ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಸಂಸ್ಕೃತಸಾಹಿತ್ಯದಲ್ಲಿ ಶಿವ.

(' ಶಿವಾಂಕ 'ದಿಂದ)

" ಕಾವ್ಯತೀರ್ಥ ಚಂದ್ರಶೇಖರಶರ್ಮಾ ಆರಾಧ್ಯಮಠ "

(ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀ ಕ್ಷೇತ್ರ ಕಾಶಿ)

(ಹಿಂದಿನಿಂದ ಮುಂದುವರಿದುದು)

ಶಿವನ ವಿವಾಹವು ಪುರಾಣಗಳಲ್ಲಿ ಸಂಪೂರ್ಣವಾಗಿ ದೊರೆತಾಗ್ಯೂ ಕಾಳಿದಾಸನ ಲೇಖಣಿಯಿಂದ ಯಾವದು ಹೊರಟಿದೆಯೋ ಅದು ಒಂದು ಅದ್ಭುತವಾದ ವಸ್ತುವೇ ಆಗಿ ಹೋಗಿದೆ. ರಕ್ಷಕ ರೀಕ್ಷಿತ ಮಹಾಕವಿಯಾದ ತುಳಸೀದಾಸನು ಇದನ್ನು ಪ್ರತಿಯೊಂದು ಸ್ಥಾನದಲ್ಲಿ ತೆಗೆದುಕೊಂಡಿದ್ದಾರೆ. ಎಲ್ಲಿ ಕಾಳಿದಾಸನ ಸೂಕ್ತಿಗಳ ಅನುವಾದವು ಬಂದಿದೆಯೋ ಅಲ್ಲಿ ಕವಿತೆಯು ಅತ್ಯಂತ ಉಜ್ವಲಸ್ವರೂಪವನ್ನು ಹೊಂದಿದೆ. ಕಾಳಿದಾಸನ ಶಿವ ಚರಿತ್ರೆಯು ಅವರಿಗೆ ಯೋಗ್ಯವೇ ಆಗಿ ತೋರಿದೆ. ಆದರೆ ಕವನಗಳಲ್ಲಿ ಯಾವದು ಒಂದು ತರಹದ ಲಹರಿಯು ಇರುತ್ತದೆಯೋ ಅದರಿಂದ ಅವನೂ ಕೂಡ ಉಳಿಯಲು ಶಕ್ಯವಾಗಿಲ್ಲ. ಕವಿಯ ಸೂಕ್ತಿಪ್ರವಾಹವು ಯಾವಾಗ್ಗೆ ನಡೆಯಲು ಪ್ರಾರಂಭವಾಗುತ್ತದೆಯೋ ಅದರಲ್ಲಿ ಮತ್ತೆ ಕಲ್ಪನಾತರಂಗಗಳು ಏಳಹತ್ತುತ್ತವೆಯೋ ಅವಾಗ್ಗೆ ಅವನು ಎಲ್ಲವನ್ನೂ ಮರೆತುಬಿಡುತ್ತಾನೆ. ಅವನಿಗೆ ಆಕಾಲಕ್ಕೆ ಒಂದು ಅಲೌಕಿಕವಾದ ಭಾವದ ಆವೇಶವು ಉತ್ಪನ್ನವಾಗುತ್ತದೆ. ಪ್ರತಿಭೆಯು ಒಂದು ತರಹದ ಹುಚ್ಚುತನವದೆ ಎಂದು ಕವಿಗಳು ಅಂದಿದ್ದಾರೆ. ಅಸ್ತು. ಕಾಳಿದಾಸನು ಒಂದು ಕಡೆಗೆ ಹೀಗೆ ಅಂದಿದ್ದಾನೆ

> ಸಹಿ ದೇವಃ ಪರಂ ಜ್ಯೋತಿಸ್ತಮಃ ಪಾರೇ ವ್ಯವಸ್ಥಿತಃ |
> ಪರಿಚ್ಛಿನ್ನಪ್ರಭಾವರ್ದ್ಧಿರ್ನ ಮಯಾ ನ ಚ ವಿಷ್ಣುನಾ ||

ಆ ಮಹಾದೇವನು ತಮೋಗುಣಾತೀತವಾದ ಜ್ಯೋತಿಸ್ವರೂಪನಿದ್ದಾನೆ. ಅವನ ಮಹಿಮೆಯನ್ನು ವಿಷ್ಣುವೂ ತಿಳಿಯುವುದಿಲ್ಲ. ನಾನೂ ತಿಳಿಯುವುದಿಲ್ಲ. ಹೀಗೆಯೇ ಬ್ರಹ್ಮನಿಂದಲೂ ಪರಮಾತ್ಮನ ಸ್ತುತಿಯು 'ಯತೋವಾಚೋ ನಿವರ್ತಂತೆ ಅಪ್ರಾಪ್ಯಮನಸಾಸಹ' ಎನ್ನುವ ರೂಪದಲ್ಲಿ ಮಾಡಿಸಲ್ಪಡುತ್ತದೆ. ಮತ್ತು ಶೃಂಗಾರದ ವರ್ಣನೆಯನ್ನು ಅತ್ಯಂತ ಸ್ಪಷ್ಟರೀತಿಯಾಗಿ ಮಾಡುವದರಿಂದ ಅವನ ಮೇಲೆ ಸಾಹಿತ್ಯಸಂಬಂಧಕಾರರು 'ಪಿತ್ರೋಃ ಸಂಭೋಗವರ್ಣನಮಿವಾತ್ಯಂತಮನುಚಿತಂ' ಎಂಬುವ ನೇಮವನ್ನು ಹಚ್ಚುವ ಪ್ರಸಂಗವು ಬರುತ್ತದೆ.

ಕಾಳಿದಾಸನೊಬ್ಬನೇ ಅಲ್ಲ. ಸಂಸ್ಕೃತಸಾಹಿತ್ಯದ ಅನೇಕ ಉತ್ತಮಕವಿಗಳು ಶಿವನ ವರ್ಣನೆಯನ್ನು ಅನೇಕಪ್ರಕಾರವಾಗಿ ಮಾಡುತ್ತಾ ಯಾವ ವಿಷಯಗಳನ್ನು ಅವರು ತೆಗೆದುಕೊಂಡು ಕವಿತೆಗಳನ್ನು ಮಾಡಲಿಕ್ಕೆ ಕೂಡುವರೋ ಅವಾಗ್ಗೆ ಕಲ್ಪನಾತರಂಗಗಳಲ್ಲಿ ಹರಿದುಹೋಗಿ ತಮ್ಮ ಮುಖ್ಯ ಉದ್ದೇಶ್ಯವನ್ನೇ ಮರೆತುಬಿಡುತ್ತಾರೆ. ಶಿವನ ವಿಷಯಕವಾದ ಭಕ್ತಿಭಾವವನ್ನು ತೆಗೆದುಕೊಂಡು ಕವಿತ್ವದ ಮಂಗಳಾಚರಣವನ್ನು ಪ್ರಾರಂಭಿಸುತ್ತಾರೆ. ಮತ್ತು ಶ್ರೀ ಶಿವನು ಎಲ್ಲಾ ತರಹದ ಅಮಂಗಲಗಳನ್ನು ಹೋಗಲಾಡಿಸುವನೆಂದು ಮನಸ್ಸಿನಲ್ಲಿ ಇಚ್ಛಿಸುತ್ತಾರೆ. ಆದರೆ ರಚನೆಯಲ್ಲಿ ನೋಡಿದರೆ ಆಶ್ಚರ್ಯಕ್ಕೆ ಸೀಮೆಯೇ ಇರುವದಿಲ್ಲ. ಏನೂ ಅಡ್ಡಿ ಇಲ್ಲ! ಯಾವ ಭಾವದಿಂದಲಾದರೂ ಪರಮಾತ್ಮನ ಭಜನೆಯನ್ನು ಮಾಡಲಿ. ಅವನು ಅವರಿಗೆ ಮಂಗಲವನ್ನೇ ಉಂಟುಮಾಡುತ್ತಾನೆ. ಇದರಲ್ಲಿ ಏನೂ ಸಂದೇಹವಿಲ್ಲ. ಒಳ್ಳೇದು ಪಾರ್ವತೀಪತಿಯು ಭೋಲಾನಾಥನಿದ್ದಾನೆ. ಅವನು ಭಕ್ತರಿಗೆ ಒಳ್ಳೆಯದನ್ನು ಉಂಟುಮಾಡುವನೋ? ಯಾವ ಶಿವನು ಕೇವಲ ಬಂ, ಬಂ, ಎಂದು ಅನ್ನುವದರಿಂದಲೇ ಸಂತೋಷಪಡುತ್ತಾನೆಯೋ ಅಂಥ ಶಿವನ ದಯಾಲುತನಕ್ಕೆ ಬೆಲೆ ಎಲ್ಲಿದೆ? ಪರಂತು ಕವಿಗಳು ತಮ್ಮ ಕಲ್ಪನೆಯಿಂದ ಯಾವ ಯಾವ ವಿಶೇಷಣಗಳು ಅವನಿಗೆ ಹತ್ತುತ್ತವೆಯೋ ಅವನ್ನೇ ಹೇಳಿ ಅವರು ವಿಶ್ರಾಂತಿಯನ್ನು ಹೊಂದುತ್ತಾರೆ. ಒಬ್ಬಾನೊಬ್ಬ ಕವಿಯ ಮಂಗಲಾಚರಣವು ಹೀಗೆ ಅದೆ—

> ಭಸ್ಮಾಂಭೋರಂಗಭೂಷ್ಯ ಸ್ಫುಟಧವಲ್ಯಲಕ್ಷಿವ್ಯಕ್ತಾನರ |
> ಜ್ವಾಲಾಸ್ವಿನ್ನಸುಧಾಂಶು ಮಂಡಲಗಲತ್ಪೀಯೂಷಧಾರಾರಸೈಃ ||
> ಸಂಜೀವದ್ಗಜಚರ್ಮಗರ್ಜಿತ ಭಯಭ್ರಾಮ್ಯದ್ವೃಷಾಕರ್ಷಣ |
> ವ್ಯಾಸಕ್ತಃ ಸಹಸಾದ್ರಿಜೋಪಹಸಿತೊ ನಗ್ನೋ ಹರಃ ಪಾತುವಃ ||

ಶಿವನ ದೇಹದಲ್ಲಿ ಲೇಪಿಸಿದ ಭಸ್ಮವು ಕೊರಳಲ್ಲಿ ಸುತ್ತಿದ ಸರ್ಪದ ಕಣ್ಣಲ್ಲಿ ಬೀಳಲು ಕಣ್ಣುಗಳು ಕಾಣದಂತಾಗಿ ಹೆದರಿ ಅದು ಒಳ್ಳೇ ಜೋರಿನಿಂದ ಭೂತ್ಕಾರವನ್ನು ಮಾಡುತ್ತದೆ. ಈ ಭೂತ್ಕಾರದಿಂದ ಹಣೆಯಲ್ಲಿದ್ದ ಅಗ್ನಿನೇತ್ರವು ಪ್ರಜ್ವಲಿಸುತ್ತದೆ. ಅದರ ಜ್ವಾಲೆಯಿಂದ ಮಸ್ತಕದಲ್ಲಿದ್ದ ಚಂದ್ರಬಿಂಬವು ಕರಗಿ ಅಮೃತವು ಸೋರಹತ್ತುತ್ತದೆ. ಅಮೃತಬಿಂದುವು ಬೀಳುತ್ತಲೆ ಮೈಮೇಲೆ ಹೊತ್ತ ಗಜಚರ್ಮವು ಸಜೀವವಾಗುತ್ತದೆ. ಪ್ರಾಣ ದುಂಬಿದ ಆನೆಯ ಗರ್ಜನೆಯನ್ನು ಕೇಳಿ ಸವಾರಿಯ ಎತ್ತು ಓಡಲಿಕ್ಕೆ ಹತ್ತುತ್ತದೆ. ಶಿವನು ಈ ಉಪದ್ರವದಿಂದ ಹೆದರಿ ಒಳ್ಳೇ ಕಷ್ಟದಿಂದ ಎತ್ತನ್ನು ತಡೆಯುತ್ತಾನೆ. ಆದರೆ ಬತ್ತಲೆಯಾದ ಶ್ರೀ ಶಿವನ ಈ ಕೌತುಕವನ್ನು ನೋಡಿ ಶ್ರೀ ಪಾರ್ವತಿಯು ನಗೆಯು ತಡೆಯುವದಿಲ್ಲ. ಪಾರ್ವತಿಯಿಂದ ಉಪಹಾಸ್ಯಮಾಡಲ್ಪಟ್ಟ ಆ ಶಿವನು ನಮ್ಮ ರಕ್ಷಣೆಯನ್ನು ಮಾಡಲಿ!

ಕವಿಯು ಯಾವುಗಳ ಪರಸ್ಪರ ಸಂಬಂಧದಮೇಲೆ ಅನೇಕ ಕಲ್ಪನೆಗಳನ್ನು ಮಾಡಿದ್ದಾನೆಯೋ ಆ ಶಿವನ ಉಪಕರಣಗಳಾದ ಸರ್ಪ, ವೃಷಭ, ಗಜಚರ್ಮ ಇವು ಬಹು ವಿಚಿತ್ರವಾಗಿವೆ.

> ವಿಷ್ಣೋರಾಗಮನಂ ನಿಶಮ್ಯ ಸಹಸಾ ಕೃತ್ವಾ ಫಣೀಂದ್ರಂ ಗುಣಂ|
> ಕೌಪೀನಂ ಪರಿಧಾಯ ಚರ್ಮಕರಿಣಸ್ತಸ್ಯಾಗಮುತ್ತುಷ್ಟು ಬೇಃ ||
> ದೃಷ್ಟ್ವಾ ವಿಷ್ಣುರಥಂ ಸಕಂಪಹೃದಯಃ ಸರ್ಪೋsಪತದ್ಭೂತಲೇ |
> ಕೃತ್ತಿರ್ವಿಸ್ಖಲಿತಾ ಹ್ರಿಯಾ ನತಮುಖೋ ನಗ್ನೋ ಹರಃ ಪಾತುವಃ

ಶಿವನು ದರ್ಶನಕ್ಕೆ ಬರತಕ್ಕ ವಿಷ್ಣುವಿನ ವಾರ್ತೆಯನ್ನು ಕೇಳಿ ಶೀಘ್ರವಾಗಿ ಸರ್ಪವನ್ನೇ ಪಡಕಟ್ಟ (ಉಡದಾರ) ನ್ನಾಗಿ ಮಾಡಿಕೊಂಡು ಗಜಚರ್ಮದ ಕೌಪೀನವನ್ನು ಹಾಕಿಕೊಂಡು ಅತ್ಯಂತ ಪ್ರೇಮಭಾವದಿಂದ ಇದುರುಗೊಳ್ಳುವದರ ಸಲುವಾಗಿ ಹೋದನು. ಸರ್ಪವು ವಿಷ್ಣುವಿನ ವಾಹನವಾದ ಗರುಡನನ್ನು ನೋಡಿ ಹೆದರಿಕೆಯಿಂದ ಜಾರಿ ಭೂಮಿಯಮೇಲೆ ಬೀಳಲು ಅದರ ಆಶ್ರಯದಿಂದ ನಿಂತ ಕೌಪೀನವೂ ಜಾರಿ ಬಿದ್ದಿತು. ಅದರಿಂದ ಶಿವನು ನಗ್ನನಾದನು. ಅದೇ ಕಾರಣ ಲಜ್ಜೆಯಿಂದ ಬಾಗಿದ ಹರ ಶಿವನು ನಮ್ಮೆಲ್ಲರ ರಕ್ಷಣೆಯನ್ನು ಮಾಡಲಿ.

ಸಂಸ್ಕೃತ ಕವಿಗಳು ಭಕ್ತಿಭಾರದಿಂದ ತುಂಬಿಕೊಂಡವರಾಗಿ ಶಿವನ ಗುಣಸ್ತೋತ್ರವನ್ನು ಮಾಡಿರುವದಿಲ್ಲವೆಂಬುವ ಮಾತೇನೂ ಇಲ್ಲ. ಅವರು ಶಿವವಿಷಯಕವಾದ ಪ್ರೇಮಭಾವದಿಂದ ಯಾವ ಸಮಯಕ್ಕೆ ಪದ್ಯಗಳನ್ನು ರಚಿಸಲಿಕ್ಕೆ ಕೂಡುವರೋ ಆ ಸಮಯಕ್ಕೆ 'ಪ್ರಹೃಷ್ಯದ್ರೋಮಾಣಃ ಪ್ರಮದ ಸಲಿಲೋತ್ಸಂಗಿತದೃಶಃ' ಅವರಿಗೆ ರೋಮಾಂಚನವಾಗುವದಲ್ಲದೆ ಕಣ್ಣುಗಳಿಂದ ಪ್ರೇಮದ ರಸವು ಹರಿಯಹತ್ತುತ್ತದೆ. ಆದರೆ ಯಾವಾಗ್ಗೆ ಅವರು ಕವಿತೆಯ ತರಂಗಗಳಲ್ಲಿ ಹರಿಯಲು ಹತ್ತುತ್ತಾರೆಯೋ. ಆ ಸಮಯಕ್ಕೆ ಶಿವನ ವಿಷಯಕವಾದ ಭಾವನೆಯು ಹಿಂದೆ ಉಳಿಯುತ್ತದೆ. ಮತ್ತು ಕಲ್ಪನೆಯುಲಹರಿಯು ಅವರನ್ನು ಮುಂದೆ ಒಯ್ಯುತ್ತದೆ.

ಸಂಸ್ಕೃತಸಾಹಿತ್ಯದಲ್ಲಿ ಶಿವನ ವಿಷಯಕ ವರ್ಣನೆಯಮೇಲೆ ಯಾವ ಯಾವ ನವೀನ ಕಲ್ಪನೆಗಳು ಆಗಿರುತ್ತವೆಯೋ ಅವುಗಳ ವಿಷಯಕ್ಕೆ ಕೆಳಗೆ ಸ್ವಲ್ಪ ಬರೆಯಲು ಇಚ್ಛಿಸುತ್ತೇನೆ. ಪರಂತು ಲೇಖದಲ್ಲಿ ವಿಸ್ತಾರವಾಗಬಾರದೆಂಬ ಭಯದ ಭೂತವು ಉತ್ಸಾಹವನ್ನು ಕಡಿಮೆಮಾಡುತ್ತದೆ.

ಕಾವ್ಯದ ಆತ್ಮವು " ರಸ " ವಿರುತ್ತದೆ. ಆ ರಸವು ಯಾವದಾದರೊಂದು ಅರ್ಥಗತ ಚಮತ್ಕಾರದ ಹೊರತು ಇರಲು ಶಕ್ಯವಿಲ್ಲ. ಈ ಕಾರಣದಿಂದ ಚಮತ್ಕಾರ ರೂಪವಾದ ನವೀನತ್ವವನ್ನು ತರುವದಕ್ಕೋಸ್ಕರ ಕವಿಗಳು ಅನೇಕ ಕಲ್ಪನೆಗಳನ್ನು ಮಾಡುತ್ತಾರೆ. ಒಂದುಪಕ್ಷ ಅವನು " ಔಚಿತ್ಯ " ದ ಹದ್ದನ್ನು ಮೀರಿದರೂ ಕಲ್ಪನೆಯಲ್ಲಿ ಕವಿಗೆ ಪೂರ್ಣಸ್ವಾತಂತ್ರ್ಯವಿರುತ್ತದೆ. "ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ" ಅಪಾರವಾಗಿರತಕ್ಕ ಕಾವ್ಯದ ಜಗತ್ತಿನಲ್ಲಿ ಕವಿಯೇ ಬ್ರಹ್ಮನಾಗಿದ್ದಾನೆ. ಜನಸಮೂಹವನ್ನು ರಂಜಿಸುವದಕ್ಕೋಸ್ಕರ "ಯಥಾದೇಹೇ ತಥಾ ದೇವೇ" ಎನ್ನುವಂತೆ ಕವಿಯು ದೇವರ ಚರಿತ್ರೆಗಳನ್ನು ಕೂಡ ಮಾನುಷ ಚರಿತ್ರೆಗಳಂತೆ ರಚಿಸುತ್ತಾನೆ. ಇದೇ ಆಧಾರವನ್ನೇ ಹಿಡಿದು ಶಿವನ ವರ್ಣನೆಯ ಮೇಲೆಯೂ ಕವಿಗಳು ನಾನಾ ಕಲ್ಪನೆಗಳನ್ನು ಮಾಡುತ್ತಾರೆ.

ಜಗಜ್ಜನನಿಯಾದ ಪಾರ್ವತಿಯಿಂದ ಷಣ್ಮುಖನ ಜನ್ಮವು ಆಗಿದೆ. ಪರಂತು ಸಾಮಾನ್ಯ ಗರ್ಭಿಣೀಸ್ತ್ರೀಯರಂತೆ ಪಾರ್ವತಿಗೆ ಪ್ರಸವವೇದನೆಯ ದುಃಖವನ್ನು ಅನುಭವಿಸುವ ಪ್ರಸಂಗವು ಬಂದಿಲ್ಲ. ಶಿವನ ಮನೆಯಲ್ಲಿ ಜನನದ ಸಮಯಕ್ಕೆ ಯಾರಿಗೂ ಯಾವ ಕಷ್ಟವಿದ್ದಿಲ್ಲ. ಮನೆಯ ಜನರು ಮತ್ತು ಸೇವಕರು ಹೊರಗೆ ಕೂತುಕೊಂಡು ನೋಡೋಣ, ದೇವಿಗೆ ಪುತ್ರನು ಜನಿಸುವನೋ ಅಥವಾ ಪುತ್ರಿಯು ಜನಿಸುವಳೋ ಎಂಬುವ ಗಡಬಿಡಿಯಲ್ಲಿಯೂ ಇದ್ದಿಲ್ಲ. ಸಾಮಾನ್ಯವಾಗಿ ಸಾಧಾರಣ ಸಿದ್ಧಿಯುಳ್ಳವರೂ ಪುತ್ರನು ಜನಿಸುವನು ಅಥವಾ ಪುತ್ರಿಯು ಜನಿಸುವಳೆಂದು ಹೇಳಿದ ಮೇಲೆ ಶಿವನ ಪರಿವಾರದ ಜನರಿಗೆ ಇದೂ ಕೂಡ ಗೊತ್ತಿದ್ದಿಲ್ಲವೇ? ದೇವತೆಗಳು ತಾರಕಾಸುರನ ವಿಜಯಕ್ಕೋಸ್ಕರವೇ ಪರಮಾತ್ಮನಲ್ಲಿ ಪುತ್ರಸಂತತಿಯನ್ನು ಮೊದಲೇ ನಿಶ್ಚಯಮಾಡಿಕೊಂಡಿದ್ದರು. ಅದ್ದರಿಂದಲೇ ಶಿವನ ಲಗ್ನದ ಯೋಜನೆಯೂ ಕೂಡ ಮಾಡಲ್ಪಟ್ಟಿತ್ತು. ಆದರೆ ಚಮತ್ಕಾರಕ್ಕೋಸ್ಕರ ಕವಿಯು ಗೃಹಸ್ಥರ ಮನೆಯಂತೆ ರಚಿಸಿದ್ದಾನೆ. ಇದೇ ಕಾರಣದಿಂದಲೇ ಇಂಥ ಕವಿಯು "ಅರ್ಥಕವಿ" ಎಂದು ಹೇಳಲ್ಪಡುತ್ತಾನೆ. ಇದರ ಸ್ವಲ್ಪ ಪರಿಚಯವನ್ನು ಕೆಳಗೆ ನೋಡಿರಿ.

"ಕಲ್ಯಾಣ" ದ ಉದ್ದೇಶ್ಯದಿಂದ ಲೇಖದ ಎಲ್ಲಾ ಉದಾಹರಣೆಗಳು ಆಶೀರ್ವಾದ ಪೂರ್ವಕಗಳಾದ ಮಂಗಲಾಚರಣೆಗಳಿಂದಲೇ ಉದಾಹರಿಸಲ್ಪಡುತ್ತವೆ.

ಪಾರ್ವತಿಯು ಹೆರುವ (ಹಡೆಯುವ) ಕಾಲವಿರುತ್ತದೆ. ಶಿವನ ಪರಿವಾರದ ಎಲ್ಲ ಜನರು ಸೂತಿಕಾಗೃಹದ ಹೊರಭಾಗದಲ್ಲಿಯೇ ನಿಂತಿದ್ದಾರೆ. ಯಾರಿಗೂ ಯಾವ ಕಾರ್ಯ ಮಾಡಲಿಕ್ಕೂ ಮನಸ್ಸಾಗಲೊಲ್ಲದು. ದೇವಿಗೆ ಪುತ್ರನು ಜನಿಸುವನೋ ಅಥವಾ ಪುತ್ರಿಯು ಜನಿಸುವಳೋ ಎಂದು ಎಲ್ಲರೂ ನೋಡುತ್ತ ನಿಂತಿದ್ದರು. ಪುತ್ರೋತ್ಸವದ ಸಂಗತಿಯನ್ನು ತಿಳಿಸತಕ್ಕವರು ಸೂತಿಕಾಗೃಹದ ಒಳಭಾಗದಲ್ಲಿಯೇ ಮುಳ್ಕರಿಕೊಂಡಿದ್ದಾರೆ. ಸೂತಿಕಾಗೃಹದ ಹೊರಭಾಗದಲ್ಲಿ ಕಾವಲಿರುತ್ತದೆ. ಆದರೆ ಅದರ ಹೊರಭಾಗದಲ್ಲಿಯೇ ಗಣಸಮೂಹವು ಕೂಡಿರುತ್ತದೆ. ನೋಡೋಣ ಸುದ್ದಿಯು ಏನೇನು ಬರುವದೆಂದು ಬಾಗಲ ಕಡೆಗೇನೇ ಎಲ್ಲರ ದೃಷ್ಟಿಗಳು ಇರುತ್ತವೆ. ಪುತ್ರೋತ್ಸವದ ಸುದ್ದಿಯು ಬಂದಕೂಡಲೇ ಮಂಗಲೋತ್ಸವದ ನೃತ್ಯಗಾನವನ್ನು ಪ್ರಾರಂಭಮಾಡುವದಕ್ಕೋಸ್ಕರ ಒಂದು ಕಡೆಗೆ ಬಂಧು ಸಮೂಹವೂ ಮತ್ತೊಂದು ಕಡೆಗೆ ಗಣಸಮೂಹವೂ ಅತ್ಯಂತ ಉತ್ಸುಕತೆಯಿಂದ ನಿಂತಿರುತ್ತದೆ. ಹೀಗೆ ಎಲ್ಲರೂ ಉತ್ಸುಕರಾಗಿದ್ದ ಸಮಯಕ್ಕೆ ಒಮ್ಮಿಂದೊಮ್ಮಿಗೆ ಬಾಗಿಲದ ಪರದೆಯು ಸರಿಸಲ್ಪಡುತ್ತದೆ. ಮತ್ತು ಅತ್ಯಂತ ಹರ್ಷದಿಂದ ಹೆದರಿದವನಂತೆ ನಡುಗುತ್ತ "ಭೃಂಗಿರುಟಿಯು" ಹೊರಗೆ ಬಂದು ಕೈಯನ್ನು ಮೇಲಕ್ಕೆತ್ತಿ ದೇವಿಗೆ ಪುತ್ರನು ಜನಿಸಿದ್ದಾನೆ. ಗಣಸಮೂಹವೇ, ಕೂತು ಏನು ನೋಡುತ್ತಿರುವಿರಿ? ಆನಂದೋತ್ಸವದ ನೃತ್ಯಗಾನವನ್ನು ಪ್ರಾರಂಭಮಾಡಿರಿ. ಎಂದು ಹೇಳುತ್ತಿರುವಷ್ಟರಲ್ಲಿಯೇ ಬಾಂಧವ ಜನರ ಕಡೆಯಿಂದ 'ಚಾಮುಂಡಾ' ಎಂಬಾಕೆಯು ಹೊರಗೆ ಬರುತ್ತಾಳೆ. ಅಹಾ! ದೇವಿಗೆ ಪುತ್ರನು ಜನಿಸಿದ್ದಾನೆ. ಎಂದು ಉತ್ಸಾಹದಿಂದ ಪುನಃ ಪುನಃ ಅದೇ ಶಬ್ದವನ್ನೇ ಉಚ್ಚರಿಸುತ್ತ ಭೃಂಗಿರುಟಿಯನ್ನು ಆನಂದದಿಂದ ಆಲಿಂಗನಮಾಡಿಕೊಳ್ಳುತ್ತಾಳೆ. ಅವನೂ ಕೂಡ ಪುತ್ರೋತ್ಸವದ ಆನಂದದಿಂದ ಆಕೆಯ ಆಲಿಂಗನವನ್ನು ಮಾಡಿಕೊಳ್ಳುತ್ತಾನೆ. ಹೀಗೆಯೇ ಅವರಿಬ್ಬರು ಮೇಲಿಂದ ಮೇಲೆ ಆಲಿಂಗನಮಾಡಿಕೊಳ್ಳುವ ಸಮಯಕ್ಕೆ ಎದೆಯಲ್ಲಿ ಧರಿಸಿದ ಹಳೇ ಎಲಬುಗಳು ಸಡಿಲವಾಗುತ್ತ ಖಟಖಟ ಎಂದು ಭಯಂಕರಧ್ವನಿಯಾಗುತ್ತದೆ. ಆ ಶಬ್ದದಲ್ಲಿ ದೇವತೆಗಳ ದುಂದುಭಿಧ್ವನಿಯೂ ಕೂಡ ಅಡಗಿಬಿಡುತ್ತದೆ. ಅದೇ ಶಬ್ದವು ನಮ್ಮೆಲ್ಲರನ್ನೂ ರಕ್ಷಿಸಲಿ.

> ದೇವೀ ಪುತ್ರ ಮಸೂತ ನೃತ್ಯತ ಗಣಾಃ ಕಿಂತಿಷ್ಠತೇತ್ಯುದ್ಭುಜೇ
> ಹರ್ಷಾದ್ ಭೃಂಗಿರಿಟಾವುದಾಹೃತಗಿರಾ ಚಾಮುಂಡಯಾಲಿಂಗಿತೇ | ಪಾಯಾದ್ವೋ ಜಿತ ದೇವ ದುಂದುಭಿಧ್ವನಿಸ್ಸ ಪ್ರವೃತ್ತಸ್ತಯೋಃ | ರನ್ಯೋನ್ಯಾಂಗ ನಿಪಾತ ಜರ್ಜರಜರತ್ಸ್ಥಿಲಾಸ್ಥಿಸ್ವನಾ ರವಃ ||

ಶಿವನು ಮೊದಲೇ ದರಿದ್ರನಾಗಿದ್ದರೂ ಅತ್ಯಂತ ಉದಾರನೂ ಆಗಿದ್ದಾನೆ. ಅವನು ಪುತ್ರಜನ್ಮದ ಸುದ್ದಿಯನ್ನು ಕೇಳಿದ ಕೂಡಲೇ ಬ್ರಹ್ಮನಿಗೆ ಯೋಗ್ಯವಾದ ಪುರಸ್ಕಾರವನ್ನು ಮಾಡಬೇಕೆಂದು ಯೋಚಿಸಿದನು. ಪುರಸ್ಕಾರದಲ್ಲಿ ಶಾಲು, ಕಂಕಣ ಮಂಗಲಕ್ಕಾಗಿ ಕುಂಕುಮಲೇಪನಾದಿಗಳೇನೋ ಯೋಗ್ಯ! ಆದರೆ ಇವನಲ್ಲಿ ಇರುವದಾದರೂ ಏನಿದೆ? ಅವನು ತಾವು ಕೊತ್ರದಲ್ಲಿ ಇಟ್ಟುಕೊಂಡಿರುವ ಸಿಂಹದ ಚರ್ಮವನ್ನೇ ಶಾಲನ್ನಾಗಿ ಮತ್ತು ಸರ್ಪಗಳನ್ನೇ ಕಂಕಣಗಳನ್ನಾಗಿಯೂ ಮಾಡಿ ಬ್ರಹ್ಮನಿಗೆ ಕೊಟ್ಟನು. ಮತ್ತು ಅದರ ಕೂಡ ಸಮೀಪದಲ್ಲಿ ಇಟ್ಟಿದ್ದ ಭಸ್ಮವನ್ನು ಮಂಗಲ ದ್ರವ್ಯವನ್ನಾಗಿ ಮಾಡಿ ಅಂಗಕ್ಕೂ ಹಚ್ಚಿದನು. ಗಿರಿಜೆಯು ತನ್ನ ಮನೆಯ ಈ ಪುರಸ್ಕಾರವನ್ನು ಕೇಳಿ ನಕ್ಕಳು. ಅದೇ ಆ ಗಿರಿಜೆಯ ಹಾಸ್ಯವು ನಮ್ಮನ್ನು ಪವಿತ್ರರನ್ನಾಗಿ ಮಾಡಲಿ.

> ಕೃತ್ವಾ ಷಡಾನನಜನುರ್ಮುದಿತಾಂತರೇಣ |
> ಪಂಚಾನನೇನ ಸಹಸಾ ಚತುರಾನನಾಯ ||
> ಶಾರ್ದೂಲಚರ್ಮ ಭುಜಗಾಭರಣಂ ಸಭಸ್ಮ |
> ದತ್ತಂ ನಿಶಮ್ಯ ಗಿರಿಜಾಹಸಿತಂ ಪುನಾತು ||

ಯಾವ ಬ್ರಹ್ಮನು ಗೃಹಸ್ಥಾಶ್ರಮದ ಕೊಡಕಿನಲ್ಲಿ ತನ್ನ ತಪಶ್ಚರ್ಯದಿಂದ ದೂರಮಾಡಿದನೋ ಅಂಥವನಿಗೆ ಇವೇ ಪುರಸ್ಕಾರವೇ ಯೋಗ್ಯವಿದ್ದವು. ಯಾಕೆಂದರೆ ನೀನು ನನ್ನನ್ನು ಗೃಹಸ್ಥಾಶ್ರಮಿಯನ್ನಾಗಿ ಮಾಡಲಿಚ್ಛಿಸುವಿ. ಅದ್ದರಿಂದ ನೀನು ಮೈಗೆ ಬೂದಿಯನ್ನು ಲೇಪಿಸಿಕೊಂಡು ಭಜನೆಯನ್ನು ಮಾಡೆಂದು ಕೊಟ್ಟನು. ಇಲ್ಲಿ ಕ್ರಮದಿಂದ ಷಡಾನನ, ಪಂಚಾನನ, ಚತುರಾನನರ ಘಟನೆಯು ಚತುರತನವೂ ದರ್ಶನೀಯವಿರುತ್ತದೆ.

ನಟರಾಜನಾದ ಶಿವನು ದೇವಿಗೆ ನಾಟ್ಯದ ಶಿಕ್ಷಣವನ್ನು ಕೊಡುತ್ತಲಿದ್ದಾನೆ. ನರ್ತನಮಾಡುವ ಸಮಯಕ್ಕೆ ಯಾವ ಯಾವ ಭಾವದ ಅಭಿನಯಕ್ಕೆ ಕೈಯು ಎಲ್ಲಿರಬೇಕು. ಹೇಗೆ ಇರಬೇಕು. ಅಂಗವು ಹೇಗೆ ಇರಬೇಕು. ಪಾದವನ್ನು ಹೇಗೆ ಬಾಗಿಸಬೇಕು ಎಂಬುವ ಈ ಕಲೆಗಳನ್ನು ತೋರಿಸಿಕೊಡುತ್ತಲಿದ್ದಾನೆ. ಆ ವಿನೋದದ ಈ ಸಮಯದಲ್ಲಿ ಒಬ್ಬ ಸೇವಕನನ್ನಾದರೂ ಇಟ್ಟುಕೊಂಡಿರುವದಿಲ್ಲ. ಮತ್ತು ಮೃದಂಗ ಬಾರಿಸುವವನೂ ಇಲ್ಲ. ಅವನ ಕೆಲಸವನ್ನು ಅವನೇ ಮಾಡತಕ್ಕಲಿದ್ದಾನೆ ನೋಡು ಭಾವದಮೇಲೆ ಕೈಯನ್ನು ಹೀಗೆ ಮೇಲಕ್ಕೆತ್ತಬೇಕು. ಅವನು ಮಾಡಿ ತೋರಿಸುತ್ತಾನೆ. ಆದರೆ ಯಾವಾಗ್ಗೆ ಮನಸ್ಸಿನಂತೆ ಕೆಲಸವಾಗುವದಿಲ್ಲವೆಂದು ಕಂಡುಬರುವದೋ ಅವಾಗ್ಗೆ ಅವನಿಗೆ ಸಹಿಸಲು ಆಗುತ್ತಿದ್ದಿಲ್ಲ. ಅವನು ಮೇಲಕ್ಕೆದ್ದು ದೇವಿಯ ಕೈಯನ್ನು ಮೇಲಕ್ಕೆ ಮಾಡಿ ತೋರಿಸುತ್ತಾನೆ—

ನೋಡು! ಬಾಹುಲತೆಯನ್ನು ಈ ಪ್ರಕಾರವಾಗಿ ಮೇಲಕ್ಕೆತ್ತಿರಬೇಕು. ಮತ್ತು ಈ ಪ್ರಕಾರವಾಗಿ ನಿನ್ನ ಅಂಗವನ್ನು ಬಾಗಿಸು ಹೂಂ ಹೂಂ ನೋಡು ಬಹಳ ಎತ್ತರವಲ್ಲ. ಕೆಳಗೆ ಸ್ವಲ್ಪ ಹಾ ಹಾ ನೋಡು ಕಾಲಿನ ಮುಂಭಾಗವನ್ನು ಸ್ವಲ್ಪ ಹೊಸದಾಗಿ ಕಲಿತ ದೇವಿಯು ಯಾವಾಗ್ಗೆ ಚನ್ನಾಗಿ ... ದಿಲ್ಲವೆಂದು ಕಂಡುಬರುವದೋ ಆಗ್ಗೆ, ಅವನು ಸ್ವತಃ ಎದ್ದುನಿಂತು ತಿಳಿಸಿ ಹೇಳುತ್ತಾನೆ—

ನೋಡು ನನ್ನ ಕಡೆಗೆ, ನಾನು ಹೇಗೆ ನಿಂತಿದ್ದೇನೆ ... ಸ್ವಂತವಾಗಿ ಅಭಿನಯವನ್ನುಮಾಡುತ್ತ ಅವನು ಕಲಿತ ಪಾರ್ವತಿಯನ್ನು ಕುಣಿಸುತಲಿದ್ದಾನೆ. ತಕಥಂ, ತಕ್ಕ ... ಬುವ ಮದ್ದಲೆಯ ನಾದನ್ನ ಹಾಗೂ ಮುಖದ ಧ್ವನಿ ... ಮೇಘ ಗರ್ಜನೆಯಂತೆ ಮಾಡುತ್ತಲಿದ್ದಾನೆ. ಒಂದೊಂದು ... ಯದಲ್ಲಿ ವಿಶ್ರಾಂತಿಯಾಗಲು ಅವನು ಕೈಯಲ್ಲಿ ತಾಳ ... ತೆಗೆದುಕೊಳ್ಳುತ್ತಲಿದ್ದಾನೆ ಆದರೆ ಹೊಸದಾಗಿ ಕಲಿತವ...

...ರಿಂದ ಪಾರ್ವತಿಯು ಯಾವಾಗ್ಗೆ ಲಯದಲ್ಲಿ ಮಂದವಾಗುತ್ತಾಳೆಯೋ ಅವಾಗ್ಗೆ ಅವನೂ ಕೂಡ ಲಯವನ್ನು ಬಿಟ್ಟು ಸಾವಕಾಶವಾಗಿ ತಾಳಗಳನ್ನು ಹಾಕುತ್ತಾನೆ. ಅಂಥ ಶಿವನ ತಾಳದ ಧ್ವನಿಗಳು ನಮ್ಮನ್ನು ರಕ್ಷಿಸಲಿ.

> ಏವಂಥಾಯಿಯ ದೇವಿ ಬಾಹುಲತಿಕಾಮೇವಂಕುರುಷ್ವಾಂಗಕಂ |
> ಮಾತ್ಯುಚ್ಚೈರ್ನಮ ಕುಂಚಯಾಗ್ರಚರಣಂ ಮಾಂ
> ಪಶ್ಯತಾವತ್ಸ್ಥಿತಂ ||
> ದೇವೀಂ ಪಠಯತಃ ಸ್ವವಕ್ತ್ರಮುರಜೇನಾಂಭೋಧರಧ್ವಾನಿನಾ |
> ಶಂಭೋರ್ವಃ ಪರಿಪಾಂತು ಲಂಬಿತಲಯಚ್ಛೇದಾಹತಾಸ್ತಾಲಿಕಾಃ

ತ್ರಿಲೋಕ ಪೂಜ್ಯನಾದ ಪರಶಿವನು ದರಿದ್ರನಿದ್ದಾನೆ. ಆದರೆ ಜಗತ್ತಿನಲ್ಲಿರತಕ್ಕ ಸಂಪತ್ತುಗಳು ಅವನ ಚರಣದಲ್ಲಿ ಬಿದ್ದು ಹೊರಳಾಡುತ್ತವೆ. ಯಾವ ಸಮಯದಲ್ಲಿ ಪರಶಿವನು ಮುದಿ ಎತ್ತಿನ ಮೇಲೆ ಕೂತುಕೊಂಡು ಹೋಗುತ್ತಾನೆಯೋ ಆ ಸಮಯಕ್ಕೆ ಯಾವ ಇಂದ್ರನು 'ಇದಿ ಪರಮೈಶ್ವರ್ಯೆ' ಅರ್ಥಾತ್ ಶ್ರೇಷ್ಠವಾದ ಐಶ್ವರ್ಯದ ಸ್ವಾಮಿಯು ಇದ್ದಾನೆ. ಅವನು ಮದಸೋರತಕ್ಕ ಐರಾವತದ ಮೇಲೆ ಕೂತುಹೋಗುತ್ತಿದ್ದರೂ ಅದನ್ನು ಇಳಿದು ಅತ್ಯಂತ ಸಂಭ್ರಮದಿಂದ ಶಿವನ ಚರಣಗಳ ಮೇಲೆ ತನ್ನ ಮಸ್ತಕವನ್ನಿಡುತ್ತಾನೆ. ಮತ್ತು ಕಿರೀಟದಲ್ಲಿರತಕ್ಕ ಪಾರಿಜಾತ ಪುಷ್ಪಗಳ ಧೂಳಿಯಿಂದ ಅವನ ಚರಣಗಳನ್ನಲಂಕರಿಸುತ್ತಾನೆ.

> ಅಸಂಪದಸ್ತಸ್ಯ ವೃಷೇಣ ಗಚ್ಛತಃ |
> ಪ್ರಭಿನ್ನದಿಗ್ವಾರಣವಾಹನೋ ವೃಷಾ ||
> ಕರೋತಿ ಪಾದಾವುಪಗಮ್ಯ ಮೌಲಿನಾ |
> ವಿನಿದ್ರ ಮಂದಾರರಜೋsರುಣಾಂಗುಲೀ ||

ಪರಂತು ಶಿವನು ದರಿದ್ರನಿದ್ದಾಗ್ಯೂ, ಕವಿಯು ಏನೇನೋ ಕಲ್ಪನೆಗಳನ್ನು ಕೂಡಿಸುತ್ತಾನೆ. ಪಾರ್ವತಿಯು ಶಿವನ ಮನೆಗೇನೋ ಬಂದಳು. ಆಕೆಯು ಶಿವನ ಮನೆಯ ಸ್ಥಿತಿಯನ್ನು ನೋಡಿ ಹೆದರಿದಳು. ಯಾಕೆಂದರೆ ಮನೆಯಲ್ಲಿ ಸಹಸ್ರಮುಖಗಳ ಒಂದು ಸರ್ಪವಿರುತ್ತದೆ. ಒಂದೊಂದು ಮುಖಕ್ಕೆ ಒಂದೊಂದು ಛಟಾಕಿನಂತೆ (ಕಚ್ಚಾಸೇರಿನ $\frac{1}{4}$ ಭಾಗ) ಹಾಲನ್ನು ಹಾಕಿದರೆ 2, 2$\frac{3}{4}$ ಮಣ ಹಾಲು ಪ್ರತಿ ದಿವಸ ಬೇಕಾಗುತ್ತದೆ. ಸ್ವಾಮಿಯಂತೂ ಐದು ಮುಖವುಳ್ಳವನಿದ್ದಾನೆ. ಇಬ್ಬರು ಮಕ್ಕಳೂ ಇರುವರು. ಅವರಲ್ಲಿ ಒಬ್ಬನು ಆರು ಮುಖಗಳುಳ್ಳವನು, ಮತ್ತೊಬ್ಬನು ಆನೆಯ ಮುಖವುಳ್ಳವನು. ಊಟಕ್ಕೆ ಕೂತರೆ ಕಡಿಮೆಯು ಶಬ್ದವೇ ಇಲ್ಲ. ಮನೆಯ ಉತ್ಪನ್ನವನ್ನು ನೋಡಿದರೆ ಪ್ರತಿದಿವಸ ಭಿಕ್ಷೆಯನ್ನು ಬೇಡುವದೇ ಆಗಿದೆ. ಅದರ ವಿನಾ ಬೇರೆ ಮಾತೇ ಇಲ್ಲ. ಹೀಗಿದ್ದ ಮೇಲೆ ಈಗ ಹೇಗೆ ಕೆಲಸ ನಡೆಯಬೇಕು. ಪಾರ್ವತಿಯು ಹೀಗೆ ಆಲೋಚಿಸಿ ಯಾವಾಗ್ಗೆ ನಿಟ್ಟುಸುರು ಬಿಡುವಳೋ ಅವಾಗ್ಗೆ ಶಿವನು ಮನಸ್ಸಿನಲ್ಲಿಯೇ ನಗುತ್ತಾನೆ. ಹಾಗಾದಾಗ್ಯೂ ಆ ಹಾಸ್ಯವು ಮುಖದಲ್ಲಿ ಪ್ರಕಟವಾಗುವದೇ ಇಲ್ಲ. ಅದೇ ಪರಮಾತ್ಮನು ನಮ್ಮ ರಕ್ಷಣೆಯನ್ನು ಮಾಡಲಿ.

> ಸಹಸ್ರಾಸ್ಯೋ ನಾಗಃ ಪ್ರಭುರಪಿ ಮಹಾ ಪಂಚವದನಃ
> ಷಡಾಸ್ಯೋ ಪಂಕ್ತೈಕಸ್ತನಯ ಇತರೋ ವಾರಣಮುಖಃ |
> ಗೃಹೇ ಭೈಕ್ಷ್ಯಂ ಶಶ್ವತ್ಪ್ರಭವತು ಕಥಂ ವರ್ತನಮಿತಿ
> ಸ್ವಸಖ್ಯಾಂ ಪಾರ್ವತ್ಯಾಮಥ ಜಯತಿ ಶಂಭುಃ ಸ್ಮಿತಮುಖಃ ||

ಒಬ್ಬ ಕವಿಯು ಒಂದು ಕಡೆಯಲ್ಲಿ ಹೀಗೆ ಅಂದಿದ್ದಾನೆ—ಶಿವನು ತನ್ನ ಮನೆಯಲ್ಲಿ ಇಬ್ಬರ ಉಪಜೀವನವಾಗುವದು ಕಷ್ಟವೆಂದು ತಿಳಿದು ಒಬ್ಬರಿಗೆ ಆಹಾರವು ಸಿಕ್ಕರೂ ಕೆಲಸ ನಡೆಯಲೆಂಬ ಉದ್ದೇಶದಿಂದ ತನ್ನ ಪತ್ನಿಯನ್ನು ತನ್ನ ಅಂಗದಲ್ಲಿಯೇ ಇಟ್ಟುಕೊಂಡಿದ್ದಾನೆ. ಒಂದುಪಕ್ಷ ಹಾಗೆ ಇಲ್ಲದೇ ಇದ್ದರೆ ಆದರೆ ಅವನ ಮಗನು ಇಲ್ಲಿಯ ವರೆಗೆ ಕುಮಾರನಾಗೇಕೆ ಇರುತ್ತಿದ್ದನು?

> ಉದರದ್ವಯ ಭರಣಭಯಾದದ್ರ್ಧಾಂಗಾಹಿತದಾರಃ |
> ಯದಿ ನೈವ ತಸ್ಯ ಸುತಃ ಕಥಮದ್ಯಾಪಿ ಕುಮಾರಃ ||

ಪಾರ್ವತಿಯು ಈ ಭಿಕ್ಷಾವ್ಯವಸಾಯದಿಂದ ಬೇಸತ್ತು ಬಂದ ಶಿವನಿಗೆ ಹೊಲದ ಕೆಲಸವನ್ನು ಮಾಡಲು ಹೇಳುತ್ತಾಳೆ. ಒಂದು ದಿವಸ ರಾತ್ರಿಯ ಸಮಯದಲ್ಲಿ ಕೆಲಸಗಳನ್ನೆಲ್ಲಾ ತೀರಿಸಿಕೊಂಡು ... ಶೂನ್ಯವಾದ ಗುಡಿಸಲಿನಲ್ಲಿ ಕುಳಿತಕಾಲಕ್ಕೆ ಅವನೊಡನೆ ಪಾರ್ವತಿಯು ಮನಸ್ಸಿನ ಕಲ್ಪನೆಗಳನ್ನು ಮಾಡುತ್ತಾಳೆ.—

ಈಗ ಪರಶುರಾಮನು ಭೂಮಿಯನ್ನು ಕೊಡುತ್ತಾನೆಂದು ಕೇಳಿದ್ದೇನೆ. ಅವನಿಂದ ಸ್ವಲ್ಪ ಭೂಮಿಯನ್ನು ಬೇಡಿಕೊ. ಇದಕ್ಕೂ ... ನಿನ್ನ ಬಾಯಿಯು ತೆಗೆಯುವದಾಗದೇ ಇದ್ದರೆ ಯಾರನ್ನಾದರೂ ಜೊತೆಗೆ ಕರೆದುಕೊಂಡು ಹೋಗಿ ಅವರಿಂದ ಬೇಡಿಕೊ ... ನಿಕೊ. ಕುಬೇರನಿಂದ ಬೀಜಗಳನ್ನು ಸಾಲವಾಗಿ ತೆಗೆದುಕೊ. ಬಲರಾಮನ ಕಡೆಯಿಂದ ಕೆಲವು ದಿವಸಗಳವರೆಗೆ ಅವನ ... ಟೆಯನ್ನು ತೆಗೆದುಕೊಂಡು ಬಾ. ಇನ್ನು ಬೇಕಾದವು ಹೂಟ್ಟೆಯ ... ಎತ್ತುಗಳಲ್ಲವೋ? ... ನಿನ್ನ ಹತ್ತರ ಇದ್ದೇ ಇದೆ ... ಇವರ ಸಲ್ಲುವನಾಗಿಯಿದ್ದರೆ ಯಮರಾಜನ ಕಡೆಯಿಂದ ... ಇವನ್ನು ತೆಗೆದುಕೊಂಡು ಬಾ. ಹಾಗೂ ಹೀಗೂ ಇವರಿಂದ ... ಕೆಲಸವು ನಡೆಯುವದು. ಮತ್ತು ಆ ಹಳೇ ದಂಟಿಯೊಡ್ಡ ... ಗೆಯ ಅವಶ್ಯಕತೆಯು ಬಿದ್ದರೆ ನಿನ್ನ ಈ ತ್ರಿಶೂಲವು ಕೆಲಸ ಕೊಟ್ಟೇಕೊಡುತ್ತದೆ. ಈ ಮಧ್ಯಾಹ್ನಕ್ಕೆ ರೊಟ್ಟಿಯನ್ನು ... ದುಕೊಂಡು ಬರತಕ್ಕ ಭಾರ ನನ್ನ ಕಡೆಗೆ ಉಳಿಯುತ್ತದೆ ... ಕೆಯುಗಳನ್ನು ಕಾಯುವದಕ್ಕೆ ಷಣ್ಮುಖನು ಇದ್ದೇ ಇದ್ದಾನೆ. ನಾನು ಭಿಕ್ಷೆ ಬೇಡುವದರಿಂದ ಬೇಸತ್ತಿದ್ದೇನೆ. ಈಗ ... ವಾದರೂ ಹೊಲವನ್ನು ಮಾಡು. ಯಾವ ಗಿರಿಜೆಯು ಮಾತ... ನಮ್ಮೆಲ್ಲರ ರಕ್ಷಣೆಯನ್ನು ಮಾಡ...

...ಗಳು ತಾವಾಗಿಯೇ ಮುಚ್ಚಿಕೊಂಡವೆಂದೂ, ಯಾರು ಏನುಮಾಡಿದರೂ ಬಾಗಿಲನ್ನು ತೆಗೆಯುವುದಕ್ಕಾಗಲಿಲ್ಲವೆಂದೂ, ಸ್ವಲ್ಪ ಹೊತ್ತಿನನಂತರ ಒಬ್ಬ ಭಕ್ತನು ಬಾಗಿಲುಗಳನ್ನು ಮುಟ್ಟಲು ಅವು ತಾವಾಗಿ ತೆಗೆದುವೆಂದೂ ತಿಳಿದು ಬಂದಿದೆ.

ಭೂಕಂಪದ ಭಾವಿಗಳು!

ಕಳೆದ ಭೂಕಂಪದ ದೆಸೆಯಿಂದ ಚಂಪರಣ ಜಿಲ್ಲೆಯಲ್ಲಿ ಸುಮಾರು 150 ಅಡಿಗಳ ಸುತ್ತಳತೆಯುಳ್ಳ 10 ದೊಡ್ಡ ಭಾವಿಗಳು ನಿರ್ಮಾಣವಾಗಿರುವುವಂತೆ! ಇವುಗಳ ತಳವೇ ಗೊತ್ತಾಗದಷ್ಟು ಆಳವಾಗಿದ್ದು, ನೀರು ಸೋಡಾ ನೀರಿನಂತಿರುವದಂತೆ! ಆ ನೀರಿನ ಸೇವನೆಯಿಂದ ಪಚನಕ್ರಿಯೆಯು ಚೆನ್ನಾಗಿ ನಡೆಯುವದಂತೆ!

ಹುಲಿಗೂ ಹಂದಿಗೂ ಕಾದಾಟ!

ಝಾನ್ಸಿನಗರದ ಸಮೀಪದಲ್ಲಿರುವ ಮಾಣಿಕ್ಯಪುರವೆಂಬ ಗ್ರಾಮದ ಹತ್ತಿರ ಕಾಡಿನಲ್ಲಿ ಕೆಲವು ದಿವಸಗಳ ಹಿಂದೆ ಒಂದು ಹುಲಿಗೂ ಕಾಡು ಹಂದಿಗೂ 13 ಗಂಟೆಗಳ ಕಾಲ ಕಾದಾಟವಾಗಿ ಕಡೆಗೆ ಹಂದಿಯು ಮೃತಪಟ್ಟಿತೆಂದೂ, ಅನಂತರ ಶಕ್ತಿಗುಂದಿ ಬಿದ್ದ ಹುಲಿಯನ್ನು ಒಬ್ಬ ಪೋಲೀಸಿನವನು ಗುಂಡುಹೊಡೆದು ಕೊಂದನೆಂದೂ ತಿಳಿದುಬಂದಿದೆ.

ಕಪೂರ್ಥಲಾನಗರದಲ್ಲಿ ಮೊಹರಂಹಬ್ಬದಗಲಭೆ.

ಕಪೂರ್ಥಲಾ ನಗರದಲ್ಲಿ ಮೊಹರಂ ಹಬ್ಬದ ದಿವಸ ಮುಸಲ್ಮಾನರು ಪೋಲೀಸರಿಂದ ನಿರ್ಬಂಧಪಡಿಸಲ್ಪಟ್ಟಿದ್ದ ರಸ್ತೆಯಲ್ಲಿಯೇ ಮೆರವಣಿಗೆಯನ್ನು ತೆಗೆದುಕೊಂಡು ಹೋಗಲೆತ್ನಿಸಿ ಗಲಭೆಮಾಡಿದರು. ಪೋಲೀಸರು ಗತ್ಯಂತರವಿಲ್ಲದೆ ಗುಂಪನ್ನು ಚದುರಿಸಲು ಗುಂಡು ಹಾರಿಸಿದರು. ಇದರಿಂದ 10 ಜನರು ಮೃತಪಟ್ಟರು. 20 ಜನರಿಗೆ ತುಂಬಾ ಘಾಯಗಳಾಗಿರುವುವು.

ಸಂಯುಕ್ತಪ್ರಾಂತದಲ್ಲಿ ಬಿರುಗಾಳಿಯ ಹಾವಳಿ.

ಕಳೆದ ಮಂಗಳವಾರದ ದಿವಸ ಸಂಯುಕ್ತಪ್ರಾಂತಕ್ಕೆ ಸೇರಿದ ಹಾಪುರನಗರದಲ್ಲಿ ಭಯಂಕರ ಬಿರುಗಾಳಿಯು ತಲೆದೋರಿ ವಿಶೇಷ ಅನರ್ಥವುಂಟಾಗಿದೆ. ಅನೇಕರ ಮನೆಗಳ ಮೇಲ್ಛಾವಣಿಗಳು ಹಾರಿಹೋಗಿವೆ. ಮರಗಳು ಬೇರುಸಹಿತ ಕಿತ್ತುಹೋಗಿವೆ. ಜನರಿಗೆ ಆಗಿರುವ ನಷ್ಟವು ಅಪಾರವಾಗಿರುವುದು. ಜನರು ಇದರ ಜೊತೆಗೆ ಭೂಕಂಪವೂ ಆಗುವುದೇನೋ ಎಂದು ಭೀತಿಗ್ರಸ್ತರಾಗಿರುತ್ತಾರೆ.

ಬಹುಪುತ್ರವತಿಯಾದಸ್ತ್ರೀ!

ಬರ್ನಾರ್ಡ್ ಶೀನರ್ಬರ್ಗ ಎಂಬ ಜರ್ಮನ್‌ಸ್ತ್ರೀಯು 69 ಮಕ್ಕಳನ್ನು ಹೆತ್ತು ತನ್ನ 56ನೆಯ ವಯಸ್ಸಿನಲ್ಲಿ ಮೃತಳಾಗಿರುತ್ತಾಳೆ. ಇವಳು 4 ಸಾರೆ ನಾಲ್ಕು ನಾಲ್ಕು ಮಕ್ಕಳನ್ನೂ, 7 ಸಾರೆ ಮೂರು ಮೂರು ಮಕ್ಕಳನ್ನೂ, 16 ಸಾರೆ ಅವಳಿ ಮಕ್ಕಳನ್ನೂ ಪ್ರಸುವಿಸಿದಳಂತೆ! ಇವಳು ಮೃತಳಾಗಿ 25 ವರ್ಷಗಳಾದುವು. ಅನಂತರ ಇವಳ ಗಂಡನು ಪುನಃ ಮದುವೆಯಾಗಿ ಮತ್ತೆ 18 ಮಕ್ಕಳನ್ನು ಪಡೆದಿರುವನಂತೆ! ಇವನ 87 ಜನ ಮಕ್ಕಳ ಪೈಕಿ 67 ಜನ ಮಕ್ಕಳು ಸದ್ಯಃ ಜೀವಂತರಾಗಿರುವರು.

ರೈಲು ಉರುಳಿಸುವಪ್ರಯತ್ನ.

ಇದೇ ಏಪ್ರೆಲ್ 24ನೇ ತಾರೀಖಿನ ದಿವಸ ರಂಗೂನಿಗೂ ಮಾಂಡಲೆಗೂ ಮಧ್ಯಮಾರ್ಗದಲ್ಲಿ ರೈಲನ್ನು ಉರುಳಿಸಬೇಕೆಂಬ ಉದ್ದೇಶದಿಂದ ಯಾರೋ ಕೆಲವು ಜನರು ದುಷ್ಟರು ರೈಲುಕಂಬಿಗೆ ಅಡ್ಡಲಾಗಿ ಎರಡುಸ್ಥಳಗಳಲ್ಲಿ ಮರದ ದಿಮ್ಮಿಗಳನ್ನು ಹಾಕಿದ್ದರು. ರೈಲ್ವೇನೌಕರರು ರೈಲುಬರುವುದಕ್ಕೆ ಮುಂಚಿತವಾಗಿಯೇ ಅದನ್ನು ನೋಡಿದ್ದರಿಂದ ಯಾವ ಅನಾಹುತವೂ ಆಗಲಿಲ್ಲ. ಪೋಲೀಸರು ಇದಕ್ಕೆ ಮೂಲಕಾರಣರಾದವರನ್ನು ಪತ್ತೆಮಾಡುತ್ತಿರುವರು.

ಅದ್ಭುತವಾದ ಮೀನು!

ಬಂಗಾಳಾ ಪ್ರಾಂತದಲ್ಲಿರುವ ಧಾಲೇಶ್ವರೀ ನದಿಯಲ್ಲಿ 20 ಅಡಿ ಉದ್ದವಾಗಿಯೂ 30 ಮಣ ತೂಕವಾಗಿಯೂ ಇರುವ ಒಂದು ಅದ್ಭುತಾಕಾರದ ಮೀನು ದೊರಕಿರುವದಂತೆ! ಇದಕ್ಕೆ ಬಹಳ ಹರಿತವಾದ ಹಲ್ಲುಗಳೂ ಆನೆಗಿರುವಂತೆ ಎರಡು ದೊಡ್ಡ ಕಿವಿಗಳೂ, ಎರಡು ಪಕ್ಕಗಳಲ್ಲಿಯೂ 5-6 ಅಡಿ ಉದ್ದವಾದ ಎರಡು ರೆಕ್ಕೆಗಳೂ, ಏಕಕಾಲದಲ್ಲಿ ಇಬ್ಬರು ಮನುಷ್ಯರನ್ನು ನುಂಗಬಹುದಾದಷ್ಟು ದೊಡ್ಡ ಬಾಯಿಯೂ ಇರುವುದಂತೆ!

ಮಹಾದೇವನ ಚಕ್ರ!

ಈಗ್ಗೆ ಕೆಲವು ದಿವಸಗಳ ಹಿಂದೆ ಅಲಹಾಬಾದಿನಲ್ಲಿ ಬೆಳಗ್ಗೆ 6-30 ಗಂಟೆಯ ಸಮಯದಲ್ಲಿ ಸೂರ್ಯನು ಗಿರಗಿರನೆ ಸುತ್ತುತ್ತಿದ್ದನಂತೆ! ಆ ಕಾಲದಲ್ಲಿ ಸೂರ್ಯನ ಸುತ್ತಲೂ ನೀಲಿಬಣ್ಣದ ಛಾಯೆಯು ಕಾಣಿಸುತ್ತಿತ್ತಂತೆ! ಸಹಸ್ರಾರು ಜನರು ಈ ವಿಚಿತ್ರದೃಶ್ಯವನ್ನು ನೋಡಿ ಪ್ರಪಂಚದಲ್ಲಿ ಯಾವುದೋ ಮಹಾನರ್ಥವು ಸಂಭವಿಸುವದೆಂದು ಭೀತರಾದರೆಂದೂ, ಕೆಲವರು ಅದನ್ನು 'ಮಹಾದೇವನ ಚಕ್ರ' ವೆಂದು ಹೇಳಿದರೆಂದೂ, ಸ್ವಲ್ಪ ಹೊತ್ತಿನ ನಂತರ ಸುತ್ತುವ ವೇಗವು ಕಡಿಮೆಯಾಗಿ ಕ್ರಮೇಣ ನಿಂತುಹೋಯಿತೆಂದೂ ತಿಳಿದುಬಂದಿದೆ.

ಆಲ್ಪ್ಸ್‌ಪರ್ವತದಲ್ಲಿ ರಕ್ತವರ್ಣದಮಳೆ!

ಇಟಲಿದೇಶದಲ್ಲಿರುವ ಆಲ್ಪ್ಸ್‌ಪರ್ವತದಲ್ಲಿ ಕೆಲವು ದಿವಸಗಳ ಹಿಂದೆ ರಕ್ತವರ್ಣದ ಮಳೆಯು ಸುರಿಯಿತಂತೆ! ಆಲ್ಪ್ಸ್‌ಪರ್ವತ ಪ್ರಾಂತದಲ್ಲಿ ವಾಸವಾಗಿದ್ದ ಮೇರಿಯಾ ರಂಪಾಜಿ ಎಂಬ 10 ವರ್ಷದ ಹುಡುಗಿಯು ತನ್ನ ಗ್ರಾಮದ ಹೊರಗೆ ಕಾರಣಾಂತರದಿಂದ ಸಂಚರಿಸುತ್ತಿದ್ದಾಗ ಆಕಾಶದಲ್ಲಿ ಕಾರ್ಮುಗಿಲು ಕವಿದುದನ್ನು ಕಂಡು ಮನೆಯ ಕಡೆಗೆ ಓಡಲಾರಂಭಿಸಿದಳು. ಮನೆಯ ಸಮೀಪಕ್ಕೆ ಬರುವವೇಳೆಗೆ ಮಳೆಯು ಹನಿಯಲಾರಂಭಿಸಿತು. ಮಳೆಯ ಹನಿಗಳೆಲ್ಲವೂ ಕೆಂಪಾಗಿದ್ದುವು. ಹುಡುಗಿಯು ಘಾಬರಿಯಾಗಿ 'ರಕ್ತದ ಮಳೆ' ಯು ಸುರಿಯುತ್ತಿರುವದೆಂದು ಕಿರಚಿದಳು. ಗ್ರಾಮದವರೆಲ್ಲರೂ ಹೊರಗೆ ಬಂದು ನೋಡಲು ನಿಜವಾಗಿಯೂ ಮಳೆಯ ಹನಿಗಳು ರಕ್ತದಂತೆ ಕೆಂಪಾಗಿದ್ದುವಂತೆ! ಈಚೆಗೆ ಇಟಲಿ ಸರಕಾರದವರು ಸುತ್ತುಮುತ್ತಲ ಪ್ರದೇಶಗಳ ಹವಾ ಸ್ಥಿತಿಯನ್ನು ವಿಚಾರಮಾಡಿ, ಮಳೆಬಿದ್ದ ಸ್ಥಳಕ್ಕೆ 800 ಮೈಲುಗಳ ದೂರದಲ್ಲಿರುವ ಸಹರಾ ಮರುಭೂಮಿಯಲ್ಲಿ ಭಯಂಕರವಾದ ಬಿರುಗಾಳಿಯೆದ್ದು ಅಲ್ಲಿಂದ ಅಪಾರವಾದ ಮರಳನ್ನು ತಂದಿತೆಂದೂ, ಆ ಮರಳು ಕೆಂಪುಬಣ್ಣವಾಗಿದ್ದು, ಅದು ಮಳೆ ಹುಯ್ಯುವ ಕಾಲಕ್ಕೆ ಸರಿಯಾಗಿ ನೀರಿನೊಡನೆ ಸೇರಿದ್ದರಿಂದ ಮಳೆಯು ಕೆಂಪಾಗಿ ಕಾಣಿಸಿತೆಂದೂ, ಪ್ರಸಿದ್ಧಪಡಿಸಿರುವರು.

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ದಿವಾನರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಮೇ 6 ನೇ ತಾರೀಖು ಭಾನುವಾರದ ಬೆಳಗ್ಗೆ 8-30 ಘಂಟೆಗೆ ಕರ್ನಾಟಕಸಾಹಿತ್ಯ ಪರಿಷತ್ತಿನ ಆರಂಭೋತ್ಸವವನ್ನು ನೆರವೇರಿಸುವರು. ಪರಿಷತ್ತು 6, 7, 8, 9, 10, 11, ಮತ್ತು 12, ಈ 7 ದಿನಗಳ ವರೆಗೆ ನಡೆಯುವದು. ಪ್ರತಿ ದಿವಸ ಪ್ರಾತಃಕಾಲ 8-30 ರಿಂದ 11 ರವರೆಗೆ ಉಪನ್ಯಾಸವೂ ಮಧ್ಯಾಹ್ನ 3 ರಿಂದ 5 ರ ವರೆಗೆ ಸಂಗೀತ, ಕಾವ್ಯವಾಚನ ಮತ್ತು ವಿಜ್ಞಾನ ಕಾರ್ಯಶಾಲೆಗಳ ಗೋಷ್ಠಿವೂ ಸಾಯಂಕಾಲ 5-30 ರಿಂದ 8 ರ ವರೆಗೆ ಮತ್ತೆ ಉಪನ್ಯಾಸವೂ ಏರ್ಪಡಿಸಲ್ಪಟ್ಟಿರುವುವೆಂದೂ ಪ್ರತಿ ದಿವಸ ಬೆಳಗ್ಗೆ 8 ರಿಂದ 11 ರ ವರೆಗೆ ಮತ್ತು ಮಧ್ಯಾಹ್ನ 4 ರಿಂದ 7 ರ ವರೆಗೆ ಗ್ರಂಥಪ್ರದರ್ಶನವು ನಡೆಯುವದೆಂದೂ, ಪರಿಷತ್ತಿನ ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಸಂಸ್ಕೃತಸಾಹಿತ್ಯದಲ್ಲಿ ಶಿವ.

(' ಶಿವಾಂಕ 'ದಿಂದ)

" ಕಾವ್ಯತೀರ್ಥ ಚಂದ್ರಶೇಖರಶರ್ಮಾ ಆರಾಧ್ಯಮಠ "

(ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀ ಕ್ಷೇತ್ರ ಕಾಶಿ)

(ಹಿಂದಿನಿಂದ ಮುಂದುವರಿದುದು)

ಶಿವನ ವಿವಾಹವು ಪುರಾಣಗಳಲ್ಲಿ ಸಂಪೂರ್ಣವಾಗಿ ದೊರೆತಾಗ್ಯೂ ಕಾಳಿದಾಸನ ಲೇಖನಿಯಿಂದ ಯಾವದು ಹೊರಟಿದೆಯೋ ಅದು ಒಂದು ಅದ್ಭುತವಾದ ವಸ್ತುವೇ ಆಗಿ ಹೋಗಿದೆ. ರಕ್ಷಿತರೀಕ್ಷಿತ ಮಹಾಕವಿಯಾದ ತುಳಸೀದಾಸನು ಇದನ್ನು ಪ್ರತಿಯೊಂದು ಸ್ಥಾನದಲ್ಲಿ ತೆಗೆದುಕೊಂಡಿದ್ದಾರೆ. ಎಲ್ಲಿ ಕಾಳಿದಾಸನ ಸೂಕ್ತಿಗಳ ಅನುವಾದವು ಬಂದಿದೆಯೋ ಅಲ್ಲಿ ಕವಿತೆಯು ಅತ್ಯಂತ ಉಜ್ವಲಸ್ವರೂಪವನ್ನು ಹೊಂದಿದೆ. ಕಾಳಿದಾಸನ ಶಿವ ಚರಿತ್ರೆಯು ಅವರಿಗೆ ಯೋಗ್ಯವೇ ಆಗಿ ತೋರಿದೆ. ಆದರೆ ಕವನಗಳಲ್ಲಿ ಯಾವದು ಒಂದು ತರಹದ ಲಹರಿಯು ಇರುತ್ತದೆಯೋ ಅದರಿಂದ ಅವನೂ ಕೂಡ ಉಳಿಯಲು ಶಕ್ಯವಾಗಿಲ್ಲ. ಶಿವಿಯ ಸೂಕ್ತಿ ಪ್ರವಾಹವು ಯಾವಾಗ್ಯೆ ನಡೆಯಲು ಪ್ರಾರಂಭವಾಗುತ್ತದೆಯೋ ಅದರಲ್ಲಿ ಮತ್ತೆ ಕಲ್ಪನಾತರಂಗಗಳು ಏಳಹುತ್ತವೆಯೋ ಅವಾಗ್ಯೆ ಅವನು ಎಲ್ಲವನ್ನೂ ಮರೆತುಬಿಡುತ್ತಾನೆ. ಅವನಿಗೆ ಆಕಾಲಕ್ಕೆ ಒಂದು ಅಲೌಕಿಕವಾದ ಭಾವದ ಆವೇಶವು ಉತ್ಪನ್ನವಾಗುತ್ತದೆ. ಪ್ರತಿಭೆಯು ಒಂದು ತರಹದ ಹುಚ್ಚುತನವದೆ ಎಂದು ಕವಿಗಳು ಅಂದಿದ್ದಾರೆ. ಅಸ್ತು. ಕಾಳಿದಾಸನು ಒಂದು ಕಡೆಗೆ ಹೀಗೆ ಅಂದಿದ್ದಾನೆ

> ಸಹಿ ದೇವಃ ಪರಂ ಜ್ಯೋತಿಸ್ತಮಃ ಪಾರೇ ವ್ಯವಸ್ಥಿತಂ |
> ಪರಿಚ್ಛಿನ್ನಪ್ರಭಾವರ್ದ್ಧಿರ್ನ ಮಯಾ ನ ಚ ವಿಷ್ಣುನಾ ||

ಆ ಮಹಾದೇವನು ತಮೋಗುಣಾತೀತವಾದ ಜ್ಯೋತಿಸ್ವರೂಪನಿದ್ದಾನೆ. ಅವನ ಮಹಿಮೆಯನ್ನು ವಿಷ್ಣುವೂ ತಿಳಿಯುವುದಿಲ್ಲ. ನಾನೂ ತಿಳಿಯುವುದಿಲ್ಲ. ಹೀಗೆಯೇ ಬ್ರಹ್ಮನಿಂದಲೂ ಪರಮಾತ್ಮನ ಸ್ತುತಿಯು ' ಯತೋವಾಚೋ ನಿವರ್ತಂತೆ ಅಪ್ರಾಪ್ಯಮನಸಾಸಹ ' ಎನ್ನುವ ರೂಪದಲ್ಲಿ ಮಾಡಿಸಲ್ಪಡುತ್ತದೆ. ಮತ್ತು ಶೃಂಗಾರದ ವರ್ಣನೆಯನ್ನು ಅತ್ಯಂತ ಸ್ಪಷ್ಟರೀತಿಯಾಗಿ ಮಾಡುವದರಿಂದ ಅವನ ಮೇಲೆ ಸಾಹಿತ್ಯನಿಬಂಧಕಾರರು 'ಶಿವೋಃ ಸಂಭೋಗವರ್ಣನಮಿನಾತ್ಯಂತಮನುಚಿತಂ' ಎಂಬುವ ನೇಮವನ್ನು ಹಚ್ಚುವ ಪ್ರಸಂಗವು ಬರುತ್ತದೆ.

ಕಾಳಿದಾಸನೊಬ್ಬನೇ ಅಲ್ಲ ಸಂಸ್ಕೃತಸಾಹಿತ್ಯದ ಅನೇಕ ಉತ್ತಮಕವಿಗಳು ಶಿವನ ವರ್ಣನೆಯನ್ನು ಅನೇಕಪ್ರಕಾರವಾಗಿ ಮಾಡುತ್ತಾ ಯಾವ ವಿಷಯಗಳನ್ನು ಅವರು ತೆಗೆದುಕೊಂಡು ಕವಿತೆಗಳನ್ನು ಮಾಡಲಿಕ್ಕೆ ಕೂಡ್ರುವರೋ ಅವಾಗ್ಯೆ ಕಲ್ಪನಾತರಂಗಗಳಲ್ಲಿ ಹರಿದುಹೋಗಿ ತಮ್ಮ ಮುಖ್ಯ ಉದ್ದೇಶವನ್ನೇ ಮರೆತುಬಿಡುತ್ತಾರೆ. ಶಿವನ ವಿಷಯಕವಾದ ಭಕ್ತಿಭಾವವನ್ನು ತೆಗೆದುಕೊಂಡು ಕವಿತ್ವದ ಮಂಗಳಾಚರಣವನ್ನು ಪ್ರಾರಂಭಿಸುತ್ತಾರೆ. ಮತ್ತು ಶ್ರೀ ಶಿವನು ಎಲ್ಲಾ ತರಹದ ಅಮಂಗಲಗಳನ್ನು ಹೋಗಲಾಡಿಸುವನೆಂದು ಮನಸ್ಸಿನಲ್ಲಿ ಇಚ್ಛಿಸುತ್ತಾರೆ. ಆದರೆ ರಚನೆಯಲ್ಲಿ ನೋಡಿದರೆ ಆಶ್ಚರ್ಯಕ್ಕೆ ಸೀಮೆಯೇ ಇರುವದಿಲ್ಲ. ಏನೂ ಅಡ್ಡಿ ಇಲ್ಲ ! ಯಾವ ಭಾವದಿಂದಲಾದರೂ ಪರಮಾತ್ಮನ ಭಜನೆಯನ್ನು ಮಾಡಲಿ. ಅವನು ಅವರಿಗೆ ಮಂಗಲವನ್ನೇ ಉಂಟುಮಾಡುತ್ತಾನೆ. ಇದರಲ್ಲಿ ಏನೂ ಸಂದೇಹವಿಲ್ಲ. ಒಳ್ಳೇದು ಪಾರ್ವತೀಪತಿಯು ಭೋಲಾನಾಥನಿದ್ದಾನೆ. ಅವನು ಭಕ್ತರಿಗೆ ಒಳ್ಳೆಯದನ್ನುಂಟುಮಾಡುವನೋ ? ಯಾವ ಶಿವನು ಕೇವಲ ಬಂ, ಬಂ, ಎಂದು ಅನ್ನುವದರಿಂದಲೇ ಸಂತೋಷಪಡುತ್ತಾನೆಯೋ ಅಂಥ ಶಿವನ ದಯಾಳುತನಕ್ಕೆ ಬೆಲೆ ಎಲ್ಲಿದೆ ? ಪರಂತು ಕವಿಗಳು ತಮ್ಮ ಕಲ್ಪನೆಯಿಂದ ಯಾವ ಯಾವ ವಿಶೇಷಣಗಳು ಅವನಿಗೆ ಹತ್ತುತ್ತವೆಯೋ ಅವನ್ನೇ ಹೇಳಿ ಅವರು ವಿಶ್ರಾಂತಿಯನ್ನು ಹೊಂದುತ್ತಾರೆ. ಒಬ್ಬಾನೊಬ್ಬ ಕವಿಯ ಮಂಗಲಾಚರಣವು ಹೀಗೆ ಅದೆ—

> ಭಸ್ಮಾಂಭೋರಗಭೂಷ್ಯ ಶಿಸ್ಪುಟಿಭವದ್ಭಾಲಕ್ಷ್ವೈಶ್ವಾನರ |
> ಜ್ವಾಲಾಸ್ವಿನ್ನಸುಧಾಂಶು ಮಂಡಲಗಲತ್ಪೀಯೂಷಧಾರಾರಸೈಃ ||
> ಸಂಜೀವದ್ಗಜಚರ್ಮಗರ್ಜಿತ ಭಯಭ್ರಾಮ್ಯದ್ವೃಷಾಕರ್ಷಣ |
> ವ್ಯಾಸಕ್ತಃ ಸಹಸಾದ್ರಿಜೋಪಹಸಿತೊ ನಗ್ನೋ ಹರಃ ಪಾತುವಃ ||

ಶಿವನ ದೇಹದಲ್ಲಿ ಲೇಪಿಸಿದ ಭಸ್ಮವು ಕೊರಳಲ್ಲಿ ಸುತ್ತಿದ ಸರ್ಪದ ಕಣ್ಣಲ್ಲಿ ಬೀಳಲು ಕಣ್ಣುಗಳು ಕಾಣದಂತಾಗಿ ಹೆದರಿ ಅದು ಒಳ್ಳೇ ಜೋರಿನಿಂದ ಫೂತ್ಕಾರವನ್ನು ಮಾಡುತ್ತದೆ. ಈ ಫೂತ್ಕಾರದಿಂದ ಹಣೆಯಲ್ಲಿದ್ದ ಅಗ್ನಿನೇತ್ರವು ಪ್ರಜ್ವಲಿಸುತ್ತದೆ. ಅದರ ಜ್ವಾಲೆಯಿಂದ ಮಸ್ತಕದಲ್ಲಿದ್ದ ಚಂದ್ರಬಿಂಬವು ಕರಗಿ ಅಮೃತವು ಸೋರಹತ್ತುತ್ತದೆ. ಅಮೃತಬಿಂಬವು ಬೀಳುತ್ತಲೆ ಮೈಮೇಲೆ ಹೊತ್ತ ಗಜಚರ್ಮವು ಸಜೀವವಾಗುತ್ತದೆ. ಪ್ರಾಣ ದುಂಬಿದ ಆನೆಯ ಗರ್ಜನೆಯನ್ನು ಕೇಳಿ ಸವಾರಿಯ ಎತ್ತು ಓಡಲಿಕ್ಕೆ ಹತ್ತುತ್ತದೆ. ಶಿವನು ಈ ಉಪದ್ರವದಿಂದ ಹೆದರಿ ಒಳ್ಳೇ ಕಷ್ಟದಿಂದ ಎತ್ತನ್ನು ತಡೆಯುತ್ತಾನೆ. ಆದರೆ ಬತ್ತಲೆಯಾದ ಶ್ರೀ ಶಿವನ ಈ ಕೌತುಕವನ್ನು ನೋಡಿ ಶ್ರೀ ಪಾರ್ವತಿಯ ನಗೆಯು ತಡೆಯುವದಿಲ್ಲ. ಪಾರ್ವತಿಯಿಂದ ಉಪಹಾಸ್ಯಮಾಡಲ್ಪಟ್ಟ ಆ ಶಿವನು ನಮ್ಮ ರಕ್ಷಣೆಯನ್ನು ಮಾಡಲಿ !

ಕವಿಯು ಯಾವುಗಳ ಪರಸ್ಪರ ಸಂಬಂಧದಮೇಲೆ ಅನೇಕ ಕಲ್ಪನೆಗಳನ್ನು ಮಾಡಿದ್ದಾನೆಯೋ ಆ ಶಿವನ ಉಪಕರಣಗಳಾದ ಸರ್ಪ, ವೃಷಭ, ಗಜಚರ್ಮ ಇವು ಬಹು ವಿಚಿತ್ರವಾಗಿವೆ.

> ವಿಷ್ಣೋರಾಗಮನಂ ನಿಶಮ್ಯ ಸಹಸಾ ಕೃತ್ವಾ ಫಣೀಂದ್ರಂ ಗುಣಂ|
> ಕೌಪೀನಂ ಪರಿಧಾಯ ಚರ್ಮಕರಿಣಸ್ತ್ಯಾಗಮಸ್ತ್ಯುಮ್ಯುಖಂ ||
> ದೃಷ್ಟ್ವಾ ವಿಷ್ಣುರಥಂ ಸಕಂಪಹೃದಯಃ ಸರ್ಪೋsಪತದ್ಭೂತಲೇ |
> ಕೃತ್ತಿರ್ವಿಸ್ಖಲಿತಾ ಹ್ರಿಯಾ ನತಮುಖೋ ನಗ್ನೋ ಹರಃ ಪಾತುವಃ

ಶಿವನು ದರ್ಶನಕ್ಕೆ ಬರತಕ್ಕ ವಿಷ್ಣುವಿನ ವಾರ್ತೆಯನ್ನು ಕೇಳಿ ಶೀಘ್ರವಾಗಿ ಸರ್ಪವನ್ನೇ ನಡಕಟ್ಟ (ಉಡದಾರ) ನ್ನಾಗಿ ಮಾಡಿಕೊಂಡು ಗಜಚರ್ಮದ ಕೌಪೀನವನ್ನು ಹಾಕಿಕೊಂಡು ಅತ್ಯಂತ ಪ್ರೇಮಭಾವದಿಂದ ಇದುಗೋಳ್ಳುವದರ ಸಲುವಾಗಿ ಹೋದನು. ಸರ್ಪವು ವಿಷ್ಣುವಿನ ವಾಹನವಾದ ಗರುಡನನ್ನು ನೋಡಿ ಹೆದರಿಕೆಯಿಂದ ಜಾರಿ ಭೂಮಿಯಮೇಲೆ ಬೀಳಲು ಅದರ ಆಶ್ರಯದಿಂದ ನಿಂತ ಕೌಪೀನವೂ ಜಾರಿ ಬಿದ್ದಿತು. ಅದರಿಂದ ಶಿವನು ನಗ್ನನಾದನು. ಅದೇ ಕಾರಣ ಲಜ್ಜೆಯಿಂದ ಬಾಗಿದ ಹರಶಿವನು ನಮ್ಮೆಲ್ಲರ ರಕ್ಷಣೆಯನ್ನು ಮಾಡಲಿ.

ಸಂಸ್ಕೃತ ಕವಿಗಳು ಭಕ್ತಿಭಾರದಿಂದ ತುಂಬಿಕೊಂಡವರಾಗಿ ಶಿವನ ಗುಣಸ್ತೋತ್ರವನ್ನು ಮಾಡಿರುವದಿಲ್ಲವೆಂಬುವ ಮಾತೇನೂ ಇಲ್ಲ. ಅವರು ಶಿವವಿಷಯಕವಾದ ಪ್ರೇಮಭಾವದಿಂದ ಯಾವ ಸಮಯಕ್ಕೆ ಪದ್ಯಗಳನ್ನು ರಚಿಸಲಿಕ್ಕೆ ಕೂಡ್ರುವರೋ ಆ ಸಮಯಕ್ಕೆ 'ಪ್ರಹೃಷ್ಯದ್ರೋಮಾಣಃ ಪ್ರಮುದ ಸಲಿಲೋತ್ಸಂಗಿತದೃಶಃ' ಅವರಿಗೆ ರೋಮಾಂಚನವಾಗುವದಲ್ಲದೆ ಕಣ್ಣುಗಳಿಂದ ಪ್ರೇಮದ ರಸವು ಹರಿಯಹತ್ತುತ್ತದೆ. ಆದರೆ ಯಾವಾಗ್ಯೆ ಅವರು ಕವಿತೆಯ ತರಂಗಗಳಲ್ಲಿ ಹರಿಯಲು ಹತ್ತುತ್ತಾರೆಯೋ. ಆ ಸಮಯಕ್ಕೆ ಶಿವನ ವಿಷಯಕವಾದ ಭಾವನೆಯು ಹಿಂದೆ ಉಳಿಯುತ್ತದೆ. ಮತ್ತು ಕಲ್ಪನೆಯಲಹರಿಯು ಅವರನ್ನು ಮುಂದೆ ಒಯ್ಯುತ್ತದೆ.

ಸಂಸ್ಕೃತಸಾಹಿತ್ಯದಲ್ಲಿ ಶಿವನ ವಿಷಯಕ ವರ್ಣನೆಯಮೇಲೆ ಯಾವ ಯಾವ ನವೀನ ಕಲ್ಪನೆಗಳು ಆಗಿರುತ್ತವೆಯೋ ಅವುಗಳ ವಿಷಯಕ್ಕೆ ಕೆಳಗೆ ಸ್ವಲ್ಪ ಬರೆಯಲು ಇಚ್ಛಿಸುತ್ತೇನೆ. ಪರಂತು ಲೇಖದಲ್ಲಿ ವಿಸ್ತಾರವಾಗಬಾರದೆಂಬ ಭಯದ ಭೂತವು ಉತ್ಸಾಹವನ್ನು ಕಡಿಮೆಮಾಡುತ್ತದೆ.

ಕಾವ್ಯದ ಆತ್ಮವು " ರಸ " ವಿರುತ್ತದೆ. ಆ ರಸವು ಯಾವದಾದರೊಂದು ಅರ್ಥಗತ ಚಮತ್ಕಾರದ ಹೊರತು ಇರಲು ಶಕ್ಯವಿಲ್ಲ. ಈ ಕಾರಣದಿಂದ ಚಮತ್ಕಾರ ರೂಪವಾದ ನವೀನತ್ವವನ್ನು ತರುವದಕ್ಕೋಸ್ಕರ ಕವಿಗಳು ಅನೇಕ ಕಲ್ಪನೆಗಳನ್ನು ಮಾಡುತ್ತಾರೆ. ಒಂದುಪಕ್ಷ ಅವನು " ಔಚಿತ್ಯ " ದ ಹದ್ದನ್ನು ಮೀರಿದ್ದರೂ ಕಲ್ಪನೆಯಲ್ಲಿ ಕವಿಗೆ ಪೂರ್ಣಸ್ವಾತಂತ್ರ್ಯವಿರುತ್ತದೆ. "ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ" ಅಪಾರವಾಗಿರತಕ್ಕ ಕಾವ್ಯದ ಜಗತ್ತಿನಲ್ಲಿ ಕವಿಯೇ ಬ್ರಹ್ಮನಾಗಿದ್ದಾನೆ. ಜನಸಮೂಹವನ್ನು ರಂಜಿಸುವದಕ್ಕೋಸ್ಕರ ' ಯಥಾದೇಹೇ ತಥಾ ದೇವೇ ' ಎನ್ನುವಂತೆ ಕವಿಯು ದೇವರ ಚರಿತ್ರೆಗಳನ್ನು ಕೂಡ ಮಾನುಷ ಚರಿತ್ರಗಳಂತೆ ರಚಿಸುತ್ತಾನೆ. ಇದೇ ಆಧಾರವನ್ನೇ ಹಿಡಿದು ಶಿವನ ವರ್ಣನೆಯ ಮೇಲೆಯೂ ಕವಿಗಳು ನಾನಾ ಕಲ್ಪನೆಗಳನ್ನು ಮಾಡುತ್ತಾರೆ.

ಜಗಜ್ಜನನಿಯಾದ ಪಾರ್ವತಿಯಿಂದ ಷಣ್ಮುಖನ ಜನ್ಮವು ಆಗಿದೆ. ಪರಂತು ಸಾಮಾನ್ಯ ಗರ್ಭಿಣೀಸ್ತ್ರೀಯರಂತೆ ಪಾರ್ವತಿಗೆ ಪ್ರಸವವೇದನೆಯ ದುಃಖವನ್ನು ಅನುಭವಿಸುವ ಪ್ರಸಂಗವು ಬಂದಿಲ್ಲ. ಶಿವನ ಮನೆಯಲ್ಲಿ ಜನನದ ಸಮಯಕ್ಕೆ ಯಾರಿಗೂ ಯಾವ ಕಷ್ಟವಿದ್ದಿಲ್ಲ. ಮನೆಯ ಜನರು ಮತ್ತು ಸೇವಕರು ಹೊರಗೆ ಕೂತುಕೊಂಡು ನೋಡೋಣ, ದೇವಿಗೆ ಪುತ್ರನು ಜನಿಸುವನೋ ಅಥವಾ ಪುತ್ರಿಯು ಜನಿಸುವಳೋ ಎಂಬುವ ಗಡಿಬಿಡಿಯಲ್ಲಿಯೂ ಇದ್ದಿಲ್ಲ. ಸಾಮಾನ್ಯವಾಗಿ ಸಾಧಾರಣ ಸಿದ್ಧಿಯುಳ್ಳವರೂ ಪುತ್ರನು ಜನಿಸುವನು ಅಥವಾ ಪುತ್ರಿಯು ಜನಿಸುವಳೆಂದು ಹೇಳಿದ ಮೇಲೆ ಶಿವನ ಪರಿವಾರದ ಜನರಿಗೆ ಇದೂ ಕೂಡ ಗೊತ್ತಿದ್ದಿಲ್ಲವೇ ? ದೇವತೆಗಳು ತಾರಕಾಸುರನ ವಿಜಯಕ್ಕೋಸ್ಕರವೇ ಪರಮಾತ್ಮನಲ್ಲಿ ಪುತ್ರಸಂತತಿಯನ್ನು ಮೊದಲೇ ನಿಶ್ಚಯಮಾಡಿಕೊಂಡಿದ್ದರು. ಅದ್ದರಿಂದಲೇ ಶಿವನ ಲಗ್ನದ ಯೋಜನೆಯೂ ಕೂಡ ಮಾಡಲ್ಪಟ್ಟಿತ್ತು. ಆದರೆ ಚಮತ್ಕಾರಕ್ಕೋಸ್ಕರ ಕವಿಯು ಗೃಹಸ್ಥರ ಮನೆಯಂತೆ ರಚಿಸಿದ್ದಾನೆ. ಇದೇ ಕಾರಣದಿಂದಲೇ ಇಂಥ ಕವಿಯು ' ಅರ್ಥಕವಿ ' ಎಂದು ಹೇಳಲ್ಪಡುತ್ತಾನೆ. ಇದರ ಸ್ವಲ್ಪ ಪರಿಚಯವನ್ನು ಕೆಳಗೆ ನೋಡಿರಿ.

' ಕಲ್ಯಾಣ ' ದ ಉದ್ದೇಶದಿಂದ ಲೇಖದ ಎಲ್ಲಾ ಉದಾಹರಣೆಗಳು ಆಶೀರ್ವಾದ ಪೂರ್ವಕಗಳಾದ ಮಂಗಲಾಚರಣೆಗಳಿಂದಲೇ ಉದಾಹರಿಸಲ್ಪಡುತ್ತವೆ.

ಪಾರ್ವತಿಯು ಹೆರುವ (ಹಡೆಯುವ) ಕಾಲವಿರುತ್ತದೆ. ಶಿವನ ಪರಿವಾರದ ಎಲ್ಲ ಜನರು ಸೂತಿಕಾಗೃಹದ ಹೊರಭಾಗದಲ್ಲಿಯೇ ನಿಂತಿದ್ದಾರೆ. ಯಾರಿಗೂ ಯಾವ ಕಾರ್ಯ ಮಾಡಲಿಕ್ಕೂ ಮನಸ್ಸಾಗಲೊಲ್ಲದು. ದೇವಿಗೆ ಪುತ್ರನು ಜನಿಸುವನೋ ಅಥವಾ ಪುತ್ರಿಯು ಜನಿಸುವಳೋ ಎಂದು ಎಲ್ಲರೂ ನೋಡುತ್ತ ನಿಂತಿದ್ದರು. ಪುತ್ರೋತ್ಸವಾದ ಸಂಗತಿಯನ್ನು ತಿಳಿಸತಕ್ಕವರು ಸೂತಿಕಾಗೃಹದ ಒಳಭಾಗದಲ್ಲಿಯೇ ಮುಚ್ಚಿಕೊಂಡಿದ್ದಾರೆ. ಸೂತಿಕಾಗೃಹದ ಹೊರಭಾಗದಲ್ಲಿ ಕಾವಲಿರುತ್ತಿಗೆ. ಆದರೆ ಅದರ ಹೊರಭಾಗದಲ್ಲಿಯೇ ಗಣಸಮೂಹವು ಕೂಡಿರುತ್ತದೆ. ನೋಡೋಣ ಸುದ್ದಿಯು

ಸಾಯಂಕಾಲ ಶ್ರೀ ಶಂಭುಲಿಂಗಶಿವಾಚಾರ್ಯರ ಪ್ರವಚನವು ನಡೆಯಿತು. ಅನಂತರ ರಾಜಧಾನೀ ನಿವಾಸಿಗಳಾಗಿರುವ ಕೊಟ್ಟೂರು ಬಸವಯ್ಯನವರ ಸಂಗೀತ ಕಚೇರಿಯು ನೆರವೇರಿತು. ಸದರಿ ಗಾಯಕರು ಜಗದಾಚಾರ್ಯರ ಕೀರ್ತನೆಗಳನ್ನು ಪಾಡಿ ತಮ್ಮ ಗಾನಮಾಧುರ್ಯದಿಂದ ಸದಸ್ಯವೃಂದವನ್ನು ಸಂತೋಷಸಾಗರದಲ್ಲಿ ಮುಳುಗಿಸಿಬಿಟ್ಟರು. ಆ ಮೇಲೆ ಹರಪನಹಳ್ಳಿ ಮರಿಕೊಟ್ಟೂರಯ್ಯನವರ ಸಂಗೀತವು ಮನೋಹರವಾಗಿ ನೆರವೇರಿ ಸಭೆಯು ಸಮಾಪ್ತಿಯನ್ನು ಹೊಂದಿತು. ಪ್ರತಿ ದಿವಸವೂ ಪ್ರಚಂಡಸಭೆಯು ಶ್ರೀಗಳವರ ಅಧ್ಯಕ್ಷತೆಯಲ್ಲಿ ನೆರವೇರುತ್ತಿದ್ದು, ಧಾರ್ಮಿಕವಿಷಯಗಳ ಮೇಲೆ ಮಹತ್ತ್ವದ ಭಾಷಣಗಳಾಗುತ್ತಿರುವುವು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರಿಗೆ ಬೆಂಗಳೂರು ಪುರಜನರು ಸಮರ್ಪಿಸಿದ ಬಿನ್ನವತ್ತಳೆ.

ಮಹಾಸ್ವಾಮಿ,

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾದ ನಮ್ಮಾ ವೀರಶೈವ ಮತವು ಪೂರ್ವಕಾಲದಲ್ಲಿ ಆಸೇತು ಹಿಮಾಚಲ ಪರ್ಯಂತವಾಗಿ ವಿಸ್ತರಿಸಿಕೊಂಡಿದ್ದಿತೆಂಬುದಕ್ಕೆ ಭರತಖಂಡದ ನಾನಾ ಭಾಗಗಳಲ್ಲಿ ವಿರಾಜಿಸುತ್ತ ವೀರಶೈವರಿಗೆ ಐಹಿಕಾಮುಷ್ಮಿಕ ಫಲಪ್ರದ ಕ್ಷೇತ್ರಗಳೆನಿಸಿರುವ (ರಂಭಾಪುರೀ) ಬಾಳೆಹೊನ್ನೂರು, ಉಜ್ಜಯಿನೀ, ಹಿಮವತ್ಕೇದಾರ, ಶ್ರೀಶೈಲ, ಕಾಶೀಕ್ಷೇತ್ರಗಳೆಂಬ ಪಂಚ ಪುಣ್ಯಕ್ಷೇತ್ರಗಳಲ್ಲಿ ಪಂಚ ಧರ್ಮಪೀಠಗಳು ಪ್ರಕಾಶಿಸುತ್ತಿರುವುದೇ ಬಲವಾದ ಸಾಕ್ಷಿಯಾಗಿದೆ. ಭಗವತ್ಪಾದರುಗಳಾದ ಶ್ರೀ ರೇಣುಕಾಚಾರ್ಯರೂ ಶ್ರೀ ಶಂಕರಾಚಾರ್ಯರೂ ವಿಶೇಷ ಮೈತ್ರೀಭಾವದಿಂದ ವರ್ತಿಸುತ್ತಿದ್ದು ಲೋಕಾನುಗ್ರಹ ಮಾಡಿದರೆಂಬ ಅಂಶವೂ, ಅದೇ ಬಗೆಯ ಮನೋಭಾವವೂ ಅದ್ಯಾಪಿ ಉಭಯ ಪೀಠಾಧಿಪತಿಗಳಲ್ಲಿಯೂ ಪರಸ್ಪರವಾಗಿ ನಡೆದು ಬರುತ್ತಿರುವ ಅಂಶವೂ ನಮ್ಮೆಲ್ಲರಿಗೂ ಹೆಮ್ಮೆಯನ್ನುಂಟುಮಾಡುವುದಾಗಿವೆ, ಮಹಾಸ್ವಾಮಿ.

ಸಮಸ್ತ ಪವಿತ್ರ ಕ್ಷೇತ್ರಗಳಿಗೂ ಮಸ್ತಕಮಣಿ[illegible]ನಿಸಿ ಖ್ಯಾತಿವೆತ್ತು ಭದ್ರತರ ಭದ್ರಾತೀರಭಾಸಮಾನವಾದ ಶ್ರೀಮದ್ರಂಭಾಪುರೀ ವೀರಸಿಂಹಾಸನದ ಮ[illegible] ಈಗ್ಗೆ ಕೆಲವು ದಿವಸಗಳ ಪೂರ್ವದಲ್ಲಿ ಅನಾಯಕ[illegible]ವನ್ನು ಹೊಂದಿ ಸೂರ್ಯನನ್ನು ಕಾಣದ ಕಮಲ[illegible] ತೇಜೋಹೀನವಾಗಿ ಪರಿಣಮಿಸಿದ್ದಿತು. ಇಂತಹ ಸ[illegible]ಯದಲ್ಲಿ ನಮ್ಮನ್ನಾಳುವ ಧರ್ಮಾವತಾರಿ ರಾಜ[illegible] ಪುಂಗವ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯ[illegible] ಬಹದ್ದೂರ್ ಮಹಾಪ್ರಭುಗಳವರು ಈ ಧರ್ಮಪೀ[illegible] ಹೀನಾವಸ್ಥೆಯನ್ನು ದಿವ್ಯಚಿತ್ತಕ್ಕೆ ತಂದುಕೊಂ[illegible] ದಯಾಳುಗಳಾದ ತಮ್ಮ ಘನ ಸರ್ಕಾರದವರಿ[illegible] ಒಂದು ಸಮಿತಿಯನ್ನು ಏರ್ಪಡಿಸಿ ವ್ಯಾಕರಣ ತೀ[illegible] ವಿದ್ಯಾಭೂಷಣಾದಿ ಪದವೀಧರರೂ, ಜಗದ್ಗುರು[illegible] ಲಕ್ಷಿತರೂ, ಆದ ತಮ್ಮನ್ನು ನಮ್ಮಾ ಜಗ[illegible] ಪೀಠಕ್ಕೆ ಅಧಿಪತಿಗಳನ್ನಾಗಿ ಮಾಡಿ ನಮ್ಮ [illegible] ಅಸಾಧಾರಣವಾದ ಗೌರವವನ್ನುಂಟುಮಾಡಿದುದರಿ[illegible] ಅಖಂಡ ವೀರಶೈವ ಸಮಾಜವೇ ಮಹಾಪ್ರಭುಗ[illegible]ರಿಗೆ ಚಿರಋಣಿಯಾಗಿರುವುದೆಂದು ಉದ್ಘೋಷಿ[illegible] ಅತ್ಯಾನಂದವೆನಿಸುತ್ತದೆ.

ಇತ್ತೀಚೆಗೆ ನಮ್ಮಾ ವೀರಶೈವಮತದ ವೈ[illegible] ವಿದ್ಯಾಪ್ರಸಾರವು ಕಡಿಮೆಯಾಗುತ್ತ ಬಂದಿರುವುದ[illegible] ಕಂಡು ಒಂದು ಸಂಸ್ಕೃತ ಕಾಲೇಜನ್ನು ಸ್ಥಾ[illegible]ವುದು ಅತ್ಯಾವಶ್ಯಕವಾ[illegible]ದು ಶ್ರೀ ಮಹಾಸ[illegible] ಯವರ ಪಟ್ಟಾಧಿಕಾರ ಕಾ[illegible]ದಲ್ಲಿ ಅಪ್ಪಣೆ ಕೊಡಿಸಿ[illegible] ಆ ಸತ್ಸಂಕಲ್ಪದ ಬೀಜ[illegible] ಅಂಕುರಿಸಿ[illegible] ಪಲ್ಲವಿಸಿ[illegible]ಸುವಂತೆ ಮಾಡಬೇಕೆಂದೂ, ಇದಕ್ಕಂಗ[illegible] ಒಂದು ಮಹಾಗ್ರಂಥಾಲಯವು ಸ್ಥಾಪಿತವಾಗಿ [illegible]ತರ ದ್ವಾರಾ ಧರ್ಮಗ್ರಂಥ ಸಂಶೋಧವು [illegible] ಮತಗ್ರಂಥಗಳು ಪ್ರಕಾಶಕ್ಕೆ ಬರುವಂತೆ ಮಾ[illegible]ಕೆಂದೂ, ಅವರಿಗೆ ನಾವೃತ್ತಿಗಳನ್ನೂ ಕಲ್ಪಿಸಿ [illegible] ಮತೀಯರನ್ನು ಪುಭಿವೃದ್ಧಿಗೆ ತರಬೇಕೆಂ[illegible] ಬೇಡಿಕೊಳ್ಳುತ್ತೇವೆ. ಸಂದರ್ಭದಲ್ಲಿ ಈ ಪುರನಿವಾಸಿಗಳಾದ ಮ|| ರಾ|| ಶ್ರೀ|| ಶಾಂತವೀರಪ್ಪನವರ ಬುಳ್ಳಪ್ಪನವರು ಸುಮಾರು ೨೦ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಬಾಳುವ ವಿಶಿಷ್ಟ ಆಸ್ತಿಯನ್ನು ಇಂಥ ಕಾರ್ಯಗಳಿಗಾಗಿ ಶ್ರೀ ಮಹಾಸನ್ನಿಧಾನಕ್ಕೆ ಒಪ್ಪಿಸಿರುವ ವಿಷಯವನ್ನು ಅರಿಕೆಮಾಡಲು ಸಂತೋಷಿಸುತ್ತೇವೆ.

ಜಗದ್ವಿಖ್ಯಾತವಾದ ವೀರಶೈವ ಮತವು ಪೂರ್ವದಲ್ಲಿ ಕಾಶ್ಮೀರ, ನೇಪಾಳ, ಕಾಶಿ, ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ದ್ರಾವಿಡ ದೇಶಗಳಲ್ಲೆಲ್ಲಾ ವಿಸ್ತರಿಸಿ, ಸುಮಾರು ೪೦ ಲಕ್ಷ ಮೇಲ್ಪಟ್ಟ ಪ್ರಜಾಸಂಖ್ಯೆಯಿಂದೊಡಗೊಂಡು ಇತ್ತೀಚೆಗೆ ಈ ಮತದ ಉನ್ನತಸ್ಥಿತಿಗೆ ನಾನಾಕಾರಣಗಳಿಂದ ಸ್ವಲ್ಪಮಟ್ಟಿಗೆ ಲೋಪವುಂಟಾಗಿರುವುದು ಮಹಾ ಸನ್ನಿಧಿಯ ಚಿತ್ತಕ್ಕೆ ವಿದಿತವಾಗಿಯೇ ಇದೆ. ಹೊರಗಿನ ಕಾರಣಗಳಿಂದ ಈ ಬಗೆಯ ತೊಂದರೆಯುಂಟಾಗಿರುವುದಲ್ಲದೆ ನಮ್ಮ ಮತದವರಲ್ಲಿಯೂ ಕೆಲವು ಕಾಲಗಳಿಂದ ಪರಸ್ಪರವಾಗಿ ಭಿನ್ನಭಾವನೆಗಳುಂಟಾಗಿ ಇತ್ತೀಚೆಗೆ ಕಾರಣಾಂತರಗಳಿಂದ ಸ್ವಲ್ಪ ಉಲ್ಬಣಸ್ಥಿತಿಗೆ ಬಂದಿರುವುದರಿಂದ ನಮ್ಮ ಪುರೋಭಿವೃದ್ಧಿಗೆ ಸ್ವಲ್ಪಮಟ್ಟಿಗೆ ಅಡ್ಡಿಯುಂಟಾಗಿದೆ. ಇದನ್ನು ತಪ್ಪಿಸಿ ಪೂರ್ಣವಾಗಿ ಏಕಮತ್ಯವನ್ನುಂಟುಮಾಡುವ ಭಾಗದಲ್ಲಿ ಮಹಾಸನ್ನಿಧಾನವೂ ಇತರ ಆಚಾರ್ಯರುಗಳೂ ಮತ್ತು ಪ್ರಧಾನ ಮಠಾಧಿಪತಿಗಳೂ ಪ್ರವರ್ತಿಸಿ ಅನುಗ್ರಹಿಸಬೇಕೆಂದು ನಮ್ಮೆಲ್ಲರ ಪ್ರಾರ್ಥನೆಯಾಗಿದೆ.

ರಾಜಸಭಾಭೂಷಣ,
ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆಟಿ. ಸಿ.
ಐ. ಇ, (ಅಧ್ಯಕ್ಷರು)
ರಾಜಧರ್ಮಪ್ರವೀಣ
ಪಿ. ಮಹದೇವಯ್ಯ, ಬಿ.ಎ., ಬಿ.ಎಲ್.,
ಬೆಂಗಳೂರು.

೨೭-೪-೩೪ ಇನ್ನಿತರರು.

ವರ್ತಮಾನಸಂಗ್ರಹ.

ಜರ್ಮನ್ ಸರಕಾರದವರು ಅನಾರ್ಯರಾರೂ ತಮ್ಮ ದೇಶದಲ್ಲಿ ವಾಸಮಾಡಕೂಡದೆಂದು ಒಂದು ಹೊಸ ಕಾನೂನನ್ನು ಮಾಡಿರುವರು.

ಸರ್ಬಿಯಾ ದೇಶಕ್ಕೆ ಸೇರಿದ ಸರಾಜೇವ್ರೋ ಎಂಬ ನಗರದ ಸಮೀಪದಲ್ಲಿರುವ ಕಲ್ಲಿದ್ದಲು ಗಣಿಯಲ್ಲಿ ದೊಡ್ಡ ಸಿಡಿತವುಂಟಾಗಿ 200 ಜನರು ಗಣಿಯೊಳಗೆ ಹೂತುಹೋದರು.

ಮದರಾಸ್ ನಗರದ ಮುನಿಸಿಪಾಲಿಟಿಯವರು ಮುನಿಸಿಪಲ್ ಆದಾಯವನ್ನು ಹೆಚ್ಚಿಸುವುದಕ್ಕೋಸ್ಕರ ಪರಸ್ಥಳದಿಂದ ಮದರಾಸಿಗೆ ಬರುವ ಜನರಮೇಲೆ ತೆರಿಗೆಯನ್ನು ಹಾಕಬೇಕೆಂದು ಆಲೋಚಿಸುತ್ತಿರುವರು.

ಪಂಜಾಬಿಗೆ ಸೇರಿದ ಲಯಲ್‌ಪುರದಲ್ಲಿ ಕೆಲವು ಜನರು ಒಂದು ಆಸ್ತಿಗೆ ಸಂಬಂಧಪಟ್ಟ ಜಗಳದಲ್ಲಿ 4 ಜನ ಪಠಾಣರನ್ನು ಕೊಲೆ ಮಾಡಿದರೆಂಬ ಕಾರಣದ ಮೇಲೆ ಸೆಷನ್ಸ್ ಜಡ್ಜರವರು ವಿಚಾರಣೆಯನ್ನು ನಡೆಸಿ 10 ಜನರಿಗೆ ಮರಣದಂಡನೆಯನ್ನೂ, 6 ಜನರಿಗೆ ಗಡೀಪಾರು ಶಿಕ್ಷೆಯನ್ನೂ ವಿಧಿಸಿರುತ್ತಾರೆ.

ದೆಹಲಿಯಲ್ಲಿ ಪ್ರಕಟವಾಗುವ 'ಪ್ರಿನ್ಸಿಸ್ಟ್ ಇಂಡಿಯಾ' ಎಂಬ ವರ್ತಮಾನಪತ್ರಿಕೆಯಲ್ಲಿ ನಾಭಾಸಂಸ್ಥಾನದ ಮಹಾರಾಣಿಯವರ ವಿಷಯದಲ್ಲಿ ಮಾನನಷ್ಟಕರವಾದ ವಿಷಯವು [illegible]ಕಟಿಸಲ್ಪಟ್ಟಿತೆಂಬ ಕಾರಣದ ಮೇಲೆ ಮದರಾಸ್ ಹೈಕೋರ್ಟ್ ಜಡ್ಜರವರು ವಿಚಾರಣೆಯನ್ನು ನಡೆಯಿಸಿ ಪ್ರಕಾಶಕರು ಮಹಾರಾಣಿ[illegible]ವರಿಗೆ 15,000 ರೂ. ನ ದಂಡವನ್ನು ಕೊಡಬೇಕೆಂದು ತೀರ್ಮಾನಮಾಡಿತ್ತಾರೆ.

ಗುರುದಾಸಪುರ ಜಿಲ್ಲೆಸೇರಿದ ಬಾತಳ ಎಂಬ ಗ್ರಾಮದಲ್ಲಿ ಕೆಲವು ದಿವಸ ಹಿಂದೆ ರಾಧಾಕೃಷ್ಣ ದೇವಾಲಯದಲ್ಲಿ ಪೂಜಾರು ದೇವಾಲಯವನ್ನು ಪ್ರವೇಶಿಸಿ ಪೂಜೆಯನ್ನು ಮಾಡುತ್ತಿರುವಾಗ ಬಾಗಿಲುಗಳು ತಾವಾಗಿಯೇ ಮುಚ್ಚಿಕೊಂಡವೆಂದೂ, ಯಾರು ಏನುಮಾಡಿದರೂ ಬಾಗಿಲನ್ನು ತೆಗೆಯುವುದಕ್ಕಾಗಲಿಲ್ಲವೆಂದೂ, ಸ್ವಲ್ಪ ಹೊತ್ತಿನನಂತರ ಒಬ್ಬ ಭಕ್ತನು ಬಾಗಿಲುಗಳನ್ನು ಮುಟ್ಟಲು ಅವು ತಾವಾಗಿ ತೆಗೆದುವೆಂದೂ ತಿಳಿದು ಬಂದಿದೆ.

ಭೂಕಂಪದ ಭಾವಿಗಳು !

ಕಳೆದ ಭೂಕಂಪದ ದೆಸೆಯಿಂದ ಚಂಪರಣ ಜಿಲ್ಲೆಯಲ್ಲಿ ಸುಮಾರು 150 ಅಡಿಗಳ ಸುತ್ತಳತೆಯುಳ್ಳ 10 ದೊಡ್ಡ ಭಾವಿಗಳು ನಿರ್ಮಾಣವಾಗಿರುವುವಂತೆ ! ಇವುಗಳ ತಳವೇ ಗೊತ್ತಾಗದಷ್ಟು ಆಳವಾಗಿದ್ದು, ನೀರು ಸೋಡಾ ನೀರಿನಂತಿರುವದಂತೆ ! ಆ ನೀರಿನ ಸೇವನೆಯಿಂದ ಪಚನಕ್ರಿಯೆಯು ಚೆನ್ನಾಗಿ ನಡೆಯುವದಂತೆ !

ಹುಲಿಗೂಹಂದಿಗೂ ಕದಿದಾಟ !

ಝಾನ್ಸಿನಗರದ ಸಮೀಪದಲ್ಲಿರುವ ಮಾಣಿಕ್ಯಪುರವೆಂಬ ಗ್ರಾಮದ ಹತ್ತಿರ ಕಾಡಿನಲ್ಲಿ ಕೆಲವು ದಿವಸಗಳ ಹಿಂದೆ ಒಂದು ಹುಲಿಗೂ ಕಾಡು ಹಂದಿಗೂ 13 ಗಂಟೆಗಳ ಕಾಲ ಕದಿದಾಟವಾಗಿ ಕಡೆಗೆ ಹಂದಿಯು ಮೃತಪಟ್ಟಿತೆಂದೂ, ಅನಂತರ ಶಕ್ತಿಗುಂದಿ ಬಿದ್ದ ಹುಲಿಯನ್ನು ಒಬ್ಬ ಪೋಲೀಸಿನವನು ಗುಂಡುಹೊಡೆದು ಕೊಂದನೆಂದೂ ತಿಳಿದುಬಂದಿದೆ.

ಕಪೂರ್ಥಲಾನಗರದಲ್ಲಿ ಮೊಹರಂಹಬ್ಬದಗಲಭೆ.

ಕಪೂರ್ಥಲಾ ನಗರದಲ್ಲಿ ಮೊಹರಂ ಹಬ್ಬದ ದಿವಸ ಮುಸಲ್ಮಾನರು ಪೋಲೀಸರಿಂದ ನಿರ್ಬಂಧಪಡಿಸಲ್ಪಟ್ಟಿದ್ದ ರಸ್ತೆಯಲ್ಲಿಯೇ ಮೆರವಣಿಗೆಯನ್ನು ತೆಗೆದುಕೊಂಡು ಹೋಗಲೆತ್ನಿಸಿ ಗಲಭೆಮಾಡಿದರು. ಪೋಲೀಸರು ಗತ್ಯಂತರವಿಲ್ಲದೆ ಗುಂಪನ್ನು ಚದುರಿಸಲು ಗುಂಡು ಹಾರಿಸಿದರು. ಇದರಿಂದ 13 ಜನರು ಮೃತಪಟ್ಟರು. 20 ಜನರಿಗೆ ತುಂಬಾ ಘಾಯಗಳಾಗಿರುವುವು.

ಸಂಯುಕ್ತಪ್ರಾಂತದಲ್ಲಿ ಬಿರುಗಾಳಿಯ ಹಾವಳಿ.

ಕಳೆದ ಮಂಗಳವಾರದ ದಿವಸ ಸಂಯುಕ್ತಪ್ರಾಂತಕ್ಕೆ ಸೇರಿದ ಹಾಪುರನಗರದಲ್ಲಿ ಭಯಂಕರ ಬಿರುಗಾಳಿಯು ತಲೆದೋರಿ ವಿಶೇಷ ಅನರ್ಥವುಂಟಾಗಿದೆ. ಅನೇಕರ ಮನೆಗಳ ಮೇಲ್ಛಾವಣಿಗಳು ಹಾರಿಹೋಗಿವೆ. ಮರಗಳು ಬೇರುಸಹಿತ ಕಿತ್ತುಹೋಗಿವೆ. ಜನರಿಗೆ ಆಗಿರುವ ನಷ್ಟವು ಅಪಾರವಾಗಿರುವುದು. ಜನರು ಇದರ ಜೊತೆಗೆ ಭೂಕಂಪವೂ ಆಗುವುದೇನೋ ಎಂದು ಭೀತಿಗ್ರಸ್ತರಾಗಿರುತ್ತಾರೆ.

ಬಹುಪುತ್ರವತಿಯಾದಸ್ತ್ರೀ !

ಬರ್ನಾರ್ಡ್ ಶೀನ್ಬರ್ಗ ಎಂಬ ಜರ್ಮನ್‌ಸ್ತ್ರೀಯು 69 ಮಕ್ಕಳನ್ನು ಹೆತ್ತು ತನ್ನ 56ನೆಯ ವಯಸ್ಸಿನಲ್ಲಿ ಮೃತಳಾಗಿರುತ್ತಾಳೆ. ಇವಳು 4 ಸಾರೆ ನಾಲ್ಕು ನಾಲ್ಕು ಮಕ್ಕಳನ್ನೂ, 7 ಸಾರೆ ಮೂರು ಮೂರು ಮಕ್ಕಳನ್ನೂ, 16 ಸಾರೆ ಅವಳಿ ಮಕ್ಕಳನ್ನೂ ಪ್ರಸುವಿಸಿದಳಂತೆ ! ಇವಳು ಮೃತಳಾಗಿ 25 ವರ್ಷಗಳಾದುವು. ಅನಂತರ ಇವಳ ಗಂಡನು ಪುನಃ ಮದುವೆಯಾಗಿ ಮತ್ತೆ 18 ಮಕ್ಕಳನ್ನು ಪಡೆದಿರುವನಂತೆ ! ಇವನ 87 ಜನ ಮಕ್ಕಳ ಪೈಕಿ 67 ಜನ ಮಕ್ಕಳು ಸದ್ಯಃ ಜೀವಂತರಾಗಿರುವರು.

ರೈಲು ಉರುಳಿಸುವಪ್ರಯತ್ನ.

ಇದೇ ಏಪ್ರೆಲ್ 24ನೇ ತಾರೀಖಿನ ದಿವಸ ರಂಗೂನಿಗೂ ಮಾಂಡಲೆಗೂ ಮಧ್ಯಮಾರ್ಗದಲ್ಲಿ ಟ್ರೈನನ್ನು ಉರುಳಿಸಬೇಕೆಂಬ ಉದ್ದೇಶದಿಂದ ಯಾರೋ ಕೆಲವು ಜನರು ದುಷ್ಟರು ರೈಲುಕಂಬಿಗೆ ಅಡ್ಡಲಾಗಿ ಎರಡುಸ್ಥಳಗಳಲ್ಲಿ ಮರದ ದಿಮ್ಮಿಗಳನ್ನು ಹಾಕಿದ್ದರು. ರೈಲ್ವೇನೌಕರರು ರೈಲುಬರುವುದಕ್ಕೆ ಮುಂಚಿತವಾಗಿಯೇ ಅದನ್ನು ನೋಡಿದ್ದರಿಂದ ಯಾವ ಅನಾಹುತವೂ ಆಗಲಿಲ್ಲ. ಪೋಲೀಸರು ಇದಕ್ಕೆ ಮೂಲಕಾರಣರಾದವರನ್ನು ಪತ್ತೆಮಾಡುತ್ತಿರುವರು.

ಅದ್ಭುತವಾದ ಮೀನು !

ಬಂಗಾಳಾ ಪ್ರಾಂತದಲ್ಲಿರುವ ಧಾಲೇಶ್ವರೀ ನದಿಯಲ್ಲಿ 20 ಅಡಿ ಉದ್ದವಾಗಿಯೂ 30 ಮಣ ತೂಕವಾಗಿಯೂ ಇರುವ ಒಂದು ಅದ್ಭುತಾಕಾರದ ಮೀನು ದೊರಕಿರುವದಂತೆ ! ಇದಕ್ಕೆ ಬಹಳ ಹರಿತವಾದ ಹಲ್ಲುಗಳೂ ಆನೆಗಿರುವಂತೆ ಎರಡು ದೊಡ್ಡ ಕಿವಿಗಳೂ, ಎರಡು ಪಕ್ಕಗಳಲ್ಲಿಯೂ 5-6 ಅಡಿ ಉದ್ದವಾದ ಎರಡು ರೆಕ್ಕೆಗಳೂ, ಏಕಕಾಲದಲ್ಲಿ ಇಬ್ಬರು ಮನುಷ್ಯರನ್ನು ನುಂಗಬಹುದಾದಷ್ಟು ದೊಡ್ಡ ಬಾಯಿಯೂ ಇರುವುದಂತೆ !

ಮಹಾದೇವನ ಚಕ್ರ !

ಈಗ್ಗೆ ಕೆಲವು ದಿವಸಗಳ ಹಿಂದೆ ಅಲಹಾಬಾದಿನಲ್ಲಿ ಬೆಳಗ್ಗೆ 6-30 ಗಂಟೆಯ ಸಮಯದಲ್ಲಿ ಸೂರ್ಯನು ಗಿರಗಿರನೆ ಸುತ್ತುತ್ತಿದ್ದನಂತೆ ! ಆ ಕಾಲದಲ್ಲಿ ಸೂರ್ಯನ ಸುತ್ತಲೂ ನೀಲಿಬಣ್ಣದ ಛಾಯೆಯು ಕಾಣಿಸುತ್ತಿತ್ತಂತೆ ! ಸಹಸ್ರಾರು ಜನರು ಈ ವಿಚಿತ್ರದೃಶ್ಯವನ್ನು ನೋಡಿ ಪ್ರಪಂಚದಲ್ಲಿ ಯಾವುದೋ ಮಹಾನರ್ಥವು ಸಂಭವಿಸುವದೆಂದು ಭೀತರಾದರೆಂದೂ, ಕೆಲವರು ಅದನ್ನು ' ಮಹಾದೇವನ ಚಕ್ರ ' ವೆಂದು ಹೇಳಿದರೆಂದೂ, ಸ್ವಲ್ಪ ಹೊತ್ತಿನ ನಂತರ ಸುತ್ತುವ ವೇಗವು ಕಡಿಮೆಯಾಗಿ ಕ್ರಮೇಣ ನಿಂತುಹೋಯಿತೆಂದೂ ತಿಳಿದುಬಂದಿದೆ.

ಆಲ್ಪ್ಸ್ಪರ್ವತದಲ್ಲಿ ರಕ್ತವರ್ಣದಮಳೆ !

ಇಟಲಿದೇಶದಲ್ಲಿರುವ ಆಲ್ಪ್ಸ್ಪರ್ವತದಲ್ಲಿ ಕೆಲವು ದಿವಸಗಳ ಹಿಂದೆ ರಕ್ತವರ್ಣದ ಮಳೆಯು ಸುರಿಯಿತಂತೆ ! ಆಲ್ಪ್ಸ್ಪರ್ವತ ಪ್ರಾಂತದಲ್ಲಿ ವಾಸವಾಗಿದ್ದ ಮೇರಿಯಾ ರಂಪಾಜೆ ಎಂಬ 10 ವರ್ಷದ ಹುಡುಗಿಯು ತನ್ನ ಗ್ರಾಮದ ಹೊರಗೆ ಕಾರಣಾಂತರದಿಂದ ಸಂಚರಿಸುತ್ತಿದ್ದಾಗ ಆಕಾಶದಲ್ಲಿ ಕಾರ್ಮುಗಿಲು ಕವಿದುದನ್ನು ಕಂಡು ಮನೆಯ ಕಡೆಗೆ ಓಡಲಾರಂಭಿಸಿದಳು. ಮನೆಯ ಸಮೀಪಕ್ಕೆ ಬರುವವೇಳೆಗೆ ಮಳೆಯು ಹನಿಯಲಾರಂಭಿಸಿತು. ಮಳೆಯ ಹನಿಗಳೆಲ್ಲವೂ ಕೆಂಪಾಗಿದ್ದುವು. ಹುಡುಗಿಯು ಘಾಬರಿಯಾಗಿ ' ರಕ್ತದ ಮಳೆ ' ಯು ಸುರಿಯುತ್ತಿರುವದೆಂದು ಕಿರಚಿದಳು. ಗ್ರಾಮದವರೆಲ್ಲರೂ ಹೊರಗೆ ಬಂದು ನೋಡಲು ನಿಜವಾಗಿಯೂ ಮಳೆಯ ಹನಿಗಳು ರಕ್ತದಂತೆ ಕೆಂಪಾಗಿದ್ದುವಂತೆ ! ಈಚೆಗೆ ಇಟಲಿ ಸರಕಾರದವರು ಸುತ್ತಮುತ್ತಲ ಪ್ರದೇಶಗಳ ಹವಾ ಸ್ಥಿತಿಯನ್ನು ವಿಚಾರಮಾಡಿ, ಮಳೆಬಿದ್ದ ಸ್ಥಳಕ್ಕೆ 800 ಮೈಲುಗಳ ದೂರದಲ್ಲಿರುವ ಸಹರಾ ಮರುಭೂಮಿಯಲ್ಲಿ ಭಯಂಕರವಾದ ಬಿರುಗಾಳಿಯೆದ್ದು ಅಲ್ಲಿಂದ ಅಪಾರವಾದ ಮರಳನ್ನು ತಂದಿತೆಂದೂ, ಆ ಮರಳು ಕೆಂಪುಬಣ್ಣವಾಗಿದ್ದು, ಅದು ಮಳೆ ಹುಯ್ಯುವ ಕಾಲಕ್ಕೆ ಸರಿಯಾಗಿ ನೀರಿನೊಡನೆ ಸೇರಿದ್ದುದರಿಂದ ಮಳೆಯು ಕೆಂಪಾಗಿ ಕಾಣಿಸಿತೆಂದೂ, ಪ್ರಸಿದ್ಧಪಡಿಸಿರುವರು.

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ದಿವಾನರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ಮೇ 6 ನೇ ತಾರೀಖು ಭಾನುವಾರದ ಬೆಳಗ್ಗೆ 8-30 ಘಂಟೆಗೆ ಕರ್ನಾಟಕಸಾಹಿತ್ಯ ಪರಿಷತ್ತಿನ ಆರಂಭೋತ್ಸವವನ್ನು ನೆರವೇರಿಸುವರು. ಪರಿಷತ್ತು 6, 7, 8, 9, 10, 11, ಮತ್ತು 12, ಈ 7 ದಿನಗಳ ವರೆಗೆ ನಡೆಯುವದು. ಪ್ರತಿ ದಿವಸ ಪ್ರಾತಃಕಾಲ 8-30 ರಿಂದ 11 ರವರೆಗೆ ಉಪನ್ಯಾಸವೂ ಮಧ್ಯಾಹ್ನ 3 ರಿಂದ 5 ರ ವರೆಗೆ ಸಂಗೀತ, ಕಾವ್ಯವಾಚನ ಮತ್ತು ವಿಜ್ಞಾನ ಕಾರ್ಯಶಾಲೆಗಳ ನೋಟವೂ ಸಾಯಂಕಾಲ 5-30 ರಿಂದ 8 ರ ವರೆಗೆ ಮತ್ತೆ ಉಪನ್ಯಾಸವೂ ಏರ್ಪಡಿಸಲ್ಪಟ್ಟಿರುವುವೆಂದೂ ಪ್ರತಿ ದಿವಸ ಬೆಳಗ್ಗೆ 8 ರಿಂದ 11 ರ ವರೆಗೆ ಮತ್ತು ಮಧ್ಯಾಹ್ನ 4 ರಿಂದ 7 ರ ವರೆಗೆ ಗ್ರಂಥಪ್ರದರ್ಶನವು ನಡೆಯುವದೆಂದೂ, ಪರಿಷತ್ತಿನ ವ್ಯವಸ್ಥಾಪಕರು ತಿಳಿಸಿರುತ್ತಾರೆ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಘೋತ್ರೀಗ್ರಾಮದಲ್ಲಿ ನೆರವೇರಿದ ಧರ್ಮಪರಿಷತ್ತಿಗೆ ಶ್ರೀಮದುಜ್ಜಯಿನೀ ಜಗದ್ಗುರುಗಳು ದಯಪಾಲಿಸಿದ ಶುಭಾಶೀರ್ವಾದಪತ್ರ.

ಶ್ರೀಮದ್ವೇದವೇದಾಂತ ಸಿದ್ಧಾಂತ ಪ್ರತಿಪಾದಿತ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯವರ್ಯ ಶ್ರೀಮತ್ತ್ರಿಭುವನಗುರು ಶ್ರೀ ೧೦೮ ಜಗದ್ಗುರು ದಾರುಕಾಚಾರ್ಯ ಪರಂಪರಾಗತೋಜ್ಜಯಿನೀ ಸದ್ಧರ್ಮ ಸಿಂಹಾಸನಾಧಿರೂಢ ಶ್ರೀಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿನಾಂ ಜ್ಞಾನಗುರುಸ್ಥಲದಿಂದ

ಶ್ರೀಮದ್ಗುರು ಪದನಖಚಂದ್ರಸಾಂದ್ರ ರುಚಿರುಂದ್ರ ಚಂದ್ರಿಕಾಚಂಚಚ್ಚಕೋರಾಯಮಾನರಾದ ಘೋತ್ರೀಗ್ರಾಮದಲ್ಲಿ ನೆರೆದ ಗುರುವರ್ಯಾಧಿವೇಶನ ಶ್ರೀಪಟ್ಟ ಚರಾಧಿಕಾರಿಗಳಿಗೂ ವೀರಮಾಹೇಶ್ವರರಿಗೂ ವೀರಶೈವರಿಗೂ ವೀರಶೈವ ಮತಾನುಯಾಯಿಗಳಿಗೂ ಸಕಲ ಸೌಭಾಗ್ಯಸಿದ್ಧಿರಸ್ತು ಶ್ರೀಶಿವಭಕ್ತಿರಸ್ತು ಏವಿಶ್ನ ಮಸ್ತು ಇತ್ಯಾಶೀರ್ವಾದ ಸರೂಪಮುದಾಗಿ

(೧) ನಮ್ಮ ವೀರಶೈವ ಮತದಲ್ಲಿ ಅಷ್ಟಾವರಣಗಳೆನಿಸುವ ಗುರು ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷ, ಮಂತ್ರಗಳಲ್ಲಿ ಶಿವನು ಎಡೆಬಿಡದೆ ವಾಸವಾಗಿರುವನೆಂಬುದು ಲೋಕಪ್ರಸಿದ್ಧವೂ ಶಾಸ್ತ್ರಪ್ರಸಿದ್ಧವೂ ಆಗಿರುವದು. ಅದಕಾರಣವೇ ಇಂಥ ಅಷ್ಟಾವರಣಗಳ ಸಂಬಂಧದಿಂದಲೇ ನಮ್ಮ ವೀರಶೈವ ಪುರಾತನ ಭಕ್ತರೂ ಜೀವಭಾವವನ್ನು ನೀಗಿ ಶಿವಭಾವವನ್ನು ಹೊಂದಿ ಅನೇಕಾಗಾಧಮಹತ್ವಶಾಲಿಯಾಯಿತೆಂಬ ಕಥೆಗಳು ಪುರಾಣಪ್ರಸಿದ್ಧಗಳಾಗಿರುವವು.

(೨) ಇಂಥ ಅಷ್ಟಾವರಣಗಳನ್ನು ವೀರಶೈವರು ಪ್ರತಿಗ್ರಾಮಗಳಲ್ಲಿಯೂ ಅನಾದಿಕಾಲದಿಂದಲೂ ಇದುವರೆಗೂ ಚ್ಯುತಿಬಾರದಂತೆ ಸಂರಕ್ಷಿಸಿಕೊಳ್ಳುತ್ತ ಬಂದಿರುವರು. ಆದಾಗ್ಯೂ ಈ ಕಲಿಕಾಲ ಮಹತ್ವದಿಂದ ಅಂಥ ಶಿವಸ್ವರೂಪಗಳಾದ ಅಷ್ಟಾವರಣಗಳು ಉತ್ತಮವಾದ ಸಂಸ್ಕಾರಗಳಿಲ್ಲದೆ ಕ್ಷೀಣದೆಶೆಯನ್ನು ಹೊಂದಲಿಕ್ಕೆ ಪ್ರಾರಂಭಿಸಿರುತ್ತವೆ.

(೩) ಅದು ಹೇಗೆಂದರೆ—ಗುರುಗಳು ವಿದ್ಯಾವಿಹೀನರಾಗಿರುವರು. ಲಿಂಗಗಳು ಬಾಳಪ್ಪನ (ಹಿಟ್ಟಿನ) ಕಲ್ಲಿನಿಂದ ಕೂಡಿದ್ದು ಜಲಾಭಿಷೇಕ ಮಾತ್ರದಿಂದ ಕರಗುತ್ತವೆ. ಇಲ್ಲವೇ ಅವಯವಗಳು ಮುರಿದಿರುವವು. ಜಂಗಮರು ಶಾಸ್ತ್ರಜ್ಞಾನವಿಲ್ಲದೆ ಶಿವತ್ವಾಭಿವ್ಯಕ್ತಿವಿಹೀನರಾಗಿರುವರು. ಪಾದೋದಕ, ಪ್ರಸಾದಗಳಲ್ಲಿ ಸದಾಚಾರವಿಲ್ಲದೆ ಇಷ್ಟಾರ್ಥಸಿದ್ಧಿಗಳು ತೋರಲೊಲ್ಲವು. ವಿಭೂತಿಯು ಬೀಳುಮಣ್ಣಿನಲ್ಲಿ ಕೆಲವು ಅಜ್ಞ ವೀರಶೈವರು ಆರೋಪಿಸಿರುವದರಿಂದ ಆ ವಿಭೂತಿಯಲ್ಲಿ ಮಂಗಲತ್ವವೇ ಕಿತ್ತುವದಾಗಿಲ್ಲ. ಮಂತ್ರವಂತೂ ಅದರರ್ಥಜ್ಞಾನವಿಲ್ಲದೆ ನಿರರ್ಥಕವಾಗಿ ಪರಿಣಮಿಸಿರುತ್ತದೆ. ಈ ಪ್ರಕಾರವಾಗಿರುವವೆಂಬುದು ವೀರಶೈವ ವಿಚಕ್ಷಣರಾದ ತಮ್ಮಗಳಿಗೆ ಗೋಚರವಿಲ್ಲದಿರುವದಾಗಿಲ್ಲ.

(೪) ತಾವು ಇಂಥ ಅಷ್ಟಾವರಣಗಳನ್ನು ಸಂರಕ್ಷಿಸುವದಕ್ಕಾಗಿಯೇ, ಇಂಥ ಸಭೆಗಳನ್ನು ಪ್ರತಿವರ್ಷ ನೆರವೇರಿಸಲು ಪ್ರಯತ್ನಪಡುವಿರೆಂಬುವದನ್ನು ತಿಳಿದು ಚಿತ್ತಕ್ಕೆ ಅತ್ಯಾನಂದವೆನಿಸಿದೆ.

(೫) ತಮ್ಮಗಳಿಗೆ ಸೂಚಿಸುವದೇನೆಂದರೆ—ಅಷ್ಟಾವರಣಗಳಲ್ಲಿ ಮೂಲಭೂತಗಳಾದ ಪ್ರತಿ ಗ್ರಾಮಗಳಲ್ಲಿರುವ ಗುರುಜಂಗಮರನ್ನು ಪ್ರಥಮತಃ ವಿದ್ವಾಂಸರನ್ನಾಗಿ ಮಾಡಿದರೆ ಉಳಿದಾವರಣಗಳೆಲ್ಲವೂ ತಾವೇ ಸುಧಾರಿಸುವವು. ಅದಕಾರಣ ಪ್ರಥಮದಲ್ಲಿ ಈ ಗುರುಜಂಗಮರನ್ನು ಶಿವಶಾಸ್ತ್ರಜ್ಞರನ್ನಾಗಿ ಮಾಡಲು ಯತ್ನಿಸಬೇಕೆಂದು ಈ ನಿಮ್ಮ ಸಭೆಗೆ ಸೂಚನೆಯು.

(೬) ಪ್ರತಿಗ್ರಾಮಗಳಲ್ಲಿರುವ ಮಠಾಧಿಕಾರಿಗಳು ಪ್ರಥಮತಃ ವೀರಶೈವಶಾಸ್ತ್ರದಲ್ಲಿರುವ ಗರ್ಭಾಧಾನಾದಿ ಷೋಡಶ ಕ್ರಿಯಾನಿಪುಣರಾಗಿ ಸ್ವತಃ ಶಿವಶಾಸ್ತ್ರಜ್ಞತ್ವದಿಂದ ಲಿಂಗಾರ್ಚನಾತತ್ಪರರಾಗಿ, ಸರ್ವಭಕ್ತರಿಗೂ ಶಿವಭಕ್ತಿಯನ್ನೂ, ಶಿವಪೂಜೆಯನ್ನೂ ಶಿವಾಚಾರಗಳನ್ನೂ ಬೋಧಿಸಲು ಸಿದ್ಧರಾಗುವಂತೆ ಈ ಸಭೆಯವರು ಏರ್ಪಡಿಸಿ ಆ ಪ್ರಕಾರ ಜಾರಿಯಲ್ಲಿ ತರಬೇಕು.

(೭) ಶ್ರೀ ಪಟ್ಟಚರಾಧಿಕಾರಿಗಳು ಪ್ರಥಮತಃ ಶಿವಶಾಸ್ತ್ರಜ್ಞರಾಗಿ, ಪರಮತಶಾಸ್ತ್ರಗಳನ್ನೂ ಕಲಿತು ಪೂರ್ವಪಕ್ಷಿತೋದ್ಧಾಟನದಿಂದ ಶಿವಶಾಸ್ತ್ರವನ್ನು ಸ್ಥಾಪಿಸಲು ಕುಶಲರಾಗುವಂತೆ ಈ ಸಭೆಯವರು ಏರ್ಪಡಿಸಬೇಕು.

(೮) ಕೆಲವು ಅಲ್ಪಜ್ಞರಾದವರು ಈ ಜಂಗಮರಿಗೆ ವಿದ್ಯಾಭ್ಯಾಸಮಾಡಿಸಿದರೆ ನಮಗೆ ಬಂದ ಫಲವೇನೆಂದು ಶಂಕಿಸುವರು. ತಮ್ಮ ಹೊಲದ ಮಾವಿನಮರಗಳನ್ನು ಚೆನ್ನಾಗಿ ಸಂರಕ್ಷಿಸಿ ಬೆಳೆಯಿಸಿದರೆ ಮಾಲಿಕನಿಗೆ ಉತ್ತಮ ಆಯ ಫಲಗಳು ಸಿಕ್ಕುವಂತೆ, ವೀರಶೈವರಾದ ನೀವು ನಿಮ್ಮ ಗುರುಜಂಗಮರನ್ನು ವಿದ್ಯಾಭ್ಯಾಸದಿಂದ ಸಂರಕ್ಷಿಸಿ ವೃದ್ಧಿಪಡಿಸಿದರೆ ನಿಮಗೆ ನಿರಾಯಾಸವಾಗಿ ಮುಕ್ತಿಯೆಂಬ ಉತ್ತಮೋತ್ತಮವಾದ್ಮತಸಮಾನ ಫಲಗಳು ಸಿಕ್ಕಲಾರವೇನು? ಮತ್ತು ಉತ್ತಮವಾದ ಶುದ್ಧವಾದ ಆಹಾರಗಳನ್ನು ತಯಾರುಮಾಡಿಕೊಳ್ಳುವ ಶಕ್ತಿಯುಳ್ಳ ಉದಾಸೀನದಿಂದಲೂ ಆಲಸ್ಯದಿಂದಲೂ ಕದನ್ನವನ್ನು ಸೇವಿಸಿ ವ್ಯಥೆಪಡುವವನ ಸ್ಥಿತಿಯಂತೆ ನಮ್ಮ ಮತದ ಗುರುಜಂಗಮರನ್ನು ವಿದ್ವಾಂಸರನ್ನಾಗಿ ಮಾಡಿಕೊಳ್ಳದೆ ನಮ್ಮ ಕುಲಪದ್ಧತಿಪ್ರಕಾರ ಅವಿದ್ವಾಂಸರಾಗಿರುವ ಗುರುಜಂಗಮರನ್ನು ಪೂಜಿಸಿ ತೀರ್ಥಪ್ರಸಾದಗಳನ್ನು ಸೇವಿಸಲು—

ಜ್ಞಾನಹೀನಂ ಗುರುಂ ಪ್ರಾಪ್ಯ ಕಥಂ ಮುಕ್ತಿಮವಾಪ್ನುಯಾತ್ |
ಭಿನ್ನನೌಕಾಗತಃ ಸಿಂಧೋರ್ಯಥಾ ಪಾರಂ ನ ಗಚ್ಛತಿ ||೬||

'ತಂ ಶಿಲಾಂ ತಾರಯೇಚ್ಛಿಲಾ' ಎಂಬಂತೆ ಮುಕ್ತಿಯು ದೊರೆಯದೆ ಮಾಡಿದ ಪೂಜೆಯು ವ್ಯರ್ಥವಾಗಿ ವ್ಯಥಾಯಾಸಕ್ಕೆ ಕಾರಣವಾಗುವದು.

(೯) ಕೆಲವರು ಗೃಹಸ್ಥರಾದ ಮಠಸ್ಥರು ತೀರ್ಥಪ್ರಸಾದಗಳ ಪೂಜೆಗೆ ಅರ್ಹರಲ್ಲವೆಂದು ತಿಳಿದಿರುವರು. ಲಗ್ನವಿಲ್ಲದೆ ಇರುವ ಪಟ್ಟಚರಾಧಿಕಾರಿಗಳೇ ಅರ್ಹರೆಂದು ಭಾವಿಸಿರುವರು. ಈ ವಿಷಯದಲ್ಲಿ ವೀರಶೈವಾಚಾರ ಪ್ರದೀಪಿಕೆಯಲ್ಲಿ (ಪಾನು ೨೨)

ಗುರುರ್ಗೃಹಸ್ಥ ಏವ ಸ್ಯಾತ್ ನಶದಾಚಿದ್ಯತಿರ್ಗುರುಃ |
ಯಥಾಹಂ ಸರ್ವಲೋಕಾನಾಂ ಗುರುರಂಬಿಕಯಾ ಸಹ||

ಕ್ರಿಯಾಸಾರೆ—

ಗೃಹಸ್ಥಸ್ಸರ್ವವರ್ಣೇಷು ಶ್ರೇಷ್ಠೋ ಗುರುರುದಾಹೃತಃ |
ನೈಷ್ಠಿಕಸ್ತ್ವಧಮೋ ಜ್ಞೇಯೋ ಭೌತಿಕಸ್ತು ತತೋಽಧಮಃ ||೨||
ವಾನಪ್ರಸ್ಥಯತೀನಾಂ ತು ಗುರುತ್ವಂ ನಿಷ್ಫಲಂ ಭವೇತ್ |
ಶಿಷ್ಯಸ್ಯ ಶಿಕ್ಷಣೀಯತ್ವಾತ್ ಗುರುಗೌರವಭಾವತಃ ||೩||
ತಸ್ಮಾತ್ಸರ್ವಪ್ರಯತ್ನೇನ ಗುರೋರ್ಗೌರವಮಾಚರೇತ್ |
ವಯಃಷೋಡಶಕಾದೂರ್ಧ್ವಂ ಇತ್ಯತ ಸಪ್ತತೇರಧಃ ||೪||
ಶಿವಜ್ಞಾನಾಮೃತಾಸ್ವಾದಪರಿಸಂತುಷ್ಟಮಾನಸಃ |
ತತ್ವವಿಚ್ಛೈವಸಂಯುಕ್ತೋ ಮುಕ್ತಿದೋ ನತು ಚಾಪರಃ ||೫||
ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ |
ದುರ್ಲಭೋಽಯಂ ಗುರುರ್ದೇವಿ ಶಿಷ್ಯಹೃತ್ತಾಪಹಾರಕಃ ||೬||

ಹೀಗೆ ಶಿವಶಾಸ್ತ್ರವಿರುವದರಿಂದ ಗೃಹಸ್ಥರು ಪರಮಪೂಜ್ಯರೆಂದೂ, ಅವರು ಶಿಷ್ಯರಿಗೆ ತೀರ್ಥಪ್ರಸಾದಗಳನ್ನು ಕೊಟ್ಟು ಸರ್ವಪಾಪಪರಿಹಾರ ಮಾಡತಕ್ಕವರೆಂದೂ ಮನದಲ್ಲಿ ಮರೆಯದೆ ಜ್ಞಾಪಕದಲ್ಲಿಡತಕ್ಕದ್ದು.

(೧೦) ಇಂಥ ವೀರಶೈವಮತದ ಕುಂದುಕಗಳನ್ನು ಪರಿಹರಿಸುವದಕ್ಕಾಗಿ ರಾವಬಹದ್ದೂರ್ ಅಪ್ಪಾಸಾಹೇಬ ವಾರದ ಮಲ್ಲಪ್ಪ ಬಸಪ್ಪ ಸೊಲ್ಲಾಪುರ ಇವರು ತಮ್ಮ ಸ್ವತಃ ಖರ್ಚಿನಿಂದ ವೀರಶೈವ ಮತಧರ್ಮಗ್ರಂಥಗಳನ್ನು ಛಾಪಿಸಿ ಪ್ರಸಿದ್ಧಪಡಿಸಿದ್ದಲ್ಲದೆ, ಆ ಧರ್ಮಗ್ರಂಥಗಳಲ್ಲಿ ಪ್ರತಿ ಗ್ರಾಮಗಳಲ್ಲಿರುವ ಮಠಸ್ಥರು ಕುಶಲರಾಗಿ ವೀರಶೈವಧರ್ಮಪರಿಪಾಲಕರಾಗಲೆಂದು ಒಂದು ವೀರಶೈವ ವಾರದ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ಸ್ವತಃ ಖರ್ಚಿನಿಂದ ತಾವಿರುವವರೆಗೂ ಸಾಗಿಸಿ ಅನಂತರ ಬಂದಿಪ್ಪಣ್ಣ ರಾವ್‌ಸಾದಿ ಇವರು ಮತ್ತು ರೇವಣಸಿದ್ಧಪ್ಪ ಉಂಬರಜೆ ಇವರು ಮತ್ತು ಸೊಲ್ಲಾಪುರದಲ್ಲಿರುವ ವೀರಶೈವರು ಇದುವರೆಗೂ ಆ ಪಾಠಶಾಲೆಯನ್ನು ಸಂರಕ್ಷಿಸುತ್ತ ಬಂದಿರುವರೆಂಬುದು ಈ ಸಭೆಯವರಿಗೆ ಗೋಚರಿಸಿದೆ.

(೧೧) ಇಂಥ ಪಾಠಶಾಲೆಗೆ ಪ್ರತಿಗ್ರಾಮಗಳಲ್ಲಿರುವ ಮಠಾಧಿಕಾರಿಗಳ ವಟುಗಳು ಅವಶ್ಯವಾಗಿ ಹೋಗಿ ಸಂಸ್ಕೃತ ವಿದ್ಯಾಭ್ಯಾಸದಿಂದ ವೀರಶೈವಶಾಸ್ತ್ರಕುಶಲರಾಗುವಂತೆ ನಿಮ್ಮ ಸಭೆಯ ಠರಾವುಗಳನ್ನು ಜಾರಿಯಲ್ಲಿ ತರಬೇಕೆಂದು ಸೂಚಿಸಿರುತ್ತೇವೆ.

(೧೨) ಮತ್ತೊಂದೇನಂದರೆ—ಪ್ರತಿಗ್ರಾಮಗಳ ಮಠಾಧಿಕಾರಿಗಳು ತಮ್ಮ ಶಿಷ್ಯರಿಂದಲೂ ತಮ್ಮ ಧರ್ಮಾಧಿಕಾರವುಳ್ಳ ಗ್ರಾಮಗಳ ಭಕ್ತರಿಂದಲೂ, ಮಾಹೇಶ್ವರರಿಂದಲೂ, ತಮ್ಮಿಂದಲೂ ತಮ್ಮ ತಮ್ಮ ಶಕ್ತ್ಯನುಸಾರ ಸದರಿ ವಾರದ ಪಾಠಶಾಲೆಯ ಸ್ಥಿರಫಂಡಿಗೆ ಹಣವನ್ನು ಶೇಖರಿಸುವ ಏರ್ಪಾಟು ಮಾಡಬೇಕೆಂದು ಈ ಸಭೆಗೆ ಸೂಚನೆಯು.

(೧೩) ಕೆಲವರು ವಾರದ ಸಂಸ್ಕೃತ ಪಾಠಶಾಲೆಗೆ ಹಣವನ್ನು ಕೂಡಿಸಿದರೆ ನಮಗೇನು ಬರುವುದೆಂದು ಶಂಕಿಸುವರು. ವೀರಶೈವ ಗರ್ಭಸಂಜಾತರಾದ ವೀರಶೈವ ಮತೋದ್ಧಾರಕರಾದ ವಾರದ ಮಲ್ಲಪ್ಪನವರ ಮನೆಯ ಸಲುವಾಗಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿರುವದಿಲ್ಲ. ವೀರಶೈವ ಮತೋದ್ಧಾರ ಸಲುವಾಗಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿದರೆಂಬುದು ಸ್ಪಷ್ಟವಾಗಿ ತೋರುತ್ತಲಿದೆ. ಹಾಗಾದರೆ—ವಾರದ ಎಂಬ ಹೆಸರನ್ನು ತೆಗೆದು "ವೀರಶೈವ ಸಂಸ್ಕೃತ ಪಾಠಶಾಲೆ" ಎಂದು ಹೆಸರಿಡಬೇಕೆಂದು ಕೆಲವರು ತರ್ಕಿಸಬಹುದು. ಆದರೆ ಆದಿಯಲ್ಲಿ ಮತೋದ್ಧಾರ ಕಾರ್ಯದಲ್ಲಿ ತಮ್ಮ ಸಾಹಸವನ್ನು ಖರ್ಚುಮಾಡಿದವರ ನಾಮವಿದ್ದರೆ ವೀರಶೈವರಿಗೆ ಬಾಧಕವೇನು? ಯಾವ ಬಾಧಕವಿಲ್ಲ ಎಂದು ತಿಳಿಯಿರಿ. ಅಂಥಾ ಮಹನೀಯರ ನಾಮೋಲ್ಲೇಖನದಿಂದ ಉತ್ತರೋತ್ತರ ಸಹಾಯ ಬುದ್ಧಿಗಳು ನಮ್ಮ ವೀರಶೈವರಲ್ಲಿ ಹುಟ್ಟುವದಕ್ಕೆ ಪ್ರೋತ್ಸಾಹವುಂಟಾಗುವದರಿಂದ ಆ "ವಾರದ ವೀರಶೈವ ಸಂಸ್ಕೃತ ಪಾಠಶಾಲೆ" ಎಂಬ ನಾಮವನ್ನು ಸ್ಥಿರಗೊಳಿಸಿ, ಆನಂದದಿಂದ ಸರ್ವ ವೀರಶೈವರೂ, ವೀರಮಾಹೇಶ್ವರರೂ ಧನಧಾನ್ಯಗಳನ್ನು ಸಹಾಯಗೊಳಿಸಿ ವೀರಶೈವ ಮತೋದ್ಧಾರಕರಾದ ಪುಣ್ಯಕೃತಿಗೆ ಪಾತ್ರರಾಗಿ ಧನ್ಯರಾಗಬೇಕೆಂದು ಸೂಚಿಸಿರುತ್ತೇವೆ.

(೧೪) ಇಂಥ ವೀರಶೈವಮತಸಮುದ್ರವನ್ನು ಮಂಥನಮಾಡಿ ಸದ್ಧರ್ಮವೆಂಬ ನವನೀತವನ್ನು ತೆಗೆದು ಕಾಸಿ ವೀರಶೈವರಿಗೆ ಮುಕ್ತಿಸುಖವೆಂಬ ಘೃತವನ್ನೀಯಲು ಯತ್ನಿಸುವ ಹೋಟಗಿ ಬೃಹನ್ಮಠಾಧ್ಯಕ್ಷರಾದ ಷಟ್‌ಸ್ಥಲ ಬ್ರಹ್ಮಿ ಶ್ರೀ ಪಟ್ಟಾಧಿಕಾರಿ ಚನ್ನವೀರಸ್ವಾಮಿಗಳು ಪ್ರತಿ ವರ್ಷದಲ್ಲಿ ವೀರಶೈವ ಗುರುವರ್ಯಾಧಿವೇಶನವನ್ನು ನೆರವೇರಿಸುವರು. ಇವರ ಸದ್ವೃತ್ತಿಯಿಂದ ಅತ್ಯಂತ ಸಂತೋಷಸ್ವಾಂತರಾಗಿರುವೆವು. ಇವರಿಗೆ ಪರಮಾತ್ಮನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಲೆಂದು ಆಶಿಸುತ್ತೇವೆ.

(೧೫) ಈ ವರ್ಷದ ಘೋತ್ರೀ ಗ್ರಾಮದಲ್ಲಿ ನೆರವೇರುವ ಗುರುವರ್ಯಾಧಿವೇಶನದಲ್ಲಿ ಅಧ್ಯಕ್ಷಸ್ಥಾನವನ್ನು ಕೈಕೊಂಡಿರುವ ಶ್ರೀ ಗಂಗಾಧರಸ್ವಾಮಿ ಮಹಂತಿನಮಠ ಬೆಂಗಳೂರು ಇವರು ವೀರಶೈವ ಧರ್ಮೋನ್ನತಿಯನ್ನುಂಟುಮಾಡುವ ಸಲುವಾಗಿ ಶರೀರಾಯಾಸವನ್ನು ಲಕ್ಷಿಸದೆ ಶ್ರಮವಹಿಸಿದ್ದಕ್ಕಾಗಿ ಇವರಿಗೆ ಪರಶಿವನು ಸದಾಯುರಾರೋಗ್ಯಾದ್ಯಖಂಡಭೂತಿಯನ್ನೂ ಶಿವಭಕ್ತಿ, ಶಿವಜ್ಞಾನಗಳನ್ನೂ ಅನುಗ್ರಹಿಸಿ ಸುಖದಿಂದ ಸಂರಕ್ಷಿಸಲೆಂದು ಹಾರೈಸುತ್ತೇವೆ.

(೧೬) ಇಂಥ ವೀರಶೈವ ಮತೋನ್ನತಿಯ ಕಾರ್ಯದಲ್ಲಿ ಶ್ರದ್ಧೆಯುಳ್ಳವರಾಗಿ ಈ ಗುರುವರ್ಯಾಧಿವೇಶನದ ವೀರಶೈವಾತಿಥಿಸತ್ಕಾರದ ಖರ್ಚನ್ನು ವಹಿಸಿ ದೇಹಶ್ರಮವನ್ನು ಲಕ್ಷಿಸದೆ ಗುರುಭಕ್ತಿಯಿಂದ ಅವಿಶ್ರಾಂತಶ್ರಮವನ್ನು ವಹಿಸಿದ ಘೋತ್ರೀ ಗ್ರಾಮದ ವೀರಶೈವ ಭಕ್ತಮಾಹೇಶ್ವರರಿಗೂ ತದನುಯಾಯಿಗಳಾದ ಸದ್ಭಕ್ತರಿಗೂ ಶ್ರೀಮದಷ್ಟಾವರಣವಾಸಿಯಾದ ಮಹಾಲಿಂಗವು ಪುತ್ರಪೌತ್ರಾದಿ ಸಕಲ ಸಂಪತ್‌ಸಮೃದ್ಧಿಯನ್ನೂ ಶಿವಭಕ್ತಿಯನ್ನೂ ಕೊಟ್ಟು ಉದ್ಧರಿಸಲೆಂದು ಆಶೀರ್ವದಿಸುತ್ತೇವೆ.

(೧೭) ಇಂಥ ಪೂಜ್ಯವಾದ ಗುರುವರ್ಯಾಧಿವೇಶನಕ್ಕೆ ದೇಶದೇಶಗಳಿಂದಾಗಮಿಸಿರುವ ವೀರಶೈವ ಬಂಧುಭಗಿನಿಯರಿಗೆ ಪರಮೇಶ್ವರನು ಸದಾಯುರಾರೋಗ್ಯಸೌಭಾಗ್ಯಗಳನ್ನಿತ್ತು ಸಂರಕ್ಷಿಸಲೆಂದು ಆಶೀರ್ವದಿಸಿ ಈ ದೀರ್ಘವಾದ ಲೇಖವನ್ನು ವಿರಮಿಸುತ್ತೇವೆ.

ತಾ|| ೨೮-೩-೧೯೩೪. ಇತ್ಯಾಶೀಃ

ಮುಕ್ಕಾಂ ಮಂಗಳವೇಢೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ವೀರೇಶ್ವರ ಮಹಾರಥೋತ್ಸವ.

ಹೊನ್ನಾಳಿ ತಾಲೂಕು ಕುಂಕೋವ ಗ್ರಾಮದಲ್ಲಿ ತಾ|| 3-4-34 ನೇ ಮಂಗಳವಾರದಿಂದ ಮೂರು ದಿನಗಳವರೆಗೂ ಶ್ರೀಮಠದ ವೀರಸಿಂಹಾಸನ ಸೂತ್ರಾನುವರ್ತಿಗಳಾದ ಚರಪಟ್ಟಾಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರ ಅಜ್ಞಾಪ್ರಕಾರ ಪ್ರತಿನಿತ್ಯವೂ ಶ್ರೀ ವೀರಭದ್ರಮೂರ್ತಿಯ ವಿವಿಧ ಮಹೋತ್ಸವಗಳೂ ಶಿವಭಜನೆ, ಶಿವಸಂಕೀರ್ತನೆ, ಶಿವಗಣಾರಾಧನೆ ಮುಂತಾದ ಅನೇಕ ದೇವತಾ ಕಾರ್ಯಗಳೂ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ಅಸಂಖ್ಯ ಜನಸಮುದಾಯವು ಸೇರಿರುವ ಸಮಯದಲ್ಲಿ ಯಾವುದೊಂದೂ ಗಲಾಟೆಗೆ ಅವಕಾಶವಾಗದೆ ಮಹೋತ್ಸವವು ನಿರ್ವಿಘ್ನವಾಗಿ ನೆರವೇರಬೇಕಾದರೆ ಶ್ರೀ ಚರಮೂರ್ತಿಸ್ವಾಮಿಗಳವರ ಶಾಂತಭಾವವೂ, ಭಕ್ತಜನಾದರವೂ, ಮತ್ತು ಸದ್ಗುರುಸೇವಾಪರರಾದ ಮ|| ರಾ|| ಪಾಟೀಲ್ ನಾರಾಯಣಪ್ಪ, ಹನುಮಪ್ಪ, ಗಡೇಕಟ್ಟೆ ಗ್ರಾಮದಲ್ಲಿರುವ ಕೂಗೋನಹಳ್ಳಿ ಪಾಟೀಲ್ ಮ|| ರಾ|| ರುದ್ರಪ್ಪ ಮುಂತಾದ ಮಹೋದಯರ ಕಾರ್ಯವಿಚಕ್ಷಣತೆಯೂ ಕಾರಣವಾಗಿದ್ದವು. ಕೀರ್ತನಕ್ಕಾಗಿ ಆಹೂತರಾಗಿದ್ದ ವೇ|| ಕೀರ್ತನಕೇಸರಿ ಗುಬ್ಬಿ ಶಿವರುದ್ರಶಾಸ್ತ್ರಿಗಳು ಶ್ರೀಗಳವರ ಅಧ್ಯಕ್ಷತೆಯಲ್ಲಿ ಗುರುಕರುಣಾಪ್ರಭಾವ, ರಾಜಶೇಖರವಿಲಾಸ ಎಂಬೆರಡು ಶಿವಕೀರ್ತನೆಗಳನ್ನು ಸರಸವಾಗಿ ಅನುವಾದಮಾಡಿ ನೆರೆದಿದ್ದ ಸಹಸ್ರಾರು ಜನರನ್ನು ಆನಂದಸಾಗರದಲ್ಲಿ ಮುಳುಗಿಸಿದರು. ಸ್ವಾಮಿ ಶಿವಭಜನಾಸಂಘದವರು ಕಿವಿಗಿಂಪಾಗಿಯೂ, ಭಕ್ತಿರಸಪೂರಿತವಾಗಿಯೂ ಇದ್ದ ಗುರುಭಜನೆಯಿಂದ ಸರ್ವರನ್ನೂ ಸಂತೋಷಗೊಳಿಸಿದರು. ಈ ಸಮಾರಂಭ ಸಮಯದಲ್ಲಿ ಶ್ರೀ ಪಂಚಾಚಾರ್ಯ ಪ್ರಭಾಪೋಷಣಾರ್ಥವಾಗಿ ಒಂದು ರೂಪಾಯಿ ತೆಗೆಯಲ್ಪಟ್ಟಿತು. ಓರ್ವ ಉತ್ಸವಭಾಗಿ.

ವಿವಾಹಮಹೋತ್ಸವ, ಮುಧೋಳ.

ಉದಗಿರ ತಾ|| ಮುಧೋಳ ಗ್ರಾಮದ ಶ್ರೀಮಂತ ಗುರುಬಸವಪ್ಪ ಬಸನಾಳೆ ಇವರ ಜ್ಯೇಷ್ಠಪುತ್ರನಾದ ಚಿ|| ರಾ|| ಶಂಕರರಾವ ಎಂಬ ವರನಿಗೆ ನಿಲಂಗಿ ತಾ|| ಸಿಂಧಖೇಡ (...ಖೇಡ)ದ ಶ್ರೀ|| ವಿಶ್ವನಾಥಪ್ಪಾ ಹತ್ತಿ ಇವರ ಸಹೋದರರಾದ ಶ್ರೀ|| ಮಲ್ಲಿಕಾರ್ಜುನಪ್ಪನವರ ಪುತ್ರಿ ಸೌ|| ಕಾಂ|| ... ಚಿ|| ಸೌ|| ಸುಭದ್ರಾದೇವಿಯನ್ನು ಕೊಟ್ಟು ವಂದಲಿ ದಾಸೋಹ ಮಠದ ವಿರೂಪಾಕ್ಷಶಾಸ್ತ್ರಿಗಳು ಮತ್ತು ಶಿವಣಗಿ ಶಂಕರಶರ್ಮರ ಪೌರೋಹಿತ್ಯದಲ್ಲಿ ಇದೇ ಶ್ರೀಮುಖ ನಾಮಸಂ|| ಫಾಲ್ಗುಣ ಬಹುಳ ೧ ಶುಕ್ರವಾರ ಹರಿದ್ರಾಲೇಪನವೂ, ಬಹುಳ ೨ ಶನಿವಾರ ದೇವತಾಕಾರ್ಯವೂ, ಬಹುಳ ೪ ಸೋಮವಾರ ಪಂಚಕಲಶಗಳ ಪೂಜಾ, ಕನ್ಯಾದಾನ, ಅಕ್ಷತಾರೋಪಣೆ, ಮಾಂಗಲ್ಯಧಾರಣ ಇವೇ ಮೊದಲಾದ ವಿವಾಹಾಂಗಭೂತಗಳ ಸಮಸ್ತ ಕಾರ್ಯಗಳೂ ಶಾಸ್ತ್ರೋಕ್ತ ರೀತಿಯಿಂದ ಸಾಂಗವಾಗಿ ನೆರವೇರಿದವು. ಈ ವಿವಾಹಮಹೋತ್ಸವಕ್ಕೆ ಶ್ರೀ|| ... ಮಹಾಂತಸ್ವಾಮಿಗಳೂ, ಹಾಳ್ಳಿಯ ಶ್ರೀ|| ಷ|| ಬ್ರ|| ... ಬಸವ ಮಹಾಸ್ವಾಮಿಗಳೂ ಹಾಗೂ ಕೋರಣ, ... ಗಾಗಿ, ಬೈಬ್ರಿ, ಅವರಾದ, ಸುಪೂರ, ಬೆಳಕುಣಿ ... ಗ್ರಾಮಗಳ ಮಠಾಧಿಪತಿಗಳೂ ಪಾಟೀಲ, ಪಟವಾರಿ ... ಮುಖ, ದೇಶಪಾಂಡೆಯರೇ ಮೊದಲಾದ ಅನೇಕ ಜನ ... ಮನುಷ್ಯರು ಆಗಮಿಸಿ ನೂತನದಂಪತಿಗಳಿಗೆ ಸಮಸ್ತ ಸುಖಗಳುಂಟಾಗಲೆಂದು ಹಾರೈಸಿ... ಇದೇ ಸಮಯದಲ್ಲಿ ಪೋಷಕನಿಕ್ಷೇಪದ 2 ರೂ. ಸಮರ್ಪಿಸಲ್ಪಟ್ಟವು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

...ಸೂಚನೆ— ಈ ಔಷಧಾಲಯದಲ್ಲಿ ಸರ್ವಪ್ರಕಾರ ...ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

...ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೆಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 32

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾಠಶಾಲಾ, ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. 8, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಫೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (8)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು ಮಲೇರಿಯಾನವೇ ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಖಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ರ್ಹ್ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವನೋವು, ಗಂಟು ನೋವು ಸಂದು ಗಂಟು ನೋವು ಎಲ್ಲಾ ತರದ ವಾಯು, ಸೊಂಟನೋವು, ಚಜ್ಜಿದವ ಕಡಿತ, ಛಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕುಮದ್ದುಗಳು. ಹೊಮ್ಯೊಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ಹುಳಮೇಯುವ ರೋಗ, ದದ್ದು, ತುರಸುವ ನಂಜೆ ಹುಣ್ಣುಗಳನ್ನು ಶೀಘ್ರ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮೂರ್ಪಟ್ಟು ಮೆದುಳು ಕಾಯಿಗಳು ಅಸ್ತೇಜಪಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಅನಂದರಸ ಬೀರುವಂತೆ ಮಾಡುವ ಸಿರಪ್-ಸಾಲಿಸವನ ಆತ್ಮಸಂರಕ್ಷಕನಂತೆಯೇ ಯುವಕನಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,

[34] (ಹಂಪನಕಟ್ಟೆ), 21, ಮಂಗಳೂರು

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

...ದ ವೆಂಕಟಾಚಲಪಂಡಿತ,

ರಾಘವ ವೈದ್ಯಶಾಲಾ, ಮೈಸೂರು.

...7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 25

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುತ್ತದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (24)

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್,

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಪ್ರವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦X೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦X೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪X೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦X೮ ಬೆಲೆ ೧ಕ್ಕೆ	೦—೦—೯
ಪಟ್ಟಾಭಿಷೇಕಮಾಡಿದರಿಂದ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹೊನ್ನೂರು) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋ... ಪತ್ರ... ಗಳನ್ನ... ರದ ... ಧ ಸ... ರ... ಲಾದಿ ವಭಾಗಿ. ನ... ಸ್ವಸ್ಥ... ಳೆ. ಧಿಗಳು ಯ... ರೆ:—ಪಿನಶಿ... ತಲೆನೋವು, ... ಳ್ಳಿಯ ರೋ... ಕಣ್ಣುಗಳ್ಲಿ...

(Registered Trade Mark)

ಗತಕ್ಕ ಸರ್ವವ್ಯಾಧಿಗಳು, ಜಲದೋಷ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕ... ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಯನ್ನೂ ಸಹ ಹೆಚ್ಚು ಮಾಡುತ್ತದೆ. ಸಾಧಾರಣ ನಶ್ಯದ ಸಂಗಡ ಈ ನ... ಯಲ್ಲಿ ಒಂದು ಚಿಟಿಕೆಯನ್ನು ... ಪರಿಮಳವಾಗುವುದು. ಇದ... ತಮ್ಮ ಗೃಹದಲ್ಲಿ ಕುಟುಂಬದಿ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ...
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ ...

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್ ...

[16] ಪೋ. ಬಾ. ೫೧೦, ಮ...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರ... ಗಾ... ಪ್ರ...

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಅಕ್ಟೋಬರ್ ೧೯೩೩ [ಸಂಚಿಕೆ ೨೭

ಕ್ಷಯರೋಗ ನಿವಾರಣೆಯ ಕ್ರಮ.

"ಕ್ಷಯರೋಗವನ್ನು ನಿವಾರಣೆ ಮಾಡುವುದು ಹೇಗೆ? ಎಂದು ಅನೇಕರು ಕೇಳುತ್ತಾರೆ. ಇದನ್ನು ನಿವಾರಣೆ ಮಾಡುವದು ಕಷ್ಟವಲ್ಲ. ಇದು ಅಂಟುರೋಗ. ಈ ರೋಗದಿಂದ ಪೀಡಿತರಾದವರು ಯಾವ ಕೋಣೆಯಲ್ಲಿ ಮಲಗಿರುವರೋ ಅಲ್ಲಿಯೇ ನಿದ್ರೆಮಾಡುವುದಕ್ಕೆ ಮಲಗಬಾರದು. ಪುಷ್ಟಿಕರವಾದ ಆಹಾರವನ್ನು ತೆಗೆದುಕೊಳ್ಳಬೇಕು. ಸಾಕಾದಷ್ಟು ವ್ಯಾಯಾಮವನ್ನು ಹೊಂದಬೇಕು. ಆಯಾಸವು ಪರಿಹಾರವಾಗುವಷ್ಟು ವಿಶ್ರಾಂತಿಯನ್ನು ಹೊಂದಬೇಕು. ಅತಿಸರ್ವತ್ರವರ್ಜಯೇತ್ ಎಂಬ ಆರೋಗ್ಯವಿಧಿಗೆ ಅನುಸಾರವಾಗಿ ನಡೆಯಬೇಕು. ನಿರ್ಮಲವಾದ ವಾಯು ಸಂಚಾರವುಳ್ಳ ಮೈದಾನಗಳೇ ಮೊದಲಾದ ಪ್ರಾಂತಗಳಲ್ಲಿ ಸಾಧ್ಯವಾದಷ್ಟು ಕಾಲವನ್ನು ಕಳೆಯಬೇಕು. ವಾಯು ಸಂಚಾರಕ್ಕೆ ಪ್ರತಿಬಂಧಕವಿಲ್ಲದಂತೆ ಮನೆಗಳ ಬಾಗಿಲುಗಳು, ಕಿಟಕಿಗಳು ಇವುಗಳ ಏರ್ಪಾಡುಗಳನ್ನು ಮಾಡಿಕೊಂಡಿರಬೇಕು. ಸದಾ ಕಿಟಕಿಗಳು ಯಾವಾಗ್ಲೂ ತೆಗೆಯಲ್ಪಟ್ಟಿರಬೇಕು. ನಿದ್ರೆಮಾಡತಕ್ಕ ಕಾಲದಲ್ಲಿ ಕಿಟಕಿಗಳನ್ನು ಹಾಕಿಕೊಳ್ಳಬಾರದು. ಎದುರುಗಾಳಿಯು ಬೀಸದಂತೆ ಮಾಡಿಕೊಂಡು ನಿದ್ರೆಯನ್ನು ಮಾಡಬೇಕು. ವಾಯುಸಂಚಾರಕ್ಕೆ ಅವಕಾಶಮಾಡಿಕೊಳ್ಳುವುದು ಮಾತ್ರವೇ ಸಾಲದು. ವಾಸಮಾಡತಕ್ಕ ಮನೆಗಳಿಗೂ, ಕೋಣೆಗಳಿಗೂ ಬಿಸಿಲು ಬೀಳುವಂತೆಯೂ ಮಾಡಿಕೊಳ್ಳಬೇಕು. ನಿರ್ಮಲವಾದಗಾಳಿ, ಸೂರ್ಯನಬೆಳಕು, ಇವುಗಳಿಂದ ಅನೇಕ ರೋಗಗಳ ಕ್ರಿಮಿಗಳು ನಾಶವಾಗುತ್ತವೆ. ಯಾವ ಮನೆಯಲ್ಲಿ ಬಿಸಿಲಿಗೂ ನಿರ್ಮಲವಾದ ವಾಯುವಿಗೂ ಅವಕಾಶವಿರುವುದಿಲ್ಲವೋ ಆ ಮನೆಯಲ್ಲಿ ವಾಸಮಾಡತಕ್ಕವರಿಗೆ ಪ್ಲೇಗ್, ಕಾಲರಾ ಕ್ಷಯರೋಗ, ಮೊದಲಾದ ಅನೇಕರೋಗಗಳು ಬರುವುದಕ್ಕೆ ಅವಕಾಶವಾಗುವುದು. ಇದನ್ನು ತ್ವರಿತ ತಿಳಿದುಕೊಂಡು ಅನುಷ್ಠಾನಕ್ಕೆ ತಂದುಕೊಳ್ಳಬೇಕು. ಹಾಗೆ ಮಾಡಿದರೆ ಜನಗಳು ಆರೋಗ್ಯದೃಢಕಾಯರಾಗಿರುವುದು ಸಾಧ್ಯ.

M. V.

ಸ್ವೀಕಾರ

ವಿಜಾಪುರಶಹರ ನಿವಾಸಿಗಳಾದ ವೇ|| ದುಂಡಯ್ಯನವರು ಕರ್ಪೂರಮಠ ಇವರು ತಮ್ಮ ಮನಸ್ಸಂಕಲ್ಪವು ಜಗದಾಚಾರ್ಯರ ಆಶೀರ್ವಾದ ಬಲದಿಂದ ನೆರವೇರಿದ ಸಂತೋಷಕ್ಕಾಗಿ ಪ್ರಭಾ ಪೋಷಣಕ್ಕಾಗಿ ತೆಗೆಯಿಸಿದ ... ರೂ. ಗಳು, ಮ|| ರಾ|| ಕಾಡಪ್ಪ ಮಹಾಲಿಂಗಪ್ಪ ಲೋಣಿ ಇವರು ತಮ್ಮ ಮನಸ್ಸಂಕಲ್ಪವು ಜಗದಾಚಾರ್ಯರ ಅನುಗ್ರಹದಿಂದ ನೆರವೇರಿದ ಸಂತೋಷಕ್ಕಾಗಿ ಸಮರ್ಪಿಸಿದ 5 ರೂ. ಮ|| ರಾ|| ಸಂಗಪ್ಪ ... ಡಪ್ಪ ಲೋಣಿ ಇವರು ಮಹಾಲಕ್ಷ್ಮೀಪೂಜಾ ಸಮಯದಲ್ಲಿ ಸಮರ್ಪಿಸಿದ 2 ರೂ. 8 ಆ. ಮ|| ರಾ|| ...ನಪ್ಪ ಸಿದ್ಧರಾಮಪ್ಪ ತಮ್ಮಶೆಟ್ಟಿ ಇವರು ಕಿರಾಣಿ ಅಂಗಡಿಯನ್ನು ಸ್ಥಾಪಿಸಿದ ಸಮಯದಲ್ಲಿ ಸಮರ್ಪಿಸಿದ ... ರೂ. ಮ|| ರಾ|| ಅಡವಪ್ಪ ಜಗದೀಶಪ್ಪ ಅಂಬಲಿ ... ತಮ್ಮ ಮನೋಭೀಷ್ಟವು ಜಗದಾಚಾರ್ಯರ ...ರ್ವಾದದಿಂದ ನೆರವೇರಿದ ಸಂತೋಷಕ್ಕಾಗಿ ಸಮ... 2 ರೂ. ಮ|| ರಾ|| ಕರಿಬಸಪ್ಪ ಹಲಕಟ್ಟಿ ... ಮಹಾಲಕ್ಷ್ಮೀಪೂಜಾ ಸಮಯದಲ್ಲಿ ಸಮರ್ಪಿ... 1 ರೂ. ಮ|| ರಾ|| ರಾಚಪ್ಪ ಶರಣಪ್ಪ ಹೇರಲಗಿ ಇವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಜತ್ತ ಸಂಸ್ಥಾನಕ್ಕೆ ಸೇರಿದ ಮುಚಂಡಿ ಗ್ರಾಮದ ಪಾಟೀಲರಾದ ಮ|| ರಾ|| ಕಾಡಪ್ಪಗೌಡರು ತಮ್ಮ ಮನಸ್ಸಂಕಲ್ಪವು ಜಗದಾಚಾರ್ಯರ ಕೃಪೆಯಿಂದ ನೆರವೇರಿದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂ. ಒಟ್ಟು 21 ರೂ. 8 ಆ. ಗಳು ವೇ|| ದುಂಡಯ್ಯನವರು ಕರ್ಪೂರಮಠ ಮತ್ತು ಮ|| ರಾ|| ಗುರುಲಿಂಗಪ್ಪ ಅಂಬಲಿ ಇವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ|| ಗುಳೇದಗುಡ್ಡದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘದ ವಾರ್ಷಿಕಸಮಾರಂಭ ಮಹೋತ್ಸವವು ಶ್ರೀ ಶಂಭುಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಸಂಘದ ಸೆಕ್ರೆಟರಿಗಳ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು ಗೆಜೆಟ್.

ಮಿ|| ಹುಮಾಯೂನ್ ಮಿರ್ಜಾರವರು ನವೆಂಬರ್ 1 ನೇ ತಾರೀಖಿನಿಂದ ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರ ಪರ್ಸನಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟಿರುವರು.

ಮೈಸೂರು ರೈಲ್ವೇ ಚೀಫ್ ಸ್ಟೋರ್‌ಕೀಪರಾದ ಮಿ|| ಎ. ಸದಾಶಿವಮೊದಲಿಯಾರ್ ಬಿ.ಎ., ಬಿ.ಎಲ್. ರವರಿಗೆ ಅಕ್ಟೋಬರ್ 3 ನೇ ತಾರೀಖಿನಿಂದ 9 ವಾರಗಳ ರಜೆಯು ಕೊಡಲ್ಪಟ್ಟಿದೆ. ಸಬ್ ಅಸಿಸ್ಟೆಂಟ್ ಸ್ಟೋರ್‌ಕೀಪರಾದ ಮಿ|| ಎನ್. ವಿ. ಚಿಣ್ಣಪ್ಪನವರು ಮೇಲ್ಕಂಡ ಅವಧಿಯಲ್ಲಿ ಚೀಫ್ ಸ್ಟೋರ್‌ಕೀಪರರ ಚಾರ್ಜಿನಲ್ಲಿರುವರು.

ಹಾಸನ ಡಿಸ್ಟ್ರಿಕ್ಟಿನ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಎಚ್. ಸಿದ್ಧರಾಜೇ ಅರಸರವರಿಗೆ ಅವರು ಚಾರ್ಜನ್ನು ವಹಿಸುವ ತಾರೀಖಿನಿಂದ 4 ತಿಂಗಳು ಪ್ರಿವಿಲೇಜ್ ರಜೆಯೂ, ಎರಡು ತಿಂಗಳು ಸರಾಸರಿ ಸಂಬಳದಮೇಲೆ ಫರ್ಲೋರಜೆಯೂ ಕೊಡಲ್ಪಟ್ಟಿದೆ. ಮೇಲ್ಕಂಡ ಅವಧಿಯಲ್ಲಿ ಚನ್ನಪಟ್ಟಣ ಸಬ್ ಡಿವಿಜನ್ನಿನ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಸಿ. ಬಿ. ಮಾಚಯ್ಯ ಬಿ.ಎ., ಇವರು ಹಾಸನಕ್ಕೆ ಹಂಗಾಮಿ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ, ಸಕಲೇಶಪುರ ತಾಲ್ಲೂಕಿನ ಅಮಲ್ದಾರರಾದ ಮಿ|| ಎಂ. ಮಯ್ಯಣ್ಣನವರು ಚನ್ನಪಟ್ಟಣ ಸಬ್ ಡಿವಿಜನ್ನಿಗೆ ಹಂಗಾಮಿ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ.

"ಯೇಲ್" ವಿಶ್ವವಿದ್ಯಾನಿಲಯಕ್ಕೆ ಸೇರಿದ "ಪೀಬಾಡಿ ಮ್ಯೂಜಿಯಂ ಆಫ್ ನ್ಯಾಚುರಲ್ ಹಿಸ್ಟರಿ" ಎಂಬ ವಿಚಿತ್ರ ವಸ್ತುಪ್ರದರ್ಶನಶಾಲೆಯಲ್ಲಿ ಪುರಾತನ ಕಾಲದಲ್ಲಿ ವಾಸವಾಗಿದ್ದ ಒಂದು ಅದ್ಭುತ ಆಕಾರದ ಪ್ರಾಣಿಯ ಅಸ್ಥಿಪಂಜರವು ಪ್ರದರ್ಶಿಸಲ್ಪಟ್ಟಿರುವದು. ಆ ಪ್ರಾಣಿಯ ತಲೆಯ ಮೇಲೆ 20 ಅಡಿ ಉದ್ದವಾದ ಒಂದು ದೊಡ್ಡ ಕೊಂಬಿರುವದು! ಶಾಸ್ತ್ರಜ್ಞರು ಆ ಪ್ರಾಣಿಯು ಈ ಭೂಮಿಯಲ್ಲಿ ಸುಮಾರು 6,00,00,000 ವರ್ಷಗಳ ಹಿಂದೆ ವಾಸವಾಗಿತ್ತೆಂದು ನಿರ್ಧರಿಸಿರುವರು. ಉತ್ತರಧ್ರುವದ ಸಮೀಪದಲ್ಲಿರುವ ಅಲಾಸ್ಕಾ ದ್ವೀಪದಲ್ಲಿ ಈಗ ಸ್ವಲ್ಪದಿವಸಗಳ ಹಿಂದೆ ಮೇಲೆ ಹೇಳಿದಂಥ ಮತ್ತೊಂದು ಪ್ರಾಣಿಯ ಶವವು ಸ್ವಲ್ಪವೂ ಕೆಡದೆ ಇದ್ದಕ್ಕಿದ್ದಹಾಗೆಯೇ ದೊರಕಿರುವದು. ಅಲಾಸ್ಕಾ ದ್ವೀಪದಕೊಲ್ಲಿಯಲ್ಲಿ ಒಂದು ದಿನ ಒಂದು ದೊಡ್ಡ ಮಂಜಿನಗಡ್ಡೆಯು ತೇಲಿಕೊಂಡು ಬಂದಿತು. ಆ ಗಡ್ಡೆಯು ಸ್ವಾಭಾವಿಕವಾಗಿ ಬೆಳ್ಳಗಿರದೆ ಕಪ್ಪುಛಾಯೆಯಿಂದಿರುವದನ್ನು ಕಂಡು ಆ ದ್ವೀಪದ ನಿವಾಸಿಗಳಿಗೆ ಅನುಮಾನವುಂಟಾಗಿ ಕೂಡಲೇ ಕೊಡಲಿ ಮತ್ತು ಗರಗಸಗಳನ್ನು ತೆಗೆದುಕೊಂಡು ಹೋಗಿ ಆ ಗಡ್ಡೆಯನ್ನು ಒಡೆಯುವಲ್ಲಿ ಅದರ ಒಳಗಡೆಯಲ್ಲಿ ಒಂದು ಅದ್ಭುತ ಆಕಾರದ ಪ್ರಾಣಿಯ ಶವವು ಇದ್ದಿತು! ಆ ಪ್ರಾಣಿಯು ತಲೆಯಿಂದ ಬಾಲದ ಕೊನೆಯವರಿಗೆ 50 ಅಡಿಗಳಿಗಿಂತಲೂ ಹೆಚ್ಚಾಗಿರುವದು! ಶಾಸ್ತ್ರಜ್ಞರು ಅದನ್ನು ಪರೀಕ್ಷಿಸಿ ಸದರೀ ಪ್ರಾಣಿಯು ಸುಮಾರು 10,00,000 ವರ್ಷಗಳ ಹಿಂದೆ ವಾಸವಾಗಿತ್ತೆಂದೂ, ಒಂದಾನೊಂದು ಕಾಲದಲ್ಲಿ ಅದು ಒಂದು ಮಂಜಿನಗಡ್ಡೆಯ ಮೇಲೆ ಮಲಗಿ ನಿದ್ರಿಸುತ್ತಿದ್ದಾಗ ವಿಶೇಷ ಶೈತ್ಯದಿಂದ ಅದರ ಮೇಲೆಲ್ಲಾ ಮಂಜು ಮುಚ್ಚಿಕೊಂಡು ಆ ಪ್ರಾಣಿಯು ಮೃತಪಟ್ಟಿತೆಂದೂ, ಆ ಮಂಜುಗಡ್ಡೆಯು ದಿನದಿನಕ್ಕೆ ದೊಡ್ಡದಾಗುತ್ತಾ ಬಂದದ್ದರಿಂದ ಒಳಗೆ ಸೇರಿಹೋದ ಪ್ರಾಣಿಯು ಇದುವರೆಗೂ ಕೆಡದೆ ಇದ್ದಿತೆಂದೂ ಹೇಳುವರು!

ಮೈಸೂರು ಹೈಕೋರ್ಟಿನ ಚೀಫ್ ಜಸ್ಟಿಸರಾದ ಶ್ರೀಮಾನ್ ಪಿ. ಮಹಾದೇವಯ್ಯನವರ ಗುಣಕಥನ.

(ಡೇಲಿಪೋಸ್ಟ್ ಪತ್ರಿಕೆಯ ಅನುವಾದ.)

ಶ್ರೀಮಾನ್ ಪಿ. ಮಹಾದೇವಯ್ಯನವರು ಮೈಸೂರು ಹೈಕೋರ್ಟಿನ ಚೀಫ್ ಜಸ್ಟಿಸರಾಗಿ ಕಾಯಂ ಮಾಡಲ್ಪಟ್ಟಿದ್ದು ಸಂಸ್ಥಾನದಲ್ಲಿಯೂ ಮತ್ತು ಹೊರಗಡೆಯಲ್ಲಿಯೂ ಇರುವ ಮೈಸೂರು ದೇಶೀಯರೆಲ್ಲರಿಗೂ ಆನಂದವನ್ನುಂಟುಮಾಡಿರುತ್ತದೆ. ಮೈಸೂರು ದೇಶೀಯರಲ್ಲಿ ನ್ಯಾಯಶಾಖೆಯ ಮುಖ್ಯಾಧಿಕಾರಿಗಳಾಗಿ ನೇಮಿಸಲ್ಪಟ್ಟವರಲ್ಲಿ ಇವರೇ ಮೊದಲನೆಯವರಾಗಿರುತ್ತಾರೆ. ಮತ್ತು ಅವರ ಅಧಿಕಾರವು ಕಾಯಂ ಆದ ಸಂದರ್ಭದಲ್ಲಿ ಅವರ ವಿಷಯವಾಗಿ ನಡೆಯುತ್ತಿರುವ ಗುಣಕಥನವು ಜನಸಾಮಾನ್ಯವೂ ಹಾಗೂ ಬಾರಿನವರು ಅವರ ವಿಷಯದಲ್ಲಿ ಎಷ್ಟರಮಟ್ಟಿನ ಗೌರವವನ್ನು ಹೊಂದಿರುವರೆಂಬುದನ್ನು ವ್ಯಕ್ತಪಡಿಸುತ್ತದೆ.

ಅವರ ಜೀವನ ಚರಿತ್ರೆಯು ನಾನಾ ದೃಷ್ಟಿಗಳಿಂದ ಮಹತ್ವವುಳ್ಳದ್ದಾಗಿದೆ. ಅದು ಕೇವಲ ಸ್ವಶಕ್ತಿಯಿಂದಲೇ ಅಲ್ಪಸ್ಥಾನದಿಂದ ನ್ಯಾಯಶಾಖೆಯ ಅತ್ಯುನ್ನತಪದವಿಗೆ ಏರಿದವರ ಮಹತ್ವದ ಉದಾಹರಣೆಯಾಗಿದೆ.

55 ವರ್ಷಗಳಾಗಿದ್ದರೂ ಅವರ ದೇಹಶಕ್ತಿಯಾಗಲಿ ಬುದ್ಧಿಶಕ್ತಿಯಾಗಲಿ ಸ್ವಲ್ಪವೂ ಕುಂದದೆ ಮೊದಲಿನಂತೆಯೇ ಇರುತ್ತದೆ. ಕಾಲೇಜಿನಲ್ಲಿದ್ದಾಗ ಅವರು ಒಳ್ಳೇ ವ್ಯಾಯಾಮಗಾರರಾಗಿದ್ದು ಈಗಲಾದರೂ ಹಾಗೆಯೇ ಇರುವರು. ಕೋಲಾರದ ಚಿನ್ನದ ಗಣಿಗಳಲ್ಲಿಯೂ ಮತ್ತು ಬೆಂಗಳೂರಿನ ಸೆಂಚುರಿ ಕ್ಲಬ್ಬಿನಲ್ಲಿಯೂ ನಡೆದ ಟೆನಿಸ್ ಟೋರ್ನಮೆಂಟುಗಳಲ್ಲಿ ಇವರು ಅನೇಕ ಬಹುಮಾನಗಳನ್ನು ಪಡೆದಿರುವರು. ಅಲ್ಲದೆ ಇವರು ಸಂಗೀತವನ್ನು ಕಲಿದಿರುವರಲ್ಲದೆ ವೀಣಾವಾದನದಲ್ಲಿಯೂ ಪಾಂಡಿತ್ಯವನ್ನು ಪಡೆದಿರುವರು.

ಸೆಕೆಂಡರಿ ವಿದ್ಯಾಭ್ಯಾಸವಾದನಂತರ ಶ್ರೀಮಾನ್ ಮಹಾದೇವಯ್ಯನವರು ಮೈಸೂರು ಮಹಾರಾಜಾ ಕಾಲೇಜನ್ನು ಸೇರಿ ಎಫ್. ಎ. ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ಸಂಸ್ಥಾನಕ್ಕೆ ಎರಡನೆಯವರಾಗಿ ಉತ್ತೀರ್ಣರಾಗಿ ಮುಂದಿನ ವ್ಯಾಸಂಗಕ್ಕಾಗಿ ಒಂದು ವಿದ್ಯಾರ್ಥಿವೇತನವನ್ನು ಪಡೆದರು. 'ಆರ್ಟ್ಸ್ ಡಿಗ್ರಿ' ತರಗತಿಗಳಲ್ಲಿ ಇವರು ತಮ್ಮ ಬುದ್ಧಿಶಕ್ತಿಯನ್ನು ಚೆನ್ನಾಗಿ ಪ್ರದರ್ಶಿಸಿ ಅನೇಕ ಬಹುಮಾನಗಳನ್ನು ಪಡೆದರು. ಬಿ.ಎ. ಡಿಗ್ರಿಯನ್ನು ಪಡೆದನಂತರ ಪ್ಲೀಡರಾಗಿದ್ದ ಇವರ ತಂದೆಯವರ ಸಲಹೆಯಂತೆ ಇವರು ನ್ಯಾಯಶಾಸ್ತ್ರವನ್ನು ಅಭ್ಯಾಸಮಾಡಲು ನಿಶ್ಚಯಿಸಿದರು. ಎಫ್. ಎಲ್. ಪರೀಕ್ಷೆಯಲ್ಲಿ ಇವರು ಉತ್ತಮ ತರಗತಿಯಲ್ಲಿ ಉತ್ತೀರ್ಣರಾದುದಲ್ಲದೆ 1900 ರಲ್ಲಿ ಬಿ. ಎಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

ಆಗ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಮಿ|| ಜೆ. ವೀಯರ್‌ರವರು, ಪಂಡಿತವಾದಿಗಳಾಗಿದ್ದ ತಲ್ಲದೆ ತಮ್ಮಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಉತ್ತಮಧ್ಯೇಯಗಳು ನೆಲೆಗೊಳ್ಳುವಂತೆ ಮಾಡುತ್ತಿದ್ದರು. ಮಿ|| ವೀಯರ್‌ರವರು ಶ್ರೀಮಾನ್ ಮಹಾದೇವಯ್ಯನವರ ಬುದ್ಧಿಶಕ್ತಿಯನ್ನು ಅರಿತುಕೊಂಡು ಕಾಲೇಜಿನಲ್ಲಿ ಸಹಾಯೋಪಾಧ್ಯಾಯರುಗಳಲ್ಲಿ ಆಗಾಗ್ಗೆ ಹಂಗಾಮಿಯಾಗಿ ಉಂಟಾಗುತ್ತಿದ್ದ ಖಾಲಿನಾಕರಿಗಳನ್ನು (ಲಾ ಕಾಲೇಜಿನ ರಜಾಕಾಲದಲ್ಲಿ) ಶ್ರೀಮಾನ್ ರವರಿಗೆ ಕೊಡುತ್ತಿದ್ದರು. ಒಮ್ಮೆ ಶ್ರೀಮಾನ್ ಮಹಾದೇವಯ್ಯನವರು ಆಗಿನ ದಿವಾನರಾಗಿದ್ದ ಸರ್ ಶೇಷಾದ್ರಿ ಅಯ್ಯರ್‌ರವರನ್ನು ನೋಡಬೇಕೆಂದು ಅಪೇಕ್ಷಿಸಿದಾಗ ಮಿ|| ವೀಯರ್‌ರವರು ಸಂತೋಷದಿಂದ ದಿವಾನರಿಗೆ ಒಂದು ಪತ್ರವನ್ನು ಬರೆದುಕೊಟ್ಟು ಅವರಲ್ಲಿ ವಿದ್ಯಾರ್ಥಿಗಾಗಿ ಸರಕಾರಕ್ಕೆ ಬರೆದುಕೊಡುವ ಶಿಫಾರಸ್ ಪತ್ರಗಳಲ್ಲಿ ಅದೇ ಮೊದಲನೆಯದು ಮತ್ತು ಕಡೆಯದೆಂದು ಬರೆದಿದ್ದುದು ಅತ್ಯಂತ ಮಹತ್ವದ ವಿಷಯವಾಗಿರುವದು. ಅನಂತರ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ವೈಸ್‌ಛಾನ್ಸಲರೂ ಆದ ಮಿ|| ಟಿ. ಡೆನ್ಹ್ಯಾಂರವರು ಶ್ರೀಮಾನ್ ಮಹಾದೇವಯ್ಯನವರಿಗೆ ಸ್ಪೆಷಲ್ ಸ್ಕಾಲರ್‌ಷಿಪ್ಪನ್ನು ಕೊಟ್ಟು ಇಂಗ್ಲೆಂಡಿಗೆ ಕಳುಹಿಸಬೇಕೆಂದು ಶಿಫಾರಸು ಮಾಡಿದರು. ಆದರೆ ಗತಿಸಿದ ರಾಜಸಭಾಭೂಷಣ ಟಿ. ಆರ್. ತಂಬೂಚೆಟ್ಟಿಯವರು ಇವರಿಗೆ ಕಾಯಿದೆಯನ್ನು ವ್ಯಾಸಂಗಮಾಡಲು ಸ್ಪೆಷಲ್ ಸ್ಕಾಲರ್‌ಷಿಪ್ಪನ್ನು ಸ್ಯಾಂಕ್ಷನ್ ಮಾಡಿದರು. ಶ್ರೀಮಾನ್ ಮಹಾದೇವಯ್ಯನವರ ವಿದ್ಯಾರ್ಥಿಗಳಲ್ಲಿ ಅನೇಕರು ಸಂಸ್ಥಾನದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳಾಗಿರುವರು. ಅವರಲ್ಲಿ ಡಾಕ್ಟರ್ ಎಸ್. ಸುಬ್ಬರಾವ್ ಬಿ.ಎ., ಸೀನಿಯರ್ ಸರ್ಜನ್, ಮಿ|| ಎನ್. ಎಸ್. ಸುಬ್ಬರಾವ್ ಎಂ.ಎ., ಬಾರ್-ಅಟ್-ಲಾ (ಡಿ. ಪಿ. ಐ.) ಮತ್ತು ಮೈಸೂರು ಮುನಿಸಿಪಲ್ ಪ್ರೆಸಿಡೆಂಟರಾದ ಮಿ|| ಬಿ. ಟಿ. ಕೇಶವಯ್ಯಂಗಾರ್ ಬಿ.ಎ., ಮೊದಲಾದವರು ಮುಖ್ಯರಾದವರು.

ಬಿ.ಎಲ್. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದನಂತರ ಶ್ರೀಮಾನ್ ಮಹಾದೇವಯ್ಯನವರು ತುಂಕೂರಿನಲ್ಲಿ ವಕೀಲಿವೃತ್ತಿಯನ್ನವಲಂಬಿಸಿ ಅಲ್ಪಕಾಲದಲ್ಲಿ ಒಳ್ಳೆಯ ಕೀರ್ತಿಯನ್ನು ಗಳಿಸಿದರು. ಇವರ ನ್ಯಾಯಪಕ್ಷಪಾತಕೆಯೂ, ಕಷ್ಟಸಹಿಷ್ಣುತೆಯೂ ಜನಜನಿತವಾಗಿ, ಕೆಲವು ದಿವಸಗಳ ಹಿಂದೆ ಇವರು ತುಂಕೂರು ಡಿಸ್ಟ್ರಿಕ್ಟಿನಲ್ಲಿ ಇನ್ಸ್‌ಪೆಕ್ಷನ್ನಿಗಾಗಿ ಸರ್ಕೀಟ್ ಹೋಗಿದ್ದಾಗ, ತುಂಕೂರು ಬಾರಿನ ಮೆಂಬರುಗಳು ಮೇಲ್ಕಂಡ ವಿಷಯವಾಗಿ ಅವರನ್ನು ವಿಶೇಷವಾಗಿ ಪ್ರಶಂಸಿಸಿರುತ್ತಾರೆ.

ಶ್ರೀಮನ್ಮಹಾರಾಜರವರ ಸಿಂಹಾಸನಾರೋಹಣದ ಜ್ಞಾಪಕಾರ್ಥವಾಗಿ 1901 ರಲ್ಲಿ ತುಂಕೂರಿನಲ್ಲಿ ಶ್ರೀಕೃಷ್ಣರಾಜೇಂದ್ರ ಎಜುಕೇಷನಲ್ ಅಸೋಸಿಯೇಷನ್ ಎಂಬ ಸಂಘವನ್ನು ಸ್ಥಾಪಿಸಿ, ಗ್ರಾಮಾಂತರಗಳಲ್ಲಿ ವಿದ್ಯಾಪ್ರಚಾರಕ್ಕಾಗಿ ಸಹಾಯಮಾಡುವಂತೆ ಅಲ್ಲಿಯ ಲಿಂಗಾಯತರನ್ನು ಪ್ರೋತ್ಸಾಹಿಸಿ, ಸ್ವಸಾಹಸದಿಂದ ಚಂದಾಹಣವನ್ನು ಕೂಡಿಸಿ, ಮೇಲ್ಕಂಡ ಸಂಸ್ಥೆಯ ಹೆಸರಿನಲ್ಲಿ ಎರಡು ಬಹುಮಾನಗಳನ್ನು ಕಾಯಂ ಆಗಿ ಕೊಡುತ್ತಿರಬೇಕೆಂದು, ಫಂಡಿನಹಣವನ್ನು ಆಗಿನ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದ ಮಿ|| ಜೆ. ಎಚ್. ಭಾಭಾರವರಿಗೆ ರವಾನಿಸಿದರು. ಆ ಬಹುಮಾನಗಳು ಹೈಸ್ಕೂಲ್ ಹೆಡ್ಮಾಸ್ತರಿಂದ ಇಂದಿನವರೆಗೂ ಕೊಡಲ್ಪಡುತ್ತಿರುವವು. ತಮ್ಮ ಜನಾಂಗದ ಹಿತಕ್ಕಾಗಿ ಅವರು ನಿಸ್ಪೃಹತೆಯಿಂದ ಮಾಡುತ್ತಿದ್ದ ಪ್ರಯತ್ನವಿಶೇಷಗಳನ್ನು ನೋಡಿ, ಘಟ್ಟ ಮುರಿಗಮ್ಮ ಎಂಬಾಕೆಯು ಶ್ರೀಮಾನ್ ಮಹಾದೇವಯ್ಯನವರ ಬಳಿಗೆ ಬಂದು, ತನ್ನ ಕಡೆಯ ಮೊಕದ್ದಮೆಗಳನ್ನು ಪ್ರತಿಫಲವಿಲ್ಲದೆ ನಡೆಸಿಕೊಡುವದಾದರೆ ತನ್ನ ಸರ್ವಸ್ವವನ್ನೂ ವಿದ್ಯಾಭ್ಯಾಸದ ಸಲುವಾಗಿ ವಿನಿಯೋಗಮಾಡುವದಾಗಿ ಮಾತುಕೊಟ್ಟಳು. ಶ್ರೀಮಾನ್ ಮಹಾದೇವಯ್ಯನವರು ಅದಕ್ಕೆ ಒಪ್ಪಿ ಆಕೆಯ ಮೊಕದ್ದಮೆಗಳನ್ನು ಯಾವುದೊಂದು ಪ್ರತಿಫಲವೂ ಇಲ್ಲದೆ ನಡೆಯಿಸಿದರು. ಅನಂತರ ಆ ವೃದ್ಧಳು ತನ್ನ ವಾಗ್ದಾನದಂತೆ ಸಮಸ್ತ ಆಸ್ತಿಯನ್ನೂ ಶ್ರೀಕೃಷ್ಣರಾಜೇಂದ್ರ ಎಜುಕೇಷನಲ್ ಅಸೋಸಿಯೇಷನ್ನಿಗೆ ಸಮರ್ಪಿಸಿರುವದಾಗಿ 'ವಿಲ್' ಬರೆದು ರಿಜಿಸ್ಟರ್ ಮಾಡಿಸಿದಳು. ಆಮೇಲೆ ಆಕೆಯ ಶ್ರೀಮಂತ ಸಹೋದರರು ತಮಗೆ ಆ ಆಸ್ತಿಯಲ್ಲಿ ಹಕ್ಕಿರುವದೆಂದು ಹೇಳಿ ಮೊಕದ್ದಮೆಯನ್ನು ಹೂಡಿದರು. ಇದಕ್ಕಾಗಿ ಶ್ರೀಮಾನ್ ಮಹಾದೇವಯ್ಯನವರೇ ನಿಂತು ಎರಡು ಕೋರ್ಟುಗಳಲ್ಲಿ ಹೊಡೆದಾಡಿದರು. ಮೊಕದ್ದಮೆಯು ಎರಡು ಕೋರ್ಟುಗಳಲ್ಲಿಯೂ ಅವರಂತೆಯೇ ತೀರ್ಮಾನವಾಯಿತು. ಈ ರೀತಿ ಆ ಆಸ್ತಿಯೆಲ್ಲವೂ ವಿದ್ಯಾಭ್ಯಾಸದ ಸಂಸ್ಥೆಗೆ ದೊರಕಿತು. ಈ ಮೊಕದ್ದಮೆಯು 19, ಮೈಸೂರು ಚೀಫ್‌ಕೋರ್ಟ್ ರಿಪೋರ್ಟ್ಸ್, ಪುಟ 87 ರಲ್ಲಿ ವಿವರಿಸಲ್ಪಟ್ಟಿರುವದು.

ಮದರಾಸಿನಲ್ಲಿ ಲಾ ಪರೀಕ್ಷೆಗೆ ಓದುತ್ತಿದ್ದಾಗ ಶ್ರೀಮಾನ್ ಮಹಾದೇವಯ್ಯನವರು ಕಾನ್ನೆಮಾರಾ ಲೈಬ್ರರಿಯಲ್ಲಿ ಸ್ವಮತ ಸಂಬಂಧವಾದ ಗ್ರಂಥಗಳನ್ನು ದೀರ್ಘವಾಗಿ ಶೋಧಿಸಿ ಅದರಿಂದ ಪಡೆದ ಅನುಭವವನ್ನು ತಮ್ಮ ಮತೀಯರ ಹಿತಕ್ಕಾಗಿ ಉಪಯೋಗಿಸಿದರು. ಆಗಿನ ಸೆನ್ಸಸ್ ರಿಪೋರ್ಟುಗಳಲ್ಲಿ ವೀರಶೈವರ ವಿಷಯವಾಗಿ ಅನೇಕ ತಪ್ಪು ವಿಷಯಗಳು ಪ್ರಕಟವಾಗಿದ್ದವು. ಶ್ರೀ|| ಟಿ. ಆನಂದರಾಯರು ಆಗ್ಗೆ ಡೈರೆಕ್ಟರ್ ಆಫ್ ಸ್ಟ್ಯಾಟಿಸ್ಟಿಕ್ಸ್ ಆಗಿದ್ದು ಅನಂತರ ದಿವಾನಪದವಿಗೆ ಬಂದರು. ಶ್ರೀಮಾನ್ ಮಹಾದೇವಯ್ಯನವರು ಒಂದು ಡೆಪ್ಯುಟೇಷನ್ನಿನ ಮುಂದಾಳುಗಳಾಗಿ ಹೋಗಿ ಶ್ರೀ|| ಆನಂದರಾಯರೊಡನೆ 3 ದಿವಸಗಳವರೆಗೆ ಚರ್ಚೆಮಾಡಿ, ತಾವು ಸಂಗ್ರಹಿಸಿದ್ದ ಸ್ವಮತ ಸಂಬಂಧವಾದ ವಿಷಯವಾಗಿ ಅವರಿಗೆ ಚೆನ್ನಾಗಿ ಮನದಟ್ಟಾಗುವಂತೆ ಮಾಡಿ, ಸರಕಾರಕ್ಕೂ ವೀರಶೈವರಿಗೂ ಸಮಾಧಾನವಾದ ತೀರ್ಮಾನವಾಗುವಂತೆ ಮಾಡಿದರು. ಶ್ರೀ|| ಆನಂದರಾಯರು ಶ್ರೀಮಾನ್ ಮಹಾದೇವಯ್ಯನವರು ಮಾಡಿದ ಕಾರ್ಯಗಳನ್ನು ಲಿಖಿತಮೂಲಕವಾಗಿ ಒಪ್ಪಿದುದಲ್ಲದೆ. ಆ ಸಂಬಂಧವಾಗಿ ನಡೆದ ಚರ್ಚೆಯನ್ನು 1901 ನೇ ಇಸವಿಯ ಸೆನ್ಸಸ್‌ವರದಿಯಲ್ಲಿ ಸವಿಸ್ತಾರವಾಗಿ ಪ್ರಕಟಿಸಿದರು.

ಶ್ರೀಮಾನ್ ಮಹಾದೇವಯ್ಯನವರು ವಕೀಲಿವೃತ್ತಿಯಲ್ಲಿ ಇತರರಿಗಿಂತಲೂ ಜಾಗ್ರತೆಯಾಗಿ ಹೆಸರನ್ನು ಸಂಪಾದಿಸಿದರು. ಪ್ರಸಿದ್ಧಿಯಾದ ಅಡ್ಡಪಲ್ಲಕ್ಕಿ ಮೊಕದ್ದಮೆಯಲ್ಲಿ ಧಾರವಾಡದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಶ್ರೀ ಹುಬ್ಬಳ್ಳಿ ಸ್ವಾಮಿಗಳವರ ಪರವಾಗಿ ನಿಂತು, ಧಾರವಾಡದ ಲಾಯರುಗಳೆಲ್ಲರೂ ಒಟ್ಟಾಗಿ ಎದುರುಪಕ್ಷದಲ್ಲಿ ನಿಂತರೂ ಹೆದರದೆ, ಮೊಕದ್ದಮೆಯಲ್ಲಿ ಜಯಶಾಲಿಗಳಾದರು. ಒಬ್ಬ ವ್ಯವಹಾರಜ್ಞರಾದ ವೀರಶೈವರು ಶ್ರೀಮಾನ್ ಮಹಾದೇವಯ್ಯನವರ ವಾದವನ್ನು ಕನ್ನಡದಲ್ಲಿ ಪ್ರಸಿದ್ಧಪಡಿಸಲು, ಹುಬ್ಬಳ್ಳಿಯಲ್ಲಿ 3 ದಿವಸಗಳಲ್ಲಿ 50,000 ಸಾವಿರ ಪ್ರತಿಗಳು ಬಿಕರಿಯಾದವು! ಇಂದಿನವರೆಗೂ ಮುಂಬಯಿ ಪ್ರೆಸಿಡೆನ್ಸಿಯ ಜನರು ಇವರನ್ನು ಅಡ್ಡಪಲ್ಲಕ್ಕಿ ಲಾಯರೆಂದೇ ಕರೆಯುವರು. ಬಳ್ಳಾರಿ ಡಿಸ್ಟ್ರಿಕ್ಟಿನ ಶ್ರೀ ಉಜ್ಜಯಿನಿ ಸ್ವಾಮಿಗಳು ಬಹಿರಂಗವಾಗಿ ಉತ್ಸವಮಾಡಿಕೊಂಡು ಹೋಗುವ ವಿಷಯದಲ್ಲಿ ನಡೆದ ಚಿಕ್ಕನಾಯಕನಹಳ್ಳಿಯ ಮೊಕದ್ದಮೆಯಲ್ಲಿಯೂ ಶ್ರೀಮಾನ್ ಮಹಾದೇವಯ್ಯನವರೇ ನಿಂತು ಹೊಡೆದಾಡಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳೆರಡರಲ್ಲಿಯೂ ಜಯಶಾಲಿಗಳಾದರು. ಅಲ್ಲದೆ ಬಳ್ಳಾರಿ ಡಿಸ್ಟ್ರಿಕ್ಟ್ ಹೊಸಪೇಟೆ ಸಬ್ ಕಲೆಕ್ಟರರ ಕೋರ್ಟಿನಲ್ಲಿ ನಡೆದ ಗದಗಿನ ಶ್ರೀ ತೋಂಟದ ಸ್ವಾಮಿಗಳ ಅಡ್ಡಪಲ್ಲಕ್ಕಿ ಮೊಕದ್ದಮೆಯಲ್ಲಿಯೂ ಇವರು ಜಯವನ್ನು ಪಡೆದರು. ಇವೇ ಮೊದಲಾದ ಮೊಕದ್ದಮೆಗಳಲ್ಲಿ ಪಡೆದ ಜಯದಿಂದ ಇವರ ಕೀರ್ತಿಯು ವಿಶೇಷವಾಗಿ ಧಾರವಾಡದ ಲಿಂಗಾಯತರು ಇವರನ್ನು ತಮ್ಮ ಅಧಿಪತ್ಯದಲ್ಲಿಯೇ ಇದ್ದು ವಕೀಲಿವೃತ್ತಿಯನ್ನು ಕೈಕೊಳ್ಳಬೇಕೆಂದು ಅಪೇಕ್ಷಿಸಿದರು. ಆದರೆ ಶ್ರೀಮಾನ್ ಮಹಾದೇವಯ್ಯನವರು ಮದರಾಸಿನಲ್ಲಿ ಲಾ ಡಿಗ್ರಿಯನ್ನು ಪಡೆದಿದ್ದುದರಿಂದ, ಮುಂಬಯಿ ಅಧಿಪತ್ಯದಲ್ಲಿ ವಕೀಲಿವೃತ್ತಿಯನ್ನು ಅವಲಂಬಿಸಲು ಅವಕಾಶವಿರಲಿಲ್ಲ. ಆದುದರಿಂದ ಬಳ್ಳಾರಿಯಲ್ಲಿ ವಕೀಲಿವೃತ್ತಿಯನ್ನು ಮುಂದುವರಿಸಬೇಕೆಂದು ಆಲೋಚಿಸಿದರು. ಆದರೆ ಗತಿಸಿದ ಮಿ|| ತಂಬೂಚೆಟ್ಟಿಯವರು ಇವರನ್ನು ಮೈಸೂರಿನಲ್ಲಿ ಮುನಸೀಫರ ಕೆಲಸವನ್ನು ಕೈಕೊಳ್ಳುವಂತೆ ಒಪ್ಪಿಸಿದರು.

ಶ್ರೀಮಾನ್ ಮಹಾದೇವಯ್ಯನವರು ಮುನಸೀಫರಾಗಿದ್ದ ಅವಧಿಯಲ್ಲಿ ಅನೇಕ ಮಹತ್ವದ ವಿಷಯಗಳು ನಡೆದವು. ಚೀಫ್ ಜಸ್ಟಿಸ್ ಮಿ|| ಆರ್. ಬಿ. ಪ್ರಮರ್‌ರವರು ಡಿಸ್ಟ್ರಿಕ್ಟ್ ಜಡ್ಜರಾಗಿದ್ದಾಗ, ಮುನಸೀಫರಾಗಿದ್ದ ಶ್ರೀಮಾನ್ ಪಿ. ಮಹಾದೇವಯ್ಯನವರ ಕಾರ್ಯದಕ್ಷತೆಯನ್ನು ಬಹಳವಾಗಿ ಕೊಂಡಾಡುತ್ತಿದ್ದರಲ್ಲದೆ, ಆ ವಿಷಯವಾಗಿ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗೆ ಕಾಗದವನ್ನು ಸಹ ಬರೆದಿದ್ದರು. ಅವರು ಶ್ರೀಮಾನ್ ಮಹಾದೇವಯ್ಯನವರನ್ನು ಇತರ ಮುನಸೀಫರಿಗೆ ಮಾದರಿಯಂತೆ ಭಾವಿಸುತ್ತಿದ್ದರಲ್ಲದೆ, ಏನಾದರೂ ತೊಡಕುಗಳು ಪ್ರಾಪ್ತವಾದಾಗ ಅವುಗಳನ್ನು ಬಗೆಹರಿಸಲು ಶ್ರೀಮಾನ್ ಮಹಾದೇವಯ್ಯನವರ ಬಳಿಗೇ ಕಳುಹಿಸುತ್ತಿದ್ದರು. ಇವರು ನರಸಿಂಹರಾಜಪುರದಲ್ಲಿ ಆಕ್ಟಿಂಗ್ ಮುನಸೀಫರಾಗಿದ್ದಾಗ ಕೋರ್ಟಿನ ನಾಜರರವರು ಅಪಾರಹಣವನ್ನು ದುರುಪಯೋಗಪಡಿಸಿದ್ದುದನ್ನು ಬಹು ಸಾಹಸದಿಂದ ಪತ್ತೆ ಹಚ್ಚಿದರು. ಮುನಸೀಫ್‌ಕೋರ್ಟಿನ ಕೆಲವು ಜನ ಅಧಿಕಾರಿಗಳು, ಅಮೀನರು ಮತ್ತು ಪೋಲೀಸ್ ಜವಾನರು ಒಟ್ಟುಗೂಡಿ ಒಂದು ನಾಟಕ ಕಂಪೆನಿಯನ್ನು ತಯಾರ್ಮಾಡಿ, ಅದಕ್ಕಾಗಿ ಒಂದು ನಾಟಕಶಾಲೆಯನ್ನು ಕಟ್ಟಿಸಲು ಮೇಲೆ ಹೇಳಿದಂತೆ ಕೋರ್ಟಿನ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರು. ಈ ಕಂಪೆನಿಯ ಕಾರ್ಯಕ್ರಮಗಳು ಅಧಿಕಾರಿಗಳ ಮತ್ತು ಜನರ ಮನಸ್ಸಿನಲ್ಲಿ ಅನೇಕವಿಧವಾದ ದುರ್ನಡತೆಗಳಿಗೆ ಅವಕಾಶವನ್ನುಂಟುಮಾಡಿತು. ಶ್ರೀಮಾನ್ ಮಹಾದೇವಯ್ಯನವರು ಅತ್ಯಂತ ಶ್ರಮದಿಂದ ಈ ಸಂಘವನ್ನು ನಿಲ್ಲಿಸಿದರು. ಈ ಸಂದರ್ಭದಲ್ಲಿ ಅವರು ಮಾಡಿದ ಮಹತ್ಕಾರ್ಯವನ್ನು ದಿವಾನರಾಗಿದ್ದ ಸರ್ ಪಿ. ಎನ್. ಕೃಷ್ಣಮೂರ್ತಿಗಳೂ, ಚೀಫ್ ಜಡ್ಜರಾಗಿದ್ದ ಆನರಬಲ್ ಮಿ|| ಎ. ಇ. ಸ್ಟ್ಯಾಲಿಯವರೂ ಬಹಳವಾಗಿ ಶ್ಲಾಘಿಸಿದುದಲ್ಲದೆ, ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾಗಿದ್ದ ಮಿ|| ಇ. ಮ್ಯಾಕೊನೋಷಿಯವರಿಗೆ ಈ ವಿಷಯವಾಗಿ ಪತ್ರವನ್ನು ಸಹ ಬರೆದಿದ್ದರು.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಇಲ್ಲಿ ಹೇಳಬೇಕಾಗಿರುವದು. ಮೇಲೆ ಹೇಳಿದ ನರಸಿಂಹರಾಜಪುರದ ಮುನ್ಸೀಫ್ ಕೋರ್ಟಿನ ನಾಟಕದ ಕಂಪೆನಿಗೆ ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನ ಕೆಲವು ಅಧಿಕಾರಿಗಳೂ ಸಂಬಂಧಪಟ್ಟಿದ್ದರು. ಶ್ರೀಮಾನ್ ಪಿ. ಮಹಾದೇವಯ್ಯನವರು ಹಂಗಾಮಿ ಮುನ್ಸೀಫರಾಗಿದ್ದರೂ, ಈ ಅಧಿಕಾರಿಗಳ ವಿಷಯದಲ್ಲಿ ತಕ್ಕ ವಿಚಾರಣೆಯನ್ನು ನಡೆಯಿಸಬೇಕೆಂದು ಡಿಸ್ಟ್ರಿಕ್ಟ್ ಜಡ್ಜರವರಿಗೆ ಸಲಹೆಯನ್ನು ಕೊಡಲು ಸ್ವಲ್ಪವೂ ಹಿಂಜರಿಯಲಿಲ್ಲ. ಡಿ|| ಜಡ್ಜರವರು ಇವರ ಸಲಹೆಯಂತೆ ತಪ್ಪುಮಾಡಿದ್ದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದರು. ಆದರೆ ಅವರಲ್ಲಿ ಒಬ್ಬರು ಶ್ರೀಮಾನ್ ಮಹಾದೇವಯ್ಯನವರಿಗೆ ವಿರುದ್ಧವಾಗಿ ಅನಾಮಧೇಯಗಳಾದ ಕಾಗದಗಳನ್ನು ಬರೆದರು. ಇವರು ಅದಕ್ಕೂ ಹೆದರದೆ ಶಿವಮೊಗ್ಗೆಯ ಪೋಲೀಸರನ್ನು ಒತ್ತಾಯಪಡಿಸಿ ಅತ್ಯಂತ ದಕ್ಷತೆಯಿಂದಲೂ, ಚತುರತೆಯಿಂದಲೂ ಆ ಕಾಗದಗಳ ಕಾರಣಕರ್ತನನ್ನು ಪತ್ತೆಮಾಡಿ ಅವನನ್ನು ವಿಚಾರಣೆಗೆ ಗುರಿಪಡಿಸಿ ಕಡೆಗೆ ಶಿಕ್ಷೆಗೆ ಗುರಿಪಡಿಸಿದರು. ಹೆಸರಿಲ್ಲದ ಕಾಗದಗಳನ್ನು ಬರೆಯುವದು ಕೆಲವು ಜನ ಅಧಿಕಾರಿಗಳಲ್ಲಿ ಸಾಮಾನ್ಯವಾಗಿರುವದು. ಮತ್ತು ಮೇಲ್ಪಟ್ಟ ಅಧಿಕಾರಿಗಳು ಖಂಡಿತವಾದಿಗಳಾಗಿ ಕೈಕೆಳಗಿನವರ ಗುಣದೋಷಗಳನ್ನು ಕ್ರಮಪಡಿಸಲು ಪ್ರಯತ್ನಿಸಿದಾಗ ಅವರು ತಮ್ಮ ಮೇಲಿನ ಅಧಿಕಾರಿಗಳಿಗೆ ವಿರುದ್ಧವಾಗಿ ಈ ರೀತಿ ಹೆಸರಿಲ್ಲದ ಕಾಗದಗಳನ್ನು ಬರೆಯುವರು. ಆದುದರಿಂದ ಶ್ರೀಮಾನ್ ಮಹಾದೇವಯ್ಯನವರು ಇಂತಹ ಮೊಕದ್ದಮೆಯನ್ನು ಹಿಡಿದು ಅಪರಾಧಿಗಳನ್ನು ಪತ್ತೆಮಾಡಿ ನ್ಯಾಯಸ್ಥಾನದಲ್ಲಿ ಅವರ ತಪ್ಪಿಗೆ ತಕ್ಕ ಶಿಕ್ಷೆಯಾಗುವಂತೆ ತಕ್ಕ ರುಜುವಾತುಗಳನ್ನೂ ಶೇಖರಿಸಿದುದು ಶ್ಲಾಘನೀಯವು.

ರಿಟೈರ್ಡ್ ಚೀಫ್‌ಕೋರ್ಟ್ ಜಡ್ಜರಾದ ಶ್ರೀ|| ಟಿ. ಪರಮಶಿವ ಅಯ್ಯರ್‌ರವರು, ಶ್ರೀಮಾನ್ ಮಹಾದೇವಯ್ಯನವರ ಬುದ್ಧಿಶಕ್ತಿ ದೇಹಶಕ್ತಿ ನ್ಯಾಯಪರತೆ ಇವುಗಳ ವಿಷಯದಲ್ಲಿ ಬಹು ಅಭಿಮಾನವುಳ್ಳವರಾಗಿದ್ದು, ಇವರನ್ನು ಪೋಲೀಸ್ ಸೂಪರಿಂಟೆಂಡೆಂಟರನ್ನಾಗಿ ನೇಮಿಸುವಂತೆ ಸರ್ಕಾರಕ್ಕೆ ಅನೇಕ ಸಾರಿ ಶಿಫಾರಸ್ ಮಾಡಿದ್ದರು.

ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟಿನಲ್ಲಿ ಶ್ರೀಮಾನ್ ಮಹಾದೇವಯ್ಯನವರು ಕಾರ್ಯನಿರ್ವಾಹಕತ್ವದಲ್ಲಿ ಅತ್ಯಂತ ದಕ್ಷರೆಂಬ ಕೀರ್ತಿಯನ್ನು ಪಡೆದರು. 1910 ನೇ ಇಸವಿಯಲ್ಲಿ ಆ ಕೋರ್ಟಿನ ಕೆಲಸಗಳು ಬಹಳವಾಗಿ ಹೆಚ್ಚಿ ಅಲ್ಲಿಯ ಕೆಲಸಗಳನ್ನು ಬಾಕಿಯಿಲ್ಲದಂತೆ ನಿರ್ವಹಿಸಲು ಯಾವ ಮುನ್ಸೀಫರಿಂದಲೂ ಸಾಧ್ಯವಿಲ್ಲವೆಂದೂ, ಆದುದರಿಂದ ಅಲ್ಲಿ ಮತ್ತೊಂದು ಅಡಿಷನಲ್ ಮುನ್ಸೀಫರ ಕೋರ್ಟನ್ನು ಸ್ಥಾಪಿಸಬೇಕೆಂದೂ ಚೀಫ್ ಕೋರ್ಟಿನವರು ಶಿಫಾರಸು ಮಾಡಿದ್ದರು. ಈ ಸಂದರ್ಭದಲ್ಲಿ ಇವರ ಕಾರ್ಯದಕ್ಷತೆಯಲ್ಲಿ ಬಹಳ ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದ ಮೆಸ್ಸರ್ಸ್ ಟಿ. ಪರಮಶಿವ ಅಯ್ಯರ್ ಮತ್ತು [illegible] ಜಾಕುಸ್ ಈ ಇಬ್ಬರು ಡಿಸ್ಟ್ರಿಕ್ಟ್ ಜಡ್ಜರ ಶಿಫಾರಸಿನ ಮೇಲೆ ಶ್ರೀಮಾನ್ ಮಹಾದೇವಯ್ಯನವರು ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಲ್ಪಟ್ಟರು. ಆಗಿನ ಚೀಫ್ ಜಸ್ಟಿಸರಾಗಿದ್ದ ಸರ್ ಸ್ಟಾನ್ಲಿ ಇಸ್ಮೆರವರು ಮಹಾದೇವಯ್ಯನವರಿಗೆ ಮೈಸೂರಿನಲ್ಲೇ ವಾಸಮಾಡಿ ಪ್ರತಿನಿತ್ಯವೂ ಬೆಳಗ್ಗೆ 9 ಗಂಟೆಯ ಗೂಡ್ಸ್ ರೈಲಿನಲ್ಲಿ ಶ್ರೀರಂಗಪಟ್ಟಣಕ್ಕೆ ಹೋಗಿ ಸಾಯಂಕಾಲ 6-30 ವರೆಗೆ ಕೆಲಸ ಮಾಡಿ ಅನಂತರ ಸಾಯಂಕಾಲದ ಗೂಡ್ಸ್ ರೈಲಿನಲ್ಲಿ ಮೈಸೂರಿಗೆ

ಬರುವದೆಂದು ಸ್ಪೆಷಲ್ಲಾಗಿ ಅವಕಾಶವನ್ನು ಕೊಟ್ಟಿದ್ದರು. ಶ್ರೀಮಾನ್ ಮಹಾದೇವಯ್ಯನವರು ತಮ್ಮ ಹಿಂದಿನ ಅಧಿಕಾರಿಗಳಿಂದ ಉಳಿಸಲ್ಪಟ್ಟಿದ್ದ ಕೆಲಸವನ್ನು ಪೂರೈಸಲೇಬೇಕೆಂಬ ದೃಢಸಂಕಲ್ಪದಿಂದಲೂ ಉತ್ಸಾಹದಿಂದಲೂ ಕೂಡಿದವರಾಗಿ ಕಷ್ಟಪಟ್ಟು ಕೆಲಸಮಾಡಿ ಹಳೆಯ ಮತ್ತು ಸರಾಸರಿನ ಮೊಕದ್ದಮೆಗಳನ್ನೆಲ್ಲಾ ತೀರ್ಮಾನಿಸಿ ಒಂದುವರ್ಷದೊಳಗಾಗಿ ಕೋರ್ಟಿನ ಮೊಕದ್ದಮೆಗಳ ಸಂಖ್ಯೆಯನ್ನು ಮೈಸೂರು ಡಿವಿಜನ್ನಿನ ಇತರ ಕೋರ್ಟುಗಳ ಸಮಕ್ಕೆ ತಂದರು. ಡಿಸ್ಟ್ರಿಕ್ಟ್ ಜಡ್ಜರ ಪ್ರತಿ ತಿಂಗಳ ಪ್ರೊಸೀಡಿಂಗಿನಲ್ಲಿ ಇತರ ಎಲ್ಲ ಕೋರ್ಟುಗಳಿಗಿಂತಲೂ ಶ್ರೀರಂಗಪಟ್ಟಣದ ಕೋರ್ಟಿನಲ್ಲಿಯೇ ತಕರಾರು ಮೊಕದ್ದಮೆಗಳು ಹೆಚ್ಚಾಗಿ ತೀರ್ಮಾನವಾಗುತ್ತಿದ್ದುದು ಕಂಡುಬರುತ್ತಿತ್ತು. ಸರ್ ಸ್ಟಾನ್ಲಿ ಇಸ್ಮೇರವರು ಶ್ರೀಮಾನ್ ಮಹಾದೇವಯ್ಯನವರ ಕೆಲಸದಿಂದ ಅತ್ಯಂತ ಸಂತೋಷಪಟ್ಟವರಾಗಿ ಸರ್ಕಾರಕ್ಕೆ ಬರೆಯುವ ತಮ್ಮ ಗುಪ್ತವರದಿಯಲ್ಲಿ ಅವರ ವಿಷಯವಾಗಿ ಪ್ರಶಂಸಿಸಿದುದಲ್ಲದೆ ತಾವಾಗಿ ಅವರನ್ನು ಕಡಮೆ ಕೆಲಸವಿರುವ ಕೋರ್ಟಿಗೆ ಮತ್ತು ಆರೋಗ್ಯಕರವಾದ ಊರಿಗೆ ವರ್ಗಾಯಿಸುವದಾಗಿ ಹೇಳಿದರು. ಈ ರೀತಿ ಶ್ರೀಮಾನ್ ಮಹಾದೇವಯ್ಯನವರು ಡಿಸ್ಟ್ರಿಕ್ಟ್ ಜಡ್ಜರ, ಚೀಫ್ ಕೋರ್ಟ್ ಜಡ್ಜರ ಮತ್ತು ಸರ್ಕಾರದ ಸಂಪೂರ್ಣ ಮೆಚ್ಚುಗೆಗೆ ಪಾತ್ರರಾದರು. ಮತ್ತು ಆಗಿನ ದಿವಾನರಾದ ಶ್ರೀ|| ಟಿ. ಆನಂದರಾಯರು ಎಗ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲಿ ಶ್ರೀಮಾನ್ ಮಹಾದೇವಯ್ಯನವರು ಶ್ರೀರಂಗಪಟ್ಟಣದಲ್ಲಿ ತೋರಿಸಿದ ಕಾರ್ಯದಕ್ಷತೆಯ ವಿಷಯವಾಗಿ ಹೊಗಳಿದರು.

ಒಮ್ಮೆ ಶ್ರೀಮಾನ್ ಮಹಾದೇವಯ್ಯನವರು ಮೈಸೂರು ಸ್ಟೇಷನ್ನಿಗೆ ಹೋಗುವಹೊತ್ತಿಗೆ ಗೂಡ್ಸ್ ಗಾಡಿಯು ಹೊರಟು ಹೋಗಿ ಕೆಲವು ನಿಮಿಷಗಳಾಗಿತ್ತು. ಅವರು ತಕ್ಷಣವೇ ತಮ್ಮ ಬೈಸಿಕಲ್ಲನ್ನು ಶ್ರೀರಂಗಪಟ್ಟಣದ ರಸ್ತೆಯ ಕಡೆಗೆ ತಿರುಗಿಸಿ, ರೈಲಿನ ಜೊತೆಗೂ ಹೋಗಿ ಅದು ಶ್ರೀರಂಗಪಟ್ಟಣವನ್ನು ತಲುಪುವದಕ್ಕಿಂತ 1-2 ನಿಮಿಷಗಳು ಮುಂಚಿತವಾಗಿಯೇ ಕೋರ್ಟಿಗೆ ಹೋಗಿ ಬಾರಿನ ಮೆಂಬರುಗಳನ್ನೆಲ್ಲಾ ಆಶ್ಚರ್ಯಗೊಳಿಸಿದರು! ಎಷ್ಟೋ ದಿವಸಗಳವರೆಗೆ ಸಾಯಂಕಾಲ ಕೋರ್ಟಿನ ಕೆಲಸವು ಪೂರೈಸಿದ ನಂತರ ವ್ಯಾಯಾಮದ ಸಲುವಾಗಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ನಡೆದುಕೊಂಡೇ ಬರುತ್ತಿದ್ದರಂತೆ! ಒಮ್ಮೆ ವಿಶೇಷ ಕೆಲಸದಿಂದ ಇವರ ಆರೋಗ್ಯವು ಕೆಟ್ಟು ಲೈಫ್ ಇನ್ಷೂರೆನ್ಸ್ ಸಲುವಾಗಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿದ್ದ ಡಾಕ್ಟರ್ ಉಸ್ಮಾನರಲ್ಲಿಗೆ ಹೋಗಿರಲು ಅವರು ಇವರನ್ನು ಪರೀಕ್ಷಿಸಿ ದೇಹಸ್ಥಿತಿಯು ಲೈಫ್ ಇನ್ಷೂರೆನ್ಸ್ ಮಾಡಿಸಲು ತಕ್ಕಷ್ಟು ಆರೋಗ್ಯಕರವಾಗಿಲ್ಲವೆಂದು ಹೇಳಿದರು! ಆಗ ಮಹಾದೇವಯ್ಯನವರು ಔಷಧಿಯಿಲ್ಲದೆಯೇ ಸರಿಯಾದ ಆರೋಗ್ಯವನ್ನು ಪಡೆದು ಪುನಃ 6 ವಾರಗಳೊಳಗಾಗಿ ಪರೀಕ್ಷೆಗೆ ಬರುವೆನೆಂದು ಹೇಳಿ ಹೊರಟುಹೋದರು. ಅಂದಿನಿಂದಲೂ (1912 ನೇ ಇಸವಿಯ ಬೇಸಗೆಯ ರಜೆಯಲ್ಲಿ) ಅವರು ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಚಾಮುಂಡಿ ಬೆಟ್ಟವನ್ನು ಹತ್ತಿ ಇಳಿಯಲಾರಂಭಿಸಿ 5 ವಾರಗಳು ಕಳೆದ ನಂತರ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ ಬಳಿಗೆ ಹೋಗಲು ಅವರು ಪುನಃ ಪರೀಕ್ಷಿಸಿ ಆರೋಗ್ಯವು ಸಂಪೂರ್ಣಸಮರ್ಪಕವಾಗಿರುವದೆಂದು ಸರ್ಟಿಫಿಕೇಟನ್ನು ಕೊಟ್ಟರಂತೆ!

ಅನಂತರ ಮಹಾದೇವಯ್ಯನವರು ಹೊಳೇನರಸೀಪುರಕ್ಕೆ ವರ್ಗಾಯಿಸಲ್ಪಟ್ಟರು. ಆ ಊರಿನಲ್ಲಿ ಅನೇಕ ವಿರೋಧ ಪಂಗಡಗಳಿದ್ದು ನ್ಯಾಯಸ್ಥಾನದ ಗೌರವವೇ ಇಲ್ಲದಂತಿತ್ತು. ಅಲ್ಲಿಗೆ ಹೋದ ಸ್ವಲ್ಪದಿವಸಗಳೊಳಗಾಗಿಯೇ ಇವರು ಎಲ್ಲ ಪಂಗಡಗಳವರ ಗೌರವಕ್ಕೂ ನಂಬಿಕೆಗೂ ಪಾತ್ರರಾದರು ಮತ್ತು ಆ ಊರಿನಿಂದ ಹೊರಡುವಾಗ್ಗೆ ಅಲ್ಲಿನ ವೈದಿಕಬ್ರಾಹ್ಮಣರು ಇವರನ್ನು ನ್ಯಾಸರಾಯಮಠಕ್ಕೆ ಬರಮಾಡಿಕೊಂಡು ಆಶೀರ್ವದಿಸಿ ಕಳುಹಿಸಿದರು. ಇವರ ಕರ್ತವ್ಯನಿಷ್ಠೆಯು ಅಸಾಧಾರಣವಾದದ್ದು. ಏಕೆಂದರೆ ಶಿರಸ್ತೇದಾರರಿಗೆ ಚಾರ್ಜನ್ನು ವಹಿಸಿ 4 ಮೈಲುದೂರ ಪ್ರಯಾಣಮಾಡಿದ್ದವರು, ಇದ್ದಕ್ಕಿದ್ದಹಾಗೆ ಹಿಂತಿರುಗಿ ಬಂದು ಯಾವುದೋ ಒಂದು ಪ್ರಾಮುಖ್ಯವಾದ ಮೊಕದ್ದಮೆಗೆ ಸಂಬಂಧಪಟ್ಟ ಲೆಕ್ಕದ ಪುಸ್ತಕಗಳನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟು ಮೊಹರುಮಾಡಿ, ಸದರಿ ಪೆಟ್ಟಿಗೆಯನ್ನು ಮುಂದೆ ತಮ್ಮ ಸ್ಥಾನಕ್ಕೆ ಬರುವವರೇ ತೆರೆಯಬೇಕೆಂದು ಒಂದು ಕಾಗದವನ್ನು ಬರೆದಿಟ್ಟುಹೋದರು. ಮುಂದೆ ಒಂದಾನೊಂದು ಸಮಯದಲ್ಲಿ ಸದರೀ ಲೆಕ್ಕಗಳನ್ನು ತಿದ್ದಲು ಪ್ರಯತ್ನವು ನಡೆದು, ಆಗ ಮಹಾದೇವಯ್ಯನವರ ಮುಂದಾಲೋಚನೆಯು ಮೆಚ್ಚಲ್ಪಟ್ಟಿತು.

ಶ್ರೀಮಾನ್ ಮಹಾದೇವಯ್ಯನವರು ಕೋಲಾರದ ಗಣಿಗಳಲ್ಲಿದ್ದಾಗ ಅವರ ದಯಾಪರತೆಯೂ, ಧೈರ್ಯವೂ, ವಿಘ್ನಪರಂಪರೆಗಳು ಬಂದರೂ ಹೆದರದೆ ದಕ್ಷತೆಯಿಂದ ಕೆಲಸಗಳನ್ನು ನಿರ್ವಹಿಸುವದು ಇವು ಚೆನ್ನಾಗಿ ಪ್ರಕಾಶಕ್ಕೆ ಬಂದವು. ಗಣಿಗಳಲ್ಲಿದ್ದ ಮಾರ್ವಾಡಿಗಳು ಒಟ್ಟಾಗಿ ಮಹಾದೇವಯ್ಯನವರ ವಿರುದ್ಧವಾಗಿ ಒಂದು ದೊಡ್ಡ ಗೊಂದಲವನ್ನೇ ಎಬ್ಬಿಸಿದ್ದರು. ಮಹಾದೇವಯ್ಯನವರು ಸಾಲಗಾರರನ್ನೆಲ್ಲಾ ಮಾರ್ವಾಡಿಗಳ ಅಪೇಕ್ಷೆಯಂತೆ ಸೆರೆಯಾಗೃಹಕ್ಕೆ ಕಳುಹಿಸದೇ ಇದ್ದುದೂ ಮತ್ತು ಸಾಲಗಾರರ ಸಂಬಳದಲ್ಲಿ ಶೇಕಡಾ 90 ರಷ್ಟು ಭಾಗವನ್ನು ಜಪ್ತಿಮಾಡಲು ಅವಕಾಶಕೊಡದೇ ಇದ್ದುದೂ ಇದಕ್ಕೆ ಕಾರಣಗಳಾಗಿದ್ದವು. ಇಂಥಾ ವಿಷಯಗಳಲ್ಲಿ ವಿಚಾರಣೆ ನಡೆಯಿಸುವ ಜಡ್ಜರು [illegible]ಯುಕ್ತಗಳನ್ನು ಪರಿಶೀಲಿಸಿ ಕೆಲಸಮಾಡಬೇಕೆಂದೂ, ಹಾಗೆಯೇ ನಡೆಯಬೇಕೆಂದು ನ್ಯಾಯಾಧೀಶರನ್ನು ಒತ್ತಾಯಪಡಿಸಲು ಸಾಲಕೊಟ್ಟವರಿಗೆ (ಅವರು ಯಾರೇ ಆಗಲಿ) ಯಾವ ಅಧಿಕಾರವೂ ಇಲ್ಲವೆಂದೂ, ಕೇಸಿನ ವಿದ್ಯಮಾನಗಳನ್ನೂ, [illegible]ಯಗಳನ್ನೂ ಸರಿಯಾಗಿ ಪರಿಶೀಲಿಸದೆ ಸಾಲಕೊಟ್ಟವನು ಹೇಳಿದಮಾತ್ರಕ್ಕೆ ಪ್ರತಿಯೊಬ್ಬ ಸಾಲಗಾರನನ್ನೂ ಜೈಲಿಗೆ ಕಳುಹಿಸುವದಾಗಲಿ, ಅವರ ಉತ್ಪತ್ತಿಯಲ್ಲಿ ಶೇಕಡಾ 90 ಭಾಗವನ್ನು ಜಪ್ತಿಮಾಡುವದಾಗಲಿ ನ್ಯಾಯವಲ್ಲವೆಂದೂ, ಮಹಾದೇವಯ್ಯನವರು ಅಭಿಪ್ರಾಯಪಟ್ಟಿದ್ದರು. ಇತ್ತ ಮಾರ್ವಾಡಿಗಳು ಮಹಾದೇವಯ್ಯನವರ ವರ್ತನವು ಇತರ ನ್ಯಾಯಾಧೀಶರ ವರ್ತನಕ್ಕೆ ತೀರಾ ವಿರುದ್ಧವಾಗಿರುವದೆಂದೂ, ಅದರಿಂದ ತಮ್ಮ ವ್ಯವಹಾರಕ್ಕೆ ಬಹಳ ತೊಂದರೆಯಾಗುವದೆಂದೂ ಅಭಿಪ್ರಾಯಪಟ್ಟರು. ಶ್ರೀಮಾನ್ ಮಹಾದೇವಯ್ಯನವರು ಇದಕ್ಕೆ ಪ್ರತಿಯಾಗಿ, ಕಾಯಿದೆಗೆ ಅನುಸಾರವಾಗಿ ಯುಕ್ತಾಯುಕ್ತ ವಿವೇಚನೆಯಿಂದ ತೀರ್ಮಾನಮಾಡುವ ಅಧಿಕಾರವು ತಮ್ಮಲ್ಲಿರುವದೆಂದೂ, ತಮ್ಮ ತೀರ್ಮಾನವು ಸಮ್ಮತವಾಗದಿದ್ದರೆ ಕೆಲವು ಮೊಕದ್ದಮೆಗಳ ವಿಷಯದಲ್ಲಿ ಮೇಲಿನಕೋರ್ಟಿಗೆ ಅಪೀಲುಮಾಡಿ, ಪರೀಕ್ಷಿಸಿ ನೋಡಬಹುದೆಂದೂ ಹೇಳಿದರು. ಮಾರ್ವಾಡಿಗಳು ಅಪೀಲುಮಾಡಲು ಒಪ್ಪದೆ, ಮುನ್ಸೀಫ್‌ಕೋರ್ಟನ್ನೇ ಬಹಿಷ್ಕರಿಸುವದಾಗಿ ಹೆದರಿಸಿದರು. ಮಹಾದೇವಯ್ಯನವರು ಅದಕ್ಕೆ ಸ್ವಲ್ಪವೂ ಹೆದರಲಿಲ್ಲ. ಮತ್ತು ಆ ವಿಷಯವಾಗಿ ಕಡೆಯವರೆಗೂ ಪರೀಕ್ಷಿಸಲು ಸಿದ್ಧರಾಗಿದ್ದರು. ಇದರಿಂದ ವಿಷಮಸ್ಥಿತಿಯು ಪ್ರಾಪ್ತವಾಯಿತು. ಮಾರ್ವಾಡಿಗಳು ಒಟ್ಟಾಗಿ ಸೇರಿ ಮುನ್ಸೀಫ್‌ಕೋರ್ಟನ್ನು ಬಹಿಷ್ಕರಿಸಿದರು. ಮತ್ತು ಕೆಲವು ಜನ ಲಾಯರುಗಳನ್ನೂ, ಒಬ್ಬ ಬ್ಯಾರಿಸ್ಟರನ್ನೂ ನೇಮಕಮಾಡಿಕೊಂಡು ಮಹಾದೇವಯ್ಯನವರನ್ನು ಬೇರೆ ಕಡೆಗೆ ವರ್ಗಮಾಡಬೇಕೆಂದು ಚೀಫ್‌ಕೋರ್ಟಿಗೆ ಒಂದು ದೊಡ್ಡ ಮೆಮೋರಿಯಲ್ಲನ್ನು ಒಪ್ಪಿಸಿದರು. ಇದಕ್ಕೆ ಪ್ರತಿಯಾಗಿ ಶ್ರೀಮಾನ್ ಮಹಾದೇವಯ್ಯನವರು ಸಾಲಗಾರರಿಂದ ತಿಂಗಳು 1 ಕ್ಕೆ 2-3 ಲಕ್ಷ ರೂಪಾಯಿಗಳಂತೆ ಜಪ್ತಿಮಾಡಿದ್ದ ಹಣವನ್ನೆಲ್ಲಾ ಲಬ್ಬೆ ಮುಸಲ್ಮಾನರು, ಮೊದಲಿಯಾರ್‍ರು, ವೈಶ್ಯರು ಮೊದಲಾದ ಇತರ ಲೇವಾದೇವಿಗಾರರಿಗೆ ಹಂಚಲು ಪ್ರಾರಂಭಿಸಿದರು. ಬಹಿಷ್ಕಾರವು ಆರು ತಿಂಗಳಕಾಲ ನಡೆಯಿತು. ಈ ಅವಧಿಯಲ್ಲಿ ಮಾರ್ವಾಡಿ ಲೇವಾದೇವಿಗಾರರಿಗೆ ಹೋಗಬೇಕಾಗಿದ್ದ ಸುಮಾರು 15-16 ಲಕ್ಷ ರೂಪಾಯಿಗಳು ಇತರ ಲೇವಾದೇವಿಗಾರರ ಕೈಸೇರಿತು. ಇತ್ತ ಮಾರ್ವಾಡಿಗಳ ಬಳಿಯಲ್ಲಿದ್ದ ಸುಮಾರು 30 ಲಕ್ಷ ರೂಪಾಯಿಗಳ ಬಂಡವಾಳವು ವ್ಯವಹಾರವಿಲ್ಲದೆ ನಿಂತಿತು. ಈ ಸಂದರ್ಭದಲ್ಲಿ ಅನಿರೀಕ್ಷಿತವಾದ ಅನುಕೂಲತೆಗಳನ್ನು ಪಡೆದ ಇತರ ಲೇವಾದೇವಿಗಾರರು ತಮ್ಮಲ್ಲಿದ್ದ ಮೊಕದ್ದಮೆಗಳನ್ನೆಲ್ಲಾ ಒಟ್ಟೊಟ್ಟಿಗೆ ದಾಖಲ್ಮಾಡಲಾರಂಭಿಸಿದುದರಿಂದ ಕೋರ್ಟಿನ ಉತ್ಪನ್ನವು ಯಾವಭಾಗದಲ್ಲಿಯೂ ಕಡಿಮೆಯೇ ಆಗಲಿಲ್ಲ. ಮಾರ್ವಾಡಿಗಳ ಬಳಿಯಲ್ಲಿ ಸಾಲವನ್ನು ತೆಗೆದುಕೊಳ್ಳುವವರೇ ಇಲ್ಲದೆ ಅವರಲ್ಲಿದ್ದ ಹಣವು ನಿರುಪಯೋಗವಾಗಿ ನಿಂತುಬಿಟ್ಟಿತಲ್ಲದೆ ಬಡ್ಡಿಯ ದರವು ಬಹಳಮಟ್ಟಿಗೆ ಇಳಿದುಹೋಯಿತು. ಇದರಿಂದ ಮಾರ್ವಾಡಿಗಳಿಗೆ ಉಂಟಾದ ನಿರಾಶೆಯನ್ನು ಇಷ್ಟೆಂದು ಹೇಳಲು ಸಾಧ್ಯವಿಲ್ಲ. ಈ ಮಧ್ಯೆ ಚೀಫ್ ಕೋರ್ಟಿನವರು ಮುನಸೀಫರ ಹೇಳಿಕೆಯನ್ನು ತರಿಸಿಕೊಂಡು ಅನಂತರ ಮಾರ್ವಾಡಿಯವರ ಕಡೆಯ ಲಾಯರುಗಳ ವಾದವನ್ನು ಕೇಳಿ ಮೆಮೋರಿಯಲ್ಲನ್ನು ಡಿಸ್‌ಮಿಸ್ ಮಾಡಿದುದಲ್ಲದೆ ಮಹಾದೇವಯ್ಯನವರನ್ನು ಅಲ್ಲಿಂದ ವರ್ಗಾಯಿಸುವದಿಲ್ಲವೆಂದು ಸ್ಪಷ್ಟಪಡಿಸಿದರು. ಅನಂತರ ಆ ಮಾರ್ವಾಡಿಗಳೆಲ್ಲರೂ ಒಟ್ಟಾಗಿ ಶ್ರೀಮಾನ್ ಮಹಾದೇವಯ್ಯನವರಲ್ಲಿ ಕ್ಷಮಾಪಣೆಯನ್ನು ಬೇಡಿದುದಲ್ಲದೆ, ತಮ್ಮ ಮೊಕದ್ದಮೆಗಳನ್ನು ನಡೆಯಿಸಲು ಪುನಃ ಅವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಈ ಸನ್ನಿವೇಶದಿಂದ ಮಹಾದೇವಯ್ಯನವರ ಬುದ್ಧಿಶಕ್ತಿಯ ಪ್ರಭಾವವು ಸರ್ಕಾರದವರ ಗಮನಕ್ಕೆ ಬಂದು ಇವರನ್ನು ಮುಂದೆ ದೊಡ್ಡ ದೊಡ್ಡ ಮತ್ತು ಹೆಚ್ಚು ಜವಾಬ್ದಾರಿಯ ಅಧಿಕಾರಗಳಿಗೆ ಕಳುಹಿಸಬಹುದೆಂದು ಭಾವಿಸಿಕೊಂಡರು. ಅವರು ಚಿನ್ನದ ಗಣಿಯಲ್ಲಿದ್ದಾಗ ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು. ಇವರ ಕೀರ್ತಿಯೂ ಜನರಿಗೆ ಇವರಲ್ಲಿ ನಂಬುಗೆಯೂ ವಿಶೇಷವಾಗಿದ್ದುದರಿಂದ ಚಿನ್ನದ ಗಣಿಯ ಮೈನಿಂಗ್ ಬೋರ್ಡಿನವರು ತಮ್ಮ ಸೂಪರಿಂಟೆಂಡೆಂಟರೊಬ್ಬರನ್ನು ಮಹಾದೇವಯ್ಯನವರ ಬಳಿಗೆ ಕಳುಹಿಸಿ ಅವರ ಕೆಲಸದ ವಿಷಯದಲ್ಲಿ ತಮಗಿರುವ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಅವರಿಗೆ ಇನ್ನೂ ಅಲ್ಲಿಯೇ ಇರಬೇಕೆಂಬ ಅಪೇಕ್ಷೆಯಿದ್ದರೆ ತಿಳುಹಿಸಬೇಕೆಂದೂ ಅವಶ್ಯಕವಿದ್ದರೆ ತಾವು ಬ್ರಿಟಿಷ್ ರೆಸಿಡೆಂಟರ ಮುಖಾಂತರವಾಗಿ ಸರ್ಕಾರದವರನ್ನು ಕಂಡು ಅವರಿಗೆ ಸಬ್ ಜಡ್ಜರ ಅಧಿಕಾರ ದೊರೆಯುವವರೆಗೆ ಅಲ್ಲಿಯೇ ಇರಲು ಅವಕಾಶವನ್ನು ಕಲ್ಪಿಸಿಕೊಡುವದಾಗಿಯೂ ಹೇಳಿದರು. ಆದರೆ ಮಹಾದೇವಯ್ಯನವರು ಸೆಕ್ರೆಟೇರಿಯಟ್ ಕೆಲಸದಲ್ಲಿಯೂ ಸ್ವಲ್ಪ ಅನುಭವಮಾಡಿಕೊಳ್ಳುವ ಅಪೇಕ್ಷೆಯು ತಮಗಿರುವದಾಗಿ ತಿಳಿಸಿದ್ದರಿಂದ ಮೈನಿಂಗ್ ಬೋರ್ಡಿನವರು ಅವರನ್ನು ಗಣಿಯಲ್ಲಿ ಹೆಚ್ಚುಕಾಲ ಇರಿಸಿಕೊಳ್ಳಲು ಪ್ರಯತ್ನವನ್ನು ಮಾಡಲಿಲ್ಲ.

ಮಿ|| ಪಿ. ಜಿ. ಡಿ'ಸೋಜಾರವರು ಶ್ರೀಮಾನ್ ಮಹಾದೇವಯ್ಯನವರನ್ನು ತಮ್ಮ ಅಸಿಸ್ಟೆಂಟರನ್ನಾಗಿ ಚುನಾಯಿಸಿಕೊಂಡರು. ಮಹಾದೇವಯ್ಯನವರಾದರೂ ಬಹುಬೇಗ ಮುಂದೆಬಂದರು. ಸೆಕ್ರೆಟೇರಿಯಟ್ಟಿನ ನಾನಾಭಾಗಗಳಲ್ಲಿಯೂ, ಎಕನಾಮಿಕ್ ಕಾನ್ಫರೆನ್ಸಿನಲ್ಲಿಯೂ ಸಹ ಕೆಲಸಮಾಡಿದನಂತರ ಸೆಕ್ರೆಟೇರಿಯಟ್ಟಿನ ನ್ಯಾಯಶಾಖೆಗೆ ಚುನಾಯಿಸಲ್ಪಟ್ಟು ಕೌನ್ಸಿಲ್ಲಿನ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು. ಈ ಅಧಿಕಾರದಲ್ಲಿ ಸರ್ ಎ. ಆರ್. ಬ್ಯಾನರ್ಜಿ ಮತ್ತು ಸರ್ ಕಾಂತರಾಜಅರಸರ ಕಾಲದಲ್ಲಿ ಇವರು ಶ್ಲಾಘ್ಯವಾದ ಕೆಲಸಮಾಡಿ ಪ್ರಖ್ಯಾತರಾದರು. ಅನಂತರ ಇವರು ಶಿವಮೊಗ್ಗಾ ಸಬ್‌ಜಡ್ಜರಾಗಿ ನೇಮಿಸಲ್ಪಟ್ಟರು. ಇವರು ಯಾವಾಗಲೂ ಬಹು ಖಂಡಿತವಾದಿಗಳೂ, ನಿಷ್ಪಕ್ಷಪಾತಿಗಳೂ ಮತ್ತು ಆತ್ಮಸಾಕ್ಷಿಗೆ ವಿರೋಧವಾಗಿ ನಡೆಯದ ಅಧಿಕಾರಿಗಳೂ ಆಗಿದ್ದುದರಿಂದಲೂ, ಅಸಾಧಾರಣಬುದ್ಧಿಶಕ್ತಿಯುಳ್ಳವರಾಗಿ ಕಾಯಿದೆಯ ತತ್ತ್ವ ಮತ್ತು ತೊಡಕುಗಳನ್ನು ಚೆನ್ನಾಗಿ ಅರಿತುಕೊಳ್ಳುತ್ತಿದ್ದುದರಿಂದಲೂ ಇವರು ಬಹುಜಾಗ್ರತೆಯಾಗಿ ನ್ಯಾಯಶಾಖೆಯ ಉನ್ನತಸ್ಥಾನಕ್ಕೆ ಏರಿದರು. ಇವರು ಸೋಮಾರಿಗಳಾದ ನ್ಯಾಯಾಧೀಶರಾಗಿರಲಿಲ್ಲ. ಎಂತಹ ದೊಡ್ಡ ಕಟ್ಟುಗಳಾದರೂ ಬಹುಜಾಗ್ರತೆಯಾಗಿ ಪೂರೈಸುತ್ತಿದ್ದರು. ಇವರು ಬೆಂಗಳೂರು ಸಬ್‌ಜಡ್ಜರಾಗಿ ವರ್ಗಾಯಿಸಲ್ಪಟ್ಟಾಗ ಸದರೀ ಕೋರ್ಟಿನಲ್ಲಿ ಕೆಲಸವು ಬಹಳವಾಗಿತ್ತು. ಆದರೆ ಮಹಾದೇವಯ್ಯನವರು ಬಹುಕಷ್ಟಪಟ್ಟು ಉಳಿದಿದ್ದ ಕೆಲಸಗಳನ್ನೆಲ್ಲಾ ಪೂರೈಸಿದರು. ಎಕ್ಸ್‌ಪಾರ್ಟಿ ಡಿಕ್ರಿಯನ್ನು ಪಡೆಯಬಹುದೆಂಬ ಊಹೆಯಮೇಲೆ ವಾಯಿದೆಕಳೆದು ಲಿಮಿಟೇಷನ್ ಆಗಿದ್ದ ಎಷ್ಟೋ ಮೊಕದ್ದಮೆಗಳು ಕೋರ್ಟಿನಲ್ಲಿ ದಾಖಲಾಗುತ್ತಲೇ ಇದ್ದವು. ಮಹಾದೇವಯ್ಯನವರು ಈ ಪದ್ಧತಿಯನ್ನು ಧೈರ್ಯವಾಗಿ ತಡೆದು ನಿಲ್ಲಿಸಿದರು. ಇದಕ್ಕೆ ವಿರುದ್ಧವಾಗಿ ಅನೇಕರು ಪ್ರತಿಭಟಿಸಿದರೂ ಮಹಾದೇವಯ್ಯನವರು ಲಕ್ಷಿಸದೆ ತಮ್ಮ ತೀರ್ಮಾನವನ್ನೇ ಸಾಧಿಸಿದರು. ಈ ಸಂದರ್ಭದಲ್ಲಿಯೇ ಅವರು ಲಾ ರಿಲೀಫ್ ಕಮಿಟಿಗೆ ಸಬ್ ಜಡ್ಜರುಗಳ ಪರವಾಗಿ ಮೆಂಬರಾಗಿ ಚುನಾಯಿಸಲ್ಪಟ್ಟರು. ಇವರು ಪಡೆದಿದ್ದ ಅನುಭವವು ಆಗ ಚೆನ್ನಾಗಿ ಉಪಯೋಗಕ್ಕೆ ಬಂದಿತು. ಕಮಿಟಿಯಲ್ಲಿ ಇವರು ಸಬ್‌ಜಡ್ಜರುಗಳ ಪರವಾಗಿ ಧೈರ್ಯವಾಗಿನಿಂತು ಅವರ ಹಿತಗಳನ್ನು ಸಾಧಿಸಿದರಲ್ಲದೆ ಮುನ್ಸೀಫರ ಚುನಾವಣೆಗೆ ಪರೀಕ್ಷೆಯೊಂದನ್ನು ಏರ್ಪಡಿಸುವ ವಿಚಾರದಲ್ಲಿ ತಮ್ಮ ಸಂಪೂರ್ಣ ಅಸಮ್ಮತಿಯನ್ನು ನಿರಾಕ್ಷೇಪ್ಯವಾಗಿ ತಿಳಿಸಿದರು. ಸರಕಾರದವರು ಸಹ ಇವರೊಬ್ಬರ ಅಭಿಪ್ರಾಯವನ್ನು ಅನುಮೋದಿಸಿದರೇ ವಿನಾ ಮೆಜಾರಿಟಿಯವರ ಅಭಿಪ್ರಾಯವನ್ನು ಅನುಮೋದಿಸಲಿಲ್ಲ.

ಅನಂತರ ಸರಕಾರದವರು ಇವರನ್ನು ಲೀಗಲ್ ರಿಮೆಂಬ್ರೆನ್ಸರ್ ಮತ್ತು ಲಾ ಸೆಕ್ರೆಟರಿಗಳನ್ನಾಗಿ ನೇಮಿಸಿದರು. ಲೀಗಲ್ ರಿಮೆಂಬ್ರೆನ್ಸರರ ಅಧಿಕಾರದಲ್ಲಿ ಇವರು ಸರಕಾರದ ಹಿತವನ್ನು ಚೆನ್ನಾಗಿ ರಕ್ಷಿಸಿದರಲ್ಲದೆ ಇವರ ಸಲಹೆಯ ಮೇರೆ ಸರಕಾರದವರು ನಡೆಯಿಸಿದ ಪ್ರತಿಯೊಂದು ಮೊಕದ್ದಮೆಯಲ್ಲಿಯೂ ಜಯವೇ ಉಂಟಾಯಿತು. ಇದರಿಂದ ಸರಕಾರದ ಗೌರವವೂ ಆಫೀಸಿನ ಗೌರವವೂ ಬಹಳವಾಗಿ ಹೆಚ್ಚಿತು. ಗಂಧದ ಎಣ್ಣೆ ಛಾವಣಿ ಮೊಕದ್ದಮೆ ಮತ್ತು "ವೀರಕೇಸರಿ" ರಾಜದ್ರೋಹದ ಮೊಕದ್ದಮೆಗಳಲ್ಲಿ ಇವರ ಬುದ್ಧಿಚಾತುರ್ಯವು ಚೆನ್ನಾಗಿ ನಿದರ್ಶನಕ್ಕೆ ಬಂದಿತು. ಮೊದಲನೆಯ ಮೊಕದ್ದಮೆಯಲ್ಲಿ 9 ಲಕ್ಷ ರೂಪಾಯಿಗಳು ದುರುಪಯೋಗಪಡಿಸಲ್ಪಟ್ಟಿದ್ದು ಲಂಡನ್ನಿನಿಂದ ತರಿಸಲ್ಪಟ್ಟಿದ್ದ 2,000 ಕಾಗದ ಪತ್ರಗಳಿಂದ ಅಪರಾಧಿಗಳಾಗಿದ್ದ ಸೀತಾರಾಮಾಚಾರ್ಯರ ಮೇರೆ ರುಜುವಾತುಗಳ ಸಮೇತವಾಗಿ ಮೊಕದ್ದಮೆಯನ್ನು ಹೂಡಬೇಕಾಗಿತ್ತು. ಅದಕ್ಕಾಗಿ ಸೀತಾರಾಮಾಚಾರ್ಯರ ಏಜೆಂಟರಾದ ಮಿ|| ಮಾರ್ಲಾಂಕರ್ರವರ ಸಾಕ್ಷಿ ವಿಚಾರಣೆಗೆ ಏರ್ಪಾಡು ಮಾಡಿದರು. ಇದರಿಂದ ಮೊಕದ್ದಮೆಯು ಕೆಡಬಹುದೆಂಬ ಸಂಶಯವು ಬಂದರೂ ಮೊಕದ್ದಮೆಯು ನಡೆಯುತ್ತಿದ್ದಾಗ ಪ್ರತಿಯೊಂದು ವಿದ್ಯಮಾನವನ್ನೂ ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದು ಮೊಕದ್ದಮೆಯಲ್ಲಿ ಜಯವಾಗುವಂತೆ ಮಾಡಿದರು. ಹಾಗೂ ಮೊಕದ್ದಮೆಯನ್ನು ನಡೆಸುವದರಲ್ಲಿ ಎದುರು ಪಕ್ಷದ ಲಾಯರಾದ ಚತುರರಿನ, ಮಿ|| ದೊರೆಸ್ವಾಮಿ ಅಯ್ಯಂಗಾರ್ಯರ ವಾದವಿವಾದಗಳಿಗೆ ಪ್ರತಿವಾದಗಳನ್ನೂ, ಅವುಗಳಿಗೆ ಪ್ರಮಾಣಗಳನ್ನೂ ಒದಗಿಸಿಕೊಟ್ಟು ಗೌರ್ನಮೆಂಟ್ ಅಡ್ವೊಕೇಟರಿಗೆ ಅಮೂಲ್ಯವಾದ ಸಹಾಯವನ್ನು ಮಾಡಿದರು. ಮೇಲ್ಕಂಡ ಎರಡು ಮೊಕದ್ದಮೆಗಳನ್ನು ನಡೆಸುವದಕ್ಕೂ ಸ್ಥಳೀಯ ಅಡ್ವೋಕೇಟರುಗಳನ್ನೇ ನೇಮಿಸಿ ಹೊರಗಿನ ಲಾಯರುಗಳನ್ನು ಕರೆಯಿಸುವದರಿಂದ ಸರ್ಕಾರಕ್ಕೆ ಉಂಟಾಗುತ್ತಿದ್ದ ಅಪಾರವಾದ ಖರ್ಚನ್ನು ನಿಲ್ಲಿಸಿದರು. ಇದರಿಂದ ಆದ ಫಲವು ಅಪಾರವಾಗಿತ್ತು. ಇದರಿಂದ ಮೈಸೂರು ದೇಶದ ಲಾಯರುಗಳ ಯೋಗ್ಯತೆಯೂ ಹೆಚ್ಚಿದುದಲ್ಲದೆ ಸಂಸ್ಥಾನಕ್ಕೆ ಅಪಾರ ಹಣದ ಉಳಿತಾಯವಾಯಿತು. ಸ್ಥಳೀಯ ಅಡ್ವೊಕೇಟರುಗಳಾದರೂ ತಮ್ಮ ಮೇಲೆ ಬಿದ್ದ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸಿ, ಶ್ರೀಮಾನ್ ಮಹಾದೇವಯ್ಯನವರು ಅವರಲ್ಲಿ ಇಟ್ಟಿದ್ದ ನಂಬಿಕೆಯು ಸಾರ್ಥಕವಾಗುವಂತೆ ಮಾಡಿದರು.

ಲಾ ಸೆಕ್ರೆಟರಿಗಳಾಗಿ ರೆಪ್ರೆಜೆಂಟೆಟಿವ್ ಅಸೆಂಬ್ಲಿ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ ಇವೆರಡರಿಂದಲೂ ಗೌರವಿಸಲ್ಪಟ್ಟವರಾಗಿ, ಅನಧಿಕಾರಸ್ಥರಾದ ಮೆಂಬರರ ಟೀಕೆಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಡುವದರ ಮೂಲಕ ಸರಕಾರದವರ ಮತವನ್ನು ಸರ್ವಸಮ್ಮತವಾಗಿರುವಂತೆ ಸಾಧಿಸುತ್ತಿದ್ದರು. ತಮ್ಮ ವಾದಬಲದಿಂದ 'ಹಿಂದೂಸ್ತ್ರೀಯರ ಸುಧಾರಣಾಮಸೂದೆ' ಯು ರೆಪ್ರೆಜೆಂಟೆಟಿವ್ ಅಸೆಂಬ್ಲಿ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗಳಲ್ಲಿ ಪಾಸಾಗುವಂತೆ ಮಾಡಿದರು. ಈ ಸಂದರ್ಭದಲ್ಲಿ ಇವರು ಮಾಡಿದ ಭಾಷಣಗಳಿಂದ ಇವರು ವಿಷಯವನ್ನು ಚೆನ್ನಾಗಿ ಗ್ರಹಿಸಿರುವರೆಂಬುದು ವ್ಯಕ್ತವಾಗಿ, ಸದರೀಭಾಷಣಗಳು ಪ್ರತ್ಯೇಕವಾಗಿ ಪುಸ್ತಕರೂಪದಲ್ಲಿ ಪ್ರಕಟಿಸಲ್ಪಟ್ಟವು. ಬೇರೂರು ವೀರಶೈವ ಕಾನ್ಫರೆನ್ಸ್, ಬಾಳೇಹೊನ್ನೂರು ಜಗದ್ಗುರುಗಳ ಪಟ್ಟಾಧಿಕಾರ ಇತ್ಯಾದಿ ಸಂದರ್ಭಗಳಲ್ಲಿ ವಿರೋಧಪಂಗಡದವರಲ್ಲಿದ್ದ ಭಿನ್ನಭಾವನೆಗಳನ್ನು ಹೋಗಲಾಡಿಸಿ ಸದರಿ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವಂತೆ ಮಾಡಿದರು. 1929 ನೇ ಇಸವಿ ಜುಲೈನಲ್ಲಿ ನಡೆದ ದಾವಣಗೆರೆ ಗಲಭೆಯ ಕಾಲದಲ್ಲಿ ಇವರು ದಿವಾನರೊಡನೆ ಹೋಗಿ ಮುಸಲ್ಮಾನರಿಗೂ ಹಿಂದೂಗಳಿಗೂ (ಇವರಲ್ಲಿ ಹೆಚ್ಚು ಜನರು

[೬ ನೇ ಪುಟವನ್ನು ನೋಡಿ]

4-2-74

ಪಂಚಾಚಾರ್ಯ ಪ್ರಭಾ.

೧೯೩೩ನೇ ಅಕ್ಟೋಬರ್ ತಾ|| ೩೦ನೇ ಸೋಮವಾರ.

ಇಷ್ಟಲಿಂಗದ ಶ್ರೇಷ್ಠತೆ.

ಶಿವಲಿಂಗಧಾರಕರು ಶಿವನನ್ನು ಹೊರತು ಬೇರೆ ದೇವತೆಗಳನ್ನು ಆರಾಧಿಸಬಾರದು. ಸ್ಥಾವರಲಿಂಗಾರಾಧಕರಿಗಿಂತಲೂ ಇಷ್ಟಲಿಂಗಾರಾಧಕರು ಉತ್ತಮರೆಂದು ವೀರಶೈವಸಿದ್ಧಾಂತದಲ್ಲಿ ಹೇಳಲ್ಪಟ್ಟಿರುತ್ತದೆ. ಶಿವನೆಂಬ ಒಂದೇ ದೇವರನ್ನು ಪೂಜಿಸುತ್ತಿದ್ದರೂ, ಅದರೊಳಗೆ ಭೂಮಿಯಲ್ಲಿ ಪ್ರತಿಷ್ಠಿತವಾದ ಶಿವಲಿಂಗವನ್ನು ಆರಾಧಿಸುವುದಕ್ಕಿಂತಲೂ ದೇಹದಲ್ಲಿ ಪ್ರತಿಷ್ಠಿತವಾದ ಶಿವಲಿಂಗವನ್ನಾರಾಧಿಸುವುದು ಮೇಲೆಂದು ಹೇಳಲು ಕಾರಣವೇನೆಂಬುದನ್ನು ಇಲ್ಲಿ ವಿಚಾರಮಾಡಬೇಕಾದುದು ಆವಶ್ಯಕವಾಗಿದೆ. ದೇವಾಲಯದಲ್ಲಿ ಪ್ರತಿಷ್ಠಿತವಾದ ಶಿವಲಿಂಗವು ಪಂಚಸೂತ್ರಘಟಿತವಾದುದು; ದೇಹದಲ್ಲಿ ಧರಿಸಲ್ಪಟ್ಟ ಶಿವಲಿಂಗವೂ ಪಂಚಸೂತ್ರಘಟಿತವಾದುದು. ಶಿಲಾತ್ವದೋಷಪರಿಹಾರಕ್ಕಾಗಿಯೂ ದೇವತ್ವವು ಸ್ಥಿರಗೊಳ್ಳುವುದಕ್ಕಾಗಿಯೂ ಆ ಶಿವಲಿಂಗಕ್ಕಾಗುವ ವಿಶಿಷ್ಟಮಂತ್ರಸಂಸ್ಕಾರಗಳೂ ಈ ಲಿಂಗಕ್ಕೂ ಆಗುತ್ತವೆ. ಇಷ್ಟಲಿಂಗಕ್ಕೆ ವಿಧಿಸಿರುವ ಪೂಜಾನಿಯಮಗಳೆಲ್ಲವೂ ಸ್ಥಾವರಲಿಂಗಕ್ಕೂ ವಿಧಿಸಲ್ಪಟ್ಟಿರುತ್ತವೆ. ಹೀಗಾದಮೇಲೆ ಸ್ಥಾವರಲಿಂಗಾರಾಧನೆಗಿಂತಲೂ ಇಷ್ಟಲಿಂಗಾರಾಧನೆಯು ಹೇಗೆ ತಾನೆ ಉತ್ತಮವೆಂಬ ಶಂಕೆಯು ಉತ್ಪನ್ನವಾಗುವುದು. ಸ್ಥಾವರಲಿಂಗಾರಾಧಕನು ಪ್ರತಿದಿವಸವೂ ಸ್ಥಾವರಲಿಂಗವಿದ್ದೆಡೆಗೆ ಹೋಗಿ ಪೂಜೆಯನ್ನು ಮಾಡಲೇಬೇಕೆಂಬ ನಿಯಮವಾಗಲಿ, ಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿಯೇ ಭೋಜನಮಾಡಬೇಕೆಂಬ ನಿಯಮವಾಗಲಿ, ಹಾಗೆ ಮಾಡದೆ ಭೋಜನಾದಿ ವ್ಯವಹಾರಗಳನ್ನು ಮಾಡುವುದಾದರೆ ದೋಷಬರುವುದೆಂಬ ನಿಷೇಧ ಶಾಸ್ತ್ರವಾಗಲಿ ಇರುವುದಿಲ್ಲ. ಅವರವರ ಇಚ್ಛಾನುಸಾರವಾಗಿ ಹಬ್ಬ ಮೊದಲಾದ ದಿನಗಳಲ್ಲಿಯೂ ಹರಕೆ ಮುಂತಾದ ಸಂಕಲ್ಪಕಾಲಗಳಲ್ಲಿಯೂ ದೇವರಿದ್ದೆಡೆಗೆ ಹೋಗಿ ಪರಿಶುದ್ಧಭಾವದಿಂದ ಸೇವೆಮಾಡುವುದು ಲೋಕಪ್ರಸಿದ್ಧವಾಗಿದೆ. ಸ್ಥಾವರಲಿಂಗವನ್ನು ಯಾರು ಪೂಜಿಸುತ್ತಾರೆಯೋ ಅವರೇ ಪೂಜಿಸಬೇಕೆಂಬ ಪ್ರಬಲ ನಿಯಮವಿಲ್ಲವು. ಒಂದು ದೇವರನ್ನು ಅನೇಕರು ಪೂಜಿಸಬಹುದು. ಅಥವಾ ಒಬ್ಬರೇ ಆದರೂ ಪೂಜಿಸಬಹುದು. ದೇಹದಲ್ಲಿ ಧರಿಸಲ್ಪಟ್ಟ ಶಿವಲಿಂಗವನ್ನಾದರೋ ಯಾವನು ಶರೀರದಲ್ಲಿ ಧರಿಸಿರುವನೋ ಅವನೇ ಅದನ್ನು ತನ್ನ ಜೀವಿತದವರೆಗೂ ಪೂಜಿಸಬೇಕೆಂಬ ನಿಯಮವಿರುವುದಲ್ಲದೆ ಪ್ರತಿದಿವಸವೂ ಸ್ನಾನಾದಿಗಳಿಂದ ಪರಿಶುದ್ಧನಾಗಿಯೂ ಕ್ರಮವರಿತು ತತ್ವಶುದ್ಧಿ ಭೂತಶುದ್ಧ್ಯಾದಿಗಳಿಂದ ಪರಿಶುದ್ಧನಾಗಿಯೂ ಗುರುವು ಉಪದೇಶಿಸಿದ ಶಾಸ್ತ್ರಕ್ರಮದಿಂದರ್ಚಿಸಿ ಶಿವಲಿಂಗದ ತೀರ್ಥಪ್ರಸಾದಗಳನ್ನು ಸ್ವೀಕರಿಸಿದ ಹೊರತು ಭೋಜನಾದಿವ್ಯವಹಾರಗಳನ್ನು ನಡೆಸಲಾಗದು. "ಶಿವಪೂಜಾತಿಕ್ರಮಣಂ ಮಹಾದೋಷಸ್ಯ ಕಾರಣಂ" ಶಿವಪೂಜೆಯನ್ನು ಪ್ರತಿದಿವಸವೂ ಮಾಡದಿದ್ದಲ್ಲಿ ಮಹಾದೋಷವುಂಟಾಗುವುದು.

ಅಸಮರ್ಚ್ಯ ಪದಂ ಶಂಭೋಃ ಭುಕ್ತೇ ಬಾಧತಿ ಪಾತಿ ಯಃ |
ಶ್ವನಾಂಶಮುಸ್ಥಿ ಮೂತ್ರಂಚ ಭುಕ್ತೇ ಬಾಧತಿ ಪಾತಿ ಸ ||

ಎಂಬ ಪ್ರಮಾಣಬಲದಿಂದ ಯಾವ ವೀರಶೈವನು ಶಿವಲಿಂಗವನ್ನು ಪೂಜಿಸದೆ ಊಟಮಾಡುವುದಾಗಲಿ, ಜಲಪಾನಮಾಡುವುದಾಗಲಿ, ಫಲಾಹಾರ ಮಾಡುವುದಾಗಲಿ ಯಾವುದನ್ನೂ ಮಾಡಕೂಡದು. ಹಾಗೆ ಮಾಡಿದ್ದಾದರೆ ನರಕಗಾಮಿಯಾಗುವನೆಂದು ಶಾಸ್ತ್ರವು ವಿಧಿಸಿರುತ್ತದೆ. ಇಷ್ಟಲಿಂಗಧಾರಿಯಾದವನು ತಾನು ಯಾವಾಗಲೂ ಶಿವಸನ್ನಿಧಿಯಲ್ಲಿ ವಾಸಮಾಡಿದ್ದೇನೆಂಬ ದೃಢಭಾವನೆಯುಳ್ಳವನೂ, ಶಿವಸನ್ನಿಧಿಯಲ್ಲಿ ಪಾಪಕಾರ್ಯವನ್ನು ಮಾಡಲಾಗದೆಂಬಭಯದಿಂದ ಕೂಡಿದವನೂ ಆದ್ದರಿಂದ ತ್ರಿಕಾಲದಲ್ಲೂ ಶಿವಸ್ಮರಣ, ಶಿವನಾಮಕೀರ್ತನ, ಶಿವಕಥಾಶ್ರವಣ, ಶಿವಸೇವನ, ಶಿವಾರ್ಚನ, ಶಿವವಂದನ, ಶಿವಕೈಂಕರ್ಯ, ಶಿವಸಖ್ಯ ಆತ್ಮಾರ್ಪಣ ಎಂಬ ನವವಿಧಭಕ್ತಿಗಳಿಂದ ಕೂಡಿರಬೇಕೆಂಬುದೇ ಲಿಂಗಧಾರಣೆಯ ಮುಖ್ಯೋದ್ದೇಶವಾಗಿದೆ. ಸ್ಥಾವರಲಿಂಗಾರಾಧಕರು ಮುಕ್ತಿಸಾಧಕಗಳಾದ ಈ ನವವಿಧ ಭಕ್ತಿಗಳನ್ನು ಸಾಧಿಸಬೇಕಾಗಿದ್ದರೂ, ಅವರಿಗೆ ಯಾವಾಗಲೂ ಶಿವಲಿಂಗದ ಸಾನ್ನಿಧ್ಯದಲ್ಲಿರುವುದು ಸಾಧ್ಯವಿಲ್ಲ. ಏಕಂದರೆ ದೇವಾಲಯದಲ್ಲಿರುವ ಶಿವಲಿಂಗಕ್ಕೂ ತನಗೂ ಎಡಬಿಡದೆ ಸಾನ್ನಿಧ್ಯವಿಲ್ಲದುದರಿಂದಲೂ ಶಿವಲಿಂಗದ ದರ್ಶನಮಾಡಬೇಕೆಂಬ ಇಚ್ಛೆ ಹುಟ್ಟಿದಾಗ ಮಾತ್ರ ಸ್ನಾನಮಾಡಿ ದೇವಾಲಯಕ್ಕೆ ಹೋಗಬೇಕಾಗುತ್ತದೆ. ಆ ದೇವಾಲಯದಲ್ಲಿ ದೇವರು ಎಲ್ಲಿಯವರೆಗೂ ಪ್ರತ್ಯಕ್ಷವಾಗಿ ಕಾಣಿಸಿಕೊಂಡಿರುತ್ತಾನೆಯೋ ಅಲ್ಲಿಯವರೆಗೆ ಮಾತ್ರ ತಾನು ಮಾಡಿದ ಪಾಪಕರ್ಮಗಳನ್ನೆಲ್ಲಾ ಮರೆತು ಪರಿಶುದ್ಧಭಾವನೆಯಿಂದೊಡಗೂಡಿರುತ್ತಾನೆ. ಪುನಃ ದೇವಾಲಯದಿಂದ ಹೊರಗೆ ಬಂದು ಶಿವಸಾನ್ನಿಧ್ಯವು ತಪ್ಪಿದಾಗ ಕಾಯಕ, ವಾಚಿಕ, ಮಾನಸಿಕಗಳಾದ ಪಾಪಕರ್ಮಗಳನ್ನು ಮಾಡುವುದಕ್ಕೆ ಅವಕಾಶವಾದರೂ ಆಗಬಹುದು. ಲೋಕದಲ್ಲಿ ಭೂಮಿಯನ್ನಾಳುವ ಮಹಾರಾಜನಸಮಕ್ಷಮದಲ್ಲಿ ನಿಂತಿರುವ ಪ್ರಜೆಗಳಿಗೂ ದೂರದಲ್ಲಿ ಸ್ವೇಚ್ಛೆಯಾಗಿ ತಿರುಗಾಡುವ ಪ್ರಜೆಗಳಿಗೂ ಬಹಳ ವ್ಯತ್ಯಾಸವುಂಟು. ದೂರದಲ್ಲಿರುವ ಪ್ರಜೆಗಳ ಭಯಭಕ್ತಿಗೂ ರಾಜಸನ್ನಿಧಿಯಲ್ಲಿರುವ ಪ್ರಜೆಗಳ ಭಯಭಕ್ತಿಗಳಿಗೂ ಬಹಳ ವ್ಯತ್ಯಾಸವಿರುವಂತೆ ಸದಾ ಶಿವಲಿಂಗಸಾನ್ನಿಧ್ಯವಿರುವ ಶಿವಭಕ್ತರಿಗೂ ಯಾವುದೋ ಒಂದು ದಿವಸ ಶಿವಲಿಂಗವಿದ್ದೆಡೆಗೆ ಹೋಗಿ ಶಿವಲಿಂಗದರ್ಶನಮಾಡುವ ಶಿವಭಕ್ತರಿಗೂ ಬಹಳವಾದ ತಾರತಮ್ಯವಿರುತ್ತದೆ ಎಂಬುದು ಅನುಭವಸಿದ್ಧವಾಗಿ ಕಂಡುಬರುತ್ತದೆ. ಇದರಿಂದ ಗುರುವಿನಿಂದ ಸಂಸ್ಕರಿಸಲ್ಪಟ್ಟ ದೇಹವೆಂಬ ದೇವಾಲಯದಲ್ಲಿ ಶಿವಲಿಂಗಸಾನ್ನಿಧ್ಯವಿರುವುದರಿಂದ ಯಾವಾಗಲೂ ಭಯಭಕ್ತಿಯುಳ್ಳವನಾಗಿದ್ದು ಕಾಯವಾಕ್‌ಮನಸ್ಸುಗಳೊಳಗೆ ಯಾವುದೊಂದರಲ್ಲಿಯೂ ನರಕಹೇತುವಾದ ಪಾಪಕಾರ್ಯಗಳನ್ನು ಮಾಡಲವಕಾಶವಿಲ್ಲವು. ಹಾಗೆ ಪಾಪಕರ್ಮಗಳನ್ನು ಮಾಡಿದ್ದಾದರೆ ಸ್ಥಾವರಲಿಂಗಾರಾಧಕರು ಮಾಡಿದ ಪಾಪಕಾರ್ಯಗಳು ಶಿವಸಾನ್ನಿಧ್ಯವಿಲ್ಲದಾಗ ಮಾಡಿದ್ದುದರಿಂದ ಕ್ಷಮ್ಯವಾದರೂ ಆಗಬಹುದು. ಇಷ್ಟಲಿಂಗಾರಾಧಕನು ಮಾಡುವ ಪಾಪಕರ್ಮಗಳಾದರೂ ಶಿವಸನ್ನಿಧಿಯಲ್ಲಿಯೇ ನಿರ್ಭೀತನಾಗಿ ಮಾಡಲ್ಪಟ್ಟುದುದರಿಂದ ಅಕ್ಷಮ್ಯವಾದವುಗಳೆಂದೇ ಹೇಳಬೇಕಾಗುವದು. ಶಿವಸನ್ನಿಧಿಯಲ್ಲದಾಗ ಮಾಡಿದ ಪಾಪಕರ್ಮಗಳು ಅಜ್ಞಾನದೋಷದಿಂದ ಮಾಡಲ್ಪಟ್ಟವು. ಶಿವಸನ್ನಿಧಿಯಲ್ಲಿ ಮಾಡಲ್ಪಟ್ಟ ಪಾಪಕರ್ಮಗಳು ಜ್ಞಾನಪೂರ್ವಕವಾಗಿ ಮಾಡಲ್ಪಟ್ಟವಾದ ಪ್ರಯುಕ್ತ ಲಿಂಗಧಾರಿಯು ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆಗಳಲ್ಲೂ ಸಹ ಶಿವಸಂಬಂಧವಾದ ಪುಣ್ಯಕಾರ್ಯಗಳನ್ನು ಮಾಡಬೇಕಲ್ಲದೆ ಶಿವವಿರೋಧಿಗಳಾದ ಪಾಪಕರ್ಮಗಳನ್ನು ಮಾಡಬಾರದು ಹಾಗೆ ಪಾಪಕಾರ್ಯವನ್ನಾಚರಿಸಿದ ಲಿಂಗಾಂಗಿಯ ಅಪರಾಧವು ಹೆಚ್ಚಿನದೆಂದೇ ಸ್ಪಷ್ಟವಾಗುತ್ತದೆ.

ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಶಿವಲಿಂಗವನ್ನು ಒಂದೆಡೆಯಲ್ಲಿ ಇಟ್ಟು ಪೂಜಿಸುವುದಕ್ಕಿಂತಲೂ ಅನವರತವೂ ಸಂಸ್ಕರಿಸಿದ ದೇಹದಲ್ಲಿ ಧರಿಸಿರುವುದು ಉತ್ತಮಮಾರ್ಗವೆಂದು ಲಿಂಗಧಾರಣದ ಮಹತ್ವವನ್ನು ವೇದಾಗಮ ಪ್ರಮಾಣಗಳಿಂದ ಸ್ಥಿರಗೊಳಿಸಿರುತ್ತಾರೆ. ಶ್ರೀ ಪಂಚಾಚಾರ್ಯಸಿದ್ಧಾಂತಾವಲಂಬಿಗಳಾದ ಅನೇಕ ವೀರಶೈವ ಪಂಡಿತರು ಸಹ ಈ ತತ್ವಾರ್ಥವನ್ನು ಚನ್ನಾಗಿ ಬೋಧಿಸಿ.

ಲಿಂಗಧಾರೀ ಸದಾಶುದ್ಧಃ ನಿಜಲಿಂಗಂ ಮನೋಹರಂ |
ಅರ್ಚಯೇದ್ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ||

ಲೇಶಮಾತ್ರವೂ ಪಾಪಕರ್ಮಗಳ ಲೇಪವಿಲ್ಲದೆ ಕಂಠಾದ್ಯುತ್ತಮಾಂಗದಲ್ಲಿ ಧರಿಸಲ್ಪಟ್ಟ ಶಿವಲಿಂಗವನ್ನು ತನ್ನ ಹಸ್ತರೂಪವಾದ ಸಿಂಹಾಸನದಲ್ಲಿಟ್ಟು ಪೂಜಿಸುತ್ತ ಸದಾ ಪರಿಶುದ್ಧನಾಗಲೇಬೇಕೆಂದು ಉಪದೇಶ ಮಾಡಿರುತ್ತಾರೆ. ಇತ್ತೀಚೆಗೆ ಅನೇಕರು "ಅತಿಪರಿಚಯಾದವಜ್ಞಾ" ಎಂಬುಕ್ತಿಯಂತೆ ಗುರುವಿನಿಂದ ಕೊಡಲ್ಪಟ್ಟ ಇಂಥ ಪರಮಪವಿತ್ರವಾದ ಶಿವಲಿಂಗದಲ್ಲಿ ಭಯಭಕ್ತಿಗಳು ಹೆಚ್ಚುವುದಕ್ಕೆ ಬದಲಾಗಿ ಸ್ವಧರ್ಮವಿರುದ್ಧಮಾರ್ಗದಲ್ಲಿ ಕಾಲಿಡುತ್ತ ಪುಣ್ಯಸಂಚಯಕ್ಕೆ ಪ್ರತಿಯಾಗಿ ಪಾಪಸಂಚಯದಲ್ಲಿ ಆತುರರಾಗಿ ಸ್ವಮತಾಭಿಮಾನವನ್ನು ಬಿಡುತ್ತ ಬಂದಿರುವದು ಬಹು ವಿಷಾದಾಸ್ಪದವಾದ ಸಂಗತಿಯಾಗಿದೆ. ಜಗದಾಚಾರ್ಯರು ಈ ತರಹದ ಸದ್ಬುದ್ಧಿಯನ್ನೀಯಲಿ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಕಳೆದ ಶನಿವಾರ (28ನೆಯ ತಾ||) ಸಾಯಂಕಾಲ ರಾಜಧಾನಿಯ ವೀರನಗೆರಿಯಲ್ಲಿ ಹೊಸದಾಗಿ ಕಟ್ಟಲಿರುವ ರೋಮನ್ ಕ್ಯಾಥೊಲಿಕ್ ಕ್ರೈಸ್ತರ ಸೇಂಟ್ ಫಿಲೋಮಿನಾ ಚರ್ಚಿನ ಕಟ್ಟಡದ ಅಸ್ತಿಭಾರ ಶಿಲಾಪ್ರತಿಷ್ಠೆಯನ್ನು ನೆರವೇರಿಸಿದರು.

ಮುಂಬಯಿ ಗವರ್ನರಾದ ಸರ್ ಫ್ರೆಡರಿಕ್ ಸೈಕ್ಸ್‌ರವರು ಬರುವ ನವೆಂಬರ್ 3 ನೆಯ ತಾರೀಖಿನ ದಿವಸ ಪರಿವಾರಸಮೇತರಾಗಿ ಸಿದ್ದಾಪುರದ ಮಾರ್ಗವಾಗಿ ಗೆರಸೊಪ್ಪ ಜಲಪಾತಕ್ಕೆ ಬಂದು 5 ನೆಯ ತಾರೀಖಿನ ದಿವಸ ಹಿಂತಿರುಗುವರು. ಇವರ ಉಪಚಾರಕ್ಕಾಗಿ ಏರ್ಪಾಡುಗಳು ನಡೆಯುತ್ತಿರುವುವು.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಎಸ್ಸೆನ್ಸ್ ಫ್ಲೋರ್ ಪ್ರಾಡಕ್ಟ್ಸ್ ಕಂಪೆನಿ ಮತ್ತು ಮಿ|| ಬಿ. ಸೀತಾರಾಮಾಚಾರ್ಯರ ಮೇಲೆ ನಡೆಯುತ್ತಿದ್ದ ಗಂಧದೆಣ್ಣೆ ಛಪಾವಣೆ ಸಂಬಂಧವಾದ ಸಿವಿಲ್ ಮೊಕದ್ದಮೆಯಲ್ಲಿ ಜಡ್ಜರವರು ಮೇಲ್ಕಂಡ ಅಪರಾಧಿಗಳ ಮೇಲೆ ಕೋರ್ಟು ಖರ್ಚುಸೇರಿ ರೂ. 8,39,793-6-1ಗೆ ಡಿಕ್ರಿ ಕೊಟ್ಟಿರುವರು.

ಮೈಸೂರಿನ ವೃದ್ಧಪಿತಾಮಹರಾದ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರು ಈಗ್ಗೆ ಕೆಲವು ದಿವಸಗಳಿಂದಲೂ ಜ್ವರದಿಂದ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. 21 ನೇ ತಾರೀಖಿನ ದಿವಸ ರಾತ್ರಿ ಅವರ ದೇಹಸ್ಥಿತಿಯು ಸ್ವಲ್ಪ ಕಳವಳಕ್ಕೆ ಆಸ್ಪದವಾಗಿತ್ತು. ದೈವಕೃಪೆಯಿಂದ ಈಚೆ ಗುಣಮುಖರಾಗುತ್ತಿರುವರು.

ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಪರಿಶೀಲಿಸಿ ಅದರಲ್ಲಿರುವ ಕುಂದುಕೊರತೆಗಳನ್ನು ಕ್ರಮಪಡಿಸುವದಕ್ಕಾಗಿ ಅವಶ್ಯಕವಾದ ಸಲಹೆಗಳನ್ನು ಕೊಡಬೇಕೆಂದು ಸರಕಾರದವರು ಸರ್ ಎಂ. ವಿಶ್ವೇಶ್ವರಯ್ಯನವರನ್ನು ಕೋರಿರುವರೆಂದೂ, ಅದರಂತೆ ಸರ್. ವಿಶ್ವೇಶ್ವರಯ್ಯನವರು ಕೆಲವು ಸಲಹೆಗಳನ್ನು ಬರೆದು ಕಳುಹಿಸಿರುವರೆಂದೂ ತಿಳಿದುಬಂದಿದೆ.

ಮೈಸೂರು ಮುನಸೀಫ್ ಕೋರ್ಟಿನಲ್ಲಿ ಗುಮಾಸ್ತರಾಗಿದ್ದ ಪಿ. ವಿ. ರಂಗಣ್ಣ ಎಂಬುವರು ಕೋರ್ಟಿನ ಬಾಬ್ತು ಹಣವನ್ನು ದುರುಪಯೋಗಪಡಿಸಿದರೆಂಬ ಕಾರಣದ ಮೇಲೆ ಮೈಸೂರು ಅಡಿಷನಲ್ ಸೆಷನ್ ಜಡ್ಜರವರ ಕೋರ್ಟಿನಲ್ಲಿ ಮೊಕದ್ದಮೆಯು ನಡೆದು ಅಪರಾಧಿಗೆ 6 ತಿಂಗಳ ಸಜಾ, 100 ರೂ. ಜುಲ್ಮಾನೆ, ತಪ್ಪಿದರೆ ಮತ್ತು 6 ತಿಂಗಳ ಸಜೆಯು ವಿಧಿಸಲ್ಪಟ್ಟಿತು.

ಬೆಂಗಳೂರು ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಆ... ಡರಾಗಿದ್ದ ನಾರಾಯಣಸ್ವಾಮಿ ಎಂಬುವನು ಇ... ಅಕ್ಟೋಬರ್ 25 ನೇ ತಾರೀಖಿನ ದಿವಸ ತಾಲ್ಲೂಕು ಆಫೀಸಿಗೆ ಕಟ್ಟಲು ತನ್ನ ವಶಕ್ಕೆ ಕೊಟ್ಟಿದ್ದ ... ರೂ. ಗಳನ್ನು ತಾಲ್ಲೂಕು ಆಫೀಸಿಗೆ ಕಟ್ಟದೆ ಹಣ... ಮೇತವಾಗಿ ಎಲ್ಲಿಯೋ ಪರಾರಿಯಾಗಿರುವನು. ಪೋ... ಲೀಸರು ರಾತ್ರಿ ಅವನ ಮನೆಯನ್ನು ಜಪ್ತುಮಾಡಿ... ದಾಗ ಏನೂ ದೊರೆಯಲಿಲ್ಲವಾಗಿ ಅವನ ಮೇಲೆ ... ಪಿ. ಸಿ. 409 ನೇ ಸೆಕ್ಷನ್ ಪ್ರಕಾರವಾಗಿ ಮೊಕದ್ದಮೆಯನ್ನು ಹೂಡಿರುವರೆಂದು ತಿಳಿದುಬಂದಿದೆ.

ಬೆಂಗಳೂರು 1 ನೆಯ ಗಲಭೆಯ ಸಂಬಂಧ... ಖಾನ್ ಬಹದ್ದೂರ್ ಅಬ್ಬಾಸ್‌ಖಾನ್‌ರವರು ... ವಿಷಯದಲ್ಲಿ ಅವಮಾನಕರವಾದ ಮಾತುಗಳನ್ನಾಡಿ... ರೆಂಬ ಕಾರಣದ ಮೇಲೆ ಮ|| ಬಿ. ಕೆ. ಗುರುದಾಚಾರ್ಯರು ಮಿ|| ಅಬ್ಬಾಸ್‌ಖಾನರಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ 10,000 ರೂಪಾಯಿಗಳಿಗೆ ಮಾನನಷ್ಟ ಮೊಕದ್ದಮೆಯನ್ನು ಹಾಕಿದ್ದರು. ಆ ಮೊಕದ್ದಮೆಯು ತೀರ್ಮಾನವಾಗುವಷ್ಟರಲ್ಲಿ ಈಗ್ಗೆ 5-6 ದಿವಸಗಳ ಹಿಂದೆ ಮಿ|| ಅಬ್ಬಾಸ್‌ಖಾನರು ತಾವು ಮಾಡಿದ್ದ ಆಪಾದನೆಗಳು ನಿರಾಧಾರವಾದದ್ದೆಂದು ತಮಗೆ ಚನ್ನಾಗಿ ಮನವರಿಕೆಯಾಗಿರುವದರಿಂದ ತಮ್ಮನ್ನು ಕ್ಷಮಿಸಬೇಕೆಂದು ಮಿ|| ಬಿ. ಕೆ. ಗುರುದಾಚಾರ್ಯರಲ್ಲಿ ಕ್ಷಮಾಪಣೆಯನ್ನು ಕೇಳಿಕೊಂಡರು. ಇದರಮೇಲೆ ಮಿ|| ಗುರುದಾಚಾರ್ಯರು ಮೊಕದ್ದಮೆಯನ್ನು ವಾಪಸ್ ತೆಗೆದುಕೊಂಡಿರುತ್ತಾರೆ.

ರಾಜಧಾನಿಯ ಶ್ರೀ ಲಕ್ಷ್ಮೀಸಿನಿಮಾ ಕಂಪನಿಯವರು ಇದೇ ಅಕ್ಟೋಬರ್ 27 ನೇ ತಾರೀಖಿನ ದಿವಸ ಸಾಯಂಕಾಲ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾದ ಸರ್ ಛಾರಲ್ಸ್ ಟಾಡ್‌ಹಂಟರವರ ಅಧ್ಯಕ್ಷತೆಯಲ್ಲಿ ರಿಚರ್ಡ್ ಟಾಲ್ಮಾಡ್ಜ್ ಎಂಬ ಪ್ರಸಿದ್ಧ ನಟನು ಅಭಿನಯಿಸಿದ್ದ 'ದಿ ಬ್ಯಾಚಲರ್ಸ್ ಕ್ಲಬ್' ಎಂಬ ಚಲನಚಿತ್ರವನ್ನು ಪ್ರದರ್ಶಿಸಿ, ಬಂದ ಉತ್ಪತ್ತಿಯಲ್ಲಿ ಖರ್ಚು ಜಾತಾ ಉಳಿದ ಸುಮಾರು 100 ರೂಪಾಯಿಗಳನ್ನು ರಾಜಧಾನಿಯ ಕಿವುಡಮೂಗರ ಪಾಠಶಾಲೆಯ ಫಂಡಿಗೆ ಸಮರ್ಪಿಸಿದರು. ಸರ್ ಛಾರಲ್ಸ್ ಟಾಡ್‌ಹಂಟರ್‌ರವರು ಶ್ರೀ ಲಕ್ಷ್ಮೀಸಿನಿಮಾ ಕಂಪೆನಿಯ ಪ್ರೊಪ್ರೈಟರ್‌ಗಳ ಉದಾರಸ್ವಭಾವವನ್ನು ಕೊಂಡಾಡಿ, ಸಿನಿಮಾ ಕಂಪನಿಯವರಲ್ಲಿ ಮೈಸೂರಿನಲ್ಲಿ ಬೆನಿಫಿಟ್ ಕೊಟ್ಟಿರುವುದು ಇದೇ ಪ್ರಥಮವೆಂದೂ, ಇವರು ಇದೇರೀತಿ ಇನ್ನುಮುಂದೆಯೂ ಪರಹಿತಕ್ಕಾಗಿ ಉದಾರ ಸಹಾಯವನ್ನು ಮಾಡಿ ಕೀರ್ತಿವಂತರಾಗಲೆಂದೂ ಹಾರೈಸಿದರು. ಈ ಸಿನಿಮಾ ಕಂಪೆನಿಯವರು ಇದೇ ರೀತಿ ಕಿವುಡುಮೂಗರ ಪಾಠಶಾಲೆಗೆ ಪ್ರತಿವರ್ಷವೂ ಒಂದು ಪ್ರದರ್ಶನದ ಉತ್ಪನ್ನವನ್ನು ಕೊಡಬೇಕೆಂದು ನಿರ್ಧರಿಸಿರುವರು. ಸ್ತುತ್ಯ!

ವರ್ತಮಾನಸಂಗ್ರಹ

ಜರ್ಮನಿಯಲ್ಲಿ 70,000 ಬೌದ್ಧರ ದೇವಾಲಯಗಳಿರುವವಂತೆ!

ಜರ್ಮನಿಯಲ್ಲಿ ಬಂಜೆಯರಮೇಲೆ ಹೊಸದೊಂದು ತೆರಿಗೆಯನ್ನು ವಿಧಿಸಿರುವರಂತೆ!

ಸ್ಕಾಟ್ಲೆಂಡ್ ದೇಶದ ಕೆಲವು ಕಡೆಗಳಲ್ಲಿ ಜನರು ಹೆಣಗಳನ್ನು ಕಿತ್ತು ತಿನ್ನುವರಂತೆ!

ಪಾಚ್ಛಾದ ಇಬ್ಬರು ತರುಣರು ಒಂದೇ ಸಮನೆ 30 ಗಂಟೆಗಳ ಕಾಲ ಬೈಸಿಕಲ್ ಸವಾರಿಯನ್ನು ಮಾಡಿದರು!

ಯೂರೋಪಿನ ಒಬ್ಬ ರಾಜನೀತಿಜ್ಞನು 1934 ನೇ ಇಸವಿಯಲ್ಲಿ ಯೂರೋಪಿನಲ್ಲಿ ಮಹಾಯುದ್ಧವು ನಡೆಯುವದೆಂದು ಹೇಳಿರುವರು!

ನ್ಯೂಯಾರ್ಕ್ ನಗರದ ಅಡಾ ಬ್ರೈಟ್ ಎಂಬ ಸ್ತ್ರೀಯಳ ಬಳಿಯಲ್ಲಿರುವ ಪೆಗ್ಗಿ ಎಂಬ ನಾಯಿಯು ಮನುಷ್ಯರಂತೆ ಮಾತನಾಡುವದಂತೆ!

ಜರ್ಮನಿಯಲ್ಲಿ ಪ್ರತಿಯೊಬ್ಬರೂ ಸಂಸ್ಕೃತವನ್ನು ಕಲಿಯಬೇಕೆಂದು ಸರಕಾರದವರು ಹೊಸದೊಂದು ಕಾಯಿದೆಯನ್ನು ಮಾಡಿರುವರಂತೆ!

ಡರ್ಬಾನ್‌ನಗರದ ಸಮೀಪದ ಸಮುದ್ರದಲ್ಲಿ ಘೇಂಡಾಮೃಗದಂತೆ ತಲೆಯ ಮೇಲೆ ಎರಡು ಕೊಂಬುಗಳುಳ್ಳ ಒಂದು ವಿಚಿತ್ರ ಮೀನು ದೊರೆತಿರುವದಂತೆ!

ಲಂಡನ್‌ನಗರದಲ್ಲಿರುವ ಒಂದಾನೊಂದು ಗಿಣಿಯು ನಾಯಿಗಳ ಜಗಳವನ್ನೂ, 'ಜಾಜ್' ಎಂಬ ವಾದ್ಯಸಮೂಹದ ಶಬ್ದಗಳನ್ನೂ ಆಡಿ ತೋರಿಸಬಲ್ಲದಂತೆ!

ಅಲಹಾಬಾದಿನಲ್ಲಿ ನಡೆದ 11 ನೆಯ ಈಜುವ ಪಂದ್ಯದಲ್ಲಿ ಜಯಂತಿದೇವಿ ಎಂಬ 7 ವರ್ಷದ ಹುಡುಗಿಯು ಯಮುನಾನದಿಯನ್ನು ಸ್ವಲ್ಪವೂ ವಿಶ್ರಾಂತಿಯಿಲ್ಲದೆ ಎರಡುಸಾರಿ ಈಜಿದಳಂತೆ!

ತುರ್ಕೀ ಸರಕಾರದವರು ಚತುರ್ವೇದಗಳನ್ನೂ, ಹಾಗೂ ಇತರ ಸಂಸ್ಕೃತಶಾಸ್ತ್ರಗ್ರಂಥಗಳನ್ನೂ ತುರ್ಕೀಭಾಷೆಗೆ ತರ್ಜುಮೆ ಮಾಡುವದಕ್ಕೋಸ್ಕರ 4 ಜನ ಯೂರೋಪಿಯನ್ ಪಂಡಿತರನ್ನು ನೇಮಿಸಿರುವರು.

ಲಂಡನ್ನಿನ 'ಬಿಜಿನೆಸ್ ಎಫಿಸಿಯೆನ್ಸಿ ಎಗ್ಜಿಬಿಷನ್ನಿ' ನಲ್ಲಿ ಒಂದು ವಿಚಿತ್ರವಾದ ಟೈಪ್‌ರೈಟಿಂಗ್ ಯಂತ್ರವು ಪ್ರದರ್ಶಿಸಲ್ಪಟ್ಟಿರುವದು. ಅದು ಹೇಳಿದ ವಿಷಯಗಳನ್ನೆಲ್ಲಾ ತಾನೇ ಟೈಪ್ ಮಾಡುವದಂತೆ!

ಅರ್ಜೆಂಟೈನ್ ದೇಶಕ್ಕೆ ಸೇರಿದ ಕ್ಯಾಂಪಾಸ್ ಡೆಪಾಟಿಸ್ ಎಂಬಲ್ಲಿ 2,000 ಕ್ಯಾರಟ್ ತೂಕವುಳ್ಳ ಒಂದು ದೊಡ್ಡ ವಜ್ರವು ದೊರಕಿರುವದು. ಇದರ ಬೆಲೆಯು 23,40,000 ರೂಪಾಯಿಗಳಾಗುವದಂತೆ!

ಜಪಾನ್ ದೇಶದಲ್ಲಿ ಭೂಕಂಪದಿಂದ ಪ್ರತಿನಿತ್ಯವೂ 20 ಜನರು ಮೃತಿಹೊಂದುವರಂತೆ! ಕಳೆದ ಹತ್ತು ವರ್ಷಗಳಲ್ಲಿ ಅಲ್ಲಿ 22,000 ಸಾರೆ ಭೂಕಂಪವಾಗಿ ಒಟ್ಟು 1,07,090 ಜನರು ಮೃತಿಹೊಂದಿರುವರಂತೆ!

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಇಲ್ಲಿನಾಯಿಸ್ ಪ್ರಾಂತಕ್ಕೆ ಸೇರಿದ ಪೆಯೋರಿಯಾ ಎಂಬಲ್ಲಿ ಒಂದು ದೊಡ್ಡ ಮದ್ಯದ ಕಾರ್ಖಾನೆಯು ಕಟ್ಟಲ್ಪಡುತ್ತಿರುವದು. ಅದರ ಬಂಡವಾಳ 1,05,00,000 ರೂಪಾಯಿಗಳು!

ತುರ್ಕೀ ದೇಶದ ಮುಖ್ಯಮಂತ್ರಿಗಳಾದ ಇಸ್ಮತ್ ಪಾಷಾರವರು ಅಂಗೋರಾದಿಂದ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಕೆಲವು ಜನ ದುಷ್ಟರು ಸದರಿ ರೈಲನ್ನು ಸಿಡಿಮದ್ದಿನಿಂದ ನಾಶಪಡಿಸಲು ಪ್ರಯತ್ನಿಸಿದರು. ಆದರೆ ಅದೃಷ್ಟವಶಾತ್ ಪ್ರಯತ್ನವು ಸಫಲವಾಗಲಿಲ್ಲ.

ಅಸ್ಸಾಂಪ್ರಾಂತಕ್ಕೆ ಸೇರಿದ ಸಿಲ್ಚಾರ್ ಡಿಸ್ಟ್ರಿಕ್ಟಿನಲ್ಲಿ ಕಳೆದ 15 ದಿವಸಗಳಲ್ಲಿ 1000 ಜನರಿಗೆ ಕಾಲರಾ ರೋಗವು ಪ್ರಾಪ್ತವಾಗಿ 300 ಜನರು ಮೃತಪಟ್ಟರು. ಸರಕಾರದವರು ಎಲ್ಲಾ ವಿದ್ಯಾಶಾಲೆಗಳನ್ನೂ ಮುಚ್ಚಿ, ರೋಗವು ಇನ್ನೂ ಹೆಚ್ಚದಂತೆ ತಡೆಯಲು ಅವಶ್ಯಕವಾದ ಕಾರ್ಯಕ್ರಮಗಳನ್ನು ಕೈಕೊಂಡಿರುತ್ತಾರೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಒಂದೇ ಸಮನೆ 72 ಘಂಟೆ 18 ನಿಮಿಷಗಳವರೆಗೆ ನೀರಿನಲ್ಲಿ ಈಜುತ್ತಿದ್ದು ಪ್ರಖ್ಯಾತರಾಗಿರುವ ಕಲ್ಕತ್ತೆಯ ಮಿ|| ಪಿ. ಕೆ. ಘೋಷ್‌ರವರು ಪುನಃ ಒಂದೇ ಸಮನೆ 79 ಘಂಟೆ 24 ನಿಮಿಷಗಳವರೆಗೆ ಈಜಿರುವರು! ಇಷ್ಟು ದೀರ್ಘಕಾಲ ಇದುವರೆಗೆ ಈ ಭೂಮಂಡಲದಲ್ಲಿ ಯಾರು ಈಜಿರಲಿಲ್ಲವಂತೆ!

ಅಮೇರಿಕೆಯ ಪ್ರೆಸಿಡೆಂಟರಾದ ರೂಜ್‌ವೆಲ್ಟರ ಬಂಧುಗಳಾದ ಫ್ರೆಡರಿಕ್ ಡೆಲಾನೋ ಎಂಬುವರು ಒಂದು ಹೊಸತರಹ ಗಾಜನ್ನು ಕಂಡುಹಿಡಿದಿರುವರು. ಈ ಗಾಜನ್ನು ಕಿಟಕಿಗಳಿಗೆ ಹಾಕಿದರೆ ಹೊರಗೆ ನಡೆಯುವದೆಲ್ಲವೂ ಆ ಗಾಜಿನ ಮುಖಾಂತರ ಮನೆಯೊಳಕ್ಕೆ ಕಾಣಿಸಿದರೂ ಒಳಗಿನದು ಯಾವುದೂ ಹೊರಕ್ಕೆ ಕಾಣಿಸುವದಿಲ್ಲವಂತೆ!

ಬರ್ಮಾದೇಶಕ್ಕೆ ಸೇರಿದ ಪೆನ್ಸಿನ್ ಎಂಬ ಊರಿನಲ್ಲಿ ಒಂದು ದೇವಸ್ಥಾನದ ಕೆಳಭಾಗದಲ್ಲಿ ಚಿತ್ರವಿಚಿತ್ರರೀತಿಯಿಂದ ಬರೆಯಲ್ಪಟ್ಟಿದ್ದ ಒಂದು ದೊಡ್ಡ ಕಲ್ಲಿನ ಚಪ್ಪಡಿಯು ಸಿಕ್ಕಿರುವದಂತೆ! ಆ ದೇವಸ್ಥಾನದ ಪೂಜಾರಿಗೆ ಆ ಚಪ್ಪಡಿಯ ವಿಷಯವಾಗಿ ಸ್ವಪ್ನವಾಗಲು, ಅಧಿಕಾರಿಗಳು ಅವನ ಹೇಳಿಕೆಯಮೇಲೆ ಅಗೆಯಿಸಿ ನೋಡಿದಾಗ ಚಪ್ಪಡಿಯು ದೊರಕಿತಂತೆ!

ಇಟಲಿದೇಶದಲ್ಲಿ ಜನನ ಸಂಖ್ಯೆಯು ಬಹಳ ಕಡಿಮೆಯಾಗುತ್ತಿರುವದರಿಂದ ಫ್ಯಾಸಿಸ್ಟ್ ಸಂಗಡದವರು ಇದೇ ಅಕ್ಟೋಬರ್ 30 ನೇ ತಾರೀಖಿನ ದಿವಸ (ನಾಳೆ ಮಂಗಳವಾರ) 2,000 ಜನರಿಗೆ ಮದುವೆ ಮಾಡಿಸುವ ಏರ್ಪಾಡನ್ನು ಮಾಡಿರುವರು. ಈ ಸಂದರ್ಭದಲ್ಲಿ ಸೀನಾರ್ ಮುಸ್ಸೋಲಿನಿಯವರು ನೂತನ ದಂಪತಿಗಳಿಗೆಲ್ಲಾ ಬಹುಮಾನವನ್ನು ಕೊಡುವರಂತೆ!

ಬರ್ಮಾದೇಶಕ್ಕೆ ಸೇರಿದ ಮಾಂಡಲೇನಗರದಿಂದ ಹತ್ತು ಮೈಲು ದೂರದಲ್ಲಿ ರೈಲ್ವೇ ರಸ್ತೆಯ ಹತ್ತಿರ ಒಂದು ಹೊಲದಲ್ಲಿ ಮೇಯುತ್ತಿದ್ದ ಎಮ್ಮೆ ಇದ್ದಕ್ಕಿದ್ದ ಹಾಗೆ ಬೆದರಿ ಆ ಮಾರ್ಗವಾಗಿ ಬರುತ್ತಿದ್ದ ರೈಲ್ವೇ ಇಂಜನ್ನಿನ ಮೇಲೆ ನುಗ್ಗಿತು. ಇಂಜನ್ನು ಕೂಡಲೇ ಕೆಳಕ್ಕುರುಳಿ ಸ್ವಲ್ಪ ಮಟ್ಟಿಗೆ ಮುರಿಯಿತು. ಆದರೆ ಅದರಲ್ಲಿ ಇದ್ದವರಿಗೆ ಮಾತ್ರ ಯಾವ ಅಪಾಯವೂ ಆಗಲಿಲ್ಲ.

ಜರ್ಮನಿಯ ಕೆಲವು ಜನ ಶಾಸ್ತ್ರಜ್ಞರು, ನಾಜಿ ಸರಕಾರದಿಂದ ತಮಗೆ ಬಹಳ ತೊಂದರೆಯಾಗಿರುವದೆಂದೂ, ಇಂಡಿಯಾದ ವಿಶ್ವವಿದ್ಯಾನಿಲಯಗಳಲ್ಲಿ ತಮಗೆ ಏನಾದರೂ ಕೆಲಸವು ದೊರೆತರೆ ಕೊಡಿಸಿಕೊ...

...ಪ್ರಭಾ

...ಪ್ರಕಟಿಸಲ್ಪಡುವುದು.

...ಪಂಚಲಿಂಗೋದ್ಭವರ್ ||
...ಪರವರ್‌ಪಾಲಿಪ್ಪುದಿಲೋಕಮಂ ||

...ಶಾಸ್ತ್ರಿಗಳು.

...ಕದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

...ವೆಂಬರ್ ೧೯೩೩ [ಸಂಚಿಕೆ ೨೮

...ವು. ನೆಲಮಂಗಲತಾಲ್ಲೂಕಿನ ಚರಿತ್ರೆಯನ್ನು ಸಧ್ಯದಲ್ಲಿಯೇ ಬರೆದು ಪ್ರಕಟಿಸುವರಾಗಿರುವದರಿಂದ ಅದರಲ್ಲಿ ಧರ್ಮ ಮಾಡಿರುವವರ ಹೆಸರನ್ನೂ ಮತ್ತು ಅವರ ಧರ್ಮಕಾರ್ಯಗಳನ್ನೂ ನಮೂದಿಸಬೇಕಾಗಿರುವದರಿಂದ ಅಂಥ ಧರ್ಮಿಷ್ಠರ ಮತ್ತು ಹಳ್ಳಿಗಳಿಗೆ ರಸ್ತೆ ಮಾಡಿಸುವವರ ಹೆಸರನ್ನು ಕೂಡಲೆ ತಿಳಿಸಬೇಕೆಂದು ಸೂಚಿಸಿದರು. ಅನಂತರ ಅಧ್ಯಕ್ಷರಾದ ಮೆ|| ಮಲ್ಲಾರಾಧ್ಯರು ಈ ರೀತಿ ಅಪ್ಪಣೆ ಕೊಡಿಸಿದರು ಮಿ|| ಜಿ. ಕೆ. ರುದ್ರಾಧ್ಯರು ಸರ್ಕಾರದ ರೆವಿನ್ಯೂದಲ್ಲಿ ಒಂದಾದ ಇನ್‌ಕಂಟ್ಯಾಕ್ಸ್ ವಿಷಯದಲ್ಲಿ ವಿಶೇಷ ಅನುಭವ ಪಡೆದು ರೆವಿನ್ಯೂ ಇಲಾಖೆಗೆ ಬಂದಿರುವದರಿಂದ ಇಲಾಖೆಯ ಲೆಖ್ಖವಗೈರೆ ಬಾಬುಗಳನು ಅತಿ ಸುಲಭ ರೀತಿಯಿಂದ ಜಾಗ್ರತೆಯಾಗಿ ವಾಹಿತಿ ಮಾಡಿಕೊಳ್ಳುವದಕ್ಕೆ ಅವಕಾಶವಿರುತ್ತದೆ. ಆದ ಪ್ರಯುಕ್ತ ಅವರು ಜಾಗ್ರತೆಯಾಗಿ ಅಮಲ್ದಾರರಾಗಿ ಪ್ರಜೆಗಳ ಕುಂದು ಕೊರತೆಗಳನ್ನು ನಿವಾರಣೆ ಮಾಡುತ್ತಾರೆಂದು ಹಾರೈಸಿ, ತಾಲ್ಲೂಕು ಅಮಲ್ದಾರರು ಕ್ಲಬ್ ಸೆಕ್ರೆಟರಿಯವರು ಈ ಕ್ಲಬ್ ಹಾಲಿನಲ್ಲಿ ಈ ಮೊದಲನೇ ಉಪನ್ಯಾಸವನ್ನು ಮಾಡಿಸಿದ್ದಲ್ಲದೆ ಉತ್ತರೋತ್ತರ ಇಲ್ಲಿ ಅನೇಕ ಉಪನ್ಯಾಸಗಳು ನಡೆಯಬೇಕೆಂದು ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಅಮಲ್ದಾರ್ ಮಿ|| ಯಂ. ಶಂಕರಪ್ಪನವರು ಈ ತಾಲ್ಲೂಕಿಗೆ ದಯಮಾಡಿಸಿದ ಮೇಲೆ ಕ್ಲಬ್ ಕಟ್ಟಡ ಬಡಾವಣೆ, ಪಾರ್ಕು, ಇಂಡಸ್ಟ್ರಿಯಲ್ ಸ್ಕೂಲು ಕಟ್ಟಡ, ಕೋ-ಆಪರೇಟೀವ್ ಸೊಸೈಟಿ ಕಟ್ಟಡ, ತ್ಯಾಮಗೊಂಡ್ಲಿನಲ್ಲಿ ಮುನಿಸಿಪಲ್ ಆಫೀಸು ಕಟ್ಟಡ ಮತ್ತು ಅನೇಕ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡಿಸಿರುವರು.

ಭಾಷಣಗಳಾದ ಮೇಲೆ ಶ್ರೀಮನ್ ಮಹಾರಾಜರವರ ಮತ್ತು ದಿವಾನ್ ಸಾಹೇಬರವರ ಶ್ರೇಯಃಪ್ರಾರ್ಥನೆ ಮಾಡಿ ಮೀಟಿಂಗ್ ಬರಕಾಸ್ತಾಯಿತು.

ದುಃಖವಾರ್ತೆ.

ಧಾರವಾಡ ಡಿ|| ಗದಗ ಬೆಟಗೇರಿಯಲ್ಲಿರುವ ಸುಪ್ರಸಿದ್ಧ ಗುರುಭಕ್ತರಾದ ಮ|| ರಾ|| ಹಿರೇಮನೆ ಪಾಟೀಲ ನೀಲಪ್ಪಗೌಡರವರ ಮಾತೃಶ್ರೀಯವರು ಕಳೆದ ತಿಂಗಳು ೨೮ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವ್ಯಸನವೆನಿಸುತ್ತದೆ. ಮಾತೃಶ್ರೀಯವರು ಒಳ್ಳೆ ಸದ್ಗುಣಶಾಲಿನಿಯರಾಗಿದ್ದರಲ್ಲದೆ ಗುರುಲಿಂಗಜಂಗಮರಲ್ಲಿ ಅಸಾಧಾರಣವಾದ ಭಕ್ತಿಯುತೆಯರಾಗಿದ್ದರು. ಇವರ ವಿಯೋಗದಿಂದ ಪುತ್ರರೇ ಮೊದಲಾದ ಬಂಧುವರ್ಗಕ್ಕೆ ಪರಮದುಃಖವಾಗಿರುವುದು ಸ್ವಾಭಾವಿಕವಾಗಿದೆ. ಶ್ರೀ ಜಗದಾಚಾರ್ಯರು ಬಂಧುಗಳಿಗೆಲ್ಲಾ ದುಃಖಶಮನವನ್ನುಂಟುಮಾಡಿ ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಓರ್ವ ದುಃಖಭಾಗಿ.

ಗುಂಡಿನೇಟನ್ನು ಸಹಿಸಬಲ್ಲ ಅಂಗಿ!

ಲಂಡನ್ ನಗರದ ಒಂದು ಕಾರ್ಖಾನೆಯಲ್ಲಿ ಗುಂಡಿನೇಟನ್ನು ತಡೆಯಬಲ್ಲ ಒಂದು ಹೊಸತರಹದ ಅಂಗಿಯನ್ನು ತಯಾರಿಸಿರುವರು. ಇಂಡಿಯಾದಲ್ಲಿ ಕ್ರಾಂತಿಕಾರರ ದೆಸೆಯಿಂದ ಭೀತಿಗ್ರಸ್ತರಾದ ಯೂರೋಪಿಯನ್ನರು ಈ ಅಂಗಿಗಳನ್ನು ವಿಶೇಷವಾಗಿ ತರಿಸಿ ಉಪಯೋಗಿಸಲಾರಂಭಿಸಿರುವರಂತೆ!

ಪಂಚಾಚಾರ್ಯ ಪ್ರಭಾ.

೧೯೩೩ನೇ ಅಕ್ಟೋಬರ್ ತಾ|| ೩೦ನೇ ಸೋಮವಾರ.

ಇಷ್ಟಲಿಂಗದ ಶ್ರೇಷ್ಠತೆ.

ಶಿವಲಿಂಗಧಾರಕರು ಶಿವನನ್ನು ಹೊರತು ಬೇ[ರೆ] ದೇವತೆಗಳನ್ನು ಆರಾಧಿಸಬಾರದು. ಸ್ಥಾವರಲಿಂಗಾ[ರಾ]ಧಕರಿಗಿಂತಲೂ ಇಷ್ಟಲಿಂಗಾರಾಧಕರು ಉತ್ತ[ಮ]ರೆಂದು ವೀರಶೈವಸಿದ್ಧಾಂತದಲ್ಲಿ ಹೇಳಲ್ಪಟ್ಟಿರುತ್ತ[ದೆ]. ಶಿವನೆಂಬ ಒಂದೇ ದೇವರನ್ನು ಪೂಜಿಸುತ್ತಿದ್ದರೂ, ಅ[ವ]ರೊಳಗೆ ಭೂಮಿಯಲ್ಲಿ ಪ್ರತಿಷ್ಠಿತವಾದ ಶಿವಲಿಂಗವನ್ನು ಆರಾಧಿಸುವುದಕ್ಕಿಂತಲೂ ದೇಹದಲ್ಲಿ ಪ್ರತಿಷ್ಠಿತವಾ[ದ] ಶಿವಲಿಂಗವನ್ನಾರಾಧಿಸುವುದು ಮೇಲೆಂದು ಹೇಳಲ[ು] ಕಾರಣವೇನೆಂಬುದನ್ನು ಇಲ್ಲಿ ವಿಚಾರಮಾಡಬೇಕಾ[ಗಿ]ದುದು ಅವಶ್ಯಕವಾಗಿದೆ. ದೇವಾಲಯದಲ್ಲಿ ಪ್ರತಿಷ್ಠಿ[ತ]ವಾದ ಶಿವಲಿಂಗವು ಪಂಚಸೂತ್ರಘಟಿತವಾದುದು. ದೇಹದಲ್ಲಿ ಧರಿಸಲ್ಪಟ್ಟ ಶಿವಲಿಂಗವೂ ಪಂಚಸೂತ್ರ ಘಟಿತವಾದುದು. ಶಿಲಾತ್ವದೋಷಪರಿಹಾರಕ್ಕಾಗಿಯೂ ದೇವತ್ವವು ಸ್ಥಿರಗೊಳ್ಳುವುದಕ್ಕಾಗಿಯೂ ಆ ಶಿವಲಿಂ[ಗ]ಕ್ಕಾಗುವ ವಿಶಿಷ್ಟಮಂತ್ರಸಂಸ್ಕಾರಗಳೂ ಈ ಲಿಂಗಕ್ಕೂ ಆಗುತ್ತವೆ. ಇಷ್ಟಲಿಂಗಕ್ಕೆ ವಿಧಿಸಿರುವ ಪೂಜಾನಿಯಮ[ಗ]ಳೆಲ್ಲವೂ ಸ್ಥಾವರಲಿಂಗಕ್ಕೂ ವಿಧಿಸಲ್ಪಟ್ಟಿರುತ್ತವೆ. ಹೀಗಾದಮೇಲೆ ಸ್ಥಾವರಲಿಂಗಾರಾಧನೆಗಿಂತಲೂ ಇಷ್ಟ[ಲಿಂ]ಗಾರಾಧನೆಯು ಹೇಗೆ ತಾನೆ ಉತ್ತಮವೆಂಬ ಶಂಕೆಯು ಉತ್ಪನ್ನವಾಗುವುದು. ಸ್ಥಾವರಲಿಂಗಾರಾಧಕನು ಪ್ರತಿದಿವಸವೂ ಸ್ಥಾವರಲಿಂಗವಿದ್ದೆಡೆಗೆ ಹೋಗಿ ಪೂಜೆಯನ್ನು ಮಾಡಲೇಬೇಕೆಂಬ ನಿಯಮವಾಗಲಿ, ಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿಯೇ ಭೋಜನಮಾಡಬೇಕೆಂಬ ನಿಯಮವಾಗಲಿ, ಹಾಗೆ ಮಾಡದೆ ಭೋಜನಾದಿ ವ್ಯವಹಾರಗಳನ್ನು ಮಾಡುವುದಾದರೆ ದೋಷಬರುವುದೆಂಬ ನಿಷೇಧ ಶಾಸ್ತ್ರವಾಗಲಿ ಇರುವುದಿಲ್ಲ. ಅವರವರ ಇಚ್ಛಾನುಸಾರವಾ[ಗಿ] ಹಬ್ಬ ಮೊದಲಾದ ದಿನಗಳಲ್ಲಿಯೂ ಹರಕೆ ಮುಂತಾ[ದ] ಸಂಕಲ್ಪಕಾಲಗಳಲ್ಲಿಯೂ ದೇವರಿದ್ದೆಡೆಗೆ ಹೋ[ಗಿ] ಪರಿಶುದ್ಧಭಾವದಿಂದ ಸೇವೆಮಾಡುವುದು ಲೋಕ[ಪ್ರ]ಸಿದ್ಧವಾಗಿದೆ. ಸ್ಥಾವರಲಿಂಗವನ್ನು ಯಾರು ಪೂ[ಜಿ]ಸುತ್ತಾರೆಯೋ ಅವರೇ ಪೂಜಿಸಬೇಕೆಂಬ ಪ್ರ[ಬ]ಲ ನಿಯಮವಿಲ್ಲವು. ಒಂದು ದೇವರನ್ನು ಅನೇಕ[ರು] ಪೂಜಿಸಬಹುದು. ಅಥವಾ ಒಬ್ಬರೇ ಆದರೂ ಪೂ[ಜಿಸ]ಬಹುದು. ದೇಹದಲ್ಲಿ ಧರಿಸಲ್ಪಟ್ಟ ಶಿವಲಿಂಗವನ್ನು [ಯಾ]ರೋ ಯಾವನು ಶರೀರದಲ್ಲಿ ಧರಿಸಿರುವನೋ ಅವ[ನೇ] ಅದನ್ನು ತನ್ನ ಜೀವಿತದವರೆಗೂ ಪೂಜಿಸಬೇಕೆ[ಂಬ] ನಿಯಮವಿರುವುದಲ್ಲದೆ ಪ್ರತಿದಿವಸವೂ ಸ್ನಾನಾ[ದಿಗ]ಳಿಂದ ಪರಿಶುದ್ಧನಾಗಿಯೂ ಕ್ರಮವರಿತು ತತ್ವಶು[ದ್ಧಿ] ಭೂತಶುದ್ಧ್ಯಾದಿಗಳಿಂದ ಪರಿಶುದ್ಧನಾಗಿಯೂ ಗುರು[ವು] ಉಪದೇಶಿಸಿದ ಶಾಸ್ತ್ರಕ್ರಮದಿಂದರ್ಚಿಸಿ ಶಿವಲಿಂ[ಗದ] ತೀರ್ಥಪ್ರಸಾದಗಳನ್ನು ಸ್ವೀಕರಿಸಿದ ಹೊರತು ಭೋ[ಜ]ನಾದಿವ್ಯವಹಾರಗಳನ್ನು ನಡೆಸಲಾಗದು. "ಶಿವ[ಲಿಂಗ] ಜಾತಿಕ್ರಮಣಂ ಮಹಾದೋಷಸ್ಯ ಕಾರಣಂ" [ಶಿವ] ಪೂಜೆಯನ್ನು ಪ್ರತಿದಿವಸವೂ ಮಾಡದಿದ್ದಲ್ಲಿ ಮ[ಹಾ] ದೋಷವುಂಟಾಗುವುದು.

ಅಸಮರ್ಚ್ಯ ಪದಂ ಶಂಭೋಃ ಭುಂಕ್ತೇ ಬಾಡಿ ಪಾತಿ ಯಃ
ಶ್ವಮಾಂಸಮಸ್ಥಿಮೂತ್ರಂಚ ಭುಂಕ್ತೇ ಬಾಡಿ ಪಾತಿ ಸ ||

ಎಂಬ ಪ್ರಮಾಣಬಲದಿಂದ ಯಾವ ವೀರಶೈವ[ನು] ಶಿವಲಿಂಗವನ್ನು ಪೂಜಿಸದೆ ಊಟಮಾಡುವುದಾಗ[ಲಿ], ಜಲಪಾನಮಾಡುವುದಾಗಲಿ, ಫಲಾಹಾರ ಮಾಡು[ವು]ದಾಗಲಿ ಯಾವುದನ್ನೂ ಮಾಡಕೂಡದು. ಹಾಗೆ ಮಾ[ಡಿ]ದ್ದಾದರೆ ನರಕಗಾಮಿಯಾಗುವನೆಂದು ಶಾಸ್ತ್ರವು ವಿ[ಧಿಸಿ]ರುತ್ತದೆ. ಇಷ್ಟಲಿಂಗಧಾರಿಯಾದವನು ತಾನು ಯಾ[ವಾ]ಗಲೂ ಶಿವಸನ್ನಿಧಿಯಲ್ಲಿ ವಾಸಮಾಡಿದ್ದೇನೆಂಬ ವೃಥ[ಾಭಾ]ವನೆಯುಳ್ಳವನೂ, ಶಿವಸನ್ನಿಧಿಯಲ್ಲಿ ಪಾಪಕಾರ್ಯವ[ನ್ನು] ಮಾಡಲಾಗದೆಂಬಭಯದಿಂದ ಕೂಡಿದವನೂ ಆದ್ದ[ರಿಂದ] ತ್ರಿಕಾಲದಲ್ಲೂ ಶಿವಸ್ಮರಣ, ಶಿವನಾಮಕೀರ್ತನ, ಶಿ[ವಕ]ಥಾಶ್ರವಣ, ಶಿವಸೇವನ, ಶಿವಾರ್ಚನ, ಶಿವವಂದನ, [ಶಿವ]ಕೈಂಕರ್ಯ, ಶಿವಸಖ್ಯ ಆತ್ಮಾರ್ಪಣ ಎಂಬ ನವ[ವಿಧ]

[...]ಮವಾದ ಮತಗ್ರಂಥಗಳು

....	೨ ಆಣೆ
....	೧ ಆಣೆ
....	೧ ಆಣೆ
....	೧ ಆಣೆ
....	೧ ಆಣೆ
[...] ಆವೃತ್ತಿ)	೧ ಆಣೆ
....	೧ ಆಣೆ
....	೨ ಆಣೆ
....	೨ ಆಣೆ
....	೨ ಆಣೆ
....	೩ ಆಣೆ
....	೨ ಆಣೆ
....	೨ ಆಣೆ
....	೨|| ಆಣೆ
....	೩ ಆಣೆ
....	೩ ಆಣೆ
[...]ವೃತ್ತಿ)	೪ ಆಣೆ
....	೪ ಆಣೆ
....	೫ ಆಣೆ
....	೮ ಆಣೆ
....	೮ ಆಣೆ
....	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	२ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

[...]ವ ಫೋಟೋಗಳು.

	ರೂ. ಆ. ಪೈ.
[...]ದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
[...]ಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ	
[...] ಸೈಜು ೧೦×೧೪ ಬೆಲೆ	೦—೦—೩
ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಸೈಜು ೧೦×೮ ಬೆಲೆ ೧ಕ್ಕೆ	೦—೦—೯
[...]ದಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೩
[...]ಶಿವಾಚಾರ್ಯರ ಫೋಟೋ	೦—೧—೦
[...]ಲಿಂಗಶಿವಾಚಾರ್ಯರ ಫೋಟೋ	೦—೧—೦
....	೦—೧—೦
[...]ದಿಂದ ಅವತರಿಸುವ ಫೋಟೋ	೦—೦—೯
[...] ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
[...]ಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು	
[...]ಸುವ ಫೋಟೋ ೧ಕ್ಕೆ	೦—೦—೯
[...]ಗೋಲೇಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
[...]ಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
....	೦—೦—೯
[...] ಸುಂದರವಾದ ಫೋಟೋ ೧ಕ್ಕೆ	೦—೦—೯
[...]ದ ಸುಂದರ ಫೋಟೋ ೧ಕ್ಕೆ	೦—೦—೯
[...]ಗೋಪುರದ ಫೋಟೋ	೦—೦—೯
[...]ದರ ಫೋಟೋ	೦—೦—೯
[...]ಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
[...]ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

[...]ರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ [...] ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

[ಪ]ಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ[ರು]. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂ[ದ]ರೆ:—ಪೀನಸಿ, ಒಂ[ಟಿ] ತಲೆನೋವು, ತಲೆಯ[ಲ್ಲಿಯ] ರೋಗಗಳು, ಕಣ್ಣುಗಳಲ್ಲಿ ಉಂಟಾ[ಗುವ]

ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ[ದ] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇ[ರ]ಲ್ಪಟ್ಟ ೯೬. ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿ[ನ] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು[ಡಿ]ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ[ಳು] ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ[ಗಿ]ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ[ತು].

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪[...]
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮[...]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[43] ಪೋ. ಬಾ. ೫೧೦, ಮದರಾ[ಸು]

[ಪಂಚಾಚಾ]ರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[ತು].

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದಿಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ನೇ ನವಂಬರ್ ೧೯೩೩ [ಸಂಚಿಕೆ ೨೮

ಶ್ರೀ ಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘದ ವಾರ್ಷಿಕ ಸಮಾರಂಭ ಮಹೋತ್ಸವವೂ, ಶ್ರೀ ಶಂಭುಲಿಂಗ ಶಿವಾಚಾರ್ಯರ ಪ್ರವಚನವೂ.

ಗುಳೇದಗುಡ್ಡ.

ವಿಜಾಪೂರ ಡಿ|| ಗುಳೇದಗುಡ್ಡ ಶಹರದಲ್ಲಿ ಸ್ಥಾಪಿತವಾದ ಶ್ರೀ ಜಗದ್ಗುರು ಪಂಚಾಚಾರ್ಯ ಪೌರಾಣಿಕ ಸಂಘದ ವಾರ್ಷಿಕ ಸಮಾರಂಭ ಮಹೋತ್ಸವವು ಈ ವರ್ಷ ಅತ್ಯಂತ ವೈಭವದಿಂದ ನೆರವೇರಿತು. ಈ ವಾರ್ಷಿಕೋತ್ಸವಕ್ಕೆ ಸುಪ್ರಸಿದ್ಧ ಪ್ರವಚನ ಬೃಹಸ್ಪತಿಗಳಾದ ವಿಜಾಪೂರ ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಬರಮಾಡಿಕೊಂಡಿತ್ತು. ತಾ|| ೨೧-೧೦-೩೩ ನೇ ಶನಿವಾರದಿಂದ ತಾ|| ೨೩-೧೦-೩೩ ನೇ ಸೋಮವಾರದವರೆಗೆ ಸಂಘದಲ್ಲಿ ಪ್ರವಚನವು ನೆರವೇರಿತು. ಈ ಪೌರಾಣಿಕ ಸಂಘದ ಸಮುದ್ದೇಶವು ಸನಾತನ ಧರ್ಮದ ಏಳ್ಗೆಯನ್ನುಂಟುಮಾಡುವದಾಗಿದೆ. ಸದ್ಯಃ ಬೇರೂರುತ್ತಿರುವ ನಾಸ್ತಿಕತೆಯನ್ನು ನಾಶಗೊಳಿಸಿ ಜನತೆಯನ್ನು ಆಸ್ತಿಕ ಮಾರ್ಗಗಾಮಿಗಳಾಗುವಂತೆ ಮಾಡುವದೇ ಸಂಘದ ಮುಖ್ಯ ಗುರಿಯಾಗಿದೆ. ಈ ಸಂಘವು ಜನ್ಮವೆತ್ತಿದಂದಿನಿಂದಲೂ ಸಮಾಜೋದ್ಧಾರದ ಕಾರ್ಯಗಳನ್ನೆಷ್ಟೋ ಮಾಡಿರುವದು. ಈ ಸಂಘಕ್ಕೆ ಇಲ್ಲಿಯ ಮಹಾಜನಗಳಾದ ಮ್ಯುನಸಿಪಲ್ ಪ್ರೆಸಿಡೆಂಟರು ಕೌನ್ಸಿಲರು ಹಾಗೂ ಬೆಂಚಮ್ಯಾಜಿಸ್ಟ್ರೇಟರವರು ಮೊದಲಾದ ಪ್ರತಿಷ್ಠಿತ ಮಹಾಶಯರು ಸದಸ್ಯರಾಗಿ ಸಂರಕ್ಷಿಸುತ್ತಿರುವದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಈ ವರ್ಷದ ಸಂಘದ ಕಾರ್ಯಕ್ರಮಗಳು ತಾ|| ೨೩-೧೦-೩೩ನೇ ಸೋಮವಾರ ದಿವಸ ಶ್ರೀ ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನೆರವೇರಿದವು. ಸಂಘದ ವಾರ್ಷಿಕ ವರದಿಯು ಓದಲ್ಪಟ್ಟಿತು. ಮುಂದಿನವರ್ಷದ ಕಾರ್ಯಕಾರಿಸಮಿತಿಯ ಸದಸ್ಯರನ್ನು ಗೊತ್ತುಮಾಡಿತು. ಅಧ್ಯಕ್ಷರಾದ ಶ್ರೀ ಸ್ವಾಮಿಗಳವರು ಸಂಘದ ಸದುದ್ದೇಶವು ಸರ್ವತೋಮುಖವಾಗಿ ಯೋಗ್ಯವಾಗಿರುವದೆಂಬುದನ್ನು ಬಹು ಸೊಗಸಾಗಿ ಬೋಧಿಸಿದರು. ಪ್ರವಚನವು ಸಂಘದಲ್ಲಿ ಶೃಂಗರಿಸಲ್ಪಟ್ಟ ಭವ್ಯವಾದ ಮಂಟಪದಲ್ಲಿ ಮೂರು ದಿವಸಗಳವರೆಗೆ ಚನ್ನಾಗಿ ಸಾಗಿತು. ಪ್ರವಚನಕಾರರ ವೇದಾಗಮೋಪನಿಷತ್ ಪ್ರಮಾಣಗಳೆಂಬ ಪ್ರವಾಹದಲ್ಲಿ ತೇಲಿ ಬರುತ್ತಿದ್ದ ವೀರಶೈವ ಸಿದ್ಧಾಂತತತ್ವ, ಗುರುಭಕ್ತಿ, ಸದಾಚಾರ ಸತ್ಕ್ರಿಯಾ ಸಂಯುಕ್ತವಾದ ನೈತಿಕವಿಷಯಗಳೆಂಬ ತರಂಗಗಳಲ್ಲಿ ಶ್ರೋತೃಗಳು ಹೊಂದುತ್ತಿರುವ ಆನಂದವನ್ನು ಶ್ರೀಗಳವರಿಂದಲೇ ಕೇಳಿ ತಿಳಿಯಬೇಕಲ್ಲದೆ ಲೇಖನಮೂಲಕವಾಗಿ ಬರೆಯಲ್ಪಡುವ ವರ್ಣನಾತೀತಯುಗಳಿಂದ ಎಷ್ಟು ಬಣ್ಣಿಸಿ ಬರೆದರೂ ಈ ಶ್ರೀ ಸ್ವಾಮಿಗಳವರ ಪ್ರವಚನದ ಘನತೆಯು ಪೂರ್ಣತೆಯನ್ನು ಹೊಂದಲಾರದು.

ಗುರುವರ್ಗದಲ್ಲಿ ಈಗ ವಿದ್ವಾಂಸರ ಸಂಖ್ಯೆಯು ದಿನೇದಿನೇ ಹೆಚ್ಚಾಗುತ್ತಿರುವದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಈ ನಮ್ಮ ವಿದ್ವತ್ ಪ್ರತಿಭಾಶಾಲಿಗಳು ನಾನಾ ಮುಖವಾಗಿ ನಶಿಸಿಹೋಗುತ್ತಿರುವ ವೀರಶೈವ ಮತೋನ್ನತಿಯನ್ನುಂಟುಮಾಡಲು ಮುಂದಾಗಬೇಕು. ಮತ್ತು ಸರ್ವ ಪಂಡಿತರು ತಮ್ಮ ಧರ್ಮೋಪದೇಶ ಪಾಂಡಿತ್ಯವನ್ನು ಭಿನ್ನ ಭಿನ್ನವಾಗಿ ಪ್ರಚಾರಮಾಡದೆ ಎಲ್ಲರೂ ಏಕಮುಖವಾಗಿ ಸರ್ವತ್ರ ಬೋಧಿಸುತ್ತ ವೀರಶೈವ ಸಮಾಜೋದ್ಧಾರವನ್ನು ಮಾಡಲೆಂದು ಪ್ರಾರ್ಥನೆ. ಈ ವರ್ಷದಂತೆ ಮುಂದಿನ ವರ್ಷದ ಸಂಘದ ಕಾರ್ಯಕ್ರಮಗಳು ಶ್ರೀ ಜಗದಾಚಾರ್ಯರ ಕೃಪೆಯಿಂದ ಇತೋಪ್ಯತಿಶಯವಾಗಿ ಅಭಿವೃದ್ಧಿಯಾಗಲೆಂದು ಭಕ್ತವತ್ಸಲನಾದ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಸನಾತನ ಧರ್ಮಾಭಿಮಾನಿ
ಗು. ಬ. ದೊಡ್ಡಮನಿ,
ಗೌರವ ಕಾರ್ಯದರ್ಶಿ.

ಗ್ರಾಮಗಳ ಪುನರುತ್ಥಾನ.

ಮಿ|| ರುದ್ರಾರ್ಯರ ಸಲಹೆಗಳು

ಅಮಲ್ದಾರಿ ಟ್ರೇನಿಂಗಿಗೆ ಬಂದಿರುವ ಮೆ|| ಜಿ. ಕೆ. ರುದ್ರಾರ್ಯರು ಸಬ್ ಡಿವಿಜನ್ ಆಫೀಸರ್ ಮೆ|| ಜಿ. ಬಿ. ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ತಾ|| ೨೬-೧೦-೩೩ ನೇ ಗುರುವಾರ ಸಾಯಂಕಾಲ ೭ ಘಂಟೆಯಲ್ಲಿ ಸೋಷಿಯಲ್ ಕ್ಲಬ್ ಹಾಲಿನಲ್ಲಿ ಮೇಲ್ಕಂಡ ವಿಷಯದ ಮೇಲೆ ಬಹಳ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಆ ಕಾಲಕ್ಕೆ ತಾಲ್ಲೂಕ್ ಅಮಲ್ದಾರರವರು, ಅ|| ಇಂಜಿನೀರ್‌ರವರು, ಹಾಸ್ಪಿಟಲ್ ಡಾಕ್ಟರು, ನೇಟಿವ್ ಡಾಕ್ಟರು, ವೈಸ್‌ಪ್ರೆಸಿಡೆಂಟರು, ರಿಕಾರ್ಡ್ ಆಫ್ ರೈಟ್ಸ್ ಡೆಪ್ಯುಟಿ ಅಮಲ್ದಾರರವರು, ಸಬ್ ರಿಜಿಸ್ಟ್ರಾರವರು, ವರ್ತಕರು, ರೈತರು ಮುಂತಾಗಿ ಸೇರಿದ್ದರು. ಅವರ ಭಾಷಣದಲ್ಲಿ ಈ ಕೆಳಗಿನ ವಿಷಯಗಳು ಕಂಡುಬಂದವು. ಮನುಷ್ಯನ ದೇಹವನ್ನೇ ಒಂದು ಗ್ರಾಮಕ್ಕೆ ಉಪಮಾನವಾಗಿ ತೆಗೆದುಕೊಂಡಲ್ಲಿ ದೇಹದ ಒಂದು ಭಾಗದ ಅಂಗಕ್ಕೆ ನೋವು ಉಂಟಾದರೆ ದೇಹಕ್ಕೆಲ್ಲಾ ನೋವು ಕಂಡುಬರುತ್ತದೆ. ಅದರಂತೆ ಗ್ರಾಮದ ಒಂದು ಮನೆಯಲ್ಲಿಯ ಪ್ರಜೆಗಳಿಗೆ ಸಾಂಕ್ರಾಮಿಕ ರೋಗಾದಿಗಳು ವ್ಯಾಪಿಸಿದರೆ ಗ್ರಾಮವೆಲ್ಲಾ ಮನೋವ್ಯಥೆಯಲ್ಲಿ ಮಗ್ನವಾಗಬೇಕಾಗುತ್ತದೆ. ದೇಹದ ಅಂಗಾಂಗಗಳನ್ನೆಲ್ಲಾ ಶುಚಿಯಾಗಿಟ್ಟುಕೊಂಡರೆ ಯಾವ ರೀತಿ ಆರೋಗ್ಯವೂ ಭೂಷಣವೂ ಉಂಟಾಗುತ್ತದೆಯೋ ಅದರಂತೆ ಗ್ರಾಮದಲ್ಲಿರುವ ಪ್ರತಿಯೊಂದು ಮನೆಯವರೂ ತಮ್ಮ ತಮ್ಮ ಮನೆ ಮತ್ತು ಅವರಣಗಳನ್ನು ಶುಚಿಯಾಗಿಟ್ಟುಕೊಂಡರೆ ಗ್ರಾಮವೆಲ್ಲಾ ಶುಚಿಯಾಗಿ ಬಹಳ ಆರೋಗ್ಯಕರವಾದ ಗ್ರಾಮವೆನಿಸಿಕೊಳ್ಳುತ್ತದೆ. ಇದರಿಂದ ಗ್ರಾಮದ ಪ್ರಜೆಗಳು ದೃಢಕಾಯರಾಗಿಯೂ, ಆರೋಗ್ಯವಂತರಾಗಿಯೂ, ತಮ್ಮ ತಮ್ಮ ಕಾರ್ಯಗಳಲ್ಲಿ ನಿಪುಣರಾಗಿಯೂ ಇರುವದಕ್ಕೆ ಕಾರಣವಾಗುತ್ತದೆ. ನೆಲಮಂಗಲದ ಟವನ್ನೊಳಗೆ ಸರಿಯಾದ ಡ್ರೈನೇಜ್, ಹೊಸದಾಗಿ ಮನೆಗಳನ್ನು ಕಟ್ಟಿಕೊಳ್ಳುವದಕ್ಕೆ ಎಕ್ಸ್‌ಟೆನ್‌ಷನ್ ಮಾಡಿದಲ್ಲಿ ಪೂರ್ಣ ಉನ್ನತಸ್ಥಿತಿಗೆ ಬರಲು ಅವಕಾಶವಾಗುತ್ತದೆ. ಪ್ರತಿಯೊಂದು ಹಳ್ಳಿಗೂ ದೊಡ್ಡ ರಸ್ತೆಗಳನ್ನು ಮಾಡುವದರಲ್ಲಿ ಒಬ್ಬೊಬ್ಬ ಧರ್ಮಿಷ್ಠರಿಗೆ ಪ್ರೋತ್ಸಾಹಿಸಿ, ಅವರ ಸಹಾಯದಿಂದ ರಸ್ತೆಮಾಡಿಸಿ ಆ ರೋಡಿಗೆ ಅವರ ಹೆಸರನ್ನು ಹಾಕಿಸುವದರಿಂದ ಅತಿ ಜಾಗ್ರತೆಯಾಗಿ ಹಳ್ಳಿಗಳಿಗೆಲ್ಲಾ ರಸ್ತೆಗಳು ಬೇಗಲು ಸುಲಭಸಾಧ್ಯವಾಗಿ ತೋರುತ್ತದೆ. ಪ್ರಕೃತ ವ್ಯವಸಾಯದಿಂದ ವಿಶೇಷ ಫಾಯದೆ ಕಂಡುಬಾರದಿರುವದರಿಂದ ಅದರ ಜೊತೆಗೆ ಸಾಧ್ಯವಾದಷ್ಟು ಬಾಳೆ ದಾಳಿಂಬರ, ಫರಂಗಿ, ಅಂಜೂರ, ದ್ರಾಕ್ಷಿ, ನಿಂಬೆ ಮೊದಲಾದ ಹಣ್ಣುಗಳು ಮಲ್ಲಿಗೆ, ರೋಜು ಮೊದಲಾದ ಹುವ್ವುಗಳು ಮತ್ತು ನಾನಾವಿಧ ತರಕಾರಿಗಳನ್ನು ಬೆಳೆಯುವದರಿಂದ ಹೆಚ್ಚು ಉತ್ಪತ್ತಿಯಾಗುತ್ತದೆ. ಮತ್ತು ರೈತರು ಕೆಲವುಕಾಲ ಸೋಂಬೇರಿಗಳಾಗಿ ಕುಳಿತುಕೊಳ್ಳುವುದು ತಪ್ಪಿಹೋಗುತ್ತದೆ. ಎಲೆಕ್ಟ್ರಿಕ್ ಲೈಟ್ ಈ ಟವನ್ನಿಗೆ ಸಮೀಪದಲ್ಲಿಯೇ ಬರುವುದರಿಂದ ಫ್ಲೋರ್‌ಮಿಲ್, ರೈಸ್‌ಮಿಲ್, ಸಿಲ್ಕ್ ವೀವಿಂಗ್‌ಫ್ಯಾಕ್ಟರಿ ಪ್ರಾರಂಭಿಸುವದಕ್ಕೆ ಅವಕಾಶವಿರುತ್ತದೆ. ಟವನ್ನಿನಲ್ಲಿಯೂ ಹಳ್ಳಿಗಳಲ್ಲಿಯೂ ಸಣ್ಣಪುಟ್ಟ ಕೈಗಾರಿಕೆಗಳನ್ನು ಅಂದರೆ ನಿಟ್ಟಿಂಗ್ ಮೆಷಿನಿಂದ ಬನಿಯನ್ನು, ಟೋಪಿ, ಟೇಬಲ್ ಕ್ಲಾತ್, ಸಾಕ್ಸ್, ಸ್ವೆಟರಿಂಗ್ಸ್‌ಗಳನ್ನು ತಯಾರಿಸುವದು ಬೆತ್ತದಿಂದ ಕೆಲವು ಸಾಮಾನುಗಳನ್ನು ತಯಾರಿಸುವದು ಮೊದಲಾದವುಗಳನ್ನು ಪ್ರಚಾರಕ್ಕೆ ತಂದರೆ ಪ್ರತಿಯೊಬ್ಬ ಮನುಷ್ಯನ ಉತ್ಪತ್ತಿಯು ಹೆಚ್ಚುವದಕ್ಕೆ ಅವಕಾಶವಾಗುತ್ತದೆ. ವ್ಯಾಪಾರಿಕನ ವ್ಯಾಪಾರವು ಅಭಿವೃದ್ಧಿಯಾಗಬೇಕಾದರೆ ಅವನ ಪ್ರಾಮಾಣಿಕತೆ, ಸತ್ಯಸಂಧತೆಯು ಮುಖ್ಯವಾಗಿರಬೇಕಾಗುತ್ತದೆ. ಒಬ್ಬರುಮಾಡುತ್ತಿರುವ ವ್ಯಾಪಾರವನ್ನೇ ಹಿಂಬಾಲಿಸದೆ ಹೊಸಹೊಸ ವ್ಯಾಪಾರಗಳನ್ನು ಮಾಡುವದರಿಂದ ಉಭಯಕಾಪಿ ಪ್ರಯೋಜನವುಂಟು. ಪ್ರಪಂಚದಲ್ಲಿ ಯಾವ ವಿಧವಾಗಿಯಾದರೂ ಧರ್ಮಮಾಡುವುದರಿಂದ ಇಹಲೋಕದಲ್ಲಿ ಕೀರ್ತಿಯೂ ಪರಲೋಕದಲ್ಲಿ ಗತಿಯೂ ಲಭಿಸುವವು. ನೆಲಮಂಗಲತಾಲ್ಲೂಕಿನ ಚರಿತ್ರೆಯನ್ನು ಸಮೀಪದಲ್ಲಿಯೇ ಬರೆದ ಪ್ರಕಟಿಸುವವರಾಗಿರುವದರಿಂದ ಅದರಲ್ಲಿ ಧರ್ಮ ಮಾಡಿರುವವರ ಹೆಸರನ್ನೂ ಮತ್ತು ಅವರ ಧರ್ಮಕಾರ್ಯಗಳನ್ನೂ ನಮೂದಿಸಬೇಕಾಗಿರುವದರಿಂದ ಅಂಥ ಧರ್ಮಿಷ್ಠರ ಮತ್ತು ಹಳ್ಳಿಗಳಿಗೆ ರಸ್ತೆ ಮಾಡಿಸುವವರ ಹೆಸರನ್ನು ಕೂಡಲೆ ತಿಳಿಸಬೇಕೆಂದು ಸೂಚಿಸಿದರು. ಅನಂತರ ಅಧ್ಯಕ್ಷರಾದ ಮೆ|| ಮಲ್ಲಾರಾಧ್ಯರು ಈ ರೀತಿ ಅಪ್ಪಣೆ ಕೊಡಿಸಿದರು ಮಿ|| ಜಿ. ಕೆ. ರುದ್ರಾರ್ಯರು ಸರ್ಕಾರದ ರೆವಿನ್ಯೂವಲ್ಲಿ ಒಂದಾದ ಇನ್‌ಕಂಟ್ಯಾಕ್ಸ್ ವಿಷಯದಲ್ಲಿ ವಿಶೇಷ ಅನುಭವ ಪಡೆದು ರೆವಿನ್ಯೂ ಇಲಾಖೆಗೆ ಬಂದಿರುವದರಿಂದ ಇಲಾಖೆಯ ಲೆಕ್ಕವಗೈರೆ ಬಾಬುಗಳನು ಅತಿ ಸುಲಭ ರೀತಿಯಿಂದ ಜಾಗ್ರತೆಯಾಗಿ ಮಾಹಿತಿ ಮಾಡಿಕೊಳ್ಳುವದಕ್ಕೆ ಅವಕಾಶವಿರುತ್ತದೆ. ಅದಪ್ರಯುಕ್ತ ಅವರು ಜಾಗ್ರತೆಯಾಗಿ ಅಮಲ್ದಾರರಾಗಿ ಪ್ರಜೆಗಳ ಕುಂದು ಕೊರತೆಗಳನ್ನು ನಿವಾರಣೆ ಮಾಡುತ್ತಾರೆಂದು ಹಾರೈಸಿ, ತಾಲ್ಲೂಕು ಅಮಲ್ದಾರರವರು ಕ್ಲಬ್ ಸೆಕ್ರೆಟರಿಯವರು ಈ ಕ್ಲಬ್ ಹಾಲಿನಲ್ಲಿ ಈ ಮೊದಲನೇ ಉಪನ್ಯಾಸವನ್ನು ಮಾಡಿಸಿದ್ದಲ್ಲದೆ ಉತ್ತರೋತ್ತರ ಇಲ್ಲಿ ಅನೇಕ ಉಪನ್ಯಾಸಗಳು ನಡೆಯಬೇಕೆಂದು ತಮ್ಮ ಸಂತೋಷವನ್ನು ಪ್ರದರ್ಶಿಸಿದರು. ಅಮಲ್ದಾರ್ ಮಿ|| ಯಂ. ಶಂಕರಪ್ಪನವರು ಈ ತಾಲ್ಲೂಕಿಗೆ ದಯಮಾಡಿಸಿದ ಮೇಲೆ ಕ್ಲಬ್ ಕಟ್ಟಡ ಬದಾವಣೆ, ಪಾರ್ಕು, ಇಂಡಸ್ಟ್ರಿಯಲ್ ಸ್ಕೂಲು ಕಟ್ಟಡ, ಕೋ-ಆಪರೇಟೀವ್ ಸೊಸೈಟಿ ಕಟ್ಟಡ, ತ್ಯಾಮಗೊಂಡ್ಲಿನಲ್ಲಿ ಮುನಸಿಪಲ್ ಆಫೀಸು ಕಟ್ಟಡ ಮತ್ತು ಅನೇಕ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡಿಸಿರುವರು.

ಭಾಷಣಗಳಾದ ಮೇಲೆ ಶ್ರೀಮನ್ ಮಹಾರಾಜರವರ ಮತ್ತು ದಿವಾನ್ ಸಾಹೇಬರವರ ಶ್ರೇಯಃಪ್ರಾರ್ಥನೆ ಮಾಡಿ ಮೀಟಿಂಗ್ ಭರಖಾಸ್ತಾಯಿತು.

ದುಃಖವಾರ್ತೆ.

ಧಾರವಾಡ ಡಿ|| ಗದಗ ಬೆಟಗೇರಿಯಲ್ಲಿರುವ ಸುಪ್ರಸಿದ್ಧ ಗುರುಭಕ್ತರಾದ ಮ|| ರಾ|| ಹಿರೇಮನೆ ಪಾಟೀಲ ನೀಲಪ್ಪಗೌಡರವರ ಮಾತೃಶ್ರೀಯವರು ಕಳೆದ ತಿಂಗಳು ೨೮ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ. ಮಾತೃಶ್ರೀಯವರು ಒಳ್ಳೆ ಸದ್ಗುಣಶಾಲಿನಿಯರಾಗಿದ್ದರಲ್ಲದೆ ಗುರುಲಿಂಗಜಂಗಮರಲ್ಲಿ ಅಸಾಧಾರಣವಾದ ಭಕ್ತಿಯುತೆಯರಾಗಿದ್ದರು. ಇವರ ವಿಯೋಗದಿಂದ ಪುತ್ರರೇ ಮೊದಲಾದ ಬಂಧುವರ್ಗಕ್ಕೆ ಪರಮದುಃಖವಾಗಿರುವುದು ಸ್ವಾಭಾವಿಕವಾಗಿದೆ. ಶ್ರೀ ಜಗದಾಚಾರ್ಯರು ಬಂಧುಗಳಿಗೆಲ್ಲಾ ದುಃಖಶಮನವನ್ನುಂಟುಮಾಡಿ ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಓರ್ವ ದುಃಖಭಾಗಿ.

ಗುಂಡಿನೇಟನ್ನು ಸಹಿಸಬಲ್ಲ ಅಂಗಿ!

ಲಂಡನ್ ನಗರದ ಒಂದು ಕಾರ್ಖಾನೆಯಲ್ಲಿ ಗುಂಡಿನೇಟನ್ನು ತಡೆಯಬಲ್ಲ ಒಂದು ಹೊಸತರಹದ ಅಂಗಿಯನ್ನು ತಯಾರಿಸಿರುವರು. ಇಂಡಿಯಾದಲ್ಲಿ ಕ್ರಾಂತಿಕಾರರ ದೆಸೆಯಿಂದ ಭೀತಿಗ್ರಸ್ತರಾದ ಯೂರೋಪಿಯನ್ನರು ಈ ಅಂಗಿಗಳನ್ನು ವಿಶೇಷವಾಗಿ ತರಿಸಿ ಉಪಯೋಗಿಸಲಾರಂಭಿಸಿರುವರಂತೆ!

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜ

ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್

ಜಿ.ಸಿ.ಎಸ್.ಐ., ಜಿ.ಬಿ.ಇ., ಮಹಾಸ್ವಾಮಿಯವರ ಸನ್ನಿಧಿಯಲ್ಲಿ

ಮೈಸೂರು ನಿವಾಸಿಗಳಾದ ಕಥೋಲಿಕರು ಒಪ್ಪಿಸಿದ ವಿಜ್ಞಾಪನಾ ಪತ್ರಿಕೆ.

ಮಹಾಸ್ವಾಮಿ,

ಈ ದಿನವು ಮೈಸೂರು ಪಟ್ಟಣದ ಕಥೋಲಿಕರಿಗೆ ಚಿರಸ್ಮರಣೀಯವಾದ ಶುಭ ದಿನವಾಗಿದೆ. ಇಂತಹ ಶುಭ ದಿವಸದಲ್ಲಿ ಮಹಾಸ್ವಾಮಿಗಳಿಗೆ ನಮ್ಮ ಅತ್ಯಂತ ವಿನಯಪೂರ್ವಕವಾದ ಸ್ವಾಗತವನ್ನೀಯಲು ಅವಕಾಶದೊರೆತುದು, ನಮಗೆ ಮಹದಾನಂದಕರವಾದ ವಿಷಯವೇ ಸರಿ. ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ಹೆಸರಿನಲ್ಲಿ ಈ ಸ್ಥಳದಲ್ಲಿ ಕಟ್ಟಬೇಕೆಂದಿರುವ ದೇವಾಲಯದ ಅಸ್ತಿಭಾರಶಿಲೆಯನ್ನು ಮಹಾಸ್ವಾಮಿಗಳು ಪ್ರತಿಷ್ಠಿಸಬೇಕೆಂಬ ಆಕಾಂಕ್ಷೆಯಿಂದ ನಾವು ಮಹಾಸ್ವಾಮಿಗಳ ಸನ್ನಿಧಿಗೆ ಬಂದಾಗ, ತಮ್ಮ ಪ್ರಜೆಗಳ ಎಲ್ಲಾ ಪಂಗಡಗಳ ಕ್ಷೇಮಚಿಂತನೆಯಲ್ಲಿಯೂ ಸಮುದೃಷ್ಟಿಯಿಂದ ನಿರತರಾಗಿರುವ ಮಹಾಸ್ವಾಮಿಗಳು ನಮ್ಮ ಕೋರಿಕೆಯನ್ನು ನೆರವೇರಿಸಲು ಅತ್ಯಂತ ಉದಾರಭಾವದಿಂದ ಸಮ್ಮತಿಸಿ ಅನುಗ್ರಹಿಸಿದುದು ನಮ್ಮದೊಂದು ಭಾಗ್ಯ. ನಮಗೆ ಲಭಿಸಿದ ಈ ಅಪೂರ್ವ ಗೌರವದಿಂದ ನಮ್ಮ ಹೃದಯದಲ್ಲಿ ಉಕ್ಕಿಬರುವ ಮಹದಾನಂದವನ್ನು ಸೂಚಿಸುವ ಈ ಸಮಯದಲ್ಲಿ ಮೈಸೂರು ಪಟ್ಟಣದ ಪ್ರತಿಯೊಬ್ಬ ಕಥೋಲಿಕನ ಮನಸ್ಸೂ ಮಹಾಸ್ವಾಮಿಗಳ ರಾಜ್ಯಭಾರದ ವಿಷಯದಲ್ಲಿಯೂ, ಮಹಾಸ್ವಾಮಿಗಳ ವಿಷಯದಲ್ಲಿಯೂ ಇರುವ ರಾಜಭಕ್ತಿ ಮತ್ತು ಪ್ರೇಮಪೂರಿತ ಕೃತಜ್ಞತೆಗಳಿಂದ ಉಜ್ವಲವಾಗಿ ಬೆಳಗುತ್ತಿದೆಯೆಂದು ಪ್ರಕಟಪಡಿಸುತ್ತೇವೆ. ಈ ಕೃತಜ್ಞತೆಯ ವಾಣಿಯು ಅತಿಶಯೋಕ್ತಿಯ ಅಲಂಕಾರದಿಂದ ತುಂಬಿದ ವರ್ಣನೆಯಲ್ಲ. ಈ ಅರ್ಚ್ಯಶಿಷ್ಟರಿಂದ ಅನುಗ್ರಹಗಳನ್ನು ಪಡೆದ, ಸಮಗ್ರ ಹಿಂದೂದೇಶದಲ್ಲಿಯೂ ಮತ್ತು ದೇಶವಿದೇಶಗಳಲ್ಲಿಯೂ ಇರುವ ಕೋಟ್ಯನುಕೋಟಿ ಕಥೋಲಿಕರೂ ಈ ಕೃತಜ್ಞತೆಯಲ್ಲಿ ವಾಸ್ತವವಾಗಿ ಸಹಭಾಗಿಗಳಾಗಿರುತ್ತಾರೆ, ಮಹಾಸ್ವಾಮಿ.

ಈಗ ಶಿಥಿಲವಾಗುತ್ತಿರುವ ಈ ಹಳೆಯ ದೇವಾಲಯವು ಈಗ್ಗೆ ತೊಂಬತ್ತು ವರ್ಷಗಳಿಗೆ ಹಿಂದೆ, ಅಂದರೆ ೧೮೪೩ ರಲ್ಲಿ ಮಹಾಸ್ವಾಮಿಗಳ ಪಿತಾಮಹರಾದ ಕೀರ್ತಿಶೇಷರಾದ ಮುಮ್ಮಡಿ ಕೃಷ್ಣರಾಜ ಒಡೆಯರವರ ಉದಾರಾಶ್ರಯದಲ್ಲಿ ಕಟ್ಟಲ್ಪಟ್ಟಿತು. ಕ್ರಮೇಣ, ಮೈಸೂರು ಪಟ್ಟಣದಲ್ಲಿ ಕಥೋಲಿಕರ ಜನಸಂಖ್ಯೆಯು ಅಭಿವೃದ್ಧಿಯಾಗುತ್ತಿರಲು, ಇದಕ್ಕನುಗುಣವಾಗಿ ವಿಶಾಲವಾದ ಒಂದು ದೇವಾಲಯವನ್ನು ಕಟ್ಟಬೇಕೆಂಬ ಆಕಾಂಕ್ಷೆಯು ಕೆಲವು ಕಾಲದಿಂದ ಪ್ರಬಲವಾಗುತ್ತಿದ್ದಿತು. ಆದರೆ ಈ ಮಹತ್ಕಾರ್ಯಕ್ಕೆ ಬೇಕಾದ ಧನಸಹಾಯವಿಲ್ಲದುದರಿಂದ ತೊಡಕಿನಲ್ಲಿ ಸಿಕ್ಕಿ ಚಿಂತಿಸುತ್ತಿದ್ದೆವು, ಮಹಾಸ್ವಾಮಿ.

೧೯೨೬ ನೇ ಅಗಸ್ಟು ತಿಂಗಳಿನಲ್ಲಿ ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ಮೇಲಣ ಭಕ್ತಿಯ ಪರಿಣಾಮವಾಗಿ ಅಂತು ದರೂಪದಲ್ಲಿ ಪೂಜಾಸ್ಥಾನವೊಂದು ಮೈಸೂರು ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿತು. ಈ ಭಕ್ತಿಯು ಆಶ್ಚರ್ಯವನ್ನುಂಟುಮಾಡುವಷ್ಟು ಜಾಗ್ರತೆಯಾಗಿ ಹರಡಿ ಇಷ್ಟು ಪ್ರಬಲವಾಗುವುದೆಂದು ನಾವೆಂದಿಗೂ ಆಗ ನೆನಸಿರಲಿಲ್ಲ. ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ವಿಚಾರದಲ್ಲಿ ಪ್ರಬಲವಾದ ಪ್ರಾರ್ಥನೆಯಿಂದ ಜನಗಳು ಪಡೆದುಕೊಳ್ಳುತ್ತಿದ್ದ ವರಪ್ರಸಾದಗಳು ಆಶ್ಚರ್ಯಕರವಾಗಿದ್ದುದರಿಂದ ಎಲ್ಲರ ಗಮನವೂ ಮೈಸೂರು ಪಟ್ಟಣದಲ್ಲಿರುವ ಆ ಅಮ್ಮನವರ ಪೀಠದ ಕಡೆಗೆ ಆಕರ್ಷಿಸಲ್ಪಟ್ಟಿತು. ಮೈಸೂರು ಪಟ್ಟಣದಲ್ಲಿರುವ ಈ ದೇವಸ್ಥಾನವು ಮೈಸೂರು ದೇಶದಲ್ಲಿರುವ ಕಥೋಲಿಕ್ ದೇವಾಲಯಗಳಲ್ಲೆಲ್ಲಾ ಧನಾಢ್ಯತೆಯಲ್ಲಿ ಅತ್ಯಂತ ಕನಿಷ್ಠವಾದುದು. ಆದರೆ ಈ ಪೂಜಾಸ್ಥಾನವನ್ನು ಸ್ಥಾಪಿಸಿದ ಹತ್ತು ತಿಂಗಳೊಳಗಾಗಿ ಇದು ಒಂದು ಹೊಸರೂಪವನ್ನು ತಾಳಿತು. ಎಲ್ಲಾ ಪಂಗಡಗಳವರ ಕ್ಷೇಮಲಾಭವನ್ನೂ ಕೋರುವ ಮೈಸೂರು ದೇಶದ ದಿವಾನರವರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರು ದೇವಾಲಯದ ಮುಂಭಾಗವನ್ನು ಪ್ರಾಮುಖ್ಯವಾಗಿರುವಂತೆ ಕಟ್ಟುವುದಕ್ಕೆ ಸಹಾಯಮಾಡಲು ಕುತೂಹಲಪಡುತ್ತಿದ್ದುದನ್ನು ಕಂಡು ನಮಗೆ ಆನಂದಾಶ್ಚರ್ಯಗಳುಂಟಾದುವು. ಮಹಾಸ್ವಾಮಿಗಳ ಸರ್ಕಾರದವರು ಜೀರ್ಣವಾಗುತ್ತಿದ್ದ ದೇವಾಲಯದ ಸುತ್ತಲೂ ಇದ್ದ ಮಣ್ಣಿನಗೋಡೆಗಳಿಗೆ ಪ್ರತಿಯಾಗಿ ಎರಡು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಹೊಸ ಪೌಳಿ ಗೋಡೆಗಳನ್ನು ಕಟ್ಟಿಸಿ, ಸುಂದರವಾದ ಎರಡು ಮುಂಬಾಗಿಲುಗಳನ್ನು ಇಡಿಸಿ, ದೇವಾಲಯವು ಭವ್ಯವಾಗಿ ಕಾಣುವಂತೆ ಮಾಡಿದರು. ಈ ಪಟ್ಟಣದಲ್ಲಿ ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ಪುಣ್ಯಕ್ಷೇತ್ರವನ್ನು ಕಟ್ಟಿ ಆಕೆಯ ಭಕ್ತಿಯು ಪ್ರಾರಂಭವಾದ ಮೇಲೆ, ಇಂತಹ ಅನೇಕ ಪುಣ್ಯಕ್ಷೇತ್ರಗಳು ಮತ್ತು ದೇವಾಲಯಗಳು ಕೂಡ ಹಿಂದೂದೇಶದ ಅನೇಕ ಭಾಗಗಳಲ್ಲಿಯೂ ವಿದೇಶಗಳಲ್ಲಿಯೂ ಆಕೆಯ ಹೆಸರಿನಲ್ಲಿ ಕಟ್ಟಲ್ಪಟ್ಟಿವಾದಾಗ್ಯೂ, ಈ ಮೈಸೂರು ಪಟ್ಟಣದ ಕ್ಷೇತ್ರವು ಮಾತ್ರ ಅನುಗ್ರಹಪೂರಿತವಾಗಿರುವ ಕಾರಣ ಈ ಅಮ್ಮನವರ ಭಕ್ತರು ಯಾವಾಗಲೂ ಮೈಸೂರು ಪಟ್ಟಣವೇ ಬಹಳ ಪವಿತ್ರವಾದ ಯಾತ್ರಾಸ್ಥಾನವೆಂದು ಭಾವಿಸುತ್ತಾರೆ. ಮೋಕ್ಷದ ರಾಜಪುತ್ರಿಯಾದ ಆ ಅಮ್ಮನವರ ಅನುಗ್ರಹಗಳನ್ನು ಪಡೆದ ಭಕ್ತರು ವರ್ಷದಲ್ಲೆಲ್ಲಾ ಹತ್ತಿರ ಪ್ರದೇಶಗಳಿಂದಲೂ, ದೂರದೇಶಗಳಿಂದಲೂ ತಮ್ಮ ಭಕ್ತಿಪ್ರೇಮಾತಿಶಯಗಳೆಂಬ ಕಪ್ಪಕಾಣಿಕೆಗಳನ್ನು ಒಪ್ಪಿಸಲು ಈ ಪುಣ್ಯಕ್ಷೇತ್ರಕ್ಕೆ ತಂಡೋಪತಂಡವಾಗಿ ಬರುತ್ತಿರುತ್ತಾರೆ. ಇವರು ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿ ಹೋಗುವಾಗ, ಸತ್ಕೀರ್ತಿ ಸಚ್ಚಾರಿತ್ರಗಳ ರತ್ನ ಕಿರೀಟಧರರೆನಿಸಿ ದಯಾಪ್ರೇಹೃದಯರಾದ ಪ್ರಭುಗಳಿಂದ ಪರಿಪಾಲಿಸಲ್ಪಡುತ್ತ ಅನುಪಮವಾದ ಸೌಂದರ್ಯದಿಂದ ರಂಜಿಸುತ್ತಲಿರುವ ಈ ಪಟ್ಟಣದ ಸೊಬಗು ಮರೆಯಲಾಗದಂತೆ ಅವರ ಮನಸ್ಸಿನಲ್ಲಿ ಸ್ಥಿರವಾಗಿ ನೆಲಸುತ್ತದೆ. ಇದರಿಂದ "ಮೈಸೂರು" ನಗರವು ಈ ದೇಶದ ಕಥೋಲಿಕರ ಮನೆಗಳಲ್ಲಿ ಮಾತ್ರವಲ್ಲದೆ ಸಮುದ್ರಗಳ ಆಚೆ ಇರುವ ನಾನಾ ದೇಶಗಳ ಕಥೋಲಿಕರ ಮನೆಗಳಲ್ಲಿಯೂ ಸಹ ಜನಜನಿತವಾಗಿ ಕೊಂಡಾಡಲ್ಪಡುತ್ತಲಿದೆ, ಮಹಾಸ್ವಾಮಿ.

ಮೂರನೆಯ ಶತಮಾನದ ಆ ಘೋರವಾದ ದಿವಸಗಳಲ್ಲಿ ಪೂರ್ವದ ಕ್ರೈಸ್ತರು ಕ್ರೂರವಾಗಿ ಹಿಂಸಿಸಲ್ಪಡುತ್ತಿದ್ದುದರಿಂದ ಅವರು ಬೇರೆ ಯಾವುದೊಂದು ಮಾರ್ಗವೂ ಇಲ್ಲದೆ ತಮ್ಮ ಪೂಜೆ, ಜಪ, ತಪ, ಧ್ಯಾನ ಮುಂತಾದ ವೇದಕಾರ್ಯಗಳನ್ನು ಅಲ್ಲಿ ರೋಮಾಪುರಿಯ ಸರಹದ್ದಿನಲ್ಲಿರುವ ಕಟಕೂಂಬಗಳೆಂದು ಕರೆಯಲ್ಪಡುವ ನೆಲಮಾಳಿಗೆಗಳಲ್ಲಿ ಮಾಡುತ್ತಿದ್ದರು. ಪ್ರಾಕ್ತನ ಶೋಧಕರಲ್ಲಿ (Archæologist) ಪ್ರಖ್ಯಾತನಾದ ದೆ ರೊಸ್ಸಿ ಎಂಬವನು ಮಾಡಿದ ಪರಿಶೋಧನೆಗಳ ಪ್ರಕಾರ, ಅರ್ಚ್ಯಶಿಷ್ಟ ಪ್ರಿಸಿಲ್ಲಾ ಎಂಬವರ ಕಟಕೂಂಬವು ಅತ್ಯಂತ ಪುರಾತನವಾದವುಗಳಲ್ಲಿ ಒಂದಾಗಿ ಕಂಡುಬಂದಿತು. ೧೮೦೨ನೇ ಇಸವಿ ಮೇ ತಿಂಗಳ ೨೫ನೇ ತಾರೀಖಿನ ದಿವಸ ಇದನ್ನು ಬೇರೆ ಯಾವುದೋ ಒಂದು ಕಾರ್ಯಕ್ಕಾಗಿ ಅಗೆಯುತ್ತಿರುವಾಗ ಪ್ರಖ್ಯಾತವಾದ ಶಿಲಾಶಾಸನವೊಂದು ಕಾಣಿಸಿತು. ಅದರ ಮೇಲೆ ವೇದಸಾಕ್ಷಿಯ ಚಿಹ್ನೆಗಳಿದ್ದು ಹೀಗೆ ಬರೆಯಲ್ಪಟ್ಟಿದ್ದಿತು :—

"ಫಿಲೋಮಿನಾ ಅಮ್ಮನವರಿಗೆ ಸಮಾಧಾನವಾಗಲಿ!" ಆ ಶಾಸನವನ್ನೆತ್ತಿ ನೋಡಲು ವೇದಸಾಕ್ಷಿಯಾದ ಯುವತಿಯ ಅಮೂಲ್ಯವಾದ ಅವಶಿಷ್ಟಗಳು ಕಂಡುಬಂದುವು. ಇವುಗಳು ಪೂಜ್ಯವಸ್ತುಗಳೆಂಬ ಭಾವನೆಯಿಂದ ದಿವ್ಯಾವಶಿಷ್ಟಗಳ ಭಂಡಾರದಲ್ಲಿಡಲ್ಪಟ್ಟುವು. ಅನಂತರ ಇವುಗಳನ್ನು ನೇಪಲ್ಸಿನ ಹತ್ತಿರದಲ್ಲಿರುವ 'ಮನ್ಯಾನೋ ಡೆಲ್ ಕಾರ್ಡಿನಾಲೆ' ಎಂಬ ಸ್ಥಳಕ್ಕೆ ತೆಗೆದುಕೊಂಡುಹೋದರು. ಅದರ ತರುವಾಯ ಫಿಲೋಮಿನಾ ಅಮ್ಮನವರು ಗ್ರೀಸ್ ದೇಶದಲ್ಲಿ ಒಂದು ಚಿಕ್ಕ ಸಂಸ್ಥಾನದ ಅರಸುಮಗಳೆಂದು ತಿಳಿಯಬಂದಿತು. ಬಹು ಚಿಕ್ಕವಯಸ್ಸಿನಲ್ಲಿಯೇ ಆಕೆಯು ಕನ್ಯಾವ್ರತಮಾಡಿ ತನ್ನನ್ನು ದೇವರಿಗೆ ಸಮರ್ಪಿಸಿಬಿಟ್ಟರು. ಅದ್ಭುತಸೌಂದರ್ಯದಿಂದ ಪ್ರಕಾಶಿಸುತ್ತಿದ್ದ ಆ ರಾಜಕುಮಾರಿಯನ್ನು ಕಂಡ ಡಯೋಕ್ಲೀಸಿಯನ್ ಎಂಬ ಚಕ್ರವರ್ತಿಯು ಆಕೆಯನ್ನು ಪಾಣಿಗ್ರಹಣ ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದಾಗ, ತನ್ನ ಅಭೀಷ್ಟವು ನೆರವೇರದಿರಲು, ಆಕೆಯನ್ನು ಕ್ರೂರವಾಗಿ ಹಿಂಸಿಸಿ ಕೊಲ್ಲಿಸಿದನು. ಈ ಪ್ರಕಾರ ಆ ಪುಣ್ಯವತಿಯು ಹದಿಮೂರನೆಯ ವಯಸ್ಸಿನಲ್ಲಿ ವೇದಸಾಕ್ಷಿಯ ಪದವಿಯನ್ನು ಪಡೆದರು, ಮಹಾಸ್ವಾಮಿ.

ಕಳೆದ ಶತಮಾನದಲ್ಲಿ ಮಾಡಿದ ಬಹು ದೊಡ್ಡ ಪ್ರಾಕ್ತನ ವಿಮರ್ಶೆಯ ವಿಷಯಗಳಲ್ಲಿ ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ಸಮಾಧಿಯನ್ನು ಕಂಡುದೂ ಒಂದು. ಇದಾದ ಕೂಡಲೆ ಅತ್ಯದ್ಭುತವಾದ ಘಟನೆಗಳು ನಡೆಯಲಾರಂಭವಾಗಿ ಆಕೆಯ ಕೀರ್ತಿಯು ಸಮಸ್ತ ದಿಕ್ಕುಗಳಿಗೂ ಹರಡಿತು. ಅಂದಿನಿಂದ ಆಕೆಯ ಭಕ್ತಿಯು ಯೂರೋಪಿನ ಅನೇಕ ಭಾಗಗಳಲ್ಲಿ ಪ್ರಾರಂಭವಾಯಿತು. ಇದರಲ್ಲಿ ವಿಶೇಷವೇನೆಂದರೆ, ಅವರ ಭಕ್ತಿಯು ಯಾವುದೊಂದು ವಿಶೇಷವಾದ ಸ್ಥಳದಲ್ಲಿ ಮಾತ್ರವಲ್ಲದೆ, ಯೂರೋಪಿನಲ್ಲಿ ಅದಂತೆಯೇ ಆಕೆಯ ಮೇಲಣ ಭಕ್ತಿಯಿಂದ ಪೂಜಾಸ್ಥಾನವನ್ನು ಮೈಸೂರು ನಗರದಲ್ಲಿ ಸ್ಥಾಪಿಸಿದ ಮೇಲೆ ಅದರ ಖ್ಯಾತಿಯು ನಾಲ್ಕು ದಿಕ್ಕುಗಳಿಗೂ ಹರಡಿ, ಸಮಗ್ರ ಹಿಂದೂದೇಶವನ್ನೂ ಬರ್ಮಾ, ಸಿಂಹಳದ್ವೀಪ ಫೆಡರೇಟೆಡ್ ಮಲೆಯ ಸ್ಟೇಟುಗಳನ್ನೂ ಆವರಿಸಿರುತ್ತದೆ. ಅರ್ಚ್ಯಶಿಷ್ಟ ಫಿಲೋಮಿನಾಅಮ್ಮನವರು ಕಥೋಲಿಕರ ಮೇಲೆ ಮಾತ್ರವಲ್ಲದೆ ಇತರ ಭಕ್ತರಮೇಲೂ ಧಾರಾಳವಾಗಿ ಅನುಗ್ರಹಗಳ ಪ್ರವಾಹವನ್ನು ಕರುಣಿಸಿ, ಸಾವಿರಾರು ಮಂದಿ ಸಂತಪ್ತಹೃದಯರಿಗೆ ಉಪಶಾಂತಿಯನ್ನು ತರುತ್ತಿರುವುದೇ ಇದಕ್ಕೆ ಕಾರಣ. ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರಿಗಿರುವ ಅದ್ಭುತಗಳು ನಡೆಯುವಂತೆ ಮಾಡುವ ಶಕ್ತಿಗೆ ಕಥೋಲಿಕರಲ್ಲದವರಲ್ಲಿ ಕೂಡ ತಂಡೋಪತಂಡವಾಗಿ ಸಾಕ್ಷಿಗಳಾಗಿರುತ್ತಾರೆ. ಈ ಅಮ್ಮನವರಿಗೆ ಇಂಥ ಅಸಾಧಾರಣವಾದ ಶಕ್ತಿಯನ್ನು ದೇವರು ದಯಪಾಲಿಸಿರುವುದರಿಂದ ಇವರು 'ಅದ್ಭುತಮಹಿಮೆಯುಳ್ಳವರು' ಎಂಬ ಖ್ಯಾತಿಯುಂಟಾಗಿದೆ. ಈ ಪ್ರಕಾರವಾಗಿ ನಿರ್ಮಲ ಕನ್ಯೆಯೂ ಆಗಿದ್ದು 'ವೇದಸಾಕ್ಷಿಯಾದವರೂ' ಮತ್ತು 'ಅದ್ಭುತಗಳನ್ನು ಮಾಡುವವರೂ' ಎಂದು ಪ್ರಪಂಚದಲ್ಲೆಲ್ಲಾ ಪ್ರಸಿದ್ಧಿಪಡೆದಿರುವ ಮೋಕ್ಷನಿವಾಸಿಯಾದ ರಾಜಕುಮಾರಿಯ ಹೆಸರಿನಲ್ಲಿ ಈ ದೇವಾಲಯವು ಕಟ್ಟಲ್ಪಡುತ್ತದೆ. ಮಹಾಸ್ವಾಮಿಗಳಿಂದ ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಇದರ ಅಸ್ತಿಭಾರಶಿಲೆಯು ಪ್ರತಿಷ್ಠಿಸಲ್ಪಡುವುದು. ಇಷ್ಟು ಪ್ರಖ್ಯಾತರಾದ ಅರ್ಚ್ಯಶಿಷ್ಟರ ದೇವಾಲಯದ ಅಸ್ತಿಭಾರಶಿಲೆಯು ರಾಜರ್ಷಿಗಳೆಂದು ಪೂಜ್ಯತೆಗೊಂಡ ಮೈಸೂರಿನ ಶ್ರೀಮನ್ಮಹಾರಾಜರವರಾದ ಆಳುವ ಮಹಾಸ್ವಾಮಿಗಳವರಿಂದಲೇ ಪ್ರತಿಷ್ಠಿಸಲ್ಪಟ್ಟಿತೆಂಬ ಸುಯೋಗವು ನಮಗೆ ದೊರೆತುದರಿಂದ ನಾವುಗಳು ಅನುಗ್ರಹಕ್ಕೆ ಪಾತ್ರರಾದೆವೆಂದೂ ನಾವು ಅದೃಷ್ಟಶಾಲಿಗಳೆಂದೂ ಭಾವಿಸುತ್ತೇವೆ, ಮಹಾಸ್ವಾಮಿ.

ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ಭಕ್ತರು ಮಾಡುತ್ತಿರುವ ಸಹಾಯವು ವಿಶೇಷ ಪ್ರೋತ್ಸಾಹಕರವಾಗಿಯೂ, ಇತರರ ಪ್ರೇರಣೆಯೇನೂ ಇಲ್ಲದೆ ತನ್ನಷ್ಟಕ್ಕೆ ತಾನೇ ಅವರಿಂದ ಉಕ್ಕಿಬರುತ್ತಿರುವುದಾಗಿಯೂ, ವಿಶೇಷ ಧಾರಾಳವಾಗಿಯೂ ಇರುವುದರಿಂದ, ಒಂದು ಲಕ್ಷದ ಇಪ್ಪತ್ತುಸಾವಿರ ರೂಪಾಯಿಗಳು ಮುಟ್ಟುವುವೆಂದು ಲೆಕ್ಕಾಚಾರವಾಗಿರುವ ಈ ಕಟ್ಟಡದ ಕೆಲಸವು ಜಾಗ್ರತೆಯಾಗಿ ಮುಗಿಯುವುದೆಂದು ನಂಬಿದ್ದೇವೆ. ಈ ಕಟ್ಟಡವು ಮುಗಿದಮೇಲೆ ಇದು ಈ ಶೋಭಾಯಮಾನವಾದ ರಾಜಧಾನಿಯ ಇತರ ದಿವ್ಯ ಭವನಗಳಿಗೆ ಸರಿತೂಗುವುದೆಂದು ನಾವು ನಿರೀಕ್ಷಿಸಿದ್ದೇವೆ, ಮಹಾಸ್ವಾಮಿ.

ಮಹಾಸ್ವಾಮಿಗಳವರು ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸಬೇಕೆಂಬ ನಮ್ಮ ಕೋರಿಕೆಯನ್ನು ಈಡೇರಿಸಿದ ಈಶುಭ ದಿನದ ಸವಿನೆನಪು ಯಾವಾಗಲೂ ನಮಗೆ ಪ್ರಿಯತಮವಾಗಿರುವುದು. ಮಹಾಸ್ವಾಮಿಗಳವರು ನಮ್ಮ ಪ್ರಾರ್ಥನೆಯನ್ನು ದೊಡ್ಡಮನಸ್ಸಿನಿಂದ ಅನುಮೋದಿಸಿದುದಕ್ಕಾಗಿ ದೇಶವಿದೇಶಗಳಲ್ಲಿರುವ ಈ ಅಮ್ಮನವರ ಭಕ್ತರೊಡನೆ ಏಕೀಭವಿಸಿ, ಪುನಃ ನಮ್ಮ ಕೃತಜ್ಞತೆಯನ್ನು ಅರಿಕೆಮಾಡಿಕೊಳ್ಳುತ್ತೇವೆ. ಮಹಾಸ್ವಾಮಿಗಳ ಆಳ್ವಿಕೆಯು ಪೂರ್ವಕಾಲದಲ್ಲಿದ್ದ ದಾಶರಥಿರಾಮರ ಆಳ್ವಿಕೆಯಂತೆ ಚಿರಕಾಲ ಬೆಳಗಿ ಆಚಂದ್ರಾರ್ಕವಾಗಿ ಖ್ಯಾತಿಯನ್ನು ಪಡೆದು ಮಹಾಮಹಿಮೆಯುಳ್ಳುದಾಗಬೇಕೆಂದು ನಿರಂತರವೂ ಭಕ್ತಿಪೂರ್ವಕವಾಗಿ ನಡೆಯುವ ನಮ್ಮ ಪ್ರಾರ್ಥನೆ. ಸರ್ವಶಕ್ತನಾದ ಭಗವಂತನು ಆಳುವ ಮಹಾಸ್ವಾಮಿಗಳ ಮೇಲೂ, ಮಹಾಮಾತೃಶ್ರೀಯವರಾದ ಮಹಾರಾಣಿ, ಸಿ.ಐ. ಅವರ ಮೇಲೂ, ಈ ಸಮಯದಲ್ಲಿ ಮಹಾಸನ್ನಿಧಾನದಲ್ಲಿ ಮಂಟಪಶೋಭಾಯಮಾನ ಮಾಡಿರುವ ಮಹಾಸ್ವಾಮಿಗಳಾದ ಶ್ರೀಮದ್ಯುವರಾಜರವರ ಮೇಲೂ, ಆಳುವ ಮಹಾಸ್ವಾಮಿಗಳವರಿಗೆ ಪ್ರಿಯತಮರಾದ ರಾಜವಂಶದವರ ಮೇಲೂ ಅನುಗ್ರಹಮಾಡಿ ಆಯುರಾರೋಗ್ಯ ಶಾಂತಿಸುಖಸಂಪತ್ತುಗಳನ್ನಿತ್ತು ಪರಿಪಾಲಿಸಲೆಂದು ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ಮೈಸೂರು, ೨೮ ನೇ ಅಕ್ಟೋಬರ್ ೧೯೩೩

ಇಂತು, ಆಳುವ ಮಹಾಸ್ವಾಮಿಗಳವರಲ್ಲಿ ಪ್ರೀತಿವಿಶ್ವಾಸಯುತರಾದ ರಾಜಭಕ್ತಿನಿರತರಾದ

ಮೈಸೂರು ನಿವಾಸಿಗಳಾದ ಕಥೋಲಿಕರು.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ಮೈಸೂರು ನಗರದಲ್ಲಿ ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ಅಂಕಿತದ ಮೇಲೆ ನಿರ್ಮಿತವಾಗುವ ನೂತನ ದೇವಾಲಯದ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸುವಾಗ ಅಪ್ಪಣೆಕೊಡಿಸಿದ ಭಾಷಣ.

೧೯೩೩ನೆಯ ಇಸವಿ ಅಕ್ಟೋಬರು ೨೮ನೆಯ ತಾರೀಖು.

ಘನತೊಂದಿದ ಬಿಷಪ್‌ರವರೇ, ಕಥೋಲಿಕ್ ಪಂಗಡದ ಗುರುಗಳೇ, ಮಹಿಳೆಯರೇ ಮತ್ತು ಮಹನೀಯರೇ,

ಕಥೋಲಿಕ್ ಪಂಗಡದವರು ತಮಗೆ ಶರಣ್ಯರಾದ ಅರ್ಚ್ಯಶಿಷ್ಟರೆಂದು ಭಾವಿಸಿರುವ ಫಿಲೋಮಿನಾ ಅಮ್ಮನವರ ನಾಮಾಂಕಿತದಲ್ಲಿ ನಿರ್ಮಿತವಾಗುವ ಭವ್ಯವಾದ ನೂತನ ದೇವಾಲಯದ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸುವುದಕ್ಕಾಗಿ, ನಾವು ಬಹಳ ಸಂತೋಷದಿಂದ ಇಲ್ಲಿಗೆ ಬಂದಿರುವೆವು.

ಶ್ರೇಯಸ್ಕರವೆನಿಸಿ ಶಾಂತಮಯವಾಗಿರುವ ಶ್ರೇಷ್ಠ ಜೀವನದಿಂದ ಜನಾಂಗವು ಚರಿತಾರ್ಥವಾಗಬೇಕಾದರೆ, ದೈವಭಕ್ತಿಯುತವಾದ ಧರ್ಮನಿಷ್ಠೆಯೇ ಅದಕ್ಕೆ ಮೂಲಾಧಾರವೆಂಬುದು ನಮಗಿರುವ ದೃಢವಾದ ನಂಬುಗೆಯಾಗಿದೆ. ನಮ್ಮ ದೇಶದಲ್ಲಿ ಅನೇಕ ಮತಗಳು ನೆಲೆಗೊಂಡಿವೆ. ತೀರ ಧರ್ಮವಿರುದ್ಧವೆನಿಸುವ ವೈರಭಾವವು ನಾನಾ ಮತೀಯರಲ್ಲಿಯೂ ಪರಸ್ಪರವಾಗಿ ಪದೇ ಪದೇ ಕಂಡುಬರುವುದೂ ಉಂಟು. ಆದಾಗ್ಯೂ, ನಾನಾ ಮತಗಳಿಗೂ ಇರುವ ಪರಸ್ಪರ ಭೇದಗಳಿಗಿಂತ, ಮಣಿಗಳ ಮಧ್ಯದ ಸೂತ್ರದಂತೆ ಮತಗಳೆಲ್ಲಕ್ಕೂ ಸರ್ವಸಾಧಾರಣವಾಗಿರುವ ಸಾರತತ್ವಗಳ ಏಕತ್ವವೇ ಹೆಚ್ಚು ಪ್ರಬಲವಾಗಿಯೂ ಗಾಢವಾಗಿಯೂ ನೆಲಸಿದೆಯೆಂಬ ಅಂಶವು ಕ್ರಮಕ್ರಮವಾಗಿ ನಮ್ಮೆಲ್ಲರಿಗೂ ಮನದಟ್ಟಾಗುತ್ತಿದೆ. ಅಲ್ಲದೆ, ಮತಸಿದ್ಧಾಂತಗಳಲ್ಲಿಯೂ ಆಚಾರಸಂಪ್ರದಾಯಗಳಲ್ಲಿಯೂ ಭೇದಗಳಿದ್ದರೂ, ಭಗವದ್ಭಕ್ತಿಯ ವಿಚಾರದಲ್ಲಿಯೂ ಉಪಾಸನೆಗಳ ವಿಚಾರದಲ್ಲಿಯೂ ಸಮಸ್ತ ಮತೀಯರೂ ಸಮಾನಧರ್ಮಿಗಳೆಂಬ ಅಂಶವೂ ಹೃದಯಂಗಮವಾಗಿ ಗೊತ್ತಾಗುತ್ತಿದೆ. ವಾಸ್ತವ ಸ್ಥಿತಿಯು ಹೀಗಿರುವ ಕಾರಣ, ನಮ್ಮಲ್ಲಿ ಪ್ರತಿಯೊಂದು ಮತದವರೂ ಇತರ ಸಮಸ್ತ ಮತಗಳ ಸಿದ್ಧಾಂತಗಳನ್ನೂ, ಆಚಾರಸಂಪ್ರದಾಯಗಳನ್ನೂ, ಗೌರವಪುರಸ್ಸರವಾಗಿ ಗ್ರಹಿಸಿ ಮನದಟ್ಟು ಮಾಡಿಕೊಳ್ಳಬೇಕಾದುದು ಯುಕ್ತವೇ ಸರಿ.

ಈಗಿರುವ ದೇವಾಲಯವು ಪೂಜ್ಯಪಾದರಾದ ನಮ್ಮ ಪಿತಾಮಹರ ಉದಾರಾಶ್ರಯದಲ್ಲಿ ಈಗ್ಗೆ ತೊಂಬತ್ತು ವರ್ಷಗಳ ಹಿಂದೆ ನಿರ್ಮಿತವಾದ ಸಂಗತಿಯನ್ನು ಜ್ಞಾಪಿಸಿರುವಿರಿ. ಆಗ್ಗೆ ಪ್ರತಿಷ್ಠಿತವಾದ ಶಿಲಾಶಾಸನದ ಬರಹವನ್ನು ನೆನಪಿಗೆ ತಂದುಕೊಳ್ಳುವುದು ಸಂತೋಷಕರವಾಗಿದೆ. ಆ ಶಿಲಾಶಾಸನದಲ್ಲಿ "ಜ್ಯೋತಿರ್ಮಂಡಲವಂ ಭುವನವಂ ಸಮಸ್ತ ಸೃಷ್ಟಿ ಜೀವರಾಶಿಗಳನ್ನು ನಿರ್ಮಿಸಿ ಪೋಷಿಸಿ ಆಳಿಕೊಂಡು ಬರುವಂಥ ಏಕೋದೇವರಾಗಿಹ ಸರ್ವೇಶ್ವರನಾದವರ ನಾಮಾಂಕಿತದಲ್ಲಿ ಲೋಕಕ್ಕೆ ಯೋಗಕ್ಷೇಮಕರರಾದ ಯೇಸುಕ್ರಿಸ್ತುವು ಮನುಷ್ಯಾವತರಿಸಿದ ಬಳಿಕ ಸ. ೧೮೪೩ ರಲ್ಲು ಈ ದೇವಸ್ಥಾನ ಕಟ್ಟಲ್ಪಟ್ಟಿದೆ" ಎಂಬ ವಾಕ್ಯವಿದೆ. ಈ ಬಗೆಯ ಉದಾತ್ತಭಾವನೆಯಿಂದ ನಿರ್ಮಿತವಾದ ಈ ದೇವಾಲಯವು ಇಷ್ಟು ದೀರ್ಘಕಾಲವೂ ಅಸಂಖ್ಯಾತ ಜನರಿಗೆ ಶ್ರೇಯಸ್ಕರವಾದ ಪವಿತ್ರಕ್ಷೇತ್ರವಾಗಿ ನಡೆದು ಬಂದಿದೆ. ದಾರಿದ್ರ್ಯಪೀಡಿತರೂ, ಆರ್ತರೂ, ಇಲ್ಲಿಗೆ ಬಂದು ಶಾಂತಿಯನ್ನು ಗಳಿಸಿಕೊಂಡಿದ್ದಾರೆ. ಕಷ್ಟಗಳಿಂದ ಕ್ಲೇಶಪಡುತ್ತ ಇಲ್ಲಿಗೆ ಬಂದು ಆಶ್ರಯಹೊಂದಿದವರು, ಕೇವಲ ಬುದ್ಧಿಪ್ರಕರ್ಷ ಮಾತ್ರದಿಂದಲೇ ಲಭಿಸುವುದು ಶಕ್ಯವಲ್ಲದ ಅನಿರ್ವಚನೀಯವಾದ ವಿವೇಕದ ನೆರಿಯನ್ನರಿತು ನಲಿದಾಡಿದ್ದಾರೆ. ಆದಕಾರಣ, ಈಗಿನ ದೇವಾಲಯದ ಪ್ರತಿಯೊಂದು ಶಿಲೆಯೂ ಸಹ, ಅವರೆಲ್ಲರಿಗೂ ಪ್ರಿಯವಾದ ಪೂಜ್ಯವಸ್ತುವಾಗಿ ಪರಿಣಮಿಸಿದೆ. ಈ ದೃಷ್ಟಿಯಿಂದ ಯೋಚಿಸಿ ನೋಡಿದರೆ, ಈಗಿನ ದೇವಾಲಯವು ಮುಂದೆ ಇಲ್ಲದೆ ಹೋಗುವ ಅಂಶವೇನೊ ಸ್ವಲ್ಪಮಟ್ಟಿಗೆ ಖೇದಕರವೇ. ಆದಾಗ್ಯೂ, ಅದಕ್ಕೆ ಪ್ರತಿಯಾಗಿ ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ನಾಮಾಂಕಿತದಲ್ಲಿ ಮತ್ತಷ್ಟು ರಮಣೀಯವಾದ ನೂತನ ದೇವಾಲಯವು ಭವ್ಯತರವಾಗಿ ಇಲ್ಲಿ ನಿರ್ಮಿತವಾಗುವುದಾಗಿದೆ. ಈ ಅಂಶದಿಂದಲೂ, ಇಲ್ಲಿ ನಿರ್ಮಿತವಾಗುವ ನೂತನ ದೇವಾಲಯವು ಆಶ್ರಿತಜನರ ರೋಗಾದ್ಯುಪದ್ರವಗಳನ್ನು ಪರಿಹರಿಸುವ ಶಾಂತಿದಾಯಕವಾದ ಪವಿತ್ರಕ್ಷೇತ್ರವಾಗಿ ಚಿರಕಾಲ ನೆಲೆಗೊಂಡಿರುವುದೆಂಬ ಅಂಶದಿಂದಲೂ, ಮನಸ್ಸಿಗೆ ನೆಮ್ಮದಿಯೂ ಹರ್ಷವೂ ಉಂಟಾಗುವುವು.

ಈ ನೂತನ ದೇವಾಲಯವು ನಿರ್ಮಿತವಾಗುವ ರೀತಿಯು ಶ್ಲಾಘನೀಯವೆನಿಸಿ ಮನೋಜ್ಞವಾಗಿದೆ. ತೀರ ರಿಕ್ತರಾದವರು ಭಕ್ತಿಯಿಂದ ಸಮರ್ಪಿಸಿದ ಕಾಣಿಕೆಗಳ ದ್ರವ್ಯವೇ ಇದನ್ನು ಕಟ್ಟಲು ಮುಖ್ಯಾವಲಂಬನವಾದ ಸಾಧನ. ಈ ದೇವಾಲಯ ನಿರ್ಮಾಣಕ್ಕೆ ಭಗವತ್ಕೃಪೆಯೂ ಮಾನವಹೃದಯದ ಅಮಿತ ಕೃತಜ್ಞತೆಯೂ ಮೂಲಾಧಾರವಾಗಿವೆ. ಇವುಗಳ ಪ್ರಬಲವಾದ ತಳಹದಿಯ ಮೇಲೆ ಈ ಕಟ್ಟಡವು ದೃಢವಾಗಿಯೂ, ಶಾಶ್ವತವಾಗಿಯೂ ನೆಲೆಗೊಳ್ಳುತ್ತದೆ. ಈ ಸಂಬಂಧದಲ್ಲಿ ಕಥೋಲಿಕ ಪಂಗಡದ ಗುರುವರ್ಗದವರು ಶ್ರದ್ಧೆಯಿಂದ ಶ್ರಮಿಸಿ ಸಹಾಯಮಾಡಿರುವುದನ್ನೂ ನಾವು ಮರೆಯುವಂತಿಲ್ಲ. ಅವರು ಹಾಗೆ ಮಾಡದೆ ಹೋಗಿದ್ದಲ್ಲಿ ನೂತನ ದೇವಾಲಯವು ನಿರ್ಮಿತವಾಗಬೇಕೆಂಬ ಮನೋರಥವು ಈಡೇರುವುದಕ್ಕೆ ಸ್ವಲ್ಪವೂ ಅವಕಾಶವೇ ಇಲ್ಲದೆ, ಅದು ಕೇವಲ ಮರೀಚಿಕೆಯಂತಿರುತ್ತಿದ್ದಿತು. ಘನತೊಂದಿದ ಬಿಷಪ್‌ರವರೇ, ತಾವು ಕಥೋಲಿಕ ಪಂಗಡದವರ ಶ್ರೇಯಸ್ಸನ್ನು ಮುಖ್ಯಧ್ಯೇಯವಾಗಿಟ್ಟುಕೊಂಡು, ಬಹುಕಾಲದಿಂದಲೂ ಮೈಸೂರು ಸಂಸ್ಥಾನದಲ್ಲಿ ಶ್ರಮಿಸುತ್ತಿರುವಿರಿ. ತಾವು ಮೈಸೂರು ನಗರನಿವಾಸಿಗಳಾದ ಕಥೋಲಿಕರ ಗುರುಪದವಿಯಲ್ಲಿದ್ದಾಗಲೂ, ಈಚಿನ ವರ್ಷಗಳಲ್ಲಿ ಘನತೊಂದಿದ ಬಿಷಪ್ ಪದವಿಯನ್ನಲಂಕರಿಸಿದಾಗಿನಿಂದಲೂ ನಿಮ್ಮಿಂದ ಅವರಿಗೆ ಅಮೂಲ್ಯ ಸಹಾಯವು ದೊರೆತಿದೆ. ತಾವೂ, ತಮ್ಮ ನೇತೃತ್ವದಲ್ಲಿ ಕೆಲಸಮಾಡುತ್ತಿರುವ ಕಥೋಲಿಕ ಪಂಗಡದ ಗುರುವರ್ಗಕ್ಕೆ ಸೇರಿದ ಇತರರೂ ಜನರಲ್ಲಿ ಅನುಕಂಪಾಬುದ್ಧಿಯಿಂದ ನೆರವೇರಿಸಿರುವ ಧರ್ಮಕಾರ್ಯಗಳು ಅಸಂಖ್ಯಾತವಾಗಿವೆ. ಜನಗಳು ಸುಸಂಸ್ಕೃತರಾಗಿ ಶ್ರೇಯಸ್ಸಿನ ಮಾರ್ಗವನ್ನು ಹಿಡಿದು ಉದ್ಧಾರವಾಗುವಂತೆ ಮಾಡುವ ಭಾಗದಲ್ಲಿ, ತಾವುಗಳು ನಿರಂತರವೂ ಕೃಷಿಮಾಡುತ್ತಿರುವಿರಿ. ಆದಕಾರಣ, ಸಾಮಾನ್ಯವಾಗಿ ಮೈಸೂರು ಸಂಸ್ಥಾನದ ಪ್ರಜೆಗಳೂ, ವಿಶೇಷತಃ ಮೈಸೂರು ನಗರನಿವಾಸಿಗಳೂ ಇದಕ್ಕಾಗಿ ನಿಮ್ಮೆಲ್ಲರಿಗೂ ಅತ್ಯಂತ ಕೃತಜ್ಞರಾಗಿದ್ದಾರೆ. ತಾವುಗಳು ಬಹುಕಾಲದಿಂದಲೂ ಸ್ವವಿಷಯವನ್ನೇ ಮರೆತು ಪರಹಿತಸಾಧನೆಗಾಗಿ ಮಾತ್ರವೇ ಸ್ವಾರ್ಥತ್ಯಾಗದಿಂದ ಕೆಲಸಮಾಡುತ್ತಿರುವವರು. ಆದರೆ, ತಾವುಗಳು ನಿಮ್ಮನ್ನೇ ಈ ರೀತಿ ಮರೆತಿದ್ದರೂ, ತಾವು ನೆರವೇರಿಸುತ್ತಿರುವ ಸತ್ಕಾರ್ಯಗಳೇನೂ ಜನಗಳ ದೃಷ್ಟಿಯಿಂದ ಮರೆಯಾಗುವಂತಿಲ್ಲ. ಇಲ್ಲಿ ನಿರ್ಮಿತವಾಗುವ ದೇವಾಲಯದ ದೊಡ್ಡ ಕಟ್ಟಡವು, ಸಾಹಸಿಗಳಾದ ನಿಮ್ಮ ಕಾರ್ಯಸಾಧನೆಯ ಸಾಮರ್ಥ್ಯಕ್ಕೂ, ಸ್ವಾರ್ಥತ್ಯಾಗಕ್ಕೂ, ಸಾಕ್ಷ್ಯವೆನಿಸುವ ಶ್ಲಾಘನೀಯನಿದರ್ಶನವಾಗಿ ಚಿರಕಾಲ ಬಾಳುತ್ತದೆ.

ಅರ್ಚ್ಯಶಿಷ್ಟ ಫಿಲೋಮಿನಾ ಅಮ್ಮನವರ ನಾಮಾಂಕಿತದಲ್ಲಿ ನಿರ್ಮಿತವಾಗುವ ಈ ದೇವಾಲಯದ ಅಸ್ತಿಭಾರಶಿಲೆಯನ್ನು ನಾವು ಅತ್ಯಂತ ಸಂತೋಷದಿಂದ ಈಗ ಪ್ರತಿಷ್ಠಿಸುವೆವು. ಇಲ್ಲಿ ನಿರ್ಮಿತವಾಗುವ ದೇವಾಲಯವು ಕಥೋಲಿಕ ಪಂಗಡದವರ ಪಾರಮಾರ್ಥಿಕ ಜೀವನದ ಪುಣ್ಯಕ್ಷೇತ್ರವಾಗುವುದು ಮಾತ್ರವೇ ಅಲ್ಲದೆ, ಶಾಂತಿ ಸೌಹಾರ್ದಗಳಿಗೂ ಶ್ರದ್ಧಾಯುತವಾದ ಸತ್ಕಾರ್ಯಸಂದೋಹಗಳಿಗೂ ಆವಾಸಸ್ಥಾನವೆನಿಸುವ ಶಿಬಿರವಾಗಿಯೂ ಪರಿಣಮಿಸಲೆಂದು ನಾವು ಹಾರೈಸುವೆವು.

ಜಿನೀವಾ ನಗರದಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದ ಶ್ರೀ|| ವಿಠಲಭಾಯಿ ಪಟೇಲರವರು ಕಳೆದ ಅಕ್ಟೋಬರ್ 23 ನೇ ತಾರೀಖಿನ ದಿವಸ ಮೃತಿಹೊಂದಿದರು. ಇವರ ಶವವು ಹಡಗಿನಲ್ಲಿ ಮುಂಬಯಿಗೆ ಸಾಗಿಸಲ್ಪಡುತ್ತಿರುವದು ಅದು ನವೆಂಬರ್ 9 ನೇ ತಾರೀಖಿನ ದಿವಸ ಮುಂಬಯಿಗೆ ತಲಪುವದೆಂದೂ, ಅನಂತರ ಅಂತ್ಯಕ್ರಿಯೆಗಳು ನಡೆಯುವವೆಂದೂ ತಿಳಿದುಬಂದಿದೆ. ದೇಶಸೇವೆಗಾಗಿ ತಮ್ಮ ತನುಮನಧನಗಳನ್ನೆಲ್ಲಾ ಧಾರೆಯೆರೆದು ದೇಶಭಕ್ತಾಗ್ರಣಿಗಳಾಗಿದ್ದ ಇವರ ಮರಣದಿಂದ ಭರತಖಂಡಕ್ಕೆ ಆದ ನಷ್ಟವನ್ನು ಇಷ್ಟಿಷ್ಟೆಂದು ಹೇಳಲಾಗುವದಿಲ್ಲ. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಆಶಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮಿದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ನನ್ನ ಲೇಖಾಂಕಗಳು.

[ಬರೆದವ—ದೈವಜ್ಞ ವಿನೋದ.]

ವೀರಶೈವ ಮತೋನ್ನತಿಗಾಗಿ ಜನ್ಮವೆತ್ತಿದ 'ಪಂಚಾಚಾರ್ಯಪ್ರಭಾ' ಪತ್ರಿಕೆಯಲ್ಲಿ ನನ್ನ ಲೇಖಗಳು ಬರುತ್ತಿರುವದು ಸಹಿಯಷ್ಟೆ! ಈ ಲೇಖಗಳನ್ನು ಕೆಲವರು ಅಲ್ಲಗಳೆಯುತ್ತಿರುವುದಾಗಿ ತಿಳಿಯುತ್ತದೆ. 'ದೈವಜ್ಞ' ನ ಲೇಖಗಳ ಮೇಲೆ ವಕ್ರದೃಷ್ಟಿಯನ್ನಿಟ್ಟ ಮಹಾನುಭಾವರು ಲೇಖನ ಪ್ರಪಂಚದ ತತ್ವವನ್ನರಿಯದಿರುವದು ಸಖೇದಾಶ್ಚರ್ಯವನ್ನುಂಟುಮಾಡುತ್ತದೆ. ವಿನೋದನ ಲೇಖಗಳು ವ್ಯಕ್ತಿಗತವೈಷಮ್ಯದಿಂದ ಕೂಡಿದವುಗಳೆಂದು ಕೆಲವು ವೃತ್ತಪತ್ರಿಕಾಕರ್ತರು ಬಡಬಡಿಸುತ್ತಲಿದ್ದಾರೆ. ಆಯುರ್ವೇದಾಂತರ್ಗತವಾದ ನಾಡಿಯಜ್ಞಾನವಿಲ್ಲದೆ ಮತ್ತು ಔಷಧಿಯ ಉಪಯೋಗ ಕಾರತಮ್ಯವನ್ನರಿಯದೆ ಕಂಡ ಕಂಡ ಕಷಾಯಗಳನ್ನು ಕುಡಿಸಿ ರೋಗಿಯನ್ನು ತೀವ್ರವಾಗಿ ಯಮಪುರಿಗೆ ಕಳುಹಿಸುವ ಪಂಡಿತಂಮನ್ಯರಂತೆ ಈಗ ಕೆಲವರು ವೀರಶೈವ ಸಮಾಜ ಸುಧಾರಕಂಮನ್ಯರಾಗಿ ನಾನಾ ವಿಧದಿಂದ ನರಳುತ್ತಲಿದ್ದ ನಮ್ಮ ಪರಮಪವಿತ್ರವಾದ ವೀರಶೈವ ಮತಕ್ಕೆ ಅನೇಕ ವಿಧವಾಗಿ ಸಾಂಕರ್ಯಾದಿ ದೋಷಗಳನ್ನು ಕಲ್ಪಿಸತೊಡಗಿದ್ದು ಅತ್ಯಂತ ವಿಷಾದ ಸಂಗತಿಯಲ್ಲವೇ? ಈ ದೂಷಿತ ದೋಷಾರೋಪಿಗಳ ಬಡಬಡಿಕೆಯನ್ನು ಯಾವ ವಿಧವಾಗಿ ಖಂಡಿಸಿದರೂ ತೀರದಾಗಿದೆ. ವಾದಿಯು ಸರಳವಾದ ಹಾದಿಯಿಂದ ಬಂದರೆ ಪ್ರತಿವಾದಿಯಾದವರೂ ಅದೇ ಹಾದಿಯಿಂದ ಹೋಗಿ ಅವನಿಗೆ ಬುದ್ಧಿಗಲಿಸುವನು. ಹಾಗಾಗದೆ ಪ್ರತಿಸ್ಪರ್ಧಿಗಳು ಅರಣ್ಯರೋದನಮಾಡುತ್ತ ಅಡವಿಯನ್ನು ಬಿದ್ದರೆ ಆ ಅವಿವೇಕಿಗಳ ಅಂತರ್ಯವನ್ನು ಬಯಲಿಗೆಳೆದು ಅಖಿಲ ಪ್ರಪಂಚಕ್ಕೆಲ್ಲಾ ಪ್ರಸಿದ್ಧಪಡಿಸುವದೇ ಪ್ರಾಜ್ಞರಿಗೆ ಯೋಗ್ಯವಾದುದಲ್ಲವೇ? ಸ್ವಾರ್ಥಾಂಧರಾಗಿ ತಮ್ಮ ಕುಟಿಲವಿಚಾರಗಳನ್ನೆಲ್ಲ ಅಂತರಂಗದಲ್ಲಿಟ್ಟುಕೊಂಡು ಬಹಿರಂಗ ಭೂಮಿಕೆಯಲ್ಲಿ ಪಾತಿವ್ರತ್ಯ ಪ್ರತಿಭಾಶಾಲಿನಿಯಾದ ಸಾವಿತ್ರೀದೇವಿಯ ಪಾತ್ರವನ್ನು ವಹಿಸಿದ ವೇಶ್ಯಾಕುಮಾರಿಯಂತೆ ಈಗಿನ ಜಾತಿಸಂಕರರ ತತ್ವವಾಗಿದೆ. ಇವರ ಅಂತರಂಗದಲ್ಲಿ ಅಡಕವಾದ ಅಹಿತೇಯವಾದ ಮತ್ತು ಸಮಾಜವಿಘಾತಕವಾದ ವಿಷಯವನ್ನೆಲ್ಲ ಹೊರಗೆಡುವುದೇ ದೈವಜ್ಞನ ಕರ್ತವ್ಯವಾಗಿದೆ. ಮುಖ್ಯವಾಗಿ ಕುಲಗೇಡಿಗಳಾದ ಜಾತಿಸಂಕರರಿಂದ ನಮ್ಮ ಸನಾತನ ವೀರಶೈವ ಮತಕ್ಕೆ ಯಾವ ವಿಧವಾಗಿಯೂ ಮಾಲಿನ್ಯವು ಬರಬಾರದೆಂದೇ ಖಂಡ ತುಂಡಿತ ಲೇಖಗಳನ್ನು ನಿರ್ಭಯವಾಗಿ ಬರೆಯುವ ಪ್ರಸಂಗವು ಬಂದಿದೆ. ಯಾವನಾದರೊಬ್ಬ ವ್ಯಕ್ತಿಯಿಂದ ಬರುವ ವಿಷಯ ಪ್ರವಾಹವನ್ನು ತಡೆಯಬೇಕಲ್ಲದೆ ಆ ವ್ಯಕ್ತಿಯನ್ನು ಬುಡಮೇಲು ಮಾಡಬಾರದೆಂದು ಹಲವರ ಹೇಳಿಕೆ. ಆದರೆ ವ್ಯಕ್ತಿಯು ಮುಖ್ಯಗುರಿಯೇನಿರುವದೆಂಬುದನ್ನು ಅರಿಯದೆ ಅವನ ವಿಷಯ ಪ್ರವಾಹದ ಬೆನ್ನು ಹತ್ತಿದರೆ ಅದರಿಂದೇನೂ ಪ್ರಯೋಜನವಿಲ್ಲ. ಆ ವ್ಯಕ್ತಿಯು ಯಾವಧ್ಯೇಯವನ್ನಿಟ್ಟುಕೊಂಡು ಸಮಾಜದಲ್ಲಿ ತನ್ನ ಚೇಷ್ಟೆಯನ್ನು ನಡೆಸುತ್ತಿರುವನೋ ಆ ಮುಖ್ಯಧ್ಯೇಯವನ್ನೇ ಮರೆಯಲ್ಲದಗಿಸಿಕೊಂಡು ಬಾಹ್ಯ ಪ್ರಪಂಚದಲ್ಲಿ ವಿಶಾಲಧ್ಯೇಯವನ್ನೇ ಮುಂದಿಟ್ಟಂತೆ ಮಾಡಿ ನರ್ತಿಸುವ ಈ ವ್ಯಕ್ತಿಗಳ ನವಾಚಾರವನ್ನು ಚನ್ನಾಗಿ ತೆಗೆದುಕೊಳ್ಳಬೇಕಾಗಿದೆ. ಇನ್ನು ಆ ವ್ಯಕ್ತಿಗಳ ಮೂಲಧ್ಯೇಯವು ಏನೇ ಇರಲಿ; ಅವರಿಂದ ಹೊರಸೂಸುವ ಶಾಸ್ತ್ರಿತವಿಷಯವೆಂಬ ಗಿಲೀಟನ್ನು ನಾಶಮಾಡಬೇಕೆಂದು ನಮ್ಮ ಸಹೋದ್ಯೋಗಿಗಳು ನಮಗೆ ಸೂಚಿಸುತ್ತಲಿದ್ದಾರೆ. ಆದರೆ ಅವರ ಗಿಲೀಟನ್ನೇ ಒಂದಾವರ್ತಿ ಸಂಪೂರ್ಣ ಹಾಳುಮಾಡಿದರೆ ತೀರುವಂತಿಲ್ಲ; ಆ ಚೋರದಲಿಯ ಬಂಟರಿಗೆ ಪುನಃ ಗಿಲೀಟಿನ ಹೊಳಪನ್ನಿಕ್ಕಲು ಹಂಡಬಂಡವರ್ಗವು ಮುಂದಾಗುತ್ತದೆ. ಆದ್ದರಿಂದ ಮೇಲಿಂದ ಮೇಲೆ ಈ ತಾತ್ಕಾಲಿಕ ಹೊಳಪನ್ನು ಹಾಳುಮಾಡುವ ಶ್ರಮಕ್ಕಿಂತ ಈ ವ್ಯಕ್ತಿಗಳ ಮುಖ್ಯಧ್ಯೇಯವೇನೆಂಬುದನ್ನೂ ಇವರು ಜಗತ್ತಿಗೆ ತೋರಿಸುತ್ತಲಿದ್ದ ಬಾಹ್ಯಾಡಂಬರವನ್ನೂ ಇವರು ಹೊತ್ತು ಬಂದಂತೆ ವೇಷಗಳನ್ನು ಹಾಕುತ್ತಿರುವದನ್ನೂ ಪ್ರಪಂಚಕ್ಕೆಲ್ಲ ತೋರಿಸುತ್ತಿರುವದೇ ದೈವಜ್ಞನ ಲೇಖಾಂಕದ ಕರ್ತವ್ಯವು. ಜಾತಿಸಂಕರರ ಒಂದೆರಡು ವೇಷ ಬದಲಾವಣೆಯನ್ನು ಇದೇ ಲೇಖದಲ್ಲಿ ತಿಳಿಸುತ್ತೇನೆ. ಈ ಸಂಕರರ ಹಿಂದಿನ ವಂಶವಾಗಲಿ ಅಥವಾ ಇವರ ಜನನ ಜಾತಕವಾಗಲಿ ಕೆಲವರಿಗೆ ಬೇಡಾದದ್ದು. ಈ ಸಂಕರರಲ್ಲಿ ಒಬ್ಬನು ಇದುವರೆಗೆ ಕೈಕೊಂಡ ಕಾಯಕಗಳಿಗೆ ಲೆಕ್ಕವಿಲ್ಲದಾಗಿದೆ. ಲಿಂಗವಿಲ್ಲದೆ ಭವಿಯಾಗಿ ತಿರುಗಾಡುವಾಗ ಆರ್ಯಸಮಾಜದ ಶಿಷ್ಯನಾಗಿಯೂ, ಲಿಂಗಧಾರಣಮಾಡಿಕೊಂಡು ಲಿಂಗಾಯತನೆಂದು ನಾಮಧಾರಿಯಾದಾಗ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಪವಿತ್ರನಾಮಪಾರಾಯಣದ ಸೋಗು ಹಾಕಿದ್ದ. ಅಷ್ಟರಲ್ಲಿಯೇ ಇವನ ಜಾತಿಯ ಹೂರಣವು ಹೊರಬಿದ್ದೊಡನೆ ರಾಷ್ಟ್ರೀಯ ಚಳವಳಿಯಲ್ಲಿ ಸೇರಿದಂತೆ ಮಾಡಿ ಗಾಂಧಿಯವರಂತೆ ವೇಷಹಾಕಿದ್ದ. ಈ ಪ್ರಸಂಗವು ಮೈಮೇಲೆ ಬಂದುದರಿಂದ ಸೆರೆಮನೆಗೆ ಹೆದರಿ ಹೇಡಿಯಂತೆ ಬಾಲವನ್ನು ಬಡಿದು ಸುಮ್ಮನೆ ರಾಜನಿಷ್ಠನಂತೆ ನಟಿಸಿದ್ದ. ಇಷ್ಟಾಗುವದರೊಳಗೆ ಪರಮಪವಿತ್ರವಾದ ವೀರಶೈವ ಮತದಲ್ಲಿ ಪ್ರವೇಶಿಸಿ ವಿದ್ಯಾಭಿವೃದ್ಧಿಯ ವಿಕಟವೇಷವನ್ನು ಧರಿಸಿ ಸಮಾಜದ ಅಪಾರದ್ರವ್ಯವನ್ನು ಸೆಳೆದುಕೊಂಡದ್ದು. ಅದನ್ನೂ ನಡುವೆ ಕೈಬಿಟ್ಟು ಗುರುವರ್ಗ-ವಿರಕ್ತವರ್ಗ ಚಳವಳಿಯಲ್ಲಿ ಕೈಹಾಕಿ ವಿರಕ್ತರ ಪಟ್ಟಶಿಷ್ಯನಾದದ್ದು. ತನಗೆ ನಿಲ್ಲಲು ನೆರಳಾದ ಮೇಲೆ ಆ ವಿರಕ್ತರನ್ನೂ ಕೈಬಿಟ್ಟು ತಾನು ಯಾವ ಮಿಶ್ರಜಾತಿಯಿಂದ ಉತ್ಪನ್ನವಾಗಿರುವನೋ ಆ ಹಂಡಬಂಡರ ತತ್ವವನ್ನೇ ಹೊರಗೆಡಹಿ ಶುದ್ಧಸಾಂಪ್ರದಾಯವಾದ ವೀರಶೈವ ಮತಸಾಮ್ರಾಜ್ಯವನ್ನೆಲ್ಲ ದೂಷಿಸತೊಡಗಿದ್ದಾನೆ. ಈ ಜಾತಿಸಂಕರತನವನ್ನು ಪ್ರತಿಪಾದಿಸುವ ವ್ಯಕ್ತಿಗಳ ಕಳ್ಳತನದ ವೇಷಗಳನ್ನು ಬಯಲಿಗೆಳೆಯುವಾಗ ಉಪಯೋಗಿಸುವ ಶಬ್ದಗಳು ಅವರಿಗೆ ಸ ವ ರ ಿ ತ ಯ ಂ ದ ಲೂ ಶೋಭಾಯಮಾನಗಳಾಗಿವೆ. ಅಂಥ ಅಧರಣಗಳಿಂದಲೇ ಅವರು ಭೂಷಿಸಲಿಕ್ಕೆ ಯೋಗ್ಯರಾಗಿದ್ದಾರೆ. ಈ ಯಥಾರ್ಥತತ್ವವನ್ನು ಜಾಜತತ್ವಾನ್ವೇಷಿಗಳು ಕಂಡುಹಿಡಿದು ಅವರು ಕೈಕೊಂಡಿರುವ ಘೋರನರಕಹೇತುವಾದ ದುರ್ಮಾರ್ಗವನ್ನು ಖಂಡಿಸಿ ಅವರನ್ನು ದುರ್ಮಾರ್ಗದಿಂದ ಬಿಡುಗಡೆಮಾಡಿ ಸನ್ಮಾರ್ಗವನ್ನು ತೋರಿಸಿ ಅವರವರ ಜಾತಿಯಂತೆ ಅವರನ್ನು ಧನ್ಯರನ್ನಾಗಿ ಮಾಡಬೇಕೆನ್ನುವುದೇ ದೈವಜ್ಞ ವಿನೋದನ ಬಲವಾದ ಆಶೆಯು.

ಸರ್ಕಾರದವರು ಈ ಕಡೆಗೆ ಗಮನಕೊಡುವರೇ ?
ಅರಸೀಕೆರೆಯಿಂದ ಹುಳಿಯಾರಿಗೆ ಹೋಗುವ ರಸ್ತೆಯ ಅವ್ಯವಸ್ಥೆ.

ಈ ರಸ್ತೆಯು ಶುದ್ಧ ಕಾಯಿಸೀಮೆಯ ಮಧ್ಯದಲ್ಲಿದ್ದು ಪ್ರತಿವಾರವೂ ಸುಮಾರು 500-600 ಗಾಡಿಗಳ ಸಂಚಾರವುಳ್ಳದ್ದಾಗಿಯೂ, ಎರಡು ಸರ್ವಿಸ್ಸು ಬಸ್ಸುಗಳು ಮತ್ತು ಅನೇಕ ಖಾಸಗಿ ಹಾಗೂ ಸರ್ಕಾರಿ ಆಫೀಸರುಗಳ ಮೋಟಾರ್ ಕಾರುಗಳೂ ಸಂಚರಿಸುವ ರಾಜಮಾರ್ಗವಾಗಿರುತ್ತದೆ. ಅಲ್ಲದೆ ಹೊಸದುರ್ಗ, ಕಡೂರು, ಚಿಕ್ಕನಾಯ್ಕನಹಳ್ಳಿ ಈ ಪ್ರಾಂತಗಳ ಜೋಬ್ಬರಿ, ದವಸ, ಕಾಯಿ ವಗೈರೆ ರಫ್ತು ಪದಾರ್ಥಗಳು ಮತ್ತು ಅರಸೀಕೆರೆಯಿಂದ ಈ ಸ್ಥಳಗಳಿಗೆ ಆಮದಾಗುವ ಪದಾರ್ಥಗಳು ಈ ರಸ್ತೆಯು ಮುಖಾಂತರವಾಗಿ ಸಾಗುತ್ತವೆ.

ಇಂಥ ಅತಿಪ್ರಾಮುಖ್ಯವಾದ ರಸ್ತೆಯಲ್ಲಿ ಗಾಡಿ ಒಂದಕ್ಕೆ 4 ಆಣೆಗಳಂತೆ ಟೋಲು ವಸೂಲಾಗುತ್ತಲಿದೆ. ಅಲ್ಲದೆ, ಬಸ್ಸುಗಳು ದಿನ ಒಂದಕ್ಕೆ 2 ರೂಪಾಯಿಗಳಂತೆ ಟೋಲ್ ಫೀ ಕೊಟ್ಟು ರೋಡ್ ಸೆಸ್ಸು ಸಹ ಸಲ್ಲಿಸುತ್ತಲಿವೆ. ಬೈಸ್ಕಲ್‌ಗಳೂ ಇತರ ವಾಹನಗಳೂ 2 ಆಣೆಗಳಂತೆ ಅರ್ಪಿಸುತ್ತಲಿರುತ್ತವೆ. ಆದರೇನು? ಇಷ್ಟು ಉತ್ಪತ್ತಿಯನ್ನು ದುಡಿಯುವ ಈ ನಿರ್ಭಾಗ್ಯ ರಸ್ತೆಯು ಕಾಡುದಾರಿಗಳಿಗೆ ನಾಚುತ್ತಲಿದೆ. ಹೀಗೆ ಹೀನಾವಸ್ಥೆಯಲ್ಲಿರುವ ರಸ್ತೆಯು ಘನಸರ್ಕಾರದ ಆಫೀಸರ ನಿಗಾಕ್ಕೆ ಇದುವರೆಗೂ ಬಿದ್ದಿಲ್ಲದೆ ಇರುವದು ಆಶ್ಚರ್ಯ! ಈ ರಸ್ತೆಯಲ್ಲಿರುವ ಗುಂಡಿಗೊಟರುಗಳನ್ನು ವರ್ಣಿಸಲು ಸಾಧ್ಯವಿಲ್ಲ. ಬಸ್ಸುಗಳು ಈ ಗುಂಡಿಗಳಲ್ಲಿ ಧುಮುಕುತ್ತಾ ಪ್ರಯಾಣಿಕರನ್ನು ಎತ್ತಿ ಎತ್ತಿ ಹಾಕುತ್ತ ಬಹುಸಂಕಟದಿಂದ ಸಾಗಬೇಕಾಗುತ್ತದೆ. ಅಲ್ಲದೆ ಮಳೆಗಾಲವಾದ ಈ ಕಾಲದಲ್ಲಿಯಾದರೋ ಒಂದೊಂದು ಗುಂಡಿಯಲ್ಲಿ ಚಕ್ರಗಳು ಹೂತುಕೊಳ್ಳುತ್ತಲಿವೆ. ಇದರಿಂದ ಗಾಡಿಗಳು ಸಕಾಲಕ್ಕೆ ಸರಿಯಾಗಿ ಪ್ರಯಾಣ ಮಾಡದೆ ಒಂದೆರಡು ಘಂಟೆಗಳ ಕಾಲಕಳೆದು ಕಾಲವಿಡಾರುತ್ತವೆ. ಇದು ಹಾಗಿರಲಿ, ಭರ್ತಿಭಂಡಿಗಳು ಕಾಡುದಾರಿಗಳಲ್ಲಿ ಬೀಳುವಂತೆ ಅನೇಕ ಭಂಡಿಗಳು ಬೀಳುತ್ತವೆ. ಹೀಗೆ ಬೀಳುವುದರಿಂದ ಜನಗಳು ಕಂಗೆಟ್ಟು ಬೇಜಾರುಪಡುತ್ತಲಿದ್ದಾರೆ. ಇದಲ್ಲದೆ, ಈ ಮಳೆಗಾಲದಲ್ಲಿ ದೂರಪ್ರದೇಶಗಳಿಂದ ಬಂದ ಗಾಡಿಗಳು ಮತ್ತು ಮೋಟಾರುಗಳು 8-10 ದಿನಗಳವರೆಗೂ ದಡದಲ್ಲಿ ವಿಶ್ರಾಂತಿಹೊಂದುತ್ತಲಿರುತ್ತವೆ. ಜನಗಳು ಜಾನುವಾರುಗಳು ಹತ್ತಿರಬರುವಂತೆಯೇ ಇಲ್ಲ. ಏಕೆಂದರೆ, ಈ ರಸ್ತೆಯಲ್ಲಿ ಅನೇಕ ಹಳ್ಳಗಳಿಗೆ ಸೇತುವೆ ಇಲ್ಲದ್ದರಿಂದ ಮಳೆಗಾಲದಲ್ಲಿ, ನೀರುತುಂಬಿಕೊಂಡು ರಸ್ತೆಯನ್ನು ಮುಚ್ಚಿಕೊಂಡು ಬಿಡುತ್ತವೆ. ಒಂದೆರಡು ಅಡಿಗಳವರೆಗೂ ನೀರು ಹರಿಯುತ್ತಲಿದೆ. ಹೀಗಿರುವಲ್ಲಿ ಜನಜಾನುವಾರುಗಳು, ವ್ಯಾಪಾರಸ್ಥರು, ಬಸ್ಸುಗಳು, ಕಾರುಗಳು ವಗೈರೆ ಹೇಗೆ ಪ್ರಯಾಣಮಾಡುವುದು? ಅಲ್ಲದೆ ಅತಿ ಜರೂರಾದ ಕೆಲಸಗಾರರು, ಕೋರ್ಟು ಕಛೇರಿ, ರೈಲು ವಗೈರೆಗೆ ಹೋಗುವವರು ಹೇಗೆಮಾಡಬೇಕು? ದಯಾಳುಗಳಾದ ಘನಸರಕಾರದವರು ಈ ವಿಷಯಗಳನ್ನು ಚಿತ್ತಕ್ಕೆ ತಂದುಕೊಂಡು ಈ ಅವ್ಯವಸ್ಥೆಗಳನ್ನು ದೂರಮಾಡಿ ಪ್ರಜೆಗಳಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿ ಪ್ರಾರ್ಥನೆ.

ಒಬ್ಬ ರೈತ.

ಪಂಚಾಚಾರ್ಯ ಪ್ರಭಾ.

೧೯೩೩ನೇ ನವಂಬರ್ ತಾ|| ೬ನೇ ಸೋಮವಾರ.

ತ್ರಿವಿಧಲಿಂಗೋಪಾಸನೆ.

ಲಯಗಶ್ಯರ್ಥಯೋರ್ಹೇತುಭೂತತ್ವಾತ್ ಸರ್ವದೇಹಿನಾಂ |
ಲಿಂಗಮಿತ್ಯುಚ್ಯತೇ ಸಾಕ್ಷಾತ್ ಶಿವಸ್ಸಕಲನಿಷ್ಕಳಃ ||

ಸ್ಥಾವರಜಂಗಮಾತ್ಮಕವಾದೀಪ್ರಪಂಚವು ಯಾವನಲ್ಲಿಯೇ ತೋರಿ ಯಾವನಲ್ಲಿಯೇ ಅಡಕವಾಗುತ್ತದೆಯೋ, ಅಂತಹ ಪರಮಾತ್ಮನೇ ಲಿಂಗವೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. ಇಂತಹ ಲಿಂಗಮೂರ್ತಿರೂಪನಾದ ಪರಶಿವನು ಜಗದುದ್ಧಾರಕ್ಕಾಗಿ ಸಕಲರೂಪನಾಗಿಯೂ, ನಿಷ್ಕಲರೂಪನಾಗಿಯೂ, ಸಕಲ ನಿಷ್ಕಲರೂಪನಾಗಿಯೂ ತೋರುತ್ತಿರುವನು. ಕೇವಲ ನಿಷ್ಕಲರೂಪದಿಂದಿರುವಕಾಲದಲ್ಲಿ ಭಾವಲಿಂಗವೆಂದೂ, ಸಕಲ ನಿಷ್ಕಲರೂಪದಿಂದಿರುವ ಕಾಲದಲ್ಲಿ ಪ್ರಾಣಲಿಂಗವೆಂದೂ, ಕೇವಲ ಸಕಲರೂಪದಿಂದಿರುವ ಕಾಲದಲ್ಲಿ ಇಷ್ಟಲಿಂಗವೆಂದೂ ಮೂರುಬಗೆಯಾಗುವನು. ಇವುಗಳಲ್ಲಿ ಭಾವಲಿಂಗವೆಂಬುದು ಅತಿಸೂಕ್ಷ್ಮವಾದುದರಿಂದ ಭಾವದಿಂದ ಗ್ರಹಿಸಲ್ಪಡಲು ಯೋಗ್ಯವಾದುದು; ಪ್ರಾಣಲಿಂಗವು ಸೂಕ್ಷ್ಮವಾದುದರಿಂದ ಮನಸ್ಸಿನಿಂದ ಗ್ರಹಿಸಲ್ಪಡಲು ಯೋಗ್ಯವಾದುದು; ಇಷ್ಟಲಿಂಗವು ಸ್ಥೂಲವಾದುದರಿಂದ ನೇತ್ರದಿಂದ ಗ್ರಹಿಸಲ್ಪಡಲು ಯೋಗ್ಯವಾದುದು. ಲೋಕದಲ್ಲಿ ಯಾವ ಪದಾರ್ಥವು ಕಣ್ಣಿನಿಂದ ನೋಡಲ್ಪಡುವುದೋ ಆ ವಸ್ತುವಿನಲ್ಲಿಯೇ ಮನಸ್ಸು ಮತ್ತು ಭಾವವು ಪ್ರವರ್ತಿಸುವುವು. ಯಾವ ಪದಾರ್ಥವು ನೇತ್ರಕ್ಕೆ ಗೋಚರವಾಗುವುದಿಲ್ಲವೋ ಅದು ಮನಸ್ಸಿಗೆ ಗೋಚರವಾಗುವುದಿಲ್ಲ. ಯಾವುದು ಮನಸ್ಸಿಗೆ ಗೋಚರವಾಗುವುದಿಲ್ಲವೋ ಆ ಪದಾರ್ಥವು ಭಾವಕ್ಕೆಂದೂ ಗೋಚರವಾಗುವುದಿಲ್ಲ. ಭವರೋಗವನ್ನು ನಾಶಮಾಡುವ ಶಿವಲಿಂಗವನ್ನು ನಾವು ಪ್ರಥಮತಃ ನಮ್ಮ ನೇತ್ರಗಳೆದುರಿಗೆ ಹಸ್ತಪೀಠದಲ್ಲಿಟ್ಟು ಆರಾಧಿಸಬೇಕಲ್ಲದೆ ಸೂಕ್ಷ್ಮರೂಪದಿಂದಾಗಲಿ, ಅತಿಸೂಕ್ಷ್ಮರೂಪದಿಂದಾಗಲಿ ಆರಾಧಿಸಲಾಗುವುದಿಲ್ಲ. ಚಿತ್ರಕಾರನು ಅತಿ ಸೂಕ್ಷ್ಮವಾದ ಚಿತ್ರವನ್ನು ಬರೆಯಬೇಕಾದರೆ ಮೊದಲು ಸ್ಥೂಲಾಕಾರಗಳಾದ ಅನೇಕ ಚಿತ್ರಗಳನ್ನು ಬರೆಯಬೇಕಾಗುತ್ತದೆ. ಹೀಗೆ ಬರೆಯುತ್ತಬಂದಲ್ಲಿ ಅವನ ಕೈಗಳು ಸುಧಾರಿಸಿ ಅತ್ಮವೂ ಸೂಕ್ಷ್ಮವಾಗಿ ಸೂಕ್ಷ್ಮಚಿತ್ರವನ್ನು ಬರೆಯುವ ಯೋಗ್ಯತೆಯನ್ನು ಪಡೆಯುತ್ತಾನೆ. ಹಾಗಲ್ಲದೆ ತನ್ನ ಕೈಗಳಿಂದಲೂ ದೃಷ್ಟಿಯಿಂದಲೂ ಯಾವುದೊಂದು ಅಭ್ಯಾಸಮಾಡದಿದ್ದ ಮಾನವನಿಗೆ ಆತ್ಮದಲ್ಲಾಗಲಿ ಮನಸ್ಸಿನಲ್ಲಾಗಲಿ ಯಾವುದೊಂದು ವಿಶೇಷಾಂಶವೂ ತೋರುವುದೇ ಇಲ್ಲ. ಇದರಿಂದ ಪ್ರತಿಯೊಂದು ಪದಾರ್ಥಾನುಭವವೆಂಬುದು ಮೊದಲು ನೇತ್ರಕ್ಕಾದ ಮೇಲೆ ಅನಂತರ ಮನಸ್ಸಿನಿಂದಲೂ ಭಾವದಿಂದಲೂ ಗ್ರಾಹ್ಯವಾಗುವುದೆಂಬುದು ಸರ್ವಾನುಭವಸಿದ್ಧವಾಗಿರುತ್ತದೆ. ಅದರಂತೆ ಸೂಕ್ಷ್ಮಾತ್ ಸೂಕ್ಷ್ಮತರವಾದ ಶಿವಲಿಂಗಸ್ವರೂಪವು ತನಗೆ ಸಾಕ್ಷಾತ್ಕಾರವಾಗಬೇಕಾದರೆ ಮೊದಲು ಸ್ಥೂಲಾಕಾರದಲ್ಲಿರುವ ಇಷ್ಟಲಿಂಗವನ್ನು ಆರಾಧಿಸಬೇಕು. ಈ ಇಷ್ಟಲಿಂಗವನ್ನು ಆರಾಧಿಸದಿದ್ದವನು ಪ್ರಾಣಲಿಂಗಾರಾಧನೆಗೆ ಅರ್ಹನೆನಿಸಲಾರನು. ಪ್ರಾಣಲಿಂಗಾರಾಧನೆಯನ್ನು ಮಾಡದವನು ಭಾವಲಿಂಗಾರಾಧನೆಗೆ ಅರ್ಹನೆನಿಸಲಾರನು. ಇಷ್ಟಲಿಂಗವು ಸ್ಥೂಲಾಕಾರವಾದುದರಿಂದ ನೇತ್ರಗ್ರಾಹ್ಯವಾದುದು. ಪ್ರಾಣಲಿಂಗವು ಸೂಕ್ಷ್ಮಾಕಾರವಾದುದರಿಂದ ಕೇವಲ ಮನೋಗ್ರಾಹ್ಯವಾದುದು. ಭಾವಲಿಂಗವು ಅತಿಸೂಕ್ಷ್ಮಾಕಾರವಾದುದರಿಂದ ಕೇವಲ ಭಾವಗ್ರಾಹ್ಯವಾದುದು.

ಸ್ಥೂಲಂ ಬಾಹ್ಯಮಿತಿಪ್ರೋಕ್ತಂ ಸೂಕ್ಷ್ಮಮಾಭ್ಯಂತರಂ ಸ್ಮೃತಂ||

ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬೀ ಮೂರುಲಿಂಗಗಳಲ್ಲಿ ಇಷ್ಟಲಿಂಗವೇ ಸ್ಥೂಲವು; ಉಳಿದ ಎರಡು ಲಿಂಗಗಳು ಸೂಕ್ಷ್ಮಗಳು. ಸೂಕ್ಷ್ಮಗಳಾದ ಪ್ರಾಣಲಿಂಗ ಭಾವಲಿಂಗಗಳೇ ಅಭ್ಯಂತರಲಿಂಗಗಳು. ಇಷ್ಟಲಿಂಗವೇ ಬಾಹ್ಯಲಿಂಗವು. ಇವುಗಳಲ್ಲಿ ಇಷ್ಟಲಿಂಗವನ್ನು ವೇದೋಕ್ತನಿಯಮದಿಂದ ಆರಾಧಿಸದಿದ್ದವನಿಗೆ ಪ್ರಾಣಲಿಂಗಾರಾಧನೆಯ ಮತ್ತು ಭಾವಲಿಂಗಾರಾಧನೆಯ ಸಾಮರ್ಥ್ಯವುಂಟಾಗುವುದಿಲ್ಲ. ಹೃದಯಾಕಾಶದಲ್ಲಿ ಸ್ವಸ್ವರೂಪದಿಂದ ಪ್ರಕಾಶಿಸುವ ಜ್ಯೋತಿರ್ಲಿಂಗಾರಾಧನೆಯ ಶಕ್ತಿಯನ್ನುಂಟುಮಾಡುವುದೇ ಇಷ್ಟಲಿಂಗಾರಾಧನೆಯ ಫಲವಾಗಿದೆ. ಈ ಇಷ್ಟಲಿಂಗಾರಾಧನೆಯನ್ನು ಮಾಡದೆ ಯಾವನು ಜ್ಯೋತಿರ್ಲಿಂಗಸಾಕ್ಷಾತ್ಕಾರವನ್ನು ಪಡೆಯುವೆನೆಂದು ಬಯಸುತ್ತಾನೆಯೋ, ಅವನು ಬೀಜವನ್ನು ಬಿತ್ತದೆ ಬೆಳೆಯನ್ನು ಆಪೇಕ್ಷಿಸುವ ಮೂಢನಂತೆ ಹಾಸ್ಯಾಸ್ಪದನಾಗುವನು. ಆದುದರಿಂದಲೇ ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು, ಸರ್ವರೂ ಆ ಪರಮಾತ್ಮನ ಆರಾಧನೆಯನ್ನು ಮಾಡಿ ಭವಬಂಧದಿಂದ ಬಿಡುಗಡೆಯಾಗಲೆಂಬ ವಿಶಾಲದೃಷ್ಟಿಯಿಂದ ಸ್ಥೂಲವಾದ ಇಷ್ಟಲಿಂಗಧಾರಣರೂಪ ನಿಯಮವನ್ನು ಮಾಡಿದ್ದಾರೆ. ವೀರಶೈವಮತಸ್ಥನಾಗಿರುವ ಯಾವನದೇಹದಲ್ಲಿ ಇಂಥ ಇಷ್ಟಲಿಂಗವಿರುವುದಿಲ್ಲವೋ ಅವನ ದೇಹವು ಪಾಳುಬಿದ್ದ ಕ್ಷೇತ್ರದಂತೆ ವ್ಯರ್ಥವಾದುದು. ಈ ಇಷ್ಟಲಿಂಗವೆಂಬುದು ಮೋಕ್ಷೋಪಾಯಕ್ಕೆ ಪ್ರಥಮಸೋಪಾನವಾದುದರಿಂದ ಇದನ್ನು ಸಿದ್ಧಾಂತಕಾರರು ವಿಶೇಷವಾಗಿ ಸ್ತುತಿಸಿರುತ್ತಾರೆ

ಇಷ್ಟಾವಾಪ್ತಿಕರಂ ಸಾಕ್ಷಾದನಿಷ್ಟಪರಿಹಾರಕಂ |
ಇಷ್ಟಿಃ ಪೂಜಾ ತಯಾ ನಿತ್ಯಮಿಷ್ಟಂ ಪೂಜಿತಮಾದರಾತ್ ||
ಇಷ್ಟಲಿಂಗಮಿತಿ ಪ್ರೋಕ್ತಮಾಚಾರ್ಯೈರ್ಲಿಂಗಪೂಜಕೈಃ |
ಇಷ್ಟಮರ್ಥಂ ಸ್ವಭಕ್ತಾನಾಮನುಯಚ್ಛತಿ ಸರ್ವದಾ |
ತದಿಷ್ಟಲಿಂಗಮಿತ್ಯಾಹ ತಸ್ಮಾದಾಥರ್ವಣೀಶ್ರುತಿಃ ||

ಈ ಇಷ್ಟಲಿಂಗವೆಂಬುದು ಭಕ್ತರಿಗೆ ಇಷ್ಟಾರ್ಥಗಳನ್ನುಂಟುಮಾಡುತ್ತದೆ. ಅನರ್ಥಪರಂಪರೆಗಳನ್ನೆಲ್ಲಾ ಹೋಗಲಾಡಿಸುವದು. ಇಷ್ಟಿಯೆಂದರೆ ಪೂಜೆಯು. ಇಂಥ ಪೂಜೆಯಿಂದ ಯಾವ ಲಿಂಗವು ಭಕ್ತಿಯಿಂದ ಪೂಜಿಸಲ್ಪಡುವುದೋ ಅದೇ ಇಷ್ಟಲಿಂಗವೆಂದು ಲಿಂಗಪೂಜಕರಾದ ಮಹಾಚಾರ್ಯರು ಅಭಿಪ್ರಾಯಪಡುತ್ತಾರೆ. ತನ್ನ ದೇಹದಲ್ಲಿ ಧರಿಸಿಕೊಂಡು ಅನವರತವೂ ಪೂಜಿಸುತ್ತಿರುವ ಭಕ್ತರಾರುಂಟೋ ಅಂತಹ ಭಕ್ತರ ಇಷ್ಟಾರ್ಥಗಳನ್ನುಂಟುಮಾಡುವದರಿಂದ ಇದು ಇಷ್ಟಲಿಂಗವೆಂಬ ಹೆಸರನ್ನು ಪಡೆಯಿತೆಂದು ಅಥರ್ವಣಶ್ರುತಿವಾಕ್ಯಗಳೇ ಮೊದಲಾದವುಗಳು ಈ ವಿಷಯದಲ್ಲಿ ಜಾಗರೂಕಗಳಾಗಿರುತ್ತವೆ. ಆದುದರಿಂದ ಅವಶ್ಯವಾಗಿ ಇಷ್ಟಲಿಂಗವನ್ನು ಧರಿಸಿ ಪೂಜಿಸಬೇಕು. ಸ್ಥೂಲಶರೀರದಲ್ಲಿ ಇಷ್ಟಲಿಂಗಾರಾಧನಸಿದ್ಧಿಯನ್ನು ಪಡೆದವನಿಗೆ ಸೂಕ್ಷ್ಮಶರೀರದಲ್ಲಿ ಮುಂದಿನ ಪ್ರಾಣಲಿಂಗಾರಾಧನೆಯು ಸುಲಭವಾಗುವದು. ಪ್ರಾಣಲಿಂಗಾರಾಧನೆಯ ಸಿದ್ಧಿಯನ್ನು ಪಡೆದವನಿಗೆ ಕಾರಣಶರೀರದಲ್ಲಿ ಭಾವಲಿಂಗಾರಾಧನೆಯು ಸುಲಭವಾಗುವುದು. ಯಾವ ವೀರಶೈವನು ಶ್ರೀ ಗುರುವಿನಿಂದ ಇಷ್ಟಲಿಂಗವನ್ನು ಪಡೆದು ಕ್ರಮವರಿತು ಪರಿಶುದ್ಧಾತ್ಮನಾಗಿ ಅರ್ಚಿಸುವುದಿಲ್ಲವೋ ಅವನು ಮನೋಗ್ರಾಹ್ಯವೂ, ಆತ್ಮಗ್ರಾಹ್ಯವೂ ಆದ ಪ್ರಾಣಲಿಂಗ ಭಾವಲಿಂಗಾರಾಧನೆಗಳಿಗೆ ಅರ್ಹನಾಗುವುದಿಲ್ಲ. ಕೆಳಗಿನ ಕ್ಲಾಸಿನಲ್ಲಿ ತಕ್ಕಷ್ಟು ಜ್ಞಾನವನ್ನು ಪಡೆಯದಿದ್ದವನು ಮೇಲುಕ್ಲಾಸುಗಳಲ್ಲಿ ಪ್ರವೇಶಿಸಲು ಅರ್ಹತೆಯುಂಟಾಗುವುದಿಲ್ಲವೆಂಬುದು ಸರ್ವಾನುಭವಸಿದ್ಧವಾಗಿರುತ್ತದೆ. ಹೀಗೆ ಸ್ಥೂಲ ಸೂಕ್ಷ್ಮಕಾರಣಗಳೆಂಬ ಮೂರು ಶರೀರಗಳಲ್ಲೂ ಕ್ರಮವಾಗಿ ಇಷ್ಟ ಪ್ರಾಣ ಭಾವಗಳೆಂಬ ಮೂರು ಲಿಂಗಗಳನ್ನು ಧರಿಸಿ ಆರಾಧಿಸುವ ಶಕ್ತಿಯನ್ನು ಪಡೆದವನೇ ಜೀವನ್ಮುಕ್ತನೆಂಬ ಹೆಸರನ್ನು ಪಡೆಯುವನು. ಈ ರೀತಿಯಾಗಿ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾದ್ಯಾಚಾರ್ಯರ ಸಿದ್ಧಾಂತನಿಯಮಗಳನ್ನೆಲ್ಲಾ ಸಾಂಗವಾಗಿ ಪರಿಪಾಲಿಸಿದವರಲ್ಲಿ ಪರಮಾತ್ಮನು ಸಂಪೂರ್ಣ ಕೃಪಾಕಟಾಕ್ಷವನ್ನಿರಿಸಿ ಮೋಕ್ಷರೂಪವಾದ ನಿತ್ಯಪದವಿಯನ್ನನುಗ್ರಹಿಸುವನು. ಇಂಥವರಲ್ಲಿಯೇ ವೀರಶೈವ ಎಂಬ ಅಭಿಧಾನವು ಅನ್ವರ್ಥಕವಾಗುವುದು. ಇವರ ಜನ್ಮವೇ ಸಾರ್ಥಕವು!

ಒಳದೇಶದ ವೃತ್ತಾಂತಗಳು.

ವೃದ್ಧಪಿತಾಮಹರಾದ ಶ್ರೀಯುತ ಎಂ. ವೆಂಕಟಕೃಷ್ಣಯ್ಯನವರು ಆಸ್ಪತ್ರೆಯಲ್ಲಿ ದಿನದಿನಕ್ಕೆ ಗುಣಮುಖರಾಗುತ್ತಿರುವರು.

ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರಾದ ಮಿ|| ಕೆ. ನಾರಾಯಣ ಅಯ್ಯಂಗಾರ್ಯರಿಗೆ 21 ನೇ ಜುಲೈನಿಂದ ಕೊಡಲ್ಪಟ್ಟಿದ್ದ 3 ತಿಂಗಳ ರಜೆಯು ಮತ್ತೆ 11 ದಿವಸಗಳ ಕಾಲ ಹೆಚ್ಚಿಸಲ್ಪಟ್ಟಿದೆ.

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯ ಸೆಷನ್ಸ್ ವಿಚಾರಣೆಯು ಇದೇ ನವೆಂಬರ್ 1 ನೇ ತಾರೀಖಿನ ದಿವಸ ಕೋಲಾರದಲ್ಲಿ ಪ್ರಾರಂಭವಾಗಿದೆ. ಪೋಲೀಸರು ಖುಲಾಸೆಯಾಗಿದ್ದ ಅಪರಾಧಿಗಳ ಮೇಲೂ ಹೊಸಚಾರ್ಜನ್ನು ಮಾಡಿ ವಿಚಾರಣೆಗೆ ಗುರಿಪಡಿಸಿರುವರು.

ಮದರಾಸಿನ ಸುಪ್ರಸಿದ್ಧ ಅಡ್ವೋಕೇಟರೂ ಕಾಂಗ್ರೆಸ್ ಮುಖಂಡರೂ ಆದ ಮಿ|| ಎಸ್. ಸತ್ಯಮೂರ್ತಿಯವರು ಕಳೆದವಾರ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಭರತಖಂಡದಲ್ಲಿ ಸಂಯುಕ್ತ ರಾಜ್ಯಾಂಗ ರಚನೆಯಾಗುವ ವಿಷಯವಾಗಿ 3 ದಿವಸಗಳವರೆಗೆ 3 ಉಪನ್ಯಾಸಗಳನ್ನು ಮಾಡಿದರು.

ಮೈಸೂರು ಮೆಡಿಕಲ್ ಕಾಲೇಜಿನ ಫಿಜಿಯಾಲಜಿ ಪ್ರೊಫೆಸರಾಗಿರುವ ಡಾಕ್ಟರ್ ಎ. ಸುಬ್ಬರಾಯರಿಗೆ ಸೆಪ್ಟಂಬರ್ 18 ನೇ ತಾರೀಖಿನಿಂದ ಒಂದು ವರ್ಷದ ರಜೆಯು ಕೊಡಲ್ಪಟ್ಟಿರುವದು. ಈ ಅವಧಿಯಲ್ಲಿ ಮೆಡಿಕಲ್ ಕಾಲೇಜಿನ ಫಿಜಿಯಾಲಜಿ ಲೆಕ್ಚರರಾದ ಮಿ|| ಎಸ್. ಹಿರಿಯಣ್ಣಯ್ಯನವರು ಅಫಿಸಿಯೇಟಿಂಗ್ ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಿಸಲ್ಪಟ್ಟಿರುತ್ತಾರೆ.

ನೆಲಮಂಗಲ ತಾಲೂಕಿಗೆ ಅಮಲ್ದಾರಿ ಟ್ರೇನಿಂಗಿಗಾಗಿ ಹೋಗಿರುವ ಬೆಂಗಳೂರು ಇನ್‌ಕಂಟ್ಯಾಕ್ಸ್ ಇನ್ಸ್‌ಪೆಕ್ಟರಾದ ಮೆ|| ಜಿ. ಕೆ. ರುದ್ರಾರ್ಯರು ಕಳೆದ ತಿಂಗಳು ೨೭ ನೆಯ ತಾರೀಖಿನ ದಿವಸ ಗ್ರಾಮಾಭಿವೃದ್ಧಿಯ ಬಗ್ಗೆ ಮೆ|| ಸಬ್ ಡಿವಿಜನ್ ಆಫೀಸರವರ ಅಧ್ಯಕ್ಷತೆಯಲ್ಲಿ ಮಾಡಿದ ಉಪನ್ಯಾಸವು ಅತ್ಯುತ್ತಮವಾಗಿದ್ದು, ನಮ್ಮ ಪತ್ರಿಕೆಯಲ್ಲಿ ಮುದ್ರಿತವಾಗಿದೆ. ಅವರ ಸಲಹೆಯನ್ನು ಅಂಗೀಕರಿಸಿ ಕಾರ್ಯವನ್ನು ನಡೆಯಿಸಿದ್ದಾದರೆ ಶೀಘ್ರವಾಗಿ ಗ್ರಾಮಾಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

ಕಳೆದವಾರದ ನಮ್ಮ ಪತ್ರಿಕೆಯಲ್ಲಿ ಮೈಸೂರು ಮುನ್‌ಸೀಫ್ ಕೋರ್ಟಿನಲ್ಲಿ ಗುಮಾಸ್ತರಾಗಿದ್ದ ಪಿ. ವಿ. ರಂಗಣ್ಣ ಎಂಬವರು ಕೋರ್ಟಿನ ಹಣವನ್ನು ದುರುಪಯೋಗಪಡಿಸಿದರೆಂಬ ಕಾರಣದಮೇಲೆ 6 ತಿಂಗಳ ಸಜೆಗೆ ಗುರಿಯಾದರೆಂದು ಪ್ರಕಟಿಸಿದ್ದುದು ಸರಿಯಷ್ಟೇ! ಆದರೆ ಅಪರಾಧಿಯ ನಿಜವಾದ ಹೆಸರು 'ಪಿ. ವಿ. ರಾಗಣ್ಣ' ಎಂಬುದಾಗಿರುತ್ತದೆ. ಹಾಗೂ ಅವರು ಮುನಸೀಫ್ ಕೋರ್ಟಿನಲ್ಲಿ ಗುಮಾಸ್ತರಾಗಿರದೆ ಕ್ಯಾಷ್ ನಾಜರಾಗಿದ್ದರು. ವಾಚಕರು ಸದರಿ ವರ್ತಮಾನವನ್ನು ಮೇಲ್ಕಂಡಂತೆ ತಿದ್ದಿ ಓದಿಕೊಳ್ಳಬೇಕೆಂದು ಕೋರುತ್ತೇವೆ.

ರಾಜಧಾನಿಯ ಮಹಾರಾಜ ಕಾಲೇಜಿನಲ್ಲಿ ಸೀನಿಯರ್ ಬಿ.ಎ. ಕ್ಲಾಸಿನಲ್ಲಿ ಅಭ್ಯಾಸಮಾಡುತ್ತಿರುವ ಶಿರಾಳಕೊಪ್ಪದ ವೈ. ಯಂ. ಷಣ್ಮುಖಯ್ಯ ಎಂಬವರು ಕಳೆದ ತಿಂಗಳು ೨೮ ಮತ್ತು ೨೯ ನೆಯ ತಾರೀಖುಗಳಲ್ಲಿ ನೆರವೇರಿದ ಮೈಸೂರು ವಿಶ್ವವಿದ್ಯಾನಿಲಯಸಂಘದ ಕನ್ನಡ ಮತ್ತು ಇಂಗ್ಲೀಷ್ ಭಾಷಣ ಸ್ಪರ್ಧೆಯಲ್ಲಿ ಎರಡೂ ಭಾಷೆಗಳಲ್ಲಿಯೂ ಪ್ರಥಮ ಬಹುಮಾನವನ್ನು ಪಡೆದರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ. ಜಗದೀಶ್ವರನು ಈ ಮೇಧಾವಿತರುಣರಿಗೆ ಇನ್ನೂ ಹೆಚ್ಚಾದ ಮೇಧಾಶಕ್ತಿಯನ್ನು ಅನುಗ್ರಹಿಸಿ ವಾಗ್ಮಿಶ್ರೇಷ್ಠರನ್ನಾಗಿ ಮಾಡಲೆಂದು ಕೋರುತ್ತೇವೆ.

ವೈಸರಾಯರಾದ ಲಾರ್ಡ್ ವಿಲಿಂಗ್‌ಡನ್‌ರವರು ಡಿಸೆಂಬರಿನಲ್ಲಿ ರಾಜಧಾನಿಗೆ ಬಂದಾಗ್ಗೆ ನಗರದ ಶೃಂಗಾರಕ್ಕಾಗಿ ಸರಕಾರದವರು 10,000 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವರು. ಮೈಸೂರು ಸಿಟಿ ಮುನಿಸಿಪಾಲಿಟಿಯವರು ಪೌರಸಭೆಯ ಪರವಾಗಿ ಚಪ್ಪರತೋರಣ ಮುಂತಾದ ಅಲಂಕಾರಗಳನ್ನು ಮಾಡಿಸಲು 5,000 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವರು. ಅಗ್ಗೆ ವೈಸ್ರಾಯ್‌ದಂಪತಿಗಳನ್ನು ರಂಗಾಚಾರ್ಲು ಮೆಮೋರಿಯಲ್ ಹಾಲಿಗೆ ಕರೆಯಿಸಿಕೊಂಡು ಸುಂದರವಾದ 'ಕ್ಯಾಸ್ಕೆಟ್' ನಲ್ಲಿ ಬಿನ್ನವತ್ತಳೆಯನ್ನು ಒಪ್ಪಿಸಲು ತಕ್ಕ ಏರ್ಪಾಡುಗಳನ್ನು ಕೈಕೊಂಡಿರುವರು. ಅದಕ್ಕೆ ಅವಕಾಶವುಂಟಾದರೆ ಅಡ್ರೆಸ್ಸು, ಕ್ಯಾಸ್ಕೆಟ್ಟು ಮುಂತಾದವುಗಳಿಗಾಗಿ ಮುನಿಸಿಪಾಲಿಟಿಯವರು ಮತ್ತೊಂದು ಸಾವಿರ ರೂಪಾಯಿಗಳನ್ನು ವೆಚ್ಚಮಾಡುವರು.

ವರ್ತಮಾನಸಂಗ್ರಹ

ಲಾರ್ಡ್ ಇರ್ವಿನ್ನರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರಾಗಿ ನೇಮಿಸಲ್ಪಟ್ಟಿರುವರು.

ಮದರಾಸ್ ಸರಕಾರದವರು ಜಮೀನು ಕಂದಾಯದಲ್ಲಿ 33ಲಕ್ಷ ರೂಪಾಯಿಗಳನ್ನು ಮಾಫಿಮಾಡಿರುವರು.

ದಕ್ಷಿಣ ಅಮೇರಿಕೆಗೆ ಸೇರಿದ ಬ್ರಿಟಿಷ್ ಗಿಯಾನಾ ದೇಶದಲ್ಲಿ ಒಬ್ಬ ಹೆಂಗಸು ಒಂದೇಕಾಲದಲ್ಲಿ ಏಳು ಗಂಡು ಮಕ್ಕಳನು ಹೆತ್ತಿರುವಳಂತೆ!

ಕಲ್ಲಿಕೋಟೆಯಲ್ಲಿ ಅಸ್ಪೃಶ್ಯರಿಗೂ ಹಿಂದುಗಳಿಗೂ ಹೊಡೆದಾಟವಾಗಿ 22 ಜನರಿಗೆ ತುಂಬಾ ಗಾಯಗಳಾದವು. ಪೋಲೀಸರು ತನಿಖೆಮಾಡುತ್ತಿರುವರು.

ಮೆಕ್ಸಿಕೊ ದೇಶಕ್ಕೆ ಸೇರಿದ ಟ್ಯಾಂಪಿಕೊ ಎಂಬಲ್ಲಿ ಎರಡು ಗಂಟೆಯ ಕಾಲದಲ್ಲಿ 9 ಅಂಗುಲ ಮಳೆಯಾಯಿತು! ಇದರಿಂದ ಜನವಾಹನಗಳ ಸಂಚಾರವು ಸಂಪೂರ್ಣವಾಗಿ ನಿಂತುಹೋಗಿತ್ತು!

ರಷ್ಯಾದೇಶಕ್ಕೆ ಸೇರಿದ 'ಖಾರ್ಕೋವ್' ಎಂಬಲ್ಲಿ 128 ಜನ ಪ್ರಯಾಣಿಕರನ್ನು ಹೊತ್ತುಕೊಂಡುಹೋಗಬಲ್ಲ 'ಕೆ. 7' ಎಂಬ ಹೆಸರಿನ ಒಂದು ಅದ್ಭುತವಾದ ವಿರೋಪ್ಲೇನು ತಯಾರುಮಾಡಲ್ಪಟ್ಟಿರುವದು.

ಶ್ರೀ|| ವಿಠಲಭಾಯಿ ಪಟೇಲರವರ ಶವಸಂಸ್ಕಾರವನ್ನು ಮುಂಬಯಿ ಚೌಪಾತಿ ಸಮುದ್ರ ತೀರದಲ್ಲಿ ನೆರವೇರಿಸಕೂಡದೆಂದು ಮುಂಬಯಿ ಸರಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ವೈಸರಾಯರಾದ ಲಾರ್ಡ್ ವಿಲಿಂಗ್‌ಡನ್‌ರವರು ಬ್ರಿಟಿಷ್ ಸರಕಾರದೊಂದಿಗೆ ಭರತಖಂಡದ ರಾಜಕೀಯ ಪರಿಸ್ಥಿತಿಯ ಬಗ್ಗೆ ಪರ್ಯಾಲೋಚಿಸಲು ಬರುವ ಬೇಸಿಗೆಯಲ್ಲಿ 4 ತಿಂಗಳಕಾಲ ಲಂಡನ್ನಿಗೆ ಹೋಗಿಬರುವರು.

ಐರಿಷ್ ಫ್ರೀ ಸ್ಟೇಟ್ ಸರಕಾರದವರು ಇಂಗ್ಲೆಂಡಿನ ಪ್ರಿವಿ ಕೌನ್ಸಿಲ್ಲಿಗೆ ಅಪೀಲ್‌ಮಾಡುವ ಅಧಿಕಾರವನ್ನು ವಜಾಮಾಡಿ ಫ್ರೀ ಸ್ಟೇಟ್ ಸರಕಾರಕ್ಕೆ ಸಂಪೂರ್ಣ ಅಧಿಕಾರವಿರಬೇಕೆಂದು ಹೊಸ ಠರಾವನ್ನು ಪಾಸುಮಾಡಿರುತ್ತಾರೆ.

ಬಂಗಾಳಪ್ರಾಂತಕ್ಕೆ ಸೇರಿದ ಹಿಳ್ಳಿ ಎಂಬ ರೈಲ್ವೇ ಸ್ಟೇಷನ್ನಿಗೆ 12 ಜನ ಢಕಾಯಿತರು ನುಗ್ಗಿ, ಗುಂಡುಹಾರಿಸಿ ಅನೇಕರನ್ನು ಗಾಯಪಡಿಸಿ, ಅಲ್ಲಿದ್ದ ಅಂಚೆಯ ಚೀಲಗಳನ್ನೂ, ನಗದು 350 ರೂಪಾಯಿಗಳನ್ನೂ ಅಪಹರಿಸಿಕೊಂಡು ಹೋಗಿರುತ್ತಾರೆ.

ಕ್ಯಾಲಿಫೋರ್ನಿಯಾದಲ್ಲಿ 88 ವರ್ಷ ವಯಸ್ಸಿನ ಪೀಟರ್ ಸ್ಕುಲಟ್ಜ ಎಂಬ ವೃದ್ಧನು ಕೆಲವು ದಿವಸಗಳ ಹಿಂದೆ ಮೃತಪಟ್ಟನು. ಇವನಿಗೆ 13 ಜನ ಮಕ್ಕಳೂ, 86 ಜನ ಮೊಮ್ಮಕ್ಕಳೂ, 96 ಜನ ಮರಿಮಕ್ಕಳೂ, ಇಬ್ಬರು ಮರಿಮಕ್ಕಳ ಮಕ್ಕಳೂ ಇರುವರಂತೆ!

ಕೆನಡಾದೇಶಕ್ಕೆ ಸೇರಿದ ವಾಂಕೋವರ್ ನಗರದಲ್ಲಿ ನಿರುದ್ಯೋಗದದೆಸೆಯಿಂದ ಸ್ತ್ರೀಯರು ಬಹಳ ಕಷ್ಟಪಡುತ್ತಿರುವದರಿಂದ ಅಲ್ಲಿಯ ಹುಡುಗಿಯರೆಲ್ಲರೂ ಒಟ್ಟುಗೂಡಿ, ಸರಕಾರದವರು ತಮ್ಮ ಕಷ್ಟನಷ್ಟಗಳ ನಿವಾರಣೋಪಾಯವನ್ನು ಕಲ್ಪಿಸದಿದ್ದರೆ ಎಲ್ಲರೂ ಬೆತ್ತಲೆ ಮೆರವಣಿಗೆ ಮಾಡುವದಾಗಿ ಸರಕಾರಕ್ಕೆ ತಿಳಿಸಿರುವರಂತೆ!

ವಾಯುಮಂಡಲದ ವೈಚಿತ್ರ್ಯಗಳನ್ನು ಶೋಧಿಸಿ ಬರುವದಕ್ಕಾಗಿ ರಷ್ಯಾದೇಶದ 'ರೆಡ್ ಆರ್ಮಿ' ಯ ಕಮ್ಯಾಂಡರ್ ಪ್ರೋಕೋಫೇಫರವರು ಒಂದು ಆಕಾಶಬುಟ್ಟಿಯಲ್ಲಿ ಅಂತರಿಕ್ಷದಲ್ಲಿ 12 ಮೈಲುಗಳ ಎತ್ತರಕ್ಕೆ ಹೋಗಿಬಂದಿರುವರು. ಪ್ರೊಫೆಸರ್ ಪಿಕ್ಕಾರ್ಡ್ ಎಂಬ ಫ್ರಾನ್ಸಿನ ಪ್ರಸಿದ್ಧ ಶಾಸ್ತ್ರಜ್ಞರು ಕಳೆದವರ್ಷ 11 ಮೈಲುಗಳವರೆಗೆ ಮಾತ್ರ ಹೋಗಿದ್ದರು. ಅಷ್ಟು ಎತ್ತರದಲ್ಲಿ ವಾಯುವಿನ ಉಷ್ಣತೆಯು ಮಂಜುಗಡ್ಡೆಗಿಂತಲೂ 88 ಡಿಗ್ರಿಗಳಷ್ಟು ಕಡಿಮೆಯಾಗಿರುವದಂತೆ!

ರಂಗೂನಿನಲ್ಲಿ ಒಬ್ಬ ಆಂಗ್ಲೋ-ಇಂಡಿಯನ್ ಸ್ತ್ರೀಯು ಒಂದು ಚೆಕ್ಕಿಗೆ ಸುಳ್ಳು ರುಜು ಮಾಡಿ ಬ್ಯಾಂಕಿನಿಂದ 1,500 ರೂಪಾಯಿಗಳನ್ನು ಪಡೆದುಕೊಂಡು ಪೋಲೀಸರಿಂದ ದಸ್ತಗಿರಿಯಾಗುವದರೊಳಗಾಗಿ 300 ರೂಪಾಯಿಗಳನ್ನು ವೆಚ್ಚಮಾಡಿದ್ದಳು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, ಅಪರಾಧಿಯು ಒಂದು ವರ್ಷದವರೆಗೆ ಸನ್ಮಾರ್ಗದಲ್ಲಿಯೇ ಇರುವುದಾಗಿ ಮುಚ್ಚಳಿಕೆಯನ್ನು ಬರೆದು ಕೊಡಬೇಕೆಂದು ಅಪ್ಪಣೆಮಾಡಿದರು.

ಪ್ಯಾರಿಸ್ ನಗರದಲ್ಲಿ ಹೆನ್ರಿ ಬ್ಲಾಟ್ ಎಂಬ ಶ್ರೀಮಂತನಾದ ವಕೀಲನಿದ್ದನು. ಅವನಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದರು. ಇವರಿಬ್ಬರೂ ಕ್ಷಯರೋಗದಿಂದ ನರಳುತ್ತಿದ್ದು, ಅವರು ಗುಣಹೊಂದಲೆಂದು ಆತನು ಬೇಕಾದಷ್ಟು ಹಣವನ್ನು ವೆಚ್ಚಮಾಡಿದರೂ ಪ್ರಯೋಜನವಾಗದೆ ದಿನದಿನಕ್ಕೆ ಕ್ಷಯಿಸುತ್ತಬಂದರು. ಹೆನ್ರಿ ಬ್ಲಾಟ್ಟನಿಗೆ ಕಡೆಗೆ ತನ್ನ ಮಕ್ಕಳು ಬದುಕುವದಿಲ್ಲವೆಂದು ನಿರ್ಧರವಾಗಲು, ನಿರಾಶನಾಗಿ ಆ ಇಬ್ಬರು ಮಕ್ಕಳನ್ನೂ ತನ್ನ ಹೆಂಡತಿಯನ್ನೂ ಗುಂಡಿನಿಂದ ಹೊಡೆದು ಕೊಂದು, ಕಡೆಗೆ ತಾನೂ ಆತ್ಮಹತ್ಯಮಾಡಿಕೊಂಡನು.

ಹಸುಗಳು ಮೇಲಕು ಹಾಕುವಾಗ ಅವುಗಳ ಮೈಮೇಲೆ ಕುಳಿತುಕೊಳ್ಳುವ ನೊಣ ಮುಂತಾದುವುಗಳನ್ನು ಓಡಿಸಲು ತನ್ನ ಬಾಲವನ್ನು ಪದೇಪದೇ ಅಲ್ಲಾಡಿಸುವದರಿಂದ, ಅವುಗಳು ಕೊಡುವ ಹಾಲು ಬಹಳಮಟ್ಟಿಗೆ ಕಡಿಮೆಯಾಗುವದೆಂದೂ, ಹಸುಗಳು ಹಾಗೆ ಬಾಲವನ್ನು ಅಲ್ಲಾಡಿಸದಂತೆ ಮಾಡಿದರೆ ಹೆಚ್ಚಾಗಿ ಹಾಲುಕೊಡುವವೆಂದೂ ಒಬ್ಬ ಶಾಸ್ತ್ರಜ್ಞರು ಶೋಧಮಾಡಿದ್ದು, ಅದಕ್ಕಾಗಿ ಅವರು ಒಂದು ವಿಧವಾದ ದ್ರಾವಕವನ್ನು ತಯಾರಿಸಿರುವರು. ಅದನ್ನು ಹಸುಗಳ ಮೈಮೇಲೆ ಎರಚಿದರೆ ನೊಣ ಮೊದಲಾದುವುಗಳು ಬಂದು ಕುಳಿತುಕೊಳ್ಳುವದಿಲ್ಲವಂತೆ! ಇದರಿಂದ ಹಸುಗಳಿಗೆ ಬಾಲವನ್ನು ಅಲ್ಲಾಡಿಸುವ ಕೆಲಸವು ತಪ್ಪಿ, ಹಾಲು ಹೆಚ್ಚಾಗಿ ಕೊಡುವವಂತೆ!

ವಿಚಿತ್ರಬೀಗ!

ಲಂಡನ್ನಿನ 'ವೈಟ್‌ಸಿಟಿ'ಯಲ್ಲಿ ಒಂದು ವಿಚಿತ್ರ ಬೀಗವು ಪ್ರದರ್ಶಿಸಲ್ಪಟ್ಟಿರುವದು! ಇದು ಬೀಗವನ್ನು ತೆಗೆದಕಾಲವನ್ನೂ ಹಾಕಿದ ಕಾಲವನ್ನೂ ಮತ್ತು ಹಾಕಿದವರು ಯಾರೆಂಬುದನ್ನೂ ತಿಳಿಸಬಲ್ಲದಂತೆ!

೫೦ ಲಕ್ಷ ವರ್ಷಗಳ ಹಿಂದೆ ಇದ್ದ ಸೊಳ್ಳೆ.

ಬಾಲ್ಟಿಕ್ ಸಮುದ್ರತೀರದಲ್ಲಿ ಪಾಂಪಿಕ್ಕನ್ ಎಂಬ ಊರಿನಲ್ಲಿರುವ 'ಅಂಬರ್' ಗಣಿಯಲ್ಲಿ ತೆಗೆದ ಒಂದು ಅಂಬರ್ ತುಂಡಿನಲ್ಲಿ 50,00,000 ವರ್ಷಗಳ ಹಿಂದೆ ಜೀವಿಸಿದ್ದ ಒಂದು ಸೊಳ್ಳೆಯು ಸಿಕ್ಕಿರುವದಂತೆ!

ಹೊಸತರಹದ ವಿಮಾನ!

ಎಲ್ಲ ವಿರೋಪ್ಲೇನುಗಳಂತೆ ರೆಕ್ಕೆಗಳೂ, ಮುಂಭಾಗದಲ್ಲಿ ಚಕ್ರವೂ ಇಲ್ಲದ ಒಂದು ಹೊಸತರಹದ ವಿರೋಪ್ಲೇನು ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟಿರುವದು. ಮೇಲಕ್ಕೆ ಹೋಗಲು ಇದಕ್ಕೆ ಇತರ ವಿರೋಪ್ಲೇನುಗಳಂತೆ ದೊಡ್ಡ ಮೈದಾನದ ಅವಶ್ಯಕತೆಯಿರದೆ ಅತ್ಯಂತ ಚಿಕ್ಕ ಬಯಲಿನಿಂದಲೇ ಮೇಲಕ್ಕೇರಿ ಕೆಳಗೆ ಇಳಿಯುವದಂತೆ! 1934ನೆಯ ಇಸವಿಯ ಏಪ್ರಿಲ್ ತಿಂಗಳಿನಲ್ಲಿ ಮೇಲ್ಕಂಡ ವಿರೋಪ್ಲೇನುಗಳು ಮಾರಾಟಕ್ಕೆ ಸಿದ್ಧವಾಗುವವಂತೆ! ಇವುಗಳನ್ನು ಪ್ರತಿಯೊಬ್ಬರೂ ಯಾವ ಭೀತಿಯೂ ಇಲ್ಲದೆ ಉಪಯೋಗಿಸಬಹುದಾಗಿದೆ.

ಬೆಂಕಿಯಿಂದ ನಾಶವಾಗದ ಗಿಡ!

ದಕ್ಷಿಣ ಅಮೇರಿಕೆಗೆ ಸೇರಿದ ಕೊಲಂಬಿಯಾ ದೇಶದ ಮೈದಾನಗಳಲ್ಲಿ ಬೆಂಕಿಯಿಂದ ನಾಶಹೊಂದದ ಒಂದು ವಿಚಿತ್ರ ಜಾತಿಯ ಗಿಡವಿರುವದು. ಅದನ್ನು 'ಫಪರೋ' ಎಂದು ಕರೆಯುವರು. ಮೇಲ್ಕಂಡ ಮೈದಾನಗಳಲ್ಲೆಲ್ಲಾ ಹುಲ್ಲು ಬೆಳೆಯುತ್ತಾ, ಬೇಸಿಗೆಯ ಕಾಲದಲ್ಲಿ ಒಣಗಿ ಹೋಗುವದರಿಂದ, ಪದೇ ಪದೇ ಕಾಡುಕಿಚ್ಚು ಉಂಟಾಗಲು ಕಾರಣವಾಗಿರುವದು. ಹುಲ್ಲು ಬಹಳ ದಟ್ಟವಾಗಿಯೂ ಮತ್ತು ಎತ್ತರವಾಗಿಯೂ ಬೆಳೆಯುವದರಿಂದ, ಕಾಡುಕಿಚ್ಚು ಪ್ರಾಪ್ತವಾದಾಗ ಉರಿಯು ಆ ಪ್ರದೇಶದಲ್ಲಿರುವ ವೃಕ್ಷಜಾತಿಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡಿದರೂ ಮೇಲ್ಕಂಡ 'ಫಪರೋ' ಗಿಡಗಳು ಮಾತ್ರ ನಾಶವಾಗದೆ ಮಳೆಗಾಲ ಪ್ರಾಪ್ತವಾದಕೂಡಲೇ ಪುನಃ ಚಿಗುರಲಾರಂಭಿಸುವವಂತೆ!

ಸ್ವೀಡನ್‌ದೇಶದ ಭೂತದ ರೈಲು!

ಸ್ವೀಡನ್ ದೇಶದ ಮಧ್ಯಪ್ರಾಂತದಲ್ಲಿರುವ ವೈಸ್ಟ್ ರಾಸ್ ರೈಲಿನಲ್ಲಿ ಬಹುದಿವಸಗಳಿಂದಲೂ ಒಂದು ಛಾಯಾಗಾಡಿಯು ತಿರುಗಾಡುವದೆಂದೂ, ಅದನ್ನು ಅನೇಕರು ನೋಡಿ ಭಯಗ್ರಸ್ತರಾಗಿರುವರೆಂದೂ ಎಲ್ಲೆಲ್ಲಿಯೂ ವರ್ತಮಾನವಿತ್ತು. ಈಗ್ಗೆ ಕೆಲವು ದಿವಸಗಳ ಹಿಂದೆ ಒಂದು ದೊಡ್ಡ ಜನರ ಗುಂಪು ಛಾಯಾಗಾಡಿಯು ಸಂಚರಿಸುವ ಪ್ರದೇಶದ ಪಕ್ಕದ ರಸ್ತೆಯಲ್ಲಿ ಹೋಗುತ್ತಿದ್ದಾಗ ಸದರಿ ಛಾಯಾಗಾಡಿಯನ್ನು ಪ್ರತ್ಯಕ್ಷವಾಗಿ ನೋಡಿದರಂತೆ! ಅದು ಆಕಾರದಲ್ಲಿ ಸಾಮಾನ್ಯಗಾಡಿಗಳಂತೆಯೇ ಇದ್ದು, ಮುಂಭಾಗದ ಮತ್ತು ಹಿಂಭಾಗದ ದೀಪಗಳು ಮಾತ್ರ ವಿಶೇಷವಾಗಿ ಪ್ರಕಾಶವುಳ್ಳವುಗಳಾಗಿದ್ದವಂತೆ! ಗಾಡಿಯು ಇತರ ಗಾಡಿಗಳಿಗಿಂತಲೂ ಅತ್ಯಂತ ವೇಗದಲ್ಲಿ ಹೋಗುತ್ತಿದ್ದರೂ, ನಿಶ್ಶಬ್ದವಾಗಿದ್ದಿತಂತೆ! ಆ ಪ್ರದೇಶದಲ್ಲಿ ಅದೇ ದೃಶ್ಯವನ್ನು ಇದುವರೆಗೆ ನೂರಾರು ಜನರು ನೋಡಿದ್ದರೂ ಈ ವಿಚಿತ್ರಕ್ಕೆ ಕಾರಣವನ್ನು ಯಾರೂ ಅರಿಯರು! ಶಾಸ್ತ್ರಜ್ಞರು ಇದೊಂದು ಪ್ರಕೃತಿವೈಚಿತ್ರ್ಯವೆಂದು ಹೇಳುವರಂತೆ!

ಸ್ವೀಕಾರ

ಧಾರವಾಡ ಜಿ|| ಗದಗಶಹರನಿವಾಸಿಗಳಾದ ಮ|| ರಾ|| ಕಲ್ಯಾಣಪ್ಪ ಅಬ್ಬಿಗೇರಿ ಇವರ ಪುತ್ರಿಯನ್ನು ಹಂಪಸಾಗರದ ಮ|| ರಾ|| ಮಸಿಗಿ ಸಂಗಪ್ಪನವರ ಪುತ್ರನಿಗೆ ಕೊಟ್ಟು ತಾ|| ೩೦—೧೦—೩೩ ನೆಯ ದಿವಸ ನಿಶ್ಚಯಮಾಡಿದ ಸಮಯದಲ್ಲಿ ವಧೂವರರ ಕಡೆಯವರಿಂದ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **4** ರೂ. ಗಳು ಬೆಟಗೇರಿ ಮ|| ರಾ|| ಬೇಲೇರಿ ಸಂಗನಬಸವಪ್ಪನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಶಹರ ನಿವಾಸಿಗಳಾದ ವೇ|| ಕಾಡದೇವರ ಮಠದ ಕಾಡಯ್ಯನವರು ಯಲಿವಾಳಗ್ರಾಮದಲ್ಲಿ ಶಿವಾಧೀನರಾದ ಕಾಲಕ್ಕೆ ಅವರ ಧರ್ಮಪತ್ನಿಯವರಾದ ಶ್ರೀಮತಿ ಗುರುಬಸವ್ವನವರು ಸಮರ್ಪಿಸಿದ **2** ರೂ. ಗಳು ಯಲಿವಾಳಗ್ರಾಮದ ಕೆಳದಿ ಮಠದ ವೇ|| ಚಂದ್ರಶೇಖರಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಬೊಜ್ಜು ಬೆಳೆದಷ್ಟೂ, ಮುಪ್ಪು ಬೆಳೆಯುವುದು.

ಡಾಕ್ಟರ್ ಜೆ. ಎ. ಫೆಲ್ಪನ್.

ಸಾಧಾರಣವಾಗಿ ಒಬ್ಬ ಹೆಂಗಸು ೧೬ ನೇ ವಯಸ್ಸಿನಿಂದ ೨೦ ನೇ ವಯಸ್ಸಿನೊಳಗೆ ನೋಡುವುದಕ್ಕೆ ಲಕ್ಷಣವಾಗಿ ಕಾಣಿಸುವಳು. ಆಗ ಅವಳ ಮೈಕಟ್ಟೂ ಚೆನ್ನಾಗಿರುವುದು, ಆಗ ಒಳ್ಳೇ ಶಕ್ತಿಯೂ, ಉಲ್ಲಾಸವೂ ಕಾಣಿಸುವುದು.

ಹೀಗೆ ಯೌವನಲಕ್ಷಣವೂ, ಉತ್ಸಾಹವೂ, ಉಳ್ಳ ಹೆಂಗಸು ತನ್ನ ೨೦ ನೆಯ ಪ್ರಾಯದೊಳಗಾಗಿ ವಿವಾಹವಾಗುವಳು. ಆದರೆ ಕೆಲವು ವರ್ಷಗಳೊಳಗೆಲ್ಲ ಅವಳ ದೇಹದ ತೂಕವು ೨೦ ಪೌಂಡುಗಳಿಗೆ ಮೇಲೆ ಹೆಚ್ಚಿ, ಅವಳ ಮುಖದಲ್ಲಿ ಆಗಿನಿಂದಲೇ ಸುಕ್ಕುಗಳು ಕಾಣಿಸಲಾರಂಭಿಸುವುವು. ಅವಳ ಶರೀರಭಾಗದಲ್ಲಿ ಅಲ್ಲಲ್ಲಿ ಬೇನೆಗಳೂ, ಏನಾದರೂ ಕುಂಟುರೋಗಗಳೂ ತಲೆದೋರುತ್ತಿರುವುವು. ಹೀಗಾಗಿ ೪೦ ವಯಸ್ಸಿಗೆ ಬರುವಷ್ಟರಲ್ಲಿಯೇ, ಅವಳಲ್ಲಿ ಮುಪ್ಪಿನ ಲಕ್ಷಣಗಳೆಲ್ಲಾ ಪೂರ್ಣವಾಗಿ ಕಾಣಿಸುವುವು.

ಇಷ್ಟು ಶೀಘ್ರದಲ್ಲಿ ಇಂತಹ ಬದಲಾವಣೆಗಳು ಕಾಣಿಸಿಕೊಳ್ಳುವುದು ಸಹಜಸ್ವಭಾವಕ್ಕೇನೋ ವಿರುದ್ಧವೇ. ಇದಕ್ಕೆ ಕಾರಣವು ಅವಳು ತನ್ನ ದೇಹವನ್ನು ಸರಿಯಾಗಿ ಕಾಪಾಡಿಕೊಳ್ಳದಿರುವುದೇ ಹೊರತು ಬೇರೆಯಲ್ಲ. ಈ ದೇಹಾರೋಗ್ಯ ರಕ್ಷಣೆಗಾಗಿ ತಾನು ಹೇಗೆ ನಡೆದುಕೊಳ್ಳಬೇಕೆಂಬ ವಿಧಿಯೇ ಅವರಿಗೆ ತಿಳಿಯದು. ಬೇರೆ ಸಾಧಾರಣಸ್ತ್ರೀಯರು ನಡೆಯುವಂತೆಯೇ ಅವಳೂ ನಡೆದುಕೊಳ್ಳುವುದರಿಂದ, ಬಹುಬೇಗನೆ ಮುಪ್ಪನ್ನು ಹೊಂದುವಳು.

ಸ್ತ್ರೀಯರು ವಯಸ್ಸು ಕಳೆದೂ ವಯಸ್ಕರಂತೆ ಕಾಣಿಸುವುದಕ್ಕೆ ಬೊಜ್ಜುಬೆಳೆದು ಅವರ ದೇಹವು ಸ್ಥೂಲವಾಗುವುದೇ ಪ್ರಧಾನಕಾರಣವು. ಕೆಲವು ಸ್ತ್ರೀಯರು ವೃದ್ಧಾಪ್ಯವನ್ನು ಹೊಂದುವಹಾಗಿಯೇ ತಿಳಿಯುವುದಿಲ್ಲ. ಯಾವಾಗಲೂ ಯೌವನವತಿಯರಂತೆಯೇ ಕಾಣಿಸುತ್ತಿರುವರು. ಒಳ್ಳೇ ತರುಣ ವಯಸ್ಸಿನವರಲ್ಲಿರುವ ವೀರ್ಯೋತ್ಸಾಹಗಳೇ ಅವರಲ್ಲಿ ಯಾವಾಗಲೂ ಕಾಣಿಸುತ್ತಿರುವುವು.

ದೇಹದಲ್ಲಿ ಕೊಬ್ಬು ಬೆಳೆದರೆ ಅದು ಅಂದವನ್ನು ಕೆಡಿಸುವುದು. ಯೌವನವಯಸ್ಸಿಗೆ ಇದೊಂದು ದೊಡ್ಡ ಕುಂದು; ಮತ್ತು ಶೀಘ್ರಕಾಲದಲ್ಲಿ ಜರಾಮರಣಗಳು ಸಂಭವಿಸಲು ಇದೊಂದು ಮುಖ್ಯ ಕಾರಣವೆನಿಸಿದೆ. ಈ ಕೊಬ್ಬು ಮೈಯಲ್ಲಿ ಹೆಚ್ಚುವುದಕ್ಕೆ ಅನೇಕ ಕಾರಣಗಳುಂಟು. ಪ್ರಮಾಣಕ್ಕೆ ಮೀರಿ ಭೋಜನ ಮಾಡುವುದು, ಅಸಂಬದ್ಧವಾದ ಆಹಾರಗಳನ್ನು ಸೇವಿಸುವುದು, ವ್ಯಾಯಾಮವನ್ನು ಮಾಡದಿರುವದು, ಇನ್ನೂ ಕೆಲವು ಆರೋಗ್ಯವಿಧಿಗಳಿಗೆ ಗಮನಕೊಡದಿರುವುದು, ಇವೆಲ್ಲ ಮೈಯಲ್ಲಿ ಬೊಜ್ಜು ಬೆಳೆಯಲು ಕಾರಣಗಳು.

ಇಂತಹ ದೋಷಾಸ್ಪದವಾದ ಕೊಬ್ಬನ್ನು ಕರಗಿಸುವುದಾದರೂ, ಅಷ್ಟಾಗಿ ಅಸಾಧ್ಯಕಾರ್ಯವಲ್ಲ. ಆಹಾರದಲ್ಲಿ ವಿಶೇಷವಾಗಿ ಹಣ್ಣುಗಳನ್ನೂ, ತರಕಾರಿಗಳನ್ನೂ ಉಪಯೋಗಿಸುವುದು, ಮಸಾಲೆ ಪದಾರ್ಥಗಳನ್ನು ದೂರಮಾಡುವುದು. ಪಾನೀಯಗಳಿಗಾಗಿ ಬರೀ ಜಲಮಾತ್ರವನ್ನೇ ಉಪಯೋಗಿಸುತ್ತಾ ಬರುವುದು, ಇವೆಲ್ಲ ಕೊಬ್ಬುಬೆಳೆಯುವುದನ್ನು ತಪ್ಪಿಸುವ ಪರಿಹಾರೋಪಾಯಗಳು. ಕುಡಿಯುವ ನೀರು ಶುದ್ಧವಾದ ಮಳೆಯ ನೀರಾಗಿಯಾಗಲಿ, ಇಲ್ಲವೇ ಚೆನ್ನಾಗಿ ಶೋಧಿಸಿದ ನೀರಾಗಿಯಾಗಲಿ ಇರಬೇಕು.

ಈ ಮೇಲ್ಕಂಡ ವಿಧಿಯನ್ನನುಸರಿಸಿ ಕೆಲವು ದಿನಗಳವರೆಗೆ ನಡೆಯುತ್ತಾ ಬಂದರೆ, ಕೊಬ್ಬು ತಾನಾಗಿ ಕರಗಿ ಹೋಗುವುದು. ದೇಹಾರೋಗ್ಯವೂ ವೃದ್ಧಿಯಾಗುವುದು. ಚರ್ಮಕ್ಕೆ ಮೃದುತ್ವವೂ ಹೊಳಪೂ ಉಂಟಾಗುವುದು. ದೃಷ್ಟಿಯು ಸ್ಫುಟವಾಗುವುದು. ನೋಟಕ್ಕೂ ಅಂದವಾಗಿ ಕಾಣುವುದು. ಬಾಯೊಳಗಿನ ದುರ್ಗಂಧಗಳೆಲ್ಲವೂ ಹೋಗಿ ಸುವಾಸನೆಯುಳ್ಳದಾಗಿರುವುದು. ಕಾಲುನಡೆಯಲ್ಲಿ ಒಂದು ವಿಧವಾದ ಚಟುವಟಿಕೆಯೂ, ಪ್ರಯತ್ನವಿಲ್ಲದೆಯೇ ಸಾಗುವ ಒಂದು ಬಗೆಯ ನಿರಾಯಾಸತ್ವವೂ ತೋರುವುದು.

ಮುಪ್ಪು ಹಿಡಿದಂತಿರುವ ನಿಮ್ಮ ದೇಹವನ್ನು ನೀವು ತಿರುಗಿ ಯೌವ್ವನದೆಶೆಗೆ ತಿರುಗಿಸಬೇಕಾದರೆ ಶುದ್ಧವಾದ ಗಾಳಿಯಿದ್ದೆಡೆಗಳಲ್ಲಿ ಆಗಾಗ ಸಂಚರಿಸಿ ಬರಬೇಕು. ಪ್ರತಿದಿನವೂ ತಪ್ಪದೆ ತಕ್ಕಷ್ಟು ವ್ಯಾಯಾಮವನ್ನು ತೆಗೆದುಕೊಳ್ಳಬೇಕು. ಶುದ್ಧವಾದ ನೀರನ್ನೇ ಸೇವಿಸಬೇಕು. ಹಸುರು ತರಕಾರಿಗಳನ್ನು ಹೆಚ್ಚಾಗಿ ಭುಂಜಿಸಬೇಕು, ರಾತ್ರಿಯಲ್ಲಿ ಬೇಗನೆ ನಿದ್ರೆಗೆ ಹೋಗಿ ಎಷ್ಟುಹೊತ್ತಿನವರೆಗೆ ನಿದ್ರೆಮಾಡುವುದವಶ್ಯವೋ ಅಷ್ಟರವರೆಗೆ ಸುಖನಿದ್ರೆ ಮಾಡಬೇಕು. ಈ ನಿಯಮಗಳಿಂದ ನಡೆದರೆ, ಕೆಲವು ದಿನಗಳೊಳಗೆಲ್ಲ ನಿಮ್ಮ ಶಾರೀರಕ, ಮಾನಸಿಕ ಆರೋಗ್ಯಗಳೆರಡೂ ವೃದ್ಧಿಹೊಂದುವುವು. ದೇಹವನ್ನು ವೃದ್ಧಿಗೊಳಿಸಲು ಯಾವುದು ಕಾರಣವೋ ಅದೇ ಮನಸ್ಸಿನ ಆರೋಗ್ಯಾಭಿವೃದ್ಧಿಗೂ ಕಾರಣವು.

ನಿದ್ರೆಯ ವಿಷಯವನ್ನು ಯೋಚಿಸುವುದಾದರೆ, ಸಾಧಾರಣವಾಗಿ ಈಗ ವೈದ್ಯರು, ಇಷ್ಟಿಷ್ಟು ವಯಸ್ಸುಳ್ಳವರು ಇಷ್ಟಿಷ್ಟೇ ಹೊತ್ತು ನಿದ್ರೆಮಾಡಬೇಕೆಂದೂ, ಅದಕ್ಕೆ ಮೇಲೆ ನಿದ್ರೆಮಾಡಬಾರದೆಂದೂ ಹೇಳುವುದುಂಟು. ಇದು ತಪ್ಪು. ಇದಕ್ಕೆ ನಿದರ್ಶನವಾಗಿ, ವಯಸ್ಸಾದವರು ದಿನಕ್ಕೆ ೮ ಘಂಟೆಗಳ ಕಾಲವೇ ನಿದ್ರಿಸಬೇಕಲ್ಲದೆ, ಅದಕ್ಕಿಂತಲೂ ಹೆಚ್ಚು ಹೊತ್ತು ಮಲಗಿದ್ದರೆ ಅದರಿಂದ ಕೆಡುಕುಂಟೆಂದೂ ಕೆಲವರು ಹೇಳುವರು.

"ಅಡ್ವಾನ್ಸ್ಡ್ ಆರ್ಥೋಪತಿ" ಎಂಬ ಶಾಸ್ತ್ರದಲ್ಲಿ ಹೇಳಿರುವಂತೆ ನಿದ್ರಿಸುವ ಕಾಲದಲ್ಲಿಯೇ ಶರೀರದ ರಿಪೇರೀ ಕೆಲಸಗಳೆಲ್ಲ ನಡೆಯುವುವೆಂದು ಗೊತ್ತಾಗಿದೆ. ಅದಕ್ಕಾಗಿಯೇ ಪ್ರಾಣಿಗಳಿಗೆ ನಿದ್ರೆಯೆಂಬುದು ಏರ್ಪಟ್ಟಿದೆ. ಶರೀರಕ್ಕೂ ಬುದ್ಧಿಗೂ ಕೆಲಸವು ಹೆಚ್ಚಿದಹಾಗೆಲ್ಲ ಅದರಿಂದ ದೇಹದ ರಚನಾತಂತುಗಳೆಲ್ಲ ವ್ಯಯವಾಗುತ್ತಾ ಬರುವುವು. ಅದನ್ನು ತಿರುಗಿ ರಿಪೇರಿಮಾಡುವ ಕಾಲವೇ ನಿದ್ರಾಕಾಲವು. ಆದುದರಿಂದ ಕಣ್ಣುಗಳನ್ನೊತ್ತಿಕೊಂಡು ಬರುವ ನಿದ್ರೆಯನ್ನಾದರೂ ನಿರ್ಬಂಧದಿಂದ ತಡೆದು ಕ್ಲುಪ್ತಕಾಲಕ್ಕೆ ಏಳಬೇಕೆಂಬುದು ಸರಿಯಲ್ಲ. ಒಬ್ಬೊಬ್ಬರೂ ತಾವಾಗಿ ಎಚ್ಚರಗೊಂಡು ಏಳುವವರೆಗೆ ಮಲಗಿರುವುದಕ್ಕೆ ಅವಕಾಶ ಕೊಡುವುದೇ ಒಳ್ಳೆಯದು. ತಾವಾಗಿ ಎಚ್ಚರಗೊಳ್ಳದಿರುವವರೆಗೆ, ಇನ್ನೂ ಅವರ ದೇಹದಲ್ಲಿ ರಿಪೇರೀ ಕೆಲಸವು ಮುಗಿದಿಲ್ಲವೆಂದೇ ತಿಳಿಯಬೇಕು. ನಿಮ್ಮ ದೇಹಕ್ಕೆ ರಿಪೇರಿಯು ಬೇಕಾಗಿದೆಯೆಂಬುದನ್ನು ತಿಳಿಸುವುದೇ ನಿದ್ರೆಯು. ನಮಗೆ ಯಾವಾಗ ಎಚ್ಚರವಾಗುವುದೋ ಆಗ ರಿಪೇರಿಯು ಮುಗಿಯಿತೆಂದು ಅರ್ಥವು.

ಹಗಲೆಲ್ಲ ದುಡಿದು ಕಷ್ಟಪಟ್ಟವನು, ರಾತ್ರಿ ವಿಶ್ರಾಂತಿಗಾಗಿ ಮಲಗಿ, ಮರದ ದಿಂಡಿನಂತೆ ಬಿದ್ದು ನಿದ್ರಿಸುವನು. ಆಗಲೇ ಅವನ ದೇಹದಲ್ಲಿ ರಿಪೇರಿಯಕಾರ್ಯವು ಆರಂಭಿಸುವುದು. ತಿರುಗಿ ದೇಹಕ್ಕೆ ಕಾರ್ಯಶಕ್ತಿಯುಂಟಾಗುವವರೆಗೆ ಆ ರಿಪೇರೀ ಕೆಲಸವು ನಡೆಯುತ್ತಿರಬೇಕಾಗಿದೆ. ಅದು ಪೂರ್ತಿಯಾದ ಮೇಲೆ ಎಚ್ಚರವಾದರೆ ಮಾತ್ರವೇ ಅವನು ಕಾರ್ಯಸಮರ್ಥನಾಗುವುದರಿಂದ, ಅದಕ್ಕೆ ಮೊದಲೇ ನಿರ್ಬಂಧಿಸಿ ಎಚ್ಚರಗೊಳಿಸಬಾರದು.

ವೈದ್ಯರು ಕೆಲವುವೇಳೆ ದೇಹಾರೋಗ್ಯಕ್ಕೆ ಪ್ರಕೃತಿಸಿದ್ಧವಾಗಿ ಯಾವುದು ಅತ್ಯವಶ್ಯವೋ ಅದನ್ನು ಸರಿಯಾಗಿ ಗಮನಿಸದೆ, ವಿರುದ್ಧ ಸೂಚನೆಗಳನ್ನೂ ಕೊಡುವುದುಂಟು.

"ದಿನಕ್ಕೆ ಮೂರುಸಾರಿ ಕಾಲನಿಯಮದಿಂದ ಭೋಜನ ಮಾಡಬೇಕು. ಹಸಿವಿದ್ದರೂ, ಇಲ್ಲದಿದ್ದರೂ, ಆ ಕಾಲನಿಯಮವನ್ನು ತಪ್ಪಿಸಬಾರದು" ಎನ್ನುವರು. ಆದರೂ, ಊಟಮಾಡುವುದಕ್ಕೆ ಹಸಿವನ್ನೆ ಮುಖ್ಯ ಸೂಚನೆಯನ್ನಾಗಿ ಇಟ್ಟುಕೊಳ್ಳುವುದೊಳ್ಳೆಯದು. ಹಸಿವಿಲ್ಲದಿದ್ದಾಗ ಊಟ ಮಾಡಲೇ ಬಾರದು ಹಸಿವಿಲ್ಲದಿದ್ದಾಗ ಎಷ್ಟೇ ಉತ್ತಮವಾದ ಮತ್ತು ಆರೋಗ್ಯಕರವಾದ ಆಹಾರವಾಗಿದ್ದರೂ, ಅದು ದೇಹಕ್ಕೆ ವಿಷವಾಗಿಯೇ ಪರಿಣಮಿಸುವುದು.

"ನೀವು ದಿನಕ್ಕೆ ೮ ಅಥವಾ ೧೦ ಲೋಟಾದಷ್ಟು ನೀರನ್ನು ತಪ್ಪದೆ ಕುಡಿಯಬೇಕು. ನಿಮಗೆ ದಾಹವಿದ್ದರೂ, ಇಲ್ಲದಿದ್ದರೂ, ಈ ನಿಯಮವನ್ನು ತಪ್ಪಿಸಬಾರದು. ಏಕೆಂದರೆ, ನಿಮ್ಮ ದೇಹವನ್ನು ತೊಳೆದು ಶುದ್ಧಿಮಾಡುವುದಕ್ಕೂ, ಅಷ್ಟು ನೀರನ್ನು ಕುಡಿಯಬೇಕಾದುದವಶ್ಯ" ವೆಂದೂ ವೈದ್ಯರು ಹೇಳುವರು. ಇದೂ ಅಷ್ಟು ಯುಕ್ತವಾಗಿ ನನಗೆ ತೋರುವುದಿಲ್ಲ. ಇದಕ್ಕೆ ನಿದರ್ಶನವಾಗಿ, ಬೆಕ್ಕು, ನಾಯಿ, ಕುದುರೆ, ಆಕಳು, ಇವುಗಳೆಲ್ಲ ಆ ನಿಯಮವನ್ನೇನೂ ಇಟ್ಟುಕೊಂಡಿಲ್ಲ. ಆದರೂ, ಅವು ಮನುಷ್ಯವರ್ಗಕ್ಕಿಂತಲೂ ಎಷ್ಟೋ ಅಧಿಕಾರೋಗ್ಯವುಳ್ಳವುಗಳಾಗಿ, ಮತ್ತು ದೃಢಶರೀರಿಗಳಾಗಿರುವುವು.

ದಾಹವಿಲ್ಲದಿದ್ದಾಗಲೂ ಬಲಾತ್ಕಾರದಿಂದ ನೀರನ್ನು ಕುಡಿಯುವುದರಲ್ಲಿ ಮೂತ್ರಕೋಶಗಳಿಗೆ ಅನಾವಶ್ಯಕವಾಗಿ ಅಧಿಕ ಶ್ರಮವನ್ನು ಕೊಟ್ಟಂತಾಗುವುದು. ಏಕೆಂದರೆ? ರಕ್ತದಲ್ಲಿ ಹೆಚ್ಚಾಗಿ ಸೇರಿದ ನೀರನ್ನು ಶೋಧಿಸಿ ಹೊರಗೆ ತಳ್ಳುವುದು ಈ ಮೂತ್ರಕೋಶದ ಕಾರ್ಯವಾಗಿದೆ. ಮೂತ್ರಕೋಶಗಳಿಗೆ ಈ ಅಧಿಕ ಕಾರ್ಯವನ್ನು ಕೊಡುವುದರಿಂದಾಗಲೀ, ಅಧಿಕಜಲವನ್ನು ದೇಹಕ್ಕೆ ಸೇರಿಸುವುದರಿಂದಾಗಲಿ, ಗುಣಭಾಗವೇನೂ ಕಾಣುವುದಿಲ್ಲ.

ಆದುದರಿಂದ, ನಿಮ್ಮ ಶರೀರಕ್ಕೆ ಸಹಜವಾದ ಕಾರ್ಯವೆಷ್ಟೋ, ಅಷ್ಟನ್ನು ಮಾತ್ರ ಮಾಡುವುದಕ್ಕೆ ಅವಕಾಶವನ್ನು ಕೊಡಿರಿ ವೈದ್ಯ ಮಾಡುವೆವೆಂದು ಬಂದ ಬೇರೆಯವರು ಹೇಳಿದುದಕ್ಕೆಲ್ಲ ಕಿವಿಗೊಡಬೇಡಿರಿ. ಹಾಗೆ ಬೋಧಿಸುವವರ ಆರೋಗ್ಯವೂ ಅಷ್ಟಾಗಿ ತೃಪ್ತಿಕರವಾಗಿರಲಾರದು. ಅವರೂ, ಅವರಲ್ಲಿ ಚಿಕಿತ್ಸೆಗಾಗಿ ಬರುವ ರೋಗಿಗಳಂತೆಯೇ ನರಳುವರು. ಅವರ ಆಯುಸ್ಸೂ ಅಷ್ಟು ದೀರ್ಘವಾಗಿರದು.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್‌ಮೆಂಟ್ಸುಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಘಂಟೆಯನ್ನು ತೋರಿಸುವವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಬಂಗಾರದಷ್ಟು ಸು... ಯಾಗಿದೆ. ಇದ... ಕ್ಕೆ 5 ವರುಷ ಖಾತ್ರಿಯಾ... ಗ್ಯಾರಂಟಿ ಕೊ...



ಡುವೆವು. ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
THE CITY MART,
168, China Bazaar, MADRAS.

ಸೆಲ್ಫ್ ಇಂಗ್ಲೀಷ್ ಸ್ಟಡಿ.
೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ... ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೊ. ನಂ. 1246 ಮದರಾಸು.
K. N. BENSON & Co.,
P. B. 1246, MADRAS.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿನಾಂ.

ನುತಿನವರತ್ನಮಾಲಿಕಾ.

ಭೂಕೈಲಾಸವಿರಾಜಮಾನಸುಮಹದ್ರಂಭಾಪುರೀಸಂಲಸ
ಚ್ಛ್ರೀವೀರಾಭಿಧಸಿಂಹಪೀಠರಮಣಂ ದಿವ್ಯರೂಪೋಜ್ಜ್ವಲಂ ||
ಭಕ್ತಾಭೀಷ್ಟವರಪ್ರದಾನನಿಪುಣಂ ಸರ್ವಜ್ಞಶಂಕ್ತ್ರಂ ಪರಂ
ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||

ಯಸ್ಯ ಶ್ರೀಗುರುಪುಂಗವಸ್ಯ ಜಗತಿ ವ್ಯಾಪ್ತಂ ನಿಜವ್ಯಾದೃಶಂ |
...ಕೃತ್ತಂ ಸುರಧೇನುಕಲ್ಪಲತಿಕಾಚಿಂತಾಮಣೀನಾಂ ಗಣಃ ||
...ವಾಽಸ್ಮಾಭಿರಿಹ ಪ್ರಯೋಜನಮಿತಿ ಕೃತ್ವಾ ಧ್ರುವಂ ಸ್ವರ್ಗ...ಃ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೨||

ವಾಣೀವಾರಿಧಿಭುವೋಃ ಸದಾ ಕೃತಮಹೋ ಲೋಕೇ ...ತ್ವಂ ಮಹತ್ | ತನ್ನಾಶಂ ಕು ವಿಧಾತುಮುಗ್ರಮಹಿಮಾಽ...ಪೇಕ್ಷಿತೋ ನೈವ ನೋ || ಯಸ್ಮಿನ್ನದ್ಯ ಗುರೂತ್ತಮೇ ಶಮ...ನೇ ದೃಷ್ಟಂ ಸಮಿಷ್ಟಂ ತಯೋಃ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೩||

...ಂತಾ ದುರ್ಜನಮುಗ್ಧಮೈತ್ರಿಕರಾಂ ಭೂಮಿಃ ಸದಾ ...ರೋಃ | ಸಂಚಾರಾದಧುನಾಽಕ್ಷಿತೇ ಸ್ಥಿರತರಾಂ ಶಾಂತಿಂ ...ತೇ ನಿಜಾಂ || ಯಸ್ಯ ಶ್ರೀಮುಖದರ್ಶನೇನ ಸಕಲಾ ...ಕಂ ಪ್ರಯಾಂತ್ಯಾಪದೋ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೪||

ಪುಷ್ಪಂ ಸೌರಭಸಂಕುಲಂ ಮಧುಪಮಾಲಾ ಯಾತಿ ಯದ್ವ...ದಾ | ತದ್ವಚ್ಛ್ರೀಗುರುಸಾರ್ವಭೌಮಮನಿಶಂ ವಿದ್ವತ್ತತಿಃ ...ವತೇ || ವಲ್ಲೀ ವೃಕ್ಷಮಿವ ಶ್ರಿತಾ ಸುರುಚಿರಾ ವಿದ್ಯಾ ಗುರುಂ ...ಂ ವರಂ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೫||

ಮಾತಾ ಯದ್ವದಹರ್ನಿಶಂ ಪ್ರಯತತೇ ನಾನಾಪ್ರಯತ್ನಾ...ಲಾ | ಪ್ರೀತಾತ್ಮಾ ಸುತಪಾಲನೋತ್ಸುಕತಯಾ ತಸ್ಯೈಽಪಿ ...ಶ್ವಾಸಯಾ || ತದ್ವಚ್ಛಿಷ್ಯಹಿತಾಯ ಯೋ ಗುರುವರಃ ಸದ್ಯ...ವಾನ್ ಸರ್ವದಾ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೬||

ಶ್ರೀಗೌರೀಶಸಮರ್ಚನಾಹಿತಮನಾಃ ಕಾರುಣ್ಯವಾರಾಂನಿಧಿ | ...ರಾಜ್ಞಾನತಮಃಪ್ರಭಾಕರಸಮೋ ಧೀರಃ ಸತಾಮಗ್ರ...ಃ || ಭಕ್ತಾಘೌಘಮಹೀಧ್ರಭೇದನಪವಿರ್ಯೋ ಭೂಪಸಂಸೇವಿ...ತಃ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೭||

ಲಿಂಗಾಂಗೈಕ್ಯಸುಬೋಧಕಾಗ್ರನಿಪುಣೋ ಲಿಂಗೈಕರೂಪೋ ...ವಂ | ಲಿಂಗಧ್ಯಾನಪರಾಯಣಃ ಸುರುಚಿರೇ ಪಂಚಾಕ್ಷರೇ ...ಲುಪಃ || ಸಂಗಂ ಸಂತತಮುತ್ಸೃಜನ್ ಭವಮಯಂ ಮುಕ್ತಿಪ್ರದೋ ಯೋಽನಿಶಂ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೮||

ಸಂಕ್ಷೇಪತಸ್ತ ವ ಸದ್ಗುಣಾಸ್ತು ಸಕಲಾ ಇತ್ಯೇಷ ವಾದೋ ...ಹಾನ್ | ಲೋಕೇ ವರ್ತತ ಏವ ನಿರ್ಭರತರೋ ಮೇ ಭಾತಿ ...ಂ ನ ಸಃ || ಸರ್ವೇ ಯಾಂತಿ ಸುವಿಸ್ಮಯಂ ಗುಣಮಯಂ ...ಂ ವೀಕ್ಷ್ಯ ದೇವಾದಯೋ | ಧ್ಯಾಯೇ ವಿಶ್ವಗುರುಂ ಸದಾ ಹೃದಿ ಶಿವಾನಂದಾಭಿರಾಮಾಭಿಧಂ ||೯||

ಗುರುವರನುತಿಮೇತಾಂ ಶಿಷ್ಯಗಂಗಾಧರೋಕ್ತಾಂ | ಪಠತಿ ...ಯೋಽಯಂ ಪರೇದ್ಯುಕ್ತಿಯುಕ್ತಃ || ಸ ವಿಗತಸಕಲಾ...ಃ ಸರ್ವದಾ ಕೀರ್ತಿಭಾಗೀ | ಭವತಿ ಭುವಿ ಸಮಾಪ್ನೋತ್ಯಂತ...ಂ ಪದಾಬ್ಜಂ ||೧೦||

ಶ್ರೀಮದಾಚಾರ್ಯ ಪದಕಿಂಕರರಂಶಃ ಸಂಸ್ಥಾನ ಶ್ರೀಮದ್ವಿಭೂತಿಪುರಮಠಾಧೀಶಃ ಶ್ರೀ ಗಂಗಾಧರಶಿವಾಚಾರ್ಯಃ
ಮಹಂತಿನಮಠ ಬೆಂಗಳೂರ ಸಿಟಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿಡಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 2

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 12

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [45]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೇಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಜಿಲ್ಲೆ— ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತಂಟುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1, 1.8.0, 7-0-0

ಹೂಪಿಂಗ್ ಕಫ್ ರೆಮೆಡಿ— ಕಪ್ಪೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೊಮ್ಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಂಪೌಂಡ್ ಸಿರಪು ಬ್ಲಟ್— ಉಬ್ಬಸ, ನೀವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

[10] 8 ಔನ್ಸಿಗೆ ರೂ. 3-8-0.

ನೂತನಗ್ರಂಥ ! ನೂತನಗ್ರಂಥ !!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದಗಳಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸಂನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸಂನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[ಣೆ]
पंडित श्रीकाशीनाथशास्त्री यांचें भाषण (मराठी)	८ आ[णे]
Speeches by Pandit Shri Kashinatha Shastri (*English*)	12 A[s]
ವೇದೋಕ್ತಶಿವಪೂಜಾವಿಧಿ	೧೦ ಆ[ಣೆ]
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ[ಣೆ]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[ಣೆ]
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ[ಣೆ]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[ಣೆ]
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆ[ಣೆ]
ಸಚಿತ್ರ ರೇಣುಕವಿಜಯ	೧ [ರೂ]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ [ರೂ]
ಕೇನೋಪನಿಷತ್ (ವೀರಶೈವಭಾಷ್ಯ)	೧ [ರೂ]
ವೀರಶೈವಸಿದ್ಧಾಂತಸುಧಾಕರ	೨ [ರೂ]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ [ರೂ]
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ [ರೂ]
लिंगधारणचंद्रिका (संस्कृत)	३ [ರೂ]
महानारायणोपनिषत् (वीरशैवभाष्य-संस्कृत)	१ [ರೂ]
वीरशैवेंदुशेखर (संस्कृत)	१ [ರೂ]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ[ದಿಲ್ಲ.] ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು[ಸ್ತಕ] ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ[ರು.]

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಧ್ಯಃ ಶೀತಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ[…] ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇ[…] ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ[…]

(Registered Trade Mark)

[…]ಗಳನ್ನು ಕೊಟ್ಟಿ[…]ರು. ಪ್ರಸಿದ್ಧವಾ[…] ನಶ್ಯದ ಪುಡಿಯ[…] ಸ್ವಸ್ಥವಾಗುವ […]ಧಿಗಳು ಯಾವ[…]ರೆ:—ಪಿನಸಿ, […] ತಲೆನೋವು, […]ಳ್ಳಿಯ ರೋಗ[…] ಕಣ್ಣುಗಳಲ್ಲಿ […] ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮು[…] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ […]ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ[…]ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರು[…] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯ[…]ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ […] ಪರಿಮಳವಾಗುವುದು. ಇದನ್ನು ಅನೇಕ ಪ್ರ[…] ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪ[…]ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾ[…]

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. […]
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. […]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ[…]

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[44] ಪೋ. ಬಾ. ೫೧೧, ಮದ[ರಾಸು]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿಸ[ಲ್ಪಟ್ಟಿದೆ.]

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ನವೆಂಬರ್ ೧೯೩೩ [ಸಂಚಿಕೆ ೨೯

ಕೃತಜ್ಞತಾಪ್ರಕಾಶ.

ಶೈವಭಾರತೀಭವನದ ಪ್ರಾರ್ಥನೆಯನ್ನು ಲಾಲಿಸಿ ಪೂಜ್ಯಪಂಡಿತವರ್ಯ ನಾ|| ಬ್ರ|| ಶ್ರೀ ಕಾಶೀನಾಥ ಶಾಸ್ತ್ರಿಗಳವರು ಅತ್ಯಂತ ಕೃಪೆಯಿಂದ ಪಂಚಾಚಾರ್ಯ ಪ್ರಭಾ ಪತ್ರಿಕೆಯ ಮೂರು (೪, ೫, ೬ ನೇ) ವರ್ಷಗಳ ಸಂಪೂರ್ಣ ಪುಸ್ತಕಗಳನ್ನೂ ಪಂಚಾಚಾರ್ಯ ಸ್ತೋತ್ರರತ್ನಾಕರ, ವೀರಶೈವರತ್ನ, ಶಿವಾಸೂತ್ರ ಸಿದ್ಧಾಂತದರ್ಪಣ ಮೊದಲಾದ ಸರ್ವೋತ್ತಮ ಗ್ರಂಥಗಳನ್ನೂ ಅನುಗ್ರಹಿಸಿರುತ್ತಾರೆ.

ಕಾಶೀವೀರಶೈವ ಪಂಡಿತ ವೃದ್ಧಪಿತಾಮಹರಾದ ಶ್ರೀ ಭಾಲಾಕ್ಷಶಾಸ್ತ್ರಿಗಳವರು ಹಿಂದೆ ಅನೇಕ ಗ್ರಂಥಗಳನ್ನನುಗ್ರಹಿಸಿರುವರಲ್ಲದೆ ಈ ವರ್ಷದ ಪ್ರಭಾ ಪತ್ರಿಕೆಯ ಸಂಚಿಕೆಗಳನ್ನೆಲ್ಲಾ ಸನ್ನಿಧಿಭವನಕ್ಕೆ ಕೊಡುತ್ತಲಿದ್ದಾರೆ. ನಮ್ಮ ಕೋರಿಕೆಯಂತೆ ಸುಪ್ರಸಿದ್ಧ "ಗುರುಭಕ್ತಕೇಸರಿ" ಗಳಾದ ಹುಮ್ನಾಬಾದ ಕು|| ಶಾಂತಪ್ಪನವರು ಅತ್ಯಂತ ಶ್ರದ್ಧೆಯಿಂದ ವಿಶೇಷ ಪರಿಶ್ರಮಗೈದು ಪ್ರಭಾಪತ್ರಿಕೆಯ ದುರ್ಲಭ್ಯಗಳಾದ ನಲವತ್ತುನಾಲ್ಕು ಸಂಚಿಕೆಗಳನ್ನು ಕಳುಹಿಸಿರುತ್ತಾರೆ. ಇಷ್ಟು ಹಳೆಯ ಸಂಚಿಕೆಗಳನ್ನು ದೊರಕಿಸುವದು ಗುರುಭಕ್ತ ಕೇಸರಿಯವರಿಗೇನೇ ಸಾಧ್ಯವಾಯಿತೆಂದರೆ ಅತಿಶಯವಲ್ಲ!

ಸರ್ವ ಮಹನೀಯರ ಉಪಕಾರವನ್ನು ಸವಿನಯವಾಗಿ ಪ್ರಕಟಿಸುವ ಸುಸಮಯವು ಲಭಿಸಿದುದಕ್ಕೆ ಸಂತೋಷವೆನಿಸುತ್ತದೆ. ೧ ನೆಯ ವರ್ಷದ ೧, ೧೨, ೩೮ ನೆಯ ಸಂಚಿಕೆಗಳೂ, ೩ ನೆಯ ವರ್ಷದ ೧, ೧೯, ೨೧, ೨೨, ೨೩, ೪೦, ೪೧, ನೆಯ ಸಂಚಿಕೆಗಳೂ, ೭ನೆಯ (ವರ್ತಮಾನ) ವರ್ಷದ ೨, ೬, ೭, ೯, ನೆಯ ಸಂಚಿಕೆಗಳೂ ಅವಶ್ಯವಾಗಿಬೇಕಾಗಿವೆ. ಪ್ರಭಾಪತ್ರಿಕೆಯ ಧರ್ಮಾತ್ಮ ಪಾಠಕರಾರಾದರೂ ಪ್ರಯತ್ನಪಟ್ಟು ಕಳುಹಿಸಿದರೆ ಆ ಸಂಚಿಕೆಗಳನ್ನೆಲ್ಲಾ ಬೈಂಡ್ ಮಾಡಿಸಿ ನಮ್ಮ ಭವನದಲ್ಲಿರಿಸುವದರ ಮೂಲಕ ಅವರ ಉಪಕಾರವು ಚಿರಸ್ಮರಣೀಯವಾಗಿ ಉಳಿಯುವದೆಂದು ನಿವೇದಿಸುವ

ವ್ಯವಸ್ಥಾಪಕ, ಶೈವಭಾರತೀಭವನ,
ಜಂಗಮವಾಡಿಮಠ ಬನಾರಸ್ ಸಿಟಿ.

ಲಾತೂರು ಸಮಾಚಾರ.

ಕಾರ್ತಿಕ ಸ್ನಾನನಿಮಿತ್ತವಾಗಿ ಈ ಶಹರದಲ್ಲಿ ಪ್ರತಿ ದಿವಸ ಪ್ರಾತಃಕಾಲ ಇನ್ನೂರು ಮುನ್ನೂರು ಜನರು ಸ್ನಾನಮಾಡಿ, ಶ್ರೀ ಶಂಕರಸ್ವಾಮಿ ಮಠಪತಿ ಇವರ ಮನೆಯಮುಂದೆ ಸ್ಥಾಪಿಸಲ್ಪಟ್ಟಿರುವ ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರತಿಮೆಯ ಮುಂದೆ ಅಸಾಧಾರಣವಾದ ಭಕ್ತಿಯಿಂದ ಭಜನೆಯನ್ನು ಮಾಡುತ್ತಿದ್ದರು. ಈ ಭಜನಾಮಂಡಳಿಯವರು ತಮ್ಮ ಮಂಜುಳವಾದ ಭಜನೆಯಿಂದ ಸರ್ವರನ್ನೂ ಆನಂದತುಂದಿಲಹೃದಯರನ್ನಾಗಿ ಮಾಡುತ್ತಿದ್ದರು. ಕಾರ್ತಿಕ ಶು|| ಪೌರ್ಣಿಮೆಯ ದಿವಸ ಈ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು. ಸಮಾಪ್ತಿಯದಿವಸ ನಾಲ್ಕುಸಾವಿರದವರೆಗೆ ಜನರು ಮೃಷ್ಟಾನ್ನದಿಂದ ತೃಪ್ತಿಗೊಳಿಸಲ್ಪಟ್ಟರು. ಶ್ರೀಶಂಕರಸ್ವಾಮಿಯವರು ಈ ಮಹಾಕಾರ್ಯದಲ್ಲಿ ಕಟಿಬದ್ಧರಾಗಿ ನಿಂತು ಕಾರ್ಯವನ್ನು ಪೂರೈಸಿದರು. ಈ ಮಹಾಶಯರ ಈ ತರಹದ ಸತ್ಪ್ರಯತ್ನದಿಂದ ಎಲ್ಲಾ ಜನರಿಗೂ ಮತಸ್ಥಾಪನಾಚಾರ್ಯರ ಸಮಗ್ರಸ್ವರೂಪವು ಗೊತ್ತಾಯಿತು. ಶ್ರೀ ಜಗದ್ಗುರುಗಳು ಶಂಕರಸ್ವಾಮಿಯವರಿಗೂ ಇತರ ಎಲ್ಲಾ ಭಜಕಮಂಡಳಿಗೂ ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಕೋರುವ,

ದೇಶಿಕೇಂದ್ರ, ಲಾತೂರು.

ಸ್ವೀಕಾರ

ವಿಜಾಪುರ ಡಿ|| ಜತ್ತಸಂಸ್ಥಾನದಲ್ಲಿರುವ ಮ|| ರಾ|| ಕೋರಿ ಮಲ್ಲಪ್ಪನವರ ಪುತ್ರ ಚಿ|| ಶಂಕರನಿಗೆ ಕಾಯಿಲೆಯು ಪ್ರಾಪ್ತವಾದ ಸಮಯದಲ್ಲಿ ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ ಶಂಭುಲಿಂಗ ಶಿವಾಚಾರ್ಯರ ಅಪ್ಪಣೆಯಮೇರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಪ್ರಸಾದದಿಂದ ಗುಣವಾದ ಸಂತೋಷಕ್ಕಾಗಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನೀರಿನಂತೆ ಕುದಿಯುತ್ತಿರುವ ಗ್ರಹ!

ಸೂರ್ಯಮಂಡಲದಲ್ಲಿ ಸೂರ್ಯನನ್ನು ಬಿಟ್ಟರೆ ಗುರುಗ್ರಹವೇ ಎಲ್ಲಕ್ಕಿಂತಲೂ ದೊಡ್ಡದು. ಭೂಮಿಯ ಸುತ್ತಲೂ ಚಂದ್ರಗ್ರಹವು ಹೇಗೆ ಸುತ್ತುತ್ತಿರುವದೋ ಅದರಂತೆಯೇ ಈ ಗುರುಗ್ರಹದ ಸುತ್ತಲೂ 4 ಉಪಗ್ರಹಗಳು ಸುತ್ತುತ್ತಿರುವವು. ಶಾಸ್ತ್ರಜ್ಞರು ಇದುವರೆಗೂ ಈ ಗ್ರಹವು ಭೂಮಿಯಂತೆ ಗಟ್ಟಿಯಾಗಿರುವದೆಂದೇ ಊಹಿಸಿದ್ದರು. 300 ವರ್ಷಗಳಿಂದಲೂ ಇದರ ಬಗ್ಗೆ ಎಷ್ಟೋ ಶೋಧನೆಗಳನ್ನು ಮಾಡಿದರೂ ಅದರ ನಿಜಸ್ವರೂಪವೇ ತಿಳಿದುಬಂದಿರಲಿಲ್ಲ. ಶಾಸ್ತ್ರಜ್ಞರು ಅಷ್ಟಕ್ಕೇ ಬಿಡದೆ ತಮ್ಮ ಶೋಧನೆಗಳನ್ನು ಮುಂದುವರಿಸಿ, ಗುರುಗ್ರಹವು ದ್ರವರೂಪವಾಗಿದ್ದು ನೀರಿನಂತೆ ಕುದಿಯುತ್ತಿರುವದೆಂದೂ, ದಿನದಿನಕ್ಕೆ ಇದರ ಕಾವು ಕಡಿಮೆಯಾಗುತ್ತ ಗಟ್ಟಿಯಾಗುತ್ತಿರುವದೆಂದೂ ಈಗತಾನೇ ನಿರ್ಧರಿಸಿರುವರು. ಇದು ಹೀಗೆಯೇ ಗಟ್ಟಿಯಾಗುತ್ತ ಸಂಪೂರ್ಣವಾಗಿ ಆರಿಹೋದ ಮೇಲೆ ಭೂಮಿಯಮೇಲಿರುವಂತೆ ಅದರ ಮೇಲೆಯೂ ಜನರು ಹುಟ್ಟುವರಂತೆ! ಆದರೆ ಇಷ್ಟೆಲ್ಲಾ ಆಗಲು 1,20,00,000 ವರ್ಷಗಳ ಕಾಲ ಕಳೆಯಬೇಕಂತೆ!

ವಿಚಿತ್ರ ವಿವಾಹ!

ಯಾರ್ಕ್‌ಷೈರ್ ನಗರದಲ್ಲಿ ಒಬ್ಬ ತಾಯಿ, ಮಗ ಮತ್ತು ಮಗಳು ಈ ಮೂರು ಜನರೂ ಏಕಕಾಲದಲ್ಲಿ ಮದುವೆಯಾದರಂತೆ!

ಒಂದೇ ಗಿಡದಲ್ಲಿ 23 ಜಾತಿಯ ಹಣ್ಣುಗಳು.

ಅಮೇರಿಕೆಯ ಸಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಒಬ್ಬ ಸಂಗೀತಗಾರರು ಅನೇಕ ವರ್ಷಗಳಿಂದ ಕಷ್ಟಪಟ್ಟು ಬೆಳೆಯಿಸಿರುವ ಒಂದು ಗಿಡದಲ್ಲಿ 23 ಜಾತಿಯ ಹಣ್ಣುಗಳು ಬಿಡುವವಂತೆ!

ನಾದಿರ್‌ಷಾರವರ ಕೊಲೆ.

ಅಪ್ಘಾನಿಸ್ಥಾನದ ರಾಜರಾದ ನಾದಿರ್‌ಷಾರವರು ಇದೇ ನವಂಬರ್ 8 ನೆಯ ತಾರೀಖಿನ ದಿವಸ ಮಧ್ಯಾಹ್ನ 3 ಗಂಟೆಯ ಸಮಯದಲ್ಲಿ ಯಾವನೋ ಒಬ್ಬ ರಾಜದ್ರೋಹಿಯಿಂದ ಕೊಲ್ಲಲ್ಪಟ್ಟರು. ಸದ್ಯಃ ರಾಜ್ಯಾಧಿಕಾರವು ನಾದಿರ್‌ಷಾರವರ 18 ವರ್ಷದ ಮಗ ಜಾಹೀರ್‌ಷಾರವರಿಗೆ ವಹಿಸಲ್ಪಟ್ಟಿರುವದು. ತಮ್ಮೆಲ್ಲರ ಪರಮಪ್ರೀತಿಗೆ ಪಾತ್ರರಾಗಿದ್ದ ಅರಸರು ಕೊಲೆಯಾದುದರಿಂದ ಅಫ್‌ಘನ್ ಜನಾಂಗವೇ ಶೋಕಸಾಗರದಲ್ಲಿ ಮುಳುಗಿರುವದಲ್ಲದೆ ನಾದಿರ್‌ಷಾರವರ ಪುತ್ರರನ್ನೇ ತಮ್ಮ ಮುಂದಿನ ರಾಜರನ್ನಾಗಿ ಅಂಗೀಕರಿಸಿರುವದು. ಈ ಘೋರಕೃತ್ಯಕ್ಕೆ ರಾಜ್ಯಭ್ರಷ್ಟರಾಗಿರುವ ಅಮಾನುಲ್ಲಾರವರ ಪಕ್ಷದ ಜನರೇ ಕಾರಣರೆಂದು ಅಧಿಕಾರಿವರ್ಗದವರು ನಿಶ್ಚಯಿಸಿರುವರು. ಯಾವುದೋ ಶತ್ರುಪಕ್ಷದ ಸರಕಾರದ ಪಿತೂರಿಯಿಂದ ಈ ಕೊಲೆಯು ನಡೆಯಿತೆಂದು ಕೆಲವರೂ, ರಾಜಕುಟುಂಬದ ಹತ್ತಿರದಲ್ಲಿದ್ದ ವೈದ್ಯರುಗಳ ಪಿತೂರಿಯಿಂದ ನಡೆಯಿತೆಂದು ಮತ್ತೆ ಕೆಲವರೂ ಹೇಳುವರು. ಆದರೂ ರಾಜ್ಯದಲ್ಲಿ ಹೆಚ್ಚಿನ ಗಲಭೆಗಳಾವುವೂ ಇಲ್ಲದೆ ಎಲ್ಲವೂ ಶಾಂತವಾಗಿರುವದು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 3

ಚಿಂತಾಮಣಿ ಪ್ರಕರಣ.

ಮಹಾಲಕ್ಷ್ಮಮ್ಮನ ಹೇಳಿಕೆ.

೨ ನೇ ತಾರೀಖಿನ ದಿವಸ ೪ ಗಂಟೆಗೆ ಮಹಾಲಕ್ಷ್ಮಮ್ಮನ ಹೇಳಿಕೆಯು ಪ್ರಾರಂಭವಾಯಿತು. ಬಿಕ್ಕಿ ಬಿಕ್ಕಿ ಅಳುತ್ತಾ ಕೋರ್ಟಿಗೆ ಬಂದಳು. ಮೈಯೆಲ್ಲವೂ ನಡುಗುತ್ತಿದ್ದಿತು. ಪಬ್ಲಿಕ್ ಪ್ರಾಸಿಕ್ಯೂಟರವರು ಸಮಾಧಾನ ಪಡಿಸುತ್ತಿದ್ದರು.

ಜಡ್ಜರು:—ಸ್ವಲ್ಪ ಕಾಲ ಸುಧಾರಿಸಿಕೊಳ್ಳಿ, ಎಂದು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರವರು:—ಇಲ್ಲಿ ಯಾರೂ ಇಲ್ಲ, ಧೈರ್ಯದಿಂದ ಹೇಳು ಎಂದರು.

ನಿಧಾನದಿಂದ ಸಾಕ್ಷ್ಯವನ್ನು ಹೇಳತೊಡಗಿದಳು. ಮಹಾಲಕ್ಷ್ಮಮ್ಮನಿಗೆ ಕುರ್ಚಿಯನ್ನು ಹಾಕಿ ಕುಳ್ಳಿರಿಸಿದರು.

"ನಾನು ನಮ್ಮ ತಂದೆಯ ಮನೆಯಲ್ಲಿ ಈಗ ಒಂದು ವರ್ಷದಿಂದ ಇದ್ದೇನೆ. ಅದಕ್ಕೆ ಮುಂಚೆ ಬೆಂಗಳೂರಿನಲ್ಲಿರುವ ನಮ್ಮ ಅತ್ತೆಯ ಮನೆಯಲ್ಲಿದ್ದೆ. ನಾನೂ ಖಾಯಿಲೆ ಬಿದ್ದೆ. ನಮ್ಮ ಯಜಮಾನರೂ ಖಾಯಿಲೆ ಬಿದ್ದರು. ನನ್ನನ್ನು ಚಿಂತಾಮಣಿಗೆ ಕರೆದುಕೊಂಡು ಹೋಗುವ ಹಾಗೆ ನಮ್ಮ ತಂದೆಗೆ ಕಾಗದ ಬರೆದರು. ಅಲ್ಲಿಂದ ನನ್ನನ್ನು ಚಿಂತಾಮಣಿಗೆ ಕರೆದುಕೊಂಡು ಹೋದರು. ಈಗ ಎರಡು ತಿಂಗಳ ಹಿಂದೆ ಮಂಗಳವಾರ ದಿವಸ ಈ ಕೃತ್ಯವು ನಡೆಯಿತು. ಆ ದಿವಸ ನಮ್ಮ ತಂದೆಯವರು ಸುಮಾರು ೭ ಗಂಟೆಯ ಸಮಯದಲ್ಲಿ ಹಳ್ಳಿಗೆ ಹೋಗಿ ಬಂದರು. ಆಗ ಮನೆಯಲ್ಲಿ ನಮ್ಮ ಅಕ್ಕಂದಿರೆಲ್ಲರೂ ಇದ್ದರು. ನಮ್ಮ ತಂದೆಗೆ ಮುಖವನ್ನು ತೊಳೆದುಕೊಳ್ಳಲು ನೀರನ್ನು ಕೊಟ್ಟೆ. ನಮ್ಮ ತಂದೆಯವರು ಹಿತ್ತಲಕಡೆಗೆ ಹೋದರು. ನಮ್ಮ ಅಕ್ಕಂದಿರೂ ಅವರ ಮಕ್ಕಳೂ ಅರಿಶಿನ ಕುಂಕುಮಕ್ಕೆ ಹೋಗಿದ್ದರು. ನನಗೆ ತಲೆ ನೋಯುತ್ತೆ ಎಂದು ನಮ್ಮ ತಂದೆಯವರು ಹೇಳಿದರು. ನಾನು ಅವರಿಗೆ ಹಾಸಿಗೆಯನ್ನು ಹಾಕಿಕೊಟ್ಟೆ. ಅನಂತರ ಅವರು ಮಲಗಿಕೊಂಡರು. ಮಡಿಕೆಲಸ ಅಡಿಗೆಕೆಲಸ ಮಾಡುವವರು ಯಾರೂ ಇಲ್ಲ. ನನ್ನ ಕೂದಲು ತೆಗೆಸಿ ಮನೆಗೆಲಸಕ್ಕೆ ಹಾಕಬೇಕೆಂದು ನಮ್ಮ ಮನೆಯವರು ಯೋಚನಾದಿಕೊಳ್ಳುತ್ತಿದ್ದರು. ನಾನು ಇನ್ನೂ ಚಿಕ್ಕವಳು ನನ್ನ ಭವಿಷ್ಯವೇ ಹಾಳಾಗಿ ಹೋಗುವುದು, ಎಂದೆಣಿಸಿ ಬೆಂಗಳೂರು ನಗರಕ್ಕಾದರೂ ಹೋಗಿ ನಮ್ಮ ಅತ್ತೆಯ ಮನೆಯಲ್ಲಿದ್ದು ಅವರ ಅನುಮತಿಯನ್ನು ತೆಗೆದುಕೊಂಡು ಆರ್ಯಸಮಾಜವನ್ನಾದರೂ ಮಹಿಳಾ ಸಮಾಜವನ್ನಾದರೂ ಸೇರಿಕೊಂಡು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಯಾವದಾದರೂ ಉಪಾಧ್ಯಾಯಿನಿಯ ವೃತ್ತಿಯನ್ನು ಅವಲಂಬಿಸಬೇಕೆಂದು ನಿರ್ಧರಿಸಿಕೊಂಡೆ. ಅನಂತರ ಟ್ರಂಕನ್ನು ತೆಗೆದುಕೊಂಡು ನಮ್ಮ ತಂದೆಯವರ ಔಷಧಿ ಚಿಕ್ಕಮನೆಯಲ್ಲಿ ಸಾಮಾನುಗಳೆಲ್ಲವನ್ನೂ ಸಜ್ಜುಗೊಳಿಸಿ ಮುಂಬಾಗಿಲಿನಿಂದ ಹೊರಟುಹೋದೆ. ಹೊರಡುವಾಗ ರಾತ್ರಿ ೮ ಗಂಟೆ ಅಥವಾ ೮-೩೦ ಗಂಟೆಯಾಗಿರಬಹುದು. ಮನೆ ಬಿಟ್ಟ ತಕ್ಷಣ ಆ ರಾತ್ರಿ ಎಲ್ಲವನ್ನೂ ನಮ್ಮ ಚಿಕ್ಕ ತಂದೆ ಸೀತಾರಾಮಶಾಸ್ತ್ರಿಗಳ ಮನೆಯಲ್ಲಿ ಕಳೆದು ಅವರಿಗೆ ಈ ಸಮಾಚಾರವನ್ನು ತಿಳಿಸಿ ಅವರೊಂದಿಗೆ ಪ್ರಾತಃಕಾಲ ಬಸ್ಸಿನಲ್ಲಿ ಬೆಂಗಳೂರಿಗೆ ಹೋಗೋಣವೆಂದು ನಿರ್ಧರಿಸಿಕೊಂಡೆ. (ಹುಡುಗಿಯು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.) ಮನೆಯನ್ನು ಬಿಟ್ಟು ನಮ್ಮ ಮನೆಯ ಮುಂದಿನ ಸಂದಿಯಲ್ಲಿ ಹೊರಟೆ. ದೊಡ್ಡಬೀದಿಯಲ್ಲಿ ಹೋಗಲು ಭಯವಿತ್ತು. ನಮ್ಮ ಮನೆಯ ಎದುರಿಗೆ ಉರ್ದು ಹೈಸ್ಕೂಲೊಂದಿದೆ. ಆ ಸ್ಕೂಲಿಗೆ ಸಂದಿಯ ಕಡೆಯಿಂದ ಒಂದು ಬಾಗಿಲು ಇದೆ. ಸಂದಿಯ ಕಡೆ ಬಾಗಿಲು ತೆಗೆದಿತ್ತು. ಒಳಗಡೆ ಯಾರೋ ಎಲೆಂಟು ಜನ ಕುಳಿತಿದ್ದರು. ನಾನು ಹೋಗುತ್ತಿರುವದನ್ನು ನೋಡಿ ಸ್ಕೂಲಿನಲ್ಲಿದ್ದವರು ಈಚೆಗೆ ಬಂದರು. ನಾನು ಹೋಗುತ್ತಿದ್ದೆ. ಹಿಂದುಗಡೆ ಯಾರೋ ಓಡಿದಹಾಗಾಯಿತು. ನಮ್ಮ ಮನೆಯವರೇನಾದರೂ ಬಂದಿರಬಹುದೆಂಬ ಶಂಕೆಯಿಂದ ಹಿಂದಕ್ಕೆ ನೋಡಿದೆ. ಸ್ಕೂಲ್ ಪಕ್ಕದಲ್ಲಿ ಒಂದು ಸಂದಿ ಇದೆ. ಅಲ್ಲಿ ಇಬ್ಬರು ಮೂವರು ಮುಸಲ್ಮಾನರು ಓಡಿದಹಾಗೆ ಕಾಣಿಸಿತು. ಯಾರೋ ಎಂದು ನನ್ನಷ್ಟಕ್ಕೆ ನಾನು ಮುಂದಕ್ಕೆ ಹೋಗುತ್ತಿದ್ದೆ. ಒಂದು ಮನೆಯನ್ನು ಸಮೀಪಿಸುತ್ತಿರುವಾಗ ಎದುರಾಗಿ ಒಬ್ಬ ವ್ಯಕ್ತಿಯು ಬಂದ. ಅವನು ಯಾರೋ ಒಬ್ಬ ಮುಸಲ್ಮಾನನು. ಅವನು ಬಂದು ನಿನ್ನದು ಯಾವೂರು? ನೀನು ಎಲ್ಲಿಗೆ ಹೋಗುತ್ತಿದ್ದೀಯಾ? ಎಂದು ಕೇಳಿದ. ನನ್ನದು ಇದೇ ಊರು ನಮ್ಮವರ ಮನೆಯಿದೆ ಅಲ್ಲಿಗೆ ಹೋಗುತ್ತೇನೆ ಎಂದು ಅವನಿಗೆ ಉತ್ತರ ಕೊಟ್ಟೆ. "ಕತ್ತಲಿನಲ್ಲಿ ಎಲ್ಲಿಗೆ ಹೋಗುವುದು, ಇಲ್ಲೇ ನಮ್ಮ ಮನೆ ಇದೆ, ಈ ರಾತ್ರಿ ಅಲ್ಲಿದ್ದು ಬೆಳಗ್ಗೆ ನಿನ್ನಿಷ್ಟಬಂದ ಕಡೆ ಕರೆದುಕೊಂಡು ಹೋಗಿ ಬಿಡುತ್ತೇನೆ ಎಂದು ಅವನು ಹೇಳಿದ. ಏನಪ್ಪಾ ಈರೀತಿ ಹೇಳುತ್ತೀರಿ? ನಾನು ಬ್ರಾಹ್ಮಣರ ಹುಡುಗಿ, ನೀವು ಮುಸಲ್ಮಾನರು. ಈ ರೀತಿ ಕರೆಯಬಹುದೇ? ನಾನು ಹಾಗೆಲ್ಲಾ ಬರುತ್ತೇನೆಯೆ? ಜಾತಿಯನ್ನು ಕೆಡಿಸಲಿಕ್ಕೆ ಸುಲಭವೊ? ಎಂದು ಹೇಳಿದೆ. ಅನಂತರ ನನಗೆ ಭಯವಾಯಿತು. ಮನೆಗಾದರೂ ಹೋಗಿಬಿಡೋಣವೆಂದು ಹಿಂದಕ್ಕೆ ತಿರುಗಿದೆ. ಆಗ ನನ್ನ ಕತ್ತಿಗೆ ಕೈಹಾಕಿ ಬಿಗಿಯಾಗಿ ಹಿಡಿದುಕೊಂಡ. ನನಗೆ ಕೂಗಿಕೊಳ್ಳಲು ಆಗಲಿಲ್ಲ. ಇನ್ನೊಬ್ಬನು ಬಂದು ನನ್ನ ಕೈಯಲ್ಲಿದ್ದ ಟ್ರಂಕನ್ನು ಕಿತ್ತುಕೊಂಡ. ಕುತ್ತಿಗೆ ಹಿಡಿದುಕೊಂಡಿದ್ದವನು ಯಾರನ್ನೋ ಕೂಗಿದ. ಇನ್ನಿಬ್ಬರು ಬಂದು ನನ್ನ ಮುಖದಮೇಲೆಲ್ಲಾ ಉಗಿದು "ನಮ್ಮ ಜಾತಿಗ ಸೇರು ಎಂದರೆ ಸೇರೋದಿಲ್ಲಾ ಅಂತೀಯಾ" ಎಂದು ನನ್ನ ತಲೆಯನ್ನು ಒಬ್ಬನು ಹಿಡಿದು ಕಾಲನ್ನು ಒಬ್ಬನು ಹಿಡಿದು ಭುಜದ ಮೇಲೆ ಹಾಕಿಕೊಂಡು ಬೆಟ್ಟದ ಹತ್ತಿರವಿರುವ ಹುಣಿಸೇಮರದ ಹತ್ತಿರ ಕುಳ್ಳಿರಿಸಿದರು. ನನ್ನನ್ನು ಕರೆದುಕೊಂಡು ಹೋದ ವ್ಯಕ್ತಿಗಳು ಯಾರೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಅವರ ಧ್ವನಿಯಿಂದ ಅವರು ಇಂತಹವರೇ ಎಂದು ಗುರ್ತಿಸಿದೆ. ಮಾರನೆಯ ದಿವಸ ಪ್ರಾತಃಕಾಲ ಅವರನ್ನು ಚೆನ್ನಾಗಿ ಗುರ್ತಿಸಿದೆ. ಹಿಂದಿನ ದಿವಸ ಕತ್ತಲಾಗಿದ್ದುದರಿಂದ ಗುರ್ತಿಸಲಾಗಲಿಲ್ಲ. ಅಪರಾಧಿಗಳ ಪೈಕಿ ಇಬ್ಬರಿದ್ದರು. ಅವರು ಈಗ ಖುಲಾಸೆಯಾಗಿರುವರು. ಇಲ್ಲಿಲ್ಲ. ಬಹಳ ಹೊತ್ತು ಹುಣಿಸೇಮರದ ಬಳಿಯೇ ನನ್ನನ್ನು ಅವರು ನಿರ್ಬಂಧಿಸಿದ್ದರು. ಏನಾದರೂ ಧ್ವನಿ ಮಾಡಿದರೆ ಪ್ರಾಣವನ್ನು ತೆಗೆದುಬಿಡುತ್ತೇವೆಂಬ ಭಯವನ್ನಿಟ್ಟು, ಬಹಳ ಹೊತ್ತಾದನಂತರ ಇಕ್ಕಟ್ಟಾದ ದಾರಿಯಲ್ಲಿ ನನ್ನನ್ನು ಕರೆದುಕೊಂಡುಹೋದರು. ಅಲ್ಲಿ ಯಾವುದೋ ಒಂದು ರಸ್ತೆ ಇದೆ. ಆ ಜಾಗಕ್ಕೆ ಕರೆದುಕೊಂಡು ಬಂದರು. ನನ್ನ ತಲೆ ತುಂಬಾ ಮುಸುಕು ಹಾಕಿಬಿಟ್ಟು ರಟ್ಟೆಗಳನ್ನು ಹಿಡಿದುಕೊಂಡು ಕರೆದುಕೊಂಡು ಬಂದರು. ಆ ಸ್ಥಳಕ್ಕೆ ಯಾರೋ ಒಬ್ಬನು ಬಂದಂತಾಯಿತು. ಅವನನ್ನು ಸಾಬ್‌ಜಾನ್ ಸಾಬ್‌ಜಾನ್ ಎಂದು ಕೂಗಿದರು. ಅವನೇನು ಉತ್ತರವನ್ನಿತ್ತನೋ ನನಗೆ ಗೊತ್ತಿಲ್ಲ. ಅನಂತರ ನನ್ನನ್ನು ಒಂದು ಸಂದಿಗೆ ಕರೆದೊಯ್ದು ಹೈಸ್ಕೂಲಿನ ಮುಂಭಾಗದ ವರಾಂಡದಲ್ಲಿ ಕುಳ್ಳಿರಿಸಿದರು. ಆಗ ನನಗೆ ಬಾಯಾರಿಕೆಯಾಯಿತು. ಸ್ವಲ್ಪ ನೀರು ಕುಡಿದು ಬರುತ್ತೇನೆ ಎಂದು ಅವರಿಗೆ ಹೇಳಿದೆ. ಅವರು ನನ್ನನ್ನು ಬೆದರಿಸಿ ನಾವೇ ನೀರನ್ನು ಕುಡಿಸುತ್ತೇವೆಂದು ಹೇಳಿ ಇಬ್ಬರು ಹೊರಟು ಹೋದರು. ಇಬ್ಬರು ಅಲ್ಲಿಯೇ ಇದ್ದರು. ಅರ್ಧಗಂಟೆ ಅಥವಾ ಮುಕ್ಕಾಲು ಗಂಟೆಯಮೇಲೆ ಒಂದು ಗಾಜಿನ ಲೋಟಾದಲ್ಲಿ ನೀರನ್ನು ತಂದರು ನನಗೆ ಬಾಯಾರಿಕೆ ಇಲ್ಲವೆಂದು ಹೇಳಿ ಅದನ್ನು ನಿರಾಕರಿಸಿದೆನು. ಅನಂತರ ಇಬ್ರಾಹಿಂ ಎಂದು ಕೂಗಿಕೊಂಡರು. ಅವನು ಬಂದು ನನ್ನ ಮೂಗನ್ನು ಹಿಡಿದುಕೊಂಡು ಬಲಾತ್ಕಾರವಾಗಿ ನನ್ನ ಬಾಯಿಗೆ ನೀರನ್ನು ಹಾಕಿಬಿಟ್ಟನು.

೩ ನೇ ತಾರೀಖಿನ ದಿವಸ ಹೇಳಿಕೆ—

ನೀರನ್ನು ಹಾಕಿದನಂತರ ನನ್ನ ಹೊಟ್ಟೆಯಲ್ಲಿ ಏನೋ ಬಾಧೆಯುಂಟಾಯಿತು. ಸ್ವಲ್ಪ ಹೊತ್ತು ಜ್ಞಾನ ತಪ್ಪಿಹೋಯಿತು. ನಂತರ ಅಲ್ಲಿದ್ದವರೆಲ್ಲರೂ ಉಸಿರೆತ್ತಿದರೆ ಪ್ರಾಣ ತೆಗೆದುಬಿಡುತ್ತೇವೆ ಎಂದು ಚಾಕುವನ್ನು ತೋರಿಸಿ ನನ್ನನ್ನು ಬೆದರಿಸಿದರು. ನಾವು ಹೇಳಿದ ಹಾಗೆ ಕೇಳಿದರೆ ಸರಿ! ಎಂದು ನನ್ನನ್ನು ಬೆದರಿಸಿ, "ಇನ್ಸ್‌ಪೆಕ್ಟರವರ ಮುಂದೆ ನಮ್ಮ ತಂದೆ ಮತ್ತು ಭಾವ ಮುಂತಾದವರು ನನ್ನನ್ನು ಮನೆಯಲ್ಲಿ ಹೆದರಿಸಿ ಹೊಡೆದು ಮನೆಯಿಂದ ಅಟ್ಟಿದ್ದಾರೆ, ಆದಕಾರಣ ನನ್ನ ಮತದಲ್ಲಿರಲು ಇಷ್ಟವಿಲ್ಲ ನಿಮ್ಮ ಜಾತಿಗೆ ಸೇರುತ್ತೇನೆ ಎಂದು ಹೇಳು. ಅವರು ಅರ್ಜಿ ಬರೆದು ಕೊಡು ಎಂದು ಹೇಳುವರು. ಆಗ ಕಾಗದ ಕಡ್ಡಿ ಇಲ್ಲ ಅನ್ನು, ಅವರು ಕಾಗದ ಕಡ್ಡಿಯನ್ನು ಕೊಡುತ್ತಾರೆ. ಅದರಂತೆ ಅರ್ಜಿಯನ್ನು ಬರೆದುಕೊಡು" ಎಂದು ಅಲ್ಲಿದ್ದ ಮುಸಲ್ಮಾನರು ನನ್ನನ್ನು ಒತ್ತಾಯಪಡಿಸಿದರು.

ಇನ್ಸ್‌ಪೆಕ್ಟರ್‌ರವರ ಮನೆಯಲ್ಲಿ ನಡೆದ ಪ್ರಕರಣ.

ನಂತರ ನನ್ನನ್ನು ಇನ್ಸ್‌ಪೆಕ್ಟರವರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ನನ್ನನ್ನು ತೋರಿಸಿ ಪುನಃ ಆ ಸ್ಥಳಕ್ಕೆ ಕರೆದುಕೊಂಡು ಬಂದರು. ಅಷ್ಟೊತ್ತಿಗೆ ಸಾಬ್‌ಜಾನ್ ಎಂದು ಕೂಗಿಕೊಂಡರು. ಅವನು ಅಲ್ಲಿಗೆ ಬಂದ. ಅವನ ಹತ್ತಿರ ಸ್ವಲ್ಪ ಹೊತ್ತು ಮಾತನಾಡಿಕೊಂಡರು. ಚಿಂತಾಮಣಿ ಪೋಲೀಸಿನವರೆಲ್ಲರೂ ನಮಗೆ ಬೇಕಾದವರು ಅವರ ಹತ್ತಿರ ಮಾತನಾಡಿದ್ದೇವೆ ಎಂದು ಹೇಳಿದರು. ಅವರಲ್ಲಿ ಒಬ್ಬರು ಖುಲಾಸೆಯಾದ ಅಪರಾಧಿ. ಇನ್ನೊಬ್ಬನು ನಮ್ಮ ಮನೆಯ ಸಮೀಪದಲ್ಲಿದ್ದಾನೆ. ಬೀಟಿನವರು ಬರುವ ಹೊತ್ತಾಯಿತು. ನಾವೆಲ್ಲರೂ ಇಲ್ಲಿರುವುದು ಚೆನ್ನಾಗಿಲ್ಲ, ಹತ್ತಿರವೇ ಇದ್ದು ನೋಡಿಕೊಳ್ಳುತ್ತೇವೆ ಎಂದು ಅಲ್ಲಿಂದ ಅವರೆಲ್ಲರೂ ಹೊರಟುಹೋದರು. ಒಂದು ಒಂದೂವರೆ ಗಂಟೆಮೇಲೆ ನನಗೆ ಸ್ವಲ್ಪ ಶಕ್ತಿ ಬಂದು ಎದ್ದು ಕೂತುಕೊಳ್ಳುವ ಹಾಗಾಯಿತು. ಮುಸಲ್ಮಾನರು ಅಲ್ಲಿಲ್ಲವಲ್ಲಾ ಎಂದುಕೊಂಡು ತಂದೆಯ ಮನೆಗಾದರೂ ಹೋಗೋಣವೆಂದು ಪಡಸಾಲೆಯಿಂದ ಈಚೆಗೆ ಬಂದೆ. ಅನಂತರ ಗೋಡೆ ಕಡೆಯಿಂದ ಇಬ್ಬರು ಬಂದು ಎಲ್ಲಿಗೆ ಹೋಗುತ್ತೀಯಾ ಅಲ್ಲಿಯೇ ಇರು ಎಂದು ಬೆದರಿಸಿದರು. ಜಲಬಾಧೆಗೆ ಹೋಗುತ್ತಿದ್ದೇನೆ ಎಲ್ಲಿಗೂ ಇಲ್ಲ ಎಂದು ಅಂದುಕೊಂಡುಹೋಗಿ ಸ್ವಲ್ಪ ಮರೆಯಾಗಿದ್ದ ಕಡೆ ನನ್ನನ್ನು ಕುಳ್ಳಿರಿಸಿ ಅವರೂ ಸ್ವಲ್ಪ ದೂರದಲ್ಲಿ ನಿಂತುಕೊಂಡರು. ಪುನಃ ೧ ಅಥವಾ ೧|| ಗಂಟೆ ಬಿಟ್ಟುಕೊಂಡು ನಾನು ತಂದೆಯ ಮನೆಗೆ ಹೋಗಬೇಕೆಂದು ಹೊರಟೆ. ಪುನಃ ಎಲ್ಲಿಗೆ ಹೋಗುತ್ತೀಯಾ? ಎಂದು ಬೆದರಿಸಿದರು. ಅವರೂ ಬಂದು ನನ್ನ ಬಳಿಯೇ ಕೂತುಕೊಂಡಿದ್ದರು. ಮುಂಜಾನೆ ನನ್ನನ್ನು ಇನ್ಸ್‌ಪೆಕ್ಟರವರ ಮನೆಗೆ ಕರೆದುಕೊಂಡು ಬಂದು ಅಲ್ಲಿ ಕೂರಿಸಿ ನನ್ನ ಬಳಿಯಲ್ಲಿಯೇ ಅವರೂ ಕೂತುಕೊಂಡರು. ಬೆಳಗಾದಮೇಲೆ ಅವರು ನನ್ನ ಬಳಿಗೆ ಬಂದು ಇನ್ಸ್‌ಪೆಕ್ಟರವರ ಮುಂದೆ ನಾವು ಹೇಳಿದಂತೆಯೇ ಹೇಳಬೇಕು. ಇಲ್ಲದೆ ಹೋದರೆ ನಿನ್ನ ಮತ್ತು ನಿಮ್ಮ ಮನೆಯವರ ಪ್ರಾಣವನ್ನು ತೆಗೆಯುತ್ತೇವೆ. ಇನ್ಸ್‌ಪೆಕ್ಟರವರ ಮನೆಯ ಜವಾನನು ಬರುವ ಹಾಗಿದೆ. ನಾವು ಇಲ್ಲಿರುವುದಿಲ್ಲ ಹೊರಟುಹೋಗುತ್ತೇವೆ ಎಂದು ಹೇಳಿ ಅವರು ಎಲ್ಲಿಗೋ ಹೊರಟೇ ಹೋದರು. ಅನಂತರ ಇನ್ಸ್‌ಪೆಕ್ಟರವರ ಮನೆಯ ಜವಾನ ಅಲ್ಲಿಗೆ ಬಂದ. ಬಂದು ನನ್ನನ್ನು ನೀನು ಯಾರು ಎಂದು ಕೇಳಿದ. ನಾನು ಇನ್ಸ್‌ಪೆಕ್ಟರವರ ಹತ್ತಿರ ಸ್ವಲ್ಪ ಮಾತನಾಡಬೇಕು ಎಂದು ಹೇಳಿದೆ. ಇನ್ಸ್‌ಪೆಕ್ಟರವರು ಊರಿನಲ್ಲಿಲ್ಲವೆಂಬ ಉತ್ತರವು ಜವಾನನಿಂದ ಬಂದಿತು. ಆ ಮೇಲೆ ಮನೆಯ ಒಳಕ್ಕೆ ಹೋಗಿ ನೋಡಿಕೊಂಡು ಬಂದು ಒಳಗಿದ್ದಾರೆ ಕೂತುಕೊಳ್ಳಿ ಎಂದು ಹೇಳಿದ. ಸ್ವಲ್ಪ ಹೊತ್ತಿನ ಮೇಲೆ ಇನ್ಸ್‌ಪೆಕ್ಟರವರು ಅಲ್ಲಿಗೆ ಬಂದರು. ಬಂದು ನೀವು ಯಾರು ಯಾತಕ್ಕೆ ಬಂದಿದ್ದೀರಿ ಎಂದು ಕೇಳಿದರು. ನನ್ನೊಡನೆ ಬಂದ ಮುಸಲ್ಮಾನರು ಅಲ್ಲಿಯೇ ಇದ್ದಾರೆಂಬ ಭೀತಿಯಿಂದ ನಾನು ಹಿಂದೂ ಹುಡುಗಿ ಮುಸಲ್ಮಾನ್ ಜಾತಿಗೆ ಸೇರಲು ಬಂದಿದ್ದೇನೆ ಎಂದು ಹೇಳಿದೆ "ಯಾಕೆ ಸೇರುತ್ತೀಯಾ" ಎಂದು ಅವರು ಕೇಳಿದರು. ಅದಕ್ಕೆ "ನಮ್ಮ ತಂದೆ ಮತ್ತು ಭಾವನವರು ಹೊಡೆದು ಓಡಿಸಿದ್ದಾರೆ. ಆದಕಾರಣ ಮುಸಲ್ಮಾನ್ ಮತವನ್ನು ಸ್ವೀಕರಿಸಲು ಬಂದೆ ಎಂದು ಹೇಳಿದೆ" "ಹಾಗಾದರೆ ಮುಸಲ್ಮಾನ್ ಜಾತಿಗೆ ಸೇರು. ನಿನಗೆ ಒಳ್ಳೆಯದಾಗುತ್ತದೆ. ನಿಮ್ಮ ಜಾತಿಯಲ್ಲಿ ಏನಿದೆ? ನಮ್ಮ ಜಾತಿಯೇ ಶ್ರೇಷ್ಠ" ಎಂದು ಹೇಳಿ ಅದರಂತೆ ಒಂದು ಅರ್ಜಿಯನ್ನು ಬರೆದುಕೊಡು ಎಂದರು. ನನ್ನ ಹತ್ತಿರ ಕಾಗದ ಕಡ್ಡಿ ಮುಂತಾದವು ಇಲ್ಲ ಎಂದೆ. ಇನ್ಸ್‌ಪೆಕ್ಟರವರು ಅವರ ಮನೆಯ ಹುಡುಗನನ್ನು ಒಳಕ್ಕೆ ಕರೆದರು. ಆ ಹುಡುಗ ಕಾಗದವನ್ನೂ ಕಡ್ಡಿಯನ್ನೂ ತಂದುಕೊಟ್ಟ. ಕಾಗದದಲ್ಲಿ ಏನು ಬರೆಯಬೇಕೆಂದು ನಾನು ಕೇಳಿದೆ "ನೀನು ಈವಾಗ ಹೇಳಿದೆಯಲ್ಲಾ ಅದೇ ರೀತಿ ಬರಿ" ಎಂದು ಆಜ್ಞಾಪಿಸಿದರು ಅನಂತರ ಅದೇ ರೀತಿಯ ಅರ್ಜಿಯನ್ನು ಬರೆದೆ. ಇನ್ಸ್‌ಪೆಕ್ಟರವರು ಕೈಯಲ್ಲಿ ಅರ್ಜಿಯನ್ನು ತೆಗೆದುಕೊಂಡು ನೋಡಿ.

ಪ|| ಪ್ರಾ||—ಇದೇನೋ ನೀನು ಬರೆದ ಅರ್ಜಿ?

ಉತ್ತರ—ಹೌದು.

ಅರ್ಜಿಯಲ್ಲಿ "ಮಹಾಜನರಲ್ಲಿ ವಿಜ್ಞಾಪನೆ" ಎಂದು ಬರೆದೆ. ಮನೆಯ ಆಳು ಹಾಗೆ ಬರೀಬೇಡ. "ಇನ್ಸ್‌ಪೆಕ್ಟರವರಲ್ಲಿ ವಿಜ್ಞಾಪನೆ" ಎಂದು ಬರೀ ಅಂದ. ಅದೇ ರೀತಿಯಲ್ಲಿ ಮೊದಲಿದ್ದ ವಾಕ್ಯವನ್ನು ಆಳಿನ ಹೇಳಿಕೆಯಂತೆ ಬದಲಾಯಿಸಿ ಬರೆದೆ. ಪೋಲೀಸ್ ಇನ್ಸ್‌ಪೆಕ್ಟರವರು ಅರ್ಜಿಯನ್ನು ತೆಗೆದುನೋಡಿ "ನನ್ನ ಹೆಸರಿಗ್ಯಾತಕ್ಕೆ ಬರೆದೆ" ಸಬ್-ಇನ್ಸ್‌ಪೆಕ್ಟರಿಗೆ ಬರಿ ಎಂದು ಹೇಳಿ ಕೆಳಗೆ ರುಜು ಮಾಡಿಕೊಡು ಎಂದರು. ಅನಂತರ ಸಬ್ ಇನ್ಸ್‌ಪೆಕ್ಟರಿಗೆ ಅರ್ಜಿಯನ್ನು ಬರೆದು ಕೆಳಗೆ ಸಹಿ ಹಾಕಿದೆ.

(ಕೋರ್ಟಿನಲ್ಲಿ ಮಹಾಲಕ್ಷ್ಮಮ್ಮನ ಅರ್ಜಿಯನ್ನು ಓದಿದರು. ಅದರಲ್ಲಿ ಡಿ. ಎಸ್. ಮಹಾಲಕ್ಷ್ಮಮ್ಮ ಎಂದು ರುಜು ಇದ್ದಿತು.)

ಇನ್ಸ್‌ಪೆಕ್ಟರವರು ಪೋಲೀಸ್ ಡ್ರೆಸ್ಸುಗಳನ್ನು ಧರಿಸಿಕೊಂಡು ಕಚೇರಿಗೆ ಹೋಗುವಾಗ "ಸಬ್ ಇನ್ಸ್‌ಪೆಕ್ಟರವರು ಬ್ರಾಹ್ಮಣರು. ನೀನು ಇಲ್ಲಿ ಹೇಳಿದೆಯಲ್ಲಾ, ಅದೇ ರೀತಿಯಲ್ಲಿ ಕಚೇರಿಯಲ್ಲಿಯೂ ಕೂಡ ಹೇಳಬೇಕು. ನಾನು ಅವರಲ್ಲಿ ವಿಷಯಗಳೆಲ್ಲವನ್ನೂ ಮಾತನಾಡುವೆನು. ಇಲ್ಲಿ ಹೇಳಿದ ವಿವರಗಳೆಲ್ಲವನ್ನೂ ಅವರಲ್ಲಿಯೂ ಹೇಳಬೇಡ. ನೀನೇನಾದರೂ ಹಾಗೆ ಹೇಳದೆ ಹೋದರೆ ಆಚೆಕಡೆ ಇರುವ ಮಹಮ್ಮದೀಯರು ನಿನ್ನ ಪ್ರಾಣವನ್ನು ತೆಗೆದುಬಿಡುವರು" ಎಂದು ಹೇಳಿದರು.

ಶುಕ್ರವಾರವಾದ್ದರಿಂದ ಮಹಮ್ಮದೀಯರ ನಮಾಜಿನ ಸೌಕರ್ಯಾರ್ಥವಾಗಿ ೧೨ ಗಂಟೆಯಿಂದ ೧-೩೦ ಗಂಟೆಯವರೆಗೂ ಕೋರ್ಟನ್ನು ಮುಂದುವರಿಸಿದರು.

ವಿರಾಮವಾದನಂತರ

ವಿರಾಮದ ನಂತರ ಮಹಾಲಕ್ಷ್ಮಮ್ಮನ ಹೇಳಿಕೆಯು ಮುಂದರಿಯಿತು. ಅವಳು ಪಬ್ಲಿಕ್ ಪ್ರಾಸಿಕ್ಯೂಟರವರ ಪ್ರಶ್ನೆಗಳಿಗೆ ಉತ್ತರವನ್ನೀಯುತ್ತಾ ಹೇಳಿದ್ದೇನೆಂದರೆ—"ಇನ್ಸ್‌ಪೆಕ್ಟರವರು ಮನೆ ಜವಾನನನ್ನು ಕರೆದುಕೊಂಡು ಬರುವಂತೆ ಆಜ್ಞಾಪಿಸಿ ಹೊರಟು ಹೋದರು. ಜವಾನನು ಠಾಣೆಗೆ ಕರೆದೊಯ್ಯುತ್ತಾ ದಾರಿಯಲ್ಲಿ 'ಅವನ್ನು ಸಾಹೇಬರು ಹೇಳಿದಂತೆಯೇ ಹೇಳಬೇಕು' ಎಂದ. ಕಚೇರಿಯಲ್ಲಿ ನನ್ನನ್ನು ಬಿಟ್ಟು ಬಿಟ್ಟು ಇನ್ಸ್‌ಪೆಕ್ಟರವರ ಜವಾನನು ಹೊರಟುಹೋದ. ಠಾಣೆಯಲ್ಲಿ ಪೋಲೀಸ್ ಇನ್ಸ್‌ಪೆಕ್ಟರವರೂ ಸಬ್ ಇನ್ಸ್‌ಪೆಕ್ಟರವರೂ ಇದ್ದರು. ಅವರ ಸಮ್ಮುಖಕ್ಕೆ ಅರ್ಜಿಯನ್ನು ತೆಗೆದುಕೊಂಡು ಹೋದೆ. ಪೋಲೀಸ್ ಇನ್ಸ್‌ಪೆಕ್ಟರವರು ನನ್ನನ್ನು ಕುರಿತು "ಇವರೇ ಸಬ್ ಇನ್ಸ್‌ಪೆಕ್ಟರವರು ಅರ್ಜಿಯನ್ನು ಕೊಡು" ಎಂದರು. ಅರ್ಜಿಯನ್ನು ಕೊಟ್ಟೆ. ಅದನ್ನು ನೋಡಿಕೊಂಡು ನನ್ನ ತಂದೆ ರಾಮಸ್ವಾಮಿ ಪಂಡಿತರಿಗೆ ಹೇಳಿಕಳುಹಿಸಿದರು. ನಮ್ಮ ತಂದೆಯವರು ಬರುವುದರೊಳಗೆ ನನ್ನನ್ನು ಆಚೆಕಡೆ ಕುಳ್ಳಿರಿಸಿದರು. ನಂತರ ನಮ್ಮ ತಂದೆಯವರು ಬಂದು "ಯಾಕಮ್ಮ ಹೀಗೆ ಮಾಡಿದೆ. ಮನೆಯಲ್ಲೇನು ಕಷ್ಟವಿದ್ದಿತು" ಎಂದರು. (ಹುಡುಗಿಯು ಇಲ್ಲಿ ಅಳುತ್ತಿದ್ದಳು.)

ಪಬ್ಲಿಕ್ ಪ್ರಾಸಿಕ್ಯೂಟರು—ಅಳಬೇಡಮ್ಮಾ ಸರಿಯಾಗಿ ಹೇಳು ಎಂದರು.

ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದ್ದೇನೆಂದರೆ—"ನಾನೇನು ಮಾತಾಡಲಿಲ್ಲ. ಕಣ್ಣಿನಲ್ಲಿ ನೀರನ್ನು ಹಾಕಿಕೊಂಡೆ. ಜವಾಬನ್ನು ಹೇಳಲಿಲ್ಲ. ಪೋಲೀಸ್ ಇನ್ಸ್‌ಪೆಕ್ಟರವರು ನಮ್ಮ ತಂದೆಯವರನ್ನು ಒಳಕ್ಕೆ ಕರೆಸಿದರು. ನನ್ನನ್ನೂ ಒಳಕ್ಕೆ ಕರೆಸಿದರು. ನಾನೂ ಅವರ ಸಮ್ಮುಖಕ್ಕೆ ಹೋದೆ. ಇನ್ಸ್‌ಪೆಕ್ಟರವರು ನನ್ನ ತಂದೆಯನ್ನು ಕುರಿತು "ಏನ್ರಿ ನಿಮ್ಮ ಮಗಳನ್ನು ಹೊಡೀತೀರಂತೆ ಬಡೀತೀರಂತೆ ಎಂದು ಕೇಳಿದರು. ತಂದೆಯವರು ಪ್ರತ್ಯುತ್ತರವಾಗಿ "ನಾನು ಆಕೆಯನ್ನು ಹೊಡೆದವನೇ ಅಲ್ಲ. ಎಷ್ಟೋ ಪ್ರೀತಿಯಿಂದ ಅವಳನ್ನು ಸಾಕಿದ್ದೇನೆ" ಎಂದರು. ಇದನ್ನು ಹೇಳಿ ನಮ್ಮ ತಂದೆಯವರೂ ಅತ್ತರು. ಇನ್ಸ್‌ಪೆಕ್ಟರವರು ನನ್ನ ತಂದೆಯನ್ನು ಕುರಿತು "ಯಾಕ್ರೀ ಅಳುತ್ತೀರಿ ನಿಮ್ಮ ಮಗಳು ಜಾತಿಕೆಟ್ಟಿದ್ದಾಳೆ, ಮನೆಗೆ ಪುನಃ ಕರೆದುಕೊಂಡು ಹೋಗುತ್ತೀರಾ" ಎಂದರು. ಅದಕ್ಕೆ ನಮ್ಮ ತಂದೆಯವರು "ಅವಳು ಜಾತಿಗೆಟ್ಟಿದ್ದರೆ ಪ್ರಾಯಶ್ಚಿತ್ತ ಮಾಡಿ ಪುನಃ ಸೇರಿಸಿಕೊಳ್ಳುತ್ತೇನೆ" ಎಂದರು. ಇನ್ಸ್‌ಪೆಕ್ಟರವರು ಮನೆಗೆ ಹೋಗುತ್ತೀಯಾ? ಎಂದು ನನ್ನನ್ನು ಕೇಳಿದರು. ಪೋಲೀಸ್ ಇನ್ಸ್‌ಪೆಕ್ಟರವರು ಏನೂ ಮಾತನಾಡಬೇಡವೆಂದು ಬೆದರಿಸಿದ್ದರಿಂದ ನಾನು ಮೌನದಿಂದಿದ್ದೆ. ಸ್ವಲ್ಪ ಹೊತ್ತಿನ ನಂತರ ಅವರು ಸಬ್ ಇನ್ಸ್‌ಪೆಕ್ಟರವರನ್ನು ಅಲ್ಲಿಗೆ ಕರೆದರು. ಸಬ್ ಇನ್ಸ್‌ಪೆಕ್ಟರವರು ಬಂದು ನನ್ನನ್ನು ಅವರ ಆಫೀಸ್‌ರೂಮಿಗೆ ಕರೆದುಕೊಂಡು ಹೋದರು. ನಮ್ಮ ತಂದೆಯವರನ್ನು ಅಲ್ಲಿಗೆ ಕರೆದರು. ನಿಮ್ಮ ಮಗಳು ಮುಸಲ್ಮಾನರ ಜಾತಿಗೆ ಸೇರಿಕೊಂಡು ಸ್ವತಃ ಜಾತಿ ಕೆಟ್ಟಿದ್ದಾಳೆ. ಅವಳನ್ನು ಯಾತಕ್ಕೆ ಪುನಃ ಸೇರಿಸಿಕೊಳ್ಳುತ್ತೀರಿ? ಎಂದು ಸಬ್ ಇನ್ಸ್‌ಪೆಕ್ಟರವರು ನನ್ನ ತಂದೆಯನ್ನು ಕೇಳಿದರು. ಅದಕ್ಕೆ ಅವರು "ಪ್ರಾಯಶ್ಚಿತ್ತ ಮಾಡಿ ಜಾತಿಗೆ ತೆಗೆದುಕೊಳ್ಳುತ್ತೇನೆ. ಅವಳು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳು" ಎಂದು ದುಃಖಾಶ್ರುಪೂರಿತರಾಗಿ ಉತ್ತರವನ್ನಿತ್ತರು. 'ನೀವು ಅವಳನ್ನು ಹೊಡೀತೀರಂತೆ, ಬಡೀತೀರಂತೆ, ಕಾರಣವೇನು?' ಎಂದು ಸಬ್ ಇನ್ಸ್‌ಪೆಕ್ಟರು ಪುನಃ ನಮ್ಮ ತಂದೆಯವರನ್ನು ಪ್ರಶ್ನಿಸಿದರು. ಅದಕ್ಕೆ ನಮ್ಮ ತಂದೆಯವರು 'ನಾನು ಎಂದೂ ಹಾಗೆ ಮಾಡಿದವನಲ್ಲ. ಎಷ್ಟೋ ಪ್ರೇಮದಿಂದ ಸಾಕಿ ಸಲಹಿದ್ದೇನೆ' ಎಂದರು. ಅಷ್ಟೊತ್ತಿಗೆ ನನ್ನ ದೊಡ್ಡ ಭಾವಂದಿರಾದ ಶಂಕರಶಾಸ್ತ್ರಿಗಳು ಅಲ್ಲಿಗೆ ಬಂದು 'ಯಾಕಮ್ಮಾ ಹೀಗೆ ಮಾಡಿದೆ? ಮನೆಯಲ್ಲಿ ನಿನಗೇನು ತೊಂದರೆ ಇದ್ದಿತು?' ಎಂದು ನನ್ನನ್ನು ಕೇಳಿದರು. ಅದಕ್ಕೆ ನಾನು 'ಮನೆಯಲ್ಲಿ ಮಾತನಾಡಿಕೊಂಡ ಸಂಗತಿ ನಿಮಗೆ ಗೊತ್ತೇಯಿದೆಯಲ್ಲಾ. ಬೆಂಗಳೂರಿಗೆ ಹೋಗಿ ಸಮಾಜಕ್ಕೆ ಸೇರಬೇಕೆಂದು ಹೊರಟೆ. ದಾರಿಯಲ್ಲಿ ಮುಸಲ್ಮಾನರು ನನಗೆ ಹೀಗೆ ಮಾಡಿಬಿಟ್ಟರು ಎಂದು ಹೇಳಿದೆ. [ಹುಡುಗಿಯು ಮತ್ತೊಮ್ಮೆ ಇಲ್ಲಿ ಅತ್ತಳು.] ಅದಕ್ಕೆ ಅವರೇನೂ ಹೇಳಲಿಲ್ಲ.

ನಂತರ ಸಬ್ ಇನ್ಸ್‌ಪೆಕ್ಟರವರು ಟ್ರಂಕನ್ನು ತೆಗಿ ಎಂದು ಹೇಳಿದರು. ನಂತರ ಪೆಟ್ಟಿಗೆಯ ಸಾಮಾನುಗಳೆಲ್ಲವನ್ನೂ ತೆಗಿಸಿ ನಮ್ಮ ತಂದೆಯವರನ್ನು ಇದೆಲ್ಲಾ ಯಾರದು ಎಂದು ಪ್ರಶ್ನಿಸಿದರು. ನನ್ನನ್ನು ಆ ಬಗ್ಗೆ ಪ್ರಶ್ನಿಸಿದರು. ನಮ್ಮ ತಂದೆಯವರು ಈ ಪ್ರಶ್ನೆಗೆ 'ಕೆಲವು ಸಾಮಾನುಗಳು ನನ್ನದು ಕೆಲವು ಅವಳ ಅತ್ತೆಯ ಮನೆಯವರದು' ಎಂದು ಉತ್ತರವನ್ನಿತ್ತರು. ನಾನೂ ಹಾಗೆಯೇ ಉತ್ತರವನ್ನು ಕೊಟ್ಟೆ. ಅಷ್ಟು ಹೊತ್ತಿಗೆ ಪೋಲೀಸ್ ಇನ್ಸ್‌ಪೆಕ್ಟರವರು ಬಂದು, ಸಬ್ ಇನ್ಸ್‌ಪೆಕ್ಟರವರನ್ನು ಕರೆದುಕೊಂಡುಹೋಗಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದರು. ಸಬ್ ಇನ್ಸ್‌ಪೆಕ್ಟರು ಒಳಕ್ಕೆ ಬಂದು 'ಏನಮ್ಮಾ ನಿನ್ನ ತಮ್ಮ ಬಂದಿದ್ದಾನೆ, ಅವನ ಮದುವೆಗೆ ಏನು ಕೊಟ್ಟುಬಿಡುತ್ತೀಯೋ ಕೊಟ್ಟುಬಿಡು, ಎಂದರು. ನನ್ನ ಹತ್ತಿರ ೩೦ ಬಂಗಾರದ ಲಕ್ಷ್ಮೀಕಾಸುಗಳೂ ಬೆಳ್ಳಿ ಡಾಬೂ ಇದ್ದಿತು. ಅದರಲ್ಲಿ ೧೦ ಬಂಗಾರದ ಕಾಸುಗಳನ್ನೂ ಡಾಬನ್ನೂ ನನ್ನ ತಮ್ಮನಿಗೆ ಅವರು ಕೊಡಿಸಿದರು. ಚಿಕ್ಕ ಚಿಕ್ಕ ಎರಡು ಬೆಳ್ಳಿಯ ಕೃಷ್ಣ ವಿಗ್ರಹಗಳು ಪೆಟ್ಟಿಗೆಯಲ್ಲಿದ್ದವು. 'ನೀನು ಮುಸಲ್ಮಾನ ಜಾತಿಗೆ ಸೇರುತ್ತೀಯಾ, ಇದನ್ನೆಲ್ಲಾ ಕಟ್ಟಿಕೊಂಡಿದ್ದರೆ ಅವರು ಸುಮ್ಮನಿರುವರೇ? ಅದನ್ನೆಲ್ಲಾ ನಿಮ್ಮ ತಂದೆಯವರಿಗೆ ಕೊಟ್ಟುಬಿಡು. ಅವರು ದೇವರ ಸನ್ನಿಧಿಯಲ್ಲಿಟ್ಟುಕೊಂಡು ಪೂಜೆ ಮಾಡುತ್ತಾರೆ. ಕೊಟ್ಟುಬಿಡು" ಎಂದು ಆ ವಿಗ್ರಹಗಳನ್ನು ತಂದೆಯವರಿಗೆ ಕೊಡಿಸಿದರು. ನಮ್ಮ ತಂದೆಯವರು 'ಇವನ್ನೆಲ್ಲವನ್ನು ಯಾತಕ್ಕೆ ಸ್ವಾಮಿ ಕೊಡಿಸುತ್ತೀರಾ' ಎಂದು ಕೇಳಿದರು. ಸಬ್ ಇನ್ಸ್‌ಪೆಕ್ಟರವರು ಇದಕ್ಕೆ 'ಅದರ ಸಮಾಚಾರವನ್ನು ಅನಂತರ ನಿಮ್ಮೊಂದಿಗೆ ಹೇಳುತ್ತೇನೆ. ಈಗ ತೆಗೆದುಕೊಳ್ಳಿ' ಎಂದು ಉತ್ತರವನ್ನಿತ್ತರು. ಅಲ್ಲಿದ್ದವರನ್ನೂ ನಮ್ಮ ತಂದೆಯವರನ್ನೂ ನಂತರ ಹೊರಕ್ಕೆ ಕಳುಹಿಸಿಬಿಟ್ಟರು. ಎರಡು ಕಾಗದಗಳಲ್ಲಿ ಏನನ್ನೊ ಬರೆದುಕೊಂಡರು. ಒಂದು ಕಾಗದಕ್ಕೆ ರುಜು ಮಾಡುವಂತೆ ನನ್ನನ್ನು ಆಜ್ಞಾಪಿಸಿದರು. 'ಯಾತಕ್ಕೆ ಸ್ವಾಮಿ ರುಜು ಮಾಡುವುದು' ಎಂದು ನಾನು ಅವರನ್ನು ಕೇಳಿದೆ. ನೀನು ಅರ್ಜಿ ತಂದುಕೊಟ್ಟೆಯಲ್ಲಾ ಅದಕ್ಕೆ ರುಜು ಎಂದರು. ನಂತರ ರುಜು ಮಾಡಿದೆ. ಅದರಲ್ಲಿ ಏನು ಬರೆದಿದ್ದಿತೋ ಅದನ್ನು ನಾನು ಓದಲಿಲ್ಲ. [ಅರ್ಜಿಯನ್ನು ತೋರಿಸಿದಾಗ ಅದನ್ನು ಮಹಾಲಕ್ಷ್ಮಮ್ಮನು ಗುರ್ತಿಸಿದಳು.] ಆಮೇಲೆ ನನ್ನ ತಂದೆಯವರನ್ನು ಒಳಕ್ಕೆ ಕರೆಸಿದರು. ನಮ್ಮ ತಂದೆಯವರು ಒಳಕ್ಕೆ ಬಂದಮೇಲೆ, ಸಬ್ ಇನ್ಸ್‌ಪೆಕ್ಟರು 'ನಿಮ್ಮ ಹುಡುಗಿಯನ್ನು ಮನೆಗೆ ಕರೆದುಕೊಂಡು ಹೋಗುತ್ತೀರೇನ್ರಿ' ಎಂದು ಕೇಳಿದರು. ಅದಕ್ಕೆ ನಮ್ಮ ತಂದೆಯವರು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದರು. ತಂದೆಯವರು ರೂಮಿನೊಳಕ್ಕೆ ಬಂದ ಮೇಲೆ ಯಾವುದಕ್ಕೋ ರುಜುಮಾಡಿ, ಎಂದು ಹೇಳಿದರು. ಯಾತಕ್ಕೆ ರುಜುಮಾಡಬೇಕೆಂದು ನಮ್ಮ ತಂದೆಯವರು ಪೋಲೀಸಾಧಿಕಾರಿಗಳನ್ನು ಪ್ರಶ್ನಿಸಿದರು. ನಿಮ್ಮ ಮಗಳು ನಿಮ್ಮ ಮನೆಗೆ ಬರಬೇಕಾಗಿದ್ದರೆ ರುಜುಮಾಡಿ, ಇಲ್ಲದಿದ್ದರೆ ಬಿಟ್ಟುಬಿಡಿ ಎಂದು ಗರ್ಜಿಸಿದರು. ನಂತರ ನಮ್ಮ ತಂದೆಯವರ ಕೈನಿಂದ ಕಾಗದಕ್ಕೆ ರುಜುಮಾಡಿಸಿಕೊಂಡು ಹೊರಡಿ ಎಂದು ಹೇಳಿದರು. ನಮ್ಮ ತಂದೆಯವರು "ಮಗಳನ್ನು ಕಳುಹಿ" ಎಂದು ಕೇಳಿದರು. ಅದಕ್ಕೆ ಮಹಾಲಕ್ಷ್ಮಮ್ಮನನ್ನು ಪೋಲೀಸಿನವರ ಕೈಲಿ ಕಳುಹಿಸುತ್ತೇನೆ ನೀವು ಹೊರಡಿ ಎಂದರು. ನಮ್ಮ ತಂದೆಯವರು ಅಲ್ಲಿಂದ ಹೊರಟುಹೋದಮೇಲೆ ಸಬ್ ಇನ್ಸ್‌ಪೆಕ್ಟರವರು ಇನ್ಸ್‌ಪೆಕ್ಟರವರ ರೂಮಿಗೆ ಹೋಗವನ್ನೂ ಅವರು ಹ್ಯಾಗೆಹೇಳಿದರೆ ಹಾಗೆ ಕೇಳು ಎಂದರು. ನಾನು ಪೋಲೀಸ್ ಇನ್ಸ್‌ಪೆಕ್ಟರವರ ರೂಮಿಗೆ ಅವರ ಆಜ್ಞೆಯಂತೆ ಹೋದೆ. ಖುಲಾಸೆಯಾದ ಅಪರಾಧಿಗಳೂ ನಮ್ಮ ಮನೆ ಹಿಂದುಗಡೆಯಲ್ಲಿ ವಾಸಿಸುವ ಒಬ್ಬ ಮಹಮ್ಮದೀಯನೂ ಕೆಲವು ಮುಸಲ್ಮಾನರೂ ಅಲ್ಲಿದ್ದರು. ಆ ಮೇಲೆ ಇನ್ಸ್‌ಪೆಕ್ಟರವರು "ಏನಮ್ಮಾ ನೀನು ಹೇಳಿದ್ದೆಲ್ಲಾ ಸರಿಯಾಗಿದೆ. ನಮ್ಮ ಬಳಿ ೧೫ ರೂಪಾಯಿ ಸಂಬಳದವನೊಬ್ಬನಿದ್ದಾನೆ. ಅವನನ್ನು ವಿವಾಹ ಮಾಡಿಕೊಳ್ಳಲು ನಿನಗೆ ಇಷ್ಟವಿದೆಯೇ" ಎಂದು ಕೇಳಿದರು. "ಏನು ಸ್ವಾಮಿ ಈ ರೀತಿ ಕೇಳುತ್ತೀರಿ" ಎಂದು ನಾನು ಉತ್ತರವನಿತ್ತೆ. ಹೋಗಲಿ ಇಲ್ಲಿ ನಾಲ್ಕೈದು ಜನರಿದ್ದಾರೆ. ಅವರಲ್ಲಿ ಯಾರನ್ನಾದರೂ ಮದುವೆ ಮಾಡಿಕೋ ಎಂದರು. ಅದಕ್ಕೆ 'ಪುನಃ ಯಾತಕ್ಕೆ ಸ್ವಾಮಿ ಹೀಗೆ ಕೇಳುತ್ತೀರಿ ನನಗೆ ಸುತರಾಂ ಮದುವೆಯ ಇಷ್ಟವಿಲ್ಲ ಎಂದು ನಾನು ಅವರಲ್ಲಿ ಅರುಹಿದೆ. ನಿನ್ನ ಗತಿ ಏನಾದರೆ ನನಗೇನು ಎಂದು ಹೇಳಿ ಒಬ್ಬ ಪೋಲೀಸನವನನ್ನೂ, ಒಬ್ಬ ಕೋಟಿಯನ್ನೂ ಜೊತೆಮಾಡಿ ನನ್ನನ್ನು ಕಳುಹಿಸಿದರು. ಎಲ್ಲಿಗಾದರೂ ಹೋಗಲಿ ಎಂದು ಹೇಳಿ ಕಳುಹಿ ಬಿಟ್ಟರು. ಅಲ್ಲಿಂದ, ಹೈಸ್ಕೂಲು ಪಕ್ಕದಲ್ಲಿರುವ ಸಂದಿಯ ಮುಖಾಂತರ ನಮ್ಮ ತಂದೆಯ ಮನೆಗೆ ಹೋಗೋಣವೆಂದು ಹೊರಡಲುದ್ಯುಕ್ತಳಾದೆ. ಹೋಗುತ್ತಿದ್ದಾಗ ಕಟ್ಟೆಗೆ ಮಂಡಿಯವನೂ, ನಮ್ಮ ಮನೆ ಹಿಂಭಾಗದಲ್ಲಿರುವ ಮಹಮ್ಮದೀಯನೂ, ಸ್ಕೂಲ್‌ಮಾಸ್ಟರೂ ನನ್ನನ್ನು ಸ್ವಲ್ಪ ದೂರ ಹಿಂಬಾಲಿಸಿದರು.' 'ಎಲ್ಲೀ ಹೋಗೋದು? ಪಡಸಾಲೆಯಲ್ಲಿ ಕೂತುಕೋ' ಅಂದರು. ನಾನು, ಹೋಗಿ ಕೈಸಾಲೆಯಲ್ಲಿ ಕೂತುಕೊಂಡೆ, ಅಲ್ಲಿಗೆ ಲಾಯರ್ ಶೇಷಗಿರಿರಾಯರು ಬಂದರು. 'ಏನಮ್ಮಾ ಇಲ್ಲಿ ಕೂತಿದ್ದೀಯೇ? ನಮ್ಮ ಮನೆಗೆ ಬಾ ಎಂದು ಕರೆದರು. ನಾನಲ್ಲಿ ಬರುವುದಿಲ್ಲ ಭಯವಾಗುತ್ತದೆ. ಎಂದು ಶೇಷಗಿರಿರಾಯರಲ್ಲಿ ಹೇಳಿದೆ. ಏನು ಭಯವಮ್ಮ ನಿನಗೆ ಪೋಲೀಸಿನವನೂ ಇದ್ದಾನೆ. ನಾನೂ ಇದ್ದೇನೆ. ಎಂದರು. ಅನಂತರ ಅವರು ನನ್ನನ್ನು ಅವರ ಗೃಹಕ್ಕೆ ಕರೆದೊಯ್ದರು. ಅನಂತರ ನಮ್ಮ ತಂದೆಯವರಿಗೆ ಹೇಳಿ ಕಳುಹಿಸಿದರು. ಅಷ್ಟರಲ್ಲಿ 'ಯಾಕಮ್ಮ ಮನೆಯನ್ನು ಬಿಟ್ಟು ಬಂದೆ ಎಂದು ನನ್ನನ್ನು ಪ್ರಶ್ನಿಸಿದರು.' ಅದಕ್ಕೆ 'ಬೀದಿಯಲ್ಲಿ ಮುಸಲ್ಮಾನರಿದ್ದರು ನನ್ನ ತಂದೆ ಹೊಡೆದರು ಆದುದರಿಂದ ಬಂದೆ' ಎಂದೆ. ನಮ್ಮ ತಂದೆಯವರು ಸ್ವಲ್ಪ ಹೊತ್ತಿನ ಬಳಿಕ ಅಲ್ಲಿಗೆ ಬಂದರು. ಶೇಷಗಿರಿರಾಯರು ನಮ್ಮ ತಂದೆಯವರನ್ನು 'ಯಾತಕ್ಕೆ ಹೊಡೆದೆ' ಎಂದು ಕೇಳಿದರು. ನಾನೆಂದೂ ಹೊಡೆದವನಲ್ಲ, ನೀವು ಹೀಗೆ ನನ್ನನ್ನು ಯಾತಕ್ಕೆ ಕೇಳುತ್ತೀರಿ ಎಂದು ನಮ್ಮ ತಂದೆಯವರು ಅವರಿಗೆ ಉತ್ತರವನ್ನಿತ್ತರು. ಹೋಗಲಿ ಈವಾಗಲಾದರೂ ಮಹಾಲಕ್ಷ್ಮಮ್ಮನನ್ನು ಮನೆಗೆ ಕರೆದೊಯ್ಯುವಿರಾ? ಎಂದು ಶೇಷಗಿರಿರಾಯರು ಕೇಳಿದರು. ಅದಕ್ಕೆ ನಮ್ಮ ತಂದೆಯವರು ಒಪ್ಪಿದರು. ಹೋಗುತ್ತೀಯಾ ಎಂದು ನನ್ನನ್ನು ಕೇಳಿದರು. ಅದಕ್ಕೆ ನಾನು ಸಮ್ಮತಿಸಿದೆ. ಬಹಳ ಜನ ಮುಸಲ್ಮಾನರಿದ್ದಾರೆ. ಪೋಲೀಸಿನವರಿಗೆ ನನ್ನನ್ನು ಬಿಟ್ಟುಬಿಡುವ ಹಾಗೆ ಹೇಳಿ ಎಂದು ನಾನು ಶೇಷಗಿರಿರಾಯರಿಗೆ ಹೇಳಿದೆ. ಶೇಷಗಿರಿರಾಯರು ಹಿಂದೂಸ್ತಾನೀ ಭಾಷೆಯಲ್ಲಿ ಪೋಲೀಸಿನವರಿಗೆ ಏನನ್ನೋ ಹೇಳಿದರು. ನಾನೂ ನನ್ನ ತಂದೆ ಮತ್ತು ಪೋಲೀಸನವನು ಈ ಮೂರು ಮಂದಿಯೂ ದಾರಿಯಲ್ಲಿ ಬರುತ್ತಾ ಇದ್ದೆವು. ಆಗ ಬೀದಿಯಲ್ಲಿ ಬಹುಮಂದಿ ಮುಸಲ್ಮಾನರಿದ್ದರು. ನಮ್ಮ ತಂದೆಯವರು ಏನಮ್ಮಾ ಬೀದಿಯಲ್ಲಿ ಮುಸಲ್ಮಾನರಿದ್ದಾರೆ. ಹಿಂದೂಗಳನ್ನು ಕರೆದುಕೊಂಡು ಬರಲೇ ಎಂದು ನನ್ನನ್ನು ಕೇಳಿದರು. ನನಗೆ ಭಯವಾಗಿದ್ದುದರಿಂದ ಬೇಗ ಕರೆದುಕೊಂಡು ಬಾ ಎಂದು ಅವರಿಗೆ ಹೇಳಿದೆನು. ನಮ್ಮ ತಂದೆಯವರು ಶೀಘ್ರದಲ್ಲಿಯೇ ಬರುತ್ತೇನೆಂದು ಹೊರಟುಹೋದರು. ಪೋಲೀಸಿನವನು ೪-೫ ನಿಮಿಷಗಳು ಅಲ್ಲಿದ್ದು ಬಹಳ ಕೆಲಸವಿದೆಯೆಂದು ಹೇಳಿ ಸಂದಿಯ ಮುಖಾಂತರ ಕರೆದೊಯ್ಯಲು ನಿಶ್ಚಯಿಸಿದರು. ಅವನು ಸ್ವಲ್ಪ ದೂರ ಕರೆದೊಯ್ದು ಯಾವುದೋ ಗಲ್ಲಿಯ ಮುಖಾಂತರ ಮಾಯವಾದನು. (ಪುನಃ ಮಹಾಲಕ್ಷ್ಮಮ್ಮನು ಇಲ್ಲಿ ಬಿಕ್ಕಿ ಬಿಕ್ಕಿ ಅಳುತ್ತಾ, ನಾಲ್ಕೈದು ಮಂದಿ ಮುಸಲ್ಮಾನರೂ ಇನ್ನಿಬ್ಬರೂ ಅಲ್ಲಿಗೆ ಬಂದರು. ನಮ್ಮ ಮನೆ ಹಿಂಭಾಗದಲ್ಲಿರುವ ಮುಸಲ್ಮಾನನು ನನ್ನ ಟ್ರಂಕನ್ನು ಕಿತ್ತುಕೊಂಡ (ಅಳುವು ಅಧಿಕವಾಯಿತು) ಕಟ್ಟಿಗೆ ಮಂಡಿಯವನೂ (ಖುಲಾಸೆಯಾದ ಅಪರಾಧಿ) ಮತ್ತು ಇನ್ನೋರ್ವನೂ ನನ್ನ ಕೈಹಿಡಿದು ಎಳೆದು ಸ್ವಲ್ಪದೂರ ಕರೆದುಕೊಂಡು ಹೋದರು. ಖುಲಾಸೆಯಾದ ಅಪರಾಧಿಯೂ ಇನ್ನೊಬ್ಬನೂ ಅಲ್ಲಿ ನಿಂತಿರುವ ಮಿಕ್ಕ ಮುಸಲ್ಮಾನರೆಲ್ಲರೂ ಎಲ್ಲಿಗೋ ಹೊರಟುಹೋದರು. ಸ್ಕೂಲ್‌ಮೇಸ್ಟರು ಇನ್ನೊಬ್ಬ ಮುಸಲ್ಮಾನನ ವಶಕ್ಕೆ ನನ್ನನ್ನೊಪ್ಪಿಸಿ ವೆಂಕಟಗಿರಿ ಕೋಟೆಯಿಂದ ಒಬ್ಬ ಹೆಂಗಸನ್ನು ಕರೆದುಕೊಂಡು ಬರುವುದಾಗಿ ಹೊರಟು ಹೋದನು. ನನ್ನನ್ನು ವೆಂಕಟಗಿರಿಕೋಟೆ ಸ್ಕೂಲಿನ ಸಮೀಪದಲ್ಲಿಟ್ಟಿದ್ದರು. ನನ್ನನ್ನು ಕರೆದುಕೊಂಡುಹೋದವನ ಪೈಕಿ ಇಲ್ಲಿನ ೪ ನೆಯ ಅಪರಾಧಿಯೂ ಕೂಡ ಇದ್ದನು. ಅವನು ರಟ್ಟೆಹಿಡಿದು ಕರೆದುಕೊಂಡು ಹೋಗಿ ಸ್ಕೂಲಿನಲ್ಲಿ ಕುಳ್ಳಿರಿಸಿದ ಸ್ವಲ್ಪಹೊತ್ತಿನನಂತರ ಸ್ಕೂಲ್ ಮೇಸ್ಟರು ಒಬ್ಬ ಜವಾನನನ್ನು ಕರೆದುಕೊಂಡು ಅಲ್ಲಿಗೆ ಬಂದರು. ಮೇಸ್ಟರು ನನ್ನನ್ನು ಊಟ ಮಾಡುತ್ತೀಯಾ ಎಂದು ಕೇಳಿದರು. ನಾನು ಊಟಮಾಡೋದಿಲ್ಲವೆಂದು ಹೇಳಿದೆ. ಹಾಲನ್ನಾದರೂ ತರಿಸಿಕೊಡುತ್ತೇನೆಂದು ಹೇಳಿದ. ನನಗೆ ಹಾಲೂ ಬೇಕಿಲ್ಲವೆಂದು ನಿರಾಕರಿಸಿದೆ. ಅಲ್ಲಿಂದ ೧ ಗಂಟೆಗೆ ಪುನಃ ಬರುವುದಾಗಿ ಹೊರಟುಹೋಗಿ ನನಗೆ ೫೦-೫೫ ವರ್ಷ ವಯಸ್ಸಿನ ಮುದುಕನೊಬ್ಬನು ಹಾಲನ್ನು ತೆಗೆದುಕೊಂಡು ಬಂದ. ಅವನೊಬ್ಬ ಮುಸಲ್ಮಾನನವನು. ಹಾಲನ್ನು ಜವಾನಳ ಹತ್ತಿರಕೊಟ್ಟು ಮಾತನಾಡುತ್ತಿದ್ದು ಹೊರಟುಹೋದ. ಹಾಲನ್ನು ಕುಡಿ ಎಂದು ಆ ಜವಾನಳು ಒತ್ತಾಯಪಡಿಸಿದಳು. ನನಗೆ ಆಯಾಸವಾಗಿದ್ದುದರಿಂದ ಹಾಲನ್ನು ಕುಡಿದೆ. ತೆಗೆದುಕೊಂಡ ಸ್ವಲ್ಪಹೊತ್ತಿನ ಅನಂತರ ಹೊಟ್ಟೆಯಲ್ಲಿ ಸಂಕಟವಾಯಿತು. ಆಮೇಲೆ ಜವಾನಳು ಆ ಮುದುಕನು ಬಂದಿದ್ದನಲ್ಲಾ ಅವನನ್ನು ಮದುವೆ ಮಾಡಿಕೋ ಅವನ ಹೆಂಡತಿಯೂ ಕೆಟ್ಟಿದ್ದಾಳೆ ನೀನು ಸುಖವಾಗಿರಬಹುದು ಎಂದು ನನಗೆ ಸಲಹೆಯನ್ನಿತ್ತರು. ಅದಕ್ಕೆ ನಾನು ಕುಪಿತಳಾಗಿ ಈರೀತಿ ನೀನು ನನಗೆ ಹೇಳಬಹುದೇ ಎಂದು ಗದರಿಸಿದೆ. ಅನಂತರ ಒಂದುಗಂಟೆಗೆ ಮೇಸ್ಟರೂ ಅವರ ಅಜ್ಜ ಪೇಶ್ಕಾರರೊಬ್ಬರೂ ಅಲ್ಲಿಗೆ ಬಂದು ಅವರ ಮನೆಗೆ ನನ್ನನ್ನು ಕರೆದೊಯ್ದರು. ನನ್ನನ್ನು ಕರೆದುಕೊಂಡುಹೋಗಿ ಮನೆಯು ಇವರಿಬ್ಬರಲ್ಲಿ ಯಾರದೋ ಹೇಳಲಾರೆ. ಅಲ್ಲಿ ನನ್ನನ್ನು ಕೂರಿಸಿದರು. ೫ ಗಂಟೆಗೆ ಪುನಃ ಬರುತ್ತೇನೆಂದು ಮೇಸ್ಟರು ಹೊರಟುಹೋದರು ಪೇಶ್ಕಾರರು ಅಲ್ಲಿಗೆ ಬಂದು 'ಯಾತಕ್ಕೆ ಸಂಕಟಪಡುತ್ತೀಯಾ ನಿಮ್ಮ ಜಾತಿಯಲ್ಲಿ ಏನಿದೆ?' ಎಂದು ಹೇಳಿ ಹೊರಟುಹೋದರು.

ಸ್ಕೂಲ್‌ಮೇಸ್ಟರು ೫ ಗಂಟೆಯ ಸುಮಾರಿನಲ್ಲಿ ನನಗೆ ಕಣ್ಣು ಬೇನೆಯಾಗಿದ್ದುದರಿಂದ ಔಷಧವನ್ನೂ ಮುಸಲ್ಮಾನ ಮತಸಂಬಂಧದ ಒಂದು ಪುಸ್ತಕವನ್ನೂ ತೆಗೆದುಕೊಂಡು ಬಂದರು. ಕಣ್ಣಿನ ಔಷಧವನ್ನು ಜವಾನಳ ವಶಕ್ಕೆ ಕೊಟ್ಟು ಪುಸ್ತಕವನ್ನು ನನ್ನ ಹತ್ತಿರಕೊಟ್ಟು ಯಾವುದೋ ಮಂತ್ರವನ್ನು ಉಚ್ಚರಿಸಿಬಿಟ್ಟು ಹೊರಟುಹೋದರು. ಅನಂತರ ಮೇಸ್ಟರು ಬಳೆಗಳನ್ನು ತೆಗೆದುಕೊಂಡುಬಂದು ಜವಾನಳಿಗೆ ಕೊಟ್ಟರು. ಜವಾನಳು ಬಳೆಗಳನ್ನು ನನಗೆ ತೊಡಿಸಲು ಬಂದಳು. ನಾನು ಬಳೆಗಳನ್ನು ಧರಿಸಬಾರದೆಂದು ಅವಳಿಗೆ ಹೇಳಿದೆ. (ಬಿಕ್ಕಿಬಿಕ್ಕಿ ಪುನಃ ಅಳುತ್ತಾ) ಅವಳು ನನಗೆ ಎರಡು ಏಟುಗಳನ್ನು ಕೊಟ್ಟು ಕೈಗೆ ನಾಲ್ಕು ನಾಲ್ಕು ಬಳೆಗಳಂತೆ ಬಲಾತ್ಕಾರವಾಗಿ ತೊಡಿಸಿದಳು. ಅನಂತರ ಸ್ಕೂಲ್‌ಮೇಸ್ಟರು ನನ್ನನ್ನು ಶಾಲೆಗೆ ಕರೆದೊಯ್ದರು. ಅಲ್ಲಿಗೆ ೩-೪ ಜನ ಮಹಮ್ಮದೀಯರನ್ನು ಕರೆದುಕೊಂಡು ಬಂದು ಒಬ್ಬನನ್ನು ತೋರಿಸಿ ಇವನು ಬೀಡಿ ಅಂಗಡಿಯ ಮಾಲೀಕ, ಐಶ್ವರ್ಯವಂತ, ಇವನನ್ನು ಮದುವೆಮಾಡಿಕೋ ಎಂದರು. ಇನ್ನೊಬ್ಬನನ್ನು ಕೂಡ ತೋರಿಸಿ ಇವನೂ ಸಾಹುಕಾರ ಏನ್ ಹೇಳ್ತೀಯಾ ಎಂದರು. ಜಾತಿಕೆಡಿಸಿದ್ದಲ್ಲದೆ ಮದುವೆಯನ್ನು ಕೂಡ ಮಾಡಿಸುತ್ತೀರಾ? ಎಂದು ನಾನು ಅವರಿಗೆ ಹೇಳಬೇಕಾಯಿತು. ಇನ್ನೂ ಇಬ್ಬರು ಮೂರು ಮಂದಿ ಬಂದಿದ್ದಾರೆ. ಅವರನ್ನೂ ನೋಡು ಎಂದು ಪುನರಾವರ್ತಿ ವಿವಾಹದ ವಿಷಯವನ್ನು ಪ್ರಸ್ತಾಪಿಸಿದರು. ನಾನು ಪುನಃ ಅದೇರೀತಿಯಲ್ಲಿ ಜವಾಬನ್ನು ಕೊಟ್ಟೆ. ನಂತರ ಮೇಸ್ಟರು ಹುಡುಗರನ್ನೆಲ್ಲಾ ಕರೆದುಕೊಂಡು ಹೊರಟುಹೋದರು. ಇನ್ನೊಬ್ಬ ಸ್ಕೂಲ್‌ಮೇಸ್ಟರನ್ನು ನನ್ನ ಉಸ್ತುವಾರಿಗೆ ಇಟ್ಟು ಅವರು ಅಲ್ಲಿಂದ ಹೊರಟುಹೋದರು. ಮೇಸ್ಟರು ನನ್ನನ್ನು ಕುರಿತು ಏನಮ್ಮಾ ನಮ್ಮ ಜಾತಿಗೆ ಸೇರಿಕೊಂಡಮೇಲೆ ನಿನ್ನನ್ನ ಯಾರಿಗಾದರೂ ಮದುವೆ ಮಾಡಬೇಕು. ಮದುವೆಮಾಡಿಕೊಳ್ಳದೇ ಹೋದರೆ ನಮ್ಮವರೆಲ್ಲರೂ ಸುಮ್ಮನೆ ಇರುವುದಿಲ್ಲ. ಎಂದು ಹೇಳಿದರು. ನಾನು ಏನನ್ನೂ ಹೇಳದೆ ಅಳುತ್ತಾ ಕೂತಿದ್ದೆ. ಅನಂತರ ಮುಂಚೆ ಇದ್ದ ಮೇಸ್ಟರು (ಖುಲಾಸೆಯಾದ ೧ ನೆಯ ಅಪರಾಧಿ) ಅಲ್ಲಿಗೆ ಬಂದು ಈ ರಾತ್ರಿ ಸೇಟ್‌ಸಾಬಿ ಮನೆಯಲ್ಲಿರು. ನಾಳೆ ಬೆಳಗ್ಗೆ ನಿನ್ನ ಇಷ್ಟಬಂದಂತೆ ಮಾಡುತ್ತೇವೆ ಎಂದು ಹೇಳಿದರು ನಾನೆಲ್ಲಿಗೂ ಬರಲಾರೆ ಇಲ್ಲಿಯೇ ಇರುತ್ತೇನೆ. ಎಂದು ಹೇಳಿದೆ. ನೀನು ಇಲ್ಲಿದ್ದರೆ ಈ ರಾತ್ರಿ ಅನೇಕ ಘಟನೆಗಳು ನಡೆದುಹೋಗುವುದು ಇಲ್ಲಿರುವುದಕ್ಕಾಗುವುದಿಲ್ಲ ಎಂದರು. ಪ್ರಾಣವನ್ನಾದರೂ ತೆಗೆದುಬಿಡಿ ಸುಮ್ಮನೆ ನನ್ನನ್ನು ಯಾತಕ್ಕೆ ಹಿಂಸಿಸುವಿರಿ ಎಂದು ಅವರಲ್ಲಿ ಹೇಳಿದೆ. ನಂತರ ಸೇಟ್‌ಸಾಬಿಯೂ ಇನ್ನೊಬ್ಬನೂ ಒಳಕ್ಕೆ ಬಂದರು. ಸೇಟ್‌ಸಾಬಿಯ ಜೊತೆಯಲ್ಲಿ ಬಂದಿದ್ದವನು ನನ್ನ ಟ್ರಂಕನ್ನು ತೆಗೆದುಕೊಂಡು ಮೋಟಾರುಕಾರಿನಲ್ಲಿಟ್ಟ. ಸೇಟ್‌ಸಾಬಿಯು ನನ್ನ ಕೈಹಿಡಿದು ಎಳೆದುಕೊಂಡು ಮೋಟಾರಿನಲ್ಲಿ ಕೂತುಕೊಂಡ ನಂತರ ಮೋಟಾರುಗಾಡಿಯು ಸೇಟ್‌ಸಾಬಿಯ ಮನೆಗೆ ಹೋಯಿತು. ರಸ್ತೆಯಲ್ಲಿ ಬಹುಮಂದಿ ಮುಸಲ್ಮಾನರಿದ್ದರು. ಎರಡು ಕಡೆಯಲ್ಲಿಯೂ ತೆರೆಯನ್ನು ಕಟ್ಟಬಿಟ್ಟು ನನ್ನನ್ನು ಒಳಕ್ಕೆ ಕರದೊಯ್ದರು. ಒಳಗಡೆ ಸೇಟ್‌ಸಾಬಿಯ ಹೆಂಡತಿಯ ಸಮೀಪಕ್ಕೆ ನನ್ನನ್ನು ಕರೆದುಕೊಂಡು ಹೋದರು. ಖಾಜೀಸಾಬಿ, ಅಜೀಂ ಎಂಬಿಬ್ಬರು ಬಂದಿದ್ದಾರೆ ಎಂದು ಸೇಟ್‌ಸಾಬಿಯು ಅಲ್ಲಿದ್ದವರಿಗೆ ಹೇಳಿದ. ಅನಂತರ ಒಂದು ಕಾಗದದಲ್ಲಿ ಏನನ್ನೋ ಬರೆದು ಸೇಟ್‌ಸಾಬಿಯು ನನ್ನನ್ನು ರುಜುಮಾಡುವ ಹಾಗೆ ಹೇಳಿದ. ನಾನು ರುಜುಮಾಡುವುದಿಲ್ಲವೆಂದು ನಿರಾಕರಿಸಿದೆ. ಪರವಾ ಇಲ್ಲ. ನಮ್ಮ ಜಾತಿಗೆ ಸೇರಿಸಿಕೊಂಡರೆ ಈ ತರಹ ರುಜುಮಾಡಬೇಕು. ಎಂದು ಒತ್ತಾಯಪಡಿಸಿದ. ನನ್ನನ್ನು ಬೆದರಿಸಿ ಕಾಗದಕ್ಕೆ ರುಜುಮಾಡಿಸಿಕೊಂಡ (ಕಾಗದವನ್ನು ಎಗ್ಜಿಬಿಟ್ ಪಿ. ೬. ಮಹಾಲಕ್ಷ್ಮಮ್ಮನು ಕೋರ್ಟಿನಲ್ಲಿ ಗುರ್ತಿಸಿದಳು.)

ಕೋರ್ಟಿನವರು ನಿಕಾಹಪತ್ರದ ವಿವರಗಳನ್ನು ಓದಿದರು. ಅದರಲ್ಲಿ ಮಹಾಲಕ್ಷ್ಮಮ್ಮನ ಮಹಮ್ಮದೀಯ ಹೆಸರೂ (ಅಲೀಮಾಬೀ ಬರಕತ್) ವರನ ಹೆಸರೂ ನಮೂದಾಗಿದ್ದಿತು. ನಂತರ ಪಡಸಾಲೆಯಲ್ಲಿ ಅವರೇನನ್ನೋ ಹಿಂದೂಸ್ತಾನಿಯಲ್ಲಿ ಓದುತ್ತಿದ್ದರು. ಅನಂತರ ಸೇಟ್‌ಸಾಬಿಯು ಒಂದು ಮಸ್ಲಿನ್ ಸೀರೆಯನ್ನೂ ಒಂದು ವಸ್ತ್ರದ ತುಂಡನ್ನು ತೆಗೆದುಕೊಂಡುಬಂದು ಧರಿಸುವಂತೆ ಒತ್ತಾಯಪಡಿಸಿದನು. ನಾನು, ಆ ಸೀರೆಯನ್ನು ಉಟ್ಟುಕೊಳ್ಳಲಿಲ್ಲ. ನಂತರ ಸೇಟ್‌ಸಾಬಿಯ ಹೆಂಡತಿಯು ಎರಡೇಟುಗಳನ್ನು ಕೊಟ್ಟು ಸೀರೆಯನ್ನು ಉಟ್ಟುಕೊಳ್ಳುವಂತೆ ಗದರಿಸಿದಳು. ಅವಳು ಬೆದರಿಸಿ, ಹೊಡೆದು ಸೀರೆಯನ್ನು ಉಡಿಸಿದಳು. ಹೂವನ್ನು ಕರೀಮಣಿಯನ್ನು ತಂದು ಧರಿಸುವಂತೆ ಹೇಳಿದಳು. ನಾನು ಮುಡಿದುಕೊಳ್ಳುವುದಿಲ್ಲವೆಂದು ಕೆಳಕ್ಕೆ ಎಸೆದೆ ನಂತರ ಆಕೆಯು ಸೇಟ್‌ಸಾಬಿಯನ್ನು ಕರೆದು ಸಂಗತಿಯನ್ನು ತಿಳಿಸಿದಳು. (ಅಳುತ್ತಾ) ಸೇಟ್‌ಸಾಬಿಯು ಜೇಬಿನಿಂದ ಚೂರಿಯನ್ನು ತೆಗೆದು ಪ್ರಾಣವನ್ನು ತೆಗೆದು ಬಿಡುತೇನೆ ಹುಷಾರ್ ಎಂದು ಹೆದರಿಸಿದ ಮಾತನಾಡುವುದಕ್ಕೆ ಚೈತನ್ಯವಿಲ್ಲದೆ ಸುಮ್ಮನೆ ಇದ್ದೆ. ನಂತರ ಸೇಟ್‌ಸಾಬಿಯು ಹೆಂಡತಿಯು ಹೂವನ್ನು ಮುಡಿಸಿ

(6 ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೩ನೇ ನವಂಬರ್ ತಾ|| ೧೩ನೇ ಸೋಮವಾರ.

ದಿವಂಗತರಾದ ಎಂ. ವೆಂಕಟಕೃಷ್ಣಯ್ಯನವರು.

ರಾಜಧಾನಿಯಲ್ಲಿ ವೃದ್ಧಪಿತಾಮಹರೆಂದು ಪ್ರಖ್ಯಾತಿ ಪಡೆದ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರು ಕೆಲವುದಿವಸಗಳಿಂದ ಅಸ್ವಸ್ಥರಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಲಿದ್ದು, ಕಳೆದ 8ನೆಯ ತಾರೀಖು ಬುಧವಾರ ಪ್ರಾತಃಕಾಲ ಭಗವನ್ನಾಮ ಸ್ಮರಣದಿಂದ ತಮ್ಮ ಭೌತಿಕಶರೀರವನ್ನು ತ್ಯಜಿಸಿದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದಿಸುತ್ತೇವೆ. "ಪರೋಪಕಾರಾರ್ಥಮಿದಂ ಶರೀರಂ" ಎಂಬ ವಚನಾರ್ಥವು ಈ ಮಹೋದಯರ ಪ್ರತಿಯೊಂದು ರೋಮನಾಳಗಳಲ್ಲಿಯೂ ಹೇಗೆ ವ್ಯಾಪಿಸಿ ಕೆಲಸಮಾಡುತ್ತಿದ್ದಿತೆಂಬುದು ಪ್ರತಿಯೊಬ್ಬರಿಗೂ ವೇದ್ಯವೇ ಆದೆ. ಇವರು ಮಾಡುತ್ತಿರುವ ಪ್ರಜಾಸೇವೆಯೇ ಪ್ರಪಂಚದಲ್ಲಿ ಇವರ ನಾಮವು ವಿಶ್ವತೋಮುಖವಾಗಿ ವ್ಯಾಪಿಸುವಂತೆ ಮಾಡಿತು. ರಾಜಧಾನಿಯ ಪ್ರಜಾವರ್ಗದಲ್ಲಿ ಸದ್ಯಃ ವಯೋವೃದ್ಧರೂ, ಜ್ಞಾನವೃದ್ಧರೂ, ಶಾಂತಾತ್ಮರೂ, ದೇಶಸೇವಾನಿರತರೂ, ಸ್ವಾರ್ಥತ್ಯಾಗಿಗಳೂ, ಮಹಾಮೇಧಾವಿಗಳೂ, ರಾಜಕೀಯ ತಂತ್ರವಿಶಾರದರೂ ಅಂದರೆ ಇವರೇ ಆಗಿದ್ದರೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಪ್ರಪಂಚದಲ್ಲಿ ಮೇಧಾವಿಗಳಾದ ಜನಗಳು ಅನಂತವಾಗಿರಬಹುದು; ಅವರೆಲ್ಲರೂ ಸ್ವಾರ್ಥತ್ಯಾಗಿಗಳಾಗಿರುವುದಿಲ್ಲ. ಅನೇಕರು ಸ್ವಾರ್ಥತ್ಯಾಗಿಗಳಾಗಿರಬಹುದು; ಅವರೆಲ್ಲರೂ ಮೇಧಾವಿಗಳಾಗಿರುವುದಿಲ್ಲ. ಈ ಮಹಾಶಯರಾದರೂ ಮೇಧಾವಿಗಳೂ, ಸ್ವಾರ್ಥತ್ಯಾಗಿಗಳೂ ಆಗಿದ್ದರು. ಇವರ ದಿನಚರ್ಯೆವೆಲ್ಲವೂ ಪ್ರಪಂಚಕಲ್ಯಾಣಾರ್ಥವಾಗಿದ್ದಿತಲ್ಲದೆ ವೃಥಾ ಕಾಲಕ್ಷೇಪವೆಂಬುದು ಇವರ ಹತ್ತಿರ ಸುಳಿಯುತ್ತಿರಲಿಲ್ಲ. "ಉದಾರಚರಿತಾನಾಂ ತು ವಸುಧೈವ ಕುಟುಂಬಕಂ" ಎಂಬುಕ್ತಿಯಂತೆ ಸಚ್ಚರಿತ್ರೆಯುಳ್ಳ ಈ ಮಹಾಶಯರನ್ನು ಪ್ರಪಂಚವೇ ಪ್ರೀತಿಸುತ್ತಲಿತ್ತು. 90 ವರ್ಷಗಳವರೆಗೂ ಬಾಳಿ ಬದುಕಿ ಯಶಸ್ವಿಗಳಾಗಿ ದೇಹತ್ಯಾಗಕ್ಕೆ ಯೋಗ್ಯವಾದ ವಾರ್ಧಕಾವಸ್ಥೆಯಲ್ಲಿ ತಮ್ಮ ಸ್ಥೂಲ ಕಳೇಬರವನ್ನು ಬಿಟ್ಟರೂ ಸಹ ಈ ಮಹಾಶಯರ ವಿಯೋಗವು ಪ್ರತಿಯೊಬ್ಬ ಮಾನವನಿಗೂ ದುಃಖವನ್ನುಂಟುಮಾಡುತ್ತಿರುವುದನ್ನು ನೋಡಿದರೆ, ಇವರ ಹೃದಯಾಬ್ಧಿಯಲ್ಲಿ ನೆಲಸಿದ್ದ ಗುಣರತ್ನಗಳ ಬಾಹುಳ್ಯವೇ ಕಾರಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಇವರ ಯಶೋವಲ್ಲರಿಯು ಮೈಸೂರು ಸೀಮೆಯಲ್ಲಿಯೂ, ಭರತಖಂಡದಲ್ಲಿಯೂ ಹಬ್ಬಿತಲ್ಲದೆ ಅನ್ಯಖಂಡಗಳಲ್ಲಿಯೂ ಸಹ ಕುಡಿವಡೆದಿದ್ದಿತು. ಮೈತ್ರಿ-ಕರುಣೆ-ಮುದಿತೆ-ಉಪೇಕ್ಷೆ ಎಂಬ ನಾಲ್ಕು ಗುಣಗಳು ಯಾರಲ್ಲಿ ಕಂಡುಬರುವುವೋ ಅವರೇ ದೇವಾಂಶಪುರುಷರೆಂದು ಶಾಸ್ತ್ರವು ಹೇಳುತ್ತದೆ. ಸತ್ಪುರುಷರಲ್ಲಿ ಸ್ನೇಹ ಬೆಳೆಯಿಸುವುದೇ ಮೈತ್ರಿಯೆನಿಸುವುದು. ದುಃಖಿಗೊಂಡವರನ್ನು ನೋಡಿ ಮನಮರುಗುವುದೇ ಕರುಣೆಯೆನಿಸುವುದು. ಪುಣ್ಯಕಾರ್ಯಗಳನ್ನು ನೋಡಿ ಸಂತೋಷಪಡುವುದೇ ಮುದಿತೆಯೆನಿಸುವುದು. ಪಾಪಿಗಳಲ್ಲಿ ರಾಗದ್ವೇಷಾದಿಗಳನ್ನು ತೋರಿಸದಿರುವುದೇ ಉಪೇಕ್ಷೆಯೆನಿಸುವುದು. ಇಂಥ ಅಸಾಧಾರಣಗಳಾದ ಗುಣಗಳು ಈ ಮಹೋದಯರಲ್ಲಿ ವಾಸಮಾಡಿದ್ದವಲ್ಲದೆ ದಯಾರಸವೇ ಘನೀಭೂತವಾಗಿ ಸ್ಥೂಲಶರೀರಾಕಾರದಿಂದ ಪರಿಣಮಿಸಿದೆಯೋ ಎಂಬುವಂತೆ ದಯಾಮಯಮೂರ್ತಿಗಳೂ ಆಗಿದ್ದರು. ಈ ಮಹಾಶಯರು ಕೈ|| ಮರಿಮಲ್ಲಪ್ಪನವರು ಸ್ಥಾಪಿಸಿದ ಹೈಸ್ಕೂಲಿನಲ್ಲಿ ಎಷ್ಟೋ ವರ್ಷ ಪ್ರಧಾನೋಪಾಧ್ಯಾಯರಾಗಿದ್ದು, ವೀರಶೈವ ವಿದ್ಯಾರ್ಥಿಗಳಿಗೂ ಇತರ ವಿದ್ಯಾರ್ಥಿಗಳಿಗೂ ವಿದ್ಯಾದಾನಮೂಲಕವಾಗಿ ಮಹೋಪಕಾರಮಾಡಿದರು. ತಮ್ಮ ವಿಶ್ರಾಂತಿಕಾಲದಲ್ಲಿಯೂ ಅನೇಕ ವರ್ಷಕಾಲ ಪತ್ರಿಕಾಪ್ರಪಂಚದಲ್ಲಿದ್ದು ಧಾರ್ಮಿಕ ನೈತಿಕ ರಾಜಕೀಯ ಸಾಮಾಜಿಕ ವಿಷಯಗಳಲ್ಲಿ ಕಂಡುಬರುವ ನ್ಯೂನಾತಿರೇಕಗಳನ್ನು ಆತ್ಮಸಾಕ್ಷಿಯಾಗಿಯೂ ನಿರ್ಭಯವಾಗಿಯೂ ಸಾಧಿಸುತ್ತಬಂದರು. ವಿದ್ಯಾರ್ಥಿಗಳಲ್ಲಿ ಇವರಿಗೆ ನಿರ್ವ್ಯಾಜವಾದ ಪುತ್ರವಾತ್ಸಲ್ಯವಿದ್ದಿತು. ಇವರ ಬಳಿಗೆ ಹೋಗಿ ನಾನು ವಿದ್ಯಾರ್ಥಿಯೆಂದು ಹೇಳಿಕೊಂಡಮಾತ್ರದಲ್ಲಿಯೇ ಅವನ ಜಾತಿ ಕುಲ ಗೋತ್ರ ಶೀಲಸ್ವಭಾವಾದಿಗಳನ್ನು ವಿಚಾರಿಸದೆ ತಮ್ಮ ಕಾರ್ಯಗೌರವವೆಷ್ಟಿದ್ದರೂ ಮೊದಲು ಅವರಿಗೆ ತಮ್ಮಿಂದಾಗುವ ಉಪಕಾರವನ್ನು ಮಾಡಿ ಕಳುಹಿಸುತ್ತಿದ್ದರಲ್ಲದೆ, ಇದುವರೆಗೆ ಒಬ್ಬ ವಿದ್ಯಾರ್ಥಿಯ ಬಾಯಿಯಲ್ಲಿಯೂ ಶ್ರೀಮಾನ್ ವೆಂಕಟಕೃಷ್ಣಯ್ಯನವರು ಸಹಾಯಮಾಡದೆ ನನ್ನನ್ನು ಹಿಂದಕ್ಕೆ ಕಳುಹಿಸಿದರೆಂಬ ಪ್ರವಾದವು ಎಲ್ಲಿಯೂ ಕೇಳಿಬಂದಿಲ್ಲ. ಇಷ್ಟು ಅವ್ಯಾಜವಾದ ವಾತ್ಸಲ್ಯವುಳ್ಳವರಾದ್ದರಿಂದ ಈ ಮಹಾಶಯರನ್ನು ತಾತಯ್ಯ ಎಂದು ಸಂಬೋಧಿಸಿ ಕರೆಯುವ ಸಂಪ್ರದಾಯವು ಎಲ್ಲರಲ್ಲಿಯೂ ವಾಡಿಕೆಯಾಗಿತ್ತು. ಈ ಮಹಾಶಯರು ಇಷ್ಟು ಹಣ್ಣುಮುದುಕರಾಗಿದ್ದರೂ ಒಂದು ದಿವಸವೂ ಹಾಸುಗೆಯನ್ನಾಶ್ರಯಿಸಲಿಲ್ಲ. ಯಾವಕಾಲದಲ್ಲಿ ನೋಡಿದರೂ ಇದು ಹಗಲು ಇದು ರಾತ್ರಿಯೆನ್ನದೆ ಲೇಖನಗಳನ್ನು ಬರೆಯಿಸುತ್ತಲೇ ಇದ್ದರು. ಕೊನೆಗೆ ಮರಣಶಯ್ಯೆಯಲ್ಲಿದ್ದ ದಿವಸವೂ ಸಹ ಲೇಖನಗಳನ್ನು ಬರೆಯಿಸಿ ಪ್ರಾಣವನ್ನು ಬಿಟ್ಟರು. ಇದನ್ನು ನೋಡಿದರೆ ಪತ್ರಿಕಾಪ್ರಪಂಚದಲ್ಲಿ ಇವರ ಉತ್ಸುಕತೆಯು ಎಷ್ಟು ಪರಾಕಾಷ್ಠದಶೆಯನ್ನು ಹೊಂದಿತ್ತೆಂಬುದು ಗೊತ್ತಾಗುತ್ತದೆ. ಯಾವ ಮಹಾಮೇಧಾವಿಗಳೆನಿಸಿದ ತರುಣರೂ ಸಹ ಈ ವೃದ್ಧರು ಮಾಡುವ ಕಾರ್ಯವನ್ನು ಮಾಡಲಾರರೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಪ್ರತಿ ದಿವಸವೂ ಲೇಖನಗಳನ್ನು ಬರೆಯಿಸಿ ಎಲ್ಲ ಪತ್ರಿಕೆಗಳಿಗೆ ಕಳುಹಿಸಿದ ಹೊರತು ಅವರಿಗೆ ಸಮಾಧಾನವಾಗುತ್ತಿರಲಿಲ್ಲ. ಇಂಥ ದೇಶಸೇವಾನಿರತರಾದ ಮಹಾವ್ಯಕ್ತಿಗಳು ನಮ್ಮ ಭರತಖಂಡದಲ್ಲಿ ಹುಟ್ಟುವುದು ಬಹಳ ಅಪೂರ್ವವಾದುದರಿಂದ ಈ ಮಹೋದಯರ ವಿಯೋಗವು ದುಃಖವನ್ನುಂಟುಮಾಡುವುದೊಂದು ವಿಶೇಷವಲ್ಲ! ಇನ್ನು ಈ ರೀತಿಯಾಗಿ ದೇಶಸೇವೆಯೇ ಈಶಸೇವೆಯೆಂದು ಭಾವಿಸಿ ತ್ರಿಕರಣದಲ್ಲಿ ಪ್ರಪಂಚಕಲ್ಯಾಣ ಮಾಡುವುದಕ್ಕೆ ಯೋಗ್ಯಗಳಾದ ವ್ಯಕ್ತಿಗಳು ಮುಂದೆ ಬರುವವರೆಗೂ ಈ ಮಹೋದಯರು ಸ್ಮರಣಪಥದಲ್ಲಿ ಇದ್ದೇ ಇರುವರು.

ಈ ಮಹಾಶಯರು ಅವಿಶ್ರಾಂತಶ್ರಮದಿಂದ ಮಹಾಜನಸಹಾಯವನ್ನು ಪಡೆದು ರಾಜಧಾನಿಯಲ್ಲಿ ಅನಾಥಾಲಯ, ಶಾರದಾ ಹೈಸ್ಕೂಲು ಮೊದಲಾದ ಸ್ಥಿರವಾಗಿರುವ ಅನಂತ ಪುಣ್ಯಕಾರ್ಯಗಳನ್ನು ಸಹ ಮಾಡಿರುತ್ತಾರೆ. ಅವುಗಳೆಲ್ಲವೂ ಬಹಳ ಊರ್ಜಿತಾವಸ್ಥೆಯಲ್ಲಿರುತ್ತವೆ. ಹೀಗೆ ಇವರು ಮಾಡಿದ ಕಾರ್ಯಗಳೆಲ್ಲವೂ ಮುಂದೆ ಎಷ್ಟು ವರ್ಷ ಕಳೆದರೂ ಅಚ್ಚಳಿಯದಂತೆ ಸ್ಮಾರಕಗಳಾಗಿ ಉಳಿಯುವವೆಂಬುವಲ್ಲಿ ಆವ ಸಂಶಯವೂ ಇಲ್ಲ. ಈ ಮಹಾಶಯರ ಮೃತಶರೀರದ ಸ್ಮಶಾನಯಾತ್ರೆಗೆ ಬಹುಜನ ಸರ್ಕಾರಿಯುದ್ಯೋಗಿಗಳೂ, ನಾಗರಿಕರೂ, ವಿದ್ಯಾರ್ಥಿಗಳೂ ಆಗಮಿಸಿದ್ದರು. ಆ ದಿವಸ ಪಾಠಶಾಲೆಗಳಿಗೂ, ಸರ್ಕಾರಿ ಆಫೀಸುಗಳಿಗೂ ರಜಾ ಕೊಡಲ್ಪಟ್ಟಿದ್ದಿತು. ಶ್ರೀಮನ್ಮಹಾರಾಜರವರೂ ಸಹ ಹುಜೂರು ಸೆಕ್ರೆಟರಿಗಳನ್ನು ಕಳುಹಿಸಿ ತಮ್ಮ ಅನುತಾಪವನ್ನು ವ್ಯಕ್ತಗೊಳಿಸಿದರು. ನಾಗರಿಕರೆಲ್ಲರೂ ಈ ವೃದ್ಧಪಿತಾಮಹರ ಆತ್ಯಂತಿಕ ವಿಯೋಗವನ್ನು ಸಹಿಸದೆ ಬಹಳವಾಗಿ ಪರಿತಪಿಸುತ್ತಲಿದ್ದರು. ಜಗದೀಶ್ವರನು ಇವರ ಆತ್ಮಕ್ಕೆ ಶಾಂತಿಯನ್ನೀಯುವುದಲ್ಲದೆ ಇವರ ಬಂಧುವರ್ಗದವರಿಗೊದವಿದ ದುಃಖವನ್ನು ಶಮನಗೊಳಿಸಲೆಂದು ಕೋರುವೆವು.

ಕೃಷ್ಣರಾಜಪೇಟೆ ತಾಲೂಕು ತೆಂಡೆಕೆರೆ ಗ್ರಾಮದಲ್ಲಿ ನಡೆಯುವ ಸಂತೆಯ ಸಂಬಂಧದಲ್ಲಿ ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿ ಮೇಲ್ಕಂಡ ಸಂತೆಯಲ್ಲಿ ಸುಂಕವನ್ನು ವಸೂಲ್ಮಾಡುವದಕ್ಕಾಗಲಿ ಸಂತೆಯು ನಡೆಯದಂತೆ ನಿಲ್ಲಿಸುವುದಕ್ಕಾಗಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಯಾವ ಅಧಿಕಾರವೂ ಇಲ್ಲವೆಂದೂ ಸಂತೆಯನ್ನು ನಡೆಯಿಸುವ ಬಗ್ಗೆ 5 ರೂ. ಲೈಸೆನ್ಸ್ ಫೀಜನ್ನು ಮಾತ್ರ ತೆಗೆದುಕೊಳ್ಳತಕ್ಕದ್ದೆಂದೂ ಅಪ್ಪಣೆಮಾಡಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಗುಂಡ್ಲುಪೇಟೆ ತಾಲೂಕಿನಲ್ಲಿ 40 ಜನ ಶ್ಯಾನುಭೋಗರು ರಾಜೀನಾಮೆಯನ್ನು ಕೊಟ್ಟಿರುವುದಾಗಿ ವರ್ತಮಾನವದೆ. ಕಾರಣವು ಸರಿಯಾಗಿ ತಿಳಿದುಬಂದಿಲ್ಲ.

ರಾಜಧಾನಿಯ ಮಿ|| ಥಿಯೋಬಾಲ್ಡ್ ರವರಲ್ಲಿರುವ ಚಿಕ್ಕನೆಂಬ ಶಿಕಾರಿಯು ಲೈಸೆನ್ಸ್ ಇಲ್ಲದೆ ಬಂದೂಕವನ್ನು ಇಟ್ಟುಕೊಂಡಿದ್ದನೆಂಬ ಕಾರಣದ ಮೇಲೆ ಸ್ಪೆಷಲ್ ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ 55 ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿದರು.

ತರೀಕೆರೆ ರೈಲ್ವೆ ಮೊಕದ್ದಮೆಯು ಚಿಕ್ಕಮಗಳೂರು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದ್ದು, ಇದೇ ನವೆಂಬರು 6 ನೆಯ ತಾರೀಖಿನ ದಿವಸ ಐ. ಪಿ. ಸಿ. 304 ನೇ ಸೆಕ್ಷನ್ ಮತ್ತು ರೈಲ್ವೇ ರೆಗ್ಯುಲೇಷನ್ 83 ನೆಯ ಸೆಕ್ಷನ್‌ಗಳ ಪ್ರಕಾರ 3 ಜನ ಅಪರಾಧಿಗಳ ಮೇಲೂ ಚಾರ್ಜು ಮಾಡಲ್ಪಟ್ಟಿತು.

ಕೋಲಾರದ ಚಿನ್ನದ ಗಣಿಯ ಸಮೀಪದಲ್ಲಿರುವ ಚಿನ್ನಪಲ್ಲಿಯಲ್ಲಿ 3 ಜನರೂ, ರಾಬರ್ಟ್‌ಸನ್‌ಪೇಟೆಯಲ್ಲಿ ಒಬ್ಬನೂ ಖೋಟಾನಾಣ್ಯಗಳನ್ನು ತಯಾರಿಸುತ್ತಿದ್ದುದನ್ನು ಪೋಲೀಸರು ಪತ್ತೆಮಾಡಿ ಅವರನ್ನೆಲ್ಲಾ ದಸ್ತಗಿರಿ ಮಾಡಿರುವರೆಂದೂ, ಅವರ ಮನೆಗಳಲ್ಲಿ ನಾಣ್ಯಗಳನ್ನು ತಯಾರಿಸುವ ಸಾಮಗ್ರಿಗಳು ದೊರೆತಿರುವವೆಂದೂ ತಿಳಿದುಬಂದಿದೆ.

ರಾಜಧಾನಿಯ 'ಬಾಂಬೆ ಆರ್ಟ್ ಮತ್ತು ಫೋಟೋಗ್ರಫಿಕ್ ಸ್ಟೂಡಿಯೊ' ಪ್ರೊಪ್ರೈಟರಾದ ಶ್ರೀ|| ಎಂ. ವೀರಪ್ಪನವರು ಲಲಿತಕಲಾಭಿಮಾನಿಗಳಿಗೆ ಪೂರ್ಣಪರಿಚಿತರಾಗಿರುವರು. ಇವರು ಈವರೆಗೆ ಅನೇಕ ಚಿತ್ರಗಳನ್ನು ಬರೆದು ಮೈಸೂರು, ಬೆಂಗಳೂರು, ಸಿಮ್ಲಾ, ಮುಂಬಯಿ ಮೊದಲಾದ ಭರತಖಂಡದ ಮುಖ್ಯಮುಖ್ಯ ನಗರಗಳಲ್ಲಿ ನಡೆದ ಚಿತ್ರಕಲಾಪ್ರದರ್ಶನಗಳಲ್ಲಿ ಅನೇಕ ಬಹುಮಾನಪತ್ರಗಳನ್ನೂ, ಪಾರಿತೋಷಕಗಳನ್ನೂ ಪಡೆದಿರುವರು. ಕಳೆದವರ್ಷ ದಸರಾ ವಸ್ತುಪ್ರದರ್ಶನದಲ್ಲಿ ಇವರಿಂದ ರಚಿಸಲ್ಪಟ್ಟಿದ್ದ ದೇವಾಲಯದಲ್ಲಿ ಎಂಬ ಚಿತ್ರಕ್ಕೆ ಶ್ರೇಷ್ಠಬಹುಮಾನವು ಕೊಡಲ್ಪಟ್ಟಿತ್ತು. ಈ ವರ್ಷವೂ ಇವರು 'ಶಿವಾಲಯದಿಂದ' ಎಂಬ ಮತ್ತೊಂದು ಮನೋಹರವಾದ ದೃಶ್ಯವನ್ನು ಚಿತ್ರಿಸಿ ಕಳುಹಿಸಿದ್ದರು. ಆ ಚಿತ್ರದಲ್ಲಿ ಕಂಡುಬಂದ ಕಲಾಕೌಶಲ್ಯವನ್ನು ನೋಡಿ ಶ್ರೀಮನ್ಮಹಾರಾಜರವರು ಸದರಿ ಚಿತ್ರವನ್ನು ತಾವೇ ಕ್ರಯಕ್ಕೆ ತೆಗೆದುಕೊಂಡಿರುವದನ್ನು ನೋಡಿ ಸಂತೋಷವೆನಿಸುತ್ತದೆ. ಜಗದೀಶ್ವರನು ಇವರಿಗೆ ಇನ್ನೂ ಹೆಚ್ಚಾದ ಕಲಾಶಕ್ತಿಯನ್ನನುಗ್ರಹಿಸಲೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ.

ಸ್ವೀಡನ್ ದೇಶದ ರೈಲ್ವೇ ಕಂಪೆನಿಯವರು ರೈಲ್ವೇ ಚಾರ್ಜನ್ನು ಶೇಕಡಾ 30 ರಂತೆ ಕಡಿಮೆಮಾಡಿರುವರು.

ಮುಂಬಯಿ ಗವರ್ನರವರು ಕಾರವಾರದ ಜಿಲ್ಲಾ ರೈತರುಗಳಿಂದ ಬರಬೇಕಾಗಿದ್ದ ಕಂದಾಯದ ಬಾಕಿ 11 ಸಹಸ್ರ ರೂ. ಗಳನ್ನು ಮಾಫಿಮಾಡಿರುತ್ತಾರೆ.

ಆಗಸ್ಟ್ 13 ನೆಯ ತಾರೀಖಿನವರೆಗೆ ಚಿಕಾಗೋ ನಗರದಲ್ಲಿ ನಡೆಯುತ್ತಿರುವ 'ವಿಶ್ವವಸ್ತುಪ್ರದರ್ಶನ'ದಲ್ಲಿ ಪ್ರೇಕ್ಷಕರಿಂದ 4,00,00,000 ರೂಪಾಯಿಗಳು ಉತ್ಪತ್ತಿಯಾಗಿರುವವಂತೆ!

ಅಮೇರಿಕೆಯಲ್ಲಿ ಪ್ರತಿವರ್ಷವೂ 20,000 ಜನರು ಪತ್ತೆಯಿಲ್ಲದೆ ಹೋಗುವರಂತೆ! ಇದರಲ್ಲಿ ಹೆಚ್ಚಿನ ಜನರು ಜೀವನದ ಕಷ್ಟಗಳನ್ನು ಅನುಭವಿಸಲಾರದೆ ಎಲ್ಲಿಯೋ ಹೊರಟು ಹೋಗುವರಂತೆ!

ಲಂಡನ್ನಿನ ಪೋಲೀಸರು ಭಿಕ್ಷೆ ಬೇಡುತ್ತಿದ್ದನೆಂಬ ಕಾರಣದ ಮೇಲೆ ಒಬ್ಬ ಮನುಷ್ಯನನ್ನು ದಸ್ತಗಿರಿ ಮಾಡಿದರು. ಆ ಭಿಕ್ಷುಕನು ಬ್ಯಾಂಕಿನಲ್ಲಿ 5,400 ರೂಪಾಯಿಗಳನ್ನು ಡಿಪಾಜಿಟ್ ಇಟ್ಟಿದ್ದನಂತೆ!

ಇದೇ ನವೆಂಬರ್ 5 ನೆಯ ತಾರೀಖಿನ ದಿವಸ ಮುಂಬಯಿ ಮಲಬಾರ್ ಗುಡ್ಡದ ಸಮೀಪದಲ್ಲಿ ವಾಲುಕೇಶ್ವರದಲ್ಲಿರುವ ಒಂದು ಮಹಡಿಯ ಮನೆಗೆ ಬೆಂಕಿಬಿದ್ದು ಸುಮಾರು 50,000 ರೂಪಾಯಿಗಳ ನಷ್ಟವಾಯಿತು.

ಬ್ರಿಟಿಷ್ ಸರಕಾರದವರು ಫ್ರಾನ್ಸ್ ಮತ್ತು ಬೆಲ್ಜಿಯಂ ಸರಕಾರಗಳ ಅಪ್ಪಣೆಯನ್ನು ಪಡೆದು ಕಳೆದ ಘೋರಸಂಗ್ರಾಮದಲ್ಲಿದ್ದ ತಮ್ಮ ಸೈನ್ಯದ ಅಧಿಕಾರಿಗಳನ್ನು ಯುದ್ಧಕಲೆಯಲ್ಲಿ ನಿಪುಣರನ್ನಾಗಿ ಮಾಡುತ್ತಿರುವರಂತೆ!

ಅನಾಂದೇಶದ ಚಕ್ರವರ್ತಿಯವರು ತಮ್ಮ ರಾಜ್ಯದಲ್ಲಿರುವ ದೇವಾಲಯಗಳಲ್ಲಿ ಯಾರೂ ಪ್ರಾಣಿಗಳನ್ನು ಬಲಿಕೊಡಕೂಡದೆಂದು ಕಟ್ಟಪ್ಪಣೆಮಾಡಿರುತ್ತಾರೆ. ಇವರು ಪ್ಯಾರಿಸ್ಸಿನಲ್ಲಿ ವಿದ್ಯೆಯನ್ನು ಕಲಿತು ಬಂದಿರುವರು. ವಯಸ್ಸು ಇನ್ನೂ 20 ವರ್ಷ!

ಮೊದಲೇ ನಿಶ್ಚಯಿಸಲ್ಪಟ್ಟಿದ್ದಂತೆ ದಿವಂಗತ ಶ್ರೀ ವಿಠಲಭಾಯಿ ಪಟೇಲರ ಶವವು ನವೆಂಬರು 9 ನೆಯ ತಾರೀಖು ಸಾಯಂಕಾಲ ಮುಂಬಯಿಗೆ ಬಂದಿತು. ಕೂಡಲೇ ಅದು ಸರಕಾರೀ ಆಸ್ಪತ್ರೆಗೆ ಸಾಗಿಸಲ್ಪಟ್ಟು, ಮರುದಿವಸ (ಶುಕ್ರವಾರ) ಬೆಳಿಗ್ಗೆ ನಗರದಲ್ಲಿ ಮೆರವಣಿಗೆಯಾದನಂತರ ಹಿಂದೂಗಳ ಸ್ಮಶಾನದಲ್ಲಿ ಸಂಸ್ಕರಿಸಲ್ಪಟ್ಟಿತು.

ಜರ್ಮನ್ ಸರ್ಕಾರದವರು ಇಂಗ್ಲೆಂಡಿನ ಲೋಕಪ್ರಸಿದ್ಧವಾದ "ರೋಲ್ಸ್‌ರಾಯ್ಸ್" ಕಂಪೆನಿಯಿಂದ ಅನೇಕ ಸರ್ವೋತ್ಕೃಷ್ಟವಾದ ವಿಮಾನದ ಇಂಜನ್ನುಗಳನ್ನು ಕೊಂಡುಕೊಂಡಿರುವರು. ಈ ಇಂಜನ್ನುಗಳು ಕೇವಲ ಯುದ್ಧವಿಮಾನಗಳಿಗೇ ಉಪಯೋಗಿಸತಕ್ಕವುಗಳಾದರೂ ಜರ್ಮನ್ ಸರ್ಕಾರದವರು ಸದರಿ ಇಂಜನ್ನುಗಳು ಕೈಗಾರಿಕೆಯ ಕೆಲಸಗಳಿಗಾಗಿ ಬೇಕೆಂದು ಹೇಳಿ ಕೊಂಡುಕೊಂಡಿರುವರಂತೆ!

ಹೆಲ್ಸಿಂಗ್‌ಫೋರ್ಸ್ ಎಂಬ ನಗರದ ಹತ್ತಿರ ರಾತ್ರಿಯವೇಳೆಯಲ್ಲಿ ಒಂದು ಮೋಟಾರ್‌ಗಾಡಿಯು ಹಳ್ಳದಲ್ಲಿ ತಲೆಕೆಳಗಾಗಿ ಮೊಗಚಿಕೊಂಡಿತು. ಡ್ರೈವರನು ಗಾಡಿಯೊಳಗಿಂದ ಹೊರಕ್ಕೆ ಬಂದು ನೋಡಲು ಮೋಟಾರಿನ ಮುಂಭಾಗದ ದೀಪಗಳು ಇನ್ನೂ ಉರಿಯುತ್ತಲೇ ಇದ್ದವು. ದೀಪವನ್ನು ಆರಿಸಲು ಪ್ರಯತ್ನಿಸಿದನು; ಆದರೆ ಸಾಧ್ಯವಾಗಲಿಲ್ಲ. ಸ್ವಲ್ಪಹೊತ್ತು ಯೋಚಿಸಿ ಕಡೆಗೆ ಜೇಬಿನಲ್ಲಿದ್ದ ಪಿಸ್ತೂಲಿನಿಂದ ಆತ್ಮಹತ್ಯಮಾಡಿಕೊಂಡನು.

ಅಮೇರಿಕೆಯ ಸಂಯುಕ್ತ ಸಂಸ್ಥಾನದ ಸರಕಾರದವರೂ ಜರ್ಮನ್ ಸರಕಾರದವರೂ ಒಟ್ಟುಗೂಡಿ ಅಮೇರಿಕೆಯಿಂದ ಉತ್ತರ ಅಟ್ಲಾಂಟಿಕ್ ಸಮುದ್ರದ ಮಾರ್ಗವಾಗಿ ಯೂರೋಪಿಗೆ ಶೀಘ್ರವಾದ ಏರೋಪ್ಲೇನ್ ಸಂಚಾರವನ್ನು ಏರ್ಪಡಿಸಬೇಕೆಂದು ನಿರ್ಧರಿಸಿರುವರು. ಇದಕ್ಕಾಗಿ ಸಂಯುಕ್ತ ಸಂಸ್ಥಾನದವರು ಒಂದು ಅದ್ಭುತವಾದ ವಿಮಾನವನ್ನು ಕಟ್ಟುವರು. ಜರ್ಮನ್ ಸರಕಾರದ ಲೋಕಪ್ರಸಿದ್ಧವಾದ ಜೆಪ್ಲಿನ್ ಎಂಬ ವಿಮಾನವೂ ಈ ದಾರಿಯಲ್ಲಿ ಸಂಚಾರಕ್ಕೆ ಉಪಯೋಗಿಸಲ್ಪಡುವದು.

ಅಲಹಾಬಾದಿನ ಡಾ|| ಆರ್. ಎ. ಮಾರ್ಟಿನ್ಸ್ ಎಂಬ ಐರೋಪ್ಯ ಡಾಕ್ಟರರು, ಒಂದು ಮನೆಯನ್ನು ಕೊಂಡುಕೊಂಡು ಅದಕ್ಕಾಗಿ ಬ್ಯಾಂಕಿನಲ್ಲಿ ಹಣವಿಲ್ಲದಿದ್ದರೂ 1,100 ರೂಪಾಯಿಗಳಿಗೆ ಚೆಕ್ಕನ್ನು ಬರೆದುಕೊಟ್ಟು ಅನಂತರ ಹಣವನ್ನು ಪೂರ್ತಿಯಾಗಿ ಪಾವತಿಮಾಡಿರುವೆನೆಂದು ಸುಳ್ಳು ರಶೀತಿಯನ್ನು ತೋರಿಸಿದರೆಂಬ ಕಾರಣದಮೇಲೆ, ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಡಾಕ್ಟರಿಗೆ 1 ವರ್ಷ ಕಠಿಣಸಜೆಯನ್ನೂ, 300 ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಿದರು.

ಪ್ಯಾರಿಸ್‌ನಗರದಲ್ಲಿ ಫ್ರಾನ್ಸ್‌ದೇಶದ ಡೆಟ್ರೊಯಾಟ್ ಎಂಬ ಪ್ರಸಿದ್ಧ ವೈಮಾನಿಕನಿಗೂ, ಜರ್ಮನಿಯ ಫೀಜಲರ್ ಎಂಬ ಯುದ್ಧಶಾಸ್ತ್ರವಿಶಾರದನಿಗೂ ಏರೋಪ್ಲೇನುಗಳನ್ನು ಚಮತ್ಕಾರವಾಗಿ ಹಾರಿಸುವ ಪಂದ್ಯವು ನಡೆದು ಸಮಾನವಾಗಿ ಮುಕ್ತಾಯವಾಯಿತು. ಇದನ್ನು ನೋಡಲು 1,00,000 ಜನರು ನೆರೆದಿದ್ದರು. ಈ ವಿಮಾನಕಾರರು ಪಂದ್ಯದ ಮಧ್ಯಕಾಲದಲ್ಲಿ ಆಕಾಶದಲ್ಲಿ ಹಾರಾಡುತ್ತಿದ್ದಂತೆಯೇ ಒಬ್ಬರ ಏರೋಪ್ಲೇನಿನಿಂದ ಮತ್ತೊಬ್ಬರ ಏರೋಪ್ಲೇನಿಗೆ ಬದಲಾಯಿಸಿಕೊಂಡರಂತೆ!

ಆಸ್ಟ್ರಿಯಾದೇಶಕ್ಕೆ ಸೇರಿದ ರುಸ್ಟಾಕ್ ಎಂಬಲ್ಲಿ ವಾಸವಾಗಿರುವ ಮೈಕೇಲ್ ಎಂಬ 27 ವರ್ಷದ ಒಬ್ಬ ರೈತನು ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಪಾಷಾಣವನ್ನು ತಂದು, ಅದರ ಸೇವನೆಯಿಂದ ಪ್ರಾಣಹೋಗುವದೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಅದಕ್ಕೆ ಸ್ವಲ್ಪ ಸಕ್ಕರೆಯನ್ನು ಬೆರಸಿ 4 ವರ್ಷದ ಹುಡುಗನಿಗೆ ತಿನ್ನಿಸಿದನು. ಹುಡುಗನು ವಿಷಸೇವನೆಯಿಂದ ಬಹಳ ಸಂಕಟಪಟ್ಟು ಮೃತಪಟ್ಟನು. ಆ ಹುಡುಗನ ಸಂಕಟವನ್ನು ನೋಡಿ ಮೈಕೇಲನು ಆತ್ಮಹತ್ಯಮಾಡಿಕೊಳ್ಳುವ ಯೋಚನೆಯನ್ನೇ ಬಿಟ್ಟನು. ಆದರೆ ಪೋಲೀಸರು ಹುಡುಗನ ಕೊಲೆಗಾಗಿ ಅವನನ್ನು ದಸ್ತಗಿರಿಮಾಡಿರುವರು.

ಪ್ರಪಂಚದ ಮುಖ್ಯ ಮುಖ್ಯ ರಾಜ್ಯದವರು ಹೊಂದಿರುವ ಏರೋಪ್ಲೇನುಗಳ ಪಟ್ಟಿಯಲ್ಲಿ ಇಂಗ್ಲೆಂಡ್‌ದೇಶವು ಕೇವಲ 5 ನೆಯ ಸ್ಥಾನವನ್ನು ಹೊಂದಿರುವದರಿಂದ ಚರ್ಚ್‌ಹಿಲ್ ಮತ್ತು ಲಾಯಿಡ್ ಮೊದಲಾದ ಟೋರಿ ಪಂಗಡದವರು ತಮ್ಮ ದೇಶದ ವಿಮಾನದ ಬಲವನ್ನು ಹೆಚ್ಚಿಸಬೇಕೆಂದು ವೃತ್ತಪತ್ರಿಕೆಗಳಲ್ಲಿ ದೊಡ್ಡ ಚಳವಳಿಯನ್ನು ಹೂಡಿರುವರು. ಸದರಿ ಪಟ್ಟಿಯು ಈ ರೀತಿಯಾಗಿರುವದು—

	ಮಿಲಿಟರಿ.	ಸಿವಿಲ್.
ಫ್ರಾನ್ಸ್	3,000	1,821
ಅಮೇರಿಕೆಯ ಸಂಯುಕ್ತಸಂಸ್ಥಾನ	2,826	10,673
ಜಪಾನ್	1,939	88
ಇಟಲಿ	1,507	598
ಗ್ರೇಟ್ ಬ್ರಿಟನ್	1,434	981
ಜರ್ಮನಿ	ಇಲ್ಲ	1,200

ದಿವಂಗತರಾದ ರಾವ್ ಬಹದ್ದೂರ್ ಲಕ್ಷ್ಮೀನಾರಾಯಣ ಎಂಬವರು ನಾಗಪುರದ ವಿಶ್ವವಿದ್ಯಾನಿಲಯಕ್ಕೆ 40 ಲಕ್ಷ ರೂಪಾಯಿ ಬೆಲೆ ಬಾಳುವ ತಮ್ಮ ವಿಶಿಷ್ಟ ಆಸ್ತಿಯನ್ನೂ, ಸದರಿ ಪ್ರಾಂತದಲ್ಲಿ ಕಲಾವಿದ್ಯಾಭ್ಯಾಸದ ಉತ್ತೇಜನಕ್ಕಾಗಿ ದಾನಮಾಡಿರುವರು. ಈ ಸಂದರ್ಭದಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಯ ಸದಸ್ಯರಾದ ರಾವ್ ಬಹದ್ದೂರ್ ಎಸ್. ಆರ್. ಪಂಡಿತರವರು, ನಾಗಪುರದ ವಿಶ್ವವಿದ್ಯಾನಿಲಯದ ಮೇಲೆ 4 ಲಕ್ಷ ರೂಪಾಯಿಗಳಿಗೆ ದಾವೆಯನ್ನು ಮಾಡಿ ದಿವಂಗತರಾದ ಲಕ್ಷ್ಮೀನಾರಾಯಣರವರು ತಾವು ಮಾಡಿದ ಕೆಲಸಗಳಿಗಾಗಿ ತಮಗೆ 3 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಿರ್ಧರಿಸಿದ್ದರೆಂದೂ, ಆ ಸಂಬಂಧವಾಗಿ ಕಾಗದಪತ್ರಗಳನ್ನು ಮಾಡುವುದಕ್ಕೆ ತಮ್ಮ ಮನೆಗೆ ಬರುವದರೊಳಗಾಗಿ (1930 ನೇ ಸೆಪ್ಟಂಬರ್ 30 ನೇ ತಾರೀಖಿನ ದಿವಸ) ಮೃತಪಟ್ಟರೆಂದೂ, ಮೇಲ್ಕಂಡ 3 ಲಕ್ಷ ರೂಪಾಯಿಗಳ ಬಡ್ಡಿ 1,08,000 ರೂಪಾಯಿಗಳ ಸಮೇತ 1,08,000 ರೂಪಾಯಿಗಳು ತಮಗೆ ಬರಬೇಕೆಂದೂ ದಾವೆಯಲ್ಲಿ ನಮೂದಿಸಿರುವರು.

ಯೂರೋಪಿನಲ್ಲಿ ಯುದ್ಧದ ಚಿಹ್ನಗಳು!

ನವೆಂಬರ್ 3 ನೇ ತಾರೀಖಿನ ದಿವಸ ಜಪಾನಿನ 10 ಯುದ್ಧದ ವಿಮಾನಗಳು ರಷ್ಯಾದೇಶದೊಳಕ್ಕೆ ಹೋಗಿ ಹಾರಾಡುತ್ತಿದ್ದವೆಂದೂ, ಇದನ್ನು ರಷ್ಯಾದೇಶದ ರಾಯಭಾರಿಗಳು ನಿರ್ದಾಕ್ಷಿಣ್ಯವಾಗಿ ಖಂಡಿಸಿ, ಜಪಾನ್ ವಿಮಾನಗಳು ಇನ್ನು ಮುಂದೆ ತಮ್ಮ ದೇಶದೊಳಕ್ಕೆ ಬಂದರೆ ತಾವು ಅವುಗಳ ಮೇಲೆ ಗುಂಡುಗಳನ್ನು ಹಾರಿಸುವದಾಗಿಯೂ ತಿಳಿಸಿರುವರು. ಜಪಾನ್ ರಾಯಭಾರಿಗಳು ತಮ್ಮ ವಿಮಾನಗಳು ರಷ್ಯಾದೇಶದೊಳಕ್ಕೆ ಹೋದುದೇ ಸುಳ್ಳೆಂದು ಹೇಳುತ್ತಿರುವರಾದರೂ, ಇದೇ ಮೂಲಕಾರಣವಾಗಿ ಮತ್ತೊಂದು ಘೋರ ಸಂಗ್ರಾಮವು ನಡೆದರೂ ನಡೆಯಬಹುದೆಂದು ಪ್ರಪಂಚದ ಎಲ್ಲ ರಾಷ್ಟ್ರದವರೂ ಭೀತಿಗ್ರಸ್ತರಾಗಿರುವರು.

ಅಸ್ಪೃಶ್ಯತಾನಿವಾರಣೆಗಾಗಿ ಹೊಡೆದಾಟ.

ಇದೇ ನವಂಬರ್ 5 ನೆಯ ತಾರೀಖಿನ ದಿವಸ ರಾತ್ರಿ ಕಲ್ಕತ್ತೆಯಲ್ಲಿ ಕಾರಿಂಥಿಯನ್ ನಾಟಕಶಾಲೆಯಲ್ಲಿ 'ಗರೀಬರ ಹುಡುಗಿ' ಎಂಬ ಅಸ್ಪೃಶ್ಯತಾನಿವಾರಣೆಯ ಸಂಬಂಧವಾದ ನಾಟಕವು ಅಭಿನಯಿಸಲ್ಪಟ್ಟಿತು. ಅದರಲ್ಲಿ ಅಸ್ಪೃಶ್ಯರ ಹುಡುಗಿಯೊಬ್ಬಳು ಹಳ್ಳಿಯ ಭಾವಿಯಿಂದ ನೀರು ತರಲು ಹೋದಾಗ ಸನಾತನ ಹಿಂದೂಗಳಿಂದ ಹೊಡೆದೋಡಿಸಲ್ಪಟ್ಟಂತೆ ಒಂದು ದೃಶ್ಯವು ತೋರಿಸಲ್ಪಟ್ಟಿತು. ಈ ದೃಶ್ಯವನ್ನು ಕೆಲವು ಜನ ಪ್ರೇಕ್ಷಕರು ಆಕ್ಷೇಪಿಸಿ ನಾಟಕರಂಗದ ಮೇಲೆ ನುಗ್ಗಲು ಯತ್ನಿಸಿದರು. ಮತ್ತೆ ಕೆಲವರು ಅವರನ್ನು ತಡೆದರು. ಇದರಿಂದ ಉಭಯಪಕ್ಷದವರಿಗೂ ಕೈಕೈ ಹತ್ತಿ ಹೊಡೆದಾಟವಾಗಿ ಅನೇಕರಿಗೆ ಗಾಯಗಳಾದವು. ಪೋಲೀಸರು ಗಲಭೆಮಾಡಿದವರನ್ನು ದಸ್ತಗಿರಿಮಾಡಿರುತ್ತಾರೆ. ಹಿಂದುಹಿಂದುಗಳಲ್ಲಿಯೇ ಬಡಿದಾಟವನ್ನು ಹಚ್ಚಿರುವ ಗಾಂಧಿಯವರ ಪ್ರತಾಪವಿದು!

ತೂಕದ ವೈಚಿತ್ರ್ಯ!

ಒಂದು ಪದಾರ್ಥವು 10 ಪೌಂಡ್ ತೂಕವಿರುವದೆಂದರೆ, ಭೂಮಿಯು ಆ ಪದಾರ್ಥವನ್ನು 10 ಪೌಂಡ್ ಶಕ್ತಿಯಿಂದ ಆಕರ್ಷಿಸುವದೆಂದು ಅರ್ಥವಾಗುವದು. ಶಾಸ್ತ್ರಜ್ಞರು ಈ ತತ್ತ್ವವನ್ನು ಎಲ್ಲ ಗ್ರಹಗಳಿಗೂ ಅನ್ವಯಿಸಿ ಗ್ರಹಗಳು ದೊಡ್ಡವಾಗಿದ್ದರೆ ಅವುಗಳ ಆಕರ್ಷಣಶಕ್ತಿಯೂ ಹೆಚ್ಚಿ ಅವುಗಳ ಮೇಲಿರುವ ಪದಾರ್ಥಗಳ ತೂಕವೂ ಹೆಚ್ಚಾಗುವದೆಂದೂ, ಗ್ರಹಗಳ ಆಕೃತಿಯು ಸಣ್ಣದಾಗಿದ್ದರೆ ಅವುಗಳ ಆಕರ್ಷಣಶಕ್ತಿಯೂ ಕಡಿಮೆಯಾಗಿ ಪದಾರ್ಥಗಳ ತೂಕವೂ ಕಡಿಮೆಯಾಗುವದೆಂದೂ ನಿರ್ಧರಿಸಿರುವರು. ಅಂದರೆ ಭೂಮಿಯಮೇಲೆ 168 ಪೌಂಡುಗಳ ತೂಕವುಳ್ಳ ವಸ್ತುವು ಭೂಮಿಗಿಂತಲೂ ಬಹಳ ಚಿಕ್ಕದಾದ ಚಂದ್ರಗ್ರಹದ ಮೇಲೆ ಕೇವಲ 28 ಪೌಂಡುಗಳಷ್ಟು ತೂಕವಾಗಿಯೂ, ಭೂಮಿಗಿಂತಲೂ ದೊಡ್ಡದಾದ ಗುರುಗ್ರಹದ ಮೇಲೆ 294 ಪೌಂಡು ತೂಕವಾಗಿಯೂ, ಸೂರ್ಯಗ್ರಹದ ಮೇಲಿದ್ದರೆ 2240 ಪೌಂಡುಗಳ ತೂಕವಾಗಿಯೂ ಇರುವದಂತೆ! ಸೂರ್ಯನ ಸುತ್ತಲೂ ಎಷ್ಟೋ ಸಣ್ಣ ಸಣ್ಣ ಗ್ರಹಗಳಿರುವವಷ್ಟೆ! ಮೇಲೆ ಹೇಳಿದ ವಸ್ತುವೇ ಅವುಗಳ ಮೇಲಿದ್ದರೆ ಕೇವಲ 10 ತೊಲೆಗಳಷ್ಟು ತೂಕವಾಗುವದಂತೆ! ಈ ವಿಚಿತ್ರಕ್ಕೆ ಗ್ರಹಗಳ ಆಕೃತಿಯೊಂದೇ ಕಾರಣವಾಗಿಲ್ಲ; ಗ್ರಹಗಳ ತೂಕವು ಹೆಚ್ಚುಕಡಿಮೆಯಾದಂತೆ ಅವುಗಳ ಆಕರ್ಷಣಶಕ್ತಿಯೂ ಹೆಚ್ಚುಕಡಿಮೆಯಾಗುವುದು. ಅಂದರೆ ಭೂಮಿಯು ಆಕೃತಿಯಲ್ಲಿ ಚಿಕ್ಕದಾಗಿದ್ದರೂ ಅದರಲ್ಲಿ ಕಲ್ಲುಮಣ್ಣಿನ ಭಾಗನೇ ಹೆಚ್ಚಾಗಿರುವದರಿಂದ ತೂಕವೂ ಹೆಚ್ಚಾಗಿರುವದು. ಆದೇ ಸೂರ್ಯಗ್ರಹವು ಭೂಮಿಗಿಂತಲೂ ಎಷ್ಟೋಪಾಲು ದೊಡ್ಡದಾಗಿದ್ದರೂ ಅಪರಿಮಿತವಾದ ತಾಪದಿಂದ ಧಗಧಗಿಸುತ್ತಿರುವದರಿಂದ ಅದರಲ್ಲಿ ದ್ರವ ಮತ್ತು ಹವೆಯ ಭಾಗಗಳೇ ಹೆಚ್ಚಾಗಿದ್ದು ತೂಕವು ಕಡಿಮೆಯಾಗಿರುವದು. ಆದುದರಿಂದ ಸೂರ್ಯಗ್ರಹವು ಅದರ ಅಳತೆಗೆ ತಕ್ಕಷ್ಟು ತೂಕವಾಗಿರುವುದಿಲ್ಲ. ಅಂದರೆ ಸದ್ಯಃಸ್ಥಿತಿಯಲ್ಲಿ ಭೂಮಿಯಮೇಲೆ 1 ಪೌಂಡು ತೂಕವುಳ್ಳ ವಸ್ತುವು ಸೂರ್ಯಗ್ರಹದಮೇಲೆ 13¼ ಪೌಂಡಿನಷ್ಟು ತೂಗುವದು. ಆದರೆ ಅದೇ ಸೂರ್ಯಗ್ರಹವು ಭೂಮಿಯಂತೆ ಕಲ್ಲುಮಣ್ಣುಗಳಿಂದ ಕೂಡಿ ಗಟ್ಟಿಯಾಗಿದ್ದಿದ್ದರೆ ಆಗ ಭೂಮಿಯಮೇಲೆ 1 ಪೌಂಡು ತೂಗುವ ಪದಾರ್ಥವು ಸೂರ್ಯಗ್ರಹದಮೇಲೆ 3,24,000 ಪೌಂಡುಗಳ ತೂಕವಾಗಿರುತ್ತಿದ್ದಿತಂತೆ! ಇದರಂತೆಯೇ ಭೂಮಿಯಮೇಲೆ 100 ಪೌಂಡು ತೂಗುವ ವಸ್ತುವು ಚಂದ್ರಗ್ರಹದ ಮೇಲೆ 16, ಮಂಗಳ ಮತ್ತು ಬುಧಗ್ರಹಗಳಮೇಲೆ 38, ಶುಕ್ರಗ್ರಹದಮೇಲೆ 86, ಯೂರೇನಸ್ ಗ್ರಹದ ಮೇಲೆ 88 ಮತ್ತು ನೆಪ್ಚ್ಯೂನ್‌ಗ್ರಹದಮೇಲೆ 277 ಪೌಂಡುಗಳಷ್ಟು ತೂಗುವದಂತೆ!

(೩ನೆಯ ಪುಟದಿಂದ ಮುಂದುವರಿಸಿದುದು)

ಕರೀಮಣಿಯನ್ನು ತೊಡಿಸಿದಳು. ಸೇಟ್‌ಸಾಬಿಯು ಆಗ ಸ್ಥಳದಿಂದ ಹೊರಟುಹೋದ. ಪಡಸಾಲೆಯಲ್ಲಿದ್ದವರೆಲ್ಲರೂ ಹೊರಟು ಹೋದರು. ಸೀರೆಯನ್ನು ಉಟ್ಟುಕೊಂಡನಂತರ ಸೇಟ್‌ಸಾಬಿಯು ಕಲ್ಲುಸಕ್ಕರೆ, ಖರ್ಜೂರ ಬಾದಾಮಿಯನ್ನು ತಂದು ನನ್ನ ತಲೆಯಮೇಲೆ ಇರಿಸಿ 'ಕಲಂ' ಎಂದು ಹೇಳಿ ಹೊರಟುಹೋದ. ಆ ದಿವಸ ರಾತ್ರಿ ಪುಸ್ತಕಕ್ಕೆ ರುಜು ತೆಗೆದುಕೊಳ್ಳಲಿಲ್ಲ. ಮಾರನೆಯ ದಿವಸ ಪ್ರಾತಃಕಾಲ ರುಜು ತೆಗೆದುಕೊಂಡರು. (೨೪ ನೆಯ ತಾರೀಖು ಗುರುವಾರದ ದಿವಸ.)

(ಪುಸ್ತಕದಲ್ಲಿದ್ದ ರುಜುವನ್ನು ಗುರ್ತಿಸಿದಳು) ಅನಂತರ ಅಲ್ಲಿಗೆ ಪೋಲೀಸ್ ಇನ್ಸ್‌ಪೆಕ್ಟರವರು ಬಂದರು. (೨೩ ನೆಯ ತಾರೀಖಿನ ದಿವಸ ರಾತ್ರಿ) ಸೇಟ್ ಸಾಬಿಯೂ ಮೇಸ್ತ್ರಿಯೂ ಒಳಕ್ಕೆ ಬಂದು ಪೋಲೀಸ್ ಇನ್ಸ್‌ಪೆಕ್ಟರು ಬಂದಿದ್ದಾರೆ. ಅವರು ನಿನ್ನ ಕೈಫಿಯತ್ತು ಕೇಳುತ್ತಾರೆ ಆಗ ಯಾರೂ ಜುಲುಂ ಮಾಡಲಿಲ್ಲ. ನಾನೇ ಸ್ವಂತ ಇಚ್ಛೆಯಿಂದ ಮದುವೆ ಮಾಡಿಕೊಂಡೆ. ಎಂಬ ರೀತಿಯಲ್ಲಿ ಅವರಿಗೆ ಕೈಫಿಯತನ್ನು ಕೊಡಬೇಕೆಂದು ತಿಳಿಸಿದರು. ಪೋಲೀಸ್ ಇನ್ಸ್‌ಪೆಕ್ಟರು ಕರೀತಾರೆ ಎಂದು ನನ್ನನ್ನು ಕರೆದರು. ಇನ್ಸ್‌ಪೆಕ್ಟರವರು ನನ್ನ ಕೈಫಿಯತ್ತನ್ನು ಕೇಳಿದರು. ನನಗ್ಯಾರೂ ಜುಲುಂ ಮಾಡಲಿಲ್ಲ ನಾನೇ ಮದುವೆ ಮಾಡಿಕೊಂಡೆ ಎಂದು ಅವರಿಗೆ ಹೇಳಿದೆ. ನಂತರ ಇನ್ಸ್‌ಪೆಕ್ಟರವರು ಹೊರಟುಹೋದರು. ಸ್ವಲ್ಪ ಹೊತ್ತಿನ ಮೇಲೆ ನನ್ನ ಅಣ್ಣ ಲಕ್ಷ್ಮೀನರಸಿಂಹಯ್ಯನು ಅಲ್ಲಿಗೆ ಬಂದ. ಸೇಟ್ ಸಾಬಿಯು ಜೊತೆಯಲ್ಲಿರುವವನು ನಿಮ್ಮ ಅಣ್ಣನು ಬಂದಿದ್ದಾನೆ ಎಂದು ನನ್ನನ್ನು ಕರೆದ ಪಡಸಾಲೆ ಬಾಗಿಲ ಹತ್ತಿರಕ್ಕೆ ಬಂದೆ ಅವನು ನನ್ನನ್ನು ನೋಡಿ "ಯಾಕಮ್ಮಾ ಹೀಗೆ ಮಾಡಿದೆ" ಎಂದು ಕಣ್ಣಲ್ಲಿ ನೀರನ್ನು ಸುರಿಸಿದ ಮಾತನಾಡಲು ಚೈತನ್ಯವಿಲ್ಲದೆ ನಾನೂ ಅತ್ತೆ. ಸೇಟ್ ಸಾಬಿಯೂ ಮೇಸ್ತ್ರಿಯೂ ನಮ್ಮ ಅಣ್ಣನನ್ನು ಬೆದರಿಸಿ ನೀನು ಇಲ್ಲಿದ್ದರೆ. ನಿನ್ನ ಪ್ರಾಣವನ್ನು ತೆಗೆಯುತ್ತೇವೆಂದು ಅವನಿಗೆ ತಿಳಿಸಿ ಅಟ್ಟಿಬಿಟ್ಟರು. ಸೇಟ್‌ಸಾಬಿ ಹೆಂಡತಿ ಬಂದು "ಯಾರೇ ಇಲ್ಲಿಗೆ ಬಾ ಅಂದರು" ಎಂದು ಹೇಳಿ ಒಳಕ್ಕೆ ಕಳ್ಳುಕೊಂಡು ಹೋದಳು. ಸ್ವಲ್ಪ ಹೊತ್ತಿನ ಮೇಲೆ 'ಏಳು ಏಳು' ಎಂದರು ಯಾತಕ್ಕೆ ಅಂದೆ "ನಿನಗೊಂದು ಮಾತನ್ನು ಹೇಳುತ್ತೇನೆ" ಎಂದು ಹೇಳಿ ಒಂದು ಚಿಕ್ಕಮನೆಗೆ ಕರೆದುಕೊಂಡು ಹೋಗಿ ಅಲ್ಲಿರುವಂತೆ ಆಜ್ಞಾಪಿಸಿದರು. ಆ ಮೇಲೆ ಅಬ್ದುಲ್ ಸಲಾಮನು ಒಳಕ್ಕೆ ಬಂದು ಬಾಗಿಲ ಚಿಲಕವನ್ನು ಭದ್ರಪಡಿಸಿ ಬಾಯಿ ಮುಚ್ಚಿಕೊಂಡಿದ್ದರೆ ಸರಿ, ಇಲ್ಲದಿದ್ದರೆ ಪ್ರಾಣ ತೆಗೆದು ಬಿಡುತ್ತೇನೆ ಎಂದು ಚಾಕುವನ್ನು ತೋರಿಸಿ ನನ್ನ ಕೈಲಿ ಸಿಕ್ಕಿದ ಮೇಲೆ ಹುಲಿ ಕೈಗೆ ಸಿಕ್ಕಿದಂತೆಯೇ ಸರಿ ಎಂದು ಬೆದರಿಸಿದ.

ಪಬ್ಲಿಕ್ ಪ್ರಾಸಿಕ್ಯೂಟರು:—ನಿನ್ನ ಮೇಲೆ ಸಲಾಮನು ಅತ್ಯಾಚಾರ ನಡೆಸಿದನೋ ?

ಮಹಾಲಕ್ಷ್ಮಮ್ಮ:—(ತಲೆಯನ್ನು ತಗ್ಗಿಸಿ) ಹೌದು ಅತ್ಯಾಚಾರ ನಡಿಸಿದ.

ಮಾರನೆಯ ದಿವಸವೆಲ್ಲವೂ ಆ ಮನೆಯಲ್ಲಿ ಅಳುತ್ತಾ ಕುಳಿತಿದ್ದೆ. ನಂತರ ಮೇಸ್ತ್ರಿಯೂ ಅಲ್ಲಿಗೆ ಬಂದು ಎಲ್ಲಿಯೋ ಹೋಗುತ್ತೇನೆಂದು ಹೊರಟುಹೋದ. ನಂತರ ೧೨೫ ರೂಪಾಯಿಗಳ ಮಹರಿನ ವಿಚಾರವಾಗಿ ಕೆಲವು ವಿವರಗಳನ್ನು ನನಗೆ ತಿಳಿಸಿದರು. ನಂತರ ಸೇಟ್‌ಸಾಬಿಯು ಅನೇಕ ಮಹಮ್ಮದೀಯ ಹೆಂಗಸರನ್ನು ಆ ಮನೆಗೆ ಆಹ್ವಾನಿಸಿ ಚಿಕ್ಕ ಹಬ್ಬವೊಂದನ್ನು ಜರುಗಿಸಿದರು. ಶುಕ್ರವಾರದ ದಿವಸ ಯಾವನೋ ಒಬ್ಬನು ಒಂದು ಅರ್ಜಿಯನ್ನು ತಂದು, ಸೇಟ್‌ಸಾಬಿಯ ಕೈಗೆ ಕೊಟ್ಟ. ಸೇಟ್‌ಸಾಬಿಯು ಅದರಂತೆ ೫ ಅರ್ಜಿಗಳನ್ನು ತಯಾರಿಸಬೇಕೆಂದು ನನಗೆ ಹೇಳಿದ. ನಂತರ ಆ ಪ್ರಕಾರ ೫ ಕಾಪಿಗಳನ್ನು ಬರದೆ. ಮಧ್ಯಾಹ್ನ ಅದನ್ನು ಯಾರಿಗೋ ತೋರಿಸಿ ಪುನಃ ತೆಗೆದುಕೊಂಡುಬಂದು ಟ್ರಂಕಿನಲ್ಲಿ ಜೋಪಾನವಾಗಿಡುವ ಹಾಗೆ ನನಗೆ ಹೇಳಿದ. ನಂತರ ಸಲಾಮನು ಶಿಡ್ಲಘಟ್ಟಕ್ಕೆ ಹೋಗಿಬರುತ್ತೇನೆಂದು ಹೊರಟುಹೋದ. ಶನಿವಾರದ ದಿವಸ ರಾತ್ರಿ ಸಲಾಮನು ಬಂದು ಅವನೂ ಮೇಸ್ತ್ರಿಯೂ ಒಂದೇ ರೈಲಿನಲ್ಲಿ ಬಂದ ಸಂಗತಿಯನ್ನು ನನಗೆ ತಿಳಿಸಿ ಮೇಸ್ತ್ರಿಯು ಪೋಲೀಸ್ ಸೂಪರೆಂಟೆಂಡೆಂಟರಲ್ಲಿ ಅರುಹಿದ ವಿಷಯವನ್ನು ವಿವರಿಸಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೂ ತಮಗೂ ಸಲ್ಲಿಸಬಹುದಾದ ಅರ್ಜಿಯ ವಿಷಯವನ್ನು ಆಮೂಲಾಗ್ರವಾಗಿ ನಿವೇದಿಸಿದನು. ಭಾನುವಾರದ ದಿವಸ ಬೆಳಿಗ್ಗೆ ಮೇಸ್ತ್ರಿಯು ಬಂದು ಸೂಪರೆಂಟೆಂಡೆಂಟರ ಸಂಗಡ ಎಲ್ಲವನ್ನು ಮಾತನಾಡಿದ್ದೇನೆ. ಎರಡು ಅರ್ಜಿಬರೆದು ಹಾಕಬೇಕೆಂದು ಹೇಳಿದ್ದಾರೆ. ಆ ಪ್ರಕಾರ ಎರಡು ಬರೆದುಕೊಡು ಎಂದು ಹೇಳಿದ. ಅದರಂತೆ ಎರಡು ಅರ್ಜಿಯನ್ನು ತಯಾರಿಸಬೇಕೆಂದು ನನಗೆ ಹೇಳಿ, ಸಲಾಮನಿಗೆ ಈ ವಿಷಯವನ್ನು ತಿಳಿಸಿ ಹೊರಟು ಹೋದ. ಎರಡು ಅರ್ಜಿಯನ್ನು ಬರೆದ. ಭಾನುವಾರದ ದಿವಸ ಬೆಳಿಗ್ಗೆ ಮೋಜಿ ಮನೆಯ ಯಾರೋ ಬಂದು ಮದುವೆಯನ್ನು ಮಾಡಿಸಿದರೆಂದು ಹೇಳಿದ. ಸೋಮವಾರದ ದಿವಸ ಮೇಸ್ತ್ರಿಯು ಎರಡು ಕವರುಗಳನ್ನು ತಂದರು. ಕವರಿನ ಮೇಲೆ ಡೆಪ್ಯುಟಿಕಮಿಷನರ್ ವಿಳಾಸವನ್ನು ಸೂಪರಿಂಟೆಂಡೆಂಟರ ವಿಳಾಸವನ್ನು, ನನ್ನ ಕೈಲಿ ಬರೆಸಿದ. ನಾನು ಅಡ್ರೆಸ್ಸುಗಳನ್ನು ಅವನ ಇಚ್ಛೆಯಂತೆ ಬರೆದು ಸೇಟ್ ಸಾಬಿಯು ಮನೆಯಲ್ಲಿ ಅಡ್ರೆಸ್ಸನ್ನು ಕಾಗದದಲ್ಲಿ ಬರೆದೆ. ಕೊಲಾರ ನೆಯಾದ ಅಪರಾಧಿಯು ಕವರಿನಮೇಲೆ ಇಂಗ್ಲೀಷಿನಲ್ಲಿ "ಕೋಲಾರ" ಎಂದು ಬರೆದ. ಕವರುಗಳ ಮೇಲೆಯೂ ಅಡ್ರೆಸ್ಸನ್ನು ಬರೆಸಿದ. ಇವೆಲ್ಲವನ್ನು ಪೋಸ್ಟಿನಲ್ಲಿ ಹಾಕುವ ಹಾಗೆ ಎರಡನೆಯ ಅಪರಾಧಿಯು ಕೈಗೆ ಕೊಟ್ಟ. ಸಂಧ್ಯಾಕಾಲ ಮೊದಲನೆಯ ಅಪರಾಧಿಯು ಖುಲಾಸೆಯಾದ ಅಬ್ದುಲ್ ಸುಕೂರನೂ ನನ್ನ ಬಳಿಬಂದು ಸೂಪರೆಂಟೆಂಡೆಂಟರು ಇಲ್ಲಿಗೆ ಬರುವರು ಇನ್ನೊಂದು ಅರ್ಜಿಯನ್ನು ತಯಾರಿಸು ಎಂದು ಹೇಳಿದರು. ನನಗೆ ಬರೆಯುವದಕ್ಕೆ ಆಗಲಿಲ್ಲ. ನೀನೇನು ಅನುಮಾನ ಪಡಬೇಡ, ಅರ್ಜಿಯನ್ನು ಮಾತ್ರ ಬರಿ ಎಂದು ಹೇಳಿ ಹೊರಟು ಹೋದರು. ನಂತರ ಅರ್ಜಿಯನ್ನು ಬರೆಸಿಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಮೇಸ್ತ್ರಿಯೂ ಸೇಟ್‌ಸಾಬಿಯೂ ಆ ಅರ್ಜಿಯನ್ನು ತೆಗೆದುಕೊಂಡು ಹೋದರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಕೈ|| ಧರ್ಮವೀರಶಂಕರಣ್ಣನವರ ಸ್ಮಾರಕ, ಯಾದಗಿರಿ.

ಮೇಲ್ಕಂಡ ಮಹಾಶಯರ ಏಳನೆಯ ಸ್ಮಾರಕವು ತಾ|| ೧೭-೧೧-೧೯೩೩ ಪು|| ಕಾರ್ತಿಕ ಶು|| ೪ ರವಿವಾರ ಶಂಕರ ಸಂಸ್ಕೃತ ಕಾಲೇಜಿನ ಶಿಕ್ಷಣಮಂಡಲದ ವತಿಯಿಂದ ಅತ್ಯಂತ ವಿಜೃಂಭಣೆಯಿಂದಲೂ, ಅಧಿಕೋತ್ಸಾಹದಿಂದಲೂ ನೆರವೇರಿಸಲ್ಪಟ್ಟಿತು. ಈ ಉತ್ಸವದ ಕಾರ್ಯಕ್ರಮದಲ್ಲಿ ವ್ಯಾಯಾಮ ಮತ್ತು ವಾಙ್ಮಯ ಎಂದು ಎರಡು ಭಾಗಗಳನ್ನು ಮಾಡಿ ೧೨ ದಿವಸ ಮುಂಚಿತವಾಗಿಯೇ ನೋಟೀಸ ದ್ವಾರಾ ಯಾವತ್ತೂ ವಿದ್ಯಾರ್ಥಿಗಳಿಗೆ ತಿಳಿಸಲ್ಪಟ್ಟಪ್ರಕಾರ ವಾಙ್ಮಯ ಸಂಘದವರು ೩ ದಿವಸ ಮುಂಚಿತವಾಗಿ ತಮ್ಮ ಕಾರ್ಯಕಲಾಪಗಳನ್ನೆಲ್ಲಾ ಬರೆದು ಪ್ರಿನ್ಸಿಪಾಲರ ಕಡೆಗೆ ಒಪ್ಪಿಸಿದ್ದರು. ಇದರ ತಪಾಸಣೆಗಾಗಿ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಎಂಟು ಜನರದೊಂದು ಕಮೀಟಿ ಕೂಡಿಸಲ್ಪಟ್ಟಿತ್ತು. ಈ ಕಾರ್ಯದಲ್ಲಿ ಇಲ್ಲಿಯ ಹೈಸ್ಕೂಲಿನ ಹೆಡ್ಮಾಸ್ತರರಾದ ವಾಸುದೇವರಾವರು ಅಸಿಸ್ಟೆಂಟ್ ಮಾಸ್ತರರಾದ ಅಳ್ವರಾವರು, ಗುರುನಾಥರಾವರು, ಸಿದ್ಧರಾಮಯ್ಯನವರು ಮತ್ತು ನಾಯಕಲ್ ಬಸವರಾಜಶಾಸ್ತ್ರಿಗಳು ಭಾಗವಹಿಸಿದ್ದರು.

ವ್ಯಾಯಾಮಸಂಘದವರ ಆಟಪಾಟಗಳನ್ನಾಡಿಸುವದರಲ್ಲಿ ಮಹಾಬೂಬಅಲ್ಲಿಖಾನ, ಸಿದ್ದೀಸಾಹೇಬ, ಲುಥಫಿಸಾಹೇಬ, ಅಬ್ದುಲ್‌ರಹಿಮಾನ ಸಾಹೇಬರು ಭಾಗವಹಿಸಿದ್ದರು. ವ್ಯಾಯಾಮಸಂಘದವರಲ್ಲಿ ೪೫ ವಿದ್ಯಾರ್ಥಿಗಳು ಬಹುಮಾನಗಳನ್ನು ಪಡೆದರು. ವಾಙ್ಮಯ ಸಂಘದವರಲ್ಲಿ ೩೩ ವಿದ್ಯಾರ್ಥಿಗಳು ಬಹುಮಾನಗಳನ್ನು ಪಡೆದರು. ಅದಿನ ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ ಕಾಲೇಜಿನ ಭವನವೂ, ಶಂಕರಲಿಂಗದೇವಾಲಯವೂ ಶೃಂಗರಿಸಲ್ಪಟ್ಟಿದ್ದವು. ಕಾರ್ಯಕ್ರಮ—ಪ್ರಾತಃಕಾಲ ೯ ರಿಂದ ೧೧ ರ ವರೆಗೆ ವೈದಿಕರಿಂದ ಶ್ರೀ ಶಂಕರಲಿಂಗಮೂರ್ತಿಗೆ ರುದ್ರಾಭಿಷೇಕವು ವಿಧ್ಯುಕ್ತವಾಗಿ ಜರಗಿಸಲ್ಪಟ್ಟಿತು. ಆ ಮೇಲೆ ೩ ರಿಂದ ೫ ರ ವರೆಗೆ ಮಲಕೂಡ ಪಟ್ಟಾಧ್ಯಕ್ಷ ಶ್ರೀ ಸೋಮಶೇಖರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜ್ಯೋತಿಪುರ ಚಂದ್ರಶೇಖರಶಾಸ್ತ್ರಿ ಎಂಬ ವಿದ್ಯಾರ್ಥಿಯಿಂದ ರಚಿತವಾದ 'ಶಂಕರಚರಿತ' ಕೀರ್ತನವು ಬಹುಮನೋಹರವಾಗಿ ಮಾಡಲ್ಪಟ್ಟಿತು. ೫ ರಿಂದ ೬ ವರೆಗೆ ವಿದ್ಯಾರ್ಥಿಗಳ ಕುರ್ಚಿಯ ಆಟ, ಲಿಂಬೆಹಣ್ಣಿನ ಆಟ, ಗುಂಡು ಒಗೆಯುವದು ಇತ್ಯಾದಿಗಳು ತೋರಿಸಲ್ಪಟ್ಟವು. ೬ ರಿಂದ ೭|| ವರೆಗೆ ಶಂಕರಲಿಂಗ ಮೂರ್ತಿಗೆ ಮಂಗಲಮಾಡಿ ಧರ್ಮವೀರರ ಭಾವಚಿತ್ರದ ಮೆರವಣಿಗೆಯು ವಾದ್ಯವೈಭವದಿಂದಲೂ, ವೇದಘೋಷೆಯಿಂದಲೂ ಭಜನೆಯಿಂದಲೂ ಶಂಕರಲಿಂಗದೇವಾಲಯದಿಂದ ಹೊರಟು ಮುಖ್ಯ ಬಾಜಾರದಿಂದ ಧರ್ಮವೀರರ ಗೃಹಕ್ಕೆ ತೆರಳಿತು. ಧರ್ಮವೀರರ ಗೃಹದಲ್ಲಿ ಸ್ಮಾರಕಪರ ಸಮಾರೋಪ ಭಾಷಣವಾಗಿ ಆ ದಿವಸದ ಉತ್ಸವವು ಪೂರೈಯಿಸಲ್ಪಟ್ಟಿತು. ಮಾರನೇ ದಿನ ಸಾಯಂಕಾಲ ೫ ಘಂಟೆಗೆ ಎಸ್. ರುದ್ರಪ್ಪ ವಕೀಲ ಹೈಕೋರ್ಟ ವೈಸ್ ಪ್ರೆಸಿಡೆಂಟ್ ಶಂಕರಕಾಲೇಜ ಇವರ ಅಧ್ಯಕ್ಷತೆಯಲ್ಲಿ ಕೆಲವು ಆಟಪಾಟಗಳು ನಡೆದು ೬ ರಿಂದ ೭ ರ ವರೆಗೆ ಗಾಯನವೂ, ವೈದಿಕರ ವೇದಮಂತ್ರಗಳೂ, ವ್ಯಾಖ್ಯಾನಕಾರರ ವ್ಯಾಖ್ಯಾನಗಳೂ ನಡೆದವು. ಬಳಿಕ ಷಡಕ್ಷರಯ್ಯ ಸಿದ್ಧಯ್ಯ ಪಲ್ಲಾಪುರ ಮಠ ಗುಲ್ಬರ್ಗಾ ಇವರಿಂದ ಕಳುಹಿಸಲ್ಪಟ್ಟ ಲೇಖನವನ್ನು ಸದಾಶಿವಶಾಸ್ತ್ರಿಗಳು ಓದಿ ಹೇಳಿದರು. ಅನಂತರ ನಾಯ್ಕಲ್ ಬಸವರಾಜಶಾಸ್ತ್ರಿಗಳ ಮತ್ತು ಕಾಲೇಜ ಪ್ರಿನ್ಸಿಪಾಲರ ಭಾಷಣಗಳಾದವು. ತರುವಾಯ ಜಯಶೀಲರಾದ ವಿದ್ಯಾರ್ಥಿಗಳಿಗೆ ಬಹುಮಾನಗಳು ಕೊಡಲ್ಪಟ್ಟವು. ಧರ್ಮವೀರರ ಕೀರ್ತನವನ್ನು ಬರೆದ ಚಂದ್ರಶೇಖರಶಾಸ್ತ್ರಿ ಎಂಬ ವಿದ್ಯಾರ್ಥಿಗೆ ಕಾಲೇಜಿನ ವತಿಯಿಂದ ಬಹುಮಾನಕೊಟ್ಟದ್ದಲ್ಲದೆ ಜನರಲ್ ಸೆಕ್ರೆಟರಿಗಳಾದ ಹಂಪಣ್ಣನವರು ಸ್ವಂತವಾಗಿ ೫ ರೂಪಾಯಿ ಬಹುಮಾನ ಕೊಟ್ಟರು. ಈ ಉತ್ಸವಕ್ಕಾಗಿ ಮ|| ರಾ|| ರೊಟ್ನಡಗಿ ಶರಣಪ್ಪನವರು ಸ್ವತಃ ೮ ರೂಪಾಯಿಗಳನ್ನು ಕೊಟ್ಟರು. ತರುವಾಯ ಅಧ್ಯಕ್ಷರ ಭಾಷಣವಾಗಿ ಸಭಿಕರಿಗೆ ತಾಂಬೂಲಾದಿಗಳು ಕೊಡಲ್ಪಟ್ಟು, ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರಿನ್ಸಿಪಾಲ, ಶಂಕರಕಾಲೇಜ, ಯಾದಗಿರಿ.

ಓಂ ನಮೋ ಜಗದ್ಗುರು ಪಂಚಕಾಯ.

ಕೀರ್ತನ ಸಮಾರಂಭ

ಕನಕಗಿರಿ.

ಪರಮಪವಿತ್ರವಾದೀ ಶ್ರೀಮುಖನಾಮಸಂವತ್ಸರ ಕಾರ್ತಿಕ ಶುದ್ಧ ೧ ತಾ|| ೨೦-೧೦-೩೩ ಶುಕ್ರವಾರದಿಂದ ತಾ|| ೩೧-೧೦-೩೩ ಮಂಗಳವಾರದವರೆಗೂ ರಾಯಚೂರ ಜಿಲ್ಲಾ ಗಂಗಾವತಿ ತಾಲೂಕಿಗೆ ಸೇರಿದ ಕನಕಗಿರಿಯಲ್ಲಿರುವ ಶ್ರೀ|| ಷ|| ಬ್ರ|| ಪಂಚಾಕ್ಷರ ಶಿವಾಚಾರ್ಯರು ಹಿರೇಮಠ ಇವರ ಸನ್ನಿಧಿಯಲ್ಲಿ ಪ್ರತಿನಿತ್ಯವೂ ರಾತ್ರಿ ೮ ರಿಂದ ೧೧ ಘಂಟೆಯವರೆಗೆ ಸುಪ್ರಸಿದ್ಧರಾದ ವೇ|| ಚರಂತಯ್ಯ ಹಿರೇಮಠ ಕೊಂಗವಾಡ ಇವರು ಸುಶ್ರಾವ್ಯವಾಗಿ ಶಿವಕೀರ್ತನೆ ಮಾಡಿದರು. ಈ ಕೀರ್ತನ ಶ್ರವಣದಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಮಹತ್ವ, ವೀರಶೈವಮತ ನಿಜತತ್ವ, ಆಸ್ತಿಕತ್ವ ಇತ್ಯಾದಿ ಧಾರ್ಮಿಕ ವಿಚಾರ ಪೂರಿತಬೋಧೆಯು ಶ್ರವಣೇಚ್ಛುಗಳಾಗಿ ಆಗಮಿಸುತ್ತಿದ್ದ ಸ್ವಮತ ಪರಮತದ ಸಮಸ್ತ ಸ್ತ್ರೀಪುರುಷ ಮಹಾಜನಗಳ ಮನಸ್ಸಿನ ಮೇಲೆ ಚನ್ನಾಗಿ ಪರಿಣಾಮವಾಯಿತೆಂದು ಬಹುಸಂತೋಷದಿಂದ ಹೇಳಬೇಕಾಗಿದೆ. ತರುವಾಯ ಶ್ರೀ ಸ್ವಾಮಿಗಳವರ ಶಿಷ್ಯರಾದ ನಾಗಪ್ಪ ಭೀಮಪ್ಪ ತೆಗ್ಗಿನಮನಿ ಇವರ ಗೃಹದಲ್ಲಿ ಶ್ರೀ ಜಗದ್ಗುರು ರೇಣುಕವಿಜಯ ಕೀರ್ತನೆಯು ಒಳ್ಳೇ ವಿಜೃಂಭಣೆಯಿಂದ ನಡೆಯಿತು. ಕೀರ್ತನ ಮಧ್ಯದಲ್ಲಿ ವೀರಭದ್ರಪ್ಪ ಸಮಗಂಡಿ ಇವರು ಜನಮನೋರಂಜನವಾಗುವಂತೆ ಗಾನಮಾಡಿದರು. ಈ ಮಹಾಕಾರ್ಯದಲ್ಲಿ ಅಮರಪ್ಪ ಭಾವಿಕಟ್ಟಿ, ಅದಪ್ಪ ತೆಗ್ಗಿನಮನಿ, ಬಸಪ್ಪ ಶೆಟ್ರ, ಮಲ್ಲಪ್ಪ ಗಡಾದ, ಯಮನಪ್ಪ ಬೊಂದಾಡೆ, ಬಸಲಿಂಗಯ್ಯನವರು ಸಾಲಿಮಾಸ್ತರರು ಬಸಪ್ಪ ಬಕ್ಕಸದ, ವೈಶ್ಯರ ಪಂಪಣ್ಣ ಪುಷ್ಪದತ್ತ, ತಬಲಾಜಿ ಮುಂತಾದವರು ತ್ರಿಕರಣ ಪೂರ್ವಕ ಸೇವೆಯನ್ನು ಮಾಡಿ ಧನ್ಯಜೀವಿಗಳಾದರು. ಇಂಥ ಅಪೂರ್ವ ಸುಯೋಗವನ್ನು ದೊರಕಿಸಿಕೊಟ್ಟ ಶ್ರೀ ಪಟ್ಟಾಧ್ಯಕ್ಷರವ ಸ್ವೈಜವಾದ ಗುಣಗಳನ್ನು ಎಲ್ಲರೂ ಶ್ಲಾಘಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರು ಈ ಕಾರ್ಯದಲ್ಲಿ ಭಾಗಿಗಳಾದ ಸರ್ವರಿಗೆ ಸೌಖ್ಯವನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ.

ಗುರುಬಸಯ್ಯವಸ್ತ್ರದ, ಸ್ಕೂ-ಮಾ|| ಕನಕಗಿರಿ

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ... ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೋ.,

ಪೊ. ನಂ. 1246 ಮದರಾಸು.

K. N. BENSON & Co.,

[2] P. B. 1246, MADRAS.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿ ಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ... ಅಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್‌ಮೆಂಟ್ಸುಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಘಂಟೆಯನ್ನು ತೋರಿಸುವವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.



ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ... ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿವಸಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು. ... ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,

168, ಚೈನಾಬಜಾರ್, ಮದ್ರಾಸು.

THE CITY MART,

168, China Bazaar, MADRAS

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 12

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [46]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಚಳುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

... ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಪುಸ್ತಕಕ್ಕೆ ಬರೆಯಿರಿ. ಧರ್ಮಾರ್ಥ.

ಕಂಪೌಂಡ್ ಸಿರಪು ಬ್ಲಟ್—ಉಬ್ಬಸ, ನೆಗಡಿ, ದಮ್ ರೋಗಳಲ್ಲಿ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೆ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಪರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಪರ' ತರಿಸಿ ಕುಡಿಯಿರಿ.

ಮಲೇರಿಯಾನ ಕಂಪೆನಿ, ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

(ಹಂಪನಕಟ್ಟೆ), 21, ಮಂಗಳೂರು. [11] 8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಪುಷ್ಟಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಕಟ್ಟು, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್.

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	....	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	....	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ವೀರಶೈವಮತಮೀಮಾಂಸಾ	....	೩ ಆಣೆ
ಶಿವಶಕ್ತಿವಿಲಾಸ	....	೨ ಆಣೆ
ಶ್ರೀಗುರುತತ್ತ್ವಪದಗಳು	....	೨ ಆಣೆ
ಶಿವಸ್ತವಶಿರೋಮಣಿ	....	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	....	೪ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಶ್ರುತಿಸಾರಭಾಷ್ಯ	....	೫ ಆಣೆ
ಆಗಮಪರಿಜ್ಞಾನ	....	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	....	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	....	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		೮ ಆಣೆ
पंडित श्रीकाशीनाथशास्त्री यांचें भाषण (मराठी)	....	८ आणे
Speeches by Pandit Shri Kashinatha Shastri (*English*)		12 As.
ವೇದೋಕ್ತಶಿವಪೂಜಾವಿಧಿ	....	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	....	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	೧೨ ಆಣೆ
ಸಚಿತ್ರ ರೇಣುಕವಿಜಯ	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	....	೧ ರೂ.
लिंगधारणचंद्रिका (संस्कृत)	....	३ रू.
महानारायणोपनिषत् (वीरशैवभाष्य-संस्कृत)	....	१ रू.
वीरशैवेंदुशेखर (संस्कृत)	....	१ रू.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

		ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ		೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	....	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	....	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	....	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ		೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	....	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	....	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	....	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟಕರ್ಣದಿಂದ ಅವತರಿಸುವ ಫೋಟೋ	....	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	....	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	....	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	....	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	....	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	....	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	....	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	....	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ನಶ್ಯದ ಪುಡಿಯಿ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪಿನಸಿ, ... ತಲೆನೋವು, ತಲೆ ... ಲ್ಲಿಯ ರೋಗಗ ... ಕಣ್ಣುಗಳಲ್ಲಿ ಉಂ ... ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆ ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎ ... ಪರಿಮಳವಾಗುವುದು. ಇದನ್ನು ಅನೇಕ ಪ್ರಭು ... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦- ...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[45] ಪೋ. ಬಾ. ೫೧೦, ಮದರಾಸು

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ನವಂಬರ್ ೧೯೩೩ [ಸಂಚಿಕೆ ೩೦

ಶಿವದೀಕ್ಷಾಮಹೋತ್ಸವ.

ತೀರ್ಥಹಳ್ಳಿ ತಾಲ್ಲೂಕು ಶ್ರೀಮನ್ ಮಳಲಿಮಠದ ಶ್ರೀಗುರು ನಾಗಾರ್ಜುನಸ್ವಾಮಿಗಳವರು ತಮ್ಮ ಮಠಕ್ಕೆ ಸುಪ್ರಸಿದ್ಧ ಶ್ರೀಮನ್ ದುಮ್ಮಳ್ಳಿ ಮಠದ ಶ್ರೀ ಶಿವಲಿಂಗಸ್ವಾಮಿಗಳವರನ್ನು ಬರಮಾಡಿಕೊಂಡು, ಶ್ರೀಮುಖ ಸಂ|| ದ ಕಾರ್ತಿಕ ಶು|| ೧೨ ಸೋಮವಾರ ಬೆಳಗ್ಗೆ ೧೦|| ಘಂಟೆಗೆ ಸಲ್ಲುವ ಧನುರ್ಲಗ್ನದಲ್ಲಿ ತರೀಕೆರೆ ಹಿರೇಮಠದ ವೇ|| ಕಲ್ಲಿನಾಥದೀಕ್ಷಿತರ ಮತ್ತು ವಿಶ್ವನಾಥಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಶ್ರೀಪಂಚಬ್ರಹ್ಮಕಲಶಸ್ಥಾಪನ, ಹವನಾದಿಗಳನ್ನು ನಡೆಯಿಸಿದರು. ೮ ಜನ ವೀರಮಾಹೇಶ್ವರ ವಟುಗಳಿಗೆ ಶಿವದೀಕ್ಷಾಸಂಸ್ಕಾರಪೂರ್ವಕ ಬ್ರಹ್ಮೋಪದೇಶವು ನಡೆಯಿತು. ಆ ಕಾಲಕ್ಕೆ ಸೇರಿದ ವೈದಿಕ ಲೌಕಿಕಮಂಡಲಿಯನ್ನು ವ್ಯಾಖ್ಯಾನದಿಂದ ಸಂತೋಷಪಡಿಸಿದರು. ಶು|| ೧೩ ಮಂಗಳವಾರ ಸಾಯಂಕಾಲಕ್ಕೆ ರಜತಮೂರ್ತಿ ಶ್ರೀ ನಾಗಾರ್ಜುನಸ್ವಾಮಿಯ ಆಂದೋಳಿಕೋತ್ಸವವೂ ಸಹಸ್ರ ದೀಪೋತ್ಸವವೂ ನಡೆದು ಅನಂತರ ಶ್ರೀ ದುಮ್ಮಳ್ಳಿ ಶ್ರೀಗಳ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆಯು ನಡೆಯಿತು. ಅಧ್ಯಕ್ಷರು ಆಚಾರ ಮತ್ತು ಇಷ್ಟಲಿಂಗದಮಹತ್ವ ಎಂಬ ವಿಷಯವಾಗಿ ಬಹು ಸ್ವಾರಸ್ಯವಾಗಿ ಭಾಷಣ ಮಾಡಿದರು. ಈ ಮಹೋತ್ಸವಕ್ಕಾಗಿ ಬಂದಿದ್ದ ಶಿವಮೊಗ್ಗಾ ಮ|| ರಾ|| ಪೇಟಗಾರ ರುದ್ರಪ್ಪನವರ ಪುತ್ರಿ ಚಿ|| ೮ ವರ್ಷದ ಸುವರ್ಣದೇವಿ ಎಂಬ ಬಾಲಿಕೆಯು ಸಂಗೀತವನ್ನು ಹಾಡಿ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದಳು. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಶ್ರೀ ಪಂಚಾಚಾರ್ಯಪ್ರಭಾಪೋಷಣಕ್ಕಾಗಿ ೨ ರೂ. ಗಳು ತೆಗೆಯಿಸಲ್ಪಟ್ಟು, ಸಭಿಕರಿಗೆಲ್ಲಾ ಗಂಧಪುಷ್ಪಫಲತಾಂಬೂಲಗಳು ಹಂಚಲ್ಪಟ್ಟವು. ಅನಂತರ ಶ್ರೀಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಎಂಬ ಜಯಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ವೀರಶೈವ ಸಂಸ್ಕೃತ ಪಾಠಶಾಲೆಗಳಲ್ಲಿ ಧಾರ್ಮಿಕಶಿಕ್ಷಣವುಂಟೇ?

ಲೇಖಕ—ದೈವಜ್ಞವಿನೋದ.

ನಮ್ಮ ವೀರಶೈವ ಮತಬಾಂಧವರಿಂದ ಸ್ಥಾಪಿಸಲ್ಪಟ್ಟ ಸಂಸ್ಕೃತ ಪಾಠಶಾಲೆಗಳು ಅಲ್ಲಲ್ಲಿ ವಿರಾಜಿಸುತ್ತಲಿದ್ದು, ಅಲ್ಲಿ ಸಂಸ್ಕೃತ ಬಾಲಪಾಠಗಳನ್ನೋದಿದ ವಿದ್ಯಾರ್ಥಿಗಳು ಪ್ರೌಢವಿದ್ಯಾಧ್ಯಯನಕ್ಕಾಗಿ ಕಾಶೀ ಮೊದಲಾದ ಕಡೆಗೆ ಹೋಗುತ್ತಿರುವದು ಸರಿಯಷ್ಟೆ! ಇವರು ಅಲ್ಲಿ ತರ್ಕ, ವ್ಯಾಕರಣ ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಬರುತ್ತಿರುವದರಿಂದ ಇದರಿಂದ ಸಮಾಜಕ್ಕೇನೂ ಅಷ್ಟು ಲಾಭವಾಗಲಾರದು. ಮತಧರ್ಮ ಶಾಸ್ತ್ರಾಧ್ಯಯನವಿಲ್ಲದೆ ಎಷ್ಟು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರೂ ಪ್ರಯೋಜನವಿಲ್ಲ. "ಮನೆ ಗೆದ್ದು ಮಾರು ಗೆದೆ" ಎಂಬ ಹಿರಿಯರ ನುಡಿಯಂತೆ ಮೊದಲು ತಮ್ಮ ಧರ್ಮಶಾಸ್ತ್ರಾಧ್ಯಯನ ಮಾಡುವದೇ ಮುಖ್ಯವಾದುದು ಈ ಧಾರ್ಮಿಕ ಶಿಕ್ಷಣವು ಬಾಲಪಾಠಾರಂಭದಿಂದಲೇ ಸುರುವಾಗಬೇಕು. ಬಾಲ್ಯದಲ್ಲಿ ಪ್ರಾರಂಭಿಸಿದ ವಿದ್ಯೆಯೇ ಮಾನವನ ಹೃದಯಭೂಮಿಯಲ್ಲಿ ಬೇರುಬಿಡುವದು. ವೀರಶೈವದ್ವಿಜಕುಮಾರನು ಬಾಲ್ಯದಲ್ಲಿಯೇ ವೇದಾಧಿಕಾರಕ್ಕಾಗಿ ಉಪನಯನ ಸಂಸ್ಕಾರವನ್ನು ಹೊಂದುತ್ತಿರುವನು. ಆ ವೇದಾಧ್ಯಯನವನ್ನು ಪ್ರಾರಂಭಿಸಬೇಕಾದರೂ, ಮೊಟ್ಟಮೊದಲು ಸ್ವಶಾಖಾಧ್ಯಯನವನ್ನು ಮಾಡಬೇಕೆಂದೂ, ಅನಂತರ ಉಳಿದ ವೇದಗಳ ಅಧ್ಯಯನ ಮಾಡಬೇಕೆಂದೂ ಪ್ರಬಲವಾದ ನಿಯಮವಿರುವದು. ಅಂತೇ ಆಚಾರ್ಯರು ವೀರಶೈವ ತ್ರೈವರ್ಣಿಕರು (ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು) ದೀಕ್ಷೋಪನಯನ ಪೂರ್ವಕ ಸ್ವಶಾಖಾಧ್ಯಯನವನ್ನು ಮಾಡಿ ಆತ್ಮೋನ್ನತಿಯ ಸಾಧನಸಂಪತ್ತಿಯನ್ನು ಪಡೆದುಕೊಳ್ಳಬೇಕೆಂದು ಸಿದ್ಧಾಂತ ಗ್ರಂಥಗಳಲ್ಲಿ ಪ್ರತಿಪಾದಿಸಿರುವರು. ಆದರೆ ಈ ಪವಿತ್ರತತ್ವವನ್ನು ಕೆಲ ಜನ ನಾಸ್ತಿಕರು ಅಲ್ಲಗಳೆಯುತ್ತಿರುವರು. 'ಲಿಂಗವುಳ್ಳವನೇ ಕುಲಜನು' "ವೇದವನೋದುವವ ಕೋತಿಮಗ" ಎಂಬ ಹಂಚಬಂದ ವಚನಗಳನ್ನೇ ಕೆಲಜನ ಶೂದ್ರಲಿಂಗಿಗಳು ಮುಂದುವರಿಸುತ್ತಿರುವರು. ಈ ಜಾತಿಸಂಕರಕಾರರು ಕಿರಿಚಿಕೊಟ್ಟುಕೊಂಡು ಎಷ್ಟು ಚೀರಿದರೂ ವೇದಾಗಮೋಕ್ತಗಳಾದ ಉಚ್ಚತತ್ವಗಳು ಎಂದೂ ಹಾರಿಹೋಗುವುದಿಲ್ಲ. ಆ ಅಮೋಘವಾದ ತತ್ವರತ್ನಗಳನ್ನು ವೀರಮಾಹೇಶ್ವರರೂ ಶುದ್ಧಸಂಪ್ರದಾಯದ ಭಕ್ತರೂ ಬಹುಕಾಲದಿಂದ ಚನ್ನಾಗಿ ರಕ್ಷಿಸಿಕೊಂಡು ಬಂದಿರುವರು. ಜಾತಿಸಾಂಕರ್ಯದ ಗಾಳಿಯು ಬೆನ್ನು ಹತ್ತಿಬಂದ ಮಿಶ್ರರು ಮಾತ್ರ ತ್ರಿಶಂಕುವಿನ ಸ್ವರ್ಗದಲ್ಲಿರುವರು.

ಗುರುವರ್ಗದ ವಿಭೂತಿಗಳಿಂದಲೇ ವೀರಶೈವ ಮತವು ತನ್ನ ಶುದ್ಧಸಂಪ್ರದಾಯವನ್ನು ಕಳೆದುಕೊಂಡಿಲ್ಲವೆಂದು ಎದೆ ತಟ್ಟಿ ಹೇಳಬಹುದು. ಆಧ್ಯಾತ್ಮಿಕ ತೇಜೋಬಲದಿಂದ ಮತಧರ್ಮಗಳನ್ನು ರಕ್ಷಿಸಿದ ಗುರುವರ್ಗಕ್ಕೆ ಎಷ್ಟು ವಂದನೆಗಳನ್ನು ಅರ್ಪಿಸಿದರೂ ತೀರದು. ಇದೀಗ ವಿದ್ಯಾಭಿವೃದ್ಧಿಯ ಸುಗ್ಗಿಯಕಾಲವು! ಗುರುವರ್ಗದವರು ಶಾಸ್ತ್ರವಿದ್ಯಾಪರಿಣತರಾಗಬೇಕು. ಪ್ರಾಚೀನಕಾಲದ ಗುರುಕುಲಾಶ್ರಮಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳು ತಮ್ಮ ವರ್ಣಾಶ್ರಮೋಚಿತವಾದ ಅಧ್ಯಯನವನ್ನು ಮಾಡುತ್ತಿದ್ದರು. ಅಗ್ಗೆ ಪ್ರಪಂಚವೆಲ್ಲ ವರ್ಣಾಶ್ರಮಧರ್ಮಗಳಲ್ಲಿ ನಿಷ್ಠೆಯುಳ್ಳುದಾಗಿತ್ತು. ಈಗಿನ ಗುರುಕುಲಾಶ್ರಮಕ್ಕೂ ಮೊದಲಿನವುಗಳಿಗೂ ಭೂಮ್ಯಾಕಾಶದಷ್ಟು ಅಂತರವಿದೆ. ವಿಷಯಪ್ರಪಂಚ ಶೂನ್ಯವಾದ ಅರಣ್ಯದಲ್ಲಿದ್ದ ಮೊದಲಿನ ಗುರುಕುಲಾಶ್ರಮಗಳೆಲ್ಲಿ? ವಿಷಯ ವ್ಯಾಮೋಹದ ತವರುಮನೆಯಾದ ಈಗಿನ ನಗರಗಳಮಧ್ಯದಲ್ಲಿ ವಿರಾಜಿಸುವ ಸಂಸ್ಕೃತಪಾಠಶಾಲೆಗಳೆಲ್ಲಿ? ಇರುವಿಕೆಯೇ ಇಷ್ಟು ಬದಲಾವಣೆಹೊಂದಿದ ಬಳಿಕ ಉಳಿದ ವಿಚಾರಗಳನ್ನಂತೂ ಬಿಚ್ಚಿ ಹೇಳದಾಗಿದೆ. ಅದು ಏನೇ ಇರಲಿ; ಎಲ್ಲಾದರೂ ಪಾಠಶಾಲೆಗಳಿರಲಿ. ಆ ಶಾಲೆಯ ಸ್ಥಾಪಕರು ಪೋಷಕರು ಅಧ್ಯಾಪಕರು ಸನಾತನೀಯವಾದ ಆರ್ಯಗುರುಕುಲಾಶ್ರಮ ಪದ್ಧತಿಯಂತೆ ಧಾರ್ಮಿಕ ಶಿಕ್ಷಣದ ಪದ್ಧತಿಯನ್ನು ಮುಖ್ಯಾಂಗವಾಗಿಟ್ಟುಕೊಳ್ಳಬೇಕು. ಈಗ ಬಾಗಲಕೋಟೆ, ಹುಬ್ಬಳ್ಳಿ, ಧಾರವಾಡ ಮೊದಲಾದ ಶಹರಗಳಲ್ಲಿ ನಮ್ಮ ವೀರಶೈವರಿಂದಲೇ ಸಂಸ್ಕೃತಪಾಠಶಾಲೆಗಳು ಅವ್ಯಾಹತವಾಗಿ ಸಾಗಿರುವದು ಸರಿಯಷ್ಟೆ! ಈ ಪಾಠಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವು ದೊರೆಯುತ್ತಿರುವುದೇ? ಈಗ ಸಾಮಾನ್ಯವಾಗಿ ಬಾಗಲಕೋಟೆ ಮೊದಲಾದ ಸಂಸ್ಕೃತಪಾಠಶಾಲೆಗಳು ಎಷ್ಟೋ ವರ್ಷಗಳಿಂದ ಪಾಠ ಪ್ರವಚನಗಳನ್ನು ಸಾಗಿಸುತ್ತ ಬಂದಿವೆ. ಆದರೆ ಯಾವ ಪಂಡಿತರು ಪಾಠಶಾಲೆಗೆ ಬಂದರೂ ವೀರಶೈವ ಮತಧರ್ಮ ಶಾಸ್ತ್ರಾನಭಿಜ್ಞರೇ ಇರಬಹುದೇನು? ಯಾಕೆಂದರೆ ಈ ಪಾಠಶಾಲೆಗಳ ಪ್ರಯೋಜನವು ಆ ಪಟ್ಟಣಗಳಿಗೆ ಕೆಲಮಟ್ಟಿಗಾದರೂ ಆಗಬೇಕಲ್ಲವೇ? ಈಗ ಈ ಪಟ್ಟಣಗಳಲ್ಲಿ ಪ್ರತಿವರ್ಷ ಧರ್ಮಾಭಿಮಾನದಿಂದ ವೀರಶೈವ ಮಹಾಜನಗಳು ಸಹಸ್ರಗಟ್ಟಲೆ ರೂಪಾಯಿಗಳನ್ನು ಈ ಶಾಲೆಗಳಿಗೆ ಸುರಿಮಾಡಿದರೂ ಮತಸಂಸ್ಕಾರ ಲೌಕಿಕೋಪಯುಕ್ತವಾದ ಶಾಂತ್ಯಾದಿಕರ್ಮಾದಿಗಳನ್ನು ಮಾಡಿಸುವದಾದರೆ ಎಲ್ಲಿಂದಲೋ ವೈದಿಕರನ್ನು ತರಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ವೈದಿಕರ ಸಂಖ್ಯೆಯು ವಿರಳವಾಗಿದೆ. ಅತ್ಯಗತ್ಯವಾದ ಜ್ಯೋತಿಶ್ಶಾಸ್ತ್ರವಂತೂ ಬಹುದೂರ ಉಳಿದಿದೆ. ಬಾಗಲಕೋಟೆ ಮೊದಲಾದ ವೀರಶೈವ ಪಟ್ಟಣಿಗರು ಪರಮತೀಯರ ಹತ್ತರ ಹೋಗಿ ದಕ್ಷಿಣೆ ತಾಂಬೂಲವನ್ನಿಟ್ಟು ಮುಹೂರ್ತಾದಿಗಳನ್ನು ಕೇಳುತ್ತಲಿದ್ದಾರೆ. ಇಷ್ಟೇ ಅಲ್ಲ, ವಾಸ್ತುಶಾಂತಿ-ಕೂಷ್ಮಾಂಡಶಾಂತಿ-ದುಷ್ಟನಕ್ಷತ್ರ ಜನನಶಾಂತಿ ದುಷ್ಟನಕ್ಷತ್ರ ಮರಣಶಾಂತಿ ಮೊದಲಾದ ಅನೇಕ ಕರ್ಮಾದಿಗಳನ್ನು ಪರಮತೀಯರಿಂದಲೇ ಮಾಡಿಸುತ್ತಲಿರುವದು ನಮ್ಮ ಪವಿತ್ರವಾದ ಸಮಾಜಕ್ಕೆಷ್ಟು ಹೇಯವಾದುದೆನ್ನುವದನ್ನು ವಾಚಕರೇ ಯೋಚಿಸಬೇಕು. ಅಸ್ತು! ಈಗಿನ ಸಂಸ್ಕೃತಪಾಠಶಾಲೆಯವರು ಮುಖ್ಯವಾಗಿ 'ಮನೆ ಗೆದ್ದು ಮಾರು ಗೆದೆ' ಎಂಬಂತೆ ಸ್ವಧರ್ಮಗಸ್ಮೃತಿಗಳಾದ ಜ್ಯೋತಿಷ-ವೈದಿಕ ಶಿಕ್ಷಣವನ್ನು ಅತ್ಯವಶ್ಯವಾಗಿ ಆರಂಭಿಸಿ ಈ ಧಾರ್ಮಿಕ ಕೊರತೆಯನ್ನು ಜಾಗ್ರತವಾಗಿ ದೂರ ಮಾಡಬೇಕಾಗಿ ಬಲವಾಗಿ ಸೂಚಿಸುತ್ತೇವೆ.

ಸ್ವೀಕಾರ

ತೀರ್ಥಹಳ್ಳಿ ತಾಲೂಕು ಮಳಲಿ ಮಠದಲ್ಲಿ ನೆರವೇರಿದ ಶಿವದೀಕ್ಷಾಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಗಳು ವೇ|| ತರೀಕೆರೆ ಹಿರಿಯಮಠದ ವೇ|| ಕಲ್ಲಿನಾಥಯ್ಯನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 4

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೋ. ನಂ. 1246 ಮದರಾಸು.

K. N. BENSON & Co.,
[3] P. B. 1246, MADRAS.

ಚಿಂತಾಮಣಿ ಪ್ರಕರಣ.

ಮಹಾಲಕ್ಷ್ಮಮ್ಮನ ಅಣ್ಣನಾದ ಲಕ್ಷ್ಮೀನರಸಿಂಹಯ್ಯನ ಹೇಳಿಕೆ.

ನಾನು ರಾಮಸ್ವಾಮಿ ಪಂಡಿತರ ಮಗ ಮತ್ತು ಮಹಾಲಕ್ಷ್ಮಮ್ಮನ ಅಣ್ಣ. ಆಕೆಯು ಮನೆಬಿಟ್ಟುಹೋದ ದಿವಸ ನಾನು ಬೇಗೂರಿಗೆ ಹೋಗಿದ್ದೆ. ೨೩ ನೆಯ ತಾರೀಖಿನ ದಿವಸ ರಾತ್ರಿ ಸುಮಾರು ೮ ಗಂಟೆಯಲ್ಲಿ ಊರಿಗೆ ಬಂದೆ. ಬಂದಾಗ ನಮ್ಮ ತಂದೆಯವರು ಮನೆಯಲ್ಲಿದ್ದರು. ನಾನು ಮನೆಗೆ ಬಂದೊಡನೆಯೇ ಶೋಕಾಶ್ರುಪೂರಿತರಾಗಿ 'ಮಹಾಲಕ್ಷ್ಮಮ್ಮನು ತುರುಕರ ಪಾಲಾದಳು' ಎಂದು ಹೇಳಿದರು. ಎಲ್ಲಿದ್ದಾಳೆ ಏನು ಎಂದು ನಾನು ವಿಚಾರಿಸಿದ್ದಲ್ಲಿ ವೆಂಕಟಗಿರಿಕೋಟೆಯಲ್ಲಿರುವಳೆಂಬ ಉತ್ತರವು ಬಂದಿತು. ಅಲ್ಲಿಂದ ನಾನೂ ವೆಂಕಟಗಿರಿಕೋಟೆಗೆ ಹೋಗಬೇಕೆಂದು ಹೊರಟೆ. ಮಧ್ಯ ದಾರಿಯಲ್ಲಿ ಸ್ನೇಹಿತರಾದ ವೆಂಕಟರಮಣಶೆಟ್ಟಿ ಮತ್ತು ರಾಮಚಂದ್ರರಾಯರನ್ನು ಸಂದರ್ಶಿಸಿದೆ. ಅವರೊಂದಿಗೆ ನನ್ನ ತಂಗಿಯ ವಿಚಾರವನ್ನು ಪ್ರಸ್ತಾಪಿಸಿ ಅವರನ್ನು ಕರೆದುಕೊಂಡು ಹೊರಟೆ. ಮಧ್ಯ ದಾರಿಯಲ್ಲಿ ಯಾರೋ ಮುಸಲ್ಮಾನರು "ಯಾರು ಯಾರು" ಎಂದು ಕೂಗಿಕೊಂಡರು. ನಾನು ಅವರಿಗೆ ಉತ್ತರಕೊಡದೆ ವೆಂಕಟಗಿರಿಕೋಟೆ ಸ್ಕೂಲ್ ಬಳಿ ಬಂದೆ. ಅಲ್ಲಿ ೨೦೦-೩೦೦ ಮಂದಿ ಮಹಮ್ಮದೀಯರ ಗುಂಪಿದ್ದಿತು. ಕೆಳಗಿನ ಕೋರ್ಟಿನಲ್ಲಿ ಖುಲಾಸೆಯಾದ ಇಬ್ಬರೂ, ಇಲ್ಲಿನ ಅಪರಾಧಿಗಳಾದ ೧, ೩, ಮತ್ತು ನಾಲ್ಕನೆಯ ಅಪರಾಧಿಗಳೂ ಅಲ್ಲಿದ್ದರು. ನನ್ನ ತಂಗಿಯನ್ನು ನೋಡಬೇಕೆಂದು ಮೊದಲನೆಯ ಅಪರಾಧಿಯನ್ನು ಕೇಳಿದೆ. "ಈಗ ನೋಡುವುದಕ್ಕಾಗುವುದಿಲ್ಲ. ಅವಳು ಗೋಷಾದಲ್ಲಿದ್ದಾಳೆ" ಎಂದು ಅವನು ಉತ್ತರಕೊಟ್ಟ. ನಾನು ಮಾತನಾಡಿಕೊಂಡು ಹೊರಟು ಹೋಗುತ್ತೇನೆ ಎಂದು ಅವನಿಗೆ ಹೇಳಿದೆ. ಮುಷ್ಕರ ಹಿಡಿದರೆ ನಿನ್ನ ಪ್ರಾಣವನ್ನು ತೆಗೆದುಬಿಡುತ್ತೇವೆ ಎಂದು ಬೆದರಿಸಿದರು. ಹಿಂದಿನ ಕೋರ್ಟಿನಲ್ಲಿ ಖುಲಾಸೆಯಾದ ಇಬ್ಬರು ಅಪರಾಧಿಗಳೂ ಸೇಟ್ ಸಾಬಿಯೂ ನನ್ನನ್ನು ಬೆದರಿಸಿದರು. ನಂತರ ನಾವು ವಾಪಸು ಬಂದುಬಿಟ್ಟೆವು ವಾಪಸು ಬಂದು ಸಂಗತಿಯೆಲ್ಲವನ್ನೂ ಊರಿನ ಕೆಲವು ಮಂದಿ ದೊಡ್ಡಮನುಷ್ಯರಲ್ಲಿ ಹೇಳಿಕೊಂಡೆವು. ಸಹಾಯ ಮಾಡುತ್ತೇವೆ, ಅವಳನ್ನು ಕರೆದುಕೊಂಡು ಬರೋಣ ಎಂದು ಅವರು ನನಗೆ ಭರವಸೆಯನ್ನಿತ್ತರು. ನಾವೆಲ್ಲರೂ ಸೇರಿ ವೆಂಕಟಗಿರಿಕೋಟೆಗೆ ಹೋಗೋಣವೆಂದು ಹೊರಟೆವು. ನಮ್ಮಷ್ಟಕ್ಕೆ ನಾವೇ ಹೋದರೆ ಗಲಾಟೆಯಾದೀತೆಂಬ ಭಯದಿಂದ ಅಮಲ್ದಾರರ ಹತ್ತರಕ್ಕೆ ಹೋದೆವು. ಅಮಲ್ದಾರರ ಬಳಿ ನಮ್ಮ ಕಷ್ಟವೆಲ್ಲವನ್ನೂ ಹೇಳಿಕೊಂಡೆವು. ಅವರು ಕಾಗದವೊಂದನ್ನು ಬರೆದು ಇನ್ಸ್ಪೆಕ್ಟರವರಿಗೆ ಕೊಡಿ ಎಂದರು. (ಅಮಲ್ದಾರರ ಕಾಗದವನ್ನು ಸಾಕ್ಷಿಯು ಗುರ್ತಿಸಿದ) ನಂತರ ಅದನ್ನು ಇನ್ಸ್ಪೆಕ್ಟರವರಿಗೆ ಕೊಟ್ಟೆವು. ಇನ್ಸ್ಪೆಕ್ಟರವರ ಮನೆಯು ಅಮಲ್ದಾರರ ಮನೆಗೆ ಒಂದು ಮನೆ ಬಿಟ್ಟು ಇದೆ. ಪರಶುರಾಮಯ್ಯನೆಂಬುವನನ್ನು ಇನ್ಸ್ಪೆಕ್ಟರು ದಫೇದಾರನ ಮನೆಗೆ ಕಳುಹಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ ಅಮಲ್ದಾರರು, ಇನ್ಸ್ಪೆಕ್ಟರವರನ್ನು ಬರಮಾಡಿಕೊಂಡರು. ಇನ್ಸ್ಪೆಕ್ಟರವರು ಅಮಲ್ದಾರರೊಡನೆ ಮಾತನಾಡಿ ಪುನಃ ಬಂದರು. ಅನಂತರ ಇನ್ಸ್ಪೆಕ್ಟರು ನಮ್ಮೆಲ್ಲರನ್ನೂ ಕರೆದುಕೊಂಡು ತಾಲೂಕು ಆಫೀಸಿಗೆ ಬಂದರು. ಅಲ್ಲಿ ಬಹಳ ಹೊತ್ತು ಕಾಲಹರಣಮಾಡಿಬಿಟ್ಟು ಮನೆಗೆ ವಾಪಸು ಹೋದರು. ಮನೆಯ ಹತ್ತಿರ ನಾವೂ ಹೋದೆವು. ಅಲ್ಲಿಯೂ ಬಹಳ ಹೊತ್ತು ಕಾಲಹರಣ ಮಾಡಿಬಿಟ್ಟು ಅಲ್ಲಿಂದ ನಮ್ಮೆಲ್ಲರನ್ನು ಕರೆದುಕೊಂಡು ಹೈಸ್ಕೂಲಿನ ಬಳಿಗೆ ಬಂದರು. ಹೈಸ್ಕೂಲು ಬಳಿ ಇರಬೇಕೆಂದು ಇನ್ಸ್ಪೆಕ್ಟರವರು ನನಗೆ ಹೇಳಿ, ನೀವು ಬರಬೇಡಿ ಎಂದು ತಿಳಿಸಿ ವೆಂಕಟಗಿರಿ ಕೋಟೆಗೆ ಹೋಗಿ ಬರುತ್ತೇವೆಂದು ಹೇಳಿ ಹೊರಟು ಹೋದರು. ಹುಡುಗಿಯನ್ನು ಕಳುಹಿಸಬೇಕೆಂದು ಅಮಲ್ದಾರರು ಹೇಳಿದ್ದಾರೆ. ಆದುದರಿಂದ ನಾವೂ ಬರುತ್ತೇವೆ ಎಂದು ಇನ್ಸ್ಪೆಕ್ಟರವರಲ್ಲಿ ವಿಜ್ಞಾಪಿಸಿಕೊಂಡೆವು. ಪುನಃ ನೀವು ಇಲ್ಲಿಯೇ ಇರಬೇಕು ಎಂದು ಹೊರಟುಹೋದರು. ಸ್ವಲ್ಪ ಹೊತ್ತಿನಮೇಲೆ ಕೆಲವು ಮಂದಿ ಮಹಮ್ಮದೀಯರು "ಶಿಡ್ಲಘಟ್ಟಕ್ಕೆ ಹೋದ ಮೋಟಾರು ಇನ್ನೂ ಬರಲೇ ಇಲ್ಲವಲ್ಲಾ" ಎಂದು ಮಾತನಾಡಿಕೊಳ್ಳುತ್ತಿದ್ದರು. ಅದನ್ನು ಕೇಳಿ ಪುಟ್ಟತಿ ಶ್ರೀನಿವಾಸಯ್ಯನೆಂಬುವರು ಸೇಟ್ ಸಾಬಿ ಮನೆಯಕಡೆ ಹೊರಟರು. ನಾನೂ ಶ್ರೀನಿವಾಸಯ್ಯನ ಜೊತೆಯಲ್ಲಿ ಹೋದೆ. ಅಲ್ಲಿ ಅಷ್ಟು ಹೊತ್ತಿಗೆ ಮೋಟಾರು ಬಂದಿತು. ಆ ಮೋಟಾರಿನಲ್ಲಿ ಇಲ್ಲಿನ ೧, ೩ ಮತ್ತು ೪ ನೇ ಅಪರಾಧಿಗಳೂ ಖುಲಾಸೆಯಾದ ದಸ್ತಗಿರಿ ಸಾಬಿಯೂ ಬಂದಿಳಿದರು. ನಾನೂ ಶ್ರೀನಿವಾಸಯ್ಯನೂ ನಂತರ ಹೈಸ್ಕೂಲ್ ಹತ್ತರ ಬಂದುಬಿಟ್ಟೆವು. ಸ್ವಲ್ಪ ಹೊತ್ತಿನ ಮೇಲೆ ಇನ್ಸ್ಪೆಕ್ಟರವರು ವಾಪಸು ಬಂದರು. ವೆಂಕಟಗಿರಿಕೋಟೆಯಲ್ಲಿ ಹುಡುಗಿ ಇಲ್ಲ ೧ ನೆಯ ಅಪರಾಧಿ ಮನೆಯಲ್ಲಿದ್ದಾಳೆ ಎಂದು ಹೇಳಿದರು. ಆ ಮೇಲೆ ಸೇಟ್ ಸಾಬಿಯ ಮನೆಗೆ ಇನ್ಸ್ಪೆಕ್ಟರು ಹೋದರು. ನಾವು ಹೈಸ್ಕೂಲಿನ ಬಳಿಯಲ್ಲಿಯೇ ಇದ್ದೆವು. ಇನ್ಸ್ಪೆಕ್ಟರವರು ಕೈಯಲ್ಲಿ ಹೂವಿನ ಹಾರ ವೀಳ್ಯದೆಲೆ ಕಲ್ಲು ಸಕ್ಕರೆ ಬಾದಾಮಿಯನ್ನು ತೆಗೆದುಕೊಂಡು ಬಂದರು. ಹುಡುಗಿಗೆ ನಿಖಾ ಆಗಿಹೋಯಿತು ಎಂದು ಹೇಳಿ ಅಮಲ್ದಾರರ ಮನೆಗೆ ಹೋದರು. ಅಮಲ್ದಾರರ ಮನೆಯಿಂದ ಪುನಃ ವಾಪಸು ಬಂದು ನಿಖಾ ಆಗಿಹೋಯಿತು ನೀವೆಲ್ಲರೂ ಮನೆಗೆ ಹೋಗಿ ಎಂದು ಹೇಳಿದರು. ನಾವು ಹುಡುಗಿಯನ್ನು ನೋಡಬೇಕೆಂದು ಕೇಳಿಕೊಂಡೆವು. ಇನ್ಸ್ಪೆಕ್ಟರವರು ದಫೇದಾರರನ್ನು ಕರಿಸಿ "ನೀವು ಸೇಟಿನ ಹತ್ತರ ಹೇಳಿ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ" ಎಂದು ಹೇಳಿದರು. ನಾನೊಬ್ಬನೇ ಸೇಟ್ ಸಾಬಿ ಮನೆಗೆ ಹೋದೆ. ದಫೇದಾರನು ಅವನ ಮನೆಗೆ ಹೋಗಿ ಸೇಟ್ ಸಾಬಿಯನ್ನು ಹೊರಗೆ ಕರೆದ. ಸೇಟ್ ಸಾಬಿಯು ಹೊರಗೆ ಬಂದ. ಇನ್ಸ್ಪೆಕ್ಟರವರು ಹೇಳಿದ್ದನ್ನು ದಫೇದಾರನು ಸೇಟ್ ಸಾಬಿಗೆ ಹೇಳಿದ. ಸೇಟ್ ಸಾಬಿಯು ನನ್ನನ್ನು ಒಳಕ್ಕೆ ಕರೆದುಕೊಂಡು ಹೋದ. ಒಳಗೆಹೋಗಿ ಮಹಾಲಕ್ಷ್ಮಮ್ಮ ಎಂದು ಕರೆದೆ. ಹುಡುಗಿಯು ಅಳುತ್ತಾ ಕೊಠಡಿಯಿಂದ ಬಾಗಿಲಬಳಿ ಬಂದಳು. ನನಗೂ ಅವಳನ್ನು ಮಾತನಾಡಿಸಲು ಚೈತನ್ಯವಿಲ್ಲದೆ ಹೋಯಿತು. ಅಬ್ದುಲ್ ಸುಕೂರೂ ಮತ್ತು ದಸ್ತಗಿರಿಸಾಬಿಯೂ ಹುಡುಗಿಯನ್ನು ಗದರಿಸಿಕೊಂಡರು. ಸೇಟ್ ಸಾಬಿ ಮನೆಯಲ್ಲಿದ್ದ ಕೆಲವು ಮಹಮ್ಮದೀಯ ಹೆಂಗಸರು ಹುಡುಗಿಯನ್ನು ಒಳಕ್ಕೆ ಎಳೆದುಕೊಂಡುಹೋದರು. ಇಲ್ಲಿದ್ದರೆ ನಿನ್ನನ್ನು ಹೊಡೆಯುತ್ತೇನೆಂದು ಬೆದರಿಸಿದರು. ನಾನು ಹೊರಗೆ ಬಂದು ದಫೇದಾರನನ್ನು ಕರೆದುಕೊಂಡು ಹೋಗಿ ಇನ್ಸ್ಪೆಕ್ಟರವರಿಗೆ ಈ ವರ್ತಮಾನವನ್ನು ತಿಳಿಸಿದೆ. ಬೆಳಿಗ್ಗೆ ೭ ಅಥವಾ ೭-೩೦ ಗಂಟೆಗೆ ಕಚೇರಿಗೆ ಬಾ, ಹುಡುಗಿಯನ್ನು ಹಾಜರುಮಾಡುತ್ತೇನೆ ಎಂದು ಹೇಳಿದರು. ಇದೇ ರೀತಿಯಂತೆ ನಾವು ಮನೆಗೆ ಬಂದು ಬಿಟ್ಟೆವು.

ಮುಂಜಾನೆ ಕಚೇರಿಗೆಹೋದೆ. ಕಚೇರಿಯಲ್ಲಿ ಬಹಳಹೊತ್ತು ಕಾದರೂ ಇನ್ಸ್ಪೆಕ್ಟರವರಾಗಲೀ ಹುಡುಗಿಯಾಗಲೀ ಬರಲೇ ಇಲ್ಲ. ಅಲ್ಲಿಂದ ನಾನು ಮನೆಗೆ ಬಂದು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೂ, ಸೂಪರಿಂಟೆಂಡೆಂಟರಿಗೂ ತಂತಿಗಳನ್ನು ಕೊಟ್ಟೆ. ನಂತರ ಮನೆಗೆ ಬಂದುಬಿಟ್ಟೆ. ಮಧ್ಯಾಹ್ನ ೪ ಗಂಟೆ ಸಮಯದಲ್ಲಿ ಇನ್ಸ್ಪೆಕ್ಟರವರು ನನ್ನನ್ನು ಬರಮಾಡಿಕೊಂಡರು. ನಾನು ಅವರ ಆಫೀಸಿಗೆ ಹೋದೆ. ವರದಿಯನ್ನು ಒಪ್ಪಿಸು ಎಂದು ನನಗೆ ಹೇಳಿದರು. ನಾನು ವರದಿಯನ್ನು ಬರೆದುಕೊಟ್ಟೆ. (ಎಗ್ಜಿಬಿಟ್ ಪಿ. ೧೬) ಬರೆದುಕೊಟ್ಟೆ. ನಂತರ ನನ್ನ ಹೇಳಿಕೆಯನ್ನು ರಿಕಾರ್ಡು ಮಾಡಿದರು. ನಾನು ಹೇಳಿದ್ದಲ್ಲದೆ ಹೇಳಿಕೆಯಲ್ಲಿ ಹೆಚ್ಚು ಸಂಗತಿಯನ್ನು ಅವರೇ ಬರಸಿದರು. (ಹೇಳಿಕೆಯನ್ನು ಕೋರ್ಟಿನಲ್ಲಿ ಓದಲಾಯಿತು.) ಈ ಹೇಳಿಕೆಯೆಲ್ಲವನ್ನು ಹೇಳು ನಿನಗೆ ಸಹಾಯವಾಗುತ್ತದೆ ಎಂದು ಹೇಳಿದರು. ಇವೆಲ್ಲವನ್ನೂ ಬರೆದುಕೊಟ್ಟ ನಂತರ ಹೆಚ್ಚಾಗಿ ಬರೆಸಿಕೊಂಡ ವಿವರಗಳನ್ನು ಅಮಲ್ದಾರರಿಗೆ ತಿಳಿಸಬೇಕೆಂದು ಅವರಲ್ಲಿ ಹೊರಟೆ. ಅಮಲ್ದಾರರು ಊರಿನಲ್ಲಿರಲಿಲ್ಲ. ಸೂಪರಿಂಟೆಂಡೆಂಟರು ಇದೆಲ್ಲಾ ಆದ ಮೇಲೆ ಚಿಂತಾಮಣಿ ಟಿ. ಬಿ. ಗೆ ಬಂದಿದ್ದರು. ಮಹಾಲಕ್ಷ್ಮಮ್ಮನನ್ನು ಕರೆಸಿಕೊಂಡ ದಿವಸ ಬಂಗಲೆಯ ಹೊರಗೆ ನಾನು ಕಾದುಕೊಂಡಿದ್ದೆ. ಕೋಲಾರ್ ಆಸ್ಪತ್ರೆಗೆ ಆಕೆಯನ್ನು ಕಳುಹಿಸಿದುದು ನನಗೆ ಗೊತ್ತಿಲ್ಲ. ನಾನು ಬೇಗೂರಿಗೆ ಹೋಗುವುದಕ್ಕಿಂತ ಮುಂಚಿನ ಶುಕ್ರವಾರ, ರಾತ್ರಿ ೧೦ ಗಂಟೆಯ ಸಮಯದಲ್ಲಿ ಮೇಸ್ತ್ರರೂ, ದಸ್ತಗಿರಿಸಾಬಿ, ಖಾದರೂ, ಇಬ್ರಾಹಿಮನೆಂಬುವನೊಬ್ಬನು ನಮ್ಮ ಮನೆಯ ಮುಂದಿರುವ ಉರ್ದು ಸ್ಕೂಲಿನಬಳಿ ಇದ್ದರು. ಇಬ್ರಾಹಿಂ ಎಂಬುವನು ಬಂದು ಕಿಟಕಿಯಲ್ಲಿ ನೋಡಿದ. ನಾನು ಹೊರಕ್ಕೆಬಂದು ಅವನ ನಡತೆಯನ್ನು ಖಂಡಿಸಿದೆ. ಇವರೆಲ್ಲಾ ಗುಂಪುಕಟ್ಟಿಕೊಂಡು ಹುಡುಗಿಗೆ ಮದ್ದುಸೇರಿಸಿ ಅಪಾಯ ಮಾಡುತ್ತೇವೆ ಎಂದು ಕೂಗಿಕೊಂಡು ಹೋಗುತ್ತಿದ್ದರು. ೧-೪೫ಕ್ಕೆ ಹೇಳಿಕೆಯು ಮುಗಿಯಿತು.

ಪಾಟೀಸವಾಲು.

ಡಿಫೆನ್ಸ್ ವಕೀಲರ ಪ್ರಶ್ನೆಗಳಿಗೆ ಉತ್ತರವನ್ನೀಯುತ್ತಾ ನಮ್ಮ ಅಕ್ಕನ ಮಗಳಿಗೆ ಮದುವೆಯಾಯಿತು. ಬೀಗರು ವಾಪಸು ಹೋದಾಗ ಅವರ ಜೊತೆಯಲ್ಲಿ ಆ ಊರಿಗೆ ಹೋಗಿದ್ದೆ. ನಾನು ವಾಪಸು ಬಂದಾಗ್ಗೆ ನಮ್ಮ ತಂದೆಯವರೂ ನನ್ನ ತಮ್ಮ ಕೃಷ್ಣಮೂರ್ತಿಯೂ ಮನೆಯಲ್ಲಿದ್ದರು. ಮಹಾಲಕ್ಷ್ಮಮ್ಮನು ಇಂಥವರ ಮನೆಯಲ್ಲಿದ್ದಾಳೆ ಎಂದು ಅವರು ನನಗೆ ಹೇಳಲಿಲ್ಲ. ವೆಂಕಟಗಿರಿ ಕೋಟೆಯಲ್ಲಿ ಎಲ್ಲಿದ್ದಾಳೆಂಬುದನ್ನು ನಾನು ಕೇಳಲಿಲ್ಲ. ಆಗ ನಾನು ಓದುವುದನ್ನು ಬಿಟ್ಟುಬಿಟ್ಟಿದ್ದೆ. ಬಿಟ್ಟು ಎರಡು ಮೂರು ತಿಂಗಳಾಗಿರಬಹುದು. ನಾನು ೫ ನೆಯ ಫಾರಂನಲ್ಲಿ ಫೇಲಾದೆ. ನಾನು ಲೋಯರ್ ಸೆಕೆಂಡರಿ ಪರೀಕ್ಷೆಗೋಸ್ಕರ ದರಖಾಸ್ತನ್ನು ನನ್ನ ಸ್ವಂತ ಕೈಬರಹದಿಂದ ಬರೆದುಕೊಟ್ಟಿದ್ದೇನೆ. ನಾನು ೧೯೨೯-೩೦ ನೆಯ ಇಸವಿಯಲ್ಲಿ ಆ ಪರೀಕ್ಷೆಗೆ ಕೂತುಕೊಂಡೆ. ಆಗ ನಾನು ಯಾವ ವಯಸ್ಸನ್ನು ಕೊಟ್ಟನೋ ಅದು ನನಗೆ ಜ್ಞಾಪಕವಿಲ್ಲ. ಇನ್ಸ್ಪೆಕ್ಟರ್ ಗರುಡಾಚಾರ್ಯರು ಹುಡುಗಿಯು ಬಂದ ೫-೬ ದಿನಗಳ ನಂತರ ನನ್ನ ಕೈಫಿಯತ್ತನ್ನು ತೆಗೆದುಕೊಂಡರು. ಅಲ್ಲಿ ನನ್ನ ವಯಸ್ಸು, ತಂದೆಯ ಹೆಸರು, ಮುಂತಾದುವನ್ನು ನಾನೇ ಹೇಳಿದೆ. ಆಗ ನನ್ನ ವಯಸ್ಸು ೨೦ ವರ್ಷವೆಂದು ನಾನು ಹೇಳಲಿಲ್ಲ. ೧೮ ವರ್ಷವೆಂದು ಮಾತ್ರ ಹೇಳಿದೆ. ಅಮಲ್ದಾರರಲ್ಲಿ ಹೋಗುವುದಕ್ಕೆ ಮುಂಚೆ ವಿಷಯವನ್ನು ಸಬ್ ಇನ್ಸ್ಪೆಕ್ಟರವರಾಗಲೀ ಇನ್ಸ್ಪೆಕ್ಟರವರಾಗಲೀ ತಿಳಿಸಲು ಪ್ರಯತ್ನ ಪಡಲಿಲ್ಲ. ಸಬ್ ಇನ್ಸ್ಪೆಕ್ಟರವರಲ್ಲಿ ತಿಳಿಸಲು ಪ್ರಯತ್ನಪಟ್ಟೆ. ಆದರೆ ಅವರು ಊರಿನಲ್ಲಿರಲಿಲ್ಲ. ಇನ್ಸ್ಪೆಕ್ಟರ ಬಗ್ಗೆ ನಾನು ಯೋಚಿಸಲೇ ಇಲ್ಲ. ಅಮಲ್ದಾರರಲ್ಲಿ ಹೋಗಿ ಹುಡುಗಿ ಓಡಿಬಿಟ್ಟಿದ್ದಾಳೆ ನಾವು ಕರೆದುಕೊಂಡು ಬರಬೇಕು. ಪೋಲೀಸ್ ಸಹಾಯಬೇಕು ಎಂದು ಹೇಳಿದೆ. ಹುಡುಗಿಯನ್ನು ಮಾತನಾಡಿಕೊಂಡು ಬರಬೇಕೆಂಬುದಾಗಿ ನಾನು ಹೇಳಲಿಲ್ಲ. ಅಮಲ್ದಾರರವರಲ್ಲಿ ಹೋದಾಗ ಹುಡುಗಿಯು ಸೇಟ್ ಸಾಬಿ ಮನೆಯಲ್ಲಿರುವಳೆಂದು ನನಗೆ ಗೊತ್ತಿರಲಿಲ್ಲ.

ಅಷ್ಟು ಹೊತ್ತಿಗೆ ೨ ಗಂಟೆಯಾಯಿತು ಅರ್ಧ ಗಂಟೆಯ ಫಲಾಹಾರದ ವಿರಾಮಕ್ಕೆ ಜಡ್ಜರು ಕೋರ್ಟನ್ನು ಮುಂದರಿಸಿದರು.

ಫಲಾಹಾರದ ನಂತರ.

ಫಲಾಹಾರದ ನಂತರ ೨-೩೦ ಗಂಟೆಗೆ ಪುನಃ ಕೋರ್ಟು ಸೇರಿತು. ಲಕ್ಷ್ಮೀನರಸಿಂಹಯ್ಯನು ಡಿಫೆನ್ಸ್ ವಕೀಲರಾದ ಮಿ|| ರಾಜರತ್ನಂರವರ ಪಾಟೀ ಸವಾಲಿಗೆ ಉತ್ತರವನ್ನೀಯುತ್ತಾ ಹೇಳಿದ್ದೇನೆಂದರೆ—

ನಮ್ಮ ಅಣ್ಣ ಶ್ರೀಕಂಠೇಶ್ವರಯ್ಯನು ಈಗ ಐದಾರು ದಿವಸದಿಂದ ಚಿಂತಾಮಣಿಯಲ್ಲಿದ್ದಾನೆ. ಅದಕ್ಕೆ ಮುಂಚೆ ಅವನು ಬೆಂಗಳೂರಿನಲ್ಲಿದ್ದ. ಅಲ್ಲಿ ಮಾರುತೀ ಸಿಮೆಂಟ್ ಟೈಲ್ಸ್ ಕಂಪೆನಿಯಲ್ಲಿ ಕೆಲಸಮಾಡುತ್ತಾ ಇದ್ದನು. ಅದು ಬಳೇಪೇಟೆಯಲ್ಲಿದೆ. ಅವನು ಸುಮಾರು ೪-೫ ತಿಂಗಳಿನಿಂದ ಬೆಂಗಳೂರಿನಲ್ಲಿಯೇ ಇದ್ದಾನೆ. ಅದಕ್ಕೆ ಮುಂಚೆ ಚಿಕ್ಕಬಳ್ಳಾಪುರದಲ್ಲಿದ್ದರು. ಅಲ್ಲಿ ಏನು ಕೆಲಸ ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. ಜೈಭಾರತ ಇನ್ಷೂರೆನ್ಸ್ ಕಂಪನಿಯ ಏಜೆಂಟರಾಗಿ ಚಿಂತಾಮಣಿಯಲ್ಲಿ ಕೆಲಸ ಮಾಡುತ್ತಿದ್ದರು. ಚಿಕ್ಕಬಳ್ಳಾಪುರದ ವಿಷಯ ನನಗೆ ಗೊತ್ತಿಲ್ಲ. ಅವರು ಜೈಭಾರತದಲ್ಲಿ ಇನ್ಷೂರ್ ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಅವರು ಇನ್ಷೂರೆನ್ಸ್ ಹಣವನ್ನು ತಿಂದುಹಾಕಿ ಬೆಂಗಳೂರಿಗೆ ಓಡಿಹೋಗಿದ್ದು ನನಗೆ ಗೊತ್ತಿಲ್ಲ. ಐದಾರು ದಿವಸಗಳಿಗೆ ಮುಂಚೆ ಶ್ರೀಕಂಠೇಶ್ವರಯ್ಯನು ಚಿಂತಾಮಣಿಗೆ ಬಂದಿದ್ದನು. ಇದು ಕೃತ್ಯ ನಡೆದ ೫-೬ ದಿವಸಗಳ ನಂತರ ಇರಬಹುದು. ಅವರು ಇನ್ಸ್ಪೆಕ್ಟರ್ ಜನರಲ್‌ರವರಿಗೆ ಅರ್ಜಿ ಹಾಕಿದ ವಿಷಯವು ನನಗೆ ಗೊತ್ತಿಲ್ಲ. ಅವರು ಚಿಂತಾಮಣಿಗೆ ಬೆಳಿಗ್ಗೆ ಬಂದು ಮಧ್ಯಾಹ್ನ ಹೊರಟುಹೋದರು. ಕೆಳಗಿನ ಕೋರ್ಟಿನಲ್ಲಿ ಕೇಸು ನಡೆದಾದ ಮೇಲೆ ಒಂದು ದಿವಸ ಚಿಂತಾಮಣಿಗೆ ಬಂದಿದ್ದರು. (ಒಂದು ಕಾಗದವನ್ನು ತೋರಿಸಿ ರುಜು ನಿಮ್ಮದೇ ಎಂದು ಸಾಕ್ಷಿಯನ್ನು ಕೇಳಿದರು. ಇರಬಹುದು ಎಂದು ಲಕ್ಷ್ಮೀ ನರಸಿಂಹಯ್ಯನು ಉತ್ತರವನ್ನು ಕೊಟ್ಟರು.)

ಪ್ರ—ಆ ಪತ್ರದಲ್ಲಿ ಬರೆದಿರುವ ರಾಮರಾಯನು ಯಾರು?

ಉ—ನನಗೆ ಗೊತ್ತಿಲ್ಲ.

ಪ್ರ—ರಾಮರಾವು ಬಂದಿದ್ದರೋ ಇಲ್ಲವೋ ಎಂದು ನಿಮ್ಮ ಅಣ್ಣ ಬರೆದಿದ್ದರೋ?

ಉ—ನನಗೆ ಒಂದೂ ಗೊತ್ತಿಲ್ಲ.

ಪ್ರ—ಅದರಲ್ಲಿ ಬರೆದಿರುವ ರಾಮರಾವು ಯಾರು?

ಉ—ನನಗೆ ಗೊತ್ತಿಲ್ಲ ಅಕ್ಷರಗಳು ನನ್ನ ಅಕ್ಷರಗಳಂತೆಯೇ ಇವೆ. ಆದರೆ ಅದನ್ನು ನಾನು ಬರೆಯಲಿಲ್ಲ.

ಪ್ರ—ಕೊರಗಾಯಲಿ ವೆಂಕಟಪ್ಪನ ಮನೆಯಲ್ಲಿ ಅಕ್ಕಮ್ಮನೆಂಬುವಳು ಇದ್ದಾಳೆಯೋ?

ಉ—ನನಗೆ ಗೊತ್ತಿಲ್ಲ.

ಪ್ರ—ಕೊರಗಾಯಲಿ ವೆಂಕಟರಾಮಪ್ಪನವರು ನಿಮ್ಮ ಊರಿನವರೇ?

ಉ—ಹೌದು.

ಪ್ರ—ಆಕೆಯು ಇನ್ಷೂರೆನ್ಸ್ ಮಾಡಿರುವಳೇ?

ಉ—ಗೊತ್ತಿಲ್ಲ.

ಪ್ರ—ಬೆಂಗಳೂರಿನಲ್ಲಿರುವ ಅಣ್ಣನನ್ನು ನೀವು ನೋಡಿಕೊಂಡು ಬರುತ್ತಿದ್ದರೋ?

ಉ—ನೋಡಿಕೊಂಡು ಬರುತ್ತಿದ್ದೆ.

ಪ್ರ—ಅವರು ಎಲ್ಲಿ ವಾಸವಾಗಿದ್ದರು?

ಉ—ಅವರಿರುವ ಅಂಗಡಿಯಲ್ಲಿಯೇ.

ಪ್ರ—ಆಗ ಶೀನಪ್ಪನವರ ಮನೆಗೆ ಹೋಗಿ ಬರುತ್ತಿದ್ದರೋ?

ಉ—ಇಲ್ಲ. ಹೋಗಿಬರುತ್ತಿರಲಿಲ್ಲ.

ಪ್ರ—ಯಾಕೆ ಹೋಗಲಿಲ್ಲ?

ಉ—ಮಗನು ಹೋದ ಸಂಕಟದಲ್ಲಿದ್ದುದರಿಂದ ನಾನು ಹೋದರೆ ಇನ್ನೂ ಅಧಿಕವಾಗುವುದೆಂದು ಹೋಗಲಿಲ್ಲ.

ಪ್ರ—ಅವನು ಸಾಯುವುದಕ್ಕೆ ಮುಂಚೆ ಹೋಗಿದ್ದಿರೋ?

ಉ—ಹೋಗುತ್ತಿದ್ದೆ.

ಪ್ರ—ಯಾವಾಗ ಹೋಗಿದ್ದಿರಿ?

ಉ—ಸಾಯುವುದಕ್ಕೆ ೧೨ ದಿವಸಗಳ ಮುಂಚೆ ಅವರ ಮನೆಗೆ ಹೋಗಿದ್ದೆ.

ಪ್ರ—ಯಾರು ಯಾರು ಹೋಗಿದ್ದಿರಿ?

ಉ—ನಾನು ಮಾತ್ರ.

ಪ್ರ—ಆ ಕಾಲದಲ್ಲಿ ನಿಮ್ಮ ತಂಗಿ ಎಲ್ಲಿದ್ದರು?

ಉ—ಚಿಂತಾಮಣಿಯಲ್ಲಿದ್ದಳು.

ಪ್ರ—ನೀವು ಹೋಗಿದ್ದಾಗ ಆಕೆಯ ಗಂಡನಿಗೆ ಯಾವ ಖಾಯಿಲೆಯಾಗಿದ್ದಿತು?

ಉ—ಇಂಥಾ ಖಾಯಿಲೆಯೆಂದು ನನಗೆ ಗೊತ್ತಿಲ್ಲ.

ಪ್ರ—ನಿಮ್ಮ ಭಾವ ನಿಮ್ಮ ಊರಿಗೆ ಬಂದಿದ್ದರೋ?

ಉ—ಅವರಿಗೆ ಶಕ್ತಿಯಿರಲಿಲ್ಲ. ಊರಿಗೆ ಬರಲಿಲ್ಲ.

ಪ್ರ—ನಿಮ್ಮ ಭಾವ ಬಂದಿದ್ದರೆಂದು ಯಾರಾದರೂ ಹೇಳಿದರೆ?

ಉ—ನಾನು ವಿಚಾರಿಸಲಿಲ್ಲ. ಅವರು ಹೇಳಲಿಲ್ಲ.

ಪ್ರ—ಅಮಲ್ದಾರರವರ ಹತ್ತರಕ್ಕೆ ಹೋಗುವಾಗ ನಿಮ್ಮ ಜೊತೆಯಲ್ಲಿ ಯಾರಿದ್ದರು?

ಅಮಲ್ದಾರರವರಲ್ಲಿ ಹೋಗುವಾಗ ಸುಮಾರು ೨೦-೩೦ ಜನರಿದ್ದರು. ಅಮಲ್ದಾರರವರು ಇನ್ಸ್ಪೆಕ್ಟರವರಿಗೆ ಚೀಟಿ ಕೊಟ್ಟರು. ಅವರು ಓದಿಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂಗಿಯು ಇಂತಹವರ ಮನೆಯಲ್ಲಿದ್ದಾಳೆ ಎಂಬ ಸಂಗತಿಯನ್ನು ಪೋಲೀಸ್ ಅಧಿಕಾರಿಗಳಿಗೆ ನಾನು ಹೇಳಲಿಲ್ಲ. ತಂಗಿಯನ್ನು ಕರೆದುಕೊಂಡು ಬರಲು ನಾನು ಸಹಾಯ ಕೇಳಲಿಲ್ಲ. ಚೀಟಿಕೊಟ್ಟ ಮೇಲೆ ಇನ್ಸ್ಪೆಕ್ಟರ ಜೊತೆಯಲ್ಲಿ ಒಬ್ಬ ಕಾನ್ಸ್ಟೇಬಲ್ಲು ಬಂದಿದ್ದ. ಸ್ಕೂಲಿನ ಹತ್ತರ ಇಲ್ಲೇ ಇರಿ. ನೀವು ಬಂದರೆ ಅಪಾಯವಾಗುತ್ತದೆ. ನಾನೇ ಹುಡುಗಿಯನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿ ಹೊರಟು ಹೋದರು. ಅವರು ಹೋದಮೇಲೆ ಸುಮಾರು ಅರ್ಧ ಗಂಟೆಯ ಬಳಿಕ ಬಂದರು. ಅಮಲ್ದಾರರಿಗೆ ಹೋದಾಗ ನನ್ನನ್ನು ತೊಂದರೆಪಡಿಸುವರೆಂಬ ಸಮಾಚಾರವನ್ನು ಅವರಿಗೆ ತಿಳಿಸಿದೆ. ಲಿಖಿತರೂಪದಲ್ಲಿ ಫಿರ್ಯಾದನ್ನು ಮಾಡಿ ಸೇಟ್ ಸಾಬಿ ಮನೆಯಿಂದ ಸುಮಾರು ಕಾಲುಗಂಟೆಯ ಬಳಿಕ ಪುನಃ ಇನ್ಸ್ಪೆಕ್ಟರವರು ಸ್ಕೂಲಿಗೆ ಬಂದರು. ಇನ್ಸ್ಪೆಕ್ಟರವರು ವೆಂಕಟಗಿರಿಕೋಟೆಗೆ ಹೋದಾಗ ಶಿಡ್ಲಘಟ್ಟದಿಂದ ಕೆಲವು ಮಹಮ್ಮದೀಯರು ಸೇಟ್ ಸಾಬಿ ಮನೆಗೆ ಬಂದರು. ರಾತ್ರಿ ಸುಮಾರು ೧೦ ಗಂಟೆಯ ಸಮಯದಲ್ಲಿ ಸೇಟ್ ಸಾಬಿಯನ್ನು ನೋಡಿದೆ. ಸೇಟ್ ಸಾಬಿಯ ಜೊತೆಯಲ್ಲಿ ಮೇಸ್ತ್ರು, ದಸ್ತಗೀರ್, ಖಾದರ್ ಇವರುಗಳು ಇದ್ದರು. ಮೌಲಾನೂ ಇದ್ದನು. ಇನ್ನೂ ಅನೇಕ ಜನರು ಅಲ್ಲಿದ್ದರು. ಅಲ್ಲಿದ್ದವರ ಪೈಕಿ ಅವರೂ ಒಬ್ಬರೆಂದು ನನ್ನ ತಂಗಿಯ ವಿಚಾರವಾಗಿ ಸೇಟ್ ಸಾಬಿಯನ್ನು ಕೇಳಿದೆ. ನಾನು ಹಾಗೆ ಕೇಳಿದಾಗ ನನ್ನ ಜೊತೆಯಲ್ಲಿ ವೆಂಕಟರಮಣಶೆಟ್ಟಿ ಮತ್ತು ರಾಮಚಂದ್ರರಾಯರು ಎರಡು ಗಜ ದೂರದಲ್ಲಿ ನಿಂತಿದ್ದರು. ಅಲ್ಲಿ ಲೈಟ್ ಇತ್ತು, ಮುಖವು ಚೆನ್ನಾಗಿ ಕಾಣಿಸುತ್ತಿದ್ದಿತು.

ಪ್ರ—ನಿಮ್ಮ ಜೊತೆಯಲ್ಲಿ ಬಂದವರು ಏನಾದರೂ ಮಾತಾಡಿದರೋ?

ಉ—ಇಲ್ಲ, ಮಾತನಾಡಲಿಲ್ಲ.

ಪ್ರ—ನಂತರವೇನೋ ಅಮಲ್ದಾರರ ಮನೆಗೆ ಹೋಗಿದ್ದು?

ಉ—ಹೌದು. ವೆಂಕಟರಮಣಶೆಟ್ಟಿ ಮತ್ತು ರಾಮಚಂದ್ರರಾಯರು ಬರಲಿಲ್ಲ. ಅವರು ಮನೆಗೆ ಹೊರಟುಹೋದರು.

ಪ್ರ—ಇನ್ಸ್ಪೆಕ್ಟರ್‌ರವರು ಎಷ್ಟುಹೊತ್ತು ಕಾಲಹರಣ ಮಾಡಿದರು. ಅಮಲ್ದಾರರ ಮನೆಯಿಂದ ಬಂದಮೇಲೆ?

ಉ—ಸುಮಾರು ಒಂದು ಗಂಟೆಯ ಹೊತ್ತು ಕಾಲಹರಣ ಮಾಡಿದರು.

ಪ್ರ—ಪುನಃ ಯಾವಾಗ ನೋಡಿದಿರಿ ಅವರನ್ನು?

ಉ—ನೋಡಲಿಲ್ಲ, ಚೀಟಿ ಕೊಟ್ಟಾಗ ಮಾತ್ರ ನೋಡಿದ್ದು.

ಪ್ರ—ನೀವು ಹುಡುಗಿಯನ್ನು ನೋಡಬರುವುದಕ್ಕೆ ಹೋಗಿದ್ದಿರೋ ಅಥವಾ ಕರೆದುಕೊಂಡು ಬರುವುದಕ್ಕೋ?

ಉ—ನೋಡಿ ಕರೆದುಕೊಂಡು ಬರುವುದಕ್ಕೆ ಹೋಗಿದ್ದೆ.

ಪ್ರ—ನೀವು ಹೋಗಿ ಅವಳನ್ನು ಕಂಡಿರಾ?

ಉ—ಹೌದು. ಎದುರಾಗಿರುವ ರೂಮಿನಿಂದ ಅವಳೇ ಬಂದಳು.

ಪ್ರ—ನಿಮ್ಮ ತಂಗಿಯನ್ನು ಮಾತನಾಡಿಸಿದಿರೋ?

ಉ—ಮಾತನಾಡಲಿಲ್ಲ.

ಜಡ್ಜರು—ಸಾಕ್ಷಿಯು ಈ ವಿಷಯವನ್ನು ಆಗಲೇ ಹೇಳಿರುತ್ತಾರೆ.

ಪ್ರ—ಇನ್ಸ್ಪೆಕ್ಟರ್ ಗರುಡಾಚಾರ್ಯರಲ್ಲಿ ನಾನು ಮಾತನಾಡಿಸಿ ಬಂದುಬಿಟ್ಟೆ ಎಂದು ಹೇಳಿದಿರೊ?

ಉ—ಇಲ್ಲ ನಾನು ಹಾಗೆ ಹೇಳಲಿಲ್ಲ.

ಪ್ರ—ಅಲ್ಲಿಂದ ಎಲ್ಲಿಗೆ ಹೋದಿರಿ?

ಉ—ಇನ್ಸ್ಪೆಕ್ಟರವರ ಮನೆಗೆ.

ಪ್ರ—ಮುಂಚೆಯೇ ಬಂದಿದ್ದ ಜನಗಳು ಎಲ್ಲಿದ್ದರು?

ಉ—ಅವರು ಇನ್ಸ್ಪೆಕ್ಟರ ಮನೆಯಲ್ಲಿದ್ದರು.

ಪ್ರ—ನೀವು ಯಾತಕ್ಕೋಸ್ಕರ ಹುಡುಗಿಯನ್ನು ಕರೆದುಕೊಂಡು ಬರಲಿಲ್ಲ.

ಉ—ಹುಡುಗಿಯನ್ನು ಹೆದರಿಸಿ ಒಳಕ್ಕೆ ಸೆಳೆದರು. ನನಗೆ ಭಯವಾಯಿತು. ಆದುದರಿಂದ ಕರೆದುಕೊಂಡು ಬರಲಿಲ್ಲ.

ಪ್ರ—ಇನ್ಸ್ಪೆಕ್ಟರವರಿಗೆ ನೀವೆ ಕರೆಸಿ ಎಂದು ಕೇಳಿದಿರಾ?

ಉ—ಹೌದು ಕೇಳಿದೆ.

ಮುಂದುವರಿಸುತ್ತಾ ಹೇಳಿದ್ದೇನೆಂದರೆ—"ನಾನು ಬೇಗೂರಿನಿಂದ ಬಂದಮೇಲೆ ಶಂಕರಶಾಸ್ತ್ರಿಯನ್ನಾಗಲೀ ಸೀತಾರಾಮಶಾಸ್ತ್ರಿಗಳನ್ನಾಗಲೀ ನೋಡಿದೆನೋ ಇಲ್ಲವೋ ಜ್ಞಾಪಕವಿಲ್ಲ. ಆದರೆ ೨೪ ನೆಯ ತಾರೀಖಿನ ದಿವಸ ಮುಂಜಾನೆ ಶಂಕರಶಾಸ್ತ್ರಿಯವರನ್ನು ನೋಡಿದೆ. ಸೀತಾರಾಮಶಾಸ್ತ್ರಿಗಳನ್ನೂ ನೋಡಿದೆ ಶಂಕರಶಾಸ್ತ್ರಿಯವರನ್ನು ಬೆಳಗಿನ ಝಾವ ನಮ್ಮ ಮನೆಯಲ್ಲಿ ನೋಡಿದೆ. ಅವರು ಹುಡುಗಿಯ ವಿಚಾರವನ್ನು ಕೇಳಲೂ ಇಲ್ಲ. ನಾನು ಹೇಳಲೂ ಇಲ್ಲ. ಆ ಕಾಲದಲ್ಲಿ ನಮ್ಮ ಮನೆಯಲ್ಲಿ ಯಾರಿದ್ದರೋ ನನಗೆ ಗೊತ್ತಿಲ್ಲ. ಆ ಕಾಲದಲ್ಲಿ ನಾನು ಬರೆಯುತ್ತಿದ್ದೆ. ಶಂಕರಶಾಸ್ತ್ರಿಗಳು ಸುಮ್ಮನೆ ಹೊರಟುಹೋದರು. ಯಾವುದೋ ಒಂದು ಪತ್ರವನ್ನು ಬರೆಯುತ್ತಾ ಇದ್ದೆ. ಯಾರಿಗೆ ಬರೆಯುತ್ತಿದ್ದೆನೋ ಜ್ಞಾಪಕವಿಲ್ಲ. ಅದು ನನ್ನ ತಂಗಿಯ ವಿಚಾರವಲ್ಲ. ಪ್ರಾಯಶಃ ಅದು ಮದರ್ ಇಂಡಿಯಾ ಇನ್ಷೂರೆನ್ಸ್ ಏಜೆಂಟರಿಗಿರಬಹುದು. ಬೆಂಗಳೂರಿನಲ್ಲಿರುವ ಸ್ಪೆಷಲ್ ಏಜೆಂಟ್ ಆರ್. ಶ್ರೀನಿವಾಸಮೂರ್ತಿಗಳಿಗೆ ಬರೆಯುತ್ತಿರಬಹುದು. ಮದರ್ ಇಂಡಿಯಾ ಕಂಪೆನಿಗೆ ನಮ್ಮ ಅಣ್ಣನು ಏಜಂಟಲ್ಲ. ನಾನು ಬರೆಯುತ್ತಿದ್ದುದು ಇಂತಹ ವಿಚಾರವೆಂದು ನಾನು ಅದನ್ನು ಹೇಳಲಾರೆ. ಅದನ್ನು ಪೋಸ್ಟ್ ಮಾಡಿದೆನೋ ಇಲ್ಲವೋ ಹೇಳಲಾರೆ. ಶ್ರೀನಿವಾಸಮೂರ್ತಿಗಳನ್ನು ನಾನು ಏಜೆಂಟ್ ಕೆಲಸ ತೆಗೆದುಕೊಂಡ ದಿನದಿಂದಲೂ ಬಲ್ಲೆ. ಪರಿಚಯವು ಒಂದು ವರ್ಷ ಹಳೆಯದಾಗಿರಬಹುದು. ಅಂದಿನಿಂದಲೂ ನಾನು ಆ ಕಂಪೆನಿಗೆ ಚಿಂತಾಮಣಿಯಲ್ಲಿ ಏಜೆಂಟಾಗಿದ್ದೆ. ಏಜನ್ಸಿಯನ್ನು ನನ್ನ ಅಣ್ಣನು ಕೊಡಿಸಿಕೊಡಲಿಲ್ಲ. ಶ್ರೀನಿವಾಸಮೂರ್ತಿಯವರೇ ನಿಯಮಿಸಿದರು. ನಾನು ನಮ್ಮ ತಂದೆಯನ್ನು ಬೇಗೂರಿನಿಂದ ಬಂದಮೇಲೆ ಪುನಃ ಬೆಳಗಿನ ಜಾವ ಕಾಗದ ಬರೆಯುವವರೆಗೂ ನೋಡಲೇ ಇಲ್ಲ. ನಂತರವೇ ನೋಡಿದ್ದು ನಾನು ಮಾಡಿದ ಸನ್ನಾಹಗಳೆಲ್ಲವನ್ನೂ ಅವರಿಗೆ ಹೇಳಿದೆ. ನಮ್ಮ ತಂದೆಯೂ ಮತ್ತು ನನ್ನ ತಂಗಿಯೂ ಪೋಲೀಸ್ ಸ್ಟೇಷನ್ನಿನಲ್ಲಿ ಹೇಳಿಕೆಗಳನ್ನಿತ್ತುದು ನನಗೆ ಗೊತ್ತಿತ್ತು. ಹೇಳಿಕೆಯನ್ನು ಕೊಟ್ಟಾಗ ನಾನಿದ್ದೆ. ಸ್ಟೇಟ್ ಮೆಂಟ್ ಕೊಟ್ಟ ವಿಚಾರವನ್ನು ೨೪ ನೆಯ ತಾರೀಖಿನ ದಿವಸಬೆಳಿಗ್ಗೆ ನಮ್ಮ ತಂದೆಯವರು ಹೇಳಿದರು. ಅರ್ಜಿಯನ್ನು ಕೊಡು ಎಂದು ನನಗೆ ಯಾರೂ ಹೇಳಲಿಲ್ಲ. ಟೆಲಿಗ್ರಾಮನ್ನು ನಾನು ಸ್ವಂತವಾಗಿ ಕೊಟ್ಟೆ. ನನಗೆ ಯಾರೂ ಹೇಳಲಿಲ್ಲ. ಈ ರೀತಿ ಫಿರ್ಯಾದನ್ನು ಕೊಡುವ ಹಾಗೆ ನಮ್ಮ ತಂದೆಯಾಗಲೀ ಇನ್ಯಾರಾಗಲಿ ನನಗೆ ಹೇಳಲೇ ಇಲ್ಲ. ಅರ್ಜಿಯನ್ನು ತೆಗೆದುಕೊಂಡುಹೋಗಿ ಕೊಡುವಾಗ ನನ್ನ ಸಂಗಡ ಯಾರೂ ಬರಲಿಲ್ಲ. ಸ್ಟೇಷನ್ನಿನಲ್ಲಿಯೇ ಅರ್ಜಿಯನ್ನು ಬರೆದೆ. ಮನೆಯಲ್ಲಿ ಬರೆಯಲಿಲ್ಲ. ಅಲ್ಲಿ ರೈಟರೂ ಇದ್ದರು.

ಲಕ್ಷ್ಮೀನರಸಿಂಹಯ್ಯನ ಹೇಳಿಕೆಯು ಅಷ್ಟುಹೊತ್ತಿಗೆ ನಿಲ್ಲಿಸಲಾಯಿತು.

ಪೋ|| ಇ|| ಜಹಿರುದ್ದೀನರವರ ಹೇಳಿಕೆ.

ಚಿಂತಾಮಣಿಯಲ್ಲಿ ನೀವಿದ್ದಾಗ ಸಾಬ್ಜಾನ್ ಎಂಬ ಒಬ್ಬ ಕಾನ್ಸ್ಟೇಬಲ್ ಇದ್ದನೋ?

ಉ—ಇದ್ದ.

ಪ್ರ—ಹುಡುಗಿಗೆ ನೀವೇನಾದರೂ ಕಾಗದಾ ಗೀಗದ ಕೊಟ್ಟು ಅರ್ಜಿ ಬರೆಯುವಂತೆ ಹೇಳಿದಿರಾ?

ಉ—ಇಲ್ಲ.

ಪ್ರ—ಆಕೆಗೆ ಮುಸಲ್ಮಾನ್ ಜಾತಿಗೆ ಸೇರುವಂತೆ ಪ್ರೋತ್ಸಾಹ ಮಾಡಿದಿರಾ?

ಉ—ನನಗೂ ಅದಕ್ಕೂ ಸಂಬಂಧವಿಲ್ಲ ಎಂದು ಹೇಳಿದೆ.

ಪ್ರ—ಸ್ಟೇಷನ್ನಿನಲ್ಲಿ ಹುಡುಗೀಗೆ ಬುದ್ಧಿವಾದ ಹೇಳಿದಾಗ ಆಫೀಸಿನಲ್ಲಿ ಎಷ್ಟು ಜನರಿದ್ದರು?

ಉ—ಸುಮಾರು ೭-೮ ಜನರಿದ್ದರು.

ಪ್ರ—ಅಲ್ಲಿದ್ದವರು ಆಕೆಯ ತಂದೆಗೂ ಆಕೆಗೂ ಬುದ್ಧಿವಾದ ಹೇಳಿದರೇ?

ಉ—ಹೇಳಿದರು. ಅವರು ಕೇಳಲಿಲ್ಲ.

ಪ್ರ—ನಿಮ್ಮ ಆಫೀಸಿನಲ್ಲಿ ಅಬ್ದುಲ್ ಲತೀಫ್ ಎಂಬ ಸಬ್-ಇನ್ಸ್ಪೆಕ್ಟರಿದ್ದರೋ?

ಉ—ಇದ್ದರು.

ಪ್ರ—ಹುಡುಗಿ ಬರುವುದಿಲ್ಲ ನೀವೇ ಬನ್ನಿ ಎಂತ ಅಮಲ್ದಾರರನ್ನು ನೀವು ಕರೆದಿರೋ?

ಉ—ಕರೆದೆ.

ಪ್ರ—ಹುಡುಗಿ ಅರ್ಜಿ ತಂದು ಕೊಟ್ಟದ್ದು ಯಾವಾಗ?

ಉ—ಸುಮಾರು ರಾತ್ರಿ ಏಳು ಗಂಟೆ ಸಮಯದಲ್ಲಿ (೨೪-೮-೩೩ ರಲ್ಲಿ) ಅರ್ಜಿಯನ್ನು ಸ್ಟೇಷನ್ನಿನಲ್ಲಿಯೇ ಬರೆದದ್ದು. ಸ್ಟೇಟ್‌ಮೆಂಟಿನಲ್ಲಿ ಅವಳು ಹೇಳದೆ ಇದ್ದ ವಿಷಯಗಳೇನೂ ಬರೆಯಲಿಲ್ಲ.

ಪ್ರ—ಹೈಸ್ಕೂಲಿಗೂ ಸೇಟ್‌ಸಾಬಿ ಮನೆಗೂ ಎಷ್ಟು ದೂರ.

ಉ—ಸುಮಾರು ೫೦ ಗಜ ದೂರದಲ್ಲಿದೆ.

ಪ್ರ—ಸೇ|| ಮನೆಯ ಮುಂದೆ ಆಸ್ಪತ್ರೆ ಲೇಡಿ ಡಾಕ್ಟರ್ ಮನೆ, ಇವೆಲ್ಲಾ ಇವೆಯಲ್ಲವೆ?

ಉ—ಹೌದು ಅಕ್ಕಪಕ್ಕ ಹಿಂದೂಗಳ ಮನೆಗಳೂ ಇವೆ.

ಪ್ರ—ರಾಮಸ್ವಾಮಿ ಪಂಡಿತರ ಮನೆ ಮುಂದೆ ಇರುವ ಸಂದಿಯಲ್ಲಿರುವ ಮನೆಗಳೆಲ್ಲಾ ಹಿಂದೂಗಳವೋ?

ಉ—ಹೌದು.

ಪ್ರ—ವೆಂಕಟಗಿರಿ ಕೋಟೆಗೆ ಹೋಗುವ ರಸ್ತೆಯಲ್ಲಿ ದೀಪಗಳಿವೆ ಮತ್ತು ಷಾಪುಗಳಿವೆಯಲ್ಲವೆ?

ಉ—ಹೌದು ಇವೆ.

ಪ್ರ—ಸ್ಟೇಷನ್ ಡೈರಿಗಳೆಲ್ಲಾ ಅಮಲ್ದಾರರ ಮೂಲಕ ತಾನೆ ಕಳುಹಿಸುವುದು?

ಉ—ಹೌದು.

ಪ್ರ—ಡಾ|| ರವರನ್ನು ಯಾವಾಗ ನೋಡಿದ್ದು?

ಉ—೨೬ ನೇ ತಾರೀಕಿನ ದಿನ.

ಪ್ರ—ಅವರಿಗೆ ನಡೆದ ಸಮಾಚಾರವನ್ನೆಲ್ಲಾ ಹೇಳಿದರೋ?

ಉ—ಹೇಳಿದೆ. ೨೭ ಕ್ಕೆ ಹೊರಟುಹೋಗಿ ಪುನಃ ೨೮ಕ್ಕೆ ಅಲ್ಲಿಗೆ ಬಂದರು.

ಪ್ರ—ಡಾ|| ರವರು ಕೇಸನ್ನು ರಿಜಿಸ್ಟರ್ ಮಾಡಿ ಎಂದು ಹೇಳಿದರೋ?

ಉ—ಹೇಳಿದರು.

ಪ್ರ—ನೀವೇಕೆ ರಿಜಿಸ್ಟರ್ ಮಾಡಲಿಲ್ಲ?

ಉ—ನನ್ನ ಮೇಲೆ ದೂರು ಹೇಳುತ್ತಾರೆ. ಅದಕ್ಕಾಗಿ ನಾನು ಬೇಡ. ಬೇರೆಯವರು ಮಾಡಲಿ ಎಂತ ಡಾ|| ರವರಿಗೆ ಹೇಳಿದೆ. ೨೬ನೇ ತಾರೀಖು ಡಾ|| ರವರು ಶೇಷಗಿರಿರಾವ್, ತಾಲೂಕು ಶಿರಸ್ತೇದಾರರನ್ನು ವಿಚಾರಣೆಮಾಡಿದರು.

ಪ್ರ—೭ಗಂಟೆಯಂತ ಹೇಳಿದ್ದರಲ್ಲಿ ಆಗ್ಗೆ ಸ್ಟೇಟ್‌ಮೆಂಟ್ ಎಲ್ಲಾ ರಿಕಾರ್ಡು ಮಾಡಿದ್ದರಲ್ಲವೇ?

ಉ—ಹೌದು.

ಪ್ರ—ರಾಮಸ್ವಾಮಿ ಪಂಡಿತರ ಮನೆಯ ಮುಂದೆ ಇರುವ ಸಂದಿಯಲ್ಲಿರುವ ಹಿಂದೂಗಳ ಮನೆಯ ಹಿತ್ತಲು ಬಾಗಿಲು ಈ ಸಂದಿಯೊಳಕ್ಕೆ ತೆರೆಯುತ್ತದಲ್ಲವೇ?

ಉ—ನಾನು ಅಷ್ಟು ಚೆನ್ನಾಗಿ ನೋಡಿಲ್ಲ?

ಪ್ರ—ಕಿಟ್‌ಸನ್ ದೀಪಗಳನ್ನು ರಸ್ತೆಯಲ್ಲಿ ಹಾಕಿದ್ದಾರಲ್ಲಾ ಎಷ್ಟೆಷ್ಟು ದೂರಕ್ಕೆ ಹಾಕಿದ್ದಾರೆ?

ಉ—ಆ ರಸ್ತೆಯಲ್ಲಿ ೪-೫ ದೀಪಗಳಿರಬಹುದು ನಾನೇ ಸ್ಟೇಷನ್ ಹೌಸ್ ಡೈರಿಯನ್ನು ಮೆಂಟೈನ್ ಮಾಡುವುದು.

ಸಬ್-ಇನ್ಸ್‌ಪೆಕ್ಟರ್ ಲಕ್ಷ್ಮೀನಾರಣಪ್ಪನವರ ಸಾಕ್ಷ್ಯ.

೨೨-೮-೩೩ ರಲ್ಲಿ ರಾತ್ರಿ ರಾಮಸ್ವಾಮಿ ಪಂಡಿತರು ನನ್ನಲ್ಲಿ ಬಂದು ತನ್ನ ಮಗಳು ಮಹಲಕ್ಷ್ಮಮ್ಮ ಮನೆಯಲಿಲ್ಲ ಎಂತ ಹೇಳಿದರು. ನಾನು ಅದಕ್ಕೆ ನಿಮ್ಮ ನೆಂಟರಮನೆಯಲ್ಲೆಲ್ಲಾ ನೋಡಿ ಬಂದು ಹೇಳಿ ನಾನು ಹುಡುಕಿಸುತ್ತೇನೆಂದು ಹೇಳಿದೆ. ಅವರು ಕೊಂಚ ಹೊತ್ತಿನಲ್ಲಿಯೇ ಬಂದು ಆಕೆಯ ಟ್ರಂಕೂ ಸಹ ಇಲ್ಲ ಎಂತ ಹೇಳಿದರು. ನೀವು ಹೋಗಿ ಸ್ಟೇಷನ್ನಿನಲ್ಲಿ ಬನ್ನಿ ನಾನು ಹುಡುಕಿಸುತ್ತೇನೆಂತ ಹೇಳಿದೆ. ನಾನೂ ಹುಡುಕಿದೆ. ಟರ್ನ್‌ಬೋರ್ಡ್ ಕಾನ್ಸ್ಟೇಬಲ್‌ರಿಗೂ ತಿಳಿಸಿ ಹುಡುಕಿಸಿದೆ. ಬೆಳಿಗ್ಗೆ ಸ್ಟೇಷನ್‌ಗೆ ಹೋದೆ. ಫಿರ್ಯಾದಿ ಬರೆಸಿರಲಿಲ್ಲ. ಇವರನ್ನು ಕರೆಸಬೇಕೆಂತ ಇದ್ದೆ. ಅಷ್ಟರಲ್ಲಿ ಇ|| ಬಂದು ಒಬ್ಬ ಬ್ರಾಹ್ಮಣ ಹುಡುಗಿ ನಮ್ಮ ಮನೆಯ ಹತ್ತರ ಇದಾಳೆ. ಮುಸಲ್ಮಾನ್ ಜಾತಿಗೆ ಸೇರಬೇಕಂತೆ. ಒಂದು ಅರ್ಜಿ ತೆಗೆದುಕೊಂಡು ಬರುತ್ತಾಳೆಂದು ತಿಳಿಸಿದರು. ರಾತ್ರಿ ನಡೆದ ವಿಷಯವನ್ನು ಅವರಿಗೆ ತಿಳಿಸಿದೆ. ಪಂಡಿತರನ್ನು ಕರೆದುಕೊಂಡು ಬರುವಂತೆ ಹೇಳಿ ಕಳುಹಿಸಿದೆ. ಇನ್ಸ್‌ಪೆಕ್ಟರು ಆಫೀಸಿಗೆ ಹೊರಟುಹೋದರು. ಸ್ವಲ್ಪಹೊತ್ತಿನಲ್ಲಿಯೇ ಮಹಾಲಕ್ಷ್ಮಮ್ಮ ಟ್ರಂಕು ತೆಗೆದುಕೊಂಡು ಬಂದು ನನಗೆ ಒಂದು ಅರ್ಜಿಯನ್ನು ಕೊಟ್ಟಳು, ಅಷ್ಟರಲ್ಲಿಯೇ ಅವರ ತಂದೆ ಬಂದರು. ತಂದೆಗೂ ಆಕೆಗೂ ಮಾತು ನಡೆಯಿತು. ನನ್ನಲ್ಲಿ ಬಂದಾಗ ಹುಡುಗಿ ಅಳುತ್ತಿದ್ದಳು. ಮುಸಲ್ಮಾನ್ ಜಾತಿಗೆ ಸೇರುತ್ತೇನೆಂತ ಹುಡುಗಿ, ಏಕೆ ಹಾಗೆ ಮಾಡುತ್ತೀಯೆಂತ ತಂದೆ ಹೀಗೆ ಮಾತನಾಡುತ್ತಿದ್ದರು. ಆಗ ಪ್ರಾಸಿಕ್ಯೂಷನ್ ಇನ್ಸ್‌ಪೆಕ್ಟರು ನರಸಿಂಹಾಚಾರ್, ಕೆಂಚಾರ್ಲಹಳ್ಳಿ ಸಬ್-ಇನ್ಸ್‌ಪೆಕ್ಟರು ಅಲ್ಲಿಗೆ ಬಂದರು. ಹುಡುಗಿ ತಂದೆ ಮನೆಗೆ ಹೋಗುವುದಿಲ್ಲವೆಂತಲೂ ತಂದೆ ಬೇಡವೆಂತಲೂ ಮಾತು ನಡೆಯಿತು. ಇನ್ಸ್‌ಪೆಕ್ಟರು ಇವರಿಬ್ಬರ ಕೈಫೀತು ತೆಗೆದುಕೊಳ್ಳಿ ಎಂತ ಹೇಳಿದರು. ಆ ವೇಳೆ ಹುಡುಗಿ ತನ್ನ ಟ್ರಂಕಿನಲ್ಲಿದ್ದ ಕೆಲವು ಬೆಳ್ಳಿಯ ಸಾಮಾನುಗಳನ್ನು ತಂದೆಗೆ ಕೊಟ್ಟಳು. ನಾನು ಅವರಿಬ್ಬರ ಕೈಫಿಯತ್ತು ಮಾಡಿಕೊಂಡೆ. ಹುಡುಗಿಯನ್ನು ಕಳುಹಿಸಿಕೊಟ್ಟುಬಿಡಿ ಎಂದು ಇನ್ಸ್‌ಪೆಕ್ಟರು ಹೇಳಿದರು. ತಂದೆ ಮನೆಕಡೆ ಹೋದರು. ಮಹಾಲಕ್ಷ್ಮಮ್ಮ ಪಶ್ಚಿಮದ ಕಡೆ ಪೋಲೀಸ್ ಲೈನ್ ಕಡೆ ಹೊರಟಳು. ನಾನು ಅಲ್ಲಿ ಹೋಗಬೇಡ. ಲಾಯರ್ ಶೇಷಗಿರಿರಾಯರ ಮನೆಕಡೆ ಹೋಗು ಎಂತ ಹೇಳಿದೆ. ಆ ಮಧ್ಯಾಹ್ನ ನಾನು ಬೆಂಗಳೂರಿಗೆ ಹೊರಟುಹೋದೆ. ಅಲ್ಲಿ ನಮ್ಮ ತಾಯಿ ಖಾಯಿಲೆಯಾಗಿದ್ದಳು. ನಾನು ಹುಡುಗಿಯನ್ನು ರಾತ್ರಿ ಎಲ್ಲಿದ್ದೆ ಎಂತ ಕೇಳಲಿಲ್ಲ.

ಪ್ರ—ಹುಡುಗಿ ಕೊಟ್ಟ ಅರ್ಜಿ ಇದೇ ತಾನೆ?

ಉ—ಹೌದು. ರಾತ್ರಿ ಅಂಗಡೀಸಾಲಿನಲ್ಲಿದ್ದು ಇಲ್ಲಿಗೆ ಬಂದೆ ಎಂತ ಹೇಳಿದಳು. ನಾನು ಬೆಂಗಳೂರಿಗೆ ಹೊರಟಿದ್ದು ಸುಮಾರು ೧|| ಘಂಟೆಯ ಸಮಯದಲ್ಲಿ. ಹುಡುಗಿಯ ತಂದೆ ಬಂದು ರಾತ್ರಿ ಕಂಪ್ಲೇಂಟ್ ಮಾಡಿದ್ದನ್ನು ಬರೆದುಕೊಳ್ಳಲಿಲ್ಲ. ಯಾಕೆಂದರೆ ಮಾರನೆ ದಿನ ಹುಡುಗಿ ಸಿಕ್ಕಿಬಿಟ್ಟಳು.

೧|| ಗಂಟೆಯನಂತರ ಸಾಕ್ಷಿಯ ಪಾಟೀಸವಾಲು.

ಈ ಕೃತ್ಯವು ನಡೆಯುವುದಕ್ಕೆ ಒಂದು ವರ್ಷ ಎರಡು ತಿಂಗಳ ಮುಂಚಿನಿಂದಲೂ ನಾನು ಚಿಂತಾಮಣಿಯಲ್ಲಿ ಸಬ್-ಇನ್ಸ್‌ಪೆಕ್ಟರು ಆಗಿದ್ದೇನೆ. ಬ್ರಾಹ್ಮಣರ ಹುಡುಗಿ ಫಿರ್ಯಾದುಮಾಡಿಕೊಳ್ಳಬೇಡಿ ಎಂತ ಹೇಳಲಿಲ್ಲ. ಹುಡುಕಿ ಎಂತ ಹೇಳಿದೆ. ರಾತ್ರಿ ಕಂಪ್ಲೇಂಟು ಬರೆಸಿರಲಿಲ್ಲ. ಆದ್ದರಿಂದ ತಂದೆಗೆ ಹೇಳಿಕಳುಹಿಸಿದೆ. ಕೆಳಗಿನ ಕೋರ್ಟಿನಲ್ಲಿ 'ಇನ್ಸ್‌ಪೆಕ್ಟರು ಬಂದು ನನ್ನ ಮನೆಮುಂದೆ ಒಬ್ಬ ಬ್ರಾಹ್ಮಣರ ಹುಡುಗಿ ಇದ್ದಾಳೆ ಮುಸಲ್ಮಾನ್ ಜಾತಿಗೆ ಸೇರಿಸಬೇಕಂತೆ ಒಂದು ಅರ್ಜಿ ತರುತ್ತಾಳೆಂತ ನನಗೆ ಹೇಳಿದರು ಎಂತ ಹೇಳಲಿಲ್ಲ. ನನ್ನ ಕೇಳಲಿಲ್ಲ ನಾನು ಹೇಳಲಿಲ್ಲ. ಸ್ಟೇಟ್‌ಮೆಂಟ್ ವಿಚಾರದಲ್ಲಿ ನನ್ನನ್ನು ಗರುಡಾಚಾರ್ರು ವಿಚಾರಿಸಿದರು. ನೋಟ್ ಮಾಡಿಕೊಂಡರು.

ಪ್ರ—ನಿಮ್ಮನ್ನು ತನಿಖೆ ಮಾಡಿದ್ದು ಕೆಳಗಿನ ಕೋರ್ಟಿನಲ್ಲಿ ಚಾರ್ಜ್‌ಶೀಟು ಹಾಕಿದಮೇಲೆ ತಾನೆ?

ಉ—ಇರಬಹುದು.

ಪ್ರ—ನಿಮ್ಮನ್ನ ಐ.ಜಿ.ಪಿ. ಯವರು ಚಿಂತಾಮಣಿಗೆ ಬಂದು ಬಂಗಲೆಯಲ್ಲಿ ವಿಚಾರಿಸಿದರೊ?

ಉ—ವಿಚಾರಿಸಿದರು.

ಪ್ರ—ಹುಡುಗೀಗೂ ತಂದೆಗೂ ಮಾತು ನಡೆಯಿತು ಎಂತ ಹೇಳಿದರಲ್ಲ! ಏನು ಬೈದಾಡಿಕೊಂಡರೆ?

ಉ—ಇಲ್ಲ.

ಪ್ರ—ಇನ್ಸ್‌ಪೆಕ್ಟರೂ ನೀವೂ ಅಲ್ಲಿದ್ದವರೆಲ್ಲಾ ಹುಡುಗೀಗೂ ತಂದೆಗೂ ಬುದ್ಧಿ ಹೇಳಿದಿರಾ?

ಉ—ಹೌದು. ಹುಡುಗಿ ಹೋಗೊಲ್ಲಾ ಎಂದಳು. ತಂದೆ ಬೇಡವೆಂದಳು. ಶಂಕರಶಾಸ್ತ್ರಿ ಪಬ್ಬತಿ ಶ್ರೀನಿವಾಸಶೆಟ್ಟಿಯವರು ಗಳಿದ್ದರು.

ಪ್ರ—ನಿಮ್ಮ ಆಫೀಸಿನಲ್ಲಿಯೂ ಕೈಫೀತು ಮಾಡಿಕೊಳ್ಳುವುದಕ್ಕೆ ಮುಂಚೆ ಬುದ್ಧಿ ಹೇಳಿದರಲ್ಲವೆ?

ಉ—ಹೌದು. ಸಬ್-ಇನ್ಸ್‌ಪೆಕ್ಟರ್ ಲತೀಫ್ ಸಾಹೇಬರು ಬುದ್ಧಿ ಹೇಳಿದರು. ತಾಲ್ಲೂಕು ಕಚೇರಿ ನೌಕರರು ಕೂಡ ಬುದ್ಧಿ ಹೇಳಿದರು.

ಪ್ರ—ನೀವು ಕೈಫಿಯತು ಮಾಡಿಕೊಂಡಾಗ ಶಂಕರಶಾಸ್ತ್ರಿ ಪಬ್ಬತಿ ಶ್ರೀನಿವಾಸಶೆಟ್ಟಿ ಮೊದಲಾದವರು ಇದ್ದರಲ್ಲವೆ?

(6 ನೆಯ ಪುಟವನ್ನು ನೋಡಿ).

ಪಂಚಾಚಾರ್ಯ ಪ್ರಭಾ.

೧೯೩೩ನೇ ನವಂಬರ್ ತಾ|| ೨೦ನೇ ಸೋಮವಾರ.

ದಿವಂಗತರಾದ ವಿಠ್ಠಲಭಾಯಿ ಪಟೇಲರು.

ರಾಜಕಾರ್ಯಧುರೀಣರೂ, ಭಾರತಸ್ವಾತಂತ್ರ್ಯಪ್ರೇಮಿಗಳೂ ಆಗಿದ್ದ ವಿಠ್ಠಲಭಾಯಿ ಪಟೇಲರು ಕಳೆದ ತಿಂಗಳು ಅಂತ್ಯದಲ್ಲಿ ತಮ್ಮ ಸ್ಥೂಲ ಕಳೇಬರವನ್ನು ಬಿಟ್ಟು ವೀರಸ್ವರ್ಗವನ್ನು ಹೊಂದಿದರೆಂಬ ವಿಷಯವನ್ನು ಕೇಳಿ ಪ್ರತಿಯೊಬ್ಬ ಭಾರತೀಯನೂ ಪರಿತಪಿಸುತ್ತಲಿರುವನು. ಈ ಮಹೋದಯರು ಗುಜರಾಥ ದೇಶದಲ್ಲಿರುವ ಒಂದು ಚಿಕ್ಕ ಗ್ರಾಮದಲ್ಲಿ ೧೮೭೩ ರಲ್ಲಿ ಜನ್ಮಧಾರಣಮಾಡಿದರು. ಅಹಮ್ಮದಾಬಾದ್ ಬೊಂಬಾಯಿಗಳಲ್ಲಿ ಶಿಕ್ಷಣವನ್ನು ಹೊಂದಿ ವಕೀಲಿ ವೃತ್ತಿಯನ್ನವಲಂಬಿಸಿದ್ದು, ೧೯೦೮ ರಲ್ಲಿ ವಿಲಾಯಿತಿಗೆ ಹೋಗಿ ಬ್ಯಾರಿಷ್ಟರ್ ಪದವೀಧರರಾಗಿ ಬೊಂಬಾಯಿಯಲ್ಲಿಯೇ ವಾಸವಾಗಿದ್ದರು. ಮುಂದೆ ಇವರು ರಾಜಕೀಯ ಕಾರ್ಯದಲ್ಲಿ ಪ್ರವೇಶಿಸಿ ತಮ್ಮ ಬುದ್ಧಿ ಪ್ರತಿಭಾಸಾಮರ್ಥ್ಯದಿಂದ ಅದ್ವಿತೀಯರೆನಿಸಿಕೊಂಡರು. ಇವರು ಹೇಗೆ ಹೇಗೆ ರಾಜಕೀಯ ಕಾರ್ಯಗಳಲ್ಲಿ ಪ್ರಖ್ಯಾತರಾಗುತ್ತಬಂದರೋ ಹಾಗೆಹಾಗೆ ಭಾರತಸ್ವಾತಂತ್ರ್ಯಬೀಜವು ಮೆಲ್ಲಮೆಲ್ಲನೆ ಈ ಮಹೋದಯರ ಹೃದಯಕ್ಷೇತ್ರದಲ್ಲಿ ಅಂಕುರಿಸಹತ್ತಿ ವಿರಾಡ್ರೂಪವನ್ನು ಧರಿಸಿತು. ಸದ್ಯಃ ಯಾವ ದಿಕ್ಕಿನಲ್ಲಿ ಯಾರ ಬಾಯಿಯಲ್ಲಿ ನೋಡಿದರೂ ಭಾರತಮಹಾವೀರರಾದ ವಿ. ಜೆ. ಪಟೇಲರ ಗುಣಗಾನವೇ ಕೇಳಿಬರುತ್ತಲಿದೆ. ಈ ಮಹೋದಯರು ಭೂಲೋಕವನ್ನು ಬಿಟ್ಟು ಸ್ವರ್ಗಲೋಕವನ್ನು ಸೇರಿದರೂ ಇವರು ಮಾಡಿದ [illegible] ಸಾಧ್ಯ [illegible] ಧಯದಿಂದ [illegible] ಅನೇಕರಹಿತ [illegible] ಲೋಕಕಾರ್ಯಗಳಿಂದ ಇವರ ಕೀರ್ತಿಕಾಯವು ಈ ಲೋಕದಲ್ಲಿಯೇ ಇದೆ ಎಂದು ಹೇಳಬಹುದಾಗಿದೆ. ಇವರು ಹಿಂದೆ ಭಾರತೀಯಪ್ರತಿನಿಧಿಗಳಿಂದ ಆರಿಸಲ್ಪಟ್ಟು ದಿಲ್ಲಿ ಅಸೆಂಬ್ಲಿಯ ಅಧ್ಯಕ್ಷಪದವಿಯನ್ನು ವಹಿಸಿದ್ದ ಕಾಲದಲ್ಲಿ ದಕ್ಷತೆಯಿಂದಲೂ ಪ್ರಜಾವಾತ್ಸಲ್ಯದೃಷ್ಟಿಯಿಂದಲೂ ದೇಶೋಪಕಾರಕಗಳಾದ ಕಾರ್ಯಗಳನ್ನು ಮಾಡುತ್ತಲಿದ್ದರು. ಕೆಲವು ವಿಷಯಗಳಲ್ಲಿ ಪ್ರಭುತ್ವದವರಿಗೂ ಇವರಿಗೂ ಸರಿಬಾರದ್ದರಿಂದ ಆ ಅಧ್ಯಕ್ಷತೆಗೆ ರಾಜಿನಾಮೆಯನ್ನು ಕೊಟ್ಟು ಸ್ವಾತಂತ್ರ್ಯಸಂಗ್ರಾಮದಲ್ಲಿ ಭಾಗವನ್ನು ವಹಿಸಿ ಕಾಯಿದೆಭಂಗವನ್ನು ಪ್ರಾರಂಭಿಸಿದರು. ಆಗ ಪ್ರಭುತ್ವದವರು ಇವರನ್ನು ಕಾರಾಗೃಹಕ್ಕೆ ಗುರಿಮಾಡಿದರು. ಕಾರಾಗೃಹವಾಸದಿಂದ ಸೂಕ್ಷ್ಮಶರೀರಿಗಳಾದ ಇವರ ಆರೋಗ್ಯಭಾಗ್ಯವು ಕಡಿಮೆಯಾಗುತ್ತಬಂದುದರಿಂದ ಪ್ರಭುತ್ವದವರು ಇವರನ್ನು ಅವಧಿಯು ಮುಗಿಯುವುದಕ್ಕಿಂತ ಮುನ್ನವೇ ಬಿಡುಗಡೆಮಾಡಿದರು. ಅಲ್ಲಿಂದ ದೇಹಸುಧಾರಣೆಯ ಬಗ್ಗೆ ಈ ಮಹೋದಯರು ಅನ್ಯಖಂಡಗಳಿಗೆ ಪ್ರಯಾಣಬೆಳೆಯಿಸಿ ವಿಯನ್ನಾದಲ್ಲಿ ಚಿಕಿತ್ಸೆಯನ್ನು ಪಡೆಯುತ್ತಲಿದ್ದು ಸ್ವಲ್ಪ ಗುಣವಾದಕೂಡಲೇ ಅಮೇರಿಕಾ ಮುಂತಾದ ಸ್ಥಲಗಳಿಗೆ ಹೋಗಿ ಅಲ್ಲಿ ಭರತಖಂಡದ ಸ್ಥಿತಿಗತಿಗಳನ್ನೆಲ್ಲಾ ಉಪನ್ಯಾಸಗಳ ಮೂಲಕ ಅರುಹಿದರು. ಈಶ್ವರಕೃಪೆಯಿಂದ ಇವರು ಇಷ್ಟರಲ್ಲಿಯೇ ತಮ್ಮ ಜನ್ಮಭೂಮಿಯನ್ನು ಸೇರುವರೆಂದು ನಿರೀಕ್ಷಿಸಿರುವಲ್ಲಿ "ದೈವಮನ್ಯತ್ರ ಚಿಂತಯೇತ್" ತಾನು ಒಂದು ಬಗೆದರೆ ದೈವವೊಂದು ಬಗೆಯುವದೆಂಬ ವಾಕ್ಯದಂತೆ ಮತ್ತೆ ಈ ಮಹೋದಯರಿಗೆ ದೇಹಾರೋಗ್ಯವು ತಪ್ಪಿ, ವಿಯನ್ನಾದಲ್ಲಿಯೇ ಚಿಕಿತ್ಸೆಹೊಂದುತ್ತ ಅಲ್ಲಿಯೇ ಪ್ರಾಣವನ್ನು ತ್ಯಜಿಸಿದರು. ಪವಿತ್ರವಾದ ಕರ್ಮಭೂಮಿಯೆಂದೆನಿಸಿದ ಭಾರತಭೂಮಿಯಲ್ಲಿ ಪ್ರಾಣವನ್ನು ಬಿಡಬೇಕೆಂಬ ಕುತೂಹಲವೊಂದು ವಿ. ಜೆ. ಪಟೇಲರ ಮಹಾಸಂಕಲ್ಪವಾಗಿದ್ದಿತು. ದೈವದುರ್ವಿಲಾಸವು ಈ ಸಂಕಲ್ಪವನ್ನು ನೆರವೇರಿಸದೆ ಅಲ್ಲಿಯೇ ಮೃತ್ಯುವನ್ನುಂಟುಮಾಡಿತು. ಇಂಥ ಮಹಾಮೇಧಾವಿಗಳು ಒಬ್ಬಬ್ಬರಾಗಿ ಕಳಚಿಕೊಳ್ಳುತ್ತಬರುವುದನ್ನು ನೋಡಿದರೆ ಪರಮವ್ಯಸನವೆನಿಸುತ್ತದೆ. ಶ್ರೀ ಪಟೇಲರ ಅಭಿಪ್ರಾಯದಂತೆ ಇವರ ಸ್ಥೂಲಕಳೇಬರಕ್ಕೆ ಆಗುವ ಅಪರಸಂಸ್ಕಾರಗಳೆಲ್ಲವೂ ಪವಿತ್ರಭಾರತಭೂಮಿಯಲ್ಲಿಯೇ ಆಗಬೇಕೆಂದು ಯೋಚಿಸಿ ಇವರ ಶರೀರವು ಕೆಡದಂತೆ ದ್ರಾವಕದಲ್ಲಿಡಲ್ಪಟ್ಟು ವಿಯನ್ನಾದಿಂದ ಇದೇ ತಿಂಗಳು ಕಳೆದ ೯ನೆಯ ತಾರೀಖಿನ ದಿವಸ ಸಾಯಂಕಾಲ 8 ಘಂಟೆಗೆ ಬೊಂಬಾಯಿಗೆ ತರಲ್ಪಟ್ಟಿತು. ಹಡಗಿನಿಂದ ಶವದ ಪೆಟ್ಟಿಗೆಯನ್ನು ಇಳುಹಿಸಿದೊಡನೆ ಹಡಗಿನ ಕ್ಯಾಪ್ಟನ್ ಮತ್ತು ಇತರ ಅಧಿಕಾರಿಗಳು ಮುಜುರೆಯನ್ನು ಸಮರ್ಪಿಸಿದರು. ಜನಗಳ ಸಂಖ್ಯೆಯು ಮಿತಿಮೀರಿದ್ದಿತು. ಶವಸಂಸ್ಕಾರ ಸಮಿತಿಯವರೂ, ಪಟೇಲರ ಬಂಧುವರ್ಗದವರೂ, ನಗರಪ್ರಮುಖರೂ ಶ್ರೀ ಪಟೇಲರ ಕಳೇಬರದ ಪೆಟ್ಟಿಗೆಯನ್ನು ಪುಷ್ಪಮಾಲೆಗಳಿಂದ ಅಲಂಕಾರಗೊಳಿಸಿದರು. ಬಳಿಕ ಶವದ ಪೆಟ್ಟಿಗೆಯು ಜೆ.ಟಿ. ಆಸ್ಪತ್ರೆಗೆ ಒಯ್ಯಲ್ಪಟ್ಟಿತು. ಸಿ. ಕಸ್ಟಮ್ಸ್ ಕಾನೂನಿನ ಪ್ರಕಾರ ಶೋಧನೆಗಾಗಿ ಅಲ್ಲಿಯ ಅಧಿಕಾರಿಗಳಿಂದ ಪೆಟ್ಟಿಗೆಯು ತೆರೆಯಲ್ಪಟ್ಟು ಮರುದಿವಸ ಶವಸಂಸ್ಕಾರಸಮಿತಿಯವರಿಗೆ ಒಪ್ಪಿಸಲ್ಪಟ್ಟಿತು. ಸಮಿತಿಯವರು ೧೦ ನೆಯ ತಾರೀಖಿನ ಪ್ರಾತಃಕಾಲ ಆ ಪೆಟ್ಟಿಗೆಯನ್ನು ಮೋಟಾರಿನಲ್ಲಿರಿಸಿ ಉತ್ಸವವನ್ನು ಮಾಡಿದರು. ದಾರಿಯುದ್ದಕ್ಕೂ ಮಹಡಿಗಳಮೇಲೂ ಜನಸಂದಣಿಯು ಅಪರಿಮಿತವಾಗಿದ್ದಿತು. ಭಾರತಮಹಾವೀರರಾದ ಪಟೇಲರ ಶವಪೆಟ್ಟಿಗೆಯ ದರ್ಶನಾರ್ಥವಾಗಿ ಬರುವ ಜನಗಳ ತಂಡವನ್ನಂತೂ ಇಷ್ಟಿಷ್ಟೆಂದು ಹೇಳಲು ಶಕ್ಯವಿಲ್ಲ. ಸ್ಪೆಷಲ್ ರೈಲುಗಳು ಮೋಟಾರುಗಳು ಬಿಡುವಿಲ್ಲದೆ ಬಂದುಹೋಗುತ್ತಲೇ ಇದ್ದುವು. ಜನರು ದಾರಿಯುದ್ದಕ್ಕೂ ಶವದ ಪೆಟ್ಟಿಗೆಗೆ ಪುಷ್ಪಮಾಲಿಕೆಗಳನ್ನರ್ಪಿಸುತ್ತ ದೇಶಭಕ್ತಿಯನ್ನು ಪ್ರಕಟಿಸುತ್ತಿದ್ದರು. ಉತ್ಸವವು ರುದ್ರಭೂಮಿಗೆ ತಲ್ಪಿತು. ಅಲ್ಲಿ ಪೆಟ್ಟಿಗೆಯ ಮುಚ್ಚಳವನ್ನು ತೆಗೆದಿಟ್ಟು ಬಂದವರಿಗೆಲ್ಲಾ ಪಟೇಲರ ಸ್ಥೂಲಕಳೇಬರದ ಅಂತಿಮದರ್ಶನವು ಮಾಡಿಸಲ್ಪಟ್ಟಿತು. ಶ್ರೀಮತಿ ಸರೋಜಿನಿದೇವಿ ಮುಂತಾದ್ದವರು [illegible] ಮಹಾವೀರರ ಶೌರ್ಯಸಾಹಸಗಳನ್ನು ಕೊಂಡಾಡುತ್ತ ಅಶ್ರುಪೂರ್ಣವಾದ ಕಣ್ಣುಗಳಿಂದೊಡಗೂಡಿ ಹಿಂದೂಶಾಸ್ತ್ರಪದ್ಧತಿಯಂತೆ ದಹನಾದಿ ಅಪರಕರ್ಮಗಳೆಲ್ಲವನ್ನೂ ನೆರವೇರಿಸಿದರು. ಆ ದಿವಸವೆಲ್ಲ ನಗರದ ಪಾಠಶಾಲೆಗಳೂ, ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ರುದ್ರಭೂಮಿಯಲ್ಲಿ 5 ಲಕ್ಷದವರೆಗೆ ಜನರು ಸೇರಿದ್ದರು. "ನರಃ ಪತಿತಕಾಯೋಽಪಿ ಯಶಃಕಾಯೇನ ಜೀವತಿ" ಎಂಬಂತೆ ಈ ಮಹಾವೀರರು ಸ್ವಾರ್ಥತ್ಯಾಗಿಗಳಾಗಿ ತಮ್ಮ ಕಾಲಮಾನವನ್ನೆಲ್ಲಾ ದೇಶಹಿತಕ್ಕಾಗಿಯೇ ಕಳೆದುದರಿಂದ ಅಸ್ಥಿರವಾದ ಭೌತಿಕಶರೀರವನ್ನು ಬಿಟ್ಟರೂ ಪ್ರಪಂಚವಿರುವವರೆಗೂ ಅವಿನಾಶಿಯಾಗಿರುವ ಯಶಃಶರೀರವನ್ನು ಧರಿಸಿ ಭಾರತೀಯರೆಲ್ಲರ ಜ್ಞಾನದೃಷ್ಟಿಗೆ ಗೋಚರವಾಗುತ್ತಿರುವರು. ಇಂಥ ಅನ್ಯಾದೃಶಸತ್ವಶಾಲಿಗಳಾದ ಶ್ರೀಮಾನ್ ವಿ. ಜೆ. ಪಟೇಲರ ಆತ್ಮನಿಗೆ ದಯಾನಿಧಿಯಾದ ಪರಮೇಶ್ವರನು ಶಾಂತಿಯನ್ನು ಕರುಣಿಸಿ ಅವರ ಬಂಧುವರ್ಗದವರಿಗೆ ಈ ಮಹೋದಯರ ವಿಯೋಗದುಃಖವನ್ನು ಶಮನಗೊಳಿಸಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ಕೋಲಾರದ ಉರಿಗಾಂ ಚಿನ್ನದ ಗಣಿಯಲ್ಲಿ ಕಲ್ಲು ಸಿಡಿದು ಒಬ್ಬ ಕೆಲಸಗಾರನು ಮೃತಪಟ್ಟನು. ಇನ್ನೊಬ್ಬನಿಗೆ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ರಾಜಧಾನಿಯ ದೇವರಾಜ ಮೊಹಲ್ಲಾ ಒಕ್ಕಲಗೇರಿಯಲ್ಲಿ ವಾಸವಾಗಿರುವ ರಾಧಾಕೃಷ್ಣಪ್ಪ ಎಂಬಾತನ 14 ವರ್ಷ ವಯಸ್ಸಿನ ಮಗಳು ನಾಗಮ್ಮ ಎಂಬವಳು ಕಳೆದ 8-10 ದಿವಸಗಳಿಂದ ಪತ್ತೆಯಿಲ್ಲದೆ ಹೋಗಿರುತ್ತಾಳೆ. ಪೋಲೀಸರು ತನಿಖೆ ಕ್ರಮಗಳನ್ನು ಜರುಗಿಸಿರುವರು.

ಕೋಲಾರ ಡಿವಿಜನ್ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರವರ ಆಫೀಸ್ ಗುಮಾಸ್ತೆಯಾಗಿದ್ದ ಎ. ವಿ. ಪುಟ್ಟಸ್ವಾಮಿ ಎಂಬಾತನು ದಾವಾ ಅರ್ಜಿಗಳಿಗೆ ಹಚ್ಚಿದ್ದ ಕೋರ್ಟುಫೀ ಸ್ಟಾಂಪುಗಳನ್ನು ದುರುಪಯೋಗಪಡಿಸಿದನೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಅಪರಾಧಿಗೆ 100 ರೂ. ಜುಲ್ಮಾನೆಯನ್ನು ವಿಧಿಸಿರುತ್ತಾರೆ.

ಕೋಲಾರದ ಚಿನ್ನದಗಣಿ ಪೋಲೀಸರು ಪೇಟೆಯಲ್ಲಿ ಜೂಜಾಡುತ್ತಿದ್ದ 7 ಜನರನ್ನು ದಸ್ತಗಿರಿಮಾಡಿ ಮೊಕದ್ದಮೆಮಾಡಿದ್ದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಪ್ರತಿಯೊಬ್ಬ ಅಪರಾಧಿಗೂ 8 ರೂ. ಯಂತೆ ಜುಲ್ಮಾನೆಯನ್ನು ವಿಧಿಸಿ, ಇದನ್ನು ಪತ್ತೆಮಾಡಿದ ಪೋಲೀಸರಿಗೆ ಜುಲ್ಮಾನೆ ಹಣದಲ್ಲಿ 25 ರೂ. ಗಳನ್ನು ಬಹುಮಾನವಾಗಿ ಕೊಡುವಂತೆ ಅಪ್ಪಣೆಮಾಡಿದರು.

ಬೆಂಗಳೂರು ಗೌರ್ನಮೆಂಟ್ ಪ್ರೆಸ್ಸಿನ ಫೋರ್‌ಮ್ಯಾನ್ ಆಗಿದ್ದ ಎ. ಮರಿದಾಸ್ ಎಂಬವನು ಪ್ರತಿನಿತ್ಯವೂ ತನಗೆ ಅನ್ನವನ್ನು ತರುತ್ತಿದ್ದ ಹುಡುಗನ ಸಂಗಡ 12-13 ಪೌಂಡುಗಳಷ್ಟು ಲೆಡ್ಡುಗಳನ್ನು ಅನ್ನದ ಪಾತ್ರೆಯಲ್ಲಿ ಹಾಕಿ ಕಳುಹಿಸುತ್ತಿದುದು ಪತ್ತೆಯಾಗಿ ಮೇಲಧಿಕಾರಿಗಳು ಅವನನ್ನು 4 ತಿಂಗಳ ಕಾಲ ಕೆಲಸದಿಂದ ಸಸ್ಪೆಂಡ್ ಮಾಡಿ, ಸಂಬಳದಲ್ಲಿ 10 ರೂಪಾಯಿ ಕಡಿಮೆ ಮಾಡಿರುತ್ತಾರೆ.

ಶ್ರೀರಂಗಪಟ್ಟಣದ ತಾಲೂಕು ನಗುವನಹಳ್ಳಿ ಗ್ರಾಮದಲ್ಲಿರುವ ಶೇಷೇಗೌಡ ಎಂಬುವರ ತಾಯಿ ಮತ್ತು ಆಳು ಈ ಇಬ್ಬರನ್ನೂ ಖೂನಿಮಾಡಿದರೆಂಬ ಆಪಾದನೆಯ ಮೇಲೆ ಪೋಲೀಸರು ಸದರಿ ಗ್ರಾಮದ ಅಪ್ಪೂಗೌಡ ಮತ್ತು ಅಣ್ಣಯ್ಯ ಎಂಬ ಇಬ್ಬರ ಮೇಲೆ ಮೊಕದ್ದಮೆಯನ್ನು ತಂದಿದ್ದರು. ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರವರು ಮೊಕದ್ದಮೆಯನ್ನು ವಿಚಾರಣೆಮಾಡಿ ಇದೇ ನವೆಂಬರ್ 18 ನೇ ತಾರೀಖಿನ ದಿವಸ ಆಪಾದಿತರು ತಪ್ಪಿತಸ್ಥರಲ್ಲವೆಂದು ಹೇಳಿ ಕೇಸನ್ನು ವಜಾಮಾಡಿದರು. ಆಪಾದಿತರ ಪರವಾಗಿ ಅಡ್ವೋಕೇಟ್ ಮ|| ರಾ|| ಎಂ. ಪಿ. ಭೋಗಯ್ಯ, ಬಿ.ಎ., ಬಿ.ಎಲ್. ಇವರು ವಕಾಲತ್ತನ್ನು ವಹಿಸಿದ್ದರು.

ಲೇವಾದೇವಿ ಮಾಡತಕ್ಕ ಜನರು ಸಾಲಗಾರರಿಂದ ವಸೂಲ್ಮಾಡುವ ಬಡ್ಡಿ ವಿಷಯದಲ್ಲಿ ತಕ್ಕ ನಿರ್ಬಂಧವನ್ನು ಕಲ್ಪಿಸುವದಕ್ಕಾಗಿ ಒಂದು ಕಾನೂನನ್ನು [illegible] ಸಬೇಕೆಂದು ಸರಕಾರದವರು ಆಲೋಚಿಸುತ್ತಿರುವರು. ಅದಕ್ಕಾಗಿ ದ್ವಿತೀಯ ಸಚಿವರಾದ ಶ್ರೀ|| ಎಸ್. ಪಿ. ರಾಜಗೋಪಾಲಾಚಾರ್ಯರು ಕಳೆದ ವಾರ ಒಂದು ಸಭೆಯನ್ನು ಮಾಡಿ ಮೈಸೂರು, ಬೆಂಗಳೂರು ನಗರಗಳ ಕೆಲವು ಜನ ಮುಖಂಡರನ್ನು ಕರೆಯಿಸಿ ಅವರ ಸಲಹೆಗಳನ್ನು ಕೇಳಿರುವರು. ಸರಕಾರದವರು ಈ ಬಗ್ಗೆ ಶೀಘ್ರದಲ್ಲಿಯೇ ಒಂದು ಮಸೂದೆಯನ್ನು ರಚಿಸಿ ಮುಂದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ಇಡುವರು.

ವರ್ತಮಾನಸಂಗ್ರಹ.

ಅಮೇರಿಕೆಯ ಪ್ರೆಸಿಡೆಂಟರಾದ ರೂಸ್‌ವೆಲ್ಟರಿಗೆ ಪ್ರತಿನಿತ್ಯವೂ ಟಪಾಲಿನಿಂದ 8,000 ಕಾಗದಗಳು ಬರುವವಂತೆ!

ಚೀನಾದೇಶದ ಕ್ಯಾಂಟನ್ ಸರಕಾರದವರು ವಿದ್ಯಾರ್ಥಿಗಳಾರೂ ಪರದೇಶದ ಸೀಸದಕಡ್ಡಿ, ಮಸಿ, ಲೇಖನಿ ಮತ್ತು ಕಾಗದಗಳನ್ನು ಉಪಯೋಗಿಸಕೂಡದೆಂದು ಅಪ್ಪಣೆಮಾಡಿರುತ್ತಾರೆ.

ಸ್ವಿಟ್ಜರ್ಲೆಂಡ್ ಸರ್ಕಾರದವರು ತಮ್ಮ ರಾಜ್ಯರಕ್ಷಣೆಗಾಗಿ ಅವಶ್ಯಕವಾದ ಯುದ್ಧಸಾಮಗ್ರಿಗಳನ್ನು ಒದಗಿಸಲು 10 ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ನಿರ್ಧರಿಸಿರುವರು.

ಆಸ್ಟ್ರಿಯಾದೇಶದ ಬ್ಯಾರೊನೆಸ್ ಮೇಯರ್ ವಾನ್‌ಸ್ಟಾಟ್ಜ್ ಎಂಬ ಆಗರ್ಭ ಶ್ರೀಮಂತ ತರುಣಿಯು ಆರ್ಥಿಕ ದುರವಸ್ಥೆಯ ಸೆಳೆತಕ್ಕೆ ಸಿಲುಕಿ ಸದ್ಯಃ ವಿಯನ್ನಾ ನಗರದಲ್ಲಿ ಹಾಡಾಡಿಗಳಾಗಿರುವಳಂತೆ!

ನ್ಯೂಯಾರ್ಕ್‌ನಗರದಲ್ಲಿ ವಿನ್‌ಸೆಂಟ್ ಲೋಪಿಕೋ ಎಂಬ 15 ತಿಂಗಳ ಮಗುವು ತನ್ನ ತಾಯಿಯ ತೊಡೆಯ ಮೇಲೆ ಮಲಗಿದ್ದು, ಇದ್ದಕ್ಕಿದ್ದಹಾಗೆ ಚಿಕ್ಕ ಮೂರನೆಯ ಅಂತಸ್ತಿನಿಂದ ಕೆಳಕ್ಕೆ ಬಿದ್ದುಬಿಟ್ಟಿತು. ತಾಯಿಯು ಭೀತಳಾಗಿ ಅಳುತ್ತಾ ಕೆಳಕ್ಕೆ ಬಂದು ನೋಡುವಲ್ಲಿ ಮಗುವಿಗೆ ಯಾವ ಅಪಾಯವೂ ಆಗದೆ ಸ್ವಸ್ಥವಾಗಿದ್ದಿತಂತೆ!

ಅಯೋಧ್ಯಾನಗರದಲ್ಲಿ ವಕೀಲರಾಗಿದ್ದ ಪರಶುರಾಂ ಎಂಬವರು ತಮ್ಮ ಮನೆಯಲ್ಲಿ ಜೂಜಿನಕಟ್ಟೆಯನ್ನು ಏರ್ಪಡಿಸಿದ್ದರೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಸದರಿ ವಕೀಲರಿಗೆ 75 ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿದರು. ಪೋಲೀಸರು ಶೋಧನೆಗಾಗಿ ಅವರ ಮನೆಗೆ ನುಗ್ಗಿದಾಗ 34 ಜನರು ಜೂಜಾಡುತ್ತಿದ್ದರಂತೆ!

ಲಕ್ನೋ ನಗರದ ರಾಮಗೋಪಾಲ ಎಂಬಾತನು ಒಬ್ಬ ಶ್ರೀಮಂತನಲ್ಲಿ ನೌಕರಿ ಮಾಡುತ್ತಿದ್ದನು. ಶ್ರೀಮಂತನು ಒಂದುದಿನ ಕಾಮಾಂಧನಾಗಿ ರಾಮಗೋಪಾಲನ ಪತ್ನಿಯನ್ನು ಕೆಣಕಿ ತಿರಸ್ಕೃತನಾದನು. ರಾಮಗೋಪಾಲನು ಇದನ್ನು ತಿಳಿದು ಯಜಮಾನನ ಮೂಗನ್ನೇ ಕತ್ತರಿಸಿಬಿಟ್ಟನು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ರಾಮಗೋಪಾಲನಿಗೆ ಒಂದು ದಿವಸ ಸಜೆಯನ್ನು ವಿಧಿಸಿದರು.

ಇದೇ ನವೆಂಬರ್ 16 ನೇ ತಾರೀಖಿನ ದಿವಸ ಮುಂಬಯಿಯ ಲ್ಯಾಮಿಂಗ್‌ಟನ್ ರಸ್ತೆಯಲ್ಲಿದ್ದ ಮಹಾಲಕ್ಷ್ಮೀ ಎಣ್ಣೆ ಗಿರಣಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಗಿರಣಿಯೆಲ್ಲವೂ ಸಂಪೂರ್ಣವಾಗಿ ಸುಟ್ಟು ಭಸ್ಮವಾಯಿತು. ಫೈರ್‌ಬ್ರಿಗೇಡಿನವರು ತತ್‌ಕ್ಷಣವೇ ಬಂದು ಬೆಂಕಿಯನ್ನು ಆರಿಸಿದರು. ದೈವಯೋಗದಿಂದ ಪ್ರಾಣಾಪಾಯವೇನೂ ಆಗದಿದ್ದರೂ, ಗಿರಣಿಯ ಯಜಮಾನನಿಗೆ ಒಟ್ಟು 50,000 ರುಪಾಯಿಗಳ ನಷ್ಟವು ಸಂಭವಿಸಿರುತ್ತದೆ.

ಲಿಸ್ಬನ್‌ನಗರದ ಒಬ್ಬ ಸೈನ್ಯದ ಅಧಿಕಾರಿಯು ಸುಮಾರು 8 ವರ್ಷಗಳ ಹಿಂದೆ ಸರಕಾರದ ಕೆಲವು ಹಣವನ್ನು ದುರುಪಯೋಪಗಡಿಸಿಕೊಂಡನೆಂಬ ಕಾರಣದಮೇಲೆ ದಸ್ತಗಿರಿಮಾಡಲ್ಪಟ್ಟನು. ಆದರೆ ಆತನ ಮೇಲಿನ ಮೊಕದ್ದಮೆಯು ಇನ್ನೂ ತೀರ್ಮಾನವಾಗದೆ, ಆತನು ಕಾರಾಗೃಹದಲ್ಲಿಯೇ ಇರುವನು. ಮುಂದೆ ಮತ್ತಾವದಾದರೂ ಅಪೇಕ್ಷಿತಗಳಾದ ವಿಘ್ನಗಳು ಸಂಭವಿಸದಿದ್ದರೆ 1934 ನೇ ಜುಲೈ ತಿಂಗಳಲ್ಲಿ ಮೊಕದ್ದಮೆಯು ತೀರ್ಮಾನವಾಗುವದಂತೆ!

ಸಿಕಂದರಾಬಾದಿನಲ್ಲಿ ವಾಸಾವಾಸಗಿರುವ ಮಿಸ್ ಆನ್ ಕ್ಯಾಮರಾನ್ ಎಂಬಾಕೆಯ ಬಳಿಯಲ್ಲಿ ಮೋಟಾರ್ ಡ್ರೈವರಾಗಿದ್ದ ಜಾನ್‌ಮಹಮ್ಮದ್ ಎಂಬಾತನು ಕಳೆದ ಮಾರ್ಚಿ ೨೩ ನೇ ತಾರೀಖಿನ ದಿವಸ ತನ್ನ ಯಜಮಾನಿಯನ್ನು ಮೋಟಾರಿನಲ್ಲಿ ಹೈದರಾಬಾದಿಗೆ ಕರೆತರುತ್ತಿದ್ದಾಗ ಮೋಟಾರನ್ನು ನೆಟ್ಟಗೆ ಹೈದರಾಬಾದಿಗೆ ಬಿಡದೆ ಲಾಲಗುಡಿಯಕಡೆ ಬಿಟ್ಟನು. ಇದರಿಂದ ಆಕೆಗೆ ಅನುಮಾನವಾಗಿ ಜಾನ್‌ಮಹಮ್ಮದನನ್ನು ಪ್ರಶ್ನೆಮಾಡಲು ಅವನು ಅವಳನ್ನು ಹೆದರಿಸಿದನು. ಆಗ ಆಕೆಯು ಏನು ಮಾಡುವುದಕ್ಕೂ ತೋಚದೆ ಮೋಟಾರಿನಿಂದ ಕೆಳಕ್ಕೆ ಧುಮುಕಿ ಬಿಟ್ಟಳು. ಇದರಿಂದ ಅವಳಿಗೆ ಬಹಳವಾಗಿ ಪೆಟ್ಟುಬಿದ್ದು 24 ಗಂಟೆಗಳವರೆಗೆ ಜ್ಞಾನವಿಲ್ಲದೆ ಅಲ್ಲಿಯೇ ಬಿದ್ದಿದ್ದಳು. ಅನಂತರ ಯಾರೋ ನೋಡಿದವರು ಅವಳನ್ನು ಆಸ್ಪತ್ರೆಗೆ ಸಾಗಿಸಿದರು. ಈ ಮಧ್ಯೆ ಜಾನ್‌ಮಹಮದನು ಹೈದರಾಬಾದ್ ಸಂಸ್ಥಾನವನ್ನೇ ಬಿಟ್ಟು ಮತ್ತೆಲ್ಲಿಯೋ ವಾಸಿಸುತ್ತಿದ್ದನು. ಪೋಲೀಸರು ಎಕ್ಸ್‌ಟ್ರಾಡಿಷನ್ ಆಕ್ಟ್ ಪ್ರಕಾರ ಅವನನ್ನು ಹಿಡಿದು ತಂದು ಮೊಕದ್ದಮೆ ಹೂಡಿರುತ್ತಾರೆ.

ಹನ್ನೊಂದು ಅಡಿಯ ಮನುಷ್ಯ!

ಪರ್ಶಿಯಾದೇಶಕ್ಕೆ ಸೇರಿದ ಸಿರಾಜ್‌ನಗರದ 'ಸಿಯಾಬಾನ್ ಇಬ್ನ್ ಕಾಶ್ಮೀರ್ ಖಾನ್' ಎಂಬಾತನು 11 ಅಡಿ 3 ಅಂಗುಲ ಎತ್ತರವಿದ್ದು, ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾದ ಮನುಷ್ಯನೆಂದು ನಿರ್ಧರಿಸಲ್ಪಟ್ಟಿರುವನು. ಸದ್ಯಃ ಇವನು ಕೆಲವು ಜನ ಸ್ನೇಹಿತರೊಡನೆ ಸಂಚಾರಾರ್ಥವಾಗಿ ಯೂರೋಪಿಗೆ ಹೊರಟಿರುವನು. ಮಾರ್ಗಮಧ್ಯದಲ್ಲಿ ಬೈರತ್ ಎಂಬ ರೇವುಪಟ್ಟಣದಲ್ಲಿ ರೇವಿನಿಂದ ಹಡಗಿಗೆ ಹೋಗಬೇಕಾದರೆ ಹಡಗಿನ ಅಧಿಕಾರಿಗಳು, ದೋಣಿಯು ಇವನ ಭಾರವನ್ನು ತಡೆಯುವದಿಲ್ಲವೆಂದು ಭಾವಿಸಿ, ಈತನನ್ನು ತೊಲೆಗಳನ್ನು ಎತ್ತುವ ಯಂತ್ರದಿಂದ ಎತ್ತಿ ಹಡಗಿನಲ್ಲಿ ಇಳಿಸಿದರಂತೆ!

ವಿಚಿತ್ರ ಚಿಕಿತ್ಸೆ!

ವಿಯನ್ನಾನಗರದ ಡಾಕ್ಟರ್ ಫ್ರಾಂಜ್ ಕ್ರೆಟ್ಸ್‌ಚಿ ಎಂಬವರು ಬಹಳ ದಿವಸಗಳಿಂದಲೂ ಕೈಕಾಲುಗಳು ಹಿಡಿದು ನರಳುತ್ತಿದ್ದರು. ಆದರೆ ಅವರು 708 ಸಾರೆ ಜೇನುಹುಳುಗಳಿಂದ ಕಡಿಸಿಕೊಂಡನಂತರ ಸಂಪೂರ್ಣ ಗುಣಹೊಂದಿದರಂತೆ!

ಮಗನಿಗಿಂತಲೂ ನಾಯಿಯು ಹೆಚ್ಚಾಯಿತು.

ಕೆನಸಾಸ್ ದೇಶದ ರಿವರ್ಟನ್ ನಗರದ ಡಬ್ಲ್ಯೂ. ಎಫ್. ಕಿಂಬಾಲ ಎಂಬಾತನು ಮೃತ್ಯುಶಾಸನದಲ್ಲಿ ತನ್ನ ಪ್ರೀತಿಗೆ ಪಾತ್ರವಾಗಿದ್ದ, 'ಟಫಿ' ಎಂಬ ನಾಯಿಗೆ 20,000 ರೂಪಾಯಿಗಳನ್ನೂ, ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ 30 ರೂ. ಗಳನ್ನೂ ಬರೆದಿರುವನಂತೆ!

ವಿಮಾನದಲ್ಲಿ ಚಲನಚಿತ್ರ!

ರಷ್ಯಾದೇಶದಲ್ಲಿ ಒಂದು ಹೊಸಮಾದರಿಯ ಆಕಾಶವಿಮಾನವು ತಯಾರಿಸಲ್ಪಟ್ಟಿರುವದು. ಅದರಲ್ಲಿ ಹತ್ತುಜನ ಪ್ರಯಾಣಿಕರಿಗೆ ಸ್ಥಳವಿರುವದಲ್ಲದೆ ಜಾಹಿರಾತುಗಳನ್ನು ಅಚ್ಚುಹಾಕಿ ಭೂಮಿಮೇಲೆ ಚೆಲ್ಲುವದಕ್ಕೆ ಒಂದು ಮುದ್ರಾಶಾಲೆಯೂ, ಪ್ರಯಾಣಿಕರ ಸೌಕರ್ಯಕ್ಕಾಗಿ ಒಂದು ಚಲನಚಿತ್ರಮಂದಿರವೂ ಇರುವವಂತೆ!

ವಿಚಿತ್ರ ಶಿಶು!

ತಿಪ್ಪೇರಾ ಡಿಸ್ಟ್ರಿಕ್ಟಿಗೆ ಸೇರಿದ ಅಂಬಾರ್ ಗ್ರಾಮದ ಸಾಬರಲ್ಲಿ ಎಂಬಾತನ ಪತ್ನಿಯು 3 ಕಾಲು ಮತ್ತು 3 ಕೈಗಳುಳ್ಳ ಒಂದು ವಿಚಿತ್ರ ಶಿಶುವನ್ನು ಪ್ರಸವಿಸಿದಳೆಂದೂ, 3ನೇ ಕೈಯು ಎದೆಯ ಮಧ್ಯಭಾಗದಿಂದಲೂ 3 ನೇ ಕಾಲು ಹೊಟ್ಟೆಯ ಕೆಳಭಾಗದಿಂದಲೂ ಬೆಳೆದಿದ್ದವೆಂದೂ, ಶಿಶುವು ಜನಿಸುವಾಗಲೇ ಮೃತಿಯನ್ನೈದಿದ್ದಿತೆಂದೂ ತಿಳಿದುಬಂದಿದೆ.

ನಕ್ಷತ್ರಗಳ ಮಳೆ!

ಕಳೆದ ಅಕ್ಟೋಬರ್ ತಿಂಗಳಲ್ಲಿ ಯೂರೋಪ್ ದೇಶದ ಕೆಲವೆಡೆಗಳಲ್ಲಿಯೂ ಮೊರಾಕೊದೇಶದಲ್ಲಿಯೂ ನಕ್ಷತ್ರಗಳ ವೃಷ್ಟಿಯಾಯಿತು. ಕೆಲವು ಕಡೆಗಳಲ್ಲಿ ಆಕಾಶವೆಲ್ಲವೂ ಧಗಧಗನೆ ಉರಿಯುತ್ತಾ, ಸಿಡಿಯುತ್ತಿದ್ದ ನಕ್ಷತ್ರಗಳಿಂದ ತುಂಬಿ, ಜನರೆಲ್ಲರೂ ಭೂಮಿಯೇ ನಾಶವಾಗಬಹುದೆಂದು ಭೀತಿಗ್ರಸ್ತರಾಗಿದ್ದರು. ಪೋರ್ಚುಗಲ್ ದೇಶಕ್ಕೆ ಸೇರಿದ 'ಒಪೋರ್ಟೋ' ಮೊದಲಾದ ಊರುಗಳಮೇಲೆ ಉರಿಯುತ್ತಿರುವ ನಕ್ಷತ್ರಗಳು ಮಳೆಯಂತೆ ಬಿದ್ದವು. ಶಾಸ್ತ್ರಜ್ಞರು ಯಾವುದೋ ಧಗಧಗಿಸುತ್ತಿದ್ದ ಗ್ರಹವು ಮಹಾರಭಸದಿಂದ ಸಿಡಿದುದೇ ಇದಕ್ಕೆ ಕಾರಣವೆಂದು ಹೇಳುವರಾದರೂ, ಖಗೋಳಶಾಸ್ತ್ರಜ್ಞರು ಮಾತ್ರ ಈ ವಿಚಿತ್ರಕ್ಕೆ ಕಾರಣವನ್ನು ಇನ್ನೂ ಸರಿಯಾಗಿ ನಿರ್ಧರಿಸಿಲ್ಲವಂತೆ!

ಯುಗಾಂತರದ ಪ್ರಾಣಿ!

ಸ್ಕಾಟ್ಲೆಂಡ್ ದೇಶಕ್ಕೆ ಸೇರಿದ ಇನ್‌ವರ್ನೆಸ್ ಪ್ರಾಂತದ ಸಮೀಪದಲ್ಲಿರುವ ಲಾಕ್‌ನೆಸ್ ಎಂಬ ಸರೋವರದಲ್ಲಿ ಒಂದು ಅದ್ಭುತ ಆಕಾರದ ಪ್ರಾಣಿಯು ಸೇರಿಕೊಂಡಿದ್ದು ಅದು 30 ಅಡಿ ಉದ್ದವಾಗಿಯೂ, ಅದರ ಕಣ್ಣುಗಳು ಮೋಟಾರ್‌ಕಾರಿನ ಮುಂಭಾಗದಲ್ಲಿರುವ ದೀಪಗಳಂತೆ ಪ್ರಕಾಶವಾಗಿಯೂ ಇರುವವಂತೆ! ಎಷ್ಟೋ ಸಂದರ್ಭಗಳಲ್ಲಿ ಅದು ನೀರನ್ನು ಬಿಟ್ಟು ದಡದ ಮೇಲೆ ಬರುವದಾದರೂ ಮನುಷ್ಯರನ್ನು ಕಂಡ ಕೂಡಲೇ ನೀರಿನಲ್ಲಿ ಮುಳುಗಿಕೊಳ್ಳುವದಂತೆ! ಅನೇಕರು ಅದನ್ನು ಪ್ರತ್ಯಕ್ಷವಾಗಿ ನೋಡಿದ್ದು, ಅದು ಒಂದು ಅದ್ಭುತ ಆಕಾರದ ಮೊಸಳೆಯಂತಿರುವದೆಂದು ಹೇಳುವರು. ನೀರಿನಲ್ಲಿ ಅದು ಅತ್ಯಂತ ವೇಗದಿಂದ ಈಜುವದಂತೆ! ಸದರಿ ಪ್ರಾಣಿಯು ಬಹಳ ಪುರಾತನ ಕಾಲದ್ದೆಂದೂ, ಅದು ಯಾವ ಕಾಲದಲ್ಲಿಯೋ ಹೇಗೋ ಉತ್ತರಧ್ರುವದ ಸಮುದ್ರದ ತಳದಿಂದ ತಪ್ಪಿಸಿಕೊಂಡು ಆ ಸರೋವರಕ್ಕೆ ಬಂದು ಸೇರಿಕೊಂಡಿರುವದೆಂದೂ ಶಾಸ್ತ್ರಜ್ಞರು ಹೇಳುವರು.

ಅಗ್ನಿಗೆ ೫ ಜನ ಸಹೋದರರ ಆಹುತಿ.

ಯೆರಪಾಳ್ಯಂ ರೈಲ್ವೇ ಸ್ಟೇಷನ್ನಿಗೆ ಒಂದು ಮೈಲುದೂರದಲ್ಲಿರುವ ಒಂದು ಹಳ್ಳಿಯಲ್ಲಿ ವಾಸವಾಗಿದ್ದ 5 ಜನ ಸಹೋದರರು ತಮ್ಮ ನಡತೆಯಿಂದ ಆ ಗ್ರಾಮದ ಎಲ್ಲ ಜನರ ದ್ವೇಷಕ್ಕೆ ಪಾತ್ರರಾಗಿದ್ದರು. ಆ ಹಳ್ಳಿಯವರು ಇವರ ಕಾಟವನ್ನು ಸಹಿಸಿ ಸಹಿಸಿ ಸಾಕಾಗಿ ಕಡೆಗೆ ಒಂದು ದಿವಸ ರಾತ್ರಿ ಇವರೆಲ್ಲರೂ ಮಲಗಿದ್ದ ಸಮಯದಲ್ಲಿ ಮನೆಯ ಸುತ್ತಲೂ ಒಣಹುಲ್ಲು, ಸೌದೆ ಮುಂತಾದ ವಸ್ತುಗಳನ್ನು ಹಾಕಿ ಮನೆಗೆ ಬೆಂಕಿಹಚ್ಚಿಬಿಟ್ಟರು. ಒಳಗಿದ್ದ 5 ಜನರು ಪ್ರಾಣರಕ್ಷಣೆಗಾಗಿ ಹೊರಕ್ಕೆ ಬರಲು ಯತ್ನಿಸಿದರು. ಆದರೆ ಮನೆಗೆ ಬೆಂಕಿಹಚ್ಚಿ ತಮಾಷೆಯನ್ನು ನೋಡುತ್ತ ನಿಂತಿದ್ದವರು ಅವರನ್ನು ಹೊಡೆದು ಬಡಿದು ಪುನಃ ಉರಿಯುತ್ತಿದ್ದ ಮನೆಯೊಳಕ್ಕೆ ತಳ್ಳಿದರು. ಅಂತೂ ಅವರೈವರೂ ಬೆಂಕಿಯಲ್ಲಿ ಸುಟ್ಟು ಭಸ್ಮವಾದರು. ಈ ವರ್ತಮಾನವನ್ನು ತಿಳಿದಕೂಡಲೇ ಓರಂಗಲ್ಲಿನ ಪೋಲೀಸ್ ಸೂಪರಿಂಟೆಂಡೆಂಟರವರು ಸಿಬ್ಬಂದಿಸಮೇತವಾಗಿ ಆ ಹಳ್ಳಿಗೆ ಹೋಗಿ ಈ ಕ್ರೂರಕೃತ್ಯಕ್ಕೆ ಕಾರಣರಾದ ಅನೇಕ ಜನರನ್ನು ದಸ್ತಗಿರಿಮಾಡಿರುವರು.

ಅಸ್ಪೃಶ್ಯತಾನಿವಾರಣೆಗಾಗಿ ಪ್ರಾಣಹಾನಿ. ಗಾಂಧಿಯವರಿಗೆ ಕೋಳಿತತ್ತಿಯ ಏಟು.

ಗಾಂಧಿಯವರು ಸದ್ಯಃ ಅಸ್ಪೃಶ್ಯತಾನಿವಾರಣೆಗಾಗಿ ದೇಶಮಧ್ಯದಲ್ಲಿ ಸಂಚರಿಸುತ್ತಿರುವರಷ್ಟೇ! ಇವರು ಹೋದಹೋದಲ್ಲೆಲ್ಲಾ ಸನಾತನಮತಾನುಯಾಯಿಗಳಾದ ಹಿಂದೂ ಜನರು ಇವರಿಗೆ ವಿಶೇಷವಾದ ಅಪಮಾನವನ್ನು ಮಾಡುತ್ತಿರುವರೆಂದೂ, ಕೆಲವುಕಡೆಗಳಲ್ಲಿ ಅಸ್ಪೃಶ್ಯರೇ ಇವರ ವರ್ತನವನ್ನು ತಿರಸ್ಕರಿಸುತ್ತಿರುವರೆಂದೂ ಕೆಲವು ಪತ್ರಿಕೆಗಳಿಂದ ತಿಳಿದುಬರುತ್ತದೆ. ನಾಗಪುರದಲ್ಲಿ ನಡೆದ ಒಂದಾನೊಂದು ಸಭೆಯಲ್ಲಿ ಹಿಂದೂಜನರು ಗಾಂಧಿಯವರ ಮೇಲೆ ಕೋಳಿಯತತ್ತಿಗಳನ್ನು ಎಸೆದರೆಂದು ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆ. ಗಾಂಧಿಯವರು ಮೊನ್ನೆ ಕಾನಪುರಕ್ಕೆ ಹೋದಾಗ ಅಸ್ಪೃಶ್ಯತಾವಿಷಯದಲ್ಲಿ ಸನಾತನಪದ್ಧತಿಯವರಿಗೂ, ಗಾಂಧಿತತ್ತ್ವದ ಸಂಕರಪದ್ಧತಿಯವರಿಗೂ ಭಯಂಕರ ಹೊಡೆದಾಟವಾಗಿ ಈ ಗೊಂದಲದಲ್ಲಿ ಒಬ್ಬ ಹುಡುಗನು ಮರಣಹೊಂದಿದನು. ಇದಕ್ಕಾಗಿ ಸರಕಾರದವರು ಅನೇಕರನ್ನು ದಸ್ತಗಿರಿಮಾಡಿದ್ದಾರೆ.

ಶಿವಾಂಕದ ಪುನರ್ಮುದ್ರಣ.

ಗೋರಖಪುರದಲ್ಲಿ ಹೊರಡುತ್ತಿರುವ ಕಲ್ಯಾಣ ಪತ್ರಿಕೆಯ ವಿಶೇಷ ಸಂಚಿಕೆಯಾದ "ಶಿವಾಂಕ" ದ ವಿಷಯವನ್ನು ಈ ಮೊದಲು ನಾವು ನಮ್ಮ ಪತ್ರಿಕೆಯಲ್ಲಿ ವಿಮರ್ಶಿಸಿರುವ ವಿಷಯವು ವಾಚಕರ ಸ್ಮೃತಿಪಥದಲ್ಲಿರಬಹುದು. ಸಂಪಾದಕರು ಈ ಮೊದಲು ೨೨೫೦೦ ಶಿವಾಂಕದ ಪ್ರತಿಗಳನ್ನು ಮುದ್ರಿಸಿದ್ದರು. ಶಿವಾಂಕದ ಮಹತ್ತ್ವವನ್ನು ಕಂಡು ಕಲ್ಯಾಣಪತ್ರಿಕೆಗೆ ಸಾವಿರಾರು ಜನರು ಹೊಸದಾಗಿ ಚಂದಾದಾರರಾದುದರಿಂದ ಶಿವಾಂಕದ ಪ್ರತಿಗಳೆಲ್ಲವೂ ಮುಗಿದುಹೋಗಿವೆಯೆಂದೂ, ಸದ್ಯಃ ಶಿವಾಂಕವು ಪುನಃ ಮುದ್ರಿಸಲ್ಪಡುತ್ತಿರುವುದೆಂದೂ, ಮುದ್ರಣವಾದಕೂಡಲೇ ನೂತನ ಚಂದಾದಾರರಿಗೆ ಶಿವಾಂಕವು ಕಳುಹಿಸಲ್ಪಡುವುದೆಂದೂ ಸಂಪಾದಕರು ನಮಗೆ ಪತ್ರವನ್ನು ಬರೆದಿದ್ದಾರೆ. ಈ ವಿಷಯವನ್ನು ಹೊಸಚಂದಾದಾರರು ಗಮನಿಸಬೇಕೆಂದು ಕೋರುತ್ತೇವೆ.

(3 ನೆಯ ಪುಟದಿಂದ ಮುಂದುವರಿದುದು).

ಉ—ಹೌದು ಇದ್ದರು.

ಪ್ರ—ಸಬ್-ಇನ್ಸ್‌ಪೆಕ್ಟರು ಲತೀಫ್ ಸಾಹೇಬರೂ ಇದ್ದರೋ ಆಗ?

ಉ—ಜ್ಞಾಪಕವಿಲ್ಲ.

(ಕೈಫಿಯತುಗಳನ್ನೂ ಅರ್ಜಿಗಳನ್ನೂ ಗುರ್ತಿಸಿದರು. ಅರ್ಜಿ ಮತ್ತು ಕೈಫೀತುಗಳನ್ನು ಕೋರ್ಟಿನಲ್ಲಿ ಓದಲಾಯಿತು).

ಪ್ರ—ಹೇಳಿಕೆಗಳನ್ನು ಅವರುಗಳು ಹೇಳಿದಹಾಗೆ ತಾನೆ ಬರೆದಿರುವುದು?

ಉ—ಹೌದು ಅವುಗಳನ್ನು ಓದಿ ಹೇಳಿ ಅವಕ್ಕೆ ರುಜು ತೆಗೆದುಕೊಂಡಿರುತ್ತೆ.

ಪ್ರ—ಸಾಮಾನುಗಳನ್ನು ನೀವೇನೂ ಕೊಡಿಸಲಿಲ್ಲವೋ?

ಉ—ಇಲ್ಲ. ಹುಡುಗೀನೆ ಕೊಟ್ಟುಬಿಟ್ಟಳು.

ಪ್ರ—ಈ ಹುಡುಗಿ ಗಂಡ ನಿಮ್ಮಲ್ಲಿ ಏನಾದರೂ ಫಿರ್ಯಾದಿ ಕೊಟ್ಟಿದ್ದಾರೋ?

ಉ—ನನ್ನಲ್ಲಿ ಕೊಟ್ಟಿಲ್ಲ. ನನಗೆ ಗೊತ್ತಿಲ್ಲ.

ಪ್ರ—ನಿಮಗೆ ಇಂಗ್ಲೀಷು ಬರುತ್ತೇ?

ಉ—ಇಲ್ಲ.

ಪ್ರ—ಇನ್ಸ್‌ಪೆಕ್ಟರವರ ಜೊತೆಯಲ್ಲಿ ನರಸಿಂಹಾಚಾರ್ರು ಬಂದಿದ್ದರೋ?

ಉ—ಬಂದಿರಬಹುದು. ಕೆಳಗಿನ ಕೋರ್ಟಿನಲ್ಲಿ ಬಂದಿದ್ದರು ಎಂತ ಹೇಳಿದ್ದೇನೆ.

ಪ್ರ—ಹುಡುಗಿಜೊತೆಯಲ್ಲಿ ಪೋಲೀಸಿನವರನ್ನು ಕಳುಹಿಸಿದಿರಾ?

ಉ—ನಾನು ಯಾರನ್ನೂ ಕಳುಹಿಸಲಿಲ್ಲ.

ಪ್ರ—ಹುಡುಗಿ ಸ್ಟೇಷನ್ ಬಿಟ್ಟು ಹೋಗುವತನಕ ನೀವು ಅಲ್ಲಿಯೇ ಇದ್ದಿರಾ?

ಉ—ಇದ್ದೆ.

ಪ್ರ—ಹುಡುಗಿ ಶೇಷಗಿರಿರಾಯರ ಮನೆಗೆ ಹೋದಳೋ?

ಉ—ಅತ್ತ ಕಡೆ ಹೋದಳು.

ಪ್ರ—ರಾಮಸ್ವಾಮಿ ಪಂಡಿತರು ನಿಮ್ಮಲ್ಲಿ ಈ ಹುಡುಗಿಯ ಗಂಡನ ಮೇಲೇನಾದರೂ ಕಂಪ್ಲೇಂಟು ಕೊಟ್ಟರೋ?

ಉ—ನನಗೆ ಜ್ಞಾಪಕವಿಲ್ಲ.

Re-Examination.

ಪ್ರ—Statements record ಮಾಡಿದಾಗ ಅಲ್ಲಿದ್ದವರುಗಳು ಕೊನೆಯತನಕ ಇದ್ದರೋ?

ಉ—ನನಗೆ ಜ್ಞಾಪಕವಿಲ್ಲ.

ಪ್ರ—ಹುಡುಗಿ ಹೊರಟುಹೋಗುವತನಕ ಇನ್ಸ್‌ಪೆಕ್ಟರವರು ಇದ್ದರೋ?

ಉ—ಅವರೂ ಇದ್ದರು.

ಪ್ರ—ಸ್ಟೇಷನ್ ಬಳಿ ಯಾರಾದರೂ ಇದ್ದರೋ?

ಉ—ಕೆಲವು ಮುಸಲ್ಮಾನರೂ ಇದ್ದರು.

Cross-Examination.

ಪ್ರ—ಕೆಳಗಿನ ಕೋರ್ಟಿನಲ್ಲಿ ಹುಡುಗಿ ನನ್ನಲ್ಲಿಗೆ ಬಂದಾಗ್ಯೆ ಅಳುತ್ತಿದ್ದಳು ಎಂತ ಹೇಳಲಿಲ್ಲ? ಹೌದೋ?

ಉ—ನನ್ನನ್ನು ಕೇಳಲಿಲ್ಲ. ನಾನು ಹೇಳಲಿಲ್ಲ.

ಪ್ರ—ರಾಮಸ್ವಾಮಿ ಪಂಡಿತರಿಗೆ ನಿಮ್ಮ ಮಗಳನ್ನು ನಾನು Constable ಜೊತೆಯಲ್ಲಿ ಕಳುಹಿಸಿಕೊಡುತ್ತೇನೆಂತ ಹೇಳಿದಿರಾ?

ಉ—ಇಲ್ಲ.

ಅಮಲ್ದಾರ್ ಕಾಂತಂರವರ ಸಾಕ್ಷ್ಯ.

ನಾನು ಆ ದಿವಸ ಆಗಸ್ಟ್ ೨೩ ರಲ್ಲಿ ಚಿಂತಾಮಣಿಯಲ್ಲಿದ್ದೆ. ಆಗ್ಗೆ ಈ ವಿಷಯವಾಗಿ ನನಗೆ ಏನೂ ತಿಳಿಸಲಿಲ್ಲ. ಆ ದಿವಸ ಪೋ|| ಇನ್ಸ್‌ಪೆಕ್ಟರರನ್ನು ನಾನು ಕಂಡಿದ್ದೆ. ಆದರೆ ಅವರು ನನಗೇನೂ ಹೇಳಲಿಲ್ಲ. ಆಗಸ್ಟ್ ೨೪ ರಲ್ಲಿ ೨-೩೦ ರಲ್ಲಿ ನನಗೆ ಗಲಾಟೆಯು ಕೇಳಿಬಂತು. ಏನೆಂದು ಬಾಗಿಲನ್ನು ತೆಗೆದು ನೋಡಿದೆ. ಅನೇಕ ಜನರು ತುಂಬಿದ್ದರು. ಹುಡುಗಿಯ ಅಣ್ಣನಾದ ಲಕ್ಷ್ಮೀನರಸಿಂಹಯ್ಯನು ತನ್ನ ತಂಗಿಯು ಮುಸಲ್ಮಾನರಿಂದ ಅಪಹರಿಸಲ್ಪಟ್ಟಿರುವಳೆಂದು ಅವಳನ್ನು ಹಿಂದಕ್ಕೆ ಕೊಡಿಸಬೇಕೆಂದೂ ಅವನು ಕೇಳಿದನು. ನಾನು ಒಂದು ಚೀಟಿಯನ್ನು ಪೋ|| ಇನ್ಸ್‌ಪೆಕ್ಟರರಿಗೆ ಬರೆದೆ. ಆಗ್ಗೆ ಅವರೆಲ್ಲಾ ಹೊರಟುಹೋದರು. ಇನ್ಸ್‌ಪೆಕ್ಟರರನ್ನು ಆ ಮೇಲೆ ಕರೆಸಿ ಕೇಳಲಾಗಿ ತಾ|| ೨೩ರಲ್ಲಿ ತಮ್ಮ ಮನೆಗೆ ಒಬ್ಬ ಬ್ರಾಹ್ಮಣ ಹುಡುಗಿಯು ಟ್ರಂಕನ್ನು ಹಿಡಿದುಕೊಂಡು ಬಂದದ್ದನ್ನು ಕಂಡಂತೆಯೂ ತಾನು ಇಸ್ಲಾಂ ಮತಕ್ಕೆ ಸೇರಲಿಚ್ಛಿಸುವಂತೆ ಹೇಳಿದಂತೆಯೂ ತಿಳಿಸಿದರು. ನಂತರ ಪೋಲೀಸ್ ಸ್ಟೇಷನ್ನಿಗೆ ಹುಡುಗಿಯನ್ನು ಕರೆದುಕೊಂಡು ಹೋಗಿ ಆಕೆಯ ಹೇಳಿಕೆಯನ್ನೂ ತಂದೆಯ ಹೇಳಿಕೆಯನ್ನೂ ತೆಗೆದುಕೊಳ್ಳಲಾಯಿತೆಂದು ಅವರು ನನಗೆ ತಿಳಿಸಿದರು. ಹುಡುಗಿಗೆ ೧೮ ವರ್ಷವೆಂದು ತಿಳಿಸಿದರು.

ನಗರದಲ್ಲಿ ಗಲಭೆಯ ಸೂಚನೆಗಳಿದ್ದುದರಿಂದ ನಾನು ಅನುಮಾನಪಟ್ಟು ಹುಡುಗಿಯನ್ನು ಕರೆಸಬೇಕೆಂದು ಇನ್ಸ್‌ಪೆಕ್ಟರರಿಗೆ ತಿಳಿಸಿದೆ. ೪-೩೦ ಘಂಟೆಗೆ ಇನ್ಸ್‌ಪೆಕ್ಟರರು ನನ್ನಲ್ಲಿಗೆ ಬಂದು ಹುಡುಗಿಯು ಮದುವೆಯಾಗಿದೆಯಾದ್ದರಿಂದ ಹುಡುಗಿಯನ್ನು ಅವರು ಕಳುಹಿಸುವುದಿಲ್ಲವೆಂದು ಹೇಳಿದರು. ಸಾಯಂಕಾಲ ೭ ಘಂಟೆಗೆ ಪುನಃ ಇನ್ಸ್‌ಪೆಕ್ಟರರು ಬಂದು ಹುಡುಗಿಯನ್ನು ಕರೆತರಲು ಯಾವ ಅಧಿಕಾರವು ಇದೆಯೆಂದು ಪ್ರಶ್ನಿಸಿದರು. ಆಗ ನನಗೆ ಅನುಮಾನವಾಗಿ ಕ್ರಿ. ಪ್ರೊ. ಕೋಡ್ ಮತ್ತು ಪೋಲೀಸ್ ರೆಗ್ಯುಲೇಷನ್‌ಗಳನ್ನು ತರಿಸಿ ನೋಡಿದೆ. ಅದರಲ್ಲಿ ಪೋಲೀಸರ ಮೇಲೆ ನನಗೆ ಇರುವ ಅಧಿಕಾರವು ನಮೂದಾಗಿತ್ತು. ಆದರೂ ನಾನು ಈ ವಿಷಯವು ಮ್ಯಾಜಿಸ್ಟ್ರೇಟರೆದುರಿಗೆ ಬರುವುದೆಂದು ಸುಮ್ಮನಾದೆ. ಸ್ಟೇಷನ್ ಹಾಸ್ ಡೈರಿಯನ್ನು ತರುತ್ತೇನೆಂದು ಇನ್ಸ್‌ಪೆಕ್ಟರರು ಹೇಳಿದ್ದರು ಆದರೆ ಹಾಗೆ ಅವರು ತರಲಿಲ್ಲ. ೨೬-೨೭ರಲ್ಲಿ ಡಿ.ಎಸ್.ಪಿ. ರವರು ಈ ಮೊಕದ್ದಮೆಗಾಗಿ ಚಿಂತಾಮಣಿಗೆ ಬಂದಿದ್ದರು. ನಾನು ಆಗೆಲ್ಲಾ ನಗರದ ವಿಷಯವಾಗಿ ಬಹಳ ಜಾಗರೂಕನಾಗಿದ್ದೆ. ಹುಡುಗಿಯು ಆಗ ಶಿಡ್ಲಘಟ್ಟಕ್ಕೆ ಹೋಗಿರುವಳೆಂದೂ ಕ್ಯಾತನೂರಿಗೆ ಹೋಗಿರುವಳೆಂದೂ ವದಂತಿಯಿತ್ತು. ನಾನು ಇನ್ಸ್‌ಪೆಕ್ಟರವರಿಗೆ ಲಾಸ್ ಬಾಬಸೇಟಿನ ಮನೆಯನ್ನು ಜಪ್ತಿ ಮಾಡಬೇಕೆಂದು ತಿಳಿಸಿದೆ. ೨೯ರಲ್ಲಿ ಟಿ. ಬಿ. ಹತ್ತಿರ ಹುಡುಗಿಯನ್ನು ನಾನು ನೋಡಿದೆ. ೨೮ ನೇ ಸಾಯಂಕಾಲ ಡಿ|| ಮ್ಯಾಜಿಸ್ಟ್ರೇಟರು ಅಲ್ಲಿಗೆ ಬಂದಿದ್ದರು. ೨೯ ರಲ್ಲಿ ಹುಡುಗಿಯೊಡನೆ ನಾನೂ ಮಾತನಾಡಿದೆ. ಜಾತಕದ ವಿಷಯವಾಗಿ ಆಕೆಗೆ ಕೆಲವು ಪ್ರಶ್ನೆಯನ್ನು ಹಾಕಿದೆ.

ಪ್ರ—ಆಕೆಯು ಏನು ಹೇಳಿದಳು?

ಈ ಸಮಯದಲ್ಲಿ ಡಿಫೆನ್ಸ್ ಲಾಯರು ಒಂದು ಆಕ್ಷೇಪವನ್ನು ತೆಗೆದರು. ಪಬ್ಲಿಕ್ ಪ್ರಾಸಿಕ್ಯೂಟರು ಪೋಲೀಸ್ ಆಫೀಸರಾದ್ದರಿಂದ ಹಾಗೆ ಪ್ರಶ್ನೆಹಾಕಕೂಡದೆಂದರು. ಪ್ರಾಸಿಕ್ಯೂಟರು ಅಮಲ್ದಾರರು ಪೋಲೀಸ್ ಆಫೀಸರಲ್ಲವೆಂದೂ ಪೋಲೀಸರ ಮೇಲೆ ಅಧಿಕಾರವವರಿಗಿದೆಯೇ ಹೊರತು ಅವರೇ ಪೋಲೀಸ್ ಆಫೀಸರಲ್ಲವೆಂದು ವಾದಿಸಿದರು. ಅವರು ಐ. ಜಿ. ಪಿ ಗೆ ಅಧೀನರಲ್ಲ ರೆವಿನ್ಯೂ ಕಮಿಷನರಿಗೆ ಮಾತ್ರ ಅಧೀನರು. ಸಾಕ್ಷಿಯು ಮುಂದುವರಿಯುತ್ತ ಹೇಳಿದ್ದೇನೆಂದರೆ.

ಹುಡುಗಿಯ ತಂದೆ ಮತ್ತು ತಮ್ಮನ ಜಾತಕಗಳು ಒಂದು ಪುಸ್ತಕದಲ್ಲಿಯೂ ಮತ್ತು ಇತರ ಜಾತಕಗಳು ಇನ್ನೊಂದು ಪುಸ್ತಕದಲ್ಲಿಯೂ ಇದೆಯೆಂದು ತಿಳಿಸಿದಳು ೨೮ ರಲ್ಲಿ ಹುಡುಗಿಯ ತಂದೆಯನ್ನು ನೋಡಿದೆ. ಅವರು ಡೆ|| ಕಮಿಷನರೊಡನೆ ಹುಡುಗಿಯನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತಿದ್ದರು. ನಾನು ಅವರ ಜೊತೆಯಲ್ಲಿ ಮನೆಯವರೆಗೂ ಹೋದೆ ಅವರು ಬಹಳ ಸಂತೋಷಪಟ್ಟುಕೊಂಡರು.

ಪ್ರ—ನೀವು ೨೩ ರಲ್ಲಿ ಚಿಂತಾಮಣಿಯಲ್ಲಿದ್ದಿರಾ?

ಉ—ಹೌದು ಇದ್ದೆ. ಬೆಳಗ್ಗೆ ೯ ರಿಂದ ೧೨ ವರೆಗೆ ಮಾತ್ರ ಇರಲಿಲ್ಲ.

ಪಾಟೀಸವಾಲು.

ಚಿಂತಾಮಣಿ ತಾಲ್ಲೂಕು ಅಮಲ್ದಾರರಾದ ಮಿ|| ಟಿ. ಎಲ್. ಕಾಂತಂರವರು ಪಾಟೀಸವಾಲಿಗೆ ಉತ್ತರವನ್ನೀಯುತ್ತಾ ಹೇಳಿದ್ದೇನೆಂದರೆ "ಚಿಂತಾಮಣಿ ಬಡಾವಣೆಯು ಊರಿನ ಸಮೀಪದಲ್ಲಿಯೇ ಇದೆ. ಸಮೀಪದಲ್ಲಿದ್ದರೂ ಗ್ರಾಮದ ಒಂದು ಮುಖ್ಯ ಅಂಗವಾಗಿದೆ. ಪೋಲೀಸ್ ಠಾಣೆಯು ಈ ಬಡಾವಣೆಯಲ್ಲಿದೆ. ಆಗಸ್ಟ್ ೨೩ ರಿಂದ ೨೫ ರ ವರಿಗೆ ಕೋಲಾರದ ಎರಡನೇ ಮ್ಯಾಜಿಸ್ಟ್ರೇಟರು ಚಿಂತಾಮಣಿ ತಾಲ್ಲೂಕು ಕಛೇರಿಯಲ್ಲಿ ನ್ಯಾಯ ಪರಿಷ್ಕಾರದಲ್ಲಿದ್ದರು. ಅಂದಿನ ದಿವಸ ನಾನು ಕಚೇರಿಗೆ ಹೋಗಲಿಲ್ಲ.

ಪ್ರ—ಹುಡುಗಿಯನ್ನು ತಂದೆಯ ಸ್ವಾಧೀನಕ್ಕೆ ಕೊಡುವ ವಿಚಾರದಲ್ಲಿ ನೀವು ಇನ್ಸ್‌ಪೆಕ್ಟರವರಿಗೆ ಸಲಹೆಯನ್ನೇತಕ್ಕೆ ಕೊಡಲಿಲ್ಲ?

ಉ—ಅವರಿಗೆ ಪೋಲೀಸ್ ಸಹಾಯವು ಬೇಕಾಗಿದ್ದಿತೇ ವಿನಾ ಹುಡುಗಿಯ ವಿಚಾರದಲ್ಲಿ ಆಸಕ್ತಿಯಿಂದಿರಲಿಲ್ಲ.

ಪ್ರ—ಊರಿನಲ್ಲಿ ಶಾಂತಿಭಂಗವಾದೀತೆಂಬ ಭಯವಿದ್ದಿತೇ?

ಉ—ಹೌದು.

ಪ್ರ—ಹುಡುಗಿಯನ್ನು ತರುವ ವಿಚಾರದಲ್ಲಿ ಲಕ್ಷ್ಮೀನರಸಿಂಹಯ್ಯನವರಿಗೆ ಏನಾದರೂ ಸೂಚನೆಯನ್ನು ಕೊಟ್ಟಿರಾ?

ಉ—ಇಲ್ಲ.

ಪ್ರ—ನೀವು ಇನ್ನಾರಬಳಿಯಾದರೂ ಈ ವಿಚಾರವನ್ನು ಪ್ರಸ್ತಾಪಿಸಿದಿರಾ?

ಉ—ಇಲ್ಲ.

ಪ್ರ—ಹುಡುಗಿಯು ಚಿಂತಾಮಣಿಯಲ್ಲಿರುವಳೆಂದು ಇನ್ಸ್‌ಪೆಕ್ಟರವರು ಹೇಳಿದರೇನು?

ಉ—ಹೌದು.

ಪ್ರ—ನೀವು ಹುಡುಗಿಯನ್ನು ಅಂದಿನ ದಿವಸ ನೋಡಲು ಕಾತುರಪಟ್ಟಿರಾ?

ಉ—ಹೌದು.

ಪ್ರ—ನೀವು ಅವರಿಗೆ ವಿವರಗಳನ್ನು ಕೊಟ್ಟಿರಾ?

ಉ—ಹೌದು.

ಇಲ್ಲಿಗೆ ಅಮಲ್ದಾರ್ ಕಾಂತಂರವರ ಸಾಕ್ಷಿಯು ಮುಗಿಯಿತು.

ಇನ್ಸ್‌ಪೆಕ್ಟರ್ ಗರುಡಾಚಾರ್ಯರ ಸಾಕ್ಷ್ಯ.

ನಾನು ಶ್ರೀನಿವಾಸಪುರದ ಪೋ|| ಇನ್|| ಆಗಿರುತ್ತೇನೆ. ಡಿ.ಎಸ್.ಪಿ. ಯವರು ಈ ಕೇಸನ್ನು ಇನ್ವೆಸ್ಟಿಗೇಟ್ ಮಾಡುವಂತೆ ಹೇಳಿದರು. ನಾನು ೨೮-೮-೩೩ ರಲ್ಲಿ ಕೇಸನ್ನು ತೆಗೆದುಕೊಂಡು ೩೬೬ ನೇ ಸೆಕ್ಷನ್ ಪ್ರಕಾರ ರಿಜಿಸ್ಟರ್ ಮಾಡಿದೆ. ನರಸಿಂಹಯ್ಯನೆಂಬುವನು (ರಾಮಸ್ವಾಮಿ ಪಂಡಿತರ ಮಗ) ಜಾತಕವನ್ನು ೨೮-೮-೩೩ ರಲ್ಲಿ ತಂದುಕೊಂಡಿದ್ದ. ಅವನು ಒಂದು ಪುಸ್ತಕವನ್ನು ತಂದಿದ್ದ. ಅದರಲ್ಲಿ ಈ ಜಾತಕವಿತ್ತು ಅದರಿಂದ ನಾನು ಜಾತಕವಿದ್ದ ಹಾಳೆಯನ್ನು ಹರಿದುಕೊಂಡೆ ಆಮೇಲೆ ಅದನ್ನು ಡಿ.ಎಸ್.ಪಿ. ಯವರಿಗೆ ತೋರಿಸಿದೆ. ೨೯-೮-೩೩ ಸಲಾಂನೂ ಮತ್ತು ಹುಡುಗಿ ಇಬ್ಬರೂ ಸೇಟುಸಾಬಿ ಮನೆಯಿಂದ ಹೊರಗೆ ಬಂದರು. ಇನ್|| ಜಹಿರುದ್ದೀನ್‌ರು ಸಲಾಂನನ್ನು ಬಂಗಲೆ ಬಳಿ ದಸ್ತಗಿರಿ ಮಾಡಿದರು. ಹುಡುಗಿಯನ್ನು ಕೋಲಾರಕ್ಕೆ ಶ್ರೀನಿವಾಸಪುರದ ಸೈಯದ್ ಅಕ್ಬರ್ ಪಟೇಲ್‌ರವರ ಜೊತೆಯಲ್ಲಿ ಮೆಡಿಕಲ್ ಪರೀಕ್ಷೆಗೆ ಕರೆದುಕೊಂಡು ಹೋದೆ. ಹುಡುಗಿಯ ಅಣ್ಣ ನರಸಿಂಹಯ್ಯ ತಾನೂ ಬರುವುದಾಗಿ ಹೇಳಿದ. ಗಾಡಿಯವರು ಕಾರಿನಲ್ಲಿ ಜಾಗವಿಲ್ಲ ಬೇರೆ ಕಾರುಮಾಡಿಕೊಂಡು ಹೋಗಿ ಎಂತ ಹೇಳಿದರು. ಹುಡುಗಿಯನ್ನು ಡಾಕ್ಟರ ಬಳಿಗೆ ಕಳುಹಿಸುವತನಕ ನಾನೂ ಜೊತೆಯಲ್ಲಿದ್ದೆ. ಆಮೇಲೆ ನಾನು ಡೆಪ್ಯುಟಿ ಮಿಷನ್‌ರಲ್ಲಿ ಹೋಗಬೇಕಾಗಿತ್ತು. ಪಟೇಲರು ನನ್ನ ಜೊತೆಯಲ್ಲಿ ಬರಲಿಲ್ಲ. ಎಲ್ಲಿ ಹೋದರೋ ನನಗೆ ಗೊತ್ತಿಲ್ಲ. ಎಗ್ಸಾಮಿನ್ ಆದಮೇಲೆ ಹುಡುಗಿಯನ್ನು ಚಿಂತಾಮಣಿಗೆ ಕರೆದುಕೊಂಡು ಹೋದೆ. ಆ ರಾತ್ರಿಯೇ ಹುಡುಗಿಯನ್ನು ಅವಳ ತಂದೆ ವಶಕ್ಕೆ ಕೊಟ್ಟುಬಿಟ್ಟೆ. ಹುಡುಗಿ ವಿನಯವಾಗಿಯೇ ಮನೆಗೆ ಹೋದಳು. ಇತರ ಅಪರಾಧಿಗಳನ್ನು ತಪಾಸೆ ಮಾಡುತ್ತಿದ್ದೆ. ಒಂದನೇ ಅಪರಾಧಿಯನ್ನು ೩-೯-೩೩ ರಲ್ಲಿ ಬೆಂಗಳೂರಿನ ಕಂಟೋನ್ಮೆಂಟಿನಲ್ಲಿ ದಸ್ತಗಿರಿ ಮಾಡಿದೆ. ಬಾಕಿ ಅಪರಾಧಿಗಳು ಕೋರ್ಟಿನಲ್ಲಿ ಚಾರ್ಜ್‌ಷೀಟು ಇಟ್ಟಾಗಲು ೧೩-೯-೩೩ ಸರೆಂಡರ್ ಮಾಡಿಕೊಂಡರು. ಟ್ರಂಕು ಮೊದಲಾದುವನ್ನು ಒಂದನೇ ಅಪರಾಧಿ ಮನೆಯಲ್ಲಿ ಸೀಜ್ ಮಾಡಿದೆ. ಚಿಂತಾಮಣಿಯ ಮುನಿಸಿಪಾಲಿಟಿಯ ೧೯೧೩ ರಿಂದ ಜನನಮರಣದ ಪಟ್ಟಿಯಲ್ಲಿ ಮಹಾಲಕ್ಷ್ಮಮ್ಮನ ಜನನದ ವಿಚಾರವಾಗಿ ಏನೂ ಸಿಕ್ಕಲಿಲ್ಲ. ಜಂಗಂಕೋಟೆಯ ೧೯೧೨ ರ ೧೯೧೮ ರ ವರಿಗಿನ ಜನನಮರಣದ ರಿಜಿಸ್ಟರುಗಳನ್ನು ಹುಡುಕಿದೆ. ಅವರಲ್ಲಿಯೂ ಏನೂ ಸಿಕ್ಕಲಿಲ್ಲ. ಹುಡುಗಿಯ ಕೈಫೀತು ತೆಗೆದುಕೊಂಡಾಗ ಹುಡುಗಿ ಬಹಳ ಅಳುತ್ತಿದ್ದಳು. ಭಯಪಟ್ಟವಳಂತಿದ್ದಳು. ನಿಕಾಪಟ್ಟಿಯನ್ನು ನೋಡಬೇಕೆಂತ ಪ್ರಯತ್ನಪಟ್ಟೆ. ಅದು ಸಿಗಾ ಇಲ್ಲ. ಆ ಸಂಬಂಧದಲ್ಲಿ ೩ ನೇ ಅಪರಾಧಿ ಮನೆಯನ್ನು ಸರ್ಚ್ ಮಾಡಿದೆ. ಅಲ್ಲಿಯೂ ಸಿಕ್ಕಲಿಲ್ಲ. ಕೆಳಗಿನ ಕೋರ್ಟಿನಲ್ಲಿ ಖಾಜಿ ಅದನ್ನು ಹಾಜರ್ಮಾಡಿದ. ಅದೂ ಕೂಡ ವಾರಂಟು ಕೊಟ್ಟಮೇಲೇನೆ.

ಪಾಟೀಸವಾಲು.

ಪ್ರ—ಖಾಜಿಯನ್ನು ಪರೀಕ್ಷೆ ಮಾಡಿದಿರಾ ನೀವು?

ಉ—ಹೌದು.

ಪ್ರ—ಯಾವಾಗ.

ಉ—೩೦-೮-೩೩ ರಲ್ಲಿ.

ಪ್ರ—ಹುಡುಗಿ ಕೈಫೀತು ಆಗುತ್ತಿರುವಾಗ ಏಕೆ ತೆಗೆದುಕೊಂಡಿರಿ?

ಉ—ಡಾ|| ರವರು ಹೇಳಿದರು ಆದ್ದರಿಂದ?

ಪ್ರ—ಆಕೆ ಅಳುತ್ತಿದ್ದಳು. ಭಯಪಟ್ಟಿದ್ದಳು ಎಂಬುದನ್ನು ಎಲ್ಲಿಯಾದರೂ ನೋಟ್ ಮಾಡಿರುವಿರಾ?

ಉ—ಇಲ್ಲ.

ಪ್ರ—ಆಕೆ ಸ್ಟೇಟ್‌ಮೆಂಟ್ ರಿಕಾರ್ಡು ಮಾಡಲು ೬ ಘಂಟೆ ಕಾಲ ಹಿಡಿಯಿತೋ?

ಉ—ಹೌದು.

ಪ್ರ—ಆ ಮೇಲೆ ಆಕೆ ಯಾವಾಗ ಸರಿಯಾಗಿದ್ದಳು ಎಂಬುದನ್ನು ನೀವು ನೋಡಿದಿರಾ?

ಉ—ನಾನು ನೋಡಲಿಲ್ಲ.

ಪ್ರ—ಕೆಳಗಿನ ಕೋರ್ಟಿನಲ್ಲಿ ೧೮-೯-೩೩ ರಲ್ಲಿ ಬೈಲ್ ಅಪ್ಲಿಕೇಷನ್ ಮೂವ್ ಮಾಡಿತಲ್ಲವೇ?

ಉ—ಹೌದು.

ಪ್ರ—ಇದಾದ ಮೇಲೆ ತಾನೇ, ನೀವು ಸೀತಾರಾಮಶಾಸ್ತ್ರಿ ಶಂಕರಶಾಸ್ತ್ರಿ ಇವರುಗಳ ಕೈಫೀತುಗಳನ್ನು ತೆಗೆದುಕೊಂಡಿದ್ದು?

ಉ—ಹೌದು. ೨೯-೯-೩೩ ಸೀತಾರಾಮಶಾಸ್ತ್ರಿ, ಶಂಕರಶಾಸ್ತ್ರಿ. ಶ್ರೀನಿವಾಸಶೆಟ್ಟರನ್ನು ಪರೀಕ್ಷೆ ಮಾಡಿದೆ.

ಪ್ರ—೨೮-೮-೩೩ ರಲ್ಲಿ ತಾನೇ ನೀವು ರಾಮಸ್ವಾಮಿ ಪಂಡಿತರ ಕೈಫೀತು ಮಾಡಿಕೊಂಡು ತಾನೆ ಕೇಸು ರಿಜಿಸ್ಟರು ಮಾಡಿದ್ದು?

ಉ—ಹೌದು.

ಪ್ರ—ಆಗ ನಿಮಗೆ ಈ ಅಪರಾಧಿಗಳ ವಿಚಾರದಲ್ಲಿ ಏನೂ ಗೊತ್ತಿರಲಿಲ್ಲ. ಸೈಯದ್ ಅಕ್ಬರ್‌ರವರನ್ನು ನೀವು ಕರೆದುಕೊಂಡು ಬರಲಿಲ್ಲ. ೨೪-೮-೩೩ ರಲ್ಲಿ ನರಸಿಂಹಯ್ಯನನ್ನು ಪರೀಕ್ಷೆ ಮಾಡಿದಿರಾ? ಅವರ ಸ್ಟೇಟ್‌ಮೆಂಟ್ ರಿಕಾರ್ಡ್ ಮಾಡಿದಿರಾ?

ಉ—ಇಲ್ಲ.

ಪ್ರ—ಎಲ್ಲಿಯಾದರೂ ಆತನನ್ನು ಎಗ್ಸಾಮಿನ್ ಮಾಡಿದಿರಾ? ಈ ವಿಚಾರ ನೋಟ್ ಮಾಡಿರುವಿರಾ?

ಉ—ಇಲ್ಲ. ಜಾತಕದ ಮೇಲೆ ಡಿ. ಎಸ್. ಪಿ. ಯವರೇನೆ ನರಸಿಂಹಯ್ಯನನ್ನು ಹಾಜರ್ಮಾಡಿದ್ದು ಅವನ ಕೈಲಿ ಬರೆಸಿ ಸಹಿ ಮಾಡಿರುತ್ತಾರೆ.

ಪ್ರ—ನರಸಿಂಹಯ್ಯ ಎಂಬುದನ್ನು ಬರೆದು ಹೊಡೆದುಹಾಕಿದೆಯೋ?

ಉ—ಲಕ್ಷ್ಮಿ ಅನ್ನುವುದನ್ನು ಹೊಡೆದು ಹಾಕಿದೆ.

ಪ್ರ—ಜಾತಕ ಎಲ್ಲಿತ್ತು ಎಂದು ಕೇಳಿದಿರಾ?

ಉ—ಹೌದು ಕೇಳಿದೆ. ನನ್ನಲ್ಲಿಯೇ ಇತ್ತು ಎಂದು ಹೇಳಿದ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಲಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 13

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [47]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೇಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತಂಟುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಪಿಂಗ್ ಕಫ್ ರಿಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಟಿಂಕ್ಚರುಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಜೀತಿಸೂತ್ರಕ್ಕೆ ಬರೆಯಿರಿ. ಧರ್ಮಾರ್ಥ.

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ಸೀನಸ, ದಮ್ ರೋಗಗಳ್ಳೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೆ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಪರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಪರ' ತರಿಸಿ ಕುಡಿಯಿರಿ.

ಮಲೇರಿಯಾನ ಕಂಪೆನಿ,

(ಹಂಪನಕಟ್ಟೆ), 21, ಮಂಗಳೂರು. [12]

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್ಮೆಂಟ್ಸ್‌ಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಬರಾರು ಘಂಟೆಯನ್ನು ತೋರಿಸುವುವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.

ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿವಸಗಳವರೆಗೆ ಮಾತ್ರ: ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,

168, ಚೈನಾಬಜಾರ್ ಮದ್ರಾಸು.

[3]

THE CITY MART,

168, China Bazaar, MADRAS.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (2)

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್,

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ... (೨ನೆಯ ಆವೃತ್ತಿ)	೪ ಆಣೆ
ವೈದಿಕವ್ಯಾ...ಯರಹಸ್ಯ	೪ ಆಣೆ
ಶ್ರುತಿಸ...ಸ್ವ	೫ ಆಣೆ
ಆಗಮಪರಿಶ್...ಸ	೮ ಆಣೆ
ಶಿವಾದ್ವೈ...ರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 A.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦X೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವ[ರು]. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದ[ರೆ]:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾ[ದ] ಗತಕ್ಕ ಸರ್ವವ್ಯಾಧಿಗಳು, ಜೀರ್ಣದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ[ಲ್ಪ]ಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲ[ವೂ] ಪರಿಮಳವಾಗುವ್ವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋ[ಗಿ]ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ[ತು]. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[46] ಪೋ. ಬಾ. ೫೧೦, ಮದರಾಸ್.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[ತು].

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2269

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ: ಪಂಚಾಸ್ಯಪೀಠಾಧಿಪಾ: | ಪಂಚಕ್ಲೇಶವಿನಾಶಕಾ: ಪರತರಶ್ರೀಪಂಚಲಿಂಗೋದ್ಭವಾ: ||
ಪಂಚಾಚಾರನಿಯಾಮಕಾ: ಪರಿಲಸತ್ಪಂಚಾಕ್ಷರೀಬೋಧಕಾ: | ಪಂಚಾಚಾರ್ಯಜಗದ್ಗುರೂತ್ತಮವರಾ: ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ನೇ ನವಂಬರ್ ೧೯೩೩ [ಸಂಚಿಕೆ ೩೧

ಲಕ್ಕವಳ್ಳಿ ಜಲಾಶಯ.

ಮದ್ರಾಸ್, ಮೈಸೂರು ಮತ್ತು ಹೈದರಾಬಾದ್ ಸರಕಾರಗಳು ಈ ತಿಂಗಳಲ್ಲಿ ಚರ್ಚಿಸಿ ನಿರ್ಧರಿಸಿರುವ ತುಂಗಭದ್ರಾ ಅಣೆಕಟ್ಟಿನ ಸಂಬಂಧದಲ್ಲಿ ಲಕ್ಕವಳ್ಳಿ ಜಲಾಶಯವು ನಿರ್ಮಿತವಾಗುವ ಪ್ರಮೇಯ ಒದಗುವುದು. ತುಂಗಭದ್ರಾ ಅಣೆಕಟ್ಟು ಬಹು ದೊಡ್ಡ ಪ್ರಯತ್ನವಾಗಿದೆ. ಇದರಿಂದ ಹೈದರಾಬಾದ್ ಮತ್ತು ಮದ್ರಾಸ್ ಅಧಿಪತ್ಯಗಳಲ್ಲಿ ಲಕ್ಷಾಂತರ ಎಕರೆಗಳು ತರೀ ಸಾಗುವಳಿಗೆ ಬರುವವು. ಮೈಸೂರು ಸಂಸ್ಥಾನಕ್ಕೆ ಇದರಿಂದ ಪ್ರಯೋಜನವೇನೂ ಇಲ್ಲ. ಆದರೆ ತುಂಗಭದ್ರೆಯು ಮೈಸೂರು ಸಂಸ್ಥಾನದಲ್ಲಿ ಹುಟ್ಟಿ ಅಲ್ಲಿಯ ನೀರನ್ನು ಹೊರಗೆ ಸಾಗಿಸುವುದು. ಆದ್ದರಿಂದ ತುಂಗಭದ್ರೆಯ ನೀರಿಗೆ ನಮ್ಮ ಸರಕಾರಕ್ಕೆ ಸ್ವಲ್ಪಮಟ್ಟಿಗೆ ಮೊದಲನೆಯ ಹಕ್ಕು ಇರುವುದು. ಅಣೆಕಟ್ಟನ್ನು ಕಟ್ಟಿದ ಮೇಲೆ ತುಂಗಭದ್ರೆಯ ನೀರನ್ನು ಮೈಸೂರು ದೇಶದಲ್ಲಿ ನಡೆಯುವುದಕ್ಕೆ ಉಪಯೋಗಿಸಿಕೊಳ್ಳುವದಕ್ಕೆ ನಿರ್ಬಂಧವುಂಟಾಗುವುದು. ಆದ್ದರಿಂದ ಈಗಲೇ ಈ ನದಿಯ ನೀರನ್ನು ಮೈಸೂರು ಸರಕಾರವು ಎಷ್ಟರಮಟ್ಟಿಗೆ ಯಾವಾಗಬೇಕಾದರೂ ಉಪಯೋಗಿಸಿಕೊಳ್ಳಬಹುದೆಂಬುದಕ್ಕೆ ಒಂದು ನಿರ್ಧಾರವಾಗುವುದು ಅಗತ್ಯವಾಗಿದೆ. ಆದ್ದರಿಂದ ಈ ತಿಂಗಳಲ್ಲಿ ನಡೆಯುವ ಮಾತುಕತೆಗಳಲ್ಲಿ ಮೈಸೂರು ಸರಕಾರದ ಪ್ರತಿನಿಧಿಗಳೂ ಅಲ್ಲಿಗೆ ಹೋಗುವರು.

ತುಂಗಭದ್ರೆಯು ತುಂಗಾ ಭದ್ರಾ ಎಂಬ ಎರಡು ನದಿಗಳಿಂದ ಕೂಡಿದೆ. ಕಳಸಕ್ಕೆ 15 ಮೈಲುಗಳ ದೂರದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಗಂಗಾಮೂಲವೆಂಬಲ್ಲಿ ಭದ್ರಾನದಿಯು ಹುಟ್ಟಿರುವುದು. ಅದರ ಸಮೀಪದಲ್ಲಿಯೇ ತುಂಗಾನದಿಯೂ ಹುಟ್ಟಿರುವುದು. ಇವೆರಡಕ್ಕೂ ಕೂಡಲಿ ಎಂಬಲ್ಲಿ ಸಂಗಮವಾಗಿ ತುಂಗಭದ್ರೆ ಎಂಬ ಹೆಸರಿನಿಂದ ಹರಿದು ಮೈಸೂರು ದೇಶದ ಆಚೆ ಕೃಷ್ಣಾನದಿಗೆ ಸೇರುವವು. ಭದ್ರಾನದಿಯು ಅನೇಕ ಸಣ್ಣಪುಟ್ಟ ಹೊಳೆಗಳನ್ನು ಸ್ವೀಕರಿಸಿ ಬರುವಾಗ ತರೀಕೆರೆಗೆ 13 ಮೈಲುಗಳ ದೂರದಲ್ಲಿ ಲಕ್ಕವಳ್ಳಿಗ್ರಾಮದ ಹತ್ತಿರ ಅಗಾಧವಾದ ಜಂಗಲಿನಲ್ಲಿ ಐದು ಕೋಟಿ ರೂಪಾಯಿಗಳ ಖರ್ಚಿನಿಂದ ಅಣೆಕಟ್ಟನ್ನು ಹಾಕಬೇಕೆಂದು ಮೈಸೂರು ಸರಕಾರದವರ ಯೋಚನೆಯಲ್ಲಿದೆ. 760 ಚದರಮೈಲುಗಳ ವಿಸ್ತಾರವಾದ ಪರ್ವತಪ್ರಾಂತಗಳ ನೀರು ಈ ಜಲಾಶಯಕ್ಕೆ ಬರುವುದು. ಭದ್ರಾನದಿಗೆ ಅಲ್ಲಲ್ಲಿ ಸಣ್ಣವಾದ 18 ಅಣೆಕಟ್ಟೆಗಳನ್ನು ಹಾಕಿ ವ್ಯವಸಾಯಕ್ಕೆ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.

ಭದ್ರಾ ಅಣೆಕಟ್ಟು ಜಾಗದಲ್ಲಿ ಆಳವಾದ ಮೂರು ಕಣಿವೆಗಳಿವೆ. ಈ ಕಣಿವೆಗಳಿಗೆ ಅಡ್ಡವಾಗಿ 3200 ಅಡಿಗಳ ಉದ್ದವಾದ ಏರಿಯನ್ನು ಹಾಕಿದರೆ 180 ಅಡಿಗಳ ಆಳವಾಗಿ ನೀರು ನಿಲ್ಲುವದೆಂದು ಅಂದಾಜಾಗಿದೆ. ಅಣೆಕಟ್ಟಿನ ತಳಹದಿಯು 218 ಅಡಿ ಅಗಲವಾಗಿಯೂ, ಅದು ನದೀ ತಳಮಟ್ಟದಲ್ಲಿ 156 ಅಡಿ ಅಗಲವಾಗಿಯೂ, ಮೇಲ್ಭಾಗದಲ್ಲಿ 15 ಅಡಿ ಅಗಲವಾಗಿಯೂ ಇದ್ದು ತಳಹದಿಯಿಂದ ತುದಿಯವರೆಗೆ 220 ಅಡಿ ಎತ್ತರವಾಗಿರುವುದು. ಏರಿಯು ಕಟ್ಟಿದವು ಕೃಷ್ಣರಾಜ ಸಾಗರದ ಏರಿಯಂತೆಯೇ ಆಗುವದು. ಆ ಅಣೆಕಟ್ಟಿನಿಂದ ಕಡೂರು, ಶಿವಮೊಗ್ಗ, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಒಟ್ಟಿಗೆ ಎರಡೂವರೆ ಲಕ್ಷ ಎಕರೆಗಳ ವಿಸ್ತಾರವಾದ ಪ್ರದೇಶವು ತರೀ ಸಾಗುವಳಿಗೆ ಬರುವುದು. ಜಲಾಶಯದ ಕಾಲುವೆಗಳಿಂದ ಹೊರಡುವ ನೀರಿನ ರಭಸದಿಂದ 9000 ಅಶ್ವಶಕ್ತಿಗಳ ವಿದ್ಯುತ್ ಶಕ್ತಿಯೂ ಉತ್ಪನ್ನವಾಗುವುದು. ಜಲಾಶಯವು ದಟ್ಟವಾದ ಅರಣ್ಯ ಮಧ್ಯದಲ್ಲಿರುವುದರಿಂದ ನಾಟಗಳನ್ನು ಸಾಗಿಸುವದು ಸುಲಭವಾಗುವುದು.

ಶಾಸ್ತ್ರಿಗಳು ಬೇಕಾಗಿದೆ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿ ತಾ|| 20—11—1933 ನೆಯ ದಿವಸ ಈ ಗ್ರಾಮದ ಸರ್ವಜನ ಸಮ್ಮತಿಯಿಂದ ಸಂಸ್ಕೃತಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಈ ಪಾಠಶಾಲೆಗೆ ವೈದಿಕ, ಜ್ಯೋತಿಷ, ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದೆ. 20 ರೂ. ಗಳಿಂದ 30 ರೂ. ಗಳ ವರೆಗೆ ವೇತನವು ದೊರೆಯುವುದು. ಬರಲಪೇಕ್ಷೆಯುಳ್ಳವರು ಈ ಪಾಠಶಾಲೆಯ ವ್ಯವಸ್ಥಾಪಕರಾದ ಶ್ರೀಮಾನ್ ವೇ|| ಮಿರಾಳಘಟ್ಟದ ಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರ ಹೆಸರಿಗೆ ಡಿಶಂಬರ್ ತಿಂಗಳೊಳಗಾಗಿ ಬರೆದುಕೊಳ್ಳಬೇಕು.

ಚಟ್ರಿಕಿ ಕೊಟ್ರಬಸಪ್ಪ,
ಪಾಠಶಾಲಾ ಸೆಕ್ರೆಟರಿ, ಕೊಟ್ಟೂರು.

ಸಂಗೀತಶ್ರವಣದಿಂದ ಪಶುಗಳು ಹೆಚ್ಚುಹಾಲು ಕರೆಯುವವಂತೆ!

ಅಮೇರಿಕೆಯ ಸಂಯುಕ್ತ ಪ್ರಾಂತಗಳಿಗೆ ಸೇರಿದ ಸೀಟಲ್ ಎಂಬಲ್ಲಿ ಅನೇಕ ಗೋಶಾಲೆಗಳಿದ್ದು ಅಲ್ಲಿರುವ ಗೋವುಗಳಿಗೆ ಹಾಲುಕರೆಯುವಾಗಲೆಲ್ಲಾ ಮನೋಹರವಾದ ಸಂಗೀತಶ್ರವಣವಾಗುತ್ತಿರುವಂತೆ ಮಾಡಿರುವರು. ಇದರಿಂದ ಅಲ್ಲಿಯ ಪಶುಗಳು ಪ್ರಪಂಚದ ಇತರ ಎಲ್ಲ ಪಶುಗಳಿಗಿಂತಲೂ ಹೆಚ್ಚು ಹಾಲು ಕೊಡುವವಂತೆ!

ಸಮುದ್ರತಳದ ಶೋಧನೆ!

ಬಹಳ ಕಾಲದ ಹಿಂದೆ, ಅಂದರೆ ಈ ಭೂಮಿಯ ಮೇಲೆ ಮನುಷ್ಯರು ಹುಟ್ಟುವದಕ್ಕಿಂತಲೂ ಪೂರ್ವದಲ್ಲಿ ಇಂಡಿಯಾ ಮತ್ತು ಆಫ್ರಿಕಾ ಖಂಡಗಳು ಒಂದಾಗಿದ್ದು, ಈಗ ಅರಬ್ಬೀಸಮುದ್ರವೆನಿಸಿರುವ ಪ್ರದೇಶಗಳಲ್ಲಿ 'ಲಾಮೂರಿಯಾ' ಅಥವಾ 'ಗೋಂಡ್ ವಾನಾ' ಎಂಬ ವಿಸ್ತಾರವಾದ ಖಂಡವಿದ್ದಿತಂತೆ! ಈಚೆಗೆ ಆ ಪ್ರದೇಶವು ಸಮುದ್ರದಲ್ಲಿ ಮುಳುಗಿ ಹೋಗಿರುವದೆಂದು ಶಾಸ್ತ್ರಜ್ಞರು ಊಹಿಸಿರುವರು. ಇವರ ಈ ಊಹೆಗೆ ಇಂಡಿಯಾ ಮತ್ತು ಆಫ್ರಿಕಾ ದೇಶಗಳ (ಅರಬ್ಬಿ ಸಮುದ್ರದ) ತೀರಪ್ರದೇಶಗಳಲ್ಲಿ ಒಂದೇ ಜಾತಿಯ ಕೆಲವು ಗಿಡಗಳೂ ಮತ್ತು ಪ್ರಾಣಿಗಳೂ ದೊರೆತಿರುವದೇ ಮುಖ್ಯಕಾರಣವಾಗಿರುವದು. ಪ್ರಸಿದ್ಧ ಸಮುದ್ರಶೋಧಕರಾದ ಗತಿಸಿದ ಸರ್ ಜಾನ್ ಮುರ್ರೇಯವರು ಈ ಕಾರ್ಯಕ್ಕೆ ಒಂದು ದೊಡ್ಡ ನಿಧಿಯನ್ನು ಇಟ್ಟಿರುವರು. ಲೆಫ್ಟನೆಂಟ್ ಕರ್ನಲ್ ಆರ್. ಬಿ. ಸೇಮೂರ್ ಸೊಯಲ್ ಎಂಬವರು ಮುಂದಾಳುಗಳಾಗಿ ನಿಂತು ಈ ಕೆಲಸವನ್ನು ಮುಂದುವರಿಸಿರುವರು. ಈಜಿಪ್ಟ್ ದೇಶದ ದೊರೆಗಳು ಇದಕ್ಕೆ ಅವಶ್ಯಕವಾದ ಸಹಾಯಗಳನ್ನು ಮಾಡುತ್ತಿರುವರು.

ನಾಯಿಗಳ ರಾಜ್ಯ!

ತುರ್ಕಸ್ಥಾನದ ರಾಜಧಾನಿಯಾದ 'ಇಸ್ತಾಂಬೂಲ್' ಅಥವಾ 'ಕಾನ್‌ಸ್ಟಾಂಟಿನೋಪಲ್' ನಗರದಲ್ಲಿ ಸರಕಾರದವರು ಕಳೆದ 15 ವರ್ಷಗಳಿಂದೀಚೆಗೆ ಸುಮಾರು 1,50,000 ನಾಯಿಗಳನ್ನು ನಾಶಮಾಡಿರುವರು. ಇಷ್ಟಾದರೂ ಆ ನಗರದ ಸಂದುಗಳಲ್ಲಿ ಈಗಲೂ ನಾಯಿಗಳು ತಂಡೋಪತಂಡವಾಗಿ ತಿರುಗುತ್ತಾ, ಕತ್ತಲಾದ ಕೂಡಲೇ ನಗರದ ಮಧ್ಯಭಾಗದಲ್ಲಿ ಗುಂಪುಗೂಡುವವು. ಇದರಿಂದ ಅಲ್ಲಿಯ ಅಧಿಕಾರಿಗಳಿಗೆ ಅವುಗಳ ನಾಶಕ್ಕೆ ಏನುಮಾಡಬೇಕೆಂಬುದೇ ತಿಳಿಯದಾಗಿದೆ. ಮೊದಲು ಅವರು ಅವುಗಳ ನಾಶಕ್ಕಾಗಿ ವಿಷಮಿಶ್ರವಾದ ಆಹಾರವನ್ನು ಹಾಕುತ್ತಿದ್ದರು. ಅನಂತರ ನಾಯಿಗಳನ್ನು ಕೊಂದು ಅವುಗಳ ಬಾಲವನ್ನು ತಂದು ತೋರಿಸಿದವರಿಗೆಲ್ಲಾ ಬಹುಮಾನವನ್ನು ಕೊಡುತ್ತಿದ್ದರು. ಇಷ್ಟಾದರೂ ನಾಯಿಗಳ ಸಂಖ್ಯೆಯು ಮಾತ್ರ ಕಡಿಮೆಯಾಗಲಿಲ್ಲ. ಈಗ ಅವುಗಳನ್ನು ವಿಷದ ಗಾಳಿಯಿಂದ ನಾಶಮಾಡಬೇಕೆಂದು ನಿರ್ಧರಿಸಿರುವರು. ಸುಮಾರು 100 ವರ್ಷಗಳ ಹಿಂದೆ ಸುಲ್ತಾನ್ ಅಬ್ದುಲ್ ಮೆದ್‌ಜಿದ್‌ರವರ ಆಳ್ವಿಕೆಯ ಕಾಲದಲ್ಲಿ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿದ್ದ ನಾಯಿಗಳನ್ನೆಲ್ಲಾ ಒಟ್ಟಿಗೆ ಹಿಡಿದು ಮಾರ್ಮೊರಾ ಸಮುದ್ರದ ಮಧ್ಯದಲ್ಲಿರುವ ಎರಡು ದ್ವೀಪಗಳಿಗೆ ಸಾಗಿಸಿದ್ದರು. ಇದರಿಂದ ನಗರದಲ್ಲಿ ಹೊಲಸು ವಿಶೇಷವಾಗಲು, ನಾಯಿಗಳನ್ನು ಪುನಃ ಹಿಡಿದುತರಿಸಿದರು. ಕಾನ್‌ಸ್ಟಾಂಟಿನೋಪಲ್ ನಗರದ ನಾಯಿಗಳು ಸ್ವಾಭಾವಿಕವಾಗಿ ಅತ್ಯಂತ ಕಷ್ಟರವಾಗಿರುವವು. ನಾಯಿಯು ಹೊಲಸು ಪ್ರಾಣಿಯೆಂದು ಕೊರಾನಿನಲ್ಲಿ ಹೇಳಿರುವದರಿಂದ ಅಲ್ಲಿಯ ಜನರಾರೂ ನಾಯಿಗಳನ್ನು ಸಾಕುವದಿಲ್ಲವಾದರೂ, ಈ ಬೀದಿಯ ನಾಯಿಗಳನ್ನು ಅವರು ಸ್ವಾಭಾವಿಕವಾಗಿ ಪ್ರೀತಿಸುವರು. ಹೀಗೆ ಯಜಮಾನರಿಲ್ಲದ ಈ ನಾಯಿಗಳು ಆ ನಗರದಲ್ಲೆಲ್ಲಾ ತಾವೇತಾವಾಗಿ ಕರೆಯಲ್ಪಟ್ಟಿಯಿಲ್ಲದೆ, ಹೆಸರಿಲ್ಲದೆ, ಮನೆಯಿಲ್ಲದೆ ಸ್ವೇಚ್ಛೆಯಾಗಿ ತಿರುಗುತ್ತಿರುವುವು. ಆದರೆ ಅವು ತಮ್ಮಲ್ಲಿ ಒಂದು ಕಾಯಿದೆಯನ್ನು ಮಾಡಿಕೊಂಡಿರುವವು. ಒಂದೊಂದು ಬೀದಿ, ಚೌಕ ಅಥವಾ ಬಯಲಿನಲ್ಲಿ ಒಂದೊಂದು ಗುಂಪು ಇರುವುದು; ಈ ಗುಂಪುಗಳಿಗೆ ಆಗಾಗ್ಗೆ ಜಗಳಗಳಾಗುತ್ತಲೇ ಇರುವವು. ಯಾವುದಾದರೊಂದು ಗುಂಪಿನ ನಾಯಿಯು ಅಕಸ್ಮಾತ್ ಒಂಟಿಯಾಗಿ ಮತ್ತೊಂದು ಗುಂಪಿರುವ ರಸ್ತೆಗೆ ಬಂದರೆ ಸಾಕು, ಆ ರಸ್ತೆಯನ್ನು ಆಕ್ರಮಿಸಿರುವ ನಾಯಿಗಳು ಕ್ಷಣಮಾತ್ರದಲ್ಲಿ ಅದರ ಮೇಲೆ ಬಿದ್ದು ಅದನ್ನು ಹರಿದುತಿಂದುಬಿಡುವುವು!

ಚಿಂತಾಮಣಿಪ್ರಕರಣ.

ಅಹಮದ್ ಷರೀಫ್‌ರ ಸಾಕ್ಷ್ಯ.

ಎಳು ತಿಂಗಳಿಂದ ನಾನು ಹೆಡ್ಮಾಸ್ತರಾಗಿರುತ್ತೇನೆ ನನ್ನ ಮನೆಯು ಮುಂದೆ ರಾಮಸ್ವಾಮಿ ಪಂಡಿತರ ಮನೆಯಿದೆ. ಮಹಾಲಕ್ಷ್ಮಮ್ಮನನ್ನು ಬಲ್ಲೆ. ೨೨-೮-೩೩ ರಲ್ಲಿ ಫುಟ್‌ಬಾಲ್ ಆಡಿ ಮಸೀದಿಗೆ ಹೋದೆ. ಅಲ್ಲಿಂದ ೭|| ಘಂಟೆಗೆ ನನ್ನ ರೂಮಿಗೆ ಬಂದೆ. ಕೊಂಚಹೊತ್ತಿಗೆ ಲೈಟ್ ಕಂಟ್ರಾಕ್ಟರ್ ಬುಡನ್‌ಬೇಗ್ ಬಂದು ನನ್ನನ್ನು ಊಟಮಾಡುವುದಕ್ಕೆ ಕರೆದ. ಅಲ್ಲಿಂದ ಊಟಮಾಡಿ ೫|| ಘಂಟೆಗೆ ರೂಮಿಗೆ ಬಂದೆ. ಮಹಾಲಕ್ಷ್ಮಮ್ಮನು ಟ್ರಂಕು ತೆಗೆದುಕೊಂಡು ನನ್ನ ರೂಮಿಗೆ ಬಂದಳು. ನೀನು ಯಾರು ಎಂತ ಕೇಳಿದೆ. ಬುಡನ್‌ಬೇಗು ಕೇಳಿದ ಇಲ್ಲಿಗೇಕೆ ಬಂದೆ ಅಂತ. ಅದಕ್ಕೆ ಆಕೆ ನಾನು ಮುಸಲ್ಮಾನ್ ಜಾತಿಗೆ ಸೇರಬೇಕು ಅಂತ ಬಂದೆ ಎಂದು ಹೇಳಿದಳು. ಆಕೆ ನನಗೆ ಒಂದು ಕಾಗದ ಬರೆದಿದ್ದಳು. ನಾನು ನಿನ್ನಲ್ಲಿಗೆ ಬಂದುಬಿಡುತ್ತೇನೆ ಎಂತ. ಆಕೆ ಬರುತ್ತಲೂ ನನಗೆ ಭಯವಾಯ್ತು. ನಾನು ಗದರಿಸಿಕೊಂಡೆ. ಅವಳು ಹೊರಟು ಹೋದಳು. ಈಕೆ ನನ್ನಲ್ಲಿಗೆ ಬರುವುದಕ್ಕೆ ೧೮-೧೫ ದಿನ ಮುಂಚೆ ಕಾಗದ ಬರೆದಿದ್ದಳು. ಆ ಕಾಗದ ಬುಡನ್‌ಬೇಗ್ ಹತ್ತಿರವಿರುತ್ತೆ. ಆ ಚೀಟಿಯನ್ನು ರಾಮಸ್ವಾಮಿ ಪಂಡಿತರ ಮಗ ಕೃಷ್ಣಮೂರ್ತಿ ತಂದುಕೊಟ್ಟ. ಕೃಷ್ಣಮೂರ್ತಿಯನ್ನು ಹೇಗೆ ಬಲ್ಲೆನೆಂದರೆ ಅವನು ಆಗಾಗ ನನ್ನಲ್ಲಿ ಇಂಗ್ಲೀಷಿಗೆ ಅರ್ಥ ತಿಳಿದುಕೊಳ್ಳಲು ಬರುತ್ತಿದ್ದ. ಈ ಕೃಷ್ಣಮೂರ್ತಿಯು ನನ್ನ ಅಸಿಸ್ಟೆಂಟ್. ಇನ್ನು ಮೇಲೆ ಇಲ್ಲಿಗೆ ಬಂದರೆ ಕಾಲುಮುರಿದು ಬಿಡುತ್ತೇನೆಂತ ಹೇಳಿದೆ. ಅದು ಈ ಕಾಗದ ತಂದುಕೊಟ್ಟಮೇಲೆ.

ಸ್ಕೂಲಿಗೆ ರಸ್ತೆ ಕಡೆ ಒಂದು ಬಾಗಿಲು. ಸಂದಿಯೊಳಕ್ಕೆ ಒಂದು ಬಾಗಿಲು ಇರುತ್ತೆ. ನನ್ನ ರೂಮಿನ ಪಕ್ಕದಲ್ಲಿ ಕಟ್ಟಿಗೆ ಮಂಡಿ ಇರುತ್ತೆ. ಕಾಗದವನ್ನು ಬುಡನ್‌ಬೇಗ್ ಕೈಗೇಕೆ ಕೊಟ್ಟನೆಂದರೆ ಈ ರೀತಿ ನಡೆಯುವುದಕ್ಕೆ ಅವಕಾಶವಿಲ್ಲದಂತೆ ಬಂದೋಬಸ್ತು ಮಾಡಿ ಬರಲೀ ಎಂತ ಕೊಟ್ಟೆ.

ಪಾಟೀಸವಾಲು.

ನನಗೆ ಕನ್ನಡ ಚೆನ್ನಾಗಿ ಗೊತ್ತಾಗುವುದಿಲ್ಲ. ಸ್ವಲ್ಪ ಸ್ವಲ್ಪ ತಿಳಿಯುತ್ತೆ. ಉರ್ದು ಚೆನ್ನಾಗಿ ತಿಳಿಯುವುದು. ಇಂಗ್ಲೀಷು ಅಷ್ಟು ತಿಳಿಯದು. ಅರ್ಥ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ.

ಪ್ರ—'ಅನಾಥರನ್ನು ರಕ್ಷಿಸಬೇಕು ಎಂದು ಪ್ರಾರ್ಥಿಸುತ್ತೇನೆ' ಎಂತ ಬರೆದಿದ್ದಳಲ್ಲ ನಿನ್ನನ್ನು ಯಾಕೆ ಹಾಗೆ ಪ್ರಾರ್ಥಿಸಿದಳು?

ಉ—ನನಗೆ ಅದರ ಅರ್ಥ ಗೊತ್ತಿಲ್ಲ.

ಪ್ರ—ನೀವು ಅವಳಿಗೆ ಪ್ರೋತ್ಸಾಹವನ್ನಿತ್ತಿರಾ?

ಉ—ಇಲ್ಲ.

ಪ್ರ—'ನಿಮ್ಮ ಕೆಲಸ ಕೈಗೂಡುವುದು' ಎಂದರೆ ಅರ್ಥವೇನು?

ಉ—ನನಗೆ ಗೊತ್ತಿಲ್ಲ.

ಪ್ರ—'ಸಕಲವೂ ತಿಳಿದಂಥವರಿಗೆ ಬರೆಯಲು ಶಕ್ತಿಸಾಲದು' ಅಂದರೇನು ಅರ್ಥ?

ಉ—ನನಗೆ ಗೊತ್ತಿಲ್ಲ. ನನಗೆ ಆಕೆಯ ವಿಷಯವೇ ತಿಳಿಯದು.

ಪ್ರ—೫-೮-೩೩ ಶುಕ್ರವಾರವೋ?

ಉ—ಅಲ್ಲ, ಶನಿವಾರ.

ಪ್ರ—ಕಾಗದದಲ್ಲಿ ತಾರೀಕು ೬-೮-೩೩ ಅಂತ ಇದೆಯಲ್ಲವೆ?

ಉ—ಹೌದು.

ಮುಂದೆಂಸುತ್ತಾ ಅವನು ಹೇಳಿದ್ದೇನೆಂದರೆ—'ನಾನು, ಹಿಂದೂಸ್ತಾನಿ ಮತಕ್ಕೆ ಸೇರಬೇಕು ಎಂತ ಹೇಳಿದಳು. ನಾನು ಉರ್ದುವಿನಲ್ಲೇ ಮಾತನಾಡಿಸಿ ಗದರಿಸಿಬಿಟ್ಟೆ. ಅವಳು ಗಲಾಟೆ ಮಾಡದೆ ಹೊರಟುಹೋದಳು.

ಮುರ್‌ಟೋಜಾ ಷರೀಫನ ಸಾಕ್ಷ್ಯ.

(ಜಮೀನ್‌ದಾರ್ ಚಿಂತಾಮಣಿ)

ಪ್ರ—ಮಹಾಲಕ್ಷ್ಮಮ್ಮನನ್ನು ಮೊದಲು ಎಲ್ಲಿ ನೋಡಿದಿರಿ?

ಉ—೨೨-೮-೩೩ ರಲ್ಲಿ ರಸ್ತೆ ಬಳಿ ನೋಡಿದೆ. ನಾನು ಅಲ್ಲಿಗೆ ೭|| ಗಂಟೆಗೆ ಹೋದೆ. ಅಲ್ಲಿ ಹುಡುಗಿ ಒಂದು ಟ್ರಂಕು ಇಟ್ಟುಕೊಂಡು ಕೂತಿದ್ದಳು. ಅಲ್ಲಿ ಬಹಳ ಜನರಿದ್ದರು. ನಾನು ಅಲ್ಲಿಂದ ಮಸೀದಿಗೆ ಹೋದೆ. ಅಲ್ಲಿ ಹುಡುಗಿಯ ವಿಷಯವಾಗಿ ಮಾತನಾಡಿಕೊಳ್ಳುತ್ತಿದ್ದರು. ನಮಾಜು ಆದಮೇಲೆ ಜನರೆಲ್ಲರೂ ಹೊರಗೆ ಬಂದರು. ಖಾಜಿಯೂ ಹೊರಗೆ ಬಂದರು. ನಾನು ನಿಕಾ ಆದಾಗ ಇದ್ದೆ. ಸೇಟ್‌ಸಾಬಿ ಮನೆಯಲ್ಲಿ ರಾತ್ರಿ ೧೧ ಗಂಟೆಯಲ್ಲಿ ನಿಕಾ ಆಯ್ತು. ಮೌಜಮ್‌ಸಾಬ್ (೩ ನೇ ಅಪರಾಧಿ) ಹುಡುಗಿಯನ್ನು 'ನೀನೇ ರಾಜಿಯಿಂದ ನಮ್ಮ ಮತಕ್ಕೆ ಸೇರಿಕೊಂಡಿಯಾ' ಎಂದು ಕೇಳಿದರು. ಹೌದು ಎಂದು ಹೇಳಿದಳು. ನಿಕಾ ಮಾಡಿದ ಮೇಲೆ ನಿಕಾ ಪಟ್ಟಿಯನ್ನು ಬರೆದು ಅದಕ್ಕೆ ಸಂಬಂಧಪಟ್ಟವರೆಲ್ಲರ ರುಜುಗಳನ್ನು ತೆಗೆದುಕೊಳ್ಳಲಾಯಿತು.

ಪಾಟೀಸವಾಲು.

ನಿಕಾ ಸುಮಾರು ೧೦ ಗಂಟೆಗೆ ಪ್ರಾರಂಭವಾಯಿತು. ನಿಕಾ ಯಾವಾಗ ಬೇಕಾದರೂ ಆಗಬಹುದು. ಅದಕ್ಕೆ ಇಂಥಾ ಕಾಲವೆಂದು ನಿಯಮವಿಲ್ಲ. ಹುಡುಗಿ ನಿಕಾ ಆಗುವಾಗ ಬಂದು ಅಸೇ ಮೇಲೆ ಕೂಡುವುದಿಲ್ಲ. ಮುಸಲ್ಮಾನರಿಗೆ ಘೋಷಾ ಉಂಟು. ನಿಕಾ ಮಾಡುವಾಗ ವಕೀಲ್ ಎಂಬುವನು ಹುಡುಗಿಯ ಸಮ್ಮತಿ ಇದೆಯೋ ಇಲ್ಲವೋ ಎಂತ ಹುಡುಗಿಯನ್ನು ಕೇಳಬೇಕು. ನಿಕಾ ಆಗುವಾಗ ೧೦-೧೫ ಜನರು ಮತ್ತು ಧಿಯರು ೧೦-೧೫ ಜನ

ಹಿಂದೂಗಳೂ ಇದ್ದರು. ನಿಕಾಕ್ಕೆ ಬರಬೇಕೆಂದು ನನ್ನನ್ನು ಸುಮಾರು ೧೦ ಗಂಟೆಯಲ್ಲಿ ಕರೆದರು. ರಸ್ತೆ ಪಕ್ಕದಲ್ಲಿ ಅಂಗಡಿಗಳಿವೆ. ಟೋಲ್‌ಗೇಟ್ ಅಲ್ಲಿಯೇ ಇದೆ. ನಿಕಾಕ್ಕೆ ನಾನು ಸಾಕ್ಷಿಯಲ್ಲ. ಹಿಂದೆ ನಡೆದ ರೈಟಿಂಗ್ ಕೇಸಿನಲ್ಲಿ ಅಪರಾಧಿಗಳ ಪರ ಸಾಕ್ಷಿಯಾಗಲಿಲ್ಲ.

ಪುನಃ ಪ್ರಶ್ನೆ.

ಬೇರೆ ಜಾತಿಯವರು ನಮ್ಮ ಜಾತಿಗೆ ಸೇರಿದರೆ ನಿಕಾ ಆಗುವ ಸಮಯದಲ್ಲಿ ಘೋಷಾ ಇಲ್ಲ.

ವಕೀಲ್ ಮತ್ತು ಮೌಲ್ವಿ ಇಬ್ಬರೂ ಒಬ್ಬರೇ ಆಗಬಹುದು. ಈ ರೀತಿ ಯಾವ ನಿಕಾ ನಡೆಯಿತೋ ನನಗೆ ಜ್ಞಾಪಕವಿಲ್ಲ.

ಡಾ|| ಮಿಸ್. ಕ್ಯಾಪ್ಟನ್ನರ ಹೇಳಿಕೆ.

ಪ್ರ—ದಯವಿಟ್ಟು ಕೋಲಾರದ ಲೇಡಿ ಡಾಕ್ಟರರಾದ ಮಿಸೆಸ್. ವೆಲ್ಸ್‌ರ ಹೇಳಿಕೆಯನ್ನು ಓದಿರಿ?

ಉ—ನಾನು ಅದನ್ನು ಓದಿದ್ದೇನೆ. ಪುನಃ ಓದಬೇಕಾದ ಅವಶ್ಯಕವಿಲ್ಲ.

ಕೋರ್ಟು—ನೀವು ಮಿಸೆಸ್. ವೆಲ್ಸ್‌ರವರ ಅಭಿಪ್ರಾಯವನ್ನು ಸಮರ್ಥಿಸುವಿರಾ?

ಉ—ಹೌದು ಅದನ್ನು ಸಮರ್ಥಿಸುತ್ತೇನೆ.

ಪ್ರ—ಅವರ ಹೇಳಿಕೆಯನ್ನು ವ್ಯತಿರೇಕಿಸುವಿರಾ?

ಉ—ಮಿಸೆಸ್. ವೆಲ್ಸ್‌ರವರು ಹುಡುಗಿಗೆ ೧೬ ವರ್ಷ ವಯಸ್ಸೆಂದು ಹೇಳಿರುವರು. ಅವಳಿಗೆ ೧೬ ವರ್ಷವೆಂದು ಹೇಳುವುದಕ್ಕಾಗುವದಿಲ್ಲ.

ಪ್ರ—ಎಕ್ಸ್‌ರೇ ಪರೀಕ್ಷೆಯಿಂದ ಹುಡುಗಿಯ ನಿಜವಯಸ್ಸು ಗೊತ್ತಾಗುವುದಿಲ್ಲವೆಂದು ನೀವು ಹೇಳಬಲ್ಲಿರಾ?

ಉ—ನಾನು ಹೇಳಬಲ್ಲೆ.

ಪ್ರಾಸಿಕ್ಯೂಷನ್ನವರ ಪರೀಕ್ಷೆ.

ಪ್ರಾಸಿಕ್ಯೂಷನ್ನವರ ಪ್ರಶ್ನೆಗಳಿಗೆ ಉತ್ತರವಾಗಿ ಹೇಳಿದ್ದೇನೆಂದರೆ—ನಾನು ಲಂಡನ್ ವಿಶ್ವವಿದ್ಯಾನಿಲಯದ ಎಂ. ಬಿ. ಎಸ್. ಮತ್ತು ಡಿ.ಬಿ.ಎಂ.ಹೆಚ್ ಪರೀಕ್ಷೆಗಳಲ್ಲಿ ಉತ್ತೀರ್ಣಳಾಗಿದ್ದೇನೆ. ಮೈಸೂರು ಮೆಡಿಕಲ್ ಕಾಲೇಜಿನ ಅಧ್ಯಾಪಕಳಾಗಿದ್ದೇನೆ. ಸಾಮಾನ್ಯ ಮೂಳೆಗಳ ವಿಚಾರವಾಗಿ ಡಾ|| ಇಸಿಡೋರವರು ಸೂಚಿಸಿರುವ ಅಭಿಪ್ರಾಯಗಳನ್ನು ಅರಿತಿದ್ದೇನೆ.

ಪ್ರ—ಬದಲಾವಣೆಗಳು ಬೇರೆಬೇರೆ ವ್ಯಕ್ತಿಗಳಲ್ಲಿ ಬೇರೆಬೇರೆಯಾಗುವುವೇ?

ಉ—ಹೌದು.

ಪ್ರ—ಆದರೆ ಎಕ್ಸ್‌ರೇ ಪರೀಕ್ಷೆಯಿಂದ ವಯಸ್ಸನ್ನು ಗುರ್ತಿಸಲು ಸಾಧ್ಯವಿಲ್ಲವೆಂದು ಹೇಳುವಿರಾ?

ಉ—ಹೌದು ಅದು ಸರಿಯಾದ ಪರೀಕ್ಷೆಯಲ್ಲವೆಂದು ನಿರ್ಧರವಾಗಿ ಹೇಳಬಲ್ಲೆ. ಸರಿಯಾದ ವಯಸ್ಸನ್ನು ಗುರ್ತಿಸಲು ವೈದ್ಯಶಾಸ್ತ್ರದಲ್ಲಿ ಯಾವ ವಿಧಾನವೂ ಇಲ್ಲ. ಮೈನರ್ ಹುಡುಗಿಯ ನಿರ್ದಿಷ್ಟ ವಯಸ್ಸನ್ನು ಗೊತ್ತುಮಾಡುವುದು ವೈದ್ಯರಿಗೆ ಅತಿಕಷ್ಟ. ಒಂದೆರಡು ವರ್ಷಗಳು ಹೆಚ್ಚು ಕಡಿಮೆಯಾಗಬಹುದು. ಈ ವಿಷಯದಲ್ಲಿ ನಾವು ಯಾವಾಗಲೂ ರೋಟುಂಡಾಲಜೀ ಪುಸ್ತಕದ ವಿವರಗಳಮೇಲೆ ಆಧಾರವಾಗಿದ್ದೇವೆ.

ಸೈದ್ ಅಹಮ್ಮದ್ ಸಾಕ್ಷ್ಯ.

(ಮ್ಯುನಿಸಿಪಲ್ ಕೌನ್ಸಿಲರ್, ಚಿಂತಾಮಣಿ).

ನಾನು ಚಿಂತಾಮಣಿಯ ಮುನಿಸಿಪಲ್ ಮೆಂಬರು ೨೮-೮-೩೩ ರಲ್ಲಿ ಮುಸ್ತಫಾ ಸಾಹೇಬರು ನನ್ನ ಮನೆಗೆ ಬಂದಿದ್ದರು. ಅವರು ಡೆಪ್ಯುಟಿ ಕಮಿಷನರ್ ಹುಡುಗಿಯನ್ನು ನೋಡಲು ಬರುತ್ತಾರೆ, ನಿನ್ನ ರೂಮನ್ನು ಬಿಟ್ಟುಕೊಡಬೇಕೆಂದು ಹೇಳಿದರು. ಹುಡುಗಿಯನ್ನು ಸೇಟ್‌ಸಾಬಿ ಚಿಕ್ಕಮಗ ಕರೆದುಕೊಂಡು ನನ್ನ ಮನೆಗೆ ಬಂದರು. ನನ್ನ ಮನೆಗೆ ಮುಸ್ತಫಾ ಸಾಹೇಬರೊಬ್ಬರಲ್ಲದೆ ಬೇರೆ ಯಾರೂ ಬರಲಿಲ್ಲ. ಡಿ.ಎಸ್.ಪಿ.ಯವರೂ ಬಂದು ನೋಡಿಕೊಂಡು ಹೋದರು.

ಪಾಟೀಸವಾಲು.

ನಾನು ಸೇಟ್‌ಸಾಬಿ ಮನೆಯನ್ನು ಬಲ್ಲೆ. ನನ್ನ ಮನೆ ಸೇಟುಸಾಬಿ ಮನೆಯಿಂದ ೨ ಫರ್ಲಾಂಗ್ ದೂರದಲ್ಲಿದೆ. ನಾನೂ ಮುಸ್ತಫಾ ಸಾಹೇಬರು ಹುಡುಗಿ ಬರುವುದಕ್ಕೆ ಮುಂಚೆ ನಮ್ಮ ಮನೆಯ ಮುಂದುಗಡೆ ನಿಂತಿದ್ದೆವು. ಹುಡುಗಿಯನ್ನು ನನ್ನ ಭಾವಮೈದ ಕರೆದುಕೊಂಡು ಬರಲು ಹೋಗಿದ್ದ. ಚಿಂತಾಮಣಿಯಲ್ಲಿ ಆ ದಿನ ಗಲಾಟೆಯಾದದ್ದು ಗೊತ್ತಿಲ್ಲ. ಹಿಂದೂಗಳ ಮೀಟಿಂಗು ನಡೆಯಿತೆಂದು ಕೇಳಿದೆ ನನಗೆ ಹಿಂದೂಗಳು ಮತ್ತು ಮುಸಲ್ಮಾನರು ಓಟರುಗಳಿದ್ದಾರೆ. ಹೆಚ್ಚು ಓಟರುಗಳು ಯಾವ ಮತಸ್ಥರು ಎಂದು ಹೇಳಲಾರೆ.

ಕೋರ್ಟು—ಹುಡುಗಿ ಮುಸ್ತಫಾಸಾಹೇಬರವರಿಗೆ ತನ್ನ ವಿಷಯವನ್ನೆಲ್ಲಾ ಹೇಳಿದಳಲ್ಲ ಆಗ ನೀವು ಅಲ್ಲಿದ್ದಿರಾ?

ಉ—ಒಳಗೆ ಹೋಗಿ ಬರುತ್ತಿದ್ದೆ.

ನರಸಪ್ಪನ ಸಾಕ್ಷ್ಯ.

(ಗಾರೆ ಕೆಲಸದವ ಚಿಂತಾಮಣಿ).

ನಾನು ಹುಡುಗಿಯನ್ನು ಬಲ್ಲೆ. ಸುಮಾರು ೨|| ತಿಂಗಳೊಳಗೆ ಶಿಡ್ಲಘಟ್ಟಕ್ಕೆ ಹೋಗುವ ರಸ್ತೆಯಲ್ಲಿ ಹುಡುಗಿಯನ್ನು ನೋಡಿದೆ. ನಾನು ಗಾರೆ ಕೆಲಸಕ್ಕೆ ಹೋಗಿದ್ದು ವಾಪಸು ಬರುತ್ತಿದ್ದೆ. ಆಗ ಸುಮಾರು ಊಟದ ಹೊತ್ತಾಗಿರಬಹುದು. ಅಲ್ಲಿ ಬಹಳ ಜನ ಹಿಂದೂಗಳು ಮತ್ತು ಮುಸಲ್ಮಾನರೂ ಇದ್ದರು. ಹುಡುಗಿ ಯಾರಾದರೂ ನನ್ನನ್ನು ನಿಕಾಮಾಡಿಕೊಳ್ಳುವವರಿದ್ದರೆ ನಿಕಾ

ಮಾಡಿಕೊಳ್ಳುತ್ತೇನೆಂತ ಹೇಳುತ್ತಿದ್ದಳು. ನಾನು ಹೊರಟು ಹೋದೆ.

ಪಾಟೀಸವಾಲು.

ನಾನು ಕೆಂಪಯ್ಯನ ಮನೆಯಲ್ಲಿ ಬಾಡಿಗೆಗೆ ಇರುತ್ತೇನೆ. ನಾನು ಮಹಾಲಕ್ಷ್ಮಮ್ಮನ ಸಂಗಡ ಮಾತನಾಡಲಿಲ್ಲ. ಅಲ್ಲಿ ಜನರು ಹುಡುಗಿ ಮುಸಲ್ಮಾನ್ ಮತಕ್ಕೆ ಸೇರುತ್ತಾಳಂತೆ ಅಂದುಕೊಳ್ಳುತ್ತಿದ್ದರು. ಯಾರು ನನಗೆ ಹೇಳಿದರೋ ಜ್ಞಾಪಕವಿಲ್ಲ. ಇದನ್ನು ಕೇಳಿ ಬಿಟ್ಟು ನಾನು ಸುಮ್ಮನೆ ಹೊರಟುಹೋದೆ. ನನಗೆ ಊರಲ್ಲಿ ಒಂದು ಮನೆ ಇದೆ. ಅದು ಸಾಲದ್ದರಿಂದ ಕೆಂಪಯ್ಯನ ಜಮೀನಿನಲ್ಲಿ ಗುಡಿಸಲು ಹಾಕಿ ಬಾಡಿಗೆ ಕೊಟ್ಟುಕೊಂಡು ವಾಸಮಾಡುತ್ತಿರುತ್ತೇನೆ. ಆ ಜಮೀನು ಕೆಂಪಯ್ಯನಿಗೇ ಸೇರಿದ್ದು. ಅದರಲ್ಲಿ ದಸ್ತಗಿರಿಸಾಬಿಗಾಗಲಿ, ಬಾಬಾಸಾಬಿಗಾಗಲೀ ಹಕ್ಕಿಲ್ಲ.

ಅಬ್ದುಲ್‌ಘನಿ ಸಾಕ್ಷ್ಯ.

(ಚಿಂತಾಮಣಿ)

ನಾನು ಕೋರ್ಲ್ಪಟ್ಟಿ ಸಂತೆಗೆ ಹೋಗುತ್ತೇನೆ. ಅದು ಬುಧವಾರ ನಡೆಯುವುದು ಗೌರಿ ಹಬ್ಬಕ್ಕೆ ಮುಂಚಿನ ದಿನ ಬುಧವಾರ ಸಂತೆಗೆ ಹೋಗಿದ್ದೆ. ಆದಿನ ಗಾಡಿಯಲ್ಲಿ ಸೇಟುಸಾಬಿ ಸಲಾಂ ಮತ್ತು ಸಿದ್ದಪ್ಪ ಹೋದೆವು. ಗಾಂಜಕುಂಟೆಯ ಹತ್ತಿರ ಗಾಡಿ ನಿಂತು ಬಿಟ್ಟಿತು. ಆ ಮೇಲೆ ನಡೆದು ಹೋದೆವು. ಅಲ್ಲಿ ಕೆಲಸ ಮುಗಿಸಿಕೊಂಡು ಪುನಃ ಎಲ್ಲರೂ ಅದೇ ಜಟಕಾದಲ್ಲಿಯೇ ವಾಪ್ಸು ಬಂದೆವು. ಟೋಲ್‌ಗೇಟ್ ಹತ್ತಿರ ಬಾಬಾಸಾಬ್ ಹುಸೇನ್‌ಸಾಬ್ ಒಂದು ಗಾಡಿಯನ್ನು ತಡೆದರು. ನಾವುಗಳು ಗಾಡಿಯಿಂದ ಇಳಿದೆವು. ಅಲ್ಲಿ ಬಹಳ ಜನ ಹಿಂದೂಗಳೂ ಮತ್ತು ಮುಸಲ್ಮಾನರೂ ಇದ್ದರು. ಅಲ್ಲಿದ್ದವರು ಒಬ್ಬ ಬ್ರಾಹ್ಮಣರ ಹುಡುಗಿ ಮುಸಲ್ಮಾನ್ ಆಗಿದ್ದಾಳೆ ಎಂತ ಹೇಳಿದರು. ಸೇಟುಸಾಬಿ ನಮಾಜಿಗೆ ಹೊತ್ತಾಯಿತು ಎಂತ ಹೇಳಿ ಹೊರಟುಹೋದ. ಸಲಾಂನನ್ನ ಹುಡುಗಿಗೆ ತೋರಿಸಲು ಅವಳು ಅವನನ್ನ ಮದುವೆಯಾಗಲು ಒಪ್ಪಿದಳು. ಆದರೆ ಸಲಾಂನು ನನ್ನ ದೊಡ್ಡವರನ್ನು ಕೇಳಬೇಕು ಎಂತ ಹೇಳಿದ ನಾನೂ ಸಲಾಂನು ಹೊರಟುಹೋದೆವು.

ಪಾಟೀಸವಾಲು.

ನಾವು ಸಂತೆಯಿಂದ ೯|| ಗಂಟೆ ರಾತ್ರಿಗೆ ಟೋಲ್‌ಗೇಟ್ ಬಳಿ ಬಂದೆವು. ಸಂತೆಯಿಂದ ೬ ಗಂಟೆಗೆ ಹೊರಟೆವು. ಗಂಜಿಕುಂಟೆಗೂ ಕೋರ್ಲಪಟ್ಟಿಗೂ ೫ ಮೈಲಿ ದೂರವಿದೆ. ಗಾಡಿಯಲ್ಲಿದ್ದ ಹಿಂದುವೂ ಟೋಲ್‌ಗೇಟ್ ಬಳಿ ಇಳಿದ. ಆ ಮೇಲೆ ಎಲ್ಲಿ ಹೋದನೋ ತಿಳಿಯದು. ಸೇಟುಸಾಬಿ ಮನೆಗೆ ನಡೆದುಕೊಂಡೇ ಹೋದ. ವೆಂಕಟಗಿರಿಕೋಟೆ ಟೋಲ್‌ಗೇಟಿನಿಂದ ಮುಕ್ಕಾಲು ಮೈಲಿ ದೂರದಲ್ಲಿದೆ. ಟೋಲ್‌ಗೇಟಿನಿಂದ ಸೇಟ್‌ಸಾಬಿ ಮನೆಗೆ ೧|| ಫರ್ಲಾಂಗ್ ಇದೆ. ನಾವು ಹೊರಟುಹೋದಾಗ ಜನರೆಲ್ಲಾ ಅಲ್ಲಿಯೇ ಇದ್ದರು. ೪-೫ ತಿಂಗಳಿಂದ ಕೋರ್ಲಪಟ್ಟಿ ಸಂತೆ ಕಂಟ್ರಾಕ್ಟು ಸೇಟುಸಾಬಿ ತೆಗೆದುಕೊಂಡಿರುತ್ತಾನೆ.

ಷೇಕ್ ಫರೀದ್ ಸಾಕ್ಷ್ಯ.

(ಚಿಂತಾಮಣಿ).

ನನ್ನ ಗಾಡಿಯಲ್ಲಿ ಕೋರ್ಲಪಟ್ಟಿ ಸಂತೆಗೆ ಸೇಟುಸಾಬಿ ಸಲಾಂ ಸಿದ್ದಪ್ಪ ಇವರನ್ನು ಕೂಡಿಸಿಕೊಂಡು ಹೋಗಿದ್ದೆ. ವಾಪಸು ೯ ಗಂಟೆಗೆ ಸಂತೆಯಿಂದ ಬಂದೆವು. ಟೋಲ್‌ಗೇಟ್ ಬಳಿ ಗಾಡಿಯನ್ನು ನಿಲ್ಲಿಸಿದರು. ಗಾಡಿಯಲ್ಲಿದ್ದವರು ಇಳಿದುಬಿಟ್ಟರು. ನಾನು ಜಟಕಾ ತೆಗೆದುಕೊಂಡು ಹೊರಟುಹೋದೆ.

ಪಾಟೀಸವಾಲು.

ನಾನು ಅಲ್ಲಿ ನಿಲ್ಲಲಿಲ್ಲ. ಸಿದ್ದಪ್ಪ ನನ್ನ ಗಾಡಿಯಲ್ಲಿ ಯಾವ ಸಾಮಾನನ್ನೂ ತರಲಿಲ್ಲ. ಟಿಕೆಟ್ ಬುಕ್ಕುಗಳನ್ನು ಜೇಬಿನಲ್ಲಿಟ್ಟುಕೊಂಡುಹೋದರು. ಸೇಟುಸಾಬಿ ಸಲಾಂ ಯವರು ಬರುವಾಗ ಅದನ್ನು ವಾಪಸು ತಂದರೋ ಇಲ್ಲವೋ ಗೊತ್ತಿಲ್ಲ. ಆಗ ಆಗಾಗಲು, ಅನೇಕಾವರ್ತಿ ಸೇಟುಸಾಬಿಯನ್ನು ನನ್ನ ಗಾಡಿಯಲ್ಲಿ ಸಂತೆಗೆ ಕರೆದುಕೊಂಡು ಹೋಗಿದ್ದೇನೆ. ಚಿಂತಾಮಣಿಯ ಮಸೀದಿಗೆ ಸೇಟುಸಾಬಿ ಮುಖಂಡನೋ ಅಲ್ಲವೋ ಹೇಳಲಾರೆ.

ಬಾಬಾಸಾಬಿಯ ಪಾಟೀಸವಾಲ್.

ನಾನೂ ಸೇಟುಸಾಬಿ ಮತ್ತು ಸಲಾಂ ಮೂವರೂ ಹೋದ ವರ್ಷ ನಡೆದ ಶಿಡ್ಲಘಟ್ಟದ ರೈಟಿಂಗ್ ಕೇಸಿನಲ್ಲಿ ಅಪರಾಧಿಗಳು. ನನ್ನ ಹೆಸರಿನಲ್ಲಿ ಜಮೀನುಗಳೂ ಯಾವದೂ ಇಲ್ಲ. ಟೋಲ್‌ಗೇಟ್ ಹತ್ತಿರ ಮನೆಗಳಿವೆ. ಟೋಲ್‌ಗೇಟ್ ಬಳಿ ೩.೪ ಮುಸಲ್ಮಾನರೂ, ೩೦-೪೦ ಹಿಂದೂಗಳೂ ಮತ್ತು ೭-೮ ಜನ ಹೆಂಗಸರೂ ಸೇರಿದ್ದರು. ಮುಸಲ್ಮಾನರು ಅಲ್ಲಿ ಗುಂಪು ಸೇರಲಿಲ್ಲ. ಅಲ್ಲಿ ಹಿಂದೂಗಳ ಪೈಕಿ, ಮುನಿಶಾಮಿ, ತೈಲಗಿರಿ ಸೊಣ್ಣಕ್ಕ ಕೆಂಪಣ್ಣ ನೊಲಾದವರು ಇದ್ದರು, ನಾನೂ ಅಲ್ಲಿಯೇ ಇದ್ದೆ. ನಾನು ಯಾರಿಗೂ ಈ ವಿಷಯವನ್ನು ಹೇಳಲಿಲ್ಲ. ಪೋಲೀಸಿನವರಿಗೂ ಹೇಳಲಿಲ್ಲ. ಅಲ್ಲಿ ಬಂದವರಿಗೂ ಈ ಹುಡುಗಿಯ ತಂದೆಗೆ ವಿಷಯವನ್ನು ತಿಳಿಸುವಂತೆ ಹೇಳಲಿಲ್ಲ. ನಮ್ಮಲ್ಲಿ ೫ ಜನ ಮುಸಲ್ಮಾನರು ಇದ್ದಾರೆ 'ನಿಕಾ' ನಡಿಯಬಹುದು ಖಾಜಿಯನ್ನು ಕರೆದುಕೊಂಡು ಹೋಗಬೇಕೆಂತ ಯಾರೂ ಯೋಚಿಸಲಿಲ್ಲ. ಸೇಟುಸಾಬಿಯನ್ನ ೧೦|| ಗಂಟೆಯಲ್ಲಿ ನಿಕಾ ಸ್ಥಳಕ್ಕೆ ಕರೆದುಕೊಂಡು ಬಂದೆವು. ಆಕೆಗೆ ಸೈದ್ ಹುಸೇನ್ ಬುಡನ್‌ಸೇಟ್ ಇಬ್ಬರು ಹುಡುಗರನ್ನು ತೋರಿಸಿದೆ. ಮದುವೆ ಮಾಡಿಕೊಳ್ಳುತ್ತೀಯಾ ಆಕೆ ಒಪ್ಪಲಿಲ್ಲ. ಆಮೇಲೆ ಸಲಾಂನನ್ನು ತೋರಿಸಿದೆ. ಹುಡುಗಿ ಮದುವೇ ಈಗಲೇ ಆಗಬೇಕೆಂತ ಮುಷ್ಕರ ಹಿಡಿದಳು. ಅದ್ದರಿಂದ ಆ ರಾತ್ರಿಯೇ ಮದುವೆಮಾಡಿದೆವು. ರಾತ್ರಿ ೧

ಯಲ್ಲಿ ಎಷ್ಟೋ ನಿಕಾಗಳು ಆಗಿವೆ. ಆದರೆ ಇಂಥಾದ್ದೇ ಎಂತ ಹೇಳಲಾರೆ. ಮದುವೆ ಸಮಯದಲ್ಲಿ ಪೆಟ್ರೋಮ್ಯಾಕ್ಸ್ ಲೈಟ್ ಹಾಕಿತ್ತು. ಶಿಡ್ಲಘಟ್ಟದ ಕೇಸಿನಲ್ಲಿ ಕೇಪಣ್ಣನನ್ನು ನ್ಯಾಯ ಪಡೆದರು. ಸಾಕ್ಷಿಯಾಗಿ ಬಂದಿದ್ದ ... ನನಗೆ ...

... ಮಾಡಿದರೂ ಇದಕ್ಕಿಂತಲೂ ಹೆಚ್ಚು ವೇಗದಲ್ಲಿ ಹೋದಾಗ ಈ ಬಹುಮಾನವು ಅವರಿಗೆ ಕೊಡಲ್ಪಡುವದು. ಕಡೆಯಲ್ಲಿ ಗಂಟೆಗೆ 625 ಮೈಲುಗಳ ವೇಗದಲ್ಲಿ ಯಾರು ಅರ್ಧಘಂಟೆಗಳ ಕಾಲ ಏರೋಪ್ಲೇನನ್ನು ಹಾರಿಸುವರೋ ಅವರಿಗೆ ಈ ಬಹುಮಾನದ ಬಟ್ಟಲು ಶಾಶ್ವತವಾಗಿ ಕೊಡಲ್ಪಡುವದಂತೆ!

ನೂತಿ ಹುಣ್ಣಿಗಾಗಿ ಹಾವಿನವಿಷ.

ಪ್ಯಾರಿಸ್ಸಿನಲ್ಲಿರುವ ಪಾಶ್ಚರ್ ಇನ್‌ಸ್ಟಿಟ್ಯೂಟಿನ ಮಿ|| ರಾಬರ್ಟ್ ಹೆಮಾರ್ಡಿಂಪರ್ ಎಂಬ ಫ್ರೆಂಚ್ ವೈಜ್ಞಾನಿಕರು, ಕ್ಯಾನ್ಸರ್ (ನೂತಿ) ವ್ರಣಕ್ಕೆ ಸರ್ಪದ ವಿಷವು ಸರ್ವೋತ್ತಮ ಗುಣಕಾರಿಯೆಂದು ನಿರ್ಧರಿಸಿರುವರು. ಅದಕ್ಕಾಗಿ ಅವರು ಸುಮಾರು ಎರಡು ಪೌಂಡುಗಳಷ್ಟು ಸರ್ಪದ ವಿಷವನ್ನು ಶೇಖರಿಸಬೇಕೆಂದು ಮುಂಬಯಿಗೆ ಬಂದಿರುವರು. ಈಗಾಗಲೇ ಅವರು ಸರ್ಪಗಳನ್ನು ಸಂಗ್ರಹಿಸುವದಕ್ಕಾಗಿ ತಮ್ಮ ಪ್ರತಿನಿಧಿಗಳನ್ನು ಭರತಖಂಡದ ನಾನಾಭಾಗಗಳಿಗೆ ಕಳುಹಿಸಿರುವರಲ್ಲದೆ, ಮುಂಬಯಿಯ ಹಾಫ್‌ಕಿನ್ ಇನ್‌ಸ್ಟಿಟ್ಯೂಟಿನಲ್ಲಿ ಒಂದು ಸರ್ಪಸಂಗ್ರಹಾಲಯವನ್ನು ತೆರೆದಿರುತ್ತಾರೆ. 2 ಪೌಂಡ್ ವಿಷವನ್ನು ಶೇಖರಿಸಲು ಸುಮಾರು 5000 ಸರ್ಪಗಳು ಬೇಕಂತೆ!

ತಂತಿಯನ್ನು ಕತ್ತರಿಸಿದರೂ ಕೆಡದಿರುವ ಟೆಲಿಫೋನ್!

ಇಂಗ್ಲೆಂಡ್ ಮೊದಲಾದ ದೊಡ್ಡದೊಡ್ಡ ನಗರಗಳಲ್ಲಿ ಪ್ರತಿಯೊಬ್ಬ ಶ್ರೀಮಂತರ ಬಂಗಲೆಯಲ್ಲಿಯೂ ಟೆಲಿಫೋನ್ ಇದ್ದೇ ಇರುವುದು. ಪ್ರಾಯಶಃ ಇಂಥ ಬಂಗಲೆಗಳಲ್ಲಿ ಕಳ್ಳತನಮಾಡಲು ಬರತಕ್ಕವರು ಟೆಲಿಫೋನಿನ ತಂತಿಯನ್ನು ಕತ್ತರಿಸಿ ಅನಂತರ ಒಳಕ್ಕೆ ನುಗ್ಗುವರು. ಇದರಿಂದ ಮನೆಯಲ್ಲಿದ್ದವರಿಗೆ ಟೆಲಿಫೋನ್ ಮೂಲಕ ಪೋಲೀಸರಿಗೆ ವರ್ತಮಾನ ಕೊಡುವದಕ್ಕೂ ಅವಕಾಶವಿಲ್ಲದೆ ಹೋಗುವದು. ಇದನ್ನು ತಪ್ಪಿಸುವದಕ್ಕಾಗಿ ಬ್ರಿಟಿಷ್ ಪೋಸ್ಟ್ ಆಫೀಸಿನವರು ಒಂದು ಹೊಸತರಹ ಟೆಲಿಫೋನನ್ನು ತಯಾರುಮಾಡಿರುವರು. ಇವುಗಳ ತಂತಿಯನ್ನು ಕತ್ತರಿಸಿ ಹಾಕಿದರೂ ವರ್ತಮಾನವನ್ನು ಕಳುಹಿಸುವದಕ್ಕೆ ಮಾತ್ರ ಯಾವ ತೊಂದರೆಯೂ ಆಗುವದಿಲ್ಲವಂತೆ!

ಯುಗಾಂತರದ ಪ್ರಾಣಿಯನ್ನು ಹಿಡಿಯುವರಂತೆ!

ಸ್ಕಾಟ್ಲೆಂಡ್ ದೇಶದಲ್ಲಿರುವ ಲಾಕ್‌ನೆಸ್ ಎಂಬ ಸರೋವರದಲ್ಲಿ ಬಹಳ ಹಿಂದಿನ ಕಾಲದ ಒಂದು ಪ್ರಾಣಿಯು ವಾಸವಾಗಿರುವದೆಂದು ಕಳೆದವಾರದಲ್ಲಿ ನಾವು ಪ್ರಕಟಿಸಿದ್ದೆವಷ್ಟೆ! 'ಸ್ಕಾಟಿಷ್ ಮ್ಯಾರೈನ್ ಬಯೊಲಾಜಿಕಲ್ ಅಸೋಸಿಯೇಷನ್'ನ ಸೂಪರಿಂಟೆಂಡೆಂಟರಾದ ಮಿ|| ರಿಚರ್ಡ್ ಎಲ್ಮ್‌ಹರ್ಸ್ಟ್‌ರವರು ಸದ್ಯಃ ಆ ಮೃಗವನ್ನು ಹಿಡಿಯಬೇಕೆಂದು ಉದ್ದೇಶಿಸಿರುವರು. ಇದೇ ಸಂದರ್ಭದಲ್ಲಿ ಸರ್ ಆರ್ಥರ್ ರಾಸ್ಟ್ರನ್ ಎಂಬ ರಿಟೈರ್ಡ್ ಕ್ಯಾಪ್ಟನ್‌ರವರು ಸ್ಕಾಟ್ಲೆಂಡ್ ದೇಶದ ಸಮುದ್ರತೀರದಲ್ಲಿ ಇಂಥ ಅದ್ಭುತಾಕಾರದ ಪುರಾತನ ಪ್ರಾಣಿಗಳು ಅನೇಕವಿರುವವೆಂದೂ, 1907 ನೇ ಇಸವಿಯಲ್ಲಿ ಐರ್ಲೆಂಡ್ ದೇಶದ ಸಮುದ್ರತೀರದಲ್ಲಿ ಅಂಥದೇ ಒಂದು ಅದ್ಭುತ ಪ್ರಾಣಿಯನ್ನು ತಾವು ಕಣ್ಣಾರೆ ನೋಡಿದೆವೆಂದೂ, ಅದರ ಕುತ್ತಿಗೆಯು ಸುಮಾರು 13-14 ಅಡಿ ಉದ್ದವಾಗಿದ್ದಿತೆಂದೂ, ಶರೀರವು ನೀರಿನಲ್ಲಿದ್ದುದರಿಂದ, ಅದರ ಆಕಾರವನ್ನು ಸರಿಯಾಗಿ ತಿಳಿಯಲಾಗಲಿಲ್ಲವೆಂದೂ ಹೇಳಿರುವರು.

... ದಾರಕ್ಕೆ ಕಟ್ಟಿಕೊಂಡು ಬಂದದ್ದು. ನನ್ನ ಕಾರಿನಲ್ಲಿ ಒಬ್ಬ

...ಕೂತುಕೊಂಡಿದ್ದ. ಹಿಂದುಗಡೆ ಹುಡುಗಿ ಮತ್ತು ... ಕೂತುಕೊಂಡಿದ್ದರು. ಚಿಂತಾಮಣಿಯಿಂದ ... ಗಂಟೆಯಲ್ಲಿ ಹೊರಟೆವು. ಆಸ್ಪತ್ರೆಯ ಹತ್ತಿರ ... ಮತ್ತು ಇನ್‌ಸ್ಪೆಕ್ಟರು ಒಳಗೆ ಹೋದರು. ...ಕಾರಿಗೆ ನಿಂತಿದ್ದ. ಮುಸಲ್ಮಾನನು ದಾರಿಯಲ್ಲಿ ...ಗಿಯ ಸಂಗಡ ಮಾತನಾಡಲಿಲ್ಲ. ಕೋಲಾರಕ್ಕೆ ...ಯಲ್ಲಿ ಪೆಟ್ರೋಲ್ ಇತ್ತು. ಇಲ್ಲಿಂದ ಹೋಗು... ಕಂಪೆನಿಯಲ್ಲಿ ಡಿ. ಎಸ್. ಪಿ. ಯವರ ಹೆಸರು ...ಲ್ ತೆಗೆದುಕೊಂಡು ಹೋದೆ. ಡಿ. ಎಸ್. ...ಗೆ ಮಾಡುವಂತೆ ಹೇಳಿದ್ದರು. ನನಗೆ ಚೀಟಿ ...ಲ್ಲ. ನಮ್ಮ ಕಾರು 'ಪ್ರೈವೇಟ್‌ಕಾರು.'

ಅಬ್ದುಲ್‌ಸುಭಾನ್.

(...ಡಾ ಫ್ಯಾಕ್ಟರಿ ಚಿಂತಾಮಣಿ)

...೮-೩೩ ರಲ್ಲಿ ಸಾಯಂಕಾಲ ರಸ್ತೆಯ ಹತ್ತಿರ ...ಬಿ ಬಂದಾಗ ನಾನು ಅಲ್ಲಿದ್ದೆ. ಅಲ್ಲಿಂದ ...ಟುಹೋದ. ನಾನು ಇನ್ನು ಕೆಲವರು ಸೇಟು ...ದೆವು. ಸೇಟು ಮಸೀದಿಯಲ್ಲಿದ್ದ ನಾನು ...ಕೊಂಡು ಬಂದೆ, ನಿಕಾ ಆದಾಗ ನಾನು ಇದ್ದೆ. ...ಮುಗಿದುಹೋಯ್ತು. ಹುಡುಗಿಯನ್ನ ಬಂಗ...ಕು ಹೋದಾಗ ನಾನು ನನ್ನ ಮನೆಯ ಹತ್ತಿರ ...ಕೊಂಡುಹೋದೆ ಜಟಕಾವನ್ನು ಹೊಡೆದದ್ದು ...ಬಿ ಮನೆಯಲ್ಲಿ ನನಗೆ ಘೋಷಾ ಇರಿಸಿ ಹುಡು... ಕರೆದುಕೊಂಡುಹೋದಾಗ ಅವರ ಮನೆಗೆ ...ಹುಡುಗಿಯ ಟ್ರಂಕನ್ನು ಸೀಜ್‌ಮಾಡಿದಾಗ ನಾನು ... ರೂಮಿನ ಬೀಗವನ್ನು ನಾನೇ ತೆಗೆದದ್ದು. ...ಡಿದಾಗ ಮಹಜರು ಮಾಡಲಾಯ್ತು.

ಪಾಟೀಸವಾಲು.

...ಸಾಬಿ ನೆಂಟನಲ್ಲ. ನನ್ನನ್ನು ಚಿಕ್ಕಂದಿನಿಂದಲೂ ...ಂದ ಘೋಷಾ ಇಲ್ಲ. ನಾನು ಹುಡುಗಿ... ಕರೆದುಕೊಂಡುಹೋದಾಗ ಗಾಡಿಯಲ್ಲಿ ... ಆಗಲೇ ಹುಡುಗಿ ರೂಮಿನ ಬೀಗದ ಕೈ ನನಗೆ ...ಮು ಬಾಗಿಲು ತೆಗೆದಾಗ ಇನ್‌ಸ್ಪೆಕ್ಟರು ಇರ... ಇದ್ದರು. ನಾನು ಸೇಟುಸಾಬಿ ಮನೆಗೆ ... ಮನೆಯವರ ಹೊರ್ತು ಮಿಕ್ಕವರು ಯಾರೂ ...೨ ಜಟಕ ಇಟ್ಟಿರುತ್ತೇನೆ. ನಿಕಾಕ್ಕೆ ಸಾಕ್ಷಿ... ಮತ್ತು ೩ ನೇಯ ಅಪರಾಧಿಗಳಿಗೆ ದಸ್ತಗಿರಿ... ನಿಕಾಕ್ಕೆ ೧೦೦ ಜನರು ಬಂದಿದ್ದರು. ...ಟ್ರೋಮ್ಯಾಕ್ಸ್ ಲೈಟ್ ಹಾಕಿದ್ದರು. ಹೂವು ...ಡಲಿಲ್ಲ. ಖಜಾನರ ಮತ್ತು ಬಾದಾಮಿ ...ಇನ್‌ಸ್ಪೆಕ್ಟರು ಅಲ್ಲಿಗೆ ಬರಲಿಲ್ಲ. ಇನ್‌ಸ್ಪೆ... ಇನ್‌ಸ್ಪೆಕ್ಟರ ಮನೆಗೆ ಯಾರೂ ಹೋದದ್ದು

...ನಕ್ಕೆ ಊಟಮಾಡಿಸಿದರು ಆ ರಾತ್ರಿ?
...ಯಾರಿಗೂ ಹಾಕಿಸಲಿಲ್ಲ.
...ತ್ತಿನಲ್ಲಿ ಗಂಡು ಹೆಣ್ಣು ಕಾಣಿಸುತ್ತಿದ್ದರೊ?
...ತ್ತಿದ್ದರು.
...ಕೊಟ್ಟಿದ್ದ ರೂಮಿನಲ್ಲಿ ಇನ್ನು ಯಾರಿದ್ದರು?
...ಗೊತ್ತಿಲ್ಲ. ನಾನು ಒಳಗೆ ಹೋಗಲಿಲ್ಲ.

ಬುಡನ್‌ಬೇಗ್.

(...ಕಂಟ್ರಾಕ್ಟರ್ ಚಿಂತಾಮಣಿ)

...ಹೋಗಿ ೨|| ವರ್ಷವಾಯ್ತು. ಮಸೀದಿ ಹತ್ತಿರ ...ಸ್ಕೂಲ್ ಇರುತ್ತೆ. ಅದಕ್ಕೆ ಹೆಡ್‌ಮಾಸ್ತರು ...ಆತ ಆ ಸ್ಕೂಲಿಗೆ ಬಂದು ಒಂದೂವರೆ ವರ್ಷ...ಲ್ ಷುಕೂರ್ ಎಂಬುವನು ಆ ಸ್ಕೂಲಿನಲ್ಲಿ... ಈ ಸ್ಕೂಲಿಗೆ ಎದುರಿನಲ್ಲಿ ರಾಮಸ್ವಾಮಿ... ಹೆಡ್ಮಾಸ್ತರು ಅಲ್ಲಿಗೆ ಬಂದಾಗಲಿಂದಲೂ ...ಊಟಮಾಡುತ್ತಾ ಇದಾನೆ. ರಾಮಸ್ವಾಮಿ... ತನ್ನ ಮನೆಯಿಂದ ಹೊರಟುಹೋದಳೆಂದು ... ಆ ರಾತ್ರಿ ಊಟಮಾಡಿಕೊಂಡು ನಾನು ...ಗೆ ಹೋದೆ. ಆಗ ಸುಮಾರು ೮|| ಘಂಟೆ ...ವು ಏನೋ ಓದುತ್ತಿದ್ದೆವು. ಅರ್ಧ ಘಂಟೆಯ ...ಗಿಯು ಟ್ರಂಕು ಹಿಡಿದುಕೊಂಡು ಒಳಗೆ ...ರ್ ಯಾರು ಎಂತ ಕೇಳಿದರು (ಕೋರ್ಟ್...) ಅವಳನ್ನು ಹೊರಗೆ ಕಳುಹಿಸಿಬಿಟ್ಟೆ.

...ಕ್ಕೆ ಮುಂಚೆ ೧೫ ದಿವಸಗಳ ಕೆಳಗೆ ಹೆಡ್ಮಾ... ಕಾಗದ ಕೊಟ್ಟ. ಈ ಚೀಟಿಯನ್ನು ತೆಗೆದು... ಹುಡುಗಿಯ ದೊಡ್ಡವರು ಯಾರಾದರೂ ...ದ್ದಿ ಹೇಳಿ ಬಾ ಎಂತ ಹೇಳಿದ. ಚೀಟಿ ...ಹೇಳಿದೆ. ಕನ್ನಡದಲ್ಲಿ ಕಷ್ಟದಿಂದ ಓದಿದ. ...ಗಿ ಏನೂ ಮಾಡಲಿಲ್ಲ. ಈ ವಿಚಾರವನ್ನು ...ಸಾಬಿಗೆ ಹೇಳಿದೆ. ಆ ಮೇಲೆ ಕೋಲಾರಕ್ಕೆ ...ಹೋದಮೇಲೆ ೫-೬ ದಿವಸಗಳಿಗೆ ರಾಮಸ್ವಾಮಿ... ಗಿ ಆತನನ್ನ ಕಂಡು ಬುದ್ಧಿ ಹೇಳಿ ಬಂದೆ. ... ಆ ರೀತಿ ಮಾಡಬೇಡಿ ಎಂತ ಹೇಳಿದೆ. (ಕಾಗದವನ್ನು ಸಾಕ್ಷಿಗೆ ತೋರಿಸಲಾಗಿ ಗುರ್ತಿಸಿದ).

ಪಾಟೀಸವಾಲು.

ನನಗೆ ಕನ್ನಡ ಬರುವುದಿಲ್ಲ. ಓದಲು ಹೆಡ್ಮಾಸ್ಟರಿಗೆ ನೀನೆ ಹೋಗಿ ಹೇಳಿ ಎಂತ ಹೇಳಲಿಲ್ಲ. ನಾನು ರಾಮಸ್ವಾಮಿಪಂಡಿತರ ಮನೆಗೆ ಹೋದಾಗ ಆತ ಒಬ್ಬನೇ ಇದ್ದದ್ದು. ಆತನಿಗೆ ಕಾಗದ ತೋರಿಸಿದೆ. ಆತನ ಕೈಲಿ ಕೊಡಲಿಲ್ಲ. ಆತ ಅದನ್ನು ಓದಲಿಲ್ಲ. ಆತ ಕಾಗದವನ್ನು ಕೊಡು ಎಂತ ಕೇಳಲಿಲ್ಲ. ನಾನು ತೋರಿಸಿದ ಮೇಲೂ. ನೋಡಿ ಕೊಡುತ್ತೇನೆ ಕೊಡು ಎಂತ ಕೇಳಲಿಲ್ಲ. ನಾನು ಕೊಡಲೂ ಇಲ್ಲ.

ಪ್ರ—ಆತ ಏನು ಹೇಳಿದ?

ಉ—ನಾನು ಏನು ಹೇಳಲಿ. ನನ್ನ ಹಣೆಬರಹ ಎಂತ ಹೇಳಿದ.

ಹೆಡ್ಮಾಸ್ಟರ ರೂಮು ಮುಂದೆ ದೊಡ್ಡಪೇಟೆಯ ರಸ್ತೆ ಇರುತ್ತೆ. ರೂಮಿನ ಪಕ್ಕಗಳಲ್ಲಿ ಕಟ್ಟಿಗೆ ಮಂಡಿ, ಆಯುರ್ವೇದ ಶಾಲೆ ಇರುತ್ತೆ. ರೂಮಿನ ಬಾಗಿಲುಗಳು ಎಲ್ಲವೂ ಕೀಲುಗಳಿಂದ ಸೇರಿಸಲ್ಪಟ್ಟಿವೆ. ರಸ್ತೆಯಲ್ಲಿ ಆಪ್ಪುಹೊತ್ತಿನಲ್ಲಿ ಜನರು ತಿರುಗಾಡುತ್ತಿದ್ದರು. ಪಕ್ಕದ ಮನೆಗಳಲ್ಲಿ ದೀಪ ಇತ್ತು. ಹುಡುಗಿಯನ್ನ ನೂಕಿಬಿಟ್ಟಾಗ ಗಲಾಟೆಯೇನೂ ಆಗಲಿಲ್ಲ. ನೂಕಲಿಲ್ಲ ಗದರಿಸಿಕೊಂಡೆವು. ಅವಳು ಹೊರಟುಹೋದಳು. ಆ ಮೇಲೆ ಎಲ್ಲಿ ಹೋದಳೋ ಗೊತ್ತಿಲ್ಲ. ನಾವು ಹೊರಕ್ಕೆ ಬರಲಿಲ್ಲ. ಆ ಮೇಲೆ ಪಂಡಿತರ ಮನೆಗೆ ಹೋಗಿ ಹೇಳಲಿಲ್ಲ. ಪಕ್ಕದ ಮನೆಯಲ್ಲಿ ಯಾರಿಗೂ ಹೇಳಲಿಲ್ಲ. ಮಾರನೆದಿನ ಪುಕಾರಾಯ್ತು. ನಾನು ಹೋಗಿ ಪೋಲೀಸ್ ಸ್ಟೇಷನ್ನಿನಲ್ಲಿ ಹೇಳಲಿಲ್ಲ. ಇದುವರಿವಿಗೂ ಯಾರ ಸಂಗಡವೂ ಈ ವಿಷಯವನ್ನು ಹೇಳಲಿಲ್ಲ. ರೂಮಿನ ಬಾಗಿಲುಗಳು ಒಳಗೆ ತೆರೆಯಲ್ಪಡುತ್ತವೆ. ಅಬ್ದುಲ್‌ವಹಾಬ್ ಇರುವ ಮನೆಗೂ ಮತ್ತು ಹೆಡ್ಮಾಸ್ಟರ್ ರೂಮಿಗೂ ಸುಮಾರು ೫೦ ಗಜ ದೂರವಿರಬಹುದು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಗೃಹಕಲಹವು ಮಹಾನರ್ಥಕರವು.

(ಬರೆದವ—ದೈವಜ್ಞ ವಿನೋದ)

ಗೃಹಕಲಹವೆಂದರೆ ಸಾಮಾನ್ಯವಾದುದಲ್ಲ. ಸಂಸಾರಿಕರ ಮನೆಗಳಲ್ಲಿ ಕಲಹದ ಕುರುಹು ತೋರಿದೊಡನೆ ಅದನ್ನು ನಿರ್ಮೂಲಮಾಡುವದು ಒಳಿತು. ಅದನ್ನು ಹಾಗೆಯೇ ಬೆಳೆಯಗೊಟ್ಟರೆ ಅದರಿಂದಾಗುವ ಅನಿಷ್ಟಪರಂಪರೆಗಳ ಕಷ್ಟನಷ್ಟಗಳನ್ನು ಹೇಳಲಾಗಿಸಲ್ಲ. ಮನೆಯೊಳಗೆ ಜಗಳವಿದ್ದಮೇಲೆ ಆ ಮನೆಯನ್ನು ಸುಡುವದಕ್ಕಾಗಿ ಬೇರೆಕಡೆಯಿಂದ ಬೆಂಕಿಯನ್ನು ತರುವದೇ ಬೇಡ. ಮನೆಯೊಳಗೆ ಯಾವದೇ ಯಃಕಶ್ಚಿತ್ ಕಾರಣಮೂಲಕ ಉದಯವಾದ ಮನಸ್ತಾಪಾಗ್ನಿಯು ತಿಪ್ಪೆಯೊಳಗೆ ಪ್ರವೇಶಿಸಿದ ಬೆಂಕಿಯಂತೆ ಕಣ್ಣಿಗೆ ಕಾಣದೆ ಹೊತ್ತುತ್ತ, ಹೊತ್ತುತ್ತ ಕಡೆಗೆ ಸರ್ವವೂ ನಾಶವಾಗಿ ಮನೆತನ ಗೌರವವೇ ಇಲ್ಲವಾಗುವದು. ಮನೆಜಗಳವು ಮನೆಯನ್ನು ಹಾಳುಮಾಡುವದು. ಈ ಜಗಳದ ಉತ್ಪತ್ತಿಗೆ ಪುರುಷರಿಗಿಂತಲೂ ಸ್ತ್ರೀಯರೇ ಮೂಲಕಾರಣರೆಂದು ಬಹುಜನರ ಹೇಳಿಕೆಯಾಗಿದೆ. ಇದು ಸರಿಯಾದುದಲ್ಲವೆಂದು ತೋರುತ್ತದೆ. ಅದಿಗೆ ಮಾಡುವ ಹೆಂಗಳೆಯರ ಅವಿಚಾರದ ಅಪರಾಧಗಳನ್ನು ಆದರಿಸಿ ಕೇಳಿ ಅತ್ಯಂತ ಘಾತುಕವಾದ ಕಲಹಕ್ಕೆ ಕೈಕಂಕಣಕಟ್ಟಿಕೊಳ್ಳುವ ಬಹದ್ದೂರ ಪುರುಷಸಿಂಹರಿಗೇನನ್ನಬೇಕೋ ಸುಜ್ಞವಾಚಕರೇ ಊಹಿಸಲಿ; ಅಂತೂ ಗೃಹಕಲಹದ ಉತ್ಪತ್ತಿಗೆ ಇಬ್ಬರೂ ಕಾರಣರೆಂದು ನನ್ನ ಅಭಿಪ್ರಾಯ. ಸಾಮಾನ್ಯವಾಗಿ ಒಂದು ಕುಟುಂಬದವರು ಪರಸ್ಪರವಾಗಿ ವೈಮನಸ್ಸಿನಿಂದ ನಡೆಯುತ್ತಿರುವವರ ಮೂಲಧ್ಯೇಯವು ವ್ಯಕ್ತಿಸ್ವಾತಂತ್ರ್ಯದಿಂದಿರಬೇಕಾಗಿರುವದು. ವ್ಯಕ್ತಿಸಮುದಾಯದಿಂದ ದೊರೆಯುವ ಸೌಖ್ಯದ ಸವಿಯುಂಡು ಮೈಮರೆತು ಅದರ ಬೆಲೆಯನ್ನರಿಯದೆ ವಿಭಾಗವಿಭಕ್ತಿನ ದುಃಖದ ತಾತ್ಪೂರ್ತಿಕಸವಿಗನಸನ್ನು ಸ್ಮರಿಸಿ ಸವಿಪಾಲುಬೇಡುತ್ತ ಕವನಕ್ಕೆ ಕಾಲುಕೆರೆಯುವ ಮಹಾನುಭಾವರು ಈಗ ಪ್ರತಿಮನೆಗಳಲ್ಲಿಯೂ ದೊರೆಯುತ್ತಾರೆ. ಆದರೂ ಆಗಲಿ; ತಮ್ಮ ಮನೆತನದ ಗುಟ್ಟು ಹೊರಬೀಳದಂತೆ ಯೋಗ್ಯರೀತಿಯಿಂದ ವಿಭಾಗಮಾಡಿಕೊಂಡು ಪ್ರತಿದಿನದಲ್ಲಿಯೂ ಬೆಳೆಯುತ್ತಿರುವ ಕಲಹಾಗ್ನಿಯಿಂದ ಬೆಂದುಬೆಂಡಾಗುವದಕ್ಕಿಂತ ಅದರಿಂದ ಮುಕ್ತರಾಗುವದೊಂದು ಪಾಯವೆಂದು ಅನಿಸುತ್ತದೆ. ಕ್ಷುದ್ರಕಾರಣಗಳಿಗಾಗಿ ಸ್ವಾರ್ಥಭಾವನೆಯಿಂದ ಅಸುರೀಕಾರ್ಯಗಳಿಗೆ ಪ್ರವರ್ತಿಸುವ ಅನೇಕ ಮಂದಿರ ವ್ಯಾಜ್ಯಗಳು ನ್ಯಾಯಸ್ಥಾನಗಳನ್ನು ಕಂಡಿರುತ್ತವೆ. ನಮ್ಮ ಪ್ರಾಂತದಲ್ಲಿ ಲಕ್ಷಾಧೀಶ ಶ್ರೀಮಂತರೊಬ್ಬರು ಅಣ್ಣತಮ್ಮರ ಪಾಲುವಿಭಾಗದಲ್ಲಿ ಪ್ರಾಪ್ತವಾದ ನಾಲ್ಕು ಎಕರೆ ಜಮೀನಿನ ಬಗ್ಗೆ ಬೊಂಬಾಯಿ ಹೈಕೋರ್ಟಿನವರೆಗೆ ಹೋಗಿ ಉಭಯರೂ ತಮ್ಮ ಪಾಲಿಗೆಬಂದ ಅನೇಕ ಘನಾದಸಂಪತ್ತನ್ನು ವ್ಯಾಜ್ಯಕ್ಕೆ ಸೂರೆಮಾಡಿ ಈಗ ಭಿಕ್ಷಾಧೀಶರಾಗಿದ್ದಾರೆ. ಇಂಥ ಉದಾಹರಣೆಗಳು ಬೇಕಾದಲ್ಲಿ ಬೇಕಾದಷ್ಟು ದೊರೆಯಬಹುದು. ಬಡವರಿರಲಿ, ಶ್ರೀಮಂತರಿರಲಿ ಸಾಮುದಾಯಕವಾಗಿ ಸರ್ವತೋಮುಖವಾಗಿ ಸಮತಾದೃಷ್ಟಿಯಿಂದ ಸರ್ವರೂ ಸಂಸಾರರಥವನ್ನು ಸಂತೃಪ್ತಿಸುಖ ಸಾಗಿಸುವದು ಸರ್ವೋತ್ತಮವಾದುದು. ಪ್ರಾಪಂಚಿಕರು ತಮ್ಮ ಮನೆಯ ಸವಿಾಪಕ್ಕೆ ಪಶ್ಚಾಂಧಪಿಶಾಚಿಯು

(6ನೆಯ ಪುಟವನ್ನು ನೋಡಿ.)

ಚಿಂತಾಮಣಿಪ್ರಕರಣ.

ಅಹಮದ್ ಷರೀಫ್‌ರ ಸಾಕ್ಷ್ಯ.

ಏಳು ತಿಂಗಳಿಂದ ನಾನು ಹೆಡ್ಮಾಸ್ಟರಾಗಿರುತ್ತೇನೆ. ನನ್ನ ಮನೆಯ ಮುಂದೆ ರಾಮಸ್ವಾಮಿ ಪಂಡಿತರ ಮನೆಯಿದೆ. ಮಹಾಲಕ್ಷ್ಮಮ್ಮನನ್ನು ಬಲ್ಲೆ. ೨೨-೮-೩೩ ರಲ್ಲಿ ಫುಟ್‌ಬಾಲ್ ಆಡಿ ಮಸೀದಿಗೆ ಹೋದೆ. ಅಲ್ಲಿಂದ ೭|| ಘಂಟೆಗೆ ನನ್ನ ರೂಮಿಗೆ ಬಂದೆ. ಕೊಂಚಹೊತ್ತಿಗೆ ಲೈಟ್ ಕಂಟ್ರ್ಯಾಕ್ಟರ್ ಬುಡನ್‌ಬೇಗ್ ಬಂದು ನನ್ನನ್ನು ಊಟಮಾಡುವುದಕ್ಕೆ ಕರೆದ. ಅಲ್ಲಿಂದ ಊಟ ಮಾಡಿ ೫|| ಘಂಟೆಗೆ ರೂಮಿಗೆ ಬಂದೆ. ಮಹಾಲಕ್ಷ್ಮಮ್ಮನು ಟ್ರಂಕು ತೆಗೆದುಕೊಂಡು ನನ್ನ ರೂಮಿಗೆ ಬಂದಳು. ನೀನು ಯಾರು ಎಂತ ಕೇಳಿದೆ. ಬುಡನ್‌ಬೇಗು ಕೇಳಿದ ಇಲ್ಲಿಗೇಕೆ ಬಂದೆ ಅಂತ. ಅದಕ್ಕೆ ಆಕೆ ನಾನು ಮುಸಲ್ಮಾನ್ ಜಾತಿಗೆ ಸೇರಬೇಕು ಅಂತ ಬಂದೆ ಎಂದು ಹೇಳಿದಳು. ಆಕೆ ನನಗೆ ಒಂದು ಕಾಗದ ಬರೆದಿದ್ದಳು. ನಾನು ನಿನ್ನಲ್ಲಿಗೆ ಬಂದುಬಿಡುತ್ತೇನೆ ಎಂತ. ಆಕೆ ಬರುತ್ತಲೂ ನನಗೆ ಭಯವಾಯ್ತು. ನಾನು ಗದರಿಸಿಕೊಂಡೆ. ಅವಳು ಹೊರಟು ಹೋದಳು. ಆಕೆ ನನ್ನಲ್ಲಿಗೆ ಬರುವುದಕ್ಕೆ ೧೪-೧೫ ದಿನ ಮುಂಚೆ ಕಾಗದ ಬರೆದಿದ್ದಳು. ಆ ಕಾಗದ ಬುಡನ್‌ಬೇಗ್ ಹತ್ತಿರವಿರುತ್ತೆ. ಆ ಚೀಟಿಯನ್ನು ರಾಮಸ್ವಾಮಿ ಪಂಡಿತರ ಮಗ ಕೃಷ್ಣಮೂರ್ತಿ ತಂದುಕೊಟ್ಟ. ಕೃಷ್ಣಮೂರ್ತಿಯನ್ನು ಹೇಗೆ ಬಲ್ಲೆನೆಂದರೆ ಅವನು ಆಗಾಗ ನನ್ನಲ್ಲಿ ಇಂಗ್ಲೀಷಿಗೆ ಅರ್ಥ ತಿಳಿದುಕೊಳ್ಳಲು ಬರುತ್ತಿದ್ದ. ಈ ಕೃಷ್ಣಮೂರ್ತಿಯು ನನ್ನ ಅಸಿಸ್ಟೆಂಟ್. ಇನ್ನು ಮೇಲೆ ಇಲ್ಲಿಗೆ ಬಂದರೆ ಕಾಲುಮುರಿದು ... [illegible]

ಪಾಟೀಸವಾಲು.

[illegible]

ಮುರ್‌ತೋಜಾ ಷರೀಫನ ಸಾಕ್ಷ್ಯ.

[illegible]

ಪಾಟೀಸವಾಲು.

[illegible]

ಪುನಃ ಪ್ರಶ್ನೆ.

[illegible]

ಡಾ|| ಮಿಸ್. ಕ್ಯಾಪ್ಸನ್ನ...

[illegible]

ಪ್ರಾಸಿಕ್ಯೂಷನ್ನವರ...

[illegible]

ಸೈದ್ ಅಹಮ್ಮದ್...

[illegible]

ಪಾಟೀಸವಾಲು.

[illegible]

ನರಸಪ್ಪನ...

[illegible]

ಕನ್ನಮ್ಮನ ಸಾಕ್ಷ್ಯ.

[illegible]

ಪಾಟೀಸವಾಲು.

[illegible]

ಗಣೇಶ್ ಸಾಕ್ಷಿ.

[illegible]

ಅಬ್ದುಲ್‌ಸುಭಾನ್.

[illegible]

ಪಾಟೀಸವಾಲು.

[illegible]

ಬುಡನ್‌ಬೇಗ್.

[illegible]

ಪಾಟೀಸವಾಲು.

ನನಗೆ ಕನ್ನಡ ಬರುವುದಿಲ್ಲ. ಓದಲು ಹೆಡ್ಮಾಸ್ಟರಿಗೆ ನೀನೆ ಹೋಗಿ ಹೇಳಿ ಎಂತ ಹೇಳಲಿಲ್ಲ. ನಾನು ರಾಮಸ್ವಾಮಿಪಂಡಿತರ ಮನೆಗೆ ಹೋದಾಗ ಆತ ಒಬ್ಬನೇ ಇದ್ದದ್ದು. ಆತನಿಗೆ ಕಾಗದ ತೋರಿಸಿದೆ. ಆತನ ಕೈಲಿ ಕೊಡಲಿಲ್ಲ. ಆತ ಅದನ್ನು ಓದಲಿಲ್ಲ. ಆತ ಕಾಗದವನ್ನು ಕೊಡು ಎಂತ ಕೇಳಲಿಲ್ಲ. ನಾನು ತೋರಿಸಿದ ಮೇಲೂ, ನೋಡಿ ಕೊಡುತ್ತೇನೆ ಕೊಡು ಎಂತ ಕೇಳಲಿಲ್ಲ. ನಾನು ಕೊಡಲೂ ಇಲ್ಲ.

ಪ್ರ—ಆತ ಏನು ಹೇಳಿದ?

ಉ—ನಾನು ಏನು ಹೇಳಲಿ, ನನ್ನ ಹಣೆಬರಹ ಎಂತ ಹೇಳಿದ.

ಹೆಡ್ಮಾಸ್ಟರ ರೂಮು ಮುಂದೆ ದೊಡ್ಡಪೇಟೆಯ ರಸ್ತೆ ಇರುತ್ತೆ. ರೂಮಿನ ಪಕ್ಕಗಳಲ್ಲಿ ಕಟ್ಟಿಗೆ ಮಂಡಿ, ಆಯುಕ್ತರ ಕಾಲೆ ಇರುತ್ತೆ. ರೂಮಿನ ಬಾಗಿಲುಗಳು ಎಲ್ಲವೂ ಕೀಲುಗಳಿಂದ ಸೇರಿಸಲ್ಪಟ್ಟಿವೆ. ರಸ್ತೆಯಲ್ಲಿ ಆಪ್ಪು ಹೊತ್ತಿನಲ್ಲಿ ಜನರು ತಿರುಗಾಡುತ್ತಿದ್ದರು. ಪಕ್ಕದ ಮನೆಗಳಲ್ಲಿ ದೀಪ ಇತ್ತು. ಹುಡುಗಿಯನ್ನ ನೂಕಿಬಿಟ್ಟಾಗ ಗಲಾಟೆಯೇನೂ ಆಗಲಿಲ್ಲ. ನೂಕಲಿಲ್ಲ, ಗದರಿಕೊಂಡೆವು. ಅವಳು ಹೊರಟುಹೋದಳು. ಆ ಮೇಲೆ ಎಲ್ಲಿ ಹೋದಳೋ ಗೊತ್ತಿಲ್ಲ. ನಾವು ಹೊರಕ್ಕೆ ಬರಲಿಲ್ಲ. ಆ ಮೇಲೆ ಪಂಡಿತರ ಮನೆಗೆ ಹೋಗಿ ಹೇಳಲಿಲ್ಲ. ಪಕ್ಕದ ಮನೆಯಲ್ಲಿ ಯಾರಿಗೂ ಹೇಳಲಿಲ್ಲ. ಮಾರನೆದಿನ ಶುಕ್ರವಾರವಾಯ್ತು. ನಾನು ಹೋಗಿ ಪೋಲೀಸ್ ಸ್ಟೇಷನ್ನಿನಲ್ಲಿ ಹೇಳಲಿಲ್ಲ. ಇದುವರಿವಿಗೂ ಯಾರ ಸಂಗಡವೂ ಈ ವಿಷಯವನ್ನು ಹೇಳಲಿಲ್ಲ. ರೂಮಿನ ಬಾಗಿಲುಗಳು ಒಳಗೆ ತೆರೆಯಲ್ಪಡುತ್ತವೆ. ಅಬ್ದುಲ್‌ವಹಾಬ್ ಇರುವ ... [illegible]

ಪತ್ರವ್ಯವಹಾರ.

[illegible]

ಗೃಹಕಲಹವು ಮಹಾನರ್ಥಕರವು.

[illegible]

(ಆನೆಯ ಘಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೩ನೇ ನವಂಬರ್ ತಾ|| ೨೭ನೇ ಸೋಮವಾರ.

ಭಸ್ಮಧಾರಣಮಹಿಮೆ.

ತ್ರಿಕಾಲೇಷು ವಿಧಿವದ್ಭಸ್ಮಧಾರಣಮಕ್ರುವತಾದೇನ ಕಾರ್ಯಂ |
ಪ್ರಮಾದಾತ್ಪತಿತೋ ಭವತಿ | ಭಸ್ಮಧಾರಣಮಕೃತ್ವಾ ನಾಶ್ನೀಯಾದಾಪೋಽನ್ನಮನ್ಯದ್ವಾ ||

(ಭಸ್ಮಜಾಬಾಲೋಪನಿಷತ್)

ಮೋಕ್ಷಸಾಧನಹೇತುಭೂತವಾದ ಭಸ್ಮವನ್ನು ಪ್ರಾತರ್ಮಧ್ಯಾಹ್ನಸಾಯಂಕಾಲಗಳಲ್ಲಿ ವಿಧಿಗನುಸಾರವಾಗಿ ಧರಿಸಬೇಕೆಂದೂ, ತಪ್ಪಿದರೆ ಮಾನವನು ಪಾಪಿಯಾಗುವನೆಂದೂ, ಭಸ್ಮಧಾರಣವನ್ನು ಮಾಡಿಕೊಳ್ಳದೆ ಅನ್ನವನ್ನಾಗಲಿ ಜಲವನ್ನಾಗಲಿ ಗ್ರಹಿಸಕೂಡದೆಂದೂ ಭಸ್ಮಜಾಬಾಲಿಕೇಶ್ರುತಿಯು ಶಾಸನಮಾಡಿರುವುದರಿಂದ, ಪ್ರತಿಯೊಬ್ಬರೂ ಇಹಪರಸುಖಸಾಧಕವಾದೀಪವಿತ್ರಭಸ್ಮವನ್ನು ಅಸಾಧಾರಣವಾದ ಶ್ರದ್ಧೆಯಿಂದ ತ್ರಿಕಾಲಗಳಲ್ಲಿಯೂ ಧರಿಸಿ ಧನ್ಯರಾಗಬೇಕಾಗಿದೆ. ವೇದಪ್ರತಿಪಾದ್ಯವಾದ ಭಸ್ಮಧಾರಣಮಹಿಮೆಯು ಅಸಾಧಾರಣವಾದುದರಿಂದ ಈ ಭಸ್ಮವನ್ನು ದೇವತೆಗಳೂ ಮಹರ್ಷಿಗಳೂ ಧರಿಸಿಕೊಳ್ಳುವರೆಂದು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವುವು.

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವಾಃ ಶಕ್ರಪುರೋಗಮಾಃ |
ತ್ರಿಪುಂಡ್ರಂ ಧಾರಯಂತ್ಯೇವ ಭಸ್ಮನಾ ಪರಿಕಲ್ಪಿತಂ ||
ವಸಿಷ್ಠಾದ್ಯಾ ಮಹಾಭಾಗಾ ಮುನಯಃ ಶ್ರುತಿಕೋವಿದಾಃ |
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಂ ||

ಬ್ರಹ್ಮ-ವಿಷ್ಣು-ರುದ್ರ-ಇಂದ್ರ ಇವರೇ ಮೊದಲಾದ ದೇವತೆಗಳೂ, ವೇದಪಾರೀಣರಾದ ವಸಿಷ್ಠಾದಿ ಮಹರ್ಷಿಗಳೂ ಎಲ್ಲಾ ಕಾಲಗಳಲ್ಲಿಯೂ ಭಸ್ಮತ್ರಿಪುಂಡ್ರವನ್ನು ಧರಿಸಿಕೊಳ್ಳುತ್ತಿರುವರೆಂಬ ಶಿವಾಗಮಾಭಿಪ್ರಾಯವನ್ನು ಸರ್ವಜ್ಞಮೂರ್ತಿಗಳಾದ ಶ್ರೀ ಜಗದ್ಗುರುರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಅಪ್ಪಣೆಕೊಡಿಸಿರುವರು. ದೇವಾಧಿದೇವತೆಗಳಿಗೂ ಸಹ ಮಾನ್ಯವಾದ ಭಸ್ಮಧಾರಣವು ಪಾಪಾಧಿಕವಾದೀ ಕಾಲದಲ್ಲಿ ಅವಮಾನಿತವಾಗಿ ಹೋಗಿದೆ. ಇಂಗ್ಲೀಷ್ ವಿದ್ಯೆಯ ಪ್ರಭಾವದಿಂದ ಎಲ್ಲಾ ಮತೀಯರ ಮತಧರ್ಮಗಳು ನಷ್ಟವಾಗುತ್ತಿರುವಂತೆ ಶೈವಮತದ ಭಸ್ಮಧಾರಣವೂ ಸಹ ನಷ್ಟವಾಗತೊಡಗಿದೆ. ಇಂಗ್ಲೀಷ್ ಭಾಷೆಯನ್ನು ಕಲಿತ ಕೆಲ ಜನ ನಾಸ್ತಿಕರು ಭಸ್ಮಧಾರಣಮಾಡಿಕೊಳ್ಳುವುದೇ ಒಂದು ತರಹದ ಅಪಮಾನವೆಂದು ಭಾವಿಸಿ ಭಸ್ಮವನ್ನೇ ಧರಿಸಿಕೊಳ್ಳುವುದಿಲ್ಲ. ಇದು ಇವರ ಬಹುಜನ್ಮಕೃತ ಪಾಪದ ಫಲವನ್ನು ಸೂಚಿಸುವದಲ್ಲದೆ ಬೇರೆಯಲ್ಲ. ಭಸ್ಮಧಾರಣವು ಸಾಮಾನ್ಯವಾದುದಲ್ಲ. ಅದು ಇಹಪರಸುಖಗಳೆರಡನ್ನೂ ಕೊಡತಕ್ಕ ಮಹಾಪವಿತ್ರವಸ್ತುವಾಗಿದೆ ಮನುಷ್ಯನು ಸದಾ ಶರೀರದ ಮೇಲೆ ಭಸ್ಮವನ್ನು ಧರಿಸುತ್ತಿದ್ದರೆ ಅವನಿಗೆ ಅಂಟುರೋಗಗಳಾವುವೂ ಅಂಟುವುದಿಲ್ಲ. ಭಸ್ಮದಲ್ಲಿ ರೋಗಪರಿಹಾರಕವಾದ ಅತ್ಯದ್ಭುತ ಶಕ್ತಿಯುಂಟೆಂಬುದನ್ನು ವಿದೇಶೀಯ ವೈದ್ಯಶಾಸ್ತ್ರಪ್ರವೀಣರೇ ಒಪ್ಪಿದ್ದಾರೆ. ಚಳಿಗಾಲದಲ್ಲಿ ಉಷ್ಣ್ಯವನ್ನುಂಟುಮಾಡತಕ್ಕ ಧರ್ಮವೂ, ಉಷ್ಣಕಾಲದಲ್ಲಿ ಶೈತ್ಯವನ್ನುಂಟುಮಾಡತಕ್ಕ ಧರ್ಮವೂ ಈ ಪವಿತ್ರವಸ್ತುವಿನಲ್ಲಿ ಸ್ವಭಾವಸಿದ್ಧವಾಗಿ ವಾಸಮಾಡಿಕೊಂಡಿರುತ್ತವೆ. ಈ ರೀತಿಯಾಗಿ ಈ ಭಸ್ಮವು ಇಹಸುಖಕಾರಣವಾಗಿರುವುದಲ್ಲದೆ, ಶಿವಪ್ರಕಾಶರೂಪವಾಗಿರುವುದರಿಂದ ಮೋಕ್ಷಸುಖಕ್ಕೂ ಕಾರಣೀಭೂತವಾಗಿರುವುದು. ಆದುದರಿಂದಲೇ ತ್ರಿಕಾಲಜ್ಞಾನಿಗಳಾದ ಪೂರ್ವಾಚಾರ್ಯರು ಈ ಪವಿತ್ರವಸ್ತುವನ್ನು ಪ್ರತಿಯೊಬ್ಬರೂ ಧರಿಸಿ ಮೋಕ್ಷಸಾಮ್ರಾಜ್ಯಸುಖಭಾಗಿಗಳಾಗಬೇಕೆಂದು ಬೋಧಿಸಿರುವರು. ಈ ತತ್ತ್ವವನ್ನೆಲ್ಲಾ ಈಗಿನ ಕಾಲದ ನವೀನ ನಾಸ್ತಿಕರು ಶುದ್ಧಹೃದಯದಿಂದ ಪರಾಮರ್ಶಿಸಿ ಭಸ್ಮಧಾರಣದ ಮಹತ್ತ್ವವನ್ನು ತಿಳಿದುಕೊಂಡು ಅದರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಧರಿಸಿ ಮಂಗಲಮಯಶರೀರಗಳಾಗಿ ಇಹಪರಸುಖಗಳನ್ನು ಪಡೆಯಬೇಕಲ್ಲದೆ, ತಮ್ಮ ಕುಲಧರ್ಮಾಚರಣೆಗಳಿಗೆ ತಿಲಾಂಜಲಿಯನ್ನಿತ್ತು ಪರಮನಾಸ್ತಿಕರಾದ ವಿದೇಶೀಯರ ಅಮಂಗಲಾಚರಣೆಯಂತೆ ನಡೆಯುತ್ತ ಅಮಂಗಲಮಯಶರೀರಿಗಳಾಗಿ ಇಹಪರಸುಖಗಳೆರಡನ್ನೂ ಕಳೆದುಕೊಳ್ಳಬಾರದೆಂದು ಕೋರುತ್ತೇವೆ. ವಿದೇಶೀಯರಲ್ಲಿ ಚಕ್ರವರ್ತಿ ಮೊದಲಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಮತಧರ್ಮಗಳನ್ನು ಪಾಲಿಸುತ್ತಿರುವರಲ್ಲದೆ ತಮ್ಮ ಧರ್ಮಗಳಿಗೆ ಎಂದೂ ಲೋಪವನ್ನು ತಂದುಕೊಳ್ಳುವುದಿಲ್ಲ. ನಮ್ಮ ದೇಶೀಯರ ಹೃದಯದಲ್ಲಿ ನಾಲ್ಕು ಇಂಗ್ಲೀಷ ಅಕ್ಷರಗಳು ಪ್ರವೇಶವಾದಕೂಡಲೇ ಇವರು ತಮ್ಮ ಮತಧರ್ಮಗಳಿಗೆ ತಿಲಾಂಜಲಿಯನ್ನು ಕೊಡಹತ್ತುವರು. ಇದು ಇವರ ದುರ್ದೈವವೋ ನಮ್ಮ ಭರತಖಂಡದ ದುರ್ದೈವವೋ ತಿಳಿಯದಾಗಿದೆ. ಅಸ್ತು! ಜಗನ್ನಿಯಾಮಕನಾದ ಪರಶಿವನು ಸನಾತನಧರ್ಮದ ಮೇಲೆ ಕೃಪಾಕಟಾಕ್ಷವನ್ನಿತ್ತು ತನ್ನ ಮತಧರ್ಮಗಳು ಸರ್ವರಲ್ಲಿಯೂ ಬೇರೂರುವಂತೆ ಮಾಡಿ ನಾಸ್ತಿಕವರ್ಗಕ್ಕೆ ಸದ್ಬುದ್ಧಿಯನ್ನನುಗ್ರಹಿಸಿ ಪವಿತ್ರ ಧರ್ಮಗಳನ್ನು ಪೂರ್ವದಂತೆ ಪ್ರಕಾಶಗೊಳಿಸಬೇಕೆಂದು ಆ ಜಗನ್ನಿಯಾಮಕನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಸಂಕಾರದವರು 1934 ನೇ ಇಸವಿ ಜನವರಿ 1 ನೇ ತಾರೀಖಿನಿಂದ ಅಮಾವಾಸ್ಯೆಯದಿವಸ ಎಲ್ಲಾ ಸರಕಾರೀ ಕಚೇರಿಗಳನ್ನೂ ಬೆಳಗಿನ ವೇಳೆ ಮಾಡತಕ್ಕದ್ದೆಂದು ಅಪ್ಪಣೆಮಾಡಿರುತ್ತಾರೆ.

ಮುನಿಸಾಮಿ ಎಂಬವನು ಕೋಲಾರದ ಗಣಿಯ ಚಿನ್ನವನ್ನು ಕದ್ದುತಂದು ದೇವನಹಳ್ಳಿಯಲ್ಲಿ ವಿಕರಿ ಮಾಡುತ್ತಿದ್ದನೆಂಬ ಕಾರಣದ ಮೇಲೆ ಪೋಲೀಸರು ಅವನನ್ನು ದಸ್ತಗಿರಿ ಮಾಡಿರುತ್ತಾರೆ.

ಇಂಡಿಯಾ ಸರಕಾರದವರು ಬೆಂಗಳೂರಿನಲ್ಲಿ ಶೀಘ್ರದಲ್ಲಿಯೇ ಭಾರತೀಯ ಫಿರಂಗಿ ಸೈನ್ಯವೊಂದನ್ನು ಏರ್ಪಡಿಸಬೇಕೆಂದು ನಿರ್ಧರಿಸಿರುವರು. ಶಿಪಾಯಿ ದಂಗೆಯಾದಂದಿನಿಂದಲೂ ಭಾರತೀಯರಾರೂ ಫಿರಂಗಿ ಸೈನ್ಯಕ್ಕೆ ಸೇರಿಸಲ್ಪಡುತ್ತಿರಲಿಲ್ಲ.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಡಿಸೆಂಬರ್ 16 ನೇ ತಾರೀಖಿನ ದಿವಸ ಹೊಸ ಮೆಂಬರುಗಳ ಚುನಾವಣೆಯು ನಡೆಯುವದರಿಂದ ಆ ದಿವಸ ಎಲ್ಲಾ ಕಚೇರಿಗಳಿಗೂ ಮತ್ತು ಶಾಲೆಗಳಿಗೂ ರಜೆಯನ್ನು ಕೊಡತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಹಯಾತ್ ಎಂಬವನು ಬೌರಿಂಗ್‌ಪೇಟೆ ವೆಂಕಟರಾಮಶೆಟ್ಟರ ಮನೆಯಲ್ಲಿ 3,000 ರೂ. ಗಳ ನಗನಾಣ್ಯಗಳನ್ನು ಕದ್ದನೆಂಬ ಆಪಾದನೆಯ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ 4 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಈ ಮೊದಲು ಇವನಿಗೆ 14 ಸಾರೆ ಶಿಕ್ಷೆಯಾಗಿದ್ದಿತಂತೆ!

ಕೃಷ್ಣರಾಜಸಾಗರ ಜಲಾಶಯದ ಮುಂಭಾಗದಲ್ಲಿ ನಿರ್ಮಿಸಲ್ಪಟ್ಟಿರುವ ಮನೋಹರವಾದ ಜಲಯಂತ್ರಗಳಿಂದ ರಂಜಿಸುವ ತೋಟವನ್ನು ನೋಡಲು ವಾದಕಾರಿಗಳಾಗಿ ಬರುವ ಜನರಿಂದ ಡಿಸೆಂಬರ್ 1 ನೇ ತಾರೀಖಿನ ಲಾಗಾಯಿತು ತಲೆಗೆ 1 ಆಣೆಯಂತೆ ಫೀಜು ವಸೂಲು ಮಾಡತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಭದ್ರಾವತಿಯ ಮಹಮದ್ ಖಾಸಿಂ ಎಂಬವನು ಕಳ್ಳತನದಿಂದ ಸಾರಾಯಿ ತಯಾರು ಮಾಡುತ್ತಿದ್ದನೆಂಬ ಕಾರಣದಮೇಲೆ ಎಕ್ಸೈಜ್ ಇಲಾಖೆಯವರು ಪೋಲೀಸರ ಸಹಾಯದಿಂದ ಅವನ ಮನೆಯನ್ನು ಜಪ್ತುಮಾಡಿ ಅಲ್ಲಿ ದೊರೆತ ಸಾಮಾನುಗಳನ್ನು ಸ್ವಾಧೀನಪಡಿಸಿಕೊಂಡರು. ಈ ಸಂದರ್ಭದಲ್ಲಿ ಖಾಸೀಮನ ಮಕ್ಕಳಿಗೂ ಪೋಲೀಸರಿಗೂ ಹೊಡೆದಾಟವಾಗಿ, ಕೆಲವರಿಗೆ ಗಾಯಗಳಾದವು. ಪೋಲೀಸರು 3 ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಹಿಂದೂಸ್ಥಾನದ ವೈಸರಾಯ ದಂಪತಿಗಳು ರಾಜಧಾನಿಗೆ ಆಗಮಿಸುವ ಸಂತೋಷಾರ್ಥವಾಗಿ ರಾಜಧಾನಿಯಲ್ಲಿ ಡಿಸೆಂಬರ್ 4 ನೇ ತಾರೀಖು ಸೋಮವಾರ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಶಾಲೆಗಳಿಗೂ, 5 ನೇ ತಾರೀಖು ಮಂಗಳವಾರ ಎಲ್ಲಾ ಶಾಲೆಗಳಿಗೂ ರಜೆಯನ್ನು ಕೊಡತಕ್ಕದ್ದೆಂದೂ, ಡಿಸೆಂಬರ್ 6 ನೇ ತಾರೀಖು ಬುಧವಾರ ಬೆಂಗಳೂರಿನಲ್ಲಿ ಎಲ್ಲಾ ಕಚೇರಿ ಮತ್ತು ಶಾಲೆಗಳಿಗೂ ರಜೆಯನ್ನು ಕೊಡತಕ್ಕದ್ದೆಂದೂ ಸರಕಾರದವರು ಅಪ್ಪಣೆಮಾಡಿರುತ್ತಾರೆ.

ಶ್ರೀರಂಗಪಟ್ಟಣದ ಮುನಿಸಿಪಾಲಿಟಿಯವರು ತಮ್ಮ ಉತ್ಪನ್ನವು ಹೆಚ್ಚಲೆಂಬ ಉದ್ದೇಶದಿಂದ ಶ್ರೀರಂಗಪಟ್ಟಣ, ಪಶ್ಚಿಮವಾಹಿನಿ, ಗಂಜಾಂ ಈ ಊರುಗಳಿಗೆ ಬರುವ ಜನರಮೇಲೆಯೂ ವಾಹನಗಳಮೇಲೆಯೂ 'ಯಾತ್ರಾತೆರಿಗೆ' ಯನ್ನು ವಿಧಿಸಿರುತ್ತಾರೆ. ಈ ತೆರಿಗೆಯನ್ನು ವಿಧಿಸಿರುವದು ಅನೇಕರಿಗೆ ಸಮ್ಮತವಿಲ್ಲದ್ದರಿಂದ ಕೆಲವು ದಿವಸಗಳ ಹಿಂದೆ ಶ್ರೀರಂಗಪಟ್ಟಣದ ಸುತ್ತಮುತ್ತಲ 3-4 ತಾಲೂಕಿನ ಸಾವಿರಾರು ಜನರು ಫ್ರೆಂಚ್‌ರಾಕ್ಸ್ ರೈಲ್ವೇಸ್ಟೇಷನ್ನಿನ ಸಮೀಪದಲ್ಲಿರುವ ತೋಪಿನಲ್ಲಿ ಸಭೆಸೇರಿ, ಮೇಲ್ಕಂಡ ತೆರಿಗೆಯನ್ನು ವಜಾ ಮಾಡಬೇಕೆಂದು ಸರ್ಕಾರದಲ್ಲಿ ವಿಜ್ಞಾಪಿಸಿಕೊಂಡಿರುತ್ತಾರೆ.

ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಶ್ರೀ|| ಡಿ. ವಾಸುದೇವರಾವ್ ಎಂಬ ವಕೀಲರಿಗೆ ಒಬ್ಬ ಮುಯಾಳೀ ಹೆಂಗಸು ಒಂದು ಸಿವಿಲ್ ಮೊಕದ್ದಮೆಯನ್ನು ಕೊಟ್ಟಿದ್ದಳೆಂದೂ, ಮೊಕದ್ದಮೆಯ ದಿವಸ ವಕೀಲರು ಕೋರ್ಟಿಗೆ ಹೋಗಲಿಲ್ಲವಾದ್ದರಿಂದ ಮೊಕದ್ದಮೆಯು ಏಕಪಕ್ಷ ಡಿಕ್ರಿಆಯಿತೆಂದೂ, ಇದರಿಂದ ಆ ಹೆಂಗಸು ಮಹಾಕುಪಿತಳಾಗಿ ಇದೇ ನವೆಂಬರು 19ನೆಯ ತಾರೀಖಿನ ದಿವಸ ಬೆಳಗ್ಗೆ ಬೀದಿಯಲ್ಲಿ ವಕೀಲರನ್ನು ಮನಸ್ವಿ ಬೈದು ಮಾನಭಂಗ ಮಾಡಿದಳೆಂದೂ, ಇದರ ಮೇಲೆ ವಕೀಲರು ಪೋಲೀಸ್‌ಕಂಪ್ಲೇಂಟ್ ಕೊಟ್ಟು ಆ ಹೆಂಗಸಿನ ಮೇಲೆ ಮೊಕದ್ದಮೆ ಮಾಡಿರುವರೆಂದೂ ತಿಳಿಬಂದಿದೆ.

ಕಳೆದ ಸೋಮವಾರ ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ದಿವಂಗತ ಶ್ರೀ ವಸಂತ ವೆಂಕಟಕೃಷ್ಣಯ್ಯನವರ ಸ್ಮಾರಕ ದಿನಾಚರಣೆಯು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಎ. ಜೆ. ಸಿ. ರೋಲೋರವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಪ್ರೊ|| ಎ. ಎಲ್. ಡಿ'ಸೌಜಾ, ರೆ|| ಟರ್ನರ್ ಮೊದಲಾದವರು ದಿವಂಗತರ ಗುಣಕಥನವನ್ನು ಮಾಡಿದರು. ಅನಂತರ, ಅವರ ಸ್ಮಾರಕವನ್ನು ಏರ್ಪಡಿಸುವದಕ್ಕಾಗಿ ಒಂದು ಸಮಿತಿಯು ಏರ್ಪಡಿಸಲ್ಪಟ್ಟಿತು. ಈ ಸಮಿತಿಗೆ ಶ್ರೀ|| ಅಂಬಳೆ ಸುಬ್ರಹ್ಮಣ್ಯಯ್ಯರ್‌ರವರು ಅಧ್ಯಕ್ಷರಾಗಿಯೂ, ಶ್ರೀ|| ಲೋಕಹಿತೈಷಿ ನಂಜುಂಡರಾಜ ಅರಸರವರು, ಶ್ರೀ|| ಬಿ. ಗರುಡಾಚಾರ್ಯರು ಮತ್ತು ಶ್ರೀ|| ಹೊಸಕೊಪ್ಪ ಕೃಷ್ಣರಾಯರು ಉಪಾಧ್ಯಕ್ಷರುಗಳಾಗಿಯೂ, ಶ್ರೀ|| ಪಾವಳ್ಳಿ ಸೀತಾರಾಮಯ್ಯನವರು, ರಾವ್‌ಸಾಹೇಬ್ ಶ್ರೀ|| ಎಂ. ರಾಮಸ್ವಾಮಿಯವರು ಮತ್ತು ಶ್ರೀ|| ಜಿ. ಜೋಯಿಸರವರು ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು.

ಪ್ರೊಫೆಸರರಮೇಲೆ ವಿದ್ಯಾರ್ಥಿಯ ಮೊಕದ್ದಮೆ

ಮುಂಬಯಿಯ ಸೇಂಟ್ ಝೇವಿಯರ ಕಾಲೇಜಿನಲ್ಲಿ ಇಂಟರ್ ತರಗತಿಯ ವಿದ್ಯಾರ್ಥಿಯೊಬ್ಬನು ಆ ಕಾಲೇಜಿನ ಪ್ರೊಫೆಸರಾದ ಶ್ರೀ|| ಭಾಗವತರವರು ಪರೀಕ್ಷೆಯ ಅಂಕಿಗಳಲ್ಲಿ ಹೆಚ್ಚುಕಡಿಮೆಮಾಡಿರುವದರಿಂದ ತಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲವೆಂದು ಹೇಳಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ಪ್ರೊಫೆಸರರವರ ಮೇಲೆ ಮೊಕದ್ದಮೆಯನ್ನು ಹೂಡಿರುತ್ತಾನೆ. ಮ್ಯಾಜಿಸ್ಟ್ರೇಟರು ಮೇಲ್ಕಂಡ ವಿದ್ಯಾರ್ಥಿಯ ಉತ್ತರಪತ್ರಿಕೆಗಳನ್ನು ಕೋರ್ಟಿಗೆ ಹಾಜರ್ಮಾಡಬೇಕೆಂದೂ, ತಪ್ಪಿದರೆ ವಿಶ್ವವಿದ್ಯಾನಿಲಯದ ಮೇಲೆ ಸರ್ಚ್ ವಾರಂಟು ಹೊರಡಿಸಲ್ಪಡುವದೆಂದೂ ಅಪ್ಪಣೆಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಮರವನ್ನು ಕೊಯ್ಯುವವರಿಗೆ ಎಷ್ಟು ವಯಸ್ಸಾದರೂ ತಲೆಕೂದಲೇ ಉದುರುವದಿಲ್ಲವಂತೆ!

ಇಂದೂರು ಮಹಾರಾಣಿಯವರು ಪ್ಯಾರಿಸ್ಸಿನ 'ಅಮೇರಿಕನ್ ಆಸ್ಪತ್ರೆ' ಯಲ್ಲಿ ಹೆಣ್ಣುಶಿಶುವನ್ನು ಪ್ರಸವಿಸಿರುವರು.

ಜೆಸ್ಸೂರ್ ಡಿಸ್ಟ್ರಿಕ್ಟಿನಲ್ಲಿ ಹೆಮಿತುಲ್ಲಾ ಷೇಕ್ ಎಂಬವನು ಆರುದಿನಗಳವರೆಗೆ ಉಪವಾಸವಿದ್ದು 7 ನೆಯ ದಿವಸ ಆತ್ಮಹತ್ಯಮಾಡಿಕೊಂಡನು.

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೆನಿಸಿಕೊಂಡಿದ್ದ ರಷ್ಯಾದೇಶದ ಒಂದು ವಿಮಾನವು ಟಾರ್ಪೇಮಿನಲ್ಲಿ ಮುರಿದುಬಿದ್ದು 14 ಜನರು ಮೃತಪಟ್ಟರು.

ಡ್ಯೂಕ್ ಆಫ್ ನಾರ್ತಂಬರ್‌ಲೆಂಡ್‌ರವರಿಗೆ ಕೆನ್ಯಾದಲ್ಲಿ ಷಿಕಾರಿಗೆ ಸಾಕಾದಷ್ಟು ಹುಲಿಗಳಿಲ್ಲದಿರುವದರಿಂದ ಹುಲಿ ಬೇಟೆಗಾಗಿ ಹಿಂದೂಸ್ಥಾನಕ್ಕೆ ಬರುವರಂತೆ!

ಇಟಲಿ ಸರಕಾರದವರು ತಮ್ಮ ದೇಶದಲ್ಲಿರುವ ರಸ್ತೆಗಳನ್ನೆಲ್ಲಾ ರಿಪೇರಿ ಮಾಡಿಸುವದಕ್ಕೆ ಪ್ರಾರಂಭಿಸಿಲ ವರು. ಇದರಿಂದ 47,000ಜನ ನಿರುದ್ಯೋಗಿಗಳಿಗೆ ಕೆಲಸ ದೊರೆತಿರುವದಂತೆ!

ಜಪಾನ್‌ದೇಶದ "ಕುರಪಿಕಿ ಕೆನ್‌ಷೋಕು ಕಂಪೆನಿ" ಯವರು ಹತ್ತಿಯ ಮೇಲೆ ಪೈಪೋಟಿಯನ್ನು ಮಾಡುವದಕ್ಕಾಗಿ ಒಂದು ಹೊಸತರಹದ 'ಕೃತಕ ಹತ್ತಿ' ಯನ್ನು ತಯಾರಿಸಿರುವರಂತೆ!

ಪೋರ್ಚುಗಲ್ ದೇಶದ ಜೋಸ್ ಡಿ ಸಾಂಟಾಸ್ ಎಂಬವನಿಗೆ ಮದುವೆಯಾದಕೂಡಲೇ ಮನಸ್ಸಿನಲ್ಲಿ ಏನೋ ಒಂದು ವಿಧವಾದ ಭೀತಿಯುಂಟಾಗಿ ಮಾತನಾಡುವ ಶಕ್ತಿಯೇ ಅಡಗಿಹೋಗಿರುವದಂತೆ!

ಇಂಡಿಯಾದೇಶದ ಕೆಲವು ಜನ ಮಂತ್ರಗಾರರು ಲಂಡನ್ನಿನ 'ಮಂತ್ರವಾದಿಗಳ ಸಂಘ' ದಲ್ಲಿ ಕೆಲವು ಆಶ್ಚರ್ಯಕರಗಳಾದ ಯಕ್ಷಿಣೀ ವಿನೋದಗಳನ್ನು ಮಾಡಿ ತೋರಿಸಿದರು. ಲಂಡನ್ ಕ್ಲಬ್ಬಿನವರು ಅದರಿಂದ ಅತ್ಯಾನಂದಹೊಂದಿ ಅವರಿಗೆ ಒಂದು ಮೆಡಲನ್ನು ಕೊಟ್ಟರು.

ಅಮೇರಿಕಾದೇಶಕ್ಕೆ ಸೇರಿದ್ದ 'ಲಾಂಗ್' ಎಂಬ ದ್ವೀಪದಲ್ಲಿರುವ ಸೆಂಟ್ರಲ್ ಐಲಿಪ್‌ಸ್ಟೇಟ್ ಆಸ್ಪತ್ರೆಯಲ್ಲಿ ಹೊಟ್ಟೆನೋವಿನಿಂದ ನರಳುತ್ತಿದ್ದ ಒಬ್ಬ ಹೆಂಗಸಿಗೆ ಆಪರೇಷನ್ ಮಾಡಿದಾಗ ಆಕೆಯ ಹೊಟ್ಟೆಯಲ್ಲಿ 48 ಚಮಚಗಳೂ, 2 ಬೋಲ್ಟುಗಳೂ, ಒಂದು ಸ್ಕ್ರೂ ಮತ್ತು ಒಂದು ಸೂಜಿಯೂ ಇದ್ದವಂತೆ!

ಆಸ್ಟ್ರೇಲಿಯಾ ದೇಶದ ಟಪ್ಪಾಲ್ ಆಫೀಸಿನ ಕೆಲಸ ಮಾಡುತ್ತಿದ್ದ ಮಾರ್ಟಿನ್ ಎಡ್ವರ್ಡ್ ಬಕ ಎಂಬ ಐರ್ಲೆಂಡ್ ದೇಶಸ್ಥನು 10,00,000 ರೂ. ಸಿ. ಆಸ್ತಿಯನ್ನು ಗಳಿಸಿ ಮೃತಪಟ್ಟನು. ಆ ಆಸ್ತಿಗಾಗಿ ಸದ್ಯಃ 700 ಐರಿಷ್ ಜನರು ಬಡಿದಾಡುತ್ತಿರುವರು. ಕೋರ್ಟಿನವರು ಅವರಲ್ಲಿ 7 ಜನರಿಗೆ ನಿಜವಾದ ಹಕ್ಕಿರುವದೆಂದು ಭಾವಿಸಿ ಮೊಕದ್ದಮೆಯನ್ನು ಮುಂದುವರಿಸಿರುವರು.

ಅಮೇರಿಕೆಯ ಪ್ರೆಸಿಡೆಂಟರಾದ ರೂಜ್‌ವೆಲ್ಟ್‌ರವರು ತಮ್ಮ ದೇಶದಲ್ಲಿ ಇನ್ನು ಮುಂದೆ ಸರಕಾರದ ಅಪ್ಪಣೆಯಿಲ್ಲದೆ ಹತ್ತಿಯ ಗಿರಣಿಗಳಲ್ಲಿ ಹೊಸಯಂತ್ರಗಳನ್ನು ಸ್ಥಾಪಿಸಕೂಡದೆಂದು ಅಪ್ಪಣೆ ಮಾಡಿರುವರು. ಕೆಲವು ತಿಂಗಳುಗಳಿಂದೀಚೆಗೆ ಅಲ್ಲಿ ಚರಕದ ಉಪಯೋಗವು ದಿನದಿನಕ್ಕೆ ಹೆಚ್ಚುತ್ತಾ ಬಂದಿರುವದು. ಈ ಹೊಸಕಾಯಿದೆಯಿಂದ ಚರಕಕ್ಕೂ, ಕೈನೂಲಿನ ಬಟ್ಟೆಗೂ ಹೆಚ್ಚು ಪ್ರೋತ್ಸಾಹವು ದೊರೆಯುವದೆಂದು ಭಾವಿಸಲ್ಪಟ್ಟಿರುವದು.

ಜಲಂಧರ ಡಿಸ್ಟ್ರಿಕ್ಟಿಗೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಮುಸಮ್ಮತ್ ರಹ್‌ಮತೇ ಎಂಬೊಬ್ಬ ವಿಧವೆಯು ತಂದೆಯ ಮನೆಯಲ್ಲಿ ವಾಸಮಾಡಿಕೊಂಡಿದ್ದಳು. ನೂರ್‌ಬಕ್ಷ್ ಮತ್ತು ನೂರಾ ಎಂಬಿಬ್ಬರು ಆ ವಿಧವೆಯ ಗಂಡನ ಆಸ್ತಿಯನ್ನು ಅವಳ ಹೆಸರಿಗೆ ಬದಲಾಯಿಸಿಕೊಡುವೆವೆಂದು ಹೇಳಿ ಅವಳನ್ನು ತಮ್ಮ ಊರಿಗೆ ಕರೆದುಕೊಂಡು ಹೋದರು. ಅನಂತರ ನೂರ್‌ಬಕ್ಷನು ಅವಳನ್ನು ಬಲಾತ್ಕಾರವಾಗಿ ನಿಕಾ (ಲಗ್ನ) ಮಾಡಿಕೊಂಡನು. ಈ ವಿಚಾರವು ಆಕೆಯ ತಂದೆಗೆ ತಿಳಿದು ಈಗ ಡಿ|| ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯು ನಡೆಯುತ್ತಿರುವದು.

ಭಯಂಕರವಾದ ಬರಗಾಲ.

ದಕ್ಷಿಣ ಆಫ್ರಿಕಾದೇಶಕ್ಕೆ ಸೇರಿದ "ಬಸೂಟೋಲ್ಯಾಂಡ್" ಮೊದಲಾದ ಪ್ರದೇಶಗಳಲ್ಲಿ 4 ವರ್ಷಗಳ ...

...ಕರ್ತನಿಗ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 14

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಘಂಟೆಗೆ 372 ಮೈಲು!

ಇಟಲಿದೇಶದ ಕ್ಯಾಪ್ಟನ್ ಪೀಟ್ರೋ ಸ್ಕಾಪಿನೆಲ್ಲಿ ಎಂಬ ಪ್ರಸಿದ್ಧ ವೈಮಾನಿಕರು ಅಂಕೋನಾ ಎಂಬಲ್ಲಿ 2,400 ಕುದುರೆಗಳ ಬಲವುಳ್ಳ ಏರೋಪ್ಲೇನನ್ನು ೧ ಘಂಟೆಗೆ 372 ಮೈಲುಗಳ ವೇಗದಲ್ಲಿ ಹಾರಿಸಿ 'ಬ್ಲೇರಿಯಟ್ ಕಪ್' ಎಂಬ 18,750 ರೂ. ಗಳ ಬೆಲೆಯುಳ್ಳ ಅಂತರರಾಷ್ಟ್ರೀಯ ಬಹುಮಾನವನ್ನು ...

ಹಿತ್ತಾಳೆ, ಸೀಸದ, ಬ್ಲಾಕುಗಳು ಅರಗಿನಶೀಲು, ಜವಾನರ ಬಿಲ್ಲೆ ಮತ್ತು ರಬ್ಬರ್ ಮೊಹರುಗಳೂ ತಯಾರಿಸುತ್ತೇವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [48]

ಮಲೇರಿಯಾನ ಮಲೆಜ್ವರ ಸಂಹಾರಿಣೆ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇವರ ಗುಣಕ್ಕಾಗಿ ಮುಖ್ಯಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸ್ ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1, 1.8.0, 7-0-0

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9.0, 1ಔನ್ಸಿಗೆ ರೂ. 1-0-0.

...ಶುದ್ಧ ಚಿಕ್ಕಮುದ್ದುಗಳೂ, ಹೋಮ್ಯೋಪಥಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಬಿಡಿ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪತ್ರಿಕೆಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ನೀವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾಗೂ ಇವಾಗ ಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

[13] 8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (3)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್.
ನಂ. 271, ರಥಬೀದಿ, ಮಂಗಳೂರು.

(3ನೆಯ ಪುಟದಿಂದ ಮುಂದುವರಿದುದು.)

ಪ್ರವೇಶಿಸದಂತೆ ಪ್ರಬಲಪ್ರಯತ್ನಗಳಿಂದ ಜಾಗರೂಕರಾಗಿರಬೇಕು. ಕುಟುಂಬದ ಜನಗಳನ್ನು ಒಂದು ದೇಹಕ್ಕೆ ಹೋಲಿಸಿದಂತವಾಗ ಬೇಕು. ದೇಹದೊಳಗಿನ ಯಾವದೇ ಅವಯವಕ್ಕೆ ಅಪಾಯವಾದರೂ ಇಡೀದೇಹವೇ ನಡುಗುವದು. ನಖ-ಶಿಖಾಂತವಾಗಿಯೂ ಯಾವತ್ತಕಕ್ಕೂ ಬಾಧೆಯಾಗಬಾರದಲ್ಲವೇ? ದೇಹದ ಸ್ವಾಮಿಯಾದ ಜೀವಾತ್ಮನು ಬುದ್ಧಿಶಕ್ತ್ಯಾದಿಗಳಿಂದ ಅದನ್ನು ಚನ್ನಾಗಿ ರಕ್ಷಿಸುವಂತೆ ನಮ್ಮ ಸಾಂಸಾರಿಕಮನೆಯ ಯಜಮಾನನು ಸಹ ಭ್ರಾತ್ರಿಗ ಎಲ್ಲರನ್ನೂ ...ಪಾಡಿಕೊಂಡು ಹೋದರೆ ...

ತ್ರಿಕಾಲೇಷು ವಿಧಿವದ್ಭಸ್ಮಧಾರಣಮಪ್ರಮಾದೇನ ಕಾರ್ಯಂ | ಪ್ರಮಾದಾತ್ಪತಿತೋ ಭವತಿ | ಭಸ್ಮಧಾರಣಮಕೃತ್ವಾ ನಾಶ್ನೀಯಾದಾಪೋऽನ್ನಮನ್ಯದ್ವಾ ||

(ಭಸ್ಮಜಾಬಾಲೋಪನಿಷತ್)

ಮೋಕ್ಷಸಾಧನಹೇತುಭೂತವಾದ ಭಸ್ಮವನ್ನು ಪ್ರಾತರ್ಮಧ್ಯಾಹ್ನಸಾಯಂಕಾಲಗಳಲ್ಲಿ ವಿಧಿಗನುಸಾರವಾಗಿ ಧರಿಸಬೇಕೆಂದೂ, ತಪ್ಪಿದರೆ ಮಾನವನು ಪಾಪಿಯಾಗುವನೆಂದೂ, ಭಸ್ಮಧಾರಣವನ್ನು ಮಾಡಿಕೊಳ್ಳದೆ ಅನ್ನವನ್ನಾಗಲಿ ಜಲವನ್ನಾಗಲಿ ಗ್ರಹಿಸಕೂಡದೆಂದೂ ಭಸ್ಮಜಾಬಾಲಿಕೀಶ್ರುತಿಯು ಶಾಸನಮಾಡಿರುವುದರಿಂದ, ಪ್ರತಿಯೊಬ್ಬರೂ ಇಹಪರಸುಖಸಾಧಕವಾದೀಪವಿತ್ರಭಸ್ಮವನ್ನು ಅಸಾಧಾರಣವಾದ ಶ್ರದ್ಧೆಯಿಂದ ತ್ರಿಕಾಲಗಳಲ್ಲಿಯೂ ಧರಿಸಿ ಧನ್ಯರಾಗಬೇಕಾಗಿದೆ. ವೇದಪ್ರತಿಪಾದ್ಯವಾದ ಭಸ್ಮಧಾರಣಮಹಿಮೆಯು ಅಸಾಧಾರಣವಾದುದರಿಂದ ಈ ಭಸ್ಮವನ್ನು ದೇವತೆಗಳೂ ಮಹರ್ಷಿಗಳೂ ಧರಿಸಿಕೊಳ್ಳುವರೆಂದು ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವುವು.

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ದೇವಾಃ ಶಕ್ರಪುರೋಗಮಾಃ |
ತ್ರಿಪುಂಡ್ರಂ ಧಾರಯಂತ್ಯೇವ ಭಸ್ಮನಾ ಪರಿಕಲ್ಪಿತಂ ||
ವಸಿಷ್ಠಾದ್ಯಾ ಮಹಾಭಾಗಾ ಮುನಯಃ ಶ್ರುತಿಕೋವಿದಾಃ |
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಂ ||

ಬ್ರಹ್ಮ-ವಿಷ್ಣು-ರುದ್ರ-ಇಂದ್ರ ಇವರೇ ಮೊದಲಾದ ದೇವತೆಗಳೂ, ವೇದಪಾರೀಣರಾದ ವಸಿಷ್ಠಾದಿ ಮಹರ್ಷಿಗಳೂ ಎಲ್ಲಾ ಕಾಲಗಳಲ್ಲಿಯೂ ಭಸ್ಮತ್ರಿಪುಂಡ್ರವನ್ನು ಧರಿಸಿಕೊಳ್ಳುತ್ತಿರುವರೆಂಬ ಶಿವಾಗಮಾಭಿಪ್ರಾಯವನ್ನು ಸರ್ವಜ್ಞಮೂರ್ತಿಗಳಾದ ಶ್ರೀ ಜಗದ್ಗುರುರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಅಪ್ಪಣೆಕೊಡಿಸಿರುವರು. ದೇವಾಧಿದೇವತೆಗಳಿಗೂ ಸಹ ಮಾನ್ಯವಾದ ಭಸ್ಮಧಾರಣವು ಪಾಪಾಧಿಕವಾದೀ ಕಾಲದಲ್ಲಿ ಅಮಾನ್ಯತವಾಗಿ ಹೋಗಿದೆ. ಇಂಗ್ಲೀಷ್ ವಿದ್ಯೆಯ ಪ್ರಭಾವದಿಂದ ಎಲ್ಲಾ ಮತೀಯರ ಮತಧರ್ಮಗಳು ನಷ್ಟವಾಗುತ್ತಿರುವಂತೆ ಶೈವಮತದ ಭಸ್ಮಧಾರಣವೂ ಸಹ ನಷ್ಟವಾಗತೊಡಗಿದೆ. ಇಂಗ್ಲೀಷ್ ಭಾಷೆಯನ್ನು ಕಲಿತ ಕೆಲ ಜನ ನಾಸ್ತಿಕರು ಭಸ್ಮಧಾರಣಮಾಡಿಕೊಳ್ಳುವುದೇ ಒಂದು ತರಹದ ಅಪಮಾನವೆಂದು ಭಾವಿಸಿ ಭಸ್ಮವನ್ನೇ ಧರಿಸಿಕೊಳ್ಳುವುದಿಲ್ಲ. ಇದು ಇವರ ಬಹುಜನ್ಮಕೃತ ಪಾಪದ ಫಲವನ್ನು ಸೂಚಿಸುವದಲ್ಲದೆ ಬೇರೆಯಿಲ್ಲ. ಭಸ್ಮಧಾರಣವು ಸಾಮಾನ್ಯವಾದುದಲ್ಲ. ಅದು ಇಹಪರಸುಖಗಳೆರಡನ್ನೂ ಕೊಡತಕ್ಕ ಮಹಾಪವಿತ್ರವಸ್ತುವಾಗಿದೆ ಮನುಷ್ಯನು ಸದಾ ಶರೀರದ ಮೇಲೆ ಭಸ್ಮವನ್ನು ಧರಿಸುತ್ತಿದ್ದರೆ ಅವನಿಗೆ ಅಂಟುರೋಗಗಳಾವುವೂ ಅಂಟುವುದಿಲ್ಲ. ಭಸ್ಮದಲ್ಲಿ ರೋಗಪರಿಹಾರಕವಾದ ಅತ್ಯದ್ಭುತ ಶಕ್ತಿಯುಂಟೆಂಬುದನ್ನು ವಿದೇಶೀಯ ವೈದ್ಯಶಾಸ್ತ್ರಪ್ರವೀಣರೇ ಒಪ್ಪಿದ್ದಾರೆ. ಚಳಿಗಾಲದಲ್ಲಿ ಔಷ್ಣ್ಯವನ್ನುಂಟುಮಾಡತಕ್ಕ ಧರ್ಮವೂ, ಉಷ್ಣಕಾಲದಲ್ಲಿ ಶೈತ್ಯವನ್ನುಂಟುಮಾಡತಕ್ಕ ಧರ್ಮವೂ ಈ ಪವಿತ್ರವಸ್ತುವಿನಲ್ಲಿ ಸ್ವಭಾವಸಿದ್ಧವಾಗಿ ವಾಸಮಾಡಿಕೊಂಡಿರುತ್ತವೆ. ಈ ರೀತಿಯಾಗಿ ಈ ಭಸ್ಮವು ಇಹಸುಖಕಾರಣವಾಗಿರುವುದಲ್ಲದೆ, ಶಿವಪ್ರಕಾಶರೂಪವಾಗಿರುವುದರಿಂದ ಮೋಕ್ಷಸುಖಕ್ಕೂ ಕಾರಣೀಭೂತವಾಗಿರುವುದು. ಆದುದರಿಂದಲೇ ತ್ರಿಕಾಲಜ್ಞಾನಿಗಳಾದ ಪೂರ್ವಾಚಾರ್ಯರು ಈ ಪವಿತ್ರವಸ್ತುವನ್ನು ಪ್ರತಿಯೊಬ್ಬರೂ ಧರಿಸಿ ಮೋಕ್ಷಸಾಮ್ರಾಜ್ಯಸುಖಭಾಗಿಗಳಾಗಬೇಕೆಂದು ಬೋಧಿಸಿರುವರು. ಈ ತತ್ತ್ವವನ್ನೆಲ್ಲಾ ಈಗಿನ ಕಾಲದ ನವೀನ ನಾಸ್ತಿಕರು ಶುದ್ಧಹೃದಯದಿಂದ ಪರಾಮರ್ಶಿಸಿ ಭಸ್ಮಧಾರಣದ ಮಹತ್ತ್ವವನ್ನು ತಿಳಿದುಕೊಂಡು ಅದರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಧರಿಸಿ ಮಂಗಲಮಯಶರೀರ

ದಂತೆ ಪರಸ್ಪರವಾಗಿ ಒಕ್ಕಟ್ಟನ್ನು ಪಡೆದು ಸದಾ ಸುಖೋಪಭೋಗವನ್ನು ಪಡೆಯಬೇಕು. 'ಪ್ರೇಮ'ದ ಕಟ್ಟು ಯಾರ ಮನೆಗಿರುವದಿಲ್ಲವೋ ಅವರ ಮನೆಗೆ ಅಸೂಯಾ ರಾಕ್ಷಸಿಯು ಪ್ರವೇಶಿಸುವಳು. ದ್ವೇಷಾಸೂಯೆಗಳು ವಾಸವಾಡಿದ ಮನೆತನವು ನಾಶವಾಗುವದು. ಗೃಹಕಲಹಾಗ್ನಿಯನ್ನು ನಾಶಮಾಡಲು ಯಾವತ್ತರೂ ಪ್ರೇಮಭಾಗಿಗಳಾಗಬೇಕು. ಪ್ರೇಮವು ಜಗತ್ತನ್ನು ಗೆಲ್ಲುವಾಗ ಮನೆತನದ ಗೌರವ ಪ್ರತಿಷ್ಠೆಗಳನ್ನು ಕಾಯಲಾರದೇ? ಗೃಹಸ್ಥಾಶ್ರಮಿಗಳಾದ ಯಾವತ್ತರೂ ಗೃಹಕಲಹ ಪಿಶಾಚಿಗೆ ಅವಕಾಶ ಕೊಡದಂತೆ ಒಕ್ಕಟ್ಟಿನ ಬಲವನ್ನು ಬಲಪಡಿಸಬೇಕಾಗಿ ವಿನೋದನ ಹಾರ್ದಿಕೆ.

ಎಂದೂ ಲೋಪವನ್ನು ...

ದೇಶೀಯರ ಹೃದಯದಲ್ಲಿ ನಾಲ್ಕು ಇಂಗ್ಲೀಷ ಅಕ್ಷರಗಳು ಪ್ರವೇಶವಾದಕೂಡಲೇ ಇವರು ತಮ್ಮ ಮತಧರ್ಮಗಳಿಗೆ ತಿಲಾಂಜಲಿಯನ್ನು ಕೊಡಹತ್ತುವರು. ಇದು ಇವರ ದುರ್ದೈವವೋ ನಮ್ಮ ಭರತಖಂಡದ ದುರ್ದೈವವೋ ತಿಳಿಯದಾಗಿದೆ. ಅಸ್ತು! ಜಗನ್ನಿಯಾಮಕನಾದ ಪರಶಿವನು ಸನಾತನಧರ್ಮದ ಮೇಲೆ ಕೃಪಾಕಟಾಕ್ಷವನ್ನಿತ್ತು ತನ್ನ ಮತಧರ್ಮಗಳು ಸರ್ವರಲ್ಲಿಯೂ ಬೇರೂರುವಂತೆ ಮಾಡಿ ನಾಸ್ತಿಕವರ್ಗಕ್ಕೆ ಸದ್ಬುದ್ಧಿಯನ್ನನುಗ್ರಹಿಸಿ ಪವಿತ್ರ ಧರ್ಮಗಳನ್ನು ಪೂರ್ವದಂತೆ ಪ್ರಕಾಶಗೊಳಿಸಬೇಕೆಂದು ಆ ಜಗನ್ನಿಯಾಮಕನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಸಂಕಾರದವರು 1934 ನೇ ಇಸವಿ ಜನವರಿ 1 ನೇ ತಾರೀಖಿನಿಂದ ಅಮಾವಾಸ್ಯೆಯದಿವಸ ಎಲ್ಲಾ ಸರಕಾರೀ ಕಚೇರಿಗಳನ್ನೂ ಬೆಳಗಿನ ವೇಳೆ ಮಾಡತಕ್ಕದ್ದೆಂದು ಅಪ್ಪಣೆಮಾಡಿರುತ್ತಾರೆ.

ಮುನಿಸಾಮಿ ಎಂಬವನು ಕೋಲಾರದ ಗಣಿಯ ಚಿನ್ನವನ್ನು ಕದ್ದುತಂದು ದೇವನಹಳ್ಳಿಯಲ್ಲಿ ವಿಕರಿ ಮಾಡುತ್ತಿದ್ದನೆಂಬ ಕಾರಣದ ಮೇಲೆ ಪೋಲೀಸರು ಅವನನ್ನು ದಸ್ತಗಿರಿ ಮಾಡಿರುತ್ತಾರೆ.

ಇಂಡಿಯಾ ಸರಕಾರದವರು ಬೆಂಗಳೂರಿನಲ್ಲಿ ಶೀಘ್ರದಲ್ಲಿಯೇ ಭಾರತೀಯ ಫಿರಂಗಿ ಸೈನ್ಯವೊಂದನ್ನು ಏರ್ಪಡಿಸಬೇಕೆಂದು ನಿರ್ಧರಿಸಿರುವರು. ಶಿಪಾಯಿ ದಂಗೆಯಾದಂದಿನಿಂದಲೂ ಭಾರತೀಯರಾರೂ ಫಿರಂಗಿ ಸೈನ್ಯಕ್ಕೆ ಸೇರಿಸಲ್ಪಡುತ್ತಿರಲಿಲ್ಲ.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಡಿಸೆಂಬರ್ 16 ನೇ ತಾರೀಖಿನ ದಿವಸ ಹೊಸ ಮೆಂಬರುಗಳ ಚುನಾವಣೆಯು ನಡೆಯುವದರಿಂದ ಆ ದಿವಸ ಎಲ್ಲಾ ಕಚೇರಿಗಳಿಗೂ ಮತ್ತು ಶಾಲೆಗಳಿಗೂ ರಜೆಯನ್ನು ಕೊಡತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಹಯಾತ್ ಎಂಬವನು ಬೌರಿಂಗ್‌ಪೇಟೆ ವೆಂಕಟರಾಮಶೆಟ್ಟರ ಮನೆಯಲ್ಲಿ 3,000 ರೂ. ಗಳ ನಗನಾಣ್ಯಗಳನ್ನು ಕದ್ದನೆಂಬ ಅಪಾದನೆಯ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ 4 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು. ಈ ಮೊದಲು ಇವನಿಗೆ 14 ಸಾರೆ ಶಿಕ್ಷೆಯಾಗಿದ್ದಿತಂತೆ!

ಕೃಷ್ಣರಾಜಸಾಗರ ಜಲಾಶಯದ ಮುಂಭಾಗದಲ್ಲಿ ನಿರ್ಮಿಸಲ್ಪಟ್ಟಿರುವ ಮನೋಹರವಾದ ಜಲಯಂತ್ರಗಳಿಂದ ರಂಜಿಸುವ ತೋಟವನ್ನು ನೋಡಲು ಪ್ರೇಕ್ಷಕರಾಗಿ ಬರುವ ಜನರಿಂದ ಡಿಸೆಂಬರ್ 1 ನೆ ತಾರೀಖಿನ ಲಾಗಾಯಿತು ತಲೆಗೆ 1 ಆಣೆಯಂತೆ ಫೀಜ ವಸೂಲು ಮಾಡತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಭದ್ರಾವತಿಯ ಮಹಮದ್ ಖಾಸಿಂ ಎಂಬವನು ಕಳ್ಳತನದಿಂದ ಸಾರಾಯಿ ತಯಾರು ಮಾಡುತ್ತಿದ್ದನೆಂಬ ಕಾರಣದಮೇಲೆ ಎಕ್ಸೈಜ್ ಇಲಾಖೆಯವರು ಪೋಲೀಸರ ಸಹಾಯದಿಂದ ಅವನ ಮನೆಯನ್ನು ಜಪ್ತಿ ಮಾಡಿ ಅಲ್ಲಿ ದೊರೆತ ಸಾಮಾನುಗಳನ್ನು ಸ್ವಾಧೀನಪಡಿಸಿಕೊಂಡರು. ಈ ಸಂದರ್ಭದಲ್ಲಿ ಖಾಸೀಮನ ಮಕ್ಕಳಿಗೂ ಪೋಲೀಸರಿಗೂ ಹೊಡೆದಾಟವಾಗಿ, ಕೆಲವರಿಗೆ ಗಾಯಗಳಾದವು. ಪೋಲೀಸರು 3 ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಶ್ರೀ ಕೊಟ್ಟೂರೇಶನ ಕಾರ್ತಿಕ ಮಹೋತ್ಸವ,

ಕೊಟ್ಟೂರು.

ಬಳ್ಳಾರಿ ಡಿ|| ಕೊಟ್ಟೂರು ಪಟ್ಟಣದಲ್ಲಿ ಅಗಾಧಮಹಿಮಾಶೀಲನಾದ ಶ್ರೀ ಕೊಟ್ಟೂರೇಶನ ಕಾರ್ತಿಕಮಹೋತ್ಸವವು ಇದೇ ಮಾರ್ಗಶಿರ ಬಹುಳ ೩ (ತಾ|| 4—12—33) ಸೋಮವಾರ ದಿವಸೆ ಪದ್ಧತಿ ಮೇರೆಗೆ ಬಹು ವಿಜೃಂಭಣೆಯಿಂದ ನಡೆಯುತ್ತದೆ. ...ಹವೆಯು ಚನ್ನಾಗಿರುತ್ತದೆ. ಆ ಕಾಲಕ್ಕೆ ಭಕ್ತರು ಆಗಮಿಸಿ ಕೃತಾರ್ಥರಾಗಬೇಕೆಂದು ಆಶಿಸುತ್ತೇನೆ.

ಪಿ. ಯಂ. ಮರುಳಸಿದ್ಧಯ್ಯ,
ಕೊಟ್ಟೂರು.

ಹರಿಹರ.

ನಾವುಗಳು ಬೀರೂರಿನ ಇಂದ್ರಜಾಲವಿದ್ಯಾವಿಚಕ್ಷಣರಾದ ಪ್ರೊಫೆಸರ್ ಎಸ್. ವಿ. ಶಾಂತಯ್ಯನವರ ವಿಷಯವನ್ನು ಪತ್ರಿಕೆಗಳಲ್ಲಿ ಓದುತ್ತ ಕರ್ಣಾನಂದವನ್ನು ಹೊಂದುತ್ತಿದ್ದೆವು. ಇಲ್ಲಿ ಪ್ರತ್ಯಕ್ಷವಾಗಿ ಅವರ ವಿದ್ಯೆಯನ್ನು ನೋಡಿ ನೇತ್ರಾನಂದವನ್ನು ಹೊಂದಿದೆವು. ಇವರು ತಾವು ಸಂಪಾದಿಸಿರುವ ಇಂದ್ರಜಾಲವಿದ್ಯೆಯನ್ನು ಲಲಿತವಾದ ಉಪನ್ಯಾಸದೊಡನೆ ಇಲ್ಲಿಯ ಮಿಡ್ಲ್‌ಸ್ಕೂಲ್ ಕಟ್ಟಡದಲ್ಲಿ ತೋರಿಸಿದರು. ಮೆ|| ಅಮಲ್ದಾರ್‌ರವರು ಪ್ರೊಫೆಸರ್‌ರವರ ಅಗಾಧವಾದ ವಿದ್ಯೆಯನ್ನು ಪರಾಮರ್ಶಿಸಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿ ಧನರೂಪದೊಡನೆ ಸಹಾಯಮಾಡಿ ಇವರ ಗುಣಕಥನವನ್ನು ಮಾಡಿ ಸದರಿಯವರಿಗೆ ಶ್ರೇಯಸ್ಸನ್ನು ಕೋರಿದರು. ಜಗದಾಚಾರ್ಯರು ಇವರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಕೋರುವ,

ಪ್ರತ್ಯಕ್ಷದರ್ಶಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚು—
ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 5

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೊ. ನಂ. 1246. ಮದರಾಸು.
K. N. BENSON & Co.,
[4] P. B. 1246, MADRAS.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮುಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕನಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂಮೆಂಟ್ಸಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಘಂಟೆಯನ್ನು ತೋರಿಸುವವು. ಒಳಗಡೆ ಕೆಂಪು ಇಟ್ಟಿರುವದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.

ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿವಸಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
[4] THE CITY MART,
168, China Bazaar, MADRAS

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 14

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [48]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರರಾದುದಲ್ಲದೇ ಇವರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1-8-0, 7-0-0

ಹೂಫಿಂಗ್ ಕಫ್ ರಿಮೆಡಿ—ಕಪ್ಪೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.

½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಟಿಂಕ್ಚರ್‌ಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪತ್ರಿಕೆಗೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [13]

ಕಂಪೌಂಡ್ ಸಿರಪು ಬ್ಲಡ್—ಉಬ್ಬಸ, ನೇವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯು ದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (3)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿಬಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ತಿಪ್ಪರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟಾಭಿಷೇಕಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಳ್ಳಿಯ ರೋಗಗಳು, ಕಣ್ಣುಗಳಲ್ಲಿ ಉಂಟಾ

ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಬ್ಬ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[47] ಪೋ. ಬಾ. ೫೧೧, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ನೇ ಡಿಶಂಬರ್ ೧೯೩೩ [ಸಂಚಿಕೆ ೩೨

ಚಿಂತಾಮಣಿಯಲ್ಲಿ ಹೈಸ್ಕೂಲು ಕಟ್ಟಡದ ಪ್ರವೇಶಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ದಿವಾನ್‌ಸಾಹೇಬರು ಮಾಡಿದ ಭಾಷಣ.

ಮಹಿಳೆಯರೇ ಮತ್ತು ಮಹಾಶಯರೇ,—ಈ ದಿನದ ಉತ್ಸವದಲ್ಲಿ ನಿಮ್ಮೊಡನೆ ಸೇರಿ, ಈ ಹೊಸಕಟ್ಟಡದಲ್ಲಿ ಹೈಸ್ಕೂಲಿನ ತರಗತಿಗಳ ಕೆಲಸವು ಪ್ರಾರಂಭವಾಗಬಹುದೆಂದು ಅನುಮತಿ ಕೊಡುವುದು ನನಗೆ ವಿಶೇಷ ಸಂತೋಷಕರವಾಗಿದೆ. ಈ ಸಾಯಂಕಾಲ ವಿದ್ಯುಚ್ಛಕ್ತಿಯ ದೀಪೋತ್ಸವವನ್ನು ನೆರವೇರಿಸುವ ಸಂತೋಷವೂ ನನಗೆ ಲಭಿಸುವುದಾಗಿದೆ. ಇವೆರಡರಿಂದ ನಿಮಗೆ ದೊರೆಯುವ ಪ್ರಯೋಜನಗಳ ಸ್ವಭಾವವೂ ಒಂದೇ ಆಗಿದೆಯೆಂದು ಹೇಳಬಹುದು. ವಿದ್ಯುಚ್ಛಕ್ತಿಯಿಂದ ನಿಮಗೆ ಶಕ್ತಿಯೂ ಬೆಳಕೂ ದೊರೆಯುತ್ತವೆ. ಎಂದರೆ ನಾನಾ ತಿಳುವಳಿಕೆಯ ಅಂಶಗಳಿಂದಲೂ ಮನಸ್ಸು ಸುಸಜ್ಜಿತವಾಗಿ ವಿಶಾಲಹೊಂದುವುದರ ದೆಸೆಯಿಂದುಂಟಾದ ಶಕ್ತಿಯೂ ಹೈಸ್ಕೂಲಿನಿಂದ ನಿಮಗೆ ದೊರೆಯುತ್ತದೆ. ಅನೇಕ ಶತಮಾನಗಳಿಂದ ರೂಪುಗೊಂಡು ಸಂಗ್ರಹವಾಗಿರುವ ಸಂಸ್ಕೃತಿಯ ಬೆಳಕೂ ಹೈಸ್ಕೂಲಿನಿಂದ ನಿಮಗೆ ದೊರೆಯುತ್ತದೆ. ಈ ಊರಿನಲ್ಲಿ ಹಾಕಿರುವ ತಂತಿಗಳಲ್ಲಿ ಹರಿಯುವ ಪ್ರವಾಹಕ್ಕೆ ಶಿವನಸಮುದ್ರದಲ್ಲಿರುವ ವಿದ್ಯುಚ್ಛಕ್ತಿ ಉತ್ಪತ್ತಿಯ ಯಂತ್ರಗಳೇ ಮೂಲಾಧಾರ. ಆದರೆ ಈ ಹೈಸ್ಕೂಲಿಗೆ ಶಕ್ತಿಯನ್ನೂ, ಸಂಸ್ಕೃತಿಯ ಬೆಳಕನ್ನೂ ಒದಗಿಸುವ ಪ್ರವಾಹಕ್ಕೆ ಜಗತ್ತಿನಲ್ಲಿ ನಾಗರಿಕತೆಯು ನೆಲೆಯೂರಿರುವ ನಾನಾ ದೇಶಗಳಿಂದಲೂ ಸಾಧನ ಸಹಾಯಗಳು ಅನೇಕವಾಗಿ ಲಭಿಸಿವೆ. ಅಷ್ಟೇ ಅಲ್ಲ. ವಿದ್ಯುಚ್ಛಕ್ತಿಯ ಪ್ರವಾಹಕ್ಕೆ ಅಡಚಣೆಯಾಗಿ ಒಂದೊಂದು ವೇಳೆ ಅದು ನಿಂತು ಹೋಗುವುದೂ ಉಂಟು. ಆದರೆ ಈ ಹೈಸ್ಕೂಲಿನಿಂದ ಪ್ರವಹಿಸುವ ತೇಜಸ್ಸಿನ ವಿಷಯದಲ್ಲಿ ಮಾತ್ರ ಆ ಭಯವೇ ಇಲ್ಲ. ಅದು ಒಂದು ಕ್ಷಣಮಾತ್ರವೂ ನಿಲ್ಲುವಂತಿಲ್ಲ.—ಶ್ರೀಮಾನ್ ಕಾರಬಾಕಲು ಸೂರಯ್ಯಶೆಟ್ಟಿಯವರು ಒಪ್ಪಿಸಿದ ಬಿನ್ನವತ್ತಳೆಗಾಗಿಯೂ, ಹತ್ತುಸಾವಿರ ರೂಪಾಯಿಗಳ ವೆಚ್ಚದಲ್ಲಿ ವಿದ್ಯಾರ್ಥಿನಿಲಯವನ್ನು ಕಟ್ಟಿಸಿಕೊಡುವುದಾಗಿ ಒಪ್ಪಿ ಅವರು ತೋರಿಸಿರುವ ಔದಾರ್ಯಕ್ಕಾಗಿಯೂ ವಂದನೆಗಳನ್ನರ್ಪಿಸುವೆನು. ಅದು ಅವರ ನಾಮಾಂಕಿತದ ಮೇಲೆ ಸ್ಥಾಪಿತವಾಗುವುದರಿಂದ ಈ ಊರಿನಲ್ಲಿ ಉಪಕಾರಿಗಳಾದ ಅವರ ಹೆಸರು ಶಾಶ್ವತವಾಗಿರಲು ಅವಕಾಶವಾಗುತ್ತದೆ. ಈ ಊರಿನ ಹೈಸ್ಕೂಲಿನಲ್ಲಿ ವಿಜ್ಞಾನಶಾಸ್ತ್ರದ ಪಾಠಗಳೇ ಮುಂತಾದವು ನಡೆಯುವುದಕ್ಕಾಗಿ ಶ್ರೀಮಾನ್ ಕೊಮರ್ಲ ಗೋಪಾಲಕೃಷ್ಣಶೆಟ್ಟಿಯವರು ಮೂರುಸಾವಿರ ರೂಪಾಯಿ ವೆಚ್ಚದಲ್ಲಿ ಒಂದು ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ ಉದಾರಭಾವದಿಂದ ಒಪ್ಪಿರುತ್ತಾರೆ. ಅವರು ಕಟ್ಟಿಸಿಕೊಡುವುದಾಗಿ ಒಪ್ಪಿರುವ ಕಟ್ಟಡದ ಅಸ್ತಿಭಾರ ಶಿಲೆಯನ್ನು ನಾನು ಪ್ರತಿಷ್ಠಿಸಬೇಕೆಂದು ಕೋರಿದ್ದಾರೆ. ನಾನು ಅತ್ಯಂತ ಸಂತೋಷದಿಂದ ಅದನ್ನು ಪ್ರತಿಷ್ಠಿಸುವೆನು. ಈ ಕಟ್ಟಡದ ದೆಸೆಯಿಂದ ಅವರ ಹೆಸರೂ ಸಹ ಈ ಊರಿನಲ್ಲಿ ಚಿರಸ್ಮರಣೀಯವಾಗಿರಲು ಅವಕಾಶವಾಗುತ್ತದೆ.

ಹೈಸ್ಕೂಲಿನ ಹೊಸಕಟ್ಟಡವನ್ನು ನೋಡಿದರೆ ಮುಂದೆ ಅದರ ಪರಿಣಾಮವು ಯಾವ ರೀತಿಯಲ್ಲಿರಬಹುದೆಂಬ ವಿಚಾರದಲ್ಲಿ ಅಸಹ್ಯಕರವಾದುದೊಂದು ಮತ್ತು ಮನೋಹರವಾದುದೊಂದು ಈ ರೀತಿ ಎರಡು ಬಗೆಯ ಭಾವನೆಗಳು ಸಾಧ್ಯ. ಮೊದಲನೆಯದು, ಈ ಕಟ್ಟಡವು ಹಳೆಯದಾಗಿ ಕೊಳಕಿನಿಂದ ತುಂಬಿರುವುದು, ಹುಡುಗರು ಸಿಕ್ಕಿದಂತೆಲ್ಲ ಗೋಡೆಗಳ ಮೇಲೆ ಗೀಚಿರುವುದು; ಕೊಟಡಿಗಳೆಲ್ಲ ಕೊಳೆಯಿಂದಲೂ ಕಸ್ಮಲಗಳಿಂದಲೂ ತುಂಬಿರುವುದು; ಕಟ್ಟಡದ ಸುತ್ತಲೂ ಕಾಡುಗಿಡಗಳು ಬೆಳೆದುಕೊಂಡು ಕಾಂಪೌಂಡಿನಲ್ಲೆಲ್ಲ ಕಾಗದಗಳ ಚೂರುಗಳು ತುಂಬಿರುವುದು. ಇದೊಂದು ಪರಿಸ್ಥಿತಿ. ಎರಡನೆಯದು: ಈ ಕಟ್ಟಡವು ಈಗಿನಂತೆಯೇ ಚೊಕ್ಕಟವಾಗಿಯೂ ಅಚ್ಚುಕಟ್ಟಾಗಿಯೂ ಸೊಗಸಿನಿಂದಿದ್ದು, ಹುಡುಗರು ಸಿಕ್ಕಿದಂತೆಲ್ಲ ಗೀಚುವ ಅವಾಂತರಕ್ಕೆ ಗೋಡೆಗಳು ಸಿಕ್ಕದಿರುವುದು; ಕಾಂಪೌಂಡಿನಲ್ಲಿ ಕಸಕಡ್ಡಿಗಳಾವುವೂ ಇಲ್ಲದೆ, ಕಟ್ಟಡದ ಸುತ್ತಲೂ ಅಚ್ಚುಕಟ್ಟಾಗಿ ಉತ್ತಮರೀತಿಯಲ್ಲಿ ಏರ್ಪಡಿಸಿದ ತೋಟವಿದ್ದು ಅದರ ಸೊಬಗನ್ನು ಹೆಚ್ಚಿಸುವುದು. ಇದೊಂದು ಪರಿಸ್ಥಿತಿ. ಇವೆರಡರಲ್ಲಿ ಯಾವುದರಂತೆ ಈ ಕಟ್ಟಡವಿರುವುದೋ ನೋಡಬೇಕು. ಸ್ಪಷ್ಟವಾಗಿಯೂ ಖಂಡಿತವಾಗಿಯೂ ಹೇಳುವುದಾದರೆ, ಈ ಕಟ್ಟಡವು ಮುಂದೆ ಹೇಗಿರುವುದೆಂಬುದು ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಪೌರನೀತಿಯ ಕರ್ತವ್ಯಕ್ಕೆ ಎಷ್ಟುಮಟ್ಟಿಗೆ ಗಮನಕೊಡುವರೆಂಬುದನ್ನವಲಂಬಿಸಿರುತ್ತದೆ. ಸಾರ್ವಜನಿಕವಾದ ಕಟ್ಟಡಗಳೇ ಮುಂತಾದವುಗಳಲ್ಲಿ ಆಸಕ್ತಿಯನ್ನು ವಹಿಸಿ ಅವುಗಳನ್ನು ಉತ್ತಮಸ್ಥಿತಿಯಲ್ಲಿ ಕಾಪಾಡಬೇಕೆಂಬ ಕುತೂಹಲವೇ ಆ ಬಗೆಯ ಕರ್ತವ್ಯಬುದ್ಧಿಗೆ ಸಾಮಾನ್ಯ ಗುರುತು. ವಿದ್ಯಾರ್ಥಿಗಳು ಈ ಕಟ್ಟಡದ ಆವರಣವನ್ನು (ಕಾಂಪೌಂಡನ್ನು) ತಮ್ಮ ದೇಹಬಾಧೆಯನ್ನು ಕಳೆದುಕೊಂಡು ಕೊಳಕುಮಾಡಲು ಉಪಯೋಗಿಸುವುದಿಲ್ಲವೆಂದು ನಾನು ನಂಬಿದ್ದೇನೆ. ಈ ಉದ್ದೇಶವು ನೆರವೇರಬೇಕಾದರೆ ಉತ್ತಮವಿಧದ ಕಕ್ಕಸುಗಳೂ ಏರ್ಪಡಬೇಕು; ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲೂ ಬೇಕು. ಇದು ಅಲ್ಪವಿಚಾರವೆಂದು ತೋರಬಹುದಾದರೂ ಇದನ್ನು ಅಸಡ್ಡೆಮಾಡುವುದು ಸರಿಯಲ್ಲ. ಎತ್ತರವನ್ನು ಅಳೆಯಬೇಕಾದರೆ ಒಂದು ಕೆಳಮಟ್ಟವನ್ನಿಟ್ಟುಕೊಂಡು ಅದರ ಮೇಲಕ್ಕಿರುವ ಭಾಗವನ್ನು ಅಳೆಯುವ ಅಂಶವು ನಿಮ್ಮೆಲ್ಲರಿಗೂ ತಿಳಿದೇ ಇದೆ. ಸಮಾಜಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿಯೂ ಕೊನೆಗೆ ಬುದ್ಧಿಶಕ್ತಿಯ ಬೆಳವಣಿಗೆಯಲ್ಲಿಯೂ ಸಹ ಜನಗಳು ಮುಂದುವರಿದಿದ್ದಾರೆಯೇ ಎಂಬುದನ್ನು ನಿರ್ಧರಿಸುವುದರಲ್ಲಿ ಪರಿಗಣಿಸಬೇಕಾದ ಕೆಳಮಟ್ಟದಂಥ ವಿಚಾರವೂ ಒಂದಿದೆ. ಕಕ್ಕಸುಗಳನ್ನು ಚೊಕ್ಕಟವಾಗಿಯೂ ಆರೋಗ್ಯಸಾಧಕವಾದ ಸ್ಥಿತಿಯಲ್ಲಿಯೂ ಅವರು ಇಟ್ಟುಕೊಂಡಿರುವರೇ ಎಂಬುದೇ ಆ ವಿಚಾರ. ಸಮಾಜಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿಯೂ, ಬುದ್ಧಿಶಕ್ತಿಯಲ್ಲಿಯೂ ಜನಗಳು ಮುಂದುವರಿದಿರುವುದನ್ನೂ, ಇಲ್ಲದಿರುವುದನ್ನೂ ಕಕ್ಕಸುಗಳ ಸ್ಥಿತಿಯೇ ಸೂಚಿಸುತ್ತದೆ. ಆದಕಾರಣ ಈ ಹೈಸ್ಕೂಲಿನ ಕಕ್ಕಸುಗಳು ಚೊಕ್ಕಟವಾಗಿರುವಂತೆಯೂ, ಸರಿಯಾಗಿ ಉಪಯೋಗಿಸಲ್ಪಡುವಂತೆಯೂ ತಕ್ಕ ಏರ್ಪಾಡನ್ನು ಮಾಡುವುದು ತಮ್ಮ ಕರ್ತವ್ಯವೆಂದು ಮುಖ್ಯೋಪಾಧ್ಯಾಯರು (ಹೆಡ್ಮಾಸ್ಟರವರು) ಭಾವಿಸಬೇಕೆಂದು ನಾನು ಯಾವುದೊಂದು ಸಂಕೋಚವೂ ಇಲ್ಲದೆ ತಿಳಿಸತಕ್ಕವನಾಗಿದ್ದೇನೆ.

ಹೈಸ್ಕೂಲು ವಿದ್ಯಾಭ್ಯಾಸದ ಪ್ರಾಮುಖ್ಯತೆ.

ಹೈಸ್ಕೂಲು ವಿದ್ಯಾಭ್ಯಾಸವು ದೇಶೋನ್ನತಿಗೆ ಎಷ್ಟು ಮುಖ್ಯವಾಗಿ ಬೇಕಾದುದೆಂಬ ವಿಚಾರವನ್ನು ನಾನು ಈಗ ಪ್ರಸ್ತಾಪಿಸತಕ್ಕವನಾಗಿಲ್ಲ. ಅಲ್ಲದೆ ಹೈಸ್ಕೂಲು ವಿದ್ಯಾಭ್ಯಾಸದಲ್ಲಿ ಸುಧಾರಣೆಗಳನ್ನು ಮಾಡುವುದು ಎಷ್ಟು ಜರೂರಾಗಿದೆಯೆಂಬ ವಿಚಾರವನ್ನು ನಾನು ಈಗ ಪ್ರಸ್ತಾಪಿಸತಕ್ಕವನಾಗಿಲ್ಲ. ಈ ವಿಚಾರದಲ್ಲಿ ಸ್ವಾರಸ್ಯವಾಗಿಯೂ, ತಿಳುವಳಿಕೆಯನ್ನುಂಟುಮಾಡುತ್ತಿರತಕ್ಕವಾಗಿಯೂ ಇರುವ ಚರ್ಚೆಗಳು ಈಗ ನಡೆಯುತ್ತಿವೆ. ಹೈಸ್ಕೂಲು ವಿದ್ಯಾಭ್ಯಾಸವನ್ನು ಕೈಕೊಳ್ಳುವುದರಲ್ಲಿ ವಿಶ್ವವಿದ್ಯಾನಿಲಯದ ವ್ಯಾಸಂಗವೊಂದನ್ನೇ ಎಲ್ಲರೂ ಗುರಿಯಾಗಿಟ್ಟುಕೊಂಡಿರತಕ್ಕ ಈಗಿನ ಸ್ಥಿತಿಯು ಮುಂದೆ ವಿಶೇಷವಾಗಿ ಬದಲಾಯಿಸುವುದೇನೋ ಖಂಡಿತ. ಹೈಸ್ಕೂಲು ವಿದ್ಯಾಭ್ಯಾಸವು ಮುಂದೆ ಯಾವ ಯಾವ ಹೊಸ ರೂಪಗಳನ್ನೇ ಪಡೆದರೂ ಸರಿ, ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡುವವರ ಹೃದಯದಲ್ಲಿ ಜ್ಞಾನದ ಬೆಳಕನ್ನು ತುಂಬಿ, ದೇಶಕ್ಕೆ ಪ್ರಯೋಜನವಾಗುವ ಸಾಮರ್ಥ್ಯವನ್ನು ಅವರಲ್ಲಿ ವೃದ್ಧಿಪಡಿಸುವುದೇ ಎಂದೆಂದಿಗೂ ಹೈಸ್ಕೂಲು ವಿದ್ಯಾಭ್ಯಾಸದ ಮುಖ್ಯ ಗುರಿಯಾಗಿರಬೇಕು. ಹೈಸ್ಕೂಲುಗಳಲ್ಲಿ ವ್ಯಾಸಂಗಮಾಡತಕ್ಕವರಲ್ಲಿ ಉತ್ತಮಜೀವನದ ಸಾಮರ್ಥ್ಯವನ್ನುಂಟುಮಾಡುವುದಕ್ಕೆ ಮುಖ್ಯ ಗಮನಕೊಡಬೇಕಾದುದು ಯುಕ್ತವಾಗಿದೆ. ಆ ರೀತಿ ಮಾಡದೆ ವಿಶ್ವವಿದ್ಯಾನಿಲಯ ವ್ಯಾಸಂಗಕ್ಕೆ ಮಾತ್ರವೇ ಅವರೆಲ್ಲರನ್ನೂ ಸಿದ್ಧಗೊಳಿಸುವುದಕ್ಕೆ ಮುಖ್ಯ ಗಮನಕೊಡುತ್ತಿರುವುದು ಶೋಚನೀಯವಾಗಿದೆ.

ಉಪಾಧ್ಯಾಯರಿಂದ ಹೆಚ್ಚಿಗೆ ಸೇವೆ.

ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡತಕ್ಕವರಿಗೆ ಆಯಾಯ ತರಗತಿಗಳು ನಡೆಯತಕ್ಕ ಕಾಲಗಳಲ್ಲಿ ಮಾತ್ರ ಪಾಠ ಹೇಳುವುದರಿಂದಲೇ ಆಗಲಿ ಅಥವಾ ತರಗತಿಗಳು ನಡೆಯುವ ಕಾಲಗಳಲ್ಲಿಯೂ ಇತರ ಕಾಲಗಳಲ್ಲಿಯೂ ಉಪಾಧ್ಯಾಯರು ಅವರಿಗೆ ಪಾಠ ಹೇಳುವಷ್ಟು ಮಾತ್ರದಿಂದಲೇ ಆಗಲಿ ಉಪಾಧ್ಯಾಯರಿಂದ ಅವರ ಶಿಕ್ಷಣವು ಮುಗಿಯುತ್ತಿಲ್ಲವೆಂಬ ಸಂಗತಿಯು ನಮ್ಮೆಲ್ಲರಿಗೂ ತಿಳಿದೇ ಇದೆ. ಇಲ್ಲಿ ವ್ಯಾಸಂಗ ಮಾಡತಕ್ಕವರಿಗೆ ಮಾತ್ರವೇ ಈ ರೀತಿ ಶಿಕ್ಷಣ ಕೊಡುವಷ್ಟರಿಂದಲೂ ಉಪಾಧ್ಯಾಯರಿಂದ ಸಮಾಜಕ್ಕೆ ದೊರೆಯಬೇಕಾದ ಸೇವೆಯು ಮುಗಿದಂತಾಗಲಿಲ್ಲ. ಇತರರೂ ಸಹ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಂಡು ತಮ್ಮ ಹೃದಯದ ಜ್ಞಾನದೀಪಗಳನ್ನು ಹೊತ್ತಿಸಿಕೊಳ್ಳುವ ಜ್ಯೋತಿಗಳಂತಿರುವುದೂ ಉಪಾಧ್ಯಾಯರ ಕರ್ತವ್ಯ. ಉಪಾಧ್ಯಾಯರುಗಳು ಊರಿನ ಮಹಾಜನರಲ್ಲಿ ಸಂಸ್ಕೃತಿಯ ಮೇಲಣ ಅಭಿಮಾನವು ಲೋಕಸೇವಾ ಬುದ್ಧಿಯು ವೃದ್ಧಿಹೊಂದುವಂತೆ ಮಾಡಬೇಕು. ಈ ವಿಚಾರದಲ್ಲಿ ಅವರು ಆಯಾ ಊರಿನ ಜನರಿಗೆ ಪ್ರೇರಕರಾಗಿ ಪರಿಣಮಿಸಿ ಜನರನ್ನು ಹುರಿದುಂಬಿಸುವ ಸಾಧನಗಳಂತಿರಬೇಕು. ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಕೆಲಸಮಾಡುವ ಅಧಿಕಾರಿಗಳು ಹೊಸ ಹೊಸ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕಾಗಿ ಗಿರಾಕಿಗಳನ್ನು ಹೆಚ್ಚಿಸಿಕೊಳ್ಳುವುದು ಅವರ ಕರ್ತವ್ಯವಾಗಿರುವುದಷ್ಟೆ! ಅದರಂತೆಯೇ ಈ ಹೈಸ್ಕೂಲಿನ ಉಪಾಧ್ಯಾಯರುಗಳು ವಯಸ್ಸಾದ ದೊಡ್ಡವರಿಗೂ ಅನುಕೂಲ ಕಾಲಗಳಲ್ಲಿ ವಿದ್ಯೆಯನ್ನು ಬೋಧಿಸಿ ಆ ಮೂಲಕ ತಮ್ಮ ಶಿಷ್ಯವರ್ಗವನ್ನು ಹೆಚ್ಚಿಸಿಕೊಳ್ಳುವುದೂ ಅವರ ಕರ್ತವ್ಯವಾಗಿದೆ. ಆದರೆ, ಈ ವಿಚಾರದಲ್ಲಿ ಒಂದು ಎಚ್ಚರಿಕೆಯನ್ನು ಹೇಳಲಿಚ್ಛಿಸುವೆನು. ಉಪಾಧ್ಯಾಯರುಗಳೇ! ನೀವುಗಳು ಅವರಿಗೆ ಪಾಠಕಲಿಸುವಿರೆಂಬ ಪರಿಜ್ಞಾನವೇ ಅವರ ಮನಸ್ಸಿಗುಂಟಾಗದಂತೆ ಅವರೊಡನೆ ವರ್ತಿಸಬೇಕು. ಏಕೆಂದರೆ ಅವರಿಗೆ ತಿಳುವಳಿಕೆ ಸಾಲದೆಂದೂ, ಉಪಾಧ್ಯಾಯರಾದ ನಿಮ್ಮಿಂದ ಅವರು ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಬೇಕಾಗಿದೆಯೆಂದೂ ಅವರಿಗೇನಾದರೂ ತಿಳಿಸಿಬಿಟ್ಟರೆ ಅಲ್ಲಿಗೆ ಆ ಕೆಲಸವೇ ಕೆಟ್ಟುಹೋಗುವುದು. ಅವರಿಗೆ ಅದರಿಂದ ಅಸಮಾಧಾನವಾಗುವುದು ಖಂಡಿತ. ಉಪಾಧ್ಯಾಯರ ಕೈಯಿಂದ ಬಹುಕಾಲಕ್ಕೆ ಹಿಂದೆಯೇ ಅವರು ಬಿಡುಗಡೆ ಹೊಂದಿರುತ್ತಾರೆ. ಉಪಾಧ್ಯಾಯರ ಕೈಗೆ ಸಿಕ್ಕಿ ಓದುಬರಹಗಳನ್ನು ಕಲಿಯುವ ದುರದೃಷ್ಟವೇ ತಮಗೆ ಒದಗಲಿಲ್ಲವೆಂದೂ ಅವರಲ್ಲಿ ಕೆಲವರು ಭಾವಿಸಿರುತ್ತಾರೆ. ಹೀಗಿರುವಲ್ಲಿ ಅವರಿಗೆ ನೀವು ಆ ರೀತಿ ತಿಳಿಸಿದರೆ ಅದರಿಂದ ಅಸಮಾಧಾನವಾಗದಿರುವ ಬಗೆ ಹೇಗೆ? ವಯಸ್ಸಾದವರ ವಿದ್ಯಾಭ್ಯಾಸವು ಈಗ ಅತ್ಯವಶ್ಯಕವಾಗಿ ನಡೆಯಬೇಕು. ಏಕೆಂದರೆ—ಜನಜೀವನದಲ್ಲಿ ಈಗ ಒದಗಿರತಕ್ಕ ಅನೇಕ ತೊಡಕಿನ ಸಂಗತಿಗಳು ಒತ್ತಿನೆಯೇ ಬಗೆಹರಿಯಬೇಕಾಗಿವೆ. ಅವು ಬಗೆಹರಿಯಬೇಕಾದರೆ ಅಧಿಕಾರ ವರ್ಗದವರೊಡನೆ ಪ್ರಜೆಗಳು ತಿಳುವಳಿಕೆಯಿಂದಲೂ ವಿವೇಕ ವಿಚಕ್ಷಣೆಗಳಿಂದಲೂ ಸಹಕರಿಸಬೇಕಾದುದು ಅವಶ್ಯಕ. ಇತರ ದೇಶಗಳಲ್ಲಿರುವಂತೆಯೇ ನಮ್ಮ ದೇಶದಲ್ಲಿಯೂ ಈಗ ಈ ಅವಶ್ಯಕತೆಯು ಅತಿಶಯವಾಗಿದೆ. ವಯಸ್ಸಾದವರಿಗೆ ಓದುಬರಹಗಳನ್ನು ಕಲಿಸಿ ಅವರ ತಿಳುವಳಿಕೆಯನ್ನು ಹೆಚ್ಚಿಸಿದಲ್ಲದೆ ಇದು ಸಾಧ್ಯವಲ್ಲ. ಆದಕಾರಣ ಆ ರೀತಿ ಮಾಡಬೇಕಾದುದು ಅತ್ಯಾವಶ್ಯಕ. ಆದರೆ ಅವರಿಗೆ ಏನನ್ನು ಹೇಳಿಕೊಡಬೇಕು? ಎಷ್ಟುಕಾಲ ಹೇಳಿಕೊಡಬೇಕು? ಅವರಿಗೆ ಬೋಧನೆ ಮಾಡುವ ಯುಕ್ತ ವಿಧಾನಗಳಾವುವು? ಎಂಬ ತಪಶೀಲು ವಿವರಗಳನ್ನು ಸೂಚಿಸುವ ಸಮಗ್ರವಾದೊಂದು ಏರ್ಪಾಡನ್ನು ಕುರಿತು ನಾನು ಈಗ ಪ್ರಸ್ತಾಪಿಸುವವನಾಗಿಲ್ಲ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಪರಿಣತರಾದ ಪಂಡಿತರು ಇವುಗಳನ್ನು ಚರ್ಚೆಮಾಡಿ ವ್ಯವಸ್ಥೆಮಾಡಲು ಅವುಗಳನ್ನು ಅವರಿಗೇ ಬಿಟ್ಟಿರುವೆನು.

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯಲ್ಲಿ ಸೆಷನ್ಸ್ ಜಡ್ಜರ ತೀರ್ಪು.

ಪೋಲೀಸು ಇನಸ್ಪೆಕ್ಟರು ಸಾಮಿಾಲಾದುದೇ ಮೂಲಕಾರಣ.

ಪ್ರಣಯಪತ್ರಗಳೆಲ್ಲಾ ಪುಂಡು ಫೋರ್ಜರಿಗಳು.

ಮಹಾಲಕ್ಷ್ಮಮ್ಮನ ಮೇಲೆ ನಡೆಸಿದ ಅತ್ಯಾಚಾರವು ಅಮರಣಾಂತ ಸಂಕಟಕ್ಕೆ ಕಾರಣ.

ಕಠಿನವಾದ ಶಿಕ್ಷೆಯೇ ಆಗಬೇಕು.

ಈ ಮೊಕದ್ದಮೆಯಲ್ಲಿ ನಾಲ್ಕು ಅಪರಾಧಿಗಳು ಕೋಲಾರದ ಮ್ಯಾಜಿಸ್ಟ್ರೇಟರಿಂದ ೩೬೬ ನೇ ಪ್ರಕರಣದಂತೆ ತಕ್ಸೀರು ಮಾಡಿರುತ್ತಾರೆಂದು ನಮ್ಮ ಕೋರ್ಟು ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ. ಆ ಮ್ಯಾಜಿಸ್ಟ್ರೇಟರು ಮಾಡಿರುವ ಛಾರ್ಜು ಲೋಪವಾಗಿದೆ. ಆದ್ದರಿಂದ ಪಬ್ಲಿಕ್ ಪ್ರಾಸಿಕ್ಯೂಟರು ಇಲ್ಲಿ ಸರಿಯಾಗಿ ಛಾರ್ಜನ್ನು ತಿರುಗಿಸಿ ಇಲ್ಲಿ ಇಟ್ಟಿದ್ದಾರೆ. ಅದು ಈ ರೀತಿಯಾಗಿದೆ.—

೧. ಈ ನಾಲ್ಕು ಅಪರಾಧಿಗಳು ೨೩ ನೇ ತಾ|| ದಿವಸ ಅಥವಾ ಆ ಸುಮಾರಿನಲ್ಲಿ ಚಿಂತಾಮಣಿಯಲ್ಲಿ ಮಹಾಲಕ್ಷ್ಮಮ್ಮನೆಂಬ ಮೈನರು ಹುಡುಗಿಯನ್ನು ಬಲಾತ್ಕಾರದಿಂದ ಮದುವೆ ಮಾಡುವುದಕ್ಕೆ ಅಥವಾ ಮದುವೆಗೆ ಬಲಾತ್ಕಾರವಾಗುವುದೆಂದು ತಿಳಿದು ಅವಳನ್ನು ಅಪಹಾರಮಾಡಿರುತ್ತಾರೆ.

೨. ಈ ನಾಲ್ಕು ಅಪರಾಧಿಗಳು ಚಿಂತಾಮಣಿಯಲ್ಲಿ ಮಹಾಲಕ್ಷ್ಮಮ್ಮನೆಂಬ ಹುಡುಗಿಯನ್ನು ಮದುವೆಗೆ ಬಲಾತ್ಕಾರವಾದಳು ಅಥವಾ ಅವಳಿಗೆ ಮದುವೆಯು ಬಲಾತ್ಕಾರವಾಗುವುದೆಂದು ತಿಳಿದು ೨೩ರಲ್ಲಿ ಅಥವಾ ಆ ಸುಮಾರಿನಲ್ಲಿ ಅಬ್ಡಕ್ಟ್ (ಅಪಹಾರ) ಮಾಡಿರುತ್ತಾರೆ.

೩. ಅಬ್ದುಲ್ ಷುಕೂರು ಮತ್ತು ದಸ್ತಗಿರಿಸಾಬಿ ಅವರು ಬ್ಬರೂ ಚಿಂತಾಮಣಿಯಲ್ಲಿ ೨೨ ನೇ ತಾ|| ದಿವಸ ಮಹಾಲಕ್ಷ್ಮಮ್ಮನೆಂಬ ಮೈನರು ಹುಡುಗಿಯನ್ನು ನ್ಯಾಯವಾದ ಗಾರ್ಡಿಯನ್ನರಿಂದ ಅವಳ ಇಷ್ಟಕ್ಕೆ ವಿರೋಧವಾಗಿ ಮದುವೆನಡೆಸುವ ಬಗ್ಗೆ ಅವಳನ್ನು ಅಪಹಾರ ಮಾಡಿದರೆಂದೂ, ಈಗ ಕೋರ್ಟು ಮುಂದೆ ಇರುವ ಅಪರಾಧಿಗಳು ಅವರಿಗೆ ಮದ್ದತ್ತು ಮಾಡಿದರೆಂದೂ, ಅದರಿಂದ ೩೬೬ನೇ ಸೆಕ್ಷನ್‌ಗೆ ಬಾಧಕವಾಗುವ ೧೧೪ನೇ ಸೆಕ್ಷನ್ ಪ್ರಕಾರ ಅಪರಾಧಮಾಡಿರುತ್ತಾರೆ.

೪. ಅಬ್ದುಲ್ ಷುಕೂರ್ ಮತ್ತು ದಸ್ತಗಿರಿಸಾಬಿ ಎಂಬುವರು ೨೨ನೇ ತಾ|| ದಿವಸ ಮಹಾಲಕ್ಷ್ಮಮ್ಮನೆಂಬ ಹುಡುಗಿಯ ಮೇಲೆ ಬಲಾತ್ಕಾರ ನಡೆಸಿರುತ್ತಾರೆಂದೂ, ಈ ಅಪರಾಧಿಗಳು ಅವರಿಗೆ ಮದ್ದತ್ ಮಾಡಿರುತ್ತಾರೆಂದೂ ಫಿರ್ಯಾದುಕಂಡಿದೆ.

ಈ ಬದಲಾಯಿಸಿದ ರೂಪದಲ್ಲಿ ಛಾರ್ಜು ಹಾಕಿದ್ದರಿಂದ ಅಪರಾಧಿಗಳ ನ್ಯಾಯವು ಕೆಟ್ಟುಹೋಗುವುದಿಲ್ಲವೆಂದು ನಮ್ಮ ಮನಸ್ಸಿಗೆ ಖಾತ್ರಿಯಾದದ್ದರಿಂದ ಆಗಲೇ ವಿಚಾರಣೆಗೆ ಆರಂಭ ಮಾಡಲಾಯಿತು. ಈ ಬದಲಾಯಿಸಿದ ಛಾರ್ಜಿಗೆ ಸಂಬಂಧಪಟ್ಟಂತೆ ಸಾಕ್ಷಿಗಳನ್ನು ಹಾಜರ್ಮಾಡುವಂತೆ ಅಪರಾಧಿಗಳಿಗೆ ಹೇಳಲಾಯಿತು. ಅಪರಾಧಿಗಳ ಲಾಯರು ಹೆಚ್ಚಿಗೆ ಸಾಕ್ಷಿಗಳ ಪಟ್ಟಿಯನ್ನು ಕೊಟ್ಟರು. ಅವರೆಲ್ಲರಿಗೂ ಸಮರ್ನ್ ಕಳುಹಿಸಲಾಯಿತು.

ಹೀಗೆ ಪರಂಪರೆಯಾಗಿ ವಿಚಾರಣೆಯ ಕ್ರಮವನ್ನೆಲ್ಲಾ ಸೂಚಿಸಿ, ಜಡ್ಜಮೆಂಟು ಮುಂದುವರಿಯುತ್ತದೆ. ಮಹಾಲಕ್ಷ್ಮಮ್ಮನ ಹೇಳಿಕೆ ಮತ್ತು ರಾಮಸ್ವಾಮಿಪಂಡಿತರ ಹೇಳಿಕೆಯು ಗೋಷ್ವಾರೆಯಾಗಿ ಎತ್ತಿ ವಿವರಿಸಲ್ಪಟ್ಟಿದೆ. ಹೀಗೆಯೇ ನ್ಯಾಯಾಧೀಶರು ಪೂರ್ವರಂಗವನ್ನೆಲ್ಲಾ ಅಣಿಮಾಡಿಕೊಂಡು ವಯಸ್ಸಿನ ನಿರ್ಣಯಕ್ಕೆ ಆರಂಭಿಸುತ್ತಾರೆ.

ವಯಸ್ಸೆಷ್ಟು?

ಈ ಮಹಾಲಕ್ಷ್ಮಮ್ಮನ ಮೇಲೆ ಕೃತ್ಯ ನಡೆದ ದಿನ ಆಕೆಯ ವಯಸ್ಸು ಹದಿನಾರಕ್ಕಿಂತ ಕಡಮೆಯಾಗಿತ್ತೆಂದೂ, ಅವಳು ಮೈನರೆಂದೂ, ಪ್ರಾಸಿಕ್ಯೂಷನ್ನಿನವರು ಕಾಗದಪತ್ರಗಳ ದಾಖಲೆಯನ್ನೂ ಬಾಯಿಮಾತಿನ ಹೇಳಿಕೆಗಳನ್ನೂ ಆಧಾರವಾಗಿ ಕೊಟ್ಟಿರುತ್ತಾರೆ. ಕೋಲಾರದ ಲೇಡೀ ಡಾಕ್ಟರ ಸರ್ಟಿಫಿಕೇಟೂ ಸಹ ಆಧಾರವಾಗಿ ಕೊಡಲ್ಪಟ್ಟಿದೆ. ವಯಸ್ಸಿನ ವಿಷಯದಲ್ಲಿ ಮೊದಲನೇ ಆಧಾರವೆಂದರೆ, ಹುಡುಗಿಯ ಅಣ್ಣ ನರಸಿಂಹಯ್ಯನು ಸೂಪರಿಂಟೆಂಡೆಂಟರಲ್ಲಿ ಕೊಟ್ಟ ಹುಡುಗಿಯ ಜಾತಕ! ಆ ಜಾತಕವನ್ನೇ ಸ್ವೀಕರಿಸಕೂಡದೆಂಬ ಬಗ್ಗೆ ಅಪರಾಧಿಗಳ ಲಾಯರು ಅಡ್ಡಿಮಾಡಿದರು. ಆ ಬಗ್ಗೆ ಕೆಲವು ಲಾ ಕೇಸುಗಳನ್ನು ಉದಾಹರಿಸಿದರು. ಕೋರ್ಟು ಹುಡುಗಿಯ ವಯೋನಿರ್ಣಯದ ಬಗ್ಗೆ ಜಾತಕವನ್ನು ಸ್ವೀಕರಿಸಬಹುದೆಂದು ಎವಿಡೆನ್ಸ್ ಅಕ್ಟಿನ ೧೫೯-೧೬೦ ನೇ ಕಲಂ ಪ್ರಕಾರ ಆರ್ಡರುಮಾಡಿತು. ಎವಿಡೆನ್ಸ್ ಆಕ್ಟು ೩೫ ನೇ ಸೆಕ್ಷನ್ ಪ್ರಕಾರ ಜಾತಕವನ್ನು ಆಧಾರವಾಗಿ ಸ್ವೀಕರಿಸಬಹುದೆಂದು ಕೋರ್ಟು ಹುಕುಂಮಾಡಿತು. ಅದೇ ಸೆಕ್ಷನ್ ಪ್ರಕಾರ ಸ್ಕೂಲು ರಿಜಿಸ್ಟ್ರು ದಾಖಲೆಯೂ ವಯೋನಿರ್ಣಯದಲ್ಲಿ ಅಂಗೀಕರಿಸಲ್ಪಡಬಹುದೆಂದು ಕೋರ್ಟು ಅಭಿಪ್ರಾಯಪಟ್ಟಿತು. ಆ ಆಧಾರದಂತೆ ೧೯೨೩ ರಲ್ಲಿ ಹುಡುಗಿಯ ವಯಸ್ಸು ೫ ವರ್ಷಗಳೆಂದು ಇರುವಾಗ ಅವಳು ೧೯೧೮ರಲ್ಲಿ ಹುಟ್ಟಿದಳೆಂಬುದಕ್ಕೆ ಸಂದೇಹವೇನೂ ಇಲ್ಲ. ಅಪರಾಧಿಗಳ ಲಾಯರು ೧೯೧೮ರಲ್ಲಿ ಹುಡುಗಿಯು ಹುಟ್ಟಿದಳೆಂದು ನಮೂದಾಗಿದೆಯೇ ಹೊರತು ಇಂಥಾ ದಿವಸವೇ ಎಂದು ನಿರ್ದಿಷ್ಟವಾಗಿ ಇಲ್ಲವೆಂದು ಆಕ್ಷೇಪಿಸಿದರು. ತಂದೆಯು ಜಾತಕನೋಡಿ ಬರದಿದ್ದರೆ ಗೊತ್ತಾದ ದಿವಸವನ್ನೇ ಬರೆಯಬಹುದಾಗಿತ್ತು. ಆದರೆ ೧೯೩೨ನೇ ಇಸ್ವಿಯಲ್ಲಿ ನಡೆಯುವ ಪ್ರಕಾರ ನಾವು ಅವನಿಗೆ ಮೊದಲೇ ಗೊತ್ತಾಗಿದ್ದರೆ ಹಾಗೆಯೇ ಮಾಡುತ್ತಿದ್ದನೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಆದಾಗ್ಯೂ ಆ ಹುಡುಗಿಯನ್ನು ಸ್ಕೂಲಿಗೆ ಸೇರಿಸುವುದಕ್ಕೆ ಆ ವರ್ಷವನ್ನು ನಮೂದಿಸಿದರೆ ಸಾಕೆಂದು ಭಾವಿಸುವುದರಲ್ಲಿ ಅಸಹಜವೇನೂ ಇಲ್ಲ. ಈ ಮೊಕದ್ದಮೆಯಲ್ಲಿ ಆ ಹುಡುಗಿ ಹುಟ್ಟಿದ ವರುಷವೇ ಮುಖ್ಯವಾಗಿದೆ. ಯಾವ ದಿವಸವಾದರೂ ಸರಿಯೆ ಅದು ಅಷ್ಟು ಗಣನೀಯವಲ್ಲ. ಏಕೆಂದರೆ, ಅವಳು ಆ ವರ್ಷ ಜನವರಿ ಮೊದಲನೇ ತಾ|| ದಿವಸವೇ ಹುಟ್ಟಿದ್ದಾಗ್ಯೂ, ಈ ಕೃತ್ಯ ನಡೆದ ದಿವಸಕ್ಕೆ ಆಕೆಯ ವಯಸ್ಸು ೧೬ರ ಒಳಗೇ ಬರುತ್ತದೆ. ಆದ್ದರಿಂದ ಈ ಕೃತ್ಯ ನಡೆದ ದಿವಸ ಆ ಹುಡುಗಿಯು ೧೬ ವಯಸ್ಸಿನೊಳಗೇ ಮೈನರಾಗಿದ್ದಳೆಂದು ಆ ಜಾತಕವೂ, ಮತ್ತು ಸ್ಕೂಲು ರಿಜಿಸ್ಟ್ರು ಸಹ ಪ್ರಮಾಣೀಕರಿಸುತ್ತದೆಂದು ನಾನು ಭರವಸೆಯುಳ್ಳವನಾಗಿದೇನೆ. ಈ ಅಂಶವು ಇತರ ಕಾಗದಪತ್ರಗಳ ಆಧಾರದ ಮೇಲೆಯೂ, ಜುಬಾನೀ ಸಾಕ್ಷ್ಯದ ಮೇಲೆಯೂ ಸಿದ್ಧವಾಗುತ್ತದೆ.

ರಾಮಸ್ವಾಮಿ ಪಂಡಿತನು ಹೇಳುತ್ತಾನೆ, ಮಹಾಲಕ್ಷ್ಮಮ್ಮನು ಲಕ್ಷ್ಮೀನರಸಿಂಹಯ್ಯನು ಹುಟ್ಟಿದ ೩ ಅಥವಾ ೩|| ವರ್ಷದ ಮೇಲೆ ಹುಟ್ಟಿದಳೆಂದು. ಲಕ್ಷ್ಮೀನರಸಿಂಹಯ್ಯನ ವಯಸ್ಸಿನ ವಿಚಾರದಲ್ಲಿ ಕೆಲವು ಸ್ಕೂಲು ರಿಜಿಸ್ಟ್ರುಗಳು ವಗೈರೆ ಆಧಾರಗಳು ಸೂಚಿಸಲ್ಪಟ್ಟಿವೆ. ಈ ಸಂದರ್ಭದಲ್ಲಿ ಅಪರಾಧಿಗಳ ಪರ ಸಾಕ್ಷಿಯಾಗಿ, ಸದರಿ ಲಕ್ಷ್ಮೀನರಸಿಂಹಯ್ಯನ ಮಿಡಲ್ ಸ್ಕೂಲು ಪರೀಕ್ಷೆಯ ಅಪ್ಲಿಕೇಷನ್ ವಗೈರೆ ದಾಖಲೆಗಳಿಗೆ ಸಮನ್ ಮಾಡಲ್ಪಟ್ಟಿತ್ತು. ಏನೋ ಕಾರಣವಿರಬಹುದು. ಈ ಸಾಕ್ಷಿಯನ್ನು ತೆಗೆದುಕೊಂಡರೆ ತಮ್ಮಗೇ ತೊಂದರೆಯಾಗಬಹುದೆಂದು ತಿಳಿದುಕೊಂಡು ಈ ಸಾಕ್ಷ್ಯವನ್ನು ಅಪರಾಧಿ ಪರ ವಿಚಾರಿಸಲೇ ಇಲ್ಲ. ಪಬ್ಲಿಕ್ ಪ್ರಾಸಿಕ್ಯೂಟರ ಸೂಚನೆಯಂತೆ ಕೋರ್ಟಿನವರು ತಮ್ಮ ಅಧಿಕಾರಾನುಸಾರ ಈ ಸಾಕ್ಷಿಗಳನ್ನು ತಾವೇ ವಿಚಾರಿಸಿದರು. ಅದರಲ್ಲಿ ಪ್ರಾಸಿಕ್ಯೂಟರ ಶಿಫಾರಸಿನಂತೆ ಈ ಸಾಕ್ಷಿಗಳ ವಿಚಾರಣೆಯಾಗಿರುವುದರಿಂದ ಈ ಸಾಕ್ಷಿಗಳನ್ನೇ ಪೂರ್ತಿಯಾಗಿ ತಿರಸ್ಕರಿಸಬೇಕೆಂದೂ, ಇವು ಕೋರ್ಟು ಸಾಕ್ಷಿಗಳಾಗಿ ಪರಿಗಣಿಸಲ್ಪಡಕೂಡದೆಂದೂ ಅಪರಾಧಿಗಳ ಪರ ಲಾಯರು ವಾದಿಸಿದರು. ಈ ಸಾಕ್ಷಿಗಳು ಅಪರಾಧಿಗಳ ಪರವಾಗಿಯೇ ಸಮನ್ ಮಾಡಲ್ಪಟ್ಟವರಾದ್ದರಿಂದಲೂ, ಇವರ ಸಾಕ್ಷ್ಯವು ಮೊಕದ್ದಮೆಗೆ ಅವಶ್ಯಕವೆಂದು ಕೋರ್ಟು ಭಾವಿಸಿದ್ದರಿಂದಲೂ ಅವರ ಸಾಕ್ಷ್ಯವು ಸಂಗ್ರಾಹ್ಯವೇ ಆಗಿದೆ. ಪಬ್ಲಿಕ್ ಪ್ರಾಸಿಕ್ಯೂಟರು ಕೇಳಿದ ಮಾತ್ರದಿಂದ ಅವರನ್ನು ಕೋರ್ಟು ವಿಚಾರಣೆಮಾಡಲಿಲ್ಲ. ಅವರ ವಿಚಾರಣೆಯಿಂದ ನ್ಯಾಯವು ಹೊರಪಡುತ್ತೆಂಬ ನಂಬಿಕೆಯಿಂದಲೇ ವಿಚಾರಣೆಮಾಡಲ್ಪಟ್ಟಿತು. ಆದ್ದರಿಂದ ಅಪರಾಧಿಗಳ ಲಾಯರ ಆಕ್ಷೇಪವನ್ನು ನಾನು ನಿರಾಕರಿಸುತ್ತೇನೆ. ಲೋಕಲ್ ಎಗ್ಸಾಮಿನೇಷನ್ ರಿಜಿಸ್ಟ್ರಿನಲ್ಲಿ ಲಕ್ಷ್ಮೀನರಸಿಂಹಯ್ಯನು ೧೯೩೧ನೇ ಇಸ್ವಿಯಲ್ಲಿ ಪರೀಕ್ಷೆಗೆ ಹೋದ ಅಂಶವೂ ಆ ಹುಡುಗನ ವಯಸ್ಸು ಆಗ ೧೫ ಎಂದೂ ಕೊಡಲ್ಪಟ್ಟಿದೆ. ಆ ಪರೀಕ್ಷೆಗಳ ಸೆಕ್ರೆಟರಿಗಳು ವಾಡಿಕೆಯಲ್ಲಿ ಹೇಳುವುದೇನಂದರೆ, ಆ ಅಪ್ಲಿಕೇಷನ್ ಫಾರಂಗಳು ಎರಡು ವರ್ಷವಾದ ಮೇಲೆ ನಾಶಪಡಿಸಲ್ಪಡುತ್ತವೆಂದು ಸಾಕ್ಷಿ ಹೇಳುತ್ತಾರೆ. ಅಪ್ಲಿಕೇಷನ್‌ನಲ್ಲಿ ಏನು ಬರದಿತ್ತೋ ಅದೇ ಈ ರಿಜಿಸ್ಟ್ರಿನಲ್ಲಿದೆ. ಆ ದಿವಸ ಆತನ ವಯಸ್ಸು ೧೫ ಎಂದು ನಮೂದಾಗಿದೆ. ಮಹಾಲಕ್ಷ್ಮಮ್ಮನು ಲಕ್ಷ್ಮೀನರಸಿಂಹಯ್ಯನು ಹುಟ್ಟಿದ ಮೇಲೆ ಹುಟ್ಟಿದಳೆಂದು ರಾಮಸ್ವಾಮಿ ಪಂಡಿತನು ಹೇಳುವುದು ಕೂಡ ಈ ರಿಜಿಸ್ಟ್ರಿನಲ್ಲಿ ನಮೂದಿರುವ ಬರವಣಿಗೆಯಿಂದ ಸಾಬೀತು ಆಗುತ್ತದೆ. ಈ ಹುಡುಗಿಗೂ, ಲಕ್ಷ್ಮೀನರಸಿಂಹಯ್ಯನಿಗೂ ಬಹುಶಃ ಎರಡು ವರ್ಷ ವ್ಯತ್ಯಾಸವಿರಬಹುದು. ರಾಮಸ್ವಾಮಿಪಂಡಿತನು ತನ್ನ ಜ್ಞಾಪಕದಿಂದ ಮೂರು ಮೂರುವರೆ ವರ್ಷ ವ್ಯತ್ಯಾಸವೆಂದು ಹೇಳಿದ್ದಾನೆ. ಇಷ್ಟು ಮಾತ್ರಕ್ಕೆ ಇದೇ ಒಂದು ದೊಡ್ಡ ವ್ಯತ್ಯಾಸವಲ್ಲ. ಆ ಸ್ಕೂಲು ರಿಜಿಸ್ಟ್ರು ಪ್ರಕೃತ ಪರಿಸ್ಥಿತಿಯಲ್ಲಿ ಸುಳ್ಳಲ್ಲವೆಂದೂ, ಬಹುಕಾಲದ ಹಿಂದೆಯೇ ಅವು ಬರೆಯಲ್ಪಟ್ಟಿದ್ದರಿಂದಲೂ, ಈ ಕೃತ್ಯ ನಡೆಯುವ ಗಂಧವೇ ಆಗ ಇಲ್ಲದಿದ್ದರಿಂದಲೂ ಅವು ನಂಬಿಕೆಗೆ ಅರ್ಹವಾದ್ದೆಂದು ನಾನು ಅಭಿಪ್ರಾಯಪಡುತ್ತೇನೆ. ಆ ಹುಡುಗಿಯು ಜಾತಕದಲ್ಲಿ ನಮೂದಿರುವ ದಿವಸವೇ ಹುಟ್ಟಿದಳೆಂದು ವಾಜ್ಮೂಲದಲ್ಲಿಯೂ ರಾಮಸ್ವಾಮಿಪಂಡಿತನು ಹೇಳುತ್ತಾನೆ. ಅದನ್ನು ನಂಬದೇ ಇರುವುದಕ್ಕೆ ಕಾರಣವೇನೂ ಕಂಡುಬರುವುದಿಲ. ಅವನ ಹೇಳಿಕೆಗೂ ಆತನ ಅಳಿಯ ಶಂಕರಶಾಸ್ತ್ರಿಯ ಹೇಳಿಕೆಗೂ ಬಲವಾದ ತಾಳೆ ಇದೆ.

ಜನನಮರಣದ ರಿಜಿಷ್ಟರ್.

ಜಂಗಮಕೋಟೆ ಜನನಮರಣದ ರಿಜಿಷ್ಟರನ್ನು ಅಮಲ್ದಾರ್ ಸೂರ್ಯನಾರಾಯಣರಾಯರು ಹಾಜರ್ಮಾಡಿದರು. ಆ ರಿಜಿಷ್ಟರ್ ತಿದ್ದಿ ತಪ್ಪು ಸಾಕ್ಷಿಯನ್ನು ಕಲ್ಪಿಸಲು ಮಾಡಿದ ಹೇಸಿಗೆಯ ಪ್ರಯತ್ನವು ಕಂಡುಬರುತ್ತದೆ. ಅದನ್ನು ಯಾರೋ ಅಭಿನಿವೇಶವುಳ್ಳವರೇ ಮಾಡಿರಬೇಕು. ರಾಮಸ್ವಾಮಯ್ಯ ತಂದೆ ಅಪ್ಪಯ್ಯ ಎಂಬ ದಾಖಲೆಯನ್ನು ಇದೇ ರಾಮಸ್ವಾಮಿಪಂಡಿತರೆಂದು ತೋರಿಸಲು ತಿದ್ದಿದ್ದಾರೆ. ಎರಡನೇ ಕಾಪಿ ಅರ್ಜಿಯು ೧೬-೧೦-೧೯೩೩ ನೇ ದಿವಸ ಬಂತೆಂದೂ, ಅದನ್ನು ಅರ್ಜಿದಾರನು ತೆಗೆದುಕೊಳ್ಳಲು ಬರಲೇ ಇಲ್ಲವೆಂದೂ ಅಮಲ್ದಾರರು ಹೇಳುತ್ತಾರೆ! ಆಗ ಆ ದಾಖಲೆಯನ್ನು ತಿದ್ದಿರುವ ವಿಷಯವನ್ನು ಶಿರಸ್ತೆದಾರರು ಅಮಲ್ದಾರರ ನಿಗಾಕ್ಕೆ ತಂದರೆಂದೂ ಅವರು ಹೇಳುತ್ತಾರೆ. ಆ ಅಮಲ್ದಾರರ ಹೇಳಿಕೆಯಂತೆಯೂ, ಅದೇ ಜನನಮರಣದ ರಿಜಿಸ್ಟ್ರಿನಲ್ಲಿರುವ ಇತರ ದಾಖಲೆಗಳಿಂದಲೂ, ಜಂಗಮಕೋಟೆ ಗ್ರಾಮದಲ್ಲಿ ಅಪ್ಪಯ್ಯನ ಮಗ ರಾಮಸ್ವಾಮಯ್ಯ, ಮತ್ತೊಬ್ಬ ನರಸಿಂಹಭಟ್ಟರ ಮಗ ರಾಮಸ್ವಾಮಯ್ಯ ಇವರು ಇಬ್ಬರು ವ್ಯಕ್ತಿಗಳಿದ್ದರೆಂದು ಸ್ಪಷ್ಟವಾಗಿ ತಿಳಿಯಬರುತ್ತೆ. ಜನನಮರಣದ ರಿಜಿಸ್ಟ್ರಿಗೆ ಬರಸಲೇಬೇಕೆಂದು ಕಾನೂನು ಇಲ್ಲವಾದ ಪ್ರಯುಕ್ತ ಈ ರಿಜಿಸ್ಟ್ರಿಗಿಂತ ಕಡಮೆಯಾದದ್ದು ಹುಡುಗಿಯ ವಯಸ್ಸಿನ ವಿಚಾರವಾಗಿ ಆಧಾರವು ಮತ್ತೊಂದು ಯಾವುದೆಂದರೆ ಡಾ|| ಮೈಲ್ಸ್‌ರವರ ಸಾಕ್ಷ್ಯ. ವಿಚಾರಮಾಡಿ ನೋಡಲಾಗಿ ವೈದ್ಯರ ಸಾಕ್ಷಿಯ ಸಾಧನವು ವಯಸ್ಸಿನ ವಿಚಾರದಲ್ಲಿ ಅದರ ಮರ್ಗದಲ್ಲಿ ಅದು ಆಧಾರಭೂತವಾದದ್ದೇ ಆದಾಗ್ಯೂ ಇತರ ಖರಾರುವಾಕ್ಕಾ ಆಧಾರಗಳಿಂದ ಜಾತಕ ಮೊದಲಾದವುಗಳಿಗಿಂತಲೂ, ಕಡಮೆಯಾದದ್ದೇ ಸರಿ. ವೈದ್ಯರ ಪರೀಕ್ಷೆಯು ಸಾಧಾರಣವಾಗಿ ವಯಸ್ಸನ್ನು ನಿರ್ದೇಶಿಸುತ್ತಾದರೂ ಗೊತ್ತಾಗಿ ಇಷ್ಟೇ ವಯಸ್ಸೆಂದು ನಿರ್ಧರಿಸಲು ಅದಕ್ಕೆ ಶಕ್ತಿಯಿಲ್ಲ. ಡಾಕ್ಟರ್ ಮೈಲ್ಸ್‌ರು ಪರೀಕ್ಷಿಸಿದಾಗ ಹುಡುಗಿಯ ವಯಸ್ಸು ಸುಮಾರು ೧೬ ವಯಸ್ಸಿನೊಳಗೆ ಇತ್ತೆಂದು ಮ್ಯಾಜಿಸ್ಟ್ರೇಟರ ಮುಂದೆ ಸಾಕ್ಷಿ ನುಡಿದಿದ್ದಾರೆ. ಇದು ಸರಿಯಾದ ವಯಸ್ಸನ್ನು ನಿರ್ದೇಶಿಸದೆ ಇದ್ದಾಗ್ಯೂ ಸ್ವಲ್ಪ ಹೆಚ್ಚುಕಡಮೆ ವಯಸ್ಸನ್ನು ಸೂಚಿಸುತ್ತದೆ. ಅಪರಾಧಿಗಳ ಪರ ಕಲ್ಪನೆಯಂತೆ ಹುಡುಗಿಗೆ ೧೮-೨೦ ವರ್ಷಗಳು. ಡಾಕ್ಟರು ಮೈಲ್ಸ್‌ರವರು ಹೇಳುತ್ತಾರೆ. ೧೫ ವರ್ಷಕ್ಕೂ ೧೮ ವರ್ಷಕ್ಕೂ ಅಂಗ ವ್ಯತ್ಯಾಸವಿರುತ್ತದೆಂದೂ, ೧೬ ವರ್ಷದಲ್ಲಿ ಎಲ್ಲಾ ಚಿಹ್ನೆಗಳೂ ಎದ್ದು ಕಾಣುತ್ತವೆಂದೂ ೧೫ ವರ್ಷಗಳಲ್ಲಿ ಅಸ್ಪಷ್ಟವಾಗಿರುತ್ತವೆಂದೂ ಹೇಳುತ್ತಾರೆ. ಈ ಹುಡುಗಿಯ ಬೆಳವಣಿಗೆಯಲ್ಲಿ ಚಿಹ್ನೆಗಳು ಸ್ಪಷ್ಟವಾಗಿಲ್ಲವೆನ್ನುತ್ತಾರೆ. ಡಾಕ್ಟರ್ ಮೈಲ್ಸ್‌ರ ಸಾಕ್ಷ್ಯವನ್ನು ದೃಢಮಾಡಲು ಎಕ್ಸ್‌ರೇ ಪರೀಕ್ಷೆ ಮಾಡಲ್ಪಡಲಿಲ್ಲ. ಎಕ್ಸ್‌ರೇ ಪರೀಕ್ಷೆಯು ಈ ಸಂದರ್ಭದಲ್ಲಿ ಮುಖ್ಯವೇ ಎಂದು ನಿರ್ಧರಮಾಡಿಕೊಳ್ಳಲು ಕೋರ್ಟು ಡಾ|| ಮಿಸ್ ಕ್ಯಾಸ್ಪರ್ ಮತ್ತು ಡಾ|| ಪುಟ್ಟಣ್ಣನವರನ್ನು ಸಾಕ್ಷಿಯಾಗಿ ಕರೆಸಿ ವಿಚಾರಣೆ ಮಾಡಿತು. ಅವರಿಬ್ಬರೂ ಬಲು ಸಮರ್ಥರೂ ದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮಹಾವಿದ್ವಾಂಸರೂ ಆಗಿದ್ದಾರೆ.

ಈ ವಿಷಯವನ್ನು ಮುಕ್ತಾಯಮಾಡುವ ಮುಂಚೆ ಅಪರಾಧಿಗಳ ಲಾಯರು ತಂದ ಒಂದು ಆಕ್ಷೇಪವನ್ನೂ ಮೊದಲು ಪ್ರಸ್ತಾಪಿಸುತ್ತೇನೆ. ಲೇಡಿ ಡಾ|| ರ ಪರೀಕ್ಷೆಯು ಮಹಾಲಕ್ಷ್ಮಮ್ಮನ ಅನುಮತಿಯಿಂದ ನಡೆದದ್ದಲ್ಲವಾದ್ದರಿಂದ ಆ ಸಾಕ್ಷ್ಯವನ್ನು ಪೂರಾ ನಿರಾಕರಿಸಬೇಕೆಂದು ಲಾಯರು ವಾದಿಸಿದರು. ಅವಳ ಸಾಕ್ಷ್ಯದಲ್ಲಿ ಹುಡುಗಿಯು ಹೇಳದ್ದೇನೆಂದರೆ ಡಾಕ್ಟರು ತನ್ನ ಬಟ್ಟೆಯನ್ನು ಬಿಚ್ಚಿ ಪರೀಕ್ಷಿಸುತ್ತಾರೆಂಬುದು ಅವಳಿಗೆ ತಿಳಿದಿರಲಿಲ್ಲವೆಂದೂ, ನಾಡೀ ನೋಡಿ ವಯಸ್ಸು ಗೊತ್ತುಮಾಡುತ್ತಾರೆಂದು ತಿಳಿದಿದ್ದೆನೆಂದೂ ಹೇಳುತ್ತಾಳೆ. ಅವಳೊಬ್ಬ ಆಯುರ್ವೇದ ಪಂಡಿತರ ಮಗಳಾದ್ದರಿಂದ ಹೀಗೆ ಭಾವಿಸಿರಬಹುದು. ಹಾಗೆ ನಿರ್ವಾಣದಲ್ಲಿ ಪರೀಕ್ಷೆ ಮಾಡುತ್ತಾರೆಂದು ತಿಳಿದಿದ್ದರೆ ನಾನು ಸಮ್ಮತಿಸುತ್ತಿರಲಿಲ್ಲ ಎಂದು ಹೇಳುತ್ತಾಳೆ. ಆದ್ದರಿಂದ ನಾನು ಅಭಿಪ್ರಾಯ ಪಡುವುದೇನೆಂದರೆ, ಲೇಡಿ ಡಾಕ್ಟರ ಸಾಕ್ಷಿಯು ಹೇಗೇ ಇರಲಿ ಅದನ್ನು ಸ್ವೀಕರಿಸಲೇಕೂಡದೆಂಬುದನ್ನು ನಾನು ಒಪ್ಪುವುದಿಲ್ಲ. ಡಾ|| ಕ್ಯಾಸ್ಪರ್‌ರು ಹೇಳುತ್ತಾರೆ. ವಯಸ್ಸನ್ನು ನಿರ್ಣಯವಾಗಿ ಹೇಳಲಾಗುವುದಿಲ್ಲವೆಂದು ಕಾಕ್ಸ್ ಮೆಡಿಕಲ್ ಜುರಿಸ್ ಪ್ರುಡೆನ್ಸ್‌ನಲ್ಲಿ ಹೇಳಿರುವ ಪ್ರಕಾರ ಮೈನರು ವಯಸ್ಸು ಗೊತ್ತುಮಾಡಿ ಹೇಳಲು ಡಾ|| ಪರೀಕ್ಷೆಯಿಂದ ಸಾಧ್ಯವೇ ಇಲ್ಲವೆಂದೂ, ಒಂದೆರಡು ವರ್ಷ ಹೆಚ್ಚು ಕಡಿಮೆಯಾಗಿಯೇ ಹೇಳಬಹುದೆಂದೂ ಅಲ್ಲಿ ಹೇಳಲ್ಪಟ್ಟಿರುವುದನ್ನು ಅಂಗೀಕರಿಸುತ್ತಾರೆ. ಅದೇ ಸಾಕ್ಷಿಯು ಹೇಳುವುದೇನೆಂದರೆ ಡಾ|| ಮೈಲ್ಸ್‌ರವರ ಪರೀಕ್ಷೆಯ ಅಂಶಗಳ ಮೇಲೆ ಸಾಧಾರಣವಾಗಿ ವಯಸ್ಸು ಹೇಳಬಹುದೆಂದು ಹೇಳುತ್ತಾರೆ. ಡಾ|| ಮೈಲ್ಸ್‌ರವರು ಹೇಳಿದ ಅಂಶಗಳಿಗೆಲ್ಲಾ ಡಾ|| ಪುಟ್ಟಣ್ಣನವರು ಒಪ್ಪಿಗೆ ಕೊಟ್ಟಿದ್ದಾರೆ. ಈ ಇಬ್ಬರು ದೊಡ್ಡ ಡಾ|| ಗಳೂ ಎಕ್ಸ್‌ರೇಯಿಂದ ಹೆಚ್ಚು ವಿಷಯಗಳು ಗೊತ್ತಾಗುವುದಾದರೂ ಎಕ್ಸ್‌ರೇ ಪರೀಕ್ಷೆಯಿಂದಲೂ ನಿರ್ದೋಷವಾಗಿ ವಯಸ್ಸನ್ನು ಹೇಳಲಾಗುವುದಿಲ್ಲವೆಂಬ ಅಂಶವನ್ನು ಒಪ್ಪುತ್ತಾರೆ. ಈ ಎಲ್ಲಾ ಎವಿಡೆನ್ಸ್‌ಗಳಿಂದಲೂ, ಆ ಕೃತ್ಯವು ನಡೆದ ದಿವಸ, ಮಹಾಲಕ್ಷ್ಮಮ್ಮನು ಮೈನರಾಗಿದ್ದಳೆಂದು ಕೋರ್ಟು ನಿರ್ಧರಿಸುತ್ತದೆ. ಐ.ಪಿ.ಸಿ. ೩೬೧ನೇ ಸೆಕ್ಷನ್ನಿನಲ್ಲಿ ಹೇಳುವಂತೆ ಬಲಾತ್ಕಾರದ ಅಪರಾಧಕ್ಕೆ ಇದೊಂದು ಮುಖ್ಯವಾದ ಅಂಶವಾಗಿದೆ.

ಆ ಹುಡುಗಿಯನ್ನು ಗಾರ್ಡಿಯನ್ ವಶದಿಂದ ಎತ್ತಿಕೊಂಡು ಹೋದರೇ? ಬಲತ್ಕಾರದಿಂದ ಮದುವೆ ಮಾಡುವುದಕ್ಕಾಗಿ ಎಂಬಂಶವನ್ನು ವಿಚಾರಮಾಡಬೇಕಾಗಿದೆ.

ಅಪರಾಧಿಗಳು ಮಹಾಲಕ್ಷ್ಮಮ್ಮನನ್ನು ಎರಡನೇ ಅಪರಾಧಿಯೊಂದಿಗೆ ಮದುವೆ ಮಾಡಿದ್ದನ್ನೂ ಮತ್ತು ಆ ಸಂಬಂಧದಲ್ಲಿ ಪಾತ್ರವಹಿಸಿದ್ದನ್ನೂ ತಾವೇ ಒಪ್ಪಿಕೊಳ್ಳುತ್ತಾರೆ. ಅವರು ಹೇಳುವುದೆಲ್ಲಾ ಇಷ್ಟೆ! ಹುಡುಗಿಯ ಸ್ವಂತ ಇಚ್ಛೆಯ ಪ್ರಕಾರವೇ, ಅವಳು ಪದೇ ಪದೇ ಕೋರಿದ್ದರಿಂದಲೇ ಈ ಮದುವೆ ಮಾಡಿದೆವೆಂದು ಅವರು ಹೇಳುತ್ತಾರೆ. ಈ ನೆಪವು ಪ್ರಯೋಜನವೇ ಇಲ್ಲ. ಆ ಕೃತ್ಯ ನಡೆದ ದಿವಸ ಆ ಹುಡುಗಿಯು ಮೈನರಾಗಿದ್ದಳು. ಅವಳ ಸಮ್ಮತಿಯು ಕಾನೂನಿನ ಪ್ರಕಾರ ವ್ಯರ್ಥವಾದದ್ದು. ಅಪರಾಧಿಗಳು ಹುಡುಗಿಯು ಮೇಜರೆಂದೇ ತಿಳಿದಿದ್ದೆವೆಂದು ಸಬೂಬು ಹೇಳುವುದು ನಿರರ್ಥಕವಾದದ್ದು. ಹುಡುಗಿಯ ಸಮ್ಮತಿಯೆಂಬುದು ಅದು ನಿಜವಾಗಿಯೇ ಇದ್ದಾಗ್ಯೂ ಅದು ಪ್ರಯೋಜನಕಾರಿಯಾದದ್ದಲ್ಲ.

ಮುಂದಿನ ಪ್ರಶ್ನೆ: ಈ ಕೃತ್ಯ ನಡೆದಾಗ ಮಹಾಲಕ್ಷ್ಮಮ್ಮನು ಗಾರ್ಡಿಯನ್ ಅಧೀನದಲ್ಲಿದ್ದಳೇ ಇಲ್ಲವೇ ಎಂಬ ಅಂಶವು ವಿಚಾರಣೀಯವಾಗಿದೆ.

ಈ ಕೃತ್ಯವು ನಡೆದ ದಿವಸ ಆ ಹುಡುಗಿಯು ಮೈನರಾಗಿದ್ದಳು. ಅವಳು ತಂದೆಯ ಅಧಿಕಾರಕ್ಕೆ ಒಳಪಡದಿದ್ದರೂ ಕಾನೂನು ಪ್ರಕಾರ ಮಾವನ ಅಧಿಕಾರಕ್ಕೆ ಒಳಪಟ್ಟೇ ಇದ್ದಳು. ಬಲಾತ್ಕಾರದ ಅಪರಾಧಕ್ಕೆ ಏನೇನು ಬೇಕೋ ಅದೆಲ್ಲಾ ಸಾಬೀತಾಗಿದೆ.

ಹೇಗೆ ಆಗಲಿ ರಾಮಸ್ವಾಮಿ ಪಂಡಿತನಾಗಲಿ, ಆ ಹುಡುಗಿಯ ಮಾವನೇ ಆಗಲಿ ಈ ಎರಡನೇ ಅಪರಾಧಿಯೊಡನೆ ಮಹಾಲಕ್ಷ್ಮಮ್ಮನ ವಿವಾಹಕ್ಕೆ ಅಪ್ಪಣೆಕೊಟ್ಟಿದ್ದರೆಂಬ ಕಲ್ಪನೆಯಾಗಲಿ, ಆ ಬಗ್ಗೆ ಆಧಾರವಾಗಲಿ ಇಲ್ಲವೇ ಇಲ್ಲ.

ಆ ಮೇಲೆ ಹುಡುಗಿಯನ್ನು ಮೊದಲನೇ ಅಪರಾಧಿಯ ಮನೆಗೆ ತೆಗೆದುಕೊಂಡು ಹೋದ ಉದ್ದೇಶವೇನೆಂದು ವಿಚಾರ ಮಾಡತಕ್ಕದ್ದು. ಆ ಉದ್ದೇಶವನ್ನು ಅಪರಾಧಿಗಳು ಗೋಪ್ಯ ಮಾಡಲೇ ಇಲ್ಲ. ೨ ನೇ ಅಪರಾಧಿಗೆ ಲಗ್ನ ಮಾಡುವುದೇ ಅವರ ಉದ್ದೇಶವೆಂದು ಸ್ಪಷ್ಟಪಡಿಸಿದ್ದಾರೆ. ಒಂದು ಕ್ಷಣ ಹೊತ್ತು ಅವಳ ಒಪ್ಪಿಗೆಯಿಂದ ಮದುವೆಯಾಯಿತೇ ಅಥವಾ ಒಪ್ಪಿಗೆ ಇಲ್ಲದೆ ಆಯಿತೇ ಎಂಬುದನ್ನು ಮರೆತುಬಿಡೋಣ! ನಾನು ಅವಳ ವಯಸ್ಸು ನಿರ್ದೇಶಮಾಡಿರುವಂತೆ ಅವಳು ಮೈನರಾದ್ದರಿಂದ ಮದುವೆಯಲ್ಲಿ ಅವಳ ಒಪ್ಪಿಗೆಯೇ ಆಗಲಿ, ಅಥವಾ ಅವಳಾಗಿಯೇ ಮದುವೆಗೆ ಬೇಡಿಕೊಂಡಳೆಂಬುದಾಗಲಿ, ನಿಶ್ಚಯವೇ ಎಂದು ನಂಬಿದಾಗ್ಯೂ, ಅದು ಸಾರ್ಥಕವಾಗಲಾರದು.

ಈ ಪ್ರಕೃತ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ನವರು ಹೇಳುವಂತೆ ಆ ರಾತ್ರಿ ಹುಡುಗಿಯನ್ನು ಅಪಹಾರ ಮಾಡಿದಲಾಗಾಯ್ತು ಮರುದಿನ ಮದುವೆ ಆಗುವ ವರೆಗೆ ಆ ಬಲಾತ್ಕಾರದ ಅಪರಾಧವು ವ್ಯಾಪಿಸಿಯೇ ಇತ್ತು. ಪ್ರಾಸಿಕ್ಯೂಷನ್ ಪರ ಸಾಕ್ಷ್ಯದಂತೆ "ಲಗ್ನ" ಅವರ ರಾತ್ರಿಯಲ್ಲಿ ರಾತ್ರಿ ೨ ಘಂಟೆ ಸಮಯದಲ್ಲಿ ನಡೆಯಿತು. ಡಿಫೆನ್ಸ್‌ನವರ ಹೇಳಿಕೆಯಂತೆ ರಾತ್ರಿ ೧೦ ಗಂಟೆಯಲ್ಲಿ ನಡೆಯಿತು.

ಸಾರಾಂಶವಾಗಿ ಹೇಳುವುದೆಂದರೆ—ಪ್ರಾಸಿಕ್ಯೂಷನ್ನವರು ಹುಡುಗಿಯು ಮೈನರೆಂದೂ, ಅವಳು ಗಾರ್ಡಿಯನ್ ಅಧೀನದಲ್ಲೇ ಇದ್ದಳೆಂದೂ, ತಂದೆಯಲ್ಲಿದ್ದರೂ ಮಾವನೇ ಗಾರ್ಡಿಯನ್ನೆಂದೂ, ಅಂಥ ಸಂದರ್ಭದಲ್ಲಿ ಕೃತ್ಯ ನಡೆಯಿತೆಂದೂ ಸಾಬೀತು ಮಾಡಿದ್ದಾರೆ. ಅಪರಾಧಿಗಳು ಹುಡುಗಿಗೆ ಎರಡನೇ ಅಪರಾಧಿಯೊಡನೆ ಲಗ್ನ ಮಾಡಿದ್ದನ್ನೂ ಇನ್ಕಾರ ಮಾಡುವುದಿಲ್ಲ. ಅವಳ ಸಮ್ಮತಿಯು ನಿಜವೆಂದು ನಂಬಿದರೂ ಅವಳು ಮೈನರೆಂದು ರುಜುವಾತು ಆಗಿರುವಾಗ ಕಾರ್ಯಕಾರಿಯಾಗುವುದಿಲ್ಲ. ಎಲ್ಲಾ ಅಪರಾಧಿಗಳೂ ಈ ಮದುವೆಯಲ್ಲಿ ತಮ್ಮ ತಮ್ಮ ಭಾಗವನ್ನು ವಹಿಸಿದ್ದಾರೆ. ಬಲಾತ್ಕಾರದ ಅಪರಾಧದಲ್ಲಿ ಹುಡುಗಿಯ ವಯಸ್ಸು ಕಾರಣವೇ ಅಲ್ಲ. ಬಲಾತ್ಕಾರ, ನಿರ್ಬಂಧ ಮತ್ತು ಮೋಸವೂ ಗಳುಗಳು ಅಪರಾಧದಲ್ಲಿ ಉಪಯೋಗಿಸಲ್ಪಟ್ಟಿದ್ದರೆ ಸಾಕು. ಅಬ್ಡಕ್ಷನ್ ಬಂದರೆ ಹಿಂದೆ ಒಂದು ಸಾರೋದ್ಧಾರವಾಗಿ ಇರತಕ್ಕದ್ದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡು ಹೋದರೆ ಅದೊಂದೇ ಒಂದು ಅಪರಾಧವಾಗುತ್ತದೆ.

ಅಸೆಸರುಗಳ ಪಾಹಪಕ್ಷಿತಿ ಒಬ್ಬ ಅಸೆಸರು ಮಾತ್ರ ಅಪರಾಧಿಗಳನ್ನು ಎತ್ತಿ ಹಿಡಿದರು. ಮತ್ತೆ ಮೂವರೂ ಅಪರಾಧಿಗಳು ತಪ್ಪು ಮಾಡಿದ್ದಾರೆಂದು ಹೇಳಿದರು.

ಮಹಾಲಕ್ಷ್ಮಮ್ಮನಾಗಲಿ, ರಾಮಸ್ವಾಮಿ ಪಂಡಿತರಾಗಲಿ ಪೋಲೀಸು ಇನ್ಸ್ಪೆಕ್ಟರಲ್ಲಿ ಮಾಡಿದ ಹೇಳಿಕೆಯು ತಾವಾಗಿ ಮಾಡಿದ್ದಲ್ಲವೆಂದು ಕೋರ್ಟು ನಂಬುತ್ತದೆ.

ಪ್ರಣಯಪತ್ರಗಳು

ಯಾರೋ ಚಾಂದಬೀಬಿ ಎಂಬ ಹೆಸರಿನಿಂದ ಉರ್ದು ಸ್ಕೂಲ್ಮಾಸ್ತರ ಹೆಸರಿಗೆ ಬರೆಯಲ್ಪಟ್ಟಿದೆಯೆಂದು ಹಾಜರ್ಮಾಡಿದ ಪ್ರಣಯಪತ್ರಗಳೆಲ್ಲಾ ಪೋಕರಿತನದ ಫೋರ್ಜರಿ ಎಂದು ಕೋರ್ಟು ಭಾವಿಸುತ್ತದೆ.

ಹುಡುಗಿಯು ಟೋಲ್‌ಗೇಟಿನ ಹತ್ತಿರ ಇರಲಿಲ್ಲ.

ಪ್ರತಿವಾದಿಗಳ ಪರ ಸಾಕ್ಷಿಗಳನ್ನು ತಂದಿದ್ದಾರಷ್ಟೆ! ಆ ಹುಡುಗಿಯು ಟೋಲ್‌ಗೇಟಿನ ಹತ್ತಿರ ಕೂತಿದ್ದಳೆಂಬುದೂ, ಯಾರಾದರೂ ಮುಸಲ್ಮಾನ್ ಮತಕ್ಕೆ ಸೇರಿಸಿರಿ ಎಂದು ಕೇಳುತ್ತಿದ್ದಳೆಂಬುದೂ, ಶುದ್ಧಾಂಗವಾಗಿ ಸುಳ್ಳು. ಅವಳು ಇಸ್ಲಾಂ ಮತಕ್ಕೆ ಸೇರಬೇಕೆಂದೂ ಒಬ್ಬ ಮುಸಲ್ಮಾನನನ್ನು ಮದುವೆಯಾಗಬೇಕೆಂದೂ ನಿಜವಾಗಿ ಅಭಿಲಾಷೆಯುಳ್ಳವಳಾಗಿದ್ದರೆ ಅದನ್ನು ಸಾಧನೆಮಾಡಿಕೊಳ್ಳುವುದಕ್ಕೆ ಟೋಲ್‌ಗೇಟಿನ ಹತ್ತಿರವಿದ್ದ ಕಟ್ಟೆಯಮೇಲೆ ಹೋಗಿ ಕುಳಿತುಕೊಳ್ಳುವುದು ಅಸಹಜ. ಹಾಗಿದ್ದರೆ ಅವಳು ಮಸೀದಿಯ ಬಾಗಿಲಿಗೋ ಅಥವಾ ಒಬ್ಬ ಮರ್ಯಾದಸ್ಥನಾದ ಮೌಲ್ವಿಯ ಮನೆಗೋ ಹೋಗುತ್ತಿದ್ದಳು. ಆ ಟೋಲ್‌ಗೇಟಿನ ಹತ್ತಿರ ಹೋಗುತ್ತಿರಲಿಲ್ಲ. ಅಲ್ಲಿ ಮುಸಲ್ಮಾನರು ಬರುತ್ತಾರೆಂದು ಅವಳು ಪೂರ್ವ ಭಾವಿಯಾಗಿಯೇ ಊಹಿಸುವುದು ಹೇಗೆ? ಇಷ್ಟು ಮಾತ್ರವೇ-ಪ್ರತಿವಾದಿಗಳ ಸಾಕ್ಷಿ ವಾದವೆಲ್ಲಾ ಅಸಂಭವವೆಂದು ವ್ಯಕ್ತಪಡಿಸುವುದಕ್ಕೆ ಸಾಕಾಗಿದೆ. ಹುಡುಗಿಯು ಅವಳ ಹೇಳಿಕೆಯಲ್ಲಿ ಹೇಳುವಂತೆ ವೆಂಕಟಗಿರಿ ಕೋಟೆಯಲ್ಲಿಯೇ ಅವಳನ್ನು ಮೊದಲನೇ ಅಪರಾಧಿಯ ಮನೆಯಲ್ಲಿ ಮದುವೆಯ ಸಿದ್ಧತೆಯೆಲ್ಲಾ ಆಗುವವರೆಗೆ ಮುಚ್ಚಿಡಲ್ಪಟ್ಟಿದ್ದಳೆಂದು ಧಾರಾಳವಾಗಿ ಹೇಳಬಹುದು. ಆ ಮೇಲೆ ಆ ಹುಡುಗಿಯನ್ನು ಆ ಮನೆಗೆ ಸೇಟುಸಾಬಿಯ ಮನೆಗೆ ತೆಗೆದುಕೊಂಡು ಹೋಗಿರಬೇಕು. ಒಂದು ಪಕ್ಷ ಅವಳು ಟೋಲ್‌ಗೇಟಿನ ಹತ್ತಿರವೇ ಇದ್ದದ್ದು ನಿಜವಾದರೆ ಅವಳನ್ನು ಮೊದಲನೇ ಅಪರಾಧಿಯ ಮನೆಗೆ ಯಾರು ತೆಗೆದುಕೊಂಡುಹೋದರು? ಪ್ರತಿವಾದಿಗಳ ಸಾಕ್ಷಿಗಳಲ್ಲಿ ಒಬ್ಬನಾದರೂ ಬಂದು 'ನಾನು ಕರೆದುಕೊಂಡುಹೋದೆ' ಎಂದು ಧೈರ್ಯವಾಗಿ ಎದುರಿಗೆ ಬಂದು ಹೇಳಲಿಲ್ಲ. ಹುಡುಗಿಯು ಯಾವಾಗಲೂ ಜೊತೆಯಲ್ಲಿಯೇ ಇದ್ದ ಟ್ರಂಕಿನೊಡನೆ ಮೊದಲನೇ ಅಪರಾಧಿಯ ಮನೆಯಲ್ಲಿ ಹೇಗೆ ಆವಿರ್ಭವಿಸಿದಳು?

ಅಪರಾಧಿಗಳ ಪರ ಸಾಕ್ಷಿಗಳು.

ಹೀಗೆ ಪರಿಶೀಲಿಸುತ್ತಾ ನ್ಯಾಯಾಧೀಶರು ಹೇಳಿದ್ದೇನೆಂದರೆ ಈ ಮೊಕದ್ದಮೆಯಲ್ಲಿ ಅಪರಾಧಿಗಳ ಕಡೆ ಬಂದ ಸಾಕ್ಷಿಗಳೆಲ್ಲಾ ಅದೇ ಜಾತಿಯವರು. ಈ ವಿಷಯದಲ್ಲಿ ಅಭಿನಿವೇಶವುಳ್ಳವರು. ಹಿಂದಿನ ಚಿಂತಾಮಣಿ ದೊಂಬಿ ಮೊಕದ್ದಮೆಯಲ್ಲಿ ಈ ಮೊದಲನೇ ಅಪರಾಧಿಯೊಡನೆ ಅಪರಾಧದಲ್ಲಿ ಭಾಗಿಗಳಾಗಿದ್ದವರು ಅವರ ಸಾಕ್ಷಿಯು ತಿರಸ್ಕಾರಾರ್ಹವಾದದ್ದು.

ಮದುವೆಯ ಆತುರತೆ!

ಮದುವೆಯು ಅತ್ಯಂತ ಆತುರದಲ್ಲಿ, ಗಾಬರಿಯಲ್ಲಿ ನಡೆಯಿತೆಂಬುದಕ್ಕೆ ಬೇಕಾದಷ್ಟು ಆಧಾರವಿದೆ. ಮೊದಲನೇ ಅಪರಾಧಿಯು ಚಿಂತಾಮಣಿಗೆ ರಾತ್ರಿ ೯ ಗಂಟೆಗೆ ಬಂದನಂತೆ! ಎರಡು ಗಂಟೆ ಕಾಲದಲ್ಲಿ ಮದುವೆ ಎಲ್ಲಾ ಪೂರೈಸಿಹೋಯಿತಂತೆ! ಅಪರಾಧಿಗಳು ಇವಳಿಗೆ ಮದುವೆಯ ಶಾಸ್ತ್ರವನ್ನು ಮಾಡಿಬಿಟ್ಟು ಮದುವೆ ಆಗಿಹೋಯಿತು ಎಂಬ ಕಾರ್ಯವನ್ನು ಮುಗಿಸಿಬಿಟ್ಟರೆ ಗೆದ್ದುಬಿಟ್ಟೆವೆಂದು ಈ ಕಾರ್ಯವನ್ನು ಇಷ್ಟು ಆತುರವಾಗಿ ನಡೆಸಿದ್ದಾರೆ. ಇಲ್ಲದಿದ್ದರೆ ಈ ಆತುರವೇಕೆ? ಇದು ಸ್ವಾಭಾವಿಕವಾದ ಮದುವೆ ಆಗಿದ್ದರೆ, ಮಾರನೇ ದಿನ ರಾಜಾರೋಷಾಗಿ ಹಗಲಿನಲ್ಲಿಯೇ ನಡೆಯುತ್ತಿರಲಿಲ್ಲವೇ? ಆ ಊರಿನ ಖಾಯಂ ಖಾಜಿಯೇ ಆ ಮದುವೆಯನ್ನು ಮಾಡಿಸುತ್ತಿರಲಿಲ್ಲವೇ? ಯಾವನೋ ಖಾಜಿಯಾಗಿ ಮದುವೆ ನಡೆಸಿದನಲ್ಲಾ, ಅವನೇ 'ಮೌಲ್ವಿ' ಆಗಿಯೂ, ವಕೀಲನಾಗಿಯೂ, ಇದ್ದುದು ಏತಕ್ಕೆ? ಬೇರೆ ಯಾರಾದರೂ ದೊಡ್ಡ ಮನುಷ್ಯರು ಆ ಕೆಲಸಕ್ಕೆ ಸಿಗುತ್ತಿರಲಿಲ್ಲವೆ? ಇದೆಲ್ಲವೂ ಆ ಮದುವೆಯು ಏನೋ ಗೂಢ ವಿವಾಹವೆಂದು ಸಂದೇಹವನ್ನುಂಟುಮಾಡುತ್ತದೆ.

ನಿಕಾ ರಿಜಿಸ್ಟ್ರು.

ಆ ನಿಕಾ ಪಟ್ಟಿಗೂ, ನಿಕಾ ರಿಜಿಸ್ಟ್ರಿಗೂ ವ್ಯತ್ಯಾಸವಿದೆ. ಆ ರಿಜಿಸ್ಟ್ರಿನಲ್ಲಿ ಕೆಲವು ಭಾಗವನ್ನು ಕತ್ತರಿಸಿಹಾಕಿರುತ್ತಾರೆ. ಆ ಖಾಜಿಗೆ ಕೋರ್ಟಿನಿಂದ ವಾರಂಟು ಕಳಿಸಿದ ಮೇಲೆಯೇ ಈ ರಿಜಿಸ್ಟ್ರು ಸಹ ಹಾಜರ್ಮಾಡಲ್ಪಟ್ಟಿದೆ. ಆ ನಿಕಾ ಪಟ್ಟಿಯನ್ನು ಮೊದಲೇ ಪೋ|| ಸೂಪರಿಂಟೆಂಡೆಂಟರು ಕೈವಶಮಾಡಿಕೊಂಡದ್ದರಿಂದ ಅದನ್ನು ತಿದ್ದುವುದಕ್ಕೆ ಅವಕಾಶವಾಗಲಿಲ್ಲ! ಆ ಹುಡುಗಿಯು ಹೇಳುವಂತೆ ಆ ರಿಜಿಸ್ಟ್ರಿಗೆ ಮದುವೆಯ ಕಾಲದಲ್ಲೇ ರುಜು ತೆಗೆಯಲಿಲ್ಲವೆಂದೂ ಮಾರನೆಯ ದಿವಸ ರುಜುಮಾಡಿಸಿಕೊಂಡರೆಂದೂ, ಅವಳು ಹೇಳುವ ಹೇಳಿಕೆಯನ್ನು ನಿಜವೆಂದು ವ್ಯಕ್ತಪಡಿಸುತ್ತದೆ. ಈ ಅಪರಾಧಿಗಳು ಈ ವಿಷಯದಲ್ಲಿ ಇಂಥಾ ದುಷ್ಕಾರ್ಯ ಸಂಬಂಧವಾದ ಭಯವೇನೂ ಇಲ್ಲದಿದ್ದರೆ ಈ ಮದುವೆಯನ್ನು ಮಾರನೇ ದಿನದವರೆಗೆ ಕಾದು ನಡೆಸುತ್ತಿದ್ದರು. ಅಪರಾಧಿಯು ಸಮೀಪ ಬಂಧುವಾದ ಸೈಯ್ಯದ್ ಯೂಸಫ್‌ನನ್ನು ಆ ಮದುವೆಗೆ ಕರೆದಿಲ್ಲ. ಅಪರಾಧಿಗಳು ಎತ್ತಿಕಟ್ಟಿರುವ ಸಾಕ್ಷ್ಯವನ್ನೆಲ್ಲಾ ಸುಳ್ಳೆಂದು ಕೋರ್ಟು ಭಾವಿಸುತ್ತದೆ. ಮತ್ತು ಅವರು ಬಲಾತ್ಕಾರದ ಅಪರಾಧವನ್ನು ಮಾಡಿದ್ದಾರೆಂದು ಧಾರಾಳವಾಗಿ ನಂಬುತ್ತದೆ.

ಪೋ|| ಅಧಿಕಾರಿಗಳ ಸಾಮಿಾಲು.

ಈ ಸಂದರ್ಭದಲ್ಲಿ ಪೋಲೀಸು ಅಧಿಕಾರಿಗಳು ತಮ್ಮ ಕರ್ತವ್ಯದ ಪ್ರಥಮ ಪಾಠವನ್ನಾದರೂ ಮಾಡಿದ್ದರೆ ಈ ಮೊಕದ್ದಮೆಯೇ ನಡೆಯುತ್ತಿರಲಿಲ್ಲ. ಇದನ್ನು ಮೊಳಕೆಯಲ್ಲಿಯೇ ಮೂಲೋತ್ಪಾಟನ ಮಾಡಬಹುದಾಗಿತ್ತು. ಹಾಗೆ ಮಾಡಿದ್ದರೆ ಈ ಮೊಕದ್ದಮೆಯನ್ನು ವಿಚಾರಿಸುವ ದುಃಖಕರವಾದ ಪ್ರಸಂಗವೂ ನನಗೆ ಒದಗುತ್ತಿರಲಿಲ್ಲ. ಇನ್ಸ್ಪೆಕ್ಟರ್ ಜಹರುದ್ದೀನನು ಅಪರಾಧಿಗಳಿಗೆ ಸಹಕಾರಿಯಾಗಿ ಇಷ್ಟೊಂದು ಅನಾಹುತಕ್ಕೂ, ಮುಂದಿನ ಘೋರ ಪ್ರಕರಣಗಳಿಗೂ ಮುಖ್ಯಕಾರಣನಾಗಿದ್ದಾನೆ. ಆತನು ನ್ಯಾಯವಾಗಿ ನಡೆದುಕೊಳ್ಳಲಿಲ್ಲವೆಂಬುದಕ್ಕೆ ಬೇಕಾದಷ್ಟು ಪ್ರಮಾಣಗಳಿವೆ. ಆತನು ಮಾಡಿದ ಅತ್ಯಂತ ಸಾಧಾರಣವಾದ ಕಾರ್ಯವೆಂದರೆ ಅವನು ಅರೆಮನಸ್ಸಿನಿಂದ ಆ ರಾತ್ರಿ ಹುಡುಕಿದಂತೆ ನಟಿಸಿದ್ದಾನೆ. ಅಷ್ಟೆ! ಸಬ್ ಇನ್ಸ್ಪೆಕ್ಟರು ಲಕ್ಷ್ಮೀನಾರಣಪ್ಪನು ತನ್ನ ಮೇಲಧಿಕಾರಿಗಳ ವಿಶ್ವಾಸಪಾತ್ರನಾಗಬೇಕೆಂಬ ಅಭಿಲಾಷೆಯಿಂದ ಆತನ ಕಾರ್ಯಕ್ಕೇ ಪ್ರೋತ್ಸಾಹ ಮಾಡಿರಬಹುದು. ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ, ಅವರ ಸಂತೋಷಕ್ಕಾಗಿ ಹಾಗೆ ಮಾಡಿದ್ದಾನೆ. ಮುಂದೆ ಬಹಳ ತೊಂದರೆಗೆ ಇಟ್ಟುಕೊಳ್ಳಬಹುದೆಂದು ಊಹಿಸಿಕೊಂಡು ಉಪಾಯವಾಗಿ ಯಾವುದೋ ನೆಪದಿಂದ ಮಾರನೇ ದಿನವೇ ರಜಾ ತೆಗೆದುಕೊಂಡು ಹೊರಟುಹೋಗಿದ್ದಾನೆ.

ಅಮಲ್ದಾರರೇನು ಮಾಡಿದರು?

ಸ್ಥಳದ ಅಧಿಕಾರಿಯೂ ಆ ಊರು ಪೋಲೀಸಿನ ಮೇಲ್ವಿಚಾರಣೆಯ ಅಧಿಕಾರಿಯೂ ಆದ ಅಮಲ್ದಾರರ ಸಾಕ್ಷಿಯು ಸ್ಪಷ್ಟವಾಗಿದೆ. ಆತನು ಹೇಳುತ್ತಾನೆ. ಆ ಪ್ರಾತಃಕಾಲ ೨-೪ ಗಂಟೆಗಳು ಹೊರತು ಬಾಕಿ ಸಮಯದಲ್ಲೆಲ್ಲಾ ಸ್ಥಳದಲ್ಲಿ ಇದ್ದೆನೆಂದು. ಇನ್ಸ್ಪೆಕ್ಟರು ಜಹರುದ್ದೀನರು ಈ ರಾತ್ರಿಯ ವಿದ್ಯಮಾನಗಳನ್ನೆಲ್ಲಾ ಅವರಿಗೆ ತಿಳಿಸಲೇ ಇಲ್ಲ. ಹುಡುಗಿಯ ಅಣ್ಣನೂ ಇನ್ನೂ ಕೆಲವರೂ ಹೋಗಿ ಮಾರನೆಯ ದಿನ ಮಧ್ಯರಾತ್ರಿಯಲ್ಲಿ ಹೇಳಿದಾಗ ಅಮಲ್ದಾರರಿಗೆ ತಿಳಿಯಿತು. ಇನ್ಸ್ಪೆಕ್ಟರ ಮನೆ ಅಮಲ್ದಾರರ ಮನೆಗೆ ೨೫ ಗಜ ದೂರದಲ್ಲಿತ್ತು. ರಾತ್ರಿ ೭ ಗಂಟೆಯ ಸಮಯದಲ್ಲಿ ಇನ್ಸ್ಪೆಕ್ಟರು ಕ್ಲಬ್ಬಿನ ಹತ್ತಿರ ಅಮಲ್ದಾರರನ್ನು ನೋಡಿದ್ದಾರೆ. ಅವರಿಬ್ಬರೂ ಮಾತನಾಡಿಕೊಂಡೇ ಮನೆಗೆ ಬಂದಿದ್ದಾರೆ. ಆ ಬೆಳಗಿನ ವಿದ್ಯಮಾನಗಳು ಎಂದರೆ ಹುಡುಗಿಯು ತಾನಾಗಿಯೇ ಇಸ್ಲಾಂ ಮತಕ್ಕೆ ತನ್ನ ಇಚ್ಛಾನುಸಾರವಾಗಿಯೇ ಸೇರುತ್ತೇನೆಂದು ಅರ್ಜಿ ಕೊಟ್ಟಿದ್ದು ವಗೈರೆ ಸಂಗತಿಗಳನ್ನು ಅಮಲ್ದಾರರಿಗೆ ಹೇಳಲೇ ಇಲ್ಲ. ಅಮಲ್ದಾರರು ಹೇಳುವಂತೆ ಚಿಂತಾಮಣಿಯಲ್ಲಿ ಪೂರ್ವದಿಂದಲೂ ಹಿಂದೂ ಮಹಮ್ಮದೀಯ ದ್ವೇಷವಿದೆಯೆಂದೂ, ಆ ಪ್ರಾತಃಕಾಲ ಗಲಾಟೆ ನಡೆಯಿತೆಂದೂ ಹೇಳುತ್ತಾರೆ.

ಈ ವಿಷಯಗಳನ್ನೆಲ್ಲಾ ಅಮಲ್ದಾರರಲ್ಲಿ ಹೇಳದೇ ಇದ್ದುದು ಮಾತ್ರವೇ ಅಲ್ಲ. ಅಮಲ್ದಾರರು ಹುಡುಗಿಯನ್ನು ತಂದು ಹಾಜರ್ಮಾಡಬೇಕೆಂದು ಹೇಳಿದಾಗ ಅಡ್ಡಿಪಡಿಸಿ ಮಾತನಾಡಿದ್ದಾನೆ. ನಿಮಗೆ ಅನಧಿಕಾರವಿದೆಯೆಂದು ಕೇಳಿದ್ದಾನೆ. ಅದರೆ ಅಕ್ಷರಶಃ ಕಾನೂನಿಗೆ ಅದು ಸರಿಯಾದ ಪ್ರಶ್ನೆಯೇ ಆಗಿದ್ದರೂ ವಾಸ್ತವವಾಗಿ ಅಮಲ್ದಾರರ ಅಧಿಕಾರವನ್ನು ಧಿಕ್ಕರಿಸಿ ಪ್ರಶ್ನೆಮಾಡಿದ್ದಾನೆ. ಅಮಲ್ದಾರರು ಕೇಳಿದಾಗ ಸ್ಟೇಷನ್ ಡೈರಿಯನ್ನು ಹಾಜರ್ಮಾಡಲಿಲ್ಲ. ಆ ಡೈರಿಯಲ್ಲಿ ಬರೆದಿರುವುದೆಲ್ಲಾ ಸರಿಯಾಗಿದೆಯೇ ಎಂಬ ವಿಷಯದಲ್ಲಿ ಈ ಅಂಶವು ಸಂದೇಹವನ್ನುಂಟುಮಾಡುತ್ತದೆ. ಅದು ಮಾಮೂಲು ಪ್ರಕಾರ ೨೬ ನೇ ತಾ|| ದಿವಸ ಅಮಲ್ದಾರರ ಕಣ್ಣು ಮುಂದೆ ಬಂತು. ಅತ್ಯಂತ ದೋಷಕರವಾದ ಅಂಶವೆಂದರೆ ಆತನು ಹುಡುಗಿಯು ಎಲ್ಲಿದ್ದಾಳೆಂಬ ವಿಷಯದಲ್ಲಿ ಅಮಲ್ದಾರರನ್ನು ಪೋ|| ಸೂಪರಿಂಟೆಂಡೆಂಟರನ್ನು ಭ್ರಾಂತರನ್ನಾಗಿ ಮಾಡಿ ದಾರಿ ತಪ್ಪಿಸಿದ್ದಾನೆ. ೨೪ ನೇ ತಾ|| ದಿವಸ ಪ್ರಾತಃಕಾಲ ಹುಡುಗಿಯು ಮೈನರು ಹೌದೇ ಅಲ್ಲವೇ ಎಂಬುದನ್ನು ವಿಚಾರಿಸಲೇ ಇಲ್ಲ. ಹುಡುಗಿಯ ಹೇಳಿಕೆಯಲ್ಲಿ ಎಲ್ಲೋ ಅವಳು ಮೆಜಾರಿಟಿಗೆ ಬಂದಿದ್ದಾಳೆಂದು ಹೇಳಲ್ಪಟ್ಟಿದೆ. ಇನಸ್ಪೆಕ್ಟರ ರಿಪೋರ್ಟನ್ನು ಪೋ|| ಸೂಪರಿಂಟೆಂಡೆಂಟರು ನೋಡಿದರೋ ಇಲ್ಲವೋ ಅದೇ ಸಂದೇಹವಾಗಿದೆ. ಹೇಗೇ ಆಗಲಿ ಅದರಮೇಲೆ ಅವರು ರುಜು ಮಾಡಲಿಲ್ಲ. ಏನೂ ಹುಕುಂ ಮಾಡಲಿಲ್ಲವೆಂಬುದೇನೋ ಖಂಡಿತ. ಪೋಲೀಸು ಸೂಪರಿಂಟೆಂಡೆಂಟರು ಅದನ್ನು ನೋಡಿದೆನೆಂದು ಹೇಳುತ್ತಾರಾದರೂ ಎಂದು ಯಾವ ತಾರೀಖಿನಲ್ಲಿ ನೋಡಿದೆನೆಂದು ಹೇಳಲಾರರಾಗಿದ್ದಾರೆ.

ಅಂತೂ ಪೋಲೀಸು ಸೂಪರಿಂಟೆಂಡೆಂಟರಾದ ಅಬ್ದುಲ್ ರಜಾಕರು ಅಪರಾಧಿಗಳ ಸಾಕ್ಷಿಯಾಗಿ ಕರೆಯಲ್ಪಟ್ಟು ಪಬ್ಲಿಕ್ ಪ್ರಾಸಿಕ್ಯೂಟರಿಂದ ಪಾಟೀಸವಾಲು ಮಾಡಿಸಿಕೊಳ್ಳುವಂಥ ಪರಿಸ್ಥಿತಿಯು ಬಹಳ ಅಪರೂಪ. ಇಂಥ ಸಂದರ್ಭಗಳು ಮುಂದೆ ಒದಗದೇ ಇರಬೇಕು. ಈ ಮೊಕದ್ದಮೆಯಲ್ಲಿ ಪೂರ್ವ ಭಾಗದಲ್ಲಿ ಸರಿಯಾದ ವಿಚಾರಣೆ ನಡೆಯಲೇ ಇಲ್ಲ. ಆದಾಗ್ಯೂ, ಕೂಡ, ಈ ಕೇಸಿನ ಬೆಲೆಯೇನೂ ಕಡಿಮೆಯಾಗಲಿಲ್ಲ.

ಅಪರಾಧಗಳ ಸ್ವರೂಪ.

ಈ ಮೊಕದ್ದಮೆಯಲ್ಲಿ ಕನ್ಯಾಪಹಾರ ಮತ್ತು ಬಲಾತ್ಕಾರ ಎರಡೂ ನಡೆದಿದ್ದಾಗ್ಯೂ, ಕೂಡ, ಕೋರ್ಟು ಯಾವುದಾದರೊಂದಕ್ಕೆ ಶಿಕ್ಷೆ ಕೊಡಲು ಇಷ್ಟಪಡುತ್ತದೆ. ಎರಡೂ, ೩೬೬ ನೇ ಸೆಕ್ಷನ್ ಒಳಗೆ ಬರುತ್ತದೆ. ಅಸೆಸರುಗಳೊಡನೆ ಅರ್ಧಮಟ್ಟಿಗೆ ಒಪ್ಪಿಗೆ ಹೊಂದುತ್ತಲೂ, ಅರ್ಧಮಟ್ಟಿಗೆ ಅಸಮ್ಮತಿಯನ್ನು ಹೊಂದಿಯೂ, ಕೋರ್ಟು ಅಪರಾಧಿಗಳನ್ನು ಕಿಡ್ನಾಪಿಂಗ್, ಅಥವಾ ಅಬ್ಡಕ್ಷನ್ ಅಪರಾಧಕ್ಕೆ ಶಿಕ್ಷಿಸುತ್ತದೆ. ಈ ಸಂದರ್ಭದಲ್ಲಿ ಛಾರ್ಜು ಷೀಟಿನಲ್ಲಿ ಹಾಕಿರುವ ೩-೪ ನೇ ಅಪರಾಧಗಳನ್ನು ಪರಾಮರ್ಶಿಸಿ, ಅಭಿಪ್ರಾಯವನ್ನು ಕೊಡುವುದೂ, ಅನಾವಶ್ಯಕವೆಂದು ಕೋರ್ಟು ಭಾವಿಸುತ್ತದೆ. ಬಿಡಲ್ಪಟ್ಟ ಅಪರಾಧಿಗಳು ದೋಷಿಗಳೇ ನಿರ್ದೋ

(6ನೆಯ ಪುಟವನ್ನು ನೋಡಿರಿ.)

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯಲ್ಲಿ ಸೆಷನ್ಸ್ ಜಡ್ಜರ ತೀರ್ಪು.

ಪೋಲೀಸು ಇನಸ್ಪೆಕ್ಟರು ಸಾಮೀಲಾದುದೇ ಮೂಲಕಾರಣ.

ಪ್ರಣಯಪತ್ರಗಳೆಲ್ಲಾ ಪುಂಡು ಫೋರ್ಜರಿಗಳು.

ಮಹಾಲಕ್ಷ್ಮಮ್ಮನ ಮೇಲೆ ನಡೆಸಿದ ಅತ್ಯಾಚಾರವು ಆಮರಣಾಂತ ಸಂಕಟಕ್ಕೆ ಕಾರಣ.

ಕಠಿನವಾದ ಶಿಕ್ಷೆಯೇ ಆಗಬೇಕು.

ಈ ಮೊಕದ್ದಮೆಯಲ್ಲಿ ನಾಲ್ಕು ಅಪರಾಧಿಗಳು ಕೋಲಾರದ ಮ್ಯಾಜಿಸ್ಟ್ರೇಟರಿಂದ ೩೬೬ ನೇ ಪ್ರಕರಣದಂತೆ ತಪ್ಸೀರು ಮಾಡಿರುತ್ತಾರೆಂದು ನಮ್ಮ ಕೋರ್ಟು ಮುಂದೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ. ಆ ಮ್ಯಾಜಿಸ್ಟ್ರೇಟರು ಮಾಡಿರುವ ಛಾರ್ಜು ಲೋಪವಾಗಿದೆ. ಆದ್ದರಿಂದ ಪಬ್ಲಿಕ್ ಪ್ರಾಸಿಕ್ಯೂಟರು ಇಲ್ಲಿ ಸರಿಯಾಗಿ ಛಾರ್ಜನ್ನು ತಿರುಗಿಸಿ ಇಲ್ಲಿ ಇಟ್ಟಿದ್ದಾರೆ. ಅದು ಈ ರೀತಿಯಾಗಿದೆ.—

೧. ಈ ನಾಲ್ಕು ಅಪರಾಧಿಗಳು ೩೩ ನೇ ತಾ|| ದಿವಸ ಅಥವಾ ಆ ಸುಮಾರಿನಲ್ಲಿ ಚಿಂತಾಮಣಿಯಲ್ಲಿ ಮಹಾಲಕ್ಷ್ಮಮ್ಮನೆಂಬ ಮೈನರು ಹುಡುಗಿಯನ್ನು ಬಲಾತ್ಕಾರದಿಂದ ಮದುವೆ ಮಾಡುವುದಕ್ಕೆ ಅಥವಾ ಮದುವೆಗೆ ಬಲಾತ್ಕಾರವಾಗುವುದೆಂದು ತಿಳಿದು ಅವಳನ್ನು ಅಪಹಾರಮಾಡಿರುತ್ತಾರೆ.

೨. ಈ ನಾಲ್ಕು ಅಪರಾಧಿಗಳು ಚಿಂತಾಮಣಿಯಲ್ಲಿ ಮಹಾಲಕ್ಷ್ಮಮ್ಮನೆಂಬ ಹುಡುಗಿಯನ್ನು ಮದುವೆಗೆ ಬಲಾತ್ಕಾರಮಾಡಲು ಅಥವಾ ಅವಳಿಗೆ ಮದುವೆಯು ಬಲಾತ್ಕಾರವಾಗುವುದೆಂದು ತಿಳಿದು ೩೩ರಲ್ಲಿ ಅಥವಾ ಆ ಸುಮಾರಿನಲ್ಲಿ ಅಬ್ಡಕ್ಷನ್ (ಅಪಹಾರ) ಮಾಡಿರುತ್ತಾರೆ.

೩. ಅಬ್ದುಲ್ ಷುಕೂರು ಮತ್ತು ದಸ್ತಗಿರಿಸಾಬಿ ಅವರು ಬ್ಬರೂ ಚಿಂತಾಮಣಿಯಲ್ಲಿ ೩೩ ನೇ ತಾ|| ದಿವಸ ಮಹಾಲಕ್ಷ್ಮಮ್ಮನೆಂಬ ಮೈನರು ಹುಡುಗಿಯನ್ನು ನ್ಯಾಯವಾದ ಗಾರ್ಡಿಯನ್ನರಿಂದ ಅವಳ ಇಷ್ಟಕ್ಕೆ ವಿರೋಧವಾಗಿ ಮದುವೆನಡೆಸುವ ಬಗ್ಗೆ ಅವಳನ್ನು ಅಪಹಾರ ಮಾಡಿದರೆಂದೂ, ಈಗ ಕೋರ್ಟು ಮುಂದೆ ಇರುವ ಅಪರಾಧಿಗಳು ಅವರಿಗೆ ಮದ್ದತ್ತು ಮಾಡಿದರೆಂದೂ. ಅದರಿಂದ ೩೬೬ನೇ ಸೆಕ್ಷನ್‌ಗೆ ಲಗಾವಾಗುವ ೧೧೪ನೇ ಸೆಕ್ಷನ್ ಪ್ರಕಾರ ಅಪರಾಧಮಾಡಿರುತ್ತಾರೆ.

೪. ಅಬ್ದುಲ್ ಷುಕೂರ್ ಮತ್ತು ದಸ್ತಗಿರಿಸಾಬಿ ಎಂಬುವರು ೩೩ನೇ ತಾ|| ದಿವಸ ಮಹಾಲಕ್ಷ್ಮಮ್ಮನೆಂಬ ಹುಡುಗಿಯ ಮೇಲೆ ಬಲಾತ್ಕಾರ ನಡೆಸಿರುತ್ತಾರೆಂದೂ. ಈ ಅಪರಾಧಿಗಳು ಅವರಿಗೆ ಮದ್ದತ್ ಮಾಡಿರುತ್ತಾರೆಂದೂ ಫಿರ್ಯಾದುಕಂಡಿದೆ.

ಈ ಬದಲಾಯಿಸಿದ ರೂಪದಲ್ಲಿ ಛಾರ್ಜು ಹಾಕಿದ್ದರಿಂದ ಅಪರಾಧಿಗಳ ನ್ಯಾಯವು ಕೆಟ್ಟುಹೋಗುವುದಿಲ್ಲವೆಂದು ನಮ್ಮ ಮನಸ್ಸಿಗೆ ಖಾತ್ರಿಯಾದದ್ದರಿಂದ ಆಗಲೇ ವಿಚಾರಣೆಗೆ ಆರಂಭ ಮಾಡಲಾಯಿತು. ಈ ಬದಲಾಯಿಸಿದ ಛಾರ್ಜಿಗೆ ಸಂಬಂಧಪಟ್ಟಂತ ಸಾಕ್ಷಿಗಳನ್ನು ಹಾಜರ್ಮಾಡುವಂತೆ ಅಪರಾಧಿಗಳಿಗೆ ಹೇಳಲಾಯಿತು. ಅಪರಾಧಿಗಳ ಲಾಯರು ಹೆಚ್ಚಿಗೆ ಸಾಕ್ಷಿಗಳ ಪಟ್ಟಿಯನ್ನು ಕೊಟ್ಟರು. ಅವರೆಲ್ಲರಿಗೂ ಸಮನ್ಸ್ ಕಳುಹಿಸಲಾಯ್ತು.

ಹೀಗೆ ಪರಂಪರೆಯಾಗಿ ವಿಚಾರಣೆಯು ಕ್ರಮವನ್ನೆಲ್ಲಾ ಸೂಚಿಸಿ, ಜಡ್ಜಮೆಂಟು ಮುಂದುವರಿಯುತ್ತದೆ. ಮಹಾಲಕ್ಷ್ಮಮ್ಮನ ಹೇಳಿಕೆ ಮತ್ತು ರಾಮಸ್ವಾಮಿಪಂಡಿತರ ಹೇಳಿಕೆಯು ಗೋಷ್ವಾರೆಯಾಗಿ ಎತ್ತಿ ವಿವರಿಸಲ್ಪಟ್ಟಿದೆ. ಹೀಗೆಯೇ ನ್ಯಾಯಾಧೀಶರು ಪೂರ್ವರಂಗವನ್ನೆಲ್ಲಾ ಅಣಿಮಾಡಿಕೊಂಡು ವಯಸ್ಸಿನ ನಿರ್ಣಯಕ್ಕೆ ಆರಂಭಿಸುತ್ತಾರೆ.

ವಯಸ್ಸೆಷ್ಟು?

ಈ ಮಹಾಲಕ್ಷ್ಮಮ್ಮನ ಮೇಲೆ ಕೃತ್ಯ ನಡೆದ ದಿನ ಆಕೆಯ ವಯಸ್ಸು ಹದಿನಾರಕ್ಕಿಂತ ಕಡಮೆಯಾಗಿತ್ತೆಂದೂ, ಅವಳು ಮೈನರೆಂದೂ, ಪ್ರಾಸಿಕ್ಯೂಷನ್ನವರು ಕಾಗದಪತ್ರಗಳ ದಾಖಲೆಯನ್ನೂ ಬಾಯಿಮಾತಿನ ಹೇಳಿಕೆಗಳನ್ನೂ ಆಧಾರವಾಗಿ ಕೊಟ್ಟಿರುತ್ತಾರೆ. ಕೋಲಾರದ ಲೇಡೀ ಡಾಕ್ಟರ ಸರ್ಟಿಫಿಕೇಟೂ ಸಹ ಆಧಾರವಾಗಿ ಕೊಡಲ್ಪಟ್ಟಿದೆ. ವಯಸ್ಸಿನ ವಿಷಯದಲ್ಲಿ ಮೊದಲನೇ ಆಧಾರವೆಂದರೆ, ಹುಡುಗಿಯ ಅಣ್ಣ ನರಸಿಂಹಯ್ಯನು ಸೂಪರಿಂಟೆಂಡೆಂಟರಲ್ಲಿ ಕೊಟ್ಟ ಹುಡುಗಿಯ ಜಾತಕ! ಆ ಜಾತಕವನ್ನೇ ಸ್ವೀಕರಿಸಕೂಡದೆಂಬ ಬಗ್ಗೆ ಅಪರಾಧಿಗಳ ಲಾಯರು ಅಡ್ಡಿಮಾಡಿದರು. ಆ ಬಗ್ಗೆ ಕೆಲವು ಲಾ ಕೇಸುಗಳನ್ನು ಉದಾಹರಿಸಿದರು. ಕೋರ್ಟು ಹುಡುಗಿಯ ವಯೋನಿರ್ಣಯದ ಬಗ್ಗೆ ಜಾತಕವನ್ನು ಸ್ವೀಕರಿಸಬಹುದೆಂದು ಎವಿಡೆನ್ಸ್ ಆಕ್ಟಿನ ೧೫೯-೧೬೦ ನೇ ಕಲಂ ಪ್ರಕಾರ ಆರ್ಡರುಮಾಡಿತು. ಎವಿಡೆನ್ಸ್ ಆಕ್ಟು ೩೫ ನೇ ಸೆಕ್ಷನ್ ಪ್ರಕಾರ ಜಾತಕವನ್ನು ಆಧಾರವಾಗಿ ಸ್ವೀಕರಿಸಬಹುದೆಂದು ಕೋರ್ಟು ಹುಕುಂಮಾಡಿತು. ಅದೇ ಸೆಕ್ಷನ್ ಪ್ರಕಾರ ಸ್ಕೂಲು ರಿಜಿಸ್ಟ್ರು ದಾಖಲೆಯೂ ವಯೋನಿರ್ಣಯದಲ್ಲಿ ಅಂಗೀಕರಿಸಲ್ಪಡಬಹುದೆಂದು ಕೋರ್ಟು ಅಭಿಪ್ರಾಯಪಟ್ಟಿತು. ಆ ಆಧಾರದಂತೆ ೧೯೩೩ ರಲ್ಲಿ ಹುಡುಗಿಯ ವಯಸ್ಸು ೫ ವರ್ಷಗಳೆಂದು ಇರುವಾಗ ಅವಳು ೧೯೧೮ರಲ್ಲಿ ಹುಟ್ಟಿದಳೆಂಬುದಕ್ಕೆ ಸಂದೇಹವೇನೂ ಇಲ್ಲ. ಅಪರಾಧಿಗಳ ಲಾಯರು ೧೯೧೮ರಲ್ಲಿ ಹುಡುಗಿಯು ಹುಟ್ಟಿದಳೆಂದು ನಮೂದಾಗಿದೆಯೇ ಹೊರತು ಇಂಥಾ ದಿವಸವೇ ಎಂದು ನಿರ್ದಿಷ್ಟವಾಗಿ ಇಲ್ಲವೆಂದು ಆಕ್ಷೇಪಿಸಿದರು. ತಂದೆಯು ಜಾತಕನೋಡಿ ಬರದಿದ್ದರೆ ಗೊತ್ತಾದ ದಿವಸವನ್ನೇ ಬರೆಯಬಹುದಾಗಿತ್ತು. ಆದರೆ ೧೯೩೩ನೇ ಇಸ್ವಿಯಲ್ಲಿ ನಡೆಯುವ ಪ್ರಕಾರ ನಾವು ಅವನಿಗೆ ಮೊದಲೇ ಗೊತ್ತಾಗಿದ್ದರೆ ಹಾಗೆಯೇ ಮಾಡುತ್ತಿದ್ದನೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಆದಾಗ್ಯೂ ಆ ಹುಡುಗಿಯನ್ನು ಸ್ಕೂಲಿಗೆ ಸೇರಿಸುವುದಕ್ಕೆ ಆ ವರ್ಷವನ್ನು ನಮೂದಿಸಿದರೆ ಸಾಕೆಂದು ಭಾವಿಸುವುದರಲ್ಲಿ ಅಸಹಜವೇನೂ ಇಲ್ಲ. ಈ ಮೊಕದ್ದಮೆಯಲ್ಲಿ ಆ ಹುಡುಗಿ ಹುಟ್ಟಿದ ವಯಸ್ಸೇ ಮುಖ್ಯವಾಗಿದೆ. ಯಾವ ದಿವಸವಾದರೂ ಸರಿಯೆ ಅದು ಅಷ್ಟು ಗಣನೀಯವಲ್ಲ. ಏಕೆಂದರೆ, ಅವಳು ಆ ವರ್ಷ ಜನವರಿ ಮೊದಲನೇ ತಾ|| ದಿವಸವೇ ಹುಟ್ಟಿದ್ದಾಗ್ಯೂ ಈ ಕೃತ್ಯ ನಡೆದ ದಿವಸಕ್ಕೆ ಆಕೆಯ ವಯಸ್ಸು ೧೬ರ ಒಳಗೇ ಬರುತ್ತದೆ. ಆದ್ದರಿಂದ ಈ ಕೃತ್ಯ ನಡೆದ ದಿವಸ ಆ ಹುಡುಗಿಯು ೧೬ ವಯಸ್ಸಿನೊಳಗೇ ಮೈನರಾಗಿದ್ದಳೆಂದು ಆ ಜಾತಕವೂ, ಮತ್ತು ಸ್ಕೂಲು ರಿಜಿಸ್ಟ್ರು ಸಹ ಪ್ರಮಾಣೀಕರಿಸುತ್ತದೆಂದು ನಾನು ಭರವಸೆಯುಳ್ಳವನಾಗಿದ್ದೇನೆ. ಈ ಅಂಶವು ಇವರ ಕಾಗದಪತ್ರಗಳ ಆಧಾರದ ಮೇಲೆಯೂ, ಜುಬಾನಿ ಸಾಕ್ಷ್ಯದ ಮೇಲೆಯೂ ಸಿದ್ಧವಾಗುತ್ತದೆ.

ರಾಮಸ್ವಾಮಿ ಪಂಡಿತನು ಹೇಳುತ್ತಾನೆ, ಮಹಾಲಕ್ಷ್ಮಮ್ಮನು ಲಕ್ಷ್ಮೀನರಸಿಂಹಯ್ಯನು ಹುಟ್ಟಿದ ೩ ಅಥವಾ ೩|| ವರ್ಷದ ಮೇಲೆ ಹುಟ್ಟಿದಳೆಂದು. ಲಕ್ಷ್ಮೀನರಸಿಂಹಯ್ಯನ ವಯಸ್ಸಿನ ವಿಚಾರದಲ್ಲಿ ಕೆಲವು ಸ್ಕೂಲು ರಿಜಿಸ್ಟ್ರುಗಳು ವಗೈರೆ ಆಧಾರಗಳು ಸೂಚಿಸಲ್ಪಟ್ಟಿವೆ. ಈ ಸಂದರ್ಭದಲ್ಲಿ ಅಪರಾಧಿಗಳ ಪರ ಸಾಕ್ಷಿಯಾಗಿ, ಸದರಿ ಲಕ್ಷ್ಮೀನರಸಿಂಹಯ್ಯನ ಮಿಡಲ್ ಸ್ಕೂಲು ಪರೀಕ್ಷೆಯ ಅಪ್ಲಿಕೇಷನ್ ವಗೈರೆ ದಾಖಲೆಗಳಿಗೆ ಸಮನ್ಸ್ ಮಾಡಲ್ಪಟ್ಟಿತ್ತು. ಏನೋ ಕಾರಣವಿರಬಹುದು. ಈ ಸಾಕ್ಷಿಯನ್ನು ತೆಗೆದುಕೊಂಡರೆ ತಮ್ಮಗೇ ತೊಂದರೆಯಾಗಬಹುದೆಂದು ತಿಳಿದುಕೊಂಡು ಈ ಸಾಕ್ಷ್ಯವನ್ನು ಅಪರಾಧಿ ಪರ ವಿಚಾರಿಸಲೇ ಇಲ್ಲ. ಪಬ್ಲಿಕ್ ಪ್ರಾಸಿಕ್ಯೂಟರ ಸೂಚನೆಯಂತೆ ಕೋರ್ಟಿನವರು ತಮ್ಮ ಅಧಿಕಾರಾನುಸಾರ ಈ ಸಾಕ್ಷಿಗಳನ್ನು ತಾವೇ ವಿಚಾರಿಸಿದರು. ಅದರಲ್ಲಿ ಪ್ರಾಸಿಕ್ಯೂಟರ ಶಿಫಾರಿಸಿನಂತೆ ಈ ಸಾಕ್ಷಿಗಳ ವಿಚಾರಣೆಯಾಗಿರುವುದರಿಂದ ಈ ಸಾಕ್ಷಿಗಳನ್ನೇ ಪೂರ್ತಿಯಾಗಿ ತಿರಸ್ಕರಿಸಬೇಕೆಂದೂ, ಇವು ಕೋರ್ಟು ಸಾಕ್ಷಿಗಳಾಗಿ ಪರಿಗಣಿಸಲ್ಪಡಕೂಡದೆಂದೂ ಅಪರಾಧಿಗಳ ಪರ ಲಾಯರು ವಾದಿಸಿದರು. ಈ ಸಾಕ್ಷಿಗಳು ಅಪರಾಧಿಗಳ ಪರವಾಗಿಯೇ ಸಮನ್ಸ್ ಮಾಡಲ್ಪಟ್ಟವರಾದ್ದರಿಂದಲೂ, ಇವರ ಸಾಕ್ಷ್ಯವು ಮೊಕದ್ದಮೆಗೆ ಅವಶ್ಯಕವೆಂದು ಕೋರ್ಟು ಭಾವಿಸಿದ್ದರಿಂದಲೂ ಅವರ ಸಾಕ್ಷ್ಯವು ಪರಿಗ್ರಾಹ್ಯವೇ ಆಗಿದೆ. ಪಬ್ಲಿಕ್ ಪ್ರಾಸಿಕ್ಯೂಟರು ಕೇಳಿದ ಮಾತ್ರದಿಂದ ಅವರನ್ನು ಕೋರ್ಟು ವಿಚಾರಣೆಮಾಡಲಿಲ್ಲ. ಅವರ ವಿಚಾರಣೆಯಿಂದ ನ್ಯಾಯವು ಹೊರಪಡುತ್ತೆಂಬ ನಂಬಿಕೆಯಿಂದಲೇ ವಿಚಾರಣೆಮಾಡಲ್ಪಟ್ಟಿತು. ಆದ್ದರಿಂದ ಅಪರಾಧಿಗಳ ಲಾಯರ ಆಕ್ಷೇಪವನ್ನು ನಾನು ನಿರಾಕರಿಸುತ್ತೇನೆ. ಲೋಕಲ್ ಎಗ್ಸಾಮಿನೇಷನ್ ರಿಜಿಸ್ಟರಿನಲ್ಲಿ ಲಕ್ಷ್ಮೀನರಸಿಂಹಯ್ಯನು ೧೯೩೧ನೇ ಇಸ್ವಿಯಲ್ಲಿ ಪರೀಕ್ಷೆಗೆ ಹೋದ ಅಂಶವೂ ಆ ಹುಡುಗನ ವಯಸ್ಸು ಆಗ ೧೫ ಎಂದೂ ಕೊಡಲ್ಪಟ್ಟಿದೆ. ಆ ಪರೀಕ್ಷೆಗಳ ಸೆಕ್ರೆಟರಿಗಳು ವಾಙ್ಮೂಲದಲ್ಲಿ ಹೇಳುವುದೇನೆಂದರೆ, ಆ ಅಪ್ಲಿಕೇಷನ್ ಫಾರಂಗಳು ಎರಡು ವರ್ಷವಾದ ಮೇಲೆ ನಾಶಪಡಿಸಲ್ಪಡುತ್ತವೆಂದು ಸಾಕ್ಷಿ ಹೇಳುತ್ತಾರೆ. ಅಪ್ಲಿಕೇಷನ್‌ನಲ್ಲಿ ಏನು ಬರದಿತ್ತೋ ಅದೇ ಈ ರಿಜಿಸ್ಟರಿನಲ್ಲಿದೆ. ಆ ದಿವಸ ಆತನ ವಯಸ್ಸು ೧೫ ಎಂದು ನಮೂದಾಗಿದೆ. ಮಹಾಲಕ್ಷ್ಮಮ್ಮನು ಲಕ್ಷ್ಮೀನರಸಿಂಹಯ್ಯನು ಹುಟ್ಟಿದ ಮೇಲೆ ಹುಟ್ಟಿದಳೆಂದು ರಾಮಸ್ವಾಮಿ ಪಂಡಿತನು ಹೇಳುವುದು ಕೂಡ ಈ ರಿಜಿಸ್ಟರಿನಲ್ಲಿ ನಮೂದಿರುವ ಬರವಣಿಗೆಯಿಂದ ಸಾಬೀತು ಆಗುತ್ತದೆ. ಈ ಹುಡುಗಿಗೂ, ಲಕ್ಷ್ಮೀನರಸಿಂಹಯ್ಯನಿಗೂ ಬಹುಶಃ ಎರಡು ವರ್ಷ ವ್ಯತ್ಯಾಸವಿರಬಹುದು. ರಾಮಸ್ವಾಮಿಪಂಡಿತನು ತನ್ನ ಜ್ಞಾಪಕದಿಂದ ಮೂರು ಮೂರುವರೆ ವರ್ಷ ವ್ಯತ್ಯಾಸವೆಂದು ಹೇಳಿದ್ದಾನೆ. ಇಷ್ಟು ಮಾತ್ರಕ್ಕೆ ಇದೇ ಒಂದು ದೊಡ್ಡ ವ್ಯತ್ಯಾಸವಲ್ಲ. ಆ ಸ್ಕೂಲು ರಿಜಿಸ್ಟ್ರು ಪ್ರಕೃತ ಪರಿಸ್ಥಿತಿಯಲ್ಲಿ ಸುಳ್ಳಲ್ಲವೆಂದೂ, ಬಹುಕಾಲದ ಹಿಂದೆಯೇ ಅವು ಬರೆಯಲ್ಪಟ್ಟಿದ್ದರಿಂದಲೂ. ಈ ಕೃತ್ಯ ನಡೆಯುವ ಗಂಧವೇ ಆಗ ಇಲ್ಲದಿದ್ದರಿಂದಲೂ ಅವು ನಂಬಿಕೆಗೆ ಅರ್ಹವಾದ್ದೆಂದು ನಾನು ಅಭಿಪ್ರಾಯಪಡುತ್ತೇನೆ. ಆ ಹುಡುಗಿಯು ಜಾತಕದಲ್ಲಿ ನಮೂದಿರುವ ದಿವಸವೇ ಹುಟ್ಟಿದಳೆಂದು ವಾಙ್ಮೂಲದಲ್ಲಿಯೂ ರಾಮಸ್ವಾಮಿಪಂಡಿತನು ಹೇಳುತ್ತಾನೆ. ಅದನ್ನು ನಂಬದೇ ಇರುವುದಕ್ಕೆ ಕಾರಣವೇನೂ ಕಂಡುಬರುವುದಿಲ. ಅವನ ಹೇಳಿಕೆಗೂ ಆತನ ಅಳಿಯ ಶಂಕರಶಾಸ್ತ್ರಿಯ ಹೇಳಿಕೆಗೂ ಅನುವಾದ ತಾಳೆ ಇದೆ.

ಜನನಮರಣದ ರಿಜಿಷ್ಟರ್.

ಜಂಗಮಕೋಟೆ ಜನನಮರಣದ ರಿಜಿಷ್ಟರನ್ನು ಅಮಲ್ದಾರ್ ಸೂರ್ಯನಾರಾಯಣರಾಯರು ಹಾಜರ್ಮಾಡಿದರು. ಆ ರಿಜಿಷ್ಟರ್ ತಿದ್ದಿ ತಪ್ಪು ಸಾಕ್ಷಿಯನ್ನು ಕಲ್ಪಿಸಲು ಮಾಡಿದ ಹೇಸಿಗೆಯು ಪ್ರತ್ಯಕ್ಷವು ಕಂಡುಬರುತ್ತದೆ. ಅದನ್ನು ಯಾರೋ ಅಭಿನಿವೇಶವುಳ್ಳವರೇ ಮಾಡಿರಬೇಕು. ರಾಮಸ್ವಾಮಯ್ಯ ತಂದೆ ಅಪ್ಪಯ್ಯ ಎಂಬ ದಾಖಲೆಯನ್ನು ಇದೇ ರಾಮಸ್ವಾಮಿಪಂಡಿತರೆಂದು ತೋರಿಸಲು ತಿದ್ದಿದ್ದಾರೆ. ಎರಡನೇ ಕಾಪಿ ಅರ್ಜಿಯು ೧೬-೧೦-೧೯೩೩ನೇ ದಿವಸ ಬಂತೆಂದೂ, ಅದನ್ನು ಅರ್ಜಿದಾರನು ತೆಗೆದುಕೊಳ್ಳಲು ಬರಲೇ ಇಲ್ಲವೆಂದೂ ಅಮಲ್ದಾರರು ಹೇಳುತ್ತಾರೆ! ಆಗ ಆ ದಾಖಲೆಯನ್ನು ತಿದ್ದಿರುವ ವಿಷಯವನ್ನು ಶಿರಸ್ತೆದಾರರು ಅಮಲ್ದಾರರ ಸಿಗಾಕ್ಕೆ ತಂದರೆಂದೂ ಅವರು ಹೇಳುತ್ತಾರೆ. ಆ ಅಮಲ್ದಾರರ ಹೇಳಿಕೆಯಂತೆಯೂ, ಅದೇ ಜನನಮರಣದ ರಿಜಿಸ್ಟರಿನಲ್ಲಿರುವ ಇತರ ದಾಖಲೆಗಳಿಂದಲೂ, ಜಂಗಮಕೋಟೆ ಗ್ರಾಮದಲ್ಲಿ ಅಪ್ಪಯ್ಯನ ಮಗ ರಾಮಸ್ವಾಮಯ್ಯ, ಮತ್ತೊಬ್ಬ ನರಸಿಂಹಭಟ್ಟರ ಮಗ ರಾಮಸ್ವಾಮಯ್ಯ ಇವರು ಇಬ್ಬರು ವ್ಯಕ್ತಿಗಳಿದ್ದರೆಂದು ಸ್ಪಷ್ಟವಾಗಿ ತಿಳಿಯಬರುತ್ತೆ. ಜನನಮರಣದ ರಿಜಿಸ್ಟರಿಗೆ ಬರಸಲೇಬೇಕೆಂದು ಕಾನೂನು ಇಲ್ಲವಾದ ಪ್ರಯುಕ್ತ ಈ ರಿಜಿಸ್ಟರಿಗಿಂತ ಕಡಮೆಯಾದದ್ದು ಹುಡುಗಿಯ ವಯಸ್ಸಿನ ವಿಚಾರವಾಗಿ ಆಧಾರವು ಮತ್ತೊಂದು ಯಾವುದೆಂದರೆ ಡಾ|| ಮೈಲ್ಸ್‌ರವರ ಸಾಕ್ಷ್ಯ. ವಿಚಾರಮಾಡಿ ನೋಡಲಾಗಿ ವೈದ್ಯರ ಸಾಕ್ಷಿಯು ಸಾಧನವು ವಯಸ್ಸಿನ ವಿಚಾರದಲ್ಲಿ ಅದರ ಮಾರ್ಗದಲ್ಲಿ ಅದು ಆಧಾರಭೂತವಾದದ್ದೇ ಆದಾಗ್ಯೂ ಇತರ ಖರಾರುವಾಕಾ ಆಧಾರಗಳಿಂದ ಜಾತಕ ಮೊದಲಾದವುಗಳಿಗಿಂತಲೂ, ಕಡಮೆಯಾದದ್ದೇ ಸರಿ. ವೈದ್ಯರ ಪರೀಕ್ಷೆಯು ಸಾಧಾರಣವಾಗಿ ವಯಸ್ಸನ್ನು ನಿರ್ದೇಶಿಸುತ್ತಾದರೂ ಗೊತ್ತಾಗಿ ಇಷ್ಟೇ ವಯಸ್ಸೆಂದು ನಿರ್ಧರಿಸಲು ಅದಕ್ಕೆ ಶಕ್ತಿಯಿಲ್ಲ. ಡಾಕ್ಟರ್ ಮೈಲ್ಸ್‌ರು ಪರೀಕ್ಷಿಸಿದಾಗ ಹುಡುಗಿಯ ವಯಸ್ಸು ಸುಮಾರು ೧೬ ವಯಸ್ಸಿನೊಳಗೆ ಇತ್ತೆಂದು ಮ್ಯಾಜಿಸ್ಟ್ರೇಟರ ಮುಂದೆ ಸಾಕ್ಷಿ ನುಡಿದಿದ್ದಾರೆ. ಇದು ಸರಿಯಾದ ವಯಸ್ಸನ್ನು ನಿರ್ದೇಶಿಸದೆ ಇದ್ದಾಗ್ಯೂ ಸ್ವಲ್ಪ ಹೆಚ್ಚು ಕಡಮೆ ವಯಸ್ಸನ್ನು ಸೂಚಿಸುತ್ತದೆ. ಅಪರಾಧಿಗಳ ಪರ ಕಲ್ಪನೆಯಂತೆ ಹುಡುಗಿಗೆ ೧೮-೨೦ ವರ್ಷಗಳು ಡಾಕ್ಟರು ಮೈಲ್ಸ್‌ರವರು ಹೇಳುತ್ತಾರೆ. ೧೫ ವರ್ಷಕ್ಕೂ ೧೮ ವರ್ಷಕ್ಕೂ ಅಂಗ ವ್ಯತ್ಯಾಸವಿರುತ್ತದೆಂದೂ. ೧೬ ವರ್ಷದಲ್ಲಿ ಎಲ್ಲಾ ಚಿಹ್ನೆಗಳೂ ಎದ್ದು ಕಾಣುತ್ತವೆಂದೂ ೧೫ ವರ್ಷಗಳಲ್ಲಿ ಅಸ್ಪಷ್ಟವಾಗಿರುತ್ತವೆಂದೂ ಹೇಳುತ್ತಾರೆ. ಈ ಹುಡುಗಿಯ ಬೆಳವಣಿಗೆಯಲ್ಲಿ ಚಿಹ್ನೆಗಳು ಸ್ಪಷ್ಟವಾಗಿಲ್ಲವೆನ್ನುತ್ತಾರೆ. ಡಾಕ್ಟರ್ ಮೈಲ್ಸ್‌ರ ಸಾಕ್ಷ್ಯವನ್ನು ದೃಢಮಾಡಲು ಎಕ್ಸ್‌ರೇ ಪರೀಕ್ಷೆ ಮಾಡಲ್ಪಡಲಿಲ್ಲ. ಎಕ್ಸ್‌ರೇ ಪರೀಕ್ಷೆಯು ಈ ಸಂದರ್ಭದಲ್ಲಿ ಮುಖ್ಯವೇ ಎಂದು ನಿರ್ಧರಮಾಡಿಕೊಳ್ಳಲು ಕೋರ್ಟು ಡಾ|| ಮಿಸ್ ಕ್ಯಾಪ್ಪರ್ ಮತ್ತು ಡಾ|| ಪುಟ್ಟಣ್ಣನವರನ್ನು ಸಾಕ್ಷಿಯಾಗಿ ಕರೆಸಿ ವಿಚಾರಣೆ ಮಾಡಿತು. ಅವರಿಬ್ಬರೂ ಬಲು ಸಮರ್ಥರೂ ದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮಹಾವಿದ್ವಾಂಸರೂ ಆಗಿದ್ದಾರೆ.

ಈ ವಿಷಯವನ್ನು ಮುಕ್ತಾಯಮಾಡುವ ಮುಂಚೆ ಅಪರಾಧಿಗಳ ಲಾಯರು ತಂದ ಒಂದು ಆಕ್ಷೇಪವನ್ನು ಮೊದಲು ಪ್ರಸ್ತಾಪಿಸುತ್ತೇನೆ. ಲೇಡಿ ಡಾ|| ರ ಪರೀಕ್ಷೆಯು ಮಹಾಲಕ್ಷ್ಮಮ್ಮನ ಅನುಮತಿಯಿಂದ ನಡೆದದ್ದಲ್ಲವಾದ್ದರಿಂದ ಆ ಸಾಕ್ಷ್ಯವನ್ನು ಪೂರಾ ನಿರಾಕರಿಸಬೇಕೆಂದು ಲಾಯರು ವಾದಿಸಿದರು. ಅವಳ ಸಾಕ್ಷ್ಯದಲ್ಲಿ ಹುಡುಗಿಯು ಹೇಳಿದ್ದೇನೆಂದರೆ ಡಾಕ್ಟರು ತನ್ನ ಬಟ್ಟೆಯನ್ನು ಬಿಚ್ಚಿ ಪರೀಕ್ಷಿಸುತ್ತಾರೆಂಬುದು ಅವಳಿಗೆ ತಿಳಿದಿರಲಿಲ್ಲವೆಂದೂ, ನಾಡೀ ನೋಡಿ ವಯಸ್ಸು ಗೊತ್ತುಮಾಡುತ್ತಾರೆಂದು ತಿಳಿದಿದ್ದೆನೆಂದೂ ಹೇಳುತ್ತಾಳೆ. ಅವಳೊಬ್ಬ ಆಯುರ್ವೇದ ಪಂಡಿತರ ಮಗಳಾದ್ದರಿಂದ ಹೀಗೆ ಭಾವಿಸಿರಬಹುದು. ಹಾಗೆ ನಗ್ನದಲ್ಲಿ ಪರೀಕ್ಷೆ ಮಾಡುತ್ತಾರೆಂದು ತಿಳಿದಿದ್ದರೆ ನಾನು ಸಮ್ಮತಿಸುತ್ತಿರಲಿಲ್ಲ ಎಂದು ಹೇಳುತ್ತಾಳೆ. ಆದ್ದರಿಂದ ನಾನು ಅಭಿಪ್ರಾಯಪಡುವುದೇನೆಂದರೆ, ಲೇಡಿ ಡಾಕ್ಟರ ಸಾಕ್ಷಿಯು ಹೇಗೇ ಇರಲಿ ಅದನ್ನು ಸ್ವೀಕರಿಸಲೇಕೂಡದೆಂಬುದನ್ನು ನಾನು ಒಪ್ಪುತ್ತಿಲ್ಲ. ಡಾ|| ಕ್ಯಾಪ್ಪರ್‌ರು ಹೇಳುತ್ತಾರೆ. ವಯಸ್ಸನ್ನು ಸರಿಯಾಗಿ ಹೇಳಲಾಗುವುದಿಲ್ಲವೆಂದು ಕಾಕ್ಸ್ ಮೆಡಿಕಲ್ ಜೂರಿಸ್ ಪ್ರುಡೆನ್ಸ್‌ನಲ್ಲಿ ಹೇಳಿರುವ ಪ್ರಕಾರ ಮೈನರು ವಯಸ್ಸು ಗೊತ್ತುಮಾಡಿ ಹೇಳಲು ಡಾ|| ಪರೀಕ್ಷೆಯಿಂದ ಸಾಧ್ಯವೇ ಇಲ್ಲವೆಂದೂ, ಒಂದೆರಡು ವರ್ಷ ಹೆಚ್ಚು ಕಡಿಮೆಯಾಗಿಯೇ ಹೇಳಬಹುದೆಂದೂ ಅಲ್ಲಿ ಹೇಳಲ್ಪಟ್ಟಿರುವುದನ್ನು ಅಂಗೀಕರಿಸುತ್ತಾರೆ. ಅದೇ ಸಾಕ್ಷಿಯು ಹೇಳುವುದೇನೆಂದರೆ ಡಾ|| ಮೈಲ್ಸ್‌ರವರ ಪರೀಕ್ಷೆಯ ಅಂಕಗಳ ಮೇಲೆ ಸಾಧಾರಣವಾಗಿ ವಯಸ್ಸು ಹೇಳಬಹುದೆಂದು ಹೇಳುತ್ತಾರೆ. ಡಾ|| ಮೈಲ್ಸ್‌ರವರು ಹೇಳಿದ ಅಂಶಗಳಿಗೆಲ್ಲಾ ಡಾ|| ಪುಟ್ಟಣ್ಣನವರು ಒಪ್ಪಿಗೆ ಕೊಟ್ಟಿದ್ದಾರೆ. ಇವರಿಬ್ಬರು ದೊಡ್ಡ ಡಾ|| ಗಳೂ ಎಕ್ಸ್‌ರೇಯಿಂದ ಹೆಚ್ಚು ವಿಷಯಗಳು ಗೊತ್ತಾಗುವುದಾದರೂ ಎಕ್ಸ್‌ರೇ ಪರೀಕ್ಷೆಯಿಂದಲೂ ನಿರ್ದೋಷವಾಗಿ ವಯಸ್ಸನ್ನು ಹೇಳಲಾಗುವುದಿಲ್ಲವೆಂಬ ಅಂಶವನ್ನು ಒಪ್ಪುತ್ತಾರೆ. ಈ ಎಲ್ಲಾ ಎವಿಡೆನ್ಸ್‌ಗಳಿಂದಲೂ, ಆ ಕೃತ್ಯವು ನಡೆದ ದಿವಸ ಮಹಾಲಕ್ಷ್ಮಮ್ಮನು ಮೈನರಾಗಿದ್ದಳೆಂದು ಕೋರ್ಟು ನಿರ್ಧರಿಸುತ್ತದೆ. ಐ.ಪಿ.ಸಿ. ೩೬೬ನೇ ಸೆಕ್ಷನ್ನಿನಲ್ಲಿ ಹೇಳುವಂತೆ ಬಲಾತ್ಕಾರದ ಅಪರಾಧಕ್ಕೆ ಇದೊಂದು ಮುಖ್ಯವಾದ ಅಂಶವಾಗಿದೆ.

ಆ ಹುಡುಗಿಯನ್ನು ಗಾರ್ಡಿಯನ್ ವಶದಿಂದ ಎತ್ತಿಕೊಂಡು ಹೋದರೇ? ಬಲತ್ಕಾರದಿಂದ ಮದುವೆ ಮಾಡುವುದಕ್ಕಾಗಿ ಎಂಬಂಶವನ್ನು ವಿಚಾರಮಾಡಬೇಕಾಗಿದೆ.

ಅಪರಾಧಿಗಳು ಮಹಾಲಕ್ಷ್ಮಮ್ಮನನ್ನು ಎರಡನೇ ಅಪರಾಧಿಯೊಂದಿಗೆ ಮದುವೆ ಮಾಡಿದ್ದನ್ನೂ ಮತ್ತು ಆ ಸಂಬಂಧದಲ್ಲಿ ಪಾತ್ರವಹಿಸಿದ್ದನ್ನೂ ತಾವೇ ಒಪ್ಪಿಕೊಳ್ಳುತ್ತಾರೆ. ಅವರು ಹೇಳುವುದೆಲ್ಲಾ ಇಷ್ಟೆ! ಹುಡುಗಿಯ ಸ್ವಂತ ಇಚ್ಛೆಯ ಪ್ರಕಾರವೇ, ಅವಳು ಪದೇ ಪದೇ ಕೋರಿದ್ದರಿಂದಲೇ ಈ ಮದುವೆ ಮಾಡಿದೆವೆಂದು ಅವರು ಹೇಳುತ್ತಾರೆ. ಈ ನೆಪವು ಪ್ರಯೋಜನವೇ ಇಲ್ಲ. ಆ ಕೃತ್ಯ ನಡೆದ ದಿವಸ ಆ ಹುಡುಗಿಯು ಮೈನರಾಗಿದ್ದಳು. ಅವಳ ಸಮ್ಮತಿಯು ಕಾನೂನಿನ ಪ್ರಕಾರ ವ್ಯರ್ಥವಾದದ್ದು. ಅಪರಾಧಿಗಳು ಹುಡುಗಿಯು ಮೇಜರೆಂದೇ ತಿಳಿದಿದ್ದೆವೆಂದು ಸುಮ್ಮನೆ ಹೇಳುವುದು ನಿರರ್ಥಕವಾದದ್ದು. ಹುಡುಗಿಯ ಸಮ್ಮತಿಯೆಂಬುದು ಅದು ನಿಜವಾಗಿಯೇ ಇದ್ದಾಗ್ಯೂ ಅದು ಪ್ರಯೋಜನಕಾರಿಯಾದದ್ದಲ್ಲ.

ಮುಂದಿನ ಪ್ರಶ್ನೆ: ಈ ಕೃತ್ಯ ನಡೆದಾಗ ಮಹಾಲಕ್ಷ್ಮಮ್ಮನು ಗಾರ್ಡಿಯನ್ ಅಧೀನದಲ್ಲಿದ್ದಳೇ ಇಲ್ಲವೇ ಎಂಬ ಅಂಶವು ವಿಚಾರಣೀಯವಾಗಿದೆ.

ಈ ಕೃತ್ಯವು ನಡೆದ ದಿವಸ ಆ ಹುಡುಗಿಯು ಮೈನರಾಗಿದ್ದಳು. ಅವಳು ತಂದೆಯ ಅಧಿಕಾರಕ್ಕೆ ಒಳಪಡದಿದ್ದರೂ ಕಾನೂನು ಪ್ರಕಾರ ಮಾವನ ಅಧಿಕಾರಕ್ಕೆ ಒಳಪಟ್ಟೇ ಇದ್ದಳು. ಬಲಾತ್ಕಾರದ ಅಪರಾಧಕ್ಕೆ ಏನೇನು ಬೇಕೋ ಅದೆಲ್ಲಾ ಸಾಬೀತಾಗಿದೆ.

ಹೇಗೆ ಆಗಲಿ ರಾಮಸ್ವಾಮಿ ಪಂಡಿತನಾಗಲಿ, ಆ ಹುಡುಗಿಯ ಮಾವನೇ ಆಗಲಿ ಈ ಎರಡನೇ ಅಪರಾಧಿಯೊಡನೆ ಮಹಾಲಕ್ಷ್ಮಮ್ಮನ ವಿವಾಹಕ್ಕೆ ಅಪ್ಪಣೆಕೊಟ್ಟಿದ್ದರೆಂಬ ಕಲ್ಪನೆಯಾಗಲಿ, ಆ ಬಗ್ಗೆ ಆಧಾರವಾಗಲಿ ಇಲ್ಲವೇ ಇಲ್ಲ.

ಆ ಮೇಲೆ ಹುಡುಗಿಯನ್ನು ಮೊದಲನೇ ಅಪರಾಧಿಯ ಮನೆಗೆ ತೆಗೆದುಕೊಂಡು ಹೋದ ಉದ್ದೇಶವೇನೆಂದು ವಿಚಾರ ಮಾಡತಕ್ಕದ್ದು. ಆ ಉದ್ದೇಶವನ್ನು ಅಪರಾಧಿಗಳು ಗೋಪ್ಯ ಮಾಡಲೇ ಇಲ್ಲ. ೨ ನೇ ಅಪರಾಧಿಗೆ ಲಗ್ನ ಮಾಡುವುದೇ ಅವರ ಉದ್ದೇಶವೆಂದು ಸ್ಪಷ್ಟಪಡಿಸಿದ್ದಾರೆ. ಒಂದು ಕ್ಷಣ ಹೊತ್ತು ಅವಳ ಒಪ್ಪಿಗೆಯಿಂದ ಮದುವೆಯಾಯಿತೇ ಅಥವಾ ಒಪ್ಪಿಗೆ ಇಲ್ಲದೆ ಆಯಿತೇ ಎಂಬುದನ್ನು ಮರೆತುಬಿಡೋಣ! ನಾನು ಅವಳ ವಯಸ್ಸು ನಿರ್ದೇಶಮಾಡಿರುವಂತೆ ಅವಳು ಮೈನರಾದ್ದರಿಂದ ಮದುವೆಯಲ್ಲಿ ಅವಳ ಒಪ್ಪಿಗೆಯೇ ಆಗಲಿ, ಅಥವಾ ಅವಳಾಗಿಯೇ ಮದುವೆಗೆ ಬೇಡಿಕೊಂಡಳೆಂಬದಾಗಲಿ, ನಿಶ್ಚಯವೇ ಎಂದು ನಂಬಿದಾಗ್ಯೂ, ಅದು ಸಾರ್ಥಕವಾಗಲಾರದು.

ಈ ಪ್ರಕೃತ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್‌ನವರು ಹೇಳುವಂತೆ ಆ ರಾತ್ರಿ ಹುಡುಗಿಯನ್ನು ಅಪಹಾರ ಮಾಡಿದಲಾಗಾಯ್ತು ಮರುದಿನ ಮದುವೆ ಆಗುವ ವರೆಗೆ ಆ ಬಲಾತ್ಕಾರದ ಅಪರಾಧವು ವ್ಯಾಪಿಸಿಯೇ ಇತ್ತು. ಪ್ರಾಸಿಕ್ಯೂಷನ್ ಪರ ಸಾಕ್ಷ್ಯದಂತೆ "ಲಗ್ನ" ಅವರ ರಾತ್ರಿಯಲ್ಲಿ ರಾತ್ರಿ ೨ ಘಂಟೆ ಸಮಯದಲ್ಲಿ ನಡೆಯಿತು. ಡಿಫೆನ್ಸ್‌ನವರ ಹೇಳಿಕೆಯಂತೆ ರಾತ್ರಿ ೧೦ ಗಂಟೆಯಲ್ಲಿ ನಡೆಯಿತು.

ಸಾರಾಂಶವಾಗಿ ಹೇಳುವುದೆಂದರೆ—ಪ್ರಾಸಿಕ್ಯೂಷನ್‌ನವರು ಹುಡುಗಿಯು ಮೈನರೆಂದೂ, ಅವಳು ಗಾರ್ಡಿಯನ್ ಅಧೀನದಲ್ಲೇ ಇದ್ದಳೆಂದೂ, ತಂದೆಯಲ್ಲಿದ್ದರೂ ಮಾವನೇ ಗಾರ್ಡಿಯನ್ನೆಂದೂ, ಅಂಥ ಸಂದರ್ಭದಲ್ಲಿ ಕೃತ್ಯ ನಡೆಯಿತೆಂದೂ ಸಾಬೀತು ಮಾಡಿದ್ದಾರೆ. ಅಪರಾಧಿಗಳು ಹುಡುಗಿಗೆ ಎರಡನೇ ಅಪರಾಧಿಯೊಡನೆ ಲಗ್ನ ಮಾಡಿದ್ದನ್ನೂ ಇನ್‌ಕಾರ ಮಾಡುವುದಿಲ್ಲ. ಅವಳ ಸಮ್ಮತಿಯು ನಿಜವೆಂದು ನಂಬಿದರೂ ಅವಳು ಮೈನರೆಂದು ರುಜುವಾತು ಆಗಿರುವಾಗ ಕಾರ್ಯಕಾರಿಯಾಗುವುದಿಲ್ಲ. ಎಲ್ಲಾ ಅಪರಾಧಿಗಳೂ ಈ ಮದುವೆಯಲ್ಲಿ ತಮ್ಮ ತಮ್ಮ ಭಾಗವನ್ನು ವಹಿಸಿದ್ದಾರೆ. ಬಲಾತ್ಕಾರದ ಅಪರಾಧದಲ್ಲಿ ಹುಡುಗಿಯ ವಯಸ್ಸು ಕಾರಣವೇ ಅಲ್ಲ. ಬಲಾತ್ಕಾರ, ನಿರ್ಬಂಧ ಮತ್ತು ಮೋಸವೂ ಗಗಳು ಅಪರಾಧದಲ್ಲಿ ಉಪಯೋಗಿಸಲ್ಪಟ್ಟಿದ್ದರೆ ಸಾಕು. ಅಬ್ಡಕ್ಷನ್ ಅಂದರೆ ಹಿಂದೆ ಒಂದು ಸಾರೋದ್ಧಾರವಾಗಿ ಇರತಕ್ಕದ್ದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡು ಹೋದರೆ ಅದೊಂದೇ ಒಂದು ಅಪರಾಧವಾಗುತ್ತದೆ.

ಅಸೆಸರುಗಳ ಮಾತನ್ನೆತ್ತಿ ಒಬ್ಬ ಅಸೆಸರು ಮಾತ್ರ ಅಪರಾಧಿಗಳನ್ನು ಎತ್ತಿ ಹಿಡಿದರು. ಮತ್ತೆ ಮೂವರೂ ಅಪರಾಧಿಗಳು ತಪ್ಪು ಮಾಡಿದ್ದಾರೆಂದು ಹೇಳಿದರು.

ಮಹಾಲಕ್ಷ್ಮಮ್ಮನಾಗಲಿ, ರಾಮಸ್ವಾಮಿ ಪಂಡಿತರಾಗಲಿ ಪೋಲೀಸು ಇನ್‌ಸ್ಪೆಕ್ಟರಲ್ಲಿ ಮಾಡಿದ ಹೇಳಿಕೆಯು ತಾವಾಗಿ ಮಾಡಿದ್ದಲ್ಲವೆಂದು ಕೋರ್ಟು ನಂಬುತ್ತದೆ.

ಪ್ರಣಯಪತ್ರಗಳು

ಯಾರೋ ಚಾಂದಬೀಬಿ ಎಂಬ ಹೆಸರಿನಿಂದ ಉರ್ದು ಸ್ಕೂಲ್ಮಾಸ್ತರ ಹೆಸರಿಗೆ ಬರೆಯಲ್ಪಟ್ಟದೆಯೆಂದು ಹಾಜರ್ಮಾಡಿದ ಪ್ರಣಯಪತ್ರಗಳೆಲ್ಲಾ ಪೋಕರಿತನದ ಫೋರ್ಜರಿ ಎಂದು ಕೋರ್ಟು ಭಾವಿಸುತ್ತದೆ.

ಹುಡುಗಿಯು ಟೋಲ್‌ಗೇಟಿನ ಹತ್ತಿರ ಇರಲಿಲ್ಲ.

ಪ್ರತಿವಾದಿಗಳ ಪರ ಸಾಕ್ಷಿಗಳನ್ನು ತಂದಿದ್ದಾರಷ್ಟೆ! ಆ ಹುಡುಗಿಯು ಟೋಲ್‌ಗೇಟಿನ ಹತ್ತಿರ ಕೂತಿದ್ದಳೆಂಬುದೂ, ಯಾರಾದರೂ ಮುಸಲ್ಮಾನ್ ಮತಕ್ಕೆ ಸೇರಿಸಿರಿ ಎಂದು ಕೇಳುತ್ತಿದ್ದಳೆಂಬುದೂ, ಕುದ್ದಾಂಗವಾಗಿ ಸುಳ್ಳು. ಅವಳು ಇಸ್ಲಾಂ ಮತಕ್ಕೆ ಸೇರಬೇಕೆಂದೂ ಒಬ್ಬ ಮುಸಲ್ಮಾನನನ್ನು ಮದುವೆಯಾಗಬೇಕೆಂದೂ ನಿಜವಾಗಿ ಅಭಿಲಾಷೆಯುಳ್ಳವಳಾಗಿದ್ದರೆ ಅದನ್ನು ಸಾಧನೆಮಾಡಿಕೊಳ್ಳುವುದಕ್ಕೆ ಟೋಲ್‌ಗೇಟಿನ ಹತ್ತಿರವಿದ್ದ ಕಟ್ಟೆಯಮೇಲೆ ಹೋಗಿ ಕುಳಿತುಕೊಳ್ಳುವುದು ಅಸಹಜ. ಹಾಗಿದ್ದರೆ ಅವಳು ಮಸೀದಿಯ ಬಾಗಿಲಿಗೋ ಅಥವಾ ಒಬ್ಬ ಮರ್ಯಾದಸ್ಥನಾದ ಮೌಲ್ವಿಯ ಮನೆಗೋ ಹೋಗುತ್ತಿದ್ದಳು. ಆ ಟೋಲ್‌ಗೇಟಿನ ಹತ್ತಿರ ಹೋಗುತ್ತಿರಲಿಲ್ಲ. ಅಲ್ಲಿ ಮುಸಲ್ಮಾನರು ಬರುತ್ತಾರೆಂದು ಅವಳು ಪೂರ್ವ ಭಾವಿಯಾಗಿಯೇ ಊಹಿಸುವುದು ಹೇಗೆ? ಇಷ್ಟು ಮಾತ್ರವೇ-ಪ್ರತಿವಾದಿಗಳ ಸಾಕ್ಷಿ ವಾದವೆಲ್ಲಾ ಅಸಂಭವವೆಂದು ವ್ಯಕ್ತಪಡಿಸುವುದಕ್ಕೆ ಸಾಕಾಗಿದೆ. ಹುಡುಗಿಯು ಅವಳ ಹೇಳಿಕೆಯಲ್ಲಿ ಹೇಳುವಂತೆ ಮಂಕಟಗಿರಿ ಕೋಟೆಯಲ್ಲಿಯೇ ಅವಳನ್ನು ಮೊದಲನೇ ಅಪರಾಧಿಯ ಮನೆಯಲ್ಲಿ ಮದುವೆಯ ಸಿದ್ಧತೆಯೆಲ್ಲಾ ಆಗುವವರೆಗೆ ಮುಚ್ಚಿಡಲ್ಪಟ್ಟಿದ್ದಳೆಂದು ಧಾರಾಳವಾಗಿ ಹೇಳಬಹುದು. ಆ ಮೇಲೆ ಆ ಹುಡುಗಿಯನ್ನು ಆ ಮನೆಗೆ ಸೇಟುಸಾಬಿಯ ಮನೆಗೆ ತೆಗೆದುಕೊಂಡು ಹೋಗಿರಬೇಕು. ಒಂದು ಪಕ್ಷ ಅವಳು ಟೋಲ್‌ಗೇಟಿನ ಹತ್ತಿರವೇ ಇದ್ದದ್ದು ನಿಜವಾದರೆ ಅವಳನ್ನು ಮೊದಲನೇ ಅಪರಾಧಿಯ ಮನೆಗೆ ಯಾರು ತೆಗೆದುಕೊಂಡುಹೋದರು? ಪ್ರತಿವಾದಿಗಳ ಸಾಕ್ಷಿಗಳಲ್ಲಿ ಒಬ್ಬನಾದರೂ ಬಂದು 'ನಾನು ಕರೆದುಕೊಂಡುಹೋದೆ' ಎಂದು ಧೈರ್ಯವಾಗಿ ಎದುರಿಗೆ ಬಂದು ಹೇಳಲಿಲ್ಲ. ಹುಡುಗಿಯು ಯಾವಾಗಲೂ ಜೊತೆಯಲ್ಲಿಯೇ ಇದ್ದ ಟ್ರಂಕಿನೊಡನೆ ಮೊದಲನೇ ಅಪರಾಧಿಯ ಮನೆಯಲ್ಲಿ ಹೇಗೆ ಆವಿರ್ಭವಿಸಿದಳು?

ಅಪರಾಧಿಗಳ ಪರ ಸಾಕ್ಷಿಗಳು.

ಹೀಗೆ ಪರಿಶೀಲಿಸುತ್ತಾ ನ್ಯಾಯಾಧೀಶರು ಹೇಳಿದ್ದೇನೆಂದರೆ ಈ ಮೊಕದ್ದಮೆಯಲ್ಲಿ ಅಪರಾಧಿಗಳ ಕಡೆ ಬಂದ ಸಾಕ್ಷಿಗಳೆಲ್ಲಾ ಅದೇ ಜಾತಿಯವರು. ಈ ವಿಷಯದಲ್ಲಿ ಅಭಿನಿವೇಶವುಳ್ಳವರು. ಹಿಂದಿನ ಚಿಂತಾಮಣಿ ದೊಂಬಿ ಮೊಕದ್ದಮೆಯಲ್ಲಿ ಈ ಮೊದಲನೇ ಅಪರಾಧಿಯೊಡನೆ ಅಪರಾಧದಲ್ಲಿ ಭಾಗಿಗಳಾಗಿದ್ದವರು ಅವರ ಸಾಕ್ಷಿಯು ತಿರಸ್ಕಾರಾರ್ಹವಾದದ್ದು.

ಮದುವೆಯ ಆತುರತೆ!

ಮದುವೆಯು ಅತ್ಯಂತ ಆತುರದಲ್ಲಿ, ಗಾಬರಿಯಲ್ಲಿ ನಡೆಯಿತೆಂಬುದಕ್ಕೆ ಬೇಕಾದಷ್ಟು ಆಧಾರವಿದೆ. ಮೊದಲನೇ ಅಪರಾಧಿಯು ಚಿಂತಾಮಣಿಗೆ ರಾತ್ರಿ ೯ ಗಂಟೆಗೆ ಬಂದನಂತೆ! ಎರಡು ಗಂಟೆ ಕಾಲದಲ್ಲಿ ಮದುವೆ ಎಲ್ಲಾ ಪೂರೈಸಿಹೋಯಿತಂತೆ! ಅಪರಾಧಿಗಳು ಇವಳಿಗೆ ಮದುವೆಯ ಶಾಸ್ತ್ರವನ್ನು ಮಾಡಿಬಿಟ್ಟು ಮದುವೆ ಆಗಿಹೋಯಿತು ಎಂಬ ಕಾರ್ಯವನ್ನು ಮುಗಿಸಿಬಿಟ್ಟರೆ ಗೆದ್ದುಬಿಟ್ಟೆವೆಂದು ಈ ಕಾರ್ಯವನ್ನು ಇಷ್ಟು ಆತುರವಾಗಿ ನಡೆಸಿದ್ದಾರೆ. ಇಲ್ಲದಿದ್ದರೆ ಈ ಆತುರವೇಕೆ? ಇದು ಸ್ವಾಭಾವಿಕವಾದ ಮದುವೆ ಆಗಿದ್ದರೆ, ಮಾರನೇ ದಿನ ರಾಜಾರೋಷವಾಗಿ ಹಗಲಿನಲ್ಲಿಯೇ ನಡೆಯುತ್ತಿರಲಿಲ್ಲವೇ? ಆ ಊರಿನ ಖಾಯಂ ಖಾಜಿಯೇ ಆ ಮದುವೆಯನ್ನು ಮಾಡಿಸುತ್ತಿರಲಿಲ್ಲವೇ? ಯಾವನೋ ಖಾಜಿಯಾಗಿ ಮದುವೆ ನಡೆಸಿದನಲ್ಲಾ, ಅವನೇ 'ಮೌಲ್ವಿ' ಆಗಿಯೂ, ವಕೀಲನಾಗಿಯೂ, ಇದ್ದುದು ಏಕೆ? ಬೇರೆ ಯಾರಾದರೂ ದೊಡ್ಡ ಮನುಷ್ಯರು ಆ ಕೆಲಸಕ್ಕೆ ಸಿಗುತ್ತಿರಲಿಲ್ಲವೆ? ಇವೆಲ್ಲವೂ ಆ ಮದುವೆಯು ಏನೋ ಗೂಢ ವಿವಾಹವೆಂದು ಸಂದೇಹವನ್ನುಂಟು ಮಾಡುತ್ತದೆ.

ನಿಕಾ ರಿಜಿಸ್ಟ್ರು.

ಆ ನಿಕಾ ಪಟ್ಟಿಗೂ, ನಿಕಾ ರಿಜಿಸ್ಟರಿಗೂ ವ್ಯತ್ಯಾಸವಿದೆ. ಆ ರಿಜಿಸ್ಟರಿನಲ್ಲಿ ಕೆಲವು ಭಾಗವನ್ನು ಕಿತ್ತುಹಾಕಿರುತ್ತಾರೆ. ಆ ಖಾಜಿಗೆ ಕೋರ್ಟಿನಿಂದ ವಾರಂಟು ಕಳಿಸಿದ ಮೇಲೆಯೇ ಈ ರಿಜಿಸ್ಟ್ರು ಸಹ ಹಾಜರ್ಮಾಡಲ್ಪಟ್ಟಿದೆ. ಆ ನಿಕಾ ಪಟ್ಟಿಯನ್ನು ಮೊದಲೇ ಪೋ|| ಸೂಪರಿಂಟೆಂಡೆಂಟರು ಕೈವಶಮಾಡಿಕೊಂಡದ್ದರಿಂದ ಅದನ್ನು ತಿದ್ದುವುದಕ್ಕೆ ಅವಕಾಶವಾಗಲಿಲ್ಲ! ಆ ಹುಡುಗಿಯು ಹೇಳುವಂತೆ ಆ ರಿಜಿಸ್ಟರಿಗೆ ಮದುವೆಯ ಕಾಲದಲ್ಲೇ ರುಜು ತೆಗೆಯಲಿಲ್ಲವೆಂದೂ ಮಾರನೆಯ ದಿವಸ ರುಜುಮಾಡಿಸಿಕೊಂಡರೆಂದೂ, ಅವಳು ಹೇಳುವ ಹೇಳಿಕೆಯನ್ನು ನಿಜವೆಂದು ವ್ಯಕ್ತಪಡಿಸುತ್ತದೆ. ಈ ಅಪರಾಧಿಗಳು ಈ ವಿಷಯದಲ್ಲಿ ಇಂಥಾ ದುಷ್ಕಾರ್ಯ ಸಂಬಂಧವಾದ ಭಯವೇನೂ ಇಲ್ಲದಿದ್ದರೆ ಈ ಮದುವೆಯನ್ನು ಮಾರನೇ ದಿನದವರೆಗೆ ಕಾದು ನಡೆಸುತ್ತಿದ್ದರು. ಅಪರಾಧಿಯು ಸಮೀಪ ಬಂಧುವಾದ ಸೈಯ್ಯದ್ ಯೂಸುಫ್‌ನನ್ನು ಆ ಮದುವೆಗೆ ಕರೆದಿಲ್ಲ. ಅಪರಾಧಿಗಳು ಎತ್ತಿಕಟ್ಟಿರುವ ಸಾಕ್ಷ್ಯವನ್ನೆಲ್ಲಾ ಸುಳ್ಳೆಂದು ಕೋರ್ಟುಭಾವಿಸುತ್ತದೆ. ಮತ್ತು ಅವರು ಬಲಾತ್ಕಾರದ ಅಪರಾಧವನ್ನು ಮಾಡಿದ್ದಾರೆಂದು ಧಾರಾಳವಾಗಿ ನಂಬುತ್ತದೆ.

ಪೋ|| ಅಧಿಕಾರಿಗಳ ಸಾಮಿಲು.

ಈ ಸಂದರ್ಭದಲ್ಲಿ ಪೋಲೀಸು ಅಧಿಕಾರಿಗಳು ತಮ್ಮ ಕರ್ತವ್ಯದ ಪ್ರಥಮ ಪಾದವನ್ನಾದರೂ ಮಾಡಿದ್ದರೆ ಈ ಮೊಕದ್ದಮೆಯೇ ನಡೆಯುತ್ತಿರಲಿಲ್ಲ. ಇದನ್ನು ಮೊಳಕೆಯಲ್ಲಿಯೇ ಮೂಲೋತ್ಪಾಟನ ಮಾಡಬಹುದಾಗಿತ್ತು. ಹಾಗೆ ಮಾಡಿದ್ದರೆ ಈ ಮೊಕದ್ದಮೆಯನ್ನು ವಿಚಾರಿಸುವ ದುಃಖಕರವಾದ ಪ್ರಸಂಗವೂ ನನಗೆ ಒದಗುತ್ತಿರಲಿಲ್ಲ. ಇನ್‌ಸ್ಪೆಕ್ಟರ್ ಜಹರುದ್ದೀನನು ಅಪರಾಧಿಗಳಿಗೆ ಸಹಕಾರಿಯಾಗಿ ಇದ್ದೊಂದು ಅನಾಹುತಕ್ಕೂ, ಮುಂದಿನ ಘೋರ ಪ್ರಕರಣಗಳಿಗೂ ಮುಖ್ಯಕಾರಣನಾಗಿದ್ದಾನೆ. ಆತನು ನ್ಯಾಯವಾಗಿ ನಡೆದುಕೊಳ್ಳಲಿಲ್ಲವೆಂಬುದಕ್ಕೆ ಬೇಕಾದಷ್ಟು ಪ್ರಮಾಣಗಳಿವೆ. ಆತನು ಮಾಡಿದ ಅತ್ಯಂತ ಸಾಧಾರಣವಾದ ಕಾರ್ಯವೆಂದರೆ ಅವನು ಅರೆಮನಸ್ಸಿನಿಂದ ಆ ರಾತ್ರಿ ಹುಡುಕಿದಂತೆ ನಟಿಸಿದ್ದಾನೆ. ಅಷ್ಟೆ! ಸಬ್ ಇನ್‌ಸ್ಪೆಕ್ಟರು ಲಕ್ಷ್ಮೀನಾರಣಪ್ಪನು ತನ್ನ ಮೇಲಧಿಕಾರಿಗಳ ವಿಶ್ವಾಸಪಾತ್ರನಾಗಬೇಕೆಂಬ ಅಭಿಲಾಷೆಯಿಂದ ಆತನ ಕಾರ್ಯಕ್ಕೇ ಪ್ರೋತ್ಸಾಹ ಮಾಡಿರಬಹುದು. ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ, ಅವರ ಸಂತೋಷಕ್ಕಾಗಿ ಹಾಗೆ ಮಾಡಿದ್ದಾನೆ. ಮುಂದೆ ಬಹಳ ತೊಂದರೆಗೆ ಇಟ್ಟುಕೊಳ್ಳಬಹುದೆಂದು ಊಹಿಸಿಕೊಂಡು ಉಪಾಯವಾಗಿ ಯಾವುದೋ ನೆಪದಿಂದ ಮಾರನೇ ದಿನವೇ ರಜಾ ತೆಗೆದುಕೊಂಡು ಹೊರಟುಹೋಗಿದ್ದಾನೆ.

ಅಮಲ್ದಾರರೇನು ಮಾಡಿದರು?

ಸ್ಥಳದ ಅಧಿಕಾರಿಯೂ ಆ ಊರು ಪೋಲೀಸಿನ ಮೇಲ್ವಿಚಾರಣೆಯ ಅಧಿಕಾರಿಯೂ ಆದ ಅಮಲ್ದಾರರ ಸಾಕ್ಷಿಯು ಸ್ಪಷ್ಟವಾಗಿದೆ. ಆತನು ಹೇಳುತ್ತಾನೆ. ಆ ಪ್ರಾತಃಕಾಲ ೨-೩ ಗಂಟೆಗಳು ಹೊರತು ಬಾಕಿ ಸಮಯದಲ್ಲೆಲ್ಲಾ ಸ್ಥಳದಲ್ಲಿ ಇದ್ದೆನೆಂದು. ಇನ್‌ಸ್ಪೆಕ್ಟರು ಜಹರುದ್ದೀನರು ಈ ರಾತ್ರಿಯ ವಿದ್ಯಮಾನಗಳನ್ನೆಲ್ಲಾ ಅವರಿಗೆ ತಿಳಿಸಲೇ ಇಲ್ಲ. ಹುಡುಗಿಯ ಅಣ್ಣನೂ ಇನ್ನೂ ಕೆಲವರೂ ಹೋಗಿ ಮಾರನೆಯ ದಿನ ಮಧ್ಯರಾತ್ರಿಯಲ್ಲಿ ಹೇಳಿದಾಗ ಅಮಲ್ದಾರರಿಗೆ ತಿಳಿಯಿತು. ಇನ್‌ಸ್ಪೆಕ್ಟರ ಮನೆ ಅಮಲ್ದಾರರ ಮನೆಗೆ ೨೫ ಗಜ ದೂರದಲ್ಲಿತ್ತು. ರಾತ್ರಿ ೭ ಗಂಟೆಯ ಸಮಯದಲ್ಲಿ ಇನ್‌ಸ್ಪೆಕ್ಟರು ಕ್ಲಬ್ಬಿನ ಹತ್ತರ ಅಮಲ್ದಾರರನ್ನು ನೋಡಿದ್ದಾರೆ. ಅವರಿಬ್ಬರೂ ಮಾತನಾಡಿಕೊಂಡೇ ಮನೆಗೆ ಬಂದಿದ್ದಾರೆ. ಆ ಬೆಳಗಿನ ವಿದ್ಯಮಾನಗಳು ಎಂದರೆ ಹುಡುಗಿಯು ತಾನಾಗಿಯೇ ಇಸ್ಲಾಂ ಮತಕ್ಕೆ ತನ್ನ ಇಚ್ಛಾನುಸಾರವಾಗಿಯೇ ಸೇರುತ್ತೇನೆಂದು ಅರ್ಜಿ ಕೊಟ್ಟದ್ದು ವಗೈರೆ ಸಂಗತಿಗಳನ್ನು ಅಮಲ್ದಾರರಿಗೆ ಹೇಳಲೇ ಇಲ್ಲ. ಅಮಲ್ದಾರರು ಹೇಳುವಂತೆ ಚಿಂತಾಮಣಿಯಲ್ಲಿ ಪೂರ್ವದಿಂದಲೂ ಹಿಂದೂ ಮಹಮ್ಮದೀಯ ದ್ವೇಷವಿದೆಯೆಂದೂ, ಆ ಪ್ರಾತಃಕಾಲ ಗಲಾಟೆ ನಡೆಯಿತೆಂದೂ ಹೇಳುತ್ತಾರೆ.

ಈ ವಿಷಯಗಳನ್ನೆಲ್ಲಾ ಅಮಲ್ದಾರರಲ್ಲಿ ಹೇಳದೇ ಇದ್ದದ್ದು ಮಾತ್ರವೇ ಅಲ್ಲ. ಅಮಲ್ದಾರರು ಹುಡುಗಿಯನ್ನು ತಂದು ಹಾಜರ್ಮಾಡಬೇಕೆಂದು ಹೇಳಿದಾಗ ಅಡ್ಡಪಡಿಸಿ ಮಾತನಾಡಿದ್ದಾನೆ. ನಿಮಗೆ ಅನಧಿಕಾರವಿದೆಯೆಂದು ಕೇಳಿದ್ದಾನೆ. ಆದರೆ ಅಕ್ಷರಶಃ ಕಾನೂನಿಗೆ ಅದು ಸರಿಯಾದ ಪ್ರಶ್ನೆಯೇ ಆಗಿದ್ದರೂ ವಾಸ್ತವವಾಗಿ ಅಮಲ್ದಾರರ ಅಧಿಕಾರವನ್ನು ಧಿಕ್ಕರಿಸಿ ಪ್ರಶ್ನೆಮಾಡಿದ್ದಾನೆ. ಅಮಲ್ದಾರರು ಕೇಳಿದಾಗ ಸ್ಟೇಷನ್ ಡೈರಿಯನ್ನು ಹಾಜರ್ಮಾಡಲಿಲ್ಲ. ಆ ಡೈರಿಯಲ್ಲಿ ಬರೆದಿರುವುದೆಲ್ಲಾ ಸರಿಯಾಗಿದೆಯೋ ಎಂಬ ವಿಷಯದಲ್ಲಿ ಈ ಅಂಶವು ಸಂದೇಹವನ್ನುಂಟುಮಾಡುತ್ತದೆ. ಅದು ಮಾಮೂಲು ಪ್ರಕಾರ ೨೬ ನೇ ತಾ|| ದಿವಸ ಅಮಲ್ದಾರರ ಕಣ್ಣು ಮುಂದೆ ಬಂತು. ಅತ್ಯಂತ ದೋಷಕರವಾದ ಅಂಶವೆಂದರೆ ಆತನು ಹುಡುಗಿಯು ಎಲ್ಲಿದ್ದಾಳೆಂಬ ವಿಷಯದಲ್ಲಿ ಅಮಲ್ದಾರರನ್ನು ಪೋ|| ಸೂಪರಿಂಟೆಂಡೆಂಟರನ್ನು ಭ್ರಾಂತರನ್ನಾಗಿ ಮಾಡಿ ದಾರಿ ತಪ್ಪಿಸಿದ್ದಾನೆ. ೨೩ ನೇ ತಾ|| ದಿವಸ ಪ್ರಾತಃಕಾಲ ಹುಡುಗಿಯು ಮೈನರು ಹೌದೇ ಅಲ್ಲವೇ ಎಂಬುದನ್ನು ವಿಚಾರಿಸಲೇ ಇಲ್ಲ. ಹುಡುಗಿಯ ಹೇಳಿಕೆಯಲ್ಲಿ ಎಲ್ಲೋ ಅವಳು ಮೆಜಾರಿಟಿಗೆ ಬಂದಿದ್ದಾಳೆಂದು ಹೇಳಲ್ಪಟ್ಟಿದೆ. ಇನಸ್ಪೆಕ್ಟರ ರಿಪೋರ್ಟನ್ನು ಪೋ|| ಸೂಪರಿಂಟೆಂಡೆಂಟರು ನೋಡಿದರೋ ಇಲ್ಲವೋ ಅದೇ ಸಂದೇಹವಾಗಿದೆ. ಹೇಗೇ ಆಗಲಿ, ಅದರಮೇಲೆ ಅವರು ರುಜು ಮಾಡಲಿಲ್ಲ. ಏನೂ ಹುಕುಂ ಮಾಡಲಿಲ್ಲವೆಂಬುದೇನೋ ಖಂಡಿತ. ಪೋಲೀಸು ಸೂಪರಿಂಟೆಂಡೆಂಟರು ಅದನ್ನು ನೋಡಿದೆನೆಂದು ಹೇಳುತ್ತಾರಾದರೂ ಎಂದು ಯಾವ ತಾರೀಖಿನಲ್ಲಿ ನೋಡಿದೆನೆಂದು ಹೇಳಲಾರದರಾಗಿದ್ದಾರೆ.

ಅಂತೂ ಪೋಲೀಸು ಸೂಪರಿಂಟೆಂಡೆಂಟರಾದ ಅಬ್ದುಲ್ ರಜಾಕರು ಅಪರಾಧಿಗಳ ಸಾಕ್ಷಿಯಾಗಿ ಕರೆಯಲ್ಪಟ್ಟು ಪಬ್ಲಿಕ್ ಪ್ರಾಸಿಕ್ಯೂಟರಿಂದ ಪಾಟೀಸವಾಲು ಮಾಡಿಸಿಕೊಳ್ಳುವಂಥ ಪರಿಸ್ಥಿತಿಯು ಬಹಳ ಅಪರೂಪ. ಇಂಥ ಸಂದರ್ಭಗಳು ಮುಂದೆ ಒದಗದೇ ಇರಬೇಕು. ಈ ಮೊಕದ್ದಮೆಯಲ್ಲಿ ಪೂರ್ವ ಭಾಗದಲ್ಲಿ ಸರಿಯಾದ ವಿಚಾರಣೆ ನಡೆಯಲೇ ಇಲ್ಲ. ಆದಾಗ್ಯೂ ಕೂಡ, ಈ ಕೇಸಿನ ಬೆಲೆಯೇನೂ ಕಡಿಮೆಯಾಗಲಿಲ್ಲ.

ಅಪರಾಧಗಳ ಸ್ವರೂಪ.

ಈ ಮೊಕದ್ದಮೆಯಲ್ಲಿ ಕನ್ಯಾಪಹಾರ ಮತ್ತು ಬಲಾತ್ಕಾರ ಎರಡೂ ನಡೆದಿದ್ದಾಗ್ಯೂ ಕೂಡ, ಕೋರ್ಟು ಯಾವುದಾದರೊಂದಕ್ಕೆ ಶಿಕ್ಷೆ ಕೊಡಲು ಇಷ್ಟಪಡುತ್ತದೆ. ಎರಡೂ, ೩೬೬ ನೇ ಸೆಕ್ಷನ್ ಒಳಗೆ ಬರುತ್ತದೆ. ಅಸೆಸರುಗಳೊಡನೆ ಅರ್ಧಮಟ್ಟಿಗೆ ಒಪ್ಪಿಗೆ ಹೊಂದುತ್ತಲೂ, ಅರ್ಧಮಟ್ಟಿಗೆ ಅಸಮ್ಮತಿಯನ್ನು ಹೊಂದಿಯೂ, ಕೋರ್ಟು ಅಪರಾಧಿಗಳನ್ನು ಕಿಡ್ನಾಪಿಂಗ್, ಅಥವಾ ಅಬ್ಡಕ್ಷನ್ ಅಪರಾಧಕ್ಕೆ ಶಿಕ್ಷಿಸುತ್ತದೆ. ಈ ಸಂದರ್ಭದಲ್ಲಿ ಛಾರ್ಜು ಶೀಟಿನಲ್ಲಿ ಹಾಕಿರುವ ೩-೪ ನೇ ಅಪರಾಧಗಳನ್ನು ಪರಾಮರ್ಶಿಸಿ, ಅಭಿಪ್ರಾಯವನ್ನು ಕೊಡುವುದೂ, ಅನಾವಶ್ಯಕವೆಂದು ಕೋರ್ಟು ಭಾವಿಸುತ್ತದೆ. ಬಿಡಲ್ಪಟ್ಟ ಅಪರಾಧಿಗಳು ದೋಷಿಗಳೇ ನಿರ್ದೋಷಿ

(6ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೩ನೇ ಡಿಸೆಂಬರ್ ತಾ|| ೪ನೇ ಸೋಮವಾರ.

ಅಸ್ಪೃಶ್ಯತೆಯೂ ಗಾಂಧಿಯವರೂ.

ಈಶ್ವರಸೃಷ್ಟವಾದೀ ಪ್ರಪಂಚದಲ್ಲಿ ಅನಂತಪದಾರ್ಥಗಳಿರುತ್ತವೆ. ಇವುಗಳಲ್ಲಿ ಕೆಲವು ಸ್ಪೃಶ್ಯಪದಾರ್ಥಗಳೆಂದೂ, ಕೆಲವು ಅಸ್ಪೃಶ್ಯಪದಾರ್ಥಗಳೆಂದೂ, ಕೆಲವು ಸ್ಪೃಶ್ಯಾಸ್ಪೃಶ್ಯಪದಾರ್ಥಗಳೆಂದೂ ಮೂರು ಭಾಗವಾಗಿ ವಿಂಗಡಿಸಲ್ಪಟ್ಟಿವೆ. ಯಾವಾಗಲೂ ಸ್ವಭಾವವಾಗಿ ಮುಟ್ಟುವುದಕ್ಕೆ ಯೋಗ್ಯವಲ್ಲದ ವಸ್ತುಗಳೇ ಅಸ್ಪೃಶ್ಯವಸ್ತುಗಳೆನಿಸಿಕೊಳ್ಳಲ್ಪಡುತ್ತವೆ. ಸ್ವಭಾವವಾಗಿ ಮುಟ್ಟುವುದಕ್ಕೆ ಯೋಗ್ಯವಾದ ವಸ್ತುಗಳು ಸ್ಪೃಶ್ಯವಸ್ತುಗಳೆನಿಸಿಕೊಳ್ಳಲ್ಪಡುತ್ತವೆ. ಪರಿಶುದ್ಧಗಳಾದ ವಸ್ತುಗಳು ಒಂದೊಂದು ದೋಷಸಂಬಂಧದಿಂದ ಮುಟ್ಟುವುದಕ್ಕೆ ಅಯೋಗ್ಯಗಳಾಗಿಯೂ, ದೋಷವಿಮೋಚನೆಯಿಂದ ಮುಟ್ಟುವುದಕ್ಕೆ ಯೋಗ್ಯಗಳಾಗಿಯೂ ಆಗುವುದರಿಂದ ಸ್ಪೃಶ್ಯಾಸ್ಪೃಶ್ಯ ವಸ್ತುಗಳೆನಿಸಿಕೊಳ್ಳಲ್ಪಡುತ್ತವೆ. ಹೀಗೆ ಸ್ಪೃಶ್ಯಾಸ್ಪೃಶ್ಯವಸ್ತುಗಳು ಜಗದಾದಿಯಿಂದಲೂ ಈಶ್ವರಸೃಷ್ಟಿಯ ಸ್ವಭಾವವಾಗಿದ್ದು ಆ ಸ್ವಭಾವವನ್ನು ಬದಲಾವಣೆಮಾಡುವುದು ಯಾರಿಂದಲೂ ಸಾಧ್ಯವಿಲ್ಲ. ಒಂದು ದೇಹದೊಳಗೆ ಇರುವ ವಸ್ತುಗಳನ್ನು ವಿಚಾರಮಾಡಿ ನೋಡಿದರೂ ಸಹ ಸ್ಪೃಶ್ಯವಸ್ತುಗಳೂ ಅಸ್ಪೃಶ್ಯವಸ್ತುಗಳೂ ಕಂಡುಬರುತ್ತವೆ. ಈಗ ಬಲಹಸ್ತಕ್ಕಿರುವ ಪಾರಿಶುದ್ಧ್ಯವು ಎಡಹಸ್ತಕ್ಕಿರುವುದಿಲ್ಲ. ಒಂದೊಂದು ಸಮಯದಲ್ಲಿ ಎಡಹಸ್ತವು ಅಸ್ಪೃಶ್ಯಾಂಗವೆನಿಸಿಕೊಳ್ಳಲ್ಪಡುತ್ತದೆ. ಹೀಗೆ ಒಂದು ದೇಹದಲ್ಲಿಯೇ ಸ್ಪೃಶ್ಯಾಸ್ಪೃಶ್ಯಭೇದವಿರುವಲ್ಲಿ ಇನ್ನು ಮಾನವರಲ್ಲಿ ಸ್ಪೃಶ್ಯಾಸ್ಪೃಶ್ಯಭೇದವಿಲ್ಲವೆಂಬ ಮಾತು ಶಶವಿಷಾಣಪ್ರಾಯವೇ ಸರಿ! ವೇದಮತಾವಲಂಬಿಗಳಾದ ಸನಾತನಧರ್ಮಾವಲಂಬಿಗಳು ಜ್ಞಾನಕ್ಕಿಂತಲೂ ಕರ್ಮಗಳಿಗೆ ವಿಶೇಷವಾಗಿ ಪ್ರಾಧಾನ್ಯವನ್ನು ಕೊಟ್ಟಿರುವುದರಿಂದಲೂ, ಸನಾತನಧರ್ಮಿಗಳು ವಾಸಮಾಡುವ ಭೂಮಿಯು ಕರ್ಮಭೂಮಿಯೆಂಬ ಸಂಕೇತವನ್ನು ಪಡೆದಿರುವುದರಿಂದಲೂ ಸ್ಪೃಶ್ಯಾಸ್ಪೃಶ್ಯನಿಯಮಪರಿಪಾಲನೆಯಿಲ್ಲದೆ ಇವರ ಆಚಾರವ್ಯವಹಾರಗಳೇ ನಿರ್ವಹಿಸುವಂತೆ ಇಲ್ಲ. ಎಂದು ಸ್ಪೃಶ್ಯಾಸ್ಪೃಶ್ಯವಸ್ತುಗಳು ಒಂದಕ್ಕೊಂದು ಭೇದವಿಲ್ಲದೆ ಏಕಾಕಾರವನ್ನು ಹೊಂದುವುವೋ ಅಂದೇ ಸನಾತನಧರ್ಮವು ನಾಮಾವಶೇಷವಾಗುವುದರಲ್ಲಿ ಸಂದೇಹವಿಲ್ಲ. ಹೀಗಿರುವಲ್ಲಿ ಈಗಿನ ಕೆಲವು ಸ್ವರಾಜ್ಯವಾದಿಗಳು ಅನಾದಿಕಾಲದಿಂದ ರೂಢವಾಗಿ ಬಂದಿರುವ ಅಸ್ಪೃಶ್ಯತ್ವವನ್ನು ತೆಗೆದುಹಾಕಲು ತವಕಪಡುತ್ತಲಿದ್ದಾರೆ. ಜನ್ಮತಃ ವರ್ಣವ್ಯವಸ್ಥೆಯನ್ನು ಒಪ್ಪುವ ಸನಾತನಧರ್ಮದವರಿಗೆ ಈ ಅಸ್ಪೃಶ್ಯನಿವಾರಣೋಪಾಯವು ಅತ್ಯಂತ ಅನಿಷ್ಟಕರವಾಗಿ ಪರಿಣಮಿಸಿದೆ. ಗಾಂಧಿಯವರು ಇದುವರೆಗೂ ಸತ್ಯಾಗ್ರಹಸಮರವೇ ಸ್ವರಾಜ್ಯಸಾಧನವೆಂದು ಭಾವಿಸುತ್ತ ಸತ್ಯಾಗ್ರಹಸಮರವನ್ನು ಹೂಡಿದ್ದರು. ಈ ಸತ್ಯಾಗ್ರಹಸಮರದಲ್ಲಿ ನಮ್ಮ ಭರತಖಂಡವಾಸಿಗಳಾದವರೆಲ್ಲರೂ ಏಕಮುಖದಿಂದ ಭಾಗಿಗಳಾಗುತ್ತ ಗಾಂಧಿಯವರ ಪ್ರಧಾನನಾಯಕತ್ವಕ್ಕೆ ಅನುಮೋದನವನ್ನು ಕೊಟ್ಟು ಯಥಾಶಕ್ತಿ ದೇಶಸೇವೆ ಮಾಡುತ್ತ ಅನೇಕ ವಿಧಗಳಾದ ಕಷ್ಟನಷ್ಟಗಳಿಗೊಳಗಾಗಿ ಈಗಲೂ ಕಾರಾಗೃಹದಲ್ಲಿ ನರಳುತ್ತಲಿದ್ದಾರೆ. ಇಷ್ಟರಲ್ಲಿಯೇ ಸತ್ಯಾಗ್ರಹನಾಯಕರಾದ ಗಾಂಧಿಯವರು ಆ ಮಾರ್ಗದಿಂದ ನಿವೃತ್ತರಾಗಿ ಅಸ್ಪೃಶ್ಯೋದ್ಧಾರದ ಕಡೆಗೆ ತಿರುಗಿ ಅಸ್ಪೃಶ್ಯಜನಗಳನ್ನು ಪ್ರೋತ್ಸಾಹಿಸಿ ಈ ಜನಗಳು ದೇವಾಲಯದೊಳಗೆ ಪ್ರವೇಶಿಸಲರ್ಹರೆಂದು ವಾದಿಸುತ್ತ ಸ್ವರಾಜ್ಯಸಾಧನಗಳಾದ ಕಾರ್ಯಕಲಾಪಗಳನ್ನೆಲ್ಲಾ ಬಿಟ್ಟು, ಪ್ರಪಂಚದಲ್ಲಿರುವ ದೇವಾಲಯಗಳಿಗೆಲ್ಲ ಅಸ್ಪೃಶ್ಯಜನಗಳನ್ನು ನುಗ್ಗಿಸಲು ಸಂಚರಿಸಹತ್ತಿದ್ದಾರೆ. ಇವರೀ ಮನೋಭಿಲಾಷೆಯು ಎಷ್ಟರಮಟ್ಟಿಗೆ ಫಲಕಾರಿಯಾಗುವುದೋ ನೋಡಬೇಕಾಗಿದೆ. ಗಾಂಧಿಯವರ ಸ್ವಭಾವವು ಬಹು ಚಂಚಲವಾದುದೆಂದೂ, ಅವರು ಹಿಡಿದಿರುವ ಎಲ್ಲಾ ಕಾರ್ಯಗಳು ಪೂರ್ತಿಯಾಗದೆ ಅಪ್ರಯೋಜಕಗಳಾಗಿರುವುವೆಂದೂ ಇಂದಿನವರೆಗೆ ಅವರು ನಡೆಯಿಸಿದ ಕಾರ್ಯಕಲಾಪಗಳಿಂದ ತಿಳಿದುಬಂದಿರುತ್ತದೆ. ಈಗ ಕೈಕೊಂಡಿರುವ ಅಸ್ಪೃಶ್ಯತೆಯ ಹಣೆಬರಹವಾದರೂ ಅಷ್ಟೇ ಎಂದು ನಿರ್ವಿವಾದವಾಗಿ ಹೇಳಬಹುದಾಗಿದೆ.

ಅನಾದಿಕಾಲದಿಂದ ಆಗಮೋಕ್ತವಾಗಿ ಸ್ಥಾಪಿತಗಳಾದ ದೇವಾಲಯಗಳೊಳಗೆ ಅಸ್ಪೃಶ್ಯ ಜನಗಳನ್ನು ಬಲಾತ್ಕಾರವಾಗಿ ನುಗ್ಗಿಸಿ ದೇವಾಲಯಗಳನ್ನು ಅಪವಿತ್ರಗೊಳಿಸುವುದು ಅತ್ಯಂತ ಶೋಚನೀಯವಾದ ವಿಷಯವಾಗಿರುತ್ತದೆ. ಅಸ್ಪೃಶ್ಯ ಜನಗಳ ಪ್ರವೇಶದಿಂದ ಬಿಂಬದಲ್ಲಿ ನೆಲೆಗೊಂಡಿರುವ ದೇವಕಲೆಯು ನಿಲ್ಲಲಾರದೆಂದು ಶಿವಾಗಮಗಳೂ ಧರ್ಮಶಾಸ್ತ್ರಗಳೂ ಮುಕ್ತಕಂಠದಿಂದ ಸಾರುತ್ತಿದ್ದರೂ ಇದನ್ನೆಲ್ಲಾ ಮೀರಿ ಬಲಾತ್ಕಾರದಿಂದ ದೇವಾಲಯಗಳಿಗೆ ಅಸ್ಪೃಶ್ಯರನ್ನು ನುಗ್ಗಿಸುವುದು ವೇದಾಗಮಮತಾವಲಂಬಿಗಳನ್ನು ಬಹಳವಾಗಿ ಬಾಧಿಸುತ್ತಿರುವುದು. ಶಾಸ್ತ್ರನಿಯಮನ್ನುಲ್ಲಂಘಿಸಲಿರುವ ಗಾಂಧಿಯವರವಿಷಯದಲ್ಲಂತೂ ಪ್ರತಿಯೊಬ್ಬರು ಅಪ್ರೀತಿಯನ್ನು ಪ್ರದರ್ಶಿಸುತ್ತಿರುವರು. ಈ ಕಾರ್ಯವು ಧರ್ಮದರ್ಶಿಗಳಿಗೂ ಧರ್ಮಪ್ರಚಾರಕರಾದ ಮಠಾಧಿಕಾರಿಗಳಿಗೂ ದುಃಖವನ್ನುಂಟುಮಾಡುತ್ತಿರುವುದು. ಪ್ರಕೃತದಲ್ಲಿ ಗಾಂಧಿಯವರು ಹಳ್ಳಿಹಳ್ಳಿಗಳಿಗೂ ಹೋಗಿ ಅಸ್ಪೃಶ್ಯರನ್ನು ದೇವಾಲಯಗಳಿಗೆ ಬಿಡಿಸುವ ಪ್ರಯತ್ನವನ್ನು ಬಹಳ ವೇಗದಿಂದ ನಡೆಸುತ್ತಲಿದ್ದಾರೆ. ಆದರೂ ಎಷ್ಟೋ ಕಡೆಗಳಲ್ಲಿ ಅಸ್ಪೃಶ್ಯ ಜನಗಳೇ ತಮಗೆ ಈ ನಡವಳಿಕೆಯು ಸರಿಬಾರದಿರುವುದರಿಂದ ದೇವಾಲಯಪ್ರವೇಶವನ್ನು ಖಂಡಿಸುತ್ತಲಿದ್ದಾರೆ. ಮೊನ್ನೆ ಆಕೋಲೆಯೆಂಬಲ್ಲಿ ಗಾಂಧಿಯವರು ಮೋಟಾರ್ ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅನೇಕ ಜನರು ಮಾರ್ಗದಲ್ಲಿ ಅಡ್ಡಗಟ್ಟಿ ಕರಿಯ ನಿಶಾನೆಗಳನ್ನು ತೋರಿಸಿದರಂತೆ! ಅನೇಕ ಕಡೆಗಳಲ್ಲಿ ಹಿಂದೂ ಜನರು ದೇವಸ್ಥಾನದ ಮಹಾದ್ವಾರದಲ್ಲಿ ಮಲಗಿ ತಡೆಯನ್ನು ಮಾಡಿದರಂತೆ! ನಾಗಪುರದಲ್ಲಿ ಕೋಳಿಮಟ್ಟೆಗಳನ್ನು ಗಾಂಧಿಯವರ ಮೇಲೆ ಎಸೆದರಂತೆ! ಅಲ್ಲದೆ ಅಲ್ಲಲ್ಲಿ ಸನಾತನಿಗಳಿಗೂ ಇವರಿಗೂ ಭಯಂಕರವಾದ ಹೊಡೆದಾಟಗಳು ನಡೆಯುತ್ತಲಿವೆ. ಇದರಿಂದ ಇವರಿಗೆ ಯಾವ ಪುರುಷಾರ್ಥವೂ ದೊರೆಯದೆ ಹತಾಶರಾಗುವುದರಲ್ಲಿ ಸಂದೇಹವಿಲ್ಲ. ಗಾಂಧಿಯವರು ತಾವು ಸನಾತನಿಗಳ ವಂಶದಲ್ಲಿಯೇ ಹುಟ್ಟಿದ್ದರೂ ಅದಕ್ಕೆ ವಿರೋಧವಾಗಿ ನಡೆಯುತ್ತ ದೇವಾಲಯಗಳನ್ನು ಅಪವಿತ್ರಗೊಳಿಸುವುದರ ಮೂಲಕ ಅಪರಿಮಿತ ಸನಾತನಮತಾವಲಂಬಿಗಳಿಗೆಲ್ಲ ವ್ಯಥೆಯನ್ನುಂಟುಮಾಡುತ್ತ ಧಾರ್ಮಿಕ ರಾಜ್ಯದ ಮೇಲೆ ದಾಳಿಯನ್ನು ಮಾಡುತ್ತಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶಮಾಡಿಸುವುದರಿಂದ ಸ್ವರಾಜ್ಯವು ಲಭಿಸುವುದು, ಇಲ್ಲವಾದರೆ ಲಭಿಸುವುದಿಲ್ಲ ಎಂಬ ದೃಢತರವಾದ ಕಾರ್ಯಕಾರಣ ಭಾವವೇನೂ ಎಲ್ಲಿಯೂ ಕಂಡುಬರುವುದಿಲ್ಲ. ದೇವಾಲಯಪ್ರವೇಶವೆಂಬುದು ಧರ್ಮಾಧರ್ಮನಿಬಂಧನೆಗೊಳಪಟ್ಟಿದೆ. ಸ್ವರಾಜ್ಯಸಾಧನೆಗೆ ಯಾವ ವಿಧದಲ್ಲಿಯೂ ಕಾರಣವಲ್ಲದ ದೇವಾಲಯಪ್ರವೇಶವನ್ನು ಸ್ವರಾಜ್ಯಕಾರ್ಯಸಾಧಕವೆಂದು ಭಾವಿಸಿ ಕೆಲಸಮಾಡುವುದಂತೂ ಕೇವಲ ಅಸಂಬದ್ಧಕ್ರಿಯೆಯಾಗುವುದಲ್ಲದೆ ನೀಲಾಶ್ವವನ್ನು ಶ್ವೇತಾಶ್ವವನ್ನು ಮಾಡುವುದಕ್ಕೆ ಹೊರಟಂತೆ ವ್ಯರ್ಥೋದ್ಯೋಗವಾಗುವುದೊಂದೇ ಫಲವಾಗುತ್ತದೆ. ಹೀಗೆ ಭಾರತೀಯ ಸಹೋದರರಲ್ಲಿಯೇ ಮನಃಕ್ಲೇಶವನ್ನುಂಟುಮಾಡುವ ಸ್ವರಾಜ್ಯಸಾಧನವಿರುದ್ಧವಾದ ದೇವಾಲಯಪ್ರವೇಶಕಾರ್ಯದಲ್ಲಿ ಗಾಂಧಿಯವರು ಪ್ರಯತ್ನಮಾಡುವುದಕ್ಕಿಂತ ಆ ಉದ್ಯಮದಿಂದ ನಿವೃತ್ತರಾಗಿ ಧರ್ಮಶಾಸ್ತ್ರದಂತೆ ನಡೆದು ಸನಾತನ ಮತಾನುಯಾಯಿಗಳ ಪ್ರೇಮವನ್ನು ಸಂಪಾದಿಸುವುದು ಉತ್ತಮವಾಗಿದೆ. ಜಗನ್ನಿಯಾಮಕನು ಇವರಿಗೆ ಈ ತರಹದ ಸದ್ಬುದ್ಧಿಯನ್ನನುಗ್ರಹಿಸಲೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸರಕಾರದವರು ಶ್ರೀ|| ಆನಂದಾಬಾಯಿ ಬಿ.ಎ.,ಬಿ.ಎಲ್. ರವರನ್ನು ಬೆಂಗಳೂರು ನಗರದ ಬೆಂಚ್ ಕೋರ್ಟಿನ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿರುತ್ತಾರೆ.

ಭದ್ರಾವತಿಯಲ್ಲಿ ಒಬ್ಬ ಮಹಮ್ಮದೀಯನು ಒಬ್ಬ ಮಹಮ್ಮದೀಯ ಬಾಲಿಕೆಯ ಮೇಲೆ ಅತ್ಯಾಚಾರ ನಡೆಸಿದನೆಂಬ ಕಾರಣದ ಮೇಲೆ ಶಿವಮೊಗ್ಗಾ ಅ|| ಸೆಷನ್ಸ್ ಜಡ್ಜರು ವಿಚಾರಣೆ ನಡೆಯಿಸಿ ಅಪರಾಧಿಗೆ 3 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಮೈಸೂರು ಡಿಸ್ಟ್ರಿಕ್ಟ್‌ಬೋರ್ಡ್ ಅಧ್ಯಕ್ಷರ ಚುನಾವಣೆಯು ಕಾನೂನಿಗೆ ವಿರುದ್ಧವಾಗಿ ನಡೆಯಿತೆಂದು ಮ|| ಎಂ. ಸಿ. ಲಿಂಗೇಗೌಡರು ಆಕ್ಷೇಪಿಸಿ ಅರ್ಜಿಯನ್ನು ಹಾಕಿರುವದರಿಂದ ಸರಕಾರದವರು ಆ ವಿಷಯವಾಗಿ ವಿಚಾರಣೆ ಮಾಡಬೇಕೆಂದು ಮೈಸೂರು ಡೆಪ್ಯುಟಿಕಮಿಷನರಿಗೆ ಅಪ್ಪಣೆಮಾಡಿರುತ್ತಾರೆ.

ಈಗ್ಗೆ ಸುಮಾರು 7-8 ದಿವಸಗಳ ಹಿಂದೆ ರಾಜಧಾನಿಯ ಒಂಟಿಕೊಪ್ಪಲಿನ ಮೈದಾನದಲ್ಲಿ ಕೆಲವು ಜನ ವಿದ್ಯಾರ್ಥಿಗಳು ಕ್ರಿಕೆಟ್ ಚಂಡಾಡುತ್ತಿದ್ದಾಗ ನಾರಾಯಣ ಎಂಬವನಿಗೆ ಚಂಡಿನಿಂದ ಬಲವಾದ ಏಟುಬಿದ್ದು ಗಾಯವಾಯಿತು. ಚಿಕಿತ್ಸೆಗಾಗಿ ಕೂಡಲೇ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟರೂ ಪ್ರಯೋಜನವಾಗದೆ ಮೃತಪಟ್ಟನು.

ವೈಸರಾಯ್ ದಂಪತಿಗಳು ನಾಳೆ ಮಂಗಳವಾರ ಕೃಷ್ಣರಾಜಸಾಗರ ಅಣೆಕಟ್ಟೆಯನ್ನು ನೋಡಬರುವರು. ಈ ಸಂಬಂಧವಾಗಿ ಅಲ್ಲಿಯ 'ಟೆರೇಸ್' ಉದ್ಯಾನವು ವಿದ್ಯುದ್ದೀಪಮಾಲಿಕೆಗಳಿಂದ ನೇತ್ರಾನಂದಕರವಾಗಿರುವಂತೆ ಮಾಡಲ್ಪಟ್ಟಿರುವದು. ಈ ಅಪೂರ್ವ ನೋಟವನ್ನು ಬುಧವಾರ ಸಾಯಂಕಾಲ ಇತರ ಜನಗಳೂ ನೋಡಿ ಬರಲು ಅವಕಾಶವು ಕಲ್ಪಿಸಲ್ಪಟ್ಟಿರುವುದು.

ಮಾಲೂರ್ ತಾಲೂಕು ಹೊಸಕೋಟೆಯ ಮುನಿಸಾಮಾಚಾರಿ ಮೊದಲಾದ 7 ಜನರು ಕೋಲಾರದ ಕೆಲವು ಸರಾಫರನ್ನು ಚಿನ್ನವನ್ನು ಕೊಡಿಸುತ್ತೇವೆಂದು ಹೇಳಿ ಮಾಲೂರಿಗೆ ಕರೆದುಕೊಂಡುಹೋಗಿ, ವ್ಯಾಪಾರವಾದನಂತರ ಆ ಸರಾಫರ ಮೇಲೆ ಬಿದ್ದು ಅವರು ತಂದಿದ್ದ 1500 ರೂ. ಗಳನ್ನೂ ಭಂಗಾರವನ್ನೂ ಸಹ ಕಿತ್ತುಕೊಂಡರೆಂಬ ಆಪಾದನೆಯ ಮೇಲೆ ಪೋಲೀಸರು ಅವರೆಲ್ಲರನ್ನೂ ದಸ್ತಗಿರಿಮಾಡಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ರಾಜಧಾನಿಗೆ ವೈಸ್ರಾಯರವರ ಆಗಮನ.

ಭರತಖಂಡದ ವೈಸ್ರಾಯರವರಾದ ಲಾರ್ಡ್ ವಿಲಿಂಗ್ಡನ್‌ರವರು ನಿನ್ನೆಯ ದಿವಸ ಬೆಳಗ್ಗೆ ೮ ಘಂಟೆಗೆ ಸ್ಪೆಷಲ್ ಗಾಡಿಯಿಂದ ರಾಜಧಾನಿಗೆ ಆಗಮಿಸಿದರು. ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರು ರೇಲ್ವೆಸ್ಟೇಷನ್ನಿನಲ್ಲಿ ಅವರಿಗೆ ಸ್ವಾಗತವನಿತ್ತರು. ಅನಂತರ ವೈಸ್ರಾಯರವರು ಸಕಲರಾಜಮರ್ಯಾದೆಗಳೊಡನೆ ಸಯ್ಯಾಜಿರಾವ್‌ರೋಡ್ ಮೊದಲಾದ ರಾಜಮಾರ್ಗಗಳಲ್ಲಿ ಹಾಯ್ದು ಬಿಡಾರಕ್ಕಾಗಿ ಸಿದ್ಧವಾಗಿದ್ದ ಲಲಿತಾಮಹಲ್ಲಿಗೆ ದಯಮಾಡಿಸಿದರು. ಮೈಸೂರು ರಾಜಧಾನಿಯು ಸದ್ಯಃ ಇಂದ್ರನ ರಾಜಧಾನಿಯಾದ ಅಮರಾವತಿಯ ಶೋಭೆಯನ್ನು ಮೀರಿಸಿ ಶೋಭಿಸುತ್ತಿರುವುದು. ಇಂಥ ವೈಭವವು ಯಾವಕಾಲದಲ್ಲಿಯೂ ಆಗಿಲ್ಲವೆಂದರೆ ಅತಿಶಯೋಕ್ತಿಯೆನಿಸಲಾರದು. ಈ ವರ್ಷ ಹೊಸದಾಗಿ ಕೃಷ್ಣರಾಜಸಾಗರದಲ್ಲಿ ಮನೋಹರವಾದ ಉದ್ಯಾನವನವು ನಿರ್ಮಿಸಲ್ಪಟ್ಟಿರುವುದು. ಇಂಥ ಉದ್ಯಾನವು ಇಡೀ ಜಗತ್ತಿನಲ್ಲಿಯೇ ಇಲ್ಲವಂತೆ! ವೈಸ್ರಾಯರವರು ಇಂದು ಮತ್ತು ನಾಳೆಯ ದಿವಸ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ನೋಡಿಕೊಂಡು ಬಂದು ಬುಧವಾರ ದಿವಸ ಬೆಂಗಳೂರಿಗೆ ಪ್ರಯಾಣ ಮಾಡುವರು.

ವರ್ತಮಾನಸಂಗ್ರಹ.

ಕ್ಯೂಬಾದೇಶದಲ್ಲಿರುವ ಒಂದುಜಾತಿಯ ಏಡಿಯು ಕುದುರೆಗಿಂತಲೂ ಹೆಚ್ಚು ವೇಗವಾಗಿ ಓಡಬಲ್ಲದಂತೆ!

ಇಂಗ್ಲೆಂಡ ದೇಶದ 'ಅರ್ಲ್‌ಕ್ಯಾಡಗ್ಗ' ಎಂಬವರು ನ್ಯಾಯಸ್ಥಾನದಲ್ಲಿ 3 ಸಾರೆ 'ಪಾಪರ್' ಎಂಬುದಾಗಿ ನಿರ್ಣಯಿಸಲ್ಪಟ್ಟರು. ಆದರೆ ಅವರಿಗೆ ಸಾಯುವಾಗ 4,00,00,000 ರೂ ಗಳ ಆಸ್ತಿಯಿದ್ದಿತಂತೆ!

ವೈಸರಾಯರಾದ ಲಾರ್ಡ್ ವಿಲಿಂಗ್‌ಡನ್‌ರವರು 4 ತಿಂಗಳಕಾಲ ರಜೆಯಮೇಲೆ ಇಂಗ್ಲೆಂಡಿಗೆ ಹೋಗುವರೆಂದೂ, ಆ ಅವಧಿಯಲ್ಲಿ ಮದರಾಸ್ ಗವರ್ನರಾದ ಸರ್ ಜಾರ್ಜ್‌ಸ್ಟಾನ್ಲಿಯವರು ವೈಸರಾಯರಾಗಿಯೂ ಮದರಾಸ್ ರೆವಿನ್ಯೂ ಮೆಂಬರರಾದ ಸರ್ ಆರ್ಚಿಬಾಲ್ಡ್ ಕ್ಯಾಂಬೆಲ್‌ರವರು ಮದರಾಸ್ ಗವರ್ನರಾಗಿಯೂ ಹಂಗಾಮಿಯಾಗಿ ನೇಮಿಸಲ್ಪಡುವರೆಂದೂ ವರ್ತಮಾನ!

ಕೊಳ್ಳೆಗಾಲದ ಶ್ರೀ|| ಜಿ. ಪಿ. ಮಲ್ಲಪ್ಪನವರಿಗೆ ಬ್ರಿಟಿಷ್ ಸರಕಾರದಿಂದ ರಾವ್ ಸಾಹೇಬ್ ಎಂಬ ಪ್ರಶಸ್ತಿಯು ಅನುಗ್ರಹಿಸಲ್ಪಟ್ಟ ಸಂತೋಷಾರ್ಥವಾಗಿ ಕೊಳ್ಳೆಗಾಲಪ್ರಾಂತದ ಮಹಾಜನರು ಕಳೆದ ನವೆಂಬರ್ 30 ನೇ ತಾರೀಖಿನ ದಿವಸ ರಾಜಕಪಿ ಭೂಷಣ ಶ್ರೀ ಮಾ|| ಎಚ್. ಲಿಂಗರಾಜ ಅರಸರವರ ಅಧ್ಯಕ್ಷತೆಯಲ್ಲಿ ಶ್ರೀ ಮಲ್ಲಪ್ಪನವರನ್ನು ಸತ್ಕರಿಸಿ ಪಶಂಸಾ ಪತ್ರವನ್ನು ಒಪ್ಪಿಸಿದರು.

ಬಳ್ಳಾರಿ ತಾಲೂಕು ಬೋರ್ಡ್ ಮೆಂಬರರಾದ ಹುಂಡಿಹಾಳ್ ಸೀತಾರಾಮರೆಡ್ಡಿ ಎಂಬವರು 4 ಜನ ಸ್ನೇಹಿತರೊಡನೆ ಕಳೆದ ಮಾರ್ಚಿ 13 ನೇ ತಾರೀಖಿನ ದಿವಸ ಸಾಂತಮ್ಮ ಎಂಬ ಮೈನರ್ ಹುಡುಗಿಯನ್ನು ಅವಳ ಇಷ್ಟಕ್ಕೆ ವಿರುದ್ಧವಾಗಿ ಮದುವೆಮಾಡಲು ಅಪಹರಿಸಿಕೊಂಡು ಹೋದರೆಂಬ ಕಾರಣದಮೇಲೆ ಬಳ್ಳಾರಿ ಡಿ|| ಜಡ್ಜರು ವಿಚಾರಣೆ ನಡೆಯಿಸಿ ಸೀತಾರಾಮರೆಡ್ಡಿಯವರಿಗೆ 5 ವರ್ಷ ಕಠಿಣಶಿಕ್ಷೆಯನ್ನೂ, ಉಳಿದ 4 ಜನರಿಗೆ ನಾಲ್ಕುವರ್ಷ ಕಠಿಣಶಿಕ್ಷೆಯನ್ನೂ ವಿಧಿಸಿದರು.

ಪೋಲೀಸ್ ಇನ್ಸ್‌ಪೆಕ್ಟರ್ ಅಬ್ದುಲ್ ಹಸೀಬ್ ಎಂಬವರು ಮತ್ತು 3 ಜನ ಪೋಲೀಸ್ ಕಾನ್‌ಸ್ಟೆಬಲರು ಅನುಮಾನದ ಮೇಲೆ ದಸ್ತಗಿರಿಮಾಡಲ್ಪಟ್ಟಿದ್ದ ಕೆಲವು ಜನರಿಂದ ಸುದ್ದಿಯನ್ನು ಹೊರಗೆಡಹುವದಕ್ಕಾಗಿ ಬಲಪ್ರದರ್ಶನಮಾಡಿದರೆಂಬ ಆಪಾದನೆಯ ಮೇಲೆ ದೆಹಲಿ ಅಡಿಷನಲ್ ಡಿ|| ಮ್ಯಾಜಿಸ್ಟ್ರೇಟರವರು ವಿಚಾರಣೆ ಮಾಡಿ ಎಲ್ಲರಿಗೂ ಕೋರ್ಟುಮುಗಿಯುವವರೆಗೆ ಶಿಕ್ಷೆಯನ್ನೂ, ಸಬ್‌ಇನ್ಸ್‌ಪೆಕ್ಟರಿಗೆ 300 ರೂ. ಪೋಲೀಸ್ ಕಾನ್‌ಸ್ಟೆಬಲರಿಗೆ ಪ್ರತಿಯೊಬ್ಬರಿಗೂ 50 ರೂ. ನಂತೆ ಜುಲ್ಮಾನೆಯನ್ನೂ ವಿಧಿಸಿದರು.

ಕಳೆದ ನವೆಂಬರ್ 28 ನೆಯ ತಾರೀಖಿನ ದಿವಸ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು, ಮಿಸ್ ಮಣಿಬೆನ್ ಪಟೇಲರೂ ಪ್ರಾಗ್ಜಿಭಾಯ್‌ರವರೂ ರಾಸ್ ಹಳ್ಳಿಗೆ ಹೋಗುತ್ತಿದ್ದಾಗ ಪೋಲೀಸರು ಅವರನ್ನು ದಸ್ತಗಿರಿ ಮಾಡಿ ಮ್ಯಾಜಿಸ್ಟ್ರೇಟರ ಮುಂದೆ ಕರೆದೊಯ್ದರು. ಮ್ಯಾಜಿಸ್ಟ್ರೇಟರು ಇವರೆಲ್ಲರ ಮೇಲೂ ಕೂಡಲೇ ಕೈರಾಜಿಲ್ಲೆಯನ್ನು ಬಿಟ್ಟು ಹೋಗಬೇಕೆಂದು ಅಪ್ಪಣೆ ಮಾಡಿದರು. ಆದರೆ ಅದರಂತೆ ಯಾರೂ ನಡೆಯದಿದ್ದುದರಿಂದ ಪುನಃ ದಸ್ತಗಿರಿಮಾಡಲ್ಪಟ್ಟರು. ಕೈರಾಜಿಲ್ಲೆಯ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಎಲ್ಲರಿಗೂ ಶಿಕ್ಷೆ ವಿಧಿಸಿದರು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ತಮ್ಮ ಪತಿಯಾದ ಹರೀಂದ್ರನಾಥ ಚಟ್ಟೋಪಾಧ್ಯಾಯರು ಮದ್ಯಪಾನಾಸಕ್ತರಾಗಿ ತಮ್ಮನ್ನು ಹೊಡೆದು ಬಹಳ ತೊಂದರೆಕೊಡುವರೆಂದೂ, ಬಹಿರಂಗನಾಗಿ ಮನೆಯಲ್ಲಿದ್ದ ಕ್ರೈಸ್ತದಾದಿಯೊಡನೆ ವಿಹರಿಸುತ್ತಿರುವರೆಂದೂ, ಆದುದರಿಂದ ತಮ್ಮ ವಿವಾಹವಿಚ್ಛೇದನಕ್ಕೆ ಅಪ್ಪಣೆಯನ್ನಿತ್ತು ತಮ್ಮ ಮಗನೊಡನೆ ಬೇರೆಯಾಗಿರಲು ಅವಕಾಶ ಕೊಡಬೇಕೆಂದೂ ಮುಂಬಯಿ ಹೈಕೋರ್ಟಿನಲ್ಲಿ ಅರ್ಜಿಯನ್ನು ಹಾಕಿದ್ದರು. ನವಂಬರ್ 28ನೇ ತಾರೀಖಿನ ದಿವಸ ಮೊಕದ್ದಮೆಯು ವಿಚಾರಣೆಗೆ ಇಡಲ್ಪಟ್ಟಿತ್ತು. ಹರೀಂದ್ರನಾಥಚಟ್ಟೋಪಾಧ್ಯಾಯರಿಗೆ ಕೋರ್ಟಿಗೆ ಹಾಜರಾಗಲು ಸರ್ನ ಕಳುಹಿಸಿದ್ದರೂ ಅವರಾಗಲಿ ಅವರ ಕಡೆಯ ವಕೀಲರಾಗಲಿ ಯಾರೂ ಬಂದಿರಲಿಲ್ಲ. ನ್ಯಾಯಾಧೀಶರು ಕಮಲಾದೇವಿಯವರ ಪರವಾಗಿ ಎರಡುಸಾಕ್ಷಿಗಳ ವಿಚಾರಣೆಮಾಡಿ ಅವರು ತಮ್ಮ ಮಗನೊಡನೆ ಬೇರೆಯಾಗಿರಬಹುದೆಂದು ಅಪ್ಪಣೆ ಮಾಡಿದರು.

ಬೇಲಿಯು ಹೊಲವನ್ನು ನುಂಗಿತು!

ಲಿಥ್ಯೂನಿಯಾ ದೇಶದ ಟಪ್ಪಾಲು ಇಲಾಖೆಯ ಡೈರೆಕ್ಟರಾದ 'ಎಂ. ಅಡಾಲ್ಫ್ ಸ್ಟ್ರಯೋಗಾ' ರವರು ಮತ್ತೊಬ್ಬ ಅಧಿಕಾರಿಗಳ ಸಮೇತರಾಗಿ ಅಪಾರವಾದ ಮೋಸದ ಆಪಾದನೆಯ ಮೇಲೆ ದಸ್ತಗಿರಿಮಾಡಲ್ಪಟ್ಟಿರುವರು. ಇವರು ಇದುವರೆಗೆ ಸುಮಾರು 1,20,00,000 ರೂಪಾಯಿಗಳ ಬೆಲೆಯ ಕೃತಕ ಸ್ಟಾಂಪುಗಳನ್ನು ತಯಾರಿಸಿ, ಟಪ್ಪಾಲಾಫೀಸುಗಳಲ್ಲಿ ವಿಕ್ರಯಮಾಡಿಸಿರುವರಂತೆ!

ಮುನಿಸಿಪಲ್ ಮೆಂಬರರಿಗೆ ಅರ್ಥದಂಡ.

1933 ನೇ ಇಸವಿ ಸೆಪ್ಟಂಬರ್ 26ನೇ ತಾರೀಖಿನ ದಿವಸ ಗೌಹತಿ ಮುನಿಸಿಪಲ್ ಬೋರ್ಡಿನ ಮೆಂಬರರು ಗಾಂಧಿಯವರನ್ನು ಕೂಡಲೆ ಬಿಡುಗಡೆ ಮಾಡಬೇಕೆಂಬ ಬಗ್ಗೆ ಒಂದು ಠರಾವನ್ನು ಪಾಸುಮಾಡಿ ಇಂಗ್ಲೆಂಡಿನ ಮುಖ್ಯಮಂತ್ರಿಗಳಿಗೆ ಒಂದು ತಾರನ್ನು ಕೊಟ್ಟಿದ್ದರು. ಸದರೀ ತಾರಿಗೆ ವೆಚ್ಚವಾಗಿದ್ದ 10 ರೂ. 5 ಆಣೆಗಳನ್ನು ಮುನಿಸಿಪಲ್ ಮೆಂಬರರು ತಮ್ಮ ಕೈಯಿಂದ ಭರ್ತಿಮಾಡಬೇಕೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

ರೈಲ್ವೇ ಅನಾಹುತಗಳೇ ಆಗುವಂತಿಲ್ಲ!

ಬ್ಯೂಡಾಪೆಸ್ಟ್ ನಗರದ ಸಮೀಪದಲ್ಲಿ ವಾಸವಾಗಿರುವ ಇಬ್ಬರು ಅಲ್ಪ ವಿದ್ಯಾವಂತರಾದ ತರುಣರು ಕೆಲಸಗಾರರ ಅಚಾತುರ್ಯದಿಂದ ಅಕಸ್ಮಾತ್ತಾಗಿ ಎದುರುಬದುರಾಗಿ ಬರುವ ರೈಲುಗಳು ಒಂದಕ್ಕೊಂದು ಢಿಕ್ಕಿ ಹೊಡೆಯದಂತೆ ಒಂದು ರಕ್ಷಣಸಾಧನೆಯನ್ನು ನಿರ್ಮಿಸಿರುವರು. ಈ ಸಾಧನೆಯನ್ನು ಹೊಂದಿದ್ದ ರೈಲುಗಳು ಒಂದೇ ಕಂಬಿಯ ಮೇಲೆ ಎದುರುಬದುರಾಗಿ ಬಂದರೆ ಒಂದಕ್ಕೊಂದು 4 ಮೈಲು ದೂರವಿರುವಾಗಲೇ ನಿಂತುಹೋಗುವವಂತೆ!

ಟೋಪಿಯ ಭೂಪ್ರದಕ್ಷಿಣೆ!

ಮಾಂಟ್ರೀಲ್ ನಗರದ ಒಬ್ಬಾನೊಬ್ಬ ಮನುಷ್ಯನಿಗೆ ಪ್ರಪಂಚವನ್ನೆಲ್ಲಾ ಸುತ್ತಿಬರಬೇಕೆಂಬ ಆಶೆಯು ಬಹಳವಾಗಿತ್ತು. ಆದರೆ ಅವನಿಗೆ ಹಣದ ಅನುಕೂಲತೆಯಿಲ್ಲದ್ದರಿಂದ ತನ್ನ ಟೋಪಿಗೆ 'ನನಗೆ ಭೂಪ್ರದಕ್ಷಿಣೆಯನ್ನು ಮಾಡಿಸಿ' ಎಂದು ಒಂದು ಚೀಟಿಯನ್ನು ಬರೆದು ಕಟ್ಟಿ ಕಳುಹಿಸಿಕೊಟ್ಟನು. ಅಂತೂ ಆ ಟೋಪಿಯು ಭೂಪ್ರದಕ್ಷಿಣೆಯನ್ನು ಮಾಡುತ್ತಿದ್ದ ಇತರರ ಸಹಾಯದಿಂದ ಚೀನಾ, ಜಪಾನ್, ನ್ಯೂಗಿನಿ, ದಕ್ಷಿಣ ಸಮುದ್ರದ ದ್ವೀಪಗಳು ಮೊದಲಾದ ದೇಶಗಳನ್ನು ಸುತ್ತಿ, ಸದ್ಯಃ ಲಂಡನ್ನಿಗೆ ಹೋಗುತ್ತಿರುವದಂತೆ! ಅಲ್ಲಿಂದ ಅದು ಸ್ವಸ್ಥಾನವಾದ ಕೆನಡಾಕ್ಕೆ ಕಳುಹಿಸಲ್ಪಡುವದಂತೆ!

ಮುಂದಿನ ಯುದ್ಧದ ಸ್ವರೂಪ!

ಈಗಿನಂತೆ ಶಿಪಾಯಿಗಳಿಗೆ ಕವಾಯಿತುಮಾಡಿಸಿ ತರಪೇತು ಮಾಡುವದರಿಂದ ಮುಂದಿನ ಯುದ್ಧದಲ್ಲಿ ಯಾವ ಪ್ರಯೋಜನವೂ ಆಗುವದಿಲ್ಲವಂತೆ! ಏಕೆಂದರೆ ಯುದ್ಧಪ್ರಾರಂಭವಾದ ಅರ್ಧಘಂಟೆಯೊಳಗಾಗಿ ಇವರೆಲ್ಲರೂ ಛಿದ್ರಛಿದ್ರಗಳಾಗಿ ನಾಶಿಸಲ್ಪಡುವರಂತೆ! ಪೂರ್ವಕಾಲದ ಯುದ್ಧಗಳಿಗೂ ಕಳೆದ ಘೋರಯುದ್ಧಕ್ಕೂ ಎಷ್ಟು ವ್ಯತ್ಯಾಸವಿತ್ತೋ, ಕಳೆದ ಘೋರಯುದ್ಧಕ್ಕೂ ಮುಂದಿನ ಯುದ್ಧಕ್ಕೂ ಅಷ್ಟೇ ವ್ಯತ್ಯಾಸವಿರುವದಂತೆ! ಕಳೆದ ಘೋರಯುದ್ಧವು ನಡೆದ ನಾಲ್ಕುವರ್ಷಗಳಲ್ಲಿ ಒಟ್ಟು 300 ಟನ್ ಸಿಡಿಮದ್ದುಗಳು ಉಪಯೋಗಿಸಲ್ಪಟ್ಟವು. ಆದರೆ ಮುಂದಿನ ಯುದ್ಧದಲ್ಲಿ ಯುದ್ಧಾರಂಭವಾದ ಅರ್ಧಘಂಟೆಯೊಳಗಾಗಿ 300 ಟನ್ ಸಿಡಿಮದ್ದುಗಳು ಯೂರೋಪಿನ ಮುಖ್ಯಮುಖ್ಯ ನಗರಗಳ ಮೇಲೆ ಹಾಕಲ್ಪಡುವವಂತೆ!

ಕಂದಾಯವನ್ನು ಕೊಡುವೆವೆಂದರೂ ಸರ್ಕಾರದವರು ಬೇಡವೆನ್ನುವರಂತೆ!

ಅಲ್ಬೇನಿಯಾ ದೇಶದಲ್ಲಿ ಸರಕಾರದ ಅಧಿಕಾರಿಗಳು 1933-34ನೇ ವರ್ಷದ ಆದಾಯವೆಚ್ಚದ ಅಂದಾಜಾಪಟ್ಟಿಯನ್ನು ತಯಾರಿಸಿದಾಗ ಖರ್ಚಿಗಿಂತಲೂ ಆದಾಯವು ಅನೇಕಪಾಲು ಹೆಚ್ಚಾಗಿದ್ದಿತು. ಇದನ್ನು ನೋಡಿ ಅಲ್ಲಿಯ ರಾಜರಾದ ಜೋಗುರವರು ಪ್ರಜೆಗಳಮೇಲಿನ ತೆರಿಗೆಗಳನ್ನೆಲ್ಲಾ ವಜಾಮಾಡಿಬಿಡುವಂತೆ ಅಪ್ಪಣೆಮಾಡಿದರು. ತಮ್ಮ ರಾಜರ ಈ ಉದಾರಸ್ವಭಾವವನ್ನು ಕಂಡು ದುರಾಜೋ ನಗರದ ವರ್ತಕರು ಒಟ್ಟಾಗಿ ಸೇರಿ ಒಂದಕ್ಕೆ ಎರಡರಷ್ಟು ಕಂದಾಯವನ್ನು ಕೊಡುವದಾಗಿ ಅರಿಕೆಮಾಡಿಕೊಂಡರು. ದುರಾಜೋ ನಗರದ ವರ್ತಕರಿಗಿಂತಲೂ ತಾವು ಯಾವ ಭಾಗದಲ್ಲಿಯೂ ಕಡಿಮೆಯವರಲ್ಲವೆಂಬುದನ್ನು ತೋರ್ಪಡಿಸಲು ಕೊಸೊವ್ಹೊ ನಗರದ ವರ್ತಕರೂ ಎರಡುಭಾಗ ಕಂದಾಯವನ್ನು ಕೊಡಲು ಸಿದ್ಧರಾದರು. ಆದರೆ ಅಲ್ಬೇನಿಯಾ ರಾಜ್ಯದ ಮಂತ್ರಿಶ್ರೇಷ್ಠರು ಸರಕಾರಕ್ಕೆ ಆ ಹಣದ ಅವಶ್ಯಕತೆಯಿಲ್ಲದಿರುವುದರಿಂದ ಅವರ ತೆರಿಗೆಯನ್ನು ವಂದನಾಪೂರ್ವಕವಾಗಿ ತಿರಸ್ಕರಿಸಿರುವದಾಗಿ ಉತ್ತರಕೊಟ್ಟರಂತೆ!

ಯೂಗೋ-ಸ್ಲೇವಿಯಾದಲ್ಲಿ ಕನ್ಯಾಪಹಾರ! 2 ದಿನಗಳಲ್ಲಿ 4 ಸಾರೆ!

ಯೂಗೋ-ಸ್ಲೇವಿಯಾ ದೇಶಕ್ಕೆ ಸೇರಿದ ಬೆಲ್‌ಗ್ರೇಡ್ ನಗರದ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ 16 ವರ್ಷ ವಯಸ್ಸಿನ ಅತ್ಯಂತ ಸ್ವರೂಪಿಯಾದ ಒಬ್ಬ ಕನ್ಯೆಯನ್ನು 40 ವರ್ಷದ ಒಬ್ಬ ವೃದ್ಧನೂ 20 ವರ್ಷದ ಒಬ್ಬ ತರುಣನೂ ಪ್ರೀತಿಸುತ್ತಿದ್ದರು. ಒಂದು ದಿನ ಸಂಧ್ಯಾ ಸಮಯದಲ್ಲಿ ವೃದ್ಧನು ಕನ್ಯೆಯನ್ನು ಅಪಹರಿಸಿಕೊಂಡು ಹೋಗಿ ತನ್ನ ಮನೆಯಲ್ಲಿಟ್ಟುಕೊಂಡನು. ಇತ್ತ ಹುಡುಗಿಯೂ ತರುಣನೂ ಪರಸ್ಪರ ಪ್ರೀತಿಸುತ್ತಿದ್ದುದರಿಂದ ಅದೇ ದಿನ ರಾತ್ರಿ ತರುಣನು ಉಪಾಯದಿಂದ ಹುಡುಗಿಯನ್ನು ಯಾರಿಗೂ ತಿಳಿಯದಂತೆ ತನ್ನ ಮನೆಗೆ ಕರೆದುಕೊಂಡು ಹೋದನು. ಮರುದಿನ ಬೆಳಗ್ಗೆ ವೃದ್ಧನು ಸಶಸ್ತ್ರರಾದ ಕೆಲವರೊಡನೆ ಬಂದು ಹುಡುಗಿಯನ್ನು ಪುನಃ ಬಲಾತ್ಕಾರವಾಗಿ ತನ್ನ ಮನೆಗೆ ಎಳೆದುಕೊಂಡುಹೋದನು. ಅದೇ ದಿನ ಮಧ್ಯಾಹ್ನ ತರುಣನು 50 ಜನ ಸ್ನೇಹಿತರೊಡನೆ ಕತ್ತಿ, ಕೊಡಲಿ, ದೊಣ್ಣೆ ಮುಂತಾದುವುಗಳ ಸಮೇತನಾಗಿ ಹೋಗಿ ಮುದುಕನ ಮನೆಗೆ ಮುತ್ತಿಗೆಹಾಕಿದನು. ಉಭಯ ಪಂಗಡದವರಿಗೂ ಕೈಕೈಹತ್ತುವದರೊಳಗಾಗಿ ಪೋಲೀಸರು ಬಂದು ಗಲಾಟೆಯನ್ನು ನಿಲ್ಲಿಸಿದುದಲ್ಲದೆ ಹುಡುಗಿಯ ಇಚ್ಛೆಯಂತೆ ತರುಣವರನನ್ನೇ ಮದುವೆಯಾಗುವಂತೆ ಮಾಡಿದರು.

ಪೋಲೆಂಡ್‌ದೇಶದ ಚೋರ ಚಕ್ರವರ್ತಿ!

ಪೋಲೆಂಡ್ ದೇಶದ 'ಚಾಜ್ ಕೌಸ್ಕಿ' ಎಂಬ ಚೋರಾಗ್ರೇಸರನ ಕೃತ್ಯಗಳು ನಿಜವಾಗಿಯೂ ಆಶ್ಚರ್ಯಕರಗಳಾಗಿರುವವು! ಒಂದು ದಿನ ರಾತ್ರಿ ಒಬ್ಬ ವರ್ತಕನ ಮನೆಗೆ ಹೋಗಿ ಅಲ್ಲಿದ್ದ ನಗನಾಣ್ಯಗಳನ್ನೆಲ್ಲಾ ದೋಚಿಕೊಂಡು ಹೋಗುವಾಗ ವರ್ತಕನ ಪತ್ನಿಯ ಕೈಗೆ ಮುತ್ತಿಟ್ಟುಹೋದನಂತೆ! ಮತ್ತೊಂದು ದಿನ ಇನ್ನೊಬ್ಬನ ಮನೆಗೆ ನುಗ್ಗಿ ಯಜಮಾನನೊಡನೆ ಬಹಳಹೊತ್ತಿನವರೆಗೆ ಮತ ಮತ್ತು ರಸಾಯನಶಾಸ್ತ್ರ ಸಂಬಂಧವಾಗಿ ಚರ್ಚೆಮಾಡುತ್ತಿದ್ದು ಹೋಗುವಾಗ ಕೈಗೆ ಸಿಕ್ಕಿದುದನ್ನೆಲ್ಲಾ ದೋಚಿಕೊಂಡುಹೋದನಂತೆ! ಇನ್ನೊಂದು ದಿನ ಇಬ್ಬರು ಮಾರ್ಗಸ್ಥರನ್ನು ತಡೆದು ಪರೀಕ್ಷಿಸಿದಾಗ ಏನೂ ದೊರೆಯದೆ, ಅವರಿಬ್ಬರೂ ನಿರುದ್ಯೋಗಿಗಳೆಂದು ತಿಳಿದುಬರಲು, ತಾನೇ ಅವರಿಗೆ ಕೆಲವು ಷಿಲಿಂಗುಗಳನ್ನು ಕೊಟ್ಟು ಹೊರಟುಹೋದನಂತೆ! ಮತ್ತೊಂದು ದಿನ ಪೋಲೀಸರು ಇವನ ಕಡೆಯ ಕೆಲವು ಜನರನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರಲು, ರಾತ್ರಿಯವೇಳೆಯಲ್ಲಿ ಕೋರ್ಟಿಗೆ ನುಗ್ಗಿ ತನ್ನ ಕಡೆಯವರ ಮೇಲಿನ ಮೊಕದ್ದಮೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ಅಪಹರಿಸಿಕೊಂಡು, ಕಡೆಯಲ್ಲಿ ನ್ಯಾಯಾಧೀಶರಿಗೆ ಒಂದು ವಂದನಾಪತ್ರವನ್ನೂ ಬರೆದಿಟ್ಟುಹೋದನಂತೆ!

(3ನೆಯ ಪುಟದಿಂದ ಮುಂದುವರಿದುದು.)

ಹಿಗೆಳೇ ಎಂಬುದನ್ನು ಹೇಳುವುದೂ ಈಗ ತೀರ ಅನವಶ್ಯಕ. ಈ ವಿಷಯದಲ್ಲಿ ಯಾವ ಅಭಿಪ್ರಾಯವನ್ನೂ ನಾವು ಕೊಡುವುದಿಲ್ಲ.

ಈ ಅಪರಾಧಕ್ಕೆ ಎಂಥ ಶಿಕ್ಷೆಯನ್ನು ಮಾಡಬೇಕೆಂಬ ವಿಷಯದಲ್ಲಿ ಅಲಹಾಬಾದ್ ಹೈಕೋರ್ಟಿನ ತೀರ್ಪಿನಂತೆ, ಇಂಥ ಅಪರಾಧಗಳಿಗೆ ಕಠಿನತರವಾದ ಶಿಕ್ಷೆಯನ್ನು ಕೊಡಬೇಕೆಂಬುದೇ ನ್ಯಾಯವಾದದ್ದು. "ಅಪರಾಧಿಯಕೃತ್ಯದಿಂದ ಹುಡುಗಿಯ ಬದುಕೇ ಹಾಳಾಗಿ ಹೋಯ್ತು. ಅದಕ್ಕೆ ಪರಿಹಾರವೇ ಇಲ್ಲ." ಹೀಗೆಂದು ಆ ನ್ಯಾಯಾಧೀಶರು ಹೇಳಿದ್ದಾರೆ.—ಈ ಮೊಕದ್ದಮೆಯಲ್ಲಿ ಮಹಾಲಕ್ಷ್ಮಮ್ಮನ ಮೇಲೆ ನಡೆದಿರುವ ಅಘಾತವು ಅವಳ ಜೀವಾವಧಿ ಅದಕ್ಕೆ ಪರಿಹಾರವೇ ಇಲ್ಲವೆಂದು ಹೇಳದಿದ್ದರೂ, ಅತ್ಯಂತ ಕಷ್ಟವೆಂದು ಧಾರಾಳವಾಗಿ ಹೇಳಬೇಕು.

ಅವಳ ಮೇಲೆ ಆಗಿರುವ ಅತ್ಯಾಚಾರ ದೋಷವು ಅವಳ ಮುಂದಿನ ಜೀವನವು ಸಂಕಟಕರವಾದದ್ದೆಂದು ಸುಲಭವಾಗಿ ಊಹಿಸಬಹುದು. ಈ ಮೊಕದ್ದಮೆಯಲ್ಲಿ ಅತ್ಯಂತ ಕಠಿಣವಾದ ಶಿಕ್ಷೆಯನ್ನು ಕೊಡುವುದು ಸೂಕ್ತವಾಗಿದೆ. ಅದರ ಜೊತೆಗೆ ಅವರ ಮೇಲೆ ಜುಲ್ಮಾನೆಯನ್ನು ಹೊರಿಸಿ ಅದರಿಂದ ಅವಳಿಗೆ ಸ್ವಲ್ಪ ಹಣವನ್ನು ಕೊಡಿಸುವ ಏರ್ಪಾಡು ಮಾಡಬೇಕು. ಇಷ್ಟೇ ಅಲ್ಲ, ಆ ಹುಡುಗಿಯು ಸಿವಿಲ್ ಕೋರ್ಟಿನಲ್ಲಿ ದಾವೆ ತಂದು ನ್ಯಾಯವಾದ ನಷ್ಟ ಪರಿಹಾರವನ್ನು ಹೊಂದಬಹುದು. ಈ ಅಪರಾಧಿಗಳು ಎಲ್ಲರೂ ಅಪರಾಧ ಮಾಡಿದವರೇ. ಆದರೂ ಅವರು ಈ ಕೃತ್ಯದಲ್ಲಿ ಎಷ್ಟೆಷ್ಟು ಕೃತ್ಯ ನಡಿಸಿದ್ದಾರೋ ಅಷ್ಟಷ್ಟಕ್ಕೆ ತಕ್ಕ ಹಾಗೆ ಅವರಿಗೆ ಶಿಕ್ಷೆಯನ್ನು ವಿಧಿಸುತ್ತೇನೆ.

ಈ ಅಪರಾಧದಲ್ಲಿ ಮೊದಲನೇ ಅಪರಾಧಿಯು ಬಹಳ ಚಾತುರ್ಯದಿಂದ ಎಲ್ಲ ಸನ್ನಾಹವನ್ನು ಮಾಡಿದ್ದಾನೆ.

ಎಲ್ಲ ತೊಂದರೆಗಳಿಗೂ ಅವನೇ ಮೂಲಕಾರಣ. ನಿಕಾ ಮಾಡುವುದಕ್ಕೆ ಅವನ ಮನೆಯನ್ನು ಕೊಟ್ಟಿದ್ದಾನೆ. ಮದುವೆ ಗಂಡನನ್ನು ಗೊತ್ತುಮಾಡಿದ್ದಾನೆ. ಪೋಲೀಸರು ಪತ್ತೆ ಮಾಡಿ ಆ ಹುಡುಗಿಯನ್ನು ತಂದೆಯ ಮನೆಗೆ ಒಪ್ಪಿಸುವವರೆಗೆ ಅವನ ಮನೆಯಲ್ಲಿ ಅವಳು ಮುಚ್ಚಿಹಲ್ಪಟ್ಟಿದ್ದಳು. ಎರಡನೇ ಅಪರಾಧಿಯು ಸ್ವಲ್ಪ ಕಡಿಮೆಯಾಗಿ ಇಷ್ಟೇ ಜವಾಬ್ದಾರನಾಗಿದ್ದಾನೆ. ೩-೪ ನೇ ಅಪರಾಧಿಗಳು ಅದಕ್ಕಿಂತಲೂ ಸ್ವಲ್ಪ ಕಡಿಮೆಯಾಗಿ ಈ ಕೃತ್ಯದಲ್ಲಿ ಭಾಗಿಗಳಾಗಿದ್ದಾರೆ. ಅದ್ದರಿಂದಲೇ ಮೊದಲನೇ ಅಪರಾಧಿ ಲೆಸ್ ಬಾಬಾ ಸೇಟು ಐದು ವರ್ಷ ಕಠಿಣ ಸಜಾ ಅನುಭವಿಸತಕ್ಕದ್ದು. ಮತ್ತು ೫೦೦ ರೂಪಾಯಿಗಳ ಜುಲ್ಮಾನೆ ಕೊಡತಕ್ಕದ್ದು. ತಪ್ಪಿದಲ್ಲಿ ಒಂದು ವರ್ಷ ಕಠಿಣ ಸಜಾ ಅನುಭವಿಸತಕ್ಕದ್ದು. ೨ ನೇ ಅಪರಾಧಿ ಅಬ್ದುಲ್ ಸಲಾಮನು ೪ ವರ್ಷ ಕಠಿನ ಸಜಾ ಅನುಭವಿಸತಕ್ಕದ್ದು. ೩೦೦ ರೂ. ಗಳ ಜುಲ್ಮಾನೆ ಕೊಡತಕ್ಕದ್ದು. ತಪ್ಪಿದಲ್ಲಿ ೬ ತಿಂಗಳ ಕಠಿಣ ಸಜಾ ಅನುಭವಿಸತಕ್ಕದ್ದು. ೩ ನೇ ಅಪರಾಧಿ ಮಹಮ್ಮದ್ ಹುಸೇನ್ ಮತ್ತು ೪ ನೇ ಅಪರಾಧಿ ಅಬ್ದುಲ್ ಖಾದರು ಇವರಿಬ್ಬರೂ ೩-೩ ವರ್ಷಗಳ ಕಠಿಣ ಸಜಾ ಅನುಭವಿಸತಕ್ಕದ್ದು, ಮತ್ತು ೧೦೦-೧೦೦ ರೂಪಾಯಿ ಜುಲ್ಮಾನೆ ಕೊಡತಕ್ಕದ್ದು. ತಪ್ಪಿದಲ್ಲಿ ೩ ತಿಂಗಳು ಕಠಿಣ ಸಜಾ ಅನುಭವಿಸತಕ್ಕದ್ದು. ಈ ಪೈಕಿ ವಸೂಲಾದ ಜುಲ್ಮಾನೆಯಲ್ಲಿ ಹುಡುಗಿಗೆ ನಷ್ಟಪರಿಹಾರಾರ್ಥವಾಗಿ ೫೦೦ ರೂಪಾಯಿಗಳನ್ನು ಕೊಡತಕ್ಕದ್ದು.

ನ್ಯಾಯಾಧೀಶರು ಆಮೇಲೆ ಪಬ್ಲಿಕ್ ಪ್ರಾಸಿಕ್ಯೂಟರು ಅತಿ ದಕ್ಷತೆಯಿಂದ ಮೊಕದ್ದಮೆಯನ್ನು ನಡೆಸಿದ್ದಕ್ಕಾಗಿಯೂ, ಈ ಮೊಕದ್ದಮೆಯಲ್ಲಿ ಕಾನೂನಿನ ಅಂಶಗಳನ್ನು ಹುಡುಕಿ ಉದಾಹರಿಸಿದ ರೀತಿಗಾಗಿಯೂ, ಅವರನ್ನು ಶ್ಲಾಘಿಸುತ್ತೇನೆ ಎಂದು ಮಿ|| ದೊರಸ್ವಾಮಿ ಅಯ್ಯಂಗೆ ಧನ್ಯವಾದಗಳನ್ನು ಸೂಚಿಸಿದ್ದಾರೆ.

ಸರ್ವಂ ಶಿವಮಿದಂ ಜಗತ್.

(ಕಲ್ಯಾಣಪತ್ರಿಕೆಯ ಅನುವಾದ).

ಅನುವಾದಕ—ದೈವಜ್ಞವಿನೋದ.

ಧ್ಯಾಯೇನ್ನಿತ್ಯಂ ಮಹೇಶಂ ರಜತಗಿರಿನಿಭಂ ಚಾರುಚಂದ್ರಾವತಂಸಂ | ರತ್ನಾಕಲ್ಪೋಜ್ವಲಾಂಗಂ ಪರಶುಮೃಗವರಾಭೀತಿಹಸ್ತಂ ಪ್ರಸನ್ನಂ || ಪದ್ಮಾಸೀನಂ ಸಮಂತಾತ್ ಸ್ತುತಮಮರಗಣೈರ್ವ್ಯಾಘ್ರಕೃತ್ತಿಂ ವಸಾನಮ್ | ವಿಶ್ವಾದ್ಯಂ ವಿಶ್ವವಂದ್ಯಂ ನಿಖಿಲಭಯಹರಂ ಪಂಚವಕ್ತ್ರಂ ತ್ರಿನೇತ್ರಂ || ಕರ್ಪೂರಗೌರಂ ಕರುಣಾವತಾರಂ ಸಂಸಾರಸಾರಂ ಭುಜಗೇಂದ್ರಹಾರಮ್ | ಸದಾವಸಂತಂ ಹೃದಯಾರವಿಂದೇ ಭವಂ ಭವಾನೀಸಹಿತಂ ನಮಾಮಿ || ಕೈಲಾಸಪೀಠಾಸನಮಧ್ಯಸಂಸ್ಥಂ ಭಕ್ತೈಃ ಸನಂದಾದಿಭಿ ಸೇವ್ಯಮಾನಮ್ | ಭಕ್ತಾರ್ತಿದಾವಾನಲಮಪ್ರಮೇಯಂ ಧ್ಯಾಯೇದುಮಾಲಿಂಗಿತವಿಶ್ವರೂಪಮ್ ||

ವೇದ-ಸ್ಮೃತಿ-ಪುರಾಣ-ಶಾಸ್ತ್ರಗಳು ಶ್ರೀ ಸದಾಶಿವನನ್ನು ಅನೇಕ ವಿಧವಾಗಿ ಕೊಂಡಾಡುತ್ತಿದ್ದರೂ ಆ ಸರ್ವಾಂತರ್ಯಾಮಿಯಾದ ಶಿವನ ಸ್ವರೂಪವು ಸಂಪೂರ್ಣಯಾಗಿರುವುದಿಲ್ಲ.

ಬ್ರಹ್ಮಾದಿಕೃಣಪರ್ಯಂತಂ ಯತ್ಕಿಂಚಿದ್ದೃಶ್ಯತೇತ್ರಿಹ |
ತತ್ಸರ್ವಂ ಶಿವ ಏವಾಸ್ತಿ ನಾತ್ರ ಕಾರ್ಯಾ ವಿಚಾರಣಾ ||

ಬ್ರಹ್ಮಾದಿಕೃಣಪರ್ಯಂತವಾಗಿ ಸರ್ವವೂ ಶಿವಮಯವಾಗಿದೆ. ಶಿವಾಂಶವಿಲ್ಲದೆ ಇರತಕ್ಕ ವಸ್ತುವೇ ಇಲ್ಲ. ಸರ್ವವ್ಯಾಪಿಯಾದ ಸದಾಶಿವನು ಸಗುಣಮೂರ್ತಿಯಾಗುವ ಮೊದಲು ನಿರ್ಗುಣನೂ ನಿರವಯವನೂ ನಿರಂಜನನೂ ಆಗಿದ್ದನಲ್ಲವೇ? ಅವನೇ ಇಚ್ಛಾ-ಜ್ಞಾನ-ಕ್ರಿಯಾ-ಶಕ್ತಿತ್ರಯದಿಂದ ಕೂಡಿ ಸಗುಣಮೂರ್ತಿಯಾಗಿ ಸರ್ವ ವಸ್ತುಗಳನ್ನು ಸೃಷ್ಟಿಸಿ ಪೋಷಿಸಿ ಕಡೆಗೆ ನಾಶಗೊಳಿಸುವ ತ್ರಿವಿಧಕಾರ್ಯಗಳನ್ನೂ ಮಾಡುತ್ತಿರುವ ಬಗ್ಗೆ—

ಸೃಷ್ಟೇಃ ಪೂರ್ವಂ ಶಿವಃ ಪ್ರೋಕ್ತಃ ಸೃಷ್ಟೇರ್ಮಧ್ಯೇ ಶಿವಸ್ತಥಾ |
ಸೃಷ್ಟೇರಂತೇ ಶಿವಃ ಪ್ರೋಕ್ತಸ್ತೇನ ಪ್ರೋಕ್ತಃ ಸದಾಶಿವಃ ||

ಹೀಗೆ ಆ ಶಿವನು ಜಗತ್ಕಾರಣಕಾರ್ಯಮೂರ್ತಿಯಾಗಿರುವನು. ಇದರಿಂದ ಜಗತ್ತು ಸತ್ಯವೆಂದು ಸಿದ್ಧವಾಗುವದಲ್ಲದೆ ಆ ಶಿವನು ತ್ರಿಪುಟಿಭೇದಗಳನ್ನೊಳಗೊಂಡಿರುವನು.

ಶಿವಏವ ಪರೋ ದೇವಃ ಶಿವಏವ ಪರಂಪದಮ್ |
ಶಿವಏವ ಪರಾ ಮುಕ್ತಿರ್ನಾತಃ ಪರತರಂ ವ್ರತಂ ||

ಯಾವ ದೇವತೆಗಳಾಗಲಿ, ಯಾವ ಪದವಿಗಳಾಗಲಿ, ಯಾವ ಮುಕ್ತಿಯಾಗಲಿ ಅಥವಾ ಯಾವ ವ್ರತಗಳಾಗಲಿ ಶಿವಶೂನ್ಯವಾಗಿರುವುದಿಲ್ಲ. ಶ್ರೀ ಶಂಕರನೇ ಸಂಸಾರದ ಸೃಷ್ಟಿ-ಸ್ಥಿತಿ-ಲಯಗಳನ್ನುಂಟುಮಾಡಲು ಸಮರ್ಥನಾಗಿ, ಸತ್ವ-ರಜ-ತಮೋಗುಣವಿಶಿಷ್ಟತೆಯಿಂದ ತ್ರಿದೇವರೂಪಧಾರಣಮಾಡಿ ಬ್ರಹ್ಮ-ವಿಷ್ಣು-ರುದ್ರನಾಗಿರುವನು.

ಸೃಷ್ಟಿಕರ್ತಾ ಭವೇದ್ಬ್ರಹ್ಮಾ ಸೃಷ್ಟೇಶ್ಚ ಪಾಲಕೋ ಹರಿಃ |
ಮದೀಯಶ್ಚ ತಥಾಪ್ಯಂಶೋ ಭವಿಷ್ಯತಿ ತದಂತಕೃತ್ ||

ನಮ್ಮ ಅಂತರಿಂದ್ರಿಯ ಬಾಹ್ಯೇಂದ್ರಿಯಗಳಿಗೆ ತೋರುವ ಸಕಲ ಪದಾರ್ಥಗಳಲ್ಲಿಯೂ ಶಿವಸಂಬಂಧವದೆ—

ಯತ್ಕಿಂಚಿದ್ದೃಶ್ಯತೇ ದೃಶ್ಯಂ ವರ್ಣ್ಯತೇ ಶ್ರೂಯತೇ ಚ ಯತ್ |
ತತ್ಸರ್ವಂ ಶಿವರೂಪಂ ಚ ನಾನ್ಯದಸ್ತೀತಿ ಕಿಂಚನ ||
ದೃಶ್ಯತೇ ಶ್ರೂಯತೇ ಯದ್ಯತ್ತತ್ತದ್ವಿದ್ಧಿ ಶಿವಾತ್ಮಕಂ ||

ಶಿವಮಯವಾದ ಪ್ರಪಂಚದಲ್ಲಿ ತೋರುವ ಎಲ್ಲೆಡೆಯಲ್ಲಿಯೂ ಶಿವನೇ ಇರುವನು. (ಶಿವೇತರ ಜಗತ್ತೊಂದು ಬೇರೊಂದಿದ್ದರಲ್ಲವೇ ಶಿವನಿಲ್ಲದಿರುವುದು?) ಈ ಪರಶಿವನ ವ್ಯಾಪಕತೆಯು ಜಗತ್ತಿಗೆ ಹೀಗೆ ತೋರುವುದು—

ಪರಾನಂದಕರಂ ಲಿಂಗಂ ವಿಶುದ್ಧಂ ಶಿವಮಕ್ಷರಮ್ |
ನಿಷ್ಕಲಂ ಸರ್ವಗಂ ಜ್ಞೇಯಂ ಯೋಗಿನಾಂ ಹೃದಿ ಸಂಸ್ಥಿತಂ ||

ಯೋಗಿಜನ ಹೃದಯದಲ್ಲಿ ವಿರಾಜಿಸುವನಾಗಿಯೂ, ಸಚ್ಚಿದಾನಂದಸ್ವರೂಪನಾಗಿಯೂ, ಲಿಂಗರೂಪನಾಗಿಯೂ, ವಿಶುದ್ಧಸ್ವರೂಪನಾಗಿಯೂ, ಇರುವ ಪರಶಿವನು ಯೋಗಿಗಳ ಹೃದಯದಲ್ಲಿ ತೋರುವನು.

ಶಿವನಾಮ ವಿಭೂತಿಶ್ಚ ರುದ್ರಾಕ್ಷಸ್ತ್ರಿತಯಂ ಶುಭಃ |
ಏತತ್ತ್ರಯಂ ಶರೀರೇ ಚ ಯಸ್ಯ ತಿಷ್ಠತಿ ನಿತ್ಯಶಃ ||
ತಸ್ಯೈವ ದರ್ಶನಂ ಲೋಕೇ ದುರ್ಲಭಂ ಪಾಪಹಾರಕಂ ||

ಶಿವಭಾವ ಪ್ರಕಾಶಗೊಳಿಸುವ ಶಿವನಾಮ ಪಾರಾಯಣ, ಶಿವನ ಮೈ ಬೆಳಗೊಳಿಸಿದ ವಿಭೂತಿ, ರುದ್ರಾಕ್ಷಗಳು ಯಾರ ಶರೀರದಲ್ಲಿ ಯಾವಾಗಲೂ ವಿರಾಜಿಸುವವೋ ಆ ಮಹಾತ್ಮರ ದರ್ಶನದಿಂದ ಸರ್ವಪಾಪಗಳೂ ನಾಶವಾಗುವವು. ಈ ಪ್ರಕಾರ ಶಿವಮಯವಾದ ಜಗತ್ತಿನಲ್ಲಿ ಆ ಶಿವನನ್ನು ಕಾಣಲು ಭಕ್ತ್ಯಾದಿ ಸಾಧನಕ್ರಿಯೆಗಳು ಅವಶ್ಯವಾಗಿರಬೇಕು. ಎಲ್ಲಾ ಕಟ್ಟಿಗೆಗಳಲ್ಲಿ ಅಗ್ನಿಯು ಇದ್ದರೂ ಅದನ್ನು ಹೊರಗೆಡವಲು ಒಂದಕ್ಕೊಂದು ಘರ್ಷಣವಾಗುವಂತೆ ಶಿವನು ಸರ್ವವ್ಯಾಪಕನಾಗಿದ್ದರೂ ಜ್ಞಾನ ಕ್ರಿಯೆಗಳಿಂದ ತಿಳಕೊಳ್ಳಬೇಕಾಗುವದು. ಆಗ್ಗೆ ತಾನೇ ಶಿವನಾಗುವನು. ಆಗ 'ಸರ್ವಂ ಶಿವಮಿದಂ ಜಗತ್' ಎಂಬುದು ಸಿದ್ಧವಾಗುವದು.

ಮೂಲಿಕೆಯ ಪ್ರಭಾವ.

ಜೀವಿತವನ್ನು ಮುಂದರಿಸುವ ಮಹಾಶಕ್ತಿ.

ಲೋಕದಲ್ಲಿ ಅತಿ ಹೆಚ್ಚಿನ ವಯಸ್ಕನೆಂದು ಪ್ರಸಿದ್ಧನಾದ ಚೀನಾದೇಶದ ಲಿ ಚೇಂಗ್ ಯುನನು ಇತ್ತಲಾಗಿ ಮೃತನಾಗಿರುವನು—ಇವನು ೧೬೭೮ರಲ್ಲಿ ಹುಟ್ಟಿ ೨೫೬ ವರ್ಷ ಬದುಕಿರುವನೆಂಬುದಕ್ಕೆ ಸಾಕಷ್ಟು ದಾಖಲೆಗಳಿವೆ. ಮತ್ತು ಹಲವು ರಾಷ್ಟ್ರಗಳ ವಿಜ್ಞಾನಶಾಸ್ತ್ರಜ್ಞರು ಲಿ ಚೆಂಗನನ್ನೂ, ಅವನ ವಯಸ್ಸಿನ ವಿಷಯದಲ್ಲಿ ದಾಖಲೆಗಳನ್ನೂ ಪರೀಕ್ಷಿಸಿ ಸಮಾಧಾನ ಹೊಂದಿದ್ದಾರೆ. ಚೇಂಗನಿಗ ೨೪ ನೇ ಹೆಂಡತಿಯು ಈಗ ೬೦ ವರ್ಷದ ವಿಧವೆಯಾಗಿರುವಳು. ಅವನು ತನ್ನ ಕೊನೆಯ ಕೆಲವು ವರ್ಷಗಳನ್ನು, ವೃದ್ಧಾಪ್ಯದಲ್ಲಿಯೂ ಉತ್ಸಾಹ, ಚಟುವಟಿಕೆಯಿಂದಿರುವುದು ಹೇಗೆಂಬ ವಿಷಯದ ಮೇಲೆ ಭಾಷಣಗಳನ್ನೀಯುವುದರಲ್ಲಿಯೂ ಕಳೆದನು. ಮುಖ್ಯವಾಗಿ ಹೃದಯವನ್ನು ಶಾಂತವಾಗಿಟ್ಟುಕೊಳ್ಳಬೇಕು. ಆಮೆಯಂತೆ ಕೂಡು, ಪಾರಿವಾಳದಂತೆ ಚುರುಕಾಗಿ ನಡೆದು, ನಾಯಿಯಂತೆ ಮಲಗಬೇಕೆಂದೇ ಚೇಂಗನ ಬೋಧನೆಯ ಸಾರ. ಅವನು ನಿರಂತರವೂ ರಸಾಯನ ಶಾಸ್ತ್ರಾಭ್ಯಾಸನಿರತನಾಗಿ, ಬೇರೆ ಬೇರೆ ಗಿಡಮೂಲಿಕೆಗಳನ್ನು ಸಂಗ್ರಹಿಸಿ, ಜೀವಾಮೃತವನ್ನೇ ಕಂಡುಹಿಡಿದಿರುವೆನೆಂದು ಹೇಳುತ್ತಿದ್ದನು. ಅವನನ್ನು ಪರೀಕ್ಷಿಸಿದ ವಿಜ್ಞಾನ ಶಾಸ್ತ್ರಜ್ಞರು, 'ಹೈಡ್ರೊಕೊಟೈಲ್ ಏಸಿಯಾಟಿಕ' ಎಂಬ ಹಿಂದುದೇಶದ ಗಿಡಮೂಲಿಕೆಯೇ ಅವನ ಇಷ್ಟು ದೀರ್ಘ ಕಾಲದ ಜೀವನಕ್ಕೆ ಕಾರಣವೆಂದು ಅಭಿಪ್ರಾಯಪಡುತ್ತಾರೆ. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳಿಂದಲ್ಲ, ೧೧ ತಲಾಂತರದವರೆಗಣ ಚೇಂಗನ ಸಂತಾನದವರು ೧೮೦ ಮಂದಿ ಇರುವರು. ಸಾಯುವವರೆಗೂ ಅವನಿಗೆ ಸರಿಯಾಗಿ ಕಣ್ಣು ತೋರುತಿದ್ದು ವಿಚಿತ್ರ ಸ್ಮರಣಶಕ್ತಿಯುಳ್ಳವನಾಗಿದ್ದನು. ಚೇಂಗನು ಸತ್ತ ಮೇಲೆ ಅವನು ಲೋಕದ ಅತಿ ವೃದ್ಧನೆಂದು ಚೀನದ ದೊಡ್ಡ ದೊಡ್ಡ ಸೇನಾಧಿಕಾರಿಗಳೂ ನೌಕರರೂ ಅವನ ಕಳೇಬರವನ್ನು ಬಹಳ ಗೌರವಿಸಿದರು.

(ಚೇಂಗನು ಮೃತನಾದ ಮೇಲೆ ಈಗ ಲೋಕದ ಮುದುಕನೆಂದು ಹೆಸರುಪಡೆದವನು.) ಟರ್ಕಿಯ ಜಾರೋ ಅಘಾನೆಂಬವನು. ಇವನು ಇನ್ನೂ ಸಶಕ್ತನಾಗಿಯೇ ಇದ್ದು ತನ್ನ ಪ್ರತಿನಿತ್ಯದ ಕೆಲಸವನ್ನು ಮಾಡುತ್ತಿರುವನು. (ಲೋಕದ ಬೇರೆ ಬೇರೆ ರಾಷ್ಟ್ರಗಳ ಜನನಮರಣ ರಿಜಿಸ್ಟರುಗಳನ್ನು ಪರೀಕ್ಷಿಸಿದ ಪಕ್ಷದಲ್ಲಿ, ಶತಮಾನದ ಅವಧಿಮೀರಿ ಬಾಳಿದ ಹಲವು ಉದಾಹರಣೆಗಳು ದೊರೆಯಬಹುದು. ಇಂಗ್ಲೆಂಡಿನ ವಿನ್ನಿಂಗ್ಟನ್ ಎಂಬಲ್ಲಿದ್ದ ಥಾಮಸ್ ಪಾರ್ ಎಂಬವನು ೧೫೨ ವರ್ಷಗಳ ವರೆಗೆ ಬದುಕಿದ್ದನು. ಇವನು ೧೪೮೩ರಲ್ಲಿ ಹುಟ್ಟಿ ೪ನೇ ಮತ್ತು ೫ನೇ ಎಡ್ವರ್ಡ್ ರಾಜರುಗಳ ಕಾಲದಲ್ಲಿಯೂ, ಅನಂತರ ೩ನೇ ರಿಚರ್ಡ್, ೭ನೇ ಹೆನ್ರಿ, ೮ನೇ ಹೆನ್ರಿ, ೬ನೇ ಎಡ್ವರ್ಡ್, ರಾಣಿ ಮೇರಿ, ರಾಣಿ ಎಲಿಜಬೆತ್ ಮತ್ತು ೧ನೇ ಜೇಮ್ಸರ ಆಳ್ವಿಕೆಯಲ್ಲಿಯೂ ಬಾಳಿಕೊಂಡಿದ್ದು ೧ನೇ ಚಾರ್ಲ್ಸರ ಕಾಲದಲ್ಲಿ ಮೃತನಾದನು. ಇವನು ದೇಶದ ಅತಿ ಹಳಬನೆಂದು ಅರಸರಿಗೊಪ್ಪಿಸಲ್ಪಟ್ಟನು. ಥಾಮಸ್ ಪಾರನು ೮೦ನೇ ವಯಸ್ಸಿನಲ್ಲಿ ೪೦ ವರ್ಷವಾದವರಂತಿದ್ದು ಚಿಕ್ಕ ಪ್ರಾಯದ ಸ್ತ್ರೀಯೊಬ್ಬಳನ್ನು ಮದುವೆಯಾದನು. ೩೦ ವರ್ಷವಾದ ಮೇಲೆ ಅವಳು ಮೃತಳಾದಾಗ ಅವನು ಕೂಡಲೆ ತನ್ನ ೧೧೧ ನೇ ವಯಸ್ಸಿನಲ್ಲಿ ಇನ್ನೊಂದು ಮದುವೆಮಾಡಿಕೊಂಡನು. ಥಾಮಸನು ಲಂಡನ್ನಿಗೆ ಮಾಡಿದ ಪ್ರಯಾಣದ ಮತ್ತು ಅಲ್ಲಿ ನಡೆದ ಆತನ ಪ್ರದರ್ಶನದ ಉತ್ತೇಜಕತೆಯಿಂದ ಮೃತನಾದನು. ಸಾಯುವಾಗ ಡಾಕ್ಟರ್ ವಿಲಿಯಮ್ ಹಾರ್ವೆಯೆಂಬವರು ಅವನನ್ನು ಪರೀಕ್ಷಿಸಿದಾಗ ಅವನಲ್ಲಿ ಮುದಿತನ ಚಿನ್ಹೆಗಳೇನೂ ತೋರಿಬರಲಿಲ್ಲವಂತೆ!

ಕೊರೆಡಿಚ್ ಎಂಬಲ್ಲಿಯ ಸೈಂಟ್ ಲಯನಾರ್ಡ್ ಚರ್ಚಿನ ರಿಜಿಷ್ಟರ್ ಪ್ರಕಾರ ಥಾಮಸ್ ಕಾರ್ನೆಂಬವನೊಬ್ಬನು ೧೫೨೮ರಲ್ಲಿ ಲಂಡನ್ನಿನಲ್ಲಿ ಹುಟ್ಟಿ ೧೫೮೮ರಲ್ಲಿ ತನ್ನ ೨೦೭ನೆಯ ವರ್ಷದಲ್ಲಿ ಮೃತನಾಗಿರುವನೆಂದು ತಿಳಿದುಬರುತ್ತದೆ. ಇಂಗ್ಲೆಂಡಿನಲ್ಲಿ ಅತ್ಯಂತ ವೃದ್ಧರಾಗಿ ಬಾಳಿದ ಇತರ ಜನರೆಂದರೆ ೧೪೦ ವರ್ಷವಾಗಿದ್ದ ಡೆಸ್ಮೊಂಡಿನ ಕೌಂಟೆಸಳು ೧೪೬ ನೇ ವರ್ಷದಲ್ಲಿ ಮೃತವಾದ ವಿಕ್ಟ್ಸಿನ ಕೌಂಟೆಸಳು ೧೬೭ ವರ್ಷ ಬಾಳಿದ ಜೋನ್ ವಾರೆನ್ ಮತ್ತು ೧೪೧ನೇ ವಯಸ್ಸಿನಲ್ಲಿ ಸತ್ತ ಕನೆಲ್ ವಿನ್‌ಸ್ಲೋ ಎಂಬವರು. ಲೋಕದ ಬೇರೆ ಬೇರೆ ಭಾಗಗಳಲ್ಲಿ ಅತಿ ಹೆಚ್ಚು ವರ್ಷ ಬಾಳಿದ ಹಲವು ಉದಾಹರಣೆಗಳು ತಿಳಿದುಬಂದಿವೆ. ರಷ್ಯದ ವಿಕಟರಿ ಸೊಕ್ತ ಎಂಬಲ್ಲಿ ಯಾವನೋ ಒಬ್ಬನಿಗೆ ೨೦೦ ವರ್ಷವಾಗಿದ್ದನಂತೆ. ಮೆಕ್ಸಿಕೋದಲ್ಲಿ ಒಬ್ಬನು ೧೯೦ ವರ್ಷವಾದವನಿದ್ದನಂತೆ. ಆಸ್ಟ್ರೇಲಿಯದ ಮೂಲನಿವಾಸಿಗಳಲ್ಲಿ ಕೆಲವರು ೩೦೦ ವರ್ಷ ಬಾಳಿರುವವರೂ ಇರುವರೆಂದೂ ತಿಳಿದುಬರುತ್ತದೆ. ಹಿಂದುದೇಶದ ಸಾಧುಗಳು ಕೆಲವರು ಬಹು ದೀರ್ಘಕಾಲದಿಂದ ಬಾಳಿಕೊಂಡಿರುವರೆಂದು ಪ್ರಸಿದ್ಧಿಪಡೆದಿರುತ್ತಾರೆ. ಆದರೆ ಈಗ ಕುರಿತು ಸರಿಯಾದ ದಾಖಲೆಗಳೇನೂ ಇಲ್ಲದಿರುವುದರಿಂದ ಅದನ್ನು ಋಜುಪಡಿಸುವುದು ಅಸಾಧ್ಯವಾಗಿದೆ.

ಈಗ ನಾಗರಿಕ ದೇಶಗಳಲ್ಲಿ ಜನತೆಯ ಸರಾಸರಿ ಜೀವಿತಾವಧಿಯು ಕಳೆದ ೩೦೦ ವರ್ಷಗಳಲ್ಲಿ ಕ್ರಮೇಣ ಅಧಿಕವಾಗುತ್ತ ನಡೆದಿದೆ. ಇದರಿಂದ ಬ್ರಿಟಿಷ್ ವಿಮಾ ಕಂಪೆನಿಗಳು ತಮ್ಮ ವಿಮೆಯ ಪಟ್ಟಿಯನ್ನೇ ಮಾರ್ಪಡಿಸಬೇಕಾಗಿ ಬಂದಿದೆ. ೧೫ ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಹುಟ್ಟಿದ ಮಗುವಿನ ಸರಾಸರಿ ಜೀವಿತಾವಧಿಯು ಕೇವಲ ೨೦ ವರ್ಷವಾಗಿತ್ತು. ೧೮ನೇ ಶತಮಾನದಲ್ಲಿ ಅದು ೩೬ಕ್ಕೇರಿತು. ೧೯ನೇ ಶತಮಾನದಲ್ಲದು ೪೦ಕ್ಕೇರಿತು. ಈಗ ಹುಟ್ಟಿ ಒಂದು ವರ್ಷ ಬಾಳಿ ಬಂದ ಮಗುವು ೬೦ನೇ ವಯಸ್ಸಿನ ವರೆಗೆ ಬಾಳುವ ಸಂಭವವೇ ಹೆಚ್ಚಾಗಿದೆ. ಈ ಶತಮಾನದ ಆರಂಭದಲ್ಲಿ ಇಂಗ್ಲೆಂಡಿನಲ್ಲಿ ೭ರಲ್ಲಿ ಪ್ರತಿಯೊಂದು ಮಗುವು ಒಂದುವರ್ಷದೊಳಗೇನೇ ಸಾಯುತ್ತಿತ್ತು. ಈಗ ೧೪ ಮಕ್ಕಳಲ್ಲಿ ಒಂದು ಮಾತ್ರ ಸಾಯುವಂತಾಗಿರುವುದು. ಈ ಪರಿಸ್ಥಿತಿಯು ಮುಂದುವರಿದಪಕ್ಷದಲ್ಲಿ ಈ ಶತಮಾನದ ಅಂತ್ಯದೊಳಗೆ ಸರ್ವಸಾಧಾರಣ ಪ್ರತಿಯೊಬ್ಬ ಸ್ತ್ರೀಪುರುಷರು ಸರಾಸರಿ ೧೦೦ ವರ್ಷ ಬಾಳುವಂತಾಗಬಹುದೆಂದು ವೈದ್ಯಶಾಸ್ತ್ರಜ್ಞರ ಅಭಿಪ್ರಾಯವಿರುತ್ತದೆ. (ನವಯುಗ).

ಜರ್ಮನಿಯ ಪ್ರಾಣಿಹತ್ಯಾನಿರೋಧಶಾಸನ!

ಜರ್ಮನ್ ಸರಕಾರದವರು ಮೂಕಪ್ರಾಣಿಗಳ ರಕ್ಷಣಾರ್ಥವಾಗಿ ಒಂದು ಹೊಸ ಕಾನೂನನ್ನು ಮಾಡಿರುವರು. ಈ ಕಾನೂನಿನ ಪ್ರಕಾರವಾಗಿ ಸರಕಾರದ ಅಪ್ಪಣೆಯಿಲ್ಲದೆ ಪ್ರಾಣಿಹತ್ಯೆಯನ್ನು ಮಾಡಿದವರಿಗೆ ೬ ತಿಂಗಳ ಕಠಿಣಶಿಕ್ಷೆಯೂ, ಪ್ರಾಣಿಗಳನ್ನು ಹಿಂಸಿಸಿ ಮಿತಿಮೀರಿ ದುಡಿಸುವವರಿಗೆ ಎರಡುವರ್ಷ ಶಿಕ್ಷೆ ಅಥವಾ ಗಡೀಪಾರಿನ ಶಿಕ್ಷೆಯೂ ವಿಧಿಸಲ್ಪಡುವದು. ನಾಯಿಗಳಿಗೆ ಬೇಟೆಯಾಡುವದನ್ನು ಕಲಿಸುವದಕ್ಕಾಗಿ ಬೆಕ್ಕು, ನರಿ ಮೊದಲಾದ ಪ್ರಾಣಿಗಳನ್ನು ಉಪಯೋಗಿಸುವವರಿಗೂ ಇದೇ ಕಾನೂನು ಅನ್ವಯಿಸುವದು. ಆದರೆ ವಿಜ್ಞಾನಶಾಸ್ತ್ರಪ್ರಯೋಗಸಂಸ್ಥೆಗಳಿಗೂ, ಸಾರ್ವಜನಿಕ ಸಂಸ್ಥೆಗಳಿಗೂ, ಶೋಧನಾರ್ಥವಾಗಿ ಸಜೀವ ಪ್ರಾಣಿಗಳನ್ನು ಉಪಯೋಗಿಸುವ ಅಧಿಕಾರವು ಕೊಡಲ್ಪಟ್ಟಿರುವದು.

ಶಾಸ್ತ್ರಿಗಳು ಬೇಕಾಗಿದೆ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿ ತಾ|| 20—11—1933 ನೆಯ ದಿವಸ ಈ ಗ್ರಾಮದ ಸರ್ವಜನ ಸಮ್ಮತಿಯಿಂದ ಸಂಸ್ಕೃತಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಈ ಪಾಠಶಾಲೆಗೆ ವೈದಿಕ, ಜ್ಯೋತಿಷ, ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದೆ. 20 ರೂ. ಗಳಿಂದ 30 ರೂ. ಗಳ ವರೆಗೆ ವೇತನವು ದೊರೆಯುವುದು. ಬರಲಪೇಕ್ಷೆಯುಳ್ಳವರು ಈ ಪಾಠಶಾಲೆಯ ವ್ಯವಸ್ಥಾಪಕರಾದ ಶ್ರೀವರ್ಧ ವೇ|| ಮಿರಾಳಘಟ್ಟದ ಮಠದ ಚಾಗಟಗೇರಿ ಸಣ್ಣ ವೀರಪ್ಪಯ್ಯನವರ ಹೆಸರಿಗೆ ಡಿಸಂಬರ್ ತಿಂಗಳೊಳಗಾಗಿ ಬರೆದುಕೊಳ್ಳಬೇಕು.

ಚಟ್ರಿಕಿ ಕೊಟ್ರಬಸಪ್ಪ,
ಪಾಠಶಾಲಾ ಸೆಕ್ರೆಟರಿ, ಕೊಟ್ಟೂರು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚು—
ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 6

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೋ. ನಂ. 1246. ಮದರಾಸು.
K. N. BENSON & Co.,
[5] P. B. 1246, MADRAS.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್ಮೆಂಟ್ಸಿನಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಘಂಟೆಯನ್ನು ತೋರಿಸುವುವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.



ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
[5] THE CITY MART,
168, China Bazaar, MADRAS

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 15

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟಿವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [49]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ಟ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತರತರದ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1, 1.8.0, 7-0-0

ಹೂಪಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಸೂಚಿಪತ್ರಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [14]

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ಸೇವಕ, ದಮ್ ರೋಗಗಳನ್ನು, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0 ; 1 ಡಬ್ಬಿ ಮಾತ್ರೆಗೆ 1—0—0 ; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0 ; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0 ; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0 ; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0 ; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (4)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

(3ನೆಯ ಪುಟದಿಂದ ಮುಂದುವರಿದುದು.)

ಹೀಗೇ ಎಂಬುದನ್ನು ಹೇಳುವುದೂ ಈಗ ತೀರ ಅನವಶ್ಯಕ. ಈ ವಿಷಯದಲ್ಲಿ ಯಾವ ಅಭಿಪ್ರಾಯವನ್ನೂ ನಾವು ಕೊಡುವುದಿಲ್ಲ.

ಈ ಅಪರಾಧಕ್ಕೆ ಎಂಥ ಶಿಕ್ಷೆಯನ್ನು ಮಾಡಬೇಕೆಂಬ ವಿಷಯದಲ್ಲಿ ಅಲಹಾಬಾದ್ ಹೈಕೋರ್ಟಿನ ತೀರ್ಪಿನಂತೆ, ಇಂಥ ಅಪರಾಧಗಳಿಗೆ ಕಠಿನತರವಾದ ಶಿಕ್ಷೆಯನ್ನು ಕೊಡಬೇಕೆಂಬುದೇ ನ್ಯಾಯವಾದದ್ದು. "ಅಪರಾಧಿಯ ಕೃತ್ಯದಿಂದ ಹುಡುಗಿಯ ಬದುಕೇ ಹಾಳಾಗಿ ಹೋಯಿತು. ಅದಕ್ಕೆ ಪರಿಹಾರವೇ ಇಲ್ಲ." ಹೀಗೆಂದು ಆ ನ್ಯಾಯಾಧೀಶರು ಹೇಳಿದ್ದಾರೆ.—ಈ ಮೊಕದ್ದಮೆಯಲ್ಲಿ ಮಹಾಲಕ್ಷ್ಮಮ್ಮನ ಮೇಲೆ ನಡೆದಿರುವ ಅಘಾತವು ಅವಳ ಜೀವಾವಧಿ ಅದಕ್ಕೆ ಪರಿಹಾರವೇ ಇಲ್ಲವೆಂದು ಹೇಳದಿದ್ದರೂ, ಅತ್ಯಂತ ಕಷ್ಟವೆಂದು ಧಾರಾಳವಾಗಿ ಹೇಳಬೇಕು.

ಅವಳ ಮೇಲೆ ಆಗಿರುವ ಅತ್ಯಾಚಾರ ದೋಷವು ಅವಳ ಮುಂದಿನ ಜೀವನವು ಸಂಕಟಕರವಾದದ್ದೆಂದು ಸುಲಭವಾಗಿ ಊಹಿಸಬಹುದು. ಈ ಮೊಕದ್ದಮೆಯಲ್ಲಿ ಅತ್ಯಂತ ಕಠಿಣವಾದ ಶಿಕ್ಷೆಯನ್ನು ಕೊಡುವುದು ಸೂಕ್ತವಾಗಿದೆ. ಅದರ ಜೊತೆಗೆ ಅವರ ಮೇಲೆ ಜುಲ್ಮಾನೆಯನ್ನು ಹೊರಿಸಿ ಅದರಿಂದ ಅವಳಿಗೆ ಸ್ವಲ್ಪ ಹಣವನ್ನು ಕೊಡಿಸುವ ಏರ್ಪಾಡು ಮಾಡಬೇಕು. ಇಷ್ಟೇ ಅಲ್ಲ. ಆ ಹುಡುಗಿಯು ಸಿವಿಲ್ ಕೋರ್ಟಿನಲ್ಲಿ ದಾವೆ ತಂದು ನ್ಯಾಯವಾದ ನಷ್ಟ ಪರಿಹಾರವನ್ನು ಹೊಂದಬಹುದು. ಈ ಅಪರಾಧಿಗಳು ಎಲ್ಲರೂ ಅಪರಾಧ ಮಾಡಿದವರೇ. ಆದರೂ ಅವರು ಈ ಕೃತ್ಯದಲ್ಲಿ ಎಷ್ಟೆಷ್ಟು ಕೃತ್ಯ ನಡಿಸಿದ್ದಾರೋ ಅಷ್ಟಷ್ಟಕ್ಕೆ ತಕ್ಕ ಹಾಗೆ ಅವರಿಗೆ ಶಿಕ್ಷೆಯನ್ನು ವಿಧಿಸುತ್ತೇನೆ.

ಈ ಅಪರಾಧದಲ್ಲಿ ಮೊದಲನೇ ಅಪರಾಧಿಯು ಬಹಳ ಚಾತುರ್ಯದಿಂದ ಎಲ್ಲ ಸನ್ನಾಹವನ್ನು ಮಾಡಿದ್ದಾನೆ.

ಎಲ್ಲ ತೊಂದರೆಗಳಿಗೂ ಅವನೇ ಮೂಲಕಾರಣ. ನಿಕಾ ಮಾಡುವುದಕ್ಕೆ ಅವನ ಮನೆಯನ್ನು ಕೊಟ್ಟಿದ್ದಾನೆ. ಮದುವೆ ಗಂಡನನ್ನು ಗೊತ್ತುಮಾಡಿದ್ದಾನೆ. ಪೋಲೀಸರು ಪತ್ತೆ ಮಾಡಿ ಆ ಹುಡುಗಿಯನ್ನು ತಂದೆಯ ಮನೆಗೆ ಒಪ್ಪಿಸುವವರೆಗೆ ಅವನ ಮನೆಯಲ್ಲಿ ಅವಳು ಮುಚ್ಚಿಡಲ್ಪಟ್ಟಿದ್ದಳು. ಎರಡನೇ ಅಪರಾಧಿಯು ಸ್ವಲ್ಪ ಕಡಮೆಯಾಗಿ ಇಷ್ಟೇ ಜವಾಬ್ದಾರನಾಗಿದ್ದಾನೆ. ೩-೪ ನೇ ಅಪರಾಧಿಗಳು ಅದಕ್ಕಿಂತಲೂ ಸ್ವಲ್ಪ ಕಡಿಮೆಯಾಗಿ ಈ ಕೃತ್ಯದಲ್ಲಿ ಭಾಗಿಗಳಾಗಿದ್ದಾರೆ. ಅದ್ದರಿಂದಲೇ ಮೊದಲನೇ ಅಪರಾಧಿ ಲೀಕ್ ಬಾಬಾ ಸೇಟು ಐದು ವರ್ಷ ಕಠಿಣ ಸಜಾ ಅನುಭವಿಸತಕ್ಕದ್ದು. ಮತ್ತು ೫೦೦ ರೂಪಾಯಿಗಳ ಜುಲ್ಮಾನೆ ಕೊಡತಕ್ಕದ್ದು. ತಪ್ಪಿದಲ್ಲಿ ಒಂದು ವರ್ಷ ಕಠಿಣ ಸಜಾ ಅನುಭವಿಸತಕ್ಕದ್ದು. ೨ ನೇ ಅಪರಾಧಿ ಅಬ್ದುಲ್ ಸಲಾಮನು ೪ ವರ್ಷ ಕಠಿನ ಸಜಾ ಅನುಭವಿಸತಕ್ಕದ್ದು. ೩೦೦ ರೂ. ಗಳ ಜುಲ್ಮಾನೆ ಕೊಡತಕ್ಕದ್ದು. ತಪ್ಪಿದಲ್ಲಿ ೬ ತಿಂಗಳ ಕಠಿಣ ಸಜಾ ಅನುಭವಿಸತಕ್ಕದ್ದು. ೩ ನೇ ಅಪರಾಧಿ ಮಹಮ್ಮದ್ ಹುಸೇನ್ ಮತ್ತು ೪ ನೇ ಅಪರಾಧಿ ಅಬ್ದುಲ್ ಖಾದರು ಇವರಿಬ್ಬರೂ ೩-೩ ವರ್ಷಗಳ ಕಠಿಣ ಸಜಾ ಅನುಭವಿಸತಕ್ಕದ್ದು, ಮತ್ತು ೧೦೦-೧೦೦ ರೂಪಾಯಿ ಜುಲ್ಮಾನೆ ಕೊಡತಕ್ಕದ್ದು. ತಪ್ಪಿದಲ್ಲಿ ೩ ತಿಂಗಳು ಕಠಿಣ ಸಜಾ ಅನುಭವಿಸತಕ್ಕದ್ದು. ಈ ಪೈಕಿ ವಸೂಲಾದ ಜುಲ್ಮಾನೆಯಲ್ಲಿ ಹುಡುಗಿಗೆ ನಷ್ಟಪರಿಹಾರಾರ್ಥವಾಗಿ ೫೦೦ ರೂಪಾಯಿಗಳನ್ನು ಕೊಡತಕ್ಕದ್ದು.

ನ್ಯಾಯಾಧೀಶರು ಅಮೀರ ಹಬೀಬ್ ಪ್ರಾಸಿಕ್ಯೂಟರು ಅತಿ ದಕ್ಷತೆಯಿಂದ ಮೊಕದ್ದಮೆಯನ್ನು ನಡೆಸಿದ್ದಕ್ಕಾಗಿಯೂ, ಈ ಮೊಕದ್ದಮೆಯಲ್ಲಿ ಕಾನೂನಿನ ಅಂಶಗಳನ್ನು ಹುಡುಕಿ ಉದಾಹರಿಸಿದ ರೀತಿಗಾಗಿಯೂ, ಅವರನ್ನು ಶ್ಲಾಘಿಸುತ್ತೇನೆ ಎಂದು ಮಿ|| ದೊರಸ್ವಾಮಿ ಅಯ್ಯರಿಗೆ ಧನ್ಯವಾದಗಳನ್ನು ಸೂಚಿಸಿದ್ದಾರೆ.

ಸರ್ವಂ ಶಿವಮಿದಂ ಜಗತ್.

(ಕಲ್ಯಾಣಪತ್ರಿಕೆಯ ಅನುವಾದ).

ಅನುವಾದಕ—ದೈವಜ್ಞ ವಿನೋದ.

ಧ್ಯಾಯೇನ್ನಿತ್ಯಂ ಮಹೇಶಂ ರಜತಗಿರಿನಿಭಂ ಚಾರುಚಂದ್ರಾವತಂಸಂ | ರತ್ನಾಕಲ್ಪೋಜ್ಜ್ವಲಾಂಗಂ ಪರಶುಮೃಗವರಾಭೀತಿಹಸ್ತಂ ಪ್ರಸನ್ನಂ || ಪದ್ಮಾಸೀನಂ ಸಮಂತಾತ್ ಸ್ತುತಮಮರಗಣೈರ್ವ್ಯಾಘ್ರಕೃತ್ತಿಂ ವಸಾನಮ್ | ವಿಶ್ವಾದ್ಯಂ ವಿಶ್ವವಂದ್ಯಂ ನಿಖಿಲಭಯಹರಂ ಪಂಚವಕ್ತ್ರಂ ತ್ರಿನೇತ್ರಂ || ಕರ್ಪೂರಗೌರಂ ಕರುಣಾವತಾರಂ ಸಂಸಾರಸಾರಂ ಭುಜಗೇಂದ್ರಹಾರಮ್ | ಸದಾವಸಂತಂ ಹೃದಯಾರವಿಂದೇ ಭವಂ ಭವಾನೀಸಹಿತಂ ನಮಾಮಿ || ಕೈಲಾಸಪೀಠಾಸನಮಧ್ಯಸಂಸ್ಥಂ ಭಕ್ತೈಸ್ಸನಂದಾದಿಭಿಃ ಸೇವ್ಯಮಾನಮ್ | ಭಕ್ತಾರ್ತಿದಾವಾನಲಮಪ್ರಮೇಯಂ ಧ್ಯಾಯೇದುಮಾಲಿಂಗಿತವಿಶ್ವರೂಪಮ್ ||

ವೇದ-ಸ್ಮೃತಿ-ಪುರಾಣ-ಶಾಸ್ತ್ರಗಳು ಶ್ರೀ ಸದಾಶಿವನನ್ನು ಅನೇಕ ವಿಧವಾಗಿ ಕೊಂಡಾಡುತ್ತಿದ್ದರೂ ಆ ಸರ್ವಾಂತರ್ಯಾಮಿಯಾದ ಶಿವನ ಸ್ವರೂಪವು ಸಂಪೂರ್ಣಯಾಗಿರುವುದಿಲ್ಲ.

ಬ್ರಹ್ಮಾದಿತೃಣಪರ್ಯಂತಂ ಯತ್ಕಿಂಚಿದ್ದೃಶ್ಯತೇತ್ವಿಹ |
ತತ್ಸರ್ವಂ ಶಿವ ಏವಾಸ್ತಿ ನಾತ್ರ ಕಾರ್ಯಾ ವಿಚಾರಣಾ ||

ಬ್ರಹ್ಮಾದಿತೃಣಪರ್ಯಂತವಾಗಿ ಸರ್ವವೂ ಶಿವಮಯವಾಗಿದೆ. ಶಿವಾಂಶವಿಲ್ಲದೆ ಇರತಕ್ಕ ವಸ್ತುವೇ ಇಲ್ಲ. ಸರ್ವವ್ಯಾಪಿಯಾದ ಸದಾಶಿವನು ಸಗುಣಮೂರ್ತಿಯಾಗುವ ಮೊದಲು ನಿರ್ಗುಣನೂ ನಿರವಯವನೂ ನಿರಂಜನನೂ ಆಗಿದ್ದನಲ್ಲವೇ? ಅವನೇ ಇಚ್ಛಾ-ಜ್ಞಾನ-ಕ್ರಿಯಾ-ಶಕ್ತಿತ್ರಯದಿಂದ ಕೂಡಿ ಸಗುಣಮೂರ್ತಿಯಾಗಿ ಸರ್ವ ವಸ್ತುಗಳನ್ನು ಸೃಷ್ಟಿಸಿ ಪೋಷಿಸಿ ಕಡೆಗೆ ನಾಶಗೊಳಿಸುವ ತ್ರಿವಿಧಕಾರ್ಯಗಳನ್ನೂ ಮಾಡುತ್ತಿರುವ ಬಗ್ಗೆ—

ಸೃಷ್ಟೇಃ ಪೂರ್ವಂ ಶಿವಃ ಪ್ರೋಕ್ತಃ ಸೃಷ್ಟೇರ್ಮಧ್ಯೇ ಶಿವಸ್ತಥಾ |
ಸೃಷ್ಟೇರಂತೇ ಶಿವಃ ಪ್ರೋಕ್ತಸ್ತೇನ ಪ್ರೋಕ್ತಃ ಸದಾಶಿವಃ ||

ಹೀಗೆ ಆ ಶಿವನು ಜಗತ್ಕಾರಣಕಾರ್ಯಮೂರ್ತಿಯಾಗಿರುವನು. ಇದರಿಂದ ಜಗತ್ತು ಸತ್ಯವೆಂದು ಸಿದ್ಧವಾಗುವದಲ್ಲದೆ ಆ ಶಿವನು ತ್ರಿಪುಟಿಭೇದಗಳನ್ನೊಳಗೊಂಡಿರುವನು.

ಶಿವಏವ ಪರೋ ದೇವಃ ಶಿವಏವ ಪರಂಪದಮ್ |
ಶಿವಏವ ಪರಾ ಮುಕ್ತಿರ್ನಾಸ್ತಿ ಪರತರಂ ವ್ರತಂ ||

ಯಾವ ದೇವತೆಗಳಾಗಲಿ, ಯಾವ ಪದವಿಗಳಾಗಲಿ, ಯಾವ ಮುಕ್ತಿಯಾಗಲಿ ಅಥವಾ ಯಾವ ವ್ರತಗಳಾಗಲಿ ಶಿವಶೂನ್ಯವಾಗಿರುವುದಿಲ್ಲ. ಶ್ರೀ ಶಂಕರನೇ ಸಂಸಾರದ ಸೃಷ್ಟಿ-ಸ್ಥಿತಿ-ಲಯಗಳನ್ನುಂಟುಮಾಡಲು ಸಮರ್ಥನಾಗಿ, ಸತ್ವ-ರಜ-ತಮೋಗುಣವಿಶಿಷ್ಟತೆಯಿಂದ ತ್ರಿದೇವರೂಪಧಾರಣಮಾಡಿ ಬ್ರಹ್ಮ-ವಿಷ್ಣು-ರುದ್ರನಾಗಿರುವನು.

ಸೃಷ್ಟಿಕರ್ತಾ ಭವೇದ್ಬ್ರಹ್ಮಾ ಸೃಷ್ಟೇಶ್ಚ ಪಾಲಕೋ ಹರಿಃ |
ಮದೀಯಶ್ಚ ತಥಾತ್ಯಂತೋ ಭವಿಷ್ಯತಿ ತದಂತಕೃತ್ ||

ನಮ್ಮ ಅಂತರಿಂದ್ರಿಯ ಬಾಹ್ಯೇಂದ್ರಿಯಗಳಿಗೆ ತೋರುವ ಸಕಲ ಪದಾರ್ಥಗಳಲ್ಲಿಯೂ ಶಿವಸಂಬಂಧವಿದೆ—

ಯತ್ಕಿಂಚಿದ್ದೃಶ್ಯತೇ ದೃಷ್ಟಂ ವರ್ಣ್ಯತೇ ಶ್ರೂಯತೇ ಚ ಯತ್ |
ತತ್ಸರ್ವಂ ಶಿವರೂಪಂ ಚ ನಾನ್ಯದಸ್ತೀತಿ ಕಿಂಚನ ||
ದೃಶ್ಯತೇ ಶ್ರೂಯತೇ ಯದ್ಯತ್ತತ್ತದ್ವಿದ್ಧಿ ಶಿವಾತ್ಮಕಂ ||

ಶಿವಮಯವಾದ ಪ್ರಪಂಚದಲ್ಲಿ ತೋರುವ ಎಲ್ಲೆಡೆಯಲ್ಲಿಯೂ ಶಿವನೇ ಇರುವನು. (ಶಿವೇತರ ಜಗತ್ತೊಂದು ಬೇರೊಂದಿದ್ದರಲ್ಲವೇ ಶಿವನಿಲ್ಲದಿರುವುದು ?) ಈ ಪರಶಿವನ ವ್ಯಾಪಕತೆಯು ಜಗತ್ತಿಗೆ ಹೀಗೆ ತೋರುವುದು—

ಪರಾನಂದಕರಂ ಲಿಂಗಂ ವಿಶುದ್ಧಂ ಶಿವಮಕ್ಷರಮ್ |
ನಿಷ್ಕಲಂ ಸರ್ವಗಂ ಜ್ಞೇಯಂ ಯೋಗಿನಾಂ ಹೃದಿ ಸಂಸ್ಥಿತಂ ||

ಯೋಗಿಜನ ಹೃದಯದಲ್ಲಿ ವಿರಾಜಿಸುವನಾಗಿಯೂ, ಸಚ್ಚಿದಾನಂದಸ್ವರೂಪನಾಗಿಯೂ, ಲಿಂಗರೂಪನಾಗಿಯೂ, ವಿಶುದ್ಧಸ್ವರೂಪನಾಗಿಯೂ, ಇರುವ ಪರಶಿವನು ಯೋಗಿಗಳ ಹೃದಯದಲ್ಲಿ ತೋರುವನು.

ಶಿವನಾಮ ವಿಭೂತಿಶ್ಚ ರುದ್ರಾಕ್ಷಸ್ತ್ರಿತಯಂ ಶುಭಃ |
ಏತತ್ತ್ರಯಂ ಶರೀರೇ ಚ ಯಸ್ಯ ತಿಷ್ಠತಿ ನಿತ್ಯಶಃ ||
ತಸ್ಯೈವ ದರ್ಶನಂ ಲೋಕೇ ದುರ್ಲಭಂ ಪಾಪಹಾರಕಂ ||

ಶಿವಭಾವ ಪ್ರಕಾಶಗೊಳಿಸುವ ಶಿವನಾಮ ಪಾರಾಯಣ, ಶಿವನ ಮೈ ಬೆಳಗೊಳಿಸಿದ ವಿಭೂತಿ, ರುದ್ರಾಕ್ಷಗಳು ಯಾರ ಶರೀರದಲ್ಲಿ ಯಾವಾಗಲೂ ವಿರಾಜಿಸುವವೋ ಆ ಮಹಾತ್ಮರ ದರ್ಶನದಿಂದ ಸರ್ವಪಾಪಗಳೂ ನಾಶವಾಗುವು. ಈ ಪ್ರಕಾರ ಶಿವಮಯವಾದ ಜಗತ್ತಿನಲ್ಲಿ ಆ ಶಿವನನ್ನು ಕಾಣಲು ಭಕ್ತ್ಯಾದಿ ಸಾಧನಕ್ರಿಯೆಗಳು ಅವಶ್ಯವಾಗಿರಬೇಕು. ಎಲ್ಲಾ ಕಟ್ಟಿಗೆಗಳಲ್ಲಿ ಅಗ್ನಿಯು ಇದ್ದರೂ ಅದನ್ನು ಹೊರಗೆಡವಲು ಒಂದಕ್ಕೊಂದು ಘರ್ಷಣವಾಗುವಂತೆ ಶಿವನು ಸರ್ವವ್ಯಾಪಕನಾಗಿದ್ದರೂ ಜ್ಞಾನ ಕ್ರಿಯೆಗಳಿಂದ ತಿಳಿಯಬೇಕಾಗುವದು. ಆಗ್ಗೆ ತಾನೇ ಶಿವನಾಗುವನು. ಆಗ 'ಸರ್ವಂ ಶಿವಮಿದಂ ಜಗತ್' ಎಂಬುದು ಸಿದ್ಧವಾಗುವದು.

ಮೂಲಿಕೆಯ ಪ್ರಭಾವ.

ಜೀವಿತವನ್ನು ಮುಂದರಿಸುವ ಮಹಾಶಕ್ತಿ.

ಲೋಕದಲ್ಲಿ ಅತಿ ಹೆಚ್ಚಿನ ವಯಸ್ಕನೆಂದು ಪ್ರಸಿದ್ಧನಾದ ಚೀನಾದೇಶದ ಲಿ ಚೇಂಗ್ ಯುನನು ಇತ್ತೀಚಾಗಿ ಮೃತನಾಗಿರುವನು—ಇವನು ೧೬೭೭ರಲ್ಲಿ ಹುಟ್ಟಿ ೨೫೬ ವರ್ಷ ಬದುಕಿರುವನೆಂಬುದಕ್ಕೆ ಸಾಕಷ್ಟು ದಾಖಲೆಗಳಿವೆ. ಮತ್ತು ಹಲವು ರಾಷ್ಟ್ರಗಳ ವಿಜ್ಞಾನಶಾಸ್ತ್ರಜ್ಞರು ಲಿ ಚೆಂಗನನ್ನೂ, ಅವನ ವಯಸ್ಸಿನ ವಿಷಯದಲ್ಲಿ ದಾಖಲೆಗಳನ್ನೂ ಪರೀಕ್ಷಿಸಿ ಸಮಾಧಾನ ಹೊಂದಿದ್ದಾರೆ. ಚೇಂಗನಿಗೆ ೨೪ ನೇ ಹೆಂಡತಿಯು ಈಗ ೬೪ ವರ್ಷದ ವಿಧವೆಯಾಗಿರುವಳು. ಅವನು ತನ್ನ ಕೊನೆಯ ಕೆಲವು ವರ್ಷಗಳನ್ನು, ವೃದ್ಧಾಪ್ಯದಲ್ಲಿಯೂ ಉತ್ಸಾಹ, ಚಟುವಟಿಕೆಯುಂಟಿರುವುದು ಹೇಗೆಂಬ ವಿಷಯದ ಮೇಲೆ ಭಾಷಣಗಳನ್ನೀಯುವುದರಲ್ಲಿಯೂ ಕಳೆದನು. ಮುಖ್ಯವಾಗಿ ಹೃದಯವನ್ನು ಶಾಂತವಾಗಿಟ್ಟುಕೊಳ್ಳಬೇಕು. ಆಮೆಯಂತೆ ಕೂಡಬೇಕು, ಪಾರಿವಾಳದಂತೆ ಚುರುಕಾಗಿ ನಡೆದು, ನಾಯಿಯಂತೆ ಮಲಗಬೇಕೆಂಬೇ ಚೇಂಗನ ಬೋಧನೆಯ ಸಾರ. ಅವನು ನಿರಂತರವೂ ರಸಾಯನ ಶಾಸ್ತ್ರಾಭ್ಯಾಸನಿರತನಾಗಿ, ಬೇರೆ ಬೇರೆ ಗಿಡಮೂಲಿಕೆಗಳನ್ನು ಸಂಗ್ರಹಿಸಿ, ಜೀವಾಮೃತವನ್ನೇ ಕಂಡುಹಿಡಿದಿರುವೆನೆಂದು ಹೇಳುತ್ತಿದ್ದನು. ಅವನನ್ನು ಪರೀಕ್ಷಿಸಿದ ವಿಜ್ಞಾನ ಶಾಸ್ತ್ರಜ್ಞರು, 'ಹೈಡ್ರೊಕೋಟ್ಯಾಲ್ ಎಸಿಯೂಟೀಕ' ಎಂಬ ಹಿಂದುದೇಶದ ಗಿಡಮೂಲಿಕೆಯೇ ಅವನ ಇಷ್ಟು ದೀರ್ಘ ಕಾಲದ ಜೀವನಕ್ಕೆ ಕಾರಣವೆಂದು ಅಭಿಪ್ರಾಯಪಟ್ಟಿರುವರು. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೆಂದಲ್ಲ, ೧೧ ತಲಾಂತರದವರೆಗೂ ಚೇಂಗನ ಸಂತಾನದವರು ೧೮೦ ಮಂದಿ ಇರುವರು. ಸಾಯುವವರೆಗೂ ಅವನಿಗೆ ಸರಿಯಾಗಿ ಕಣ್ಣು ತೋರುತ್ತಿದ್ದು ವಿಚಿತ್ರ ಸ್ಮರಣಶಕ್ತಿಯುಳ್ಳವನಾಗಿದ್ದನು. ಚೇಂಗನು ಸತ್ತನಂತರ ಅವನು ಲೋಕದ ಅತಿ ವೃದ್ಧನೆಂದು ಚೀನದ ದೊಡ್ಡ ದೊಡ್ಡ ಸೇನಾಧಿಕಾರಿಗಳೂ ನೌಕರರೂ ಅವನ ಕಳೇಬರವನ್ನು ಬಹಳ ಗೌರವಿಸಿದರು.

(ಚೇಂಗನು ಮೃತನಾದ ಮೇಲೆ ಲೋಕದ ಮುದುಕನೆಂದು ಹೆಸರುಪಡೆದವನು.) ಟರ್ಕಿಯ ಜಾರೋ ಅಘಾನೆಂಬುವನು. ಇವನು ಇನ್ನೂ ಸಶಕ್ತನಾಗಿಯೇ ಇದ್ದು ತನ್ನ ಪ್ರತಿನಿತ್ಯದ ಕೆಲಸವನ್ನು ಮಾಡುತ್ತಿರುವನು. (ಲೋಕದ ಬೇರೆ ಬೇರೆ ರಾಷ್ಟ್ರಗಳ ಜನನಮರಣ ರಿಜಿಸ್ಟ್ರಗಳನ್ನು ಪರೀಕ್ಷಿಸಿದ ಪಕ್ಷದಲ್ಲಿ, ಶತಮಾನದ ಅವಧಿಮೀರಿ ಬಾಳಿದ ಹಲವು ಉದಾಹರಣೆಗಳು ದೊರೆಯಬಹುದು. ಇಂಗ್ಲೆಂಡಿನ ವಿನ್ನಿಂಗ್ಟನ್ ಎಂಬಲ್ಲಿದ್ದ ಥಾಮಸ್ ಪಾರ್ ಎಂಬವನು ೧೫೨ ವರ್ಷಗಳ ವರೆಗೆ ಬದುಕಿದ್ದನು. ಇವನು ೧೪೮೩ರಲ್ಲಿ ಹುಟ್ಟಿ ೪ನೇ ಮತ್ತು ೫ನೇ ಎಡ್ವರ್ಡ್ ರಾಜರುಗಳ ಕಾಲದಲ್ಲಿಯೂ, ಅನಂತರ ೩ನೇ ರಿಚರ್ಡ್, ೭ನೇ ಹೆನ್ರಿ, ೮ನೇ ಹೆನ್ರಿ, ೬ನೇ ಎಡ್ವರ್ಡ್, ರಾಣಿ ಮೇರಿ, ರಾಣಿ ಎಲಿಜಬೆತ್ ಮತ್ತು ೧ನೇ ಜೇಮ್ಸರ ಆಳ್ವಿಕೆಯಲ್ಲಿಯೂ ಬಾಳಿಕೊಂಡಿದ್ದು ೧ನೇ ಚಾರ್ಲ್ಸರ ಕಾಲದಲ್ಲಿ ಮೃತನಾದನು. ಇವನು ದೇಶದ ಅತಿ ಹಳಬನೆಂದು ಅರಸಂಗೊಪ್ಪಿಸಲ್ಪಟ್ಟನು. ಥಾಮಸ್ ಪಾರನು ೮೦ನೇ ವಯಸ್ಸಿನಲ್ಲಿ ೪೦ ವರ್ಷವಾದವಳಂತಿದ್ದ ಚಿಕ್ಕಪ್ರಾಯದ ಸ್ತ್ರೀಯೊಬ್ಬಳನ್ನು ಮದುವೆಯಾದನು, ೩೦ ವರ್ಷವಾದ ಮೇಲೆ ಅವಳು ಮೃತಳಾದಾಗ ಅವನು ಕೂಡಲೆ ತನ್ನ ೧೧೧ ನೇ ವಯಸ್ಸಿನಲ್ಲಿ ಇನ್ನೊಂದು ಮದುವೆಮಾಡಿಕೊಂಡನು. ಥಾಮಸನು ಲಂಡನ್ನಿಗೆ ಮಾಡಿದ ಪ್ರಯಾಣದ ಮತ್ತು ಅಲ್ಲಿ ನಡೆದ ಆತನ ಪ್ರದರ್ಶನದ ಉತ್ತೇಜಕತೆಯಿಂದ ಮೃತನಾದನು. ಸಾಯುವಾಗ ಡಾಕ್ಟರ್ ವಿಲಿಯಮ್ ಹಾರ್ವೆಯೆಂಬವರು ಅವನನ್ನು ಪರೀಕ್ಷಿಸಿದಾಗ ಅವನಲ್ಲಿ ಮುದಿತನದ ಚಿಹ್ನೆಗಳೇನೂ ತೋರಿಬರಲಿಲ್ಲವಂತೆ!

ಶೋರಿಡಿಚ್ ಎಂಬಲ್ಲಿಯ ಸೈಂಟ್ ಲಿಯೊನಾರ್ಡ್ ಚರ್ಚಿನ ರಿಜಿಸ್ಟರ್ ಪ್ರಕಾರ ಥಾಮಸ್ ಕಾರ್ನೆಂಬವನೊಬ್ಬನು ೧೫೮೮ರಲ್ಲಿ ಲಂಡನ್ನಿನಲ್ಲಿ ಹುಟ್ಟಿ ೧೭೯೫ರಲ್ಲಿ ತನ್ನ ೨೦೭ ನೆಯ ವರ್ಷದಲ್ಲಿ ಮೃತನಾಗಿರುವನೆಂದು ತಿಳಿದುಬರುತ್ತದೆ. ಇಂಗ್ಲೆಂಡಿನಲ್ಲಿ ಅತ್ಯಂತ ವೃದ್ಧರಾಗಿ ಬಾಳಿದ ಇತರ ಜನರೆಂದರೆ ೧೪೦ ವರ್ಷವಾಗಿದ್ದ ಡೆಸ್ಮಂಡಿನ ಕೌಂಟೆಸಳು ೧೪೬ ನೇ ವರ್ಷದಲ್ಲಿ ಮೃತವಾದ ಏಕ್ಸೆಸ್ಟಿನ ಕೌಂಟೆಸಳು ೧೬೬ ವರ್ಷ ಬಾಳಿದ ಜೋನ್ಸ್ ವಾರೆನ್ ಮತ್ತು ೧೪೧ನೇ ವಯಸ್ಸಿನಲ್ಲಿ ಸತ್ತ ಕರ್ನೆಲ್ ವಿನ್‌ಸ್ಲೋ ಎಂಬವರು. ಲೋಕದ ಬೇರೆ ಬೇರೆ ಭಾಗಗಳಲ್ಲಿ ಅತಿ ಹೆಚ್ಚು ವರ್ಷ ಬಾಳಿದ ಹಲವು ಉದಾಹರಣೆಗಳು ತಿಳಿದುಬಂದಿವೆ. ರಷ್ಯದ ವಿಕಟ್ರಿಸೊಕ್ಸ ಎಂಬಲ್ಲಿ ಯಾವಳೋ ಒಬ್ಬಳಿಗೆ ೨೦೫ ವರ್ಷವಾಗಿದ್ದಿತಂತೆ! ಮೆಕ್ಸಿಕೋದಲ್ಲಿ ಒಬ್ಬನು ೧೯೦ ವರ್ಷವಾದವನಿದ್ದನಂತೆ. ಆಸ್ಟ್ರೇಲಿಯದ ಮೂಲನಿವಾಸಿಗಳಲ್ಲಿ ಕೆಲವರು ೩೦೦ ವರ್ಷ ಬಾಳಿರುವವರೂ ಇರುವರೆಂದೂ ತಿಳಿದುಬರುತ್ತದೆ. ಹಿಂದುದೇಶದ ಸಾಧುಗಳು ಕೆಲವರು ಬಹು ದೀರ್ಘಕಾಲದಿಂದ ಬಾಳಿಕೊಂಡಿರುವರೆಂದು ಪ್ರಸಿದ್ಧಿಪಡೆದಿರುತ್ತಾರೆ. ಆದರೆ ಈಗ ಖಚಿತ ಸರಿಯಾದ ದಾಖಲೆಗಳೇನೂ ಇಲ್ಲದಿರುವುದರಿಂದ ಅದನ್ನು ರುಜುಪಡಿಸುವುದು ಅಸಾಧ್ಯವಾಗಿದೆ.

ಈಗ ನಾಗರಿಕ ದೇಶಗಳಲ್ಲಿ ಜನತೆಯ ಸರಾಸರಿ ಜೀವಿತಾವಧಿಯು ಕಳೆದ ೩೦೦ ವರ್ಷಗಳಲ್ಲಿ ಕ್ರಮೇಣ ಅಧಿಕವಾಗುತ್ತ ನಡೆದಿದೆ. ಇದರಿಂದ ಬ್ರಿಟಿಷ್ ವಿಮಾ ಕಂಪೆನಿಗಳು ತಮ್ಮ ವಿಮೆಯ ಪಟ್ಟಿಯನ್ನೇ ಮಾರ್ಪಡಿಸಬೇಕಾಗಿ ಬಂದಿದೆ. ೧೭ ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಹುಟ್ಟಿದ ಮಗುವಿನ ಸರಾಸರಿ ಜೀವಿತಾವಧಿಯು ಕೇವಲ ೨೦ ವರ್ಷವಾಗಿತ್ತು. ೧೮ನೇ ಶತಮಾನದಲ್ಲಿ ಅದು ೩೬ಕ್ಕೇರಿತು. ೧೯ನೇ ಶತಮಾನದಲ್ಲದು ೪೦ಕ್ಕೇರಿ ಈಗ ಹುಟ್ಟಿ ಒಂದು ವರ್ಷ ಬಾಳಿ ಬಂದ ಮಗುವು ೬೦ನೇ ವಯಸ್ಸಿನ ವರೆಗೆ ಬಾಳುವ ಸಂಭವವೇ ಹೆಚ್ಚಾಗಿದೆ. ಈ ಶತಮಾನದ ಆರಂಭದಲ್ಲಿ ಇಂಗ್ಲೆಂಡಿನಲ್ಲಿ ೬ರಲ್ಲಿ ಪ್ರತಿಯೊಂದು ಮಗುವು ಒಂದುವರ್ಷದೊಳಗೇನೇ ಸಾಯುತ್ತಿತ್ತು. ಈಗ ೧೬ ಮಕ್ಕಳಲ್ಲಿ ಒಂದು ಮಾತ್ರ ಸಾಯುವಂತಾಗಿರುವುದು. ಇದೇ ಪರಿಸ್ಥಿತಿಯು ಮುಂದುವರಿದಪಕ್ಷದಲ್ಲಿ ಈ ಶತಮಾನದ ಅಂತ್ಯದೊಳಗೆ ಸರ್ವಸಾಧಾರಣ ಪ್ರತಿಯೊಬ್ಬ ಸ್ತ್ರೀಪುರುಷರು ಸರಾಸರಿ ೧೦೦ ವರ್ಷ ಬಾಳುವಂತಾಗಬಹುದೆಂದು ವೈದ್ಯಶಾಸ್ತ್ರಜ್ಞರ ಅಭಿಪ್ರಾಯವಿರುತ್ತದೆ. (ನವಯುಗ).

ಜರ್ಮನಿಯ ಪ್ರಾಣಿಹತ್ಯಾನಿರೋಧಶಾಸನ !

ಜರ್ಮನ್ ಸರಕಾರದವರು ಮೂಕಪ್ರಾಣಿಗಳ ರಕ್ಷಣಾರ್ಥವಾಗಿ ಒಂದು ಹೊಸ ಕಾನೂನನ್ನು ಮಾಡಿರುವರು. ಈ ಕಾನೂನಿನ ಪ್ರಕಾರವಾಗಿ ಸರಕಾರದ ಅಪ್ಪಣೆಯಿಲ್ಲದೆ ಪ್ರಾಣಿಹತ್ಯೆಯನ್ನು ಮಾಡಿದವರಿಗೆ 6 ತಿಂಗಳ ಕಠಿಣಶಿಕ್ಷೆಯೂ, ಪ್ರಾಣಿಗಳನ್ನು ಹಿಂಸಿಸಿ ಮಿತಿಮೀರಿ ದುಡಿಸುವವರಿಗೆ ಎರಡುವರ್ಷ ಶಿಕ್ಷೆ ಅಥವಾ ಗಡೀಪಾರಿನ ಶಿಕ್ಷೆಯೂ ವಿಧಿಸಲ್ಪಡುವದು. ನಾಯಿಗಳಿಗೆ ಬೇಟೆಯಾಡುವದನ್ನು ಕಲಿಸುವದಕ್ಕಾಗಿ ಬೆಕ್ಕು, ನರಿ ಮೊದಲಾದ ಪ್ರಾಣಿಗಳನ್ನು ಉಪಯೋಗಿಸುವವರಿಗೂ ಇದೇ ಕಾನೂನು ಅನ್ವಯಿಸುವದು. ಆದರೆ ವಿಜ್ಞಾನಶಾಸ್ತ್ರಪ್ರಯೋಗಸಂಸ್ಥೆಗಳಿಗೂ, ಸಾರ್ವಜನಿಕ ಸಂಸ್ಥೆಗಳಿಗೂ, ಶೋಧನಾರ್ಥವಾಗಿ ಸಜೀವ ಪ್ರಾಣಿಗಳನ್ನು ಉಪಯೋಗಿಸುವ ಅಧಿಕಾರವು ಕೊಡಲ್ಪಟ್ಟಿರುವದು.

ಶಾಸ್ತ್ರಿಗಳು ಬೇಕಾಗಿದೆ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿ ತಾ|| 20—11—1933 ನೆಯ ದಿವಸ ಈ ಗ್ರಾಮದ ಸರ್ವಜನ ಸಮ್ಮತಿಯಿಂದ ಸಂಸ್ಕೃತಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಈ ಪಾಠಶಾಲೆಗೆ ವೈದಿಕ, ಜ್ಯೋತಿಷ, ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದೆ. 20 ರೂ. ಗಳಿಂದ 30 ರೂ. ಗಳ ವರೆಗೆ ವೇತನವು ದೊರೆಯುವುದು. ಬರಲಪೇಕ್ಷೆಯುಳ್ಳವರು ಈ ಪಾಠಶಾಲೆಯ ವ್ಯವಸ್ಥಾಪಕರಾದ ಶ್ರೀವರ್ಧಾವೇ|| ಮಿರಾಳಘಟ್ಟದ ಮಠದ ಚಾಗಟಗೇರಿ ಸಣ್ಣ ವೀರಪ್ಪಯ್ಯನವರ ಹೆಸರಿಗೆ ಡಿಶಂಬರ್ ತಿಂಗಳೊಳಗಾಗಿ ಬರೆದುಕೊಳ್ಳಬೇಕು.

ಚಟ್ರಿಕಿ ಕೊಟ್ರಬಸಪ್ಪ,
ಪಾಠಶಾಲಾ ಸೆಕ್ರೆಟರಿ, ಕೊಟ್ಟೂರು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 6

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೋ. ನಂ. 1246. ಮದರಾಸು.
K. N. BENSON & Co.,
[5] P. B. 1246, MADRAS.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್ಮೆಂಟ್ಸಿಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಖರಾರು

ಘಂಟೆಯನ್ನು ತೋರಿಸುವವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ: ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
[5] THE CITY MART,
168, China Bazaar, MADRAS

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 15

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೆಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [49]

ಮಲೇರಿಯಾನ ಮಲೆಜ್ವರ ಸಂಹಾರಿಣೆ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಪಿಲ್ಸ್—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ತರತರದ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1, 1-8-0, 7-0-0

ಹೂಪಿಂಗ್ ಕಫ್ ರೆಮೆಡಿ—ಕಪ್ಪ ಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕರಿಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಟಿಂಕ್ಚರುಮದ್ದುಗಳೂ, ಹೋಮಿಯೋಪಥಿ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಪಟ್ಟಿಕೆಗೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [14]

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ಸೇವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರಿ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಿಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (4)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಮ್ಮೇಳನ ಶೀಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಬ್ಬ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು

[48]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ನೇ ಡಿಶಂಬರ್ ೧೯೩೩ [ಸಂಚಿಕೆ ೩೩

ಶಾಸ್ತ್ರಿಗಳು ಬೇಕಾಗಿದೆ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿ ತಾ|| 20—11—1933 ನೆಯ ದಿವಸ ಈ ಗ್ರಾಮದ ಸರ್ವಜನ ಸಮ್ಮತಿಯಿಂದ ಸಂಸ್ಕೃತಪಾಠಶಾಲೆಯು ಸ್ಥಾಪಿಸಲ್ಪಟ್ಟಿದೆ. ಈ ಪಾಠಶಾಲೆಗೆ ವೈದಿಕ, ಜ್ಯೋತಿಷ, ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದೆ. 20 ರೂ. ಗಳಿಂದ 30 ರೂ. ಗಳ ವರೆಗೆ ವೇತನವು ದೊರೆಯುವುದು. ಬರಲಪೇಕ್ಷೆಯುಳ್ಳವರು ಈ ಪಾಠಶಾಲೆಯ ವ್ಯವಸ್ಥಾಪಕರಾದ ಶ್ರೀಮಾನ್ ವೇ|| ಮಿರಾಳಪಟ್ಟದ ಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರ ಹೆಸರಿಗೆ ಡಿಶಂಬರ್ ತಿಂಗಳೊಳಗಾಗಿ ಬರೆದುಕೊಳ್ಳಬೇಕು.

ಚಟ್ರಿಕಿ ಕೊಟ್ರಬಸಪ್ಪ,
ಪಾಠಶಾಲಾ ಸೆಕ್ರೆಟರಿ, ಕೊಟ್ಟೂರು.

ಹಾಸನ ಟವನ್ನಿನ 25 ನೇ ದನಗಳ ಪ್ರದರ್ಶನ.

ಹಾಸನ ಟವನ್ ದನಗಳ ಪ್ರದರ್ಶನ ಕ್ಷೇತ್ರದಲ್ಲಿ 25 ನೇ ದನಗಳ ಪ್ರದರ್ಶನವು ಏರ್ಪಾಟಾಗುತ್ತದೆ.

ಪ್ರದರ್ಶನವು 1934 ನೇ ಜನವರಿ ಮಾಹೆ ತಾರೀಖು 3 ನೇ ಬುಧವಾರದಿಂದ 7 ನೇ ಭಾನುವಾರದ ವರೆಗೆ ಉಭಯದಿವಸಗಳಲ್ಲೂ ನಡೆಯುತ್ತದೆ.

ಗೌರ್ನಮೆಂಟ್ ಆರ್ಡರ್ ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು 1 ಕ್ಕೆ ಎರಡಾಣೆಯಂತೆ ಫೀ ವಸೂಲ್‌ಮಾಡಲ್ಪಡುತ್ತದೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲ್ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನದ (ಮುನಸಿಪಲ್) ಜಾಗಾದಲ್ಲಿ ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನು ಸಹ ತಾರೀಖು 12—12—1933ರ ರಲ್ಲಿ ಹಾಸನದ ಸಂತೆ ಬಳಿ ಇರುವ ಅಕ್ಕರಾಯಿ ಕಟ್ಟೆ ಬಳಿ ಬಹಿರಂಗವಾಗಿ ಮುನಸಿಪಲ್ ಪ್ರೆಸಿಡೆಂಟರು ಯಾ ವೈಸ್ ಪ್ರೆಸಿಡೆಂಟರವರಿಂದ ಮಧ್ಯಾಹ್ನ 2 ಘಂಟೆಯಿಂದ ಹರಾಜುಮಾಡಿಸಲ್ಪಡುತ್ತದೆ.

ಅಂಗಡಿ ವಗ್ಗೈರೆಗಳಿಗಾಗಿ ವಿಂಗಡಿಸಿರುವ ಜಾಗಗಳನ್ನು ತಾ 15—12—33ರ ಲಾಗಾಯ್ತು ವಿಲೇವಾರಿ ಮಾಡಲುಪಕ್ರಮಿಸುತ್ತದೆ. ಬಾಕಿ ವಿಷಯಗಳನ್ನು ಹಾಸನ ಟವನ್ ಮುನಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳತಕ್ಕದ್ದು.

S. P. Bramhappa,
For President H. T. M.
& Chairman, Cattle Show Committee,
Hassan.

ಹೂಲಿಯ ಪಾಠಶಾಲೆಯೂ ವಾಚನಾಲಯವೂ.

ಪ್ರಿಯ ಮಹಾಶಯರೇ! ನಾವು ಪ್ಲೇಗಿನ ನಿಮಿತ್ತವಾಗಿ ಶಿಂದೋಗಿಯಲ್ಲಿರುವದು ಸರ್ವರಿಗೂ ತಿಳಿದ ವಿಷಯವಷ್ಟೇ! ಈಗ್ಗೆ ಹೂಲಿಯಲ್ಲಿ ರೋಗವು ಶಾಂತವಾದ ಕಾರಣ ಉದಾರಾಶ್ರಯದಾತೃಗಳೂ ಮತ್ತು ಪತ್ರವ್ಯವಹಾರ ಮಾಡತಕ್ಕವರೂ ಹೂಲಿಗೆ ಪತ್ರವ್ಯವಹಾರ ಮಾಡಬೇಕಾಗಿ ನಮ್ರ ಸೂಚನೆ. ಶಿಂದೋಗಿಯಲ್ಲಿ ಶ್ರೀಯುತ ಶಿವಲಿಂಗಪ್ಪನವರು ಬಾಳಿ ಇವರು ವಿಶೇಷ ಸಹಾಯವಾಡಿದ್ದು ಅತ್ಯಂತ ಸ್ತುತ್ಯವಾಗಿದೆ.

ಸೆಕ್ರೆಟರಿ.

ಕೃತಜ್ಞತೆ.

ಸುಪ್ರಸಿದ್ಧ ಗುರುಭಕ್ತರಾದ ಹೊಸಪೇಟೆಯ ಮ|| ರಾ|| ಶೀಲವಂತರ ರೇವಪ್ಪನವರು ನಮ್ಮ ಭವನಕ್ಕೋಸ್ಕರ 'ಪ್ರಭೆ' ಯ ಬಹಳ ಹಳೆಯ ಕೆಲವು ಸಂಚಿಕೆಗಳನ್ನು ಕಳುಹಿಸಿರುತ್ತಾರೆ. ಅದರಲ್ಲಿ ಪ್ರಭೆಯ ಮೊಟ್ಟಮೊದಲನೆಯ ಸಂಚಿಕೆಯೂ ಇರುವುದರಿಂದ ರೇವಪ್ಪನವರ ಉಪಕಾರವು ಅಸಾಧಾರಣವೆಂತಲೇ ಹೇಳಬೇಕಾಗಿದೆ.

ರಾಣೆಬೆನ್ನೂರಿನಿಂದಲೂ ಯಾರೋ ಪುಣ್ಯಾತ್ಮರು (ಅವರ ಹೆಸರುಗೊತ್ತಾಗಿಲ್ಲ) ೨೫ ಸಂಚಿಕೆಗಳನ್ನು ರವಾನಿಸಿರುತ್ತಾರೆ. ಇವುಗಳಲ್ಲಿ ನಮಗೆ ಬೇಕಾಗಿರುವ ಸಂಚಿಕೆಗಳಿಲ್ಲವಾದರೂ ಅವರ ಪ್ರಯತ್ನವು ಸ್ತುತ್ಯವಾಗಿದೆ.

ಇನ್ನು ನಮಗೆ ಪ್ರಭಾಪತ್ರಿಕೆಯ 3 ನೆಯ ವರ್ಷದ ೧೯, ೨೧, ೨೨, ೨೩ ಸಂಚಿಕೆಗಳೂ ೭ ನೆಯ ವರ್ಷದ ೨, ೭ ಸಂಚಿಕೆಗಳೂ ಮಾತ್ರ ಬೇಕಾಗಿವೆ. ಉದಾರ ವಾಚಕರು ರವಾನಿಸಿ ಶ್ರೀ ಶಿವನ ಕೃಪೆಗೆ ಪಾತ್ರರಾಗಲೆಂದು ಕೋರುವ.

ವ್ಯವಸ್ಥಾಪಕ
ಶೈವಭಾರತೀಭವನ
ಜಂಗಮವಾಡೀ ಮಠ, ಬನಾರಸ್ ಸಿಟಿ.

ರಾಜಧಾನಿಯ ಅಬ್ಕಾರಿ ಕಂಟ್ರಾಕ್ಟರಾದ ಮಿ|| ಆರ್. ಎನ್. ಬಾಯ್ಸ್‌ರವರು ಅಂಗವಿಹೀನರ ಪಾಠಶಾಲೆಯ ಮುಂಭಾಗದ ಕಟ್ಟಡವನ್ನು ಕಟ್ಟುವದಕ್ಕೆ 25,000 ರೂಪಾಯಿಗಳನ್ನೂ, ಬೆಂಗಳೂರು ಹೆಂಗೆ ಆಸ್ಪತ್ರೆಗೆ 15,000 ರೂ. ಗಳನ್ನೂ, ಮುಂಬಯಿ ಅಧಿಪತ್ಯದಲ್ಲಿ ಧರ್ಮಕಾರ್ಯಗಳನ್ನು ನಡೆಯಿಸುವದಕ್ಕಾಗಿ 3,00,000 ರೂಪಾಯಿಗಳನ್ನೂ ದಾನಮಾಡಿರುತ್ತಾರೆ. ಮೇಲ್ಕಂಡ ಅಂಗವಿಹೀನರ ಪಾಠಶಾಲೆಯ ಕಟ್ಟಡದ ಅಸ್ತಿಭಾರಶಿಲಾಪ್ರತಿಷ್ಠೆಯು ಕಳೆದವಾರ ಲೇಡಿ ವಿಲಿಂಗ್‌ಡನ್‌ರವರಿಂದ ನೆರವೇರಿಸಲ್ಪಟ್ಟಿತು.

ಸ್ಟೇಟ್ ಸೆಕ್ರೆಟರಿಯವರ ಮೇಲೆ ಡಿಕ್ರಿ!

ಡೆಹರಾಡೂನಿನ ಒಬ್ಬ ಕಂಟ್ರಾಕ್ಟರು ಸರಕಾರದವರು ಯಾವುದೋ ಒಂದು ಕಂಟ್ರಾಕ್ಟಿನ ನಿಬಂಧನೆಗಳನ್ನು ಪಾಲಿಸಲಿಲ್ಲವೆಂಬ ಕಾರಣದ ಮೇಲೆ ಲುಕ್ಸಾನಿಗಾಗಿ ಸೆಕ್ರೆಟರಿ ಆಫ್ ಸ್ಟೇಟರವರ ಮೇಲೆ ದಾವೆಯನ್ನು ಹೂಡಿದ್ದರು. ನ್ಯಾಯಾಧೀಶರು ವಿಚಾರಣೆ ಮಾಡಿ ಸೆಕ್ರೆಟರಿ ಆಫ್ ಸ್ಟೇಟರವರ ಮೇಲೆ 30,000 ರೂಪಾಯಿಗಳಿಗೆ ಡಿಕ್ರಿ ಕೊಟ್ಟಿರುತ್ತಾರೆ.

ಫ್ರಾನ್ಸ್‌ದೇಶದಲ್ಲೊಂದು ವಿಚಿತ್ರ ಮೊಕದ್ದಮೆ!

ಜರ್ಮನ್‌ದೇಶದ ಇಬ್ಬರು ಸತಿಪತಿಗಳು ಅನೇಕ ವರ್ಷಗಳ ಹಿಂದೆ ಕಾರಣಾಂತರದಿಂದ ಕೆಲವು ಕಾಲ ಫ್ರಾನ್ಸ್‌ದೇಶದಲ್ಲಿ ಬಂದು ವಾಸಿಸುತ್ತಿದ್ದರು. ಅದೇ ಸಮಯದಲ್ಲಿ ಅವರಿಗೆ ಒಂದು ಗಂಡುಮಗುವು ಹುಟ್ಟಿತು. ಹುಡುಗನಿಗೆ ಸ್ವಲ್ಪ ವಯಸ್ಸಾದನಂತರ ತಂದೆ ತಾಯಿಗಳು ಜರ್ಮನಿಗೇ ಹಿಂತಿರುಗಿಹೋದರು. ಆ ಮೇಲೆ ಹುಡುಗನು ಜರ್ಮನಿಯಲ್ಲಿಯೇ ಬೆಳೆದು ದೊಡ್ಡವನಾಗಿ ಕಳೆದ ಘೋರಯುದ್ಧದಲ್ಲಿ ಸ್ವಾಭಾವಿಕವಾಗಿ ಜರ್ಮನ್ ಪಕ್ಷವನ್ನೇ ವಹಿಸಿ ಶಿಪಾಯಿಯಾಗಿದ್ದನು. ಯುದ್ಧವು ಮುಗಿದನಂತರ ಆತನು ತನ್ನ ಜರ್ಮನ್ ಪತ್ನೀ ಸಮೇತನಾಗಿ ಫ್ರಾನ್ಸಿನಲ್ಲಿ ತನ್ನ ಜನ್ಮಸ್ಥಾನಕ್ಕೆ ಬಂದು ನೆಲಸಿದನು. ಆಗ ಈತನು ಫ್ರಾನ್ಸಿನಲ್ಲಿಯೇ ಹುಟ್ಟಿದವನೆಂದೂ, ಯುದ್ಧಕಾಲದಲ್ಲಿ ಜರ್ಮನ್ ಪಕ್ಷವನ್ನು ವಹಿಸಿದ್ದನೆಂದೂ ಅಧಿಕಾರಿಗಳಿಗೆ ತಿಳಿದು ಅವನು ದೇಶದ್ರೋಹಿಯೆಂದು ಈಗ ಅವನನ್ನು ವಿಚಾರಣೆಗೆ ಗುರಿಪಡಿಸಿರುವರು. ಈತನು ಫ್ರಾನ್ಸಿನಲ್ಲಿಯೇ ಹುಟ್ಟಿದನೆಂಬುದು ಅಲ್ಲಿಯ ಜನನ ರಿಜಿಸ್ಟರಿನಲ್ಲಿ ದಾಖಲಾಗಿರುವದರಿಂದ ಫ್ರೆಂಚ್ ಕಾಯಿದೆಯ ಪ್ರಕಾರ ಅವನು ಫ್ರಾನ್ಸ್ ದೇಶಸ್ಥನೇ ಆಗಿರುವನಂತೆ!

ಸ್ವೀಕಾರ

ಬಿಜಾಪುರ ಶಹರ ನಿವಾಸಿಗಳಾದ ವೇ|| ಕರ್ಪೂರ ಮಠದ ದುಂಡಯ್ಯನವರು ಪ್ರಭಾಪೋಷಣಕ್ಕಾಗಿ 1 ರೂ. ಯನ್ನು ಕಳುಹಿಸಿರುತ್ತಾರೆ.

ಶಿವಮೊಗ್ಗಾ ಡಿ|| ನೇಮತಿಗ್ರಾಮ ನಿವಾಸಿ ತೆಲಗು ಬಣಜಿಗರ ಚಿ|| ಮಂಜಪ್ಪನಿಗೂ, ಶಿಕಾರಿಪುರದಲ್ಲಿರುವ ಮ|| ರಾ|| ಹಾನಗಲ್ಲ ಹನುಮಂತಪ್ಪನವರ ಪುತ್ರಿ ಹ|| ಕುಂ|| ಶೋ|| ಚಿ|| ಸೌ|| ಹುಚ್ಚಮ್ಮನಿಗೂ ಶಿಕಾರಿಪುರದಲ್ಲಿ ನಡೆದ ಶುಭಲಗ್ನದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂ. ಯು ನ್ಯಾಮತಿ ಮ|| ರಾ|| ಹೊಮ್ಮರಡಿ ಸಂಗಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ವೈಸ್ರಾಯ್ ದಂಪತಿಗಳಿಗೆ ಆತಿಥ್ಯ.

ರಾಜಧಾನಿಯಲ್ಲಿ ನಡೆದ ವಿಶೇಷೋತ್ಸವಗಳು.

ಹಿಂದೂಸ್ಥಾನದ ವೈಸ್ರಾಯ್‌ರವರೂ ಗವರ್ನರ್ ಜನರಲ್‌ರವರೂ ಆದ ಘನವನ್ತ್ಯರಾದ ದಿ ರೈಟ್ ಆನರಬಲ್ ಫ್ರೀಮನ್ ಫ್ರೀಮನ್-ಥಾಮಸ್, ಅರ್ಲ್-ಆಫ್ ವಿಲ್ಲಿಂಗ್ಡನ್, ಪಿ.ಸಿ., ಜಿ.ಸಿ.ಎಸ್.ಐ., ಜಿ.ಸಿ.ಎಂ.ಜಿ., ಜಿ.ಬಿ.ಇ. ರವರು ಪತ್ನೀ ಪರಿವಾರ ಸಮೇತ ಕಳೆದ ಭಾನುವಾರ (ಡಿಸೆಂಬರ್ ತಾ. 3) ಬೆಳಗ್ಗೆ 8 ಘಂಟೆಗೆ ಸ್ಪೆಷಲ್ ರೈಲಿನಲ್ಲಿ ರಾಜಧಾನಿಗೆ ಚಿತ್ತೈಸಿದರು. ಸ್ಟೇಷನ್ ಪ್ಲಾಟ್‌ಫಾರಮನ್ನು ವಿಶೇಷವಾಗಿ ಶೃಂಗರಿಸಿದ್ದರು. ಅಲ್ಲಿ ಅರ್ಧ ಗಂಟೆಗೆ ಮುಂಚೆಯೇ ಸಂಸ್ಥಾನದ ಮುಖ್ಯಾಧಿಕಾರಿಗಳು, ಸರ್ದಾರರು, ದೊಡ್ಡ ಮನುಷ್ಯರು, ವರ್ತಕರೂ ದರ್ಬಾರ್ ಉಡುಪಿನಲ್ಲಿ ಕಾದಿದ್ದರು. ಘನವನ್ತ್ಯರಾದ ಬ್ರಿಟಿಷ್ ರೆಸಿಡೆಂಟರು, ಅವರ ಪರಿವಾರ, ನಮ್ಮ ದಿವಾನ್‌ರವರು, ಶ್ರೀಮನ್ಮಹಾರಾಜರವರ ಪ್ರೈವೆಟ್ ಮತ್ತು ಹುಜೂರು ಸೆಕ್ರೆಟರಿಗಳು, ಕೌನ್ಸಿಲ್ ಮೆಂಬರುಗಳು, ಹೈಕೋರ್ಟಿನ ಚೀಫ್ ಜಡ್ಜಿಯವರು, ಯೂನಿವರ್ಸಿಟಿ ವೈಸ್-ಛಾನ್ಸೆಲರು, ಚೀಫ್ ಸೆಕ್ರೆಟರಿ, ವಿದ್ಯಾ ಇಲಾಖೆಯ ಡೈರೆಕ್ಟರವರು ಇವರೇ ಮೊದಲಾದವರು, ಪ್ಲಾಟ್ ಫಾರಮಿನಲ್ಲಿ ಸೇರಿದ್ದರು. ಸ್ಪೆಷಲ್ ರೈಲ್‌ಗಾಡಿ ಬರುವ ಸಮಯಕ್ಕೆ ನಮ್ಮ ಶ್ರೀಮನ್ಮಹಾರಾಜರೂ, ಶ್ರೀಮದ್ಯುವರಾಜರವರೂ ಅರಮನೆಯಿಂದ ಸ್ಟೇಷನ್ನಿಗೆ ದಯಮಾಡಿಸಿದರು.

ವೈಸ್ರಾಯದಂಪತಿಗಳು ರೈಲ್‌ಗಾಡಿಯಿಂದ ಇಳಿದ ಕೂಡಲೆ ಘನವನ್ತರಿಯಲ್ಲಿ ಅವರನ್ನು ಎದುರುಗೊಂಡು ಸತ್ಕರಿಸಿ ಪರಸ್ಪರ ಯೋಗಕ್ಷೇಮವನ್ನು ವಿಚಾರಿಸುತ್ತಿರುವಲ್ಲಿ ಸಾಲುಕಟ್ಟಿ ನಿಂತಿದ್ದ ಅರಮನೆ ಸಿಪಾಯಿಗಳು (ಗಾರ್ಡ್ ಆಫ್ ಆನರ್) ಮುಜರೆ ಮಾಡಿದರು. ಶ್ರೀಮನ್ಮಹಾರಾಜರವರು ವೈಸ್ರಾಯರವ...

...

ರಾಯರು ಆ ನಿಲಯಕ್ಕೆ ಕೊಂಡು ತಂದು ಒಪ್ಪಿಸಿರುವ ಸಿಜವಾ ಫ್ರಿಜಶ್ವರನ್ನು ಕೂಡ ಪರಾಮರ್ಶಿಸಿ, ಮೈಸೂರಿನಂಥ ಉದ್ಯಾನವನಗಳುಳ್ಳ ಸುಂದರವಾದ ಪಟ್ಟಣವನ್ನು ಹಿಂದೂಸ್ಥಾನದಲ್ಲೆಲ್ಲೂ ನೋಡಿದ್ದಿಲ್ಲವೆಂದು, ಕೊಂಡಾಡಿ ಸರ್ಟಿಫಿಕೇಟುಗಳನ್ನು ಸ್ವಹಸ್ತ ದಯಪಾಲಿಸಿ ಸಂತೋಷಪಡಿಸಿದರು. (ವ್ಯ. ಪ.)

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮದ್ರಂಭಾಪುರೀಸಿಂಹಾಸನಾಧೀಶ ಜಗದ್ಗುರು ಶ್ರೀಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ವರ್ಧಂತ್ಯುತ್ಸವ ಸಮಾರಂಭ ಜಗಲೂರು.

ಪ್ರತಿವರ್ಷದ ಪದ್ಧತಿಯಂತೆ ಈ ಶ್ರೀಮುಖಸಂವತ್ಸರದ ಮಾರ್ಗಶೀರ್ಷ ಶುದ್ಧ ೭ ತಿಥಿಯಲ್ಲಿ ಶ್ರೀಮದಾಚಾರ್ಯರ ವರ್ಧಂತ್ಯುತ್ಸವ ಸಮಾರಂಭವು ಚಿತ್ರದುರ್ಗ ಡಿ|| ಜಗಲೂರು ಟೌನಿನಲ್ಲಿ ಅತಿವಿಜೃಂಭಣೆಯಿಂದ ನೆರವೇರಿತು. ಗ್ರಾಮಾಂತರಗಳಿಂದ...

...

ದಾಯವೂ ಘಳ್ಯದ ಬೆಳಸನ್ನು ಉಣ್ಣುವ ಸುಸಮಯವನ್ನು ಪಡೆದುಕೊಂಡುದಕ್ಕಾಗಿ ಆನಂದಿಸುತ್ತೇನೆ.

ಓರ್ವ ಗುರುಭಕ್ತ.

ಶ್ರೀ ಗುರುಸಮರ್ಥ.

ಕಾಲವೈಚಿತ್ರ್ಯದ ಮಹಿಮೆ.

ಲೇಖಕ—K. J. B. Gurukinkar, Kollur.

ವಸಂತಋತುವಿನ ಸಿರಿಯ ಶೃಂಗಾರವು, ಸೂಸಿಬರುವ ಮಂದಮಾರುತನಿಂ ಬೀರುವ ವಿಕಸಿತ ಪುಷ್ಪಗುಚ್ಛಗಳಾಮೋದವು, ಮೆಲ್ಲ ಮೆಲ್ಲನೆ ಆಡಿದಾಡುವ ಮಯೂರಗಳ ಮನೋಮುದವು, ಕುಳಿತ ಚಕೋರಗಳ ಚಕ್ ಚಕ್ ಎಂಬ ಮಧುರಾಲಾಪವು, ಅತ್ತಿಂದಿತ್ತ ಇತ್ತಿಂದತ್ತ ಹಾರಾಡುತ್ತ ಕುಸುಮರಸವೀವ ಮಧುಕರಗಳ ಚಲನವಲನವು, ಅಲ್ಲದೆ ತುಂಬಿ ತುಳುಕುತ್ತಿರುವ ಹೌಜುನಾಳಗಳ ಸೂಕ್ಷ್ಮರಂಧ್ರದಿಂದ ಸುರಿಯುತ್ತಿರುವ ಜಲತುಂತುರುಗಳು, ಇಂತೀ ಸೊಬಗಿನ ವಸುಂಧರೆಯ ಸಂಪು, ಕಮಲದ ತಂಪು, ಖಗಗಳ ಇಂಪು, ನವತರುಣರ ಹೃದಯಾಂಗಳ್ಳಿ ತಂಪನ್ನುಂಟುಮಾಡುತ್ತಿರುವಲ್ಲಿ ಕೆಲವು ಹೈಸ್ಕೂಲ್ ವಿದ್ಯಾರ್ಥಿಗಳು ವನವಿಹಾರಕ್ಕೋಸ್ಕರ ಪೋದಲ್ಲಿ ನಡೆದ ಹಲವು ಪ್ರಶ್ನೋತ್ತರಗಳು—

ಪ್ರ—ಅಯ್ಯೋ! ವರ್ತಮಾನಯುಗದಲ್ಲಿ ಧಾರ್ಮಿಕಾದಿ ಜಿಬಂಧನೆಗಳು ಸ್ಥಾಯಿಯಾಗಿರುವವೋ?

ಉ—ಹೇಳುವುದೇನಿದೆ ಸ್ವಾಮಿ! ರುಚಿರಂಗುಗಳಿಂದ ಲಾಲು ಮಾಡಿ ಹೊರಟುಹೋದವಲ್ಲವೆ!

ಪ್ರ—ಅದು ಹೇಗೆ?

ಉ—ಬಜಾರಗಳಲ್ಲಿ ಪ್ರದರ್ಶನವಾಗುವ ಹೋಟೆಲ್ಲುಗಳಲ್ಲಿ ಚಹಾ, ಕಾಫಿ, ಉಪ್ಪಿಟ್ಟು, ದೋಸೆ ಮುಂತಾದುವುಗಳಿಂದ ಸವಿದು ಪಕ್ಕದಲ್ಲಿ ಮಾರಲ್ಪಡುವ ಪಾನ ಬೀಡಿಗಳಿಂದ ಬಾಯಿ ಕೆಂಪಗೆ ಮಾಡಿ ಮರೆಮಾಚದೆ ಹೋದುದು ಸುಳ್ಳೆ?

ಪ್ರ—ಅದರೆ ಇವರ ಗುರುದೇವತಾಶ್ರದ್ಧೆಗಳೆತ್ತಕಡೆ ಹೋದವು?

ಉ—ಶ್ರದ್ಧೆಯಲ್ಲ, ಶ್ರಾದ್ಧವೆಂದು ನುಡಿಯಬಾರದೆ? ಯಾಕೆಂದರೆ, ಬಂಧುಬಾಂಧವರು ವ್ಯಾಜ್ಯವಾಡುತ್ತ, ಫೀಯನ್ನು ಕೊಟ್ಟು ಕಚೇರಿ ಕೋರ್ಟುಗಳಲ್ಲಿ ವಕೀಲರ ಭಕ್ತರಾಗಿ, ಅವರಿಗೋಸುಗ ಹಿರಿಯರು ಸಂಪಾದಿಸಿದ ಹಣವನ್ನೆಲ್ಲ ಹಾಳುಮಾಡಿ ಸತ್ತನಂತರ ಸಾಲವನ್ನು ತೆಗೆದು ಮಾಡುವ ಶ್ರಾದ್ಧವೇ ಅವರ ಶ್ರದ್ಧೆಯಾಗಿರುವದು.

ಪ್ರ—ಮುಹೂರ್ತಾಮುಹೂರ್ತ ವಿಚಾರಗಳೇನಾದವು?

ಉ—ಅಯ್ಯೊ! ಈಗ್ಗೆ ಅಂಗ್ರೇಜಿ ಬಂದ ಮೇಲೆ ಫ್ಯಾಷನ್ ಅಂತೆ! ಫ್ಯಾಷನ್ ಎಂಬುದು ಹೊರಟಿದೆಯಲ್ಲವೆ? (ಕೂದ್ರಸ್ಯ ಚ ಶುಭಂನಾಸ್ತಿ) ಎನ್ನುವಂತೆ ಕೆಲವರಿಗೆ ಕತ್ತಿ ಕತ್ತರಿ ಚಿಮುಟಿಗೆಗಳೇ ಶುಭಮುಹೂರ್ತಗಳಾಗಿವೆ.

ಪ್ರ—ಅದ್ಯರು (ಕರ್ಮಯುದ್ಧಪುರುಷಃ) ಎಂದು ನಿರೂಪಿಸಿದ್ದು ಅಲ್ಪಾಯುಗಳಾಗಲು ಕಾರಣವೇನು?

ಉ—ಇವರ ಕಣ್ಣುಗಳು ಗುದ್ದೆ ಬೆಳೆಯುವವಂತೆ ಬುದ್ಧಿಬಂದು, ಅದಕ್ಕಾಗಿ ಕಣ್ಣುಗಳಿಂದಲ್ಲೆಯೇ ಮಕ್ಕಳಿಗೆ ಅಕ್ಕಿಕಾಳು ಹಾಕಿ ಅಧ್ಯತೇಂದ್ರಿಯರಾಗಿ ಮೊಮ್ಮಗನನ್ನು ಕಂಡು ಸಾಯುವದು ಕಾಣಬೇಕೆಂದು ತೋರಿದ್ದಕ್ಕೆ.

ಪ್ರ—ಸುಧಾರಕ ಮತ್ತು ಸುಶಿಕ್ಷಿತರ ನೈತಿಕಧೈರ್ಯವೆತ್ತ ಕಡೆ ಹೋಯಿತು?

ಉ—ಡಾಕ್ಟರ್ ಹರ್ಡಿಕರ್‌ರವರು ಹೇಳಿರುವಂತೆ—Where is the reformers moral courage? It drowned in the tea cup. ಚಹಾದ ಕಪ್ಪು ಬಸಿಗಳಲ್ಲೇ ಮುಳುಗಿ ಮುಳುಗಿಹೋದದ್ದಾಯಿತು.

ಪ್ರ—ಇವರು ಸತತೋದ್ಯೋಗಿಗಳೋ?

ಉ—ಕೇಳಲ್ಲವೇ "ಚುಟ್ಟಾ ಬಿಟ್ಟರೆ ಕೆಟ್ಟೆ" ಎಂಬ ಅಧುನಿಕ ಸಾಕ್ಷಿಯನ್ನು? ಎಡೆಬಿಡದೆ ಬಿಗಿಯೋಟಿತ್ತಿಯನ್ನುತ್ತ ಟ್ರೇನ್ ಇಂಜಿನ್ನಿನ ಹಾಗೆ ಭುಸ್ ಭುಸ್ ಎಂದು ಹೊಗೆಯನ್ನೂದುತ್ತ ಇರುವದೇ ಸತತೋದ್ಯೋಗದ ಲಕ್ಷಣವಾಗಿದೆ.

ಪ್ರ—ಇವರ ಜಿತೇಂದ್ರಿಯತ್ವವೇನಾಯಿತು?

ಉ—ವಿದೇಶಗಳ ಪೋಷಾಕುಗಳ ವ್ಯಾಮೋಹದಿಂದ ವೈರಾಗ್ಯರಮಾಡಿ ವಿನಾಶವಾಯಿತು.

ಪ್ರ—ಇವರಿ ಅನಾರ್ಯವೃತ್ತಿಯು ಅದೇಶಸ್ಥಾನವಾಗಿದೆಯೆಂದು ಹೇಳಬಹುದಲ್ಲ?

ಉ—ಶಾಂತಂ ಪಾಪಂ! ಶಾಂತಂ ಪಾಪಂ! ಇನ್ನು ಆರ್ಯಾವರ್ತನದ ಚಿಹ್ನಗಳು ಅಲ್ಲಲ್ಲಿ ತೋರುತ್ತಿರುವವು.

ಇಷ್ಟು ಆಗುವದರೊಳಗಾಗಿ ಸಾಯಂಕಾಲವು ಸಮೀಪಿಸಿತು. ಸರ್ವರೂ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು.

ಪಂಚಾಚಾರ್ಯ ಪ್ರಭಾ.

೧೯೨೩ ಸಂವತ್ಸರ ೨೧
೧೯೩೩ನೇ ಡಿಸೆಂಬರ್ ತಾ|| ೧೧ನೇ ಸೋಮವಾರ.

ಧರ್ಮಮಾರ್ಗದಿಂದಲೇ ನಡೆಯಬೇಕು.

ಈಗಿನಕಾಲದಲ್ಲಿ ಪ್ರಾಯಶಃ ಎಲ್ಲಿ ನೋಡಿದರೂ ಜನಗಳು ತಮ್ಮ ತಮ್ಮ ಜೀವನೋಪಾಯವನ್ನೂ ಧನಾರ್ಜನೆಯನ್ನೂ ಖ್ಯಾತಿಯನ್ನೂ ಪಡೆಯುವುದರಲ್ಲಿ ಆಸಕ್ತರಾಗಿದ್ದಾರೆಯೇ ಹೊರತು ಆತ್ಮೋದ್ಧಾರ ಸಾಧನವಾದ ಧರ್ಮಾನುಷ್ಠಾನಗಳೆಂದರೆ ಒಬ್ಬರಿಗೂ ಬೇಕಾಗಿಲ್ಲವು. ಮುಂದೆ ಏನಾದರೂ ಆಗಲಿ, ಇರುವವರಿಗೆ ಪ್ರತಿಷ್ಠಾವಂತರಾಗಿಯೂ ದ್ರವ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇದ್ದರೆ ಸಾಕೆಂಬ ಭಾವನೆಯು ಜನಗಳಲ್ಲಿ ಬೇರೂರುತ್ತ ಬಂದಿರುತ್ತದೆ. ತಮ್ಮ ಧನಾರ್ಜನೆಗೂ, ಪ್ರತಿಷ್ಠೆಗೂ, ತಮ್ಮ ಸ್ವೇಚ್ಛಾವಿಹಾರಕ್ಕೂ ಯಾವುದು ಅಡ್ಡಿಮಾಡುವುದೋ ಅದೆಲ್ಲವೂ ಅಧರ್ಮವೆಂತಲೂ, ಯಾವುದು ಅನುಕೂಲವಾಗಿರುವುದೋ ಅದೆಲ್ಲವೂ ಧರ್ಮವೆಂತಲೂ ಹೇಳಲು ಹಿಂಜರಿಯುವುದಿಲ್ಲ. ಆದರೆ ಮಾನವನಿಗೆ ಪ್ರತಿಷ್ಠೆ, ಧನಾರ್ಜನೆ ಸ್ವೇಚ್ಛಾವಿಹಾರ ಮುಂತಾದ ಗುಣಗಳೇ ಮುಖ್ಯಗುಣಗಳಲ್ಲ. ಇವು ಪ್ರತಿಯೊಬ್ಬ ಮನುಷ್ಯನಿಗೂ ತಾನಾಗಿ ಹುಟ್ಟುವ ಗುಣಗಳಲ್ಲದೆ ಕಲಿಯಬೇಕಾದ ಗುಣಗಳಲ್ಲವು. ನೀರಿಗೆ ಹಳ್ಳವಿದ್ದ ಕಡೆ ಹರಿಯುವುದು ಹೇಗೆ ಸ್ವಭಾವಗುಣವಾಗಿರುವುದೋ ಹಾಗೆ ವಿಷಯಲಂಪಟನಾದ ಮಾನವನ ಮನಸ್ಸು ನಾನು ಧನಾರ್ಜನೆ ಮಾಡಬೇಕು, ಖ್ಯಾತನಾಗಬೇಕು, ಸ್ವತಂತ್ರತೆಯನ್ನು ಗಳಿಸಬೇಕೆಂದು ಬಯಸಲೇ ಬಯಸುತ್ತದೆ. ರಾಜನಾದಿಯಾಗಿ ತಿರುಕನವರೆಗೂ ಈ ಚಾಪಲ್ಯವು ಇದ್ದೇ ಇರುತ್ತದೆ. ಇಷ್ಟರಲ್ಲಿಯೇ ತೃಪ್ತನಾಗಿದ್ದರೆ ಮಾನವನ ಕರ್ತವ್ಯವು ಪೂರ್ಣವಾದಂತಾಗಲಿಲ್ಲ. ಮಾನವನು ಖ್ಯಾತಿಯನ್ನೇ ಪಡೆಯಲಿ, ಧನವನ್ನೇ ಆರ್ಜಿಸುತ್ತಿರಲಿ, ಯಾವುದನ್ನು ಮಾಡಿದರೂ ಧರ್ಮಮಾರ್ಗವನ್ನು ಬಿಟ್ಟು ಮಾಡಬಾರದು. ಹಾಗೆ ಧರ್ಮಮಾರ್ಗವನ್ನು ಬಿಟ್ಟು ಧನಾರ್ಜನೆಮಾಡುವವರಾಗಲಿ, ಪ್ರತಿಷ್ಠಾಕಾಮಿಗಳಾಗಲಿ ಇವರೆಲ್ಲರನ್ನೂ ರಾಕ್ಷಸಾಂಶಸಂಭೂತರೆಂದೇ ಹೇಳಬೇಕಾಗುವದಲ್ಲದೆ ದೇವಾಂಶಸಂಭೂತರೆಂದು ಹೇಳಲವಕಾಶವಿಲ್ಲ. ಹಿಂದೆ ರಾವಣಾದಿ ಮಹಾ ಮಹಾ ರಾಕ್ಷಸರೂ ಸಹ ಪ್ರತಿಷ್ಠಾವಂತರಾಗಿಯೂ ಅಖಂಡೈಶ್ವರ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇದ್ದರು. ಅವರ ಹೆಸರನ್ನು ಕೇಳಿದಮಾತ್ರದಿಂದ ಪ್ರತಿಯೊಬ್ಬನೂ ಕೋಪದಿಂದ ತಪ್ತನಾಗಿ ಹೋಗುವುದರಿಂದ ಅವರೆಲ್ಲರೂ ದುಷ್ಟಾತ್ಮರೆನಿಸಿಕೊಳ್ಳಲ್ಪಡುತ್ತಾರಲ್ಲದೆ ಸತ್ಪುರುಷರೆನಿಸಿಕೊಳ್ಳಲ್ಪಡುವುದಿಲ್ಲ. ರಾಮಾದಿಗಳು ಬಹಳಕಾಲದವರೆಗೆ ಹೊಟ್ಟೆಗೆ ಅನ್ನಾಹಾರಾದಿಗಳಿಲ್ಲದೆ ಕಾಡಿನಲ್ಲಿ ಅಲೆಯುತ್ತಿದ್ದರೂ ಚಕ್ರವರ್ತಿಪದವಿಯನ್ನನುಭವಿಸಿದ್ದರೂ ಅವರೆಲ್ಲರೂ ಮಹಾತ್ಮರೆನಿಸಿಕೊಳ್ಳಲ್ಪಟ್ಟು ತದಾರಭ್ಯ ಮುಂದೆ ಪ್ರಪಂಚವಿರುವವರೆಗೂ ಸ್ತುತ್ಯಕೋಟಿಯಲ್ಲಿ ಸೇರಿದ್ದಾರೆ. ಹೀಗೆ ರಾವಣಾದಿ ರಾಕ್ಷಸರೂ, ರಾಮಾದಿ ಮಹಾರಾಜರೂ ಪ್ರತಿಷ್ಠೆ ಅಖಂಡೈಶ್ವರ್ಯ ಸಾಮ್ರಾಜ್ಯ ಸ್ವೇಚ್ಛಾವಿಹಾರತ್ವಾದಿ ಗುಣಗಳಲ್ಲಿ ಸಮಾನರಾಗಿದ್ದರೂ ರಾವಣಾದಿಗಳು ಯಾವಾಗಲೂ ಅಧರ್ಮಮಾರ್ಗದಲ್ಲಿಯೇ ಇದ್ದುದರಿಂದ ಅಪವಿತ್ರಾತ್ಮರೆಂದೂ, ಶ್ರೀ ರಾಮಾದಿಗಳು ಕಷ್ಟದಶೆಯಲ್ಲೂ ಧರ್ಮಮಾರ್ಗವನ್ನು ಬಿಡದೆ ಇದ್ದುದರಿಂದ ಪವಿತ್ರಾತ್ಮರೆಂದೂ ಪ್ರತಿಯೊಬ್ಬರು ಸ್ವಭಾವಜನ್ಯವಾದ ಅವರವರ ಗುಣಾಗುಣಗಾನವನ್ನು ಮಾಡುತ್ತಲೇ ಬಂದಿರುತ್ತಾರೆ. ಇದರಿಂದ ಮನುಷ್ಯನು ಎಷ್ಟು ಖ್ಯಾತಿಯನ್ನು ಪಡೆಯಬೇಕಾಗಿದ್ದರೂ, ದ್ರವ್ಯಾರ್ಜನೆ ಮಾಡಬೇಕಾಗಿದ್ದರೂ, ಸ್ವಾತಂತ್ರ್ಯವನ್ನು ಗಳಿಸಬೇಕಾಗಿದ್ದರೂ ಧರ್ಮರಹಸ್ಯವನ್ನು ಅನುಸರಿಸಿರಬೇಕಲ್ಲದೆ ಧರ್ಮಮಾರ್ಗವನ್ನತಿಕ್ರಮಿಸಿರಲಾಗದೆಂದು ಸ್ಪಷ್ಟವಾಗುತ್ತದೆ.

ಈಗಿನ ನೂತನ ವಾತಾವರಣದಲ್ಲಿ ಧರ್ಮವೆಂಬುದು ಗೋಸುಂಬೆಯಂತೆ ನಾನಾರೂಪವನ್ನು ಹೊಂದುತ್ತ ಬರುತ್ತಲಿದೆ. ಹೀಗೆ ನಾನಾರೂಪವನ್ನು ಹೊಂದುವುದಕ್ಕೆ ಜನಗಳ ಚಾಂಚಲ್ಯವೃತ್ತಿಯೇ ಕಾರಣವಾಗಿದೆಯಲ್ಲದೆ ವಾಸ್ತವವಾಗಿ ಧರ್ಮವು ನಾನಾಕಾರವನ್ನು ಹೊಂದಲಾರದು. ಜಗದಾದಿಯಲ್ಲಿ ಪರಮೇಶ್ವರನು ಜಗತ್ತನ್ನು ಸೃಷ್ಟಿಸಿ ಆ ಜಗದುದ್ಧಾರಕ್ಕಾಗಿ ವೇದಗಳನ್ನು ಸೃಷ್ಟಿಸಿದನು. ವೇದಗಳಲ್ಲಿ ಯಾವುದು ಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಧರ್ಮವೆಂದೂ, ಯಾವುದು ಅಧರ್ಮವೆಂದು ಹೇಳಲ್ಪಟ್ಟಿದೆಯೋ ಅದೇ ಅಧರ್ಮವೆಂದೂ ಪೂರ್ವಾಚಾರ್ಯರಾಗಲಿ, ಮಹರ್ಷಿಗಳಾಗಲಿ ಎಲ್ಲರೂ "ವೇದೇನ ಪ್ರಯೋಜನಮುದ್ದಿಶ್ಯ ವಿಧೀಯಮಾನೋ ಧರ್ಮಃ" ಎಂದು ಏಕಮುಖದಿಂದ ಒಪ್ಪಿಕೊಂಡಿರುತ್ತಾರೆ. ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನನ್ನು ಸಂಬೋಧಿಸಿ—

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ |
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ||

ಯಾವ ಕಾರ್ಯವನ್ನು ಮಾಡಬೇಕೋ ಯಾವ ಕಾರ್ಯವನ್ನು ಮಾಡಬಾರದೋ ಎಂಬ ವ್ಯವಸ್ಥೆಯನ್ನು ವೇದಾಧಾರದಿಂದಲೇ ಮಾಡಿಕೊಳ್ಳಬೇಕು. ಯಾವ ಕರ್ಮವು ವೇದದಲ್ಲಿ ವಿಧಿಸಲ್ಪಟ್ಟಿರುತ್ತದೆಯೋ ಅಂಥ ಕರ್ಮವನ್ನೇ ಮಾಡಬೇಕು. ವೇದದಲ್ಲಿ ವಿಧಿಸಲ್ಪಡದಿರುವುದನ್ನು ಮಾಡಬಾರದೆಂದು ಹೇಳಿರುತ್ತಾನೆ. ಆದುದರಿಂದ ಧರ್ಮಾಧರ್ಮನಿರ್ಣಯವು ವೇದದಿಂದಲೂ ಆ ವೇದಾನುಸಾರಗಳಾದ ಸ್ಮೃತ್ಯಾದಿಗಳಿಂದಲೂ ಆಗಬೇಕಾಗಿದೆಯಲ್ಲದೆ ಕಾಲಾನುಗುಣವಾಗಿ ತಮ್ಮ ಮನಸ್ಸಿಗೆ ಬಂದಹಾಗೆಲ್ಲ ಧರ್ಮನಿರ್ಣಯಮಾಡಿಕೊಳ್ಳಬಾರದು.

ಪ್ರಕೃತದಲ್ಲಿ ಅನೇಕರು ಒಂದೊಂದು ರಾಜ್ಯಕಾರ್ಯದಲ್ಲೋ ಬೇರೆ ಇತರ ಕಾರ್ಯಗಳಲ್ಲೋ ಹೊರಟು ಅದು ತಮ್ಮಿಂದ ಕೊನೆಗಾಣಿಸಲು ಆಗದೆ ಯಾವುಯಾವುದೋ ಅಸಂಬದ್ಧ ಕಾರ್ಯಕಾರಣಗಳನ್ನು ಮನಸ್ಸಿನಲ್ಲಿ ಊಹಿಸಿಕೊಂಡು, ಧರ್ಮವಿನಿಮಯಗೊಳಿಸಲು ಹೊರಡುತ್ತಾರೆ. ಇದರಿಂದ ಧರ್ಮದ ಎಲ್ಲೆಯನ್ನು ವಿಚಾರದರುವ ಜನಗಳಿಗೂ ಇವರಿಗೂ ಯಾದವೀಕಲಹಕ್ಕೆ ಪ್ರಾರಂಭವಾಗುವುದು.

ಏಕೆಂದರೆ—ವೇದಶಾಸ್ತ್ರಪುರಾಣಗಳನ್ನು ತಿಳಿದ ಪ್ರಾಚೀನಸಂಪ್ರದಾಯದ ಗುರುಜನಗಳು ಪ್ರಾಚೀನಕಾಲದಿಂದ ರೂಢವಾಗಿ ಬಂದ ಧರ್ಮಾಧರ್ಮಗಳ ನಿಬಂಧನೆಯ ಮೂಲೋತ್ಪಾಟನೆಗೆ ಒಪ್ಪುವದಿಲ್ಲ. ಹಾಗೆ ಧರ್ಮೋತ್ಪಾಟನೆಮಾಡುವುದೂ, ಪ್ರಾಣಬಿಡುವುದೂ ಎರಡೂ ಒಂದೇ ಆಗಿದೆ. ಸ್ವಾತಂತ್ರ್ಯಸಾಧನೆಯಾಗಲಿ ದೇಶಾಭ್ಯುದಯವಾಗಲಿ, ಸ್ವಾಭ್ಯುದಯವಾಗಲಿ ಎಲ್ಲವನ್ನೂ ಸನಾತನಧರ್ಮದವರು ಬಹಳ ಸುಲಭಹಲದಿಂದ ಸಾಧಿಸಲು ಅಪೇಕ್ಷಿಸುತ್ತಾರೆ. ಆದರೆ ಸನಾತನಧರ್ಮಕ್ಕೆ ವಿರೋಧವಾದ ಸ್ವಾತಂತ್ರ್ಯವನ್ನಾಗಲಿ ದೇಶಾಭ್ಯುದಯವನ್ನಾಗಲಿ ಅಪೇಕ್ಷಿಸುವವರಲ್ಲ. ಧರ್ಮವೇ ಹಾಳಾದಮೇಲೆ ಉಳಿದ ಸ್ವಾತಂತ್ರ್ಯಾದಿಗಳೆಲ್ಲ ಆತ್ಮವಿಲ್ಲದ ಶರೀರಕ್ಕೆ (ಹೆಣಕ್ಕೆ) ಅಲಂಕಾರಮಾಡಿದಂತೆ ವ್ಯರ್ಥವಾಗುವುದು. ಗುರುದೇವತಾಭಕ್ತಿ ಮೊದಲಾದ ಆಸ್ತಿಕ್ಯಧರ್ಮಗಳೊಂದೊಡಗೂಡಿದ ಐಹಿಕಸೌಖ್ಯವನ್ನನುಭವಿಸುತ್ತಿರುವುದೇ ಸನಾತನಿಗಳ ಕರ್ತವ್ಯವು. ಧರ್ಮಸಾಧ್ಯವಾದ ಆಧ್ಯಾತ್ಮಸೌಖ್ಯವನ್ನೇ ಮರೆತು ಕೇವಲ ಬಾಹ್ಯಾಡಂಬರಸೌಖ್ಯದಲ್ಲಿ ಮಗ್ನನಾದವನು 'ಪ್ರತ್ಯಕ್ಷಮೇಕಂ ಚಾರ್ವಾಕಃ' ಎಂಬ ಪ್ರಮಾಣದಂತೆ ಚಾರ್ವಾಕನೆನಿಸುವನು. ಧರ್ಮದೇವತೆಯನ್ನು ತಳ್ಳಿ ವಿದೇಶೀಯರಂತೆ ಸ್ತ್ರೀಯರಾಗಲಿ ಪುರುಷರಾಗಲಿ ಎಲ್ಲರೂ ಎಲ್ಲಾ ಭಾಗದಲ್ಲಿ ಸ್ವಾತಂತ್ರ್ಯವನ್ನು ಬಯಸುತ್ತ ಬಂದಲ್ಲಿ ಅದರಿಂದಾಗುವ ಅನರ್ಥಪರಂಪರೆಯು ಎಷ್ಟೆಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿ ತಿಳಿಯದೆ ಹೋಗುವುದಿಲ್ಲ. ಆದ್ದರಿಂದ ಯಾರೂ ಧರ್ಮವಿರುದ್ಧಕಾರ್ಯದಲ್ಲಿ ಕೈಹಾಕಬಾರದೆಂದು ಕೋರುತ್ತೇವೆ. ~~ಅನಾದಿಕಾಲದಿಂದ ನಡೆದುಬಂದ ಧರ್ಮವಿಚಾರ ಸನಾತನರ ಹೃದಯವನ್ನು ... ಹಾಗೆ ... ಇದೆ.~~

ಉಜ್ಜಯಿನೀ ಜಗದ್ಗುರುಗಳವರ ದೇಹಸ್ಥಿತಿ.

ಉಜ್ಜಯಿನೀ ಜಗದ್ಗುರುಗಳವರು ಈಗ್ಗೆ ೧-೨ ತಿಂಗಳುಗಳಿಂದ ಸೊಲ್ಲಾಪುರ ಡಿ|| ಪಂಢರಪುರದಲ್ಲಿ ಮೊಕ್ಕಾಂ ಮಾಡಿರುವುದು ಸರಿಯಷ್ಟೆ! ಆದರೆ ಈಗ ೧೦-೧೨ ದಿವಸಗಳಿಂದ ಶ್ರೀಗಳವರಿಗೆ ನ್ಯುಮೋನಿಯಾ ಜ್ವರವು ಪ್ರಾಪ್ತವಾಗಿ, ಜ್ವರವು ೧೦೪-೧೦೫ ಡಿಗ್ರಿಗಳವರೆಗಿದ್ದು ವಿಶೇಷ ತೊಂದರೆಯನ್ನುಂಟುಮಾಡಿರುತ್ತದೆಂದು ಪಂಢರಪುರದ ಭಕ್ತರು ಒಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿದ್ದರು. ಈ ಪ್ರಸಿದ್ಧಪತ್ರಿಕೆಯನ್ನು ನೋಡಿ ಮೊನ್ನೆ ಶನಿವಾರದ ದಿವಸ ಪಂಢರಪುರಕ್ಕೆ ಟೆಲಿಗ್ರಾಂ ಕೊಟ್ಟಿದ್ದೆವು. ನಿನ್ನೆಯ ದಿವಸ ಅಲ್ಲಿಂದ "ಶ್ರೀಗಳವರ ಶರೀರದಲ್ಲಿ ಈಗ ಸ್ವಲ್ಪ ಉತ್ತಮವಾಗಿದೆ. ಈ ದಿವಸ ಸನ್ನಿಧಿಯವರು ಸೊಲ್ಲಾಪುರಕ್ಕೆ ದಯಮಾಡಿಸತಕ್ಕವರಾಗಿದ್ದಾರೆ." ಎಂದು ಉತ್ತರವು ಬಂದಿತು. ಇದರಿಂದ ಎಲ್ಲಾ ಜನಗಳ ಮನಸ್ಸಿಗೆ ಸಮಾಧಾನವೆನಿಸಿದೆ. ಜಗದೀಶ್ವರನ ದಯೆಯಿಂದ ಶೀಘ್ರಗುಣವಾಗಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ವೈಸ್‍ರಾಯರ ನಿಸ್ಸಾರವಾದ ಭಾಷಣ.

ಇದೇ ಡಿಸೆಂಬರ್ 4 ನೇ ತಾರೀಖಿನ ದಿವಸ ರಾತ್ರಿ ರಾಜಭೋಜನಾನಂತರದಲ್ಲಿ ವೈಸ್‍ರಾಯರವರು ಸದ್ಯದ ಆರ್ಥಿಕಪರಿಸ್ಥಿತಿ ಮತ್ತು ಮೈಸೂರಿನ ಕೈಗಾರಿಕೆ ಮತ್ತು ವಾಣಿಜ್ಯಾಭಿವೃದ್ಧಿಯ ವಿಷಯವಾಗಿ ಭಾಷಣಮಾಡಿ, ಅನಂತರ ಪ್ರೊಗದಿಯ ವಿಷಯವನ್ನೆತ್ತಿಕೊಂಡು, ಇಂಡಿಯಾ ಸರಕಾರದ ಆರ್ಥಿಕಸ್ಥಿತಿಯು ಉತ್ತಮಗೊಂಡಕೂಡಲೇ ಡೇವಿಡ್‍ಸನ್ ಸಮಿತಿ ಮತ್ತು ಶ್ವೇತಪತ್ರಗಳ ಸಲಹೆಗಳನ್ನನುಸರಿಸಿ ಅತ್ಯಂತ ಸಹಾನುಭೂತಿಯಿಂದ ತೀರ್ಮಾನಿಸಲಾಗುವದೆಂದೂ, ಬೆಂಗಳೂರು ಕಂಟೋನ್ಮೆಂಟನ್ನು ಮೈಸೂರಿಗೆ ಹಿಂತಿರುಗಿ ಕೊಡುವ ವಿಷಯವನ್ನು ಇಂಡಿಯಾಸರಕಾರದವರು ಪರಿಶೀಲಿಸುತ್ತಿರುವರೆಂದೂ, ಇಷ್ಟರಲ್ಲಿಯೇ ಉಭಯಸರಕಾರಗಳೂ ಸಮರ್ಪಕವಾದ ತೀರ್ಮಾನವಾಗುವದೆಂದೂ ಹೇಳಿದರು. ಮತ್ತು ಇದುವರೆಗೆ ಮೈಸೂರು ಸರಕಾರದವರು ಬ್ರಿಟಿಷ್ ಸರಕಾರದವರೊಡನೆ ಪೂರ್ವದಲ್ಲಿ ಮಾಡಿಕೊಂಡಿದ್ದ ಕರಾರಿನಂತೆ ಯಾವ ಹೊಸ ಕಾನೂನನ್ನು ಮಾಡಬೇಕಾದರೂ ಗವರ್ನರ್ ಜನರಲ್‍ರವರ ಅಪ್ಪಣೆಯನ್ನು ಪಡೆಯಬೇಕಾಗಿತ್ತು. ಆದರೆ ವೈಸ್‍ರಾಯರು, ಕರಾರಿನಲ್ಲಿ ಇದಕ್ಕೆ ಸಂಬಂಧಪಟ್ಟದ್ದ 18 ನೆಯ ನಿಬಂಧನೆಯನ್ನು ರದ್ದುಮಾಡಿರುವದಾಗಿಯೂ, ಇನ್ನುಮುಂದೆ ಮೈಸೂರು ಸರಕಾರದವರು ಅವಶ್ಯಕವಾದ ಕಾನೂನುಗಳನ್ನು ಸ್ವತಂತ್ರವಾಗಿ ರಚಿಸಿಕೊಳ್ಳಬಹುದೆಂದೂ ಭಾಷಣಮಾಡಿದರು. ೧೮ನೆಯ ಕರಾರನ್ನು ರದ್ದುಮಾಡಿದ್ದರಿಂದ ಮೈಸೂರು ಸರಕಾರಕ್ಕೆ ವಿಶೇಷವಾದ ಸ್ವಾತಂತ್ರ್ಯವು ದೊರೆತಂತಾಯಿತು. ಇದೊಂದು ಮಾತ್ರ ಸಂತೋಷಕರವಾದ ವಿಷಯವಾಗಿದೆ.

ಈ ವಾರದ ಪತ್ರಿಕೆಯಸಂಗಡ ನಮ್ಮ ಚಂದಾದಾರರಿಗೆಲ್ಲಾ ೧೯೩೪ ನೆಯ ಇಸ್ವಿಯ ಕ್ಯಾಲೆಂಡರ ಕಳುಹಿಸಲ್ಪಟ್ಟಿದೆ.

ತುಮಕೂರು ಡಿಸ್ಟ್ರಿಕ್ಟ್ ಆಸ್ಪತ್ರೆಯ ಲೇಡಿ ಸರ್ಜನ್ನರಾದ ಮಿಸೆಸ್ ಎ. ಜೆ. ಲ್ಯಾಯ್, ಎಲ್. ಎಂ. ಎಸ್. ಎಲ್. ಎಂ. ರವರಿಗೆ ಕೊಟ್ಟಿದ್ದ ಒಂದು ತಿಂಗಳ ರಜೆಯು ಪುನಃ 1 ತಿಂಗಳಕಾಲ ಹೆಚ್ಚಿಸಲ್ಪಟ್ಟಿದೆ.

ಮಂಡ್ಯದ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮಿ|| ಬಿ. ಸುಬ್ರಹ್ಮಣ್ಯಶಾಸ್ತ್ರಿ ಬಿ. ಎ., ಬಿ. ಎಲ್. ರವರಿಗೆ ಇದೇ ಡಿಸೆಂಬರ 6 ನೇ ತಾರೀಖಿನಿಂದ 18 ದಿವಸಗಳ ಪ್ರಿವಿಲೇಜ್ ರಜೆಯನ್ನು ಕೊಡಲಾಗಿದೆ. ಈ ಅವಧಿಯಲ್ಲಿ ಮಂಡ್ಯದ ಅಡಿಷನಲ್ ಸ್ಪೆಷಲ್ ಫಸ್ಟ್‍ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಎಚ್. ನಿರಂಜನರಾಜ ಅರಸ್, ಬಿ.ಎ., ಇವರು ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೆಲಸವನ್ನು ನೋಡುವರು.

ವರ್ತಮಾನಸಂಗ್ರಹ.

ಲಂಡನ್ನಿನ ಒಬ್ಬನೊಬ್ಬ ಶ್ರೀಮಂತನು ನೆಪೋಲಿಯನ್ನನು ಬರೆದ 8 ಪ್ರೇಮಪತ್ರಗಳನ್ನು 80,000 ರೂಪಾಯಿಗಳಿಗೆ ಕೊಂಡುಕೊಂಡನು.

ಫ್ರಾನ್ಸ್ ಸರಕಾರದವರು 'ಹಾವರ್' ಎಂಬ ರೇವನ್ನು ಉತ್ತಮಗೊಳಿಸುವದಕ್ಕಾಗಿ 6,00,00,000 ರೂಪಾಯಿಗಳನ್ನು ವೆಚ್ಚ ಮಾಡುವರಂತೆ!

ಸಯಾಂ ದೇಶದ ಒಂದಾನೊಂದು ರೈಲ್ ಗಾಡಿಯಲ್ಲಿ ರವಾನಿಸಲ್ಪಡುತ್ತಿದ್ದ 3,50,00,000 ರೂಪಾಯಿಗಳ ಭಂಗಾರವನ್ನು ಯಾರೋ ಕಳ್ಳರು ಅಪಹರಿಸಿರುವರು.

ಅಕ್ಟೋಬರ್ ತಿಂಗಳಿಗೆ ಅವಸಾನವಾಗುವ 7 ತಿಂಗಳುಗಳಲ್ಲಿ ಬ್ರಿಟಿಷ್ ಸರಕಾರದವರಿಗೆ ಸುಂಕದ ಬಾಬಿನಲ್ಲಿ 3 ಕೋಟಿ ರೂಪಾಯಿಗಳ ಉತ್ಪನ್ನವು ಕಡಿಮೆಯಾಗಿರುವದಂತೆ!

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ 1,75,47,000 ಟೆಲಿಫೋನುಗಳೂ, ಜರ್ಮನಿಯಲ್ಲಿ 29,60,401 ಟೆಲಿಫೋನುಗಳೂ, ಇಂಗ್ಲೆಂಡಿನಲ್ಲಿ 21,41,700 ಟೆಲಿಫೋನುಗಳೂ ಉಪಯೋಗದಲ್ಲಿರುವವಂತೆ!

ಪಂಡಿತ ಜವಾಹಿರಲಾಲ ನೆಹರೂರವರು ಅನೇಕ ವರ್ಷಗಳಿಂದಲೂ ಆದಾಯದ ತೆರಿಗೆಯನ್ನು ಕೊಟ್ಟಿಲ್ಲವೆಂಬ ಕಾರಣದ ಮೇಲೆ ಸರಕಾರದವರು ಅವರ ಸಂಬಂಧಿ 20,000 ರೂಪಾಯಿ ಬೆಲೆಬಾಳುವ ರೈಲ್ವೇ ಪೇರ್ ಸರ್ಟಿಫಿಕೇಟುಗಳನ್ನು ಜಪ್ತು ಮಾಡಿರುತ್ತಾರೆ.

ಸದ್ಯದ ರಾಜಕೀಯಪರಿಸ್ಥಿತಿಯನ್ನು ಕುರಿತು ಚರ್ಚಿಸುವದಕ್ಕಾಗಿ 'ಅಖಿಲಭಾರತ ಕಾಂಗ್ರೆಸ್‍ಕಮಿಟಿ'ಯನ್ನು ಸೇರಿಸಬೇಕೆಂದು ಕಾಂಗ್ರೆಸ್ಸಿನವರು ಪ್ರಯತ್ನಿಸುತ್ತಿರುವರು. ಆದರೆ ವೈಸ್ರಾಯರವರು ಯಾವ ಕಾರಣದಿಂದಲೂ ಅದನ್ನು ಸೇರಗೊಡಕೂಡದೆಂದು ಅಪ್ಪಣೆಮಾಡಿರುವರೆಂದು ತಿಳಿದುಬಂದಿರುತ್ತದೆ.

ಬ್ರಿಟಿಷ್ ಮಂತ್ರಿಮಂಡಲದಲ್ಲಿರುವ ಚೋರಿಸಂಗಡದ ಮಂತ್ರಿಗಳೆಲ್ಲರೂ ಮಂತ್ರಿಶ್ರೇಷ್ಠರಾದ ಮಿ|| ರಾಂಸೆ ಮ್ಯಾಕ್‍ಡೋನಾಲ್ಡರಿಗೆ ನಾನಾರೀತಿಯಲ್ಲಿ ತೊಂದರೆಗಳನ್ನುಂಟುಮಾಡುತ್ತಿರುವದರಿಂದ, ಮಿ|| ಮ್ಯಾಕ್ಡೋನಾಲ್ಡರವರು ಮಂತ್ರಿಪದವಿಯನ್ನು ಬಿಟ್ಟು ಇಂಡಿಯಾಕ್ಕೆ ವೈಸ್ರಾಯರಾಗಿ ಬರಬಹುದೆಂದು ಊಹಿಸಲ್ಪಟ್ಟಿರುವದು.

ರಷ್ಯಾದೇಶದ ಪ್ರೊಫೆಸರ್ ಎಲ್. ಎ. ಇಲ್ಲಿನ್ ಎಂಬ ತರುಣ ಶಾಸ್ತ್ರಜ್ಞರು ಕುರಿಗಳ ಉಣ್ಣೆಯು ಕತ್ತರಿಸದೆ ತಾನಾಗಿ ಉದುರುವಂತೆ ಒಂದು ಹೊಸಪ್ರಯೋಗವನ್ನು ಕಂಡುಹಿಡಿದಿರುವರಂತೆ! ಇವರು ಕಂಡುಹಿಡಿದಿರುವ ಒಂದು ವಿಧವಾದ ಔಷಧವನ್ನು ಕುರಿಗಳಿಗೆ ತಿನ್ನಿಸಿದರೆ, ಅವುಗಳ ಉಣ್ಣೆಯೆಲ್ಲವೂ ತಾನಾಗಿ ಉದುರಿಹೋಗುವದಂತೆ!

ಜಪಾನ್ ಸರಕಾರದವರು ಪೆಸಿಫಿಕ್‍ಸಾಗರದ ದ್ವೀಪಗಳಲ್ಲಿ ಗುಪ್ತವಾಗಿ ಯುದ್ಧದನಾವುಗಳನ್ನು ಶೇಖರಿಸುತ್ತಿರುವರೆಂಬ ವರ್ತಮಾನವು ಎಲ್ಲೆಲ್ಲಿಯೂ ಹರಡುತ್ತಿರುವದರಿಂದ, ಈ ವರ್ತಮಾನವು ನಿಜವೋ ಸುಳ್ಳೋ ಎಂಬುದನ್ನು ತಿಳಿದುಬರಲು ಅಮೇರಿಕೆಯ ಪ್ರೆಸಿಡೆಂಟ್ ರೂಜ್‍ವೆಲ್ಟ್‍ರವರು ಕೆಲವು ವಿಮಾನಗಳನ್ನು ಮೇಲ್ಕಂಡ ದ್ವೀಪಗಳ ಮೇಲೆ ಹಾರಾಡಿಬರುವಂತೆ ಕಳುಹಿಸಿರುವರು.

ಮುಂಬಯಿಗೆ ಸೇರಿದ ಸಾಂತಾಕ್ರೂಜ್‍ನಲ್ಲಿ ರಾಮುಬರೋನೆ ರಾಧಾಕೃಷ್ಣ ಎಂಬವನು ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳು ಮನೆಯೊಳಗಿರುವ ಸಮಯದಲ್ಲಿ ಹೊರಗಿನಿಂದ ಬೀಗ ಹಾಕಿ ಮನೆಗೆ ಬೆಂಕಿಯನ್ನು ಹಾಕಿ ಸುಟ್ಟನೆಂಬ ಕಾರಣದ ಮೇಲೆ ಹಿಡಿಯಲ್ಪಟ್ಟನೆಂದು ಗುರಿಯಾದನು. ಹೈಕೋರ್ಟಿನಲ್ಲಿ ಅಪೀಲ್ ಮಾಡಿದಲು ಅಲ್ಲಿಯೂ ಮರಣದಂಡನೆಯೇ ಖಾಯಂ ಆಯಿತು.

ಫ್ರೆಂಚರ ಯುದ್ಧದ ಸಿದ್ಧತೆ!

ಫ್ರಾನ್ಸ್ ಸರಕಾರದವರು ತಮ್ಮ ರಾಜ್ಯದ ಪೂರ್ವ ಮತ್ತು ಆಗ್ನೇಯಭಾಗಗಳ ರಕ್ಷಣಾರ್ಥವಾಗಿ ಆಫ್ರಿಕಾದೇಶದಿಂದ 5,00,000 ಜನ ಶಿಪಾಯಿಗಳನ್ನು ಕರೆತರಿಸಬೇಕೆಂದು ನಿರ್ಧರಿಸಿರುವರು.

ಗಾಂಧಿಯವರ ಸಂಚಾರಕ್ಕೆ ಬಹಿಷ್ಕಾರ!

ಗಾಂಧಿಯವರು ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಸಂಚಾರಮಾಡುವ ಕಾಲದಲ್ಲಿ ಸನಾತನಧರ್ಮಾನುಯಾಯಿಗಳೆಲ್ಲರೂ ಅವರನ್ನು ಬಹಿಷ್ಕರಿಸಬೇಕೆಂದು ಮ|| ರಾ|| ಎಂ. ಕೆ. ಆಚಾರ್ಯರವರು ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ.

ಬ್ರಿಟಿಷರ ಯುದ್ಧದ ಸಿದ್ಧತೆ!

ಬ್ರಿಟಿಷ್ ಸರಕಾರದವರು ಲಂಡನ್ ನಗರದ ರಕ್ಷಣಾರ್ಥವಾಗಿ, 15,000 ಅಡಿಗಳ ಎತ್ತರದಲ್ಲಿ ಗಂಟೆಯೊಂದಕ್ಕೆ 200 ಮೈಲುಗಳ ವೇಗದಲ್ಲಿ ಹೋಗಬಲ್ಲ 12 ಯುದ್ಧದ ವಿಮಾನಗಳನ್ನೂ 6 ಬೇರೆ ತರಹದ ವಿಮಾನಗಳನ್ನೂ ಆರ್ಡರು ಕೊಟ್ಟಿರುವರಂತೆ!

ಜರ್ಮನರ ಯುದ್ಧದ ಸಿದ್ಧತೆ!

ಜರ್ಮನಿಯವರು ಗುಪ್ತಕಾರ್ಖಾನೆಗಳಲ್ಲಿ ಮುಂದಿನ ಘೋರಯುದ್ಧದಲ್ಲಿ ಉಪಯೋಗಿಸುವುದಕ್ಕಾಗಿ ಸಹಸ್ರಾರು ತರಹದ ಹೊಸ ವಿಷಗ್ಯಾಸುಗಳನ್ನು ತಯಾರಿಸುತ್ತಿರುವರಂತೆ! ಈ ವಿಷದಗ್ಯಾಸುಗಳು ಕ್ಷಣಮಾತ್ರದಲ್ಲಿ ಒಂದೊಂದು ಸೈನ್ಯವನ್ನೇ ಅಥವಾ ಒಂದೊಂದು ನಗರವನ್ನೇ ನಾಶಮಾಡಬಲ್ಲವಂತೆ!

ಬ್ರಿಟಿಷ್ ಇಂಡಿಯಾದಲ್ಲಿ ಹೊಸತರಹದ ರಸೀದಿಸ್ಟಾಂಪು.

ಬ್ರಿಟಿಷ್ ಇಂಡಿಯಾ ಪ್ರಾಂತಗಳಲ್ಲಿ ಹಣಸಂದಿರಸೀತಿಗಳಿಗೆ ಟಪ್ಪಾಲು ಆಫೀಸಿನ ಸ್ಟಾಂಪುಗಳನ್ನೇ ಹಚ್ಚುವ ಪದ್ಧತಿಯು ಇದುವರೆಗೆ ಆಚರಣೆಯಲ್ಲಿತ್ತು. ಸರಕಾರದವರು ಇನ್ನು ಮುಂದೆ ರಸೀತಿಗಳಿಗೆ ಆ ಸ್ಟಾಂಪುಗಳನ್ನು ಹಚ್ಚದೆ ಅದಕ್ಕಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟಿರುವ ಆರ್ಥಾಣೆ, ಒಂದಾಣೆ, ಎರಡಾಣೆ ಮತ್ತು ನಾಲ್ಕಾಣೆಯ ಹೊಸತರಹದ ಸ್ಟಾಂಪುಗಳನ್ನೇ ಉಪಯೋಗಿಸತಕ್ಕದ್ದೆಂದೂ, 1934 ನೇ ಇಸವಿ ಜನವರಿ 1 ನೇ ತಾರೀಖಿನಿಂದ ಈ ಸ್ಟಾಂಪುಗಳು ಬಿಕರಿಗೆ ದೊರೆಯುವವೆಂದೂ, ಏಪ್ರಿಲ್ 1 ನೇ ತಾರೀಖಿನ ನಂತರ ಯಾರಾದರೂ ರಶೀತಿಗಳಿಗೆ ಪೋಸ್ಟಾಫೀಸಿನ ಸ್ಟಾಂಪುಗಳನ್ನು ಹಚ್ಚಿದರೆ ಪ್ರಯೋಜನವಾಗಲಾರದೆಂದೂ ಪ್ರಕಟಿಸಿರುವರು.

ಸತ್ತ ರಾಜಕುಮಾರನ ದಾವೆ!

1909 ನೇ ಇಸವಿಯಲ್ಲಿ ಭೋಪಾಲ್ ಸಂಸ್ಥಾನದ ದ್ವಿತೀಯ ರಾಜಕುಮಾರರಾದ ಕುಮಾರ ರಾಮೇಂದ್ರನಾರಾಯಣರಾಯ ಎಂಬವರು ಡಾರ್ಜಿಲಿಂಗಿಗೆ ಹೋಗಿದ್ದ ಕಾಲದಲ್ಲಿ ಯಾರೋ ವಿಷಪ್ರಯೋಗ ಮಾಡಿದುದರಿಂದ ಕುಮಾರರಾಯರು ಮೂರ್ಛೆ ಹೋದರು. ಆದರೆ ಇವರು ಮೃತಪಟ್ಟರೆಂದು ಭಾವಿಸಿ ಇತರರು ಇವರನ್ನು ಸ್ಮಶಾನಕ್ಕೆ ಎತ್ತಿಕೊಂಡು ಹೋಗುವಷ್ಟರಲ್ಲಿ ವಿಶೇಷವಾಗಿ ಮಳೆ ಮತ್ತು ಗಾಳಿಯು ಪ್ರಾಪ್ತವಾಗಲು ಕುಮಾರರಾಯರ ದೇಹವನ್ನು ಅಲ್ಲಿಯೇ ಬಿಟ್ಟು ಪರಾರಿಯಾದರು. ಮಳೆ ನಿಂತಮೇಲೆ ಅವರು ಹಿಂತಿರುಗಿ ಬಂದು ನೋಡಿದಾಗ ಕುಮಾರ ರಾಯರ ದೇಹವು ಅಲ್ಲಿರಲಿಲ್ಲ. ಬಂದಿದ್ದವರು ಅತ್ತಿತ್ತ ಹುಡುಕಿ ಆಶ್ಚರ್ಯದಿಂದ ಹಿಂದಕ್ಕೆ ತೆರಳಿದರು. 24 ವರ್ಷಗಳು ಕಳೆದ ನಂತರ ಈಗ ಆತನು ಪ್ರಕಟನಾಗಿ ಢಕ್ಕಾ ಸಬ್‍ಜಡ್ಜರಲ್ಲಿ ರಾಜ್ಯದ ಮೂರನೇ ಒಂದು ಭಾಗವು ತನಗೆ ಬರಬೇಕೆಂದು ಮೊಕದ್ದಮೆ ಹೂಡಿರುವನು. ಕುಮಾರ ರಾಯರು ತನ್ನ ಹೇಳಿಕೆಯಲ್ಲಿ, ಮಳೆಗಾಳಿಯಿಂದ ತನಗೆ ಎಚ್ಚರವಾಗಿ, ಬುದ್ಧಿಭ್ರಮಣೆಯಾಗಿದ್ದುದರಿಂದ ಏನೂ ತೋಚದೆ ಹೊರಟು ಹೋದೆನೆಂದೂ, ಪುನಃ ಜ್ಞಾನೋದಯವಾದಾಗ ಸನ್ಯಾಸಿಗಳ ಗುಂಪಿನಲ್ಲಿದ್ದೆನೆಂದೂ ಹೇಳಿರುವನು. ಮೊಕದ್ದಮೆಯು ನಡೆಯುತ್ತಿರುವದು.

ಜಪಾನರ ಯುದ್ಧದ ಸಿದ್ಧತೆ!

ಜಪಾನರ ನಾವಿಕಸೈನ್ಯದ ಸಿದ್ಧತೆಯು ಇತರ ರಾಷ್ಟ್ರಗಳಿಗೆಲ್ಲಾ ಬಹಳ ಕಳವಳವನ್ನುಂಟುಮಾಡುತ್ತಿರುವದು. ಕೆಲವು ದಿವಸಗಳ ಹಿಂದೆ ಜಪಾನ್ ಸರಕಾರದವರು 3 ದಿವಸಗಳವರೆಗೆ ಬಹಳ ಗುಪ್ತವಾಗಿ ಕೆಲವು ಹೊಸ ಯುದ್ಧದ ಹಡಗುಗಳ ಮತ್ತು ವಿಮಾನಗಳ ಪರೀಕ್ಷೆಯನ್ನು ನಡೆಯಿಸಿದರು. ಪರೀಕ್ಷೆಯು ನಡೆಯುವ ಪ್ರದೇಶಕ್ಕೆ ಬೇರೆ ಯಾರಿಗೂ ಪ್ರವೇಶವಿರಲಿಲ್ಲವಾದರೂ ಪರೀಕ್ಷೆಯ ಫಲಿತಾಂಶವು ಮಾತ್ರ ಸಂಪೂರ್ಣ ಸಮರ್ಪಕವಾಗಿತ್ತೆಂದು ತಿಳಿದು ಬಂದಿರುವದು. ಈ ಹೊಸ ಹಡಗುಗಳು ಶತ್ರುಪಕ್ಷದ ಹಡಗುಗಳನ್ನು ತಡೆಯುವಂತೆ ಭಯಂಕರಗಳಾದ ಸಿಡಿಮದ್ದುಗಳನ್ನು ಸಮುದ್ರಮಧ್ಯದಲ್ಲಿ ಶೇಖರಿಸಬಹುದಂತೆ! ಈ ಸಿಡಿಮದ್ದುಗಳು ಒಂದಕ್ಕೊಂದು ಸಮೀಪದಲ್ಲಿದ್ದು ಹೊರಕ್ಕೆ ಕಾಣಿಸದಂತೆ ನೀರಿನಲ್ಲಿಯೇ ಮುಳುಗಿರುವವಲ್ಲದೆ ಎಂತಹ ವೇಗವಾಗಿ ಹರಿಯುವ ನೀರಿನಲ್ಲಾದರೂ ಇದ್ದಲ್ಲಿಯೇ ಇರುವವಂತೆ! ವಿಮಾನಗಳು ಒಂದು ಹೊಸತರಹ ವಿಷಪದಾರ್ಥವನ್ನು ಸಮುದ್ರದ ಮೇಲೆ ಚೆಲ್ಲಿ ಹೋಗುವವು. ಈ ವಸ್ತುವು ನೀರಿಗೆ ತಗಲಿದ ಕೂಡಲೇ ಅಪಾರವಾದ ವಿಷದಗ್ಯಾಸು ಹುಟ್ಟಿ ಆ ಪ್ರದೇಶವನ್ನೆಲ್ಲಾ ಆವರಿಸಿ ಆ ಮಾರ್ಗವಾಗಿ ಬರುವ ಹಡಗುಗಳಲ್ಲಿರುವ ಜನರನ್ನು ನಾಶಗೊಳಿಸುವದಂತೆ! ಈ ವಿಮಾನಗಳು ಮತ್ತೊಂದು ತರಹ ಪದಾರ್ಥವನ್ನು ನೀರಿನ ಮೇಲೆ ಚಲ್ಲುವವು. ಇದರಿಂದ ಅಪರಿಮಿತವಾದ ಹೊಗೆಯು ಹುಟ್ಟಿ ಮಂಜು ಕವಿದಂತೆ ಎಲ್ಲ ಕಡೆಯಲ್ಲಿಯೂ ಹರಡಿಕೊಂಡು ಶತ್ರುಪಕ್ಷದ ಹಡಗುಗಳಿಗೆ ಹಿಂದೆಮುಂದೆ ಯಾವ ಕಡೆಗೆ ಹೋಗುವದಕ್ಕೂ ದಿಕ್ಕೇ ತೋಚದಂತೆ ಮಾಡುವದಂತೆ!

ಘಂಟೆಗೆ 16 ಮೈಲು ಉದ್ದ ಕಾಗದವನ್ನು ತಯಾರಿಸುವ ಯಂತ್ರ!

ಫ್ರಾಂಕ್ಲಿನ್ನಿನ ಒಂದಾನೊಂದು ಕಾರ್ಖಾನೆಯವರು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಒಂದು ಕಾಗದದ ಯಂತ್ರವನ್ನು ತಯಾರಿಸುತ್ತಿರುವರು. ಇದು ಒಂದು ವಾರಕ್ಕೆ 1000 ಟನ್ ವರ್ತಮಾನಪತ್ರದ ಕಾಗದವನ್ನು ತಯಾರಿಸಬಲ್ಲುದೆಂದು ಅಂದಾಜು ಹಾಕಲ್ಪಟ್ಟಿರುವದು. ಯಂತ್ರದ ವೇಗದಿಂದ ಅದು ಒಂದು ನಿಮಿಷಕ್ಕೆ 1,400 ಅಡಿ ಅಥವಾ ಘಂಟೆ 1ಕ್ಕೆ ಸುಮಾರು 16 ಮೈಲು ಉದ್ದ ಕಾಗದವನ್ನು ತಯಾರಿಸಬಲ್ಲುದೆಂದು ನಿರ್ಧರಿಸಲ್ಪಟ್ಟಿರುವದು.

ವಾಯುಮಂಡಲದ ವೈಚಿತ್ರ್ಯ!

ಖಗೋಳಶಾಸ್ತ್ರಜ್ಞರು ಈ ಭೂಮಿಯನ್ನು ಆವರಿಸಿರುವ ವಾಯುಮಂಡಲದಿಂದ ಪ್ರತಿನಿತ್ಯವೂ 1,00,00,000 ರಿಂದ 2,00,00,000 ದಷ್ಟು ನಕ್ಷತ್ರಗಳು ಸುಟ್ಟು ಬೂದಿಯಾಗುವವೆಂದು ಅಂದಾಜುಹಾಕಿರುತ್ತಾರೆ. ಹೀಗೆ ಸುಟ್ಟು ಬೂದಿಯಾಗುವ ನಕ್ಷತ್ರಗಳ ಸಂಖ್ಯೆಯನ್ನು ಸರಾಸರಿ 1,50,00,000 ಎಂದು ಲೆಕ್ಕಹಾಕಿದರೂ, ಒಂದು ವರ್ಷಕ್ಕೆ 5,25,00,00,000 ನಕ್ಷತ್ರಗಳು ಸುಟ್ಟುಹೋದಂತಾಯಿತು. ಹೀಗೆ ಸುಟ್ಟು ಹೋದ ಪ್ರತಿಯೊಂದು ನಕ್ಷತ್ರವೂ ಕಡೆಯಲ್ಲಿ ಬೂದಿಯಾಗಿ ಅದು ಕ್ರಮೇಣ ಭೂಮಿಯ ಮೇಲೆ ಬಂದು ಬೀಳುವದು. ಈ ರೀತಿ ಭೂಮಿಯ ಮೇಲೆ ಬೀಳುವ ಬೂದಿಯು ಒಂದು ವರ್ಷಕ್ಕೆ ಸುಮಾರು 45,000 ಟನ್‍ಗಳಾಗುವದೆಂದು ಶಾಸ್ತ್ರಜ್ಞರು ನಿರ್ಧರಿಸಿರುವರು. ಈ ಬೂದಿಯಿಂದ ಭೂಮಿಯು ತೂಕವು ವರ್ಷವರ್ಷಕ್ಕೂ ಹೆಚ್ಚುತ್ತಿರುವುದಾದರೂ ಅದರಿಂದ ಮತ್ತಾವ ತೊಂದರೆಯೂ ಆಗುವಂತಿಲ್ಲ. ಏಕೆಂದರೆ—ಈ ಬೂದಿಯು ನಮ್ಮ ಭೂಮಿಯ ಮೇಲೆ ಒಂದು ಅಂಗುಲದಷ್ಟು ದಪ್ಪನಾಗಿ ಬೀಳಬೇಕಾದರೆ 1,00,00,00,00,000 ವರ್ಷಗಳಿಗಿಂತಲೂ ಹೆಚ್ಚುಕಾಲ ಕಳೆಯಬೇಕಂತೆ!

17-6-74

ಶಿಷ್ಟಾಚಾರ...

(ಸನಾತನ ಧರ್ಮಪತ್ರಿಕೆಯ ಅನುವಾದ)

ಅನುವಾದಕ ಶಾಸ್ತ್ರಶೀಲ ಚರಪತ್ರಿಕಾಪಾಠಕರಾದ ಸುಜನರು ಶಿವಾರಾಧ್ಯಮಠ ಶ್ರೀ ಶಿವಾರಾಧ್ಯ ಗುರುಗಳು ...

ಧರ್ಮಪ್ರಧಾನವಾದ ಭಾರತದೇಶದೊಳಗೆ ಪೂರ್ವಕಾಲದಲ್ಲಿ ಶಿಷ್ಟಾಚಾರಕ್ಕೆ ಬಹಳ ಮಹತ್ವವಿದ್ದಿತು. ಪರದೇಶೀಯ ವಿಚಾರಗಳಿಂದ ಈಗ ನಮ್ಮ ಸಮಸ್ತ ಸದಾಚಾರಗಳು ಲುಪ್ತವಾಗುತ್ತಿರುವದು ದುರ್ದೈವವೇ ಸರಿ! ಅದರಂತೆ ವಿಶೇಷವಾಗಿ ನೈತಿಕ ಸಂಬಂಧವುಳ್ಳ ಶಿಷ್ಟಾಚಾರಗಳೂ ನಾಮಶೇಷವಾಗುತ್ತಿರುವವೆಂದರೆ ಹಾನಿಕರವಲ್ಲದೆ ನಾವು ಜಗತ್ತಿನಲ್ಲಿ ಪರಿಹಾಸಕ್ಕೆ ಗುರಿಯಾಗುವೆವು.

ಈಗೀಗ ಪಾಶ್ಚಾತ್ಯರೂ ಸದ್ವಿದ್ಯಾಪ್ರಭುಗಳೂ ಶಿಷ್ಟಾಚಾರದ ಕಡೆಗೆ ಅತ್ಯಂತ ಲಕ್ಷ್ಯಕೊಡುತ್ತಾರೆ. ನಮ್ಮ ದೇಶದಲ್ಲಿ ಹುಡುಗರಿಗೆ ಶಿಷ್ಟಾಚಾರದ ಶಿಕ್ಷಣವನ್ನೇ ಕೊಡುವದಿಲ್ಲ. ಆ ಹುಡುಗರೇ ದೊಡ್ಡವರಾಗಿ ಅತ್ಯಂತ ಸಾಧಾರಣ ಮಾತುಗಳಲ್ಲಿಯೇ ತಮ್ಮ ಮೂರ್ಖತ್ವವನ್ನೂ ಅಸಭ್ಯತೆಯನ್ನೂ ಹೊರಗೆಡವುತ್ತಾರೆ. ನಾವು ನಮ್ಮ ಸುಖವಿಲಾಸಗಳ ಕೂಡ ಆಚರಣೆ ವ್ಯವ ಗಳಿಂದ ಯಾರಿಗೂ ಕಷ್ಟವಾಗದಂತೆ ಎಚ್ಚರವುಳ್ಳವರಾಗಿರಬೇಕು. ಯಾವತರಹದ ಅಸಭ್ಯತೆಯೂ ಆಗಬಾರದು. ಮತ್ತು ಯಾರ ಮನಸ್ಸಿಗೂ ದುಃಖವಾಗಬಾರದು. ಈ ಹೊತ್ತು ಆರೋಗ್ಯ ಸಂಬಂಧ ಶಿಷ್ಟಾಚಾರದ ಸಾಧಾರಣ ನಿಯಮಗಳ ಕಡೆಗೆ ವಾಚಕರ ಮನಸ್ಸನ್ನು ಆಕರ್ಷಿಸಬೇಕಾಗಿದೆ.

೧. ನೀರು, ತುಪ್ಪ, ಹಾಲು ಮುಂತಾದ ಪದಾರ್ಥಗಳಲ್ಲಿ ಕೈಯನ್ನು ಹಾಕಬಾರದು. ಹಾಲಿನಲ್ಲಿ ಕೈಯಿಂದ ಸಕ್ಕರೆಯನ್ನು ಹಾಕಬಾರದು. ಚಮಚೆಯಿಂದ ಹಾಕಬೇಕು. ಅನಂತರ ಒಂದು ಗ್ಲಾಸಿನಿಂದ ಮತ್ತೊಂದು ಗ್ಲಾಸಿಗೆ ಹಾಲನ್ನು ಹಾಕುತ್ತ ಸಕ್ಕರೆ ಮತ್ತು ಹಾಲು ಕೂಡುವಂತೆ ಮಾಡಬೇಕು. ೨. ಯಾವ ಪಾತ್ರೆಯಲ್ಲಿ ಕುಡಿಯತಕ್ಕ ನೀರು, ಹಾಲು ಮೊದಲಾದ ಪದಾರ್ಥಗಳಿರುವವೋ ಆ ಪಾತ್ರೆಯಮೇಲೆ ಮುಚ್ಚುವದನ್ನು ಮರೆಯಬಾರದು. ಮತ್ತು ಆ ಪಾತ್ರೆಗಳನ್ನು ನೆಲಗಿಡುವದಕ್ಕಿಂತಲೂ ಸ್ವಲ್ಪ ಎತ್ತರವಾದ ಸ್ಥಾನದಲ್ಲಿ ಇಟ್ಟರೆ ಬಹಳ ಒಳ್ಳೆಯದು. ಎಲ್ಲಾ ಪದಾರ್ಥಗಳನ್ನು ಹಾಕಿಡುವ ಪಾತ್ರೆಗಳು ಒಳಗೂ ಕೂಡ ಬೆಳಗಲಿಕ್ಕೆ ಬರುವಂತಿರಬೇಕು. ಅಂಥ ಪಾತ್ರೆಗಳನ್ನೇ ಉಪಯೋಗಿಸಬೇಕು. ೩. ದೊಡ್ಡ ಪಾತ್ರೆಯಲ್ಲಿದ್ದ ಹಾಲು, ತುಪ್ಪ, ನೀರು ಮೊದಲಾದವುಗಳನ್ನು ತೆಗೆಯಲಿಕ್ಕೆ ಉಪಯೋಗಿಸುವ ತಂಬಿಗೆ, ಗ್ಲಾಸು, ಚಮಚೆಗಳನ್ನು ಮೊದಲು ಸ್ವಚ್ಛವಾಗಿ ನೀರಿನಿಂದ ತೊಳೆಯಬೇಕು. ಇಲ್ಲವೇ ಸ್ವಚ್ಛವಾದ ಅರಿವೆಯಿಂದ ಒರಸಿ ಉಪಯೋಗಿಸಬೇಕು. ೪. ನೀರು ಹಾಕಿರುವ ಹಾಡು, ಹಂಡೆ, ಕೊಡಗಳ ಹತ್ತರ ಕೈತೊಳೆದುಕೊಳ್ಳುವದಕ್ಕೋಸ್ಕರ ತುಂಬಿದ ತಂಬಿಗೆಯನ್ನು ಯಾವಾಗಲೂ ಇಟ್ಟಿರಬೇಕು. ನೀರಿನಿಂದ ತುಂಬಿದ ಹಂಡೆ, ಹಾಡು, ಕೊಡಗಳಲ್ಲಿ ಕೈಯನ್ನು ಹಾಕಬಾರದು. ನೀರನ್ನು ತುಂಬುವ ಕಾಲಕ್ಕೆ ತಂಬಿಗೆಯನ್ನು ಬಗ್ಗಿಸಿ ಕೈಗೆ ನೀರು ಹತ್ತದಂತೆ ತುಂಬಿಕೊಳ್ಳಬೇಕು. ೫. ಕೈ ತೊಳೆದುಕೊಳ್ಳಲಿಕ್ಕೆ ಅಥವಾ ಪಾತ್ರೆಗಳನ್ನು ಬೆಳಗಲಿಕ್ಕೆ ಸಿಕ್ಕ ಸಿಕ್ಕ ಸ್ಥಳದ ಮಣ್ಣನ್ನು ಉಪಯೋಗಿಸಬಾರದು. ಸ್ವಚ್ಛವಾದ ಸ್ಥಳದಲ್ಲಿಯೇ ಮಣ್ಣನ್ನು ಉಪಯೋಗಿಸಬೇಕು. ನೆಲವನ್ನು ಅಗಿದು ಅದರೊಳಗಿನ ಮಣ್ಣನ್ನು ಉಪಯೋಗಿಸುವದು ಬಹಳ ಒಳ್ಳೆಯದು. ಇಂಥ ಮಣ್ಣನ್ನು ತಂದು ಮೂಲೆಯಲ್ಲಿ ಒಂದು ಕಡೆಗೆ ಹಾಕದೆ ಒಂದು ಪಾತ್ರೆಯಲ್ಲಿ ಹಾಕಿ ಇಡಬೇಕು. ಸಿಕ್ಕ ಸಿಕ್ಕ ಸ್ಥಳದಲ್ಲಿ ಇಡುವದರಿಂದ ಬೆಕ್ಕು ಮೊದಲಾದ ಪ್ರಾಣಿಗಳು ಹೊಲಸು ಮಾಡುತ್ತವೆ. ೬. ಊಟಮಾಡುವ ಕಾಲಕ್ಕೆ ಪಟ್ಟಿಯಿಂದಾಗಲಿ ಎಲೆಯಿಂದಾಗಲಿ ಕೆಳಗೆ ಬೀಳದಂತೆ ಊಟಮಾಡಬೇಕು. ಊಟವಾದನಂತರ ಪಟ್ಟಿ ಎಲೆಗಳನ್ನು ತೆಗೆದ ಮೇಲೆ ಕೂಡಲೇ ಆ ಸ್ಥಾನವನ್ನು ಗೋಮಯದಿಂದ ಸ್ವಚ್ಛಮಾಡಬೇಕು. ೭. ಉಡುವ ತೊಡುವ ಬಟ್ಟೆಗಳನ್ನು ಪ್ರತಿದಿವಸ ಸ್ವಚ್ಛಮಾಡಬೇಕು. ಮಲಗುವದಕ್ಕಿಂತಲೂ ಮೊದಲು ಹಾಸಿಗೆಯನ್ನು ಸ್ವಚ್ಛವಾಗಿ ಕೊಡವಬೇಕು. ೮. ಒಂದೇ ಪಟ್ಟಿಯಲ್ಲಿ ಇಬ್ಬರು ಕೂಡಿ ಊಟಮಾಡಬಾರದು. ಒಂದೇ ಗ್ಲಾಸಿನಲ್ಲಿ ಇಬ್ಬರು ಹಾಲು ಅಥವಾ ನೀರು ಕುಡಿಯಬಾರದು. ಒಬ್ಬನು ಕುಡಿದು ಉಳಿದುದನ್ನು ಮತ್ತೊಬ್ಬನು ಕುಡಿಯಬಾರದು. ೯. ಊಟಮಾಡತಕ್ಕ ಪದಾರ್ಥಗಳನ್ನಾಗಲಿ ಅಥವಾ ಬೇರೆ ಯಾವ ಸಾಮಾನುಗಳನ್ನಾಗಲಿ ಹೊಸಸ್ಥಳವನ್ನು ಗೋಮಯದಿಂದ ಸಾರಿಸಿ ಇಡಬೇಕು. ೧೦. ರಾತ್ರಿಯಲ್ಲಿ ತೊಟ್ಟುಕೊಂಡ ನೂಲಿನ ಅರಿವೆಗಳನ್ನು ಮರುದಿವಸ ತೊಳೆದು ಉಪಯೋಗಿಸಬೇಕು. ಉಣ್ಣೆಯ ಅರಿವೆಗಳಿದ್ದರೆ ಅವನ್ನು ಬಿಸಿಲಿನಲ್ಲಿ ಹಾಕಬೇಕು. ೧೧. ಕೈ ಮತ್ತು ಕಾಲು ಬೆರಳುಗಳ ಉಗುರನ್ನು ಬೆಳೆಯಿಸಬಾರದು. ಮತ್ತು ಅವುಗಳಲ್ಲಿ ಹೊಲಸನ್ನು ಕೂಡ್ರಗೊಡಬಾರದು. ೧೨. ಮಲಗುವ ಹಾಸಿಗೆಯನ್ನು ಸ್ವಲ್ಪ ಹೊತ್ತಾದರೂ ಬಿಸಿಲಿನಲ್ಲಿ ಹಾಕಬೇಕು. ಮತ್ತು ಅದರ ಮೇಲೆ ಪಕ್ಷಿಗಳು ಹೊಲಸುಮಾಡದಂತೆ ಲಕ್ಷ್ಯವಿಡಬೇಕು. ಹೊದಿಕೆ ಬಟ್ಟೆಗಳನ್ನೂ ಬಿಸಿಲಿನಲ್ಲಿ ಹಾಕುತ್ತಿರಬೇಕು. ೧೩. ಹೊರಗಿನಿಂದ ಬರಿಗಾಲಿನಿಂದ ಬಂದರೆ ಕಾಲನ್ನು ತೊಳೆದುಕೊಳ್ಳಬೇಕು. ೧೪. ಹತ್ತರ ಯಾವಾಗಲೂ ನೀರ ತಂಬಿಗೆಯನ್ನಾಗಲಿ ಅಥವಾ ಕರವಸ್ತ್ರವನ್ನಾಗಲಿ ಇಟ್ಟುಕೊಳ್ಳಬೇಕು. ಧೋತರದಿಂದ ಸೆರಗಿನಿಂದ ಅಥವಾ ಅಂಗಿಯಿಂದ ಮೂಗು, ಕೈ, ಬಾಯಿಗಳನ್ನು ಒರೆಸುವದು ಬಹಳ ಕೆಟ್ಟ ಪದ್ಧತಿಯಾಗಿದೆ. ೧೫. ಹಣ್ಣು ತಿನ್ನುವ ಸಮಯದಲ್ಲಿ ಅದರ ಸಿಪ್ಪೆ ಬೀಜಗಳನ್ನು ಸಂದಿಗಳಲ್ಲಿ ಅಥವಾ ಕಿಟಿಕಿಗಳಲ್ಲಿ ಚೆಲ್ಲಬಾರದು. ೧೬. ಪಾದರಕ್ಷೆಗಳನ್ನು ಅಥವಾ ಎಂಜಲದ ಪಾತ್ರೆಗಳನ್ನು ಮುಟ್ಟಿದನಂತರ ಕೈಗಳನ್ನು ತೊಳೆದುಕೊಳ್ಳಬೇಕು. ೧೭. ಬರೆಯುವ ಸಮಯದಲ್ಲಿ ಬೆರಳುಗಳಿಗೆ ಮಸಿಯನ್ನು ಹಚ್ಚಿಕೊಳ್ಳಬಾರದು. ಅದನ್ನು ತಲೆಯಕೂದಲಿಕ್ಕೆ ಒರಸಿಕೊಳ್ಳಬಾರದು. ೧೮. ಬೆಳಗುವದಕ್ಕೆ ಮಣ್ಣು ಅಥವಾ ಹುಳಿಹಚ್ಚಿದ ತಂಬಿಗೆ ಕೊಡಗಳನ್ನು ನೀರುಕುಡಿಯತಕ್ಕ ಭಾವಿಗಳಲ್ಲಿ ಬಿಡಬಾರದು. ೧೯. ಸ್ನಾನಮಾಡಿದ ನೀರು ಭಾವಿಯಲ್ಲಿ ಬೀಳದಂತೆ ಸ್ನಾನಮಾಡಬೇಕು. ೨೦. ಮಲಗಿರತಕ್ಕ ಮನುಷ್ಯನನ್ನು ಅವೇಳೆಯಲ್ಲಿ ಎಬ್ಬಿಸಬಾರದು. ಪ್ರಸಂಗವರಿತು ಎಬ್ಬಿಸಬೇಕು. ೨೧. ನದಿಗಳಲ್ಲಿ ಅರಿವೆಗಳನ್ನು ತೊಳೆಯಬೇಕಾದರೆ ಅಥವಾ ಕುಡಿಯಲಿಕ್ಕೆ ನೀರನ್ನು ತೆಗೆದುಕೊಳ್ಳಬೇಕಾದರೆ ದಂಡೆಯನ್ನು ಬಿಟ್ಟು ಸ್ವಲ್ಪ ಪ್ರವಾಹದ ಸಮೀಪಕ್ಕೆ ಹೋಗಬೇಕು. ೨೨. ಎರಡನೆಯವರು ಉಪಯೋಗ ಮಾಡಿದ ಸಾಬೂನು, ಎಣ್ಣೆ, ಅರಿವೆ ಮೊದಲಾದ ಸಾಮಾನುಗಳನ್ನು ಎಂದೂ ಉಪಯೋಗಿಸಬಾರದು. ೨೩. ಊಟಮಾಡುವಕಾಲಕ್ಕೆ ಕೈ ತುಂಬ ಮುಸುರೆಯನ್ನು ಮಾಡಿಕೊಳ್ಳಬಾರದು. ಕೈ ಬೆರಳುಗಳ ಅರ್ಧಭಾಗವನ್ನೇ ಉಪಯೋಗಿಸಬೇಕು. ೨೪. ಊಟಮಾಡುವ ಸಮಯದಲ್ಲಿ ನೀರು ಕುಡಿಯುವ ಕಾಲಕ್ಕೆ ನೀರುಕುಡಿಯುವ ಗ್ಲಾಸಿಗೆ ಕೈಯೊಳಗಿನ ಮುಸುರೆಯು ಹತ್ತದಂತೆ ಎತ್ತಿ ಕುಡಿಯಬೇಕು. (ಅಂದರೆ ಬಲಗೈಯಿಂದಲೇ ನೀರು ಕುಡಿದು ಪಟ್ಟಿಯೊಡನೆ ಬೇರೆ ಗುವದಕ್ಕೆ ಹಾಕಬೇಕು.) ೨೫. ಅನ್ನವನ್ನೂ ಬೇರೆ ಪದಾರ್ಥಗಳನ್ನೂ ಉಣ್ಣುವವರ ಇಚ್ಛೆಯಂತೆ ನೀಡಬೇಕು. ೨೬. ರೋಗಿಗಳ ಕೂಡ ಮಾತಾಡುವ ಕಾಲದಲ್ಲಿ ಅವರ ಮನಸ್ಸಿಗೆ ತ್ರಾಸಾಗದಂತೆ ಸವಿಮಾತುಗಳನ್ನೇ ಆಡಬೇಕು. ೨೭. ರೋಗಿಗಳಿಂದ ದೂರವಾಗಿರಬೇಕು. ಯಾವ ಮನುಷ್ಯನ ಬಟ್ಟೆಗಳು ಕಾಲರಾಬೇನೆಯಿಂದ ಹೊಲಸಾಗಿರುತ್ತವೆಯೋ ಅವನ್ನು ಸುಟ್ಟುಬಿಟ್ಟರೆ ಬಹಳ ಒಳ್ಳೆಯದು. ಶಕ್ಯವಿಲ್ಲದ ಪ್ರಸಂಗದಲ್ಲಿ ಕಳಮಳಿಸುವ ನೀರಿನಲ್ಲಿ ಆ ಅರಿವೆಗಳನ್ನು ಹಾಕಿ ಅದರಲ್ಲಿ ಬೇವಿನ ತೊಪ್ಪಲವನ್ನು ಹಾಕಿ ಕುದಿಸಬೇಕು. ೨೮. ಪ್ರತಿಯೊಂದು ಸ್ಥಳದಲ್ಲಿ ಉಗುಳುವ ರೂಢಿಯು ಬಹಳ ತಪ್ಪು ಅದೆ. ರೋಗಿಗಳು ಉಗುಳುವ ಪ್ರಸಂಗದಲ್ಲಿ ಅವರ ಹತ್ತರ ಉಗುಳುವದರ ದೆಸೆಯಿಂದ ಒಂದು ಪಾತ್ರೆಯನ್ನು ಇಟ್ಟಿರಬೇಕು. ೨೯. ಸಾಧಾರಣ ರೋಗಿಗಳ ಹತ್ತರವೂ ಹೋಗಬೇಕಾದರೆ ಯಾರು ರೋಗಿಗಳ ಸೇವೆಯನ್ನು ಮಾಡುವರೋ ಅವರೇ ಹೋಗಬೇಕು. ಅವನ ಹತ್ತರ ಬಹಳ ಜನರು ಹೋಗಬಾರದು. ಪ್ರಶ್ನಮಾಡಬಾರದು. ಅವರನ್ನು ಆಗ್ರಹದಿಂದ ಮಾತಾಡಿಸಬಾರದು. ೩೦. ಉಗುಳಿನಿಂದ ಪಾಕೀಟಿನ (ಕವರಿನ) ಬಾಯಿಯನ್ನು ಬಂದು ಮಾಡಬಾರದು. ಮತ್ತು ಬೆರಳಿಗೆ ಉಗುಳು ಹಚ್ಚಿಕೊಂಡು ಪುಸ್ತಕದ ಹಾಳೆಗಳನ್ನು ತೆಗೆಯಬಾರದು. ೩೧. ಕೆರೆಭಾವಿಗಳಲ್ಲಿ ಉಗುಳಿ ಹೊಲಸು ಮಾಡಬಾರದು. ೩೨. ಊಟಮಾಡುವದಕ್ಕಿಂತಲೂ ಮೊದಲು ಕೈ, ಕಾಲು, ಮುಖಗಳನ್ನು ಚನ್ನಾಗಿ ತೊಳೆದುಕೊಳ್ಳಬೇಕು. ಮತ್ತು ಊಟವಾದನಂತರ ಸ್ವಚ್ಛವಾಗಿ ಕೈಬಾಯಿಗಳನ್ನು ತೊಳೆದುಕೊಳ್ಳಬೇಕು. ೩೩. ಪ್ರಾತಃಕಾಲದಲ್ಲಿ ಹಲ್ಲು ಕಡ್ಡಿಯನ್ನು ಮಾಡಿ ಸ್ವಚ್ಛವಾಗಿ ಬಾಯಿತೊಳೆದುಕೊಳ್ಳಬೇಕು. ಯಾವ ಕಡ್ಡಿಯಿಂದ ಹಲ್ಲುಗಳನ್ನು ತಿಕ್ಕುವರೋ ಆ ಕಡ್ಡಿಯಲ್ಲಿ ಎರಡು ಭಾಗಗಳನ್ನು ಮಾಡಿ ಅದರಿಂದ ನಾಲಿಗೆಯನ್ನು ಸ್ವಚ್ಛಮಾಡಿಕೊಳ್ಳಬೇಕು. ೩೪. ಪ್ರಾತಃಕಾಲದಲ್ಲಿ ಮಲಮೂತ್ರವಿಸರ್ಜನೆಯನ್ನು ಮಾಡದೆ, ಹಲ್ಲುಗಳನ್ನು ತಿಕ್ಕದೆ, ಸ್ನಾನಮಾಡದೆ ಯಾವ ಪದಾರ್ಥಗಳನ್ನೂ ತಿನ್ನಬಾರದು. ೩೫. ಒಂದು ಸಾರೆ ನೀರುಕುಡಿದ ಪಾತ್ರೆಯನ್ನೂ ಊಟಮಾಡುವದಕ್ಕೆ ಉಪಯೋಗಿಸಿದ ಪಟ್ಟಿಯನ್ನೂ ಎರಡನೇಯವರು ಉಪಯೋಗಮಾಡಿದ ಪಾತ್ರೆಗಳನ್ನೂ ಬೆಳಗಿದ ಹೊರತು ಕೆಲಸಕ್ಕೆ ಉಪಯೋಗಿಸಬಾರದು. ೩೬. ಒಬ್ಬರು ಉಪಯೋಗಿಸಿದ ಕೊಳಲು ಮೊದಲಾದ ಮುಖವಾದ್ಯದ ಸಾಮಾನುಗಳನ್ನು ಇನ್ನೊಬ್ಬರು ಉಪಯೋಗಿಸಬಾರದು. ಒಂದುವೇಳೆ ಉಪಯೋಗಿಸುವ ಪ್ರಸಂಗಬಂದಾಗ್ಯೂ, ಅದನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ೩೭. ಒಂದೇ ಹೊದ್ದಿಕೆಯಲ್ಲಿ ಇಬ್ಬರು ಮಲಗಬಾರದು. ಎರಡನೆಯವರು ಹೊದ್ದುಕೊಳ್ಳುವ ಮತ್ತು ಹಾಸಿಕೊಳ್ಳುವ ಸಾಮಾನುಗಳನ್ನು ತೊಳೆದಹೊರತು ಉಪಯೋಗಿಸಕೂಡದು. ೩೮. ಯಾವ ಅಂಗಡಿಯವನು ಮಿಠಾಯಿ ಮೊದಲಾದ ತಿನ್ನತಕ್ಕ ಸಾಮಾನುಗಳ ಮೇಲೆ ನೊಣಗಳು ಕುಳಿತುಕೊಳ್ಳದಂತೆ ವ್ಯವಸ್ಥೆಮಾಡಿರುವದಿಲ್ಲವೋ, ಯಾವನು ಮಲಿನವಾದ ಬಟ್ಟೆಗಳನ್ನು ತೊಟ್ಟು ಸ್ವಚ್ಛವಾಗಿಲ್ಲವೋ ಅಂಥ ಮಿಠಾಯಿಗಾರನ ಮಿಠಾಯಿಗಳನ್ನು ಸರ್ವಥಾ ತಿನ್ನಬಾರದು. ಮೊದಲು ಬಾಜಾರದ ಮಿಠಾಯಿಗಳನ್ನು ತಿನ್ನುವದೇ ತಪ್ಪು. ೩೯. ಯಾವ ಬಟ್ಟೆಯನ್ನು ತೊಟ್ಟುಕೊಂಡು ಶೌಚಾದಿ ಕ್ರಿಯೆಗಳನ್ನು ಮಾಡುವರೋ ಆ ಬಟ್ಟೆಯನ್ನು ತೊಳೆದರೆ ಒಳ್ಳೆಯದು. ೪೦. ಕೆರೆ, ನದಿಗಳಲ್ಲಿ ಶೌಚಾಂತಕ್ರಿಯೆಯನ್ನು ಮಾಡಬಾರದು. ಶೌಚಕ್ಕೆ ಹೋಗುವ ಕಾಲಕ್ಕೆ ನೀರನ್ನು ಅವಶ್ಯವಾಗಿ ತೆಗೆದುಕೊಂಡು ಹೋಗಬೇಕು. ೪೧. ಊಟಮಾಡುವ ಸಮಯದಲ್ಲಿ ಸತ್ತು ಮತ್ತು ದುಃಖದ ಸಂಗತಿಗಳನ್ನು ಹೇಳಬಾರದು. ಹಾಗೂ ಕ್ರೋಧ, ಅಶ್ಲೀಲಮಾತುಗಳನ್ನಾಡಬಾರದು. ೪೨. ಊಟಮಾಡತಕ್ಕ ಸ್ಥಾನವು ಸ್ವಚ್ಛವಾಗಿಯೂ ಬೆಳಕುಳ್ಳದಾಗಿಯೂ, ಹವೆಯುಳ್ಳದಾಗಿಯೂ ಇರಬೇಕು. ಮತ್ತು ಆ ಸ್ಥಾನದಲ್ಲಿ ನೊಣಗಳ ಪ್ರವೇಶವನ್ನಾಗಗೊಡಬಾರದು. ೪೩. ಊಟವನ್ನು ಬಹಳ ಸಾವಕಾಶವಾಗಿ ಮಾಡಬೇಕು. ನೀರನ್ನೂ, ಹಾಲನ್ನೂ ಸಾವಕಾಶವಾಗಿ ಕುಡಿಯಬೇಕು. ಊಟಮಾಡುವ ಕಾಲಕ್ಕೆ ಅಥವಾ ಹಾಲು, ನೀರು ಕುಡಿಯುವ ಕಾಲಕ್ಕೆ ಬಾಯಿ ಸಪ್ಪಳಮಾಡಬಾರದು. ೪೪. ಮನೆಯಲ್ಲಿ ಕದವನ್ನು ಮುಚ್ಚಿಕೊಂಡು ಕುಳಿತುಕೊಳ್ಳುವದಾಗಲಿ ಮಲಗುವದಾಗಲಿ ಒಳ್ಳೆಯದಲ್ಲ. ಗಾಳಿ ಆಡುತ್ತಿರುವ ಸ್ಥಳದಲ್ಲಿ ಮಲಗಬೇಕು. ಕೋಣೆಯ ಕಿಡಕಿಗಳನ್ನು ಯಾವಾಗಲೂ ಮುಚ್ಚಬಾರದು. ೪೫. ಮುಖವನ್ನು ಮುಚ್ಚಿಕೊಂಡು ಮಲಗಬಾರದು. ೪೬. ವ್ಯಾಯಾಮ ಮಾಡುವ ಕಾಲಕ್ಕೆ ಬಾಯಿಯನ್ನು ಬಂದುಮಾಡಿ ಮೂಗಿನಿಂದ ಉಸುರನ್ನು ತೆಗೆದುಕೊಳ್ಳಬೇಕು. ೪೭. ಮಲಗತಕ್ಕ ಕೋಣೆಯಲ್ಲಿ ಬೇರೆ ಸಾಮಾನುಗಳನ್ನು ಇಟ್ಟಿರಬಾರದು. ಹಾಗೂ ದೀಪವನ್ನಿಟ್ಟು ಮಲಗಬಾರದು. ೪೮. ಮಲಗಿಕೊಂಡು ಓದಬಾರದು. ಓದುವಕಾಲಕ್ಕೆ ಸರಿಯಾಗಿ ಕುಳಿತುಕೊಳ್ಳಬೇಕು. ೪೯. ಬೇರೆ ಬೇರೆ ಬಾವಿಯ ನೀರನ್ನು ಕುಡಿಯಬಾರದು. ನೀರನ್ನು ಕುಡಿಯುವಕಾಲಕ್ಕೆ ಸೋಸಿ ಕುಡಿಯಬೇಕು. ನೀರು ಸೋಧಿಸುವ ವಸ್ತ್ರವು ಮಾತ್ರ ಬಹಳ ಸ್ವಚ್ಛವಿರಬೇಕಲ್ಲದೆ ಅದನ್ನು ಯಾತಕ್ಕೂ ಉಪಯೋಗಿಸಕೂಡದು. ೫೦. ಮಂಜಿನಗಡ್ಡೆ (ಬರಫ್) ಸೋಡಾ ಮುಂತಾದುವುಗಳನ್ನು ಕುಡಿಯಬಾರದು. ೫೧. ತಿಂಗಳಲ್ಲಿ ಒಂದು ಅಥವಾ ಎರಡುಸಾರೆ ಲಂಘನಮಾಡುವದು ಒಳ್ಳೆಯದು. ೫೨. ಸಣ್ಣ ಹುಡುಗರನ್ನು ಅಳಿಸಬಾರದು. ಯಾವಾಗಲೂ ಎತ್ತಿಕೊಂಡಿರಬಾರದು. ಹುಡುಗರಿಗೆ ತಮ್ಮ ಶಕ್ತಿಯಿಂದ ಎದ್ದು ನಿಲ್ಲುವ ರೂಢಿಯನ್ನು ಕಲಿಸಬೇಕು. ಹುಡುಗರಿಗೆ ಮುದ್ದು ಕೊಡುವ ರೂಢಿಯು ಒಳ್ಳೆಯದಲ್ಲ. ಅದರಿಂದ ಮಕ್ಕಳಿಗೆ ಹಾನಿಯಾಗುವದೆನ್ನುವದನ್ನು ಪೂರ್ಣ ಲಕ್ಷ್ಯದಲ್ಲಿಡಬೇಕು. ೫೩. ಹುಡುಗರಿಗೆ ಹೆದರುವ ಭೂತಪ್ರೇತಗಳ ಕಥೆಗಳನ್ನು ಹೇಳಬಾರದು. ೫೪. ಕೊಳೆತ ಹಾಗೂ ಪೂರ್ಣ ಪಕ್ವವಾಗದೆ ಇದ್ದ ಹಣ್ಣುಗಳನ್ನು ತಿನ್ನಬಾರದು. ೫೫. ವಾಸಮಾಡತಕ್ಕ ಮನೆಯನ್ನು ಬಹಳ ಸ್ವಚ್ಛ ವಿಟ್ಟಿರಬೇಕು. ನೆಲಗಟ್ಟನ್ನು ೨-೩ ದಿವಸಕ್ಕೊಮ್ಮೆಯಾದರೂ ತೊಳೆಯುತ್ತಿರಬೇಕು. ನೆಲಗಟ್ಟು ಇಲ್ಲದಿದ್ದರೆ ಪವಿತ್ರವಾದ ಗೋಮಯದಿಂದ ಸಾರಿಸಬೇಕು. ೫೬. ಸ್ವಚ್ಛ ನೀರಿನಿಂದ ಸ್ನಾನ ಮಾಡುವಕಾಲಕ್ಕೆ ಮೈಯನ್ನು ಚನ್ನಾಗಿ ತಿಕ್ಕಬೇಕು.

ಸಾಧಾರಣ ನಿಯಮಗಳು.

೧. ಯಾರಾದರೂ ನಿಮಗೆ ರೊಕ್ಕ, ರೂಪಾಯಿ, ಮಿಠಾಯಿ ಕೊಡಲಿಕ್ಕೆ ಬಂದರೆ ತಾಯಿತಂದೆಗಳ ಅಪ್ಪಣೆಯಿಲ್ಲದೆ ತೆಗೆದುಕೊಳ್ಳಬಾರದು. ೨. ಯಾರಿಗಾದರೂ ಏನಾದರೂ ಸಾಮಾನು ಕೊಡುವಕಾಲಕ್ಕೆ ಎಡಗೈಯಿಂದ ಕೊಡಬಾರದು. ಮತ್ತು ತೆಗೆದುಕೊಳ್ಳಬಾರದು. ೩. ಅಪರಿಚಿತ ಸ್ತ್ರೀಯರ ಕೂಡ ಮಾತಾಡಬಾರದು. ಒಂದುವೇಳೆ ಮಾತಾಡುವ ಪ್ರಸಂಗಬಂದರೆ ಮುಖವನ್ನು ಕೆಳಗೆ ಮಾಡಿ ಮಾತಾಡಬೇಕು. ಸ್ತ್ರೀಯರ ಕಡೆಗೆ ಕಣ್ಣುಗಳನ್ನು ಹೊರಳಿಸುತ್ತ ನೋಡುವದು ಅಸಭ್ಯತೆಯು!

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ.
ಬೆಂಗಳೂರು ಸಿಟಿ. 7

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೮ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೨ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೋ. ನಂ. 1246, ಮದರಾಸು.
K. N. BENSON & Co.,
[6] P. B. 1246, MADRAS.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೦—೦
ಪ್ರವಾಲಭಸ್ಮ	೧	೦—೮—೦
ಕಪರ್ದಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್ಮೆಂಟ್ಸಿನಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಘಂಟೆಯನ್ನು ತೋರಿಸುವವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರದ್ದು ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.

ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ: ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
[6] **THE CITY MART,**
168, China Bazaar, MADRAS.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 16

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [50]

ಮಲೇರಿಯಾನ ಮಲೆಜ್ವರ ಸಂಹಾರಿಣೆ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ನಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೇಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಜಿಲ್ಲೆ— ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೆಂಪುಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.

60, 100, 500ಕ್ಕೆ ರೂ. 1. 1.8.0, 7-0-0

ಹೂಪಿಂಗ್ ಕಫ್ ರೆಮೆಡಿ— ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕೆಮ್ಮುಗಳಿಗೆ ಸಿದ್ಧೌಷಧ.

$\frac{1}{2}$ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೋಮಿಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಟೀಕಾಪತ್ರಕ್ಕೆ ಬರೆಯಿರಿ. ಧರ್ಮಾರ್ಥ.

ಕಂಪೌಂಡ್ ಸಿರಪು ಬ್ಲಡ್— ಉಬ್ಬಸ, ನೆಗಡಿ, ದಮ್ ರೋಗಗಳಿಗೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ತಪ್ಪಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ— ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೆ 'ಕಂಪೌಂಡು ಸಿರಪು ಫೋಸ್ಫರ' ತರಿಸಿ ಕುಡಿಯಿರಿ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [15]

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಿಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (5)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಟಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ...

...ಗಳನ್ನು ಕೊಟ್ಟಿರು... ರು. ಪ್ರಸಿದ್ಧವಾದ... ನಶ್ಯದ ಪುಡಿಯಿಂ... ಸ್ವಸ್ಥವಾಗುವ ವ್ಯಾ... ಧಿಗಳು ಯಾವವೆ... ರೆ:—ಪೀನಸಿ, ಒ... ತಲೆನೋವು, ತಲೆ... ಲ್ಲಿಯ ರೋಗಗ... ಕಣ್ಣುಗಳಲ್ಲಿ ಉಂ... ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ಆ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[49] ಪೋ. ಬಾ. ೫೧೦, ಮದರಾ...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್

ಸಂಪಾದಕರು—ಆಸ್ಥಾನ ವಿದ್ವಾ... ...ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರ... ...ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವ... ...ತಾ॥ ೧೮ನೇ ಡಿಶಂಬರ್ ೧೯೩೩ [ಸಂಚಿಕೆ ೩೪

MYSORE DISTRICT.

Notification No. H. 1064—32, dated 27th Noven... ...33.

It is hereby notified for the information of the public that the ... g unserviceable jewels and valuable articles belonging to the Sri Srikanteswaraswamy ... e at Nanjangud will be sold by public auction by the Deputy Commissioner, Mysore ... t, or such other officer as may be deputed by him for the purpose at the District Of... ...ysore, from 8th January 1934 and subsequent days between 2 P.M. and 4 P.M.

Conditions of sale.

1. Each intending bidder shall make a deposit of Rs. 10.
2. Each jewel or other article will be sold to the highest bidde...
3. The full amount of the bid shall be paid at 4 P.M. by the ... t bidder on the date of sale.
4. If the bid amount is not so paid, the first sale purchaser ... liable to make good the loss sustained, but he will not be entitled to the gain, if any.
5. The deposits tendered by the unsuccessful bidders will be ... l soon after the sale is concluded.
6. The sale conducting officer shall have the option either ... pt or reject any bid, if he considers it to be low.
7. The sale is subject to the confirmation by the Muzrai Com... r.

List of articles and jewels.

I.	1	Hosuramma Kolaga 1	silver
	2	Mr. Siddaraje Urs Kolaga 1	do
	3	Kasivishvanatha Mukha-vada 1	do
	4	Sarahanthe 2	do
	5	Karpurarthi 4	do
	6	Pancharthi 1	do
	7	Kolathappale 2	do
	8	Panchapatre 3	do
	9	Ghante 4	do
	10	Lingada Karadige 1	do
	11	Cups 12	do
	12	Chombu 1	do
	13	Dabu 3	do
	14	Hastha 2	do
	15	Kireeta 1	do
	16	Korumba 1	do
	17	Karnapatna 2	do
	18	Udharane 8	do
	19	Thatte 1	do
II.	1	Chain Sharadaddike 1	gold
	2	Sharadaddike with padaka 1	do
	3	Asali 1	do
	4	Bandi Bille 1	silver
	5	Dabu 1	do
	6	Kalina chain 1 pair, 2	do
	7	Bell 1	do
	8	Kalina chain 1 pair (small) 2	do
	9	Chamara 1	do
	10	Dhuparthi 1	do
	11	Pada 1	do
	12	Alankarada Pada 2	do
III.	1	Chowrikottu 1	gold
	2	Bendole 1 pair, 2	do
	3	Kasu 1	do
	4	Muguthi 1	do
	5	Lakshmikasu 1	do
	6	Sarigedhara with Kasu 1	do
	7	Thali 1	do
	8	Dabu 1	do
	9	Male Sarad... 1	Gold
	10	Dodda Ma... ggu 1	do
	11	Nagara 1	do
	12	Sannathali...	do
	13	Sanna Mal... gu 1	do
	14	Jadebille 1	do
	15	Kaibale 1 ...	do
	16	Six Kasu a... Thali with 1 ruby 8...	do
	17	One Sover...	gold
	18	Dodda Gur... ra etc., 1	do
	19	Sanna Dab...	do
	20	Thattegalu...	silver
	21	Dabu 1	do
	22	Udharane 3...	do
	23	Kalugejje 1...	do
	24	Pada 1	do
	25	Karpurar...	
IV.	1	Battlu 5	do
	2	Udharane...	do
	3	Thagadu...	do
	4	One Sar...	do
	5	Korumb...	do
	6	Karnapa...	do
	7	Hastha ...	do
	8	Kireeta...	do
	9	Sara 1	do
	10	Shanka...	do
	11	Henike...	do
	12	Gejjeda...	do
	13	Small Chat...	do
	14	Gejjesara 1	do
	15	Dabu 1	do
	16	Thilaka 1	do
	17	French Kas... half Lakshmi...	do
	18	Lakshmi K...	do
	19	Prabhavali ... igra-has 1	do
V.	1	Karperart...	do
	2	Cup 1	do
	3	Panchapatre Udharane 2	Silver
	4	Vigraha of Sri Krishna 1	do
	5	One Plate with Prathime 1	do
	6	Udharane 1	do
	7	Vigneswara Vigraha 1	do
	8	Kolaga Nagabharana 1	do
	9	Do do 1	do
	10	Vigraha of Uma Mahe-swara 1	do
	11	Mukkanna with Thri-shula 1	do
	12	Udharane 1	do
	13	Bell 1	do
	14	Chatri 1	do
	15	Udharane 1	do
VI.	1	Kaimuri 1 pair, 2	gold
	2	Vole one pair (Diamond) 2	do

C. S. KUPPUSWAMIENGAR,
Deputy Commissioner.

ಹಾಸನ ಟವನ್ನಿನ 25 ನೇ ದನಗಳ ಪ್ರದರ್ಶನ.

ಹಾಸನ ಟವ್ನ ದನಗಳ ಪ್ರದರ್ಶನ ಕ್ಷೇತ್ರದಲ್ಲಿ 25 ನೇ ದನಗಳ ಪ್ರದರ್ಶನವು ಏರ್ಪಾಡಾಗುತ್ತದೆ.

ಪ್ರದರ್ಶನವು 1934 ನೇ ಜನವರಿ ಮಾಹೆ ತಾರೀಖು 3 ನೇ ಬುಧವಾರದಿಂದ 7 ನೇ ಭಾನುವಾರದವರೆಗೆ ಉಭಯದಿವಸಗಳಲ್ಲೂ ನಡೆಯುತ್ತದೆ.

ಗೌರ್ನಮೆಂಟ್ ಆರ್ಡರ್ ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು 1 ಕ್ಕೆ ಎರಡಾಣೆಯಂತೆ ಫೀ ವಸೂಲ್‌ಮಾಡಲ್ಪಡುತ್ತದೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲ್ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನದ (ಮುನಿಸಿಪಲ್) ಜಾಗದಲ್ಲಿ ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನು ಸಹ ತಾರೀಖು 12—12—1933 ರ ರಲ್ಲಿ ಹಾಸನದ ಸಂತೆ ಬಳಿ ಇರುವ ಅಕ್ಕರಾಯಿ ಕಟ್ಟೆ ಬಳಿ ಬಹಿರಂಗವಾಗಿ ಮುನಿಸಿಪಲ್ ಪ್ರೆಸಿಡೆಂಟರು ಯಾ ವೈಸ್ ಪ್ರೆಸಿಡೆಂಟರವರಿಂದ ಮಧ್ಯಾಹ್ನ 2 ಘಂಟೆಯಿಂದ ಹರಾಜುಮಾಡಿಸಲ್ಪಡುತ್ತದೆ.

ಅಂಗಡಿ ವಗೈರೆಗಳಿಗಾಗಿ ವಿಂಗಡಿಸಿರುವ ಜಾಗಗಳನ್ನು ತಾ॥ 15—12—33ರ ಲಾಗಾಯ್ತು ವಿಲೇವಾರಿ ಮಾಡಲುಪಕ್ರಮಿಸುತ್ತದೆ. ಬಾಕಿ ವಿಷಯಗಳನ್ನು ಹಾಸನ ಟವ್ನ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳತಕ್ಕದ್ದು.

S. P. Bramhappa,
For President H. T. M.
& Chairman, Cattle Show Committee,
Hassan.

SUIT No. 12. OF 1932 IN THE SUB JUDGE'S COURT, BENARES CITY.

The above is a suit filed by Sri Jagadguru Panchakshara Sivacharya Mahaswamy, Jangamwadi Math, Benares City against certain depositors of Sri Vishwaradhya Bank. Judgement was delivered on 27th Nov. 1933. Portions from it relating to the antiquity of the Math have been given below:—

ಕಾಶೀ ಜಗದ್ಗುರು ಪೀಠದ ಬಗ್ಗೆ ಬನಾರಸ್ ಸಬ್ ಜಜ್ಜ ಕೋರ್ಟಿನಲ್ಲಿ ತಾ॥ ೨೭-೧೧-೩೩ ನೆಯ ದಿವಸ ತೀರ್ಮಾನವಾದ ಜಡ್ಜಮೆಂಟಿನ ಕೆಲವು ಭಾಗ.

(ಇದರಲ್ಲಿ ಕಾಶೀಪೀಠದ ಪ್ರಾಶಸ್ತ್ಯವು ಬಹು ಚನ್ನಾಗಿ ವಿವರಿಸಲ್ಪಟ್ಟಿದೆ. ಸರ್ವರೂ ಅವಶ್ಯವಾಗಿ ಓದಿನೋಡಬೇಕು.)

JUDGEMENT.

J. N. Farquhai M.A., D. Litt., in his book entitled **the Religious Quest of India** gives the history of Virasaivas beginning from page 259. He says that "the tradition is that the sect was founded by five ascetics—**Ekorama, Panditaradhya, Revana, Marula**, and **Vishwaradhya**—who are said to have sprung from the heads of Shiva, incarnate age after age. These are regarded very ancient and Basava is said to have been but the reviver of the faith in the 12th century. Later on he remarks that the five ascetics were probably Basava's contemporaries, but he admits that this is a point on which an opinion cannot be expressed with certainty. Then he goes on to point out the organization of the Sect and states that originally the following five monastries were established, the first heads of which were the five ascetics mentioned above—

Monastries.	First Mahants.
1. **Kedar Nath, Himalayas**	**Ekorama**
2. **Srisaila, Near Nandyal**	**Panditaradhya.**
3. **Balehalli, West Mysore**	**Revana.**
4. **Ujjini, Bellary, Boundary Mysore**	**Marula.**
5. **Benares**	**Vishwaradhya.**

In the **Mysore Gazetteer** at page 477 at the top we find that Lingayats do possess Maths. In the **Gazetteer of Bijapur** district (Bombay Presidency) also we find that the Lingayats do possess Maths. In this book (1884 edition) the description of Lingayats is given in greater detail (see pages 219 to 280). At page 238, the five original pontifical thrones are mentioned. Strangely enough, the Benares Math is not mentioned. It is said that the fifth throne is an empty one. Probably the reference is to the Math in suit. In the **Sholapur Gazetteer** (1884 Edition) page 75, the Lingayats are described and there is nothing in it to show that they cannot possess a Math.

Lastly I may refer to **Castes and Tribes of Southren India by Thurston** (1909 Edition). At the bottom of page 264 the author refers to the establishment of the five great religious centres of the Lingayats in India. The **Vishwaradhya Math** at Benares, that is to say the Math in dispute is also mentioned. He mentions specifically that at all of these five centres, "**the Maths still exist**." He goes on to say that "the heads of these Maths have geographically divided the Lingayats into five great divisions, and each head exercises spiritual control within his own legitimate sphere, though all of them have a general jurisdiction over all the Lingayats generally. Each of these Maths, called Simhasanas (thrones) has sub-maths in important popular centres under the management of Pattadaswamis. Each sub-math has a number of branch maths, called Gurusthala maths under it, and these latter are established where-ever a community of Lingayats exist. The rights and duties of the Swamis of these Maths are to preside on all ceremonial occasions, to receive their dues, to impart religious instructions, and to exercise a general control over all matters affecting the interests of the community at large."

I have been referred also to the following books—

1. **Govt. Oriental Series Class B. No. 4 book on Vishnavism and Shaivism by Bhandarkar p.** 187 and 190. 2. **Kashi Natha Shastry's Book** pages 2, 8 and 10. 3. **Guru Vamsa Kavya from Sringeri Math** p. 109 and 110. 4. **Shiva Tattwa Ratnakar** p. 10. 5. **Benares Gazetteer** p. 123.

The conclusion at which I arrive on a perusal of these books by authors whose independence is undoubted is that Lingayats also form an important sect of the religious order in India. Their number is large—particularly in the South. They do possess the institutions of Math, and in their case these institutions exercise a greater degree of control on the followers than other Maths. The Math in dispute is one of the five original Maths of this sect and has a high status among the Lingayats. The existence of the Math in dispute is borne out by the history as contained in these books.

I pass on now to consider the DOCUMENTARY EVIDENCE. This may be divided into the following six classes—

(i) **Ancient deeds and firmans**, brings **grants** by **Emperors** from **574 A.D.** right up to the reign of **Aurangazeb** and certain proceedings taken in those days. They are 53 in number and are marked as Ex. 1 to 39 (a) 40 to 42, 55 to 61 and 72 to 74.

(ii) Deeds of will executed by the Mahants of this Math. They are five in number and are marked as Ex. J17 to L17, 102 and 19. They range from 1872 to 1919.

(iii) Judgements, decrees, and orders of Courts, 13 in number and summarized in paper No. 1050 (d) —2 pages.

(iv) Deeds of transfers, which are thirty five in number and are summarized in paper No. 1049 (d)—4 pages.

(v) Books of account from 1915 to 1932—Cash Book and iedger.

(vi) Copies of plaints, written statements and other miscellaneous documents.

I shall now take up each class of the documents separately.

THE DEEDS OF GRANT AND FIRMANS.

The earliest document is the **Danapatra**, by the **Raja of Kashi**. It is of Sambat **631** corresponding to **574 A.D.** A gift of an area of land on the banks of the Ganges is made to **Mallikarjuna, Gosain** of **Sri Vishwaradhya Simhasana**. It lays down that the grant is for the Gosain and members of his sect. **The deed is written on paper which is on the face of it very old—so old that it is difficult to handle it.** It is in a frame. It is marked Ex. (1) **The father of the present Maharaja renewed the deed and got its contents inscribed on a Copper plate marked Ex.** (2).

The deed is not of any great importance so far as the properties in dispute are concerned as it has been proved by evidence that the land granted was in the village of **Jangampur** where Kardameshwar Mahadeo referred to in this deed is situated and this land has been acquired for the Hindu University and the Math is no longer in its possession. Its significance lies in the fact that so far back as **574 A.D.** this Simhasan or pontifical throne existed and received a grant from the Maharaja of Benares for the support and maintenance of the sect. (24-12-73)

The genuineness of this deed has been challenged by the defdts on various grounds. First, I am referred to **Imperial Gazetteer of India**, Vol. III page 106 (1907 edition) wherein it is said that paper was introduced into India by the Mohammadans who had learnt its use from the Chinese. As the Mohammedan invasion of India was in about 10th or 11th century, it is urged that it was impossible for any deed in India to have been written on paper, in the sixth century. I may in this connection invite attention to the researches of **Rai Bahadur Pandit Gauri Shanker Ojha** as contained in his book entitled "**The Calaeography of India**" a book on which the defdts also rely as regards another point. At page 144 after referring to the records of Alexander's invasion, points out that in India paper was being made even prior to 4th century B. C. from cotton though it was not much in vogue. The defdt's contention, therefore falls to the ground. **Mr. Gauri Shanker's book is more scientific and carries greater weight than the Imperial Gazetteer.**

Secondly it is urged that the script of the deed Ex. 1 is quite defferent from what was prevalant in the sixth century A. D. and I am referred to pages 62 and 63 and the alphabets as contained in plate XIX of **Pandit Gouri Shanker's** book and to **Barnet's Antiquities of India** p. 226 and **Bhandarkar's** commemoration volume page 309. It would appear from these references that the script in India was rather different from what we find in Ex. 1.

A reference to **Epigraphia Carnatica by B. Lewis Rice C. I. E. Late Director of Public Instruction, Mysore and Coorg.** (1905 Edition) at page 53 (a) will show that the script in the Danapatra Ex. 1 is somewhat similar to that reproduced in this book at p. 53 (a). This is the script of about the period when the Danapatra is said to have been written.

After all, it is a matter of about 1400 years back and no one can exactly say as to what the script then was. This is a land with variety of scripts and languages. No wonder therefore' if the script of the Danapatra then prevailed.

Thirdly it is urged that **Jainanda Deo** was not the ruler of Benares in **574 A.D.** How could he make a grant?

True, history shows that about the 5th century the Raja of Kanauj had obtained mastery over Benares, but there is nothing to show that the Raja of Benares was deprived of all his powers. What appears to have happened was that Raja of Kanauj became the suzerain power, but the Raja of Kashi continued under him. He continues upto this day.

The defendants' contentions as regards this document therfore, fail. I hold that Ex. 1 is a genuine document and Ex. 2 is its copy on copper plate. True about the copper plate theory, there is the evidence of the plff only, but it stands un-rebutted and although the defdts had ample opportunity to prove that it was not genuine, yet they did not summon any one from Benares State to establish it. The presumption is in favour of genuineness.

I come now to consider the Firmans and other ancient documents. They are of the time of **Humayun, Akbar, Jehangir, Shahjehan, Aurangazeb and Mohammad Shah.** Nothing has been pointed out to me to raise any suspicion about their genuineness. They are all in Persian and their translations in Urdu, done by a Vakil who was appointed as Commissioner, for this purpose, are on the record. **The paper on which they are written, their language, their character, their appearance, the royal seals on most of them and the fact that some of them had been produced in courts of law as evidence e.g.** Ex. 37, 16, 12, 11, and 4 have no doubt that they are genuine deeds.

It is suggested that on the advent of the British rule, many persons forged firmans to establish Mafi rights and it is possible that the plff's predecessors might then have forged them. We cannot take the documents to be forgeries on such suggestions without any proof, particularly when in **Benares Gazetteer** p. 123, we find a reference to these grants. It is noteworthy that these firmans do not describe the properties granted with sufficient details to enable one to easily identify them. A forger would not forge documents which with difficulty help the person concerned. At this stage, it is not necessary for me to refer in detail to all the firmans. I have gone through the originals as well as the translations. Each party has given me a resume of the firmans according to his point of view. They are papers No. 1051 and 1052 (d) on the record. It appears that **Humayun** made a grant of about three hundred bighas of land in the outskirts of Benares and Chunar (Dist. Mirzapur). From time to time in the reigns of the successive Emperors that grant was confirmed with some alterations in areas. I may invite attention to Exs. 4, 14, 19, 28, 35, 34 & 61. These firmans establish that a congregation of jangams live here. The grants were bestowed upon them for Madad Maash which may he translated as aid for subsistence. In this connection I may refer to 2 M. I. Appeals 390 at 419 and I.L.R. 34, Allahabad p. 468 where it was held that if property is granted for Madad Maash or the support of the Fakirs of a particular sect, an endowment and a trust may be presumed. The successive Moghal emperors regarded the Jangams as pious persons and in lieu of their piety and their praying for the prosperity of the Emperors the grants were made and continued. I may also refer to Exhs. 73 and 74 which are of 1802. They prove the assertion of title by the plaintiff's predecessors over certain properties, as regards which disputes had arisen, and recognition of title on the basis of firms that had been then produced before the officers.

On behalf of the defdts, I am referred to the document Ex. 72. It appears that by regulations No. 41 and 42 of 1795 everyone claiming Mafi land was called upon to produce Sanads before the District authorities by a certain date. By regulation No. 8 of 1800, that time was extended. In the year 1812, Sheoling, one of the plff's predecessors made an application that he had gone out pilgrimage and so he could not produce his deeds earlier. He prayed that his Sanads might be copied out in the register of Mafidars. The Mutsaddi an official, was ordered to report. He made the report and asked for further directions. The Nazir was then ordered to summon the applicant with his title deeds. It is argued that as the plff has not produced copies of further proceedings, it must be taken that the Sanads were disbelieved and the application was rejected. Assuming that this is the legitimate inference that may be drawn from Ex., 72, I do not think it goes to prove non-existence of the Math. It can prove only this much, that the Mafi right was not recognized.

• • • • •

The Danapatra Ex. 1 of **574 A. D.** is the earliest document and is the direct evidence of an original grant. It may be that there might have been grant of properties earlier than that, for Ex. 1, shows that the Jangams were living here even then. But we cannot positively say that. The grant Ex. 1 is of value to show only the existence of this institution so far back as 574 A. D. The property endowed by it is near Kardameshwar Mahadeo, which means Jangampur. Till the establishment of the Hindu University about twenty-two years back that land was within this Math. It passed out of its possession only when it was acquired for the University.

The firmans and the ancient documents range from **1530 to 1748 A. D.** They prove the following facts— By Ex. 39 (a) **Humayun** made a grant of three hundred bighas of land. This documents is badly damaged and we cannot make out the whole of it. The fact that it comes from the plff's custody proves that the grant was to his predecessors. By Ex. 15 **Akbar** referring to the old grants, confirms the grant of 480 bighas of land in Mah[illegible] Arjun Mal Jangam. It is difficult to find out to which land it refers. There is no description of it. The important thing to note in it is that there is explicit dedication in this deed of 480 bighas for Jangams.

(*Continued on page 6*).

ಪಂಚಾಚಾರ್ಯ ಪ್ರಭಾ.

೧೯೩೩ನೇ ಡಿಸೆಂಬರ್ ತಾ|| ೧೮ನೇ ಸೋಮವಾರ.

ಶ್ರೀಗುರುವಿನ ಶ್ರೇಷ್ಠತೆ.

ಜೀವನು ಅನಾದಿಕಾಲದಿಂದ ಅವಿದ್ಯೆಯಿಂದ ಆವರಿಸಲ್ಪಟ್ಟವನಾದುದರಿಂದ, ತಂದೆತಾಯಿಗಳಿಗಿಂತಲೂ ಸಾವಿರಪಾಲಾಗಿ ವಾತ್ಸಲ್ಯವುಳ್ಳವನಾದ ಪರಮಾತ್ಮನನ್ನು ಮರೆತು ಜನನಮರಣರೂಪ ದುಃಖಗಳಿಗೊಳಗಾಗಿರುವನು. ಇದರಿಂದ ಪರಮಾತ್ಮನಿಗೂ, ಜೀವಾತ್ಮನಿಗೂ ಇರುವ ಪ್ರೇಮಬಂಧವು ತಪ್ಪಿಹೋಗಿರುತ್ತದೆ. ತಂದೆಯು ಮಗನನ್ನು ಉದ್ಧರಿಸಬೇಕೆಂಬ ನಿರ್ವ್ಯಾಜಪ್ರೇಮವುಳ್ಳವನಾಗಿದ್ದರೂ ತಂದೆಯನ್ನೇ ಮರೆತು ದುಸ್ಸಹವಾಸದಲ್ಲಿರುವ ಮಗನ ವಿಷಯದಲ್ಲಿ ತಂದೆಯು ಪ್ರೇಮಬಂಧವು ಕಡಿಮೆಯಾಗುತ್ತ ಬರುವಲ್ಲಿ, ಆಪ್ತನಾದ ವಿವೇಕಿಪುರುಷನು ಆ ತಂದೆಮಕ್ಕಳಿಗೆ ಪರಸ್ಪರ ಉಂಟಾಗಿರುವ ವಿಯೋಗದುಃಖವನ್ನು ತಪ್ಪಿಸುವುದಕ್ಕಾಗಿ ಆ ಮಗನಿಗೆ ಹಿತೋಕ್ತಿಗಳನ್ನು ಬೋಧಿಸಿ ಆತನ ದುರ್ವೃತ್ತಿಗಳನ್ನು ತಪ್ಪಿಸಿ ಆ ಮಗನನ್ನು ತಂದೆಯಬಳಿಗೆ ಕರೆದುಕೊಂಡುಹೋಗಿ ತಂದೆಮಕ್ಕಳನ್ನೊಟ್ಟುಗೂಡಿಸುತ್ತಾನೆ. ಇದರಿಂದ ತಂದೆಯ ಸುಖಸಂಪತ್ತುಗಳು ಮಗನಿಗೂ ದೊರೆತು ತಂದೆಯಂತೆ ಮಗನೂ ಅಭ್ಯುದಯಾವಸ್ಥೆಗೆ ಬರುತ್ತಾನೆ. ಅದರಂತೆ ಪರಮಾತ್ಮನಿಂದ ಉತ್ಪನ್ನನಾದ ಈ ಜೀವಾತ್ಮನು ಮಧ್ಯಕಾಲದಲ್ಲಿ ಅವಿದ್ಯಾದಿ ಮಹಾಮಾಯೆಗಳ ಕೈಸಿಕ್ಕ ಪರವಶನಾಗಿ ಆ ತನ್ನ ಸುಖಸ್ಥಾನವಾದ ಪರಶಿವನ ಸ್ಥಾನವನ್ನೇ ಬಿಟ್ಟು ಸ್ವೇಚ್ಛೆಯಾಗಿ ಅಲೆಯುತ್ತ ಬಹು ಹೀನಾವಸ್ಥೆಯನ್ನು ಅನುಭವಿಸುತ್ತ ಬಂದಿರುತ್ತಾನೆ. ಹೀಗಿರಲು ಆ ಜೀವಾತ್ಮನೆಂಬ ಪುತ್ರನು ಅಕಸ್ಮಾತ್ತಾಗಿ ಪರಮಾತ್ಮನ ಆಪ್ತದೂತನಂತಿರುವ ಗುರುವಿನ ಬಳಿಗೆ ಬರುತ್ತಾನೆ. ದಯಾಳುವಾದ ಶ್ರೀ ಗುರುವು ಈತನ ದುರ್ದಶೆಯನ್ನು ನೋಡಿ ಮನಮರುಗಿ, ಈತನು ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನೂ ಅಣಿಮಾದ್ಯಖಿಲೈಶ್ವರ್ಯಸಂಪನ್ನನೂ ಆದ ನಮ್ಮ ಪರಶಿವನ ಅಂಶಸಂಜಾತನಾಗಿದ್ದುದರಿಂದ ಆ ಪರಶಿವನ ನಿತ್ಯಾನಂದತ್ವಾದ್ಯಖಿಲ ಸಾಮ್ರಾಜ್ಯಕ್ಕೂ ಈತನೇ ಬಾಧ್ಯನಾಗಿದ್ದರೂ ಮಹಾಮೋಹವೆಂಬ ಪಿಶಾಚಿಯಿಂದ ಹಿಡಿಯಲ್ಪಟ್ಟು ಪರವಶನಾಗಿ ಜನನಮರಣಗಳೆಂಬ ಸಮುದ್ರದ ಸುಳಿಯಲ್ಲಿ ಸುತ್ತುತ್ತಿರುವನಲ್ಲ! ಎಂದು ದಯಾಪೂರಿತಹೃದಯನಾಗಿ ಆತನಿಗೆ ಹಿಡಿದಿರುವ ಮೋಹಪಿಶಾಚಿಯನ್ನು ಓಡಿಸುವುದಕ್ಕೆ ಸಮರ್ಥವಾದ ಶಿವದೀಕ್ಷೆಯೆಂಬ ಮಹಾಯಂತ್ರವನ್ನು ಧರಿಸಿ ಆ ಪಿಶಾಚಿಯನ್ನೋಡಿಸಿ ಶಿವಲಿಂಗಸಂಬಂಧ ದ್ವಾರಾ ಮಹಾಮಂತ್ರೋಪದೇಶವನ್ನು ಮಾಡಿ ಶಿವನಿಗೂ ಈತನಿಗೂ ಇರುವ ಸಂಬಂಧವನ್ನು ವೇದಾಂತವಾಕ್ಯಗಳಿಂದ ಬೋಧಿಸಿ ವಿವೇಕವನ್ನುಂಟುಮಾಡಿ ಪರಮಾತ್ಮನ ಬಳಿಗೆ ಸೇರಿಸುತ್ತಾನೆ.

ಹೀಗೆ ಪರಮಾತ್ಮನ ವಿಷಯದಲ್ಲಿ ಅವಿವೇಕದಿಂದ ಜೀವಾತ್ಮನಿಗುಂಟಾಗಿರುವ ದೋಷವನ್ನು ಪರಿಹರಿಸಿ, ಪರಮಾತ್ಮನ ಪ್ರೇಮವುಂಟಾಗುವಂತೆ ಮಾಡುವ ಶಕ್ತಿಯನ್ನು ಪಡೆದಿರುವ ಗುರುಗಳ ಮಹೋಪಕಾರವನ್ನು ಯಾರೂ ಮರೆಯುವಂತೆ ಇಲ್ಲವು. ಆದ್ದರಿಂದ ಶಾಸ್ತ್ರಕಾರರು—

ಗುರುರೇವ ಪರಂತತ್ತ್ವಂ ಪ್ರಕಾಶಯತಿ ದೇಹಿನಾಂ | ಕೋವಾ ಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತಕಃ || ಅಂತರೇಣ ಗುರುಂ ಸಿದ್ಧಂ ಕಥಂ ಸಂಸಾರನಿಷ್ಕೃತಿಃ | ನಿದಾನಜ್ಞಂ ವಿನಾವೈದ್ಯಂ ಕೋವಾ ರೋಗೋ ನಿವರ್ತತೇ || ಅತಿರೋಹಿತ ಸ್ವಕತತ್ತ್ವಸ್ಯ ಜೀವಸ್ಯ ಶಿವಸ್ವಭಾವಿನಃ || ಗುರೋಃ ಕಟಾಕ್ಷಸಂಸಿದ್ಧೇಃ ಕೋವಾ ಲೋಕೇಷು ದುರ್ಲಭಃ || ಕ್ಷೀರಾಬ್ಧಿರಿವ ಸಿಂಧೂನಾಂ ಸುಮೇರುರಿವ ಭೂಭೃತಾಂ | ಗ್ರಹಾಣಾಮಿವ ತಿಗ್ಮಾಂಶುರ್ಮಣೀನಾಮಿವ ಕೌಸ್ತುಭಃ ||

ಸೂರ್ಯನು ಉದಯಿಸಿದ ಹೊರತು ಜಗತ್ತನ್ನಾವರಿಸಿದ ಅಂಧಕಾರವು ಹೇಗೆ ತೊಲಗುವುದಿಲ್ಲವೋ, ರೋಗನಿದಾನವನ್ನು ತಿಳಿದ ವೈದ್ಯನಿಲ್ಲದೆ ರೋಗವು ಹೇಗೆ ನಿವೃತ್ತಿಯಾಗುವದಿಲ್ಲವೋ, ಹಾಗೆ ಗುರುವಿಲ್ಲದೆ ಜನನಮರಣರೂಪವಾದ ದುಃಖವು ಶಾಂತವಾಗುವುದಿಲ್ಲ. ಗುರುವೇ ನಿಜತತ್ತ್ವವನ್ನು ಪ್ರಕಾಶಗೊಳಿಸುತ್ತಾನಲ್ಲದೆ, ಇತರರು ಪ್ರಕಾಶಗೊಳಿಸಲಾರರು. ಗುರುವಿನ ಅನುಗ್ರಹವನ್ನು ಪಡೆದವನಿಗೆ ಯಾವುದು ತಾನೇ ದುರ್ಲಭವು? ಸಮುದ್ರಗಳೊಳಗೆ ಕ್ಷೀರಸಮುದ್ರವೂ ಗಿರಿಗಳೊಳಗೆ ಮೇರುಗಿರಿಯೂ ಗ್ರಹಗಳೊಳಗೆ ಸೂರ್ಯಗ್ರಹವೂ ರತ್ನಗಳೊಳಗೆ ಕೌಸ್ತುಭರತ್ನವೂ ಶ್ರೇಷ್ಠಗಳಾಗಿರುವಂತೆ ಎಲ್ಲಕ್ಕೂ ಗುರುವೇ ಶ್ರೇಷ್ಠನಾಗಿರುತ್ತಾನೆಂದು ಗುರುಮಹತ್ವವನ್ನು ಬಹಳವಾಗಿ ಕೊಂಡಾಡಿರುತ್ತಾರೆ. ಆದುದರಿಂದ ಜೀವಾತ್ಮನಿಗೂ ಪರಮಾತ್ಮನಿಗೂ ನಿಕಟಸಂಬಂಧವಿದ್ದರೂ ಆ ಸಂಬಂಧವನ್ನು ಜೀವಾತ್ಮನು ಮರೆತಿರುವುದರಿಂದ ಗುರುವೆಂಬ ಪರಮಾಪ್ತನು ಜೀವಾತ್ಮಪರಮಾತ್ಮರಿಗಿರುವ ಸಂಬಂಧವನ್ನರುಹಿ ಜೀವಾತ್ಮನನ್ನು ಬಂಧನದಿಂದ ನಿವೃತ್ತಿಗೊಳಿಸುವ ಉಪಾಯವನ್ನು ತಿಳಿದಿರುವುದರಿಂದಲೇ ವೇದಾಗಮಾದಿಗಳು ಸಹ ಆ ಶ್ರೀಗುರುವನ್ನು ಮುಕ್ತಕಂಠದಿಂದ ಹೊಗಳಿರುತ್ತವೆ. ಘಟಾದಿ ಪದಾರ್ಥಗಳನ್ನು ನೋಡುವುದಕ್ಕೆ ದೀಪವು ಹೇಗೆ ಸಹಾಯಭೂತವಾಗಿದೆಯೋ ಹಾಗೆ ಆ ಪರಮಾತ್ಮತತ್ವವನ್ನು ಪ್ರತ್ಯಕ್ಷೀಕರಿಸಲು ಗುರುವೇ ಸಂಪೂರ್ಣ ಸಹಾಯಕನಾಗಿರುವನು. ಹೀಗಿದ್ದರೂ ಐಹಿಕಸೌಖ್ಯವೇ ಪರಮಧ್ಯೇಯವಾಗುಳ್ಳ ಈಗಿನಕಾಲದಲ್ಲಿ ಕೆಲವರು ಭವರೋಗಮಹಾವೈದ್ಯನಾದ ಗುರುವಿನ ವಿಷಯದಲ್ಲಿ ಅಲಕ್ಷ್ಯವುಳ್ಳವರಾಗಿರುವುದಲ್ಲದೆ ತಮ್ಮ ತಮ್ಮ ಸ್ವೇಚ್ಛಾವಿಹಾರಿತ್ವಕ್ಕೆ ಗುರುಗಳೆಂಬವರು ಪ್ರತಿಬಂಧಕವನ್ನುಂಟುಮಾಡುತ್ತಾರೆಂಬ ದ್ವೇಷಬುದ್ಧಿಯಿಂದ ಗುರುಗಳಮೇಲೆಯೇ ಟೀಕೆಟಿಪ್ಪಣಿಗಳಿಗೆ ಪ್ರಾರಂಭ ಮಾಡಿದ್ದಾರೆ. ಇಂಥ ಗುರುದೂಷಕರಾದ ಪರಮನಾಸ್ತಿಕರು ಮರದಮೇಲೆ ಕುಳಿತುಕೊಂಡು ಬುಡವನ್ನು ಕಡೆಯಲು ಹೊರಟ ಮಹಾಪಂಡಿತನಿಗೆ ಸಮಾನರಾಗುವರು. ಇಂಥವರೆಂದೂ ಆ ಪರಮಾತ್ಮನ ಅನುಗ್ರಹಕ್ಕೆ ಭಾಗಿಗಳಾಗಲಾರರು.

ಪರಮಾತ್ಮನಲ್ಲಿ ಸಹಜಪ್ರೇಮವುಳ್ಳವರೆಂದೂ ಗುರುದೂಷಣೆ ಮಾಡುವುದಿಲ್ಲ. ಯಾರು ಗುರುದೂಷಕರೋ ಅವರು ಪರಮಾತ್ಮದೂಷಕರೆಂದೂ ಯಾರು ಗುರುಪ್ರೇಮಿಗಳೋ ಅವರು ಪರಮಾತ್ಮ ಪ್ರೇಮಿಗಳೆಂದೂ ಶಾಸ್ತ್ರವು ಸಾರುತ್ತಿರುವುದು. ಗುರುವಿನ ವಿಷಯದಲ್ಲಿ ತೋರಿಸುತ್ತಿರುವ ಪ್ರೀತಿದ್ವೇಷಗಳೇ ಪರಮಾತ್ಮನ ಪ್ರೀತಿದ್ವೇಷಗಳ ಬಾಹ್ಯಚಿಹ್ನೆಗಳಾಗಿರುತ್ತವೆ.

ಕರಸ್ಥಂ ಪಾಯಸಂ ತ್ಯಕ್ತ್ವಾ ಕೂರ್ಪರಂ ಲೇಢಿ ಚಾತ್ಮನಃ |
ಯಸ್ತ್ಯಕ್ತ್ವಾ ಗುರುಪೂಜಾಂ ತು ಕೃತ್ವಾ ಶಿವಪದಂ ಯಜೇತ್ ||
ಪರಾಙ್ಮುಖಃ ಶಿವಸ್ತಸ್ಯ ನರಕಂ ಸಂಪ್ರಯಚ್ಛತಿ |
ಏತತ್ಸರ್ವಂ ಪರಿಜ್ಞಾಯ ಪೂಜಾಂ ಕುರ್ಯಾದ್ಗುರೋಃ ಸ್ವಯಂ |
ಗುರುಪೂಜಾಭಿಸಂತುಷ್ಟಃ ಸ್ವಸಾಯುಜ್ಯಂ ಪ್ರಯಚ್ಛತಿ ||

ಯಾವನು ಗುರುಪೂಜಾವಂದನಾದಿಗಳನ್ನು ತಿರಸ್ಕರಿಸಿ ಶಿವಲಿಂಗವನ್ನು ಮಾತ್ರ ಪುರಸ್ಕರಿಸಲಿಕ್ಕೆ ಹೊರಡುತ್ತಾನೆಯೋ, ಅಂಥವನು ತನ್ನ ಅಂಗೈಯಲ್ಲಿ ಸಿದ್ಧವಾಗಿರುವ ಪಾಯಸವನ್ನು ಸೇವಿಸದೆ ಮೊಣಕೈಯನ್ನು ನೆಕ್ಕಲಿಕ್ಕೆ ಹೊರಟ ಮೂಢನಂತೆ ಹಾಸ್ಯಾಸ್ಪದನಾಗುವನಲ್ಲದೆ ಅಂಥವನ ವಿಷಯದಲ್ಲಿ ಶಿವನು ಸಹ ಹಿಮ್ಮುಖನಾಗಿ ನರಕವನ್ನು ಕೊಡುತ್ತಾನೆ. ಇದೆಲ್ಲವನ್ನೂ ತಿಳಿದು ಗುರುಪೂಜಾವಂದನಾದಿಗಳಲ್ಲಿ ಆಸಕ್ತನಾದರೆ ಶಿವನು ಆತನ ವಿಷಯದಲ್ಲಿ ಸಂತುಷ್ಟನಾಗಿ ತನ್ನಲ್ಲಿ ಸೇರಲು ಅವಕಾಶಕೊಡುತ್ತಾನೆ.

ಎಂದು ಬೋಧಿಸುವ ಶಿವಾಗಮವಾಕ್ಯಗಳನ್ನು ಪರಿಶೀಲಿಸಿ ತಮ್ಮ ಹಾನಿಗೆ ಕಾರಣೀಭೂತವಾದ ಗುರುದ್ರೋಹಬುದ್ಧಿಯನ್ನು ದೂರಮಾಡಿ ಗುರುಗಳಲ್ಲಿ ಶರಣಾಗತರಾಗಿ ಪೂಜಾವಂದನಾದಿಗಳಿಂದ ಗುರುಗಳನ್ನು ಸಂತೋಷಗೊಳಿಸಿ, ಆ ಗುರುಗಳ ಮೂಲಕವಾಗಿ ಪರಮಾತ್ಮನಿಗೂ ತಮಗೂ ಇರುವ ನಿತ್ಯಸಂಬಂಧವನ್ನು ತಿಳಿದುಕೊಂಡು ಬಂಧನದಿಂದ ನಿವೃತ್ತರಾಗಿ ಮಾನವಜನ್ಮವನ್ನು ಸಾರ್ಥಕಗೊಳಿಸುವುದೇ ಪ್ರತಿಯೊಬ್ಬ ಆಸ್ತಿಕನ ಕರ್ತವ್ಯವಾಗಿದೆಯಲ್ಲವೆ?

ವರ್ತಮಾನಸಂಗ್ರಹ.

ಚೀಣಾ ದೇಶದಲ್ಲಿ 20 ಲಕ್ಷ ಮಕ್ಕಳು ಗುಲಾಮರಾಗಿರುವರಂತೆ! 25 ವರ್ಷದ ಹುಡುಗಿಗೆ ಕ್ರಯ 12 ಆಣೆಗಳು ಮಾತ್ರ!

ರಷ್ಯಾ ಸರಕಾರದವರು 90 ಯುದ್ಧದ ವಿಮಾನಗಳನ್ನು ಕೊಂಡುಕೊಳ್ಳುವದಕ್ಕಾಗಿ ಪೋಲೆಂಡ್ ಸರಕಾರದವರೊಡನೆ ವ್ಯವಹಾರ ನಡೆಯಿಸಿರುವರು.

ಪಾಟಿಯಾಲಾ ನಗರದ ಸರವಣಸಿಂಗ್ ಎಂಬ 24 ವರ್ಷದ ಸಿಕ್‌ತರುಣನು 11 ಗಂಟೆ, 20 ನಿಮಿಷ 45 ಸೆಕೆಂಡುಗಳಲ್ಲಿ 75 ಮೈಲುಗಳ ದೂರ ಓಡಿದನಂತೆ!

ಮುಂಬಯಿ ಗವರ್ನರಾಗಿದ್ದ ಸರ್ ಫ್ರೆಡರಿಕ್‌ಸೈಕ್ಸ್ ರವರು ಕಳೆದವಾರ ಇಂಗ್ಲೆಂಡಿಗೆ ಹಿಂತಿರುಗಿದರು. ಲಾರ್ಡ್ ಬ್ರೆಬೋರ್ನ್‌ರವರು ಈಗ ಗವರ್ನರಾಗಿರುವರು.

ಮಿರ್ಜಾಪುರದ ಇಬ್ಬರು ಹಿಂದುಗಳು ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರವರ ಮೂಗನ್ನು ಜಜ್ಜಿದರೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟಿರುವರು.

ಪುಣೆಯಲ್ಲಿ ಸನಾತನ ವೈದಿಕಧರ್ಮ ಪರಿಷತ್ತಿನ 2 ನೆಯ ಅಧಿವೇಶನವು ಶ್ರೀ ವಾಸುದೇವಶಾಸ್ತ್ರಿ ಅಭ್ಯಂಕರರವರ ಅಧ್ಯಕ್ಷತೆಯಲ್ಲಿ ನಡೆದು ಗಾಂಧಿಯವರ ಅಮಂಗಲತತ್ವವು ಚೆನ್ನಾಗಿ ಖಂಡಿಸಲ್ಪಟ್ಟಿತು.

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಜಂಕೆಗಳು ಜಪಾನ್ ಸಮುದ್ರಕ್ಕೂ ಓಖೋಟಸ್ಕ್ ಸಮುದ್ರಕ್ಕೂ ಮಧ್ಯದಲ್ಲಿರುವ ಸಾಖಾಲಿನ್ ದ್ವೀಪದಲ್ಲಿರುವವಂತೆ! ಇವುಗಳಲ್ಲಿ ಕೆಲವು ಗಂಡು ಜಿಂಕೆಗಳು 450 ಪೌಂಡ್ ತೂಕವಾಗಿರುವವಂತೆ!

ಅಹಮದಾಬಾದ ಗುಜರಾತ ಕಾಲೇಜಿನ ಮೈದಾನದಲ್ಲಿ ಸ್ತ್ರೀಯರಿಗೂ ಗಂಡಸರಿಗೂ ಕ್ರಿಕೆಟ್ ಮ್ಯಾಚ್ ನಡೆಯಿತು. ಸ್ತ್ರೀಯರು ಚೊಣ್ಣವನ್ನು ಶರ್ಟನ್ನು ಧರಿಸಿದ್ದರು. ಸ್ತ್ರೀಯರವು 141 ಓಟಗಳಾದವು. ಪುರುಷರವು 94 ಓಟಗಳಾದುದರಿಂದ ಗಂಡಸರು 47 ಓಟಗಳಿಂದ ಪರಾಜಿತರಾದರು.

(ಸಿಂಧ್) ಶಿಕಾರಿಪುರದ ಒಬ್ಬ ಹುಡುಗಿಯು ಪಾಠವನ್ನು ಕಲಿಯುತ್ತಿರಲಿಲ್ಲವೆಂದು ಉಪಾಧ್ಯಾಯಿನಿಯು ಹುಡುಗಿಯನ್ನು ಒಂದು ಕೊಠಡಿಯಲ್ಲಿ ಕೂಡಿ ಬೀಗ ಹಾಕಿದಳು. ಅಷ್ಟರಲ್ಲಿ ಎಲ್ಲಿಂದಲೋ ಒಂದು ಹಾವು ಬಂದು ಹುಡುಗಿಯನ್ನು ಕಚ್ಚಿತು. ಹುಡುಗಿಯು ಎಷ್ಟು ಕೂಗಿಕೊಂಡರೂ ಯಾರೂ ಬಾಗಿಲನ್ನು ತೆಗೆಯಲಿಲ್ಲ. ಶಾಲೆಯು ಬಿಟ್ಟನಂತರ ಹುಡುಗಿಯು ಬರಲಿಲ್ಲವೆಂದು ಮನೆಯವರು ಹೋಗಿ ನೋಡುವ ಹೊತ್ತಿಗೆ ಹುಡುಗಿಯು ಮೃತಳಾಗಿದ್ದಳಂತೆ!

ಲಾಹೋರ್ ಡಿಸ್ಟ್ರಿಕ್ಟ್ ಕೋರ್ಟಿನ ಒಬ್ಬ ಪೋಲೀಸ್ ಕ್ಲಾರ್ಕು 3000 ರೂ. ಗಳ ಬೆಲೆಯುಳ್ಳ ವಸ್ತುಗಳನ್ನೂ, ನಗದು ಹಣವನ್ನೂ ದುರುಪಯೋಗಪಡಿಸಿದನೆಂಬ ಕಾರಣದ ಮೇಲೆ ಲಾಹೋರ್ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಯಾಗಿದ್ದನು. ಇವನ ಮೇಲೆ ಒಟ್ಟು 3 ಮೊಕದ್ದಮೆಗಳಿದ್ದುವು. ಪ್ರತಿಯೊಂದು ಮೊಕದ್ದಮೆಯಲ್ಲಿಯೂ ಮೂರು ಮೂರು ಆಪಾದನೆಗಳಿದ್ದುವು. ಮ್ಯಾಜಿಸ್ಟ್ರೇಟರು 3 ಮೊಕದ್ದಮೆಗಳನ್ನೂ ಒಟ್ಟಿಗೆ ವಿಚಾರಣೆಮಾಡಿ ಒಟ್ಟು 45 ವರ್ಷಗಳ ಕಠಿಣಶಿಕ್ಷೆಯನ್ನೂ 2,200 ರೂ. ಗಳ ದಂಡವನ್ನೂ ವಿಧಿಸಿರುವರು. ಆದರೆ ಶಿಕ್ಷೆಗಳೆಲ್ಲವೂ ಏಕಕಾಲದಲ್ಲಿಯೇ ಜರುಗುವದರಿಂದ ಒಟ್ಟು 10 ವರ್ಷಗಳಲ್ಲಿ 45 ವರ್ಷಗಳ ಶಿಕ್ಷೆಯೂ ತೀರಿಹೋಗುವದಂತೆ!

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಉಪಯೋಗವಿಲ್ಲದೆ ಇರುವ ಚಿನ್ನ, ಬೆಳ್ಳಿಯ ಸಾಮಾನುಗಳು ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ಜನವರಿ 8 ತಾರೀಖಿನಿಂದ ಪ್ರತಿನಿತ್ಯವೂ ಮಧ್ಯಾಹ್ನ 2 ರಿಂದ 4 ಗಂಟೆಗಳ ವರೆಗೆ ಬಹಿರಂಗವಾಗಿ ಹರಾಜು ಮಾಡಲ್ಪಡುವವು. ಈ ಬಗ್ಗೆ ಇಂಗ್ಲಿಷ ಪ್ರಸಿದ್ಧ ಪತ್ರಿಕೆಯು ನಮ್ಮ ವಾರದ ಪತ್ರಿಕೆಯಲ್ಲಿ ಪ್ರಕಟವಾಗಿರುವುದು. ಸರ್ವರೂ ಓದಿನೋಡಿಕೊಳ್ಳಬೇಕು.

ಒಡೆಯದೆ ಇರುವ ಗಾಜು.

ಜರ್ಮನ್ ದೇಶದ ಒಬ್ಬ ಶಾಸ್ತ್ರಜ್ಞನು ಗುಂಡಿನೇಟು ಬಿದ್ದರೂ ಒಡೆಯದಿರುವ ಒಂದುತರಹ ಗಾಜನ್ನು ತಯಾರುಮಾಡಿರುವನಂತೆ!

ಜೋಧಪುರ ಸಂಸ್ಥಾನದಲ್ಲಿ ಗಾಂಧಿಯವರಿಗೆ ಅಡ್ಡಿ.

ಜೋಧಪುರದ ಅಸ್ಪೃಶ್ಯನಿವಾರಣ ಸಂಸ್ಥೆಯವರು ಗಾಂಧಿಯವರನ್ನು ಆಹ್ವಾನಿಸುವುದಾಗಿ ಸರಕಾರಕ್ಕೆ ಬರೆದಿದ್ದರು. ಆದರೆ ಸರಕಾರದವರು ಆಹ್ವಾನಿಸಕೂಡದೆಂದು ಅಪ್ಪಣೆಮಾಡಿರುವರು.

ಖೈದಿಗಳಿಗೆ ವೈಮಾನಿಕ ಶಿಕ್ಷಣ!

ಸಾನ್ ಫ್ರಾನ್ಸಿಸ್ಕೋ ನಗರದ ಸಮೀಪದಲ್ಲಿರುವ ಮ್ಯಾಕ್‌ನೀಲ್ ಐಲೆಂಡ್ ಶಿಕ್ಷಣಗೃಹದ ಅಧಿಕಾರಿಗಳು ಅಲ್ಲಿರುವ ಬಂದಿಗಳಿಗೆಲ್ಲಾ ವಿಮಾನವನ್ನು ನಡೆಯಿಸುವವನ್ನು ಹೇಳಿಕೊಡುತ್ತಿರುವರು. ಆದರೆ ಬಂದಿಗಳು ಅದನ್ನೇ ತಮ್ಮ ಸ್ವಾತಂತ್ರ್ಯಸಾಧನೆಗೆ ಉಪಯೋಗಿಸಿಕೊಳ್ಳದಿರಲೆಂದು ಅಲ್ಲಿರುವ ವಿಮಾನಗಳ ರೆಕ್ಕೆಗಳನ್ನೆಲ್ಲ ತೆಗೆದುಹಾಕಿರುವರು.

63 ವರ್ಷದ ವಿದ್ಯಾರ್ಥಿನಿ!

ಲಂಡನ್ ನಗರದಲ್ಲಿರುವ ಚೀಣಾದೇಶದ ಡಿನ್‌ಹು ಯಾಂಗ್ಜ್ ಎಂಬ ಪ್ರೊಫೆಸರನು ತನ್ನ ಮನೆಯ ಆಡಳಿತವನ್ನು ನೋಡಿಕೊಂಡು ಲೆಕ್ಕವನ್ನು ಬರೆದಿಡುವದಕ್ಕಾಗಿ ಒಬ್ಬ ಗುಮಾಸ್ತನನ್ನು ನೇಮಿಸಿಕೊಂಡಿದ್ದನು. ಈ ಗುಮಾಸ್ತನಿಗೆ ಸಂಬಳಕೊಡುವದರಿಂದ ತಮಗೆ ಹೆಚ್ಚು ಹಣವು ವ್ಯಯವಾಗುವದೆಂದು ತಿಳಿದು ಹುಯಾಂಗ್ಜನ ಪತ್ನಿಯು ಈಗ ತನ್ನ 63 ನೆಯ ವಯಸ್ಸಿನಲ್ಲಿ ಓದುಬರಹವನ್ನು ಕಲಿಯಲು ಪ್ರಾರಂಭಿಸಿರುವಳಂತೆ!

ಕೋಟ್ಯಧೀಶ್ವರನ ಹುಚ್ಚು.

ಬ್ರೆಜಿಲ್ ದೇಶದ ಒಬ್ಬ ಕೋಟ್ಯಧೀಶ್ವರನು ತನ್ನ ಮನಸ್ಸಿಗೆ ತೋರಿದವರಿಗೆಲ್ಲಾ ತನ್ನ ಐಶ್ವರ್ಯವನ್ನು ನಾನಾರೀತಿಯಲ್ಲಿ ಹಂಚಲಾರಂಭಿಸಿದನು. ಇದು ಅಲ್ಲಿಯ ಅಧಿಕಾರಿಗಳ ಗಮನಕ್ಕೆ ಬಂದು, ಅವರು ಶ್ರೀಮಂತನಿಗೆ ಬುದ್ಧಿಸ್ವಾಸ್ಥ್ಯವಿಲ್ಲನೆಂದು ತೀರ್ಮಾನಿಸಿ, ಅವನಿಂದ ಹಣಕಾಸು ಮೊದಲಾದವುಗಳನ್ನು ಪಡೆದವರೆಲ್ಲರೂ ಕೂಡಲೇ ಹಿಂತಿರುಗಿಕೊಡಬೇಕೆಂದು ಅಪ್ಪಣೆ ಮಾಡಿರುವರು.

ಪ್ರಪಂಚದಲ್ಲೆಲ್ಲಾ ಅತ್ಯಂತ ಚಿಕ್ಕಪುಸ್ತಕ!

ಪ್ರಪಂಚದಲ್ಲೆಲ್ಲಾ ಅತ್ಯಂತ ಚಿಕ್ಕದಾದ ಒಂದು ಪುಸ್ತಕವು ಮಾಸಚುಸೆಟ್ಸ್ ನಗರದಲ್ಲಿ ತಯಾರಿಸಲ್ಪಟ್ಟಿರುವುದು. 26 ಪುಟಗಳು. ಅರ್ಧ ಪೋಸ್ಟೇಜುಸ್ಟಾಂಪಿನ ಅಗಲ! ⅓ ಕ್ಯಾರೆಟ್ ತೂಕ. ಪೂರ್ತಾ ಚರ್ಮದ ಬೈಂಡ್. ಇದರಲ್ಲಿ ಫಿಟ್ಜ್ ಜೆರಾಲ್ಡ್ ಎಂಬವರ 'ರುಬಿಯಾತ್' ಎಂಬ ಕಾವ್ಯದ 26 ಪದ್ಯಗಳು ಬರೆಯಲ್ಪಟ್ಟಿರುವವು. ಈ ಪುಸ್ತಕವನ್ನು ತಯಾರಿಸಲು 7 ವರ್ಷಗಳ ಕಾಲ ಹಿಡಿಯಿತಂತೆ!

ಯುದ್ಧದ ಸೂಚನೆ!

ಜಪಾನಿಗೂ ರಷ್ಯಾಕ್ಕೂ ಇಷ್ಟರಲ್ಲೇ ಯುದ್ಧಾರಂಭವಾಗಬಹುದೆಂಬ ಭೀತಿಯಿಂದ ಮಾಂಚುಕೊದೇಶದ ರಾಜಧಾನಿಯಾದ ಹರ್ಬಿನ್ ನಗರದಲ್ಲಿದ್ದ ರಷ್ಯನ್ನರೆಲ್ಲರೂ ಬೇರೆ ಸುರಕ್ಷಿತವಾದ ಕಡೆಗಳಿಗೆ ಹೋಗುತ್ತಿರುವರು. ಕಳೆದ ಆಗಸ್ಟ್ ಸೆಪ್ಟಂಬರ್ ತಿಂಗಳುಗಳಲ್ಲಿ 1110 ಜನ ರಷ್ಯನ್ನರು ಹರ್ಬಿನ್ ನಗರವನ್ನು ಬಿಟ್ಟು ಹೋಗಿರುವರು. ಅಕ್ಟೋಬರ್ ತಿಂಗಳಿಂದೀಚೆಗೆ ಸರಾಸರಿ ದಿನ 1ಕ್ಕೆ 40 ಜನರಂತೆ ಆ ನಗರವನ್ನು ಬಿಟ್ಟು ಹೋಗುತ್ತಿರುವರು.

ಬೆಂಗಳೂರು ಡಿ|| ಗುಡೇಮಾರನಹಳ್ಳಿಯ ವೆಂಕಟಸ್ವಾಮಿ ಎಂಬುವನು ತನ್ನ ಹೆಂಡತಿ ಮಲ್ಲಮ್ಮನನ್ನು ಕೊಂದನೆಂಬ ಕಾರಣದ ಮೇಲೆ ಬೆಂಗಳೂರು ಸೆಷನ್ಸ್ ಜಡ್ಜರವರು ವಿಚಾರಣೆ ನಡೆಯಿಸಿ ಅಪರಾಧಿಗೆ 4 ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಮೋಟಾರನ್ನು ವೇಗವಾಗಿ ನಡೆಸದಿದ್ದರೆ ದಂಡ!

ದೊಡ್ಡ ದೊಡ್ಡ ನಗರಗಳಲ್ಲಿ ಮೋಟಾರುಗಳನ್ನು ವೇಗವಾಗಿ ನಡೆಯಿಸಿದವರಿಗೆ ದಂಡವನ್ನು ವಿಧಿಸುವದು ಸರ್ವಸಾಮಾನ್ಯವಾಗಿರುವದು. ಆದರೆ ಮಾಸಚುಸೆಟ್ಸ ನಗರದಲ್ಲಿ ವೇಗವಾಗಿ ಮೋಟಾರನ್ನು ನಡೆಯಿಸದಿದ್ದವರಿಗೆ ದಂಡಹಾಕಲ್ಪಡುವದಂತೆ! ಯಾರಾದರೂ ಮೋಟಾರನ್ನು ವೇಗವಾಗಿ ನಡೆಯಿಸದೆ ಅದರಿಂದ ಇತರ ವಾಹನಗಳಿಗೆ ಅಡಚಣೆಯಾದಲ್ಲಿ ಮೊದಲನೇ ಸಾರಿ 4 ಷಿಲ್ಲಿಂಗುಗಳ ದಂಡವೂ, ಎರಡನೆಯ ಸಾರಿಯಿಂದ 4 ಪೌಂಡುಗಳ ದಂಡವೂ ವಿಧಿಸಲ್ಪಡುವದಂತೆ!

ಸತ್ತ ಸೇಟರು ತಿರುಗಿಬಂದರು.

ಅಮರಾವತಿ ಜಿಲ್ಲೆಯ ಅಂಧುರಾ ಎಂಬ ಗ್ರಾಮದ ಸೇಟ್ ಮಂಗಳಚಂದ್ ಎಂಬುವರ ಯಾವುದೋ ಕೆಲಸದ ನಿಮಿತ್ತವಾಗಿ ಕಲ್ಕತ್ತೆಗೆ ಹೋಗಿದ್ದರು. ಅದೇ ಕಾಲದಲ್ಲಿ ಮನೆಯವರಿಗೆ ಸೇಟರು ಮೃತಪಟ್ಟರೆಂದು ಮನೆಯವರಿಗೆ ಟೆಲಿಗ್ರಾಂಬಂದಿತು. ಇನ್ನೇನು? ಮನೆಯವರು ಸೇಟರ ಕರ್ಮವನ್ನು ಪ್ರಾರಂಭಿಸಿ 10 ನೆಯ ದಿವಸ ಶ್ರಾದ್ಧವೂ ಪ್ರಾರಂಭವಾಯಿತು. ಅಂತೂ ಬ್ರಾಹ್ಮಣರು ಶ್ರಾದ್ಧಭೋಜನವನ್ನು ಮಾಡುವವೇಳೆಗೆ ಸರಿಯಾಗಿ ಸೇಟರು ಕಲ್ಕತ್ತೆಯಿಂದ ಮನೆಗೆ ಬಂದರಂತೆ!

ಹಗಲೆಲ್ಲಾ ನಾರಿ! ರಾತ್ರಿಯೆಲ್ಲಾ ಮಾರಿ!

ಯೂಗೋ-ಸ್ಲೋವೇಕಿಯಾ ದೇಶಕ್ಕೆ ಸೇರಿದ ಬೆಲೆವರು ಗ್ರಾಮದ ಒಬ್ಬ ಸ್ಕೂಲು ಮಾಸ್ತರನ ತರುಣ ಪತ್ನಿಯು ಹಗಲೆಲ್ಲಾ ಇತರ ಸ್ತ್ರೀಯರಂತೆ ಅತ್ಯಂತ ಸಭ್ಯತೆಯಿಂದ ಸಂಸಾರಮಾಡಿಕೊಂಡಿದ್ದು ರಾತ್ರಿಯ ವೇಳೆಯಲ್ಲಿ ದರೋಡೆಕೋರರ ಒಡತಿಯಾಗುತ್ತಿದ್ದಳಂತೆ! ಈ ಕಳ್ಳರು ಒಂದು ದಿನ ರಾತ್ರಿ ಒಂದು ಅಂಗಡಿಗೆ ನುಗ್ಗಿ ಕಳ್ಳತನಮಾಡುತ್ತಿದ್ದಾಗ ಪೋಲೀಸರ ಕೈಗೆ ಸಿಕ್ಕಿಬಿದ್ದರು. ಇವರಲ್ಲಿ ಒಬ್ಬ ಸುಂದರಸ್ತ್ರೀಯಿದ್ದು ಅವಳಾರೆಂಬುದು ಮಾತ್ರ ಪೋಲೀಸರಿಗೆ ಪತ್ತೆಯಾಗಲಿಲ್ಲ. ಅಷ್ಟರಲ್ಲಿ ಸ್ಕೂಲು ಮಾಸ್ಟರನು ತನ್ನ ಪತ್ನಿಯು ಎಲ್ಲಿಯೋ ಹೊರಟುಹೋಗಿರುವಳೆಂದು ಪೋಲೀಸರಿಗೆ ದೂರು ಹೇಳಲು ಹೋದಾಗ 'ಲಾಕಪ್' ನಲ್ಲಿದ್ದ ಕಳ್ಳರ ಒಡತಿಯನ್ನು ಕಂಡು ಇವಳೇ ತನ್ನ ಪತ್ನಿಯೆಂದು ಗುರುತಿಸಿದನಂತೆ!

ಪದಚ್ಯುತ ಕೈಜರರ ಐಶ್ವರ್ಯ!

ಜರ್ಮನಿಯ ಪದಚ್ಯುತ ಕೈಜರ್ ವಿಲ್‌ಹೆಲ್ಮ್‌ರವರು ಜರ್ಮನಿಯಲ್ಲೆಲ್ಲಾ ಅತ್ಯಂತ ದೊಡ್ಡ ಶ್ರೀಮಂತರೆಂದೂ, ಅವರ ಆಸ್ತಿಯು 70,00,00,000 ರೂ. ಗಳಾಗುವದೆಂದೂ ಅಂದಾಜು ಮಾಡಲ್ಪಟ್ಟಿರುವದು.

ಜಪಾನರು ಆರ್ಯರಂತೆ!

ಜಪಾನರು ಆರ್ಯರೆಂದು ಜರ್ಮನ್ ಸರಕಾರದವರು ಅಧಿಕಾರಯುತವಾಗಿ ಒಪ್ಪಿಕೊಂಡಿರುವರು. ಇದರಿಂದ ಇನ್ನುಮುಂದೆ ಜರ್ಮನ್ನರು ಜಪಾನರಲ್ಲಿ ನಿರಾತಂಕವಾಗಿ ವಿವಾಹಸಂಬಂಧವನ್ನು ಬೆಳೆಸಲು ಅವಕಾಶವುಂಟಾಗಿರುವದು.

25 ವರ್ಷಗಳಲ್ಲಿ 25 ಮಕ್ಕಳು!

ವೆನಿಸ್ ನಗರದ ಒಬ್ಬ ಸ್ತ್ರೀಯಳು ತನ್ನ 21ನೆಯ ವರ್ಷದಲ್ಲಿ ವಿವಾಹವಾಗಿ ಅಂದಿನಿಂದ ಇಂದಿನವರೆಗೆ ಪ್ರತಿವರ್ಷವೂ ತಪ್ಪದೆ ಒಂದೊಂದು ಮಗುವನ್ನು ಹಡೆಯುತ್ತಿರುವಳು. ಅವಳಿಗೆ ಈಗ 46 ವರ್ಷ ವಯಸ್ಸಾಗಿದ್ದು 25 ನೆಯ ಮಗುವನ್ನು ಹಡೆದಿರುವಳಂತೆ!

ಸಮುದ್ರಪಾಲಾದ ನಿಧಿ!

1783 ನೇ ಇಸವಿಯಲ್ಲಿ ಎಸ್ಟೋನಿಯಾ ದೇಶಕ್ಕೆ ಸೇರಿದ 'ಓಸೆಲ್' ಎಂಬ ದ್ವೀಪದ ಸಮೀಪದಲ್ಲಿ 'ಬ್ರಿಟಾನಿಯಾ' ಎಂಬ ಬ್ರಿಟಿಷರ ಹಡಗು ಸಮುದ್ರದಲ್ಲಿ ಮುಳುಗಿಹೋಯಿತು. ಆ ಹಡಗಿನಲ್ಲಿ ರಷ್ಯಾ ಸರಕಾರದಿಂದ ಫ್ರಾನ್ಸಿಗೆ ರವಾನಿಸಲ್ಪಟ್ಟ 15,00,00,000 ರೂ. ಗಳ ಬೆಲೆಯುಳ್ಳ ಭಂಗಾರದ ತುಂಡುಗಳಿದ್ದು ಅವೆಲ್ಲವೂ ಸಮುದ್ರದ ಪಾಲಾಗಿರುವವು. ಆ ಭಂಗಾರವನ್ನು ಮೇಲಕ್ಕೆ ತೆಗೆಯಲು ಇದುವರೆಗೆ ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಪ್ರಯೋಜನವಾಗಿರುವವು. 'ಎಸ್ಟೋನಿಯನ್ ಸಾಲ್ವೇಜ್ ಕಂಪೆನಿ' ಯವರು ನೂತನ ಯಂತ್ರಸಾಧನಗಳಿಂದ ಆ ಭಂಗಾರವನ್ನು ಪುನಃ ಮೇಲಕ್ಕೆ ತೆಗೆಯಬೇಕೆಂದು ಪ್ರಯತ್ನಿಸುತ್ತಿರುವರು. ಈ ಭಂಗಾರಕ್ಕೆ ಗ್ರೇಟ್‌ಬ್ರಿಟನ್, ರಷ್ಯಾ ಮತ್ತು ಎಸ್ಟೋನಿಯಾ ಈ ಮೂರು ರಾಜ್ಯದವರೂ ಹಕ್ಕುದಾರರಾಗಿರುವರು.

ಸ್ವೀಕಾರ

ಧಾರವಾಡ ಡಿ|| ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಮಹಾದೇವಗೌಡ ಲಿಂಗನಗೌಡರ ಇವರ ಪುತ್ರ ಚಿ|| ಶಿವನಗೌಡನಿಗೆ ನಲವಡಿಯಲ್ಲಿರುವ ಮ|| ರಾ|| ನಿಂಗಪ್ಪನಾಯ್ಕರ ಇವರ ಪುತ್ರಿ ಹ|| ಕುಂ|| ಶೋ|| ಚಿ|| ಸೌ|| ಗುಂಡವ್ವನನ್ನೂ, ಚಿ|| ಫಕೀರಗೌಡನಿಗೆ ನಲವಡಿಯಲ್ಲಿರುವ ಮ|| ರಾ|| ಫಕೀರಪ್ಪನಾಯ್ಕರ ಇವರ ಪುತ್ರಿ ಹ|| ಕುಂ|| ಶೋ|| ಚಿ|| ಸೌ|| ಲಕ್ಷ್ಮವ್ವನನ್ನೂ ತಂದು ಮಾರ್ಗಶಿರ ಬಹುಳ ೧೦ ದಿವಸ ಬೆಟಗೇರಿಯಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ವರರ ಕಡೆಯಿಂದ ತೆಗೆಯಿಸಿದ **2** ರೂ. ಕನ್ಯೆಯವರ ಕಡೆಯಿಂದ ತೆಗೆಯಿಸಿದ **1** ರೂ. ಒಟ್ಟು **3** ರೂ. ಗಳು ಗದಗ ಬೆಟಗೇರಿ ನಿವಾಸಿಗಳಾದ ಹಿರೇಮನಿ ಪಾಟೀಲ್ ಮ|| ರಾ|| ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಾನಗಲ್ಲ ತಾ|| ಆಲೂರಲ್ಲಿರುವ ಗೌಡ್ರ ಗುರುಸ್ವಾಮಿ ಮಠದ ವೇ|| ಮಳೆಯಯ್ಯನವರು ತಮ್ಮ ಧರ್ಮಪತ್ನಿಯವರಿಗೆ ಪ್ರಾಪ್ತವಾದ ಕಾಯಿಲೆಯು ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣೆಯಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾ ಪೋಷಣಕ್ಕೋಸ್ಕರ **1** ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

(Continued from page 3)

By Ex. 3 **Akbar** reduced the grant to two hundred bighas, one hundred and fifty being in Benares and fifty in Chunar. The Chunar land is admittedly not in the plff's possession. We do not know when it passed out of his predecessors' hands and under what circumstances. There is no description of the Benares land and it is difficult to identify it with certainty with any of the properties in dispute. Amittedly the plff is the zemindar of Mohalla Jangambari. No title deed, original or copy, is produced to trace the plff's title to this property. It may be that this zamindari may be a part of that grant. Ex. 4. also is a firman of **Akbar's** time. It recognizes the grant of 178 bighas of land in Pergana Haveli Benares after enquiry. It proves endowment very clearly. It relates the custom that the eldest member of the congregation becomes the Muteallí and the income is applied towards the maintenance of the Fakirs of this cult. This was verified by Qazi, Mufti, Ahali and Mowali—state officials. The next firman is Ex. 12 of the time of **Jehangir**. It shows that enquiry into possession and title of the 178 bighas in Benares was made and the grant was confirmed. Ex. 27 is a firman of **Jehangir's** reign. It reiterates the grant of 178 bighas to the Jangams for their maintenance. By Ex. 24, 100 bighas in Chunar were re-conferred upon the Jangams in **Jehangir's** reign, as it appears from Ex. 21 that Jangams had applied to the state that their number had increased and the grant to them was insufficient. Exhs. 25 and 26 also are of **Jehangir's** reign and reiterate the grants of 178 and 100 bighas in Benares and Chunar respectively. Then there are sixteen firmans of **Shahjahan's** time marked as Ex. 36, 14, 38, 5, 37, 19, 6, 28, 30, 22, 8, 18, 33, 31, 35, and 23. They recognize and reiterate the grant of the 178 and 100 bighas in Benares and Chunar. **The occasions for the frequent issue of these orders arose, because whenever there was any interference, the Jangams approached the State, and instructions were issued to the State officials to continue the grant and not to take any charges from them, or to molest them.** Ex. 6 is of importance. It shows an assertion of the existence of the Muth. The firmans of **Aurangazeb's** time begin with Ex. 16 wherein he confirms the grant of the 278 bighas for the maintenace of the Jangams. Ex. 32 proves that there was a verification of the grant. Ex. 11 is also to the same effect. In Ex. 20 we find for the first time a mention of house property. It shows that one Nazir Beg had ousted the Jangams out of the premises in Benares City. They filed a complaint and then this order was issued directing the officials to enquire into the matter and on proof of the Jangams' titles, not to allow Nazir Beg to enter the premises. I noticed at the time of my local inspection that there are five courtyards in the main building of the Math. The reference in this may be either to this building of the Math or to five out of the several houses in this city belonging to the Math. Exhs. 1 and 10 prove that after enquiry the 5 houses were restored to the Jangams and Rs. five hundred realized as rent from them was refunded. Ex. 29 is only a receipt verified before a state official acknowledging the payment of Rs. 22-8-0 by Jangams to Man Singh and others on account of certain dues. Exhs. 17, 34, 61, 56, and 59 relate to some of the properties in suit situated in the district of Allahabad. The first three are of **Akbar's** time and the last two of **Aurangazeb's** time. Ex. 39 (a) and 7 are of the time of **Jehangir** and **Mohammad Shah** respectively and relate to the property in Gaya. They locate the property with some definiteness.

This in brief is the summary of the firmans. They may be taken to establish that the Jangams possessed endowed properties in the Districts of Benares, Allahabad and Gaya. Whether any of the properties in suit are the same ones, it is difficult to say on account of lack of description in the firmans. As regards the Gaya and Allahabad properties some identification can be made and it seems to me that the house in Mohalla Daraganj, Allahabad and Mohalia Shishwarya, Gaya, are the same which are referred to in the firmans about these districts.

ಜಡ್ಜಮೆಂಟಿನ ಕನ್ನಡಭಾಷೆಯ ಅನುವಾದ.

ಜೆ. ಎನ್. ಫಾರ್ಕುಹಾರ್ ಎಂ.ಎ., ಡಿ.ಲಿಟ್., ಎಂಬವರು ತಮ್ಮ '**ರಿಲಿಜಸ್ ಕ್ವೆಸ್ಟ್ ಆಫ್ ಇಂಡಿಯಾ**' ಎಂಬ ಗ್ರಂಥದಲ್ಲಿ 259 ನೇ ಪುಟದಿಂದ ವೀರಶೈವರ ಚರಿತ್ರೆಯನ್ನು ಕೊಟ್ಟಿರುತ್ತಾರೆ. ಅವರು ಅದರಲ್ಲಿ ಪ್ರತಿಯುಗದಲ್ಲಿಯೂ ಶಿವನ ಮುಖಗಳಿಂದ ಉದ್ಭವಿಸಿದ **ಏಕೋರಾಮ, ಪಂಡಿತಾರಾಧ್ಯ, ರೇವಣಾರಾಧ್ಯ, ಮರುಳಾರಾಧ್ಯ ಮತ್ತು ವಿಶ್ವಾರಾಧ್ಯ** ಎಂಬ ಐದುಜನ ಯತಿಗಳಿಂದ ಈ ಮಠವು ಸ್ಥಾಪಿಸಲ್ಪಟ್ಟಿತೆಂದೂ, ಇವರು ಬಹಳ ಪ್ರಾಚೀನಕಾಲದವರೆಂದೂ, ಬಸವನೆಂಬವನು 12 ನೇ ಶತಮಾನದಲ್ಲಿ ಈ ಮಠವನ್ನು ಪ್ರಚಾರಮಾಡಿದನೆಂದೂ ಬರೆದಿರುತ್ತಾರೆ. ಮುಂದೆ ಈ ಗ್ರಂಥಕಾರರು, ಪಂಚಪೀಠಾಧಿಪತಿಗಳು ಪ್ರಾಯಶಃ ಬಸವನ ಪ್ರತಿಪಕ್ಷದವರೆಂದೂ, ಆದರೆ ಈ ವಿಷಯದಲ್ಲಿ ಯಾವುದನ್ನೂ ನಿರ್ಧರಿಸಿ ಹೇಳಲಾಗುವದಿಲ್ಲವೆಂದೂ ಬರೆದಿರುತ್ತಾರೆ. ಅನಂತರ ಅವರು ಈ ಮಠ ಸ್ಥಾಪನೆಯ ವಿಷಯವನ್ನು ಪ್ರಸ್ತಾಪಿಸುತ್ತ, ಈ ೫ ಜನ ಯತಿಗಳು ಮುಂದೆ ಹೇಳುವ ೫ ಮಠಗಳನ್ನು ಸ್ಥಾಪಿಸಿ ಅವುಗಳಿಗೆ ತಾವೇ ಪ್ರಥಮ ಪೀಠಾಧ್ಯಕ್ಷರಾದರೆಂದು ಬರೆದಿರುತ್ತಾರೆ:—

ಮಠಗಳು.	ಪ್ರಥಮ ಪೀಠಾಧ್ಯಕ್ಷರು.
1. ಕೇದಾರನಾಥ, ಹಿಮಾಲಯ.	ಏಕೋರಾಮ.
2. ಶ್ರೀಶೈಲ, ನಂದ್ಯಾಲದ ಸಮೀಪ.	ಪಂಡಿತಾರಾಧ್ಯ.
3. ಬಾಳೇಹಳ್ಳಿ, ಮೈಸೂರಿನ ಪಶ್ಚಿಮಭಾಗ.	ರೇವಣಾರಾಧ್ಯ.
4. ಉಜ್ಜಯಿನಿ, ಬಳ್ಳಾರಿ. ಎಲ್ಲೆ ಮೈಸೂರು.	ಮರುಳಾರಾಧ್ಯ.
5. ಕಾಶಿ (ಬನಾರಸ್)	ವಿಶ್ವಾರಾಧ್ಯ.

ಮೈಸೂರು ಗೆಜಟಿಯರಿನ 477 ನೇ **ಪುಟದ ಮೇಲ್ಭಾಗದಲ್ಲಿ** ವೀರಶೈವರು ಮಠಗಳನ್ನು ಹೊಂದಿರುತ್ತಾರೆಂದು ಹೇಳಲ್ಪಟ್ಟಿದೆ. ಮುಂಬಯಿ ಪ್ರೆಸಿಡೆನ್ಸಿ **ಬಿಜಾಪುರ ಡಿ|| ಗೆಜಟಿಯರಿನಲ್ಲಿಯೂ** ಸಹ ವೀರಶೈವರು ಮಠಗಳನ್ನು ಹೊಂದಿರುತ್ತಾರೆಂದು ಬರೆಯಲ್ಪಟ್ಟಿದೆ. 1884 ರಲ್ಲಿ ಅಚ್ಚಾದ ಈ ಪುಸ್ತಕದಲ್ಲಿ 219 ನೇ ಪುಟದಿಂದ 280 **ಪುಟದವರೆಗೆ** ವೀರಶೈವರ ವಿಷಯವು ವಿಸ್ತಾರವಾಗಿ ಹೇಳಲ್ಪಟ್ಟಿದೆ. 238 ನೇ **ಪುಟದಲ್ಲಿ** 5 ಮೂಲಪೀಠಗಳ ವಿಷಯವು ಹೇಳಲ್ಪಟ್ಟಿದೆ. ಆದರೆ ಕಾಶೀಮಠದ ವಿಷಯವು ಹೇಳಲ್ಪಟ್ಟಿಲ್ಲ. 5 ನೇ ಪೀಠವು ಅಸ್ಪಷ್ಟವಾಗಿರುವದೆಂದು ಹೇಳಲ್ಪಟ್ಟಿದೆ. ಪ್ರಾಯಶಃ ಅದು ಈ ಮಠದ ವಿಷಯವೇ ಇರಬಹುದು. 1884 ರಲ್ಲಿ ಅಚ್ಚಾದ **ಸೋಲಾಪುರ ಗೆಜಟಿಯರಿನ** 75 ನೇ ಪುಟದಲ್ಲಿ ವೀರಶೈವರ ವಿಷಯವು ಹೇಳಲ್ಪಟ್ಟಿದೆ. ಆದರೆ, ವೀರಶೈವರಿಗೆ **ಮಠಗಳು** ಇಲ್ಲವೆಂಬ ಬಗ್ಗೆ ಯಾವ ರುಜುವಾತೂ ಇರುವದಿಲ್ಲ.

ಕಡೆಯದಾಗಿ **ಫರ್‌ಕ್ಯುಹರ್‌ರವರ 'ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ'** ಎಂಬ ಗ್ರಂಥದ ವಿಷಯವನ್ನು ಪ್ರಸ್ತಾಪಿಸುತ್ತೇನೆ. **284**ನೇ **ಪುಟದ** ಕೆಳಭಾಗದಲ್ಲಿ ವೀರಶೈವರ 5 ಮಠಸಂಸ್ಥೆಗಳ ಸ್ಥಾಪನೆಯು ಹೇಳಲ್ಪಟ್ಟಿದೆ. 'ಈ ಮಠಗಳು ಈಗಲೂ ಇರುವವು.' ಎಂದು **ಅವರು ಸ್ಪಷ್ಟಪಡಿಸಿರುತ್ತಾರೆ.** ಅನಂತರ ಅವರು ಈ 5 ಮಠಗಳ ಸ್ವಾಮಿಗಳು **ದಕ್ಷಿಣದ** ಬಗ್ಗೆ ಭೂಗೋಳವನ್ನನುಸರಿಸಿ, 5 ದೊಡ್ಡಭಾಗಗಳನ್ನಾಗಿ ವಿಂಗಡಿಸಿರುವರೆಂದೂ, ಪ್ರತಿಯೊಬ್ಬ ಪೀಠಾಧಿಕಾರಿಗಳೂ ತಮ್ಮ ತಮ್ಮ ಪ್ರಾಂತಗಳಲ್ಲಿ ಅಧಿಕಾರ ನಡೆಸುವರೆಂದೂ, ಆದರೆ 5 ಪೀಠದವರೂ ಸಾಮಾನ್ಯವಾಗಿ ಎಲ್ಲರ ಮೇಲೂ ಅಧಿಕಾರವನ್ನು ಹೊಂದಿರುವರೆಂದೂ ಬರೆದಿರುವರು. ಪ್ರತಿಯೊಂದು ಮಠಕ್ಕೂ ಮುಖ್ಯ ಮುಖ್ಯ ಸ್ಥಳಗಳಲ್ಲಿ ಪಟ್ಟದಸ್ವಾಮಿಗಳ ನೇತೃತ್ವದಲ್ಲಿ ಉಪಮಠಗಳಿರುವವೆಂದೂ, ಈ ಪ್ರತಿಯೊಂದು ಉಪಮಠಕ್ಕೂ ಗುರುಸ್ಥಲಮಠಗಳೆಂಬ ಅನೇಕ ಬ್ರಾಂಚ್ ಮಠಗಳಿರುವವೆಂದೂ, ಈ ಮಠಗಳು ವೀರಶೈವರು ಇರುವ ಕಡೆಗಳಲ್ಲೆಲ್ಲಾ ಇರುವವೆಂದೂ ಬರೆದಿರುವರು. ಹಬ್ಬ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಮೇಲ್ವಿಚಾರಣೆಯನ್ನು ವಹಿಸಿ ಕಾಣಿಕೆಗಳನ್ನು ವಸೂಲುಮಾಡುವದು, ಮಠಸಂಬಂಧವಾದ ವಿಷಯಗಳನ್ನು ಉಪದೇಶಿಸುವದು ಮತ್ತು ಸರ್ವಸಾಮಾನ್ಯವಾಗಿ ತಮ್ಮ ಮಠದ ಎಳಿಗೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಮೇಲೂ ಅಧಿಕಾರ ನಡೆಸುವದೇ ಈ ಮಠಗಳ ಸ್ವಾಮಿಗಳ ಕರ್ತವ್ಯವಾಗಿದೆ.

ಈ ಕೆಳಗಿನ ಗ್ರಂಥಗಳೂ ನನ್ನ ಅವಗಾಹನೆಗೆ ತರಲ್ಪಟ್ಟಿವೆ:—

(1) ಗೌ|| **ಓರಿಯಂಟಲ್ ಸೀರೀಸ್ ಕ್ಲಾಸ್ ಬಿ. ನಂ. 4. ಭಾಂಡಾರ್‌ಕರ್‌ರವರ 'ವೈಷ್ಣವೀಜಂ ಅಂಡ್ ಶೈವೀಜಂ'** ಪುಟ 187 ರಿಂದ 190 ರವರೆಗೆ (2) **ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ (ಇಂಗ್ಲೀಷ ಭಾಷಣ) ಪುಸ್ತಕದ** ಪುಟಗಳು 2—೮ ಮತ್ತು 10 (3) **ಶೃಂಗೇರಿ ಮಠದ ಗುರುವಂಶಕಾವ್ಯದ** ಪುಟಗಳು 109 ಮತ್ತು 110. (4) **ಶಿವತತ್ವರತ್ನಾಕರ** ಪುಟ 10 (5) **ಬನಾರಸ್ ಗೆಜೆಟಿಯರ್** ಪುಟ 123.

ಈ ಗ್ರಂಥಕರ್ತರು ತಮ್ಮ ಅಭಿಪ್ರಾಯಗಳನ್ನು ನಿಷ್ಪಕ್ಷಪಾತವಾಗಿ ಬರೆದಿರುತ್ತಾರೆನ್ನುವದರಲ್ಲಿ ಯಾವ ಸಂಶಯವೂ ಇಲ್ಲ. ಇವರ ಈ ಗ್ರಂಥಗಳ ಪರಿಶೀಲನೆಯಿಂದ ವೀರಶೈವರು ಹಿಂದೂ ದೇಶದ ಮಠಗಳಲ್ಲಿ ಶ್ರೇಷ್ಠತೆಯನ್ನು ಪಡೆದಿರುವರೆಂದು ನನಗೆ ಚೆನ್ನಾಗಿ ಮನದಟ್ಟಾಗಿರುವದು. ಇವರ ಸಂಖ್ಯೆಯು ದಕ್ಷಿಣದೇಶದಲ್ಲಿ ವಿಶೇಷವಾಗಿದೆ. ಇವರು ಮಠಗಳೆಂಬ ಮಠಸಂಸ್ಥೆಗಳನ್ನು ಹೊಂದಿರುತ್ತಾರೆ. ಮತ್ತು ಈ ಮಠದವರು ಇತರ ಮಠಗಳಿಗಿಂತಲೂ ತಮ್ಮ ಶಿಷ್ಯರ ಮೇಲೆ ಹೆಚ್ಚಿನ ಅಧಿಕಾರವನ್ನು ನಡೆಯಿಸುತ್ತಾರೆ. ಸದ್ಯಃ ವ್ಯಾಜ್ಯಕ್ಕೆ ಸಂಬಂಧಪಟ್ಟ ಮಠವು ೫ ಮೂಲಮಠಗಳಲ್ಲಿ ಒಂದಾಗಿರುವದಲ್ಲದೆ ವೀರಶೈವರಲ್ಲಿ ಬಹಳ ಪ್ರಾಶಸ್ತ್ಯವನ್ನು ಪಡೆದಿರುತ್ತದೆ. ಈ ಮಠದ ಅಸ್ತಿತ್ವವು ಮೇಲಿನ ಗ್ರಂಥಗಳಲ್ಲಿ ಹೇಳಿರುವಂತೆ ಚರಿತ್ರೆಯಲ್ಲಿ ಕೂಡಿಕೊಂಡು ಬಂದಿರುತ್ತದೆ.

ಇನ್ನು ನಾನು ಕಾಗದಪತ್ರಗಳ ವಿಷಯವನ್ನು ವಿಮರ್ಶಿಸುವೆನು. ಇದನ್ನು ಈ ಮುಂದೆ ಹೇಳಿರುವಂತೆ 6 ಭಾಗಗಳನ್ನಾಗಿ ವಿಂಗಡಿಸಬಹುದು.

(1) ಕ್ರಿಸ್ತಶಕ 574 ನೇ ವರ್ಷದಿಂದ **ಔರಂಗಜೇಬನ** ಆಳ್ವಿಕೆಯವರೆಗೆ **ಚಕ್ರವರ್ತಿಗಳಿಂದ ಕೊಡಲ್ಪಟ್ಟ ಶಾಸನಗಳು** ಮತ್ತು **ಫರ್ಮಾನಗಳು** ಇವುಗಳ ಒಟ್ಟು ಸಂಖ್ಯೆ 53, ಎಗ್ಜಿಬಿಟ್ 1 ರಿಂದ 39 (ಎ) 40 ರಿಂದ 42 ರ ವರೆಗೆ 55 ರಿಂದ 61 ರ ವರೆಗೆ ಮತ್ತು 72 ರಿಂದ 74 ರ ವರೆಗೆ.

(2) ಈ ಮಠದ ಮಹಾಂತರ 'ಎಲ್' ಅಥವಾ 'ಮರಣಶಾಸನ' ಗಳು ಇವುಗಳ ಸಂಖ್ಯೆ ಒಟ್ಟು ೩. ಎಗ್ಜಿಬಿಟ J. 17 ರಿಂದ L. 17 ರ ವರೆಗೆ, 102 ಮತ್ತು 19. ಇವುಗಳ ಕಾಲ 1872 ನೇ ಇಸವಿಯಿಂದ 1919 ರವರೆಗೆ ಇರುತ್ತದೆ.

(3) ತೀರ್ಪುಗಳು ಡಿಕ್ರಿಗಳು ಮತ್ತು ಕೋರ್ಟುಗಳ ಆರ್ಡರುಗಳು. ಒಟ್ಟು ಸಂಖ್ಯೆ 13. ನಂ. 1050 (ಡಿ) ದಾಖಲೆಯಲ್ಲಿ ಕ್ರೋಢೀಕರಿಸಲ್ಪಟ್ಟಿದೆ. 2ಪುಟ.

(4) ವರ್ಗಪತ್ರಗಳು—ಒಟ್ಟು ಸಂಖ್ಯೆ 35. ನಂ. 1049 (ಡಿ) ದಾಖಲೆಯಲ್ಲಿ ಕ್ರೋಢೀಕರಿಸಲ್ಪಟ್ಟಿದೆ. 4 ಪುಟ.

(5) 1915 ನೇ ಇಸವಿಯಿಂದ 1932 ನೇ ಇಸವಿಯುವರೆಗಿನ ಲೆಖ್ಖದ ಬುಕ್ಕುಗಳು. ಕ್ಯಾಷ್‌ಬುಕ್ಕು ಮತ್ತು ಲೆಡ್ಜರು.

(6) ಅರ್ಜಿಗಳ ಕಾಪಿಗಳು ಹೇಳಿಕೆಗಳು ಮತ್ತು ಇತರ ದಾಖಲೆಗಳು.

ಈಗ ಪ್ರತಿಯೊಂದು ತರತುದ ದಾಖಲೆಗಳನ್ನೂ ಬೇರೆಬೇರೆಯಾಗಿ ವಿಮರ್ಶಿಸುತ್ತೇನೆ.

ಶಾಸನಗಳು ಮತ್ತು ಫರ್ಮಾನ್(ಆರ್ಡರು)ಗಳು.

ಕಾಶೀರಾಜರ ದಾನಪತ್ರವು ಎಲ್ಲಕ್ಕಿಂತಲೂ ಪ್ರಾಚೀನವಾಗಿದೆ. ಇದರ ಕಾಲ **ಸಂವತ್ 631** ಅಥವಾ **ಕ್ರಿ.ಶ. 574** ಆಗಿರುವದು. ಇದರಲ್ಲಿ ಶ್ರೀ ವಿಶ್ವಾರಾಧ್ಯ ಸಿಂಹಾಸನದ ಮಲ್ಲಿಕಾರ್ಜುನಸ್ವಾಮಿಗಳವರಿಗೆ ಗಂಗಾನದಿಯ ತೀರದಲ್ಲಿ ಸ್ವಲ್ಪ ಜಮೀನು ದಾನಮಾಡಲ್ಪಟ್ಟಿರುವದು. ಈ ದಾನವು ಆ ಸ್ವಾಮಿಗಳಿಗಾಗಿ ಮತ್ತು ಅವರ ಅನುಯಾಯಿಗಳಿಗಾಗಿ ಎಂದು ನಮೂದಿಸಲ್ಪಟ್ಟಿದೆ. ಈ ದಾನಪತ್ರದ ಕಾಗದವು ಬಹಳ ಹಳೆಯದಾಗಿದ್ದು ಅದನ್ನು ಕೈಯ್ಯಲ್ಲಿ ಮುಟ್ಟುವದಕ್ಕೂ ಸಹ ಆಗದಂತಿದೆ. ಅದು ಚೌಕಟ್ಟಿನಲ್ಲಿದೆ. ಅದನ್ನು (ದಾಖಲೆ 1) ಎಂದು ಗುರುತುಮಾಡಿದೆ. ಈಗಿನ ಕಾಶೀ ಮಹಾರಾಜರ ತಂದೆಯವರು ಈ ದಾನಪತ್ರವನ್ನು ನೂತನವಾಗಿ ತಾಮ್ರಪತ್ರದ ಮೇಲೆ ಕೆತ್ತಿಸಿಕೊಟ್ಟಿರುತ್ತಾರೆ. (ದಾಖಲೆ 2)

ಮೊಕದ್ದಮೆಗೆ ಸಿಕ್ಕಿರುವ ಆಸ್ತಿಗಳ ಸಂಬಂಧದಲ್ಲಿ ಈ ದಾನಪತ್ರಕ್ಕೆ ಯಾವ ಮಹತ್ವವೂ ಇಲ್ಲ. ಏಕೆಂದರೆ—ಇದರಲ್ಲಿ ಕಂಡ ಭೂಮಿಯು, 'ಕರ್ದಮೇಶ್ವರ ಮಹಾದೇವ' ಇರತಕ್ಕ ಜಂಗಮಪುರಗ್ರಾಮದಲ್ಲಿ ಇದ್ದಿತೆಂದು ಸಾಕ್ಷಿಗಳಿಂದ ಸ್ಥಾಪಿಸಲ್ಪಟ್ಟಿರುತ್ತದೆ. ಸದ್ಯಃ ಈ ಭೂಮಿಯು ಹಿಂದೂವಿಶ್ವವಿದ್ಯಾಲಯದವರಿಂದ ಆಕ್ರಮಿಸಲ್ಪಟ್ಟಿರುವದರಿಂದ ಅದು ಮಠದವರ ವಶದಲ್ಲಿರುವದಿಲ್ಲ. ಆದರೆ ಕ್ರಿ. ಶ. 574 ರಷ್ಟು ಪ್ರಾಚೀನಕಾಲದಲ್ಲಿ ಈ ಸಿಂಹಾಸನವು ಇದ್ದಿತೆಂದೂ ಅದರ ಪೋಷಣೆಗಾಗಿ ಕಾಶೀಮಹಾರಾಜರಿಂದ ಸಹಾಯವು ದೊರಕಿತ್ತೆಂದೂ ಅದರಿಂದ ವ್ಯಕ್ತವಾಗುತ್ತದೆ. 24-12-73

ಪ್ರತಿವಾದಿಗಳು ಈ ದಾನಪತ್ರವು ನಿಜವಾದದ್ದಲ್ಲವೆಂದು ಅನೇಕ ಕಾರಣಗಳನ್ನು ಪ್ರತಿಪಾದಿಸಿರುತ್ತಾರೆ. ಮೊದಲನೆಯದು—1907 ರಲ್ಲಿ ಪ್ರಿಂಟಾಗಿರುವ 'ಇಂಪೀರಿಯಲ್ ಗೆಜಟಿಯರ್ ಆಫ್ ಇಂಡಿಯಾ' ವಾಲ್ಯುಂ 3, ಪುಟ 106 ರಲ್ಲಿ ಕಾಗದವು ಹಿಂದೂದೇಶಕ್ಕೆ ಮುಸಲ್ಮಾನರಿಂದ ತರಲ್ಪಟ್ಟಿತೆಂದೂ, ಮುಸಲ್ಮಾನರು ಅದರ ಉಪಯೋಗವನ್ನು ಚೀನಾದೇಶದವರಿಂದ ಕಲಿತಿದ್ದರೆಂದೂ ಬರೆಯಲ್ಪಟ್ಟಿದೆ. ಮಹಮ್ಮದೀಯರು 10, 11 ನೇ ಶತಮಾನಗಳಲ್ಲಿ ಹಿಂದೂಸ್ಥಾನಕ್ಕೆ ಮುತ್ತಿಗೆಯನ್ನು ಹಾಕಿದುದರಿಂದ 6 ನೇ ಶತಮಾನದಲ್ಲಿ ಹಿಂದೂಸ್ಥಾನದಲ್ಲಿ ಕಾಗದದ ಮೇಲೆ ದಾನಪತ್ರವನ್ನು ಬರೆಯುವದು ಕೇವಲ ಅಸಂಭವವೆಂದು ಪ್ರತಿಪಾದಿಸುತ್ತಾರೆ. ಆದರೆ ಈ ಸಂದರ್ಭದಲ್ಲಿ ನಾನು **ರಾಯ್‌ಬಹದ್ದೂರ್ ಗೌರೀಶಂಕರ ಓಝಾ** ರವರ '**ದಿ ಪ್ಯಾಲಿಯೋಗ್ರಾಫಿ ಆಫ್ ಇಂಡಿಯಾ**' ಎಂಬ ಗ್ರಂಥದಲ್ಲಿರುವ ವಿಷಯವನ್ನು ಪ್ರತಿವಾದಿಗಳ ಗಮನಕ್ಕೆ ತರಲಪೇಕ್ಷಿಸುತ್ತೇನೆ. ಇದೇ ಗ್ರಂಥವನ್ನೇ ಪ್ರತಿವಾದಿಗಳು ಮತ್ತೊಂದು ವಿಷಯದ ಸಂಬಂಧದಲ್ಲಿ ದಾಖಲೆಯನ್ನಾಗಿ ತೋರಿಸಿರುತ್ತಾರೆ. ಈ ಗ್ರಂಥದ 144 ನೇ ಪುಟದಲ್ಲಿ ಅಲೆಗ್ಸಾಂಡರನ ಮುತ್ತಿಗೆಯ ವಿಷಯಕ್ಕೆ ಸಂಬಂಧಪಟ್ಟ ದಾಖಲೆಗಳನಂತರ ಹಿಂದೂಸ್ಥಾನದಲ್ಲಿ ಕ್ರಿಸ್ತಪೂರ್ವ 4 ನೇ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಅರಳೆಯಿಂದ ಕಾಗದವನ್ನು ತಯಾರಿಸುತ್ತಿದ್ದರೆಂದೂ, ಆದರೂ ಅದು ವಿಶೇಷವಾಗಿ ಪ್ರಚಾರದಲ್ಲಿರಲಿಲ್ಲವೆಂದೂ ಬರೆದಿರುತ್ತಾರೆ. ಆದುದರಿಂದ ಪ್ರತಿವಾದಿಗಳ ವಾದವು ಯುಕ್ತವಾಗಿ ಕಾಣುವದಿಲ್ಲ. **ಮಿ|| ಗೌರೀಶಂಕರರವರ ಗ್ರಂಥವು ಹೆಚ್ಚು ಶಾಸ್ತ್ರೀಯವಾಗಿರುವದಲ್ಲದೆ ಇಂಪೀರಿಯಲ್ ಗೆಜಟಿಯರ್ರಿಗಿಂತಲೂ ಹೆಚ್ಚು** ಮಹತ್ವವುಳ್ಳದ್ದಾಗಿದೆ.

ಎರಡನೆಯದು— ಈ ದಾನಪತ್ರದ ಅಕ್ಷರಕ್ಕೂ 6 ನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದ ಅಕ್ಷರಕ್ಕೂ ಸಂಪೂರ್ಣ ವ್ಯತ್ಯಾಸವಿರುವದಾಗಿ ವಾದಿಸುತ್ತಾರೆ. ಇದಕ್ಕಾಗಿ **ಪಂಡಿತ ಗೌರೀಶಂಕರರವರ** ಗ್ರಂಥದ 62 ಮತ್ತು 63 ನೇ **ಪುಟಗಳ** 19 ನೆಯ ಚಿತ್ರದಲ್ಲಿ ಕಂಡ ಅಕ್ಷರಗಳು, **ಬಾರ್ನೆಟ್‌ರವರ "ಅಂಟಿಕ್ವಿಟೀಸ್ ಆಫ್ ಇಂಡಿಯಾ"** ಎಂಬ ಗ್ರಂಥದ 226ನೇ ಪುಟ ಮತ್ತು ಭಾಂಡಾರಕರವರ ಗ್ರಂಥದ 309 ನೆಯ ಪುಟ ಇವುಗಳು ದಾಖಲೆಗಳಾಗಿ ಕೊಡಲ್ಪಟ್ಟಿವೆ. ಇವುಗಳ ಪ್ರಕಾರವಾಗಿ ಹಿಂದೂಸ್ಥಾನದಲ್ಲಿ ಆ ಕಾಲದಲ್ಲಿದ್ದ ಅಕ್ಷರಗಳು ದಾನಪತ್ರದಲ್ಲಿ ಕಂಡ ಅಕ್ಷರಗಳಿಗೆ ವ್ಯತ್ಯಾಸವಾಗಿರುವುವೆಂದು ತೋರುವದು.

ಮೈಸೂರು ಮತ್ತು ಕೊಡಗುದೇಶಗಳ ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರಾಗಿದ್ದ **ಬಿ. ಲೂಯಿ ರೈಸ್ ಸಿ. ಐ. ಇ. ರವರ "ಎಪಿಗ್ರಾಫಿಯಾ ಕರ್ನಾಟಿಕಾ"** (1905 ನೇ ವರ್ಷದ ಪ್ರಿಂಟ) ಎಂಬ ಗ್ರಂಥದ 53 (ಎ) ಪುಟದಲ್ಲಿಯ ಅಕ್ಷರಗಳು ದಾನಪತ್ರ (ದಾಖಲೆ 1) ದ ಅಕ್ಷರಗಳಂತೆಯೇ ಇರುತ್ತವೆ. ಆ ಅಕ್ಷರಗಳು ಈ ದಾನಪತ್ರವು ಬರೆಯಲ್ಪಟ್ಟ ಕಾಲದವೇ ಆಗಿರುತ್ತವೆ.

ಒಟ್ಟಿನಲ್ಲಿ ಇದು ಸುಮಾರು **1400** ವರ್ಷಗಳ ಹಿಂದಿನ ವಿಷಯವಾಗಿರುತ್ತದೆ. ಆಗಿನ ಕಾಲದಲ್ಲಿ ಯಾವ ಲಿಪಿಯು ಪ್ರಚಾರದಲ್ಲಿದ್ದಿತೆಂಬುದನ್ನು ಯಾರೂ ನಿರ್ಧರಿಸಿ ಹೇಳಲಾರರು. ಈ ದೇಶವು ನಾನಾ ಲಿಪಿಗಳ ಮತ್ತು ನಾನಾ ಭಾಷೆಗಳ ನೆಲೆಯಾಗಿರುತ್ತದೆ. ಆದ್ದರಿಂದ ದಾನಪತ್ರದಲ್ಲಿ ಕಂಡ ಲಿಪಿಯು ಆಗಿನ ಕಾಲದಲ್ಲಿ ಪ್ರಚಾರದಲ್ಲಿತ್ತೆನ್ನುವದರಲ್ಲಿ ಆಶ್ಚರ್ಯವೇನೂ ಇಲ್ಲ.

ಮೂರನೆಯದು—ಕ್ರಿ. ಶ. 574 ರಲ್ಲಿ ಜಯನಂದದೇವನು ಕಾಶಿಯ ರಾಜನಾಗಿರಲಿಲ್ಲ. ಹೀಗಿರುವಲ್ಲಿ ಈ ದಾನಪತ್ರವನ್ನು ಅವನು ಹೇಗೆ ಕೊಟ್ಟನು? ಎಂದು ಪ್ರತಿಪಾದಿಸಲ್ಪಟ್ಟಿದೆ.

ನಿಶ್ಚಯ! ಚರಿತ್ರೆಯಪ್ರಕಾರವಾಗಿ 5 ನೆಯ ಶತಮಾನದಲ್ಲಿ ಕನೋಜಿನ ರಾಜನು ಕಾಶಿಯಮೇಲೆ ಸ್ವಾಮಿತ್ವವನ್ನು ಹೊಂದಿದ್ದನು. ಆದರೆ ಕಾಶೀರಾಜರ ಅಧಿಕಾರಗಳೆಲ್ಲವೂ ಕಿತ್ತುಕೊಳ್ಳಲ್ಪಟ್ಟಿದ್ದವೆಂಬುದಕ್ಕೆ ಯಾವ ದಾಖಲೆಯೂ ಇಲ್ಲ. ಪ್ರಾಯಶಃ ಕನೋಜ್ ರಾಜರು ಶ್ರೇಷ್ಠಾಧಿಕಾರವನ್ನು ಪಡೆದಿರಬಹುದು. ಆದರೆ ಕಾಶೀರಾಜರು ಅವರ ಸಾಮಂತರಾಜರಾಗಿದ್ದರು. ಇಂದಿನವರೆಗೂ ಅವರು ಅದೇ ರೀತಿಯಾಗಿರುತ್ತಾರೆ.

ಆದುದರಿಂದ ಈ ದಾನಪತ್ರದ ವಿಷಯದಲ್ಲಿ ಪ್ರತಿವಾದಿಗಳ ಹೇಳಿಕೆಯು ನಿರಾಧಾರವಾದುದು. ಆದಕಾರಣ ಈ ದಾನಪತ್ರವು (ದಾಖಲೆ 1) ನಿಜವಾದದ್ದೆಂದೂ, ಎರಡನೆಯ ದಾಖಲೆಯು ತಾಮ್ರಪತ್ರದ ಮೇಲೆ ಮಾಡಿದ ಅದರ ನಕಲೆಂದೂ ನಾನು ಒಪ್ಪಿಕೊಳ್ಳುತ್ತೇನೆ. ತಾಮ್ರಶಾಸನದ ವಿಷಯದಲ್ಲಿಯೂ, ವಾದಿಗಳ ಸಾಕ್ಷಿಯು ಮಾತ್ರವಿರುವದು ನಿಶ್ಚಯ. ಆದರೆ ಆ ಸಾಕ್ಷಿಯು ಯಾರಿಂದಲೂ ವಿರೋಧಿಸಲ್ಪಟ್ಟಿಲ್ಲ. ಅದು ನಿಜವಲ್ಲವೆಂದು ರುಜುವಾತು ಕೊಡಲು ಪ್ರತಿವಾದಿಗಳಿಗೆ ಬೇಕಾದಷ್ಟು ಅವಕಾಶವಿದ್ದರೂ, ಅವರು ತಮ್ಮ ಹೇಳಿಕೆಯನ್ನು ಸಮರ್ಥಿಸಲು ಕಾಶೀ ಸರಕಾರದಿಂದ ಯಾರನ್ನೂ ಕರೆಯಿಸಲಿಲ್ಲ. ಆದುದರಿಂದ ಶಾಸನವು ನಿಜವಾದದ್ದೆಂದೇ ಒಪ್ಪಿಕೊಳ್ಳಬೇಕಾಗುವದು. 31-12-73

ಇನ್ನು ನಾನು ಫರ್ಮಾನ್ನುಗಳನ್ನೂ ಇತರ ಪುರಾತನ ದಾಖಲೆಗಳನ್ನೂ ವಿಮರ್ಶಿಸುತ್ತೇನೆ. ಅವುಗಳು **ಹುಮಾಯೂನ್, ಅಕ್ಬರ್, ಜಹಾಂಗೀರ್, ಷಾಜಹಾನ್, ಔರಂಗಜೇಬ್, ಮತ್ತು ಮಹಮುದ್‌ಷಾ** ಬಾದಷಹರ ಕಾಲದವುಗಳಾಗಿರುತ್ತವೆ. ಇವುಗಳು ನಿಜವಾದವಲ್ಲವೆಂಬ ಬಗ್ಗೆ ಪ್ರತಿವಾದಿಗಳು ಯಾವ ವಿಷಯವನ್ನೂ ನನ್ನ ಗಮನಕ್ಕೆ ತರಲಿಲ್ಲ. ಅವುಗಳೆಲ್ಲವೂ ಪರ್ಶಿಯಾಭಾಷೆಯಲ್ಲಿದ್ದು, ಕಮಿಷನರಾಗಿ ನೇಮಿಸಲ್ಪಟ್ಟಿದ್ದ ಒಬ್ಬ ವಕೀಲರಿಂದ ಉರ್ದುಭಾಷೆಗೆ ಪರಿವರ್ತಿಸಲ್ಪಟ್ಟು ರಿಕಾರ್ಡಿನಲ್ಲಿವೆ. ಅವುಗಳನ್ನು ಬರೆದಿರುವ ಕಾಗದ, ಅವುಗಳ ಭಾಷೆ, ಅವುಗಳ ಅಕ್ಷರಗಳು, ಅವುಗಳ ಸ್ವರೂಪ, ಅವುಗಳ ಮೇಲಿರುವ ರಾಜಮುದ್ರೆಗಳು ಹಾಗೂ ಅವುಗಳಲ್ಲಿ ಕೆಲವು ಅಂದರೆ 37, 16, 12, 11 ಮತ್ತು 4 ನೇ ನಂಬರು ದಾಖಲೆಗಳು ಅನೇಕ ಮೊಕದ್ದಮೆಗಳಲ್ಲಿ ನ್ಯಾಯಾಸ್ಥಾನಕ್ಕೆ ದಾಖಲೆಗಳಾಗಿ ಕಳುಹಿಸಲ್ಪಟ್ಟಿದ್ದವೆಂಬ ವಿಷಯವು ಅವುಗಳು ನಿಜವಾದ ಶಾಸನಗಳೆಂಬುದನ್ನು ಸ್ಥಿರಪಡಿಸುತ್ತವೆ.

ಬ್ರಿಟಿಷರ ಆಳ್ವಿಕೆಯು ಪ್ರಾರಂಭವಾದಮೇಲೆ ಅನೇಕರು 'ಮಾಫಿ'ಹಕ್ಕುಗಳನ್ನು ಸ್ಥಾಪಿಸಿಕೊಳ್ಳುವದಕ್ಕೋಸ್ಕರ ಕೃತಕಫರ್ಮಾನ್ನುಗಳನ್ನು ಸೃಷ್ಟಿಸಿದರೆಂದೂ, ವಾದಿಯ ಪೂರ್ವಜರೂ ಸಹ ಅದರಂತೆ ಮಾಡಿರಬಹುದೆಂದೂ ಪ್ರತಿವಾದಿಗಳು ವಾದಿಸುತ್ತಾರೆ. ಆದರೆ ಸರಿಯಾದ ರುಜುವಾತಿಲ್ಲದ ಇಂತಹ ವಾದಗಳಮೇಲೆ, ಅದರಲ್ಲಿಯೂ **ಬನಾರಸ್ ಗೆಜಿಟಿಯರಿನ** 123ನೇ **ಪುಟದಲ್ಲಿ** ಈ ದಾನಗಳ ವಿಷಯವನ್ನು ಹೇಳಿರುವಾಗ, ಈ ಫರ್ಮಾನ್ನುಗಳು ಸೃಷ್ಟಿಸಲ್ಪಟ್ಟುವುಗಳೆಂದು ನಾವೆಂದೂ ಒಪ್ಪಲಾರೆವು. ಈ ಫರ್ಮಾನ್ನುಗಳಲ್ಲಿ ದಾನಕೊಡಲ್ಪಟ್ಟ ಆಸ್ತಿಗಳನ್ನು ಗುರ್ತಿಸಲು ಅನುಕೂಲಿಸುವಂತೆ ಸ್ಪಷ್ಟವಾಗಿ ವಿವರಿಸದಿರುವ ವಿಷಯವು ವಿಚಾರಾರ್ಹವಾಗಿದೆ. ಕಲ್ಪನೆ ಮಾಡುವವನು ತನಗೆ ಸುಲಭವಾಗಿ ಅನುಕೂಲವಾಗದ ಪತ್ರವನ್ನು ಎಂದೂ ಸೃಷ್ಟಿಸುವದಿಲ್ಲ. ಈ ಸಮಯದಲ್ಲಿ ಎಲ್ಲಫರ್ಮಾನ್ನುಗಳನ್ನೂ ಆಮೂಲಾಗ್ರವಾಗಿ ವಿಮರ್ಶಿಸುವ ಅವಶ್ಯಕತೆಯೇನೂ ಇಲ್ಲ. ಮೂಲದಾಖಲೆಗಳನ್ನೂ ಅವುಗಳ ಭಾಷಾಂತರಗಳನ್ನೂ ನಾನು ನೋಡಿದ್ದೇನೆ. ಉಭಯಪಕ್ಷದವರೂ ಅವುಗಳ ವಿಷಯವಾಗಿ ತಮ್ಮ ತಮ್ಮ ದೃಷ್ಟಿಯಿಂದ ವಾದಮಾಡಿರುತ್ತಾರೆ. ಅವು ರಿಕಾರ್ಡಿನಲ್ಲಿ 1051 ಮತ್ತು 1052 (ಡಿ) ನಂಬರಿನವುಗಳಾಗಿವೆ. **ಹುಮಾಯೂನನು** ಬನಾರಸ್ ಮತ್ತು ಚುನಾರ್ (ಮಿರ್ಜಾಪುರ ಡಿ||) ಗಳ ಹೊರಭಾಗದಲ್ಲಿ 300 ಭಿಘೆ ಜಮೀನನ್ನು ದಾನಮಾಡಿದನೆಂದು ತೋರುವದು. ಮುಂದೆ ಆಳಿದ ಚಕ್ರವರ್ತಿಗಳ ಕಾಲದಲ್ಲಿ ಆಗಿಂದಾಗ್ಗೆ ಈ ದಾನವು ಅಲ್ಪಸ್ವಲ್ಪ ವ್ಯತ್ಯಾಸಮಾಡಿ ಸ್ಥಿರಪಡಿಸಲ್ಪ

ಟ್ಟಿದೆ. ಇವುಗಳು 4, 14, 19, 28, 35, 34 ಮತ್ತು 61 ನೇ ದಾಖಲೆಗಳಾಗಿರುತ್ತವೆ. ಈ ಫರ್ಮಾನ್ಸುಗಳು ಇಲ್ಲಿ ಒಂದು ಜಂಗಮರ ಗುಂಪು ವಾಸವಾಗಿತ್ತೆಂಬುದನ್ನು ಸ್ಥಿರಪಡಿಸುತ್ತವೆ. ಈ ದಾನಗಳು ಅವರಿಗೆ 'ಮದದ್‌ಮಾಷ' ಅಥವಾ ಪೋಷಣೆಗಾಗಿ ಕೊಡಲ್ಪಡುತ್ತಿದ್ದವು. ಇದೇ ಸಂದರ್ಭದಲ್ಲಿ ಅಲಹಾಬಾದಿನ 390 ಮತ್ತು 419 ನೇ ನಂಬರು ಅಪೀಲ್ ಮೊಕದ್ದಮೆಗಳಲ್ಲಿ ಯಾವುದಾದರೊಂದು ಗೊತ್ತಾದ ಮತದ ಫಕೀರರಿಗೆ 'ಮದದ್‌ಮಾಷ' ಅಥವಾ ಪೋಷಣೆಗಾಗಿ ಆಸ್ತಿಯನ್ನು ಕೊಟ್ಟರೆ ಅದನ್ನು 'ದಾನ' ಅಥವಾ 'ಟ್ರಸ್ಟ' ಎಂದು ಭಾವಿಸಬೇಕೆಂಬುದಾಗಿ ಹೇಳಲ್ಪಟ್ಟಿದೆ. ಅಧಿಕಾರಕ್ಕೆ ಬಂದ ಮೊಗಲ್ ಚಕ್ರವರ್ತಿಗಳೆಲ್ಲರೂ ಈ ಜಂಗಮರನ್ನು ಸಾಧುಗಳೆಂದು ಭಾವಿಸಿ, ಅವರ ಸಾಧುತ್ವಕ್ಕೂ ಮತ್ತು ಚಕ್ರವರ್ತಿಗಳ ಶ್ರೇಯೋಭಿವೃದ್ಧಿಗಾಗಿ ಅವರು ಮಾಡುತ್ತಿದ್ದ ಪ್ರಾರ್ಥನೆಗೂ ಈ ದಾನಗಳನ್ನು ಕೊಟ್ಟು ನಡೆಸಿಕೊಂಡು ಬರುತ್ತಿದ್ದರು. 1802 ನೇ ವರ್ಷದ 73 ಮತ್ತು 74 ನೇ ನಂಬರ್ ದಾಖಲೆಗಳೂ ವಿಚಾರಯೋಗ್ಯವಾಗಿವೆ. ಅವುಗಳು ವಾದಿಯ ಪೂರ್ವಜರು ವ್ಯಾಜ್ಯಹುಟ್ಟಿದ್ದ ಕೆಲವು ಆಸ್ತಿಗಳ ವಿಷಯದಲ್ಲಿ, ಈ ಫರ್ಮಾನ್ಸುಗಳನ್ನು ನ್ಯಾಯಾಸ್ಥಾನಕ್ಕೆ ಹಾಜರ್ಮಾಡಿ ಅವುಗಳ ಆಧಾರದ ಮೇಲೆ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಂಡರೆಂಬುದನ್ನು ವ್ಯಕ್ತಗೊಳಿಸುತ್ತವೆ.

ಪ್ರತಿವಾದಿಗಳಿಂದ 72 ನೇ ದಾಖಲೆಯು ಟೀಕಿಸಲ್ಪಟ್ಟಿದೆ. 1795 ನೇ ಇಸವಿಯ 41 ಮತ್ತು 42 ನೇ ಕಾನೂನುಗಳಿಂದ ಸರಕಾರದವರು ಮಾಫಿ ಜಮೀನುಗಳ ಹಕ್ಕುಗಳನ್ನು ಹೊಂದಿರುವವರು ಒಂದು ಗೊತ್ತಾದ ತಾರೀಖಿನೊಳಗಾಗಿ ತಮ್ಮ ಸನ್ನದುಗಳನ್ನು ಡಿಸ್ಟ್ರಿಕ್ಟ ಅಧಿಕಾರಿಗಳ ಮುಂದೆ ಹಾಜರ್ಮಾಡಬೇಕೆಂದು ಅಪ್ಪಣೆಮಾಡಿದರು. 1800 ನೇ ಇಸವಿಯ 8 ನೇ ಕಾನೂನಿನಿಂದ ಈ ಅವಧಿಯು ಹೆಚ್ಚಿಸಲ್ಪಟ್ಟಿತು. 1812 ನೇ ವರ್ಷದಲ್ಲಿ ವಾದಿಯ ಪೂರ್ವಜರಲ್ಲೊಬ್ಬರಾದ ಶಿವಲಿಂಗಸ್ವಾಮಿಗಳು ತಾವು ಯಾತ್ರಾರ್ಥಿಗಳಾಗಿ ಹೋಗಿದ್ದುದರಿಂದ ತಮ್ಮ ಪತ್ರಗಳನ್ನು ಮುಂಚಿತವಾಗಿ ಹಾಜರ್ಮಾಡಲಿಲ್ಲವೆಂದು ಅರ್ಜಿಯನ್ನು ಹಾಕಿದರು. ತಮ್ಮ ಸನ್ನದುಗಳನ್ನು ಪರಾಮರ್ಶಿಸಿ ಮಾಫೀದಾರರ ರಿಜಸ್ಟರಿನಲ್ಲಿ ದಾಖಲ್ಮಾಡಬೇಕೆಂದು ಪ್ರಾರ್ಥಿಸಿದರು. ಅಧಿಕಾರಿಗಳು ಇದನ್ನು ವಿಚಾರಮಾಡಿ ರಿಪೋರ್ಟ್ ಮಾಡಬೇಕೆಂದು ಒಬ್ಬ ಮುತ್ಸದ್ದಿಗೆ ಅಪ್ಪಣೆ ಮಾಡಿದರು. ಅವನು ಅದರಂತೆ ರಿಪೋರ್ಟನ್ನು ಒಪ್ಪಿಸಿ ತೀರ್ಮಾನವನ್ನು ಕೇಳಿದ್ದನು. ಅನಂತರ ಅಧಿಕಾರಿಗಳು ದಾಖಲೆಗಳ ಸಮೇತ ಅರ್ಜೀದಾರರನ್ನು ಹಾಜರ್ಮಾಡುವಂತೆ ನಾಜಿರರಿಗೆ ಅಪ್ಪಣೆ ಮಾಡಿದರು. ಇದರ ವಿಷಯವಾಗಿ ಮುಂದಿನ ನಡವಳಿಕೆಗಳನ್ನು ಹಾಜರ್ಮಾಡಲಿಲ್ಲವಾಗಿ, ಸರಕಾರದವರು ಸನ್ನದುಗಳನ್ನು ಸುಳ್ಳೆಂದು ಭಾವಿಸಿ, ಅಪ್ಲಿಕೇಷನ್ನನ್ನು ವಜಾ ಮಾಡಿದರೆಂದು ಪ್ರತಿವಾದಿಗಳು ವಾದಿಸುತ್ತಾರೆ. 72 ನೇ ನಂಬರು ದಾಖಲೆಯಿಂದ ನಿಜವಾಗಿಯೂ ಇದೇ ಅರ್ಥವಾಗುವದೆಂದು ಭಾವಿಸಿದರೂ, ಅದರಿಂದ ಮಠದ ಇರುವಿಕೆಯೇನೂ ಸುಳ್ಳಾಗಲಾರದು. ಅದರಿಂದ ಮಾಫೀತಕ್ಕು ಸ್ಥಿರಪಡಲಿಲ್ಲವೆಂದು ಮಾತ್ರ ವ್ಯಕ್ತವಾಗುವದು.

* * * * *

ಕ್ರಿಸ್ತಶಕ **574** ನೇ ವರ್ಷದ (ದಾಖಲೆ ನಂ. 1) ದಾನಪತ್ರವು ಅತ್ಯಂತ ಮೊದಲಿನ ದಾಖಲೆಯಾಗಿ ಪ್ರಾಚೀನದಾನದ ಪ್ರತ್ಯಕ್ಷನಿದರ್ಶನವಾಗಿರುತ್ತದೆ. ಇದಕ್ಕಿಂತಲೂ ಪೂರ್ವದಲ್ಲಿ ಅನೇಕ ದಾನಗಳು ಕೊಡಲ್ಪಟ್ಟಿರಬಹುದು. ಏಕೆಂದರೆ—ದಾಖಲೆ ನಂ. 1 ರಲ್ಲಿ ಆಗಲೂ ಇಲ್ಲಿ ಜಂಗಮರು ವಾಸಿಸುತ್ತಿದ್ದರೆಂದು ಹೇಳಲ್ಪಟ್ಟಿದೆ. ಆದರೂ ಖಂಡಿತವಾಗಿ ಹೇಳಲಾಗುವದಿಲ್ಲ. 1 ನೇ ನಂ. ದಾಖಲೆಯು ಕ್ರಿಸ್ತಶಕ 574 ರಲ್ಲಿ ಈ ಸಂಸ್ಥೆಯು ಇತ್ತೆಂಬುದನ್ನು ಮಾತ್ರ ಸ್ಥಿರಪಡಿಸುತ್ತದೆ. ಈ ದಾನಪತ್ರದಲ್ಲಿ ಕಂಡ ಜಮೀನು ಕರ್ದಮೇಶ್ವರಮಹಾದೇವ ಅಥವಾ ಜಂಗಮಪುರದ ಸಮೀಪದಲ್ಲಿದೆ. 22 ವರ್ಷಗಳ ಹಿಂದೆ ಹಿಂದೂವಿಶ್ವವಿದ್ಯಾನಿಲಯವು ಕಟ್ಟಲ್ಪಡುವವರೆಗೆ ಈ ಜಮೀನು ಮಠದವರದಾಗಿಯೇ ಇತ್ತು. ವಿಶ್ವವಿದ್ಯಾನಿಲಯಕ್ಕೆ ತೆಗೆದುಕೊಂಡಂದಿನಿಂದ ಇದು ಅವರ ಕೈತಪ್ಪಿತು.

ಈ ಫರ್ಮಾನ್ಸುಗಳು ಮತ್ತು ಪ್ರಾಚೀನ ದಾಖಲೆಗಳು 1530 ನೇ ವರ್ಷದಿಂದ 1748 ರ ವರೆಗೆ ಇರುತ್ತವೆ. ಅವುಗಳಿಂದ ಈ ಕೆಳಗಿನ ವಿಷಯಗಳು ಸ್ಥಿರಪಡುತ್ತವೆ. 39 ನೇ ನಂ. (ಎ) ಶಾಸನದಿಂದ **ಹುಮಾಯೂನನು** 300 ಬಿಘೆ ಜಮೀನನ್ನು ದಾನಮಾಡಿದನು. ಈ ದಾಖಲೆಯು ಬಹಳ ಶಿಥಿಲವಾಗಿದೆ. ಇದನ್ನು ಪೂರ್ಣವಾಗಿ ಓದಿ ತಿಳಿಯುವಂತಿಲ್ಲ. ಅದು ವಾದಿಗಳ ವಶದಲ್ಲಿರುವದರಿಂದ, ದಾನವು ವಾದಿಗಳ ಪೂರ್ವಜರಿಗೆ ಮಾಡಲ್ಪಟ್ಟಿತೆಂದು ಗೊತ್ತಾಗುವದು. 15 ನೇ ನಂಬರು ದಾಖಲೆಯಲ್ಲಿ **ಅಕ್ಬರನು** ಹಿಂದಿನ ದಾನಗಳನ್ನು ಪ್ರಸ್ತಾಪಿಸಿ ಮಹಲ್ ಅರ್ಜುನಮಲ್ ಜಂಗಮರಲ್ಲಿರುವ 480 ಬಿಘೆ ಜಮೀನಿನ ದಾನವನ್ನು ಸ್ಥಿರಗೊಳಿಸಿರುತ್ತಾನೆ. ಈ ಜಮೀನು ಯಾವುದೆಂಬುದನ್ನು ನಿರ್ಧರಿಸುವದು ಕಷ್ಟವಾಗಿದೆ. ಅದು ಸ್ಪಷ್ಟವಾಗಿ ವಿವರಿಸಲ್ಪಟ್ಟಿಲ್ಲ. ಆದರೆ ಅದರಲ್ಲಿ ಜಂಗಮರಿಗಾಗಿ 480 ಬಿಘೆ ಜಮೀನು ಕೊಡಲ್ಪಟ್ಟಿರುವದೆಂದು ಸ್ಪಷ್ಟಪಡಿಸಲ್ಪಟ್ಟಿರುವದು. 3 ನೇ ನಂಬರು ದಾಖಲೆಯಲ್ಲಿ **ಅಕ್ಬರನು** ಈ ದಾನವನ್ನು 200 ಬಿಘೆಗಳಿಗೆ ಕಡಿಮೆಮಾಡಿರುತ್ತಾನೆ. ಅದರಲ್ಲಿ ಕಾಶಿಯಲ್ಲಿ 150 ಮತ್ತು ಚುನಾರಿನಲ್ಲಿ 50 ಬಿಘೆಗಳು ಇರುತ್ತವೆ. ಚುನಾರ್‌ಜಮೀನು ತಮ್ಮ ವಶದಲ್ಲಿಲ್ಲವೆಂದು ವಾದಿಗಳು ಒಪ್ಪಿಕೊಂಡಿರುತ್ತಾರೆ. ಅದು ಯಾರಕಾಲದಲ್ಲಿ ಹೇಗೆ ಇವರ ಕೈಬಿಟ್ಟು ಹೋಯಿತೆಂಬುದು ನಮಗೆ ಗೊತ್ತಿಲ್ಲ. ಕಾಶಿಯ ಜಮೀನುಗಳು ಸರಿಯಾಗಿ ವಿವರಿಸಲ್ಪಟ್ಟಿಲ್ಲ. ಮತ್ತು ಈಗ ವ್ಯವಹಾರಕ್ಕೆ ಸಿಕ್ಕಿರುವ ಜಮೀನುಗಳಲ್ಲಿ ಇಂಥದೆಂದು ನಿರ್ಧರಿಸಿ ಹೇಳುವದೂ ಕಷ್ಟವಾಗಿದೆ. ಅಂತೂ ವಾದಿಗಳು ಜಂಗಮವಾಡೀ ಮೊಹಲ್ಲಾ ಜಮೀನ್ದಾರರಾಗಿರುವದಾಗಿ ಹೇಳಿರುತ್ತಾರೆ. ಇದಕ್ಕೆ ವಾದಿಗಳ ಹಕ್ಕನ್ನು ಗೊತ್ತುಪಡಿಸುವ ಯಾವ ದಾಖಲೆಯೂ ಹಾಜರ್ಮಾಡಲ್ಪಟ್ಟಿಲ್ಲ. ಪ್ರಾಯಶಃ ಈ ಜಮೀನ್ದಾರಿಯು ಆ ದಾನದ ಒಂದು ಭಾಗವಾಗಿರಬಹುದು. 4 ನೇ ನಂಬರು ದಾಖಲೆಯೂ ಸಹ **ಅಕ್ಬರನ** ಕಾಲದ ಫರ್ಮಾನ್ಸೇ ಆಗಿರುತ್ತದೆ. ಅದು ಪರಗಾಣ ಹವೇಲಿ ಬನಾರಸ್ಸಿನಲ್ಲಿರುವ 178 ಬಿಘೆ ಜಮೀನಿನ ದಾನವನ್ನು ಅಂಗೀಕರಿಸಿರುತ್ತದೆ. ಇದರಿಂದ ದಾನವೆಂಬುದು ಸ್ಪಷ್ಟಪಡುತ್ತದೆ. ಇದರಲ್ಲಿ ಧರ್ಮಸಂಸ್ಥೆಯು ಹಿರಿಯ ಮೆಂಬರು 'ಮುಕ್ಯಲ್ಲಿ' ಯಾಗುವನೆಂದೂ, ಉತ್ಪತ್ತಿಯು ಆ ಮತಾನುಯಾಯಿಗಳಾದ ಸ್ವಾಮಿಗಳ ಪೋಷಣೆಗೆ ಉಪಯೋಗಿಸಲ್ಪಡುವದೆಂದೂ ಹೇಳಲ್ಪಟ್ಟಿದೆ. ಇದು ಬಾಜಿ, ಮುಫ್ತಿ, ಆಹುಲಿ, ಮತ್ತು ಮೊವಾಲಿ ಈ ಅಧಿಕಾರಿಗಳಿಂದ ಪರಿಶೀಲಿಸಲ್ಪಟ್ಟಿದೆ. ಮುಂದಿನ ಫರ್ಮಾನ್ಸು (ದಾಖಲೆ ನಂ 12) **ಜಹಾಂಗೀರನ** ಕಾಲದ್ದಾಗಿದೆ. ಇದರಿಂದ ಕಾಶಿಯಲ್ಲಿಯ 178 ಬಿಘೆ ಜಮೀನುಗಳ ಹಕ್ಕುಬಾಧ್ಯತೆಗಳ ವಿಷಯವು ವಿಚಾರಿಸಲ್ಪಟ್ಟು ದಾನವು ಸ್ಥಿರಪಡಿಸಲ್ಪಟ್ಟಿತೆಂಬುದು ವ್ಯಕ್ತವಾಗುತ್ತದೆ. 27 ನೇ ನಂಬರು ದಾಖಲೆಯು **ಜಹಾಂಗೀರನ** ಕಾಲದ್ದಾಗಿದೆ. ಇದೂ ಜಂಗಮರ ಪೋಷಣೆಗಾಗಿ ಕೊಡಲ್ಪಟ್ಟ 178 ಬಿಘೆ ಜಮೀನುಗಳನ್ನು ಸ್ಥಿರಪಡಿಸುತ್ತದೆ. 21 ನೇ ನಂ. ದಾಖಲೆಯಲ್ಲಿ ಕಂಡಂತೆ ಜಂಗಮರು ತಮ್ಮ ಸಂಖ್ಯೆಯು ಹೆಚ್ಚಾಗಿರುವದೆಂದೂ ತಮಗೆ ದೊರೆತಿರುವ ಸಹಾಯವು ಸಾಲದೆಂದೂ ಸರಕಾರಕ್ಕೆ ವಿಜ್ಞಾಪಿಸಿಕೊಂಡದ್ದರಿಂದ, **ಜಹಾಂಗೀರನ** ಕಾಲದಲ್ಲಿ ಜಂಗಮರಿಗೆ ಪುನಃ ಚುನಾರಿನಲ್ಲಿ 100 ಬಿಘೆ ಜಮೀನುಗಳು ಕೊಡಲ್ಪಟ್ಟವೆಂಬುದು 24 ನೇ ನಂಬರು ದಾಖಲೆಯಿಂದ ವ್ಯಕ್ತವಾಗುತ್ತದೆ. 25 ಮತ್ತು 26 ನೇ ನಂ. ದಾಖಲೆಗಳು **ಜಹಾಂಗೀರನ** ಕಾಲದವೇ ಆಗಿರುತ್ತವೆ. ಇವು ಕಾಶೀ ಮತ್ತು ಚುನಾರಿನಲ್ಲಿಯ 178 ಮತ್ತು 100 ಬಿಘೆ ಜಮೀನುಗಳ ದಾನವನ್ನು ಪುನಃ ಸ್ಥಿರಪಡಿಸುತ್ತವೆ. ಅನಂತರ **ಷಾಜಹಾನ** ಕಾಲದ 36, 14, 38, 5, 37, 19, 6, 28, 30, 22, 8, 18, 33, 31, 3[illegible] ಮತ್ತು 23 ನಂಬರಿನ 16 ಫರ್ಮಾನ್ಸುಗಳಿವೆ. ಇವು ಬನಾರಸ್ ಮತ್ತು ಚುನಾರಿನಲ್ಲಿನ 178 ಮತ್ತು 100 ಬಿಘೆ ಜಮೀನುಗಳ ದಾನವನ್ನು ಸ್ಥಿರಪಡಿಸುತ್ತವೆ. **ಜಂಗಮರಿಗೆ ಏನಾದರೂ ತೊಂದರೆಯು ಪ್ರಾಪ್ತವಾದ ಕೂಡಲೇ ಅವರು ಚಕ್ರವರ್ತಿಗಳಲ್ಲಿ ವಿಜ್ಞಾಪಿಸಿಕೊಳ್ಳುತ್ತಿದ್ದರು. ಇದರ ಮೇಲೆ ಜಂಗಮರಿಗೆ ಕೊಡಬೇಕಾದುದನ್ನು ಮುಂದೆಯೂ ಕೊಡಬೇಕೆಂದೂ, ಅವರಿಂದ ಯಾ[illegible] ಕಿರಿಗೆಯನ್ನೂ ವಸೂಲು ಮಾಡಕೂಡದೆಂದೂ, ಅವರನ್ನು ತೊಂದರೆಪಡಿಸಕೂಡದೆಂದೂ ಕೆಳಗಿನ ನೌಕರರಿಗೆ ಅಪ್ಪಣೆಯಾಗುತ್ತಿತ್ತು. ಪದೇಪದೇ ಫರ್ಮಾನ್ಸುಗಳು ಹೊರಡುವದಕ್ಕೆ ಇದೇ ಕಾರಣವಾಗಿದೆ.** 6 ನೇ ನಂಬರು ದಾಖಲೆಯೂ ಮುಖ್ಯವಾದದ್ದು. ಅದು ಮಠದ ಇರುವಿಕೆಯನ್ನು ಸ್ಥಿರಗೊಳಿಸುತ್ತದೆ. **ಔರಂಗಜೇಬನ** ಕಾಲದ ಫರ್ಮಾನ್ಸುಗಳು 16 ನೆಯ ನಂಬರು ದಾಖಲೆಯಿಂದ ಪ್ರಾರಂಭವಾಗುತ್ತವೆ. ಅದರಲ್ಲಿ ಜಂಗಮರಿಗೆ ಕೊಡಲ್ಪಟ್ಟಿದ್ದ 278 ಬಿಘೆ ಜಮೀನುಗಳ ದಾನವು ಸ್ಥಿರಪಡಿಸಲ್ಪಟ್ಟಿರುತ್ತದೆ. 32 ನೇ ನಂಬರ್ ದಾಖಲೆಯಿಂದ ಈ ದಾನವು ಪುನರ್ವಿಮರ್ಶಿಸಲ್ಪಟ್ಟಿತೆಂದು ಗೊತ್ತಾಗುತ್ತದೆ. 11 ನೇ ನಂ. ದಾಖಲೆಯಲ್ಲಿಯೂ ಇದೇ ವಿಷಯವಿರುತ್ತದೆ. 20 ನೇ ನಂಬರ್ ದಾಖಲೆಯಲ್ಲಿ ಒಂದು ಮನೆಯ ವಿಷಯವಿದೆ. ಅದರಲ್ಲಿ ನಾಜಿರ್‌ಬೇಗನೆಂಬುವನು ಬನಾರಸ್ ಸಿಟಿಯಲ್ಲಿ ಜಂಗಮರನ್ನು ಮಂದಿರದಿಂದ ಹೊರಕ್ಕೆ ಕಳುಹಿದನೆಂದು ಬರೆಯಲ್ಪಟ್ಟಿದೆ. ಜಂಗಮರು ಫಿರ್ಯಾದುಮಾಡಿದರು. ಆಗ ಈ ವಿಷಯವನ್ನು ವಿಚಾರಮಾಡಿ, ಜಂಗಮರ ಹಕ್ಕುಬಾಧ್ಯತೆಗಳು ರುಜುವಾತಾದರೆ, ನಾಜಿರ್‌ಬೇಗನು ಮಂದಿರವನ್ನು ಪ್ರವೇಶಮಾಡದಂತೆ ಮಾಡಬೇಕೆಂದು ಅಧಿಕಾರಿಗಳಿಗೆ ಅಪ್ಪಣೆಯಾಯಿತು. ನಾನು ಸ್ವತಃ ಪರೀಕ್ಷಿಸಿದಾಗ ಮಠದ ಮುಖ್ಯ ಕಟ್ಟಡಕ್ಕೆ 5 ಅಂಗಳಗಳಿದ್ದುದನ್ನು ನೋಡಿರುವೆನು. ಈ ದಾಖಲೆಯಲ್ಲಿ ಕಂಡ ವಿಷಯವು ಮಠದ ಈ ಕಟ್ಟಡಕ್ಕಾಗಲಿ ಅಥವಾ ಸಿಟಿಯಲ್ಲಿ ಮಠಕ್ಕೆ ಸೇರಿರುವ ಬೇರೆ 5 ಮನೆಗಳಿಗಾಗಲಿ ಸಂಬಂಧಿಸಿರಬಹುದು. 1 ಮತ್ತು 10 ನೇ ನಂಬರ್ ದಾಖಲೆಗಳಿಂದ ಆ 5 ಮನೆಗಳು ವಿಚಾರಣೆಯಾದನಂತರ ಹಿಂತಿರುಗಿ ಜಂಗಮರಿಗೆ ಕೊಡಲ್ಪಟ್ಟವೆಂದೂ ಅವುಗಳಿಂದ ವಸೂಲಾಗಿದ್ದ 500 ರೂ. ಭಾಡಿಗೆ ಹಣವು ಹಿಂತಿರುಗಿ ಕೊಡಲ್ಪಟ್ಟಿತೆಂದೂ ತಿಳಿದುಬರುತ್ತದೆ. 29 ನೇ ನಂಬರ್ ದಾಖಲೆಯು, ಜಂಗಮ[illegible] ಮಾನಸಿಂಗ್ ಮೊದಲಾದವರಿಗೆ ಯಾವುದೋ ಬಾಕಿಗಾಗಿ 22-8-0 ರೂ. ಗಳ ಪಾವತಿಮಾಡಿದ ಬಗ್ಗೆ ಸರಕಾರೀ ಅಧಿಕಾರಿಯಿಂದ ರುಜುಮಾಡಲ್ಪಟ್ಟ ರಶೀದಿಯಾಗಿದೆ. 17, 34, 61, 56 ಮತ್ತು 59 ನೇ ನಂ. ದಾಖಲೆಗಳು ಅಲಹಾಬಾದ್ ಡಿಸ್ಟ್ರಿಕ್ಟಿನಲ್ಲಿರುವ ಮೊಕದ್ದಮೆಗೆ ಸಂಬಂಧಪಟ್ಟ ಕೆಲವು ಆಸ್ತಿಗಳಿಗೆ ಸಂಬಂಧಿಸಿರುತ್ತವೆ. ಮೊದಲನೆಯ ಮೂರು **ಅಕ್ಬರನ** ಕಾಲದವುಗಳೂ, ಕಡೆಯ ಎರಡು **ಔರಂಜೇಬನ** ಕಾಲದವುಗಳೂ ಆಗಿರುತ್ತವೆ. 39 (ಎ) ಮತ್ತು 7 ನೇ ನಂಬರು ದಾಖಲೆಗಳು **ಜಹಾಂಗೀರ್ ಮತ್ತು ಮಹಮದ್‌ಷಹಾನ** ಕಾಲದವುಗಳಾಗಿ [illegible] ಗಯೆಯಲ್ಲಿರುವ ಆಸ್ತಿಗೆ ಸಂಬಂಧಪಟ್ಟಿರುತ್ತವೆ. ಆಸ್ತಿಯು ಇಂಥದೇ ಎಂಬುದನ್ನು ಅವು ತಕ್ಕಮಟ್ಟಿಗೆ ವಿಶದಮಾಡುತ್ತವೆ.

ಇದು ಫರ್ಮಾನ್ಸುಗಳ ಸಂಕ್ಷಿಪ್ತಚರಿತ್ರೆಯಾಗಿರುತ್ತದೆ. ಇವುಗಳಿಂದ ಜಂಗಮರು **ಬನಾರಸ್, ಅಲಹಾಬಾದ್** ಮತ್ತು **ಗಯಾ** ಡಿಸ್ಟ್ರಿಕ್ಟ್‌ಗಳಲ್ಲಿ [illegible] ರೂಪವಾಗಿ ಆಸ್ತಿಗಳನ್ನು ಹೊಂದಿದ್ದರೆಂದು ಸ್ಥಿರವಾಗುವದು. ವ್ಯವಹಾರಕ್ಕೆ ಸಂಬಂಧಪಟ್ಟ ಆಸ್ತಿಗಳು ಇವುಗಳೇ ಎಂಬುದು ಫರ್ಮಾನ್ಸುಗಳಲ್ಲಿ ವಿವರಿಸಲ್ಪಡದಿರುವದರಿಂದ, ಸರಿಯಾಗಿ ನಿರ್ಧರಿಸಲಾಗುವದಿಲ್ಲ. **ಗಯಾ** ಮತ್ತು **ಅಲಹಾಬಾದದಲ್ಲಿ**ರುವ ಆಸ್ತಿಗಳನ್ನು ತಕ್ಕಮಟ್ಟಿಗೆ ಗುರ್ತಿಸಬಹುದು. ಅಲಹಾಬಾದ್ ಮೊಹಲ್ಲಾ ದಾರಾಗಂಜಿನಲ್ಲಿರುವ ಮಂದಿರವೂ, ಗಯೆಯ ಶಿಕೋರಿಯಾ ಮೊಹಲ್ಲಾದಲ್ಲಿರುವ ಮಂದಿರವೂ ಆ ಡಿಸ್ಟ್ರಿಕ್ಟ್‌ಗಳಿಗೆ ಸಂಬಂಧಪಟ್ಟಿರುವ ಫರ್ಮಾನ್ಸುಗಳಲ್ಲಿ ಕಂಡ ಮಂದಿರಗಳೇ ಆಗಿರುವವೆಂದು ನನಗೆ ತೋರುತ್ತದೆ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

(7-1-74)

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ಡಿಶಂಬರ್ ೧೯೩೩ [ಸಂಚಿಕೆ ೩೫

ಮಲೆನಾಡಿನಲ್ಲೊಂದು ಸತ್ಕಾರಕೂಟವೂ, ಸದ್ಯದ ಪರಿಸ್ಥಿತಿಯೂ.

ತಾರೀಖು 1-12-33 ರಲ್ಲಿ ಆಲದೂರು ವಿಲೇಜ್ ಇಂಪ್ರೂಮೆಂಟ್ ಆಸ್ಪತ್ರೆಯಲ್ಲಿ ಈಗ್ಗೆ ಐದೂವರೆ ವರ್ಷಗಳಿಂದಲೂ ಡಾಕ್ಟರಾಗಿದ್ದು ಜನಾನುರಾಗಿಗಳಾಗಿದ್ದ, ಡಾ|| ಚಂದ್ರಶೆಟ್ಟರವರಿಗೆ ತುಮಕೂರು ಡಿ|| ಬೋರ್ಡಿಗೆ ವರ್ಗವಾದುದರಿಂದ ಅವರ ವಿಷಯದಲ್ಲಿ ಈ ಸುತ್ತಿನ ಜನಸಮುದಾಯಕ್ಕಿದ್ದ ಕೃತಜ್ಞತೆಯನ್ನು ವ್ಯಕ್ತಪಡಿಸಲು, ಹಜರತ್ ಸೀ ಜಯರ್ ಸರ್ಜ್ ಸಾಹೇಬರವರಿಂದ ಕಂತೆಯಮೂಲಕ ಅಪ್ಪಣೆಯನ್ನು ಪಡೆದು ಆಲ್ದೂರು ಡಾ|| ಪ್ರಾ|| ಮ|| ಖಾಜಾಅಬ್ದುಲ್‌ಕರೀಂಸಾಹೇಬರವರ ಅಧ್ಯಕ್ಷತೆಯಲ್ಲಿ ಮ|| ಆರ್. ಎ. ಮೆಂಬರು ಬಿ. ಪಿ. ಬಸಪ್ಪಶೆಟ್ಟರವರ ಮುಖಾಂತರದಿಂದ ಒಂದು ಸತ್ಕಾರಕೂಟವನ್ನೇರ್ಪಡಿಸಲಾಗಿದ್ದಿತು. ಈ ಸಂತೋಷಕೂಟಕ್ಕೆ ಈ ಪ್ರಾಂತದ ನೂರಾರು ಜನ ಕಾಫೀಪ್ಲಾಂಟರುಗಳೂ ಮತ್ತು ಪ್ರಜಾಸಮುದಾಯದವರೂ ಸೇರಿದ್ದರು. ಮ|| ರಾ|| ಬಿ. ಪಿ. ಬಸಪ್ಪಶೆಟ್ಟರೂ ಎರಡು ಮೂರು ಜನ ಮಹಮ್ಮದೀಯ ದೊಡ್ಡಮನುಷ್ಯರುಗಳೂ, ಡಾ|| ಚಂದ್ರಶೆಟ್ಟರವರ ದಯಾಳುಸ್ವಭಾವವನ್ನೂ, ಸರಳತೆಯನ್ನೂ, ನಿಷ್ಪಕ್ಷಪಾತತೆಯನ್ನೂ, ಒಟ್ಟಿನಲ್ಲಿ ಬಡಬಗ್ಗರಿಗೆ ಜಾಗ್ರತೆಯಿಂದ ಚಿಕಿತ್ಸೆಮಾಡುವುದರಲ್ಲಿ ಇವರಿಗಿರುವ ಶ್ರದ್ಧಾಭಕ್ತಿಗಳನ್ನೂ ಕುರಿತು ಯುಕ್ತಿಯುಕ್ತವಾಗಿ ಭಾಷಣಗಳನ್ನು ಮಾಡಿ ಮುಗಿಸಿದ ಬಳಿಕ, ಇವರ ಈ ವಿಧವಾದ ನಿರಪೇಕ್ಷ ಸೇವೆಯ ಜ್ಞಾಪಕಾರ್ಥವಾಗಿ ಈ ಊರಿನವರ ಪರವಾಗಿ ಒಂದು ರಜತಪಾತ್ರೆಯನ್ನು ಬಹುಮಾನಿಸಲಾಯಿತು. ಅನಂತರ ಸೇರಿದ್ದವರಿಗೆಲ್ಲ ಗಂಧ-ಪುಷ್ಪ-ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟ ಮೇಲೆ ಸದರಿ ಡಾಕ್ಟರವರಿಗೂ, ಅವರ ಕುಟುಂಬದವರಿಗೂ ಆಯುರಾರೋಗ್ಯ ಭಾಗ್ಯಾದಿಗಳನ್ನು ಕೋರಲಾಯಿತು. ಅನಂತರ, ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯೊಂದಿಗೆ ಸಭೆಯು ಬರಖಾಸ್ತಾಯಿತು.

ಈಗ್ಗೆ ಕೆಲದಿನಗಳ ಹಿಂದೆ ಮ|| ಸೆನೆಟ್ ಮೆಂಬರು ಬಿ. ಪಿ. ಬಸಪ್ಪಶೆಟ್ಟರವರ ಕೋರಿಕೆಯಂತೆ, ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರ್‌ಸಾಹೇಬರಾದ, ಮ|| ಎ. ಎಸ್. ಸುಬ್ಬರಾಯರವರು ಈ ಊರಿಗೆ ದಯಮಾಡಿಸಿ ಪ್ರೈಮರಿಸ್ಕೂಲನ್ನು ಪರಾಮರ್ಶಿಸಿದುದಲ್ಲದೆ, ಈ ಗ್ರಾಮಕ್ಕೊಂದು ಮಿಡ್ಲ್‌ಸ್ಕೂಲನ್ನು ಕೊಡಿಸಿಕೊಡಬೇಕೆಂಬ ಪ್ರಮುಖರ ಪ್ರಾರ್ಥನೆಯನ್ನಂಗೀಕರಿಸಿ, ಆದಷ್ಟುಜಾಗ್ರತೆ ನಮ್ಮಗಳ ಪ್ರಾರ್ಥನೆಯನ್ನು ಸಫಲಗೊಳಿಸಿಕೊಡುವದಾಗಿ ಭರವಸೆಯನ್ನಿತ್ತರು. ಈ ಸುತ್ತಿನ ಪ್ರಜೆಗಳಿಗೆ ಮಹದಾನಂದವನ್ನುಂಟುಮಾಡಿರುವುದಲ್ಲದೆ, ಸದರಿ ಮಿಡ್ಲ್‌ಸ್ಕೂಲು ಪ್ರಾಪ್ತವಾಗುವುದನ್ನು ಎದುರುನೋಡುತ್ತಾ ಇದ್ದಾರೆ.

ಈಗಾಗಲೇ ಈ ಪ್ರಾಂತದಲ್ಲಿ ಕಾಫಿ ಮತ್ತು ಭತ್ತದಕೊಯ್ಲು ಪ್ರಾರಂಭವಾಗಿರುತ್ತದೆ. ಈ ವರ್ಷ ಇತ್ತಕಡೆ ಎಲ್ಲಾ ಫಸಲುಗಳೂ ಕೇವಲ ಕಡಮೆಯಾಗಿರುವುದಲ್ಲದೆ, ಕಾಫಿ ಮಣ ೧ ಕ್ಕೆ ಸುಮಾರು ಎಂಟು ರೂಪಾಯಿಗಳಂತೆಯೂ, ಏಲಕ್ಕಿ ಮಣ ೧ ಕ್ಕೆ ಹದಿನೆಂಟು ಇಪ್ಪತ್ತು ರೂಪಾಯಿಗಳಂತೆಯೂ, ಭತ್ತ ಪಲ್ಲ ೧ ಕ್ಕೆ ಎರಡು ವ ಎರಡೂವರೆ ರೂಪಾಯಿಗಳಂತೆಯೂ, ಇರುವುದರಿಂದ ಪ್ರಜೆಗಳ ಆರ್ಥಿಕ ದುಃಸ್ಥಿತಿಯು ವರ್ಣನಾತೀತವಾಗಿರುತ್ತದೆ. ಮುಂದಾದರೂ ಧಾರಣೆವಾಸಿಗಳು ಕ್ರಮಪಟ್ಟು, ಈಗಿನ ಈ ಪರಿತಾಪಕರವಾದ ದುರ್ದೆಸೆಯು ನಿವಾರಣೆಯಾಗಬಹುದೆಂಬ ನಿರೀಕ್ಷಣೆಯುಳ್ಳದ ತೋರುತ್ತಿಲ್ಲವಾದ್ದರಿಂದ, ಪ್ರಜೆಗಳ ಈ ದುಸ್ಥಿತಿಯು ನಿವಾರಣೆಯಾಗಲು ಅನ್ಯೋಪಾಯವೇ ಇಲ್ಲದಿರುವ ಈ ಸಂದರ್ಭದಲ್ಲಾದರೂ ಪ್ರಜಾವತ್ಸಲತೆಯ ದೃಷ್ಟಿಯಿಂದ ಸರಕಾರದವರು ದಯಾಪರರಾಗಿ ಪ್ರಜೆಗಳಿಗೆ ಆರ್ಥಿಕ ಸಹಾಯ ಸೌಲಭ್ಯಗಳನ್ನೊದಗಿಸಿಕೊಡುವುದು ಮಾತ್ರವಲ್ಲ, ಸೇಕಡಾ ಅರ್ಧದಷ್ಟಾದರೂ ಕಂದಾಯವನ್ನು ಕಡಿಮೆಮಾಡುವುದೂ ದವಸಧಾನ್ಯಗಳೇ ಮೊದಲಾದ ಎಲ್ಲಾ ಸಾಮಗ್ರಿಗಳೂ ಕಡಮೆ ದರದಲ್ಲಿ ದೊರೆಯುತ್ತಿರುವ ಈ ಸಮಯದಲ್ಲಿ ಕೇವಲ ದುಬಾರಿ ಸಂಬಳಗಳನ್ನೂ, ನಾನಾರೂಪವಾದ ಅಲೋಯನ್ಸುಗಳನ್ನೂ ಅನುಭವಿಸುತ್ತಿರುವ ಸರ್ಕಾರಿ ನೌಕರರ ಸಂಬಳವನ್ನು ಸೇಕಡಾ ಕಾಲುಭಾಗವನ್ನಾದರೂ ಕಡಿಮೆಮಾಡಿ, ಈ ರೀತಿಯಲ್ಲಿ ಉಳಿತಾಯವಾಗುವ ಮೊಬಲಗನ್ನು ಪ್ರಜಾ ಸೌಕರ್ಯಗಳಿಗಾಗಿ ಉಪಯೋಗಿಸತಕ್ಕದ್ದೂ, ಸಾಲಗಾರರ ತೊಂದರೆಯನ್ನು ಪರಿಹರಿಸಲು ಸಿವಿಲ್ ಕೋರ್ಟುಗಳಲ್ಲಿ ಉದಾರವಾದ ರಿಯಾಯತಿಗಳನ್ನುಂಟುಮಾಡಿಕೊಡುವುದೂ ಸಹ ಸರ್ಕಾರದವರ ಅತ್ಯಗತ್ಯವಾದ ಕರ್ತವ್ಯವೆಂಬುದನ್ನು ಈ ಸಂದರ್ಭದಲ್ಲಿ ಸೂಚಿಸಬಿರಲಾರೆನು.

ಪ್ರಜಾಹಿತಚಿಂತಕ
ಎ. ಪಿ. ಅಮೃತಗೌಡ ಆಲದೂರು.

ಕೃತಜ್ಞತೆ.

ಧಾರವಾಡ ಸಿದ್ಧಗಿರಿ ಮಠದ ವೇ|| ಬಸವಲಿಂಗಯ್ಯನವರು ಪ್ರಭಾಪತ್ರಿಕೆಯ 14 ಸಂಚಿಕೆಗಳನ್ನು ರವಾನಿಸಿರುತ್ತಾರೆ. ಅವೆಲ್ಲವೂ ಅತ್ಯಂತ ಪ್ರಯೋಜನಕಾರಿಯಾಗಿದ್ದವು. ಪ್ರಭಾಪತ್ರಿಕೆಯ ಆರು ವರ್ಷಗಳ ಸಂಚಿಕೆಗಳನ್ನೀಗ ಸಂಪಾದಿಸುವದು ದುಸ್ತರವಾಗಿದ್ದರೂ ಅನೇಕ ಮಹನೀಯರ ಸೌಹಾರ್ದ್ರದಿಂದ ಎಲ್ಲವೂ ಸೇರಿ ನಮ್ಮ ಭವನಕ್ಕೆ ಧನ್ಯತೆಯನ್ನೂ ಮಾನ್ಯತೆಯನ್ನೂ ಉಂಟುಮಾಡುತ್ತಲಿವೆ. ಪರೋಪಕಾರ ಬುದ್ಧಿಯಿಂದ ಸಂಚಿಕೆಗಳನ್ನು ಉಚಿತವಾಗಿ ರವಾನಿಸಿದ ಉದಾರಿಗಳಲ್ಲಿ ಕೃತಜ್ಞತೆಯನ್ನು ಸಮರ್ಪಿಸುವ ಸುಸಂಧಿಯು ಶ್ರೀಮದಾಚಾರ್ಯ ಭಗವತ್ಪಾದರ ಕೃಪೆಯಿಂದಲೇ ಲಭಿಸಿರುವುದೆಂದು ಭಾವಿಸುವೆ.

ವ್ಯವಸ್ಥಾಪಕ,
ಶೈವಭಾರತೀಭವನ
ಜಂಗಮವಾಡೀಮಠ ಕಾಶೀ.

ಹಾಸನ ಟವನ್ನಿನ 25 ನೇ ದನಗಳ ಪ್ರದರ್ಶನ.

ಹಾಸನ ಟವ್ನ ದನಗಳ ಪ್ರದಶನ ಕ್ಷೇತ್ರದಲ್ಲಿ 25 ನೇ ದನಗಳ ಪ್ರದರ್ಶನವು ಏರ್ಪಡಾಗುತ್ತದೆ.

ಪ್ರದರ್ಶನವು 1934 ನೇ ಜನವರಿ ಮಾಹೆ ತಾರೀಖು 3 ನೇ ಬುಧವಾರದಿಂದ 7 ನೇ ಭಾನುವಾರದವರೆಗೆ ಉಭಯದಿವಸಗಳಲ್ಲೂ ನಡೆಯುತ್ತದೆ.

ಗೌರ್ನಮೆಂಟ್ ಆರ್ಡರ್ ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು 1 ಕ್ಕೆ ಎರಡಾಣೆಯಂತೆ ಫೀ ವಸೂಲ್‌ಮಾಡಲ್ಪಡುತ್ತದೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲ್ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನದ (ಮುನಿಸಿಪಲ್) ಜಾಗದಲ್ಲಿ ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನು ಸಹ ತಾರೀಖು 12—12—1933 ರ ರಲ್ಲಿ ಹಾಸನದ ಸಂತೆ ಬಳಿ ಇರುವ ಅಕ್ಕರಾಯಿ ಕಟ್ಟೆ ಬಳಿ ಬಹಿರಂಗವಾಗಿ ಮುನಿಸಿಪಲ್ ಪ್ರೆಸಿಡೆಂಟರು ಯಾ ವೈಸ್ ಪ್ರೆಸಿಡೆಂಟರವರಿಂದ ಮಧ್ಯಾಹ್ನ 2 ಘಂಟೆಯಿಂದ ಹರಾಜುಮಾಡಿಸಲ್ಪಡುತ್ತದೆ.

ಅಂಗಡಿ ವಗೈರೆಗಳಿಗಾಗಿ ವಿಂಗಡಿಸಿರುವ ಜಾಗಗಳನ್ನು ತಾ|| 15—12—33ರ ಲಾಗಾಯ್ತು ವಿಲೇವಾರಿ ಮಾಡಲುಪಕ್ರಮಿಸುತ್ತದೆ. ಬಾಕಿ ವಿಷಯಗಳನ್ನು ಹಾಸನ ಟವ್ನ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳತಕ್ಕದ್ದು.

S. P. Bramhappa,
For President H. T. M.
& Chairman, Cattle Show Committee,
Hassan.

ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡ್.

ನೋಟಿಫಿಕೇಷನ್ ನಂಬರು C. 600/L. B.
31-32, ತಾ|| 20-12-33.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ಶಿವಮೊಗ್ಗ ತಾಲ್ಲೂಕು ನಿದಿಗೆ ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಭಾವಿಯನ್ನು ತೆಗೆಯಲು ಅಂದಾಜಾ ತಯಾರಾಗಿರೋಣದರಿಂದ, ಈ ಕೆಲಸವನ್ನು ಕಂಟ್ರಾಕ್ಟು ಮೂಲಕ ಮಾಡಲು ಇಷ್ಟವುಳ್ಳವರು ತಾರೀಖು 22-1-34 ರ ವಳಗಾಗಿ ಈ ಆಫೀಸಿಗೆ ತಲುಪುವಂತೆ ಟೆಂಡರ್ ಮೂಲಕ ಅರ್ಜಿ ಬರೆದುಕೊಳ್ಳಬಹುದು. ಟೆಂಡರ್ ಜೊತೆಗೆ 150 ರೂಪಾಯಿ ಡಿಪಾಜಿಟ್ ಮಾಡಬೇಕು. ಅಂದಾಜಾ ತಪ್ಸೀಲನ್ನು ಆಫೀಸು ಇದ್ದ ದಿವಸಗಳಲ್ಲಿ ಮಧ್ಯಾನ್ಹ 11 ಗಂಟೆ ಲಾಗಾಯ್ತು ಸಾಯಂಕಾಲ 5 ಗಂಟೆಯವರೆಗೆ ಆಫೀಸಿಗೆ ಬಂದು ನೋಡಬಹುದು. ಟೆಂಡರ್ ಕಳುಹಿಸುವ ಕವರಿನಮೇಲೆ "ಶಿವಮೊಗ್ಗ ತಾಲ್ಲೂಕು ನಿದಿಗೆ ಭಾವಿ ಟೆಂಡರು" ಎಂಬದಾಗಿ ಬರೆಯಬೇಕು. 150 ರೂಪಾಯಿ ಡಿಪಾಜಿಟ್ ಇಲ್ಲದೆ ಬರುವ ಟೆಂಡರನ್ನು ಅಂಗೀಕರಿಸುವುದಿಲ್ಲ.

K. H. Halappa,
President,
Dist. Board, Shimoga.

ರೇಲ್ವೆಗಾಡಿಗೆ ಹುಳುಗಳ ಅಡ್ಡಿ.

ಜವಾ ದೇಶಕ್ಕೆ ಸೇರಿದ 'ನಾಗೋಯ' ಎಂಬ ಗ್ರಾಮದಲ್ಲಿ 'ಯಾಸುಡೆ' ಎಂಬ ವಿಚಿತ್ರಜಾತಿಯ ಹುಳುಗಳಿಂದ ರೈಲ್ವೇ ಪ್ರಯಾಣವೇ ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟಿರುವದು. ಈ ಹುಳುಗಳು ರೈಲ್ವೇ ಕಂಬಿಗಳ ಮೇಲೆ ಗುಂಪುಗುಂಪಾಗಿ ಕೂತಿದ್ದು ರೈಲ್ವೇ ಗಾಡಿಯು ಓಡಾಡಿದಾಗ ಹುಳುಗಳು ನಾಶವಾಗಿ ಅವುಗಳ ಶರೀರದಲ್ಲಿರುವ ಒಂದು ವಿಧವಾದ ಎಣ್ಣೆಯು ಚಕ್ರಗಳಿಗೆ ಹತ್ತಿಕೊಂಡು ಗಾಡಿಯು ಮುಂದಕ್ಕೆ ಚಲಿಸಲಾರದೆ ನಿಂತುಹೋಗುವದಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಭಕ್ತಿಯ ತತ್ತ್ವ.

(ಕಲ್ಯಾಣಪತ್ರಿಕೆಯ ಅನುವಾದ)

'ಕಾವ್ಯತೀರ್ಥ' ಚಂದ್ರಶೇಖರಶರ್ಮಾ ಆರಾಧ್ಯಮಠ
(ವಿಶ್ವಾರಾಧ್ಯಗುರುಕುಲ ಶ್ರೀ ಕ್ಷೇತ್ರಕಾಶಿ).

ಪರಶಿವನ ಭಿನ್ನಭಿನ್ನಸ್ವರೂಪಗಳ ವಿಕಾಸವೇ ಜೀವಾತ್ಮವಾಗಿರುತ್ತದೆ. ಪ್ರತಿಯೊಂದು ಜೀವವು ಪರಶಿವನ ಅಭಿವ್ಯಕ್ತಿಯೇ ಸರಿ. ಅದರಿಂದ ಭಗವದ್ಭಕ್ತಿಯು ಜೀವದ ಸ್ವಾಭಾವಿಕ ಧರ್ಮವೆಂದು ಗೊತ್ತಾಗುವುದು. ಆತ್ಮವು ಮಾಯಾವೃತವಾದುದರಿಂದ ತನ್ನ ಸ್ವಾಭಾವಿಕ ಧರ್ಮವನ್ನೂ ಸ್ವರೂಪವನ್ನೂ ಮರೆತು ಭ್ರಾಂತಿಗೊಂಡು ಅಲೆದಾಡುತ್ತದೆ. ಆದರೆ ಕರುಣಾಸಿಂಧುವೂ, ಪ್ರೇಮದ ಅಕ್ಷಯ ಭಾಂಡಾರನೂ ಆದ ಪರಶಿವನ ಪ್ರೇರಣೆಯಿಂದ ಆ ಜೀವಗಳು ಮರೆತಿರತಕ್ಕ ತಮ್ಮ ಸಂಪತ್ತನ್ನು ಒಂದೊಂದು ಸಮಯದಲ್ಲಿ ಹುಡುಕುವದಕ್ಕೆ ತೊಡಗುತ್ತವೆ. ಹಾಗೆಯೇ ಬರಬರುತ್ತ ಪರಮಾತ್ಮನ ಭಕ್ತಿವಶಗಳಾಗುತ್ತವೆ. ಬದ್ಧಜೀವಿಗಳ ಸ್ವಭಾವದಲ್ಲಿ ಯಾವ ಸಾರ್ವಭೌಮನು ಇರುವದಿಲ್ಲವೋ ಅದರ ವಿಚಾರದಿಂದಲೇ ಭಗವದ್ಭಕ್ತಿಯ ಸ್ವರೂಪವನ್ನು ತಿಳಿಯಲು ಸರಸವೆಂಬುದರಲ್ಲಿ ಸಂದೇಹವಿಲ್ಲ.

ಯಾವದರಿಂದ ಶಬ್ದ, ಸ್ಪರ್ಶಾದಿ ವಿಷಯಪ್ರಪಂಚದ ಜ್ಞಾನವಾಗುತ್ತದೆಯೋ ಅದಕ್ಕೆ ಇಂದ್ರಿಯವೆನ್ನುತ್ತಾರೆ. ಇಂದ್ರಿಯಗಳಲ್ಲಿ ಬಾಹ್ಯೇಂದ್ರಿಯವೆಂತಲೂ, ಅಭ್ಯಂತರೇಂದ್ರಿಯವೆಂತಲೂ ಎರಡು ಪ್ರಕಾರವಾಗಿವೆ. ಬಾಹ್ಯೇಂದ್ರಿಯದಲ್ಲಿಯೂ ಜ್ಞಾನೇಂದ್ರಿಯವೆಂತಲೂ, ಕರ್ಮೇಂದ್ರಿಯವೆಂತಲೂ ಎರಡು ಬಗೆಯಾಗಿರುತ್ತವೆ. ಆ ಇಂದ್ರಿಯಗಳಿಗೆ ಪ್ರತ್ಯೇಕವಾಗಿ ಅಧಿದೇವತೆಗಳುಂಟು. ಅವುಗಳ ಕೃಪೆಯಿಂದ ಇಂದ್ರಿಯಗಳು ಸಮರ್ಥವಾಗಿ ತಮ್ಮ ತಮ್ಮ ವಿಷಯಕ್ಕೆ ಯೋಗ್ಯವಾದ ಕೆಲಸವನ್ನು ಮಾಡುವುದರಲ್ಲಿ ಮುಂದುವರಿಯುತ್ತವೆ. ಈ ಎಲ್ಲಾ ಇಂದ್ರಿಯಗಳಲ್ಲಿ ಹಾಗೂ ತಮ್ಮ ತಮ್ಮ ಅಧಿದೇವತೆಗಳಲ್ಲಿ ಒಂದು ವಿಷಯದಿಂದ ಮತ್ತೊಂದು ವಿಷಯದಲ್ಲಿ ಕೂಡಿಸುವ ಒಂದು ಸ್ವಾಭಾವಿಕವಾದ ಶಕ್ತಿಯೂ ಇರುತ್ತದೆ. ಈ ಶಕ್ತಿಯು ಯಾರಿಂದಲೂ ಹುಟ್ಟಿಸಲ್ಪಟ್ಟಿಲ್ಲ. ಸೃಷ್ಟಿಯ ಆರಂಭದಲ್ಲಿಯೇ ಶಿವನು ತನ್ನ ಸ್ವಾಭಾವಿಕವಾದ ಶಕ್ತಿಯಿಂದ ಈ ಸಮಸ್ತ ಸಂಸಾರವನ್ನು ಹುಟ್ಟಿಸಿದ್ದಾನೆ. ಕೇವಲ ಇಂದ್ರಿಯಗಳಷ್ಟೇ ಅಲ್ಲ, ಪರಮಾಣುವಿನಿಂದ ಮಹತ್ತ್ವದವರೆಗೂ ಎಲ್ಲವೂ ಈ ಶಕ್ತಿಯ ಪ್ರೇರಣೆಯಿಂದಲೇ ಪರವಶವಾಗಿ ಒಂದು ಮತ್ತೊಂದರೊಡನೆ ಕೂಡಲು ಹವಣಿಸುತ್ತವೆ. ವಿಶಾಲಕಾಯಗಳಾದ ಪರ್ವತಗಳೂ ಕೂಡ ಗಾಳಿಯ ಸಂಬಂಧಗಳಾದ ಅಣುಪರಮಾಣ್ವಾದಿಗಳಲ್ಲಿ ಕೂಡುವದಕ್ಕೋಸ್ಕರ ಕ್ಷುದ್ರಕಣಗಳಾಗಿ ಮೆಲ್ಲಮೆಲ್ಲನೆ ಅತ್ಯಂತ ಕ್ಷುದ್ರಕಣಗಳೊಡನೆ ಕೂಡಿಹೋಗುತ್ತವೆ. ಮತ್ತು ಸೂಕ್ಷ್ಮಕಣಗಳ ಕ್ಷುದ್ರಾಣುಪರಮಾಣುಗಳು ಒಂದು ಮತ್ತೊಂದರೊಡನೆ ಕೂಡಿಕೊಂಡು ವಿಶಾಲಗಳಾದ ಪರ್ವತಮಾಲೆಯ ರೂಪವನ್ನು ಧಾರಣಮಾಡುತ್ತವೆ. ಮತ್ತು ವೃಕ್ಷದ ರೂಪದಲ್ಲಿ ವೃಕ್ಷವು ಮಣ್ಣಿನರೂಪದಲ್ಲಿ ಪರಿಣಾಮವನ್ನು ಹೊಂದಿ ಪರಸ್ಪರ ಕೂಡುವದರ ಪರಿಚಯವನ್ನು ಮಾಡಿಕೊಡುತ್ತಾ ಇವೆ. ಚರಾಚರಜಗತ್ತಿನ ಸಮಸ್ತ ಪದಾರ್ಥಗಳು ಈ ಪ್ರಕಾರವಾಗಿ ಯಾವಾಗಲೂ ಬೇರೆಬೇರೆ ರೂಪದಿಂದ ಪರಿಣಾಮವನ್ನು ಹೊಂದುತ್ತಾ ಇವೆ. ಇದಕ್ಕೆಲ್ಲ ಮೇಲೆಹೇಳಿದ ಪರಾನುರಕ್ತಿಶಕ್ತಿಯ ಪರಿಣಾಮವೇ ಕಾರಣವಲ್ಲದೆ ಬೇರೆ ಏನೂ ಇರುವದಿಲ್ಲ.

ಜಗತ್ಪತನಾದ ಈಶ್ವರನು ಸೃಷ್ಟಿಸಿದ ಪದಾರ್ಥಗಳಲ್ಲಿ ಒಂದು ಅಭಾವವನ್ನು ಮಾಡಿದ್ದಾನೆ. ಆ ಅಭಾವದ ಪೂರ್ತಿಗೋಸ್ಕರವಾಗಿಯೇ ಸ್ಥಾವರ ಜಂಗಮಗಳಾದ ಸಮಸ್ತ ಪದಾರ್ಥಗಳು ಪರಸ್ಪರವಾಗಿ ಪ್ರೇಮಪೂರ್ವಕ ಆಲಿಂಗನಮಾಡುತ್ತಾ ಇವೆ. ಅಲ್ಲಿ ತಮ್ಮ ಆಶೆಯು ಪೂರ್ಣವಾಗದೇ ಹೋದಕೂಡಲೇ ಅವು ಆಲಿಂಗಿಸಲ್ಪಟ್ಟ ಆ ವಸ್ತುವನ್ನು ಬಿಟ್ಟು ಬೇರೊಂದನ್ನು ಕೂಡಲಿಚ್ಛಿಸುತ್ತವೆ. ಎಲ್ಲಾ ಪ್ರಾಕೃತಿಕ ವಸ್ತುಗಳು ಈ ಅದ್ವಿತೀಯವಾದ ಅಭಾವದೊಡನೆಯೇ ಸೃಷ್ಟಿಸಲ್ಪಟ್ಟಿವೆ. ಸೃಷ್ಟಿಯ ಎಲ್ಲಾ ಪದಾರ್ಥಗಳಲ್ಲಿಯೂ ಅವಶ್ಯವಾಗಿ ಅಭಾವವಿರುತ್ತದೆ. ಈ ಕಾರಣದಿಂದ ಯಾರಿಗೂ ಜಗತ್ತಿನ ಅಭಾವವನ್ನು ಯಾವ ಪದಾರ್ಥದಿಂದಲೂ ದೂರಮಾಡಲು ಶಕ್ಯವಿಲ್ಲ. ತನ್ನ ಅಭಾವವನ್ನು ಪೂರ್ಣಮಾಡಿಕೊಳ್ಳುವದಕ್ಕೋಸ್ಕರ ಬೇರೊಂದರ ಹತ್ತರ ಹೋಗುವದರಿಂದ ಯಾವ ಪರಿಮಾಣದಲ್ಲಿ ತನ್ನ ಅಭಾವವು ಪೂರ್ಣವಾಗುತ್ತದೆಯೋ ಅದಕ್ಕಿಂತಲೂ ಹೆಚ್ಚಿನ ಪರಿಮಾಣದಲ್ಲಿ ಬೇರೊಂದರ ಅಭಾವವನ್ನು ಪೂರ್ಣಮಾಡುವದರಲ್ಲಿ ತನ್ನನ್ನು ಅಂತಸ್ಸಾರಶೂನ್ಯನನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಪ್ರೇಮ ಅಥವಾ ಪ್ರೇಮೋತ್ಪನ್ನವಾದ ಸುಖದ ಪೂರ್ತಿಗೋಸ್ಕರ ಭಾರ್ಯಾ ಪುತ್ರಾದಿಗಳ ಸಂಗಮದಲ್ಲಿ ಎಷ್ಟು ಆನಂದಲಾಭವಾಗುತ್ತದೆಯೋ ಅದಕ್ಕಿಂತಲೂ ಸಾವಿರಾರು ಪಟ್ಟು ಹೆಚ್ಚಾಗಿ ಅವರ ಪಾಲನ ಪೋಷಣಮಾಡುವದರಲ್ಲಿ ತನ್ನನ್ನು ಸಾರಹೀನನನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಆ ಕಾರಣದಿಂದಲೇ ಅಭಾವಮಯಗಳಾದ ಪ್ರಾಕೃತಿಕಪದಾರ್ಥಗಳ ದ್ವಾರಾ ಯಾರ ಸ್ವಾಭಾವಿಕಾಭಾವವೂ ದೂರವಾಗುವ ಸಂಭವವಿಲ್ಲ. ಯಾರು ಅಭಾವದೊಡನೆ ಈ ಜಗತ್ತಿನ ಸೃಷ್ಟಿಯನ್ನು ಮಾಡಿದ್ದಾರೆಯೋ ಅವರ ಹತ್ತರವೇ ಇದರ ಪ್ರತೀಕಾರದ ಔಷಧವೂ ಕೂಡ ಅವಶ್ಯವಾಗಿ ಇರುತ್ತದೆ. ಅಭಾವದ ಪೂರ್ತಿಗೋಸ್ಕರ ಹುಟ್ಟಿರುವ ಇಂದ್ರಿಯಗಳ ಸ್ವಾಭಾವಿಕವಾದ ವೃತ್ತಿಯನ್ನೇ ಆಸಕ್ತಿ ಅಥವಾ ಭಕ್ತಿಯೆಂದು ಕರೆಯುತ್ತಾರೆ. ಅಭಾವಗಳಿಂದ ಕೂಡಿದ ಪದಾರ್ಥಗಳಕಡೆಗೆ ಇಂದ್ರಿಯಗಳ ಯಾವ ಗತಿಯು ಆಗುತ್ತದೆಯೋ ಅದಕ್ಕೆ ಆಸಕ್ತಿಯೆಂದೂ ಮತ್ತು ಎಲ್ಲಾ ಪ್ರಕಾರದಿಂದಲೂ ಅಭಾವಶೂನ್ಯನೂ, ಪೂರ್ಣಕಾಮನೂ, ಅಖಂಡಾನಂದಸ್ವರೂಪನೂ ಆದ ಪರಮಾತ್ಮನಕಡೆಗೆ ಯಾವ ಗತಿಯು ಆಗುತ್ತದೆಯೋ ಅದಕ್ಕೆ ಭಕ್ತಿಯೆಂದೆನ್ನುತ್ತಾರೆ.

ಇಂದ್ರಿಯಗಳು ಮಾಯಾಮಯವಾದ ನಶ್ವರಜಗತ್ತಿನಕಡೆಗೆ ಓಡುತ್ತ ಚಿರಸ್ಥಾಯಿಯಾದ ತೃಪ್ತಿಯ ಲಾಭವನ್ನು ಹೊಂದಲಿಕ್ಕೆ ಎಂದೂ ಸಮರ್ಥಗಳಾಗುವದಿಲ್ಲ. ಅವು ಸಂತೋಷಿಸುವದಕ್ಕೋಸ್ಕರ ಸುಖಜನಕಗಳಾದ ವಸ್ತುಗಳಲ್ಲಿ ಆಸಕ್ತಿಪೂರ್ವಗಳೇನೋ ಆಗುತ್ತವೆ. ಆದರೆ ಅದರಿಂದ ತೃಪ್ತಿಯಾಗದೆ ಹೋದರೆ ಕೂಡಲೇ ಆ ವಸ್ತುಗಳನ್ನು ಬಿಟ್ಟು ಎರಡನೇ ಸುಖಜನಕವಸ್ತುಗಳ ಪ್ರಾಪ್ತಿಗೋಸ್ಕರ ಇಚ್ಛೆಯನ್ನು ಮಾಡುತ್ತವೆ. ಜೀವವು ಸಂಪೂರ್ಣವಾಗಿ ಸುಖವನ್ನು ಇಚ್ಛಿಸುತ್ತದೆ. ಯಾಕಂದರೆ ಪೂರ್ಣಾನಂದಸ್ವರೂಪವೇ ಅದರ ಸ್ವಭಾವವಾಗಿದೆ. ಅಭಾವಮಯವಾದ ಈ ಜಗತ್ತಿನ ಯಾವ ವಸ್ತುಗಳಲ್ಲಿಯೂ ಇದಕ್ಕೆ ಸಂಪೂರ್ಣಸುಖದ ಪ್ರಾಪ್ತಿಯಾಗುವದಿಲ್ಲ. ಈ ಕಾರಣದಿಂದಲೇ ಅದು ತೃಪ್ತಿಯನ್ನು ಹೊಂದದೇ ಇರುವದರಿಂದ ಪೂರ್ಣಸುಖದ ಪ್ರಾಪ್ತಿಗೋಸ್ಕರ ಹೇಗೆ ನೀರಡಿಸಿದ ಜಿಗರೆಗಳು ಬಿಸಿಲುಗುದುರೆಗಳ ಕಡೆಗೆ ಓಡುತ್ತವೆಯೋ ಹಾಗೆಯೇ ಸಂಸಾರರೂಪವಾದ ಮರುಸ್ಥಲದಲ್ಲಿ ಮಾರ್ಗದಪ್ಪಿ ತಿರುಗಹತ್ತುತ್ತದೆ. ಈ ಪರಿವರ್ತನಶೀಲವಾದ ಜಗತ್ತಿನಲ್ಲಿ ನಾನಾ ಪ್ರಕಾರದ ಉಪಹಾಸಗಳನ್ನು ಹೊಂದುತ್ತ ಸತ್ಪುರುಷರ ಹಾಗೂ ಶಾಸ್ತ್ರದ ಕೃಪೆಯಿಂದ ಅಭಾವದಿಂದ ಕೂಡಿದ ಮಾಯಾಮಯವಾದ ಜಗತ್ತಿನಲ್ಲಿ ಇಂದ್ರಿಯಗಳ ತೃಪ್ತಿಯು ಎಂದೂ ಆಗುವದಿಲ್ಲವೆಂದು ಯಾವಾಗ ಅದು ತಿಳಿಯುವದೋ ಆಗ್ಗೆ ಅದು ಎಲ್ಲಾ ವಿಷಯಗಳಿಂದ ನಿವೃತ್ತವಾಗಿ ಮಾಧುರ್ಯದಸ್ವರೂಪನೂ ಜಗತ್ಪತನೂ ಆದ ಪರಮಾತ್ಮನಕಡೆಗೆ ಆಕರ್ಷಿತವಾಗಿ ಸ್ಥಿರತ್ವವನ್ನು ಹೊಂದುತ್ತದೆ. ಸಚ್ಚಿದಾನಂದ ಮೂರ್ತಿಯಾದ ಪರಮಾತ್ಮನಲ್ಲಿ ಇಂದ್ರಿಯಗಳಿಗೆ ತೃಪ್ತಿಯನ್ನು ಮಾಡತಕ್ಕ ಯಾವ ವಸ್ತುವಿನ ಅಭಾವವೂ ಇರುವದಿಲ್ಲ. ಜಗತ್ತಿನಲ್ಲಿ ಎಲ್ಲಿ ಯಾವ ಯಾವ ಸ್ಥಳದಲ್ಲಿ ಯಾವು ಯಾವು ಚಿತ್ತಾಕರ್ಷಕವಾದ ಭಾವವಿರುತ್ತವೆಯೋ ಅವೆಲ್ಲವೂ ಎಲ್ಲಾ ಕಾರಣಗಳಿಗೂ ಕಾರಣೀಭೂತನಾದ ಪರಮಾತ್ಮನ ಅನಂತರೂಪರಸಾದಿಗಳ ಆಭಾಸಮಾತ್ರವಾಗಿವೆ. ಪರಮಾತ್ಮನ ಕೃಪೆಯಿಂದ ಆ ಕಡೆಗೆ ಒಂದುಸಾರೆ ಇಂದ್ರಿಯಗಳ ಗತಿಯು ಆಗುವುದರಿಂದ ಅಲ್ಲಿ ಅನಂತಸುಖದ ಸ್ವಾದವನ್ನು ಒಂದುಸಾರೆ ರುಚಿನೋಡಿದನಂತರ ಮತ್ತೆ ಅಲ್ಲಿಂದ ತಿರುಗಿಬರುವ ಸಂಭವವಿಲ್ಲ. ಅನಂತರ ಪವಿತ್ರವಾದ ಗಂಗಾನದಿಯು ಹೇಗೆ ಅನಂತಪ್ರವಾಹಗಳಿಂದ ಸಮುದ್ರವನ್ನು ಕೂಡುತ್ತದೆಯೋ ಅದರಂತೆ ಇವು ಎಲ್ಲಾ ವಿಘ್ನಗಳನ್ನು ದಾಟಿ ಎಲ್ಲ ಪ್ರವೃತ್ತಿಗಳು ನೂರಾರು ಮಾರ್ಗಗಳಿಂದ ಹೋಗಿ ಪರಮಾತ್ಮನ ಮಾಧುರ್ಯಸಾಗರದಲ್ಲಿ ಲೀನವಾಗುತ್ತವೆ. ಸಚ್ಚಿದಾನಂದ ರಸಮಯ ಪರಮಾತ್ಮನನ್ನು ಕುರಿತು ಇಂದ್ರಿಯಗಳ ಇಂಥ ಐಕಾಂತಿಕ ಆಕಾಂಕ್ಷೆಗೇನೇ ಭಕ್ತಿಯೆಂದನ್ನುತ್ತಾರೆ.

ಪ್ರತಿಯೊಂದು ಜೀವದ ಜೀವನಪ್ರವಾಹವು ಪ್ರತಿಕ್ಷಣದಲ್ಲಿ ಸಚ್ಚಿದಾನಂದಸಾಗರದ ಕಡೆಗೇನೇ ಹರಿಯುತ್ತಾ ಇದೆ. ಯಾವ ಜೀವವು ಒಂದು ಕ್ಷಣವೂ ಕೂಡ ತನ್ನನ್ನು ಕೃತಕೃತ್ಯನನ್ನಾಗಿ ತಿಳಿದುಕೊಂಡು ಸ್ಥಿರವಾಗುವದಿಲ್ಲ. ಜೀವನಪ್ರವಾಹವು ಎಲ್ಲಿಯವರೆಗೆ ಪರಮಾತ್ಮನ ಪ್ರೇಮಸಾಗರದಲ್ಲಿ ಲೀನವಾಗುವದಿಲ್ಲವೋ ಅಲ್ಲಿಯವರೆಗೆ ಯಾವ ಜೀವವೂ ನಿಶ್ಚಿಂತವಾಗಲು ಶಕ್ಯವಿಲ್ಲ. ಕೆಲಕೆಲವು ವ್ಯಕ್ತಿಗಳು ಧನ, ಐಶ್ವರ್ಯದ ಗರ್ವದಿಂದ ಅಥವಾ ಆಡಂಬರದ ಆಚರಣೆಯಿಂದ ಸಂಪಾದಿಸಿದ ಧರ್ಮದ ಅಹಂಕಾರರೂಪಪ್ರವಾಹದ ಸುಳಿಯಲ್ಲಿ ಬಿದ್ದು ಎರಡು ದಿವಸಗಳ ಸಲುವಾಗಿ ತಮ್ಮನ್ನು ಕೃತಕೃತ್ಯರನ್ನಾಗಿ ತಿಳಕೊಂಡು ಅಭಿಮಾನವನ್ನು ಹೊಂದುತ್ತಾರೆ. ಆದರೆ ಇದರಿಂದ ಎಷ್ಟು ದಿವಸ ಕೆಲಸ ನಡೆಯುವದು? ಸ್ವಲ್ಪ ದಿವಸಗಳಲ್ಲಿಯೇ ಅವರಿಗೆ ತಮ್ಮ ತಪ್ಪು ತಿಳಿದುಬರುವದು. ಸ್ವಭಾವವು ಅವರಿಗೆ ತನ್ನ ಅಭಾವವನ್ನು ತೋರಿಸಿ ತಾಂಡವನೃತ್ಯವನ್ನು ಮಾಡತೊಡಗುವದು. ಅನಂತರ ಆ ಅಹಂಕಾರಪ್ರವಾಹದ ಸುಳಿಯಲ್ಲಿ ಬಿದ್ದವರು ವ್ಯಾಕುಲರಾಗಿ ಮತ್ತೆ ಪುನಃ ತೃಪ್ತಿಗಾಗಿ ಓಡಹತ್ತುತ್ತಾರೆ.

ಜೀವವು ಪಾಪದಲ್ಲಿ ಎಷ್ಟು ದಿವಸಗಳ ವರೆಗೆ ಬಿದ್ದೀತು? ತೃಪ್ತಿಯು ಅವರನ್ನು ಮೆಲ್ಲಮೆಲ್ಲನೆ ಹೇಳಲಸಾಧ್ಯವಾದ ಪಾಪಕಾರ್ಯದಲ್ಲಿ ಪ್ರವೃತ್ತರನ್ನಾಗಿ ಮಾಡಿಸುವದು. ಮತ್ತು ಅಂತ್ಯದಲ್ಲಿ ಸ್ವಭಾವವೇ ಅವರಿಗೆ ಅಭಾವದ ಜ್ಞಾನವನ್ನು ಮಾಡಿಕೊಟ್ಟು ಒಂದು ದಿವಸ ತಾಪವನ್ನುಂಟುಮಾಡತಕ್ಕ ನರಕಾಗ್ನಿಯಲ್ಲಿ ನೂಕಿಬಿಡುವದು. ಆ ಅಗ್ನಿಯಿಂದ ಸುಡಲ್ಪಟ್ಟ ಅವನು ಚಿಗರೆಯಂತೆ ವ್ಯಾಕುಲನಾಗಿ ಪೂರ್ಣಾನಂದಸಮುದ್ರದ ಕಡೆಗೆ ಓಡುವನು. ಧನವಂತರಲ್ಲಿ ಬಾಹ್ಯವಸ್ತುಗಳ ಅಭಾವವಿಲ್ಲದಿದ್ದರೂ ಈ ಕಾರಣದಿಂದ ಅವರು ಸಂಸಾರವಿಷಯಗಳ ವಿಹಾರದಲ್ಲಿ ಮಗ್ನರಾಗಿ ಬಹಳ ದಿವಸಗಳವರೆಗೆ ತಪ್ಪು ತಿಳುವಳಿಕೆಯಲ್ಲಿಯೇ ಇರುತ್ತಾರೆ. ಅವರು ಜೀವನಪ್ರವಾಹದ ಚಕ್ರವನ್ನು ದಾಟಿ ಮುಂದೆ ಹೋಗಲಾರರು. ಪರಂತು ರೋಗ, ಶೋಕ ಅಥವಾ ಬೇರೆ ಯಾವ ಕಾರಣದಿಂದಲಾದರೂ ಒಂದುಸಾರೆ ಮೋಹರೂಪವಾದ ಆವರಣವು ದೂರವಾಗುತ್ತಲೇ ಅತ್ಯಂತ ವೇಗದಿಂದ ಅವರು ನಿತ್ಯಾನಂದಮಯವಾದ ಸಮುದ್ರದಕಡೆಗೆ ಓಡುತ್ತಾರೆ.

ಅಹಾ! ಪ್ರೇಮಮಯನಾದ ಪರಮಾತ್ಮನಲ್ಲಿ ಈ ತರಹದ ಕಾರುಣಿಕ ವ್ಯವಸ್ಥೆ ಇರುವದೋ? ಮಕ್ಕಳು ಪ್ರೇಮಮಯಳಾದ ತಾಯಿಗೆ ಕಷ್ಟಗಳನ್ನುಂಟುಮಾಡಿದಾಗ್ಯೂ ತಾಯಿಯು ಹೇಗೆ ಅವರನ್ನು ಮಂಗಲಕರವಾದ ಮಾರ್ಗದಲ್ಲಿ ನಡೆಯಲಿಕ್ಕೆ ಪ್ರೋತ್ಸಾಹಗೊಳಿಸುವಳೋ ಅದರಂತೆಯೇ ಪರಮಮಂಗಲಮಯನಾದ ಪರಮಾತ್ಮನು ತನ್ನ ನಿಜವಾದ ಸುಖವನ್ನು ಮರೆತು ಅಪಾರವಾದ ವಸ್ತುಗಳಲ್ಲಿ ಲೀನವಾದವನನ್ನಾಗಿ ನೋಡಿದಾಗ್ಯೂ ಮೋಹದಿಂದ ಮುಗ್ಧವಾದ ಜೀವನವನ್ನು ಮಂಗಲದಕಡೆಗೆ ಆಕರ್ಷಣಗೊಳಿಸುತ್ತಾ ಇದ್ದಾನೆ. ಬಹುಶಃ ಮಾಯೆಯಿಂದ ಬದ್ಧಜೀವವು ಪರಮಾತ್ಮನ ಸದಾ ಮಂಗಲಮಯವಾದ ವ್ಯವಸ್ಥೆಯ ರಹಸ್ಯವನ್ನು ತಿಳಿಯದೇ ಇರುವಕಾರಣ ಅವನಿಗೆ ನಿಷ್ಠುರ ನಿರ್ದಯನಾಗಿ ಕುಶಲ್ದಗಳಿಂದ ಕರೆಯುತ್ತದೆ. ಪರಮಾತ್ಮನು ಜೀವದ ಉನ್ನತಿಗೋಸ್ಕರ ಹಾಗೂ ಮಂಗಲ ಮತ್ತು ಆನಂದ ಮಾರ್ಗದಿಂದ ನಡೆಯುವದಕ್ಕೋಸ್ಕರ ತನ್ನ ಶಕ್ತಿಯಿಂದ ಆಕರ್ಷಣಮಾಡುತ್ತಾನೆ. ಸಂಪೂರ್ಣ ಆನಂದದ ಕಡೆಗೆ ನಡೆಯುವದೇ ಭಕ್ತಿಯಾಗಿದೆ.

ಸಾಂಸಾರಿಕ ಜೀವಗಳಿಗೆ ಹೇಗೆ ತನ್ನ ಹೆಂಡರು ಮಕ್ಕಳಲ್ಲಿ ಪ್ರೀತಿಯು ಉತ್ಪನ್ನವಾಗುತ್ತದೆಯೋ ಅದರಂತೆ ಜನ್ಮಜನ್ಮಾಂತರಗಳ ಸಂಸ್ಕಾರ ವಶದಿಂದ ಸತ್ಪುರುಷರ ಸಹವಾಸ ಮಾಡುತ್ತಲೇ ಕೆಲಕೆಲವು ಪುಣ್ಯಜೀವಿಗಳ ಹೃದಯದಲ್ಲಿ ಸ್ವಭಾವದಿಂದಲೇ ಭಕ್ತಿಯ ಸಂಚಾರವಾಗುತ್ತದೆ. ಒಬ್ಬಾನೊಬ್ಬ ಪುರುಷನ ಧನವು ಕಳವಾದ ಮೇಲೆ ಅವನು ಅದರ ಚಿಂತೆಯಲ್ಲಿಯೇ ಮಗ್ನನಾಗುವಂತೆ ಆ ಮೇಲೆ ಆ ಭಕ್ತನು ಪರಮಾತ್ಮನ ಚಿಂತೆಯಲ್ಲಿಯೇ ಹಗಲೂ ರಾತ್ರಿಯೂ ಲೀನನಾಗುತ್ತಾನೆ. ಒಬ್ಬ ವೃದ್ಧಮಾತೆಗೆ ಗುಣವತಿಯೂ ಸುಶೀಲಳೂ ಆದ ಒಬ್ಬಳೇ ಮಗಳಿದ್ದು ಆಕೆಯು ಮರಣಹೊಂದಿದರೆ ಆ ವೃದ್ಧಮಾತೆಯು ಹೇಗೆ ದುಃಖಪಡುವಳೋ ಅದರಂತೆಯೇ ಭಕ್ತನಹೃದಯದಲ್ಲೂ ಭಕ್ತಿಯು ಹುಟ್ಟುತ್ತಲೇ ಸ್ವಾಮಿಯ ವಿಯೋಗವಾದರೆ ಆ ಭಕ್ತನು ಸಹಿಸಲಾರದಷ್ಟು ದುಃಖಪಡಬೇಕಾಗುತ್ತದೆ. ಸಾರಾಂಶವೇನಂದರೆ ಪರಿಪೂರ್ಣಸ್ನೇಹಮಯಳಾದ ತಾಯಿಯು ತನ್ನ ಮಕ್ಕಳ ಚಿಂತೆಯಲ್ಲಿಯೂ ಲೋಭಿಯು ತನ್ನ ದುಡ್ಡಿನಲ್ಲಿಯೂ ಪತಿವ್ರತೆಯಾದ ಸ್ತ್ರೀಯಳು ತನ್ನ ಪತಿಯ ಚಿಂತೆಯಲ್ಲಿಯೂ ಹೇಗೆ ಮಗ್ನರಾಗಿರುತ್ತಾರೆಯೋ ಹಾಗೆ ಎಲ್ಲಾ ಪ್ರಕಾರದ ಚಿಂತೆಗಳನ್ನು ಬಿಟ್ಟು ಸಚ್ಚಿದಾನಂದ ಪರಮಾತ್ಮನ ಪ್ರಾಪ್ತಿರೂಪವಾದ ಚಿಂತೆಯೊಂದರಲ್ಲಿಯೇ ಮಗ್ನವಾಗುವದರ ಹೆಸರೇ ಭಕ್ತಿಯಾಗಿದೆ.

ಇಹಪರ ಸುಖಭೋಗಗಳ ಆಶೆಯನ್ನು ಪರಿತ್ಯಜಿಸಿ ಆನಂದಮಯನಾದ ಪರಮಾತ್ಮನ ಚರಣಕಮಲಗಳಲ್ಲಿ ಮನಸ್ಸನ್ನು ಲಯಗೊಳಿಸಿ ಯಾವಾಗಲೂ ತದೇಕಧ್ಯಾನದಲ್ಲಿರುವದೇ ಭಕ್ತಿಯೆಂದು ಹೇಳಲ್ಪಡುತ್ತದೆ. ಭಕ್ತಿಯು ಮುಖ್ಯವಾಗಿ ನಿರ್ಗುಣವಿರುತ್ತದೆ. ಆದರೆ ಯಾವಾಗ ಪ್ರಕೃತಿಯ ಮೂರುಗುಣಗಳ ಸಹಾಯವನ್ನು ಹೊಂದಿ ಅದು ಪ್ರಕಟವಾಗುತ್ತದೆಯೋ ಆಗಲೇ ಅದನ್ನು ಸಗುಣವೆಂದೆನ್ನುತ್ತಾರೆ.

ಭಕ್ತಿಯೋಗೋ ಬಹುವಿಧೋ ಮಾರ್ಗೈರ್ಭಾಮಿನಿ ಭಾವ್ಯತೇ |
ಸ್ವಭಾವ ಗುಣಮಾರ್ಗೇಣ ಪುಂಸಾಂ ಭಾವೋ ವಿಭಿದ್ಯತೇ ||

ಮನುಷ್ಯನ ಗುಣಮಯಸ್ವಭಾವದ ಭೇದದ ಕಾರಣಸಾಧ್ಯ ಭಕ್ತಿಯ ಭೇದವೂ ಆಗುತ್ತದೆ. ಸತ್ವಾದಿಗುಣಗಳ ಕ್ರಮಾನುಸಾರವಾಗಿ ಅವರವರ ಸ್ವಭಾವದಂತೆ ಅವರ ಭಕ್ತಿಯೂ ಕೂಡ ವಿವಿಧವಾಗುತ್ತದೆ. ಈ ಗುಣಮಯ ಭಕ್ತಿಯು ಪ್ರಧಾನವಾಗಿ ತಾಮಸ ರಾಜಸ, ಸಾತ್ವಿಕವೆಂದು ಮೂರು ಪ್ರಕಾರವಾಗಿದೆ. ಈ ತ್ರಿಗುಣಾತ್ಮಕವಾದ ಭಕ್ತಿಯನ್ನೇ ಪ್ರತ್ಯೇಕವಾಗಿ ಮೂರು ಮೂರು ಪ್ರಕಾರದ ಅಂಶಗಳಲ್ಲಿ ಒಂಭತ್ತು ಪ್ರಕಾರವಾಗಿ ಉಲ್ಲೇಖಿಸಿದ್ದಾರೆ.

ಅಭಿಸಂಧಾಯ ಯೋ ಹಿಂಸಾಂ, ದಂಭಂ, ಮಾತ್ಸರ್ಯಮೇವ ವಾ |
ಸಂರಂಭೀ ಭಿನ್ನದೃಗ್ಭಾವಂ ಮಯಿ ಕುರ್ಯಾತ್ ಸ ತಾಮಸಃ ||

ತಾಮಸಸ್ವಭಾವದ ವ್ಯಕ್ತಿಗಳು ಹಿಂಸಾ ದಂಭಾಚಾರ ಹಾಗೂ ಮಾತ್ಸರ್ಯದ ವಶರಾಗಿ ಪರರ ಅಹಿತವನ್ನು ಸಾಧಿಸುವದಕ್ಕೋಸ್ಕರವೇ ಪರಮಾತ್ಮನಲ್ಲಿ ಭಕ್ತಿಯನ್ನು ತೋರಿಸುತ್ತಾರೆ. ಇಂಥ ವ್ಯಕ್ತಿಗಳ ಭಕ್ತಿಗೇನೇ ತಾಮಸಭಕ್ತಿಯೆಂದು ಅನ್ನುತ್ತಾರೆ.

ವಿಷಯಾನಭಿಸಂಧಾಯ ಯಶ ಐಶ್ವರ್ಯಮೇವ ವಾ |
ಅರ್ಚಾದಾವರ್ಚಯೇತ್ ಯೋ ಮಾಂ ಪೃಥಗ್ಭಾವಃ ಸ ರಾಜಸಃ ||

ರಜೋಗುಣಸ್ವಭಾವದ ವ್ಯಕ್ತಿಗಳು ಕೀರ್ತಿ ಅಥವಾ ಐಶ್ವರ್ಯಲಾಭದ ಇಚ್ಛೆಯಿಂದ ಪರಮಾತ್ಮನ ಅರ್ಚನೆಯನ್ನು ಮಾಡುತ್ತಾರೆಯೋ ಯಾವ ಜನರು ಭಕ್ತಿಯ ಅತಿರಿಕ್ತವಾದ ಇತರ ವಸ್ತುವಿನ ಇಚ್ಛೆಯನ್ನು ಮಾಡುತ್ತಾರೆಯೋ ಇಂಥ ಭಕ್ತಿಗೇನೇ ರಾಜಸಭಕ್ತಿಯೆಂದನ್ನುತ್ತಾರೆ.

ಕರ್ಮನಿರ್ಹಾರಮುದ್ದಿಶ್ಯ ಪರಸ್ಮಿನ್ ವಾ ತದರ್ಪಣಂ |
ಯಜೇದ್ಯಷ್ಟವ್ಯಮಿತಿ ವಾ ಪೃಥಗ್ಭಾವಃ ಸ ಸಾತ್ವಿಕಃ ||

ಸತ್ವಗುಣಸ್ವಭಾವವುಳ್ಳ ಸಜ್ಜನರು ತಮ್ಮ ತಮ್ಮ ಕರ್ಮದ ನಾಶದ ಇಚ್ಛೆಯಿಂದ ಎಲ್ಲಾ ಕರ್ಮಗಳನ್ನು ದೀನಬಂಧು ಪರಮಾತ್ಮನ ಚರಣಕಮಲಗಳಲ್ಲಿ ಅರ್ಪಣಮಾಡಿ, ಅಥವಾ ತಮ್ಮ ತಮ್ಮ ವರ್ಣಾಶ್ರಮಧರ್ಮದ ಅನುಸಾರವಾಗಿ ಪರಮಾತ್ಮನ ಪೂಜೆಯನ್ನು ತಮ್ಮ ಕರ್ತವ್ಯವನ್ನಾಗಿ ತಿಳಿದುಕೊಂಡು ಪರಮಾತ್ಮನ ಶ್ರವಣಕೀರ್ತನಾದಿಭಕ್ತಿಯ ಅನುಷ್ಠಾನವನ್ನು ಮಾಡುತ್ತಾರೆ. ಇಂಥ ಜನರೂ ಕೂಡ ಭಕ್ತಿಯ ಅತಿರಿಕ್ತ ಮೋಕ್ಷದ ಇಚ್ಛೆಯನ್ನು ಮಾಡುತ್ತಾರೆ. ಈ ಪ್ರಕಾರದ ಭಕ್ತಿಗೇನೇ ಸಾತ್ವಿಕಭಕ್ತಿಯೆಂದೆನ್ನುತ್ತಾರೆ.

ತಮ್ಮ ತಮ್ಮ ಇಚ್ಛೆಯ ಪೂರ್ತಿಗೋಸ್ಕರ ಯಾರು ಸಕಾಮ ಭಕ್ತಿಯನ್ನು ಮಾಡುತ್ತಾರೆಯೋ ಅದೇ ಭಕ್ತಿಯೇ ಸಗುಣವಾಗುತ್ತದೆ. ಮತ್ತು ಮನಸ್ಸಿನಲ್ಲಿ ಯಾವ ತರಹದ ಇಚ್ಛೆಇಲ್ಲದೆ ಕಳೆದುಹೋದ ದ್ರವ್ಯದ ಪ್ರಾಪ್ತಿಗೆ ಹೇಗೆ ಉತ್ಕಟ ಇಚ್ಛೆಯು ಇರುತ್ತದೆಯೋ ಅದರಂತೆ ಅತ್ಯಂತ ಆಸಕ್ತಿಯಿಂದ ಪರಮಾತ್ಮನ ಪ್ರಾಪ್ತಿಗೋಸ್ಕರ ಏಕಾಂತವಾದ ಯಾವ ಇಚ್ಛೆ ಇರುತ್ತದೆಯೋ ಅದೇ ನಿರ್ಗುಣಭಕ್ತಿ ಇರುತ್ತದೆ.

ಮದ್ಗುಣಶ್ರುತಿಮಾತ್ರೇಣ ಮಯಿ ಸರ್ವಗುಹಾಶಯೇ |
ಮನೋಗತಿರವಿಚ್ಛಿನ್ನಾ ಯಥಾ ಗಂಗಾಂಭಸೋಽಂಬುಧೌ ||
ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯ ಹ್ಯುದಾಹೃತಂ |
ಅಹೈತುಕ್ಯವ್ಯವಹಿತಾ ಯಾ ಭಕ್ತಿಃ ಪುರುಷೋತ್ತಮೇ ||
ಸಾಲೋಕ್ಯಸಾರ್ಷ್ಟಿಸಾಮೀಪ್ಯ ಸಾರೂಪ್ಯೈಕತ್ವಮಪ್ಯುತ |
ದೀಯಮಾನಂ ನಗೃಹ್ಣಂತಿ ವಿನಾ ಮತ್ಸೇವನಂ ಜನಾಃ ||
ಸ ಏವ ಭಕ್ತಿಯೋಗಸ್ಯ ಆತ್ಯಂತಿಕ ಉದಾಹೃತಃ |

ಪವಿತ್ರವಾದ ಗಂಗಾನದಿಯ ಜಲಪ್ರವಾಹವು ಹೇಗೆ ಎಲ್ಲಾ ವಿಘ್ನಗಳನ್ನೆಲ್ಲಾ ಅತಿಕ್ರಮಣಮಾಡುತ್ತ ನೂರಾರು ಪ್ರವಾಹಗಳಿಂದ ಕೂಡುವದಕ್ಕೋಸ್ಕರ ಸ್ವಾಭಾವಿಕವಾಗಿಯೇ ಓಡುತ್ತಾ ಇದೆಯೋ ಅದರಂತೆಯೇ ಯಾವ ಚಿತ್ತವೃತ್ತಿಯು ಜ್ಞಾನ, ಕರ್ಮಾದಿ ಸಮಸ್ತ ವಿಷಯಗಳ ಅವರೋಧನವನ್ನೂ ಮತ್ತು ಸಮಸ್ತ ಕ್ರಿಯಾಕರ್ಮಾದಿಗಳ ಫಲದ ಇಚ್ಛೆಯನ್ನೂ ಪರಿತ್ಯಾಗಮಾಡಿ ಸ್ವಾಭಾವಿಕವಾಗಿಯೇ ಸರ್ವಭೂತಾಂತರ್ಯಾಮಿಯಾದ ಪರಮಾತ್ಮನ ಚರಣಕಮಲಗಳ ಕಡೆಗೆ ವ್ಯಾಕುಲವಾಗಿ ಯಾವಾಗಲೂ ಓಡುತ್ತಾ ಇರುತ್ತದೆ. ಇದಕ್ಕೇನೇ ನಿರ್ಗುಣಭಕ್ತಿಯೆಂದೆನ್ನುತ್ತಾರೆ. ಈ ಪ್ರಕಾರವಾದ ಭಕ್ತಿಯಲ್ಲಿ ಯಾವ ಪ್ರಕಾರದ ಕಪಟವೂ ಇಚ್ಛೆಯೂ ಪೂರ್ಣವಾಗುವದಿಲ್ಲ. ಇದು ಅತ್ಯಂತ ನಿರ್ಮಲ ಹಾಗೂ ಎಲ್ಲಾ ಪ್ರಕಾರದ ಭಕ್ತಿಗಳಲ್ಲಿ ಶ್ರೇಷ್ಠವದೆ. ಜನ್ಮಜನ್ಮಾಂತರಗಳಲ್ಲಿ ಭಕ್ತಿಯಸಂಸ್ಕಾರದಿಂದ ಕೂಡಿದ ಯಾವ ಯಾವ ಭಾಗ್ಯವಂತರ ಹೃದಯದಲ್ಲಿ ಪರಮಾತ್ಮನ ಗುಣಗಾನವನ್ನು ಕೇಳಿದಕೂಡಲೇ ಈ ಪ್ರಕಾರದ ಭಕ್ತಿಯು ಉದಯವಾದ ಶುದ್ಧಭಕ್ತರ ಹೃದಯದಲ್ಲಿ ಯಾವಪ್ರಕಾರದ ಇಚ್ಛೆ ಇರುವದಿಲ್ಲ. ಮತ್ತು ಒಂದು ವೇಳೆ ಪರಮಾತ್ಮನು ಸಾಮೀಪ್ಯ, ಸಾರೂಪ್ಯ, ಹಾಗೂ ಸಾಯುಜ್ಯಮುಕ್ತಿಯನ್ನು ದಯಪಾಲಿಸಿದಾಗ್ಯೂ ಆ ಭಕ್ತನು ಪರಮಾತ್ಮನ ಸೇವೆಯೊಂದನ್ನು ಬಿಟ್ಟು ಬೇರೆ ಏನನ್ನೂ ಇಚ್ಛಿಸುವದಿಲ್ಲ. ಇಂಥ ಭಕ್ತಿಗೇನೇ ಆತ್ಯಂತಿಕ ಭಕ್ತಿಯೆಂದೆನ್ನುತ್ತಾರೆ. ಇದಕ್ಕಿಂತಲೂ ಹೆಚ್ಚಿನ ಪುರುಷಾರ್ಥವು ಏನೂ ಇರುವದಿಲ್ಲ.

ಮನಸ್ಸು ಎಲ್ಲಾ ಇಂದ್ರಿಯಗಳಲ್ಲಿಯೂ ಮುಖ್ಯವಿದೆ. ಯಾವಾಗ ಮನಸ್ಸು ಯಾವದರಕಡೆಗೆ ಓಡುತ್ತದೆಯೋ ಇಂದ್ರಿಯಗಳೂ ಕೂಡ ತಮ್ಮ ತಮ್ಮ ವಿಷಯಗಳ ಗ್ರಹಣಮಾಡಿಕೊಳ್ಳುವದಕ್ಕೋಸ್ಕರ ಅತ್ತಕಡೆಗೇನೇ ಓಡುತ್ತವೆ. ಆ ಕಾರಣದಿಂದಲೇ ಅಂತಃಕರಣದ ಎಲ್ಲಾ ಪ್ರಕಾರದ ಕಪಟಗಳನ್ನು ಪರಮಾತ್ಮನ ಕಡೆಗೆ ಓಡುವಿಕೆಯಿಂದ ಎಲ್ಲಾ ಇಂದ್ರಿಯಗಳು ಮನಸ್ಸಿನ ಅಧೀನವಾಗಿ ಪರಮಾತ್ಮನಕಡೆಗೆ ಹೋಗಿ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಪರಮಾತ್ಮನ ಸೇವೆಯನ್ನು ಮಾಡುತ್ತವೆ. ಆ ಕಾರಣದಿಂದಲೇ ಎಲ್ಲಾ ತರಹದ ಬಾಧೆಗಳಿಗೆ ತಿಲಾಂಜಲಿಯನ್ನು ಬಿಟ್ಟು ಎಲ್ಲಾ ಇಂದ್ರಿಯಗಳೊಡನೆ ಯಾವಾಗಲೂ ಪರಮಾತ್ಮನ ಸೇವೆಯಲ್ಲಿ ನಿರತವಾಗುವದೇ ನಿರ್ಗುಣಭಕ್ತಿ ಇರುತ್ತದೆ.

[ಶ್ರೀಮದಾಚಾರ್ಯರ ಕೃಪೆಯಿಂದ ವೀರಶೈವರಿಗಂತೂ ಲಿಂಗಾಂಗಸಾಮರಸ್ಯವು ಬಾಲ್ಯದಿಂದಲೇ ಪ್ರಾಪ್ತವಾಗುತ್ತಿರುವ ಕಾರಣ ಭಕ್ತಿಯ ತತ್ತ್ವವು ಅತ್ಯಂತ ಸಹಜವಾಗಿಯೇ ತಿಳಿಯಲನುವಾಗಿದೆ.]

ಜಾತ್ಯಭಿಮಾನವೇ ಮತಾಭಿಮಾನವು.

ಬರೆದವ—ದೈವಜ್ಞ ವಿನೋದ.

ವೀರಶೈವ ಮತದಲ್ಲಿ ಗುರುವರ್ಗವೆಂತಲೂ ಭಕ್ತವರ್ಗವೆಂತಲೂ ಎರಡು ಭಾಗಗಳಿರುವದು ಸುಪ್ರಸಿದ್ಧವದೆ. ಶಿಷ್ಯಸಂಪ್ರದಾಯವುಳ್ಳ ಗುರುವರ್ಗದವರು ತಮ್ಮ ತಮ್ಮೊಳಗೆ ಮೇಲಾಟ-ಕೀಳಾಟದ ಹೊಡೆದಾಟವನ್ನು ಮಾಡುವದಿಲ್ಲ. ಇದೀಗ ಭಕ್ತವರ್ಗದಲ್ಲಿ ಈ ಹೊಡೆದಾಟದ ಸುಗ್ಗಿಗೆ ಕೆಲವರು ನಿಂತಿರುವರು. ಭಕ್ತವರ್ಗವು ಸಾಮಾನ್ಯವಾಗಿ ೧೮ ಜಾತಿಗಳಿಂದ ಕೂಡಿದ್ದಾಗಿದೆ. ಛಲವಾದಿಯಿಂದ ಬಣಜಿಗರವರೆಗೂ ಇರುವ ಜಾತಿಯವರು ಎಲ್ಲರೂ ಏಕಾಗಿರಬೇಕೆಂದು ಕೆಲಜನ ಮಿತ್ರರ ಆಶೆಯಾಗಿದೆ. ಕೆಲವರು ದೀಕ್ಷಾಸಂಸ್ಕಾರ ಹೊಂದಿದ ಸಮಸ್ತರೂ ಶರೀರ ಸಂಬಂಧಾದಿಗಳನ್ನು ಅವಶ್ಯಮಾಡಬೇಕೆಂದು ಬಡಬಡಿಸುತ್ತಿರುವರು. ಈ ಉಭಯವರ್ಗದವರ ಅಭಿಪ್ರಾಯವು ಧರ್ಮಶಾಸ್ತ್ರೀಯ ವಿಚಾರಕ್ಕೆ ಅತ್ಯಂತ ವಿರೋಧವಾದುದಾಗಿದೆ. ಭಕ್ತವರ್ಗದಲ್ಲಿ ಶೋಭಿಸುವ ೧೮ ಜಾತಿಗಳಲ್ಲಿಯೂ ಒಂದೊಂದು ಜಾತಿಯವರಲ್ಲಿ ೩-೪ ಪ್ರಕಾರ ಭೇದಗಳಿರುತ್ತವೆ. ಅವರು ಪರಸ್ಪರವಾಗಿ ಪಳಕೆ-ಭೋಜನಮಾತ್ರ ಮಾಡುವರಲ್ಲದೆ, ಶರೀರ ಸಂಬಂಧಾದಿಗಳನ್ನು ಖಂಡಿತವಾಗಿ ಮಾಡುವದಿಲ್ಲ. ಶಿವಚಿಂಪಿಗರಲ್ಲಿ ನಾಗಲೀಕರು, ಛಟ್ಟೇರು ಎಂಬ ಭೇದಗಳಿರುತ್ತವೆ. ಅವರು ಒಬ್ಬರಲ್ಲೊಬ್ಬರು ಊಟ ಉಪಚಾರಗಳನ್ನು ಮಾಡುವರಲ್ಲದೆ, ಗಂಡು-ಹೆಣ್ಣು ತಂದುಕೊಡುವದನ್ನು ಮಾಡಿಲ್ಲ; ಮಾಡುವದಿಲ್ಲ. ಬಣಜಗರಲ್ಲಿ ಶೀಲಬಳಕಿ, ಲೋಕಬಳಕಿ, ಧೂಳಪಾವಡ, ಆದಿಬಣಜಿಗ ಅರೆಬಣಜಿಗ ಮೊದಲಾದವುಗಳಿರುತ್ತವೆ. ಇವರಲ್ಲಿಯೂ ಶರೀರ ಸಂಬಂಧಾದಿಗಳು ಆಗುತ್ತಿರುವದಿಲ್ಲ. ಇದರಂತೆ ಕುರುಹಿನ ಸೆಟ್ಟರು, ಪಟ್ಟಸಾಲಿಗರು, ಪದ್ಮಸಾಲಿಯವರು, ಸಮಸಾಲಿಯವರು, ಕುಡಒಕ್ಕಲಿಗರು, ಸಾದರು, ನೊಣಬರು, ಉಪ್ಪಾರರು, ಕುಂಬಾರರು, ಅಕ್ಕಸಾಲಿಗರು, ಅಗಸರು, ಕ್ಷೌರಿಕರು ಮೊದಲಾದವರು ಅದೇ ವರ್ಗದವರೆಂದು ಹೇಳಿಸಿಕೊಂಡರೂ ಅವರವರೊಳಗೆ ಭೇದಗಳಿರುತ್ತವೆ. ಇವೆಲ್ಲವುಗಳ ಮುಖ್ಯಧ್ಯೇಯವು ಧಾರ್ಮಿಕದೃಷ್ಟಿಯಿಂದ ಪರೀಕ್ಷಿಸಿದರೆ ವಿಶಾಲವಾದ ವೀರಶೈವ ಮತದ ಸ್ವಾಭಿಮಾನದಿಂದಲೇ ಶೋಭಿಸುತ್ತಲಿರುವದು. ಪ್ರತಿಯೊಂದು ಜಾತಿಯವರು 'ವೀರಶೈವಮತ'ವೆಂಬ ನಾವಿನಲ್ಲಿಯೇ ಕುಳಿತಿರುವರು. ತಮ್ಮ ತಮ್ಮ ಮೂಲ ಪರಂಪರೆಯಿಂದ ಅನುಸರಿಸುತ್ತಬಂದ ಸ್ವಜಾತಿಯ ಕಟ್ಟುಗಳಂತೆ ಇದ್ದುಕೊಂಡು ಸಮಸ್ತ ಜಾತಿಯವರಿಂದ ಕೂಡಿ ಸಾಗಿ ನಡೆಯುತ್ತಲಿದ್ದ ಸಂಸಾರ ಸಮುದ್ರದ ಮೇಲೆ ಸರ್ವಾಂಗಸುಂದರವಾಗಿ ಶೋಭಿಸುವ ವೀರಶೈವ ಮತವೆಂಬ ನೌಕೆಯಲ್ಲಿದ್ದು 'ಶಿವಾದ್ವೈತ ಸಿದ್ಧಾಂತ'ದಂತೆ ಆ ಪರಶಿವನೊಡನೆ ಯಾವತ್ತರೂ ಸೇರುತ್ತಾರೆ. ಈ ಜಾತಿಪ್ರಭೇದಗಳು ಸಾಮಾಜಿಕ ದೃಷ್ಟಿಯಿಂದ ನಿರೀಕ್ಷಿಸಿದರಂತೂ ಸಮಾಜ ಸಂಘಟನೆಯ ಮಹತ್ತ್ವತೆಯವು ಪ್ರಜ್ವಲಿತವಾಗಿ ತೋರುವದು. ವಿಶ್ವಪ್ರಪಂಚದಲ್ಲಿ ವಿಸ್ತಾರವಾಗಿ ಹಬ್ಬಿದ ಮತವೆಲ್ಲ ಒಂದೇ ಸಮಾಜವಾಗಿ ಪರಿಣಮಿಸಿದರೆ ಆ ವಿಸ್ತೃತವಾದ ೪೦ ಲಕ್ಷ ಜನರ ಗುಂಪಿಗೆ ಸ್ವಾಭಿಮಾನ ಸಾಮಾಜಿಕನೀತಿಯು ನೆಲೆಯಾಗಿ ಉಳಿಯಲಾರದು. ಅಪಾರವಾದ ಸೈನ್ಯವನ್ನು ವಿಭಾಗಗೊಳಿಸಿ ಒಂದೊಂದುಭಾಗಕ್ಕೆ ಒಬ್ಬೊಬ್ಬ ಅಧಿಕಾರಿಯನ್ನು ನಿಯಮಿಸಿ ಆ ಭಾಗದ ರಕ್ಷಣೆಯ ಭಾರವೂ ಅದರ ಅಭಿಮಾನವೂ ಆ ಅಧಿಕಾರಿಯಕಡೆಗೆ ಇರುತ್ತದೆ. ವಿಶಿಷ್ಟಭಾಗಗಳ ಅಭಿಮಾನವೆಲ್ಲ ವಿಸ್ತೃತಸಮುದಾಯದ ಮೇಲೆಲ್ಲಾ ಇರುತ್ತದೆ. ತಮ್ಮ ತಮ್ಮ ಭಾಗದಮೇಲೆ ಅಭಿಮಾನವಿಲ್ಲದ ಹೇಡಿಯು ತಾನು ವಾಸಿಸಿದ ಅಪಾರಸಮುದಾಯದ ಬಗ್ಗೆ ಅಭಿಮಾನಪಡುವನೇ? ಅದರಂತೆ ವೀರಶೈವಮತದಲ್ಲಿ ಅನೇಕ ವಿಭಾಗ (ಜಾತಿ)ಗಳಿದ್ದು ಅವುಗಳ ಕುಲಧರ್ಮಾಭಿಮಾನವು ಜಾಗ್ರತವಾಗಿದ್ದರೆ ವಿಶಾಲವಾದ ವೀರಶೈವಮತದ ಏಳ್ಗೆಯಾಗಲು ಸಹಾಯವಾಗುವದು. ಸ್ವಕುಲಾಭಿಮಾನಶೂನ್ಯನೂ, ಸಹೋದರವಾತ್ಸಲ್ಯದೂರನೂ, ಸ್ವಜನಾಭಿಮಾನರಹಿತನೂ ಸ್ವವಂಶದ ಏಳ್ಗೆಯನ್ನು ಕೋರದವನೂ ಪರಮಪಾಪಿಯಾಗುವನೆಂದು ನೀತಿಶಾಸ್ತ್ರವು ಸಿಂಹನಾದಮಾಡುತ್ತಲಿದೆ.

ಪಳಿಯಾವುದು ಕುಲಭಂಗಂ |
ತಿಳಿವಾವುದು ಸುಮತಿ ಬಂಧವಾವುದು ಮೋಹಂ ||
ಕಳವಾವುದನ್ನ ಕವೆಡಂ |
ಸುಳಿವಾವುದು ಧೃತಿ ವಿವೇಕ ಚೂಡಾರತ್ನ ||

ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಕುಲೋನ್ನತಿಯನ್ನು ಮಾಡಬೇಕು. ತಮ್ಮ ಕುಲದಲ್ಲಿ ಪ್ರಸಿದ್ಧರಾದ ಮಹಾತ್ಮರನ್ನು ಕೊಂಡಾಡುತ್ತಿರಬೇಕು. ಅವರು ನುಡಿದು ನಡೆದ ಪಾವಕ್ಷವಿಚಾರದ ಮಾರ್ಗವನ್ನೇ ಆಯಾಯ ಕುಲದವರು ಅನುಸರಿಸಬೇಕು. ಕುಲೋದ್ಧಾರಕರನ್ನೂ, ಕುಲೋತ್ತಾರಕರನ್ನೂ ಮುಂದಿಟ್ಟುಕೊಂಡು ಸ್ವಕುಲಾಭಿಮಾನದಿಂದಿರುವದೇ ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ. ವೀರಶೈವಮತದ ಪ್ರತಿಯೊಂದು ಕುಲದಲ್ಲಿಯೂ ಸುಪ್ರಸಿದ್ಧ ಜ್ಞಾನಿಗಳೂ, ಶರಣರೂ, ಆಚಾರಶೀಲರೂ ಆಗಿಹೋಗಿದ್ದಾರೆ. ಕಲಿಕಾಲಪ್ರಭಾವದಿಂದ ಭಕ್ತವರ್ಗದವರಲ್ಲಿ ಕೆಲವರು ಜಾತಿಗಳ ಏಕೀಕರಣವೆಂಬ ಅಮಂಗಲಕರಪ್ರಚಾರದ ಕಾಯಕವನ್ನು ಕೈಕೊಂಡಿರುವದು ಅತ್ಯಂತ ಹೇಯವಾಗಿದೆ. ಶುದ್ಧಸಾಂಪ್ರದಾಯದ ರಕ್ತವೇ ವಂಶಪರಂಪರೆಯಲ್ಲಿ ಇಳಿದುಬರುತ್ತಿರುವದು. ಆ ಪವಿತ್ರರಕ್ತಸರಣಿಯು ಸ್ವರಕ್ತಾಭಿಮಾನದ ಗಂಭೀರಭಾವನೆಯಿಂದ ಸ್ವಕುಲೋನ್ನತಿಯನ್ನು ಹೆಚ್ಚಿಸುವದು. ಆ ಶುದ್ಧರಕ್ತದಲ್ಲಿ ಮಿಶ್ರವಾದರೆ ಅದು ಹಂದಲಂದವಂಶವನ್ನು ಬೆಳೆಸುವದು. ಇಂಥ ಮಿಶ್ರವಂಶಜರೇ ಜಾತಿಗಳ ಮಿಶ್ರಕ್ಕೆ ಮುಂದಾಗಿರಲುಹುದೇನು? ಈ ಮಿತ್ರರಿಗೆ ಬುದ್ಧಿಗಲಿಸಲು ಗುರುವರ್ಗವು ಜಾಗ್ರತವಾಗಿದೆ. ಸದಸದ್ವಿಚಾರ ಶೀಲರಾದ ಸದ್ಭಕ್ತರು ಶುದ್ಧಸಾಂಪ್ರದಾಯವೆಂಬ ತಮ್ಮ ತಮ್ಮ ಕುಲಾಭಿಮಾನವನ್ನು ಬಿಡದೆ ಕುಲದೀಪಕರಾಗಬೇಕೆನ್ನುವದೇ ವಿನೋದನ ಬಯಕೆಯು.

ಶಿಂಗಟಾಲೂರ ಶ್ರೀ ವೀರಭದ್ರದೇವರ ಗುಡ್ಡಕ್ಕೆ ಮೆ|| ಕಲೇಕ್ಟರ ಸಾಹೇಬರವರ ಆಗಮನ

ಶ್ರೀ ದೇವಸ್ಥಾನದ ಪಂಚಕಮಿಟಿಯವರ ಆಮಂತ್ರಣದ ಮೇರೆಗೆ ಮೆಹರ್ಬಾನ ಕಲೇಕ್ಟರ ಸಾಹೇಬ ಬಹದ್ದೂರ ಜಿಲ್ಲಾಧಾರವಾಡ ಇವರು ತಮ್ಮ ಚಿಟ್ನೀಸ (ದಿವಾನ) ಸಾಹೇಬರ ಮತ್ತು ಮುಂಡರಗಿ ಮಹಾಲ್ಕರಿ ಸಾಹೇಬರವರೊಂದಿಗೆ ತಾರೀ ಖು ೯-೧೨-೧೯೩೩ ನೇ ಇಸ್ವಿ ಶನಿವಾರ ಹಗಲು ೧೧ ಘಂಟೆಯ ಸುಮಾರಕ್ಕೆ ಆಗಮಿಸಿದರು. ಸಕಾಲಕ್ಕೆ ಪಂಚಕಮಿಟಿಯ ಪ್ರೆಸಿಡೆಂಟರಾದ ಗುರುಭಕ್ತೇಶರಿಯವರು ಸರಪಂಚರಾದ ಬೇವಿನಹಿರೇಮಠದ ಫಕೀರಯ್ಯನವರು ಮತ್ತು ಮೆಂಬರ ಜನರ ಪೈಕಿ ಶಿಂಗಟಾಲೂರ ಗುಂಡಯ್ಯನವರು ಬಸವಣ್ಣೆಪ್ಪನವರು ಹಮ್ಮಿಗಿ ಸೊಸಾಯಿಟಿ ಚೇರಮನ್‌ರೂ ಏಲೀಜ ಮ್ಯಾಜಿಸ್ಟ್ರೇಟರೂ ಆದ ವಿರೂಪಾಕ್ಷಗೌಡರು ಸಿದ್ಧಲಿಂಗಯ್ಯನವರು ನವಲಿಗ್ರಾಮದ ಶಿವರುದ್ರಯ್ಯನವರು ಫಕೀರಪ್ಪನವರೇ ಮೊದಲಾದವರು ಕಾದಿದ್ದರು. ಸಾಹೇಬ ಬಹದ್ದೂರರವರು ಬರುತ್ತಲೇ ಪ್ರೆಸಿಡೆಂಟರಾದ ಗುರುಭಕ್ತೇಶರಿಯವರು ಸ್ವಾಗತವನ್ನಿತ್ತು ಯಾವತ್ತು ಮೆಂಬರ ಜನರ ಪರಿಚಯಮಾಡಿಕೊಟ್ಟರು. ಅದೇ ಕಾಲಕ್ಕೆ ಮುಂಡರಗಿಯಿಂದ ಡಿ. ಎಲ್. ಬಿ. ಮೆಂಬರರೂ ಏಲೀಜ ಮುನಸೀಫರೂ ಆದ ಮ|| ರಾ|| ಕೊಪ್ಪಳ ವೀರಭದ್ರಪ್ಪನವರು ಮಹಾಲಡೆವಲಪ್‌ಮೆಂಟ ವೈಸ್ ಚೇರಮನ್‌ರಾದ ಶ್ರೀ-ಶಿ-ಕಾಗನೂರು ಸಂಗಯ್ಯನವರು ಡಿಸ್ಪೆನ್ಸರಿ ಕಮಿಟಿ ಚೇರಮನ್ ಮ|| ರಾ|| ಕಾಶರಕಿ ಕೋಟೆಪ್ಪನವರು ಗದಗ ಕಪಪೂರಪೇಟೆ ಇಟಗಿ ಕರಬಸಪ್ಪನವರೇ ಮೊದಲಾದ ಸದ್ಗೃಹಸ್ಥರು ಬಂದಿದ್ದರಲ್ಲದೆ ಅಜೂ ಬಾಜೂ ಗ್ರಾಮಗಳಿಂದ ೩-೪ ನೂರು ಜನರು ಕೂಡಿದ್ದರು. ಮೆ|| ಕಲೇಕ್ಟರ ಸಾಹೇಬ ಬಹದ್ದೂರರವರು ಕಪೋತಗುಡ್ಡದ ದಕ್ಷಿಣಾಂತ್ಯ ಭಾಗದಲ್ಲಿ ತುಂಗಭದ್ರಾ ತಟಾಕದೊಳು ಪರಿಶೋಭಿಸುತ್ತಿರುವ ಶ್ರೀ ವೀರೇಶನ ವಾಸಸ್ಥಾನದ ಮನೋಹರವಾದ ದೃಶ್ಯವನ್ನು ನೋಡಿ ಆನಂದಪಡುತ್ತ ಶ್ರೀ ಸ್ವಾಮಿಯ ದರ್ಶನಾರ್ಥವಾಗಿ ಗುಡ್ಡದ ಮೇಲ್ಭಾಗದಲ್ಲಿರುವ ದೇವಸ್ಥಾನಕ್ಕೆ ಬಂದರು. ದೇವಸ್ಥಾನದಲ್ಲಿ ಅರ್ಚಕರಿಂದ ಮಂಗಲವಾದೊಡನೆ ಪ್ರೆಸಿಡೆಂಟರು ಸಾಹೇಬ ಬಹದ್ದೂರರವರಿಗೆ ಹಾರತುರಾಯಿಗಳನ್ನು ವಿವಿಧಫಲಗಳಿಂದ ತುಂಬಿದ (ಶ್ರೀಸ್ವಾಮಿಯ ಫಲಾಶೀರ್ವಾದದ) ತಾಟನ್ನು ಒಪ್ಪಿಸಿದರು. ಕೂಡಲೆ ಸಾಹೇಬ ಬಹದ್ದೂರರವರು ಅರ್ಚಕರಿಗೆ ಒಂದು ರೂಪಾಯಿ ದಕ್ಷಿಣೆಯನ್ನಿತ್ತರು. ತರುವಾಯ ದೇವಸ್ಥಾನದ ಕೆಳಭಾಗದಲ್ಲಿ ತಳಿರುತೋರಣಗಳಿಂದಲಂಕರಿಸಲ್ಪಟ್ಟ ಮಂಟಪಕ್ಕೆ ಬಂದು ಮೆ|| ಕಲೇಕ್ಟರ ಸಾಹೇಬರು ಯಾವತ್ತು ಅಧಿಕಾರಸ್ಥರು ಮತ್ತು ಸದ್ಗೃಹಸ್ಥರು ಫಲಾಹಾರಾದಿಗಳನ್ನು ಸ್ವೀಕರಿಸಿದರು. ಅನಂತರ ಸಾಹೇಬ ಬಹದ್ದೂರರವರೊಂದಿಗೆ ಪ್ರೆಸಿಡೆಂಟರ ಮತ್ತು ಯಾವತ್ತು ಸಮುದಾಯದ ಫೋಟೋ ತೆಗೆಯಲ್ಪಟ್ಟಿತು. ಆ ಮೇಲೆ ಸಾಹೇಬ ಬಹದ್ದೂರರವರು ಸಂತೋಷಚಿತ್ತರಾಗಿ ದೇವಸ್ಥಾನದ ವಿಜಿಟ್ ಬುಕ್ಕಿನಲ್ಲಿ ಕೆಳಗೆ ಬರೆದಂತೆ ತಮ್ಮ ಸದಭಿಪ್ರಾಯವನ್ನು ವ್ಯಕ್ತಗೊಳಿಸಿ ಇಲ್ಲಿಂದ ೧ ಘಂಟೆಯ ಸುಮಾರಕ್ಕೆ ಮುಂಡರಗಿಗೆ ದಯಮಾಡಿಸಿದರು—

ವಿಜಿಟ ಬುಕ್ಕಿನ ಕನ್ನಡಭಾಷಾಂತರ.

ಮಿ|| ಎಸ್. ವಿ. ಕಬಸದ ಇವರ ಆಮಂತ್ರಣವನ್ನು ಸ್ವೀಕರಿಸಿ ಶಿಂಗಟಾಲೂರ ವೀರಭದ್ರ ದೇವರಗುಡಿಯನ್ನು ನೋಡಿ ಬಹಳ ಆನಂದನೆಸುತ್ತದೆ. ಈ ಗುಡಿಯ ವ್ಯವಸ್ಥೆಯನ್ನು ನೋಡತಕ್ಕ ಪಂಚಜನರು ಶಿಂಗಟಾಲೂರ ವ ಹಮ್ಮಿಗಿ ಮತ್ತು ಮದ್ರಾಸ ಪ್ರೆಸಿಡೆನ್ಸಿಗೆ ಸೇರಿದ ನವಲಿ ಗ್ರಾಮದವರು ಇರುತ್ತಾರೆ. ಇವರು ದೇವಸ್ಥಾನದ ಕೆಲಸಗಳನ್ನು ಬಹಳ ಉತ್ಸಾಹದಿಂದ ಮಾಡಿ ೩ ವರ್ಷಕ್ಕೊಮ್ಮೆ ರಿಪೋರ್ಟ ಹೊರಡಿಸುತ್ತಿರುತ್ತಾರೆ. ಈ ಕಮಿಟಿಯನ್ನು ೧೯೧೩ ನೇ ಇಸವಿಯಲ್ಲಿ ಇದ್ದ ಮಿ|| ಎಚ್. ವೆಂಕಟರಾವ ಮಹಾಲ್ಕರಿಯವರು ಉತ್ತಮರೀತಿಯಿಂದ ಸ್ಥಾಪನಮಾಡಿರುತ್ತಾರೆ.

ಎಲ್. ಎನ್. ಬ್ರ್ಯಾನ್ ಕಲೇಕ್ಟರ್ ಧಾರವಾಡ.

ದೇವಸ್ಥಾನದ ಪಂಚ ಸಿದ್ಧಲಿಂಗಯ್ಯ,
ಶಿರಹಟ್ಟಿ ಹಮ್ಮಿಗಿ.

ದುಷ್ಕರ ಭಾವ.

ದುಷ್ಟರಾದ ದುಷ್ಕರ್ಮಿಗಳು ದುರಭಿಸಂಧಿಯಿಂದ ಅಂತರ್ಯದಲ್ಲಿ ಅನೇಕ ಸನ್ನಾಹಗಳಿಂದ ನಡೆಯಿಸುವ ದುರಂತವಾದ ಘೋರಕೃತ್ಯಗಳನ್ನು ಕಂಡುಹಿಡಿಯುವದೂ, ಆ ರಹಸ್ಯಗಳನ್ನೆಲ್ಲಾ ಭೇದಿಸಿ ಹೊರಪಡಿಸುವದೂ ಸಹ ಸಾಮಾನ್ಯರಾದ ಜನರಿಂದಾಗತಕ್ಕದಲ್ಲವು. ಮಾನುಷಚರಿತ್ರೆಯನ್ನು ಎಲ್ಲಾ ಭಾಗದಲ್ಲಿಯೂ ಬಲ್ಲವರಾಗಿ ಬಹಳ ಅನುಭವಶಾಲಿಗಳಾಗಿ ಕುಶಲರಾಗಿ ನೈಪುಣ್ಯವನ್ನು ಹೊಂದಿದ ಮಹಾಶಯರ ಹೊರತು ಅಂತಹ ಕೃತ್ಯಗಳನ್ನು ಕಂಡುಹಿಡಿಯುವದು ಇತರರಿಗೆ ಸಾಧ್ಯವಿಲ್ಲವು. ಆದ್ದರಿಂದ ಈ ಗೋಮುಖವ್ಯಾಘ್ರರಾದ ಹಿತಶತ್ರುಗಳು ಮಾಡುವ ಕಪಟತಂತ್ರಗಳನ್ನರಿಯದೆ, ಹಲವರು ಮೋಸಹೋಗಿರುವವರಾಗಿರುತ್ತಾರೆ. ಆಕಾಶದಲ್ಲಿರುವ ಗ್ರಹವನ್ನೀಕ್ಷಿಸಿ ಗುಣಿಸಲ್ಪಡುವ, ಜ್ಯೋತಿಶ್ಶಾಸ್ತ್ರಕೋವಿದನೋರ್ವನಿಗೆ ಅದು ನಿಜವು ಆಗಬಹುದು. ಪ್ರತ್ಯಕ್ಷವಾಗಿರುವ ಮನುಷ್ಯನ ಛಾಯೆಯನ್ನು ಹಿಡಿದು ಗುಣಿಸಿದರೆ ಅದು ಸಾಮಾನ್ಯವಾಗಿ ಮಿಥ್ಯವೆನಿಸಲಾರದು. ಸುಖಾಭಿವೃದ್ಧಿಗೆ ಸಾತ್ವಿಕವೃತ್ತಿಯೊಂದೇ ಮುಖ್ಯಸಾಧನವಾಗಿದ್ದರೂ ಕೆಟ್ಟಜನಗಳ ಕುಯುಕ್ತಿಗಳಿಂದೊದಗುವ ದುಃಖನಿವಾರಣೆಗಾಗಿ ದುರ್ವ್ಯಾಪಾರಗಳ ಮರ್ಮಜ್ಞತೆಯು ಸಹ ವ್ಯವಹಾರದಲ್ಲಿ ಅವಶ್ಯಕವಾಗಿ ಬೇಕಾಗುತ್ತದೆ. ಗಾಂಜಿಗೆ ಧತ್ತೂರಿಯು ಕೂಡಿದಂತೆಯೂ ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿಯಾದಂತೆಯೂ ಕೆಲವು ಜನ ಧೂರ್ತರು ಮಿಳಿತರಾಗಿ ರಹಸ್ಯವಾಗಿ ಧರ್ಮವಿರುದ್ಧಾಚರಣೆಯಿಂದ ಪರರಿಗೆ ಅಪಾರವಾದ ಮನೋವ್ಯಥೆಯನ್ನುಂಟುಮಾಡಿ ಹರ್ಷೋದ್ರೇಕದಿಂದ ನಲಿದಾಡುತ್ತಾ ಇನ್ನೂ ದುರಾಲೋಚನಾಪರರಾಗಿ ಕಾಲನಿರೀಕ್ಷಣೆಯನ್ನು ಮಾಡುವವರಲ್ಲಿರುತ್ತಾರೆ. ಅಂತಹ ಜನರಿಗೆ ಒಂದು ವೇಳೆ ಇಹಲೋಕದಲ್ಲಿ ಶಿಕ್ಷೆಯು ತಪ್ಪಿದರೂ ಪರಲೋಕದಲ್ಲಿ ತಕ್ಕ ಶಾಸನವಾಗದೆ ಇರುವದೇ? ಸಾಧುವಾದ ಆಕಳು ತಾನು ಹಿಂಡುವಷ್ಟು ಹಾಲನ್ನು ಹಿಂಡುತ್ತದೆಯಲ್ಲದೆ ರಕ್ತವು ಬರುವಂತೆ ಹಿಂಡಲು ತೊಡಗಿದರೆ ಕಾಲೆತ್ತದೆ ಬಿಡುವದೇ? ಹಾಗೆಯೇ ಪ್ರತಿಯೊಬ್ಬ ಮಾನವನ ಸ್ಥಿತಿಯೂ ಇರುವದಾಗಿದೆ. ಸಹನ ಶಕ್ತಿಗೂ ಮೇರೆಯುಂಟಲ್ಲವೇ? ಸತ್ಯವು ಎಂದಿದ್ದರೊಂದು ದಿನ ಹೊರಬೀಳದೆ ಇರುವದೇ?

ಗುಬ್ಬಿ ಶಿವಕಥಾಪಂಡಿತ,
ಶಿವರುದ್ರಶಾಸ್ತ್ರಿ ಹಾರನಹಳ್ಳಿ.

ಪಂಚಾಚಾರ್ಯ ಪ್ರಭಾ.

೧೯೩೩ನೇ ಡಿಸೆಂಬರ್ ತಾ|| ೨೫ನೇ ಸೋಮವಾರ.

X ಆತ್ಮೋದ್ಧಾರ.

ಜಗತ್ತಿನಲ್ಲಿ ಎಲ್ಲಿ ನೋಡಿದರೂ ಪ್ರತಿಯೊಬ್ಬನೂ ಪ್ರಾಪಂಚಿಕಸೌಖ್ಯವನ್ನು ಪಡೆಯುವುದಕ್ಕಾಗಿ ಪ್ರಯತ್ನಿಸುತ್ತಾನಲ್ಲದೆ ಪಾರಮಾರ್ಥಿಕಸೌಖ್ಯವನ್ನು ಪಡೆಯಲು ಪ್ರಯತ್ನಿಸುವುದಿಲ್ಲ. ಸಮಸ್ತ ಮತಶಾಸ್ತ್ರಗಳೂ ಪ್ರಾಪಂಚಿಕಸೌಖ್ಯವು ಅನಿತ್ಯವಾದುದೆಂದೂ, ಪಾರಮಾರ್ಥಿಕಸೌಖ್ಯವು ನಿತ್ಯವಾದುದೆಂದೂ ಮುಕ್ತಕಂಠದಿಂದ ಸಾರುತ್ತಿವೆಯಲ್ಲದೆ ಅಲ್ಲಲ್ಲಿಯೇ ಗುರುಜನಗಳು ಸಹ ಈ ತತ್ತ್ವವನ್ನೇ ಬೋಧಿಸುತ್ತಲಿದ್ದಾರೆ. ಹೀಗಿದ್ದರೂ ಪಾರಮಾರ್ಥಿಕಸೌಖ್ಯದಲ್ಲಿ ಜನಗಳಿಗೆ ಅಭಿರುಚಿಯು ಕಡಿಮೆಯಾಗುತ್ತ ಐಹಿಕಸೌಖ್ಯಾಭಿಲಾಷೆಯು ಹೆಚ್ಚುತ್ತಬರಲು ಕಾರಣವೇನಿರಬಹುದೆಂದು ಬಹುದೂರವಾಗಿ ಆಲೋಚಿಸಬೇಕಾಗಿದೆ. ಪಾರಮಾರ್ಥಿಕಸೌಖ್ಯವೆಂಬುದು ಪರಮಾತ್ಮಸಾನ್ನಿಧ್ಯದಿಂದ ಜನಿಸುವುದು. ಪ್ರಾಪಂಚಿಕಸೌಖ್ಯವೆಂಬುದು ವಿಷಯಸಾನ್ನಿಧ್ಯದಿಂದ ಜನಿಸುವದು. ಪ್ರಾಪಂಚಿಕ ವಿಷಯಗಳಾದರೋ ಪ್ರಯತ್ನವಿಲ್ಲದೆ ಕಾಲಿಟ್ಟ ಕಡೆಯಲ್ಲೆಲ್ಲಾ ಬಹು ಸುಲಭವಾಗಿ ದೊರೆಯುವವು. ಪರಮಾತ್ಮವೆಂಬ ವಸ್ತುವಾದರೆ ಹಾಗೆ ಸುಲಭವಾಗಿ ಎಲ್ಲರಿಗೂ ದೊರೆಯುವದಿಲ್ಲ. ನಮ್ಮ ದೇಹದಲ್ಲಿ ವಾಸಮಾಡಿರುವ ಮನಸ್ಸೆಂಬ ಅಂತರಿಂದ್ರಿಯವು ಬಹು ಚಂಚಲಸ್ವಭಾವವುಳ್ಳದು. ಯಾವಾಗಲೂ ಚಕ್ಷುರಾದೀಂದ್ರಿಯಗಳ ದ್ವಾರಾ ವಿಷಯಗಳ ಮೇಲೆ ಎರಗುವುದೇ ಅದರ ಸ್ವಭಾವವಾಗಿರುತ್ತದೆಯಲ್ಲದೆ ಪರಮಾತ್ಮನೆಂಬ ಗೂಢವಸ್ತುವಿನಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ. ಕಣ್ಣು, ಮೂಗು ಮುಂತಾದ ಇಂದ್ರಿಯಗಳು ಹೊರಮುಖಗಳಾಗಿವೆಯಲ್ಲದೆ ಒಳಮುಖಗಳಾಗಿಲ್ಲ. ಹೀಗೆ ಯಾವಾಗಲೂ ನಮ್ಮ ಬಹಿರಿಂದ್ರಿಯಗಳೂ ಅಂತರಿಂದ್ರಿಯವೂ ಬಹುಕಾಲದಿಂದ ಅನಿತ್ಯವಾದ ವಿಷಯಗಳೊಡನೆ ಒಡನಾಡುತ್ತಿರುವುದರಿಂದ ವಿಷಯಸೌಖ್ಯಾನುಭವವೇ ಆತ್ಮನಿಗೆ ಪರಮಧ್ಯೇಯವಾಗಿ ಪರಿಣಮಿಸಿರುತ್ತದೆ.

ಪ್ರಪಂಚದಲ್ಲಿ ಯಾರಿಗೆ ಯಾವ ಸಂಸರ್ಗವು ಹೆಚ್ಚಾಗಿರುತ್ತದೆಯೋ ಅವರಿಗೆ ಅದೇ ಸ್ವಭಾವವು ಬರುತ್ತದೆಂಬುದು ಅನುಭವಸಿದ್ಧವಾದುದರಿಂದ ಜೀವಾತ್ಮನು ಕೇವಲ ಪರಮಾತ್ಮನ ಅಂಶಭೂತನಾಗಿದ್ದರೂ ವಿಷಯಲೋಲಗಳಾದ ಈ ದೇಹೇಂದ್ರಿಯಗಳ ಸಂಸರ್ಗದಿಂದ ಈ ಆತ್ಮನು ತನ್ನ ನಿಜವಾದ ಸ್ವಚ್ಛಸ್ವಭಾವವನ್ನು ಮರೆತು ವಿಷಯಗಳಿಗೆ ಅಧೀನನಾಗಿ ಹೋಗಿರುತ್ತಾನೆ. ಇಂದ್ರಿಯಗಳು ಹೇಗೆ ಹೇಗೆ ವಿಷಯಗಳ ಮೇಲೆ ಹೋಗುವುವೋ ಹಾಗೆ ಹಾಗೆ ಆತ್ಮನು ಆ ಇಂದ್ರಿಯಗಳ ಬೆನ್ನು ಹತ್ತಿ ಅಲೆಯುತ್ತಲಿದ್ದಾನೆ. ನಾನು ಪರಮಾತ್ಮನ ಅಂಶಭೂತನಾದುದರಿಂದ ಯಾವಾಗಲೂ ಪರಮಾತ್ಮನೊಡನೆಯೇ ವಿಹರಿಸಬೇಕೆಂಬ ಜ್ಞಾನದಿಂದ ದೂರನಾಗಿದ್ದಾನೆ. ಲೋಕದಲ್ಲಿ ಮಗನಾದವನು ತಂದೆಯ ಆಜ್ಞೆಗೆ ಒಳಪಟ್ಟಿರಬೇಕಲ್ಲದೆ ತಂದೆಯ ಆಜ್ಞೆಯನ್ನು ಮೀರಿ ವಿಷಯಲಂಪಟನಾದರೆ ಆ ಮಗನು ದುರ್ಮಾರ್ಗಿಯಾಗಿ ತಂದೆಯ ಕೋಪಕ್ಕೆ ಪಾತ್ರನಾಗುವಂತೆ, ಜಗತ್ಪಿತನಾದ ಪರಮೇಶ್ವರನ ಆಜ್ಞೆಗೆ ವಿರುದ್ಧವಾಗಿ ಆವ ಜೀವಾತ್ಮನೂ ನಡೆಯಬಾರದು. ಹಾಗೆ ನಡೆಯುವದರಿಂದ ಆ ಪರಮೇಶ್ವರನ ಸ್ಥಾನವಾಗಲಿ ಅವನ ಅಣಿಮಾದ್ಯೈಶ್ವರ್ಯವಾಗಲಿ ದೊರೆಯದೆ ಯಾವಾಗಲೂ ದುಃಖಗೊಂಡವನಾಗಿಯೇ ಇರಬೇಕಾಗುವುದು.

> ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ |
> ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ||

ಯಾರು ವಿಷಯವ್ಯಾಪಾರದಿಂದ ನಿವೃತ್ತರಾಗಿ ಪರಮಾತ್ಮನನ್ನು ಹೊಂದುವರೋ ಅಂಥವರಿಗೆ ಮಾತ್ರ ಪುನರ್ಜನ್ಮವಿಲ್ಲ. ಮಿಕ್ಕ ಆತ್ಮರೆಲ್ಲಾ ಮಾಯಾವಶರಾಗಿ ಜನನ ಮರಣ ಚಕ್ರದಲ್ಲಿ ಸುತ್ತುತ್ತಲೇ ಇರಬೇಕಾಗಿದೆ ಎಂದು ಗೀತಾಕಾರರು ಸ್ಪಷ್ಟಪಡಿಸಿರುವುದರಿಂದ ಆ ನಿತ್ಯವಿಭೂತಿಯಾದ ಪರಮಾತ್ಮಜ್ಞಾನದಿಂದಲೇ ಸುಖವುಂಟಾಗುವುದಲ್ಲದೆ ಇನ್ನಾವ ಪ್ರಾಪಂಚಿಕ ವಿಷಯಜ್ಞಾನದಿಂದಲೂ ಸೌಖ್ಯವು ದೊರೆಯುವುದಿಲ್ಲವೆಂದು ಅನೇಕ ಆತ್ಮರು ತಿಳಿದಿದ್ದರೂ ಆ ತಿಳಿವಳಿಕೆಯನ್ನೆಲ್ಲಾ ಮೂಲೆಗೊತ್ತಿ ಆಪಾತತಃ ಸುಖರೂಪದಿಂದ ತೋರುತ್ತಿರುವ ವಿಷಯ ಸೌಖ್ಯಗಳಲ್ಲೇ ಪ್ರವರ್ತಿಸುತ್ತಿರುವರು. ಇದಕ್ಕೆಲ್ಲಾ ಬಹುಕಾಲದಿಂದ ಪರಮಾತ್ಮನಿಂದ ಅಗಲಿ ವಿಷಯಲಂಪಟವಾದ ಬಾಹ್ಯೇಂದ್ರಿಯದುಷ್ಟ ಸಂಸರ್ಗವೇ ಕಾರಣವಲ್ಲದೆ ಬೇರೆ ಕಾರಣವಿಲ್ಲ. ಈಗ ಆತ್ಮನಿಗೂ ದುಷ್ಟೇಂದ್ರಿಯಗಳಿಗೂ ಇರುವ ಸಂಬಂಧವನ್ನು ತಪ್ಪಿಸಿದ ಹೊರತು ಆತ್ಮನು ತನ್ನ ನಿಜಸ್ವರೂಪವನ್ನು ತಿಳಿಯುವ ಹಾಗಿಲ್ಲ. ಇಂದ್ರಿಯಗಳನ್ನು ವಿಷಯ ಸಂಬಂಧದಿಂದ ತಪ್ಪಿಸಿ ಪರಮಾತ್ಮನೆಂಬ ವಿಷಯದಲ್ಲಿ ಆಸಕ್ತಗಳನ್ನಾಗಿ ಮಾಡಬೇಕು. ಇದು ಅಭ್ಯಾಸಬಲದಿಂದ ಸಾಧ್ಯವಲ್ಲದೆ ಸುಲಭಸಾಧ್ಯವಲ್ಲ. ಇಂದ್ರಿಯಗಳಲ್ಲೆಲ್ಲಾ ಅಂತರಿಂದ್ರಿಯವಾದ ಮನಸ್ಸು ಬಹಳ ಬಲವಾದುದು ಮತ್ತು ಚಂಚಲವಾದುದು. ಈ ವಿಷಯವನ್ನು ಗೀತಾಕಾರರು—

> ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿಬಲವದ್ದೃಢಂ |
> ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ||

ಎಂದು ಸ್ಪಷ್ಟವಾಗಿ ತೋರಿಸಿರುತ್ತಾರೆ. ಮನಸ್ಸು ಎಷ್ಟರಮಟ್ಟಿಗೆ ನಿಗ್ರಹಗೊಳಿಸಲ್ಪಡುವುದೋ ಅಷ್ಟು ಅಷ್ಟು ಇಂದ್ರಿಯಗಳು ಬಹಿರ್ಮುಖವಾಗಿ ಹರಿಯದೆ ಸನ್ಮಾರ್ಗದಲ್ಲಿ ಪ್ರವರ್ತಿಸುವವು. ಶಾಸ್ತ್ರಕಾರರು ಶರೀರವನ್ನೇ ರಥವನ್ನಾಗಿಯೂ, ಇಂದ್ರಿಯಗಳನ್ನೇ ಆ ರಥಕ್ಕೆ ಹೂಡಿದ ಕುದುರೆಗಳನ್ನಾಗಿಯೂ, ಆತ್ಮನನ್ನೇ ರಥದಲ್ಲಿ ಕುಳಿತಿರುವವನನ್ನಾಗಿಯೂ, ಮನಸ್ಸನ್ನೇ ಕುದುರೆಗಳಿಗೆ ಹಾಕಿದ ಕಡಿವಾಣವನ್ನಾಗಿಯೂ ವರ್ಣಿಸಿರುವುದನ್ನು ನೋಡಿದರೆ ಮನಸ್ಸೆಂಬುದೇ ವಿಷಯಗಳೆಂಬ ದುರ್ಮಾರ್ಗದಲ್ಲಿ ಓಡುತ್ತಿರುವ ಇಂದ್ರಿಯಗಳೆಂಬ ಕುದುರೆಗಳನ್ನು ಸನ್ಮಾರ್ಗಕ್ಕೆ ತರುವ ಸಾಧನವೆಂದು ಸ್ಪಷ್ಟವಾಗುತ್ತದೆ. ಈ ಮನಸ್ಸೆಂಬ ಕಡಿವಾಣವು ಆತ್ಮನ ಅಧೀನದಲ್ಲಿ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ಇಂದ್ರಿಯಗಳೆಂಬ ಕುದುರೆಗಳು ಹತೋಟಿಯಲ್ಲಿರುತ್ತವೆ. ಈಗಿನ ಕಾಲದಲ್ಲಿ ಪ್ರಾಯಶಃ ಚಕ್ಷುರಾದೀಂದ್ರಿಯಗಳೆಂಬ ಕುದುರೆಗಳು ನವನವಾಕಾರವಾಗಿ ಕಾಣಿಸಿಕೊಳ್ಳುತ್ತಿರುವ ವಿಷಯಗಳನ್ನು ನೋಡಿ ಸ್ಮೃತಿತಪ್ಪಿ ಓಡುವ ಜೋರಿನಲ್ಲಿ ಆತ್ಮನೆಂಬ ರಥಿಕನ ಕೈಯಲ್ಲಿ ಹಿಡಿದಿರುವ ಮನಸ್ಸೆಂಬ ಲಗಾಮನ್ನು ಕಿತ್ತೊಗೆದು ಎತ್ತಬೇಕತ್ತ ಓಡುತ್ತ, ಶರೀರವೆಂಬ ರಥವು ಮುರಿಯುವಂತೆಮಾಡಿ ಒಳಗಿರುವ ಆತ್ಮನನ್ನು ಅನೇಕವಿಧ ಸಂಕಟಗಳಿಗೀಡುಮಾಡುತ್ತಿರುತ್ತವೆ. ಆತ್ಮನಿಗುಂಟಾದ ಈ ತರಹದ ಸಂಕಟವು ತಪ್ಪಬೇಕಾದರೆ, ಆ ಮನಸ್ಸು ಯಥಾಪ್ರಕಾರ ಆತ್ಮನ ಅಧೀನವಾಗಬೇಕು. ಮನಸ್ಸಾಧನದಿಂದ ಅಡ್ಡಮಾರ್ಗದಲ್ಲಿ ನುಗ್ಗಿರುವ ಕುದುರೆಗಳು ಗುರುದೇವತೋಪಾಸನಾದಿ ಸನ್ಮಾರ್ಗದಲ್ಲಿ ಪ್ರವೇಶಿಸಬೇಕು. ಹಾಗಿಲ್ಲದಿದ್ದರೆ ಮುಕ್ತಿಯೆಂಬ ರಾಜಧಾನಿಗೆ ಹೋಗಲು ಸಾಧನವೆಂದು ಈಶ್ವರನಿಂದ ಅನುಗ್ರಹಿಸಲ್ಪಟ್ಟಿರುವ ಈ ಶರೀರವೆಂಬ ರಥವು ನರಕಸಾಧನವಾಗಿ ಪರಿಣಮಿಸಬೇಕಾಗುತ್ತದೆ. ಯಾವಾಗಲೂ ಸಂಸಾರವೆಂಬ ಕಾಡಿನಲ್ಲಿ ಅಲೆಯುತ್ತಿರುವ ಈ ಜೀವಾತ್ಮನು ತನ್ನ ಸ್ಥಾನವೆನಿಸಿದ ಶಿವರಾಜ್ಯವನ್ನು ಸೇರಲು ಅಪೇಕ್ಷಿಸಿ ಹೊರಟಿರುವದರಿಂದ ಈ ಶರೀರವು ಇಂದ್ರಿಯಗಳು ಮನಸ್ಸು ಮುಂತಾದ ಪದಾರ್ಥಗಳು ಆತ್ಮನಿಗೆ ಅನುಕೂಲಗಳಾಗಿರುವುದಕ್ಕೆ ಬದಲು ಪ್ರತಿಕೂಲಗಳಾಗಿರುವುದರಿಂದ ಆತ್ಮನು ಪರಮಾತ್ಮನನ್ನು ಮರೆತು ರಾಧಾಪುತ್ರನೆಂದೇ ತಿಳಿದುಕೊಂಡಿದ್ದ ಕರ್ಣನಂತೆ ವಿಷಯಸೌಖ್ಯವೇ ನನ್ನ ಪರಮಧ್ಯೇಯವೆಂದು ತಿಳಿದುಕೊಂಡಿದ್ದಾನೆ. ಶ್ರೀಕೃಷ್ಣನ ಬೋಧೆಯಿಂದ ನಿಜವೃತ್ತಾಂತವನ್ನು ತಿಳಿದುಕೊಂಡಂತೆ ಸದ್ಗುರುವಿನ ಕಟಾಕ್ಷದಿಂದ ಆತ್ಮನು ನಿಜವೃತ್ತಾಂತವನ್ನು ತಿಳಿದ ಹೊರತು ಪರಿಭ್ರಮಣವು ತಪ್ಪುವಂತಿಲ್ಲ.

ಒಳದೇಶದ ವೃತ್ತಾಂತಗಳು.

ಶೃಂಗೇರಿ ಜಹಗೀರಿ ಮತ್ತು ಮಠದ ಏಜಂಟರಾಗಿದ್ದ ರಾವ್ ಬಹದ್ದೂರ್ ಎಂ. ಎಸ್. ನಂಜುಂಡಯ್ಯನವರು ತಮ್ಮ ಅಧಿಕಾರದಿಂದ ನಿವೃತ್ತರಾದರೆಂದೂ ಈ ಮೊದಲು ಏಜಂಟರಾಗಿದ್ದ ವೇ|| ಶ್ರೀಕಂಠಶಾಸ್ತ್ರಿಗಳೇ ಮತ್ತೆ ಏಜಂಟರಾಗಿರುವರೆಂದೂ ತಿಳಿದು ಬಂದಿದೆ.

ಬೆಂಗಳೂರು ದಂಡಿನ ಹ್ಯಾರಿಸ್ ಬ್ಯಾರಕ್ಸಿನಲ್ಲಿ 5,000 ಹೊರೆಗಳ ಒಂದು ದೊಡ್ಡ ಹುಲ್ಲುಮೆದೆಗೆ ಬೆಂಕಿ ಬಿದ್ದು ವಿಶೇಷ ನಷ್ಟ ಸಂಭವಿಸಿತು. ಫೈರ್ ಬ್ರಿಗೇಡಿನವರು ಮತ್ತು ಸ್ಟಾಫರ್ಡ್‌ಷೈರ್ ರೆಜಿಮೆಂಟಿನವರು 10 ಗಂಟೆಗಳ ಕಾಲ ಪ್ರಯಾಸಪಟ್ಟು ಬೆಂಕಿಯನ್ನು ಆರಿಸಿದರು.

ಇದೇ ಡಿಸೆಂಬರ್ 21 ನೇ ತಾರೀಖಿನ ದಿವಸ ಶ್ರೀಮನ್ಮಹಾರಾಜರವರು ಅಕ್ಕೀಹೆಬ್ಬಾಳಿನ ಸಮೀಪದಲ್ಲಿ ಹೇಮಾವತಿ ನದಿಗೆ ಕಟ್ಟಿರುವ ಹೊಸ ಸೇತುವೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಸೇತುವೆಗೆ ಶ್ರೀನರಸಿಂಹರಾಜ ಸೇತುವೆಯೆಂದು ಹೆಸರಿಡಲ್ಪಟ್ಟಿರುವದು.

ಈಗ್ಗೆ ಕೆಲವು ತಿಂಗಳುಗಳ ಹಿಂದೆ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ನಾನಾಸಾಹೇಬ್ ಎಂಬ ಖೈದಿಯು ಭೋಗಪ್ಪನೆಂಬ ಮತ್ತೊಬ್ಬ ಖೈದಿಯನ್ನು ಕೊಂದನೆಂಬ ಕಾರಣದಮೇಲೆ ಸೆಷನ್ಸ್ ಜಡ್ಜರವರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿರುತ್ತಾರೆ.

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾದ ಸರ್ ಛಾರ್ಲ್ಸ್ ಟಾಡ್ ಹಂಟರ್‌ರವರು ಸೀಮೆಗೆ ಹೋಗಿಬರುವದಕ್ಕಾಗಿ ಮೂರೂವರೆ ತಿಂಗಳ ರಜೆಯನ್ನು ಪಡೆದಿರುತ್ತಾರೆ. ಈ ಅವಧಿಯಲ್ಲಿ ಹುಜೂರು ಸೆಕ್ರೆಟರಿಗಳಾಗಿರುವ ರಾಜಸಭಾಭೂಷಣ ಮಿ|| ಟಿ. ತಂಬೂಚೆಟ್ಟಿಯವರೇ ಪ್ರೈವೆಟ್ ಸೆಕ್ರೆಟರಿಯವರ ಕೆಲಸವನ್ನೂ ನೋಡುವರು.

ಮೈಸೂರು ತಾಲೂಕು ಕಚೇರಿ ಖಜಾನೆಯಲ್ಲಿ ಸುಮಾರು 12,000 ರೂ. ಗಳನ್ನು ದುರುಪಯೋಗಪಡಿಸಿದರೆಂಬ ಕಾರಣದ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ತಾಲೂಕು ಶಿರಸ್ತೇದಾರರಾಗಿದ್ದ ಪಿ. ಎನ್. ವೆಂಕಟರಾಘವಯ್ಯಂಗಾರ್ ಮತ್ತು ಸರಾಫ್ ಹೊನ್ನಯ್ಯ ಇವರಿಬ್ಬರಿಗೂ ಮೂರು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದರು. ಅಪರಾಧಿಗಳು ಇದರ ಮೇಲೆ ಸೆಷನ್ಸ್ ಕೋರ್ಟಿಗೆ ಅಪೀಲ್ ಮಾಡಿದ್ದರು. ಡಿಸ್ಟ್ರಿಕ್ಟ್ ಜಡ್ಜರು ಕೆಳಕೋರ್ಟಿನ ತೀರ್ಮಾನವನ್ನೇ ಸ್ಥಿರಪಡಿಸಿದರು.

ಚಿಂತಾಮಣಿ ಕನ್ಯಾಪಹಾರದ ಮೊಕದ್ದಮೆಯಲ್ಲಿ ಶಿಕ್ಷಿಸಲ್ಪಟ್ಟ ಅಪರಾಧಿಗಳ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲು ಬೆಂಗಳೂರು ನಗರದ ಮುಸಲ್ಮಾನ್ ವರ್ತಕರೆಲ್ಲರೂ ಇದೇ ಡಿಸೆಂಬರು 18 ನೇ ತಾರೀಖಿನ ದಿವಸ ತಮ್ಮ ಅಂಗಡಿಗಳನ್ನು ಮುಚ್ಚಿ ಹರತಾಳವನ್ನಾಚರಿಸಿದರೆಂದೂ, ಪ್ರಾತಃಕಾಲ ಉಸ್ಮಾನಿಯಾ ಥಿಯೇಟರಿನಲ್ಲಿ ಮುಸಲ್ಮಾನರು ಸಭೆಸೇರಿ 5,000 ರೂ. ಗಳ ಚಂದಾ ಕೂಡಿಸಬೇಕೆಂದೂ, ಶ್ರೀಮನ್ಮಹಾರಾಜರವರಿಗೆ ಒಂದು ಮೆಮೋರಿಯಲ್ಲನ್ನು ಅರ್ಪಿಸಬೇಕೆಂದು ತೀರ್ಮಾನಿಸಿದರೆಂದೂ ತಿಳಿದುಬಂದಿದೆ.

ಕಳೆದ ಜೂನ್ ತಿಂಗಳಲ್ಲಿ ರಾಜಧಾನಿಯ ಶ್ರೀಮನ್ಮಹಾರಾಜರವರ ಛತ್ರದಲ್ಲಿ ಯಜ್ಞವು ನಡೆಯುತ್ತಿದ್ದಾಗ, ಎಂ. ಸಿ. ಮಲ್ಲಪ್ಪ, ಎಸ್. ಶ್ರೀನಿವಾಸರಾವ್, ಎಸ್. ಶ್ರೀನಿವಾಸಯ್ಯ ಎಂಬ 3 ಜನರು ಯಾಗಕ್ಕೆ ವಿರುದ್ಧವಾಗಿ ಹಸ್ತಪತ್ರಿಕೆಗಳನ್ನು ಹಂಚುತ್ತ ನೆಮ್ಮದಿ ಭಂಗಪಡಿಸಿದರೆಂಬ ಕಾರಣದ ಮೇಲೆ ಪೋಲೀಸರು ಮೊಕದ್ದಮೆಯನ್ನು ಹೂಡಿದ್ದರು. ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ 1 ಮತ್ತು 3ನೇ ಅಪರಾಧಿಗಳಿಗೆ ತಲಾ ಹತ್ತು ರೂ. ಗಳ ಜುಲ್ಮಾನೆಯನ್ನೂ, 2 ನೇ ಅಪರಾಧಿಗೆ 20 ರೂ. ಜುಲ್ಮಾನೆಯನ್ನೂ, ತಪ್ಪಿದರೆ ಒಂದೊಂದು ತಿಂಗಳ ಕಠಿಣ ಶಿಕ್ಷೆಯನ್ನೂ ವಿಧಿಸಿರುತ್ತಾರೆ.

1933 ನೇ ಇಸವಿಯ ದಸರಾ ವಸ್ತುಪ್ರದರ್ಶನದ ಸೆಕ್ರೆಟರಿಗಳಾದ ಮ|| ರಾ|| ಎಸ್. ಜಿ. ಶಾಸ್ತ್ರಿಗಳವರು ಪ್ರದರ್ಶನದ ಕೈಪಿಡಿಯನ್ನು ಕನ್ನಡದಲ್ಲಿ ಪ್ರಕಟಿಸಿರುತ್ತಾರೆ. ಇದರಲ್ಲಿ ಅನೇಕ ಮನೋಹರಗಳಾದ ಚಿತ್ರಪಟಗಳೂ, ಪ್ರದರ್ಶನದ ಹಾಗೂ ಸರಕಾರೀ ಇಲಾಖೆಗಳ ಸಂಕ್ಷಿಪ್ತ ವಿವರಣೆಗಳೂ ಸರ್ವರಿಗೂ ಸುಲಭವಾಗಿ ತಿಳಿಯುವಂತೆ ವಿವರಿಸಲ್ಪಟ್ಟಿರುವವು. ಈ ಪುಸ್ತಕವನ್ನು ಸಿದ್ಧಗೊಳಿಸಲು 5 ಆಣೆಗಿಂತಲೂ ಹೆಚ್ಚು ವೆಚ್ಚವಾಗಿರುವದಾದರೂ ಮ|| ರಾ|| ಎಸ್. ಜಿ. ಶಾಸ್ತ್ರಿಗಳವರು ಕನ್ನಡವನ್ನು ತಿಳಿದವರೆಲ್ಲರೂ ಇದನ್ನು ಓದಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ಕ್ರಯವನ್ನು ಕೇವಲ 2 ಆಣೆಗಳಿಗೆ ಇಳಿಸಿರುತ್ತಾರೆ. ಕೇವಲ ಲಾಭ ಅಥವಾ ನಷ್ಟದ ಕಡೆಗೆ ಗಮನಕೊಡದೆ ಪ್ರದರ್ಶನದ ವಿಷಯಗಳು ಎಲ್ಲ ಜನರಿಗೂ ತಿಳಿಯಲೆಂಬ ಉದ್ದೇಶದಿಂದ ಮ|| ರಾ|| ಶಾಸ್ತ್ರಿಗಳು ಈ ಕೈಪಿಡಿಯನ್ನು ಹೊರಡಿಸಿರುವದು ನಿಜವಾಗಿಯೂ ಸ್ತೋತ್ರಾರ್ಹವಾಗಿದೆ.

ಇದೇ ಡಿಸೆಂಬರ್ 13 ನೇ ತಾರೀಖಿನ ದಿವಸ ಕೊಳ್ಳೇಗಾಲದಿಂದ ಸಾಲಿಗ್ರಾಮಕ್ಕೆ ಒಬ್ಬ ಹಿಂದೂ ಹುಡುಗಿಯೂ, ಆಕೆಯ ಗಂಡ ಮತ್ತು ಅಣ್ಣಂದಿರು ಪ್ರಯಾಣಮಾಡುತ್ತ ಮಧ್ಯಮಾರ್ಗದಲ್ಲಿ ಟಿ. ನರಸೀಪುರ ತಾ|| ಗರ್ಗೇಶ್ವರಿಯ ಬಳಿ ಕಾವೇರಿ ನದೀತೀರದಲ್ಲಿ ಊಟಮಾಡುತ್ತ ಕುಳಿತಿದ್ದಾಗ ಕೆಲವು ಜನ ಮುಸಲ್ಮಾನರು ಆ ಹುಡುಗಿಯನ್ನು ಅಪಹರಿಸಬೇಕೆಂದು ಯೋಚಿಸಿ ತಮ್ಮ ಗಾಡಿಯಲ್ಲಿ ಮೈಸೂರಿಗೆ ಕರೆದುಕೊಂಡು ಹೋಗುವದಾಗಿ ಹೇಳಿದರೆಂದೂ, ಹುಡುಗಿಯ ತಮ್ಮನು ಮುಸಲ್ಮಾನರು ತಮ್ಮತಮ್ಮಲ್ಲಿ ಆಡಿಕೊಳ್ಳುತ್ತಿದ್ದ ದುಷ್ಟಮಾತುಗಳನ್ನು ಕೇಳಿ ಗಾಬರಿಯಿಂದ ಅವರ ಗಾಡಿಗೆ ಹೋಗದೆ ಬಸ್ಸಿನಲ್ಲಿ ಕುಳಿತು ಮೈಸೂರಿಗೆ ಹೊರಡುವಷ್ಟರಲ್ಲಿ ಬಸ್ಸಿನ ಡ್ರೈವರೂ ಸಹ ಮುಸಲ್ಮಾನನೇ ಆಗಿದ್ದು ಅವರನ್ನು ಬಲಾತ್ಕಾರವಾಗಿ ಕೆಳಕ್ಕೆ ಇಳಿಸಿದರೆಂದೂ, ಇಷ್ಟರಲ್ಲಿ ಮುಸಲ್ಮಾನರು ಗುಂಪುಗುಂಪಾಗಿ ಹುಡುಗಿಯನ್ನು ಸುತ್ತುಕಟ್ಟಿ, 'ಹುಡುಗಿಯು ನಮ್ಮವಳು, ಇವರು ಯಾರೋ' ಅವಳನ್ನು ಅಪಹರಿಸಿಕೊಂಡು ಹೋಗುತ್ತಿರುವರು' ಎಂದು ಸಾಧಿಸಲಾರಂಭಿಸಿದರೆಂದೂ, ಇದನ್ನೆಲ್ಲಾ ಒಬ್ಬ ಮುಸಲ್ಮಾನ ಕಾನ್ಸ್ಟೆಬಲನು ನೋಡುತ್ತಿದ್ದರೂ ಸುಮ್ಮನೆ ನಗುತ್ತಾನಿಂತಿದ್ದನೆಂದೂ, ಅಷ್ಟರಲ್ಲಿ ಒಬ್ಬ ಹಿಂದುವೂ, ಇನ್ನೊಬ್ಬ ಹಿಂದೂ ದಫೇದಾರನೂ ಅಲ್ಲಿಗೆ ಬಂದು ಅವರೆಲ್ಲರನ್ನೂ ನರಸೀಪುರಕ್ಕೆ ಕರೆದುಕೊಂಡು ಹೋಗಿ ಇನ್ನೊಂದು ಬಸ್ಸಿನಲ್ಲಿ ಮೈಸೂರಿನ ಮಾರ್ಗವಾಗಿ ಸಾಲಿಗ್ರಾಮಕ್ಕೆ ಕಳುಹಿಸಿದರೆಂದೂ ತಿಳಿದುಬಂದಿದೆ. ಈಚೆಗೆ ಹುಡುಗಿಯ ಅಣ್ಣನು ಈ ವಿಷಯವಾಗಿ ಫಿರ್ಯಾದು ಮಾಡಿರುವನೆಂದೂ, ಅಮಲ್ದಾರರೂ ಮತ್ತು ಇನ್ಸ್ಪೆಕ್ಟರೂ ತನಿಖೆಮಾಡುತ್ತಿರುವರೆಂದೂ ತಿಳಿದುಬಂದಿದೆ.

ವರ್ತಮಾನಸಂಗ್ರಹ.

ಲಂಡನ್ನಿನ ಮೃಗಾಲಯದಲ್ಲಿರುವ 120 ವರ್ಷದ ಆನೆಯು ಒಂದು ವರ್ಷದಿಂದಲೂ ನಿದ್ರೆಮಾಡುತ್ತಿರುವದಂತೆ!

ಗ್ರೇಟ್‌ಬ್ರಿಟನ್ ದೇಶದ ಜನರು ಕುದುರೆ, ನಾಯಿ ಮೊದಲಾದ ಜೂಜುಗಳಲ್ಲಿ ಪ್ರತಿವರ್ಷವೂ 10,00,00,00,000 ರೂ. ಗಳಿಗಿಂತಲೂ ಹೆಚ್ಚು ಹಣವನ್ನು ವೆಚ್ಚಮಾಡುವರಂತೆ!

ತಿನ್ನವೆಲ್ಲಿಯ ಸಮೀಪದಲ್ಲಿರುವ ಆನೆಯಕ್ಕಡಿರಪ್ಪು ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸು 3 ಹೆಣ್ಣು 1 ಗಂಡು ಈ ರೀತಿಯಾಗಿ ಏಕಕಾಲದಲ್ಲಿ 4 ಮಕ್ಕಳನ್ನು ಪ್ರಸವಿಸಿರುವಳು. ಮಕ್ಕಳೂ ತಾಯಿಯೂ ಆರೋಗ್ಯವಾಗಿರುತ್ತಾರೆ.

ವೈಸರಾಯರಾದ ಲಾರ್ಡ್ ವಿಲಿಂಗ್ಡನ್‌ರವರು ಬರುವ ಮೇ ತಿಂಗಳಲ್ಲಿ 4 ತಿಂಗಳ ಕಾಲ ರಜೆಯನ್ನು ಪಡೆದು ಇಂಗ್ಲೆಂಡಿಗೆ ಹೋಗುವರೆಂದೂ, ಈ ಅವಧಿಯಲ್ಲಿ ಮದರಾಸ್ ಗವರ್ನರಾದ ಸರ್ ಜಾರ್ಜ್ ಸ್ಟಾನ್ಲಿಯವರು ಹಂಗಾಮಿ ವೈಸರಾಯರಾಗುವರೆಂದೂ ತಿಳಿದುಬಂದಿದೆ.

ನೆಲ್ಲೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದ ವೆಂಕಟಗಿರಿಯ ಕುಮಾರರಾಜರವರು ಗಾಂಧಿಯವರು ನೆಲ್ಲೂರಿಗೆ ಬಂದಾಗ ಅವರ ಸ್ವಾಗತಸಮಾರಂಭದಲ್ಲಿ ಭಾಗವಹಿಸಲು ತಮಗೆ ಇಷ್ಟವಿಲ್ಲವೆಂದೂ ಅವರ ರಾಜಕೀಯ ವರ್ತನಗಳು ತಮ್ಮ ಮನಸ್ಸಿಗೆ ಒಪ್ಪಿಗೆಯಾಗದಿರುವದೇ ಇದಕ್ಕೆ ಕಾರಣವೆಂದೂ ತಿಳಿಸಿರುವರು.

ಸೇಲಂ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ರಂಗರಾಯರ್ ಮತ್ತು ರಾಮರಾಯರ್ ಎಂಬ ಇಬ್ಬರು ಖೈದಿಗಳು ಸೆರೆಮನೆಯ ಕಿಟಕಿಯ ಸಲಾಕಿಗಳನ್ನು ಮುರಿದು ಗೋಡೆಯನ್ನು ಹಾರಿ ಪರಾರಿಯಾಗಿರುವರು. ಪೋಲೀಸರು ಅಪರಾಧಿಗಳನ್ನು ಹುಡುಕುತ್ತಿರುವರು.

ಅಫ್‌ಘಾನಿಸ್ಥಾನದ ರಾಜರಾದ ನಾದಿರ್‌ಷಾರವರನ್ನು ಕೊಲೆಮಾಡಿದ ಅಬ್ದುಲ್ ಖಲೀಕ್ ಮತ್ತು ಮಹಮ್ಮದ್ ಎಂಬಿಬ್ಬರಿಗೆ ಮರಣದಂಡನೆಯೂ, ಇವರ ಸಹಾಯಕರಾಗಿದ್ದ ಇಸ್ಹಾಕ್ ಮತ್ತು ಅಬ್ದುಲ್ಲಾ ಎಂಬಿಬ್ಬರಿಗೆ ಆಮರಣಾಂತ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟಿತು.

ರೊಮೇನಿಯಾ ದೇಶಕ್ಕೆ ಸೇರಿದ ಗ್ಯಾಲಟ್ಜ್ ಎಂಬ ಗ್ರಾಮದ ಇಬ್ಬರು ನೇಯಿಗೆ ಸ್ತ್ರೀಯರು ಅನೇಕ ಬೆಕ್ಕುಗಳನ್ನು ಸಾಕಿ ಪಕ್ಕದ ಮನೆಗಳಲ್ಲಿರುವವರಿಗೆ ಬಹಳ ತೊಂದರೆಯನ್ನುಂಟುಮಾಡುತ್ತಿದ್ದರೆಂಬ ಕಾರಣದಮೇಲೆ ಶಿಕ್ಷೆಗೆ ಗುರಿಯಾಗಿರುವರು. ಪೋಲೀಸರು ಇವರ ಮನೆಯನ್ನು ಶೋಧಿಸಿದಾಗ 150 ಬೆಕ್ಕುಗಳಿದ್ದುವಂತೆ!

ಈಗ್ಗೆ ಕೆಲವು ತಿಂಗಳುಗಳ ಹಿಂದೆ ನೀಲಗಿರಿಯಲ್ಲಿರುವ ಟ್ರಾವಂಕೂರ್ ನ್ಯಾಷನಲ್ ಬ್ಯಾಂಕಿನಲ್ಲಿ ದರೋಡೆಮಾಡಿ ಪರಾರಿಯಾಗಿದ್ದ 6 ಜನ ಯುವಕರಿಗೆ ಮ್ಯಾಜಿಸ್ಟ್ರೇಟರು ಗಡೀಪಾರು ಶಿಕ್ಷೆಯನ್ನು ವಿಧಿಸಿದ್ದರು. ಆದರೆ ಹೈಕೋರ್ಟಿನಲ್ಲಿ ಅಪೀಲ್ ಮಾಡಲು, ಅಪರಾಧಿಗಳು ಇನ್ನೂ ತರುಣರೆಂಬ ಕಾರಣದಮೇಲೆ 10 ವರ್ಷಗಳ ಕಠಿಣಶಿಕ್ಷೆಯು ವಿಧಿಸಲ್ಪಟ್ಟಿತು.

ಆಫ್ರಿಕಾದೇಶಕ್ಕೆ ಸೇರಿದ ನೈರೋಬಿ ನಗರದಲ್ಲಿ ಜಾನ್‌ಸನ್ ಎಂಬ ಯೂರೋಪಿಯನ್ನನು ಒಬ್ಬ ನೀಗ್ರೋ ಕೂಲಿಯನ್ನು ಕೊಂದನು. ಪೋಲೀಸರು ಜಾನ್‌ಸನ್ನನನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅಪರಾಧಿಯು 100 ಪೌಂಡುಗಳ ಜಾಮೀನನ್ನು ಕೊಟ್ಟು ಒಂದು ವರ್ಷದವರೆಗೆ ಒಳ್ಳೇ ನಡತೆಯ ಬಗ್ಗೆ ಮುಚ್ಚಳಿಕೆಯನ್ನು ಬರೆದುಕೊಡಬೇಕೆಂದು ಅಪ್ಪಣೆಮಾಡಿದರು.

ಕಳೆದ ಘೋರಯುದ್ಧವು ಪ್ರಾರಂಭವಾದಾಗ ಜರ್ಮನಿಯಲ್ಲಿ 218 ಏರೋಪ್ಲೇನುಗಳಿದ್ದುವು. 1918ನೇ ನವೆಂಬರ್ 11ನೇ ತಾರೀಖಿನ ದಿವಸ ಶಾಂತಿಪತ್ರಕ್ಕೆ ರುಜುಹಾಕಿದಾಗ ರಣರಂಗದಲ್ಲಿ 5,000 ಏರೋಪ್ಲೇನುಗಳೂ, ಯುದ್ಧಶಿಕ್ಷಣಪ್ರದೇಶಗಳಲ್ಲಿ 9,000 ಏರೋಪ್ಲೇನುಗಳೂ, ಮತ್ತು ಕಾರ್ಖಾನೆಗಳಲ್ಲಿ ತಯಾರಾಗಿ ಸಿದ್ಧವಾಗಿ 5-6000 ಏರೋಪ್ಲೇನುಗಳೂ, 33,000 ಮೋಟಾರುಗಳೂ ಇದ್ದವಂತೆ! ಯುದ್ಧಪ್ರಾರಂಭದಲ್ಲಿ ಜರ್ಮನಿಯಲ್ಲಿ 8 ವಿಮಾನಗಳ ಕಾರ್ಖಾನೆಗಳಿದ್ದು ಯುದ್ಧಾಂತ್ಯದಲ್ಲಿ 53 ಕಾರ್ಖಾನೆಗಳಿದ್ದವಂತೆ! ಅಂತೂ ಜರ್ಮನಿಯವರು ಯುದ್ಧಕಾಲದಲ್ಲಿ 44,000 ಏರೋಪ್ಲೇನುಗಳನ್ನೂ, 48,000 ಮೋಟಾರುಗಳನ್ನೂ ತಯಾರಿಸಿದರು. ಇದಕ್ಕಾಗಿ 1,00,000 ಜನರು ಕೆಲಸಮಾಡುತ್ತಿದ್ದರು. ಯುದ್ಧಾಂತ್ಯದಲ್ಲಿ ಜರ್ಮನಿಯವರು ಶತ್ರುಪಕ್ಷದವರಿಗೆ ಯುದ್ಧಭೂಮಿಯಲ್ಲಿದ್ದ 2,000 ಏರೋಪ್ಲೇನುಗಳನ್ನು ಕೊಟ್ಟರು. ಅಪಜಯಹೊಂದಿದ್ದ ಸೈನಿಕರು ನೂರಾರು ಏರೋಪ್ಲೇನುಗಳನ್ನು ರಣರಂಗದಲ್ಲಿಯೇ ಬಿಟ್ಟು ಓಡಿದರು. ಆಮೇಲೆ ವಾರ್ಸೇಲ್ಸ್ ಕರಾರಾದನಂತರ ಜರ್ಮನಿಯವರು 14,000 ಏರೋಪ್ಲೇನುಗಳನ್ನೂ, 28,000 ಮೋಟಾರುಗಳನ್ನೂ ನಾಶಮಾಡಿದರು.

ವಿಚಿತ್ರ ವಧೂವರರು.

ಬರ್ಮಿಂಗ್‌ಹ್ಯಾಂ ನಗರದ 5 ಅಡಿ 8 ಅಂಗುಲ ಎತ್ತರವುಳ್ಳ ಒಬ್ಬ ಮನುಷ್ಯನು 2 ಅಡಿ 9 ಅಂಗುಲ ಎತ್ತರವುಳ್ಳ ಒಬ್ಬ ಕುಬ್ಜೆಯನ್ನು ಮದುವೆಯಾಗಿರುವನಂತೆ!

ವಿಚಿತ್ರ ಮೀನುಗಳು.

ಸ್ಪೇನ್ ದೇಶದ 'ಮ್ಯಾಕರಲ್' ಎಂಬ ಮೀನು ಸಾಮಾನ್ಯವಾಗಿ 10 ಪೌಂಡ್ ತೂಕವಿರುವದು. ಇದು 18,00,000 ತತ್ತಿಗಳನ್ನಿಡುವದಂತೆ! ಈ ತತ್ತಿಗಳೆಲ್ಲವೂ ಮರಿಗಳಾಗಿ, ಅವುಗಳೂ ಪುನಃ ತತ್ತಿಗಳನ್ನಿಡುತ್ತಾ ಬಂದರೆ 5 ತಲೆಗಳು ಕಳೆಯುವ ವೇಳೆಗೆ ಅವುಗಳ ಒಟ್ಟು ತೂಕವು ಭೂಮಿಯ ತೂಕಕ್ಕೆ 7 ರಷ್ಟಾಗುವದಂತೆ!

ಕ್ಷೌರದ ನಿರ್ಣಯ.

ಅಮೇರಿಕೆಯ ಸಂಯುಕ್ತಸಂಸ್ಥಾನಕ್ಕೆ ಸೇರಿದ ಎಲ್ಲ ನಗರಗಳಲ್ಲಿಯೂ ಕ್ಷೌರಕ್ಕೆ 2 ಷಿಲಿಂಗ್ ತೆಗೆದುಕೊಳ್ಳುವರು. ಆದರೆ ಸ್ಯಾನ್ ಫ್ರಾನ್‌ಸಿಸ್ಕೋ ನಗರದಲ್ಲಿ 2½ ಷಿಲಿಂಗ್ ತೆಗೆದುಕೊಳ್ಳಬೇಕೆಂದು ಸರಕಾರದ ಕಾನೂನಾಗಿರುವದರಿಂದ ಅಲ್ಲಿಯ ಜನರು ಇನ್ನುಮುಂದೆ ಕ್ಷೌರಮಾಡಿಸುವದನ್ನು ನಿಲ್ಲಿಸಿ ಉದ್ದವಾಗಿ ಕೂದಲು ಬೆಳೆಯಿಸಬೇಕೆಂದು ನಿರ್ಧರಿಸಿರುವರಂತೆ!

ಅದ್ಭುತವಾದ ಲೌಡ್‌ಸ್ಪೀಕರ್.

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಶಬ್ದವರ್ಧಕ ಯಂತ್ರವು (ಲೌಡ್ ಸ್ಪೀಕರ್) ರಷ್ಯಾದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವದು. ಇದರ ಧ್ವನಿಯು 30 ಮೈಲುಗಳ ದೂರದವರೆಗೆ ಕೇಳಿಸುವದಂತೆ!

ಸ್ವೀಕಾರ

ರಾಯಚೂರು ಜಿಲ್ಲಾ ಸಿಂಧನೂರು ತಾಲೂಕು ಧಡೇಸೂಗುರು ದೇಶಿಕ ಮಠದ ಶ್ರೀ|| ಅಮರಗಣನಾಥ ಸ್ವಾಮಿಗಳವರು ಚಿಕ್ಕ ಹೆಸರೂರು ಗ್ರಾಮದಲ್ಲಿ ಶ್ರೀಮದುಜ್ಜಯಿನೀ ಜಗದ್ಗುರುಗಳವರ ಹೆಸರಿನಿಂದ ಭಜನಾಸಂಘವನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ. ಯು ಬನ್ನಿಕೊಪ್ಪ ಹಿರೇಮಠದ ವೇ|| ಅಮರನಾಥ ಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗ ಡಿ|| ಹಾರನಹಳ್ಳಿಯಲ್ಲಿರುವ ಮ|| ರಾ|| ದಂಡೂರಬಸವಪ್ಪನವರ ಮೊಮ್ಮಗಳು ಚಿ|| ಸೌ|| ಶಂಕರಮ್ಮನೆಂಬ ಬಾಲಿಕೆಗೆ ಪ್ರಾಪ್ತವಾಗಿದ್ದ ಗ್ರಹಪೀಡೆಯು ಶ್ರೀ ಜಗದ್ಗುರು ರೇಣುಕಭಗವತ್ಪಾದರವರ ಆಶೀರ್ವಾದಬಲದಿಂದ ಬಿಡುಗಡೆಯಾದ ಸಂತೋಷಾರ್ಥವಾಗಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಗುಬ್ಬಿ ಶಿವಕಥಾ ಪಂಡಿತ ಶ್ರೀ|| ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಪ್ರಸೀದ

ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಮಹಿಮೆಯೂ, ಭಜನಾಸಂಘಸ್ಥಾಪನವೂ

ಗೆಜ್ಜಲಗಟ್ಟಿ ಸಂಸ್ಥಾನದಿಂದ ಧರೇಸೂಗೂರು ದೇಶಿಕಮಠಾಧಿಕಾರಿಗಳಾದ ಶ್ರೀ|| ಷ|| ಬ್ರ|| ಅಮರಗಣನಾಥ ಶಿವಾಚಾರ್ಯ ದೇಶಿಕೇಂದ್ರರು ರೇಣುಕವಿಜಯ ಮಹಾಪುರಾಣ ಶ್ರವಣಾರ್ಥವಾಗಿ ಚಿಕ್ಕಹೆಸರೂರಿಗೆ ದಯಮಾಡಿಸಿ ಶ್ರೀ ಶಿವಾನಂದ ಮಂದಿರದಲ್ಲಿ ಶ್ರೀಮಂತ ಬಸವಪ್ರಭುಗಳ ಆತಿಥ್ಯದಲ್ಲಿರಲು ಅವರು ಒಮ್ಮೆ ಬಂಡಿಯಮೇಲಿಂದ ಬಿದ್ದ ಕಾಲಕ್ಕೆ ಬಲಗೈ ರಟ್ಟೆಗೆಪೆಟ್ಟು ತಗಲಿ ಅಸ್ಥಿಯು ಮುರಿದದ್ದರಿಂದ, ಅದೇ ಕೈಯಿಂದ ಲೇಸಗ ಅನ್ನು ಹಿಕ್ಕಿಕೊಂಡು ಸ್ನಾನಮಾಡುವಾಗ ಮುರಿದ ಅಸ್ಥಿಯು ಸ್ಥಾನಾಂತರವಾಗಿ ಬಹಳ ತೊಂದರೆಯನ್ನು ಕೊಡಲು, ಪರಿಚಾರಕರು ಎಣ್ಣೆಯನ್ನು ತಿಕ್ಕಲು ರಟ್ಟೆಯು ಬಾತು ಸ್ವಲ್ಪವಾದರೂ ಗುಣವಾಗದೆ ಸಕಲರೂ ಆಲೋಚನಾಮಗ್ನರಾಗಲು, ವೇ|| ಕವೀಂದ್ರ ಅಮರನಾಥಶಾಸ್ತ್ರಿಗಳವರು ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ನಾಮಸ್ಮರಣೆಯಂಮಾಡಿದರೆ ತಪ್ಪದೆ ಗುಣವಾಗುವದೆಂದು ಹೇಳಲು, ಶ್ರೀಮತಿ ರಾಣಿ ಅಮರಮ್ಮನವರು ಗುರುಮೂರ್ತಿಗಳ ಆಜ್ಞೆಯಂತೆ ಮತ್ತೆ ನಿರ್ಮಲಸ್ನಾನವನ್ನು ಮಾಡಿಸಲು ಧ್ಯಾನತತ್ಪರರಾದ ದೇಶಿಕೇಂದ್ರರ ಬಲಗೈ ರಟ್ಟೆಯ ಅಸ್ಥಿಯು ಮೊದಲಿದ್ದಂತೆ ಗುಣವಾಯಿತು. ಆಗ ದೇಶಿಕೇಂದ್ರರು ಜಗದ್ಗುರು ಪುಂಗವರ ಹೆಸರಿನಿಂದ ಭಜನಾಸಂಘವನ್ನು ಸ್ಥಾಪಿಸಬೇಕೆಂದು ತಮ್ಮ ಅಧ್ಯಕ್ಷತೆಯಲ್ಲಿ ಭಕ್ತಾದಿಗಳನ್ನು ಕರೆಯಿಸಿ ನಂದೀಶ್ವರ ದೇವಾಲಯದಲ್ಲಿ ಸಭೆಯನ್ನು ಕೂಡಿಸಿದರು. ಆಗ್ಗೆ ಕವೀಂದ್ರರು ಸಿದ್ಧಲಿಂಗ ಶಿವಾಚಾರ್ಯರ ಈ ಒಳಗಾಗಿ ಜರುಗಿದ ಮಹಿಮೆಗಳನ್ನೂ ಸದ್ಯಃ ಜರುಗಿದ ಮಹಿಮೆಯನ್ನೂ ವಿಸ್ತಾರವಾಗಿ ಹೇಳಲು, ಸರ್ವರೂ "ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾರಾಜಕೀಜಯ ಎಂದು ಘೋಷಿಸಲು, ಕಾರ್ತಿಕ ಬ|| ೧೧ ಸೋಮವಾರ ದಿವಸ ಅದೇ ದೇವಾಲಯದಲ್ಲಿ ಭಜನಾಸಂಘವು ಸ್ಥಾಪನವಾಗಿ ಜಗದ್ಗುರುಗಳ ಮಂಗಲನೀರಾಜನವು ಕವೀಂದ್ರರಿಂದ ರಚನೆಯಾಗಿ ಗಾಯಕರಿಂದ ಹಾಡಲ್ಪಟ್ಟಿತು. ದೇಶಿಕೇಂದ್ರರು ಗುರುಧ್ವಜವನ್ನು ಕೈಯಲ್ಲಿ ಹಿಡಿದು ಸಂಘದವಶ್ಯಕತೆಯ ವಿಷಯಕ್ಕೆ ಭಾಷಣವನ್ನು ಮಾಡಿ ಧ್ವಜವನ್ನು ಸಂಘದವರ ವಶಕ್ಕೆಕೊಟ್ಟು ಅಜ್ಞಾನವಸ್ಥೆಯಲ್ಲಿದ್ದ ಶಿವಭಕ್ತರನ್ನು ಎಚ್ಚರಗೊಳಿಸಿದ ಪ್ರಭಾಪತ್ರಿಕೆಯ ಪೋಷಣೆಗಾಗಿ ೧ ರೂಪಾಯಿಯನ್ನು ಕವೀಂದ್ರರಿಗೊಪ್ಪಿಸಿ ಅವರು ಮಾಡುವ ಸಮಾಜಸೇವೆಯನ್ನುವರ್ಣಿಸಿ ಸರ್ವರಿಗೂ ಆಶೀರ್ವದಿಸಿ ಗೆಜ್ಜಲಗಟ್ಟಿಗೆ ಪ್ರಯಾಣವನ್ನು ಬೆಳೆಯಿಸಿದರು.

ಅಮರಾರ್ಯಶೋಕಬಾಳ,
ಕಾಲಾಮಾಸ್ತರ ಚಿಕ್ಕಹೆಸರೂರು.

ಸಂಘಸ್ಥಾಪಕರು.

ದೇಶಿಕೇಂದ್ರ ಅಮರಗಣನಾಥ ಶಿವಾಚಾರ್ಯ ಸ್ವಾಮಿಗಳು ಧರೇಸೂಗುರು

ಚಾಲಕರು ಮತ್ತು ಪ್ರಕಾಶಕರು.

ವೇ|| ಕವೀಂದ್ರ ಅಮರನಾಥ ಶಾಸ್ತ್ರಿಗಳು ಬೃಹನ್ಮಠ ಬನ್ನಿಕೊಪ್ಪ.

ಸಂಘಾಧ್ಯಕ್ಷರು.

ಶ್ರೀಮಂತ ಮ|| ರಾ|| ಬಸವಂತರಾವ್ ನಾಡಗೌಡ ಸಾಹೇಬರು.

ಕಾರ್ಯದರ್ಶಿಗಳು.

ಪರ್ವತಯ್ಯ ತುಪ್ಪದೂರು, ಬಸವನಗೌಡ ಪೋ||ಪಾ||
ಬಸವಯ್ಯ ಮಠದ, ಮಲ್ಲೇಶಪ್ಪಗೌಡ ಮಾ|| ಪಾ||
ಚಿನ್ನಪ್ಪ ಮಾ|| ಪಾ||

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ರೇಣುಕವಿಜಯ ಮಹಾಪುರಾಣಶ್ರವಣವೂ, ಶಿಷ್ಯರ ಸನ್ಮಾನವೂ.

ವೇ|| ಕವೀಂದ್ರರು ಸಂಸ್ಥಾನ ಗೆಜ್ಜಲಗಟ್ಟಿಯ ರಾಜಾಸಾಹೇಬರ ಆಮಂತ್ರಣದಂತೆ ದೀಪಾವಲಿಯಲ್ಲಿ ಜರಗುವ ಮಹಾಲಕ್ಷ್ಮೀ ಶಾರದಾದೇವತೆಗಳ ಪೂಜಾಕಾರ್ಯವನ್ನು ತೀರಿಸಿಕೊಂಡು ಚಿಕ್ಕಹೆಸರೂರು ಶಿವಾನಂದಮಂದಿರಕ್ಕೆ ಬರಲು ಶ್ರೀಮತಿ ರಾಣಿಸಾಹೇಬ ನಾಡಗೌಡ ಅಮರಮ್ಮನವರು ವೇ|| ಕವೀಂದ್ರ ಅಮರನಾಥ ಶಾಸ್ತ್ರಿಗಳನ್ನು ಕುರಿತು—"ಚಿದ್ಘನಶಿವಾಚಾರ್ಯರು ಅಮೃತವತಿ ಮಹಾದೇವಿ ಸಕ್ಕೇಂದ್ರ ಚೋಳಭೂಪಾದಿಗಳಿಗೆ ಶಿವಲೀಲೆಗಳನ್ನು ಬೋಧಿಸಿದಂತೆ" ತಾವಾದರೂ ರೇಣುಕವಿಜಯಪುರಾಣವನ್ನು ಬೋಧಿಸಬೇಕೆಂದು ಪ್ರಾರ್ಥಿಸಲು, ಇವರಲ್ಲಿರುವ ಶ್ರವಣರೂಪಭಕ್ತಿಯನ್ನು ಕಂಡು ಕಾರ್ತಿಕಮಾಸವು ಪೂರೈಸುವವರೆಗೂ ಗುರುಲೀಲೆಗಳನ್ನು ಸಿದ್ಧಾಂತಶಿಖಾಮಣಿ ರೇಣುಕವಿಜಯಾದಿ ಸಂಸ್ಕೃತ ಪ್ರಬಲ ಧರ್ಮಗ್ರಂಥಗಳ ಪ್ರಮಾಣಗಳಿಂದ ಬೋಧಿಸಿ ಧನ್ಯರನ್ನು ಮಾಡಿ ಮಾರ್ಗಶಿರ ಶು|| ೩ ದಿವಸ ಹೊರಡಲಿಕ್ಕೆ ಸಿದ್ಧರಾಗಲು, ಶ್ರೀಮತಿ ರಾಣಿ ಅಮರಮ್ಮನವರು ೨ ತೊಲಿ ಬಂಗಾರ ಮುಂಗುರವನ್ನೂ, ಶ್ರೀಮತಿ ರಾಣಿ ನಾಗಮ್ಮನವರು ೧ ತೊಲಿ ಬಂಗಾರದುಂಗುರವನ್ನೂ, ಶ್ರೀಮತಿ ಕಲಾಧುರೀಣೆ ಗುರುಬಸವಮ್ಮನವರು ೧೨ ತೊಲಿ ಬೆಳ್ಳಿಯ ತೀರ್ಥಸೇವನೆಯ ಬಟ್ಟಲನ್ನೂ ಮತ್ತು ಊಣ್ಣೆಯಿಂದ ರಚಿಸಿದ ವಿಚಿತ್ರ ಸಿಂಹಾಸನವನ್ನೂ, ಶ್ರೀಮಂತ ಮ|| ರಾ|| ನಾಡಗೌಡ ಬಸವಪ್ರಭುಗಳ ಹಸ್ತದಿಂದ ಕೊಡಿಸಿ ಸತ್ಕರಿಸಿದರು. ಇದಲ್ಲವೇ ನಿಜಗುರುಭಕ್ತಿಯು? ಇಂಥ ಗುರುಭಕ್ತಿಸಾಮ್ರಾಜ್ಯವನ್ನು ಆಳುವವನೇ ನಿಜವಾದ ವೀರಶೈವನು. ಅದಕ್ಕಾಗಿಯೇ ಹಿರಿಕ್ತರಳವಿಯು—"ಕರದೊಳ್ ತಾಳ್ದ ನಿಜೇಷ್ಟಲಿಂಗದೆ ಮನಂ ಪಂಚಾಕ್ಷರಂ ವಕ್ತ್ರದೊಳ್ | ಕೊರಳೊಳ್ ಶ್ರೀ ಶಿವಾಕ್ಷಮಾಲೆ ಭಸಿತಾಲೇಪಂ ಲಲಾಟಾಗ್ರದೊಳ್ || ಗುರುಪಾದಾಂಬುಜಸೇವೆ ಕಾಯದೊಳೊಡಂಬಟ್ಟಿರ್ದ ಭಕ್ತಂಗದಾರ್| ಸರಿ:ನಾಶಸಧೀನನಲ್ತೆ ಸತತಂ ಶ್ರೀಶೈಲಜಾವಲ್ಲಭಾ ||" ಎಂದು ರಾಜಶೇಖರವಿಳಾಸದಲ್ಲಿ ವರ್ಣಿಸಿರುವನು. ಅದಕಾರಣ ಚಿಕ್ಕಹೆಸರೂರು ಗ್ರಾಮವೇ ಧನ್ಯ! ಶ್ರೀ ಶಿವಾನಂದಮಂದಿರವೇ ಧನ್ಯ! ರೇಣುಕಚರಿತ್ರವನ್ನು ಕೇಳಿದ ಮಹಾಶಯರೇ ಧನ್ಯರು ಧನ್ಯರು! ಆಗ್ಗೆ ಕವೀಂದ್ರರು ಸಾಧ್ವೀಮಣಿತ್ರಯಕ್ಕೂ ಮತ್ತು ಮ|| ರಾ|| ಬಸವಪ್ರಭು ಚಿ|| ಶರಣಾಂಬೆ ಮೊದಲಾದವರಿಗೂ ರೇಣುಕನು ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನು ಕೊಡಲೆಂದು ಶುಭಾಶೀರ್ವಾದವನ್ನು ಮಾಡಿ ಸ್ವಗ್ರಾಮಕ್ಕೆ ಪ್ರಯಾಣವನ್ನು ಬೆಳೆಯಿಸಿದರು.

ಶಿವಾನಂದಮಂದಿರ ಕಾರ್ಯ
ಪಿ. ಎಮ್. ಗುರುಪಾದಾರ್ಯ ಚಿಕ್ಕಹೆಸರೂರು.

ಶ್ರೀ ಗೊಡಚಿ ವೀರಭದ್ರೇಶ್ವರನ ಜಾತ್ರೆ.

ತೊರಗಲ್ಲ ಸಂಸ್ಥಾನದಲ್ಲಿ ವಿರಾಜಿಸುವ ಪರಮಪವಿತ್ರವಾದ ಗೊಡಚೀಕ್ಷೇತ್ರವು ಶೈವ ಮತ್ತು ವೀರಶೈವರಿಗೆ ಪೂಜ್ಯಸ್ಥಾನವಾಗಿದೆ. ಪ್ರತಿ ವರುಷ ಈ ಜಾತ್ರೆಗೆ ೨೦-೨೫ ಸಾವಿರದವರೆಗೆ ಜನರು ಕೂಡುತ್ತಾರೆ. ಈ ಕ್ಷೇತ್ರದಲ್ಲಿ ಮಹಿಮಾತಿಶಯಗಳು ವಿಶೇಷವಾಗಿರುತ್ತವೆ. ಕ್ಷೇತ್ರ ಸುಧಾರಣೆಯು ಮಾತ್ರ ಇದುವರೆಗೆ ಆಗಿರುವದಿಲ್ಲ. ಈ ಯಾತ್ರೆಯಕಾಲಕ್ಕೆ ಜನರಿಗಾಗುವ ಕುಂದುಕೊರತೆಗಳು ಬಹಳವಾಗಿರುತ್ತವೆ. ಈ ಜಾತ್ರೆಯು ಚಳಿಗಾಲದಲ್ಲಿ ಆಗುವದು. ೨೦-೨೫ ಸಹಸ್ರ ಜನಗಳು ೩-೪ ದಿವಸಗಳವರೆಗೆ ಬಯಲಿನಲ್ಲಿಗುಡಾರಗಳನ್ನು ಹೊಡೆದುಕೊಂಡಿರುತ್ತಾರೆ. ಈ ಮೊದಲು ನಗ್ಗಲಿಮುಳ್ಳುಗಳ ವಿಶೇಷ ತೊಂದರೆಯನ್ನು ಕೊಡುತ್ತಿರುವಾಗ ಅವುಗಳಿಗಿಂತ ಹೆಚ್ಚಿನ ಕಷ್ಟವನ್ನು ಕೊಡುವ ದಕ್ಕಾಗಿ, ಪರಂಗಿಮುಳ್ಳಿನ ಬಳ್ಳಿಯು ಹಬ್ಬಿ ಅತ್ಯಂತ ಕಷ್ಟವನ್ನುಂಟುಮಾಡಿದೆ. ನೀರಿನ ತೊಂದರೆಯೂ ಅಸದಳವಾಗಿತ್ತು. ಆದರೆ ಕಳೆದ ವರುಷದ ಜಾತ್ರೆಯಕಾಲಕ್ಕೆ ಕಡಕೊಳ್ಳ ಹಿರೇಮಠದ ಶ್ರೀ ಸ್ವಾಮಿಗಳವರೂ ಸತ್ತಿಗೇರಿ ಹಿರೇಮಠದ ಶ್ರೀ ಸ್ವಾಮಿಗಳವರೂ ಕ್ಷೇತ್ರಸುಧಾರಣೆಗಾಗಿ ಒಂದು ಸಂಘವನ್ನೇರ್ಪಡಿಸಿ, ಸಂಘದ ಧ್ಯೇಯದಂತೆ ಈ ವರುಷದ ಜಾತ್ರೆಯಕಾಲಕ್ಕೆ ಜನರಿಗೆ ಅನೇಕ ಸೌಕರ್ಯಗಳನ್ನುಂಟುಮಾಡಿದರು. ಮುಖ್ಯವಾಗಿ ಹಳ್ಳದಲ್ಲಿ ಜನರು ಇಳಿಯದಂತೆಯೂ, ನೀರು ನಿರ್ಮಲವಾಗಿರುವಂತೆಯೂ, ಮಲಮೂತ್ರವಿಸರ್ಜನೆಗಾಗಿ ಪರಸೆಯನ್ನು ಬಿಟ್ಟು ದೂರ ಹೋಗುವಂತೆಯೂ ವ್ಯವಸ್ಥೆಯಾಗಿದ್ದುದು ಅತ್ಯಂತ ಆನಂದದ ಸಂಗತಿಯಾಗಿದೆ. ಇವೆಲ್ಲ ಕಾರ್ಯಗಳನ್ನು ನಿರ್ವಹಿಸಲು ಕಡಕೊಳ್ಳ ಬಾಲವೀರಸಂಘದ ಸ್ವಯಂಸೇವಕರನ್ನು ಗೊತ್ತುಮಾಡಿದರು. ಈ ಸ್ವಯಂಸೇವಕರು ಅತ್ಯಂತ ದಕ್ಷತೆಯಿಂದ ಕೆಲಸಮಾಡಿದರು. ತಾ|| ೧-೧೨-೧೯೩೩ ನೇ ಶುಕ್ರವಾರ ದಿವಸ ಶ್ರೀ ವೀರಭದ್ರೇಶ್ವರ ಮಹಾರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಉತ್ಸವದ ಪೂರ್ವದಲ್ಲಿ ತೊರಗಲ್ಲ ಸಂಸ್ಥಾನಿಕರಾದ ಶ್ರೀ ದೊರೆಗಳವರನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಹೂಲಿ ಬೃಹನ್ಮಠಾಧ್ಯಕ್ಷರಾದ ಶ್ರೀನೀಲಕಂಠಶಿವಾಚಾರ್ಯರವರಿಂದ ಫಲಪ್ರಸಾದವು ಆಶೀರ್ವದಿಸಲ್ಪಟ್ಟಿತು. ಶ್ರೀ ಶಿವಾಚಾರ್ಯರು ಈ ಕ್ಷೇತ್ರದ ಸುಧಾರಣೋಪಾಯಗಳ ಬಗ್ಗೆ ಸುವಿಸ್ತಾರವಾಗಿ ಹಿಂದೀಭಾಷೆಯಿಂದ ದೊರೆಗಳವರಿಗೆ ಅಪ್ಪಣೆಕೊಡಿಸಿದರು. ಈ ವರುಷ ಕಡಕೊಳ್ಳ, ಸತ್ತಿಗೇರಿ ಶ್ರೀಗಳವರ ಪ್ರಯತ್ನವಿಶೇಷದಿಂದ ಆದ ಸುಧಾರಣೆಗಳನ್ನು ತೊರಗಲ್ಲ ಸಂಸ್ಥಾನದ ಸರಕಾರಿ ಅಧಿಕಾರಿಗಳೂ, ಕೊಲ್ಹಾಪುರ ಸ್ಟೇಟ್ ಅಧಿಕಾರಿಗಳೂ, ಕೊಲ್ಹಾಪುರ ಸ್ಟೇಟ್ ದೇವಾಲಯಗಳ ಪ್ರೆಸಿಡೆಂಟರೇ ಮೊದಲಾದವರಿಪ್ಪಾಧಿಕಾರಿಗಳೂ ನೋಡಿ ಬಹು ಸಂತೋಷಭರಿತರಾಗಿ ಈ ಕಾರ್ಯಕಲಾಪಗಳಿಗೆ ಬಹಳ ಸಹಾಯವಿತ್ತರು. ಅದೇ ದಿನ ರಾತ್ರಿ ಕರ್ನಾಟಕವಿಚಂದ್ರರಾದ ನಲವಡಿ ಶ್ರೀಕಂಠಶಾಸ್ತ್ರಿಗಳ ಕೀರ್ತನವಾಯಿತು. ಮರುದಿವಸ ಶ್ರೀ|| ಷ|| ಬ್ರ|| ನೀಲಕಂಠ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಧಾರ್ಮಿಕಸಭೆಯು ನೆರವೇರಿತು. ವೇ|| ಪಂ|| ಶ್ರೀಕಂಠಶಾಸ್ತ್ರಿಗಳು ವೇ|| ಪಂಚಾಕ್ಷರಶಾಸ್ತ್ರಿಗಳು ಹಿರೇಮಠ ಶಿರೋಳ ಮೊದಲಾದ ವಕ್ತೃಶ್ರೇಷ್ಠರ ಭಾಷಣಗಳಾದವು. ಅಧ್ಯಕ್ಷರು ಕ್ಷೇತ್ರಸುಧಾರಣೆಯ ಬಗ್ಗೆ ಅನೇಕ ಮಹತ್ವದ ವಿಷಯಗಳನ್ನು ಬೋಧಿಸಿದರು. ಎಡೆಯೂರು ಯಲ್ಲಮ್ಮನ ಗುಡ್ಡ ಮೊದಲಾದ ಕ್ಷೇತ್ರಗಳಂತೆ ಈ ಕ್ಷೇತ್ರಕ್ಕಾದರೂ ಪಂಚಕಮಿಟಿಯನ್ನು ನಿಯಮಿಸಿ ಆ ಕಮಿಟಿಯ ಮೂಲಕ ಕ್ಷೇತ್ರದ ಸುಧಾರಣೆಯ ಮಾರ್ಗವನ್ನು ಹಿಡಿಯಬೇಕೆಂದು ಬಹಳ ಗಂಭೀರವಾಗಿಯೂ ಪರಿಣಾಮಕಾರಿಯಾಗಿಯೂ ಬೋಧಿಸಿದರು. ಈ ಮಹಾಸಭೆಗೆ ತೊರಗಲ್ಲ ಸಂಸ್ಥಾನದ ಮ|| ಕಾರಭಾರಿ ಸಾಹೇಬರೂ, ಕಡಕೋಳ ಪೇಟಾಧಿಕಾರಿಗಳಾದ ರಾ|| ಸಾ|| ಮಹಾಲಕರಿಸಾಹೇಬರೂ, ತೊರಗಲ್ಲ ಸಂಸ್ಥಾನದ ಮ|| ಮ್ಯಾಜಿಸ್ಟ್ರೇಟರೂ, ಕೊಲ್ಹಾಪುರ ಸ್ಟೇಟ್ ದೇವಾಲಯ ಪ್ರೆಸಿಡೆಂಟ್ ಮ|| ಬಾಗಿಯವರೇ ಮೊದಲಾದ ಸರಕಾರೀ ಅಧಿಕಾರಿಗಳೂ ಆಗಮಿಸಿದ್ದರು. ಕಡಕೊಳ್ಳ, ಸತ್ತಿಗೇರಿ, ಬೆಳಗಾಂವ, ರಾಮದುರ್ಗ ಮೊದಲಾದ ಶ್ರೀ|| ಷ|| ಬ್ರ|| ಪಟ್ಟಾಧಿಕಾರಿಗಳೂ, ವೈದಿಕರೂ, ಪಂಡಿತರೂ, ಶಾಸ್ತ್ರಿಗಳೇ ಮೊದಲಾದ ವಿದ್ವಜ್ಜನರು ಸಭೆಗೆ ಆಗಮಿಸಿದ್ದರಿಂದ ಸಭೆಯು ಅತ್ಯಂತ ಶೋಭಾಯಮಾನವಾಗಿತ್ತು. ಸಭೆಯ ಸೌಂದರ್ಯಾತಿಶಯಗಳ ಬಗ್ಗೆ ಹುಬ್ಬಳ್ಳಿ ಪಾಠರದ ಸಂಗೀತ ವಿಶಾರದ ಕಾಪಸಿ ಹನುಮಂತಪ್ಪನವರು ತತ್ಕಾಲದಲ್ಲಿಯೇ ರಚಿಸಿದ ಪದ್ಯವನ್ನು ಗಾಯನರೂಪವಾಗಿ ಅನುವಾದಿಸಿ ಸಭಿಕರನ್ನು ಆನಂದತುಂದಿಲಹೃದಯರನ್ನಾಗಿ ಮಾಡಿದರು. ಗೊಡಚಿಜಾತ್ರೆಯಲ್ಲಿ ೨೦-೨೫ ಸಾವಿರದವರೆಗೆ ಜನರು ಕೂಡಿ ೩-೪ ದಿವಸಗಳ ವರೆಗೆ ನಿರರ್ಗಳವಾಗಿ ಕಾಲಹರಣ ಮಾಡುತ್ತ ಅನೇಕ ತೊಂದರೆಗಳನ್ನು ಸಹಿಸುತ್ತಲಿದ್ದರು. ಕಳೆದ ವರುಷವೇ ಈ ಕಷ್ಟನಿವಾರಣೆಗಾಗಿ ಸತ್ತಿಗೇರಿ, ಕಡಕೊಳ್ಳದ ಪಟ್ಟದಸ್ವಾಮಿಗಳವರು ಅತ್ಯಂತ ಕಾಳಜಿಯಿಂದ ಕ್ಷೇತ್ರಸುಧಾರಣೋಪಾಯಗಳನ್ನು ಕಲ್ಪಿಸಿ ಅದನ್ನು ಕಾರ್ಯರಂಗದಲ್ಲಿಳಿಸಿದರು. ಇವರ ಪ್ರಯತ್ನದಿಂದ ಈ ವರುಷ ಜಾತ್ರೆಯು ಅತ್ಯಂತ ಆನಂದದಿಂದ ಸಾಗಿತು. ಕ್ಷೇತ್ರಸುಧಾರಣೆಯ ಕಾರ್ಯಗಳು ಇನ್ನೂ ಅನೇಕವಾಗಿರುತ್ತವೆ. ದೇವಾಲಯ ಜೀರ್ಣೋದ್ಧಾರ ಮಹಾರಥವನ್ನು ತಯಾರಿಸುವದು, ಶ್ರೀ ದೇವರ ಪೂಜೋತ್ಸವಗಳನ್ನು ವಿಧ್ಯುಕ್ತವಾಗಿ ಸಾಗಿಸುವದು ಮೊದಲಾದವುಗಳನ್ನು ಕೈಕೊಳ್ಳಲು ಪಂಚಕಮಿಟಿಯ ಆವಶ್ಯಕತೆ ಇದೆ. ಪಂಚಕಮಿಟಿಯ ಮೂಲಕ ದೇವಾಲಯವನ್ನು ಜನತೆಯ ಸ್ವಾಧೀನದಲ್ಲಿ ತೆಗೆದುಕೊಳ್ಳುವದು ಅತ್ಯಗತ್ಯವಾದುದಾಗಿದೆ. ಈ ವೀರಭದ್ರೇಶ್ವರಸ್ವಾಮಿಯ ಭಕ್ತರು ಇತ್ತಕಡೆಗೆ ಚೆನ್ನಾಗಿ ಲಕ್ಷ್ಯಗೊಟ್ಟು ಪಂಚಕಮಿಟಿಯನ್ನು ಸ್ಥಾಪಿಸಲು ಪ್ರಯತ್ನಮಾಡಬೇಕು. ಇದರಿಂದ ಕ್ಷೇತ್ರಸುಧಾರಣೆಯಾಗುವದಲ್ಲದೆ ಧಾರ್ಮಿಕ ಸಾಮಾಜಿಕ, ನೈತಿಕ ಸುಧಾರಣೆಯ ಪ್ರವಾಹವು ಪವಿತ್ರಕ್ಷೇತ್ರ ಮೂಲಕ ಪ್ರವಹಿಸುತ್ತ ಪ್ರಪಂಚವನ್ನೇ ಪಾವನಗೊಳಿಸುವದು. ಈ ವರುಷ ನೆರವೇರಿದ ಕಾರ್ಯಗಳನ್ನು ನೋಡಿದರೆ ಮುಂದಿನ ವರ್ಷದೊಳಗಾಗಿ ಇದಕ್ಕೂ ಹೆಚ್ಚಾದ ಕಾರ್ಯಗಳಾಗಿ ಯಾತ್ರೆಯ ಜನರಿಗೆ ಅನೇಕ ಅನುಕೂಲತೆಗಳು ಒದಗುವಂತೆ ತೋರುತ್ತದೆ. ಇವೆಲ್ಲ ಕಾರ್ಯಗಳನ್ನು ನಿರ್ವಹಿಸುವದಕ್ಕಾಗಿ 'ಸೇವಾಸಂಘವು' ಸ್ಥಾಪಿಸಲ್ಪಟ್ಟಿದೆ. ಈ ಸಂಘವು ಕಡಕೊಳ್ಳ, ಸತ್ತಿಗೇರಿ ಶ್ರೀಗಳವರಿಂದ ಪುಷ್ಟಿಗೊಳ್ಳುತ್ತ ಚೆನ್ನಾಗಿ ಸಾಗಿರುವದು. ಈ ಸಂಘಕ್ಕೆ ಸರ್ವಮತೀಯರೂ ಸದಸ್ಯರಾಗಿದ್ದಾರೆ. ಸರ್ವಜ್ಞಮೂರ್ತಿಯಾದ ಶ್ರೀವೀರಭದ್ರೇಶ್ವರನು ಸರ್ವರಿಗೂ ಸುಖಶಾಂತಿಯನ್ನೀಯಲೆಂದು ಹಾರೈಸುತ್ತೇನೆ.

ಓರ್ವಯಾತ್ರಿಕ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರ್ಯಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರ್ಯಾಂಚು—
ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 8

ಸೆಲ್ಫ್ ಇಂಗ್ಲೀಷ್ ಸ್ಟಡಿ.
೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿಸುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೊ. ನಂ. 1246, ಮದರಾಸು.
K. N. BENSON & Co.,
[7] P. B. 1246, MADRAS.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.
ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್ಮೆಂಟ್ಸಿನಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಟೈಮನ್ನು ತೋರಿಸುವುವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ವಾರಂಟಿಯಾದ ಗ್ಯಾರಂಟಿ ಕೊಡುವೆವು.

ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ: ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್, ಮದ್ರಾಸು.
[7] THE CITY MART,
168, China Bazaar, MADRAS.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 16

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [51]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೀರ್, ಕುಂಭಕೋಣಂ, ತ್ರಿವೆಂದ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿವೆ ಎಂಬದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಪಿಲ್ಲ್—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕೆಂಕುಗಳ ಜ್ವರಗಳನ್ನು ಸಹ ಈ ಪಿಲ್ಲಿಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1, 1.8.0, 7-0-0

ಹೂಫಿಂಗ್ ಕಫ್ ರೆಮೆಡಿ—ಕಪ್ಪುಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-8-0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸಾಮದ್ದುಗಳೂ, ಹೋಮ್ಯೊಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯ ಭಾಗ್ಯದ ಜೀತಿಪತ್ರಕ್ಕೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು. [16]

ಕಂಪೌಂಡ್ ಸಿರಪು ಬ್ಲಟಿ—ಉಬ್ಬಸ, ನೇವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ. ತರಿಸಿ ಕುಡಿಯಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ

8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (6)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಷಟ್ಸ್ಥಲ ಶಿಖಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಶಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು. ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೯-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[50] ಪೋ. ಬಾ. ೫೧೦, ಮದರಾಸು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ ನೇ ಜನವರಿ ೧೯೩೪ [ಸಂಚಿಕೆ ೩೬

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸಪ್ತಾಹಭಜನೆ.

ಧಾರವಾಡ ಡಿ|| ನರಗುಂದಪೇಟಾ ಪೈಕಿ ಚಿಕ್ಕನರಗುಂದಗ್ರಾಮದ ಸಮಸ್ತ ದೈವದವರು ಪ್ರತಿವರ್ಷದ ಪದ್ಧತಿಯಂತೆ ವೃಷಭೇಶ್ವರನ ಮಂದಿರದಲ್ಲಿ ಮಾರ್ಗಶಿರ ಶು|| ೧೩ ಬುಧವಾರ ಸಪ್ತಾಹಭಜನೆಯನ್ನು ಪ್ರಾರಂಭಮಾಡಿದರು. ಇದಕ್ಕೆ ಶ್ರೀ ಕೊಣ್ಣೂರು ಬೃಹನ್ಮಠಾಧ್ಯಕ್ಷ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳವರು ಆಗಮಿಸಿದ್ದರು. ೫ ದಿವಸಗಳವರೆಗೆ ವೃಷಭೇಶ್ವರನಿಗೆ ಮಹಾರುದ್ರಾಭಿಷೇಕವು ಮಾಡಲ್ಪಟ್ಟಿತು. ಸಿದ್ಧಪ್ಪ ಶಾಸ್ತ್ರಿಗಳು ಪತ್ತಾರ ಹುಲ್ಲೂರು ಇವರ ಕೀರ್ತನವು ಮಾರುತಿಗುಡಿಯಲ್ಲಿ ೩ ದಿವಸಗಳವರೆಗೆ ನಡೆಯಿತು. ಸದರಿಯವರ ಕೀರ್ತನವು ಜನರಿಗೆ ಸಂತೋಷವನ್ನುಂಟುಮಾಡುತ್ತಿತ್ತು. ಗ್ರಾಮವು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಅಲಂಕೃತವಾಗಿತ್ತು. ವೇ|| ದೊಡ್ಡಯ್ಯನವರು ಹಿರೇಮಠ, ಬಸಪ್ಪನವರು ಕುಲಕರ್ಣಿ, ಬಸಯ್ಯನವರು ಹೆಡ್ಮಾಸ್ತರ, ಬಸವನ ಗೌಡರು ಮುಲ್ಕೀಪಾಟೀಲ, ಬಸವನಗೌಡರು ಪೋಲೀಸಪಾಟೀಲ, ಹೊಳೆಬಸವನಗೌಡ ಚೆನ್ನಪ್ಪಗೌಡರ, ರುದ್ರಗೌಡ ಸರ್ವಮಾನ್ಯದ ಸಂಗನಗೌಡ ಚನ್ನಪ್ಪಗೌಡರ ಮಲ್ಲಪ್ಪ ತೊರಗಲ್ಲ, ಶಿವನಪ್ಪ ಯರಗಟ್ಟಿ, ಸಿದ್ಧಪ್ಪ ರಾಮರಡ್ಡಿ ಬಸೆಟ್ಟೆಪ್ಪನವರು ಉಪ್ಪಿನ, ಅಡಿವಪ್ಪ ನವಲಗುಂದ ಇವರೇ ಮೊದಲಾದ ಪ್ರಮುಖಜನರು ಕಾರ್ಯದಲ್ಲಿ ಭಾಗವಹಿಸಿ ದಕ್ಷತೆಯಿಂದ ಕೆಲಸಮಾಡಿದರು. ಸದರಿ ಭಜನೆಯು ಮಾರ್ಗಶಿರ ಬ|| ೪ ಬುಧವಾರ ಸೂರ್ಯೋದಯಕ್ಕೆ ಸಮಾಪ್ತಿಮಾಡಲ್ಪಟ್ಟಿತು. ಅನಂತರ ಸದರಿ ಶ್ರೀ ಮುರುಗೇಂದ್ರಸ್ವಾಮಿಗಳವರ ಪಾದಪೂಜಾ ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪೂಜಾಸಮಾಪ್ತಿಯಾದನಂತರ ಗಣಾರಾಧನೆಯು 'ನಭೂತೋ ನ ಭವಿಷ್ಯತಿ' ಎಂಬಂತೆ ಸಾಗಿಸಲ್ಪಟ್ಟಿತು. ಎಲ್ಲಾ ಜನರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಬಸಪ್ಪ ಸಪ್ಪರದ, ಚಿಕ್ಕ ನರಗುಂದ.

ಶ್ರೀಮಜ್ಜಗದ್ಗುರು ರೇಣುಕಾದಿಪಂಚಾಚಾರ್ಯಾಃ ಪ್ರಸೀದಂತು.

ವೀರಶೈವಧರ್ಮೋತ್ತೇಜಕಸಭಾ ಚಿಕ್ಕಚಲ್ಲೂರು, ತಾಲ್ಲೂಕು ಚಳ್ಳಕೆರೆ.

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತವಾದ ಈ ಸಭೆಯು ತಾ|| ೯-೧೦-೩೩ರಲ್ಲಿ ಬ್ರಂ|| ಶ್ರೀ|| ವೇ|| ತಿಮ್ಮಣ್ಣನಾಯ್ಕನ ಕೋಟೆ ಮಠದ ಚನ್ನಬಸವಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಸಭೆಯ ಪ್ರೋಗ್ರಾಂ ಮೇರೆಗೆ ಹಂಚಲ್ಪಟ್ಟ ವಿಜ್ಞಾಪನಾಪತ್ರಿಕೆಯ ಪ್ರಕಾರ ವೀರಶೈವಪ್ರಮುಖ ಮಹಾಶಯರಾದ ಮ|| ರಾ|| ಅಮರಾಪುರದ ರೇವಣ್ಣನವರ ಮರಿಬಸಪ್ಪನವರೂ, ಜಡೆರುದ್ರಪ್ಪನವರೂ, ಕಠೆಟ್ಟಿ ಅಡಿವಪ್ಪನವರೂ, ಹೊಲಸೆ ಸಾ|| ಚಿಕ್ಕವೀರಣ್ಣನವರು, ಪತೀರಪ್ಪಗಳ ರುದ್ರಪ್ಪನವರೂ, ದೊಡ್ಡಚೆಲ್ಲೂರು ಮ|| ರಾ|| ಚನ್ನಪ್ಪನವರೇ ಮುಂತಾದ ಭಕ್ತಮಂಡಳಿಯವರೂ, ತಿಮ್ಮಣ್ಣನಾಯ್ಕನಕೋಟೆ ಮ|| ಬಸಪ್ಪನವರೂ, ಗಡಿ ರುದ್ರಪ್ಪನವರೂ, ಬೆಣ್ಣೆ ಲಿಂಗಪ್ಪನವರೇ ಮುಂತಾದವರು ದಯಮಾಡಿಸಿದ್ದರು. ಚೆನ್ನಮ್ಮ ನಾಗ್ತಿಹಳ್ಳಿ ಮುಂತಾದ ಪ್ರದೇಶದ ಮಹಾಶಯರು ದಯಮಾಡಿಸಲಿಕ್ಕೆ ಅಧಿಕ ನದೀಪ್ರವಾಹದ ದೆಸೆಯಿಂದ ಅವಕಾಶವಿಲ್ಲವಾಯಿತು. ಕಾರ್ಯಕ್ರಮಗಳ ಪ್ರೋಗ್ರಾಂಮೇರೆಗೆ ಅಧ್ಯಕ್ಷರವರು ಪೀಠಾರೋಹಣಮಂಗೈದು ಶಿವಾಧಿಕ್ಯ, ಮತತತ್ವ, ಧರ್ಮಾಚರಣೆ, ಸಮಾಜಸುಧಾರಣೆ ಮುಂತಾದ ಅನೇಕ ವಿಷಯಗಳಿಂದ ಗರ್ಭಿತವಾಗಿರುವ ಸನಾತನಧರ್ಮಗಳನ್ನು ಕುರಿತು ಸಭಿಕರಿಗೆ ಹೃದಯಂಗಮವಾಗುವಂತೆ ಭಾಷಣಮಾಡಿ ಸಭಾಕಾರ್ಯಕ್ಕೆ ಪ್ರಾರಂಭಿಸಿದನಂತರ ಮ|| ಮಹಾದೇವಪ್ಪಗಳ ಚನ್ನಬಸಪ್ಪನವರು ಮತತತ್ವವಿಚಾರದಲ್ಲಿಯೂ, ಮ|| ತಿಪ್ಪೆಸ್ವಾಮಿಗಳು ನಿತ್ಯನೈಮಿತ್ತಿಕಕರ್ಮಗಳ ವಿಷಯದಲ್ಲಿಯೂ, ನಿಡುಮಾಮುಡಪ್ಪ, ಈಶ್ವರಪ್ಪ ಇವರು ಗುರುಭಕ್ತಿವಿಚಾರದಲ್ಲಿಯೂ, ಮ|| ನಂದಪ್ಪನವರ ರುದ್ರಪ್ಪನವರು ಶಿವದೀಕ್ಷಾಸಂಸ್ಕಾರದ ವಿಷಯದಲ್ಲಿಯೂ, ಸಣ್ಣೈಗಳ ಕೆಂಚಪ್ಪನವರು ವೀರಶೈವ ಪ್ರಾಂತಿಕ ಸಭೆಗಳ ಪ್ರಯೋಜನದ ಪರವಾಗಿಯೂ ಭಾಷಣಗಳನ್ನು ಮಾಡಿದರು. ಆಗ ಸರ್ವಾನುಮತಿಯಿಂದ ಪಾಸಾದ ಠರಾವುಗಳು.—

೧. ಶಿವಸರ್ವೋತ್ತಮತ್ವಬೋಧಕ ಶ್ರುತಿಸ್ಮೃತಿಪುರಾಣಾಗಮೇತಿಹಾಸಗಳಿಂದ ಪ್ರಸಿದ್ಧಿಗೊಂಡಿರ್ಪ ಸರ್ವಾಂತರ್ಯಾಮಿಯಾದ ಪರಶಿವನೇ ಸಕಲ ದೇವತಾಪೂಜ್ಯನೆಂತಲೂ ಸರ್ವಶ್ರೇಷ್ಠನೆಂತಲೂ ತನ್ನ ಸದ್ಯೋಜಾತಾದಿ ಪಂಚಮುಖಗಳಿಂದ ಆವಿರ್ಭವಿಸಿದ ರೇಣುಕಾದಿ ಪಂಚಾಚಾರ್ಯ ಜಗದ್ಗುರುಗಳೇ ದೀಕ್ಷಾ, ಶಿಕ್ಷಾ, ಮೋಕ್ಷಗಳಿಗೆ ಕರ್ತೃಗಳೆಂತಲೂ ಈ ಸಭೆಯವರು ಸಿದ್ಧಾಂತ ಮಾಡುತ್ತಾರೆ.

೨. ವೀರಶೈವ ಮತವು ಜಗದ್ಗುರುಗಳಿಂದ ಶಾಸನವಾಕ್ಯ ಪ್ರತಿಪಾದಿತವಾದ ಮತದಾಚಾರ್ಯರ ಮತಸಿದ್ಧಾಂತ ಗ್ರಂಥಗಳಿಂದ ಅನಾದಿಸಂಸಿದ್ಧವಾದುದೆಂದು ಈ ಸಭೆಯವರು ನಿರ್ಣಯಿಸುತ್ತಾರೆ.

೩. ಊರ್ಜಿತಸ್ಥಿತಿಯಲ್ಲಿದ್ದ ಈ ಮತವು ಕಾಲಾಂತರದಲ್ಲಿ ಸ್ವಮತಾಚಾರ ವಿದ್ಯಾದಿ ನ್ಯೂನತೆಯಿಂದ ಗ್ಲಾನಿಯನ್ನು ಹೊಂದಿರುವ ಕಾರಣ ಅದನ್ನು ಹೋಗಲಾಡಿಸುವದಕ್ಕೆ ಅಲ್ಲಲ್ಲಿ ವೀರಶೈವ ಪ್ರಾಂತಿಕಸಭೆಗಳನ್ನು ಕೂಡಿಸುವದರಿಂದಲೂ ಮತತತ್ವಬೋಧಕ ಗ್ರಂಥಗಳಿಂದಲೂ ಭಕ್ತಿಯೂ ಆಚಾರನಿಷ್ಠೆಯೂ ಧರ್ಮಶ್ರದ್ಧೆಯೂ ಹುಟ್ಟುವಂತೆ ಉಪದೇಶಮಾಡಲಿಕ್ಕೆ ಬೋಧಕರನ್ನು ನಿಯಮಿಸಿ ಈ ತತ್ವಗಳನ್ನು ಸಮಾಜದಲ್ಲಿ ನೆಲೆಗೊಳ್ಳುವಂತೆ ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.

೪. ವೀರಶೈವರು ಶಿವಾರಾಧನೆಯ ಹೊರತು ಅನ್ಯದೇವತಾರಾಧನೆ ಅನ್ಯದೇವತಾಪ್ರಸಾದ ಮುಂತಾದವುಗಳಿಗೆ ಭಾಗಿಗಳಾಗುವದನ್ನು ನಿಶ್ಶೇಷವಾಗಿ ತ್ಯಜಿಸಿ ಶಿವಸಾಯುಜ್ಯ ಫಲದಾಯಕಗಳಾದ ಅಷ್ಟಾವರಣಗಳನ್ನು ಶ್ರದ್ಧೆಯಿಂದ ಆಚರಿಸಬೇಕೆಂದು ಈ ಸಭೆಯವರು ತೀರ್ಮಾನಿಸುತ್ತಾರೆ.

೫. ವೀರಶೈವ ಸಮಾಜದಲ್ಲಿ ಭಕ್ತವರ್ಗಕ್ಕೆ ನಿರ್ದಿಷ್ಟವಾದ ಸ್ವಾವರದೀಕ್ಷಾಸಂಸ್ಕಾರವು ಪ್ರಚಾರದಲ್ಲಿ ಇರುವದಿಲ್ಲವಾದ್ದರಿಂದ ವಿಧ್ಯುಕ್ತವಾಗಿ ಸ್ವಾವರದೀಕ್ಷಾಸಂಸ್ಕಾರವನ್ನು ಹೊಂದಬೇಕೆಂತಲೂ ನಿತ್ಯಾನುಷ್ಠಾನಗಳನ್ನು ತಪ್ಪದೆ ಆಚರಿಸಬೇಕೆಂತಲೂ ತಮ್ಮ ವಿವಾಹ ಮುಂತಾದ ಕಾರ್ಯಗಳನ್ನು ಯಥಾವಿಧಿಯಾಗಿ ಗುರುಸ್ಥಲದ ಪುರಾಧಿಕಾರಿಗಳಿಂದಲೇ ಮಾಡಿಸಬೇಕೆಂತಲೂ ಇದಕ್ಕೆ ವಿರುದ್ಧವಾಗಿ ಆಚರಿಸಿದರೆ ಯೋಗ್ಯ ಅಧಿಕಾರಿಗಳು ಅವರಿಗೆ ತಕ್ಕ ಶಾಸನವನ್ನು ಮಾಡಬೇಕೆಂತಲೂ ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.

೬. ವೀರಶೈವರು ತಮ್ಮ ತಮ್ಮಲ್ಲೇ ಉಪಸ್ಥಿತವಾಗುವ ವ್ಯಾಜ್ಯವ್ಯವಹಾರಗಳನ್ನು ಮಾಡಿಕೊಂಡು ಕೋರ್ಟುಕಛೇರಿಗಳಿಗೆ ಹೋಗಿ ಧನವ್ಯಯಮಾಡಿಕೊಳ್ಳುವದನ್ನು ನಿಲ್ಲಿಸಿ ತಮ್ಮ ಗ್ರಾಮಗಳಲ್ಲಿ ವೀರಶೈವ ಪಂಚಾಯಿತಿ ಸಂಘವೆಂಬುದಾಗಿ ಸ್ಥಾಪಿಸಿ ಪಂಚರ ತೀರ್ಮಾನದಂತೆ ನಡೆದುಕೊಳ್ಳಬೇಕೆಂಬುದಾಗಿಯೂ ಸಭಾಧ್ಯಕ್ಷರ ಉಪದೇಶದಂತೆ ಈ ದಿನವೇ ಈ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಪಂಚಾಯಿತಿ ಸಂಘವು ಮಾರ್ಗದರ್ಶಕವಾಗಿರುವದರಿಂದ ಸರ್ವರೂ ಇದರಂತೆ ಆಚರಿಸಬೇಕಾಗಿ ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.

೭. "ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ" ಎಂಬಂತೆ ಮಾನವಶರೀರಕ್ಕೆ ಶಿರಸ್ಸು ಹ್ಯಾಗೆ ಪ್ರಧಾನವೋ ಹಾಗೆಯೇ ವೀರಶೈವ ಸಮಾಜಕ್ಕೆ ಪ್ರಧಾನವಾಗಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯು ಮತತತ್ವಗಳನ್ನು ಅನೇಕ ಆಧಾರಗಳಿಂದೊಡಗೂಡಿ, ಮತಧರ್ಮಗಳನ್ನು ಪ್ರಚಾರಕ್ಕೆ ತರುವದಕ್ಕೆ ಮಾರ್ಗದರ್ಶಕವಾಗಿರುವದರಿಂದ, ಪ್ರತಿಗ್ರಾಮದವರೂ ಗ್ರಾಮಕ್ಕೆ ಒಂದೊಂದನ್ನಾದರೂ ತರಿಸಿಯೇ ತೀರಬೇಕೆಂದು ಈ ಸಭೆಯವರು ಖಂಡಿತವಾಗಿಯೂ ಸೂಚಿಸುತ್ತಾರೆ.

೮ ಚಳ್ಳಕೆರೆಯಲ್ಲಿ ಸ್ಥಾಪಿತವಾಗಿರುವ, ವೀರಶೈವಸಮಾಜೋನ್ನತಿಯ ಸಂಘದಪರವಾಗಿ ಮ|| ರಾ|| ಚೆನ್ನಮ್ಮನಾಗ್ತಿಹಳ್ಳಿ ಸಾ|| ಕುಪ್ಪದ ಪಡಕ್ಷರಪ್ಪನವರು, ಸಂಘದ ಸೆಕ್ರೆಟರಿಯವರಾದ ಚಳ್ಳಕೆರೆ ಸೆಟ್ರು ಬಸಪ್ಪನವರು, ಪ್ರೆಸಿಡೆಂಟ್ ಅಳ್ಳಿಮಲ್ಲಪ್ಪನವರೇ ಮುಂತಾದವರು ಸಂಘದ ಸಲುವಾಗಿ ಪ್ರಮಸಹಿಷ್ಣುಗಳಾಗಿ ಕೆಲಸಮಾಡುತ್ತಿರುವದರಿಂದ, ಸದರಿ ಸಂಘಕ್ಕೆ ಎಲ್ಲಾ ವೀರಶೈವರು ಆದಷ್ಟು ಸಹಾಯಮಾಡಬೇಕೆಂದು ಈ ಸಭೆಯವರು ನಿವೇದಿಸುತ್ತಾರೆ.

ಈ ನಿರ್ಣಯಗಳಾದ ಬಳಿಕ ಸಭೆಗೆ ದಯಮಾಡಿಸಿದ್ದ ಮಹಾಶಯರ ಉಪಕಾರವನ್ನು ಸ್ಮರಿಸಿ ನೆರೆದಿದ್ದ ಸಭಾಸದರಿಗೂ, ಸಭಾಧ್ಯಕ್ಷರೇ ಮುಂತಾದವರಿಗೂ ಪುಷ್ಪಹಾರಾದಿಗಳನ್ನು ಸಮರ್ಪಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣಪೂರ್ವಕ, ತ್ರಿವಾರ ಜಯಘೋಷವೂ, ನಮ್ಮನ್ನಾಳುವ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ಸಹ ಮಾಡಲ್ಪಟ್ಟು, ಸಭೆಯು ವಿಸರ್ಜಿಸಲ್ಪಟ್ಟಿತು. ಓವರ್ ಪ್ರತ್ಯಕ್ಷದರ್ಶಿ, ಚಿಕ್ಕಚೆಲ್ಲೂರು.

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ.

ಪಂಢರಪುರ ತಾ|| ಮಂಗಳವೇಡೆಯಲ್ಲಿ ನಿನ್ನೆಯ ದಿವಸ ಶ್ರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತೆಂದು ತಿಳಿದುಬಂದಿದೆ.

ಶಾಸ್ತ್ರಿಗಳು ಬೇಕಾಗಿದೆ.

ಮಳಲಿ ಮಠದಿಂದ ಹುಂಚದಕಟ್ಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾನಂದಾಶ್ರಮ ಸಂಸ್ಕೃತಪಾಠಶಾಲೆಗೆ ವೈದಿಕ ಜ್ಯೋತಿಷ ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದ್ದಾರೆ. ಬರಲಪೇಕ್ಷೆಯುಳ್ಳವರು ಈ ಕೆಳಗಿನ ಅಡ್ರೆಸ್ಸಿಗೆ ಈ ತಿಂಗಳ ಅಖೈರೊಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಯೋಗ್ಯತೆಗನುಸಾರವಾಗಿ ಸಂಬಳವು ಕೊಡಲಾಗುವುದು.

ಪಾಠಶಾಲಾ ವ್ಯವಸ್ಥಾಪಕ,
ಕ್ಯಾರಂದೂರು ಅಯ್ಯಪ್ಪಗೌಡ,
ಮಳಲಿಮಠ,
ಪೋ|| ಅಗ್ರಹಾರ ಡಿ|| ಶಿವಮೊಗ್ಗ.

ಸ್ವೀಕಾರ

ಗದಗ ತಾಲೂಕು ಬಳಗಾನೂರು ಗ್ರಾಮದಲ್ಲಿರುವ ಮ|| ರಾ|| ಗಡ್ಡೆಪ್ಪನವರ ಗುಂಡಪ್ಪನವರ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 3 ರೂ. ಗಳು ಹಿರೇಹಾಳುಶೆಟ್ಟರ ಮ|| ರಾ|| ಮಲ್ಲಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಜಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸಂಕ್ಷಿಪ್ತ ಗಾಂಧೀ ಪುರಾಣ.

ಅಸಾಧಾರಣ ಚಂಚಲಸ್ವಭಾವವುಳ್ಳ ಗಾಂಧಿಯವರು ತಮ್ಮ ಅನೇಕ ತರಹದ ಪುರಾಣಗಳನ್ನು ಮುಗಿಸಿ ಒಂದು ಕಾರ್ಯವನ್ನೂ ಕೂಡ ಪೂರ್ತಿಮಾಡದೆ ಜೈಲಿಗೆ ಹೆದರಿ ಇತ್ತೀಚೆಗೆ ಅಸ್ಪೃಶ್ಯರನ್ನುದ್ಧರಿಸುತ್ತೇನೆಂಬ ವಿಚಿತ್ರವೇಷವನ್ನು ತಾಳಿ ಅಲ್ಲಲ್ಲಿ ತಿರುಗಾಡುತ್ತಿರುವ ವಿಷಯವು ಪ್ರತಿಯೊಬ್ಬರಿಗೂ ತಿಳಿದುದಾಗಿದೆ. ಗಾಂಧಿಯವರು ಹೊತ್ತುಬಂದಹಾಗೆಲ್ಲಾ ಒಂದೊಂದು ರೀತಿ ನಡೆಯುತ್ತಾರೆ. ಅದುದರಿಂದಲೇ ಇವರ ವಿಚಿತ್ರ ವರ್ತನಕ್ಕೆ ದೇವರು ಇಂದಿನವರೆಗೂ ಜಯವನ್ನುಂಟು ಮಾಡಲೊಲ್ಲನು.

ದೇವಸ್ಥಾನದ ಪುರಾಣ.

ಗುರುವಾಯೂರು ದೇವಸ್ಥಾನದಲ್ಲಿ ಅಸ್ಪೃಶ್ಯರನ್ನು ಪ್ರವೇಶಮಾಡಿಸಿಯೇ ತೀರುತ್ತೇನೆ. ಇಲ್ಲದಿದ್ದರೆ ಉಪವಾಸಮಾಡಿ ಸಾಯುತ್ತೇನೆಂದು ಈ ಮಹಾಶಯರು ಹೆದರಿಸಿದರು. ಧರ್ಮವಿರೋಧವಾದ ಇವರ ಗೊಡ್ಡು ಬೆದರಿಕೆಗೆ ಜನರು ಬೆದರುವರೇ? ಅಸ್ಪೃಶ್ಯರು ಮಂದಿರದ ಸಮೀಪಕ್ಕೆ ಬರಕೂಡದೆಂದು ನಿರ್ಣಯಿಸಿಯೇ ಬಿಟ್ಟರು. ಆಗ ಇವರು ತಮ್ಮ ಪ್ರತಿಜ್ಞೆಯಂತೆ ಸಾಯಬೇಕಾಗಿತ್ತು; ಹಾಗೆಮಾಡಿದರೇನು? ಶರೀರಾಭಿಮಾನವು ಎಂದಾದರೂ ಬಿಟ್ಟೀತೆ? 'ವಚನೇ ಕಾ ದರಿದ್ರತಾ?' ಎನ್ನುವಂತೆ ಕ್ಷಣಕ್ಷಣಕ್ಕೂ ಉಪವಾಸಮಾಡಿ ಸಾಯುತ್ತೇನೆ, ಉಪವಾಸಮಾಡಿ ಸಾಯುತ್ತೇನೆಂದು ಹೇಡಿಗಳಂತೆ ನುಡಿಯುವುದನ್ನು ಮಾತ್ರ ಇವರು ಬಹು ಚೆನ್ನಾಗಿ ಕಲಿತಿದ್ದಾರೆ. ಅಸ್ತು!

ಜಾತಿಸಾಂಕರ್ಯ ಪುರಾಣ.

ಈ ಗಾಂಧಿಯವರು ಸನಾತನವಾದ ಹಿಂದೂ ಧರ್ಮಕ್ಕೆ ಪರಮವೈರಿಗಳಾಗಿದ್ದಾರೆ. ಅನಾದಿಕಾಲದಿಂದ ಬಂದ ಉತ್ತಮಧರ್ಮಗಳನ್ನೆಲ್ಲಾ ಹಾಳುಮಾಡಹತ್ತಿದ್ದಾರೆ. ವರ್ಣಸಾಂಕರ್ಯವನ್ನು ಮಾಡುವುದರಲ್ಲಿ ಮೊದಲನೆಯ ಕಲಿಪುರುಷರಾಗಿದ್ದಾರೆ. ತಾವು ಕೋಮಟಿಗಳಾಗಿದ್ದರೂ ತಮ್ಮ ಮಗನಿಗೆ ಬ್ರಾಹ್ಮಣ ಹುಡುಗಿಯನ್ನು ತೆಗೆದುಕೊಂಡು ಲಗ್ನಮಾಡಿದರು. ಅನಾಥನಾದ ಒಬ್ಬ ಬ್ರಾಹ್ಮಣ ಹುಡುಗನಿಗೆ ಅಸ್ಪೃಶ್ಯ ಹುಡುಗಿಯನ್ನು ಲಗ್ನಮಾಡಿದರು. ತಮ್ಮ ಮಗನಿಗೆ ಅಸ್ಪೃಶ್ಯರ ಹುಡುಗಿಯನ್ನು ಯಾಕೆ ಲಗ್ನಮಾಡಲಿಲ್ಲವೋ? ಇದು ವಂಚಕತನವಲ್ಲವೇ? ಅಸ್ಪೃಶ್ಯಜಾತಿಯಲ್ಲಿ ಎಲ್ಲಾ ಜಾತಿಗಳಿಗಿಂತಲೂ ಸುಂದರ ತರುಣಿಯರು ಸಿಗುವರು. ಬಿಟ್ಟದ್ದೇಕೆ? ಎರಡನೆಯವರನ್ನು ಕೆಡಿಸಿ ತಾವು ಕೆಡದಿರುವುದು ದ್ರೋಹವಲ್ಲವೇ?

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ |
ಪತಂತಿ ಪಿತರೋಹ್ಯೇಷಾಂ ಲುಪ್ತಪಿಂಡೋದಕ ಕ್ರಿಯಾಃ ||೪೨||

(ಅಧ್ಯಾಯ ೧)

ಎಂಬ ಗೀತಾವಾಕ್ಯದಂತೆ ಜಾತಿಸಾಂಕರ್ಯವನ್ನು ಮಾಡುವುದು ಮಹಾಪಾಪಕಾರ್ಯವಲ್ಲವೇ? ಗೀತಾಭಕ್ತರೆಂದು ಹೇಳಿಕೊಳ್ಳುತ್ತಿರುವ ಗಾಂಧಿಯವರು ಗೀತೆಯ ವಿರುದ್ಧವಾಗಿ ಆಚರಿಸುತ್ತಿರುವುದು ಅತ್ಯಂತ ಹೇಯವಲ್ಲವೇ? ಇದು ಸತ್ಪುರುಷರ ಲಕ್ಷಣವೇ? ಇವರಿಗೆ ಸನಾತನ ಹಿಂದೂ ಧರ್ಮಧ್ವಂಸಕಮೂರ್ತಿಯೆಂದರೆ ಇದನ್ನು ಯಾರೂ ಅಲ್ಲಗಳೆಯಲಾರರು. ಎಲ್ಲಾ ಕಡೆಯಿಂದಲೂ ಹಿಂದೂಧರ್ಮಕ್ಕೆ ಅಳಿಗಾಲವು ಬಂದಿದೆಯಲ್ಲದೆ ಬೇರೆಯಿಲ್ಲ. ಹಿಂದೂಧರ್ಮದ ದುರ್ದೈವ! ದುರ್ದೈವ! ಕಾಲಾಯ ತಸ್ಮೈ ನಮಃ!

ವಿಧವಾವಿವಾಹ ಪುರಾಣ.

ಇವರು ಹಿಂದಕ್ಕೊಮ್ಮೆ ಕಾಲೇಜಿನ ವಿದ್ಯಾರ್ಥಿಗಳನ್ನು ಕುರಿತು—ಈಗಿನ ತರುಣವಿದ್ಯಾರ್ಥಿಗಳೆಲ್ಲರೂ ಕನ್ಯೆಯರನ್ನು ಲಗ್ನವಾಗದೆ ಗಂಡಸತ್ತ ಮುಂಡೆಯರನ್ನೇ ಲಗ್ನವಾಗಬೇಕೆಂದೂ, ಹೀಗೆ ಲಗ್ನವಾದರೆ ಇಂಡಿಯಾ ದೇಶವೇ ಉದ್ಧಾರವಾಗುವುದೆಂದೂ ಭಾಷಣ ಮಾಡಿದ್ದರು. ಅಹಾ! ಇವರ ವಿಚಾರ ಸರಣಿಗೆ ಬೆಲೆಯೇ? ಈ ರೀತಿಯಾಗಿ ಭಾಷಣ ಮಾಡಿದ ಈ ಮಹಾಶಯರು ಸ್ವತಃ ತಮ್ಮ ನಾಲ್ಕು ಜನ ಗಂಡು ಮಕ್ಕಳಿಗೆ ವಿಧವಾವಿವಾಹವನ್ನು ಮಾಡಬಹುದಾಗಿತ್ತಲ್ಲವೇ? ಹಾಗೆ ಮಾಡಿರುವರೇನು? ಎರಡನೆಯವರನ್ನು ಬಾವಿಗೆ ನೂಕುವುದಕ್ಕೆ ಎಷ್ಟುಬೇಕೋ ಅಷ್ಟು ದಾರಿ!

ವಿದ್ಯಾರ್ಥಿಗಳ ಪುರಾಣ.

ಇನ್ನು ಈ ಗಾಂಧಿಯವರು ನಮ್ಮ ಇಂಡಿಯಾದಲ್ಲಿ ಇಲ್ಲಿಯವರೆಗೆ ಆಡಿದ ನಾನಾತರಹದ ಆಟಗಳ ವಿಷಯವನ್ನು ಸ್ವಲ್ಪ ವಿಮರ್ಶಿಸೋಣ! ಇವರು ೧೯೩೧ನೆಯ ಇಸ್ವಿಯಲ್ಲಿ ಒಂದು ಚಳವಳಿಯನ್ನೆಬ್ಬಿಸಿದರು. ಆಗ್ಗೆ ವಿದ್ಯಾರ್ಥಿಗಳಾರೂ ಸರಕಾರಿ ಸ್ಕೂಲು ಕಾಲೇಜುಗಳಿಗೆ ಹೋಗಕೂಡದೆಂದು ಹೇಳಹತ್ತಿದರು. ಹಿಂದೆಯೂ ಮುಂದೆಯೂ ವಿಚಾರಮಾಡದೆ ಇವರ ಮಾತಿಗೆ ಮರುಳಾಗಿ ಎಷ್ಟೋ ಜನ ವಿದ್ಯಾರ್ಥಿಗಳು ಸ್ಕೂಲು ಕಾಲೇಜುಗಳನ್ನು ಬಿಟ್ಟು ಅವಿದ್ಯಾವಂತರಾಗಿ ಹೊಟ್ಟೆಗಿಲ್ಲದೆ ಈಗಲೂ ತಿರುಗುತ್ತಿರುವರು.

ವಕೀಲರ ಪುರಾಣ.

ಅದೇ ಸಮಯದಲ್ಲಿ ಈ ಪುಣ್ಯಾತ್ಮರು ವಕೀಲರಿಗೆ ವಕಲಾತ್ತು ಮಾಡಕೂಡದೆಂದು ಸಾರಹತ್ತಿದರು. ಕೈಯಿಂದ ಕಾಲಿಗೆ ಕಾಲಿನಿಂದ ಕೈಗೆ ಮಾಡುವ ವಿಚಿತ್ರ ಬುದ್ಧಿಯುಳ್ಳ ವಕೀಲರಲ್ಲಿಯೂ ಕೂಡ ಎಷ್ಟೋ ಜನರು ಇವರ ಬಣ್ಣದಮಾತುಗಳಿಗೆ ಮನಸೋತು ತಮ್ಮ ವಕೀಲಿವೃತ್ತಿಯನ್ನು ಬಿಟ್ಟು ಬಾಯಿಬಾಯಿ ಬಿಡಹತ್ತಿರುವರು. ಸರಕಾರಿ ಅಧಿಕಾರಕ್ಕೂ ಕೂಡ ಶರಣುಹೊಡೆಯಬೇಕೆಂದು ಇವರು ಸಾರಿದ್ದರಿಂದ ಸಾರಾಸಾರವಿಚಾರಶೂನ್ಯರಾದ ಕೆಲವರು ಇವರ ಮಾತಿನಂತೆ ಸರಕಾರಿ ಕೆಲಸವನ್ನು ಬಿಟ್ಟು ಕಣ್ಣುಕಣ್ಣು ಬಿಡಹತ್ತಿರುವರು.

ಕೌನ್ಸಿಲ್ ಪುರಾಣ.

ಕಾಯಿದೆ ಕೌನ್ಸಿಲುಗಳಿಗೆ ಜನರು ಮೆಂಬರಾಗಿ ಹೋಗಬಾರದೆಂದು ಒಂದುಸಾರೆ ಇವರು ಹೂಲೆಹಾಕಿದರು, ಕೆಲವರು ಇವರ ಮಾತಿನಂತೆಯೇ ನಡೆದರು. ಆದರೆ ಈಗ ಇವರೇ ಅಸ್ಪೃಶ್ಯರ ಬಗ್ಗೆ ಕಾಯಿದೆ ಕೌನ್ಸಿಲಿನಲ್ಲಿ ಕಾಯಿದೆಯನ್ನು ಮಾಡಿಸಬೇಕೆಂದು ಕೌನ್ಸಿಲ್ ಮೆಂಬರರ ಜಾಲವನ್ನು ಒಡೆಯುತ್ತಿರುವರು. ಅಸ್ಪೃಶ್ಯರನ್ನು ದೇವಾಲಯಗಳಲ್ಲಿ ಬಿಡುವಂತೆ ಹುಕುಂ ಮಾಡಬೇಕೆಂದು ಸರಕಾರದವರಿಗೆ ಸಾಷ್ಟಾಂಗನಮಸ್ಕಾರಮಾಡುತ್ತ ಬೇಡಿಕೊಳ್ಳುತ್ತಿರುವರು. ಅಹಾ! ಈ ಮಹನೀಯರ ಆಟವು ಒಂದೊಂದೇ?

ಪಟೇಲ್ ಶ್ಯಾನಭೋಗರ ಪುರಾಣ.

ಕೆಲವುದಿವಸಗಳಾದಮೇಲೆ ಗೌಡರು-ಶಾನಭೋಗರು ತಮ್ಮ ಕೆಲಸಗಳನ್ನು ಬಿಟ್ಟುಬಿಡಬೇಕೆಂದು ಹೂಲೆಯನ್ನೆಬ್ಬಿಸಿದರು. ಅದೂರದರ್ಶಿಗಳಾದ ಅನೇಕ ಜನ ಪಟೇಲ ಶಾನಭೋಗರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಬಹುಕಾಲದಿಂದ ಬಂದ ಇನಾಂ ಭೂಮಿಗಳನ್ನೆಲ್ಲಾ ಕಳೆದುಕೊಂಡು ಹೆಂಡರು ಮಕ್ಕಳಿಗೆ ಕೂಳನ್ನು ಹಾಕಲು ಗತಿಯಿಲ್ಲದೆ ಈ ಮಹಾಶಯರ ಹೆಸರಿನಿಂದ ಕಣ್ಣೀರು ಸುರಿಸುತ್ತಿರುವರು.

ಉಪ್ಪಿನ ಪುರಾಣ.

ಇತ್ಯಾದಿ ಪುರಾಣಗಳಾದ ಮೇಲೆ ಪ್ರತಿಯೊಬ್ಬರೂ ತಮ್ಮ ತಮ್ಮಲ್ಲಿಯೇ ಉಪ್ಪನ್ನು ತಯಾರುಮಾಡಬೇಕೆಂಬ ಗುಲ್ಲನ್ನೆಬ್ಬಿಸಿದರು. ಇದಕ್ಕಾಗಿ ದಂಡಿಗೆ ಹೊರಟರು. ಇವರ ಉಪ್ಪು ದೇಶವನ್ನೆಲ್ಲಾ ಹಾಳುಮಾಡಿಬಿಟ್ಟಿತು. ಸಾವಿರಾರು ಜನರು ಜೈಲಿನಪಾಲಾದರು. ಎಷ್ಟೋ ಜನರು ಮರಣಹೊಂದಿದರು. ಕಡೆಗೆ ಉಪ್ಪು ಗಸ್‌ಚುಸ್ ಆಯಿತು.

ಪಿಕೆಟಿಂಗ್ ಪುರಾಣ.

ಇದಾದಮೇಲೆ ಈ ಪುಣ್ಯಾತ್ಮರು ಪಿಕೆಟಿಂಗ್ ಮಾಡಬೇಕೆಂಬ ನೂತನಚಳವಳಿಯನ್ನೆಬ್ಬಿಸಿದರು. ಸ್ತ್ರೀಯರೇ ಇದರಲ್ಲಿ ಮುಖ್ಯಭಾಗವಹಿಸಬೇಕೆಂದು ಹೇಳಿದರು. ಸೂರ್ಯರಶ್ಮಿಯನ್ನು ಕಾಣದ ಸ್ತ್ರೀಯರೂ ಬಾಲಬಾಲಿಕೆಯರೂ ಈ ಕಾರ್ಯದಲ್ಲಿ ಪ್ರವೇಶಿಸಿ ಪಡಬಾರದಕಷ್ಟಗಳನ್ನು ಪಟ್ಟು ಸೆರೆಮನೆಯ ಯಾತನೆಯನ್ನನುಭವಿಸಿದ್ದಲ್ಲದೆ ಕಾಶೀ ಮೊದಲಾದ ಸ್ಥಳಗಳಲ್ಲಿ ಅನೇಕ ಜನ ಸ್ತ್ರೀಯರೂ ಮಾನಭಂಗವನ್ನೂ ಕೂಡ ಹೊಂದಿದರು. ಇದೂಕೂಡ ಅಸ್ಪೃಕ್ಕೇನೇ ಶಾಂತಂ!

ಕಂದಾಯದ ಪುರಾಣ.

ಆ ಮೇಲೆ ಈ ಚಂಚಲಮೂರ್ತಿಗಳು ಸರಕಾರಕ್ಕೆ ರೈತರು ತೆರಿಗೆ (ಕಂದಾಯ) ಯನ್ನು ಕೊಡಕೂಡದೆಂಬ ಚಳವಳಿಯನ್ನೆಬ್ಬಿಸಿದರು. ಇವರ ಮುಬ್ಬುಮಾತುಗಳಿಗೆ ಗುಜರಾಥ ದೇಶದ ಕೆಲ ಗ್ರಾಮದವರು ಮನಸೋತು, ಜಮೀನು ಮನೆ ಮೊದಲಾದವುಗಳನ್ನೆಲ್ಲಾ ಕಳೆದುಕೊಂಡು ಉಪವಾಸ ವನವಾಸಗಳನ್ನು ಮಾಡುತ್ತ ಅಸಾಧಾರಣವಾದ ಕಷ್ಟವನ್ನನುಭವಿಸಿ ಇನ್ನೊಮ್ಮೆ ಇಂಥ ಉದ್ಯೋಗಕ್ಕೆ ಎಂದೂ ಹೋಗಬಾರದೆಂದು ಬುದ್ಧಿಗಲಿತರು. ಇದರಂತೆ ಇವರು ಒಂದಲ್ಲ, ಎರಡಲ್ಲ, ಸಾವಿರಾರು ಆಟಗಳನ್ನಾಡಿ ಯಾವುದರಲ್ಲಿಯೂ ಜಯವನ್ನು ಹೊಂದದೆ, ಈಗ ಸರಕಾರದವರ ಏಟಿಗೂ ಜೈಲಿಗೂ ಹೆದರಿ ಮೊದಲಿನ ಕಾರ್ಯಕ್ರಮವನ್ನೆಲ್ಲಾ ಬಿಟ್ಟು ಅಸ್ಪೃಶ್ಯೋದ್ಧಾರದ ಸೋಗುಹಾಕಿಕೊಂಡು ಹೊರಟಿದ್ದಾರೆ. ಈ ಸೋಗೂ ಕೂಡ ಬಹುಕಾಲನಿಲ್ಲಲಾರದು. ಇವರ ಪ್ರತಿಯೊಂದು ಕಾರ್ಯವೂ ಹೇಗೆ ಬುರ್‌ಬುಸ್ ಆಗಿ ಹೋಗಿದೆಯೋ, ಅದರಂತೆಯೇ ಇದೂ ಸಹ ಬುರ್‌ಬುಸ್ಸೇ ಆಗುವುದು. ನಾಸ್ತಿಕಮಯವಾದ ಈಗಿನ ಕಾಲದಲ್ಲಿ ಕೆಲಜನ ಇಂಗ್ಲೀಷ್ ಕಲಿತವರು ತಮ್ಮ ಸನಾತನ ಧರ್ಮಪದ್ಧತಿಗಳಿಗೆಲ್ಲಾ ತಿಲಾಂಜಲಿಯನ್ನು ಕೊಟ್ಟು, ಇಂಥವರ ಮಾತಿಗೆ ಮರುಳಾಗಿ ಮಾಡಬಾರದ ಕೃತಿಗಳನ್ನು ಮಾಡಹತ್ತಿರುವರು. "ಜನ ಮರುಳು-ಜಾತ್ರೆ ಮರುಳು............" ಎಂಬ ಗಾದಿಯ ಮಾತಿನಂತೆ ಕೆಲವು ಜನ ಮುಗ್ಧರೂ ಸಹ ಈ ತರಹದ ಜನರ ಉಪದೇಶಕ್ಕೆ ಮರುಳಾಗಿ ಅಡ್ಡದಾರಿಯನ್ನು ತುಳಿಯುಹತ್ತಿರುವರು.

ಸಾರಾಂಶ.

ಒಟ್ಟಿಗೆ ವಿಚಾರಮಾಡಿನೋಡಿದರೆ—ಗಾಂಧಿಯವರ ಬುದ್ಧಿಯಲ್ಲಿ ಸ್ಥಿರತೆಯಿರುವುದಿಲ್ಲವೆಂದೂ, ನಮ್ಮ ಇಂಡಿಯಾದಲ್ಲಿ ಇಂದಿನವರೆಗೂ ಇವರ ಯಾವ ಕಾರ್ಯಗಳಿಗೂ ಜಯವು ದೊರೆತಿಲ್ಲವೆಂದೂ, ಇವರು ಪ್ರತಿಯೊಂದು ಕಾರ್ಯವನ್ನು ಪೂರ್ತಿಗೊಳಿಸದೆ ತಿರುಪತಿ ಕ್ಷೌರದಂತೆ ಅರ್ಧಕ್ಕರ್ಧ ಮಾಡುವರೆಂದೂ, ಇವರ ನುಡಿಯಂತೆ ನಡೆಯುತ್ತಹೋದರೆ ಸರ್ವರಿಗೂ ಹಜಾಮತ್ ಆಗುವುದೆಂದೂ, ಸರಕಾರದವರ ಬಲವಾದ ಏಟಿನಿಂದ ಜೈಲಿಗೆ ಹೆದರಿ ಈಗೀಗ ಈ ಹೊಸ ಆಟವನ್ನು ಹೂಡಿರುವುದನ್ನು ನೋಡಿದರೆ ಇವರು ಆಡಿ ತೋರಿಸುತ್ತಿದ್ದ ಪೌರುಷದ ಮಾತುಗಳೆಲ್ಲಾ ಕೇವಲ ಪೊಳ್ಳೆಂದೂ, ಅಸ್ಪೃಶ್ಯರೂ ಸಹ ಇವರ ಸಹವಾಸಕ್ಕೆ ಹೋಗಬಾರದೆಂದೂ, ಹೋದದ್ದಾದರೆ ಈವರೆಗೆ ಅನೇಕರು ಅನುಭವಿಸಿದ ಕಷ್ಟಗಳನ್ನು ಅವರೂ ಕೂಡ ಅನುಭವಿಸಬೇಕಾಗುವುದೆಂದೂ, ಹಿಂದೂಸ್ಥಾನದಲ್ಲಿ ಇಂದಿನವರೆಗೆ ಕೇವಲ ಸಹಾನುಭೂತಿಯಿಂದಿದ್ದ ಸ್ಪೃಶ್ಯ ಮತ್ತು ಅಸ್ಪೃಶ್ಯರಲ್ಲಿ ಈ ಮಹಾಶಯರು ಭಯಂಕರ ದ್ವೇಷವನ್ನುಂಟುಮಾಡಿ ಸರ್ವತ್ರ ಹೊಡೆದಾಟವನ್ನು ಹುಟ್ಟಿಸುತ್ತ ಅಶಾಂತತೆಯನ್ನುಂಟುಮಾಡುತ್ತಿರುವರೆಂದೂ, ಈ ಕಾರಣದಿಂದ ಕೆಲವು ಕಡೆಗಳಲ್ಲಿ ಹೊಡೆದಾಟಗಳಾಗಿ ಮರಣಗಳುಂಟಾಗಿರುವುದರಿಂದ ಹಿಂದೂ ಜನಗಳಾರೂ ಇವರ ಸಹವಾಸದಲ್ಲಿ ಬೀಳದೆ ಇವರಿಂದ ದೂರವಾಗಿರುವುದೇ ಲೇಸೆಂದೂ ಅನೇಕ ಜನ ಜ್ಞಾನಿಗಳು ಯಥಾರ್ಥವಾದ ವಿಷಯವನ್ನು ಹೇಳುತ್ತಿರುವರು. ಈ ನಿಜತತ್ವವನ್ನು ಪ್ರತಿಯೊಬ್ಬರೂ ಲಕ್ಷ್ಯಕ್ಕೆ ತಂದು ಸನಾತನ ಧರ್ಮವಿರೋಧಿಗಳೂ ರಾಜಧರ್ಮವಿರೋಧಿಗಳೂ ಆದವರ ಸೆರಳಿಗೆ ಸಹ ಹೋಗದೆ ತಮ್ಮ ತಮ್ಮ ಧರ್ಮದಂತೆಯೂ ರಾಜಧರ್ಮದಂತೆಯೂ ನಡೆದು ಇಹಪರ ಸುಖಭಾಗಿಗಳಾಗಬೇಕೆಂದಾಶಿಸುವ,

ಓರ್ವ ಸನಾತನಧರ್ಮಾಭಿಮಾನಿ.

1-7-74

ಆಯುರ್ವೇದಪರಿಚಯ.

~~ಲೇಖಕರು: ಶಿವಕುಮಾರಸ್ವಾಮಿ, ಬೆಂಗಳೂರು.~~
~~(ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲ ...)~~.

ಧರ್ಮಾರ್ಥಕಾಮಮೋಕ್ಷಾಣಾಮಾರೋಗ್ಯಂ ಮೂಲಮುತ್ತಮಂ |
ರೋಗಾಸ್ತಸ್ಯಾಪಹರ್ತಾರಃ ಶ್ರೇಯಸೋ ಜೀವಿತಸ್ಯ ಚ ||
(ಚ. ಸಂ. ಸೂ.)

ಚರಾಚರಾತ್ಮಕವಾದೀಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ, ಸರ್ವಜ್ಞತ್ವ, ಸರ್ವಶಕ್ತಿಮತ್ವ, ಸರ್ವನಿಯಂತೃತ್ವಾದಿ ಲಕ್ಷಿತನಾದ ಪರಶಿವನ ಅಪ್ರಯತ್ನರೂಪವಾದ ನಿಶ್ವಾಸದಿಂದ ಚತುರ್ವೇದಗಳು ಆವಿರ್ಭವಿಸಿದವೆಂಬುದು ಬೃಹದಾರಣ್ಯಕೋಪನಿಷತ್ತಿನ 'ಅಸ್ಯಮಹತೋಭೂತಸ್ಯ ನಿಶ್ವಸಿತಮೇತದೃಗ್ವೇದೋ ಯಜುರ್ವೇದಃ ಸಾಮವೇದೋಥರ್ವಾಂಗಿರಸಃ' ಈ ಮಂತ್ರದಿಂದ ಸ್ಪಷ್ಟವಾಗುತ್ತದೆ. ಈ ವೇದಗಳಲ್ಲಿ ಐಹಿಕಾಮುಷ್ಮಿಕಸುಖಸಾಧಕಗಳಾದ ಅನಂತಶ್ರೇಷ್ಠತತ್ವಗಳಿರುತ್ತವೆ. ಇವು ಪ್ರಪಂಚದ ನಿಖಿಲವಿಜ್ಞಾನಗಳ ಭಂಡಾರಗಳಾಗಿರುತ್ತವೆ, ಸಕಲ ಸಿದ್ಧಾಂತಗಳಿಗೂ ಜನ್ಮಸ್ಥಾನವಾಗಿರುತ್ತವೆ. ಇಷ್ಟೇಕೆ? ಮಾನವಜಾತಿಯ ಪ್ರಾಣಸ್ವರೂಪವಾದ ವೇದಚತುಷ್ಟಯದಲ್ಲಿ ಸಕಲವಿದ್ಯೆಗಳೂ, ಸಕಲಶಾಸ್ತ್ರಗಳೂ, ಭೂತಭವಿಷ್ಯವಿಚಾರಗಳೂ ತುಂಬಿರುತ್ತವೆ. ಅದುದರಿಂದಲೇ 'ಭೂತಂ ಭವ್ಯಂ ಭವಿಷ್ಯಂ ಚ ಸರ್ವಂವೇದಾತ್ಪ್ರಸಿಧ್ಯತಿ' ಎಂಬ ವ್ಯಾಸೋಕ್ತಿಯು ಜಾಗ್ರತವಾಗಿರುತ್ತದೆ. ಈ ದುರೂಹಗಳಾದ ವೇದಾರ್ಥಗಳನ್ನು ಪರಿಶೀಲಿಸಿ ಪ್ರಾಚೀನಮಹರ್ಷಿಗಳು ಲೋಕಕಲ್ಯಾಣಾರ್ಥವಾಗಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಸಾಧಕಗಳಾದ ಅನಂತಶಾಸ್ತ್ರಗಳನ್ನು ರಚಿಸಿದರು. ದ್ವೈತಾದ್ವೈತ ವಿಶಿಷ್ಟಾದ್ವೈತ-ಶಕ್ತಿವಿಶಿಷ್ಟಾದ್ವೈತ ಮತಸ್ಥಾಪಕರಾದ ಶ್ರೀಮದಾಚಾರ್ಯರವರು ವೇದಾರ್ಥಗಳ ಪರ್ಯಾಲೋಚನೆಯಿಂದಲೇ ಸ್ವಮತಸಿದ್ಧಾಂತಗಳನ್ನು ಪ್ರಸಾರಗೊಳಿಸಿ ಜಗದ್ವಿಖ್ಯಾತರಾದರು. ಮುಖ್ಯವಾಗಿ ವಿಚಾರಮಾಡಿದರೆ ಸಕಲಶಾಸ್ತ್ರಗಳೂ, ಸಕಲ ಮತಸಿದ್ಧಾಂತಗಳೂ ಸಹ ಮಾನವರ ಉದ್ಧಾರಕ್ಕೆ ಕಾರಣಗಳಾದ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಿಗೋಸ್ಕರವಾಗಿಯೇ ನಿರ್ಮಿಸಲ್ಪಟ್ಟವುಗಳೆಂಬುದು ಸರ್ವಾನುಮತಸಿದ್ಧಾಂತವಾಗಿರುತ್ತದೆ. ಇನ್ನು ಪುರುಷಾರ್ಥಚತುಷ್ಟಯಕ್ಕೆ ಅಧಿಕಾರಿಯು ಯಾರೆಂಬುದನ್ನು ವಿಚಾರಮಾಡೋಣ. 'ಪುರಂತಿ ಪ್ರಾಣಿನಾಮಗ್ರೇ ಗಚ್ಛಂತೀತಿ ಪುರುಷಾಃ ಪುರಅಗ್ರಗಮನೇ ಇತಿ ದಾತ್ವರ್ಥ ಸಾಮರ್ಥ್ಯಾತ್ ಪ್ರಾಣಿನಾಮಗ್ರೇಸರಾಃ ಪುರುಷಾ ಇತಿ ಶಬ್ದಾರ್ಥಃ' ಸಕಲ ಜೀವರಾಶಿಯಲ್ಲಿ ಶ್ರೇಷ್ಠವಾದ ಮಾನವ ಸಮೂಹಕ್ಕೆ 'ಪುರುಷ' ಎಂಬ ಹೆಸರುಂಟಾಯಿತು. ಈ ಪುರುಷರ ಪ್ರಯೋಜನವೇ ಅರ್ಥಶಬ್ದದಿಂದ ದ್ಯೋತಕವಾಗುತ್ತದೆ. ಇದರಿಂದ ಮನುಷ್ಯಶರೀರವನ್ನು ಧರಿಸಿದ ಪ್ರತಿಯೊಂದು ವ್ಯಕ್ತಿಯೂ ಧರ್ಮಾರ್ಥಕಾಮಮೋಕ್ಷಗಳಲ್ಲಿ ಯಾವದಾದರೊಂದು ಪ್ರಯೋಜನವನ್ನು ಸಾಧಿಸಲು ನಿರಂತರವಾಗಿ ಪ್ರಯತ್ನಮಾಡಬೇಕೆಂಬುದು ಸಿದ್ಧವಾಗುವುದು. ಆದರೆ ಇಲ್ಲಿ ಮನುಷ್ಯನಾರೆಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗುತ್ತದೆ. ಪಂಚಜ್ಞಾನೇಂದ್ರಿಯಗಳೂ, ಪಂಚಕರ್ಮೇಂದ್ರಿಯಗಳೂ, ಮನಸ್ಸು, ಆತ್ಮ, ಇವುಗಳಿಂದ ಕೂಡಿದ ಪಂಚಭೂತಾತ್ಮಕವಾದ ಶರೀರಕ್ಕೇ ಮನುಷ್ಯ ಸಂಜ್ಞೆಯೆಂದು ಸಕಲ ಶಾಸ್ತ್ರಕಾರರ ಅಭಿಪ್ರಾಯವಾಗಿರುತ್ತದೆ. ನಿತ್ಯಶುದ್ಧ ಬುದ್ಧ ಮುಕ್ತಸ್ವರೂಪವಾದ ಪರವಸ್ತುವು ಈ ಪಂಚಭೂತಾತ್ಮಕ ಶರೀರದಲ್ಲಿ ಪ್ರವೇಶಿಸಿ ಜೀವಾತ್ಮನೆಂಬ ನಾಮಧೇಯವನ್ನು ಹೊಂದಿರುತ್ತದೆ. 'ಶರೀರಂ ಪಂಚಮಹಾಭೂತವಿಕಾರಾತ್ಮಕಮಾತ್ಮನೋಭೋಗಾಯತನಂ' (ಚ. ಸಂ. ಸೂ) ಪಂಚಭೂತಮಯವಾದ ಶರೀರವು ಪರಮಾತ್ಮನ ಭೋಗಸ್ಥಾನವಾಗಿರುತ್ತದೆ. 'ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ' (ಕಾಠ ಉ. ೧-೩-೪) ಶರೀರ, ಇಂದ್ರಿಯ, ಮನಸ್ಸು ಇವುಗಳಿಂದ ಕೂಡಿದವನಿಗೆ 'ಭೋಕ್ತಾ' ಎಂಬ ಹೆಸರು ಬರುತ್ತದೆ. ಅಂದಮೇಲೆ ಜೀವಾತ್ಮನ ಸಕಲ ಭೋಗಗಳಿಗೂ ಶರೀರವೇ ಆಧಾರವಾದಂತಾಯಿತು, ಶರೀರವನ್ನು ಬಿಟ್ಟು ಜೀವನು ಯಾವ ಕಾರ್ಯವನ್ನೂ ಮಾಡಲಾರನು.

"ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವಚ" (ಭ-ಗೀ) ಶರೀರವನ್ನು ರಥವನ್ನಾಗಿಯೂ ಜೀವನನ್ನು ಸಾರಥಿಯನ್ನಾಗಿಯೂ ಭಗವದ್ಗೀತೆಯಲ್ಲಿ ವರ್ಣಿಸಿರುತ್ತಾರೆ. ಧರ್ಮವನ್ನಾಗಲಿ ಅರ್ಥವನ್ನಾಗಲಿ ಕಾಮವನ್ನಾಗಲಿ ಮೋಕ್ಷವನ್ನಾಗಲಿ ಸಾಧಿಸಿಕೊಳ್ಳಬೇಕಾದರೆ ಈ ಶರೀರವೇ ಪ್ರಧಾನಕಾರಣವಾಗಿರುತ್ತದೆ. ಸಕಲ ಶಾಸ್ತ್ರಗಳೂ ಪುರಾಣಗಳೂ ಶರೀರಾವಚ್ಛಿನ್ನ ಜೀವಾತ್ಮನ ಉದ್ಧಾರಕ್ಕಾಗಿಯೇ ನಿರ್ಮಾಣವಾಗಿರುತ್ತವೆ. ಧರ್ಮಾಧರ್ಮಗಳೂ ಸುಖದುಃಖಗಳೂ ಪಾಪಪುಣ್ಯಗಳೂ ಶರೀರಸಹಿತನಾದ ಜೀವಾತ್ಮನಿಗೇ ಉಂಟಾಗುತ್ತವೆ. ಶ್ರವಣ, ಮನನ, ನಿದಿಧ್ಯಾಸ, ಧ್ಯಾನ, ಧಾರಣ, ಸಮಾಧಿಗಳಾದರೂ ಈ ಶರೀರದ ಹೊರತಾಗಿ ಸಾಧ್ಯವಿಲ್ಲ. ಲೌಕಿಕ ಪಾರಮಾರ್ಥಿಕ ವ್ಯವಹಾರಗಳಿಗಾದರೂ ಶರೀರವೇ ಆಧಾರಭೂತವಾಗಿದೆ. ಎಷ್ಟುದೂರ ವಿಚಾರಮಾಡಿದರೂ ಈ ಪಂಚಭೂತಾತ್ಮಕ ಶರೀರವೇ ಜಗತ್ತಿನ ಸಕಲಕಾರ್ಯಕಲಾಪಗಳಿಗೆ ಮೂಲವಾದುದೆಂಬುದೇ ಸಿದ್ಧವಾಗುತ್ತದೆ. ಹೀಗಾದ ಮೇಲೆ ಈ ಪುರುಷಾರ್ಥಸಾಧಕವಾದ ಶರೀರವನ್ನು ರಕ್ಷಿಸಿಕೊಳ್ಳಲು ನಿರಂತರವಾಗಿ ಪ್ರಯತ್ನಮಾಡುವುದು ಮೊದಲನೆಯ ಕರ್ತವ್ಯವಾಯಿತು. "ಶೀರ್ಯತಇತಿಶರೀರಂ" ಎಂಬ ವ್ಯುತ್ಪತ್ತಿಯಿಂದ ಶರೀರವು ಕ್ಷೀಣವಾಗತಕ್ಕ ಸ್ವಭಾವವುಳ್ಳದ್ದಾದುದರಿಂದ ರೋಗಾದಿ ಬಾಧೆಗಳುಂಟಾದಲ್ಲಿ ಅತ್ಯಂತ ಕ್ಷೀಣವಾಗಿ ಕಡೆಗೆ ಒಂದು ದಿನ ಮೃತ್ಯುವಿನ ಬಾಯಿಗೆ ತುತ್ತಾಗುವುದು. ಅದುದರಿಂದಲೇ "ಶರೀರಂ ಸತ್ವಸಂಜ್ಞಂಚ ವ್ಯಾಧೀನಾಮಾಶ್ರಯೋಮತಃ" ಎಂದು ಚರಕ ಮುನಿಗಳು ಹೇಳಿರುತ್ತಾರೆ. ಇಂತಹ ಅಮೂಲ್ಯವಾದ ಶರೀರವನ್ನು ಕಾಪಾಡಿಕೊಳ್ಳಬೇಕೆಂಬ ಅಭಿಲಾಷೆಯು ಯಾರಿಗೆ ಇಲ್ಲ? ಮನುಷ್ಯನಿಗೆ ಯಾವುದಾದರೊಂದು ವಸ್ತುವಿನಲ್ಲಿ ಪ್ರವೃತ್ತಿಯಾಗಲಿ ನಿವೃತ್ತಿಯಾಗಲಿ ಉಂಟಾಗಬೇಕಾದರೆ ಮೊದಲು ಆ ವಸ್ತುವಿನ ಸ್ವರೂಪವನ್ನು ತಿಳಿಯಬೇಕಾಗುತ್ತದೆ. ಒಬ್ಬನಿಗೆ ಪುಣ್ಯವನ್ನು ಮಾಡು ಎಂದು ಹೇಳುವುದಕ್ಕಿಂತಲೂ ಮೊದಲು ಪುಣ್ಯವೆಂದರೆ ಮನುಷ್ಯನ ಸದ್ಗತಿಗೆ ಮೂಲವಾದದ್ದು. ಪರೋಪಕಾರ, ಜಪ, ಪೂಜಾ, ಇವುಗಳನ್ನಾಚರಿಸಿದರೆ ಪ್ರಾಪ್ತವಾಗುತ್ತದೆಂದು ತಿಳಿಸಿದರೆ ಫಲದ ಅಭಿಲಾಷೆಯಿಂದ ಪುಣ್ಯಕಾರ್ಯದಲ್ಲಿ ಪ್ರವೃತ್ತನಾಗುವನು. ಪಾಪವು ದುರ್ಗತಿಗೆ ಕಾರಣವಾದದ್ದು ಪರಹಿಂಸೆ, ಗುರುನಿಂದೆ, ಪರದ್ರವ್ಯಾಪಹರಣೆ, ಇವುಗಳನ್ನಾಚರಿಸಬಾರದೆಂದು ಹೇಳಿದರೆ ಪಾಪಕರ್ಮದಿಂದ ನಿವೃತ್ತನಾಗುವನು. ಇದರಂತೆ, ಶರೀರವನ್ನು ರೋಗದಿಂದ ರಕ್ಷಿಸಿಕೊಳ್ಳಬೇಕೆಂದು ಉಪದೇಶಿಸುವುದಕ್ಕಿಂತಲೂ ಮೊದಲು, ರೋಗವೆಂದರೇನು? ರೋಗಕ್ಕೆ ಮೂಲಕಾರಣವಾವುದು? ರೋಗವು ಎಂದು ಹುಟ್ಟಿತು? ರೋಗಗಳೆಷ್ಟು ವಿಧವಾಗಿವೆ? ಎಂಬ ವಿಷಯಗಳನ್ನು ವಿಸ್ತಾರವಾಗಿ ತಿಳಿಸಿದಲ್ಲಿ ರೋಗನಿವಾರಣೆಯಲ್ಲಾಗಲಿ, ರೋಗಾನುತ್ಪತ್ತಿಯಲ್ಲಾಗಲಿ ಪ್ರವೃತ್ತಿಯುಂಟಾಗುತ್ತದೆ. ಅದುದರಿಂದ ಇಲ್ಲಿ ರೋಗದ ಉತ್ಪತ್ತಿಕಾಲ ಮೊದಲಾದುವುಗಳನ್ನು ಪರಿಶೀಲಿಸುವುದುತ್ತಮವಾಗಿದೆ. ರುಜಾ ಶಿರೋಗಃ ಎಂಬ ವ್ಯುತ್ಪತ್ತಿಯಿಂದ ರೋಗವು ಶರೀರ, ಇಂದ್ರಿಯ, ಮನಸ್ಸುಗಳನ್ನಾಶ್ರಯಿಸಿ ದುಃಖವನ್ನುಂಟುಮಾಡುತ್ತದೆಂದರ್ಥವಾಗುತ್ತದೆ. "ಸರ್ವೇಷಾಮೇವರೋಗಾಣಾಂನಿದಾನಂಕುಪಿತಾಮಲಾಃ | ತತ್ಪ್ರಕೋಪಸ್ಯತು ಪ್ರೋಕ್ತಂ ವಿವಿಧಾಹಿತಸೇವನಂ ||" (ಮಾ. ನಿ.) ಶರೀರದಲ್ಲಿ ಉಂಟಾಗುವ ಸಮಸ್ತ ರೋಗಗಳಿಗೂ ನಾನಾವಿಧಗಳಾದ ಅಪಥ್ಯವಸ್ತುಗಳ ಸೇವನೆಯಿಂದ ಕುಪಿತಗಳಾದ ವಾತ, ಪಿತ್ತ, ಕಫಗಳೇ ಕಾರಣವಾಗಿರುತ್ತವೆ. ಶರೀರಜನ್ಯಗಳಾದ ರೋಗಗಳಿಗೆ ಆಹಾರವಿಹಾರಗಳು ನಿಮಿತ್ತಕಾರಣಗಳಾಗುತ್ತವೆ. ಅಧರ್ಮವು ಉಪಾದಾನಕಾರಣವಾಗುತ್ತದೆ. ಸಕಲವಸ್ತುಗಳ ಉತ್ಪತ್ತಿಯಲ್ಲಿಯೂ ಉಪಾದಾನ ನಿಮಿತ್ತಕಾರಣಗಳು ಇದ್ದೇಇರಬೇಕಾಗುತ್ತವೆ. ಘಟದ ಉತ್ಪತ್ತಿಗೆ ಮೃತ್ತಿಕೆಯು ಉಪಾದಾನಕಾರಣವಾಗಿದೆ. ಕುಂಬಾರ, ಚಕ್ರ, ದಂಡಗಳು ನಿಮಿತ್ತಕಾರಣಗಳಾಗಿವೆ. ಪಟದ ಉತ್ಪತ್ತಿಗೆ ತಂತುವು ಉಪಾದಾನಕಾರಣವಾಗಿದೆ. ನೇಯುವವನು, ಮಗ್ಗ, ಲಾಳಿಗಳು ನಿಮಿತ್ತಕಾರಣಗಳಾಗಿವೆ. ಇದರಂತೆ ರೋಗಕ್ಕಾದರೂ ಆಹಾರಗಳು ನಿಮಿತ್ತಕಾರಣವಾಗಿಯೂ ಅಧರ್ಮವು ಉಪಾದಾನಕಾರಣವಾಗಿಯೂ ಇರುತ್ತವೆ. ರೋಗೋತ್ಪತ್ತಿಗೆ ಅಧರ್ಮವು ಮೂಲವಾದುದೆಂಬುದು ಚರಕಸಂಹಿತೆಯ ವಿಮಾನಸ್ಥಾನದ ಮೂರನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿರುತ್ತದೆ. 'ಭ್ರಶ್ಯತಿ ಕೃತಯುಗೇ ಕೇಷಾಂಚಿದತ್ಯಾದಾನಾತ್ ಸಾಂಪನ್ನಿಕಾನಾಂ ಶರೀರಗೌರವಮಾಸೀತ್ ಸತ್ವಾನಾಂ ಗೌರವಾತ್ ಶ್ರಮಃ ಶ್ರಮಾದಾಲಸ್ಯಮಾಲಸ್ಯಾತ್ ಸಂಚಯಃ ಸಂಚಯಾತ್ಪರಿಗ್ರಹಃ ಪರಿಗ್ರಹಾಲ್ಲೋಭಃ ಸಂಜಾತಃ | ತತಸ್ತ್ರೇತಾಯಾಂ ಲೋಭಾದಭಿದ್ರೋಹಃ............ಧರ್ಮಪಾದಸ್ಯಾಂತರ್ಧಾನಾತ್ ಪೃಥಿವ್ಯಾದೀನಾಂ ಗುಣಪಾದಪ್ರಣಾಶೋಽಭೂತ್ |............ಹೀಯಮಾನಗುಣಪಾದೈಶ್ಚಾಹಾರವಿಹಾರೈರಯಥಾಪೂರ್ವಮುಪಸ್ಥ್ಯಮಾನಾಗ್ನಿ ಮಾರುತಪರೀತಾನಿ ಪ್ರಾಗ್ವ್ಯಾಧಿಭಿರ್ಜ್ವರಾದಿಭಿರಾಕ್ರಾಂತಾನಿ ಅತಃ ಪ್ರಾಣಿನೋ ಹ್ರಾಸಮವಾಪುರಾಯುಷಃ ಕ್ರಮಶಃ||' ಕೃತಯುಗದಲ್ಲಿ ಧರ್ಮವು ಚತುಷ್ಪಾದಪರಿಪೂರ್ಣವಾಗಿದ್ದುದರಿಂದ ಪ್ರಜೆಗಳು 'ಅತಿವೃಷ್ಟಿರನಾವೃಷ್ಟಿಃ ಶಲಭಾ ಮೂಷಕಾಃ ಶುಕಾಃ | ಅತ್ಯಾಸನ್ನಾಶ್ಚ ರಾಜಾನಃ ಷಡೇತಾ ಈತಯಃ ಸ್ಮೃತಾಃ ||' ಅತಿವೃಷ್ಟ್ಯಾದಿ ಆರು ಈತಿಬಾಧೆಗಳಿಂದ ರಹಿತರಾಗಿಯೂ, ಇಂದ್ರನಿಗೆ ಸಮಾನವಾದ ತೇಜೋಬಲವುಳ್ಳವರಾಗಿಯೂ, ಜ್ವರಾದಿ ರೋಗಸಂಪರ್ಕರಹಿತರಾಗಿಯೂ, ಹಿಮಾಚಲಕ್ಕೆ ಸಮಾನವಾದ ದೃಢಶರೀರವುಳ್ಳವರಾಗಿಯೂ, ಸಾಮಾನ್ಯವಾಗಿ ನಾಲ್ಕುನೂರು ವರ್ಷಗಳ ಆಯುಃಪರಿಮಿತಿಯುಳ್ಳವರಾಗಿ ಬಾಳುತ್ತಿದ್ದರು. ಈ ಯುಗದ ಅಂತಿಮಭಾಗದಲ್ಲಿ ಧನಸಮೃದ್ಧಿಶಾಲಿಗಳಾದ ಕೆಲವರಲ್ಲಿ ಶರೀರಗೌರವವುಂಟಾಗಿ ಇದರಿಂದ ಶ್ರಮ, ಆಲಸ್ಯ, ಲೋಭಗಳುಂಟಾದುವು. ತ್ರೇತಾಯುಗದಲ್ಲಿ ಧರ್ಮದ ಒಂದು ಪಾದವು ಲೋಪವಾಗಲು ಪ್ರಜೆಗಳಲ್ಲಿ ಲೋಭ, ದ್ರೋಹ, ಶೋಕ ಮೊದಲಾದವು ವೃದ್ಧಿಗೊಂಡವು. ಧರ್ಮದ ಒಂದು ಭಾಗವಿನಾಶದಿಂದ ಪೃಥ್ವಿಯಲ್ಲಿಯೂ ಒಂದುಭಾಗ ಸಾರವು ಕಡಿಮೆಯಾಯಿತು. ಅಲ್ಪಸಾರವುಳ್ಳ ಭೂಮಿಯಲ್ಲಿ ಹುಟ್ಟಿದ ಸಸ್ಯಗಳಲ್ಲಿಯೂ ರಸ, ವೀರ್ಯ, ವಿಪಾಕಾದಿಗಳು ಕ್ಷೀಣಾವಸ್ಥೆಯನ್ನು ಹೊಂದಿದುವು. ಈ ಕ್ಷೀಣ ಮತ್ತು ವಿಷಮರಸವೀರ್ಯಯುಕ್ತಗಳಾದ ಸಸ್ಯಗಳಿಂದ ಹುಟ್ಟಿದ ಪದಾರ್ಥಸೇವನೆಯಿಂದ ಶರೀರದಲ್ಲಿರುವ ವಾತಪಿತ್ತಕಫಗಳು ದೂಷಿತಗಳಾಗಿ ಜ್ವರಾದಿ ರೋಗಗಳ ಆವಿರ್ಭಾವವಾಯಿತು. 'ಆತ್ಮನ ಆಕಾಶಃ ಸಂಭೂತಃ ಆಕಾಶಾದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ ಪೃಥಿವೀ ಪೃಥಿವ್ಯಾಂ ಓಷಧಯಃ ಓಷಧಿಭ್ಯೋಽನ್ನಂ ಅನ್ನಾತ್ಪುರೀರಾಣಿ ಸಂಜಾಯಂತೆ' ಎಂಬ ಶ್ರುತಿಗನುಸಾರವಾಗಿ ಪ್ರಾಣಿಗಳ ಉತ್ಪತ್ತಿಗೆ ಸಸ್ಯಗಳು ಸಾಕ್ಷಾತ್‌ಕಾರಣಗಳಾಗಿರುವುದರಿಂದ, ಕ್ಷೀಣವೀರ್ಯಸಸ್ಯಗಳಿಂದ ಹುಟ್ಟಿದ ಆಹಾರಸೇವನೆಯಿಂದ ಪ್ರಜೆಗಳಲ್ಲಿ ಜ್ವರಾದಿಗಳುಂಟಾದುವೆಂತಲೂ, ಪೃಥಿವ್ಯಾದಿಗಳ ಕ್ಷೀಣಶಕ್ತಿಗೆ ಅಧರ್ಮವೇ ಮೂಲಕಾರಣವೆಂತಲೂ ಸಿದ್ಧವಾಯಿತು. ಇದರಿಂದ ರೋಗದ ಆವಿರ್ಭಾವವು ತ್ರೇತಾಯುಗದಲ್ಲಾಯಿತೆಂಬುದು ನಿರ್ಣಯವಾಯಿತು. ಈ ಪ್ರಕಾರವಾಗಿ ಅಧರ್ಮಮೂಲಕವಾದ ರೋಗವು ಜಗತ್ತಿನಲ್ಲಿ ವ್ಯಾಪಿಸಿ ಪ್ರಜೆಗಳನ್ನು ಬಾಧಿಸುತ್ತಿರುವ ಸಮಯದಲ್ಲಿ ಅಂಗಿರಸ-ಜಮದಗ್ನಿ-ವಸಿಷ್ಠ-ಕಶ್ಯಪ-ಭರದ್ವಾಜ ಮೊದಲಾದ ಮುನಿಗಳು ರೋಗನಿವಾರಣೋಪಾಯವನ್ನರಿಯದೆ ಚಿಂತಾವ್ಯಾಕುಲಿತರಾಗಿ ಪವಿತ್ರವಾದ ಹಿಮಾಲಯದ ಸಮೀಪದಲ್ಲಿ ಒಟ್ಟುಗೂಡಿ ಒಂದು ಸಭೆಯನ್ನು ಮಾಡಿದರು.

8-7-74

'ವಿಘ್ನಭೂತಾ ಯದಾ ರೋಗಾಃ ಪ್ರಾದುರ್ಭೂತಾಃ ಶರೀರಿಣಾಂ | ತಪೋಪವಾಸಾಧ್ಯಯನ ಬ್ರಹ್ಮಚರ್ಯವ್ರತಾಯುಷಾಂ || ತದಾ ಭೂತೇಷ್ವನುಕ್ರೋಶಂ ಪುರಸ್ಕೃತ್ಯ ಮಹರ್ಷಯಃ | ಸಮೇತಾಃ ಪುಣ್ಯಕರ್ಮಾಣಃ ಪಾರ್ಶ್ವೇ ಹಿಮವತಃ ಶುಭೇ || ಧರ್ಮಾರ್ಥಕಾಮಮೋಕ್ಷಾಣಾಮಾರೋಗ್ಯಂ ಮೂಲಮುತ್ತಮಂ | ರೋಗಾಸ್ತಸ್ಯಾಪಹರ್ತಾರಃ ಶ್ರೇಯಸೋ ಜೀವಿತಸ್ಯ ಚ || ಪ್ರಾದುರ್ಭೂತೋ ಮನುಷ್ಯಾಣಾಮಂತರಾಯೋ ಮಹಾನಯಂ | ಕಃ ಸ್ಯಾತ್ತೇಷಾಂ ಶಮೋಪಾಯ ಇತ್ಯುಕ್ತ್ವಾ ಧ್ಯಾನಮಾಸ್ಥಿತಾಃ || ಅಥ ತೇ ಶರಣಂ ಶಕ್ರಂ ದದೃಶುರ್ಧ್ಯಾನಚಕ್ಷುಷಾ | ಸ ವಕ್ಷ್ಯತಿ ಶಮೋಪಾಯಂ ಯಥಾವದಮರಪ್ರಭುಃ" ಆ ಹಿಮಾಲಯಪ್ರದೇಶದಲ್ಲಿ ಸೇರಿದ ಸಭೆಯಲ್ಲಿ ಸಕಲ ಮುನಿಗಳೂ ಅನೇಕ ವಿಧವಾಗಿ ಚರ್ಚೆಗಳನ್ನು ನಡೆಯಿಸಿ ಕಡೆಗೆ ನಿರುಪಾಯರಾಗಿ ದಿವ್ಯದೃಷ್ಟಿಯ ಬಲದಿಂದ ರೋಗನಿವಾರಣೋಪಾಯವನ್ನು ಅಮರಪತಿಯಾದ ಇಂದ್ರನಿಂದಲೇ ತಿಳಿಯಬೇಕೆಂದು ನಿರ್ಧರಿಸಿದರು. ಸರ್ವಾನುಮತದಿಂದ ಭರದ್ವಾಜಮುನಿಯೇ ಇಂದ್ರನಲ್ಲಿ ಹೋಗಲು ಯೋಗ್ಯನಾಗುವನೆಂದು ನಿರ್ಣಯಿಸಿ ಆ ಮುನಿಯನ್ನು ಇಂದ್ರನಲ್ಲಿಗೆ ಕಳಿಸಿದರು. 'ಸ ಶಕ್ರಭವನಂ ಗತ್ವಾ ಸುರರ್ಷಿಗಣಸೇವಿತಂ ದದರ್ಶ ಬಲಹಂತಾರಂ ದೀಪ್ಯಮಾನಮಿವಾನಲಂ | ಸೋಭಿಗಮ್ಯ ಜಯಾಶೀರ್ಭಿರಭಿನಂದ್ಯ ಸುರೇಶ್ವರಂ ಪ್ರೋವಾಚ ಭಗವಾನ್ ಧೀಮಾನ್ ಋಷೀಣಾಂ ವಾಕ್ಯಮುತ್ತಮಂ || ವ್ಯಾಧಯೋಹಿ ಸಮುತ್ಪನ್ನಾಃ ಸರ್ವಪ್ರಾಣಿಭಯಂಕರಾಃ ತದ್ಬ್ರೂಹಿ ಮೇ ಶಮೋಪಾಯಂ ಯಥಾವದಮರಪ್ರಭೋ|| ತಸ್ಮೈ ಪ್ರೋವಾಚ ಭಗವಾನಾಯುರ್ವೇದಂ ಶತಕ್ರತುಃ | ಪದೈರಲ್ಪೈರ್ಮತಿಂ ಬುದ್ಧ್ವಾ ವಿಪುಲಾಂ ಪರಮರ್ಷಯೆ' (ಚ-ಸಂ) ಭರದ್ವಾಜಮುನಿಯು ಅಮರಾವತಿಗೆ ಹೋಗಿ ಸುರಮುನಿ ಪರಿಸೇವಿತನಾದ ಇಂದ್ರನನ್ನು ಸಂದರ್ಶಿಸಿ ಜಯಾಶೀರ್ವಾದಗಳನ್ನು ಮಾಡಿದ ನಂತರ ಸಕಲ ಮುನಿಗಳ ಪವಿತ್ರತಮವಾದ ಸಂದೇಶವನ್ನು ತಿಳಿಸಿದನು. ಅನಂತರದಲ್ಲಿ ರೋಗನಿವಾರಣೋಪಾಯವನ್ನು ಉಪದೇಶಮಾಡಬೇಕೆಂದು ಪ್ರಾರ್ಥಿಸಲಾಗಿ ಇಂದ್ರನು ವಿಮಲಮತಿಯಾದ ಭರದ್ವಾಜಮುನಿಗೆ ಆಯುರ್ವೇದವನ್ನುಪದೇಶಮಾಡಿದನು. ಚರಕಸಂಹಿತೆಯಲ್ಲಿ ಆಯುರ್ವೇದದ ಆವಿರ್ಭಾವವು ಈ ರೀತಿಯಾಗಿರುತ್ತದೆ. 'ಆಯುರ್ಹಿತಾಹಿತಂ ವ್ಯಾಧೇರ್ನಿದಾನಂ ಶಮನಂ ತಥಾ | ವಿದ್ಯತೇ ಯತ್ರ ವಿದ್ವದ್ಭಿಃ ಸ ಆಯುರ್ವೇದ ಉಚ್ಯತೇ' ಆಯುಸ್ಸಿನ ಹಿತಾಹಿತರೂಪಗಳಾದ ಸುಖದುಃಖಗಳೂ, ರೋಗಗಳ ಕಾರಣ, ನಿವಾರಣೋಪಾಯಗಳೂ ಯಾವ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುವೋ ಅದನ್ನೇ ಪಂಡಿತರು ಆಯುರ್ವೇದವೆಂದು ಕರೆಯುತಾರೆ. 'ಋಗ್ಯಜುಃಸಾಮಾಥರ್ವಾಖ್ಯಾನ್ ದೃಷ್ಟ್ವಾ ವೇದಾನ್ ಪ್ರಜಾಪತಿಃ | ವಿಚಿಂತ್ಯ ತೇಷಾಮರ್ಥಂ ಚೈವಾಯುರ್ವೇದಂ ಚಕಾರ ಸಃ' (ಬ್ರ. ವೈ. ಪು. ಅ೧೬) ಬ್ರಹ್ಮನು ವೇದವೇದಾರ್ಥಗಳ ಪರಿಶೀಲನೆಯಿಂದ ಆಯುರ್ವೇದವನ್ನು ರಚಿಸಿದನು. 'ಇಹಖಲ್ವಾಯುರ್ವೇದಮುಪಾಂಗಮಥರ್ವವೇದಸ್ಯಾನುತ್ಪಾದ್ಯೈವ ಪ್ರಜಾಃ ಶ್ಲೋಕಶತಸಹಸ್ರಮಧ್ಯಾಯಸಹಸ್ರಂ ಚ ಕೃತವಾನ್ ಸ್ವಯಂಭೂಃ | ತತೋಽಲ್ಪಾಯುಷ್ಟ್ವಮಲ್ಪಮೇಧಸ್ತ್ವಂ ಚಾಲೋಕ್ಯ ನರಾಣಾಂ ಭೂಯೋಽಷ್ಟಧಾ ಪ್ರಣೀತವಾನ್' (ಸು. ಸಂ.) ಬ್ರಹ್ಮದೇವನು ಸೃಷ್ಟಿಮಾಡುವುದಕ್ಕಿಂತಲೂ ಪ್ರಥಮದಲ್ಲಿಯೇ ಅಥರ್ವವೇದದ ಅಂಗಭೂತವಾದ ಆಯುರ್ವೇದವನ್ನು ಒಂದುಲಕ್ಷ ಶ್ಲೋಕಗಳಿಂದ ಕೂಡಿರುವ ಒಂದು ಸಾವಿರ ಅಧ್ಯಾಯಗಳನ್ನೊಳಗೊಂಡಿರುವ 'ಬ್ರಹ್ಮಸಂಹಿತಾ' ಎಂಬ ಹೆಸರಿನಿಂದ ರಚಿಸಿದನು. ಅನಂತರ ಕಾಲಕ್ರಮದಿಂದ ಮನುಷ್ಯರು ಅಲ್ಪಾಯುಷ್ಯರೂ, ಅಲ್ಪಮೇಧಾವಿಗಳೂ ಆಗುವರೆಂದು ದಿವ್ಯದೃಷ್ಟಿಯಿಂದರಿತು ಆ ಆಯುರ್ವೇದವನ್ನೇ ಎಂಟು ವಿಧವಾಗಿ ವಿಭಾಗಿಸಿದನು. ಅಲ್ಲಿಂದ ಬ್ರಹ್ಮನು ದಕ್ಷಪ್ರಜಾಪತಿಗೆ ಆಯುರ್ವೇದೋಪದೇಶವನ್ನು ಮಾಡಿದನು. ದಕ್ಷಪ್ರಜಾಪತಿಯು ಅಶ್ವಿನೀದೇವತೆಗಳಿಗೂ, ಅಶ್ವಿನೀದೇವತೆಗಳು ಇಂದ್ರನಿಗೂ, ಇಂದ್ರನು ವಸಿಷ್ಠಾದಿ ಮುನಿಗಳಿಂದ ಕಳಿಸಲ್ಪಟ್ಟ ಭರದ್ವಾಜಮುನಿಗೂ, ಭರದ್ವಾಜಮುನಿಯು ಸಮಸ್ತ ಮುನಿಗಳಿಗೂ ಕ್ರಮವಾಗಿ ಆಯುರ್ವೇದೋಪದೇಶವನ್ನು ಮಾಡಿದರು. ಆ ಋಷಿಸಮೂಹದಲ್ಲಿ ಒಬ್ಬನಾದ ಪುನರ್ವಸುಮುನಿಯು (ಇವನಿಗೆ ಆತ್ರೇಯನೆಂತಲೂ ಉಪನಾಮವಿರುತ್ತದೆ) ಭರದ್ವಾಜೋಪದಿಷ್ಟನಾದ ಆಯುರ್ವೇದವನ್ನು ಸಕಲ ಪ್ರಾಣಿಗಳ ಕಲ್ಯಾಣಕ್ಕೋಸುಗ ಅಗ್ನಿವೇಶ, ಭೇಲ, ಜತೂಕರ್ಣ, ಪರಾಶರ, ಹಾರೀತ, ಕ್ಷಾರಪಾಣಿಗಳೆಂಬಾರುಜನ ಶಿಷ್ಯರಿಗೆ ಉಪದೇಶಮಾಡಿದನು. ಅತ್ಯಂತ ಕುಶಲಮತಿಗಳಾದಿವರು ತಮ್ಮ ಹೆಸರಿನಿಂದ ಒಂದೊಂದು ತಂತ್ರವನ್ನು ರಚಿಸಿ ಜಗದ್ವಿಖ್ಯಾತರಾದರು. ಇಲ್ಲಿಗೆ ಆಯುರ್ವೇದಾವತರಣವು ಸಮಾಪ್ತವಾಯಿತು.

15-7-74

ತಿರುಪತಿಗೆ ಸಮೀಪದಲ್ಲಿರುವ ಪೊದಿಲಿ ತಾಲೂಕಿನಲ್ಲಿ ರಾಮನಾಡು ಡಿಸ್ಟ್ರಿಕ್ಟಿಗೆ ಸೇರಿದ 16 ಜನರು ಖೋಟಾ ರೂಪಾಯಿಗಳನ್ನು ತಯಾರಿಸುತ್ತಿದ್ದರೆಂಬ ಕಾರಣದ ಮೇಲೆ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟರು. ಇವರು ಈಗ್ಗೆ ಎರಡು ವರ್ಷಗಳಿಂದಲೂ ವೆಲಿಗೋಡುಬೆಟ್ಟದ ಮೇಲಿನ ಒಂದು ಗುಪ್ತಪ್ರದೇಶದಲ್ಲಿ 1919 ನೇ ಇಸವಿಯ 5000 ರೂಪಾಯಿಗಳನ್ನು ತಯಾರಿಸಿ ಚಲಾವಣೆ ಮಾಡಿರುತ್ತಾರಂತೆ!

ಪಂಚಾಚಾರ್ಯ ಪ್ರಭಾ.

೧೯೩೪ನೇ ಜನವರಿ ತಾ|| ೧ನೇ ಸೋಮವಾರ.

ಉಪಾಸನೆ.

ನಮ್ಮ ಭಾರತವರ್ಷದಲ್ಲಿ ಪ್ರಾಚೀನಕಾಲದಿಂದಲೂ ಅನಂತ ಮತಗಳು ನೆಲೆಗೊಂಡಿವೆ. ಇವುಗಳ ಧ್ಯೇಯವೇನೋ ಒಂದೇ ಆದರೂ ಉಪಾಸನಾಮಾರ್ಗಗಳು ಬೇರೆಬೇರೆಯಾಗಿರುತ್ತವೆ. ಯಾವ ಉಪಾಸನಾಮಾರ್ಗಗಳಲ್ಲಿ ಪ್ರವೇಶಿಸಿದರೂ ಮೋಕ್ಷವೆಂಬ ಮಹಾಪುರುಷಾರ್ಥವೆಂಬ ಧ್ಯೇಯವನ್ನೇ ಆಯಾಯ ಮತಸ್ಥಾಪನಾಚಾರ್ಯರು ದೃಢೀಕರಿಸಿರುತ್ತಾರೆ. ಕಾಳಿದಾಸಮಹಾಕವಿಯು ಒಂದು ಸಂದರ್ಭದಲ್ಲಿ—

ಬಹುಧಾಪ್ಯಾಗಮೈರ್ಭಿನ್ನಾಃ ಪಂಥಾನಃ ಸಿದ್ಧಿಹೇತವಃ |
ತ್ವಯ್ಯೇವ ನಿಪತಂತ್ಯೋಘಾ ಜಾಹ್ನವೀಯಾ ಇವಾರ್ಣವೇ ||

ಶಾಸ್ತ್ರಗಳು ಅನಂತವಾಗಿರುತ್ತವೆ. ಒಂದೊಂದರ ಮಾರ್ಗವು ಒಂದೊಂದು ವಿಧವಾಗಿರುತ್ತದೆ. ಇವೆಲ್ಲಾ ಮಾರ್ಗಗಳೂ ಪರಮಾತ್ಮನಲ್ಲಿ ಸೇರುವಿಕೆಯೆಂಬ ಮೋಕ್ಷರೂಪ ಮಹಾಪುರುಷಾರ್ಥಕ್ಕೇನೇ ಸಹಾಯಭೂತಗಳಾಗಿರುತ್ತವೆಯಲ್ಲದೆ ಇನ್ನೊಂದು ಪುರುಷಾರ್ಥಕ್ಕೆ ಸಹಾಯಕಗಳಾಗಿಲ್ಲ. ಗಂಗಾಪ್ರವಾಹವು ನಾನಾಕಾರವಾದ ಮಾರ್ಗಗಳಿಂದ ಹರಿಯುತ್ತಿದ್ದರೂ ಕೊನೆಯಲ್ಲಿ ಸಮುದ್ರವನ್ನೇ ಸೇರಿಬಿಡುವದಷ್ಟೆ! ಎಂದು ಹೇಳಿರುವುದನ್ನು ನೋಡಿದರೆ ಈ ನಾನಾಕಾರವಾಗಿ ತೋರಿಬರುತ್ತಿರುವ ಉಪಾಸನಾಮಾರ್ಗಗಳೆಲ್ಲವೂ ಸೃಷ್ಟಿಸ್ಥಿತಿ ಸಂಹಾರಕರ್ತನಾದ ಈಶ್ವರನ ಸ್ಥಾನವನ್ನೇ ತೋರಿಸುತ್ತವೆ. ಆ ಪರಮೇಶ್ವರನನ್ನು ಒಬ್ಬೊಬ್ಬ ಉಪಾಸಕನು ತನ್ನ ಉಪಾಸನೋಪಾಧಿಯಿಂದ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾನೆ. ಹಾಗೆ ಕರೆದ ಮಾತ್ರದಿಂದ ದೇವರು ಜೀವಾತ್ಮರಂತೆ ಅನೇಕರೆಂದು ಹೇಳಲಾಗುವುದಿಲ್ಲ. ಆಕಾಶದಿಂದ ಬೀಳುವ ನೀರು ಸ್ವಭಾವವಾಗಿ ಮಾಧುರ್ಯವೆಂಬ ಒಂದೇ ರಸವುಳ್ಳದಾಗಿದ್ದರೂ ಚವಳು ಕಟ್ಟುವಿಕೆ ಮುಂತಾದ ನಾನಾ ಸ್ವಭಾವವುಳ್ಳ ಆಯಾಯ ಭೂಮಿಯ ಮೇಲೆ ಬೀಳುವುದರಿಂದ ಭೂಮಿಯ ಉಪಾಧಿಯಿಂದ ಈ ನೀರು ಉಪ್ಪಾಗಿದೆ. ಈ ನೀರು ಸಿಹಿಯಾಗಿದೆ, ಎಂದು ಅನಂತ ವಿಧವಾಗಿ ವ್ಯವಹಾರ ಮಾಡುವದನ್ನು ನಾವು ಪ್ರತ್ಯಕ್ಷದಲ್ಲಿ ನೋಡಿರುತ್ತೇವೆ. ಪರಮಾತ್ಮನೆಂದರೆ ಅವನು ಸ್ವೇಚ್ಛಾಕಲ್ಪಿತವಿಗ್ರಹಧಾರಿಯು. ಅವನಿಗೆ ನಮ್ಮಂತೆ ಕರ್ಮಬದ್ಧವಾದ ಒಂದು ದೇಹವನ್ನೇ ಧರಿಸಿಕೊಂಡಿರಬೇಕೆಂಬ ನಿಯಮವಿಲ್ಲ. ಜೀವಾತ್ಮನಾದರೂ ಅನಾದಿಯಾದ ಕರ್ಮವಾಸನೆಯಿಂದ ಕೂಡಿರುವುದರಿಂದ ಒಂದೊಂದು ದೇಹದಲ್ಲಿ ಎಷ್ಟೋ ದಿವಸ ಸುಖಪಡುತ್ತಲೂ ದುಃಖಪಡುತ್ತಲೂ ಇರಬೇಕಾಗಿದೆ. ಸಕಲ ವೇದಶಾಸ್ತ್ರಗಳು ಪರಮಾತ್ಮನ ನಿರ್ವಿಕಾರಿತ್ವವನ್ನು ಮುಕ್ತಕಂಠದಿಂದ ಸಾರುತ್ತಿರುವುವು. ಈ ಅನಂತಕೋಟಿ ಜೀವಾತ್ಮರೆಲ್ಲರೂ ಆ ಪರಮಾತ್ಮನಿಂದ ಉದ್ಭವರಾದುದರಿಂದ ಆತನ ಪುತ್ರರೇ ಆಹುದು. ಆದರೂ ಪರಮಾತ್ಮನ ಆಜ್ಞೆಗೆ ವಿರುದ್ಧವಾಗಿ ನಡೆಯುತ್ತಿರುವ ಆತ್ಮರಾರುಂಟೋ ಅಂತಹ ಆತ್ಮರನ್ನು ತನ್ನ ಪುತ್ರರೆಂಬ ಲಾಲನೆಯಿಂದ ಶಿಕ್ಷಿಸದೆ ಬಿಡುವುದಿಲ್ಲ. ಲೋಕದಲ್ಲಿ ನೀತಿಜ್ಞನಾದ ಮಹಾರಾಜನು ತನ್ನ ಹೊಟ್ಟೆಯಲ್ಲಿ ಹುಟ್ಟಿದವನೆಂದೂ ಬೇರೆಯವನೆಂದೂ ಭೇದವೆಣಿಸದೆ ಅಕ್ಷಮ್ಯವಾದ ಅಪರಾಧಿಗಳಾರನ್ನಾದರೂ ಶಿಕ್ಷಿಸಿದೆ ಬಿಡುವುದಿಲ್ಲ. ಇದೇ ರಾಜಧರ್ಮವು. ಅನಂತಕೋಟಿ ಜೀವರಾಶಿಯೊಳಗೊರ್ವನಾದ ಮಹಾರಾಜನ ವರ್ತನವೇ ಹೀಗಿರುವಾಗ ಇನ್ನು ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನ ವಿಷಯದಲ್ಲಿ ಹೇಳಬೇಕಾದುದೇ ಇಲ್ಲ. ಆ ಪರಮೇಶ್ವರನಲ್ಲಿ ಅನುಗ್ರಹಶಕ್ತಿ ಮತ್ತು ನಿಗ್ರಹಶಕ್ತಿಯೆಂದು ಎರಡು ಅಸಾಧಾರಣಶಕ್ತಿಗಳುಂಟು. ಇವೆರಡು ಶಕ್ತಿಗಳಲ್ಲಿ ಯಾರು ಪೂರ್ವಾಚಾರ್ಯರು ರಚಿಸಿದ ಯಾವುದಾದರೊಂದು ಮಾರ್ಗವನ್ನು ಬಿಡದೆ ತನ್ನ ಅಭ್ಯಾಸಾನುಸಾರವಾಗಿ ಒಂದೊಂದು ನಾಮದಿಂದ ಯಾರು ಉಪಾಸಿಸುತ್ತಾರೆಯೋ ಅಂಥವರ ವಿಷಯದಲ್ಲಿ ತನ್ನ ನಿಗ್ರಹಶಕ್ತಿಯನ್ನು ಸಂಕುಚಿತಮಾಡಿ ಅನುಗ್ರಹಶಕ್ತಿಯನ್ನು ಅವರಮೇಲೆ ವಿಕಸನಗೊಳಿಸುತ್ತಾನೆ. ಮತ್ತು ತಾನು ಯಾವ ರೂಪದಿಂದ ಪರಮಾತ್ಮನನ್ನು ಹಿಂದಿನಿಂದ ಉಪಾಸಿಸಿಕೊಂಡು ಬಂದಿರುವನೋ ಅದೇ ಆಕಾರದಿಂದ ಕಾಣಿಸಿಕೊಂಡು ಉದ್ಧರಿಸುವ ಸ್ವಭಾವವುಳ್ಳವನಾಗಿರುತ್ತಾನೆ. ಇದಕ್ಕೆ ಅನೇಕ ದೃಷ್ಟಾಂತಗಳು ನಮ್ಮ ಇತಿಹಾಸಗಳಲ್ಲಿ ಕಂಡುಬರುತ್ತವೆ. ಪರಮಾತ್ಮನನ್ನು ಯಾವ ಆಕಾರದಿಂದ ಭಾವಿಸುತ್ತೇವೆಯೋ ಅದೇ ಆಕಾರದಿಂದಲೇ ಅವತರಿಸಿ ತನ್ನ ಅನುಗ್ರಹಶಕ್ತಿಯೆಂಬ ಚಂದ್ರಕಿರಣಗಳನ್ನು ಬೀರಿ ಭಕ್ತರನ್ನುದ್ಧರಿಸುವುದೇ ಆತನ ಕರ್ತವ್ಯವಾಗಿದ್ದರೂ ಯಾವುದಾದರೊಂದು ಮಾರ್ಗವನ್ನು ದೃಢವಾಗಿ ಆಶ್ರಯಿಸದೆ ಎರಡೆರಡು ದಿವಸ ಒಂದೊಂದು ಮತದಲ್ಲಿ ರುಚಿನೋಡುತ್ತ ಚಾಂಚಲ್ಯಸ್ವಭಾವವನ್ನವಲಂಬಿಸಿದ್ದರೆ ಅಂತಹವನನ್ನು ಮಾತ್ರ ಆ ಪರಮಾತ್ಮನು ತನ್ನ ಅನುಗ್ರಹಶಕ್ತಿಯನ್ನು ಸಂಕೋಚಮಾಡಿಕೊಂಡೇ ಇರಬೇಕಾಗುವದು. ಈ ವಿಷಯದಲ್ಲಿ ಒಂದು ದಂತಕಥೆಯನ್ನು ಹೇಳುವುದುಂಟು. ಒಬ್ಬ ಬ್ರಾಹ್ಮಣನೂ ಒಬ್ಬ ಎಲ್ಲಮ್ಮನ ಭಕ್ತಳೂ ಒಂದೂರಿಗೆ ಭಿಕ್ಷೆಗಾಗಿ ಹೋಗಿದ್ದರು. ಭಿಕ್ಷೆಯನ್ನು ಮಾಡಿಕೊಂಡು ಸಾಯಂಕಾಲ ತಮ್ಮೂರಿಗೆ ಇಬ್ಬರೂ ಜೊತೆಯಲ್ಲಿಯೇ ಹೊರಟರು. ದಾರಿಯಲ್ಲಿ ಒಂದು ಹಳ್ಳವನ್ನು ದಾಟಬೇಕಾಯಿತು. ನೀರು ಹೆಚ್ಚಾಗಿ ಬರಲಾರಂಭಿಸಿತು. ಎಲ್ಲಮ್ಮನ ಭಕ್ತಳು ತನ್ನ ತಲೆಯಮೇಲೆ ಎಲ್ಲಮ್ಮನನ್ನು ಹೊತ್ತುಕೊಂಡು ಒಂದೇ ಮನಸ್ಸಿನಿಂದ ಆ ದೇವಿಯನ್ನೇ ಧ್ಯಾನಿಸುತ್ತ ದಡವನ್ನು ಸೇರಿದಳು. ಬ್ರಾಹ್ಮಣನು ಶಿವನಾಮಸ್ಮರಣಮಾಡುತ್ತ ಹಿಂದಿನಿಂದ ಹೊರಟನು. ಆಗ ನೀರು ಕತ್ತಿನವರೆಗೂ ಬಂದಿತು. ಆಗ ಬಾಯಿಯಲ್ಲಿ ಉಚ್ಚರಿಸುತ್ತಿದ್ದ ಶಿವನಾಮವನ್ನು ಬಿಟ್ಟು ನಾರಾಯಣ ಸ್ಮರಣಮಾಡಹತ್ತಿದನು. ಅಷ್ಟರೊಳಗೆ ಸಂಪೂರ್ಣವಾಗಿ ಮುಳುಗುವ ಸಂಭವವೊದಗಿತು. ಆಗ ಸಂಶಯಗೊಂಡು ದೇವಿಯನ್ನು ಸ್ಮರಿಸಹತ್ತಿದನು. ಮುಳುಗಿಯೂ ಹೋದನು.

ಇದರಿಂದ ಯಾವ ಉಪಾಸನೆಯನ್ನು ಮಾಡುತ್ತೇವೆಯೋ ಅದನ್ನು ಎಷ್ಟು ಕಷ್ಟವೊದಗಿದರೂ ಬಿಡದೆ ದೃಢಬುದ್ಧಿಯಿಂದ ಮಾಡಬೇಕು. ಪರಮಾತ್ಮನು ಯಾವರೂಪದಿಂದ ತನ್ನನ್ನು ಉಪಾಸಿಸಿದರೂ ಅವರ ಇಷ್ಟಾರ್ಥವನ್ನು ಕೊಡುವೆನೆಂಬ ಅಭಯಹಸ್ತವನ್ನು ಯಾವಾಗಲೂ ಮೇಲಕ್ಕೆತ್ತಿರುತ್ತಾನೆ. ಹೀಗೆ ಪೂರ್ವಕಾಲದಿಂದ ತಮ್ಮ ಪೂರ್ವಾಚಾರ್ಯರು ತೋರಿಸಿಕೊಟ್ಟಿರುವ ಉಪಾಸನಾ ಮಾರ್ಗಗಳನ್ನು ಬಿಟ್ಟು ಈ ದಿವಸ ಅಮೇರಿಕಾದೇಶದವನು ಬಂದು ದೊಡ್ಡದಾಗಿ ಉಪನ್ಯಾಸ ಮಾಡಿದರೆ ಆ ಮತವನ್ನು ಹಿಡಿಯುವದು, ಮತ್ತೊಬ್ಬನು ಬಂದು ಮತ್ತೊಂದನ್ನು ಬೋಧಿಸಿದರೆ ಅದನ್ನು ಹಿಡಿಯುವದು, ಹೀಗೆ ಮೊದಲೇ ಚಾಂಚಲ್ಯಸ್ವಭಾವವುಳ್ಳ ಮನಸ್ಸನ್ನು ಮತ್ತಿಷ್ಟು ಚಾಂಚಲ್ಯಗೊಳಿಸುತ್ತ ಬಂದರೆ ಪವಿತ್ರವಾದ ಆತ್ಮನೂ ಅಧೋಗತಿಗೀಡಾಗಬೇಕಾಗುವದಲ್ಲದೆ ಉತ್ತಮಗತಿಯನ್ನು ಹೊಂದುವುದಿಲ್ಲ. ಆದುದರಿಂದ ಪರಮಾತ್ಮನನ್ನು ತಿಳಿಯುವುದಕ್ಕಾಗಿ ಹಿಂದಿನವರು ಯಾವಾವ ಮಾರ್ಗಗಳನ್ನು ತೋರಿಸಿರುವರೋ ಅವುಗಳೆಲ್ಲವೂ ಉತ್ತಮಮಾರ್ಗಗಳೇ ಆದುದರಿಂದ ಹಿರಿಯರಿಂದ ಅನೂಚಾನವಾಗಿ ಬಂದ ತಮ್ಮ ತಮ್ಮ ಉಪಾಸನಾಮಾರ್ಗಗಳನ್ನು ಬಿಟ್ಟು ಇತರ ಮಾರ್ಗಗಳನ್ನು ಯಾರೂ ಅವಲಂಬಿಸಲಾಗದು.

ಒಳದೇಶದ ವೃತ್ತಾಂತಗಳು.

ಕಳೆದ ಡಿಸೆಂಬರ್ 23 ನೇ ತಾರೀಖಿನ ದಿವಸ ಬೆಂಗಳೂರು ಅಸಿಸ್ಟೆಂಟ್ ಇಂಜನಿಯರ್ ಆಫೀಸಿನ ಕೆಂಪ ಎಂಬವನು ಆಫೀಸಿನ ಸಂಬಂಧಿ 650 ರೂಪಾಯಿಗಳನ್ನು ತೆಗೆದುಕೊಂಡು ಎಲ್ಲಿಯೋ ಪರಾರಿಯಾಗಿರುತ್ತಾನೆ. ಪೋಲೀಸರು ಅಪರಾಧಿಯನ್ನು ಹುಡುಕುತ್ತಿರುವರು.

ರಾಜಧಾನಿಯ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್‌ನಲ್ಲಿರುವ ಮೆಸ್ಸರ್ಸ್ ಎಸ್. ಎಸ್. ಪಂಡಿತ್ ಅಂಡ್ ಸನ್ಸ್, ಮ್ಯಾನ್ಯುಫ್ಯಾಕ್ಚರಿಂಗ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಇವರು ಕಳುಹಿಸಿರುವ ಹೊಸವರ್ಷದ ಅಂದವಾದ ಕ್ಯಾಲೆಂಡರನ್ನು ಆತ್ಮಾದರದಿಂದ ಸ್ವೀಕರಿಸಿರುತ್ತೇವೆ.

ತುಮಕೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಕಳೆದ ಡಿಸೆಂಬರ್ 26 ನೇ ತಾರೀಖಿನ ದಿವಸ ಆರು ತಿಂಗಳವರೆಗೆ ತುಮಕೂರಿನಲ್ಲಾಗಲಿ ಅಥವಾ ಸುತ್ತ ಮತ್ತು 5 ಮೈಲುಗಳವರೆಗಿನ ಪ್ರದೇಶದಲ್ಲಾಗಲಿ ಯಾರೂ ರಾಷ್ಟ್ರೀಯಧ್ವಜಾರೋಹಣವನ್ನು ಮಾಡಕೂಡದೆಂದು ಅಪ್ಪಣೆಮಾಡಿರುವರು.

ಬೆಂಗಳೂರು ದಂಡಿನ ಪ್ರದೇಶವನ್ನು ಮೈಸೂರಿಗೆ ಹಿಂತಿರುಗಿ ಕೊಡುವ ವಿಷಯದಲ್ಲಿ ಅಲ್ಲಿಯ ಕಲೆಕ್ಟರ್‌ರವರು ದಂಡಿನ ಮುನಿಸಿಪಲ್ ಕೌನ್ಸಿಲರುಗಳ ಅಭಿಪ್ರಾಯವನ್ನು ಕೇಳಿರುವರೆಂದೂ ಅದಕ್ಕಾಗಿ ಇದೇ ಜನವರಿ 11 ನೇ ತಾರೀಖಿನ ದಿವಸ ಮುನಿಸಿಪಲ್ ಕೌನ್ಸಿಲರ ಸಭೆಯು ನಡೆಯುವದೆಂದೂ ತಿಳಿದುಬಂದಿರುತ್ತದೆ.

ಕಳೆದ ಡಿಸೆಂಬರ್ 27 ನೇ ತಾರೀಖಿನ ಸಾಯಂಕಾಲ ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಹಿಂದೀಭಾಷೆಯ ಸುಪ್ರಸಿದ್ಧ ಲೇಖಕರೂ ಪತ್ರಿಕಾಕರ್ತರೂ ಆದ ಪ್ರಯಾಗದ ಪಂಡಿತರಾಮನರೇಶ ತ್ರಿಪಾಠಿಜೀಯವರ ಅಧ್ಯಕ್ಷತೆಯಲ್ಲಿ ಹಿಂದೀ ಪ್ರಚಾರಸಭೆಯ ಪದವೀಪ್ರದಾನ ಸಮಾರಂಭವು ನೆರವೇರಿತು.

ಕಳೆದ ಅಕ್ಟೋಬರ್ 25 ನೇ ತಾರೀಖಿನ ದಿವಸ ಬೆಂಗಳೂರು ಸಿಟಿ ಸಬ್‌ರಜಿಸ್ಟ್ರಾರ್ ಆಫೀಸಿನ ಜವಾನನಾದ ನಾರಾಯಣಸ್ವಾಮಿ ಎಂಬವನು 238 ರೂಪಾಯಿಗಳನ್ನು ತೆಗೆದುಕೊಂಡು ಪರಾರಿಯಾಗಿದ್ದವನು ಕಳೆದ ಡಿಸೆಂಬರ್ 25 ನೆಯ ತಾರೀಖಿನ ದಿವಸ ತಾನಾಗಿ ಕೋರ್ಟಿಗೆ ಹಾಜರಾಗಿ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟಿರುತ್ತಾನೆ.

ಆಸ್ಥಾನಮಹಾವಿದ್ವಾನ್ ಸೀತಾರಾಮಶಾಸ್ತ್ರಿಗಳು ಮೊನ್ನೆ ದಿವಸ ಆಕಸ್ಮಿಕವಾಗಿ ವಿಧಿವಶರಾದರೆಂಬ ವಾರ್ತೆಯನ್ನು ಕೇಳಿ ವಿಷಾದಪಡುತ್ತೇವೆ. ಇವರು ಬಹಳ ಸರಳಸ್ವಭಾವದವರೂ, ಪರಮಾಸ್ತಿಕರೂ ಸಂಸ್ಕೃತ ಕನ್ನಡಗಳಲ್ಲಿ ಅಸಾಧಾರಣಜ್ಞಾನವುಳ್ಳವರೂ ಉತ್ತಮ ಕವಿಗಳೂ ಆಗಿದ್ದುದರಿಂದ ರಾಜಧಾನಿಯ ವಿದ್ವನ್ಮಣಿಗಣಮಾಲಿಕೆಯಲ್ಲಿ ಒಂದು ಉತ್ತಮರತ್ನವೇ ಮಾಯವಾದಂತಾಯಿತು. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ವರ್ತಮಾನಸಂಗ್ರಹ.

ಬಲ್ಗೇರಿಯಾದೇಶದಲ್ಲಿ ಜನರು ಹೊಟ್ಟೆಬಟ್ಟೆಗಿಲ್ಲದೆ ಉದ್ದೇಶಪೂರ್ವಕವಾಗಿ ಕಳ್ಳತನವನ್ನು ಮಾಡಿ ಕಾರಾಗೃಹಕ್ಕೆ ಹೋಗಲಾರಂಭಿಸಿರುತ್ತಾರೆ.

ಕಳೆದ ಡಿಸೆಂಬರ್ 22 ನೇ ತಾರೀಖಿನ ದಿವಸ ಜಪಾನ್‌ಚಕ್ರವರ್ತಿಗಳಿಗೆ ಒಂದು ಗಂಡುಮಗುವು ಜನಿಸಿತು. ಇದುವರೆಗೆ ಅವರಿಗೆ 3 ಜನ ಹೆಣ್ಣುಮಕ್ಕಳು ಮಾತ್ರ ಇದ್ದರು.

ಅಮೇರಿಕೆಯ ಸಂಯುಕ್ತಸಂಸ್ಥಾನಗಳಲ್ಲಿ ಪ್ರತಿನಿತ್ಯವೂ 1,382 ಜನರೂ, ಜರ್ಮನಿಯಲ್ಲಿ 270 ಜನರೂ, ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ 139 ಜನರೂ ವಿಮಾನದಲ್ಲಿ ಸಂಚರಿಸುವರಂತೆ!

ಗುರುವಾಯೂರಿನಲ್ಲಿ ಸನಾತನ ಧರ್ಮಾಭಿಮಾನಿಗಳು ಸಭೆ ಸೇರಿ ಗಾಂಧಿಯವರ ಕೇರಳಪ್ರಾಂತ ಸಂಚಾರವನ್ನೂ, ದೇವಾಲಯ ಪ್ರವೇಶಮಸೂದೆಯನ್ನೂ ವಿರೋಧಿಸಬೇಕೆಂದು ನಿರ್ಧರಿಸಿರುತ್ತಾರೆ.

ಕಲ್ಕತ್ತಾ ನಗರದಲ್ಲಿ ಒಬ್ಬ ದೇಶೀಯ ಕ್ರೈಸ್ತಸ್ತ್ರೀಯು ತಾನೋರ್ವ ಮಹಾರಾಣಿಯೆಂದು ಹೇಳಿಕೊಂಡು ಅನೇಕರನ್ನು ಮೋಸಪಡಿಸಿದಳೆಂಬ ಕಾರಣದ ಮೇಲೆ ದಸ್ತಗಿರಿಮಾಡಲ್ಪಟ್ಟಿರುತ್ತಾಳೆ.

ರಷ್ಯಾಸರಕಾರದವರು ತಮ್ಮ ದೇಶದ ಮುಖ್ಯ ಮುಖ್ಯ ನಗರಗಳಲ್ಲಿ ಬಹಿರಂಗವಾದ ವ್ಯಾಯಾಮಶಾಲೆಗಳನ್ನು ಕಟ್ಟುವದಕ್ಕಾಗಿ ಇದುವರೆಗೆ 36,00,00,000 ರೂಪಾಯಿಗಳನ್ನು ಖರ್ಚುಮಾಡಿರುವರಂತೆ!

ಇಂಗ್ಲೆಂಡಿಗೆ ಸೇರಿದ ಮಿಡಲ್‌ಸೆಕ್ಸ್‌ನಲ್ಲಿ ಆಲ್ಬರ್ಟ್ ಜಾರ್ಜ್ ಎಂಬ 16 ವರ್ಷದ ಹುಡುಗನು ದರೋಡೆಗಾಗಿ ವಿಚಾರಣೆಗೆ ಗುರಿಯಾಗಿರುವನು. ಇವನು ಇದುವರೆಗೆ 41 ಸಾರೆ ಕಾರಾಗೃಹವಾಸವನ್ನು ಅನುಭವಿಸಿರುವನಂತೆ!

ಇಂಗ್ಲೆಂಡಿನ ಲೀಸ್ಟರ್ ನಗರದಲ್ಲಿ ಜಾರ್ಜ್ ಎಂಬವನು ಮೋಟಾರ್‌ಗಾಡಿಗೆ ಸಿಕ್ಕಿ ಮೃತಪಟ್ಟನು. ಅವನ ಹೆಂಡತಿಯು ಡ್ರೈವರನ ಮೇಲೆ ಮೊಕದ್ದಮೆಯನ್ನು ಹಾಕಲು ಕೋರ್ಟಿನವರು ಆಕೆಗೆ 1,00,000 ರೂಪಾಯಿಗಳ ಪರಿಹಾರವನ್ನು ಕೊಡಿಸಿದರು.

ಜಪಾನ್‌ದೇಶದಲ್ಲಿ ಈಗ ಸಿಲ್ಕ್ ಬಟ್ಟೆಗಳು ಬಿಕರಿಯಾಗದೆ ಬಹಳವಾಗಿ ನಿಂತು ಹೋಗಿರುವದರಿಂದ, ಇನ್ನು ಮುಂದೆ ಸರಕಾರಿ ಅಧಿಕಾರಿಗಳೆಲ್ಲರೂ ರೇಷ್ಮೆ ಬಟ್ಟೆಗಳನ್ನೇ ಉಪಯೋಗಿಸಬೇಕೆಂಬ ಒಂದು ಕಾನೂನು ಮಾಡಬೇಕೆಂದು ಆಲೋಚಿಸುತ್ತಿರುವರು.

ಪ್ಯಾರಿಸ್ ನಗರದಲ್ಲಿ ರಷ್ಯಾದೇಶದ ಪರವಾಗಿ ಒಳಸಂಚು ನಡೆಯಿಸುತ್ತಿದ್ದರೆಂಬ ಕಾರಣದ ಮೇಲೆ 18 ಜನ ಗೂಢಚಾರರನ್ನು ದಸ್ತಗಿರಿ ಮಾಡಿರುತ್ತಾರೆ. ಇವರಲ್ಲಿ ಒಬ್ಬ ಪ್ರೊಫೆಸರೂ, 68 ಭಾಷೆಗಳನ್ನು ಬಲ್ಲ ಒಬ್ಬ ನಾವಿಕನೂ, ಒಬ್ಬ ರಷ್ಯಾ ದೇಶದ ಸ್ತ್ರೀಯೂ ಇರುವರಂತೆ!

ಫ್ರಾನ್ಸಿನಲ್ಲಿ ಸ್ಟ್ರಾಸ್‌ಬುರ್ಗ್‌ನಗರದಿಂದ ಪ್ಯಾರಿಸ್ಸಿಗೆ ಹೋಗುತ್ತಿದ್ದ ಎರಡು ರೈಲುಗಳು ಒಂದಕ್ಕೊಂದು ಢಿಕ್ಕಿಹೊಡೆದು 200 ಜನಕ್ಕಿಂತಲೂ ಹೆಚ್ಚಾಗಿ ಮೃತಪಟ್ಟರು. ನೂರಾರು ಜನರಿಗೆ ಗಾಯಗಳಾದವು. ಇವರೆಲ್ಲರೂ ಕ್ರಿಸ್‌ಮಸ್‌ಹಬ್ಬದ ಸಲುವಾಗಿ ಪ್ಯಾರಿಸ್ಸಿಗೆ ಹೋಗುತ್ತಿದ್ದರಂತೆ!

ಬ್ರಿಟಿಷ್ ಸರಕಾರದವರು ಇಂಗ್ಲೆಂಡ್‌ದೇಶದಲ್ಲಿರುವ 61 ಜಾತಿಯ ಗಾನಮಾಡುವ ಹಕ್ಕಿಗಳನ್ನು ಇನ್ನು ಮುಂದೆ ಯಾರೂ ಮಾರಾಟಕ್ಕಾಗಲಿ, ಸಾಕುವದಕ್ಕಾಗಲಿ ಅಥವಾ ಭಕ್ಷಿಸುವದಕ್ಕಾಗಲಿ, ಹಿಡಿಯುವದು ಅಥವಾ ಕೊಲ್ಲುವದು ಮಾಡಕೂಡದೆಂದು ಒಂದು ಹೊಸ ಕಾಯಿದೆಯನ್ನು ಮಾಡಿಸಿರುವರು.

ಇಂಗ್ಲೆಂಡ್ ದೇಶದ ಶಾಲಾ ಉಪಾಧ್ಯಾಯರುಗಳೆಲ್ಲರೂ ಒಟ್ಟುಗೂಡಿ ತಮ್ಮ ಸಂಬಳದಲ್ಲಿ ನೂರಕ್ಕೆ 10 ರಂತೆ ಕಡಿಮೆಮಾಡಿರುವದನ್ನು ಹಿಂತಿರುಗಿ ಕೊಡಬೇಕೆಂದು ಮಂತ್ರಿಮಂಡಲದವರಿಗೆ ಒಂದು ದೀರ್ಘವಾದ ಅರ್ಜಿಯನ್ನು ಬರೆದಿರುವರು. ಈ ಅರ್ಜಿಯು 36 ಗ್ರಂಥಗಳಾಗಿ ಅದರಲ್ಲಿ 2,00,000 ಉಪಾಧ್ಯಾಯರು ರುಜು ಮಾಡಿರುವರಂತೆ!

ಟಿಬೆಟ್ಟಿನಲ್ಲಿರುವ ಬುದ್ಧರ ಗುರುಗಳಾದ ದಲಾಯಿಲಾಮಾರವರು ತಮ್ಮ ಮರಣಕ್ಕೆ ಮುಂಚಿತವಾಗಿ, ಇನ್ನು ಮುಂದೆ ಯಾರೂ ಗೌರೀಶಂಕರ ಪರ್ವತಾರೋಹಣವನ್ನು ಮಾಡಕೂಡದೆಂದೂ, 1933 ನೇ ಇಸವಿಯಲ್ಲಿ ಮಾಡಿದ ಪ್ರಯತ್ನಗಳ ಫಲವಾಗಿ ತಮ್ಮ ಪ್ರಾಂತದಲ್ಲಿ ಬೇಸಿಗೆಯೇ ಇಲ್ಲವಾಯಿತೆಂದೂ, ದೇವತೆಗಳು ತಮ್ಮ ವಾಸಸ್ಥಾನವು ಮಾನವರಿಂದ ಆಕ್ರಮಿಸಲ್ಪಡುವದನ್ನು ಒಪ್ಪುವುದಿಲ್ಲವೆಂದೂ ಬ್ರಿಟಿಷ್ ಸರಕಾರಕ್ಕೆ ಒಂದು ಪತ್ರವನ್ನು ಬರೆದಿರುವರೆಂದೂ, ಈ ಪತ್ರದ ನಕಲುಗಳು ಗೌರೀಶಂಕರ ಪರ್ವತಾರೋಹಿಗಳ ಸಂಘಕ್ಕೆ 'ಅತಿರಹಸ್ಯ'ವೆಂದು ನಮೂದಿಸಲ್ಪಟ್ಟು ಕಳುಹಿಸಲ್ಪಟ್ಟವೆಂದೂ ತಿಳಿದುಬಂದಿದೆ.

ಚೀರುವ ಹಣದ ಚೀಲ!

ಕಳ್ಳರು ಅಪಹರಿಸಿಕೊಂಡು ಹೋದರೆ ಚೀರ್ರನೆ ಚೀರುವ ಹಣದ ಚೀಲಗಳು ಈಗ ಲಂಡನ್ನಿನಲ್ಲಿ ತಯಾರಿಸಲ್ಪಟ್ಟಿರುವವು.

ವಿಲಕ್ಷಣಪಠನ.

ಲಂಡನ್‌ನಗರದ ಆಲ್‌ಫ್ರೆಡ್ ಎಂಬ 13 ವರ್ಷದ ಒಬ್ಬ ಹುಡುಗನು ಪುಸ್ತಕಗಳನ್ನು ತಲೆಕೆಳಗಾಗಿ ಹಿಡಿದುಕೊಂಡು ಸರಿಯಾಗಿ ಓದುವವರಿಗಿಂತಲೂ ಶೀಘ್ರವಾಗಿ ಓದುವನಂತೆ!

ಗಂಟೆಗೆ 1,000 ಮೈಲು ಹಾರುವ ವಿಮಾನ!

ಅಂತರಿಕ್ಷದಲ್ಲಿ 10 ಮೈಲುಗಳ ಎತ್ತರದಲ್ಲಿ ಗಂಟೆಗೆ 1,000 ಮೈಲುಗಳ ವೇಗದಲ್ಲಿ ಹಾರಬಲ್ಲ ಒಂದು ಹೊಸ ತರಹದ ಏರೋಪ್ಲೇನು ಇಂಗ್ಲೆಂಡಿನಲ್ಲಿ ತಯಾರಾಗುತ್ತಿದ್ದು ಇನ್ನು 1-2 ವಾರಗಳಲ್ಲಿ ಪರೀಕ್ಷೆಗೆ ಸಿದ್ಧವಾಗುವದಂತೆ!

ಸುಳ್ಳನ್ನು ಪತ್ತೆಮಾಡುವ ಯಂತ್ರ!

ಅಮೇರಿಕೆಯ ಪೋಲೀಸರು ಈಗ ಹೊಸದಾಗಿ ಸುಳ್ಳನ್ನು ಪತ್ತೆಮಾಡುವ ಯಂತ್ರವನ್ನು ಉಪಯೋಗಿಸುತ್ತಿರುವರು. ಈ ಯಂತ್ರವು ಮಾತನಾಡುವವನ ನರಗಳ ಚಲನೆಯನ್ನು ಅಳತೆಮಾಡಿ, ಸುಳ್ಳು ಹೇಳುತ್ತಿರುವನೋ ಅಥವಾ ನಿಜವನ್ನು ಹೇಳುತ್ತಿರುವನೋ ಎಂಬುದನ್ನು ನಿರ್ಧರಿಸುವದಂತೆ!

ಚಲಿಸುವ ಪರ್ವತ!

ಫ್ರಾನ್ಸ್‌ದೇಶಕ್ಕೆ ಸೇರಿದ ಜಿನೋನ್ಸ್ ಎಂಬ ಗ್ರಾಮದ ಸಮೀಪದಲ್ಲಿರುವ ಮೌಂಟ್ ಉಂಟ್ರ್ಸ ಎಂಬ ಪರ್ವತವು ಅಪಾರವಾದ ಮಳೆಯ ದೆಸೆಯಿಂದ ಗ್ರಾಮದ ಕಡೆಗೆ 250 ಗಜಗಳವರೆಗೆ ಚಲಿಸಿರುವದಂತೆ! ಭೀತಿಗ್ರಸ್ತರಾದ ಜನರು ನಗರವನ್ನು ಬಿಟ್ಟು ಓಡಿಹೋಗುತ್ತಿರುವರಲ್ಲದೆ ಹಗಲೂ ರಾತ್ರಿ ಕಾವಲಿರಿಸಿರುವರು.

ಪ್ಯಾರಿಸ್ಸಿನ ಮಾತನಾಡುವ ಗಡಿಯಾರ!

ಪ್ಯಾರಿಸ್ ನಗರದಲ್ಲಿ ಒಂದು ಮಾತನಾಡುವ ಗಡಿಯಾರವು ಸ್ಥಾಪಿಸಲ್ಪಟ್ಟಿರುವದು. ಇದು ಟೆಲಿಫೋನಿನ ಮೂಲಕವಾಗಿ ಕೇಳಿದವರಿಗೆಲ್ಲಾ ಸರಿಯಾದ ಕಾಲವನ್ನು ತಿಳುಹಿಸುತ್ತಿರುವದಂತೆ! ಈ ಗಡಿಯಾರವು ಪ್ರತಿದಿನವೂ ಸುಮಾರು 11,000 ಜನರಂತೆ ಕಳೆದ ಒಂದು ವರ್ಷದಲ್ಲಿ 4,00,000 ಜನರಿಗೆ ಸರಿಯಾದ ಕಾಲವನ್ನು ತಿಳುಹಿಸಿತಂತೆ! ಇದರಿಂದ ಸರಕಾರಕ್ಕೆ 4 ಲಕ್ಷ ರೂಪಾಯಿಗಳು ಉತ್ಪತ್ತಿಯಾದವಂತೆ!

15 ಕೋಟಿ ರೂಪಾಯಿಗಳ ಬಾಳೆಯಹಣ್ಣು!

ಕಳೆದ ವರ್ಷ ಫ್ರಾನ್ಸ್ ದೇಶದವರು 15,00,00,000 ರೂಪಾಯಿಗಳ ಬೆಲೆಯಾಗುವ ಸುಮಾರು 2,30,000 ಟನ್ ಬಾಳೆಯ ಹಣ್ಣುಗಳನ್ನು ಉಪಯೋಗಿಸಿದರಂತೆ! ಫ್ರಾನ್ಸ್ ದೇಶದಲ್ಲಿ ಈ ಬಾಳೇಹಣ್ಣಿನ ವ್ಯಾಪಾರವು ದಿನೇದಿನೇ ಅಭಿವೃದ್ಧಿಯನ್ನು ಹೊಂದುತ್ತಿರುವದರಿಂದ ಬಾಳೇಹಣ್ಣುಗಳನ್ನು ಕೆಡದಂತೆ ಸಾಗಿಸುವದಕ್ಕಾಗಿ ಸ್ಪೆಷಲ್ಲಾಗಿ ಕೆಲವು ಹಡಗುಗಳನ್ನು ತಯಾರಿಸುತ್ತಿರುವರಂತೆ!

ಒಂದು ದೀಪದ ಕಡ್ಡಿಗೆ 5 ಲಕ್ಷ ರೂ.ಗಳು!

ಜಿನೋರ್ಯಿ ನಗರದ ಒಂದಾನೊಂದು ಕಾರ್ಖಾನೆಯವರು ಒಂದು ಹೊಸತರಹದ ದೀಪದ ಕಡ್ಡಿಯನ್ನು ತಯಾರಿಸಿರುವರು. ಇಂತಹ ಪ್ರತಿಯೊಂದು ದೀಪದ ಕಡ್ಡಿಯನ್ನೂ ಕನಿಷ್ಠಪಕ್ಷ 300 ಸಾರೆ ಹೊತ್ತಿಸಬಹುದಂತೆ! ಈದೀಪದ ಕಡ್ಡಿಗಳು ಪ್ರಚಾರಕ್ಕೆ ಬಂದರೆ ಸದ್ಯಃ ಉಪಯೋಗದಲ್ಲಿರುವ ದೀಪದ ಕಡ್ಡಿಗಳ ವ್ಯಾಪಾರವು ಸಂಪೂರ್ಣವಾಗಿ ನಿಂತುಹೋಗುವದೆಂದು ಭಾವಿಸಿ, 'ಹಂಗೇರಿಯನ್ ಮ್ಯಾಚ್ ಟ್ರಸ್ಟ್' ಕಂಪನಿಯವರು, ಆ ಹೊಸ ಬೆಂಕಿ ಕಡ್ಡಿಯ ಹಕ್ಕನ್ನು 5 ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿರುವರಂತೆ!

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಭೂಕಂಪ.

ಕ್ಯೂಬಾ, ಬಹಾಮ, ಪೂರ್ವ ಹಿಂದೂಸ್ಥಾನ (ಕಲ್ಕತ್ತಾ) ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಭೂಕಂಪದ ಕಂಪನಗಳುಂಟಾಗುವವು. ಉತ್ತರ ಹಿಂದುಸ್ಥಾನದಲ್ಲಿ ಅಲಹಾಬಾದ, ಬಂಗಾಳ ಮತ್ತು ಕಾಶ್ಮೀರ ಭಾಗಗಳಿಗೆ ವಿಶೇಷ ದುಃಖವುಂಟಾಗುವದು. ಸಪ್ತಗ್ರಹ ಯೋಗದಿಂದ ಧೂಮಕೇತುವು ಕಾಣಿಸುವ ಸಂಭವವಿದ್ದು ೧೯೧೦ ನೆಯ ವರುಷದಲ್ಲಿ ಉಂಟಾದ ವಿಪತ್ತುಗಳು ೧೯೩೪ ನೆಯ ಇಸವಿಯಲ್ಲಿ ಪುನರಾವೃತ್ತವಾಗುವ ಸಂಭವವಿದೆ.

ಸಪ್ತಗ್ರಹಗಳ ಯುವತಿಯೋಗವೂ ದೇಶಾರಿಷ್ಟವೂ.

ಶ್ರೀಮುಖ ಸಂ|| ರದ ಪುಷ್ಯ ಮಾಘಮಾಸಾಂತ ಚಾರಸ್ಫುಟತ್ವಾತ್ ಮಧ್ಯೆ ಮಕರಸಂಕ್ರಾಂತಿಪ್ರವೇಶ ರವ್ಯಾದಿ ಸಪ್ತಗ್ರಹ ಯುವತಿಸಂಧಿಯೂ ಮಾಘ ಶು|| ೧೫ ಚಂದ್ರಗ್ರಹಣವೂ ಶುಕ್ರಾಸ್ತವೂ ಇರುವುದರಿಂದ (ಗುರು) ಕನ್ಯಾತುಲಾರಾಶಿ ಪ್ರವೇಶದಿಂದ ದೇಶ ಮಧ್ಯದಲ್ಲಿ ಮಹಾ ವಿಷಗಾಳಿ ಬೀಸುವದು. ಜನರಿಗೆ ಅತಿಸಾರರಕ್ತರೋಗಭಯವೂ, ಪ್ರವಾಸಗಳಲ್ಲಿ ಪ್ರಾಣಭಯವೂ, ಪರದೇಶರಾಜರಲ್ಲಿ ಯುದ್ಧವೂ ಗ್ರಾಮಾಂತರಗಳಲ್ಲಿ ದರೋಡೆ, ಕಳವು, ಕೊಲೆಸುಲಿಗೆಗಳೂ ಆಗುವವು. ದುರ್ಮರಣಗಳೂ, ಸರಕಾರ ಸಾಹುಕಾರರ ಇತ್ತಂಡದಿಂದ ಜನರಿಗೆ ಮಹಾ ಅನರ್ಥ ಸಂಕಟಗಳೂ ಶೀತವಾತಜ್ವರ ಉದರಶೂಲ ರೋಗದಿಂದ ಮರಣಗಳೂ ಆಗುವವು. ಶೂದ್ರರಿಗೆ ಅರಿಷ್ಟ. ಪಶುಗಳಿಗೆ ತೊಂದರೆಯು. ವೃದ್ಧರಿಗೆ ಶೂರರಿಗೆ ಪೀಡೆಯು. ಕಪ್ಪು ಕೆಂಪು ವಸ್ತುಗಳ ಮಾರಾಟವಾಗುವದು. ರಸನೀರಸ ಪದಾರ್ಥಗಳು ಸಮತೇಜಿಯಿಂದ ನಡೆಯುತ್ತವೆ. ವರ್ತಕರಿಗೆ ಲಾಭದಾಯಕ. ಅಂತ್ಯದೊಳು ಮಕರ ಕುಂಭ ರಾಶಿಯವರಿಗೆ ನಾನಾ ಮೂಲಕ ಅರಿಷ್ಟ. ಗ್ರಾಮಗಳಿಗೂ ಅರಿಷ್ಟ. ಇದಕ್ಕೆ ಪ್ರತಿಯೊಂದು ಗ್ರಾಮಗಳಲ್ಲಿಯೂ ಗುರುಭಜನೆ ಈಶ್ವರಪೂಜೆ ರುದ್ರಾಭಿಷೇಕ ದೀಪಾರಾಧನೆ ಬ್ರಹ್ಮಚಾರಿ (ಗುರು) ವರ್ಗದವರಿಗೆ ದಾನ ಅನ್ನ ಶಾಂತಿ ಮಾಡಿಸಬೇಕು.

ವೈದಿಕ ಜ್ಯೋತಿಷ ಜ್ಞಾನಮಂದಿರ,
ಸಿದ್ಧಾಂತಿ ವೇ|| ಚನ್ನವೀರಾರಾಧ್ಯರು,
ಹಿರೇಮಠ, ಮಾಸೂರು.

ಭವಿಷ್ಯಫಲ.

ಶ್ರೀಮುಖಸಂವತ್ಸರದ ಮಾಘಮಾಸಾದಿಯಾಗಿ ಭಾವಸಂವತ್ಸರದ ಜ್ಯೇಷ್ಠಮಾಸಾಂತ್ಯದವರೆಗೆ ಈ ರೀತಿಯಾಗಿ ಫಲಗಳು ಜರಗುವವು. ರುದ್ರಯಾಮಳದಲ್ಲಿ—"ಯದಾ ಶುಕ್ರಶ್ಚ ಭೌಮಶ್ಚ ರವಿ ರಾಹು ಶನೈಶ್ಚರಾಃ | ಏಕೇಕ್ಷೇಕತ್ರಗಾ ದೇವಿ ಜಾಯತೇ ಹಿ ಮಹದ್ಭಯಮ್ ‖ ಸಪ್ತದ್ವೀಪೇಷು ಪೀಡ್ಯಂತೇ ಮಾನುಷಾಶ್ಚ ಕ್ಷಯಂ ತಥಾ | ಛತ್ರಭಂಗೋಭವೇದ್ದೇವಿ ಚತುರ್ದಿಕ್ಷು ಪ್ರಪೀಡನಂ ‖ ಈ ಸಂವತ್ಸರ ಮಾಘಮಾಸಾದಿಯಾಗಿ ಬರುವ ಭಾವಸಂವತ್ಸರದ ಜ್ಯೇಷ್ಠಮಾಸಾಂತ್ಯದವರೆಗೆ ಲೋಕದಲ್ಲಿ ಮಹಾಭಯವುಂಟಾಗುವದು. ಸಪ್ತದ್ವೀಪದ ಜನರಿಗೂ ಸಹ ಪೀಡೆಯುಂಟಾಗುವದು. ಮನುಷ್ಯರು ನಾಶಹೊಂದುವರು. ಛತ್ರಭಂಗವಾಗುವದು. ಅನಾವೃಷ್ಟಿ, ಅಗ್ನಿಭಯ, ಚೋರಭಯ, ಪ್ಲೇಗು ಮೊದಲಾದವುಗಳಿಂದ ಜನರು ಪೀಡಿತರಾಗುವರು. ರಾಜರಲ್ಲಿ ಪರಸ್ಪರ ಯುದ್ಧಗಳು ಜರಗುವವು. ಎಲ್ಲಾ ರಾಷ್ಟ್ರಗಳಲ್ಲಿ ಜನರು ನಾಶಹೊಂದುವರು. ಆದಕಾರಣ ಈ ಪೀಡಾ ಪರಿಹಾರಾರ್ಥವಾಗಿ ಸರ್ವರೂ ತಮ್ಮ ತಮ್ಮ ಇಷ್ಟದೇವತಾ, ಗುರುಪೂಜಾ, ಸತ್ಕಥಾಶ್ರವಣಾದಿಗಳಲ್ಲಿಯೂ ದಾನಧರ್ಮ ಪರೋಪಕಾರಗಳಲ್ಲಿಯೂ ಮನಸ್ಸನ್ನಿಟ್ಟು ವರ್ತಿಸಬೇಕೆಂದು ಕೋರಿಕೆ.

ಸಿದ್ಧಾಂತಿ ಆರ್. ಶೆಟ್ಟಣ್ಣಶಾಸ್ತ್ರಿ ಶಾಂತಪ್ಪಾಜಿ,
ಪ್ರಸಿದ್ಧಪಂಡಿತ, ಹರಪನಹಳ್ಳಿ.

ಗುರುವರ್ಗದ ಜಾಗೃತಿ.

(ಬರೆದವ—ದೈವಜ್ಞವಿನೋದ.)

ಪರಮಪವಿತ್ರವಾದ ವೀರಶೈವಮತವು ಅನೇಕ ಇಕ್ಕಟ್ಟಿನ ಪ್ರಸಂಗಗಳಿಂದ ತೊಳಲುತ್ತಿರುವಾಗ ನಮ್ಮ ಗುರುವರ್ಗದವರು ಚನ್ನಾಗಿ ರಕ್ಷಿಸಿಕೊಂಡು ಬಂದಿರುವರು. ಯುಗೆಯುಗಾಂತರಸಮಯದಲ್ಲಿ ಪ್ರಪಂಚದ ಮೇಲೆಲ್ಲ ಒದಗುವ ಧರ್ಮಕ್ರಾಂತಿಯ ಸಂಘಟನೆಯನ್ನು ದೂರಮಾಡುವದಕ್ಕಾಗಿ ಶಿವಪಂಚಾನನ ಮುಖೋದ್ಭವರಾದ ಜಗದಾಚಾರ್ಯರು ಆಯಾಯ ಯುಗಾರಂಭದಲ್ಲಿ ಶಿವಲಿಂಗಗಳಿಂದ ಅವತರಿಸಿದರು. ಸೃಷ್ಟಿಯ ಆದಿಯಿಂದಲೂ ಸುಪ್ರಸಿದ್ಧವಾದ ವೀರಶೈವಮತವನ್ನು ಶ್ರೀ ಜಗದ್ಗುರು ಪಂಚಾಚಾರ್ಯರೂ ಅವರ ಶಾಖಾಪೀಠ ಮಠಾಧಿಕಾರಿಗಳಾದ ಗುರುವರ್ಗದವರೂ ಅತ್ಯಂತ ದಕ್ಷತೆಯಿಂದ ರಕ್ಷಿಸಿಕೊಂಡು ಬಂದಿರುವರು. ಗುರುವರ್ಗದ ಪ್ರಖರವಾದ ಪ್ರಭೆಯನ್ನು ನಿಂದಿಸುವ ಕುಟಿಲಸ್ವಭಾವದ ಗೂಗೆಗಳು ಯಾವಕಾಲದಲ್ಲಿಯಾದರೂ ಇರುತ್ತವೆಂದು ಅನುಮಾನವಾಗುತ್ತದೆ. ಹಿಂದಿನ ಯುಗಗಳಲ್ಲಿ ಒಬ್ಬಿಬ್ಬರು ಇದ್ದರೆ ಈ ಕಲಿಯುಗದಲ್ಲಿ ಹೆಚ್ಚಾಗಿ ಸಿಗಬಹುದು. ಗುರುದ್ರೋಹಿಗಳು ನಿಂದಾಸ್ಪದಪಾಪಿಗಳಾದರೂ ಪುಣ್ಯಕಾಲಿಗಳಾದ ಗುರುಸಾರ್ವಭೌಮರ ಪ್ರಕಾಶವನ್ನು ಪ್ರಚಾರಪಡಿಸಲು ಅವರೇ ಕಾರಣರೆಂದು ಹೇಳಬಹುದು. ನಿಂದಕರಿಂದಲೇ ಮಹಾತ್ಮರ ಪ್ರಕಾಶವು ಬಯಲಿಗೆ ಬರುವದು. ಗುರುವರ್ಗದ ವಿರೋಧಿಗಳ ಹಾವಳಿಯಿಂದಲೇ ಗುರುವರ್ಗವು ಜಾಗೃತವಾಗಿ ತನ್ನ ಕರ್ತವ್ಯಕರ್ಮದಕಡೆಗೆ ಹೊರಳಿರುವದು. ಕ್ರಿಸ್ತಶಕದ ಪೂರ್ವ ಸಾವಿರ ವರುಷದ ಹಿಂದೆ ಅಖಿಲ ವೀರಶೈವ ಮತಕ್ರಾಂತಿಯಾಗುವ ಸಮಯವಿತ್ತು; ಆಗಿನ ವೀರಶೈವ ಅರಸರೂ ಕೂಡ ರಾಜ್ಯಮದಾನ್ವಿತರಾಗಿದ್ದರು. ಚೋಲ ಮೊದಲಾದ ಚಕ್ರವರ್ತಿಗಳು ವೈಷ್ಣವಮತಾನುಯಾಯಿಗಳಾಗಿ ಪರಮತದ ಹಬ್ಬುಗೆಯನ್ನು ತಡೆದುಹಾಕಿ ಸ್ವಮತಪ್ರಚಾರದ ಕಾರ್ಯವನ್ನು ಭರದಿಂದ ಸಾಗಿಸಿದ್ದರು. ಆಗಿನಕಾಲದಲ್ಲಿ ರಾಜನು ಆಶ್ರಯಿಸಿದ ಧರ್ಮವನ್ನೇ ಪ್ರಜೆಗಳು ಅನುಸರಿಸುತ್ತಿದ್ದರು. ಹೀಗಾಗಿ ೩ ಸಾವಿರ ವರುಷಗಳ ಹಿಂದೆ ವೀರಶೈವಮತಭಾಸ್ಕರನಿಗೆ ಪರಮತೀಯರಿಂದ ಗ್ರಹಣಕಾಲವು ಪ್ರಾಪ್ತವಾಗಿದ್ದುದು ಸರಿಯಷ್ಟೆ! ಈ ದುರ್ಘಟಪ್ರಸಂಗದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗತ್ತಿನಲ್ಲೆಲ್ಲಾ ಸಂಚರಿಸಿ ರಾಜಾಧಿರಾಜರನ್ನು ತಮ್ಮ ಶಿಷ್ಯರನ್ನಾಗಿಮಾಡಿದ ಅಮೋಘವಾದ ವಿಷಯವು ಅವರ ಚರಿತ್ರೆಯಿಂದ ತಿಳಿಯುವದು. ವೀರಶೈವಮತಸ್ಥಾಪನಾಚಾರ್ಯರು ಭಾರತದೇಶವನ್ನಷ್ಟೇ ಪಾವನಮಾಡಿಲ್ಲ; ವಿದೇಶಗಳೆಲ್ಲವನ್ನೂ ಸಂಚರಿಸಿ ಅಲ್ಲಲ್ಲಿ ಶಿವಾಲಯಗಳನ್ನು ಸ್ಥಾಪಿಸಿ ಶಿವಕ್ಷೇತ್ರಗಳ ವೈಭವಾತಿಶಯದಿಂದ ಪ್ರಪಂಚವನ್ನೆಲ್ಲಾ ಬೆಳಗಿರುವರು. ಈಗಲೂ ಪಾಶ್ಚಾತ್ಯ ಪೌರಸ್ತ್ಯದೇಶಗಳಲ್ಲಿ ಅನೇಕ ಶಿವಾಲಯಗಳು ವಿರಾಜಿಸುತ್ತಲಿವೆ. ಆಯಾಯ ದೇಶವಾಸಿಗಳು ಆ ಶಿವಕ್ಷೇತ್ರಗಳ ಯಾತ್ರೆಗಳನ್ನು ಪರಮೋತ್ಸಾಹದಿಂದ ನೆರವೇರಿಸುತ್ತಲಿದ್ದಾರೆ.

ಗುರುಸಾರ್ವಭೌಮರಿಂದ ಆದ ಮತೋನ್ನತಿಯ ಕಾರ್ಯಗಳು ಅವರ್ಣನೀಯವಾಗಿವೆ. ಆ ಜಗದ್ಗುರು ವರೇಣ್ಯರು ನಮ್ಮ ಭಾರತದೇಶದಲ್ಲಿ ಆ ಸೇತು ಶೀತಾಚಲ ಪರ್ಯಂತವಾಗಿ ಶೈವಮತ ಸಾಮ್ರಾಜ್ಯವನ್ನು ನೆಲೆಗೊಳಿಸಿದ್ದರೆಂದು ಅನೇಕ ಪ್ರಮಾಣಗಳು ದೊರೆಯುತ್ತವೆ ಕುಂಭಸಂಭವನಾದ ಅಗಸ್ತ್ಯಮಹರ್ಷಿಯನ್ನು ವೀರಶೈವನನ್ನಾಗಿ ಮಾಡಿ ತಮ್ಮ ಮುಖ್ಯಶಿಷ್ಯನನ್ನಾಗಿ ಮಾಡಿಕೊಂಡ ಶ್ರೀ ಜಗದ್ಗುರು ರೇಣುಕಾರ್ಯರ ಘನತೆಯು ಸಾಮಾನ್ಯವಾದುದಲ್ಲ! ಆ ಮೇಲೆ ತಪಸ್ತೇಜೋಬಲವುಳ್ಳ ಅಗಸ್ತ್ಯಮಹರ್ಷಿಗಳು ವಿಶ್ವವನ್ನೆಲ್ಲಾ ಸಂಚರಿಸಿ ಗುರೂಪದಿಷ್ಟವಾದ ವೀರಶೈವ ಸಿದ್ಧಾಂತ ತತ್ವಪ್ರಚಾರವನ್ನು ಮಾಡಿದರು. ಅಗಸ್ತ್ಯರು ಪ್ರಪಂಚವನ್ನೆಲ್ಲಾ ಸಂಚರಿಸಿದ ಬಗ್ಗೆ ಆ ಮಹರ್ಷಿಗಳ ನಾಮಕವಾದ ಆಶ್ರಮಗಳು ಅನೇಕ ಕ್ಷೇತ್ರತೀರ್ಥಗಳಲ್ಲಿ ಈಗಲೂ ವಿರಾಜಿಸುತ್ತಲಿವೆ. ಜಗದಾಚಾರ್ಯ ಭಗವತ್ಪಾದರು ಧರ್ಮರಕ್ಷಣೆಗಾಗಿ ಪ್ರತಿಗ್ರಾಮಗಳಲ್ಲಿಯೂ ಗುರುಮಠಗಳನ್ನು ಸ್ಥಾಪಿಸಿದ್ದಾರೆ. ಈ ಗುರುವರ್ಗದ ಮಠಗಳು ಒಂದೊಂದು ಸ್ವತಂತ್ರವಾಗಿರದೆ ಅನೇಕ ಮಠಗಳು ಸೇರಿ ಒಂದು ಶಾಖಾಪೀಠಕ್ಕೆ ಅಧೀನವಾಗಿರುತ್ತವೆ. ಆ ಶಾಖಾಪೀಠಗಳೆಲ್ಲವೂ ಮೂಲ ಜಗದ್ಗುರು ಪೀಠಕ್ಕೆ ಹೊಂದಿರುತ್ತವೆ. ಇದಲ್ಲದೆ ದೊಡ್ಡ ದೊಡ್ಡ ಗ್ರಾಮಗಳಲ್ಲಿ ಮುಖ್ಯ ಮಠವಲ್ಲದೆ ಇತರ ಗುರುಮಠಗಳೂ ಇರುತ್ತವೆ. ಅವೆಲ್ಲವುಗಳೂ ಮುಖ್ಯ ಮಠಾಧಿಕಾರಿಯ ಅನುಮತಿಯಂತೆ ವರ್ತಿಸುತ್ತವೆ. ಗ್ರಾಮಗಳಲ್ಲಿರುವ ಮಠದವರೆಲ್ಲರೂ ಧರ್ಮಾಧಿಕಾರ ಮೊದಲಾದವುಗಳಲ್ಲಿ ಮಾತ್ರ ಹಿರೇಮಠವೆಂಬ ಗುರುಮಠವನ್ನು ಮುಂದೆ ಮಾಡುವರಲ್ಲದೆ ಮಠಸಂಸ್ಕಾರ ಮೊದಲಾದವುಗಳಲ್ಲಿ ಸಮಾನಸ್ಕಂಧರಾಗಿರುವರು. ಅನೇಕ ಉಪಮಠಗಳಿಂದ ಕೂಡಿದ್ದು ಹಿರೇಮಠವೆಂತಲೂ ಅನೇಕ ಹಿರೇಮಠಗಳಿಂದ ಕೂಡಿದ್ದು ಶಾಖಾಪೀಠವೆಂತಲೂ ಅನೇಕ ಶಾಖಾಪೀಠಗಳನ್ನೊಳಗೊಂಡದ್ದು ಮೂಲ ಪೀಠವೆಂತಲೂ ಪ್ರಸಿದ್ಧವಾಗಿವೆ. ಮೂಲ ಪೀಠಗಳು ನಮ್ಮ ಮತದಲ್ಲಿ ಐದು ಇರುತ್ತವೆ. ಮಠಗಳೆಂದರೆ ಧಾರ್ಮಿಕ-ಸಾಮಾಜಿಕ-ನೈತಿಕ-ಶಿಕ್ಷಣವನ್ನು ಪದೇಶಿಸುವ ಶಾಲೆಗಳು ಪೀಠಗಳೆಂದರೆ ಧರ್ಮೋದ್ಧಾರಕ-ಶಿಕ್ಷಕರನ್ನು ತಯಾರಿಸುವ ಕಾಲೇಜುಗಳು ಮೂಲ ಪೀಠಗಳೆಂದರೆ ಅಖಿಲ ವೀರಶೈವ ಮತೋದ್ಧಾರಕ್ಕಾಗಿ ಸ್ಥಾಪಿಸಿದ ವಿಶ್ವವಿದ್ಯಾಲಯಗಳು. ಈ ಗುರುವರ್ಗದ ಶಾಲೆ ಕಾಲೇಜು ವಿಶ್ವವಿದ್ಯಾಲಯಗಳಿಂದಲೇ ನಮ್ಮ ಮತೋನ್ನತಿಯಾಗುವದು. ವೀರಶೈವ ಮತದ ರಕ್ಷಣೆಗಾಗಿ ಸಿದ್ಧವಾಗಿರುವ ಗುರುವರ್ಗವು ಅತ್ಯುತ್ತಮವಾದ ಧ್ಯೇಯದಿಂದ ಕೂಡಿಕೊಂಡಿರುತ್ತದೆ. ಇದು ತನ್ನ ಉಚ್ಚವಾದ ಧ್ಯೇಯವನ್ನು ಯಾವಾಗಲೂ ಬಿಟ್ಟಿರುವದಿಲ್ಲ. ಕೆಲವೊಂದುಕಾಲದಲ್ಲಿ ಅವಿದ್ಯಾದೇವಿಯ ಪ್ರಭಾವದಿಂದ ಕರ್ತವ್ಯವನ್ನು ಮರೆತರೂ ಸುವಿವೇಕ ಸಹಾಯದಿಂದ ಚೇತರಿಸಿಕೊಂಡು ಮತೋನ್ನತಿ ಮಾಡಿರುವದು ನಮ್ಮ ಮತದ ಐತಿಹ್ಯ ಸಂಗತಿಗಳನ್ನು ಸಂಶೋಧಕದೃಷ್ಟಿಯಿಂದ ಪ್ರಾಚೀನಕಾಲದಿಂದಲೂ ಹುಡುಕುತ್ತ ಬಂದರೆ ಗುರುವರ್ಗದವರಿಂದಾದ ಮಹತ್ಕಾರ್ಯಗಳು ನಿದರ್ಶನಕ್ಕೆ ಬರುತ್ತವೆ.

ಕ್ರಿಸ್ತಶಕದ ಪೂರ್ವದಲ್ಲಿ ಶ್ರೀ ರೇಣುಕಾಚಾರ್ಯರಿಂದಾದ ಅತಿ ಮಹತ್ವದ ಸಂಗತಿಗಳಂತೂ ಎಲ್ಲರಿಗೂ ತಿಳಿದೇ ಅವೆ. ಕ್ರಿಸ್ತಶಕಾರಂಭದಿಂದಲೂ ಗುರುವರ್ಗದವರು ಅನೇಕ ಮಹತ್ವದ ಕಾರ್ಯಗಳನ್ನು ಮಾಡಿದ್ದಾರೆ. ೫-೬ ನೇ ಶತಮಾನಗಳಲ್ಲಿ ಕಾಶೀ ಜಗದ್ಗುರು ಪೀಠಾಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಕಾಶೀ, ನೇಪಾಳ ದೇಶಾಧಿಪತಿಗಳನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡ ವಿಷಯವು ಶಿಲಾಶಾಸನಾದ್ಯಾಧಾರಗಳಿಂದ ಪ್ರಸಿದ್ಧವಾಗಿದೆ. 'ಫಿಲಿಪ್ ಬ್ರಾವುನ್' ಎಂಬ ಪಾಶ್ಚಾತ್ಯವಿದ್ವಾಂಸರೊಬ್ಬರು ತಾವು ಬರೆದ (Karnatic Chronology) ಪುಸ್ತಕದಲ್ಲಿ ರಾಜವಂಶಾವಳಿಯ ಇತಿಹಾಸವನ್ನು ವಿಸ್ತರಿಸುವಾಗ ತ್ರಿವಿಕ್ರಮಭೂಪಾಲನು ಮೊದಲು ಜೈನನಿದ್ದು ಹಿಂದಿನಿಂದ ಶಿವಭಕ್ತನಾದನೆಂದೂ, ೨೧ ನೆಯ ಅರಸನೊಬ್ಬನು ವೀರಶೈವಮತದ ಯಶೋಧ್ವಜವನ್ನು ಎತ್ತಿ ಹಿಡಿದಿದ್ದನೆಂದೂ ಸ್ಪಷ್ಟವಾಗಿ ಬರೆದಿದ್ದಾರೆ. ಮುಂದೆ ೮-೯ ೧೦-೧೧ ನೇ ಶತಮಾನಗಳಲ್ಲಿ ಗುರುವರ್ಗದ ಮಠ ಪೀಠಗಳು ಚನ್ನಾಗಿ ಜಾಗೃತವಾಗಿದ್ದವು. ಆದರೆ ೧೨ ನೇ ಶತಮಾನದಲ್ಲಿ ಈ ಗುರುಮಠಪೀಠಗಳ ಮೇಲೆ ಭಯಂಕರವಾದ ಕ್ರಾಂತಿಯೊದಗಿದಂತೆ ತೋರುತ್ತದೆ. ವೀರಶೈವಮತ ಜನಕರಾಗಿಯೂ, ಪೋಷಕರಾಗಿಯೂ, ಭೂಷಕರಾಗಿಯೂ ಇದ್ದ ಗುರುವರ್ಗದವರ ಹಂಗಿಲ್ಲದೆ ಹಲವರು ಆ ಶತಮಾನದಲ್ಲಿ ಬಹಳ ಗೊಂದಲವನ್ನು ಹಾಕಿರುವದಾಗಿ ತಿಳಿಯುತ್ತದೆ. ಈಗಿನ ಬಿಜಾಪೂರಜಿಲ್ಲೆಗೆ ಸೇರಿದ ಬಾಗೇವಾಡಿಗ್ರಾಮದ ಆಗಿನಕಾಲದ ಮಾದಿರಾಯನೆಂಬ ಆರಾಧ್ಯಬ್ರಾಹ್ಮಣಕುಲದ ಕುಲಕರ್ಣಿಯ ಮಗನು ಸ್ವಕುಲಾಭಿಮಾನವನ್ನು ತೊರೆದು ಸಂಕರಕುಲವೊಂದನ್ನು ಸ್ಥಾಪಿಸುವ ಹೇತುವಿನಿಂದಲೋ ರಾಜ್ಯಾಧಿಕಾರದ ಕೃಪೆಯಿಂದಲೋ ಅಥವಾ ಬೇರಾವಕಾರಣದಿಂದಲೋ ವೀರಶೈವಗುರುವರ್ಗದವರ ವಿರೋಧವಾಗಿ ತಾನೇ ಕೃತ್ರಿಮಲಿಂಗವನ್ನು ಕಟ್ಟಿಕೊಂಡು 'ಲಿಂಗವಂತ' ಎಂಬುವದಾಗಿ ಪ್ರಸಿದ್ಧನಾದನು. ಇವನ ಉದಯಕಾಲದಲ್ಲಿ ವೀರಶೈವಮತವಿದ್ದಿಲ್ಲವೇ? ಗುರುವರ್ಗವಿದ್ದಿಲ್ಲವೇ? ಗುರುಮಠಪೀಠಗಳು ನಾಶವಾಗಿದ್ದವೇ? ಇದೆಂಥ ಹುಚ್ಚುಕಲ್ಪನೆಯು? ಸಾಮಾನ್ಯವಾಗಿ ಬಸವನು ಗುರುವರ್ಗದ ವಿಭೂತಿಗಳಿಂದ ಉದ್ಧಾರನಾಗಿ ವೀರಶೈವಮಾರ್ಗವನ್ನು ಹಿಡಿದು ಹೋಗಿದ್ದರೆ ಈಗಿನ ಸ್ವಮತ ಪರಮತೀಯರ ಟೀಕಾ-ಟಿಪ್ಪಣಿಗಳ ವಾದವಿವಾದಕ್ಕೆ ಆಸ್ಪದವೇ ಇದ್ದಿಲ್ಲ. ಈ ಮಹಾನುಭಾವನು ಇಷ್ಟಕ್ಕೆ ಬಿಡದೆ ಸನ್ಯಾಸಾಶ್ರಮವಾಸಿಗಳಾದ ಸ್ವಮತ-ಪರಮತೀಯರನ್ನೆಲ್ಲಾ ಕೂಡಿಹಾಕಿ ಕಾವೀಕಫನಿಯನ್ನು ತೊಡಿಸಿ ಲಿಂಗಕಟ್ಟಿ ಶೂನ್ಯಮಠ, ನಿರಂಜನಮಠ, ದಿಗಂಬರಮಠ, ವಿರಕ್ತಮಠ ಮೊದಲಾದವುಗಳ ಹಬ್ಬುಗೆಗೆ ಕಾರಣನಾದನು. ಈ ವಿರಕ್ತಪ್ರನವರೆಲ್ಲರೂ ಪಮಾಜದ ಸವಿಯನ್ನವನ್ನುಂಡು ಗುರುವರ್ಗದಮೇಲೆ ತಮ್ಮ ಶೂನ್ಯಧ್ವಜವನ್ನು ಹಿಡಿಯತೊಡಗಿದ್ದರು. ಅದೇಕಾಲದಲ್ಲಿಯೇ (ಅಲ್ಲಮನಿಗೆ ಶೂನ್ಯಮಠಕ್ಕೆ ಪಟ್ಟಗಟ್ಟುವಾಗ) ಹನ್ನೆರಡುಸಾವಿರ ಜನ ಗುರುಚರಾಧಿಕಾರಿಗಳು ಬಸವನ ಮೇಲೆ ಕುಪಿತರಾಗಿ ಅವನ ಸರಕಾರೀ ಅಧಿಕಾರಕ್ಕೆ ಸಹ ಸೊಪ್ಪುಹಾಕದೆ ಆ ಸಂಕರಮಂಡಲಿಗೆಲ್ಲಾ ಬಹಿಷ್ಕಾರಹಾಕಿದ್ದು ಗುರುವರ್ಗದ ಚೇತನದ ಪ್ರಕಾಶವನ್ನು ವ್ಯಕ್ತಗೊಳಿಸುತ್ತದ. (ಇದು ವಿನೋದನ ಕಿಸೆಯೊಳಗಿನ ಮಾತಲ್ಲ ಬಸವಪುರಾಣವೇ ಇದನ್ನು ಹೇಳುವದು) ಅಂತೂ ೧೨ನೆಯ ಶತಮಾನದಲ್ಲಿ ಗುರುವರ್ಗದವರು ತಮ್ಮ ಕರ್ತವ್ಯದಲ್ಲಿ ಜಾಗರೂಕರಾಗಿದ್ದರೂ, ಕಿಂಚಿತ್ ಅಜಾಗರೂಕತೆಯಿಂದಲೋ ರಾಜಾಶ್ರಯವು ತಪ್ಪಿದ್ದರಿಂದಲೋ ವೀರಶೈವಮತದಮೇಲೆ ದೊಡ್ಡದೊಂದು ಸಂಕಟವು ಆಗಿನಮಟ್ಟಿಗೆ ಮಾತ್ರ ಬಂದಿತು. ಆ ದುರ್ಘಟಪ್ರಸಂಗವು ಮೂರುದಿವಸಮಾತ್ರ ನರ್ತನಮಾಡಿತು. ಆಮೇಲೆ ಗುರುವರ್ಗದ ವಿಭೂತಿಗಳಿಂದ ಪ್ರಕಾಶವಾಗುತ್ತ ಬಂದಿತು. ೧೩-೧೪-೧೫-೧೬ನೆಯ ಶತಮಾನಗಳವರೆಗೆ ವೀರಶೈವ ಮತದಲ್ಲಿ ಅನೇಕಜನ ಗುರುವರ್ಗದ ಪಟ್ಟಚರಾಧಿಕಾರಿಗಳು ಸುಪ್ರಸಿದ್ಧರಾಗಿ ಹೋಗಿದ್ದಾರೆ. ೧೬ ನೆಯ ಶತಮಾನದಲ್ಲಿ ವೀರಶೈವಮತವನ್ನು ಗುರುವರ್ಗದ ಮಹಾನುಭಾವರು ಎಂಥ ಬಿಕ್ಕಟ್ಟಿನ ಪ್ರಸಂಗಬಂದರೂ ತಮ್ಮ ಆತ್ಮಶಕ್ತಿಯ ದಿವ್ಯತೇಜಸ್ಸಿನಿಂದ ಹೇಗೆ ರಕ್ಷಿಸಿಕೊಂಡು ಬಂದಿರುವರೆಂಬುದನ್ನು ಸುವರ್ಣಾಕ್ಷರಗಳಿಂದ ಬರೆದಿಡುವ ಸಂಗತಿಯಾಗಿದೆ. ಉತ್ತರಹಿಂದೂಸ್ಥಾನದಲ್ಲಿ ಮೊಗಲಚಕ್ರವರ್ತಿಯಾದ ಔರಂಗಜೇಬನ ಭೀಕರವಾದ ಆಳ್ವಿಕೆಯಿಂದಲೂ, ಇತ್ತ ದಕ್ಷಿಣಹಿಂದುಸ್ಥಾನದಲ್ಲಿ ವಿಜಾಪೂರ ಅಲ್ಲಿ ಆದಿಲ್ ಶಹ, ಬಾದಶಹನ ಭಯಾನಕರಾಜ್ಯಕಾರಭಾರದಿಂದಲೂ ಮಹಮ್ಮದೀಯಮತಪ್ರಚಾರವು ನಡೆದಿರುವಾಗ ಇಡೀ ಹಿಂದೂಧರ್ಮವೇ ನಾಶವಾಗುವ ಹೊತ್ತು ಬಂದಿತ್ತು. ಅದರಲ್ಲಿ ವೀರಶೈವ ಮತದ ಮೇಲಂತೂ ಕರಧರ್ಮೀಯರ ಹಾವಳಿಯು ಬಹಳವಾಗಿತ್ತು. ಈ ೧೬ ನೇ ಶತಮಾನವು ಹಿಂದೂಧರ್ಮದವರಿಗೆ ಭಯಂಕರ ಗಂಡಾಂತರಕಾಲವಾದರೂ ಇಂಥ ಕಠಿಣ ಪ್ರಸಂಗದಲ್ಲಿಯೇ ವೀರಶೈವ ಗುರುವರ್ಗದವರು ತಮ್ಮ ಮತರಕ್ಷಣೆಯನ್ನು ಚನ್ನಾಗಿ ಮಾಡಿಕೊಂಡಿರುವರು. ಹಿಂದೂ ಮತದ ಕಡುವೈರಿಯಾದ ಔರಂಗಜೇಬ ಬಾದಶಹನು ಕಾಶೀಪೀಠವನ್ನೇ ನಾಶಮಾಡಲು ಅದರ ಮಹಾದ್ವಾರವನ್ನು ಕಲ್ಪಿದೊಡನೆ ಭಯಕಂಪಾನ್ವಿತನಾಗಿ ಗಡಗಡ ನಡುಗಿ ಶ್ರೀ ಜಗದ್ಗುರುಗಳವರ ಅದ್ಭುತವಾದ ಲೀಲೆಗೆ ಹೆದರಿ ಭಯಭಕ್ತಿಯಿಂದ ಆ ಮಹಾಚಾರ್ಯರಿಗೆ ಶರಣಾಗತನಾಗಿ ವಿಶಾಲವಾದ ಸ್ಥಳವನ್ನೆಲ್ಲ ದಾನವಾಗಿ ತಾಮ್ರ ಶಾಸನ ಮೂಲಕ ಬರೆದುಕೊಟ್ಟಿದ್ದಾನೆ. ಇತ್ತ ವಿಜಾಪೂರ ಬಾದಶಹನಿಂದಲೂ ಅನೇಕ ಗುರುಮಠಾಧಿಕಾರಿಗಳು ಭೂಮಿ ಮೊದಲಾದವುಗಳನ್ನು ಉಂಬಳಿಯಾಗಿ ಪಡೆದುಕೊಂಡ ಸನದುಗಳು ಅನೇಕ ಮಠಗಳಲ್ಲಿ ಈಗಲೂ ವಿರಾಜಿಸುತ್ತವೆ. ೧೮-೧೯ ನೇ ಶತಮಾನಗಳಲ್ಲಿಯೂ ಗುರುವರ್ಗದ ಪಟ್ಟಚರಾಧಿಕಾರಿಗಳೂ ಪ್ರಸಿದ್ಧರಾಗಿ ಹೋಗಿದ್ದಾರೆ. ಆಗ ಉತ್ತರ ಕರ್ನಾಟಕದಲ್ಲಿ ಕಲಾದಗಿ ಹುಟಗಿ-ಬರಗಿ-ಶಿರೋಳ-ಯಲಬುರ್ಗಿ ಮೊದಲಾದ ಪಟ್ಟಾಧಿಕಾರಿಗಳು ಧರ್ಮಜಾಗೃತಿಯನ್ನುಂಟುಮಾಡಿರುವರು. ಸದ್ಯಃ ಪ್ರಾಪ್ತವಾಗಿರುವ ೨೦ ನೇ ಶತಮಾನದ ಆರಂಭದಲ್ಲಿ ಗುರುವರ್ಗವು ಸಂಪೂರ್ಣಜಾಗೃತಿಯನ್ನು ಹೊಂದಿರುವದು. ೧೨ ನೇ ಶತಮಾನದಿಂದ ಒಂದಿಲ್ಲೊಂದು ಬಗೆಯಿಂದ ಸಮಾಜದಲ್ಲಿ ಕಾರ್ಯರೂಪವಾಗಿ ವ್ಯಾಪಿಸಿಕೊಂಡ ವಿರಕ್ತರ ಹಾವಳಿಯು ಈಶತಮಾನದಲ್ಲಿ ನಾಶವಾಯಿತು. ೭೦೦ ವರ್ಷಗಳಿಂದ ಇವರು ಸಾಮಾನ್ಯವಾಗಿ ಸಾಮಾಜಿಕ-ಧಾರ್ಮಿಕ ಕಾರ್ಯಗಳಲ್ಲಿ ಕೈಹಾಕಿದ್ದರು. ಅವರಲ್ಲಿ ಹೆಚ್ಚಾಗಿ ದುಡ್ಡನ್ನು ಸಂಪಾದಿಸಿಕೊಂಡ ಸನ್ಯಾಸಿಗಳಂತೂ ಅಡ್ಡ-ಉದ್ದ ಪಲ್ಲಕ್ಕಿಗಳಲ್ಲಿ ಮೆರೆದರು. ಸರ್ವಸಂಗಪರಿತ್ಯಾಗಮಾಡಿದ ಸನ್ಯಾಸಿಗಳು ಗುರುಸಾರ್ವಭೌಮರ ವೈಭವಾತಿಶಯಗಳಿಗೆ ಸೀರಿದು ಪ್ರವೇಶಿಸಬಾರದ ಪ್ರಸಂಗಗಳಲ್ಲಿ ಧುಮುಕುತ್ತಿದ್ದರು. ಇವರ ಹಾವಳಿಯಂತೂ ಈಗ ಗುರುವರ್ಗದ ಜಾಗೃತಿಯಿಂದ ಲೋಪವಾಗಿ ಇವರ ಉತ್ಸವಗಳು ಗವಿಯ ಹಾದಿಯನ್ನು ಹಿಡಿದವು. ಈಗ ೪-೬ ವರುಷಗಳಿಂದ ಪುನಃ ೧೨ನೆಯ ಶತಮಾನದಂತೆ ಜಾತಿಸಾಂಕರ್ಯದ ಬೀಗೆಯು ಹಬ್ಬುವ ಲಕ್ಷಣವಿತ್ತು; ಗುರುವರ್ಗವನ್ನೇ ಜಾಗೃತಿಗೊಳಿಸಿದ ಸುಪ್ರಸಿದ್ಧ ಪಂಡಿತವರ್ಗದವರಿಂದ ಅದು ತಣ್ಣಗಾಯಿತು. ಅಂತೂ ಗುರುವರ್ಗವು ಧಾರ್ಮಿಕಕಾರ್ಯಗಳಲ್ಲಿ ಪ್ರವೇಶಿಸಿದ ವಿರಕ್ತರನ್ನೂ ಜಾತಿಸಾಂಕರ್ಯವನ್ನು ಪ್ರಚಾರಮಾಡತೊಡಗಿದ ಮಿತ್ರರನ್ನೂ, ತಡೆದು ಹಾಕಿ ಅವರನ್ನು ಸನ್ಮಾರ್ಗದಲ್ಲಿ ತರಲು ಪ್ರಯತ್ನಿಸುತ್ತದೆ. ಗುರುವರ್ಗದ ಜಾಗೃತಿಗೆ ಗುರುವರ್ಗದವರ ಒಕ್ಕಟ್ಟೇಬಲವಾದ ಕಾರಣವಾಗಿದೆ. ಗುರುವರ್ಗದಲ್ಲಿರುವ ಒಕ್ಕಟ್ಟಿನಪ್ರಭಾವವು ವೀರಶೈವಮತದ ಇಕ್ಕಟ್ಟನ್ನೆಲ್ಲಾ ನಾಶಮಾಡುವದೆಂದು ವಿನೋದನ ನಂಬಿಕೆ.

ಶ್ರೀ ಹೊಳಲಿಂಗೇಶ್ವರ ಪ್ರಸೀದ.

ಶ್ರೀ ಹೊಳಿಲಿಂಗೇಶ್ವರಸ್ವಾಮಿಯ ರಥೋತ್ಸವ ವಾಹ್ವಾನಪತ್ರಿಕೆ.

ವಿನಯಪೂರ್ವಕ ಪ್ರಕಟಪಡಿಸುವುದೇನೆಂದರೆ—

ನಮ್ಮ ಗ್ರಾಮದ ಸವಿಪದಲ್ಲಿ ವರದಾ ಮತ್ತು ದಂಡಾವತಿಗಳ ಸಂಗಮವಾಗಿ ಹೊಳೆಯಲ್ಲಿ ಲಿಂಗವು ಉದ್ಭವಿಸಿ ಅತ್ಯಂತ ಪುಣ್ಯಸ್ಥಳವೆನಿಸಿಕೊಂಡಿದ್ದು, ಈಗ ಅನೇಕ ವರ್ಷಗಳಿಂದ ಮಕರಸಂಕ್ರಮಣದಲ್ಲಿ ನಡೆಯುವ ರಥೋತ್ಸವವನ್ನು ಅಜೂಬಾಜೂ ಗ್ರಾಮಗಳ ಪ್ರಮುಖರು ಅತ್ಯಂತ ಪ್ರೋತ್ಸಾಹದಿಂದ ನಡೆಯಿಸುತ್ತಾ ಇದ್ದಾರೆ. ಪದ್ಧತಿಪ್ರಕಾರ ಶಕೆ 1855 ನೆಯ ಶ್ರೀಮುಖನಾಮಸಂವತ್ಸರದ ಪುಷ್ಯ ಬ|| ೧೪ ರವಿವಾರ ಮಕರಸಂಕ್ರಮಣ ಹಬ್ಬ (14-1-34) ಬೆಳಗಿನಿಂದ ಸಾಯಂಕಾಲದವರೆಗೆ ಲಿಂಗಪೂಜಾ ರಾತ್ರಿ ೬ ಘಂಟೆಯಿಂದ ದೇವರ ಅಲಂಕಾರ ದೀಪಾರಾಧನೆ, ಮತಸಂಬಂಧಿ ಆಚರಣೆ, ಸಭೆ, ಕೀರ್ತನ, ಭಜನೆ, ಇವುಗಳು ನಡೆದು ತರುವಾಯ ಬೆಳಗಿನ ೫ ಘಂಟೆಗೆ ಶ್ರೀ ಹೊಳಿಲಿಂಗೇಶ್ವರನ ರಥಾರೋಹಣಮಹೋತ್ಸವವು ನಡೆಯುತ್ತದೆ. ಮರುದಿನ (ತಾ|| 15-1-34) ನೆಯ ದಿವಸ ದನಗಳ ಪ್ರದರ್ಶನ ಮತ್ತು ಹೋರಿ ಮೆಯಿಸಿದವರಿಗೆ ಬಹುಮಾನವು ಕೊಡಲ್ಪಡುತ್ತದೆ. ಮತ್ತು ತಾ|| 17 ರಿಂದ ತಾ|| 24-1-34 ರ ವರೆಗೆ ಕುಸ್ತಿ ನಡೆಸಿ ಬಹುಮಾನವು ಕೊಡಲ್ಪಡುತ್ತದೆ. ಪ್ರತಿ ವರ್ಷವೂ ದನಕರುಗಳ ವ್ಯಾಪಾರವು ಹೆಚ್ಚಾಗಿ ನಡೆಯುತ್ತಾ ಇದೆ. ಹೊಸದಾಗಿ ಬರತಕ್ಕ ನಾಟಕದವರೂ, ಅಂಗಡಿಕಾರರೂ, ತಮ್ಮ ಅನುಕೂಲತೆಯ ಬಗ್ಗೆ ಮ|| ರಾ|| ಶ್ರೀ ಜಡೇಹೊಲಬಿ ಕ್ಯಾನವಳ್ಳಿ ಮಾಳಗಿ ದೊಡ್ಡವೀರಪ್ಪಗೌಡರಿಗೂ ಮ|| ರಾ|| ಶ್ರೀ ಬಂಕನಾಳದ ಪಟೀಲ ಪುಟ್ಟಪ್ಪಗೌಡರಿಗೂ ಮೊದಲೇ ತಿಳುಹಿಸತಕ್ಕದ್ದು.

ಈ ಸಂಗಮಪ್ರದೇಶವು ಆನವಟ್ಟಿಗೆ ೩ ಮೈಲು ಆಲೂರಿಗೆ ೧೦ ಮೈಲು, ಬನವಾಸಿಗೆ ೯ ಮೈಲು ದೂರದಲ್ಲಿದೆ. ಸದ್ಭಕ್ತರು ಎಂದಿನಂತೆ ಬಂದು ಮಕರಸಂಕ್ರಮಣ ಸ್ನಾನಮಾಡಿ ಪುಣ್ಯಭಾಗಿಗಳಾಗಬೇಕಾಗಿ ಕೋರುತ್ತೇವೆ.

ಮ|| ರಾ|| ಪುಟ್ಟಪ್ಪಗೌಡ್ರು, (ಕನ್ವೀನರ್) ಅಮಲ್ದಾರ್

ಧರ್ಮದರ್ಶಿಗಳು—ಮ|| ರಾ|| ವೀರಬಸವಪ್ಪಯ್ಯನವರು, ಪಟೇಲ್ ಕುಬಟೂರು. ಮ|| ರಾ|| ಶರಮಪ್ಪನವರು, ದೇವಟ್ಟಿ. ಮ|| ರಾ|| ಶಿವಪ್ಪಗೌಡ್ರು, ಕೋಡಿಕೊಪ್ಪ. ಮ|| ರಾ|| ದೊಡ್ಡವೀರಪ್ಪಗೌಡ್ರು, ಕ್ಯಾನವಳ್ಳಿ. ಮ|| ರಾ|| ಗುರುನಾಥಪ್ಪ ನಾಡಿಗೇರ್, ಕಕನವಳ್ಳಿ. ಮ|| ರಾ|| ಪುಟ್ಟಪ್ಪಗೌಡ್ರು, ಬಂಕಸಾಣ.

ಕಾರ್ಯದರ್ಶಿಗಳು—ಮ|| ರಾ|| ಚನ್ನವೀರಯ್ಯನವರು ಜಡೇದ. ಮ|| ರಾ|| ಬಸವಣ್ಣಪ್ಪನವರು, ನೆಲ್ಲಿಕೊಪ್ಪದ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪಿಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್‌ಮೆಂಟ್ಸಿನಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಖರಾರು

ಘಂಟೆಯನ್ನು ತೋರಿಸುವವು. ಒಳಗಡೆ ಕೆಂಪು ಇಟ್ಟಿರುವವು. ಇದರ ಕೇಸು ಬಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು. ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
THE CITY MART,
168, China Bazaar, MADRAS.

[8]

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ವಸ್ವಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 17

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಯಜಮಾನ್ ಅಂಡ್ ಸನ್ಸ್
ರಬ್ಬರ್ ಮೊಹರು ತ್ಯಾರ್
ಫೋಟೊ, ಲೈನ್, ಬ್ಲಾಕುಗಳು
ಹಿತ್ತಾಳಿ, ಸೀಸದ, ಬ್ಲಾಕುಗಳು
ಅರಗಿನಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸುತ್ತೇವೆ.
ಚಿಕ್ಕಪೇಟೆ
ಬೆಂಗಳೂರು ಸಿಟಿ

ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರಿಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [52]

ಮಲೇರಿಯಾನ ಮಲೆಜ್ವರ ಸಂಹಾರಿಣಿ!

ಅರ್ಧಶತಮಾನದಿಂದಲೂ ಅಸಂಖ್ಯಾತರಾದ ಮ್ಮ ಗಿರಾಕಿಗಳ ಹೊಗಳಿಕೆಗೂ, ಯೋಗ್ಯತಾಪತ್ರಗಳಿಗೂ ಪಾತ್ರವಾದುದಲ್ಲದೇ ಇದರ ಗುಣಕ್ಕಾಗಿ ಮುಖ್ಯ ಪಟ್ಟಣಗಳಾದ ಅಹಮದಾಬಾದ್, ಅಜ್ಮೇರ್, ಕುಂಭಕೋಣಂ, ತ್ರಿವೆಂಡ್ರಂ, ತಿನ್ನವೆಲ್ಲಿ ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತುಪ್ರದರ್ಶನಗಳಲ್ಲಿ ಮೊದಲನೆಯ ತರಗತಿ ಚಿನ್ನದ ಪದಕಗಳನ್ನೂ, ಬಹುಮಾನಪತ್ರಗಳನ್ನೂ ಹೊಂದಿದೆ ಎಂಬದನ್ನು ಎಂದಿಗೂ ಮರೆಯಬೇಡಿರಿ.

8 ಔನ್ಸು ರೂ. 1—8—0.

ಮಲೇರಿನ್ ಬಿಲ್ಲೆ—ಮಲೆಜ್ವರ, ಛಳಿಜ್ವರ, ಪಿತ್ತ, ಉರಿಜ್ವರ ಇತ್ಯಾದಿ ಕಂಟಕಗಳ ಜ್ವರಗಳನ್ನು ಸಹ ಈ ಬಿಲ್ಲೆಗಳು ಖಾತ್ರಿ ಗುಣಪಡಿಸುತ್ತವೆ.
60, 100, 500ಕ್ಕೆ ರೂ. 1, 1-8-0, 7-0-0

ಹೂಫಿಂಗ್ ಕಫ್ ರೆಮೆಡಿ—ಕಪ್ಪೆಕೆಮ್ಮು, ಒಣಕೆಮ್ಮು, ಶ್ವಾಸಕಟ್ಟುವ ಕಠಿಣಕೆಮ್ಮುಗಳಿಗೆ ಸಿದ್ಧೌಷಧ.
½ ಔನ್ಸಿಗೆ 0-9-0, 1ಔನ್ಸಿಗೆ ರೂ. 1-0-0.

ಶುದ್ಧ ಚಿಕಿತ್ಸೆಯ ಮದ್ದುಗಳೂ, ಹೋಮ್ಯೋಪತಿ ಔಷಧಗಳೂ ನಮ್ಮಲ್ಲಿ ದೊರೆಯುತ್ತದೆ. ವಿವಿಧ ರೋಗಗಳಿಗಾಗುವ ಔಷಧಗಳಿಗೆ ನಮ್ಮ ಆರೋಗ್ಯಭಾಗ್ಯದ ಪತ್ರಿಕೆಗೆ ಬರೆಯಿರಿ. ಧರ್ಮಾರ್ಥ.

ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು.

ಕಂಪೌಂಡ್ ಸಿರಪು ಬ್ಲಟ—ಉಬ್ಬಸ, ನೀವಸ, ದಮ್ ರೋಗಕ್ಕೂ, ಶ್ವಾಸಕೋಶಗಳಲ್ಲಿ ಅಂಟಿಕೊಂಡಿರುವ ಕಫವನ್ನು ಸುಲಭರೀತಿಯಿಂದ ಹೊರ ಪಡಿಸಿ ಎದೆಯ ಆಯಾಸವನ್ನು ನಿಲ್ಲಿಸುವುದಕ್ಕೂ ಬಲವಾದ ಟಾನಿಕ್ಕಾಗಿದೆ ಎಂದು ಈ ರೋಗದಿಂದ ಗುಣಪಟ್ಟವರೆಲ್ಲರೂ ಹೊಗಳುತ್ತಾ ಇದ್ದಾರೆ.

8 ಔನ್ಸಿಗೆ ರೂ. 3-8-0.

ಕಂಪೌಂಡ್ ಸಿರಪು ಫೋಸ್ಫರ—ಶ್ವಾಸಕೋಶಗಳು ಆಗಿಂದಾಗ್ಗೆ ಶೀತಕ್ಕೆ ಒಳಪಟ್ಟು ಕೆಮ್ಮು, ಕಫ, ಎದೆನೋವು, ಜ್ವರ, ಸ್ವರಭಂಗ, ಗಂಟಲು ನೋವು ಇತ್ಯಾದಿ ಶ್ವಾಸಕೋಶದ ರೋಗಗಳೆಲ್ಲಾ ಗುಣವಾಗಬೇಕೆಂದಾದರೆ ಒಡನೇ 'ಕಂಪೌಂಡು ಸಿರಪು ಫೋಸ್ಫರ. ತರಿಸಿ ಕುಡಿಯಿರಿ. [17]

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದೆ.

8 ಔನ್ಸಿಗೆ ರೂ. 3-8-0.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಛಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (7)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಅಣ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಪ್ಪಣಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೨—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೨—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದ ರೆ:—ಪಿನಸಿ, ಒಂ[illegible] ತಲೆನೋವು, ತಲೆಯ[illegible] ಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾ[illegible] ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ[illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ[illegible] ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು[illegible] ಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲ[illegible] ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ[illegible] ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋ[illegible] ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ[illegible]

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-[illegible]
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ[illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[51] ಪೋ. ಬಾ. ೫೧೦, ಮದರಾಸ್.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ ನೇ ಜನವರಿ ೧೯೩೪ [ಸಂಚಿಕೆ ೩೭

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಶಾಸ್ತ್ರಿಗಳು ಬೇಕಾಗಿದೆ.

ಮಳಲಿ ಮಠದಿಂದ ಹುಂಚದಕಟ್ಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾನಂದಾಶ್ರಮ ಸಂಸ್ಕೃತಪಾಠಶಾಲೆಗೆ ವೈದಿಕ ಜ್ಯೋತಿಷ ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದ್ದಾರೆ. ಬರಲಪೇಕ್ಷೆಯುಳ್ಳವರು ಈ ಕೆಳಗಿನ ಅಡ್ರೆಸ್ಸಿಗೆ ಈ ತಿಂಗಳ ಆಖೈರೊಳಗಾಗಿ ಅಪ್ಲಿಕೇಶನ್ ಹಾಕಿಕೊಳ್ಳತಕ್ಕದ್ದು. ಯೋಗ್ಯತೆಗನುಸಾರವಾಗಿ ಸಂಬಳವು ಕೊಡಲಾಗುವುದು.

ಪಾಠಶಾಲಾ ವ್ಯವಸ್ಥಾಪಕ,
ಕ್ಯಾರಂದೂರು ಅಯ್ಯಪ್ಪಗೌಡ,
ಮಳಲಿಮಠ,
ಪೋ|| ಆಗ್ರಾ ಡಿ|| ಶಿವಮೊಗ್ಗ.

ಜ್ಯೋತಿಶ್ಶಾಸ್ತ್ರದಭವಿಷ್ಯ.

ಹಾವೇರಿಯ ಸುಪ್ರಸಿದ್ಧ ಜ್ಯೋತಿರ್ಮಾರ್ತಂಡ ಪಂ|| ಶಂಕರಶಾಸ್ತ್ರಿಗಳು ಮುಂದಿನ ವರುಷದ ಆರಂಭದಿಂದ ೨|| ತಿಂಗಳಿನ ಭವಿಷ್ಯವನ್ನು ಈ ಪ್ರಕಾರ ಹೇಳಿರುವರು—"ಫೆಬ್ರುವರಿ ೧೩ ಮತ್ತು ೧೫ ನೇ ತಾರೀಖಿನ ದಿವಸ ಸೂರ್ಯಗ್ರಹಣವಾಗುತ್ತದೆ. ಈ ಗ್ರಹಣವು ಪಶ್ಚಿಮ ಅಮೇರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳಲ್ಲಿ ಕಾಣುತ್ತಿದ್ದು ಅದರ ಪರಿಣಾಮವು ಆರ್ಥಿಕ ಪರಿಸ್ಥಿತಿ, ಹುಂಡಣಾವಳಿ, ವ್ಯಾಪಾರದ ಶರ್ತುಗಳು ಮತ್ತು ಅಂತರ ರಾಷ್ಟ್ರೀಯ ವೆಚ್ಚ ಇವುಗಳ ಮೇಲಾಗುವದು. ಮಿತವ್ಯಯ ಚಾತುರ್ಯದ ಧೋ

ರಣವನ್ನು ಸ್ವೀಕರಿಸಿ ಗ್ರೇಟ್‌ಬ್ರಿಟನ್ನವು ಪುನಃ ಸುವರ್ಣ ಪರಿಣಾಮವನ್ನು ಪ್ರಾರಂಭಿಸುವುದು.

ಮಂದಿರ ಪ್ರವೇಶ ಗೊತ್ತುವಳಿ.

ಶ್ರೀರಂಗ ಅಯ್ಯರ್ ಇವರು ಕೇಂದ್ರ ಶಾಸನಸಭೆಯಲ್ಲಿ ತಂದ ದೇವಾಲಯ ಪ್ರವೇಶದ ಗೊತ್ತುವಳಿಯು ೧೯೩೫ ನೆಯ ಇಸವಿಯ ವರೆಗೆ ನಿಲ್ಲಿಸಲ್ಪಡುವುದು. ಮಧ್ಯದಕಾಲದಲ್ಲಿ ಸನಾತನಿ ಮತ್ತು ಸುಧಾರಕರಲ್ಲಿಯ ವಿರೋಧವು ಹೆಚ್ಚಿ ಗಾಂಧಿಯವರು ಪುನಃ ಉಪವಾಸವನ್ನು ಪ್ರಾರಂಭಿಸುವರು. ಈ ಕಾಲದಲ್ಲಿ ಸರಕಾರದವರು ಸನಾತನಿಗಳ ಪಕ್ಷವನ್ನು ಹಿಡಿಯುವರಲ್ಲದೆ ಧಾರ್ಮಿಕ ವಿಷಯದಲ್ಲಿ ತಾವು ಕೈಹಾಕುವದಿಲ್ಲೆಂಬ ತತ್ತ್ವವನ್ನು ಅವಲಂಬಿಸುವರು.

ಕ್ರಾಂತಿಯುಂಟಾಗುವಿಕೆ?

ಜರ್ಮನಿ, ಪೋಲಂಡ ಮತ್ತು ಫ್ರಾನ್ಸ ದೇಶಗಳ ಯುದ್ಧದ ಗಾಳಿಗಳು ಬೀಸಹತ್ತಿ, ಯೂರೋಪದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪದ್ಧತಿಯಲ್ಲಿ ಅಪೂರ್ವ ಕ್ರಾಂತಿಗಳುಂಟಾಗುವವು. ಮತ್ತೊಂದು ಮಹತ್ತ್ವದ ಯೋಗವು ಜನವರಿ ೧೫ ನೆಯ ತಾರೀಖಿನ ದಿವಸ ಮಧ್ಯಾಹ್ನ ೪ ಘಂಟೆಗೆ ಆದೆ. ಇದಕ್ಕೆ ಗೋಲಯೋಗ ಅಥವಾ ಸಪ್ತಗ್ರಹಿ ಎಂದೆನ್ನುತ್ತಾರೆ. ಈ ಸಪ್ತಗ್ರಹದ ಪರಿಣಾಮವು ಅಖಿಲ ಜಗತ್ತಿನ ಮೇಲಾಗುವುದು. ಈ ಕಾಲದಲ್ಲಿ ಪ್ಲೇಗ, ಕಾಲರಾ ಮೊದಲಾದ ರೋಗಗಳು ಒತ್ತರದಿಂದ ಪ್ರಸಾರವಾಗುವವು. ಜ್ವಾಲಾಮುಖಿಗಳು ಪ್ರಸಾರವಾಗುವವು.

ಮಹಾಯುದ್ಧ.

೧-೨ ವರುಷಗಳಲ್ಲಿಯೇ ಮಹಾಯುದ್ಧವುಂಟಾಗುವ ಯೋಗವುಂಟಾಗುತ್ತಲಿದೆ. ಹಿಂದೂಸ್ಥಾನದಲ್ಲಿಯ ರಾಷ್ಟ್ರೀಯೋಲ್ಲಂಘನೆಯ ಚಟುವಟಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವರು. ಹಾಗೆಯೇ ಸರ್ವ ಪಕ್ಷಗಳ ಸಂಯುಕ್ತಪರಿಷತ್ತನ್ನು ಕೂಡಿಸಿ ಹೊಸ ರಾಜಕೀಯ ಕಾರ್ಯಕ್ರಮವನ್ನು ಟುವಮಾಡುವರು. ಈ ಪ್ರಕಾರದ ಯೋಗವು ಕಾಣಿಸುತ್ತಲಿದೆ. ರಾಷ್ಟ್ರೀಯಸಭೆಯ ಘಟನೆಯಲ್ಲಿ ಸ್ವಲ್ಪ ವ್ಯತ್ಯಾಸವಾಗುವದು.

2,300 ಅಡಿಗಳ ಎತ್ತರವಾದ ಕಟ್ಟಡ!

ಪ್ಯಾರಿಸ್ ನಗರದಲ್ಲಿ 1937ನೇ ಇಸವಿಯಲ್ಲಿ ನಡೆಯಲಿರುವ 'ವಿಶ್ವಪ್ರದರ್ಶನ'ದ ಸಲುವಾಗಿ ಎಂ. ಫ್ರೆಸ್ಸಿನೆಟ್ ಎಂಬ ಪ್ರಸಿದ್ಧ ಫ್ರೆಂಚ್ ಇಂಜನಿಯರು ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾದ ಕಟ್ಟಡವೊಂದನ್ನು ಕಟ್ಟಬೇಕೆಂದು ನಿರ್ಧರಿಸಿರುವರು. ಇದಕ್ಕೆ 'ಫಾರೆ ಡ್ಯು ಮಾಂಡ್' ಅಥವಾ 'ಪ್ರಪಂಚದ ಬೆಳಕಿನ ಮನೆ' ಎಂದು ಹೆಸರು. ಇದು ಪ್ಯಾರಿಸ್ಸಿನ 984 ಅಡಿ ಎತ್ತರವಾಗಿರುವ ಲೋಕಪ್ರಸಿದ್ಧವಾದ 'ಈಫಲ್ ಗೋಪುರ'ಕ್ಕೆ ಸುಮಾರು ಎರಡೂವರೆಯಷ್ಟು ಎತ್ತರವಾಗಿಯೂ, 1,248 ಅಡಿ ಎತ್ತರವಾಗಿರುವ ನ್ಯೂಯಾರ್ಕ್ ನಗರದ 'ಎಂಪೈರ್ ಸ್ಟೇಟ್ ಬಿಲ್ಡಿಂಗ್'ಗೆ ಸುಮಾರು ಎರಡರಷ್ಟು ಅಂದರೆ 2,300 ಅಡಿಗಳಷ್ಟು ಎತ್ತರವಾಗಿಯೂ ಇರುವದಂತೆ! ಮೇಲ್ಭಾಗಕ್ಕೆ ಹೋಗಿ ಬರಲು ಪದ್ಧತಿಯ ಮೇರೆಗೆ ಎಲೆಕ್ಟ್ರಿಕ್ ತೊಟ್ಟಿಲುಗಳಿರುವುವಲ್ಲದೆ, ಕಟ್ಟಡದ ಮೇಲ್ಭಾಗಕ್ಕೆ ಮೋಟಾರುಗಳು ಸುಲಭವಾಗಿ ಹೋಗಿಬರುವಂತೆ ಕಟ್ಟಡದ ಹೊರಭಾಗದಲ್ಲಿ ಸುತ್ತಲೂ ಮೋಟಾರ್ ರಸ್ತೆಯಿದ್ದು, 1600 ಅಡಿ ಎತ್ತರದಲ್ಲಿರುವ ಮೊದಲನೇ ಅಂತಸ್ತಿನಲ್ಲಿ 400 ಮೋಟಾರುಗಳನ್ನು ಬಿಡಬಹುದಾದಷ್ಟು ವಿಶಾಲವಾದ 'ಗ್ಯಾರೇಜ್' ಅಥವಾ 'ಮೋಟಾರ್ ಗೃಹ' ವೂ, ಅಲ್ಲಿಂದ ಮೇಲಕ್ಕೆ ಸಣ್ಣ ಮೋಟಾರುಗಳ ಸಂಚಾರಕ್ಕೆ ಮತ್ತೊಂದು ರಸ್ತೆಯೂ, 1,900 ಅಡಿಗಳ ಎತ್ತರದಲ್ಲಿ 2,000 ಜನರು ಇರಬಹುದಾದಷ್ಟು ವಿಶಾಲವಾದ ವಿಶ್ರಾಂತಿಗೃಹವೂ, ಅದಕ್ಕೂ ಮೇಲೆ ನೂರಾರು ಮೈಲುಗಳ ವರೆಗೆ ಕಾಣಿಸುವ ಅದ್ಭುತವಾದ ವಿದ್ಯುಚ್ಛಕ್ತಿಯ ದೀಪದ ಗೃಹವೂ, ಎಲ್ಲಕ್ಕೂ ಮೇಲೆ ವಾಯುಗುಣವನ್ನು ಪರೀಕ್ಷಿಸುವ ಗೃಹವೂ ಇರುವುವಂತೆ! ಇದನ್ನು ಕಟ್ಟಲು ಸುಮಾರು ೧ ಕೋಟಿ ರೂಪಾಯಿಗಳು ವೆಚ್ಚವಾಗುವುವೆಂದು ಅಂದಾಜು ಹಾಕಲ್ಪಟ್ಟಿರುವದು.

ಶ್ರೀ ಜಗದ್ಗುರು ಪಂಚಕಂ ವಿಜಯತೇತರಾಂ.

ಕಂಪಲಿ ಸಾಂಗತ್ಯಯಿಾ ಪಾಠಶಾಲೆಯ ಸೂಚನೆ.

ವಂದನಾಪೂರ್ವಕ ಸರ್ವ ಪಾಠಶಾಲಾಧ್ಯಾಪಕ ಮಹಾಶಯರಿಗೆ ತಿಳಿಸುವದೇನೆನೆ—ನಮ್ಮ ಪಾಠಶಾಲೆಯಿಂದ ಸುರಪುರವುರಿಯೆಂದು ಹೇಳುವ ಸಿದ್ಧರಾಮಯ್ಯ ಮತ್ತು ಇಲ್ಲಿ ಅಧ್ಯಾಪಕರಾದ ವೇ|| ಪಂ|| ಅಮರನಾಥಶಾಸ್ತ್ರಿಗಳು ಹಿರೇಮಠ ಬನ್ನಿಗೋಳ ಇವರ ಅಣ್ಣನ ಮಗನಾದ ಕಲಿಗಣನಾಥನೆಂಬ ವಿದ್ಯಾರ್ಥಿಗಳಿಬ್ಬರೂ ರಾತ್ರಿ ಪರಾರಿಯಾಗಿ ಎಲ್ಲಿಯೋ ಹೋಗಿರುತ್ತಾರೆ. ಇಬ್ಬರಿಗೂ ಸಮವಯಸ್ಸು. ಕಲಿಗಣನಾಥನಿಗೆ ೧೩ ವರ್ಷ, ಕಪ್ಪುಬಣ್ಣ. ಇವರು ನಿಮ್ಮಲ್ಲಿಗೆ ಬಂದರೆ ಸೇರಿಸಿಕೊಳ್ಳದೆ ಮುಂದಕ್ಕೆ ಬಿಡದೆ ಜರೂರು ದಯವಿಟ್ಟು ನಮ್ಮ ವಿಳಾಸಕ್ಕೆ ತಿಳಿಸುವಿರೆಂದು ತುಂಬಾ ನಂಬಿರುವ,

ಸಾಂಗತ್ಯಯಿಾಪಾಠಶಾಲಾ ಸೆಕ್ರೆಟರಿ,
ಕಂಪಲಿ, ಜಿಲ್ಲಾ ಬಳ್ಳಾರಿ.

ಸ್ವೀಕಾರ

ಕೊಳ್ಳೇಗಾಲ ತಾಲ್ಲೂಕು ಮುಡಿಗುಂಡದಲ್ಲಿರುವ ವೇ|| ಕೆ. ಆರ್. ಚಂದ್ರಶೇಖರಾರಾಧ್ಯರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಧರ್ಮ.

~~ಶಾಸ್ತ್ರೀಶ್ರೀ ಚಂದ್ರಶೇಖರಶರ್ಮಾ ಆರಾಧ್ಯರವರು.~~
~~(ಶ್ರೀ ವಿಶ್ವಾರಾಧ್ಯ ಗುರುಕುಲ ಕಾಶೀ.)~~

ನಾವು ಉನ್ನತಶಿಕ್ಷಣವನ್ನೂ ಮತ್ತು ಸಂಪತ್ತಿನ ಶಿಖರವನ್ನೂ ಹೊಂದಿದಾಗ್ಯೂ ಧರ್ಮವಿದ್ದ ಹೊರತು ನಮ್ಮ ಜೀವನವು ವ್ಯರ್ಥವೇ ಸರಿ! ಕ್ರಿಶ್ಚಿಯನ್ ಸಮಾಜದಲ್ಲಿ ರಿಲಿಜಿಯನ್ (Religion) ಎಂದು ಅನ್ನುತ್ತಾರೆ. ಆದರೆ ರಿಲಿಜಿಯನ್ನಿನ ಅರ್ಥವು ಧರ್ಮವೆಂದಾಗುವದಿಲ್ಲ. ಇದೇ ಪ್ರಕಾರವಾಗಿ ಮುಸಲಮಾನ, ಜೈನ ಮತ್ತು ಬೌದ್ಧ ಸಾಂಪ್ರದಾಯಗಳಲ್ಲಿಯೂ ಇರುತ್ತದೆ. ನಮ್ಮ ಧರ್ಮವು ಯಾವ ವ್ಯಕ್ತಿಯಿಂದಲೂ ಮಾಡಲ್ಪಟ್ಟಿಲ್ಲ. ಆದಾಗ್ಯೂ ಒಂದೊಂದು ಯುಗದಲ್ಲಿ ಇದರ ಕೆಲವು ಪರಿವರ್ತನಗಳಾಗುತ್ತಾ ಬಂದಿವೆ. ಆದರೆ ನಾವು ಯಾರ ಸಂತಾನವೆಂಬುವದರಲ್ಲಿ ನಮ್ಮ ಗೌರವವೆಂದು ತಿಳಿಯುತ್ತೇವೆಯೋ ಅಥವಾ ಆ ಪ್ರಾಚೀನ ಆಚರಣೆ ಅಥವಾ ಅವರ ಶೀಲವು ಇದರ ಆಧಾರವಾಗಿರುತ್ತದೆ. ನಮ್ಮ ಪೂರ್ವಜರಾದ ಆರ್ಯರಲ್ಲಿ ಯಾವ ಆಚಾರ ವಿಚಾರಗಳಿದ್ದವೋ ಅವೇ ಆಚಾರ, ವಿಚಾರಗಳು. ಸದ್ಯಃ ನಮ್ಮ ಜೀವನದಲ್ಲಿವೆ. ಸಾಧಾರಣವಾಗಿ ಹಿಂದೂಧರ್ಮದ ಇತಿಹಾಸವನ್ನು ಓದುವದರಿಂದಲೇ ಇದು ತಿಳಿದುಬರುತ್ತದೆ. ಈ ಮಾತು ನಮ್ಮ ಭಾರತದೇಶವನ್ನು ಬಿಟ್ಟು ಬೇರೆ ಯಾವ ದೇಶದಲ್ಲಿಯೂ ಸಿಗುವದಿಲ್ಲ. ಆದ್ದರಿಂದಲೇ ಸಾಧಾರಣವಾಗಿ ಹಿಂದೂ ಧರ್ಮಕ್ಕೆ "ಸನಾತನ ಧರ್ಮ"ವೆಂದೆನ್ನುತ್ತಾರೆ. ಅರ್ಥಾತ್ ಅನಾದಿಕಾಲದಿಂದಲೂ ಯಾವ ಧರ್ಮವು ಅವಿಚ್ಛಿನ್ನವಾಗಿ ನಡೆಯುತ್ತ ಬಂದಿದೆಯೋ ಅದಕ್ಕೇನೇ ಸನಾತನಧರ್ಮವೆಂದೆನ್ನುವರು. "ಧಾರಣಾದ್ಧರ್ಮಮಿತ್ಯಾಹುಃ" ಯಾವದರ ಸಹಾಯದಿಂದ ಸಮಸ್ತ ಸಂಸಾರದ ವ್ಯವಹಾರವು ನಡೆಯುತ್ತಿದೆಯೋ ಅಥವಾ ಯಾವದು ಜನಸಮೂಹದ ಪ್ರೇಮ ಮತ್ತು ವ್ಯವಹಾರದ ಸಂಬಂಧಗಳನ್ನು ಸ್ಥಿರಮಾಡುತ್ತದೆಯೋ ಆ ವಸ್ತುವೇ "ಧರ್ಮ"ವಾಗಿದೆ. "ಯತೋಽಭ್ಯುದಯ ನಿಃಶ್ರೇಯಸಸಿದ್ಧಿಃ ಸ ಧರ್ಮಃ" ಅರ್ಥಾತ್ ಯಾವದರ ಸಹಾಯದಿಂದ ಇಹಪರಸುಖವುಂಟಾಗುತ್ತದೆಯೋ ಅದಕ್ಕೇನೇ ಧರ್ಮವೆಂದೆನ್ನುವರು. ಯಾವದು ನಮಗೆ ಶುಭಕಾರ್ಯ ಅಥವಾ ಸತ್ಕರ್ಮಗಳನ್ನು ಮಾಡುವದಕ್ಕೆ ಪ್ರೇರಿಸುತ್ತದೆಯೋ ಅದೇ ಧರ್ಮವಿರುತ್ತದೆ. ಯಾವದು ಸದಾಚಾರವನ್ನು ಧಾರಣಮಾಡುತ್ತದೆಯೋ, ಯಾವದರಿಂದ ಇಹಪರಲೋಕಗಳಲ್ಲಿ ಸಮಾಜದ ಕಲ್ಯಾಣವಾಗುತ್ತದೆಯೋ ಮತ್ತು ಯಾವದು ನಮ್ಮನ್ನೂ ಸಮಾಜವನ್ನೂ ಉತ್ತಮೋತ್ತಮ ಕಾರ್ಯಗಳನ್ನೂ ಮಾಡಲು ಪ್ರೇರಿಸುತ್ತದೆಯೋ ಅದೇ ಧರ್ಮವಾಗಿದೆ.

ಧರ್ಮದ ಶುದ್ಧಸ್ವರೂಪವು ಮೇಲೆ ಹೇಳಿದ ಯಾವ ವಾಕ್ಯಗಳಲ್ಲಿ ತೋರುತ್ತದೆ. ಮತ್ತು ಅದು ಎಲ್ಲಿ ಸಿಗುತ್ತದೆ ಎಂಬುದನ್ನು ಈಗ ವಿಚಾರಿಸಬೇಕಾಗಿದೆ.

ವೇದೋಽಖಿಲೋ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಂ |
ಆಚಾರಶ್ಚೈವ ಸಾಧೂನಾಮಾತ್ಮನಸ್ತುಷ್ಟಿರೇವ ಚ ||
ಮ. ಸ್ಮೃ. ೨. ಅ.

ಧರ್ಮದ ಮೂಲತತ್ವದ ಪ್ರಾಪ್ತಿಯು ಸಂಪೂರ್ಣವೇದಾಗಮಗಳಲ್ಲಿ ಆಗುತ್ತದೆ. ಯಾಕೆಂದರೆ ವೇದಾಗಮಗಳೇ ಧರ್ಮದ ಮೂಲಾಧಾರವಾಗಿವೆ. ಇದರ ಮೇಲೆ ವೇದಾಗಮಗಳನ್ನು ವಿಸ್ತರಿಸುತ್ತ ಮಹಾಪುರುಷರ ಸ್ಮೃತಿಗ್ರಂಥಗಳಿಂದಲೂ ಪುರಾಣಾದಿಗಳಿಂದಲೂ ಅವರ ಶೀಲದಿಂದಲೂ ಧರ್ಮದ ಜ್ಞಾನವನ್ನು ಮಾಡಿಕೊಳ್ಳಬೇಕಾಗಿದೆ. ಶೀಲವೆಂದರೆ ಅವರ ಪವಿತ್ರವಾದ ಆಚರಣೆ. ಆಚಾರವನ್ನು ಶ್ರೇಷ್ಠವಾದ ಧರ್ಮವನ್ನಾಗಿ ಹೇಳಿದ್ದಾರೆ. "ಆಚಾರಃ ಪರಮೋಧರ್ಮಃ" ಧರ್ಮದ ವ್ಯಾಖ್ಯಾನವು "ಆತ್ಮನಸ್ತುಷ್ಟಿರೇವ ಚ" ವೆಂತಲೂ ಹೇಳಿರುತ್ತದೆ. ಅಂದರೆ ಸಂದೇಹದಲ್ಲಿ ವ್ಯಕ್ತಿಗೆ ತನ್ನ ಆತ್ಮವು ಯಾವ ಕಾರ್ಯವನ್ನು ಮಾಡುವದಕ್ಕೆ ಸಾಕ್ಷಿಯಾಗುವದೋ ನಿಜವಾಗಿ ಅದನ್ನು ಮಾಡುವದೇ "ಧರ್ಮ"ವದೆ. ಕೇವಲ ತನ್ನ ಇಂದ್ರಿಯಗಳಿಗೆ ಸಂತೋಷದಾಯಕವಾಗಿದೆ. ಆತ್ಮ ಮತ್ತು ವಿಶ್ವವ್ಯಾಪಕನಾದ ಪರಮಾತ್ಮನಿಗೂ ಕೂಡ ಸಂತೋಷದಾಯಕವಾಗುವದೇ ಧರ್ಮವಿದೆ.

ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ |
ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಂ ||

ಈಗ ನಾವು ಧರ್ಮದ ಲಕ್ಷಣವೇನದೆ. ಮತ್ತು ಯಾವದನ್ನು ಲಕ್ಷ್ಯಮಾಡಿಕೊಂಡು ಈ ಜೀವನಯಾತ್ರೆಯನ್ನು ಪೂರ್ತಿಗೊಳಿಸಬೇಕೆಂಬುದನ್ನು ವಿಚಾರಿಸಬೇಕಾಗಿದೆ. ಮನುವು ಧರ್ಮಕ್ಕೆ ಹತ್ತು ಅಂಗಗಳನ್ನಾಗಿ ಹೇಳಿದ್ದಾನೆ. ಮಹಾಭಾರತದಲ್ಲಿ ಒಂದು ಕಡೆಗೆ ಎಂಟನ್ನು ಧರ್ಮದ ಅಂಗಗಳನ್ನಾಗಿ ಹೇಳಿದ್ದಾರೆ. ಭಾಗವತದಲ್ಲಿ ಧರ್ಮದ ಮೂವತ್ತು ಲಕ್ಷಣಗಳನ್ನು ಹೇಳಿರುತ್ತದೆ. ಒಂದು ಕಡೆಗೆ ಒಂಭತ್ತು ಲಕ್ಷಣಗಳನ್ನು ಹೇಳಿದ್ದಾರೆ. ಇವೆಲ್ಲ ಲಕ್ಷಣಗಳಲ್ಲಿ ಮನುವಿನ ವಾಕ್ಯಗಳು ಸರ್ವಸಮ್ಮತವವೆ. ಅವು ಯಾವವೆಂದರೆ?

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ |
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ ||

ಧೈರ್ಯ, ಕ್ಷಮೆ, ಜಿತೇಂದ್ರಿಯತೆ, ಕಳವುಮಾಡದೆ ಇರುವದು, ತ್ರಿಕರಣ ಪವಿತ್ರತೆ, ಆತ್ಮವಶತೆ, ವಿವೇಕ, ಈಶ್ವರಜ್ಞಾನ, ಸತ್ಯಪರಿಪಾಲನೆ, ಕ್ರೋಧವನ್ನು ಬಿಡುವದು, ಇವೇ ಧರ್ಮದ ಮೂಲಲಕ್ಷಣಗಳಾಗಿವೆ. ಮುಸಲಮಾನ, ಜೈನ, ಬೌದ್ಧ, ಕ್ರಿಶ್ಚಿಯನ್ ಸಂಪ್ರದಾಯಗಳಿಗೂ ನಮ್ಮ ಧರ್ಮದ ಲಕ್ಷಣಗಳೇ ಮೂಲವಾಗಿವೆ. ಕ್ರಿಶ್ಚಿಯನ್ ಧರ್ಮದಲ್ಲಿ ಇವೇ ಹತ್ತು ಲಕ್ಷಣಗಳನ್ನು ಸ್ವಲ್ಪ ಅದಲು ಬದಲುಮಾಡಿ ಹತ್ತು ಆಜ್ಞೆಗಳನ್ನಾಗಿ ಹೇಳುತ್ತಾರೆ. (Ten commandments) ಹೇಗೆಂದರೆ ನೀವು ಹಿಂಸೆಯನ್ನು ಮಾಡಬೇಡಿರಿ; ಸುಳ್ಳುಮಾತಾಡಬೇಡಿರಿ; ಇತ್ಯಾದಿಯಾಗಿ ಉಪದೇಶಿಸುತ್ತಾರೆ.

ಇವೇ ಧರ್ಮದ ಲಕ್ಷಣಗ[ಳು ...] ಈ ಧರ್ಮದಲ್ಲಿ ಎಷ್ಟು ಭೇದಗಳಿರುವವೆಂಬುದನ್ನು ಪೂರ್ಣವಿಚಾರಿಸಬೇಕಾಗಿದೆ. ಮುಖ್ಯವಾಗಿ ಧರ್ಮದಲ್ಲಿ ಸಾಮಾನ್ಯಧರ್ಮವೆಂತಲೂ ವಿಶೇಷಧರ್ಮವೆಂತಲೂ ಹೀಗೆ ಎರಡು ಪ್ರಕಾರಗಳಾದ ಭೇದಗಳಿರುತ್ತವೆ. ಸಾಮಾನ್ಯಧರ್ಮವು ಎಲ್ಲಾ ಧರ್ಮದವರಿಗೂ ಉಪಯೋಗವಾದದ್ದೇ ಆದೆ. ಹೇಗೆಂದರೆ ಮೇಲೆ ಹೇಳಿದ ಹತ್ತು ಲಕ್ಷಣಗಳು ಬೇಕಾದ ಸಂಪ್ರದಾಯದ ಅಥವಾ ಧರ್ಮದ ವ್ಯಕ್ತಿಗೆ ಉಪಯೋಗವಾಗಿವೆ. ಆ ವ್ಯಕ್ತಿಯು ಅದರಂತೆ ಆಚರಿಸಿದರೆ ನಿಶ್ಚಯವಾಗಿ ಅವನಿಗೆ ಲಾಭವಿದೆಯೇ ಹೊರತು ಹಾನಿಯಿರುವದಿಲ್ಲ. ಸಾಧಾರಣವಾಗಿ ಹಿಂದೂಧರ್ಮವನ್ನೇ ಅವಲಂಬಿಸಿದ ನಾಲ್ಕು ವರ್ಣದವರಿಗೂ ಉಪಯೋಗವಾಗುವಂತೆ ಯಾವ ಸಾಮಾನ್ಯಧರ್ಮದ ನಿಯಮ ಉಂಟೋ ಅದು ಈ ಪ್ರಕಾರವಾಗಿದೆ.

ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯನಿಗ್ರಹಃ |
ಏತಂ ಸಾಮಾಸಿಕಂ ಧರ್ಮಂ ಚಾತುರ್ವರ್ಣ್ಯೇಽಬ್ರವೀನ್ಮನುಃ ||

ಯಾರಿಗೂ ಯಾವ ತರಹದಿಂದಲೂ ದುಃಖವನ್ನು ಕೊಡಬಾರದು. ಸತ್ಯವನ್ನು ಮಾತಾಡಬೇಕು. ಕಳವನ್ನು ಮಾಡಬಾರದು. ಆತ್ಮದ ಪವಿತ್ರತೆಯನ್ನು ಇಟ್ಟುಕೊಂಡಿರಬೇಕು. ಈ ಸಾಮಾನ್ಯ ಧರ್ಮಗಳು ನಾಲ್ಕು ವರ್ಣದವರಿಗೂ ಉಪಯೋಗವವೆ.

ವಿಶೇಷ ಧರ್ಮವು ಪ್ರತಿಯೊಂದು ವರ್ಣದವರಿಗೂ, ಪ್ರತಿಯೊಂದು ಆಶ್ರಮದವರಿಗೂ ಹಾಗೂ ಪ್ರತಿಯೊಂದು ಸಮಯದ ಅನುಸಾರವಾಗಿಯೂ ವಿಭಾಗಿಸಲ್ಪಟ್ಟಿದೆ. ವಿಶೇಷಧರ್ಮದ ವ್ಯವಸ್ಥೆಯು ಪೂರ್ವಕಾಲದ ಸಾಮಾಜಿಕ ವ್ಯವಸ್ಥೆಯ ಅನುಸಾರವಾಗಿಯೇ ಈಶ್ವರನಿಂದ ಆಜ್ಞಾಪಿಸಲ್ಪಟ್ಟಿದೆ. ಅದು ಇಲ್ಲಿಯವರೆಗೂ ಹಾಗೇ ಪರಂಪರೆಯಿಂದ ನಡೆಯುತ್ತ ಬಂದಿದೆ. ವರ್ಣಧರ್ಮದಲ್ಲಿ ಬ್ರಾಹ್ಮಣರು ಅಧ್ಯಯನ, ಅಧ್ಯಾಪನಮಾಡುವರು. ಕ್ಷತ್ರಿಯರು ರಕ್ಷಣೆಮಾಡುವದು, ವೈಶ್ಯರು ವ್ಯಾಪಾರಮಾಡುವದು. ಮತ್ತು ಶೂದ್ರರು ಕೇವಲ ಇವರ ಸೇವೆಯಲ್ಲಿ ನಿರತರಾಗಿರುವದು. ಇನ್ನು ಆಶ್ರಮದಲ್ಲಿ ಬ್ರಹ್ಮಚರ್ಯಾಶ್ರಮಿಗಳು ಗುರುಕುಲವಾಸಮಾಡಿ ವಿದ್ಯೆಯನ್ನು ಸಂಪಾದಿಸಿಕೊಳ್ಳುವದು; ಗೃಹಸ್ಥಾಶ್ರಮಿಗಳು ಪಿತೃಋಣದಿಂದ ಮುಕ್ತರಾಗುವದಕ್ಕೋಸ್ಕರ ಉಚಿತಗಳಾದ ಕಾರ್ಯಗಳನ್ನು ಮಾಡುವದು. ಈ ಆಶ್ರಮವು ಉಳಿದ ಎಲ್ಲಾ ಆಶ್ರಮಗಳಿಗೂ ಆಧಾರವಾಗಿದೆ. ಇದರಂತೆ ಉಳಿದ ಆಶ್ರಮಸ್ಥರೂ ಯಥೋಚಿತಗಳಾದ ಕಾರ್ಯಗಳನ್ನು ಮಾಡಬೇಕು.

ಹೀಗೆಯೇ ರಾಜಧರ್ಮವೆಂತಲೂ, ಆಪದ್ಧರ್ಮವೆಂತಲೂ, ಪತಿಧರ್ಮವೆಂತಲೂ, ಪತ್ನೀಧರ್ಮವೆಂತಲೂ ಎಂದು ಅವಾಂತರ ಧರ್ಮಗಳು ಬೆಳೆಯುವದರಿಂದ ಅವೆಲ್ಲವನ್ನೂ ನಾವು ಧರ್ಮದಲ್ಲಿ ಸೇರಿಸಿದ್ದೇವೆ.

ನಾವು ಮಾಡತಕ್ಕ ಎರಡು ಕಾರ್ಯಗಳಿವೆ. ಮೊದಲನೆಯದು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ರಕ್ಷಣೆಮಾಡುವದು. ನಮ್ಮ ಪ್ರಾಚೀನ ಸಂಸ್ಕೃತಿ ಇದ್ದ ಹೊರತು ನಮ್ಮ ಜಾತಿಯು ಹಾಗೂ ಸಭ್ಯತೆಯು ಉನ್ನತಿಯು ಎಂದೂ ಆಗಲಾರದು. ಅದನ್ನು ಮರೆಯುವದರಿಂದ ನಮ್ಮ ಜಾತಿಯು ಹಾಗೂ ನಮ್ಮ ಸಭ್ಯತೆಯು ಅವಶ್ಯವಾಗಿ ನಾಶವಾಗುತ್ತದೆ. ಎರಡನೆಯ ಕರ್ತವ್ಯವೆಂದರೆ ನಾವು ಈ ಜೀವನದಲ್ಲಿ ಸಫಲತೆಯನ್ನು ಹೊಂದಿ ಬೇರೆ ಜನಗಳ ಮಾರ್ಗದ ಸಂಕಟಗಳನ್ನು ದೂರಮಾಡುತ್ತಿರಬೇಕು. ಅಂಥ ಕಾರ್ಯವನ್ನು ಮಾಡಬೇಕು. ಸಂಕಟಕಾಲದಲ್ಲಿ ಈ ಸಿದ್ಧಿಯು 'ಸ್ವಸ್ಯ ಚ ಪ್ರಿಯಮಾತ್ಮನಃ' ಎಂಬ ವಾಕ್ಯದಂತೆ ಆಚರಿಸಿದರೆ ಅವಶ್ಯವಾಗಿ ಸಿದ್ಧಿಸುವದು.

ಧರ್ಮದ ಮುಖ್ಯ ಅಂಗವು ಪರಮಾತ್ಮನ ಪ್ರಾಪ್ತಿಗೋಸುಗ ಜನರ ಮನಸ್ಸನ್ನು ಆಕರ್ಷಣಮಾಡುವದೂ ಇರುತ್ತದೆ. ಮೇಲೆ ಬರೆದ ಹತ್ತು ಲಕ್ಷಣಗಳಲ್ಲಿ ಒಂದು ಲಕ್ಷಣವಾದ ವಿದ್ಯೆಯು ಪರಮಾತ್ಮನ ಜ್ಞಾನವನ್ನು ಮಾಡಿಕೊಡುವದಾಗಿರುತ್ತದೆ. ಪರಮಾತ್ಮನನ್ನು ಹೊಂದಲಿಕ್ಕೆ ಬೇರೆಬೇರೆ ಮಾರ್ಗಗಳನ್ನು ತೋರಿಸಿರುತ್ತಾರೆ. ಕೇವಲ ಪರಮಾತ್ಮನೊಬ್ಬನ ಶಕ್ತಿಯನ್ನು ಅಥವಾ ಸ್ವರೂಪವನ್ನು ಭಿನ್ನಭಿನ್ನ ಸಂಪ್ರದಾಯದವರು ಭಿನ್ನಭಿನ್ನ ಹೆಸರಿನಿಂದ ಕರೆಯುತ್ತಾರೆ. ಎಲ್ಲಾ ಮಾರ್ಗಗಳೂ ಬೇರೆ ಇದ್ದರೂ ಗುರಿಯು ಮಾತ್ರ ಒಂದೇ ಆಗಿದೆ.

ಮೂರ್ತಿಪೂಜೆಯ ವಿಷಯಕ್ಕೆ ಎರಡು ಶಬ್ದಗಳನ್ನು ಬರೆದು ಈ ಲೇಖನವನ್ನು ವಿರಮಿಸುತ್ತೇನೆ. ಧ್ಯಾನದ ಮೊದಲನೆಯ ಪಾವಟಿಗೆಯು ಮನಸ್ಸನ್ನು ಸ್ಥಿರಮಾಡಿಕೊಳ್ಳಲಿಕ್ಕೆ ಒಂದು ವಿಷಯವು ಅವಶ್ಯವಾಗಿ ಬೇಕೇಬೇಕು. ನಿರಾಕಾರದಲ್ಲಿ ಮನಸ್ಸನ್ನು ಸ್ಥಿರಮಾಡುವದೆಂದರೆ ಮಹಾತ್ಮರಿಗೂ ಅತ್ಯಂತ ಅಸಂಭವವೇ ಸರಿ. ಮನಸ್ಸನ್ನು ಸ್ಥಿರಮಾಡಿಕೊಳ್ಳುವದಕ್ಕೋಸ್ಕರ ಮಹಾಮಹಾ ಯೋಗಿಗಳಿಗೇನೇ ಪ್ರಿಯತರವಾದ ವಸ್ತುವಿನ ಅವಶ್ಯಕತೆ ಇದ್ದ ಮೇಲೆ ಸಾಧಾರಣ ಜನರಿಗಂತೂ ಅವಶ್ಯವಾಗಿ ಇದ್ದೇ ತೀರಬೇಕು. ಪರಮಾತ್ಮನು ಸರ್ವವ್ಯಾಪಕನಿದ್ದಾನೆ. ಅಂದಮೇಲೆ ನಮ್ಮ ಆಗಮಾಗಮ ಪುರಾಣೇತಿಹಾಸ ಶಿಷ್ಟಾಚಾರ ಸಮ್ಮತವಾದ ಶಿವಲಿಂಗಾದಿಮೂರ್ತಿಪೂಜೆಯು ಕಲ್ಯಾಣಕಾರಕವೇ ಸರಿ!

~~(ಹಿಂದೀ ಸನಾತನಧರ್ಮದಿಂದ.)~~

ಆಯುರ್ವೇದ ಪರಿಚಯ.

ಲೇಖಾಂಕ ೨.

~~ಲೇಖಕ—ಶಿವಕುಮಾರಸ್ವಾಮಿ, ಬೆಂಗಳೂರು.~~
~~ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ.~~
~~ಶ್ರೀಕ್ಷೇತ್ರಕಾಶೀ.~~

ಒಂದನೆಯ ಲೇಖದಲ್ಲಿ ಆವಿರ್ಭಾವದುಭಾವ, ಅದರ ಪ್ರಚಾರಕಾರ್ಥವಾಗಿ ಆಯುರ್ವೇದವು ಬ್ರಹ್ಮನಿಂದ ಪ್ರಥಮಾವಿರ್ಭೂತವಾಯಿತೆಂದೂ, ಅನಂತರ ಪ್ರಜಾಪತಿ, ಅಶ್ವಿನೀದೇವತೆಗಳು, ಇಂದ್ರ, ಭರದ್ವಾಜ, ಪುನರ್ವಸು, ಅಗ್ನಿವೇಶ, ಭೇಲ, ಜತೂಕರ್ಣ, ಪರಾಶರ, ಹಾರೀತ, ಕ್ಷಾರಪಾಣಿ ಈ ಆರು ಜನ ಶಿಷ್ಯರಿಗೆ ಕ್ರಮವಾಗಿ ಒಬ್ಬರಿಂದೊಬ್ಬರಿಗೆ ಉಪದಿಷ್ಟವಾಯಿತೆಂದೂ, ಅಗ್ನಿವೇಶ ಮೊದಲಾದವರಿಂದೊಂದು ಗ್ರಂಥವು ರಚಿಸಲ್ಪಟ್ಟಿತೆಂದೂ ಬರೆಯಲ್ಪಟ್ಟಿದೆ. ಈ ಎರಡನೆಯ ಲೇಖದಲ್ಲಿ ಅಗ್ನಿವೇಶರಚಿತವಾದ ಅಗ್ನಿವೇಶತಂತ್ರದ ವಿಚಾರವೂ ಮತ್ತಿತರಗಳಾದ ಪ್ರಾಚೀನ ನವೀನಗ್ರಂಥಗಳ ವಿಚಾರವೂ ಸಾಧ್ಯವಾದಷ್ಟು ಬರೆಯಲ್ಪಡುವುದಾಗುತ್ತದೆ.

ಈ ಅಗ್ನಿವೇಶನು ತನ್ನ ಹೆಸರಿನಿಂದಲೇ ಈ ತಂತ್ರವನ್ನು ರಚಿಸಿರುವನು. ಈ ತಂತ್ರವು ಅತ್ಯಂತ ವಿಸ್ತಾರವಾಗಿಯೂ, ದುರೂಹ ವಿಷಯಗಳನ್ನೊಳಗೊಂಡಿರುವುದಾಗಿಯೂ ವಿಭಾಗರಹಿತವಾಗಿಯೂ ಇದ್ದುದರಿಂದ ಚರಕ ಮಹರ್ಷಿಯು ಲೋಕಕಲ್ಯಾಣಾರ್ಥವಾಗಿ ವಿಸ್ತೃತವಿಷಯವನ್ನು ಸಂಕ್ಷೇಪಿಸಿ ಸಂಕ್ಷಿಪ್ತ ವಿಷಯವನ್ನು ವಿಸ್ತರಿಸಿ ನಿದಾನ, ವಿಮಾನ, ಶಾರೀರ, ಇಂದ್ರಿಯ, ಚಿಕಿತ್ಸಾ, ಕಲ್ಪ, ಸಿದ್ಧಿ ಎಂಬೆಂಟು ಸ್ಥಾನಗಳನ್ನಾಗಿ ವಿಭಾಗಿಸಿ ಸಂಸ್ಕರಿಸಿದನು.

ವಿಸ್ತಾರಯತಿ ಲೇಶೋಕ್ತಂ ಸಂಕ್ಷಿಪತ್ಯತಿವಿಸ್ತರಂ |
ಸಂಸ್ಕರ್ತಾ ಕುರುತೇ ತಂತ್ರಂ ಪುರಾಣಂ ಚ ಪುನರ್ನವಂ ||
(ಚ. ಸಿ. ಸ್ಥಾ.)

ಅತಿವಿಸ್ತಾರವಾಗಿರುವ ವಿಷಯವನ್ನು ಸಂಕ್ಷೇಪಿಸಿ ಸಂಕ್ಷಿಪ್ತ ವಿಷಯವನ್ನು ವಿಸ್ತರಿಸಿ ಪುರಾತನ ಗ್ರಂಥವನ್ನು ನೂತನವಾದುದನ್ನಾಗಿ ಮಾಡುವವನೇ 'ಸಂಸ್ಕರ್ತಾ' ಎನಿಸಿಕೊಳ್ಳುತ್ತಾನೆ. ಚರಕನು ನಿಯಾದರೂ ಹೀಗೆಯೇ ಸಂಸ್ಕರಿಸಿದನಾದುದರಿಂದ ಈ ತಂತ್ರವು 'ಚರಕಸಂಹಿತಾ' ಎಂದು ಹೆಸರುಗೊಂಡಿತು. ಒಬ್ಬನು ಅತಿಪರಿಶ್ರಮದಿಂದ ಹಣವನ್ನು ಅಪಾರವಾಗಿ ಕೂಡಿಟ್ಟು ಅದನ್ನು ವ್ಯಯಮಾಡದೆ ಹೋಗುವನು. ಅವನ ವಂಶಜನಾದ ಮತ್ತೊಬ್ಬನು ಆ ಹಣವನ್ನೇ ದೇಶಸೇವೆ, ಸಮಾಜ ಸೇವೆ, ವಿದ್ಯಾಸೇವೆಗಳಿಗಾಗಿ ವಿನಿಯೋಗಿಸಿ ಜಗತ್ತಿನಲ್ಲಿ ಕೂಡಿಸಿಟ್ಟವನಿಗಿಂತಲೂ ವಿಶೇಷ ಖ್ಯಾತಿಯನ್ನು ಹೊಂದುವಂತೆ ಈ ತಂತ್ರವು ಗ್ರಂಥಕರ್ತನಾದ ಅಗ್ನಿವೇಶನ ಹೆಸರಿನಿಂದ ಪ್ರಖ್ಯಾತವಾಗದೆ ಚರಕಮುನಿಯ ಹೆಸರಿನಿಂದ ಪ್ರಖ್ಯಾತಿಗೊಂಡಿತು. ಈ ಚರಕಮುನಿಯು ಯೋಗಶಾಸ್ತ್ರಪ್ರವರ್ತಕನೂ ವ್ಯಾಕರಣ ಮಹಾಭಾಷ್ಯಕರ್ತನೂ ಆದ ಪತಂಜಲಿಯೇ ಆಗಿರುವನೆಂಬುದು ಈ ಸಂಹಿತೆಯ ಟೀಕಾಕಾರನಾದ 'ಚರಕಚತುರಾನನ' ಎಂಬ ಬಿರುದನ್ನು ಹೊಂದಿದ ಚಕ್ರಪಾಣಿಯು ಆರಂಭದಲ್ಲಿ ಬರೆದಿರುವ—ಪಾತಂಜಲಮಹಾಭಾಷ್ಯಚರಕಪ್ರತಿಸಂಸ್ಕೃತೈಃ | ಮನೋವಾಕ್ಕಾಯದೋಷಾಣಾಂಹಂತ್ರೇಽಹಿಪತಯೇನಮಃ || ಈ ಶ್ಲೋಕದಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಪತಂಜಲಿಚರಿತವೆಂಬ ಗ್ರಂಥದ ೫ ನೆಯ ಸರ್ಗದಲ್ಲಿನ ಸೂತ್ರಾಣಿ ಯೋಗಶಾಸ್ತ್ರೇ ವೈದ್ಯಕಶಾಸ್ತ್ರೇ ಚ ಸಂಹಿತಾಮಕುಲಾಂ | ಕೃತ್ವಾ ಪತಂಜಲಿಮುನಿಃ ಪ್ರಚಾರಯಾಮಾಸ ಜಗದಿದಂ ಸರ್ವಂ || ಈ ಶ್ಲೋಕದಿಂದ ಪತಂಜಲಿಗೆ ಚರಕನೆಂಬ ಉಪನಾಮವಿದ್ದಿತೆಂದು ತಿಳಿದುಬರುತ್ತದೆ. ಮತ್ತು ಈ ಚರಕಮುನಿಯು ವೈದ್ಯಶಾಸ್ತ್ರಜ್ಞನಾಗಿದ್ದುದಕ್ಕೆ ಶಾರ್ಙ್ಗಧರಸಂಹಿತೆಯ ಟೀಕಾಕಾರನಾದ ಕಾಶೀರಾಮವೈದ್ಯನು ಗೂಢಾರ್ಥದೀಪಿಕೆಯ ಲೌಹಮಾರಣ ಪ್ರಕರಣದಲ್ಲಿ 'ಪಾತಂಜಲೀಯೇ ಕಥಾಸಂತಿ ಲೋಹಾ ಬಹುವಿಧಾ ಮತಾಃ' ಎಂದು ಬರೆದಿರುವುದೂ, ಚಕ್ರದತ್ತನು ತನ್ನ ಗ್ರಂಥದಲ್ಲಿ 'ಪಾತಂಜಲೀಯತಂತ್ರಕಾರದಿನಾಪಿ ಪಾತಜ್ಞಾನಮುಕ್ತಂ' ಎಂಬುದೂ ವ್ಯಾಕರಣ ಮಹಾಭಾಷ್ಯದಲ್ಲಿ 'ಅನಭ್ಯಾಸೋ ದಶಂಬಾ ದರೋಗಃ, ದಧಿತ್ರಪುಸಂಪ್ರತ್ಯಕ್ಷೋ ಜ್ವರಃ ಆಯುಷೇ ಘೃತಂ' ಎಂಬ ವಾಕ್ಯಗಳೂ ಪ್ರಮಾಣಗಳಾಗಿರುತ್ತವೆ. ಈ ತಂತ್ರವು ಚರಕಮುನಿಯಿಂದ ಸಂಸ್ಕರಿಸಲ್ಪಟ್ಟ ಬಹುಕಾಲಾನಂತರದಲ್ಲಿ ಅತಿಶಿಥಿಲವಾಗುತ್ತಾ ಬಂದು ಚಿಕಿತ್ಸಾಸ್ಥಾನದಲ್ಲಿ ೧೭ ಅಧ್ಯಾಯಗಳೂ, ಕಲ್ಪ, ಸಿದ್ಧಿಸ್ಥಾನಗಳೂ ಲೋಪಗೊಂಡವು. ಆ ಸಮಯದಲ್ಲಿ ಉತ್ತರ ಭಾರತದ ಪಂಚನದ (ಪಂಜಾಬ್) ದೇಶವಾಸಿಯಾದ ದೃಢಬಲಾಚಾರ್ಯನು ಲುಪ್ತಗಳಾದ ೧೭ ಅಧ್ಯಾಯ, ಕಲ್ಪಸ್ಥಾನ, ಸಿದ್ಧಿಸ್ಥಾನಗಳನ್ನು ಅನೇಕ ಗ್ರಂಥಗಳನ್ನವಲೋಕಿಸಿ ಚರಕಮುನಿಯ ಗ್ರಂಥಶೈಲಿಯಂತೆಯೇ ರಚಿಸಿ ಯಥಾರೀತಿಯಾಗಿ ಪೂರ್ಣಗೊಳಿಸಿದನೆಂಬುದು ಚರಕಸಂಹಿತೆಯ ಚಿಕಿತ್ಸಾಸ್ಥಾನದಲ್ಲಿರುವ 'ಅಸ್ಮಿನ್ ಸಪ್ತದಶಾಧ್ಯಾಯಾಃ ಕಲ್ಪಾಃ ಸಿದ್ಧಯ ಏವ ಚ | ನಾಸಾದ್ಯಂತೇಽಗ್ನಿವೇಶಸ್ಯ ತಂತ್ರೇ ಚರಕಸಂಸ್ಕೃತೇ || ತಾನೇತಾನ್ ಕಾಪಿಲಬಲಿಃ ಶೇಷಾನ್ ದೃಢಬಲೋಽಕರೋತ್ | ತಂತ್ರಸ್ಯಾಸ್ಯ ಮಹಾರ್ಥಸ್ಯ ಪೂರಣಾರ್ಥಂ ಯಥಾತಥಂ" ಈ ೨೭-೨೮ನೆಯ ಶ್ಲೋಕಗಳಿಂದ ತಿಳಿದುಬರುತ್ತದೆ. ಮತ್ತು

ಸಿದ್ಧಿಸ್ಥಾನದಲ್ಲಿರುವ "ಇದಮನ್ಯೂನಶಬ್ದಾರ್ಥಂ ತಂತ್ರಂ ದೋಷವಿವರ್ಜಿತಂ | ಅಖಂಡಾರ್ಥಂ ದೃಢಬಲೋ ಜಾತಃ ಪಂಚನದೇ ಪುರೇ || ಕೃತ್ವಾ ಬಹುಭ್ಯಸ್ತಂತ್ರೇಭ್ಯೋ ವಿಶೇಷಾಚ್ಛಿಲೋಚ್ಛಯಂ | ಸಪ್ತದಶೌಷಧಾಧ್ಯಾಯ ಸಿದ್ಧಿಕಲ್ಪೈರಪೂರಯತ್ ||" ಈ ೭೮-೭೯ ನೆಯ ಶ್ಲೋಕಗಳೂ ಗ್ರಂಥದ ಕಡೆಯಲ್ಲಿರುವ 'ಅಗ್ನಿವೇಶಕೃತೇ ತಂತ್ರೇ ಚರಕಪ್ರತಿಸಂಸ್ಕೃತೇ | ಸಿದ್ಧಿಸ್ಥಾನೇಽಪ್ರಾಪ್ತೇ ಅಸ್ಮಿನ್ ದೃಢಬಲೇನ ಸಃ | ಸಿದ್ಧಿಸ್ಥಾನಂ ಸ್ವಸಿದ್ಧ್ಯರ್ಥಂ ಸಮಾಸೇನ ಸಮಾಪಿತಂ' ಎಂಬ ಶ್ಲೋಕದಿಂದಲೂ ವಿಶದವಾಗುತ್ತದೆ. ಈ ದೃಢಬಲನು ಕ್ರಿಸ್ತಶಕದ ೨ನೆಯ ಶತಾಬ್ದದಲ್ಲಿದ್ದನೆಂದು ಶಾರ್ಙ್ಗಧರಸಂಹಿತೆಯನ್ನು ಪರಿಶೋಧಿಸಿದ ಆಯುರ್ವೇದಾಚಾರ್ಯ, ವಿದ್ಯಾಸಾಗರಪದವೀಭೂಷಿತ ಪರಶುರಾಮಶಾಸ್ತ್ರಿಗಳು ಶಾರ್ಙ್ಗಧರಭೂಮಿಕೆಯಲ್ಲಿ ಬರೆದಿರುವರು. ಈ ಚರಕಸಂಹಿತೆಯು ಚಿಕಿತ್ಸಾವಿಷಯದಲ್ಲಿ ಜಗದ್ವಿಖ್ಯಾತವಾಗಿರುತ್ತದೆ. ಈ ಗ್ರಂಥಾನುಸಾರವಾದ ಚಿಕಿತ್ಸಾಪ್ರಣಾಳಿಯು ಅಧುನಿಕಾಯುರ್ವೇದಪಂಡಿತರಲ್ಲಿ ಪ್ರಚಲಿತಗೊಂಡಿರುತ್ತದೆ. ಅನೇಕ ಪಾಶ್ಚಾತ್ಯವಿದ್ವಾಂಸರು ಚರಕಾನುಸಾರವಾದ ಚಿಕಿತ್ಸೆಯು ಅತ್ಯುತ್ಕೃಷ್ಟವಾದುದೆಂದುಗ್ಗಡಿಸಿರುವರು. ಈ ಕಾರಣದಿಂದಲೇ 'ನಿದಾನೇ ಮಾಧವಃ ಶ್ರೇಷ್ಠಃ ಸೂತ್ರಸ್ಥಾನೇ ತು ವಾಗ್ಭಟಃ | ಶಾರೀರೇ ಸುಶ್ರುತಃ ಶ್ರೇಷ್ಠಃ ಚರಕಸ್ತು ಚಿಕಿತ್ಸಿತೇ' ಎಂದು ಆಯುರ್ವೇದಜಗತ್ತಿನಲ್ಲಿ ಪ್ರಸಿದ್ಧವಾಗಿದೆ. ಈ ಗ್ರಂಥವು ನ್ಯಾಯವೈಶೇಷಿಕಶಾಸ್ತ್ರಗಳನ್ನರಿಯದವರಿಗೆ ಅತ್ಯಂತ ಕಠಿಣವಾಗಿರುತ್ತದೆ. ಚರಕಾಧ್ಯಯನವನ್ನು ಮಾಡದಿರುವ ವೈದ್ಯನು ಚಿಕಿತ್ಸೆಯಲ್ಲಿ ಅಪೂರ್ಣನಾಗುವನು. ಕಾಯಚಿಕಿತ್ಸೆಯಲ್ಲಿ ಚರಕವೂ ಶಲ್ಯಚಿಕಿತ್ಸೆಯಲ್ಲಿ ಸುಶ್ರುತವೂ ಉನ್ನತಸ್ಥಾನವನ್ನು ಹೊಂದಿರುವುವೆಂದು ವಿದ್ವಾಂಸರು ಮುಕ್ತಕಂಠದಿಂದ ಹೊಗಳುತ್ತಾರೆ. ಆಯುರ್ವೇದಶಾಸ್ತ್ರದ ಟೀಕಾಕಾರರಾದ ಡಲ್ಹಣ, ಚಕ್ರಪಾಣಿ, ವಿಜಯರಕ್ಷಿತ, ಶ್ರೀಕಂಠದತ್ತ, ಹೇಮಾದ್ರಿಗಳೇ ಮೊದಲಾದವರು ತಮ್ಮ ತಮ್ಮ ವ್ಯಾಖ್ಯಾನಗಳಲ್ಲಿ ಚರಕ, ಭೇಲ, ಜತೂಕರ್ಣ, ಹಾರೀತ, ಕ್ಷಾರಪಾಣಿ ಮೊದಲಾದ ತಂತ್ರಗಳು ತಮ್ಮ ಕಾಲದಲ್ಲಿ ಸಂಪೂರ್ಣಗಳಾಗಿದ್ದುವೆಂದುಲ್ಲೇಖಿಸಿರುವರು. ಈಗ ನಮ್ಮ ದುರ್ದೈವದಿಂದ ಅವೆಲ್ಲವೂ ನಾಮಾವಶೇಷವಾಗಿವೆ. ಕೆಲವು ಅಲ್ಲಲ್ಲಿ ದೊರೆತರೂ ಅಪೂರ್ಣಗಳಾಗಿರುತ್ತವೆ. ಸದ್ಯಃ ಆರ್ಷಗ್ರಂಥಗಳಲ್ಲಿ ಚರಕಸುಶ್ರುತಗಳೆರಡೇ ಸಂಪೂರ್ಣವಾಗಿ ದೊರೆಯುತಕ್ಕವುಗಳಾಗಿವೆ. ವಾಗ್ಭಟನ ಸಮಯದಲ್ಲಿ ಅನೇಕಾಯುರ್ವೇದಗ್ರಂಥಗಳಿದ್ದರೂ ಚರಕಸುಶ್ರುತಗಳೇ ಪಠನಪಾಠಗಳಲ್ಲಿದ್ದುವೆಂಬುದನ್ನು ತನ್ನ ವಾಗ್ಭಟಸಂಹಿತೆಯಲ್ಲಿ—ಋಷಿಪ್ರಣೀತೇ ಪ್ರೀತಿಶ್ಚೇನ್ಮುಕ್ತ್ವಾ ಚರಕಸುಶ್ರುತೌ | ಭೇಡಾದ್ಯಾಃ ಕಿಂ ನ ಪಠ್ಯಂತೇ ||ಎಂದು ಬರೆದಿರುವನು. ಮತ್ತು ನೈಷಧಕಾವ್ಯವನ್ನು ರಚಿಸಿದ ಶ್ರೀಹರ್ಷ ಮಹಾಕವಿಯು—ಅನ್ಯಂತಃಪುರಬಾಧನಾಯ ಯದಧೀಕಾರಾನ್ನದೋಷಾನ್ನೃಪಂ ದ್ವಾ ಮಂತ್ರಿಪ್ರವರಶ್ಚ ತುಲ್ಯಮಗದಂಕಾರಶ್ಚ ತಾವೂಚತುಃ | ದೇವಾಽಕರ್ಣಯ ಸುಶ್ರುತೇನ ಚರಕಸ್ಯೋಕ್ತೇನ ಜಾನೇಽಖಿಲಂ ಸ್ಯಾದಸ್ಯಾನಲದಂ ವಿನಾ ನ ದಲನೇ ತಾಪಸ್ಯ ಕೋಽಪಿ ಕ್ಷಮಃ || (ನೈ. ಕಾ. ಸ. ೪ ಶ್ಲೋ. ೧೧೬) ಈ ಶ್ಲೋಕದಲ್ಲಿ ಚರಕಸುಶ್ರುತಗಳನ್ನಧ್ಯಯನಮಾಡಿದವನೇ ವೈದ್ಯಶ್ರೇಷ್ಠನೆಂದು ಹೇಳಿ ತನ್ನ ಸಮಯದಲ್ಲಿಯಾದರೂ ಚರಕಸುಶ್ರುತಗಳೇ ಅಧಿಕ ಪ್ರಚಾರದಲ್ಲಿದ್ದುವೆಂದು ಸೂಚಿಸಿರುತ್ತಾನೆ. ಚರಕಸಂಹಿತೆಯ ಅಂತ್ಯದಲ್ಲಿ ದೃಢಬಲಾಚಾರ್ಯನು—ಚಿಕಿತ್ಸಾ ವಹ್ನಿವೇಶಸ್ಯ ಸುಸ್ಥಾತುರಹಿತಂ ಪ್ರತಿ | ಯದಿಹಾಽಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್ || ಕಾಯಚಿಕಿತ್ಸಾಪ್ರಧಾನವಾದೀ ಚರಕದಲ್ಲಿ ಸ್ವಸ್ಥರಿಗೂ ರೋಗಿಗಳಿಗೂ ಅತಿಹಿತಕರಗಳಾದ ವಿಷಯಗಳಿರುತ್ತವೆ. ಇದರಲ್ಲಿರುವ ವಿಷಯವು ಮತ್ತಿತರ ಗ್ರಂಥಗಳಲ್ಲಿ ದೊರೆಯುತ್ತವೆ. ಆದರೆ ಇದರಲ್ಲಿಲ್ಲದ ವಿಷಯವು ಮತ್ತಾವಗ್ರಂಥದಲ್ಲಿಯೂ ಇರುವುದಿಲ್ಲವೆಂದೀ ಶ್ಲೋಕದಿಂದ ಸ್ಪಷ್ಟಪಡಿಸಿರುತ್ತಾನೆ. ಈ ಅನಂತೋದಾಹರಣೆಗಳಿಂದ ಋಷಿಪ್ರಣೀತವಾದೀ ಚರಕಸಂಹಿತೆಯಲ್ಲಿ ಯಾರಿಗೆ ಶ್ರದ್ಧೆಯುಂಟಾಗುವುದಿಲ್ಲ?

ಸುಶ್ರುತಸಂಹಿತೆ—ಈ ಗ್ರಂಥವನ್ನು ವಿಶ್ವಾಮಿತ್ರಮುನಿಯಾದ ಸುಶ್ರುತನು ರಚಿಸಿರುತ್ತಾನೆ. ದೇವಾಸುರ ಯುದ್ಧದಲ್ಲಿ ಶಸ್ತ್ರಾಸ್ತ್ರಗಳಿಂದ ಗಾಯಹೊಂದಿದವರ ಚಿಕಿತ್ಸೆಯನ್ನು ಮಾಡುವುದಕ್ಕಾಗಿ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಅಶ್ವಿನೀದೇವತೆಗಳು ಬ್ರಹ್ಮನಿಂದುಪದಿಷ್ಟವಾದ ಮತ್ತು ಅಷ್ಟಾಂಗಾಯುರ್ವೇದದ ಪ್ರಥಮಾಂಗವಾದ ಶಲ್ಯತಂತ್ರವನ್ನು ಇಂದ್ರನಿಗುಪದೇಶಮಾಡಿದರು. ಇಂದ್ರನು ಮರ್ತ್ಯಲೋಕದ ಮಾನವರ ಕಲ್ಯಾಣಾರ್ಥವಾಗಿ ಧನ್ವಂತರಿಗುಪದೇಶಮಾಡಿ ಈ ಧನ್ವಂತರಿಯನ್ನು ಭೂಲೋಕಕ್ಕೆ ಕಳಿಸಿದನು. (ಧನ್ವಂ ಶಲ್ಯಶಾಸ್ತ್ರಂ ತಸ್ಯ ಅಂತಂ ಪಾರಂ ಇಯರ್ತಿ ಗಚ್ಛತೀತಿ ಧನ್ವಂತರಿಃ ಅಂದರೆ ಶಲ್ಯಶಾಸ್ತ್ರದ ಪಾರವನ್ನು ಹೊಂದಿದವನೆಂದರ್ಥವಾಗುತ್ತದೆ.) ಈತನು ಕಾಶೀರಾಜನ ಪುತ್ರನಾಗಿ ಅವತರಿಸಿ ದಿವೋದಾಸನೆಂದು ಪ್ರಖ್ಯಾತಿಗೊಂಡು ಔಪಧೇನವ, ವೈತರಣ, ಔರಭ್ರ, ಪೌಷ್ಕಲಾವತ, ಕರವೀರ್ಯ, ಗೋಪುರರಕ್ಷಿತ, ಸುಶ್ರುತ, ಭೋಜ, ನಿಮಿ, ಕಾಂಕಾಯನ, ಗಾರ್ಗ್ಯ, ಗಾಲವರೆಂಬ ೧೨ ಜನ ಶಿಷ್ಯರಿಗೆ ಶಲ್ಯಶಾಸ್ತ್ರವನ್ನುಪದೇಶ ಮಾಡಿದನು. ಇವರೆಲ್ಲರೂ ಶಲ್ಯಚಿಕಿತ್ಸೆಯನ್ನು ಕುರಿತು ತಮ್ಮ ತಮ್ಮ ಹೆಸರಿನ ಒಂದೊಂದು ತಂತ್ರವನ್ನು ನಿರ್ಮಾಣಮಾಡಿದರು. ಇವರಲ್ಲೊಳನೆಯವನಾದ ಸುಶ್ರುತನೇ ಸುಶ್ರುತಸಂಹಿತೆಯ ಕರ್ತನಾಗಿರುತ್ತಾನೆ. ಕಾಲಪರಿಣಾಮದಿಂದಲೋ ಭಾರತೀಯರ ದುರ್ದೈವದಿಂದಲೋ ಈ ತಂತ್ರಗಳೆಲ್ಲವೂ ಈಗ ನಾಮಾವಶೇಷಗಳಾಗಿರುತ್ತವೆ. ಇವುಗಳ ಪೈಕಿ ಸುಶ್ರುತಸಂಹಿತೆಯೊಂದೇ ಜೀವಿತದಿಂದಿದ್ದು ಮಹಾಂಧಕಾರದಲ್ಲಿ ಮಿಂಚಿನಂತೆ ಹೊಳೆಯುತ್ತಲಿದೆ. ಈ ಗ್ರಂಥದಲ್ಲಿ ಈಗಿನ ಡಾಕ್ಟರುಗಳುಪಯೋಗಿಸುವ ಸಮಸ್ತಾಯುಧಗಳ ವರ್ಣನೆಯೂ ಇರುತ್ತದೆ. ವಿದೇಶೀಯರು ಈ ಶಸ್ತ್ರಚಿಕಿತ್ಸೆಯಲ್ಲಿ ವಿಶೇಷೋನ್ನತಿಯನ್ನು ಮಾಡಿಕೊಂಡಿರುತ್ತಾರೆ. ಕಾಯಚಿಕಿತ್ಸೆಯಲ್ಲಿ ಮಾತ್ರ ಬಾಲಕರಾಗಿರುವರು. ಪರಾಧೀನದೇಶವಾಸಿಗಳಾದ ನಾವು ಯಾವ ಉನ್ನತಿಯನ್ನು ಮಾಡಿಕೊಳ್ಳಲೂ ಅಸಮರ್ಥರಾಗಿರುವೆವು. ಪೂರ್ವದವರು ೧೨೭ ವಿಧಗಳಾದ ಆಯುಧಗಳನ್ನು ಶಸ್ತ್ರಚಿಕಿತ್ಸೆಯಲ್ಲುಪಯೋಗಿಸುತ್ತಿದ್ದರು. ಶರೀರಾವಯವಪರಿಜ್ಞಾನಕ್ಕೆ ಈ ಗ್ರಂಥವನ್ನು ಬಿಟ್ಟರೆ ಮತ್ತೊಂದಿಲ್ಲ. ಋಷಿಪ್ರಣೀತಗಳಾದ ಅನೇಕ ಗ್ರಂಥಗಳಲ್ಲಿ ಈ ಚರಕ ಸುಶ್ರುತಗಳೆರಡೇ ಈಗ ಸಂಪೂರ್ಣವಾಗಿರುತ್ತವೆ. ಪ್ರಾಚೀನಕಾಲದಲ್ಲಿಯಾದರೂ ಅನಂತಗ್ರಂಥಗಳಿದ್ದರೂ ಈ ಎರಡು ಗ್ರಂಥಗಳೇ ಪಠನಪಾಠಗಳಲ್ಲಿದ್ದುವೆಂಬುದಕ್ಕೆ ಮೇಲೆ ಅನೇಕೋದಾಹರಣೆಗಳನ್ನು ಕೊಟ್ಟಿರುವುದಾಗಿದೆ. ಆಧುನಿಕಗಳಾದ ಸಕಲ ಗ್ರಂಥಗಳೂ ಚರಕ ಸುಶ್ರುತಗಳ ಆಧಾರದಿಂದಲೇ ಬರೆಯಲ್ಪಟ್ಟವುಗಳಾಗಿವೆ. ಇವೆರಡು ಗ್ರಂಥಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ ವೈದ್ಯನು ಜಗತ್ತಿನಲ್ಲಿ ವೈದ್ಯಸಾರ್ವಭೌಮನಾಗಲು ಸಂದೇಹವಿಲ್ಲ.

ಅಷ್ಟಾಂಗಹೃದಯ—ಈ ಗ್ರಂಥವನ್ನು ವಾಗ್ಭಟನು ರಚಿಸಿರುತ್ತಾನೆ. ಇದರಲ್ಲಿ ಶಲ್ಯಶಾಲಾಕ್ಯಾದಿ ಎಂಟು ಅಂಗಗಳ ಚಿಕಿತ್ಸೆಯೂ ಇರುತ್ತದೆ. ಇದರಿಂದಲೇ ಇದಕ್ಕೆ ಅಷ್ಟಾಂಗಹೃದಯವೆಂಬ ಹೆಸರು ಬಂದಿತು. ಈತನು ಮಹಾಭಾರತದ ಕಾಲದಲ್ಲಿ ಧರ್ಮರಾಜನಲ್ಲಿ ಪ್ರಧಾನ ವೈದ್ಯನಾಗಿದ್ದನೆಂದು ಕೆಲವರು ಹೇಳುತ್ತಿರುವರು. ಕ್ರಿಸ್ತಶಕಕ್ಕಿಂತಲೂ ಮೊದಲು ೨೦೦ ವರ್ಷಗಳ ಪೂರ್ವದಲ್ಲಿದ್ದನೆಂದು ತಿಳಿದುಬರುತ್ತದೆ. ಈತನಾದರೂ ಚರಕ ಸುಶ್ರುತಗಳ ಆಧಾರದಿಂದಲೇ ಗ್ರಂಥರಚನೆಯನ್ನು ಮಾಡಿರುವನು. ಮತ್ತು ಅಷ್ಟಾಂಗಸಂಗ್ರಹವೆಂಬ ಮತ್ತೊಂದು ಗ್ರಂಥವನ್ನೂ ರಚಿಸಿರುತ್ತಾನೆ. ಮೊದಲನೆಯ ಅಷ್ಟಾಂಗಹೃದಯವು ಬಹಳ ಸೂಕ್ಷ್ಮಶೈಲಿಯಿಂದ ಬರೆಯಲ್ಪಟ್ಟಿದೆ. ಇದರಲ್ಲಿಯೂ ಸೂತ್ರ, ನಿದಾನಾದಿ ಸ್ಥಾನಗಳಿರುವುವಲ್ಲದೆ, ಉತ್ತರ ಸ್ಥಾನವೂ ಇರುತ್ತದೆ. ಚರಕ, ಸುಶ್ರುತ, ವಾಗ್ಭಟಗಳನ್ನು ಸೇರಿಸಿ "ವೃದ್ಧತ್ರಯೀ" ಎಂಬುದಾಗಿ ಆಯುರ್ವೇದಶಾಸ್ತ್ರಜ್ಞರು ಕರೆಯುತ್ತಾರೆ. ಪ್ರಾಚೀನಾಯುರ್ವೇದ ಗ್ರಂಥಗಳ ಸಾರವೆಲ್ಲಾ ಈ ಗ್ರಂಥದಲ್ಲಿ ಸಂಗ್ರಹಿಸಲ್ಪಟ್ಟಿದೆಯೆಂದು ಗ್ರಂಥಕರ್ತನು 'ಏತದ್ಧ್ಯಾಽಽಶಿಶು ಪ್ರತೀತಿನೋಽಭ್ಯಾಯುಃಸಾರತರೋಚ್ಚಯಃ | ಕ್ರಿಯತೇಽಷ್ಟಾಂಗಹೃದಯಂ ನಾತಿಸಂಕ್ಷೇಪವಿಸ್ತರಂ' ||ಸೂ|| ಎಂದು ಹೇಳಿರುವನು. ಶರೀರದಲ್ಲಿನ ಸಮಸ್ತಾವಯವಗಳಿಗೂ ಹೃದಯವೇ ಪ್ರಧಾನವಾಗಿರುವಂತೆ ಆಯುರ್ವೇದದ ಅಷ್ಟಾಂಗಗಳಿಗೂ ಈ ಗ್ರಂಥವು ಹೃದಯದಂತೆ ಪ್ರಧಾನವಾಗಿರುವುದರಿಂದ ಇದಕ್ಕೆ 'ಅಷ್ಟಾಂಗಹೃದಯ'ವೆಂಬ ಹೆಸರು ಅನ್ವರ್ಥವಾಗಿರುತ್ತದೆ.

ರಸರತ್ನ ಸಮುಚ್ಚಯಕಾರನಾದ ವಾಗ್ಭಟನು ಬೇರೆಯಾಗಿರುತ್ತಾನೆ. ಇವನು ತನ್ನ ಗ್ರಂಥದಲ್ಲಿ ವಿಕ್ರಮಶಕೆಯ ೧೨ ನೆಯ ಶತಾಬ್ದದಲ್ಲಿದ್ದ ಸೋಮದೇವ ಪರಿಭಾಷಾ ಮತ್ತು ರಸಹೃದಯ ಗ್ರಂಥಗಳ ಪಾಠಗಳನ್ನುದ್ಧರಿಸಿರುವುದರಿಂದ ಈತನಾದರೂ ವಿ. ಶ. ೧೨ ನೆಯ ಶತಾಬ್ದದಲ್ಲಿದ್ದನೆಂದು ತಿಳಿಯಬರುತ್ತದೆ. ಅಷ್ಟಾಂಗಹೃದಯಕಾರನಾದ ವಾಗ್ಭಟನು ಬೌದ್ಧರ ಅಳ್ವಿಕೆಯ ಕಾಲದಲ್ಲಿದ್ದನೆಂತಲೂ ಧರ್ಮರಾಜನ ಆಸ್ಥಾನದಲ್ಲಿ ಪ್ರಧಾನವೈದ್ಯನಾಗಿದ್ದನೆಂತಲೂ ಅನೇಕ ಪ್ರಮಾಣಗಳು ಸಿಗುತ್ತವೆಯಾದುದರಿಂದ ಇವನು ಆ ವಾಗ್ಭಟನಿಗಿಂತಲೂ ಪ್ರಾಚೀನನೆಂದು ಗೊತ್ತಾಗುತ್ತದೆ. ಮತ್ತು ಅನೇಕರು ಈತನನ್ನು ೨೦೦೦ ವರ್ಷಗಳ ಹಿಂದೆ ಇದ್ದನೆಂದು ಪ್ರಮಾಣಗಳನ್ನು ತೋರಿಸಿರುವರಾದುದರಿಂದ ಒಂದೇ ಹೆಸರಿನ ಇಬ್ಬರು ವಾಗ್ಭಟರು ಭಿನ್ನಕಾಲೀನರೆಂದು ಸ್ಪಷ್ಟವಾಗುತ್ತದೆ. ಈತನ ಗ್ರಂಥವನ್ನು ಚರಕಸುಶ್ರುತಗಳೊಡನೆ ಸೇರಿಸಿ ವೃದ್ಧತ್ರಯೀ ಎಂದು ಪಂಡಿತರು ಹೆಸರಿಟ್ಟಿರುವುದು ಉಚಿತವಾಗಿರುತ್ತದೆ. ಬ್ರಹ್ಮವೈವರ್ತಪುರಾಣದಲ್ಲಿ ಅನೇಕ ಪ್ರಾಚೀನ ಗ್ರಂಥಗಳ ಹೆಸರುಗಳಿರುತ್ತವೆ. ಭಾಸ್ಕರಸಂಹಿತಾ, ಧನ್ವಂತರಿ ವಿರಚಿತಚಿಕಿತ್ಸಾತತ್ವ ವಿಜ್ಞಾನತಂತ್ರ, ಚಿಕಿತ್ಸಾದರ್ಶನ, ಚಿಕಿತ್ಸಾಕೌಮುದೀ ಅಶ್ವಿನಿಪ್ರಣೀತಚಿಕಿತ್ಸಾಸಾರತಂತ್ರ, ಭ್ರಮಘ್ನ, ನಕುಲಪ್ರಣೀತ ವೈದ್ಯಕಸರ್ವಸ್ವ, ಸಹದೇವಪ್ರಣೀತ ವ್ಯಾಧಿಸಿಂಧುವಿಮರ್ದನ, ಯಮರಾಜಪ್ರಣೀತಜ್ಞಾನಾರ್ಣವ, ಚ್ಯವನಪ್ರಣೀತ ಜೀವದಾನ, ಜನಕಪ್ರಣೀತ ವೈದ್ಯಸಂದೇಹಭಂಜನ, ಜಾಬಾಲಿಪ್ರಣೀತ ತಂತ್ರಸಾರ, ಮೊದಲಾದ ಗ್ರಂಥಗಳ ಉಲ್ಲೇಖವಿರುತ್ತದೆ. ಇವೆಲ್ಲವೂ ಆಯುರ್ವೇದದ ಅಷ್ಟಾಂಗಗಳನ್ನುದ್ದೇಶಿಸಿ ರಚಿಸಲ್ಪಟ್ಟಿರುತ್ತವೆ. ಒಂದೊಂದಂಗದ ವಿಷಯವಾಗಿ ಅನೇಕ ಗ್ರಂಥಗಳು ನಿರ್ಮಿಸಲ್ಪಟ್ಟವೆಯೆಂದು ಬರೆದಿರುವುದಾಗಿದೆ ಆದರೆ ಯಾವ ಯಾವ ಅಂಗವನ್ನು ಕುರಿತು ಎಷ್ಟೆಷ್ಟು ಗ್ರಂಥಗಳು ರಚಿತವಾಗಿರುತ್ತವೆಂಬುದನ್ನು ತಿಳಿಸಲ್ಲವಾದುದರಿಂದ ಇಲ್ಲಿ ಅವುಗಳನ್ನು ಸಂಕ್ಷೇಪವಾಗಿ ಉದಹರಿಸುವೆನು. (೧ ನೆಯ ಶಲ್ಯಚಿಕಿತ್ಸೆಯಲ್ಲಿ) ೧ ಔಪಧೇನವತಂತ್ರ, ೨ ಔರಭ್ರತಂತ್ರ, ೩ ವೃದ್ಧಸುಶ್ರುತಸಂಹಿತೆ, ೪ ಪೌಷ್ಕಲಾವತತಂತ್ರ, ೫ ವೈತರಣತಂತ್ರ, ೬ ಭೋಜಸಂಹಿತೆ, ೭ ಕರವೀರ್ಯತಂತ್ರ, ೮ ಗೋಪುರರಕ್ಷಿತತಂತ್ರ, ೯ ಭಾಲುಕಿತಂತ್ರ, ೧೦ ಕಾಪಿಲತಂತ್ರ, ೧೧ ಗೌತಮತಂತ್ರ, ಈ ೧೧ ತಂತ್ರಗಳು ಶಲ್ಯಚಿಕಿತ್ಸಾಪ್ರತಿಪಾದಕಗಳಾಗಿರುತ್ತವೆ. (೨ ನೆಯ ಶಾಲಾಕ್ಯ ಚಿಕಿತ್ಸೆಯವಿಷಯವಾಗಿ) ೧ ವಿದೇಹತಂತ್ರ, ೨ ನಿಮಿತಂತ್ರ, ೩ ಕಾಂಕಾಯನತಂತ್ರ, ೪ ಗಾರ್ಗ್ಯತಂತ್ರ, ೫ ಗಾಲವತಂತ್ರ, ೬ ಸಾತ್ಯಕಿತಂತ್ರ, ೭ ಶೌನಕತಂತ್ರ, ೮ ಕರಾಳತಂತ್ರ, ೯ ಚಕ್ಷುಷ್ಯತಂತ್ರ, ೧೦ ಕೃಷ್ಣಾತ್ರೇಯಸಂಹಿತೆ, ಈ ೧೦ ಗ್ರಂಥಗಳು ಶಾಲಾಕ್ಯಚಿಕಿತ್ಸಾ ಪ್ರತಿಪಾದಕಗಳಾಗಿರುತ್ತವೆ. (೩ ನೆಯ ಕಾಯಚಿಕಿತ್ಸೆಯ ವಿಷಯದಲ್ಲಿ) ೧ ಅಗ್ನಿವೇಶತಂತ್ರ, ೨ ಭೇಲಸಂಹಿತೆ, ೩ ಜತೂಕರ್ಣಸಂಹಿತೆ, ೪ ಹಾರೀತಸಂಹಿತೆ, ೫ ಖರನಾದ ಸಂಹಿತೆ, ೬ ವಿಶ್ವಾಮಿತ್ರಸಂಹಿತೆ, ೭ ಆತ್ರೇಯಸಂಹಿತೆ, ೮ ಪರಾಶರಸಂಹಿತೆ, ೯ ಕ್ಷಾರಪಾಣಿಸಂಹಿತೆ, ಈ ೯ ಗ್ರಂಥಗಳು ಕಾಯಚಿಕಿತ್ಸಾಪ್ರತಿಪಾದಕಗಳಾಗಿರುತ್ತವೆ. ಇನ್ನು ೪ ನೆಯ ಭೂತಚಿಕಿತ್ಸಾಂಗದ ವಿಷಯವಾಗಿ ರಚಿಸಿರುವ ಯಾವ ಗ್ರಂಥವೂ ಇದ್ದಂತೆ ಕಾಣುವುದಿಲ್ಲ. ಸುಶ್ರುತಸಂಹಿತೆಯ ಉತ್ತರ ತಂತ್ರದ ೬೦ ನೆಯ ಅಧ್ಯಾಯದಲ್ಲಿ ಮಾತ್ರ ಭೂತಚಿಕಿತ್ಸೆಯು ವರ್ಣಿಸಲ್ಪಟ್ಟಿರುತ್ತದೆ. 'ದೇವಗ್ರಹಾಃ ಪೌರ್ಣಮಾಸ್ಯಾಮಸುರಾಃ ಸಂಧ್ಯಯೋರಪಿ | ಗಂಧರ್ವಾಃ ಪ್ರಾಯಶೋಽಷ್ಟಮ್ಯಾಂ ಯಕ್ಷಾಶ್ಚ ಪ್ರತಿಪದ್ಯಥ || (೧೬ ಶ್ಲೋ.) ಕೃಷ್ಣಪಕ್ಷೇ ಚ ಪಿತರಃ ಪಂಚಮ್ಯಾಮಪಿ ಚೋರಗಾಃ ರಕ್ಷಾಂಸಿ ನಿಶಿ ಪೈಶಾಚಾಶ್ಚತುರ್ದಶ್ಯಾಂ ವಿಶಂತಿ ಚ (ಶ್ಲೋ. ೧೮) ಎಂದಾರಂಭಿಸಿ ಈ ಅಧ್ಯಾಯದ ಕಡೆಯವರೆಗೂ ಭೂತಚಿಕಿತ್ಸೆಯು ಸಂಕ್ಷೇಪವಾಗಿ ವರ್ಣಿಸಲ್ಪಟ್ಟಿರುತ್ತದೆ. ಮತ್ತು 'ಭೂತ' ಶಬ್ದದ ನಿರ್ವಚನೆಯು ಈ ರೀತಿಯಾಗಿರುತ್ತದೆ. 'ಹಿಂಸಾವಿಹಾರಾ ಯೇ ಕೇಚಿದ್ದೇವಭಾವಮುಪಾಶ್ರಿತಾಃ | ಭೂತಾನೀತಿ ಕೃತಾ ಸಂಜ್ಞಾ ತೇಷಾಂ ಸಂಜ್ಞಾಪ್ರವರ್ತಕೈಃ || ಗ್ರಹಸಂಜ್ಞಾನಿ ಭೂತಾನಿ ಯಸ್ಮಾದ್ವೇತ್ತ್ಯನಯಾ ಭಿಷಕ್ | ವಿದ್ಯಯಾ ಭೂತವಿದ್ಯಾತ್ವಮತ ಏವ ನಿರುಚ್ಯತೇ ' (ಶ್ಲೋ. ೩೦-೩೭) ಇದನ್ನು ಬಿಟ್ಟು ಮತ್ತಾವ ಆಯುರ್ವೇದ ಗ್ರಂಥದಲ್ಲಿಯೂ ಇದರಂತೆ ಕಾಣಿಸುವುದಿಲ್ಲ. (೫ ನೆಯ ಕೌಮಾರಭೃತ್ಯದ ವಿಷಯದಲ್ಲಿ) ೧ ಜೀವಕತಂತ್ರ, ೨ ಪಾರ್ವತಕತಂತ್ರ, ೩ ಬಂಧಕತಂತ್ರ, ೪ ಹಿರಣ್ಯಾಕ್ಷತಂತ್ರ, ಈ ೪ ಗ್ರಂಥಗಳು ಕೌಮಾರಭೃತ್ಯ ಚಿಕಿತ್ಸಾಪ್ರತಿಪಾದಕಗಳಾಗಿರುತ್ತವೆ. (೬ ನೆಯ ಅಗದತಂತ್ರದಲ್ಲಿ) ೧ ಕಾಶ್ಯಪಸಂಹಿತೆ, ೨ ಅಲಂಬಾಯನಸಂಹಿತೆ, ೩ ಉಶನಸಂಹಿತೆ, ೪ ಸನಕಸಂಹಿತೆ, ೫ ಲಾಟ್ಯಾಯನತಂತ್ರ, ಈ ೫ ಗ್ರಂಥಗಳು ಅಗದ ಚಿಕಿತ್ಸೆಯನ್ನು ವರ್ಣಿಸುತ್ತವೆ. (೭ ನೆಯ ರಸಾಯನ ಚಿಕಿತ್ಸೆಯಲ್ಲಿ) ೧ ಪಾತಂಜಲತಂತ್ರ, ೨ ವ್ಯಾಡಿತಂತ್ರ, ೩ ವಸಿಷ್ಠತಂತ್ರ, ೪ ಮಾಂಡವ್ಯತಂತ್ರ, ೫ ನಾಗಾರ್ಜುನತಂತ್ರ, ಈ ೫ ಗ್ರಂಥಗಳು ರಸಾಯನಚಿಕಿತ್ಸಾವಿಷಯಕಗಳಾಗಿರುತ್ತವೆ. (೮ ನೆಯ ವಾಜೀಕರಣತಂತ್ರದಲ್ಲಿ) ೧ ಕುಚುಮಾರತಂತ್ರ, (ವಾತ್ಸ್ಯಾಯನಕಾಮಸೂತ್ರದಲ್ಲಿ 'ಕುಚುಮಾರಃ ಔಪನಿಷದಿಕಂ' ಎಂದು ವರ್ಣನೆಯಿರುತ್ತದೆ. ಅದೇ ಈ ತಂತ್ರವು). ಈ ಗ್ರಂಥವನ್ನು ಆ ಆ ವಿದ್ಯಾಸಾಗರ ಪರಶುರಾಮಶಾಸ್ತ್ರಿಗಳು ಸಂಗ್ರಹಿಸಿರುತ್ತಾರೆ. ನಮ್ಮ ಪ್ರಾಚೀನಾಯುರ್ವೇದಪಂಡಿತರು ಕೇವಲ ಮನುಷ್ಯಚಿಕಿತ್ಸೆಯಲ್ಲಿ ಮಾತ್ರ ಪ್ರವೀಣರಾಗಿರಲಿಲ್ಲ. ಪಶು, ವೃಕ್ಷ ಮೊದಲಾದವುಗಳ ಚಿಕಿತ್ಸೆಯಲ್ಲಿಯೂ ಪ್ರವೀಣರಾಗಿದ್ದರೆಂಬುದಕ್ಕೆ ಉದಾಹರಣೆಯನ್ನು ನೋಡಿರಿ. ಪಶುಚಿಕಿತ್ಸೆಯಲ್ಲಿ—ಅಶ್ವಾಯುರ್ವೇದವಿಷಯಕವಾದ ಶಾಲಿಹೋತ್ರಸಂಹಿತೆ, ನಕುಲವಿರಚಿತವಾದ ಅಶ್ವವೈದ್ಯಕ, (ಇದು ಕಲ್ಕತ್ತೆಯಲ್ಲಿ ಮುದ್ರಿತವಾಗಿರುತ್ತದೆ). ಗಜಾಯುರ್ವೇದ, (ಇದು ಪೂನಾದಲ್ಲಿ ಮುದ್ರಿತವಾಗಿದೆ) ವೃಕ್ಷಚಿಕಿತ್ಸೆಯಲ್ಲಿ ವೃಕ್ಷಾಯುರ್ವೇದ, (ಇದು ಭಾರತರತ್ನ ಗಟ್ಟುಲಾಲಶಾಸ್ತ್ರಿಗಳ ಪುಸ್ತಕಾಲಯದಲ್ಲಿರುತ್ತದೆ). ಮತ್ತು ರತ್ನ-ಖನಿಜ-ಭೂವಿಜ್ಞಾನಗಳವಿಷಯವಾಗಿ ಪುರಾಣಗಳಲ್ಲಿ ಎಷ್ಟೋ ಉದಾಹರಣೆಗಳಿರುತ್ತವೆ. ಈ ಕಾರಣಗಳಿಂದಲೂ ಎಂದಾದರೊಂದು ದಿನ ಆಯುರ್ವೇದಚಿಕಿತ್ಸೆಯೆಂದರೆ ಮೂಗುಮುರಿಯುವ ನಮ್ಮ ದೇಶದವರ ಮನಸ್ಸುಗಳಲ್ಲಿ ಪ್ರವೇಶಮಾಡಿದಾಗ ಪ್ರಾಚೀನಾಯುರ್ವೇದ ಚಿಕಿತ್ಸೆಯದಲ್ಲಿ ನತಮಸ್ತಕರಾಗದಿರಲಾರರು. ಮುಂದಿನ ಲೇಖನಗಳಲ್ಲಿ ಇನ್ನುಳಿದ ಗ್ರಂಥಗಳ ಪರಿಚಯವೂ ಮತ್ತು ರಸಗ್ರಂಥಗಳ ಉತ್ಪತ್ತಿ, ಪರಿಚಯಗಳೂ ಕ್ರಮವಾಗಿ ಬರೆಯಲ್ಪಡುತ್ತವೆ. ವಾಚಕರು ಗಟ್ಟಿಮನಸ್ಸಿನಿಂದೊಂದು ಸಾರೆ ನಮ್ಮ ಆಯುರ್ವೇದಗ್ರಂಥಗಳ ಪುಣ್ಯನಾಮಗಳನ್ನಾದರೂ ಕೇಳಿ ಪ್ರಾಚೀನಮಹರ್ಷಿಗಳಿಂದ ಪ್ರಚಲಿತವಾದ ನಮ್ಮ ಪವಿತ್ರಾಯುರ್ವೇದಚಿಕಿತ್ಸೆಯಕಡೆಗೆ ನಮ್ಮ ದೇಶವಾಸಿಗಳನ್ನು ತಿರುಗಿಸಬೇಕೆಂಬುದೇ ಈ ಆಯುರ್ವೇದಪರಿಚಯದ ಉದ್ದೇಶವಾಗಿರುತ್ತದೆ.

ಧರ್ಮಾಭಿಮಾನಿಗಳಿಗೆ ಸುಸಂಧಿ.

ಶ್ರೀ ರಂಗಯ್ಯರ ಇವರು ಧರ್ಮನಾಶಕವಾದ 'ಮಂದಿರಪ್ರವೇಶ' ಬಿಲ್ಲನ್ನು ತಂದದ್ದು ಸರ್ವಶ್ರುತವದೆ. ಅದರ ಸಲುವಾಗಿ ಮುಂಬಯಿ ಸರಕಾರದವರು ಜನರ ಅಭಿಪ್ರಾಯವನ್ನು ಕೇಳಿರುವರು. ಅಸ್ಪೃಶ್ಯರು ಮಂದಿರಪ್ರವೇಶಮಾಡುವದೂ ಅಲ್ಲಿ ದೇವರಪೂಜೆ ಮಾಡುವದೂ ಸ್ಪೃಶ್ಯರ ಧರ್ಮಕ್ಕೆ ವಿರೋಧವಾಗಿರುವದು. ಇದರಂತೆ ಅಭಿಪ್ರಾಯವುಳ್ಳವರ ಸೋಯಿ ದೃಷ್ಟಿಯಿಂದ ಮಂದಿರಪ್ರವೇಶದ ವಿರೋಧ ಠರಾವು ಕರ್ನಾಟಕಧರ್ಮರಕ್ಷಕಸಭೆಯಲ್ಲಿ ಮಂಜೂರ ಆದದ್ದು ಮುದ್ರಿಸಿರುತ್ತೇವೆ. ಕೆಳಗೆ ಬರೆದ ವಿಳಾಸಕ್ಕೆ ಕಾರ್ಡುಬರೆದರೆ, ಠರಾವುಗಳ ಫಾರ್ಮುಗಳನ್ನು ಕಳುಹಿಸುತ್ತೇವೆ. ಧರ್ಮಾಭಿಮಾನಿಗಳು ಫಾರ್ಮುಗಳನ್ನು ತರಿಸಿಕೊಂಡು ಅದರ ಮೇಲೆ ಜನರ ಸಹಿಮಾಡಿಸಿ ಸರಕಾರಕ್ಕೆ ಕಳುಹಿಸಿ ಧರ್ಮರಕ್ಷಣೆಯನ್ನು ಮಾಡಬೇಕಾಗಿ ಬೇಡಿಕೊಳ್ಳುತ್ತೇವೆ.

ವಿಳಾಸ—ಗೋವಿಂದ ಭೀಮಾಚಾರ್ಯಗೋಶಿ,
ಮಾಳಗುಡ್ಡ, ಧಾರವಾಡ.

ಕಾರ್ಯದರ್ಶಿ—ಕ-ಧ-ರ-ಸಭೆ, ಧಾರವಾಡ.

ಚಂದಾದಾರರಲ್ಲಿ ವಿಜ್ಞಾಪನೆ.

ಹೊಸದಾಗಿ ಹೊರಟಿರುವ ಪೋಸ್ಟ್‌ರೂಲ್ ಮೇರೆಗೆ ನಮ್ಮ ಪತ್ರಿಕೆಯು ಇನ್ನೂ ರಿಜಿಸ್ಟರ್ ಆಗದಿರುವುದರಿಂದ ಕಳೆದವಾರ ಪತ್ರಿಕೆಯನ್ನು ನಿಲ್ಲಿಸಿದ್ದಾಯಿತೆಂಬ ವಿಷಯವನ್ನು ಚಂದಾದಾರರು ಗಮನಕ್ಕೆ ತರಬೇಕು. ಈ ವಾರದ ಪತ್ರಿಕೆಯ ಸಂಗಡ ಕಳೆದವಾರದ ಪತ್ರಿಕೆಯೂ ಕಳುಹಿಸಲ್ಪಟ್ಟಿದೆ. ಸಂ.—

ಪಂಚಾಚಾರ್ಯ ಪ್ರಭಾ.

೧೯೩೪ನೇ ಜನವರಿ ತಾ|| ೮ನೇ ಸೋಮವಾರ.

ಧರ್ಮರಕ್ಷಣ.

ಪ್ರಪಂಚದಲ್ಲಿರುವ ಯಾವ ಯಾವ ಜನಗಳಲ್ಲಿ ಯಾವ ಯಾವ ಧರ್ಮಗಳು ಪ್ರಾಚೀನಕಾಲದಿಂದಲೂ ನಡೆದುಬಂದಿರುತ್ತವೆಯೋ ಆಯಾಯ ಧರ್ಮಗಳು ಆಯಾಯ ಜನಗಳಿಂದ ಅನಾದಿಕಾಲಾರಭ್ಯ ನಡೆಸಲ್ಪಡುತ್ತಲೇ ಬಂದಿರುತ್ತವೆ. ರೂಢಮೂಲವಾಗಿ ಬಂದಿರುವ ಇಂಥ ನಡವಳಿಕೆಗಳನ್ನು ಬದಲಾಯಿಸಿ ಮನುಷ್ಯರೆಲ್ಲರೂ ಒಂದೇ ಸ್ವಭಾವದವರಾಗಬೇಕೆಂದು ಈಗಿನಕಾಲದ ಅನೇಕರಲ್ಲಿ ಒಂದು ವಿಧವಾದ ವಾತಾವರಣವು ಹರಡುತ್ತಲಿದೆ. ಈ ವಾತಾವರಣವು ನಮ್ಮ ಹಿಂದುಸ್ಥಾನದಲ್ಲಿ ನೆಲೆಗೊಂಡಿರುವ ಆಸ್ತಿಕ್ಯವನ್ನು ಹಾಳುಮಾಡುವುದಕ್ಕೆ ಹುಟ್ಟಿದ ವಾತಾವರಣವೇ ಹೊರತು ಮನುಷ್ಯೋದ್ಧಾರಕ್ಕೆ ಸಾಧಕವಾದ ವಾತಾವರಣವಲ್ಲವು. ಈ ವಾತಾವರಣಕ್ಕೆ ಯಾರು ಇಂಬುಗೊಡುತ್ತಾರೆಯೋ ಅವರಿಗೆಂದಿಗೂ ನಮ್ಮ ಸನಾತನ ಧರ್ಮರೀತಿಯಾಗಿ ಆತ್ಮೋದ್ಧಾರವಾಗುವುದಿಲ್ಲ. ಬಹುಕಾಲದಿಂದ ಯಾರು ಯಾವುದನ್ನು ತಮ್ಮ ಹಿರಿಯರ ಕಾಲದಿಂದಲೂ ಧರ್ಮವೆಂದು ತಿಳಿದು ಆಚರಿಸುತ್ತ ಬಂದಿರುತ್ತಾರೆಯೋ ಅಂಥ ಧರ್ಮಧ್ವಜವನ್ನು ಮುರಿಯಲು ಯಾರಿಂದಲೂ ಶಕ್ಯವಲ್ಲ. ಈಶ್ವರಸಂಕಲ್ಪದಿಂದ ಪ್ರಪಂಚವು ಎಂದು ಉತ್ಪನ್ನವಾಯಿತೋ ಅಂದಿನಿಂದಲೂ ಸನಾತನಧರ್ಮವು ಬೆಳೆಯುವುದರಲ್ಲಿದೆ. ಮಧ್ಯಮಧ್ಯದಲ್ಲಿ ಅನಂತ ಮಹಾತ್ಮರು ಅವತರಿಸಿ ಈ ಸನಾತನಧರ್ಮವನ್ನು ಉತ್ತೇಜನಗೊಳಿಸಿ ದೃಢಪಡಿಸಿರುತ್ತಾರೆ. ಈಗಿನ ಯುಗಮಹಿಮೆಯಿಂದ ಭಿನ್ನದೇಶೀಯಸಂಸರ್ಗವು ಹೆಚ್ಚುತ್ತ ಬಂದಹಾಗೆಲ್ಲಾ ಸ್ವಧರ್ಮದಲ್ಲಿ ದ್ವೇಷವು ಹೆಚ್ಚಿ ಪರಧರ್ಮದಲ್ಲಿ ಆದರಬುದ್ಧಿಯು ಬೆಳೆಯುತ್ತ ಬರುವುದನ್ನು ನೋಡಿದರೆ ಈ ಹಿಂದೂ ಧರ್ಮದ ಅದೃಷ್ಟವು ಹೀನವಾದುದೆಂದೇ ಭಾವಿಸಬೇಕಾಗಿದೆ.

ಪ್ರತಿಯೊಬ್ಬನೂ ಮೊದಲು ತನ್ನ ಧರ್ಮರಕ್ಷಣೆ ಮಾಡಿಕೊಂಡು ಅನಂತರ ಮುಂದಿನ ಕಾರ್ಯವನ್ನು ಯೋಚಿಸಬೇಕಾಗುವುದು. ಧರ್ಮವನ್ನು ಹಾಳುಮಾಡಿ ಏಳ್ಗೆಯನ್ನು ಅಪೇಕ್ಷಿಸುವವರು ತಮ್ಮ ಕಾಲಿನಮೇಲೆ ತಾವೇ ಕಲ್ಲುಹಾಕಿಕೊಂಡು ನರಳುವವರಿಗೆ ಸಮಾನರೇ ಸರಿ! ಮಹಮ್ಮದೀಯ, ಕ್ರೈಸ್ತ ಮೊದಲಾದ ಕೆಲ ಜನಾಂಗದವರು ಧರ್ಮರಕ್ಷಣೆಯಲ್ಲಿ ಎಷ್ಟರಮಟ್ಟಿಗೆ ಜಾಗರೂಕರಾಗಿರುವರೆಂಬುದನ್ನಾದರೂ ನೋಡಿ ಭಾರತೀಯರು ಬುದ್ಧಿಗಲಿಯಬಾರದೆ? ಆ ಮತೀಯರು ಎಂಥ ದುರ್ದಶೆಯೊದಗಿದರೂ ತಮ್ಮ ಧರ್ಮವಿರುದ್ಧವಾಗಿ ಯಾವಾಗಲೂ ಪ್ರತಿಭಟಿಸುವುದಿಲ್ಲ. ತಮ್ಮ ಶಾಸ್ತ್ರದಲ್ಲಿ ಏನು ಹೇಳಿರುತ್ತದೆಯೋ ಅದನ್ನು ದೇವರಾಜ್ಞೆಯೆಂದು ತಲೆಯಿಂದ ಹೊತ್ತು ಪರಿಪಾಲಿಸುತ್ತಾರೆ. ತಮ್ಮ ಗುರುಗಳ ವಾಕ್ಯದಲ್ಲಿ ಪ್ರಾಮಾಣ್ಯಬುದ್ಧಿಯುಳ್ಳವರಾಗಿರುತ್ತಾರೆ. ಯಾರಿಂದಲಾದರೂ ತಮ್ಮ ಧರ್ಮಕ್ಕಾಗಲಿ, ತಮ್ಮ ಧರ್ಮಗ್ರಂಥಗಳಿಗಾಗಲಿ, ತಮ್ಮ ಗುರುಗಳಿಗಾಗಲಿ ಏನಾದರೂ ಎಡರುಂಟಾದರೆ ಪ್ರಾಣವನ್ನಾದರೂ ಬಿಟ್ಟು ರಕ್ಷಣೆಮಾಡಿಕೊಳ್ಳುವದರಲ್ಲಿ ಬದ್ಧದೀಕ್ಷೆಯುಳ್ಳವರಾಗುತ್ತಾರೆ. ಗೋಪಾಲಾದಿಭೂಪಾಲರನ್ನಂತವಾಗಿ ಸರ್ವರೂ ತಮ್ಮ ಧರ್ಮವನ್ನು ಕಾಪಾಡುವುದರಲ್ಲಿ ಆಸಕ್ತರಾಗಿದ್ದಾರೆ. ಸನಾತನಿಗಳೆಂದು ಹೇಳಿಸಿಕೊಳ್ಳುವ ನಮ್ಮ ಭಾರತೀಯರಲ್ಲಿ ಕೆಲಜನರಿಗೆ ಮಾತ್ರ ಧರ್ಮದ್ವೇಷವೆಂಬ ವಿಷಮಬುದ್ಧಿಯು ಏಕೆ ಹುಟ್ಟುತ್ತಿರುವುದೋ ತಿಳಿಯದಾಗಿದೆ. ಪ್ರಕೃತವಾತಾವರಣದಲ್ಲಿ ಸನಾತನಿಗಳಿಗೊದಗಿದ ದುರ್ದಶೆಯನ್ನು ಭಗವಂತನು ನಿವಾರಿಸುವನೋ ಅಥವಾ ಸನಾತನಧರ್ಮವನ್ನೇ ನಿರ್ನಾಮಮಾಡುವನೋ ನೋಡಬೇಕಾಗಿದೆ. ಹೊರಗಿನಿಂದ ಈ ಸನಾತನಧರ್ಮದ್ವೇಷವೆಂಬ ರೋಗವುಂಟಾದುದಾದರೆ ತಕ್ಕ ಔಷಧೋಪಚಾರದಿಂದ ಶೀಘ್ರಗುಣಪಡಿಸಿಕೊಳ್ಳಬಹುದಾಗಿದ್ದಿತು. ಆದರೆ ಇದು ಹೊರಗೆ ಹುಟ್ಟಿದ ರೋಗವಲ್ಲ. ಒಳಗೊಳಗೆ ಒಡಮೂಡಿದ ರೋಗವಾಗಿದೆ. ಈ ರೋಗಕ್ಕೆ ತಕ್ಕ ಔಷಧವು ಸಿಗುವುದೇ ದುರ್ಲಭವಲ್ಲವೆ? ಸನಾತನಧರ್ಮಕ್ಕೆ ಮೂಲಾಶ್ರಯವಾದ ನಂದನವನದಂತೆ ಶೋಭಿಸುತ್ತಿರುವ ಪವಿತ್ರ ಭಾರತಭೂಮಿಯಲ್ಲಿ ವಿಷಲತೆಯೋಪಾದಿಯಲ್ಲಿ ಅನೇಕರು ಜನ್ಮಿಸಿ ತಮ್ಮ ಧರ್ಮವನ್ನು ತಾವೇ ಹಾಳುಮಾಡಲುಪಕ್ರಮಿಸಿರುವುದನ್ನು ನೋಡಿದರೆ ಪರಕೀಯರಲ್ಲಿ ಎಷ್ಟರಮಟ್ಟಿಗೆ ಹಾಸ್ಯಾಸ್ಪದವೆಂಬುದು ಸ್ಪಷ್ಟವಾಗಿ ತೋರುತ್ತದೆ. ಧರ್ಮವಿರೋಧವಾದ ಮನೋಭಾವವು ನಮ್ಮ ಭಾರತೀಯರಲ್ಲಿ ಎಂದಿನವರೆಗೂ ನಾಶವಾಗುವುದಿಲ್ಲವೋ ಅಂದಿನವರೆಗೂ ಇವರಿಗೆ ಸುಖವುಂಟಾಗುವುದಿಲ್ಲ. ನಮ್ಮ ಸನಾತನದ ಶಾಸ್ತ್ರಪದ್ಧತಿಪ್ರಕಾರ ಸಾಧಿಸಲ್ಪಡಬೇಕಾದ ಪುರುಷಾರ್ಥಗಳೆಂದರೆ, ಧರ್ಮ ಅರ್ಥ ಕಾಮಮೋಕ್ಷ ಎಂಬ ನಾಲ್ಕೇ ಪುರುಷಾರ್ಥಗಳು. ಇವುಗಳು ಶೃಂಖಲಾನ್ಯಾಯದಿಂದ ಒಂದಕ್ಕೊಂದು ಸಂಬಂಧವುಳ್ಳವುಗಳಾಗಿವೆ. ಇವುಗಳಲ್ಲಿ ಮೊದಲನೆಯದು ಧರ್ಮವು. ಧರ್ಮವು ಹಾಳಾದರೆ ಅಂಥ ಧರ್ಮವಿರುದ್ಧವಾದ ಅರ್ಥ, ಕಾಮ, ಮೋಕ್ಷಗಳು ಹಾಳಾಗುವುವು. ಪಾಯವಿಲ್ಲದೆ ಮನೆಯನ್ನು ಕಟ್ಟಲಾದೀತೆ? ಪಾಯವು ಗಟ್ಟಿಯಾಗಿದ್ದರೆ ಅದರ ಎಂಥ ಸೂಕ್ಷ್ಮಕೆಲಸಗಳನ್ನಾದರೂ ಮಾಡಬಹುದಲ್ಲವೆ? ಧರ್ಮವೆಂಬುದು ನಮ್ಮ ಸನಾತನಿಗಳಿಗೆ ಮೂಲಾಧಾರವಾದುದು. ಈ ಧರ್ಮವನ್ನು ಭದ್ರಪಡಿಸಿಕೊಂಡು ಎಂತಹ ಕಾಮಾರ್ಥಗಳನ್ನಾದರೂ ತನ್ನ ಬುದ್ಧಿಶಕ್ತಿಯಿಂದ ಗಳಿಸಲಿ. ನಮ್ಮ ಭಾರತೀಯರು ಪುಣ್ಯಪಾಪಗಳನ್ನೂ, ಅದೃಷ್ಟವನ್ನೂ, ಜನ್ಮಾಂತರಗಳನ್ನೂ, ದೈವವನ್ನೂ, ದೈವಪ್ರತಿನಿಧಿಗಳಾದ ಗುರುಗಳನ್ನೂ ಬಲವಾಗಿ ಒಪ್ಪಿಕೊಳ್ಳುವವರಾದುದರಿಂದ ಪಾಪಕರ್ಮವನ್ನು ಅಧರ್ಮಸಾಧಕವನ್ನಾಗಿಯೂ ಪುಣ್ಯಕರ್ಮವನ್ನು ಧರ್ಮವನ್ನಾಗಿಯೂ ಭಾವಿಸಿ ಅದರಂತೆ ವರ್ತಿಸಬೇಕು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಮಾಲಿಕೆಯಲ್ಲಿ ಸೇರಿರುವ ಮೊದಲನೆಯದಾದ ಧರ್ಮಕ್ಕೂ, ಅಂತ್ಯದಲ್ಲಿರುವ ಮೋಕ್ಷಕ್ಕೂ ಸಾಧ್ಯಸಾಧನಭಾವವಿರುವುದರಿಂದ ಈ ಮಾಲಿಕೆಯ ಮಧ್ಯದಲ್ಲಿ ಸೇರಿದ ಅರ್ಥ ಕಾಮಗಳೂ ಆದ್ಯಂತಗಳಲ್ಲಿರುವ ಧರ್ಮ ಮೋಕ್ಷಗಳಿಗೆ ವಿರೋಧವಾಗಿರಕೂಡದು. ಈಗ ಕೆಲವರಲ್ಲಿ ಹುಟ್ಟಿದ ಅರ್ಥ ಕಾಮಾಪೇಕ್ಷೆಗಳಾದರೂ ಪುರುಷಾರ್ಥಮಾಲಿಕೆಯಲ್ಲಿ ಮೂಲಮಣಿಯಂತೆಯೂ ಶಿಖಾಮಣಿಯಂತೆಯೂ ಇರುವ ಧರ್ಮ ಮೋಕ್ಷಗಳಿಗೆ ವಿರುದ್ಧವಾಗಿದೆ. ಹೀಗೆ ವಿರುದ್ಧವಾಗಿರುವ ಕಾಮ್ಯಫಲಗಳು ಆಸುರೀಸಂಪತ್ತಿಗೆ ಸೇರಿರುವುವಲ್ಲದೆ ದೈವೀಸಂಪತ್ತಿಗೆ ಸೇರುವುದಿಲ್ಲ. ಇಂಥ ಆಸುರೀಸಂಪತ್ತಿನಿಂದುಂಟಾಗುವ ಅನರ್ಥಗಳನ್ನೂ, ದೈವೀಸಂಪತ್ತಿನಿಂದುಂಟಾಗುವ ಪ್ರಯೋಜನಗಳನ್ನೂ ಗೀತಾಕಾರರು ಸ್ಪಷ್ಟವಾಗಿ "ದೈವೀಸಂಪದ್ವಿಮೋಕ್ಷಾಯ" ಇತ್ಯಾದಿ ಶ್ಲೋಕಗಳಿಂದ ವಿಶದವಾಗಿ ವರ್ಣಿಸಿರುತ್ತಾರೆ. ಆದುದರಿಂದ ಯಾವ ಲೋಕೋದ್ಧಾರಸಾಧಕಗಳಾದ ಕಾರ್ಯಗಳನ್ನು ಮಾಡಬೇಕಾಗಿದ್ದರೂ ಅವುಗಳೆಲ್ಲವೂ ಪರಲೋಕಕ್ಕೆ ವಿಘ್ನಕಾರಿಗಳಾಗಿರಕೂಡದು. ಅಂಥ ಪರಲೋಕವಿಘ್ನಕಾರಿಗಳಾದ ಲೋಕೋದ್ಧಾರ ಕಾರ್ಯಗಳು ಈಶ್ವರಪ್ರೀತ್ಯಾಸ್ಪದಗಳಾಗಲಾರವು. ಧರ್ಮಭೀತಿಯಿಲ್ಲದೆ ಮಾಡುವ ಲೌಕಿಕ ಕಾರ್ಯಗಳೆಲ್ಲವೂ ಎಷ್ಟು ಮಹತ್ವದವುಗಳಾಗಿದ್ದರೂ ಅವಕ್ಕೆ ಬೆಲೆ ಬರುವುದಿಲ್ಲ. ಧರ್ಮಭೀತಿಯಿಂದ ಮಾಡುವ ಅತ್ಯಲ್ಪಗಳವಾದ ಕಾರ್ಯಗಳೆಲ್ಲವೂ ಶಿಲಾಲಿಪಿಯಂತೆ ಶಾಶ್ವತವಾಗಿರುವವು. ತಾನು ಗಳಿಸಿದ ರಾಜ್ಯವಾಗಲಿ, ದ್ರವ್ಯವಾಗಲಿ, ಯಶಸ್ಸಾಗಲಿ, ಹೆಂಡರುಮಕ್ಕಳಾಗಲಿ, ಬಂಧುಗಳಾಗಲಿ ಒಂದೂ ಆತ್ಮನ ಸಂಗಡ ಬರುವುದಿಲ್ಲ. ಧರ್ಮವೊಂದೇ ಆತ್ಮನ ಸಂಗಡವಿದ್ದು ಯೋಗಕ್ಷೇಮವನ್ನು ನೋಡಿಕೊಳ್ಳುವುದೆಂಬ ವಿಷಯವನ್ನು ಎಲ್ಲರೂ ತಿಳಿದೇ ಇರುತ್ತಾರೆ. ಅಂದಮೇಲೆ ಅತಿ ಸುಂದರವಾದ ಧರ್ಮಪುರುಷನ ಮುಖ್ಯಾಂಗವಾದ ಕಣ್ಣುಮೂಗುಗಳನ್ನು ಕಿತ್ತು ಆ ಧರ್ಮಪುರುಷನನ್ನು ವಿರೂಪಗೊಳಿಸುವ ಶಾಸ್ತ್ರವಿರುದ್ಧವಾದ ಮಾರ್ಗದಿಂದ ಹಿಂತಿರುಗಿ, ಎಲ್ಲರೂ ಧರ್ಮಮಾರ್ಗದಲ್ಲಿ ಪ್ರವೇಶಿಸುವುದುತ್ತಮವಲ್ಲವೆ?

ಒಳದೇಶದ ವೃತ್ತಾಂತಗಳು.

ಮೈಸೂರು ಸರಕಾರದವರು ಧರ್ಮಾರ್ಥದ ಫಂಡುಗಳಿಗೆ ಇದುವರೆಗೆ 100ಕ್ಕೆ 5 ರಂತೆ ಕೊಡುತ್ತಿದ್ದ ಬಡ್ಡಿಯನ್ನು 4½ ಗೆ ಕಡಿಮೆ ಮಾಡಿರುತ್ತಾರೆ.

ಕಳೆದವಾರ ಕೋಲಾರದ ಚಾಂಪಿಯನ್ ರೀಫ್ಸ್ ಎಂಬ ಚಿನ್ನದ ಗಣಿಯಲ್ಲಿ ಕಲ್ಲು ಸಿಡಿತದಿಂದ 4 ಜನರು ಮೃತಪಟ್ಟರು. 3 ಜನರಿಗೆ ತುಂಬಾ ಗಾಯಗಳಾಗಿರುವುವು.

ನಂಜನಗೂಡು ಸದ್ವೈದ್ಯಶಾಲಾ ಪ್ರೊಪ್ರೈಟರಾದ ಭಿಷಗ್ರತ್ನ ಆಯುರ್ವೇದವಿದ್ವಾನ್ ಶ್ರೀ|| ಬಿ. ವಿ. ಪಂಡಿತರವರು ಕಳುಹಿಸಿರುವ ಅಂದವಾದ ಹೊಸವರ್ಷದ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

1931-32 ನೇ ವರ್ಷದಲ್ಲಿ ಚಳ್ಳಕೆರೆ ತಾಲೂಕಿನ ಪಿಲ್ಲಹಳ್ಳಿ, ಗೌರೀಪುರ ಮೊದಲಾದ 7 ಗ್ರಾಮಗಳ ಕೆರೆಗಳ ಕೆಳಗೆ ರೈತರಿಗೆ ಯಾವ ಫಸಲೂ ಸರಿಯಾಗಿ ಬೆಳೆಯದೆ ಇದ್ದುದರಿಂದ ಸರಕಾರದವರು ಒಟ್ಟು 1551-12-0 ರೂ. ಗಳ ಕಂದಾಯವನ್ನು ವಜಾ ಮಾಡಿರುತ್ತಾರೆ.

ಹೊಸ ವರ್ಷದ ಪ್ರಯುಕ್ತವಾಗಿ ಬ್ರಿಟಿಷ್ ಸರಕಾರದವರು ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಮ|| ಎಂ ಎನ್. ಕೃಷ್ಣರಾಯರಿಗೆ "ಸರ್" ಎಂಬ ಬಿರುದನ್ನೂ, ಪ್ರಾಕ್ತನವಿಮರ್ಶವಿಚಕ್ಷಣ ರಾವ್‌ಬಹದ್ದೂರ್ ಮ|| ಆರ್. ನರಸಿಂಹಾಚಾರ್ಯರಿಗೆ "ಮಹಾಮಹೋಪಾಧ್ಯಾಯ" ಎಂಬ ಬಿರುದನ್ನೂ ದಯಪಾಲಿಸಿರುತ್ತಾರೆ.

ರಾಜಧಾನಿಯ ಸಮಾಚಾರ.

ಕಳೆದ ೫ನೆಯ ತಾರೀಖಿನ ದಿವಸ ಗಾಂಧಿಯವರು ಇಲ್ಲಿಗೆ ಬಂದರು. ಇವರು ಈ ಮೊದಲು ಇಲ್ಲಿಗೆ ಬಂದಾಗ್ಗೆ ಜನರಲ್ಲಿ ಉತ್ಸಾಹವಿದ್ದಂತೆ ಈ ಸಾರೆ ಎಷ್ಟೂ ಇದ್ದಿಲ್ಲ. ಪಟ್ಟಣದಲ್ಲಿ ಎಲ್ಲಿ ನೋಡಿದರೂ ಅನುತ್ಸಾಹವೇ ತುಂಬಿತುಳುಕುತ್ತಿತ್ತು. ಇದಕ್ಕೆ ಇವರು ಈಗ ಕೈಕೊಂಡಿರುವ ಅಸ್ಪೃಶ್ಯ ಚಳವಳಿಯೇ ಮೂಲಕಾರಣವೆಂದು ಸರ್ವರೂ ಉದ್ಗಾರವನ್ನು ತೆಗೆಯುತ್ತಿರುವರು. ಸನಾತನ ಮತಾನುಯಾಯಿಗಳು ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿಯೂ, ಟವನ್‌ಹಾಲಿನಲ್ಲಿಯೂ ಸಭೆಸೇರಿ ಇವರು ಕೈಕೊಂಡಿರುವ ಅಸ್ಪೃಶ್ಯ ಚಳವಳಿಯ ತತ್ತ್ವವನ್ನು ಖಂಡಿಸಿದರು. ಈ ಬಗ್ಗೆ ಅನೇಕ ಪತ್ರಿಕೆಗಳು ಹಂಚಲ್ಪಟ್ಟವು. ಆ ದಿವಸ ಸಾಯಂಕಾಲ ಗಾಂಧಿಯವರು ಟವನ್‌ಹಾಲಿಗೆ ಬಂದು ಸಂಕ್ಷೇಪವಾಗಿ ಮಾತನಾಡಿದರು. ಕೆಲವರು ಅಡ್ರೆಸ್ಸುಗಳನ್ನೊಪ್ಪಿಸಿದರು. ಇವರ ಅಸ್ಪೃಶ್ಯತತ್ತ್ವವನ್ನು ಖಂಡಿಸುವ ನಾನಾವಿಧವಾದ ಪ್ರಸಿದ್ಧ ಪತ್ರಿಕೆಗಳು ಸಭೆಯಲ್ಲಿ ವಿಶೇಷವಾಗಿ ಹಂಚಲ್ಪಟ್ಟವು. ಇವುಗಳನ್ನು ನೋಡುವುದೇ ಜನರಿಗೆ ಒಂದು ತರಹದ ವಿನೋದವಾಗಿತ್ತು. ಸನಾತನ ಧರ್ಮಕ್ಕೆ ತವರೂರೆನಿಸಿರುವ ಮೈಸೂರು ನಗರದಲ್ಲಿ ಇವರಿಗೆ ಮೊದಲಿನಂತೆ ವಿಶೇಷವಾದ ಗೌರವವು ದೊರೆಯಲಿಲ್ಲವೆಂದು ಹೇಳಬಹುದಾಗಿದೆ. ಮರುದಿವಸ ಗಾಂಧಿಯವರು ಬೆಂಗಳೂರಿಗೆ ಪ್ರಯಾಣ ಮಾಡಿದರು.

ವರ್ತಮಾನಸಂಗ್ರಹ.

ಕಳೆದ ವರ್ಷ ಜರ್ಮನ್ ಸರಕಾರದವರು 'ನಾಜಿ' ಚಳವಳಿಗಾಗಿ 4 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿದರಂತೆ!

ಆಳ್ವಾರ್‌ಮಹಾರಾಜರು ಈ ದಿವಸ ಮುಂಬಯಿಗೆ ಬರುವರೆಂದೂ, ಅಲ್ಲಿಂದ ಕಾಶಿಗೆ ಪ್ರಯಾಣಬೆಳೆಸುವರೆಂದೂ ತಿಳಿದುಬಂದಿದೆ.

ಲೇಡಿಹಾಸ್ಟನ್ ಎಂಬವರು ಲಂಡನ್‌ನಗರದ ರಕ್ಷಣೆಗಾಗಿ 30,00,000 ರೂಪಾಯಿಗಳನ್ನು ಕೊಡುವುದಾಗಿ ಬ್ರಿಟಿಷ್‌ಸರಕಾರಕ್ಕೆ ತಿಳಿಸಿರುತ್ತಾರೆ.

ಜರ್ಮನ್‌ಸರಕಾರದವರು ತಮ್ಮ ದೇಶದಲ್ಲಿರುವ ಪ್ರತಿಯೊಬ್ಬ ಬ್ರಹ್ಮಚಾರಿಯೂ ಲಗ್ನವಾಗಿಯೇ ತೀರಬೇಕೆಂದು ಒಂದು ಹೊಸ ಆಜ್ಞೆಯನ್ನು ಮಾಡಿರುವರು.

ಸ್ಪೇನ್‌ದೇಶದಲ್ಲಿ ಖೈದಿಗಳ ಸಂಖ್ಯೆಯು ಕಾರಾಗೃಹಗಳಲ್ಲಿ ಸ್ಥಳವಿಲ್ಲದಿರುವದರಿಂದ ನಿರುಪಯೋಗಗಳಾದ ಜಹಜುಗಳನ್ನೇ ಕಾರಾಗೃಹಗಳಂತೆ ಉಪಯೋಗಿಸುತ್ತಿರುವರು.

ಇಂಗ್ಲೆಂಡ್ ದೇಶದ ಡೆವಿಸ್ ಎಂಬವನು ಜೂಜಿನಲ್ಲಿ 7,500 ರೂ. ಗಳನ್ನು ಕಳೆದುಕೊಂಡು, ಈ ವಿಷಯವು ತನ್ನ ಪತ್ನೀಪುತ್ರರಿಗೆ ತಿಳಿಯದಿರಲೆಂದು ಹೆಂಡತಿಯನ್ನೂ ಇಬ್ಬರು ಮಕ್ಕಳನ್ನೂ ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡನು.

ಭರತಖಂಡದ ಸ್ಟೇಟ್‌ಸೆಕ್ರೆಟರಿಗಳಾದ ಸರ್ ಸ್ಯಾಮುಯಲ್ ಹೋರ್‌ರವರು ದುಂಡುಮೇಜಿನ ಪರಿಷತ್ತು ಮತ್ತು ಜಾಯಿಂಟ್‌ಪಾರ್ಲಿಮೆಂಟರಿ ಕಮಿಟಿಗಳಲ್ಲಿ ವಿಶೇಷ ಶ್ರಮವಹಿಸಿ ಕೆಲಸಮಾಡಿದರೆಂದು ಇಂಗ್ಲೀಷ್ ಸರಕಾರದವರು ಹೊಸವರ್ಷದಲ್ಲಿ ಅವರಿಗೆ ಜಿ. ಸಿ. ಎಸ್. ಐ. ಎಂಬ ಬಿರುದನ್ನು ಕೊಟ್ಟಿರುತ್ತಾರೆ.

ಜರ್ಮನಿಯ ಸರ್ವಾಧಿಕಾರಿಗಳಾಗಿರುವ ಹೆರ್ ಹಿಟ್ಲರ್‌ರವರು ಜರ್ಮನ್ ಕೂಲಿಗಾರರನ್ನು ಕುರಿತು ಉಪನ್ಯಾಸ ಮಾಡುತ್ತಿದ್ದಾಗ, ಉಪನ್ಯಾಸವು ಮುಗಿಯುವದಕ್ಕೆ ಮುಂಚಿತವಾಗಿ 3 ಜನ ಡೈರೆಕ್ಟರುಗಳು ಹೊರಟು ಹೋದದ್ದರಿಂದ ಹಿಟ್ಲರ್‌ರವರಿಗೆ ಅವಮಾನ ಮಾಡಿದಂತಾಯಿತೆಂದು ಅಧಿಕಾರಿಗಳು ಆ 3 ಜನ ಡೈರೆಕ್ಟರರನ್ನೂ ದಸ್ತಗಿರಿ ಮಾಡಿರುವರು.

ಸದ್ಯಃ ಪುದುಚೇರಿಯಲ್ಲಿ ಅಜ್ಞಾತವಾಸಿಗಳಾಗಿರುವ ದೇವಾಸ್‌ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ತಾವು ಪೂಜಿಸುತ್ತಿದ್ದ ದೇವಾಲಯಗಳಿಗೆ ಕೊಡುತ್ತಿದ್ದ ದ್ರವ್ಯವನ್ನು ಇಂಡಿಯಾಸರಕಾರದವರು ಕಡಿಮೆಮಾಡಿರುವರೆಂಬ ಕಾರಣದಮೇಲೆ ಉಪವಾಸವ್ರತವನ್ನು ಕೈಕೊಂಡಿರುತ್ತಾರೆ. ಹಾಗೂ ಪೋಲ್ಕಂಡ ಗ್ರಾಂಟನ್ನು ಮೊದಲಿನಂತೆಯೇ ನಡೆಸಿಕೊಡಬೇಕೆಂಬ ಬಗ್ಗೆ ವೈಸರಾಯರಿಗೆ ಒಂದು ಮನವಿಯನ್ನೂ ಕಳುಹಿಸಿರುತ್ತಾರೆ.

ಸನಾತನಧರ್ಮದವರ ಚಳವಳಿ.

ಕಾನ್ಪುರದ ಹಿಂದೂಮಹಾಸಭೆಯವರು ಗ್ವಾಲಿಯರ್ ಸಂಸ್ಥಾನದ ಸ್ವಾಮಿಸುಖಾನಂದರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಗಾಂಧಿಯವರ ಚಳವಳಿಯು ಹಿಂದುಳಿದ ಪಂಗಡದವರ ಏಳ್ಗೆಗೆ ಸ್ವಲ್ಪವೂ ಅನುಕೂಲವಾಗಿಲ್ಲವೆಂದೂ, ಅವರು ತಮ್ಮ ಪ್ರಾಂತಕ್ಕೆ ಬಂದಾಗ ಅವರ ಕಾರ್ಯಕ್ರಮಗಳಲ್ಲಿ ಯಾರೂ ಸಹಕರಿಸಕೂಡದೆಂದೂ ತೀರ್ಮಾನಿಸಿರುವರು.

ಗುರುವಾಯೂರಿನ ಸನಾತನಧರ್ಮಾಭಿಮಾನಿಗಳು ಗುರುವಾಯೂರುಮೂರ್ತಿಯ ಬಂಗಾರದ ಪಾದುಕೆಗಳನ್ನು ಮಾಡಿಸಿ, ಮೋಟಾರಿನಲ್ಲಿಟ್ಟು ಭರತಖಂಡದ ಲ್ಲೆಲ್ಲಾ ಮೆರವಣಿಗೆಮಾಡಿಕೊಂಡು, ಗಾಂಧಿಯವರಿಗೆ ವಿರುದ್ಧವಾದ ಚಳವಳಿಯನ್ನು ಹೂಡಬೇಕೆಂದು ತೀರ್ಮಾನಮಾಡಿರುವರು.

ಘೋರಯುದ್ಧದಲ್ಲಾದ ಪ್ರಾಣನಷ್ಟ.

ಕಳೆದ ಘೋರಯುದ್ಧವು ಸುಮಾರು 20,00,000 ನಿಮಿಷಗಳ ಕಾಲ ನಡೆಯಿತಂತೆ! ಈ ಅವಧಿಯಲ್ಲಿ ಸುಮಾರು 1,00,00,000 ಜನರು ಕೊಲ್ಲಲ್ಪಟ್ಟರು. ಅಂದರೆ ಯುದ್ಧಾರಂಭದಿಂದ ಅಂತ್ಯದವರೆಗೆ ಪ್ರತಿ ನಿಮಿಷಕ್ಕೂ 5 ಜನರಂತೆ ಕೊಲ್ಲಲ್ಪಟ್ಟಂತಾಯಿತು.

ಶ್ರೀ ಜಗದ್ಗುರು ವಿಶ್ವಾರಾಧ್ಯಮಹಾಸಂಸ್ಥಾನ (ಜಂಗಮವಾಡೀಮಠ) ದ ದರ್ಬಾರಹಾಲ್ ಶ್ರೀಕ್ಷೇತ್ರಕಾಶೀ.

ಚಿಕಾಗೋ ನಗರದ ವಿಶ್ವಪ್ರದರ್ಶನ!

ಚಿಕಾಗೋ ನಗರದಲ್ಲಿ ನಡೆದ 'ವಿಶ್ವಪ್ರದರ್ಶನ'ಕ್ಕೆ 2,30,00,000 ಜನ ಪ್ರೇಕ್ಷಕರು ಹೋಗಿದ್ದು ಪ್ರದರ್ಶನದಲ್ಲಿ 12,00,00,000 ರೂಪಾಯಿಗಳನ್ನು ವೆಚ್ಚಮಾಡಿದರಂತೆ! ಪ್ರದರ್ಶನವು ಈ ವರ್ಷವೂ ನಡೆಯಿಸಲ್ಪಡುವದು.

ನವೀನ ವಿವಾಹ ಪದ್ಧತಿ!

ಸ್ವೀಡನ್ ದೇಶದ ರಾಜಧಾನಿಯಾದ ಸ್ಟಾಕ್‌ಹೋಂ ನಗರದ ಮಿಸ್ ಸೌಜಾ ಕಾರ್ಲ್‌ಸನ್ ಎಂಬ ತರುಣಿಯು ಅಮೇರಿಕೆಗೆ ಸೇರಿದ ಫ್ಲಿಂಟ್‌ನಗರದಲ್ಲಿರುವ ಒಬ್ಬ ಇಂಜನಿಯರನ್ನು 'ಟ್ರಾನ್ಸ್ ಅಟ್ಲಾಂಟಿಕ್' ಟೆಲಿಫೋನಿನ ಮುಖಾಂತರವಾಗಿ ಮದುವೆಯಾಗಿರುವಳಂತೆ! ಉಭಯ ಕಡೆಗಳಲ್ಲಿಯೂ ನೆರೆದಿದ್ದ ಸಾಕ್ಷಿಗಳು ಟೆಲಿಫೋನ್ ಮುಖಾಂತರ ಎಲ್ಲವನ್ನು ಕೇಳಿದರಂತೆ!

ನೀಲಿಬಣ್ಣದ ಸೂರ್ಯ!

1883 ನೇ ಇಸವಿಯಲ್ಲಿ 'ಸುಂಡಾ ಸ್ಟ್ರೇಟ್ಸ್' ನಲ್ಲಿ ನೀಲಿಬಣ್ಣದ ಸೂರ್ಯನು ಕಾಣಿಸಿದನಂತೆ! ಒಂದು ದೊಡ್ಡ ಜ್ವಾಲಾಮುಖಿಯ ಸ್ಫೋಟವೇ ಇದಕ್ಕೆ ಕಾರಣವಾಗಿದ್ದಿತು. ಆ ಜ್ವಾಲಾಮುಖಿಯು ದೆಸೆಯಿಂದ ಒಂದು ದೊಡ್ಡ ಪರ್ವತ ಶ್ರೇಣಿಯು ಸಿಡಿದು, ಕೆಲವು ಕೋಟಿ ಟನ್‌ಗಳ ಕಲ್ಲು ಮತ್ತು ಮಣ್ಣು 17 ಮೈಲುಗಳ ಎತ್ತರಕ್ಕೆ ಹಾರಿ, ಮುಗಿಲನ್ನು ಮುಚ್ಚಿದುದರಿಂದ ಸೂರ್ಯನು ನೀಲಿಯ ಬಣ್ಣವಾಗಿ ಕಾಣಿಸುತ್ತಿದ್ದನು. ಪರ್ವತವು ಸಿಡಿದನಂತರ ಆ ಸ್ಥಳದಲ್ಲಿ 1,000 ಅಡಿಗಳಷ್ಟು ಆಳವಾದ ಹಳ್ಳವಿದ್ದಿತಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ಸೂಕ್ಷ್ಮವಾದ ಯಂತ್ರ!

ರಸಾಯನಶಾಸ್ತ್ರಜ್ಞರಿಂದ ಇದುವರೆಗೆ ನಿರ್ಮಿಸಲ್ಪಟ್ಟಿರುವ ಸೂಕ್ಷ್ಮಯಂತ್ರಗಳಲ್ಲಿ ಲಾಂಗ್‌ಲೇ ಎಂಬವರಿಂದ ತಯಾರಿಸಲ್ಪಟ್ಟಿರುವ 'ಬೋಲೋಮಿಟರ್' ಎಂಬುದೇ ಅತ್ಯಂತ ಸೂಕ್ಷ್ಮವಾದುದು. ಈ ಯಂತ್ರವು ಒಂದು ಡಿಗ್ರಿ ಉಷ್ಣತೆಯಲ್ಲಿ ಹತ್ತುಲಕ್ಷದ ಒಂದು ಭಾಗವನ್ನೂ ಸಹ ಅಳತೆಮಾಡಬಲ್ಲುದಂತೆ! ಈ ಯಂತ್ರದಲ್ಲಿ ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾದ 'ಪ್ಲಾಟಿನಂ' ಲೋಹದ ತಂತಿಯಿದ್ದು, ಅದು ಉಷ್ಣತೆಯಿಂದ ಪ್ರಕಾಶಿಸಿದಾಗ ಮಾತ್ರವೇ ಕಾಣಿಸುವದಂತೆ!

'ನಿಾರಾ' ಎಂಬ ಹೊಸನಕ್ಷತ್ರದ ಆಗಮನ!

ಇನ್ನು ಕೆಲವು ದಿವಸಗಳು ಕಳೆಯುವದರೊಳಗಾಗಿ ದಕ್ಷಿಣದಿಗ್ಭಾಗದಲ್ಲಿ ಒಂದು ಅದ್ಭುತವಾದ ಹೊಸ ನಕ್ಷತ್ರವು ನಮ್ಮ ದೃಷ್ಟಿಗೆ ಗೋಚರವಾಗುವದಂತೆ! ಈ ನಕ್ಷತ್ರವು ನಮ್ಮ ವಾಯುಮಂಡಲವನ್ನು 163 ವರ್ಷಗಳಿಗೊಮ್ಮೆ ಪ್ರವೇಶಿಸುವದಂತೆ! 3 ತಿಂಗಳ ಹಿಂದೆ ಇದು ಒಂದು ಸಣ್ಣ ನಕ್ಷತ್ರದಂತಿದ್ದು, ಅಲ್ಲಿಂದೀಚೆಗೆ ಅದರಲ್ಲಿ ಉತ್ಪತ್ತಿಯಾದ 'ಹೈಡ್ರೋಜನ್' ಎಂಬ ಗಾಳಿಯಿಂದ ಧಗಧಗಿಸುತ್ತ ಮೊದಲಿಗಿಂತಲೂ ಸಹಸ್ರಾರುಪಾಲು ಹೆಚ್ಚು ಬೆಳಕನ್ನು ಕೊಡುತ್ತಿರುವುದಂತೆ! ಈ ನಕ್ಷತ್ರದ ಅಕ್ಷವು 26 ಕೋಟಿ ಮೈಲುಗಳಾಗಿದ್ದು, ಸೂರ್ಯನಿಗಿಂತಲೂ 300 ಪಾಲು ದೊಡ್ಡದಾಗಿರುವದಂತೆ! ಇದು ಹೀಗೆಯೇ ಕೆಲವು ಕಾಲ ಉರಿದನಂತರ ಪುನಃ ಆರಿ ಮೊದಲಿನಂತೆ ಅಲ್ಪಪ್ರಕಾಶವುಳ್ಳ ನಕ್ಷತ್ರವಾಗುವದಂತೆ! ಇದಕ್ಕೆ 600 ಕೋಟಿ ಮೈಲುಗಳ ದೂರದಲ್ಲಿ ಒಂದು ಸೂರ್ಯನಿದ್ದು ಇದರ ಸುತ್ತಲೂ ಸುತ್ತುತ್ತಿರುವನಂತೆ!

ಉಕ್ಕನ್ನು ಕೊರೆಯಬಲ್ಲ ಗುಂಡು! ಮತ್ತು ಎಂತಹ ಗುಂಡಿನಿಂದಲೂ ಕೊರೆಯಲಾಗದ ಉಕ್ಕು!

ಎಂತಹ ಉಕ್ಕಿನ ತಗಡನ್ನಾದರೂ ಕ್ಷಣಮಾತ್ರದಲ್ಲಿ ಕೊರೆಯಬಲ್ಲ ಹೊಸತರಹದ ಗುಂಡುಗಳು ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟಿರುವವು. ಈ ಗುಂಡುಗಳು ಕ್ರೋಮಿಯಂ, ಉಕ್ಕು ಮತ್ತು ಅಲ್ಯುಮಿನಿಯಂ ಲೋಹಗಳಿಂದ ಕೂಡಿದ ಒಂದು ಹೊಸಪದಾರ್ಥದಿಂದ ತಯಾರಿಸಲ್ಪಟ್ಟಿರುವುವಂತೆ! ಈ ಮಿಶ್ರಲೋಹವನ್ನು ಕರಗಿಸಿ ಉಳಿ, ಚಾಣ, ಗರಗಸ ಮೊದಲಾದ ಆಯುಧಗಳಿಗೆ ಸವರಿದರೆ ಅವು ಎಂದೆಂದಿಗೂ ಸವೆಯುವದೇ ಇಲ್ಲವಂತೆ! ಆದರೆ ಅದರಿಂದ ಮನುಷ್ಯರಿಗೆ ಯಾವತೊಂದರೆಯೂ ಇಲ್ಲ! ಈ ಗುಂಡುಗಳು ತಗಲಿದ ಜಾಗದಲ್ಲಿ ಒಂದು ಗುಂಡಾದ ತೂತು ಮಾತ್ರ ಆಗುವದಂತೆ! ಜರ್ಮನ್‌ದೇಶದವರು ಇದರಂತೆಯೇ ಎಂತಹ ಗುಂಡಿನಿಂದಲೂ ಕರಗಿಸಲಾಗದ ಹೊಸತರಹದ ಉಕ್ಕನ್ನು ತಯಾರಿಸಿರುವರಂತೆ! ಈ ಹೊಸಲೋಹವು ನಿಕ್ಕಲ್, ಕ್ರೋಮಿಯಂ, ಮಾಲಿಬ್ಡಿನಂ ಮತ್ತು ಉಕ್ಕು ಇವುಗಳಿಂದ ತಯಾರಿಸಲ್ಪಟ್ಟಿದ್ದು, ಒಂದು ಚದುರಅಂಗುಲಕ್ಕೆ 1,80,000 ಪೌಂಡುಗಳಷ್ಟು ಬಲವಾಗಿರುವದಂತೆ!

ದಂತಧಾವನ.

ಲೇಖಕ—ವಾಗೀಶಶಿವಾಚಾರ್ಯ ಬೃಹನ್ಮಠ, ಮುದೇನೂರು.

(ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀ ಕ್ಷೇತ್ರಕಾಶಿ)

ಆರೋಗ್ಯ ಮತ್ತು ಸುಖಮಯಜೀವನವನ್ನು ಹೊಂದುವುದಕ್ಕಾಗಿ 'ಹಲ್ಲುಗಳನ್ನು ಜೋಪಾನವಾಗಿಟ್ಟುಕೊಳ್ಳುವುದು' ಅತ್ಯಾವಶ್ಯಕವಾದ ಕಾರ್ಯವಾಗಿದೆ. ಅದಕ್ಕಾಗಿಯೇ ನಮ್ಮ ಮೊದಲಿನ ಮಹಾಪುರುಷರು ಕಡ್ಡಿಯಿಂದ ಹಲ್ಲುಜ್ಜುವುದನ್ನು ಪ್ರಧಾನವಾದ ನಿತ್ಯಕರ್ಮವೆಂದು ಭಾವಿಸಿ, ತಮ್ಮ ಆಚಾರವಿಧಿಯಲ್ಲಿ ಬರೆದಿಟ್ಟಿರುವರಲ್ಲದೆ ಪ್ರಚಾರವನ್ನೂ ಮಾಡಿದ್ದಾರೆ. ಬಹುಕು ಕಾಶಿಯೇ ಮುಂತಾದ ಉತ್ತರದೇಶವಾಸಿಗಳಾದ ಜನರು ಈವಾಗಲೂ ಕಡ್ಡಿಯಿಂದ ಹಲ್ಲುಜ್ಜದೆ ಒಂದು ಗುಟುಕು ನೀರು ಕುಡಿಯುವುದನ್ನೂ ಅಧರ್ಮವೆಂದು ತಿಳಿಯುತ್ತಾರೆ. ಔಷಧಿಯನ್ನೂ ಕುಡಿಯುವದಿಲ್ಲವೆಂದಮೇಲೆ ಊಟ ಮಾಡುವುದೆಂತೂ ದೂರವುಳಿಯಿತು. ಅದುದರಿಂದಲೇ ಈ ಜನರಲ್ಲಿ ದಂತರೋಗವುಳ್ಳವರು ಬಹಳ ಕಡಿಮೆ. ಆದರೆ ಪಟ್ಟಣವಾಸಿಗಳಾದ ಸುಶಿಕ್ಷಿತ ಸಜ್ಜನರು ಈ ವಿಧಿಯು ಅತ್ಯಾವಶ್ಯಕವಾದ ನಿತ್ಯಕರ್ಮವೆಂದು ತಿಳಿಯದೆ ಇದರ ಮೇಲೆ ಉದಾಸೀನಮಾಡಿ ಹಲ್ಲು ಹುಳಿಯುವುದೇ ಮುಂತಾದ ದಂತರೋಗವುಳ್ಳವರಾಗಿ ತಮ್ಮ ಬಾಳುವೆಯನ್ನು ದುಃಖಮಯವನ್ನಾಗಿ ಮಾಡುತ್ತಿರುವರು. ಕೆಲವರು 'ಅಗ್ನಿಮಾಂದ್ಯ, ಅಜೀರ್ಣ' ಮುಂತಾದವುಗಳಿಂದ ಯಾವಾಗಲೂ ಪೀಡಿತರಾಗಿ ದುರ್ಬಲರಾಗುತ್ತಲಿದ್ದಾರೆ. ಇನ್ನು ಕೆಲವರು ಸಾಹಸಮಾಡಿ ಪ್ರಕೃತಿಸಿದ್ಧಗಳಾದ ಹಲ್ಲುಗಳನ್ನು ತೀಳಿಸಿ, ಕೃತ್ರಿಮಗಳಾದ ಹಲ್ಲುಗಳನ್ನು ಹಾಕಿಸಿಕೊಂಡು ಯಾವುದೋ ಒಂದು ತೆರನಾಗಿ ತಮ್ಮ ಭೋಜನಾದಿ ಕಾರ್ಯಗಳನ್ನು ಸಾಗಿಸುತ್ತಲಿದ್ದಾರೆ. ಆದರೆ ಮೊದಲಿನಿಂದಲೂ ದಂತರಕ್ಷಣೆಯ ಸಲುವಾಗಿ ಜಾಗರೂಕರಾಗಿದ್ದರೆ ಮುಂದೆ ಇಂತಹ ದುರ್ದೆಶೆಯುಂಟಾಗಲಾರದು. 'ದುಃಖದಲ್ಲಿ ಎಲ್ಲರೂ ಸ್ಮರಣೆಮಾಡುವರು, ಸುಖದಲ್ಲಿ ಯಾರೂ ಮಾಡುವುದಿಲ್ಲ; ಯಾರು ಸುಖದಲ್ಲಿಯೂ ಸ್ಮರಣೆಮಾಡುವರೋ, ಅವರಿಗೆ ದುಃಖವೆಲ್ಲಿದೆ?' ಎಂಬ ಪೂರ್ವಕರಿಯ ವಾಕ್ಯವನ್ನು ಎಲ್ಲರೂ ನೆನಪಿನಲ್ಲಿಡಬೇಕು.

ಪ್ರಕೃತಿ (ಭೂಮಿ)ಯು ಭಾರತವಾಸಿಗಳ ಸಲುವಾಗಿ ಅನೇಕ ಗುಣಕಾರಿಗಳಾದ ಗಿಡಗಳನ್ನು ಹೊತ್ತಿರುತ್ತದೆ. ಆ ಗಿಡಗಳ ಮಿದುವಾದ ಹೊಸಹೊಸ ಕಡ್ಡಿಗಳು ಎಲ್ಲಿಬೇಕಾದರೂ ದೊರೆಯುತ್ತವೆ. ಯಾವ ಗಿಡದ ಕಡ್ಡಿಯಿಂದ ಸ್ವಚ್ಛತೆಯಲ್ಲದೆ ಹಲ್ಲುಗಳಿಗೆ ಜೊಸರಸದ ಲಾಭವಾಗುವುದೋ ಅಂತಹ ಕಡ್ಡಿಯಿಂದರೇ ಹಲ್ಲುಗಳು ರೋಗರಹಿತಗಳಾಗುವವಲ್ಲದೆ ಗಟ್ಟಿಯಾಗುತ್ತವೆ. ಮತ್ತು ದಂತರೋಗಕ್ಕೆ ಹೊರತಾದ ಬಗೆಬಗೆಯ ಮುಖರೋಗಗಳೂ ನಾಶವಾಗಿ ಅನ್ನದಲ್ಲಿ ರುಚಿಯೂ ಪಾಚನಶಕ್ತಿಯೂ ಹೆಚ್ಚುತ್ತದೆ. ಈಗಿನ ಸಮಯದಲ್ಲಿ ಪ್ರಚಾರವಾಗುತ್ತಿರುವ ಬ್ರಶ್ಶುಗಳಲ್ಲಿ ಈ ಮೇಲ್ಕಂಡ ಗುಣಗಳಿಲ್ಲ. ಅಲ್ಲದೆ ಇವುಗಳನ್ನು ನಿತ್ಯವೂ "ಕಾರ್ಬೋಲಿಕ, ಲೋಶನ" ಮುಂತಾದ ದ್ರವ್ಯಗಳಿಂದ ಸ್ವಚ್ಛವಾಗಿ ತೊಳೆದಿಡಬೇಕಾಗುತ್ತದೆ. ಹಾಗಿಡದೆ ಹೋದರೆ ಅಂತಹ ಬ್ರಶ್ಶುಗಳಿಂದ ಹಲ್ಲುಗಳಿಗೆ ಅವಶ್ಯವಾಗಿ ರೋಗ ತಗಲುವುದು. ಆದರೆ ಕಡ್ಡಿಗಳನ್ನು ಪ್ರತಿನಿತ್ಯ ಹೊಸಹೊಸದಾಗಿ ತೆಗೆದುಕೊಳ್ಳಬೇಕಾಗುವುದರಿಂದಲೂ, ಉಜ್ಜಿದ ಕಡ್ಡಿಗಳನ್ನು ಬಿಸಾಡಬೇಕಾಗುವುದರಿಂದಲೂ ರೋಗಗಳು ಹರಡುವ ಭೀತಿಯಿಲ್ಲ. ಬ್ರಶ್ಶು ಪಾವುಡರುಗಳಿಗಿಂತ ಗಿಡಗಳ ಹೊಸದಾದ ಮಿದುವಾದ ಕಡ್ಡಿಯು ಯಾವ ವಿಘ್ನಗಳಿಲ್ಲದೆ ಹಿತವನ್ನು ಮಾಡುವುದರಲ್ಲಿ ಎಷ್ಟೋಪಾಲು ಮಿಗಿಲಾಗಿದೆ.

ಕಿರಿಬೆರಳಿನಗಲತೆಯಿಂದ ಅವರವರ ಅಪೇಕ್ಷೆಯಂತೆ ಇದಕ್ಕೂ ಸಣ್ಣಸಣ್ಣದಾಗಿಯೂ ಹನ್ನೆರಡು ಬೆರಳುದ್ದವಾಗಿಯೂ, ಅಂಕುಡೊಂಕವಾಗಿರದೆಯೂ, ಗಂಟಿಲ್ಲದುದಾಗಿಯೂ ದೋಷರಹಿತವಾದ ಒಳ್ಳೆಯ ನೆಲದಲ್ಲಿ ಹುಟ್ಟಿರುವ ಗಿಡದಿಂದ ಆಗಲೇ ಕಿತ್ತುತಂದುದಾಗಿಯೂ ಇರುವ ಕಡ್ಡಿಯನ್ನು ಶೌಚಾದಿಕ್ರಿಯಾನಂತರ ಸ್ನಾನಕ್ಕೆ ಮುನ್ನ ಪ್ರಾತಃಕಾಲದಲ್ಲಿ ಹಲ್ಲುಜ್ಜುವುದಕ್ಕಾಗಿ ಉಪಯೋಗಿಸಬೇಕು. ಇಚ್ಛೆಯುಳ್ಳವರು ಸಾಯಂಕಾಲದಲ್ಲಿ ಮತ್ತೊಮ್ಮೆ ಸ್ನಾನಕ್ಕೆ ಮುಂಚೆ ಉಪಯೋಗಮಾಡಲುಬಹುದು.

ಕಡ್ಡಿಯನ್ನು ಮುಂಭಾಗದಲ್ಲಿ ಸಣ್ಣನಾಗಿ ಕುಟ್ಟಿ ಅಥವಾ ಹಲ್ಲುಗಳಲ್ಲಿ ಚೆನ್ನಾಗಿ ಜಗಿದು ಕುಂಚುಮಾಡಿಕೊಂಡು ಒಂದೊಂದೇ ಹಲ್ಲನ್ನು ಒಳಗೂ ಹೊರಗೂ ಹಲ್ಲು ಪೌಲುಗಡೆಯ ಒಸಡೆಗೆ ಬಾಧೆಯಾಗದ ಹಾಗೆ ಸಾವಧಾನವಾಗಿ ತಿಕ್ಕಬೇಕು. ಋತುಕಾಲ ರಸ ಮುಂತಾದುದನ್ನು ವಿಚಾರಮಾಡಿಕೊಂಡು ಆಯಾಯ ಸಮಯಕ್ಕೆ ಹಿತಕರವಾಗುವಂತಹ ಬೇಸಿಗೆ ಮತ್ತು ಶರತ್ಕಾಲಗಳಲ್ಲಿ ಪಿತ್ತನಾಶಕಗಳಾದ "ಬೇವು, ಜಾಲಿ" ಕಡ್ಡಿಗಳನ್ನೂ, ಮಳೆಗಾಲದಲ್ಲಿ ವಾತನಾಶಕಗಳಾದ "ತೋರಮತ್ತಿ, ಗಂಡುಬಿದಿರು, ಎಕ್ಕೆ" ಕಡ್ಡಿಗಳನ್ನೂ, ಚಳಿಗಾಲದಲ್ಲಿ ಕಫನಾಶಕಗಳಾದ "ಹುಲಿಗಿಲ, ಬೇವು, ಎಕ್ಕೆ, ಕಣಗಿಲು" ಕಡ್ಡಿಗಳನ್ನೂ ಉಪಯೋಗಿಸಬೇಕು. "ಬೊಳ್ಳೆ (ಚಳ್ಳೆ) ಅರೆ, ಲಕ್ಕಿ, ನಾಗಸಂಪಿಗೆ, ತಾರೆ, ಮುತ್ತುಗ, ಬೂರುಗ, (ಮತ್ತಲ, ಬೂರಲ) ಮುಗ್ಗಿ, ಅರಳೆ, ಲೋಧ್ರ (ಲೊದ್ದುಗೆ) ಗೋಣಿ, ಸೀಸ, ಆಲ" ಮುಂತಾದ ಮರಗಳ ಕಡ್ಡಿಯೂ ದಂತಧಾವನೆಗೆ ಯೋಗ್ಯವಾಗಿದೆ. ಹುಳಿಯಾಗಿಯೂ, ಉಪ್ಪಾಗಿಯೂ, ಒಣಗಿಯೂ, ಟೊಳ್ಳಾಗಿಯೂ, ದುರ್ವಾಸನೆಯುಳ್ಳುದಾಗಿಯೂ, ಲೋಳೆಯುಳ್ಳುದಾಗಿಯೂ ಇರುವ ಕಡ್ಡಿಯನ್ನು ಎಂದೂ ಉಪಯೋಗ ಮಾಡಬಾರದು. ಅರ್ಧಾಂಗವಾಯು, ಬಿಕ್ಕಳಿಕೆ, ವಾಂತಿ, ಮೂರ್ಛೆ, ಶ್ವಾಸ (ದಮ್ಮು) ರೋಗಗಳಿಂದ ವಿಶೇಷ ಪೀಡೆಯುಂಟಾದಾಗಲೂ, ಮುಖದೊಳಗೆ ಬೊಕ್ಕೆಗಳೆದ್ದಾಗಲೂ, ಅಂಗಳು, ನಾಲಿಗೆ, ತುಟಿ, ಕುತ್ತಿಗೆಗಳೊಳಗೆ ರೋಗವುಂಟಾದಾಗಲೂ, ಜ್ವರದಿಕೆ, ಮಾಗಾರ್ಯಾಸ, ಅಜೀರ್ಣ, ಹಲ್ಲುನೋವು, ಕಿವಿನೋವು, ತಲೆನೋವುಗಳುಂಟಾದಾಗಲೂ ಕಡ್ಡಿಯಿಂದ ಹಲ್ಲುಜ್ಜುವುದು ಹಾನಿಕರವಾಗಿದೆ.

ಹಲ್ಲುಗಳನ್ನು ಭದ್ರವಾಗಿಯೂ, ರೋಗರಹಿತವಾಗಿಯೂ ಇಟ್ಟುಕೊಳ್ಳುವುದಕ್ಕಾಗಿ ಸುಗಂಧವಾದ ಪುಡಿಯೇ ಮುಂತಾದುದನ್ನು ಆಗಾಗ್ಗೆ ಉಪಯೋಗಿಸುವುದೂ ಅತ್ಯಾವಶ್ಯಕವು. ಇಂಥವುಗಳನ್ನು ಉಪಯೋಗಿಸುವುದಕ್ಕೆ 'ಮಂಜನ' ವೆನ್ನುತ್ತಾರೆ. ಈ ಮಂಜನಕ್ಕಾಗಿ—೧. ಸೈಂಧವಲವಣದ ಪುಡಿಯಲ್ಲಿ ನೀರಾಗದಂತೆ ಅದಕ್ಕೆ ಸರಿಯಾದ ಸಾಸುವೆ ಎಣ್ಣೆಯನ್ನು ಕಲಸಿ ಹಲ್ಲು ಮತ್ತು ಅವುಗಳ ಬೇರು (ಮೇಲುಭಾಗ ಕೆಳಭಾಗ) ಗಳನ್ನು ಮೆಲ್ಲಮೆಲ್ಲನೆ ತಿಕ್ಕುವುದು ಬಹಳ ಒಳ್ಳೆಯದು. ಅಥವಾ ೨. ದಾಸ್ನಾ, ತೇಜಪತ್ರ, ಕೊತ್ತುಂಬರೀ ಬೀಜ, ಕಚೋರ, ಬೆಂಗಲಕೋಷ್ಠ, ಬಜೆ, ಶವಕ್ಷೀರ, ಕಂಕೋಲ, ಕರ್ಪೂರಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಸಮಭಾಗ ತೆಗೆದುಕೊಂಡು ಕುಟ್ಟಿ ಬಟ್ಟೆಯಲ್ಲಾಗಲಿ ಅಥವಾ ಬಹಳ ಸಣ್ಣ ಕಣ್ಣಿನ ಜರಡಿಯಲ್ಲಾಗಲಿ ಸೋಸಿ, ಎಲ್ಲವನ್ನೂ ಕೂಡಿಸಿಟ್ಟುಕೊಂಡು ಇದರಿಂದಲೂ ಮಂಜನ (ಹಲ್ಲುತಿಕ್ಕುವದನ್ನು) ಮಾಡುವುದು ಹಿತಕರವಾಗಿದೆ.

ಕಡ್ಡಿಯಿಂದ ಹಲ್ಲುಜ್ಜುವುದಾದಮೇಲೆ ಅದೇ ಕಡ್ಡಿಯನ್ನೇ ಹೋಳಾಗಿ ಸೀಳಿ ಎರಡೂ ಕೈಗಳಿಂದ ಬಿಲ್ಲಿನಾಕಾರವಾಗಿ ಬಾಗಿಸಿ ನಾಲಿಗೆಯಮೇಲಿನ ಹಾಗೂ ಹಿಂಭಾಗದ ಕೊಳೆಯನ್ನು ಸೂಕ್ಷ್ಮವಾಗಿ ಕೆರೆದುತೆಗೆಯಬೇಕು. ಅಥವಾ ಹತ್ತು ಬೆರಳುದ್ದವಾಗಿಯೂ, ಕಾಲಿಂಚಿಗೆ ಸ್ವಲ್ಪಹೆಚ್ಚಾದ ಅಗಲವಾಗಿಯೂ ಇರುವ ಬಂಗಾರದ ಅಥವಾ ಬೆಳ್ಳಿಯ ತಗಡಿನಿಂದ ಒಂದುಕಾಲಿಂಚಿನ ಅಗಲವಿಟ್ಟು ನಡುವೆ ಬಿಲ್ಲಿನಾಕಾರವಾಗಿ ಮಣಿಸಿರುವ ವಸ್ತುವನ್ನಾದರೂ ಮಾಡಿಸಿಕೊಂಡು ಈ ಕೆಲಸಕ್ಕಾಗಿ ಉಪಯೋಗಿಸಬಹುದು, ಆದರೆ ಇದನ್ನು ಪ್ರತಿನಿತ್ಯವೂ ಸೀಂಪೆ, ಹುಣಿಸೆ ಹುಳಿಗಳಿಂದ ಚೊಕ್ಕಟವಾಗಿ ತೊಳೆಯಬೇಕಾಗುವುದು.

ಹಲ್ಲುಜ್ಜಿ ಕಡ್ಡಿಯನ್ನೊಗೆದು ಬಾಯನ್ನು ಚೆನ್ನಾಗಿ ತೊಳೆದ ತರುವಾಯ ಎಳ್ಳೆಣ್ಣೆ ಇಲ್ಲವೆ ಸಾಸುವೆ ಎಣ್ಣೆಯ ಒಂದು ಮುಕ್ಕಳವನ್ನು (ಬಹಳ ಸಣ್ಣಗುಟುಕ) ಬಾಯಿಯಲ್ಲಿ ತುಂಬಿಕೊಂಡು ಕುಲುಕುಲು ಮುಕ್ಕಳಿಸಿ ಐದು ನಿಮಿಷಗಳಿಂದ ಇಪ್ಪತ್ತು ನಿಮಿಷಗಳವರೆಗೆ ಹಾಗೆಯೇ ಇಟ್ಟುಕೊಂಡು ಆಮೇಲೆ ಉಗುಳಬೇಕು. ಹೀಗೆ ಮಾಡುವುದರಿಂದ ಹಲ್ಲಿಗೆ ಹುಳು ಹತ್ತುವುದು, ಅಲ್ಲಾಡುವುದು, ಸೀಂಬೆಹಣ್ಣು ಮುಂತಾದ ಹುಳಿಯಾದ ಪದಾರ್ಥಸೇವನೆಯಿಂದ ಜುಳುಗುಟ್ಟುವುದು, ಒಸಡೆಯುಬ್ಬುವುದು, ಸೋರಾಗುವುದು ಮುಂತಾದ ದಂತರೋಗಗಳು ನಿವಾರಣೆಹೊಂದುವುವಲ್ಲದೆ ಹಲ್ಲುಗಳು ಭದ್ರಗಳಾಗಿ ಗಟ್ಟಿಯಾದ ಪದಾರ್ಥವನ್ನು ತಿನ್ನಲು ಸಮರ್ಥಗಳಾಗುವವು. ಅಲ್ಲದೆ ಪ್ರತಿದಿನವೂ ಬೆಳೆಯುತ್ತಿರುವ ಕಫವು ಕತ್ತರಿಸಿ ಬೀಳುವುದು, ಭೋಜನದಲ್ಲಿ ಬಹುರುಚಿ ಹುಟ್ಟುವುದು, ಅನ್ನವು ಪಚನವಾಗುವುದು, ಕಂಠಧ್ವನಿಯು ಬಲಿಷ್ಠವೂ ಮಂಜುಳವೂ ಆಗುವುದು, ಮುಖದಲ್ಲಿ ಕಾಂತಿ ಹೆಚ್ಚಿ ಗುಲಾಬಿಯ ಬಣ್ಣ ಬರುವುದು, ಗಂಟಲು ಒಣಗುವುದು ನಿವಾರಣೆಯಾಗುತ್ತದೆ.

ದಂತಧಾವನ ವಿಧಿಯು ಎಷ್ಟೋ ಜನರಿಗೆ ತಿಳಿಯದಿರುವುದರಿಂದ ಇದರ ಪ್ರಚಾರವು ದಿನೇದಿನೇ ಕ್ಷೀಣವಾಗುತ್ತ ನಡೆದಿದೆ. ಆದುದರಿಂದ ದಂತರೋಗವು ಸರ್ವತ್ರವ್ಯಾಪಿಸಿಕೊಳ್ಳುತ್ತಿದೆ. ಮಹಾಜನರು ಸುಲಭವಾದ ಈ ಆಚರಣೆಯನ್ನು ಚೆನ್ನಾಗಿ ತಿಳಿದುಕೊಂಡು ಪ್ರತಿನಿತ್ಯವೂ ಆಚರಿಸಿ ಆರೋಗ್ಯಾಯುಷ್ಯಗಳನ್ನು ಹೊಂದಬೇಕಾಗಿ ಆಯುರ್ವೇದಾಚಾರ್ಯ ಶ್ರೀ ಪಂ. ರಾಜೇಶ್ವರದತ್ತಶಾಸ್ತ್ರಿಗಳವರು ಸನಾತನ ಧರ್ಮದಲ್ಲಿ ಬರೆದಿದ್ದಾರೆ. ಕನ್ನಡಿಗರ ಹಿತಕ್ಕಾಗಿ ಈ ಬರವಣಿಗೆ ಯೋಗ್ಯವಾಗಿದೆ ಎಂದು ಮೃತ್ಯುಂಜಯೌಷಧಾಲಯದ ಅಧ್ಯಕ್ಷರಾದ ಬೆಂಗಳೂರಿನ ಶ್ರೀ|| ಪಂ|| ಶಿವಕುಮಾರಸ್ವಾಮಿ (ಆಯುರ್ವೇದ ಬೃಹಸ್ಪತಿ) ಇವರು ಅಭಿಪ್ರಾಯಪಟ್ಟುದರ ಮೇಲೆ ಕನ್ನಡಿಸಿದುದಾಗಿದೆ.

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆ. ಹೈಕೋರ್ಟಿನಲ್ಲಿ ಅಫೀಲು ಅಫಿಡವಿಟ್.

ಡಿಫೆನ್ಸ್ ವಕೀಲರ ಕಾರಣಗಳು.

ಬೆಂಗಳೂರು ಜ. ೩

ಅಡ್ವೋಕೇಟ್ ಮಿ|| ಪಿ. ರಾಜರತ್ನಂರವರು ನಿನ್ನೆ ಹೈಕೋರ್ಟಿನಲ್ಲಿ ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯಲ್ಲಿ ಅಪೀಲು ಹೂಡಿದರು. ಅಪೀಲು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಸೆಕ್ಷನ್ ೪೧೦ ರ ಪ್ರಕಾರ ಹೂಡಲಾಗಿದೆ. ಸೆಷನ್ಸ್ ಜಡ್ಜರ ಕೋರ್ಟಿನ ರಿಕಾರ್ಡುಗಳನ್ನು ತರಿಸಿ, ಈ ಕೆಳಗೆ ಕೊಟ್ಟಿರುವ ಕಾರಣಗಳಿಂದ ಸೆಷನ್ಸ್ ಜಡ್ಜರು ಅಪರಾಧಿಗಳಿಗೆ ವಿಧಿಸಿರುವ ಶಿಕ್ಷೆಯನ್ನು ತೆಗೆದು ಹಾಕಬೇಕೆಂದು ಅಪೀಲಿನಲ್ಲಿ ಪ್ರಾರ್ಥಿಸಲ್ಪಟ್ಟಿದೆ.

೧. ಇಂ. ಪೀ. ಕೋ. ೩೬೬ ನೆಯ ಸೆಕ್ಷನ್ನಿಗೋಸ್ಕರ ಹುಡುಗಿಯು ಮೈನರ್ ಎಂಬುದು ಸಮರ್ಪಕವಾಗಿ ಸ್ಥಾಪಿತವಾಗಿಲ್ಲ.

೨. ಎಕ್ಸ್. ಪಿ. ೪ ನೆಯ ಜಾತಕವನ್ನು ನಂಬಲಾಗುವುದಿಲ್ಲ. ಅದು ಒಂದು ಸುಳ್ಳು ಮೊಕದ್ದಮೆಗೆ ಸಹಕಾರಿಯಾಗಿದೆ.

೩. ಎಕ್ಸ್. ಪಿ. ೩ ರ ಸ್ಕೂಲು ರಿಜಿಸ್ಟರಿನ ಎಂಟ್ರಿಯೂ ನಂಬಲಾಗುವುದಿಲ್ಲ. ಅದರಲ್ಲಿ ನಮೂದಿಸಿರುವ ವರ್ಷವು ಅಂದಾಜಿನ ಮೇಲೆ ಬರೆದಿದೆ.

೪. ಹುಡುಗಿಯ ವಯಸ್ಸಿನ ಬಗ್ಗೆ ಒದಗಿರುವ ಮೆಡಿಕಲ್ ಸಾಕ್ಷ್ಯವನ್ನು ನಂಬಲಾಗಿದೆ.

೫. ಹುಡುಗಿಗೆ ಸ್ವತಂತ್ರ ಮೆಡಿಕಲ್ ಪರೀಕ್ಷೆಯಾಗಬೇಕಾಗಿತ್ತು. ಹಾಗೆ ನಡೆಯಕೂಡದೆಂಬ ಸೆಷನ್ಸ್ ಜಡ್ಜರ ಹುಕುಂ ಅಪರಾಧಿಗಳಿಗೆ ತೀರ ಅನ್ಯಾಯಮಾಡಿದೆ.

೬. ಆಗಸ್ಟ್ ೨೨ ನೆಯ ತಾರೀಖು ಹುಡುಗಿಯನ್ನು ಅಪಹರಣ ಮಾಡಿದರೆಂಬುದರ ಉದ್ದೇಶ ಅವಳನ್ನು ಮಹಮ್ಮದೀಯ ಜಾತಿಗೆ ಸೇರಿಸುವುದಕ್ಕೋಸ್ಕರ.

೭. ಕೆಳಗಿನ ಕೋರ್ಟಿನಲ್ಲಿ ಅಪರಾಧಿಗಳ ಮೇಲೆ ಮೂರು ಅಡೀಷನಲ್ ಚಾರ್ಜುಗಳನ್ನು ಹೊರಿಸುವುದು ತಪ್ಪು.

೮. ಹುಡುಗಿಯ ಅಪಹರಣ ಕಾಲದಲ್ಲಿ ಹುಡುಗಿಯು ಪ್ರಾಸಿಕ್ಯೂಷನ್ ಪರ ೭ ನೆಯ ಸಾಕ್ಷಿಯ ವಶದಲ್ಲಿದ್ದಳು ಎಂದು ಕೆಳಗಿನ ಕೋರ್ಟಿನ ತೀರ್ಪು ತಪ್ಪು. ಇದು ಅಪರಾಧಿಗಳಿಗೆ ಅಕ್ಷೇಪ್ಯವನ್ನುಂಟುಮಾಡಿರುತ್ತದೆ.

ಹುಡುಗಿಯ ಸಾಕ್ಷ್ಯವು ನಂಬಲನರ್ಹವಾಗಿದೆ. ಅದು ಸುಳ್ಳು ಸಾಕ್ಷ್ಯ. ಅದನ್ನು ಅವಳಿಗೆ ಯಾರೋ ಹೇಳಿಕೊಟ್ಟಿರುತ್ತಾರೆ.

ಪೋಲೀಸ್ ಸ್ಟೇಷನ್ನಿನಲ್ಲಿ ಹಾಜರಿದ್ದ ಮರ್ಯಾದಸ್ಥರಾದ ಹಿಂದುಗಳು ಸರ್ಕಾರೀ ಅಧಿಕಾರಿಗಳು ಇವರುಗಳನ್ನು ಪರೀಕ್ಷಿಸದೆ ಇರುವುದು ಪ್ರಾಸಿಕ್ಯೂಷನ್ನಿಗೆ ಮೊಕದ್ದಮೆಯಲ್ಲಿ ಸಂದೇಹವನ್ನುಂಟುಮಾಡಿದೆ.

ಡಿಫೆನ್ಸಿಗೆ ವ್ಯತಿರಿಕ್ತರಾಗಿ ಕೆಳಗಿನ ಕೋರ್ಟು ಕೆಲವು ಸಾಕ್ಷಿಗಳನ್ನು ಪರೀಕ್ಷಿಸಿದುದು ತಪ್ಪು. ಅವರನ್ನು ಕೋರ್ಟುಸಾಕ್ಷಿಗಳಾಗಿ ಎಣಿಸಬೇಕಾಗಿರಲಿಲ್ಲ.

ಕೆಳಗಿನ ಕೋರ್ಟು ಮಿಸ್ ಕ್ಯಾಸ್ಪರ್ ಮತ್ತು ಡಾಕ್ಟರ್ ಪುಟ್ಟಣ್ಣ ಇವರುಗಳನ್ನು ಕೋರ್ಟು ಸಾಕ್ಷಿಗಳಾಗಿ ಪರೀಕ್ಷಿಸಬಾರದಾಗಿತ್ತು.

ಮೊಕದ್ದಮೆಯು ನಡೆಯುವ ಕಾಲದಲ್ಲಿ ಪ್ರತಿ ಹೆಜ್ಜೆಯಲ್ಲಿಯೂ ಪ್ರಾಸಿಕ್ಯೂಷನ್ ತಮ್ಮ ಉದ್ದೇಶವನ್ನು ನೆರವೇರಿಸುವುದಕ್ಕೋಸ್ಕರ ಮೊಕದ್ದಮೆಯನ್ನು ಅಭಿವೃದ್ಧಿ ಪಡಿಸಿ ತಮಗೆ ಅನುಕೂಲ ಮಾಡಿಕೊಳ್ಳುತ್ತಿದ್ದರು.

ಮೊಕದ್ದಮೆಗೆ ಕೋಮುವಾರು ರಂಗು ಕೊಡಲ್ಪಟ್ಟಿತು. ಮೊಕದ್ದಮೆಯ ಸಂದರ್ಭಗಳು ಅಪರಾಧಿಗಳ ವೈರಿಗಳಿಗೆ ಸಹಾಯಮಾಡಿದವು.

ಮೊಕದ್ದಮೆಯ ವಿಚಾರಣೆಯು ನ್ಯಾಯವಾಗಿ ನಡೆಯಬೇಕಾದ ರೀತಿಯಲ್ಲಿ ನಡೆಯಲಿಲ್ಲ.

ಕೆಳಗಿನ ಕೋರ್ಟು ಡಿಫೆನ್ಸ್ ಸಾಕ್ಷಿಗಳ ಸಾಕ್ಷ್ಯವನ್ನು ಅವಗಾಹನೆಗೆ ತರದೇ ಇದ್ದುದು ತಪ್ಪು. ಶಿಕ್ಷೆಯು ಅನ್ಯಾಯವಾಗಿದ್ದು ಕಠಿಣವಾಗಿದೆ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಬೇಕು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 9

ಸೆಲ್ಫ್ ಇಂಗ್ಲೀಷ್ ಸ್ಟಡಿ.

ಅಅಅ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೨ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೋ. ನಂ. 1246, ಮದರಾಸು.

K. N. BENSON & Co.,
[8] P. B. 1246, MADRAS

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂಮೆಂಟ್ಸುಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಹಿರಾರು ಘಂಟೆಯನ್ನು ತೋರಿಸುವುವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.

ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್, ಮದ್ರಾಸು.

[9] THE CITY MART,
168, China Bazaar, MADRAS.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 17

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.



ಡಿಸ್ಟ್ರಿಕ್ಟ್‌ಬೋರ್ಡು, ರೆಪ್ರೆಜೆಂಟೇಟೀವ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬೇಕಾಗುವ ಓಟಿನ ಬ್ಲಾಕುಗಳು ಮತ್ತು ಫೋಟೋ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. [53]

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಖಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬಿ. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ರ್‍ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವನೋವು, ಗಂಟುನೋವು ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಚಿಜ್ಜಿದವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕುಮದ್ದುಗಳು, ಹೊಮ್ಯೊಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ಹುಳಮೇಯುವ ರೋಗ, ದದ್ದು, ತುರಸುವ ನಂಜೆ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಠಿಣ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ಕಾಯಗಳು ನಿಸ್ತೇಜಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತ ಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಅತ್ಯಂತರಕ್ತವಂತೆಯೇ ಯುವಕಜನಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಬಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,
[18] (ಹಂಪನಕಟ್ಟೆ), 21, ಮಂಗಳೂರು.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (8)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	....	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	....	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ವೀರಶೈವಮತವಿಮಾಂಸಾ	....	೩ ಆಣೆ
ಶಿವಶಕ್ತಿವಿಲಾಸ	....	೨ ಆಣೆ
ಶ್ರೀಗುರುತತ್ತ್ವಪದಗಳು	....	೨ ಆಣೆ
ಶಿವಸ್ತವಶಿರೋಮಣಿ	....	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	....	೪ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಶ್ರುತಿಸಾರಭಾಷ್ಯ	....	೫ ಆಣೆ
ಆಗಮಪರಿಜ್ಞಾನ	....	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	....	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)		೬ ಆಣೆ
पंडित श्रीकाशीनाथशास्त्री यांचें भाषण (मराठी)	....	८ आणे.
Speeches by Pandit Shri Kashinatha Shastri (*English*)		12 As.
ವೇದೋಕ್ತಶಿವಪೂಜಾವಿಧಿ	....	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	....	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	೧೨ ಆಣೆ
ಸಚಿತ್ರ ರೇಣುಕವಿಜಯ	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	....	೧ ರೂ.
लिंगधारणचंद्रिका (संस्कृत)	....	३ रु.
महानारायणोपनिषत् (वीरशैवभाष्य-संस्कृत)	....	१ रु.
वीरशैवेंदुशेखर (संस्कृत)	....	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶೋಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂತಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[52] ಪೋ. ಬಾ. ೫೧೧, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ನೇ ಜನವರಿ ೧೯೩೪ [ಸಂಚಿಕೆ ೩೮

ಶಾಸ್ತ್ರಿಗಳು ಬೇಕಾಗಿದೆ.

ಮಳಲಿ ಮಠದಿಂದ ಹುಂಚದಕಟ್ಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾನಂದಾಶ್ರಮ ಸಂಸ್ಕೃತಪಾಠಶಾಲೆಗೆ ವೈದಿಕ ಜ್ಯೋತಿಷ ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದ್ದಾರೆ. ಬರಲಪೇಕ್ಷೆಯುಳ್ಳವರು ಈ ಕೆಳಗಿನ ಅಡ್ರೆಸ್ಸಿಗೆ ಈ ತಿಂಗಳ ಆಖೈರೊಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಯೋಗ್ಯತೆಗನುಸಾರವಾಗಿ ಸಂಬಳವು ಕೊಡಲಾಗುವುದು.

ಪಾಠಶಾಲಾ ವ್ಯವಸ್ಥಾಪಕ,
ಕ್ಯಾರಂದೂರು ಅಯ್ಯಪ್ಪಗೌಡ,
ಮಳಲಿಮಠ,
ಪೋ|| ಆಗಾ ಡಿ|| ಶಿವಮೊಗ್ಗ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನದ ಸಂಚಾರಿಟನ ಶುಭಾಗಮನ ಮಹೋತ್ಸವ ಮೆಟ್ರಿ.

ಶ್ರೀಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೮ ಪಟ್ಟಾಧ್ಯಕ್ಷ ಶ್ರೀಮನ್ಮಾಗಲೂಟಿ ಭಕ್ತಾವರ ಶಿವಾಚಾರ್ಯ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸಂಚಾರಿಟನ ಗುರುಸ್ಥಾಧಿಕಾರಿಗಳಾದ ಶ್ರೀಮತ್ಕಾಂಚಿನ್ಯ ಪುರಶಿಲಾ ಮಠದ ಪಟ್ಟಾಧ್ಯಕ್ಷ ಶ್ರೀ ಶಿವಶಂಕರ ಶಿವಾಚಾರ್ಯಸ್ವಾಮಿಗಳು (ವೇದಾಂತಭೂಷಣ) ಇವರು ಧರ್ಮೋದ್ಧಾರಾರ್ಥವಾಗಿ ದೇಶ ಮಧ್ಯದಲ್ಲಿ ಸಂಚರಿಸುತ್ತ ಮಹಾಸಂಸ್ಥಾನದ ಸರ್ವಾಧಿಕಾರಿಗಳಾದ ಶಾಡಿಶಕ್ತಿ ಕಂಬಾಳಮಠದ ವೇ|| ಸಣ್ಣಮಲ್ಲಯ್ಯನವರು ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ಯುದ್ಮಗನೂರು ಮುಕ್ಕಾಮಿನಿಂದ ತಾ|| 25-12-33 ಸಾಯಂಕಾಲ 5 ಘಂಟೆಗೆ ಆನೆ ಕುದುರೆ ಮುಂತಾದ ಸಕಲ ಸಿಬ್ಬಂದಿಯೊಡನೆ ಹೊಸಪೇಟೆ ತಾಲೂಕ ಮೆಟ್ರಿಗ್ರಾಮಕ್ಕೆ ದಯಮಾಡಿಸಿದರು. ಮಠಮುಹಸ್ತು ಗೌಡರು ಶಾನಭೋಗರು ಮುಂತಾದ ಪುರಪ್ರಮುಖರು ಭಕ್ತಮಾಹೇಶ್ವರರು ಇತ್ತಕಪಾಲ ಸಮೇತರಾಗಿ ಭಜನಾಸಂಘದವರಿಂದಲೂ ಬಾಜಾಭಜಂತ್ರೀ ಮುಂತಾದ ಮಂಗಲವಾದ್ಯವೈಭವದಿಂದಲೂ ಶ್ರೀಗಳವರನ್ನು ಎದುರುಗೊಂಡು ಫಲಪುಷ್ಪಹಾರಗಳನ್ನು ಸಮರ್ಪಿಸಿದನಂತರ ಉತ್ಸವವು ಸಕಲ ಬಿರುದಾವಳಿಗಳೊಡನೆ ಅತ್ಯಂತವೈಭವದಿಂದ ರಾಜಬೀದಿಯಲ್ಲಿ ಹೊರಟು ಪುರದ ಮುಂಭಾಗದಲ್ಲಿರುವ ನಂದೀಶ್ವರನ ದೇವಸ್ಥಾನಕ್ಕೆ ಬಂದು ತಲ್ಪಿತು. ಅಲ್ಲಿ ಅಲಂಕರಿಸಲ್ಪಟ್ಟ ಭವ್ಯತರವಾದ ಪೀಠದ ಮೇಲೆ ಶ್ರೀ ಸ್ವಾಮಿಗಳವರು ಮಂಡಿಸಿದ ನಂತರ ತಮ್ಮ ಅಮೃತವಾಣಿಯಿಂದ ಪಂಡಿತರಿಗೂ ಪಾಮರರಿಗೂ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಶ್ರೀ ಜಗದ್ಗುರು ಪಂಚಾಚಾರ್ಯ ಭಗವತ್ಪಾದರು ಮಹಾಲಿಂಗಗಳಿಂದವತರಿಸಿ ಕುಂಭಜಾದಿ ಮಹರ್ಷಿಗಳಿಗೆ ಶಿವತತ್ತ್ವೋಪದೇಶವನ್ನು ಮಾಡಿ ಪರಮಪವಿತ್ರವಾದ ವೀರಶೈವಮತವನ್ನು ಸ್ಥಾಪನಮಾಡಿದ ವಿಷಯವು "ಸವೀರಶೈವ ಸದ್ಧರ್ಮಸ್ತಮಸ್ತಿ ಜಗತ್ತ್ರಯೇ" ಎಂಬ ಶಿವಾಗಮೋಕ್ತಿಗನುಸಾರವಾಗಿ ಬೋಧಿಸಿದರು. ಅನಂತರ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" "ಶ್ರೀಮನ್ಮಾಗಲೂಟಿ ಭಕ್ತಾವರ ಶಿವಾಚಾರ್ಯಮಹಾರಾಜಕೀ ಜೈ" ಎಂಬ ಜಯಘೋಷದೊಡನೆ ವಿಸರ್ಜಿಸಲ್ಪಟ್ಟಿತು.

ತಾ|| 29-12-33 ಶುಕ್ರವಾರ ಸದರಿ ಗ್ರಾಮದ ಮ|| ರಾ|| ರೆಡ್ಡಿಶಿವಮೂರಪ್ಪ ಪಟ್ಟು ಕಿಲ್ಪನವರ ಪ್ರಾರ್ಥನೆಯ ಮೇರೆಗೆ ಅವರ ಗೃಹಕ್ಕೆ ಉತ್ಸವದೊಡನೆ ಆಗಮಿಸಿ ಪಾದಪೂಜೆಯನ್ನು ಕೀರಿಸಿಕೊಂಡು ಸಾಯಂಕಾಲ 5 ಘಂಟೆಗೆ ದರ್ಬಾರಿಗೆ ಆಗಮಿಸಿದರು. ಮ|| ರಾ|| ಪಂಚಾಕ್ಷರಲು ಶಿವಲಸಕ್ಷನವರ ಪ್ರಾರ್ಥನೆಯಮೇರೆಗೆ ತಾ|| 1-1-34 ಸೋಮವಾರ ಉತ್ಸವದೊಡನೆ ದಯಮಾಡಿಸಿ ಪಾದಪೂಜೆಯನ್ನು ಕೀರಿಸಿಕೊಂಡು ದರ್ಬಾರು ಕಚೇರಿಗೆ ಸಾಯಂಕಾಲ 4 ಘಂಟೆಗೆ ಆಗಮಿಸಿದರು. ಈ ಮೆಟ್ರಿ ಗ್ರಾಮದ ಸಮಸ್ತ ಭಕ್ತಮಾಹೇಶ್ವರರ ಗುರುಕಾಣಿಕೆಯನ್ನು ಸಮರ್ಪಿಸಿಕೊಂಡು ತಾ|| 2-1-34 ಮಂಗಳವಾರ ಯೇಳುಬೆಂಚಿ ಗ್ರಾಮಕ್ಕೆ ದಯಮಾಡಿಸಿದರು.

ಬೋರ್ಡ್‌ಸ್ಕೂಲ್ ಹೆಡ್ಮಾಸ್ಟರ್.
ಯಂ. ಮಹಾದೇವಯ್ಯ, ಮೆಟ್ರಿ.

ಧರ್ಮಾಭಿಮಾನಿಗಳಿಗೆ ಸುಸಂಧಿ.

ಶ್ರೀ ರಂಗಯ್ಯರ್ ಇವರು ಧರ್ಮನಾಶಕವಾದ 'ಮಂದಿರಪ್ರವೇಶ' ದ ಬಿಲ್ಲನ್ನು ತಂದದ್ದು ಸರ್ವಶ್ರುತವಷ್ಟೆ! ಅದರ ಸಲುವಾಗಿ ಮುಂಬಯಿ ಸರಕಾರದವರು ಜನರ ಅಭಿಪ್ರಾಯವನ್ನು ಕೇಳಿರುವರು. ಅಸ್ಪೃಶ್ಯರು ಮಂದಿರಪ್ರವೇಶಮಾಡುವದೂ, ಅಲ್ಲಿ ದೇವರಪೂಜೆ ಮಾಡುವದೂ ಸ್ಪೃಶ್ಯರ ಧರ್ಮಕ್ಕೆ ವಿರೋಧವಾಗಿರುವದು. ಇದರಂತೆ ಅಭಿಪ್ರಾಯವುಳ್ಳವರ ಸೋಯಿ ದೆಶೆಯಿಂದ ಮಂದಿರಪ್ರವೇಶದ ವಿರೋಧ ಠರಾವು ಕರ್ನಾಟಕಧರ್ಮರಕ್ಷಕಸಭೆಯಲ್ಲಿ ಮಂಜೂರ ಆಗಿದೆ. ಅದನ್ನು ಮುದ್ರಿಸಿರುತ್ತೇವೆ. ಕೆಳಗೆ ಬರೆದ ವಿಳಾಸಕ್ಕೆ ಕಾರ್ಡ ಬರೆದರೆ, ಠರಾವುಗಳ ಫಾರ್ಮುಗಳನ್ನು ಕಳುಹಿಸುತ್ತೇವೆ. ಧರ್ಮಾಭಿಮಾನಿಗಳು ಫಾರ್ಮುಗಳನ್ನು ತರಿಸಿಕೊಂಡು ಅದರಮೇಲೆ ಜನರ ಸಹಿಮಾಡಿಸಿ ಸರಕಾರಕ್ಕೆ ಕಳುಹಿಸಿ ಧರ್ಮರಕ್ಷಣೆಯನ್ನು ಮಾಡಬೇಕಾಗಿ ಬೇಡಿಕೊಳ್ಳುತ್ತೇವೆ.

ವಿಳಾಸ—ಗೋವಿಂದ ಭೀಮಾಚಾರ್ಯಗೋಶಿ,
ಮಾಳಗುಡ್ಡ, ಧಾರವಾಡ.
ಕಾರ್ಯದರ್ಶಿ—ಕ-ಧ-ರ-ಸಭೆ ಧಾರವಾಡ.

ನೀಲನಾಗಿಣಿಗೆ ಗಡೀಪಾರು ಶಿಕ್ಷೆ.

ಕಲ್ಕತ್ತೆಯ ಹುಚ್ಚಾಸ್ಪತ್ರೆಯಲ್ಲಿಡಲ್ಪಟ್ಟಿದ್ದ (ಗಾಂಧಿಯವರ ಶಿಷ್ಯಳು) ನೀಲನಾಗಿಣೀದೇವಿಗೆ ನಿಜವಾಗಿಯೂ ಹುಚ್ಚು ಹಿಡಿದಿಲ್ಲವೆಂದೂ, ಅವಳು ಉದ್ದೇಶಪೂರ್ವಕವಾಗಿ ಹುಚ್ಚರಂತೆ ನಟಿಸುವಳೆಂದೂ ತಿಳಿದು ಬಂದದ್ದರಿಂದ, ಪೋಲೀಸರು ಅವಳನ್ನು ಡಿ|| ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಿಸಿದರು. ಅಲ್ಲಿ ಅವಳು ತನಗೆ ಮನೆಮಠಗಳಾವುವೂ ಇಲ್ಲವೆಂದು ಒಪ್ಪಿಕೊಂಡದ್ದರಿಂದ ಅವಳನ್ನು ಗಡೀಪಾರು ಮಾಡಬೇಕೆಂದು ಅಪ್ಪಣೆಮಾಡಿರುವರು. ಅವಳಿಗೆ ಒಂದು ಗಂಡು ಮಗುವಿದ್ದು ಗಾಂಧಿಯವರು ಅದನ್ನು ಯಾರ ಪೋಷಣೆಗೋ ವಹಿಸಿರುವರಂತೆ! ಪೋಲೀಸರು ಆ ಮಗುವನ್ನೂ ಅವಳ ಜೊತೆಯಲ್ಲಿಯೇ ಗಡೀಪಾರ್ ಮಾಡಬೇಕೆಂದಿರುವರು.

ತಿರುವಾಂಕೂರು ಸಂಸ್ಥಾನದಲ್ಲಿ ಗಾಂಧಿಯವರ ಕಾರ್ಯಕ್ರಮಕ್ಕೆ ಅಡ್ಡಿ.

ತ್ರಾವಣಕೋರ್ ಸಂಸ್ಥಾನದ ಸರಕಾರದವರು ಗಾಂಧಿಯವರೊಡನೆ ತಮ್ಮ ಸಂಸ್ಥಾನದ ಸರಕಾರಿ ಅಧಿಕಾರಿಗಳಾರೂ ವಿದ್ಯಾರ್ಥಿಗಳೂ ಸಹಕರಿಸಕೂಡದೆಂದು ಹುಕುಂ ಹೊರಡಿಸಿದ್ದಾರೆ.

ಬಿಳೀ ಆನೆ!

ತುಂಗಾರ್ ಎಂಬ ಊರಿನಲ್ಲಿ ಒಂದು ಸಾಕಿದ ಹೆಣ್ಣಾನೆಯು ಒಂದು ಬಿಳೀ ಮರಿಯನ್ನು ಹಾಕಿರುವದಂತೆ! ಇದೇ ಪ್ರಾಂತದಲ್ಲಿ ಈ ಮೊದಲು ಒಂದು ಬಿಳೀ ಆನೆಯು ಹಿಡಿಯಲ್ಪಟ್ಟಿತ್ತು. ಅದನ್ನು ಅಮೇರಿಕಾ ಮತ್ತು ಯುರೋಪ್‌ಖಂಡಗಳಲ್ಲಿ ಸುತ್ತಿಸಿಕೊಂಡು ಬಂದರು. ಆದರೆ ಅದು ಮುಂದೆ ಬಹುದಿವಸ ಬದುಕದೆ ಮೃತಿಯನ್ನೈದಿತು. ಈ ಸಾರೆಯೂ ಜನರ ದೃಷ್ಟಿ ತಗಲಿ ಆನೆಯು ಮೃತಿಯನ್ನೈದಬಹುದೆಂಬ ಭಯದಿಂದ ಮಾವಟಿಗನು ಆನೆಯನ್ನೂ, ಮರಿಯನ್ನೂ ಬೇರೊಂದು ದೂರಪ್ರದೇಶಕ್ಕೆ ಸಾಗಿಸಿರುವನಂತೆ!

ರೆಕ್ಕೆಯ ಭೂತ!

ಜರ್ಮನಿಯ ಡಾಕ್ಟರ್ ಗರ್ಲಿಚ್ ಎಂಬವರು ಇದುವರೆಗೆ ಪ್ರಪಂಚದಲ್ಲಿ ತಯಾರಿಸಲ್ಪಟ್ಟಿರುವ ಎಲ್ಲ ಯುದ್ಧಸಾಧನಗಳಿಗಿಂತಲೂ ಅತ್ಯಂತ ಭಯಂಕರವಾದ ಒಂದು ಹೊಸ ತರಹದ ಗುಂಡನ್ನೂ ಅದನ್ನು ಹಾರಿಸಲು ಒಂದು ಹೊಸ ತರಹದ ಬಂದೂಕವನ್ನೂ ತಯಾರಿಸಿರುವರು. ಡಾಕ್ಟರ್ ಗರ್ಲಿಚ್‌ರವರ ಹೇಳಿಕೆಯಂತೆ ಈ ಗುಂಡು ಒಂದು ಸೆಕೆಂಡಿಗೆ 5,800 ಅಡಿ ಅಥವಾ ಒಂದು ಘಂಟೆಗೆ 4,000 ಮೈಲುಗಳ ದೂರ ಪ್ರಯಾಣ ಮಾಡಬಲ್ಲದಂತೆ! ಈ ಗುಂಡಿನಿಂದ ಎಷ್ಟು ವೇಗವಾಗಿ ಹಾರಾಡುತ್ತಿರುವ ಏರೋಪ್ಲೇನನ್ನಾದರೂ ಗುರಿತಪ್ಪದೆ ಸುಟ್ಟುಬಿಡಬಹುದಂತೆ! ಇದು ತನ್ನ ಅಸಾಧಾರಣವಾದ ಶಕ್ತಿ ಮತ್ತು ವೇಗಗಳಿಂದ ಅರ್ಧ ಅಂಗುಲ ದಪ್ಪವಾದ ಸರ್ವೋತ್ಕೃಷ್ಟವಾದ ಉಕ್ಕಿನ ತಗಡನ್ನಾದರೂ ಭೇದಿಸುವದಂತೆ! ಇದು ವಿಚಿತ್ರ ಆಕಾರವುಳ್ಳದ್ದಾಗಿ ರೆಕ್ಕೆಗಳಿಂದ ಕೂಡಿರುವದರಿಂದ 'ರೆಕ್ಕೆಯ ಭೂತ' ವೆಂದು ಕರೆಯುವರು. ಇದನ್ನು ತಮ್ಮ ವಶಪಡಿಸಿಕೊಳ್ಳಬೇಕೆಂದು ಯುರೋಪಿನ ಅನೇಕ ರಾಷ್ಟ್ರಗಳ ಸರಕಾರದವರು ಮಹತ್ಪ್ರಯತ್ನವನ್ನು ಮಾಡುತ್ತಿರುವರು. ಡಾಕ್ಟರ್ ಗರ್ಲಿಚ್‌ರವರು ಕೆಲವು ಕಾಲ ಇಂಗ್ಲೆಂಡಿನಲ್ಲಿ ವಾಸವಾಗಿದ್ದು ಸದ್ಯಃ ಡೆನ್ಮಾರ್ಕ್ ದೇಶಕ್ಕೆ ಸೇರಿದ 'ಫ್ಯಾನೋ' ದ್ವೀಪದಲ್ಲಿ ವಾಸಮಾಡುತ್ತ, ಅಲ್ಲಿಗೆ ಸಮೀಪದಲ್ಲಿರುವ ಡೆನ್ಮಾರ್ಕ್‌ದೇಶದ ಸಿಡಿಮದ್ದುಗಳ ಕಾರ್ಖಾನೆಯವರೊಡನೆ 'ರೆಕ್ಕೆಯಭೂತ' ದ ವಿಷಯವಾಗಿ ವ್ಯವಹಾರ ಮಾಡುತ್ತಿರುವರು. ಈ ಮಧ್ಯೆ ಡೇನಿಷ್ ಸರಕಾರದವರು ಗರ್ಲಿಚ್‌ರವರನ್ನು ಗಡೀಪಾರು ಮಾಡಬೇಕೆಂದು ಆಲೋಚಿಸುತ್ತಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

Mr. Gandhi's Latest Crusade

DANGER TO SOCIETY

SIR AZIZUDDIN AHMED'S CRITICISM.

It is only in consonance with his well known high sense of honour that Mr. Gandhi should have decided, as he has now publicly announced, to confine his activities to the harijan cause. Thus for the unexpired term of imprisonment to which he was sentenced in August last he drops out of politics, or he appears to do so. But are his present activities as politically innocent as they seem? His present tour of India differs from his previous tours in that, while his former mission was frankly political and anti-Government, his journeys to-day are taken with a professedly socio-religious object, the emancipation of the harijans from age-old caste tyranny. Thus it would seem that Mr. Gandhi has turned to the path of peace and social reconstruction. That, at least, is the picture of himself presented by Mr. Gandhi to the public to-day.

But is his disassociation from politics really more than nominal? The question is not asked in derogation of the honourable way in which he has decided to utilise the year that he was destined, but for his fast, to spend in Yeravada Gaol. No doubt he has convinced himself of the innocence of his present crusade. But are his efforts to help the depressed classes to a new sense of manhood and liberty really free of those disruptive features that marked his civil disobedience programme in the past? Civil Disobedience aimed at the overthrowal of Government as established by law. It was admittedly revolutionary. Mr. Gandhi's harijan crusade aims at the overthrowal of the ancient caste system and the very social foundations of Hindu India. It is not merely revolutionary; it seeks to bring about a social earthquake, the end of which no one can see. Civil disobedience gained its power from the patriotic appeal against an alien rule. The harijan crusade makes its appeal to humanity, to those basic sympathies that are common to mankind. But both movements are like in their daring and revolutionary nature, seeking as they do respectively to change by direct action the political and social foundations on which India's life and welfare rest.

The connection between the two movements is emphasised by the fact that their promoter is known to be at one with Pandit Jawaharlal Nehru in his socialistic ideals. Mr. Gandhi exhibits in action and speech little of the Pandit's hotheadedness and intransigence. But underneath his quiet methods and moderate manners Mr. Gandhi is as much an iconoclast and a rebel against the present social order as is the Pandit. They are really acting in unison for the destruction of society in India and its reconstruction on Bolshevistic lines. Let there be no mistake about this. If the essential destructiveness of the two movements were not crystal-clear, confirmation enough is to be found in the public utterances of the two men and specially in the Pandit's phrase, summarising his ideals, "the divestment of vested interests."

It is little wonder that Hindu society is moved as it has never been before by the threat held out to it by Mr. Gandhi's crusade. Whether he has thought out the implications of his campaign may be perhaps doubted. He is first and last an idealist and a dreamer of political Utopias. But, whether he intends it or not, the success of his harijan movement must mean the total destruction of Hindu society and those religious doctrines of caste and Karma upon which it had been established for thousands of years. At least it may be assumed that the cooler-headed and more practical Pandit knows whither he and his revered leader are going and whither they hope to lead India. The objects of the two men are really identical—Communism naked and unashamed. The Pandit seeks to bolshevise property; the Mahatma strikes at the roots of the Hindu faith, seeking to destroy the birthright of caste Hindus acquired, as they believe, through the merits and virtues of their past lives, according to their faith in transmigration of souls and the law of Karma. If the Pandit preaches irreligion through the godless doctrine of Communism, Mr. Gandhi is attacking religion with a subtler and sharper weapon in his seemingly innocent propaganda on behalf of justice to the harijans. If the Pandit wages war against the vested interests of the landlord and capitalist, Mr. Gandhi, greatly daring, seeks to do even more destruction; for he purposes to take from caste Hindus the spiritual rank and privileges earned, as they think, through centuries of reincarnation. Before it be too late, Indians who have their country's welfare at heart should realize that these two highly respected and noble-hearted men personify the deadliest menace to India's social stability and peaceful progress that it is possible to imagine. They and their doctrines must be ceaselessly and ruthlessly combated, if India is to be saved from a fate worse than has overtaken starving and warstricken China.

(SIR) AZIZUDDIN AHMED.

(From 'The Times of India,' Dec. 30th 1933.)

ಟೈಮ್ಸ್ ಆಫ್ ಇಂಡಿಯಾ ಪತ್ರಿಕಾಲೇಖದ ಕನ್ನಡ ಅನುವಾದ

ತಾ 30.12.33.

ಮಿ|| ಗಾಂಧಿಯವರ ನೂತನಚಳವಳಿಯು ಸಮಾಜಘಾತಕವಾದುದು.

ಸರ್ ಅಜೀಜ್‌ಉದ್ದೀನ್ ಅಹಮುದ್‌ರ ಟೀಕೆ.

ಮಿ|| ಗಾಂಧಿಯವರು, ಅಸ್ಪೃಶ್ಯರಿಗಾಗಿ ತಮ್ಮ ಚಳವಳಿಯನ್ನು ಆರಂಭಿಸಿದ್ದೇನೆಂದು ಪ್ರಸಿದ್ಧಪಡಿಸಿರುವುದು ಅವರ ಆತ್ಮಗೌರವಕ್ಕೆ ತಕ್ಕುದಾಗಿದೆ. ಆ ಪ್ರಕಾರವಾಗಿ ಕಳೆದ ಆಗಸ್ಟು ತಿಂಗಳಲ್ಲಿ ವಿಧಿಸಿದ ಅವರ ಶಿಕ್ಷೆಯ ಅವಧಿಯು ಮುಗಿಯುವವರೆಗೂ ರಾಜಕೀಯಕಾರ್ಯಕ್ಷೇತ್ರದಿಂದ ವಿಮುಖನಾಗುವೆನೆಂದು ಹೇಳಿದ್ದಾರೆ. ಅಲ್ಲಿ ಹಾಗೆ ವಿಮುಖರಾಗಿದ್ದಂತೆ ತೋರುವುದು. ಆದರೆ ಅವರ ಚಳವಳಿಯು ವಾಸ್ತವವಾಗಿ ಹೊರಗೆ ತೋರುವಷ್ಟು ಸಾಧುವಾಗಿದೆಯೆ? ಅವರು ಈಗ ಕೈಕೊಂಡಿರುವ ಹಿಂದೂಸ್ಥಾನದ ನಾನಾ ಭಾಗದ ಸಂಚಾರಕ್ಕೂ ಪೂರ್ವದ ಸಂಚಾರಕ್ಕೂ ಬಹಳ ಅಂತರವುಂಟು ಯಾಕೆಂದರೆ ಆ ಹಿಂದಿನ ಸಂಚಾರಗಳು ಯಾವ ಮುಚ್ಚುಮರೆಯೂ ಇಲ್ಲದೆ ರಾಜಕೀಯ ಉದ್ದೇಶದಿಂದ ಕೂಡಿದವುಗಳೂ ಸರ್ಕಾರದ ವಿರುದ್ಧವೂ ಆದವುಗಳಾಗಿದವು; ಆದರೆ ಈಗಿನವು [illegible]

[illegible]

ಸರ್ ಅಜೀಜ್ ಉದ್ದೀನ್ ಅಹಮುದ್.

ಮುದ್ದಿಯಾದ ಲೇಖಕನೊಬ್ಬನ ಗೊಡ್ಡು ತಲೆಹರಟೆ.

'ಇದೇ ಮಾಹೆ ತಾ|| 8 ನೇ ಸ್ಟಾರ್ ಪತ್ರಿಕೆಯಲ್ಲಿ ಸುಳ್ಳು ಹೆಸರಿನಿಂದೊಬ್ಬನು ಮಹಾಜ್ಯೋತಿಷಕನಂತೆ 'ಓರಿಯೆಂಟಲ್ ಲೈಬ್ರರಿಯವರಿಗೆಚ್ಚರಿಕೆ' ಎಂಬ ಶಿರೋನಾಮದಿಂದ ಪರಿಜ್ಞಾನವಿಲ್ಲದೆ, ಮುಂದೆ ಹೀಗೆಯೇ ಆಗುವುದೆಂದು ಕವಡೆಹಾಕಿ [illegible]

[illegible]

ಸತ್ಯಶಂಶೋಧಕ.

ಶ್ರೀ ಗೌರೀಶಂಕರ ಕಂಪನಿಯವರ ೨ ನೆಯ ಮಹಾಯಾತ್ರೆಯು ಪ್ರಾರಂಭವಾಗಿದೆ.

ಕರ್ನಾಟಕ ಪ್ರಾಂತದಲ್ಲಿ ಸುಪ್ರಸಿದ್ಧವಾದ ಹುಬ್ಬಳ್ಳಿಯ ಶ್ರೀ ಗೌರೀಶಂಕರ ಕಂಪನಿಯವರು ಕಳೆದ ವರುಷ ಮೊದಲನೆಯ ಯಾತ್ರೆಯನ್ನು ಅತ್ಯಂತ ಸುಖರೂಪವಾಗಿ ಮಾಡಿಕೊಂಡು ಬಂದುದು ಸರ್ವಪ್ರಸಿದ್ಧವಷ್ಟೆ! ಈ ಕಂಪನಿಯವರು ಎರಡನೆಯ ಮಹಾಯಾತ್ರೆ [illegible]

[illegible]

ಯಾತ್ರೆಯನ್ನು ಮುಗಿಸಿಕೊಂಡು ಮುಂದಿನ ಕಾರ್ಯಕ್ರಮಗಳನ್ನು ಪ್ರಸಿದ್ಧಪಡಿಸುವವರಾಗುವರು.

ಗೌರೀಶಂಕರ ಕಂಪನಿಯ ಯಾತ್ರಿಕ.

ಪ್ರಭಪ್ಪ ಮಲ್ಲೇಶಪ್ಪ ಕಲ್ಲಕೇರಿ ಶಿರೋಳ.

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವ, ಮಂಗಳವೇಢೆ.

ಶ್ರೀಮಜ್ಜಗದ್ಗುರುಗಳವರು ಪಂಢರಪುರ ಮುಕ್ಕಾಮಿನಿಂದ ತಾ|| 31-12-33 ನೇ ಭಾನುವಾರ ದಿವಸ ಸೋಲಾಪುರ ಜಿ|| ಮಂಗಳವೇಢೆಗೆ ದಯಮಾಡಿಸಿದರು. ಗ್ರಾಮದ ಪ್ರಮುಖರು ಶ್ರೀ ಜಗದ್ಗುರುಗಳವರನ್ನು ಎದುರುಗೊಂಡು ಗೌರವಿಸಿದರು. [illegible]

[illegible]

ಸೆಕ್ರಟರಿ, ವೀರಶೈವ ತರುಣಸಂಘ, ಮಂಗಳವೇಢೆ.

ಪಂಚಾಚಾರ್ಯ ಪ್ರಭಾ.

೧೯೩೩ ಡಿಸೆಂಬರ್ ೧೨ [illegible]

[illegible] ಜನವರಿ ತಾ|| [illegible]ನೇ ಸೋಮವಾರ.

ದೈವಾಭಿಮಾನ

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಸ್ವದೈವಾಭಿಮಾನವೂ, ಸ್ವಾಭಿಮಾನವೂ, ಸ್ವಜನಾಭಿಮಾನವೂ, ಸ್ವಜಾತ್ಯಭಿಮಾನವೂ, ಸ್ವಮತಾಭಿಮಾನವೂ, ಸ್ವಗ್ರಾಮಾಭಿಮಾನವೂ, ಸ್ವದೇಶಾಭಿಮಾನವೂ, ಸ್ವರಾಷ್ಟ್ರಾಭಿಮಾನವೂ ಇದ್ದೇ ಇರಬೇಕು. ಇವುಗಳಲ್ಲಿ ಸ್ವದೈವಾಭಿಮಾನವಿಲ್ಲದಿದ್ದರೆ ದೇವರೊಲುಮೆಯುಂಟಾಗುವುದಿಲ್ಲ. ಸ್ವಾಭಿಮಾನವಿಲ್ಲದಿದ್ದರೆ ಆತ್ಮಸೌಖ್ಯವುಂಟಾಗುವುದಿಲ್ಲ. ಸ್ವಜನಾಭಿಮಾನವಿಲ್ಲದಿದ್ದರೆ ತನ್ನ ಬಂಧುಬಾಂಧವರ ರಕ್ಷಣೆಯಾಗುವುದಿಲ್ಲ. ಸ್ವಜಾತ್ಯಭಿಮಾನವಿಲ್ಲದಿದ್ದರೆ ವರ್ಣಸಾಂಕರ್ಯವುಂಟಾಗಿ ಆಶ್ರಮಧರ್ಮಗಳು ಹಾಳಾಗಿಹೋಗುವುವು. ಸ್ವಮತಾಭಿಮಾನವಿಲ್ಲದಿದ್ದರೆ ಮತಾಭಿವೃದ್ಧಿಯಾಗುವುದಿಲ್ಲ. ಸ್ವಗ್ರಾಮಾಭಿಮಾನವಿಲ್ಲದಿದ್ದರೆ ಗ್ರಾಮಪುರೋಭಿವೃದ್ಧಿಯು ಕೆಟ್ಟುಹೋಗುವುದು. ಸ್ವದೇಶಾಭಿಮಾನವಿಲ್ಲದಿದ್ದರೆ ದೇಶವು ಪರಾಕ್ರಾಂತವಾಗಿ ಹೀನಾವಸ್ಥೆಯನ್ನು ಪಡೆಯುವುದು. ಸ್ವರಾಷ್ಟ್ರಾಭಿಮಾನವಿಲ್ಲದಿದ್ದರೆ ಆ ರಾಷ್ಟ್ರವು ಪರದಾಸ್ಯವೃತ್ತಿಯನ್ನನುಭವಿಸಬೇಕಾಗುವುದು. ಹೀಗೆ ಸ್ವದೈವಾಭಿಮಾನವೇ ಆದಿಯಾಗಿ ಸ್ವರಾಷ್ಟ್ರಾಭಿಮಾನಾಂತಗಳಾದ ಸಕಲ ಅಭಿಮಾನಗಳನ್ನು ರಕ್ಷಿಸಿಕೊಳ್ಳಬೇಕಾದುದು ಮಾನವನ ಅವಶ್ಯ ಕರ್ತವ್ಯವು. ಇವುಗಳಲ್ಲಿ ಒಂದು ಅಭಿಮಾನವಿಲ್ಲದಿದ್ದರೂ ಅನೇಕ ವಿಧಗಳಾದ ಅನರ್ಥಪರಂಪರೆಗಳು ಬಂದೊದಗುತ್ತವೆ. ಇವುಗಳಲ್ಲಿ ಸ್ವದೈವಾಭಿಮಾನವೇ ಪ್ರಧಾನವಾದುದು. ಈ ಅಭಿಮಾನವು ಆತ್ಮಕಲ್ಯಾಣಕ್ಕೆ ಸಾಧನವಾದುದರಿಂದ ಪ್ರಥಮತಃ ಇದನ್ನು ದೃಢಪಡಿಸಬೇಕು. ಸಾರ್ವಭೌಮನಂತೆ ರಾರಾಜಿಸುವ ಆತ್ಮನು ಯಾವಾಗಲೂ ಪವಿತ್ರನಾಗಿಯೇ ಇರಬೇಕು. ಆತ್ಮರಕ್ಷಣೆಯೆಂಬುದು ಕೇವಲ ದೈವಬಲದಿಂದಾಗಬೇಕಲ್ಲದೆ ಇನ್ನಾವ ಬಲದಿಂದಲೂ ಆಗಲಾರದು. 'ಆತ್ಮಾರ್ಥಂ ಪೃಥಿವೀಂ ತ್ಯಜೇತ್' ಎಂಬ ವಾಕ್ಯವನ್ನು ವಿಚಾರಮಾಡಿ ನೋಡಿದರೆ ಆತ್ಮರಕ್ಷಣೆಗೆ ಸುಖಸಂಪತ್ತುಗಳೆಷ್ಟಿದ್ದರೂ ಅವುಗಳಿಂದೇನೂ ಪ್ರಯೋಜನವಿಲ್ಲವೆಂದೂ, ಆತ್ಮರಕ್ಷಣಾನುಕೂಲಗಳಾದ ವಿಪತ್ಪರಂಪರೆಯು ಎಷ್ಟಿದ್ದರೂ ಅದು ಇಷ್ಟಾಪತ್ತಿಯೇ ಎಂದೂ ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸ್ವಜನ, ಸ್ವಜಾತಿ, ಸ್ವಮತ, ಸ್ವಗ್ರಾಮ, ಸ್ವದೇಶ, ಸ್ವರಾಷ್ಟ್ರ ಎಂಬ ಭೂಮಿಕೆಗಳೆಲ್ಲವೂ ಸ್ವದೈವತಾಧಾರದಲ್ಲಿ ನಿಂತಿರುವುವು. ಒಂದು ಮನೆಯನ್ನು ಕಟ್ಟಬೇಕಾದರೆ ಅದಕ್ಕೆ ತಳಹದಿಯೇ ಮುಖ್ಯವಾದುದು. ತಳಹದಿಯು ಭದ್ರವಾಗಿದ್ದರೆ ಅದರ ಮೇಲೆ ಎಂಥ ಮನೆಯನ್ನಾದರೂ ಕಟ್ಟಬಹುದು. ಎಂಥ ಕಿಡಿಕಿಗಳನ್ನಾದರೂ ಇಟ್ಟುಕೊಳ್ಳಬಹುದು. ಎಂಥ ಕಂಬಗಳನ್ನಾದರೂ ನಿಲ್ಲಿಸಬಹುದು. ಮನೋರಂಜಕವಾಗುವಂತೆ ಚಿತ್ರವಿಚಿತ್ರಗಳಾದ ಕೆಲಸಗಳನ್ನು ಮಾಡಿಸಿ ಸುಣ್ಣಬಣ್ಣಗಳಿಂದ ಅಲಂಕಾರಗೊಳಿಸಬಹುದು. ಆಧಾರವೇ ಬಲವಾಗಿಲ್ಲದಿದ್ದರೆ ಮೇಲೆಮೇಲೆ ಮಾಡುವ ಅಂಥ ಅಂದಚಂದಗಳಿಂದ ಪ್ರಯೋಜನವೇನು? 'ಸರ್ವೇಷು ಗಾತ್ರೇಷು ಶಿರಃಪ್ರಧಾನಂ' ಎಂಬಂತೆ ಮನುಷ್ಯನಿಗೆ ತಲೆಯು ಚನ್ನಾಗಿದ್ದರೆ ಆ ಮೇಲೆ ಕಣ್ಣು, ಮೂಗು, ಕಿವಿ, ಮುಖ, ಕೈಕಾಲುಗಳನ್ನು ರಕ್ಷಿಸಿಕೊಂಡಷ್ಟೂ ಉತ್ತಮವೇ ಸರಿ! ತಲೆಯು ಕೆಟ್ಟುಹೋಗಿದ್ದರೆ ಮಿಕ್ಕ ಅವಯವರಕ್ಷಣೆಯಿಂದ ಆಗುವ ಭಾಗ್ಯೋದಯವಾದರೂ ಏನು? ಹಾಗೆ ಮನೆಯ ತಳಹದಿಯಂತೆಯೂ ಮನುಷ್ಯನ ತಲೆಯಂತೆಯೂ ಇರುವ ಸ್ವದೈವಾಭಿಮಾನವನ್ನೇ ಬಿಟ್ಟು ತೆನೆಯಮೇಲೆ ಇರುವ ಹಕ್ಕಿಯಂತೆ ಓಡಾಡುವ ಮನುಷ್ಯನು ಸಿನಿಮಾದಲ್ಲಿ ಹಾಡುವ ಕುಣಿಯುವ ಕುಪ್ಪಳಿಸುವ ಸುಖಾನುಭವಮಾಡುವ ಚಲನಚಿತ್ರಗಳಿಗೆ ಸಮಾನನೆಂಬುವಲ್ಲಿ ಸಂಶಯವಿಲ್ಲ. ಮಾನವನಾದವನು ಮೊದಲು ದೇವರಿಗೆ ವಿಧೇಯನಾಗಿದ್ದು ಬಳಿಕ ತನ್ನವರನ್ನೂ, ತನ್ನ ಜಾತಿಯವರನ್ನೂ, ತನ್ನ ಮತವನ್ನೂ, ಆಮೇಲೆ ತನ್ನ ಊರನ್ನೂ, ತನ್ನ ದೇಶವನ್ನೂ, ತನ್ನ ರಾಷ್ಟ್ರವನ್ನೂ ಉದ್ಧರಿಸುವುದರಲ್ಲಿ ತೊಡಗಬೇಕು. ತನ್ನ ಆತ್ಮನನ್ನೂ, ತನ್ನವರನ್ನೂ, ತನ್ನ ಜಾತೀಯರನ್ನೂ, ತನ್ನ ಮತೀಯರನ್ನೂ, ತನ್ನ ಗ್ರಾಮವನ್ನೂ, ತನ್ನ ದೇಶವನ್ನೂ ಉದ್ಧರಿಸದಿದ್ದವನು, ಅಖಂಡವಾದ ರಾಷ್ಟ್ರವನ್ನುದ್ಧರಿಸುವುದೆಂದರೆ ಹಾಸ್ಯಾಸ್ಪದವೇ ಸರಿ! ದೇಶರಕ್ಷಣೆಯಾಗಲಿ ರಾಷ್ಟ್ರರಕ್ಷಣೆಯಾಗಲಿ ಎಲ್ಲವೂ ಆತ್ಮಶಕ್ತಿಯನ್ನು ಹೆಚ್ಚಿಸುವುದಕ್ಕಾಗಿಯೇ ಹೊರತು ತಮ್ಮ ತಮ್ಮ ಸ್ವೇಚ್ಛಾವಿಹಾರಗಳಾಗಿ ಮನಬಂದಂತೆ ತಿಂದು ತೇಗಿ ಮಹಾರಾಕ್ಷಸರಂತೆ ಲೋಕಪ್ರಸಿದ್ಧರಾಗಿದ್ದು ದೇಹಾತ್ಮವಿಯೋಗವಾದ ಬಳಿಕ ನರಕದಲ್ಲಿ ಕ್ರಿಮಿಕೀಟಾದಿ ಹೀನಜನ್ಮಗಳನ್ನೆತ್ತುವುದಕ್ಕಲ್ಲ. ಯಾವನು ಈ ಮೇಲೆ ಹೇಳಿದ ಸಪ್ತಭೂಮಿಕೆಗಳಲ್ಲಿಯೂ ಸ್ವಲ್ಪವೂ ಲೋಪವಿಲ್ಲದಂತೆ ಕ್ರಮಕ್ರಮದಿಂದ ಮುಂದುವರಿಯುವನೋ ಅವನೇ ಮಹಾಪುರುಷಕೋಟಿಪ್ರವಿಷ್ಟನೆನಿಸಿಕೊಳ್ಳುತ್ತಾನೆ. ಹಿಂದಿನ ಅದ್ಭುತಮಹಿಮಾಶಾಲಿಗಳಾದ ಮತಾಚಾರ್ಯರು ಆತ್ಮಬಲಶಾಲಿಗಳಾಗಿದ್ದರಿಂದಲೇ ಅವರ ನಾಮಾವಳಿಗಳು ಸುವರ್ಣಾಕ್ಷರದಂತೆ ಎಲ್ಲರ ಕಣ್ಣೆದುರಿಗೆ ಕಂಗೊಳಿಸುತ್ತಲಿವೆ. ದೈವಾಭಿಮಾನದಿಂದೊಡಗೂಡಿದ ರಾಷ್ಟ್ರಾಭಿಮಾನಿಗಳನ್ನು ಮಾತ್ರ ಗುರುಹಿರಿಯರಾದಿಯಾಗಿ ಸ್ತೋತ್ರ ಮಾಡುವರು. ಇದಕ್ಕೆ ಶಿವಾಜಿ ಮುಂತಾದ ಮಹಾರಾಜರುಗಳೇ ಬಲವಾದ ಸಾಕ್ಷಿಯಾಗಿದ್ದಾರೆ. ಈಗಿನ ವಾತಾವರಣವೇ ಒಂದು ವಿಧವಾಗಿ ಬೀಸುತ್ತಲಿದೆ. ಕೆಲವರು ಸ್ವರಾಷ್ಟ್ರಾಭಿಮಾನವನ್ನು ಅಭಿನಯಿಸುತ್ತ ಸ್ವದೈವಾಭಿಮಾನ ಸ್ವಮತಾಭಿಮಾನವನ್ನು ಅಲ್ಲಗಳೆಯುತ್ತಾರೆ. ಇಂಥವರಿಗೆ ಆತ್ಮರಕ್ಷಣೆಯೂ ದೇಶರಕ್ಷಣೆಯೂ ಹೇಗೆ ತಾನೆ ಸಂಭವಿಸುವದು? "ಜಾಣನು ಲೌಕಿಕ ಪರಮಾರ್ಥವೆರಡನು ಮಾಣದೆ ಕೂಡಿ ನಡೆಸುತಿಹನಿಂತು" ಎಂಬಂತೆ ಪ್ರತಿಯೊಬ್ಬ ಭಾರತೀಯನೂ ಆಸ್ತಿಕಮತಾವಲಂಬಿಯಾದುದರಿಂದ ಪಾರಮಾರ್ಥಿಕ ಲೌಕಿಕಗಳೆರಡಕ್ಕೂ ವಿರೋಧವಿಲ್ಲದಂತೆ ನಡೆಯುವುದೇ ಜಾಣತನವೆಂದು ಅನೇಕ ಮಹಾತ್ಮರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದರೂ ಅದನ್ನೆಲ್ಲಾ ಮರೆತು ಸ್ವಮತಕ್ಕೂ ಸ್ವಜಾತಿಗೂ ಸ್ವಜನರಿಗೂ ಸ್ವದೇಶಕ್ಕೂ ತರ್ಪಣವನ್ನಿತ್ತು ಕೇವಲ ಶೂನ್ಯಹೃದಯರಾಗಿ ರಾಷ್ಟ್ರಕೂಟದಲ್ಲಿ ಬೆರೆತರೆ ಅದು ದೈವದ್ರೋಹಿಯಾದ ರಾವಣರಾಜ್ಯವಾಗುವುದಲ್ಲದೆ ರಾಮರಾಜ್ಯವೆನಿಸಲಾರದು. ಮನುಷ್ಯನಾದವನಿಗೆ ಐಹಿಕ ಸೌಖ್ಯವೊಂದೇ ಮುಖ್ಯಧ್ಯೇಯವಲ್ಲ. ಪಾರಮಾರ್ಥಿಕ ಮಾರ್ಗಕ್ಕೆ ವಿರೋಧವಿಲ್ಲದಂತೆ ಐಹಿಕಸೌಖ್ಯವನ್ನು ಹೊಂದುವುದೇ ಮುಖ್ಯ ಧ್ಯೇಯವು. ಎರಡು ಕಣ್ಣುಗಳಂತಿರುವ ಇಂಥ ಐಹಿಕ ಪಾರಮಾರ್ಥಿಕ ಮಾರ್ಗಗಳೆರಡರಲ್ಲೂ ಸಾಧಕವಾದ ಸ್ವದೈವಾಭಿಮಾನಾದಿ ಸ್ವರಾಷ್ಟ್ರಾಭಿಮಾನಾಂತವಾದ ಸಕಲಾಭಿಮಾನವನ್ನು ಬಿಡದೆ ಇಹಪರಸೌಖ್ಯಭಾಗಿಗಳಾಗಬೇಕೆಂದಾಶಿಸುತ್ತೇವೆ.

ವರ್ತಮಾನಸಂಗ್ರಹ.

ಉತ್ತರ ಬೊಹಿಮಿಯಾ ದೇಶದಲ್ಲಿ ಒಂದು ಕಲ್ಲಿದ್ದಲ ಗಣಿಗೆ ಬೆಂಕಿಹತ್ತಿ 160 ಜನರು ಮೃತಪಟ್ಟರು.

ಮುಂಬಯಿ ನಗರದ ಸಮೀಪದಲ್ಲಿ ಒಂದು ದೊಡ್ಡ ಸೀಮೆಯೆಣ್ಣೆಯ ಗಣಿಯು ದೊರೆತಿರುವದಂತೆ!

ಅಫ್ಘಾನಿಸ್ತಾನದ ದೊರೆಗಳಾದ ನಾದಿರ್‌ಷಾರವರನ್ನು ಕೊಲೆಮಾಡಿದ ಸಲುವಾಗಿ 14 ಜನರಿಗೆ ಮರಣದಂಡನೆಯು ವಿಧಿಸಲ್ಪಟ್ಟಿದೆ.

ಮ್ಯಾಸಿಡೋನಿಯಾ ದೇಶಕ್ಕೆ ಸೇರಿದ 'ವರ್ಬಾಸ್' ಗ್ರಾಮದಲ್ಲಿ 400 ಕ್ಕಿಂತಲೂ ಹೆಚ್ಚು ಜನರು ವಾಸವಾಗಿದ್ದು ಅವರ ಪೈಕಿ 100 ಕ್ಕಿಂತ ಹೆಚ್ಚು ವಯಸ್ಸಿನ 20 ಜನರಿರುವರಂತೆ! ಅಲ್ಲಿ ಕಳೆದ ಎರಡು ವರ್ಷಗಳಿಂದೀಚೆಗೆ ಆಗತಾನೇ ಹುಟ್ಟಿದ ಒಂದು ಶಿಶುವಿನ ವಿನಾ ಬೇರೆ ಯಾರೂ ಮೃತಪಟ್ಟಿಲ್ಲವಂತೆ!

ಅಮೇರಿಕೆಯ ಕರ್ಟಿಸ್-ರೈಟ್ ಕಾರ್ಪೊರೇಷನ್ನಿನವರು 1½ ಕೋಟಿ ರೂಪಾಯಿಗಳ ವೆಚ್ಚದಿಂದ ಒಂದು ದೊಡ್ಡ ಏರೋಪ್ಲೇನ್ ಕಾರ್ಖಾನೆಯನ್ನು ಕಟ್ಟಬೇಕೆಂದು ನಿರ್ಧರಿಸಿರುವರು. ಚೀನಾಸರಕಾರದವರು ಈ ಕಾರ್ಖಾನೆಗಾಗಿ ದ್ರವ್ಯರೂಪವಾದ ಸಹಾಯವನ್ನು ಮಾಡುವದಾಗಿಯೂ, ಅದರಲ್ಲಿ ತಯಾರಾಗುವ ಏರೋಪ್ಲೇನುಗಳನ್ನು ಕೊಂಡುಕೊಳ್ಳುವದಾಗಿಯೂ ಒಪ್ಪಿರುವರಂತೆ!

ಚಿತಗಾಂಗಿನಲ್ಲಿ ಕ್ರಿಕೆಟ್ ಆಟವನ್ನು ನೋಡುತ್ತಿದ್ದ ಯೂರೋಪಿಯನ್ನರ ಮೇಲೆ ಕ್ರಾಂತಿಕಾರರ ಗುಂಪಿಗೆ ಸೇರಿದ 4 ಜನ ಹಿಂದೂ ತರುಣರು ಮೂರು ಸಿಡಿಮದ್ದುಗಳನ್ನು ಎಸೆದರು. ಅವುಗಳಲ್ಲಿ ಒಂದು ಮಾತ್ರ ಸಿಡಿದು ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಕ್ಲೀರವರ ಕೈಗೆ ಪೆಟ್ಟುಬಿತ್ತು. ಅಪರಾಧಿಗಳ ಪೈಕಿ ಒಬ್ಬನು ಪೋಲೀಸರ ಗುಂಡಿಗೆ ತುತ್ತಾದನು. ಇಬ್ಬರಿಗೆ ಸ್ವಲ್ಪ ಪೆಟ್ಟುಬಿದ್ದವು. ಮತ್ತೊಬ್ಬನು ಹಾಗೆಯೇ ಸಿಕ್ಕಿಬಿದ್ದನು.

ಗುರುಭಕ್ತಕಂಠೀರವ
ಕಾಂತಪ್ಪ ವೀರಭದ್ರಪ್ಪ ಕುಬಸದ ಹಮ್ಮಿಗಿ.

ಈ ಗುರುಭಕ್ತಮಹಾಶಯರು ಧಾರವಾಡ ಡಿ|| ಗದಗ ತಾ|| ಹಮ್ಮಿಗಿ ಗ್ರಾಮನಿವಾಸಿಗಳು. ಸದಾ ಜಗದಾಚಾರ್ಯರ ಸೇವೆಯಲ್ಲಿಯೂ ಧಾರ್ಮಿಕ ಕಾರ್ಯಗಳಲ್ಲಿಯೂ ಶರೀರವನ್ನು ಸವೆಸತಕ್ಕವರು. ಇವರ ತಂದೆಯವರಾದ ಕೈ|| ವೀರಭದ್ರಪ್ಪನವರು ಉಭಯ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದು, ತಮ್ಮ ಆಯುಸ್ಸನ್ನೆಲ್ಲಾ ಗುರುಸೇವೆಯಲ್ಲಿಯೇ ವೆಚ್ಚಮಾಡಿ ಪರಂಧಾಮವನ್ನೈದಿದರು. 'ಯಥಾಪಿತಾ ತಥಾ ಪುತ್ರಃ' ಎಂಬಂತೆ ಅವರ ಸತ್ಪುತ್ರರಾದ ಈ ಮಹಾಶಯರೂ ಕೂಡ ಅದೇ ಮಾರ್ಗವನ್ನವಲಂಬಿಸಿ ಸದಾ ಧರ್ಮಸುಧಾರಣಪರಾಯಣರಾಗಿರುವುದು ವರ್ಣನೀಯವಾಗಿದೆ. ಇವರಲ್ಲಿ ನೆಲೆಯಾಗಿರುವ ಗುರುಭಕ್ತಿಯು ಅನ್ಯಾದೃಶವಾದುದು. ಇವರು ಗುರುಸೇವೆಗಾಗಿ ತಮ್ಮ ದೇಹವನ್ನೇ ಧಾರೆಯೆರೆದಿರುವರು. ಈ ಮಹಾಶಯರಲ್ಲಿ ಸ್ವಭಾವಸಿದ್ಧವಾಗಿ ವಾಸಮಾಡಿಕೊಂಡಿರುವ ಅಸದೃಶ ಗುರುಭಕ್ತಿಯನ್ನು ಕಂಡು ಪಂಚಾಚಾರ್ಯಪ್ರಭಾ ಆಫೀಸಿನಿಂದ ಇವರಿಗೆ "**ಗುರುಭಕ್ತಕಂಠೀರವ**" ಎಂಬ ಪದವಿಯು ಸುವರ್ಣಪದಕದಲ್ಲಿ ಕೆತ್ತಿಸಿ ಅನುಗ್ರಹಿಸಲ್ಪಟ್ಟಿದೆ. ಇನ್ನುಮುಂದೆ ಇವರು ಈ ಅಮೋಘವಾದ ಪದವಿಯಿಂದ ರಾರಾಜಿಸಲೆಂದೂ, ಜಗದಾಚಾರ್ಯರು ಗುರುಭಕ್ತಕಂಠೀರವರಿಗೆ ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದೂ ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಕಂಟೋನ್ಮೆಂಟಿನಲ್ಲಿ "ಸೇನಗುಪ್ತರಿಗೆ ಕಲ್ಕತ್ತೆಯಲ್ಲಿ ಸ್ವಾಗತ" ಎಂಬ ಚಲನ ಚಿತ್ರವನ್ನು ಪ್ರದರ್ಶಿಸಕೂಡದೆಂದು ಬ್ರಿಟಿಷ್ ರೆಸಿಡೆಂಟರು ಅಪ್ಪಣೆಮಾಡಿರುವರು.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ಬರುವ ಮಾರ್ಚಿ 3 ನೇ ತಾರೀಖಿನ ದಿವಸ ಹೊಸ ಪ್ರತಿನಿಧಿಗಳು ಚುನಾಯಿಸಲ್ಪಡುವದರಿಂದ ಆ ದಿನ ಸಂಸ್ಥಾನದಲ್ಲಿರುವ ಎಲ್ಲ ಕೋರ್ಟು, ಕಚೇರಿ ಮತ್ತು ಸ್ಕೂಲುಗಳಿಗೂ ರಜೆಯು ಕೊಡಲ್ಪಟ್ಟಿದೆ.

ಚಿಂತಾಮಣಿ ಕನ್ಯಾಪಹಾರಮೊಕದ್ದಮೆಯಲ್ಲಿ ಶಿಕ್ಷಿಸಲ್ಪಟ್ಟಿರುವ ಅಪರಾಧಿಗಳ ಪೈಕಿ ಇಬ್ಬರ ವಿಚಾರಣೆಯು ಪುನಃ ನಡೆಯಬೇಕೆಂದು ಪೋಲೀಸರು ಮೊಕದ್ದಮೆಯನ್ನು ಹೂಡಿದ್ದರು. ಆದರೆ ಸರಕಾರದವರ ಅಪ್ಪಣೆಯ ಮೇರೆಗೆ ಸದರಿ ಮೊಕದ್ದಮೆಯು ವಾಪಸ್ ತೆಗೆದುಕೊಳ್ಳಲ್ಪಟ್ಟಿದೆ.

ರಾಜಧಾನಿಯ ಮಂಡಿಮೊಹಲ್ಲಾ ಸವಾಯಿ ಬೀದಿಯಲ್ಲಿರುವ ಕುಂಜಪಾತು ಎಂಬ ಸ್ತ್ರೀಯು ಕಳೆದ ಡಿಸೆಂಬರ್ 3 ನೇ ತಾರೀಖಿನ ದಿವಸ ಆತ್ಮಹತ್ಯಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕತ್ತಿನಲ್ಲಿ ಗಾಯಮಾಡಿಕೊಂಡಳೆಂಬ ಕಾರಣದಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅವಳಿಗೆ ಒಂದು ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಚಿತ್ರದುರ್ಗದ ಶ್ರೀನಿವಾಸಾಚಾರ್ಯರ ಮಗ ಕೃಷ್ಣಮೂರ್ತಿ ಉರುಫ್ ಕಿಟ್ಟಿ ಎಂಬಾತನು ರಾಜಧಾನಿಯಲ್ಲಿ ಸುಳ್ಳು ಹೇಳಿ 2-3 ಜನರಿಂದ 8-10 ರೂಪಾಯಿಗಳನ್ನು ತೆಗೆದುಕೊಂಡು ಮೋಸಪಡಿಸಿದನೆಂಬ ಕಾರಣದ ಮೇಲೆ ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ 2 ವರ್ಷಗಳ ಕಠಿಣಶಿಕ್ಷೆಯನ್ನು ವಿಧಿಸಿದರು. ಇವನಿಗೆ ಈ ಮೊದಲು 8 ಸಾರೆ ಶಿಕ್ಷೆಯಾಗಿದ್ದಿತಂತೆ!

ರಾಜಧಾನಿಯ 'ವೃತ್ತಾಂತಪತ್ರಿಕಾ' ಕರ್ತರೂ, ಬೆಂಗಳೂರಿನ 'ನ್ಯಾಷನಲ್ ಟೈಪ್ ಫೌಂಡ್ರಿ' ಯ ಪ್ರೊಪ್ರೈಟರಾದ ಮೆಸ್ಸರ್ಸ್ ಎಚ್. ರಂಗಸಾಮಯ್ಯ ಅಂಡ್ ಕಂಪೆನಿಯವರೂ, ಮೈಸೂರು ದೊಡ್ಡಪೇಟೆಯಲ್ಲಿರುವ ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟಿನವರೂ ಮತ್ತು ಮದರಾಸಿನ ಪ್ರೋ|| ಇ. ಎಂ. ಗೋಪಾಲಕೃಷ್ಣಕೋನೆ, ಪ್ರಿಂಟರ್ ಅಂಡ್ ಪಬ್ಲಿಷರ್‌ರವರೂ ಕಳುಹಿಸಿರುವ ಅಂದವಾದ ಹೊಸವರ್ಷದ ಕ್ಯಾಲೆಂಡರುಗಳನ್ನು ಆತ್ಯಾದರದಿಂದ ಸ್ವೀಕರಿಸಿರುತ್ತೇವೆ.

ರಾಜಧಾನಿಯ ಕ್ಷಯರೋಗದ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೈದರಾಬಾದಿನಿಂದ ಬಂದಿರುವ ಡಾ|| ಪ್ರಭಾಭಿದಾಸ್‌ಗುಪ್ತ ಎಂಬ ಮಹಿಳೆಯ ಬಳಿಯಲ್ಲಿ ಅಡಿಗೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿದ್ದ ಮಹಮದ್ ಗೌಸ್ ಎಂಬವನು ಡಾ|| ಗುಪ್ತರ ಬಳಿಯಲ್ಲಿದ್ದ 1000 ರೂ. ಗಿಂತಲೂ ಹೆಚ್ಚು ಬೆಲೆಬಾಳುವ ಗಡಿಯಾರವನ್ನು ಕದ್ದು ಒಬ್ಬ ಮಾರ್ವಾಡಿಯ ಹತ್ತಿರ 15 ಆಣೆಗಳಿಗೆ ಒತ್ತೆಯಿಟ್ಟಿದ್ದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅಪರಾಧಿಗೆ 18 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಬೆಂಗಳೂರು ದಂಡನ್ನು ಮೈಸೂರು ಸರಕಾರಕ್ಕೆ ಹಿಂತಿರುಗಿ ಕೊಡುವ ವಿಷಯದಲ್ಲಿ ಇದೇ ಜನವರಿ 11 ನೆಯ ತಾರೀಖಿನ ದಿವಸ ಬೆಂಗಳೂರು ಪೌರಸಭೆಯ ಮೆಂಬರರು ಸಭೆಸೇರಿ 2 ಗಂಟೆಯಕಾಲ ಚರ್ಚೆಯನ್ನು ನಡೆಯಿಸಿದರು. ಇಬ್ಬರು ಆಂಗ್ಲೋ-ಇಂಡಿಯನ್ನರ ವಿನಾ ಇತರರೆಲ್ಲರೂ ದಂಡನ್ನು ಮೈಸೂರು ಸರಕಾರಕ್ಕೆ ಒಪ್ಪಿಸುವ ವಿಷಯದಲ್ಲಿ ಸಮ್ಮತಿಯನ್ನಿತ್ತರು. ಆದರೆ ಮೆಂಬರರು ಈ ಸಂಬಂಧವಾಗಿ ಇನ್ನೂ ಸಂಪೂರ್ಣವಾದ ವಿದ್ಯಮಾನಗಳನ್ನು ತಿಳಿಯಬೇಕೆಂದು ಅಪೇಕ್ಷೆಪಟ್ಟಿದ್ದರಿಂದ ಮಿಾಟಿಂಗು ಮತ್ತೊಂದು ದಿವಸಕ್ಕೆ ಮುಂದುವರಿಸಲ್ಪಟ್ಟಿತು.

ವಿಚಿತ್ರ ಜನನ!

ಕರಾಚಿಗೆ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಸ್ತ್ರೀಯಳು ಎರಡು ಕೋತಿಗಳನ್ನು ಪ್ರಸವಿಸಿರುವಳಂತೆ!

ಜವಾಹರಲಾಲರ ದಸ್ತಗಿರಿಯ ಸುದ್ದಿ!

ಈ ತಿಂಗಳು ೨೬ ನೆಯ ತಾರೀಖಿನೊಳಗಾಗಿ ಸರಕಾರದವರು ಪಂಡಿತ ಜವಾಹರಲಾಲರನ್ನು ದಸ್ತಗಿರಿ ಮಾಡುವರೆಂದು ದಿಲ್ಲಿಯಲ್ಲಿ ಸುದ್ದಿಯು ಹರಡಿದೆ.

ಎರಡು ತಲೆಗಳ ಗುಬ್ಬಿ!

ಲಂಡನ್ ನಗರದ ಸಮೀಪದಲ್ಲಿರುವ ಒಂದು ಉದ್ಯಾನದಲ್ಲಿ ಎರಡು ತಲೆಗಳುಳ್ಳ ಒಂದು ಗುಬ್ಬಿಯಿರುವದಂತೆ! ಅದು ಏಕಕಾಲದಲ್ಲಿ ಎರಡು ಕೊಕ್ಕುಗಳಿಂದಲೂ ತಿನ್ನುವದಂತೆ!

ಭಾರತೀಯರಿಗೆ ಲಾರ್ಡ್ ಪದವಿಯಿಲ್ಲ.

ಭಾರತೀಯರಲ್ಲಿ ಬಹುಪತ್ನೀತ್ವದ ಪದ್ಧತಿಯು ಆಚರಣೆಯಲ್ಲಿರುವದರಿಂದ ಬ್ರಿಟಿಷ್ ಸರಕಾರದವರು ಇನ್ನುಮುಂದೆ ಭಾರತೀಯರಾರಿಗೂ 'ಲಾರ್ಡ್' ಎಂಬ ಬಿರುದನ್ನು ಕೊಡುವದಿಲ್ಲವಂತೆ!

ರೈಲಿನಲ್ಲಿ ನರ್ತನ!

ಜೆಕ್ ಸಂಸ್ಥಾನದ ರೈಲ್ವೇ ಕಂಪೆನಿಯವರು ಜನರು ರೈಲಿನಲ್ಲಿ ಹೆಚ್ಚಾಗಿ ಪ್ರಯಾಣಮಾಡಲೆಂಬ ಉದ್ದೇಶದಿಂದ ಪ್ರಯಾಣಕಾಲದಲ್ಲಿ ನರ್ತನಮಾಡಲನುಕೂಲಿಸುವಂತೆ ಸ್ಪೆಷಲ್‌ಗಾಡಿಗಳನ್ನು ಜೋಡಿಸುವರಂತೆ! ನರ್ತನಮಾಡುವವರಿಗೆ ವಾದ್ಯಗಳನ್ನೂ ಸಿದ್ಧಪಡಿಸಿರುವರು.

ವಿಲಕ್ಷಣ ತೀರ್ಮಾನ!

ಜರ್ಮನಿಯಲ್ಲಿ 33 ವರ್ಷದ ಒಬ್ಬಾನೊಬ್ಬ ವಿವಾಹಿತ ಮನುಷ್ಯನು ಕೆಲವು ಜನ ತರುಣ ವಿದ್ಯಾರ್ಥಿನಿಯರನ್ನು ತೊಂದರೆಪಡಿಸಿದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ 20 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದುದಲ್ಲದೆ, ಅವನ ಜನನಾಂಗವನ್ನು ತೆಗೆದುಹಾಕುವಂತೆ ಅಪ್ಪಣೆಮಾಡಿರುವರು.

ಬೆಂಕಿ ಹಚ್ಚಿದ್ದಕ್ಕಾಗಿ ಮರಣದಂಡನೆ.

ಜರ್ಮನಿಯ 'ರೀಚ್‌ಸ್ಟಾಗ್' ಕಟ್ಟಡಕ್ಕೆ ಬೆಂಕಿ ಹಾಕಿದ ಮೊಕದ್ದಮೆಯಲ್ಲಿ ವಾಂಡರ್ ಲಬ್ಬೆ ಎಂಬುವನಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು. ಉಳಿದವರು ಬಿಡುಗಡೆ ಮಾಡಲ್ಪಟ್ಟರು. ಈ ಮೊಕದ್ದಮೆಯ ವಿಚಾರಣೆಯು ಸಂಪೂರ್ಣವಾಗಿ 7,000 ದೊಡ್ಡಸೈಜು ಗ್ರಾಮಾಫೋನ್ ಪ್ಲೇಟ್‌ಗಳಲ್ಲಿ ರಿಕಾರ್ಡ್ ಮಾಡಲ್ಪಟ್ಟಿರುವದಂತೆ!

ಅಪೂರ್ವ ಪಕ್ಷಿ.

ಆಸ್ಟ್ರೇಲಿಯಾ ದೇಶದಲ್ಲಿ 'ರಾತ್ರಿಯ ಗಿಣಿ' ಎಂಬ ಅಪೂರ್ವವಾದ ಪಕ್ಷಿಯು ವಾಸವಾಗಿದ್ದು, ಅದು ರಾತ್ರಿಯ ಕಾಲದಲ್ಲಿ ಮಾತ್ರವೇ ಹೊರಕ್ಕೆ ಬರುವದರಿಂದ ಇದುವರೆಗೆ ಹಗಲಿನಲ್ಲಿ ಅದನ್ನು ಯಾರೂ ನೋಡಿಯೇ ಇಲ್ಲವಂತೆ! 8 ಜನ ಶಾಸ್ತ್ರಜ್ಞರು ಆ ಪಕ್ಷಿಯನ್ನು ಹಿಡಿಯಬೇಕೆಂಬ ಉದ್ದೇಶದಿಂದ ಅನೇಕ ಸಾಮಗ್ರಿಗಳೊಡನೆ 5,000 ಮೈಲುಗಳ ಪ್ರವಾಸ ಹೊರಟಿರುವರಂತೆ!

ಜಪಾನ್ ಸೈನ್ಯದ ಖರ್ಚು!

ಜಪಾನ್ ಸರಕಾರದವರು 1934 ನೇ ವರ್ಷದ ಆದಾಯವೆಚ್ಚದ ಅಂದಾಜುಪಟ್ಟಿಯಲ್ಲಿ ಕಂಡ ಸುಮಾರು 300 ಕೋಟಿ ರೂಪಾಯಿಗಳ ಉತ್ಪತ್ತಿಯಲ್ಲಿ 200 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಭಾಗವನ್ನು ಸೈನ್ಯದ ಖರ್ಚು ಮತ್ತು ಯುದ್ಧದ ಸಾಮಗ್ರಿಗಳ ತಯಾರಿಗಾಗಿ ವೆಚ್ಚಮಾಡುವರಂತೆ! ಇದರಲ್ಲಿ ಅರ್ಧ ಹಣವು ಕೇವಲ ಯುದ್ಧಸಾಮಗ್ರಿಗಳ ತಯಾರಿಗಾಗಿಯೇ ಉಪಯೋಗಿಸಲ್ಪಡುವದಂತೆ!

ವಿಲಕ್ಷಣ ಹೃದಯ!

ಪ್ರತಿಯೊಬ್ಬ ಮನುಷ್ಯನ ಹೃದಯವೂ ಒಂದು ನಿಮಿಷಕ್ಕೆ 72 ಸಾರೆಯೂ, ವಿಶೇಷ ಸಂತೋಷ, ವ್ಯಸನ, ಭೀತಿ, ಆಶ್ಚರ್ಯಗಳುಂಟಾದರೆ ಇನ್ನೂ ಹೆಚ್ಚಾಗಿಯೂ ಬಡಿಯುವದೆಂದು ಶಾಸ್ತ್ರಜ್ಞರು ನಿರ್ಧರಿಸಿರುವರು. ಆದರೆ ಆಸ್ಟ್ರೇಲಿಯಾದಲ್ಲಿ ರಾಯ್ ಗ್ರೀ ಎಂಬ ಒಬ್ಬ ವೃದ್ಧನಿದ್ದು ಅವನ ಹೃದಯವು ಮೂರು ಸೆಕೆಂಡುಗಳಿಗೆ ಒಂದಾವರ್ತಿ ಮಾತ್ರ ಬಡಿಯುವದಂತೆ!

ಜರ್ಮನ್ನರ ಯುದ್ಧದ ಸಿದ್ಧತೆ!

'ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್' ಪತ್ರಿಕೆಯ ಬಾತ್ಮೀದಾರರಾದ ಮಿ|| ಡೆಸ್ಮಾಂಡ್ ಸ್ಟೋ ಎಂಬವರು ಜರ್ಮನಿಯಲ್ಲಿ ಪ್ರವಾಸಮಾಡಿ, ಜರ್ಮನ್ ಸೈನ್ಯದಲ್ಲಿ ಉತ್ತಮವಾಗಿ ತರಪೇತು ಮಾಡಲ್ಪಟ್ಟ 13,00,000 ಶಿಪಾಯಿಗಳಿರುವರೆಂದೂ, ಸುಮಾರು 15-20 ಲಕ್ಷ ವಿದ್ಯಾರ್ಥಿಗಳು ಪ್ರತಿದಿನವೂ ಯುದ್ಧಕಲೆಯಲ್ಲಿ ಶಿಕ್ಷಣ ಹೊಂದುತ್ತಿರುವರೆಂದೂ, ಜರ್ಮನಿಯ ಆಯುಧ ಶಾಲೆಗಳಲ್ಲಿ 30-40 ಲಕ್ಷ ಬಂದೂಕಗಳು ಶೇಖರಿಸಲ್ಪಟ್ಟಿರುವವೆಂದೂ ಪ್ರಕಟಿಸಿರುವರು.

ಕೈಗೆ ಬಂದ ತುತ್ತು ಬಾಯಿಗಿಲ್ಲ!

ಫ್ರಾನ್ಸಿನ ಒಬ್ಬಾನೊಬ್ಬ ಮನುಷ್ಯನು 'ಫ್ರೆಂಚ್ ನ್ಯಾಷನಲ್ ಲಾಟರಿ' ಯಲ್ಲಿ 5 ಲಕ್ಷ ರೂಪಾಯಿಗಳ ಬಹುಮಾನವನ್ನು ಪಡೆದನು. ಆದರೆ ಹಣವನ್ನು ಪಡೆಯುವದಕ್ಕೆ ಮುಂಚೆಯೇ ಅಕಸ್ಮಾತ್ ಮೃತಪಟ್ಟನು. ಅವನ ಬಂಧುಗಳು ಹಣದ ವಿಷಯವನ್ನು ತಿಳಿಯದೆ ಲಾಟರಿ ಟಿಕೆಟ್ಟಿನ ಸಮೇತವಾಗಿ ಅವನ ಸಮಾಧಿಯನ್ನು ಮಾಡಿಬಿಟ್ಟರು. ಈಗ ಅವರು ಹಣದ ವಿಷಯವನ್ನರಿತು, ಸಮಾಧಿಯನ್ನು ತೆರೆದು, ಟಿಕೆಟನ್ನು ತೆಗೆದುಕೊಳ್ಳುವದಕ್ಕಾಗಿ ಸರಕಾರದ ಅಪ್ಪಣೆಯನ್ನು ಕೇಳಿರುವರಂತೆ!

ಅಸ್ಪೃಶ್ಯತಾನಿವಾರಣತತ್ವಖಂಡನ.

ಕಳೆದ ಡಿಸೆಂಬರು 29 ನೇ ತಾರೀಖಿನ ದಿವಸ ಮುಂಬಯಿಯಲ್ಲಿ ವರ್ಣಾಶ್ರಮ ಸ್ವರಾಜ್ಯ ಸಂಘದ ಆರನೇ ವಾರ್ಷಿಕಸಭೆಯು ಸಂಯುಕ್ತ ಪ್ರಾಂತದ ನ್ಯಾಯವಿಧಾಯಕಸಭೆಯ ಸದಸ್ಯರಾದ ಶ್ರೀ ಸದಾಯತನ ಪಾಂಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸ್ವಾಗತಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ|| ಮನಮೋಹನದಾಸ ರಾಮಜಿಯವರು ಗಾಂಧಿಯವರ ಅಸ್ಪೃಶ್ಯತಾ ನಿವಾರಣಚಳವಳಿಯನ್ನು ತೀವ್ರವಾಗಿ ಖಂಡಿಸಿ, ವರ್ಣಾಶ್ರಮಧರ್ಮಕ್ಕೆ ಪ್ರಾಪ್ತವಾಗಿರುವ ಈ ವಿಷಮ ಸಮಯದಲ್ಲಿ ಸನಾತನಧರ್ಮಾವಲಂಬಿಗಳೆಲ್ಲರೂ ಐಕಮತ್ಯದಿಂದ ಕೆಲಸಮಾಡಬೇಕೆಂದು ಹೇಳಿದರು.

ಸ್ವೀಕಾರ

ಶಿವಮೊಗ್ಗಾ ಡಿ|| ಹಾರನಹಳ್ಳಿ ನಿವಾಸಿಗಳಾದ ಮ|| ರಾ|| ಮುದಗಲ್ಲಸಂಗಪ್ಪನವರ ಪುತ್ರ ಚಿ|| ಹಾಲಪ್ಪನಿಗೆ ಪ್ರಾಪ್ತವಾಗಿದ್ದ ಗ್ರಹಪೀಡೆಯು ಶ್ರೀ ಜಗದ್ಗುರು ರೇಣುಕಾಚಾರ್ಯರ ಅನುಗ್ರಹಬಲದಿಂದ ನಿವಾರಣೆಯಾದ ಸಂತೋಷಕ್ಕಾಗಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 1 ರೂ. ಯು ವೇ|| ಗುಬ್ಬಿ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕುರುಬರ ಕಾನ್ಫರೆನ್ಸ್.

ಕುರುಬರ ಕಾನ್ಫರೆನ್ಸ್ (ಮಹಾಸಭೆ) ಮತ್ತು ಸಂಘದ ಜನರಲ್ ಮೀಟಿಂಗ್ 1934 ನೇ ಇಸ್ವಿ ಜನವರಿ ತಾ|| 21 ನೇ ಭಾನುವಾರ ಬೆಳಗ್ಗೆ ಬೆಂಗಳೂರು ಸಿಟಿ ಸೆನೊಟಾಫ್ ರೋಡಿನಲ್ಲಿರುವ ಸಿಟಿ ವೈ. ಯಂ. ಸಿ. ಎ. ಹಾಲ್ ಕಟ್ಟಡದಲ್ಲಿ ಬಳ್ಳಾರಿ ಡಿಸ್ಟ್ರಿಕ್ಟು ಹೊಸಪೇಟೆಯಲ್ಲಿರುವ ಡಾಕ್ಟರ್ ಆರ್. ನಾಗನಗೌಡ. ಎಂ. ಎಸ್. ಪಿ. ಹೆಚ್. ಡಿ. (ಎಲ್. ಯಂ. ಯಲ್ ಸಿ. ಮದ್ರಾಸ್) ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಮೇಲ್ಕಂಡ ಸಭೆಯಲ್ಲಿ ಅತಿಮುಖ್ಯವಾದ ವಿಷಯಗಳು ಚರ್ಚಿಸಲ್ಪಡುವುದಲ್ಲದೆ 1336 ನೇ ಇಸವಿಯಲ್ಲಿ ಹಂಪೆಯಲ್ಲಿ ವಿಜಯನಗರ ಸಂಸ್ಥಾನ ಸ್ಥಾಪಕರಾದ ಹುಕ್ಕ ಬುಕ್ಕರಾಯರ 600 ನೆಯ ವರ್ಷದ ಉತ್ಸವ ಮತ್ತು ಅದೇ ಕಾಲದಲ್ಲಿ ಅಖಿಲಭಾರತ ಕುರುಬರ ಸಮ್ಮೇಳನವನ್ನು ಸೇರಿಸುವ ವಿಷಯವು ಚರ್ಚಿಸಲ್ಪಡುವುದರಿಂದ ಅಖಿಲ ಕುರುಬರ ಜನಾಂಗದವರು ತಪ್ಪದೆ ದಯಮಾಡಿಸಬೇಕಾಗಿ ಪ್ರಾರ್ಥನೆ. ಈ ಮಹಾಸಭೆಗೆ ಪರಸ್ಥಳದಿಂದ ಬರುವ ಮಹನೀಯರುಗಳಿಗೆಲ್ಲಾ ಭೋಜನವಗೈರೆಗಳು ಉಚಿತವಾಗಿ ಏರ್ಪಡಿಸಲ್ಪಟ್ಟಿರುತ್ತದೆ.

ನೀಲಗಿರಿ ಜಿ. ಸಂಜೀವಯ್ಯ,
ಪ್ರೆಸಿಡೆಂಟ್, ಕುರುಬರ ಸಂಘ.

ಔಷಧಸೇವನೆಯಿಲ್ಲದೆಯೇ ಮಲಬದ್ಧತೆಯನ್ನು ನೀಗಿಸುವುದು.

ಡಾಕ್ಟರ್ ಎಡ್ವರ್ಡ್ ಪೊಡಾಲ್‌ಸ್ಕಿ ಎಮ್. ಡಿ.
ಬ್ರೂಕ್ಲಿನ್, ನ್ಯೂಯಾರ್ಕ್.

"ಊಟಮಾಡುವುದು, ಅದನ್ನು ಮಲದ್ವಾರದಿಂದ ಹೊರಕ್ಕೆ ಬಿಡುವುದು" ಇವೇ ಜೀವನದ ತತ್ವವೆಂದು ಒಬ್ಬ ವೇದಾಂತಿಗಳು ಹೇಳಿರುವರು. ಇದರ ಅರ್ಥವೇನು? ಜೀವನಾಧಾರಕ್ಕಾಗಿ ನಾವು ಆಹಾರವನ್ನು ತೆಗೆದುಕೊಳ್ಳಬೇಕು. ಅವುಗಳಲ್ಲಿ ಸಾರವಾದ ಭಾಗವನ್ನು ನಮ್ಮ ದೇಹವು ಆಕರ್ಷಿಸಿಕೊಂಡ ಮೇಲೆ ಕರಳುಗಳಲ್ಲಿ ತಂಗುವ ನಿಸ್ಸಾರವಾದ ಚರಟಗಳನ್ನು ಮಲಕೋಶದಿಂದ ಹೊರಗೆ ಬಿಡಬೇಕು. ಇವೆರಡು ಕೆಲಸಗಳೇ ನಮ್ಮ ಜೀವನಕ್ಕೆ ಆಧಾರವೆಂದು ಭಾವವು. ಆ ವಿಸರ್ಜನ ಕಾರ್ಯವು ಸರಿಯಾಗಿ ನಡೆಯದಿರುವುದೇ ಮಲಬದ್ಧತೆ. ಈಚೀಚೆಗೆ ಆ ಮಲಬದ್ಧತೆಯು ಅನೇಕ ಜನರಿಗೆ ತೊಂದರೆ ಕೊಡತಕ್ಕ ದೊಡ್ಡ ತೊಡಕಾದ ವಿಷಯವಾಗಿದೆ. ಇನ್ನು ಹೀಗೆಯೇ ಮುಂದೆಹೋದರೆ ಕಾಲಕ್ರಮದಿಂದ ಅದು ಇನ್ನೂ ಅಧಿಕವಾದ ಕಠಿನಸಮಸ್ಯೆಯಾಗುವುದರಲ್ಲಿ ಸಂದೇಹವಿಲ್ಲ.

ಶಾರೀರಕ ಶಾಸ್ತ್ರಜ್ಞರು, ಈಗಿನ ನವನಾಗರಿಕತೆಯೇ ಇದಕ್ಕೆ ಮುಖ್ಯಕಾರಣವೆಂದು ನಮಗೆ ತಿಳಿಸಿರುವರು. ಅದು ಹಾಗಿದ್ದ ಪಕ್ಷದಲ್ಲಿ ಬೊಜ್ಜುತನಕ್ಕೂ ನವನಾಗರಿಕತೆಯೇ ಕಾರಣವೆಂದು ಹೇಳುವಷ್ಟೇ ಇದೂ ಅಸಂಬದ್ಧವೆಂದು ಹೇಳಬೇಕಾಗುವುದು. ಏಕೆಂದರೆ, ವಾಸ್ತವದಲ್ಲಿ ಮಲಕೋಶವು ಸರಿಯಾಗಿ ಕೆಲಸಮಾಡದೆ ಬಂಧಿಸುವದೆಂದರೆ, ಅದಕ್ಕೆ ಸರಿಯಾದ ಶಕ್ತಿಯಿಲ್ಲವೆಂದೇ ತಿಳಿಯಬೇಕು. ಎಂದರೆ, ಅದು ತನ್ನೊಳಗೆ ಸಂಗ್ರಹವಾಗುವ ಕಲ್ಮಷಗಳನ್ನು ಹೊರಗೆ ತಳ್ಳುವ ತನ್ನ ಸಹಜ ಶಕ್ತಿಯನ್ನು ಕಳೆದುಕೊಂಡಂತೆ ತಿಳಿಯಬೇಕು. ಮುಖ್ಯವಾಗಿ ಅದು ಯಾವುದೋ ಒಂದು ಕಾರಣದಿಂದ ತನ್ನ ಕಾರ್ಯವನ್ನು ಮರೆಯುವಂತಾಗಿರಬೇಕು. ಆದುದರಿಂದ ಅದಕ್ಕೆ ತಿರುಗಿ ಅದನ್ನು ಕಲಿಸಬೇಕಾದುದು ಅವಶ್ಯವಾಗಿದೆ. ಆದರೆ ಅನೇಕರು ಅದಕ್ಕೆ ಬುದ್ಧಿ ಕಲಿಸುವುದಕ್ಕೂ ಬೇಸರಪಟ್ಟು ಸೋಮಾರಿಗಳಾಗಿರುವರು. ಈ ಸ್ಥಿತಿಯಲ್ಲಿ ಕರಳುಗಳು ಜಡವಾಗಿ, ಆ ಜಾಡ್ಯವನ್ನು ದೇಹಕ್ಕೆಲ್ಲಾ ಹಬ್ಬಿಸುವುವು. ಇದರಿಂದ ಮಲಕೋಶವು ಕಾರ್ಯಸಮರ್ಥವಿಲ್ಲದೆ ಕೆಟ್ಟುಹೋಗುವುದು.

ಈ ಮಲಬದ್ಧತೆಗಾಗಿ ಎಷ್ಟೋ ಭೇದಿಯ ಔಷಧಗಳುಂಟು. ಅವು ಸೇವನೆಗೂ ಕಷ್ಟವಿಲ್ಲದೆ ಸುಖಭೇದಿಯಾಗುವುದಕ್ಕೂ ಅನುಕೂಲವಾಗಿರಬಹುದು. ಆದರೆ ಕೆಲವು ದಿನಗಳವರೆಗೆ ಹಾಗೆಯೇ ತೆಗೆದುಕೊಳ್ಳುತ್ತ ಬಂದರೆ, ಕಾಲಕ್ರಮದಿಂದ ಅವು ದೇಹದಲ್ಲಿ ಮೊದಲಿನಂತೆ ಕೆಲಸಮಾಡಲಾರವು. ಆಗ ಇನ್ನೂ ಅಧಿಕವೇಗವುಳ್ಳ ಭೇದಿಯ ಔಷಧಗಳನ್ನು ತೆಗೆದುಕೊಳ್ಳಬೇಕಾಗುವುದು. ಅದನ್ನೂ ಹಾಗೆಯೇ ತೆಗೆದುಕೊಳ್ಳುತ್ತ ಬಂದರೆ, ಕಾಲಕ್ರಮದಿಂದ ಅದೂ ಪ್ರಯೋಜನಕ್ಕೆ ಬಾರದೆ ಮಲಬದ್ಧತೆಯನ್ನು ಇನ್ನೂ ಹೆಚ್ಚಿಸುವುದು. ಆದುದರಿಂದ ಔಷಧಸೇವನೆಗಿಂತಲೂ ಪ್ರಕೃತಿಚಿಕಿತ್ಸೆಯೇ ಮಲಬದ್ಧತೆಯನ್ನು ತಪ್ಪಿಸುವುದಕ್ಕೆ ಒಳ್ಳೆಯ ಮಾರ್ಗವೆಂದು ಏರ್ಪಡುವುದು.

ಈ ಮಲಬಂಧವನ್ನು ನೀಗಿಸುವುದಕ್ಕೆ ಒಳ್ಳೇಶಾಸ್ತ್ರಜ್ಞರು ನಿರ್ಣಯಿಸಿರುವ ಪ್ರಕೃತಿಮಾರ್ಗಗಳು ಎಷ್ಟೋ ಇವೆ. ಅವುಗಳಲ್ಲಿ ಬಹುಕಾಲದಿಂದ ಅನುಭವಕ್ಕೆ ಬಂದಿರುವುದು ಸಾಧಾರಣವಾದ ಉಪ್ಪುಮಾತ್ರವೇ! ಇದು ಬಹಳ ಸುಲಭವಾಗಿ ದೊರೆಯುವದಲ್ಲದೆ ಬೇರೆ ಭೇದಿಯ ಔಷಧಗಳಲ್ಲಿರುವ ಕೆಡುಕುಗಳೂ ಇದರಲ್ಲಿಲ್ಲ. ಮಲಬದ್ಧತೆಯನ್ನು ನೀಗಿಸುವುದಕ್ಕಾಗಿ ಉಪ್ಪನ್ನು ಹೇಗೆ ಸೇವಿಸಬೇಕೆಂಬ ಕ್ರಮವನ್ನು ಈ ಕೆಳಗೆ ಕೊಟ್ಟಿದೆ. ಮಲಬದ್ಧತೆಯುಳ್ಳವರು ಎರಡು ಟೀ ಸ್ಪೂನಿನಷ್ಟು ಉಪ್ಪನ್ನು ಹಾಕಿದ ಸಾಧಾರಣ ಒಂದು ಬುದ್ದಿ ಬಿಸಿನೀರನ್ನು ಎದ್ದೊಡನೆ ತೆಗೆದುಕೊಳ್ಳಬೇಕು. ಬೆಳಗ್ಗೆ ಬರೀಹೊಟ್ಟೆಗೆ ಈ ಉಪ್ಪುನೀರನ್ನು ತೆಗೆದುಕೊಳ್ಳುವುದರಿಂದ ಅದು ದೇಹದೊಳಗೆ ಚೆನ್ನಾಗಿ ಕೆಲಸಮಾಡುವುದು.

ಇದು ಜಠರವಾಸ್ತವ್ಯನ್ನಗಳಿಸಿ, ಅಲ್ಲಿ ಆಗಾಗ ಅಲೆಗಳಂತಿರುವ ಬಲವಾದ ಚಲನವನ್ನುಂಟುಮಾಡುವುದು. ಇದು ಕರಳುಗಳೊಳಗೆಲ್ಲಾ ಚೆನ್ನಾಗಿ ವ್ಯಾಪಿಸುವುದು. ಈ ಸಾರ್ವದ್ರಾವಕದ ಕಾರ್ಯಸಾಮರ್ಥ್ಯವು ಜೀರ್ಣಾಂಗಗಳ ತಡಿಕೆಯಲ್ಲಿರುವ ಸೂಕ್ಷ್ಮ ಗ್ರಂಥಿಗಳಿಗೆಲ್ಲಾ ಕಾರ್ಯಶಕ್ತಿಯನ್ನು ಉತ್ತೇಜನಗೊಳಿಸುವುದರಿಂದ ಅದು ಕರಳುಗಳಿಂದ ಚರಟಗಳನ್ನು ಹೊರಗೆ ತಳ್ಳಲು ಬಹಳ ಸಹಕರಿಸುವುದು. ಅಲ್ಲದೆ ಇದಕ್ಕೆ ಕರಳುಗಳಲ್ಲಿ ತಂಗಿರುವ ಗಟ್ಟಿಪದಾರ್ಥಗಳನ್ನೆಲ್ಲಾ ಕರಗಿಸುವ ಶಕ್ತಿಯುಂಟು.

ಹಿಂದೆ ಪಶ್ಚಿಮಮಹಾಯುದ್ಧದಲ್ಲಿ ಫ್ರೆಂಚ್ ಡಾಕ್ಟರರೊಬ್ಬರು ತಮ್ಮ ಶಿಬಿರದಲ್ಲಿದ್ದ ಸೈನಿಕರ ಮಲಬದ್ಧತೆಯನ್ನು ನೀಗಿಸುವುದಕ್ಕಾಗಿ ಸಾಧಾರಣವಾದ ಕಿತ್ತಳೆಹಣ್ಣಿನ ಸಿಪ್ಪೆಯನ್ನೇ ಉಪಯೋಗಿಸುತ್ತಿದ್ದರು. ಅದನ್ನು ಅವರು ಉಪಯೋಗಿಸುತ್ತಿದ್ದುದು ಹೇಗೆಂದರೆ ಒಂದು ಬಟ್ಟಲಿನಷ್ಟು ನೀರಿಗೆ ಆಗಲೇ ಸುಲಿದ ಕಿತ್ತಳೆಹಣ್ಣಿನ ಸಿಪ್ಪೆಯನ್ನು ಹಾಕಿ ಅರ್ಧಗಂಟೆಕಾಲ ಅದನ್ನು ಬೇಯಿಸುತ್ತಿದ್ದರು. ಹಾಗೆ ಸ್ವಲ್ಪ ಬೆಂದ ಆ ಸಿಪ್ಪೆಯನ್ನು ತೆಗೆದು ಸ್ವಲ್ಪ ಸಕ್ಕರೆ ಬೆರಸಿದ ಹೊಸ ನೀರಿನಲ್ಲಿ ಹಾಕಿ ತಿರುಗಿ ಅರ್ಧಗಂಟೆಯ ಕಾಲದವರೆಗೆ ಅದನ್ನು ಬೇಯಿಸಿ ನೀರನ್ನು ಬಸಿದು ಒಣಗಿಸುತ್ತಿದ್ದರು. ಅದನ್ನೇ ಇವರು ಆ ಸೈನಿಕರಿಗೆ ಕೊಡುತ್ತಿದ್ದುದು. ಒಂದು ಹಣ್ಣಿನ ಸಿಪ್ಪೆಯು ಒಬ್ಬ ಮನುಷ್ಯನಿಗೆ ಸಾಕಾಗುವುದು. ಹೀಗೆ ಪಕ್ವಮಾಡಿದ ಕಿತ್ತಳೆಹಣ್ಣಿನ ಸಿಪ್ಪೆಯು ಕರಳುಗಳಲ್ಲಿ ಯಂತ್ರದಂತೆ ಕೆಲಸಮಾಡುವುದು. ಅಲ್ಲದೆ ಈ ಕಿತ್ತಳೆಯ ಸಿಪ್ಪೆಯು ದೇಹದಲ್ಲಿ ಪಿತ್ತರಸವನ್ನು ಹೆಚ್ಚಾಗಿ ಉತ್ಪತ್ತಿಮಾಡುವುದು. ಮಲಬದ್ಧತೆಯನ್ನು ತಪ್ಪಿಸುವುದಕ್ಕೆ ಈ ಪಿತ್ತರಸವು ಬಹಳ ಮುಖ್ಯವು.

ಇನ್ನೂ ಅನೇಕ ಸಂದರ್ಭಗಳಲ್ಲಿ ಮಲಬಂಧವನ್ನು ನೀಗಿಸುವುದಕ್ಕಾಗಿ ಯಾಂತ್ರಿಕವಾದ ಕೆಲವು ಪ್ರಯೋಗಗಳನ್ನೂ ಮಾಡುವುದುಂಟು. ಇದರಲ್ಲಿ ಎರಡು ವಿಧವುಂಟು. ಮೊದಲನೆಯದು, ಆ ಜಠರದ ಸ್ನಾಯುಗಳನ್ನು ಒತ್ತಿಕೊಡುವುದು. ಈಗ ಹಲವು ವರ್ಷಗಳ ಕೆಳಗೆ ಈ ಜಠರಮರ್ದನಕ್ಕಾಗಿ ಡಾಕ್ಟರ್ ಸಿಪ್ಪಿ ಎಂಬುವರು ಫಿರಂಗಿಯ ಗುಂಡುಗಳನ್ನು ಉಪಯೋಗಿಸುತ್ತಿದ್ದರು. ಹೇಗೆಂದರೆ? ಮೂರರಿಂದ ಐದುಪೌಂಡುಗಳವರೆಗೆ ತೂಕವುಳ್ಳ ಫಿರಂಗಿಯ ಗುಂಡುಗಳಿಗೆ ಫ್ಲಾನಲ್ ಬಟ್ಟೆಯನ್ನು ಸುತ್ತಿ ಅದನ್ನು ಕಿಬ್ಬೊಟ್ಟೆಯ ಬಲಭಾಗದಿಂದ ಆರಂಭಿಸಿ ಕೊಲೋನಿನ ಮಾರ್ಗವಾಗಿ ಉರುಳಿಸುತ್ತಬಂದು ಕಿಬ್ಬೊಟ್ಟೆಯ ಎಡಭಾಗದ ವರೆಗೆ ತರಬೇಕು. ಪ್ರತಿದಿನವೂ ಬೆಳಗ್ಗೆ ಹಾಸಿಗೆಯಿಂದ ಎದ್ದೊಡನೆ ಈ ಪ್ರಯೋಗವನ್ನು ಮೂವತ್ತು ಮೊದಲು ಅರವತ್ತರವರೆಗೆ ಮಾಡುತ್ತ ಬಂದರೆ ಅದರಿಂದ ಬಹಳ ಗುಣವುಂಟು.

ಇದಕ್ಕಿಂತಲೂ ಇನ್ನೂ ಜನಗಳಿಗೆ ಅನುಕೂಲವಾದ ವ್ಯಾಯಾಮಕ್ರಮಗಳುಂಟು. ಅವುಗಳಲ್ಲಿ ಬಹು ಸುಲಭವಾಗಿ ಮಾಡಬಹುದಾದುದೇನೆಂದರೆ? ನಾವು ನಿಂತಹಾಗೆಯೇ ನಮ್ಮ ಬಲಗಾಲಿನ ಮಂಡಿಯನ್ನು ಎರಡುಕೈಗಳಿಂದ ಹಿಡಿದು ಮೇಲಕ್ಕೆತ್ತಿ ಜಠರಭಾಗಕ್ಕೆ ಒತ್ತುವಂತೆ ಮಾಡುವುದು. ತಿರುಗಿ ಮಂಡಿಯನ್ನು ಕೆಳಕ್ಕೆ ಬಿಟ್ಟು ಬಿಡುವುದು. ಈ ವ್ಯಾಯಾಮವನ್ನೇ ಪುನರಾವರ್ತಿಮಾಡುವುದರಿಂದ ಮಲಬಂಧವನ್ನು ನೀಗಿಸಲಹುದು.

ಮತ್ತೊಂದು ವ್ಯಾಯಾಮಕ್ರಮವೇನೆಂದರೆ ಕೈಗಳನ್ನು ಎರಡು ತೊಡೆಗಳ ಸಂದಿನಲ್ಲಿ ಬಿಟ್ಟುಕೊಂಡು ಆದಷ್ಟು ಕೆಳಕ್ಕೆ ಬಗ್ಗಬೇಕು. ಮಂಡಿಗಳು ಸ್ವಲ್ಪಮಾತ್ರವೇ ಬಗ್ಗುವಂತಿರಬೇಕು. ಈ ವ್ಯಾಯಾಮಕಾಲದಲ್ಲೆಲ್ಲಾ ತೋಳುಗಳನ್ನು ನೆಟ್ಟಗೆ ನೀಡಿಯೇ ಇರಬೇಕು.

ಬೇರೊಂದು ವ್ಯಾಯಾಮಕ್ರಮವೇನೆಂದರೆ, ಮೈಯನ್ನು ನಿಂತಿದ್ದಹಾಗೆಯೇ ಒಂದು ಪಕ್ಕವಾಗಿ ಬಗ್ಗಿಸಬೇಕು. ಆಗ ಬಲಗೈಯಿಂದ ನಮ್ಮ ಕಿಬ್ಬೊಟ್ಟೆಯನ್ನು ಕಾಳಜದಕಡೆಗೆ ಒತ್ತುತ್ತಿರಬೇಕು. ಹೀಗೆ ಮುಂದಕ್ಕೂ, ಕೆಳಕ್ಕೂ ಮೈಯನ್ನಾಡಿಸುತ್ತಿರಬೇಕು. ನೀವು ನೆಟ್ಟಗೆ ನಿಲ್ಲುವಾಗ ಕೈಯಿಂದ ಒತ್ತಿರುವ ಭಾಗವನ್ನು ಥಟ್ಟನೆ ಬಿಟ್ಟುಬಿಡಬೇಕು. ಮೂಲೆಯಾಗಿ ಬಗ್ಗುವುದನ್ನು ಆಗಾಗ ಎಡಗಡೆಗೂ ಮಾಡಿಸಬೇಕು.

ಮಲಕೋಶವನ್ನು ಸರಿಯಾಗಿ ಕೆಲಸಮಾಡುವಂತೆ ತಿದ್ದುವುದಕ್ಕೆ ಇವೆಲ್ಲಕ್ಕಿಂತಲೂ ಗುಣಕಾರಿಯಾದ ಬೇರೊಂದು ವ್ಯಾಯಾಮವಿದೆ. ಬೆನ್ನು ಕೆಳಗಾಗಿ ಮಲಗಿ, ಕೈಗಳೆರಡನ್ನೂ ಹೊಟ್ಟೆಯ ಮೇಲೆ ಅಡ್ಡವಾಗಿಟ್ಟುಕೊಳ್ಳಿರಿ. ಹೀಗೆ ಮಲಗಿದ್ದಹಾಗೆಯೇ ತಲೆಯನ್ನೂ, ಭುಜಗಳನ್ನೂ ಮೇಲಕ್ಕೆತ್ತಿರಿ, ತಿರುಗಿ ಕೆಳಕ್ಕೆ ತಗ್ಗಿಸಿರಿ. ಹೀಗೆಯೇ ಹತ್ತುಸಾರಿ ಪುನರಾವರ್ತಿ ಮಾಡಿರಿ. ಈ ವ್ಯಾಯಾಮಗಳು ಮುಗಿಯುವಾಗ ತಲೆ ಮತ್ತು ಭುಜಗಳನ್ನು ಮೇಲಕ್ಕೆತ್ತಿ, ಕೈಗಳ ಕೊನೆಯಿಂದ ಹೊಟ್ಟೆಯನ್ನೂ, ಕೆಳಗಿನ ಪಕ್ಕೆಲುಬುಗಳನ್ನೂ ಸಡಿಲವಾಗಿ ಒತ್ತಿಹಿಡಿದಿರಬೇಕು.

ಮತ್ತೊಂದು ಕ್ರಮವೇನೆಂದರೆ, ನೆಲದಮೇಲೆ ಅಂಗತನಾಗಿ ಮಲಗಿರಿ! ನಿಮ್ಮ ಕೈಗಳೆರಡನ್ನೂ ತಲೆಯ ಕೆಳಗೆ ಇಟ್ಟುಕೊಳ್ಳಿರಿ! ಮೊಳಕೈಗಳೆರಡೂ ಪಕ್ಕದಲ್ಲಿರಲಿ. ಹೀಗಿದ್ದಂತೆಯೇ ಎಳಕಾಲದಲ್ಲಿ ಬಲಗಾಲನ್ನೂ, ತಲೆಯನ್ನೂ ಭುಜಗಳನ್ನೂ ಮೇಲಕ್ಕೆತ್ತಿರಿ. ಆಗ ಎಡ ಮಂಡಿಯು ನಿಮ್ಮ ಬಲ ಮೊಳಕೈಗೆ ತಗುಲಿರಬೇಕು. ಆಮೇಲೆ ಆ ಕಾಲುಗಳನ್ನು ಕೆಳಕ್ಕೆ ಬಿಡಬೇಕು. ಹೀಗೆಯೇ ಪುನರಾವರ್ತಿಮಾಡುತ್ತಿರಬೇಕು.

ಮತ್ತೊಂದು ಕ್ರಮವೇನೆಂದರೆ? ಬೆನ್ನು ಕೆಳಗಾಗಿ ಮಲಗಿ ಮೊಳಕಾಲುಗಳನ್ನು ಮೇಲಕ್ಕೆತ್ತಿ ಜೋಡಿಸಿಟ್ಟುಕೊಳ್ಳಿರಿ. ಉಸಿರನ್ನು ಬಿಡುತ್ತ ಮಂಡಿಗಳನ್ನು ಕೆಳಕ್ಕೆ ತಗ್ಗಿಸಿ, ಅದೇ ಸಮಯ ತಲೆಯನ್ನು ಮೇಲಕ್ಕೆತ್ತಿ ತಲೆಯು ಮಂಡಿಗಳ ಸಮಿಪವಾಗಿ ಆದಷ್ಟು ಮಟ್ಟಿಗೆ ಬರುವವರೆಗೆ ಎತ್ತಬೇಕು. ಹೀಗೆ ಪುನರಾವರ್ತಿಮಾಡಬೇಕು.

ಈ ಮಲಬಂಧವನ್ನು ತಪ್ಪಿಸುವ ವಿಷಯದಲ್ಲಿ ಆಹಾರನಿಯಮಗಳೂ ಕೂಡ ಒಂದು ಮುಖ್ಯಭಾಗವಾಗಿವೆ. ಹೊಟ್ಟು ತೆಗೆಯದ ಘೋಧಿಯ ರೊಟ್ಟಿ, ಕಂಬು, ಹುರುಳಿ, ಧಾನ್ಯಗಳ ರೊಟ್ಟಿ, ಓಟುಗಂಜಿ ಇವೆಲ್ಲಾ ಅದಕ್ಕೆ ಬಹಳ ಉತ್ತಮಗುಣಕಾರಿಗಳು. ಈ ಧಾನ್ಯಗಳಲ್ಲಿ ಸೆಲುಲೋಸ್ ಎಂಬುದು ವಿಶೇಷವಾಗಿರುವುದರಿಂದ, ಅವು ಮಲಬದ್ಧತೆಯನ್ನು ನೀಗಿಸುವ ವಿಷಯದಲ್ಲಿ ಸಹಜವಾದ ಶಕ್ತಿಯನ್ನು ಹೊಂದಿವೆ. ಹಸಿಯ ಕಾಯಿಪಲ್ಯಗಳಲ್ಲಿಯೂ ಕೂಡ ಕ್ಯಾರೆಟ್, ಟರ್ನಿಪ್ಸ್, ಅವರೆ ಮುಂತಾದ ಕೆಲವು ತರಕಾರಿಗಳು ಈ ಮಲಬಂಧವನ್ನು ನೀಗಿಸತಕ್ಕವುಗಳಾಗಿವೆ. ಫಲಜಾತಿಗಳಲ್ಲಿ ಸೇಬಿನಹಣ್ಣುಗಳು ಮಲಬದ್ಧತೆಯನ್ನು ನೀಗಿಸುವುದರಲ್ಲಿ ಬಹಳ ಪ್ರಖ್ಯಾತಿ ಹೊಂದಿವೆ. ದ್ರಾಕ್ಷಿ, ಅಂಜೂರ, ಪೀರಳೆ, ಪಿಚ್ಚಿಸ್‌ಹಣ್ಣು, ಇವೆಲ್ಲಾ ಮಲವನ್ನು ಸಡಿಲಿಸುವ ಗುಣವುಳ್ಳುವಾಗಿವೆ.

ಕೆಲವು ದೇಹಪ್ರಕೃತಿಗಳಲ್ಲಿ ಈ ಮಲಬಂಧಕ್ಕೆ ಅವರವರ ಮಾನಸಿಕ ಸ್ಥಿತಿಯೇ ಕಾರಣವೆಂದೂ ತಿಳಿದುಬರುತ್ತದೆ. ಮನಶ್ಶಾಂತಿಯು ಕೋಲೋನಿನಲ್ಲಿ ಕಾರ್ಯಶಕ್ತಿಯನ್ನು ಹೆಚ್ಚಿಸುವುದು. ಮನಸ್ಸಿನ ಕಳವಳವು ಮಲಬದ್ಧತೆಗೆ ಅವಕಾಶವನ್ನು ಕೊಡುವುದು.

ಮಲಬಂಧವು ಪ್ರಕೃತಿಚಿಕಿತ್ಸೆಯಿಂದಲೇ ಬೇಗನೆ ಗುಣವಾಗುವುದಲ್ಲದೆ, ಆ ಗುಣಾಂಶವು ಸ್ಥಿರವಾಗಿಯೂ ನಿಲ್ಲುವುದು. ಭೇದಿಯ ಔಷಧಗಳನ್ನು ಕುಡಿಯುವುದಕ್ಕಿಂತಲೂ, ಮೇಲೆ ಹೇಳಿದಂತೆ ಪ್ರಕೃತಿಚಿಕಿತ್ಸೆಯಿಂದ ಅದನ್ನು ನೀಗಿಸುವ ಪ್ರಯತ್ನವು ಬಹಳ ಒಳ್ಳೆಯದು. ಜಠರ ಶುದ್ಧಿಮಾಡುವ ಭೇದಿಯ ಔಷಧಗಳು ತಾತ್ಕಾಲಿಕವಾಗಿ ಆ ಮಲವನ್ನು ತಳ್ಳುವುವೇ ಹೊರತು, ಅದರಿಂದ ಸ್ಥಿರವಾದ ಗುಣವಿಲ್ಲ. ಅವು ಈ ಮಲಬಂಧವನ್ನು ಮುಂದೆ ಮುಂದೆ ಹೆಚ್ಚಿಸುವುವೇ ಹೊರತು ಬೇರೆಯಲ್ಲ. ಹಸಿಲ್ಲೆ ಮುಂತಾಗಿ ಮಲಶುದ್ಧಿಮಾಡುವ ಕೆಲವು ವಸ್ತುಗಳು, ಮಲವನ್ನು ಸಡಿಲಿಸಿದ ಮೇಲೆ, ಕರಳುಗಳನ್ನು ಜಡವಾಗಿ ಮಾಡಿಬಿಡುವುವು. ಆದುದರಿಂದ ಅಂಥವುಗಳನ್ನು ಈ ಮಲಬಂಧಕ್ಕೆ ಔಷಧವಾಗಿ ಸೇವಿಸುವುದು ಅಷ್ಟು ಪ್ರಯೋಜನಕರವಲ್ಲ.

ಪ್ರಕೃತಿಚಿಕಿತ್ಸೆಯಲ್ಲಿ ಗುಣತೋರುವುದಕ್ಕೆ ಸ್ವಲ್ಪ ದೀರ್ಘಕಾಲ ವಿಳಂಬವಾದರೂ ಆಗಬಹುದು. ಆದರೆ, ಅದರಿಂದ ತೋರಿಬರುವ ಗುಣವು ತೃಪ್ತಿಕರವಾಗಿಯೂ, ಶಾಶ್ವತವಾಗಿಯೂ ಇರುವುದು. ಮುಖ್ಯವಾಗಿ ಈ ಪ್ರಕೃತಿಚಿಕಿತ್ಸೆಗಳು ಮಲಕೋಶಗಳಿಗೆ ತಮ್ಮ ಕಾರ್ಯದಲ್ಲಿ ಉಂಟಾಗಿರುವ ಅಸಾಮರ್ಥ್ಯವನ್ನು ನೀಗಿಸಿ ಅವುಗಳಲ್ಲಿ ಚಟುವಟಿಕೆಯುಂಟಾಗುವಂತೆ ಮಾಡುವುವು. ಯಾವಾಗಲೂ ಯಾವ ಕೆಲಸಕ್ಕೂ ನಿಯಮಮಾರ್ಗದಿಂದಲೇ ಜಯವು ಕೈಗೂಡುವುದು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ.
ಬೆಂಗಳೂರು ಸಿಟಿ. 10

ಸೆಲ್ಫ್ ಇಂಗ್ಲೀಷ್ ಸ್ಟಡಿ.
೮೮೮ ಪೇಜುಗಳ ದೊಡ್ಡ ಪುಸ್ತಕ.



ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೋ. ನಂ. 1246, ಮದರಾಸು.

K. N. BENSON & Co.,
[9] P. B. 1246, MADRAS

ಶಾಸ್ತ್ರೋಕ್ತ ದಿವ್ಯಾಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.
ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್‌ಮೆಂಟ್ಸುಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಘಂಟೆಯನ್ನು ತೋರಿಸುವುವು. ಒಳಗಿನ ಕೆಂಪು ಇಟ್ಟಿರುವುದು. ಇದರ ಕೇಸು ಬಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.



ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ: ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
[10] **THE CITY MART,**
168, China Bazaar, MADRAS.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 18

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಮಲೇರಿಯಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಖಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ರ್ಹುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವನೋವು, ಗಂಟುನೋವು ಸಂಧು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವಿ ಕಡಿತ, ಭಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 3 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕುಮದ್ದುಗಳು, ಹೋಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮು ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಕೆಯುಳ್ಳ ರೋಗ, ದದ್ದು, ಸೋರುವ ನಂಜೆ ಹುಣ್ಣುಗಳನ್ನು ಕ್ಷಣದಲ್ಲಿ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಶಬ್ದ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.
½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ಕಾಯುಗಳು ನಿಸ್ತೇಜವಾಗಿಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕರ ಗುರುತು ಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದದ ಬೀರುವಂತೆ ಮಾಡುವ **ಸಿರಪ್‌-ಸಾಲಿಸವನ** ಆತ್ಮಸಂರಕ್ಷಣೆಯಂತೆಯೇ ಯುವಕರಾಗಿರುವನು.
ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರ:— ಮಲೇರಿಯಾನ ಕಂಪೆನಿ,
[19] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಿದ್ದುಹೋಗುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (9)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೩ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟಾಭಿಷೇಕವಾಗುವ ಕಾಲದಲ್ಲಿ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬೌಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[1] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಜನವರಿ ೧೯೩೪ [ಸಂಚಿಕೆ ೩೯

ಶ್ರೀಶೈಲಂ.

ಶಿವರಾತ್ರಿ ಉತ್ಸವದ ಏರ್ಪಾಡುಗಳು.

ಈ ಸಾರೆ ಶಿವರಾತ್ರಿಯು ಸೋಮವಾರವಾಗುವದರಿಂದಲೂ, ಕೃಷ್ಣಾ ನದಿಯು ಪುಷ್ಕರದಲ್ಲಿರುವದರಿಂದಲೂ ಹೆಚ್ಚು ಜನ ಯಾತ್ರಿಕರು ಬರುವರೆಂದು ನಿರೀಕ್ಷಿಸಲ್ಪಟ್ಟಿದೆ. ಅದಕ್ಕಾಗಿ ಕರ್ನೂಲ್ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ ಮೇಲ್ವಿಚಾರಣೆಯಲ್ಲಿ ವಿಶೇಷವಾದ ಆರೋಗ್ಯರಕ್ಷಣೆಯ ಏರ್ಪಾಡುಗಳು ಮಾಡಲ್ಪಟ್ಟಿವೆ.

ದಾರಿಯಲ್ಲೂ, ದೇವಾಲಯದ ಒಳ ಹೊರಭಾಗಗಳಲ್ಲೂ ಇರುವ ಭಾವಿಗಳು, ಕೆರೆಗಳು ಮತ್ತು ಕೊಳಗಳು ನೀರಿನಿಂದ ತುಂಬಿವೆ.

ಯಾತ್ರಿಕರಿಗೆ ಅನುಕೂಲವಾದ ವಸತಿ ಸ್ಥಳಗಳೂ ಎಲೆಕ್ಟ್ರಿಕ್ ದೀಪಗಳೂ ಮತ್ತು ಕುಡಿಯುವದಕ್ಕೆ ಒಳ್ಳೆಯ ನೀರೂ ಒದಗಿಸಲ್ಪಡುವುವು. ಹಂಗಾಮಿ ಜೋಪಡಿಗಳು ಕಟ್ಟಲ್ಪಡುತ್ತಿರುವುವು. ಇವುಗಳಿಗೆ ಕಡಿಮೆ ಚಾರ್ಜು ಮಾಡಲಾಗುವದು.

ಅವಶ್ಯವಿದ್ದ ಯಾತ್ರಿಕರು ವಸತಿ ಸ್ಥಳವನ್ನು ಕಾದಿಡುವದಕ್ಕಾಗಿ 1 ರೂ. 'ರಿಜರ್ವೇಷನ್ ಫೀ' ಸಮೇತ ಈ ಕೆಳಗೆ ರುಜುಮಾಡಿರುವವರಿಗೆ ಬರೆದುಕೊಳ್ಳಬಹುದು. ಕ್ಷೇತ್ರದ ಸುತ್ತುಮುತ್ತಿನ ಪ್ರದೇಶದ ದಾರಿಗಳನ್ನು ತೋರಿಸುವ ಚಿತ್ರವು ಬೇಕಾದವರಿಗೆ ಕಳುಹಿಸಲ್ಪಡುವದು.

ಪಿ. ರಾಮಯ್ಯ,
ಪ್ರೆಸಿಡೆಂಟ್,
ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡ್,
17-1-34 ಕೊಯಿಲ್‌ಕುಂಟ್ಲ.

ರಷ್ಯಾದೇಶಕ್ಕೆ ಸೇರಿದ ಕಪ್ಪುಸಮುದ್ರದ ರೇವು ಪಟ್ಟಣಗಳಲ್ಲಿರುವ ಸ್ವಿಸ್‌ಕಂಟ್ರೋಲ್ ಕಂಪೆನಿಯ ಕೆಲವು ಜನ ನೌಕರರನ್ನು ಸರಕಾರದವರು ದಸ್ತಗಿರಿ ಮಾಡಿರುತ್ತಾರೆ. ಇವರಲ್ಲಿ ಜರ್ಮನಿ, ಬೆಲ್ಜಿಯಂ, ಆಸ್ಟ್ರಿಯಾ ಮತ್ತು ಡೇನ್ಮಾರ್ಕ್ ಈ ನಾಲ್ಕು ರಾಜ್ಯಗಳ ಜನರೂ ಇದ್ದು ಇವರು ತಮ್ಮ ನಿಯಮಿತ ಕೆಲಸಗಳ ಜೊತೆಗೆ ತಮಗೆ ಸಂಬಂಧ ಪಡದ ಕೆಲಸಗಳನ್ನೂ ಮಾಡುತ್ತಿದ್ದರಂತೆ!

ಒಳದೇಶದ ವೃತ್ತಾಂತಗಳು:

ರಾಜಧಾನಿಯ ದೊಡ್ಡಪೇಟೆಯಲ್ಲಿರುವ 'ಬಾಂಬೆ ಜ್ಯೂಯಲರಿ ಮಾರ್ಟ್'ನವರು ಕಳುಹಿಸಿರುವ ಹೊಸ ವರ್ಷದ ಕ್ಯಾಲೆಂಡರನ್ನು ಆತ್ಮಾದರದಿಂದ ಸ್ವೀಕರಿಸಿರುತ್ತೇವೆ.

ಬೆಂಗಳೂರು ಪಬ್ಲಿಕ್ ಹೆಲ್ತ್ ಇನ್ಸ್ಟಿಟ್ಯೂಟಿನ ಜೂನಿಯರ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಡಾಕ್ಟರ್ ವಿ. ಕೃಷ್ಣಮೂರ್ತಿಯವರು ಬ್ಯಾಕ್ಟೀರಿಯಾಲಜಿ ಎಂಬ ವೈದ್ಯವಿದ್ಯೆಯನ್ನು ಅಭ್ಯಸಿಸಿ ಬರುವದಕ್ಕಾಗಿ ಜರ್ಮನಿಗೆ ಪ್ರಯಾಣಮಾಡಿದರು.

ಇದೇ ಜನವರಿ 10 ನೆಯ ತಾರೀಖಿನ ದಿವಸ ನಡೆದ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ಲಿನ ಮೀಟಿಂಗಿನಲ್ಲಿ ವೈಸ್-ಪ್ರೆಸಿಡೆಂಟರು ಇರಬೇಕೇ ಬೇಡವೇ ಎಂಬ ವಿಚಾರದಲ್ಲಿ ದೀರ್ಘವಾದ ಚರ್ಚೆಯು ನಡೆದು ಕಡೆಯಲ್ಲಿ ವೈಸ್‌ಪ್ರೆಸಿಡೆಂಟರು ಇರಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯಿತು.

ಕಳೆದ ಮಂಗಳವಾರದ ದಿವಸ ಬೆಳಗ್ಗೆ ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಕೆ. ಎ. ಸರ್ವಿಸ್ ಬಸ್ಸಿನಲ್ಲಿ ಸುಮಾರು 30 ವರ್ಷ ವಯಸ್ಸಿನ ಜೋಸೆಫ್ ರಾಜು ಎಂಬುವನೂ, ಸುಮಾರು 15ವರ್ಷ ವಯಸ್ಸಿನ ಭಾಗ್ಯಂ ಮೇರಿ ಎಂಬ ಹುಡುಗಿಯೂ ಮೈಸೂರಿಗೆ ಬರುತ್ತಿದ್ದಾಗ ಅದೇ ಬಸ್ಸಿನಲ್ಲಿ ಪ್ರಯಾಣಮಾಡಿದ ಸಬ್-ಇನ್ಸ್ಪೆಕ್ಟರ್ ಅಧಿಕಾರಿಗಳಿಗೆ ಏನೋ ಅನುಮಾನವುಂಟಾಗಿ ಇಬ್ಬರನ್ನೂ ರಾಜಧಾನಿಯ ದೇವರಾಜ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡುಹೋಗಿ ವಿಚಾರಿಸುವಲ್ಲಿ ರಾಜುವು ಮೇರಿಯನ್ನು ಬೆಂಗಳೂರು ದಂಡಿನಿಂದ ಯಾರಿಗೂ ತಿಳಿಸದೆ ಕರೆತಂದನೆಂದು ಪತ್ತೆಯಾಗಿ, ಪೋಲೀಸರು ಅವರೀರ್ವರನ್ನು ನಿರ್ಬಂಧದಲ್ಲಿಟ್ಟು ವಿಚಾರಣೆಗೆ ಪ್ರಾರಂಭಿಸಿರುತ್ತಾರೆ.

ಮದರಾಸ್ ಜೈಲಿನಲ್ಲಿ ಪೊಂಗಲ್ ಹಬ್ಬದ ದಿವಸ ಪದ್ಧತಿಯ ಮೇರೆ ಪೊಂಗಲನ್ನು ಕೊಡಲಿಲ್ಲವೆಂಬ ಕಾರಣದಮೇಲೆ 900 ಜನ ಖೈದಿಗಳು ನಿರಶನ ವ್ರತವನ್ನು ಕೈಕೊಂಡಿರುವರು.

ಡೆಹಲಿಯ 'ಹಿಮಾಲಯನ್ ಟ್ರಾನ್ಸ್‌ಪೋರ್ಟ್ ಕಂಪೆನಿ' ಯವರು ಬದರೀನಾಥಕ್ಕೆ ಪ್ರತಿವರ್ಷವೂ ಹೋಗುವ ಯಾತ್ರಿಕರ ಅನುಕೂಲಕ್ಕಾಗಿ ಒಂದು 'ಏರೋಪ್ಲೇನ್ ಸರ್ವಿಸ್' ನ್ನು ಏರ್ಪಡಿಸಬೇಕೆಂದು ನಿರ್ಧರಿಸಿರುವರು. ಸದ್ಯಃ ಇದು ಹರದ್ವಾರದಿಂದ ಗಂಚಾರ್ ವರೆಗೆ ಅಂದರೆ 100 ಮೈಲುಗಳ ದೂರ ಮಾತ್ರ ಏರ್ಪಡಿಸಲ್ಪಡುವದು.

ಲಂಡನ್ನಿನಲ್ಲಿ ಭಾವಲ್ಪುರದ ನವಾಬರ ವ್ಯಾಪಾರ.

ಭಾವಲ್ಪುರದ ನವಾಬರು ಲಂಡನ್ನಿನಲ್ಲಿ ಕ್ರಿಸ್‌ಮಸ್ ಕಾಲದಲ್ಲಿ 750 ರೂ. ಗಳಿಗೆ ಎಲೆಕ್ಟ್ರಿಕ್ ಕರೆಂಟಿನಿಂದ ನಡೆಯುವ ಎರಡು ಆಟದ ಮೋಟಾರುಗಳನ್ನೂ, 10,000 ರೂ. ಗಳಿಗೆ 15 ಅಡಿ ಎತ್ತರವಾಗಿ ಆರು ಕೊಠಡಿಗಳುಳ್ಳ ಒಂದು ಬೊಂಬೆಯ ಮನೆಯನ್ನೂ ಕೊಂಡುಕೊಂಡಿರುವರು. ನವಾಬರು ಇವುಗಳನ್ನು ಸ್ಪೆಷಲ್ಲಾಗಿ ತಯಾರಿಸಿದ ಪೆಟ್ಟಿಗೆಗಳಲ್ಲಿ ಬಂದೋಬಸ್ತಾಗಿ ಪ್ಯಾಕ್‌ಮಾಡಿಸಿ, ಹಿಂದೂಸ್ಥಾನಕ್ಕೆ ತಮ್ಮ ಅರಮನೆಗೆ ಕಳುಹಿಸುವರಂತೆ!

ವಿಚಿತ್ರಮೀನು!

ಮುಂದೆ ಬರುವ ಬಿರುಗಾಳಿಯನ್ನು ಪೂರ್ವಭಾವಿಯಾಗಿಯೇ ತಿಳುಹಿಸುವ ಒಂದು ವಿಚಿತ್ರಜಾತಿಯ ಮೀನು ಲಂಡನ್ನಿನ ಪ್ರಾಣಿಸಂಗ್ರಹಾಲಯದಲ್ಲಿ ಹೊಸದಾಗಿ ಶೇಖರಿಸಲ್ಪಟ್ಟಿರುವದು. ಇದಕ್ಕೆ 'ಥಂಡರ್ ಫಿಷ್' ಅಥವಾ 'ಗುಡುಗಿನ ಮೀನು' ಎಂದು ಹೆಸರು. ಇದು ಯಾವಾಗಲೂ ನದೀಪಾತ್ರದಲ್ಲಿಯೇ ಓಡಾಡುತ್ತಿದ್ದು ಬಿರುಗಾಳಿಯು ಪ್ರಾಪ್ತವಾಗುವ ಕಾಲದಲ್ಲಿ ನೀರಿನ ಮೇಲ್ಭಾಗಕ್ಕೆ ಬಂದು ವಿಶೇಷ ಗಾಬರಿಯಿಂದ ಈಜುವದಂತೆ!

ವಾರ್ಧಾನಗರದಲ್ಲಿ ಕಳೆದ ಒಂದೂವರೆ ವರುಷದಿಂದಲೂ ನಡೆಯುತ್ತಿದ್ದ ಪುಲಗಾಂವ್ ಗ್ಯಾಂಗ್ ಕೇಸ್ ಎಂಬ ಮೊಕದ್ದಮೆಯಲ್ಲಿ ಅಪಾದಿತರಾಗಿದ್ದ 13 ಜನರೂ ನಿರಪರಾಧಿಗಳೆಂದು ಸೆಷನ್ಸ್ ಜಡ್ಜರವರು ತೀರ್ಪು ಹೇಳಿರುವರು. ಈ ಸಂಬಂಧದಲ್ಲಿ ಅಪಾದಿತರು ಕಳೆದ ಒಂದೂವರೆ ವರುಷದಿಂದಲೂ ಕಾರಾಗೃಹದಲ್ಲಿಡಲ್ಪಟ್ಟಿದ್ದು, ಸರಕಾರಕ್ಕೆ ಒಟ್ಟು 40,000 ರೂಪಾಯಿಗಳು ಖರ್ಚಾದುವಂತೆ!

ಗೌಹತಿಯ ಒಬ್ಬಾನೊಬ್ಬ ಸಶಸ್ತ್ರನಾದ ಪೋಲೀಸ್ ಕಾನ್ಸ್ಟೆಬಲನು ಅಲ್ಲಿಯ ಕೋರ್ಟಿನ ಮೇಲಿದ್ದ 'ಯೂನಿಯನ್ ಜಾಕ್' ಬಾವುಟವನ್ನು ಕಿತ್ತು, ಹರಿದುಹಾಕಿದನೆಂಬ ಕಾರಣದ ಮೇಲೆ ದಸ್ತಗಿರಿ ಮಾಡಲ್ಪಟ್ಟಿರುವನು. ಅಪರಾಧಿಯು ಗಾಂಧಿಯವರ ಕಾರ್ಯಕ್ರಮದಲ್ಲಿ ಭಾಗವಹಿಸಲೋಸುಗ ರಜೆಯನ್ನು ಕೇಳಿದನಂತೆ! ಅಧಿಕಾರಿಗಳು ರಜೆಯನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಈ ರೀತಿ ವರ್ತಿಸಿದನಂತೆ!

ಲಾಹೋರಿನ ರಹಮತ್‌ಅಲಿ ಎಂಬ ಜೈಲ್ ಅಧಿಕಾರಿಯು ಫಿರೋಜ್‌ಪುರದ ರಾಮಸುಖದಾಸ್ ಕಾಲೇಜಿನ ಮನೋಹರಲಾಲ ಎಂಬ ವಿದ್ಯಾರ್ಥಿಯ ಮೇಲೆ ಅತ್ಯಾಚಾರಮಾಡಲೆಳಸಿ, ಅದು ಸಾಧ್ಯವಾಗದೆ ಇಬ್ಬರಿಗೂ ಕೈಕೈ ಹತ್ತಿದ ಸಂದರ್ಭದಲ್ಲಿ ರಹಮತ್ ಅಲಿಯು ಮನೋಹರಲಾಲನನ್ನು ಖೂನಿಮಾಡಿದನೆಂಬ ಕಾರಣದಮೇಲೆ ಸೆಷನ್ಸ್ ಜಡ್ಜರು ವಿಚಾರಣೆನಡೆಯಿಸಿ ಅಪರಾಧಿಗೆ ಫಾಸಿ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಸನ್ಯಾಸಿಗಳು ಜಂಗಮರಲ್ಲ.

ಬರೆದವ—ದೈವಜ್ಞವಿನೋದ.

ಈಗಿನ ವಿರಕ್ತರೆಂಬ ಕಾವಿಕಪನೀಬಂಟರಿಗೆ ಸಮಾಜದಿಂದ ಯಾವ ವಿಧವಾದ ಗೌರವಗಳೂ ದೊರೆಯದಿದ್ದುದರಿಂದ ತಾವು ಅಷ್ಟಾವರಣಾಂತರ್ಗತಜಂಗಮರೆಂಬ ಗುಲ್ಲನ್ನೆಬ್ಬಿಸಿರುವರು. ವೀರಶೈವಮತನಾಯಕರಾದ ಗುರುವರ್ಗದವರ ಕಿಂಚಿತ್ ಅಜಾಗರೂಕತೆಯ ಕಾಲದಲ್ಲಿ ಈ ಸನ್ಯಾಸಿಗಳು ಮಠಮಾನ್ಯಾದಿಗಳನ್ನು ರಚಿಸಿಕೊಂಡರು. ಸಾಮಾನ್ಯವಾಗಿ ಇವರು ಅಲ್ಲಮನ ಪರಂಪರೆಯನ್ನೇ ಹೇಳುತ್ತಿರುವುದರಿಂದ ೭ ನೂರು ವರ್ಷಗಳಿಂದೀಚೆಗೆ ಇವರ ಈ ತರಹದ ಸಾಂಪ್ರದಾಯಕ್ಕೆ ಕಾರಣವಾಗಿರುವದು. ಇವರು ಬಹು ಗೌರವವಾಚಕವೆಂದು ಭಾವಿಸಿ ನಿರಂಜನ, ನಿರಾಭಾರಿ, ನಿಶ್ಶೂನ್ಯ, ನಿರವಯ, ವಿರಕ್ತ ಎಂಬ ಶಬ್ದಜಾಲದಿಂದ ಮೆರೆಯತೊಡಗಿದರು. ಸರ್ವಸಂಗಪರಿತ್ಯಾಗವಮಾಡಿದ ಮಹಾತ್ಮರಿಗೆ ಇವುಗಳ ಅವಶ್ಯಕತೆ ಇಲ್ಲವಷ್ಟೆ! ನಿಜವಿರಕ್ತಶಿಖಾಮಣಿಗಳಾದ ಮುಳಗುಂದ ಬಾಲಲೀಲಾಮಹಾಂತ ಶಿವಯೋಗಿಗಳು ಮೈಸೂರಿಂದ ಹಿಂತಿರುಗಿ ಬರುವಾಗ ಚಿತ್ರದುರ್ಗದ ಮುರಿಗೀಮಠಕ್ಕೆ ಹೋಗಿ ಅಲ್ಲಿಯವರನ್ನು ನೀವು ಯಾರೆಂದು ಕೇಳಲು, ಅವರು ನಾವು ಮುರಿಗಿಸಮಯದ ಮೂಲಗುರುಗಳೆಂದು ಹೇಳಿದ್ದಕ್ಕೆ ಅವರು ಮುರಿಗೀಸಮಯದೊಳಿರದೆ ಶಿವಸಮಯದೊಳಿರಬಾರದೇ? ಎಂದು ಉಪದೇಶಿಸಿದ್ದಾರೆ. ಈ ಸನ್ಯಾಸಿವರ್ಗವು ಕಲ್ಪಿಸಿಕೊಂಡ ಮುರಿಗಿ, ಚಿಲ್ಲಾಳ, ಕುಮಾರ, ಕೆಂಪು ಈಗ ಹೊಸದಾಗಿ ಐದಕ್ಕೆ ಜಮಾಮಾಡುವದಕ್ಕೆ ಸಂಪಾದನವೆಂಬ ನೂತನಸಮಯವೊಂದವಾದುರ್ಭವಿಸಿದೆ. ಅದು ಏನೇ ಇರಲಿ; ತಮ್ಮ ತಮ್ಮ ಸಮಯದಗೊಂದಲವನ್ನು ಘೋಷಿಸುತ್ತಿರುವಾಗ ಸಮಾಜದಿಂದ ಗೌರವವು ತಪ್ಪಿಹೋದಿತೆಂಬ ಭೀತಿಯಿಂದ 'ನಾವು ಜಂಗಮರು ಜ್ಞಾನಬೋಧಕರು; ಗುರುವರ್ಗದ ಪಟ್ಟಾಧರಮೂರ್ತಿಗಳು ಕರ್ಮಬೋಧಕರು' ಎಂಬ ಮಾತಿನ ಜಾಲವನ್ನು ಪಸರಿಸತೊಡಗಿರುವರು. ಗುರುವಿಗೆ ಕೇವಲ ಕರ್ಮವನ್ನು ಬೋಧಿಸುವದೂ, ಕರ್ಮಾಂಗಭೂತಕಾರ್ಯಗಳನ್ನು ಮಾಡುವದೂ ಇಷ್ಟೇ ಅಧಿಕಾರವಂತೆ! ಜ್ಞಾನವನ್ನು ಬೋಧಿಸಲು ಈಗಿನ ವಿರಕ್ತರೇ ಜಂಗಮರಾಗಿ ಬೋಧಿಸುತ್ತಾರಂತೆ! ಕರ್ಮವನ್ನು ಹೇಳುವವನೊಬ್ಬನು, ಜ್ಞಾನವನ್ನು ಹೇಳುವವನೊಬ್ಬನು; ಹೀಗೆ ಇಬ್ಬರು ಬೇಕಾದಂತಾಯಿತು. ವೀರಶೈವನು ಅಷ್ಟಾವರಣಗಳುಳ್ಳವನಾಗಬೇಕಾದರೆ ತನ್ನ ಗುರುವಿನ ಪೂಜೆಯನ್ನು ಮಾಡಿ ಗುರುಪಾದತೀರ್ಥಸೇವನೆಮಾಡಿದ ಬಳಿಕ ವಿರಕ್ತಮಠದ ಮರಿಯೊಂದನ್ನು ಕರೆತಂದು ಜಂಗಮಪೂಜೆಮಾಡಿ ಜಂಗಮಪಾದತೀರ್ಥವನ್ನು ಸೇವಿಸಬೇಕಲ್ಲವೇ? ವನಸ್ಪತಿಗಳನ್ನು ರೋಗಿಗೆ ಕೂಡಿಸಿಡುವ ವೈದ್ಯನೊಬ್ಬನು; ಆ ವನಸ್ಪತಿಗಳನ್ನು ಆಯಾಯ ರೋಗಕ್ಕೆ ತಕ್ಕಂತೆ ಔಷಧಿಯನ್ನು ಕೊಡುವವನೊಬ್ಬನು. ಸರಿ, 'ವೈದ್ಯದ್ವಯಂ ರೋಗಿನಿಪಾತಹೇತುಃ' ಎಂಬಂತಾಗುತ್ತದೆ. ಭವರೋಗವೈದ್ಯನಾದ ಗುರುವಿನಲ್ಲಿ ಜ್ಞಾನಶಕ್ತಿಯಿಲ್ಲದೆ ಹೋದಮೇಲೆ ಇವನಿಗೆ 'ಗುರು'ವು ಎಂದೆನ್ನುವ ಬಗೆ ಹೇಗೆ? 'ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ | ಚಕ್ಷುರುನ್ಮೀಲಿತಂಯೇನ ತಸ್ಮೈಶ್ರೀಗುರವೇನಮಃ ||' ಎಂಬ ಗುರುಗೀತೆಯ ಗತಿಯೇನು? ವೀರಶೈವರಲ್ಲಿ ಜಂಗಮವರ್ಗವೊಂದು ಬೇರುಂಟೇ? ಅಷ್ಟಾವರಣಗಳೆಂಬ ವೀರಶೈವನ ರಕ್ಷಾಕವಚಗಳು ವರ್ಗೀಕರಣವಿಭಾಗಗಳನ್ನು ತಿಳಿಸುವವೇ? ಇದೆಂಥ ವಿಪರೀತವಿಚಾರಸರಣಿಯು? ಅಷ್ಟಾವರಣಗಳಲ್ಲಿ ಅವರಣಕ್ಕೊಂದು ವರ್ಗವನ್ನು ಕಲ್ಪಿಸಿದರೆ ನಮ್ಮ ಸಮಾಜದಲ್ಲಿ ೮ ವರ್ಗಗಳಾಗುವುವು. ಅದರಂತೆ ಷಟ್ಸ್ಥಲವಿಚಾರದಲ್ಲಿ ಸ್ಥಲಕ್ಕೊಂದು ವರ್ಗವನ್ನು ಮಾಡಿದರೆ ೬ ವರ್ಗಗಳಾಗುವವು. ಆ ಮೇಲೆ ಪಂಚಾಚಾರಕ್ಕೊಂದೊಂದು ವರ್ಗವನ್ನು ನಿರ್ಮಿಸಿದರೆ ೫ ವರ್ಗಗಳಾಗುವವು. ಹೀಗೆ ಲಿಂಗಾಂಗಸಾಮರಸ್ಯಾನಂದಸಾಮ್ರಾಜ್ಯಕ್ಕೆ ಸಾಗಿರುವ ವೀರಶೈವನಿಗೆ ಸಾಧನದೆಶೆಯಿಂದ ಸಿದ್ಧಾಂತಗೊಳಿಸಿದ ವಿಚಾರಗಳನ್ನೆಲ್ಲಾ ತಮ್ಮ ಮನಬಂದಂತೆ ಜಗ್ಗುವದು ಅತ್ಯಂತ ಧರ್ಮಘಾತುಕತನವಾಗಿದೆ. ಶ್ರೀ ಗುರುವು ಲಿಂಗರೂಪನಾಗಿಯೂ ಜಂಗಮರೂಪನಾಗಿಯೂ ಇರುವನು. ಸಾಕ್ಷಾತ್ ಪರಶಿವನೇ ಗುರುವಾಗಿರುವಾಗ ಜಂಗಮನಾಗಲು ಇವನಿಗೆ ಸಾಧ್ಯವಿಲ್ಲವೇ? ಗುರುಪಾದಪೂಜಾವಿಧಿಯಲ್ಲಿ ವಿವರಿಸಲ್ಪಟ್ಟ ದಶವಿಧ ಪಾದೋದಕದ ಲಕ್ಷಣಗಳನ್ನಾದರೂ ಕಣ್ದೆರೆದು ನೋಡಬಾರದೆ? ಮಠಾಧಿಕಾರಿಯಾದ ಬ್ರಹ್ಮಚರ್ಯಾಶ್ರಮದ (ಮಾಹೇಶ್ವರದೀಕ್ಷಾಯುಕ್ತ) ವಟುವಿನಿಂದಾಗಲಿ ಅಥವಾ ಗೃಹಸ್ಥಾಶ್ರಮಿಯಾದ ಮಾಹೇಶ್ವರನಿಂದಾಗಲಿ ಅಷ್ಟಾವರಣಸಂಪನ್ನನಾದ ಭಕ್ತನು ಗುರು-ಲಿಂಗ-ಜಂಗಮ ಪಾದೋದಕಾದಿಗಳನ್ನು ಪಡೆಯುತ್ತಿರುವದು ಸುಪ್ರಸಿದ್ಧವಷ್ಟೆ! ಹೀಗಿದ್ದು ಸಾಕ್ಷಾತ್ ಗುರುವರ್ಗದ ಪಟ್ಟಾಧರಮೂರ್ತಿ ಮಹಾಸ್ವಾಮಿಗಳಲ್ಲಿ ಜಂಗಮತ್ವವಿಲ್ಲವೆಂಬ ಸೊಲ್ಲನ್ನು ಪ್ರಚಾರಮಾಡಲು ಇದೀಗ ಕೆಲವರು ಮುಂದುಬಂದುದಕ್ಕಾಗಿ ಬಹಳ ವಿಷಾದವಾಗುತ್ತದೆ. ಇದರಿಂದ ಗುರುವರ್ಗ ವಿರಕ್ತವರ್ಗದ ಚಳವಳಿಯು ನಾಶವಾಗದೆ ತುಪ್ಪವನ್ನೆರಚಿದ ಅಗ್ನಿಯಂತೆ ಮತ್ತಿಷ್ಟು ಪ್ರಜ್ವಲವಾಗುವದರಲ್ಲಿ ಸಂದೇಹವಿಲ್ಲ. ಇನ್ನೂರು ಮುನ್ನೂರು ವರ್ಷಗಳ ಈಚೆಗೆ ಮೆದಿಕೆರಿ ನಾಯಕನೇ ಮೊದಲಾದವರಿಂದ ಮಠಮಾನ್ಯಾದಿಗಳನ್ನು ಸಂಪಾದಿಸಿಕೊಂಡು ಯಾವುದೋ ರೀತಿಯಿಂದ ಸಮಾಜದಿಂದ ಗೌರವಿಸಲ್ಪಟ್ಟು ಅದೇ ಗೌರವದ ಮಬ್ಬಿನಿಂದ ಉಬ್ಬಿ ಮತಸ್ಥಾಪನಾಚಾರ್ಯರ ನಿಂದೆಯ ಹಬ್ಬವನ್ನು ಮಾಡುತ್ತ ಬಂದುದರಿಂದ ಈಗ ಆ ವಿರಕ್ತವರ್ಗವೇ ಬುಡ ಮೇಲಾಗತೊಡಗಿದೆ. ಅಸ್ತು! ಸನ್ಯಾಸಿಗಳ ದುಡ್ಡಿನ ಎಂಜಲಕ್ಕೆ ಬಾಯಿನೀರುಸುರಿದು ಕೆಲ ಬಡಪಾಯಿಗಳು ವೃತ್ತಪತ್ರಿಕೆಗಳಲ್ಲಿ ಕೂಗನ್ನೆಬ್ಬಿಸಿರುವದು ಅತ್ಯಂತ ಶೋಚನೀಯವಾಗಿದೆ. ಈಗಿನ ವಿರಕ್ತರು ಜಂಗಮರಾಗುವದು ಒತ್ತಟ್ಟಿಗಿರಲಿ; ಇವರಿಗೆ ಸಮಾಜಪುರುಷನು ಕವಡಿಯ ಬೆಲೆಯನ್ನೂ ಕೊಡನು. ಗುರುನಿಂದೆಯ ಪರದೆಯ ಮರೆಗೆ ನಿಂತು ವೀರಶೈವಸಮಾಜವಿಘಾತುಕತನವನ್ನು ಆರಂಭಿಸಿದವರ ಸದ್ದನ್ನಡಗಿಸಲು ಪ್ರಭೋದಯವಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರ ಬಗ್ಗೆಯೂ ಈಗಿನ ಪೀಠಾಧಿಕಾರಿಗಳ ಮೇಲೆಯೂ ಅಸೂಯಾಂಧತೆಯಿಂದ ಪುನಃ ಲೇಖಗಳು ಜಾತಿಸಾಂಕರ್ಯದ ಪತ್ರಿಕೆಯಲ್ಲಿ ಬರತೊಡಗಿದ್ದಂತೂ ಅತ್ಯಂತ ವಿಷಾದದ ಮಾತಾಗಿದೆ ಆಗಲಿ. ಎರಡು ತಿಂಗಳುಗಳಿಂದ ಕೈಕಾಯ್ದು ದೈವಜ್ಞವಿನೋದನು ವರ್ಣಸಂಕರ ಜಾತಿಸಂಕರರ ಸಮಾಚಾರವನ್ನು ತೆಗೆದುಕೊಳ್ಳಲು ಲೇಖಾಶಾಸ್ತ್ರಗಳನ್ನು ಪ್ರಯೋಗಿಸುವನು.

ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಪೀಠಾಧೀಶ ಶ್ರೀ ೧೦೮ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸಂಚಾರ.

ಶ್ರೀ ಪೂಜ್ಯಭಗವತ್ಪಾದರು ಜಗಲೂರು ತಾಲೂಕು ಮುಕ್ಕಾಂ ಮಾಡಿದಂತವು ವಿಸ್ತೃತವೇ ಇದೆ. ಈ ತಾಲೂಕಿನ ಅನೇಕ ಗ್ರಾಮದವರು ಸ್ವಿಜವಾದ ಗುರುಭಕ್ತಿಯಿಂದ ಮುಕ್ಕಾಮಿನ ಸ್ಥಳಕ್ಕೆ ಬಂದು ಕಾಣಿಕಾಸಮರ್ಪಣವನ್ನು ಮಾಡಿ ದರ್ಶನಾಶೀರ್ವಾದಗಳಿಂದ ಕೃತಾರ್ಥರಾಗುತ್ತಿದ್ದಾರೆ. ಈ ಮಧ್ಯೆ ಜಗಲೂರು ತಾಲೂಕು ಪಲ್ಲಾಗಟ್ಟಿಯ ಭಕ್ತಮಂಡಲಿಯವರು ಸರ್ವರೂ ಮಿಳಿತರಾಗಿ ಬಂದು ಬಿನ್ನವಿಸಿಕೊಂಡು ತಮ್ಮ ಗ್ರಾಮಕ್ಕೆ ದಯಮಾಡಿಸಿಕೊಂಡು ಹೋಗಿ ಅಪೂರ್ವವಾದ ಉತ್ಸವವನ್ನು ಮಾಡಿ ಕಾಣಿಕೆಯನ್ನರ್ಪಿಸಿ ಆಶೀರ್ವಾದವನ್ನು ಪಡೆದು ಕೃತಾರ್ಥರಾದರು. ಅದರಂತೆ ಬಿದ್ದಿಗ ಭಕ್ತಮಂಡಲಿಯವರೂ ಮಹಾಸವಾರಿಯನ್ನು ದಯಮಾಡಿಸಿಕೊಂಡು ಹೋಗಿ ತಮ್ಮ ಗ್ರಾಮದಲ್ಲಿ ಉತ್ಸವವನ್ನು ಮಾಡಿ ದರ್ಶನಾಶೀರ್ವಾದಗಳಿಂ ಪಡೆದು ಕೃತಾರ್ಥರಾದರು. ಬಳ್ಳಾರಿ ಡಿಸ್ಟ್ರಿಕ್ಟ್ ಗಡಿಗುಡಾಳಗ್ರಾಮದ ಪಟೇಲ್ ಶ್ರೀಮಂತ ಸಿದ್ಧನಗೌಡರೂ ಇವರ ಸಹೋದರರಾದ ಮೂಗಬಸವನಗೌಡರೂ ಗುರುಭಕ್ತಿ ಕಾರ್ಯದಕ್ಷತೆ ವಿಚಾರಶೀಲತಾದ್ಯನಂತಗುಣಗಣದಿಂದ ಶೋಭಿತರಾಗಿ ತಮ್ಮಲ್ಲಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡದ್ದರಿಂದ ಮಹಾಗುರುಚರಣರು ಸದರಿಯವರ ಸಾಹಿತ್ಯಾದ್ಯಮುಲಸದ್ಗುಣಗಳಿಂ ಕಂಡು ಪ್ರೇಮದಿಂದ ಸಕಲ ಬಿರುದಾವಳಿ ಸಮೇತ ತಮ್ಮ ಚತುರಂಗಬಲದೊಡನೆ ತಾ|| ೧೦-೧-೧೯೩೪ ಬುಧವಾರ ಮಧ್ಯಾಹ್ನ ನಾಲ್ಕು ಘಂಟೆಗೆ ದಯಮಾಡಿಸಿದರು. ಗ್ರಾಮವು ತಳಿರುತೋರಣ ಚಪ್ಪರಗಳಿಂದಲಂಕೃತವಾಗಿತ್ತು. ಊರಲ್ಲಿ ಗುರುಗಳ ಆಗಮನದಿಂದುಂಟಾದ ಹರ್ಷವನ್ನು ವರ್ಣಿಸಲಶಕ್ಯರಾಗಿತ್ತು. ಪದ್ಧತಿಯಂತೆ ಉತ್ಸವವು ಶಿರ್ರ್ರ್ಘವಾಗಿ ಜರುಗಿತು. ಶ್ರೀ ಮಹಾಗುರುಗಳವರು ದರ್ಬಾರ ಮಂಟಪಕ್ಕೆ ದಯಮಾಡಿಸಿ ಸಾಲಂಕೃತಸಿಂಹಾಸನವನ್ನಾರೋಹಿಸಿದ ಕೂಡಲೆ ಸರ್ವರೂ ಶ್ರೀಮದಚಾರ್ಯನಾಮದಿಂದ ಜಯಘೋಷವನ್ನು ಮಾಡಿದರು. ನೆರೆದ ಸಭೆಯಲ್ಲಿ ಪುರಾಣೀಕ್ಷಂ ಸುಹಳಲ್ಲಿ ಬಿದರಿ ಆರಾಧ್ಯಮಠದ ಬಸವಲಿಂಗಶಾಸ್ತ್ರಿಗಳು ಮಹಾಗುರುಸೇವೆಯಿಂದಲೇ ಶಿಷ್ಯನ ಕೃತಾರ್ಥತೆಯೆಂಬಂಶವನ್ನು ಉಪನ್ಯಸಿಸಿದನಂತರ ಶ್ರೀಮದಾಚಾರ್ಯರು ಸರ್ವಮತಸಮ್ಮತವಾಗಿ ಧರ್ಮನಿಷ್ಠೆಯಿಂದಲೇ ಐಹಿಕಾಮುಷ್ಮಿಕಫಲವಂ ಪಡೆದು ನರಜನ್ಮವನ್ನು ಸಾರ್ಥಕಮಾಡಿಕೊಳ್ಳುವದು ಸರ್ವಾಶ್ರಮಿಗಳ ಕರ್ತವ್ಯವೆಂಬುದನ್ನು ಅತ್ಯಣಿಯಂ ಕೊಡಿಸಿ ಸರ್ವರನ್ನೂ ಆನಂದಸಾಗರದಲ್ಲಿ ಮುಳುಗಿಸಿದರು. ಶಿವಘೋಷದಿಂದ ಸಭೆಯು ವಿಸರ್ಜಿತವಾಯಿತು. ಪಟೇಲ್ ಸಿದ್ಧನಗೌಡರೂ ಇವರ ಸಹೋದರರೂ ಸಹ ಮಹಾಚಾರ್ಯರು ತೃಪ್ತಿಯಾಗುವಂತೆ ಕಾಣಿಕೆಯನ್ನರ್ಪಿಸಿ ಕೃತಾರ್ಥರಾದರು. ಸದರಿ ಸಿದ್ಧನಗೌಡರ ಮಾವಂದಿರಾದ ದಾವಣಗೆರೆ ತಾಲೂಕು ಹೆಮ್ಮನಬೇತೂರು ಪಟೇಲ್ ಶಿವರುದ್ರಗೌಡರು ಗುರುಮಹೋತ್ಸವ ದರ್ಶನಕ್ಕೆ ಮಕ್ಕಳಿಂದ ಆಹೂತರಾಗಿ ಬಂದವರು ಮಹೋತ್ಸವವನ್ನು ನೋಡಿ ಸಂತುಷ್ಟರಾಗಿ ಸಂಸಾರದಿಂದ ವಿಳಸಿತಹೃದಯರಾಗಿ ತಮ್ಮಲ್ಲಿಗೆ ದಯಮಾಡಿಸಿಕೊಂಡು ಹೋಗಲು ಬಿನ್ನವಿಸಿಕೊಂಡು ಹೋಗಿ ಒಂದೇ ದಿವಸದಲ್ಲಿ ಭಕ್ತಮಂಡಲಿಯನ್ನು ಸೇರಿಸಿ ಪುರಾಲಂಕಾರವನ್ನು ಮಾಡಿ ಚತುರಂಗಬಲದೊಡನೆ ಸಕಲ ಬಿರುದಾವಳಿ ಸಮೇತ ಬಿಜಯಮಾಡಿಸಿಕೊಂಡು ಬಂದು ಅಭೂತಪೂರ್ವವಾದ ಉತ್ಸವವನ್ನು ಮಾಡಿ ಭೂರಿಗುರುಕಾಣಿಕೆಗಳನ್ನರ್ಪಿಸಿ ಆಶೀರ್ವಾದವನ್ನು ಪಡೆದು ಕೃತಾರ್ಥರಾದರು. ಜಗತ್ತಿಗೆ ಒದಗಿದ ಸಪ್ತಗ್ರಹಯೋಗ ಜನ್ಯ ದುಷ್ಫಲನಿವೃತ್ತಿಗೆ ಈ ಪುಣ್ಯಾತ್ಮರು ಆಚರಿಸಿದ ಗುರುಸೇವೆಯು ಅನಾಯಾಸವಾಗಿ ದೊರೆತದ್ದರಿಂದ ಇವರೇ ಸಫಲ ಜೀವಿಗಳೆಂದು ಹೇಳಲು ಅಡ್ಡಿಯಿಲ್ಲ. ಸನಾತನಧರ್ಮಾಚಾರವನ್ನು ರಕ್ಷಿಸುವ ಇಂತಹ ಧರ್ಮಾತ್ಮರಿಗೆ ಭಗವಂತನು ಸಕಲ ಸುಖಗಳನ್ನು ಕೊಡಲಿ ಎಂದು ಆತನನ್ನು ಅನನ್ಯಭಾವದಿಂದ ಬೇಡುತ್ತೇನೆ. ಶ್ರೀ ರಂಭಾಪುರೀ ಜಗದ್ಗುರುಗಳವರು ಈ ತಾಲೂಕಿನಲ್ಲಿ ಸಂಚರಿಸಿ ಸಮಸ್ತ ಭಕ್ತರನ್ನೂ ಕೃತಾರ್ಥರನ್ನು ಮಾಡಿ ಕೊಟ್ಟೂರಿಗೆ ದಯಮಾಡಿಸತಕ್ಕವರಾಗಿದ್ದಾರೆ.

ಓರ್ವ ಗುರುಭಕ್ತ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಜೀವಬೋಧ ನಕ್ಷತ್ರಮಾಲಿಕಾ

ಜೀವ ತ್ವತ್ತರಿಕಂ ಕಿಮದ್ಯ ಸುಖದಂ ಮನ್ಯೇsಥವಾ ದುಃಖದಂ| ಮಿಶ್ರತ್ವಾತ್ಸುಖದುಃಖಯೋಃ ಕಥಮಹಂ ನಿಶ್ಚೇತು ಮಹೋsಬಲಃ || ತೀವ್ರಂ ತ್ವಂ ಶಿವತಾತಿಮಾಶ್ರಯ ಸತಾಂ ವೃತ್ತಿಂ ಪರಾಂ ನಿಶ್ಚಲಾಂ | ಯಸ್ಮಾಸ್ಸ್ತೇsನಿಶಮೇಕತಾನಸುಭಗಾ ವೃತ್ತಿಃ ಸುಖಂ ಯಾಸ್ಯಸಿ ||೧||

ಜೀವ ತ್ವಂ ಶಿವ ಏವ ನೂನಮಧುನಾ ಸಂಸಾರ ಬಂಧಾನ್ವಿತೋ ನಾsಯಂ ಸೋsಹಮಿತಿ ತ್ವಯಾ ತು ವಿದಿತಂ ಮಾಯಾ ವಶೇನಾನ್ವಹಂ || ಪಶ್ಯಾsಸ್ಯನ್ವಚಿರಾದನಂತಮಮಲಂ ಜ್ಯೋತಿರ್ಮಯಂ ಚಿನ್ಮಯಂ | ಸರ್ವೋಪಾಧಿಮಪಾಸ್ಯ ತತ್ತ್ವಪರಂಜ್ಯೋತಿರ್ಭವಾನೇವ ಹಿ ||೨||

ಯದ್ವನ್ನೇತ್ರನಿಮೀಲನೇ ಜಗದಿದಂ ಗಾಢಾಂಧಕಾರಾತ್ಮಕಂ | ತದ್ವದ್ ಜ್ಞಾನವಿಯೋಗತಃ ಖಲು ನಿಜಾ ವೃತ್ತಿಃ ಸುದುಃಖಾವಹಾ || ತಸ್ಮಾಚ್ಛ್ರೀಗುರುದತ್ತಚಿನ್ಮಯತಯಾ ಸರ್ವಂ ಜಗದ್ವ್ಯಕ್ತಂ | ತಸ್ಮಾತ್ಕಿಂ ಶಿವ ಏಕ ಏವ ನಿತರಾಂ ವಿಶ್ವಪ್ರಪಂಚೋದಯಃ ||೩||

ಸೌಖ್ಯಂ ನಶ್ವರಮೈಕೇ ಕುತೋsಪಿ ವಿಮಲಂ ಬಾಹ್ಯೇ ಪ್ರಪಂಚೇsಖಿಲೇ | ಮೂರ್ಖ ತ್ವಂ ಭ್ರಮಸೀಷ್ಟವಾಗರ್ಥಪರಃ ಕಷ್ಟಾದಪಾ ತಾವತೀ || ಕಸ್ತೂರೀಮೃಗ ಆತ್ಮನಿ ಸ್ಥಿತಸುಗಂಧಂ ನಾವಿಶಾಶರ್ವಾಣಂ | ಸಂತ್ಯಜ್ಯಾsನ್ಯತೃಣಾದಿಷೂನ್ನಯತೇ "ಮಾಯಾಬಲಂ ದುಸ್ತರಂ" ||೪||

ಯತ್ಪ್ರಾಪ್ತಂ ಬಹಿರರ್ಥತಃ ಸುಖಮಲಂ ತತ್ಸರ್ವಥಾ ನಶ್ವರಂ | ಪೂರ್ವಂ ದಿಷ್ಟಮಶಿಷ್ಟಮಂತ ಇತಿ ತತ್ಪ್ರಾಜ್ಞಾಃ ಸಮಾಚಕ್ಷತೇ || ಏತದ್ಬುದ್ಧ್ವಾ ಸಮಾಸತಃ ಸುಖಮಿತಿ ಸ್ವಾತ್ಮಸ್ಥಿತಂ ಶಾಶ್ವತಂ | ಬಾಹ್ಯಾರ್ಥಾತ್ಸು ಸರಾಪಣೀಯಮಮಲಂ ಸೌಖ್ಯಂ ಸದಾ ನಶ್ವರಂ ||೫||

ಭೋಗಾಶಾ ಪರಿವರ್ಧತೇ ಪ್ರತಿದಿನಂ ಭೋಜ್ಯಾರ್ಥಸಂಪಾದನಾತ್ | ಪ್ರಾಪ್ತಪ್ರಾರ್ಥಮುಪಾರ್ಜಿತುಂ ಕ್ರಿಯತ ಆಯಾಸಸ್ತ್ವಯಾ ಸಂತತಂ || ಪ್ರಾಪ್ತಾರ್ಥಾನುಭವಂಜತಾ ಕಿಮಥವಾ ಪ್ರಾಪ್ಯಾಶಯಾ ಸಾಧಿತಂ | ಚಿತ್ತೇಮಂ ವಿಫಲಂ ಪ್ರಯತ್ನಮಚಿರಾನ್ನಾಗಾರಂತರಂ ಮಾರ್ಗಯ ||೬||

ಕಿಂ ತೇ ಮಾನುಷಜನ್ಮ ದುರ್ಲಭತರಂ ಜನ್ಮಾಂತರೇ ಲಭ್ಯತೇ | ಮಂತವ್ಯಃ ಸಹಸ್ರಾಕ್ಷ ಏವ ಹೃದಿ ನಿಷ್ಪನ್ನಾಪುರಸ್ಕಾರಾತ್ || ಯಾವತ್ತೇನ ಬಹಿರ್ಗತಿರ್ಭವತಿ ಕಾಯಾತ್ತಾವದೇವಾsರ್ಜಯ | ಸ್ವಾತ್ಮಾರಾಮಸುಖಂ ಶರೀರವಿಲಯೇ ಕಿಂ ಸಾಧನೀಯಂ ಭವೇತ್ ||೭||

ಜೀವಾsಸ್ಯ ವ್ರಜ ಹೃತ್ಸರೋಜನಿಲಯಾಸೀನಂ ಶಿವಂ ಶಾಂತಿದಂ | ಕಾಲಸ್ತೇ ನಹಿ ತಿಷ್ಠತಿ ಕ್ಷಣಮಪೀಯಂ ತೇ ಸಮರ್ಥಂ ಗುರಾ || ಪೀಯೂಷಂ ಗರಲಾಯತೇ ಚಿರಪರಿತ್ಯಾಗಾದಿತಿ ಜ್ಞಾಜಗು | ಮಾಯೋಪಾಧಿನಿವಾರಣಂ ಕುರು ಭಜ ಶ್ರೀಸದ್ಗುರೋಃ ಸನ್ನಿಧಿಂ ||೮||

ಕಾಯಂ ಪಾತಕಶೈಲಬದ್ಧ ಸುದೃಢೈರ್ಬಾಢಂ ಯಥಾ ಮೂಢಧೀಃ | ವಾರಯೋಗೀಗಳ್ಳತಿ ಭಾವನೋತ್ಸುಕತಯಾsಗ್ರೇ ತ್ವಂ ತಥಾ ಜೀವ ಭೋಃ || ಬದ್ಧಃ ಸಂಸ್ಥಿತಿಘೋರಪಾತಕಶತೈಃ ಕೈವಲ್ಯಲಾಭಾಶಯಾ | ನಿತ್ಯಂ ನರ್ತನಮಾತನೋಷಿ ಕಿಮಿದಂ ಮೂರ್ಖತ್ವಮತ್ಯದ್ಭುತಂ ||೯||

ಕಿಂ ಭೂಯೋವಚನೈರನೇಕಮಹಿಮಾನಂ ಭಾಸುರಜ್ಞಾನದಂ ಶಂಭೋರ್ದರ್ಶನಕಾರಿಣಂ ಗುರುವರಂ ಭೋಗಾಶಯಾ ವರ್ಜಿತಂ|| ತ್ವಂ ಭೋಃ ಜೀವ ಸುಖಾರ್ಥಮದ್ಯ ಶರಣಂ ಯಾಹಿ ಪ್ರಸನ್ನಂ ಮುದಾ | ಶಂಭುಸ್ತ್ವಂ ಸ ನಯೇದ್ಧ್ರುವಂತಮಚಿರಾನ್ಮಾ ಮುಂಚಮಾ ವಿಸ್ಮರ ||೧೦||

ಯದ್ವತ್ಸ್ವರ್ಗಮಣೇಃ ಸಮಾಗಮವಶಾಲ್ಲೋಹಂ ಸುವರ್ಣಾಯತೇ | ತದ್ವತ್ತ್ವಂ ಶಿವಯೋಗತಃ ಶಿವಪದಂ ಪ್ರಾಪ್ಸ್ಯಸಿ ಕಾಂ ಕಾsತ್ರ ಕಾ? || ಯದ್ವದ್ಧ್ಯಾನವಶಾನ್ನಿರಂತರಮಹಾಃ ಕೀಟೋsಪಿ ಭೃಂಗಾಯತೇ | ತದ್ವತ್ತ್ವಂ ಭವ ಜೀವ ಸಂತತಶಿವಧ್ಯಾನಾಬ್ಧಿಪೋ ನಿರ್ಮಲಃ ||೧೧||

ಯಾವತ್ತೇ ಮತಿರಸ್ತ್ಯಹಂಕೃತಿಯುತಾ ಕಾಯೇಷು ಸರ್ವೇಷ್ವಪಿ | ಯಾವದ್ದ್ವಂದ್ವಯುತೋsಸಿ ಜೀವ ನಿತರಾಂ ಸಾಂಸಾರಿಕೈರ್ಬಂಧನೈಃ || ಯಾವನ್ನೇಕ್ಷಸ ಉಜ್ವಲಂ ಶಿವಪರಂಜ್ಯೋತಿಃ ಸುಖಾವಾಪ್ತಯೇ | ತಾವತ್ತೇ ನಹಿ ಸೌಖ್ಯಮಣ್ವಪಿ ಸತೋ ಮಾ ಭೂಭ್ರಮವ್ಯಾಕುಲಃ ||೧೨||

ನಿತ್ಯಂ ಪಶ್ಯಸಿ ದುಃಖಿತಾನ್ ಭವಸುಖೋನ್ಮತ್ತಾನನಂತಾನ್ ಜನಾನ್ | ಮೃತ್ಯೋರ್ವಕ್ತ್ರಕರಾಲಗರ್ಭಪತಿತಾನಜ್ಞಾನಪಾಶಪಿನಃ || ಸತ್ತ್ವಂ ನ ಭವಾಮಯೇ ಗತಿರಿಯಂ ಸ್ವೈರಾಶಿಯಶ್ಚಾಹಸಂ | ಹಿತ್ವಾ ಚಾಪಲಮದ್ಯ ಯಾಹಿ ಶರಣಂ ಜೀವಾsಗಜಾವಲ್ಲಭಂ ||೧೩||

ಅಜ್ಞಾನಾವೃತಚೇತನಾಃ ಪ್ರತಿದಿನಂ ಸೌಖ್ಯಾಶಯಾ ಪ್ರಾಣಿನಃ | ಸ್ವಾಂಸ್ವಾಂ ವೃತ್ತಿಮುಪಾಸತೇsವಯವಶಾಃ ಪೂರ್ವಬಂಧಾನ್ವಿತಾಃ || ತ್ವಂ ಜಾನಾಸಿ ಹಿತಾಹಿತಾತ್ಮಚರಿತಂ ಸುಧ್ಯೇನ ಚಿತ್ತೇಕ್ಷುತಾ | ಕಿಂ ಭೋಃ ಮುಹ್ಯಸಿ ಭೋಗ್ಯವಸ್ತುಷು ಪರಂ ಭೂಯೋsಕ್ಷಯವಸ್ತ್ವಾಶ್ರಯೇ ||೧೪||

ಸಾರಾಸಾರವಿವೇಕಶೂನ್ಯಪಶವೋ ಮತ್ತ್ಯೈಕದಾ ಸ್ವಾಹಿತಂ | ಚೇಷ್ಟಂತ್ಯೇಷ್ವಪಿ ಭೋಗ್ಯವಸ್ತುಷು ತಥಾ ಸ್ವಸ್ವೈಕಂತ್ಯೇವ ತೇ || ಜೀವ ತ್ವಂ ಸುವಿವೇಕವಾನಪಿ ಸದಾsಪಥ್ಯೇ ಭವಾಸ್ವಾದನೇ | ಸಕ್ತಃ ಸಂತತಸಂಯುತಃ ಪರಮತಃ ಕಿಂತೇ ಲಭ್ಯತ್ವಂ ಭುವಿ ||೧೫||

ಮಾತಾsssದ್ ಜನಕಾತ್ತತೋ ಹಿತಕರೈಃ ಸ್ವಜ್ಞಾತಿಭಿರ್ಬಂಧುಭಿಃ | ಶಾಸ್ತ್ರಾಭ್ಯಾಸಸುಶಿಕ್ಷಿತೋsಪಿ ಗುರುಣಾ ರಾಜ್ಞಾsಪಿ ಸಚ್ಛಾಸನಾತ್ || ದೃಷ್ಟ್ವಾ ಲೋಕಪರಂಪರಾಂ ಸುಖಕೃತೇ ಸದ್ವರ್ತನೀಗಾಮಿನಃ | ತ್ವಂ ಜೀವಾsಸ್ಯಹಿತಂ ನ ಪಶ್ಯಸಿ ಕಥಂ ಭೋಃ ವಾಮಮಾರ್ಗಸ್ತವ ||೧೬||

ಪೂರ್ವಾಚಾರ್ಯಮಹೋದಯಾಸ್ತು ಬಹವಸ್ತೇ ಸನ್ತಿ ಸತ್ವಾಪರಾಃ || ಪ್ರಾಚೀನಾಸ್ತು ಮಹರ್ಷಯೋ ನಿಜಪೋಷನುಷ್ಠಾನಶುದ್ಧಾಶಯಾಃ || ಸರ್ವೇ ಜೀವ ವಿಮೋಕ್ಷಣಾಯ ವಿಫಲಸ್ವಾಯುರ್ವ್ಯಯೇ ನಿಷ್ಪ್ರಹಾಃ | ನಿರ್ಮಾಯಾನಘಶಾಸ್ತ್ರಜಾಲಮದುರೀವೀಕ್ಷಸ್ವ ತತ್ಸಾದರಂ ||೧೭||

ಸರ್ವಂ ಯಚ್ಚ ಚರಾಚರಂ ಜಗದಿದಂ ಸನ್ನಾಮರೂಪಾತ್ಮಕಂ | ತಜ್ಜಾನೀಹಿ ಶಿವಸ್ವರೂಪಮಿತಿ ತೇ ಸೌಖ್ಯಪ್ರದಂ ನಾನ್ಯಥಾ || ಜೀವಾನಾಂ ಹಿತಕಾಮ್ಯಯಾ ಪರಶಿವಃ ಕಾರ್ಯೈಕ್ಯ ಸ್ವಯಾ ವಿಸ್ತೃತೋ | ನಾನಾರೂಪಧರೋ ವಿಭಾತಿ ತದತಸ್ತ್ವಂ ಜೀವ ಸಂಜಾಗೃಹಿ ||೧೮||

ಸರ್ವಂ ತ್ವತ್ಸುಖಸಾಧಕಂ ಜಗದಹೋ ತಸ್ಮಿನ್ ಭವಾನ್ನಂದಧೀಃ | ತತ್ಪ್ರತ್ಯಂ ಪರಿಕಲ್ಪ್ಯ ದುಃಖಮನುಭುಂಕ್ಷ್ವೇsನಾಂತ್ಯತಂ ಪತತ್ತವ || ಪಿತ್ರಾ ಸ್ವೀಯನಿಕೇತನೇ ಸಮುಭವಾಂ ನಾನಾಪದಾರ್ಥಾ ಹಿತಾ | ನ್ಯಸ್ತಂತೇ ಶಿವಮಾ ಸುಖಾರ್ಥಮಥವಾ ಜೀವಾsಹಿತಾಯ ಸ್ವಯಂ ||೧೯||

ಪಾಂಥೋ ಗಂತುಮನಾಃ ಸ್ವಕಾರ್ಯವಶತೋ ಗ್ರಾಮಾಂತರಂ ಸತ್ಪಥಂ | ಜ್ಞಾತ್ವಾ ಲೀನಚಿರೇತಿಚೇತ್ಸು ಖತರಂ ಕದಾಪ್ನೋತಿ ಸಃ || ಸೋsಚೇತ್ಸ್ವಾಪಥಮಾಕಲಯ್ಯ ಗಹನೇ ರೋದಿತ್ಯಲಂ ವಿಹ್ವಲ | ಸ್ತತ್ತೀವ್ರಂ ಭವಕಾನನೇ ಭಜ ಗುರುಂ ಸನ್ಮಾರ್ಗಸಂದರ್ಶಕಂ ||೨೦||

ಮೂರ್ಖಸ್ತ್ವಂ ಕಿಮು ವರ್ಣಯಾಮಿ ತವ ಜೀವಾತ್ಮಂತದುಃಖಾಸ್ಪದಂ | ಶುದ್ಧಾತ್ಮಾ ಕರುಣಾಮಯೋ ಗುರುವರಃ ಸೌಖ್ಯಾಶಯಾ ಪ್ರಾಣಿನಾಂ || ಆಗಛಾರ್ದ್ಯಕೃತೇ ಪಿರಾಕುಲಮನಾ ವಿಸ್ಮೃತ್ಯ ತಂ ಮೋಹತೋ | ಭ್ರಾಮಂಭ್ರಾಮಮನಂತದುಃಖಮತುಲಂ ಪ್ರಾಪ್ನೋಷಿ ದುರ್ಗತಿಂ ||೨೧||

ಕಾಮಕ್ರೋಧಮುಖಾಸ್ತು ವೈರಿಣೋ ಮಾಯಾವಿನೋ ವಂಚಕಾಃ | ರಂಧ್ರಾನ್ವೇಷಣತತ್ಪರಾಃ ಸುಚತುರಾಸ್ತ್ವೀರಾ ದಯಾವರ್ಜಿತಾಃ || ಕ್ರೂರಾ ಲೋಕವಿಘಾತುಕಾಸ್ತು ಪಿಶುನಾ ಧೀರಾಃ ಪರಸ್ವಾಪಹಾ | ಧೀರೋ ಜೀವ ಭವಂತಮತ್ರ ವಿಷಯೇ ಕರ್ಷಂತಿ ತಜ್ಜಾಗೃಹಿ ||೨೨||

ಸಂಚಲ್ಲೀಕಮುಖಾಃ ಷಡೂರ್ಮಿಸಹಿತಾಃ ಕಾಮಾದಿಸಂಪೀಡಿತಾಃ| ಕ್ಷುತ್ತೃಡ್ವ್ಯಾಧಿಭಿರಂತಿಕೋ ವ್ಯಸನತೋ ಮಾನೋ ಹತೋ ನಿದ್ರಯಾ || ಇತ್ಥಂ ಬಂಧಕತೈರನಂತರಮಮುಂದಾತಿಂ ಲಭನ್ ಜೀವ ಭೋಃ | ತ್ವಂ ತತ್ರೈವ ಲುಠಸ್ಯಲಜ್ಜ ಕಿಮಿದಂ ಪ್ರಜ್ಞಾವತೋ ಭೂಷಣಂ ||೨೩||

ಆಯುಸ್ತೇ ಪತಿತಸ್ಯ ಮಾತೃಜಠರಾತ್ಪ್ರೀಣಾಂ ಪತಾಂ ಯಾತ್ಯಹೋ | ನಾಶಂ ಯಾತಿ ಯಥಾಯಥಾsಥ ಭವತೋ ಭೂಯಾನ್ ಭ್ರಮೋ ಜಾಯತೇ || ಜಾತೋsಹಂ ಸುಮಹಾನಿತಿ ಸ್ಥಿರತರೋ ಜೀವಾಮ್ಯನಂತಾಃ ಸಮಾಃ | ಕಾಯಧಿಗಂ ಸಮವೇಕ್ಷ್ಯ ಜೀವ ಕಿಮತೋsಜ್ಞಾನಂ ಪರಂ ತಾವಕಂ ||೨೪||

ವಿಕ್ರೀಣೈವ ಗದೇನ ಪೀಡಿತಜನಾನ್ತನ್ಮೂಲಮುನ್ಮೂಲಿತುಂ | ಸಂತ್ರಸ್ತಾಃ ಪ್ರಯತಂತ ಏವ ಬಹುಧೋಪಾಯಂ ವಿಧಾತುಂ ಜವಂ || ತ್ವಂ ಜೀವಾಂತಕರೋಗಕೋಟಿಬಲಯಃ ಸ್ವಸ್ಥಃ ಕಥಂ ವರ್ತಸೇ | ಧಿಗ್ಧಿಗ್ ಧಿಕ್ತವ ಚೇಷ್ಟಿತಂ ಕ್ಷಿತಿತಲೇ ಪ್ರತ್ಯಃ ಪ್ರಮತ್ತಾಶಯಃ ||೨೫||

ಯದ್ವದ್ಭಾವಿರತೀಶಸಾಹಿತಮನಾ ನಾನ್ಯಂ ಪದಾರ್ಥಂ ಸುಖಂ | ಸ್ವಾತ್ಮಾನಂದಕರಂ ಪ್ರಪಶ್ಯತಿ ತಥಾ ಜೀವ ತ್ವಮುತ್ಕೃಷ್ಟಧೀಃ || ಮಗ್ನೋ ವೈಷಯಿಕೇ ಸುಖೇ ಚ ವಿರಸೇ ಪರ್ಯಂತಸಂತಾಪಿನೀ | ಬ್ರಹ್ಮಾನಂದಸುಖಂ ವಿಹಾಯ ರಮಸೇ ನೋ ತೇ ಜುಗುಪ್ಸಾ ಕಥಂ ||೨೬||

ಮಾತುರ್ಗರ್ಭಗುಹಾಗತೇನ ಭವತಾ ದುಃಖಾಕುಲೇನಾನ್ವಹಂ | ಸಂವೀತೇನ ಜರಾಯುಣಾ ಕ್ರಿಮಿಕೃತೈರ್ದಷ್ಟೇನ ಕಷ್ಟಾತ್ಮನಾ || ನಿರ್ಗಂತುಂ ಬಹಿರಧ್ವಮಾರ್ಗಪರಿಣಾಸ್ಥೇನ ಮೂತ್ರಾದಿನಾ | ಯದ್ವಿಚಿಂತಿತಮದ್ಯತತ್ಕ್ವನುಗತಂ? ಶ್ರೀಶಂಭುಪೂಜಾವಿಧೌ ||೨೭||

ಜಹಿಹಿ ತವ ಕುಮಾರ್ಗಂ ಸರ್ವಥಾ ಜೀವ ಬಂಧೋ | ಗಹನದುರಿತಬಂಧಾನ್ಮೋಕ್ತುಕಾಸೇ ಮುಕ್ತಬುದ್ಧೇ || ಅಲಸಂಭುಗುರೋಃಪಾದಾರವಿಂದದ್ವಯಂತ್ವಂ | ಭಜ ಪರಮಸುಖಾರ್ಥಂ ಮೂಢ ಮಾ ವಿಸ್ಮರೇದಂ ||

ಸಂಸ್ಥಾನ ಶ್ರೀಮತ್ತ್ರಿಭೂತಿಪುರಮಠಾಧೀಶ
ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯ ಮಹಾಂತಿನಮಠ,
ಬೆಂಗಳೂರುಸಿಟಿ (ಪಾಲೀಕೊಪ್ಪ)

ಧರ್ಮಾಭಿಮಾನಿಗಳಿಗೆ ಸುಸಂಧಿ.

ಶ್ರೀ ರಂಗಯ್ಯರ್ ಇವರು ಧರ್ಮನಾಶಕವಾದ 'ಮಂದಿರಪ್ರವೇಶ' ದ ಬಿಲ್ಲನ್ನು ತಂದದ್ದು ಸರ್ವಶ್ರುತವಷ್ಟೆ! ಅದರ ಸಲುವಾಗಿ ಮುಂಬಯಿ ಸರಕಾರದವರು ಜನರ ಅಭಿಪ್ರಾಯವನ್ನು ಕೇಳಿರುವರು. ಅಸ್ಪೃಶ್ಯರು ಮಂದಿರಪ್ರವೇಶಮಾಡುವದೂ, ಅಲ್ಲಿ ದೇವರಪೂಜೆ ಮಾಡುವದೂ ಸ್ಪೃಶ್ಯರ ಧರ್ಮಕ್ಕೆ ವಿರೋಧವಾಗಿರುವದು. ಇದರಂತೆ ಅಭಿಪ್ರಾಯವುಳ್ಳವರ ಸೋಯಿ ದೆಶೆಯಿಂದ ಮಂದಿರಪ್ರವೇಶದ ವಿರೋಧ ಠರಾವು ಕರ್ನಾಟಕಧರ್ಮರಕ್ಷಕಸಭೆಯಲ್ಲಿ ಮಂಜೂರ ಆಗಿದೆ. ಅದನ್ನು ಮುದ್ರಿಸಿರುತ್ತೇವೆ. ಕೆಳಗೆ ಬರೆದ ವಿಳಾಸಕ್ಕೆ ಕಾರ್ಡು ಬರೆದರೆ, ಠರಾವುಗಳ ಫಾರ್ಮುಗಳನ್ನು ಕಳುಹಿಸುತ್ತೇವೆ. ಧರ್ಮಾಭಿಮಾನಿಗಳು ಫಾರ್ಮುಗಳನ್ನು ತರಿಸಿಕೊಂಡು ಅದರಮೇಲೆ ಜನರ ಸಹಿಮಾಡಿಸಿ ಸರಕಾರಕ್ಕೆ ಕಳುಹಿಸಿ ಧರ್ಮರಕ್ಷಣೆಯನ್ನು ಮಾಡಬೇಕಾಗಿ ಬೇಡಿಕೊಳ್ಳುತ್ತೇನೆ.

ವಿಳಾಸ—ಗೋವಿಂದ ಭೀಮಾಚಾರ್ಯಗೋತೆ.
ಮಾಳಗುಡ್ಡ, ಧಾರವಾಡ.
ಕಾರ್ಯದರ್ಶಿ—ಕ-ಧ-ರ-ಸಭೆ ಧಾರವಾಡ.

Marimallappa's Charities' Fund, Mysore.

Applications form the lingayet students studying in the college classes, are invited for the scholarships of the above fund on or before the 31st January 1934.

Printed application forms can be had from the Hon: Secretary, on sending half-anna postage stamp.

The Hon: Secretary.
Marimallppa's Charities' Fund,
Mysore.

ಆಹಾರಪದಾರ್ಥಗಳೊಳಗಿನ ಮೂಲವಸ್ತುಗಳು ಮತ್ತು ಆಹಾರಗುಣಗಳು.

ಡಾಕ್ಟರ್ ಎ. ರಕ್ಷಿತ್, ಬಿ.ಎಸ್‌ಸಿ., ಎಮ್.ಬಿ., ರೆಸಿಡೆಂಟ್ ಫಿಸಿಶಿಯನ್, ಪ್ರಕೃತಿ ಚಿಕಿತ್ಸಾಶಾಲಾ, ಕಲ್ಕತ್ತಾ.

ಆಹಾರವೆಂದರೇನು? ದೇಹದಲ್ಲಿ ಕ್ಷೀಣಿಸುವ ಭಾಗಗಳನ್ನೆಲ್ಲಾ ದುರಸ್ತುಮಾಡುವುದಕ್ಕೂ, ಸ್ನಾಯುಗಳನ್ನು ಪುನರುಜ್ಜೀವನಗೊಳಿಸುವುದಕ್ಕೂ, ಬೇಕಾದ ಉಷ್ಣಾಂಶವನ್ನೂ, ಶಕ್ತಿಯನ್ನೂ, ಕೊಡತಕ್ಕ ವಸ್ತುವಾವುದೋ ಅದೇ ಆಹಾರವೆನಿಸುವುದು. ದೇಹಪೋಷಣೆಗೂ, ಆರೋಗ್ಯಕ್ಕೂ ಆಹಾರವು ಬಹಳ ಮುಖ್ಯವಾದುದು. ಅಂತಹ ಆಹಾರವನ್ನು ತಕ್ಕ ರೀತಿಯಲ್ಲಿ ಆರಿಸಿಕೊಂಡು ಉಪಯೋಗಿಸಿದರೆ, ಆಗ ನಿಮ್ಮ ದೇಹಾರೋಗ್ಯವು ಕ್ರಮವಾಗಿರುವುದರೊಡನೆ, ನಿಮಗೆ ಯಾವ ವ್ಯಾಧಿಯೂ ಬಾರದಂತೆ ನಿವಾರಿಸುವುದು. ಅಸಂಬದ್ಧವಾದ ದುರಾಹಾರಗಳನ್ನು ಭುಜಿಸುವದು, ಪ್ರಮಾಣಕ್ಕೆ ಮೀರಿ ಭುಜಿಸುವುದು, ಆಹಾರಗಳ ಗುಣಾಗುಣಗಳನ್ನು ವಿಮರ್ಶಿಸದೆ ಸಿಕ್ಕಿದುದನ್ನು ತಿನ್ನುವುದು, ಪೋಷಣೆಯಿಲ್ಲದ ಪದಾರ್ಥಗಳನ್ನು ಸೇವಿಸುವುದು, ಇವುಗಳಿಂದ, ನಿಮ್ಮ ದೇಹಾರೋಗ್ಯವು ಹೇಗೆ ಕೆಡುವುದೆಂಬುದು ನಿಮಗೆ ತಕ್ಷಣದಲ್ಲಿ ಗೋಚರವಾಗಲಾರದು. ಕಾಲಕ್ರಮದಿಂದ ಅದರ ದುಷ್ಪರಿಣಾಮಗಳು ನಿಮಗೆ ಸ್ವಲ್ಪಸ್ವಲ್ಪವಾಗಿ ತೋರುತ್ತಾ ಬರುವುವು. ಆಹಾರದ ಮಿಶ್ರಣಗಳಲ್ಲಿಯೂ ಗಮನಿಸಬೇಕಾದ ಕೆಲವು ಅಂಶಗಳುಂಟು. ಹಾಗಿಲ್ಲದೆ ಒಂದಕ್ಕೊಂದು ಹೊಂದಿಕೆಯಿಲ್ಲದ ಆಹಾರ ಮಿಶ್ರಣಗಳನ್ನು ಸೇವಿಸುವುದರಿಂದಲೂ, ಮೇಲೆಹೇಳಿದ ಕೆಡುಕಿಗೆ ಕಾರಣವಾಗುವುದು. ಇವೆಲ್ಲ ವ್ಯಾಧಿಗೆ ಕಾರಣಗಳೇ.

ಭಯಂಕರವಾದ ವ್ಯಾಧಿಯೆಂಬ ಪದವೇ ನಿಮಗೆ ಅಪಾಯಸೂಚಕವಾಗಿ ಎಚ್ಚರಿಕೊಡುವ ಚಿಹ್ನವೆನಿಸಿದೆ. ನಿಮ್ಮ ದೇಹದಲ್ಲಿ ಬಹುಕಾಲದಿಂದ ದುರಾಹಾರಸೇವನೆಯಿಂದಲೂ, ಮತ್ತು ಕಶ್ಮಲವಿಸರ್ಜನದ ಕಾರ್ಯಗಳು ಸರಿಯಾಗಿ ನಡೆಯದಿರುವುದರಿಂದಲೂ, ದೇಹದಲ್ಲಿ ವಿಷವು ತುಂಬಿರುವುದೆಂಬುದನ್ನು ವ್ಯಾಧಿಗಳು ಹೊರಕ್ಕೆ ಕಾಣಿಸುವುವು. ನಿಮಗೆ ಒಳ್ಳೇ ದೇಹಾರೋಗ್ಯವಿರಬೇಕಾದರೆ, ಆ ಆಹಾರಪದಾರ್ಥಗಳನ್ನು ಹೊರಗೆಡಹುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡಬೇಕು.

ಕಾಲಕ್ರಮತಪ್ಪದೆ ಸರಿಯಾದ ಆಹಾರವನ್ನು ತೆಗೆದುಕೊಳ್ಳುವುದೂ ಅದನ್ನು ಚೆನ್ನಾಗಿ ಜೀರ್ಣಿಸಿ ಕಲ್ಮಷಗಳನ್ನು ಹೊರಪಡಿಸುವುದೂ ಇವೆರಡೂ ಜೀವಕ್ಕೆ ಮುಖ್ಯವಾಗಿರುವುದು. ಈ ಕೆಲಸವು ತಪ್ಪಿಹೋದರೆ ವ್ಯಾಧಿಯುಂಟಾಗುವುದು. ಒಬ್ಬ ಮನುಷ್ಯನು ವ್ಯಾಧಿಯಿಂದಲೂ ಮತ್ತು ಆರೋಗ್ಯದಿಂದಲೂ ಕೂಡಿ, ಹೊರಗೆ ನೋಡುವುದಕ್ಕೆ ವ್ಯಾಧಿಯ ಚಿಹ್ನೆಗಳಾವುವೂ ಇಲ್ಲದೆ ಇರಬಹುದು. ಅದರೆ ಸಾಂಕ್ರಾಮಿಕರೋಗವಿದ್ದ ಕಾಲದಲ್ಲಿ ಅಂಥವನು ವ್ಯಾಧಿಗೆ ಸುಲಭವಾಗಿ ಸಿಕ್ಕಿಬೀಳುವನು. ಕ್ರಮವಿಲ್ಲದ ಆಹಾರವೂ, ಪ್ರಕೃತಿಗೆ ವಿರುದ್ಧವಾದ ಜೀವನವೂ, ಅಸೌಖ್ಯಕ್ಕೂ, ವ್ಯಾಧಿಗೂ ಕಾರಣವಾಗುವುವು. ನಾವು ತೆಗೆದುಕೊಳ್ಳುವ ಎಲ್ಲಾ ಆಹಾರವೂ ಒಳ್ಳೆಯ ಆಹಾರವೆನಿಸಲಾರದು. ಯಾವ ಆಹಾರವು ನಮ್ಮ ದೇಹಕ್ಕೆ ಚೆನ್ನಾಗಿ ಗ್ರಹಿಸಲ್ಪಡುವುದೋ, ಅದೇ ಒಳ್ಳೆಯ ಪೋಷಣಗುಣವುಳ್ಳ ಆಹಾರವೆನಿಸುವುದು. ಸ್ಥೂಲಶರೀರವುಳ್ಳ ಒಬ್ಬನು ಘನವಾದ ಮತ್ತು ಕಠಿನವಾದ ಆಹಾರವನ್ನು ತೆಗೆದುಕೊಳ್ಳುವನು. ಅದರೆ ಅಂಥವನು ಆರೋಗ್ಯವಂತನೆನಿಸುವನೆ? ಎಂದಿಗೂ ಇಲ್ಲ. ಏಕೆಂದರೆ, ಅವನು ಸ್ನಾಯುವರ್ಧಕವಾದ ಆಹಾರವನ್ನು ತೆಗೆದುಕೊಳ್ಳುವದೇ ಇಲ್ಲ. ಈ ಕಶ್ಮಲಗಳೆಲ್ಲ ಅವನ ದೇಹದಲ್ಲಿ ಒಂದಾಗಿ ಸೇರಿಕೊಂಡು ಕಡೆಗೆ ಕೊಬ್ಬಾಗುಗುವವು. ಇದರಿಂದ ದೇಹದಲ್ಲಿ ಶಕ್ತಿಯೂ, ಬಲವೂ ಕಡಿಮೆಯಾಗುವುವು. ಯಾವಾಗಲೂ ನಾವು ಆಹಾರದ ಗುಣವನ್ನು ಕುರಿತು ಗಮನಿಸಬೇಕೇ ಹೊರತು, ಆಹಾರದ ಪರಿಣಾಮವನ್ನು ಕುರಿತು ಯೋಚಿಸಬೇಕಾದುದಿಲ್ಲ. ಆಹಾರದ ಪರಿಣಾಮವು ಸ್ವಲ್ಪವಾದರೂ, ಅದು ಸುಲಭವಾಗಿ ಜೀರ್ಣಿಸುವುದಾಗಿದ್ದರೆ ಅದೇ ಬಹಳ ಉತ್ತಮ.

ಘೋರವ್ಯಾಧಿಗಳಿದ್ದ ಕಾಲದಲ್ಲಿಯಾಗಲಿ, ಜೀವಕಣಗಳಿಗೆ ಸಂಬಂಧಪಟ್ಟ ವ್ಯಾಧಿಯಿದ್ದ ಕಾಲದಲ್ಲಿಯಾಗಲಿ, ಘನವಾದ ಆಹಾರವನ್ನು ಸೇವಿಸಕೂಡದು. ಅವು ಶೀಘ್ರದಲ್ಲಿ ಜೀರ್ಣವಾಗುವುದಿಲ್ಲ. ಅವುಗಳನ್ನು ತೆಗೆದುಕೊಂಡರೆ ವಿಷಪದಾರ್ಥವು ಹೆಚ್ಚಾಗಿ, ಅವು ಕೊನೆಗೆ ಅಪಾಯವನ್ನುಂಟುಮಾಡುವುವು.

ಒಳ್ಳೆಯ ಆಹಾರಪದಾರ್ಥಗಳನ್ನು ಆರಿಸಿ ತೆಗೆದುಕೊಂಡರೆ, ಅನಾಂಗವೃದ್ಧಿ ಮುಂತಾದುವುಗಳಿಗೂ ಸಹಾಯಕವಾಗಿರುವುವು. ಆದುದರಿಂದ, ಮಿಶ್ರಣವಿಲ್ಲದ ಒಳ್ಳೆಯ ಆಹಾರವನ್ನು ನಿಧಾನವಾಗಿಯೂ, ರುಚಿಯನ್ನನುಭವಿಸುತ್ತಲೂ ತೆಗೆದುಕೊಳ್ಳಬೇಕು. ಹಸಿವುಂಟಾದಾಗ ಆಹಾರವನ್ನು ತೆಗೆದುಕೊಳ್ಳಬೇಕು. ಹಾಗಿಲ್ಲದೆ ಪದ್ಧತಿಗೆ ತಕ್ಕಂತೆ ಉಣ್ಣಬೇಕೆಂದು, ಹಸಿವಿಲ್ಲದಿರುವಾಗಲೂ ಆಹಾರವನ್ನು ತೆಗೆದುಕೊಳ್ಳಬಾರದು. ಎರಡು ಆಹಾರಗಳಿಗೆ ನಡುವೆ ಆರು ಘಂಟೆಗಳ ಕಾಲವಾದರೂ ಬಿಡಬೇಕು.

ನಾವು ತೆಗೆದುಕೊಳ್ಳಬೇಕಾದ ಆಹಾರದ ಮುಖ್ಯಗುಣಗಳಾವುವೆಂದರೆ—

(೧) ಒಳ್ಳೆಯ ಪೋಷಣಶಕ್ತಿಯಿರಬೇಕು.

(೨) ಸುಲಭವಾಗಿ ಜೀರ್ಣವಾಗುವಂತಿರಬೇಕು.

(೩) ಹೊಸತರದ್ದಾಗಿಯೂ ಮತ್ತು ಅಗ್ಗವಾಗಿಯೂ ಇರಬೇಕು.

ಘನವಾದ ಆಹಾರವನ್ನು ಅಧಿಕವಾಗಿ ಸೇವಿಸುವುದು ಸಂಗತವಲ್ಲ. ಅದರಿಂದ ದೇಹದಲ್ಲಿ ಭಾರ, ಬೇಸರ, ಜೀರ್ಣವಯುವ

(೧೧ನೆಯ ಪುಟವನ್ನು ನೋಡಿರಿ.)

ಪಂಚಾಚಾರ್ಯ ಪ್ರಭಾ.

೧೯೩೪ನೇ ಜನವರಿ ತಾ|| ೨೨ ನೇ ಸೋಮವಾರ.

ಸಪ್ತಗ್ರಹಕೂಟ.

ಸಪ್ತಗ್ರಹಗಳು ಒಂದೆಡೆಯಲ್ಲಿ ಕೂಡುವುದರಿಂದ ಪ್ರಪಂಚದಲ್ಲಿ ಬಹುವಿಧಗಳಾದ ಅನರ್ಥಪರಂಪರೆಗಳು ಸಂಭವಿಸುವುವೆಂದು ನಮ್ಮ ಆರ್ಯಜ್ಯೋತಿಶ್ಶಾಸ್ತ್ರ ವಿಶಾರದರು ಈಗ್ಗೆ ಸ್ವಲ್ಪದಿವಸಗಳ ಕೆಳಗೆ ಹೇಳುತ್ತಿದ್ದಂತೆ ಕಳೆದವಾರದಲ್ಲಿ ಸಪ್ತಗ್ರಹಗಳು ಏಕತ್ರವಿರುತವಾದ ದಿವಸವೇ ಕಲಕತ್ತಾ, ಗಯಾ, ಕಾಶಿ, ಭಾಗಲಪೂರ್, ಮೊಂಘೈರ್, ಪಾಟ್ನಾ ಮುಂತಾದ ಅನೇಕ ಕಡೆಗಳಲ್ಲಿ ಭೂಕಂಪವುಂಟಾಗಿ ಅನೇಕ ಮನೆಮಠಗಳು ನೆಲಸಮವಾದವೆಂದೂ, ಅಸಂಖ್ಯಜನರು ಮೃತ್ಯುವಿನಬಾಯಿಗೆ ತುತ್ತಾದರೆಂದೂ, ಬಹುಜನಗಳು ಉತ್ಕ್ರಮಣಾವಸ್ಥೆಯಲ್ಲಿರುವರೆಂದೂ ಕೇಳಿ ವಿಶೇಷ ವಿಷಾದಪಡಬೇಕಾಗಿದೆ. ಪುಣ್ಯಭೂಮಿಯೆಂದೆನಿಸಿದ ನಮ್ಮ ಭರತಖಂಡದಲ್ಲಿ ಹಿಂದೆ ಒಂದೊಂದು ಸಮಯದಲ್ಲಿ ಕಾಲಪರಿಪಾಕದಿಂದ ಅತಿವೃಷ್ಟಿ ಅಥವಾ ಅನಾವೃಷ್ಟಿ ಮುಂತಾದ ಕೆಲ ದೋಷಗಳಿಂದ ಅಲ್ಪಸ್ವಲ್ಪ ಪ್ರಜೆಗಳಿಗೆ ತೊಂದರೆಯು ಸಂಭವಿಸುತ್ತಿದ್ದರೂ, ಇಂತಹ ಭೂಕಂಪದಿಂದುಂಟಾದ ವಿಪ್ಲವಗಳು ಬಹಳ ಮಟ್ಟಿಗೆ ಇರಲಿಲ್ಲವೆಂದೇ ಹೇಳಬಹುದು. ಇಂಥ ಭೂಕಂಪಗಳು ಪ್ರಾಯಶಃ ಅನ್ಯಖಂಡಗಳಲ್ಲಿ ವಿಶೇಷವಾಗಿ ನಡೆಯುತ್ತಿದ್ದುದನ್ನು ಕೇಳುತ್ತಿದ್ದೆವು. ಆದರೆ ಈ ಭೂಕಂಪವು ನಮ್ಮ ಭರತಖಂಡದಲ್ಲೂ ಪದಾರ್ಪಣ ಮಾಡಿರುವುದನ್ನು ನೋಡಿದರೆ ಪರಮೇಶ್ವರನು ನಮ್ಮ ಭರತಖಂಡದ ಮೇಲೆ ಸರ್ವತೋಮುಖವಾಗಿ ಹರಡಿದ್ದ ತನ್ನ ಅನುಗ್ರಹಶಕ್ತಿಯನ್ನೆಲ್ಲಾ ಸಂಕೋಚಮಾಡಿಕೊಂಡು ನಿಗ್ರಹಶಕ್ತಿಯನ್ನೇ ಬಹಳಮಟ್ಟಿಗೆ ಪ್ರಸರಿಸಿರುವನೆಂದು ಅನುಮಾನಿಸಬೇಕಾಗಿದೆ. ಹಾಗಿಲ್ಲವಾದರೆ ಆಕಸ್ಮಿಕವಾಗಿ ಇಂಥ ವಿಪ್ಲವಗಳು ಸಂಭವಿಸಲು ಕಾರಣವಿಲ್ಲ. ಈ ನಮ್ಮ ಭರತಖಂಡವಾದರೂ ಕೇವಲ ದೈವಾಧಾರದಲ್ಲಿ ನಿಂತಿರುವುದಲ್ಲದೆ ಪುರುಷಪ್ರಯತ್ನದಲ್ಲಿ ನಿಂತಿರುವುದಿಲ್ಲ. ದೈವವಾದರೋ ಕೇವಲ ಧರ್ಮವನ್ನವಲಂಬಿಸಿರುತ್ತದೆ. ಧರ್ಮಹೀನರಿಗೆ ದೈವಬಲವಿಲ್ಲ. ದೈವಬಲವಿಲ್ಲದವರಿಗೆ ಸುಖವಿಲ್ಲ. ಸುಖವಿಲ್ಲದ ಮಾನವನ ಜನ್ಮವೇ ವ್ಯರ್ಥ!

ಧರ್ಮಃ ಪ್ರವ್ರಜಿತಸ್ತಪಃ ಪ್ರಚಲಿತಂ ಸತ್ಯಂ ಚ ದೂರೇ ಗತಂ | ಪೃಥ್ವೀ ಮಂದಫಲಾ ನರಾಃ ಕಪಟಿನಶ್ಚಿತ್ತಂ ಚ ಶಾಠ್ಯೇ ಸ್ಥಿತಂ || ರಾಜಾನೋಽರ್ಥಪರಾ ನ ರಕ್ಷಣಪರಾಃ ಪುತ್ರಾಃ ಪಿತುರ್ದ್ವೇಷಿಣಸ್ಸಾಧುಸ್ಸೀದತಿ ದುರ್ಜನಃ ಪ್ರಭವತಿ ಪ್ರಾಪ್ತೇ ಕಲೌ ದುರ್ಯುಗೇ ||೧||

ದುಷ್ಟವಾದ ಕಲಿಯುಗದಲ್ಲಿ ದೇವರೊಲುಮೆಗೆ ಸಾಧನವಾದ ಧರ್ಮವು ಕಾಡುಪಾಲಾಗುವುದು. ಮನಃಸ್ಥೈರ್ಯಕ್ಕೆ ಸಾಧನವಾದ ತಪಸ್ಸು ಪಲ್ಲಟವಾಗುವುದು. ಸತ್ಯವೆಂಬುದು ಹೇಳಲು ಹೆಸರಿಲ್ಲದಂತಾಗುವುದು. ಭೂದೇವಿಯಲ್ಲಿ ಸಸ್ಯಾದಿ ಫಲಸಮೃದ್ಧಿಯು ಕಡಿಮೆಯಾಗುವುದು. ಎಲ್ಲಿ ನೋಡಿದರೂ ಪ್ರತಿಯೊಬ್ಬ ಮನುಷ್ಯರೂ ಋಜುಮಾರ್ಗವನ್ನು ಬಿಟ್ಟು ಕಪಟಮಾರ್ಗವನ್ನು ಹಿಡಿಯುವರು. ಚಿತ್ತವೆಂಬುದು ಸೌಜನ್ಯಕ್ಕೆ ಬದಲಾಗಿ ದೌರ್ಜನ್ಯವನ್ನವಲಂಬಿಸುವುದು. ಪ್ರತ್ಯಕ್ಷ ದೇವತಾಸ್ವರೂಪಿಗಳಾದ ಮಹಾರಾಜರಾದರೋ ತಮ್ಮ ಜನ್ಮಸಿದ್ಧವಾದ ರಕ್ಷಣಚಾತುರ್ಯವನ್ನು ಬಿಟ್ಟು ದ್ರವ್ಯಾರ್ಜನಪರರಾಗುವರು. ಮಕ್ಕಳು ತಂದೆಯಲ್ಲಿ ದ್ವೇಷಬುದ್ಧಿಯುಳ್ಳವರಾಗುವರು. ಸಾಧುಸಂತರು ದುಷ್ಟಸಂಸರ್ಗದಿಂದ ಪರಿತಪಿಸುವರು. ದೈವಧಾತಿಗಳಾದ ದುಷ್ಟರು ಪ್ರಬಲಿಸುವರು. ಎಂಬೀರೀತಿಯಾಗಿ ತ್ರಿಕಾಲಜ್ಞಾನಿಗಳಾದ ಮಹಾತ್ಮರು ಕಲಿಯುಗದಲ್ಲಿ ಆಗಬೇಕಾದ ಅಸತ್ಯಭಾವಗಳನ್ನು ಸ್ಪಷ್ಟವಾಗಿ ಹೇಳಿರುವಂತೆ ಸದ್ಯಃ ಪ್ರತಿಯೊಂದು ಅಸತ್ಯಕಾರ್ಯಗಳೂ ನಮ್ಮ ಪವಿತ್ರ ಭಾರತೀಯರಲ್ಲಿ ಪ್ರಾರಂಭವಾಗಿವೆ. ಭಾರತಮಾತೆಯು ತನ್ನ ಮಕ್ಕಳ ಅಪವಿತ್ರ ನಡತೆಯನ್ನು ನೋಡಿ ನೋಡಿ ತನ್ನ ಗರ್ಭಾಂಬುಧಿಯಲ್ಲಿ ಅಡಗಿದ್ದ ಇಂಥ ಭೂಕಂಪವೆಂಬ ಬಡಬಾಗ್ನಿಯನ್ನು ಹೊರಗೆಡವಿರುತ್ತಾಳೆ. ಈ ಜ್ವಾಲೆಯೊಳಗೆ ಭಾರತೀಯರ ಅವಸ್ಥೆಯೇನಾಗುವುದೋ ತಿಳಿಯದಾಗಿದೆ. ಭೂಮಾತೆಯು ತನ್ನ ಅಮೃತಕಟಾಕ್ಷ ಸೇಚನಕ್ಕೆ ಬದಲು ಉಷ್ಣಕಿರಣಗಳನ್ನು ಎರಚುತ್ತ ಬಂದರೆ ಬದುಕುವ ಬಗೆಯೆಂತು? ಹೇಗೆ ಹೇಗೆ ಅಧರ್ಮವು ಹೆಚ್ಚುವುದೋ ಹಾಗೆ ಹಾಗೆ ಭೂಮಿಯು ಕಲ್ಲಣಗೊಳ್ಳುತ್ತ ತಾಪವು ಹೆಚ್ಚಿ ಸಹಿಸಲಾರದೆ ಹೀಗೆ ಉದ್ಗಾರವನ್ನು ಮಾಡುವದು ಸ್ವಭಾವವಾಗಿದೆ. ಪೂರ್ವಕಾಲದಲ್ಲಿ ಜಗತ್ತಿನಲ್ಲಿ ಇಂಥ ವಿಪ್ಲವಗಳುಂಟಾದರೆ ಅನೇಕ ಶಾಂತಿಕರ್ಮಗಳು ಮಾಡಲ್ಪಟ್ಟು ಜನಗಳು ಪುನಃ ಧರ್ಮಜಾಗೃತರಾಗುತ್ತಿದ್ದರು. ಭೂದೇವಿಗುಂಟಾದ ವ್ಯಾಕೋಪವು ಧರ್ಮವೆಂಬ ಶೈತ್ಯೋಪಚಾರದಿಂದಲೇ ಶಾಂತವಾಗಬೇಕಲ್ಲದೆ ಇನ್ನು ಬೇರೆ ಉಪಾಯಗಳಿಲ್ಲ. ಗ್ರಹಗಳು ಒಂದೊಂದು ಸಮಯದಲ್ಲಿ ಕ್ರೂರವಾಗಿರುವುದೂ ಒಂದೊಂದು ಸಮಯದಲ್ಲಿ ಸೌಮ್ಯವಾಗಿರುವುದೂ ಅವುಗಳ ಸ್ವಭಾವವಾಗಿದ್ದರೂ ಆಯಾಯಕಾಲಗಳಲ್ಲಿ ನಡೆಸಲ್ಪಡುವ ಸತ್ಕರ್ಮಾಚರಣೆಯಿಂದ ಅನುಕೂಲತೆಯನ್ನು ಪಡೆಯುವವೆಂದು ನಂಬುವ ಆಸ್ತಿಕಸ್ವಭಾವವುಳ್ಳ ನಮ್ಮ ಭಾರತೀಯರು, ಪಾಶ್ಚಾತ್ಯದೇಶದ ಸಂಸರ್ಗದಿಂದ ತಮ್ಮ ತಮ್ಮ ದೈವಕರ್ಮಗಳ ಸ್ವರೂಪವನ್ನು ಮರೆತು ಕೇವಲ ವೈಷಯಿಕಸೌಖ್ಯಾಭಿಲಾಷೆಯಲ್ಲಿ ಮಗ್ನರಾಗಿ, ಮಹರ್ಷಿಪ್ರಣೀತಧರ್ಮಶಾಸ್ತ್ರಮಾರ್ಗಕ್ಕೆ ವಿರೋಧಿಗಳಾದುದರಿಂದ ಧರ್ಮಗ್ಲಾನಿಯು ಸಂಭವಿಸುತ್ತಲಿದೆ. ಇದರಿಂದ ಇಂಥ ಖಂಡಪ್ರಳಯಗಳಿಂದುಂಟಾಗುವ ಮಹಾನರ್ಥವನ್ನು ಅನುಭವಿಸಬೇಕಾಗಿ ಬಂದಿರುವದು. ಜಗದೀಶ್ವರನು ಈ ಮಹಾಪರಾಧವನ್ನು ಕ್ಷಮಿಸಿ ಭಾರತೀಯರು ಇಂಥ ವಿಪ್ಲವಗಳಿಗೆ ಗುರಿಯಾಗದಂತೆ ನಮ್ಮ ಭಾರತಭೂಮಿಯನ್ನು ಕಾಪಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಸಪ್ತಗ್ರಹಕೂಟದ ದುಷ್ಪರಿಣಾಮ!

ಹಿಂದೂದೇಶದಲ್ಲಿ ಅಭೂತಪೂರ್ವವಾದ ಭೂಕಂಪ!

ಅನೇಕ ಜನರು ಸತ್ತರು! ಸಾವಿರಾರು ಮನೆಗಳು ಬಿದ್ದುಹೋದವು!

ತಂತಿ (ಟೆಲಿಗ್ರಾಫ್) ಕಂಬಗಳು ಬಿದ್ದುಹೋಗಿವೆ!

ರೇಲ್ವೆಮಾರ್ಗಗಳು ಕೆಟ್ಟುಹೋಗಿ ಗಾಡಿಗಳ ಸಂಚಾರವು ನಿಂತುಹೋಗಿದೆ!

ಹಿಂದೂಸ್ಥಾನದಲ್ಲಿ ಅಭೂತಪೂರ್ವವಾದ ಭೂಕಂಪ!

ಈ ತಿಂಗಳು ೧೫ ನೆಯ ತಾರೀಖಿನ ದಿವಸ ಮಧ್ಯಾಹ್ನ ಎರಡೂಕಾಲು ಘಂಟೆಯ ಸಮಯದಲ್ಲಿ ಹಿಂದೂದೇಶದಲ್ಲಿ ಹಿಂದೆ ಎಂದೂ ಕಾಣದಂತಹ ಭಯಂಕರ ಭೂಕಂಪವಾಯಿತು. ಈ ಭೂಕಂಪವು ಇಡೀ ಉತ್ತರ ಹಿಂದೂ ದೇಶದಲ್ಲೆಲ್ಲಾ ಹರಡಿದ್ದಲ್ಲದೆ, ದಕ್ಷಿಣ ಹಿಂದೂದೇಶದ ಕೆಲವು ಭಾಗಗಳಿಗೂ ಹರಡಿತ್ತು. ಆದರೆ ದಕ್ಷಿಣದಲ್ಲಿ ಉತ್ತರದಲ್ಲಿದಷ್ಟು ಜೋರಿರಲಿಲ್ಲ.

ಭೂಕಂಪಸಮಯದಲ್ಲಿ ಭಾವಿಗಳಲ್ಲಿ ನೀರು ಕುಣಿಯಿತು; ಕೆರೆತೊರೆಗಳಲ್ಲಿ ನೀರು ದಡವನ್ನುಕ್ಕಳಿಸಿತು; ಮಹಾಸೌಧಗಳ ಮೇಲ್ಭಾಗಗಳೆಲ್ಲವೂ ಬಿದ್ದುಹೋದವು: ಗೋಡೆಗಳು ಸಂದುಬಿಟ್ಟವು; ಕೆಲವು ಹಳೆಯ ಮನೆಗಳು ಬಿದ್ದುಹೋದವು; ಎಷ್ಟೋ ಜನರು ಸತ್ತುಹೋದರು; ಅನೇಕ ಜನರಿಗೆ ಗಾಯಗಳಾದವು; ಈ ರೀತಿಯಾಗಿ ೩-೪ ನಿಮಿಷಗಳಲ್ಲಿ ಅಪೂರ್ವಸಂಘಟನೆಯುಂಟಾಗಿ ಹೋಯಿತು.

ಸಪ್ತಗ್ರಹಕೂಟ!

೧೫ ನೇ ತಾರೀಖಿನ ದಿವಸ ರವಿ, ಚಂದ್ರ, ಬುಧ, ಶನಿ, ಗುರು, ಕುಜರು ಏಕಸ್ಥಾನದಲ್ಲಿದ್ದವರು ಮಧ್ಯಾಹ್ನಾತ್ಪರ ರಾಹುವಿನೊಂದಿಗೆ ಸೇರಿದರು. ಇದರಿಂದಲೇ ಇಂತಹ ದುರ್ಘಟನೆಯುಂಟಾಯಿತು.

ಲಂಡನ್.

ಈ ಭೂಕಂಪದ ಪ್ರತಿಧ್ವನಿಯು ಲಂಡನ್ನಿಗೆ ತಿಳಿದೊಡನೆಯೆ ಅನೇಕರು ಇಂಡಿಯಾ ಆಫೀಸಿನ ಬಳಿ ಗೋಡಿ ತಮ್ಮ ಬಂಧುಮಿತ್ರರು ಇಂಡಿಯಾದಲ್ಲಿದ್ದಾರೆಂದೂ, ಅವರ ಕ್ಷೇಮಚಿಂತನೆಯು ಅಗತ್ಯವೆಂದೂ ಆದುದರಿಂದ ಭೂಕಂಪದಲ್ಲಿ ಸತ್ತವರ ಪಟ್ಟಿಯನ್ನು ಕೂಡಲೇ ಪ್ರಕಟಿಸಬೇಕೆಂದೂ ಕೇಳಿದ್ದಾರೆ.

ವೈಸ್ರಾಯರು.

ಈ ಸಮಯದಲ್ಲಿ ವೈಸ್ರಾಯ್ ದಂಪತಿಗಳು ಕಲ್ಕತ್ತಾದಿಂದ ಹೊರಡುವ ಸಮಾರಂಭದಲ್ಲಿದ್ದರು. ಹೌರಾ ರೈಲ್ವೆಸ್ಟೇಷನ್ನಿನಲ್ಲಿದ್ದಾಗ ಭೂಕಂಪವುಂಟಾಯಿತು. ವೈಸ್ರಾಯರು ಇದನ್ನು ನೋಡಿ "ನಾನು ಮದರಾಸು ಬಿಟ್ಟಾಗ ಬಿರುಗಾಳಿ, ಕಲ್ಕತ್ತಾ ಬಿಡುವಾಗ ಭೂಕಂಪ" ಎಂದರು.

ಕಲಕತ್ತಾ.

ಕಲ್ಕತ್ತಾ ಎಲೆಕ್ಟ್ರಿಕ್ ಸಪ್ಲೈ ಕಾರ್ಪೋರೇಷನ್ನಿನ ಪ್ರಧಾನ ಕಾರ್ಯಸ್ಥಾನವಾದ 'ವಿಕ್ಟೋರಿಯಾ ಹೌಸಿ' ಗೆ ಆಗಿರುವಷ್ಟು ನಷ್ಟ ಮತ್ತಾವ ಕಟ್ಟಡಕ್ಕೂ ಆಗಿಲ್ಲ. ಇದನ್ನು ಬಿಟ್ಟು ಹೆಚ್ಚಾಗಿ ನಷ್ಟವಾಗಿರುವ ಕಟ್ಟಡಗಳೆಂದರೆ, ಸೆನೆಟ್‌ಹೌಸ್, ಹಾರ್ಡಿಂಜ್ ಹಾಸ್ಟೆಲ್, ದರ್ಭಂಗಾ ಬಿಲ್ಡಿಂಗ್ಸ್, ಹೈಕೋರ್ಟ್ ಗೋಪುರ, ಪೆಲ್ಲಿಸ್ಲಿ ಚರ್ಚಿನ ಗೋಪುರ, ಟ್ರಾಂ ಡಿಪೋ ಗೋಡೆಗಳು, ಜನರಲ್ ಪೋಸ್ಟಾಫೀಸಿನ ಕ್ವಾರ್ಟರ್ಸ್ ಮತ್ತೆ ಕೆಲವು ಚರ್ಚಗಳು.

ಕಲ್ಕತ್ತಾದಲ್ಲೆಲ್ಲಾ ಮಹಾ ಭಾರಿಯೂ, ಅತ್ಯಂತ ಎತ್ತರವೂ ಆದ ಟೆಲಿಫೋನ್ ಕಟ್ಟಡಕ್ಕೆ ವಿಶೇಷ ನಷ್ಟವಾಗಿದೆ. ಟೆಲಿಗ್ರಾಫ್ ತಂತಿಗಳು ಕಿತ್ತುಹೋಗಿ ಸಮಾಚಾರಗಳು ತಿಳಿಯುವುದು ಕಷ್ಟವಾಗಿದೆ.

ಕಲ್ಕತ್ತಾ ಹೈಕೋರ್ಟಿನಲ್ಲಿ ಗಾಬರಿಯು ಉಂಟಾಯಿತು. ಅದು ಹಳೆಯ ಕಟ್ಟಡವಾದ್ದರಿಂದ ಎಲ್ಲರಿಗೂ ಪ್ರಾಣಭಯವಾಯಿತು. ಜೈಲುಗಳಲ್ಲಿದ್ದ ಖೈದಿಗಳು ಬೆದರಿಬಿದ್ದರು. ಕೆಲವರಂತೂ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟರು. ಸಾಧ್ಯವಾಗಲಿಲ್ಲ. ಒಬ್ಬನು ಮಾತ್ರ ಓಡಿಹೋದನು.

ಕಾನಪುರ.

೨-೧೫ ಘಂಟೆ ಸಮಯದಲ್ಲಿ ಭೂಯೋತ್ಪಾದಕ ಭೂಕಂಪವಾಯಿತು. ಭಯಂಕರವಾದ ದೊಡ್ಡ ಶಬ್ದವುಂಟಾಗಿ ಜನರು ನಡುಗಿಹೋದರು. ಉತ್ತರ ಕ್ಷಣದಲ್ಲಿಯೇ ಎಷ್ಟೋ ಕಟ್ಟಡಗಳು ಭೂಗತವಾದವು. ಐದು ನಿಮಿಷಗಳಕಾಲ ಜನರೆಲ್ಲರೂ ಉಯ್ಯಾಲೆಯಲ್ಲಿದ್ದಂತೆ ಭಾವಿಸಿದರು. ಜನರೆಲ್ಲರೂ ಬೀದಿಗಳಿಗೋಡಲಾಗಿ ಬೀದಿಯಲ್ಲೆಲ್ಲಾ ರೋದನ!

೧೫೦ ಮನೆಗಳು ಬಿದ್ದುಹೋದವು. ದೇವಾಲಯಗಳ ಮತ್ತು ಚರ್ಚುಗಳ ಮೇಲ್ಭಾಗಗಳೆಲ್ಲಾ ಅಲ್ಲಾಡಿದವು. ಮಸೀದಿಗಳ ಮಿನಾರತ್ತುಗಳೂ ಮುರಿದವು.

೭೦೦ ಗೋಡೆಗಳು ಒಡೆದು ಹೋಗಿವೆ. ಅನೇಕ ಜನರಿಗೆ ಗಾಯಗಳಾಗಿವೆ. ಇಲ್ಲಿ ಏಳು ಸಾವಿರ ಮನೆಗಳು ಬಿರುಕುಬಿಟ್ಟಿದ್ದು ೩೦೦ಮನೆಗಳು ಬಿದ್ದುಹೋಗಿವೆ

ಲಕ್ನೋ.

೨-೧೫ ಘಂಟೆ ಸಮಯದಲ್ಲಿ ಭೂಕಂಪವಾಯಿತು. ಐದು ನಿಮಿಷಗಳಕಾಲ. ಎಲೆಕ್ಟ್ರಿಕ್ ತಂತಿಗಳೆಲ್ಲವೂ ಭೂಮಿಯಮೇಲೆ ಬಿದ್ದಿದ್ದವು. ನದಿಯ ನೀರು ಅಲೆಯೇರುತ್ತಿದ್ದಿತು. ಆಫೀಸುಗಳಲ್ಲಿ ಕೆಲಸಮಾಡುತ್ತಿದ್ದ ಕಾರಕೂನರೂ ಮಿಲ್ಲುಗಳಲ್ಲಿ ಕೆಲಸಮಾಡುತ್ತಿದ್ದ ಕೆಲಸಗಾರರೂ ಆಯಾ ಬಿಲ್ಡಿಂಗುಗಳನ್ನು ಬಿಟ್ಟು ಹೊರಗೆ ಓಡಿದರು. ಕೆಲವು ಮನೆಗಳು ಬಿದ್ದುಹೋದವು.

ಕಾಶಿ

ನಾಲ್ಕು ನಿಮಿಷಗಳ ಕಾಲ ಭೂಕಂಪವಾಯಿತು. ಅನೇಕ ಮನೆಗಳು ಬಿರುಕುಬಿಟ್ಟು ಕೆಲವು ಬಿದ್ದುಹೋದವು. ಬಹಳ ಮಂದಿಗೆ ಗಾಯಗಳೂ ಆದವು.

ಡೆಲ್ಲಿ.

ಒಂದೂವರೆ ನಿಮಿಷ ಭೂಕಂಪವಾಯಿತು. ಇಂಪೀರಿಯಲ್ ಸೆಕ್ರೆಟೇರಿಯಟ್ಟಿನಲ್ಲಿ ಕೆಲಸಮಾಡುತ್ತಿದ್ದವರೆಲ್ಲರೂ ವರಾಂಡಾಗಳಿಗೆ ಬಂದುಬಿಟ್ಟರು. ಭಾವಣೆಗಳೆಲ್ಲವೂ ಬಿರುಕುಬಿಟ್ಟವು.

ಜಬ್ಬಲ್‌ಪುರ.

ಸಾಮಾನ್ಯವಾದ ಕಂಪನ. ಒಂದೂವರೆ ನಿಮಿಷ! ಮನೆಗಳೆಲ್ಲಾ ಅಲ್ಲಾಡಿದವು. ಜನರು ಕೂಡಲೆ ಬೀದಿಗೆ ಹೋದರು. ಆಸ್ತಿಪಾಸ್ತಿಗೆ ಅಷ್ಟು ಅಪಾಯವಾಗಲಿಲ್ಲ.

ಅಲಹಾಬಾದ್.

ಕೆಲವು ಮನೆಗಳು ಒಡೆದವು. ಒಂದು ಮಸೀತಿಯ ಮೇಲಿದ್ದ ರಿಜರ್ವಾಯಿರ್ ಒಡೆದುಹೋಯಿತು. ಇಲ್ಲಿ ನಾಲ್ಕು ನಿಮಿಷಗಳಹಾವಳಿಯಾಯಿತು. ಸಾವಿರಾರು ಮಂದಿ ಯಾತ್ರಿಕರು ದಿಗ್ಭ್ರಾಂತರಾಗಿ ಹೋದರು.

ಬೊಂಬಾಯಿ.

ಅಲ್ಪಸ್ವಲ್ಪ ಭೂಕಂಪವಾಯಿತು.

ಗುಡಿವಾಡಾ.

ಒಂದು ನಿಮಿಷದ ಗುಡುಗಾಟ ಭಾವಿಗಳಲ್ಲಿ ನೀರು ಹಾರಾಡಿತು. ಕಾಫಿ ಕುಡಿಯುತ್ತಿದ್ದ ಕಪ್ಪುಗಳು ಕೆಲವರ ಕೈಗಳಿಂದ ಬಿದ್ದುಹೋದವು. ಜನರ ತಲೆ ತಿರುಗಲು ಆರಂಭವಾಯಿತು.

ಎಲ್ಲೋರು ಬೆಜವಾಡ.

ಅನೇಕ ಜನರು ತಲೆ ತಿರುಗಿ ಬಿದ್ದರು. ಕೆಲವು ಜನ ಹೆಂಗಸರಂತೂ ವಾಂತಿಮಾಡಿಕೊಂಡರು.

ಗಯಾ.

ಇಲ್ಲಿ ಒಂಭತ್ತು ಮಂದಿ ಸತ್ತರು. ಕೆಲವುಮನೆಗಳು ಬಿದ್ದುಹೋಗಿವೆ.

ಜಮಾಲ್‌ಪುರ.

ಇಲ್ಲಿಯ ರೈಲ್ವೆ ಸ್ಟೇಷನ್ನಿನ ಕಟ್ಟಡವು ಬಿದ್ದುಹೋಯಿತು. ಅನೇಕರು ಸತ್ತರು. ರೈಲ್ವೆ ವರ್ಕಷಾಪ್ ಮ್ಯಾನೇಜರ್ ಹೆಂಡತಿಯೂ, ಡಿ|| ಮೆ|| ಆಫೀಸರೂ ಅವರ ಮಕ್ಕಳೂ ಸತ್ತರು. ಸ್ಟೇಷನ್ನಿನ ಮೇಲ್ಭಾವಣಿಯು ರೈಲುಗಾಡಿಗಳ ಮೇಲೆ ಬಿತ್ತು.

ಡಾರ್ಜಿಲಿಂಗ್.

ಡಾರ್ಜಿಲಿಂಗಿನ ಗೌರ್ನ್‌ಮೆಂಟ್ ಹೌಸಿನ ಕೆಲವು ಭಾಗಗಳು ಬಿದ್ದು ಕೆಲವರು ಸತ್ತುಹೋದರು.

ಮುಝಫರಪುರ

ಭೂಕಂಪ ಎಲ್ಲೆಲ್ಲಿ ಸಂಭವಿಸಿತೋ ಅಲ್ಲೆಲ್ಲಾ ವಿಮಾನದಿಂದ ಸಂಚಾರಮಾಡಿ ನೋಡಿಕೊಂಡು ಬಂದಿರುವ ಕ್ಯಾಪ್ಟನ್ ಎ. ಹೆಚ್. ಡಾಲ್ಬರು ಹೇಳುವುದೇನೆಂದರೆ—

"ಮುಝಫರಪುರದಿಂದ ಮೋತಿಹಾರಿ ವರೆಗೂ ಅಲ್ಲಿಂದ ಮುಂದಕ್ಕೂ (ಅಂದರೆ ಅದಕ್ಕೆ ಉತ್ತರಭಾಗದ ಪ್ರದೇಶದಲ್ಲೂ) ಒಂದು ಇಂಚು ಜಾಗವೂ ಸಹ ಭೂಕಂಪದ ಹಾವಳಿಗೆ ಈಡಾಗದೆ ಇಲ್ಲ. ಬೀಹಾರ್ ಉತ್ತರಪ್ರದೇಶದಲ್ಲಿ ಅನೇಕ ದೊಡ್ಡ ದೊಡ್ಡ ಸಕ್ಕರೆ ಕಾರ್ಖಾನೆಗಳು ಸಂಪೂರ್ಣವಾಗಿ ನಾಶವಾಗಿವೆ. ಮುಝಫರಪುರದಲ್ಲಂತೂ ಭೂಕಂಪವು ಸಂಭವಿಸಿದಾಗ, ಭೂಮಿಯಲ್ಲಿ ದೊಡ್ಡ ದೊಡ್ಡ ಬಿರುಕುಗಳು ಆಗಿ, ನೀರು ಐದು ಅಡಿ ಎತ್ತರ ಚಿಮ್ಮಿ, ರಸ್ತೆಯ ಮೇಲೆ ನಿಂತು, ಭಾವಿ, ಕೊಳ, ಕೆರೆ, ಕಟ್ಟೆಗಳ ನೀರನ್ನೆಲ್ಲಾ ಕೆಡಿಸಿಬಿಟ್ಟಿದೆ. ಮುಝಫರ ಪುರಕ್ಕೂ ಬೀಹಾರಿಗೂ ಟೆಲಿಗ್ರಾಫ್ ತಂತಿಗಳೇ ಇಲ್ಲದಂತಾಗಿದೆ. ಮುಝಫರಪುರದಲ್ಲಂತೂ ಯಾವ ಬೀದಿಯಲ್ಲಿ ನೋಡಿದರೂ ಹೆಣಗಳು ರಾಶಿರಾಶಿಯಾಗಿ ಬಿದ್ದಿವೆ.

ಮುಜುಫರಪುರದಲ್ಲಿ ಭೂಕಂಪವು ಸಂಭವಿಸಿದಾಗ ಅಲ್ಲೇ ಇದ್ದ ಮಿ|| ಫೇರ್‌ವೆದರ್ ಎಂಬ ಆಂಗ್ಲೇಯರೊಬ್ಬರು ಈರೀತಿ ಹೇಳಿದ್ದಾರೆ.

ಮುಝುರಫರಪುರದಲ್ಲಿ ಸುಮಾರು ೨-೩೦ ಘಂಟೆ ಹೊತ್ತಿಗೆ ಭೂಕಂಪವು ಆರಂಭವಾಯಿತು. ಆಗ ನಾನು ಪೂಸಾ ಇಂಪೀರಿಯಲ್ ಇನ್‌ಸ್ಟಿಟ್ಯೂಟಿನಲ್ಲಿದ್ದೆ. ಭೂಕಂಪವು ಮೊದಲು ಸ್ವಲ್ಪ ನಿಧಾನವಾಗಿ ಆರಂಭವಾಗಿ ಅನಂತರ ಭೂಮಿಯೇ ಈ ಕಡೆಯಿಂದ ಆ ಕಡೆಗೆ ಅಲ್ಲಾಡಲು ಆರಂಭವಾಯಿತು. ನನ್ನ ಮೋಟಾರು ಬೀದಿಯಲ್ಲಿತ್ತು. ಅದು ಹಿಂದಕ್ಕೂ, ಮುಂದಕ್ಕೂ ಈ ಕಡೆಗೂ, ಆ ಕಡೆಗೂ ಓಡಾಡಿತು. ನಾನಿದ್ದ ಕಟ್ಟಡದಿಂದ ಧೂಳು ಭೂತಾಕಾರವಾಗಿ ಎದ್ದಿತು. ಮೋಟಾರಿನಲ್ಲಿ ಕುಳಿತು ಹೊರಟೆ. ರಸ್ತೆಯ ಉದ್ದಕ್ಕೂ ಭೂಮಿಯು ಅಲ್ಲಲ್ಲಿ ಮೇಲಕ್ಕೆದ್ದಿತ್ತು; ಇಲ್ಲವೇ ಒಳಕ್ಕೆ ಹೋಗಿತ್ತು. ಎಲ್ಲಾ ಕಡೆಯಲ್ಲೂ ಭೂಮಿಯು ಬಿರುಕುಬಿಟ್ಟಿತ್ತು. ಬಿರುಕುಗಳಿಂದ ನೀರು ಚಿಮ್ಮುತ್ತಿತ್ತು.

ಮುಝುಪರಪುರಕ್ಕೆ ಬಂದಾಗ, ಅಲ್ಲಿ ಮಿ|| ಡ್ಯಾನ್ಸಿಯವರ ಕಟ್ಟಡವು ಪೂರ್ತಿಯಾಗಿ ಬಿದ್ದುಹೋಯಿತು. ಆದರೆ ಗಂಡವು ಹೆಂಡತಿಬ್ಬರೂ ಆ ಸಮಯದಲ್ಲಿ ವರಾಂಡದಲ್ಲಿದ್ದರು. ಮನೆ ಬೀಳುವ ಸಮಯದಲ್ಲಿ ಬೀದಿಗೆ ಓಡಿಬಂದರು. ಗಡಂಗಿನಲ್ಲಿ ಇಬ್ಬರು ಕೆಳಗೆ ಸಿಕ್ಕಿ ಸತ್ತುಹೋದರು. ಮುಝುಫರಪುರಕ್ಕೆ ೭ ಮೈಲಿ ದೂರದಲ್ಲಿ ರಸ್ತೆಯೇ ಮಾಯವಾಗಿದೆ. ರಸ್ತೆಯ ಬದಲು ಅಲ್ಲೊಂದು ನದಿಯು ಹರಿಯುತ್ತಿದೆ.

ಭಾಗಲಪುರ.

ಸೆಷನ್ಸ್ ಜಡ್ಜರ ಹೆಂಡತಿಗೆ ಅವರು ವಾಸಮಾಡುತ್ತಿದ್ದ ಮನೆಯು ಉರುಳಿ ಚಿಖಿ ಆಗಿದೆ. ಇತರೇ ೪೦ ಮಂದಿ ಹೀಗೆ ಘಾಯಪಟ್ಟಿರುತ್ತಾರೆ. ಇವರನ್ನೆಲ್ಲಾ ಆಸ್ಪತ್ರೆಗೆ ಸಾಗಿಸುತ್ತಿರುವಾಗ ಒಬ್ಬ ದಾರಿಯಲ್ಲೇ ಹರಹರ ಎಂದ. ಕ್ರಿಮಿಲ್ ಕೋರ್ಟು ಕಮಿಷನರ ವಸತಿ, ಡಿ|| ಬೋ|| ಕಛೇರಿ, ಟ್ರಾವಲರ್ಸ್ ಬಂಗಲೋ, ಪೋಸ್ಟಾಫೀಸು, ಸೆಂಟ್ರಲ್ ಜೈಲು, ರೈಲ್ವೆಸ್ಟೇಷನ್ನಿನ ಕ್ಲಬ್ ಕಟ್ಟಡ ಈ ಕಟ್ಟಡಗಳ ಅನೇಕ ಭಾಗಗಳು ಬಿದ್ದಿವೆ.

ಚಾಪ್ರಾ.

ಚಾಪ್ರಾ ನಗರದಲ್ಲಂತೂ ಅನೇಕ ಕಟ್ಟಡಗಳು ನಾಶಗಿವೆ. ಆ ಜಿಲ್ಲೆಯಲ್ಲಿ ಸುಮಾರು ೧೦೦ ಜನ ಸತ್ತಿದ್ದಾರೆ.

ಪಾಟ್ನಾ.

ಸರ್ಕಾರೀ ಪ್ರಕಟನೆಯನ್ನು ನೋಡಿದರೆ ಪಾಟ್ನಾದಲ್ಲಿ ೪೦೦೦ ಮನೆಗಳು ಬಿದ್ದುಹೋಗಿವೆ. ಸುಮಾರು ೫೦-೬೦ ಮಂದಿ ಸತ್ತಿದ್ದಾರೆ.

ಪಾಟ್ನಾ ಜಿಲ್ಲೆಯ ಅನೇಕ ಕಡೆಗಳಲ್ಲಿ ಕಟ್ಟಡಗಳು ಉರುಳಿವೆ. ಅನೇಕರಿಗೆ ಗಾಯಗಳಾಗಿವೆ. ಬಹುಜನರು ಸತ್ತಿದ್ದಾರೆ. ಸತ್ತವರ ಸಂಖ್ಯೆ ೪೦೯.

ಮೊಂಘೈರ್.

ಮೊಂಘೈರಿನಲ್ಲಿ ಊರಿಗೆ ಊರೇ ಉರಿಯುತ್ತಿದೆ. ೫೦೦ ಜನರು ಭೂಕಂಪಕ್ಕೆ ಆಹುತಿಯಾಗಿದ್ದಾರೆ. ಶ್ರೀಯುತ ದುಲೀಪ್ ನಾರಾಯಣಸಿಂಗರ ಮನೆಯ ೩ ಜನರೂ ಮೊಂಘೈರ್ ರಾಜರ ಒಬ್ಬರು ಸಂಬಂಧಿಕರೂ, ಸತ್ತಿದ್ದಾರೆ. ಗೊಂಕಾ ಮನೆತನವೇ ಅಲ್ಲಿ ಹೆಸರುವಾಸಿಯಾದದ್ದು. ಅವರ ಮನೆಯವರಾರೂ ಪತ್ತೇ ಇಲ್ಲ.

ಮಿರ್ಜಾಪುರ.

ಮಿರ್ಜಾಪುರದಲ್ಲಿ ೨೦ ಲಕ್ಷ ರೂ. ಗಳಷ್ಟು ನಷ್ಟ ಸಂಭವಿಸಿದೆ.

ಒಟ್ಟು ಮೃತರಾದವರ ಸಂಖ್ಯೆ.

ಬೀಹಾರ್ ಪ್ರಾಂತದಲ್ಲಿ ಮೃತರಾದವರ ಸಂಖ್ಯೆ ಒಟ್ಟು ೩೫೦೦. ಮುಝುಫರಪುರದಲ್ಲಿ ೭೦೦.

ವರ್ತಮಾನಸಂಗ್ರಹ.

ನೆಪೋಲಿಯನ್ನಿನ ರಾಣಿ ಮೇರಿಲೂಯಿಯು ಸಂಗ್ರಹಿಸಿದ್ದ ಪುಸ್ತಕಗಳು 60,000 ರೂ. ಗಳಿಗೆ ಮಾರಲ್ಪಟ್ಟಿರುತ್ತವೆ.

ಜರ್ಮನಿದೇಶದ ಕೆಲವು ಜನ ವಿಶ್ವವಿದ್ಯಾಲಯದ ಪದವೀಧರರು ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸುವದಕ್ಕಾಗಿ ಕ್ಷೌರಿಕವೃತ್ತಿಯನ್ನು ಕೈಕೊಂಡಿರುವರಂತೆ!

ಕ್ವಾರ್ಟರ್ ದೇಶಕ್ಕೆ ಸೇರಿದ ಹೋಯಿಹರ್ಾ ಡಿಸ್ಟ್ರಿಕ್ಟಿನಲ್ಲಿ ವಾಸವಾಗಿದ್ದ ಒಬ್ಬ ರೈತನು ತನ್ನ ಹಸುವು ರೈಲಿಗೆ ಸಿಕ್ಕಿ ಮೃತಪಟ್ಟಿತೆಂಬ ಕಾರಣದ ಮೇಲೆ ನೇಣುಹಾಕಿಕೊಂಡು ಸತ್ತನು.

ಈಸ್ಟ್ ಇಂಡಿಯಾ ದ್ವೀಪಗಳಿಗೆ ಸೇರಿದ ಟಿಮಾರ್ ಲೌಟ್ ಎಂಬಲ್ಲಿ ಗಂಡಸರ ಮುಂದೆ ಸ್ತ್ರೀಯರು ಯಾವಾಗಲೂ ಒಂದು ಕಣ್ಣನ್ನು ಮುಚ್ಚಿಕೊಂಡೇ ಇರಬೇಕೆಂದು ಒಂದು ಕಾಯಿದೆಯನ್ನು ಮಾಡಿರುವರು.

ನ್ಯೂಯಾರ್ಕ್‌ನಗರದಲ್ಲಿ ಮಾದಕ ವಸ್ತುಗಳನ್ನು ತಯಾರಿಸುತ್ತಿದ್ದ ಒಬ್ಬ ಮನುಷ್ಯನ ಬಳಿಯಲ್ಲಿದ್ದ ಪುರಾತನಕಾಲದ ಚೀಣಾದೇಶದ ಪಿಂಗಾಣಿ ಸಾಮಾನುಗಳು 1,60,000 ರೂ. ಗಳಿಗೆ ಮಾರಲ್ಪಟ್ಟವಂತೆ!

ರಾತ್ರಿಯಕಾಲದಲ್ಲಿ ಅಂತರಿಕ್ಷದಲ್ಲಿ ಸಂಚರಿಸುವ ವಿಮಾನಗಳನ್ನು ಶೋಧಿಸುವದಕ್ಕಾಗಿ ಅಮೇರಿಕೆಯಲ್ಲಿ ಒಂದು ಹೊಸ ಸರ್ಚ್‌ಲೈಟ್ ತಯಾರಿಸಲ್ಪಟ್ಟಿರುವದು. ಇದರ ಪ್ರಕಾಶವು ಅಂತರಿಕ್ಷದಲ್ಲಿ 80 ಮೈಲುಗಳವರೆಗೆ ಹೋಗುವದಂತೆ!

ಅಮೇರಿಕೆಗೆ ಸೇರಿದ ಚಿಲಿ ನಗರದಲ್ಲಿ 45,00,000 ಜನರು ವಾಸವಾಗಿದ್ದು 1932 ನೇ ವರ್ಷದಲ್ಲಿ 2913 ಜನರು ಖೂನಿ ಮಾಡಲ್ಪಟ್ಟರಂತೆ! ಅಂದರೆ ಇಡೀ ವರ್ಷದಲ್ಲಿ ಪ್ರತಿ 3 ಗಂಟೆಗೆ ಒಬ್ಬರಂತೆ ಖೂನಿಮಾಡಲ್ಪಟ್ಟಿರುವರು!

ಮದರಾಸಿನ ಎಗ್ಮೋರ್ ರೈಲ್ವೇ ಸ್ಟೇಷನ್ನಿನಿಂದ ಕಾರಂಗಜಿಯೆಂಬ ಸ್ಟೇಷನ್ನಿಗೆ ರವಾನಿಸಲ್ಪಟ್ಟ ಒಂದು ಪಾರ್ಸಲ್ಲಿನಲ್ಲಿ ಒಬ್ಬ ಹೆಂಗಸಿನ ಮೃತದೇಹವಿದ್ದು ಪೋಲೀಸರು ಈ ಬಗ್ಗೆ ಮದರಾಸಿನಲ್ಲಿ ಕೆಲವರನ್ನು ದಸ್ತಗಿರಿಮಾಡಿರುತ್ತಾರೆ.

ಮಾಂಚೂರಿಯಾ ದೇಶಕ್ಕೆ ಸೇರಿದ ಜೆಹೋಲ್ ಪ್ರಾಂತದಲ್ಲಿ ಒಂದು ವರ್ಷದ ಹಿಂದೆ ಒಬ್ಬ ಜಪಾನ್ ದೇಶಸ್ಥನೂ ಇರಲಿಲ್ಲ. ಆದರೆ ಈಗ ಅಲ್ಲಿ 2000 ಜಪಾನ್ ಸಂಸಾರಗಳು ನೆಲಸಿರುವವಲ್ಲದೆ ಇನ್ನೂ ಅನೇಕ ಸಂಸಾರಗಳು ಬರುತ್ತಲೇ ಇರುವವಂತೆ!

ಜರ್ಮನಿದೇಶದ ಥಾಟಿಂಗ್ ಡಿಸ್ಟ್ರಿಕ್ಟಿನಲ್ಲಿರುವ ಒಂದು ಬೌದ್ಧ ದೇವಾಲಯಕ್ಕೆ ಕೆಲವು ಮಂಗಗಳು ಒಂದು ಬಿಳೀ ಮಂಗದ ಮುಂದಾಳುತನದಲ್ಲಿ ಹೋಗಿ ಬೌದ್ಧರು ಆರಾಧಿಸುವಂತೆ ಬುದ್ಧನ ಪ್ರತಿಮೆಯನ್ನು ಪುಷ್ಪಗಳಿಂದ ಅರ್ಚಿಸಿ ನಮಸ್ಕರಿಸಿ ಹೋದವಂತೆ!

ವೈಸರಾಯರು ಕಾಶಿಗೆ ಹೋದಾಗ್ಗೆ ಪಂ|| ಮದನಮೋಹನ ಮಾಳವೀಯರೊಡನೆ 45 ನಿಮಿಷಗಳವರೆಗೆ ಭರತಖಂಡದ ಆರ್ಥಿಕ ಮತ್ತು ರಾಜಕೀಯ ವಿಷಯಗಳ ಸಂಬಂಧವಾಗಿ ಚರ್ಚೆಮಾಡಿದರು. ಚರ್ಚೆಯು ರಹಸ್ಯವಾಗಿ ನಡೆದುದರಿಂದ ವಿವರಗಳಾವುವೂ ಇನ್ನೂ ಹೊರಬಿದ್ದಿಲ್ಲ.

ಜರ್ಮನಿದೇಶಕ್ಕೆ ಸೇರಿದ ಹಂತವಾಡಿ ಎಂಬಲ್ಲಿ ಒಂದು ವಿಚಿತ್ರ ರೋಗವು ಪ್ರಾಪ್ತವಾಗಿರುವದು. ಇದ್ದಕ್ಕಿದ್ದಹಾಗೆಯೇ ವಿಪರೀತವಾಗಿ ಜ್ವರವು ಬಂದು ತತ್‌ಕ್ಷಣವೇ ಪ್ರಾಣಹೋಗುವದಂತೆ! ಇದರಿಂದ ಒಂದು ಸಣ್ಣ ಹಳ್ಳಿಯಲ್ಲಿ 30 ಜನರು ಮೃತಿಹೊಂದಿರುವರು. ಡಾಕ್ಟರುಗಳು ಇದರ ಸಂಬಂಧವಾಗಿ ಶೋಧಮಾಡುತ್ತಿರುವರು.

(3ನೆಯ ಪುಟದಿಂದ ಮುಂದುವರಿದುದು.)

ಗಳು ಕೆಟ್ಟುಹೋಗುವವು ಈ ಮುಂತಾದ ಅಪಾಯಗಳುಂಟಾಗುವವು. ಇದಲ್ಲದೆ ಹೊಟ್ಟೆಯಲ್ಲಿ ಹುಳಿಬಿದ್ದು ವಾಯುವು ಹೆಚ್ಚಾಗುವದು. ಮಿತಿಮೀರಿ ಆಹಾರವನ್ನು ತೆಗೆದುಕೊಂಡರೆ, ಮೂತ್ರದಲ್ಲಿ ಆಕ್ಸಲೇಟ್ಸ್, ಫಾಸ್ಫೇಟ್ಸ್ ಮುಂತಾದುವುಗಳುಂಟಾಗುವವು. ಅದರಿಂದ ಅಗ್ನಿಮಾಂದ್ಯ, ಅಕ್ಸರಿ ಮುಂತಾದ ದೀರ್ಘವ್ಯಾಧಿಗಳು ತಲೆದೋರುವವು.

ಔತನಗಳಿಂದ ವೃಥಾ ನಷ್ಟವೇ ಹೊರತು ಬೇರೆಯಲ್ಲ. ಖರ್ಚು ಮಾಡಿದ ಹಣದಲ್ಲಿ ಮುಕ್ಕಾಲುಪಾಲು ವ್ಯರ್ಥವಾಗುವದು. ಔತನದಲ್ಲಿ ಜನರು ಹಸಿವಿಗಾಗಿ ಆಹಾರವನ್ನು ತೆಗೆದುಕೊಳ್ಳುವದಿಲ್ಲ. ನಾಲಗೆಗೆ ತೃಪ್ತಿಯಾಗುವವರೆಗೂ ಆಹಾರವನ್ನು ತೆಗೆದುಕೊಳ್ಳುವರು. ಮಾರನೆಯ ದಿವಸವೇ ಆ ಔತನದ ಕೆಟ್ಟ ಫಲಗಳನ್ನೆಲ್ಲ ಅನುಭವಿಸುವರು. ಎಂದರೆ, ಹೊಟ್ಟೆಯಲ್ಲಿ ಉಬ್ಬಸ, ಮಲಬದ್ಧತೆ ಭೇದಿ ಮುಂತಾದ ಅಸೌಖ್ಯಗಳೂ, ಮನೋವಿಕಾರಗಳೂ ಉಂಟಾಗುವವು.

ನಾವು ಸಾಧಾರಣವಾದ ಒಳ್ಳೆಯ ಪೋಷಣಾಶಕ್ತಿಯುಳ್ಳ ಮತ್ತು ಸುಲಭಜೀರ್ಣಕಾರಿಯಾದ ಆಹಾರವನ್ನೇ ತೆಗೆದುಕೊಳ್ಳಬೇಕು. ಹೊಟ್ಟೆಯನ್ನು ಮಿತಿಮೀರಿ ತುಂಬಿಸಬಾರದು. ನಾವು ಆರೋಗ್ಯವಂತರಾಗಿಯೂ ಬಲವಂತರಾಗಿಯೂ ಇರುವುದಕ್ಕೆ ಸ್ವಲ್ಪ ಆಹಾರವೇ ಸಾಕೆಂಬುದು ಇನ್ನೂ ಅನೇಕರಿಗೆ ತಿಳಿಯದು ಕೆಲವರು ತಮಗೆ ಹೆಚ್ಚು ಬಲ ಬರಬೇಕೆಂದು ಆಹಾರವನ್ನು ಹೆಚ್ಚಾಗಿ ತೆಗೆದುಕೊಳ್ಳುವರು. ಸಾಧಾರಣವಾದ ಮನುಷ್ಯರಿಗಿಂತಲೂ ಹಣಗಾರರು ಹೆಚ್ಚಾಗಿ ವ್ಯಾಧಿಯಿಂದ ನರಳುವುದಕ್ಕೆ ಎರಡು ಕಾರಣಗಳಿರುವವು. (೧) ಮಿತಿಮೀರಿ ಆಹಾರವನ್ನು ತೆಗೆದುಕೊಳ್ಳುವುದು. (೨) ಕೆಲಸಮಾಡದೆ ಯಾವಾಗಲೂ ಸುಮ್ಮನೆ ಕುಳಿತುಕೊಂಡಿರುವುದು. ನಾವು "ಜೀವಿಸುವುದಕ್ಕಾಗಿ ಭುಜಿಸಬೇಕೇ ಹೊರತು, ಭುಜಿಸುವುದಕ್ಕಾಗಿ ನಮ್ಮ ಬದುಕಲ್ಲ" ವೆಂಬುದನ್ನು ನಾವು ಸದಾ ಮನಸ್ಸಿನಲ್ಲಿಟ್ಟಿರಬೇಕು.

ಆರೋಗ್ಯಜೀವನಕ್ಕೆ ಉಪವಾಸವಿರುವುದು ಬಹಳ ಉತ್ತಮವು. ಒಂದು ವಾರಕ್ಕೆ ಒಂದುಸಲವಾದರೂ ಉಪವಾಸವಿರಬೇಕು. ಎಂದರೆ, ದೇಹದೊಳಗೆ ಸೇರಿಕೊಂಡಿರುವ ವಿಷಗಳನ್ನೆಲ್ಲ ನೀಗಿಸಿ ಶುದ್ಧಮಾಡುವುದಕ್ಕಾಗಿ ಒಂದು ತಿಂಗಳಿಗೆ ನಾಲ್ಕಾವರ್ತಿ ಉಪವಾಸವಿರಬೇಕು. ಉಪವಾಸವಿರುವದರಿಂದ ಅನ್ನಕೋಶಕ್ಕೆ ಸ್ವಲ್ಪ ವಿಶ್ರಾಂತಿಯೂ ದೊರೆಯುವುದು. ನರಗಳಿಗೆ ಬಹಳ ಆಯಾಸವಾಗಿರುವಾಗ, ಅವುಗಳಿಗೆ ವಿಶ್ರಾಂತಿಯನ್ನು ಕೊಡದಿದ್ದರೆ, ಅವು ತಮ್ಮ ಕೆಲಸವನ್ನು ನಿಲ್ಲಿಸಿಬಿಡುವಂತೆಯೇ ಜೀರ್ಣಾವಯವಗಳು ವಿಶ್ರಾಂತಿಯಿಲ್ಲದೆ ಯಾವಾಗಲೂ ಕೆಲಸಮಾಡುತ್ತಿದ್ದರೆ ದುರ್ಬಲವಾಗಿ ಹೋಗುವವು.

ಭೇದಿ ಅಥವಾ ವಾಂತಿಯುಂಟಾದರೆ, ಅದು ನಮಗೆ ಪ್ರಕೃತಿಯಿಂದ ಕೊಡಲ್ಪಟ್ಟ ಒಂದು ಎಚ್ಚರಿಕೆಯೆಂದೆಣಿಸಬೇಕು. ಅದನ್ನು ಲಕ್ಷ್ಯಮಾಡದೆ ನಾವು ಕೆಟ್ಟ ಆಹಾರವನ್ನೇ ತೆಗೆದುಕೊಳ್ಳುತ್ತಿದ್ದರೆ, ನಮ್ಮ ಅವಯವಗಳಲ್ಲಿ ವಿಕಾರಗಳುಂಟಾಗಿ, ಕಡೆಗೆ ಶಾಶ್ವತವಾದ ಅಂಗಹೀನತೆಗಳುಂಟಾಗುವವು. ಅಗ್ನಿಮಾಂದ್ಯ ರೋಗವು ಕಂಡು, ಕಾಲಕ್ರಮದಲ್ಲಿ ದೇಹವನ್ನು ಬಹಳ ಹೀನಸ್ಥಿತಿಯಲ್ಲಿಟ್ಟುಬಿಡುವದು. ಉಪವಾಸವಿದ್ದ ಮೇಲೆ ಮಲವನ್ನು ಕಳೆಯಬೇಕಾದರೆ, ಯಾವುದಾದರೂ ಭೇದಿಯ ಉಪ್ಪನ್ನು ತೆಗೆದುಕೊಳ್ಳಬೇಕು. ಮತ್ತು ನೀರನ್ನು ಹೆಚ್ಚಾಗಿ ಉಪಯೋಗಿಸಬೇಕು. ದೀರ್ಘವ್ಯಾಧಿಗಳಿಗೆ ಉಪವಾಸವಿರುವುದರಿಂದ ಬಹಳ ಗುಣವುಂಟು. ಉಪವಾಸಕಾಲದಲ್ಲಿ ವಿಶ್ರಾಂತಿಯು ಅವಶ್ಯವು. ಕಾರಿಂಗ್ಟನ್ ಎಂಬವರು ಉಪವಾಸದ ವಿಷಯವಾಗಿ ಹೀಗೆಂದು ಹೇಳುವರು—'ಒಬ್ಬ ಮನುಷ್ಯನು ೪೪ ದಿನಗಳವರೆಗೆ ದೊಡ್ಡ ಅಪಾಯವೊಂದೂ ಇಲ್ಲದೆ ಉಪವಾಸವಿರಬಹುದು. ದೀರ್ಘಕಾಲದ ಉಪವಾಸವಾದರೆ, ಆ ವಿಷಯದಲ್ಲಿ ಸಮರ್ಥರಾದ ಒಬ್ಬ ರಾಜವೈದ್ಯರ ಸಹಾಯವು ಅವಶ್ಯವು. ಕೃಶರಾಗಿಲ್ಲದ ಸ್ಥೂಲಶರೀರಿಗಳು ಕಷ್ಟವಿಲ್ಲದೆ ಉಪವಾಸವಿರಬಹುದು. ಒಬ್ಬನು ಉಪವಾಸವಿರುವಾಗ, ಅವನ ದೇಹದಲ್ಲಿರುವ ಅಡಿಪೋಸ್ ಸ್ನಾಯುಗಳು ಪ್ರಾಣವಾಯುವಿನೊಡನೆ ಕಲೆತುಕೊಳ್ಳುವದರಿಂದ, ದೇಹದಲ್ಲಿ ಶಕ್ತಿಯು ಹೆಚ್ಚುವದು. ಆರೋಗ್ಯವುಳ್ಳವರು ಅಧಿಕವಾಗಿ ಉಪವಾಸವಿದ್ದರೆ ಅವರಿಗೆ ಇರುವ ಬಲವು ಕಡಿಮೆಯಾಗುವದು.'

ಈಗ ನಾವು ತೆಗೆದುಕೊಳ್ಳುವ ಆಹಾರಪದಾರ್ಥಗಳ ಗುಣಗಳನ್ನು ಕುರಿತು ವಿವರಿಸುವೆವು:—

ಕಾಯಿಪಲ್ಯಗಳು:—ಬಟಾಣಿ, ಅವರೆಯಕಾಯಿ, ಬಸಳೆ ಸೊಪ್ಪು, ಲೆಟ್ಯೂಸ್, ತಕ್ಕಾಳಿಯಹಣ್ಣು, ನೀರಿನಲ್ಲಿ ಹಾಕಿದ್ದ ಹುರುಳಿ, ರಾಡಿಷ್ ಈರುಳ್ಳಿ, ಕಾಲೀಫ್ಲವರ್ ಎಂಬ ಸೊಪ್ಪು ಕ್ಯಾಬೇಜ್ ಅಥವಾ ಕೋಸು, ಅಸ್ಪರಾಗಸ್, ಕ್ಯಾರೆಟ್ ಎಂಬ ಗೆಣಸು, ಬೀಟ್ಸ್, ವಾಟರ್‌ಕ್ರೆಸ್ ಮುಂತಾದುವನ್ನೆಲ್ಲ ಒಂದಾಗಿ ಸೇರಿಸಿ ಕುದಿಸದೆ ಹಾಗೆಯೇ ತೆಗೆದುಕೊಂಡರೆ ಬಹಳ ಗುಣವುಂಟು. ಇದರಲ್ಲಿ ಜೀವಸತ್ವಗಳು ಹೆಚ್ಚಾಗಿರುವವು. ಆದರೆ ಕುದಿಸಿದರೆ ಅವರಲ್ಲಿನ ಜೀವಸತ್ವಗಳೆಲ್ಲ ಹೋಗುವವು.

ನೀರಿನಲ್ಲಿ ಬೇಯಿಸಿದ ಕಾಯಿಪಲ್ಯಗಳಿಗಿಂತ ನೀರಿನ ಆವಿಯಲ್ಲಿ ಬೇಯಿಸಿದ ಕಾಯಿಪಲ್ಯಗಳು ಉತ್ತಮವಾದುವು. ಅವು ರುಚಿಯಾಗಿರುವದಕ್ಕಾಗಿ ನಾವು ಅವುಗಳನ್ನು ಬೇಯಿಸುವೆವು. ಆದರೆ ಬೇಯಿಸುವಾಗ ಅವುಗಳಿಗೆ ಸ್ವಾಭಾವಿಕವಾಗಿ ಏರ್ಪಟ್ಟ ವಾಸನೆಯು ಹೋಗುವದು. ಅದರ ಕಾರಣವಾಗಿಯೂ, ಅವುಗಳಿಗೆ ರುಚಿಯನ್ನು ಕೊಡುವದಕ್ಕಾಗಿಯೂ ಮಸಾಲಾ, ಉಪ್ಪು ಮುಂತಾದುವನ್ನು ಸೇರಿಸಬೇಕಾಗಿದೆ.

ಅಕ್ಕಿ:—ಈಗ ಅಕ್ಕಿಯನ್ನು ಬೇಯಿಸುವ ವಿಧದಲ್ಲಿ ಬಹಳ ನಷ್ಟವುಂಟಾಗುವದು. ಅಕ್ಕಿಯನ್ನು ಉಜ್ಜಿ ತೊಳೆಯುವದರಿಂದ, ಅದರ ಮೇಲಿರುವ ಸತ್ವಗಳೆಲ್ಲ ಹೋಗಿಬಿಡುವವು. ಅದರೊಳಗೆ ಉಳಿದಿರುವ ಪೋಷಣಾಗುಣವುಳ್ಳ ಪದಾರ್ಥವು ಅದನ್ನು ಕೋಧಿಸುವಾಗ ಗಂಜಿಯೊಡನೆ ಹೊರಬೀಳುವದು. ಆದುದರಿಂದ ಕಡೆಗೆ ನಾವು ಪೋಷಣಾಗುಣವಿಲ್ಲದ ಅನ್ನವನ್ನು ಮಾತ್ರವೇ ತೆಗೆದುಕೊಳ್ಳುವೆವು. ಇದರಲ್ಲಿ ಸತ್ವವಿಲ್ಲದಿರುವದರಿಂದ, ಬೆರಿ-ಬೆರಿ ಎಂಬ ವ್ಯಾಧಿಯುಂಟಾಗುವದು. ದೇಹದಲ್ಲಿ ಆಯಾಸವು ಹೆಚ್ಚುವದು. ಆದುದರಿಂದ ಸ್ವಲ್ಪ ಅಕ್ಕಿಗೆ ನೀರನ್ನು ಹೆಚ್ಚಾಗಿ ಸೇರಿಸಿ ಬೇಯಿಸಿ ಉಳಿದ ನೀರನ್ನು ಹೊರಗೆ ಬಸಿದುಬಿಡಬಾರದು.

ಈ ವಿಷಯದಲ್ಲಿ 'ಕಿಚಡಿ' ಎಂಬುದು ಒಳ್ಳೆಯದು. ಏಕೆಂದರೆ—ಇದರಲ್ಲಿ ಅಕ್ಕಿ, ಬೇಳೆ ಇವುಗಳ ಪೋಷಣಾಶಕ್ತಿಯೆಲ್ಲವೂ ಅಡಗಿರುವದು.

ಗೋಧಿ:—ಇದು ಅಕ್ಕಿಗಿಂತ ಉತ್ತಮವಾದುದು. ಇದರಲ್ಲಿ ಅಕ್ಕಿಯಲ್ಲಿರುವ ಪ್ರೋಟೀನಿಗಿಂತ ಎರಡು ಪಾಲು ಪ್ರೋಟೀನ್ ಇರುವುದು. ಮೇಲಿನ ಹೊಟ್ಟನ್ನು ತೆಗೆಯದೆ ಹಾಗೆಯೇ ಮಾಡಲ್ಪಟ್ಟ ರೊಟ್ಟಿಗೆ ಒಳ್ಳೆಯ ಆಹಾರಗುಣವುಂಟು.

ಚಪಾತಿಗಿಂತ ಸುಡಿದ ರೊಟ್ಟಿಯಲ್ಲಿ ಗುರುತ್ವವು ಹೆಚ್ಚು. ನಾವು ಚಪಾತಿಗಳನ್ನೇ ಉಪಯೋಗಿಸಬೇಕು. ರೊಟ್ಟಿಯಲ್ಲಿ ಒಳಗೆ ಸ್ಪಂಜಿನಂತಿರುವ ಭಾಗವು ಸುಲಭವಾಗಿ ಜೀರ್ಣವಾಗುವುದು. ಆದುದರಿಂದ ನಾವು ರೊಟ್ಟಿಯಲ್ಲಿ ಆ ಭಾಗವನ್ನೇ ತೆಗೆದುಕೊಳ್ಳಬೇಕು. ಯಾಕೆಂದರೆ ಜಠರರಸವು ಆ ಸ್ಪಂಜಿನಂತಿರುವ ಭಾಗದಲ್ಲಿ ಚೆನ್ನಾಗಿ ಕಲೆಯುವದರಿಂದ ಶೀಘ್ರವಾಗಿಯೇ ಜೀರ್ಣಿಸುವುದು.

ಗೋಧುಮೆಯ ಮೇಲಿನ ದಪ್ಪನಾದ ಹೊರಭಾಗಕ್ಕೆ ರವೆಯೆಂದು ಹೆಸರು. ಇದು 'ಅಟ್ಟಾ' ಎಂಬುದಕ್ಕಿಂತ ಹೆಚ್ಚು ಪೋಷಣಾಶಕ್ತಿಯುಳ್ಳದೆಂದು ಹೇಳುವರು. ರವೆಯೊಡನೆ ಸಕ್ಕರೆ ಮತ್ತು ತುಪ್ಪ ಇವುಗಳನ್ನು ಸೇರಿಸಿ ಮಾಡುವ ಹಲ್ವ ಎಂಬ ಪದಾರ್ಥವು ಸುಲಭವಾಗಿ ಜೀರ್ಣವಾಗುವದಿಲ್ಲ. ಏಕೆಂದರೆ ಜಠರರಸಕ್ಕೆ ಅದರಲ್ಲಿರುವ ತುಪ್ಪವನ್ನು ಜೀರ್ಣಿಸುವುದಕ್ಕಾಗುವುದಿಲ್ಲ.

ಅಟ್ಟಾ ಎಂಬುದು ಗೋಧಿಯಹಿಟ್ಟಿಗಿಂತ ಉತ್ತಮವಾದುದು. ಏಕೆಂದರೆ ಇದರಲ್ಲಿ ವಿಟಮಿನ್ ಎಂಬ ಜೀವಸತ್ವವಿರುವುದು. ಈ ಜೀವಸತ್ವವು, ಕರುಳುಗಳ ಸ್ನಾಯುಗಳನ್ನು ಹುರಿದುಂಬಿಸಿ ಕಶ್ಮಲಗಳನ್ನು ಹೊರಪಡಿಸುವಂತೆ ಮಾಡುವುದು.

ಹಾಲು ಮತ್ತು ಅದರಿಂದುಂಟಾಗುವ ಬೆಣ್ಣೆ ಮುಂತಾದ ಪದಾರ್ಥಗಳು—ಹಾಲಿನಿಂದ ಸಂಪೂರ್ಣವಾದ ಫಲವನ್ನು ಪಡೆಯಬೇಕಾದರೆ ಅದನ್ನು ಕರೆದು ಕಾಯಿಸದೆಯೇ ಸ್ವಲ್ಪಸ್ವಲ್ಪವಾಗಿ ಹೀರಿ, ಅಥವಾ ಸ್ಪೂನಿನಿಂದ ತೆಗೆದು ಅದು ಜೊಲ್ಲಿನೊಡನೆ ಚೆನ್ನಾಗಿ ಕಲೆತುಕೊಳ್ಳುವಂತೆ ಕುಡಿಯಬೇಕು. ಕಾಯಿಸದಿದ್ದ ಹಸೀಹಾಲನ್ನು ಕುಡಿಯಲಾಗದಿದ್ದರೆ ಹಾಲಿನ ಪಾತ್ರೆಯನ್ನು ಹಾಲು ಸ್ವಲ್ಪ ಬಿಸಿಯಾಗುವವರೆಗೆ ಕುದಿಯುವ ನೀರಿನಲ್ಲಿಟ್ಟು, ಆ ಮೇಲೆ ಅದನ್ನು ಸ್ವಲ್ಪಸ್ವಲ್ಪವಾಗಿ ಹೀರಿ ಕುಡಿಯಬೇಕು. ಹಾಲು ಜೀರ್ಣವಾಗುವುದೇನೂ ಕಷ್ಟವಲ್ಲ. ಆದರೂ ಹಾಲಿನಿಂದ ವಾಯುವುಂಟಾಗುವುದೆಂಬ ನಂಬಿಕೆಯುಳ್ಳವರು, ಅದನ್ನು ಸರಿಯಾದ ವಿಧದಲ್ಲಿ ಉಪಯೋಗಿಸುವುದಿಲ್ಲವೆಂದೇ ಹೇಳಬೇಕು. ಎಂದರೆ ಮೊದಲು ಅವರು ಹಾಲನ್ನು ಅವಸರದಿಂದ ಕುಡಿಯುವರು. ಎರಡನೆಯದಾಗಿ ಅವರು ಮೊದಲು ಇತರ ಆಹಾರಗಳಿಂದ ಹೊಟ್ಟೆಯನ್ನು ಚೆನ್ನಾಗಿ ತುಂಬಿ, ಆ ಮೇಲೆ ಹಾಲನ್ನು ಕುಡಿಯುವರು. ಆಗಲೇ ಕರೆದುತಂದ ಮತ್ತು ಕಾಯಿಸದ ಹಾಲೊಂದೇ ಮನುಷ್ಯರಿಗೆ ಸರ್ವಾಹಾರವೆನಿಸುವುದು. ಮೊಸರೆಂಬುದು ಕರುಳುಗಳಿಗೆ ಹಿತವನ್ನುಂಟುಮಾಡುವುದು. ಅನ್ನಕೋಶದಲ್ಲಿ ಉರಿಯನ್ನು ಅಡಗಿಸುವುದು. ಇದು ಒಳ್ಳೆಯ ಆಹಾರಪದಾರ್ಥವು. ಇದಕ್ಕೆ ನೀರನ್ನು ಸೇರಿಸಿ ಮಜ್ಜಿಗೆಯನ್ನಾಗಿ ಮಾಡಿ ತೆಗೆದುಕೊಳ್ಳುವುದರಲ್ಲಿ ಜನರಿಗೆ ಪ್ರಿಯವು ಹೆಚ್ಚು. ಭೇದಿ, ಮತ್ತು ಹೊಟ್ಟೆಯಲ್ಲಿ ಹುಳಿಯೇರುವುದು ಮುಂತಾದವುಗಳಿಗೆ ಮಜ್ಜಿಗೆಯನ್ನು ಕುಡಿಯುವುದರಿಂದ ಬಹಳ ಗುಣವುಂಟು. ಇದು ಕರುಳುಗಳಲ್ಲಿ ಉಂಟಾಗುವ ಕೋಲಿ, ಬಾಸಿಲ್ಲೈ ಎಂಬುದನ್ನು ನಾಶಮಾಡುವದು.

ಚೀಸ್-ಹಾಲುಕೆನೆ—ಇದರಲ್ಲಿ ಪ್ರೋಟೀನ್ ಭಾಗವು ಹೆಚ್ಚು. ಇದನ್ನು ಮಾಂಸ ಮತ್ತು ಇತರ ಪ್ರೋಟೀನ್‌ಗಳಿಗೆ ಬದಲಾಗಿ ಉಪಯೋಗಿಸಬಹುದು.

ಕ್ಷೀರ್ ಎಂಬುದು ಹಾಲನ್ನು ಗಟ್ಟಿಯಾಗಿಮಾಡಿ ಅದಕ್ಕೆ ಸಕ್ಕರೆಯನ್ನು ಸೇರಿಸಿ ತಯಾರಿಸಿದುದು. ಇದನ್ನು ತೆಗೆದುಕೊಂಡರೆ ಹೊಟ್ಟೆಯಲ್ಲಿ ಉಬ್ಬಸ, ತೇಗು, ವಾಯು ಮುಂತಾದುವುಂಟಾಗುವವು. 'ಸಾಂದೇಷ್' ಮುಂತಾದ ಹಾಲಿನಿಂದ ಮಾಡಲ್ಪಟ್ಟ ಇತರ ಪದಾರ್ಥಗಳಿಗೆ ರುಚಿಹೊರತು ಬೇರೆ ಆಹಾರಗುಣವಾವುದೂ ಇಲ್ಲ.

ಫಲವರ್ಗಗಳು—ಇವು ಮೂಗಿನ ಸೂಕ್ಷ್ಮತ್ವಚೆಗಳನ್ನು ಮೃದುವಾಗಿ ಮಾಡಿ ಅಶುದ್ಧಗಳನ್ನೆಲ್ಲ ನಿವಾರಿಸಿ ದೇಹದಲ್ಲಿರುವ ವಿಷಪದಾರ್ಥಗಳನ್ನು ಉಪ್ಪುಗಳ ಸಹಾಯದಿಂದ ನೀಗಿಸುವವು. ವಿಟೋಕೋ ಎಂಬವರು ಹಣ್ಣುಗಳು ಯೂರಿಕ್ ದ್ರಾವಕವನ್ನು ಕರಗಿಸಬಲ್ಲವೆಂದು ನಿರ್ಧರಿಸಿರುವರು. ಹಣ್ಣುಗಳಲ್ಲಿ ಈಥರಿಗೆ ಸಂಬಂಧಪಟ್ಟ ಮಿಶ್ರವಸ್ತುಗಳೂ ಮತ್ತು ಕೆಲವು ಎಣ್ಣೆಗಳಿರುವದರಿಂದಲೇ ಅವುಗಳಲ್ಲಿ ರುಚಿ ಮತ್ತು ವಾಸನೆ ಇವೆಲ್ಲವೂ ಇರುವವು. ಹಣ್ಣುಗಳು ಪ್ರಕೃತಿಯಿಂದುಂಟಾದ ಆಹಾರವು. ದೇಹಕ್ಕೆ ಒಳ್ಳೆಯ ಪೋಷಣೆಯನ್ನು ಕೊಡಬಲ್ಲವು. ಸ್ಥೂಲಶರೀರವುಳ್ಳವರು ಸ್ವಲ್ಪ ಶ್ರಮಪಟ್ಟು ಕೆಲಸಮಾಡಿದರೂ ಆಯಾಸಪಡುವರು. ಅಂಥವರು, ಇತರ ಆಹಾರವನ್ನು ಬಿಟ್ಟು ಹಣ್ಣುಗಳನ್ನೇ ತೆಗೆದುಕೊಳ್ಳಬೇಕು. ಇದರಿಂದ ಅವರ ತೂಕವು ಕಡಿಮೆಯಾಗುವುದಲ್ಲದೆ, ಅವರ ದೇಹದಲ್ಲಿ ಶಕ್ತಿಯೂ ಉಂಟಾಗುವುದು. ಕಿತ್ತಳೆ, ಸೇಬುಹಣ್ಣು, ದಾಳಿಂಬೆ, ಅನಾನಸ್, ದ್ರಾಕ್ಷಿ, ಮಾವಿನಹಣ್ಣು ಮುಂತಾದುವು ಉತ್ತಮವಾದ ಹಣ್ಣುಗಳು. ಇವುಗಳಲ್ಲಿ ನಮ್ಮ ದೇಹಕ್ಕೆ ಬೇಕಾದ ಜೀವಸತ್ವಗಳು ಹೆಚ್ಚಾಗಿರುವವು. ಹಣ್ಣನ್ನೇ ಆಹಾರವನ್ನಾಗಿ ಉಪಯೋಗಿಸುವವನ ಮೈತೂಕವು ಕಡಿಮೆಯಾಗುವುದು. ಏಕೆಂದರೆ, ಆ ಹಣ್ಣುಗಳು ದೇಹದ ಕಶ್ಮಲಗಳನ್ನು ಹೊರಪಡಿಸಿ, ಶುದ್ಧಗೊಳಿಸುವುದು.

ಇನ್ನು ಪಾನಗಳ ವಿಷಯ—ಘನಪದಾರ್ಥಗಳನ್ನು ತಿಂದುಕೊಂಡ ಒಂದು ಘಂಟೆಯ ಕಾಲವಾದ ಮೇಲೆಯೇ ದ್ರವಪದಾರ್ಥವನ್ನು ತೆಗೆದುಕೊಳ್ಳಬೇಕು. ದ್ರವಪದಾರ್ಥಗಳನ್ನಾದರೂ ಒಂದೇ ಗುಟುಕಿನಲ್ಲಿ ನುಂಗಿಬಿಡಬಾರದು. ಅವುಗಳನ್ನು ಸ್ವಲ್ಪ ಸ್ವಲ್ಪವಾಗಿ ಹೀರಿ ಕುಡಿಯಬೇಕು. ಅತ್ಯುಷ್ಣಪ್ರದೇಶದಿಂದ ಆಗಲೇ ಬಂದ ಒಬ್ಬ ಮನುಷ್ಯನು ಆಯಾಸದಿಂದ ದಾಹಶಾಂತಿಗಾಗಿ ನೀರನ್ನು ಕುಡಿಯಲಾರಂಭಿಸುವನು. ಸ್ವಲ್ಪಕಾಲವಾದೊಡನೆ ಅವನಿಗೆ ಒಂದುವಿಧವಾದ ಉಸಿರು ಹಿಡಿದಂತಾಗುವುದು. ಆದುದರಿಂದ ಅಂಥವನು ನೀರನ್ನು ಸ್ವಲ್ಪಸ್ವಲ್ಪವಾಗಿ ಕುಡಿಯಬೇಕು. ದ್ರವಪದಾರ್ಥಗಳು ದೇಹವನ್ನು ತೊಳೆದು ಶುದ್ಧಮಾಡಿ ಮೂತ್ರಕೋಶವನ್ನು ಹುರಿದುಂಬಿಸಿ ಮೂತ್ರವು ಸುಲಭವಾಗಿ ಬರುವಂತೆ ಮಾಡುವುವು. ಒಬ್ಬ ಮನುಷ್ಯನು ದಿನಕ್ಕೆ ೨ ಸೇರಿನಷ್ಟು ಯಾವುದಾದರೂ ದ್ರವಪದಾರ್ಥವನ್ನು ಕುಡಿಯಬೇಕು. ಮನುಷ್ಯದೇಹವು ಶೇಕಡಾ ೭೫ ಪಾಲು ನೀರಿನಿಂದ ಕೂಡಿರುವದು.

ಭೋಜನವಾದೊಡನೆಯೇ ಕೆಲಸಕ್ಕೆ ಓಡಬಾರದು. ಹಾಗೆ ಮಾಡಿದರೆ ಹೊಟ್ಟೆಯು ಅಗಲಿ, ಕಿಬ್ಬೊಟ್ಟೆಯಲ್ಲಿ ನೋವುಂಟಾಗುವದು.

ಶಾಸ್ತ್ರಿಗಳು ಬೇಕಾಗಿದೆ.

ಮಳಲಿ ಮಠದಿಂದ ಹುಂಚದಕಟ್ಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾನಂದಾಶ್ರಮ ಸಂಸ್ಕೃತಪಾಠಶಾಲೆಗೆ ವೈದಿಕ ಜ್ಯೋತಿಷ ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದ್ದಾರೆ. ಬರಲಪೇಕ್ಷೆಯುಳ್ಳವರು ಈ ಕೆಳಗಿನ ಅಡ್ರೆಸ್ಸಿಗೆ ಈ ತಿಂಗಳ ಅಖೈರೊಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಯೋಗ್ಯತೆಗನುಸಾರವಾಗಿ ಸಂಬಳವು ಕೊಡಲಾಗುವುದು.

ಪಾಠಶಾಲಾ ವ್ಯವಸ್ಥಾಪಕ,
ಕ್ಯಾರಂದೂರು ಅಯ್ಯಪ್ಪಗೌಡ,
ಮಳಲಿಮಠ,
ಪೋ|| ಆಗರ್ ಡಿ|| ಶಿವಮೊಗ್ಗ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 11

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೊ. ನಂ. 1246, ಮದರಾಸು.
K. N. BENSON & Co.,
[10] P. B. 1246, MADRAS.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಆಣೆ ಟಿಕೇಟ (ಸ್ಟ್ಯಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್‌ಮೆಂಟ್ಸುಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಖರಾರು ಘಂಟೆಯನ್ನು ತೋರಿಸುವವು. ಒಳಗಡೆ ಕೆಂಪು ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ 5 ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.

ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ: ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
[11] THE CITY MART,
168, China Bazaar, MADRAS.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 19

ವಿಳಾಸ—ಬ್ರ. **ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,**
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಖಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ರ್ಹುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶನೋವು, ಗಂಟ್ಲುನೋವು ಸಂದು ಗಂಟ್ಲುನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕುಮದ್ದುಗಳು, ಹೊಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಮೇಯುವ ರೋಗ, ದದ್ದು, ತುರಿಸುವ ನಂಜಿ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ಕಾಯಿಗಳು ಕ್ಷೀಣವಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಆತ್ಮಸಂರಕ್ಷಕನಂತೆಯೇ ಯುವಕನಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ನೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— **ಮಲೇರಿಯಾನ ಕಂಪೆನಿ,**
[20] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಡಿಮೆಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಧಾತುಶೀತಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (10)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಪಂಚ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪಕಲೆಯ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೨] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಜನವರಿ ೧೯೩೪ [ಸಂಚಿಕೆ ೪೦

ಕಾಶಿಯಲ್ಲಿ ಅದ್ಭುತ ಭೂಕಂಪ.

(ಓರ್ವ ಪ್ರತ್ಯಕ್ಷದರ್ಶಿ, 15—1—1934.)

ಪಂಚಾಚಾರ್ಯಪ್ರಭೆಯು ಇದೇ ಜನವರಿ ೧ ಮತ್ತು ೮ ನೆಯ ತಾರೀಖಿನ ಸಂಚಿಕೆಗಳಲ್ಲಿ ಪ್ರಕಟವಾದ ಭವಿಷ್ಯದಂತೆ ಕಾಶೀಕ್ಷೇತ್ರದಲ್ಲಿ ತಾ|| 15-1-1934 ನೆಯ ಮಧ್ಯಾಹ್ನ ಎರಡು ಘಂಟೆ ಹತ್ತು ನಿಮಿಷಗಳ ಸಮಯದಲ್ಲಿ ಅದ್ಭುತವಾದ ಭೂಕಂಪವಾಯಿತೆಂದು ತಿಳಿಸಲು ಈಗಲೂ ಹೃದಯವು ಕಂಪಿಸುತ್ತದೆ. ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳೂ ಮಹಾಸಂಸ್ಥಾನದ ಕರ್ಮಚಾರಿಗಳೂ ತನ್ನ ತನ್ನ ಕಾರ್ಯದಲ್ಲಿ ನಿರತರಾಗಿದ್ದಾಗ ಅಕಸ್ಮಾತ್ತಾಗಿ ಮೊದಲೊಂದು ವಿಚಿತ್ರ ಧ್ವನಿಯಾಯಿತು. ಆಮೇಲೆ ಭೂಮಿಯು ಅತ್ಯಂತಸ್ಪಷ್ಟವಾಗಿ ನಡುಗುತ್ತಿರುವುದನ್ನು ಕಂಡು ಎಲ್ಲರೂ ದರ್ಬಾರು ಹಾಲಿನ ಮುಂಭಾಗದಲ್ಲಿ ಸೇರಿ 'ಹರಹರಮಹಾದೇವ' ಎಂಬ ಶಿವಘೋಷವನ್ನು ಮಾಡುತ್ತ, ಅದ್ಭುತ ಧ್ವನಿಯನ್ನು ಸ್ಪಷ್ಟವಾಗಿ ಅನುಭವಿಸುತ್ತಿದ್ದರು. ಬಿರುಗಾಳಿಯಿಂದ ಗಿಡವು ತಳಮಳ ನಡುಗುವಂತೆ ಸಮಸ್ತ ಕಾಶೀಕ್ಷೇತ್ರವು ಶ್ರೀಪರಶಿವನ ಲೀಲೆಯಿಂದ ಮೂರು ನಾಲ್ಕು ನಿಮಿಷಗಳ ವರೆಗೂ ಸಾಕಷ್ಟು ನಡುಗಿಬಿಟ್ಟಿತು. ಮನುಷ್ಯನ ಶಕ್ತಿಯನ್ನೂ ಗರ್ವವನ್ನೂ ಕ್ಷಣಕಾಲದಲ್ಲಿಯೇ ನಾಶಮಾಡಿ ತೋರಿಸಿದ ಪರಮೇಶ್ವರನ ಅದ್ಭುತ ಲೀಲೆಯು ವಿಚಾರಿಸಿದ ಹಾಗೆಲ್ಲ ಅತ್ಯಂತ ಗಂಭೀರವಾಗಿಯೇ ತೋರುತ್ತಿದೆ. ವಿಪನ್ಮಹಾಸಾಗರದಲ್ಲಿ ಬಿದ್ದು ನಿರುಪಾಯವಾದ ಪ್ರಾಣಿಕೋಟಿಯು ಜಗದಾಧಾರನಾದ ಶಿವನ ಮೊರೆಹೊಕ್ಕಿದುದೂ ಸಹಜವಾಗಿದೆ. ದುಃಖಿತರಾದ ಮಕ್ಕಳನ್ನು ಪಿತೃಗಳು ಲಾಲಿಸುವಂತೆ, ಪರಮ ಕರುಣಾಮಯನಾದ ಶ್ರೀವಿಶ್ವನಾಥನು ತನ್ನ ಮಕ್ಕಳಾದ ಜೀವಿಗಳ ಹೃದಯಪೂರ್ವಕವಾದ ಆರ್ತನಾದವನ್ನೂ ಆತ್ಮಸ್ಮರಣೆಯನ್ನೂ ಕೇಳಿ ಭೂಸ್ತಂಭನೆಯನ್ನು ಕೂಡಲೇ ಮಾಡಿಬಿಟ್ಟನು. ಆಗ ಜೀವಕೋಟಿಯು ಎಂದಿನಂತೆ ಉಪಶಾಂತ್ಯದಲ್ಲಿ ಮುಳುಗಿ ಮನೆಮಾರುಗಳನ್ನು ನೋಡಿಕೊಳ್ಳಹತ್ತಿತು. ಕಾಶಿಯಲ್ಲಿ ಈ ಭೂಕಂಪದಿಂದ ಅನೇಕ ಮನೆಗಳು ಬಿದ್ದುಹೋಗಿರುವವಲ್ಲದೆ ಕೆಲವು ಮಾನವರು ಮಡಿದುಹೋಗಿದ್ದಾರೆ. ಅನೇಕರಿಗೆ ಗಾಯಗಳಾಗಿವೆ. ಸ್ವಲ್ಪ ಹೆಚ್ಚಾಗಲಿ ಕಡಿಮೆಯಾಗಲಿ ಪ್ರತಿಯೊಬ್ಬರ ಮನೆಗಳಿಗೂ ನಷ್ಟವುಂಟಾಗಿದೆ. ಶ್ರೀವಿಶ್ವನಾಥನ ಮಂದಿರವೆಲ್ಲವೂ ಕಂಪಿಸಿರುವದಾದರೂ ಲಿಂಗಮೂರ್ತಿಯು ಮಾತ್ರ ಚಲಿಸಲಿಲ್ಲವೆಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಿರುವರು. ಶ್ರೀವಿಶ್ವಾರಾಧ್ಯ ಮಹಾಸಂಸ್ಥಾನದಲ್ಲಿಯೂ ಒಂದೆರಡು ಹಳೆಗೋಡೆಗಳು ಬಿದ್ದುಹೋಗಿವೆ. ಆದರೆ ಶ್ರೀವಿಶ್ವಾರಾಧ್ಯ ಮಹಾಪೀಠ, ಮಂದಿರ, ಕೈಲಾಸಮಂಟಪಗಳು ಮಾತ್ರ ಸುಸ್ಥಿರವಾಗಿಯೇ ಇವೆ. ಕಂಪಿಸಿದ ಚಿಹ್ನವೇ ಇಲ್ಲ! ಆ ದಿವಸವು ಸೋಮವತ್ಯಮಾವಾಸ್ಯೆಯ ಮಹಾಪರ್ವವಾದುದರಿಂದ ಗಂಗಾಸ್ನಾನಾದಿಗಳಿಗೋಸ್ಕರ ಹಳ್ಳಿಗಳಿಂದ ಬಂದ ಜನರು ವಿಶೇಷವಾಗಿ ಕಾಶಿಯಲ್ಲಿ ಕಾಣಿಸುತ್ತಿದ್ದರು. ಶ್ರೀ ವಿಶ್ವಾರಾಧ್ಯ ಗುರುಕುಲವಾಸಿಗಳಾದರೂ ಸಾಯಂಕಾಲ ನಾಲ್ಕು ಘಂಟೆಗೆ ಭೋಜನವನ್ನು ತೀರಿಸಿಕೊಂಡು, ರಾತ್ರಿಯಲ್ಲಿ ನಿಯಮದಂತೆ ಶ್ರೀಗುರು ಪೀಠದ ಸನ್ನಿಧಿಯೊಳಗೆ ಅತ್ಯಂತ ಭಕ್ತಿಯಿಂದ ಭಜನೆಯನ್ನು ಮಾಡಿದರು.

ಹಾವೇರಿಯ ಸುಪ್ರಸಿದ್ಧ ಜ್ಯೋತಿರ್ಮಾರ್ತಂಡ ವೇ|| ಶಂಕರಶಾಸ್ತ್ರಿಗಳ ಭವಿಷ್ಯವು ಅನೇಕವೇಳೆಯಂತೆ ಈಗಲೂ ಸತ್ಯವಾಗಿರುವುದು ಸಂತೋಷದ ಸುದ್ದಿಯು.—ಭಾರತೀಯರ ಧರ್ಮಶಾಸ್ತ್ರಗಳನ್ನೂ ಜ್ಯೋತಿಶ್ಶಾಸ್ತ್ರವನ್ನೂ ಮನಬಂದಂತೆ ಹಳಿಯುತ್ತಿರುವ ಗಾಂಧೀಭಕ್ತರೂ ನಾಸ್ತಿಕರೂ ಇನ್ನು ಮೇಲಾದರೂ ಸನ್ಮಾರ್ಗಾವಲಂಬಿಗಳಾಗಿ ಶಿವಕೃಪೆಯನ್ನು ಸಂಪಾದಿಸಲೆಂದು ಭಾವಿಸುವೆನು.

ಶ್ರೀ ಕೊಟ್ಟೂರೇಶನ ರಥೋತ್ಸವ.

ಕೊಟ್ಟೂರು.

ಬಳ್ಳಾರಿ ಡಿ|| ಕೊಟ್ಟೂರು ಪಟ್ಟಣದಲ್ಲಿ ಅಗಾಧ ಮಹಿಮಾಶಾಲಿಯಾದ ಶ್ರೀ|| ಕೊಟ್ಟೂರೇಶನ ರಥೋತ್ಸವವು ತಾರೀಖು 10-2-34 ಮಾಘ ಬ|| ೧೧ ಶನಿವಾರ ದಿವಸ ಮೂಲಾನಕ್ಷತ್ರದಲ್ಲಿ ಪ್ರತಿವರ್ಷಕ್ಕಿಂತಲೂ ಈ ವರ್ಷ ಬಹುವಿಜೃಂಭಣೆಯಿಂದ ನಡೆಯುವದು. ಈ ಮಹಿಮನು ಅನೇಕ ದೇಶಗಳನ್ನು ಸಂಚರಿಸಿ ನಾನಾ ವಿಧವಾದ ಮಹಿಮೆಗಳನ್ನು ತೋರಿಸುತ್ತ ರಾಜಾಧಿರಾಜರನ್ನು ಒಲಿಸಿ ತನ್ನ ತಪಃಪ್ರಭಾವದಿಂದ ಭಕ್ತರನ್ನುದ್ಧರಿಸಿದನೆನ್ನುವುದು ಜಗತ್ಪ್ರಸಿದ್ಧವೇ ಆದೆ. ಆದಕಾರಣ ಸಕಲಭಕ್ತರೂ ಈ ಮಹಿಮನ ರಥೋತ್ಸವಕ್ಕೆ ಬಂದು ದರ್ಶನವನ್ನು ಪಡೆದು ಪುಣ್ಯಭಾಗಿಗಳಾಗಬೇಕೆಂದು ಕೋರಿಕೆ.

ಪಿ. ಎಂ. ಮರುಲಸಿದ್ಧಯ್ಯ, ಕೊಟ್ಟೂರು.

Marimallappa's Charities' Fund, Mysore.

Applications form the lingayet students studying in the college classes, are invited for the scholarships of the above fund on or before the 31st January 1934.

Printed application forms can be had from the Hon: Secretary, on sending half-anna postage stamp.

The Hon: Secretary.
Marimallppa's Charities' Fund,
Mysore.

ನರರಾಕ್ಷಸರು !

ಬೆಲ್ಜಿಯನ್ ಕಾಂಗೋದಲ್ಲಿ ಕೆಲವು ಜನರು 'ಚಿರತೆಗಳ ಸಂಘ' ವೆಂಬ ಒಂದು ಗುಪ್ತಸಂಸ್ಥೆಯನ್ನು ಸ್ಥಾಪಿಸಿಕೊಂಡು ಚಿರತೆಯ ಚರ್ಮವನ್ನೂ ಉಕ್ಕಿನ ಉಗುರುಗಳನ್ನೂ ಧರಿಸಿ, ದಾರಿಯಲ್ಲಿ ಸಿಕ್ಕಿದ ಜನರನ್ನು ಕೊಂದು ಭಕ್ಷಿಸುತ್ತಿದ್ದರಂತೆ! ಸರಕಾರದವರು ಅವರಲ್ಲಿ 8 ಜನರನ್ನು ಹಿಡಿದು ಫಾಶೀ ಶಿಕ್ಷೆಯನ್ನು ವಿಧಿಸುತ್ತಾರೆ.

ಇಟಲಿಯಲ್ಲೊಂದು ಘಟಸರ್ಪ !

ಇಟಲಿ ದೇಶಕ್ಕೆ ಸೇರಿದ ಸ್ಯೆರಕ್ಯೂಸ್ ನಗರದ ಸಮೀಪದಲ್ಲಿರುವ 'ಪ್ಯಾಂಟಾನೋ' ಎಂಬ ಜೌಗು ಪ್ರದೇಶದಲ್ಲಿ 15-20 ಅಡಿಗಳ ಉದ್ದವಾದ ಒಂದು ಘಟಸರ್ಪವು ವಾಸವಾಗಿರುವದಂತೆ! ಶಾಸ್ತ್ರಜ್ಞರು ಅದಕ್ಕೆ 100 ವರ್ಷವಾಗಿರುವದೆಂದು ಹೇಳುವರು. ಅದನ್ನು ನೋಡಿದ ಒಬ್ಬ ಮನುಷ್ಯನಿಗೆ ಭೀತಿಯಿಂದ 3 ತಿಂಗಳ ವರೆಗೆ ಮಾತನಾಡುವುದಕ್ಕೇ ಆಗುತ್ತಿರಲಿಲ್ಲವಂತೆ!

ಕ್ರಿಮಿನಾಶಕ ಕಿರಣಗಳು !

ಲಂಡನ್ನಿನ ಒಂದಾನೊಂದು ಈಜುವ ಕೊಳದಲ್ಲಿ ಕ್ರಿಮಿಗಳನ್ನು ನಾಶಮಾಡುವದಕ್ಕೆ 'ಅಲ್ಟ್ರಾ-ವಯೊಲೆಟ್' ಎಂಬ ಕಿರಣಗಳನ್ನು ಉಪಯೋಗಿಸುತ್ತಿರುವರು. ಈ ಕೊಳದಲ್ಲಿ 56,000 ಗ್ಯಾಲನ್ ನೀರಿದ್ದು 4 ತಿಂಗಳುಗಳಿಂದಲೂ ಅದೇ ನೀರನ್ನು ಉಪಯೋಗಿಸುತ್ತಿರುವರು. ನೀರು ಕೊಳೆಯಾದಕೂಡಲೇ ಅದನ್ನೇ ಶೋಧಿಸಿ, ವಿದ್ಯುಚ್ಛಕ್ತಿಯಿಂದ ಕಾಯಿಸುವರು. ಅನಂತರ ಅದರಲ್ಲಿರಬಹುದಾದ ಕ್ರಿಮಿಸಂಬಂಧವಾದ ದೋಷಗಳನ್ನು ಹೋಗಲಾಡಿಸುವದಕ್ಕಾಗಿ ಅದರ ಮೇಲೆ 'ಅಲ್ಟ್ರಾ-ವಯೊಲೆಟ್' ಕಿರಣಗಳನ್ನು ಬಿಡುವರು. ಇದರಿಂದ ನೀರಿನಲ್ಲಿರುವ ಎಂತಹ ಕ್ರಿಮಿಗಳಾಗಲಿ ಕ್ಷಣಮಾತ್ರದಲ್ಲಿ ನಾಶವಾಗುವುವಂತೆ!

ಸ್ವೀಕಾರ

ಬೆಳಗಾಂವ ಡಿ|| ಹೂಲಿ ಗ್ರಾಮನಿವಾಸಿಗಳಾದ ಸಾಂಬಯ್ಯನ ಮಠದ ಶ್ರೀ ಬಾಲಲೀಲಾ ಸಂಗಮೇಶ್ವರ ಚರವರ್ಯರು ಶಿವಾಧೀನರಾದ ಸಮಯದಲ್ಲಿ ಜಗದಾಚಾರ್ಯರ ಹೆಸರಿನಿಂದ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಗಳ ಹೂಲಿ ಬೃಹನ್ಮಠದ ವೇ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಈಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಬಾಲಲೀಲಾ ಶ್ರೀ ಸಂಗಮೇಶ್ವರಸ್ವಾಮಿಗಳವರ ಲಿಂಗೈಕ್ಯ.

ಶ್ರೀ ದಕ್ಷಿಣಕಾಶೀಕ್ಷೇತ್ರ (ಪೂವಲ್ಲಿ) ಹೂಲಿಯಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಶಾಖಾನುವರ್ತಿಗಳಾದ ಸಾಂಬಯ್ಯನಮಠದ ಶ್ರೀ ಸಂಗಮೇಶ್ವರ ಚರಮೂರ್ತಿಸ್ವಾಮಿಗಳವರು ಇದೇ ತಿಂಗಳು ೧೩ನೆಯ ತಾರೀಖಿನ ದಿವಸ ಶಿವಾಧೀನರಾದರು. ಅವಸಾನಕಾಲಕ್ಕೆ ಇವರಿಗೆ ೮೫ ವರ್ಷಗಳಾಗಿದ್ದವು. ಇವರು ಅತ್ಯಂತ ಮಹಿಮಾಶಾಲಿಗಳೂ, ವಾಕ್‌ಸಿದ್ಧಿ, ಲಿಂಗನಿಷ್ಠೆಯುಳ್ಳವರೂ ಸರ್ವಮಠದ ಸದ್ಭಕ್ತರ ವಂದನೆಗೆ ಪಾತ್ರರೂ ಅತಿಥಿಸತ್ಕಾರಾದಿ ಕಾರ್ಯಗಳಲ್ಲಿ ಅತ್ಯಂತ ಪ್ರೇಮಿಗಳೂ ಸರ್ವಮತದವರಲ್ಲಿ ಸಮದೃಷ್ಟಿವಂತರೂ ಆಗಿದ್ದು, ಅನೇಕ ಲೀಲೆಗಳನ್ನು ಮಾಡಿ ತಮ್ಮ ಗುರುತ್ವದ ನಿಜತ್ವವನ್ನು ಪ್ರಕಟಗೊಳಿಸುತ್ತ ಮುಂದಿನವರಿಗೆ ಮಾರ್ಗದರ್ಶಿಗಳಾಗಿದ್ದರು. ಹೀಗಿದ್ದರೂ ಕೂಡ ಈ ಶ್ರೀ ಚರವರ್ಯರು ಕಂಡಕಂಡವರಿಗೆ ಲಿಂಗಧರಿಸುವದಕ್ಕೂ, ಈಗಿನ ವಾಗದ್ವೈತಿ ಸಾಧುಗಳಂತೆ ಜನರಿಗೆ ಮಂತ್ರೋಪದೇಶ ಮಾಡುವ ಕಾರ್ಯಕ್ಕೂ ಹೋಗದೆ ತಮ್ಮ ಸನ್ನಿಧಿಗೆ ಬಂದ ಸದ್ಭಕ್ತರಿಗೆ 'ಭಕ್ತಿಯೇ ಮುಕ್ತಿಯು' 'ನುಡಿಯಂತೆ ನಡೆಯುವದೇ ಈ ಜನ್ಮದ ಕಡೆಯು' ಇವೆರಡು ವಾಕ್ಯದ ಸದ್ಬೋಧವನ್ನು ಸರ್ವರಿಗೂ ಮಾಡುತ್ತಿದ್ದರು. ಮತ್ತು ಇವರು ನಿಸ್ಸಂಗಿಯಾಗಿ ಏಕಾಂತಸ್ಥಾನದಲ್ಲಿ ಸಂಚರಿಸುವುದನ್ನೇ ತಮ್ಮ ಮುಖ್ಯ ಧ್ಯೇಯವಾಗಿಟ್ಟುಕೊಂಡಿದ್ದರು. ಇಂಥ ಮಹಾ ಶಿವಯೋಗಿವರ್ಯರಾದ ಗುರುಸ್ಥಲದ ನಮ್ಮ ಬಾಲಲೀಲಾ ಶ್ರೀ ಸಂಗಮೇಶ್ವರಸ್ವಾಮಿಗಳ ದರ್ಶನಕ್ಕಾಗಿ ದೂರದೂರದಿಂದ ಅನೇಕ ಸಾಧುಸತ್ಪುರುಷರೂ, ನಿರಂಜನಸ್ವಾಮಿಗಳೂ, ಭಕ್ತಮಾಹೇಶ್ವರರೂ ಆಗಿಂದಾಗ್ಗೆ ಆಗಮಿಸುತ್ತಿದ್ದರಲ್ಲದೆ, ಸಿರಸಂಗಿ ಶ್ರೀ|| ಲಿಂಗರಾಜಭೂಪರು ಹಿಂದೆ ನಡಿಸಿದ ಮಹಾರುದ್ರಪೂಜೆಯ ಕಾಲಕ್ಕೆ ಅಥಣಿ ಶಿವಯೋಗಿಗಳಾದ ಶ್ರೀ ಮರುಳೇಂದ್ರಸ್ವಾಮಿಗಳವರು ಕೆಲವು ಸದ್ಭಕ್ತರಿಂದೊಡಗೂಡಿ ಇಲ್ಲಿಗೆ ದಯಮಾಡಿಸಿ ಈ ಬಾಲಲೀಲಾ ಶ್ರೀ ಸಂಗಮೇಶ್ವರ ಚರವರ್ಯರ ದರ್ಶನವನ್ನು ತೆಗೆದುಕೊಂಡು ಇವರ ಮಹಿಮೆಯನ್ನು ಕೊಂಡಾಡಿ ಹೋಗಿದ್ದರು. ಈ ಚರವರ್ಯರು ಲಿಂಗೈಕ್ಯರಾದ ದಿವಸವೇ ಮುಂಜಾನೆ ಹಾವೇರಿ ಶ್ರೀ ನಿರಂಜನ ಸಿದ್ಧಬಸವಸ್ವಾಮಿಗಳವರು ಸವದತ್ತಿ ಸದ್ಭಕ್ತರೊಡಗೂಡಿ ದಯಮಾಡಿಸಿ ಈ ಮಹಿಮರ ದರ್ಶನವನ್ನು ತೆಗೆದುಕೊಂಡು ಹೋದರು. ಈ ಪ್ರಕಾರ ಅತ್ಯಂತ ಮಹಿಮಾಶಾಲಿಗಳಾದ ಬಾಲಲೀಲಾ ಶ್ರೀ ಸಂಗಮೇಶ್ವರ ಸ್ವಾಮಿಗಳವರನ್ನು ಎಷ್ಟು ಕೊಂಡಾಡಿದರೂ ಪೂರ್ಣವಾಗುವಂತೆ ಇಲ್ಲ. ಧನ್ಯಧನ್ಯ ಗುರುವರ್ಯರೇ ಧನ್ಯಧನ್ಯ! ಈ ಮಹಾಮಹಿಮರು ಭೌತಿಕಶರೀರವನ್ನು ತ್ಯಜಿಸಿ ಲಿಂಗೈಕ್ಯರಾದ ವಾರ್ತೆಯು ಶನಿವಾರ ರಾತ್ರಿ ೭ ಘಂಟೆಗೆ ಊರತುಂಬೆಲ್ಲಾ ಹಬ್ಬಲು, ಕೂಡಲೇ ಯಾವತ್ತು ಮಠದವರೂ ವಾದ್ಯಗಳ ಮತ್ತು ಭಜನೆಗಳ ಸಮುದಾಯದೊಡನೆ ಸ್ವಾಮಿಗಳವರ ಮಠಕ್ಕೆ ಇಲ್ಲಿಯ ಪಂಚವಣ್ಣಿಗೆಯ ಬೃಹನ್ಮಠದ ಸ್ಥಿರಪಟ್ಟಾಧ್ಯಕ್ಷರಿಂದ ಕೂಡಿಕೊಂಡು ಬಂದು, ಇಲ್ಲಿ ಮೂರ್ತಿಗೊಳಿಸಿದ ಲಿಂಗೈಕ್ಯರಾದ ಚರವರ್ಯರಿಗೆ ಮಂಗಲಪುಷ್ಪಾಂಜಲಿಯನ್ನರ್ಪಿಸಿದರು. ಮರುದಿವಸ ರವಿವಾರ ಶ್ರೀ ಸ್ವಾಮಿಗಳು ಲಿಂಗೈಕ್ಯರಾದ ವಾರ್ತೆಯು ಸುತ್ತಮುತ್ತಲಿನ ಗ್ರಾಮಗಳಿಗೂ ಮತ್ತು ಸಮೀಪದಲ್ಲಿರುವ ಮಲಾಪಹಾರಿ ನದಿಯಲ್ಲಿಯ ಮಕರಸಂಕ್ರಮಣದ ಸ್ನಾನದ ನಿಮಿತ್ತವಾಗಿ ಪ್ರತಿವರ್ಷದಂತೆ ಕೂಡುವ ಜಾತ್ರೆಯ ಜನಸಮುದಾಯಕ್ಕೂ ತಲ್ಪಲು ಕೇಳುವದೇನು? ಆ ದಿನ ಸಾಯಂಕಾಲ ೯ ಘಂಟೆಯಾಗುವದರೊಳಗಾಗಿ ಅಸಂಖ್ಯಜನರು ಇವರ ದರ್ಶನಕ್ಕೆಂದು ಬರಲು ಇಲ್ಲಿರುವ ಅನೇಕ ಶಿವಾಲಯಗಳೂ, ಗುರುಮಠಮನೆಗಳೂ ಬಂದ ಜನರಿಂದ ತುಂಬಿದವಲ್ಲದೆ, ರಾತ್ರಿಯ ಕಾಲವೆಲ್ಲ ಶಿವಭಜನೆಯೂ, ಸ್ವಾಮಿಗಳ ಮಹಿಮೆಯ ಕಥೆಗಳ ಶ್ರವಣವೂ, ಕರಡೆ, ಡೊಳ್ಳು, ಕಾಳೆ, ಕರಣೆ ಮೊದಲಾದ ಮಂಗಲವಾದ್ಯಗಳ ರಭಸವೂ, ಎಲ್ಲ ಕಡೆಯಲ್ಲೂ ವಿಸ್ತಾರವಾಗಿ ಹಬ್ಬಿದ ಈ ವೇಳೆಯನ್ನು ವರ್ಣಿಸುವದೇ ಅಸಾಧ್ಯವಾಯಿತು. ಮರುದಿವಸ ಚಂದ್ರವಾರ ೧೦ ಘಂಟೆಯ ವೇಳೆಗೆ ಶಿವೈಕ್ಯರಾದ ಶ್ರೀ ಚರವರ್ಯರಿಗೆ ಅಂತ್ಯ ಮಂಗಲ ಪುಷ್ಪಾಂಜಲಿಯು ಸಮರ್ಪಿಸಿದನಂತರ ಮುಂದೆ ಮಧ್ಯಾಹ್ನದ ೧ ಘಂಟೆಯ ಸುಮಾರಕ್ಕೆ ಸ್ವಾಮಿಗಳ ಭೌತಿಕದೇಹವನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಮೆರವಣಿಗೆಯು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟ ರಾಜಬೀದಿಯೊಳಗೆ ಹಾಯ್ದು ಸಾಯಂಕಾಲದ ೫ ಘಂಟೆಗೆ ಪಂಚವಣ್ಣಿಗೆ ಬೃಹನ್ಮಠಕ್ಕೆ ತಲ್ಪಿ ಪುನಃ ೭ ಘಂಟೆಗೆ ಇವರ ಮಠದಲ್ಲಿ ತಯಾರಿಸಿದ ಸಮಾಧಿಯ ಸ್ಥಾನಕ್ಕೆ ತಲ್ಪಿತು. ಇಲ್ಲಿಯ ಪಂಚವಣ್ಣಿಗೆಯ ಬೃಹನ್ಮಠದ ವೇ|| ಬ್ರ|| ಶ್ರೀ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ವಿಧಾನೋಕ್ತವಾಗಿ ಅಂತ್ಯೇಷ್ಟಿವಿಧಿಯನ್ನು ನೆರವೇರಿಸಿದರು. ಅನಂತರ ಕೊಂಗವಾಡ ಹಿರೇಮಠದ ವೇ|| ಚರಂತಯ್ಯನವರು ತಾವು ತಯಾರಿಸಿದ ಶಿವೈಕ್ಯರಾದ ಬಾಲಲೀಲಾ ಚರವರ್ಯರ ಮಹಿಮೆಯ ಕೀರ್ತನವನ್ನು ಸುಶ್ರಾವ್ಯವಾಗಿ ಮಾಡಿದರು. ಮರುದಿವಸ ಮಠದಲ್ಲಿ ಸ್ಥಲ-ಪರಸ್ಥಲ ಭಕ್ತಮಾಹೇಶ್ವರರಿಂದ ಕಡಕೊಳ್ಳ ಬೃಹನ್ಮಠದ ಶ್ರೀ ಪಟ್ಟದೇವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಲು ಇಲ್ಲಿಯ ವೇ|| ಬ್ರ|| ಶ್ರೀ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ಶ್ರೀ ಲಿಂಗೈಕ್ಯಸ್ವಾಮಿಗಳ ಮಹಿಮೆಯನ್ನು ವಿಸ್ತಾರವಾಗಿ ಹೇಳಿದರು. ಅನಂತರ ಶಿವೈಕ್ಯಸ್ವಾಮಿಗಳ ಉತ್ತರಾಧಿಕಾರಕ್ಕೆ ನೇಮಿಸಿದ ಇವರ ವಂಶೋದ್ಭವ ಶ್ರೀ ಸಂಗಮೇಶ್ವರ ಮರಿದೇವರು ಯಾವತ್ತರ ಅಭಾರವನ್ನು ಮನ್ನಿಸಿ ನಾನು ಗುರುಸೇವೆಯನ್ನು ಯಥಾಪ್ರಕಾರವಾಗಿ ಮಾಡಿ ಗುರುಕೃಪೆಗೆ ಪಾತ್ರರಾಗುವದೇ ನನ್ನ ಮುಖ್ಯಧ್ಯೇಯವೆಂದು ಮಧುರವಾಣಿಯಿಂದ ಹೇಳಿದರು. ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಹಾಮಹಿಮರಾದ ಬಾಲಲೀಲಾ ಶ್ರೀ ಸಂಗಮೇಶ್ವರ ಚರವರ್ಯರ ಸಮಾಧಿ ಸಮಾರಂಭದ ಯಾತ್ರೆಗೆ ಕೂಡಿದ ೫೦-೬೦ ಸಾವಿರ ಮೇಲ್ಪಟ್ಟ ಜನರಲ್ಲಿ ಶಾಂತತೆಯು ನೆರಿಗೊಳ್ಳುವಂತೆ ವ್ಯವಸ್ಥೆಮಾಡಿದ ಸ್ಥಲ-ಪರಸ್ಥಲದ ಸ್ವಯಂಸೇವಕರಿಗೂ ಹಾಗೂ ಈ ಕಾರ್ಯದಲ್ಲಿ ವಿಶೇಷ ಶ್ರಮವಹಿಸಿದ ಇಲ್ಲಿಯ ಸದ್ಭಕ್ತವರ್ಯರಾದ ಶಿವಪ್ಪ ಚಿಕರಡ್ಡಿ, ತಿಮ್ಮಪ್ಪ ತಿಮರಡ್ಡಿ, ವೀರಸಂಗಯ್ಯ ಸ್ವಾಮಿ ಶಿವಪನಮಠ, ಶಿವಮೂರ್ತಿಸ್ವಾಮಿ ಕಳ್ಳೀಮಠ, ಮಲ್ಲಪ್ಪ ಕೌಜಲಗಿ, ಶೆಟ್ಟೆಪ್ಪ ಮುನವಳ್ಳಿ, ಮಲ್ಲಪ್ಪ ಕಟ್ಟೂರ ಇವರಿಗೂ ಸದ್ಗುರುವರ್ಯರು ಸುಮಂಗಲಾಶೀರ್ವಾದವನ್ನೀಯಲೆಂದು ಸದ್ಗುರುವನ್ನು ಅನನ್ಯಭಾವದಿಂದ ಬೇಡುವೆನು.

ಸೆಕ್ರೆಟರಿ,
ಶ್ರೀಜಗದ್ಗುರು ವಿಶ್ವಾರಾಧ್ಯ ವಾಚನಾಲಯ, ಹೂಲಿ.

ಕಲ್ಯಾಣ.

(ಲೇ|| ವಾಗೀಶಶಿವಾಚಾರ್ಯ, ಬೃಹನ್ಮಠ ಮುದೇನೂರು.)
ಶ್ರೀಕ್ಷೇತ್ರ ಕಾಶೀ ವಿಶ್ವಾರಾಧ್ಯ ಗುರುಕುಲ.

ಆದಿಗುರುಗಳ ಕೃಪೆಯಿಂದ ಇದೀಗ ಎಲ್ಲಿ ನೋಡಿದರೂ "ಧರ್ಮಕ್ಕೆ ಜಯವಾಗಲಿ, ಜಯವಾಗಲಿ" ಎಂಬ ಆನಂದಮಯವಾದ ಮಹಾಘೋಷವೇ ಕೇಳಬರುತ್ತಿದೆ. ಸನಾತನವಾದ ಧರ್ಮರಕ್ಷಣೆಗಾಗಿ ತನುಮನಧನಗಳನ್ನು ಧಾರೆಯೆರೆಯುವ ಧರ್ಮವೀರರೂ ಜಾಗರೂಕರಾಗಿದ್ದಾರೆ. ಪೂರ್ವಾಚಾರ ಪ್ರಭೆಯು ಅಜ್ಞಾನ ತಿಮಿರವನ್ನು ಲೋಕದಲ್ಲಿ ಮತ್ತೊಮ್ಮೆ ಕಲಿಯುತ್ತದ ಹಾಗೆ ನಿರ್ಮೂಲಗೊಳಿಸುತ್ತಿದೆ. ಕತ್ತಲೆಯಲ್ಲಿ ಕಣ್ಣುಇದೆ ಅರಿವಿಯ ದಾರಿಯನ್ನು ಹಿಡಿದು ನಡೆದು ನಡೆದು ಬೇಸತ್ತವರೆಲ್ಲರೂ ದೈವಯೋಗದಿಂದ ಪ್ರಾತಃಕಾಲದ ಮುಖವನ್ನು ಹೊಂದಿ ನಿಜವಾದ ದಾರಿಯನ್ನು ಕಾಣುತ್ತಿದ್ದಾರೆ. ಸನ್ಮಾರ್ಗಗಾಮಿಗಳಾದ ಮಕ್ಕಳನ್ನು ಕಂಡು ಅವರ ಮೊದಲಿನ ದುರಾಚಾರವನ್ನು ಖಂಡಿಸುತ್ತ ಸದುಪದೇಶಗೆಯ್ಯುವ ತಾಯಿಯೇನಾದರೂ "ಮಕ್ಕಳಿರಾ! ಜಗತ್ತಿನಲ್ಲಿ ಪಾಪಕಟ್ಟಿದೆ. ಧರ್ಮಾಚರಣೆಯಿಂದ ಅದನ್ನು ಕಳೆಯದೆ ಅಧರ್ಮಮಾರ್ಗವನ್ನು ಹಿಡಿದಿದ್ದಿರಾ? ಇನ್ನೆಂದಿಗೂ ಅತ್ತಕಡೆ ಚಿತ್ತವಿಡಬೇಡಿರೆಂದು" ತರ್ಜನೆಗೊಳಿಸುವ ಮೂಲಕ ನುಡಿಯುತ್ತಿರುವಳೋ ಎಂಬಂತೆಯೂ, ಅಧರ್ಮವು ಹೆಚ್ಚಾದರೆ ಹೀಗೆಯೇ ಪ್ರಳಯವಾಗುವುದೆನ್ನುವುದನ್ನು ತೋರಿಸಿರುವಳೋ ಎಂಬಂತೆಯೂ, ಆದಿನದ ಕೆಲಹೊತ್ತಿನ ಮೇಲೆ ಭೂಮಾತೆಯು ತನ್ನಂಗವನ್ನೆಲ್ಲಾ ಗಡಗಡನೆ ನಡುಗಿಸಿ, ಭಯಂಕರವಾಗಿ ಗರ್ಜಿಸಿ, ಹಳೆಯ ಮನೆಗಳ ಮೊದಲೇ ಸಡಿಲಾದ ಭಾಗಗಳನ್ನು ಮತ್ತಷ್ಟು ಸಡಿಲಿಸಿಯೂ, ಅತ್ಯಂತ ಜೀರ್ಣವಾದ ಭಾಗಗಳನ್ನು ದಡದಡನೆ ಕೆಡಹಿಯೂ, ಧರ್ಮಿಗಳೂ ಅಧರ್ಮಿಗಳೂ ಒಂದೇದನಿಯಿಂದ "ಹರಹರ! ಮಹಾದೇವ!! ವಿಶ್ವನಾಥ ವಿಶ್ವನಾಥ!!!" ಎನ್ನುತ್ತಲೂ, ತಮ್ಮ ತಮ್ಮ ಗುರೂಪದಿಷ್ಟಮಂತ್ರಗಳನ್ನು ವಾಚಕವಿಧಿಯಿಂದ ಉಚ್ಚರಿಸುತ್ತಲೂ ಇರುವಾಗ, "ಅದೋ ನೋಡು ನಿಜಮಾರ್ಗವನ್ನು ಕಂಡೆಯಾ?" ಎಂದು ಅಶರೀರವಾಣಿಯಿಂದ ನುಡಿದಳೇನೋ ಎಂಬುವಂತಾಗಿ ಮೆಲ್ಲಮೆಲ್ಲನೆ ಶಾಂತಳಾದಳು. ಇಂತಹ ಘಟನೆಯಿಂದ ಮತ್ತಷ್ಟು ಎಚ್ಚರಗೊಂಡು ಪರಿಪಕ್ವಮತಿಗಳಾಗಿ 'ಯತೋಧರ್ಮಸ್ತತೋಜಯಃ' ಎಂದು ಧರ್ಮೋದಯಸ್ಥಾನಕ್ಕೆ ಶರಣಾಗತರಾಗುತ್ತಲೂ, 'ಗುರೂಪದೇಶೋನಾಮ ಪುರುಷಾಣಾಮಖಿಲಮಲಪ್ರಕ್ಷಾಲನಮಜಲಂ ಸ್ನಾನಂ' ಎಂಬುದನ್ನರಿತವರಾಗಿ ಶ್ರೀ ಗುರುವಚನೋಪದೇಶಕ್ಕೆ ಪಾತ್ರರಾಗುತ್ತಲೂ, ಧರ್ಮಾಚರಣೆಗೆ ಬದ್ಧಕಂಕಣರಾಗುತ್ತಲೂ ಇರುವುದು ತೋರಿಬರುತ್ತಿದೆ. ಕನ್ನಡಿಗರಾದ ಅಂಥವರ ಕಲ್ಯಾಣಕ್ಕೆ ಯೋಗ್ಯವೆಂದು ಕಂಡುಬಂದ ಕಲ್ಯಾಣವಾಕ್ಯರಾಶಿಯನ್ನು ವಿಸ್ತಾರಗೊಳಿಸುವುದೇ ಈ ಲೇಖನದ ಉದ್ದೇಶವಾಗಿದೆ.

ದುಸ್ಸಂಗದಿಂದ ಯಾವಾಗಲೂ ದೂರವಿರು. ದುಸ್ಸಂಗವೆಂದರೆ ದುರ್ಜನಸಂಗವೊಂದೇ ಆಗುವುದಿಲ್ಲ; ದುಷ್ಟಸ್ಥಾನ, ದುಷ್ಟಅನ್ನ, ದುಷ್ಟಗ್ರಂಥ, ದುಷ್ಟದೃಶ್ಯ, ದುಷ್ಟವಾಕ್ಯ, ದುಷ್ಟವಾತಾವರಣ ಮುಂತಾದವುಗಳೂ ದುಸ್ಸಂಗದೊಳಗೆ ಗಣನೆಯಾಗಿವೆ. ಎಡಬಿಡದ ದುಸ್ಸಂಗದಿಂದ ದುಷ್ಟಪರಮಾಣುಗಳ ಮುಖಾಂತರವಾಗಿ ಒಳಗಣ ಶಿಷ್ಟಪರಮಾಣುಗಳು ಹಕೊತ್ತಲ್ಪಡುವವಾದುದರಿಂದ ಅಂತಹ ಸಮಯದಲ್ಲಿ ದುಷ್ಟವಾಕ್ಯಗಳು ಸ್ವಾಭಾವಿಕವಾಗಿ ಶ್ರೇಷ್ಠವಾಕ್ಯಗಳೆಂದು ತಿಳಿಯಲ್ಪಡುವವು. ಮನಸ್ಸು ಹೇಗಿರುವುದೋ ದೃಷ್ಟಿಯೂ ಹಾಗೆಯೇ ಇರುವುದು. ದೃಷ್ಟಿಯು ಹೇಗಿರುವುದೋ ದೃಶ್ಯವೂ ಹಾಗೆಯೇ. ಸಜ್ಜನಸಾಧುವಿಗೆ ಪ್ರಾಯಶಃ ಎಲ್ಲವೂ ಸಾಧುರೂಪವಾಗಿಯೂ, ಚೋರನಿಗೆ ಚೌರ್ಯರೂಪವಾಗಿಯೂ, ಕಾಮುಕನಿಗೆ ಕಾಮಮಯವಾಗಿಯೂ, ಲೋಭಿಗೆ ಲೋಭಮಯವಾಗಿಯೂ ಕಾಣುವುದು.

ದುಷ್ಟವಾತಾವರಣದಲ್ಲಿ ಇರಇರುತ್ತ ಚಿತ್ತವು ದುಷ್ಟವಾಗುವುದು; ಆಮೇಲೆ ಆ ಚಿತ್ತದಲ್ಲಿ ದುಷ್ಟಸಂಕಲ್ಪಗಳು ಹುಟ್ಟುವವು: ಯಾವನ ಚಿತ್ತದಲ್ಲಿ ದುಷ್ಟಸಂಕಲ್ಪಗಳು ಹುಟ್ಟುವವೋ ಅವನಿಗೆ ಸಮಾನವಾದ ದುಃಖಿಯೂ, ಅಪರಾಧಿಯೂ ಮತ್ತಾವನಾಗುವನು? ಏಕೆಂದರೆ—ಅವನು ತನ್ನ ಚಿತ್ತದ ದುಷ್ಟಸಂಕಲ್ಪಗಳನ್ನು ಜಗತ್ತಿನಲ್ಲಿ ಹರಡಿ ಅನ್ಯರನ್ನೂ ಭ್ರಷ್ಟಗೊಳಿಸುವನು.

'ಶಾಸ್ತ್ರಜಲಪ್ರಕ್ಷಾಲನಾಮರ್ಷಾಪಿ ಕಾಲುಷ್ಯಮುಪಯಾತಿ ಬುದ್ಧಿಃ' ಎಂದು ಪ್ರಾಜ್ಞರು ನುಡಿದಿರುವುದರಿಂದ ಯಾವಾಗಲೂ ಚಿತ್ತದಲ್ಲಿ ಸತ್ಸಂಕಲ್ಪವನ್ನೇ ಇಟ್ಟುಕೊಂಡಿರಬೇಕು. ಸತ್ಸಂಕಲ್ಪಕ್ಕಾಗಿ ಸತ್ಸಂಗ, ಸದಾಲೋಚನ, ಸದ್ಗ್ರಂಥಪಠನ, ಸದ್ಗುರುಸೇವನ ಮುಂತಾದವುಗಳ ಅವಶ್ಯಕತೆಯುಂಟು; ಯಾವನ ಚಿತ್ತವು ಸತ್ಸಂಕಲ್ಪದಿಂದ ತುಂಬಿಕೊಂಡಿದೆಯೋ ಅವನೇ ಸುಖಿಯೂ, ಪರೋಪಕಾರಿಯೂ ಆಗಿದ್ದಾನೆ. ಏಕೆಂದರೆ—ಅವನು ತನ್ನ ಸತ್ಸಂಕಲ್ಪವನ್ನು ಜಗತ್ತಿನಲ್ಲಿ ಹರಡಿ ಅನ್ಯರನ್ನೂ ಸನ್ಮಾರ್ಗಕ್ಕೆ ತರುತ್ತಾನೆ. ಆದುದರಿಂದ ನನ್ನ ಚಿತ್ತದಲ್ಲಿ ಎಂದಿಗೂ ದುಷ್ಟಕಲ್ಪನೆ ಹುಟ್ಟುವುದಿಲ್ಲ. ನಾನು ಪವಿತ್ರನಾಗಿದ್ದೇನೆ. ಈಶ್ವರಕೃಪೆಯಿಂದ ನನ್ನ ಹೃದಯವು ಶುದ್ಧವಾಗಿದೆ. ಸರ್ವಶಕ್ತಿಯುಕ್ತನಾದ ಈಶ್ವರನ ಅಭಯಹಸ್ತವು ಯಾವಾಗಲೂ ನನ್ನ ತಲೆಯಮೇಲಿದೆ. ಅಭಯದಾನಕ್ಕೆಂದೆತ್ತಿದ ಆತನ ಅಂಗೈಗೋಡೆಯ ನೆರಳಲ್ಲಿಯೇ ನಾನಿದ್ದೇನೆ. ಪಾಪತಾಪಗಳು ನನ್ನ ಸಮೀಪಕ್ಕೆ ಬರುವುದಿಲ್ಲವೆಂದು ನಿಶ್ಚಯಮಾಡು.

ನಾನು ದುಃಖದ ಸಂಸಾರದಿಂದ ಅಡಗಿದ್ದೇನೆ, ನನಗೆ ದುಃಖ ಬರುವುದಿಲ್ಲ; ಜಗತ್ತಿನಲ್ಲಿ ನನಗೆ ಪ್ರತಿಕೂಲವಾದುದಾವುದೂ ಇಲ್ಲವೆಂದು ನಿಶ್ಚಯಮಾಡು. ಎಲ್ಲದರಲ್ಲಿಯೂ ಅನುಕೂಲವಾದ ಭಾವವನ್ನಿಡು, ಯಾವಾಗಲೂ ಸುಖಿಯಾಗಿರು. ರೋಗದ ಅವಸ್ಥೆಯಲ್ಲಿ—ರೋಗವು ಶರೀರಕ್ಕಿದೆ, ನಾನು ನಿತ್ಯನಿರಾಮಯನಾಗಿದ್ದೇನೆ, ನನಗೆಂದಿಗೂ ಯಾವ ರೋಗಗಳೂ ಬಾಧೆಮಾಡುವುದಿಲ್ಲ. ನಾನೆಲ್ಲದಕ್ಕೂ ದರ್ಶಕನಾಗಿದ್ದೇನೆ, ಶರೀರವು ಕ್ಷಣಭಂಗುರವಾದುದು, ಒಂದು ದಿನ ನಾಶವಾಗತಕ್ಕುದೇ ಆಗಿದೆ, ನಾನು ಅಜ (ಹುಟ್ಟದವ)ನು, ಅಮರ (ಸಾಯದವ)ನು, ಎಂತಲೂ ಭಾವಿಸು.

ಶೋಕದ ಪ್ರಸಂಗದಲ್ಲಿ—ಈ ಶೋಕವು ನನ್ನ ಸಲುವಾಗಿ ಎಂದೂ ಬಂದಿಲ್ಲ; ಮುಂದೆ ಬರುವುದೂ ಇಲ್ಲ; ಪ್ರಕೃತಿಯು ಇಂದ್ರಜಾಲಮಯವಾಗಿದೆ; ಪರಿವರ್ತನನಾಗುವಸ್ವಭಾವವುಳ್ಳದಾಗಿದೆ; ಇದರಲ್ಲಿ ಹುಟ್ಟುವ ಸಾಯುವ ಆಟವು ಯಾವಾಗಲೂ ನಡೆದೇ ಇದೆ; ರೂಪವು ಬದಲಾಗುವುದು; ಮೂಲವಸ್ತುವು ಎಂದೂ ನಷ್ಟವಾಗುವುದಿಲ್ಲ. ಅಂದಮೇಲೆ ನಾನು ಶೋಕವನ್ನೇಕೆ ಮಾಡಲಿ? ಅಥವಾ ಈಶ್ವರನು ಯಾವುದೊಂದು ವಿಧಾನವನ್ನು ಮಾಡಿದರೂ ಅದರಿಂದಲೇ ನನಗೆ ಪರಮಕಲ್ಯಾಣವಾಗುವುದು. ಇದು ಸ್ಥಿರವಾಗಿದೆ; ಶೋಕಮಾಡುವುದು ಈಶ್ವರನ ವಿಧಾನದ ಮೇಲೆ ಅಸಂತೋಷವನ್ನು ಪ್ರಕಟಮಾಡಿದಂತಾಗುವುದು; ಹೀಗೆ ಮಾಡುವುದು ಸರ್ವಥಾ ಅನುಚಿತವು; ಸರ್ವಸಮರ್ಥನಾದ ಈಶ್ವರನು ಮಾಡತಕ್ಕುದೆಲ್ಲಾ ನನ್ನ ಹಿತಕ್ಕಾಗಿಯೇ ಎಂತಲೂ ಭಾವಿಸು.

'ತಿಮಿರೋಪಹತೇವ ಯೂನಾಂ ದೃಷ್ಟಿರಲ್ಪಮಪಿ ಕಾಲುಷ್ಯಂ ಮಹತ್ಪಶ್ಯತಿ' ಎಂತಲೂ 'ಉತ್ತಮವಿವೇಕೋ ಯೌವನಮದೋ ಮದಯತಿ' ಎಂತಲೂ ಪ್ರಮಾಣವಿರುವುದರಿಂದ ಕಾಮದ ಅವಸ್ಥೆಯಲ್ಲಿ—ಜಗತ್ತಿನ ಸಮಗ್ರಸೌಂದರ್ಯವು ಈಶ್ವರಸೌಂದರ್ಯದ ಒಂದುಕಣವಾಗಿದೆ. ಇಂತಹ ಸುಂದರವಸ್ತುವನ್ನು ಸೃಜಿಸಿ ನೋಡುವವನಾಗಿ ನಾನು ಕೊಳಕಿನ ಗೊಂಬೆಗಾಗಿ ಆಸೆಮಾಡುತ್ತಿರುವೆನೇ? ಥೂ! ಇದು ಅಜ್ಞಾನ; ನಾನು ಈಶ್ವರನ ಕೃಪೆಯಿಂದ ಇಂತಹ ಅಜ್ಞಾನದ ವಶನೆಂದೂ ಆಗುವುದಿಲ್ಲ. ನಾನು ನಿರ್ಮಲನಾಗಿದ್ದೇನೆ, ನನ್ನ ಹೃದಯದಲ್ಲಿ ಈಶ್ವರನಿದ್ದಾನೆ; ನಾನು ಈಶ್ವರನವನಾಗಿದ್ದೇನೆ, ಈಶ್ವರನು ನನ್ನವನಾಗಿದ್ದಾನೆ; ಆದುದರಿಂದ ಕಾಮವು ನನ್ನ ಸಮೀಪಕ್ಕೆ ಬರುವುದಿಲ್ಲ. ಈಶ್ವರನ ಸೌಂದರ್ಯದ ಮುಂದೆ ಇತರ ಸೌಂದರ್ಯವು ಸೂರ್ಯನ ಮುಂದೆ ಮಿಂಚಿನ ಹುಳಕ್ಕಿಂತಲೂ ತುಚ್ಛವಾಗಿದೆ ಎಂದು ತಿಳಿ.

ಕ್ರೋಧದ ಸಮಯವೊದಗಿದಾಗ—ಪ್ರಯತ್ನಪೂರ್ವಕವಾಗಿ ಸುಮ್ಮನಿರು, ಅಲ್ಲದೆ ಜಗತ್ತಿನಲ್ಲಿ ಎಲ್ಲಾಕಡೆಯಲ್ಲಿಯೂ ಈಶ್ವರನು ವ್ಯಾಪಕನಾಗಿದ್ದಾನೆ, ಈಶ್ವರನೇ ವಿಶ್ವರೂಪವಾಗಿ ಪ್ರಕಾಶಗೊಂಡಿದ್ದಾನೆ; ನಾನು ಈಶ್ವರನ ಮೇಲೆ ಹೇಗೆ ಕೋಪಗೊಳ್ಳಲಿ? ಆತನಿಗೆ ಹೇಗೆ ಅಪಮಾನಮಾಡಲಿ? ನಾನು ಕ್ರೋಧದಿಂದ ಅಡಗಿದ್ದೇನೆ, ನನ್ನ ಹೃದಯವು ಯಾವಾಗಲೂ ಕ್ಷಮೆಯಿಂದ ತುಂಬಿಕೊಂಡಿದೆ; ಸಮಸ್ತಪ್ರಾಣಿಗಳ ಮೇಲೆ ಪ್ರೇಮ, ಮೈತ್ರಿ, ಕ್ಷಮಾ, ದಯೆಗಳನ್ನು ತೋರಿಸುವುದೇ ನನ್ನ ಸ್ವಭಾವವಾಗಿದೆ ಎಂದೂ, ಅತ್ಯಂತಕಠೋರವಚನವನ್ನೂ ಕಠೋರವ್ಯವಹಾರವನ್ನೂ ನಾನು ಆನಂದಪೂರ್ವಕವಾಗಿ ಸಹನಮಾಡಿಕೊಳ್ಳುವೆನು. ನನ್ನ ಮನಸ್ಸಿನಲ್ಲಿ ಯಾರಮೇಲೂ ದ್ವೇಷವಿಲ್ಲ, ಆದುದರಿಂದ ನಾನು ಎಂದಿಗೂ ಕ್ರೋಧವಶನಾಗುವುದಿಲ್ಲವೆಂದೂ ವಿಚಾರಮಾಡುತ್ತ ನಿಶ್ಚಯಿಸು. ಲೋಭದ ಪ್ರಸಂಗವೊದಗಿದಾಗ ನಾನು ಪೂರ್ಣನಾಗಿದ್ದೇನೆ, ನಾನು ಯಾರದ್ರವ್ಯವನ್ನೂ ಬಯಸುವುದಿಲ್ಲ; ನನ್ನನ್ನು ಆಶೆಗೊಳಿಸುವ ವಸ್ತುವು ಜಗತ್ತಿನಲ್ಲಿ ಯಾವುದೂ ಇಲ್ಲ; ನನಗೆ ಯಾವುದೊಂದರ ಬಯಕೆಯೂ ಬೇಡಿಕೆಯೂ ಇಷ್ಟವಿಲ್ಲವಾದುದರಿಂದ ನಾನು ಲೋಭಕ್ಕೆ ಎಂದೂ ಒಳಗಾಗುವುದಿಲ್ಲವೆಂದು ನಿಶ್ಚಯಮಾಡು.

ಪ್ರತಿನಿತ್ಯವೂ ಸ್ವಲ್ಪ ಸಮಯವನ್ನು ಏಕಾಂತದಲ್ಲಿ ಕಳೆ. ಮೌನವಾಗಿರು. ಏಕಾಂತವಾಸ ಮೌನವ್ರತಗಳು ಶರೀರಕ್ಕೂ ವಾಣಿಗೂ ಲಾಭದಾಯಕಗಳಾಗಿವೆ. ಮೌನವ್ರತದಿಂದ ಫಲವನ್ನು ತೋರಿಸುವುದಕ್ಕಾಗಿಯೇ ಪೂರ್ವದ ಕವಿಗಳು—'ಮೌನೇನ ಕಲಹೋ ನಾಸ್ತಿ' ಎಂದು ನುಡಿದಿದ್ದಾರೆ. ಏಕಾಂತ ಮೌನಾವಸ್ಥೆಗಳಲ್ಲಿ ಈಶ್ವರನ ಧ್ಯಾನವನ್ನೂ ಗುರೂಪದಿಷ್ಟವಾದ ಶಿವಮಂ-

ತ್ರಜಪವನ್ನೂ ಮಾಡುತ್ತಿರು. ಚಿತ್ತವು ಸ್ಥಿರವಾಗುವುದಕ್ಕೆ ಏಕಾಂತಮೌನಾವಸ್ಥೆಗಳೂ ಈಶ್ವರಧ್ಯಾನವೂ ಸಾಧನಗಳಾಗಿವೆ. ಚಿತ್ತವನ್ನು ಸ್ಥಿರಗೊಳಿಸುವಾಗ ಯಾವ ಸಂಕಲ್ಪವಿಕಲ್ಪಗಳನ್ನೂ ಭಾವಿಸಬಾರದು, ಚಿತ್ತವು ಸರ್ವಥಾ ವಿಷಯರಹಿತವಾಗಿ ಕೇವಲ ಪರಮಾತ್ಮಚಿಂತನೆಯಲ್ಲಿಯೇ ಮಗ್ನವಾಗಬೇಕು. ಮನಸ್ಸಿನಲ್ಲಿ ಸಂಸಾರದ ಹಾಗೂ ಶರೀರದ ಸ್ವಲ್ಪ ಜ್ಞಾನವೂ ಇರಕೂಡದು.

ವಾಣಿಯ ಸಂಯಮನವನ್ನು ಕಟ್ಟಕಡೆಗೆ ಇಷ್ಟಾದರೂ ಮಾಡು—ಕಾರಣವಿಲ್ಲದೆ ಅನಾವಶ್ಯಕವಾಗಿ ಮಾತುಗಳನ್ನು ಎಂದೂ ಆಡಬೇಡ. ಕೆಲಸಕ್ಕೆ ಬಾರದ ಮಾತುಗಳನ್ನಾಡುವವನನ್ನು 'ಬಹುಭಾಷಿಣೀ ನಶ್ರದ್ಧಧಾತಿ ಲೋಕಃ' ಎಂದು ಬಾಣಕವಿಯು ಹೇಳಿದ್ದಾನೆ. ಯಾರ ನಿಂದೆಯನ್ನೂ ಮಾಡಬೇಡ, ಹಾಗೆಯೇ ಸ್ವಾರ್ಥ ಪರಾರ್ಥರಹಿತವಾದ ಯಾರ ಸ್ತುತಿಯನ್ನೂ ಮಾಡಬೇಡ, ಅಶ್ಲೀಲಶಬ್ದಗಳನ್ನುಚ್ಚರಿಸಬೇಡ, ಅನ್ಯರಿಗೆ ಅಹಿತವಾಗುವ ಅಸತ್ಯವಚನವನ್ನು ಎಂದೂ ನಿನ್ನ ಮುಖದಿಂದ ಹೊರಗೆ ಬಿಡಬೇಡ.

ಮನಸ್ಸಿನಲ್ಲಿ ಭಯ, ಅಶಾಂತಿ, ಉದ್ವೇಗ ವಿಷಾದಗಳಿಗೆ ಸ್ಥಾನವನ್ನು ಕೊಡಬೇಡ. ಈಶ್ವರನ ಕೃಪೆಯಮೇಲೂ ಅತ್ಯದ್ಭುತ ಶಕ್ತಿಗಳ ಮೇಲೂ ವಿಶ್ವಾಸವಿಟ್ಟು ಯಾವಾಗಲೂ ಶಾಂತನಾಗಿ, ನಿರ್ಭೀತನಾಗಿ, ಪ್ರಸನ್ನನಾಗಿರುವುದಕ್ಕೆ ಯತ್ನಮಾಡು. ಉತ್ತೇಜನವಸ್ತುವಿನಿಂದ ದೂರನಾಗಿರುವುದನ್ನು ಕಲಿ, ಧೈರ್ಯವನ್ನೆಂದಿಗೂ ಬಿಡಬೇಡ; ಉತ್ತೇಜನದಿಂದಲೂ ಅಧೈರ್ಯದಿಂದಲೂ ನಿವಾರಿಸಲು ಕಷ್ಟಗಳಾದ ಶಾರೀರಿಕ ಮಾನಸಿಕ ರೋಗಗಳುಂಟಾಗುತ್ತವೆ.

ಯಾರಿಗೂ ಅನಾದರವನ್ನುಂಟುಮಾಡಬೇಡ, ಯಾರನ್ನೂ ನೋಡಿ ಹೇಸಿಕೊಳ್ಳಬೇಡ. ಯಾರಿಗೂ ದುಃಖವನ್ನು ಕೊಡಬೇಡ. ಪರರಿಂದ ಒದಗಿದ ಕಷ್ಟವನ್ನು ಸಹನಮಾಡಿಕೋ, ಆದರೆ ನಿನ್ನ ಸಲುವಾಗಿ ಎಂದೂ ಅವರನ್ನು ಕಷ್ಟಭಾಗಿಗಳನ್ನಾಗಿ ಮಾಡಬೇಡ. ಯಾವುದೋ ಒಂದು ಒಳ್ಳೆಯ ಕೆಲಸದಲ್ಲಿ ಆಸಕ್ತನಾದ ಮನುಷ್ಯನ ಮನಸ್ಸನ್ನು ಭಂಗಗೊಳಿಸಬೇಡ. ಅವನಿಗೆ ಉತ್ಸಾಹವನ್ನು ಕೊಡು. ಮತ್ತು 'ಪರೋಪಕಾರೋಪಕಾರಂ ಶರೀರಂ, ಸ್ವಲ್ಪಲಘು ಚ ಜೀವಿತಂ' ಎಂದು ತತ್ವಜ್ಞಾನಿಗಳು ಹೇಳಿರುವುದರಿಂದ ಸಾಧ್ಯವಾದಮಟ್ಟಿಗೂ ಅವನ ಒಳ್ಳೆಯ ಕೆಲಸಕ್ಕೆ ಸಹಾಯಮಾಡು.

ಬಡವರನ್ನೂ, ದುಃಖಿಗಳನ್ನೂ, ರೋಗಿಗಳನ್ನೂ ದಯಾದೃಷ್ಟಿಯಿಂದ ನೋಡಿ ರಕ್ಷಣೆಮಾಡು, ಹಾಗೂ ಆದರ ಪ್ರೇಮಗಳಿಂದ ಅವರನ್ನು ಮಾತಾಡಿಸು. ಕೈಲಾದಮಟ್ಟಿಗೆ ಸಹಾಯಮಾಡು. ಪುಣ್ಯಸಾಧನೆಗೆ ಪರೋಪಕಾರವೇ ಮಿಗಿಲಾದುದು. ಅಂತೆಯೇ 'ಅಷ್ಟಾದಶ ಪುರಾಣೇಷು ವ್ಯಾಸಸ್ಯ ವಚನದ್ವಯಂ | ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ||' ಎಂದು ಆರ್ಯರು ನುಡಿದಿದ್ದಾರೆ. 'ಆತ್ಮವತ್ಸರ್ವಭೂತೇಷು ಯಃ ಪಶ್ಯತಿ ಸ ಪಂಡಿತಃ' ಎಂದಿರುವುದರಿಂದ ಈ ಮೇಲ್ಕಾಣಿಸಿದವರನ್ನು ನಿನ್ನವರನ್ನಾಗಿ ಭಾವಿಸಿ ಈಶ್ವರಭಜನೆಯಲ್ಲಿಯೂ ಸತ್ಸೇವೆಯಲ್ಲಿಯೂ ಇರಿಸುವಂತೆಮಾಡು.

ಹೃದಯದ ಸರಳತೆಯಲ್ಲಿ ದೇವತ್ವಋಷಿತ್ವಗಳುಂಟು, ಅದರಂತೆ ಕಾಪಟ್ಯದಲ್ಲಿ ಅಸುರತ್ವವುಂಟು. ಚಿತ್ತವನ್ನು ಕಪಟರಹಿತವಾಗಿರಿಸು. ಒಂದುವೇಳೆ ಅದರ ಮಾನನ್ನು ಮಾಡಲಾಗದಿದ್ದರೂ ಚಿಂತೆಯಿಲ್ಲ. ಆದರೆ ಕಪಟಿಗಳ ಮತ್ತು ವಾಕ್ಚತುರರ ಮುಂದೆ ನೀನು ಹುಚ್ಚನಂತಿರುವುದೇ ಲೇಸು. ಜನರ ಭ್ರಮಪೂರ್ಣವಾದ ದೃಷ್ಟಿಪಾತದಿಂದ ನೀನು ಐಹಿಕೋನ್ನತಿಯನ್ನು ಮಾಡಲು ಸಾಧ್ಯವಾಗದಿದ್ದರೂ ಅಡ್ಡಿಯಿಲ್ಲ, ಪರಂತು ಕಪಟಚಾತುರ್ಯಗಳಿಂದ ತಮ್ಮನ್ನು ದೊಡ್ಡವರನ್ನಾಗಿ ತಿಳಿದುಕೊಂಡಿರುವ ಜನಗಳಿಂದ ನಿಜವಾಗಿ ಯಾವಾಗಲೂ ದೂರದಲ್ಲಿರು.

ಒಬ್ಬ ಮಹಾತ್ಮನು ಹೇಳುವುದೇನೆಂದರೆ—ಈ ಕಾಲದಲ್ಲಿ ಪ್ರಾಯಃ ಎಲ್ಲರೂ ಮೃದುಮಧುರವಾಗಿ ಮಾತಾಡುವುದರಲ್ಲಿ ನಿಪುಣರಾಗಿದ್ದಾರೆ, ಆದರೆ ಹೃದಯದಲ್ಲಿ ದಂಭಕಪಟಗಳು ತುಂಬಿಕೊಂಡಿವೆ. ಪೂರ್ವಿಕರು ಮಾತಾಡುವುದನ್ನರಿಯದವರಾಗಿದ್ದರೇನಾಯಿತು, ಅವರ ಹೃದಯವು ಸರಳವಾಗಿದ್ದಿತು. ಅವರು ತಮ್ಮ ದೋಷಗಳನ್ನು ಮುಚ್ಚಿಕೊಳ್ಳುವುದನ್ನು ತಿಳಿಯುತ್ತಿರಲಿಲ್ಲ. ದಂಭವುಳ್ಳವನಾಗಿ ಮತ್ತೆ ಮಾತಾಡಿ ಶಿಕ್ಷೆ ಪಡೆಸಿಕೊಳ್ಳುವುದಕ್ಕಿಂತಲೂ ಸರಳಸ್ವಭಾವವುಳ್ಳವನಾಗಿ ಹಳ್ಳಿಯವನೆನಿಸಿಕೊಳ್ಳುವುದೇ ನಿಜವಾದ ಉನ್ನತಿಯ ಲಕ್ಷಣವಾಗಿದೆ. ಸರಳತನದಲ್ಲಿಯೇ ಪವಿತ್ರತೆಯುಂಟು, ಕಾಪಟ್ಯದಲ್ಲಿಯೇ ಅಪವಿತ್ರತೆಯುಂಟು. ಕಪಟಿಯು ಅನ್ಯರನ್ನು ಕೆಡಿಸುವುದಕ್ಕಿಂತ ಹೆಚ್ಚಾಗಿ ತಾನೇ ಕೆಡುವನು.

ನಿನ್ನ ಪಾಪವನ್ನು ಮುಚ್ಚಿಕೊಳ್ಳಬೇಡ, ಪುಣ್ಯವನ್ನು ಹೊರಗೆಡವಬೇಡ; ಮುಚ್ಚಿಕೊಳ್ಳುವುದರಿಂದ ಪಾಪವು ಹೆಚ್ಚುವದು, ಹೊರಗಿಡುವುದರಿಂದ ಪುಣ್ಯವು ಕಡಿಮೆಯಾಗುವುದು. ಪುಣ್ಯವನ್ನು ಕರ್ಪೂರವನ್ನಾಗಿ ತಿಳಿ; ಗಾಳಿಯು ಬಾಯ್ದೆರೆದು ಇರುವೆಯಾದರೆ ಕರಗಿ ಹಾರಿಹೋಗುವುದು. ಪಾಪವು ದುಷ್ಟಪದಾರ್ಥವು, ಮುಚ್ಚಿಡುವೆಯಾದರೆ ಒಳಗೊಳಗೇ ವಿಷವಾಯುವನ್ನುಂಟುಮಾಡಿ ಹೃದಯದ ಸಮಸ್ತ ಶುದ್ಧಭಾವಗಳನ್ನು ನಾಶಮಾಡುವುದು.

ಜೀವನದ ಒಂದೊಂದು ಕ್ಷಣವನ್ನು ದೊಡ್ಡಬೆಲೆಯುಳ್ಳದನ್ನಾಗಿ ತಿಳಿ, ಮತ್ತು ಸಾವಧಾನದೊಡನೆ ಪ್ರತಿಕ್ಷಣಕ್ಕೂ ಈಶ್ವರ (ಆತ್ಮ) ಚಿಂತನೆಯನ್ನು ಮಾಡುತ್ತ ಲೋಕಕ್ಕೆ ಹಿತವಾಗುವ ಕಾರ್ಯದಲ್ಲಿ ತತ್ಪರನಾಗು. ಯಾವುದೊಂದು ಕ್ಷಣವನ್ನೂ ಅಹಿತಕಾರ್ಯದಲ್ಲಿ ಕಳೆಯಬೇಡ, ಅಹಿತವು ವಾಣಿಯಿಂದಲೂ ಶರೀರದಿಂದಲೂ ಉಂಟಾಗುವುದೆಂದಿಷ್ಟೇ ಅಲ್ಲ; ಆದರೆ ಎಂದು ನಿನ್ನ ಮನಸ್ಸಿನಲ್ಲಿ ದುರಾಲೋಚನೆಯು ಹುಟ್ಟುವದೋ, ಅಂದೇ ನೀನು ನಿನಗೂ ಅನ್ಯರಿಗೂ ಅಹಿತವನ್ನುಂಟುಮಾಡಲುದ್ಯುಕ್ತನಾದೆ ಹಾಗೆಯೇ ಸರಿ. ದುರಾಲೋಚನೆಯನ್ನು ಮನಸ್ಸಿನಲ್ಲಿ ಎಂದೂ ತರಬೇಡ, ಒಂದುವೇಳೆ ಪೂರ್ವಸಂಸ್ಕಾರವಶದಿಂದ ಉಂಟಾದರೂ ಆ ಕೂಡಲೇ ಅದನ್ನು ತೆಗೆದು ಹೊರಗೊಗೆ.

'ಶಿವಮಸ್ತು ಸರ್ವಜಗತಾಂ, ಪರಹಿತನಿರತಾ ಭವಂತು ಭೂತಗಣಾಃ |
ದೋಷಾಃ ಪ್ರಯಾಂತು ಶಾಂತಿಂ, ಸರ್ವತ್ರ ಸುಖೀ ಭವತು ಲೋಕಃ ||' (ಕಲ್ಯಾಣ).

1-7-74

ಶ್ರೀ ಜಗದ್ಗುರು ವಿಶ್ವಾರಾಧ್ಯಾಯನಮಃ

ಸ್ವದೇಶಭಕ್ತಿ.

(ಲೇಖಕ—ಸಿದ್ಧಲಿಂಗಶರ್ಮ ಬಂಕಾಪುರ)
ಶ್ರೀ ಕ್ಷೇತ್ರ ಕಾಶೀ.

ಪ್ರತಿಯೊಬ್ಬರಿಗೂ ತಮ್ಮ ಜನ್ಮಭೂಮಿಯಮೇಲೆ ಶ್ರದ್ಧೆಯು ಮುಖ್ಯವಾಗಿರಬೇಕು. ಇದು ಮನುಷ್ಯನ ಮುಖ್ಯ ಧರ್ಮವಾಗಿದೆ. ನಾವು ಯಾವದೇಶದಲ್ಲಿ ಉತ್ಪನ್ನರಾಗಿರುತ್ತೇವೆಯೋ ಯಾವ ದೇಶದ ಅನ್ನ, ನೀರು, ವಸ್ತ್ರಾದಿಗಳಿಂದ ನಮ್ಮ ಶರೀರ ಪೋಷಣೆಯಾಗುತ್ತದೆಯೋ ಆ ದೇಶದ ಮೇಲೆ ಭಕ್ತಿವಿಶ್ವಾಸಗಳನ್ನಿಡುವುದು ಮನುಷ್ಯನ ಕರ್ತವ್ಯವಾಗಿದೆ. ಆದುದರಿಂದಲೇ ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ || ಜನನಿಯು ಮತ್ತು ಜನ್ಮಭೂಮಿಯು ಸ್ವರ್ಗಕ್ಕಿಂತಲೂ ಶ್ರೇಷ್ಠವೆಂದು ಆರ್ಯರು ನುಡಿದಿದ್ದಾರೆ. ಸ್ವರ್ಗದಲ್ಲಿರತಕ್ಕ ಸುಖವನ್ನು ನಾವು ಪುರಾಣೇತಿಹಾಸಗಳಲ್ಲಿ ಮಾತ್ರ ನೋಡುತ್ತಲಿದ್ದೇವೆ; ಹೊರತು ಸ್ವರ್ಗದಲ್ಲಿರತಕ್ಕ ಸುಖವನ್ನು ಈ ಜನ್ಮದಲ್ಲಿ ಯಾರೂ ಅನುಭವವನ್ನು ಹೊಂದಿರುವದಿಲ್ಲ. ಆದರೆ ಮಾತೃಭೂಮಿಯು ಕೊಡತಕ್ಕ ಸುಖವನ್ನು ಮಾತ್ರ ಮೇಲಿಂದಮೇಲೆ ಹೊಂದುತ್ತಲಿದ್ದೇವೆ. ಇದೇ ಭೂಮಿಯಲ್ಲಿ ಜನ್ಯವಾಗಿರತಕ್ಕ ವನಸ್ಪತಿಗಳಿಂದ ಈ ದೇಶದವರೂ ಪರದೇಶದವರೂ ಕೂಡ ಔಷಧಗಳನ್ನು ತಯಾರಿಸಿ ಘೋರವಾದ ರೋಗಗಳಿಂದ ಮುಕ್ತರನ್ನಾಗಿ ಮಾಡುತ್ತಾರೆ. ಮಾತೃಭೂಮಿಯಲ್ಲಿರತಕ್ಕ ತೀರ್ಥಸ್ನಾನ, ದೇವಸಂದರ್ಶನ, ಯಾತ್ರಾದಿಗಳನ್ನು ಮಾಡಿ ಪುನೀತರಾಗುತ್ತಾರೆ. ಇದೇ ಭೂಮಿಯಲ್ಲಿ ಪೂರ್ವಕಾಲದಲ್ಲಿ ಮಹಾಮಹಾ ಋಷಿಗಳೂ, ಮುನಿಗಳೂ, ವಿದ್ವಾಂಸರೂ, ಸನ್ಯಾಸಿಗಳೂ ಜ್ಞಾನವನ್ನು ಸಂಪಾದಿಸಿಕೊಂಡು ಕೇವಲ ಸ್ವದೇಶಭಕ್ತಿ, ಗುರುಭಕ್ತಿಯುಳ್ಳವರಾಗಿದ್ದರಿಂದಲೇ ಆ ಮಹಾತ್ಮರು ಭಕ್ತಿಪ್ರಧಾನರಾಗಿ ಹೋಗಿರುತ್ತಾರೆ. ಅವರು ಈಗಿನವರಂತೆ ಭಕ್ತಿವಿಹೀನರಾಗಿ ತಮ್ಮ ಕುಶಲಬುದ್ಧಿಯನ್ನು ಪ್ರಕಟಗೊಳಿಸುತ್ತ ಅಂತಃಕಲಹಗಳನ್ನು ಬೆಳೆಯಿಸುತ್ತ ನಾನು ಸ್ವದೇಶಭಕ್ತ, ಅವನು ಸ್ವದೇಶಭಕ್ತನೆಂದು ಬಾಹ್ಯಾಡಂಬರವನ್ನು ಮಾಡುತ್ತ ಸದಾ ಅಸಹನಶೀಲತೆಯಿಂದೊಡಗೂಡಿದ ಈ ಅಂತಃಕರಣದವರಿಗೆ ಸ್ವದೇಶಭಕ್ತರೆನ್ನಬೇಕೇ? ಛೇ ಎಂದಿಗೂ ಅನ್ನಲಾಗದು. ಪೂರ್ವದಲ್ಲಿ ಮಹರ್ಷಿಗಳಿಂದಲೂ, ತಪಸ್ವಿಗಳಿಂದಲೂ, ಮಹಾರಾಜರಿಂದಲೂ ನಮ್ಮ ಭಾರತಭೂಮಿಯು ಪುಣ್ಯಭೂಮಿಯೆಂದೆನಿಸಿಕೊಂಡಿತ್ತು. ಈಗಿನ ಕೆಲಭಾರತಪುತ್ರರು ಸ್ವದೇಶಭಕ್ತರೆಂದು ಹೇಳಿಕೊಂಡು ಸ್ವಾರ್ಥಕ್ಕಾಗಿ ದುರ್ಮಾರ್ಗವನ್ನು ಬೋಧಿಸುತ್ತಲಿದ್ದಾರೆ. ಕಿಂತು ಇವರು ಬೋಧಿಸತಕ್ಕ ಮಾತುಗಳೆಲ್ಲ ತಮ್ಮ ದುರ್ಗುಣ, [redacted] ದುಷ್ಟಮಾರ್ಗಗಳನ್ನು ಮರೆಮಾಚುವದಕ್ಕೇ ಅನುಸರಿಸುತ್ತವೆಯೇ ಹೊರತು ರಾಷ್ಟ್ರದ ಹಿತಕಾರ್ಯವನ್ನೆಂದೂ ಅನುಸರಿಸುವದಿಲ್ಲ. ಜನರಿಗೆ ಸ್ವದೇಶಭಕ್ತರೆಂದು ತೋರಿಸುವದಕ್ಕೋಸ್ಕರ ಈ ಅಜ್ಞರು ಸರ್ವಾಂಗದಲ್ಲಿ ಖಾದಿಯ ಬಟ್ಟೆಯ ವೇಷವನ್ನು ಹಾಕಿಕೊಂಡು ಕಾಪಟ್ಯದಿಂದ ಮಾಡತಕ್ಕ ನಟನವನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಮಹಾಜನಗಳು ಈ ದುರಾತ್ಮರ ಮೋಸಕ್ಕೊಳಗಾಗದೆ ಯಥಾರ್ಥತತ್ವವನ್ನು ವಿಮರ್ಶಿಸಿ ಮಾತೃಭೂಮಿಸೇವಾಸ್ವದೇಶಭಕ್ತಿಯುಳ್ಳವರಾಗಬೇಕೆಂದು ಕೋರಿಕೆ.

ಮಹಾಶಿವರಾತ್ರಿ.

12-2-1934 ನೇ ಸೋಮವಾರ.

ಶ್ರೀಶೈಲಮಹಾಕ್ಷೇತ್ರದಲ್ಲಿ ಆರೋಗ್ಯರಕ್ಷಣೆಯ ಏರ್ಪಾಡುಗಳು.

ಕೃಷ್ಣಾನದಿಯು ಪುಷ್ಕರದಲ್ಲಿರುವುದರಿಂದಲೂ ಶಿವರಾತ್ರಿಯು ಸೋಮವಾರವಾಗುವುದರಿಂದಲೂ ಈ ವರ್ಷ ಯಾತ್ರಿಕರು ಹೆಚ್ಚಾಗಿ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ. ಕಂಚಿ ಕಾಮಕೋಟಿಪೀಠದ ಶ್ರೀ ಶಂಕರಾಚಾರ್ಯಸ್ವಾಮಿಗಳವರು ದಯಮಾಡಿಸುವದು ಯಾತ್ರಿಕರು ಹೆಚ್ಚಾಗಿ ಬರುವುದಕ್ಕೆ ಮತ್ತೊಂದು ಕಾರಣವಾಗಿದೆ.

ಮೊನ್ನೆ ಮೊನ್ನೆ ಕರ್ನೂಲ್ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರವರು ಶ್ರೀಶೈಲಕ್ಕೆ ಬಂದಿದ್ದರು. ಆರೋಗ್ಯರಕ್ಷಣೆಯ ಏರ್ಪಾಡುಗಳೆಲ್ಲವೂ ಅವರ ಖುದ್ದು ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವವು. ಸರ್ವಸಮರ್ಪಕವಾದ ಏರ್ಪಾಡುಗಳನ್ನು ಮಾಡುವುದಕ್ಕೆ ಅವಶ್ಯಕವಾದ ಎಚ್ಚರಿಕೆಗಳನ್ನೆಲ್ಲಾ ತೆಗೆದುಕೊಳ್ಳಲಾಗಿದೆ.

ಅಧಿಕಾರಿಗಳ ಮತ್ತು ಯಾತ್ರಿಕರ ಉಪಯೋಗಕ್ಕಾಗಿ ದೇವಸ್ಥಾನದ ಒಳಹೊರಭಾಗಗಳಲ್ಲಿ ಹುಂಗಾಮಿ ಜೋಪಡಿಗಳನ್ನು ಕಟ್ಟಿಸಲಾಗಿದೆ. ದೇವಾಲಯ ಪ್ರಾಕಾರದ ಒಳಭಾಗದಲ್ಲಿ ವಿಶೇಷ ಹೊಲಸು ಆಗದಂತೆಯೂ ಮತ್ತು ಆರೋಗ್ಯಕರವಾಗಿರುವಂತೆಯೂ, ಜೋಪಡಿಗಳ ಸಂಖ್ಯೆಯನ್ನು ಬಹುಮಟ್ಟಿಗೆ ಕಡಿಮೆಮಾಡಲಾಗಿದೆ. ಪಾತಾಳಗಂಗೆ ಮತ್ತು ಶಿಖರೇಶ್ವರದಲ್ಲಿಯೂ ಜೋಪಡಿಗಳನ್ನು ಕಟ್ಟಿಸಲಾಗುವದು.

ಈ ಮೊದಲು ಹೊಯಿದ ಮಳೆಯಿಂದ ದೇವಾಲಯದ ಪ್ರಾಕಾರದ ಒಳಹೊರಭಾಗಗಳಲ್ಲಿರುವ ಕೆರೆಭಾವಿಗಳು ನೀರಿನಿಂದ ತುಂಬಿವೆ. ಯಾತ್ರಿಕರಿಗೆ ನೀರಿಗೆ ಅನುಕೂಲವಾಗುವಂತೆ ತೊಟ್ಟಿಗಳ ಹತ್ತಿರ ಇಳಿದುಕೊಳ್ಳುವಂತೆ ಮಾಡಲಾಗುವದು. ಈ ತೊಟ್ಟಿಗಳು ಇಂಜಿನ್ನಿನಿಂದ ಭರ್ತಿಮಾಡಲ್ಪಡುವುವು. ಮತ್ತು ನಲ್ಲಿಗಳನ್ನು ಹಾಕಲಾಗಿದೆ. ಶಿಖರೇಶ್ವರ, ಭೀಮನಕೊಳ್ಳ, ಬೊಡುಗಲಮಠ, ಪೆದ್ದಚೆರುವು ಮತ್ತು ನಾಗಲೂಟಿ ಈ ಸ್ಥಳಗಳಲ್ಲೆಲ್ಲಾ ನೀರಿನ ಸರಬರಾಜು ಚೆನ್ನಾಗಿದೆ.

ಪೆದ್ದಚೆರುವುದಲ್ಲಿರುವ ಡಿಸ್ಟ್ರಿಕ್ಟ್‌ಬೋರ್ಡಿನ ಭಾವಿಯ ಕೆಲಸವು ಪೂರೈಸುತ್ತಾ ಬಂದಿದೆ. ಇದಕ್ಕೆ ಕಟಕಟೆ, ಚಚ್ಚಲು, ಗಾಲಿಗಳನ್ನು ಕಟ್ಟಿಸುವದು ಮತ್ತು ಈಗ ನಿಂತಿರುವ ನೀರನ್ನು ಎತ್ತಿಹಾಕುವದು ಇಷ್ಟುಮಾತ್ರ ಉಳಿದಿದೆ.

ಎಲೆಕ್ಟ್ರಿಕ್ ಯಂತ್ರಗಳು ಈ ಸಾರೆ ಸರಿಯಾಗಿ ಕೆಲಸಮಾಡುವಂತೆ ಏರ್ಪಾಡುಮಾಡಲಾಗಿದೆ. ಏನಾದರೂ ಹೆಚ್ಚು ಕಡಿಮೆಯಾದೀತೆಂದು ಸಾಕಾದಷ್ಟು ಪೆಟ್ರೊಮ್ಯಾಕ್ಸ್ ದೀಪಗಳನ್ನು ಶೇಖರಿಸಲಾಗಿದೆ.

ಕರ್ನೂಲ್ ಡಿಸ್ಟ್ರಿಕ್ಟ್ ಹೆಲ್ತ್‌ಆಫೀಸರ ಸಲಹೆಯ ಮೇರೆಗೆ ಕೆಲವು ಕಕ್ಕಸುಗಳನ್ನು ಹೆಚ್ಚಾಗಿ ಕಟ್ಟಿಸಲಾಗುವದು. ಝಾಡಮಾಲಿಗಳೂ, ತೋಟಿಗಳೂ ಹೆಚ್ಚಾಗಿ ನೇಮಿಸಲ್ಪಡುವರು.

ನೀರಿನ ತೊಟ್ಟಿಗಳು ರಸ್ತೆಯ ಉತ್ತರದಿಕ್ಕಿನ ಕೊನೆಯಲ್ಲಿ ಇರುತ್ತವೆ. ದೇವಾಲಯದ ಪೂರ್ವಬಾಗಿಲ ಮುಂಭಾಗದಲ್ಲಿ ಅಂಗಡಿಗಳನ್ನಿಡುವದರಿಂದ ಮೇಲ್ಕಂಡ ತೊಟ್ಟಿಗಳಿಗೆ ನೀರಿಗಾಗಿ ಹೋಗಿಬರುವ ಜನರಿಗೆ ವಿಶೇಷ ತೊಂದರೆಯಾಗುತ್ತದೆ. ಆದ್ದರಿಂದ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ ಸಲಹೆಯಮೇಲೆ ಪಾತಾಳಗಂಗೆಗೆ ಹೋಗುವ ರಸ್ತೆಯ ಉಭಯಪಾರ್ಶ್ವಗಳಲ್ಲಿರುವ ಮಂಟಪಗಳೂ, ದೇವಾಲಯದ ಹೆಬ್ಬಾಗಿಲಿನ ಮುಂದೆ ಪೂರ್ವದ ರಸ್ತೆಯಲ್ಲಿರುವ ಮಂಟಪಗಳೂ ಅಂಗಡಿಗಳಿಗಾಗಿ ಕಾದಿಡಲ್ಪಡುವುವು.

ಪದ್ಧತಿಯಮೇರೆಗೆ ಒಬ್ಬ ಸಬ್-ಅಸಿಸ್ಟೆಂಟ್ ಸರ್ಜನ್‌ರನ್ನು ಕಳುಹಿಸುವಂತೆಯೂ, ಶಿವರಾತ್ರಿಯು ಪ್ರಾರಂಭವಾಗುವದಕ್ಕೆ ಮುಂಚೆ 4 ದಿನಗಳಿಂದ ಶಿವರಾತ್ರಿಯಾದನಂತರ 3 ದಿವಸಗಳವರೆಗೆ ಒಂದು ಹುಂಗಾಮಿ ಆಸ್ಪತ್ರೆಯನ್ನು ಏರ್ಪಡಿಸುವಂತೆಯೂ, ನಂದಿಕೋಟಕೂರು ತಾಲೂಕುಬೋರ್ಡ್ ಪ್ರೆಸಿಡೆಂಟರನ್ನು ಪ್ರಾರ್ಥಿಸಲಾಗುವದು.

ಪಿ. ರಾಮಯ್ಯ, ಪ್ರೆಸಿಡೆಂಟ್,
17-1-34. ಶ್ರೀಶೈಲಂ ಮ್ಯಾನೇಜ್‌ಮೆಂಟ್‌ಬೋರ್ಡ್,
ಕೊಯಿಲ್‌ಕುಂಟ್ಲ.

ಶಾಸ್ತ್ರಿಗಳು ಬೇಕಾಗಿದೆ.

ಮಳಲಿ ಮಠದಿಂದ ಹುಂಚದಕಟ್ಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾನಂದಾಶ್ರಮ ಸಂಸ್ಕೃತಪಾಠಶಾಲೆಗೆ ವೈದಿಕ ಜ್ಯೋತಿಷ ಸಾಹಿತ್ಯ ಇವುಗಳಲ್ಲಿ ಕುಶಲರಾದ ಒಬ್ಬ ಶಾಸ್ತ್ರಿಗಳು ಬೇಕಾಗಿದ್ದಾರೆ. ಬರಲಪೇಕ್ಷೆಯುಳ್ಳವರು ಈ ಕೆಳಗಿನ ಅಡ್ರೆಸ್ಸಿಗೆ ಈ ತಿಂಗಳ ಅಖೈರೊಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಯೋಗ್ಯತೆಗನುಸಾರವಾಗಿ ಸಂಬಳವು ಕೊಡಲಾಗುವುದು.

ಪಾಠಶಾಲಾ ವ್ಯವಸ್ಥಾಪಕ,
ಕ್ಯಾರಂದೂರು ಅಯ್ಯಪ್ಪಗೌಡ,
ಮಳಲಿಮಠ,
ಪೋ|| ಆಗ್ರಾ ಡಿ|| ಶಿವಮೊಗ್ಗ.

ಪಂಚಾಚಾರ್ಯ ಪ್ರಭಾ.

೧೯೩೪ನೇ ಜನವರಿ ತಾ|| ೨೯ ನೇ ಸೋಮವಾರ.

ಭೂಕಂಪದಿಂದ ಅನಾಹುತ.

ಈ ತಿಂಗಳು ಹದಿನೈದನೆಯ ತಾರೀಖಿನ ದಿವಸ ಉತ್ತರಹಿಂದೂಸ್ಥಾನದಲ್ಲಿ ಸಂಭವಿಸಿದ ಭೂಕಂಪದಿಂದುಂಟಾದ ಅನಾಹುತಗಳನ್ನು ಅಷ್ಟಿಷ್ಟೆಂದು ನಿರ್ಣಯಿಸಲು ಸಾಧ್ಯವಿಲ್ಲವೆಂದು ದೇಶವೇ ಪರಿತಪಿಸುತ್ತಿರುವಷ್ಟರೊಳಗಾಗಿ, ಹುಣ್ಣಿನ ಮೇಲೆ ಹುಣ್ಣು ಹುಟ್ಟಿದಂತೆ ಮುಝಫರಪುರ ಮುಂತಾದ ಸ್ಥಾನಗಳಲ್ಲಿ ಪುನಃ ಭೂಕಂಪವುಂಟಾಯಿತೆಂಬ ವಾರ್ತೆಯು ಪ್ರತಿಯೊಬ್ಬರಿಗೂ ಬಹುದುಃಖವನ್ನುಂಟುಮಾಡಿರುತ್ತದೆ. ನಮ್ಮ ಭಾರತಮಾತೆಯ ಸುಂದರವಾದ ಮುಖಕಮಲದಂತೊಪ್ಪುತ್ತಿರುವ ಉತ್ತರಹಿಂದೂಸ್ಥಾನವು ದೈವದುರ್ವಿಲಾಸದಿಂದ ಒಂದು ಕ್ಷಣಮಾತ್ರದಲ್ಲಿ ಈ ವಿಧವಾದ ಅಸಾಧ್ಯ ವಿಪತ್ಪರಂಪರೆಗೀಡಾಗುವುದೆಂದು ಯಾರೂ ಕನಸುಮನಸುಗಳಲ್ಲಿಯೂ ಭಾವಿಸಿರಲಿಲ್ಲ. ಉತ್ತರಹಿಂದೂಸ್ಥಾನದಲ್ಲುಂಟಾದ ಈ ಮಹಾಪ್ರಳಯವನ್ನು ಸ್ಮರಿಸಿಕೊಂಡರೆ ಪ್ರತಿಯೊಬ್ಬನ ಹೃದಯವು ನಡುಗುವುದು; ಹಸ್ತಗಳು ಕಂಪಿಸುವುವು; ಕಂಠವು ಗದ್ಗದಸ್ವರದಿಂದ ಕೂಡುವದು; ದೇಹದಲ್ಲಿ ಬೆವರು ಒಡೆಯುವದು. ಅಸಾಧಾರಣ ಕ್ಷಮಾಗುಣವುಳ್ಳ ಭಾರತ ಭೂಮಾತೆಯು ತನ್ನ ಮಕ್ಕಳಾದ ಭಾರತೀಯರನ್ನು ಅತ್ಯಾನಂದದಿಂದ ಪರಿಪೋಷಿಸುತ್ತಲಿದ್ದು ಆಕಸ್ಮಿಕವಾಗಿ ಇಷ್ಟರಮಟ್ಟಿಗೆ ತನ್ನ ಮಕ್ಕಳಮೇಲೆ ಕೋಪಿಸಿಕೊಳ್ಳಲು ಕಾರಣವೇನಿರಬಹುದೆಂದು ಬಹುಜನಗಳು ಆಲೋಚಿಸುತ್ತಿರುವರು. ಮಕ್ಕಳು ಎಂಥ ಅಕ್ಷಮ್ಯವಾದ ತಪ್ಪುಗಳನ್ನು ಮಾಡಿದರೂ ತಾಯಿಯು ಸಹಿಸುವ ಸ್ವಭಾವವುಳ್ಳವಳೆಂದು ಸರ್ವಾನುಭವಸಿದ್ಧವಾಗಿದ್ದರೂ, ಪ್ರಕೃತದಲ್ಲಿ ಲೋಕಮಾತೆಯಾದ ಭೂದೇವಿಯು ತನ್ನ "ಸರ್ವಂಸಹಾ" ಎಂಬ ನಿಜನಾಮಕ್ಕೆ ವಿರೋಧವಾಗಿ ವರ್ತಿಸಲು ಕಾರಣವೇನಿರಬಹುದೆಂದು ಅನೇಕರು ವಿಷಾದಾಶ್ಚರ್ಯಗಳಿಂದೊಡಗೂಡಿದವರಾಗಿ ಆಲೋಚನಾಪರರಾಗಿರುವರು. ಇದುವರೆಗೂ ಇದರ ಯಥಾರ್ಥತತ್ತ್ವವೇ ನಿರ್ಧರವಾಗಲೊಲ್ಲದು. ಗಣಿತಶಾಸ್ತ್ರವಿಶಾರದರು ಇದಕ್ಕೆ ಗ್ರಹಗತಿಗಳ ಚೇಷ್ಟೆಯೇ ಕಾರಣವೆಂದು ಹೇಳುವರು. ಧರ್ಮಶಾಸ್ತ್ರಜ್ಞರು ಅಧರ್ಮಭಾರದಿಂದ ಈ ವಿಪತ್ಪರಂಪರೆಯೊದಗಿತೆಂದೂಹಿಸುವರು. ಕಾಲಜ್ಞಾನಿಗಳು ಇದು ಕಾಲಪರಿಪಾಕವೆಂದು ಹೇಳುತ್ತಿರುವರು. ನೀತಿವಿಶಾರದರು ಜನಗಳು ನೀತಿಬಾಹಿರರಾದುದರಿಂದ ಹೀಗಾಯಿತೆಂದು ಅನುಮಾನಿಸುವರು. ಶಿಷ್ಟಜನಗಳು ದುರಾಚಾರದ ಹೆಚ್ಚಳಿಕೆಯಿಂದ ಹೀಗಾಯಿತೆಂದೂಹಿಸುವರು. ಆಸ್ತಿಕ ಜನರು ಈಶ್ವರನು ಒಂದೊಂದು ಸಮಯದಲ್ಲಿ ಹೀಗೆ ತನ್ನ ಫಾಲನೇತ್ರವನ್ನು ತೆರೆಯುವುದುಂಟೆಂದು ಹೇಳುತ್ತಿರುವರು. ವೈಜ್ಞಾನಿಕಶಾಸ್ತ್ರಜ್ಞರು ಭೂಮಿಯೊಳಗೆ ಗಂಧಕ ಮುಂತಾದ ದ್ರಾವಕ ಪದಾರ್ಥಗಳಿರುವುದರಿಂದ ಒಂದೊಂದು ಸಾರೆ ಹೀಗೆ ಸ್ಫೋಟವಾಗುವುದುಂಟೆಂದು ಹೇಳುತ್ತಿರುವರು. ಹೀಗೆ ಅವರವರು ಯಾವ ಯಾವ ವಿದ್ಯೆಯನ್ನು ಬಲ್ಲವರಾಗಿರುವರೋ ಆಯಾಯ ಭಾವಾನುಸಾರವಾಗಿ ತಮ್ಮ ತಮ್ಮ ಮುಖದಿಚ್ಛೆಗೆ ಮಾತನಾಡಿಕೊಳ್ಳುತ್ತಿರುವರು. ಇದು ಹೀಗೆಯೇ ಸರಿಯೆಂದು ನಿಶ್ಚಯ ಮಾಡುವ ಶಕ್ತಿಯು ಕಿಂಚಿಜ್ಞರಾದ ಮಾನವರಲ್ಲಿರುವುದಿಲ್ಲ. ಆಸ್ತಿಕರು ಎಲ್ಲದಕ್ಕೂ ದೈವವನ್ನು ಮುಂದೊಡ್ಡುವದೂ, ನಾಸ್ತಿಕರು ಯುಕ್ತಿವಾದವನ್ನು ಮುಂದೊಡ್ಡುವದೂ ಅನಾದಿಕಾಲದಿಂದ ರೂಢಿಯಾಗಿ ಬಂದಿರುತ್ತದೆ. ಅಸ್ತು! ಪ್ರಕೃತದಲ್ಲ ನಮ್ಮ ಭಾರತೀಯರಿಗೆ ಅನಿರ್ವಚನೀಯವಾದ ಧಕ್ಕೆಯೇನೋ ತಗಲಿದ್ದಾಯಿತು. ಇಂಥ ವಿಷಮಸಂದರ್ಭದಲ್ಲಿ ನೆಲವು ಹೀಗೆ ಗುಡುಗಲು ಕಾರಣವೇನೆಂದು ಆಲೋಚಿಸುತ್ತ ಕುಳಿತುಕೊಳ್ಳದೆ, ಸರ್ವರೂ ನಡುಕಟ್ಟಿ ನಿಂತು ಭಾರತೀಯರಿಗೊದಗಿದ ಮಹಾವಿಪತ್ತನ್ನು ಪರಿಹರಿಸುವುದರಲ್ಲಿ ಉದ್ಯುಕ್ತರಾಗಬೇಕಲ್ಲದೆ, ಕಳೆದುಹೋದ ವಿಷಯಕ್ಕೆ ಯೋಚಿಸಿ ಫಲವಿಲ್ಲ. ಮನೆಗೆ ಬೆಂಕಿ ಹತ್ತಿ ಧಗಧಗನೆ ಉರಿಯುವ ಸಮಯದಲ್ಲಿ ಬೆಂಕಿಯು ಹೇಗೆ ಹತ್ತಿತೆಂದು ಆಲೋಚಿಸದೆ ಮೊದಲು ಆ ಬೆಂಕಿಯನ್ನು ನಂದಿಸಲು ಪ್ರಯತ್ನಪಡುವುದು ವಿವೇಕಿಗಳ ಕರ್ತವ್ಯವಲ್ಲವೆ? ನಮ್ಮ ಒಂದು ಶರೀರದಲ್ಲಿ ಯಾವುದಾದರೂ ಒಂದು ಅವಯವಕ್ಕೆ ಪೆಟ್ಟುಬಿದ್ದರೆ ಸರ್ವಾಂಗವೂ ನೋಯುವಂತೆ ಉತ್ತರಹಿಂದೂಸ್ಥಾನೀಯರಿಗೆ ಒದಗಿದ ದುರವಸ್ಥೆಯಿಂದ ನಮ್ಮ ಭರತಖಂಡವೇ ತಲ್ಲಣಿಸುವಂತಾಗಿದೆ. ಪ್ರಾಚೀನಕಾಲದಿಂದಲೂ ನಮ್ಮ ಪವಿತ್ರ ಭಾರತಭೂಮಿಯನ್ನು ಹಿಂದಾವಕಾಲದಲ್ಲೂ ಸರ್ವಶಕ್ತನಾದ ಈಶ್ವರನು ಇಂಥ ಘೋರವಾದ ವಿಪ್ಲವಕ್ಕೆಡೆಗೊಡದೆ ಈಗ ಮಾತ್ರ ಇಂಥ ಪರಿಸ್ಥಿತಿಯನ್ನುಂಟುಮಾಡಿರುವುದನ್ನು ನೋಡಿದರೆ ಕಲಿಪ್ರಭಾವದಿಂದ ಭಾರತೀಯರು ಸಂಗ್ರಹಮಾಡುತ್ತಿರುವ ಅಧರ್ಮಪ್ರಭಾವವೆಂದೇ ನಿರ್ಧರಿಸಬೇಕಾಗಿದೆ. ನೇಪಾಳ ದೇಶದಲ್ಲಿ ಸಾಧಾರಣ ೫೦ ಸಾವಿರದವರೆಗೂ ಜನಗಳು ಒಂದೇಕ್ಷಣದಲ್ಲಿ ಮೃತ್ಯುವಿನ ಬಾಯಿಗೆ ತುತ್ತಾದರು. ಅಲ್ಲಲ್ಲಿ ಲಕ್ಷೋಪಲಕ್ಷ ಮನೆಗಳು ಮಾಯವಾದವು. ಕೆಲವರು ಬದುಕಿದ್ದರೂ ಹೊದ್ದುಕೊಳ್ಳುವುದಕ್ಕೆ ಬಟ್ಟೆಯಿಲ್ಲದೆ ತಿನ್ನುವುದಕ್ಕೆ ಅನ್ನವಿಲ್ಲದೆ ಹಗಲು ಬಿಸಿಲಿನ ಬಾಧೆಯಿಂದಲೂ, ರಾತ್ರಿಯಲ್ಲಿ ಚಳಿಯ ಅರ್ಭಟದಿಂದಲೂ ಪರಿತಪಿಸುತ್ತಿರುವರು. ಅಲ್ಲಲ್ಲಿ ಜಲಪ್ರದೇಶಗಳು ಭೂಮಯವಾಗಿಯೂ, ಭೂಮಿಗಳು ಜಲಮಯವಾಗಿಯೂ ಆಗಿಹೋಗಿವೆ ಈ ಘೋರವಾದ ವಿಪತ್ತನ್ನು ನೋಡಿ ನಮ್ಮ ಭಾರತೀಯರೂ ಪ್ರಭುತ್ವದವರೂ ಮನಮರುಗಿ ವಿಪನ್ನರ ಸಹಾಯಕ್ಕಾಗಿ ಅಲ್ಲಲ್ಲಿಯೇ ಸಭೆಗಳನ್ನುಮಾಡಿ ದ್ರವ್ಯವನ್ನು ಶೇಖರಿಸುತ್ತಿರುವುದೊಂದು ಮಹೋಪಕಾರವಾಗಿದೆ. ಬೊಂಬಾಯಿ ಮುಂತಾದ ಮುಖ್ಯಸ್ಥಳಗಳಲ್ಲಿರುವ ಶ್ರೀಮಂತರು ಈಗಾಗಲೇ ಯಥೋಚಿತ ದ್ರವ್ಯವನ್ನು ದಾನಮಾಡುತ್ತಿರುವರು. ನಮ್ಮ ಸಾರ್ವಭೌಮಪ್ರತಿನಿಧಿಗಳಾದ ವೈಸರಾಯರವರು ಈ ದುಃಖವನ್ನು ಸಹಿಸಲಾರದೆ ಸದ್ಯಃ ಪ್ರಜೆಗಳಿಗೊದಗಿದ ಈ ಮಹಾವಿಪತ್ತನ್ನು ಪರಿಹರಿಸುವುದಕ್ಕಾಗಿ ಬಹಳವಾಗಿ ಪ್ರಯತ್ನಪಡುತ್ತ ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಶೇಖರಿಸಿರುತ್ತಾರೆ. ಇಂಡಿಯಾ ಸಾರ್ವಭೌಮರೂ ಮತ್ತು ಅವರ ಪತ್ನಿಯವರೂ ಸಹ ನಮ್ಮ ಭಾರತಪ್ರಜೆಗಳ ಕಷ್ಟವನ್ನು ಕೇಳಿ ದಯಾರ್ದ್ರಹೃದಯರಾಗಿ ದ್ರವ್ಯನಿಧಿಯನ್ನು ಕರುಣಿಸಿರುತ್ತಾರೆ. ಇದರಂತೆ ನಮ್ಮ ಭರತಖಂಡದ ಎಷ್ಟೋ ಮಹಾರಾಜರು, ಧನಿಕರು, ವರ್ತಕರು ಹೇರಳವಾದ ದ್ರವ್ಯಸಹಾಯಮಾಡುತ್ತಲಿರುವರು. ಇಂಥ ವಿಷಮಸಮಯದಲ್ಲಿ ಪ್ರತಿಯೊಬ್ಬ ಮಾನವನೂ ತನ್ನ ಕೈಲಾದಮಟ್ಟಿಗೆ ದ್ರವ್ಯಸಹಾಯಮಾಡಿ ಉತ್ತರಹಿಂದೂಸ್ಥಾನೀಯರಿಗೊದಗಿದ ವಿಪತ್ತನ್ನು ಪರಿಹರಿಸಿ ಮಾನವಜನ್ಮಕ್ಕುಪಯೋಗಪಾದೇಯವಾದ ದಯಾರಸವನ್ನು ತೋರಿಸುವ ಸುಸಮಯವನ್ನು ವ್ಯರ್ಥಮಾಡಿಕೊಳ್ಳದಿರಲಾರರೆಂದು ನಂಬಿದ್ದೇವೆ.

ಒಳದೇಶದ ವೃತ್ತಾಂತಗಳು.

ಫೆಬ್ರವರಿ 2 ನೇ ತಾರೀಖು ಸಾಯಂಕಾಲ ರಾಜಧಾನಿಯ ಮುನಿಸಿಪಲ್ ಕೌನ್ಸಿಲರುಗಳು ವೈಸ್‌ಪ್ರೆಸಿಡೆಂಟರ ಚುನಾವಣೆಯನ್ನು ನಡೆಯಿಸುವರು.

ಮೈಸೂರು ಸಂಸ್ಥಾನದ ಪರಸ್ಪರ ಸಹಾಯಸಂಘಗಳ ರಿಜಿಸ್ಟ್ರಾರವರು ತೃಪ್ತಿಕರವಾಗಿ ನಡೆಯದೆ ಇದ್ದ 20 ಸಂಘಗಳನ್ನು ಕಾನೂನು ಪ್ರಕಾರವಾಗಿ ರದ್ದು ಮಾಡಿರುತ್ತಾರೆ.

ರಾಜಧಾನಿಯ ಸಂತೇಪೇಟೆಯಲ್ಲಿರುವ ಜೆ. ಎಸ್. ಬೀಡಿ ಡಿಪೋ (ಜ್ಯೂಬಿಲಿ ಸ್ಟೋರ್ಸ್) ಪ್ರೊಪ್ರೈಟರಾದ ಮ|| ರಾ|| ಎಂ. ಆರ್. ಚನ್ನಬಸಪ್ಪನವರು ಕಳುಹಿಸಿರುವ ಹೊಸ ವರ್ಷದ ಸುಂದರವಾದ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ರಾಜಧಾನಿಯ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ನಡೆದಿರುವ ಕೆಲಸಗಳ ವಿಚಾರದಲ್ಲಿ ತಮಗುಂಟಾದ ಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ವೈಸ್ರಾಯ್ ದಂಪತಿಗಳು ತಮ್ಮ ಭಾವಚಿತ್ರಗಳನ್ನು ಬಹುಮಾನ ರೂಪವಾಗಿ ಕೊಟ್ಟಿರುತ್ತಾರೆ.

ತೀರ್ಥಹಳ್ಳಿಯ ಒಬ್ಬ ಪೋಲೀಸ್ ನೌಕರನು 20 ಮತ್ತು 14 ವರ್ಷದ ಇಬ್ಬರು ಹುಡುಗಿಯರನ್ನು ಉಪಾಯದಿಂದ ತನ್ನೊಡನೆ ಶಿವಮೊಗ್ಗೆಗೆ ಕರೆತಂದನೆಂಬ ಕಾರಣದಮೇಲೆ ಶಿವಮೊಗ್ಗೆಯ ಪೋಲೀಸರು ಅವನನ್ನು ದಸ್ತಗಿರಿ ಮಾಡಿ ಕನ್ಯಾಪಹಾರದ ಅಪಾದನೆಯ ಮೇಲೆ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ರಾಜಧಾನಿಯ ಬೆಳ್ಳೀಕಟ್ಟೆಗೆ ವಿಸಲ್‌ನಲ್ಲಿರುವ ತಿಮ್ಮಯ್ಯ ಎಂಬವನು ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಒಂದು ಕೃತಕ ನಾಣ್ಯವನ್ನು ಕೊಟ್ಟು ಚಿಲ್ಲರೆ ಪಡೆಯಲು ಪ್ರಯತ್ನಿಸಿದನೆಂಬ ಕಾರಣದಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ ಒಂದು ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ಚಿಂತಾಮಣಿ ಮಹಾಲಕ್ಷ್ಮಮ್ಮನ ಕೊಲೆಮೊಕದ್ದಮೆಯಲ್ಲಿ ಅಪರಾಧಿಗಳ ಪರ ಅಡ್ವೋಕೇಟರಾದ ವಿ|| ರಾಜರತ್ನಂರವರು ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡಬೇಕೆಂದು ಹೈಕೋರ್ಟಿನಲ್ಲಿ ವಾದಮಾಡಿದರು. ಕಳೆದ ಮಂಗಳವಾರ ಘನವೆತ್ತಿದ ಚೀಫ್ ಜಡ್ಜರವರು ಜಾಮೀನ್ ಅರ್ಜಿಯನ್ನು ವಿಮರ್ಶಿಸಿ ಅಪರಾಧಿಗಳನ್ನು ಜಾಮೀನಿನಮೇಲೆ ಬಿಡುವುದಕ್ಕೆ ಹೊಸ ಆಧಾರಗಳೇನೂ ಇಲ್ಲವೆಂದು ಅರ್ಜಿಯನ್ನು ವಜಾಮಾಡಿದರು.

ಮೈಸೂರು ಸರಕಾರದವರು ಶ್ರೀರಂಗಪಟ್ಟಣದ ಸಮೀಪದಲ್ಲಿರುವ ವೆಲ್ಲೆಸ್ಲಿ ಸೇತುವೆಯ ಮೇಲೆ ಸಂಚರಿಸುವ ಎಲ್ಲ ಗಾಡಿಗಳೂ ಸುಂಕವನ್ನು ಕೊಡಬೇಕೆಂದು 1933 ನೇ ಇಸವಿ ಜನವರಿಯಲ್ಲಿ ಅಪ್ಪಣೆ ಮಾಡಿದ್ದರು. ಈಚೆಗೆ ಸರಕಾರದವರು ಆ ಆರ್ಡರನ್ನು ರದ್ದುಮಾಡಿ ಕಲ್ಲು, ಚಪ್ಪಡಿ, ದಿಮ್ಮಿಗಳು, ಕಬ್ಬಿಣದ ತೊಲೆಗಳು, ಸೌದೆ ಇವೇ ಮೊದಲಾದ ಪದಾರ್ಥಗಳನ್ನು ಹೇರಿಕೊಂಡು ಹೋಗುವ ಗಾಡಿಗಳುಮಾತ್ರ 8 ಆಣೆಯನ್ನು ಕೊಡಬೇಕೆಂದು ಅಪ್ಪಣೆ ಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಜರ್ಮನ್ 'ರೀಚ್‌ಸ್ಟಾಗ್' ಸಭೆಯ ಚುನಾವಣೆಗೆ 10 ಲಕ್ಷ ರೂಪಾಯಿಗಳು ವೆಚ್ಚವಾದವಂತೆ!

ವೈಸರಾಯರು ಏರ್ಪಡಿಸಿರುವ ಭೂಕಂಪದ ನಿಧಿಗೆ ಇದುವರೆಗೆ 3 ಲಕ್ಷ ರೂಪಾಯಿಗಳು ಕೂಡಿರುವುವು.

ಡೇರಾಇಸ್ಮಾಯಿಲ್‌ಖಾನ್ ಸಮೀಪದಲ್ಲಿರುವ ರಜ್ಮಾಕ್ ಎಂಬಲ್ಲಿ 6 ಜನರು ವಿಶೇಷವಾದ ಚಳಿಯಿಂದ ಮೃತಪಟ್ಟರು.

ಮುಂಬಯಿಯ ಸಿಪ್ರಿ ಎಂಬಲ್ಲಿ ಒಂದು ದೊಡ್ಡ ಅರಳೆ ಕೋಠಿಗೆ ಬೆಂಕಿ ಹತ್ತಿ ಸುಮಾರು 1 ಲಕ್ಷ ರೂಪಾಯಿಗಳ ನಷ್ಟವುಂಟಾಗಿದೆ.

ಈ ಪ್ರಪಂಚದಲ್ಲಿ ಕಳೆದ 500 ವರ್ಷಗಳಿಂದಲೂ ಶೇಖರಿಸಲ್ಪಟ್ಟಿರುವ ಬಂಗಾರವನ್ನೆಲ್ಲಾ ಒಟ್ಟುಗೂಡಿಸಿದರೆ 40 ಘನ ಅಡಿಗಳಷ್ಟು ಮಾತ್ರ ಆಗುವದಂತೆ!

ವಿಯನ್ನಾನಗರದಲ್ಲಿ 49 ವರ್ಷ ವಯಸ್ಸಿನ ಒಬ್ಬ ಸ್ತ್ರೀಯು 29 ನೇ ಶಿಶುವನ್ನು ಪ್ರಸವಿಸಿರುವಳು. ಪ್ರಪಂಚದ ಬಹುಪುತ್ರವತಿಯರಲ್ಲಿ ಇವಳೇ ಮೊದಲನೆಯವಳಂತೆ!

ರಷ್ಯಾದೇಶದ ರಾಜಧಾನಿಯಾದ ವಾರ್ಸಾನಗರದಲ್ಲಿ ಒಬ್ಬ ಮನುಷ್ಯನು ಈಗಾಗಲೇ 34 ಸಾರೆ ಮದುವೆಯಾಗಿದ್ದು 35 ನೇ ಸಾರೆ ಮದುವೆಯಾಗುವಷ್ಟರಲ್ಲಿ ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟಿರುತ್ತಾನೆ.

ಇಟಲಿದೇಶದ ಸರ್ವಾಧಿಕಾರಿಗಳಾದ ಸೀನಾರ್ ಮುಸ್ಸೋಲಿನಿಯವರು ಬಹುಪುತ್ರವತಿಯರಾದ 92 ಜನ ಸ್ತ್ರೀಯರನ್ನು ಖುದ್ದಾಗಿ ಅಭಿನಂದಿಸಿ ಪ್ರತಿಯೊಬ್ಬರಿಗೂ ಒಂದೊಂದು ಪದಕವನ್ನು ಬಹುಮಾನವಾಗಿ ಕೊಟ್ಟಿರುವರು.

ಲಯಾಲಪುರದ ಮುನಿಸಿಪಲ್ ಕಮೀಷನರಾದ ಭಾಯಿ ಮೋಹನಸಿಂಗ್‌ರವರು ಲತೀಫ್‌ಬೇಗಂ ಎಂಬ ಸ್ತ್ರೀಯಳ ಮೇಲೆ ಅತ್ಯಾಚಾರನಡೆಸಲು ಪ್ರಯತ್ನಿಸಿದರೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾರೆ.

ಜಪಾನ್‌ದೇಶದವರು ಲಂಡನ್ನಿನಲ್ಲಿ ಫೌಂಟನ್‌ಪೆನ್ನುಗಳನ್ನು 2½ ಪೆನ್ನಿಗಳಿಗೆ ಒಂದರಂತೆ ಮಾರುತ್ತಿರುವರು. ಅದೇ ಫೌಂಟನ್‌ಪೆನ್ನುಗಳನ್ನು ಇಂಗ್ಲೆಂಡಿನಲ್ಲಿ 1 ಕ್ಕೆ 12 ಪೆನ್ನಿಗಳಿಗಿಂತಲೂ ಕಡಿಮೆ ಬೆಲೆಗೆ ತಯಾರಿಸುವದಕ್ಕೂ ಸಾಧ್ಯವಿಲ್ಲವಂತೆ!

ರಾಜಷಾಹಿನಗರದ ಖಾಸಿಂ ಅಲಿ ಎಂಬ ಪೋಲೀಸ್ ಕಾನ್‌ಸ್ಟೆಬಲನು ವೈಸರಾಯರೇ ಮೊದಲಾದ ಕೆಲವು ದೊಡ್ಡದೊಡ್ಡ ಅಧಿಕಾರಿಗಳಿಗೆ ಹೆಸರಿಲ್ಲದ ಭಯೋತ್ಪಾತಕಗಳಾದ ಪತ್ರಗಳನ್ನು ಬರೆದನೆಂಬ ಕಾರಣದ ಮೇಲೆ 6 ವರ್ಷಗಳ ಕಠಿಣಶಿಕ್ಷೆಗೆ ಗುರಿಯಾದನು.

ಬರೋಲಿಗ್ರಾಮದಲ್ಲಿ ಕೆಲವು ಜನ ಕಳ್ಳರು ಒಂದು ಮನೆಗೆ ನುಗ್ಗಿ ಸಿಕ್ಕಿದುದನ್ನೆಲ್ಲಾ ದೋಚಿಕೊಂಡು ಹೋದರು. ಆದರೆ ಆ ಮನೆಯಲ್ಲಿ ಒಬ್ಬನೇ ರೋಗಿಯು ನರಳುತ್ತಿದ್ದುದನ್ನು ಕಂಡು ಅವನಿಗೆ ಔಷಧೋಪಚಾರಕ್ಕಾಗಿ 50 ರೂ. ಗಳನ್ನು ಕೊಟ್ಟು ಹೋದರಂತೆ!

ಲಾಹೋರಿನ 'ತಿಲಕ್ ಹೋಸಿಯರಿ ವರ್ಕ್ಸ್' ಕಂಪೆನಿಯವರು ಪ್ರಿಂಟ್‌ಮಾಡಿರುವ ಹೊಸವರ್ಷದ ಕ್ಯಾಲೆಂಡರಿನಲ್ಲಿ ಒಬ್ಬ ಸ್ತ್ರೀಯಳ ಚಿತ್ರವಿದ್ದು ಅದು ತನ್ನ ಚಿತ್ರದಂತಿರುವುದೆಂಬ ಕಾರಣದ ಮೇಲೆ 'ಚಂದ್ರಾ' ಎಂಬಾಕೆಯು ಕಂಪೆನಿಯವರ ಮೇಲೆ ದಾವಾ ಮಾಡಿರುತ್ತಾಳೆ.

ರಷ್ಯಾದೇಶಕ್ಕೆ ಸೇರಿದ ಇರ್ಕಟಸ್ಕ್ ಎಂಬ ನಗರದ ಸಮೀಪದಲ್ಲಿ ಪುರಾತನಕಾಲದ ಒಂದು ಅದ್ಭುತಾಕಾರದ ಪ್ರಾಣಿಯ ಮೃತಶರೀರವು ಸ್ವಲ್ಪವೂ ಕೆಡದ ಸ್ಥಿತಿಯಲ್ಲಿ ದೊರೆತಿರುವದಂತೆ! ಅದರ ಹಲ್ಲುಗಳು 15 ಪೌಂಡುಗಳೂ, ಅದರ ಕೊಂಬುಗಳು 35 ಪೌಂಡುಗಳೂ ತೂಕವಾಗಿರುವುವಂತೆ!

ಕರಾಚಿ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರಾದ ಖಾನ್ ಸಾಹೇಬ್ ಅಲ್ಲಾಬಕ್ಷ್ ಗಾಬೋಲೆಯವರ ಪತ್ನಿಯಾದ ಮಿಸೆಸ್ ಹರ್‌ಗಾಬೋಲೆ ಎಂಬಾಕೆಯು 5 ತಿಂಗಳ ಹಿಂದೆ ಒಬ್ಬ ಜವಾನನೊಡನೆ ಓಡಿಹೋದಳೆಂಬ ಕಾರಣದ ಮೇಲೆ ಪೋಲೀಸರು ಆಕೆಯನ್ನೂ ಜವಾನನನ್ನೂ ದಸ್ತಗಿರಿ ಮಾಡಿರುತ್ತಾರೆ.

ಸರ್ದಾರ್‌ಘಡದ ಆಡಳಿತದಲ್ಲಿ ಕೆಲವು ಅವ್ಯವಸ್ಥೆಗಳು ಕಂಡುಬಂದದ್ದರಿಂದ ವೈಸರಾಯರು ಒಂದು ವಿಚಾರಣಾಸಮಿತಿಯನ್ನು ನೇಮಕಮಾಡಿ ಅವರ ತೀರ್ಮಾನದಂತೆ ಅಲ್ಲಿಯ ರಾಜರನ್ನು ಪದಚ್ಯುತರನ್ನಾಗಿ ಮಾಡಿ ಆಡಳಿತವನ್ನು ಬೇರೆ ಅಧಿಕಾರಿಗಳ ವಶಕ್ಕೆ ಒಪ್ಪಿಸಿರುತ್ತಾರೆ.

ಮುಝಫರಪುರದಲ್ಲಿ ಭೂಕಂಪವಾದಾಗ ಜನರು ರಕ್ಷಣೆಗಾಗಿ ಸರಕಾರೀ ಆಫೀಸು ಕಾಂಪೌಂಡುಗಳಿಗೆ ಓಡಿಬರಲು ಪೋಲೀಸರು ಅವರನ್ನು ಅಲ್ಲಿಗೆ ಬಿಡದೆ ತಡೆದರೆಂದೂ, ನಿರಾಶ್ರಿತರಾದವರಿಗೆ 3-4 ದಿವಸಗಳನಂತರ ಪರಿಹಾರವನ್ನು ಒದಗಿಸಲಾರಂಭಿಸಿದರೆಂದೂ ಪಂಡಿತ ಜವಾಹರಲಾಲ ನೆಹರೂರವರು ಒಂದು ಹೇಳಿಕೆಯನ್ನು ಕೊಟ್ಟಿರುತ್ತಾರೆ.

ಚೀಣಾ ದೇಶದಲ್ಲಿ ಭೂಕಂಪ!

ಚೀಣಾ ದೇಶಕ್ಕೆ ಸೇರಿದ ಕಾನ್ಸು ಮತ್ತು ಸೂಯರ್ನ್ ಪ್ರಾಂತಗಳಲ್ಲಿ 2 ನಿಮಿಷಗಳವರೆಗೆ ಭೂಕಂಪವಾಗಿ ನೂರಾರು ಜನರು ಮೃತಪಟ್ಟರು. ಅದೇ ಸಮಯಕ್ಕೆ ಸರಿಯಾಗಿ ನದಿಗಳಲ್ಲಿ ಪ್ರವಾಹವು ಹೆಚ್ಚಿ ಸಾವಿರಾರು ಜನರು ನೀರಿನ ಪಾಲಾದರು.

ನೇಪಾಳದಲ್ಲಿ ಭೂಕಂಪ!

ಭೂಕಂಪದ ದೆಸೆಯಿಂದ ನೇಪಾಳದ ಅರಮನೆಯು ಕುಸಿದು ಬಿದ್ದು ಚಕ್ರವರ್ತಿಗಳ ಇಬ್ಬರು ಹೆಣ್ಣು ಮಕ್ಕಳೂ ಕೆಲವು ಜನ ದಾದಿಯರೂ ಮೃತಪಟ್ಟರೆಂದೂ, ಅನೇಕ ಪ್ರಸಿದ್ಧ ಪುರಾತನ ಮಂದಿರಗಳು ನಾಶವಾದುವೆಂದೂ ತಿಳಿದುಬರುತ್ತದೆ.

ಇಂದೋರಿನಲ್ಲಿ ವೃದ್ಧವಿವಾಹಕ್ಕೆ ನಿರ್ಬಂಧ!

ಇಂದೋರು ಸರಕಾರದವರು 45 ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರಾರೂ ವಿವಾಹಮಾಡಿಕೊಳ್ಳಕೂಡದೆಂದೂ, ಇದನ್ನು ಮೀರಿದವರಿಗೆ 1000 ರೂ. ಗಳ ಜುಲ್ಮಾನೆಯು ವಿಧಿಸಲ್ಪಡುವದೆಂದೂ ಒಂದು ಹೊಸ ಕಾಯಿದೆಯನ್ನು ಮಾಡಿರುತ್ತಾರೆ.

೩ ತಲೆಗಳ ಮಗು!

ಅಂಬಾಲಾದಲ್ಲಿ ಒಂದು ಶಿಶುವು ಹುಟ್ಟಿದ ಸ್ವಲ್ಪ ಹೊತ್ತಿನಲ್ಲಿ ಅದರ ಹೊಟ್ಟೆಯು ಚಂಡಿನಂತೆ ಉಬ್ಬಿ, ಕಡೆಗೆ ಒಂದು ತಲೆಯಾಯಿತೆಂದೂ, ಅನಂತರ ಮತ್ತೆರಡು ತಲೆಗಳು ಮೂಡಿದುವೆಂದೂ, ಮಗುವು 3 ಮುಖಗಳಿಂದಲೂ ಅಳುತ್ತಿದ್ದು, 12 ಗಂಟೆಗಳಾದನಂತರ ಮೃತಪಟ್ಟಿತೆಂದೂ ತಿಳಿದುಬಂದಿದೆ.

ಭವಿಷ್ಯ!

ಅಮೇರಿಕೆಯ ಡಬ್ಲ್ಯು. ಎಚ್. ವೆಲ್ಸ್ ಎಂಬೊಬ್ಬ ಜ್ಯೋತಿಷ್ಕರು 1940 ರಲ್ಲಿ ಮತ್ತೊಂದು ಮಹಾಯುದ್ಧವೂ, 1945 ರಲ್ಲಿ ಪ್ರಜೆಗಳಿಗೆ ವಿಶೇಷ ಹಿಂಸೆಯೂ, 1960 ರಲ್ಲಿ ಕ್ರಿಮಿಕೀಟಗಳಿಂದ ಮಹಾ ಅನರ್ಥವೂ, ಅಮೇರಿಕೆಯ ಪ್ರಜಾಸತ್ತಾತ್ಮಕ ಸರಕಾರದ ನಾಶವೂ, 1969 ರಲ್ಲಿ ಬ್ರಿಟಿಷ್ ದ್ವೀಪಗಳ ಹೆಚ್ಚಿನ ಭಾಗವು ಸಮುದ್ರದಲ್ಲಿ ಮುಳುಗಿ ಹೋಗುವುದೂ, 1990 ರಲ್ಲಿ ನೂತನ ವಿಶ್ವರಾಜ್ಯಸ್ಥಾಪನೆಯೂ ಆಗುವುವೆಂದು ಒಂದು ಗ್ರಂಥದಲ್ಲಿ ಬರೆದಿರುವರಂತೆ!

ಕಾಲಾಗ್ನಿರುದ್ರನ ವಿಚಿತ್ರಲೀಲೆ!

ಮುಝಫರಪುರದಲ್ಲಿ ಭೂಕಂಪದಿಂದ ದೊಡ್ಡದೊಡ್ಡ ಕ್ರೈಸ್ತರ ದೇವಾಲಯಗಳೂ, ಮುಸಲ್ಮಾನರ ಮಸೀದಿಗಳೂ, ಹಿಂದೂಜನರ ಶಿವೇತರ ದೇವಾಲಯಗಳೂ ಉರುಳುರುಳಿ ಬಿದ್ದುಹೋಗಿರುವಾಗ, ರುದ್ರನ ದೇವಾಲಯವು ಮಾತ್ರ ಅಚ್ಚಳಿಯದೆ ಹಾಗೆಯೇ ಇರುವುದಂತೆ! ಇದು ಆ ರುದ್ರಮೂರ್ತಿಯ ಲೀಲೆಯಲ್ಲದೆ ಬೇರೆಯಲ್ಲವೆಂದು ದೇಶವೆಲ್ಲಾ ಉದ್ಗಾರವನ್ನು ತೆಗೆಯುತ್ತಿರುವುದು.

ಭೂಕಂಪದ ವಿದ್ಯಮಾನಗಳು.

ಇದೇ ಜನವರಿ 20 ಮತ್ತು 22 ನೆಯ ತಾರೀಖಿನ ದಿವಸ ಮಧ್ಯರಾತ್ರಿಯಲ್ಲಿ ಮುಝಫರಪುರದಲ್ಲಿ ಪುನಃ ಭೂಕಂಪವಾಯಿತು. ಇದುವರೆಗೆ ಆ ಊರಿನಲ್ಲಿ 12 ಸಾವಿರ ಹೆಣಗಳು ದೊರೆತಿರುವುವು. ಸುಮಾರು 25,000 ಜನರು ಮೃತಪಟ್ಟಿರಬಹುದೆಂದು ಅಂದಾಜು ಮಾಡಲ್ಪಟ್ಟಿದೆ. ನಗರದಲ್ಲಿ ಅನೇಕ ಕಟ್ಟಡಗಳು ಬಹಳ ಅಪಾಯಸ್ಥಿತಿಯಲ್ಲಿದ್ದು ಅಧಿಕಾರಿಗಳು ಅವುಗಳನ್ನು ಸಿಡಿಮದ್ದಿನಿಂದ ಕೆಡವುತ್ತಿರುವರು. ಮಾಂಘೀರ್‌ನಗರವು ಸಂಪೂರ್ಣವಾಗಿ ನಾಶವಾಗಿರುವದು. ಅಲ್ಲಿ ಸುಮಾರು 4000 ಜನರು ಮೃತಪಟ್ಟಿರುವರೆಂದು ಅಂದಾಜು ಹಾಕಲ್ಪಟ್ಟಿದೆ. ಭೂಕಂಪದಿಂದ ನಷ್ಟಪಟ್ಟವರಿಗೆ ಸಹಾಯಮಾಡಲು ಅವಶ್ಯಕವಾದ ಏರ್ಪಾಡುಗಳೆಲ್ಲಾ ಮಾಡಲ್ಪಡುತ್ತಿರುವುವು. ಬಿಹಾರ ಪ್ರಾಂತದ ಮುಖಂಡರಾದ ಶ್ರೀ|| ಬಾಬುರಾಜೇಂದ್ರಪ್ರಸಾದರವರು ಬೀಹಾರ್‌ಪ್ರಾಂತದಲ್ಲಿ ಕಷ್ಟಪಡುತ್ತಿರುವವರಿಗೆ ಪರಿಹಾರವನ್ನು ಒದಗಿಸುವ ವಿಷಯದಲ್ಲಿ ತಾವು ಸಹಕರಿಸುವದಾಗಿ ಸರ್ಕಾರಕ್ಕೆ ಬರೆದಿದ್ದರು. ಸರಕಾರದವರು ಅವರ ಸಹಕಾರವನ್ನು ಸ್ವೀಕರಿಸಿ, ಬಾಬು ರಾಜೇಂದ್ರಪ್ರಸಾದರೊಡನೆ ಸಹಕರಿಸಬೇಕೆಂದು ಎಲ್ಲ ಅಧಿಕಾರಿಗಳಿಗೂ ಅಪ್ಪಣೆಮಾಡಿರುತ್ತಾರೆ. ಪರಿಹಾರದ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಸರಕಾರದವರು ಪ್ರತಿ ಜಿಲ್ಲಾಧಿಕಾರಿಗಳ ವಶದಲ್ಲೂ 6,000 ರೂ. ಗಳನ್ನು ಕೊಟ್ಟಿರುತ್ತಾರೆ. ರಸ್ತೆಗಳ ರಿಪೇರಿಗಾಗಿ ಪ್ರತಿ ಜಿಲ್ಲಾಬೋರ್ಡಿಗೂ 6 ಲಕ್ಷ ರೂಪಾಯಿಗಳನ್ನು ವೆಚ್ಚಮಾಡುವ ಅಧಿಕಾರವನ್ನು ಕೊಟ್ಟಿರುತ್ತಾರೆ. ವೈದ್ಯಸಲಕರಣೆಗಳಿಗಾಗಿ ಪ್ರತಿಜಿಲ್ಲಾ ಕಲೆಕ್ಟರವರಿಗೂ 24,000 ರೂಪಾಯಿಗಳನ್ನು ಕಳುಹಿಸಿರುವರಲ್ಲದೆ 25,000 ರೂಪಾಯಿಗಳನ್ನು ಮೀಸಲಾಗಿಟ್ಟಿರುತ್ತಾರೆ. ಬೀಹಾರ್‌ಪ್ರಾಂತದ ಗವರ್ನರು 20-30 ಸಹಸ್ರ ರೂ. ಗಳ ಒಂದು ನಿಧಿಯನ್ನು ಕೂಡಿಸಿರುತ್ತಾರೆ. ಚಕ್ರವರ್ತಿಯವರು 100 ಪೌಂಡುಗಳನ್ನೂ, ಚಕ್ರವರ್ತಿನಿಯವರು 50 ಪೌಂಡುಗಳನ್ನೂ, ವೈಸ್ರಾಯ್ ಲಾರ್ಡ್ ವಿಲಿಂಗ್‌ಡನ್‌ರವರು 5,000 ರೂ. ಗಳನ್ನೂ, ಅಮೇರಿಕೆಯ ನ್ಯೂಯಾರ್ಕ್‌ನಗರದಲ್ಲಿರುವ 'ಇಂಟರ್ ನ್ಯಾಷನಲ್ ರಿಲೀಫ್‌ಯೂನಿಯನ್'ದವರು 1,000 ಪೌಂಡುಗಳನ್ನೂ, ಫ್ರಾನ್ಸಿನ 'ಪ್ಯಾರಿಸ್ ರಿಲೀಫ್ ಯೂನಿಯನ್' ದವರು 1,000 ಪೌಂಡುಗಳನ್ನೂ, ಹಿಂದೂಸ್ಥಾನದ ರೆಡ್‌ಕ್ರಾಸ್ ಸೊಸೈಟಿಯವರು 5,000 ರೂ. ಗಳನ್ನೂ, ಮುಸ್ಲಿಂ ರಿಲೀಫ್ ಕಮಿಟಿಯವರು 13,000 ರೂ.ಗಳನ್ನೂ, ಪಂ|| ಮಾಳವೀಯರವರು ಚಂದಾಎತ್ತಿ 10,000 ರೂ. ಗಳನ್ನೂ, ಸೇಟ್ ಜಮುನಾಲಾಲಬಜಾಜರವರು 1000 ರೂ. ಗಳನ್ನೂ, ಮದರಾಸಿನ 'ಹಿಂದೂ' ಪತ್ರಿಕಾಕರ್ತರು ಚಂದಾ ಎತ್ತಿದ 12,000 ರೂ. ಗಳನ್ನೂ, ಜರ್ಮನಿಯ 'ಅಲಯನ್ಸ್ ಅಂಡ್ ಸ್ಟುಟ್‌ಗಾರ್ಟರ್' ಕಂಪೆನಿಯ ದೆಹಲಿ ಮ್ಯಾನೇಜರಾದ ಡಾ|| ಸೋಮರ್‌ರವರು 5,000 ರೂ. ಗಳನ್ನೂ, ಸರ್ ದೋರಬ್ಜಿ ಟಾಟಾ ಧರ್ಮಸಂಸ್ಥೆಯವರು 50,000 ರೂ. ಗಳನ್ನೂ, ಕಲ್ಕತ್ತಾ ಜೂಟ್ ಸಂಘದವರು 5,000 ರೂ. ಗಳನ್ನೂ, ಕಲ್ಕತ್ತೆಯ ಪೌರಸಭಾಧ್ಯಕ್ಷರ ನಿಧಿಯಿಂದ 30,000 ರೂ. ಗಳನ್ನೂ, ಈಸ್ಟ್ ಇಂಡಿಯಾ ಜೂಟ್ ಸಂಘದವರು 25,000 ರೂ. ಗಳನ್ನೂ, ಕೆಲವು ವ್ಯಾಪಾರಿಗಳು 25,000 ರೂ. ಗಳನ್ನೂ ಕಳುಹಿಸಿರುತ್ತಾರೆ. ಸರಕಾರದವರು ಮನೆಮಠಗಳಿಲ್ಲದವರಿಗಾಗಿ 35 ಎಕರೆ ಜಮೀನಿನಲ್ಲಿ ಹುಂಗಾಮಿ ಬಿಡಾರಗಳನ್ನು ಹಾಕಿಸಿ ಕೊಟ್ಟಿರುತ್ತಾರೆ. ಟಾಟಾ ಕಂಪೆನಿಯವರು ಬಿಡಾರಗಳಿಗಾಗಿ ಸ್ಪೆಷಲ್ ರೈಲಿನಲ್ಲಿ ಕಬ್ಬಿಣದ ಹಲಗೆಗಳನ್ನು ಕಳುಹಿಸಿರುತ್ತಾರೆ. ಬೀಹಾರಪ್ರಾಂತದಲ್ಲಿ ಅನೇಕ ದೊಡ್ಡ ಸರಕಾರಿಕಟ್ಟಡಗಳು ನಾಶವಾಗಿರುವುವು. ಅವುಗಳನ್ನು ಸರಿಪಡಿಸಲು 60 ಲಕ್ಷ ರೂ. ಗಳು ಬೇಕಂತೆ! 2 ಲಕ್ಷ ಎಕರೆ ಕಬ್ಬುಬೆಳೆದಿದ್ದ ಪ್ರದೇಶವೂ ಅನೇಕ ಸಕ್ಕರೆ ಕಾರ್ಖಾನೆಗಳೂ ಪ್ರವಾಹದಲ್ಲಿ ಮುಳುಗಿಹೋಗಿರುತ್ತವೆ.

ಧರ್ಮಾಭಿಮಾನಿಗಳಿಗೆ ಸುಸಂಧಿ.

ಶ್ರೀ ರಂಗಯ್ಯರ್ ಇವರು ಧರ್ಮನಾಶಕವಾದ 'ಮಂದಿರಪ್ರವೇಶ' ದ ಬಿಲ್ಲನ್ನು ತಂದದ್ದು ಸರ್ವಶ್ರುತವಷ್ಟೆ! ಅದರ ಸಲುವಾಗಿ ಮುಂಬಯಿ ಸರಕಾರದವರು ಜನರ ಅಭಿಪ್ರಾಯವನ್ನು ಕೇಳಿರುವರು. ಅಸ್ಪೃಶ್ಯರು ಮಂದಿರಪ್ರವೇಶಮಾಡುವದೂ, ಅಲ್ಲಿ ದೇವರಪೂಜೆ ಮಾಡುವದೂ ಸ್ಪೃಶ್ಯರ ಧರ್ಮಕ್ಕೆ ವಿರೋಧವಾಗಿರುವದು. ಇದರಂತೆ ಅಭಿಪ್ರಾಯವುಳ್ಳವರ ಸೋಯಿ ದೆಶೆಯಿಂದ ಮಂದಿರಪ್ರವೇಶದ ವಿರೋಧ ಠರಾವು ಕರ್ನಾಟಕಧರ್ಮರಕ್ಷಕಸಭೆಯಲ್ಲಿ ಮಂಜೂರ ಆಗಿದೆ. ಅದನ್ನು ಮುದ್ರಿಸಿರುತ್ತೇವೆ. ಕೆಳಗೆ ಬರೆದ ವಿಳಾಸಕ್ಕೆ ಕಾರ್ಡು ಬರೆದರೆ, ಠರಾವುಗಳ ಫಾರ್ಮುಗಳನ್ನು ಕಳುಹಿಸುತ್ತೇವೆ. ಧರ್ಮಾಭಿಮಾನಿಗಳು ಫಾರ್ಮುಗಳನ್ನು ತರಿಸಿಕೊಂಡು ಅದರಮೇಲೆ ಜನರ ಸಹಿಮಾಡಿಸಿ ಸರಕಾರಕ್ಕೆ ಕಳುಹಿಸಿ ಧರ್ಮರಕ್ಷಣೆಯನ್ನು ಮಾಡಬೇಕಾಗಿ ಬೇಡಿಕೊಳ್ಳುತ್ತೇನೆ.

ವಿಳಾಸ—ಗೋವಿಂದ ಭೀಮಾಚಾರ್ಯಗೋಶೆ,
ಮಾಳಗುಡ್ಡ, ಧಾರವಾಡ.
ಕಾರ್ಯದರ್ಶಿ—ಕ-ಧ-ರ-ಸಭೆ ಧಾರವಾಡ.

ಮಹೇಶ್ವರನ ಉತ್ಸವ.

ಮಾವಲಿ.

ಸೊರಬ ತಾ|| ಮಾವಲಿಗ್ರಾಮದ ವೀರಶೈವಮತಾನುಯಾಯಿಗಳಾದ ಭಕ್ತಾದಿಗಳೂ ವೇ|| ಮಠದ ಕೋಟೆಪ್ಪಯ್ಯನವರೂ ಸೇರಿ ಇದೇ ಶ್ರೀಮುಖ ಸಂವತ್ಸರದ ಪುಷ್ಯ ಬಹುಳ ತ್ರಯೋದಶಿ ಮಂದವಾರ ಗ್ರಾಮದ ಮುಂಭಾಗದಲ್ಲಿರುವ ಬೆಂಡೆಗೆರೆ ಪಕ್ಕದಲ್ಲಿರುವ ವನಕ್ಕೆ ಶ್ರೀ ಮಹೇಶ್ವರನ ಉತ್ಸವದೊಡನೆ ಹೋಗಿ ಪಕ್ಕದಲ್ಲಿರುವ ಬಿಲ್ವವನದಲ್ಲಿ ಮಹೇಶನನ್ನು ಸ್ಥಾಪಿಸಿದರು. ಸಕಲರೂ ಸ್ನಾನಸಂಧ್ಯಾದಿಗಳನ್ನು ತೀರಿಸಿಕೊಂಡು ಮಾವಲಿಸ್ಕೂಲ್ ಅ|| ಮಾ|| ವೇ|| ಸಿದ್ಧಲಿಂಗಾರ್ಯರು ಕಸಬಾಮಠ ಜಡೆಕೋಟೆ ಇವರು ಮತ್ತು ವೇ|| ಟಿ. ಕೆ. ಯಂ. ಸಿದ್ಧಾಂತಿ ಶಿವಪ್ಪಯ್ಯಶಾಸ್ತ್ರಿಗಳವರ ಪೌರೋಹಿತ್ಯದಿಂದ ಶ್ರೀಮಹೇಶ್ವರದೇವರಿಗೆ ಅಭಿಷೇಕ ಪೂಜಾದಿಗಳನ್ನು ಭಕ್ತಿಪುರಸ್ಸರವಾಗಿ ನೆರವೇರಿಸಿದರು. ತರುವಾಯ ಮಾಹೇಶ್ವರ ಸಂತರ್ಪಣೆಯಾದ ಮೇಲೆ ಸಕಲ ಭಕ್ತರೂ ದೇವಪ್ರಸಾದವನ್ನು ಸ್ವೀಕರಿಸಿದರು. ನೂರಾರು ಜನಕ್ಕೆ ಕಡಿಮೆಯಿಲ್ಲದೆ ಸ್ತ್ರೀಪುರುಷರು ಮಕ್ಕಳುಗಳಿಂದ ಕೂಡಿ ಭಕ್ತಿಯುತರಾದ ಈ ಜನ ಸಮುದಾಯವು ವನಮಧ್ಯದಲ್ಲಿ ನೋಡುವುದಕ್ಕೆ ಆನಂದವನ್ನುಂಟುಮಾಡುತ್ತಿದ್ದಿತು. ಈ ಆನಂದಕೂಟಕ್ಕೆ ತಾವರೆಕೊಪ್ಪ ಯಲವಳ್ಳಿ ಗ್ರಾಮಗಳ ವೀರಶೈವಭಕ್ತರೂ ಆಗಮಿಸಿದ್ದರು. ಸಕಲರ ಭೋಜನಾನಂತರ ವೇ|| ಟಿ. ಕೆ. ಎಂ. ಸಿದ್ಧಾಂತಿ ಶಿವಪ್ಪಯ್ಯಶಾಸ್ತ್ರಿಗಳವರ ಸಂಗೀತ ಕಚೇರಿಯು ನಡೆಯಿಸಲ್ಪಟ್ಟಿತು. ತರುವಾಯ ಮಾವಲಿ ಮ|| ರಾ|| ಯಜಮಾನ ಮಲ್ಲಪ್ಪಗೌಡರು ಮತ್ತು ತಾವರೇ ಕೊಪ್ಪದ ಮ|| ರಾ|| ಸೋಮಯ್ಯಗೌಡರೇ ಮೊದಲಾದ ಶಿವಭಕ್ತರ ಕೋರಿಕೆಯಂತೆ ಮಾವಲಿ ಸ್ಕೂಲ್ ಅ|| ಮಾ|| ಕೆ. ಸಿದ್ಧಲಿಂಗಾರ್ಯರು ಶಶಿಪ್ರಭಾ ಎಂಬ ಶಿವಕೀರ್ತನೆಯನ್ನು ಮಾಡಿ ಭಕ್ತರಿಗೆ ಭಕ್ತಿ ಗುರುಪೂಜಾ ಇವುಗಳಿಂದಾಗುವ ಫಲ ಅಹುದು ಕಾರಿಗಳಿಗೆ ಆಗುವ ತೊಂದರೆ ಪತಿವ್ರತಾಧರ್ಮ ಪತಿಸೇವೆಯಿಂದಾಗುವ ಫಲ ಇತ್ಯಾದಿ ವಿಷಯಗಳನ್ನು ಸ್ವಾರಸ್ಯವಾಗಿ ಹೇಳಿದರು. ಈ ರೀತಿಯಾಗಿ ಕೀರ್ತನೆಯು ಮಧ್ಯಾಹ್ನ ಮೂರುಘಂಟೆಯಿಂದ ಸಾಯಂಕಾಲ ಆರುಘಂಟೆಯವರೆಗೂ ನಡೆದು ಮಹೇಶನಿಗೆ ಮಂಗಲಮಾಡುವುದರ ಮೂಲಕ ಮುಕ್ತಾಯವಾಯಿತು. ಸಾಯಂಕಾಲ ಆರೂವರೆಘಂಟೆಗೆ ಸಕಲಭಕ್ತರೂ ಶ್ರೀಮಹೇಶ್ವರನ ಉತ್ಸವದೊಡನೆ ವನದಿಂದ ಹೊರಟು ಶ್ರೀ ಜಗದ್ಗುರು ಪಂಚಾಚಾರ್ಯರ ಭಜನ ಜಯಘೋಷಗಳೊಡನೆ ಗ್ರಾಮವನ್ನು ಸೇರಿದರು. ಈ ವೇಳೆಗೆ ಗುರುಸೇವೆಗಳನ್ನು ಮಾಡಿದ ಭಕ್ತರೇ ಧನ್ಯರು! ಇವರು ಇಂತಹಕೂಟಗಳಿಗೆ ಆಗಾಗ್ಗೆ ಭಾಗಿಗಳಾಗಿ ಧರ್ಮಜಾಗೃತಿಯನ್ನುಂಟುಮಾಡುವ ಬುದ್ಧಿಯನ್ನು ದಯಪಾಲಿಸಲೆಂದು ಶ್ರೀ ಜಗದ್ಗುರು ರೇಣುಕರನ್ನು ಪ್ರಾರ್ಥಿಸುತ್ತೇನೆ.

ಶಾಂತವೀರನಗೌಡ, ಟಂಕಸಾಲೆ.

ಮಲಬದ್ಧತೆ.

ದುರ್ಗಾಕುಮಾರಸೇನ್. ಎಲ್. ಎಮ್. ಪಿ. ಕಾನ್ಪೆಥಾಟ್
ಡಿಸ್ಪೆನ್ಸರಿ. ಸಿಲ್‌ಹೆಟ್. ಡಿಸ್ಟ್ರಿಕ್ಟ್.

ಮಲಬದ್ಧತೆಯೆಂಬುದು ಈಗಿನ ಕಾಲದ ತರುಣರಲ್ಲಿ ಸರ್ವಸಾಮಾನ್ಯವಾದ ಒಂದು ವ್ಯಾಧಿಯೆನಿಸಿದೆ. ಈ ರೋಗವು ದೇಹದೊಳಗಣ ಸಾರವನ್ನೇ ಕೆಡಿಸಿಬಿಡತಕ್ಕದ್ದಾಗಿದೆ.

ಈಗ ನಾವು ಪ್ರಕೃತಿಯಲ್ಲಿ ಪರಿಶೀಲಿಸಿ ನೋಡಿದಾಗಲೇ! ಅದರ ಅವಗುಣವೆಷ್ಟೆಂಬುದನ್ನು ಕಂಡುಕೊಳ್ಳಬಹುದು. ಕಾಗೆಗಳು ಚಿರಜೀವಿಯೆನಿಸಿಕೊಂಡು ಬಹುಕಾಲ ಬದುಕಿರುವುವು. ಕಾಗೆಗಳು ಅಪಾಯವಿಲ್ಲದೆ ಸಾಯುವುದನ್ನು ನಾವು ನೋಡುವದೇ ಅಪೂರ್ವವು. ಇದಕ್ಕೆ ಕಾರಣವೇನು? ಅವು ಆಗಾಗ್ಗೆ ಮಲವನ್ನು ವಿಸರ್ಜಿಸುತ್ತಲೇ ಇರುವುವು. ಇದಕ್ಕೆ ಕಾರಣವೇನೆಂದರೆ, ಕಾಗೆಗಳದೇಹದಲ್ಲಿ ದೊಡ್ಡ ಕರಳುಗಳೇ ಇಲ್ಲ. ಮನುಷ್ಯರಿಗೆ ಆ ದೊಡ್ಡ ಕರಳುಗಳುಂಟು. ಮಲವು ಸಂಗ್ರಹವಾಗಿ ನಿಲ್ಲುವುದು ಈ ದೊಡ್ಡ ಕರಳುಗಳಲ್ಲಿಯೇ. ಕಾಗೆಗಳಿಗೆ ಅವಿಲ್ಲದುದರಿಂದಲೇ, ಕ್ಷಣಕ್ಷಣಕ್ಕೂ ಅವು ಮಲವನ್ನು ಹೊರಗೆಡಹುತ್ತಲೇ ಇರುವುವು. ಒಂದು ಮರದ ಕೆಳಗೆ ನಾವು ಸಂಚರಿಸುವಾಗ ಸ್ವಲ್ಪ ಎಚ್ಚರತಪ್ಪಿದರೆ ತಲೆಯ ಮೇಲೆ ಕಾಗೆಯು ಹೊಲಸುಮಾಡಿ ಹೋಗುವುದು.

ಈ ಮಲಬದ್ಧತೆಯಿಂದುಂಟಾಗುವ ಅನೇಕ ವಿಧ ರೋಗಗಳನ್ನು ಪರಿಶೀಲಿಸಿದರೆ, ಮಲಶುದ್ಧಿಯು ಆರೋಗ್ಯಕ್ಕೆ ಎಷ್ಟು ಮುಖ್ಯವಾದುದೆಂದು ತಿಳಿಯಬಹುದು. ಮಲಸಂಗ್ರಹಸ್ಥಾನವಾದ ದೊಡ್ಡ ಕರಳುಗಳು ಯಾವಾಗಲೂ ಶುದ್ಧವಾಗಿರುವಂತೆ ಎಚ್ಚರತೆಗೊಳ್ಳುವುದು ದೀರ್ಘಾಯುಷ್ಯಕ್ಕೆ ಕಾರಣವೆಂಬುದು ಯಥಾರ್ಥವು. ಯೋಗಾಭ್ಯಾಸಪರರಾದ ಯೋಗಿಗಳು, ಧಾರಾಳವಾಗಿ ನೀರನ್ನೆಳೆದುಕೊಂಡು, ಆಹಾರ ನಾಳಗಳನ್ನೆಲ್ಲ ಚೆನ್ನಾಗಿ ತೊಳೆದು ಶುದ್ಧಮಾಡಬಲ್ಲರು. ಮತ್ತು ಶ್ವಾಸದಿಂದ ಗಾಳಿಯನ್ನು ಆ ನಾಳಗಳಲ್ಲಿ ತುಂಬಿಡುವರು.

ಕರಳುಗಳಲ್ಲಿ ಸೇರಿದ ಆಹಾರದ ಚರಟಗಳೆಲ್ಲ ಅಲ್ಲಿಂದ ಹೊರಬೀಳಲು ತಾಮಸವಾಗುವುದೇ ಮಲಬದ್ಧತೆಯೆಂಬುದರ ಅರ್ಥವು. ಈ ಮಲಬಂಧದಲ್ಲಿ ಮಲವು ಬಹಳ ಗಟ್ಟಿಯಾಗಿರುವುದು. ಅಥವಾ ಸ್ವಲ್ಪ ಗಟ್ಟಿಯಾಗಿಯೂ ಇರುವುದುಂಟು. ಹಾಗಿರುವುದು ಒಳ್ಳೇ ಲಕ್ಷಣವಲ್ಲ.

ಮಲಬದ್ಧತೆಗೆ ಸರ್ವಸಾಧಾರಣವಾದ ಕಾರಣವೇನೆಂದರೆ, ಮಲವಿಸರ್ಜನೆಗೆ ಹಾಲುವರಾರಿ ಅದನ್ನು ತಡೆಯುವುದೇ! ಈ ಅಲಕ್ಷ್ಯತೆಗೆ ಈಗಿನ ನವಜೀವನ ಕ್ರಮದಲ್ಲಿ ಜನಗಳಿಗಿರುವ ದುಡಿತವೂ, ಕಾರ್ಯಾತುರವೂ ಮುಖ್ಯಕಾರಣಗಳೆನಿಸಿವೆ. ಈಗಿನ ಅನುಭವದಲ್ಲಿ ಪ್ರಾಯಶಃವಾಗಿ ತರುಣಿಯರಲ್ಲಿಯೂ ಈ ಮಲಬದ್ಧತೆಯು ಹೆಚ್ಚಾಗಿ ಕಂಡುಬರುತ್ತದೆ. ಅವರಿಗೆ ಜೀವನದ ದುಡಿತವಿಲ್ಲದಿದ್ದರೂ, ಅವರು ಲಜ್ಜಾಸ್ವಭಾವವುಳ್ಳವರಾದುದರಿಂದ, ಜಲ ಮಲವಿಸರ್ಜನೆಗಳನ್ನು, ಆಯಾ ಕಾಲದಲ್ಲಿ ಮಾಡದೆ ಸಮಯಪರೀಕ್ಷಣೆಗಾಗಿ ತಡೆದಿಡುವರು.

ಇದು ಹೊರತು ಮಲಬದ್ಧತೆಗೆ ಇನ್ನೂ ಹಲವು ಕಾರಣಗಳುಂಟು. ಕರುಳುಗಳ ಸ್ನಾಯುಗಳು ದುರ್ಬಲವಾಗಿ ಅವು ವಿಸರ್ಜನಕಾರ್ಯವನ್ನು ನಡೆಸದಿರುವುದೊಂದು. ಆಹಾರಗಳಲ್ಲಿ ಸಾಯುಮವೂ ಮಿತಿಯೂ ಇಲ್ಲದಿರುವುದೊಂದು, ಇವೆರಡೂ ಈ ಮಲಬಂಧಕ್ಕೆ ಮೂಲವಾಗುವುವು. ಕರಳುಗಳನ್ನು ಬಗಿಯುವಂತೆ ಅಲ್ಲಿ ಅತ್ಯಧಿಕವಾಗಿ ಆಹಾರದ ಚರಟಗಳು ಸೇರಿದರಾಗಲಿ, ಅದೇ ಆಹಾರದ ಚರಟವು ಬಹಳ ಸ್ವಲ್ಪವಾಗಿದ್ದರಾಗಲಿ. ಮಲಬದ್ಧತೆಗೆ ಕಾರಣವೆನಿಸುವುದು.

ಜಠರಕ್ಕೆ ಸಂಬಂಧಪಟ್ಟ ಸ್ನಾಯುಗಳು, ದೊಳ್ಳುಹೊಟ್ಟೆಯುಳ್ಳವರಿಗೆ ದುರ್ಬಲವಾಗಿರುವುದುಂಟು. ಗಂಡಸರಲ್ಲಿ ಈ ದುರ್ಬಲತೆಯೂ, ಹೆಂಗಸರಲ್ಲಿ ಮೇಲೆ ಮೇಲೆ ಪ್ರಸವವಾಗುವುದೂ ಈ ಮಲಬಂಧಕ್ಕೆ ಕಾರಣಗಳಾಗುವುವು.

ಮಲಬದ್ಧತೆಯುಳ್ಳವರಿಗೆ ಆಗಾಗ ತಲೆಶೂಲೆ, ಮನಸ್ಸಿನಲ್ಲಿ ಉತ್ಸಾಹಹೀನತೆ, ಹಸಿವಾಗದಿರುವುದು, ದಣಿವು, ಮುಂತಾದುವೆಲ್ಲ ಹೆಚ್ಚಾಗಿ ತಲೆದೋರುತ್ತಿರುವುವು. ಅಲ್ಲದೆ ಇಂತಹ ಮಲಬದ್ಧತೆಯುಳ್ಳವರಿಗೆ ಉಸಿರಿನಲ್ಲಿ ಬಹಳ ದುರ್ಗಂಧವಿರುವುದರಿಂದ, ಇವರ ಸಮೀಪದಲ್ಲಿ ನಿಲ್ಲುವುದಕ್ಕೆ ಬೇರೆಯವರು ಅಸಹ್ಯಪಡುವರು. ಇದರಿಂದ ಉಲ್ಲಾಸವೂ, ಸಂತೋಷವೂ ಇಲ್ಲದೆ, ಅವರ ಜೀವನವೇ ಅವರಿಗೆ ಒಂದು ಭಾರವಾಗಿ ತೋರುವುದು.

ಜನ್ಮಸಿದ್ಧವಾದ ಮಲಬದ್ಧತೆಯುಳ್ಳವರು, ಮೂಲವ್ಯಾಧಿ, ಕರುಳು ಹಿಡಿದುಕೊಳ್ಳುವುದು ಅಪೆಂಡಿಸೈಟಿಸು ಎಂಬ ಜಠರರೋಗ, ಈ ಮುಂತಾದ ಕಠಿಣರೋಗಗಳಿಗೆ ಗುರಿಯಾಗುವರಲ್ಲದೆ, ಅವರಿಗೆ ಕರುಳುಗಳಲ್ಲಿ ವ್ರಣಗಳೂ ಉಂಟಾಗುವುವು. ಸ್ತ್ರೀಯರಿಗೆ ರಜಃಕಾಲದಲ್ಲಿ ಹೊಟ್ಟೆಶೂಲೆ ಮುಂತಾದ ನೋವು ಕಾಣಿಸುವದೂ, ಈ ಮಲಬದ್ಧತೆಯಿಂದಲೇ.

ರೋಗ ಚಿಕಿತ್ಸೆಗಳಿಗಿಂತಲೂ ನಿವಾರಣೋಪಾಯವೇ ಮೇಲೆಂಬ ಪ್ರಸಿದ್ಧವಾದ ಸಾಮತಿಯುಂಟಲ್ಲವೆ? ಅದರಂತೆಯೇ ಈ ಮಲಬದ್ಧತೆಗೆ ಅವಕಾಶ ಕೊಡದಂತೆ ಮೊದಲಿಂದಲೇ ಎಚ್ಚರತೆಗೊಳ್ಳುವುದು ಮೇಲು. ಮುಖ್ಯವಾಗಿ ಈ ಮಲಬಂಧವೆಂಬುದು ಪ್ರಕೃತಿ ನಿಯಮಗಳಿಗೆ ವಿರೋಧವಾಗಿ ನಡೆಯುವುದರಿಂದಲೇ ಬರುವುದೆಂಬುದು ನಿಜವು. ಒಂದೇ ಕ್ರಮವಾದ ಮತ್ತು ಎಲ್ಲಾ ವಿಷಯದಲ್ಲಿಯೂ ಮಿತವಾದ ಆಚರಣೆಯುಳ್ಳವರಿಗೆ, ಈ ಮಲಬದ್ಧತೆ ಇರುವದೇ ಇಲ್ಲ. ಅಂಥವರು ಯಾವಾಗಲೂ ಆರೋಗ್ಯಕರವಾದ ಮತ್ತು ಉಲ್ಲಾಸವಾದ ಜೀವನಸುಖವನ್ನನುಭವಿಸುವರು.

ಅದಲ್ಲದೆ, ಮಲಬದ್ಧತೆ ಇದ್ದಮೇಲೆ ಅದನ್ನು ಗುಣಪಡಿಸುವ ಮಾರ್ಗವೇನೆಂಬುದನ್ನೂ ತಿಳಿದಿರಬೇಕಾದುದವಶ್ಯವಲ್ಲವೆ? ಈ ಮಲಬಂಧವು ಪ್ರಾಯಶಃವಾಗಿ ಅವರವರ ಸಹಜವಾದ ಆಚರಣೆಯ ಮೇಲೆ ಬರತಕ್ಕ ವ್ಯಾಧಿಯಾದುದರಿಂದ ಅದರ ಚಿಕಿತ್ಸೆಗೂ ಪ್ರಕೃತಿಮಾರ್ಗದಿಂದಲೇ ಪ್ರಯತ್ನಿಸುವುದು ಉತ್ತಮವು. ಪ್ರಾಯಶಃವಾಗಿ ಅದರಿಂದಲೇ ಅದಕ್ಕೆ ಗುಣಕಾಣುವದೂ ನಿಜವೇ. ಇದಕ್ಕಾಗಿ ಮಲಬಂಧವುಳ್ಳವರು ಮೊಟ್ಟಮೊದಲು ತಮ್ಮ ದಿನಚರ್ಯೆಯನ್ನು ಮಾರ್ಪಡಿಸಿ ತಿದ್ದಿಕೊಳ್ಳಬೇಕು. ಅವನು ತನ್ನ ಶರೀರ ಪ್ರಕೃತಿಗೆ ಸಹಜವಾದ ಕಾರ್ಯಗಳಿಗೆಲ್ಲ, ಕಾಲನಿರ್ಣಯವನ್ನಿಟ್ಟುಕೊಂಡು ಪ್ರತಿದಿನವೂ ಆಯಾ ಕ್ಲುಪ್ತ ಘಂಟೆಗಳಲ್ಲಿಯೇ ನಡೆಸಬೇಕು. ತನಗೆ ಇಷ್ಟವೂ ಆವಶ್ಯಕತೆಯೂ ತೋರದಿದ್ದಾಗಲೂ ನಿರ್ಬಂಧಪೂರ್ವಕವಾಗಿ ಅದನ್ನು ಆಗಾಗ ಮಾಡಿಯೇ ತೀರಬೇಕು. ಹೀಗೆ ಮಾಡುತ್ತಾಬಂದರೆ ಕಾಲಕ್ರಮದಿಂದ ತಾನಾಗಿ ಅದೇ ವಾಡಿಕೆಗೆ ಬರುವುದು.

ಪ್ರತಿದಿನವೂ ರಾತ್ರಿ ಮಲಗುವುದಕ್ಕೆ ಮೊದಲೂ ಬೆಳಗ್ಗೆ ಎದ್ದ ಮೇಲೆಯೂ ಒಂದೊಂದು ತಾಲಿ ನೀರನ್ನು ಕುಡಿಯುವ ಅಭ್ಯಾಸವು ಇದಕ್ಕೆ ಬಹಳ ಗುಣಕಾರಿ. ಜಠರದಲ್ಲಿ ಉಂಟಾಗಿರುವ ಜಡತೆಯನ್ನು ನೀಗಿಸಿ, ಅದನ್ನು ತಕ್ಕ ಕಾರ್ಯದಲ್ಲಿ ಹುರುಪುಗೊಳಿಸುವುದಕ್ಕಾಗಿ ಆ ಭಾಗದ ಸ್ನಾಯುಗಳಿಗೆ ಬಲಕೊಡುವ ವ್ಯಾಯಾಮಗಳನ್ನು ಪ್ರತಿದಿನವೂ ತಪ್ಪದೆ ಮಾಡುತ್ತಾಬರಬೇಕು. ಇದಕ್ಕಾಗಿ ಹಾಸಿಗೆಯಲ್ಲಿ ಅಂಗತ್ತನಾಗಿ ಮಲಗಿ, ಆ ಮೇಲೆ ಥಟ್ಟನೆ ಮೇಲೇಳುವುದು, ತಿರುಗಿಮಲಗುವುದು, ತಿರುಗಿ ಮೇಲೇಳುವುದು ಹೀಗೆ ಪುನರಾವರ್ತನೆಮಾಡುವುದರಿಂದ ಜಠರಸ್ನಾಯುಗಳಿಗೆ ಒಳ್ಳೇ ವ್ಯಾಯಾಮವುಂಟಾಗುವುದು. ಈ ತರದ ವ್ಯಾಯಾಮವನ್ನು ಪ್ರತಿಯೊಬ್ಬರೂ ಬಹು ಸುಲಭವಾಗಿ ಮಾಡಬಹುದು.

ಆಹಾರಕ್ರಮವನ್ನೂ ಸ್ವಲ್ಪಮಟ್ಟಿಗೆ ಬದಲಾಯಿಸಿಕೊಳ್ಳಬೇಕು. ಇದಕ್ಕಾಗಿ ಹಸುರು ಸೊಪ್ಪುಗಳನ್ನೂ, ಭೇದಿಕಾರಿಗುಣವುಳ್ಳ ಹಣ್ಣುಗಳನ್ನೂ ಆಹಾರದಲ್ಲಿ ಹೆಚ್ಚಾಗಿ ಉಪಯೋಗಿಸುವುದುತ್ತಮವು.

ಈಚೀಚೆಗೆ ಔಷಧದ ಅಂಗಡಿಗಳಲ್ಲಿ ಭೇದಿಯ ಔಷಧಿಗಳು ವಿಧವಿಧವಾಗಿ ಮಾರಾಟಕ್ಕಿಡಲ್ಪಟ್ಟಿರುವುವು. ಮಲಬಂಧವುಳ್ಳವರು ಅವುಗಳಲ್ಲಿ ಒಂದಾದಮೇಲೆ ಒಂದನ್ನು ತೆಗೆದು ಉಪಯೋಗಿಸುತ್ತಲೇ ಇರುವರು. ಆದರೇನು? ಅವುಗಳಿಂದೇನೂ ಉಪಯೋಗವಿಲ್ಲದೆ ಕೊನೆಗೆ ಚಿಕಿತ್ಸೆಗಾಗಿ ವೈದ್ಯರನ್ನು ಹುಡುಕಿಕೊಂಡು ಹೋದವರೆಷ್ಟೋಮಂದಿಯುಂಟು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 12

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಬಲ್ಲವರ ಸಹಾಯವಿಲ್ಲದೆ ಇಂಗ್ಲೀಷು ಓದುವದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೂ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.
ಪೊ. ನಂ. 1246. ಮದರಾಸು.
K. N. BENSON & Co.,
[11] P. B. 1246, MADRAS. [21]

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕವಡಿಭಸ್ಮ	೧	೦—೪—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಕಸ್ತೂರಿ (೨ನೇ ನಂಬರ್)	೧	೪೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು. ೧ ಅಣೆ ಟಿಕೀಟ (ಸ್ಟಾಂಪು) ಕಳುಹಿಸಿದಲ್ಲಿ ಕ್ಯಾಟಲಾಗು ಕಳುಹಿಸುವೆವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ಗೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್‌ಮೆಂಟ್ಸಿನಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಸರಿಯಾದ ಘಂಟೆಯನ್ನು ತೋರಿಸುವುವು. ಒಳಗಡೆ ಕೆಂಪು ಇಟ್ಟಿರುವುವು. ಇದರ ಕೇಸು ಭಂಗಾರಕ್ಕೆ ಸರಿಯಾಗಿದೆ. ಇದಕ್ಕೆ ೬ ವರುಷ ಬಾತ್ರಿಯಾದ ಗ್ಯಾರಂಟಿ ಕೊಡುವೆವು.



ಈ ವಾರದಲ್ಲಿ ಈ ಗಡಿಯಾರವನ್ನು ತರಿಸುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿನಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು. ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.
THE CITY MART,
168, Chinzan Baur, MADRAS.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 20

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ಕೇಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಅಣೆ 14, $\frac{1}{2}$ ಡಜ್ 8-8-0 ಮತ್ತು ರೂ 5

ರ್ಹುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವನೋವು, ಗಂಟ್ಲುನೋವು ಸಂದು ಗಂಟ್ಲುನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ವಾಸಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಚುಮದ್ದುಗಳು, ಹೊಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮು ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ಹುಳಮೇಯುವ ರೋಗ, ದದ್ದು, ತುರಸುವ ನಂಜಿ ಹುಣ್ಣುಗಳನ್ನು ಕಷ್ಣಾ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಠಿಣ ನೋವು ಇತ್ಯಾದಿ ಅವಸ್ಥೆಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಔನ್ಸಿಗೆ ಆಣೆ 8, $\frac{1}{2}$ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ಕಾಯಗಳು ನಿಸ್ತೇಜಪಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತ ಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪು-ಸಾಲಿಸವನ** ಅತ್ಯಂತ ರಕ್ತಕನಂತೆಯೇ ಯುವಕನಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,
[21] (ಹಂಪನಕಟ್ಟೆ), 21, ಮಂಗಳೂರು.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಿದ್ದುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1 ಕ್ಕೆ ರೂ. 2—8—0. 3 ಕ್ಕೆ ರೂ. 7—0—0

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1 ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1 ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1 ಕ್ಕೆ 2—0—0; 2 ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (11)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್.
ನಂ. 271, ರಥಬೀದಿ, ಮಂಗಳೂರು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಡ್ಸ್ಥಲ ಶೀಲಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ... ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪ ... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

ಪೋ. ಬಾ. ೫೧೦, ಮದರಾಸು.

[3]

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಫೆಬ್ರವರಿ ೧೯೩೪ [ಸಂಚಿಕೆ ೪೧

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಸಪ್ತಗ್ರಹಶಾಂತಿ ಸಮಾರಂಭಗಳು

ಚಿಕ್ಕಕೊಳಚಿ.

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕು ಚಿಕ್ಕಕೊಳಚಿ ಗ್ರಾಮದಲ್ಲಿ ಪ್ರಮುಖರಾದ ಮ|| ರಾ|| ಅಲೂರು ನಾಗಪ್ಪನವರು, ಕುರುವತ್ತಿ ಹಾಲಪ್ಪನವರು, ಹಳ್ಳಂಡಿ ಕರಿಯಪ್ಪ, ಹರಿಪುರದ ದೊಡ್ಡಹಾಲಪ್ಪ, ಸಣ್ಣಹಾಲಪ್ಪ ಮತ್ತು ಹಾಲು ಮಠದ ಕುರುಬರಯಲ್ಲಪ್ಪ, ನಾಯಕರ ಹನುಮಪ್ಪ, ಹಡಗಲಿ ಹನುಮಪ್ಪ, ಮಾಳಪ್ಪನಲಕಪ್ಪ, ಮಗೇಗಾರ ಭರಮಜ್ಜ, ಕ್ಯಾವರ ಮಾಚರಪ್ಪ ಮುಂತಾದ ಸಮಸ್ತ ಶೈವರ ಮಂಡಳಿಯವರು ಸೇರಿ ಸಪ್ತಗ್ರಹಕೂಟ ಶಾಂತ್ಯರ್ಥವಾಗಿ ಪ್ರತಿದಿವಸ ಉದಯಕ್ಕೆ ಶಿವಭಜನೆಯನ್ನು ನಡೆಸುತ್ತಲೂ ಸಾಯಂಕಾಲದಲ್ಲಿ ಶ್ರೀ ರೇಣುಕಶಿವಾಚಾರ್ಯರ ಪುರಾಣವನ್ನು ಸುರಗಿ ಮಠದ ವೇ|| ಬಸಪ್ಪಯ್ಯನವರಿಂದ ಹೇಳಿಸುತ್ತಲೂ ೧೧ ದಿವಸಗಳವರೆಗೆ ಸರ್ವರೂ ತ್ರಿಕರಣ ಶುದ್ಧವಾದ ಭಕ್ತಿಯಿಂದ ನಡೆಯಿಸುತ್ತ ಬಂದು ಈ ಮಾಘ ಶು|| ೭ ದಿವಸ ಮಾಚಿಹಳ್ಳಿ ಪುರವರ್ಗಮಠದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಮಳೆಸ್ವಾಮಿಗಳವರ ಮಹಾಪಾದಪೂಜಾ, ಬಿಲ್ವಾರ್ಚನೆ, ತೀರ್ಥಪ್ರಸಾದ ಸೇವನಾದಿಗಳನ್ನು ನೆರವೇರಿಸಿದರು. ೧ ಸಾವಿರಜನರವರೆಗೂ ಅನ್ನಸಂತರ್ಪಣೆಯಾಯಿತು. ಮತ್ತು ಈ ದಿವಸ ಉದಯಕ್ಕೆ ಇದೇ ಗ್ರಾಮದ ಮಠದ ವೇ|| ಕೊಟ್ರಯ್ಯನವರ ಪುತ್ರ ಚಿ|| ವೀರಭದ್ರಯ್ಯನೆಂಬ ವಟುವಿಗೆ ಶಿವದೀಕ್ಷಾ ಸಂಸ್ಕಾರವು ನಡೆಸಲ್ಪಟ್ಟಿತು.

ಮಾರನೇ ದಿವಸ ಶ್ರೀ ನಂದೀಶಮೂರ್ತಿಯ ಮತ್ತು ಪುರಾಣದ ಮಹೋತ್ಸವವನ್ನು ಅನೇಕ ವಾದ್ಯವೈಭವಗಳಿಂದ ನಡೆಯಿಸಿ ಬಳಿಕ ಕೂಡಿದ ಜನ ಸಮೂಹಕ್ಕೆ ಹಿರೇಹಡಗಲಿ ಪುರಾಣಿಕ ಮಠದ ವೇ|| ವಿರೂಪಾಕ್ಷಶಾಸ್ತ್ರಿಗಳು ಆಚಾರತ್ರಯಗಳನ್ನೂ ಸ್ತ್ರೀಪುರುಷರ ನೀತಿಮಾರ್ಗಗಳನ್ನೂ ಚನ್ನಾಗಿ ಬೋಧಿಸಿ ವೀರಶೈವ ಸಮಾಜೋದ್ಧಾರಕ್ಕಾಗಿ ಉದಯಿಸಿರುವ ಶ್ರೀ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ೨ ರೂಪಾಯಿಗಳನ್ನು ತೆಗೆಯಿಸಿದರು.

ಈ ಗ್ರಾಮದಲ್ಲಿ ವೀರಶೈವರು ಅಲ್ಪಸಂಖ್ಯಾತರಾಗಿದ್ದು ವಾಲ್ಮೀಕಮತದವರೇ ವಿಶೇಷವಾಗಿದ್ದಾರೆ. ಇವರು ಮೇಲ್ಕಾಣಿಸಿದ ವೀರಶೈವ ಪ್ರಮುಖರ ಸದ್ಬೋಧೆಯನ್ನು ಲಾಲಿಸಿ ಈ ಸಮಯದಲ್ಲಿ ತಮ್ಮ ದೃಢವಾದ ಭಕ್ತಿಯಿಂದಲೂ ತನುಮನಧನಗಳಿಂದಲೂ ನೆರವೇರಿಸಿ ಪುಣ್ಯಕ್ಕೂ ಕೀರ್ತಿಗೂ ಪಾತ್ರರಾದರು. ಇದರಂತೆ ಪ್ರತಿಯೊಂದು ಗ್ರಾಮದವರೂ ಸತ್ಕಾರ್ಯನಿರತರಾಗಿ ಸುಖವನ್ನು ಹೊಂದುವವರಾಗಬೇಕೆಂದು ಬಯಸುತ್ತೇವೆ.

ಕಾಶೀಗವಿ ರಾಚೋಟೆಪ್ಪ,
ಎನಹಳ್ಳಿ ಬಣಕಾರಗುರುಸಿದ್ದಪ್ಪ
ಬಣಕಾರ ಮೂಕಿ ಹೊಳೆಯಪ್ಪ.

ಬೀರೂರು.

ತಾ|| 15-1-1934 ನೆಯ ಸೋಮವಾರ ಪ್ರಾರಬ್ಧವಾದ ಸಪ್ತಗ್ರಹಕೂಟವು ನಮ್ಮ ಪುಣ್ಯಭೂಮಿಯಾದ ಭರತಖಂಡದಲ್ಲಿ ಅತ್ಯಂತ ಅನರ್ಥಕಾರಿಯೆಂದು ಜ್ಯೋತಿಷ್ಯರು ಹೇಳಿದಂತೆ ಭೂಕಂಪನವೇ ಮೊದಲಾದ ಅನಾಹುತಗಳು ನಡೆದದ್ದು ಸರ್ವರಿಗೂ ವೇದ್ಯವೇ ಅದೆ.

ಇಂಥ ಸಂದರ್ಭದಲ್ಲಿ ಸನಾತನ ಸಂಪ್ರದಾಯದಂತೆ ಬೀರೂರಿನ ವೀರಶೈವರು ಈ ಗ್ರಹಕೂಟದ ಶಾಂತ್ಯರ್ಥವಾಗಿ ಶ್ರೀ ವೀರಭದ್ರಸ್ವಾಮಿಯ ದೇವಾಲಯದಲ್ಲಿ ಪುಷ್ಯ ಬಹುಳ ತ್ರಯೋದಶಿ ತಾ|| 13.1-34 ರಿಂದ ತಾ|| 23-134 ರ ವರೆಗೆ ಬೆಂಗಳೂರು ವೇ|| ಗುರುಲಿಂಗಶಾಸ್ತ್ರಿಗಳಿಂದ ಶ್ರೀ ವೀರಭದ್ರಸ್ವಾಮಿಗೂ ಶ್ರೀ ಶಿವಲಿಂಗಮೂರ್ತಿಗೂ ಮಹಾರುದ್ರಾಭಿಷೇಕವನ್ನೂ ಹವನಕಾರ್ಯಗಳನ್ನು ನೆರವೇರಿಸಿದರು.

ಹಾಸನದ ಶ್ರೀ ಸ್ವಾಮಿಗಳವರಿಂದ ಮೃತ್ಯುಂಜಯಜಪವೂ ಕೆಂಸಾಗರದ ಚನ್ನಬಸವಸ್ವಾಮಿಗಳವರಿಂದ ಶಿವಪಂಚಾಕ್ಷರೀಜಪವೂ, ಇಲ್ಲಿಯ ಶ್ರೀ ಶಿವಾನಂದಾಶ್ರಮದ ಶ್ರೀ ಗುರುಲಿಂಗಸ್ವಾಮಿಗಳವರಿಂದ ಶಿವಸಹಸ್ರನಾಮ ಪಾರಾಯಣವೂ ದುರ್ಗಾಜಪವೂ, ನವಗ್ರಹಜಪವೂ, ಸಕಾಲಕ್ಕೆ ನೆರವೇರಿಸಲ್ಪಟ್ಟವು.

ಕುಮಟೆಯ ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿಗಳ ಶಿವಕೀರ್ತನವು ಪ್ರತಿದಿವಸ ಬಹಳ ಸ್ವಾರಸ್ಯವಾಗಿ ನಡೆಯುತ್ತಿತ್ತು. ಈ ಊರಿನ ಶ್ರೀಮದ್ವೀರಶೈವ ಸೇವಾಸಂಘದ ತರುಣರು ತ್ರಯೋದಶಿ ಮೊದಲ್ಗೊಂಡು ಹನ್ನೆರಡು ದಿವಸಗಳವರೆಗೆ ಸಂಘದ ಪ್ರೆಸಿಡೆಂಟರಾದ ಶ್ರೀಮಾನ್ ಪತ್ರಿ ಕೆ. ಶಿವಪ್ಪಯ್ಯನವರ ಸಲಹೆಯಂತೆಯೂ, ಪುರಪ್ರಮುಖರು ಹಾಗೂ ಸಂಘದ ಸೆಕ್ರಟರಿಯವರಾದ ವೇ|| ಬಿ. ಎಂ. ಹಾಲಯ್ಯನವರು ಮತ್ತು ಎಸ್. ಚಿಕ್ಕವೀರಯ್ಯನವರಿಂದ ಶಿಕ್ಷಣಹೊಂದಿದ ಅರವತ್ತು ಜನರಿಂದ ಕೂಡಿದ ತರುಣ ಮಂಡಲಿಯು ದೇವಾಲಯದಲ್ಲಿಯೇ ಶಿಲಾಮಂಟಪವೊಂದರಲ್ಲಿ ಕೈಲಾಸಶಂಕರನ ಫೋಟೋ ಸ್ಥಾಪನೆಗೊಳಿಸಿ ಹಗಲಿರಳು ಅವಿಚ್ಛಿನ್ನವಾಗಿ ಶಿವನಾಮಪೂರ್ವಕವಾದ ಭಜನೆಯನ್ನು ವಿಧಿಗನುಸಾರವಾಗಿ ನಡೆಸಿದ್ದು ಅಭಿನಂದನೀಯವಾಗಿದೆ.

ಹನ್ನೆರಡನೆಯ ದಿವಸ ರಾತ್ರಿ ಶ್ರೀ ವೀರಭದ್ರಮಹಾಸ್ವಾಮಿಯ ವೈಭವಯುಕ್ತವಾದ ಉತ್ಸವವು ವೀರೇಶನ ಅನಂತಾನಂತ ಲೀಲೆಗಳ ನಾಮಸ್ಮರಣಪೂರ್ವಕ ಬೆಳಗಿನ ಐದು ಘಂಟೆಯ ವರೆಗೂ ಸಾಗಿತು. ಅನಂತರ ಅಗ್ನಿಕುಂಡದಲ್ಲಿ ಇದೇ ಊರು ವೇ|| ಮುಚಿಷಿ ಮುದ್ವೀರಯ್ಯನವರ ಕಲಶದಿಂದ ಪ್ರವೇಶವೂ ದೇವರುಗಳ ಪ್ರವೇಶವೂ ಆಯಿತು. ಅನಂತರ ಸ್ಥಳಪರಸ್ಥಳದಿಂದ ಬಂದಿದ್ದ ಭಕ್ತಮಾಹೇಶ್ವರರಿಗೆ ಪ್ರತಿದಿವಸವೂ ನಡೆಯುತ್ತಿದ್ದಂತೆ ಅನ್ನಸಂತರ್ಪಣೆಯು ನಡೆಯಿತು.

ಈ ಕಾರ್ಯಕ್ಕೆ ಈ ಊರಿನ ವೀರಶೈವಮಂಡಳಿಯವರು ಅಬಾಲವೃದ್ಧರಾಗಿ ಸ್ತ್ರೀಯರೂ ಸಹ ತಮ್ಮ ತನುಮನಧನಗಳಿಂದ ಮಹಾಕಾರ್ಯವನ್ನು ಸಾವಧಾನವಾಗಿ ಪೂರ್ಣಗೊಳಿಸಿ ಪುಣ್ಯಭಾಗಿಗಳಾದರು. ಶ್ರೀ ಸರ್ವಮಂಗಳಾಧವನು ಜಗತ್ತನ್ನು ಶಾಂತಿಗೊಳಿಸಲೆಂದು ಪ್ರಾರ್ಥಿಸುವ,

ಓರ್ವ ಸೇವಾಂಡಿರ್.

ಹೊಳಲು.

ಬಳ್ಳಾರಿ ಡಿ|| ಹರಪನಹಳ್ಳಿ ತಾ|| ಹೊಳಲು ಗ್ರಾಮದ ಪ್ರಮುಖರಾದ ಮ|| ರಾ|| ಗಚ್ಚಿನಮನೆ ಬಸೆಟ್ಟೆಪ್ಪನವರು, ಯತ್ನಳ್ಳಿ ಚನ್ನಬಸಪ್ಪನವರು, ಬ್ಯಾಡಗಿ ಪಕ್ಕೀರಪ್ಪನವರು, ಬೆಳಗಾವಿ ದೊಡ್ಡಚನ್ನಬಸಪ್ಪ, ಯಲಗಚ್ಚಿನ ಸೋಮಣ್ಣ, ಗಂಧುದ ಪಕ್ಕೀರಪ್ಪ, ವಗೈರೆಯವರು ಸೇರಿ ಸಪ್ತಗ್ರಹಕೂಟದ ಶಾಂತ್ಯರ್ಥವಾಗಿ ಶ್ರೀ ರೇಣುಕವಿಜಯ ಪುರಾಣವನ್ನು ಹಿರೇಹಡಗಲಿ ಪುರಾಣಿಕಮಠದ ವೇ|| ವಿರೂಪಾಕ್ಷಶಾಸ್ತ್ರಿಗಳಿಂದ ಸಂಗೀತಸಾಹಿತ್ಯಗಳೊಡನೆ ಪ್ರವಚನ ನಡೆಯಿಸಿದರು. ಮತ್ತು ತರುಣಮಂಡಳಿಯವರಾದ ವೇ|| ಹಿರೇಮಠದ ಚನ್ನಮಲ್ಲಯ್ಯನವರು ಕಾಲಾಮುಕ್ತಿರ ಮರುಳಸಿದ್ಧಯ್ಯನವರು, ಮರಿಯಪ್ಪ ಚನ್ನಪ್ಪ, ಅಸುಂಡಿ ಚನ್ನಬಸಪ್ಪ ಮುಂತಾದವರು ಭಜನಾಸಂಘವನ್ನು ಏರ್ಪಡಿಸಿ ಪ್ರತಿದಿವಸ ರಾಗತಾಳಗಳಿಂದ ಮನೋಹರವಾಗಿ ಭಜನೆಮಾಡುತ್ತ ಅಮೃತೇಶ್ವರ ಮಹಾಲಿಂಗಕ್ಕೆ ಸದರಿ ಶಾಸ್ತ್ರಿಗಳಿಂದ ವಿಧ್ಯುಕ್ತಪ್ರಕಾರ ಮಹಾಭಿಷೇಕಾದಿಗಳನ್ನು ನೆರವೇರಿಸಿ ಇದೇ ಮಾಘ ಶುದ್ಧ|| ೭ ದಿವಸ ಪುರಾಣ ಸಮಾಪ್ತಿ ಭೂರಿಗಣಾರಾಧನೆ ಸಾಯಂಕಾಲ ಪಲ್ಲಕ್ಕಿ ಮಹೋತ್ಸವಾದಿಗಳನ್ನು ಜರಗಿಸಿ ಪುಣ್ಯಕ್ಕೂ ಕೀರ್ತಿಗೂ ಪಾತ್ರರಾದರು.

ಪ್ರತ್ಯಕ್ಷ ದರ್ಶಿ.

ಕುಂಸಿ.

ಕುಂಸಿ ಟೌನ್ ದೊಡ್ಡಪೇಟೆಯಲ್ಲಿರುವ ಮ|| ರಾ|| ರಾ|| ಜಾಜಿ ವೀರಭದ್ರಪ್ಪ ಶ್ರೇಷ್ಠಿಯವರ ಗೃಹದಲ್ಲಿ ಸಪ್ತಗ್ರಹಯೋಗದ ಸಂಬಂಧವಾಗಿ (ತಾ|| 15-1-34) ಸೋಮವಾರ ಪ್ರಾತಃಕಾಲ ನವಗ್ರಹಶಾಂತಿ ಈಶ್ವರಾರ್ಚನೆ ಮಧ್ಯಾಹ್ನ ಮಾಹೇಶ್ವರ ಸಂತರ್ಪಣೆ ಶ್ರೀ ಗುರುಭಜನೆ ರಾತ್ರಿ 9 ಘಂಟೆಯಿಂದ ಶಿವಸಂಕೀರ್ತನೆ ಇತ್ಯಾದಿ ಕಾರ್ಯಗಳು ನೆರವೇರಿಸಲ್ಪಟ್ಟವು. ಕೀರ್ತನಕ್ಕಾಗಿ ಆಹೂತರಾಗಿದ್ದ ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳು ವಿಶ್ವಮಹರ್ಗಕನ್ನಪರೀಕ್ಷೆ (ಶನೈಶ್ಚರಮಾಹಾತ್ಮ್ಯ) ಎಂಬ ಕೀರ್ತನೆಯನ್ನು ಲೌಕಿಕ ಪಾರಮಾರ್ಥಿಕ ವಿವರಣೆಗಳೊಡನೆ ೫ ತಾಸುಗಳವರೆಗೆ ಅನುವಾದ ಮಾಡಿದರು. ಶ್ರವಣೇಚ್ಛೆಗೆಂದಾಗಿ ಆಗಮಿಸಿದ್ದ ಮಹಾಜನಗಳು ಚಿತ್ರದ ಬೊಂಬೆಗಳಂತೆ ಕುಳಿತಿದ್ದು ಶಾಸ್ತ್ರಿಗಳವರ ಮಧುರವಾದ ಗಾಯನಕ್ಕೂ ವಾಗ್ವೈಖರಿಗೂ ನೈಜವಾದ ಧರ್ಮಬೋಧೆಗೂ ಯೋಗ್ಯವಾದ ಉಪಕಥೆಗಳ ಜೋಡಣೆಗೂ ತಲೆದೂಗಿ ಶಾಸ್ತ್ರಿಗಳವರ ಪ್ರತಿಭಾಶಕ್ತಿಯನ್ನು ಶ್ಲಾಘಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ಮಾಡಿದ ಬಳಿಕ ಸತ್ಸಮಯದ ಜ್ಞಾಪಕಾರ್ಥವಾಗಿ ಪ್ರಭಾಪೋಷಕೋತ್ಸವ ೧ ರೂ. ಯು ತೆಗೆಯಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

|| ಶ್ರೀ ||

ಚಿಕ್ಕಮಗಳೂರು,

ಕಾಫೀಪ್ಲಾಂಟರ್ ತೊಗರಿಹಂಕಲು ಮಲ್ಲೇಗೌಡನ ವಿಜ್ಞಾಪನೆಗಳು.

ಮಹಾಶಯರೇ!

ನನ್ನ ಇಷ್ಟಮಿತ್ರರು ಅನೇಕರು ಪ್ರೋತ್ಸಾಹಿಸಿದುದರ ಮೇರೆ ಈ ಸಾಲಿನಲ್ಲಿ ರಚಿಸಲ್ಪಡುವ **ಮೈಸೂರು ನ್ಯಾಯವಿಧಾಯಕ ಸಭೆಗೆ** ನಾನು ನಮ್ಮ ಕಡೂರು ಡಿಸ್ಟ್ರಿಕ್ಟಿನ ಪ್ರತಿನಿಧಿ ಸ್ಥಾನಕ್ಕೆ ಉಮೇದುವಾರನಾಗಿ ನಿಂತಿರುತ್ತೇನೆ.

ಇದೇ 1934 ನೇ ಇಸವಿ **ಮಾರ್ಚಿ ತಾರೀಖು 3 ನೇ ಶನಿವಾರ** ನಡೆಯುವ ಚುನಾವಣೆಯಲ್ಲಿ ತಮ್ಮ ಸ್ನೇಹಿತರೊಡನೆ ತಾವು ತಮ್ಮ ಅಮೋಘವಾದ ಓಟನ್ನು ದಯವಿಟ್ಟು ನನಗೆ ಕೊಡುವುದರ ಮೂಲಕ ಈಗಲಾಗಾಯಿತು ಮೂರು ವರ್ಷ ತಮ್ಮಗಳ ಪ್ರಾತಿನಿಧ್ಯವನ್ನು ದಯವಿಟ್ಟು ನನಗೆ ಕಲ್ಪಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ದಯವಿಟ್ಟು ಆನೆಯ ಮುಂದೆ **X** ಈ ರೀತಿ ಗುರುತು ಮಾಡಬೇಕು.

ತಮ್ಮ ವಿಧೇಯ,
ಟಿ. ಬಿ. ಮಲ್ಲೇಗೌಡ,
ಕಾಫೀಪ್ಲಾಂಟರ್.

ಇಂಡಿಯಾದಲ್ಲಿ ವಿಮಾನರಚನೆ.

ನಾಸಿಕ್ ನಗರದ ವೈ. ಎನ್. ಸಿಂಧೆ ಎಂಬ ಮೋಟಾರ್ ಡ್ರೈವರು 30-40 ಅಡಿಗಳ ಎತ್ತರಕ್ಕೆ ಹಾರುವ ಒಂದು ಸಣ್ಣ ಮಾದರಿ ಏರೋಪ್ಲೇನನ್ನು ತಯಾರಿಸುವರಂತೆ!

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಲೇಖಾಂಕ 3

ಲೇಖಕ—ಶಿವಕುಮಾರಸ್ವಾಮಿ.

ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲ,
ಶ್ರೀಕ್ಷೇತ್ರಕಾಶಿ.

ಎರಡನೆಯ ಲೇಖದಲ್ಲಿ ಚರಕ ಸುಶ್ರುತ ವಾಗ್ಭಟರ ಸಂಕ್ಷಿಪ್ತ ಪರಿಚಯವು ಸಮಾಪ್ತಿಗೊಳಿಸಲ್ಪಟ್ಟಿತು. ಈಗ ಮಾಧವನಿದಾನ, ಚಕ್ರದತ್ತ, ಶಾರ್ಙ್ಗಧರಸಂಹಿತೆ, ಭಾವಪ್ರಕಾಶ, ಬಸವರಾಜೀಯ ಮತ್ತು ಪ್ರಾಚೀನ ರಸಗ್ರಂಥಗಳ ಪರಿಚಯವನ್ನು ವಾಚಕರ ಮುಂದಿಡುವೆನು.

ಮಾಧವನಿದಾನ:—ಈ ಗ್ರಂಥವನ್ನು ಮಾಧವಕರನೆಂಬ ಪಂಡಿತನು ರಚಿಸಿರುತ್ತಾನೆ. ಈತನು ವಂಗದೇಶದ ಲಕ್ಷ್ಮಣಸೇನನೆಂಬ ರಾಜನ ಆಳಿಕೆಯ ಸಮಯದಲ್ಲಿ ವಂಗದೇಶದ ವೈದ್ಯಕುಲಕ್ಕೆ ಅಲಂಕಾರಪ್ರಾಯನಾಗಿದ್ದನು. ಚರಕಸಂಹಿತೆಯ ಟೀಕಾಕಾರನಾದ ಚಕ್ರಪಾಣಿದತ್ತನು ತನ್ನ ಪರಿಚಯವನ್ನು ಬರೆಯುವಾಗ ಮಾಧವಕರನ ಸಮಯವು ಕ್ರಿ. ಶ. ೧೦ ನೇ ಶತಮಾನವಾಗಿರುವುದೆಂದು ಸೂಚಿಸಿರುವನು. ಈ ಗ್ರಂಥವು ಚರಕಸುಶ್ರುತ ವಾಗ್ಭಟರಲ್ಲಿ ವಿಸ್ತಾರವಾಗಿರುವ ನಿದಾನಗಳನ್ನೇ ಸಂಗ್ರಹಿಸಿ ರಚಿಸಲ್ಪಟ್ಟಿರುವುದಾಗಿದೆ. ಇದು ರೋಗನಿದಾನವನ್ನು ತಿಳಿದುಕೊಳ್ಳುವುದಕ್ಕೆ ಬಹಳ ಸಹಾಯಕವಾಗಿರುತ್ತದೆ. ಇಹುಮಟ್ಟಿಗೆ ಆಧುನಿಕ ವೈದ್ಯರು ಇದೊಂದರಿಂದಲೇ ನಿದಾನಕಾರ್ಯವನ್ನು ಪೂರೈಸಿಕೊಳ್ಳುತ್ತಾರೆ.

'ನಿದಾನೇ ಮಾಧವಃ ಶ್ರೇಷ್ಠಃ' ಎಂಬ ವೈದ್ಯವೈದ್ಯೋಕ್ತಿಯು ಸಾರ್ಥಕವಾಗಿರುತ್ತದೆ. ಇದು ಸಕಲ ಪ್ರಾಂತಗಳಲ್ಲಿಯೂ ಸುಪಾಠ್ಯಗ್ರಂಥವಾಗಿ ಅಂಗೀಕರಿಸಲ್ಪಟ್ಟಿರುವುದರಿಂದ ಇದರ ಶ್ರೇಷ್ಠತೆಯ ವಿಷಯದಲ್ಲಿ ಸಕಲ ವೈದ್ಯರ ಅಭಿಪ್ರಾಯವು ಏಕಮುಖವಾಗಿರುತ್ತದೆ.

ಚಕ್ರದತ್ತ:—ಈ ಗ್ರಂಥಕಾರನು ಚರಕಸಂಹಿತೆಗೆ ವ್ಯಾಖ್ಯಾನವನ್ನು ಬರೆದು ಚರಕಚತುರಾನನನೆಂಬ ಬಿರುದಾಂಕಿತನಾದ ಚಕ್ರಪಾಣಿದತ್ತನೇ ಆಗಿರುತ್ತಾನೆ. ಮಾಧವಕರನು ನಿದಾನಗ್ರಂಥವನ್ನು ರಚಿಸಿದ ಸ್ವಲ್ಪಕಾಲದ ಮೇಲೆ ಈ ಚಿಕಿತ್ಸಾಗ್ರಂಥದ ರಚನೆಯಾಗಿರುತ್ತದೆ. ಇದರಲ್ಲಿ ಮಾಧವನಿದಾನದ ರೋಗಕ್ರಮಾನುಸಾರವಾಗಿ ಚಿಕಿತ್ಸೆಗಳಿರುವುದರಿಂದ, ಚಕ್ರಪಾಣಿಯು ಮಾಧವಕರನ ಅನಂತರದಲ್ಲಿದ್ದವನೆಂದು ಗೊತ್ತಾಗುತ್ತದೆ. ಈತನು ವಂಗದೇಶದ ನಯಪಾಲರಾಜನಲ್ಲಿ ರಾಜವೈದ್ಯನಾಗಿದ್ದನು. ಕಲ್ಕತ್ತಾನಗರಿಯಲ್ಲಿ ಸದ್ಯಃ ವಿರಾಜಿಸುತ್ತಿರುವ ಮಹಾಮಹೋಪಾಧ್ಯಾಯ ಕವಿರಾಜ ಗಣನಾಥಸೇನರು ತಮ್ಮ 'ಪ್ರತ್ಯಕ್ಷಶಾರೀರಕ' ದ ಭೂಮಿಕೆಯಲ್ಲಿ. 'ತತ್ಪರಮೇಕಾದಶಶತಕೇ ಚಕ್ರಪಾಣಿರ್ನಾಮ ನಯಪಾಲರಾಜಸ್ಯವೈದ್ಯವರಃ ಪ್ರಾದುರ್ಬಭೂವ........ಚಕ್ರಪಾಣಿಪ್ರಭೃತಯ ಏಕಾದಶಶತಕ ಮಧ್ಯಮಾರ್ಗ ಇತಿ ಸರ್ವವಾದಿಸಮ್ಮತಃ ಸಿದ್ಧಾಂತಃ ಪೂರ್ವೋಕ್ತಹೇತುಃ' ಎಂದು ಬರೆದಿರುವುದರಿಂದ ಚಕ್ರಪಾಣಿದತ್ತನು ಕ್ರಿ. ಶ. ೧೧ ನೆಯ ಶತಮಾನದಲ್ಲಿ ನಯಪಾಲರಾಜನ ವೈದ್ಯನಾಗಿದ್ದನೆಂದು ತಿಳಿದು ಬರುತ್ತದೆ. ಈ ಗ್ರಂಥವು ಚಿಕಿತ್ಸಕರಿಗೆ ಅತ್ಯಂತ ಸಹಾಯಕರವಾಗಿರುವುದೆಂದರಿತು ಕ್ರಿ. ಶ. ೧೫ ನೆಯ ಶತಮಾನದಲ್ಲಿದ್ದ ಶಿವದಾಸಸೇನರೆಂಬ ಪಂಡಿತರು ಇದಕ್ಕೆ 'ತತ್ತ್ವಚಂದ್ರಿಕೆ' ಎಂಬ ಸಂಸ್ಕೃತವ್ಯಾಖ್ಯಾನವನ್ನು ಬರೆದಿರುವರು. ಈ ಗ್ರಂಥವು ವಂಗದೇಶದಲ್ಲಿ ಸರ್ವವೈದ್ಯಮಾನ್ಯವಾಗಿ ವಿಶೇಷಪ್ರಚಾರದಲ್ಲಿರುತ್ತದೆ. ಇದರಲ್ಲಿರುವ ಕಷಾಯ, ಮತ್ತು ರಸೌಷಧಿಗಳು ಆರ್ಷಗ್ರಂಥಾನುಸಾರಗಳಾಗಿರುತ್ತವೆ.

ಶಾರ್ಙ್ಗಧರಸಂಹಿತೆ:—ಈ ಗ್ರಂಥಕಾರನು ಮೊಗಲಸಾಮ್ರಾಜ್ಯ ಸಮಯದಲ್ಲಿದ್ದ ವೃಂದಮಾಧವ, ಭಾವಮಿಶ್ರ, ಮಲ್ಲಿನಾಥ, ಶಿವದಾಸ, ವಂಗಸೇನರೆಂಬ ವೈದ್ಯೋತ್ತಮರ ಸಮಕಾಲಿಕನಾದ ಶಾರ್ಙ್ಗಧರನಾಗಿರುತ್ತಾನೆ. ಇದರಲ್ಲಿ ಶಾರೀರಕವಿಜ್ಞಾನವು ಅತಿ ಸಂಕ್ಷೇಪವಾಗಿರುತ್ತದೆ. ಪರಿಭಾಷಾ, ನೇತ್ರ, ಮುಖ, ನಾಡೀ ಪರೀಕ್ಷೆಗಳು ವಿಸ್ತಾರವಾಗಿ ವರ್ಣಿಸಲ್ಪಟ್ಟಿರುತ್ತವೆ. ರೋಗಗಳಲ್ಲವೂ ಕೇವಲ ಸಂಖ್ಯಾರೂಪವಾಗಿ ವರ್ಣಿತಗಳಾಗಿವೆ. ಸುಲಕ್ಷಣಗಳಾಗಿ ಬರೆಯಲ್ಪಡದಿರುವುದರಿಂದ ರೋಗವಿಜ್ಞಾನಕ್ಕೆ ಸಹಾಯಕವಾಗಿರುವುದಿಲ್ಲ. ನಿಘಂಟು ನಾಮಮಾತ್ರಕ್ಕಾದರೂ ಇಲ್ಲ. ಇದರಲ್ಲಿರುವ ಸಕಲೌಷಧಗಳೂ ಬಹುಮಟ್ಟಿಗೆ ಅನುಭೂತಗಳಾಗಿರುತ್ತವೆ. ಇದೂ ಸರ್ವತ್ರ ಪ್ರಚಾರದಲ್ಲಿರುತ್ತದೆ. ಈತನು 'ಶಾರ್ಙ್ಗಧರ ಪದ್ಧತಿ' ಯೆಂಬ ಸುಭಾಷಿತಗ್ರಂಥವನ್ನೂ ರಚಿಸಿರುತ್ತಾನೆಂದು ಈ ಕೆಳಗೆ ಕೊಡುವ ಪ್ರಮಾಣದಿಂದ ಸಿದ್ಧವಾಗುತ್ತದೆ. ಈ ಸುಭಾಷಿತ ಗ್ರಂಥಾರಂಭದಲ್ಲೀತನ ಪರಿಚಯವು ವರ್ಣಿತವಾಗಿದೆ.

'ಪುರಾ ಶಾಕಂಭರೀದೇಶೇ ಶ್ರೀಮಾನ್ ಹಮ್ಮೀರಭೂಪತಿಃ |
ಚಾಹುವಾಣಾನ್ವಯೇ ಜಾತಃ ಖ್ಯಾತಃ ಶೌರ್ಯಇವಾರ್ಜುನಃ ||
ತಸ್ಯಾSಭವತ್ಸಭ್ಯಜನೇಷು ಮುಖ್ಯಃ ಪರೋಪಕಾರವ್ಯಸನೈಕದಕ್ಷಃ |
ಪುರಂದರಸ್ಯೇವ ಗುರುರ್ಗರೀಯಾನ್ ದ್ವಿಜಾಗ್ರಣೀ ರಾಘವದೇವ ನಾಮಾ ||
ಗೋಪಾಲದಾಮೋದರದೇವದಾಸ ಸಂಜ್ಞಾ ಬಭೂವುಸ್ತನಯಾಸ್ತದೀಯಾಃ |
ನೇತ್ರಾSವತಾರಾ ಇವ ಚಂದ್ರಮೌಲೇರಪಾಕೃತಧ್ವಾಂತಗಣಾಸ್ತ್ರಯೋSಪಿ ||
ತೇಷಾಂ ಮಧ್ಯೇ ಯಸ್ತು ದಾಮೋದರೋSಭೂದುತ್ಪ್ರಾದ್ಯಸ್ಯಾತ್ರಿನಾಕ್ಷರ್ಜಾ ವೀರರಾಗಃ |
ಭಾಗೀರಥ್ಯಾಂ ಶುದ್ಧದೇಹಂ ವಿಧಾಯ ಜ್ಞಾನಾದಾತ್ಮಸ್ಯೈವ ನಿಷ್ಠಾಂ ಜಗಾಮ ||
ಜ್ಯೇಷ್ಠಃ ಶಾರ್ಙ್ಗಧರಸ್ತೇಷಾಂ ಲಘುರ್ಲಕ್ಷ್ಮೀಧರಃ ಸ್ಮೃತಃ |
ಕೃಷ್ಣೋSನುಜಸ್ತತಸ್ತೇಷಾಂ ತ್ರಯಸ್ತ್ರೇತಾಗ್ನಿತೇಜಸಃ ||'

ಉತ್ತರ ಭಾರತದಲ್ಲಿ ಅಂಬಾಲಾಜಿಲ್ಲೆಗೆ ಸೇರಿದ ಕುರುಕ್ಷೇತ್ರ ಸಮೀಪದಲ್ಲಿ ಶಾಕಂಭರೀದೇವಿಯ ಮಂದಿರವಿರುತ್ತದೆ. ಈ ಮಂದಿರದ ಸಮೀಪಪ್ರದೇಶದಲ್ಲಿದ್ದ ರಾಜ್ಯವನ್ನು ಇತಿಹಾಸ ಪ್ರಸಿದ್ಧನಾದ ಹಮ್ಮೀರಭೂಪತಿಯಾಳುತ್ತಿದ್ದನು. ಈತನ ಆಸ್ಥಾನದಲ್ಲಿ ರಾಘವದೇವನೆಂಬ ಬ್ರಾಹ್ಮಣಪಂಡಿತಶ್ರೇಷ್ಠನಿದ್ದನು. ಈತನಿಗೆ ಗೋಪಾಲ, ದಾಮೋದರ, ದೇವದಾಸರೆಂಬ ಮೂವರು ಪುತ್ರರಿದ್ದರು. ಇವರಲ್ಲಿ ಎರಡನೆಯವನಾದ ದಾಮೋದರ ಪಂಡಿತನ ಶಾರ್ಙ್ಗಧರ ಲಕ್ಷ್ಮೀಧರ, ಕೃಷ್ಣರೆಂಬ ಪುತ್ರರಲ್ಲಿ ದೊಡ್ಡವನಾದ ಶಾರ್ಙ್ಗಧರ ಪಂಡಿತನೇ ಈ ಸುಭಾಷಿತಗ್ರಂಥವನ್ನು ಬರೆದವನಾಗಿರುತ್ತಾನೆ. ಶಾರ್ಙ್ಗಧರಸಂಹಿತೆಯ ಪ್ರತಿಯೊಂದು ಅಧ್ಯಾಯದ ಅಂತ್ಯದಲ್ಲಿ 'ಇತಿ ಶ್ರೀ ದಾಮೋದರಸೂನುನಾ ಶಾರ್ಙ್ಗಧರಾಚಾರ್ಯೇಣ ವಿರಚಿತಾಯಾಂ ಶಾರ್ಙ್ಗಧರಸಂಹಿತಾಯಾಂ' ಎಂದಿರುತ್ತದೆ. ಇವೆರಡನ್ನೂ ಪರಿಶೀಲಿಸಿದರೆ ಈ ದಾಮೋದರಪಂಡಿತನ ಪುತ್ರನಾದ ಶಾರ್ಙ್ಗಧರನೇ ಶಾರ್ಙ್ಗಧರಪದ್ಧತಿ, ಶಾರ್ಙ್ಗಧರಸಂಹಿತೆಗಳನ್ನು ರಚಿಸಿರುವನೆಂದು ನಿರ್ವಿವಾದ ಸಿದ್ಧಾಂತವಾಗುತ್ತದೆ.

ಭಾವಪ್ರಕಾಶ:—ಈ ಗ್ರಂಥಕಾರನಾದ ಭಾವಮಿಶ್ರನು ಮದರಾಸ್ ಪ್ರಾಂತದವನಾಗಿರುವನು. ಚರಕಸುಶ್ರುತವಾಗ್ಭಟ ಮೊದಲಾದ ಪ್ರಾಚೀನಗ್ರಂಥಗಳ ಆಧಾರದಿಂದಲೇ ರಚಿಸಲ್ಪಟ್ಟ ಈ ಗ್ರಂಥವು ಆಯುರ್ವೇದದ ಸಕಲವಿಷಯಗಳನ್ನೊಳಗೊಂಡಿದೆ. ಮತ್ತು ಪ್ರಾಚೀನಗ್ರಂಥಗಳಲ್ಲಿಲ್ಲದಿರುವ 'ಫಿರಂಗ' ಮೊದಲಾದ ನವೀನ ಸಾಂಕ್ರಾಮಿಕರೋಗಗಳ ವರ್ಣನೆಯೂ ಅವುಗಳ ಚಿಕಿತ್ಸೆಯೂ ವಿಶದವಾಗಿ ಉಲ್ಲೇಖಿಸಲ್ಪಟ್ಟಿದೆ. ಇದರಲ್ಲಿರುವ ಹರೀತಕ್ಯಾದಿ ನಿಘಂಟು ವೈದ್ಯರಿಗತ್ಯುಪಯುಕ್ತವಾಗಿದೆ ಇದೂ ಸರ್ವತ್ರ ಸುಪಾಠ್ಯಗ್ರಂಥವಾಗಿರುತ್ತದೆ.

ಇಲ್ಲಿಯವರೆಗೆ ಉದಾಹರಿಸಲ್ಪಟ್ಟ ಸಮಸ್ತ ವೈದ್ಯಗ್ರಂಥಗಳಲ್ಲಿ ಕಷಾಯಾದಿ ಕಾಷ್ಠೌಷಧಿಚಿಕಿತ್ಸೆಯೇ ವಿಶೇಷವಾಗಿ ಬರೆಯಲ್ಪಟ್ಟಿರುತ್ತದೆ ರಸಚಿಕಿತ್ಸೆಯು ಸಂಕ್ಷೇಪವಾಗಿ ವರ್ಣಿತವಾಗಿದೆ. ಆಯುರ್ವೇದಚಿಕಿತ್ಸೆಯಲ್ಲಿ ರಸಚಿಕಿತ್ಸೆಯು ಅಗ್ರಸ್ಥಾನವನ್ನು ಹೊಂದಿರುತ್ತದೆ.

'ಆಸುರೀ ಮಾನುಷೀ ದೈವೀ ಚಿಕಿತ್ಸಾ ತ್ರಿವಿಧಾ ಮತಾ |
ಶಸ್ತ್ರೈಃ ಕಷಾಯೈರ್ಲೋಹಾದ್ಯೈಃ ಕ್ರಮೇಣಾಂತ್ಯಾಃ ಸುಪೂಜಿತಾ || ಅಲ್ಪಮಾತ್ರೋಪಯೋಗಿತ್ವಾದರುಚೇರಪ್ರಸಂಗತಃ |
ಕ್ಷಿಪ್ರಮಾರೋಗ್ಯದಾಯಿತ್ವಾದೌಷಧೇಭ್ಯೋಧಿಕೋ ರಸಃ ||'
(ರ. ಸಂ. ಸ.)

ಶಸ್ತ್ರಪ್ರಯೋಗದಿಂದ ಮಾಡಲ್ಪಡುವ ಚಿಕಿತ್ಸೆಗೆ 'ಆಸುರೀ' ಎಂತಲೂ ಕಷಾಯಾದಿ ಕಾಷ್ಠೌಷಧಿಮೂಲಕವಾದ ಚಿಕಿತ್ಸೆಗೆ 'ಮಾನುಷೀ' ಎಂತಲೂ ಪಾರದಲೋಹಾಭ್ರಕಾದಿಮೂಲಕವಾದ ಚಿಕಿತ್ಸೆಗೆ 'ದೈವೀ' ಎಂತಲೂ ಆಯುರ್ವೇದಶಾಸ್ತ್ರಜ್ಞರ ಸಂಕೇತವಿರುತ್ತದೆ. ಕಾಷ್ಠೌಷಧಿಯನ್ನು ಅಧಿಕಪ್ರಮಾಣದಿಂದ ಕೊಡಬೇಕಾಗುವುದರಿಂದ ರೋಗಿಗೆ ಇದನ್ನು ಸೇವಿಸುವಾಗ ಜುಗುಪ್ಸೆಯಿಂದ ವಮನಾದಿಗಳುಂಟಾಗುವ ಸಂಭವವಿರುತ್ತದೆ. ರಸೌಷಧಿಯು ಅತ್ಯಲ್ಪಪ್ರಮಾಣದಿಂದುಪಯೋಗಿಸಲ್ಪಡುವುದರಿಂದ ರೋಗಿಗೆ ಸೇವನೆಯಕಾಲದಲ್ಲಿ ಯಾವ ಆತಂಕವೂ ಉಂಟಾಗಲಾರದು. ಇದು ಯೋಗವಾಹಿಯಾಗಿರುವುದರಿಂದ ರಕ್ತದಲ್ಲಿ ತೀವ್ರವಾಗಿ ಪ್ರವೇಶಿಸಿ ರೋಗವನ್ನು ಶೀಘ್ರವಾಗಿ ನಾಶಮಾಡುತ್ತದೆ. ಈ ಕಾರಣದಿಂದಲೇ ರಸಚಿಕಿತ್ಸೆಯು ಶ್ರೇಷ್ಠವಾಗಿರುತ್ತದೆ. ರಸಾಭ್ರಕಾದಿಗಳು ಸಾಕ್ಷಾದ್ದೇವಸಂಭೂತಗಳಾಗಿರುವುದರಿಂದಲೇ ಇದಕ್ಕೆ ದೈವೀಚಿಕಿತ್ಸೆಯೆಂಬ ಹೆಸರು ಬಂದಿರುತ್ತದೆ. ಶಸ್ತ್ರಚಿಕಿತ್ಸೆಯು ದೇವಾಸುರಸಂಗ್ರಾಮಕಾಲದಲ್ಲಾವಿರ್ಭವಿಸಿರುವುದರಿಂದ 'ಆಸುರೀ' ಎಂಬ ಹೆಸರನ್ನು ಹೊಂದಿರುತ್ತದೆ.

ರಸಚಿಕಿತ್ಸೆಯು ಅತ್ಯಂತ ಪ್ರಾಚೀನವಾದುದಾಗಿದೆ. ಇದು ಅತಿಕಷ್ಟಸಾಧ್ಯವಾಗಿರುವುದರಿಂದಲೂ, ರಸಚಿಕಿತ್ಸಾಪ್ರತಿಪಾದಕಗಳಾದ ಪ್ರಾಚೀನ ರಸಗ್ರಂಥಗಳು ಲುಪ್ತಗಳಾಗಿರುವುದರಿಂದಲೂ, ನಮ್ಮ ವೈದ್ಯರಲ್ಲೀ ಚಿಕಿತ್ಸಾಪ್ರಣಾಳಿಯು ಕ್ಷೀಣವಾಗುತ್ತಾ ಬಂದಿತು. ಈಗ ಸುಮಾರು ೫೦ ವರ್ಷಗಳಿಂದ ಆಯುರ್ವೇದಪ್ರೇಮಿಗಳಾದ ಪಂಡಿತರು ಅಧಿಕಪರಿಶ್ರಮದಿಂದ ಆಯುರ್ವೇದಸಂಸ್ಥೆಗಳನ್ನೂ, ವಿದ್ಯಾಲಯಗಳನ್ನೂ ಸ್ಥಾಪಿಸಿ ಎಲ್ಲೆಡೆಯಲ್ಲಿಯೂ ಆಯುರ್ವೇದಪ್ರಚಾರವನ್ನು ಮಾಡುತ್ತಿರುವುದರಿಂದ ಈಗೀಗ ರಸಚಿಕಿತ್ಸೆಯು ಸರ್ವತ್ರ ಪ್ರಸಾರವಾಗಲಾರಂಭಿಸಿದೆ. ಇದೇರೀತಿಯಾಗಿ ಶಾಸ್ತ್ರಜ್ಞರಾದ ವೈದ್ಯರು ಉದಾಸೀನರಾಗದೆ ಪ್ರಚಾರಕಾರ್ಯದಲ್ಲುದ್ಯುಕ್ತರಾದರೆ ಕೆಲವು ವರ್ಷಗಳಲ್ಲಿಯೇ ಆಯುರ್ವೇದಚಿಕಿತ್ಸೆಯು ಜಗದ್ವ್ಯಾಪಿಯಾಗುವುದರಲ್ಲಿ ಸಂಶಯವೇ ಇಲ್ಲ.

ರಸಚಿಕಿತ್ಸೆಯಲ್ಲಿ ಸಫಲನಾಗಬೇಕಾದರೆ ವೈದ್ಯನಿಗೆ ಶಾಸ್ತ್ರಪಾಂಡಿತ್ಯವೂ, ಕ್ರಿಯಾಕೌಶಲ್ಯವೂ, ಇರಬೇಕಾಗುತ್ತದೆ. ಇಲ್ಲವಾದರೆ ರಸ, ಅಭ್ರಕ, ಲೋಹಾದಿಗಳ ಶೋಧನಮಾರಣಗಳಲ್ಲಿ ನ್ಯೂನತೆಯುಂಟಾಗಿ ಮಹಾನರ್ಥಗಳಿಗೆ ಭಾಗಿಯಾಗುತ್ತಾನೆ. ಈ ಈ ಅನರ್ಥವು ಇಹದಲ್ಲಿ ಯಶೋಹಾನಿಗೂ ಪರದಲ್ಲಿ ದುರ್ಗತಿಪ್ರಾಪ್ತಿಗೂ ಕಾರಣವಾಗುತ್ತದೆ. ಈ ರಸಚಿಕಿತ್ಸೆಯ ಸಂಬಂಧವಾದ ವಿಷಯಗಳೆಲ್ಲವನ್ನು ಇಲ್ಲಿಯೇ ಬರೆಯಲುಪಕ್ರಮಿಸಿದರೆ ಗ್ರಂಥವಿಚಾರಕ್ಕೆ ಭಂಗವುಂಟಾಗುವುದರಿಂದ ರಸದ ಸಾಮಾನ್ಯಸ್ವರೂಪವನ್ನು ಇಲ್ಲಿ ತೋರಿಸಿ ಸಂದರ್ಭಾನುಸಾರವಾಗಿ ಮುಂದೆ ರಸಚಿಕಿತ್ಸೆಯನ್ನು ವಿಸ್ತರಿಸುವುದಾಗುತ್ತದೆ.

ಕ್ರಿ. ಶ. ೧೩ ನೆಯ ಶತಕದಲ್ಲಿ ಮಾಧವಾಚಾರ್ಯ (ವಿದ್ಯಾರಣ್ಯ) ರಿಂದ ವಿರಚಿತವಾಗಿರುವ ಸರ್ವದರ್ಶನಸಂಗ್ರಹದಲ್ಲಿ ರಸವರ್ಣನೆಯು ವಿಸ್ತಾರವಾಗಿರುತ್ತದೆ. ಅದರಲ್ಲಿಯ ಸ್ವಲ್ಪಭಾಗವನ್ನು ವಾಚಕರ ಅವಗಾಹನೆಗಾಗಿಲ್ಲಿ ಉದ್ಧರಿಸುವೆನು.

'ಪಾರದೋ ಗದಿತೋ ಯಸ್ಮಾತ್ಪರಾರ್ಥಂ ಸಾಧಕೋತ್ತಮೈಃ |
ಸುಪ್ತೋಯಂ ಮತ್ಸಮೋ ದೇವಿ ಮಮ ಪ್ರತ್ಯಂಗಸಂಭವಃ ||
ಅಭ್ರಕಸ್ತವ ಬೀಜಂತು ಮಮ ಬೀಜಂತು ಪಾರದಃ |
ಅನಯೋರ್ಮೇಲನಂ ದೇವಿ ಮೃತ್ಯುದಾರಿದ್ರ್ಯನಾಶನಂ ||
ಆಯತನಂ ವಿದ್ಯಾನಾಂ ಮೂಲಂ ಧರ್ಮಾರ್ಥಕಾಮ ಮೋಕ್ಷಾಣಾಂ |
ಶ್ರೇಯಃ ಪರಂ ಕಿಮನ್ಯಚ್ಛರೀರಮಜರಾಮರಂ ವಿಹಾಯೈಕಂ ||
ದರ್ಶನಾತ್ ಸ್ಪರ್ಶನಾತ್ತಸ್ಯ ಭಕ್ಷಣಾತ್ ಸ್ಮರಣಾದಪಿ |
ಪೂಜನಾದ್ರಸದಾನಾಚ್ಚ ದೃಶ್ಯತೇ ಷಡ್ವಿಧಂ ಫಲಂ ||
ರಸೋವೈಸಃ ರಸಂಹ್ಯೇವಾಯಂ ಲಬ್ಧ್ವಾನಂದೀಭವತಿ |
(ತೈ. ಶ್ರು. ೨-೭-೧)

ಅಪರೇ ಮಾಹೇಶ್ವರಾಃ ಪರಮೇಶ್ವರತಾದಾತ್ಮ್ಯವಾದಿನೋSಪಿ ಪಿಂಡಸ್ಥೈರ್ಯೇ ಸರ್ವಾಭಿಮತಾ ಜೀವನ್ಮುಕ್ತಿಃ ನೇತ್ಸ್ಯತೀತ್ಯಾಸ್ಥಾಯ ಪಿಂಡಸ್ಥೈರ್ಯೋಪಾಯಂ ಪಾರದಾದಿಪದವೇದನೀಯಂ ರಸಮೇವ ಸಂಗಿರಂತೇ. ರಸಸ್ಯ ಪಾರದತ್ವಂ ಸಂಸಾರಪರಪಾರಪ್ರಾಪಣಹೇತುತ್ವೇನ ತದುಕ್ತಂ ಸಂಸಾರಸ್ಯ ಪರಂ ಪಾರಂ ದತ್ತೇSಸೌ ಪಾರದಃ ಸ್ಮೃತಃ ||'

ಪರಮೇಶ್ವರನ ಪವಿತ್ರಾಂಗದಿಂದುದ್ಭವಿಸಿದ ಪಾರದವು ಜರಾಮರಣದಾರಿದ್ರ್ಯನಾಶಕವೂ, ಸ್ಥಿರಶರೀರಸಾಧ್ಯವಾದ ಜೀವನ್ಮುಕ್ತಿಗೆ ಸಾಧಕವೂ ಸಕಲ ವಿದ್ಯೆಗಳಿಗೂ, ಪುರುಷಾರ್ಥಗಳಿಗೂ ಮೂಲಸ್ಥಾನವೂ, ಆಗಿರುತ್ತದೆ. 'ಪಾರಂದದಾತೀತಿ ಪಾರದಃ' ಎಂಬ ವ್ಯುತ್ಪತ್ತಿಯಿಂದ ಪಾರದವು ಸಂಸಾರತಾರಕವಾಗಿರುತ್ತದೆ. ಇದಕ್ಕೆ ರಸವೆಂಬ ಹೆಸರು ರಸಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ರಸದ ದರ್ಶನ ಸ್ಪರ್ಶನ ಭಕ್ಷಣ, ಸ್ಮರಣ, ಪೂಜನ, ದಾನಗಳಿಂದ ಆರು ವಿಧ ಫಲಗಳುಂಟಾಗುತ್ತವೆ.

ಹಿಂದೆ ಆಯುರ್ವೇದಾವತರಣದಲ್ಲಿ ಶರೀರವು ಸಕಲಭೋಗಮೋಕ್ಷಗಳಿಗಾಧಾರವಾಗಿರುತ್ತದೆಂಬುದನ್ನು ಸೂಚಿಸಿರುವುದಾಗಿದೆ. ಕ್ಷೀಣಸ್ವಭಾವದಿಂದ ಕೂಡಿದ ಶರೀರವನ್ನು ದೃಢಮಾಡಿ ಪುರುಷಾರ್ಥಸಾಧನೆಗೆ ಯೋಗ್ಯವನ್ನಾಗಿಮಾಡುವ ಅಪಾರಸಾಮರ್ಥ್ಯವುಳ್ಳ ಈ ರಸದ ಮಹಾತ್ಮ್ಯವು ಅಗಣಿತವಾಗಿರುತ್ತದೆ.

ಆದಿಯಲ್ಲಿ ಪರಶಿವನು ಪಾರ್ವತೀದೇವಿಗೆ ರಸವರ್ಣನಾತ್ಮಕವಾದ ಶಿವಸಂಹಿತೆಯನ್ನುಪದೇಶಿಸಿರುವನೆಂತಲೂ, ದೇವತೆಗಳೂ, ಮುನಿಗಳೂ, ಸಿದ್ಧರೂ ಅನೇಕ ರಸತಂತ್ರಗಳನ್ನು ರಚಿಸಿರುವರೆಂತಲೂ ರಸಗ್ರಂಥಗಳಲ್ಲಿ ವರ್ಣಿತವಾಗಿರುತ್ತದೆ. ರಸತರಂಗಿಣಿಯಲ್ಲಿ ವರ್ಣಿತವಾಗಿರುವ ಅಂಶವನ್ನಿಲ್ಲಿ ಉದಾಹರಿಸುವೆನು.

ರಸಚಿಕಿತ್ಸಾಯಾಸ್ತಂತ್ರಕಾರಾಃ-ಶ್ರೀಶಂಕರ-ನಂದೀಶ್ವರ-ಭೈರವ-ಬ್ರಹ್ಮ-ವಿಷ್ಣು-ದತ್ತಾತ್ರೇಯಪ್ರಭೃತಯೋದೇವಾಃ ಅಗಸ್ತ್ಯ-ಕಪಿಲ-ಭಾಲುಕಿ-ವ್ಯಾಡಿ-ಮಾಂಡವ್ಯಾದಯೋ ಮಹರ್ಷಯಃ ಚಂದ್ರಸೇನ-ಲಂಕೇಶ್ವರ-ವಿಶಾರದ-ಭಾಸ್ಕರ-ಸುರಸೇನ-ರತ್ನಕೋಶ-ಸ್ವಚ್ಛಂದಭೈರವ-ಕಾಕಚಂಡೀಶ್ವರ-ನರವಾಹನ-ಕಾಪಾಲಿಕ-ರಸೇಂದ್ರತಿಲಕ-ಸುರಾನಂದ-ಯಶೋಧನ-ಗೋಮುಖ-ನರೇಂದ್ರ-ಮೈಥಿಲ-ಸ್ಕಂದ-ಗೋವಿಂದಪಾದ-ನಾಗಾರ್ಜುನ-ಭೈರವನಾಥ-ಸಿದ್ಧನಾಥ-ಸೋಮನಾಥ-ಹರೀಶ್ವರ-ಚರ್ಪಟೀನಾಥ-ಗೋರಕ್ಷನಾಥ-ಮತ್ಸ್ಯೇಂದ್ರನಾಥಾದಯಸ್ತು ಪ್ರಸಿದ್ಧಾ ಬಹವೋ ರಸಸಿದ್ಧಾಃ ಸಮಾಜಾಯಂತ'' ಈ ಮಹಾಪುರುಷರು ಅನೇಕ ರಸಚಿಕಿತ್ಸಾಗ್ರಂಥಗಳನ್ನು ರಚಿಸಿರುತ್ತಾರೆ. ಅವೆಲ್ಲವೂ ಅವರವರ ಹೆಸರಿನಿಂದಲೇ ಪ್ರಸಿದ್ಧಗಳಾಗಿರುತ್ತವೆ. ಸದ್ಯಃ ಈ ಗ್ರಂಥಗಳು ನಾಮಮಾತ್ರಶೇಷಗಳಾಗಿರುತ್ತವೆ. ಕೆಲಕೆಲವು ಯಾವ ಮೂಲೆಯಲ್ಲಿಯೋ ಅಪೂರ್ಣಗಳಾಗಿಯೂ, ಹುಳಗಳಿಗಾವಾಸಸ್ಥಾನವಾಗಿಯೂ, ಜೀರ್ಣಗಳಾಗಿಯೂ, ಅಲಸಿಗಳಾಗಿರುವ ನಮ್ಮಗಳನ್ನು ಶಪಿಸುತ್ತಾ ಬಿದ್ದಿರಬಹುದು. ಇಂತಹ ಜೀರ್ಣಗ್ರಂಥಗಳನ್ನು ಹೊರಗೆಡುವಿದರೆ ನಮ್ಮ ಸರ್ವಸ್ವವೇ ನಾಶವಾಗುವುದೆಂಬ ಭಯದಿಂದ ಕೆಲವು ಮಹಾಪುರುಷರು ಇತರರಿಗೆ ತೋರಿಸದೆಯೂ, ಶಾಸ್ತ್ರಜ್ಞಾನಶೂನ್ಯತೆಯಿಂದ ತಾವೂ ನೋಡಲಸಮರ್ಥರಾಗಿಯೂ, ಈ ಹಳೆಯಗ್ರಂಥಗಳನ್ನು ಪೆಟ್ಟಿಗೆಗಳಲ್ಲಿ ಮುಚ್ಚಿಟ್ಟಿರಬಹುದು. ಹೀಗಾಗಿಯೇ ನಮ್ಮ ಅನೇಕ ಪ್ರಾಚೀನ ಗ್ರಂಥಗಳು ಹಾಳಾಗಿರುತ್ತವೆ.

ಸಿದ್ಧಪುರುಷ ವಿರಚಿತಗಳಾದೀರಸಚಿಕಿತ್ಸಾಗ್ರಂಥಗಳ ಅಭಾವದಿಂದ ಗ್ರಂಥಕಾರರ ಪರಿಚಯವನ್ನರಿಯಲಸಾಧ್ಯವಾಗಿರುತ್ತದೆ. ಆದರೂ ಈ ಸಿದ್ಧಸಮೂಹಪ್ರವಿಷ್ಟರಾಗಿರುವ ಸಿದ್ಧನಾಥ, ಸೋಮನಾಥ, ಹರೀಶ್ವರರೆಂಬ ತ್ರಿಸಿದ್ಧರ ಪವಿತ್ರನಾಮಗಳು ನನ್ನ ಮನೋಗತಗಳಾದುದರಿಂದ ಇವರ ಪರಿಚಯವನ್ನರಿಯಬೇಕೆಂಬ ಕುತೂಹಲವುಂಟಾಗುವ ಸಮಯದಲ್ಲಿ ಕೆಲವು ಪ್ರಮಾಣಗಳು ನನ್ನ

ಮಂದಬುದ್ಧಿಯಲ್ಲಿ ಪ್ರವೇಶಮಾಡಿ ಈ ಮಹಾಪುರುಷರ ಪರಿಚಯವನ್ನೊಪ್ಪಿಸುವ ಸಾಹಸವನ್ನುಂಟುಮಾಡಿರುತ್ತವೆ. ತದನುಸಾರವಾಗಿ ಇವರ ಪರಿಚಯವನ್ನು ವಾಚಕರ ಮುಂದಿಡುವೆನು. ಇದರ ತಥ್ಯಾತಥ್ಯವಿಚಾರವನ್ನು ಸುಜ್ಞವಾಚಕರ ಕಡೆಗೇ ಬಿಟ್ಟಿರುವೆನು.

ಸಿದ್ಧನಾಥ—ಈ ನಾಮವು ವೀರಶೈವಮತಗ್ರಂಥ ಪರಿಶೀಲಕರಾದ ಪಂಡಿತರಿಗೆ ಸುಪರಿಚಿತವಾಗಿರುತ್ತದೆ. ಶಿವಯೋಗಿಶಿವಾಚಾರ್ಯರಿಂದ ವಿರಚಿತವಾಗಿರುವ ರೇಣುಕಾಗಸ್ತ್ಯಸಂವಾದರೂಪವಾದ ಸಿದ್ಧಾಂತಶಿಖಾಮಣಿಯ ಅವತರಣಿಕೆಯಲ್ಲಿ—

'' ಆಸ್ತಿ ದಾಚಾರಸಿದ್ಧಾನಾಮಗ್ರಣೀಃ ಶಿವಯೋಗಿನಾಂ |
ಶಿವಯೋಗೀತಿವಿಖ್ಯಾತಃ ಶಿವಜ್ಞಾನಮಹೋದಧಿಃ ||
ತಸ್ಯವಂಶೇ ಸಮುತ್ಪನ್ನೋ ಮುಕ್ತಾಮಣಿರಿವಾಮಲಃ |
ಮುದ್ದದೇವಾಭಿಧಾಚಾರ್ಯೋ ಮೂರ್ಧನ್ಯಃ ಶಿವಯೋಗಿನಾಂ ||
ತಸ್ಯಾಸೀನ್ನಂದನಃ ಶಾಂತಃ 'ಸಿದ್ಧನಾಥ' ಭಿಧಃ ಶುಚಿಃ |
ಶಿವಸಿದ್ಧಾಂತನಿರ್ಣೇತಾ ಶಿವಾಚಾರ್ಯಃ ಶಿವಾತ್ಮಕಃ ||''(ಸಿ.ಶಿ.)

ಶಿವಸಿದ್ಧಾಂತತತ್ತ್ವಜ್ಞನಾದ ಶಿವಯೋಗಿಶಿವಾಚಾರ್ಯನ ಪವಿತ್ರವಂಶದಲ್ಲುದ್ಭವಿಸಿದ ಮುದ್ದದೇವಶಿವಾಚಾರ್ಯನ ಸುಪುತ್ರನೂ, ಶಿವಾದ್ವೈತಸಿದ್ಧಾಂತ ಪಾರಂಗತನೂ ಆದ 'ಸಿದ್ಧನಾಥ' ನೆಂಬೊಬ್ಬ ಶಿವಯೋಗಿಯಿದ್ದನು. ಮತ್ತು ವಿಕ್ರಮಶಕಾಬ್ದದ ೧೧ ನೆಯ ಶತಮಾನದಲ್ಲಿ ರೇಣುಕವಿಜಯಕಾವ್ಯವನ್ನು ಬರೆದಿರುವ 'ಸಿದ್ಧನಾಥ' ನೆಂಬೊಬ್ಬ ಶಿವಾಚಾರ್ಯನಿದ್ದನು.

ಮತ್ತು ಕೊಲ್ಲಿಪಾಕಿಯ ಸೋಮೇಶಲಿಂಗದಲ್ಲಾವಿರ್ಭವಿಸಿದ ಶ್ರೀ ಜಗದ್ಗುರು ರೇಣುಕಭಗವತ್ಪೂಜ್ಯಪಾದರಿಗೂ 'ಸಿದ್ಧನಾಥ' ನೆಂಬ ಪವಿತ್ರನಾಮವಿದ್ದಿತೆಂಬುದು ವೀರಶೈವಸಿದ್ಧಾಂತಶಿಖಾಮಣಿಯ ೨೧ನೆಯ ಪರಿಚ್ಛೇದದಲ್ಲಿರುವ 'ಲೀನೇ ತಸ್ಮಿನ್ ಶಾಂಕರೇ ಸ್ವಪ್ರಕಾಶೇ ದಿವ್ಯಾಕಾರೇ ರೇಣುಕೇ 'ಸಿದ್ಧನಾಥೆ' ಎಂಬ ೫೩ ನೆಯ ಶ್ಲೋಕದಿಂದವಗತವಾಗುತ್ತದೆ. ಮತ್ತು ಇದೇ ಪರಿಚ್ಛೇದದಲ್ಲಿ 'ಯಂತ್ರಮಂತ್ರ ಕಲಾಸಿದ್ಧಾನ್ ವಿಮತಾನ್ ಸಿದ್ಧಮಂಡಲಾನ್ | ವಿಜಿತ್ಯ ಸ್ವಪ್ರಭಾವೇನ ಸ್ಥಾಪಯಿತ್ವಾ ಶಿವಾಗಮಾನ್ || ' (ಸಿ.ಶಿ.ಪ. ೨೧. ಶ್ಲೋ. ೪೧).

ಈ ಶ್ಲೋಕಕ್ಕೆ ಮರಿತೋಂಟದಾರ್ಯರು ಈರೀತಿಯಾಗಿ ವ್ಯಾಖ್ಯಾನವನ್ನು ಬರೆದಿರುವರು. 'ಯಂತ್ರಮಂತ್ರಾದಿಚತುಃಷಷ್ಟಿಕಲಾಸಿದ್ಧಿಯುಕ್ತಾನ್ ಕಾಪಾಲಿಕಾದಿಪರಮತಸಿದ್ಧಮಂಡಲಾನ್ ಗೋರಕ್ಷಾದಿ ನವಕೋಟಿಸಿದ್ಧಸಮೂಹಾನ್ ಸ್ವಸಾಮರ್ಥ್ಯೇನ ವಿಜಿತ್ಯ '

೬೪ ಕಲಾಸಿದ್ಧಿಗಳಿಂದ ಯುಕ್ತರಾಗಿದ್ದ ಕಾಪಾಲಿಕಾದಿಗಳನ್ನೂ ಗೋರಕ್ಷನಾಥನೇ ಮೊದಲಾದ ೯ ಕೋಟಿ ಮಹಾಸಿದ್ಧರನ್ನೂ ತನ್ನ ಯೋಗಸಿದ್ಧಿಯಿಂದಲೂ, ಸಕಲ ವಿದ್ಯಾಪ್ರಭಾವದಿಂದಲೂ ಜಯಿಸಿ 'ಸಿದ್ಧನಾಥ' ನಾಮಾಂಕಿತನಾದ ಶ್ರೀ ರೇಣುಕನು ಸೋಮೇಶಲಿಂಗೈಕ್ಯನಾದನೆಂದಿರುತ್ತದೆ. ಗೋರಕ್ಷನಾಥ, ಮತ್ಸ್ಯೇಂದ್ರನಾಥಾದಿ ಮಹಾಸಿದ್ಧರು ರಸಚಿಕಿತ್ಸಾಗ್ರಂಥಕಾರರಾಗಿದ್ದರೆಂದು ಹಿಂದೆಯೇ ಬರೆದಿರುವುದಾಗಿದೆಯಷ್ಟೆ! ಈ ಮಹಾಸಿದ್ಧರು ತಮ್ಮ ವಿದ್ಯಾಸಾಮರ್ಥ್ಯದಿಂದಲೂ, ಸಿದ್ಧಿಪ್ರಭಾವದಿಂದಲೂ ಜಗತ್ತನ್ನು ಆಶ್ಚರ್ಯಸಾಗರದಲ್ಲಿ ವಿಲೀನವಾಗುವಂತೆ ಮಾಡಿದ್ದರು. ಇಂತಹ ವಿದ್ಯಾ, ಸಿದ್ಧಿ ವೈಭವಮಂಡಿತರಾದ ಮಹಾಸಿದ್ಧರನ್ನು ಜಯಿಸಿದ ಈ ಸಿದ್ಧನಾಥನು ಸಕಲಶಾಸ್ತ್ರಪಾರಾವಾರಪಾರಂಗತನೂ, ಅಣಿಮಾದ್ಯಷ್ಟಸಿದ್ಧಿಮಂಡಿತನೂ, ಸಿದ್ಧಾಂತತತ್ತ್ವಜ್ಞನೂ ಆಗಿದ್ದನೆಂಬುದು ಸಕಲ ಪಂಡಿತಪಾಮರಜನಗೋಚರವಾಗಿರುವ ನಿರ್ವಿವಾದವಿಷಯವಾಗಿರುತ್ತದೆ. ಈ ಮಹಾಸಿದ್ಧಸಮೂಹವನ್ನು ಜಯಿಸಿದುದರಿಂದಲೇ ಈತನಿಗೆ 'ಸಿದ್ಧನಾಥ' ನೆಂಬ ಜಗತ್ಪ್ರಸಿದ್ಧನಾಮಧೇಯವುಂಟಾಗಿರುತ್ತದೆ. ಈ ಸಿದ್ಧನಾಥ ನಾಮಾಂಕಿತರಾಗಿದ್ದ ಮೂವರಲ್ಲಿ ಯಾವ ಸಿದ್ಧನಾಥನು ರಸಚಿಕಿತ್ಸಾಗ್ರಂಥಕಾರನಾಗಿರುವನೆಂಬುದು ಸಂದೇಹಾಸ್ಪದವಾಗಿರುತ್ತದೆ. ಆದರೆ ಸಿದ್ಧನಾಥಾಪರನಾಮಧಾರಿಗಳಾಗಿದ್ದ ಶ್ರೀ ಜಗದ್ಗುರು ರೇಣುಕಭಗವತ್ಪೂಜ್ಯಪಾದರು ಸಕಲವಿದ್ಯಾಪಾರಂಗತರಾಗಿದ್ದಂತೆ ಆಯುರ್ವೇದಶಾಸ್ತ್ರದಲ್ಲಿಯೂ ನಿಷ್ಣಾತರಾಗಿದ್ದರೆಂಬುದಕ್ಕೆ ಈಗಲೂ ಕೆಲವು ಪ್ರಮಾಣಗಳು ಉಪಲಬ್ಧಗಳಾಗುತ್ತವೆ. ಯಾವ ಗ್ರಂಥಕಾರನು ಯಾವ ದೇಶದಲ್ಲಿ ಜನಿಸಿ ಯಾವ ಶಾಸ್ತ್ರದಲ್ಲಿ ಯಾವ ಗ್ರಂಥವನ್ನು ರಚಿಸುವನೋ ಆ ದೇಶದಲ್ಲಿ ವಂಶಪರಂಪರಾಗತವಾಗಿಯೂ, ಶಿಷ್ಯಪರಂಪರಾಗತವಾಗಿಯೂ ಆ ಶಾಸ್ತ್ರಪರಂಪರೆಯು ಪ್ರಚಾರದಲ್ಲಿರುತ್ತದೆಂಬುದು ಸರ್ವತ್ರಪ್ರಸಿದ್ಧವಾಗಿರುತ್ತದೆ. ವಂಗದೇಶದಲ್ಲಿ ಮಾಧವಕರ, ಚಕ್ರಪಾಣಿದತ್ತರು ಜನಿಸಿ ಆಯುರ್ವೇದಗ್ರಂಥಗಳನ್ನು ರಚಿಸಿರುತ್ತಾರೆ. ಆ ದೇಶದಲ್ಲಿ ಈಗಲೂ ಈ ಪಂಡಿತರ ವಂಶಪರಂಪರಾಗತರಾಗಿಯೂ, ಶಿಷ್ಯಪರಂಪರಾಗತರಾಗಿಯೂ ಇರುವವರಲ್ಲಿ ಆಯುರ್ವೇದಶಾಸ್ತ್ರಜ್ಞರಾದ ವೈದ್ಯರು ಬಹುಸಂಖ್ಯಾತರಾಗಿರುತ್ತಾರೆ. ಈ ವೈದ್ಯಕುಲಕ್ಕೆ 'ಕವಿರಾಜ' ಎಂಬ ನಾಮಧೇಯವು ಪ್ರಸಿದ್ಧವಾಗಿರುತ್ತದೆ. ವೈದ್ಯಪರಂಪರೆಯು ಸಕಲ ಪ್ರಾಂತಗಳಿಗಿಂತಲೂ ವಿಶೇಷವಾಗಿ ವಂಗದೇಶದಲ್ಲಿಯೇ ಇರುತ್ತದೆಂಬುದನ್ನು ಭಾರತೀಯಾಯುರ್ವೇದ ಪಂಡಿತರು ಅಂಗೀಕರಿಸುತ್ತಾರೆ.

ಇದರಂತೆ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಆವಿರ್ಭಾವಕ್ಕೆ ಮೂಲಸ್ಥಾನವಾಗಿರುವ ಆಂಧ್ರದೇಶದ ಕೊಲ್ಲಿಪಾಕಿಯೆಂಬ ಗ್ರಾಮದ ಸುತ್ತಲೂ ಇರುವ ವೀರಮಾಹೇಶ್ವರರಲ್ಲಿ ವಂಶಪರಂಪರೆಯಿಂದ ಆಯುರ್ವೇದಶಾಸ್ತ್ರ ಪರಂಪರೆಯುಳಿದಿರುತ್ತದೆ. ಈಗಲೂ ಇಲ್ಲಿ ನೂರಾರು ವೈದ್ಯರಿರುತ್ತಾರೆ. ಇಲ್ಲಿರುವ ವೀರಮಾಹೇಶ್ವರರಿಗೆ ವೈದ್ಯವೃತ್ತಿಯು ಜೀವನಾಧಾರವಾಗಿರುತ್ತದೆ. ಈ ವೈದ್ಯಪರಂಪರೆಯಲ್ಲಿ 'ರೇವಣಸಿದ್ಧಕಲ್ಪ' ವೆಂಬ ಪ್ರಾಚೀನಾಯುರ್ವೇದಗ್ರಂಥವು ಇರುವುದೆಂಬ ಪ್ರತೀತಿಯು ಪ್ರಬಲವಾಗಿರುತ್ತದೆ. ಈ ಕೊಲ್ಲಿಪಾಕಿಯಲ್ಲಿ ರೇಣುಕ ಶಾಖಾಪ್ರವಿಷ್ಟ ವೀರಮಾಹೇಶ್ವರ ವಂಶದಲ್ಲುದ್ಭವಿಸಿದ ಕೊಟ್ಟೂರು ಬಸವರಾಜನೆಂಬ ಪಂಡಿತನು ಕ್ರಿ. ಶ. ೧೯ ನೆಯ ಶತಮಾನದಲ್ಲಿ 'ಬಸವರಾಜೀಯ' ವೆಂಬ ಅತ್ಯುತ್ಕೃಷ್ಟವಾದ ಆಯುರ್ವೇದ ಗ್ರಂಥವನ್ನು ಸಂಸ್ಕೃತದಲ್ಲಿ ಸ್ವನಾಮದಿಂದ ರಚಿಸಿರುತ್ತಾನೆ. ಇದರಲ್ಲಿ ಚರಕಸುಶ್ರುತ ವಾಗ್ಭಟರ ಸಾರವೇ ಸಂಗ್ರಹಿಸಲ್ಪಟ್ಟಿದೆ. ಇದು ಆಧುನಿಕವಾದರೂ ಪ್ರಾಚೀನಗ್ರಂಥಗಳ ಶ್ರೇಣಿಯಲ್ಲಿ ಪರಿಗಣಿಸಲ್ಪಡಲು ಅರ್ಹವಾಗಿರುತ್ತದೆ. ಇದರಲ್ಲಿ ರೋಗನಿದಾನವೂ, ರೋಗಾನುಸಾರವಾದ ಚಿಕಿತ್ಸೆಯೂ, ಅನುಭೂತಗಳಾಗಿರುವ ಕಾಷ್ಠೌಷಧಿಗಳೂ ರಸೌಷಧಿಗಳೂ, ಬರೆಯಲ್ಪಟ್ಟಿವೆ. ಅಲ್ಲದೆ ಅನೇಕಚಿತ್ರಗಳೂ ಇರುತ್ತವೆ. ಈ ಗ್ರಂಥವು ಆಂಧ್ರದೇಶದ ವೈದ್ಯರಿಗೆ ಕಲ್ಪವೃಕ್ಷಸ್ವರೂಪವಾಗಿರುತ್ತದೆ. ಆಂಧ್ರದೇಶದಲ್ಲಾದ ಅಖಿಲಭಾರತೀಯಾಯುರ್ವೇದ ಮಹಾಸಭೆಯಲ್ಲಿ ಈ ಗ್ರಂಥವು ಮುಕ್ತಕಂಠವಾಗಿ ಪ್ರಶಂಸಿಸಲ್ಪಟ್ಟಿದೆ. ಇದುವರೆಗೆ ಈ ಗ್ರಂಥವು ೭-೮ ಸಾರೆ ಮುದ್ರಣಗೊಂಡ ಪರಿಶೋಧಿತವಾಗಿ ಆಂಧ್ರದೇಶದ ವಿದ್ಯಾಲಯಗಳಲ್ಲಿ ಸುಪಾಠ್ಯಗ್ರಂಥವಾಗಿರುವುದರಿಂದ ಇದರ ಉತ್ಕೃಷ್ಟತೆಯನ್ನು ವಾಚಕರೇ ಊಹಿಸಬಹುದು. ಇದು ಸರ್ವೋತ್ತಮವಾಗಿರುವುದೆಂದು ತಿಳಿದು ನಾಗಪುರದಲ್ಲಿ ದೇವನಾಗರಿ ಲಿಪಿಯಲ್ಲಿ ಮುದ್ರಿಸಿರುತ್ತಾರೆ ಇದು ಈಗ ಉತ್ತರಭಾರತದಲ್ಲಿಯೂ ಪ್ರಚಾರಕ್ಕೆ ಬಂದಿರುತ್ತದೆ. ಈ ಗ್ರಂಥವನ್ನು ನೋಡಲಾಗಿ ಬಸವರಾಜ ಪಂಡಿತನು ಆಯುರ್ವೇದಶಾಸ್ತ್ರದಲ್ಲಿ ಅಪರಿಮಿತಪಾಂಡಿತ್ಯಮಂಡಿತನಾಗಿದ್ದನೆಂದು ಗೊತ್ತಾಗುತ್ತದೆ. ಈತನು ತನ್ನ ಸಮಯದಲ್ಲಿ ಆಂಧ್ರದೇಶದ ವೈದ್ಯಕುಲಕ್ಕೆ ಅಲಂಕಾರಪ್ರಾಯನಾಗಿದ್ದನೆಂದು ತಿಳಿದುಬರುತ್ತದೆ.

ಆಂಧ್ರದೇಶದ ಕೊಲ್ಲಿಪಾಕಿಯ ವೀರಮಾಹೇಶ್ವರರಲ್ಲಿ ವಂಶಪರಂಪರಾಗತಾಯುರ್ವೇದಶಾಸ್ತ್ರಪರಂಪರೆಯು ಈಗಲೂ ಜೀವಿತವಾಗಿರುವುದನ್ನವಲೋಕಿಸಿದುದಾದರೆ, ಆ ದೇಶದ ಕೊಲ್ಲಿಪಾಕಿಯ ಸೋಮೇಶಲಿಂಗದಲ್ಲಾವಿರ್ಭವಿಸಿದ ಸಿದ್ಧನಾಥ ನಾಮಾಂಕಿತರಾದ ಶ್ರೀ ಜಗದ್ಗುರು ರೇಣುಕ ಭಗವತ್ಪೂಜ್ಯಪಾದರು ಆಯುರ್ವೇದಶಾಸ್ತ್ರದಲ್ಲಿಯೂ ಅನನ್ಯ ಸಾಧಾರಣ ಪಾಂಡಿತ್ಯಮಂಡಿತರಾಗಿದ್ದರೆಂದು ಹೇಳಲು ಯಾವ ಅಂತರವೂ ಇರಲಾರದು.

ಈ ಕಾರಣ ಕಲಾಪವನ್ನು ಕೂಲಂಕಷವಾಗಿ ಪರಿಶೀಲಿಸಿದರೆ, ಸಿದ್ಧನಾಥರೆಂಬ ಮೂವರಲ್ಲಿ ಸಿದ್ಧನಾಥಾಪರನಾಮಧಾರಿಗಳಾದ ಶ್ರೀ ಜಗದ್ಗುರು ರೇಣುಕ ಭಗವತ್ಪೂಜ್ಯಪಾದರೇ ಆಯುರ್ವೇದ ಚಿಕಿತ್ಸಾಪ್ರಧಾನವಾದ ರಸಚಿಕಿತ್ಸಾಗ್ರಂಥವನ್ನು ರಚಿಸಿರುತ್ತಾರೆಂದೂಹಿಸುವುದು ಸಮಂಜಸವಾಗಿ ತೋರುತ್ತದೆ.

ಈ ಮೇಲೆ ಉದಾಹರಿಸಲ್ಪಟ್ಟ ಕಾರಣಗಳಿಂದ ವೀರಶೈವಮತದಲ್ಲಿ ಪ್ರಾಚೀನ ಕಾಲದಿಂದಲೂ ಆಯುರ್ವೇದ ಶಾಸ್ತ್ರಪರಂಪರೆಯು ಅವ್ಯಾಹತಪ್ರಭಾವವನ್ನು ಹೊಂದಿದೆ. ಯಾವುದೋ ಒಂದು ಮೂಲೆಯಲ್ಲಿ ಕ್ಷೀಣಾವಸ್ಥೆಯಿಂದಲಾದರೂ ಜೀವಿಸುತ್ತಿರುವ ವಿಷಯವು ಪರಮಾನಂದಕರವಾಗಿರುತ್ತದೆ.

ವೀರಶೈವ ಮತೀಯರು ಆಯುರ್ವೇದಶಾಸ್ತ್ರನಿಷ್ಣಾತರಾಗಿದ್ದರೆಂಬುದಕ್ಕೆ ಶಿವತತ್ತ್ವರತ್ನಾಕರವೆಂಬ ಗ್ರಂಥವೂ ಪ್ರಮಾಣಭೂತವಾಗಿರುತ್ತದೆ. ಈ ಗ್ರಂಥವನ್ನು ಕೆಳದಿಯ ಬಸವರಾಜನು ಕ್ರಿ.ಶ. ೧೮ ನೆಯ ಶತಮಾನದಲ್ಲಿ ರಚಿಸಿರುತ್ತಾನೆ. ಈತನು ಸಕಲ ಶಾಸ್ತ್ರಗಳಲ್ಲಿಯೂ, ೬೪ ಕಲೆಗಳಲ್ಲಿಯೂ ಅಸಾಧಾರಣ ಪಂಡಿತನಾಗಿದ್ದನೆಂಬುದೀ ಗ್ರಂಥಾವಲೋಕನದಿಂದ ತಿಳಿದುಬರುತ್ತದೆ. ಈ ಗ್ರಂಥವು ಸಕಲ ವಿದ್ಯಾಭಂಡಾರವಾಗಿರುತ್ತದೆ. ಇದು ೧೦೮ ತರಂಗಗಳಿಂದೊಡಗೂಡಿದ ೯ ಕಲ್ಲೋಲಗಳಿಂದ ಮುಗಿಸಲ್ಪಟ್ಟಿದೆ. ೬ ನೆಯ ಕಲ್ಲೋಲದಲ್ಲಿ ೨೧ ರಿಂದ ೨೭ ನೆಯ ತರಂಗದವರೆಗೆ ಸಂಪೂರ್ಣಾಷ್ಟಾಂಗಾಯುರ್ವೇದದ ಸಾರಾಂಶವು ವರ್ಣಿತವಾಗಿದೆ ಅಷ್ಟಮಹಾರಸಗಳ ಉತ್ಪತ್ತಿ, ಅವುಗಳ ವರ್ಣನೆ, ಪಾರದಸಂಸ್ಕಾರವರ್ಣನೆ, ವನೌಷಧಿಗಳ ಗುಣದೋಷವರ್ಣನೆ, ದಿನಚರ್ಯೆ, ಪ್ರಧಾನರಸೌಷಧಿಗಳು, ವಿಷಚಿಕಿತ್ಸೆ, ಭೂತಚಿಕಿತ್ಸೆ, ಮೊದಲಾದ ವಿಷಯಗಳು ಸಂಗ್ರಹಿಸಲ್ಪಟ್ಟಿರುತ್ತವೆ. ಇಷ್ಟೇ ಅಲ್ಲದೆ ಅಶ್ವಾಯುರ್ವೇದ, ಗಜಾಯುರ್ವೇದ, ವೃಕ್ಷಾಯುರ್ವೇದ, ರತ್ನಪರೀಕ್ಷೆ, ಸೂಪಶಾಸ್ತ್ರ ಮೊದಲಾದ ವಿಷಯಗಳೂ ಸಂಗ್ರಹರೂಪವಾಗಿ ವರ್ಣಿಸಲ್ಪಟ್ಟಿರುತ್ತವೆ. ಇವುಗಳನ್ನು ನೋಡಲಾಗಿ ಈತನು ಆಯುರ್ವೇದಶಾಸ್ತ್ರದಲ್ಲಿ ಪಾರಂಗತನಾಗಿದ್ದನೆಂದು ಸ್ಪಷ್ಟವಾಗುತ್ತದೆ. ಈ ಗ್ರಂಥದ ಆದಿಯಲ್ಲಿ—

'' ಆಸೀದುಜ್ಜಯಿನೀಪಟಮಂಡಲಸಿದ್ಧೇಶ್ವರೋಗುರುಃ ಪ್ರಸ್ಫುರ |
ತ್ಪ್ರಾಚೀತೋಥ ವಸಂತದೇವಮಹಿತಶ್ರೀಮಲ್ಲಿಕಾರ್ಜುನಃ ||
ವೀರಶೈವಪರಸ್ತತೋ ಗುರುಪದಸ್ವಾಮಿನಾ ವಸಂತಸ್ತತಃ |
ಸ್ತತ್ಸ್ವಾಮ್ಯದುದ್ಯತ್ತೇನ್ನ ವೀರಪಿಭುರಿತ್ಯಾಚಾರ್ಯಪಾರಂಪರೀ ||''

ಎಂದು ಉಜ್ಜಯಿನೀಪೀಠಾಧೀಶ ಶ್ರೀ ಜಗದ್ಗುರು ಭಗವತ್ಪೂಜ್ಯಪಾದರನ್ನು ಸ್ತುತಿಸಿ ಪ್ರತಿಯೊಂದು ಕಲ್ಲೋಲದ ಕಡೆಯಲ್ಲಿ 'ಶ್ರೀ ದೀಕ್ಷಾಗುರು ಚೆನ್ನವೀರಶರಸಂಜಾತೇನ ವಿದ್ಯಾಬ್ಧಿನಾ ' ಎಂದು ಬರೆದಿರುವುದರಿಂದ ಸಕಲ ಶಾಸ್ತ್ರಗಳನ್ನೂ ಶ್ರೀ ಜಗದ್ಗುರು ಪೂಜ್ಯಪಾದರಿಂದಲೇ ಅಧ್ಯಯನಮಾಡಿದ ಪ್ರಧಾನಶಿಷ್ಯನಾಗಿದ್ದನೆಂದವಗತವಾಗುತ್ತದೆ. ಶಿಷ್ಯನಾದಿವನ ಸರ್ವತೋಮುಖಪಾಂಡಿತ್ಯವನ್ನವಲೋಕಿಸಲಾಗಿ ಈತನ ವಿದ್ಯಾ ಗುರುಗಳೂ, ದೀಕ್ಷಾಗುರುಗಳೂ ಆಗಿದ್ದ ಶ್ರೀಮದುಜ್ಜಯಿನೀ ಪೀಠಾಧೀಶ ಶ್ರೀ ಜಗದ್ಗುರು ಪೂಜ್ಯಪಾದರವರು ಸಕಲಶಾಸ್ತ್ರಜ್ಞರಾದ ಮಹಾಸಿದ್ಧರಾಗಿದ್ದರೆಂಬುದು ಸ್ವತಃ ಸಿದ್ಧವಾಗುವುದು. ಈ ಶಿಷ್ಯನಾದ ಕೆಳದಿ ಬಸವರಾಜನ ಆಯುರ್ವೇದಶಾಸ್ತ್ರಪಾಂಡಿತ್ಯವು ಈತನ ಗುರುಗಳಾದ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಆಯುರ್ವೇದಶಾಸ್ತ್ರಪ್ರಕರ್ಷಪಾಂಡಿತ್ಯವನ್ನು ವ್ಯಕ್ತಪಡಿಸುತ್ತದೆ. ಇದರಿಂದೀಪೀಠದಲ್ಲಿಯೂ ಆಯುರ್ವೇದಪರಂಪರೆಯು ಗುರುಪರಂಪರಾಗತವಾಗಿದ್ದಿತೆಂದು ತಿಳಿದುಬರುತ್ತದೆ. ಇದಕ್ಕೆ ಶ್ರೀಮದುಜ್ಜಯಿನೀ ಸದ್ಧರ್ಮಪೀಠದಲ್ಲಿ ಸದ್ಯಃ ವಿರಾಜಿಸುತ್ತಿರುವ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು ನಿಖಿಲಶಾಸ್ತ್ರತತ್ತ್ವಜ್ಞರೂ, ಯೋಗಸಿದ್ಧರೂ, ಪರಮತಪಸ್ವಿಗಳೂ ಆಗಿರುವಂತೆ ಆಯುರ್ವೇದಶಾಸ್ತ್ರಜ್ಞರೂ ಆಗಿರುವರೆಂಬುದೇ ಪ್ರಮಾಣೀಭೂತವಾಗಿರುತ್ತದೆ. ವೀರಶೈವಮತಸ್ಥಾಪನಾಚಾರ್ಯರಲ್ಲಿ ಆಯುರ್ವೇದಶಾಸ್ತ್ರಜ್ಞತೆಯು ಪರಂಪರಾಗತವಾದುದೆಂಬುದಕ್ಕೆ ಮತ್ತೊಂದುದಾಹರಣಸ್ವರೂಪರಾಗಿರುವ ಸದ್ಯಃ ಶ್ರೀ ಹಿಮವತ್ಕೇದಾರಪೀಠದಲ್ಲಿ ವಿರಾಜಿಸುತ್ತಿರುವ ಶ್ರೀ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಆಯುರ್ವೇದಶಾಸ್ತ್ರದಲ್ಲಿ ಅಸದೃಶಪಾಂಡಿತ್ಯಮಂಡಿತರಾಗಿರುತ್ತಾರೆ. ಶ್ರೀ ಕೇದಾರಪೀಠದಲ್ಲಿ ಆಯುರ್ವೇದವಿದ್ಯಾಲಯವನ್ನೂ, ಆಯುರ್ವೇದರಸಾಯನ ಶಾಲೆಯನ್ನೂ ಸ್ಥಾಪಿಸಿರುತ್ತಾರೆ. ಸಕಲೌಷಧಿಗಳೂ ಶ್ರೀ ಜಗದ್ಗುರುಗಳವರ ನಿರೀಕ್ಷಣೆಯಲ್ಲಿಯೇ ತಯಾರಿಸಲ್ಪಡುತ್ತವೆ. ಇನ್ನು ರಸಗ್ರಂಥಕಾರನಾದ ಸೋಮನಾಥನೆಂಬುವನು ಬಸವರಾಜೀಯಗ್ರಂಥಕರ್ತನಾದ ಕೊಟ್ಟೂರು ಬಸವರಾಜನ ವಂಶದಲ್ಲಿ ಜನಿಸಿದ ಪ್ರಾಚೀನ ಪಂಡಿತನೆಂದು ತಿಳಿದುಬರುತ್ತದೆ. ಬಸವರಾಜನ ವಂಶದಲ್ಲಿ ಹಿಂದೆ ಸೋಮನಾಥನೆಂಬ ಹೆಸರಿನವರು ಅನೇಕ ಪಂಡಿತರಿದ್ದರೆಂದು ಹೇಳುತ್ತಾರೆ. ಅಲ್ಲದೆ ಕೊಟ್ಟೂರು ಬಸವರಾಜನಲ್ಲಿರುವ ಅಪಾರವಾದ ವೈದ್ಯಶಾಸ್ತ್ರಪಾಂಡಿತ್ಯವನ್ನು ವಿಚಾರಪುರಸ್ಸರವಾಗಿ ಪರಿಶೀಲನಮಾಡಿದರೆ ಈತನ ವಂಶದಲ್ಲಿ ವೈದ್ಯಶಾಸ್ತ್ರಸಂಪನ್ನರಾದ ಅನಂತ ಪಂಡಿತರಿದ್ದರೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಅಲ್ಲದೆ ಈತನ ವೈದ್ಯಗ್ರಂಥದಲ್ಲಿ ಪರಂಪರಾಗತಗಳಾದ ಕೆಲವು ಅನುಭೂತೌಷಧಗಳ ಉಲ್ಲೇಖವಿರುವುದರಿಂದ ಈತನ ಶಾಸ್ತ್ರಪಾಂಡಿತ್ಯವು ವಂಶಪರಂಪರಾಗತವಾಗಿದ್ದಿತೆಂದೂ ಸ್ಪಷ್ಟವಾಗುತ್ತದೆ. ಈ ಕಾರಣಗಳಿಂದ ಸೋಮನಾಥನು ಈತನ ವಂಶೀಯನೇ ಆಗಿರಬಹುದೆಂದು ತೋರುತ್ತದೆ

ಹರೀಶ್ವರ:—ರಸರತ್ನಸಮುಚ್ಚಯ ಮೊದಲಾದ ಗ್ರಂಥಗಳಲ್ಲಿ ಹರೀಶ್ವರತಂತ್ರವೆಂದು ಅನೇಕಸ್ಥಲಗಳಲ್ಲಿ ಉಲ್ಲೇಖಿತವಾಗಿದೆ. ಇದರ ಪರಿಚಯವನ್ನು ಯಾವ ಗ್ರಂಥಕಾರನೂ ಬರೆದಿರುವುದಿಲ್ಲ. 'ಹರೀಶ್ವರ' ಎಂಬ ಹೆಸರಿನ ಅನಂತಸಿದ್ಧರು ಶ್ರೀ ಕ್ಷೇತ್ರಕಾಶಿಯಲ್ಲಿ ವಿರಾಜಿಸುತ್ತಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದಲ್ಲಿ ಸಿಂಹಾಸನಾರೂಢರಾಗಿ ಜಗದ್ಗುರು ಪದಾಂಕಿತರಾಗಿದ್ದರೆಂತಲೂ, ಪರಮತಪಸ್ವಿಗಳೂ, ಯೋಗಸಿದ್ಧರೂ, ಸಕಲಶಾಸ್ತ್ರತತ್ತ್ವಜ್ಞರೂ, ಆಗಿದ್ದರೆಂತಲೂ, ಪ್ರಸಿದ್ಧವಾಗಿರುತ್ತದೆ. ಜಂಗಮವಾಡಿಯ ಸುತ್ತಣ ಪ್ರದೇಶಕ್ಕೆ ಹರಿಕೇಶ ನಂದನವನವೆಂಬ ನಾಮಧೇಯವುಂಟಾಗಿರುವುದಕ್ಕೆ ಈ ಹರೀಶ್ವರ ಮಹಾಸಿದ್ಧರೇ ಕಾರಣರಾಗಿರುತ್ತಾರೆ. ಆದುದರಿಂದ ಹರೀಶ್ವರ ತಂತ್ರವು ಇದೇ ಪೀಠಾಧೀಶರಾಗಿದ್ದ ಹರೀಶ್ವರ ಸಿದ್ಧರಿಂದಲೇ ರಚಿತವಾಗಿರಬಹುದೆಂಬ ಕಲ್ಪನೆಯು ಸಕಾರಣವಾಗಿದೆ.

ಇಲ್ಲಿಯವರೆಗೂ ಸದ್ಯಃ ಪಠನಪಾಠಗಳಲ್ಲಿ ಪ್ರಧಾನಗಳಾಗಿರುವ ಸಮಸ್ತ ಗ್ರಂಥಗಳ ಪರಿಚಯವನ್ನೂ ಕೊಟ್ಟಂತಾಯಿತು. ಆಧುನಿಕ ಪಂಡಿತರಿಂದ ಬರೆಯಲ್ಪಟ್ಟ ಸಂಗ್ರಹ ಗ್ರಂಥಗಳು ಅನೇಕವಾಗಿರುತ್ತವೆ. ಇವುಗಳ ಪರಿಚಯವನ್ನೂ ಮತ್ತೊಮ್ಮೆ ಸಂದರ್ಭಾನುಸಾರವಾಗಿ ಲಿಖಿಸುವೆನು.

ಈಗ ಸರ್ವತ್ರಪಾಠ್ಯಗಳಾಗಿರುವ ಗ್ರಂಥಗಳಲ್ಲಿ ರಸರತ್ನಸಮುಚ್ಚಯ, ರಸೇಂದ್ರಸಾರಸಂಗ್ರಹಗಳ ವಿಸ್ತೃತಪರಿಚಯವು ಎಲ್ಲಿಯೂ ಸಿಗುವುದಿಲ್ಲ. ರಸರತ್ನಸಮುಚ್ಚಯಕಾರನಾದ ವಾಗ್ಭಟನೂ, ಅಷ್ಟಾಂಗಹೃದಯಕಾರನಾದ ವಾಗ್ಭಟನೂ ಬೇರೆಬೇರೆಯೆಂತಲೂ ಒಬ್ಬನೇ ಎಂತಲೂ ವಿವಾದಗ್ರಸ್ತವಿಷಯವಾಗಿರುತ್ತದೆ. ಇದರ ನಿರ್ಣಯವನ್ನು ಯಾರೂ ಮಾಡಿಲ್ಲ. ಈ ಗ್ರಂಥದ ಭೂಮಿಕೆಯಲ್ಲಿ ಮಾತ್ರ ಒಬ್ಬನೇ ಎಂದು ಬರೆದಿರುತ್ತದೆ. ಶಾರ್ಙ್ಗಧರ ಸಂಹಿತೆಯ ಪರಿಶೋಧಕರಾದ ವಿದ್ಯಾಸಾಗರ ಪಂ|| ಪರಶುರಾಮ ಶಾಸ್ತ್ರಿಗಳು ಇಬ್ಬರು ವಾಗ್ಭಟರಿದ್ದರೆಂದು ಹೇಳುತ್ತಾರೆ. ಇದರಲ್ಲಾವುದು ನಿಜವೆಂಬುದನ್ನು ತಿಳಿಯಲಸಾಧ್ಯವಾಗಿರುತ್ತದೆ. ರಸೇಂದ್ರಸಾರಸಂಗ್ರಹಕಾರನು ೧೩ ನೆಯ ಶತಮಾನದಲ್ಲಿದ್ದ ಗೋಪಾಲಕೃಷ್ಣಭಟ್ಟನೆಂಬುದು ಮಾತ್ರ ಇದರ ಭೂಮಿಕೆಯಿಂದ ತಿಳಿದುಬರುತ್ತದೆ. ಈತನ ವಾಸಸ್ಥಾನ ಮೊದಲಾದ ವಿಷಯವು ಇದರಲ್ಲಿ ಬರೆಯಲ್ಪಟ್ಟಿಲ್ಲ. ಭಟ್ಟನೆಂಬ ಉಪಾಧಿಯು ದಕ್ಷಿಣದೇಶೀಯರಲ್ಲಿ ವಿಶೇಷ ಪ್ರಚಲಿತವಾಗಿರುವುದರಿಂದ ಭಟ್ಟೋಪಾಧಿಯುಕ್ತನಾದಿವನು ಪ್ರಾಯಶಃ ದಾಕ್ಷಿಣಾತ್ಯನಾಗಿದ್ದನೆಂದು ಹೇಳಬಹುದು.

ಈ ಮೂರು ಲೇಖಗಳಿಂದ ಆಯುರ್ವೇದವಾಙ್ಮಯಪರಿಚಯವು ಸಂಕ್ಷೇಪವಾಗಿ ಕೊಡಲ್ಪಟ್ಟಿದಾಯಿತು. ಮುಂದಿನಲೇಖದಲ್ಲಿ ಆಯುರ್ವೇದವೈಭವವನ್ನು ವಿಸ್ತರಿಸುವೆನು.

ಯತ್ಪ್ರಸಾದಾನ್ನ ಮಾಷ್ಯಾಣಾಂ ಹಿತಾಹಿತವಿವೇಚಯಃ |
ತದಾಯುಃಶಾಸ್ತ್ರಮೇತಸ್ಮೈ ವಿದ್ಯತಂ ಲೇಖಪತ್ರಯೇ ||

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಮಹೋತ್ಸವ

ಮಹಾಶಿವರಾತ್ರಿ.

ಭರತಖಂಡದಲ್ಲಿರುವ ಸಮಸ್ತ ವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವುದೇ ಆಸ್ತಿಕಮತಾನುಯಾಯಿಗಳ ಮುಖ್ಯಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು!

ಸೂಚನೆ.

ಪ್ರತಿವರ್ಷದ ಪದ್ಧತಿಯಮೇರೆಗೆ ಮಹಾಶಿವರಾತ್ರಿಯ ನಿಮಿತ್ತವಾಗಿ ಮುಂದಿನ ೧೨ ನೆಯ ತಾರೀಖಿನ ಪತ್ರಿಕೆಯು ಹೊರಡುವದಿಲ್ಲವೆಂಬ ವಿಷಯವನ್ನು ಚಂದಾದಾರರೆಲ್ಲರೂ ತಿಳಿಯತಕ್ಕದ್ದು.

ಸಂ.

ಒಳದೇಶದ ವೃತ್ತಾಂತಗಳು.

ಭೂಕಂಪದಿಂದ ನಷ್ಟಪಟ್ಟು ನರಳುತ್ತಿರುವ ಜನರ ಸಹಾಯಾರ್ಥವಾಗಿ ಬೆಂಗಳೂರು ಸಿಟಿ ಮುನಿಸಿಪಾಲಿಟಿಯವರು 1000 ರೂ. ಗಳನ್ನೂ, ಮೈಸೂರು ಸಿಟಿ ಮುನಿಸಿಪಾಲಿಟಿಯವರು 500 ರೂ. ಗಳನ್ನೂ ಕಳುಹಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ.

ಇದೇ ಫೆಬ್ರವರಿ 2 ನೇ ತಾರೀಖಿನ ದಿವಸ ಸಾಯಂಕಾಲ ರಾಜಧಾನಿಯ ಮುನಿಸಿಪಲ್ ಆಫೀಸಿನಲ್ಲಿ ಮುನಿಸಿಪಲ್ ವೈಸ್‌ಪ್ರೆಸಿಡೆಂಟರ ಚುನಾವಣೆಯು ನಡೆದು, ಮಿ|| ಮಹಮುದ್ ಸೇಟ್‌ರವರು ಬಹುಮತದಿಂದ ವೈಸ್‌ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು.

ರಾಜಧಾನಿಯ ವಾಣೀವಿಲಾಸಮಾರ್ಕೆಟ್ಟಿನ ಸಮೀಪದಲ್ಲಿರುವ ಒಂದಾನೊಂದು ಅಂಗಡಿಯಲ್ಲಿ ಶ್ರೀನಿವಾಸಯ್ಯಂಗಾರ್, ಶ್ರೀಕಂಠರಾಜೇಅರಸು ಮತ್ತು ಮಾದಯ್ಯ ಎಂಬುವರು ಕಳುವುಮಾಡಿದರೆಂಬ ಕಾರಣದಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ, 1, 2 ಮತ್ತು 3 ನೇ ಅಪರಾಧಿಗಳಿಗೆ ಕ್ರಮವಾಗಿ 1 ವರ್ಷ, 2 ವರ್ಷ ಮತ್ತು 3 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಕಳೆದ ಜನವರಿ 24 ನೇ ತಾರೀಖು ಬುಧವಾರ ರಾತ್ರಿ ದೇವರಾಜ ಮಾರ್ಕೆಟ್ಟಿನ ಬಳಿ ಇಬ್ಬರು ಮಹಮ್ಮದೀಯರು ಜಗಳವಾಡುತ್ತಿರಲು, ದಫೇದಾರ್ ರಾಜನಾಯಕ್ ಎಂಬಾತನು ಅವರಲ್ಲಿ ಒಬ್ಬನನ್ನು ಸ್ಟೇಷನ್ನಿಗೆ ಎಳೆತಂದು ಅವನ ಹೆಸರು ಮೊದಲಾದುವುಗಳನ್ನು ಕೇಳಲು ಅವನು ಯಾವುದನ್ನೂ ತಿಳಿಸದಿರಲು ಪೋಲೀಸರು ಅವನನ್ನು ಲಾಕಪ್ಪಿನಲ್ಲಿಟ್ಟರೆಂದೂ, ಅಷ್ಟರಲ್ಲಿ ಇನ್ನು ಕೆಲವು ಮುಸಲ್ಮಾನರು ಸ್ಟೇಷನ್ನಿಗೆ ನುಗ್ಗಿ ಮೇಲ್ಕಂಡ ರಾಜನಾಯಕನನ್ನೂ ದಫೇದಾರ್ ತಮ್ಮಯ್ಯ ಎಂಬವನನ್ನೂ ಮತ್ತೊಬ್ಬ ಪೋಲೀಸ್ ಕಾನ್‌ಸ್ಟೆಬಲ್ಲನ್ನೂ ಹೊಡೆದು ಬಂಧನದಲ್ಲಿಟ್ಟಿದ್ದ ಮುಸಲ್ಮಾನನನ್ನು ಬಿಡಿಸಿಕೊಂಡು ಹೋದರೆಂದೂ, ಪೋಲೀಸ್ ಅಧಿಕಾರಿಗಳು ಈ ಸಂಬಂಧದಲ್ಲಿ 8 ಜನ ಮುಸಲ್ಮಾನರ (ಜಟಕಾ ಹೊಡೆಯುವವರು) ಮೇಲೆ ಮೊಕದ್ದಮೆಯನ್ನು ಹೂಡಲು ತಕ್ಕ ಕ್ರಮಗಳನ್ನು ನಡೆಸುತ್ತಿರುವರೆಂದೂ ತಿಳಿದು ಬಂದಿದೆ.

ವರ್ತಮಾನಸಂಗ್ರಹ.

ಭೂಕಂಪದಿಂದ ಕಷ್ಟಪಡುತ್ತಿರುವವರ ಸಹಾಯಾರ್ಥವಾಗಿ ಸರಕಾರದವರು 1 ಕೋಟಿ ರೂಪಾಯಿಗಳನ್ನು ಮೀಸಲಾಗಿಡಬೇಕೆಂಬ ಬಗ್ಗೆ ಮಿ|| ಮುಜ್ಜಾರ್‌ರವರು ದೆಹಲಿ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಠರಾವನ್ನು ಚರ್ಚೆಗೆ ತರುವರೆಂದು ತಿಳಿದುಬಂದಿದೆ.

ಬಾರಿಸಾಲ್ ನಗರದ ಒಬ್ಬ ಸಬ್ ಇನ್‌ಸ್ಪೆಕ್ಟರು ಒಂದಾನೊಂದು ಧಕಾಯಿತಿ ಮೊಕದ್ದಮೆಯನ್ನು ತನಿಖೆಮಾಡುವಾಗ್ಗೆ ವಿಷಯ ಸಂಗ್ರಹಣಮಾಡಲು ಒಬ್ಬ ವಿಧವೆಯನ್ನು ವಿಶೇಷ ತೊಂದರೆ ಪಡಿಸಿದರೆಂಬ ಕಾರಣದಮೇಲೆ ಸೆರ್ವಿಸ್ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾರೆ.

ಲೀಸ್ಟರ್ ನಗರದ ಪಬ್ಲಿಕ್ ಲೈಟಿಂಗ್ ಇಂಜನಿಯರು ರಸ್ತೆಗಳಲ್ಲಿ ಉಪಯೋಗಿಸುವುದಕ್ಕಾಗಿ ರಬ್ಬರಿನಿಂದ ಕೆಲವು ಹೊಸ ತರಹ ದೀಪದ ಕಂಬಗಳನ್ನು ತಯಾರಿಸಿರುವರು. ಈ ಕಂಬಗಳಿಗೆ ಮೋಟಾರ್ ಗಾಡಿಗಳು ಢಿಕ್ಕಿಹೊಡೆದರೆ ಮೋಟಾರಿಗಾಗಲಿ ಕಂಬಗಳಿಗಾಗಲಿ ಯಾವ ಅಪಾಯವೂ ಆಗುವುದಿಲ್ಲವಂತೆ!

ಇಂಗ್ಲೆಂಡಿನ ರಾಂಸ್‌ಗೇಟ್ ನಗರದ ಒಬ್ಬ 13 ವರ್ಷದ ಹುಡುಗನು ಅಧಿಕಾರಿಗಳಿಗೆ ತಿಳಿಯದಂತೆ ಒಂದಾನೊಂದು ನೆಲಮಾಳಿಗೆಯಲ್ಲಿ 3 ವರ್ಷಗಳಿಂದಲೂ ಚಲನಚಿತ್ರ ಪ್ರದರ್ಶನವನ್ನು ನಡೆಯಿಸುತ್ತಿದ್ದನಂತೆ! ಮ್ಯಾಜಿಸ್ಟ್ರೇಟರು ಹುಡುಗನ ಸಾಹಸವನ್ನು ಕೊಂಡಾಡಿ ಅವನಿಗೆ 15 ರೂ. ಗಳ ಜುಲ್ಮಾನೆಯನ್ನು ಮಾತ್ರ ವಿಧಿಸಿದರು.

ಲೋಕಪ್ರಸಿದ್ಧವಾದ 'ಫೋರ್ಡ್' ಮೋಟಾರು ಕಂಪೆನಿಯ ಮಾಲಕರಾದ ಹೆನ್ರಿಫೋರ್ಡ್‌ರವರ ಸಹೋದರರಾದ ವಿಲಿಯಂ ಫೋರ್ಡ್‌ರವರು ತಮಗೆ 12,00,000 ರೂ. ಗಳ ಸಾಲವಿರುವುದೆಂದು ತಾವಾಗಿ ಕೋರ್ಟಿನಲ್ಲಿ ಪಾಪರ್ ಅರ್ಜಿಯನ್ನು ಹಾಕಿರುವರು. ಮ್ಯಾಜಿಸ್ಟ್ರೇಟರು ಅವರ ಆಸ್ತಿಯೆಷ್ಟೆಂಬುದನ್ನು ನಿರ್ಧರಿಸುವಂತೆ ಅಧಿಕಾರಿಗಳಿಗೆ ಅಪ್ಪಣೆ ಮಾಡಿರುವರು.

ಮಧುರೆಯ 'ವರ್ಣಾಶ್ರಮಧರ್ಮಸ್ವರಾಜ್ಯ ಸಂಘ'ದವರು ಕಳೆದ ಜನವರಿ 20 ನೇ ತಾರೀಖಿನ ದಿವಸ ಬಹಿರಂಗ ಸಭೆಯನ್ನು ಮಾಡಿ, ಮಧುರೆಯ ಮುನಿಸಿಪಲ್ ಕೌನ್ಸಿಲ್ಲಿನವರು ಗಾಂಧಿಯವರಿಗೆ ಒಪ್ಪಿಸಿದ ಬಿನ್ನವತ್ತಳೆಯಲ್ಲಿ ಅಸ್ಪೃಶ್ಯತೆ ಮತ್ತು ಅಸ್ಪೃಶ್ಯರ ದೇವಾಲಯ ಪ್ರವೇಶಗಳ ಸಂಬಂಧವಾಗಿ ವ್ಯಕ್ತಪಡಿಸಿರುವ ಅಭಿಪ್ರಾಯವು ಮಧುರಾ ನಗರದ ನಿವಾಸಿಗಳ ಅಭಿಪ್ರಾಯಕ್ಕೆ ತೀರಾ ವಿರುದ್ಧವಾಗಿದೆಯೆಂದು ತೀರ್ಮಾನಮಾಡಿರುತ್ತಾರೆ.

ದೆಹಲಿಯ ಪೋಲೀಸರು ಕಳ್ಳತನದ ಅಪಾದನೆಯ ಮೇಲೆ 3 ಜನ ಗಂಡಸರನ್ನೂ ಒಬ್ಬ ಹೆಂಗಸನ್ನೂ ದಸ್ತಗಿರಿ ಮಾಡಿರುತ್ತಾರೆ. ಆ ಹೆಂಗಸು ಮೊದಲು ಕಳ್ಳತನ ಮಾಡಬೇಕೆಂದಿರುವ ಮನೆಯವರೊಡನೆ ಸ್ನೇಹಮಾಡಿಕೊಂಡು, ಅವರ ಮನೆಯ ಗುಟ್ಟನ್ನೆಲ್ಲಾ ತಿಳಿದ ನಂತರ ಅದನ್ನು ತನ್ನ ಕಡೆಯವರಿಗೆ ತಿಳುಹಿಸುತ್ತಿದ್ದಳಂತೆ! ಅವರು ಸಮಯ ಕಾದಿದ್ದು, ಆ ಹೆಂಗಸು ಮನೆಯವರೊಡನೆ ಮಾತನಾಡುತ್ತಿದ್ದ ಸಮಯದಲ್ಲಿ ಗಂಡಸರು ಬೇರೆ ಮಾರ್ಗದಿಂದ ಮನೆಗೆ ನುಗ್ಗಿ ಸಿಕ್ಕಿದುದನ್ನೆಲ್ಲಾ ದೋಚಿಕೊಂಡು ಹೋಗುತ್ತಿದ್ದರಂತೆ!

ಕಾಂಗ್ರೆಸ್ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಲ್ಲೊಬ್ಬರಾದ ಡಾಕ್ಟರ್ ಆಲಂರವರು ಕಾಯಿದೆ ಭಂಗದ ಚಳವಳಿಯಲ್ಲಿ ಭಾಗವಹಿಸಿ ಕಾರಾಗೃಹವಾಸಿಗಳಾಗಿದ್ದುದರಿಂದ, ಅವರಿಗೆ ಇನ್ನು ಮುಂದೆ ಹೈಕೋರ್ಟಿನಲ್ಲಿ ವಕಾಲತ್ತು ನಡೆಸಲು ಅವಕಾಶ ಕೊಡಕೂಡದೆಂಬ ಬಗ್ಗೆ ಸರಕಾರದವರು ಅವರ ಮೇಲೆ ಒಂದು ಮೊಕದ್ದಮೆಯನ್ನು ಹೂಡಿದ್ದರು. ಲಾಹೋರ್ ಹೈಕೋರ್ಟ್ ಜಡ್ಜರವರು ಮೊಕದ್ದಮೆಯನ್ನು ವಿಚಾರಣೆ ಮಾಡಿ ಇನ್ನು ಮುಂದೆ ಕಾಯಿದೆಭಂಗದ ಚಳವಳಿಯಲ್ಲಿ ಭಾಗವಹಿಸಕೂಡದೆಂದು ಡಾ|| ಆಲಂರವರಿಗೆ ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ.

ರಾಯಪುರದ ಪ್ರಸಿದ್ಧ ವಕೀಲರೂ, ಕಾಂಗ್ರೆಸ್ ಮುಂದಾಳುಗಳೂ ಆದ ಪಂಡಿತ ರವಿಶಂಕರ ಶುಕ್ಲರವರು ಸಿಯೋನಿ ಕಾರಾಗೃಹದಲ್ಲಿ ಕಾಯಿದೆ ಭಂಗಕ್ಕಾಗಿ ಬಂದಿಗಳಾಗಿದ್ದಾಗ, ಆಗ್ಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದ ಮಿ|| ಸಿ. ಕೆ. ಸೀಮರ್‌ರವರು ಮತ್ತು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಾಗಿದ್ದ ಮಿ|| ಪೆಂಡಾರಕರರವರು ಪಂಡಿತ ಶುಕ್ಲರವರ ಬೆರಳುಗಳ ಗುರುತುಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ಬಲ ಪ್ರಯೋಗ ಪಡಿಸಿದರೆಂಬ ಕಾರಣದ ಮೇಲೆ ಸರ್ ಹರಿಸಿಂಗ್ ಗೋರ್‌ರವರು ಪಂಡಿತರ ಪರವಾಗಿ ಸದರಿ ಅಧಿಕಾರಿಗಳ ಮೇಲೆ 10,5000 ರೂ. ಗಳ ಡ್ಯಾಮೇಜಿಗೆ ದಾವೆಯನ್ನು ಹೂಡಿರುತ್ತಾರೆ.

ಪುರಾತನ ಗುಹೆ!

ಉತ್ತರ ಅಮೇರಿಕೆಗೆ ಸೇರಿದ ಮೇರಿಲ್ಯಾಂಡಿನಲ್ಲಿರುವ 'ಅಲ್ಲಿಘನಿ' ಪರ್ವತ ಪ್ರಾಂತದಲ್ಲಿ ಒಂದು ಪುರಾತನ ಗುಹೆಯು ಗೋಚರವಾಗಿ ಅದರಲ್ಲಿ 20,00,000 ವರ್ಷಗಳ ಹಿಂದೆ ವಾಸವಾಗಿದ್ದ ಅನೇಕಾನೇಕ ವಿಚಿತ್ರ ಮೃಗಗಳ ಅಸ್ಥಿಪಂಜರಗಳು ದೊರೆತಿರುವವಂತೆ!

ಮರಣಾನಂದ.

ರಿಕಾರ್ಡೋ ಫ್ಲೋರ್ಟಿಸ್ ಎಂಬ ಒಬ್ಬ ಸ್ಪೇನ್ ದೇಶದ ಸ್ಟೇಷನ್ ಮಾಸ್ಟರಿಗೆ 'ಸ್ಪ್ಯಾನಿಷ್ ಕ್ರಿಸ್‌ಮಸ್ ಲಾಟರಿ'ಯಲ್ಲಿ 3,75,000 ಪೌಂಡುಗಳ ಬಹುಮಾನವು ದೊರೆಯಿತು. ಆದರೆ ಈ ಸುದ್ದಿಯು ಆತನಿಗೆ ತಿಳಿದ ಕೂಡಲೇ ತಡೆಯಲಾರದಷ್ಟು ಆನಂದದಿಂದ ತತ್‌ಕ್ಷಣವೇ ಮೃತಪಟ್ಟನು!

ಅದ್ಭುತವಾದ ಗುಂಡು.

ಇಂಗ್ಲೆಂಡಿನ ಒಂದು ದೊಡ್ಡ ಮದ್ದಿನ ಕಾರ್ಖಾನೆಯವರು 'ಷೆಲ್' ಎಂಬ ಹೊಸ ತರಹದ ಗುಂಡನ್ನು ತಯಾರಿಸಿರುವರು. ಇದು 16 ಅಂಗುಲ ದಪ್ಪನಾದ ಉಕ್ಕಿನ ತಗಡನ್ನು ಕ್ಷಣಮಾತ್ರದಲ್ಲಿ ಭೇದಿಸುವುದಲ್ಲದೆ ಎಂತಹ ಬಲವಾದ ಜಹಜನ್ನಾದರೂ ಕ್ಷಣಮಾತ್ರದಲ್ಲಿ ಛಿದ್ರಛಿದ್ರವಾಗಿ ಮಾಡಿಬಿಡುವುದಂತೆ!

ಹೊಸತರಹದ ಪೆಟ್ರೋಲ್!

ಒಬ್ಬ ಫ್ರೆಂಚ್ ಇಂಜನಿಯರು 15 ವರ್ಷಗಳ ಕಾಲ ಪರೀಕ್ಷೆ ಮಾಡಿ ಪೆಟ್ರೋಲಿಗೆ ಬದಲಾಗಿ ಒಂದು ಹೊಸತರಹ ಎಣ್ಣೆಯನ್ನು ಶೋಧಿಸಿರುವರು. ಇದನ್ನು ತಯಾರಿಸಲು ಒಂದು ಗ್ಯಾಲನ್ನಿಗೆ 9 ಕಾಸುಗಳಿಗಿಂತಲೂ ಕಡಿಮೆ ವೆಚ್ಚವಾಗುವುದಂತೆ! ಹಾಗೂ ಪೆಟ್ರೋಲಿಗಿಂತಲೂ ಹೆಚ್ಚು ಗುಣವುಳ್ಳದ್ದಾಗಿರುವುದಂತೆ!

ಸ್ಟೇಟ್‌ಸೆಕ್ರೆಟರಿಯವರ ಮೇಲೆ ದಾವಾ!

ಮೊರಾದಾಬಾದ್ ಡಿಸ್ಟ್ರಿಕ್ಟ್ ಸಹಪುರದ ರಾಜಾ ಜಗತ್ಕುಮಾರಸಾಹೇಬರವರು, ಸದರಿ ಡಿಸ್ಟ್ರಿಕ್ಟಿನ ರಸ್ತೆಗಳು ಸರಿಯಾಗಿಲ್ಲದಿರುವುದರಿಂದ ತಮ್ಮ ಮೋಟಾರುಗಳಿಗೆ ವಿಶೇಷ ಧಕ್ಕೆ ಯುಂಟಾಯಿತೆಂದು 18,000 ರೂ. ಗಳ ನಷ್ಟಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೇಲೆ ದಾವೆಯನ್ನು ಹೂಡಿರುತ್ತಾರೆ.

ಹೊಸತರಹದ ಬಲ್ಬು.

ಅಮೇರಿಕೆಯ ಜಿ. ಇ. ಕಂಪೆನಿಯವರು ಒಂದು ಹೊಸ ತರಹ ಎಲೆಕ್ಟ್ರಿಕ್ ಬಲ್ಬನ್ನು ತಯಾರಿಸಿರುವರು. ಅದರಲ್ಲಿ ಎಲ್ಲಾ ಬಲ್ಬುಗಳಂತೆ ಒಂದೇಒಂದು ತಂತಿಯಿರದೆ ಪ್ರತ್ಯೇಕವಾದ ಎರಡು ತಂತಿಗಳಿರುವುವಂತೆ! ಈ ತಂತಿಗಳನ್ನು ಬೇರೆ ಬೇರೆ ಅಥವಾ ಒಟ್ಟಿಗೆ ಹತ್ತಿಕೊಳ್ಳುವಂತೆ ಜೋಡಿಸಿರುವದರಿಂದ ಅವಶ್ಯವಿದ್ದಂತೆ ಬಲ್ಬಿನ ಪ್ರಕಾಶವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದಂತೆ!

ರಾಜರ ಮೇಲೆ ದಿವಾನರ ದಾವಾ!

ವೆಂಕಟಗಿರಿ ಸಂಸ್ಥಾನದ ಮಹಾರಾಜರಿಗೂ ಸದರಿ ಸಂಸ್ಥಾನದ ದಿವಾನರಾದ ದಿವಾನ್ ಬಹದ್ದೂರ್ ಜೆ. ವೆಂಕಟನಾರಾಯಣ ನಾಯುಡುರವರಿಗೂ ಒಂದು ಒಪ್ಪಂದವಾಗಿದ್ದು, ವೆಂಕಟಗಿರಿರಾಜರು ಆ ಒಪ್ಪಂದವನ್ನು ಮುರಿದರೆಂಬ ಕಾರಣದ ಮೇಲೆ, ದಿವಾನ್ ಬಹದ್ದೂರ್‌ರವರು 75,000 ರೂ. ಗಳ ಪರಿಹಾರಕ್ಕಾಗಿ ಮದರಾಸ್ ಹೈಕೋರ್ಟಿನಲ್ಲಿ ದಾವೆಯನ್ನು ಹೂಡಿರುತ್ತಾರೆ.

ಜರ್ಮನಿಯಲ್ಲಿ ನಿರುದ್ಯೋಗ ಸಮಸ್ಯಾಪರಿಹಾರ.

ಜರ್ಮನ್ ಸರಕಾರದವರು ವಿದ್ಯಾವಂತರಾದ ನಿರುದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೋಸ್ಕರ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ 38,000 ವಿದ್ಯಾರ್ಥಿಗಳಲ್ಲಿ 15,000 ವಿದ್ಯಾರ್ಥಿಗಳಿಗೆ ಮಾತ್ರ ಕಾಲೇಜಿನಲ್ಲಿ ವ್ಯಾಸಂಗಮಾಡಲು ಅವಕಾಶಕೊಟ್ಟಿರುತ್ತಾರೆ. ಉಳಿದ 23,000 ವಿದ್ಯಾರ್ಥಿಗಳಿಗೆ ವ್ಯಾಪಾರ ಮತ್ತು ಕೈಗಾರಿಕೆಯಲ್ಲಿ ಶಿಕ್ಷಣ ಕೊಡಬೇಕೆಂದು ಆಲೋಚಿಸುತ್ತಿರುವರು.

ಮತ್ತೊಂದು ಭವಿಷ್ಯ!

ಲಂಡನ್ ನಗರದ 'ಡೇಲಿ ಎಕ್ಸ್‌ಪ್ರೆಸ್' ಎಂಬ ಪತ್ರಿಕೆಯು 1934 ನೇ ಇಸವಿಯಲ್ಲಿ ಆಸ್ಟ್ರೇಲಿಯಾ ನಗರದಲ್ಲಿ ಒಂದು ಚಿನ್ನದ ಗಣಿಯು ದೊರಕುವುದೆಂದೂ, ಇಂಗ್ಲೆಂಡಿಗೂ ಜಪಾನಿಗೂ ಯುದ್ಧ ಪ್ರಾಪ್ತವಾಗಿ, ಭೂಕಂಪದಿಂದ ಅದು ನಿಂತುಹೋಗುವುದೆಂದೂ, ರಷ್ಯಾದೇಶದ ರೈತರು ಸೋವಿಯಟ್ ಸರಕಾರದ ಮೇಲೆ ದಂಗೆಯೇಳುವರೆಂದೂ, ಐರ್ಲೆಂಡ್, ಸ್ಪೇನ್ ಮತ್ತು ಆಸ್ಟ್ರಿಯಾ ದೇಶಗಳಲ್ಲಿ ಭಯಂಕರ ಹೊಡೆದಾಟಗಳಾಗುವುವೆಂದೂ ಭವಿಷ್ಯವನ್ನು ಪ್ರಕಟಿಸಿರುತ್ತದೆ.

ಸ್ವೀಕಾರ

ಹರಪನಹಳ್ಳಿ ತಾಲೂಕು ಚಿಕ್ಕಕೋಳಚಿ ಗ್ರಾಮದವರು ಸಪ್ತಗ್ರಹಕೂಟ ಶಾಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **2** ರೂ. ಗಳು ಹಿರೇಹಡಗಲಿ ಪುರಾಣಿಕಮಠದ ವೇ|| ವಿರೂಪಾಕ್ಷಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ನಿಜಾಮು ಇಲಾಖಾ ಕುಷ್ಟಿಗಿ ತಾ|| ಶಾಂತಗಿರಿ ಹಿರೇಮಠದ ವೇ|| ಪಟದಯ್ಯನವರ ಧರ್ಮಪತ್ನಿಯವರಾದ ಪತಿವ್ರತಾಶಿರೋಮಣಿ ಶ್ರೀಮತಿ ವೀರಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **2** ರೂ. ಗಳು ಮ|| ರಾ|| ಹಂಚಿನಾಳ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ.

ಗದಗಪಟ್ಟಣನಿವಾಸಿಗಳಾದ ವೇ|| ಗುರುಸ್ವಾಮಿಮಠದ ಶಿವಲಿಂಗಾರ್ಯರು ಮಾಘ ಶು|| ೨ ದಿವಸ ನೆರವೇರಿದ ತಮ್ಮ ಚಿ|| ಶ್ರೀಶರನ ೮ ನೆಯ ವರ್ಷದ ವರ್ಧಂತಿಯಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂ. ಗಳು ಶ್ರೀ|| ಷ|| ಬ್ರ|| ಮೇಗೇರಿ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಗದಗಶಹರನಿವಾಸಿಗಳಾದ ಮ|| ರಾ|| ಉಪಾಸಿ (ಶಿರಗೇರಿ) ಸಂಗಪ್ಪನವರ ಪುತ್ರ ಚಿ|| ರಾಚಪ್ಪನಿಗೆ ಇಬ್ರಾಹಿಂಪುರದ ಮ|| ರಾ|| ರಾಮದುರ್ಗದ ಗುರುಪಾದಪ್ಪಶೆಟ್ಟರ ಪುತ್ರಿ ಚಿ|| ಕುಂ|| ಸೌ|| ಪಾರ್ವತವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **1-8-0** ರೂ. ಗಳು ವೇ|| ಮುಳಗುಂದ ಹಿರೇಮಠದ ಪುರದಯ್ಯನವರ ದ್ವಾರಾ ತಲ್ಪಿರುತ್ತವೆ.

ಹಾನಗಲ್ಲ ತಾ|| ಆಲೂರಿನಲ್ಲಿರುವ ವೇ|| ಮಳಿಯಯ್ಯನವರು ರಾಚಯ್ಯನವರು ಹಿರೇಮಠ ಗ್ರಾಮದ ಕೊಪ್ಪ (ವ) ಗೌಡ್ರ ಗುರುಸ್ವಾಮಿಮಠ ಇವರ ಫಲಶೋಭನಕಾರ್ಯವು ನೆರವೇರಿದ ಸಮಯದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಹೆಸರಿನಿಂದ **1** ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಶಿಕಾರಿಪುರ ತಾ|| ಗುಳಮಲ್ಲೇಶ್ವರ ಗ್ರಾಮಸ್ಥಾಪನೆಯ ಸಮಯದಲ್ಲಿ ಮ|| ರಾ|| ಸಣ್ಣಗೌಡರ ಮಲ್ಲಪ್ಪಗೌಡರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **1** ರೂ. ಯು ವೇ|| ಮಾಸೂರು ಹಿರೇಮಠದ ಚನ್ನವೀರಾರಾಧ್ಯರ ದ್ವಾರಾ ತಲ್ಪಿರುತ್ತದೆ.

ದಾವಣಗೆರೆ ನಿವಾಸಿಗಳಾದ ಮ|| ರಾ|| ಯಜಮಾನ ಬೆಳ್ಳೂಡಿ ವೀರಪ್ಪನವರ ಪುತ್ರ ಚಿ|| ವೀರಪ್ಪನವರ ವಿವಾಹಮಹೋತ್ಸವ ಸಮಯದಲ್ಲಿ ತೆಗೆಯಿಸಿದ **1** ರೂ. ಯು ವೇ|| ಮಲೇಬೆನ್ನೂರು ಮಠದ ಹಾಲಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗಾ ಡಿ|| ಕುಂಸಿ ಗ್ರಾಮದ ಮ|| ರಾ|| ಜಾಜಿ ವೀರಭದ್ರಪ್ಪಶ್ರೇಷ್ಠಿಯವರ ಗೃಹದಲ್ಲಿ ಸಪ್ತಗ್ರಹಕೂಟಶಾಂತಿಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ಶಿವಕೀರ್ತನಕೇಸರಿ ವೇ|| ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಗೌರೀಶಂಕರ ಕಂಪನಿಯ ೨ ನೆಯ ಮಹಾಯಾತ್ರಾ ಪ್ರವಾಸ.

ಹುಬ್ಬಳ್ಳಿಯ ಓರ್ವ ಪ್ರವಾಸಿಯ ಅನುಭವ

ಭರತಖಂಡದ ಸುಪ್ರಸಿದ್ಧ ಕ್ಷೇತ್ರಗಳ ಯಾತ್ರೆಗಳನ್ನು ಮಾಡಲು ಹುಬ್ಬಳ್ಳಿಯ ಶ್ರೀ ಗೌರಿಶಂಕರ ಕಂಪನಿಯವರು ತಮ್ಮ ಮೊದಲನೆಯ ಯಾತ್ರೆಯನ್ನು ಪೂರೈಸಿಕೊಂಡು ಈಗ ೨ ನೆಯ ಮಹಾಯಾತ್ರೆಯನ್ನು ಪ್ರಾರಂಭಿಸಿರುವದು ಪ್ರಸಿದ್ಧವಷ್ಟೆ! ಈ ಸಾರೆ ಪ್ರಾರಂಭಿಸಿದ ಯಾತ್ರಾನಿಯಮಾವಳಿಯಲ್ಲಿ ಸನಾತನಿಗಳಿಗೆ ಅತ್ಯಂತ ಪರಮಪವಿತ್ರಗಳಾದ ದ್ವಾದಶಜ್ಯೋತಿರ್ಲಿಂಗಗಳಲ್ಲಿ ಐದು ಜ್ಯೋತಿರ್ಲಿಂಗಗಳ ದರ್ಶನವನ್ನಿಟ್ಟಿದ್ದಾರೆ. ನಾವು ನಾಸಿಕಕ್ಕೆ ಮುಟ್ಟಿದ ಮರುದಿನ ತ್ರ್ಯಂಬಕೇಶ್ವರಕ್ಕೆ ಹೋದೆವು. ಇದು ನಾಸಿಕದಿಂದ ಪಶ್ಚಿಮಕ್ಕೆ ೧೮ ಮೈಲುದೂರದಲ್ಲಿದೆ. ಯಾವಾಗಲೂ ಮೋಟಾರುಗಳು ದೊರೆಯುತ್ತವೆ. ತ್ರ್ಯಂಬಕೇಶ್ವರ ಕ್ಷೇತ್ರವು ಗೋದಾವರೀ ನದಿಯ ಉಗಮಸ್ಥಾನದಲ್ಲಿದೆ. ದ್ವಾದಶಜ್ಯೋತಿರ್ಲಿಂಗಾಂತರ್ಗತವಾದ ಈ ಶಿವಲಿಂಗವು ಅತ್ಯಂತ ರಮಣೀಯವಾದ ಸ್ಥಳದಲ್ಲಿರುವುದು. ಪಿತೃಕುಲೋದ್ಧಾರಕ ಸರ್ವಶ್ರೇಯಸ್ಕ ಪುರುಷಸಿಂಹನಾದ ಭಗೀರಥನು ಉಗ್ರವಾದ ತಪಸ್ಸನ್ನಾಚರಿಸಿ ಋಷಿಶ್ರೇಷ್ಠನಾದ ಗೌತಮ ಮಹರ್ಷಿಯ ಕೃಪೆಯಿಂದ ಗಂಗಾವತರಣಗೊಳಿಸಿಕೊಂಡದ್ದು ಇದೇ ಪುಣ್ಯಸ್ಥಲದಲ್ಲಿ. ಗೌತಮ ಮಹರ್ಷಿಗಳ ಹಾಗೂ ಗೋದಾವರೀ (ಗಂಗಾ) ದೇವಿಯ ಪ್ರಾರ್ಥನಾನುಸಾರವಾಗಿ ಪರಶಿವನು ಇಲ್ಲಿ ಪ್ರಾದುರ್ಭವಿಸಿ ಜ್ಯೋತಿರ್ಲಿಂಗಮೂರ್ತಿಯಾಗಿರುವನು. ಈ ಕ್ಷೇತ್ರ ಮಹಿಮೆಯು ಅವರ್ಣನೀಯವಾಗಿರುವದು. ಈ ಕ್ಷೇತ್ರದಲ್ಲಿ ನೋಡತಕ್ಕ ಸ್ಥಳಗಳು—ಗಂಗಾವತರಣ ಬ್ರಹ್ಮಗಿರಿ ನಿವೃತ್ತಿನಾಥ ಮೊದಲಾದವುಗಳು ಪ್ರಸಿದ್ಧವಿರುತ್ತವೆ. ೧ ಗಂಗಾವತರಣ ಸ್ಥಾನವನ್ನು ನೋಡಲು ಪರ್ವತವನ್ನು ೭೫೦ ಸೋಪಾನುಗಳಿಂದ ಹತ್ತಿಹೋಗಬೇಕಾಗುವದು. ಮುದುಕರು ಅಶಕ್ತರು ಡೋಲಿಯಲ್ಲಿ ಕುಳಿತು ಹೋಗುವರು. ಗಂಗಾವತರಣದ ಉನ್ನತವಾದ ಸ್ಥಲವು ಪ್ರೇಕ್ಷಣೀಯವಾದುದು. ಇದೇ ಸ್ಥಲದಲ್ಲಿ ಗೋರಖನಾಥ ಗುಹೆಯು ನೋಡತಕ್ಕದ್ದಾಗಿದೆ. ಇಲ್ಲಿಂದ ತೋರುವ ನಿಸರ್ಗದೇವಿಯ ಸೃಷ್ಟಿಸೌಂದರ್ಯವು ವರ್ಣನಾತೀತವಾಗಿರುವದು. ಪರ್ವತದ ಕೆಳಭಾಗದಲ್ಲಿ ನಿವೃತ್ತಿನಾಥ ದೇವಾಲಯವಿದೆ. ನಿವೃತ್ತಿನಾಥರೆಂಬ ಸತ್ಪುರುಷರು ಇಲ್ಲಿ ಜೀವಂತ ಸಮಾಧಿಸ್ಥರಾಗಿದ್ದಾರೆ. ಈ ದೇವಸ್ಥಾನದ ಯಾತ್ರೆಯು ಪುಷ್ಯ ಬ|| ೧೧ ರಲ್ಲಿ ಆಗುವದು. ನಾವು ಈ ತ್ರ್ಯಂಬಕೇಶ್ವರಕ್ಕೆ ಬಂದ ಬಳಿಕ ಕುಶಾವರ್ತ ತೀರ್ಥದಲ್ಲಿ ಸ್ನಾನ ಮಾಡಿದೆವು. ಜ್ಯೋತಿರ್ಲಿಂಗದರ್ಶನವು ಗರ್ಭಗುಡಿಯ ಹೊರಗೆ ಆದುದೊಂದು ವಿಷಾದದ ಸಂಗತಿಯಾಗಿದೆ. ತ್ರ್ಯಂಬಕೇಶ್ವರ ಕ್ಷೇತ್ರಯಾತ್ರೆಯನ್ನು ಪೂರೈಸಿಕೊಂಡು ನಾಸಿಕಕ್ಕೆ ಬಂದು ಅಲ್ಲಿಂದ ಮುಂಬಯಿಗೆ ಬಂದೆವು. ಹಿಂದೂಸ್ಥಾನದಲ್ಲಿ ಸುಪ್ರಸಿದ್ಧಗಳಾದ ನಗರಗಳಲ್ಲಿ ಇದೇ ಮೊದಲನೆಯದಾಗಿದೆ. ಮುಂಬಯಿ ನಗರವನ್ನು ನೋಡಿದಬಳಿಕ ಬೇರೆಯಾವ ಪಟ್ಟಣಗಳನ್ನೂ ನೋಡಲಾಗುವದಿಲ್ಲ. ಇಲ್ಲಿ ಮುಖ್ಯವಾಗಿ ನೋಡತಕ್ಕ ಸ್ಥಳಗಳೆಂದರೆ—ಮ್ಯುಝಿಯಮ್, ರಾಣೀಬಾಗ, ವಾಳುಕೇಶ್ವರ ಬಾಬುಲನಾಥ ದೇವಾಲಯ, ಮುಂಬಾದೇವಿ ಮೊದಲಾದ ಸ್ಥಳಗಳು. ವ್ಯವಹಾರದೃಷ್ಟಿಯಿಂದ ಕಾಲಬಾದೇವಿರೋಡ್, ಹಾರ್ನಬಿರೋಡ್ ಇವುಗಳಿಗೆ ತಾಯಿಯಾದ ದಾಣಾ ಬಂದರ ಇವೆಲ್ಲವೂ ಅವಶ್ಯವಾಗಿ ನೋಡತಕ್ಕವುಗಳಾಗಿವೆ. ನಾವು ಮೂರು ದಿವಸ ಮುಂಬಯಿಯಲ್ಲಿದ್ದು ಎಲ್ಲವನ್ನೂ ನೋಡಿಕೊಂಡು ತಾರೀಖು ೭-೧-೧೯೩೪ ರವಿವಾರ ಬಡೋದೆಗೆ ಬಂದೆವು. ಇದು ಗಾಯಕವಾಡ ಸಂಸ್ಥಾನಿಕರ ರಾಜಧಾನಿಯು. ಇಲ್ಲಿ ಮಹಾರಾಜರ ೩ ಅರಮನೆಗಳು ನೋಡತಕ್ಕಂಥವಿರುತ್ತವೆ. ಇಲ್ಲಿ ಸುಪ್ರಸಿದ್ಧ ಕಲಾಭವನವಿದೆ. ಸಂಸ್ಥಾನಿಕರು ಕೈಗಾರಿಕೆಯ ಉದ್ಯೋಗದ ಕಲಾವಿದ್ಯೆಗೆ ಮೊದಲಿನಿಂದಲೂ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಅದಿತ್ಯವಾರವಿದ್ದುದರಿಂದ ನಮಗೆ ನೋಡುವದಾಗಲಿಲ್ಲ. ನಾವು ಬಡೋದೆಯಲ್ಲಿ ಒಂದು ದಿವಸ ವಿಶ್ರಾಂತಿಯನ್ನು ಹೊಂದಿ ಮರುದಿವಸ ಅಲ್ಲಿಂದ ಹೊರಟವರು ತಾ|| ೯-೧-೩೪ ಮಂಗಳವಾರ ಸೂರ್ಯೋದಯಕ್ಕೆ ಉಜ್ಜಯಿನೀ (ಅವಂತಿಕಾ) ಮಹಾಕ್ಷೇತ್ರಕ್ಕೆ ಬಂದೆವು. ಇಲ್ಲಿ ಮಹಾಕಾಲೇಶ್ವರನಾಮಕ ಜ್ಯೋತಿರ್ಲಿಂಗವು ವಿರಾಜಿಸುತ್ತಲಿರುವದು. ನಮ್ಮ ಮಹಾಯಾತ್ರೆಯಲ್ಲಿ ಇದು ೩ ನೆಯ ಜ್ಯೋತಿರ್ಲಿಂಗ ದರ್ಶನವು. ಈ ಕ್ಷೇತ್ರವು ಕ್ಷಿಪ್ರಾನದಿಯ ತೀರದಲ್ಲಿರುವದು. ಶಕಪುರುಷನಾದ ವಿಕ್ರಮಾರ್ಕನ ರಾಜಧಾನಿಯು. ಕವಿಗಳಿಗೆ ಆಶ್ರಯವನ್ನಿತ್ತು ಕವಿಕುಲ ಕಂಠೀರವನಾದ ಕಾಳಿದಾಸನಿಗೆ ಪ್ರಾಣಪದಕನಾದ ಭೋಜರಾಜನು ಆಳಿದುದು ಇದೇ ಪುಣ್ಯಕ್ಷೇತ್ರದಲ್ಲಿ. ಇದು ಈಗ ಗ್ವಾಲೇರಸಂಸ್ಥಾನಕ್ಕೆ ಸೇರಿದೆ. ಸರಕಾರದವರು ಕ್ಷೇತ್ರಸುಧಾರಣೆಯನ್ನು ಚನ್ನಾಗಿಟ್ಟಿರುವರು. ಇಲ್ಲಿ ನೋಡತಕ್ಕ ಸ್ಥಳಗಳು ಮಹಾಕಾಲೇಶ್ವರ (ಜ್ಯೋತಿರ್ಲಿಂಗ) ಅಗಸ್ತ್ಯೇಶ್ವರ, ಕೋಟೇಶ್ವರ, ಕೇದಾರೇಶ್ವರ, ಹರಸಿದ್ಧಿದೇವಿ (ಮಹಾರಾಜಾ ವಿಕ್ರಮಾರ್ಕನ ಕುಲದೇವಿ) ಇವಲ್ಲದೆ ಭರ್ತೃಹರಿಗುಫಾ, ಮಂಗಲನಾಥ, ಸಾಂದೀಪನ ಮುನಿಆಶ್ರಮ (ಬಲರಾಮ-ಕೃಷ್ಣರು ಅಧ್ಯಯನಮಾಡಿದ ಸ್ಥಳ) ಸಿದ್ಧವಟಕ್ಷೇತ್ರ ಇವೆಲ್ಲವುಗಳನ್ನು ನಾವು ನೋಡಿದೆವು. ಇವುಗಳಲ್ಲಿ ಜ್ಯೋತಿರ್ಲಿಂಗವಾದ ಶ್ರೀ ಮಹಾಕಾಲೇಶ್ವರ ದೇವಾಲಯದೊಳಗೆ ಪ್ರವೇಶಿಸಲು ಸನಾತನೀಯರಿಗೆಲ್ಲಾ ಅಧಿಕಾರವಿದೆ. ನಾವು ಕ್ಷಿಪ್ರಾನದಿಯಲ್ಲಿ ಸ್ನಾನಮಾಡಿಕೊಂಡು ಜ್ಯೋತಿರ್ಲಿಂಗಕ್ಕೆ ಅಭಿಷೇಕವನ್ನು ಮಾಡಿದೆವು. ಸಿದ್ಧವಟಕ್ಷೇತ್ರವು ವೀರಶೈವರಿಗೆ ಅತ್ಯಂತ ಪೂಜ್ಯವಾದುದು. ವೀರಶೈವಮತಸಂಸ್ಥಾಪನಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ದಾರುಕಾಚಾರ್ಯರು ವಟಕ್ಷೇತ್ರ ಸಿದ್ಧೇಶ್ವರಲಿಂಗದಿಂದ ಅವತರಿಸಿದ ವಿಷಯವು ಶಿವಾಗಮಗಳಲ್ಲಿರುವದು ಸರಿಯಷ್ಟೆ! ಈ ಆಚಾರ್ಯರು ಅವತರಿಸಿದ ಸಿದ್ಧೇಶ್ವರಲಿಂಗವು ಈ ವಟಕ್ಷೇತ್ರದಲ್ಲಿ ವಿರಾಜಿಸುತ್ತಿರುವದು. ಮೊದಲು ಈ ಆಚಾರ್ಯರ ಸಿಂಹಾಸನವು ಇದೇ ಉಜ್ಜಯಿನೀ ಕ್ಷೇತ್ರದಲ್ಲಿದ್ದು ಸಾವಿರಾರು ವರ್ಷಗಳ ಪೂರ್ವದಲ್ಲಿ ಈ ಪೀಠಾಧೀಶ್ವರರು ಕರ್ನಾಟಕ ಪ್ರಾಂತಕ್ಕೆ ದಯಮಾಡಿಸಿ ಅಲ್ಲಿಯ ರಾಜರ ಪ್ರಾರ್ಥನಾನುಸಾರವಾಗಿ ಅಲ್ಲಿಯೇ ನೆಲಸಿದರು. ಅದು ಈಗ ಬಳ್ಳಾರಿ ಜಿಲ್ಲಾ ಕೂಡಲಗಿ ತಾಲೂಕಿಗೆ ಸೇರಿದೆ. ಅಸ್ತು! ಸಿಂಹಾಸನದ ಚಿಹ್ನೆಗಳನ್ನು ಈ ಉಜ್ಜಯಿನೀಕ್ಷೇತ್ರದಲ್ಲಿ ಈಗ ಗುರುತುಹಿಡಿಯಲು ಸಾಧ್ಯವಿಲ್ಲ. ವಟಕ್ಷೇತ್ರವು ಮಾತ್ರ ಐತಿಹಾಸಿಕಶೋಧನೆಗೆ ಶಿಕ್ಕದ್ದಾಗಿದೆ.

ಈ ಉಜ್ಜಯಿನೀ ಮಹಾಕ್ಷೇತ್ರವು ವಿಶಾಲವಾಗಿರುವದು. ಇಲ್ಲಿಯ ಸ್ಟೇಶನ್ ಸಮೀಪದಲ್ಲಿ ಇಂದೂರ ಮಹಾರಾಣಿಯವರು ಕಟ್ಟಿಸಿದ ಧರ್ಮಶಾಲೆಯು ಯಾತ್ರಿಕರಿಗೆ ಬಹಳ ಅನುಕೂಲವಿರುವದು. ನಾವು ಉಜ್ಜಯಿನೀ ಮುಕ್ಕಾಮಿನಿಂದ ಮೊರಟಕ್ಕೆ ಹೋದೆವು. ಮೊರಟಕ್ಕ ಸ್ಟೇಶನ್ನಿನಿಂದ ಓಂಕಾರೇಶ್ವರಕ್ಕೆ ಹೋಗಬೇಕಾಗುವದು. ಈ ದೇವಾಲಯವು ಈ ಸ್ಟೇಶನ್ನದಿಂದ ೭ ಮೈಲುದೂರದಲ್ಲಿದೆ. ಈ ಓಂಕಾರೇಶ್ವರ ಕ್ಷೇತ್ರವು ನರ್ಮದಾನದಿಯ ತೀರದಲ್ಲಿರುವದು. ನದಿಯ ದಕ್ಷಿಣಭಾಗದಲ್ಲಿ ಓಂಕಾರೇಶ್ವರ ದೇವಾಲಯವೂ ಉತ್ತರಭಾಗದಲ್ಲಿ ಮಾಮಲೇಶ್ವರ ದೇವಾಲಯವೂ ಇರುತ್ತವೆ. ಓಂಕಾರೇಶ್ವರಲಿಂಗವು ಸ್ವಯಂಭೂಲಿಂಗವು. ಈ ಜ್ಯೋತಿರ್ಲಿಂಗದ ಅಭಿಷೇಕಾದಿಗಳಿಗೆ ಸನಾತನೀಯರಿಗೆಲ್ಲ ಅಧಿಕಾರವಿರುವುದು. ನಾವು ಈ ಯಾತ್ರೆಯನ್ನು ಪೂರೈಸಿಕೊಂಡು ಪುನಃ ಉಜ್ಜಯಿನಿಗೆ ಬಂದು ಮರುದಿನ (ತಾ|| ೧೧-೧-೧೯೩೪) ಆಗ್ರಾಕ್ಕೆ ಬಂದೆವು. ಈಗ ಇದುವರೆಗೆ ಆದ ಕ್ಷೇತ್ರ ನಗರಗಳ ಪ್ರೇಕ್ಷಣೀಯಸ್ಥಳಗಳ ವಿಷಯವಾಗಿದೆ. ಮುಂದಿನ ಮಹಾಯಾತ್ರಾಪ್ರವಾಸದ ವಿಷಯವನ್ನು ಇನ್ನೊಂದು ಲೇಖದಲ್ಲಿ ಬರೆಯುತ್ತೇನೆ. ಗೌರೀಶಂಕರ ಕಂಪನಿಯವರು ಯಾತ್ರಿಕರಿಗೆ ಸರ್ವವಿಧದಿಂದಲೂ ಸಹಾಯಕರಾಗಿ ಒಳ್ಳೇ ಅನುಕೂಲತೆಗಳನ್ನುಂಟುಮಾಡಿದ್ದಾರೆ. ಯಾತ್ರಿಕರ ಊಟದ ವ್ಯವಸ್ಥೆ ಹಾಗೂ ಬಿಡದೋಪಚಾರ ಇಳಿದುಕೊಳ್ಳುವ ಸ್ಥಳದ ವ್ಯವಸ್ಥೆ ಮೊದಲಾದವು ಅತ್ಯುತ್ತಮವಾಗಿರುತ್ತವೆ. ಈ ಮಹಾಯಾತ್ರೆಯ ಪ್ರವಾಸವು ಸುಖರೂಪವಾಗಿ ಸಾಗಲು ಗೌರೀಶಂಕರನ ಅನುಗ್ರಹವಾಗಿದೆಯೆಂದು ಧಾರಾಳವಾಗಿ ಹೇಳಬಹುದಾಗಿದೆ.

ವಿರೂಪಾಕ್ಷಯ್ಯ, ನಂದಿಕೇಶ್ವರಮಠ, ಹುಬ್ಬಳ್ಳಿ.

ನೆಲಮಂಗಲ.

ತಾ|| 25-1-1934 ನೆಯ ಗುರುವಾರ ನೆಲಮಂಗಲದ ಟೌನ್‌ನಲ್ಲಿರುವ ಕಾಲಾಧಿಮಠ ಶ್ರೀ ರುದ್ರೇಶ್ವರದೇವಸ್ಥಾನದಲ್ಲಿ ಮಂಟಾಳು ರುದ್ರಶಾಸ್ತ್ರಿಗಳ ಪೌರೋಹಿತ್ಯದಲ್ಲಿ ಮಹಾರುದ್ರಾಭಿಷೇಕವೂ ಶ್ರೀಮತಿ ರಂಗಮ್ಮನಿಂದ ಕಟ್ಟಿಸಲ್ಪಟ್ಟಿರುವ ಮಂಟಪದ ಗೋಪುರದ ಮೇಲೆ ಪಂಚಕಲಶಾರೋಹಣವೂ ನೆರವೇರಿದವು. ಸ್ಥಳ ಪರಸ್ಥಳದ 500 ಜನಗಳಿಗೆ ಅನ್ನಸಂತರ್ಪಣೆಯಾಯಿತು. ಶ್ರೀ ರುದ್ರೇಶ್ವರಸ್ವಾಮಿಯ ಮುಖ್ಯಭಕ್ತರಾದ ಬೆಂಗಳೂರು ಸಿಟಿ ಸರಾಫ್ ಅಂಗಡಿ ಮ|| ಬಿ. ಬಸಪ್ಪನವರು ದಂಡು ಮುನ್ಸಿಪಲ್ ಕೌನ್ಸಿಲರ್ ಆಗಿದ್ದ ಮ|| ಸಿ. ಆರ್. ನಾಗಪ್ಪನವರು ಮೊದಲಾದವರು ಬಂದು ಪೂರ್ಣಶ್ರದ್ಧೆವಹಿಸಿ ಕಾರ್ಯಕ್ರಮಗಳನ್ನು ನಡೆಯಿಸಿದರು. ಪ್ರೋಗ್ರಾಂ ಪ್ರಕಾರ ಸಾಯಂಕಾಲ ನಾಲ್ಕು ಘಂಟೆಗೆ ಶ್ರೀ ರುದ್ರದೇವಸ್ಥಾನದ ನಂದಿಧ್ವಜ ಛತ್ರಚಾಮರಸಮೇತ ವಾದ್ಯದೊಂದಿಗೆ ಸ್ಥಳಪರಸ್ಥಳದ ಪ್ರಮುಖರು ಸಭೆ ಡಿವಿಜನ್ ಆಫೀಸರಾದ ಮ|| ಜಿ. ಬಿ. ಮಲ್ಲಾರಾಧ್ಯರು ಎಂ.ಎ., ಇವರನ್ನು ಎದುರುಗೊಂಡು ದೇವಸ್ಥಾನಕ್ಕೆ ಬರಮಾಡಿಕೊಂಡು ಬಂದು ಶ್ರೀ ಸ್ವಾಮಿಗೆ ಮಹಾಮಂಗಳಾರತಿಯನ್ನು ಅರ್ಪಿಸಿದನಂತರ ಪ್ರಸಾದ ವಿನಿಯೋಗವು ಮಾಡಲ್ಪಟ್ಟಿತು. ಪ್ರೈಮರಿ ಸ್ಕೂಲ್‌ಮಾಸ್ಟರ್ ಮ|| ಹೊನ್ನಪ್ಪನವರಿಂದ ರಚಿತವಾಗಿದ್ದ ಕವಿತೆಯು ಮ|| ಮಲ್ಲಾರಾಧ್ಯರವರಿಗೆ ಅರ್ಪಿಸಲ್ಪಟ್ಟಿತು. ಮ|| ಯಜಮಾನ್ ರುದ್ರಮುನಿಯಪ್ಪನವರು ಮ|| ಧರ್ಮದರ್ಶಿ ಗಂಗಪ್ಪನವರು, ಪೂರ್ವಕಾಲದಿಂದಲೂ ಬಂದಿರುವ ಈ ದೇವಸ್ಥಾನಕ್ಕೆ ಶ್ರೀಮನ್ ಮಹಾರಾಜರವರು ವಿಶೇಷವಾಗಿ ಮಾನ್ಯದಭೂಮಿಯನ್ನು ದಯಪಾಲಿಸಿದ್ದರು. ಈಚೆಗೆ ಮೈಸೂರುಸೀಮೆಯ ಚೀಫ್ ಕಮಿಷನರ್ ಸಾಹೇಬರವರು ಪರೋಪಕಾರದಿಂದ ಸ್ವಲ್ಪ ಮಾನ್ಯಮಾತ್ರ ಉಳಿಸಿದರು. ಮೂರುವರುಷದೊಳಗೆ ಶ್ರೀಮನ್ ದಿವಾನ್ ಸಾಹೇಬರವರಾದ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರವರು ದೇವಸ್ಥಾನಕ್ಕೆ ದಯಮಾಡಿಸಿದಕಾಲದಲ್ಲಿ ಇದರ ಸನಾತನತ್ವವನ್ನು ಪರಾಮರ್ಶಿಸಿ ನಾಲ್ಕು ಎಕರೆ ಜಮೀನನ್ನು ದಯಪಾಲಿಸಿಕೊಟ್ಟಿರುವರು. ಈ ದೇವಸ್ಥಾನಕ್ಕೆ ಬೆಂಗಳೂರುದಂಡು, ತುಮಕೂರು, ತರೀಕೆರೆ, ಭದ್ರಾವತಿ, ಶಿವಮೊಗ್ಗ ಪ್ರಾಂತ್ಯಗಳಲ್ಲೆಲ್ಲಾ ಅನೇಕ ಭಕ್ತಾದಿಗಳು ಇದ್ದಾರೆಂತಲೂ ವಗೈರೆ ಸೂಚಿಸಿದರು. ಅನಂತರ ಆ ಕಾಲಕ್ಕೆ ದಯಮಾಡಿಸಿದ್ದ ಪ್ರಮುಖರ ಫೋಟೋ ತೆಗೆಯಲ್ಪಟ್ಟಿತು. ಅನಂತರ ದೇವಸ್ಥಾನದ ಆವರಣದಲ್ಲಿ ಉದ್ಯಾನವನ ಸ್ಥಾಪನೆಯು ಮ|| ಜಿ. ಬಿ. ಮಲ್ಲಾರಾಧ್ಯರವರಿಂದ ಮಾಡಲ್ಪಟ್ಟಿತು. ಆರೋಗ್ಯಭಾಗ್ಯ, ಜನಾಭಿವೃದ್ಧಿ ಐಕಮತ್ಯವಿಷಯಗಳನ್ನು ಮ|| ಜಿ. ಬಿ. ಮಲ್ಲಾರಾಧ್ಯರು ಮನೋಹರವಾಗಿ ಬೋಧಿಸಿದರು. ಅನಂತರ ಶ್ರೀಮನ್ ಮಹಾರಾಜರವರ ಶ್ರೀಮನ್ ದಿವಾನ್ ಸಾಹೇಬರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಈ ಸಮಾರಂಭವು ಸಾಂಗವಾಗಿ ನಡೆಯುವುದಕ್ಕೆ ತಾಲೂಕು ಅಮಲ್ದಾರ್ ಮ|| ಎಂ. ಶಂಕರಪ್ಪನವರು ಪ್ರೊಬೆಷನರಿ ಅಮಲ್ದಾರ್ ಮ|| ಜಿ. ಕೆ. ರುದ್ರಾರ್ಯರು ಪೂರ್ಣಭಾಗಿಗಳಾಗಿದ್ದರು.

ಬಿ. ಎಸ್. ಶಿವಬಸವಯ್ಯ.

ಚಾಣಕ್ಯನ ಅರ್ಥಶಾಸ್ತ್ರ.

(ಲೇಖಕ:—ಮ|| ಕನ್ನಡಕವಿ ಆಸ್ಥಾನವಿದ್ವಾನ್ ಅನವಟ್ಟಿ ರಾಮರಾಯರಿಂದ)

7 ನೆಯ ಅಧ್ಯಾಯ.

ಮಂತ್ರಿ ಮತ್ತು ಪುರೋಹಿತರ ಉತ್ಪತ್ತಿ ಕ್ರಮಗಳು.

ಮಂತ್ರಿಗಳನ್ನೂ ಪುರೋಹಿತರುಗಳನ್ನೂ ನೇಮಿಸಿಕೊಳ್ಳಬೇಕಾಗಿದ್ದರೆ ಅವರು ಹೇಗಿರಬೇಕೆಂಬುದನ್ನು ಇಲ್ಲಿ ವಿಶದವಾಗಿ ತಿಳಿಸಲಾಗುತ್ತದೆ. ಮಂತ್ರಿಪದವಿಗೆ ಬರತಕ್ಕವನು ಸ್ವದೇಶೀಯನಾಗಿಯೂ ಸದ್ವಂಶಜಾತನಾಗಿಯೂ, ಎಲ್ಲರಲ್ಲಿಯೂ ಬಳಕೆಯುಳ್ಳವನಾಗಿಯೂ, ಕೋವಿದನಾಗಿಯೂ ಮುಂದಿನ ದೃಷ್ಟಿಯುಳ್ಳವನಾಗಿಯೂ ಇರಬೇಕು. ಬುದ್ಧಿವಂತನೂ ಜ್ಞಾಪಕಶಕ್ತಿಯುಳ್ಳವನೂ ಮಧುರಭಾಷಣ, ಚಮತ್ಕಾರ, ಉತ್ಸಾಹ, ಯೋಗ್ಯತೆ, ತಾಳ್ಮೆ, ನಿರ್ಮಲಗುಣ, ಔಪಚಾರಿಕ ಸ್ವಭಾವ ಮುಂತಾದ ಗುಣಗಳಿಗೆ ಆಕರನೂ ಆಗಿರಬೇಕು. ಮತ್ತು ತನ್ನ ಯಜಮಾನನಲ್ಲಿ ವಿಧೇಯನೂ ಭಕ್ತಿಯುಳ್ಳವನೂ ಆಗಿರಬೇಕು. ಅಲ್ಲದೆ ಕಾಯಶಕ್ತಿ, ಆರೋಗ್ಯಭಾಗ್ಯ, ಧೈರ್ಯ ಮುಂತಾದ ಗುಣಗಳಿಂದ ವಿರಾಜಿಸುತ್ತಿರಬೇಕು. ಕಾರ್ಯನಿರ್ವಾಹಮಾಡುವುದರಲ್ಲಿ ಅಲಸಿಕೆ ಮನಶ್ಚಾಂಚಲ್ಯ ವ್ಯಾಮೋಹ ಮುಂತಾದುವುಗಳನ್ನು ದೂರಮಾಡಿರಬೇಕು. ದ್ವೇಷವನ್ನು ಹೆಚ್ಚಿಸುವುದು, ಶತ್ರುತ್ವವನ್ನು ಬೆಳೆಸುವುದು ಮುಂತಾದ ಹೇಯಗುಣಗಳಿಗಂತೂ ಎಡೆಗೊಡಬಾರದು.

ಈ ಗುಣಗಳಲ್ಲಿ ಕೆಲವನ್ನು ಹೊಂದಿ, ಕೆಲವನ್ನು ಹೊಂದದ ಮಂತ್ರಿಯು ಮಧ್ಯಮ ಮತ್ತು ಕನಿಷ್ಠತರಗತಿಗೆ ಸೇರುವನಲ್ಲದೆ ಉತ್ತಮತರಗತಿಗೆ ಸೇರಿದವನಲ್ಲ.

ಹೀಗೆ ಸಂಪೂರ್ಣವಾದ ಗುಣಗಳಿಂದ ವಿರಾಜಿತನಾಗಿರುವನೆಂಬುದು ಕಂಡುಬಂದರೂ, ವಿಶೇಷವಾಗಿ ಜನಗಳಲ್ಲಿ ಪ್ರೀತಿಯನ್ನು ಸಂಪಾದಿಸಿಕೊಂಡಿರುವನೇ ಮತ್ತು ಸ್ವದೇಶದಲ್ಲಿ ಜನ್ಮಧಾರಣಮಾಡಿದ ನಡೆನುಡಿಗಳಲ್ಲಿ ಶುದ್ಧನಾಗಿರುವನೇ ಎಂಬುದನ್ನು ರಾಜನು ಗುಪ್ತಚಾರರಿಂದ ತಿಳಿದುಕೊಳ್ಳಬೇಕು. ಮತ್ತು ಶಿಲ್ಪಿಶಾಸ್ತ್ರದಲ್ಲಿ ಪಾಂಡಿತ್ಯವು ಎಷ್ಟರಮಟ್ಟಿಗಿರುವುದೆಂಬುದನ್ನು ತಿಳಿದುಕೊಂಡಿರಬೇಕು. ಇವುಗಳನ್ನೆಲ್ಲಾ ಇವನು ಅನುಷ್ಠಾನದಲ್ಲಿ ತರಬಲ್ಲನೇ ಎಂಬುದನ್ನು ರಾಜನು ಚೆನ್ನಾಗಿ ಶೋಧಿಸಬೇಕು. ಮತ್ತು ಈತನ ಪ್ರತಿದಿನದ ವರ್ತನೆ ಮುಂತಾದುವುಗಳನ್ನು ಅವನು ನಡೆಸುತ್ತಿರುವ ಕಾರ್ಯಗಳಿಂದ ತಿಳಿಯಬೇಕು. ವಾಕ್ಚಾತುರ್ಯ, ಚಮತ್ಕಾರ, ಅಧಿಕಾರಸ್ಥಾನಕ್ಕೆ ತಕ್ಕ ಬುದ್ಧಿ ಇವುಗಳನ್ನು ಅವನು ಆಡುವ ಮಾತುಗಳಿಂದ ತಿಳಿಯಬೇಕು. ಅವನಿಗೆ ಕಷ್ಟಕಾಲ ಪ್ರಾಪ್ತವಾದಾಗ್ಗೆ ಅವನಲ್ಲಿರುವ ಸಹನೆ, ಉತ್ಸಾಹ, ಧೈರ್ಯಾದಿ ಗುಣಗಳನ್ನು ತಿಳಿದುಕೊಳ್ಳಬೇಕು. ವಿಷಯಾಸಕ್ತಿಯಿಲ್ಲದ ಪರಿಶುದ್ಧವಾದ ಮನೋಧರ್ಮ, ಎಲ್ಲರಲ್ಲಿಯೂ ಸ್ನೇಹ, ಇತರರು ರಾಜದರ್ಶನಕ್ಕೆ ಬಂದಾಗ್ಗೆ ತೋರಿಸುವ ಭಕ್ತಿ, ಇವುಗಳು ಎಷ್ಟರಮಟ್ಟಿಗೆ ಇವೆ ಎಂಬುದನ್ನು ಸೂಕ್ಷ್ಮದೃಷ್ಟಿಯಿಂದ ತಿಳಿಯುತ್ತಿರಬೇಕು. ಸ್ವಾತಂತ್ರ್ಯವನ್ನು ಪಾಲಿಸಿಕೊಳ್ಳುವ ಗುಣವು ಅವನಲ್ಲಿರುವುದೇ ಎಂಬುದನ್ನು ಸ್ನೇಹಿತರಿಂದ ತಿಳಿದುಕೊಳ್ಳಬೇಕು. ಜನಗಳಲ್ಲಿ ವಿಶ್ವಾಸ ಮತ್ತು ಪರೋಪಕಾರಬುದ್ಧಿಗಳಿರುವುದನ್ನು ರಾಜನು ತನ್ನ ಸ್ವಾನುಭವದಿಂದ ತಿಳಿದುಕೊಳ್ಳಬೇಕು.

ರಾಜನು ನಡೆಸುವ ಕಾರ್ಯಗಳು ಒಂದು ವೇಳೆ ಗೋಚರಕ್ಕೆ ಬರಬಹುದು. ಅವುಗಳನ್ನು ಒಂದು ವೇಳೆ ಪರೋಕ್ಷದಲ್ಲಿ ತಿಳಿಯಬಹುದಲ್ಲದೆ, ನಡೆಸುತ್ತಿರುವ ಕಾರ್ಯಗಳಿಂದಲೂ ತಿಳಿದುಕೊಳ್ಳಬೇಕು. ನಡೆಯುವ ಕಾರ್ಯಗಳು ದೃಷ್ಟಿಗೆ ಒಂದುವೇಳೆ ಗೋಚರಿಸಬಹುದು. ಮತ್ತೊಂದುವೇಳೆ ಮತ್ತೊಬ್ಬರಿಂದ ತಿಳಿದುಬಂದುದು ದೃಷ್ಟಿಗೆ ಅಗೋಚರವಾಗಿರಬಹುದು. ಯಾವ ಕಾರ್ಯವು ನಡೆಸಲ್ಪಟ್ಟಿಲ್ಲವೋ, ಯಾವ ಕಾರ್ಯವು ನಡೆಸಲ್ಪಟ್ಟಿರುವುದೋ ಅವುಗಳನ್ನು ಊಹಿಸಿ ತಿಳಿದುಕೊಳ್ಳುವ ಸ್ವಭಾವಶಕ್ತಿಯನ್ನು ಮಂತ್ರಿಯಾದವನು ಹೊಂದಿರಬೇಕು.

ನಡೆಸಲ್ಪಡುತ್ತಿರುವ ಕಾರ್ಯಗಳೆಲ್ಲಾ ಒಂದೇ ಕಾಲದಲ್ಲಿ ಸಂಭವಿಸಿದಂತೆಯೇ ನಾನಾವಿಧ ಮಾರ್ಗಗಳಿಂದ ನಡೆದಂತೆಯೂ, ಕಾಣಬರುತ್ತಿರುವುದುಂಟಷ್ಟೆ! ಹಾಗೆ ನಡೆಸುವ ಕಾರ್ಯಗಳೆಲ್ಲಾ ದೂರಸ್ಥಳದಲ್ಲಿಯೂ, ಬೇರೆ ಬೇರೆ ಸ್ಥಳಗಳ ಸಂಬಂಧವಾದುವಾಗಿಯೂ ಇರುವಂತೆ ಕಾಣಬರುವುದುಂಟಷ್ಟೆ! ಇಂತಹ ಸಂದರ್ಭಗಳಲ್ಲಿ ರಾಜನು ಅದೇ ಕಾಲ, ಅದೇ ಸ್ಥಳದಲ್ಲಿ ಇರುವಂತೆಯೇ ನೋಡಿ, ಕಾರ್ಯಗಳನ್ನು ನೆರವೇರಿಸಿದಂತೆ ಮಂತ್ರಿಯು ಕಾರ್ಯನಿರ್ವಾಹಮಾಡುವ ಶಕ್ತಿವಂತನಾಗಿರಬೇಕು. ಯಾವನ ಸಂಸಾರವೂ, ಯಾವನ ಗುಣಗಳೂ ಬಹಳವಾಗಿ ಕೊಂಡಾಡಲ್ಪಡುವುವೋ, ಯಾವನು ವೇದವೇದಾಂಗಗಳನ್ನು ಓದಿ ಜ್ಞಾನವಂತನಾಗಿರುವನೆಂದು ಹೇಳುವರೋ, ರಾಜ್ಯದಲ್ಲಿ ಮಾನುಷ ಅಮಾನುಷ (ದೈವಿಕ) ವ್ಯಾಪಾರಗಳಿಂದ ಕ್ಷಾಮವು ಪ್ರಾಪ್ತವಾಗಿರುವುದೆಂದು ಅರಿತು, ಅವುಗಳ ನಿವಾರಣೆಮಾಡಲು ಶಕ್ತಿವಂತನೆಂದು ಹೇಳುವರೋ ಅಂಥವನನ್ನೇ ರಾಜನಾದವನು ಮಂತ್ರಿಯನ್ನಾಗಿ ನಿಯಮಿಸಿಕೊಳ್ಳಬೇಕು. ರಾಜನು ತನ್ನ ಚಿಕ್ಕವಯಸ್ಸಿನಲ್ಲಿ ಉಪಾಧ್ಯಾಯನಂತೆಯೂ, ಮಗುವಾಗಿದ್ದಾಗ್ಗೆ ತಂದೆಯಂತೆಯೂ, ಸೇವಕನಾಗಿದ್ದಾಗ್ಗೆ ಯಜಮಾನನಂತೆಯೂ ಇರಲು ಶಕ್ತನಾದ ಪುರೋಹಿತನನ್ನೇ ಆರಿಸಿಟ್ಟುಕೊಂಡು ಅಂಥವನನ್ನೇ ಅನುಸರಿಸಿಕೊಂಡು ರಾಜನು ನಡೆದುಕೊಳ್ಳುತ್ತಿರಬೇಕು.

ಬ್ರಾಹ್ಮಣರಿಂದ ಪರಿಪೋಷಿಸಲ್ಪಟ್ಟು ಒಳ್ಳೇ ಬುದ್ಧಿವಂತರಾದ ಮಂತ್ರಿಗಳಿಂದ ಕೊಂಡಾಡಲ್ಪಟ್ಟು, ಶಾಸ್ತ್ರಗಳಿಗನುಗುಣವಾಗಿ ನಡೆಯುವವನಾದನೋ ಅಂತಹ ಕ್ಷತ್ರಿಯನೇ ಆಯುಧಗಳನ್ನು ಕರದಲ್ಲಿ ಹಿಡಿಯದಿದ್ದರೂ ಪರರಿಂದ ಅಜೇಯನಾಗಿ ಕೈಕೊಂಡ ಕಾರ್ಯಗಳಲ್ಲಿ ವಿಘ್ನವಿಲ್ಲದೆ ಜಯಶಾಲಿಯಾಗಿ ಮೆರೆವನು.

ಸೆಲ್ಫ್ ಇಂಗ್ಲೀಷ್ ಸ್ಟಡಿ.

೮೮೪ ಪೇಜುಗಳ ದೊಡ್ಡ ಪುಸ್ತಕ.

ಕನ್ನಡ ಓದಲು ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಬರೆಯುವದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೆ ಬರೆಯಿರಿ. ಕ್ರಯ ಪುಸ್ತಕ 1 ಕ್ಕೆ ರೂ. 2—0—0.

ವಿಳಾಸ:—ಕೆ. ಎನ್. ಬೆನ್‌ಸನ್ ಎಂಡ್ ಕೊ.,
ಪೊ. ನಂ. 1246. ಮದರಾಸು.

K. N. BENSON & Co.,
[12] P. B. 1246, MADRAS.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 13

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ವಾರಸ್ಯವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 21

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಅಕಾರ್ಡಿಯನ್ ಪೆಟ್ಟಿಗೆ ಇನಾಂ.

ರೋಲ್ಡ್‌ಗೋಲ್ಡ್ ಲೀವರ್ ರಿಸ್ಟ್‌ವಾಚು.

ಈ ಗಡಿಯಾರಗಳು ಬಹು ಪ್ರಖ್ಯಾತಿಯಾದ ಲೀವರ್ ಮೂವ್‌ಮೆಂಟ್ಸುಗಳಿಂದ (ಸ್ವಿಸ್‌ಮೇಡ್) ತಯಾರಿಸಿದೆ. ಇವು ಹಲವಾರು ಘಂಟೆಯನ್ನು ತೋರಿಸುವುವು. ಒಳಗಡೆ ರೇಡಿಯಂ ಇಟ್ಟಿರುವುದು. ಇದರ ಕೇಸು ಭಂಗಾರಕ್ಕೆ ಸಮಯಾಗಿದೆ. ಇದಕ್ಕೆ ೫ ವರುಷ ಖಾತ್ರಿಯಾದ ಗ್ಯಾರಂಟಿ ಕೊಡುವೆವು.

ಈ ವಾರದಲ್ಲಿ ಈ ಗಡಿಯಾರವನ್ನು ಕೊಳ್ಳುವವರಿಗೆ ಒಂದು ಅಕಾರ್ಡಿಯನ್ ಎಂಬ ವಾದ್ಯದ ಪೆಟ್ಟಿಗೆ ಇನಾಂ ಕೊಡುವೆವು. ಕೆಲವು ದಿವಸಗಳವರೆಗೆ ಮಾತ್ರ; ಮತ್ತೆ ಸಿಕ್ಕಲಾರದು.

ಕ್ರಯ ಗಡಿಯಾರ 1 ಕ್ಕೆ ರೂ. 5—14—0.

ವಿಳಾಸ:—ಸಿಟಿ ಮಾರ್ಟ್,
168, ಚೈನಾಬಜಾರ್ ಮದ್ರಾಸು.

[13] THE CITY MART,
168, China Bazaar, MADRAS.

ಮಲೇರಿಯಾ ಜ್ವರಕ್ಕೆ ಮಲೇರಿಯಾನ

ಗುದುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿರಿ? ಇಗೋ ರಾಜಮದ್ದು ಮಲೇರಿಯಾನವೇ ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ಝ್ಯಾನೊ ಬಾಮು.

ಕೆಮ್ಮು, ಶೀತ, ತಲೆನೋವು, ಪಾರ್ಶ್ವನೋವು, ಗಂಟುನೋವು ಸಂದು ಗಂಟು ನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ಮತ್ತೆ ಕಡಿತ, ಗಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿವಾರಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕಮದ್ದುಗಳು, ಹೋಮಿಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುಳಮೇಯುವ ರೋಗ, ದದ್ದು, ತುರಿಸುವ ನಂಜಿ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ನೋಯುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕರಿಣ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 3, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ಕಾಯಿಗಳು ಶಕ್ತಿಹೀನವಾಗಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತ ಹಿಂಸೆಯಲ್ಲವೇ? ಪ್ರಾಢ ದೇಹವಂತನಾಗಿ ಸದಾ ಆನಂದನ ಬೀರುವಂತೆ ಮಾಡುವ ಸಿರಪ್-ಸಾಲಿಸನ ಆತ್ಮಸಂರಕ್ಷಕನಂತೆಯೇ ಯುವಕರಿಗಿರುವದು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರ:— ಮಲೇರಿಯಾನ ಕಂಪೆನಿ,
[22] (ಹಂಪನಕಟ್ಟೆ), 21, ಮಂಗಳೂರು.

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಯೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕ್ಷಯಾಲು ಬರುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಶ್ವೇತಾಲು ಸೆರಗು ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (12)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಛಾಯಾಸಹಿತ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	२ रु.
महानारायणोपनिषत (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಶಿಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಸದ್ಯಃ ಶೀಕಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆಸೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[4] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M.

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಫೆಬ್ರವರಿ ೧೯೩೪ [ಸಂಚಿಕೆ ೪೩

ನೂತನಗ್ರಂಥ! ನೂತನಗ್ರಂಥ!!

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವನಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಹೂಲಿಪಂಚಾಂಗದ ನಿಜಸ್ಥಿತಿಯು.

ಆಸ್ತಿಕ ಮಹಾಶಯರೇ! ಇದೇ ಮಾಘ ಶು|| ೧೫ ಮಂಗಳವಾರ ಚಂದ್ರಗ್ರಹಣವಾದದ್ದು ಎಲ್ಲರಿಗೂ ವಿದಿತವೇ ಅದೆ. ಈ ಗ್ರಹಣದ ವಿಷಯದಲ್ಲಿ ಕೆಲವರು ಈ ಗ್ರಹಣವು ಆಗುವದಿಲ್ಲೆಂದೂ ಕೆಲವರು ಈ ಗ್ರಹಣವು ಉತ್ಪನ್ನವಾದರೂ ನಮಗೆ ಕಾಣುವದಿಲ್ಲೆಂದೂ ತಮ್ಮ ತಮ್ಮ ಪಂಚಾಂಗದಲ್ಲಿ ಪ್ರಕಟಿಸಿದ್ದರು. ಹಿಂದೆ ಕೆಲವು ಸಾರೆ ಇದರಂತೆಯೇ ಕೆಲವು ಪಂಚಾಂಗಕರ್ತರದು ತಪ್ಪು ಆಗಿರುವದು. ಇದರ ಬಗ್ಗೆ ಹಿಂದೆ ಎಷ್ಟೋ ಸಾರೆ ವರ್ತಮಾನಪತ್ರದಲ್ಲಿ ಕೆಲವು ಮಹನೀಯರು ತಿಳಿಸಿರುವರು. ಹೂಲಿಪಂಚಾಂಗದಲ್ಲಿ ಮಾತ್ರ ವ್ಯತ್ಯಸ್ತವಾಗದೆ ಹಿಂದೆ ಸರಿಯಾದಂತೆ ನಿನ್ನಿನ ಗ್ರಹಣವಾದರೂ ನಿಜವಾಗಿ ಎಲ್ಲರಿಗೂ ಗೋಚರವಾಯಿತು. ಇದಕ್ಕೆ ಹೂಲಿಪಂಚಾಂಗ ಕರ್ತರು ಸಿದ್ಧಾಂತ ರೀತ್ಯಾ ಗ್ರಹಸ್ಫುಟಾದಿಗಣಿತದಲ್ಲಿ ವಿಶೇಷ ಲಕ್ಷ್ಯಕೊಟ್ಟದ್ದೇ ಕಾರಣವಾಗಿದೆ. ಇದು ಅವರ ಶ್ರಮಕ್ಕೂ ಪಂಚಾಂಗಕ್ಕೂ ಭೂಷಣವಾಗಿದೆ.

ಬಸವಂತಪ್ಪ ಕೆರೂರು ಸಾ|| ಸವದತ್ತಿ.

ಅಮೇರಿಕೆಯ ಸಂಯುಕ್ತ ಸಂಸ್ಥಾನ ಸರಕಾರದವರು ದರೋಡೆಗಾರರನ್ನು ಪತ್ತೆಮಾಡುವುದಕ್ಕಾಗಿ ಪ್ರತಿವರ್ಷವೂ 40,00,00,00,000 ರೂಪಾಯಿಗಳನ್ನು ವೆಚ್ಚ ಮಾಡುವರಂತೆ!

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಶಂಕುಸ್ಥಾಪನವೂ ಶ್ರೀ ಗುಳೇಮಲ್ಲೇಶ್ವರ ನೂತನಗ್ರಾಮ ಪ್ರವೇಶವೂ.

ಶಿವಮೊಗ್ಗಾ ಡಿ|| ಶಿಕಾರಿಪುರ ತಾಲ್ಲೂಕು ಪೈಕಿ ಗುಳದಳ್ಳಿ ಗ್ರಾಮವು ಬಹು ಹೀನಾವಸ್ಥೆಯಲ್ಲಿರುವದನ್ನು ಕಂಡು ಸದರಿ ಗ್ರಾಮದ ಮ|| ರಾ|| ಮಲ್ಲಪ್ಪಗೌಡ ಸಣ್ಣಗೌಡರ ಇವರು ಕೆಲವು ದಿವಸಗಳಿಂದ ನೂತನ ಗ್ರಾಮವನ್ನು ಮಾಡಬೇಕಾಗಿ ಹಿರೇಕೇರೂರು ತಾಲ್ಲೂಕು ಮಾಸೂರು ಗ್ರಾಮದ ಲೋಕಲ್ ಬೋರ್ಡ ವೈಸ್ ಪ್ರೆಸಿಡೆಂಟ್ ಮ|| ರಾ|| ಸಣ್ಣಬಸಪ್ಪನವರು ಮಾಗಲಿ ಶೆಟ್ರ ಮ|| ರಾ|| ಹೋಳೆಬಸಪ್ಪಲಂಗೋಟೆ ಇವರನ್ನು ಕರಯಿಸಿಕೊಂಡು ಮ|| ರಾ|| ಸಿದ್ಧಪ್ಪಗೌಡ ಪಾಟೀಲ ಶಿವಪ್ಪ ಭೈರನಳ್ಳಿಯವರ, ವೇ|| ಬಸಪ್ಪಯ್ಯ ಮಠದ, ವೇ|| ವೀರಬಸಪ್ಪಯ್ಯ ಕಲ್ಲುಮಠದ ಶಿದ್ದಪ್ಪ ಬಣಜಿಗರ, ಶಿವಪ್ಪ ಪೂಜಾರ, ತಿರಕಪ್ಪ ಕೆರೆಗಾರ, ರಾಮಪ್ಪ ತಿಮಲಾಪುರ, ವೀರಪ್ಪ ತಳವಾರ, ಹುಚ್ಚಪ್ಪ ಕಡೇಮನಿ, ರಂಗಪ್ಪ ಅಜ್ಜಪ್ಪಳವರ ಮುಂತಾದ ಜನರನ್ನು ಕರೆಸಿಕೊಂಡು ಮಲ್ಲಪ್ಪಗೌಡ್ರು ಸಣ್ಣಗೌಡ್ರ ಇವರು ತಮ್ಮ ಗ್ರಾಮದ ಸ್ಥಿತಿಯನ್ನು ತಿಳಿಸಿದರು. ಮಾಸೂರುಶೆಟ್ಟರು ಜನರ ದೇಹಾರೋಗ್ಯವೇಭಾಗ್ಯವೆಂದು ಅನೇಕ ಉದಾಹರಣೆಗಳಿಂದ ಭಾಷಣಮಾಡಿ ಈ ಗ್ರಾಮವನ್ನು ಬಿಟ್ಟು ಬೇರೆ ಸ್ಥಲದಲ್ಲಿದ್ದದ್ದಾದರೆ ಜನರು ಸೌಖ್ಯದಿಂದಿರುವುದಾಗಿ ಹೇಳಿದರು. ಆ ಪ್ರಕಾರ ಗ್ರಾಮದ ಪ್ರಮುಖ ಜನರು ಅನುಮೋದನಕೊಟ್ಟದ್ದರಿಂದ ರಾ|| ಮಲ್ಲಪ್ಪಗೌಡರು ಮೊದಲಾದವರು ಶ್ರಮವಹಿಸಿ ಹೊಸಗ್ರಾಮವನ್ನು ಮಾಡಿಕೊಂಡು ಶ್ರೀಮುಖ ಸಂ|| ರದ ಮಾಘ ಶು|| ೧೧ ಶುಕ್ರವಾರ ಬ್ರಾಹ್ಮೀಮುಹೂರ್ತದಲ್ಲಿ ಲಿಂಗಮುದ್ರೆ ರುದ್ರಮುದ್ರೆ ಶಂಕುಸ್ಥಾಪನವನ್ನು ಮಾಸೂರ ಹಿರೇಮಠದ ವೈದಿಕ ಜ್ಯೋತಿಷಜ್ಞಾನಮಂದಿರ ಸಿದ್ಧಾಂತಿ ವೇ|| ಚನ್ನವೀರಶಾಸ್ತ್ರಿಗಳಿಂದ ಶಾಸ್ತ್ರೋಕ್ತಪ್ರಕಾರ ಮಾಡಿಸಿದರು. ದೇವರನ್ನು ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವ ಭಜನೆಗಳಿಂದ ಹೊರಟು ನೂತನ ಗ್ರಾಮಪ್ರವೇಶಮಾಡಿದರು. ಈ ಕಾರ್ಯಕ್ಕೆ ಗ್ರಾಮದ ಜನರು ಮತ್ತು ನೆಸವಿಗ್ರಾಮದ ರಾ|| ಬಸಪ್ಪ ಬಣಕಾರ, ಭರಮಗೌಡ ಬೈಲಪ್ಪನವರ, ವೇ|| ವೀರಪ್ಪಯ್ಯ ಸಣ್ಣಯ್ಯನವರ, ಮೇದೂರು ರಾ|| ಶಿವಪ್ಪನೇಕಾರ, ಪಿರಿಯಪ್ಪ ಗಂಗವ್ವನವರ, ಮಾಸೂರ ಶೆಟ್ರು ಮುಂತಾದವರು ಬಂದ ಜನರಿಗೆ ಅನ್ನಸಂತರ್ಪಣೆಯನ್ನುಮಾಡಿ ಕಾರ್ಯವನ್ನು ಸಾಂಗಗೊಳಿಸಿ ಮಲ್ಲಪ್ಪಗೌಡ್ರು ಮಾಡಿದ ಸ್ತಿರಕೆಲಸವನ್ನು ಕೊಂಡಾಡುತ್ತ ತಮ್ಮತಮ್ಮ ಗ್ರಾಮಗಳಿಗೆ ತೆರಳಿದರು. ಈ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಮಲ್ಲಪ್ಪಗೌಡರಿಂದ ೧ ರೂಪಾಯಿಯು ಸಮರ್ಪಿಸಲ್ಪಟ್ಟಿತು. ಈ ಗ್ರಾಮಕ್ಕೆ ಪ್ರಮುಖ ಜನರು (ಶ್ರೀಗುಳೇ ಮಲ್ಲೇಶ್ವರಹಳ್ಳಿ) ಎಂಬ ಹೆಸರನ್ನು ಇಟ್ಟಿರುವರು. ಈ ನೂತನ ಗ್ರಾಮಕ್ಕೆ ಶ್ರೀ ಜಗದಾಚಾರ್ಯವರ್ಯರು ಸರ್ವತೋಮುಖವಾಗಿ ಮಂಗಲವನ್ನೀಯಲಿ.

ಗ್ರಾಮವಾಸಿ.

ಸ್ವೀಕಾರ

ರಾಯಚೂರು ಜಿಲ್ಲಾ ಕಾಡ್ಲೂರು ಗ್ರಾಮನಿವಾಸಿಗಳಾದ ಶ್ರೀಮಂತ ಸಿದ್ಧಪ್ಪನವರು ತಮ್ಮ ಅಣ್ಣನವರ ಪುತ್ರ ಚಿ|| ಶಂಕರಣ್ಣನಿಗೆ ಗುಲಬರ್ಗಾ ಡಿ|| ಕಡೇಚೂರುಗ್ರಾಮದ ಮ|| ರಾ|| ಶೆಟ್ಟರ ವೀರಪ್ಪನವರ ಪುತ್ರಿ ಹ|| ಕುಂ|| ಕೋ|| ಚಿ|| ಸೌ|| ಬಸಮ್ಮನನ್ನು ತಂದು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ಕರೇಕಲ್ಲು ಮಾಲೀಪಾಟೀಲ ವಿರಡ್ಡಿಗೌಡರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಪಟ್ಟಣದಲ್ಲಿ ಸುಪ್ರಸಿದ್ಧರಾದ ಮ|| ರಾ|| ಹನುಮಂತಪ್ಪ ಚಿನ್ನಪ್ಪಾ ಬಾಗಲಕೋಟೆ ಇವರು ಇದೇ ತಿಂಗಳು 15 ನೆಯ ತಾರೀಖಿನ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣೆಗಾಗಿ ತೆಗೆಯಿಸಲ್ಪಟ್ಟ 1 ರೂಪಾಯಿಯು ವೇ|| ಚನ್ನಬಸವಯ್ಯನವರು ಗಂಜಿಗಟ್ಟಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರ

ದ್ವಿತೀಯ ವರ್ಷವರ್ಧಂತ್ಯುತ್ಸವ ಸಮಾರಂಭವು.

ಶ್ರೀ ವಿಶ್ವಾರಾಧ್ಯಪೀಠದಲ್ಲಿ ಸದ್ಯಃ ವಿರಾಜಿಸುತ್ತಿರುವ ಶ್ರೀಮದಾಚಾರ್ಯ ಜಗದ್ಗುರು ಪೂಜ್ಯಪಾದರವರು ಜ್ಞಾನಸಿಂಹಾಸನಾರೂಢರಾಗಿ ಈ ಶ್ರೀಮುಖನಾಮ ಸಂವತ್ಸರದ ಮಾಘ ಶುದ್ಧ ದ್ವಾದಶಿ ಸ್ಥಿರವಾರ (೨೭-೧-೧೯೩೪) ಕ್ಕೆ ಎರಡು ವರ್ಷಗಳು ಪೂರ್ತಿಗೊಂಡವು. ಈ ವರ್ಧಂತ್ಯುತ್ಸವನಿಮಿತ್ತವಾಗಿ ಇಂದಿನ ಪ್ರಾತಃಕಾಲದಲ್ಲಿ ಶ್ರೀ ವಿಶ್ವಾರಾಧ್ಯಪೀಠಕ್ಕೆ ಏಕಾದಶವಾರ ಮಹಾರುದ್ರಾಭಿಷೇಕವು ವಿಧ್ಯುಕ್ತರೀತಿಯಿಂದಾಚರಿಸಲ್ಪಟ್ಟಿತು. ಅನಂತರ ಗೌರೀಶಂಕರ ಸ್ಪೆಷಲ್ ಟ್ರೈನಿನಲ್ಲಿ ಬಂದಿರುವ ಗಳತಿಗಿ ಗ್ರಾಮದ ಶ್ರೀಮಂತರಾದ ಶ್ರೀಯುತ ರಾಮನಗೌಡರು ಭಕ್ತಿಪುರಸ್ಸರವಾಗಿ ಮಾಡಿಸಿದ ಮಾಹೇಶ್ವರ ಸಂತರ್ಪಣೆಯಲ್ಲಿ ಷಡ್ರಸೋಪೇತಗಳಾದ ನಾನಾವಿಧ ಭಕ್ಷ್ಯಭೋಜ್ಯಗಳಿಂದೊಡಗೂಡಿದ ದಿವ್ಯಭೋಜನದಿಂದ ಸಕಲಭಕ್ತಮಾಹೇಶ್ವರರೂ ಸಂತೃಪ್ತರಾದರು. ರಾತ್ರಿಯಲ್ಲಿ ಸಂಸ್ಥಾನದ ಎಲ್ಲಾ ಪ್ರದೇಶಗಳಲ್ಲಿಯೂ ದೀಪೋತ್ಸವವು ಹಗಲಿನ ಶೋಭೆಯನ್ನುಂಟುಮಾಡುತ್ತಲಿದ್ದಿತು.

ಸಾಯಂಕಾಲ ೫ ಘಂಟೆಗೆ ವಿದ್ಯುದ್ದೀಪಾವಳಿಯಿಂದ ದೇದೀಪ್ಯಮಾನವಾದ ಚಿತ್ರಕಲಾಪರಿಶೋಭಿತ ಸಭಾಮಂದಿರದ (ದರ್ಬಾರ್ ಹಾಲಿನ) ಲ್ಲಿ ಬ್ರಹ್ಮತೇಜಃಪುಂಜರಾದ ಶ್ರೀ ಜಗದ್ಗುರು ಭಗವತ್ಪಾದರವರ ಸವಾರಿಯು ದಯಮಾಡಿಸಿದೊಡನೆಯೇ ಮಹಾಗುರುಚರಣದರ್ಶನದಿಂದಾನಂದಕಂದಿಲಹೃದಯರಾದ ದರ್ಶನಾರ್ಥಿಗಳು ಗಗನಭೇದಿಜಯಧ್ವನಿಯನ್ನು ಮಾಡುತ್ತಿರುವ ಸಮಯದಲ್ಲಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ನಾನಾವಿಧವಾಗಿ ಅಲಂಕರಿಸಲ್ಪಟ್ಟಿದ್ದ ರಜತಸಿಂಹಾಸನದಲ್ಲಿ ಶಾಂತಮುದ್ರೆಯಿಂದ ಮಂಡಿಸಿದರು. ಅನಂತರ ಶ್ರೀಗಳವರ ಸನ್ನಿಧಿಯಲ್ಲಿ ಸಭೆಯು ೫|| ಗಂಟೆಗೆ ಆರಂಭವಾಯಿತು. ಈ ಸಭೆಯು ಗಳತಿಗಿ, ಶಿರೋಳ, ಕೊಣ್ಣೂರು, ಬಾಗಲಕೋಟೆ, ಹುಬ್ಬಳ್ಳಿ, ಬ್ಯಾಡಗಿ, ಬಸ್ಸಟ್ಟಿ, ಹತ್ತ್ಯಾಳ, ಸಾಂಗಾವ, ಮೊದಲಾದ ಗ್ರಾಮಗಳ ಭಕ್ತಮಾಹೇಶ್ವರರಿಂದ ಪರಿಶೋಭಿತವಾಗಿ ಕರುಣಾಸಾಗರನೂ, ಭಕ್ತವತ್ಸಲನೂ, ಬುಧಗಣಪರಿವೃತನೂ ಆದ ಸಾಕ್ಷಾತ್ ಪರಶಿವನ ಸಭೆಯಂತೆ ಮೆರೆಯುತ್ತಲಿದ್ದಿತು.

ಆದಿಯಲ್ಲಿ ಗೌರೀಶಂಕರ ಸ್ಪೆಷಲ್ ಟ್ರೈನಿನ ಮೇನೇಜರಾದ ಶ್ರೀಯುತ ಶಿರೂರು ಮಾಸ್ಟರ್ ಗಂಗಾಧರಪ್ಪನವರು ದರ್ಬಾರಿನ ಫೋಟೋ ತೆಗೆದರು. ಅನಂತರ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳ ಮಂಗಲಾಚರಣದಿಂದ ಸಭಾಕಾರ್ಯವಾರಂಭವಾಯಿತು. ಮೊದಲು ಶ್ರೀ ಗೊಬ್ಬೂರು ವೃಷಭಲಿಂಗ ಶಿವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ ಶ್ರೀ ಜಗದ್ಗುರು ಗುಣವರ್ಣನಾತ್ಮಕವಾದ ಪದವನ್ನು ಸಭಿಕರು ಮುಗ್ಧರಾಗುವಂತೆ ಬಹು ಮನೋಹರಸ್ವರದಿಂದ ಹಾಡಿದರು. ಅನಂತರ ಶ್ರೀ ಬೆಂಗಳೂರು ಶಿವಕುಮಾರಸ್ವಾಮಿಗಳು. ಶ್ರೀ ಜಗದ್ಗುರು ಪಂಚಾಚಾರ್ಯ ಭಗವತ್ಪೂಜ್ಯಪಾದರು ಪ್ರತಿಯುಗದಲ್ಲಿ ಪಂಚಲಿಂಗಗಳಿಂದಾವಿರ್ಭೂತರಾದರೆಂಬ ವಿಷಯವನ್ನು ವರ್ಣಿಸಿ ತಮ್ಮಿಂದ ರಚಿಸಲ್ಪಟ್ಟ ಈ ಕೆಳಗಿನ ಶ್ಲೋಕಗಳನ್ನು ಪಠಿಸಿದರು.

ಕಾಶೀಧಾಮವಿರಾಜಮಾನಮನಘಂ ವಿಶ್ವಾಭಿರಾಮಂ ಪರಂ | ವಿಜ್ಞಾನೈಕನಿದಾನಮದ್ಭುತಚರಿತ್ರಾಯತ್ತಭೂಪವ್ರಜಂ || ವಿಶ್ವಾರಾಧ್ಯಮಹಾಗುರೋಃಸ್ವನುಹಿತಂ ಪೀಠಂ ತಪೋದೀಪರ್ಯ | ದೀಪ್ಯೋ ಯೋಗಿವರೋ ಜಗದ್ಗುರುರಸೌ ಪಂಚಾಕ್ಷರೋ ರಾಜತೇ ||೧||

ಪ್ರಜ್ಞಾನಿರ್ಜಿತಗೀಷ್ಪತಿಂ ಗುರುವರಂ ಕಾರುಣ್ಯವಾರಾಂನಿಧಿಂ | ಶಿಷ್ಯಾನುಗ್ರಹಕಾರ್ಯಸಕ್ತವಿಮಲಸ್ವಾಂತಂ ವಿಮುಕ್ತೈಷಣಂ || ಪಂಚಾಚಾರ್ಯಕಲಾಂಚಿತಂ ಬುಧನುತಂ ಪಂಚಾಕ್ಷರಂ ಯೋಗಿನಂ | ವಂದೇಹಂ ದೃಢಭಕ್ತಿತೋಽನವರತಂ ಸುಜ್ಞಾನಪೀಠಾಧಿಪಂ ||೨||

ಯೇನಾಚಾರ್ಯಹರೀಶ್ವರೇಣ ಗುರುಣಾ ಯೋಗಪ್ರಪೂತಾತ್ಮನಾ | ಪೀಠಂ ಜ್ಞಾನಪದಾಂಕಿತಂ ಭುವಿ ಪುರಾ ಪ್ರಖ್ಯಾತಮಾವಿಷ್ಕೃತಂ || ಭೂಯೋ ಯೋಗಿವರಸ್ಯ ಏವ ಜನತೋದ್ಧಾರೈಕಚಿಂತಾಪರಃ | ಶ್ರೀ ಪಂಚಾಕ್ಷರಯೋಗಿರೂಪಮಗನುತ್ತೀಪೀಠೋತ್ತಮೇ ಜ್ಞಾನದೇ ||೩||

ಆಚಾರ್ಯಪ್ರವರಂ ಪ್ರಶಾಂತಮನಸಂ ವಿಧ್ವಸ್ತಷಡ್ವರ್ಗಕಂ | ಗಂಗಾಪೂರಪವಿತ್ರಚಾರುಚರಿತಂ ಶೈವಾಗಮಾರ್ಥಾರ್ಕರಂ || ಶ್ರೀಮದ್ವಿಶ್ವಗುರುಂ ಜಿತಾಕ್ಷವಲಯಂ ಪಂಚಾಕ್ಷರಂ ಯೋಗಿನಂ | ಧ್ಯಾತ್ವಾಪ್ನೋತಿ ನರಸ್ಸುಖಂ ಭುವಿ ಗುರುಃ ಸರ್ವಾರ್ಥದಃ ಶ್ರೂಯತೇ ||೪||

ಸೂರ್ಯೇಹಾಭ್ಯುದಿತೇ ವಿನಶ್ಯತಿ ಬಹಿರ್ವ್ಯಾಪ್ತಂ ತಮಃ ಕೇವಲಂ | ತೇಜಃಪುಂಜಮಯೇ ಜಗದ್ಗುರುವರೇ ಪಂಚಾಕ್ಷರೇ ಭಾಸ್ಕರೇ || ಅಜ್ಞಾನಾಂಧತಮೋ ನಿವಾರಣಪಟೌ ಭಾಸತ್ಯನಸ್ತಂಗತೇ | ಬಾಹ್ಯಾಭ್ಯಂತರಸಂಸ್ಥಿತಂ ದೃಢತಮೋ ನಶ್ಯತ್ಯಹೋ ವಿಶ್ವತಃ ||೫||

ವಿಜಯತು ವರವಿಶ್ವಾರಾಧ್ಯಪೀಠಾಧಿನಾಥೋ |
ವಿಜಯತು ಜಿತಮಾಯೋ ಧೂತಪಾಪೌಘದೇಹಃ ||
ವಿಜಯತು ಗುರುವರ್ಯಃ ಪೂಜ್ಯಪಂಚಾಕ್ಷರೋಽಸೌ |
ವಿಜಯತು ಗುರುವರ್ಧಂತ್ಯುತ್ಸವಶ್ಚೇಹ ಲೋಕೇ ||೬||

ಈ ಕವಿತಾಪಾಠವಾದಮೇಲೆ ಶ್ರೀ ಮುದೇನೂರು ವಾಗೀಶಶಿವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟಿರುವ ಈ ಕೆಳಗಿನ ಪದ್ಯಗಳನ್ನು ಪಠಿಸಿದರು.

ಗುರುವೆ ಸದ್ಗುರುವೆ ಚಿದ್ಗುರುವೆ ಆನಂದಮಯ |
ಗುರುವೆ ಜಂಗಮಗುರುವೆ ಯತಿಗುರುವೆ ಕ್ಷಿತಿಗುರುವೆ |
ವರವೀರಶೈವಾದ್ಯಗುರುವೆ ಪಟ್ಟಸ್ಥಲಗುರುವೆ ಸನ್ನಿರಾಭಾರಿ ಗುರುವೆ || ಪರಮಪಂಚಕರಮುಹಂತರ ಗುರುವೆ ವರ್ಣಿಗಳ | ಗುರುವೆ ಚತುರಾಶ್ರಮಸ್ಥಿರ ಗುರುವೆ ಭೂಪಾಲ | ಗುರುವೆ ಸುಜ್ಞಾನಪೀಠೇಶ ಪಂಚಾಕ್ಷರ ಜಗದ್ಗುರುವೇ ಪಾಲಿಸೆಮ್ಮಂ ||೧||

ಶ್ರೀಪಂಚಾಕ್ಷರಗುರುವರ | ತಾಪತ್ರಯದೂರ ಶಾಂತಿಗಾಗಾರ ಲಸ || ದ್ರೂಪ ಶ್ರೀವಿಶ್ವಾರಾ | ಧ್ಯಾಪರಪರಮಾವತಾರ ಪೊರೆಯೆನವರತಂ ||೨||

ಶಿಷ್ಟನೆ ಶಮದಮಗುಣಪರಿ | ಪುಷ್ಟನೆ ಗೀರ್ವಾಣವಾಣೀತುಷ್ಟನೆ ಮಹಿಮಾ || ವಿಷ್ಟನೆ ವಿಶ್ವಾರಾಧ್ಯಮ | ಹೇಷ್ಟನೆ ಪಂಚಾಕ್ಷರಾಖ್ಯಯೋಗಿಯೆ ಪೊರೆಯೈ ||೩||

ಪಂಚಾಕ್ಷರಗುರುವರ್ಯಂ | ಸಂಚಿತಕರ್ಮಂಗಳಳಿ ಪುಣ್ಯೋದಯಮಂ || ವಂಚನೆಯಿಲ್ಲದಲೆಸಗುತ | ಪಂಚಾಕ್ಷರಮಂತ್ರರೂಪವಾಂತುರೆ ಮೆರೆವಂ ||೪||

ಸುಲಭಂ ನಿಮ್ಮಡಿಸೇವೆಯು | ಫಲಮುಂ ಸುರಸೇವ್ಯಕಲ್ಪತರುಸಂಭವಮೈ || ಕೆಲವಂ ಸೇವಿಪುದೇತಕೆ | ಗೆಲವಿನ ನಿಮ್ಮಡಿಗಳಾವಗಂ ರಾಜಿಸಿರಲ್ ||೫||

ಈ ಕವಿತಾಪಠನವಾದನಂತರ ಸದರಿ ಮುದೇನೂರು ಶ್ರೀಗಳು ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠದ ಚರಿತ್ರೆಯನ್ನು ಸಭಿಕರಿಗೆ ಸಂಕ್ಷೇಪವಾಗಿ ತಿಳಿಸಿದರು. ಅನಂತರ ವೇ|| ಶಿರೋಳದ ಪಂಚಾಕ್ಷರಶಾಸ್ತ್ರಿಗಳು ಶ್ರೀ ಜಗದ್ಗುರು ವರ್ಧಂತ್ಯುತ್ಸವ ವಿಷಯದಲ್ಲಿ ಅತಿ ಸುಲಲಿತವಾಣಿಯಿಂದ ವ್ಯಾಖ್ಯಾನವನ್ನು ಮಾಡಿದರು. ಇವರ ಭಾಷಣಶೈಲಿಯೂ, ವಾಗ್ಝರಿಯೂ, ಪದಲಾಲಿತ್ಯವೂ, ಸಭಿಕರನ್ನು ಆನಂದಸಾಗರದಲ್ಲಿ ಮುಳುಗಿಸಿಬಿಟ್ಟಿದ್ದಿತು. ಈಶಾಸ್ತ್ರಿಗಳವರ ಭಾಷಣದಿಂದ ತಮಗುಂಟಾದ ಆನಂದವನ್ನು ಸಭಿಕರು ಆಚಾರ್ಯ ಜಯಧ್ವನಿಪುರಸ್ಸರವಾಗಿ ಕರತಾಡನಗಳಿಂದ ವ್ಯಕ್ತಗೊಳಿಸುತ್ತಲಿದ್ದರು. ಅನಂತರ ಶ್ರೀ ಮುನೇನೂರು ವಾಗೀಶ ಶಿವಾಚಾರ್ಯರು ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠದ ಪ್ರಾಚೀನಚರಿತ್ರೆಯ ವಿಷಯದಲ್ಲಿ ಅನಂತ ಪ್ರಮಾಣಪೂರ್ವಕವಾಗಿ ಗಂಭೀರಭಾಷಣವನ್ನು ಮಾಡಿದರು. ಇವರ ಭಾಷಣದಿಂದ ಸಭಿಕರ ಮನೋಗತವಾದ ಗುರುಭಕ್ತಿಯು ಮತ್ತಿಷ್ಟು ದೃಢಗೊಳಿಸಲ್ಪಟ್ಟಿತು. ಅನಂತರ ಪಂ|| ಮರಿಗುದ್ದಿ ಶಂಕರಶಾಸ್ತ್ರಿಗಳು ವೀರಶೈವ ಧರ್ಮದ ವಿಷಯದಲ್ಲಿ ತಮ್ಮ ಗಂಭೀರವಾಣಿಯಿಂದ ಹಾಸ್ಯರಸಮಿಶ್ರಿತವಾದ ಮಧುರ ಭಾಷಣವನ್ನು ಮಾಡಿದರು. ಅನಂತರ ಶ್ರೀ ಗೊಬ್ಬೂರು ವೃಷಭಲಿಂಗ ಶಿವಾಚಾರ್ಯರು ವೀರಶೈವಧರ್ಮಸ್ವರೂಪವಿಷಯವಾಗಿ ಶಾಸ್ತ್ರೀಯ ಪ್ರಮಾಣಗಳನ್ನುದಹರಿಸುತ್ತ ಅತಿ ಹೃದಯಂಗಮವಾದ ಭಾಷಣವನ್ನು ಮಾಡಿದರು. ಆ ಮೇಲೆ ಶ್ರೀಯುತ ಜಿ. ಎ. ಗಂಗಾಧರಪ್ಪನವರು ಶಿರೂರು ಇವರು ಲೌಕಿಕೋದಾಹರಣಪುರಸ್ಸರವಾಗಿ ವೀರಶೈವ ಸಮಾಜೋದ್ಧಾರ ಪ್ರೇಮಸೂಚಕವಾದ ಭಾಷಣವನ್ನು ಮಾಡಿದರು. ಅನಂತರ ವೇ|| ಪಂಚಾಕ್ಷರಶಾಸ್ತ್ರಿಗಳವರು ವೀರಶೈವಮತಸುಧಾರಣೆಯಲ್ಲುಂಟಾಗುವ ಸಾಧಕಬಾಧಕಗಳನ್ನು ವಿಚಾರಪೂರ್ವಕವಾಗಿ ಪ್ರತಿಪಾದಿಸಿದರು. ಅನಂತರ ವೇ|| ಪಂ|| ವೀರಭದ್ರಶಾಸ್ತ್ರಿಗಳವರು ಗುರುಲಕ್ಷಣ ವಿಚಾರವೆಂಬ ವಿಷಯವನ್ನು ಕುರಿತು ಅನಂತಪ್ರಮಾಣಪುರಸ್ಸರವಾಗಿ ಪಾಂಡಿತ್ಯಪೂರ್ಣವಾದ ಗಂಭೀರಭಾಷಣವನ್ನು ಮಾಡಿ ಸಭಿಕರನ್ನು ಗುರುಭಕ್ತಿಸಾಗರದಲ್ಲಿ ವಿಲೀನರನ್ನಾಗಿ ಮಾಡಿದರು. ಕಡೆಯಲ್ಲಿ ವೇ|| ಪಂಚಾಕ್ಷರ ಶಾಸ್ತ್ರಿಗಳು ಶ್ರೀ ಜಗದ್ಗುರು ವಿಶ್ವಾರಾಧ್ಯರ ಅಪಾರಮಹಿಮೆಯನ್ನು ಕೊಂಡಾಡಿ ಈ ವರ್ಧಂತ್ಯುತ್ಸವ ಸಮಾರಂಭದಲ್ಲಿ ಶ್ರೀ ಜಗದ್ಗುರು ಪೂಜ್ಯಪಾದರವರ ಸನ್ನಿಧಿಗೆ ಭಕ್ತಿಪುರಸ್ಸರವಾಗಿ ಭಕ್ತಮಾಹೇಶ್ವರರಿಂದೊಪ್ಪಿಸಲ್ಪಟ್ಟ ಕಾಣಿಕೆಯ ವಿವರವನ್ನು ಸಭಿಕರಿಗೆ ಅರುಹಿದರು.

ಕಾಣಿಕೆಯವಿವರ.

ಕೊಣ್ಣೂರು ಸಂಸ್ಥಾನದ ದೇಶಾಯಿಣಿಯರಾದ ಶ್ರೀಮತಿ ಸೋಮಾಬಾಯಿಯವರು ಮಹಾಸನ್ನಿಧಿಗೆ ತಮ್ಮ ಸ್ವಂತ ಆಸ್ತಿಯಲ್ಲಿಯ ಇಪ್ಪತ್ತು ಎಕರೆ ಭೂಮಿಯನ್ನು ಅರ್ಪಿಸಿದರು. ಅಲ್ಲದೆ ಪ್ರಯಾಗದಲ್ಲಿರುವ ಶಾಖಾಮಠಕ್ಕೆ ಆರುನೂರು ರೂಪಾಯಿಗಳ ಬೆಲೆಬಾಳುವ ಮನೆಯನ್ನು ದಾನವಾಗಿ ಅರ್ಪಿಸಿದರು. ಬ್ಯಾಡಗಿಯ ಪ್ರಸಿದ್ಧ ಶ್ರೀಮಂತರಾದ ಶ್ರೀಯುತ ಮುರಿಗಪ್ಪಶೆಟ್ಟರ ಮಾತೃಶ್ರೀಯವರು ಮೂರು ತೊಲೆ ಮೂರಾಣೆ ತೂಕವುಳ್ಳ ಬಂಗಾರದ ಅರ್ಘ್ಯಪಾತ್ರೆಯನ್ನರ್ಪಿಸಿದರು. ಹುಬ್ಬಳ್ಳಿ ನಂದಿಕೇಶ್ವರ ಮಠದ ವೇ|| ವಿರೂಪಾಕ್ಷಯ್ಯನವರು ಬೆಳ್ಳಿಯ ಭೋಜನಪಾತ್ರೆಯನ್ನೂ ಬಟ್ಟಲನ್ನೂ ಅರ್ಪಿಸಿದರು. ಶಿರೋಳ ಬೃಹನ್ಮಠದ ವೇ|| ಪಂಚಾಕ್ಷರ ಶಾಸ್ತ್ರಿಗಳು ಬೆಳ್ಳಿಯ ತಂಬಿಗೆ ತಾಲಿಗಳನ್ನರ್ಪಿಸಿದರು. ಶಿರೋಳದ ಶ್ರೀಯುತ ಪ್ರಭಣ್ಣನವರು ಬೆಳ್ಳಿಯ ಧಾರಾಪಾತ್ರೆ ಬೆಳ್ಳಿಯ ಗಂಟೆಗಳನ್ನರ್ಪಿಸಿದರು. ಕೊಣ್ಣೂರು ಶ್ರೀಮತಿ ಸೋಮಾಬಾಯಿದೇಸಾಯಿನಿಯವರು ೧೦೧ ರೂಪಾಯಿಗಳನ್ನರ್ಪಿಸಿದರು. ಶಿರೂರು ಮಾಸ್ಟರ್ ಶ್ರೀಯುತ ಗಂಗಾಧರಪ್ಪನವರು ೨೦ ತೊಲೆಯ ಬೆಳ್ಳಿಯ ಕರಕಮಲವನ್ನರ್ಪಿಸಿದರು. ಈ ಕಾಣಿಕೆಗಳ ಅರ್ಪಣವಾದನಂತರ ವೇ|| ಪಂಚಾಕ್ಷರಶಾಸ್ತ್ರಿಗಳವರ ಸಭಾಸಮಾಪ್ತಿಸೂಚಕ ಭಾಷಣದೊಂದಿಗೆ ಸಭೆಯು ಸಮಾಪ್ತಿಗೊಂಡಿತು. ಈ ಸಭೆಯ ಕಾರ್ಯಕ್ರಮಗಳನ್ನು ಚಿಕ್ಕಮಣ್ಣೂರು ಶ್ರೀ ಗುರುದೇವಶಿವಾಚಾರ್ಯರು ಮಧ್ಯಮಧ್ಯದಲ್ಲಿ ಸೂಚಿಸುತ್ತಿದ್ದರು. ಕಡೆಗೆ ಮಂಗಲಾರತಿ ಮಂತ್ರಪುಷ್ಪಗಳಾದನಂತರ ಶ್ರೀ ಜಗದ್ಗುರು ಭಗವತ್ಪಾದರವರ ಪ್ರಸಾದವನ್ನು ಸಭಿಕರಿಗೆ ಹಂಚಿ ರಾತ್ರಿ ೧೦||ಘಂಟೆಗೆ ಶ್ರೀ ಜಗದ್ಗುರು ಪಂಚಾಚಾರ್ಯ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಪುನಃ ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠಕ್ಕೆ ಮಂಗಲಾರತಿ ಮಂತ್ರಪುಷ್ಪಗಳನ್ನು ಮಾಡಿ ಪ್ರಸಾದವನ್ನು ಸ್ವೀಕರಿಸಿ ಸಕಲರೂ ಸ್ವಸ್ಥಾನಗಾಮಿಗಳಾದರು.

ಸನಾತನಧರ್ಮಾಭಿಮಾನಿಗಳಲ್ಲಿ ವಿನಂತಿ.

(ಮದರಾಸಿನಲ್ಲಿ ನೂತನವಾಗಿ ಹೊರಟಿರುವ 'ಧರ್ಮರಾಜ್ಯ' ಎಂಬ ಇಂಗ್ಲೀಷ್ ಪತ್ರಿಕೆಯಲ್ಲಿ ಪ್ರಕಟವಾದ ಅನುವಾದ).

ರಾಜಕೀಯ ತತ್ವಗಳಲ್ಲಿ ಜನಗಳ ಮನಸ್ಸಿನಲ್ಲಿ ಒಬ್ಬರಿಗೊಬ್ಬರಿಗೆ ಭೇದಗಳಿದ್ದರೂ, 'ಕಾಂಗ್ರೆಸ್'

ಸಂಸ್ಥೆಯು ಇಂದಿನ ಉನ್ನತಸ್ಥಿತಿಯನ್ನು ಪಡೆಯುವದಕ್ಕೆ ನಮ್ಮ ಪೂರ್ವಜರ ಮತ್ತು ನಮ್ಮ ಪ್ರಯತ್ನವಿಶೇಷಗಳೇ ಮುಖ್ಯ ಕಾರಣಗಳಾಗಿರುತ್ತವೆ. ಈ ಸಂಸ್ಥೆಯ ಮೂಲಸಂಚಾಲಕರು ಮತಸಂಬಂಧವಾದ ವಿಷಯಗಳಲ್ಲಿ ಪ್ರವೇಶಮಾಡುವುದಿಲ್ಲವೆಂದೂ, ಕೇವಲ ರಾಜಕೀಯವಿಷಯಗಳಲ್ಲಿ ಮಾತ್ರವೇ ಪ್ರವೇಶಿಸುವೆವೆಂದೂ ಸ್ಪಷ್ಟವಾಗಿ ವಚನವಿತ್ತಿದ್ದುದರಿಂದ ಈ ಸಂಸ್ಥೆಯು ಇಷ್ಟು ಉನ್ನತಸ್ಥಿತಿಗೆ ಬರಲವಕಾಶವಾಯಿತು.

ಈಗಲಾದರೋ ಅನೇಕ ಕಾಂಗ್ರೆಸ್‌ಜನರು ಈ ತತ್ವಗಳನ್ನು ಬಿಟ್ಟು ಮತಸಂಬಂಧವಾದ ವಿಷಯಗಳಲ್ಲಿ ಪ್ರವೇಶಮಾಡಿ ಕಾಂಗ್ರೆಸ್ಸಿನ ಧ್ಯೇಯವನ್ನೇ ವಿಭಾರಿ ವರ್ತಿಸುತ್ತಿರುವರು. ಆದುದರಿಂದ ಸನಾತನಿಗಳಾದ ನಾವು ಯಾವುದೇ ಪಕ್ಷದ ಬಲಾಬಲವನ್ನು ಲಕ್ಷಿಸದೆ ಧೈರ್ಯದಿಂದ ಮೇಲ್ಕಂಡ ವಿಷಯವನ್ನು ಬಹಿರಂಗವಾಗಿ ಪ್ರತಿಪಾದಿಸಬೇಕಾಗಿದೆ. ಆದುದರಿಂದ ಈ ಕಾಂಗ್ರೆಸ್‌ಸಂಸ್ಥೆಗಳ ಮತಸಂಬಂಧವಾದ ಚಳವಳಿಗಳಲ್ಲಿ ಭಾಗವನ್ನು ವಹಿಸದೆ, ಆ ಚಳವಳಿಗಳಿಗೆ ವಿರುದ್ಧವಾದ ಚಳವಳಿಯನ್ನು ಹೂಡಿ ನಮ್ಮ ಪಕ್ಷವನ್ನು ಸಾಧಿಸಬೇಕಾದದ್ದು ಸನಾತನಿಗಳಾದ ನಮ್ಮ ಕರ್ತವ್ಯವಾಗಿರುವುದು. ನಮ್ಮ ಪ್ರತಿಪಕ್ಷಿಗಳು ಬಲಿಷ್ಠರಾಗಿರುವರೆಂದು ತಿಳಿದು ನಾವು ಈ ನಮ್ಮ ಕರ್ತವ್ಯವನ್ನು ನಡೆಯಿಸದೆ ಹೋಗುವುದಾದರೆ, ನಾವು ಆತ್ಮಘಾತುಕರಾಗುವೆವಲ್ಲದೆ ಈ ರೀತಿ ನಾವು ಸುಮ್ಮನಿದ್ದರೆ ಮುಂದಿನ ಜನಾಂಗದ ನಿಂದೆಗೆ ಅವಕಾಶಕೊಟ್ಟಂತಾಗುವುದು. ಇದಕ್ಕಾಗಿ ನಾವು ಒಂದು ಬಲವಾದ ಸಂಸ್ಥೆಯನ್ನು ನಿರ್ಮಿಸಬೇಕು. ಇದಕ್ಕೆ ಕೆಲಸ ಮಾಡತಕ್ಕ ಜನರೂ ವಿಶೇಷದ್ರವ್ಯವೂ ಬೇಕು. ಅದರಲ್ಲಿಯೂ 21-12-33 ನೇ ತಾರೀಖಿನ ದಿವಸ ಗಾಂಧಿಯವರು ಮದರಾಸಿನ ವಿಕ್ಟೋರಿಯ ಥಿಯೇಟರಿನಲ್ಲಿ ವಿದ್ಯಾರ್ಥಿಗಳ ಸಭೆಯಲ್ಲಿ ಮಾಡಿದ ಭಾಷಣದ ದೃಷ್ಟಿಯಿಂದ ನೋಡಿದರೆ ನಮ್ಮ ಕಾರ್ಯಸಾಧನೆಗಾಗಿ ಹೆಚ್ಚು ಪ್ರಯತ್ನವನ್ನೇ ಮಾಡಬೇಕಾಗಿದೆ. ಗಾಂಧಿಯವರ ಭಾಷಣದ ಸಾರಾಂಶವಿದು—

'ಶಾಸ್ತ್ರಗಳನ್ನು ಓದಿರುವುದಾಗಿ ಹೇಳಿಕೊಳ್ಳುವ ಪುರಾತನ ಜನರ ಮಾತನ್ನು ನೀವು ಲಕ್ಷಿಸಬೇಡಿರಿ. ಅವರು ಜನಸಾಮಾನ್ಯದ ಪ್ರತಿನಿಧಿಗಳಲ್ಲ. ಮತ್ತು ಅವರು ನಾನು ತಿಳಿದುಕೊಂಡಿರುವಂತೆ ಶಾಸ್ತ್ರಗಳ ಅರ್ಥವನ್ನು ತಿಳಿದುಕೊಂಡಿಲ್ಲ. ಈ ವಿಷಯದಲ್ಲಿ ನಾನು ತಪ್ಪಿರಬಹುದು, ಆದಾಗ್ಯೂ ಜನಸಾಮಾನ್ಯದ ಮೇಲೆ ಪರಿಣಾಮವನ್ನುಂಟುಮಾಡತಕ್ಕ ಜನರು ಕೆಲವರಿರುವರು. ನೀವೂ ಸಹ ಜನಸಾಮಾನ್ಯದಮೇಲೆ ಪರಿಣಾಮವನ್ನುಂಟುಮಾಡಬಹುದು. ಹೀಗೆ ಜನಸಾಮಾನ್ಯಕ್ಕಾಗಿ ಕೆಲಸಮಾಡತಕ್ಕವರ ತತ್ವವೇ ಕಡೆಯಲ್ಲಿ ಜಯಹೊಂದುವುದೆಂದು ನಾನು ವಚನಕೊಡುವೆನು. ಜನಸಾಮಾನ್ಯವು ಎಂದಿಗೂ ಚರ್ಚೆಮಾಡುವುದಿಲ್ಲ. ಬಹುಕಾಲದಿಂದ ನಾವು ಒಪ್ಪಿಕೊಂಡಿದ್ದ ಅಸ್ಪೃಶ್ಯತೆಯು ನ್ಯಾಯವಲ್ಲವೆಂದೂ ಹೇಳುವವರು ಯಾರೆಂಬುದನ್ನು ಮಾತ್ರ ಅವರು ತಿಳಿಯಲಪೇಕ್ಷಿಸುವರು. ಹೀಗೆ ಅಸ್ಪೃಶ್ಯತೆಯು ನ್ಯಾಯವಲ್ಲವೆಂದು ಹೇಳುವುದಕ್ಕೆ ತಕ್ಕ ಅಧಿಕಾರಹೊಂದಿರುವ ಜನರ ಮಾತಿಗೆ ಅವರು ಕಿವಿಗೊಡುವರು. ಇಲ್ಲದಿದ್ದರೆ ಇಲ್ಲ. ಈಗ ನಾನು ಹೇಳಿದ ವಿಷಯವು ಬಹಳ ಸುಲಭವಾಗಿದ್ದು ನಿಮ್ಮಲ್ಲಿ ಪ್ರತಿಯೊಬ್ಬರೂ ಅದನ್ನು ಪರೀಕ್ಷಿಸಿ ನೋಡಬಹುದಾಗಿದೆ.'

ಗಾಂಧಿಯವರ ಈ ಭಾಷಣವು ವಸ್ತುಸ್ಥಿತಿಯನ್ನು ಸ್ಪಷ್ಟಗೊಳಿಸುತ್ತದೆ. ಆದರೆ ಬಲವೇ ನ್ಯಾಯವೆಂಬುದು ಗಾಂಧಿಯವರ ಅಭಿಪ್ರಾಯವಾಗಿದೆ. ಈ ಮೊದಲು ಇವರೇ ಈ ತತ್ವಕ್ಕೆ ವಿರುದ್ಧವಾಗಿ ಬೋಧಿಸುತ್ತಿದ್ದುದು ನಮ್ಮೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದರಿಂದ ಇವರು ಈ ಮೊದಲು ಯಾವ ತತ್ವವನ್ನು ಖಂಡಿಸುತ್ತಿದ್ದರೋ ಅದೇ ತತ್ವವನ್ನು ಇತರರಿಗೆ ಬೋಧಿಸುತ್ತಿರುವರೆಂಬುದು ಸ್ಪಷ್ಟವಾಗುತ್ತದೆ.

ಆದುದರಿಂದ ಈಗ ನಾವೆಲ್ಲರೂ ಒಗ್ಗಟ್ಟಾಗಿ ಅವಶ್ಯಕವಾದ ಚರ್ಚೆಗಳಿಂದ ಗಾಂಧಿಯವರ ಈಗಿನ ಚಳವಳಿಯು ನ್ಯಾಯವಲ್ಲವೆಂಬುದನ್ನು ಜನಸಾಮಾನ್ಯಕ್ಕೆ ತೋರಿಸಿ ಕೊಡಬೇಕಾಗಿದೆ. ಈಗಾಗಲೇ ದಕ್ಷಿಣ ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಎಲ್ಲೆಲ್ಲೂ ಅನೇಕ ಸನಾತನಸಂಸ್ಥೆಗಳು ಸ್ಥಾಪಿಸಲ್ಪಟ್ಟಿರುವವಲ್ಲದೆ, ಅವೆಲ್ಲವೂ ಅಸ್ಪೃಶ್ಯತಾನಿವಾರಣೆ ಮತ್ತು ದೇವಾಲಯಪ್ರವೇಶಶಾಸನಗಳ ವಿರುದ್ಧವಾಗಿ ಚಳವಳಿಯನ್ನು ಪ್ರಾರಂಭಿಸಿರುತ್ತವೆ. ಗುರುವಾಯೂರಿನಲ್ಲಿ ಗಾಂಧಿಯವರ ಮತ್ತು ಅವರ ಹಿಂಬಾಲಕರ ವಿರುದ್ಧವಾಗಿ ಭರತಖಂಡದ ಅದ್ಯಂತದಲ್ಲೂ ಚಳವಳಿಯನ್ನು ಹೂಡುವದಕ್ಕೂ, ಸ್ವಾಮಿಗುರುವಾಯೂರಪ್ಪನ ಪಾದುಕೆಗಳನ್ನು ರಥಗಳಲ್ಲಿಟ್ಟು ಎಲ್ಲಕಡೆಗಳಲ್ಲಿಯೂ ಮೆರವಣಿಗೆಯನ್ನು ಮಾಡಿ ಉಪನ್ಯಾಸಗಳ ಮತ್ತು ಭಜನೆಗಳ ಮೂಲಕ ಸನಾತನಧರ್ಮಧ್ವಜವನ್ನು ಎತ್ತಿ ಹಿಡಿಯುವುದಕ್ಕೂ ತಕ್ಕ ಪ್ರಯತ್ನಗಳು ಕೈಕೊಳ್ಳಲ್ಪಟ್ಟಿರುತ್ತವೆ.

ಮದರಾಸ್ ಮತ್ತು ಇತರಸ್ಥಳಗಳಲ್ಲಿರತಕ್ಕ ನಾವೂ ಸಹ ಸನಾತನಧರ್ಮೋದ್ಧಾರವೆಂಬ ಪವಿತ್ರ ಕಾರ್ಯಸಾಧನೆಗೆ ನಮ್ಮ ಕೈಲಾದ ಸಹಾಯವನ್ನು ಮಾಡಬೇಕಾಗಿದೆ. ಆದುದರಿಂದ ಸನಾತನಧರ್ಮಾಭಿಮಾನಿಗಳೆಲ್ಲರೂ ಎಚ್ಚರಹೊಂದಿರಿ! ಏಳಿರಿ!! ನಿದ್ರಿಸಬೇಡಿರಿ!!!

ಟಿ. ಬಿ. ಶಿವಶಂಕರ ದವಾಯಿ.

ವರಂ ಶಾಪಮಾದ್ಗುರುಕಂಚಕಂ ಪ್ರತಿದಿನಂ ಸಂಬಾಸ್ಯ ಕಪ್ಪೋದ್ವವಂ.

ಊರಿಲ್ಲದವರ ಉರುವಣಿಗೆ.

ಯಾವ ಧರ್ಮವಾಗಲಿ, ಯಾವ ಸಮಾಜವಾಗಲಿ, ಊರ್ಜಿತಾವಸ್ಥೆಯನ್ನು ಹೊಂದಬೇಕಾದರೆ, ಧರ್ಮಬೋಧಕರ ಆವಶ್ಯಕತೆಯುಂಟು. ಆದರೆ ಆ ಧರ್ಮಬೋಧಕರ ಜೊತೆಯಲ್ಲಿ ಧರ್ಮಬಾಧಕರೂ ಉಂಟು. ಧರ್ಮಬಾಧಕವರ್ಗವು ನವಿನ್ಯಾ ವೀರಶೈವ ಸಮಾಜದಲ್ಲಿಯಂತೂ ಮಿತಿಮೀರಿ ಅಗ್ನೇಯಾಸ್ತ್ರದಂತೆ ಉರಿಯುತ್ತಿತ್ತು. ಅಗ್ಗಿ ಶಮನಮಾಡದಿದ್ದರೆ ಅದು ವೀರಶೈವ ಸಮಾಜವನ್ನೆಲ್ಲ ಸುಟ್ಟೀತು? (ತನ್ನಂತೆ ವೀರಶೈವರನ್ನೆಲ್ಲ ಅಧರ್ಮಿಗಳನ್ನಾಗಿ ಮಾಡೀತು!) ಎನ್ನುವ ಭಯದಿಂದ ಪರಮಾತ್ಮನು ಮೇಘಾಸ್ತ್ರವನ್ನು (ಪಂಡಿತ ಕಾಶೀನಾಥ ಶಾಸ್ತ್ರಿಗಳವರನ್ನು) ಕಳುಹಿಸಬೇಕಾಯಿತು. ಈ ಮೇಘಾಸ್ತ್ರವು ಉದಯವಾಗಿ ಆ ಅಗ್ನೇಯಾಸ್ತ್ರದ ಉಪಟಳವನ್ನು ತಿಕ್ಕಿಮುಕ್ಕಿ ಒಕ್ಕಲಾಗದಂತೆ ಮಾಡಿದುದರಿಂದ ಈಗ ಬಿಕ್ಕಹತ್ತಿದೆ.

ಈ ಪ್ರಕಾರ ಬಿಕ್ಕುತ್ತಿದ್ದರೂ, ಮೊನ್ನೆ ತಾನೇ ಸೋಲಾಪುರಕ್ಕೆ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನವಾಗುವಾಗ್ಗ ಈ ಅಗ್ನೇಯಾಸ್ತ್ರವನ್ನು ಪ್ರಯೋಗಿಸಬೇಕೆಂದು ಭಗೀರಥ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಎಂದಾದರೂ ಅಸತ್ಯಕ್ಕೆ ಜಯವುಂಟೇ? ಇಂಥ ವರ್ಗವೂ ಅವಶ್ಯವಾಗಿರಬೇಕು. ಏಕೆಂದರೆ 'ಕುಜೇಷ್ಟಾ ವಾಚೋನಿ ಪ್ರತಿಷ್ಠಾ ವಾಢತ ನಾಹಿ' ಎಂಬ ಮರಾಠಿ ನಾಣ್ಣುಡಿಯಂತೆ ಕುಚೇಷ್ಟೆಯಿಲ್ಲದೆ ಪ್ರತಿಷ್ಠೆಯು ಹುಟ್ಟದು. ರಾವಣನಿರದಿದ್ದರೆ ರಾಮನು ಇಷ್ಟು ಪ್ರಸಿದ್ಧಿಯನ್ನು ಹೊಂದುತ್ತಿದ್ದನೇ? ಕೌರವರಿರದಿದ್ದರೆ ಪಾಂಡವರು ಲೋಕಮಾನ್ಯರಾಗುತ್ತಿದ್ದರೆ? ವಿಶ್ವಾಮಿತ್ರನಿರದಿದ್ದರೆ ಹರಿಶ್ಚಂದ್ರನ ಸತ್ಯದ ಪರೀಕ್ಷೆಯಾಗುತ್ತಿತ್ತೆ? ಕತ್ತಲೆಯುಇರದಿದ್ದರೆ ದೀಪಗಳಿಗೆ ಮಹತ್ವವು ಬರುತ್ತಿತ್ತೇ? ತದ್ವತ್ ಸೋಲಾಪೂರದಲ್ಲಿ ಕೆಲ ಸನ್ಯಾಸಿಗಳು ಕುಚೇಷ್ಟೆ ಮಾಡದಿದ್ದರೆ ಉಜ್ಜಯಿನೀ ಜಗದ್ಗುರುಗಳವರ ತಪಃಪ್ರಭಾವವು ಮಹಾರಾಷ್ಟ್ರೀಯ ವೀರಶೈವರಿಗೆ ಗೊತ್ತಾಗುತ್ತಿತ್ತೇ? ಪರಮಾತ್ಮನೇ! ಈ ವರ್ಗಕ್ಕೆ ಇದೇ ಸದ್ಬುದ್ಧಿಯನ್ನೇ ದಯಪಾಲಿಸು.

ಈ ವರ್ಗಕ್ಕೆ ಮನೆಮಠಗಳಿಲ್ಲ; ಊರು, ಉದ್ಯಾನಗಳಿಲ್ಲ. ಪರಂತು ಏನು ಇರದಿದ್ದರೂ ಈ ವರ್ಗವು ತನ್ನ ಮುಂಗೈ ಜೋರಿನಿಂದ ವೀರಶೈವ ಸಮಾಜದಲ್ಲಿ ಉರಿಯುತ್ತಿತ್ತು. ಈ ವರ್ಗವು ತನ್ನ ಪಿತನನ್ನು ಕೂಡ ಮರೆತು, ತನ್ನ ಪಿತೃವಿಗೂ ತಾನೇ ಪಿತೃವೆಂದು ವಿಷಕಾರುತ್ತಿರುವುದು ಕೃತಘ್ನತನವಲ್ಲವೆ? ಈ ವರ್ಗವು ಹೊತ್ತು ಬಂದಹಾಗೆಲ್ಲ ಹೊರಳಿ ಕೆಲ ವೀರಶೈವರಿಗೆ ಮಾತ್ರ ಪ್ರಿಯವಾಗಿರುವದು. ಯಾವನೊಬ್ಬನು ವೀರಶೈವರಲ್ಲಿ ವರ್ಣಾಶ್ರಮಗಳುಂಟೆಂದರೆ ಉಂಟೆನ್ನುವದು. ಇಲ್ಲವೆಂದರೆ ಇಲ್ಲವೆನ್ನುವದು. ಹೀಗೆಯೇ ಜನರ ವಾತಾವರಣದಂತೆ ಹೊರಳಿ ಕೆಲವರ ಪ್ರೀತಿಗೆ ಪಾತ್ರವಾಗಿರುವದು ಅಂದಮೇಲೆ ಈ ವರ್ಗದಲ್ಲಿ ಧರ್ಮಸುಧಾರಣೆಯ ಕಳಕಳಿಯು ಎಷ್ಟಿರುವದೆನ್ನುವದನ್ನು ವಾಚಕವೃಂದವೇ ಊಹಿಸಲಿ!

ಈ ವರ್ಗಕ್ಕೆ 'ಹೊಟ್ಟೆತುಂಬ ಭಕ್ಷ್ಯ ಮುಷ್ಟಿತುಂಬ ಭಿಕ್ಷೆ' ದೊರೆತರೆ ತೀರಿತು; ಸಮಾಜ ಕಲ್ಯಾಣದ ಕಡೆಗೆ ಈ ವರ್ಗವು ಹೊರಳಿ ನೋಡುವದೇ ಇಲ್ಲ. ಈ ವರ್ಗದಿಂದಲೇ ವೀರಶೈವಧರ್ಮವು ಉಳಿದಿದೆ ಇಲ್ಲದಿದ್ದರೆ ನಾಮಶೇಷವಾಗುತ್ತಿತ್ತೆಂದು ಕೆಲಜನ ಮುಸರಿ ನೆಕ್ಕುವವರನ್ನುವದುಂಟು. ಮಹನೀಯರೇ? ಈ ವರ್ಗದಿಂದ ವೀರಶೈವ ಧರ್ಮವು ಹಾಳಾಗಿದೆ. ಇಷ್ಟು ಹೀನಸ್ಥಿತಿಯು ಪ್ರಾಪ್ತವಾದದ್ದಾದರೂ ಈ ವರ್ಗದಿಂದಲೇ! ಅದು ಹೇಗೆಂದರೆ, ಈ ವರ್ಗವು ವೇದವಿರುದ್ಧವಿರುವದರಿಂದಲೇ ನಮ್ಮ ಸಮಾಜಕ್ಕೆ ಪವರುತೀಯರು ಕಲಂಕವನ್ನು ಹಚ್ಚುತ್ತಿರುವರು. ಈ ವರ್ಗವು ನಮ್ಮಲ್ಲಿ ಸೂತ್ರಗೋತ್ರಗಳಿಲ್ಲವೆಂದು ಬೋಧಿಸಿ, ಯಾವ ಧರ್ಮಗ್ರಂಥಗಳಲ್ಲಿಯೂ ಕಾಣದಂತಹ ಸಮಯಗಳನ್ನು ಕಲ್ಪಿಸಿರುತ್ತದೆ. ಈ ಕಲಂಕವನ್ನು ತೆಗೆದೊಗೆಯಲು ಅವತಾರಪುರುಷರಾದ ರಾವಬಹದ್ದೂರ ಅಪ್ಪಾಸಾಹೇಬ ವಾರದ ಈ ಮಹನೀಯರ ವಿಶ್ವಪ್ರಯತ್ನದಿಂದ ವೀರಶೈವರು ಸುಧಾರಿಸಿದರು. ಇಂಥ ಧರ್ಮಾವತಾರಿ ಮಹಾಪುರುಷನನ್ನೂ ಹಳಿಯುವ ಕೆಲವು 'ಛೀ' ಮಾರಿಗಳುಂಟು. ಅಸ್ತು! ವೀರಶೈವದ್ವಿಜರಿಗೆ ಶಿಖೆಯುಂಟೆಂದು ವೀರಶೈವ ಧರ್ಮಗ್ರಂಥಗಳಲ್ಲಿ ಬಲವತ್ತರ ಆಧಾರಗಳಿದ್ದರೂ (ಈ ವರ್ಗವು ತಾನು ಮುಂಡಿಯಿರುವದರಿಂದ ಸರ್ವರನ್ನೂ ತನ್ನಂತೆ ಮುಂಡಿಗಳನ್ನಾಗಿ ಮಾಡಬೇಕೆನ್ನುವ ನೆವದಿಂದ) ವೀರಶೈವರು ಶಿಖೆಯನ್ನು ಧರಿಸಕೂಡದೆಂದು ಬೋಧಿಸುತ್ತಿದೆ. ವೀರಶೈವರಿಗೆ ದೀಕ್ಷಾ, ಶಿಕ್ಷಾ, ಮೋಕ್ಷಾದಿಗಳಿಗೆ ಓರ್ವನೇ ಗುರುವಿರುತ್ತಿರಲು, ಪಟ್ಟಾಧಿಕಾರಿಗಳು ದೀಕ್ಷಾಗುರುಗಳು, ನಾವು (ಸನ್ಯಾಸಿಗಳು) ಮೋಕ್ಷಗುರುಗಳು. ದೀಕ್ಷೆಯಾದಮೇಲೆ ನಮ್ಮಿಂದ ಅನುಗ್ರಹ (ಪ್ರಸಾದ) ವನ್ನು ಪಡೆದರೆ ಮೋಕ್ಷ ದೊರೆಯುತ್ತದೆ. ಇಲ್ಲದಿದ್ದರೆ ಮೋಕ್ಷವು ದೊರೆಯುವದಿಲ್ಲೆಂದು ಜನರನ್ನು ವಂಚಿಸುತ್ತಿರುವರು. ಸ್ತ್ರೀಯಳಿಗೆ ಲಗ್ನಕಾಲದಲ್ಲಿಯ ಪತಿಯೋರ್ವನು, ಋತುಮತಿಯಾದ ಕಾಲದಲ್ಲಿಯ ಪತಿಯೋರ್ವನೆಂದಂತಾಗುವದಿಲ್ಲವೇ? ಇವರು ಮರುಳಮಾನವರಿಗೆ ಮಂಕುಬೂದಿ ಹಾಕಿ ಅವರಿಗೆ ನಿರ್ವಾಣದೀಕ್ಷೆ (ಸನ್ಯಾಸದೀಕ್ಷೆ) ಯನ್ನು ಕೊಟ್ಟು ಲಯಜಪವನ್ನು ಬೋಧಿಸಿ, ಗೃಹಸ್ಥರನ್ನೂ ಕೂಡ ಸನ್ಯಾಸಿಗಳನ್ನಾಗಿ ಮಾಡುವರು. ಈ ಸನ್ಯಾಸಿಗಳಿಂದ ಉಪದಿಷ್ಟರಾದವರು ಒಬ್ಬರಾದರೂ ಸುಖಿಗಳಾಗಿರುವರೇ? ಇಲ್ಲವೇ ಇಲ್ಲ. ಪ್ರತಿಯೊಬ್ಬನು ತನ್ನ ಕುಲಗುರುವಿನ ಸೂತ್ರ, ಗೋತ್ರಗಳನ್ನು ಹೇಳುತ್ತಿರುವದು ಸರಿಯಷ್ಟೇ! ನಿನ್ನ ಗುರುಗಳಿಗಿಂತಲೂ ನಾವೇ ಅಧಿಕರೆಂದು ಹೇಳಿ ಅವನನ್ನು ಸನ್ಯಾಸಿಯನ್ನಾಗಿಮಾಡುವದು ವಂಚಕತನವಲ್ಲವೇ? ಒಂದು ನಂದೀಶ್ವರದೇವಾಲಯದಲ್ಲಿ ನಾಲ್ವರು ಹಾದಿಕಾರರು ಇಳಿದಿರಲು, ಅವರಲ್ಲಿ ಒಬ್ಬನು ಆ ನಂದೀಶ್ವರಮೂರ್ತಿಯನ್ನು ನಮಸ್ಕಾರಮಾಡಲಿಕ್ಕೆ ಹೋಗಿ, ಆ ಮೂರ್ತಿಯನ್ನು ನೋಡಿ ಆಹಾ! ಇದು ಎಷ್ಟು ಸುಂದರವಿದೆ ಎಂದು ಆ ಮೂರ್ತಿಯ ಮೇಲೆ ಕೈಯಾಡಿಸಿ. ಆ ಮೂರ್ತಿಯ ಮೂಗಿನಲ್ಲಿ ಕೈಬೆರಳು ಹಾಕಲು ಅಲ್ಲಿರುವ ಚೇಳು ಅವನನ್ನು ಕಚ್ಚಲು, ಆ ತುಂಟನು ನಾನೋರ್ವನೇ ಕಚ್ಚಿಸಿಕೊಂಡು ಗೋಳಿಡುವದಕ್ಕಿಂತಲೂ, ಎಲ್ಲರಿಗೂ ಕಚ್ಚಿಸಬೇಕೆಂಬ ದುರುದ್ದೇಶದಿಂದ ಉಳಿದ ಮೂವರಿಗೂ ಈ ಗುಡಿಯಲ್ಲಿಯ ಬಸವಣ್ಣನು ಎಷ್ಟು ಸುಂದರನಿದ್ದಾನ, ನಡೆಯಿರಿ ನೋಡಿರಿ ಎಂದು ಕರೆತಂದು ಅವರಿಗೂ ಚೇಳುಕಚ್ಚಿಸಿದಂತೆ, ಈಗಿನ ಕೆಲಸನ್ಯಾಸಿಗಳು ತಾವೂ ಧರ್ಮದ್ರೋಹಿ, ಗುರುದ್ರೋಹಿಗಳಾಗಿರುವದರಿಂದ ಸಕಲರನ್ನೂ ತಮ್ಮಂತೆ ಗುರುಧರ್ಮದ್ರೋಹಿಗಳನ್ನಾಗಿ ಮಾಡಿ ಸನ್ಯಾಸಿಗಳನ್ನಾಗಿ ಮಾಡುವ ಯತ್ನದಲ್ಲಿದ್ದಾರೆ. ಕಿಣಿ, ಎಣ್ಣೆ ದುರ್ಗಂಧ, ಸುಗಂಧ ಇತ್ಯಾದಿಗಳಲ್ಲಿಯ ಯಾವ ಪದಾರ್ಥವನ್ನು ನಾವು ಹಿಡಿಯುವೆವೋ ಆಯಾ ಪದಾರ್ಥಗಳ ದುರ್ಗಂಧ, ಸುಗಂಧಗಳು ನಮಗೆ ಹೇಗೆ ಹತ್ತುವವೋ ಹಾಗೆಯೇ ನಾವು ಸನ್ಯಾಸಿಗಳೇ ಗುರುಗಳೆಂದು ಬೆನ್ನು ಹತ್ತಿದರೆ ಸನ್ಯಾಸಿಗಳಾಗುವದರಲ್ಲಿ ಸಂಶಯವಿಲ್ಲ. ಆದ್ದರಿಂದ ವೀರಶೈವರೇ ಈ ತರಹದ ಕಪಟಸನ್ಯಾಸಿಗಳಿಂದ ಎಚ್ಚರರಾಗಿರಬೇಕು.

ಓರ್ವ ಸತ್ಯವಾದಿ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು.

ಫಾಲ್ಗುಣ ಶುದ್ಧ ಚತುರ್ದಶೀ (28-2-34) ಬುಧವಾರ.

ಶ್ರೀ ಕೊಲ್ಲೀಪಾಕ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರವು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ಚತುರ್ದಶಿ ಬುಧವಾರ (28-2-34) ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಆ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಎಸ್. ಸಿ. ಕೋದಂಡರಾಮಶೆಟ್ಟಿ ಅಂಡ್ ಕಂಪನಿಯವರು ಕಳುಹಿಸಿರುವ ಬಹು ಮನೋಹರವಾದ 1934 ನೆಯ ಇಸ್ವಿಯ ಕ್ಯಾಲೆಂಡರನ್ನು ಅತ್ಯಾನಂದದಿಂದ ಸ್ವೀಕರಿಸಿರುತ್ತೇವೆ.

ರಾಂಪುರ ಮತ್ತು ಪುಟಾಡಿ ಸಂಸ್ಥಾನಗಳ ನವಾಬರು ಕಳೆದವಾರ ಪರಿವಾರ ಸಮೇತರಾಗಿ ರಾಜಧಾನಿಗೆ ಆಗಮಿಸಿ 2-3 ದಿವಸಗಳ ವರೆಗೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿದ್ದು ಅನಂತರ ಹಿಂತಿರುಗಿ ಪ್ರಯಾಣ ಮಾಡಿದರು.

ಮೈಸೂರು ಸಂಸ್ಥಾನದಲ್ಲಿ ಸೀನಿಯರ್ ಸರ್ಜನ್ನರಾಗಿದ್ದು ರಿಟೈರಾಗಿದ್ದ ಡಾ|| ಎಚ್. ಬಿ. ವೈಲ್ಯಾಗನರವರು ಕೆಲವು ದಿವಸಗಳಿಂದ ನ್ಯೂಮೋನಿಯಾ ಜ್ವರದಿಂದ ನರಳುತ್ತಿದ್ದು ಕಳೆದ 9 ನೇ ತಾರೀಖು ಮಧ್ಯಾಹ್ನ ಮೃತಪಟ್ಟರೆಂದು ತಿಳುಹಿಸಲು ವಿಷಾದಿಸುತ್ತೇವೆ.

ತುಮಕೂರು ಕೋ-ಆಪರೇಟಿವ್ ಸೊಸೈಟಿಯಲ್ಲಿ ಸಹಸ್ರಾರು ರುಪಾಯಿಗಳನ್ನು ದುರುಪಯೋಗಪಡಿಸಿಕೊಂಡಿರುವರೆಂಬ ಕಾರಣದಮೇಲೆ ಪೋಲೀಸರು ಮಿ|| ಎಸ್. ಕೆ. ಸೆಟ್ಲೂರ್ ಎಂಬ ಅಡ್ವೋಕೇಟರನ್ನೂ, ಸೊಸೈಟಿಯ ಗುಮಾಸ್ತೆ ಗೋವಿಂದಪ್ಪ ಎಂಬವರನ್ನು ದಸ್ತಗಿರಿಮಾಡಿ ಜಾಮೀನಿನಮೇಲೆ ಬಿಡುಗಡೆ ಮಾಡಿರುತ್ತಾರೆ. ತನಿಖೆಕ್ರಮಗಳು ನಡೆಯುತ್ತಿರುವುವು.

ಮೊನ್ನೆರಾತ್ರಿ ಹಿಂದುಮುಸಲ್ಮಾನ ಯುವಕರು ಸಿನಿಮಾನೋಡುವುದಕ್ಕೆ ಹೋಗಿ ಸುಮಾರು 12 ಘಂಟೆ ರಾತ್ರಿಯಲ್ಲಿ ವಾಪಸು ಬರುವ ಸಮಯದಲ್ಲಿ ಒಬ್ಬರಿಗೊಬ್ಬರಿಗೆ ಕಲಹವುಂಟಾಗಿ ಕೋಲುಕೋಲುಗಳಿಂದಲೂ, ಕೈಕೈಗಳಿಂದಲೂ, ಕಲ್ಲುಕಲ್ಲುಗಳಿಂದಲೂ, ಹೊಡದಾಡುತ್ತ ಬಹುಭೀಕರಸ್ಥಿತಿಗೆ ಬರಲು ತಕ್ಷಣವೇ ಪೋಲೀಸ್‍ದಳವು ಬಂದು ಜನಗಳನ್ನು ಚದುರಿಸಿತೆಂದು ಕೇಳುತ್ತೇವೆ. ಈ ಕಲಹದ ಮೂಲಕಾರಣವು ಮಾತ್ರ ಇನ್ನೂ ತಿಳಿದಿಲ್ಲವು.

ವಿ. ರಾಮಕೃಷ್ಣಶಾಸ್ತ್ರೀ ಅಂಡ್ ಬ್ರದರ್ಸ್ ಪಂಚಾಂಗಮಂದಿರಂ ವಾಣೀವಿಲಾಸ ಮೊಹಲ್ಲಾ ಮೈಸೂರು ಇವರು ತಾವು ಪ್ರಸಿದ್ಧಿಸಿರುವ ಭಾವಸಂವತ್ಸರ ಪಂಚಾಂಗವನ್ನು ನಮ್ಮ ಕಡೆಗೆ ಕಳುಹಿಸಿರುತ್ತಾರೆ. ಈ ಪಂಚಾಂಗವು ಸುಪ್ರಸಿದ್ಧ ಜ್ಯೋತಿರ್ವಿದ್ವಾಂಸರಿಂದ ರಚಿಸಲ್ಪಟ್ಟದ್ದು ಯಥಾರ್ಥ ಶಾಸ್ತ್ರೀಯ ತತ್ತ್ವಗಳಿಂದೊಡಗೂಡಿದೆ. ಇದರಲ್ಲಿ ಅನೇಕೋಪಯುಕ್ತ ವಿಷಯಗಳು ಸಂಗ್ರಹಿಸಲ್ಪಟ್ಟಿವೆ. ಜ್ಯೋತಿಶ್ಶಾಸ್ತ್ರಸಂಪ್ರದಾಯವನ್ನನುಸರಿಸಿ ವಿರಚಿತವಾಗಿರುವ ಈ ಪಂಚಾಂಗವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಭಾವಸಂವತ್ಸರದ ಸಮಸ್ತ ವಿಷಯಗಳನ್ನು ತಿಳಿದು ಧನ್ಯರಾಗಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ಕಳೆದ ವರ್ಷ ಮುಂಬಯಿಯಲ್ಲಿ 145 ಜನರು ಆತ್ಮಹತ್ಯಮಾಡಿಕೊಂಡರಂತೆ!

ಜಪಾನ್ ಸರಕಾರದವರು 800 ಯುದ್ಧದ ವಿಮಾನಗಳಿಗೆ ಹೊಸದಾಗಿ ಆರ್ಡರ್ ಕೊಟ್ಟಿರುವರಂತೆ!

ಭೂಕಂಪದಿಂದ ಕೇವಲ 4000 ಜನರು ಮೃತಪಟ್ಟಿರುವರೆಂದು ಸರಕಾರದವರು ಅಂದಾಜು ಹಾಕಿರುವರು.

ಅಮೇರಿಕಾ ದೇಶದ ಚಲನ ಚಿತ್ರಕಾರರು ಚಿತ್ರಪಟಗಳ ತಯಾರಿಗಾಗಿ ಕಳೆದವರ್ಷ 40,00,00,000 ರೂಪಾಯಿಗಳನ್ನು ವೆಚ್ಚಮಾಡಿದರಂತೆ!

ಇಂಡಿಯಾ ಸರಕಾರದವರು 1934-35 ನೇ ಸಾಲಿನಲ್ಲಿ ರೈಲ್ವೇ ಕೆಲಸಗಳಿಗಾಗಿ 12 ಕೋಟಿ ರೂಪಾಯಿಗಳನ್ನು ವೆಚ್ಚಮಾಡುವರೆಂದು ತಿಳಿದು ಬಂದಿದೆ.

ಇಂಗ್ಲೆಂಡಿನ ಮಿಸ್ ಕ್ಲಿಫರ್ಡ್ ಎಂಬ ಹುಡುಗಿಯು ಗ್ರೇವ್ಸೆಂಡ್ ನಗರದಲ್ಲಿ ನಡೆದ ಉಪವಾಸೊಂದು ಪ್ರದರ್ಶನದಲ್ಲಿ 50 ದಿವಸಗಳವರೆಗೆ ಉಪವಾಸವಿದ್ದು 1,500 ರೂಪಾಯಿಗಳ ಬಹುಮಾನವನ್ನು ಪಡೆದಳಂತೆ!

ಮೈಸೂರಾಯರ ಭೂಕಂಪದ ಫಂಡಿಗೆ ಸಹಾಯದ್ರವ್ಯವನ್ನು ಮಣಿಆರ್ಡರು ಮೂಲಕ ರವಾನಿಸುವವರಿಂದ ಮಣಿಯಾರ್ಡರು ಕಮಿಷನ್ನನ್ನು ತೆಗೆದುಕೊಳ್ಳಕೂಡದೆಂದು ಇಂಡಿಯಾ ಸರಕಾರದವರು ಅಪ್ಪಣೆಮಾಡಿರುತ್ತಾರೆ.

ಪುರಿದೇವಾಲಯದಲ್ಲಿ ವಜ್ರವೈಢೂರ್ಯಗಳಿಂದ ಕೆತ್ತಲ್ಪಟ್ಟಿದ್ದ ಬಲರಾಮ ದೇವರ ವಿಗ್ರಹವು ಇದ್ದಕ್ಕಿದ್ದಹಾಗೆ ಕೆಳಕ್ಕೆ ಉರುಳಿಬಿದ್ದಿತೆಂದೂ, ಇದರಿಂದ ಅಲ್ಲಿಯ ಪಂಡಿತರೇ ಮೊದಲಾದವರು ಗಾಬರಿಗೊಂಡು ವಿಶೇಷ ಶಾಂತಿ ಕರ್ಮಗಳನ್ನು ಮಾಡತೊಡಗಿರುವರೆಂದೂ ತಿಳಿದುಬಂದಿದೆ.

ಇದೇ ಡಿಸೆಂಬರು 7 ನೇ ತಾರೀಖಿನ ರಾತ್ರಿ ಮಿಡ್ನಾಪುರದಲ್ಲಿ 30 ಜನ ಸೋಲ್ಜರರು ಒಂದು ಜೋಪಡಿಯಲ್ಲಿ ಮಲಗಿರಲು ಜೋಪಡಿಗೆ ಬೆಂಕಿಬಿದ್ದು 5 ಜನರು ಸುಟ್ಟು ಭಸ್ಮವಾದರು. ಇಂಡಿಯಾ ಸರಕಾರದವರು ಕ್ರಾಂತಿಕಾರರ ಚಳುವಳಿಯನ್ನು ಅಡಗಿಸುವುದಕ್ಕಾಗಿ ಅವರನ್ನು ಅಲ್ಲಿಗೆ ಕಳುಹಿಸಿದ್ದರಂತೆ!

ಜರ್ಮನಿಯ ಪದಚ್ಯುತ ಕೈಜರರ ಮೊಮ್ಮಕ್ಕಳಲ್ಲಿ ಒಬ್ಬರಾದ ಪ್ರಿನ್ಸ್ ಅಲೆಗ್ಜಾಂಡರ್ ಫರ್ಡಿನೆಂಡ್‍ರವರು ಪ್ರೆಸಿಡೆಂಟ್ ಹಿಂಡೆನ್‍ಬರ್ಗ್‍ರನಂತರ ಪ್ರೆಸಿಡೆಂಟರಾಗುವರಂತೆ! ಇವರ ತಾಯಿಯು 1920 ನೆಯ ಇಸವಿಯಲ್ಲಿ ವಿವಾಹವಿಚ್ಛೇದವನ್ನು ಹೊಂದಿ ಸದ್ಯಃ ತಿನ್ನುವುದಕ್ಕೂ ಗತಿಯಿಲ್ಲದೆ ನರಳುತ್ತಿರುವಳು!

ಪಾಟ್ನಾನಗರದಲ್ಲಿ ಕಾಯಿದೆಭಂಗದ ಚಳುವಳಿಗೆ ಸಂಬಂಧಪಟ್ಟ ಖೈದಿಗಳಿಗಾಗಿ ಹೊಸದಾಗಿ ಕಟ್ಟಿದ್ದ ಕಾರಾಗೃಹವನ್ನು ಒಡೆದುಹಾಕಿ ಅದಕ್ಕೆ ಉಪಯೋಗಿಸಿರುವ ಬೆಂಕಾಪೀಟು ಮೊದಲಾದ ಸಾಮಾನುಗಳನ್ನು ಭೂಕಂಪದ ದೆಸೆಯಿಂದ ತೊಂದರೆ ಪಡುತ್ತಿರುವ ಜನರಿಗೆ ಹಂಗಾಮಿ ವಸತಿಗೃಹಗಳನ್ನು ಕಟ್ಟುವುದಕ್ಕಾಗಿ ಉಪಯೋಗಿಸಬೇಕೆಂದು ಸರಕಾರದವರು ಆಲೋಚಿಸುತ್ತಿರುವರು.

ತಿರುಪತಿಗೆ ಹೋಗಿ ಬರುವ ಯಾತ್ರಿಕರ ಅನುಕೂಲಕ್ಕಾಗಿ ಚಂದ್ರಗಿರಿಯಿಂದ ತಿರುಮಲೆಗೆ 7 ಮೈಲುಗಳ ದೂರ ರೈಲು ಹಾಕಬೇಕೆಂದು ಇಂಜನಿಯರು ಏರ್ಪಾಡು ಮಾಡಿದ್ದರು. ಆದರೆ ದೇವಸ್ಥಾನದ ಮೇಲ್ವಿಚಾರಕ ಕಮಿಟಿಯವರು ರೈಲನ್ನು ಹಾಕುವದರಿಂದ ಅಸ್ಪೃಶ್ಯರೂ ತಿರುಪತಿಗೆ ಬರುವಂತಾಗುವದೆಂದು ತಿಳಿಸಿದ್ದರಿಂದ ರೈಲ್ ಹಾಕುವ ಯೋಜನೆಯು ನಿಲ್ಲಿಸಲ್ಪಟ್ಟಿತು.

ಬಂಗಾಳದ ಎಗ್ಜಿಕುಟಿವ್ ಕೌನ್ಸಿಲ್ಲಿನ ಮತ್ತು ಸರ್ಕಾರದ ಲಾ ಮೆಂಬರರಾಗಿದ್ದ ಸರ್ ಪ್ರೊವೋಷ ಚಂದ್ರ ಮಿತ್ರರವರು ಕಳೆದ ಫೆಬ್ರವರಿ 9 ನೇ ತಾರೀಖಿನ ಮಧ್ಯಾಹ್ನ 1½ ಗಂಟೆಯ ವರೆಗೆ ಆಫೀಸಿನಲ್ಲಿ ಕೆಲಸಮಾಡುತ್ತಿದ್ದು, ಅನಂತರ ಮನೆಗೆ ಹೋಗಿ ಮುಖಪ್ರಕ್ಷಾಳನವನ್ನು ಮಾಡಿಕೊಂಡು ಎದೆಯು ನೋಯುವದೆಂದು ಹೇಳಿ ಕುರ್ಚಿಯಮೇಲೆ ಕುಳಿತವರು ಹಾಗೆಯೇ ಮೃತಪಟ್ಟರು.

ಇಂಗ್ಲೆಂಡಿನ ಮಿಲಿಟರಿ ಇಲಾಖೆಗೆ ಸಂಬಂಧಪಟ್ಟ ಕೆಲವು ಜನ ಶಾಸ್ತ್ರಜ್ಞರು ಒಂದು ಹೊಸತರಹ ಸಿಡಿಮದ್ದನ್ನು ತಯಾರಿಸಿರುವರು. ಇದು ತನ್ನ ಗರ್ಭದಲ್ಲಿ ಅಪಾರವಾದ ಸಿಡಿಮದ್ದುಗಳನ್ನು ತುಂಬಿಕೊಂಡು ಬೇಕಾದಕಡೆಗೆ ಹೋಗಿ ಶತ್ರುಪಕ್ಷದ ಹಡಗುಗಳನ್ನು ನಾಶಪಡಿಸಿ, ಹಿಂತಿರುಗಿ ತಾನು ಹೊರಟ ಸ್ಥಳಕ್ಕೇ ಬಂದು ಸೇರುವದಂತೆ! ಇದು ಸಂಪೂರ್ಣವಾಗಿ ಎಲೆಕ್ಟ್ರಿಕ್‍ಸಿಟಿಯಿಂದಲೇ ನಡೆಯುವುದಂತೆ!

ಇದೇ ಫೆಬ್ರವರಿ 4 ನೆಯ ತಾರೀಖಿನ ದಿವಸ ಟೆಹರಿ ಘರವಾಲ್ ಸಂಸ್ಥಾನದ ಮಹಾರಾಜರು ತಮ್ಮ ಇಬ್ಬರು ರಾಣಿಯರೊಡನೆ ಮೀರತ್ ಜಿಲ್ಲೆಯಲ್ಲಿ ಮೋಟಾರಿನಲ್ಲಿ ಹೋಗುತ್ತಿದ್ದಾಗ ದಾರಾಲಾ ಎಂಬ ಗ್ರಾಮದ ಸಮೀಪದಲ್ಲಿ ಮೋಟಾರಿನ ಟೈರ್ ಒಡೆದುಹೋಯಿತು. ಮೋಟಾರನ್ನು ನಡೆಯಿಸುತ್ತಿದ್ದ ಕಿರಿಯರಾಣಿಯವರು ಕೂಡಲೆ ಮುಗ್ಗುರಿಸಿ ಮುಂದಕ್ಕೆ ಬಿದ್ದು ಸ್ವಲ್ಪಹೊತ್ತಿನಲ್ಲಿಯೇ ಮೃತಪಟ್ಟರು. ಮಹಾರಾಜರು ಮೃತಶರೀರವನ್ನು ಅದೇ ಮೋಟಾರಿನಲ್ಲಿ ಅಂತ್ಯಸಂಸ್ಕಾರಕ್ಕಾಗಿ ಹರದ್ವಾರಕ್ಕೆ ತೆಗೆದುಕೊಂಡು ಹೋದರು.

ಅದ್ಭುತವಾದ ಆನೆಯತಲೆ!

ಓಪೋರ್ಟೋನಗರದ ಕಲೋನಿಯಲ್ ಎಗ್ಜಿಬಿಷನ್ನಿನಲ್ಲಿ ಒಂದು ಆನೆಯ ತಲೆಯು ಪ್ರದರ್ಶಿಸಲ್ಪಟ್ಟಿರುವದು. ಅದು ಎರಡು ಟನ್ ತೂಕವಾಗಿರುವದಂತೆ!

ನಕ್ಷತ್ರ ಪತನದಿಂದ ಪ್ರಾಣಹಾನಿ!

ಭಗವಾನ್‍ಪುರದ ಸಮೀಪದಲ್ಲಿರುವ ಹುಸೇನ ಎಂಬ ಹಳ್ಳಿಯಲ್ಲಿ ಒಂದು ನಕ್ಷತ್ರವು ಬಿದ್ದು ಒಬ್ಬ ಮನುಷ್ಯನೂ 3 ಹಸುಗಳೂ ಮೃತಪಟ್ಟವು.

ಇಂಗ್ಲೆಂಡಿನಲ್ಲಿ ಮದ್ಯಪಾನದ ಆಧಿಕ್ಯ!

ಇಂಗ್ಲೆಂಡ್‍ದೇಶದ ಜನರು 1933 ನೆಯ ಇಸವಿಯಲ್ಲಿ 1932 ನೆಯ ಇಸವಿಯಲ್ಲಿ ಕುಡಿದುದಕ್ಕಿಂತಲೂ 40,00,000 ಬಾಟ್ಲಿ ಮದ್ಯವನ್ನು ಹೆಚ್ಚಾಗಿ ಕುಡಿದರಂತೆ!

ಮೃಗಗಳ ಸಿನೇಮಾ!

ಅಮೇರಿಕೆಯ ಸುಪ್ರಸಿದ್ಧ 'ಫಾಕ್ಸ್‍ಫಿಲಂ ಕಂಪೆನಿ'ಯವರು 'ಫಾಕ್ಸ್ ಫಾಲೀಸ್' ಎಂಬ ಚಿತ್ರಪಟವನ್ನು ತಯಾರಿಸುತ್ತಿರುವರು. ಅದರಲ್ಲಿ 12,000 ಮೃಗಗಳು ಪಾತ್ರವನ್ನು ವಹಿಸುವುವಂತೆ!

ಹಿಟ್ಲೆರರ ರಾಜಕೀಯ ಯಜ್ಞ!

1933 ನೇ ಇಸವಿ ಜನವರಿಯಲ್ಲಿ ಹೆರ್ ಹಿಟ್ಲರ್‌ರವರು ಜರ್ಮನಿಯ ಸರ್ವಾಧಿಕಾರಿಗಳಾದ ಮೇಲೆ ರಾಜಕೀಯ ಅಪರಾಧಗಳಿಗಾಗಿ 59 ಜನರನ್ನು ಗಲ್ಲಿಗೇರಿಸಿದರಂತೆ! ಅವರಲ್ಲಿ 3 ಜನರು ಸ್ತ್ರೀಯರು!

ಪಂ|| ಜವಾಹಿರಲಾಲರಿಗೆ ಶಿಕ್ಷೆ!

ಪಂಡಿತ ಜವಾಹಿರಲಾಲನೆಹರೂರವರು ಕಲಕತ್ತಾದಲ್ಲಿ ರಾಜದ್ರೋಹಕರವಾದ ಭಾಷಣವನ್ನು ಮಾಡಿದರೆಂಬ ಆರೋಪದಮೇಲೆ ಕಲಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಸದರಿಯವರಿಗೆ ೨ ವರ್ಷಗಳ ಸಾದಾ ಶಿಕ್ಷೆಯನ್ನು ವಿಧಿಸಿದರು.

ಕಾಲ್ನಡಿಗೆಯಿಂದ 52,000 ಮೈಲುಗಳ ಪ್ರಯಾಣ!

ರಾಜಕೋಟೆಯ ಟಿ. ಎಂ. ಕಾಸಿಂ ಎಂಬ ತರುಣನು ಕಾಲ್ನಡಿಗೆಯಿಂದ 4 ವರ್ಷಗಳೊಳಗಾಗಿ 52,000 ಮೈಲುಗಳ ದೂರ ಸಂಚಾರಮಾಡಬೇಕೆಂದು ಕಲ್ಕತ್ತೆಯಿಂದ ಹೊರಟಿರುವನು. ಈತನು ಈಗಾಗಲೇ ಬಂಗಾಳ, ಬಿಹಾರ, ಪಂಜಾಬ್, ರಾಜಪುಟಾಣಾ, ಗುಜರಾತ್ ಪ್ರಾಂತಗಳನ್ನು ಸುತ್ತಿ ಮುಂದಕ್ಕೆ ಹೊರಟಿರುವನು.

ಸರ್. ಸಪ್ರೂರವರ ಸ್ತುತ್ಯವಾದ ಸಲಹೆ!

ಅಲಹಾಬಾದಿನ ಸುಪ್ರಸಿದ್ಧ ವಕೀಲರಾದ ಸರ್ ತೇಜ್‍ಬಹದ್ದೂರ್‌ರವರಿಗೆ 'ಪ್ರೀವಿಕೌನ್ಸಿಲರ್' ಪದವಿಯು ದೊರೆತ ಸಂತೋಷಾರ್ಥವಾಗಿ ಅವರಿಗೆ ಸನ್ಮಾನಮಾಡಬೇಕೆಂದು ಕೆಲವರು 1000 ರೂ. ಗಳ ಒಂದು ನಿಧಿಯನ್ನು ಕೂಡಿಸಿದ್ದರು. ಆದರೆ ಸರ್ ಸಪ್ರೂರವರು ಸದರಿ ರೂ. ಗಳನ್ನು ತಮ್ಮ ಸನ್ಮಾನಕ್ಕೆ ಉಪಯೋಗಿಸುವ ಬದಲು ಭೂಕಂಪದ ನಿಧಿಗೆ ಕೊಡಬೇಕೆಂದು ಸಲಹೆಯನ್ನು ಮಾಡಿರುವರು. ಸ್ತುತ್ಯ!

ಭೂಕಂಪದಿಂದ ಅದ್ಭುತನಷ್ಟ!

ಬೀಹಾರ್ ಭೂಕಂಪದ ದೆಸೆಯಿಂದ ದರ್ಭಾಂಗಾ ಮಹಾರಾಜರವರ ಎರಡು ಚರಿತ್ರಾರ್ಹವಾದ ಅರಮನೆಗಳೂ ಇನ್ನೂ ಅನೇಕ ಕಟ್ಟಡಗಳೂ ನಾಶವಾಗಿ 15 ಕೋಟಿ ರೂಪಾಯಿಗಳ ನಷ್ಟವು ಸಂಭವಿಸಿರುತ್ತದೆ. ಇದೇ ಕಾರಣದಿಂದ ಜಮಾಲ್‍ಪುರದಲ್ಲಿದ್ದ ಈಸ್ಟ್ ಇಂಡಿಯಾ ರೈಲ್ವೇ ಕಂಪೆನಿಯವರ ರೈಲ್ವೇ ಕಾರ್ಖಾನೆಯು ಹಾಳಾಗಿ 50 ಲಕ್ಷ ರೂಪಾಯಿಗಳ ನಷ್ಟವೂ ರೈಲ್ವೇ ರಸ್ತೆಗಳು ಮತ್ತು ಸೇತುವೆಗಳು ನಾಶವಾದುದರಿಂದ 1 ಕೋಟಿ ರೂಪಾಯಿಗಳ ನಷ್ಟವೂ ಸಂಭವಿಸಿರುತ್ತದೆ.

ವಿವಾಹಮಹೋತ್ಸವ ಸಮಾರಂಭ,

ಕಾಡ್ಲೂರು.

ನೈಜಾಂ ಇಲಾಖಾ ರಾಯಚೂರು ಜಿಲ್ಲಾ ಕಾಡ್ಲೂರು ಗ್ರಾಮನಿವಾಸಿಗಳಾದ ಶ್ರೀಮಂತ ಸಿದ್ಧಲಿಂಗಪ್ಪನವರ ಮಕ್ಕಳು ಸಿದ್ಧಪ್ಪನವರು ಇದೇ ಶ್ರೀಮುಖನಾಮಸಂವತ್ಸರದ ಮಾಘ ಶುದ್ಧ ೧೦ ಗುರುವಾರ ದಿವಸ ತಮ್ಮ ಅಣ್ಣನವರಾದ ಲೇಟ್ ಬಸವಪ್ಪನವರ ಸುಪುತ್ರ ಚಿ|| ಶಂಕರಣ್ಣನಿಗೂ ಗುಲಬರ್ಗಾ ಜಿಲ್ಲಾ ಯಾದಗಿರಿ ತಾಲೂಕು ಕಡೇಚೂರ ಗ್ರಾಮದ ಶೆಟ್ಟರ ವೀರಪ್ಪನವರ ಸುಪುತ್ರಿ ಚಿ|| ಸೌ|| ಬಸಮ್ಮನೆಂಬ ಬಾಲಕಿಗೂ, ಮತ್ತು ತನ್ನ ಸೋದರಳಿಯನಾದ ಕಡೇಚೂರು ಶೆಟ್ಟರ ವೀರಪ್ಪನವರ ಸುಪುತ್ರ ಚಿ|| ಶರಣಪ್ಪನಿಗೂ ಬಳ್ಳಾರಿ ಜಿಲ್ಲಾ ಆದವಾನಿ ಹುರುಳಿ ಪೊಂಪಣ್ಣನವರ ಪುತ್ರಿ ಚಿ||ಸೌ|| ಈಶ್ವರಮ್ಮನಿಗೂ ವಿವಾಹಮಹೋತ್ಸವವನ್ನು ಬೆಳೆಯಿಸಿದರು. ನೈಜಾಂ ರಾಷ್ಟ್ರದಲ್ಲಿ ಈ ರೀತಿಯಾದ ಸಮಾರಂಭವು ಎಲ್ಲಿಯೂ ನಡೆದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಆರುದಿನಗಳ ವರೆಗೂ ಅಸಂಖ್ಯ ಜನಗಳು ಮೃಷ್ಟಾನ್ನದಿಂದ ತೃಪ್ತಿಯನ್ನು ಹೊಂದಿದರಲ್ಲದೆ, ಸ್ಮಾರ್ತ-ಮಾಧ್ವ-ವೈಶ್ಯ-ಅಕ್ಕಸಾಲಿಗರು-ಬಡಗಿಯವರು-ಕಮ್ಮಾರರು ಮುಂತಾದ ಜನಸಮುದಾಯಕ್ಕೆ ಸ್ವಲ್ಪವಾದರೂ ಕೊರತೆ ಇಲ್ಲದಂತೆ ಉಲ್ಪಿಯನ್ನು ಕಳುಹಿಸಿದರು. ಅಜುಬಾಜೂ ಗ್ರಾಮದ ಭಕ್ತಮಾಹೇಶ್ವರರನ್ನು ಬರಮಾಡಿಕೊಂಡಿದ್ದರು. ನಾಂದೀಮುಖ-ಮಾಂಗಲ್ಯಧಾರಣ-ನಾಕಬಲಿ ಈ ಮೂರು ದಿನಗಳಲ್ಲಿ ಭಕ್ತಮಾಹೇಶ್ವರ ಸಮಾರಾಧನೆಗಳನ್ನು ಅತ್ಯಂತ ಸಂತೋಷದಿಂದ ನಡೆಯಿಸಿದುದಲ್ಲದೆ ಮಾಹೇಶ್ವರ ವರ್ಗಕ್ಕೂ ಯಾಚಕ ಸಮುದಾಯಕ್ಕೂ ಚಿಕ್ಕದೊಡ್ಡ ಪ್ರತಿಯೊಂದು ವ್ಯಕ್ತಿಗೂ ಒಂದು ರೂಪಾಯಿ ಪ್ರಕಾರ ದಕ್ಷಿಣೆಯನ್ನು ಸಮರ್ಪಿಸಿದರು. ೫ನೇ ದಿವಸದ ಮೆರವಣಿಗೆಯು ಪ್ರೇಕ್ಷಕಜನಸಿಚಯಕ್ಕೆ ಅತ್ಯಾನಂದವನ್ನುಂಟುಮಾಡಿತು. ಈ ಮಹಾಸಮಾರಂಭದ ವೈದಿಕಕಾರ್ಯಕರ್ತೃತ್ವವನ್ನು ಈ ಪ್ರದೇಶದ ಮಾಹೇಶ್ವರ ವರ್ಗದಲ್ಲಿ ಪಂಡಿತರಾದ ವೈದಿಕ ವಿದ್ಯಾನಿಧಿಗಳಾದ ಇದೇ ಕಾಡ್ಲೂರು ಹಿರೇಮಠದ ಪಟ್ಟಾಧ್ಯಕ್ಷ ಗುರುಪಾದಸ್ವಾಮಿಗಳವರಿಗೆ ಅಂದರೆ ಹರಪನಹಳ್ಳಿ ಗುರುಪಾದದೇವರ ಮಠದ ಪಟ್ಟದಸ್ವಾಮಿಗಳವರಿಗೆ ವಹಿಸಿದ್ದರು. ಸದರಿ ಸ್ವಾಮಿಗಳವರು ಗಣಪತಿಪೂಜಾ, ಸ್ವಸ್ತಿವಾಚನ, ನಾಂದಿ, ಅಂಕುರಾರ್ಪಣ, ಮಂಟಪದೇವತಾಪ್ರತಿಷ್ಠಾ, ಪಂಚಕಲಶಸ್ಥಾಪನ, ನಾಕಬಲ್ಯುತ್ಸವಾದಿ ಸಮಸ್ತ ಕಾರ್ಯಗಳನ್ನು ವೇದೋಕ್ತವಾಗಿ ಭಕ್ತಿಯೂ, ಆನಂದವೂ ಉಂಟಾಗುವಂತೆ ನಡೆಯಿಸಿದರು.

ಕೆಲಕೆಲವು ಶ್ರೀಮಂತರು ವಿವಾಹಮಂಟಪದಲ್ಲಿ ಯುವಕರು ಆನಂದಪಡುವಂತೆ ಪಾತ್ರದ ಹೆಂಗಸರ ನರ್ತನವನ್ನೂ, ಅನ್ಯಾಯವಾದ ದುಂದುವೆಚ್ಚಗಳನ್ನೂ ಮಾಡಿ ಸಾವಿರಾರು ರೂಪಾಯಿ ನಿರ್ಜಯಮಾಡುವರು. ಆದರೆ ವಿವಾಹ ಕಾರ್ಯವನ್ನು ಮಾಡಿಸಿದ ಮಠದವರಿಗೆ ಒಂದು ಪಾವಲಿಯೋ ಅರ್ಧ ರೂಪಾಯಿಯೋ ಒಂದು ರೂಪಾಯಿಯೋ ದಕ್ಷಿಣೆಯನ್ನು ಕೊಡುವುದಕ್ಕೆ ೧೫ ದಿನಗಳ ವರೆಗೂ ಓಡಾಡಿಸುವರು. ಕೊನೆಗೆ ಈ ಅಯ್ಯನೇ ಬೇಡವೆಂದು ಏನೂ ಕೊಡದೆ ಮಣಿವೆತ್ತಿ ಮೀಸೆಯನ್ನು ತೊಸೆಯುವ ಪರಮಪುಣ್ಯಾತ್ಮರು ಈ ಕಲಿಯುಗದಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿಯೂ ಸಿಗುವರು. ಪಾತ್ರದವರಿಗೆ ೫-೬ ನೂರು ರೂಪಾಯಿಗಳನ್ನೂ, ವಾದ್ಯದವರಿಗೆ ೩೦೦-೪೦೦ ರೂ. ಗಳನ್ನೂ ಕೊಟ್ಟು ಜನ್ಮ ಸಾಫಲ್ಯಗೊಳಿಸುವ ಮಠಾಧಿಕಾರಿಗಳಿಂದ ಮಂಗಲಕಾರ್ಯವನ್ನು ಮಾಡಿಸಿಕೊಂಡು ಅವರಿಗೆ ಕಡೆಗೆ ಏನನ್ನೂ ಕೊಡದೆ ದೂರೀಕರಿಸುವ ಮೂರ್ಖಶಿಖಾಮಣಿಗಳನ್ನು ಯಾವ ವರ್ಗದಲ್ಲಿ ಗಣಿಸಬೇಕೋ ತಿಳಿಯದು. ಇನ್ನು ಮುಂದೆ ನೈಜಾಂ ಇಲಾಖೆಯ ಸಮಸ್ತ ವೀರಶೈವ ಮಹೀಯರು ಇದುವರೆಗೂ ನಡೆಯಿಸಿದಂತೆ ವಿವಾಹಾದಿ ಸಕಲ ಕಾರ್ಯಗಳನ್ನು ಮಾಡಿಸುವುದನ್ನು ಬಿಟ್ಟು ಈ ಮಹತ್ಕಾರ್ಯದಲ್ಲಿ ಮೇಲ್ಪಂಕ್ತಿಯಂ ಪಡೆದ ಕಾಡ್ಲೂರು ಸಾಹುಕಾರ ಸಿದ್ಧಪ್ಪನವರ ಗೃಹದಲ್ಲಿ ನಡೆದ ಪದ್ಧತಿಯನ್ನು ಆಚರಣೆಯಲ್ಲಿ ತರಬೇಕೆಂದು ಕೋರುತ್ತೇನೆ.

ಸಾಹುಕಾರ ಸಿದ್ಧಪ್ಪನವರು ಕಾಡ್ಲೂರು ಗ್ರಾಮದ ಮಠ-ಮಠಪತಿ-ಗಣಾಚಾರಿ-ಸ್ಥಾವರ ಮುಂತಾದವರಿಗೂ ಈ ಮಹಾಸಮಾರಂಭದ ಕಾರ್ಯದಲ್ಲಿ ತೊಡಗಿದ ಜನರಿಗೂ ಧೋತ್ರ-ರುಮಾಲು ಮುಂತಾದವುಗಳನ್ನು ಕೊಟ್ಟುದಲ್ಲದೆ ಸ್ಥಳಪರಸ್ಥಳದ ಎಷ್ಟೋ ಬಡಬಗ್ಗರಿಗೆ ಅಂಗಿ-ವಸ್ತ್ರ-ಪಂಚೆಗಳನ್ನು ಕೊಟ್ಟರು. ಈ ಶುಭಸಮಯದಲ್ಲಿ ಶ್ರೀ|| ಷ|| ಬ್ರ|| ಹರಪನಹಳ್ಳಿ ಗುರುಪಾದದೇವರ ಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ೫ ರೂ. ಗಳು ಸಮರ್ಪಿಸಲ್ಪಟ್ಟವು. ಶ್ರೀ ಜಗದ್ಗುರು ಪಂಚಾಚಾರ್ಯರು ಕಾರ್ಯಕರ್ತೃಗಳಿಗೆ ಆಯುರಾರೋಗ್ಯಭಾಗ್ಯಾದಿಸಕಲಸಂಪತ್ಸನ್ನಿತ್ತು ರಕ್ಷಿಸಲೆಂದು ಕೋರುವ,

ವಿರೆಡ್ಡಿಗೌಡ ಮಾಲಿಪಾಟೀಲ,
ಕರೇಕಲ್ಲು.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಸೀದ.

ಶ್ರೀ ಮಹಾರಥೋತ್ಸವಾಹ್ವಾನಪತ್ರಿಕಾ.

ಸ್ವಸ್ತಿಶ್ರೀಮನ್ನೃಪಶಾಲಿವಾಹನ ಶಕ ೧೮೫೬ ನೇ ಶ್ರೀಮುಖನಾಮಸಂವತ್ಸರದ ಫಾಲ್ಗುಣ ಶುದ್ಧ ೮ ಯಿಂದ ಫಾಲ್ಗುಣ ಬಹುಳ ೮ ವರೆಗೆ **ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನಮಠದಲ್ಲಿ** ಅನಾದಿಕಾಲದಿಂದಲೂ, ಜರುಗುತ್ತ ಬಂದಿರುವಂತೆ ಈ ಸಂವತ್ಸರದಲ್ಲಿಯೂ ಮಹಾರಥೋತ್ಸವಾಂಗಭೂತಗಳಾದ ವೃಷಭೋತ್ಸವ, ಅಶ್ವಾರೋಹಣೋತ್ಸವ, ಆಂದೋಲಿಕೋತ್ಸವ, ಪುಷ್ಪಕೋತ್ಸವ, ಶಯನೋತ್ಸವ, ಸುಪ್ರಭಾತೋತ್ಸವ, ಕುಂಕುಮೋತ್ಸವ, ವಸಂತೋತ್ಸವ, ಅವಭೃತಸ್ನಾನ, ಭದ್ರಾನದೀವಿಹಾರೋತ್ಸವ ಮೊದಲಾದ ನಿತ್ಯೋತ್ಸವಗಳೂ, ಫಾಲ್ಗುಣ ಶುದ್ಧ ೧೪ ಮಘಾ ನಕ್ಷತ್ರದಲ್ಲಿ ಶ್ರೀ|| ಮಹಾರಥೋತ್ಸವವು ನೆರವೇರುವುದಲ್ಲದೆ, ಅಗ್ಗಿ ಈ ಧರ್ಮಪೀಠಾಧಿಪತಿಗಳಾದ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರೂ ಬಿಜಯಂಗೈಸುತ್ತಾರಾದಪ್ರಯುಕ್ತ ಗುರುಭಕ್ತಿನಿಷ್ಠಾಗರಿಷ್ಠರಾದ ಸಕಲರೂ ಈ ಸುಸಮಯದಲ್ಲಿ ಕಳತ್ರಪುತ್ರಮಿತ್ರಮಂಡಲಿಯೊಡನೆ ಬಂದು ಉತ್ಸವಭಾಗಿಗಳಾಗಿ ಶ್ರೀ ಸ್ವಾಮಿಯು ಶ್ರೀಮುಡಿಗಂಧ ಪ್ರಸಾದಗಳನ್ನೂ, ಶ್ರೀ ಮಹಾಗುರುದರ್ಶನಾಶೀರ್ವಾದಗಳನ್ನೂ ಪಡೆದು ಧನ್ಯರಾಗತಕ್ಕದ್ದು.

ಏಜಂಟ್.

|| ಶ್ರೀ ||

ಚಿಕ್ಕಮಗಳೂರು,

ಕಾಫೀಪ್ಲಾಂಟರ್ ತೊಗರಿಹಂಕಲು ಮಲ್ಲೇಗೌಡನ ವಿಜ್ಞಾಪನೆಗಳು.

ಮಹಾಶಯರೇ!

ನನ್ನ ಇಷ್ಟಮಿತ್ರರು ಅನೇಕರು ಪ್ರೋತ್ಸಾಹಿಸಿದುದರಮೇರೆ ಈ ಸಾಲಿನಲ್ಲಿ ರಚಿಸಲ್ಪಡುವ **ಮೈಸೂರು ನ್ಯಾಯವಿಧಾಯಕ ಸಭೆಗೆ** ನಾನು ನಮ್ಮ ಕಡೂರು ಡಿಸ್ಟ್ರಿಕ್ಟಿನ ಪ್ರತಿನಿಧಿ ಸ್ಥಾನಕ್ಕೆ ಉಮೇದುವಾರನಾಗಿ ನಿಂತಿರುತ್ತೇನೆ.

ಇದೇ 1934 ನೇ ಇಸವಿ **ಮಾರ್ಚಿ ತಾರೀಖು 3 ನೇ ಶನಿವಾರ** ನಡೆಯುವ ಚುನಾವಣೆಯಲ್ಲಿ ತಮ್ಮ ಸ್ನೇಹಿತರೊಡನೆ ತಾವು ತಮ್ಮ ಅಮೋಘವಾದ ಓಟನ್ನು ದಯವಿಟ್ಟು ನನಗೆ ಕೊಡುವುದರ ಮೂಲಕ ಈಲಾಗಾಯಿತು ಮೂರು ವರ್ಷ ತಮ್ಮಗಳ ಪ್ರಾತಿನಿಧ್ಯವನ್ನು ದಯವಿಟ್ಟು ನನಗೆ ಕಲ್ಪಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ದಯವಿಟ್ಟು ಆನೆಯ ಮುಂದೆ

X ಈ ರೀತಿ ಗುರುತು ಮಾಡಬೇಕು.

ತಮ್ಮ ವಿಧೇಯ,
ಟಿ. ಬಿ. ಮಲ್ಲೆಗೌಡ,
ಕಾಫೀಪ್ಲಾಂಟರ್.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೀಮಹೋತ್ಸವ.

ಗರುಗದಹಳ್ಳಿ.

ವೀರಶೈವಮಾರ್ಗನಿರತರಾದ ಮಾಸ್ಟರ್ ಎ. ಚನ್ನಪ್ಪನವರು ಶ್ರೀಮದ್ವೀರಶೈವ ಮಹಾಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಕಡೂರು ತಾಲ್ಲೂಕು ಗರುಗದಹಳ್ಳಿಗ್ರಾಮದಲ್ಲಿ ನಡೆಯಿಸುವಂತೆ ನಿರ್ಧರಿಸಿರುವ ಪ್ರಯುಕ್ತ ಸಮಸ್ತ ಗುರುಭಕ್ತಮಹಾಶಯರು ತತ್ಕಾಲಕ್ಕೆ ಗರುಗದಹಳ್ಳಿಗ್ರಾಮಕ್ಕೆ ದಯಮಾಡಿಸಿ, ಮೇಲ್ಕಂಡ ಮಹೋತ್ಸವವನ್ನು ಭಕ್ತಿಪೂರ್ವಕವಾಗಿ ನೆರವೇರಿಸಿ, ತೀರ್ಥಪ್ರಸಾದವಂ ಸ್ವೀಕರಿಸಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುವ ತಮ್ಮ ವಿಶ್ವಾಸಿ,

ಕೆ. ಎಂ. ಬಸವರಾಜ.

ಶ್ರೀ ಜಗದ್ಗುರು ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರ ಜಯಂತೀಮಹೋತ್ಸವ.

ಗರುಗದಹಳ್ಳಿ.

ಇದೇ ಶ್ರೀಮುಖನಾಮಸಂವತ್ಸರದ ಮಾಘ ಬ|| ತ್ರಯೋದಶಿ ಮಹಾಶಿವರಾತ್ರಿಯ ಪವಿತ್ರಸೋಮವಾರ ದಿವಸ ಮೇಲ್ಕಂಡ ಜಗದಾಚಾರ್ಯರ ಜಯಂತಿ ಮಹೋತ್ಸವವನ್ನು ನಡೆಯಿಸುವಂತೆ ವೀರಶೈವಮಾರ್ಗನಿರತರಾದ ಮಾಸ್ಟರ್ ಎ. ಚನ್ನಪ್ಪನವರು ಪ್ರೋತ್ಸಾಹಮಾಡಿದ್ದರ ಮೇರೆ, ಗ್ರಾಮದ ವೀರಶೈವಪ್ರಮುಖರಾದ ಮ|| ರಾ|| ಬುದ್ಧಿವಂತ ಕಲ್ಲಪ್ಪನವರು ಮತ್ತು ಜಿ. ಎಂ. ರಾಮಪ್ಪನವರು ಸಹ ಕಟಿಬದ್ಧರಾಗಿ ಪೂಜ್ಯಪಾದರ ಭಾವಚಿತ್ರಪಟಗಳನ್ನು ವೀರಭದ್ರದೇವರ ದೇವಾಲಯದಲ್ಲಿ ಅಭಿಷೇಕಾದಿಗಳಿಂದಲೂ, ಗಂಧ, ಅಕ್ಷತೆ, ಪತ್ರ, ಪುಷ್ಪಾದಿಗಳಿಂದಲೂ ಪೂಜೆಯನ್ನು ಮಾಡಿ ಮಹಾಮಂಗಳಾರತಿ ನೈವೇದ್ಯಾದಿಗಳು ನಡೆದ ನಂತರ ಸರ್ವರಿಗೂ ಪ್ರಸಾದವು ಹಂಚಲ್ಪಟ್ಟು ಭಗವತ್ಪಾದರ ಜಯಘೋಷದೊಡನೆ ಆಚಾರ್ಯರ ಭಾವಚಿತ್ರಪಟಗಳನ್ನು ಅಲಂಕೃತವಾದ ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವಾದಿಗಳಿಂದ ಮೆರವಣಿಗೆ ಉತ್ಸವವು ಗ್ರಾಮದಲ್ಲೆಲ್ಲಾ ನೇತ್ರಾನಂದಕರವಾಗಿ ನೆರವೇರಿಸಲ್ಪಟ್ಟಿತು. ಈ ಮಹೋತ್ಸವವನ್ನು ಅತ್ಯಂತ ಗುರುಭಕ್ತಿಯಿಂದ ನೆರವೇರಿಸಿದ ಮೇಲ್ಕಂಡ ಬುದ್ಧಿವಂತ ಕಲ್ಲಪ್ಪನವರಿಗೂ ಮತ್ತು ಜಿ. ಎಂ. ರಾಮಪ್ಪನವರಿಗೂ ಗುರುಸಾರ್ವಭೌಮರು ಸಕಲಸಂಪತ್ಸಮೃದ್ಧಿಯನ್ನೀಯಲೆಂದು ಹಾರೈಸುವ,

ಓರ್ವ ಉತ್ಸವಭಾಗಿ.

ಹಿರೇಹಡಗಲಿ.

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲ್ಲೂಕು ಹಿರೇಹಡಗಲಿ ಧರ್ಮಸುಧಾರಕ ಮಂಡಳಿಯವರಾದ ವೇ|| ಕಬ್ಬಮಣಿ ಮಠದ ಚನ್ನಯ್ಯನವರು, ಮಾಸಿಹಳ್ಳಿ ಮಠದ ಶಿವರುದ್ರಗೌಡರು ಪುರಾಣಿಕ ಮಠದ ಪರಮೇಶ್ವರಯ್ಯನವರೂ ಶೀಲವಂತರ ಅಣುವೀರಪ್ಪ, ಕೊಂಪಿಮರಿಯಪ್ಪ, ಮಳೆ ಮಲ್ಲಪ್ಪ, ಪೂಜಾರಿ ಶಿವಪ್ಪ ಮುಂತಾದವರು ಸೇರಿ ಸತ್ಸಂಗ್ರಹಕೂಟದಕಾಂತ್ಯರ್ಥವಾಗಿ ಸತ್ಕಾರ್ಯಗಳನ್ನು ನಡೆಯಿಸಬೇಕೆಂದು ನಿರ್ಣಯಿಸಿ ಶೀಲವಂತರ ಅಣುವೀರಪ್ಪನವರ ಮನೆಯಲ್ಲಿ ಶ್ರೀ ರೇಣುಕವಿಜಯ ಮಹಾಪುರಾಣವನ್ನು ಪ್ರಾರಂಭಿಸಿ ವೇ|| ಪುರಾಣಿಕ ಮಠದ ವಿರೂಪಾಕ್ಷ ಶಾಸ್ತ್ರಿಗಳಿಂದ ಸಂಗೀತಸಾಹಿತ್ಯಾದಿಗಳೊಡನೆ ಬಹುಸರಸವಾಗಿ ಪ್ರವಚನ ಮಾಡಿಸಿದರು. ಈ ಬಗ್ಗೆ ಹರಪನಹಳ್ಳಿ ತೆಗ್ಗಿನ ಮಠದ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಚಂದ್ರಶೇಖರಸ್ವಾಮಿಗಳವರನ್ನು ಆಹ್ವಾನಿಸಿಕೊಂಡು ಫಾಲ್ಗುಣ ಶು|| ೧೩ ದಿವಸ ಶ್ರೀರುದ್ರಮಹಾಭಿಷೇಕವನ್ನು ಶ್ರೀ ಹಾಲಸ್ವಾಮಿಗಳವರಲ್ಲಿ ಸರ್ವರೂ ತ್ರಿಕರಣಶುದ್ಧಭಕ್ತಿಯಿಂದ ನೆರವೇರಿಸಿ ಮಹಾಪೂಜಾ ಸಹಸ್ರ ಬಿಲ್ವಾರ್ಚನೆ ತೀರ್ಥಪ್ರಸಾದ ಸ್ವೀಕಾರ ಹಾಗೂ ಭಾರಿ ಅನ್ನ ಸಂತರ್ಪಣೆಯನ್ನು ಮಾಡಿದರು. ಮಾರನೆಯ ದಿವಸ ಸದರಿ ಶಾಸ್ತ್ರಿಗಳವರಿಂದ ಶಿವಕೀರ್ತನವು ಮಾಡಲ್ಪಟ್ಟಿತು.

ಓರ್ವಪ್ರೇಕ್ಷಕ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅಕ್ಕಾಟು ಶ್ರೀನಿವಾಸಾಚಾರ್ಯರ ಬೀದಿ.
ಬೆಂಗಳೂರು ಸಿಟಿ. 15

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನೆವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 23

ವಿಳಾಸ—ಬ್ರ. **ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,**
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, $\frac{1}{2}$ ಡಜನ್ 8-8-0 ಮತ್ತು ರೂ 5

ರ್ಹುಮೊ ಬಾಮು.

ಕೆಮ್ಮು, ಶೀತ, ತಲೆನೋವು, ಪಾರ್ಶನೋವು, ಗಂಟು ನೋವು ಸಂದುಗಂಟು ನೋವು ಎಲ್ಲಾ ತರದ ವಾಯು, ಸೊಂಟನೋವು, ಚಿಜ್ಜದ ವ ಕಡಿತ, ಗಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿಲ್ಲಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕಿಮದ್ದುಗಳು. ಹೊಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಯುವ ರೋಗ, ಚದ್ದು, ಹರಡುವ ನಂಜೆ ಹುಣ್ಣುಗಳನ್ನು ಶೀಘ್ರ ಗುಣಪಡಿಸುವದು. ಡಬ್ಬಿಗೆ ಆ. 5

ಹೇಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಔನ್ಸಿಗೆ ಆಣೆ 8, $\frac{1}{2}$ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಪಾಶಟ್ಟು ಮೆದುಳು ಶಾಯಿಗಳು ಬಿಸ್ತೀಜನಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುತ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಅತ್ಯಂತರತ್ನಕನಂತೆಯೇ ಯುವಕನಾಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಲ್ಸವೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಬಾಧಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— **ಮಲೇರಿಯಾನ ಕಂಪೆನಿ,**
[24] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಿಟ್ಟುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ಕುಂಬಳೊಳ್ಳುವದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಸಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ (14)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್.
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರು

ರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂ ರೆ:—ಪಿಸತಿ, ಒಂ ತಲೆನೋವು, ತಲೆ ಲ್ಲಿಯ ರೋಗಗಳ ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[6] ಪೋ. ಬಾ. ೫೧೦, ಮದರಾ

REGISTERED No. M. ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಫೆಬ್ರವರಿ ೧೯೩೪ [ಸಂಚಿಕೆ ೪೪

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಮಹಾಶಿವರಾತ್ರಿ ಹಾಗೂ ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ.

ಶಿವಮೊಗ್ಗಾ ಡಿ॥ ಆಯನೂರು ಗ್ರಾಮದ ವೀರಶೈವ ಮಹಾಜನರು ಸತ್ಪ್ರಗ್ರಹಕೂಟವು ಪ್ರಾಪ್ತವಾದಂದಿನಿಂದ ಸಮಸ್ತಕಷ್ಟಗಳನ್ನೂ ಪರಿಹರಿಸುವ ಸಾಮರ್ಥ್ಯವುಳ್ಳ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆ-ಮಾಹೇಶ್ವರಾರಾಧನೆ ಇತ್ಯಾದಿ ಕಾರ್ಯಕಲಾಪಗಳನ್ನು ಅಸಾಧಾರಣ ಭಕ್ತಿಯಿಂದ ನೆರವೇರಿಸುತ್ತಿದ್ದು ಕಾರ್ಯೋಪಕ್ರಮದ ಪೂರ್ವಭಾವಿಯಾಗಿಯೇ ಸಂಕಲ್ಪಿಸಿದ್ದ ಪ್ರಕಾರ ಮಹಾಶಿವರಾತ್ರಿ ಹಾಗೂ ಶ್ರೀ ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಯೂ ತಾ॥ 12-2-34 ಸೋಮವಾರ ಅತ್ಯಂತ ವೈಭವದಿಂದ ಸಮಾಪ್ತಿಗೊಂಡವು. ಈ ಸುದಿವಸದಲ್ಲಿ ವೀರಶೈವರ ಪ್ರತಿಯೊಂದು ಗೃಹದಲ್ಲಿಯೂ ಈ ಉಭಯ ಜಗದ್ಗುರುಗಳ ಭಾವಚಿತ್ರವನ್ನು ಮೂರ್ತಗೊಳಿಸಿ ಅಷ್ಟವಿಧಾರ್ಚನೆಗಳಿಂದ ಪೂಜಿಸಿ, ತತ್ಪ್ರಸಾದವನ್ನು ವಿನಿಯೋಗಿಸಿ ರಾತ್ರಿ ೧೧ ಗಂಟೆಯಿಂದ ಶ್ರೀ ವೃಷಭೇಂದ್ರಾಲಯದಲ್ಲಿ ಸುಪ್ರಸಿದ್ಧ ಕೀರ್ತನಕಾರರಾದ ವೇ॥ ಗುಬ್ಬೀಶಿವರುದ್ರಶಾಸ್ತ್ರಿಗಳಿಂದ ಪಾರ್ವತೀಪರಿಣಯ ಎಂಬ ಶಿವಸಂಕೀರ್ತನೆಯು ಅನುವಾದಮಾಡಲ್ಪಟ್ಟಿತು. ಈ ಕೀರ್ತನದಲ್ಲಿ ಪ್ರತಿಪಾದಿಸಲ್ಪಟ್ಟ ಪ್ರತಿಯೊಂದು ವಿಷಯವೂ ತತ್ತ್ವಾರ್ಥದಿಂದೊಡಗೂಡಿ ಆಬಾಲವೃದ್ಧರ ಮನಸ್ಸಿನ ಮೇಲೆ ಚನ್ನಾಗಿ ಪರಿಣಾಮವನ್ನುಂಟುಮಾಡುತ್ತಲಿತ್ತು. ಮರುದಿನ ಬೆಳಗ್ಗೆ ೧೦ ಗಂಟೆಯಿಂದ ರಾತ್ರಿ ೧೨ ಗಂಟೆಯುವರೆಗೂ ಭೂರುದ್ರಗಣಸಂತರ್ಪಣೆಯು ನಡೆದು ತತ್ಸಮಯದ ಜ್ಞಾಪಕಾರ್ಥವಾಗಿ ಶ್ರೀ ಪಂಚಾಚಾರ್ಯ ಪ್ರಭಾಪೋಷಣಕ್ಕೋಸ್ಕರ ಒಂದು ರೂ. ಯು ತೆಗೆಯಿಸಲ್ಪಟ್ಟಿತು. ತಮ್ಮ ತಮ್ಮ ವ್ಯವಹಾರಗಳ ಕಡೆಗೆ ಸ್ವಲ್ಪವೂ ಗಮನಿಸದೆ ಹಗಲಿರುಳೆನ್ನದೆ ಸೇವಾಕಾರ್ಯದಲ್ಲಿಯೇ ನಿರತರಾಗಿದ್ದ ಇಂತಹ ಶ್ರೀ ಗುರುಭಕ್ತರಿಗೆ ಶಿವಯೋಗವು ಲಭಿಸಿಯೇ ಲಭಿಸುವದು.

ಓರ್ವ ಗುರುಚರಣ ಸೇವಾಭಿಲಾಷಿ.

ಸಿಂಗಟಾಲೂರು.

ಶ್ರೀ ಭಗವತ್ಪಾದ ಜಗದ್ಗುರು ದಾರುಕಾಚಾರ್ಯ ಶಾಖಾಮಠೀಯ ಗುರುಪರಂಪರಾಗತ ಸಿಂಗಟಾಲೂರ ಬೃಹನ್ಮಠಾಧ್ಯಕ್ಷ ವೇ॥ ಬಸವಲಿಂಗಾರ್ಯ ತನೂಜಾತ ನಂಜೆಯ್ಯಸ್ವಾಮಿ ತದನುಜ ಅನ್ನದಾನಸ್ವಾಮಿ ಇವರು ಮಠದಲ್ಲಿ ಕೃತಾದಿ ಯುಗಕ್ರಮದಿಂದ ಬಂದಿರುವ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ವಿಶ್ವಾರಾಧ್ಯರ ಜಯಂತಿಗಳನ್ನು ನಮ್ಮ ಊರಿನ ಮಾನ್ಯರಾದ ಮಠಗಳ ಪ್ರಸನ್ನದೇವರ ಮತದ ವೇ॥ ಸಿದ್ಧಾಂತಿ ಗಂಗಾಧರಶಾಸ್ತ್ರಿಗಳವರು ಸರ್ವರಿಗೂ ಚನ್ನಾಗಿ ಬೋಧೆಮಾಡಿ ಇದೇ ಮಾಘ ವದ್ಯ ೧೪ (ತಾ॥೧೨-೨-೩೪) ನೇ ಚಂದ್ರವಾರ ಸಾಯಂಕಾಲದಲ್ಲಿ ಉಚ್ಚಸ್ಥಾನದಲ್ಲಿ ಉಭಯಸಿಂಹಾಸನಾಧೀಶ್ವರರ ಭಾವಚಿತ್ರಗಳನಿಟ್ಟು ವೇದೋಕ್ತಮಂತ್ರಗಳಿಂದ ಅರ್ಚಿಸಿ ಅಷ್ಟೋತ್ತರ ಶತನಾಮೋಚ್ಚಾರಣಪೂರ್ವಕ ಬಿಲ್ವಪತ್ರಗಳನ್ನು ಧರಿಸಿ ಪುಷ್ಪಾಂಜಲಿಯನ್ನಿತ್ತು, ಜಗದಾಚಾರ್ಯರ ಜಯಘೋಷದೊಡನೆ ಸಮಾಪ್ತವಾಯಿತು.

ಇದೇ ಪ್ರಕಾರವಾಗಿ ಪ್ರತಿಯೊಂದು ಗ್ರಾಮದ ಸಕಲ ಸದ್ಭಕ್ತರಾದ ವೀರಶೈವರು ಮತಸ್ಥಾಪಕರಾದ ಗುರುವರ್ಯರ ಜಯಂತೀಮಹೋತ್ಸವವನ್ನು ಆಯಾಯ ಶುಭತಿಥಿಗಳಲ್ಲಿ ಆಚರಿಸುವದಲ್ಲದೆ ಇನ್ನಾದರೂ ನಿಜವಾದ ಗುರುಮೂಲವನ್ನು ತಿಳಿದು ಶ್ರೀಗುರು ಕೃಪಾಕಟಾಕ್ಷಕ್ಕೆ ಪಾತ್ರರಾಗುವರೆಂದು ಅಪೇಕ್ಷಿಸುವೆವು.

ಕಂದ॥ ಈ ಪರಿಯೊಳ್ ಜನರೆಲ್ಲರ್ | ಪಾಪವ ಪರಿಹರಿಪ ಗುರುಜಯಂತಿಯನೆಸಗಲ್ || ತಾಪತ್ರಯದ ಳಿದಾಗಿರೆ | ಜಾಪತಿಯ ಕೃಪೆಗೆ ಪಾತ್ರರಪ್ಪರ್ ಧರೆಯೊಳ್ ||೧||

ರುದ್ರಮುನಿಸ್ವಾಮಿ, ಪಿ. ಎಂ. ಮಾಗಳ.

ಶ್ರೀಗಳವರ ಅಡ್ಡಪಲ್ಲಕ್ಕಿ ಮತ್ತು ರಥೋತ್ಸವವು

ಬಾಣಾಪೂರ.

ವಿಜಾಪೂರ ಜಿಲ್ಲಾ ಮುದ್ದೇಬಿಹಾಳ ತಾಲೂಕು ಪೈಕಿ ಮೋಜೆ, ಬಾಣಾಪುರ, ಉರ್ಫ ಗಗನಾಪೂರದಲ್ಲಿ ಶ್ರೀ ಗಂಗಾಧರನ ಜಾತ್ರೆಯು ಪದ್ಧತಿಪ್ರಕಾರ ಈ ವರ್ಷವೂ ವಿಜೃಂಭಣೆಯಿಂದ ಜರುಗಿತು. ಇದೇ ಮಾಘ ಶು॥ ೯ ಬುಧವಾರ ದಿವಸ ಮಹಾಗಣಾರಾಧನೆಗೆ ನಾಲತವಾಡದ ಶ್ರೀಮಂತ ಶಂಕರರಾವ ನಾಡಗೌಡರು, ನಾಲತವಾಡದ ಹಿರೇಮಠಾಧ್ಯಕ್ಷರಾದ ಪಟ್ಟಾಧ್ಯಕ್ಷ ಶ್ರೀ ಗಂಗಾಧರಸ್ವಾಮಿಗಳನ್ನು ಅಡ್ಡಪಲ್ಲಕ್ಕಿ ಮಹೋತ್ಸವದೊಡನೆ ಕರೆದುಕೊಂಡು ಬಂದು ಪಾದಪೂಜೆಮಾಡಿ ಭಕ್ತಮಾಹೇಶ್ವರರಿಗೆ ಸಂತರ್ಪಣೆ ನಡೆಸಿ ಯಥೋಚಿತ ದಕ್ಷಿಣತಾಂಬೂಲಾದಿಗಳಿಂದ ಸತ್ಕರಿಸಿದರು. ಈ ವರ್ಷ ನಾಲತವಾಡದಲ್ಲಿ ಪ್ಲೇಗ ಇರುವುದರಿಂದಲೂ ಜನಗಳು ಕ್ಯಾಂಪಿನಲ್ಲಿ ವಾಸಮಾಡಿರುವುದರಿಂದಲೂ ಉತ್ಸವವನ್ನು ಕ್ಯಾಂಪಿನಲ್ಲಿಯೇ ನಡೆಯಿಸಬೇಕಾಯಿತು. ಮಾಘ ಶು॥ ೧೦ ಗುರುವಾರ ಸಾಯಂಕಾಲ ನೂತನವಾಗಿ ಶೃಂಗರಿಸಲ್ಪಟ್ಟ ಪುಷ್ಪರಥದಲ್ಲಿ ಶ್ರೀ ಸ್ವಾಮಿಗಳು ಮೂರ್ತಮಾಡಿದನಂತರ ಸಕಲ ಬಿರುದಾವಳಿಯೊಡನೆಯೂ ಅನಂತ ವಾದ್ಯವೈಭವದೊಡನೆಯೂ ರಥವು ಸಾಗಿ ಪಾದಗಟ್ಟಿಗೆ ಹೋಗಿ ಸ್ವಸ್ಥಾನವನ್ನು ತಲ್ಪಿದನಂತರ ಶ್ರೀಗಳು ಬಿರುದಾವಳಿ ಸಮೇತ ಸ್ವಸ್ಥಾನಕ್ಕೆ ದಯಮಾಡಿಸಿದರು. ಈ ವರ್ಷ ಪ್ಲೇಗಿನ ಗಲಾಟೆಯಿದ್ದರೂ ೫-೬ ಸಹಸ್ರಕ್ಕೆ ಕಡಿಮೆಯಿಲ್ಲದಂತೆ ಜನಗಳು ಕೂಡಿದ್ದರು. ಮತ್ತು ನಮ್ಮ ತಾಲೂಕಿನ ೧ ನೇ ವರ್ಗ ಮ್ಯಾಜಿಸ್ಟ್ರೇಟರಾದ ರಾ॥ ಸಾ॥ ಬೆಳ್ಳುಬ್ಬಿ ಮಾಮಲೇದಾರರು, ವಕೀಲರು, ವತನದಾರರು ಮತ್ತು ಶೆಟ್ಟಿ, ಸಾಹುಕಾರರು ವಗೈರೆ ಪ್ರಮುಖ ಜನರು ಬಂದಿದ್ದರು. ಉತ್ಸವಕಾಲದಲ್ಲಿ ಪೋಲೀಸಿನವರ ಬಂದೋಬಸ್ತು ವ್ಯವಸ್ಥೆಯು ಸಮರ್ಪಕವಾಗಿದ್ದಿತು.

ಶ್ರೀಮಂತ ನಾಡಗೌಡರು ಪ್ರತಿವರ್ಷ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಶ್ರೀ ಸ್ವಾಮಿಗಳ ಮತ್ತು ಶ್ರೀ ಗಂಗಾಧರನ ಉತ್ಸವ ಮಾಡುತ್ತ ಸಾವಿರಾರು ಜನರಿಗೆ ಅನ್ನಸಂತರ್ಪಣೆ ಮಾಡುತ್ತಿರುವುದು ಸ್ತುತ್ಯವಾಗಿದೆ. ಶ್ರೀ ಗಂಗಾಧರನು ಈ ಮಹಾಶಯರಿಗೆ ದೀರ್ಘಾಯುರಾರೋಗ್ಯಸಂಪತ್ತನ್ನುಂಟುಮಾಡಲೆಂದು ಹಾರೈಸುವ,

ಓರ್ವ ಪ್ರತ್ಯಕ್ಷದರ್ಶಿ.

|| ಶ್ರೀ ||

ಚಿಕ್ಕಮಗಳೂರು,

ಕಾಫೀಪ್ಲಾಂಟರ್ ತೊಗರಿಹಂಕಲು ಮಲ್ಲೇಗೌಡನ ವಿಜ್ಞಾಪನೆಗಳು.

ಮಹಾಶಯರೇ!

ನನ್ನ ಇಷ್ಟಮಿತ್ರರು ಅನೇಕರು ಪ್ರೋತ್ಸಾಹಿಸಿದುದರಿಂದ ಈ ಸಾಲಿನಲ್ಲಿ ರಚಿಸಲ್ಪಡುವ **ಮೈಸೂರು ನ್ಯಾಯವಿಧಾಯಕ ಸಭೆಗೆ** ನಾನು ನಮ್ಮ ಕಡೂರು ಡಿಸ್ಟ್ರಿಕ್ಟಿನ ಪ್ರತಿನಿಧಿ ಸ್ಥಾನಕ್ಕೆ ಉಮೇದುವಾರನಾಗಿ ನಿಂತಿರುತ್ತೇನೆ.

ಇದೇ 1934 ನೇ ಇಸವಿ **ಮಾರ್ಚಿ ತಾರೀಖು 3 ನೇ ಶನಿವಾರ** ನಡೆಯುವ ಚುನಾವಣೆಯಲ್ಲಿ ತಮ್ಮ ಸ್ನೇಹಿತರೊಡನೆ ತಾವು ತಮ್ಮ ಅಮೋಘವಾದ ಓಟನ್ನು ದಯವಿಟ್ಟು ನನಗೆ ಕೊಡುವುದರ ಮೂಲಕ ಅನುಕೂಲರಾಗಬೇಕೆಂದು ಬಳಿಸಾರಾಗಿ ಅನುಕೂಲವಾಗಿ ನಮಗೆ ವೇಳೆ ಪ್ರಸನ್ನ ವಿನಂತಿ... ಮೂರು ವರ್ಷ ತಮ್ಮಗಳ ಪ್ರಾತಿನಿಧ್ಯವನ್ನು ದಯವಿಟ್ಟು ನನಗೆ ಕಲ್ಪಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ದಯವಿಟ್ಟು ಆನೆಯ ಮುಂದೆ X ಈ ರೀತಿ ಗುರುತು ಮಾಡಬೇಕು.

ತಮ್ಮ ವಿಧೇಯ,

ಟಿ. ಬಿ. ಮಲ್ಲೇಗೌಡ.

ಕಾಫೀಪ್ಲಾಂಟರ್.

ಲಂಡನ್ ನಗರದ ಮುನಿಸಿಪಾಲಿಟಿಯವರು ಅಲ್ಲಿಯ ಕೆಲವು ಬೀದಿಗಳಲ್ಲಿ ಗೊತ್ತಾದವೇಳೆಯಲ್ಲಿ ವಿನಾ ಇತರ ಕಾಲಗಳಲ್ಲಿ ಯಾವ ವಾಹನಗಳೂ ಸಂಚರಿಸಕೂಡದೆಂಬ ನೂತನ ಕಾಯಿದೆಯನ್ನು ಮಾಡಬೇಕೆಂದು ಯೋಚಿಸುತ್ತಿರುವರು. ಚಿಕ್ಕಚಿಕ್ಕ ಮಕ್ಕಳು ಸುರಕ್ಷಿತವಾಗಿ ಬೀದಿಗಳಲ್ಲಿ ಆಟವಾಡಲು ಅವಕಾಶವುಂಟಾಗಲೆಂಬುದೇ ಈ ಕಾಯಿದೆಯ ಉದ್ದೇಶವಾಗಿರುವದು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ವಿಶ್ವಾರಾಧ್ಯಾಯನಮಃ ವೀರಶೈವವಿದ್ವತ್ಸಂಘದ ಸಭೆ.

ಲೇಖಕರು—ಸಂಘದ ಸೆಕ್ರೆಟರಿಗಳು.

ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲದಲ್ಲಿ ಹದಿನೈದು ದಿನಕ್ಕೊಮ್ಮೆ ಸಭೆಯು ನಡೆಯುತ್ತಿರುವುದು ಪ್ರಸಿದ್ಧವೇ ಇದೆ. ಅದರಂತೆ ತಾ|| ೧೩-೨-೧೯೩೪ ನೆಯ ಸಾಯಂಕಾಲ ೭ ಘಂಟೆಗೆ ವೀರಶೈವ ವಿದ್ವತ್ಸಂಘದ ಸಭೆಯು ಆರಂಭವಾಯಿತು. ಮಹಾಶಿವರಾತ್ರಿಗಾಗಿ ಬಂದು ಶ್ರೀ ಮಠದಲ್ಲಿ ವಿಜೃಂಭಣೆಯಿಂದ ಜರುಗಿದ ಶ್ರೀ ಜಗದ್ಗುರು ಪಂಡಿತಾರಾಧ್ಯವಿಶ್ವಾರಾಧ್ಯರ ಜಯಂತೀಮಹೋತ್ಸವಗಳಲ್ಲಿ ಭಾಗಿಗಳಾಗಿ ಧನ್ಯಾತ್ಮರಾದ ಕರ್ನಾಟಕ ಹಾಗೂ ಮಹಾರಾಷ್ಟ್ರಪ್ರಾಂತದ ಸದ್ಭಕ್ತರೂ ಸಭೆಗೆ ಆಗಮಿಸಿದ್ದರು. ಮೊಟ್ಟಮೊದಲು ಸಭೆಯಸಂಚಾಲಕರಾದ ಮುದೇನೂರು ಬೃಹನ್ಮಠಾಧ್ಯಕ್ಷ ಶ್ರೀವಾಗೀಶ ಶಿವಾಚಾರ್ಯರು ಜಗದ್ಗುರುಪೀಠದ ದರ್ಶನಕ್ಕಾಗಿ ಆಗಮಿಸಿರುವ ಹೈದರಾಬಾದ ಸುಪ್ರಸಿದ್ಧವಕೀಲರಾದ ನಿರ್ಮಲದೇಶಮುಖ ಬಾಪೂರಾವರನ್ನು ಸಭಾಧ್ಯಕ್ಷರನ್ನಾಗಿ ಆರಿಸಿದರು. ಸಭಿಕರೆಲ್ಲರೂ ಅನುಮೋದನವನ್ನಿತ್ತರು. ಆ ಮೇಲೆ ಅವರಿಗೆ ಪುಷ್ಪಹಾರಾದಿಗಳು ಅರ್ಪಿಸಲ್ಪಟ್ಟವು. ದೇಶಮುಖರು ಅಧ್ಯಕ್ಷಸ್ಥಾನವನ್ನಾರೋಹಿಸಿದಮೇಲೆ ಗುರುಕುಲದವರಿಂದ ಮಂಗಲಪಾಠವು ನಡೆಯಿತು. ಆ ಮೇಲೆ ಆಯುರ್ವೇದ ವಿದ್ಯೆಯಸಲುವಾಗಿ ಸ್ವಾರ್ಥತ್ಯಾಗಮಾಡಿ ಅಹೋರಾತ್ರಿ ಪ್ರಯತ್ನಪಡುತ್ತಿರುವ ಕಂಕಣವಾಡಿ ಮ|| ರಾ|| ಬಸವಪ್ಪನವರು ಪೋಲೀಸು ಇನಸ್ಪೆಕ್ಟರು ಇವರ ಪರಿಚಯವನ್ನು ಪಂ|| ವೇ|| ವೀರಭದ್ರಶಾಸ್ತ್ರಿಗಳು ಚಿದರೀಮಠ ಇವರು ಮಾಡಿಕೊಟ್ಟರು. ತರುವಾಯ ಅಧ್ಯಕ್ಷರ ಅಪ್ಪಣೆಯಮೇರೆಗೆ ಸಂಘದವತಿಯಿಂದ ಇನಸ್ಪೆಕ್ಟರಿಗೆ ಪುಷ್ಪಹಾರವು ಅರ್ಪಿಸಲ್ಪಟ್ಟಿತು. ಮೊದಲು ಕಾವ್ಯತೀರ್ಥ ಚಂದ್ರಶೇಖರಶರ್ಮಾ ಆರಾಧ್ಯಮಠ ಇವರು ಧರ್ಮವಿಷಯವಾಗಿ ವ್ಯಾಖ್ಯಾನಮಾಡುತ್ತ ಸದ್ಯಃ ವೀರಶೈವಸಮಾಜದಲ್ಲಿ ಧರ್ಮಜಾಗ್ರತೆಯಾಗಲಿಕ್ಕೆ ಸಂಸ್ಕೃತಕಾಲೇಜುಗಳಲ್ಲಿ ಧರ್ಮಗ್ರಂಥಗಳ ಶಿಕ್ಷಣವು ಅತ್ಯಾವಶ್ಯಕವಾದುದೆಂಬುದಾಗಿ ಬಹಳ ಕಳಕಳಿಯಿಂದ ಹೇಳಿದರು. ಗುರುದೇವಶಿವಾಚಾರ್ಯರು ಬೃಹನ್ಮಠ ಚಿಕ್ಕಮಣ್ಣೂರು ಇವರು ಲಿಂಗವಿಷಯಕವಾಗಿ ತಾತ್ವಿಕದೃಷ್ಟಿಯಿಂದಲೂ ಧರ್ಮಗ್ರಂಥ ಪ್ರಮಾಣಗಳಿಂದಲೂ ವ್ಯಾಖ್ಯಾನವನ್ನು ಮಾಡಿದರು. ಸಭೆಯಲ್ಲಿ ವಿಶೇಷವಾಗಿ ಮರಾಠೀ ಭಾಷೆಯನ್ನು ತಿಳಿಯತಕ್ಕವರಿದ್ದುದರಿಂದ ಆಗ್ರಹದಮೇಲೆ ಶ್ರೀ ಕರಿಬಸವ ಶಿವಾಚಾರ್ಯರು ಬೃಹನ್ಮಠ ಮಹಿಸಾಳು ಇವರು ವೀರಶೈವ ಮತವಿಷಯವಾಗಿ ಅಮೋಘವಾದ ಭಾಷಣವನ್ನು ಮಾಡಿದರು. ಆ ಮೇಲೆ ಪಂ|| ವೇ|| ಭಾನಾಪುರ ಬೃಹನ್ಮಠದ ನೀಲಕಂಠಶಾಸ್ತ್ರಿಗಳು ಶಿವಭಕ್ತಿ ವಿಷಯವಾಗಿ ವ್ಯಾಖ್ಯಾನಮಾಡಿ ಪರಮಾತ್ಮ ಸಾಕ್ಷಾತ್ಕಾರವನ್ನು ಮಾಡಿಕೊಡಲು ಭಕ್ತಿಯು ಎಂತಹ ಸುಗಮಮಾರ್ಗವೆಂಬುದನ್ನು ತೋರಿಸಿಕೊಟ್ಟರು. ಅನಂತರ ಕೆಲವರ ಭಾಷಣಗಳಾದವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವೀರಶೈವರು ಸುಧಾರಿಸಲಿಕ್ಕೆ ಮೊದಲು ಗುರುವರ್ಗವು ತಮ್ಮ ನಿಜಸ್ವರೂಪವನ್ನು ಹೊರಪಡಿಸಿ ಶಿಷ್ಯಮಂಡಳಿಗೆ ಧರ್ಮಬೋಧೆಯನ್ನು ಮಾಡಲು ಆರಂಭಿಸಬೇಕೆಂತಲೂ ಮತ್ತು ಭಕ್ತಿಯಮಾರ್ಗವನ್ನು ಅನುಸರಿಸಲಿಕ್ಕೆ ಗುರುವಿನುಪದೇಶವೇ ಮೂಲಕಾರಣವೆಂತಲೂ ಹೇಳಿ, ಈ ವಿದ್ವತ್ಸಂಘದ ಕಾರ್ಯಕ್ರಮಗಳನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ, ಈ ಸಂಘವು ಶ್ರೀ ಜಗದ್ಗುರು ವಿಶ್ವಾರಾಧ್ಯರ ಅನುಗ್ರಹದಿಂದ ಇದಕ್ಕಿಂತಲೂ ಅಭಿವೃದ್ಧಿ ಹೊಂದಲೆಂದು ವಿಶ್ವಾರಾಧ್ಯರನ್ನು ಪ್ರಾರ್ಥಿಸುವೆನೆಂದು ತಮ್ಮ ವ್ಯಾಖ್ಯಾನವನ್ನು ಮುಗಿಸಿದರು. ಆಗ ಸಭಾಸಂಚಾಲಕರು ಅಧ್ಯಕ್ಷರ ಆಭಾರವನ್ನು ಮನ್ನಿಸಿದರು. ಕಡೆಗೆ ಶ್ರೀ ಜಗದ್ಗುರುಗಳ ಮಂಗಲ ಜಯಘೋಷಗಳೊಡನೆ ಸಭೆಯು ಸಮಾಪ್ತವಾಯಿತು.

ಹುಬ್ಬಳ್ಳಿ ಶ್ರೀ ಗೌರೀಶಂಕರ ಕಂಪನಿಯ ೨ ನೇ ಮಹಾಯಾತ್ರೆಯು.

ಜಗತ್ತಿನೊಳಗಿನ ಜೀವರಾಶಿಗಳಲ್ಲಿ ಮನುಷ್ಯಜನ್ಮವು ಶ್ರೇಷ್ಠವಾದದ್ದೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಯಾವ ಸಿಂಹವು ಶಕ್ತಿಯಲ್ಲಿ ಮಿಗಿಲಾದದ್ದೋ ಅದರ ಮೇಲೆ ಸವಾರಿಮಾಡುವ ಪ್ರಾಣಿಯು ಮನುಷ್ಯನಲ್ಲವೆ? ಯಾವ ಆನೆಯು ಆಕಾರದಲ್ಲಿ ದೊಡ್ಡದಾಗಿರುವದೋ ಅದರ ಮೇಲೆ ಸವಾರಿಮಾಡುವವನು ಮನುಷ್ಯನಲ್ಲವೇ? ಯಾವ ಯಂತ್ರವು ಭೂತಾಕಾರವಾಗಿರುವದೋ ಅದನ್ನು ನಿರ್ಮಿಸಿದವನೂ ಚಲಿಸುವ ಹಾಗೆಮಾಡುವವನೂ ಮನುಷ್ಯನಲ್ಲವೇ? ಈಶಸೃಷ್ಟಿಯಲ್ಲಿ ಉಳಿದ ಪ್ರಾಣಿಗಳಿಂದಾಗದ ಕೃತ್ರಿಮಸೃಷ್ಟಿಯನ್ನು ರೂಪಿಸುವವನು ಮನುಷ್ಯನಾಗಿದ್ದಾನೆ. ಅಂತೆಯೇ ಜಗತ್ತಿನೊಳಗಿನ ಜೀವರಾಶಿಗಿಂತಲೂ ಮನುಷ್ಯನಿಗೆ ಹೆಚ್ಚಿನ ವಿಚಾರವಿರುವದರಿಂದ ಅವನು ಜಗತ್ತನ್ನೇ ಆಳಲು ಯೋಗ್ಯತೆಯುಳ್ಳವನಾಗಿದ್ದಾನೆ. ಮಾನವನು ದೇಶಸಂಚಾರಮಾಡುವದರಿಂದ ಅವನ ಪ್ರಗತಿಯು ಇನ್ನೂ ಹೆಚ್ಚುವುದು. ಈ ತತ್ವಕ್ಕನುಸರಿಸಿ ನಮ್ಮ ಪುರಾತನರಾದ ಹಿರಿಯರು ಅದನ್ನು ಯಾತ್ರಾರೂಪದಿಂದ ಕಲ್ಪಿಸಿರುವರು. ಈ ಯಾತ್ರಾಸ್ಥಳಗಳಲ್ಲಿ ಒಂದು ಘೋರಾರಣ್ಯದಲ್ಲಿದೆ; ಒಂದು ಉನ್ನತವಾದ ಪರ್ವತದ ಮೇಲಿದೆ; ಇನ್ನೊಂದು ಸಮುದ್ರದ ತೀರದಲ್ಲಿದೆ; ಭರತಖಂಡದಲ್ಲಿರುವ ಎಲ್ಲಾ ಯಾತ್ರಾಸ್ಥಳಗಳ ಯಾತ್ರೆಯು ಮುಗಿಯುವುದರೊಳಗಾಗಿ ಮಾನವ ಪ್ರಾಣಿಗೆ ವಿಶಾಲವಾದ ಈ ಜಗತ್ತಿಗೊಡೆಯನಾದ ಜಗದೀಶನ ಅಗಾಧಮಹಿಮೆಯು ಹೊಳೆದು ಅವನು ಕೇವಲ ಸದ್ಗುಣಗಳ ಸಮೂಹದ ಮೂರ್ತಿಯಾಗಿ ಸದುದ್ಯೋಗಿಯೂ ಸತತೋದ್ಯೋಗಿಯೂ ದೇಶಸೇವಕನೂ ಆಗಿ ಮನುಷ್ಯಜನ್ಮದ ಸಾರ್ಥಕತೆಯಾಗಬೇಕೆಂಬುದೇ ಹಿರಿಯರ ಗೂಢವಾದ ತತ್ವವಾಗಿದೆ. ಇದಕ್ಕನುಸರಿಸಿ ಉತ್ತರದ ಗಂಗಾಜಲವನ್ನು ದಕ್ಷಿಣದ ರಾಮೇಶ್ವರಕ್ಕೆರೆಯಬೇಕೆಂತಲೂ ದಕ್ಷಿಣ ತುದಿಯ ಸಮುದ್ರದ (ಸೇತುವೆಯ) ಮಳಲನ್ನು ಉತ್ತರದ ಪ್ರಯಾಗಕ್ಕೆ ಒಯ್ಯಬೇಕೆಂತಲೂ ಪುರಾಣಗಳಲ್ಲಿ ಬರೆದಿಟ್ಟಿರುವರು. ಈ ತರಹದ ಯಾತ್ರೆಯನ್ನು ಮಾಡುವುದು ಮಾನವರ ಕರ್ತವ್ಯವಾಗಿದೆ. ಭರತಖಂಡದಲ್ಲಿರುವ ಮುಖ್ಯಮುಖ್ಯವಾದ ಎಲ್ಲಾ ಯಾತ್ರಾಸ್ಥಳಗಳನ್ನು ನೋಡಬೇಕೆಂದು ನಾವೆಲ್ಲರೂ ಬಹು ದಿವಸಗಳಿಂದ ಕುತೂಹಲಪಟ್ಟಿದ್ದೆವು. ಆದರೆ ನಾವರಿಯದ ಹಿಂದೂಸ್ಥಾನದ ಬೇರೆಬೇರೆಭಾಗಗಳ ಭಾಷೆ, ರೈಲ್ವೆ ವಿಷಯ, ಎಂದೂ ನೋಡದ ಪ್ರದೇಶದ ಸಂಚಾರದ ಕಷ್ಟ, ಅನನುಭವದಿಂದ ಬರುವ ಹೆಚ್ಚಾದ ಖರ್ಚು ಮುಂತಾದವುಗಳಿಂದ ಭೀತಿಗೊಂಡು ಹಾದಿ ಕಾಣದವರಾಗಿದ್ದೆವು. ಆದರೆ ಭಕ್ತವತ್ಸಲನಾದ ಶ್ರೀ ಗೌರೀಶಂಕರನು ನಮ್ಮೆಲ್ಲರಿಗೆ ಯಾತ್ರೆಮಾಡಿಸಲು ಕೈಲಾಸಬಿಟ್ಟು ಕರ್ನಾಟಕಕ್ಕೆ ಬಂದನೋ ಏನೋ ಎಂಬಂತೆ ಶ್ರೀ ಗೌರೀಶಂಕರ ಕಂಪನಿಯು ಹುಬ್ಬಳ್ಳಿ ಪಟ್ಟಣದಲ್ಲಿ ಸ್ಥಾಪಿತವಾಗಿ ಹೋದವರುಷ ಎಪ್ರಿಲ್ ತಿಂಗಳಲ್ಲಿ ತನ್ನ ಅನಂತ ಸುಖಸೌಲಭ್ಯಗಳಿಂದೊಡಗೂಡಿದ ಸಾಧನಗಳಿಂದ ಶ್ರೀ ಕಾಶೀರಾಮೇಶ್ವರ ಯಾತ್ರೆಯನ್ನು ಸುಖವಾಗಿ ಮುಗಿಯಿಸಿ ಯಾತ್ರಿಕರ ಆದರಕ್ಕೆ ಪಾತ್ರವಾಗಿ ಯಾತ್ರಿಕರಿಂದ ಬಹುಮಾನ ಪಡೆದದ್ದನ್ನು ಕೇಳಿ ಯಾರಿಗೆ ತಾನೆ ಆನಂದವಾಗಲಿಕ್ಕಿಲ್ಲ? ಈ ವರ್ಷ ಈ ಕಂಪನಿಯ ಯಾತ್ರಾಪ್ರಸಂಗದ ಹಾದಿನೋಡುತ್ತಾ ಕುಳಿತಿದ್ದೆವು ಶ್ರೀ ಗೌರೀಶಂಕರ ಕಂಪನಿಯಿಂದ ಪ್ರಕಟಿಸಿದ ತಾರೀಖಿಗನುಸರಿಸಿ ಟ್ರೇನು ಬರುವದೆಂದು ೨ ಸಾರೆ ಮಿರಜ ಸ್ಟೇಷನಿನಲ್ಲಿ ಹೊಂಚುಹಾಕಿಕೊಂಡು ಕುಳಿತೆವು. ಆದರೆ ಟ್ರೇನೇಬರಲಿಲ್ಲ. ವಿಷಣ್ಣವದನರಾಗಿ ನಮ್ಮ ಊರಿಗೆ ತೆರಳಿದೆವು. ಆದರೆ ಕುಲಕಂಟಕರಾದ ಸಮಾಜಕಂಟಕರಾದ ನಮ್ಮ ಕೆಲ ಭಾಗತಸಹೋದರರು ಈ ಕಂಪನಿಯ ೨ನೇ ಪ್ರವಾಸಕ್ಕೆ ವಿಘ್ನಗಳನ್ನನೇಕವಾಗಿ ತಂದರೆಂದೂ ಅದರಿಂದ ಟ್ರೇನು ಹೊರಡಲಿಲ್ಲವೆಂದೂ ಹಿಂದಿನಿಂದ ತಿಳಿದು ಬಂದಿತು. ಈ ಕುಲಕಂಟಕರಾದ ಭಾರತಮಾತೆಯ ಪುತ್ರರು ಹೇರಳವಾಗಿರುವತನಕ ಈ ಭರತಖಂಡವು ಎಂದೂ ಏಳ್ಗೆಯನ್ನು ಪಡೆಯಲಾರದು. ಆದರೆ ಶ್ರೀ ಗೌರೀಶಂಕರಕಂಪನಿ ಮ್ಯಾನೇಜರಾದ ಶ್ರೀಯುತ ಜಿ.ಎ. ಶಿರೂರ ಇವರು ಸುಸಂಸ್ಕೃತರೂ, ದೀರ್ಘಸಾಹಸಿಗಳೂ ಮನೋನಿಶ್ಚಯದವರೂ, ಕರ್ತವ್ಯದಕ್ಷರೂ ಶ್ರಮಸಹಿಷ್ಣುಗಳೂ, ವಿಘ್ನಕ್ಕೆ ಹಿಂಜರಿಯದವರೂ ಉತ್ಸಾಹಪ್ರಿಯರೂ ಕಲಾವಿಶಾರದರೂ ಆಚಾರವಂತರೂ ದುಷ್ಟರಿಂದ ದೂರಿರುವರೂ, ಸಜ್ಜನವಿಧೇಯರೂ ಆಗಿರುವದರಿಂದ ತಮ್ಮ ಕಂಪನಿಯ ೨ ನೇ ಯಾತ್ರೆಯ ಯೋಗವನ್ನು ಶೀಘ್ರದಲ್ಲಿಯೇ ಉಂಟುಮಾಡಿದರು. ಇದರಿಂದ ಶ್ರೀಯುತ ಜಿ. ಎ. ಶಿರೂರ ಇವರನ್ನು ಬಹಳವಾಗಿ ಮನ್ನಿಸುವೆವು. ಈ ಕಂಪನಿಯ ಯಾತ್ರಾಸಂಬಂಧವನ್ನು ಲಿಖಮಾಡಿಕೊಟ್ಟ ವೇದಮೂರ್ತಿ ಶಿವರುದ್ರಯ್ಯ ವಿರೂಪಾಕ್ಷಯ್ಯ ಬಂಗಿ ಸಾ|| ಬಸಹಟ್ಟಿ ಇವರನ್ನು ಕೊಂಡಾಡದಿರಲಾರೆವು. ಬಸಟ್ಟಿ ಹುಲ್ಯಾಳಗಳ ನಾವೆಲ್ಲಾ ಯಾತ್ರಿಕರು ತಾ|| ೨೫-೧೨-೧೯೩೪ ನೇ ದಿವಸ ಕುಡಚಿ ಸ್ಟೇಷನ್ನಿನ ಮೇಲೆ ಶ್ರೀ ಗೌರೀಶಂಕರ ಯಾತ್ರಿಕರ ಸ್ಟ್ರೀಮವನ್ನು ಕೂಡಿಕೊಂಡೆವು. ಟ್ರೇನಿನಲ್ಲಿ ಯಾತ್ರಿಕರ ಸಲುವಾಗಿ ಏರ್ಪಡಿಸಿದ್ದ ಎಲ್ಲ ಅನುಕೂಲತೆಗಳನ್ನು ನೋಡಿ ಅವುಗಳ ಆದರದಿಂದ ಯಾತ್ರೆಯು ಬಹು ಸುಖರೂಪವಾದದ್ದೂ ಸುವ್ಯವಸ್ಥೆಯುಳ್ಳದ್ದೂ ಎಂದು ಕಂಡುಬಂದಿತು. ಮುಂದೆ ಶೀಘ್ರದಲ್ಲಿಯೇ ಶ್ರೀಕ್ಷೇತ್ರ ಪಂಢರಪುರಕ್ಕೆ ತಲ್ಪಿದೆವು. ಇಲ್ಲಿ ಚಂದ್ರಭಾಗನದಿಯ ಸ್ನಾನ, ಪಂಢರೀನಾಥನ ದರ್ಶನದಿಂದ ತೃಪ್ತರಾದೆವು. ಮುಂದೆ ಇಲ್ಲಿಂದ ಹೊರಟು ನಾಸಿಕ, ತ್ರ್ಯಂಬಕೇಶ್ವರ, ಪಂಚವಟಿ ಗೋದಾವರಿ ಉಗಮ ನೋಡಿಕೊಂಡು ಪಾವನರಾದೆವು. ಇವುಗಳ ಬಗ್ಗೆ ಹೆಚ್ಚಿನ ಸಂಗತಿಯನ್ನು ನಮ್ಮ ಸಂಗಡ ಬಂದಿರುವ ನಮ್ಮ ಯಾತ್ರಾ ಬಂಧುಗಳು ಈ ಮೊದಲೇ ಕರ್ನಾಟಕದ ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧಮಾಡಿದ್ದಾರೆ. ಮುಂದೆ ಮುಂಬಯಿ ಶಹರಕ್ಕೆ ಬಂದೆವು. ಇಲ್ಲಿ ರಾಣೀಬಗೀಚ, ವಾಳುಕೇಶ್ವರ, ಮುಂಬಾದೇವಿಗುಡಿ, ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಆನಂದಪಟ್ಟೆವು. ಇಲ್ಲಿಂದ ಬಡೋದೆಗೆ ಬಂದೆವು. ಇಲ್ಲಿ ಸಯಾಜಿರಾವ ಗಾಯಕವಾಡ ಮಹಾರಾಜರ ನಜರಬಾಗ ಮಕರಪ್ಯಾಲೇಸ್, ಲಕ್ಷ್ಮೀವಿಲಾಸ ಎಂಬ ಅರಮನೆಗಳು ನೋಡತಕ್ಕಂಥವುಗಳಾಗಿರುತ್ತವೆ. ಮುಂದೆ ಉಜ್ಜಯಿನಿಗೆ ಬಂದು ಮಹಾಕಾಲೇಶ್ವರ ಓಂಕಾರ ಮಾಂಧಾತ ಜ್ಯೋತಿರ್ಲಿಂಗಗಳ ದರ್ಶನ ತೆಗೆದುಕೊಂಡೆವು. ಬಡೋದೆ ಬಿಟ್ಟನಂತರ ಯಾವ ಸ್ಟೇಷನ್ನುಗಳ ಮೇಲೆಯೂ ಚಹಾಕಾಫಿಗಳು ಮಾರಲ್ಪಡುವದಿಲ್ಲ. ಬಿಸಿಹಾಲು ಮಾತ್ರ ಎಲ್ಲೆಡೆಯಲ್ಲಿಯೂ ಮಾರಲ್ಪಡುವದು. ಒಬ್ಬರು ಕುಡಿದ ಪಾತ್ರೆಯಲ್ಲಿ ಮತ್ತೊಬ್ಬರು ಕುಡಿಯುವಂತಿಲ್ಲ. ಒಮ್ಮೆ ಕುಡಿದ ಪಾತ್ರೆಯು ಕೂಡಲೇ ನೆಲಕ್ಕೆ ಬೀಸಾಡಲ್ಪಡುವದು. ಆಹಾ! ಏನು ಇವರ ಚಟ ಶೀಲಗಳು? ಸಿಂಗಲ್ ಅರ್ಧಾಣೆಗೆ ಮೆಚ್ಚಿ ಸಿಕ್ಕವರ ಎಂಜಲದಲ್ಲಿ ಸೊಂಡಿಯನ್ನಿಡುವ ದುಶ್ಚಟಗಳ ದಾಸರಾದ ಕರ್ನಾಟಕಸ್ಥರಿಗೆ ಇನ್ನೂ ಬುದ್ಧಿ ಬರಲೊಲ್ಲದು ಮುಂದೆ ಉಜ್ಜಯಿನಿಯಿಂದ ಆಗ್ರಾಕ್ಕೆ ಬಂದೆವು. ಈ ಭಾಗದಲ್ಲೆಲ್ಲ ಗೋದಿ, ತೊಗರಿ, ಸಾಸಿವೆ ಕಡಲೆಗಳು ಹೇರಳವಾಗಿ ಬೆಳೆಯುವವು. ಗೋವುಗಳನೇಕವಾಗಿದ್ದು ಪ್ರತಿಯೊಬ್ಬರಿಗೆ ಹಾಲುಕುಡಿಯುವ ಹಾಗೂ ಮಿಠಾಯಿ ತಿನ್ನುವ ಲವಲವಿಕೆಯು ಹೆಚ್ಚು. ಆಗ್ರಾಪಟ್ಟಣದಲ್ಲಿ ತಾಜಮಹಾಲ ಕಿಲ್ಲೆ ಮೊದಲಾದ ಸಂಗಮರವರೀಕಲ್ಲಿನ ಇಮಾರತುಗಳನ್ನು ನೋಡಿ ಚಕಿತರಾದೆವು. ನಾವು ಬೇರೆಲೋಕಕ್ಕೆ ಬಂದಂತೆ ಭಾಸವಾಗಿ ಮೊಗಲರ ಸಂಪತ್ತನ್ನು ಊಹಿಸದಾದೆವು. ಅದನ್ನು ಕಲ್ಪನಾಮಾಪಿನಿಂದ ಅಳೆಯದಾದೆವು. ಅಂದಾಜಿನ ಕಲ್ಲಿನಿಂದ ತೂಗದಾದೆವು. ಮುಂದೆ ಮಥುರಾಪಟ್ಟಣಕ್ಕೆ ಬಂದೆವು. ಕೃಷ್ಣಜನ್ಮ, ಕಂಸವಧ, ಗೋಕುಲ, ಬೃಂದಾವನ ಕುಂಜವನ ಬೃಂದಾವನ ಕಾಲಿಯಾಮರ್ದನದಸ್ಥಳ ಮೊದಲಾದುವುಗಳನ್ನು ಕಣ್ಣಾರೆ ಕಂಡು ಕೃಷ್ಣನ ಅಗಾಧಲೀಲೆಗೆ ಆನಂದಪಟ್ಟೆವು. ಆಗ್ರಾನುದನರ ಶಿಲ್ಪಕಲೆಯನ್ನು ನೋಡಿದರೆ ಇವರ ಜಾಣತನಕ್ಕೆ ಕಲ್ಲುಮೃದುವಾಗಿ ಕರ್ನಾಟಕದವರ ಹುಂಬತನಕ್ಕೆ ಕಟ್ಟಿಗೆಯು ಬಿರುಸಾಗಿರುವದೋ ಏನೋ ಎಂದು ಸಂಶಯಬರುವಂತಿದೆ. ಮಥುರೆಯ ಹತ್ತಿರ

ಯಮುನೆಯ ಪ್ರವಾಹವು ಬಹು ರಮಣೀಯವಾಗಿದೆ. ನಮ್ಮ ಯಾತ್ರಾದಲ್ಲಿ ಇಲ್ಲಿಯೇ ಮಕರಸಂಕ್ರಮಣ ಯೋಗ ಉಂಟಾದ್ದರಿಂದ ಯಮುನಾ ಸ್ನಾನದಿಂದ ನಮ್ಮ ಪಾಪವೆಲ್ಲ ಪರಿಹಾರವಾಗಿ ಹೋಯಿತು. ಮಥುರೆಯ ಮುಕ್ಕಾಮಿನಲ್ಲಿಯೇ ಘೋರತರವಾದ ಭೂಕಂಪದ ವಿಪತ್ತು ಒದಗಿತ್ತು. ಆದರೆ ನಮಗೆ ಯಾವತರಹದ ವಿಪತ್ತು ಸಂಭವಿಸದೆ ನಮ್ಮನ್ನು ಆ ಗೌರೀಶಂಕರನು ಕಾಪಾಡಿದ್ದರಿಂದ ಆತನನ್ನು ಅನಂತಾನಂತ ನಮಸ್ಕಾರಗಳಿಂದ ಪ್ರಾರ್ಥಿಸುವೆವು. ಮುಂದೆ ಇಲ್ಲಿಂದ ಹೊರಟು ದಿಲ್ಲಿಗೆ ಬಂದೆವು. ಹೊಸದಿಲ್ಲಿ, ವಾಯಿಸರಾಯರ ಬಂಗಲೆ ಕೌನ್ಸಿಲಹಾಲು ನೋಡಿಕೊಂಡೆವು. ಹಸ್ತಿನಾವತಿ ಇಂದ್ರಪ್ರಸ್ಥ, ಕುತುಬಮಿನಾರಗಳನ್ನು ನೋಡಿ ಪೂರ್ವಿಕರ ಅತುಲವಾದ ಸಂಪದಭ್ಯುದಯಗಳನ್ನು ನೆನಿಸಿ ನೆನಿಸಿ ಮರುಗಿದೆವು. ಮುಂದೆ ಇಲ್ಲಿಂದ ಸಾಗಿ ಹರದ್ವಾರಕ್ಕೆ ಹೋದೆವು. ಇಲ್ಲಿ ಪರ್ವತರಾಜನಾದ ಹಿಮಾಲಯವು ದರ್ಶನಕೊಟ್ಟಿತು. ಹರದ್ವಾರವು ನಿಜವಾಗಿ ಹೆಸರಿಗನುಸರಿಸಿ ಕೈಲಾಸದಲ್ಲಿರುವ ಶಂಕರನನ್ನು ಕಾಣುವದಕ್ಕೆ ದ್ವಾರ (ಬಾಗಿಲ) ವೇ ಆಗಿರುವದು. ಇಲ್ಲಿಯ ಗಂಗಾಪ್ರವಾಹವನ್ನೂ, ಗಂಗಾತಟದಲ್ಲಿಯ ದೇವಾಲಯಗಳನ್ನೂ, ಹಿಮಾಲಯವನ್ನೂ ನೋಡಿ ಬಹಳ ವಿಸ್ಮಯಪಟ್ಟೆವು. ಮುಂದೆ ಇಲ್ಲಿಂದ ಋಷಿಕೇಶ ೧ ಮೈಲಿದ್ದು ಇಲ್ಲಿ ಪ್ರಾಚೀನ ಕಾಲದ ಭರತನ ಮಂದಿರವದೆ. ವಸಂತಪಂಚಮಿಯಲ್ಲಿ ಭರತನ ದೊಡ್ಡ ಜಾತ್ರೆಯಾಗುತ್ತದೆ. ಇಲ್ಲಿಯ ಗಂಗಾಪ್ರವಾಹವು ಹರದ್ವಾರದಲ್ಲಿಯ ಗಂಗಾಪ್ರವಾಹಕ್ಕಿಂತಲೂ ಬಹು ರಮಣೀಯವಾಗಿದೆ. ಇಲ್ಲಿಂದ ೩ ಮೈಲಿನಮೇಲೆ ಲಕ್ಷ್ಮಣಝೂಲಾ (ತೂಗುವ ಪೂಲು) ಅದೆ. ಈ ೧೫ ಮೈಲು ಪ್ರವಾಸವು ಹಿಮಾಲಯದ ನಿಬಿಡವಾದ ಅರಣ್ಯದಲ್ಲಿ ಹೋಗಬೇಕಾಗುವದು, ಲಕ್ಷ್ಮಣಝೂಲಾ ಇದು ಲಕ್ಷ್ಮಣನು ತಪಸ್ಸುಮಾಡಿದ ಸ್ಥಳವಾಗಿದ್ದು ಇಲ್ಲಿ ಲಕ್ಷ್ಮಣನ ಗುಡಿಯೇ ಮುಖ್ಯವಾಗಿರುವದು. ಈ ತೂಗುವ ಸೇತುವೆಗೆ ಸಮೀಪಿಸಿಯೇ ಬದರೀ ಕೇದಾರಗಳಿಗೆ ಹೋಗುವ ದಾರಿಯಿದೆ. ಕಠಿಣತರವಾದ ಈ ಹಾದಿಗೆ ನಮಸ್ಕರಿಸಿ ಮೋರೆ ತಿರುವಿದೆವು. ಮುಂದೆ ಇನ್ನೊಂದು ಬದಿಗೆ ಸ್ವರ್ಗಾಶ್ರಮವದೆ. ಅನೇಕ ಋಷಿಪುಂಗವರು ಇಲ್ಲಿ ದಿನವೆಲ್ಲ ತಪಸ್ಸುಮಾಡುತ್ತಿರುವರು. ಋಷಿಕೇಶದಲ್ಲಿಯ ನೇಪಾಳೀ ಮಹಾದೇವ ಮೊದಲಾದ ಅನ್ನಛತ್ರಗಳಲ್ಲಿ ಇವರಿಗೆ ಒಂದು ಹೊತ್ತು ಸದಾವರ್ತವು ಸಿಗುವದು. ಈ ಸದಾವರ್ತಕ್ಕಾಗಿ ಸಂಜೆ ಮುಂಜಾನೆಗಳಲ್ಲಿ ಹಿಮಾಲಯದ ದಟ್ಟಡವಿಯೊಳಗಿನ ತಮ್ಮ ಆಶ್ರಮದಿಂದ ತಪಸ್ಸು ನಿಲ್ಲಿಸಿ ಬರುತ್ತಿರುವ ಕಾವೀಬಟ್ಟೆಯ ಜಟಾಧಾರಿಧೀರಮುದ್ರೆಯ ಕಮಂಡಲುಧಾರಿ ಅಸಂಖ್ಯ ಮುನಿಗಳನ್ನು ನೋಡಿ ಪ್ರಪಂಚದ ನಮ್ಮ ವಿಷಯಲೋಲುಪತೆಗೆ ಧಿಕ್ಕಾರವನ್ನಿಟ್ಟೆವು. ಸಮೀಪದಲ್ಲಿಯೇ ವಿಶಾಲವಾದ ಕೊಳದಲ್ಲಿ ನೀಲವರ್ಣದ ಉದಕದಿಂದ ಹರಿಯುವ ಚಿತ್ತಾಕರ್ಷಕ ಗಂಗಾಪ್ರವಾಹವನ್ನು ನೋಡಿದಕೂಡಲೇ ನಾವು ಭ್ರಮಿಸಿದಂತಾದೆವು. ನಾವು ನೋಡಿದ ಈ ಮನೋವೇಧಕವಾದ ಗಂಗಾಪ್ರವಾಹವನ್ನು ನಮ್ಮ ಕರ್ನಾಟಕಸ್ಥರಿಗೂ ತೋರಿಸಬೇಕೆಂದು ನಿಮ್ಮನ್ನು ಬಾರಿಬಾರಿಗೂ ಕೈಮಾಡಿ ಕೂಗಿದೆವು. ಬಹಳ ಹೊತ್ತಿನಮೇಲೆ ನೀವ್ಯಾರೊಬ್ಬರೂ ಕಣ್ಣಿಗೆ ಕಾಣದ್ದು ನೋಡಿ ನಮ್ಮ ಭ್ರಾಂತಿಗೆ ನಾವೇ ನಕ್ಕುನಕ್ಕು ನಮ್ಮ ಹೊಟ್ಟೆ ಕಟ್ಟುಹಿಡಿಯಿತು. ಆಹಾ! ಏನು ಮನೋಹರಸ್ಥಳವಿದು? ಹರದ್ವಾರದಿಂದ ಮುಂದೆ ಲಖನೌಪಟ್ಟಣಕ್ಕೆ ಬಂದೆವು. ಇದು ವ್ಯಾಪಾರದಲ್ಲಿ ಬಹು ಮುಂದುವರಿದಿದೆ. ಇಲ್ಲಿಯ ವಸ್ತುಸಂಗ್ರಹಾಲಯವು ಒಳ್ಳೇ ನೋಡುವಂಥದಾಗಿದೆ. ಮುಸಲ್ಮಾನರ ಕೆಲವು ಇಮಾರತುಗಳು ಆಕರಾಳವಿಕರಾಳವಾಗಿ ಕಣ್ಣಿನ ಗುರಿಯನ್ನು ಮೀರಿದಂಥವುಗಳಾಗಿವೆ. ಇಲ್ಲಿಂದ ಮುಂದೆ ಪ್ರಯಾಗಕ್ಕೆ ಬಂದೆವು. ಇಲ್ಲಿ ಕಾಶೀ ಜಗದ್ಗುರು ವಿಶ್ವಾರಾಧ್ಯಪೀಠದಶಾಖಾ ಜಂಗಮವಾಡೀಮಠವಿದೆ. ಇಲ್ಲಿ ತ್ರಿವೇಣೀಸಂಗಮದಲ್ಲಿ ನಮ್ಮೆಲ್ಲರ ಧರ್ಮಕಾರ್ಯಗಳು ವಿಧ್ಯುಕ್ತವಾಗಿ ತೀರಿಸಲ್ಪಟ್ಟವು. ಈ ಸಂಗಮದಲ್ಲಿ ಗಂಗಾ, ಯಮುನಾ, ಸರಸ್ವತಿ ನದಿಗಳು ಕೂಡಿರುತ್ತವೆ. ಗಂಗೆಯ ಬಿಳಿನೀರಿನ ಪ್ರವಾಹವೂ ಯಮುನೆಯ ನೀಲವರ್ಣದ ಪ್ರವಾಹವೂ ಸಂಗಮದಲ್ಲಿಯ ಇವುಗಳ ಮಿಶ್ರಣದಿಂದ ಬಿಳಿಕರಿನೀರಿನ ನೋಟವು ಬಲುತಮಾಷೆಯಾಗಿ ಕಾಣುವದು. ಸರಸ್ವತೀನದಿಯು ಗುಪ್ತವಾಗಿ ಕೂಡಿದೆಯಂತೆ! ನಮ್ಮ ಸಂಗಡಯಾತ್ರೆಗೆ ಬಂದಂಥ ಜ್ಯೋತಿಷವಿದ್ವಾನ್ ವೇ|| ಪಂಚಾಕ್ಷರಶಾಸ್ತ್ರಿಗಳವರು ಶಿರೋಳ ಹಾಗೂ ವೇ|| ವಿರೂಪಾಕ್ಷಯ್ಯನವರು ನಂದಿಕೇಶ್ವರಮಠ ಹುಬ್ಬಳ್ಳಿ ಇವರು ಯಾವಾಗಲೂ ನಮ್ಮ ಸಹಾಯಕ್ಕಿದ್ದು ಶಾಸ್ತ್ರೋಕ್ತರೀತಿಯಿಂದ ಯಾತ್ರಾವಿಧಿಗಳನ್ನು ತೀರಿಸುತ್ತ ನಮ್ಮನ್ನು ಧರ್ಮರೀತಿಯಿಂದ ತೃಪ್ತರನ್ನಾಗಿ ಮಾಡಿದರು. ಆದ್ದರಿಂದ ಇವರಿಬ್ಬರಿಗೂ ನಾವು ಬಹಳವಾಗಿ ಋಣಿಯಾಗಿದ್ದೇವೆ.

ಸಶೇಷ.

ಮಲ್ಲಪ್ಪ ರುದ್ರಪ್ಪ ಬೀಳಗಿ
ದುಂಡಪ್ಪ ನಾಗಪ್ಪ ಖವಾಸಿ
ಬಸಟ್ಟಿ ಹುಲ್ಯಾಳ ಯಾತ್ರಿಕರ ಪರವಾಗಿ.

ಶ್ರೀಜಗದ್ಗುರು ವಿಶ್ವಾರಾಧ್ಯಾಯನಮಃ ಶ್ರೀ ಗೌರೀಶಂಕರ ಕಂಪನಿಯವರಯಾತ್ರೆ

ಲೇಖಕ—ಸಿದ್ಧಲಿಂಗ ಶರ್ಮಾ. ಬಂಕಾಪುರ.

ಈ ಕಂಪನಿಯವರು ಮೊದಲೇ ಪ್ರಸಿದ್ಧಪಡಿಸಿದ ಪ್ರಕಾರ ಆಯಾಯ ಕ್ಷೇತ್ರಯಾತ್ರೆಗಳನ್ನು ಮಾಡುತ್ತ ಪ್ರಯಾಗ ಕ್ಷೇತ್ರಕ್ಕೆ ಬಂದಿಳಿದರು. ಅಲ್ಲಿ ಕಾಶೀ ಶ್ರೀಜಗದ್ಗುರು ವಿಶ್ವಾರಾಧ್ಯರ ಎರಡನೆ ಮಠವಾದ ಜಂಗಮವಾಡೀ ಮಠದಲ್ಲಿ ವಿಧಿ ಪ್ರಕಾರವಾಗಿ ಎಲ್ಲಾ ಕಾರ್ಯಗಳನ್ನೂ ಮುಗಿಸಿಕೊಂಡು ತಾ|| ೨೩-೧-೩೪ ನೆಯ ದಿನ ಪ್ರಧಾನ ಶಿವಕ್ಷೇತ್ರವಾದ ಕಾಶಿಗೆ ಬಂದರು. ಇಲ್ಲಿಯೂ ಜಗದ್ಗುರುಗಳವರ ಮಠದಲ್ಲಿ ಯಥಾವಿಧಿಯಾಗಿ ಧರ್ಮಕಾರ್ಯಗಳನ್ನು ನೆರವೇರಿಸಿದರು. ಕಂಪನಿಯ ಮ್ಯಾನೇಜರಾದ ಮ|| ರಾ|| ಶಿರೂರ ಗಂಗಾಧರಪ್ಪ ಮಾಸ್ತರರೂ, ಶಿರೋಳ ಹಿರೇಮಠದ ವೇ|| ಪಂಚಾಕ್ಷರಶಾಸ್ತ್ರಿಗಳ ಶಿಷ್ಯರಾದ ಶಿರೋಳಪ್ರಭಪ್ಪನವರೂ ಶ್ರೀ ೧೦೮ ಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರನ್ನು ಬಹುಭಕ್ತಿಯಿಂದ ಪ್ರಾರ್ಥಿಸಿಕೊಂಡು ಶಿಬಾಸಂಯುಕ್ತರಾಗಿ ಶಿವದೀಕ್ಷೆಯನ್ನು ಹೊಂದಿದರು. ಈ ದೀಕ್ಷಾ ಕಾರ್ಯದಲ್ಲಿ ಪಂ|| ವೇ|| ಚಿದರೀಮಠದ ವೀರಭದ್ರಶಾಸ್ತ್ರಿಗಳು ವೈದಿಕತ್ವವನ್ನು ವಹಿಸಿ ಕೊಂಡಿದ್ದರಿಂದ ಕಾರ್ಯವು ಬಹು ಸಮರ್ಪಕವಾಗಿಯೂ ಸಾಂಗೋಪಾಂಗವಾಗಿಯೂ ನೆರವೇರಿತು. ಶ್ರೀ| ವೇ| ಷ| ಬ್ರ| ಗೊಬ್ಬೂರು ಬೃಹನ್ಮಠಾಧ್ಯಕ್ಷ ವೃಷಭಲಿಂಗಶಿವಾಚಾರ್ಯರು ಮಂತ್ರೋಪದೇಶಕರಾಗಿದ್ದರು. ದೀಕ್ಷಾ ಕಾರ್ಯವು ಮುಗಿದಮೇಲೆ ಶ್ರೀ ಜ್ಞಾನಸಿಂಹಾಸನಕ್ಕೆ ರುದ್ರಾಭಿಷೇಕವೂ ಮಂಗಳಾರತಿಯೂ ನಡೆದುವು. ಇಷ್ಟಕ್ಕೆ ಸಾಯಂಕಾಲ ೭ ಗಂಟೆಯಾದುದರಿಂದ ಮರುದಿನ ಮಹಾಸಮಾರಾಧನೆಯು ಬಹು ವಿಜೃಂಭಣೆಯಿಂದ ಜರುಗಿತು. ತಾ|| ೨೯-೧-೩೪ ನೆಯ ಸೋಮವಾರ ಸಂಜೆ ೭ ಗಂಟೆಗೆ ಕೈಲಾಸಮಂಟಪದಲ್ಲಿ ವೀರಶೈವವಿದ್ವತ್ಸಂಘದ ಸನ್ಮಾನಸಭೆಯು ಆರಂಭವಾಯಿತು. ಮೊಟ್ಟಮೊದಲು ಗುರುಕುಲವಾಸಿಗಳಿಂದ ೮ ಗಂಟೆಯವರೆಗೆ ಶ್ರೀ ಜಗದ್ಗುರು ವಿಶ್ವಾರಾಧ್ಯರ ಹಾಗೂ ಇನ್ನಿತರ ಆಚಾರ್ಯಭಗವತ್ಪಾದರಸ್ತುತಿಪಾಠವು ಹಾರ್ಮೋನಿಯಂ ಮುಂತಾದ ವಾದ್ಯಗಳೊಡನೆ ಬಹುಮನೋಹರವಾಗಿ ಮಾಡಲ್ಪಟ್ಟಿತು. ಆಮೇಲೆ ಮುದೇನೂರು ಬೃಹನ್ಮಠಾಧ್ಯಕ್ಷ ಶ್ರೀ ವಾಗೀಶಶಿವಾಚಾರ್ಯರು ಸನ್ಮಾನಯೋಗ್ಯರಾದ ಮೂವರ ಪರಿಚಯವನ್ನು ಮಾಡಿಕೊಟ್ಟರು. ಆಮೇಲೆ ಚಿದರೀ ಮಠದ ಪಂ|| ವೇ|| ವೀರಭದ್ರಶಾಸ್ತ್ರಿಗಳು ಸಂಘದ ಪರಿಚಯವನ್ನು ಆಮೂಲಾಗ್ರವಾಗಿ ತಿಳಿಸಿದ್ದಲ್ಲದೆ ಸಂಸ್ಕೃತಭಾಷೆಯ ವಿಶಾಲಹೃದಯವನ್ನು ಬಿಚ್ಚಿ ತೋರಿಸಿದರು. ಮ|| ರಾ|| ಬ್ಯಾಡಗಿ ಚಂದ್ರಶೇಖರಪ್ಪನವರು ವೀರಶೈವ ಸಮಾಜೋನ್ನತಿಯ ವಿಷಯದಲ್ಲಿಯೂ ಮ|| ರಾ|| ಗಂಗಾಧರಪ್ಪಮಾಸ್ತರರು ವೀರಶೈವಸುಧಾರಣೆಯ ವಿಷಯದಲ್ಲಿಯೂ ಮರೇಗುದ್ದಿ ಶಂಕರಶಾಸ್ತ್ರಿಗಳು ಸಂಸ್ಕೃತಪ್ರಚಾರವಿಷಯದಲ್ಲಿಯೂ ವ್ಯಾಖ್ಯಾನಗಳನ್ನು ಮಾಡಿದನಂತರ ಪಂಚಾಕ್ಷರಶಾಸ್ತ್ರಿಗಳು ಗುರುಕುಲವಾಸಿಗಳಿಗೆ ಬೋಧಪ್ರದವಾದ ಸದ್ವರ್ತನೆಯೆಂಬ ವಿಷಯದಲ್ಲಿ ಮೃದುಮಧುರವಾದ ಕನ್ನಡನುಡಿಯಿಂದ ವ್ಯಾಖ್ಯಾನಮಾಡುತ್ತ ಮಧ್ಯದಲ್ಲಿ 'ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿರುವ ಈ ವೀರಶೈವವಿದ್ವತ್ಸಂಘವು ವಿಶ್ವತೋಮುಖವಾಗಿ ಅಭಿವೃದ್ಧಿ ಹೊಂದಲೆಂದೂ, ಇದು ಶ್ರೀ ವಿಶ್ವಾರಾಧ್ಯರ ಕೃಪೆಗೆ ಪಾತ್ರವಾಗಲೆಂದೂ ಜಗತ್ತಿನ ಸಮಸ್ತ ವೀರಶೈವರಿಗೂ ಸನ್ಮಾರ್ಗದರ್ಶಕವಾಗಲೆಂದೂ, ಜಗದಾಚಾರ್ಯರನ್ನು ಪ್ರಾರ್ಥಿಸಿದ ಪ್ರಸಂಗವೂ, ಹಾಗೆಯೇ ಈ ಗುರುಕುಲವಾಸಿಗಳಾದ ನೀವು ಒಬ್ಬೊಬ್ಬರು ಒಂದೊಂದು ರತ್ನವಾಗಿ ದೇಶಕ್ಕೆ ಬರಬೇಕಲ್ಲದೆ ಕಾಜಿನಮಣಿಯಾಗಿ ಬರಬಾರದು, ಹಾಗೆ ಬರುವುದಕ್ಕಿಂತಲೂ ಇಲ್ಲಿಯೇ ಗಂಗಾರ್ಪಣವಾಗುವುದು ಮೇಲೆಂದು ಹೇಳುವ ಪ್ರಸಂಗವೂ, ಬಹಳ ಸ್ಫೂರ್ತಿದಾಯಕವಾಗಿತ್ತು. ಶಾಸ್ತ್ರಿಗಳ ವ್ಯಾಖ್ಯಾನಸರಣಿಯು ವರ್ಣನೀಯವಾದುದು. ಇವರ ವ್ಯಾಖ್ಯಾನಸರಣಿಯನ್ನು ಕೇಳಿದ ಪ್ರತಿಯೊಬ್ಬರೂ 'ಇದೇನು? ವ್ಯಾಖ್ಯಾನಕಾರರ ಸರಣಿಯನ್ನು ತಿದ್ದುವುದಕ್ಕಾಗಿ ದೇವರು ಶುದ್ಧವಾಗಿ ಮಾತಾಡುವ ಅಚ್ಚಿನ ಪೆಟ್ಟಿಗೆಯನ್ನೇನಾದರೂ ನಿರ್ಮಾಣಮಾಡಿ ಕಳಿಸಿರುವನೋ" ಎಂಬುದಾಗಿ ಆಶ್ಚರ್ಯಯುತರಾದರು. ಕಟ್ಟಕಡೆಗೆ ಶಾಸ್ತ್ರಿಗಳು 'ಈ ವೀರಶೈವ ವಿದ್ವತ್ಸಂಘವನ್ನು ಅಭಿವೃದ್ಧಿಮಾಡುವುದರಲ್ಲಿ ಎಲ್ಲರಂತೆ ನಾನೋರ್ವನು ಭಾಗಿಯಾಗಿದ್ದೇನೆ.' ಅದಕ್ಕಾಗಿ ಈ ಸಂಘದಿಂದ ಪ್ರಿಂಟಾಗುವ ಸಂಸ್ಕೃತವಿದ್ಯಾವಿಷಯಕವಾದ ಒಂದು ಕನ್ನಡ ಗ್ರಂಥದ ಮುದ್ರಣಕ್ಕಾಗುವ ಖರ್ಚನ್ನು ವಹಿಸಿಕೊಳ್ಳುವೆನೆಂದು ವಾಗ್ದಾನವಿತ್ತರು. ಇಷ್ಟರಲ್ಲಿಯೇ ರಾತ್ರಿ ೧೧ ಘಂಟೆಯಾದುದರಿಂದ ಶ್ರೀ ಜಗದ್ಗುರು ವಿಶ್ವಾರಾಧ್ಯ ಮೂರ್ತಿಗೆ ಮಂಗಲವು ಮಾಡಲ್ಪಟ್ಟು ಆಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತವಾಯಿತು. ಕಂಪನಿಯ ಮ್ಯಾನೇಜರರು ದಯಾಳುಗಳೂ ವಿದ್ಯಾವಂತರೂ ಆಚಾರವಂತರೂ ಆಗಿರುವುದರಿಂದ ಇಂತಹ ತೀರ್ಥಕ್ಷೇತ್ರಯಾತ್ರೆಗಳನ್ನು ಸರ್ವರೊಡನೆ ಮಾಡುತ್ತ ಯಶಸ್ವಿಗಳಾಗಿದ್ದಾರೆ. ಇಂಥವರು ನಮ್ಮ ಸಮಾಜದಲ್ಲಿ ಹೆಚ್ಚಲೆಂದೂ ಸಮಾಜವು ಎಲ್ಲಾ ರೀತಿಯಿಂದಲೂ ಉನ್ನತಾವಸ್ಥೆಯನ್ನು ಹೊಂದಲೆಂದೂ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಶ್ರೀ ಜಗದ್ಗುರು ರೇಣುಕಾಚಾರ್ಯ ಫ್ರೀ ಬೋರ್ಡಿಂಗ್ ವಿಜಾಪೂರ.

ಮುಲಕಿ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಅನ್ನೋದಕ ವ್ಯವಸ್ಥೆಯು.

ಪ್ರತಿವರ್ಷದಂತೆ ಈ ವರ್ಷವಾದರೂ ವಿಜಾಪೂರ ಸೆಂಟರಿನಲ್ಲಾಗುವ ಮುಲಕಿ ಪರೀಕ್ಷೆಗೆ ಬರುವ ವೀರಶೈವ ಬಡವಿದ್ಯಾರ್ಥಿಗಳಿಗಾಗಿ ತೊರವಿ ಹಿರೇಮಠ ಪಟ್ಟದ ಸ್ವಾಮಿಗಳಿಂದ ಊಟದ ವ್ಯವಸ್ಥೆಯು ಮಾಡಿಸಲ್ಪಡುವದು. ಸದರೀ ಬೋರ್ಡಿಂಗಿನಲ್ಲಿ ಅನ್ನೋದಕವನ್ನು ತೆಗೆದುಕೊಳ್ಳಬೇಕೆಂಬುವ ವಿದ್ಯಾರ್ಥಿಗಳು ಮಾರ್ಚ ತಿಂಗಳ ೧೫ನೇ ತಾರೀಖಿನೊಳಗಾಗಿ (ತಮ್ಮ ಶಾಲೆಯ ಹೆಡ್‌ಮಾಸ್ತರಿಂದಾಗಲಿ ಊರೊಳಗಿನ ಯಾರಾದರೊಬ್ಬ ಪ್ರತಿಷ್ಠಿತಜನರಿಂದಾಗಲಿ) ಬಡವನೆಂಬ ಬಗ್ಗೆ ಯೋಗ್ಯ ಸರ್ಟಿಫಿಕೇಟಿನೊಂದಿಗೆ ಅರ್ಜಿಯನ್ನು ಬಸವಪ್ರಭಯ್ಯ ದುಂಡಯ್ಯ ಹಿರೇಮಠ ಮಾಸ್ತರ ಮುನಸಿಪಾಲಟಿ ಕನ್ನಡಶಾಲಾ ವಿಜಾಪೂರ ಈ ವಿಳಾಸಕ್ಕೆ ಕಳುಹಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಯನ್ನು ಸ್ವೀಕರಿಸಲಾಗುವದಿಲ್ಲ. ಪರೀಕ್ಷೆಗೆ ಬರುವಾಗ ನಮ್ಮ ಕಡೆಯಿಂದ ಬೋರ್ಡಿಂಗಿನಲ್ಲಿ ಊಟ ಮಾಡಲಿಕ್ಕೆ ಪರವಾನಗಿ ಶಿಕ್ಕ ಪತ್ರವನ್ನು ಸಂಗಡ ತರತಕ್ಕದ್ದು.

ಬ. ದು. ಹಿರೇಮಠ ಮಾಸ್ತರ
ವ್ಯವಸ್ಥಾಪಕ
ಶ್ರೀ ರೇಣುಕಾಚಾರ್ಯ ಫ್ರೀ ಬೋರ್ಡಿಂಗ್
ವಿಜಾಪೂರ.

ಪಂಚಾಚಾರ್ಯ ಪ್ರಭಾ.

೧೯೩೪ನೇ ಫೆಬ್ರವರಿ ತಾ|| ೨೬ ನೇ ಸೋಮವಾರ.

ಭೂಕಂಪಕಷ್ಟನಿವಾರಣೆ.

ಕಳೆದ ತಿಂಗಳು ೧೫ ನೆಯ ತಾರೀಖಿನ ದಿವಸ ಉತ್ತರ ಹಿಂದೂಸ್ಥಾನದ ಬಿಹಾರ್ ಮುಂತಾದ ಕೆಲವು ಪ್ರದೇಶಗಳಲ್ಲಿ ಭಯಂಕರ ಭೂಕಂಪದಿಂದ ಲಕ್ಷಾಂತರ ಮನೆಗಳು ಅಧರ್ಮಭಾರದಿಂದ ಕಾದುಹೋಗಿರುವ ಭೂದೇವಿಯ ಜಠರದಲ್ಲಿ ಐಕ್ಯವಾದುವೆಂಬುದೂ 50-60 ಸಾವಿರ ಜನಗಳು ಮೃತ್ಯುದೇವಿಗೆ ಆಹುತಿಯಾದರೆಂಬುದೂ ಕೋಟ್ಯಂತರ ರೂಪಾಯಿಗಳು ನಷ್ಟವಾದವೆಂಬುದೂ ಅಸಂಖ್ಯ ಜನರು ತಿನ್ನುವುದಕ್ಕೆ ಅನ್ನವಿಲ್ಲದೆಯೂ ಹೊರುವುದಕ್ಕೆ ಬಟ್ಟೆಯಿಲ್ಲದೆಯೂ ಪರದೇಶಿಗಳಂತೆ ಸೂರ್ಯಾತಪದಲ್ಲಿ ಬಳಲುತ್ತಿರುವರೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಈ ಹೃದಯಭೇದಕವಾದ ಸಮಾಚಾರವನ್ನು ಕೇಳಿ ನಮ್ಮ ಭಾರತ ಸಹೋದರರು ಅಲ್ಲಿಯ ವಿಪತ್ಪರಿಹಾರಾರ್ಥವಾಗಿ ಅಲ್ಲಲ್ಲಿ ಸಭೆಗಳನ್ನು ಮಾಡಿ ಧನಶೇಖರವನ್ನು ಮಾಡುತ್ತಲಿರುವುದು ಶ್ಲಾಘ್ಯವಾದ ವಿಷಯವಾಗಿದೆ. ಆದರೆ ಈಗ ಕೊಡುತ್ತಿರುವ ಸಹಾಯ ನಿಧಿಯು ಅಣುರೂಪವಾಗಿಯೂ ಅಲ್ಲಿಯ ವಿಪತ್ತು ಪರ್ವತಾಕಾರವಾಗಿಯೂ ಇರುವುದರಿಂದ ಈ ದ್ರವ್ಯವು ಭೂಕಂಪದ ಅನಾಹುತಕ್ಕೆ ಶಿಕ್ಕು ನೆರಳುತ್ತಿರುವ ಜನಗಳ ವಿಪತ್ತನ್ನು ಪರಿಹರಿಸಲು ಎಷ್ಟುಮಾತ್ರವೂ ಸಮರ್ಥವಲ್ಲದಿದ್ದರೂ ಕಷ್ಟಕಾಲದಲ್ಲಿ ಅಲ್ಪಸ್ವಲ್ಪವಾದರೂ ಸಹಾಯಮಾಡಿ ವಿಷಾದವನ್ನು ಪ್ರದರ್ಶಿಸುವುದೊಂದು ಉತ್ತಮ ಮನುಷ್ಯನ ಲಕ್ಷಣವಾಗಿದೆ. ಪ್ರಕೃತದಲ್ಲಿ ನಮ್ಮ ಭಾರತೀಯರು ಬಹಳವಾದ ಆರ್ಥಿಕದುಸ್ಥಿತಿ ಎಂಬ ದುಷ್ಟಗ್ರಹದಿಂದ ಹಿಡಿಯಲ್ಪಟ್ಟಿದ್ದರೂ ತಮ್ಮ ಮನಸ್ಸನ್ನು ಅತ್ತಕಡೆ ಹೊರಳಿಸಿದ್ದನ್ನು ನೋಡಿದರೆ ಇವರ ಸ್ವಾಭಾವಿಕವಾದ ದಯಾರಸವು ವರ್ಣನೀಯವೆಂದೇ ಹೇಳಬೇಕಾಗಿದೆ. ಈ ವಿಪತ್ಪರಿಹಾರಾರ್ಥವಾಗಿ ಪ್ರತಿಯೊಂದು ಹಳ್ಳಿಯವರೂ ಪಟ್ಟಣಿಗರೂ ಸ್ತ್ರೀಯರೂ ಪುರುಷರೂ ಬಾಲಕರೂ ಅಧಿಕಾರಿಗಳೂ ನಾಟಕಸಂಘದವರೂ ಕೀರ್ತನಕಾರರೂ ಸಿನಿಮಾದವರೂ ತಮ್ಮತಮ್ಮ ಶಕ್ತಿವಂಚನೆ ಇಲ್ಲದೆ ದ್ರವ್ಯಸಹಾಯ ಮಾಡುವುದಲ್ಲದೆ ಈ ಸಮಯದಲ್ಲಿ ಎಲ್ಲರೂ ದ್ರವ್ಯಸಂಗ್ರಹಸಾಧಕವಾದ ಬುದ್ಧಿಚಾತುರ್ಯವನ್ನುಪಯೋಗಿಸಿ ವಿಶೇಷವಾಗಿ ಧನಶೇಖರಮಾಡಿ ಕಳಿಸುವುದುತ್ತಮವಾಗಿದೆ. ಪುಣ್ಯಸಂಗ್ರಹಮಾಡಬೇಕೆಂಬುವರಿಗೆ ಈ ಸಮಯವನ್ನು ಬಿಟ್ಟರೆ ಇನ್ನು ಇಂಥ ಸಮಯವು ದೊರೆಯಲಾರದು. ಬಾಯಾರಿದವನಿಗೆ ಸಕಾಲದಲ್ಲಿ ಸ್ವಲ್ಪ ನೀರನ್ನು ಕೊಟ್ಟರೆ ಎಷ್ಟೋ ಪುಣ್ಯವು ಬರುವಾಗ ಮನೆಮಠಗಳನ್ನು ಕಳೆದುಕೊಂಡು ಮರದ ಬುಡಗಳಲ್ಲಿ ಉಪವಾಸಮಾಡುತ್ತಿರುವವರಿಗೆ ಈ ರೀತಿ ಅನುಕೂಲತೆಗಳನ್ನು ಕಲ್ಪಿಸಿಕೊಡುವುದರಿಂದ ಬರುವ ಪುಣ್ಯಾಧಿಕ್ಯವನ್ನು ಅಷ್ಟಿಷ್ಟೆಂದು ವರ್ಣಿಸಲಾಗುವುದಿಲ್ಲ.

ಪ್ರಪಂಚದಲ್ಲಿ ಸಂಕುಚಿತಸ್ವಭಾವವುಳ್ಳ ಕೆಲವರು ನಾವು ಕೊಡುವ ಈ ಬಿಂದುಮಾತ್ರವಾದ ಹಣವು ಸಮುದ್ರೋಪಮಾನವಾದ ಆ ವಿಪತ್ತನ್ನು ಪರಿಹರಿಸುವುದೇ ಎಂದು ಯೋಚಿಸುತ್ತ ಉದಾಸೀನರಾಗುವುದುಂಟು. 'ಬಹೂನಾಮಲ್ಪಸಾರಾಣಾಂ ಸಮವಾಯೋ ದುರತ್ಯಯಃ' ಎಂಬ ನೀತಿವಾಕ್ಯದಂತೆ ಈ ವಿಷಮ ಸಂದರ್ಭದಲ್ಲಿ ಅಂಥ ಅಲ್ಪಾಲೋಚನೆಗೆ ಅವಕಾಶವನ್ನು ಕೊಡದೆ ತಮ್ಮ ಕೈಲಾದಮಟ್ಟಿಗೂ ಸಹಾಯ ಮಾಡುತ್ತ ಹೋದರೆ ಅದೊಂದು ದೊಡ್ಡನಿಧಿಯಾಗಿ ಪರಿಣಮಿಸಿ ಆ ಪ್ರಾಂತದ ಜನಗಳ ಪ್ರಾಣಧಾರಣಕ್ಕಾದರೂ ಅವಕಾಶವನ್ನು ಕಲ್ಪಿಸಿದಂತಾಗುವುದು. ಅಲ್ಪಗಳಾದ ಹುಲ್ಲಿನಕಡ್ಡಿಗಳು ಬೇರೆಬೇರೆಯಾಗಿ ಬಿದ್ದರೆ ಆ ಕಡ್ಡಿಗಳನ್ನು ಗುಬ್ಬಿಗಳು ಸಹ ಬಾಯಿಯಲ್ಲಿ ಕಚ್ಚಿಕೊಂಡು ಹೋಗುತ್ತವೆ. ಅದೇ ಕಡ್ಡಿಗಳನ್ನೆಲ್ಲಾ ಒಟ್ಟುಗೂಡಿಸಿ ಹಗ್ಗವನ್ನುಮಾಡಿದರೆ ಆ ಹಗ್ಗದಿಂದ ಮದ್ದಾನೆಯನ್ನು ಸಹ ಕಟ್ಟಿ ನಿಲ್ಲಿಸಬಹುದಲ್ಲವೆ? ಆದುದರಿಂದ ನಮ್ಮ ಭಾರತೀಯ ಸಹೋದರರು ಆಲಸ್ಯನಿದ್ರೆಯಿಂದೆಚ್ಚತ್ತು ತಾವು ದುಡಿದ ಮತ್ತು ದುಡಿಯುವ ಹಣದಲ್ಲಿ ತಮ್ಮ ಮನಸ್ಸಿಗೆ ತೋರಿದಷ್ಟು ದ್ರವ್ಯಾಂಶವನ್ನು ಕಳುಹಿಸಿ ಮಹಾದುಃಖಸಾಗರದಲ್ಲಿ ಮುಳುಗಿಹೋಗುತ್ತಿರುವವರನ್ನು ಉದ್ಧರಿಸಬೇಕಾಗಿದೆ. ಈಗಾಗಲೇ ಅನೇಕ ಮಹಾರಾಜರುಗಳೂ, ಶ್ರೀಮಂತರೂ ಅಪರಿಮಿತದ್ರವ್ಯವನ್ನು ಸಹಾಯಮಾಡುತ್ತಲಿದ್ದಾರೆ. ಪ್ರಭುತ್ವದವರಂತೂ ಹೇರಳವಾಗಿ ಅನುಕೂಲತೆಗಳನ್ನು ಕಲ್ಪಿಸುವುದರಲ್ಲಿ ನಿರತರಾಗಿದ್ದಾರೆ. ಅದರ ಜೊತೆಯಲ್ಲಿ ಪ್ರತಿಯೊಬ್ಬ ಪ್ರಜೆಗಳ ಯತ್ಕಿಂಚಿತ್ ಧನವೂ ಸೇರಿದರೆ ಮೃಷ್ಟಾನ್ನಭೋಜನಕ್ಕವಕಾಶವಿಲ್ಲದಿದ್ದರೂ ಎಲ್ಲರೂ ಗಂಜಿಯನ್ನಾದರೂ ಕುಡಿದು ಜೀವಿಸಬಹುದು. ಹೀಗೆ ಪ್ರಾಣದಾನಮಾಡುವುದರಿಂದ ಭಗವಂತನು ಪ್ರೀತನಾಗುತ್ತಾನೆ. ಪ್ರತ್ಯಕ್ಷವಾಗಿ ಹೀಗೆ ಕಷ್ಟಪಡುವುದಲ್ಲದೆ ಆ ಪ್ರಾಂತದಲ್ಲಿ ಅಂಜಿದವರಮೇಲೆ ಕಪ್ಪೆ ಹಾಕಿದಂತೆ ಪುನಃ ಪುನಃ ಅಲ್ಲಲ್ಲಿಯೇ ಭೂಕಂಪಗಳು ಆಗುತ್ತಲೇ ಇವೆ. ಇದರಿಂದ ಯಾವ ಸಮಯದಲ್ಲಿ ಏನಾಗುತ್ತದೆಯೋ ಎಂದು ಆ ಪ್ರಾಂತ್ಯದಲ್ಲಿರುವ ಪ್ರತಿಯೊಬ್ಬರೂ ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡೇ ಇರುತ್ತಾರೆ. ನಿದ್ರೆಮಾಡುವಾಗಲೂ, ಊಟಮೊದಲಾದುವನ್ನು ಮಾಡುವಾಗಲೂ, ಕೂತಾಗಲೂ, ನಿಂತಾಗಲೂ ಭೂಕಂಪದ ಭಯವು ಪಿಶಾಚರೂಪವನ್ನು ಧರಿಸಿರುವುದರಿಂದ ಜನಗಳಿಗೆ ನೆಮ್ಮದಿಯೇ ಇಲ್ಲದಂತಾಗಿದೆ. ಪುಣ್ಯಮಯವಾದ ನಮ್ಮ ಭರತಖಂಡದಲ್ಲಿ ಎಂದೂ ಸಂಭವಿಸದ ಈ ಮಹಾಪ್ರಳಯವು ಈಗ ತಲೆದೋರುತ್ತಿರುವುದನ್ನು ನೋಡಿದರೆ ಪ್ರಚಲಿತವಾಗುತ್ತಿರುವ ಅಧರ್ಮಭಾರದಿಂದ ಪವಿತ್ರಳಾದ ಭೂದೇವಿಯು ಅಸಹ್ಯಗೊಂಡು ಬೇಸರಪಟ್ಟು ಒಂದು ಚಿಕ್ಕ ಅಂಗವನ್ನು ಕೊಡವಿರುತ್ತಾಳೆ. ಇನ್ನು ತನ್ನ ಸರ್ವಾಂಗವನ್ನು ಕೊಡವಿದರಂತೂ ಭರತಖಂಡವೇ ಒಂದುನಿಮಿಷದಲ್ಲಿ ನಾಮಾವಶೇಷವಾಗುವುದು. ಇದನ್ನರಿತು ಇನ್ನಾದರೂ ಜನಗಳು ಅಧರ್ಮದಿಂದ ಉಪಸಂಹೃತರಾಗಿ ತಮ್ಮ ತಮ್ಮ ಧರ್ಮಮಾರ್ಗದಲ್ಲಿ ಜಾಗ್ರತರಾದರೆ ಭೂಮಾತೆಯ ಕೋಪಾಗ್ನಿಯು ಇಷ್ಟಕ್ಕೆ ಶಾಂತವಾಗುತ್ತದೆ. ಹಾಗಿಲ್ಲದೆ ಇದ್ದರೆ ಕೋಪಾಗ್ನಿಯು ಮತ್ತಿಷ್ಟು ಪ್ರಜ್ವಲಿತವಾಗುವುದರಿಂದ ಇನ್ನೆಷ್ಟು ಅನಾಹುತಗಳಾಗುವುವೋ ಹೇಳಲಾಗುವುದಿಲ್ಲ. ಈಗಾಗಲೇ ಅಲ್ಲಲ್ಲಿಯೇ ಪುನಶ್ಚ ಭೂಕಂಪದ ದುರ್ಲಕ್ಷಣಗಳು ತೋರಬರುತ್ತಲಿವೆ. ದಯಾಮಯಳಾದ ಭೂದೇವಿಯು ಇದುವರೆಗೆ ಮಾಡಿದ ಭಾರತಪುತ್ರರ ಶತಾಪರಾಧಗಳನ್ನು ಕ್ಷಮಿಸಿ ತನ್ನ ಸ್ವಾಭಾವಿಕವಾದ ಶಾಂತಿಗುಣವನ್ನು ಅವಲಂಬಿಸಲೆಂದು ಭಗವಂತನನ್ನು ಪ್ರಾರ್ಥಿಸಿ ಈಗೊದಗಿದ ಕಷ್ಟಗಳ ನಿವಾರಣೆಗಾಗಿ ಸರ್ವರೂ ಶಾಂತಿಕರ್ಮಗಳನ್ನಾಚರಿಸುವುದಲ್ಲದೆ ವಿಪನ್ನರಿಗೆ ಯಥಾಶಕ್ತಿ ದ್ರವ್ಯಸಹಾಯಮಾಡಿ ಪುಣ್ಯವನ್ನು ಸಂಗ್ರಹಿಸಿಕೊಳ್ಳುವ ಸಮಯವನ್ನು ಯಾರೂ ಕಳೆದುಕೊಳ್ಳಬಾರದೆಂದು ನಮ್ಮ ಸವಿನಯ ಪ್ರಾರ್ಥನೆ.

ಒಳದೇಶದ ವೃತ್ತಾಂತಗಳು.

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ನಿನ್ನೆಯ ದಿವಸ ಧಾರವಾಡ ಬಳ್ಳಾರಿ ಪ್ರಾಂತಗಳ ಕಡೆಗೆ ಪ್ರಯಾಣ ಮಾಡಿದರು.

ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆಯ ಡಾ|| ರಾಬರ್ಟ್ಸ್‌ರವರು ತಮ್ಮ ವಿದೇಶದ ಪ್ರಯಾಣವನ್ನು ಮುಗಿಸಿಕೊಂಡು ರಾಜಧಾನಿಗೆ ಹಿಂತಿರುಗಿಬಂದಿರುತ್ತಾರೆ.

ಬೀಹಾರ್ ಭೂಕಂಪದ ನಿಧಿಗೆ ಶ್ರೀಮನ್ಮಹಾರಾಜರವರು 5,000 ರೂ. ಗಳನ್ನೂ ಮೈಸೂರು ಬ್ಯಾಂಕಿನವರು 5,000 ರೂ. ಗಳನ್ನೂ ಮೈಸೂರು ಡಿ|| ಬೋರ್ಡಿನವರು 1,000 ರೂ. ಗಳನ್ನೂ, ಕೊಟ್ಟಿರುತ್ತಾರೆ.

ಬೀಹಾರ್ ಭೂಕಂಪದ ನಿಧಿಗೆ ಸಹಾಯಮಾಡಲಪೇಕ್ಷಿಸುವವರು ಸಹಾಯದ್ರವ್ಯವನ್ನು ಮೈಸೂರು ಸಂಸ್ಥಾನದಲ್ಲಿರುವ ಯಾವ ಖಜಾನೆಗಾದರೂ ಪಾವತಿ ಮಾಡಬಹುದೆಂದು ಸರಕಾರದವರು ಪ್ರಕಟಿಸಿರುತ್ತಾರೆ.

ಬೆಂಗಳೂರಿನ ಪಾಪ ಎಂಬುವನು ಒಬ್ಬ ಸಣ್ಣ ಹುಡುಗಿಯಮೇಲೆ ಅತ್ಯಾಚಾರ ನಡೆಸಿದನೆಂಬ ಆಪಾದನೆಯಮೇಲೆ ಬೆಂಗಳೂರು ಸೆಷನ್ಸ್ ಜಡ್ಜರವರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ 3 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ

ಮೈಸೂರು ಸರಕಾರದವರು ಶ್ರೀ|| ಅಮೃತಾಬಾಯಿ ಮತ್ತು ಮಿಸೆಸ್ ಎಲ್. ಥಿಯೋಬಾಲ್ಡ್ ಎಂಬ ಇಬ್ಬರು ಮಹಿಳೆಯರನ್ನು ಇದೇ ಫೆಬ್ರವರಿ 15 ನೇ ತಾರೀಖಿನ ಲಾಗಾಯಿತು 2 ವರ್ಷಗಳವರೆಗೆ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿರುತ್ತಾರೆ.

ಇದೇ ಫೆಬ್ರವರಿ 18 ನೇ ತಾರೀಖಿನ ದಿವಸ ಮಧ್ಯಾಹ್ನ ತಿಪಟೂರು ರೈಲ್ವೇ ಸ್ಟೇಷನ್ ಸಮೀಪದಲ್ಲಿರುವ ಗುಡಿಸಲುಗಳಿಗೆ ಅಕಸ್ಮಾತ್ ಬೆಂಕಿಬಿದ್ದು 50-60 ಗುಡಿಸಲುಗಳು ಸುಟ್ಟು ಭಸ್ಮವಾದುವು. ಆದರೆ ದೈವವಶಾತ್ ಪ್ರಾಣಾಪಾಯವೇನೂ ಸಂಭವಿಸಲಿಲ್ಲ.

ಮೈಸೂರು ಸರಕಾರದವರು ಈ ದಿವಸದ ಲಾಗಾಯಿತು ಉದ್ಯೋಗದಿಂದ ನಿವೃತ್ತರಾಗುವ ಡಾ|| ಎಲ್. ಸಿ. ಕೋಲ್ಮನ್‌ರವರ ಸ್ಥಾನದಲ್ಲಿ ರೆವಿನ್ಯೂ ಕಮಿಷನರು ಮಿ|| ಎನ್. ಮಾಧವರಾಯರನ್ನು ಮೈಸೂರು ಸಕ್ಕರೆ ಕಾರ್ಖಾನೆಯ ಡೈರೆಕ್ಟರನ್ನಾಗಿ ನೇಮಿಸಿರುತ್ತಾರೆ.

ಬೆಂಗಳೂರು ಮಲ್ಲೇಶ್ವರದ ಹೈ ಸ್ಕೂಲ್ ಗುಮಾಸ್ತರಾದ ಸುಬ್ಬಣ್ಣಾಚಾರ್ ಎಂಬುವರು ಸ್ಕೂಲ್ ಫೀಜಿನ ಬಾಬತು 596 ರೂ. ಗಳನ್ನು ದುರುಪಯೋಗ ಪಡಿಸಿಕೊಂಡರೆಂಬ ಕಾರಣದಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ ಒಂದು ವರುಷ ಕಠಿಣ ಶಿಕ್ಷೆ ಮತ್ತು 800 ರೂ. ಜುಲ್ಮಾನೆಯನ್ನು ವಿಧಿಸಿರುತ್ತಾರೆ.

ಬೆಳಗಾಂವ ಡಿ|| ಹೂಲಿಗ್ರಾಮದಲ್ಲಿರುವ ವೀರವಿಜಯ ಜ್ಯೋತಿಷ ಪಾಠಶಾಲಾಧ್ಯಕ್ಷರಾದ ವೇ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ತಾವು ರಚಿಸಿ ಪ್ರಸಿದ್ಧಿಸಿದ ಭಾವಸಂವತ್ಸರದ ಪಂಚಾಂಗವನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ಪಂಚಾಂಗವು ಶಾಸ್ತ್ರೀಯವಾಗಿದ್ದು ಅನೇಕ ತರಹದ ಉಪಯುಕ್ತ ವಿಷಯಗಳಿಂದೊಡಗೂಡಿದೆ. ಈ ಪಂಚಾಂಗವನ್ನು ಪ್ರತಿಯೊಬ್ಬರೂ ತರಿಸಿಕೊಳ್ಳಬೇಕೆಂದಾಶಿಸುತ್ತೇವೆ. ಬೆಲೆ ೨ ಆಣೆ.

ಮೈಸೂರು ಸರಕಾರದವರು ಮಹಾರಾಜಾಕಾಲೇಜಿನ ಸಂಸ್ಕೃತಪಂಡಿತರು, ಡಾ|| ಆರ್. ಶಾಮಶಾಸ್ತ್ರಿಗಳು, ಬೆಂಗಳೂರು ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರು, ಸದರಿ ಕಾಲೇಜಿನ ಸೀನಿಯರ್ ಸಂಸ್ಕೃತ ಪಂಡಿತರು, ಮ|| ಡಿ. ವೆಂಕಟರಾಮಯ್ಯನವರು, ಸಂಸ್ಕೃತ ಸ್ಕೂಲುಗಳ ಇನ್‌ಸ್ಪೆಕ್ಟರು, ವಿಶ್ವವಿದ್ಯಾಲಯದ ಲೈಬ್ರೇರಿಯನ್ ಡಾ|| ಎ ಎನ್. ನರಸಿಂಹಯ್ಯನವರು, ಆಸ್ಥಾನ ವಿದ್ವಾನ್ ವೇ|| ಶಿರಸಿಗುರುಶಾಂತಶಾಸ್ತ್ರಿಗಳು, ಆಸ್ಥಾನವಿದ್ವಾನ್ ಎ. ಶಾಂತರಾಜಶಾಸ್ತ್ರಿಗಳು, ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯ ಪ್ರಿನ್ಸಿಪಾಲರು ಮತ್ತು ಆಸ್ಥಾನವಿದ್ವಾನ್ ಶ್ರವಣಬೆಳಗೊಳದ ಎ. ಸುಬ್ಬಯ್ಯಶಾಸ್ತ್ರಿಗಳು ಇವರುಗಳನ್ನು 3 ವರ್ಷಗಳವರೆಗೆ ಸಂಸ್ಕೃತವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ ಬೋರ್ಡಿಗೆ ಮೆಂಬರರನ್ನಾಗಿ ನೇಮಿಸಿರುತ್ತಾರೆ.

ಮುಜಫರನಗರ ಡಿಸ್ಟ್ರಿಕ್ಟಿಗೆ ಸೇರಿದ ರತನ್‌ಸಿಂಗ್ ಎಂಬ ಜಮೀನ್ದಾರನು ಸದರಿ ಡಿಸ್ಟ್ರಿಕ್ಟಿನ ತಹಶೀಲದಾರರನ್ನು ಕೊಲೆಮಾಡಿದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದರು. ತಹಶೀಲದಾರರು ಜಮೀನ್ ಕಂದಾಯವನ್ನು ವಸೂಲು ಮಾಡುವ ವಿಚಾರದಲ್ಲಿ ಕೇವಲ ನಿರ್ದಾಕ್ಷಿಣ್ಯಪರರಾಗಿದ್ದುದೇ ಇದಕ್ಕೆ ಕಾರಣವಂತೆ!

ಕಂಚಿನಗರದ ಅಬ್ದುಲ್‌ಅಜೀಜ್, ಖಾದರ್‌ಸಾಹೇಬ, ಚೋಟಾಸಾಹೇಬ, ಸ್ವಾಮಿನಾಥಪಿಳ್ಳೆ, ಬಾಪೂನಾಯಿಡು, ಅಬ್ದುಲ್‌ಹಾಯ್, ಅಬ್ದುಲ್‌ಸಲಾಂ ಎಂಬ ಏಳು ಜನರು ಮತ್ತೊಬ್ಬ ಮಹಮ್ಮದೀಯನ ಚಿಕಿತ್ಸೆಗಾಗಿ ಸುಂದರಮ್ಮಾಳ್ ಎಂಬ 40 ವರ್ಷದ ವಿಧವೆಯ ಮನೆಗೆ ನುಗ್ಗಿ ಬಲಾತ್ಕಾರವಾಗಿ ಆಕೆಯ ರಕ್ತವನ್ನು ತೆಗೆದುಕೊಂಡು ಹೋದರೆಂಬ ಆಪಾದನೆಯ ಮೇಲೆ ಪೋಲೀಸರು ಅವರೆಲ್ಲರನ್ನೂ ದಸ್ತಗಿರಿಮಾಡಿ ಮೊಕದ್ದಮೆ ಹೂಡಿರುತ್ತಾರೆ.

ವರ್ತಮಾನಸಂಗ್ರಹ.

ಜನವರಿ ತಿಂಗಳ ಮೊದಲನೇಯ ವಾರದಲ್ಲಿ ಬಂಗಾಳ ಪ್ರಾಂತದಲ್ಲಿ 42 ಧರಾಯಿತಿಗಳು ನಡೆದವು.

ಹಿಂದೂಸ್ಥಾನದ ರೈಲ್ವೆಗಳಿಂದ ಕಳೆದವರ್ಷ 14 ಲಕ್ಷ ರೂಪಾಯಿಗಳ ನಷ್ಟವು ಸಂಭವಿಸಿರುವುದು.

8 ನೇ ಶತಮಾನದ ಒಂದು ಬೆಳ್ಳಿ ಪೆನ್ನಿಯು ಗ್ಲೆಂಡಿಂಗ್ಸ್ ಎಂಬಲ್ಲಿ 350 ರೂಪಾಯಿಗಳಿಗೆ ಹರಾಜು ಹಾಕಲ್ಪಟ್ಟಿತು.

ಇಂಗ್ಲೆಂಡ್‌ದೇಶದಲ್ಲಿ ಬೆಂಕಿಯ ಅನಾಹುತಗಳಿಂದ ಪ್ರತಿವಾರವೂ 15,00,000 ರೂಪಾಯಿಗಳ ನಷ್ಟವು ಸಂಭವಿಸುವುದಂತೆ!

ಹಂಗೇರಿಯಾದೇಶದ ಒಬ್ಬಾನೊಬ್ಬ ಕ್ಷೌರಿಕನು 11 ಸೆಕೆಂಡುಗಳೊಳಗಾಗಿ ಒಬ್ಬ ಮನುಷ್ಯನ ಕ್ಷೌರವನ್ನು ಪೂರ್ತಿಮಾಡುವನಂತೆ!

ತುರ್ಕಸ್ಥಾನದ ರಾಜಧಾನಿಯಾದ ಇಸ್ತಾಂಬೂಲ್ ನಗರದ ಭಿಕ್ಷುಕರು ಒಂದು ಘಂಟೆಗೆ 3 ರೂಪಾಯಿಗಳನ್ನು ಸಂಪಾದಿಸುವರಂತೆ!

ಮಿಡ್ನಾಪುರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಗಾಂಧಿಯವರು ಆ ಜಿಲ್ಲೆಯನ್ನು ಪ್ರವೇಶಿಸಕೂಡದೆಂದು ಅಪ್ಪಣೆಮಾಡಿರುತ್ತಾರೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನದವರು ಇಂಗ್ಲೆಂಡಿನಿಂದ 10,00,00,000 ರೂಪಾಯಿಗಳು ಭಂಗಾರವನ್ನು ಕೊಂಡುಕೊಂಡರು.

ಪ್ರೇಗ್‌ನಗರದ ಪೋಲೀಸರು ಒಬ್ಬಾನೊಬ್ಬ ಪ್ರಸಿದ್ಧ ಚೋರನನ್ನು ಅವನು ಕಡಿದು ಬಿಸಾಡಿದ್ದ ಹಣ್ಣಿನಲ್ಲಿ ಕಂಡುಬಂದ ಹಲ್ಲಿನ ಗುರುತುಗಳ ಆಧಾರದ ಮೇಲೆ ಪತ್ತೆಹಚ್ಚಿರುವರು.

ಚೀನಾದೇಶಕ್ಕೆ ಸೇರಿದ ಷಾಂಘಾಯಿ ನಗರದಲ್ಲಿ ಬೀದಿಯಲ್ಲಿ ಬಿದ್ದಿರುವ ಸಿಗರೇಟಿನ ತುಂಡುಗಳನ್ನು ಆರಿಸುವುದರಿಂದ 3000 ಜನರು ತಮ್ಮ ಜೀವನೋಪಾಯವನ್ನು ನಡೆಯಿಸುವರಂತೆ!

ರಾಜಷಾಹಿನಗರದ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಸ್ತ್ರೀಯು 5 ಹೆಣ್ಣುಮಕ್ಕಳನ್ನು ಪ್ರಸುವಿಸಿದಳು. ಮಕ್ಕಳೆಲ್ಲರೂ ಮೃತಪಟ್ಟರು. ತಾಯಿಯುಮಾತ್ರ ಸೌಖ್ಯವಾಗಿರುತ್ತಾಳೆ.

ಚಂದ್ರಗಿರಿ ಹೈಸ್ಕೂಲಿನ ಇಬ್ಬರು ವಿದ್ಯಾರ್ಥಿಗಳು ತಮ್ಮ ಹೆಡ್‌ಮಾಸ್ಟರನ್ನು ಮತ್ತು ಅವರ ಪತ್ನೀಪುತ್ರರನ್ನು ದಾರಿಯಲ್ಲಿ ಅಡ್ಡಗಟ್ಟಿ ಹೊಡೆದರೆಂಬ ಕಾರಣದಮೇಲೆ ದಸ್ತಗಿರಿಮಾಡಲ್ಪಟ್ಟಿರುತ್ತಾರೆ.

ಸೌಥಾಂಪ್ಟನ್ ನಗರದ ಒಬ್ಬ ಮನುಷ್ಯನು ಒಂದು ಹಂದಿಯನ್ನು ಒದ್ದನೆಂಬ ಕಾರಣದಮೇಲೆ 1 ತಿಂಗಳ ಕಠಿಣ ಶಿಕ್ಷೆಗೆ ಗುರಿಯಾಗಿರುವನು. ಇವನಿಗೆ ಇದೇ ಅಪಾದನೆಗಾಗಿ 11 ಸಾರಿ ಎಚ್ಚರಿಕೆಯನ್ನು ಕೊಟ್ಟಿದ್ದರಂತೆ!

ಡಾ|| ಡೇ ಎಂಬ ಸುಪ್ರಸಿದ್ಧ ಭೌತಿಕಶಾಸ್ತ್ರಜ್ಞರು ಬೀಹಾರ್ ಭೂಕಂಪದ ಕಾರಣಗಳನ್ನು ಕಂಡುಹಿಡಿಯುವ ಸಲುವಾಗಿ ಭೂಕಂಪವಾದ ಪ್ರದೇಶಗಳಲ್ಲಿ ಸಂಚರಿಸುತ್ತಿರುವರು. ಸಪ್ತಗ್ರಹಕೂಟದಿಂದ ಭೂಕಂಪವಾಯಿತೆಂಬುದನ್ನು ಇವರು ನಂಬುವುದಿಲ್ಲವಂತೆ!

ಅಲಹಾಬಾದಿನಲ್ಲಿ ಒಬ್ಬ ಅಪರಿಚಿತ ಮನುಷ್ಯನು ಅಲ್ಲಿಯ ವೇಶ್ಯಾಗೃಹಗಳಿಗೆಲ್ಲಾ ಹೋಗಿ ಅಪಾರವಾದ ದ್ರವ್ಯವನ್ನು ವೆಚ್ಚಮಾಡುತ್ತಿದ್ದನು. ಇದು ಪೋಲೀಸರಿಗೆ ತಿಳಿದು ಅನುಮಾನದಮೇಲೆ ಅವನನ್ನು ದಸ್ತಗಿರಿಮಾಡಿ ತನಿಖೆಮಾಡುತ್ತಿರುವರು.

ಇದೇ ಫೆಬ್ರವರಿ 20 ನೇ ತಾರೀಖಿನ ದಿವಸ ವಿಜಯನಗರಕ್ಕೆ 40 ಮೈಲುಗಳ ದೂರದಲ್ಲಿರುವ ಬೊಬ್ಬಿಲಿ ನಗರದಲ್ಲಿ 3-4 ನಿಮಿಷಗಳವರೆಗೆ ಭೂಕಂಪವಾಯಿತೆಂದೂ ಭೂಕಂಪದ ಕಾಲದಲ್ಲಿ ಭೂಗರ್ಭದಿಂದ ಒಂದು ತರಹ ಭೀಕರಧ್ವನಿಯು ಹೊರಟಿತೆಂದೂ ತಿಳಿದುಬಂದಿದೆ.

ಮೆಕ್ಸಿಕೊ ದೇಶದ ಪೋಲೀಸರು "ಮೊರೆಲಸ್ ದೇಶದ ಹುಲಿ" ಎಂಬ ಪ್ರಸಿದ್ಧ ಧರಾಯಿತನನ್ನು ಬಹುಸಾಹಸದಿಂದ ಹಿಡಿದು ವಿಚಾರಣೆಗೆ ಗುರಿಪಡಿಸಿರುವರು. ಪೋಲೀಸರು ಇವನ ಮೇಲೆ ಎರಡು ಖೂನಿ ಮತ್ತು 100 ದರೋಡೆಗಳ ಅಪಾದನೆಯನ್ನು ಹೊರಿಸಿರುವರಂತೆ!

ಬೆಲ್ಜಿಯಂದೇಶದ ರಾಜರಾದ 1 ನೇ ಅಲ್ಬರ್ಟ್‌ರವರು ಕೆಲವು ದಿವಸಗಳ ಹಿಂದೆ ಅಲ್ಪ್ಸ್ ಪರ್ವತವನ್ನು ಹತ್ತುತ್ತಿದ್ದಾಗ ಅಕಸ್ಮಾತ್ ಕಾಲುಜಾರಿ ಕೆಳಕ್ಕೆ ಬಿದ್ದು ಮೃತಪಟ್ಟರು. ಇವರಿಗೆ ಇನ್ನೂ 33 ವರ್ಷ ವಯಸ್ಸಾಗಿದ್ದು ಇವರ ಅಕಾಲಮರಣವು ಯೂರೋಪ್, ಅಮೇರಿಕಾಖಂಡಗಳಲ್ಲಿ ವಿಶೇಷ ಸಂತಾಪವನ್ನುಂಟುಮಾಡಿದೆ.

ಪೋರ್ಚುಗಲ್ ಸರಕಾರದವರು ಲಿಸ್ಬನ್ ನಗರದ ಪೂರ್ವದಲ್ಲಿರುವ ಟಾಗಸ್ ನದಿಗೆ ಪ್ರಪಂಚದಲ್ಲೆಲ್ಲಾ ಅತ್ಯಂತದೊಡ್ಡದಾದ ಸೇತುವೆಯನ್ನು ಕಟ್ಟಬೇಕೆಂದು ನಿರ್ಧರಿಸಿರುವರು. ಸೇತುವೆಯು ಒಟ್ಟು 6½ ಮೈಲುಗಳ ಉದ್ದವಾಗುವುದೆಂದೂ, ಅದನ್ನು ಕಟ್ಟಲು 4,50,00,000 ರೂಪಾಯಿಗಳು ವೆಚ್ಚವಾಗುವುವೆಂದೂ ಅಂದಾಜು ಹಾಕಲ್ಪಟ್ಟಿದೆ.

ಕಲ್ಕತ್ತಾನಗರದಲ್ಲಿ ಮೋಹೇಂದ್ರನಾಥರಾಯ್ ಎಂಬಾತನು ಮಿಸ್ ಮೂಬೆಲ್ ಎಂಬ ತರುಣಿಯ ಮೇಲೆ ಅತ್ಯಾಚಾರ ನಡೆಸಲು ಪ್ರಯತ್ನಿಸಿದನೆಂಬ ಕಾರಣದ ಮೇಲೆ ಡೆಪ್ಯುಟಿ ಕಮಿಷನರವರ ಕೋರ್ಟಿನಲ್ಲಿ ಒಂದು ಮೊಕದ್ದಮೆಯು ಹೂಡಲ್ಪಟ್ಟಿತ್ತು. ವಿಚಾರಣೆಯ ಕಾಲದಲ್ಲಿ ರಾಜಿಯ ಪ್ರಸ್ತಾಪವು ಬಂದು ಮೋಹೇಂದ್ರನಾಥನು ಭೂಕಂಪದ ನಿಧಿಗೆ 400 ರೂ. ಗಳನ್ನು ಕೊಟ್ಟರೆ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಿ ಹುಡುಗಿಯು ಹೇಳಿದಳು. ಅದರಂತೆ ಮೋಹೇಂದ್ರನಾಥನು 400 ರೂ. ಗಳನ್ನು ಕೊಟ್ಟು ಮುಕ್ತನಾದನು.

ಸತ್ತವರನ್ನು ಬದುಕಿಸುವ ಔಷಧಿ!

ಲಂಡನ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಜೆ. ಎಚ್. ಬರ್ನ್ ಎಂಬುವರು ಆರ್ಡೆನಾಲಿನ್ ಎಂಬ ನೂತನ ಔಷಧವನ್ನು ತಯಾರು ಮಾಡಿರುವರು. ಈ ಔಷಧವನ್ನು ಆಗತಾನೇ ಮೃತಪಟ್ಟ ಶರೀರಕ್ಕೆ ಇಂಜಕ್ಷನ್ ಮಾಡಿದರೆ ಮೃತನು ಸಜೀವನಾಗಿ ಕೆಲವು ನಿಮಿಷಗಳವರೆಗೆ ಬದುಕಿರುವನಂತೆ!

ತಪ್ಪಿಗೆ ತಕ್ಕ ಶಿಕ್ಷೆ!

ಫಿಲಡೆಲ್ಫಿಯಾ ನಗರದಲ್ಲಿ ಮದ್ಯಪಾನ ಮಾಡಿ ಜ್ಞಾನತಪ್ಪಿ ಜನರಿಗೆ ತೊಂದರೆ ಮಾಡುತ್ತಿದ್ದ 21 ಜನರನ್ನು ಪೋಲೀಸರು ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಕೋರ್ಟಿನ ಅಂಗಳದಲ್ಲಿ ಸುರಿದಿದ್ದ 1 ಚೀಲ ಹುರುಳಿ ಕಾಳುಗಳನ್ನು ಒಂದೊಂದಾಗಿ ತೆಗೆದು ತುಂಬಬೇಕೆಂದು ಅಪ್ಪಣೆ ಮಾಡಿದರು.

ಮೀನು ಹಿಡಿಯುವ ಜೇಡರಹುಳು!

ಜೇಡರ ಹುಳುಗಳು ತಮ್ಮ ಬಾಯಿಯಲ್ಲಿರುವ ಒಂದು ವಿಧವಾದ ರಸದಿಂದ ಸಂದುಗಳಲ್ಲಿ ಬಲೆಗಳನ್ನು ಕಟ್ಟಿ ನೊಣ, ಸೊಳ್ಳೆ ಮೊದಲಾದ ಸಣ್ಣಸಣ್ಣ ಹುಳುಗಳನ್ನು ಹಿಡಿದು ತಿನ್ನುವದನ್ನು ಎಲ್ಲರೂ ಬಲ್ಲರು. ಆದರೆ ಈಗ ಮೆಡೀರಾ ಎಂಬ ಸ್ಥಳದಲ್ಲಿ ಒಂದು ಹೊಸ ಜಾತಿಯ ಜೇಡರಹುಳುವು ದೊರೆತಿರುವುದು. ಅದು ನೀರಿನಲ್ಲಿ ಬಲೆಗಳನ್ನು ಕಟ್ಟಿ ಸಣ್ಣಸಣ್ಣ ಮೀನುಗಳನ್ನು ಹಿಡಿದು ತಿನ್ನುವುದಂತೆ!

300 ವರ್ಷಗಳ ಹಿಂದೆ ನಾಶವಾದ ನಕ್ಷತ್ರ!

ಅಮೇರಿಕೆಯ ಮೌಂಟ್ ವಿಲ್ಸನ್ ಖಗೋಳಶೋಧನಾಲಯದಲ್ಲಿ ಶಾಸ್ತ್ರಜ್ಞರು "ನೋರಾ ಓಫಿಯೋಚಿ" ಎಂಬ ನಕ್ಷತ್ರವನ್ನು ಬಹಳ ಕುತೂಹಲದಿಂದ ಪರೀಕ್ಷಿಸುತ್ತಿರುವರು. ಈ ನಕ್ಷತ್ರದಿಂದ ಹೊರಟ ಕಿರಣಗಳು ಭೂಮಿಯನ್ನು ತಲಪಬೇಕಾದರೆ 300 ವರ್ಷಗಳು ಬೇಕಾಗುವುವಂತೆ! ಇದರ ಪ್ರಕಾಶವು ಇದ್ದಕ್ಕಿದ್ದಹಾಗೆ ಹೆಚ್ಚಾಗುತ್ತಿರುವುದರಿಂದ, ಆ ನಕ್ಷತ್ರವು ಈಗ್ಗೆ ಸುಮಾರು 300 ವರ್ಷಗಳ ಹಿಂದೆ ಸಂಪೂರ್ಣವಾಗಿ ಸುಟ್ಟುಹೋಗಿರಬೇಕೆಂದು ಶಾಸ್ತ್ರಜ್ಞರು ಹೇಳುತ್ತಿರುವರು!

100 ವರ್ಷಗಳ ಹಿಂದೆ ನಡೆದ ಭೂಕಂಪ!

ಪಾಟ್ನಾ ನಗರದ ಒಂದಾನೊಂದು ಮಸೀದಿಯಲ್ಲಿ ಹಿಂದಿನ ಫಕೀರರು ಪೀರಾರಿನಲ್ಲಿ ಒಂದು ಶತಮಾನದ ಹಿಂದೆ ನಡೆದ ಭೂಕಂಪದ ವಿಷಯಗಳನ್ನು ಪುಸ್ತಕರೂಪದಲ್ಲಿ ಬರೆದಿಟ್ಟಿರುವರು. ಅದರಲ್ಲಿ ಭೂಕಂಪವು ನೇಪಾಳದ ಕಣಿವೆಯಿಂದ, ಗಂಗಾನದಿಯ ತಪ್ಪಲಿನ ಮಾರ್ಗವಾಗಿ ಮದರಾಸಿನವರೆಗೂ ಆವರಿಸಿದ್ದು ಇಡೀ ಭರತಖಂಡವನ್ನೇ ನಡುಗಿಸಿತೆಂದೂ, ಆಗಲೂ ಪ್ರವಾಹವು ಮಿತಿಮೀರಿ ಬಂದು, ಸಾವಿರಾರು ಜನರು ಮೃತಪಟ್ಟರೆಂದೂ, ನೂರಾರು ಕಟ್ಟಡಗಳು ಮುರಿದುಬಿದ್ದುವೆಂದೂ, ಭೂಕಂಪವು ಒಂದು ವರ್ಷದವರೆಗೆ ಆಗುತ್ತಲೇ ಇದ್ದಿತೆಂದೂ ಬರೆಯಲ್ಪಟ್ಟಿದೆ.

ಆಫ್ರಿಕೆಯಲ್ಲಿ ಗ್ರಹಣಕಾಲದ ವೈಚಿತ್ರ್ಯ!

ಬರುವ ಆಗಸ್ಟ್ 10 ನೇ ತಾರೀಖಿನ ದಿವಸ ಸಂಪೂರ್ಣ ಸೂರ್ಯಗ್ರಹಣವಾಗಿ ಅದು ಆಫ್ರಿಕಾ ಖಂಡಕ್ಕೆ ಮಾತ್ರ ಗೋಚರವಾಗುವುದು. ಪೂರ್ಣಗ್ರಾಸದ ಸಮಯದಲ್ಲಿ ಅಲ್ಲಿನ ಅಭೇದ್ಯಗಳಾದ ಅರಣ್ಯಗಳಲ್ಲಿ ವಾಸಮಾಡುವ ಸಾಧು ಮತ್ತು ದುಷ್ಟಪ್ರಾಣಿಗಳೆಲ್ಲವೂ ತಮ್ಮತಮ್ಮ ದ್ವೇಷವನ್ನು ತೊರೆದು ಸ್ನೇಹಭಾವದಿಂದ ವರ್ತಿಸುವುವೆಂದು ಅಲ್ಲಿನ ಜನರು ಹೇಳುವರು! ಪೂರ್ಣಗ್ರಾಸವು ಬೆಲ್ಜಿಯನ್ ಕಾಂಗೋ ದೇಶಕ್ಕೆ ಸೇರಿದ ಅರಣ್ಯಗಳಲ್ಲಿ ಕಾಣುವುದರಿಂದ ಗ್ರಹಣ ಕಾಲದಲ್ಲಿ ಆ ವಿಚಿತ್ರ ದೃಶ್ಯವನ್ನು ಫೋಟೋ ತೆಗೆಯಬೇಕೆಂದು ಕೆಲವು ಜನ ಶಾಸ್ತ್ರಜ್ಞರು ಬೆಲ್ಜಿಯಮ್ಮಿನಿಂದ ಆಫ್ರಿಕಾಕ್ಕೆ ಹೊರಟಿರುವರು.

ಸ್ವೀಕಾರ

ಬಳ್ಳಾರಿ ಡಿ|| ಸಿರಿಗೇರಿಯಲ್ಲಿ ನೆರವೇರಿದ ಸಪ್ತಾಹ ಭಜನಾಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **2** ರೂ. ಗಳು ಅಲ್ಲಿಯ ಸಂಸ್ಕೃತ ಪಾಠಶಾಲಾಧ್ಯಕ್ಷರಾದ ಶ್ರೀ ಷ|| ಬ್ರ|| ವಿರೂಪಾಕ್ಷಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಗಂಗಾವತಿ ತಾಲ್ಲೂಕು ಕನಕಗಿರಿಯಲ್ಲಿ ನೆರವೇರಿದ ಸಪ್ತಗ್ರಹಕೂಟಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **1** ರೂ. ಯು ಅಲ್ಲಿಯ ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗಾ ಡಿ|| ಆಯನೂರು ಗ್ರಾಮದ ಮಹಾಜನರು ಮಹಾಶಿವರಾತ್ರಿಯ ದಿವಸ ಜಗದಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **1** ರೂ. ಯು ವೇ|| ಗುಬ್ಬಿ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಶಿರಹಟ್ಟಿ ತಾ|| ಸಂಕದಾಳ ಗ್ರಾಮದ ದೈವದವರು ಹಿರೇಹಡಗಲಿ ಬೃಹನ್ಮಠದ ಶ್ರೀ ಹಾಲಸ್ವಾಮಿಗಳವರನ್ನು ಬರಮಾಡಿಕೊಂಡು ಪೂರ್ವಜರ ಗದ್ದುಗೆಯ ಸಮಾರಂಭವನ್ನು ನೆರವೇರಿಸಿದ ಸಮಯದಲ್ಲಿ ತೆಗೆಯಿಸಿದ **1** ರೂ. ಯು ಮ|| ರಾ|| ಗುಂಡೋರಾಮಚಂದ್ರ ಕುಲಕರ್ಣಿ ಇವರ ದ್ವಾರಾತಲ್ಪಿರುತ್ತದೆ.

ಜಮಖಂಡಿ ಸಂಸ್ಥಾನಕ್ಕೆ ಸೇರಿದ ಬನ್ನಟ್ಟಿ ಗ್ರಾಮದ ವೇ|| ಶಿವರುದ್ರಯ್ಯನವರು ಭಂಗಿ ಇವರ ಪುತ್ರ ಚಿ|| ವಿರೂಪಾಕ್ಷಯ್ಯನಿಗೆ ಪ್ರಾಪ್ತವಾಗಿದ್ದ ಅಸಾಧ್ಯವಾದ ಪ್ಲೇಗುರೋಗವು ಜಗದಾಚಾರ್ಯರ ಅನುಗ್ರಹದಿಂದ ಗುಣವಾದ ಸಂತೋಷಕ್ಕಾಗಿ ಸದರಿ ಶಿವರುದ್ರಯ್ಯನವರು **1** ರೂ. ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಸಪ್ತಾಹಭಜನಾಸಮಾರಂಭ, ಶಿರಿಗೇರಿ.

ಬಳ್ಳಾರಿ ಜಿಲ್ಲಾ ಶಿರುಗುಪ್ಪಾ ತಾಲೂಕು ಶಿರಿಗೇರಿ ಗ್ರಾಮದ ಪ್ರಮುಖರಾದ ಸಮಸ್ತ ಮತಬಾಂಧವರು ಸಪ್ತಗ್ರಹಯೋಗದ ಶಾಂತ್ಯರ್ಥವಾಗಿ ಸಪ್ತಾಹ ಭಜನೆಯನ್ನು ಏರ್ಪಡಿಸಿದ್ದರು. ಭಜನಾಸ್ಥಳವು ಇದೇ ಗ್ರಾಮದ ನೀಲಕಂಠೇಶ್ವರ ದೇವಾಲಯದ ಆವರಣದಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದಿತು. ಭಜನಾಮಂಟಪವು ತಳಿರು-ತೋರಣ-ರಂಭಾಸ್ತಂಭಾದಿಗಳಿಂದ ರಮಣೀಯವಾಗಿದ್ದಿತು. ಆ ಮಂಟಪದ ಮಧ್ಯರಂಗದಲ್ಲಿರುವ ಮಹಾಪೀಠದಲ್ಲಿ ನಾಗನಾಥೇಶ್ವರಸ್ವಾಮಿಯ ಸುವರ್ಣ ರಜತ-ನಿರ್ಮಿತವಾದ ದಿವ್ಯಮೂರ್ತಿಯನ್ನು ಸ್ಥಾಪಿಸಿದ್ದರು. ಅಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋತ್ಪತ್ತಿಯ ದಿವ್ಯಚಿತ್ರಪಟವು ರಂಜಿಸುತ್ತಿದ್ದಿತು. ಮಾಘ ಬ|| ೯ ಗುರುವಾರ ಪ್ರಾತಃಕಾಲಕ್ಕೆ ಭಜನಾಮುಹೂರ್ತವು ನಿಶ್ಚಿತವಾಗಿದ್ದಕಾರಣ ಆ ದಿನ ಸರಿಯಾಗಿ ಸಮಸ್ತ ಭಕ್ತಮಾಹೇಶ್ವರರು ಸೇರಿ ಮಂಗಲವಾದ್ಯಗಳು ಭೋರ್ಗರೆಯುತ್ತಿರಲು ಸದರಿ ಗ್ರಾಮದ ಸಂಸ್ಕೃತಪಾಠಶಾಲಾಧ್ಯಕ್ಷರಾದ ಶ್ರೀ|| ಷ|| ಬ್ರ|| ಹಿರೇಹಾಳುಮಳೀಮಠದ, ಚರಪಟ್ಟಾಧ್ಯಕ್ಷ ಶ್ರೀ ವಿರೂಪಾಕ್ಷಸ್ವಾಮಿಗಳವರನ್ನು ಛತ್ರ-ಚಾಮರಾದಿ ಬಿರುದಾವಳಿಗಳಿಂದ ಮಹೋತ್ಸವದೊಡನೆ ಭಜನಾಮಂಟಪಕ್ಕೆ ಆಹ್ವಾನಿಸಿ, ದಿವ್ಯಪೀಠದಲ್ಲಿ ಉಪವೇಶನಗೈಸಿದರು. ಬಳಿಕ ಸಂಸ್ಕೃತಪಾಠಶಾಲಾಧ್ಯಾಪಕರಾದ ವೇ|| ಪಿ. ಎಂ. ಶಿವಪ್ರಸಾದಶಾಸ್ತ್ರಿಗಳು ತಮ್ಮ ವಿದ್ಯಾರ್ಥಿಮಂಡಳಿಯಿಂದ ಮನೋಹರವಾದ ಮಧುರವಾಣಿಯಿಂದ ವೇದಘೋಷಮಾಡಿಸುತ್ತಿರಲು ಗಣಪತಿ ಪೂಜನಾದಿ ಕಾರ್ಯಗಳು ನೆರವೇರಿದವು. ಅನಂತರ ಶ್ರೀ ಸ್ವಾಮಿಗಳವರ ಅಜ್ಞಾನುಸಾರವಾಗಿ ಭಜನಾಸಂಘದವರು ಸ್ನಾನಾದಿಗಳಿಂದ ಶುಚಿರ್ಭೂತರಾಗಿ ಭಸ್ಮ-ರುದ್ರಾಕ್ಷಮಾಲಾದಿ ಶಿವಚಿಹ್ನಾಲಂಕೃತರಾಗಿ ಸಂಗೀತವಾದ್ಯಗಳ ಸುನಾದಪೂರ್ಣಗಳಾದ ಮಧುರಸ್ವರಗಳಿಂದ ಶ್ರೀ ಪರಮಾತ್ಮನ ಮತ್ತು ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಗವತ್ಪಾದರ ವಿಚಿತ್ರಲೀಲಾ ವಿಭ್ರಾಜಮಾನಗಳಾದ ಭಜನಾಸ್ತೋತ್ರಗಳಂಗೈಯಲು ಪ್ರಾರಂಭಿಸಿದರು. ಇದೇಕ್ರಮದಿಂದ ಏಳುದಿನಗಳವರೆಗೆ ಅವಿಚ್ಛಿನ್ನವಾಗಿ ಭಜನೆಯು ನಡೆಯಿತು. ಸುತ್ತುಮುತ್ತಲಿನ ಹಳ್ಳಿಗಳಿಂದ ಅನೇಕಜನರು ಸಂದರ್ಶನಾರ್ಥವಾಗಿ ತಂಡೋಪತಂಡವಾಗಿ ಆಗಮಿಸುತ್ತಿದ್ದರು. ನಿರಂತರದಲ್ಲಿಯೂ ಅಭ್ಯಾಗತರಿಗೆ ಅನ್ನಸಂತರ್ಪಣಾದಿಗಳು ನಡೆಯುತ್ತಿದ್ದವು. ಈ ಸಪ್ತಾಹಗಳ ಮಧ್ಯದಲ್ಲಿ ಮಹಾಶಿವರಾತ್ರಿಯು ಲಭ್ಯವಾದುದಾದರೂ ಜನರ ಪುಣ್ಯವೆಂದೇ ಹೇಳಬೇಕಾಗಿದೆ. "ಶಾಸ್ತ್ರೇಷು ತ್ರಿರುಕ್ತ್ವಾ | ರುದ್ರೈಕಾದಶಿನೀ ಶ್ರುತಾ || ತತ್ರಪಂಚಾಕ್ಷರೀತಸ್ಮಾಂ | ಶಿವಇತ್ಯಕ್ಷರದ್ವಯಂ ||" ಎಂಬ ಶಾಸ್ತ್ರವಚನಾನುಸಾರವಾಗಿ ಈ ಪವಿತ್ರದಿನದ ರಾತ್ರಿಯಲ್ಲಿ ಎಂದಿಗೂ ಜಾಗರಣಾದಿಗಳನ್ನು ಮಾಡದ ಭಕ್ತಿಶೂನ್ಯರಾದ ಸಾವಿರಾರು ಜನರು ಜಾಗರಣದಿಂದ ಏಕಚಿತ್ತರಾಗಿ ಪಾಪನಾಶಕವಾದ ಶಿವಶಬ್ದವೆಂಬ ಮಾರ್ತಂಡ ಕಿರಣಜಾಲವನ್ನು ತಮ್ಮ ಕರ್ಣಗುಹಾಂತರಾಳದಲ್ಲಿ ಪ್ರವೇಶನಗೊಳಿಸಿ, ತದ್ದ್ವಾರಾ ಅಲ್ಲಿ ಅವಿತುಕೊಂಡಿರ್ದ ಸಂಚಿತ ಪಾಪರಾಶಿಗಳೆಂಬ ದಿವಾಂಧಗಳ ವ್ರಾತವನ್ನು ಪಲಾಯನಗೊಳಿಸಿ ಶ್ರೀ ವಿಶ್ವೇಶ್ವರನಾದ ಶಂಕರನ ಕೃಪೆಗೆ ಪಾತ್ರರಾಗಿ ಧನ್ಯರಾದರು. ಹೀಗೆ ಸಪ್ತಾಹಗಳು ಸಮಾಪ್ತಿಯಾದನಂತರ ೮ ನೇ ದಿನ ಶ್ರೀ ಸ್ವಾಮಿಗಳವರ ಪಾದಪೂಜೆಯೂ ಮಹಾರಾಧನೆಯೂ ನಡೆದವು. ಗಣಾರಾಧನೆಗೆ ಅನೇಕ ಜನ ಮಾಹೇಶ್ವರರು ಆಗಮಿಸಿದ್ದರು. ಇನ್ನುಳಿದ ಭಕ್ತರೂ ಪರಮತೀಯರೂ ಮೂರು ನಾಲ್ಕು ಸಾವಿರದವರೆಗೂ ನೆರೆದಿದ್ದರು. ಅವರಿಗೆಲ್ಲಾ ಸುವ್ಯವಸ್ಥೆಯಿಂದ ಮೃಷ್ಟಾನ್ನ ಸಂತರ್ಪಣವಾದನಂತರ ಮಾಹೇಶ್ವರರಿಗೆ ದಕ್ಷಿಣಾ ತಾಂಬೂಲಾದಿಗಳನ್ನು ಸಮರ್ಪಿಸಿದ್ದಾಯಿತು. ಇದೇದಿನವೇ ಈ ಗ್ರಾಮದ ಮ|| ವೈಶ್ಯರ ದೊಡ್ಡ ಈಶ್ವರಪ್ಪನವರು ಪಾಠಶಾಲಾ ವಿದ್ಯಾರ್ಥಿಗಳಿಗೆ ಉದಾರಭಾವದಿಂದ ವಸ್ತ್ರದಾನವನ್ನೆಸಗಿದರು. ಸಾಯಂಕಾಲ ೬|| ಗಂಟೆಗೆ ಶ್ರೀ ಸ್ವಾಮಿಯವರು ಧರ್ಮದ ವಿಷಯವಾಗಿಯೂ, ಸಂಸ್ಕೃತಪಾಠಶಾಲಾಧ್ಯಾಪಕರಾದ ವೇ|| ಪಿ. ಎಂ. ಶಿವಪ್ರಸಾದಶಾಸ್ತ್ರಿಗಳು ಶಿವಮಹಿಮೆಯ ವಿಷಯದಲ್ಲಿಯೂ, ವೇ|| ಕಲ್ಮಾಲೀಮಠದ ಬಸವಾರಾಧ್ಯರ ಪುತ್ರರಾದ ಅಯ್ಯಪ್ಪಾರ್ಯರು ನೀತಿಯ ವಿಷಯದಲ್ಲಿಯೂ, ಉಪನ್ಯಾಸ ಮಾಡಿದರು. ಬಳಿಕ ಸರ್ವರೂ ಶ್ರೀ ಸ್ವಾಮಿಯವರನ್ನು ಮಹೋತ್ಸವ ಪೂರ್ವಕವಾಗಿ ಮಠಕ್ಕೆ ಪ್ರವೇಶನಗೈಸಿ, ಆ ಪೂಜ್ಯರ ಆಶೀರ್ವಾದವನ್ನು ಪಡೆದು ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಎಂಬ ಜಯಘೋಷದೊಡನೆ ತಮ್ಮ ತಮ್ಮ ಮಂದಿರಗಳಿಗೆ ತೆರಳಿದರು. ಶ್ರೀಜಗದೀಶ್ವರನೂ ಶ್ರೀ ಜಗದ್ಗುರು ಪಂಚಾಚಾರ್ಯರೂ ಇಂಥ ಶಿವಕಾರ್ಯಗಳಲ್ಲಿಯೇ ನಿರತರಾಗಿರುವಂತೆ ಈ ಪುಣ್ಯಾತ್ಮರಿಗೆ ಸುಬುದ್ಧಿಯನ್ನಿತ್ತು ರಕ್ಷಿಸಲೆಂದು ನಿರಂತರದಲ್ಲಿಯೂ ಹಾರೈಸುತ್ತೇನೆ.

ದೇಸನೂರು ಬುಳ್ಳಪ್ಪಶೆಟ್ಟಿ.

ಬಿಹಾರಿನ ಭೂಕಂಪದ ಸಹಾಯನಿಧಿ.

ಬೀರೂರು.

ಇದೇ ಮಾಹೆ ತಾರೀಖು 6 ನೇ ಸಾಯಂಕಾಲ ಬೀರೂರು ಶ್ರೀಕೃಷ್ಣರಾಜೇಂದ್ರ ಪರಸ್ಪರ ಸಹಾಯ ಸಂಘದ ಕಟ್ಟಡದಲ್ಲಿ ಬೀರೂರಿನ ಪುರಜನರ ಒಂದು ಸಭೆಯು ಶ್ರೀಯುತ ಕೆ. ಟಿ. ಸತ್ಯನಾರಾಯಣಶೆಟ್ಟಿ ಎಂ.ಎಲ್.ಸಿ., ಇವರ ಅಧ್ಯಕ್ಷತೆಯಲ್ಲಿ ಸೇರಿತು. ಅನೇಕ ಪುರಪ್ರಮುಖರು ಸ್ಥಳೀಯ ಅಧಿಕಾರಿಗಳು ಆಗಮಿಸಿದ್ದರು. ದೇವರ ಪ್ರಾರ್ಥನೆಯಾದನಂತರ ಶ್ರೀಯುತರುಗಳಾದ ಜಿ. ಗೋಪಾಲಯ್ಯನವರು ಎಚ್. ವಿ. ರಾಧಾಕೃಷ್ಣನ್‌ರವರು, ಎಸ್. ಡಿ. ವೆಂಕಟಕೃಷ್ಣಯ್ಯನವರು ಇತರರೂ ಮೊನ್ನೆ ಬಿಹಾರಪ್ರಾಂತ್ಯದಲ್ಲಿ ಭೂಕಂಪದ ದೆಸೆಯಿಂದ ಅಲ್ಲಿಯವರಿಗುಂಟಾದ ಕಷ್ಟದೆಸೆಯನ್ನು ವಿವರಿಸಿ ಮಾತನಾಡಿ ಈ ಸಮಯದಲ್ಲಿ ಮಹಾಜನರು ತಮ್ಮ ಕೈಲಾಗುವಷ್ಟು ದ್ರವ್ಯಸಹಾಯಮಾಡಬೇಕಾಗಿ ಪ್ರಾರ್ಥಿಸಿದರು. ಅನಂತರ ಅಧ್ಯಕ್ಷರು ಅಲ್ಲಿಯ ಹೃದಯವಿದ್ರಾವಕವಾದ ಸ್ಥಿತಿಯನ್ನು ಸಂಕ್ಷೇಪವಾಗಿ ವಿವರಿಸಿ ಹೇಳಿ ಜನರನ್ನು ದ್ರವ್ಯಸಹಾಯಮಾಡಬೇಕಾಗಿ ಪ್ರಾರ್ಥಿಸಿಕೊಂಡರು. ಬಿಹಾರು ಪ್ರಾಂತ್ಯದಲ್ಲಿ ಭೂಕಂಪದಿಂದ ಸಂಭವಿಸಿದ ಅನಾಹುತಕ್ಕೆ ಈಡಾಗಿರುವ ಜನರ ವಿಚಾರದಲ್ಲಿ ತಮಗುಂಟಾದ ದುಃಖವನ್ನು ಪ್ರದರ್ಶಿಸುವ ಠರಾವು ಮಂಜೂರಾದನಂತರ ಶ್ರೀಯುತರುಗಳಾದ ಕೆ. ಟಿ. ಸತ್ಯನಾರಾಯಣಶೆಟ್ಟಿ, ಕೆ. ವಿ. ಚನ್ನಯ್ಯ, ಕೆ. ಆರ್. ಕೃಷ್ಣಮೂರ್ತಿ, ಎಸ್. ಡಿ. ವೆಂಕಟಕೃಷ್ಣಯ್ಯ, ಎಂ. ವಿ. ಮುದ್ವೀರಯ್ಯ ಇವರುಗಳನ್ನು ಒಳಗೊಂಡು ಒಂದು ಕಮಿಟಿಯು ಏರ್ಪಟ್ಟು ಈ ಕಮಿಟಿಯವರು ಈ ಊರಿನಲ್ಲಿ ತಿರುಗಿ, ಸಹಾಯದ್ರವ್ಯವನ್ನು ಶೇಖರಿಸಿ ಬಾಬೂರಾಜೇಂದ್ರಪ್ರಸಾದರವರಲ್ಲಿಗೆ ಕಳುಹಿಸಬೇಕಾಗಿಯೂ ಈ ಕಮಿಟಿಯ ಸಹಾಯಕ್ಕೆ ನರಸಿಂಹಮೂರ್ತಿ, ಸಿ. ಆರ್. ಚನ್ನವೀರಪ್ಪ, ಮೈಲಾರಾಚಾರ್ ನಾಗಭೂಷಣಶೆಟ್ಟಿ, ವೆಂಕಟಸ್ವಾಮಿ, ಟಿ. ಟಿ. ವೀರಪ್ಪ, ಶಿವಲಿಂಗಮೂರ್ತಿ, ಶಿವರುದ್ರಪ್ಪ ವಗ್ಗೀರೆಯವರು ಸ್ವಯಂಸೇವಕರಾಗಿ ಕೆಲಸಮಾಡಬೇಕಾಗಿಯೂ ತೀರ್ಮಾನಿಸಲಾಯಿತು. ಶ್ರೀಯುತ ಕೆ. ಟಿ. ಸತ್ಯನಾರಾಯಣಶೆಟ್ಟರು ಖಜಾಂಚಿಯವರಾಗಿ ವಸೂಲು ಬಂದ ಹಣವನ್ನು ಕಳುಹಿಸಿಕೊಡಲು ಅಧಿಕಾರಹೊಂದಿದನಂತರ ಭಾರತಮಾತೆಯ ಶ್ರೇಯಃಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯ್ತು.

ಮರುದಿವಸ ಬೆಳಗ್ಗೆ ಎಲ್ಲರೂ ಸೇರಿ ಗ್ರಾಮದಲ್ಲಿ ಹಣವಸೂಲಿಗೆ ಹೊರಟರು. ಈಗ ಸುಮಾರು 70-80 ವರೆಗೆ ವಸೂಲು ಆಗಿರುತ್ತದೆ. ಇನ್ನೂ ವಸೂಲಿ ಕೆಲಸ ನಡೆಯುತ್ತಾ ಇದೆ. ಈ ಸಂದರ್ಭದಲ್ಲಿ ಬೀರೂರು ಮುನಿಸಿಪಾಲಿಟಿಯವರು 25-0-0 ಶ್ರೀಕೃಷ್ಣರಾಜ ಪರಸ್ಪರ ಸಹಾಯಸಂಘದವರು 10-0-0 ಬೀರೂರು ಸೇವಾಸಮಾಜದವರು 10-0-0 ಮತ್ತು ಬೀರೂರು ವೀರಶೈವ ಸೇವಾಸಂಘದವರು 5-0-0 ಸಹಾಯಮಾಡಿರುವುದು ಸ್ತೋತ್ರಾರ್ಹವಾಗಿರುತ್ತದೆ.

ಈ ನಿಧಿಗೆ ಈ ಕೆಳಗೆ ಕಂಡ ಮಹನೀಯರು ಸಹಾಯ ಮಾಡಿರುತ್ತಾರೆ. ಶ್ರೀಯುತರುಗಳಾದ ಕೆ. ಟಿ. ಸತ್ಯನಾರಾಯಣ ಶೆಟ್ರು, 10-0-0, ಕೆ. ವಿ. ಚನ್ನಯ್ಯನವರು, 10-0-0, ಡಿ. ವಿ. ಹಾಲಪ್ಪನವರು, 5-0-0, ಎಂ. ವಿ. ಮುದ್ವೀರಯ್ಯನವರು, 2-0-0, ಡಿ. ಆರ್. ರುದ್ರಪ್ಪನವರು, 3-0-0, ಕೋಡಿಹಳ್ಳಿ ಮಲ್ಲಪ್ಪ ಅಂಡ್ ಸನ್ಸ್ ರವರು, 2-0-0, ಚಂ. ವಿರುಪಯ್ಯನವರು, 2-0-0, ಎಸ್. ಡಿ. ವೆಂಕಟಕೃಷ್ಣಯ್ಯನವರು, 2-0-0, ಡಾಕ್ಟರ್ ನಾರಾಯಣ ಶೆಟ್ರು, 2-0-0, ಶ್ರೀಮತಿ ಬಿಂಧಿ ಕಮಲಾಕ್ಷಮ್ಮನವರು, 5-0-0, ಶ್ರೀಮತಿ ನಾಗಮ್ಮನವರು, 1-0-0, ಕಿರಾಣಿ ಶೀತಾರಾಮ ಶೆಟ್ರು, 1-0-0, ಕೆ. ನಂಜೆಗೌಡ್ರು, 1-0-0, ಮಲ್ಲಪ್ಪಚಾರ್ರು, 1-0-0, ಇನ್ನೂ ಅನೇಕ ಮಹನೀಯರು ಸಹಾಯ ಮಾಡಿರುತ್ತಾರೆ. ಡಬ್ಬಿಗಳ ಮುಖೇನ ಸುಮಾರು 15-0-0 ರೂ. ವರೆಗೆ ವಸೂಲು ಆಗಿರುತ್ತದೆ. 10 ನೇ ತಾರೀಖಿನ ವರೆಗೆ ವಸೂಲಿ ಕೆಲಸ ಮಾಡಿ ಒಟ್ಟಿಗೆ ಸೇರಿದ ದ್ರವ್ಯವನ್ನು ಬಾಬೂರಾಜೇಂದ್ರ ಪ್ರಸಾದರವರಲ್ಲಿಗೆ ಕಳುಹಿಸಲಾಗುತ್ತದೆ. ಸುಮಾರು 125-0-0 ರೂ. ಆಗಬಹುದೆಂದು ನಿರೀಕ್ಷಿಸಲ್ಪಟ್ಟಿರುತ್ತದೆ.

ಶ್ರೀ ಜಗದ್ಗುರು ರೇಣುಕಾಯ ನಮಃ

(ಸಪ್ತಗ್ರಹಕೂಟ ಶಾಂತಿಸಮಾರಂಭ)

ಕನಕಗಿರಿ.

ಪರಮಪವಿತ್ರವಾದ ನಮ್ಮೀ ಭರತಖಂಡದಲ್ಲಿರುವ ಸುಪ್ರಸಿದ್ಧ ಜ್ಯೋತಿಷ್ಕರ ಭವಿಷ್ಯದಂತೆ ತಾ|| 15-1-34 ನೇ ಸೋಮವಾರ ಸಪ್ತಗ್ರಹಯೋಗವುಂಟಾಗಿ ನಮ್ಮ ಭರತಖಂಡದ ಕೆಲವು ಭಾಗಗಳಲ್ಲಿ ಭೂಕಂಪವು ಸಂಭವಿಸಿ ಎಷ್ಟರಮಟ್ಟಿಗೆ ಅನಾಹುತಗಳುಂಟಾದುವೆಂಬುದು ಸರ್ವರಿಗೂ ತಿಳಿದೇ ಇದೆ. ವೀರಶೈವಮತಶಾಸ್ತ್ರಪದ್ಧತಿಯಂತೆ ರಾಯಚೂರ್ ಜಿಲ್ಲಾ ಕನಕಗಿರಿ ಶ್ರೀಮಂತ ನಾಗಪ್ಪ ಭೀಮಪ್ಪ ಕಗ್ಗನಮನೆ, ಆದಪ್ಪ ಗುಂಡಪ್ಪ ತೋಟದ, ಈ ಉಭಯ ಮಹಾಶಯರು ಸಪ್ತಗ್ರಹಗಳ ಶಾಂತಿಪೂರ್ವಕ ವಿಪತ್ಪರಿಹಾರಾರ್ಥವಾಗಿ ಶ್ರೀ|| ಷ|| ಬ್ರಂ|| ಪಂಚಾಕ್ಷರ ಶಿವಾಚಾರ್ಯರು ಹಿರೇಮಠ, ಕನಕಗಿರಿ ಇವರ ಸಾನಿಧ್ಯದಲ್ಲಿ ಕಳೆದ ಪುಷ್ಯ ಬ|| ಅಮಾವಾಸ್ಯಾ ತಾ|| 15-1-34 ರಿಂದ 25-1-34 ರವರೆಗೆ ಉದಯ ೬|| ಘಂಟೆಯಿಂದ ೧೦ ರವರೆಗೆ ಏಕಾದಶ ಮಹಾರುದ್ರಾಭಿಷೇಕವೂ ಶ್ರೀಗಳವರ ಪಾದಪೂಜೆಯೂ ನಡೆದು ಭಕ್ತಮಾಹೇಶ್ವರರನ್ನು ತೃಪ್ತಿಪಡಿಸುತ್ತಿದ್ದರು. ಪ್ರತಿದಿವಸ ಸಾಯಂಕಾಲ ಶಿವಕೀರ್ತನವು ಸ್ವಾರಸ್ಯವಾಗಿ ನಡೆಯುತ್ತಿತ್ತು. ಇಲ್ಲಿಯ ಶ್ರೀ ವೀರಶೈವ ಭಜನಾಸಂಘದವರು ಬೃಹನ್ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಚಿತ್ರಪಟವನ್ನು ಸ್ಥಾಪಿಸಿ ಅವಿಚ್ಛಿನ್ನವಾಗಿ ಭಜನೆಯನ್ನು ಮಾಡುತ್ತಲೇ ಇದ್ದರು. ತಾ|| 25-1-34 ನೇ ದಿನದ ಪದ್ಧತಿಯಂತೆ ಉದಯಕ್ಕೆ ಶ್ರೀ ಮಹಾರುದ್ರಾಭಿಷೇಕವೂ ಶ್ರೀ ಪಟಾಧ್ಯಕ್ಷರ ಪಾದಪೂಜೆಯೂ ಸಹಸ್ರ ಬಿಲ್ವಾರ್ಚನೆ ಮುಂತಾದವುಗಳೂ ನಡೆದಮೇಲೆ ಆಗಮಿಸಿದ್ದ ಅಸಂಖ್ಯ ಭಕ್ತಮಾಹೇಶ್ವರರನ್ನು ಭಕ್ಷ್ಯಭೋಜ್ಯದಕ್ಷಿಣತಾಂಬೂಲಾದಿಗಳಿಂದ ಸತ್ಕರಿಸಿದರು. ಸಾಯಂಕಾಲ ನೂತನವಾಗಿ ತಯಾರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಪಟಮಹೋತ್ಸವವು ನಡೆಯಿಸಲ್ಪಟ್ಟಿತು. ಉತ್ಸವವು ಸಮಾಪ್ತಿಗೊಂಡಬಳಿಕ ಸಭೆಯು ನಡೆದು ಶ್ರೀಗಳವರು ಸರ್ವರಿಗೂ ಸುಲಭವಾಗಿ ಬೋಧೆಯಾಗುವಂತೆ ಶ್ರೀಪಂಚಾಚಾರ್ಯರ ಮಹತ್ವವನ್ನು ಹಾಗೂ ವೀರಶೈವಾಚಾರತತ್ವವನ್ನೂ ಬೋಧಿಸಿದರು. ಆಮೇಲೆ ಸಭೆಯು ಬರಖಾಸ್ತಾಯಿತು. ಈ ಮಹಾಕಾರ್ಯವನ್ನು ಅಮರಪ್ಪ ಭಾವಿಕಟ್ಟೆ ನಗರಪ್ಪಾ ತೋಟದ ಚನ್ನಂಗಿ ಬಸಪ್ಪ ಸಣ್ಣ ಸಂಗಪ್ಪಾ ಕಡಿ, ಟಿ. ಕೊಟ್ರಪ್ಪಾ, ಮರಿಗೌಡ ಮೊದಲಾದ ಗುರುಭಕ್ತಿಶೀಲರು ಸೇವೆಯನ್ನು ಮಾಡಿ ಧನ್ಯರಾದರು. ಮೇಲ್ಕಂಡ ಮಹಾಶಯರಿಗೆ ಶ್ರೀ ರೇಣುಕನು ಸುಖವನ್ನೀಯಲೆಂದು ಹಾರೈಸುವ.

ಪಂಪಣ್ಣ ಪುಷ್ಪದತ್ತ, ತಬಲಾಜಿ, ಕನಕಗಿರಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್— ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 16

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿರೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 24

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,

ಮೈಸೂರು.

ಮಲೇರಿಯಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, $\frac{1}{2}$ ಡಜನ್ 8-8-0 ಮತ್ತು ರೂ. 5

ರ್ಯುಮೊ ಬಾಮು.

ಕೆಮ್ಮು, ಶೀತ, ತಲೆನೋವು, ಪಾರ್ಶ್ವನೋವು, ಗಂಟು ನೋವು ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಚಜ್ಜದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿಲಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕಮದ್ದುಗಳು, ಹೋಮ್ಯೊಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಕೆಯುಳ್ಳ ರೋಗ, ದದ್ದು, ತುರಿಸುವ ನಂಜಿ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಔನ್ಸಿಗೆ ಆಣೆ 8, $\frac{1}{2}$ ಡಜನಿಗೆ ರೂ. 2.12-0

ಮುಖ ರಹಿತಗಳು ವಿಕಾರಕ್ಕೆ ವಾರ್ಧಟ್ಟು ಮೆದುಳು ಕಾಯಿಗಳು ನಿಸ್ತೇಜವಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತ ಹಿಂಸೆಯಲ್ಲವೇ? ಪ್ರಾಥ ದೇಹವಂತನಾಗಿ ಸದಾ ಆನಂದದಿಂದ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಆತ್ಮಸಂರಕ್ಷಕನಂತೆಯೇ ಯುವಕನಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸಿಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,

[25] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟು ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವುದು.

ಬಾಟ್ಲಿ 1 ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (15)

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್,

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	....	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	....	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ, ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	....	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	....	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ವೀರಶೈವಮತವಿಮರ್ಶಾ	....	೩ ಆಣೆ
ಶಿವಶಕ್ತಿವಿಲಾಸ	....	೨ ಆಣೆ
ಶ್ರೀಗುರುತತ್ತ್ವಪದಗಳು	....	೨ ಆಣೆ
ಶಿವಸ್ತವಶಿರೋಮಣಿ	....	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	....	೪ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಶ್ರುತಿಸಾರಭಾಷ್ಯ	....	೫ ಆಣೆ
ಆಗಮಪರಿಜ್ಞಾನ	....	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	....	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	....	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)		೮ ಅಣೆ
पंडित श्रीकाशीनाथशास्त्री यांचें भाषण (मराठी)	....	८ आणे.
Speeches by Pandit Shri Kashinatha Shastri (*English*)		12 As.
ವೇದೋಕ್ತಶಿವಪೂಜಾವಿಧಿ	....	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	....	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	೧೨ ಆಣೆ
ಸಚಿತ್ರ ರೇಣುಕವಿಜಯ	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	....	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	....	೧ ರೂ.
लिंगधारणचंद्रिका (संस्कृत)	....	३ रु.
महानारायणोपनिषत् (वीरशैवभाष्य-संस्कृत)	....	१ रु.
वीरशैवेंदुशेखर (संस्कृत)	....	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟಾಧಿಕಾರೋತ್ಸವಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ. ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆ...

ಗುರುಬಸವ ಅಂಡ್ ಕಂಪೆನಿ ಲಿಮಿಟೆ...

[7] ಪೋ. ಬಾ. ೫೧೦, ಮದ...

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಮಾರ್ಚಿ ೧೯೩೪ [ಸಂಚಿಕೆ ೪೫

ಸಮಾಜಸುಧಾರಣೆ.

ಈ ಜಗತ್ತಿನಲ್ಲಿರುವ ಮಾನವಪ್ರಾಣಿಗಳ ಸುಖಶಾಂತಿಗಳಿಗಾಗಿ ಶ್ರೀ ಪರಶಿವನಿಂದುಕ್ತಗಳಾದ ವೇದಾಗಮೋಪನಿಷತ್ತುಗಳಲ್ಲಿರುವ ಸಾರವನ್ನು ಶೋಧಿಸಿ ಅನೇಕ ಮಹರ್ಷಿಯರು ಕನ್ನಡ ಸಂಸ್ಕೃತಗ್ರಂಥಗಳ ದ್ವಾರ ಸರ್ವರಿಗೂ ಬೋಧವಾಗುವಂತೆ ರಚಿಸಿ ಕೀರ್ತಿಶಾಲಿಗಳಾದರು. ಇದರಿಂದ ಜನರಲ್ಲಿ ಧರ್ಮಜಾಗ್ರತೆಯುಂಟಾಗಲು ಸಾಧ್ಯವಾಗದಾಯಿತು. ಆದರೆ ಈ ೨೦ನೆಯ ಶತಮಾನದಲ್ಲಿ ಅನೇಕ ನವೀನಶೋಧನೆಗಳು ನಡೆದು ಶಿವಕೀರ್ತನ ಮೂಲಕ ಜನರಿಗೆ ಧರ್ಮ, ನೀತಿ, ಆಚಾರಕ್ರಮ, ಮುಂತಾದುವುಗಳನ್ನು ಬೋಧಿಸಲು ರಸಿಕರಾದ ಶಾಸ್ತ್ರಿಗಳು ಅಲ್ಲಲ್ಲಿ ಸಂಚರಿಸಿ ಬೋಧಿಸುವ ಪದ್ಧತಿಯಿಂದ ಸಮಾಜಸುಧಾರಣೆಯಾಗಲು ಒಂದು ಸುಲಭ ಮಾರ್ಗವಾಗುತ್ತಾ ನಡೆದದೆ. ಈ ಯಾವ ದ್ವಿಷಯಗಳನ್ನೂ ಪರ್ಯಾಲೋಚಿಸಿ ಹಿರೇಹಡಗಲಿ ಪುರಾಣಿಕಮಠದ ವೇ|| ವಿರೂಪಾಕ್ಷಶಾಸ್ತ್ರಿಗಳು ಸಮಾಜದಲ್ಲಿ ಧರ್ಮಜಾಗ್ರತೆಯನ್ನುಂಟುಮಾಡಬೇಕೆಂಬ ಉದ್ದೇಶದಿಂದ ಸಣ್ಣಸಣ್ಣ ಹಳ್ಳಿಗಳಲ್ಲಿಯೂ ಸಂಚರಿಸುತ್ತಾ ಶಿವಕೀರ್ತನೆಯಮೂಲಕ ಗುರುಭಕ್ತಿ ಧರ್ಮನೀತಿಗಳನ್ನು ನಾನಾವಿಧವಾದ ಉದಾಹರಣೆಗಳಿಂದ ಮುಗ್ಧರಿಗೂ ತಿಳಿಯುವಂತೆ ಬೋಧಿಸುತ್ತಾ, ನಮ್ಮ ಗ್ರಾಮಕ್ಕೆ (ಅಂದರೆ ಬಳ್ಳಾರಿ ಜಿ|| ಹುವ್ವಿನಹಡಗಲಿ ತಾ|| ಮಾಗಳಗ್ರಾಮಕ್ಕೆ) ಆಗಮಿಸಿದರು. ಇಲ್ಲಿಯ ಪ್ರಮುಖರಾದ ಮ|| ರಾ|| ಪಾಟೀಲು ವಿರುಪನಗೌಡರು ಸಾಹುಕಾರು ನಾಗರಾಜಪ್ಪನವರು ಉಳ್ಳಾಗಡ್ಡಿ ಮರಿತಂಮಪ್ಪ ಹಡಪದ ಅಡಿವೆಪ್ಪ ಮುಂತಾದವರು ಸದರಿ ಶಾಸ್ತ್ರಿಗಳವರಿಂದ ಶಿವಕಥೆಗಳನ್ನು ಹೇಳಿಸಿ ಸರ್ವಬಾಲವೃದ್ಧರಿಗೂ ಸ್ತ್ರೀಯರುಗಳಿಗೂ ಸುಗುಣಗಳುಂಟಾಗುವಂತೆ ಮಾಡಿದರು. ಇದರಂತೆ ಇನ್ನುಳಿದ ಶಾಸ್ತ್ರಿಗಳೂ ಪಟ್ಟಾಧಿಕಾರ ಸ್ವಾಮಿಗಳೂ ಅಲ್ಲಲ್ಲಿ ಸಂಚರಿಸುತ್ತಾ (ಫಾಯಿದೆಕಡೆಗೆ ಲಕ್ಷ್ಯಕೊಡದೆ) ಜನರಿಗೆ ಸದ್ಬೋಧಮಾಡುತ್ತಾ ಒಂದರೆ ಒಂದುವಿಧದಿಂದ ಸುಧಾರಿಸಲು ಮಾರ್ಗವಾಗುವದು. ಮತ್ತು ಇದೇ ಪದ್ಧತಿಯನ್ನು ಶ್ರೀ ಜಗದ್ಗುರು ಪಂಚಪೀಠಾಧೀಶರುಗಳು ಅತಿಶೀಘ್ರವಾಗಿ ನಿರ್ಮಾಣಮಾಡಿ ಸಮಾಜದಲ್ಲಿ ಸುಧಾರಣೆಯಾಗುವಂತೆ ಮಾಡಬೇಕೆಂದು ಪ್ರಾರ್ಥನೆ.

ಓರ್ವ ಸಮಾಜಾಭಿಮಾನಿ.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಬಿಡದಿ.

ಕೃತತ್ರೇತಾದಿ ಚತುರ್ಯುಗಗಳಲ್ಲಿಯೂ ಪರಶಿವ ಲಿಂಗದಿಂದುದ್ಭವಿಸಿ ಸುರಪರಶಿವ್ನರ ಗಂಧರ್ವಾದಿ ಸಕಲರಿಗೂ ಗುರುಸಾರ್ವಭೌಮನಾಗಿ ವೀರಶೈವ ಮಹಾಮತಸ್ಥಾಪಕನಾದ ಶ್ರೀ ಜಗದ್ಗುರು ರೇಣುಕಾಚಾರ್ಯಪ್ರಮಥಪುಂಗವನ ಜಯಂತಿಮಹೋತ್ಸವವು ಪತ್ರಿಕೆಗಳ ದ್ವಾರಾ ಪ್ರಸಿದ್ಧಪಡಿಸಿದಂತೆ ಪಟ್ಟಣಿಗರು ಹಸ್ತಪತ್ರಿಕೆಗಳ ದ್ವಾರಾ ಪ್ರಸಿದ್ಧಪಡಿಸಿದಂತೆ ಪಟ್ಟಣ ಯಶ್ವಂತರ ಬಿಡದಿಗ್ರಾಮದಲ್ಲಿ ಅತ್ಯಂತ ವೈಭವದೊಡನೆ ನೆರವೇರಿಸಲ್ಪಟ್ಟಿತು. ಆ ದಿನ ಗ್ರಾಮದ ಸಕಲಸದ್ಭಕ್ತರೂ ತಮ್ಮ ತಮ್ಮ ಗೃಹಗಳನ್ನು ಸಾರಣೆಕಾರಣೆ ಸುಣ್ಣಬಣ್ಣಗಳಿಂದಲೂ ತಳಿರುತೋರಣ ರಂಗವಲ್ಲಿಗಳಿಂದಲೂ ಆನಂದಕರವಾಗಿ ಅಲಂಕರಿಸಿದ್ದರು. ದೇವಾಲಯಗಳ ಮುಂಭಾಗಗಳಲ್ಲಿ ಚಪ್ಪರತಳಿರುತೋರಣ ರಂಭಾಸ್ತಂಭಗಳಿಂದ ಶೃಂಗರಿಸಿ ವಿಶೇಷ ಪೂಜೆಯು ನಡೆಸಲ್ಪಟ್ಟಿತು.

ಪ್ರಾತಃಕಾಲ ವೃಷಭೇಶ್ವರದೇವಾಲಯದಲ್ಲಿ ಶ್ರೀ ರೇಣುಕಾಚಾರ್ಯ ರಜತಮೂರ್ತಿಗೆ ಶ್ರೀ ರುದ್ರಾಭಿಷೇಕವು ಬಿಲ್ವಾರ್ಚನೆಯೂ ವೇದಾಗಮೋಕ್ತವಾಗಿ ನಡೆಯಿಸಿದನಂತರ ವಿಶೇಷ ಭಕ್ಷ್ಯಭೋಜ್ಯಾದಿಗಳಿಂದ ಮಹಾಗಣಾರಾಧನೆಯು 12 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೂ ನಡೆಯಿತು. ಅನಂತರ 6 ಘಂಟೆಯ ಮೇಲೆ ಸುಶ್ರಾವ್ಯವಾದ ಪದಗಳಿಂದ ಭಗವತ್ಪಾದರ ಭಜನೆಯು ನಡೆದು ರಾತ್ರಿ 8 ಘಂಟೆಯ ಮೇಲೆ ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟ ರಥದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಉತ್ಸವಮೂರ್ತಿಯನ್ನು ವಿರಾಜಮಾನಮಾಡಿಸಿದನಂತರ ಮಂಗಳವಾದ್ಯ ವೈಭವದೊಡನೆ ಸಮಸ್ತಸದ್ಭಕ್ತರೂ ದೇವಾಲಯದಿಂದ ರಥೋತ್ಸವವನ್ನು ಪ್ರಾರಂಭಿಸಿ ರಾಜಮಾರ್ಗ ಮೊದಲಾಗಿ ಸಕಲ ಬೀದಿಗಳಲ್ಲಿಯೂ ಮಹಾವೈಭವದೊಡನೆ ನಡೆಸಿದರು. ಆ ಕಾಲದಲ್ಲಿ ಉತ್ಸವವು ತಮ್ಮ ತಮ್ಮ ಗೃಹಗಳ ಮುಂಭಾಗಕ್ಕೆ ಆಗಮಿಸಿದೊಡನೆಯೇ ಸರ್ವಮಹಿಳೆಯರೂ ಭಕ್ತಿಪೂರ್ವಕವಾಗಿ ಧೂಪದೀಪನೀರಾಜನಾದಿಗಳಿಂದ ಸ್ವಾಮಿಯು "ಸೇವೆಯನ್ನು ಮಾಡಿ ಜಯಜಗದ್ಗುರೆ ರೇಣುಕಾಚಾರ್ಯ" ಎಂಬ ಜಯಘೋಷವನ್ನು ಮಾಡುತ್ತಿದ್ದರು. ಈ ರೀತಿ ಅತ್ಯಂತ ವೈಭವದೊಡನೆ ಮಹೋತ್ಸವವು ನಡೆದು ಸ್ವಸ್ಥಾನಕ್ಕೆ ಬಿಜಯಂಗೈಸಿದನಂತರ ಷೋಡಶೋಪಚಾರ ರಾಜೋಪಚಾರಪೂರ್ವಕ ಸ್ವಾಮಿಯ ಪ್ರಸಾದವು ಸಮಸ್ತರಿಗೂ ವಿನಿಯೋಗಿಸಲ್ಪಟ್ಟಿತು. ತದಂಗಭೂತವಾಗಿ ನಾಲ್ಕಾರು ದಿನಗಳಿಂದಲೂ ಶ್ರೀ ಭವನದ ಮುಂಭಾಗದಲ್ಲಿ ಶ್ರೀರೇಣುಕವಿಜಯಪುರಾಣಪ್ರವಚನವು ನಡೆಸಲ್ಪಟ್ಟಿತು.

ಮೇಲ್ಕಂಡ ಜಯಂತಿಮಹೋತ್ಸವ ಕಾರ್ಯಕಲಾಪಗಳಲ್ಲಿ ಭಾಗಗಳಾದ ಸಕಲ ಸದ್ಭಕ್ತರಿಗೂ ಯತಿಕುಲಸಾರ್ವಭೌಮನಾದ ಜಗದಾಚಾರ್ಯನು ಸಮಸ್ತ ಸನ್ಮಂಗಳಗಳನ್ನೀಯಲೆಂದು ಕೋರುವ

• ಶ್ರೀಸುರಗುರುಚರಣಕಿಂಕರ.

|| ಬಾಣಾಷ್ಟಕಂ ||

ಪುಲಿಯಾಸೆಗಳಂ ನೀಳ್ದುಂ |
ಪುಲಿದೊವಲಂ ಧರಿಸಿದ ವರಧರ್ಮಧ್ವಜ! ನೀಂ ||
ಸುಲಲಿತಧರ್ಮಂಗೊಲ್ದು |
ಹುಲುಮೋಹನಭಂಗಿಯ ತರಿದೇರಿಸುವೃಷನಂ ||೧||

[ಭಂಗಿ=ಸೋಟೆ: ವೃಷ=ಧರ್ಮ]

ಪೊಲೆಯರ್ ಮಾಡಿಗೆರೆಸಿದಾ |
ಪೊಲಸಿನ ಪಂಚಮರೊಡನೆರೆದಾನಂದಿಸುತುಂ ||
ಕೆಲೆಯುತೆ ಪೇಲಂ ಬಳಿದಾ |
ಕುಲಗೇಡಿಯಮರುಮಹಾತ್ಮನೆಂಬರ್ ಜಡರ್ ||೨||

ಸೆರೆಮನೆ ವಾಸಂ ಕುಲಗಿರಿ |
ಪುರಿ ವಾಸಂ ಬಾಲರಮರಿಗಿರಿದಾ ವೋಸಂ ||
ಪರನಾರಿಯರೊಡನೆರೆಗಳಂ |
ಪಾಪಿಯಿಂ ಸುಲಿದ ನಾಸದುನೆ ಭವದೊಂಬರ್ ||೩||

ದೊರೆಯಂ ದೊರೆಸಾಜ್ಞೆಯುವುದುಮಂ |
ಜರಿಯುತೆ ಮರಮನಡರೆರೆದಾಸ್ವಾತಿಶಯಮಂ |
ಮುರಿಯುತೆ ಬಗೆದಂದಾದೆದೆ |
ಪರಿವಾಪೊಲೆಯರ್ ಧರೆಯನನಾಂತಿಯನಳಿಪರ್ ||೪||

ಅಳಿಬಾ !! ಕಷ್ಟಂ !! ಕ್ವಚಿತ |
ಪ್ರಕಟಿಸಿದಿಕಟಾಟ್ಟಹಾಸಮದವರ್ಕಂದರ್ ||
ನಿಕಟದೆ ಬಂದುದು ಮೋಹನ |
ವಿಕಟಂಸಹ್ಯ ಕುಲಧರ್ಮಹೀನಿಯೊ ಶಿವಾ !! ||೫||

ಜಗದೊಳ್ ಪೊಲಸಿನ ಪೊಲೆಯರ್ |
ಪೊಗರಿಂ ಕುಲಗಿರಿಸುಶಿಖರಂಗಳ್ಪರದಿಂ ||
ಬಗೆದಾಘೋಷಕರ ಕೃತಿಯಂ |
ಸುಗಿಯುತೆ ಭೂದೇವಿ ಶೋಕಿಸುತ್ತಿರ್ದಪಳ್ ||೬||

[ಪೊಲಸಿನಪೊಲೆಯರ್=ಶ್ವಪಚರಂಡಾಲರ್]

ಅಶೋಕಾಗ್ನಿಯೆ ಭುವನ್ನ |
ಕಾಡಗರುರೆ ಕಂಬದ ಭಸ್ಮಜನೆಯಿಂ ಭವ ||
ಶೋಕನ ಸಂದೇಶವನು |
ದೃಗ್ಮೀಸಿಪರ್ ಧರೆಯೊಳಾಮ್ರು ಭಸಭಾಣಕಂಶಂ ||೭||

ಅದಂ ಮೋಹನದಾಸನ |
ಕುದಾಸರೇ !! ಮೋಹಮ್ಮಿತ್ಯಂಪಾಷ್ಟ್ರಸ್ಥರೆ !! ನೀಂ ||
ಮುದುಭಂಗಿಯ ಮೋಹನರೆಡು |
ಪದುಳದೆ ವರ್ತಿಪುದುಮೋಹನಾಗವಗತಿಯೊಳ್ ||೮||

ಮುದದೀ ಬಾಣಾಷ್ಟಕಮಂ |
ಸುದುರಿತಮೋಹಾಂಧಕಾರ ಭಾಸ್ಕರಬಿಂಬಂ ||
ಮುದಯುತ ಜನವನದಾವಂ |
ಬುಧವಾನ್ಯಂ ಪೇಳ್ದನಿಂದು ವೆಂಕಟಸುಬ್ಬಂ ||೯||

ಇಂತೀ

ಎಸ್. ವಿ. ವೆಂಕಟಸುಬ್ಬಯ್ಯಂ, ಹರಕನಹಳ್ಳಿ,
ಗಾಂಧಿಮೋಹಾಂಧಕಾರಾಖ್ಯಭಾಸ್ಕರಂ.

ಶಾರ್ದೂಲರತ್ನತ್ರಯಂ.

[ಹರಪುರೀವಾಸಿ ಮಹೇಶರಪುರೀಭೂಸುರವರ್ಯರೋರ್ವರ್ ಮಿ|| ಎಂ. ಕೆ. ಗಾಂಧಿಯವರ್ಗೆ ಹರಪುರಿಯೊಳ್ ಸಂಪ್ರೀತಿಯಿತ್ತ ರತ್ನತ್ರಯಂಗಳ್]

ಗಾಂಧೀ! ಜಾತಿವಿನಾಶತಂತ್ರವರದೀಕ್ಷಾಬದ್ಧಗಾಂಧೀ! ಕುಮೋ |
ಹಾಂಧಾಗ್ರೇಸರಚಕ್ರವರ್ತಿವರಗಾಂಧೀ! ವೇದವಿದ್ಯಾವಿಹೀ ||
ನಾಂಧಜ್ಞಾನಸುಬೋಧಕಾಗ್ರಣಿಯೆ! ಸಂದಾ ಮೋಹದಾದಾಸನೇ! |
ಗಾಂಧೀ ಮೋಹನದಾಸನೆಂಬ ತವನಾಮಂ ಸೋದರಮ್ಯಂವಲಂ ||

ಪೂನಾದೊಳ್ ಯರವಾಡದಾಸೆರೆಯೊಳಂಭಂಗೀಶ್ವರಾ! ಬಾಲರಂ |
ನಾನಾಮಾರ್ಗದೆಬೋಧಿಸುತ್ತಲವರಂ ಸದ್ಧರ್ಮಮಂ ತೊರಿದ್ಯೆ ||
ವಿನಂಕಾನನದಬಾಲರಂಪೊಲೆಯರೆಡೆಗಟ್ಟಿದೆಂದು ಪೇಳ್ವುತ್ತಲುಂ |
ನಾನಾವಾದಿಯರಸೆಡೆಸ್ತಿ ಜಾತಿಯಳಿಪೀ ಪಿಸಾಚಿಪನೇಂದುಸ್ವಹಂ ||

ನಾನಾಜಾತಿಸಮಜಹದೊಳ್ಮುಳುಗಿ ಕೇಲುತ್ತಿರ್ಪಭೂಚಕ್ರದೊಳ್ |
ನಾನಾಗೋತ್ರಜರೆಲ್ಲರಿಂಬೆರೆದು ಜಾತ್ಯನೃಪ್ಪಳಂಗೆಯ್ವನಂ ||
ನಾನಾಜಾತಿಸಮೂಹಮಂ ಬೆರಸುವಾಪುದ್ಯೋಗದೊಳ್ಸಂತತಂ |
ನಾನಾಮಾರ್ಗದೆ ವರ್ತಿಪ್ಪ ನಿನಗೇಂ ದುಷ್ಕಾಲಮೋಕ್ಷಾನಿನಾಂ ||

ಮುದದೀರತ್ನತ್ರಯಮಂ |
ಸುದುರಿತ ಮೋಹಾಂಧಕಾರಭಾಸ್ಕರಬಿಂಬಂ ||
ಮುದಯುತ ಜನವನದಾವಂ |
ಬುಧವಾನ್ಯಂ ಪೇಳ್ದನಿಂದು ವೆಂಕಟಸುಬ್ಬಂ ||

ಇಂತೀ ತಮ್ಮ

ಎಸ್. ವಿ. ವೆಂಕಟಸುಬ್ಬಯ್ಯಂ,
ಗಾಂಧಿಮೋಹಾಂಧಕಾರಾಖ್ಯಭಾಸ್ಕರಂ.

ಪತ್ರವ್ಯವಹಾರ.

ಜಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ರೇವಣಸಿದ್ಧೇಶ್ವರನ ಮಹತ್ವ.

ಪರಶಿವನಾಜ್ಞಾನುಸಾರವಾಗಿ ಭೂಲೋಕದಲ್ಲಿ ಸೋಮೇಶ್ವರಲಿಂಗದಿಂದವತರಿಸಿ ಅರವತ್ತುನೂರುವರ್ಷವೂ ಅರುವತ್ತೇಳುನೂರುವರ್ಷವೂ ಭೂಲೋಕದಲ್ಲಿ ಸಂಚರಿಸಿ ಅನೇಕಾನೇಕ ಮಹತ್ವಗಳಂತೋರಿ ಹಾಲಿನೋಳ್ ಹಾಲುಬೆರೆದಂತೆ ಪರಶಿವನಲ್ಲಿ ಅಡಗಿದ ಗುರುಸಾರ್ವಭೌಮರಾದ ಜಗದ್ಗುರು ರೇವಣಸಿದ್ಧೇಶ್ವರರು ಯಾವಯಾವ ಸ್ಥಲದಲ್ಲಿ ವಾಸವಿನ್ಯಾಸವನ್ನು ಮಾಡಿರುವರೋ ಆಯಾಸ್ಥಳಗಳಲ್ಲಿ ದೇವಾಲಯಗಳಾಗಿವೆ. ಅಲ್ಲದೆ ಅನೇಕಾನೇಕ ಮಹತ್ವಗಳು ಈಗಲೂ ಆಸ್ತಿಕಶಿಖಾಮಣಿಗಳ ದೃಗ್ಗೋಚರವಾಗುತ್ತಿರುವವು.

ಶ್ರೀರೇವಣಸಿದ್ಧೇಶ್ವರರು ಅನೇಕ ದೇಶಗಳಂ ಸಂಚರಿಸಿ ಅನೇಕ ಮಹತ್ವಗಳಂ ತೋರಿದಂತೆ 'ಮಾಸನೂರು' ಎಂಬುವ ಗ್ರಾಮದ ದೇವತೆಯಾದ 'ಮಲ್ಲಿಕಾರ್ಜುನ' ದೇವಾಲಯದಲ್ಲಿ ಅಶ್ವತ್ಥವೃಕ್ಷದಲ್ಲಿ ಮತ್ಕುಣ (ತಗಣಿ) ರೂಪದಿಂದಿದ್ದು ಅನೇಕರಿಗೆ ತ್ರಾಸಗೊಡುತ್ತಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ದಹಿಸಿ, ಕುದುರೆಗಳನ್ನಾಗಿ ಮಾಡಿ ಭೀಮಾನದಿಯ ಮಡುವಿನಲ್ಲಿರಿಸಿರಲು ಆ ಕುದುರೆಗಳನ್ನು ತನ್ನವಶಗೊಳಿಸಿಕೊಳ್ಳುವುದಕ್ಕಾಗಿ ೧೨೦೦೦ ಕನ್ಯೆಯರನ್ನು ಗೋರಕ್ಷನ ಆಜ್ಞಾನುಸಾರವಾಗಿ ಬಲಿದಾನಕೊಡಲುದ್ಯುಕ್ತನಾದ ಬಿಜ್ಜಳರಾಜನಿಗೆ ಬುದ್ಧಿಹೇಳಿ ಆ ಯಕ್ಷದಂಪತಿಗಳಿಗೆ ಶಾಪವಿಮೋಚನೆಯನ್ನು ಮಾಡಿ ಗೋರಕ್ಷನ ಗರ್ವಭಂಗವನ್ನು ಮಾಡಿದನೆಂಬುವದು ಪುರಾಣಪ್ರಸಿದ್ಧವಷ್ಟೇ?

ಇಂಥಾ ಪರಮಪವಿತ್ರಕ್ಷೇತ್ರವೆನಿಸಿದ ಮಾಸನೂರನ್ನು ಪರಾಮರ್ಶಿಸುವುದಕ್ಕಾಗಿ ಮಾಘಕೃಷ್ಣ ಪಕ್ಷ ೧೧ ದಿವಸ ಮಹಾಮಹಿಮಾಂಬುನಿಧಿಗಳೂ, ಬ್ರಹ್ಮಚರ್ಯ ದಿವ್ಯತೇಜಸ್ಸಿಂದ ಕೋಟಿಸೂರ್ಯನಂತೊಪ್ಪುವವರೂ, ಬಾಲಲೀಲಾಮೂರ್ತಿಗಳೂ ವೀರಶೈವಧರ್ಮಾಂಬುಧಿಗೆ ಇಂದುಪ್ರಾಯರೂ ಯಾವಾಗಲೂ ತಪಸ್ಸುವನ್ನು ಪ್ರವೃತ್ತಿಭವದಲ್ಲಿಯೇ ಕಾಲಹರಣಮಾಡುವವರೂ ವಿರಕ್ತಶಿಖಾಮಣಿಗಳೂ ಭಕ್ತೋದ್ಧಾರಕರಾಯಣರೂ ಆದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ದಿವ್ಯಸ್ವಾರಿಯೊಡನೆ ನಾನು ಹೋದಾಗ್ಗೆ ಅಲ್ಲಿಯ ರೇವಣಸಿದ್ಧೇಶ್ವರಪೂಜಾರಿಯು ಅಲ್ಲಿಂಗಿ ಹೂಗಾರನಿದ್ದು ಆತನು ಮಹಾಸನ್ನಿಧಿಯಲ್ಲಿ ಬಿನ್ನಯಿಸಿಕೊಂಡ ವಿಷಯವು ಈ ಕೆಳಗೆ ಕೊಟ್ಟಿಂತಿರುತ್ತದೆ

ಈ ಮಾಸನೂರು ಗ್ರಾಮವು 'ಸಾಂಗಲಿ' ಸಂಸ್ಥಾನಕ್ಕೆ ಒಳಪಟ್ಟಿರುತ್ತದೆ. ಸದರೀ ಸಂಸ್ಥಾನದಿಂದ ಪ್ರತಿವರ್ಷದ ಖರ್ಚಿಗಾಗಿ ಈ ರೇವಣಸಿದ್ಧೇಶ್ವರನಿಗೆ ೪೫ ರೂಪಾಯಿಗಳು ಕೊಡಲ್ಪಡುತ್ತವೆ. ಪ್ರತಿಶ್ರಾವಣಮಾಸದಲ್ಲಿ ಏಕಾದಶ ರುದ್ರಾಭಿಷೇಕ ಪ್ರತಿದಿವಸವೂ ತಪ್ಪದೇ ಆಗುತ್ತಿದೆ. ಅನಂತರ ಸಾದಾಪೂಜೆಯನ್ನು ನಾವೇ ಮಾಡುತ್ತೇವೆ. ಈ ರೇವಣಸಿದ್ಧೇಶ್ವರದೇವರ ಉತ್ಸವವು ಪ್ರತಿವರ್ಷ ಮಹಾಶಿವರಾತ್ರಿಗೆ ನೆರವೇರುತ್ತದೆ. ಆಗ್ಗೆ ೧೦-೧೫ ಸಾವಿರಗಟ್ಟಲೆ ಜನರು ನೆರೆಯುತ್ತಾರೆ. ಈ ರೇವಣಸಿದ್ಧೇಶ್ವರನ ಮಹಿಮೆಯು ಈಗಲೂ ನಡೆಯುತ್ತಿದೆ. ಅದು ಹೇಗೆಂದು ಮಹಾಸನ್ನಿಧಿಯು ಪ್ರಶ್ನೆಮಾಡಿದಾಗ್ಗೆ ಆ ಪೂಜಾರಿಯು ನಡೆಯಿಸಿ ತೋರಿಸುತ್ತೇನೆಂದು ನದಿಯಕಡೆಗೆ ಮಹಾಸನ್ನಿಧಿಯನ್ನು ಕರೆದುಕೊಂಡು ಹೋಗಿ ಅಲ್ಲಿರುವ ದೇವಾಲಯದ ಕಟ್ಟೆಯಲ್ಲಿ ಕೂಡ್ರಿಸಿದನಂತರ ಸನ್ನಿಧಿಯಿಂದ ೮ ಆಣೆಯ ತೆಂಗಾಕರಿಸಿ ನದಿಯಲ್ಲಿ ಚೆಲ್ಲಹತ್ತಿದನು. ಆಗ್ಗೆ ಸೀಮೆಯಲ್ಲಿಯ ಯುದ್ಧದ ಸೀನು ಸ್ಮರಣೆಕ್ಕೆ ಬಂದಿತು. ಅರ್ಥಾತ್ ರೇವಣಸಿದ್ಧೇಶ್ವರನು ಯಾವ ಮಡುವಿನಲ್ಲಿ ಕುದುರೆಯನ್ನಿಟ್ಟಿರುವನೋ, ಆಸ್ಥಾನದಲ್ಲಿ ೧ ಫೂಟು ಅಗಲ ೨ ಫೂಟು ೩ ಫೂಟು ಉದ್ದ ಈ ಪ್ರಕಾರ ನೂರಾರು ಮೀನು ಇರುತ್ತವೆ. ಅಲ್ಲದೆ ಎಮ್ಮೆಯಷ್ಟು ದೊಡ್ಡ ಮೀನುಗಳೂ ಉಂಟೆಂದು ಆತನು ಹೇಳಿದನು. ಆ ತೆಂಗಾಕಿನ್ನುವದಕ್ಕಾಗಿ ನೂರಾರು ಮೀನುಗಳು ಓಡಾಡುವದನ್ನು ನೋಡಿದರೆ ಮಹಾಯುದ್ಧವೇ ನಡೆದಿರುವದೋ ಏನೋ ಎಂಬಂತೆ ತೋರುತ್ತದೆ. ಪರಿಶೆಯ ಜನರು ಆ ಮೀನುಗಳಿಗೆ ಕಡಲೆ, ಹೋಳಿಗೆ, ಚಪಾತಿ, ಅನ್ನ, ವಗೈರೆ ಮಾಡಿ ಹಾಕುತ್ತಾರಂತೆ. ಇನ್ನೂ ಅನೇಕರು ಆ ಮೀನುಗಳನ್ನು ಹಿಡಿದು ಅವುಗಳ ಮೂಗಿನಲ್ಲಿ ಮುತ್ತು ವಗೈರೆ ಚುಚ್ಚಿ ತಮ್ಮ ಹರಕೆ ಪೂರೈಸಿಕೊಳ್ಳುವರಂತೆ. ಅನಂತರ ಆ ಪೂಜಾರಿಯು ಹೇಳಿದುದೇನೆಂದರೆ—ಈ ಮಾಸನೂರು ಗ್ರಾಮದಲ್ಲಿ ೫೦-೫೫ ವಯಸ್ಸಿನ 'ಧನೇರಾಮಭೋವಿ' ಎಂಬುವವನಿದ್ದಾನೆ. ಅವನು ಒಮ್ಮೆ ಈ ಮೀನುಗಳನ್ನು ಹಿಡಿಯಲಿಕ್ಕೆ ಬಲೆಯನ್ನು ಹಾಕಿದಾಗ್ಗೆ ಎಷ್ಟೋ ಜನರು ಬೇಡವೆಂದರೂ ಕೇಳದೆ ಕಡೆಗೆ ರಾತ್ರಿಯಲ್ಲಿ ಓರ್ವನೇ ಬಂದು ಅವುಗಳಿಗೆ ಬಲೆಹಾಕಿ ಈ ಕಟ್ಟೆಯಮೇಲೆ (ಆ ನದಿಯಲ್ಲಿರುವ ದೇವಾಲಯದ ಕಟ್ಟೆಯಮೇಲೆ) ಯೇ ಮಲಗಿದ್ದನು. ಬೆಳಗಾಗುವದರೊಳಗಾಗಿ ಅವನದೊಂದು ಕೈಯ್ಯೇ ಇಲ್ಲದಾಗಿದೆ. 'ಆ ಧನೇರಾಮಭೋವಿ' ಎಂಬುವನು ಇನ್ನೂ ಇದ್ದಾನೆ. ಅವನೂ ಹೇಳುತ್ತಿದ್ದಾನೆ. ಮತ್ತು ೫೦-೬೦ ವರ್ಷಗಳ ಹಿಂದೆ ಓರ್ವ ಯುರೋಪಿಯನ್ನನೂ ಹೀಗೆ ಮಾಡಿದ್ದಾನಂತೆ ಅವನು ೨ ಮೀನುಗಳನ್ನು ಹಿಡಿದು ಗುಡಿಯ ಮಹಾದ್ವಾರವನ್ನು ದಾಟುವದರೊಳಗೆ ರಕ್ತವನ್ನು ಕಾರಿ ಸತ್ತನಂತೆ! ಈ ಪ್ರಕಾರ ಈ ಸ್ಥಲವು ಅತ್ಯಂತ ಮಹತ್ವದ್ದಿರುತ್ತದೆ. ಸನ್ನ ಪ್ರಾಣಿಗಳನ್ನು ಯಾರು ಹಿಡಿಯುವರೋ ಕೊಲ್ಲುವರೋ ಅವರಿಗೆ ಎಂದೂ ಕಲ್ಯಾಣವಾಗದು. ಹೀಗೆ ರೇವಣಸಿದ್ಧೇಶ್ವರನ ವಚನವಿರುತ್ತದೆ. ಹೀಗೆ ಆ ಪೂಜಾರಿಯು ಮಹಾಸನ್ನಿಧಿಯಲ್ಲಿ ಸರ್ವವಿಷಯಗಳನ್ನು ಬಿನ್ನಯಿಸಿಕೊಳ್ಳಲು ಮಹಾಸನ್ನಿಧಿಗೆ ವಿಶೇಷ ಆನಂದವುಂಟಾಯಿತು.

ಈ ರೇವಣಸಿದ್ಧೇಶ್ವರ ದೇವಾಲಯವು ಭದ್ರವಾಗಿದೆ. ಸುತ್ತ ಕಂಪೌಂಡು ಚಪ್ಪಾಗಿರುತ್ತದೆ. ಗುಡಿಯಲ್ಲಿ ಅನುಷ್ಠಾನ ವಗೈರೆ ಮಾಡುವವರಿಗೆ ೨-೩ ಗವಿಗಳುಂಟು. ಗುಡಿಯಿಂದ ನದಿಗೆ ಹೋಗಲಿಕ್ಕೆ ಸೋಪಾನಗಳನ್ನು ಭದ್ರವಾಗಿ ಕಟ್ಟಿರುತ್ತಾರೆ. ಒಮ್ಮೊಮ್ಮೆ ಪ್ರವಾಹವು ಬಂದರೆ ರೇವಣಸಿದ್ಧೇಶ್ವರನ ಗುಡಿಯಲ್ಲಿ ನೀರು ಹೋಗುತ್ತದಂತೆ. ಸ್ಥಳವು ಅತ್ಯಂತ ರಮಣೀಯವಿರುತ್ತದೆ. ಈ ಗುಡಿಯ ಮೇಲುಭಾಗದಲ್ಲಿ ರೇವಣಸಿದ್ಧೇಶ್ವರನು ಯಾವ ಸ್ಥಳದಲ್ಲಿದ್ದು ತಗಣೆಗಳನ್ನು ಸುಟ್ಟನೋ ಆ ಸ್ಥಳದಲ್ಲಿ 'ಮಲ್ಲಿಕಾರ್ಜುನ' ದೇವಾಲಯವಿರುತ್ತದೆ. ಅದೂ ಭದ್ರವಿದೆ.

ಈ ರೇವಣಸಿದ್ಧೇಶ್ವರ ದೇವಾಲಯದಿಂದ ನದಿಯ ಆಚೆದಂಡೆಗೆ ೧ ಮೈಲು ಅಂತರದಲ್ಲಿ ಬೇಗಮ್‌ಪುರ ಎಂಬುವ ಒಂದು ಊರು ಇರುತ್ತದೆ. 'ಬೇಗಮ್' ಎಂಬುವವಳು ದಿಲ್ಲಿಯ ಔರಂಗಜೇಬನ ಮಗಳಂತೆ. ಆಕೆಯ ಸಮಾಧಿಯು ನದಿಯ ಆಚೆಯದಂಡೆಯಲ್ಲಿರುತ್ತದೆ. ನದಿಯ ಪ್ರವಾಹದಿಂದ ಆ ಸಮಾಧಿಯು ಕುಸಿದುಬಿದ್ದೀತು? ಅದ್ದರಿಂದ ನದಿಯನ್ನೇ ಹೊರಳಿಸಿ ರೇವಣಸಿದ್ಧೇಶ್ವರ ದೇವಾಲಯವನ್ನೇ ಧ್ವಂಸಮಾಡಬೇಕೆಂದು ಔರಂಗಜೇಬನು ವಿಶ್ವಪ್ರಯತ್ನಪಟ್ಟರೂ ಸಾಧ್ಯವಾಗದೆ ಆ ಬೇಗಮ್‌ನ ಸಮಾಧಿಯೇ ಹಾಳಾಗಹತ್ತಿರುತ್ತದೆ. ಈ ಮಾಸನೂರಿಗೆ ಹೋಗಬೇಕಾದರೆ ಸೊಲಾಪುರದಿಂದ ಜಾತ್ರೆಯ ಕಾಲದಲ್ಲಿ ಅನೇಕ ಮೋಟಾರುಗಳು ಹೋಗುತ್ತವೆ. ಆಗ್ಗೆ ೧ ರೂಪಾಯಿ ತೆಗೆದುಕೊಳ್ಳುತ್ತಾರೆ. 'ಬೇಗಮ್‌ಪುರಕ್ಕೆ ಮೋಟಾರಿನಿಂದಿಳಿದು ನದಿಯನ್ನು ದಾಟಿ ೧ ಮೈಲು ನಡೆಯುತ್ತ ಹೋಗಬೇಕು. ಅಥವಾ, ಸೊಲಾಪುರದಿಂದ ಪಂಢರಪುರಕ್ಕೆ [illegible] ೨-೩ ರೂ. ತೆಗೆದುಕೊಳ್ಳುವರು ಅಲ್ಲಿಂದ (ಸೊಲಾಪುರದಿಂದ) ಮಂಗಳವೇಢೆಗೆ [illegible] ಮಂಗಳವೇಢೆಯಿಂದ (೧೧ ಮೈಲು) [illegible] ನಡೆಯುತ್ತಾ ಹೋಗಬೇಕು.)

ಮಂಗಳವೇಢೆಯಲ್ಲಿಯೂ ರೇವಣಸಿದ್ಧೇಶ್ವರನ ೨ ದೇವಾಲಯಗಳುಂಟು. ವೀರಬಿಜ್ಜಳನ ರಾಜಧಾನಿಯ ಸಮೀಪದಲ್ಲಿರುವ ಗುಡಿಯಮಹತ್ವವನ್ನೇ ವಿಶೇಷವಾಗಿ ಹೇಳುತ್ತಾರೆ. ಈ ದೇವಾಲಯದಲ್ಲಿರುವ ರೇವಣಸಿದ್ಧೇಶ್ವರ ಮೂರ್ತಿಯನ್ನು ಸ್ಮಾರ್ತರು ಪೂಜಿಸುತ್ತಾರೆ. ಯಾವ ಸಂವತ್ಸರದಲ್ಲಿ ಮಳೆಯಾಗುವದಿಲ್ಲವೋ ಆ ಸಂವತ್ಸರದಲ್ಲಿ ದೇವರ ಗುಡಿಯ ತುಂಬಾ ನೀರನ್ನು ತುಂಬಿ ರೇವಣಸಿದ್ಧೇಶ್ವರ ಮೂರ್ತಿಯನ್ನು ನೀರಿನಲ್ಲಿ ಮುಳುಗಿಸಿ, ಹೊರಗಿನ ಭಾಗದಲ್ಲಿ ಹೋಮ, ಹವನ, ಜಪ, ತಪಗಳನ್ನು ೭ ದಿವಸ ಪರ್ಯಂತರ ಮಾಡಿದರೆ ಆವರ್ಷ ಬೇಕಾದಷ್ಟು ಮಳೆಯಾಗುತ್ತದಂತೆ! ಈ ವಿಷಯವನ್ನು ಅಪ್ಪುಟಾ ಹೊನ್ನಪ್ಪಾ ಮಾಳಿ ಸ್ಕೂಲಮಾಸ್ತರ ಮಂಗಳವೇಢೆ ಇವರು ತಿಳಿಸಿದರು. ಇನ್ನೊಂದು ಮೂರ್ತಿಯನ್ನು ವೀರಶೈವರೇ ಪೂಜಿಸುತ್ತಾರೆ.

ಮಂಗಳವೇಢೆಯಿಂದ 'ಸಿದ್ಧನಕೆರೆ' ಎಂಬುವ ಗ್ರಾಮವು ೪-೫ ಮೈಲು ಅಂತರದಲ್ಲಿರುತ್ತದೆ. ಆಸ್ಥಾನವು ಒಳ್ಳೇ ರಮ್ಯವಾಗಿರುವುದಂತೆ! ಅಲ್ಲಿ 'ಮಾಯಾವಿ' ಎಂಬುವ ಓರ್ವ ರಾಕ್ಷಸಿಯಿದ್ದಳಂತೆ! ಅವಳು ನವನಾಥರನ್ನು ಸಹ ಬಂಧಿಸಿದ್ದಳಂತೆ. ಆಗ್ಗೆ ರೇವಣಸಿದ್ಧೇಶ್ವರನು ಅಲ್ಲಿಗೆ ದಯಮಾಡಿಸಲು ಆ ಮಾಯಾವಿಯು ನವನಾಥರನ್ನು ಪೀಡಿಸಿದಂತೆ ಇವರನ್ನೂ ಪೀಡಿಸಲಿಕ್ಕೆ ತನ್ನ ಇಂದ್ರಜಾಲ ವಿದ್ಯೆಯನ್ನೆಲ್ಲ ಖರ್ಚುಮಾಡಿದರೂ ಸಾಧ್ಯವಾಗಲಿಲ್ಲವಂತೆ! ಆಗ್ಗೆ ರೇವಣಸಿದ್ಧೇಶ್ವರನು ಇವಳು ಎಲ್ಲರನ್ನೂ ಪೀಡಿಸುತ್ತಾಳೆಂದರಿತು ಆಕೆಯದೊಂದು ಮೊಲೆಯನ್ನೂ ಮೂಗನ್ನೂ ಕೊಯಿದನಂತೆ! ಆಗ್ಗೆ ಅವಳು ಈ ಊರಲ್ಲಿ ನೀರೇ ಇರಬಾರದೆಂದು ಶಪಿಸಿದಳಂತೆ! ಆ ಊರ ಜನರೆಲ್ಲ ರೇವಣಸಿದ್ಧೇಶ್ವರನನ್ನು ಪ್ರಾರ್ಥಿಸಲು ಆ ಸಮಯದಲ್ಲಿ ರೇವಣಸಿದ್ಧೇಶ್ವರನು ಆಲೂರ ಕೆರೆಯಲ್ಲಿ ಪಾದವನ್ನಿಡಲು ಅವರು ಪಾದವಿಟ್ಟ ಸ್ಥಳದಲ್ಲಿಯೇ ಪಾದವು ಮೂಡಿ ಆ ಪಾದದಿಂದಲೇ ನೀರಿನ ಝರಿಯು ಕಾರಂಜಿಯಂತೆ ಪುಟಿಯುತ್ತಿದೆಯಂತೆ! ಅದ್ದರಿಂದಲೇ ಆ ಊರಿಗೆ 'ಸಿದ್ಧನಕೆರೆ' ಎಂಬುವ ನಾಮವು ಪ್ರಾಪ್ತವಾಗಿದೆಯಂತೆ! ಈ ವಿಷಯವನ್ನು 'ಬಸವಲಿಂಗಯ್ಯನವರು ಮಂಗಳವೇಢೆ' ಇವರು ತಿಳಿಸಿದರು.

ಅಕ್ಕಲಕೋಟೆ ಸಂಸ್ಥಾನಪೈಕಿ 'ಬಹಾದ್ದೂರಪುರ'ವೆಂಬುವ ಊರಲ್ಲಿ 'ಶ್ರೀ ಸಿದ್ಧಯ್ಯಪ್ಪ'ನೆಂಬುವ ದೇವಾಲಯವುಂಟು. ಅದೂ ಕೂಡ ರೇವಣಸಿದ್ಧೇಶ್ವರ ದೇವಾಲಯವೇ ಇರುತ್ತದೆ. ಈ ರೇವಣಸಿದ್ಧೇಶ್ವರನ ಪೂಜಾರಿಗಳು ಮುಸಲ್ಮಾನರಿದ್ದಾರೆ. ಈ ಬಹಾದ್ದೂರಪುರವು ಮುಸಲ್ಮಾನರ ಜಹಗೀರ ಗ್ರಾಮವಾಗಿರುತ್ತದೆ. ಅವರು ತಮ್ಮ ಅಮಲಿನಲ್ಲಿ ಈ ಮಹತ್ವದ ದೇವಾಲಯವನ್ನು ತಮ್ಮ ಅಧೀನಮಾಡಿಕೊಂಡಿರುವಂತೆ ತೋರುತ್ತದೆ. ಈ ರೇವಣಸಿದ್ಧೇಶ್ವರನಿಗೆ ವೀರಶೈವರು ಸಿದ್ಧಯ್ಯಪ್ಪನೆಂತಲೂ ಸ್ಮಾರ್ತರು ಅನಂತಚೈತನ್ಯನೆಂತಲೂ ಮುಸಲ್ಮಾನರು 'ಅಲ್ಲಾವುದ್ದೀನ'ನೆಂತಲೂ ಕರೆಯುತ್ತಾರೆ. ಪರಂತು ಸರ್ವರೂ ಈ ದೇವರನ್ನು ಒಳ್ಳೇ ಭಕ್ತಿಯಿಂದ ಭಜಿಸುತ್ತಿರುವರು. ಮುಸಲ್ಮಾನರು ತಮ್ಮಧೀನ ಮಾಡಿಕೊಂಡು ತಮ್ಮ ಜಾತಿಯ ಪದ್ಧತಿಯಪ್ರಕಾರ 'ಗೆಂಧ'ವನ್ನೇರಿಸಿ ಏರಿಸಿ, ಮತ್ತು 'ಗಲೀಪ' ಹಾಕಿ ಹಾಕಿ ದೊಡ್ಡದಾಗಿರಲು ಈಗ್ಗೆ ನಾಲ್ಕು-ಆರು ವರ್ಷಗಳ ಹಿಂದೆ ಅದು ಆಕಸ್ಮಾತ್ತಾಗಿ ಸುಡಲು ಅದರಲ್ಲಿ 'ಲಿಂಗಮೂರ್ತಿ'ಯೇ ಹೊರಬಿದ್ದಿತಂತೆ! ಆ ಗುಡಿಯಲ್ಲಿ ಗುಹೆಯೊಂದುಂಟು. ಅದರಲ್ಲಿ ಪಂಚಹೋಳಿಗೆ, ಇತ್ಯಾದಿಗಳಿರುತ್ತವೆಯಂತೆ! ಈ ದೇವರಿಗೆ ಪ್ರತಿಯೊಬ್ಬರೂ ಸಿದ್ಧಯ್ಯಪ್ಪ ಶೀಜೋಸ್ತಾ ರಾಜೋದೀನ್ ಎಂದೆನ್ನುವರು. ಅಂತಹಮೇಲೆ ಈ ದೇವರು ವೀರಶೈವರದೋ ಮುಸಲ್ಮಾನರದೋ ವಾಚಕರೇ ಊಹಿಸಿರಿ. ಈ ಪ್ರಕಾರವಾಗಿ ವೀರಶೈವರ ಅನೇಕ ದೇವತೆಗಳೂ, ದೇವಾಲಯಗಳೂ ಪರರವಾಗಿ ಹೋಗಿವೆ. ಇದರ ಮೇಲಿಂದ ವೀರಶೈವರಲ್ಲಿ ತಮ್ಮ ಧರ್ಮದ ಬಗ್ಗೆ ಎಷ್ಟು ಎಚ್ಚರಿಕೆಯುಂಟೆಂಬುವದು ಒಡೆದುಕಾಣುತ್ತದೆ. ಅಹೋ ವೀರಶೈವರೇ ಏಳಿರಿ ಎಚ್ಚರರಾಗಿರಿ ನಿಮ್ಮ ಧರ್ಮವನ್ನು ಉಳಿಸಿರಿ, ನಿಮ್ಮ ಗುರುಸಾರ್ವಭೌಮನಾದ ರೇವಣಸಿದ್ಧೇಶ್ವರನ ಮಹತ್ವವನ್ನು ಕಣ್ದೆರೆದು ನೋಡಿರಿ, ಕಿವಿಬಿಚ್ಚಿ ಕೇಳಿರಿ. ಆ ಶಿವನು ತುತ್ತ ಸರ್ವೇಷಾಂ.

ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷ ಬೃಹನ್ಮಠ, ಹೋಟಗಿ.

ಕನ್ನಡ ಪಂಚಾಂಗಗಳ ವಿಮರ್ಶ ಮತ್ತು ಶ್ರೀ ದಕ್ಷಿಣ ಕಾಶೀಕ್ಷೇತ್ರ ಹೂವಲ್ಲೀ (ಹೂಲೀ) ಪಂಚಾಂಗದ ಸತ್ಯತೆ.

ನಾವು ಕೆಳಗೆ ಕಂಡಿದ ಜನರೆಲ್ಲರೂ ಒಂದು ಧರ್ಮದ ಬಗ್ಗೆ ಸಭೆಯನ್ನೇರ್ಪಡಿಸಿ ಕೆಲವು ವಾರ ಪತ್ರಿಕೆಗಳನ್ನು ತರಿಸಬೇಕೆಂದು ಠರಾವು ಮಾಡಿದ ಬಳಿಕ ಇದೇ ಸಂವತ್ಸರದ ಮಾಘ ಶುದ್ಧ ೧೫ ಪೌರ್ಣಿಮಾ ಮಂಗಳವಾರದ ಗ್ರಹಣದ ಬಗ್ಗೆ ಯಾವ ಪಂಚಾಂಗವು ಖಾತ್ರೀ ಬರುತ್ತದೆಂಬ ವಿಷಯಕ್ಕಾಗಿ ೫-೬ ಪ್ರತಿಗಳನ್ನು ಜನರು ಕೂಡಿಸಿದರು. ಅದರಲ್ಲಿ ಶ್ರೀ ಹೂವಲ್ಲೀ (ಹೂಲೀ) ಪಂಚಾಂಗವೂ ಸಮಾವೇಶವಾಗಿತ್ತು. ಆದರೆ ಎಲ್ಲರೂ ಗಡಿಯಾರಗಳನ್ನು ಇರಿಸಿಕೊಂಡು ಸ್ನಾನ ಸಂಧ್ಯಾವಂದನೆಗಳನ್ನು ಮಾಡಲು ಪ್ರಾರಂಭಿಸಲು ಕೆಲವು ಪಂಚಾಂಗದಲ್ಲಿ ಗ್ರಹಣವು ಸ್ವಲ್ಪ ಅದೆಯೆಂದೂ ಕೆಲವು ಪಂಚಾಂಗಕರ್ತರು ಗ್ರಹಣವಿಲ್ಲೆಂದೂ ಕೆಲವು ಪಂಚಾಂಗ ಪಂಚಿ ಹಿಂದಿನಿಂದ ಉಳಿದ ಕೆಲವು ಪ್ರತಿಗಳಲ್ಲಿ ಗ್ರಹಣ ಉಂಟೆಂದೂ ಮತ್ತೆ ಕೆಲವರು ಸ್ಪರ್ಶಕಾಲಕ್ಕೆ ಮೋಕ್ಷಕಾಲವೆಂದೂ ಮೋಕ್ಷಕಾಲಕ್ಕೆ ಸ್ಪರ್ಶಕಾಲವೆಂದೂ ಬರೆದಿದ್ದರು. ಇದರಿಂದ ವ್ರತಾದಿಗಳನ್ನು ಮಾಡತಕ್ಕವರು ಬಹಳ ಕೋಪಗೊಂಡು ಶ್ರೀ ಹೂವಲ್ಲೀ ಪಂಚಾಂಗದರ್ಪಣವನ್ನು ತೆಗೆದು ನೋಡಲು ಆ ವೇಳೆಯವರೆಗೆ ಕೂಡು ಎಲ್ಲರೂ ಗಡಿಯಾರಗಳನ್ನು ಕೈಯಲ್ಲಿ ಹಿಡಿದುಕೊಂಡು ಪರೀಕ್ಷೆ ಮಾಡಲು ಶ್ರೀ ಹೂವಲ್ಲೀ ಪಂಚಾಂಗವು ಮಾತ್ರ ಸರ್ವರ ಮನಸ್ಸಿಗೆ ಆನಂದವನ್ನುಂಟುಮಾಡಿತು. ಆಗ್ಗೆ ವ್ರತಾದಿಗಳನ್ನೆಲ್ಲಾ ಪೂರೈಸಿ ಸದರೀ ಹೂವಲ್ಲೀ ಪಂಚಾಂಗವು ಇನ್ನೂ ಹೆಚ್ಚಿಗೆ ಸುಧಾರಣೆಯಾಗಲೆಂದು ಈ ಧರ್ಮಾರ್ಥ ಪಾಠಶಾಲೆಯ ಅಧ್ಯಾಪಕರಾದ ವೇ॥ ಬ್ರ॥ ಶ್ರೀ॥ ಸಿದ್ಧಾಂತಿ ಜ್ಯೋತಿಷಾಲಂಕಾರ ಶಿವವೃಷಭಶಾಸ್ತ್ರಿಗಳವರಿಗೆ ಬಹು ಜನಸಮಿತಿಯಿಂದ ಒಂದು ಮೆಹರ್ಬಾನಗಿ ಪತ್ರವನ್ನು ಕಳುಹಿಸುವದಾಗಿದೆ. ಅದ್ದರಿಂದ ಯಾವತ್ತರೂ ಸತ್ಯಕ್ಕೆ ಮನಗೊಟ್ಟರ್‌ದ್ದಾದರೆ ಜಯವು ಲಭ್ಯವಾಗುವದು. ಸರ್ವರೂ ಗಣಿತದ ಆಧಾರಗಳನ್ನು ಮನಮೆಚ್ಚಿ ಪರೀಕ್ಷೆ ಮಾಡಿ ಆ ಕಡೆಗೆ ಲಕ್ಷ್ಯಕೊಡಿರೆಂದು ಹೇಳಿ ನಮ್ಮೆಲ್ಲರ ಅನುಮೋದನಪತ್ರಿಕೆಯು ಮುಗಿಸುವದಾಯಿತು.

ಸಭಾಸದರು.

೧. ವೇ॥ ಬಸವಯ್ಯ, ಸ್ವಾಮಿಮಠದ.
೨. ವೇ॥ ಮರೆಯ್ಯನವರು ವಿರಕ್ತಮಠ.
೩. ಶ್ರೀ॥ ರಾ॥ ರಾ॥ ಸಂಕಪ್ಪನವರು ಶೆಟ್ಟಿಕಪ್ಪನವರ.
೪. ಶ್ರೀ॥ ರಾ॥ ರಾ॥ ಗುರುಶಿವಪ್ಪ ಕೊರಡೂರ.
೫. ಗುರುಸಿದ್ಧಯ್ಯ ಕಲ್ಮಠ.
೬. ಹಣಮಂತರಾವ ಜೋಯಿಸ.
೭. ವೀರಪ್ಪ ಸಂಗಪ್ಪ ಪಟ್ಟಣಶೆಟ್ರು.
೮. ಬಸವಪ್ಪ ಶಾಸ್ತ್ರೀ ಪರುಪತಿಹಾಳ.

ಗುರುಕೀರ್ತನೆ.

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ಮ॥ ರಾ॥ ಸಾ॥ ಜವಳಿ ಗುರುಬಸಪ್ಪ ಯಜಮಾನರವರ ಸ್ವಗೃಹದಲ್ಲಿ ಶ್ರೀ ರೇಣುಕಜಯಂತಿಯ ಮಹೋತ್ಸವ ಸಂಬಂಧವಾಗಿ (ತಾ॥ 27-2-34) ಮಂಗಳವಾರ ರಾತ್ರಿ 9 ಗಂಟೆಯಿಂದ ಕೀರ್ತನಕೇಸರಿ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಗುರುಕರುಣಾಪ್ರಭಾವ ಎಂಬ ಕೀರ್ತನೆಯನ್ನು ಬಹು ಸರಸವಾಗಿ ಅನುವಾದ ಮಾಡಿ, ಸಭಿಕಮಹಾಜನರನ್ನು ಆನಂದಾಬ್ಧಿಯಲ್ಲಿ ಮುಳುಗಿಸಿದ ಬಳಿಕ ಪೂರ್ಣಾನುಭವಿಗಳಾದ ಮ॥ರಾ॥ ಸ್ವಾಮಿತಿ ಚನ್ನಪ್ಪಶೆಟ್ಟಿಯವರು ಗುರುಕೀರ್ತನ ಶ್ರವಣಾನಂದದ ಸುಯೋಗವನ್ನು ದೊರಕಿಸಿಕೊಟ್ಟ ಮ॥ ರಾ॥ ಜವಳಿ ಗುರುಬಸವಪ್ಪನವರ ಗುಣಕಥನವನ್ನು ಮಾಡಿ ವೇ॥ ಶಾಸ್ತ್ರಿಗಳವರ ಪ್ರತಿಭಾಶಕ್ತಿಯನ್ನು ಶ್ಲಾಘಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವನ್ನು ಮಾಡಿದ ತರುವಾಯ ತತ್ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಒಂದು ರೂ. ಯು ಕೆಗೆಯಿಸಲ್ಪಟ್ಟಿತು. ಓರ್ವ ಗುರುಕೃಪಾಭಿಲಾಷಿ.

ಜಯಂತಿಮಹೋತ್ಸವಗಳು.

ಹುಬ್ಬಳ್ಳಿ.

ಇಲ್ಲಿಯ ಬೂಸಪೇಟೆ ಹಸ್ಸಿರದು ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಉತ್ಸವವು ತಾ॥ ೨೭-೨-೧೯೩೪ ನೇ ಮಂಗಳವಾರ ದಿವಸ ಬಹು ವಿಜೃಂಭಣೆಯಿಂದ ಜರುಗಿತು. ಆ ದಿವಸವನ್ನು ಇಲ್ಲಿಯ ವೀರಶೈವರು ಒಳ್ಳೇ ದೊಡ್ಡ ಹಬ್ಬದಂತೆ ಆಚರಿಸಿದರು.

ಸೋಮವಾರ (ತಾ॥ ೨೬-೨-೧೯೩೪) ದಿವಸ ಶ್ರೀ ರೇಣುಕ ಜಯಂತಿ ಶ್ರೀಕೃಷ್ಣ ಪ್ರಸಿದ್ಧ ಗಾಯಕರಾದ ವಜೀರಖಾನ ಸಾಹೇಬರವರ ಇಂಪಾದ ಗಾಯನ ಮತ್ತು ಸತಾರಬಾರಿಸುವದು, ಸಾಯಂಕಾಲ ೫॥ ಘಂಟೆಯಿಂದ ರಾತ್ರಿ ೭ ಘಂಟೆಯವರೆಗೆ ನಡೆಯಿತು. ಮುಂದೆ ೭ ಘಂಟೆಯಿಂದ ಸಭೆಸೇರಿ ಸಭೆಯಲ್ಲಿ ಕರ್ನಾಟಕವಿಚಂದ್ರ ಶ್ರೀಕಂಠಶಾಸ್ತ್ರಿಗಳು ನಲವಡಿ ಇವರು ರೇಣುಕ ಜಯಂತಿಯ ಅವಶ್ಯಕತೆಯನ್ನು ಕುರಿತು ಮಾತಾಡಿದರು. ಮತ್ತು ಮಿ॥ ಎಸ್. ಪಿ. ಅಯ್ಯ್ ಹಿರೇಮಠ ವಕೀಲ ಹುಬ್ಬಳ್ಳಿ ಮತ್ತು ವೇ॥ ವಿರಕ್ತಮಠದ ಅನ್ನದಾನಯ್ಯನವರು ಮುಂತಾದವರ ಪರಿಣಾಮಕಾರಕ ಭಾಷಣಗಳಾದವು.

ಮಂಗಳವಾರ (ತಾ॥ ೨೭-೨-೧೯೩೪) ದಿವಸ ಪ್ರಾತಃಕಾಲದಲ್ಲಿ ಮಠದಲ್ಲಿ ಶ್ರೀ ರೇಣುಕರ ರಜತವಿಗ್ರಹಕ್ಕೆ ನಲವಡಿ ಶ್ರೀಕಂಠಶಾಸ್ತ್ರಿಗಳಿಂದ ವಿಧ್ಯುಕ್ತ ರುದ್ರಾಭಿಷೇಕವು ಮಾಡಲ್ಪಟ್ಟಿತು. ಆ ಮೇಲೆ ಮಧ್ಯಾಹ್ನದಲ್ಲಿ ಗಣಾರಾಧನೆಯು ಕಾರ್ಯವು ಪೂರೈಸಿದ ಮೇಲೆ ನಾಲ್ಕು ಘಂಟೆಗೆ ವೇ॥ ವಿರೂಪಾಕ್ಷಸ್ವಾಮಿಗಳೆಂಬ ಪ್ರಸಿದ್ಧ ಕೀರ್ತನಕಾರರು ಇವರ ಸುಶ್ರಾವ್ಯವಾದ ಕೀರ್ತನವು ನಡೆಯಿತು. ಅನಂತರ ೬ ಘಂಟೆಯಿಂದ ಶ್ರೀ ರೇಣುಕರ ವಿಗ್ರಹದ ಪಲ್ಲಕ್ಕಿ ಉತ್ಸವವು ಮತ್ತು ಶ್ರೀ॥ ಷ॥ ಬ್ರ॥ ಹಸ್ಸಿರದು ಮಠದ ಚರಮೂರ್ತಿಗಳ ಮೆರವಣಿಗೆಯ ಉತ್ಸವವು ಒಳ್ಳೇ ಸಡಗರದಿಂದ ಹೊರಟು ನಗರದ ಮುಖ್ಯಮುಖ್ಯ ಬೀದಿಗಳಲ್ಲಿ ಹಾಯ್ದು ರಾತ್ರಿ ೧೦ ಘಂಟೆಗೆ ತಿರುಗಿ ಮಠಕ್ಕೆ ಬಂದು ತಲ್ಪಿತು. ಈ ಉತ್ಸವದಲ್ಲಿ ಕಲಘಟಗಿ ತಾ॥ ಹಿರೇಹೊನ್ನಿಹಳ್ಳಿಯ ಪಂಚಾಚಾರ್ಯ ಭಜನಾಸಂಘದವರು ಒಳ್ಳೇ ಉತ್ಸುಕತೆಯಿಂದ ತಮ್ಮ ಸೇವೆಯನ್ನು ಅರ್ಪಿಸಿದರು. ರಾತ್ರಿ ೧೦ ಘಂಟೆಯಮೇಲೆ ಸಭೆಯು ಕೆಲಸವು ಮಠದಲ್ಲಿ ಜರುಗಿತು. ಈ ಸಭೆಗೆ ಹುಬ್ಬಳ್ಳಿಪುರದ ಕೆಲವು ಪ್ರಮುಖ ಗೃಹಸ್ಥರು ಹಾಜರ ಇದ್ದದ್ದಲ್ಲದೆ ಪರಸ್ಥಳದಿಂದ ರಾ॥ ಕಲಘಟಗಿ ತಾ॥ ಹೆಡ್ ಮಾಸ್ತರ ಕಟ್ಟಿ ಇವರು ಶೀಗಿಯಿಂದ ವೀರಭದ್ರಯ್ಯನವರು ಕವಲೂರ ಮುಂತಾದ ಸಭ್ಯಗೃಹಸ್ಥರು ಹಾಜರಿದ್ದರು. ಈ ಸಭೆಗೆ ಶ್ರೀ॥ ಷ॥ ಬ್ರ॥ ಹಸ್ಸಿರದು ಮಠದ ಶ್ರೀಗಳವರೇ ಅಧ್ಯಕ್ಷರಿದ್ದು ಸಭೆಯಲ್ಲಿ ಸದ್ಯೋಜಾತ ಸಂಗಳಕರ, ಇವರು ಗುರುಮಾಹಾತ್ಮ್ಯದ ಬಗ್ಗೆ ಕಟ್ಟಿ ಹೆಡ್ ಮಾಸ್ತರ ಇವರು ನೈತಿಕ ಸುಧಾರಣೆಬಗ್ಗೆ ಮತ್ತು ವೇ॥ ಅನಲವಾಲ ಹಿರೇಮಠದ ಶಿವಪ್ಪಯ್ಯಶಾಸ್ತ್ರಿಗಳು ರೇಣುಕಮಾಹಾತ್ಮ್ಯದ ಬಗ್ಗೆ ಒಳ್ಳೇ ಸರಸವಾಗಿ ಭಾಷಣಮಾಡಿದರು. ಅನಂತರ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮಿ॥ ಎಸ್. ಪಿ. ಹಾಲೇವಡಿಮಠದ ವಕೀಲರು ಎಲ್ಲ ಭಾಷಣಕಾರರ ಭಾಷಣಗಳ ಉಪಸಂಹಾರ ಮಾಡಿದನಂತರ ಮಿ॥ ಪಿ. ಅಯ್ಯ್. ಹಿರೇಮಠ ವಕೀಲ ಇವರು ಸಭೆಗೆ ಸೇರಿದ ಎಲ್ಲ ಜನರ ಮತ್ತು ಕಾರ್ಯಕಾರಿ ಮಂಡಲದ ಆಭಾರವನ್ನು ಮನ್ನಿಸಿದನಂತರ ಶ್ರೀಗಳವರ ಹಸ್ತದಿಂದ ಸದ್ರಿ ಭಜನಾ ಸಂಘದವರಿಗೆ ಸದ್ಯದ ರಂಭಾಪುರೀ ಪೀಠಾಧ್ಯಕ್ಷರ ಲಾಕೆಟ್ಟುಗಳನ್ನು ಆಶೀರ್ವದಿಸಿದನಂತರ ಜಯಂತಿಯ ಎಲ್ಲ ಕಾರ್ಯವು ಸಮಾಪ್ತಿಯಾಯಿತು.

ಅಂದಾನಯ್ಯ ರುದ್ರಯ್ಯ ಚವಡಿಮಠ,
ಜಯಂತಿಯ ಗೌರವಕಾರ್ಯದರ್ಶಿ.

ಬಮ್ಮಿಗಟ್ಟಿ.

ತಾ॥ ೨೭—೨—೧೯೩೪ ನೆಯ ಮಂಗಳವಾರ ಕಲಘಟಗಿ ತಾಲ್ಲೂಕು ಬಮ್ಮಿಗಟ್ಟಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಒಳ್ಳೇ ಸಡಗರದಿಂದ ಜರುಗಿತು. ಶ್ರೀ ರೇಣುಕರ ಜಯಂತಿಯು ಇಂಥ ಮಲ್ಲಾಡ ಪ್ರದೇಶದಲ್ಲಿ ಎಂದೂ ಆಗಿದ್ದಿಲ್ಲ. ಈ ಸಾರೆ, ಶಿಗ್ಗಾವಿ ತಾ॥ ಹಿರೇಹರಕುಣಿ ಗ್ರಾಮದ ಹಿರೇಮಠದ ಸಿದ್ಧಲಿಂಗ ಮರಿದೇವರು ಅತ್ತ ಕಡೆಗೆ ಸಂಚರಿಸುತ್ತಿರುವಾಗ್ಗೆ ಅತ್ತ ಕಡೆಯ ಯಾವತ್ತು ಭಕ್ತಮಾಹೇಶ್ವರ ಜನರಿಗೆ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ವಿಶೇಷ ಭಕ್ತಿ ಹುಟ್ಟುವಂತೆ ಬೋಧಿಸಿ ಗುರುಮಾಹಾತ್ಮ್ಯವನ್ನು ತಿಳಿಸಿ ಹೇಳಿ ಎಲ್ಲರೂ ಏಕಮನಸ್ಸಿನಿಂದ ಶ್ರೀ ಗುರುಕಾರ್ಯವನ್ನು ಯಶಸ್ವಿಯಾಗಿ ಮಾಡುವಂತೆ ಪ್ರಯತ್ನಪಟ್ಟರು. ಬಮ್ಮಿಗಟ್ಟಿಯ ಭಕ್ತಮಾಹೇಶ್ವರರು ಶ್ರೀ ಜಗದ್ಗುರುಗಳ ಜಯಂತಿ ದಿವಸ ತಮ್ಮ ಒಳಗಿನ ವೈಷಮ್ಯವನ್ನು ಹಿಂದಿಟ್ಟು ಒಮ್ಮನಸ್ಸಿನಿಂದ ಮುಂದೆ ಬಂದು ಶ್ರೀ ಸಿದ್ಧಲಿಂಗ ಮರಿದೇವರ ಹೇಳಿಕೆಯಮೇರೆಗೆ ಜಯಂತಿ ಉತ್ಸವವನ್ನು ಏರ್ಪಡಿಸಿದರು. ಮತ್ತು ಗ್ರಾಮದಲ್ಲಿ ಬಹುತರ ಎಲ್ಲ ಬೀದಿಗಳಲ್ಲಿ ಉತ್ಸವವು ಹೊರಟು ಸಕಲಭಕ್ತರ ಫಲ, ಹಾರ, ಆರತಿ ಮುಂತಾದ ಭಕ್ತಿದ್ಯೋತಕ ಚಿಹ್ನಗಳಿಂದ ಒಳ್ಳೇ ರಮ್ಯವಾಗಿ ಕಾಣಿಸುತ್ತಿದ್ದಿತು. ಗ್ರಾಮದ ನಡುಬೀದಿಯಲ್ಲಿ ಉತ್ಸವವು ಬಂದಾಗ್ಗೆ ಎಲ್ಲ ಜನಗಳು ಸೇರಿ ಸಭೆ ಮಾಡಿ ವೇ॥ ಹರಕುಣಿ ಸಿದ್ಧಲಿಂಗಮರಿದೇವರ ಅಧ್ಯಕ್ಷತೆಯಲ್ಲಿ ಆಚಾರ್ಯರ ಅವತಾರದಬಗ್ಗೆ ಭಾಷಣಗಳಾದುವು. ಆಮೇಲೆ ಸಭೆಯು ಯಶಸ್ವಿಯಾಗಿ ಉತ್ಸವವು ಹಿರೇಮಠಕ್ಕೆ ಬಂದು ತಲ್ಪಿತು. ಎಲ್ಲ ಜನಗಳ ಮನಸ್ಸಿನಲ್ಲಿ ಆಚಾರ್ಯಜಯಂತಿ ವೈಭವದಿಂದ ಒಂದು ವಿಶೇಷಪರಿಣಾಮವಾದಂತಾಗಿ ಮುಂದೆ ಇದೇ ಪ್ರಕಾರವಾಗಿ ಪ್ರತಿವರ್ಷ ಜಯಂತಿಯನ್ನು ನೆರವೇರಿಸಬೇಕೆಂದು ದೃಢಸಂಕಲ್ಪಮಾಡಿದರು.

ಓರ್ವ ಪ್ರತ್ಯಕ್ಷದರ್ಶಿ.

ಜಯಂತೀಮಹೋತ್ಸವ.

ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ಅಖಿಲವೀರಶೈವರು ಆಚರಿಸಬೇಕೆಂಬುದು ತಿಳಿದ ವಿಷಯವೇ ಆಗಿದೆ. ಆದರೂ ಇಡೀ ವೀರಶೈವರಿಗೇ ದೊಡ್ಡಹಬ್ಬಗಳಾದ ಜಯಂತಿಮಹೋತ್ಸವಗಳು ನಾಡುಹಬ್ಬದಂತೆ ದೊಡ್ಡ ಹಬ್ಬವನ್ನಾಗಿ ಆಚರಿಸುವ ಪರಿಪಾಠವು ಬಹಳ ಕಡಿಮೆಯಾಗಿದೆಯೆಂದು ಅತ್ಯಂತ ದುಃಖದಿಂದ ಹೇಳಬೇಕಾಗಿದೆ. ಇದಕ್ಕೆ ಮೂಲಕಾರಣವೆಂದರೆ, ಸ್ವಭಾವವಾಗಿ ಮೂರು ಕಾರಣಗಳನ್ನು ಹೇಳಬಹುದು. ೧ ತಿಳಿಯದೆ ಬಿಡುವವರು ಕೆಲವರು. ೨ ತಿಳಿದೂ ತಿಳಿದು ತಮ್ಮ ಪ್ರಾಪಂಚಿಕ ಅಡಚಣೆಯಿಂದ ಬಿಡುವವರು ಕೆಲವರು. ೩ ಈಗಿನ ಪ್ರಕ್ಷುಬ್ಧವಾತಾವರಣದ ಪಕ್ಷಾಂಧತೆಯ ಮಹತ್ವಾಕಾಂಕ್ಷೆಯಿಂದ ಬಿಡುವವರು ಕೆಲವರು. ಇವುಗಳಿಗೆ ಉತ್ತರಗಳೆಂದರೆ—೧ ತಿಳಿಯದವರಿಗೆ ತಿಳಿದವರು ಆಚಾರ್ಯರ ಜಯಂತಿಮಹೋತ್ಸವದ ಮಹತ್ವವನ್ನು ಅವರ ಮನಸ್ಸಿನ ಮೇಲೆ ಒಳ್ಳೆ ಪರಿಣಾಮವಾಗುವಂತೆ ಹೇಳಿ, ಸರ್ವತ್ರ ಪ್ರಚಾರಮಾಡಿದ ಮಹಾಪುಣ್ಯಕ್ಕೆ ಭಾಗಿಗಳಾಗುವುದು. ೨ ಇನ್ನು ಪ್ರಾಪಂಚಿಕ ತೊಂದರೆಗಳನ್ನು ತೋರಿಸುವರಲ್ಲಿ ಅನೇಕರು. ನಮ್ಮ ವೀರಶೈವಧರ್ಮಕ್ಕೇನೇ ಸಂಬಂಧಪಡದ ಧರ್ಮವಿರುದ್ಧವೂ, ಅಶಾಸ್ತ್ರೀಯವೂ ಆದ ಎಷ್ಟೋ ಹಬ್ಬಗಳಲ್ಲಿ ತಮ್ಮ ಶಕ್ತಿಮೀರಿ ದುಂದುವೆಚ್ಚ ಮಾಡುವರನ್ನು ಅನೇಕರು ನೋಡಿಯೂ, ನೋಡುತ್ತಲೂ ಇರುವರು. ಇಂಥ ಹಬ್ಬಗಳನ್ನು ಕಡಿಮೆ ಮಾಡಿ, ಆಚಾರ್ಯರ ಜಯಂತಿಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದ ಆಚರಿಸುವುದರಮೂಲಕ ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕು. ೩ ಜನರಲ್ಲಿ ಧಾರ್ಮಿಕಶ್ರದ್ಧೆಯೂ, ಗುರುದೈವಭಕ್ತಿಯೂ ಕಡಿಮೆಯಾಗಿರುವುದರಿಂದಲೇ, ಈ ಮೂರನೇ ಕಾರಣವು ಘಾತುಕವೂ, ಅನೈಕ್ಯವೂ, ಅನರ್ಥಕಾರಕವೂ ಆದ ತನ್ನ ನಾಟ್ಯದಿಂದ ಇಡೀ ವೀರಶೈವ ಸಮುದಾಯದಲ್ಲಿಯೇ ಭಯಂಕರ ಕೋಲಾಹಲವನ್ನೆಬ್ಬಿಸಿದೆ. ಜನರ ಮನೋವಿಚಾರಗಳು ಹೇಗೇ ಇರಲಿ, ಮಗನು ಎಂಥ ಪದವೀಧರನೂ, ವರಿಷ್ಠ ಕನಿಷ್ಠನಾದರೂ, ತಂದೆಗೆ ಮಗನೇ ಮಗನು. ಧನಮದ ಅಧಿಕಾರಮದದಿಂದಲೋ ತಂದೆಗೆ ತಂದೆಯೆನ್ನಲು ಸಂಕೋಚಪಟ್ಟರೆ, ತಾಯಿಗೆ ಬರುವ ಪ್ರಮಾದದಿಂದ, ವಿಮಲಕುಲವೇ ಕಲಂಕಿತವಾಗುವದೆಂಬುದು ನಿರ್ವಿವಾದವಾದದ್ದೆ ಸರಿ. ತದ್ವತ್ ಯಾವ ಗುರುವು ಸಕಲೇಷ್ಟಪ್ರದಾಯಕವಾದ ಶಿವಲಿಂಗವನ್ನು ಅನುಗ್ರಹಿಸಿ, ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿ ಮಾಡಿ, ಮೋಕ್ಷದ ಪಥವನ್ನು ತೋರಿಸಿದ, ಗುರುವಿನ ಗುರು, ಜಗದ್ಗುರು ಪಂಚಾಚಾರ್ಯರಲ್ಲಿ ಅನನ್ಯಭಕ್ತಿಯಿಂದ ಅವರ ನಾಮಸ್ಮರಣೆ ಮಾಡದಿದ್ದಲ್ಲಿ, ಎಂಥ ರೌರವನರಕ ಪ್ರಾಪ್ತವಾಗುತ್ತದೆಂಬುದನ್ನು ಬರೆಯುವದೇ ಬೇಡ.

ಓ ವೀರಶೈವ ಬಾಂಧವರೇ! ಇಡೀ ಜಗತ್ತಿನ ಚಿತ್ರವನ್ನೇ ನೋಡಿರಿ. ಪ್ರತಿಯೊಂದು ಮತದಲ್ಲಿಯೂ, ಆಳುಗಳಾದಿಯಾಗಿ ಅರಸರವರಿಗೂ ಗುರುವಿಲ್ಲದ ಮತವಿರುವುದೇ? ಹೀಗಿದ್ದು ಮತಸ್ಥಾಪನಾಚಾರ್ಯರಂಥ ಗುರುವರ್ಯರಲ್ಲಿ ಭಕ್ತಿಬಾಹಿರರಾಗಿ ವೀರಶೈವಮತವನ್ನೇ ಅವನತಿಗೀಡುಮಾಡಿದ ಪಾಪಕ್ಕೆ ಪರಮಾತ್ಮನಲ್ಲೇನು ಹೇಳುವಿರಿ! ಇನ್ನಾದರೂ ಏಳಿರಿ! ಸ್ವಧರ್ಮದ ಕಡೆಗೆ ಲಕ್ಷ್ಯಕೊಡಿರಿ!! ನಿಮ್ಮ ಮನೋಮಯಸಾಕ್ಷಿಯಾಗಿ ಸುವಿಚಾರದೃಷ್ಟಿಯಿಂದ ಸಾರಾಸಾರವಿಚಾರಮಾಡಿ, ಸತ್ಯದ ಹಾದಿಯನ್ನು ಹಿಡಿಯಿರಿ. ಅಂದರೆ ಇಡೀಜಗತ್ತಿನಲ್ಲಿಯೇ ಆಚಾರ್ಯರ ಜಯದುಂದುಭಿಯು ಭೋರ್ಗರೆಯುವುದರಲ್ಲಿ ಸಂದೇಹವೇ ಇಲ್ಲ.

ಬಳ್ಳಾರಿ ಜಿಲ್ಲಾ ಹುವಿನಹಡಗಲಿ ತಾಲ್ಲೂಕ್ ಹೊಳಗುಂದಿಗ್ರಾಮದಲ್ಲಿ ಮಹಾಶಿವರಾತ್ರಿಯ ದಿವಸ ಪದ್ಧತಿಯಂತೆ ಸಮಸ್ತ ದೇವರಿಗೆ ಶ್ರೀ ರುದ್ರಾಭಿಷೇಕಮಹೋತ್ಸವವೂ, ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಮಹೋತ್ಸವವೂ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಶ್ರೀ ಜಗದ್ಗುರು ಪಂಚಾಚಾರ್ಯ ತತ್ತ್ವಪ್ರಚಾರಕ ಸಂಘದವರಿಂದ ಸಮರ್ಪಿಸಲ್ಪಟ್ಟ 1—0—0 ಮ॥ ರಾ॥ ಯಜಮಾನ್ ಕಾಸು ಭೋಗದ ಸಿದ್ಧಲಿಂಗಪ್ಪನವರ ಕಡಿಗೆ ಕೊಟ್ಟಿರುತ್ತದೆ.

ಕಾರ್ಯದರ್ಶಿ,
ಶ್ರೀ. ಜ. ಪಂ. ತ. ಪ್ರ ಸಂಘ.

ಶ್ರೀ ವೀರೇಶಾಯ ನಮಃ

ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿ ದೇವಾಲಯದ ಪಂಚಕಮಿಟಿಯಿಂದ ಜಾಹೀರ ವಿನಂತಿ.

ಶ್ರೀ ಸ್ವಾಮಿಯ ರಥೋತ್ಸವವು. ಪುರಾತನ ಪದ್ಧತಿಗನುಸರಿಸಿ ಇದೇ ಭಾವಸಂ॥ ರದ ಚೈತ್ರ ಶುದ್ಧ ಪಕ್ಷ ೫ ಮಂಗಳವಾರ ತಾ॥ ೨೦-೩-೩೪ ನೇ ಇಸ್ವಿಯ ದಿನ ನಡೆಯುವದು. ರಥೋತ್ಸವಕ್ಕೆ ಸಂಬಂಧಪಟ್ಟ ಪೂರ್ವೋಕ್ತ ಕಾರ್ಯಕ್ರಮಗಳು ಹಾಗೂ ಶ್ರೀ ರುದ್ರಾಭಿಷೇಕವು ಚೈತ್ರ ಶು॥ ೧ ರಿಂದ ಶು॥ ೫ ವರೆಗೆ ನಡೆಯುತ್ತವೆ. ಶು॥ ೬ ಬುಧವಾರ ಉದಯಕ್ಕೆ ಅಗ್ನಿಕುಂಡ ಮಹೋತ್ಸವವು ಸಾಯಂಕಾಲ ೪ ಘಂಟೆಗೆ ಜನರಲ್ ಕಮಿಟಿಯು ಶು॥ ೭ ಗುರುವಾರ ಗಿರಿಪ್ರದಕ್ಷಿಣೆಯೂ ವಸಂತೋತ್ಸವವೂ ನಡೆಯುತ್ತವೆ. ಕಾರಣ ಸರ್ವರೂ ದಯವಿಟ್ಟು ಆಗಮಿಸಬೇಕಾಗಿ ವಿನಂತಿ.

೧. ಇಲ್ಲಿಗೆ ಬಂದಂಥ ವ್ಯಾಪಾರಿ ಜನರು ಮತ್ತು ನಾಟಕ ಕಂಪನಿಯವರು ಕಮಿಟಿಯವರ ಪರವಾನಗಿ ಶಿವಾಯ ಗುಡಾರ ಮತ್ತು ನಾಟಕ ಸ್ಟೇಜನ್ನು ಹೊಡೆಯಬಾರದು. ತೆಂಗಿನಕಾಯಿ ಹಣ್ಣು ವಗೈರೆ ಮಾರುವವರು ಭೂ ಭಾಡೆ ಅಗಾವು ಕೊಡತಕ್ಕದ್ದು.

೨. ಅಗ್ನಿಕುಂಡದಲ್ಲಿ ಪಲ್ಲಕ್ಕಿ ಹೊತ್ತವರು ದೇವರು ಧರಿಸಿದವರು ಹಾಗೂ ಛತ್ರಿ ಚಾಮರ ವಗೈರೆ ಬಿರುದಾವಳಿ ಹಿಡಿದವರ ಶಿವಾಯ ಇತರರು ಹೋಗಕೂಡದು. ಅಗ್ನಿಕುಂಡಕ್ಕೆ ಕಾಯಿ ಒಗೆಯಬಾರದು.

೩. ಜನರು ಮೈ ತೊಳೆಯುವದನ್ನು ಮತ್ತು ದನಗಳಿಗೆ ನೀರು ಕುಡಿಸುವದನ್ನು ನದಿಯ ಮೇಲ್ಭಾಗದಲ್ಲಿ ಮಾಡಬಾರದು. ನದೀತೀರದಲ್ಲಿ ಮಲಮೂತ್ರ ವಿಸರ್ಜನೆ ಮಾಡಬಾರದು. ಜನವಸ್ತಿಯನ್ನು ಬಿಟ್ಟು ೨ ಫರ್ಲಾಂಗ್ ದೂರ ಹೋಗತಕ್ಕದ್ದು.

ಈ ಮೂರು ನಿಯಮಗಳನ್ನು ಸರ್ವರೂ ದಯವಿಟ್ಟು ಪಾಲಿಸಬೇಕು. ತದ್ವಿರುದ್ಧ ವರ್ತಿಸಿದವರನ್ನು ಪೋಲೀಸರ ತಾಬಾ ಮಾಡಲಾದೀತು.

ಸೂಚನೆ—ನಮ್ಮ ದೇವಸ್ಥಾನಕ್ಕೆ ಕಾಯಂ ಉತ್ಪತ್ತಿ ಇಲ್ಲದಿರುವದರಿಂದ ಸದ್ಯಕ್ಕೆ ನಡೆಯಬೇಕಾದ ಹಲಕೆಲವು ಮಹತ್ಕಾರ್ಯಗಳು ತಟಸ್ಥವಾಗಿವೆ. ಕಾರಣ ಪ್ರತಿಯೊಬ್ಬರೂ ತಮ್ಮ ತಮ್ಮ ಶಕ್ತ್ಯನುಸಾರವಾಗಿ ದೇವಸ್ಥಾನದಲ್ಲಿರತಕ್ಕ ಧರ್ಮಾದಾಯದ ಡಬ್ಬಿಗೆ ದುಡ್ಡನ್ನು ಹಾಕಿ ದೇವಸ್ಥಾನವನ್ನು ಉನ್ನತಸ್ಥಿತಿಗೆ ತರಬೇಕೆಂದು ಹಾರೈಸುತ್ತೇವೆ.

ಪಂಚಕಮಿಟಿ ಪ್ರೆಸಿಡೆಂಟ್ ಗುರುಭಕ್ತೇಶ್ವರ, ಹಮ್ಮಿಗಿ.

ಶ್ರೀ ಕೇದಾರ ಪ್ರಾಂತೀಯ ಸಮಾಚಾರ.

ಸರ್ವ ಸನಾತನ ಧರ್ಮಾವಲಂಬಿಗಳಾದ ಭಕ್ತಸಮೂಹಕ್ಕೆ ತಿಳಿಸುವುದೇನಂದರೆ—ತಾ॥ 29 ಏಪ್ರೀಲ್ ಉದಯ ಅಮೃತ ವೇಳೆಯಲ್ಲಿ ಶ್ರೀ ಕೇದಾರೇಶ್ವರ ದೇವಾಲಯದ ಬಾಗಿಲು ತೆಗೆಯಲ್ಪಡುವದು. ದರ್ಶನಾಪೇಕ್ಷೆಯುಳ್ಳ ಭಕ್ತಾದಿಗಳು ಮೇಲೆ ಸೂಚಿಸಿದ ಸುಸಮಯಕ್ಕೆ ಆಗಮಿಸಿ ಮಹಾಸ್ವಾಮಿಯ ಜ್ಯೋತಿಯ ದರ್ಶನವನ್ನು ಮಾಡಿಕೊಂಡು ಜೀವನ್ಮುಕ್ತರಾಗುವಿರೆಂದು ಸೂಚಿಸುತ್ತೇವೆ.

ಹೆಚ್. ಎಂ. ಶಿದ್ಧಮರಿಸ್ವಾಮಿ, ಸೆಕ್ರೆಟರಿ,
ಟ್ರೆಜರರ್, ಶ್ರೀ ಕೇದಾರಸಂಸ್ಥಾನ.

ಪಂಚಾಚಾರ್ಯ ಪ್ರಭಾ.

೧೯೩೪ನೇ ಮಾರ್ಚಿ ತಾ|| ೫ನೇ ಸೋಮವಾರ.

ಗಾಂಧಿಯವರ ನೂತನಚಳವಳಿ.

ಮ|| ಗಾಂಧಿಯವರ ಹೃದಯಾಕಾಶದಿಂದ ನೂತನವಾಗಿ ಬೀಸಹತ್ತಿರುವ ಅಸ್ಪೃಶ್ಯತಾನಿವಾರಣೆಯೆಂಬ ಬಿರುಗಾಳಿಯು ದಿಕ್ಕುದಿಕ್ಕುಗಳಲ್ಲಿಯೂ ಬೀಸಹತ್ತಿ ಅನೇಕರನ್ನು ಮಬ್ಬುಗೊಳಿಸಹತ್ತಿದೆ. ಈಗಿನ ಸುಧಾರಕರನೇಕರು ಈ ವಾತಾವರಣವನ್ನೇ ಬಹಳವಾಗಿ ಕೊಂಡಾಡುತ್ತ ಪ್ರಾಚೀನಕಾಲದಿಂದ ಶಾಸ್ತ್ರಸಿದ್ಧವಾಗಿ ಬಂದ ಸನಾತನಧರ್ಮಪದ್ಧತಿಯನ್ನು ಮೂಲೆಗೊತ್ತರಿಸಿ ಈ ಸಂಕರಕಾರ್ಯದಲ್ಲಿ ಮುಂದೊರೆಯುತ್ತಲಿದ್ದಾರೆ. ಈ ಕಾರ್ಯವು ವಾಸ್ತವವಾಗಿ ಪುಣ್ಯದಾಯಕವೋ ಪಾಪದಾಯಕವೋ ಎಂಬ ವಿಚಾರವನ್ನು ಮಾತ್ರ ಒಬ್ಬರೂ ಮಾಡುವುದಿಲ್ಲ. "ಗತಾನುಗತಿಕೋ ಲೋಕಃ ನ ಲೋಕಃ ಪಾರಮಾರ್ಥಿಕಃ" ಎಂಬ ವಾಕ್ಯದಂತೆ ಒಬ್ಬರನ್ನು ನೋಡಿ ಒಬ್ಬರು ಹಿಂಬಾಲಿಸಬೇಕಾಗಿದೆಯಲ್ಲದೆ ಯಥಾರ್ಥವಸ್ತುವಿಚಾರವನ್ನು ಮಾಡಿ ಪ್ರವರ್ತಿಸುವವರೇ ವಿರಳರಾಗಿದ್ದಾರೆ. ಗಾಂಧಿಯವರು ಇದುವರಿವಿಗೂ ಮಹಾಚಾರ್ಯರು ಮಹರ್ಷಿಗಳು ಬರೆದಿಟ್ಟ ಧರ್ಮಶಾಸ್ತ್ರಕ್ಕೆ ಕೈಹಾಕದೆ ಸ್ವರಾಜ್ಯಸಾಧನದೃಷ್ಟಿಯಿಂದ ಯಾವ ಲೌಕಿಕಕಾರ್ಯದಲ್ಲಿ ಪ್ರವರ್ತಿಸುತ್ತಿದ್ದರೂ ಜನಗಳು ವೈದಿಕರು ಲೌಕಿಕರು ಎಂಬ ಭೇದವಿಲ್ಲದೆ ಹಿಂಬಾಲಿಸುತ್ತಿದ್ದರು. ಈಗ ಗಾಂಧಿಯವರು ಆ ದಾರಿಗಳನ್ನೆಲ್ಲಾ ಬಿಟ್ಟು ಅನಾದಿಕಾಲದಿಂದಲೂ ಒಬ್ಬರಿಗೊಬ್ಬರು ಪರಸ್ಪರ ಮೈತ್ರಿಯಿಂದ ಇದ್ದು ವರ್ಣಾಶ್ರಮಧರ್ಮಗಳನ್ನು ಕಾಪಾಡಿಕೊಂಡುಬರುತ್ತಿದ್ದ ನಮ್ಮ ಭಾರತೀಯರ ಕ್ಷೇತ್ರದಲ್ಲಿ ಅಸ್ಪೃಶ್ಯತಾನಿವಾರಣೆಯೆಂಬುದೊಂದು ವಿಷಬೀಜವನ್ನು ಬಿತ್ತಲು ಹೊರಟಿದ್ದಾರೆ. ಈ ಬೀಜವು ಎಷ್ಟರಮಟ್ಟಿಗೆ ಫಲಕಾರಿಯಾಗುವುದೋ ನೋಡಬೇಕಾಗಿದೆ. ಇದುವರಿವಿಗೂ ನಮ್ಮ ಭಾರತೀಯರೆಲ್ಲರೂ ಸನಾತನಿಗಳೆನಿಸಿಕೊಂಡಿದ್ದರೂ ಗಾಂಧಿಯವರು ಹಾಕಿರುವ ಈ ಬೀಜಾವಾಪನದಿಂದ ಸನಾತನಿಗಳದೊಂದು ಸುಧಾರಕರದೊಂದು ಹೀಗೆ ಎರಡು ಪಂಗಡವಾಗಿ ದೇಶೋದ್ಧಾರಕ್ಕೆ ಬದಲು ದೇಶಕ್ಷೋಭೆಯುಂಟಾಗಲು ಪ್ರಾರಂಭವಾದಂತಾಯಿತು. ಇದರಿಂದ ಇದುವರಿವಿಗೂ ಗಾಂಧಿಯವರು ಪ್ರಾರಂಭಿಸಿದ ಕಾರ್ಯವು ಫಲಕಾರಿಯಾಗದಿದ್ದರೂ ಅವರ ಧ್ಯೇಯವನ್ನೇನೋ ಭಾರತೀಯರೆಲ್ಲರೂ ಏಕಮುಖದಿಂದ ಹೊಗಳುತ್ತಿದ್ದರು. "ಪ್ರಾರಬ್ಧಮುತ್ತಮಗುಣಾನಪರಿತ್ಯಜಂತಿ" ಎಷ್ಟೋ ವಿಘ್ನಗಳುಂಟಾಗುತ್ತಿದ್ದರೂ ಪ್ರಾರಂಭಿಸಿದ ಕಾರ್ಯವನ್ನು ಬಿಡದೆ ಮುಂದೊರೆಸುತ್ತಿರುವದೇ ಉತ್ತಮರ ಲಕ್ಷಣವೆಂಬ ನೀತಿವಾಕ್ಯವನ್ನು ಅತಿಕ್ರಮಿಸಿ ಗಾಂಧಿಯವರು ಸಂಕಲ್ಪಿಸಿದ ಕಾರ್ಯವನ್ನು ಬಿಟ್ಟು ಮಹಾಚಾರ್ಯರ ಮತ್ತು ಮಹರ್ಷಿಗಳ ನಿಬಂಧನೆಗಳನ್ನೆಲ್ಲಾ ಕಿತ್ತೊಗೆಯಲು ಪ್ರಯತ್ನಿಸಿ ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶಿಸುವ ಮೂಲಕ ಅಸ್ಪೃಶ್ಯತ್ವವನ್ನು ನಿವಾರಣಗೊಳಿಸಲು ಅಸಮಸಾಹಸಮಾಡುತ್ತಿರುವುದನ್ನು ನೋಡಿ ಧರ್ಮಶ್ರದ್ಧೆಯುಳ್ಳ ಅನೇಕ ಸನಾತನಿಗಳಿಂದ ಗಾಂಧಿಯವರಿಗೆ ಧರ್ಮಧ್ವಂಸಕಮೂರ್ತಿಯೆಂಬ ಉಪಪದವು ಯೋಜಿಸಲ್ಪಡುತ್ತಲಿದೆ. ಗಾಂಧಿಯವರು ಅಸ್ಪೃಶ್ಯರನ್ನುದ್ಧರಿಸುವುದಕ್ಕಾಗಿ ಅಹೋರಾತ್ರವೂ ತಮ್ಮ ದೇಹವನ್ನು ತೇದು ದ್ರವ್ಯವನ್ನು ಗಳಿಸಿ ಅಸ್ಪೃಶ್ಯರನ್ನು ಸುಶಿಕ್ಷಿತರನ್ನಾಗಿಯೂ ಸುಶೀಲರನ್ನಾಗಿಯೂ ಮಾಡಲಿ. ಇದರಿಂದ ಈಶ್ವರನು ಸಂತೋಷಪಡುವನಲ್ಲದೆ ಸನಾತನಿಗಳೂ ಸಂತೋಷಪಡುವರು.

ಇದ್ದಕ್ಕಿದ್ದ ಹಾಗೆ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಅಸ್ಪೃಶ್ಯತಾನಿವಾರಣ ಮುಂತಾದ ಶಾಸ್ತ್ರನಿಷಿದ್ಧ ಕಾರ್ಯಗಳಲ್ಲಿ ಪ್ರವರ್ತಿಸುವುದೆಂದರೆ ಅದು ಯಾವ ಸನಾತನಿಯ ಮನಸ್ಸಿಗೆ ನೋವನ್ನುಂಟುಮಾಡದೇ ಇದ್ದೀತು? ಗಾಂಧಿಯವರು ನಮ್ಮ ಹಿಂದಿನ ಮಹಾತಪಸ್ವಿಗಳಾದ ಆಚಾರ್ಯರಿಗಿಂತಲೂ ದೊಡ್ಡವರಲ್ಲ. ಪೂರ್ವಾಚಾರ್ಯರು ವೇದಶಾಸ್ತ್ರಪುರಾಣಗಳನ್ನೆಲ್ಲಾ ಶೋಧಿಸಿ ನಮ್ಮ ಹಿಂದೂಧರ್ಮದ ರಹಸ್ಯವನ್ನೆಲ್ಲಾ ಕಂಡುಹಿಡಿದು ಧರ್ಮಸ್ಥಾಪನಾಚಾರ್ಯರೆನಿಸಿಕೊಂಡಿದ್ದಾರೆ. "ಮಹಾಜನೋಯೇನಗತಸ್ಸಪಂಥಾಃ" ಎಂಬುಕ್ತಿಯಂತೆ ಅನಾದಿಕಾಲದಿಂದಲೂ ಆ ಮಹಾತ್ಮರಾದ ಮತಾಚಾರ್ಯರು ಹಾಕಿದ ಧರ್ಮಮಾರ್ಗವನ್ನು ಬಿಟ್ಟು ಯಾರೂ ಇದುವರಿವಿಗೂ ಆಚೆ ಈಚೆ ಚಲಿಸುತ್ತಿರಲಿಲ್ಲ. ಇತ್ತೀಚೆಗೆ ಅನೇಕರಿಗೆ ವಿದೇಶೀಯ ವಿದ್ಯಾಭ್ಯಾಸಸಂಸರ್ಗವಿಶೇಷದಿಂದ ಸ್ವೇಚ್ಛಾವಿಹಾರಕ್ಕೆ ಪ್ರತಿರೋಧಿಯಾದ ಸ್ವಧರ್ಮದಲ್ಲಿ ದ್ವೇಷಬುದ್ಧಿಯು ಹೆಚ್ಚಿತು. ಇದೇ ಸಮಯದಲ್ಲಿಯೇ ರಂಧ್ರಾನ್ವೇಷಿಯಾಗಿದ್ದ ಕಲಿಪುರುಷನೇ ಸರ್ವಜನಮೋಹಕವಾದ ಶಾಂತಿಮೂರ್ತಿಯ ರೂಪದಿಂದ ಅವತರಿಸಿದನೋ ಎಂಬಂತೆ ಗಾಂಧಿಯವರು ಈ ಧರ್ಮವಿರೋಧಿಯಾದ ಸಂಕರಕಾರ್ಯದಲ್ಲಿ ನೆರವಾಗಿದ್ದುದೊಂದು ಮೊದಲೆ ಮದ್ಯಪಾನದಿಂದ ಮತ್ತರಾಗಿ ಕುಣಿಯುತ್ತಿರುವ ಜನಗಳಿಗೆ ಪಿಶಾಚಗ್ರಹಣವಾದಂತಾಯಿತು. ಮೇರೆ ದಪ್ಪಿ ಹರಿಯುತ್ತಿರುವ ಈ ಧರ್ಮಸಾಂಕರ್ಯವೆಂಬ ಹೊಸ ಹೊಳೆಯು ಪ್ರಪಂಚವನ್ನೆಲ್ಲಾ ಆವರಿಸುತ್ತಿರುವುದು. ಈ ಹುಚ್ಚುಹೊಳೆಗೆ ಅಡ್ಡಗಟ್ಟೆ ಹಾಕಲು ಸನಾತನಿಗಳು ಮುಂದೊರೆಯುತ್ತಿರುವರು. ಆದರೆ "ಕಲೌಪಂಚಸಹಸ್ರಾಂತೆ ಜಾಯತೇ ವರ್ಣಸಂಕರಃ" ಕಲಿಯುಗದ 5 ಸಹಸ್ರವರ್ಷಗಳ ಅಂತ್ಯದಲ್ಲಿ ಧರ್ಮಗ್ಲಾನಿಯು ಸಂಭವಿಸಿ ವರ್ಣಾಶ್ರಮಗಳು ಸಂಕಲಿತವಾಗುವವು ಎಂದು ತ್ರಿಕಾಲಜ್ಞಾನಿಗಳು ನಿರ್ಣಯಿಸಿ ಬರೆದಿಟ್ಟ ಧರ್ಮಶಾಸ್ತ್ರಪ್ರಕಾರವಾಗಿ ಜನಗಳಲ್ಲಿ ಧರ್ಮದ್ವೇಷವು ಅಂಕುರಿಸಲಿಕ್ಕೆ ಹತ್ತಿರುವದು. ಈ ಸತ್ಯವಾಕ್ಯಾರ್ಥವನ್ನು ನಿರ್ವಹಿಸಲು ಗಾಂಧಿಯವರೇ ಹೇಳಿರುವಂತೆ ಅವರಿಗೆ ಈಶ್ವರಪ್ರೇರಣೆಯಾಗಿರುವುದರಿಂದ ಧರ್ಮಸಂಕರಕಾರ್ಯದಲ್ಲಿ ಪಟ್ಟವನ್ನು ಕಟ್ಟಿಕೊಂಡಿರುತ್ತಾರೆ. ಈ ವರ್ಣಸಾಂಕರ್ಯಕಾರ್ಯವು ಬಹುದಿವಸ ನಡೆಯಲಾರದು. ಎಷ್ಟು ದಿವಸಗಳವರೆಗೆ ನಡೆಯಬೇಕೆಂದು ಈಶ್ವರನಿಯಮವಿರುವುದೋ ಅಷ್ಟು ದಿವಸಗಳವರಿವಿಗೂ ಈ ಸಂಕರಪ್ರವಾಹವನ್ನು ತಡೆಯಲು ಯಾವನೂ ಸಮರ್ಥನಲ್ಲ. ಕಾಲಪರಿಪಾಕದಿಂದ ಇದರ ವೇಗವು ಒಂದು ದಿವಸ ಕಡಿಮೆಯಾಗಲೇಬೇಕು. ಭಗವಂತನ ಸಂಕಲ್ಪದಂತೆ ಪುನಃ ಎಂದಿನಂತೆ ಧರ್ಮಸಂಸ್ಥಾಪನೆಯಾಗಲೇಬೇಕು.

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ||
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ |
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ||

ಯಾವಾಗ ಧರ್ಮವು ನಾಶವಾಗುತ್ತ ಅಧರ್ಮವು ತಲೆದೋರುವುದೋ ಆಗಲೇ ನಾನೇ ಅವತರಿಸಿ ಧರ್ಮಿಷ್ಠರನ್ನು ರಕ್ಷಿಸುತ್ತಲೂ ಅಧರ್ಮಿಷ್ಠರನ್ನು ನಾಶಗೊಳಿಸುತ್ತಲೂ ಧರ್ಮವನ್ನು ಸ್ಥಾಪನೆಗೊಳಿಸುವೆನೆಂದು ಗೀತೆಯಲ್ಲಿ ಶ್ರೀಕೃಷ್ಣನು ಅಭಯದಾನಮಾಡಿರುವುದರಿಂದ ಭಗವಂತನು ಒಂದು ದಿವಸ ಅವತಾರಮಾಡಿ ನಾನಾಮುಖವಾಗಿ ಬೆಳೆಯುತ್ತಿರುವ ಅಧರ್ಮಶಾಖೆಗಳನ್ನು ಕತ್ತರಿಸಿ ಒಣಗಿಹೋಗುತ್ತಿರುವ ಧರ್ಮವೃಕ್ಷವನ್ನು ಬೆಳೆಯಿಸಿಯೇ ಬೆಳೆಯಿಸುವನು. ಆಗ ಎಲ್ಲರೂ ಈ ಪವಿತ್ರಧರ್ಮವೃಕ್ಷವನ್ನು ಆಶ್ರಯಿಸಿ ಎಂದಿನಂತೆ ಸುಖಪಡಬೇಕು. ಅಲ್ಲಿಯವರಿವಿಗೂ ಸನಾತನಧರ್ಮಾವಲಂಬಿಗಳು ಎಲೆಮರೆಕಾಯಿಯಂತೆ ಕಷ್ಟದಿಂದ ಜೀವಿಸಬೇಕಾದ ಸಮಯವು ಒದಗಿರುತ್ತದೆ.

ಅಖಿಲ ಕರ್ಣಾಟಕ ದ್ವಿತೀಯ ಜ್ಯೋತಿಷ್ಯ ಸಮ್ಮೇಲನವನ್ನು ಬರುವ ಏಪ್ರಿಲ್ ತಿಂಗಳಿನಲ್ಲಿ ನಡೆಯಿಸುವದಕ್ಕಾಗಿ ಕಳೆದ ಫೆಬ್ರವರಿ 23 ನೇ ತಾರೀಖಿನದಿವಸ ಶ್ರೀ|| ಜಿ. ಆರ್. ಜೋಸ್ಯರ್ ಎಂ.ಎ., ಎಫ್.ಆರ್.ಇ.,ಎಸ್. ರವರು ರಾಜಧಾನಿಯ ಟೌನಹಾಲಿನಲ್ಲಿ ರಾಜಸಭಾಭೂಷಣ ಶ್ರೀ|| ಎಚ್. ಲಿಂಗರಾಜ ಅರಸರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಪಂಚಾಂಗರಚನೆಯೇ ಮೊದಲಾದ ವಿಷಯಗಳನ್ನು ಕುರಿತು ಭಾಷಣಗಳಾದನಂತರ ಮಹಾಸಭೆಯ ಕಾರ್ಯಕ್ರಮಗಳನ್ನು ನಡೆಸುವ ಸಲುವಾಗಿ ಸ್ವಾಗತಸಮಿತಿಯು ರಚಿಸಲ್ಪಟ್ಟನಂತರ ಸಭೆಯು ಪರಿಸಮಾಪ್ತವಾಯಿತು.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದ ರಿಟೈರ್ಡ್ ಚೀಫ್ ಇಂಜನಿಯರಾದ ರಾಜಸೇವಾಸಕ್ತ ಮಿ|| ಜಾಭೋರ್‌ರವರು ಕೆಲವು ಕಾಲದಿಂದ ಪಾರ್ಶ್ವವಾಯುವಿನಿಂದ ನರಳುತ್ತಿದ್ದು ಕಳೆದವಾರ ಬೆಂಗಳೂರಿನಲ್ಲಿ ಮೃತಪಟ್ಟರು.

ಮೈಸೂರು ರಾಜಧಾನಿಯ ಹಳೇಅಗ್ರಹಾರ ವಾಣಿವಿಲಾಸ ಮಾರ್ಕೆಟ್ ಚೌಕದಲ್ಲಿರುವ ಜನರಲ್ ಮರ್ಚೆಂಟ್ಸ್ ಮ||ಬಿ. ರುದ್ರಪ್ಪ ಅಂಡ್ ಸನ್ಸ್‌ರವರು ಕಳುಹಿಸಿರುವ 1934 ನೆಯ ಇಸ್ವಿಯ ಸುಂದರವಾದ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಮೊನ್ನೆ ಶನಿವಾರ ರಾಜಧಾನಿಯಲ್ಲಿ ನಡೆದ ಚುನಾವಣೆಯಲ್ಲಿ ನ್ಯಾಯವಿಧಾಯಕಸಭೆಗೆ ಮ|| ರಾ|| ಎಚ್. ಸಿ. ವಾಸಪ್ಪನವರೂ, ಪ್ರಜಾಪ್ರತಿನಿಧಿಸಭೆಗೆ ಮ|| ರಾ|| ಎಂ. ಸಿ. ಮರಿಯಪ್ಪನವರು ಮತ್ತು ರಾವ್‌ಸಾಹೇಬ್ ಎಂ. ರಾಮಸ್ವಾಮಿಯವರು ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು.

ರಾಜಧಾನಿಯಲ್ಲಿ ಕೆಲವು ದಿವಸಗಳ ಹಿಂದೆ ಹಿಂದೂ ಮಹಮ್ಮದೀಯರಲ್ಲಿ ಜಗಳವುಂಟಾಗಿತ್ತೆಂದು ಪ್ರಕಟಿಸಿದ್ದೆವಷ್ಟೆ. ಪೋಲೀಸರು ಆ ವಿಷಯವಾಗಿ ತನಿಖೆಕ್ರಮಗಳನ್ನು ನಡೆಯಿಸಿ 25 ಜನ ಹಿಂದುಗಳು ಮತ್ತು 20 ಜನ ಮಹಮ್ಮದೀಯರ ಮೇಲೆ ಮೊಕದ್ದಮೆಯನ್ನು ಹೂಡಿರುತ್ತಾರೆ.

ಕೃಷ್ಣರಾಜಪೇಟೆ ತಾಲೂಕು ದೊಡ್ಡಗಡಿಗಳಹಳ್ಳಿಯ ಫಕ್ರುಸಾಬಿ ಎಂಬುವನನ್ನು ಮಹಮದ್ ಮೂಸಾಸಾಬಿ ಉರುಫ್ ಬಾಭಾಸಾಬಿ ಎಂಬುವನು ಕೊಲೆಮಾಡಿದನೆಂಬ ಕಾರಣದಮೇಲೆ ಮೈಸೂರು ಸೆಷನ್ಸ್ ಜಡ್ಜ್‌ರವರು ವಿಚಾರಣೆ ನಡೆಯಿಸಿ ಅಪರಾಧಿಗೆ ಆಮರಣಾಂತ ಕಠಿಣಶಿಕ್ಷೆಯನ್ನು ವಿಧಿಸಿದರು.

ಹುಬ್ಬಳ್ಳಿ ಶ್ರೀ ಗೌರೀಶಂಕರ ಕಂಪನಿಯ ಎರಡನೆಯ ಯಾತ್ರೆಯೆಂಬ ಶಿರೋನಾಮದಿಂದ ಕಳೆದವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯವು ಅನೇಕ ನ್ಯೂನತೆಗಳಿಂದೊಡಗೂಡಿರುವುದೆಂದು ಯಾತ್ರೆಗೆ ಹೋಗಿದ್ದ ಜನಗಳಿಂದ ತಿಳಿದುಬಂದುದರಿಂದ ಸದರಿ ಲೇಖನದ ಮುಂದಿನಭಾಗವನ್ನು ಪ್ರಕಟಿಸಲಾಗಲಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ ಶ್ರೀ ಲಕ್ಷ್ಮೀ ಪ್ರೆಸ್ಸಿನವರು ಮದ್ರಾಸ್ ಕರೀಂಬೀಡಿ ಫ್ಯಾಕ್ಟರಿಯ ರಿಜಿಸ್ಟರ್ ಲೇಬಿಲ್‌ಗಳಂತೆಯೇ ಬೇರೆ ಕೃತಿಮಲೇಬಿಲ್‌ಗಳನ್ನು ಅಚ್ಚುಮಾಡುತ್ತಿದ್ದರೆಂಬ ಕಾರಣದಮೇಲೆ ದಂಡಿನ ಪೋಲೀಸರು ಪ್ರೆಸ್ಸನ್ನು ಜಪ್ತುಮಾಡಿ ಕೃತಕ ಲೇಬಿಲ್‌ಗಳಿಗೆ ಸಬಂಧಪಟ್ಟ ಪಡಿಯಚ್ಚುಗಳನ್ನೂ, ಪ್ರಿಂಟಾಗಿದ್ದ ಕೆಲವು ಲೇಬಿಲ್‌ಗಳನ್ನೂ ಕೋರ್ಟಿಗೆ ಹಾಜರ್ಮಾಡಿ ಪ್ರೆಸ್ಸಿನ ಮಾಲಕರ ಮೇಲೆ ಮೊಕದ್ದಮೆಯನ್ನು ಹೂಡಿರುತ್ತಾರೆ.

ಕೋಲಾರದ ಚಿನ್ನದಗಣಿಯ ಪೋಲೀಸರು ನಂದಿದುರ್ಗ ಗಣಿಯ ಅಸಿಸ್ಟೆಂಟ್ ರಿಡಕ್ಷನ್ ಆಫೀಸರಾದ ಮಿ|| ಡೋಲ್ಲಿಂಗ್ ಎಂಬುವರ ಮನೆಯನ್ನು ಅನುಮಾನದ ಮೇಲೆ ಜಪ್ತುಮಾಡಿದಾಗ ಅವರ ಕಬ್ಬಿಣದ ಪೆಟ್ಟಿಗೆಯಲ್ಲಿ 138 ತೊಲಾ ಗಣಿಯ ಚಿನ್ನವು ದೊರಕಿತೆಂದೂ, ಮಿ|| ಡೋಲ್ಲಿಂಗ್‌ರವರು ಸದರಿ ಚಿನ್ನವನ್ನು ತಮ್ಮ ಬಳಿಯಲ್ಲಿಟ್ಟುಕೊಳ್ಳಲು ಲೈಸೆನ್ಸ್ ತೋರಿಸದೆ ಇದ್ದುದರಿಂದ ಪೋಲೀಸರು ಅವರನ್ನು ದಸ್ತಗಿರಿಮಾಡಿ ತನಿಖೆಮಾಡುತ್ತಿರುವರೆಂದೂ ತಿಳಿದುಬಂದಿದೆ.

ಜಪಾನ್ ದೇಶದವರು ವ್ಯಾಪಾರದ ವಿಷಯದಲ್ಲಿ ಪ್ರತಿಯೊಂದು ದೇಶದಲ್ಲಿಯೂ ಪೈಪೋಟಿಯನ್ನು ಮಾಡುತ್ತಿರುವ ಚಲನ ಚಿತ್ರಗಳನ್ನು ತಯಾರಿಸುವುದರಲ್ಲಿಯೂ ಎಲ್ಲರನ್ನೂ ಮೀರಿಸುತ್ತಿರುವರು. ಕಳೆದ 1933 ನೇ ವರ್ಷದಲ್ಲಿ ಇಡೀ ಪ್ರಪಂಚದಲ್ಲಿ ಒಟ್ಟು 2100 ಚಲನಚಿತ್ರಗಳು ತಯಾರಿಸಲ್ಪಟ್ಟವು. ಅದರಲ್ಲಿ ಜಪಾನಿನವರು 750, ಅಮೇರಿಕಾ 510, ಗ್ರೇಟಬ್ರಿಟನ್ 190, ಜರ್ಮನಿ 145, ಫ್ರಾನ್ಸ್ 140, ಯುರೋಪಿನ ಇತರರಾಜ್ಯಗಳು 175 ಇಂಡಿಯಾ 76, ಚೀನಾ 60 ಇತರ ರಾಜ್ಯಗಳು 54 ಈ ರೀತಿ ಚಲನಚಿತ್ರಗಳನ್ನು ತಯಾರಿಸುವರಂತೆ!

ವರ್ತಮಾನಸಂಗ್ರಹ.

1933 ನೇ ವರ್ಷದಲ್ಲಿ ಬಂಗಾಳದಲ್ಲಿ 220 ಜನರು ಗಲ್ಲಿಗೇರಿಸಲ್ಪಟ್ಟರಂತೆ!

1933 ನೇ ವರ್ಷದಲ್ಲಿ ಯೂರೋಪಿನಲ್ಲಿ 300 ಜನ ಗೂಢಚಾರರು ದಸ್ತಗಿರಿಮಾಡಿ ಶಿಕ್ಷಿಸಲ್ಪಟ್ಟರು. ಇಂಥ ಗೂಢಚಾರರು ಒಟ್ಟು 5 ಲಕ್ಷ ಜನರಿರುವರೆಂದು ಸರಕಾರದವರು ಹೇಳುವರು.

ಇಂಗ್ಲೆಂಡಿಗೆ ಸೇರಿದ ಎಕ್ಸೆಟರ್ ನಗರದ ಡಾಕ್ಟರ್ ಎಚ್. ಡಬ್ಲ್ಯು. ಡಿ. ಕ್ರುಕ್ ಎಂಬುವರ ಹೃದಯಚಲನೆಯು ಸಂಪೂರ್ಣವಾಗಿ ನಿಂತು 8 ವರ್ಷಗಳಾದಾಗ್ಯೂ ಇನ್ನೂ ಜೀವಿಸಿರುವರಂತೆ!

ಬೀಹಾರ ಭೂಕಂಪದ ಪರಿಹಾರಾರ್ಥವಾಗಿ ಇಂಡಿಯಾ ಸರಕಾರದವರು 1,25,00,000 ರೂ. ಗಳ ಗ್ರಾಂಟನ್ನೂ, 2,25,00,000 ರೂಪಾಯಿಗಳ ಸಾಲವನ್ನೂ ಕೊಡಲು ಉದ್ದೇಶಿಸಿರುವರು.

ಇಟಲಿ ದೇಶಕ್ಕೆ ಸೇರಿದ ಲಿವರ್ನೋ ನಗರದ ಸಮೀಪದಲ್ಲಿ ಎರಡು ರೈಲ್ವೇ ಟ್ರೈನುಗಳು ಒಂದಕ್ಕೊಂದು ಢಿಕ್ಕಿ ಹೊಡೆದು 16 ಜನರು ಮೃತಪಟ್ಟರು ಮತ್ತು 12 ಜನರಿಗೆ ತುಂಬಾ ಘಾಯಗಳಾದುವು.

ಸಾಂಬಗಾರ್ ಎಂಬ ಗ್ರಾಮದಲ್ಲಿ ಫೆಬ್ರವರಿ 17ನೇ ತಾರೀಖಿನ ಅಖೈರಾದ ವಾರದಲ್ಲಿ 400 ಮದುವೆಗಳು ಮಾಡಲ್ಪಟ್ಟವು. ಅವುಗಳಲ್ಲಿ ಅನೇಕ ವಿವಾಹಗಳು ಶಾರದಾ ಆಕ್ಟಿಗೆ ವಿರೋಧವಾಗಿದ್ದವಂತೆ!

ಫ್ರೆಂಚ್ ಇಂಡೋ ಚೀನಾ ಸಮೀಪದಲ್ಲಿ ಹಿಡಿಯಲ್ಪಟ್ಟ ಒಂದು ಹಡಗಿನಲ್ಲಿ ಅರ್ಧ ಟನ್ ಅಫೀಮು ಇದ್ದಿತೆಂಬ ಕಾರಣದಮೇಲೆ ಹಡಗಿನ ಕ್ಯಾಪ್ಟನ್ನಿಗೆ 1,50,000 ರೂ. ಜುಲ್ಮಾನೆಯು ವಿಧಿಸಲ್ಪಟ್ಟಿರುತ್ತದೆ.

ಕಳೆದ ಫೆಬ್ರವರಿ 23 ನೇ ತಾರೀಖಿನ ದಿವಸ ಕಾಶೀಕ್ಷೇತ್ರದಲ್ಲಿ ಒಂದು ಸರ್ಕಸ್ ಡೇರಾಕ್ಕೆ ಬೆಂಕಿ ಬಿದ್ದು ಸುಮಾರು 10,000 ರೂ. ಗಳ ಸಾಮಾನುಗಳು ನಷ್ಟವಾದುವು. ಅನೇಕ ಪ್ರಾಣಿಗಳು ಸುಟ್ಟು ಭಸ್ಮವಾದವು!

ಬಂಗಾಳಾದೇಶಕ್ಕೆಸೇರಿದ ರಾಫಿಕ್‌ಪುರದ ಹೇಮೇಂದ್ರಕುಮಾರ ಭೌಮಿಕ್ ಎಂಬುವರು ತಮ್ಮ ಬಳಿಯಲ್ಲಿ ಕೆಲವು ಬಂದೂಕಗಳ ಚಿತ್ರಗಳನ್ನು ಹೊಂದಿದ್ದರೆಂಬ ಕಾರಣದಮೇಲೆ 6 ತಿಂಗಳ ಕಠಿಣಶಿಕ್ಷೆಗೆ ಗುರಿಯಾದರು.

ಅಲಿಪುರದ ಸೆಂಟ್ರಲ್ ಜೈಲಿನಲ್ಲಿರುವ ರಾಜಕೀಯ ಖೈದಿಗಳೆಲ್ಲರೂ ಜೈಲಿನ ಅಧಿಕಾರಿಗಳು ತಮಗೆ ಸರಿಯಾದ ಸೌಕರ್ಯಗಳನ್ನು ಒದಗಿಸಿಕೊಡಲಿಲ್ಲವೆಂಬ ಕಾರಣದ ಮೇಲೆ ಸೊಂಪುಮಾಡಿರುವರು. ಅವರಲ್ಲಿ 5 ಜನರು ಉಪವಾಸವ್ರತವನ್ನಾಚರಿಸುತ್ತಿರುವರು.

ರಿವಾ ಸಂಸ್ಥಾನದಲ್ಲಿ ರಾಜಕನ್ಯೆಯ ವಿವಾಹದ ಕಾಲಗಳಲ್ಲಿ ಪ್ರಜೆಗಳೆಲ್ಲರೂ "ಚಳುವಳಿಯ ತೆರಿಗೆ" ಯನ್ನು ಕೊಡುವ ಪದ್ಧತಿಯು ಬಹು ಕಾಲದಿಂದ ಆಚರಣೆಯಲ್ಲಿತ್ತು. ಆದರೆ ಸರಕಾರದವರು ಅದನ್ನು ಇನ್ನು ಮುಂದೆ ವಜಾ ಮಾಡಿರುವದಾಗಿ ಪ್ರಕಟಿಸಿರುತ್ತಾರೆ.

ಇಂಗ್ಲೆಂಡಿನ ಎಂ. ಸಿ. ಸಿ. ಕ್ರಿಕೆಟ್ ಟೀಮಿನವರು ನಿನ್ನೆ, ಈ ದಿನ ಮತ್ತು ನಾಳೆ ದಿವಸಗಳಲ್ಲಿ ಪಾಟಿಯಾಲಾ ಯುವರಾಜರ ಕ್ರಿಕೆಟ್ ಟೀಮಿನೊಡನೆ ಮುಂಬಯಿಯಲ್ಲಿ ಕ್ರಿಕೆಟ್ ಪಂದ್ಯವನ್ನು ಆಡಿ ಅದರ ಉತ್ಪತ್ತಿಯನ್ನು ವೈಸರಾಯರ ಭೂಕಂಪದ ನಿಧಿಗೆ ಸಮರ್ಪಿಸುವರು.

ಇಟಲಿದೇಶದಲ್ಲಿ ಒಂದು ದೊಡ್ಡ ಮೋಟಾರ್ ಪಂದ್ಯವನ್ನು ಏರ್ಪಡಿಸಿ, ಅದರಲ್ಲಿ 1,00,000 ರೂಪಾಯಿಗಳನ್ನು ಬಹುಮಾನವನ್ನು ಇಟ್ಟಿರುವರು. ಪಂದ್ಯದಲ್ಲಿ ಸೇರತಕ್ಕವರು ಸಂಚಾಲಕರು ಗೊತ್ತುಮಾಡಿರುವ ರಸ್ತೆಯಲ್ಲಿ ಇಟಲಿದೇಶದ ಸುತ್ತಲೂ 4,000 ಮೈಲುಗಳ ದೂರ ಹೋಗಬೇಕಂತೆ!

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ಮಿಸ್ ಎಥೆಲ್ ಬೆಳ್ಳಾಮಿ ಎಂಬಾಕೆಗೆ ಗೌರವಾರ್ಥವಾದ ಎಂ.ಎ. ಡಿಗ್ರಿಯನ್ನು ದಯಪಾಲಿಸಿರುವರು. ಈಕೆಯು ತನ್ನ ಚಿಕ್ಕಪ್ಪನ ಜೊತೆಯಲ್ಲಿ ಆಕಾಶದಲ್ಲಿರುವ 10,00,000 ನಕ್ಷತ್ರಗಳ ಸ್ಥಾನವನ್ನು ಸರಿಯಾಗಿ ಗೊತ್ತುಹಚ್ಚಿರುವಳಂತ!

ಅಮೇರಿಕೆಯ ಸಂಯುಕ್ತ ಸಂಸ್ಥಾನ ಸರಕಾರದವರು 4,50,000 ರೂ. ಗಳ ವೆಚ್ಚದಿಂದ ಕೇವಲ ನೀಗ್ರೋ ಜನರಿಗಾಗಿಯೇ 75 ಆಸ್ಪತ್ರೆಗಳನ್ನು ಕಟ್ಟಿಸಬೇಕೆಂದು ನಿರ್ಧರಿಸಿರುವರು. 1000 ಜನರಿಗಿಂತಲೂ ಹೆಚ್ಚು ನೀಗ್ರೋಜನರಿರುವ ಪ್ರತಿಯೊಂದು ಊರಿನಲ್ಲಿಯೂ ಒಂದೊಂದು ಆಸ್ಪತ್ರೆಯು ಕಟ್ಟಿಸಲ್ಪಡುವುದು.

ಬನಾರಸ್ಸಿನ ಎಸ್. ಪಿ ಬೋಸ್ ಎಂಬ ಡಾಕ್ಟರವರು ಒಂದಾನೊಂದು ಅತ್ಯಾಚಾರದ ಮೊಕದ್ದಮೆಯಲ್ಲಿ ಅಪರಾಧಿಯ ಪಕ್ಷವನ್ನು ಸಾಧಿಸುವುದಕ್ಕಾಗಿ ಸುಳ್ಳುಸಾಕ್ಷ್ಯವನ್ನು ಹೇಳಿದರೆಂಬ ಕಾರಣದ ಮೇಲೆ, ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಡಾಕ್ಟರಿಗೆ 2 ವರ್ಷಗಳ ಕಠಿಣಶಿಕ್ಷೆ ಮತ್ತು 1000 ರೂ. ಜುಲ್ಮಾನೆ ವಿಧಿಸಿದರು.

ಪಂಜಾಬಿನ ಸಿ. ಐ. ಡಿ. ಇಲಾಖೆಯವರು ಬಹುಸಾಹಸದಿಂದ ಒಂದು ದೊಡ್ಡ ದರೋಡೆಯ ಗುಂಪಿಗೆ ಸಂಬಂಧಪಟ್ಟ 25 ಜನರನ್ನು ದಸ್ತಗಿರಿಮಾಡಿರುತ್ತಾರೆ. ಇವರು ಲಾಹೋರ್, ಅಮೃತಸರ್, ರಾವಲ್‌ಪಿಂಡಿ ಮೊದಲಾದ ದೊಡ್ಡ ದೊಡ್ಡ ನಗರಗಳಲ್ಲಿ ಇದುವರೆಗೆ ಅನೇಕ ದರೋಡೆಗಳನ್ನು ಮಾಡಿರುವರಂತೆ! ಇವರಲ್ಲಿ ಅನೇಕ ಹೆಂಗಸರೂ ಸೇರಿರುವರು.

ದರ್ಭಾಂಗಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಕ್ರಿಮಿನಲ್ ಪ್ರೊಸೀಜರ್‌ಕೋಡಿನ 144 ನೇ ಸೆಕ್ಷನ್ ಅನುಸರಿಸಿ ಭೂಕಂಪದ ದೆಸೆಯಿಂದ ಬಿದ್ದುಹೋಗಿರುವ ಕಟ್ಟಡಗಳನ್ನು ಯಾರೂ ರಿಪೇರಿಮಾಡಿಸಕೂಡದೆಂದೂ ಹೊಸದಾಗಿ ಮನೆಗಳನ್ನು ಬಂಬು ಮತ್ತು ಹುಲ್ಲು ಇವುಗಳ ವಿನಾ ಬೇರೆಯಾವ ಸಾಮಗ್ರಿಗಳಿಂದಲೂ ಕಟ್ಟಿಸಕೂಡದೆಂದೂ ಅಪ್ಪಣೆಮಾಡಿರುವರು.

ಕಳೆದ ಫೆಬ್ರವರಿ 27 ನೇ ತಾರೀಖಿನ ದಿವಸ ಪೆಷಾವರಿನಲ್ಲಿ ಕಾಮನ ಹಬ್ಬದ ಆಚರಣೆಯ ಸಂಬಂಧದಲ್ಲಿ ಹಿಂದೂಗಳಿಗೂ ಸಿಕ್ಕರಿಗೂ ಜಗಳ ಹತ್ತಿ ಗಲಾಟೆಯಾಯಿತು. ಆದರೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಗಲಾಟೆಯು ಬೆಳೆಯದಂತೆ ಉಭಯ ಪಂಗಡದವರಿಗೂ ಸಮಾಧಾನ ಹೇಳಿ ರಾಜಿಮಾಡಿಸಿರುತ್ತಾರೆ. ಗಲಾಟೆಯಲ್ಲಿ ಒಬ್ಬ ಸಿಕ್‌ಯುವಕನಿಗೆ ಪೂರಾಪೆಟ್ಟುಬಿದ್ದು ಆ ಮೇಲೆ ಆಸ್ಪತ್ರೆಯಲ್ಲಿ ಮೃತಪಟ್ಟನು.

ಇಂಗ್ಲೆಂಡಿನ ಅಲ್ಬರ್ಟ್ ಜಾರ್ಜ್ ಎಂಬಾತನಿಗೆ 12 ವರ್ಷ ವಯಸ್ಸಾಗಿದ್ದಾಗ ಯಾರೋ ಆತನ ಮೇಲೆ ಗುಂಡುಹಾರಿಸಿದರು. ಆ ಗುಂಡು ಮೂಗಿನ ಮುಖಾಂತರ ಹೊಟ್ಟೆಯೊಳಕ್ಕೆ ಸೇರಿತು. ಅದನ್ನು ತೆಗೆಯಲು ಡಾಕ್ಟರುಗಳು ಮಾಡಿದ ಪ್ರಯತ್ನವೆಲ್ಲವೂ ವ್ಯರ್ಥವಾದುವು. ಆದರೆ 34 ವರ್ಷಗಳು ಕಳೆದ ನಂತರ ಒಂದುದಿನ ಆತನು ಜೋರಾಗಿ ಕೆಮ್ಮುತ್ತಿರಲು ಹೊಟ್ಟೆಯಲ್ಲಿದ್ದ ಗುಂಡು ತಾನಾಗಿ ಬಾಯಿಯ ಮುಖಾಂತರ ಈಚೆಗೆ ಬಿದ್ದಿತು.

ಲಯಲಪುರದ ಒಬ್ಬ ಜಮೀನ್ದಾರರು ತಮ್ಮ ಸೊಸೆಯನ್ನು ಖೂನಿಮಾಡಿದರೆಂಬ ಕಾರಣದಮೇಲೆ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ. ಇವರ ಮಗನು ಬಹಳ ಸ್ಫುರದ್ರೂಪಿಯಾಗಿದನು. ಸೊಸೆಯು ಕಪ್ಪಾಗಿದ್ದುದರಿಂದ ಮಗನು ಹೆಂಡತಿಯನ್ನು ಪ್ರೀತಿಸುತ್ತಿರಲಿಲ್ಲ. ಸೊಸೆಯ ಬಣ್ಣವು ಜಮೀನ್ದಾರರಿಗೂ ಒಪ್ಪಲಿಲ್ಲವಾದ್ದರಿಂದ ಅವಳನ್ನು ಕೊಂದು ಸಂಸ್ಕಾರಕ್ಕಾಗಿ ಶ್ಮಶಾನಕ್ಕೆ ಒಯ್ದರು. ಆದರೆ ದಹನಕಾರ್ಯವು ಪ್ರಾರಂಭವಾಗುವದರೊಳಗಾಗಿ ಪೋಲೀಸರಿಗೆ ವರ್ತಮಾನವು ತಿಳಿದುಬಂದದ್ದರಿಂದ ಜಮೀನ್ದಾರರು ಶ್ಮಶಾನದಲ್ಲೇ ದಸ್ತಗಿರಿ ಮಾಡಲ್ಪಟ್ಟರು.

ಪಾಶ್ಚಾತ್ಯರಾಜ್ಯಗಳಲ್ಲಿ ಯುದ್ಧಸಾಧನಗಳನ್ನು ಶೇಖರಿಸುವ ಕೆಲಸವು ಅತ್ಯಂತ ರಭಸದಿಂದ ಸಾಗಿರುವುದು. ಜೆಕೊಸ್ಲೋವೇಕಿಯಾ ನಗರದಲ್ಲಿರುವ ಬ್ರುನೋ ಗುಂಡಿನ ಕಾರ್ಖಾನೆಯವರು 3 ರಾಷ್ಟ್ರಗಳಿಗೆ ಯುದ್ಧಸಾಮಗ್ರಿಗಳನ್ನು ಒದಗಿಸಬೇಕಾಗುವುದರಿಂದ 1000 ಜನ ಕೆಲಸಗಾರರನ್ನು ಹೊಸದಾಗಿ ನೇಮಿಸಿಕೊಂಡಿರುತ್ತಾರೆ. ಈ ಮೂರು ರಾಷ್ಟ್ರಗಳಲ್ಲಿ ಒಂದು ಜಪಾನ್ ಮತ್ತು ಎರಡು ದಕ್ಷಿಣಅಮೇರಿಕೆಗೆ ಸೇರಿದ ರಾಜ್ಯಗಳಾಗಿರುತ್ತವೆ. ಈ ಮೂರು ರಾಷ್ಟ್ರಗಳವರು ಒಟ್ಟು 1,50,00000 ರೂಪಾಯಿಗಳ ಮದ್ದುಗುಂಡುಗಳಿಗೆ ಆರ್ಡರ್ ಕೊಟ್ಟಿರುತ್ತಾರೆ. ಜರ್ಮನಿಯ ಲೋಕಪ್ರಸಿದ್ಧವಾದ ಕ್ರುಪ್‌ರವರ ಕಾರ್ಖಾನೆಯಲ್ಲಿ 1,50,000,00 ರೂಪಾಯಿಯ ಲಾಭವು ಬಂದು, ಹೆಚ್ಚಿಗೆ ಬಂದಿರುವ ಆರ್ಡರುಗಳನ್ನು ಪೂರೈಸುವುದಕ್ಕೆ ತಮ್ಮಲ್ಲಿದ್ದ 46,000 ಜನ ಕೆಲಸಗಾರರ ಜೊತೆಗೆ ಮತ್ತು 14,000 ಜನ ಕೆಲಸಗಾರರನ್ನು ಹೊಸದಾಗಿ ಸೇರಿಸಿಕೊಂಡಿರುತ್ತಾರೆ.

ವಿಮರ್ಶೆ.

ಮೈಸೂರು ರಾಜಧಾನಿಯಲ್ಲಿರುವ ಆಸ್ಥಾನವಿದ್ವಾನ್ ಮ|| ರಾ|| ಅನವಟ್ಟಿರಾಮರಾಯರು ತಮ್ಮಿಂದ ನೂತನವಾಗಿ ರಚಿಸಲ್ಪಟ್ಟ 'ಕರ್ಣಾಟಕಕೃತಿರತ್ನಮಾಲಾ' ಎಂಬ ಗ್ರಂಥವನ್ನು ನಮಗೆ ಕಳುಹಿಸಿರುತ್ತಾರೆ. ಈ ಗ್ರಂಥವನ್ನು ಆದ್ಯಂತವಾಗಿ ಓದಿನೋಡಿದೆವು. ಪ್ರಥಮತಃ ಶ್ರೀ ತ್ಯಾಗರಾಜರವರು ತೆಲಗು ಭಾಷೆಯಲ್ಲಿ ರಚಿಸಿರುವ ಕೃತಿಗಳಿಗೆ ಕನ್ನಡ ತಾತ್ಪರ್ಯವನ್ನು ಬರೆದು, ಭಾಮಿನೀ ಷಟ್ಪದಿರೂಪದಲ್ಲಿ ತೋರಿಸಿ ಅವುಗಳ ಆಶೆಯವನ್ನು ಬಿಡದೆ ಅದೇ ರಾಗದಲ್ಲಿಯೇ ಕನ್ನಡ ಭಾಷೆಯಲ್ಲಿ ಲಲಿತವಾಗಿ ಹಾಡುಗಳನ್ನು ಮಾಡಿರುತ್ತಾರೆ. ಮತ್ತು ಶ್ರೀ ಶಂಕರಾಚಾರ್ಯಕೃತಭಜಗೋವಿಂದ ಚತುರ್ದಶಮಂಜರಿ ಶಿವಾಪರಾಧಸ್ತೋತ್ರ ಮುಕುಂದಮಾಲಾ ಮೊದಲಾದ ಸ್ತೋತ್ರಗಳಿಗು ಸುಲಭವಾಗಿ ಭಾವಾರ್ಥಗಳೊಂದಿಗೆ ಹಾಡುಗಳನ್ನು ಸಹ ಬರೆದಿರುತ್ತಾರೆ. ಡಿಮ್ಮಿ ೧೬೭ ಪುಟಗಳುಳ್ಳ ಈ ಗ್ರಂಥವೊಂದು ಮಾದರಿಗ್ರಂಥವಾಗಿದೆ. ಅನೇಕ ಕಡೆಗಳಲ್ಲಿ ಸಂಗೀತಗಾರರು ಅರ್ಥವೇ ಗೊತ್ತಿಲ್ಲದೆ ಹಾಡುವದರಿಂದ ಯಾರಿಗೂ ಪ್ರಯೋಜನವಿಲ್ಲವು. ಹಾಗೆ ಹಾಡುವುದಕ್ಕಿಂತಲೂ ಈ ಗ್ರಂಥವನ್ನು ತರಿಸಿಕೊಂಡು ಚೆನ್ನಾಗಿ ಅರ್ಥವನ್ನು ತಿಳಿದುಕೊಂಡು ಭಗವಂತನ ಮಹಿಮಾತಿಶಯಗಳನ್ನು ತಿಳಿದು ಹಾಡುವುದರಿಂದ ಶ್ರೋತೃಗಳಿಗೂ ತಮಗೂ ಭಕ್ತಿರಸದ ಉದ್ರೇಕವಾಗಿ ಆನಂದಸಾಗರದಲ್ಲಿ ಓಲಾಡುವುದುತ್ತಮವಾದುದರಿಂದ ಲಲಿತವಾದ ಶೈಲಿಯಲ್ಲಿ ಬರೆಯಲ್ಪಟ್ಟ ಈ ಗ್ರಂಥವನ್ನು ಸಂಗೀತಗಾರರರೂ ಇತರರೂ ತರಿಸಿಕೊಂಡು ಗ್ರಂಥಕರ್ತರ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಕೋರುತ್ತೇವೆ. ಗ್ರಂಥದ ಕ್ರಯ ೧ ರೂ.

ಸ್ವೀಕಾರ

ಮುಂಡಗೋಡ ಪೇಟಾ ಚಿಗಳ್ಳಿಯಲ್ಲಿರುವ ವೇ|| ಉಜ್ಜಯ್ಯನವರು ರಾಚಯ್ಯನವರು ಹಿರೇಮಠ ಇವರ ಪುತ್ರ ಚಿ|| ರುದ್ರಗೌಡನ ಚೌಲೋಪನಯನಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ಯು ವೇ|| ಮಳಿಯಯ್ಯನವರು ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಮ||ರಾ|| ಜವಳೀ ಗುರುಬಸಪ್ಪನವರ ಸ್ವಗೃಹದಲ್ಲಿ ಶ್ರೀ ರೇಣುಕಜಯಂತಿಮಹೋತ್ಸವವು ನೆರವೇರಿಸಲ್ಪಟ್ಟ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಲ್ಪಟ್ಟ 1 ರೂ. ಯು ಗುಬ್ಬಿ ಶಿವಕಥಾಪಂಡಿತ ವೇ|| ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನಮಃ ಶ್ರೀಜಗದ್ಗುರುಪಂಚಕಾಯ

ಶ್ರೀಪುರಾಣಮಹೋತ್ಸವವೂ ಗಣಾರಾಧನೆಯೂ ಹನಮನಹಟ್ಟಿ.

ನೈಜಾಂ ಇಲಾಖಾ ಕೊಪ್ಪಳ ತಾಲೂಕಿಗೆ ಸೇರಿದ ಹನಮನಹಟ್ಟಿ ಎಂಬ ಗ್ರಾಮವು ೩೦-೩೫ ಮನೆಗಳಿಂದ ಕೂಡಿರುವದಲ್ಲದೇ ಇಲ್ಲಿ ವೀರಶೈವ ಮಠೀಯರಿಲ್ಲದಿರುವದು ಶೋಚನೀಯಸ್ಥಿತಿಯೇ ಸರಿ. ಆದಾಗ್ಯೂ ಇಲ್ಲಿಯ ಗುರುಲಿಂಗಜಂಗಮ ಪ್ರೇಮಿಗಳು ಶಿವಭಕ್ತಿ ಧುರೀಣರೂ ಗುರುಪೀಠಾಭಿಮಾನಿಗಳೂ ಆದ ಹಾಲುಮತದ ಮ|| ರಾ|| ಪೊ|| ಪಾ|| ಸಣ್ಣಭೀಮನಗೌಡರು ವ ಹಿರೇಭೀಮನಗೌಡರು ಪ್ರತಿವರ್ಷ ಪದ್ಧತಿಯಂತೆ ಇದೇ ಶ್ರೀಮುಖ|| ಸಂ|| ಶ್ರಾವಣ ಶುದ್ಧ ೧೪ ತಾ|| 4-8-1933 ನೇ ಶುಕ್ರವಾರದಿಂದ ಸದರೀ ಪೊ|| ಪಾ|| ರ ಗೃಹದಲ್ಲಿ ಶ್ರೀ|| ಷ|| ಬ್ರ|| ಪಂಚಾಕ್ಷರ ಶಿವಾಚಾರ್ಯ ಪಟ್ಟದ ಸ್ವಾಮಿಗಳು ಹಿರೇಮಠ ಕನಕಗಿರಿ ಇವರ ಸನ್ನಿಧಿಯಲ್ಲಿ ಶ್ರೀ ಶಿವಪುರಾಣವು ಪ್ರಾರಂಭಿಸಲ್ಪಟ್ಟು ಪುರಾಣವು ಮ|| ರಾ|| ವೀರಭದ್ರಪ್ಪ ಬಳಿಗಾರ್ ಇವರ ಓದುವಿಕೆಯಿಂದಲೂ ಆಗೋಲಿ ವೇ|| ಸಂಗಯ್ಯನವರ ಹೇಳಿಕೆಯಿಂದಲೂ ಬಹುಮನೋಹರವಾಗಿತ್ತು. ಪ್ರತಿದಿವಸ ಸಾಯಂಕಾಲ ೫|| ಘಂಟೆಯಿಂದ ೮ ರವರಿಗೆ ಪುರಾಣಪ್ರವಚನವೂ ಪುನಃ ೯ ಘಂಟೆಯವರೆಗೆ ಶ್ರೀಗಳವರು ವೀರಶೈವ ಮತತತ್ವವನ್ನು ಬೋಧಮಾಡುತ್ತಿದ್ದರಲ್ಲದೆ ಶ್ರೋತೃಜನ ಸಮುದಾಯವು ವಿಶೇಷವಾಗಿ ಕೂಡುತ್ತಿದ್ದು ಇದೇ ಶ್ರಾವಣ ಬ|| ೧೩ ತಾ|| 13-8-1933 ನೇ ಶುಕ್ರವಾರ ದಿವಸ ಪುರಾಣಸಮಾಪ್ತಿಯ ಆರಾಧನೆಯನ್ನು ಉದಯ ೧೦ ಘಂಟೆಯಿಂದ ಶ್ರೀಗಳವರ ಪಾದಪೂಜೆಯು ವಿಧಿವತ್ತಾಗಿ ನಡೆಸಲ್ಪಟ್ಟ ತರುವಾಯ ಅನೇಕ ಗಣಾಧೀಶ್ವರರನ್ನು ಹಾಗು ಸಹಸ್ರಾವಧಿ ಭಕ್ತಾದಿಗಳನ್ನು ಸಂತೃಪ್ತಿಪಡಿಸಿದರು. ಅನಂತರ ಇದೇ ದಿನ ಸಾಯಂಕಾಲ ನೂತನವಾಗಿ ತಯಾರಿಸಲ್ಪಟ್ಟ ಪಲ್ಲಕಿಯಲ್ಲಿ ಶ್ರೀ ಪುರಾಣವನ್ನು ಹಾಗು ಜಗದಾಚಾರ್ಯರ ಭಾವಚಿತ್ರವನ್ನು ಮೂರ್ತಗೊಳಿಸಿ ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಶೃಂಗರಿಸಲ್ಪಟ್ಟ ಪ್ರತಿಯೊಂದು ಓಣಿಯಲ್ಲಿ ಉತ್ಸವವು ನಡೆಯಿಸಲ್ಪಟ್ಟಿತು. ಮತ್ತು ಪ್ರತಿಯೊಬ್ಬ ಭಕ್ತಾದಿಗಳು ಫಲಪುಷ್ಪಾದಿಗಳನ್ನು ಅರ್ಪಿಸುತ್ತಿದ್ದರು. ಈ ರೀತಿಯಾಗಿ ಉತ್ಸವವು ಸ್ವಸ್ಥಾನವನ್ನು ಸೇರಿದ ತರುವಾಯ ಸಭೆಯು ನಡೆದು ಶ್ರೀ ಪಟ್ಟಾಧ್ಯಕ್ಷರು ಜಗದಾಚಾರ್ಯರ ಮಹತ್ವವನ್ನು ಬೋಧಿಸಿ ಸಕಲ ಭಕ್ತರನ್ನು ಧನ್ಯರನ್ನಾಗಿ ಮಾಡಿದರು. ಈ ಪ್ರಕಾರವಾಗಿ ಗುರುಸೇವೆಯನ್ನು ಮಾಡಿದ ಹನಮನಹಟ್ಟಿ ಗ್ರಾಮಸ್ಥರೇ ಧನ್ಯರು. ಇದೇ ಪ್ರಕಾರವಾಗಿ ಭೀಮನಗೌಡರು ಮುಂದಿನ ವರುಷವಾದರೂ ವಿದ್ವಾನ್ ವೇ|| ಶ್ರೀಕಂಠಶಾಸ್ತ್ರಿಗಳವರಿಂದ ರಚಿಸಲ್ಪಟ್ಟ ಶ್ರೀ ರೇಣುಕವಿಜಯ ಪುರಾಣವನ್ನು ಮಾಡಿಸಿ ಜಗದ್ಗುರು ರೇಣುಕರ ಕೃಪೆಯಿಂದ ಸಕಲೇಷ್ಟಾರ್ಥಗಳನ್ನು ಪಡಿಯತಕ್ಕವರಾಗಲೆಂದು ಹಾರೈಸುತ್ತೇನೆ. ಒಳಕ ಶ್ರೀ ಪಂಚಾಕ್ಷರ ಶಿವಾಚಾರ್ಯರು ವೀರಶೈವ ಧರ್ಮೋದ್ಧಾರಕ್ಕಾಗಿ ಜನ್ಮವೆತ್ತಿದ ಶ್ರೀ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ 1-8-0 ರೂಪಾಯನ್ನು ಪಾಟೀಲರ ಕಡೆಯಿಂದ ತೆಗೆಸಿದರು. ಶ್ರೀ ಜಗದಾಚಾರ್ಯರು ವಾ|| ರಿಗೆ ಆಯುರಾರೋಗ್ಯಾದಿ ಸಕಲ ಸಂಪತ್ತನ್ನು ದಯಪಾಲಿಸಿ ಕಾಪಾಡಲೆಂದು ಹಾರೈಸುವ

ಮಿ|| ಮಡಿವಾಳಪ್ಪ ಸ್ಕೂಲ್‌ಮಾಸ್ತರ್, ಒಡ್ಡಪ್ಪ.

ನಿಧನ.

ಶ್ರೀ ಗುರುಲಿಂಗಜಂಗಮ ಪೂಜಾಧುರಂಧರರು ಅನ್ನದಾನಪರಾಯಣರೂ ಪ್ರಾಣಿದಯಾಪರರೂ ಸುಪ್ರಸಿದ್ಧರೂ ವಯೋವೃದ್ಧರೂ ಆದ ಅನಂತಪುರಜಿಲ್ಲಾ ಮಡಕಶಿರಾತಾಲ್ಲೂಕು ಗುಡಿಬಂಡೆ ಗ್ರಾಮದಲ್ಲಿರುವ ಮ|| ರಾ|| ರಾ|| ಮುದ್ದ್ವೀರೆಗೌಡರವರು ಮೂರು ವರುಷಗಳಿಂದ ಮೌನವ್ರತಧಾರಿಗಳಾಗಿದ್ದು ನಿತ್ಯಕರ್ಮಗಳಾವುದನ್ನೂ ಬಿಡದೆ ಅನುಷ್ಠಿಸುತ್ತಲಿದ್ದು ತಮ್ಮ ಮೊರುಜನ ಮಕ್ಕಳಲ್ಲಿ ಕಿರಿಯವನಾದ ದುಗ್ಗೇಗೌಡರೆಂಬವರನ್ನು ಸಮೀಪಕ್ಕೆ ಕರೆದು ಗುಡಿಬಂಡೆಗ್ರಾಮಕ್ಕೆ 60 ಮೈಲಿಗಳ ದೂರದಲ್ಲಿರುವ ಮೈಸೂರು ಇಲಾಖಾ ಯಲ್ಲೊಡು ಗ್ರಾಮದಲ್ಲಿ ನೆಲಸಿರುವ ಶ್ರೀ ಸಿದ್ಧರಾಮೇಶ್ವರಸ್ವಾಮಿಗೆ ಒಂದು ಸಹಸ್ರ ರೂಪಾಯಿಗಳ ಬೆಲೆಬಾಳುವ ಬೆಳ್ಳಿ ಧ್ವಜಸ್ತಂಭವನ್ನು ಮಾಡಿಸುತ್ತೇನೆಂದು ಸ್ವಾಮಿಗೆ ತಿಳಿಸಿ ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ತೆಗೆದುಕೊಂಡು ಬರುವಹಾಗೆ ಆಜ್ಞೆ ಮಾಡಲು ಆ ಕುಮಾರನು ಎತ್ತಿನ ಬಂಡಿಯನ್ನು ಕಟ್ಟಿಸಿಕೊಂಡು ಹೋಗಿ ಮೂರುದಿನದಲ್ಲಿಯೇ ಸದರಿ ಸ್ವಾಮಿ ಸನ್ನಿಧಿಗೆ ಸೇರಿ ಪೂಜೆ ಮುಂತಾದ ಕಾರ್ಯಗಳು ನಡೆಯುವ ಕಾಲದಲ್ಲಿ ಆ ದೇವಸ್ಥಾನದಲ್ಲಿರುವ ಗಂಟೆಗಳು ತ್ರಿಶೂಲವು ದೊಡ್ಡ ಶಬ್ದದೊಡನೆ ಕೆಳಕ್ಕೆ ಬೀಳಲು ಅರ್ಚಕನು ಆಶ್ಚರ್ಯವುಳ್ಳವನಾಗಿ ಇದು ಯೇನು ಭೂಕಂಪವೋ ಎಂದು ಯೋಚಿಸಿ ಅನಂತರ ಸಮಾಧಾನಯುಕ್ತನಾಗಿ ಬಾಗಿಲುಗಳನ್ನು ಮುಚ್ಚಿ ಪುನಃ ಪೂಜೆ ಮಾಡಿ ತೀರ್ಥಪ್ರಸಾದಗಳನ್ನು ತೆಗೆದುಕೊಂಡುಬರುತ್ತಿರುವ ಸಮಯದಲ್ಲಿ ಅಂದರೆ ದೇವಾಲಯದಲ್ಲಿ ಗಂಟೆ ಶಬ್ದವಾದ ಶ್ರೀಮುಖ ಸಂ|| ಮಾಘ|| ಬ|| ಏಕಾದಶಿ ಶನಿವಾರ 11½ ಗಂಟೆ ಕಾಲದಲ್ಲಿ ಸದರಿ ಮುದ್ದ್ವೀರೇಗೌಡರು ಗುಡಿಬಂಡೆ ಗ್ರಾಮದಲ್ಲಿ ಸ್ನಾನಾದಿ ನಿತ್ಯಕೃತ್ಯಂಗಳನ್ನು ತೀರಿಸಿಕೊಂಡು ಗಣಾಧೀಶ್ವರರು, ಮಕ್ಕಳು ಮೊಮ್ಮೊಕ್ಕಳು ಇನ್ನೂ ಮುಂತಾದವರು ಸೇರಿರುವ ಮಧ್ಯದಲ್ಲಿ ಈಶ್ವರಪೂಜೆ ಮುಗಿಸಿ ಗೋದಾನ ಭೂದಾನ ಮುಂತಾದುವುಗಳನ್ನು ಕೊಟ್ಟನಂತರ ಅದೇ ಸಮಯಕ್ಕೆ ಬಂದ ಶ್ರೀ ಸಿದ್ಧರಾಮೇಶ್ವರಸ್ವಾಮಿಯ ತೀರ್ಥವನ್ನು ಸ್ವೀಕರಿಸಿದ ನಂತರ ಗಣಾಧೀಶ್ವರರು ಊಟಮಾಡುವಷ್ಟರಲ್ಲಿಯೇ ಕುರ್ಚಿಮೇಲೆ ಕುಳಿತು ಕಣ್ಣುಗಳನ್ನು ಮುಚ್ಚಿ ನಮಸ್ಕಾರ ಚಿನ್ಹೆಯಿಂದ ಸ್ವಲ್ಪ ತಲೆಯನ್ನು ಬಾಗಿಸಲು ಸರ್ವರೂ ನೋಡಿ ಧ್ಯಾನದಲ್ಲಿರುತ್ತಾರೆಂದು ಭಾವಿಸುವಷ್ಟರೊಳಗಾಗಿ ಕೈಲಾಸವಾಸಿಯಾದರು. ಆ ಲಿಂಗಶರೀರವನ್ನು ವಿಮಾನದಲ್ಲಿ ಕುಳ್ಳಿರಿಸಿ ಮಂಗಳವಾದ್ಯಗಳು ಭೋರ್ಗರೆಯುತ್ತಿರಲು ಉತ್ಸವವು ಹೊರಟಿತು. ಈ ಉತ್ಸವವನ್ನು ನೋಡುವದಕ್ಕಾಗಿ ಸುತ್ತ ಮುತ್ತ ಗ್ರಾಮದ ಸಹಸ್ರಾರು ಜನಗಳು ಬಂದಿದ್ದರು. ಸಮಾಧಿ ಕ್ರಿಯಗಳು ವಿಧ್ಯುಕ್ತವಾಗಿ ನಡೆದು ವಿಶೇಷದಾನಧರ್ಮಗಳು ಮಾಡಲ್ಪಟ್ಟವು. ಶರಣರ ಸಾವು ಮರಣದಲ್ಲಿ ಗೊತ್ತಾಗುವುದೆಂಬ ಲೋಕೋಕ್ತಿಯಂತೆ ನಾಲ್ಕು ಜನ ಪುತ್ರಿಯರು ಮೊಮ್ಮೊಕ್ಕಳು ಮುಂತಾದವರು ಉಪಚಾರಮಾಡುತ್ತಾ ಸುತ್ತಲೂ ಇಷ್ಟಮಿತ್ರರು ಆಪ್ತರು ಬಂಧುಗಳು, ಗಣಾಧೀಶ್ವರರು ಮುಂತಾದವರ ಮಧ್ಯದಲ್ಲಿ ಆನಂದದಿಂದ ಸಾಯುಜ್ಯ ಹೊಂದಿರುದೇ ಇವರ ಕ್ರಿಯಾಸಿದ್ಧಿಯ ಗುರುತಾಗಿದೆ.

ಪ್ರತ್ಯಕ್ಷದರ್ಶಿ.

|| ಶ್ರೀ ||

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯವರ ರಥೋತ್ಸವಾಹ್ವಾನಪತ್ರಿಕಾ.

ಶ್ರೀಮತ್ಸಕಲಭುವನಾಧೀಶ್ವರ ಶ್ರೀಭೂಕೈಲಾಸನಿವಾಸ ಸಕಲದೇವತಾರಾಧನೀಯ ಭಕ್ತಜನಮಂದಾರ ಕಾಮಿತವರಪ್ರದಾನ ಶರಣಾಗತಪರಿಪಾಲನಬಿರುದಾಂಕಿತ ಭವರೋಗನೈದ್ಯ ಕರಾಳ್ಯಾರಣ್ಯದಹನದಾವಾನಲ ಅಜ್ಞಾನತಿಮಿರದಿವಾಕರ ಸುಜ್ಞಾನಶೇಜೋನಿಧಿ ಶಮದಮಾಲಂಕಾರವಿಭ್ರಾಜಿತ ಭುಕ್ತಿಮುಕ್ತಿಫಲಪ್ರದಾಯಕ ಮುನಿಪತಿವ್ರಾತಬೋಧನ ಯಮಿಜನಾಗ್ರಗಣ್ಯ ಪದವಿನ್ಯಾಸಪಾವನೀಕೃತ ನಿಖಿಲಭುವನಕುಲಕಲಿಯುಗಕುಲತಿಲಕಾಮಲ ತೋಂಟದಸಿದ್ಧಲಿಂಗೇಶ್ವರಾಂಕಿತಾಃ ಅಪರಿಚ್ಛಿನ್ನಾಅಪಿ ಲೋಕಾನುಗ್ರಹಾರ್ಥಮಂಗೀಕೃತಪರಿಚ್ಛಿನ್ನತಾಕಾ ವಯಂ ಶ್ರೀ ಕದಂಬನದೀತೀರೇ ಮಹಾಕ್ಷೇತ್ರೇ ಶಿವಯೋಗಾನಂದವೈಭವೈರ್ವಸಾಮಃ ||

ಶ್ರೀಮದ್ರಾಜಾಧಿರಾಜಪರಮೇಶ್ವರಪ್ರೌಢಪ್ರತಾಪ ವೀರನರಪತಿಬಿರುದೆಂತೆಂಬರಗಂಡ ಲೋಕೈಕವೀರಾದಿ ಬಿರುದಾಂಕಿತರಾದ ಕರ್ನಾಟಕದೇಶಾವತಂಸ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ಜಿ. ಬಿ. ಇ., ಯವರಿಂದ ಪರಿಪೋಷಿತವಾದ ತುಮಕೂರು ಡಿಸ್ಟ್ರಿಕ್ಟ್ ಕುಣಿಗಲ್ ತಾಲ್ಲೂಕು ಎಡೆಯೂರು ಕ್ಷೇತ್ರದಲ್ಲಿ ನೆಲೆಗೊಂಡಿರುವ ಶ್ರೀಮದನಾದಿತೋಂಟದ ಸಿದ್ಧಲಿಂಗೇಶ್ವರಮಹಾಸ್ವಾಮಿಯವರ ಜಾತ್ರೆಯಲ್ಲಿ—ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನಶಕ ಗತಾಬ್ದಾಃ ೧೮೫೬ ನೆಯ ಭಾವನಾಮಸಂವತ್ಸರದ ಚೈತ್ರ ಶುದ್ಧ ೧ ಪಾಡ್ಯಮಿ ಲಾಗಾಯಿತು ಶುದ್ಧ ೧೫ ಪೌರ್ಣಿಮಾವರೆಗೆ ನಡೆಯುವ ಉತ್ಸವಗಳ ತಪಶೀಲ್—

ತಾ|| 15—3—1934 ನೇ ಗುರುವಾರ ರಾತ್ರಿ ಹುಲಿವಾಹನ, ಮ|| ರಾ|| ಬಾಳೇನಹಳ್ಳಿ ಚನ್ನಮಲ್ಲೇಗೌಡರ ಸೇವಾ.

ತಾ|| 16—3—1934 ನೇ ಶುಕ್ರವಾರ ಯುಗಾದಿ ಹಬ್ಬ. ಈ ದಿವಸ ಬೆಳಿಗ್ಗೆ ಮಹಾಗಣಪತಿಪೂಜಾ, ಸ್ವಸ್ತಿವಾಚನ, ಧ್ವಜಾರೋಹಣವೂ, ಮಧ್ಯಾಹ್ನ ಪಾಲಕಿ ಉತ್ಸವವೂ ಸಹ ಸರ್ಕಾರಿ. ರಾತ್ರಿ ವೃಷಭವಾಹನ, ಚಿಕ್ಕಹಳ್ಳಿ, ಪಟೇಲ್ ಮ|| ರಾ|| ಸಿದ್ಧಲಿಂಗೇಗೌಡರ ಸೇವಾ.

ತಾ|| 17—3—1934 ನೇ ಶನಿವಾರ ಮಧ್ಯಾಹ್ನ ಪಾಲಕಿ ಉತ್ಸವ ಸರ್ಕಾರಿ. ರಾತ್ರಿ ಕೈಲಾಸ ಉತ್ಸವ, ಎಡೆಯೂರು ಮ|| ರಾ|| ರಂಗನಾಯಕರ ಸೇವಾ.

ತಾ|| 18—3—1934 ನೇ ಭಾನುವಾರ ಮಧ್ಯಾಹ್ನ ಪಾಲಕಿ ಉತ್ಸವ ಸರ್ಕಾರಿ. ರಾತ್ರಿ ನಂದಿವಾಹನ ಉತ್ಸವ, ರಾಗೀಹಳ್ಳಿ ಮ|| ರಾ|| ನಂಜೇಗೌಡರ ಸೇವಾ.

ತಾ|| 19—3—1934 ನೇ ಸೋಮವಾರ ಮಧ್ಯಾಹ್ನ ಪಾಲಕಿ ಉತ್ಸವ ಸರ್ಕಾರಿ. ರಾತ್ರಿ ಕೈಲಾಸ ಉತ್ಸವ, ನಾಗಸಂದ್ರದ ಮ|| ರಾ|| ವೆಂಕಟಶೆಟ್ಟರ ಸೇವಾ.

ತಾ|| 20—3—1934 ನೇ ಮಂಗಳವಾರ ಮಧ್ಯಾಹ್ನ ಪಾಲಕಿ ಉತ್ಸವ ಸರ್ಕಾರಿ. ಅನಂತರ 4 ಘಂಟೆಗೆ ಕೈಲಾಸ ಉತ್ಸವ ಪಾನಕ ಫಲಹಾರ ಎಡೆಯೂರಲ್ಲಿರುವ ವಿ. ಮ. ವೇ|| ನಂಜುಂಡಾರಾಧ್ಯರ ಸೇವಾ. ರಾತ್ರಿ ಕೈಲಾಸ ಉತ್ಸವ, ಭಜಂತ್ರಿ ಮ|| ರಾ|| ನರಸಪ್ಪನವರ ಸೇವಾ. ಬೆಳಗಿನ ಝಾವದಲ್ಲಿ ಪುಷ್ಪರಥ ಮ|| ರಾ|| ದಿ. ಕೆ. ಚನ್ನಬಸಪ್ಪ ಶೆಟ್ಟರ ಸೇವಾ.

ತಾ|| 21—3—1934 ನೇ ಬುಧವಾರ ಮಧ್ಯಾಹ್ನ ಪಾಲಕಿ ಉತ್ಸವ ಸರ್ಕಾರಿ. ಅನಂತರ ಇದೇ ಊರಿನಲ್ಲಿರುವ ಶ್ರೀ ಜಗದ್ಗುರು ರಂಭಾಪುರೀಸಂಸ್ಥಾನ ಮಠಕ್ಕೆ ಶ್ರೀಸ್ವಾಮಿಯವರನ್ನು ಬಿಜಮಾಡಿಸಿ ಪಾನಕಫಲಹಾರ ವಿನಿಯೋಗ ಮತ್ತು ಕೈಲಾಸ ಉತ್ಸವ, ರಾತ್ರಿ ಚಂದ್ರಮಂಡಲೋತ್ಸವ ಬನ್ನಿರು ಮ|| ರಾ|| ಸಿದ್ಧಪ್ಪನವರ ಸೇವಾ.

ತಾ|| 22—3—1934 ನೇ ಗುರುವಾರ ಮಧ್ಯಾಹ್ನ 11 ಘಂಟೆಗೆ **(ಮಹಾರಥಾರೋಹಣ)** ಸರ್ಕಾರಿ. ರಾತ್ರಿ ಅಡ್ಡಪಲ್ಲಕ್ಕಿ ಉತ್ಸವ, ಮ|| ರಾ|| ನೇರಲಕೆರೆ ಪಟೇಲ್ ನಂಜಪ್ಪನವರ ಸೇವಾ.

ತಾ|| 23—3—1934 ನೇ ಶುಕ್ರವಾರ ಮಧ್ಯಾಹ್ನ ಪಲ್ಲಕ್ಕಿಯಲ್ಲಿ ಶ್ರೀ ಸ್ವಾಮಿಯವರು ಕದಂಬನದಿ ಬಳಿ ಇರುವ ಚಿತ್ರಮಳಿಕ್ಕೆ ದಯಮಾಡಿಸುವುದು (ಭಿಕ್ಷಾಟನೋಲೆ) ಎಡೆಯೂರು ಸ್ವಂತ ಮಠದ ವೇ|| ಗುರುಸಿದ್ಧಯ್ಯನವರು ವಗೈರೇರು—ರಾತ್ರಿ ರುದ್ರಾಕ್ಷಿ ಮಂಟಪೋತ್ಸವ, ಮ|| ರಾ|| ದೊಡಲ್ಯಾಪುರದ ತಾ|| ಹಡಿಗ್ರಾಮದ ತೋಟಪ್ಪನವರ ಸೇವಾ.

ತಾ|| 24—3—1934 ನೇ ಶನಿವಾರ ರಾತ್ರಿ ಶೇಷವಾಹನ ಅಳಲುಘಟ್ಟದ ಹಿರೇಮಠದ ವೇ|| ಸಿದ್ಧಲಿಂಗಶಾಸ್ತ್ರಿಗಳವರ ಸೇವಾ.

ತಾ|| 25—3—1934 ನೇ ಭಾನುವಾರ ರಾತ್ರಿ ಬೌಳಿಟ್ಟಿನ ಪಾಲಕಿ ಉತ್ಸವ, ಪಾರುಪತ್ತೇಗಾರ್ ಮ|| ರಾ|| ಕೃಷ್ಣಯ್ಯಂಗಾರ್ರ ಸೇವಾ.

ತಾ|| 26—3—1934 ನೇ ಸೋಮವಾರ ನವಿಲುವಾಹನ ಮ|| ರಾ|| ಗುಬ್ಬಿಹೊಸಹಳ್ಳಿ ಗುರುಚನ್ನಬಸಪ್ಪನವರ ಸೇವಾ.

ತಾ|| 27—3—1934 ನೇ ಮಂಗಳವಾರ ರಾತ್ರಿ ತೆಪ್ಪೋತ್ಸವ, ಗುಬ್ಬಿಶಿವರಾತ್ರಿ, ಮ|| ರಾ|| ಸಿದ್ಧಲಿಂಗಪ್ಪನವರ ಸೇವಾ.

ತಾ|| 28—3—1934 ನೇ ಬುಧವಾರ ರಾತ್ರಿ ಕೈಲಾಸ ಪ್ರಾಕಾರೋತ್ಸವ ಶತಪಥ ಸರ್ಕಾರಿ.

ತಾ|| 29—3—1934 ನೇ ಗುರುವಾರ ಶ್ರೀ ಸ್ವಾಮಿಯವರಿಗೆ ಶ್ರೀ ರುದ್ರಾಧ್ಯಯನಪೂರ್ವಕ ಮಹಾಭಿಷೇಕಪೂಜಾ ಸರ್ಕಾರಿ. ಅನಂತರ ಕನ್ನಂಬಾಡಿ ಮ|| ರಾ|| ಸಿದ್ಧಲಿಂಗಪ್ಪನವರ ಕೈಲಾಸ ಉತ್ಸವ, ಪಾನಕಫಲಹಾರ ಸೇವಾ. ರಾತ್ರಿ ವಿಹಾರೋತ್ಸವ ದೇವಸ್ಥಾನದ ಪ್ರಾಕಾರದಮೇಲೆ ಸರ್ಕಾರಿ.

ಈ ರೀತಿ ಸೇವೆಗಳು ನಡೆಯುವುವಲ್ಲದೆ ಭಕ್ತಾದಿಗಳು ಅಪೇಕ್ಷಿಸಿದಲ್ಲಿ ಅವರವರಿಗೆ ಇಷ್ಟವಾದ ಸೇವಾ ಉತ್ಸವಗಳು ಸಹ ನಡೆಸಲ್ಪಡುವುವು. ಈ ಮಹೋತ್ಸವಗಳಿಗೆ ಸಮಸ್ತ ಭಕ್ತಾದಿಗಳೂ ಆಗಮಿಸಿ ಶ್ರೀ ಗುರುದೇವತಾಸೇವೆಯಿಂದ ಧನ್ಯರಾಗಬೇಕಾಗಿ ಕೋರಿದೆ.

N. B.—ಮಾಮೂಲಿನಂತೆ ದನಗಳ ಜಾತ್ರೆಯು ಸೇರುತ್ತದೆ. ಉತ್ತಮ ಜಾತಿ ರಾಸುಗಳಿಗೆ ಬಹುಮಾನವು ಕೊಡಲ್ಪಡುತ್ತದೆ. ನೀರು, ನರಳು ವಗೈರೆ ಶೌಕರ್ಯವು ಅನುಕೂಲವಾಗಿದೆ. ಬಡಬಗ್ಗರಿಗೂ, ಭಕ್ತಾದಿಗಳಿಗೂ ಸಂತರ್ಪಣೆಯು ನಡೆಯುತ್ತದೆ. ಮತ್ತು ಅಂಗಡಿ ವ್ಯಾಪಾರಕ್ಕೂ, ನಾಟಕ, ಸರ್ಕಸ್‌ಗಳ ಸೇರುವಿಕೆಗೂ ಅನುಕೂಲಗಳನ್ನು ಕಲ್ಪಿಸಿರುತ್ತದೆ.

ಕೆ. ಎಸ್. ರುದ್ರಪ್ಪ, ಧರ್ಮದರ್ಶಿ, (ಕನ್ವೀನರ್)

C. K. Chellappa Iyer,
Amildar, Kunigal Taluk.
ತಾ|| 22—2—1934.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಿಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 17

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿರೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 25

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಕ್ಯಾಲೆಂಡರ್.

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೪ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ ಕ್ಕೆ ೨ ರೂಪಾಯಿ

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವುದು.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಪಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ಝ್ಯಾಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವಸೋವು, ಗಂಟುನೋವು ಸಂಧು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿಲಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಚುಮದ್ದುಗಳು, ಹೋಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಮೇಯುವ ರೋಗ, ದದ್ದು, ಸುರಿಸುವ ನಂಜೆ ಹುಣ್ಣುಗಳನ್ನು ಶೀಘ್ರ ಗುಣಪಡಿಸುವದು. ಡಬ್ಬಿಗೆ ಆ. 5

ಹೇಯರ್ ಆಯಿಲ್.

ಕಿವಿ ಸೋರುವದು, ಮರಾಳ್ಗಸೆ ಬರುವುದು, ಕಿವಿ ಹುಣ್ಣು, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಡಿಬ್ಬಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ಧೂಳಗಳು ವಿಕಾರಕ್ಕೆ ಮಾಚಗಟ್ಟು, ಮುದುಕರಾಯಗಳು ಪತ್ತೇಪಡಿಸೊಂಡಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುತ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದದ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಆತ್ಮಸಂರಕ್ಷಕವಂತೆಯೇ ಯುವಕನಾಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಳ್ಸವೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾತಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರೆ:— ಮಲೇರಿಯಾನ ಕಂಪೆನಿ,
[26] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ಥ, ಒಳಜ್ವರ, ಮಲಬದ್ಧತೆ ಕೈಕಾಲು ಬಿಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (16)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ಶಿವಶಕ್ತಿವಿಲಾಸ	೩ ಆಣೆ
ಶ್ರೀಗುರುತತ್ವಪದಗಳು	೩ ಆಣೆ
ಶಿವಸ್ತವಶಿರೋಮಣಿ	೩॥ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೨ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೩ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೩ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೩ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೩ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟಾಭಿಷೇಕ ಹಾರೋಹಣಮಾಡಿದಕಳ್ಳ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ... ಳ್ಳಿಯ ರೋಗಗಳು, ಕಣ್ಣುಗಳಲ್ಲಿ ಉಂಟಾ...

(Registered Trade Mark)

ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇ... ಲ್ಪಟ್ಟ ೭೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮಾರುಬೆಟ್ಟೆ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವು...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-...
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[8] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರಂ॥ ಪಂಡಿತ ಶಿರ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಮಾರ್ಚಿ ೧೯೩೪ [ಸಂಚಿಕೆ ೪೬

ಕಡೂರು ಡಿಸ್ಟ್ರಿಕ್ಟಿನ ಓಟರು ಮಹಾಜನಗಳಿಗೆ.

ಈ ಸಾರಿ ನಡೆದ ಮೈಸೂರು ನ್ಯಾಯವಿಧಾಯಕ ಸಭೆಯ ಚುನಾವಣೆಯಲ್ಲಿ ಈ ಡಿಸ್ಟ್ರಿಕ್ಟಿನ ಪರವಾಗಿ ಅಭಿಮಾನವಿಟ್ಟು ನನ್ನನ್ನು ಬಹುಮತದಿಂದ ಚುನಾವಣೆ ಮಾಡಿದ್ದಕ್ಕಾಗಿ ಈ ಡಿಸ್ಟ್ರಿಕ್ಟಿನ ಎಲ್ಲಾ ಓಟರು ಮಹಾಶಯರುಗಳಿಗೂ ಈ ಮೂಲಕ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

ಟಿ. ಬಿ. ಮಲ್ಲೇಗೌಡ.
ಕಾಫಿಪ್ಲಾಂಟರ್, ಚಿಕ್ಕಮಗಳೂರು.

ಅಖಿಲಕರ್ಣಾಟಕ ದ್ವಿತೀಯ ಜ್ಯೋತಿಷಿಕ ಸಮ್ಮೇಳನ, ಮೈಸೂರು.

ನೆನ್ನೆ ಸಾಯಂಕಾಲ ಇಲ್ಲಿನ ಟೌನ್ ಹಾಲಿನಲ್ಲಿ ಅಖಿಲಕರ್ಣಾಟಕ ಜ್ಯೋತಿಷಿಕ ಸಮ್ಮೇಳನದ ಎರಡನೆಯ ಅಧಿವೇಶನವನ್ನು ನಡೆಸುವ ವಿಚಾರವನ್ನು ನಿರ್ಣಯಿಸುವುದಕ್ಕೋಸ್ಕರ ಪೂರ್ವಭಾವಿ ಸಭೆಯು ಸೇರಿತ್ತು. ರಿಟೈರ್ಡ್ ಡೆಪ್ಯುಟಿಕಮೀಷನರ್ ಮ॥ ರಾ॥ ಕೆ. ಮೈಲಾರರಾಯರವರು ರಾಜಸೇವಾಸಕ್ತ ಎಚ್. ಲಿಂಗರಾಜೇ ಅರಸಿನವರು ಅಗ್ರಾಸನವನ್ನು ಅಲಂಕರಿಸಬೇಕೆಂದು ಸೂಚಿಸಿದ್ದನ್ನು ಎಲ್ಲರೂ ಅನುಮೋದಿಸಿದರು. ಅಧ್ಯಕ್ಷರು ಸಭೆಯ ಉದ್ದೇಶವನ್ನು ಸೂಚಿಸಿ ಉಪಕ್ರಮವನ್ನು ಮಾಡಲು ಅನಂತರ ಮಹಾವಿದ್ವಾನ್ ಕಡೂರು ಶೇಷಾಚಾರ್ಯರು ಜ್ಯೋತಿಶ್ಶಾಸ್ತ್ರದ ಪ್ರಕೃತಸ್ಥಿತಿಯು ಅನೇಕ ಭಾಗಗಳಲ್ಲಿ ಅಸಮರ್ಪಕವಾಗಿದೆ ಎಂಬುದಾಗಿಯೂ, ಈ ವಿಚಾರಗಳನ್ನು ಪರಿಶೀಲಿಸುವುದಕ್ಕಾಗಿ ಕಳೆದವರ್ಷ ಶಿವಮೊಗ್ಗೆಯಲ್ಲಿ ಸಮ್ಮೇಳನದ ಮೊದಲನೆಯ ಅಧಿವೇಶನವು ನಡೆಯಿತೆಂಬುದಾಗಿಯೂ ಅದರಂತೆ ವರ್ಷವರ್ಷವೂ ನಡೆಯುವುದು ಅವಶ್ಯಕವೆಂಬುದಾಗಿಯೂ ವಿವರಿಸಿದರು. ಅನಂತರ ಮಹಾಮಹೋಪಾಧ್ಯಾಯ ಅರ್ಥಶಾಸ್ತ್ರವಿಶಾರದ ಡಾ॥ ಆರ್. ಶಾಮಶಾಸ್ತ್ರಿಗಳವರು ಪೌರಸ್ತ್ಯಪಾಶ್ಚಾತ್ಯ ಜ್ಯೋತಿಶ್ಶಾಸ್ತ್ರಗಳಲ್ಲಿ ಸಾಮರಸ್ಯವನ್ನು ಕಲ್ಪಿಸಬೇಕೆಂಬ ಅಂಶವನ್ನು ಸೂಚಿಸಿ ಈಗಿರತಕ್ಕ ನ್ಯೂನಾತಿರೇಕಗಳನ್ನು ಸರಿಪಡಿಸುವುದಕ್ಕೋಸ್ಕರ ಅಖಿಲಕರ್ಣಾಟಕ ಜ್ಯೋತಿಷಿಕ ಸಮ್ಮೇಳನದ ಎರಡನೇ ಅಧಿವೇಶನವನ್ನು ಮುಂಬರುವ ಏಪ್ರಿಲ್ ತಿಂಗಳಲ್ಲಿ ಮೈಸೂರಿನಲ್ಲಿ ನೆರವೇರಿಸಬೇಕೆಂದು ಸೂಚಿಸಿದ್ದನ್ನು ವಿದ್ವಾನ್ ದೇವಶಿಖಾಮಣಿ ರಾಮಾನುಜಾಚಾರ್ಯರವರು ಪುಷ್ಟೀಕರಿಸಿ ಅನುಮೋದಿಸಿದರು. ಅನಂತರ ಮ॥ ರಾ॥ ಜಿ. ಆರ್. ಜೋಯಿಸರವರು ಸಮ್ಮೇಳನದ ಏರ್ಪಾಡಿಗಾಗಿ ಕೆಳಗೆಕಂಡ ಮಹನೀಯರ ಸ್ವಾಗತಸಮಿತಿಯನ್ನು ಏರ್ಪಡಿಸಬೇಕೆಂದು ಸೂಚಿಸಿದ್ದನ್ನು ಮ॥ ರಾ॥ ಎಂ. ಕೇಶವಯ್ಯ ಬಿ.ಎ. ಅವರು ಅನುಮೋದಿಸಲು ಎಲ್ಲರೂ ಒಪ್ಪಿದರು.

ಅಧ್ಯಕ್ಷರು—ಮ॥ ರಾ॥ ರಾಜಸೇವಾಸಕ್ತ ಎಚ್. ಲಿಂಗರಾಜೇ ಅರಸಿನವರು. ಉಪಾಧ್ಯಕ್ಷರುಗಳು—ಮ॥ ರಾ॥ ರಾವ್ ಬಹದ್ದೂರ್, ರಾಜಕಾರ್ಯಪ್ರವೀಣ ಬಿ. ಸುಬ್ಬರಾಯರವರು, ಸರ್ದಾರ್ ಗೋಪಾಲರಾಜೇ ಅರಸಿನವರು, ಲೋಕಸೇವಾನಿರತ ... ಅರ್ಥಶಾಸ್ತ್ರವಿಶಾರದ ಡಾ॥ ಆರ್. ನಂಜುಂಡರಾಜೇ ಅರಸಿನವರು, ಅರ್ಥಶಾಸ್ತ್ರವಿಶಾರದ ಡಾ॥ ಆರ್. ಶಾಮಶಾಸ್ತ್ರಿಗಳವರು, ಕೆ. ಮೈಲಾರರಾಯರವರು, ಎಂ. ಹಿರಿಯಣ್ಣ ಎಂ.ಎ., ಅವರು, ಎ. ಸುಬ್ರಹ್ಮಣ್ಯಯ್ಯರವರು, ಗೌರವಕಾರ್ಯದರ್ಶಿ—ಮ॥ ರಾ॥ ಜಿ. ಆರ್. ಜೋಯಿಸರ್, ಎಂ.ಎ.,ಎಫ್. ಆರ್.ಇ.ಎಸ್., ಸದಸ್ಯರುಗಳು—ಬ್ರಂ॥ ಶ್ರೀ॥ ಧರ್ಮಾಧಿಕಾರಿ ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರವರು, ವಿದ್ಯಾವಿಶಾರದ ಕುಣಿಗಲ್ ರಾಮಶಾಸ್ತ್ರಿಗಳವರು, ವೇದಾಂತವಿಶಾರದ ರಾಮಚಂದ್ರಾಚಾರ್ಯರವರು, ಕಾಶೀ ವೆಂಕಟಾಚಲಶಾಸ್ತ್ರಿಗಳವರು, ಮಹಾವಿದ್ವಾನ್ ಕಡೂರು ಶೇಷಾಚಾರ್ಯರವರು, ವಿದ್ವಾನ್ ದೇವಶಿಖಾಮಣಿ ರಾಮಾನುಜಾಚಾರ್ಯರವರು, ಎಚ್. ಯೋಗನರಸಿಂಹ ಎಂ. ಎ., ಅವರು, ವಿದ್ವಾನ್ ನರಸಿಂಹಾಚಾರ್ಯರವರು, ಕೆ. ಧನಕೋಟಿಶೆಟ್ಟರು, ಎಂ. ಸಿ. ತಿಮ್ಮಯ್ಯನವರು, ಕೆ. ಬಸವರಾಜೇ ಅರಸಿನವರು ಎಂ.ಎ., ಬಿ.ಎಲ್., ಎಂ. ಕೇಶವಯ್ಯನವರು, ಬಿ.ಎ., ಎಚ್. ಎನ್. ಸುಬ್ಬರಾಯರವರು, ಟಿ. ಬಿ. ಕೃಷ್ಣಶಾಸ್ತ್ರಿಗಳವರು, ವಿದ್ವಾನ್ ಸಂತಕೃಷ್ಣಜೋಯಿಸರವರು, ಎಂ. ಎ. ದೊರೆಸ್ವಾಮಯ್ಯಂಗಾರ್ಯರು, ಎಂ.ಎ., ವಿದ್ವಾನ್ ಗೋಪಾಲಾಚಾರ್ಯರವರು, ಕಿಕ್ಕೇರಿ ನಾರಾಯಣಶಾಸ್ತ್ರಿಗಳವರು, ಪಂಡಿತ ಶ್ರೀ॥ ಕಾಶೀನಾಥಶಾಸ್ತ್ರಿಗಳವರು, ವಿದ್ವಾನ್ ಜೆ. ಎನ್. ಕೃಷ್ಣಯ್ಯಂಗಾರ್ ಎಂ.ಎ., ಮತ್ತು ಇನ್ನು ಇತರ ಮಹನೀಯರು. ಅನಂತರ ಮ॥ ರಾ॥ ಜಿ. ಆರ್. ಜೋಯಿಸರವರು ಶ್ರೀಮಂತ ಲಿಂಗರಾಜೇ ಅರಸಿನವರಿಗೂ ಸಭೆಯನ್ನು ಅಲಂಕರಿಸಿದ್ದ ಇತರ ಸಭಾಸದರಿಗೂ ಧನ್ಯವಾದಗಳನ್ನು ಅರ್ಪಿಸಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯಕಾರಿ ಮಂಡಲಿಯಿಂದ.

ಬೆಂಗಳೂರು ನಗರಕ್ಕೆ ಬಾಳೇಹೊನ್ನೂರು ಸಂಸ್ಥಾನಮಠದ ಶ್ರೀಮಜ್ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಆಗಮನ.

ಇದೇ ಮಾಹೇ ತಾ॥ 7-3-34 ನೇ ಬುಧವಾರ ಸಾಯಂಕಾಲ ಬಾಳೇಹೊನ್ನೂರು ಮಠದ ಶ್ರೀಮಜ್ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಬೆಂಗಳೂರು ನಗರಕ್ಕೆ ಬರಮಾಡಿಕೊಳ್ಳುವ ವಿಚಾರದಲ್ಲಿ ಬೆಂಗಳೂರು ನಗರದ ವೀರಶೈವಮಹಾಜನಗಳು ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆ.ಟಿ.ಸಿ.ಐ.ಇ., ಯವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಸಿಟಿ ಚಿಕ್ಕಪೇಟೆ ಮಹಂತಿನಮಠದಲ್ಲಿ ಸಭೆಸೇರಿದ್ದರು. ನೂರಾರು ಜನ ವೀರಶೈವರು ಕಿಕ್ಕಿರಿದು ನೆರೆದಿದ್ದರು. ಶ್ರೀ ಸ್ವಾಮಿಗಳನ್ನು ಕರೆಸುವ ವಿಚಾರದಲ್ಲಿ ಕೆಲವರ ಭಾಷಣಗಳಾದನಂತರ ಅಧ್ಯಕ್ಷರು ಸಭೆಯ ಬಹುಮತವನ್ನು ತೆಗೆದುಕೊಂಡು, ಶ್ರೀ ಸ್ವಾಮಿಗಳನ್ನು ಕೂಡಲೇ ಬರಮಾಡಿಕೊಳ್ಳಬೇಕೆಂಬುದಾಗಿ ಅಭಿಪ್ರಾಯವನ್ನು ಸೂಚಿಸಿದರು. ಕೆಲವರು ಭಿನ್ನಾಭಿಪ್ರಾಯಪಟ್ಟರು. ಅನಂತರ ಸಭೆಯಲ್ಲಿದ್ದವರೆಲ್ಲರೂ ಏಕಮನಸ್ಸಿನಿಂದ ಶ್ರೀಗಳವರನ್ನು ಇದೇ ಏಪ್ರಿಲ್ ತಿಂಗಳಿನ ಅಂತ್ಯದಲ್ಲಿಯೋ ಅಥವಾ ಮೇ ತಿಂಗಳಿನ ಆದಿಯಲ್ಲಿಯೋ ಕರೆಸಬೇಕೆಂಬುದಾಗಿ ತೀರ್ಮಾನಿಸಲ್ಪಟ್ಟಿತು. ಶ್ರೀ ಸ್ವಾಮಿಗಳನ್ನು ಬರಮಾಡಿಕೊಳ್ಳಲು ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಅಧ್ಯಕ್ಷರಾಗಿಯೂ ಮತ್ತು ರಾಜಧರ್ಮಪ್ರವೀಣ ಪಿ ಮಹಾದೇವಯ್ಯ, ಬಿ.ಎ. ಬಿ.ಎಲ್., ಚೀಫ್‌ಜಡ್ಜರವರು ಉಪಾಧ್ಯಕ್ಷರಾಗಿಯೂ ಇರುವ ಒಂದು ಸ್ವಾಗತಸಂಘವು ಏರ್ಪಡಿಸಲ್ಪಟ್ಟಿತು. ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿದನಂತರ ಸಭೆಯು ಮುಕ್ತಾಯವಾಯಿತು.

V. Channaiah,
Advocate & Secretary,
Reception Committee.

ಕೊಳ್ಳೇಗಾಲದ ತಾಲೂಕು ಮುಡಿಗುಂಡದಲ್ಲಿರುವ ಸುಪ್ರಸಿದ್ಧರಾದ ಶ್ರೀಯುತ ಗುರುಕಾರ್ ಎಂ. ಮಾದಪ್ಪನವರು ಬೀಹಾರ್ ಭೂಕಂಪನಿಧಿಗೆ 1000 ರೂಪಾಯಿಗಳನ್ನು ಕಳುಹಿಸಿರುವರೆಂದು ಕೇಳುತ್ತೇವೆ. ಸ್ತುತ್ಯವಾದ ಧರ್ಮ!

ಶ್ರೀ ಜಗದ್ಗುರು ರೇವಣಸಿದ್ಧೇಶ್ವರನ ಜಯಂತ್ಯುತ್ಸವ.

ನಾಲತವಾಡ.

ಶ್ರೀ ಭಗವತ್ಪಾದ ಜಗದ್ಗುರು ರೇವಣಸಿದ್ಧೇಶ ಶಾಖಾಮಠೀಯ ಗುರುಚರಂಚರಂಗಳ ನಾಲತವಾಡ ಹಿರೇಮಠಾಧ್ಯಕ್ಷರು ಶ್ಯಾಂಪಿನಲ್ಲಿ ವೀರಶೈವಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇವಣಸಿದ್ಧೇಶ್ವರನ ಜಯಂತಿಮಹೋತ್ಸವವನ್ನು ಫಾಲ್ಗುಣ ಶುದ್ಧ ೧೪ ದಿವಸ ಬಹುವೈಭವದಿಂದ ನಡಿಸಿದರು. ಪ್ರಾತಃಕಾಲ ಶ್ರೀ ಜಗದ್ಗುರುಗಳ ಭಾವಚಿತ್ರವನ್ನು ಉಚ್ಚಸ್ಥಾನದಲ್ಲಿ ಸ್ಥಾಪಿಸಿ ವೇದೋಕ್ತಮಂತ್ರಗಳಿಂದಲೇಸಿ ಅಷ್ಟೋತ್ತರ ಶತನಾಮೋಚ್ಚಾರಣಪೂರ್ವಕ ಬಿಲ್ವಪತ್ರಗಳನ್ನು ಧರಿಸಿ ಪುಷ್ಪಾಂಜಲಿಯನ್ನಿತ್ತು ಜಯಘೋಷಮಾಡಲ್ಪಟ್ಟಿತು. ಅನಂತರ ಗಣಾರಾಧನೆಯಾಗಿ ಯಥೋಚಿತ ದಕ್ಷಿಣ ತಾಂಬೂಲಾದಿಗಳಿಂದ ವಿನಿಯೋಗವು ನಡೆಯಿತು. ಈ ವರ್ಷ ಪ್ಲೇಗಿನ ಮೂಲಕ ಜನಗಳು ಶ್ಯಾಂಪಿನಲ್ಲಿದ್ದುದರಿಂದ ಮೆರವಣಿಗೆಗೆ ಅವಕಾಶವಾಗಲಿಲ್ಲವು.

ಓರ್ವ ಗುರುಭಕ್ತ.

ಸ್ವೀಕಾರ

ಅರಸೀಕೆರೆ ತಾಲೂಕು ದಿಬ್ಬೂರು ಸ್ಕೂಲ್ಮಾಸ್ತರಾದ ಮ॥ ರಾ॥ ಎ. ಚನ್ನಪ್ಪನವರು ಗರುಗದಹಳ್ಳಿಯಲ್ಲಿ ಶ್ರೀ ರೇಣುಕಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬೆಂಗಳೂರು ಸಿಟಿ ಚಿಕ್ಕಪೇಟೆ ಮಹಂತಿನಮಠದಲ್ಲಿರುವ ಪುರದ ಮಠದ ಪಟ್ಟಾಧ್ಯಕ್ಷ ಶ್ರೀ॥ ಚಿಕ್ಕವೀರದೇಶಿಕೇಂದ್ರಸ್ವಾಮಿಗಳವರ ವ್ಯವಹಾರವು ಶ್ರೀ ಜಗದಾಚಾರ್ಯರ ಕೃಪೆಯಿಂದ ಜಯಪ್ರದವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೆ 1 ರೂ. ಯನ್ನು ಕಳುಹಿಸಿರುತ್ತಾರೆ.

ಕೊಳ್ಳೇಗಾಲದ ... ಸೋಮವಾರಪೇಟೆ ತಾಲೂಕು ಶ್ರೀ ರೇವಣಸಿದ್ಧೇಶ್ವರಸ್ವಾಮಿ ಬೆಟ್ಟದಲ್ಲಿ ನೆರವೇರಿದ ಶ್ರೀ ರೇಣುಕಜಯಂತಿ ಮಹೋತ್ಸವಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಲ್ಪಟ್ಟ 1 ರೂ. ಯು ಚನ್ನಪಟ್ಟಣದ ಶ್ರೀ॥ ಕೆ. ಮಲ್ಲಪ್ಪನವರ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಭಾರತೀಯರ ಹಿಮಾಲಯಪರ್ವತಾರೋಹಣ!

ಹಿಮಾಲಯಪರ್ವತವನ್ನು ಆರೋಹಿಸುವದಕ್ಕಾಗಿ ದೆಹಲಿಯಲ್ಲಿ ಒಂದು ಭಾರತೀಯರ ಸಂಘವು ಸ್ಥಾಪಿಸಲ್ಪಟ್ಟಿರುವದು. ಕಳೆದವರ್ಷ ಇವರು ಪಿಂಡಾರಿ ಗ್ಲೇಜಿಯರ್ ಎಂಬ ಪರ್ವತಶಿಖರವನ್ನು ಹತ್ತಿಬಂದರು. ಈ ವರ್ಷ ಮೇ ತಿಂಗಳಿನಲ್ಲಿ 23,000 ಅಡಿ ಎತ್ತರವಿರುವ ಕೈಲಾಸಶಿಖರವನ್ನು ಹತ್ತಿಬರಬೇಕೆಂದು ಸಂಕಲ್ಪಿಸಿರುತ್ತಾರೆ.

ಜಯಂತಿಮಹೋತ್ಸವಗಳು.

ಬೆಂಗಳೂರು.

ಆಸ್ತಿಕಮಹಾಶಯರೆ,

ಪ್ರತಿಯೊಬ್ಬ ಮನುಷ್ಯನು ಮುಕ್ತಿಯನ್ನು ಅನಾಯಾಸವಾಗಿ ಹೊಂದಬೇಕೆಂಬ ಸದುದ್ದೇಶದಿಂದ ಭಗವದಂಶೀಭೂತರಾದ ಅನೇಕ ಆಚಾರ್ಯರು ಜಗತ್ತಿನಲ್ಲಿ ಅವತರಿಸಿ ವೇದಾಗಮಸಮ್ಮತಗಳಾದ ಮತಗಳನ್ನು ಸ್ಥಾಪಿಸಿರುವುದು ಸರಿಯಷ್ಟೆ.

ಆ ಮಹಾಚಾರ್ಯರು ಹಾಕಿಕೊಟ್ಟ ಮತನಿಯಮಗಳಿಗನುಸಾರವಾಗಿ ನಡೆದು ನಮ್ಮ ಸಕಲ ಸಂಕಟಗಳನ್ನು ಸಂಹರಿಸಿಕೊಂಡು ಇಚ್ಛಿತಫಲಗಳನ್ನು ಪಡೆಯಬೇಕಾಗಿದೆ. ಆಚಾರ್ಯರಲ್ಲಿರುವ ಭಕ್ತಿವಿಶ್ವಾಸಗಳಿಂದಲೇ ಅತ್ಯಂತಿಕದುಃಖನಿವೃತ್ತಿಯಾಗಿ ಅಚಲಸುಖಪ್ರಾಪ್ತಿಯಾಗುತ್ತೆಂಬಂಶವನ್ನು 'ಆಚಾರ್ಯ ಏವ ಸರ್ವೇಷಾಂ ಮೋಚನಪ್ರದಉಚ್ಯತೆ' ಎಂಬಾಗಮವಾಕ್ಯವು ಮೇಘಗರ್ಜನೆಯಂತೆ ಗರ್ಜಿಸುತ್ತಿರುವುದು. ಹೀಗೆ ಸಹಸ್ರಾವಧಿ ಶಾಸ್ತ್ರೀಯ ಪ್ರಮಾಣಗಳು ಕರ್ಣಕುಹರದಲ್ಲಿ ಬೀಳುತ್ತಿದ್ದರೂ ಆಚಾರ್ಯರೇ ನಮ್ಮ ಸಕಲಸೌಭಾಗ್ಯಕ್ಕೆ ಕಾರಣೀಭೂತರೆಂದು ನಿಶ್ಚಯವಾಗಿ ತಿಳಿದಿದ್ದರೂ ಅವರಲ್ಲಿ ಭಕ್ತಿಹೀನರಾಗಿಯಾಗಲೀ, ವಿಪರೀತವರ್ತನದಿಂದಾಗಲೀ ನಡೆಯುವುದೆಂದರೆ ಪೂರ್ವಜನ್ಮದ ಪಾಪಪ್ರಭಾವವೆಂತಲೂ, ಪ್ರಾಪ್ತಜನ್ಮದ ದುರುಪಯೋಗವೆಂತಲೂ, ಮುಂದೆ ತಮಗೆ ಬರಬೇಕಾದ ಹೀನಜನ್ಮದ ದುಶ್ಚಿಹ್ನವೆಂತಲೂ, ಖಂಡಿತವಾಗಿ ಹೇಳಬಹುದು. ಅಸ್ತು!

ಅಂತಹ ವೈದಿಕಮತಗಳಲ್ಲಿಯೇ ಪರಮಪವಿತ್ರವಾದ ನಮ್ಮ ವೀರಶೈವಮತವು ಒಂದಾಗಿರುವುದು. ಈ ಮತವನ್ನು ಜಗದಾದಿಯಲ್ಲಿ ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದಾವಿರ್ಭವಿಸಿ ಭೂಲೋಕದಲ್ಲಿ ರಾರಾಜಮಾನಗಳಾದ ಕೊಲ್ಲಿಪಾಕಿ ಮೊದಲಾದ ಪುಣ್ಯಕ್ಷೇತ್ರಗಳಲ್ಲಿರುವ ಸೋಮೇಶಾದಿ ಲಿಂಗಗಳಿಂದವತರಿಸಿದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿದರೆಂಬ ವಿಷಯವು ಆಗಮಾದ್ಯನೇಕ ಪ್ರಮಾಣಗಳಿಂದ ತಿಳಿದಸಂಗತಿಯೇ ಆಗಿದೆಯಲ್ಲದೇ ಈ ಆಚಾರ್ಯಪುಂಗವರು ತಮ್ಮಿಂದ ಸಂಸ್ಥಾಪಿತವಾದ ಮತರಾಜ್ಯದ ಸಂರಕ್ಷಣೆಗಾಗಿ ರಾಜಧಾನಿಗಳಂತಿರುವ ಭೂಕೈಲಾಸದಂತೊಪ್ಪುವ ರಂಭಾಪುರೀ ಮೊದಲಾದ ಪವಿತ್ರಸ್ಥಾನಗಳಲ್ಲಿ ವೀರಾದ್ಯುಪನಾಮರಂಜಿತಗಳಾದ ಐದು ಮುಖ್ಯಸಿಂಹಾಸನಮಠಗಳನ್ನು ಸ್ಥಾಪಿಸಿ ಆಸೇತುಹಿಮಾಚಲಪರ್ಯಂತರದ ವಿಶ್ವತೋಮುಖವಾಗಿ ವ್ಯಾಪಿಸಿರುವ ಈ ಮತದ ಆಚಾರವಿಚಾರಗಳನ್ನು ಸುಧಾರಿಸುವದಕ್ಕಾಗಿ ಪ್ರತಿಯೊಂದು ಗ್ರಾಮನಗರಗಳಲ್ಲಿ ತಮ್ಮ ಶಾಖಾನುಯಾಯಿಗಳಾದ ಶ್ರೀಪಟ್ಟ ಚರಮೂರ್ತಿಗಳನ್ನೂ ಮಠಪತಿ ಮೊದಲಾದವರನ್ನೂ ನೇಮಿಸಿ ಮತರಾಜ್ಯಕ್ಕೆ ಯಾವ ಪ್ರಕಾರದ ಉಪದ್ರವವು ಬಾರದಹಾಗೆ ಭದ್ರವಾದ ವ್ಯವಸ್ಥೆಯನ್ನು ಮಾಡಿರುವರು. ಮತ್ತು ಯುಗಯುಗಂಗಳಲ್ಲಿ ಸಹ ಭಿನ್ನಭಿನ್ನ ನಾಮಗಳನ್ನು ಧರಿಸಿ ಪೂರ್ವೋಕ್ತಲಿಂಗಗಳಲ್ಲಿಯೇ ಅವತರಿಸಿ ಪ್ರಕೃತಮತವನ್ನು ಉದ್ಧಾರಮಾಡುವರೆಂಬ ವಿಷಯವು ಅದೇ ಆಗಮಾದಿ ಪ್ರಮಾಣಗಳಿಂದ ತಿಳಿದುಬರುತ್ತದೆ. ಅಂದಮೇಲೆ ಈ ಮತದ ಪ್ರಾಚೀನತೆಯನ್ನೂ ನಾವು ಬೇರೆ ಬೇರೆ ಬರೆಯುವುದು ಚರ್ವಿತಚರ್ವಣವಾಗಬಹುದು. ಇಂತಹ ಮಹನೀಯರು ಅವತರಿಸಿದ ಪವಿತ್ರದಿವಸವೇ ಜಯಂತಿಯೆಂಬ ಸುಮಂಗಲನಾಮದಿಂದ ಪ್ರಸಿದ್ಧವಾಗಿದೆ. ಈ ಪರಮಾಚಾರ್ಯರ ಜಯಂತಿಯ ದಿವಸವನ್ನು ಪ್ರತಿಯೊಬ್ಬ ಲಿಂಗಾಂಗಿಯು ದೊಡ್ಡಹಬ್ಬದ ದಿವಸವನ್ನಾಗಿ ಅತೀವ ಆಟ್ಟಹಾಸದಿಂದ ಆಚರಿಸುವುದು ಆದ್ಯಕರ್ತವ್ಯವಾಗಿದೆ. ಅಂತೆಯೇ ನಮ್ಮ ಬೆಂಗಳೂರು ಪಟ್ಟಣದ ನಿವಾಸಿಗಳಾದ ವೀರಶೈವಮಂಡಲಿಯವರು ಕೆಳಗೆ ನಮೂದಿಸಿದ ಪ್ರಕಾರ ಇದೇ ಫೆಬ್ರವರಿ ತಾ|| 25-2-1934 ರಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವದ ಕಾರ್ಯಕ್ರಮವನ್ನು ಪದ್ಧತಿ ಪ್ರಕಾರ ವಿಶಮನಸ್ಸಿನಿಂದ ಪ್ರಾರಂಭಿಸಿದರು. ತಾ|| 25-2-34 ನೇ ಶನಿವಾರ ದಿವಸ ಸಾಯಂಕಾಲ 6½ ಗಂಟೆಯಿಂದ ಶ್ರೀ ಮಹಂತಿನಮಠದ ಮೇಲ್ಭಾಗದಲ್ಲಿ ವಿದ್ಯುಲ್ಲತೆಗಳಿಂದ ನಿರ್ಮಿಸಲ್ಪಟ್ಟ ದಿವ್ಯಮಂಟಪದಲ್ಲಿ ಷ|| ಬ್ರ|| ಶ್ರೀ|| ಗಂಗಾಧರಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವೇ|| ಕೀರ್ತನಾಲಂಕಾರ ಪದವೀಧರರಾದ ಹುಣಸೇಘಟ್ಟದ ಮಠದ ನಂಜುಂಡಾರಾಧ್ಯಶಾಸ್ತ್ರಿಗಳವರು ಗುರುಮಾಹಾತ್ಮ್ಯವೆಂಬ ವಿಷಯದಲ್ಲಿ ಕೀರ್ತನವನ್ನು ಸುಶ್ರಾವ್ಯವಾದ ಸಂಗೀತದೊಡನೆ ರಸಭರಿತವಾಗಿಯೂ, ಶಾಸ್ತ್ರೀಯಪ್ರಮಾಣಪುರಸ್ಸರವಾಗಿಯೂ ಪಂಡಿತಪಾಮರರಿಗೂ ವೇದ್ಯವಾಗುವಂತೆ ಮಾಡಿದರು. ಅದರಂತೆಯೇ ಮಾರನೆಯ ದಿವಸದಲ್ಲಿಯೂ ಉಳಿದ ಕಥೆಯನ್ನು ಪೂರ್ತಿಗೊಳಿಸಿ ಪ್ರತಿಯೊಬ್ಬರಿಗೂ ಅತ್ಯಾನಂದವನ್ನುಂಟುಮಾಡಿದರಲ್ಲದೆ, ಗುರುಭಕ್ತಿನಿಷ್ಠರಾಗುವಹಾಗೆ ಮಾಡಿದರು. ಈ ಸಭೆಗೆ ವೀರಶೈವರು ವೀರಶೈವೇತರರನೇಕರೂ ಬಂದಿದ್ದರು. ಇವರ ಸುಶ್ರಾವ್ಯವಾದ ಕೀರ್ತನೆಯನ್ನು ಕೇಳಿ ಸಂತೋಷಭರಿತರಾದರು. ಅನಂತರ ಅಧ್ಯಕ್ಷರಾದ ಪೂಜ್ಯವಾದ ಗುರುಗಳು ಕೀರ್ತನಕಾರರ ವಿಷಯವನ್ನೇ ತೆಗೆದುಕೊಂಡು ತಮ್ಮ ಪ್ರಸಾದವಾಣಿಯಿಂದ ಉಪದೇಶಿಸಿ ನಮ್ಮಗಳನ್ನು ಕೃತಕೃತ್ಯರನ್ನಾಗಿ ಮಾಡಿದರು. ತಾ|| 27-2-34ನೇ ಮಂಗಳವಾರದದಿವಸ ಸಾಯಂಕಾಲ 6 ಗಂಟೆಗೆ ಸರಿಯಾಗಿ ಅದೇ ಶ್ರೀಮಠದ ಮೇಲ್ಭಾಗದಲ್ಲಿ ರಚಿಸಿರುವ ದಿವ್ಯಮಂಟಪದಲ್ಲಿ ಮಹಾಜನಗಳ ಪ್ರಾರ್ಥನಾಮೇರೆಗೆ ಷ|| ಬ್ರ|| ಶ್ರೀ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಸೆಂಟ್ರಲ್ ಕಾಲೇಜ್ ಪ್ರೊಫೆಸರ್ ರಿಟೈರ್ಡ್ ಬ್ರ|| ಶ್ರೀ|| ಬಿ. ವೆಂಕಟನಾರಣಪ್ಪನವರು ಎಂ.ಎ. ಇವರ ಅಧ್ಯಕ್ಷತೆಯಲ್ಲಿ ಮೋಕ್ಷವಿಚಾರವೆಂಬ ವಿಷಯದಲ್ಲಿ ಪ್ರತಿಯೊಬ್ಬರ ಹೃದಯದಲ್ಲಿ ಪ್ರತಿಬಿಂಬಿಸುವಂತೆ ವೇದಾಗಮೋಪನಿಷದಾದಿ ಶಾಸ್ತ್ರೀಯಪ್ರಮಾಣಗಳಿಂದಲೂ ಲೌಕಿಕ ದೃಷ್ಟಾಂತಗಳಿಂದಲೂ ತಮ್ಮ ಮನೋನಿಶ್ಚಿತಾನುಭವಗಳಿಂದಲೂ, ಶಿಷ್ಯಕೋಟಿಗೆ ಉಪದೇಶವನಿತ್ತು, ನಮ್ಮನ್ನಾಳುವ ಮೈಸೂರು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನ ಪುರಸ್ಸರವಾಗಿ ತಮ್ಮ ಭಾಷಣವನ್ನು ವಿರಮಿಸಿದರು. ಈ ಸಭೆಗೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜ್ ಸಾಹಿತ್ಯ ಪ್ರೊಫೆಸರ್ ಬ್ರ|| ಶ್ರೀ|| ದೇಶಿಕಾಚಾರ್ಯರವರು, ಸದರಿ ಕಾಲೇಜಿನ ಪಂಡಿತ ಬ್ರ||ಶ್ರೀ|| ವೇ|| ವಿಶ್ವನಾಥಶಾಸ್ತ್ರಿಗಳವರು, ವೇ|| ನಂಜುಂಡಾರಾಧ್ಯರು ಮೊದಲಾದ ಪಂಡಿತರು, ಶ್ರೀಯುತ ಎಲೆಕ್ಟ್ರಿಕ್ ಸೂಪರಿಂಟೆಂಡೆಂಟ್ ಸಾಹೇಬರು ರಾಮಭದ್ರೇಗೌಡರು, ಸೂಲಕುಂಟೆ ಗಂಗಾಧರಪ್ಪನವರು, ಶ್ರೀಯುತ ಅಡ್ವೋಕೇಟ್ ಚನ್ನಯ್ಯನವರು, ಶ್ರೀಯುತ ಹಲಸೂರು ರುದ್ರಪ್ಪನವರು, ಶ್ರೀಯುತ ಸೂಲಕುಂಟೆ ಚನ್ನಬಸಪ್ಪನವರು, ಶ್ರೀಯುತ ಯಜಮಾನ್ ಪುಟ್ಟಪ್ಪನವರು, ಶ್ರೀಯುತ ದೇಶದ ಸಿದ್ಧಬಸಪ್ಪಶೆಟ್ಟರು ಶ್ರೀಯುತ ಬಜಾರಾವಾರದ ಹುಚ್ಚಪ್ಪನವರು ಇವರೇ ಮೊದಲಾದ ಅನೇಕ ಮಹಾಶಯರು ದಯಮಾಡಿಸಿದ್ದರು. ಅಧ್ಯಕ್ಷಮಹಾಶಯರು ಪ್ರಾಸಂಗಿಕ ಭಾಷಣವನ್ನು ಮಾಡಿ ನಮ್ಮಗಳನ್ನು ತಮ್ಮ ಅಮೃತವಾಣಿಯಿಂದ ಪುನೀತರನ್ನಾಗಿ ಮಾಡಿದ ಪೂಜ್ಯವಾದ ಶ್ರೀಗಳವರು ಸಂಸ್ಕೃತ, ಕನ್ನಡ ಮೊದಲಾದ ವಿದ್ಯೆಗಳಲ್ಲಿ ದೊಡ್ಡ ಪಾಂಡಿತ್ಯವುಳ್ಳವರೆಂತಲೂ, ಪಾರಮಾರ್ಥಿಕ ವಿಷಯದಲ್ಲಿ ಸ್ವಾನುಭವಿಗಳೆಂತಲೂ, ಇಂತಹ ಗಹನವಾದ ಆತ್ಮಾನಾತ್ಮ ವಿಚಾರವನ್ನು ಪಂಡಿತಪಾಮರರಿಗೂ ವೇದ್ಯವಾಗುವಂತೆ ಉಪದೇಶ ಮಾಡಿದ್ದನ್ನು ನೋಡಿದರೆ ಯಾವ ಮತದವರಿಗೆ ಆನಂದವೂ ಭಕ್ತಿಯೂ ಉಂಟಾಗಲಿಕ್ಕಿಲ್ಲವೆಂದು ಹೇಳಿ ಇಂತಹ ಶ್ರೀಗಳೇ ಪ್ರತಿಯೊಂದು ಮತಕ್ಕೂ ಉಪದೇಶಗುರುಗಳಾದರೆ ಆ ಮತವು ಧನ್ಯವಾಗುವುದರಲ್ಲೇನೂ ಸಂದೇಹವಿಲ್ಲವೆಂದು ಹೇಳಿ ಕೊಂಡಾಡಿ ತಮ್ಮ ಪ್ರಾಸಂಗಿಕವಾದ ಭಾಷಣವನ್ನು ಮುಗಿಸಿದರು. ಅನಂತರ ದೇಶದಶೆಟ್ಟರು ಶ್ರೀಯುತ ಸಿದ್ಧಬಸಪ್ಪಶೆಟ್ಟರು ತಮ್ಮ ಕೋರಿಕೆ ಮೇರೆ ಅಧ್ಯಕ್ಷಮಹಾಶಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದಕ್ಕಾಗಿ ತಮ್ಮ ಮಂಡಲಿಯ ಪರವಾಗಿ ಧನ್ಯವಾದಗಳನ್ನರ್ಪಿಸಿದರು. ಅನಂತರ ಶ್ರೀಗಳವರಿಗೂ ಅಧ್ಯಕ್ಷರಿಗೂ ಪುಷ್ಪಹಾರಗಳನ್ನರ್ಪಿಸಿದರು. ಪದ್ಧತಿಪ್ರಕಾರ ಮಂಟಪದಲ್ಲಿ ರಾರಾಜಿಸುತ್ತಿರುವ ಶ್ರೀ ಜಗದ್ಗುರು ರೇಣುಕವಿಗ್ರಹಮೂರ್ತಿಗೆ ಮಹಾಮಂಗಳಾರತಿ, ರಾಜಾಶೀರ್ವಾದಪರಸ್ಪರ ಪ್ರಸಾದವಿನಿಯೋಗವನ್ನು ಮಾಡಿದರು. ಸಭೆಯು ವಿಸರ್ಜನೆಯಾಯಿತು. ಮಾರನೆ ದಿವಸ ತಾ|| 28-2-34 ನೆಯ ಬುಧವಾರ ಪ್ರಾತಃಕಾಲ 7 ಗಂಟೆಯಿಂದ 12 ಘಂಟೆವರೆಗೆ ಮಹಾಂತಿನ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಲಿಂಗೋದ್ಭವಮೂರ್ತಿಗೆ ವಿಧ್ಯುಕ್ತವಾಗಿ ಏಕಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆಯು, ಮಧ್ಯಾಹ್ನ ಮಠದಲ್ಲಿ ಭಕ್ತಮಾಹೇಶ್ವರ ಸಮಾರಾಧನೆಯೂ ಜರುಗಿಸಲ್ಪಟ್ಟವು. ಸಾಯಂಕಾಲ 5½ ಗಂಟೆಗೆ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣಶೆಟ್ಟರು ಕೆ.ಟಿ.,ಸಿ.ಐ.ಇ. ಯವರ ಅಧ್ಯಕ್ಷತೆಯಲ್ಲಿ ಕೆಳಗೆ ನಮೂದಿಸಿರುವ ಸಭೆಯ ಕಾರ್ಯಕ್ರಮಗಳು ಉಪಕ್ರಮಿಸಲ್ಪಟ್ಟವು. ಪ್ರಥಮದಲ್ಲಿ ವೈದಿಕವಿದ್ಯಾರ್ಥಿಗಳಿಂದ ವೇದಘೋಷವು ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರವು ಅನಂತರ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ಪಾಠಶಾಲೆ ಫ್ರೀಬೋರ್ಡಿಂಗಿನ ವಿದ್ಯಾರ್ಥಿಗಳು ಧಾರ್ಮಿಕವಿಷಯದಲ್ಲಿ ಪ್ರತಿಯೊಬ್ಬರ ಹೃದಯವನ್ನಾಕರ್ಷಿಸುವಂತೆ ಭಾಷಣಗಳನ್ನು ಮಾಡಿದರು. ಅನಂತರ ವೇ|| ಅಕ್ಕಿಮಂಡಿ ಎನ್. ರುದ್ರಯ್ಯನವರು ಸದರಿ ಜಯಂತಿ ಫಂಡಿನ ವಾರ್ಷಿಕವರದಿಯನ್ನೂ ಸದರಿ ಜಯಂತಿಫಂಡಿಗೆ ಕಳೆದ ವರ್ಷ ವಸೂಲಿಯಾದ ಲೆಕ್ಕದ ಜಮಾಖರ್ಚಿನ ಪಟ್ಟಿಯನ್ನೂ ಓದಿ ಹೇಳಿದುದಲ್ಲದೆ ಈ ಹಿಂದೆ ಶ್ರೀಯುತ ಗುಡೇಮಾರನಹಳ್ಳಿ ಶಿವಪ್ಪನವರ ಪುತ್ರರಾದ ಮಲ್ಲಿಕಾರ್ಜುನಪ್ಪನವರು ತಮ್ಮ ಉದಾರಭಕ್ತಿಯಿಂದ ಪ್ರತಿವರ್ಷ ನಡೆಯುತ್ತಿರುವ ಜಯಂತಿ ಮಹೋತ್ಸವಕ್ಕಾಗಿ ಪಂಚಲೋಹನಿರ್ಮಿತವಾದ ಶ್ರೀ ಜಗದ್ಗುರು ಲಿಂಗೋದ್ಭವ ರೇಣುಕಮೂರ್ತಿಯನ್ನು ಮಾಡಿಸಿಕೊಟ್ಟಿರುವುದು ಸರ್ವರಿಗೂ ವೇದ್ಯವಾದ ವಿಷಯವಷ್ಟೆ. ಈ ವರ್ಷವೂ ಈ ಗುರುಭಕ್ತನಿಷ್ಠರು ಸದರಿ ಉತ್ಸವಮೂರ್ತಿಗೆ 5 ಅಡಿ ಎತ್ತರವುಳ್ಳ ಪ್ರಭಾವಳಿ ಒಂದನ್ನೂ, ಒಂದು ನಂದಿವಿಗ್ರಹವನ್ನೂ, 2 ಸಿಂಹಾಸನಗಳನ್ನೂ, 2 ಬೆಳ್ಳಿಚಾಮರಗಳನ್ನೂ ಸುಂದರವಾದ ಬೆಳ್ಳಿ ರಾಜಮುಡಿಯನ್ನೂ ಮಾಡಿಸಿ ಕೊಟ್ಟಿರುವ ವಿಷಯವನ್ನು ಸಭಿಕರಿಗೆ ಹೇಳಿ ಆನಂದವನ್ನುಂಟುಮಾಡಿದರು. ಮತ್ತು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಂಡಾರದ ವಾರ್ಷಿಕವರದಿಯನ್ನು ಮತ್ತು ಸದರಿ ಸಂಸ್ಕೃತಪಾಠಶಾಲಾ ಫ್ರೀಬೋರ್ಡಿಂಗಿನ ವರದಿಯನ್ನೂ ಓದಿ ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಈ ಜಯಂತಿಮಹೋತ್ಸವಕ್ಕೆ ಅರಳೇಪೇಟೆಯ ಯಜಮಾನ್ ಶ್ರೀಯುತ ಪುಟ್ಟಪ್ಪನವರು, ಎಲಿಕ್ಟ್ರಿಕ್ ಸೂಪರೆಂಡೆಂಟ್ ಶ್ರೀಯುತ ರಾಮಭದ್ರೇಗೌಡರು ಇಂಜನಿಯರ್ ಶ್ರೀಯುತ ಸೂಲುಕುಂಟೆ ಗಂಗಾಧರಪ್ಪನವರು ಶ್ರೀಯುತ ತೂಬುಗೆರೆ ನಂಜಪ್ಪನವರು ಶ್ರೀಯುತ ಅಲಸೂರು ಯಜಮಾನ್ ಕಾಳಪ್ಪನವರು ಶ್ರೀಯುತ ಅಲಸೂರು ರುದ್ರಪ್ಪನವರು ಶ್ರೀಯುತ ಅಡ್ವೋಕೇಟ್ ಚನ್ನಯ್ಯನವರು ರಿಟೈರ್ಡ್ ಇನ್ಸ್ಪೆಕ್ಟರ್ ಗುಬ್ಬಿ ಚನ್ನವೀರಪ್ಪನವರು ಶ್ರೀಯುತ ಕಂಟ್ರಾಕ್ಟರ್ ಬುಳ್ಳಪ್ಪನವರ ಮಕ್ಕಳು ನಂಜುಂಡಪ್ಪನವರು ಶ್ರೀಯುತ ಯಜುಕೇಷ ಆಫೀಸ್ ಟಿ. ಸಿ. ನಂಜಪ್ಪನವರು ವೇ|| ಜಿ. ಕೆ. ರುದ್ರಾರಾಧ್ಯರು ಇನ್‌ಕಂಟ್ಯಾಕ್ಸ್ ಮ್ಯಾನೇಜರ್ ವೇ|| ಜೆ. ಬಿ. ಮಲ್ಲಾರಾಧ್ಯರು ಸಬ್ ಡಿವಿಜನ್ ಆಫೀಸರು, ಕಂಟ್ರಾಕ್ಟರ್ ಎಂ. ನಾಗಪ್ಪನವರು ಶ್ರೀಯುತರುಗಳಾದ ಬಜಾರಾವರದ ಹುಚ್ಚಪ್ಪನವರು, ಗೊಲ್ಲಳ್ಳಿ ರುದ್ರಪ್ಪನವರು, ಮಾಡಲ್ ಪ್ರೆಸ್ ಚನ್ನಪ್ಪನವರು, ಡಾಕ್ಟರ್ ಬಿ. ನಂಜಪ್ಪನವರು, ಗೌರೀವಿಲಾಸಪ್ರೆಸ್ ಶಿವಪ್ಪನವರು, ಸಾವಂದಶೆಟ್ಟರ ಮರಿಯಪ್ಪನವರು, ಕಾಯಿ ಅಂಗಡಿ ಗುಬ್ಬಣ್ಣನವರ ಮಕ್ಕಳು ಶಂಕರಪ್ಪನವರು, ಅರಳೇಪೇಟೆ ಹೊಸ್ಸಗಂಗಪ್ಪನವರ ಮಕ್ಕಳು ಶಂಕರಶೆಟ್ಟರು, ಗುಡೇಮಾರನಹಳ್ಳಿ ಮಲ್ಲಿಕಾರ್ಜುನಪ್ಪನವರು, ತೂಬುಗೆರೆ ಶ್ರೀಕಂಠಪ್ಪನವರು, ಸಿದ್ಧಲಿಂಗದೇವರು, ಅಡ್ವೋಕೇಟ್ ಬಂಡೆಪ್ಪನವರು ಅತ್ತಿಬೆಲೆ ಬಂಡೆಪ್ಪನವರು, ಮಾಮೂಲುಪೇಟೆ ದೊಡ್ಡರಾಜಪ್ಪನವರು, ಅಪ್ಪಾಜಪ್ಪನವರು, ಮುನಿಸಿಪಲ್ ಆಫೀಸ್ ಮುದ್ದನಂಜಪ್ಪನವರು, ಡಿಟೋ ಆಫೀಸ್ ಮಲ್ಲಪ್ಪನವರು ಇನ್ನೂ ಮುಂತಾದ ಸ್ವಮತಪರಮತದ ಅನೇಕ ಮಹನೀಯರು ಆಗಮಿಸಿ ಈ ಮಹೋತ್ಸವಕಾರ್ಯಕ್ಕೆ ಪುಣ್ಯಭಾಗಿಗಳಾಗಿದ್ದರು. ಅನಂತರ ಸದರಿ ಮಠದ ಸ್ವಾಮಿಗಳವರು ತಾತ್ಕಾಲಿಕ ಭಾಷಣವನ್ನು ಮಾಡಿ ನಮ್ಮನ್ನಾಳುವ ಮೈಸೂರು ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬವರ್ಗದವರಿಗೂ ಶ್ರೇಯೋಭಿವೃದ್ಧಿಯನ್ನೂ ಮತ್ತು ಸರ್ ಶೆಟ್ಟರಿಗೂ ಅವರ ಕುಟುಂಬವರ್ಗದವರಿಗೂ, ಸದರಿ ಸಂಸ್ಕೃತಪಾಠಶಾಲೆಗೆ ತಮ್ಮ ಸರ್ವಸ್ವವನ್ನೇ ಅರ್ಪಿಸಿದ ಧರ್ಮಧುರಂಧರ ಶ್ರೀಯುತ ಶಾಂತಪ್ಪನವರ ಬುಳ್ಳಪ್ಪನವರಿಗೂ, ಇನ್ನೂ ಮುಂತಾದ ಭಕ್ತಮಂಡಲಿಯವರಿಗೂ, ಶ್ರೇಯೋಭಿವೃದ್ಧಿಯನ್ನು ಪ್ರಾರ್ಥಿಸಿ ವಿರಮಿಸಿದರು. ಅನಂತರ ಅಧ್ಯಕ್ಷಮಹಾಶಯರು ಗುರುಜಯಂತಿಕಾರ್ಯವನ್ನು ನೆರವೇರಿಸಿದ ವೀರಶೈವಮಂಡಲಿಯವರಿಗೆ ತಮ್ಮ ಸಂತೋಷವನ್ನು ಸೂಚಿಸಿದುದಲ್ಲದೆ ಉಪನ್ಯಾಸಕರ ಭಾಷಣಸಾರಾಂಶಗಳನ್ನು ಸೂಚಿಸಿ ಸದರಿ ಮಠಕ್ಕೆ ಶ್ರೀ ಜಗದ್ಗುರು ರಂಭಾಪುರಿ ಮಹಾಸ್ವಾಮಿಗಳವರು ಇಂತಹ ಸ್ವಾಮಿಗಳವರನ್ನು ಕಳುಹಿಸಿಕೊಟ್ಟಿದ್ದಕ್ಕಾಗಿ ಮಹಾಸನ್ನಿಧಿಗೆ ನಾವೆಲ್ಲರೂ ಕೃತಜ್ಞತೆಯುಳ್ಳವರಾಗಿರುವುದಲ್ಲದೆ ಇಂತಹ ಸ್ವಾಮಿಗಳವರು ಈ ಮಠಕ್ಕೆ ದಯಮಾಡಿಸಿದುದು ನಮ್ಮ ವೀರಶೈವರ ಪುಣ್ಯೋದಯವೇಸರಿಯೆಂದು ಸೂಚಿಸಿ ಜಗದಾಚಾರ್ಯರ ವಿಷಯದಲ್ಲಿ ತಮಗಿರುವ ಸಹಜಭಕ್ತಿಯನ್ನು ವ್ಯಕ್ತಗೊಳಿಸಿದರು. ಮಂಗಳಾರತಿಯಾಗಿ ಫಲಮಂತ್ರಾಕ್ಷತಪೂರ್ವಕ ಪುಷ್ಪಹಾರಗಳು ವಿನಿಯೋಗಿಸಲ್ಪಟ್ಟವು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು. ಆ ಬಳಿಕ ನಕ್ಷತ್ರಗಳಂತೆ ಒಪ್ಪುತ್ತಿರುವ ವಿದ್ಯುದ್ದೀಪಾವಳಿಗಳಿಂದಲೂ, ಮಲ್ಲಿಕಾಪುಷ್ಪಗಳಿಂದಲೂ, ಅಲಂಕೃತವಾದ ಭವ್ಯಾಂದೋಳಿಕೆಯಲ್ಲಿ ಶ್ರೀ ರೇಣುಕಪೂಜ್ಯವಾದ ಮೂರ್ತಿಯನ್ನು ಮೂರ್ತಗೊಳಿಸಿ ರಾತ್ರಿ ೯ ಘಂಟೆಗೆ ಉತ್ಸವವು ಪ್ರಾರಂಭವಾಯಿತು. ವೇದಘೋಷವೂ, ಛತ್ರಿ, ಚಾಮರ, ನಂದಿಧ್ವಜ ಮುಂತಾದುವುಗಳಿಂದ ಸಮೇತವಾಗಿ, ನಾನಾವಿಧ ಮಂಜುಳವಾದ್ಯಧ್ವನಿಗಳೂ ಅಲ್ಲಲ್ಲಿ ನಡೆಯುತ್ತಿದ್ದವು. ಸಹಸ್ರಾರು ಸಂಖ್ಯೆಯುಳ್ಳ ಭಕ್ತಮಂಡಲಿಯು ಮುಂದೆ ಮುಂದೆ ಸಾಗಿತು. ಉತ್ಸವವು ಚಿಕ್ಕಪೇಟೆ ಬಳ್ಳಾಪುರದಪೇಟೆ, ದೊಡ್ಡಪೇಟೆ, ಮಾಮೂಲುಪೇಟೆ, ಅಕ್ಕಿಪೇಟೆ, ಅರಳೇಪೇಟೆ ಮುಂತಾದ ಕಡೆಗಳಲ್ಲಿ ಹೊರಟಿತು. ಮತಭೇದವಿಲ್ಲದೆ ಸರ್ವರೂ ಭಗವತ್ಪಾದರಿಗೆ ಅಲ್ಲಲ್ಲಿ ಫಲಪುಷ್ಪಕರ್ಪೂರಾದಿಗಳನ್ನು ತಮ್ಮ ತಮ್ಮ ಅಂಗಡಿಗಳ ಮುಂಭಾಗದಲ್ಲಿಯೂ, ಮನೆಗಳ ಮುಂಭಾಗದಲ್ಲಿಯೂ, ಸಮರ್ಪಿಸುತ್ತಿದ್ದರು. ಉತ್ಸವವು ಮಹಾಂತಿನ ಮಠವನ್ನು ಸೇರಿದ ಬಳಿಕ ಷೋಡಶೋಪಚಾರ, ರಾಜೋಪಚಾರ, ಪೂಜಾನಂತರ ಮಂಗಳಾರತಿಯಾಗಿ ಪ್ರಸಾದಗಳು ಹಂಚಲ್ಪಟ್ಟವು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಿದ ಭಕ್ತಮಂಡಲಿಗೆ ಶ್ರೀಮತ್ಪಂಚಾಚಾರ್ಯರು ಶ್ರೇಯಸ್ಸನ್ನುಂಟುಮಾಡಲೆಂದು ಹಾರೈಸುತ್ತೇನೆ.

ಒರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಸೀದ.

ರೇಣುಕಗಿರಿ ಕ್ಲೋಸ್‌ಪೇಟೆ ತಾಲೂಕು.

ಶ್ರೀ ಕೈಲಾಸದಲ್ಲಿ ಪರಮೇಶ್ವರಾಜ್ಞಾನುಸಾರವಾಗಿ, ಭೂಲೋಕದಲ್ಲಿ ಸೋಮೇಶ್ವರಲಿಂಗದಿಂದುದ್ಭವಿಸಿ, ಸಾವಿರದ ನಾಲ್ಕುನೂರು ವರ್ಷಗಳು ಭೂಲೋಕದಲ್ಲಿ ಸಂಚರಿಸಿ, ಅನೇಕ ಭಕ್ತರನ್ನುದ್ಧರಿಸಿದ ಶ್ರೀ ಜಗದ್ಗುರು ರೇಣುಕಭಗವತ್ಪಾದರು ಎಲ್ಲೆಲ್ಲಿ ತಮ್ಮ ಪಾದವಿನ್ಯಾಸವನ್ನು ಮಾಡಿರುವರೋ ಆಯಾ ಸ್ಥಳಗಳು ಈಗಲೂ ಅನೇಕಾನೇಕ ಮಹತ್ವಗಳಿಂದ ಕಂಗೊಳಿಸುತ್ತಿರುವವು.

ಶ್ರೀಗುರುಸಾರ್ವಭೌಮರು ಅನೇಕ ದೇಶಗಳಲ್ಲಿ ಸಂಚರಿಸಿ ಅನೇಕ ಮಹತ್ವಗಳ ಮಾಡಿದಂತೆ ಕ್ಲೋಸ್‌ಪೇಟೆ ತಾಲೂಕು ಅನ್ವೇರಹಳ್ಳಿ ಬಳಿ ಇರುವ ಶ್ರೀ ರೇವಣಗಿರಿಯಲ್ಲಿ ತಮ್ಮ ತಪಸ್ಸನ್ನು ಆಚರಿಸಿ ಅನಂತರ ಪರಶಿವನಲ್ಲಿ ಅಡಗಿದರು. ಇಂಥ ಪರಮಪವಿತ್ರವಾದ ಬೆಟ್ಟದಲ್ಲಿ ಮಾಘ ಶು|| ೧೪ ಬುಧವಾರ ಶ್ರೀ ಭಗವತ್ಪಾದರ ಜಯಂತಿಮಹೋತ್ಸವವು ಭಕ್ತಿಪೂರ್ವಕವಾಗಿ ಶ್ರೀಸ್ವಾಮಿಯ ಅರ್ಚಕರಿಂದಲೂ ಭಕ್ತಾದಿಗಳಿಂದಲೂ ನೆರವೇರಿಸಲ್ಪಟ್ಟಿತು. ಆ ದಿವಸ ಶ್ರೀಗಿರಿ ತಪ್ಪಲಲ್ಲಿರುವ ಶ್ರೀ ರೇಣುಕಾಚಾರ್ಯರ ಮೂರ್ತಿಗೆ ಶ್ರೀ ರುದ್ರಾಭಿಷೇಕವೂ, ಬಿಲ್ವಾರ್ಚನೆಯೂ, ಶಾಸ್ತ್ರೀಯವಾಗಿ ನೆರವೇರಿಸಿದನಂತರ ಸಾಯಂಕಾಲ ಶ್ರೀ ರೇಣುಕಭಗವತ್ಪಾದರವರ ವಿಗ್ರಹವನ್ನು ನೇತ್ರಾನಂದಕರವಾದ ಮಂಟಪದಲ್ಲಿ ಶೃಂಗರಿಸಿ ಮಂಗಳವಾದ್ಯದೊಡನೆ ಶ್ರೀಗಿರಿಯ ಕೆಳಗಡೆ ನೆಲಸಿರುವ ಜಗನ್ಮಾತೆಯಾದ ಶ್ರೀ ದೇವಾಂಬಿಕೆಯ ದೇವಾಲಯದ ಮುಂಭಾಗದಿಂದ ಶ್ರೀ ರಾಜಾಪುರದ ಮಠದ ಮಾರ್ಗವಾಗಿ ಶ್ರೀ ಬೆಟ್ಟಕ್ಕೆ ಉತ್ಸವವು ತೆರಳಿತು. ಅನಂತರ ಶ್ರೀ ಸ್ವಾಮಿಯವರ ಪ್ರಸಾದ ವಿನಿಯೋಗನಡೆದು ನೆರೆದಿದ್ದ ಸಮಸ್ತ ಭಕ್ತರೂ ಜಗದಾಚಾರ್ಯರ ಸ್ತೋತ್ರ ಮಾಡುತ್ತಾ ಜಯಘೋಷಮಾಡಿದರು. ಮಾರನೆ ಬೆಳಗ್ಗೆ ತದಂಗವಾದ ಗಣಾರಾಧನೆಯು ಭೀಮೇಶ್ವರಯಲ್ಲಿ ಸಾಯಂಕಾಲ ೫ ಗಂಟೆ ವರೆಗೂ ನಡೆಯಿತು. ಬಳಿಕ, ವೀರಶೈವ ಧರ್ಮೋದ್ಧಾರಕ್ಕಾಗಿ ಜನ್ಮವೆತ್ತಿದ ಪಂಚಾಚಾರ್ಯ ಪ್ರಭೆಯ ಪೋಷಣಕ್ಕಾಗಿ ಒಂದು ರೂಪಾಯಿ ತೆಗೆಯಲ್ಪಟ್ಟಿತು.

ಮೇಲ್ಕಂಡ ಜಯಂತಿಮಹೋತ್ಸವದಲ್ಲಿ ಭಾಗಿಗಳಾಗಿ ನೆರವೇರಿಸಿದ ಅರ್ಚಕ ಮ|| ಕೊಟ್ಟೆಹುಟ್ಟೆ ರುದ್ರಪ್ಪನವರಿಗೂ, ಮ|| ಅರ್ಚಕ ವೀರಭದ್ರಪ್ಪನವರಿಗೂ, ಚನ್ನಪಟ್ಟಣದ ಸಿಂಗರ್ ಕಂಪೆನಿ ಮ್ಯಾನೇಜರ್ ಕೆ. ಮಲ್ಲಪ್ಪನವರಿಗೂ ರೇಣುಕಭಗವತ್ಪಾದರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಶ್ರೀ ಗುರುಕಿಂಕರ,
ಚನ್ನಪಟ್ಟಣ.

ಕಡೂರು ತಾಲೂಕು ಗರುಗದಹಳ್ಳಿ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಪದ್ಧತಿಯಂತೆ ಇದೇ ಶ್ರೀಮುಖನಾಮಸಂವತ್ಸರದ ಫಾಲ್ಗುಣ ಶುದ್ಧ ೧೪ನೆಯ ದಿವಸ ಸ್ಕೂ|ಮಾ| ಎ. ಚನ್ನಪ್ಪನವರು ಅತ್ಯಂತ ಭಕ್ತಿಯಿಂದ ನೆರವೇರಿಸಿದರು. ಈ ಮಹೋತ್ಸವಕ್ಕೆ ಜಿಮುವಳ್ಳಿ, ದಿಬ್ಬೂರು, ಚಿಕ್ಕಾಂದಳ್ಳಿ, ಆಸಗೆರೆ, ದೇವರಹಳ್ಳಿ, ಶಿವಾಪುರ, ಶಿವನಗಟ್ಟ, ಮರವಂಜಿ ವಗೈರೆ ಗ್ರಾಮಗಳಿಂದ ಅನೇಕಜನ ವೀರಶೈವರು ಮತ್ತು ವೀರಶೈವೇತರರೂ ಆಗಮಿಸಿದ್ದರಲ್ಲದೆ ಬಾಣಾವರದ ಮಂಡಿ ಸಾಹುಕಾರ್ ವಿಭೂತಿ ವಿರೂಪಾಕ್ಷಪ್ಪನವರು ಸಹ ದಯಮಾಡಿಸಿದ್ದರು. ಕಣಕಟ್ಟೆ ಗ್ರಾಮದ ನೇಟಿವ್ ಪಂಡಿತ್ ಕಾಳಪ್ಪನವರು, ಸ್ಕೂಲ್ ಹೆ|| ಮಾ|| ಮ|| ರಾ|| ಎಂ. ಶ್ರೀಕಂಠಯ್ಯನವರು. ಅ|| ಮಾ|| ಗಳಾದ ಮ|| ರಾ|| ವೆಂಕಣ್ಣನವರು, ನಾರಣಪ್ಪನವರು ಬಿಟ್ಟೇನಹಳ್ಳಿ ಸ್ಕೂಲ್ ಮಾಸ್ಟರ್ ಬಿ. ಗುಂಡುರಾಯರು, ಸಹ ಆಹ್ವಾನಿಸಲ್ಪಟ್ಟಿದ್ದರು. ಈ ಮಹೋತ್ಸವಕ್ಕಾಗಿ ದಯಮಾಡಿಸಿದ್ದ ಎಲ್ಲಾ ಮಹನೀಯರಿಗೂ ಮಾಸ್ಟರ್ ಎ. ಚನ್ನಪ್ಪನವರು ಭೋಜನದ ಏರ್ಪಾಡುಗಳನ್ನು ಬಹುತೃಪ್ತಿಕರವಾಗಿ ಮಾಡಿದ್ದರು. ಗ್ರಾಮವು ತಳಿರುತೋರಣಗಳಿಂದ ಅಲಂಕೃತವಾಗಿತ್ತು. ಗ್ರಾಮದ ವಿ. ಹೆಂ. ಭೀರ್ಮಣ್ಣ ಪಟೇಲ್ ಮರಿಗೌಡರು, ಸ್ಕೂಲ್‌ಮಾಸ್ಟರು ಪಂಡಿತ ನಾರಣಪ್ಪನವರು, ಅಂಗಡಿ ಕಲ್ಲಪ್ಪ ವಗೈರೆಯವರು ಉತ್ಸವದ ವಿಷಯದಲ್ಲಿ ಸಹಾಯಕರಾಗಿದ್ದರು. ಗ್ರಾಮದ ವೀರಶೈವ ಪ್ರಮುಖರಾದ ಮ|| ರಾ|| ಬುದ್ಧಿವಂತ ಕಲ್ಲಪ್ಪನವರ ನೂತನಗೃಹದಲ್ಲಿ ತಳಿರುತೋರಣಾದಿಗಳಿಂದ ರಚಿಸಿದ್ದ ಮಂಟಪದ ಮಧ್ಯಭಾಗದ ಪೀಠಾಗ್ರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ಇರಿಸಿ ಪುಷ್ಪಹಾರಗಳಿಂದ ಅಲಂಕರಿಸಿ ಗಂಧ ಅಕ್ಷತೆ, ಪತ್ರೆ, ಪುಷ್ಪಾದಿಗಳಿಂದ ವಿಧ್ಯುಕ್ತವಾಗಿ ಪೂಜಿಸಿ, ಧೂಪ, ದೀಪ ಮಹಾಮಂಗಳಾರತಿ ನೈವೇದ್ಯಾದಿಗಳನ್ನು ಮಾಡಿದ ಮೇಲೆ ಮಾಸ್ಟರು ಎ. ಚನ್ನಪ್ಪನವರು ಜಯಂತಿಮಹೋತ್ಸವದ ಉದ್ದೇಶವನ್ನು ಕುರಿತು ಸ್ವಲ್ಪ ಹೊತ್ತು ಮಾತನಾಡಿ ಶ್ರೀಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆ ಮೇರೆ ಭೂಲೋಕದಲ್ಲಿ ಸುಪ್ರಸಿದ್ಧ ಕ್ಷೇತ್ರವೆನಿಸಿಕೊಂಡಿರುವ ಕೊಲ್ಲಿಪಾಕಿ ಶ್ರೀಸೋಮನಾಥಲಿಂಗದಿಂದ ಅವತರಿಸಿ ಗಗನಮಾರ್ಗದಿಂದ ಸಂಚರಿಸಿ ಚಾರ್ವಾಕಾದಿ ನಾಸ್ತಿಕಮತಗಳನ್ನು ಖಂಡಿಸಿ ವೇದಸಮ್ಮತವೂ ಪರಮಪವಿತ್ರವೂ ಆದ ವೀರಶೈವಮತವನ್ನು ಸ್ಥಾಪಿಸಿ ಲೋಕವಿಖ್ಯಾತರಾದ ಅಗಸ್ತ್ಯಾದಿ ಮಹರ್ಷಿಗಳನ್ನೂ ಶಿಲಗಳು, ವಿಭೀಷಣ ಮೊದಲಾದ ಚಕ್ರವರ್ತಿಗಳನ್ನೂ ವಿಕ್ರಮಾರ್ಕ ಮುಂತಾದ ರಾಜಾಧಿರಾಜರನ್ನೂ ಉದ್ಧರಿಸಿ ತಮ್ಮ ಮಹಿಮಾತಿಶಯಭಾವದಿಂದ ಗೋರಕ್ಷನಾಥ ಮೊದಲಾದವರ ಗರ್ವವನ್ನು ಹರಣಮಾಡಿ, ಲೋಕಕಂಟಕರಾಗಿದ್ದ ಯಕ್ಷರಂತವರಿಗೆಳನ್ನು ತಮ್ಮ ಭಾಲನೇತ್ರದಿಂದ ಸುಟ್ಟು ಲೋಕಕಲ್ಯಾಣವನ್ನುಂಟುಮಾಡಿ ಭೂಮಂಡಲದಲ್ಲಿ ಹದಿನಾಲ್ಕುನೂರು ವರ್ಷಗಳಿದ್ದು ಅದೇ ಕೊಲ್ಲಿಪಾಕಿ ಶ್ರೀ ಸೋಮನಾಥಲಿಂಗದಲ್ಲಿ ಐಕ್ಯರಾದ ವಿಷಯಗಳನ್ನೆಲ್ಲ ಸಭಿಕರ ಮನಸ್ಸಿಗೆ ಆನಂದವಾಗುವಂತೆ ಭಾಷಣ ಮಾಡಿದರು. ಅನಂತರ ಜಿಮುವಳ್ಳಿ ಸ್ಕೂಲ್‌ಮಾಸ್ಟರ್ ಮರುಳಸಿದ್ದಯ್ಯನವರು ಪ್ರತಿಯೊಬ್ಬ ವೀರಶೈವರೂ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಜಯಂತಿಮಹೋತ್ಸವಗಳನ್ನು ಗುರುಭಕ್ತಿಯಿಂದ ಆಯಾಯ ಶುಭದಿನಗಳಲ್ಲಿ ಆಚರಿಸಿ ಶ್ರೀ ಪೂಜ್ಯಪಾದರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಬೋಧಿಸಿದರು. ಅನಂತರ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಜಯಘೋಷವನ್ನು ಮಾಡಿ ಶ್ರೀ ರೇಣುಕಭಗವತ್ಪಾದರ ಭಾವಚಿತ್ರಪಟವನ್ನು ಪಲ್ಲಕ್ಕಿಯಲ್ಲಿರಿಸಿ ಛತ್ರಚಾಮರವಾದ್ಯವೈಭವಗಳಿಂದ ಉತ್ಸವವು ಬುದ್ಧಿವಂತ ಕಲ್ಲಪ್ಪನವರ ಮನೆಯಿಂದ ಹೊರಟು ಶ್ರೀವೀರಭದ್ರದೇವರ ದೇವಾಲಯದಲ್ಲಿ ಮಂಗಳಾರತಿಯಾಗಿ ಅಲ್ಲಿಂದ ಸಾಹುಕಾರ್ ನಂಜುಂಡಪ್ಪನವರ ಮಹಡಿಮನೆಯ ಮುಂಭಾಗದ ಬೀದಿಯಲ್ಲಿ ಹಾಯ್ದು ಸೀನೀರು ಭಾವಿಮಾರ್ಗವಾಗಿ ಸ್ವಸ್ಥಾನವನ್ನು ಸೇರಿತು. ಈ ಮಹೋತ್ಸವವನ್ನು ಗುರುಭಕ್ತಿಯಿಂದ ನೆರವೇರಿಸಿದ ಮಾಸ್ಟರ್ ಎ. ಚನ್ನಪ್ಪನವರೂ ಬುದ್ಧಿವಂತ ಕಲ್ಲಪ್ಪನವರೂ ಜಿ. ಎಂ. ರಾಮಪ್ಪನವರೂ ಮುಂತಾದವರಿಗೆ ಶ್ರೀಜಗದ್ಗುರು ರೇಣುಕಾಚಾರ್ಯರು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನಿತ್ತು ಕಾಪಾಡಲೆಂದು ಹಾರೈಸುವ

ಓರ್ವ ಉತ್ಸವಭಾಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಬೆಂಗಳೂರು.

ಈ ನಗರನಿವಾಸಿಗಳಾದ ವೀರಶೈವ ಮಂಡಳಿಯವರು ಪದ್ಧತಿಯಂತೆ ಶ್ರೀ ಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಜಯಂತೀ ಮಹೋತ್ಸವವನ್ನು ತಾ|| 12-2-34 ನೇ ಸೋಮವಾರ ಚಿಕ್ಕಪೇಟೆ ಶ್ರೀಮಹಂತಿನಮಠದಲ್ಲಿ ಅತಿವಿಜೃಂಭಣೆಯಿಂದ ನಡೆಸಿದರು. ಆ ದಿನ ಪ್ರಾತಃಕಾಲದಲ್ಲಿ ಜಗದಾಚಾರ್ಯರ ಉತ್ಸವಮೂರ್ತಿಗೆ ವಿಧ್ಯುಕ್ತವಾಗಿ ಏಕಾದಶವಾರ ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನಾದಿಗಳೂ ಮಾಡಲ್ಪಟ್ಟು ಸಾಯಂಕಾಲ ಭಕ್ತಮಾಹೇಶ್ವರರಿಗೆ ಫಲಾಹಾರಗಳು ನಡೆದವು. ಅದೇ ರಾತ್ರಿ 8 ಗಂಟೆಗೆ ಸದರಿ ಮಠಾಧ್ಯಕ್ಷರಾದ ಷ|| ಬ್ರ|| ಶ್ರೀ|| ಗಂಗಾಧರಶಿವಾಚಾರ್ಯಸ್ವಾಮಿಗಳವರ ಸನ್ನಿಧಿಯಲ್ಲಿ ಸಭೆಯು ನೆರವೇರಿತು.

ಈ ಸಭೆಗೆ ಶ್ರೀಯುತ ಅರಳೇಪೇಟೆ ಯಜಮಾನ ಪುಟ್ಟಪ್ಪನವರು, ಶ್ರೀಯುತ ದೇಶದ ಶೆಟ್ಟರು ಸಿದ್ಧಬಸಪ್ಪಶೆಟ್ಟರು, ಶ್ರೀಯುತ ಸಿದ್ಧಪ್ಪಶೆಟ್ಟರು ವೇ|| ಜಿ. ಕೆ. ರುದ್ರಾರಾಧ್ಯರು ಶ್ರೀ ಚಾಮರಾಜೇಂದ್ರ ಸಂಸ್ಕೃತಕಾಲೇಜು ಪಂಡಿತ ಕೆ. ಎಂ. ವಿಶ್ವನಾಥಶಾಸ್ತ್ರಿಗಳು ವೇ|| ಎನ್. ರುದ್ರಯ್ಯನವರು, ಶ್ರೀಯುತ ಕೆ. ನಾಗಪ್ಪನವರು, ಶ್ರೀಯುತ ಬಿ. ಸರಾಫ್ ಬಸಪ್ಪನವರು, ಶ್ರೀಯುತ ಶಾಂತವೀರಪ್ಪನ ಬುಳ್ಳಪ್ಪನವರು, ಶ್ರೀಯುತ ಅಪ್ಪಾಜಪ್ಪನವರ ಮಲ್ಲಶೆಟ್ಟಪ್ಪನವರು, ಶ್ರೀಯುತ ಯಜಮಾನ್ ಮಲ್ಲಶೆಟ್ಟಪ್ಪನವರು, ಶ್ರೀಯುತ ಕೆ. ಶ್ರೀಕಂಠಪ್ಪನವರು ಶ್ರೀಯುತ ವಿಶ್ವನಾಥಪ್ಪನವರು, ಶ್ರೀಯುತ ಗೌರೀವಿಲಾಸ ಪ್ರೆಸ್ ಶಿವಪ್ಪನವರು, ಶ್ರೀಯುತ ಕ್ಲರ್ಕ್ ಎಂ. ಎಲ್. ಶಿವಣ್ಣನವರು ಶ್ರೀಯುತ ಚಂದ್ರಶೇಖರಪ್ಪನವರು, ಇವರೇ ಮುಂತಾದ ಅನೇಕ ಮಹನೀಯರು ಆಗಮಿಸಿದ್ದರು.

ಸಭಾಪ್ರಾರಂಭದಲ್ಲಿ ವೈದಿಕವಿದ್ಯಾರ್ಥಿಗಳಿಂದ ಏಕಕಂಠವಾಗಿ ಭಗವತ್ಪಾದ ರೇಣುಕಾದಿ ಪಂಚಾಚಾರ್ಯ ಸ್ತೋತ್ರಗಳೂ ವೇದಘೋಷವೂ ಮಾಡಲ್ಪಟ್ಟ ಬಳಿಕ ಶ್ರೀಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತಪಾಠಶಾಲೆಯ ವಿದ್ಯಾರ್ಥಿಗಳು ಷಟ್‌ಸ್ಥಲ ವಿಷಯವನ್ನುದ್ದೇಶಿಸಿ ಬಹುಮನೋಹರವಾಗಿ ಪ್ರತಿಯೊಬ್ಬರ ಮನಸ್ಸನ್ನೂ ಆಕರ್ಷಿಸುವಂತೆ ಉಪನ್ಯಾಸಗಳನ್ನು ಮಾಡಿದರು.

ಅನಂತರ ಸಭಾಧ್ಯಕ್ಷರಾದ ಶ್ರೀಸ್ವಾಮಿಗಳವರು, ಶ್ರೀ ಜಗದಾಚಾರ್ಯ ಜಯಂತಿಯ ಅವಶ್ಯಕತೆಯೆಂಬ ವಿಷಯವನ್ನು ಕುರಿತು ಪ್ರಮಾಣಾನುಸಾರವಾಗಿ ಪ್ರತಿಯೊಬ್ಬರ ಹೃದಯದಲ್ಲಿ ನಾಟಿ ಆಚರಿಸಿ ಕೃತಕೃತ್ಯರಾಗುವಂತೆ ಉಪದೇಶವನ್ನು ಮಾಡಿ ಶ್ರೀಗುರುಜಯಂತಿಕಾರ್ಯವನ್ನು ವಿಶಮನಸ್ಸಿನಿಂದ ನೆರವೇರಿಸಿದ ವೀರಶೈವ ಮಂಡಲಿಯವರಿಗೆ ತಮ್ಮ ಸಂತೋಷವನ್ನು ಸೂಚಿಸಿದ್ದಲ್ಲದೆ ನಮ್ಮನ್ನಾಳುವ ಮೈಸೂರು ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬವರ್ಗಕ್ಕೂ, ಆಯುರಾರೋಗ್ಯಾದಿಭಾಗ್ಯಗಳನ್ನು ದಯಪಾಲಿಸಲೆಂದು ಜಗದಾಚಾರ್ಯರನ್ನು ಪ್ರಾರ್ಥಿಸಿ ತಮ್ಮ ಭಾಷಣವನ್ನು ವಿರಮಿಸಿದರು. ಶ್ರೀಯುತ ಸಿದ್ಧಬಸಪ್ಪಶೆಟ್ಟರು ಧನ್ಯವಾದವನ್ನು ಅರ್ಪಿಸಿದನಂತರ ಸಭೆಯು ಮುಕ್ತಾಯವಾಯಿತು.

ಅನಂತರ ನಕ್ಷತ್ರಗಳಂತೆ ಒಪ್ಪುತ್ತಿರುವ ಎಲೆಕ್ಟ್ರಿಕ್ ದೀಪಾವಳಿಗಳಿಂದಲೂ ಮಲ್ಲಿಕಾಪುಷ್ಪಗಳಿಂದಲೂ ಅಲಂಕೃತವಾದ ಭವ್ಯಾಂದೋಳಿಕೆಯಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯರ ಉತ್ಸವಮೂರ್ತಿಯನ್ನೂ, ಶ್ರೀ ಜಗದ್ಗುರು ವಿಶ್ವಾರಾಧ್ಯರ ಪಟವನ್ನೂ ಮೂರ್ತಗೊಳಿಸಿ ರಾತ್ರಿ 10 ಗಂಟೆಗೆ ಉತ್ಸವವು ಪ್ರಾರಂಭವಾಯಿತು. ಮಂಜುಳವಾದ ವೇದಘೋಷವೂ ನಾನಾವಿಧ ಮಂಗಳವಾದ್ಯಧ್ವನಿ ವಿಶೇಷಗಳೂ ಸ್ತೋತ್ರಧ್ವನಿಗಳೂ ಅಲ್ಲಲ್ಲಿ

[೬ ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೪ನೇ ಮಾರ್ಚಿ ತಾ|| ೧೨ ನೇ ಸೋಮವಾರ.

ಭಾವಸಂವತ್ಸರಾರಂಭವು.

ಜಗತ್ಸೃಷ್ಟಿಕರ್ತನಾದ ಶ್ರೀ ಪರಮೇಶ್ವರನ ಅನುಗ್ರಹದಿಂದ ನಾವುಗಳು ಶ್ರೀಮುಖಸಂವತ್ಸರವನ್ನು ಸೌಖ್ಯವಾಗಿ ಕಳೆದೆವು. ಚೈತ್ರ ಶು|| ಪ್ರತಿಪತ್ ಶುಕ್ರವಾರದಿಂದ ಶ್ರೀಭಾವಸಂವತ್ಸರವು ಮೆಲ್ಲಮೆಲ್ಲನೆ ಭೂದೇವಿಯಮೇಲೆ ಪದಾರ್ಪಣ ಮಾಡುವದು. ಈ ಶುಭದಿವಸ ನಮ್ಮ ಭರತಭೂಮಿಯಲ್ಲಿ ಜನ್ಮಧಾರಣ ಮಾಡಿದ ಪ್ರತಿಯೊಬ್ಬ ಹಿರಿಯರು ಕಿರಿಯರು ಆರ್ಯಮಹಿಳೆಯರೂ ತಮ್ಮ ತಮ್ಮ ಮಂದಿರಗಳನ್ನು ವಿಧವಿಧವಾದ ತೋರಣಗಳಿಂದಲೂ ಸಾರಣೆಕಾರಣೆಗಳಿಂದಲೂ ಅಲಂಕರಿಸಿಕೊಂಡು ಈ ನೂತನ ವರ್ಷಾಗಮನವನ್ನು ಬಹಳ ಪ್ರೀತಿಯಿಂದ ಎದುರುಗೊಳ್ಳುತ್ತಾರೆ. ವನದೇವತೆಯು ಸಹ ತನ್ನ ಮಿತ್ರನಾದ ವಸಂತನನ್ನು ಸಂಗಡಲೇ ಕರೆದುಕೊಂಡು ಬರುವನೆಂಬ ಸಂತೋಷದಿಂದ ನೂತನವಾದ ಚಿಗುರುಗಳಿಂದಲೂ ಘಮಘಮಿಸುತ್ತಿರುವ ಪುಷ್ಪನಿಚಯದಿಂದಲೂ ಕೂಡಿಕೊಂಡು ಸ್ವಾಗತಿಸುತ್ತಿರುವಳು. ಆಂಗ್ಲೇಯರು ಜನವರಿ ೧ ನೆಯ ತಾರೀಖಿನ ದಿವಸವನ್ನು ಹೇಗೆ ಪೂಜ್ಯಬುದ್ಧಿಯಿಂದ ಭಾವಿಸುವರೋ ಹಾಗೆ ಯುಗಾದಿಯೆಂದು ಕರೆಯಲ್ಪಡುತ್ತಿರುವ ಚೈತ್ರ ಶುದ್ಧ ಪ್ರತಿಪತ್ತನ್ನೂ ನಮ್ಮ ವೇದ ಶಾಸ್ತ್ರ ಪುರಾಣೇತಿಹಾಸಾವಲಂಬಿಗಳಾದ ಭಾರತೀಯರು ಬಹು ಪೂಜ್ಯಬುದ್ಧಿಯಿಂದ ಭಾವಿಸುವರು. ಒಂದರ ಮೇಲೊಂದಾಗಿ ಅನಂತಾನಂತ ದಿವಸಗಳು ಸುತ್ತುತ್ತಿದ್ದರೂ ಆ ದಿವಸಗಳೆಲ್ಲಾ ಅಷ್ಟು ಪ್ರಾಶಸ್ತ್ಯವನ್ನು ಪಡೆಯದೆ ಈ ಪ್ರಥಮ ದಿವಸವು ಮಾತ್ರ ಇಷ್ಟು ಪ್ರಾಶಸ್ತ್ಯವನ್ನು ಪಡೆಯಲು ಕಾರಣವೇನೆಂಬ ಸಂಶಯವು ನಮ್ಮ ಹೃದಯಭೂಮಿಯಲ್ಲಿ ಅಂಕುರಿಸುವದು.

“ಶಕ್ತಯೋಽಸ್ಯಜಗತ್ ಕೃತ್ಸ್ನಂ ಶಕ್ತಿಮಾಂಶ್ಚ ಮಹೇಶ್ವರಃ ||” ಎಂಬ ಪ್ರಮಾಣಬಲದಿಂದ ಪರಿದೃಶ್ಯಮಾನವಾದೀ ಜಗತ್ತೆಲ್ಲವೂ ಪರಮೇಶ್ವರನಲ್ಲಿ ಅಡಕವಾಗಿರುವ ಶಕ್ತಿಗಳೆಂತಲೂ ಪರಮೇಶ್ವರನು ಇಂತಹ ಶಕ್ತಿಗಳಿಂದ ಕೂಡಿರುವನೆಂತಲೂ ಶಾಸ್ತ್ರದಲ್ಲಿ ಉಕ್ತವಾಗಿರುವುದರಿಂದ ಅಂತಹ ಜಗದಾಧಾರನಾದ ಪರಮೇಶ್ವರನಲ್ಲಿ ನಾಮರೂಪಕ್ರಿಯೆಗಳೊಂದೂ ಇಲ್ಲದೆ ಅವಿಭಕ್ತವಾಗಿರುವ ಚೇತನಾಚೇತನಾತ್ಮಕಗಳಾದ ಆ ಶಕ್ತಿಗಳು ಒಂದು ಸಮಯದಲ್ಲಿ ಪರಮೇಶ್ವರನ ಸಂಕಲ್ಪದಿಂದ ವಿಕಾಸಾವಸ್ಥೆಯನ್ನು ಹೊಂದಿ ತಮ್ಮ ತಮ್ಮ ವಾಸನಾನುಗುಣವಾಗಿ ಅನಂತದೇಹಗಳನ್ನು ಧರಿಸಿದುವು. ಇದನ್ನೇ ಸೃಷ್ಟಿಯೆಂದು ಕರೆಯುವರು. ಚೈತ್ರ ಶುದ್ಧ ಪ್ರತಿಪತ್ತಿನ ದಿನವೇ ಈ ಸೃಷ್ಟಿಯ ದಿನವು. ಈ ಜಗತ್ತನ್ನು ಪಾಲಿಸುವುದಕ್ಕಾಗಿ ಜಗಜ್ಜನಕನಾದ ಆ ಪರಮೇಶ್ವರನು ಮಾಸ ಪಕ್ಷ ಋತು ಸಂವತ್ಸರ ಗ್ರಹ ಕಾಲ ಗಣನಾದಿ ಸರ್ವಸಾಮಗ್ರಿಯನ್ನು ಯೋಜಿಸಿ ದೇವತೆಗಳನ್ನು ಕರೆದು ಅವರಿಗೆ ಸಕಲದಿಕ್ಪಾಲನಾಧಿಕಾರವಂ ಯಥಾಯೋಗ್ಯವಾಗಿ ಕೊಟ್ಟು, ಲೋಕರಕ್ಷಣ ಭಾರವನ್ನು ವಹಿಸಿದನು. ಆಗ ದೇವತೆಗಳೆಲ್ಲರೂ ಒಟ್ಟುಗೂಡಿ ಹಿಮಾಲಯಕ್ಕೆ ಬಂದು ಈಶ್ವರಾಜ್ಞೆಯಂತೆ ಲೋಕರಕ್ಷಣಾಕಾರ್ಯಕ್ಕಾರಂಭಿಸಿದರು. ಅಂದಿನಿಂದಲೂ ಈ ದಿವಸವು ‘ಯುಗಾದಿ’ ಎಂಬ ಪೂಜ್ಯನಾಮದಿಂದ ಕರೆಯಲ್ಪಡುತ್ತ ಭಾರತೀಯಾಂಗಣದಲ್ಲಿ ದೊಡ್ಡ ಹಬ್ಬವಾಗಿ ಪರಿಣಮಿಸಿತು.

ಮೇಯುವುದಕ್ಕೆ ಹೋದ ಗೋವುಗಳು ಸಾಯಂಕಾಲವಾದೊಡನೆಯೇ ಎಲ್ಲಿದ್ದರೂ ತಮ್ಮ ತಮ್ಮ ಕರುಗಳನ್ನು ಹುಡುಕಿಕೊಂಡು ಹೇಗೆ ಮನೆಗೆ ಬರುವುವೋ ಹಾಗೆ ದೈವಗುರುಭಕ್ತಿಯುಳ್ಳ ಪ್ರತಿಯೊಬ್ಬ ಭಾರತೀಯನೂ ಯಾವ ದೇಶದಲ್ಲಿದ್ದರೂ ತಮ್ಮ ಮಕ್ಕಳ ಮರಿಗಳೊಡನೆ ಈ ಪವಿತ್ರವಾದ ಯುಗಾದಿಹಬ್ಬವನ್ನು ಆಚರಿಸುವುದಕ್ಕಾಗಿ ತಮ್ಮ ತಮ್ಮ ಮನೆಗಳಿಗೆ ಬರುವರು. ಯುಗಾದಿಯು ಸಮೀಪಿಸಿದಹಾಗೆಲ್ಲಾ ಚಾತಕವು ಮೇಘದ ಬರವನ್ನೇ ಅಪೇಕ್ಷಿಸುವಂತೆ ಮನೆಯಲ್ಲಿರುವ ಕಳತ್ರಪುತ್ರಾದಿಗಳೂ ಸಹ ತಮ್ಮ ಹಿರಿಯರ ದಾರಿಯನ್ನೇ ಎದುರುನೋಡುತ್ತಿರುವರು. ಈ ಹಬ್ಬದಲ್ಲಿ ಎಂತಹ ಬಡವನಾಗಲಿ ಶ್ರೀಮಂತನಾಗಲಿ ಭಿಕ್ಷುಕರಾಗಲಿ ಎಲ್ಲರೂ ಇದುವರಿವಿಗೂ ಧರಿಸಿದ್ದ ಹಳೆಯಬಟ್ಟೆಗಳನ್ನು ಬಿಟ್ಟು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಹೊಸಬಟ್ಟೆಗಳನ್ನು ಧರಿಸುವ ಸಂಪ್ರದಾಯವು ಬಂದಿರುತ್ತದೆ. ಇದು ನಾವು ಮಾಡಿದ ಪಾಪಕರ್ಮಗಳನ್ನು ಬಿಟ್ಟು ಪುಣ್ಯಾಚರಣೆಯನ್ನು ಪ್ರಾರಂಭಿಸುವ ಶುಭಸೂಚನೆಯಾಗಿದೆ. ಈ ಹಬ್ಬದ ದಿವಸ ಉಷಃಕಾಲಕ್ಕೆದ್ದು ಮುಖಮಾರ್ಜನಾದಿ ವಿಧಿಯನ್ನು ಮುಗಿಸಿ ಎಲ್ಲರೂ ತೈಲಲೇಪನಪೂರ್ವಕವಾಗಿ ಬಿಸಿನೀರಿನಿಂದ ಸ್ನಾನಮಾಡಿ ತಮ್ಮತಮ್ಮ ನಿತ್ಯಕರ್ಮಗಳನ್ನು ಮುಗಿಸಿ ಕುಲಗುರುಗಳನ್ನು ಮನೆಗೆ ಬಿಜಯ ಮಾಡಿಸಿಕೊಂಡುಬಂದು ಉಚ್ಚಾಸನದಲ್ಲಿ ಕುಳ್ಳಿರಿಸಿ ಆಚಮನಪ್ರಾಣಾಯಾಮಗಳನ್ನು ಮಾಡಿ ಈ ವರ್ಷದ ಪಂಚಾಂಗರೀತ್ಯಾ ಕಾಲದೇಶಾದಿಗಳನ್ನುಚ್ಚರಿಸಿ ‘ಮಮ ಆತ್ಮನಃ ಸಕುಟುಂಬಸ್ಯ ದೀರ್ಘಾಯುರಾರೋಗ್ಯಾದಿ ಸಕಲಸುಖಸಂಪತ್ಯರ್ಥಂ ಅಸ್ಮಿನ್ ಭಾವಸಂವತ್ಸರೇ ಅಸ್ಮದ್ಗೃಹೇ ವರ್ಷಾಂತನಿತ್ಯಮಂಗಲಾವಾಪ್ತ್ಯೇ ಗುರುಪೂಜಾಂ ನಿಂಬಪತ್ರಭಕ್ಷಣಂಚ ಕರಿಷ್ಯೆ’ ಎಂದು ಸಂಕಲ್ಪಮಾಡಿ ಕ್ರಮದಿಂದ ಗುರುಪೂಜೆಯನೆಸಗಿ ನಿಂಬಪತ್ರ (ಬೇವು ಬೆಲ್ಲ) ವನ್ನು ಸೇವಿಸಬೇಕು. ಅನಂತರ ಇಷ್ಟಮಿತ್ರರೊಂದಿಗೆ ಸುಖಭೋಜನಮಾಡಿ ನೂತನಾಂಬರಗಳನ್ನು ಧರಿಸಿ ಕುಲದೇವರ ದರ್ಶನ ಮಾಡಿ ಸಾಯಂಕಾಲ ಗುರುಮಠಗಳಿಗೆ ಹೋಗಿ ಪಂಚಾಂಗ ಶ್ರವಣ ಮಾಡುವುದರಿಂದ ಈ ವರ್ಷವೆಲ್ಲವೂ ಸುಖಸಂಪತ್ತುಗಳುದಿಸಿ ಅಖಿಲಕಷ್ಟಗಳು ನಿವಾರಣೆಯಾಗುವವು.

ವಾಹೀಕೂಚ ಕಟಾಕ ಘೂರ್ಜರಕುಲಾಸ್ತತ್ಸ್ಥಾಃ ಕ್ಷಿತೀಶಾಃ ಕ್ಷಿತೌ |
ದೇವಸ್ಪರ್ಧಿ ಅನ್ನೈಶ್ಚ ಸಸ್ಯನಿಕರೈಃ ನಾನಾವಿಧೈರಾಕರೈಃ |
ಧಾತ್ರೀಭಾತಿ ನಿರಂತರಂ ಕುಸುಮಿತಶ್ರೀಖಂಡ ಪುಂಸ್ಕೋಕಿಲ |
ಧ್ರಾಣಾಹ್ಲಾದಗಾನಮೋದಿತವನೈರ್ಭಾವಾಬ್ದಯಾಬ್ದೇಸದಾ ||

ಈ ಭಾವಸಂವತ್ಸರದಲ್ಲಿ ಕೆರೆ ಕಟ್ಟೆ ಬಾವಿಗಳು ಜಲಭರಿತಗಳಾಗುತ್ತವೆ. ಜನರೆಲ್ಲರೂ ದೇವತೆಗಳೊಡನೆ ಸ್ಪರ್ಧಿಸುವರು. ಭೂಮಿಯು ಪೈರುಪಚ್ಚೆಗಳಿಂದಲೂ ಗಿಳಿ ಕೋಗಿಲೆ ನವಿಲು ಭ್ರಮರಾದಿಗಳ ಇಂಪಾದ ಗಾನದಿಂದಲೂ ಮನೋಹರಗಳಾದ ಉದ್ಯಾನವನಗಳಿಂದಲೂ ಕಂಗೊಳಿಸುವವು. ರಾಜರು ಯುದ್ಧಾದಿಗಳ ಗೋಜಿಗೆ ಹೋಗದೆ ಸ್ವಸ್ಥರಾಗಿರುತ್ತಾರೆ. ಶುಕ್ರನು ರಾಜನಾಗಿರಲಾಗಿ ಜನರು ಬಂಧುಗಳೊಡಗೂಡಿ ಮೃಷ್ಟಾನ್ನಭೋಜನ ಮಾಡುತ್ತ ಕಾಮಿನಿಯರೊಡನೆ ವೀಣಾದಿಗಾನಾಲಾಪಗಳನ್ನಾಲಿಸುತ್ತ ಮಧುಪಾನಾಸಕ್ತತೆಯಿಂದ ಅತಿಕಾಮುಕರಾಗುವರು. ಆ ಶುಕ್ರನೇ ಮಂತ್ರಿಯಾಗಿರಲಾಗಿ ಸ್ತ್ರೀಪುರುಷರಲ್ಲಿ ಪರಸ್ಪರ ಪ್ರೀತಿಯು ಹೆಚ್ಚುವುದು. ಗೋವುಗಳು ಹೆಚ್ಚಾಗಿ ಹಾಲು ಕೊಡುತ್ತವೆ. ವೃಕ್ಷಗಳು ಫಲಿಸುತ್ತವೆ.

ಸ್ವಯಂರಾಜಾ ಸ್ವಯಂಮಂತ್ರೀ ಯಸ್ಮಿನ್ನಬ್ದೇ ಭವೇತ್ತದಾ |
ಚೋರಾಗ್ನಿ ಶಸ್ತ್ರರೋಗೈಶ್ಚ ಪೀಡ್ಯಂತೇ ಭುವಿ ಮಾನವಾಃ ||

ಎಂಬ ಪ್ರಮಾಣಬಲದಿಂದ ಈ ಸಂವತ್ಸರದಲ್ಲಿ ಶುಕ್ರನೊಬ್ಬನೇ ರಾಜನಾಗಿಯೂ ಮಂತ್ರಿಯಾಗಿಯೂ ಇರುವುದರಿಂದ ಜನಗಳು ಕಳ್ಳರಿಂದಲೂ, ಬೆಂಕಿಯಿಂದಲೂ, ಶಸ್ತ್ರಗಳಿಂದಲೂ, ವ್ಯಾಧಿಗಳಿಂದಲೂ ನಾನಾವಿಧ ಕಷ್ಟಕ್ಕೀಡಾಗುವರು.

ಗುರುವು ಸೇನಾಧಿಪನಾಗಿರಲು ಸುವೃಷ್ಟಿಯಾಗುತ್ತದೆ. ಪ್ರಜೆಗಳಲ್ಲಿ ಪರಸ್ಪರ ಪ್ರೇಮವು ಬೆಳೆಯುವದು. ದೇವೋತ್ಸವಗಳು ನಡೆಯುವುವು. ರಾಜರು ಪ್ರಜೆಗಳಿಗೆ ಹರ್ಷವನ್ನುಂಟುಮಾಡುವರು. ಚಂದ್ರನು ಸಸ್ಯಾಧಿಪತಿಯಾಗಿರಲು ತರೀ ಮತ್ತು ಖುಷ್ಕಿ ಭೂಮಿಗಳು ಚೆನ್ನಾಗಿ ಬೆಳೆಯುತ್ತವೆ. ಬೂದುಮಣ್ಣಿನಭೂಮಿಯು ಚೆನ್ನಾಗಿ ಫಲಕೊಡುವದು. ಶನಿಯು ಧಾನ್ಯಾಧಿಪತಿಯಾಗಿರಲಾಗಿ ಕಪ್ಪುಧಾನ್ಯಗಳೂ ಸಣ್ಣಸಣ್ಣ ಧಾನ್ಯಗಳೂ ಫಲಿಸುತ್ತವೆ. ಕಪ್ಪುಮಣ್ಣಿನ ಭೂಮಿಯಲ್ಲಿ ಬೆಳೆಯು ಚೆನ್ನಾಗಿ ಬರುತ್ತದೆ. ಗುರುವು ಅರ್ಘಾಧಿಪತಿಯಾಗಿರಲಾಗಿ ಸುವೃಷ್ಟಿಯೂ ಧನಧಾನ್ಯಸಮೃದ್ಧಿಯೂ ಆಗುವದು. ಅಲ್ಲಲ್ಲಿ ಉತ್ಸವಗಳು ನಡೆಯುತ್ತವೆ. ಗುರುವು ಮೇಘಾಧಿಪತಿಯಾಗಿರಲಾಗಿ ಪದಾರ್ಥಗಳಿಗೆ ಬೆಲೆಯು ಕಡಿಮೆಯಾಗುತ್ತದೆ. ಮಳೆಯು ಚೆನ್ನಾಗಿ ಆಗುವದು. ಜನಗಳಿಗೆ ರೋಗಭಯವಿಲ್ಲವು. ಬುಧನು ರಸಾಧಿಪತಿಯಾಗಿರಲಾಗಿ ಹಿಪ್ಪಲಿ, ಶುಂಠಿ, ಇಂಗು, ತುಪ್ಪ, ಬೆಲ್ಲ, ಸಕ್ಕರೆ ಇವುಗಳಿಗೆ ಬೆಲೆ ಹೆಚ್ಚುತ್ತದೆ. ರವಿಯು ನೀರಸಾಧಿಪತಿಯಾಗಿರಲಾಗಿ ತಾಮ್ರ, ಶ್ರೀಗಂಧ, ರತ್ನ, ಮಾಣಿಕ್ಯ, ಮುತ್ತು ಇವುಗಳು ಹೇರಳವಾಗಿ ಸಿಕ್ಕುತ್ತವೆ. ಕೃಷ್ಣನು ಪಶುನಾಯಕನಾಗಿರಲಾಗಿ ದನಕರುಗಳ ವೃದ್ಧಿಯೂ ಸುಭಿಕ್ಷವೂ ಉಂಟಾಗುತ್ತದೆ. ಪೈರುಗಳು ಚೆನ್ನಾಗಿ ಬೆಳೆಯುತ್ತವೆ. ಪದಾರ್ಥಗಳು ಅಗ್ಗವಾಗುತ್ತವೆ. ಪಶುಗಳಿಗೆ ಹುಲ್ಲು ವಿಶೇಷವಾಗಿ ಸಿಗುತ್ತದೆ.

ಈ ವರ್ಷ ನೀಲಮೇಘವು ಮೇರುವಿಗೆ ಆಗ್ನೇಯ ಭಾಗದಲ್ಲಿ ಹುಟ್ಟಿ ಅತಿವೃಷ್ಟಿಯನ್ನುಂಟುಮಾಡುತ್ತದೆ. ಮಳೆ ೪ ಕೊಳಗ, ಗಾಳಿ ೩ ಕೊಳಗ, ಕೊಳಗವು ೬೦ ಗಾವುದ ವಿಸ್ತೀರ್ಣವುಳ್ಳದಾಗಿಯೂ ೧೦೦ ಗಾವುದ ಎತ್ತರವುಳ್ಳದಾಗಿಯೂ ಇರುತ್ತದೆ. ಮಳೆಯು ಒಟ್ಟು ೨೦ ಭಾಗದಲ್ಲಿ ೧೦ ಭಾಗವು ಸಮುದ್ರಗಳಲ್ಲೂ ೬ ಭಾಗವು ಪರ್ವತಗಳಲ್ಲೂ ಮಿಕ್ಕ ನಾಲ್ಕು ಭಾಗವು ಭೂಮಿಯಮೇಲೂ ಬೀಳುತ್ತದೆ.

ಶ್ರೀಮುಖ ಸಂವತ್ಸರದಂತೆ ಈ ಭಾವಸಂವತ್ಸರದಲ್ಲೂ ಗುರುವು ಕನ್ಯಾ ತುಲಾ ವೃಶ್ಚಿಕ ಈ ಮೂರು ರಾಶಿಗಳಲ್ಲಿ ಸಂಚರಿಸುವುದರಿಂದ ರಾಜರಿಗೂ ಸಾಧುಗಳಿಗೂ ಗುರುಜನರಿಗೂ ಪೀಡೆ, ಅತಿವೃಷ್ಟಿ, ಹುಚ್ಚುಹೊಳೆ, ಪ್ರಪಂಚದಲ್ಲಿ ಒಟ್ಟು ೬ ಕೋಟಿ ಪ್ರಜಾನಾಶ ಮುಂತಾದ ದುಷ್ಫಲಗಳ ಸೂಚನೆಯಾಗುವುದು. ಈ ಫಲವು ಮಾರ್ಗಶೀರ್ಷ ಕೃಷ್ಣ, ಪುಷ್ಯ, ಮಾಘ, ಫಾಲ್ಗುಣ ಶುಕ್ಲ ಈ ಕಾಲದಲ್ಲಿ ನಡೆಯುವದು. ಹೀಗೆ ಪಂಚಾಂಗಫಲವು ಶ್ರುತವಾಗಿದ್ದರೂ ಮಹಾಚಾರ್ಯರ ಕೃಪೆಯಿಂದ ಕಳೆದ ವರ್ಷದಂತೆ ನಮ್ಮ ಭಾರತೀಯರು ಯಾವವಿಧವಾದ ವಿಪತ್ತಿಗೂ ಸಿಕ್ಕದೆ ದೀರ್ಘಾಯುರಾರೋಗ್ಯಾದಿ ಅಖಿಲ ವೈಭವಾತಿಶಯಗಳನ್ನು ಪಡೆಯಲೆಂದು ದೇವರನ್ನು ಪ್ರಾರ್ಥಿಸುತ್ತೇವೆ.

ಸ್ವಸ್ತಿಪ್ರಜಾಭ್ಯಃ ಪರಿಪಾಲಯಂತಾಂ |
ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ ||
ಗೋಬ್ರಾಹ್ಮಣೇಭ್ಯಶ್ಶುಭಮಸ್ತು ನಿತ್ಯಂ |
ಲೋಕಾಸ್ಸಮಸ್ತಾಸ್ಸುಖಿನೋ ಭವಂತು ||
ಕಾಲೇವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ |
ದೇಶೋಯಂ ಕ್ಷೋಭರಹಿತಃ ಬ್ರಾಹ್ಮಣಾಸ್ಸಂತು ನಿರ್ಭಯಾಃ ||
ಅಪುತ್ರಾಃ ಪುತ್ರಿಣಸ್ಸಂತು ಪುತ್ರಿಣಸ್ಸಂತು ಪೌತ್ರಿಣಃ |
ಅಧನಾಸ್ಸಧನಾಸ್ಸಂತು ಜೀವಂತು ಶರದಾಂ ಶತಂ ||

ಒಳದೇಶದ ವೃತ್ತಾಂತಗಳು.

ಬೆಂಗಳೂರು ಹೊಸತರಗುಪೇಟೆಯಲ್ಲಿರುವ ಅಮರ ನಾರಾಯಣ ಫ್ಲೋರ್ ಮಿಲ್ಲಿಗೆ ಕಳೆದ ಸೋಮವಾರ ಆಕಸ್ಮಾತ್ ಬೆಂಕಿ ಬಿದ್ದು ಸಮಾರು 4000 ರೂ. ಗಳು ನಷ್ಟವಾಯಿತೆಂದು ತಿಳಿದುಬಂದಿದೆ.

ದೆಹಲಿಯಲ್ಲಿ ನಡೆಯಲಿರುವ ಅಖಿಲಭಾರತ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳ ಮಹಾಸಭೆಗೆ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರೂ, ಶ್ರೀ|| ಎನ್. ಎಸ್. ಸುಬ್ಬರಾಯರೂ, ಇಂಜನಿಯರ್ ಕಾಲೇಜಿನ ಪ್ರಿನ್ಸಿಪಾಲರು ಪ್ರತಿನಿಧಿಗಳಾಗಿ ಹೋಗಿರುತ್ತಾರೆ.

ಕಳೆದ ಫೆಬ್ರವರಿ 3 ನೇ ತಾರೀಖಿನ ದಿವಸ ರಾಜಧಾನಿಯಲ್ಲಿ ನಡೆದ ಪ್ರಜಾಪ್ರತಿನಿಧಿಸಭೆಗೆ ಶ್ರೀ|| ಟಿ. ಮರಿಯಪ್ಪನವರು, ಶ್ರೀ|| ಪಿ. ಸೀತಾರಾಮಯ್ಯನವರು, ಶ್ರೀ|| ರಾವ್ ಸಾಹೇಬ್ ಎಂ. ರಾಮಸ್ವಾಮಿಯವರು, ಮತ್ತು ಶ್ರೀ|| ಜಿ. ಆರ್. ಜೋಯ್ಸರವರು ಮೆಂಬರರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಚಿಂತಾಮಣಿಯ ಮಹಾಲಕ್ಷ್ಮಮ್ಮನ ಮೊಕದ್ದಮೆಯ ವಾದವಿವಾದವು ಹೈಕೋರ್ಟಿನಲ್ಲಿ ಕಳೆದ 5, 6, 8 ನೇ ತಾರೀಖುಗಳಲ್ಲಿ ನಡೆಯಿತು ಅಪರಾಧಿಗಳ ಪರವಾಗಿ ಮದ್ರಾಸಿನ ಮಿ|| ನ್ಯೂಜೆಂಟ್‌ರವರೂ ವಾದಿಯ ಪರವಾಗಿ ಸರಕಾರಿ ನ್ಯಾಯವಾದಿಗಳಾದ ಮಿ|| ನಾಗೇಶ್ವರ ಅಯ್ಯರ್‌ರವರೂ ವಕಾಲತ್ತು ವಹಿಸಿದ್ದರು.

ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಫಿಟ್ಟರ್ ಅಲೆಗ್ಝಾಂಡರ್ ಎಂಬುವನು ತನ್ನ ಹೆಂಡತಿಯನ್ನು ಕೊಂದನೆಂಬ ಆಪಾದನೆಯ ಮೇಲೆ ವಿಚಾರಣೆಗೆ ಗುರಿಯಾಗಿದ್ದನು. ಶಿವಮೊಗ್ಗಾ ಸೆಷನ್ಸ್ ಜಡ್ಜರಾದ ಶ್ರೀ|| ಎಚ್. ಕೆ. ವೀರಬಸವಯ್ಯನವರು ಮೊಕದ್ದಮೆಯನ್ನು ವಿಚಾರಣೆ ಮಾಡಿ ಅಪರಾಧಿಗೆ ಮರಣಾಂತ ಗಡೀಪಾರು ಶಿಕ್ಷೆಯನ್ನು ವಿಧಿಸಿರುತ್ತಾರೆ.

ಕಳೆದವಾರ ನಮ್ಮ ಪತ್ರಿಕೆಯ ಮುಖಪತ್ರದಲ್ಲಿ ಪ್ರಕಟವಾಗಿರುವ ಬಿಡದಿಯಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವದ ಲೇಖನದಲ್ಲಿ “ಶ್ರೀ ಭವನದ ಮುಂಭಾಗದಲ್ಲಿ ಶ್ರೀ ರೇಣುಕವಿಜಯಪುರಾಣಪ್ರವಚನವು ನಡೆಸಲ್ಪಟ್ಟಿತೆಂದು” ಪ್ರಿಂಟಾಗಿರುವದನ್ನು “ಶ್ರೀ ಶಿವಭವನದ ಮುಂಭಾಗದಲ್ಲಿ” ಎಂದು ಓದಿಕೊಳ್ಳಬೇಕಾಗಿ ಕೋರುತ್ತೇವೆ.

ಕೃಷ್ಣರಾಜಪೇಟೆ ಸೆಂಟರಿಗೆ ಈ ವರ್ಷ ಲೋವರ್ ಸೆಕೆಂಡರೀಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಮ|| ರಾ|| ಕೆ. ಪಿ. ಶಾಂತಪ್ಪನವರು ಊಟ ಮತ್ತು ವಸತಿಗಳಿಗೆ ಏರ್ಪಾಡುಮಾಡಿರುತ್ತಾರೆ. ಬರತಕ್ಕ ವಿದ್ಯಾರ್ಥಿಗಳು ಇದೇ ಮಾರ್ಚಿ 15 ನೇ ತಾರೀಖಿನೊಳಗಾಗಿ ತಾವು ವ್ಯಾಸಂಗಮಾಡುವ ಪಾಠಶಾಲೆಯ ಹೆಡ್ಮಾಸ್ಟರ ಮೂಲಕ ಕೃಷ್ಣರಾಜಪೇಟೆ ಮಿಡಲ್‌ಸ್ಕೂಲ್ ಮಾಸ್ಟರ್ ಮ|| ರಾ|| ಎಚ್. ಎಚ್. ಶಿವಯ್ಯನವರಿಗೆ ತಿಳುಹಿಸಬೇಕಾಗಿ ಸೂಚಿಸಿದೆ.

ರಾಜಧಾನಿಯ ಮೆಸರ್ಸ್ ಥಿಯೋಬಾಲ್ಡ್ ಬ್ರದರ್ಸ್ ರವರಲ್ಲಿ ಗುಮಾಸ್ತರಾಗಿದ್ದ ಮಿ|| ಆರ್. ಕೃಷ್ಣಮೂರ್ತಿ ಎಂಬುವರು ಮೇಲ್ಕಂಡ ಕಂಪೆನಿಗೆ ಸಂಬಂಧಪಟ್ಟ ಸುಮಾರು 2,700 ರೂ. ಗಳನ್ನು ದುರುಪಯೋಗ ಪಡಿಸಿದರೆಂಬ ಆಪಾದನೆಯ ಮೇಲೆ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ವರ್ಷದಿಂದಲೂ ಮೊಕದ್ದಮೆಯು ನಡೆಯುತ್ತಿತ್ತು. ಕಳೆದವಾರ ಮ್ಯಾಜಿಸ್ಟ್ರೇಟರು ಅಪರಾಧವು ರುಜುವಾತಾಗಲಿಲ್ಲವೆಂದು ಆಪಾದಿತರ ಮೇಲಿನ ಛಾರ್ಜನ್ನು ವಜಾಮಾಡಿರುತ್ತಾರೆ.

ರಾಜಧಾನಿಯ ‘ನ್ಯೂ ಅಪೆರಾ ಟಾಕೀಸ್’ ಕಂಪೆನಿಯವರು ಕಳೆದ ಗುರುವಾರದ ದಿವಸ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಲ್ಲಿ ‘ವೈಟ್ ಜಾಂಬಿ’ ಎಂಬ ವಾಕ್ಚಲನಚಿತ್ರವನ್ನು ಪ್ರದರ್ಶಿಸಿ ಅದರಿಂದ ಉತ್ಪತ್ತಿಯಾದ ಸುಮಾರು 600 ರೂ. ಗಳನ್ನು ಭೂಕಂಪದ ನಿಧಿಗೆ ಸಮರ್ಪಿಸಿರುತ್ತಾರೆ. ಅದರಂತೆಯೇ ರಾಜಧಾನಿಯ ‘ಆರ್ಟ್ಸ್ ಕ್ಲಬ್’ ನವರೂ ಟೌನ್‌ಹಾಲಿನಲ್ಲಿ ಮುನಿಸಿಪಲ್ ಪ್ರೆಸಿಡೆಂಟರಾದ ಮಿ|| ಬಿ. ಟಿ. ಕೇಶವಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಒಂದು ನಾಟಕವನ್ನು ಅಭಿನಯಿಸಿ ಉತ್ಪತ್ತಿಯನ್ನು ಭೂಕಂಪದ ನಿಧಿಗೆ ಸಮರ್ಪಿಸಿರುತ್ತಾರೆ. ಸ್ತುತ್ಯ!

ವರ್ತಮಾನಸಂಗ್ರಹ.

ಶ್ರೀ|| ಬಾಬುರಾಜೇಂದ್ರಪ್ರಸಾದರವರ ಬೀಹಾರ್ ಭೂಕಂಪದ ನಿಧಿಗೆ ಇದುವರೆಗೆ 19 ಲಕ್ಷರೂಪಾಯಿಗಳು ಕೂಡಿರುತ್ತವೆ.

ಕಳೆದ ಮಾರ್ಚಿ 3ನೇ ತಾರೀಖಿನ ದಿವಸ ಹೈದರಾಬಾದ್ ನೈಜಾಮರ ಕಿರಿಯಸಹೋದರರಾದ ನವಾಬ್ ಸಲಾಬತ್‌ಜಂಗ್‌ರವರು ಮೃತಪಟ್ಟರು.

ಇದೇ ಮಾರ್ಚಿ 3ನೇ ತಾರೀಖು ಶನಿವಾರ ಬೆಳಗ್ಗೆ ಮುಂಬಯಿ ನಗರದ ಸೆವರಿ ಮೊಹಲ್ಲೆಯಲ್ಲಿದ್ದ ಜಪಾನದವರ ಎರಡು ಅರಳೆ ಉಗ್ರಾಣಗಳಿಗೆ ಬೆಂಕಿಬಿದ್ದು 2,500 ಅರಳೆಮೂಟೆಗಳು ಸುಟ್ಟು ಭಸ್ಮವಾದುವು.

ರಾಜಪಾಹಿಯ ಸಮೀಪದಲ್ಲಿರುವ ಸಾಪ್‌ನಿಹಟ್ ಮತ್ತು ಪೆನ್ಸೈಲ್ ಎಂಬ ಗ್ರಾಮಗಳಲ್ಲಿ ಅಪಾರವಾದ ಆನೆಕಲ್ಲಿನ ಮಳೆಯು ಹೊಯ್ದು 7 ಜನರು ಮೃತಪಟ್ಟರು. 14 ಜನರಿಗೆ ತುಂಬಾ ಗಾಯಗಳಾಗಿರುವುವು.

ತಿಪ್ಪೇರಾಡಿಸ್ಟ್ರಿಕ್ಟಿನ ಹರೇಂದ್ರಲಾಲ್‌ರಾಯ್ ಎಂಬ ಒಬ್ಬ ಜಮೀನ್ದಾರರು ಒಂದು ಜಮೀನಿನ ಸಂಬಂಧವಾದ ಜಗಳದಲ್ಲಿ ಒಬ್ಬ ಮುಸಲ್ಮಾನ್‌ರೈತನನ್ನು ಖೂನಿಮಾಡಿದರೆಂಬ ಆಪಾದನೆಯಮೇಲೆ 10 ವರ್ಷಗಳ ಕಠಿಣಶಿಕ್ಷೆಗೆ ಗುರಿಯಾದರು.

ಬಂಗಾಳಾಪ್ರಾಂತಕ್ಕೆ ಸೇರಿದ ಧಾಂಚೇಲ್ ಎಂಬ ಗ್ರಾಮದಲ್ಲಿ ಒಬ್ಬ ಮಹಮ್ಮದೀಯರ ಹುಡುಗಿಯು ಅಪಹರಿಸಲ್ಪಟ್ಟಳೆಂಬ ಕಾರಣದ ಮೇಲೆ ಮಹಮ್ಮದೀಯರ ಎರಡುಪಕ್ಷದಲ್ಲಿ ಹೊಡೆದಾಟವಾಗಿ ಅನೇಕ ಜನರು ಗಾಯಪಟ್ಟರು. ಪೋಲೀಸರು 80 ಜನರನ್ನು ದಸ್ತಗಿರಿಮಾಡಿ ಹುಡುಗಿಯನ್ನು ಬಿಡಿಸಿರುವರು.

ಈ ಮೊದಲು ಚೀಣಾದೇಶದ ಸಾರ್ವಭೌಮರಾಗಿದ್ದು, ರಾಜ್ಯಭ್ರಷ್ಟತ್ವವನ್ನು ಹೊಂದಿ, ಈಚೆಗೆ ಜಪಾನಿನವರಿಂದ ಮಂಚೂರಿಯಾ ರಾಜ್ಯದ ಪ್ರೆಸಿಡೆಂಟರಾಗಿ ಮಾಡಲ್ಪಟ್ಟಿದ್ದ ಹೆನ್ರಿಪೂಯಿಯವರು ಇದೇ ಮಾರ್ಚಿ 1ನೇ ತಾರೀಖಿನದಿವಸ ಮಂಚೂರಿಯಾ (ಈಗ ಇದಕ್ಕೆ ಮಂಚೂಕೊ ಎಂದು ಹೆಸರು.) ರಾಜ್ಯದ ಸಾರ್ವಭೌಮರಾಗಿ ಸಿಂಹಾಸನವನ್ನಾರೋಹಿಸಿದರು.

ಘೋರಯುದ್ಧವು ಕಳೆದನಂತರ ನಡೆದ ವಾರ್ಸೇಲ್ಸ್ ಒಪ್ಪಂದದಲ್ಲಿ ಆಸ್ಟ್ರಿಯಾ ಸರಕಾರಕ್ಕೆ 30,000 ಶಿಪಾಯಿಗಳನ್ನು ಮಾತ್ರ ಇಟ್ಟುಕೊಳ್ಳುವ ಅಧಿಕಾರವು ಕೊಡಲ್ಪಟ್ಟಿತ್ತು. ಆದರೆ ಈಚೆಗೆ ಜರ್ಮನಿಯವರಿಗೂ ಇವರಿಗೂ ದಿನೇದಿನೇ ಮನಸ್ತಾಪವು ಹೆಚ್ಚುತ್ತಿರುವುದರಿಂದ ಆಸ್ಟ್ರಿಯಾ ಸರಕಾರದವರು ತಮ್ಮ ಸೈನ್ಯವನ್ನು 1,00,000 ಕ್ಕೆ ಹೆಚ್ಚಿಸಬೇಕೆಂದು ಉದ್ದೇಶಿಸಿರುತ್ತಾರೆ.

ಇದೇ ಮಾರ್ಚಿ 7 ನೇ ತಾರೀಖಿನ ದಿನ ಮದ್ರಾಸ್ ಮುನಿಸಿಪಾಲಿಟಿಯ ನೌಕರರಾದ ಮಿ|| ವೆಂಕಟರಾಮ್ ಎಂಬುವರು ಸ್ಟೋರ್ ರೂಮಿನಲ್ಲಿ ಕೆಲವು ಪಾರ್ಸಲ್‌ಗಳಿಗೆ ಅರಗಿನ ಮುದ್ರೆ ಹಾಕಲು ಬೆಂಕಿಕಡ್ಡಿಯನ್ನು ಗೀರಿದಾಗ ಹತ್ತಿರದಲ್ಲಿದ್ದ ಒಂದು ಸ್ಪಿರಿಟ್ಟು ಡಬ್ಬವು ಹತ್ತಿಕೊಂಡು ಇಡೀ ಮುನಿಸಿಪಲ್ ಕಟ್ಟಡವೇ ನಾಶವಾಯಿತು. ಬೆಂಕಿಯನ್ನು ನಂದಿಸಲು 3 ಗಂಟೆಗಳಕಾಲ ಹಿಡಿಯಿತು.

ಮಧುರೆಯಲ್ಲಿರುವ ವೆಲ್ಲಾಳಜಾತಿಯ ದೊರೆಸ್ವಾಮಿ ಎಂಬುವನು ತನ್ನ ಅಣ್ಣನಮಗಳಾದ ಶಂಬಾಂ ಎಂಬ 14 ವರ್ಷದ ಹುಡುಗಿಯನ್ನು 6 ತಿಂಗಳಕಾಲ ಬಂಧನದಲ್ಲಿಟ್ಟಿದ್ದನೆಂಬ ಕಾರಣದ ಮೇಲೆ ಪೋಲೀಸರು ಅತನನ್ನು ದಸ್ತಗಿರಿ ಮಾಡಿರುತ್ತಾರೆ. ಹುಡುಗಿಯ ತಂದೆ ತಾಯಿಗಳು ಈ ಮೊದಲೇ ಮೃತಪಟ್ಟಿದ್ದು ಅವಳ ಹೆಸರಿನಲ್ಲಿದ್ದ 10,000 ರೂಪಾಯಿಗಳ ಆಸ್ತಿಯನ್ನು ಅಪಹರಿಸುವುದಕ್ಕಾಗಿ ದೊರಸಾಮಿಯು ಹುಡುಗಿಯ ಕೈಕಾಲುಕಟ್ಟಿ ಬಂಧನದಲ್ಲಿಟ್ಟು ಒಂದು ಹೊತ್ತು ಊಟವನ್ನು ಮಾತ್ರ ಕೊಡುತ್ತಿದ್ದನಂತೆ! ಈಗ್ಗೆ ಕೆಲವು ದಿನಗಳ ಹಿಂದೆ ಹುಡುಗಿಯು ಬಹಳ ಸಾಹಸಮಾಡಿ ತನ್ನನ್ನು ಬಂಧಿಸಿದ್ದ ಕೊಟಡಿಯ ಕಿಟಕಿಯನ್ನು ಮುರಿದು ಹೊರಕ್ಕೆ ಬಂದು ಪೋಲೀಸರಿಗೆ ವರ್ತಮಾನ ಕೊಟ್ಟನಂತರ ದೊರಸಾಮಿಯನ್ನು ದಸ್ತಗಿರಿಮಾಡಿದುತ್ತಾರೆ.

ಇಂಗ್ಲೆಂಡಿಗೆ ಹೆಚ್ಚು ವಿಮಾನಸೈನ್ಯ!

ಬ್ರಿಟಿಷ್ ಸರಕಾರದವರು ಇಂಗ್ಲೆಂಡ್‌ದೇಶದ ರಕ್ಷಣೆಗೆ ವಿಮಾನಸೈನ್ಯವನ್ನು ಹೆಚ್ಚಿಸುವುದಕ್ಕಾಗಿ ಈ ವರ್ಷದ ಬಜೆಟ್ಟಿನಲ್ಲಿ 20,00,000 ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ.

ಇಂಗಾಲಾಮ್ಲದ ಭಾವಿ!

ಪೋಲೆಂಡ್‌ದೇಶಕ್ಕೆ ಸೇರಿದ ಕ್ರಿನಿಕಾ ಎಂಬಲ್ಲಿ ಒಂದು ಭಾವಿಯಲ್ಲಿ ಕಾರ್ಬಾನಯಾಕ್ಸೈಡ್ (ಇಂಗಾಲಾಮ್ಲ) ಎಂಬ ವಿಷಗಾಳಿಯು ಬಹು ರಭಸದಿಂದ ಹೊರಕ್ಕೆಬಂದು ಅನಂತರ ಮಂಜಿನಂತೆ ಗಡ್ಡೆಯಾಗಿ ಕೆಳಕ್ಕೆ ಬೀಳುವದಂತೆ!

ಪೋಲೆಂಡ್ ಸರಕಾರದ ಸ್ವದೇಶಪ್ರೇಮ

ಪೋಲೆಂಡ್ ದೇಶದ ಪ್ರಿನ್ಸ್ ಆಫ್ ಪ್ಲೆಸ್ ಎಂಬ ಒಬ್ಬ ಕೋಟ್ಯಧೀಶ್ವರರು ತಮ್ಮ ಕಾರ್ಖಾನೆಯಲ್ಲಿ ಒಬ್ಬ ಪರದೇಶದವನನ್ನು ಮ್ಯಾನೇಜರನ್ನಾಗಿ ನೇಮಿಸಿದರೆಂಬ ಕಾರಣದಮೇಲೆ ಸರಕಾರದವರು ಅವರಮೇಲೆ ಮೊಕದ್ದಮೆಯನ್ನು ಹೂಡಿದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಪ್ರಿನ್ಸರಿಗೆ 1 ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ಭೂಗರ್ಭಶೋಧಕಯಂತ್ರ.

ಇಂಗ್ಲೆಂಡಿನ ಛಾರಲ್ಸ್ ಜಂಸ್ಕಿನ್ ಮತ್ತು ಛಾರಲ್ಸ್ ಸ್ಕಿರ್ಚ್ ಎಂಬುವರು ಭೂಗರ್ಭದಲ್ಲಿರುವ ಅಮೂಲ್ಯವಸ್ತುಗಳ ಶೋಧನೆಗಾಗಿ ಒಂದು ನೂತನ ಯಂತ್ರವನ್ನು ತಯಾರಿಸಿರುವರು. ಇದು ಒಂದು ಕೊಳವೆಯಂತಿದ್ದು ಭೂಮಿಯಲ್ಲಿ ಬಂಗಾರ, ಬೆಳ್ಳಿ, ಎಣ್ಣೆ, ಕಲ್ಲಿದ್ದಲು, ನೀರು, ಉಪ್ಪು ಮತ್ತು ಪೊಟಾಷ್ ಈ ಪದಾರ್ಥಗಳು ಎಷ್ಟೇ ಆಳದಲ್ಲಿದ್ದರೂ ಸುಲಭವಾಗಿ ಗೊತ್ತುಹಚ್ಚುವದಂತೆ!

ಭಾರೀ ಡಕಾಯಿತರ ಗುಂಪಿನ ದಸ್ತಗಿರಿ!

ಕರಾಚಿ ಸೆಷನ್ಸ್‌ಜಡ್ಜರವರ ಕೋರ್ಟಿನಲ್ಲಿ 14ಜನ ಡಕಾಯಿತರ ವಿಚಾರಣೆಯು ನಡೆಯುತ್ತಿರುವದು. ಈ ಡಕಾಯಿತರ ಗುಂಪು ಕಳೆದ 2 ವರ್ಷಗಳಲ್ಲಿ ಹಿಂದೂಸ್ಥಾನದ ನಾನಾಭಾಗಗಳಲ್ಲಿ ಮೋಟಾರ್‌ಕಾರುಗಳ ಮತ್ತು ಮದ್ದುಗುಂಡುಗಳ ಸಹಾಯದಿಂದ 19 ದರೋಡೆಗಳನ್ನು ನಡೆಯಿಸಿರುವರಂತೆ! ಹಿಂದೂಸ್ಥಾನದ ನಾನಾಕಡೆಗಳಿಂದ 90 ಜನರು ಸಾಕ್ಷಿಹೇಳಲು ಕರೆಯಿಸಲ್ಪಟ್ಟಿರುವರು.

ಹೊಸ ಯುದ್ಧದ ವಿಮಾನ.

ಇಂಗ್ಲೆಂಡಿನ ಇಂಜನಿಯರು 9 ನಿಮಿಷಗಳಲ್ಲಿ 20,000 ಅಡಿಗಳ ಎತ್ತರ ಹೋಗಬಲ್ಲ ನೂತನತರದ ವಿಮಾನವೊಂದನ್ನು ತಯಾರಿಸಿರುವರು. ಇದು ಭೂಮಿಯಿಂದ ಮೇಲಕ್ಕೆ ನೆಟ್ಟಗೆ ಹೋಗುವುದಲ್ಲದೆ ಎರಡು ಮೆಷೀನ್‌ಗನ್‌ಗಳನ್ನೂ ಹೊತ್ತುಕೊಂಡು ಹೋಗಬಲ್ಲದಂತೆ! ಇಂತಹ ವಿಮಾನಗಳ ಸೈನ್ಯವೊಂದು ಸಿದ್ಧವಾಗಿದ್ದರೆ ಶತ್ರುಪಕ್ಷದ ವಿಮಾನಗಳು ಬರುತ್ತಿರುವವೆಂಬ ವರ್ತಮಾನವು ತಿಳಿದ 20 ನಿಮಿಷಗಳನಂತರ ಹಠಾತ್ತಾಗಿ ಅವರಮೇಲೆ ನುಗ್ಗಿ ನಾಶಪಡಿಸಬಹುದಂತೆ!

ತೆರಿಗೆಗಳ ಬದಲಾವಣೆ.

ದೆಹಲಿಯ ನ್ಯಾಯವಿಧಾಯಕಸಭೆಯಲ್ಲಿ ಕಾರ್ಖಾನೆಗಳಲ್ಲಿ ತಯಾರಾಗುವ ಸಕ್ಕರೆಯಮೇಲೆ ತೆರಿಗೆಯನ್ನು ಹಾಕಬೇಕೆಂದೂ, ಹೊಗೆಸೊಪ್ಪಿನ ಮೇಲಿನ ತೆರಿಗೆಯನ್ನು ಹೆಚ್ಚಿಸಬೇಕೆಂದೂ, ಬೆಳ್ಳಿಯ ಮೇಲಿನ ತೆರಿಗೆಯನ್ನು ಕಡಿಮೆಮಾಡತಕ್ಕದೆಂದೂ, ಬುಕ್‌ಪ್ಯಾಕೆಟ್‌ಗಳಿಗೆ ಅಂಚೆಯ ದರವನ್ನು ಹೆಚ್ಚಿಸಬೇಕೆಂದೂ, ಅರ್ಧತೊಲೆಗಿಂತಲೂ ಕಡಿಮೆತೂಕವುಳ್ಳ ಕಾಗದದ ದರವನ್ನು 1 ಆಣೆಗೆ ಕಡಿಮೆಮಾಡಬೇಕೆಂದೂ, 8 ಶಬ್ದಗಳಿಗಿಂತಲೂ ಹೆಚ್ಚಿಲ್ಲದ ತಂತಿಸಮಾಚಾರಗಳಿಗೆ 9 ಆಣೆ ಚಾರ್ಜು ಮಾಡಬೇಕೆಂದೂ, ಬೀಹಾರ್ ಭೂಕಂಪದ ನಿಧಿಗೆ ಸರಕಾರದವರು 1½ ಕೋಟಿ ರೂಪಾಯಿಗಳನ್ನು ಕೊಡಬೇಕೆಂದೂ ನಿರ್ಧರಿಸಲ್ಪಟ್ಟಿತು.

[3ನೇ ಪುಟದಿಂದ ಮುಂದುವರಿದುದು.]

ನಡೆಯುತ್ತಿದ್ದವು. ಸಹಸ್ರಾರು ಸಂಖ್ಯೆಯುಳ್ಳ ಭಕ್ತಮಂಡಲಿಯು ಮುಂದೆಸಾಗಿತು. ನಂದೀಧ್ವಜ, ಛತ್ರ, ಚಾಮರಾದಿಗಳೊಂದಿಗೆ ಉತ್ಸವವು ಚಿಕ್ಕಪೇಟೆ, ಬಳ್ಳಾಪುರಪೇಟೆ, ದೊಡ್ಡಪೇಟೆ, ರಾಮಾಲ್‌ಪೇಟೆ, ಅರಳೇಪೇಟೆ, ಅಕ್ಕೀಪೇಟೆ ಮುಂತಾದ ಕಡೆಗಳಲ್ಲಿ ಹೊರಟಿತು.

ಮತಭೇದವಿಲ್ಲದೆ ಸರ್ವರೂ ಆಚಾರ್ಯಭಗವತ್ಪಾದರವರಿಗೆ ಅಲ್ಲಲ್ಲಿ ಫಲಪುಷ್ಪ, ಕರ್ಪೂರಾದಿಗಳನ್ನು ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿಯೂ ರಾಜಬೀದಿಗಳಲ್ಲಿಯೂ, ಸಮರ್ಪಿಸುತ್ತಿದ್ದರು. ಉತ್ಸವವು ಮಹಾಂತಿನ ಮಠವನ್ನು ಸೇರಿದ ಬಳಿಕ ಷೋಡಶೋಪಚಾರ ರಾಜೋಪಚಾರ ಪೂಜಾನಂತರ ಮಹಾಮಂಗಳಾರತಿಯಾಗಿ ಪ್ರಸಾದವು ವಿನಿಯೋಗಿಸಲ್ಪಟ್ಟಿತು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಲ್ಪಟ್ಟಿತು.

ಶ್ರೀ ಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿ ಮಹೋತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದಾಚರಿಸಿದ ಭಕ್ತಮಂಡಲಿಗೆ ಶ್ರೀಮತ್ಪಂಚಾಚಾರ್ಯರು ಶ್ರೇಯಸ್ಸನ್ನುಂಟುಮಾಡಲೆಂದು ಹಾರೈಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

---

೧೦೮ ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಕಟಕೋಳ.

ಕೊಲ್ಹಾಪುರ ಸಂಸ್ಥಾನ ಸೈಕಿ ಕಟಕೋಳದಲ್ಲಿ ಶ್ರೀಮುಖನಾಮಸಂವತ್ಸರದ ಫಾಲ್ಗುಣ ಬಹುಳ ೧೪ ಬಾಲವಿದ್ಯಾರ್ಥಿಗಳೆಲ್ಲರೂ ಹಿರೇಮಠದಿಂದ ಶ್ರೀರೇಣುಕರ ಭಾವಚಿತ್ರದ ಉತ್ಸವವನ್ನು ಹೊರಡಿಸಿ ಖಾಸಗಿಶಾಲೆಯಲ್ಲಿ ಅಲಂಕರಿಸಿದ ದಿವ್ಯಪೀಠದಲ್ಲಿ ಮೂರ್ತಿಯನ್ನಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಂಗಳಾರತಿಯನ್ನು ಮಾಡಿದಬಳಿಕ ಬಾಲವಿದ್ಯಾರ್ಥಿಗಳು ತಮ್ಮ ತಮ್ಮೊಳಗೆ ರೀತಿಯ ಚಿಕ್ಕ ಚಿಕ್ಕ ಕಥೆಗಳನ್ನು ಹೇಳುತ್ತಿರುವಷ್ಟರಲ್ಲಿ ಶ್ರೀಚಿತ್ಪದಸ್ವಾಮಿಗಳು ಅಕಸ್ಮಿಕವಾಗಿ ದಯಮಾಡಿಸಿ ಧರ್ಮಾಸನದಲ್ಲಿ ಕುಳಿತು ಸದರಿ ಬಾಲವಿದ್ಯಾರ್ಥಿಗಳಿಗೆ ಸದ್ಬೋಧವನ್ನು ಮಾಡಿ ಸದರಿ ಶಾಲೆಯ ಮಾಸ್ತರರು ಕೊಲ್ಹಾಪುರಕ್ಕೆ ಸರಕಾರಿ ಕೆಲಸದ ಸಲುವಾಗಿ ಹೋಗಿದ್ದರೂ ಯಾರ ಸಹಾಯವೂ ಇಲ್ಲದೆ ಈ ವಿದ್ಯಾರ್ಥಿಗಳು ಜಗದ್ಗುರು ರೇಣುಕರ ಜಯಂತಿಯಾಚರಣೆಯನ್ನು ಇಷ್ಟು ವೈಭವದಿಂದ ನಡೆಯಿಸಿದ್ದುದು ಬಹಳವಾದ ಆನಂದದ ಸಂಗತಿಯಾಗಿದೆಯೆಂದೂ ಇದೇ ಪ್ರಕಾರ ಜಗದ್ಗುರುಗಳು ಎಲ್ಲ ಬಾಲವಿದ್ಯಾರ್ಥಿಗಳಿಗೆ ಗುರುಭಕ್ತಿಯನ್ನು ಹುಟ್ಟಿಸಲೆಂದೂ ಬೋಧಿಸಿದನಂತರ ಜಗದ್ಗುರುಗಳ ಜಯಜಯಕಾರವಾಗಿ ಪ್ರಸಾದವಿನಿಯೋಗವಾಡಲ್ಪಟ್ಟಿತು.

ಓರ್ವ ಪ್ರೇಕ್ಷಕ.

ರಾಣೇ ಬೆನ್ನೂರು.

ಇದೇ ಶ್ರೀಮುಖ ಸಂವತ್ಸರದ ಫಾಲ್ಗುಣ ಶುದ್ಧ ೧೪ ದಿವಸ ರಾಣೇಬೆನ್ನೂರಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘದವರು ಮತ್ತು ಸದ್ಗೃಹಸ್ಥರು ಕುರುಬಗೇರಿ ಚರಂತಿಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಶಾಸ್ತ್ರೋಕ್ತ ಪ್ರಕಾರ ಅತಿಭಕ್ತಿಯಿಂದಾಚರಿಸಿದರು. ಈ ಜಯಂತಿಯ ನಿಮಿತ್ತವಾಗಿ ಪೂರ್ವಭಾವಿಯಾಗಿ ೭ ದಿವಸಗಳವರೆಗೂ ರುದ್ರಾಭಿಷೇಕ ಸಪ್ತಾಹ ಭಜನಾದಿಗಳನ್ನು ಬಹು ಭಕ್ತಿಯಿಂದಾಚರಿಸಿ ಧರ್ಮಸಂಕೀರ್ತನೆಯು ನಡೆಯಿಸಲ್ಪಟ್ಟಿತು. ಈ ಉತ್ಸವಕ್ಕಾಗಿ ಧಾರವಾಡ, ಹುಬ್ಬಳ್ಳಿ, ಹಾವೇರಿ, ಬ್ಯಾಡಗಿ, ಕೂಡ್ಲಗಿ ಮುಂತಾದ ಅನೇಕ ಊರುಗಳಿಂದ ಬಹು ಜನಗಳು ಆಗಮಿಸಿದ್ದರು.

ಪ್ರತ್ಯಕ್ಷದರ್ಶಿ.

ದೊಡ್ಡಬಳ್ಳಾಪುರ.

ಜಗದುದ್ಧಾರಾರ್ಥವಾಗಿ ಶಿವಾಜ್ಞಾಪ್ರಕಾರ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ಆವಿರ್ಭವಿಸಿ ಅಗಸ್ತ್ಯಾದಿ ಮಹರ್ಷಿಗಳಿಗೆ ತತ್ವೋಪದೇಶಂಗೈದು ವೇದಾದಿಗಳಿಗೆ ಭಾಷ್ಯಕರ್ತರಾಗಿಯೂ ಪ್ರಥಮಾಚಾರ್ಯರಾಗಿಯೂ ಮೆರೆದ ಶ್ರೀ ಭಗವತ್ಪಾದ ರೇಣುಕಾಚಾರ್ಯರ ಜಯಂತಿ ಕಾರ್ಯವು ದೊಡ್ಡಬಳ್ಳಾಪುರದ ಮಹಾಂತರಾದ ವೇ|| ಬಸವಾರಾಧ್ಯರ ಅಧ್ಯಕ್ಷತೆಯಲ್ಲಿ ಇವರ ಮಠದಲ್ಲಿ 28-2-34 ನೇ ಬುಧವಾರ ಪ್ರಾತಃಕಾಲ ಆಚಾರ್ಯಪೂಜಾ, ಮಧ್ಯಾಹ್ನ ಗಣಾರಾಧನೆ ಆದನಂತರ ಸಾಯಂಕಾಲ ನೆರೆದಿದ್ದ ಸಭೆಯಲ್ಲಿ H. G. ರುದ್ರಪ್ಪನವರಿಂದ ಆಚಾರ್ಯರ ಮಹಿಮಾಪ್ರದರ್ಶನರೂಪವಾದ ಉಪನ್ಯಾಸವು ಮಾಡಲ್ಪಟ್ಟನಂತರ ಮಹಾಮಂಗಳಾರತಿ ರಾಜಾಶೀರ್ವಾದ ಪ್ರಸಾದವಿನಿಯೋಗವಾಗಿ ಜಯಂತಿಕಾರ್ಯವು ಮುಕ್ತಾಯವಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಹುಬ್ಬಳ್ಳಿ ಶ್ರೀಗೌರೀಶಂಕರ ಕಂಪನಿಯ ೨ ನೇ ಯಾತ್ರೆಯು.

(ಮುಂದುವರಿದುದು)

ಪ್ರಯಾಗದಿಂದ ಭೂಕೈಲಾಸ ಶ್ರೀಕಾಶೀಕ್ಷೇತ್ರಕ್ಕೆ ಹೊರಟೆವು. ದೂರದಿಂದ ಶ್ರೀಕಾಶೀಕ್ಷೇತ್ರ ಕಂಡಕೂಡಲೆ ನಮ್ಮ ಮನೋರಥವೆಂಬ ಗುಡ್ಡವೇ ಹಣ್ಣಾದಂತಾಯಿತು. ಮನಸ್ಸಿನ ಸ್ಫೂರ್ತಿಯಿಂದ ಒಮ್ಮೆ ಆ ವಿಶ್ವನಾಥನ ಜಯಘೋಷವನ್ನು ಜೋರಿನಿಂದ ಮಾಡಿದೆವು. ಆ ವಿಶ್ವಪತಿ ವಿಶ್ವನಾಥನ ದರ್ಶನಕ್ಕೆ ನಾವೆಲ್ಲ ಯಾತ್ರಿಕರು ಮೈಮರೆದು ಹೋಗುತ್ತಿದ್ದೆವು. ದೇವಾಲಯದ ದರ್ಶನದಿಂದಲೇ ನಮ್ಮ ಅಂಗದಲ್ಲೆಲ್ಲ ವಿಶ್ವನಾಥನ ಪ್ರತಿಬಿಂಬವಾಯಿತು. ದೇವಾಲಯದ ಒಳಹೊಕ್ಕು ನೋಡಲು ಕಾಂತಿರೀತಿಯಿಂದ ಕುಳಿತಿರುವ ವಿಶ್ವನಾಥನನ್ನು ಪುನಃ ಪುನಃ ನೋಡಿ ನೋಡಿ ನೇತ್ರಗಳ ಸಫಲತೆಯನ್ನು ಮಾಡಿಕೊಂಡೆವು. ಆತನನ್ನು ಮುಟ್ಟಿಮುಟ್ಟಿ ನಮಸ್ಕರಿಸಿ ನಮಸ್ಕರಿಸಿ ನಮ್ಮ ಅಂಗವೆಲ್ಲ ಪವಿತ್ರವಾಯಿತು. ನಮ್ಮ ವಂಶ ಉದ್ಧಾರವಾಯಿತು. ನಮ್ಮ ಅನಂತ ಕೋಟಿಕುಲಕ್ಕೆಲ್ಲ ಪುಣ್ಯಲಭಿಸಿತು. ಅಭಿಷೇಕಾದಿ ಮಂಗಳಕಾರ್ಯಗಳನ್ನು ಮಾಡಿದೆವು. ನೂರೆಂಟು ಬಿಲ್ವಪತ್ರಗಳನ್ನು ಧರಿಸಿದೆವು. ಮಣಿಕರ್ಣಿಕೆಯ ಆತನನ್ನು ನೋಡಿದೆವು.

ಶ್ರೀ ಪಂಚಸಿಂಹಾಸನಗಳಲ್ಲಿ ಒಂದಾದ ಶ್ರೀಜಗದ್ಗುರು ವಿಶ್ವಾರಾಧ್ಯ ಪೀಠಾಧ್ಯಕ್ಷ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳವರ ವರ್ಧಂತ್ಯುತ್ಸವವು ನಮ್ಮ ಕಾಶೀಮುಕ್ಕಾಮಿನಲ್ಲಿಯೇ ಬಂದಿತು. ಅಂದು ಸಭೆಗೂಡಿ ಶ್ರೀಜಗದ್ಗುರು ವಿಶ್ವಾರಾಧ್ಯಗುರುಕುಲದ ಪಂಡಿತರೂ, ಪಂಚಾಕ್ಷರ ಶಾಸ್ತ್ರಿಗಳೂ ಶ್ರೀ ಗೌರೀಶಂಕರ ಕಂಪನಿ ಮ್ಯಾನೇಜರಾದ ಶ್ರೀಯುತ ಜಿ. ಎ. ಶಿರೂರ ಇವರೂ ಬೇರೆಬೇರೆ ವಿಷಯಗಳಮೇಲೆ ಉಪನ್ಯಾಸಗಳನ್ನು ಮಾಡಿದರು. ಮಾಘ ಶುದ್ಧ ಪೂರ್ಣಿಮೆಯ ಚಂದ್ರಗ್ರಹಣವೂ ಕಾಶೀಮುಕ್ಕಾಮಿನಲ್ಲಿಯೇ ಬಂದದ್ದರಿಂದ ಗಂಗಾನದಿಯಲ್ಲಿ ಗ್ರಹಣಕಾಲದಲ್ಲಿ ನಮ್ಮ ಜಪತಪಗಳಾದವು. ಈ ಭಾಗದಲ್ಲೆಲ್ಲ ಹಿಂದೀಭಾಷೆಯೇ ನಡೆಯುತ್ತದೆ. ಕಾಶೀಕ್ಷೇತ್ರದಲ್ಲಿ ಅನೇಕ ವಿದ್ಯಾಲಯಗಳೂ ಅನೇಕಾನೇಕ ಪಂಡಿತರೂ ತಪಸ್ವಿಗಳೂ ಇದ್ದಾರೆ. ಆದ್ದರಿಂದ ಇದು ನಿಜವಾಗಿ ಭೂಕೈಲಾಸವೇ. ಈ ಕ್ಷೇತ್ರದಲ್ಲಿ ೧೦ ದಿವಸ ವಾಸವಾಗಿದ್ದು ಅಲ್ಲಿಂದ ಗಯಾ ಪಟ್ಟಣಕ್ಕೆ ಬಂದೆವು. ಅಲ್ಲಿ ಬುದ್ಧನ ವಿಹಾರ ಮೊದಲಾದವುಗಳನ್ನು ನೋಡಿಕೊಂಡು ಕಲ್ಕತ್ತಾ ಪಟ್ಟಣಕ್ಕೆ ಹೋದೆವು. ಈ ಪಟ್ಟಣವು ಬಹುಕಾಲದಿಂದ ಹಿಂದುಸ್ಥಾನದ ರಾಜಧಾನಿಯಾಗಿ ವೈಸ್‌ರಾಯರ ವಾಸಸ್ಥಾನವಾಗಿದ್ದುದರಿಂದ ಅನೇಕ ಅರಮನೆಗಳಿಂದಲೂ ಕಂಪನಿಗಳಿಂದಲೂ ಶೋಭಿಸುತ್ತಿತ್ತು. ಆದರೆ ಇತ್ತಿತ್ತ ವೈಸ್‌ರಾಯರು ದಿಲ್ಲಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡದ್ದರಿಂದ ಗಂಡನನ್ನಗಲಿದ ನಾರಿಯಂತೆ ಈಗ ಇದರ ಲಕ್ಷ್ಮಿಯಿದೆ. ಇಲ್ಲಿ ನಮ್ಮ ಪಂಚಮ ಜಾರ್ಜಬಾದಶಹರು ತಳಗಲ್ಲು ಹಾಕಿ ಬೆಳಸಂಗಮವರಿ ಕಲ್ಲಿನಿಂದ ಕಟ್ಟಿಸಿದ ವಿಕ್ಟೋರಿಯಾ ಮೆಮೋರಿಯಲ್ ಎಂಬ ಚಕ್ರವರ್ತಿನಿಯ ಮಂದಿರವು ಬಹು ಮನೋಹರವಾಗಿರುತ್ತದೆ. ಇದೇ ಊರಲ್ಲಿರುವ ಮಲ್ಲಿಕ ಪ್ಯಾಲೇಸ್ (ಅರಮನೆ) ನೋಡುವಂತಿದೆ. ಈ ಭಾಗದಲ್ಲೆಲ್ಲ ಬಂಗಾಲಿ ಭಾಷೆಯು ಪ್ರಚಾರದಲ್ಲಿದೆ. ಇಲ್ಲಿಂದ ಹೊರಟು ಮುಂದೆ ಜಗನ್ನಾಥಪುರಿಗೆ ಬಂದೆವು. ಇಲ್ಲಿ ಸಮುದ್ರದ ತೆರೆಗಳ ನೋಟವು ಮನಸ್ಸಿಗೆ ಬಹು ಸೊಗಸನ್ನೀಯುವದು. ಜಗನ್ನಾಥ ದೇವರ ಗುಡಿಯಮೇಲೆ ಅನೇಕ ಬೀಭತ್ಸಮೂರ್ತಿಗಳು ದೊಡ್ಡ ಆಕಾರದಿಂದಿದ್ದು ನೋಡಲಸಹ್ಯವಾಗಿವೆ. ಈಗಿನ ಸೂಕ್ಷ್ಮ ಸುಸಂಸ್ಕೃತಿಕಾಲದಲ್ಲಿ ಈ ಗುಡಿಯ ಪಂಡರು ಹೀಗೆ ಇಡಬಾರದಾಗಿತ್ತು. ಆದರೆ ಇವರ ಹಳೇ ಮೂಢತನದ ಭಕ್ತಿಯು ಇನ್ನೂ ನುಸಿಹತ್ತದೆ ಹಾಗೆ ಉಳಿದಿದೆ. ಈ ಭಾಗದಲ್ಲೆಲ್ಲ ಭತ್ತ ತೆಂಗುಗಳೇ ಹೇರಳವಾಗಿ ಬೆಳೆಯುತ್ತವೆ. ಜನರು ಸುಸಂಸ್ಕೃತರಲ್ಲ. ತೆಲುಗುಭಾಷೆ ಮುಖ್ಯವಾಗಿರುವದು. ಇಲ್ಲಿಂದ ಮುಂದೆ ವಿಶಾಖಪಟ್ಟಣಕ್ಕೆ ಬಂದು ಊಟೋಪಚಾರಕೊಂಡು ಹಾಗೆಯೇ ರಾಜಮಹೇಂದ್ರಿಕ್ಕೆ ಬಂದೆವು. ಇಲ್ಲಿ ಗೋದಾವರಿಯು ಸಮುದ್ರಕ್ಕೆ ಕೂಡಿದ್ದು ಮುಖವು ಸುಮಾರು ೯ ಮೈಲು ಅಗಲವಾಗಿದೆ. ಇದೇ ಗೋದಾವರಿ ನದಿಯು ತ್ರ್ಯಂಬಕೇಶ್ವರದಲ್ಲಿ ಗುಡ್ಡದ ಮೇಲೆ ಹನಿಹನಿಯಾಗಿ ಬೀಳುತ್ತಿರುವದು. ಹನಿಹನಿ ಕೂಡಿ ಹಳ್ಳವೆಂಬುವದು ಗೋದಾವರೀ ಪ್ರವಾಹದಿಂದ ಪ್ರತ್ಯಕ್ಷಸಿದ್ಧವಾಯಿತು. ಮುಂದೆ ಬೆಜ್ವಾಡದಲ್ಲಿ ಕೃಷ್ಣಾಸ್ನಾನ ಹಾಗೂ ಊಟೋಪಚಾರಕೊಂಡು ಮದ್ರಾಸಿಕ್ಕೆ ಬಂದೆವು. ಇಲ್ಲಿ ಅಕ್ವೇರಿಯಮ್, ಲಾಯಿಟ ಹೌಸ್, ಚಾಯನಾಬಜಾರ ಮುಂತಾದವು ನೋಡುವಂತಿವೆ. ಮದ್ರಾಸೀ ಜನರು ಬುದ್ಧಿವಂತರು. ಇಂಗ್ಲೀಷ ಭಾಷೆಯು ಇವರಿಗೆ ಬಹಳ ಸರಳವಾಗಿರುವದು. ಜನರು ಅಷ್ಟೊಂದು ಸಿಸ್ತಿನವರೂ ಸುಂದರಿಗಳೂ ಅಲ್ಲ. ಇಲ್ಲಿ ಭಿಕ್ಷುಕರ ಸಂಖ್ಯೆ ಬಹಳವಾಗಿದ್ದು ಅವರ ಸ್ಥಿತಿಯು ಚಿಂತಾಜನಕವಾಗಿದೆ. ಇಲ್ಲಿಂದ ಪ್ರಖ್ಯಾತಪ್ರಾಚೀನಪಟ್ಟಣವಾದ ಕಾಂಚೀಕ್ಷೇತ್ರಕ್ಕೆ ಬಂದೆವು. ಊರು ಬಹಳ ದೊಡ್ಡದು. ಬೀದಿಗಳು ಬಹಳ ವಿಶಾಲವಾದಂಥವು. ಪೂರ್ವದಲ್ಲಿ ಶಿವಪೂಜಾಧುರಂಧರನಾದ ಸತ್ಯೇಂದ್ರಚೋಳರಾಜನು ಅಮೃತವತಿ ಮಹಾದೇವಿರಾಣಿಯವರೂ ಇವರ ಮಗ ರಾಜಶೇಖರನೂ ವಾಸವಾಗಿದ್ದ ರಾಜಧಾನಿಯು ಇದೇ ಕಂಚೀನಗರವೇ! ಕಾಮಾಕ್ಷಮ್ಮನು ಪೂಜಿಸಿದ ಏಕಾಮ್ರೇಶ್ವರ ಮಳಲಲಿಂಗವು ಈಗಲೂ ಇರುತ್ತದೆ. ನಾಟಕೋಟಿಯವರು ಭವ್ಯವಾದ ಮಂದಿರವನ್ನು ಕೋಟಿಗಟ್ಟಲೆ ಹಣಖರ್ಚುಮಾಡಿ ಕಟ್ಟಿಸಿರುವರು. ಶಿವರಾತ್ರಿಯ ದಿವಸವೇ ನಾವೆಲ್ಲ ಯಾತ್ರಿಕರು ಈ ಕ್ಷೇತ್ರಕ್ಕೆ ಬಂದು ಏಕಾಮ್ರೇಶ್ವರನ ಪೂಜೆಯನ್ನು ತೀರಿಸಿದೆವು. ರಾತ್ರಿಯೆಲ್ಲಾ ದೇವಾಲಯದಲ್ಲಿ ಜಾಗರಣ ಪುರಾಣಶ್ರವಣಗಳಾದವು. ಈ ಲಿಂಗದ ಮುಂಭಾಗದಲ್ಲಿಯೇ ಶ್ರೀ ಜಗದ್ಗುರು ರುದ್ರಮುನಿಶಿವಾಚಾರ್ಯರ ಅವತಾರವಾದುದು. ಈ ಕ್ಷೇತ್ರದಲ್ಲಿ ಶ್ರೀರೇಣುಕಾಚಾರ್ಯರು ವಿಶೇಷವಾಗಿ ವಾಸವಾಗಿದ್ದರು. ಇಲ್ಲಿ ವರದರಾಜ ಎಂಬ ವಿಷ್ಣುವಿನ ಮೂರ್ತಿಯ ದೇವಾಲಯವು ದರ್ಶನೀಯವಾಗಿದೆ. ಈ ದೇವಾಲಯದಲ್ಲಿರುವ ಮೂರ್ತಿಯು ಚಲಿಸುತ್ತಿದ್ದ ಮಸ್ತಕವನ್ನು ಶ್ರೀ ರೇಣುಕಾಚಾರ್ಯರು ಇಲ್ಲಿ ಚೋಳಭೂಪಾಲನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡ ವಿಷಯವು ಪುರಾಣಪ್ರಸಿದ್ಧವಾಗಿದೆ. ಇಲ್ಲಿಂದ ಕುಂಭಕೋಣಕ್ಕೆ ಹೋದೆವು ಅಲ್ಲಿ ಕುಂಭೇಶ್ವರನ ದರ್ಶನಮಾಡಿಕೊಂಡು ಅದೇ ದಿವಸವೇ ಶ್ರೀಕ್ಷೇತ್ರರಾಮೇಶ್ವರಕ್ಕೆ ಬಂದೆವು. ರಾಮೇಶ್ವರನ ದರ್ಶನವನ್ನು ಮಾಡಿಕೊಂಡು ಯಾತ್ರೆಯನ್ನು ಪೂರ್ತಿಗೊಳಿಸಿದೆವು. ರಾಮೇಶ್ವರನ ಗುಡಿಯು ಬಹುಭವ್ಯವಾಗಿರುವದು. ಸಹಸ್ರ ೩೦ ಲಕ್ಷ ಉತ್ಪನ್ನವಿದೆಯೆಂದು ಹೇಳಿಕೆಯುಂಟು. ಊರು ಸುಧಾರಣೆಯಲ್ಲಿಲ್ಲ. ಹಳ್ಳಿಯಂತಿದೆ. ಇಲ್ಲಿ ಸಮುದ್ರವು ಕಣ್ಣಿಗೆ ಬಹು ಗಂಭೀರವಾಗಿ ಕಾಣುತ್ತಿರುವದು. ಈ ಭಾಗದಲ್ಲೆಲ್ಲ ತಮಿಳುಭಾಷೆಯು ವ್ಯವಹಾರವುಂಟು. ಇಲ್ಲಿಂದ ೧೨ ಮೈಲಿನಮೇಲೆ ಧನುಷ್ಕೋಟಿಯಿದೆ. ಇಲ್ಲಿಯೇ ಅರಬೀ ಸಮುದ್ರ ಹಾಗೂ ಬಂಗಾಲ ಉಪಸಾಗರಗಳು ಕೂಡಿವೆ. ನೋಟವು ಬಹುರಮಣೀಯವಾಗಿದೆ. ರಾಮೇಶ್ವರದ ವಿಧಿಯನ್ನು ಶಾಸ್ತ್ರೋಕ್ತವಾಗಿ ಮುಗಿಯಿಸಿಕೊಂಡು ಮರಳು ತೆಗೆದುಕೊಂಡು ಮಧುರಾಪಟ್ಟಣಕ್ಕೆ ಬಂದೆವು. ಇಲ್ಲಿ ಸುಂದರೇಶ್ವರ ಹಾಗೂ ಮೀನಾಕ್ಷಿಯ ಗುಡಿಯು ಬಹಳ ದೊಡ್ಡದಾದದ್ದು. ಇಷ್ಟು ದಿವಸ ನಾವು ನೋಡಿದ ಗುಡಿಗಳಲ್ಲಿ ಇದು ಬಹಳ ವಿಸ್ತಾರವಾಗಿಯೂ ಭವ್ಯವಾಗಿಯೂ ಇರುತ್ತದೆ. ಉತ್ತರ ಹಿಂದುಸ್ಥಾನದಲ್ಲಿ ನದಿಗಳ (ತೀರ್ಥಗಳ) ಮಹಿಮೆ ದಕ್ಷಿಣ ಹಿಂದುಸ್ಥಾನದಲ್ಲಿ ದೇವಾಲಯಗಳ ಮಹಿಮೆ ಹೆಚ್ಚಾಗಿದೆ. ಇಲ್ಲಿಂದ ಹೊರಟು ತಿರುಚನಾಪಳ್ಳಿ, ಬೆಂಗಳೂರುಗಳನ್ನು ನೋಡಿಕೊಂಡು ಮೈಸೂರು ಪಟ್ಟಣಕ್ಕೆ ಬಂದೆವು. ಇಲ್ಲಿ ಕೃಷ್ಣರಾಜಸಾಗರ, ಮಹಾರಾಜರ ಅರಮನೆ ಚಾಮುಂಡಿ ಬೆಟ್ಟವೂ ಕನ್ನಂಬಾಡಿಯೂ ನೋಡತಕ್ಕವುಗಳಾಗಿವೆ. ಕನ್ನಂಬಾಡಿಯಲ್ಲಿ ಬಾಣಬಾಣವಾಗಿ ಪುಟಿಯುತ್ತಿರುವ ತರತರದ ಕಾರಂಜಿಗಳು ಮನಸ್ಸಿಗೆ ಬಲು ಆಹ್ಲಾದವನ್ನುಂಟುಮಾಡುವವು. ಇಲ್ಲಿಂದ ಹೊರಟು ಹುಬ್ಬಳ್ಳಿಗೆ ಬಂದು ಶ್ರೀ ಗೌರೀಶಂಕರ ಕಂಪನಿಯ ನಿರೂಪ ತೆಗೆದುಕೊಂಡು ಹೊರಟು ನಮ್ಮ ಊರುಗಳಿಗೆ ಸುಖವಾಗಿ ತಲುಪಿದೆವು. ಶ್ರೀ ಗೌರೀಶಂಕರ ಕಂಪನಿಯವರು ಈ ವರೆಗಾದ ಯಾತ್ರೆಯಲ್ಲಿ ಆಯಾ ಕ್ಷೇತ್ರಗಳಲ್ಲಿ ಇಳಿದುಕೊಳ್ಳಲಿಕ್ಕೆ ಮನೋಹರವಾದ ಸ್ಥಳಗಳನ್ನೇರ್ಪಡಿಸಿದ್ದರು. ನಮ್ಮೆಲ್ಲರ ಸಂಗಡಿದ್ದು ನೋಡತಕ್ಕ ಸ್ಥಳಗಳನ್ನು ತೋರಿಸಿ ಅವುಗಳ ಮಾಹಿತಿ ಮಾಡಿಕೊಡುತ್ತಿದ್ದರು. ಆ ಕ್ಷೇತ್ರಗಳಲ್ಲಿ ಶಾಸ್ತ್ರೋಕ್ತವಾಗಿ ಮಾಡತಕ್ಕ ವಿಧಿಗಳನ್ನು ಸೂಚಿಸುತ್ತಿದ್ದರು. ಅಲ್ಲಲ್ಲಿ ಪುರಾಣ ಪುಣ್ಯಕಥೆಗಳ ಶ್ರವಣವಾಡಿಸುತ್ತಿದ್ದರು. ಔಷಧೋಪಚಾರಗಳ ಒಳ್ಳೇ ವ್ಯವಸ್ಥೆಯಿತ್ತು. ಊಟದ ಸೌಕರ್ಯವನ್ನಂತೂ ಎಷ್ಟು ವರ್ಣಿಸಿದರೂ ತೀರದು. ನಮ್ಮ ಊರಿಂದ ಬರುವ ನಮ್ಮ ಪತ್ರಗಳು ವೇಳೆಗೆ ಸರಿಯಾಗಿ ನಮಗೆ ತಲುಪುವಂತೆ ಟಪಾಲಿನ ವ್ಯವಸ್ಥೆಯನ್ನಿಟ್ಟಿದ್ದರು. ಈ ಯಾತ್ರೆಯಿಂದ ನಮ್ಮ ಹಿರಿಯರು ಕಲ್ಪಿಸಿದ ಗುಟ್ಟು ಈಡೇರಿತು. ದೇವದರ್ಶನವಾಗಿ ದೈವತೃಪ್ತಿಯಾಯಿತು. ಇದರಿಂದ ನಾವು ಉದ್ಧಾರರಾಗಿರುವೆವಲ್ಲದೆ ನಮ್ಮ ಕುಲಕೋಟಿಯು ಉದ್ಧಾರವಾಯಿತು. ಈ ಯಾತ್ರೆಯಿಂದ ನಾವೆಲ್ಲರೂ ಪವಿತ್ರದೇಹಿಗಳಾಗಿರುವೆವು.

ಇದೇ ಶ್ರೀ ಗೌರೀಶಂಕರ ಕಂಪನಿಯಿಂದ ಇನ್ನು ಶೀಘ್ರದಲ್ಲಿಯೇ ಶ್ರೀ ಗೌರೀಶಂಕರ ಆಶ್ರಮವೊಂದು ಹುಬ್ಬಳ್ಳೀ ಪಟ್ಟಣದ ಸಮೀಪದಲ್ಲಿ ಸ್ಥಾಪಿತವಾಗಿ ಈ ಆಶ್ರಮದಲ್ಲಿ ಬಡವಿದ್ಯಾರ್ಥಿಗಳಿಗೆ ಭೋಜನ ವಾಸಕ್ಕೆ ಸ್ಥಳವು ಕೊಡಲ್ಪಡುವದೆಂದೂ ಬಡವರ ಲಗ್ನಗಳು ಧರ್ಮಾರ್ಥವಾಗಿ ಮಾಡಿಕೊಡಲ್ಪಡುವವೆಂದೂ ಪ್ರಯಾಣಿಕರಿಗೆ ಧರ್ಮಶಾಲೆ ಗೋರಕ್ಷಣೆಗಾಗಿ ಗೋಶಾಲೆ ನಿರ್ಮಿತವಾಗುವದೆಂದೂ ಶ್ರೀ ಗೌರೀಶಂಕರ ಕಂಪನಿಯ ನಿಶ್ಚಿತ ಧ್ಯೇಯವನ್ನು ತಿಳಿದುಕೊಂಡಿರುವೆವು. ಶೀಘ್ರದಲ್ಲಿ ಆಶ್ರಮ ಸ್ಥಾಪಿಸುವ ತಯಾರಿಯೂ ನಡೆದಿದೆ. ಸುತ್ಯ! ಶ್ರೀ ಗೌರೀಶಂಕರ ಕಂಪನಿಯೇ ನಿನ್ನ ಧ್ಯೇಯ ಹಾಗೂ ಕಾರ್ಯಗಳು ಶ್ರೇಷ್ಠತರವಾದ ಸನ್ಮಾರ್ಗದವುಗಳಾಗಿ ಲೋಕಕಲ್ಯಾಣದಾಯಕಗಳಾಗಿರುತ್ತವೆ. ನಿನಗೆ ಕುಲಕಂಟಕರಿಂದಲೂ ಸಮಾಜಕಂಟಕರಿಂದಲೂ ಅನೇಕ ವಿಘ್ನಗಳೂ, ಕಷ್ಟನಷ್ಟಗಳೂ ಬಂದೊದಗಿದರೂ ಅವುಗಳನ್ನು ಶಾಂತರೀತಿಯಿಂದ ಸಹನ ಮಾಡುತ್ತ ಹಾಗೂ ಪರಿಹರಿಸಿಕೊಳ್ಳುತ್ತ ಅಚ್ಛಾದಿತ ಮೋಡನಿವಾರಣೆಯಿಂದ ಪ್ರಜ್ವಲಿಸುವ ಚಂದ್ರನಂತೆ ನಿನ್ನ ತೇಜಸ್ಸು ಹೆಚ್ಚುತ್ತಲಿರುವದು. ಒದಗಿದ ವಿಪತ್ತುಗಳನ್ನು ಧೈರ್ಯದಿಂದ ತಾಳಿ ಧರ್ಮದಂಡವನ್ನು ಕೈಯಲ್ಲಿ ಹಿಡಿದು ತಿರುವಳೆಯ ತೇಜಸ್ಸಿನಲ್ಲಿ ಉತ್ಸಾಹದಿಂದಲೂ ಧೈರ್ಯದಿಂದಲೂ ಅವಿಶ್ರಾಂತಶ್ರಮಪಡುತ್ತ ಕೀರ್ತಿಗಾಗಿ ಮುಂದೆ ಶ್ರೀ ಗೌರೀಶಂಕರ ಕಂಪನಿಯ ಹೆಸರಿನ ಜಯಭೇರಿಯ ಸ್ವರವನ್ನು ಆಸೇತುಹಿಮಾಲಯದವರೆಗುಂಟುಮಾಡಿದ ಆ ಮಹಾನುಭಾವರಾದ ಶ್ರೀಯುತ ಜಿ. ಎ. ಶಿರೂರ ಇವರಿಗೆ ಆಯುರಾರೋಗ್ಯ ಸಂಪತ್ಸಮೃದ್ಧಿಗಳನ್ನು ಕೊಟ್ಟು ರಕ್ಷಿಸಲೆಂದು ಆ ಗೌರೀಶಂಕರನನ್ನು ಪ್ರಾರ್ಥಿಸುತ್ತೇವೆ.

ಮಲ್ಲಪ್ಪ-ರುದ್ರಪ್ಪ ಬೀಳಗಿ
ಮುಂಡಪ್ಪ-ನಾಗಪ್ಪ ಹಿವಾಸಿ,
ಬನಹಟ್ಟಿ ಹುಲ್ಲಾರ ಊರುಗಳ ಯಾತ್ರಿಕರ
ಸಮೂಹದ ಪರಿಯಿಂದ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕ್ಕಾಟ್ ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಅಕ್ಕಾಟ್ ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 18

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 26

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ
ವೀರಶೈವ ಮಾಡರ್ನ ಹೋಟೆಲ್

ನಂ. 8, ಚಿಕ್ಕಪೇಟೆ, ದಿವಾನ್

ಸೂರಪ್ಪನವರ ಗಲ್ಲಿ,

(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದೇಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನೂತನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ರ್‍ಯುಮೊ ಬಾಮು.

ಸೆಮ್ಮು, ಶೀತ, ತಲೆಸಿಡಿತ, ಪಾರ್ಶ್ವಸೋವು, ಗಂಟು ನೋವು ಸಂಧು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವ ಕಡಿತ, ಗಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕುಮದ್ದುಗಳು, ಹೊಮ್ಯೊಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುಳಮೋಯುವ ರೋಗ, ದದ್ದು, ತುರಸುವ ನಂಜೆ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವಿ ಶುಕನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೋಮಗಳು ಬಿಳಿದಾಗಲ್ಲಿ ವಾರ್ಧಕ್ಯ, ಮೈಮೇಲು ಕಾಯಿಗಳು ಪಸ್ತೋಚುವದೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕರ ಗುಪ್ತ ಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಅತ್ತ ಸಂರಕ್ಷಕನಂತೆಯೇ ಯುವಕರಿಗಿರುವದು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸ ಬಾಡುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರ:— **ಮಲೇರಿಯಾನ ಕಂಪೆನಿ,**

[27] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಿಚ್ಚುವದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗಲಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣೆ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (17)

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್,

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ವೀರಶೈವಮತವಿಮರ್ಶಾ	೭ ಆಣೆ
ಶಿವತತ್ತ್ವವಿಲಾಸ	೩ ಆಣೆ
ಶ್ರೀಗುರುತತ್ತ್ವಪದಗಳು	೩ ಆಣೆ
ಶಿವಸ್ತವಶಿರೋಮಣಿ	೩|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೭ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೭ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೩ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೩ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೩ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಮ್ಮೇಳನಾರೋಹಣಮಾಡಿದಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂದು ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವುದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[9] ಪೋ. ಬಾ. ೫೧೦, ಮದರಾಸ್.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಲ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಮಾರ್ಚಿ ೧೯೩೪ [ಸಂಚಿಕೆ ೪೭

ಶ್ರೀ ಹಿಮವತ್ಕೇದಾರ ಶ್ರೀ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀ ಚಿದ್ಘನಲಿಂಗಶಿವಾಚಾರ ಮಹಾಸ್ವಾಮಿಗಳ ಅಂದೋಲಿಕೋತ್ಸವ. ಶ್ರೀರಾಮಪುರ.

ಶ್ರೀ ಜಗದ್ಗುರು ಮಹಾಸವಾರಿಯು ಇದುವರೆಗೂ ನಿಜಾಂ ರಾಜ್ಯದಲ್ಲಿ ಸಂಚಾರಮಾಡುತ್ತಾ ಅಲ್ಲಿಯ ವೀರಶೈವ ಭಕ್ತಮಾಹೇಶ್ವರರಿಗೆ ದರ್ಶನಾಶೀರ್ವಾದಗಳನ್ನು ಕೊಟ್ಟು ಪುನಃ ನಮ್ಮ ಪ್ರಾಂತಕ್ಕೆ ದಯಮಾಡಿಸಿದೆ. ಈ ಪೀಠದ ಪೂರ್ವದ ಶ್ರೀಜಗದ್ಗುರು ವಿಶ್ವಲಿಂಗಶಿವಾಚಾರ್ಯರು ಜಗದ್ಗುರು ಉಜ್ಜಯಿನೀ ಪೀಠದಲ್ಲಿ ಶಿವೈಕ್ಯರಾದ ಸಂಗತಿಯು ಸಕಲರಿಗೂ ವಿದಿತವಿರುವದಷ್ಟೇ! ಅವರ ಜಗದ್ಗುರುಗಳ ಆರಾಧನೆಯನ್ನೂ ಗದ್ದುಗೆಯ ಕಟ್ಟಡವನ್ನೂ ಪೂರೈಸಬೇಕೆಂದು ಮಹಾಸ್ವಾಮಿಯ ಚಿತ್ತಕ್ಕೆ ಬಂದಕಾರಣ ಡಿಗ್ಗಿ ಜಯ ಮಾಡೋಣವಾಗಿದೆ. ನಮ್ಮ ಗ್ರಾಮಕ್ಕೆ 26-2-34 ನೇ ತೇದಿಗೆ ಮಹಾಸವಾರಿಯು ನಿಜಾಂ ಇಲಾಖಾ ಗುಲುಬರ್ಗಾ ಜಿಲ್ಲಾ ಕಡುಬಾದಿಮುಕ್ಕಾಮಿನಿಂದ ದಯಮಾಡಿಸಿತು. ನಮ್ಮ ಗ್ರಾಮದ ಕಿಟ್ಟರ ಬಸವಣ್ಣನವರು ಕುಂಟಿ ಪಂಪಣ್ಣನವರು ಸಾಹುಕಾರ ಬುಗಲು ಮಹಾದೇವಪ್ಪನವರು, ಮೋಟಿಗೌಡರ ಮುರಿಬಸಪ್ಪನವರು, ಕನ್ನೂಲು ಚೆನಬಸಪ್ಪನವರು, ಬಸಾಪುರ ಸೂಗಣ್ಣನವರು, ಸ್ಕೂಲುಮಾಸ್ತರ ಗಂಗಾಧರಯ್ಯನವರು, ವೈದ್ಯ ಶಂಕರಯ್ಯನವರು, ಹಗ್ಗಿ ರಾಮಣ್ಣನವರು ವೃಕ್ಷರ ಓಬಳಯ್ಯನವರು, ಜೈನ ಮಮ್ಮಣ್ಣನವರು, ಪಾಟೀಲ ಯಂಕಮ್ಮನವರು, ದುಮ್ಮತಿ ಸಾಹುಕಾರ ರುದ್ರಪ್ಪನವರು, ಇನ್ನೂ ಮುಂತಾದ ಯಾವತ್ತು ಶೈವರವರು ಮಹಾಸ್ವಾಮಿಯವರ ಉತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು.

ಜಗದಾಚಾರ್ಯರು ಪಲ್ಲಕ್ಕಿಯಲ್ಲಿ ಮೂರ್ತಮಾಡಿದ ಕೂಡಲೆ "ಪಂಚಾಚಾರ್ಯಮಹಾರಾಜಕಿ ಜೈ" ಎಂಬ ಜಯಧ್ವನಿಯು ನಭೋಮಂಡಲವನ್ನು ವ್ಯಾಪಿಸಿತು. ಪಲ್ಲಕ್ಕಿಯ ಮುಂಭಾಗದಲ್ಲಿ ಪಂಚಾಚಾರ್ಯ ಭಜನಾಮಂಡಲಿಯವರ ಭಜನೆಯು ನಡೆಯುತ್ತಿತ್ತು. ಛತ್ರಿ, ಚಾಮರ, ಮಕರತೋರಣ, ಅಪ್ತಾಗಿರಿ, ಹಗಲು ದೀವಟಿಗೆ, ನಂದಿಧ್ವಜ, ಆನೆಯ ಮೇಲೆ ನಗಾರಿ, ಕುದುರೆಯ ಮೇಲೆ ಡಂಕಾ, ಇವೇ ಮೊದಲಾದ ನಾನಾತರಹದ ಬಿರುದಾವಳಿಗಳಿಂದ ಉತ್ಸವಕ್ಕೆ ವಿಶೇಷ ಶೋಭೆಯು ಪ್ರಾಪ್ತವಾಗಿತ್ತು. ಅಲ್ಲಲ್ಲಿ ಸುಮಂಗಲೆಯರು ಆರತಿಯನ್ನು ಮಾಡುತ್ತಿದ್ದರು. ಎಲ್ಲಾ ಮತದವರು ಕಾಯಿ ಕರ್ಪೂರ ಕೊಟ್ಟು ಮಂಗಳಾರತಿ ಮಾಡಿಸಿ ಆಶೀರ್ವಾದವನ್ನು ಪಡೆಯುತ್ತಿದ್ದರು. ಅಜುಬಾಜು ಗ್ರಾಮಗಳ ಭಕ್ತಮಂಡಲಿಯವರು ಉತ್ಸವಕ್ಕೆ ಆಗಮಿಸಿದ್ದರು. ಉತ್ಸವದ ವ್ಯವಸ್ಥೆಗಾಗಿ ಸಂಸ್ಥಾನದ ಸರ್ವಾಧಿಕಾರಿಗಳಾದ ಶ್ರೀ ಸಿದ್ಧರಾಮಯ್ಯರೂ ಹಾಗೂ ಮೇಳ ಪಟ್ಟಾಧಿಕಾರಿಗಳೂ ಸಂಸ್ಥಾನದ ಏಜೆಂಟ್ ಕೆ. ಯಂ. ವೀರಯ್ಯನವರೂ ಚನ್ನಾಗಿ ವ್ಯವಸ್ಥೆಯನ್ನು ಮಾಡಿದ್ದರು. ಉತ್ಸವವು ರಾಮಲಿಂಗೇಶ್ವರ ದೇವಸ್ಥಾನಕ್ಕೆ ತಲ್ಪಿತು. ಅಲ್ಲಿ ಸುಂದರವಾಗಿ ರಚಿಸಿದ ಸಿಂಹಾಸನದ ಮೇಲೆ ಜಗದಾಚಾರ್ಯರು ಮೂರ್ತಮಾಡಿದಕೂಡಲೇ ಸರ್ವರೂ ಪಂಚಾಚಾರ್ಯರ ಜಯಘೋಷವನ್ನು ಮಾಡಿದರು. ಅನಂತರ ಮಹಾಸನ್ನಿಧಿಯವರು ವೀರಶೈವಸನಾತನ ಧರ್ಮವನ್ನು ಸಕಲರಿಗೂ ತಿಳಿಯುವಂತೆ ಅಪ್ಪಣೆಕೊಡಿಸಿದರು. ಅನುಷ್ಠಾನಕ್ಕೆ ವೇಳೆಯಾದ್ದರಿಂದ ಪಂಚಾಚಾರ್ಯ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ನಮ್ಮ ಗ್ರಾಮದ ವೀರಶೈವರೂ, ಅಜುಬಾಜು ಗ್ರಾಮಗಳ ವೀರಶೈವರೂ ಗುರುಕಾಣಿಕೆಯನ್ನು ಅರ್ಪಿಸಿ ಫಲಾಶೀರ್ವಾದವನ್ನು ಪಡೆದರು. ನಮ್ಮ ಜೀರ್ಣವಾದ ಮಠದ ಇಮಾರತಿಯನ್ನು ತೆಗೆಯಿಸಿ ಹೊಸದಾಗಿ ಕಟ್ಟಿಸಿದ ಮಠಕ್ಕೆ ಜಗದ್ಗುರುಗಳನ್ನು ಉತ್ಸವದೊಡನೆ ಕರೆದು ಕೊಂಡುಹೋಗಿ ಮಹಾಪಾದಕ್ಕೆ ರುದ್ರಾಭಿಷೇಕಮಹಾಪೂಜೆಯನ್ನು ಮಾಡಿಸಿ ಅನ್ನಸಂತರ್ಪಣೆಯನ್ನು ಮಾಡಿ ಮಹಾಸನ್ನಿಧಿಯವರಿಗೆ ಗೋದಾನ ಗುರುಕಾಣಿಕೆಯನ್ನರ್ಪಿಸಿ ಫಲಾಶೀರ್ವಾದವನ್ನು ಪಡೆದದ್ದಾಯಿತು. ನಮ್ಮ ಗ್ರಾಮದ ಪ್ರಮುಖರಾದ ಕಿಟ್ಟರ ಬಸವಣ್ಣನವರು, ಕುಂಟಿ ಪಂಪಣ್ಣನವರು, ಹಗ್ಗಿ ರಾಮಣ್ಣನವರು ಜಗದ್ಗುರು ಮಹಾಸನ್ನಿಧಿಗೆ ಬಿನ್ನಹವನ್ನು ಮಾಡಿ ಉತ್ಸವದೊಡನೆ ತಮ್ಮ ತಮ್ಮ ಗೃಹಕ್ಕೆ ಬರಮಾಡಿಕೊಂಡು ಪಾದಪೂಜೆಯನ್ನು ಮಾಡಿ ಗುರುಕಾಣಿಕೆಯನ್ನು ಸಮರ್ಪಿಸಿ ಫಲಾಶೀರ್ವಾದವನ್ನು ಪಡೆದರು. ಇದರಂತೆ ಸಕಲ ಭಕ್ತಾದಿಗಳೂ ಗುರುಪೂಜೆಯನ್ನು ಮಾಡಿ ಧನ್ಯರಾಗಿರುತ್ತಾರೆ. ಇಲ್ಲಿಂದ ಮಹಾಸವಾರಿಯು ಆದವಾನಿ ಮುಕ್ಕಾಮಿಗೆ ಭಾವನಾಮಸಂವತ್ಸರದ ಚೈತ್ರ ಶು|| ೭ ಬುಧವಾರ ದಿವಸ ದಯಮಾಡಿಸಲಿಕ್ಕಿದ್ದಾಗಿದೆ.

ರಾಂಪುರಮಠದ ರಾಮಲಿಂಗಯ್ಯ.

ಸವದತ್ತಿಯಲ್ಲಿ ಗಾಂಧಿಯವರಿಗೆ ಅನಾದರ.

ಗಾಂಧಿಯವರು ಕರ್ನಾಟಕದಲ್ಲಿ ಸಂಚಾರಮಾಡುವ ಕಾರ್ಯ ನಡೆದದ್ದನ್ನು ಕೇಳಿ ಕೆಲವು ಜನ ಸ್ವಾರ್ಥಿಗಳು ಅಲ್ಲಲ್ಲಿ ಕಾಣಲಿಕ್ಕೆ ಹತ್ತಿದರು. ಸವದತ್ತಿಯಲ್ಲಿ (ಕ್ಷ) (ಜ್ಞ) ಎಂಬ ಇಬ್ಬರು ಬ್ರಾಹ್ಮಣರು ಇಲ್ಲಿಯ ಮುನಸಿಪಾಲಿಟಿಯಲ್ಲಿ ಗಾಂಧಿಯವರಿಗೆ ಮಾನಪತ್ರಕೊಡುವ ವಿಷಯವನ್ನು ಪಾಸ್ಮಾಡಿಸಬೇಕೆಂದು ಸೂಚಿಸಿದರು. ಕಮಿಟಿಕೂಡಿ ಅಧ್ಯಕ್ಷರೂ, ಇನ್ನುಳಿದವರೂ ಬಹುಮತದಿಂದ ಮಾನಪತ್ರವನ್ನು ಕೊಡುವದನ್ನು ನಿಷೇಧಿಸಿದರು. ಇದರಂತೆ ತಾಲೂಕ ಲೋಕಲ್ಬೋರ್ಡಿನವರೂ ಸಹ ನಿಷೇಧಿಸಿದರು. ಈ ಸಂಗತಿಯು ಬೆಳಗಾಂವಿ ಪೂಜಾರಿಗಳಿಗೆ ತಿಳಿದು ಅಲ್ಲಿಯ ಒಬ್ಬರಾದ ದೇಶಭಕ್ತರೆಂಬ ಅಭಿದಾನ ಪಡೆದವರು ಕೂಡಲೇ ಸವದತ್ತಿಗೆ ಬಂದು (ಕ್ಷ) (ಜ್ಞ) ಎಂಬವರ ಅನುಯಾಯಿಗಳಾದ (ಅ) (ಆ) ಎಂಬ ಇಬ್ಬರು ಲಿಂಗಾಯತ ವಕೀಲರಿಂದ ಕೂಡಿಕೊಂಡು ತಮ್ಮ ಮತಿಯಂತೆ ಗಾಂಧಿಯವರಿಗೆ ಬೇರೆ ರೀತಿಯಿಂದ ಮಾನಪತ್ರಕೊಡುವಂತೆ ನಿಯಮಿಸಿಕೊಂಡರು. ಮುಂದೆ ಮಾಡುವುದೇನು ಮತ್ತಿನ ವಿಚಾರ?.....................

ಈ ವಿಚಾರದಲ್ಲಿ (ಕ್ಷ) (ಜ್ಞ) ಎಂಬವರಿಗೆ ಯಾರೂ ಒಂದು ಪೈ ಕೊಡುವದಿಲ್ಲವೆಂಬುದು ತಿಳಿಯಿತು. ಇವರಿಬ್ಬರ ಜಾಗಕ್ಕೆ (ಅ) (ಆ) ಎಂಬ ಲಿಂಗಾಯತ ವಕೀಲರು ನಿಂತರು. ಇವರಲ್ಲಿ (ಆ) ಎಂಬ ವಕೀಲರು ಸವದತ್ತಿಯಲ್ಲಿ ಪ್ರಯತ್ನ ಮಾಡತೊಡಗಲು ಅಲ್ಲಿ ಮೊದಲೇ ನಗರಾಧ್ಯಕ್ಷ ವಗೈರೆ ಪ್ರಮುಖರು ನಿಷೇಧಮಾಡಿದ ಕಾರ್ಯಕ್ಕೆ ಇವರು ಕೈಹಾಕಿದ್ದು ಸವದತ್ತಿಯ ಜನರಿಗೆ ತಿಳಿದು ಮತ್ತಿನ ಕಾರ್ಯದಲ್ಲಿ ಅನಾದರ ಮಾಡಿದರು. ಇದನ್ನು ತಿಳಿದು ಇವರು ಅಜುಬಾಜು ಗ್ರಾಮಗಳಿಗೆ ಹೋಗಿ ಅಲ್ಲಿಯ ಅಜ್ಞಜನರಿಗೆ ಬೋಧಮಾಡಿ ಅಲ್ಲಿಯೂ ಕೂಡ ಪಾರ್ಟಿಮಾಡಿ ಊರಿಗೆ ೧೦-೨೦ ರೂಪಾಯಿಗಳನ್ನು ಕೂಡಿಸಿದರು. ತಾರೀಖು ೪ ನೇ ರವಿವಾರ ಅಜುಬಾಜು ಹಳ್ಳಿಗಳಿಂದ ಜನರು ಬಂದು ಕೂಡಿದರು. ಸವದತ್ತಿಯಲ್ಲಿ ಊರು ಬಿಟ್ಟು ನಿರ್ಮಿಸಿದ ಹಾಳು ಗರಡಿಯ ಮತ್ತಿಯ ನೆಲದ ಒಂದು ಬಂಗ್ಲೆಕ್ಕೆ ಗಾಂಧಿಯವರನ್ನು ಸ್ವಾಗತಿಸಿ ಕರಕೊಂಡರು. ಅಷ್ಟರಲ್ಲಿ ಕೇಳುವದೇನು? ಹಳ್ಳಿಯ ಅಜ್ಞಜನರ ಸಮುದಾಯವು ಕೂಗಾಟವನ್ನು ಹಿಡಿಯಿತು. ಇದನ್ನು ಕಂಡಕೂಡಲೇ ೫-೭ ಮಿನೀಟಿನಲ್ಲಿಯೇ ಈ ಪೂಜಾರಿ ವಕೀಲರು ಕೊಟ್ಟ ಮಾನಪತ್ರವನ್ನು ಸ್ವೀಕರಿಸಿ ಗಾಂಧಿಯವರು ಬೈಲಹೊಂಗಲಕ್ಕೆ ಪ್ರಯಾಣಮಾಡಿದರು. ಈ ಕಾರ್ಯವನ್ನು ಮಾಡಿದವರಿಗೆ "ಮೂಗುಹೋದರೂ ಮೂಗಿನ ಹೊರಳಿದೆ" ಅನ್ನುವಂತೆ ಆಯಿತಲ್ಲದೆ ಚಹಾದ ಅಂಗಡಿಕಾರರಿಗೆ ಮಾತ್ರ ಈ ಜಾತ್ರೆಯಲ್ಲಿ ಲಾಭವಾದದ್ದರಿಂದ ಈ ಅಂಗಡಿಯವರು ಗಾಂಧಿಯವರನ್ನು ಆಗಮನಮಾಡಿಸಿದವರಿಗೆ ಪುಣ್ಯಹತ್ತಲೆಂದು ಹರಸಿದರು. ಹಿಂದಿನ ಕಾಯಿದೆಭಂಗದ ಚಳವಳಿಯ ಮಾರ್ಗದರ್ಶಿಯಾಗಿ ಅನೇಕರನ್ನು ಸೆರೆಮನೆಗೆ ಕಳುಹಿಸಿ ತಾವು ಹೊಲೆಯರನ್ನು ಉದ್ಧಾರ ಮಾಡುವೆವೆಂದು ಹೊಸ ಸೋಗುಹಾಕಿಕೊಂಡು ಸಂಚಾರಮಾಡುವ ಈ ಗಾಂಧಿಯವರ ಕಾರ್ಯಕ್ಕೆ ಅನೇಕ ಜನರು ನಿಷೇಧಮಾಡಿದರು.

ಓರ್ವ ಪ್ರತ್ಯಕ್ಷದರ್ಶಿ. ಸವದತ್ತಿ.

ಗಾಂಧಿಯವರ ತತ್ತ್ವ.

(ಮದರಾಸಿನ "ಧರ್ಮರಾಜ್ಯ" ಪತ್ರಿಕೆಯಿಂದ)

ಗಾಂಧಿಯವರಿಂದ ಪ್ರಾರಂಭಿಸಲ್ಪಟ್ಟಿರುವ "ದೇವಾಲಯಪ್ರವೇಶ" ಮತ್ತು "ಅಸ್ಪೃಶ್ಯತಾನಿವಾರಣ" ಚಳವಳಿಗಳಿಂದ ಭರತಖಂಡದಲ್ಲಿ ವಿಶೇಷಗೊಂದಲವುಂಟಾಗಿ ಅತ್ಯಂತ ಸೌಮ್ಯವಾದಿಗಳನ್ನು ಸಹ ಕಾರ್ಯತತ್ಪರರನ್ನಾಗಿ ಮಾಡಿದೆ. ಇವರ ಚಳವಳಿಯು ಕಾಂಗ್ರೆಸ್ಸಿನ ಕೆಲಸಕಾರ್ಯಗಳಿಗೆ ವ್ಯತ್ಯಸ್ತರೂಪವಾಗಿ ಪರಿಣಮಿಸಿರುವುದಲ್ಲದೆ ಅನೇಕ ವರ್ಷಗಳಿಂದ ಅತ್ಯಂತ ಕಷ್ಟದಿಂದ ಸಾಧಿಸಿದ್ದ ಕಾರ್ಯಗಳೆಲ್ಲವೂ ನಿಷ್ಪ್ರಯೋಜನಗಳಾದವು. ತಮಗೆ ನಾಲ್ಕು ಕಡೆಗಳಿಂದಲೂ ಅಡಚಣೆಗಳು ಪ್ರಾಪ್ತವಾದುದನ್ನು ಕಂಡು ಗಾಂಧಿಯವರು ರಾಜಕೀಯ ರಂಗವನ್ನು ತ್ಯಜಿಸಿ ಸನಾತನಿಗಳನ್ನು ಕೈಲಾಗದವರೆಂದು ಭಾವಿಸಿ, ಅವರ ಮೇಲೆ ತಮ್ಮ ಬಾಣವನ್ನು ಪ್ರಯೋಗಮಾಡಲು ಪ್ರಾರಂಭಿಸಿರುತ್ತಾರೆ. ಆದರೆ ನಿರಾಶೆಯೆಂಬುದು ಎಂತಹವರನ್ನಾದರೂ ಮಿತಿಮೀರಿ ವರ್ತಿಸುವಂತೆ ಮಾಡುವುದು. ಹಾಗೆ ಮಿತಿಮೀರಿ ಬಂದವರನ್ನು ಜಯಿಸುವುದು ಸ್ವಲ್ಪ ಕಷ್ಟಸಾಧ್ಯವೇಸರಿ! ಪ್ರಾಯಶಃ ಗಾಂಧಿಯವರು ಈ ವಿಷಯವನ್ನು ಮರೆತಿರಬಹುದು!

ಪ್ರಥಮತಃ ಇವರತತ್ತ್ವವು ವಿಚಾರಶೂನ್ಯತೆಯುಳ್ಳದಾಗಿರುತ್ತದೆ. ಏಕೆಂದರೆ—ಇವರು ಅನಾದಿಕಾಲದಿಂದ ನಡೆದು ಬಂದಿರುವ ಆಚರಣೆಗಳನ್ನು ಸಮೂಲವಾಗಿ ಕಿತ್ತುಹಾಕಲು ಪ್ರಯತ್ನಿಸಿರುತ್ತಾರೆ. ತಿಳಿದೋ ಅಥವಾ ತಿಳಿಯದೆಯೋ ನಮ್ಮ ಮತದಲ್ಲಿ ಅನೇಕ ದುರಾಚಾರಗಳು ಸೇರಿಕೊಂಡು ಅದನ್ನು ಈಗಿನ ಸ್ಥಿತಿಗೆ ತಂದಿರುತ್ತವೆ. ಪಾಶ್ಚಿಮಾತ್ಯರ ಮತತತ್ತ್ವಗಳ ಸಂಬಂಧದಿಂದಲೂ ನಮ್ಮಲ್ಲಿ ಕೆಲವರ ಮನಸ್ಸಿನಲ್ಲಿ ಬೇರೂರಿರುವ ವಿಚಿತ್ರಾಭಿಪ್ರಾಯಗಳಿಂದಲೂ ಎಲ್ಲರ ಮನಸ್ಸಿನಲ್ಲಿಯೂ ಸಂಶಯವು ತಲೆದೋರಿರುವುದು. ಇದಕ್ಕಾಗಿಯೇ ನಮ್ಮ ಮಠಾಧಿಪತಿಗಳು ಬೋಧನೆಯಿಂದಲೂ ಬರವಣಿಗೆಯಿಂದಲೂ ಭಾಷಣಗಳಿಂದಲೂ ಮತಸಂಬಂಧವಾದ ಭಿನ್ನಾಭಿಪ್ರಾಯಗಳನ್ನು ದೂರಮಾಡಬೇಕೆಂದು ಪ್ರಯತ್ನಿಸಿರುವರು. ವರ್ಣಾಶ್ರಮ ಧರ್ಮಗಳ ನಿಜತತ್ತ್ವವು ಎಂದಾದರೊಂದು ದಿನ ಪ್ರಕಾಶಕ್ಕೆ ಬರಲೇಬೇಕು. ಆ ದಿವಸವು ಜಾಗ್ರತೆಯಾಗಿ ಬರುವಂತೆಯೂ ನಮ್ಮ ತರುಣರ ಮನಸ್ಸಿನಲ್ಲಿ ಮತದ ವಿಷಯದಲ್ಲಿ ತಲೆದೋರಿರುವ ತಪ್ಪು ಅಭಿಪ್ರಾಯಗಳು ಹೋಗುವಂತೆಯೂ ಕರುಣಿಸುವಂತೆ ದೇವರನ್ನು ಪ್ರಾರ್ಥಿಸೋಣ!

ಕಾಂಗ್ರೆಸ್ ಎಂಬುದು ಸಂಪೂರ್ಣವಾಗಿ ರಾಜಕೀಯ ಸಂಸ್ಥೆಯಾಗಿದ್ದು, ರಾಜಕೀಯ ಕಾರ್ಯಗಳಲ್ಲಿ ಕೆಲಸಮಾಡಲು ಸಂಪೂರ್ಣ ಅವಕಾಶವನ್ನು ಹೊಂದಿರುತ್ತದೆ. ರಾಜಕೀಯ ಕಾರ್ಯಕ್ರಮವು ಕಾಂಗ್ರೆಸ್ಸಿನ ಮೂಲಧ್ಯೇಯವಾಗಿದ್ದು ಪ್ರಸಿದ್ಧರಾಗಿ ಹೋದ ಪ್ರತಿ

(5ನೇ ಪುಟವನ್ನು ನೋಡಿ).

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮಹಾಮಹಿಮ ಪಂಚಾಚಾರ್ಯರು ಪಾಯಾದ್ಗುರುಪಂಚಕಂಚ, ಧೋತ್ರೀಕ್ಷೇತ್ರ.

ಸೋಲಾಪೂರ ಜಿಲ್ಲೆ ಶಾಲ್ಮೋಕ ಧೋತ್ರಿಯೆಂಬುವ ೧೫೦೦ ಜನಸಂಖ್ಯೆಯುಳ್ಳ ಕೂಡಿದ ಗ್ರಾಮವೊಂದುಂಟು. ಅಲ್ಲಿ ಏಕೀಕೃತ ವೀರಶೈವರೇ ಇರುವರಲ್ಲದೆ ಪುರಾತನರಾಗಿ ಆಗಿರುತ್ತಾರೆ. ಅಲ್ಲಿ "ದರೇಕರ" ಎಂಬುವ ಮನೆತನದವರಲ್ಲಿ ಈಗ್ಗೆ ನೂರಾರು ವರ್ಷಗಳ ಪೂರ್ವದಲ್ಲಿ "ಗುರುಸಿದ್ಧಪ್ಪ" ನೆಂಬುವವರು ಒಳ್ಳೇ ಸತ್ಪುರುಷರಾಗಿ ಹೋಗಿರುತ್ತಾರೆ. ಆ ಮನೆತನದವರಿಗೆ "ಮಹಾರಾಜರು" ಎಂದೆನ್ನುವರು. ಇಲ್ಲಿಯ ವೀರಶೈವರು ಸದಾಚಾರಿಗಳಾಗಿ ವರ್ತಿಸುತ್ತಿರುವರು. ಸದರಿ "ಗುರುಸಿದ್ಧಪ್ಪ ಮಹಾರಾಜರ" ಉತ್ಸವವು ಈಗಲೂ ನಡೆಯುತ್ತದೆ. ಆ ಮನೆತನದಲ್ಲಿ ಈಗಿರುವ "ಗುರುಸಿದ್ಧಪ್ಪ" ನೆಂಬುವರೂ ವಿಶೇಷ ಸದಾಚಾರಿಗಳೂ, ಗುರುಭಕ್ತಾಗ್ರೇಸರರೂ ವಿನಯಶೀಲರೂ, ಆಗಿದ್ದಾರೆ. ಇವರಂತೆಯೇ ಈ ಊರಲ್ಲಿರುವ ಸರ್ವ ವೀರಶೈವರೂ ಗುರುಭಕ್ತಿಧುರೀಣರಾಗಿದ್ದಾರೆ. ಈ ದಕ್ಷಿಣ ಮಹಾರಾಷ್ಟ್ರ ಭಾಗದಲ್ಲಿ ಈ ಧೋತ್ರೀಗ್ರಾಮವು ಪವಿತ್ರಕ್ಷೇತ್ರವಾಗಿ ಪರಿಣಮಿಸಿದೆ. ಈ ಗ್ರಾಮಸ್ಥರು ಕೂಡಾ ಹಿಂದಿನ ವೀರಶೈವ ಧರ್ಮಸುಧಾರಣೆಪರರಾಗಿಯೇ ಮಹಾತ್ಮರೆಂಬುದು ಇತರರು ಚಿರಕಾಲ ಇತರ ವ್ಯಕ್ತಿಗಳಿಗೇ ಇಲ್ಲವು. ಉದಾಹರಣಾರ್ಥವಾಗಿ ಒಕ್ಕಲಿಗರು ಜೋಳ ವಗೈರೆ ಹೀರುವಾಗ್ಗೆ "ಬುಕೀಟಗಾರತಿ ಭಮಭಮನಾರತಿ" ಇತ್ಯಾದಿ ದುಷ್ಟಶಬ್ದಗಳನ್ನುಚ್ಚರಿಸುತ್ತಾರೆ. ಈ ಗ್ರಾಮದಲ್ಲಿ ಮಾತ್ರ ಒಕ್ಕಲಿಗರು "ಗುರುವರೇಣುಕ ಚರವರಪಾಲಕ" ಎಂದು ಪಂಚಾಚಾರ್ಯರ ನಾಮವನ್ನೇ ಉಚ್ಚರಿಸುತ್ತಾರೆ. ರಾಶಿ ಮಾಡುವ ಸಮಯದಲ್ಲಿಯೂ ರಾಶಿಯನ್ನು ಮನೆಗೆ ಒಯ್ಯುವಾಗಲೂ, ಗಳೆ, ನೇಗಿಲು, ರಂಟೆ, ಕುಂಟೆ, ಹೊಡೆಯುವಾಗಲೂ, ಗುರುಸ್ತುತಿಯೇ ಗುರುಸ್ತುತಿ. ಅಷ್ಟೇಕೆ? ಪ್ರತಿಯೊಬ್ಬ ಸ್ತ್ರೀಯರೂ ಕೂಡ ಕುಟ್ಟುವಾಗಲೂ ಬೀಸುವಾಗಲೂ ಕುಳಿ, ಕೋಲಭಜನಕಾರ್ಯಗಳಲ್ಲಿಯೂ ಗುರುಸ್ತುತಿಯನ್ನೇ ಮಾಡುತ್ತಾರೆ. ಇದನ್ನು ಪ್ರತ್ಯಕ್ಷ ನೋಡದವರಿಗೆ ಅತಿಶಯೋಕ್ತಿಯಾಗಿ ಕಂಡರೂ ಪ್ರತ್ಯಕ್ಷ ನೋಡುವವರಿಗೆ ನಿಜವೆಂದೇ ಕಾಣಿಸುತ್ತದೆ. ಪುರುಷರಂತೆ ಸ್ತ್ರೀಯರೂ ಕೂಡ "ಪಂಚಾಚಾರ್ಯ ಭಜನೆಯನ್ನು" ಮಾಡುತ್ತಾರೆ. ಇದರ ಮೇಲಿಂದ ಅಲ್ಲಿಯ ವೀರಶೈವರು ಹೇಗೆ ಸುಧಾರಿಸಿರಬಹುದೆಂಬುದು ಒಡನೆ ಕಾಣುವಂತಿದೆ.

ಈಗ್ಗೆ ಒಂದು ವರ್ಷದಿಂದ ಈ ಧೋತ್ರೀ ಗ್ರಾಮದಲ್ಲಿ ಹೋಟಗೀಸ್ವಾಮಿಗಳಿಂದ "ವೀರಶೈವ ಧರ್ಮಸುಧಾರಣಾ ಸಂಘ" ವೆಂಬುವ ಒಂದು ಸಂಘವೂ, 'ಶ್ರೀ ಚನ್ನವೀರಶಿವಾಚಾರ್ಯವಾಚನಾಲಯ' ವೆಂಬ ವಾಚನಾಲಯವೂ ಸ್ಥಾಪಿತವಾಗಿವೆ. ಈ ಸಂಘದಿಂದ ಎಷ್ಟೋ ಕಾರ್ಯಗಳಾಗುತ್ತಬಂದಿವೆ. ಈ ಊರಲ್ಲಿ ಯಾರಾದರೂ ಕಲಹವನ್ನು ಮಾಡಿದರೆ ಸರಕಾರಕ್ಕೆ ಹೋಗದೆ ಈ ಸಂಘದಿಂದಲೇ ತೀರ್ಮಾನಿಸುತ್ತಾರೆ. ಈ ಸಂಘದವರು ಈ ವರ್ಷ 'ಶ್ರೀಮದ್ವೀರಶೈವ ಧರ್ಮೋನ್ನತಿಯ ಸಭೆ' ಯೊಂದನ್ನು ನಡೆಸುವವರಿದ್ದಾರೆ. ಇವರ ಸರ್ವಕಾರ್ಯಗಳಿಗೂ ಹೋಟಗೀ ಶ್ರೀಗಳೇ ಮುಖ್ಯ ಸಹಾಯಕರಿರುವದರಿಂದ ಅವರ ಸ್ಮರಣಾರ್ಥವಾಗಿ ಅವರ ಹೆಸರಿಂದ ವಾಚನಾಲಯವನ್ನು ಮಾಡಿರುವರಲ್ಲದೆ 'ಶ್ರೀ ಬಾಲಕಸ್ವಾಮಿ ಬಾಲ್ಯಗ್ರಂಥಮಾಲೆ' ಯನ್ನೂ ಹೊರಡಿಸಿರುತ್ತಾರೆ.

ಮಹಾಶಿವರಾತ್ರಿಯ ದಿವಸ 'ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಯನ್ನೂ ಶ್ರೀ ೧೦೮ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನೂ ಒಳ್ಳೇ ವೈಭವದಿಂದ ನೆರವೇರಿಸಿದರು. ಯಾವಾಗಲೂ ವನದೊಳಗೆ ಏಕಾಂತವಾಸಪ್ರಿಯರಾದ ಹೋಟಗೀ ಶ್ರೀಗಳವರು ಸದರೀ ಧೋತ್ರೀಗ್ರಾಮದಲ್ಲಿ 'ಗಣಪತಿ ಗುರುಮೂರ್ತಿ ಪಾಟೀಲ' ಇವರ ಹೊಲದಲ್ಲಿಯ ಬಿಲ್ವವನದಲ್ಲಿಯೇ ವಿಶೇಷವಾಗಿ ವಾಸಿಸುವದರಿಂದ ಅಲ್ಲಿಯ ಜನರು ಆಸ್ಥಾನಕ್ಕೆ 'ಶ್ರೀ ಗುರುಕುಲಾಶ್ರಮ' ವೆಂದೂ ಅಲ್ಲಿರುವ ಜಲಾಶಯಕ್ಕೆ (ಭಾವಿಗೆ) 'ಧೇನುಕರ್ಣತೀರ್ಥ' ವೆಂದು ನಾಮಕರಣವನ್ನು ಒಳ್ಳೇ ಭಕ್ತಿಯಿಂದ ನಡೆದುಕೊಳ್ಳುತ್ತಿರುವರು. ಆ ಸ್ಥಾನದಲ್ಲಿಯೇ ಶ್ರೀ ೧೦೮ ಜಗದ್ಗುರು ರೇಣುಕಭಗವತ್ಪಾದರ ಜಯಂತಿಯು ಹೋಟಗೀ ಶ್ರೀಗಳ ನೇತೃತ್ವದಲ್ಲಿಯೂ, ಈ ಊರ ಸತ್ಪುರುಷರ ಮನೆತನದವರಾದ ಗುರುಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿಯೂ ನೆರವೇರಿಸಲ್ಪಟ್ಟಿತು. ಈ ಊರಿನವರು ಪ್ರೇಮದಿಂದ ಹೊರಗಿದ್ದರೂ ಸರ್ವ ಸ್ತ್ರೀಪುರುಷರೂ 'ಭಜಾಮಿಸತತಂ ಭಜಾಮಿ ಸತತಂ ರೇವಣಸಿದ್ಧಂಭಜಾಮಿಸತತಂ' ಇತ್ಯಾದಿ ಆಚಾರ್ಯಸ್ತುತಿಯನ್ನು ಮಾಡುತ್ತಾ ಆ ಗುರುಕುಲಾಶ್ರಮಕ್ಕೆ ಸಂತೋಷದಿಂದವಾಗಿ ಬರುತ್ತಿದ್ದರು. ಅಲ್ಲಿ ಮಾವು, ಬೇವು, ಬಿಲ್ವ ವೃಕ್ಷಗಳಲ್ಲಿ ಕಟ್ಟಿರುವ ಧ್ವಜಗಳು ದೂರದೂರ ಗುಡಿಸಲುಗಳಲ್ಲಿರುವವರನ್ನು 'ಜಯಂತಿಗೆ ಬೇಗನೆ ಬನ್ನಿರಿ. ಎಂದು ಕೈಮಾಡಿ ಕರೆಯುತ್ತವೆಯೋ? ಅಥವಾ ನಾವು ಆನಂದಿಯಲ್ಲಿದ್ದೇವೆ. ನಮ್ಮ ಗುಡಿಸಲು ಕಾಯುವದಕ್ಕೆ ಯಾರೂ ಇಲ್ಲ. ಹೇಗೆ ಮಾಡೋಣವೆಂದು ಅನುಮಾನಿಸುವವರನ್ನು ಏನೂ ಅಂಜಬೇಡಿರಿ ಎಂದು ಕೈಯನ್ನು ಚಲಿಸುವವೋ ಏನೋ ಎಂಬುವಂತೆ ಗಾಳಿಗೆ ಚಲಿಸುತ್ತಿದ್ದವು. ಅಗ್ಗೆ ಆ ವನದಲ್ಲಿಯ ಶೋಭೆಯನ್ನು ನೋಡಿದರೆ ಪ್ರತ್ಯಕ್ಷ ರೇಣುಕರು ಈಗಲೇ ಇಲ್ಲಿಯೇ ಅವತರಿಸಿರುವರೋ? ಎಂಬುವಂತೆ ಕಂಗೊಳಿಸುತ್ತಿತ್ತು.

ಲಕ್ಷ್ಮೀಬಾಯಿ, ಲಿಂಬಾಬಾಯಿ, ಹೀರಾಬಾಯಿ, ಪಾರ್ವತೀಬಾಯಿ, ಈರಾಬಾಯಿ, ಸಂಗಾಬಾಯಿ, ಲಕ್ಷ್ಮೀಬಾಯಿ, ಈ ಬಾಲಿಕೆಯರು ತಮ್ಮ ಕೋಮಲವಾದ ಮಂಜುಳಸ್ವರದಿಂದ ಶ್ರೀ ೧೦೮ ಜಗದ್ಗುರು ರೇಣುಕಭಗವತ್ಪಾದರ 'ಜೋಗುಳ' ವನ್ನು ಹಾಡಿದನಂತರ 'ಗಣಪತಿ ಗುರುಮೂರ್ತಿಪಾಟೀಲ ಗುರುಸಿದ್ಧಪ್ಪ ಮಹಾರಾಜ' ಹೋಟಗೀ ಶ್ರೀಗಳು ಇವರ ಸಮಯೋಚಿತ ವ್ಯಾಖ್ಯಾನಗಳಾದವು. ಈ ವರ್ಷ ನೆರವೇರಿಸುವ ಶ್ರೀಮದ್ವೀರಶೈವ ಧರ್ಮೋನ್ನತಿಯ ಸಭೆಯ ಅಧ್ಯಕ್ಷಸ್ಥಾನವು ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರ ಶಿವಾಚಾರ್ಯರಿಂದ ವಹಿಸಲ್ಪಡತಕ್ಕದ್ದೆಂದು ಸರ್ವಾನುಮತದಿಂದ ಠರಾಯಿತು. ರುದ್ರಪ್ಪ ಪಾಟೀಲ, ಗಂಗಪ್ಪ, ಮಲ್ಲಪ್ಪ, ಮಳಕಪ್ಪಮುತ್ಯಾ, ಶಿದ್ರಾಮಪ್ಪ ಪಾಟೀಲ, ಸಂಡಗಿ ಶಿದ್ರಾಮಪ್ಪ, ವಿಠಲಪಹಿಲವಾನ, ಗುರುಸಿದ್ಧಪ್ಪ ಮಹಾರಾಜ, ಗುರುಸಿದ್ಧಪ್ಪ ದರೇಕರ, ವೀರಭದ್ರಪ್ಪ, ಶಂಕರಪ್ಪ, ಭಾಕಲಗಿ ಪಾಟೀಲ, ಅಂದಪ್ಪ, ಗಣಪತಿ, ಇತ್ಯಾದಿ ಸರ್ವ ವೀರಶೈವರು ಒಮ್ಮನಸ್ಸಿನಿಂದ ಈ ಕಾರ್ಯವನ್ನು ನೆರವೇರಿಸಿದರು. ನಿರ್ವಿಘ್ನರೀತಿಯಿಂದ ಸಾಗಿದುದಕ್ಕೆ ಶ್ರೀ ಗಣಪತಿ ಗುರುಮೂರ್ತಿ ಪಾಟೀಲ, ಇವರು ಪಂಚಾಚಾರ್ಯ ಪ್ರಭೆಗೆ ೧ ರೂಪಾಯಿಯನ್ನು ಅರ್ಪಿಸಿರುತ್ತಾರೆ.

ಶ್ರೀರುದ್ರಯ್ಯ ಕೇಗಾಂವ,

ಶ್ರೀ ಶಂಕರಪ್ಪ ದರ್ಗನಹಳ್ಳಿ.

ಕಲ್ಯಾಣ.

(ಮುಂದೇನಾಗಿದ್ದು.)

(ಲೇ|| ವಾಗೀಶಶಿವಾಚಾರ್ಯ ಬೃಹನ್ಮಠ, ಮುದೇನೂರು ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲ ಕಾಶೀಕ್ಷೇತ್ರ.)

ಯಾವನ ಮನಸ್ಸಿನಲ್ಲಿ ಪ್ರೇಮ, ಸತ್ಯ, ದಯೆ, ಆನಂದ ಸರಳತನ ಮುಂತಾದ ಗುಣಗಳು ತುಂಬಿಕೊಂಡಿರುವವೋ ನೋಟಕ್ಕೆ ಕುರೂಪಿಯಾಗಿದ್ದರೂ ಯಥಾರ್ಥವಾಗಿ ಅವನೇ ಸುಂದರನೆನಿಸುವನು. ಯಾವನ ಮನಸ್ಸಿನಲ್ಲಿ ವೈರ, ಅಸತ್ಯ, ಕ್ರೂರತನ, ವಿಷಾದ ಕಾಪಟ್ಯ ಮುಂತಾದ ದೋಷಗಳು ತುಂಬಿಕೊಂಡಿರುವವೋ ಅವನೇ ನೋಟಕ್ಕೆ ಬಹುಸುಂದರನಾಗಿದ್ದರೂ ಯಥಾರ್ಥವಾಗಿ ಕುರೂಪಿಯೆನಿಸುವನು. ಆದುದರಿಂದ ಮನಸ್ಸಿನಲ್ಲಿ ದೈವೀಗುಣಗಳನ್ನು ತುಂಬಿಕೊಳ್ಳುವುದಕ್ಕೆ ಪ್ರಯತ್ನ ಮಾಡು.

ಯಾವನ ಮನಸ್ಸು ಸ್ವಾಧೀನವಾಗಿರುವುದೋ ಅವನೇ ಸ್ವತಂತ್ರನೆನಿಸಿಕೊಳ್ಳುವನು. ಶರೀರವನ್ನು ಬಂಧಿಸುವುದು ಬಂಧನವೆನಿಸುವುದಿಲ್ಲ, ಮನವನ್ನು ಬಂಧಿಸುವುದೇ ನಿಜವಾದ ಬಂಧಿಸುವಿಕೆ. ಒಬ್ಬ ಮನುಷ್ಯನು ದೇಹದಿಂದ ಸ್ವತಂತ್ರನಾಗಿದ್ದು ಮನಸ್ಸಿನ ಅಧೀನನಾಗಿದ್ದರೆ ಆತನನ್ನು ನಿಜವಾಗಿ ಪರಾಧೀನನ್ನಾಗಿಯೇ ತಿಳಿಯಬೇಕು. ಮನಸ್ಸಿನ ಮೇಲೆ ವಿಜಯವನ್ನು ಸಂಪಾದಿಸುವವನೇ ನಿಜವಾದ ವಿಜಯಿಯೆನಿಸುವನು, ಆದುದರಿಂದ ಮನಸ್ಸನ್ನು ಸ್ವಾಧೀನಪಡಿಸಿಕೋ.

ಮನವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಒಂದುವೇಳೆ ವಿಧಿನಿಯಮಗಳ ಕಟ್ಟಿಗೆ ಒಳಪಡುವ ಪ್ರಸಂಗವೊದಗಿದರೆ ನಿನ್ನ ಸೌಭಾಗ್ಯವೆಂದೇ ತಿಳಿ. ಇಂತಹ ಕಟ್ಟು ಮನಸ್ಸಿನ ಗುಲಾಮಗಿರಿಯಿಂದ ನಿನ್ನನ್ನು ದೂರಮಾಡುವುದು. ಸ್ವೇಚ್ಛಾವ್ಯವಹಾರವು ಕಟ್ಟಿದ ಗಂಟನ್ನು ಮತ್ತಷ್ಟು ಜಗ್ಗಿ ಬಿಗಿಮಾಡುವುದಾದುದರಿಂದ ನೀನು ಸ್ವೇಚ್ಛಾವ್ಯವಹಾರಕ್ಕೆ ಬೀಳದೆ ಯಾವಾಗಲೂ ನಿಯಮಗಳ ಕಟ್ಟಿಗೊಳಪಟ್ಟಿರುವುದೇ ಪರಮಮಂಗಲವು.

ಯಾವನ ಮನಸ್ಸಿನಲ್ಲಿ ಈಶ್ವರನಮೇಲೆ ಭಕ್ತಿಯಿರುವುದೋ ಆತನೇ ನಿಜವಾದ ಭಕ್ತನು. ಬಾಹ್ಯಾಡಂಬರವುಳ್ಳವನು ಭಕ್ತನಲ್ಲ; ಈಶ್ವರನು ಯಾವನ ಮನಸ್ಸು ಹೇಗಿದೆ ಎಂದು ಪರೀಕ್ಷಿಸುತ್ತಲೇ ಇರುತ್ತಾನೆ. ಆ ಮನಸ್ಸಿನಮೇಲೆ ದೃಷ್ಟಿಯಿಡುವನೇ ಹೊರತು ಆಡಂಬರದಮೇಲಲ್ಲ. ಆಡಂಬರಕ್ಕೆ ಮೆಚ್ಚುವ ಜಗತ್ತಿನ ಜನರು ನಿನ್ನನ್ನು ಭಕ್ತನಲ್ಲವೆಂದು ಹಳಿದರೂ ಚಿಂತೆಯಿಲ್ಲ. ಈಶ್ವರನ ಭಕ್ತಿಯನ್ನು ಮನವುಟ್ಟಿ ಮಾಡು.

ಯಾವುದೋ ಒಂದು ಮಾತಿನಿಂದ ಯಾವನೊಡನೆಯಾದರೂ ಮನಸ್ತಾಪವುಂಟಾದಾಗ ಅಥವಾ ವರ್ತನೆಯಲ್ಲಿ ದೋಷವೊದಗಿದಾಗ ಆತನೊಡನೆ ಒಳ್ಳೆಯ ವರ್ತನೆಯನ್ನು ಮಾಡುವುದಕ್ಕಾಗಿ 'ಮೊದಲೇ ಆತನು ನನ್ನೊಡನೆ ಒಳ್ಳೆಯ ವರ್ತನೆಯನ್ನು ಮಾಡಲಿ' ಎಂಬುದಾಗಿ ನಿರೀಕ್ಷಿಸುವುದನ್ನು ಮಾಡಬೇಡ. ಏಕೆಂದರೆ ವಾಸ್ತವಿಕವಾಗಿ ಆತನೂ ಹೀಗೆಯೇ ಎದುರುನೋಡುತ್ತಿರುತ್ತಾನೆ. ಇಂತಹ ಅವಸ್ಥೆಯಲ್ಲಿ ನೀನು ಒಳ್ಳೆಯ ವರ್ತನೆಯನ್ನು ಮಾಡುವುದು ನಿನಗೆ ಸಮಾಧಾನಕರವೆನಿಸದಿದ್ದರೂ ಚಿಂತೆಯಿಲ್ಲ. ಮೊದಲು ನೀನೇ ಒಳ್ಳೆಯ ವರ್ತನೆಯನ್ನು ಮಾಡುವುದಕ್ಕೆ ಆರಂಭಿಸು. ನಿನ್ನ ಇಂತಹ ವರ್ತನೆಯ ಪ್ರಭಾವವು ಆತನ ಮೇಲೆ ಬಿದ್ದು ಆತನೂ ಒಳ್ಳೆಯ ವರ್ತನೆಯನ್ನು ಮಾಡಲು ಪ್ರಾರಂಭಿಸುವನು.

ಯಾರಿಗಾದರೂ ಉಪಕಾರವಮಾಡಿ ಅದನ್ನು ಪ್ರಸಿದ್ಧಪಡಿಸಿಕೊಳ್ಳಬೇಕೆಂಬ ಇಚ್ಛೆಯನ್ನು ಮನಸ್ಸಿನಲ್ಲಿ ತರಬೇಡ. ಮಾಡುವ ಉಪಕಾರವು ಗುಪ್ತವಾಗಿದ್ದಷ್ಟು ಬಹಳ ಬೆಲೆಯನ್ನು ಹೊಂದುವುದು. ಪ್ರಸಿದ್ಧಪಡಿಸಿಕೊಂಡರೆ ಉಪಕಾರದ ಕಿಮ್ಮತ್ತು ಕಡಿಮೆಯಾಗುವುದಲ್ಲದೆ ಉಪಕಾರವನ್ನು ಪಡೆಯತಕ್ಕವರು ಒಮ್ಮೊಮ್ಮೆ ಬಹಳ ಸಂಕೋಚದಲ್ಲಿ ಬೀಳಬೇಕಾಗುವುದು.

ಸತ್ಪುರುಷರು ತಮ್ಮ ದೊಡ್ಡಸ್ತಿಕೆಯ ಡಂಗುರವನ್ನು ಬಡಿಸುವುದಿಲ್ಲ. ಅವರಲ್ಲಿ ಎಷ್ಟೋ ಮಹಿಮರಿಗೆ ತಮ್ಮ ಮಹಿಮೆಯು ಸಹ ಗೊತ್ತಿರುವುದಿಲ್ಲ. ಅವರು ತಮ್ಮನ್ನು ಸಾಧಾರಣ ಪುರುಷನನ್ನಾಗಿ ತಿಳಿದುಕೊಂಡಿರುವರು. ಆದರೆ ಅವರ ಸಂಗದಿಂದ ದೊಡ್ಡದೊಡ್ಡ ಪಾಪಿಗಳೂ ಪಾಪವಿಮುಕ್ತರಾಗುವರು.

ಸತ್ಪುರುಷರನ್ನು ಹೊಂದುವುದೂ ಅವರನ್ನು ಗೊತ್ತಿಸುವುದೂ ಬಹಳ ಕಠಿಣವು. ಸತ್ಪುರುಷರು ಬಹಳವಾಗಿ ಹಿಂದಿರುವರು. ಅವರ ವೇಷದ ಆಚರಣೆಯಿಂದ ಸುಲಭವಾಗಿ ಗೊತ್ತಿಸುವುದಕ್ಕಾಗುವುದಿಲ್ಲ. ಸಾಧಾರಣ ಜನರು ಸತ್ಪುರುಷರನ್ನು ಕಂಡುಹಿಡಿಯುವ ಬಗೆಯಾದರೂ ಹೇಗೆ? ಅಥವಾ ಒಂದುವೇಳೆ ತಮ್ಮ ಬುದ್ಧಿಗನುಸಾರವಾಗಿ ಕಂಡುಹಿಡಿಯಲು ಯತ್ನಿಸಿದರೂ ಆ ಯತ್ನವು ಕೆಲ್ಲುಹೂಗುವ ಕಲ್ಪನೆಯಲ್ಲಿ ಬಹಳವೇಳೆಯರವನ್ನು ಹಾಗಿ ದಣಿ ನಿರರ್ಥಕವಾಗುವುದು.

ಈಶ್ವರ ಕೃಪೆಯಿಂದಲೇ ಸತ್ಪುರುಷರು ದೊರೆಯುವರು. ಅವರ ಪ್ರಾಪ್ತಿಯು ಎಂದಿಗೂ ಫಲರಹಿತವಾಗಿರುವುದಿಲ್ಲ. ಅವರ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳಬೇಕೆಂಬಭಿಲಾಷೆಯುಳ್ಳ ಮನುಷ್ಯನು ಅವರಂತೆಯೇ ಆಗಬೇಕಾಗುವುದು. ಸತ್ಪುರುಷರನ್ನು ಕಂಡುಹಿಡಿಯುವುದೇ ಅವರೊಡನೆ ನಿಜವಾದ ಕೂಡುವಿಕೆಯು. ಈ ಸತ್ಪುರುಷ ಸಂಗಮದ ಪ್ರಶಂಸೆಯು ಎಲ್ಲೆಲ್ಲಿಯೂ ವಜ್ರಾಕ್ಷರಗಳಿಂದ ಬರೆಯಲ್ಪಟ್ಟಿದೆ.

ದುಃಖವು ಪಾಪದ ಫಲವು, ಸುಖವು ಪುಣ್ಯದ ಫಲವು; ಈವಾಗ ನಮ್ಮ ಮೇಲೂ ಸಂಸಾರದ ಮೇಲೂ ಪ್ರತಿನಿತ್ಯವೂ ಹೊಸಹೊಸ ತರನಾದ ದುಃಖರಾಶಿಯು ಬಂದು ಬೀಳುತ್ತಿರುವುದನ್ನು ನೋಡಿದರೆ ಸಂಸಾರದಲ್ಲಿ ಪಾಪವು ಹೆಚ್ಚಾಗುತ್ತ ನಡೆದಿದೆ ಎಂದು ತಾನೇ ಸಿದ್ಧವಾಗುವುದು. ಬುದ್ಧಿಯಲ್ಲಿ ಪಾಪವು ಅಂಟಿಕೊಂಡಿರುವುದರಿಂದ ಪಾಪದ ವೃತ್ತಿಯೇ ಕಂಡು ಬರುತ್ತಿದೆ. ಅದಕ್ಕಾಗಿ ಜನರು ಪಾಪದಲ್ಲಿ ತೊಡಗಿ ಹತ್ತಿದ್ದಾರೆ. ಸುಖವನ್ನು ಬಯಸುವ ಪುಣ್ಯಾತ್ಮರು ಜಗತ್ತಿನಲ್ಲಿ ವಿಪರೀತವರ್ತನೆಯುಳ್ಳವರ ದಾರಿಯನ್ನು ಹಿಡಿಯಬೇಕು. ಅದರೇನೇ ಪುಣ್ಯವು ಹೆಚ್ಚಾಗುವುದು; ಪುಣ್ಯದ ಫಲವೇ ಸುಖವು.

ಪಾಪದಲ್ಲಿ ಪುಣ್ಯವನ್ನೂ, ಅಕಾರ್ಯದಲ್ಲಿ ಕಾರ್ಯವನ್ನೂ ಅಧರ್ಮದಲ್ಲಿ ಧರ್ಮವನ್ನೂ, ಬಂಧನದಲ್ಲಿ ಮುಕ್ತಿಯನ್ನೂ ಊಹಿಸುವುದು ವಿಪರೀತಬುದ್ಧಿಯ ಪರಿಣಾಮವಾಗಿದೆ. ಈವಾಗ ಜಗತ್ತಿನಲ್ಲಿ ವಿಪರೀತವರ್ತನೆಯೇ ಹೆಚ್ಚುತ್ತ ನಡೆದಿದೆ. ಇದರಿಂದ ಜನರಿಗೆ ದುಃಖವೂ ಬಂಧನವೂ ಉಂಟಾಗುವುದು ಸಹಜವಾಗಿದೆ. ಈಶ್ವರಕೃಪೆಯಿಂದ ನಷ್ಟವಾಗಬಹುದಾದ ಅವಿದ್ಯೆಯು ಮನುಷ್ಯನ ವಿಪರೀತಜ್ಞಾನದಿಂದ ಉಂಟಾಗುತ್ತದೆ. ಈಶ್ವರನ ಕೃಪೆಯನ್ನು ಪಡೆಯಬೇಕಾದರೆ ಆತನ ಭಜನೆಯನ್ನು ಮಾಡುವುದು ಶರಮಾವಶ್ಯಕವಾಗಿದೆ. ಆದುದರಿಂದ ಶಿವಭಜನೆಯನ್ನು ಚಿತ್ತವಿಟ್ಟು ಮಾಡು.

ಯಾವನು ಸಾಂಸಾರಿಕ ವಿಷಯಗಳ ಮೇಲೆ ಎಷ್ಟು ಕಡಿಮೆಯಾಗಿ ಚಿತ್ತವಿಡುವನೋ ಹಾಗೂ ಎಷ್ಟು ಕಡಿಮೆ ಮಾತನಾಡುವನೋ ಆತನು ಆಧ್ಯಾತ್ಮಿಕಮಾರ್ಗದಲ್ಲಿ ಅಷ್ಟೇ ಮುಂದರಿಯುವನು. ಆದುದರಿಂದ ಸಾಧ್ಯವಾದಮಟ್ಟಿಗೆ ಚಿತ್ತದಲ್ಲಿ ಸಾಂಸಾರಿಕವಿಷಯಗಳಿಗೆ ಸ್ಥಲವನ್ನು ಕಡಿಮೆ ಮಾಡು. ಮತ್ತು ಪ್ರಸಂಗವಿಲ್ಲದೆ ಮಾತಾಡುವುದಕ್ಕೆ ಎಂದೂ ಬಾಯ್ದೆರೆಯಬೇಡ. ನಾನು ಬುದ್ಧಿವಂತನೆಂದು ಹೇಳಿಸಿಕೊಳ್ಳುವುದಕ್ಕಾಗಿ ಬಾಯಬಡಾಯಿ ಮಾಡುವುದಕ್ಕಿಂತಲೂ ಸುಮ್ಮನಿರುವುದೇ ಉತ್ತಮವಾದುದು.

ಯಾವನು ಎಷ್ಟೆಷ್ಟು ಕಡಿಮೆ ಮಾತಾಡುವನೋ ಆತನಲ್ಲಿ ಸುಳ್ಳುಮಾತೂ ಪರನಿಂದೆಯೂ ಅಷ್ಟಷ್ಟು ಕಡಿಮೆಯಾಗುತ್ತ ಹೋಗುವವು. ಸುಳ್ಳಾಡುವುದೂ ನಿಂದೆಮಾಡುವುದೂ ದೊಡ್ಡ ಪಾಪ. ಆದುದರಿಂದ ವಾಣಿಯನ್ನು ಸ್ವಾಧೀನಮಾಡಿಕೋ.

ವಾಣಿಯಿಂದುಂಟಾಗುವ ಪಾಪಗಳಲ್ಲಿ ಸುಳ್ಳಾಡುವುದು, ನಿಂದೆಮಾಡುವುದು, ಕೆಟ್ಟಮಾತಾಡುವುದು, ಪ್ರಯೋಜನವಿಲ್ಲದೆ ಮಾತಾಡುವುದು ಎಂದು ನಾಲ್ಕು ಮುಖ್ಯವಾದವುಗಳು. ಆದುದರಿಂದ ಆದಷ್ಟು ಪ್ರಯತ್ನ ಮಾಡಿ ಕಡಿಮೆ ಮಾತಾಡು.

ಆ ಕಡಿಮೆ ಮಾತುಗಾರಿಕೆಯು ಪ್ರಸಂಗದಲ್ಲಿಯೂ ನಾಲ್ಕು ಕಡೆ ಚಿತ್ತವಿಡು. ನಿನ್ನ ನುಡಿಯು ಉದ್ವೇಗವನ್ನುಂಟುಮಾಡತಕ್ಕದ್ದಾಗಿರಬಾರದು. ಅಂದವಾಗಿರಬೇಕು. ಹಿತಕಾರಿಯಾಗಿರಬೇಕು.

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ |
ನ ಬ್ರೂಯಾತ್ ಸತ್ಯಮಪ್ರಿಯಂ ||

(ಅಪೂರ್ಣ.)

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಶ್ರೀಶೈಲ ಪರ್ವತಮಹಾ ಸಂಸ್ಥಾನದ ಸಂಚಾರದ ಶುಭಾಗಮನ ಕಾಳೂರು.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೮ ಷಟ್ಸ್ಥಲಚಕ್ರವರ್ತಿ ಶ್ರೀಮತ್ಸ್ವಾಗಲೂಟಿ ಭಕ್ತಾವರ್ತಿ ಶಿವಾಚಾರ್ಯ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸದ್ಭಕ್ತ ಕರ್ತಗುರುಸ್ಥಾಧಿಕಾರಿಗಳಾದ ಶ್ರೀಮತ್ಸ್ಯಂದಿಸ್ವಪುರಿ ಶ್ರೀ|| ಷ|| ಬ್ರ|| ಗಳಾದ ಶಿವಶಂಕರ ಶಿವಾಚಾರ್ಯ ಪಟ್ಟದಸ್ವಾಮಿಗಳು ಶಿಲಾಮಠ (ವೇದಾಂತಭೂಷಣ) ಇವರು ಭಕ್ತೋದ್ಧಾರಾರ್ಥವಾಗಿಯೇ ಮಧ್ಯದಲ್ಲಿ ಸಂಚರಿಸುತ್ತಾ ಏಳುಬೆಂಚಿ, ಕೋರಗಲ್ಲು ವನ್ನು, ನಾಗಲಾಪೂರ ಮುಂತಾದ ಗ್ರಾಮಗಳ ಸದ್ಭಕ್ತಾದಿಗಳಿಗೆ ಸದ್ಬೋಧೆಯನ್ನು ಮಾಡುತ್ತಾ ಮಹಾಸಂಸ್ಥಾನಕ್ಕೆ ಸದರಿಯವರ ಕಡೆಯಿಂದ ಸಲ್ಲತಕ್ಕ ದೇಣಿಗೆ ಸರಬರಾಯ ವಗೈರೆಗಳನ್ನು ಸ್ವೀಕರಿಸಿ ಫಲಾಶೀರ್ವಾದವನ್ನೀಯುತ್ತಲು, ಮಹಾಸಂಸ್ಥಾನದ ಸರ್ವಾಧಿಕಾರಿಗಳಾದ ಕೆ. ಎಂ. ಸಿ ಮಲ್ಲಯ್ಯನವರು ಪ್ರೋಗ್ರಾಂ ನಿಶ್ಚೈಸಿದ ಪ್ರಕಾರ (ಹಂಪಿ) ಶ್ರೀ ಪಂಪಾಕ್ಷೇತ್ರದಲ್ಲಿ ಮಹಾಶಿವರಾತ್ರಿ, ಸೋಮವಾರ ಶಿವಯೋಗಾನುಷ್ಠಾನ ಶ್ರೀ ರುದ್ರಾಭಿಷೇಕಪೂಜಾ, ಮಹಾಗಣಾರಾಧನೆ ನೆರವೇರಿಸಿಕೊಂಡು ತಾ|| 15-2-34ನೇ ಗುರುವಾರ ಸಾಯಂಕಾಲ 6 ಘಂಟೆಗೆ ಹೊಸಪೇಟೆ ತಾಲೂಕು ಕಾಳೂರು ಗ್ರಾಮಕ್ಕೆ ಆನೆ, ಕುದುರೆ. ಮುಂತಾದ ಸಕಲ ಸಿಬ್ಬಂದಿಯೊಡನೆ ದಯಮಾಡಿಸುವದರೊಳಗಾಗಿಯೇ ಮಠ, ಮಹಾಂತ, ಶೆಟ್ರು ಯಜಮಾನರು, ಗೌಡರು, ಶ್ಯಾನುಭೋಗರು ಮುಂತಾದ ಸಮಸ್ತ ದೈವದವರು ಇಷ್ಟಶಿವಾಲಯಸಹಿತರಾಗಿ, ಬಾಜಾ, ಭಜಂತ್ರಿ ಮುಂತಾದ ಮಂಗಲವಾದ್ಯವೈಭವದೊಡನೆ ಎದುರುಗೊಂಡು ದರ್ಶನಾಶೀರ್ವಾದ ಪಡೆದನಂತರ, ಉತ್ಸವವು ಸಕಲ ಬಿರುದಾವಳಿಗಳೊಡನೆ ಅತ್ಯಂತ ವೈಭವದಿಂದ ರಾಜಬೀದಿಯಲ್ಲಿ ಹೊರಟು ಪುರದ ಮುಂಭಾಗದಲ್ಲಿರುವ ಮಠಕ್ಕೆ ಚಿತ್ತ ಅಲಂಕರಿಸಲ್ಪಟ್ಟ ಭವ್ಯತರವಾದ ಸಿಂಹಾಸನದಮೇಲೆ ಶ್ರೀಗಳವರು ಆರೋಹಣಮಾಡಿದನಂತರ ತಮ್ಮ ಅಮೃತವಾಣಿಯಿಂದ ಶ್ರೀ ಜಗದ್ಗುರು ಸಾರ್ವಭೌಮರವರ ಮಹಿಮೆಯನ್ನು (ನಾಸ್ತಿತತ್ತ್ವಂ ಗುರೋಃ ಪರಂ) ಎಂಬುವ ಶಿವಾಗಮೋಕ್ತಿಗನುಸಾರವಾಗಿ ಸರ್ವಮತೀಯರಿಗೂ ಆನಂದವಾಗುವಂತೆ ಅತ್ಯಂತ ಸ್ಫೂರ್ತಿದಾಯಕ ಭಾಷಣಮಾಡಿದನಂತರ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಶ್ರೀಮತ್ಸ್ವಾಗಲೂಟಿ ಭಕ್ತಾವರ್ತಿ ಶಿವಾಚಾರ್ಯ ಮಹಾರಾಜಕೀ ಜೈ, ಎಂಬುವ ಜಯಘೋಷದೊಡನೆ ಮಂಗಲವನ್ನು ಮಾಡಿ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಕಾಳೂರು ಗ್ರಾಮದ ಭಕ್ತಮಾಹೇಶ್ವರರ ಕಾಣಿಕಾದಿಗಳನ್ನು ಸ್ವೀಕರಿಸಿ ಸದರಿ ಗ್ರಾಮದ ಬೆಳ್ಳೂಡಿ ಮಠದ ಮರಿಸ್ವಾಮಯ್ಯನವರು ಶಿಷ್ಯ ಭಕ್ತವೃಂದದೊಡನೆ ಸನ್ನಿಧಿಗೆ ಆಗಮಿಸಿ ಫಲಪುಷ್ಪಹಾರಾದಿಗಳನ್ನು ಶ್ರೀಗಳವರಿಗೆ ಅರ್ಪಿಸಿ (ಆಮಂತ್ರಣ) ಬಿನ್ನಹ ಮಾಡಿಕೊಂಡ ಪ್ರಕಾರಕ್ಕೆ ತಾ|| 26-2-34ನೇ ಸೋಮವಾರ ಸಕಲಸಿಬ್ಬಂದಿಯೊಡನೆ ಉತ್ಸವಪೂರ್ವಕವಾಗಿ ಉದಯ 10 ಘಂಟೆಗೆ ಹೊರಟು ಸದರಿ ಮರಿಸ್ವಾಮಯ್ಯನವರ ಗೃಹದಲ್ಲಿ ಪೂಜಾನುಷ್ಠಾನ, ಪಾದಪೂಜೆ ಮಹಾಗಣಾರಾಧನೆ ನಡೆದು ಪುನಃ ಸಾಯಂಕಾಲ 5 ಘಂಟೆಗೆ ದುರ್ಗಾರು ಕಟ್ಟೆಗೆ ದಯಮಾಡಿಸಿದನಂತರ ಶ್ರೀಗಳವರು ಅನ್ನದಾನದ ಮಹತ್ವವನ್ನು 'ಸತ್ಯಹರಿಶ್ಚಂದ್ರ' ನ ಚರಿತ್ರೆಯನ್ನು ನಿದರ್ಶನವನ್ನಾಗಿ ಇಟ್ಟುಕೊಂಡು ಅನೇಕೋದಾಹರಣೆಗಳಿಂದ ಬೋಧಿಸಿ ಸಭಿಕರನ್ನು ಆನಂದತುಂದಿಲಮನಸ್ಕರನ್ನಾಗಿ ಮಾಡಿದರು.

ಶ್ರೀಗಳವರು ನಮ್ಮ ಗ್ರಾಮದ ಸಮಸ್ತ ದೈವದವರಿಗೂ, ಫಲಾಶೀರ್ವಾದವನ್ನನುಗ್ರಹಿಸಿ ತಾ|| 28-2-34ನೇ ಬುಧವಾರ ಅಲ್ಲಿಂದ ಚಿಕ್ಕಜೋಗಿಹಳ್ಳಿ ಬಾಳಬಾಳು ಮುಕ್ಕಾಂಮಾಡಿದರು.

ಗುರುಪೀಠಾಭಿಮಾನಿಗಳು

ಬೆಳ್ಳೂಡಿ ಮಠದ ವೀರಯ್ಯ.

ಎ.ಸ್ಕೂ.ಮಾ. ಶೆಟ್ರು ಸುಬ್ಬಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ದಾವಣಗೆರೆ.

ಪದ್ಧತಿ ಪ್ರಕಾರ ಈ ವರ್ಷವೂ ದಾವಣಗೆರೆ ಟೌನಿನಲ್ಲಿ ಇದೇ ಫಾಲ್ಗುಣ ಶು|| ೧೩ ದಿವಸ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯವರ್ಯರಾದ ಶ್ರೀ ರೇಣುಕಾಚಾರ್ಯರವರ ಜಯಂತಿ ಮಹೋತ್ಸವಕಾರ್ಯವನ್ನು ಪುರಪ್ರಮುಖರು ಪ್ರಾರಂಭಿಸಿ ಶ್ರೀ ಸ್ವಾಮಿಯ ಭಾವಚಿತ್ರವನ್ನು ಪುಷ್ಪಮಾಲೆಗಳಿಂದಲಂಕರಿಸಿದ ಪಲ್ಲಕ್ಕಿಯಲ್ಲಿರಿಸಿ ಸಕಲ ಬಿರುದಾವಳಿಗಳೊಡನೆ ವಾದ್ಯವೈಭವದಿಂದ ಸಾಯಂಕಾಲ 4 ಗಂಟೆಗೆಹಳೇಪೇಟೆ ಹಿರೇಮಠದಿಂದ ಕಾಯಿಪೇಟೆ ಹಿರೇಮಠಕ್ಕೆ ಬಿಜಯಂಗೈಸಿಕೊಂಡನಂತರ ಕಿರಾತಾರ್ಜುನರ ವಿಷಯವಾಗಿ ಕೀರ್ತನವು ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿಗಳವರಿಂದ ನಡೆದು ನೆರೆದ ಮತಸ್ಥೀಯರಿಗೂ ಮತ್ತು ಮಹಿಳೆಯರಿಗೂ ಸಹ ಆನಂದವುಂಟಾಯಿತು. ಪುನಃ ಬೆಳಗ್ಗೆ ಹರ್ಷಯಿಸಿದ ಪ್ರಕಾರ ಶ್ರೀ ಸ್ವಾಮಿಗೆ ಪೂಜಾ ಮತ್ತು ಪ್ರಸಾದ ವಿನಿಯೋಗವಾದ ಮೇಲೆ ಸುಮಾರು ೧೧ ಗಂಟೆಗೆ ಈ ಟೌನಿನ ಭಕ್ತ ಮಾಹೇಶ್ವರರಾದಿಯಾಗಿ ಸರ್ವಮತೀಯರಿಂದಲೂ ಬಂದಿರತಕ್ಕ ಎಡೆಗಳಿಂದ ನೆರೆದ ಜಂಗಮರೆಲ್ಲರಿಗೂ ಭೋಜನವು ನಡೆಸಲ್ಪಟ್ಟು ಅನಂತರ ಮಧ್ಯಾಹ್ನ 4 ಘಂಟೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರವರ ಕೀರ್ತನವು ಪ್ರಾರಂಭಿಸಲ್ಪಟ್ಟಿತು. ಸರ್ವರೂ ಶಾಸ್ತ್ರಿಗಳವರ ಅಮೃತವಾಣಿಯಿಂದ ಹೊರಡತಕ್ಕ ಮಹಾಚಾರ್ಯರ ಅದ್ಭುತ ಲೀಲೆಗಳನ್ನು ಸಂಪೂರ್ಣವಾಗಿ ಕೇಳಲು ಸಮಯವು ಸಾಲದ್ದರಿಂದ ಶ್ರೀಮಂತ ಉರಕೊಂಡಿ ಗುದ್ದೆಪ್ಪನವರ ಚನ್ನಬಸವಪ್ಪನವರು ಬ್ಯಾಂಕಿನ ಏಜೆಂಟರಾದ ಹಳಪುರುಂಡಿಮಠದ ರಾಜಪ್ಪಯ್ಯನವರು, ರಿಟೈರ್ ಸ್ಕೂಲ್ ಮಾಸ್ಟರ್ ಎಸ್. ರುದ್ರಪ್ಪನವರು, ಶ್ಯಾವಿಗೆ ಸಾಹುಕಾರ ಬಸಪ್ಪಪ್ಪನವರು, ಬೆಳಗಾವಿ ಚನ್ನಪ್ಪನವರು ಮಾಗಾನಹಳ್ಳಿ ಗುರುಬಸವಪ್ಪನವರಾದಿಯಾಗಿ ಸರ್ವ ಮತೀಯರ ಅಭಿಪ್ರಾಯದ ಮೇರೆಗೆ ಕೀರ್ತನವು ಪುನಃ ತಾ|| 1-3-34 ರ ಮಧ್ಯಾಹ್ನ 4 ಘಂಟೆಗೆ ಪ್ರಾರಂಭಿಸಲ್ಪಡಬೇಕೆಂದು ನಿರ್ಧರಿಸಿದನಂತರ ಕ್ರಮಪ್ರಕಾರ ಶ್ರೀ ಸ್ವಾಮಿಯ ಉತ್ಸವವು ಹೊರಟು ಕಾಯಿಪೇಟೆಯಲ್ಲಿ ಅಂದಾನೂರು ಕೊಟ್ರಪ್ಪ, ಚನ್ನಬಸವಪ್ಪನವರು, ಕಾಯಿಸಂಗನ ಬಸಪ್ಪನವರು, ಶರಣಪ್ಪನವರು, ವಗೈರೆಯವರ ಮಂಗಳಾರತಿಯು ನಡೆದು ಅಜ್ಜಂಪುರದ ಶೆಟ್ರವರ ಮನೆಯಿಂದ ಒಕ್ಕಲಗೇರಿಪೇಟೆಗೆ ಪ್ರವೇಶಿಸಿ ಶ್ರೀಮಂತ ಅಥಣಿ ಮುರಿಗೆಪ್ಪನವರು ಬೆಳಗಾವಿ ಬಸಪ್ಪನವರು ಮುತ್ತೀಹಳ್ಳಿ ಚನ್ನಬಸವಪ್ಪನವರು ಕುಲಗೌಡಪ್ಪ ವಗೈರೆ ವೀರಶೈವರಲ್ಲದೆ ಬ್ರಾಹ್ಮಣರಾದಿಯಾಗಿ ಸರ್ವಮತೀಯರ ಮಂಗಳಾರತಿಯಾಗಿ ಬಾರ್ಲೈನ್ ಬೀದಿಗೆ ಬಂದು ಕುಮ್ಮನಕಟ್ಟೆ ಕೋಲಶಾಂತಪ್ಪ ಮುದೇನೂರು ಗೌಡರವರು ಸ್ವಾಮಿಪುಟ್ಟಪ್ಪನವರು ವಗೈರೆ ವೀರಶೈವರಲ್ಲದೆ ಮರಾಠಾ ಜಂಗಿನ ಮರ್ಚಂಟ್ ಗುಬ್ಬಿ ಅಂಬಾಜಪ್ಪನವರು, ಸುಕ್ರೆದುರ್ಗಪ್ಪ ಸಣ್ಣಂಗಿ ದುರ್ಗಪ್ಪ ವಗೈರೆಯವರ ಮಂಗಳಾರತಿಯನ್ನು ಸ್ವೀಕರಿಸಿ ಮಂಡೀಪೇಟೆ ತಿಳವಳ್ಳಿ ಶೆಟ್ರ ನಂಜುಂಡಪ್ಪನವರು ಬಳ್ಳಾರಿ ಈಶಪ್ಪನವರು ಮಾಗಾನಹಳ್ಳಿ ಹಕ್ಕುಮಣಿಪ್ಪನವರು ಅಥಣಿ ಶಾಂತವೀರಯ್ಯನವರು ಶ್ಯಾಮನೂರು ಮುದೇಗೌಡಪ್ಪನವರಾದಿಯಾಗಿ ಸರ್ವರ ಮಂಗಳಾರತಿಯನ್ನು ಸ್ವೀಕರಿಸಿ ಚಾಮರಾಜಪೇಟೆ ಕೆ. ಶಿದ್ದಲಿಂಗಪ್ಪನವರು ಜಗಳೂರು ಸಾಹುಕಾರ ಮಹಲಿಂಗಪ್ಪನವರು ವಗೈರೆಯವರ ಭಕ್ತಿಯುಕ್ತವಾದ ಮಂಗಳಾರತಿಯನ್ನು ಸ್ವೀಕರಿಸಿ ಚೌಕೀಪೇಟೆ ಕೋಳಾಳುಮಠದ ರುದ್ರಯ್ಯನವರು ಯಜಮಾನ್ ಬೆಳ್ಳೂಡಿ ಮಲ್ಲಪ್ಪ ಎಗೂರು ರುದ್ರಪ್ಪನವರು ಶ್ರೀಮಂತ ಅಜ್ಜಿ ಶಿವಲಿಂಗಪ್ಪನವರು ಶ್ಯಾವಗಿ ಅಕ್ಕಮ್ಮನವರ ಬಕೆಟ್ಟಪ್ಪನವರಾದಿಯಾಗಿ ಸರ್ವರ ಮಂಗಳಾರತಿಯಿಂದ ಚಾರಮನಿಯವರ ಪೇಟೆ ಪ್ರವೇಶಿಸುತ್ತಲೇ ಭಕ್ತಿಪುರಸ್ಸರವಾಗಿ ಮಾರ್ಗದರ್ಶಿಸುತ್ತಿಕೊಂಡಿದ್ದ ಗೌಲಿಗರ ಚಿಕ್ಕಪ್ಪ, ಕಟ್ಟೀಹಳ್ಳಿಮಠದ ಮಹದೇವಯ್ಯನವರು ಚನ್ನಬಸಯ್ಯನವರು ಮುಂತಾಗಿ ಮಹದೇವಪ್ಪನವರಾದಿಯಾಗಿ ಸರ್ವರ ಮಂಗಳಾರತಿಯನ್ನು ಸ್ವೀಕರಿಸುತ್ತ ಹಂಬಾಳಪೇಟೆ ಮಾರ್ಗವಾಗಿ ಹಳೇಪೇಟೆಯನ್ನು ಪ್ರವೇಶಿಸುತ್ತಲೇ ತಿರುಕಪ್ಪನವರ ಮಠದ ಗುರುಬಸಪ್ಪಯ್ಯನವರು ಅನೇಕೊಂಡದ ಪೇಟೆ ಚೆಂದಪ್ಪನವರು ಮುದೇಗೌಡ್ರ ಸಣ್ಣಬಸವಯ್ಯನವರು ವಗೈರೆ ಸರ್ವರ ಮಂಗಳಾರತಿಯನ್ನು ಸ್ವೀಕರಿಸಿ ಹಳೇಪೇಟೆ ಹಿರೇಮಠಕ್ಕೆ ದಯಮಾಡಿಸಿದ ಮೇಲೆ ಶ್ರೀ ಮಹಾಸ್ವಾಮಿಯ ಪೂಜಾ ಮತ್ತು ಪ್ರಸಾದವಿನಿಯೋಗವಾದ ಬಳಿಕ ಕ್ರಮವಹಿಸಿ ಜಯಂತಿ ಕಾರ್ಯವನ್ನು ಮಾಡಿಸಿದ ಮಳೇಬೆನ್ನೂರು ಮಠದ ಹಾಲಸಿದ್ದಪ್ಪಯ್ಯನವರು ಯ|| ಬೆಳ್ಳೂಡಿ ವೀರಪ್ಪನವರು ಮತ್ತು ಮಾಗಾನಹಳ್ಳಿ ಹಡಕಿ ರಪ್ಪನವರು ವಗೈರೆಯವರ ಶ್ರೇಯೋಭಿವೃದ್ಧಿಯ ಭಾಷಣವಾಗಿ ನಮ್ಮನ್ನಾಳುವ ಶ್ರೀಮನ್ಮಹಾರಾಜಾ ಮೈಸೂರು ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರು ಜಿ. ಸಿ. ಎ. ಇ. ಜಿ. ಬಿ. ಇ. ಯವರ ಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಸರ್ವರ ಶ್ರೇಯೋಭಿಲಾಷಿ ಗದಗಿನ ಮಠದ,

ಅಂದಾನಪ್ಪಯ್ಯ ದಾವಣಗೆರೆ.

ಶ್ರೀ ರೇಣುಕಜಯಂತಿ.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ ಮಠದಲ್ಲಿ ಜಗದಾದಿಯಿಂದಲೂ ಪದ್ಧತಿಯಂತೆ ಜರುಗುತ್ತ ಬಂದಿರುವ ಮಹಾರಥೋತ್ಸವವು ಈ ವರ್ಷವೂ ಫಾಲ್ಗುಣ ಶುದ್ಧ ೧೩ ತಿಥಿಯಲ್ಲಿ ನಿರ್ವಿಘ್ನವಾಗಿ ಜರುಗಿತು. ತದಂಗಗಳಾದ ಕಾರ್ಯಗಳು ಫಾಲ್ಗುಣ ಶುದ್ಧ ೮ ಯಿಂದಲೇ ವಿಧ್ಯುಕ್ತವಾಗಿ ಆರಂಭಿಸಲ್ಪಟ್ಟು ಫಾಲ್ಗುಣ ಬಹುಳ ೮ ಗೆ ಸಮಾಪ್ತಿಯನ್ನು ಹೊಂದಿದುವು. ಪ್ರತಿದಿವಸದಲ್ಲಿ ಮಹಾಸ್ವಾಮಿಗೆ ಮಹಾರುದ್ರಾಭಿಷೇಕ ಪೂರ್ವಕ ಪೂಜೆಯೂ ಅನ್ನಸಂತರ್ಪಣೆಯೂ ಜರುಗುತ್ತಿತ್ತು. ಶ್ರೀಮಜ್ಜಗದ್ಗುರು ಪೀಠದ ಮತ್ತು ಮಹಾಜಗದ್ಗುರುಗಳವರ ದರ್ಶನವನ್ನು ಬಯಸಿ ವೇದಾಗಮಗಳ ರಹಸ್ಯಮಾರ್ಗವಾದ ಗುರುಯಾತ್ರೆಯಿಂದ ಜನ್ಮಸಾರ್ಥಕ್ಯವನ್ನು ಹೊಂದಲು ನೈಜಾಮ್ ಸ್ಟೇಟ ತಾಲೂಕು ದೇವದುರ್ಗ ಮುಂತಾದ ಕೆಲವು ಗ್ರಾಮಗಳ ಭಕ್ತಮಾಹೇಶ್ವರರೂ ಶಿರೋಳ, ಚಿಕ್ಕಮಗಳೂರು, ಅಲ್ದೂರು, ಮೂಡಿಗೆರೆ, ನರಸಿಂಹರಾಜಪುರ ತುಮಕೂರು ಹಿರಿಯೂರ ಗುಡಿಬಿಹಾಲಸೂರು ಸೇಮಠಿ, ಹೊನ್ನವಳ್ಳಿ, ಆಣೂವಮಾದಿನಕೆರೆ, ಕಾಲ್ಲಗುಂಡಿ, ಮುಂತಾದ ಗ್ರಾಮಗಳ ಭಕ್ತಮಾಹೇಶ್ವರರೂ ಸಕುಟುಂಬರಾಗಿ ಆಗಮಿಸಿ ಮಹಾಗುರುದೇವತಾಸೇವೆಯನ್ನು ಮಾಡಿ ಜಗದ್ಗುರುಗಳವರ ಆಶೀರ್ವಾದವನ್ನು ಹೊಂದಿ ಕೃತಾರ್ಥರಾದರು. ಧರ್ಮಪ್ರಾಸಕಾಲದಲ್ಲಿಯೂ ಈ ಮಹಾಕಾರ್ಯದ ಅತ್ಯುತ್ಕಟ ಧರ್ಮನಿಷ್ಠೆಯನ್ನು ನೋಡಿದರೆ ಸನಾತನ ಧರ್ಮವು ಶಿವಗಾತ್ರಯಮಾದ ಶ್ರೀ ಗುರುಪೀಠದ ಮಹದಾಶ್ರಯದಿಂದ ಪಾಪಿಗಳ ಕುತಂತ್ರಕ್ಕೆ ಭಯಪಡದೆ ತನ್ನ ಅಮೃತತ್ವಭಾವವನ್ನು ಬಿತ್ತರದಿಂದ ಹೊರಗೆಡಹುವ ಸಮಯವನ್ನು ನಿರೀಕ್ಷಿಸಿ ಗಾಂಭೀರ್ಯದಿಂದಲೂ ಶಾಂತತೆಯಿಂದಲೂ ಧೀರತೆಯಿಂದಲೂ ನಿರ್ವಿಕಾರದಿಂದಲೂ ಇದೆಯನ್ನುವುದು ಪ್ರತ್ಯಕ್ಷವಾಗಿ ಕಂಡುಬರುವುದು. ಯತೋಧರ್ಮಸ್ತತೋ ಜಯಃ ಎನ್ನುವ ವಾಕ್ಯವು ಸಾರ್ಥಕವೇಸರಿ. ತಾತ್ಕಾಲದ ಪಟಿಡ್ಡಾಳಿಕೆಯವರ ಬಾಧೆಗಳಿಗೆ ಮುಖದಿರದೆ ಸನಾತನಧರ್ಮಾವಲಂಬಿಗಳು ಎಲ್ಲರಿಗೊಂದು ಸ್ವತಂತ್ರತ್ರಯ ಧರ್ಮಗಳಲ್ಲಿ ನಿಷ್ಠೆಯುಳ್ಳವರಾಗಿರುವರೆಂದೇ ನಂಬುಗೆಯಿದೆ. ಶ್ರೀ ಜಗದ್ಗುರುಗಳವರು ೧೫-೨೦ ದಿವಸ ಮಠದಲ್ಲಿಯೇ ಇದ್ದು ಪ್ರತಿದಿವಸವೂ ದರ್ಶನಾಶೀರ್ವಾದಗಳಿಂ ಹೊಂದುವ ಲವಲವಿಕೆಯಿಂದ ಮೇಲಿಂದ ಮೇಲೆ ಬರುತ್ತಿರುವ ಭಕ್ತವೃಂದವನ್ನು ಕೃತಾರ್ಥರನ್ನು ಮಾಡುತ್ತ ಮುಂದೆ ಸಂಚಾರಕ್ಕೆ ದಯಮಾಡಿಸತಕ್ಕವರಿರುವರು. 'ಜಲಬಿಂದುನಿಪಾತೇನ ಕ್ರಮಶಃಪೂರ್ಯತೇಘಟಃ' ಎನ್ನುವಂತೆ ಸನಾತನ ಧರ್ಮವು ಕ್ರಮೇಣ ತನ್ನ ಪ್ರಕಾಶವನ್ನು ಜಗತ್ತಿನಲ್ಲಿ ಬೀರಲಿ ಎಂದೇ ಧರ್ಮಸ್ಥಾಪಕರನ್ನು ಬೇಡಿಕೊಳ್ಳುವೆನು.

ಮಹಾದೇವಪ್ಪ ಶೆಟ್ರು

ವಾಯಿನಕೆರೆ.

ಧರ್ಮಸಂಬಂಧಿ ಮಠದ ಉತ್ತರಾಧಿಕಾರದ ಫೈಸಲ್‌ನಾಮೆಯ ಪ್ರಸಿದ್ಧಪತ್ರಿಕೆ.

ಶ್ರೀಮದ್ವೇದವೇದಾಂತಸಿದ್ಧಾಂತ ಪುರಾಣಾಗಮೇತಿಹಾಸ, ಸಕಲಶಾಸ್ತ್ರಪ್ರಸಿದ್ಧ ಶ್ರೀಮಜ್ಜಗದ್ಗುರು ರಂಭಾಪುರೀ ಮತ್ತು ಶ್ರೀ ಜಗದ್ಗುರು ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ ಮಹಾಸ್ವಾಮಿನಾಂ ಸನ್ನಿಧಿ ಅಧಿಕಾರಸ್ಥಾನದವರಿಗೆ, ಶಿವಾಯಬಾಬು ನಂ. $\frac{555}{24\text{-}11\text{-}33}$ ಗೆ. ಶಿ. ನಂ. $\frac{3}{33\text{-}34}$

ವಾದಿ—

ಗುಬ್ಬಿ ತಾಲೂಕು ಚಟ್ನಾರು ಸಮ್ಮತು ಮರ್ಲೀನಹಳ್ಳಿಯಲ್ಲಿರುವ, ಪುರದ ಮಠದ ಪಟ್ಟಾಧ್ಯಕ್ಷ ಚಿಕ್ಕವೀರಸ್ವಾಮಿಯವರು ಶ್ರೀ ಜಗದ್ಗುರು ರೇಣುಕಾಚಾರ್ಯ ಶಾಖಾನುವರ್ತಿ ಶ್ರೀ ಚಾಮರಾಜೇಂದ್ರ ಸಂಸ್ಕೃತಶಾಲೇಯ ವಿದ್ಯಾರ್ಥಿ ಮಹಾಂತಿನಮಠ, ಚಿಕ್ಕಪೇಟೆ, ಬೆಂಗಳೂರುಸಿಟಿ.

ಪ್ರತಿವಾದಿ—

ಇಟ್ಟೋ ಗುಬ್ಬಿ ತಾಲೂಕು ಚಟ್ನಾರು ಸಮ್ಮತು ಪುರದವಾಸಿ, ಸುಬ್ಬಪ್ಪಯ್ಯನವರ ಮಗ ಬಸವಣ್ಣಯ್ಯ.

ಈ ಧರ್ಮಸಂಬಂಧಿ ಪುರದ ಮಠದ ಉತ್ತರಾಧಿಕಾರದ ವಿವಾದವು 1880 ನೇ ಇಸ್ವಿ ಸುಮಾರಿನಿಂದಲೂ, ಕಳೆರಾರು ವಿಚಾರಣೆ ಪೆಂಡಿಂಗಿನಲ್ಲಿ ಇದ್ದದ್ದು. ಶ್ರೀ ಜಗದ್ಗುರು ಶ್ರೀಶೈಲಪರ್ವತಪೀಠದ ಸರ್ವಾಧಿಕಾರಿಗಳ ಆಫೀಸಿನಲ್ಲಿ ತಾ|| 8-10-33 ನೇ ದಿನ ವಿವಾದದ ವಿಚಾರಣೆಕ್ರಮವು ಮುಂದುವರಿದು ಉಭಯ ಪಾರ್ಟಿಗಳ ಪೂರ್ವಾಪರ ದಾಖಲಾತಿಗಳ ಪರೀಲನೆಯಿಂದ ವಾದಿಯವರೇ ಪುರದ ಮಠದ ಪೂರ್ವವರ್ಗದ ವಂಶಪಾರಂಪರ್ಯವಾಗಿಯೂ, ಪಟ್ಟಾಧಿಕಾರಕ್ಕೆ ಹಕ್ಕುದಾರರೆಂತಲೂ, ಪ್ರತಿವಾದಿ ವಂಶೀಕರು, ವಾದಿಯವರು ಹೊಂದಿರುವ, ಪುರದಮಠಕ್ಕೆ ಶಿಷ್ಯವರ್ಗದವರೆಂತಲೂ, ಪ್ರತಿವಾದಿ ಹಾಜರ್ಪಡಿಸುವ, 1880 ನೇ ಇಸ್ವಿ ಮತ್ತು 1886 ನೇ ಇಸ್ವಿಯಲ್ಲಿ ಹುಟ್ಟಿರುವ, ದಾಖಲಾತಿಗಳು ಕೆಲಸಕ್ಕೆಬಾರದವುಗಳೆಂತಲೂ, ಪ್ರತಿವಾದಿಯು ಇತರರ, ಪೂರ್ವಾಪರವಾದಿಯವರು ಹೊಂದಿರುವ ಪುರದಮಠದವರು ಎಂದು ಬರೆದುಕೊಳ್ಳಬಾರದೆಂತಲೂ, ಪ್ರತಿವಾದಿ ಕಳೆರಾರು ಸ್ಟೇಟ್‌ಮೆಂಟಿನಲ್ಲಿ ಅವಾಚ್ಯವಾಕ್ಯಗಳನ್ನು ಉದಹರಿಸಿರುವ ಬಗ್ಗೆ ವಾದಿಯವರಲ್ಲಿ ಕ್ಷಮಾಪಣೆ ಬೇಡಿಕೊಳ್ಳಬೇಕೆಂತಲೂ, ವಾದಿಯವರಿಗೆ ಈ ದೆಸೆಯಿಂದ ಉಂಟಾದ ಖರ್ಚುಬಾಬುಗಳನ್ನು ಪ್ರತಿವಾದಿಯು ಕೊಡತಕ್ಕದ್ದೆಂತಲೂ, ಸಹ ತಾ|| 16-2-34 ನೇ ಶುಕ್ರವಾರ ಶ್ರೀಮನ್ನೃಪಶಾಲಿವಾಹನ ಶಕ 1855 ನೇ ಶ್ರೀಮುಖನಾಮಸಂವತ್ಸರದ ಫಾಲ್ಗುಣ ಶುದ್ಧ ಪಾಡ್ಯ ತಿಥಿಯಲ್ಲಿ ತುಮಕೂರು ಜಿಲ್ಲಾ ಗುಬ್ಬಿ ಮೊಕ್ಕಾಂನಲ್ಲಿ ವಾದಿಯವರಂತೆ ತೀರ್ಮಾನವಾಗಿರುವ, ವಿದ್ವಜ್ಜನ ಸಂತೃಪ್ತವಾಗಿ ಸಮಸ್ತ ವೀರಶೈವಮಂಡಲಿಯವರಿಗೂ ಮತ್ತು ವಾದಿಯವರು ಹೊಂದಿರುವ, ಪುರದಮಠದ ಶಿಷ್ಯಪ್ರಶಿಷ್ಯರಿಗಳ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಸಿದ್ಧಪಡಿಸಲಾಗಿರುತ್ತೆ.

ದಾಖಲೆ ಮತ್ತು ಮುಂದಿನ ಕ್ರಮದ ಜಾರಿಪತ್ರದ ಬಗ್ಗೆ ಬಾಜು ಜಗದ್ಗುರು ಶ್ರೀರಂಭಾಪುರೀ, ಉಜ್ಜಯಿನಿ, ಹಿಮವತ್ಕೇದಾರ, ಶ್ರೀಕಾಶಿ ಈ ಮಹಾಪೀಠಗಳಿಗೂ ವಿಸ್ತಾರವಾದ ತೀರ್ಮಾನ ಕಾಪಿ ಸಮೇತ ಸರ್ವಾಧಿಕಾರಿಗಳಿಂದ ಟಪಾಲ್, ರಿಜಿಸ್ಟರ್ ಮೂಲಕ ವರದಿ ಮಾಡಿಸಲ್ಪಡುತ್ತೆ.

ಜಾಹೀರ್. (ಸಹಿ) ವಾದಿ ಚಿಕ್ಕವೀರದೇಶಿಕೇಂದ್ರ

ತಾ|| 25-2-34ನೇ ಇಸ್ವಿ. ಸ್ವಾಮಿ,

ಬೆಂಗಳೂರುಸಿಟಿ. ಮರ್ಲೀನಹಳ್ಳಿಪುರದಮಠದ ಪಟ್ಟಾಧ್ಯಕ್ಷ,

ಮಹಾಂತಿನಮಠ, ಬೆಂಗಳೂರುಸಿಟಿ.

ಜಾರಿ ಬಗ್ಗೆ ಮತ್ತು ಮುಂದಿನ ನಡವಳಿ ಅದರಂತೆ ಗುರುಪೀಠಗಳ ಸಮಾಜದ ಧರ್ಮಸುಧಾರಣೆಗಾಗಿ ವಾದಿಯ ಮೊಕ್ತೇಸರ್ ಸಂಪಿಗೇ ಹಿರೇಮಠದ ಶ್ರೀಕಂಠಮೂರ್ತಿಗಳಿಗೆ ವಹಿಸಿದೆ.

ಚಂದಾದಾರರಲ್ಲಿ ವಿಜ್ಞಾಪನೆ.

ಪೋಸ್ಟ್‌ಖಾತೆಯ ಹೊಸರೂಲ್ಸಿನ ಪ್ರಕಾರ ನಮ್ಮ ಪತ್ರಿಕೆಯು ಇನ್ನೂವರೆಗೆ ರಜಿಷ್ಟರ್ ಆಗಿಲ್ಲ. ಅದಕ್ಕಾಗಿ ಈಗ 3 ತಿಂಗಳುಗಳಿಂದಲೂ 3 ಪೈ ಸ್ಟಾಂಪಿಗೆ ಬದಲಾಗಿ ಅರ್ಧ ಆಣೆಯ ಸ್ಟಾಂಪನ್ನು ಹಚ್ಚುತ್ತಿದ್ದೇವೆ. ಇದರಿಂದ ನಮಗೆ ವಿಶೇಷವಾಗಿ ಲುಕ್ಸಾನ್ ಆಗುವುದೆಂಬ ವಿಷಯವು ಚಂದಾದಾರರಿಗೆಲ್ಲಾ ತಿಳಿದೇ ಇದೆ. ಆದಕಾರಣ ಪೋಸ್ಟ್ ಆಫೀಸಿನವರಿಂದ ಆರ್ಡರ್ ಬರುವವರೆಗೆ 2 ವಾರಗಳ ಪತ್ರಿಕೆಗಳನ್ನು ಒಟ್ಟುಗೂಡಿಸಿ 15 ದಿವಸಗಳಿಗೊವ್ಮೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ವಿಷಯವನ್ನು ಚಂದಾದಾರರೆಲ್ಲರೂ ಗಮನಿಸಬೇಕಾಗಿ ಕೋರಿಕೆ.

ಸಂ.—

ಪಂಚಾಚಾರ್ಯ ಪ್ರಭಾ.

೧೯೩೪ನೇ ಮಾರ್ಚ್ ತಾ|| ೧೯ ನೇ ಸೋಮವಾರ.

ಏಕದೇವತೋಪಾಸನೆ.

ಲೋಕದಲ್ಲಿ ಸೃಷ್ಟಿಕರ್ತನಾದ ಪರಮೇಶ್ವರನನ್ನು ಆರಾಧಿಸುವ ಮಾರ್ಗಗಳು ಬಹಳವಾಗಿರುತ್ತವೆ. ಯಾವ ಯಾವ ಮಾರ್ಗದಲ್ಲಿ ಪ್ರವೇಶಿಸಿ ಯಾವ ಯಾವ ರೂಪದಿಂದ ಭಗವಂತನನ್ನಾರಾಧಿಸುತ್ತೇವೆಯೋ ಭಗವಂತನು ಆಯಾಯ ರೂಪದಿಂದಲೇ ಪ್ರತ್ಯಕ್ಷನಾಗಿ ದುಃಖರೂಪವಾದ ಸಂಸಾರಬಂಧವನ್ನು ತೊಲಗಿಸುತ್ತಾನೆ. ಹೀಗಿದ್ದರೂ ಮಾನವನು ತಾನು ಹಿಡಿದ ಉಪಾಸನಾಮಾರ್ಗದಲ್ಲಿ ಎಷ್ಟು ಕಷ್ಟಗಳೊದಗಿದರೂ ಬಿಡದೆ ಅನುಷ್ಠಿಸುವ ಧೈರ್ಯವನ್ನು ಹೊಂದುವುದಿಲ್ಲ. ಸ್ವಲ್ಪ ಯುಕ್ತಿಯುಕ್ತವಾಗಿ ಯಾರಾದರೂ ಬೇರೆ ಮಾರ್ಗವನ್ನು ಹೇಳಿದರೆ ತನ್ನ ಹಿಂದಿನ ದಾರಿಯನ್ನು ಬಿಟ್ಟು ಬೇರೆ ದಾರಿಯನ್ನು ಹಿಡಿಯುವ ಚಂಚಲಸ್ವಭಾವದವನಾಗಿರುವುದರಿಂದ ಸುಖವನ್ನು ಹೊಂದುವುದಕ್ಕೆ ಬದಲಾಗಿ ಪ್ರತಿಕ್ಷಣದಲ್ಲೂ ದುಃಖವನ್ನೇ ಪಡೆಯುವವನಾಗಿದ್ದಾನೆ. ಅನಾದಿಕಾಲದಿಂದ ತನ್ನ ಗುರುಹಿರಿಯರು ತೋರಿಸಿರುವ ಉಪಾಸನಾಮಾರ್ಗವನ್ನು ಬಿಟ್ಟು ಹೊಸದಾದ ಮಾರ್ಗವನ್ನವಲಂಬಿಸುವುದರಿಂದ ಅವನಿಗೆ ಸಂಶಯತರಂಗಗಳು ಹೆಚ್ಚಿ "ಸಂಶಯಾತ್ಮಾವಿನಶ್ಯತಿ" ಎಂಬ ವಾಕ್ಯದಂತೆ ನಾಶವೇ ಫಲವಾಗಿ ಪರಿಣಮಿಸುವುದು. ಎಲ್ಲ ಮಾರ್ಗಗಳು ಭಗವಂತನ ಸಮೀಪವನ್ನು ಸೇರಿಸುವ ಮಾರ್ಗಗಳಾಗಿದ್ದರೂ ಒಂದೊಂದು ಮತಕ್ಕೆ ಒಂದೊಂದು ಉಪಾಸನಾಮಾರ್ಗವು ಪೂರ್ವಾಚಾರ್ಯರಿಂದ ಗೊತ್ತುಮಾಡಲ್ಪಟ್ಟಿರುವುದರಿಂದಲೂ ಅದಕ್ಕೆ ಬೇಕಾದ ಉಪಕರಣಗಳೆಲ್ಲವೂ ಆಯಾಯ ಮತೀಯರಲ್ಲಿ ಬಾಲ್ಯಾದಾರಭ್ಯ ಅಭ್ಯಾಸದಲ್ಲಿರುವುದರಿಂದಲೂ ಆಯಾಯ ಮತೀಯರು ಆಯಾಯ ಉಪಾಸನಾಮಾರ್ಗದಲ್ಲೇ ಪ್ರವೇಶಿಸಬೇಕಲ್ಲದೆಹುಚ್ಚರಂತೆ ಕ್ಷಣಕ್ಷಣಕ್ಕೂ ಒಂದೊಂದು ದಾರಿಯನ್ನು ಹಿಡಿದು ಭ್ರಷ್ಟರಾಗಬಾರದು. ಎಲ್ಲ ಮಾರ್ಗಗಳೂ ಭಗವಂತನನ್ನು ಕಂಡು ಭವರೋಗವನ್ನು ಪರಿಹರಿಸಿಕೊಳ್ಳಲು ಸಾಧನಗಳಾಗಿದ್ದರೂ ಒಂದೊಂದು ಮತಕ್ಕೆ ಒಂದೇ ಮಾರ್ಗವೇ ಸುಖಕರವೂ ಫಲಪ್ರದವೂ ಆಗಿರುತ್ತದೆ. ಶರೀರದಲ್ಲಿ ಹುಟ್ಟಿದ ಒಂದು ರೋಗವನ್ನು ಪರಿಹರಿಸಲು ಒಬ್ಬೊಬ್ಬ ವೈದ್ಯಶಾಸ್ತ್ರಕಾರರು ಒಂದೊಂದು ವಿಧವಾಗಿ ಔಷಧೋಪಚಾರಗಳನ್ನು ಕಲ್ಪಿಸಿರುತ್ತಾರೆ. ರೋಗಿಯು ಆ ಔಷಧಗಳೆಲ್ಲವನ್ನೂ ಸೇವಿಸುವುದನ್ನಾಗಲಿ ಎರಡೆರಡುದಿವಸ ಒಂದೊಂದು ಔಷಧದ ರುಚಿಯನ್ನು ನೋಡುವುದನ್ನಾಗಲಿ ಮಾಡಬಾರದು. ಚಾಂಚಲ್ಯಸ್ವಭಾವದಿಂದ ಹಾಗೆ ಮಾಡುತ್ತ ಬಂದರೆ 'ವೈದ್ಯದ್ವಯಂ ರೋಗನಿಪಾತಹೇತುಃ' ಎಂಬುಕ್ತಿಯಂತೆ ಅವನು ಆದಷ್ಟುಬೇಗನೆ ಯಮಾಲಯವನ್ನು ಪ್ರವೇಶಿಸಬೇಕಾಗುತ್ತದೆ. ಆದುದರಿಂದ ಭವರೋಗಮಹಾವೈದ್ಯನಾದ ಪರಮೇಶ್ವರನಿಂದ ಜನನಮರಣರೂಪವಾದ ದೀರ್ಘರೋಗವನ್ನು ಪರಿಹರಿಸಲು ಶಿವೋಪಾಸನಾದ್ಯನಂತ ಉಪಾಸನೆಗಳು ಕಲ್ಪಿಸಲ್ಪಟ್ಟಿದ್ದರೂ ಇವೆಲ್ಲಾ ಭವರೋಗವನ್ನೊಂದನ್ನೇ ನಾಶಗೊಳಿಸುವ ಸಾಧನಗಳಾದುದರಿಂದ ತನ್ನ ಆಚಾರ ವ್ಯವಹಾರಗಳಿಗನುಕೂಲವಾಗಿ ಸಂಪ್ರದಾಯಸಿದ್ಧವಾದ ದೇವತೋಪಾಸನೆಯನ್ನು ತಪ್ಪದೆ ಮಾಡಬೇಕಲ್ಲದೆ ಎರಡೆರಡುದಿವಸ ಒಂದೊಂದುಪಾಸನೆಯನ್ನಾಗಲಿ ಅಥವಾ ಒಟ್ಟುಗೂಡಿಸಿಯಾಗಲಿ ಮಾಡಬಾರದು.

ಈಗಿನ ನವೀನಕಾಲದಲ್ಲಿ ಒಂದು ಮತವನ್ನು ಬಿಟ್ಟು ಮತ್ತೊಂದು ಮತವನ್ನು ಪ್ರವೇಶಿಸುವುದೆಂದರೆ ಬಹು ಸುಲಭವಾಗಿಹೋಗಿದೆ. ಆದರೆ ಹೀಗೆ ಮತಾಂತರವನ್ನು ಪ್ರವೇಶಿಸುವವರೆಲ್ಲರೂ ಮೋಕ್ಷಾರ್ಥಿಗಳಾಗಿ ಪ್ರವೇಶಿಸುವರೆಂದು ಹೇಳಲಾಗುವುದಿಲ್ಲ. ಕೆಲವರು ತಾವು ಜನ್ಮವೆತ್ತಿದ ಮತದಲ್ಲಿ ಹೇಳಿದ ಮಾಂಸಾಹಾರನಿಷೇಧಾದಿ ನಿರ್ಬಂಧವನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೂ, ಕೆಲವರು ನಾಲಗೆಯ ರುಚಿಗಾಗಿಯೂ, ಕೆಲವರು ವಿಧವಾವಿವಾಹಾದ್ಯನುಕೂಲತೆಗಳನ್ನು ಪಡೆಯುವುದಕ್ಕಾಗಿಯೂ, ಕೆಲವರು ಪಶುವೃತ್ತಿಯನ್ನವಲಂಬಿಸುವುದಕ್ಕಾಗಿಯೂ, ಇನ್ನು ಕೆಲವರು ಐಶ್ವರ್ಯಲಾಭಕ್ಕಾಗಿಯೂ ಬೇರೆಬೇರೆ ಮತಗಳನ್ನು ಪ್ರವೇಶಿಸ ತೊಡಗಿದ್ದಾರೆ. ದೇವರ ಸ್ವರೂಪವನ್ನು ತಿಳಿದುಕೊಳ್ಳಬೇಕೆಂಬವನಿಗೆ ತನ್ನ ಹಿರಿಯರು ಕಲ್ಪಿಸಿದ ದಾರಿಯೇ ಸಾಕಾಗಿದೆ. ಪಥ್ಯಮಾಡದಿದ್ದ ಜಿಹ್ವಾಚಾಪಲ್ಯವುಳ್ಳ ಸೋಮಾರಿಯು ಯಾವ ಔಷಧವನ್ನು ಸೇವಿಸಿದರೂ ರೋಗವು ಮತ್ತಷ್ಟು ಹೆಚ್ಚುವದಷ್ಟೆ!

ತ್ರಿಕಾಲಜ್ಞಾನಿಗಳಾದ ನಮ್ಮ ಪೂರ್ವಾಚಾರ್ಯರು ಭವರೋಗವನ್ನು ನಿವಾರಣೆಮಾಡಿಕೊಳ್ಳಲಿಚ್ಛೆಯುಳ್ಳವರನ್ನು ಕುರಿತು ಪ್ರಥಮತಃ, 'ಆಹಾರಶುದ್ಧೌ ಸತ್ವಶುದ್ಧಿಃ' ಎಂಬುವಂತೆ ಆಹಾರನಿಯಮಗಳನ್ನು ಮಾಡಿ ಬಳಿಕ ಆ ಹೃದಯಕ್ಷೇತ್ರದಲ್ಲಿ ಬ್ರಹ್ಮೋಪದೇಶವೆಂಬ ಬೀಜವು ನಿರುಪಾಧಿಕವಾಗಿ ಬೆಳೆಯಲು ಸಂಸ್ಕಾರಗಳನ್ನೇರ್ಪಡಿಸಿ ಉಪಾಸನೆಮಾಡುವ ರೀತಿಗಳನ್ನು ತಿಳಿಸಪಡಿಸಿದ್ದಾರೆ. ಅದರಂತೆ ನಡೆಯದಿದ್ದವನು ಯಾವ ಮತವನ್ನು ಪ್ರವೇಶಿಸಿದರೂ ಪ್ರಯೋಜನವಿಲ್ಲ. ವಿದ್ಯಾರ್ಥಿಯು ತನಗೆ ಪರಿಚಯವಾದ ಪಾಠಶಾಲೆಯೊಳಗಿದ್ದು ಆ ಶಾಲೆಯ ನಿಯಮಗಳನ್ನು ಪಾಲಿಸುತ್ತ ಕಷ್ಟಪಟ್ಟು ಅಭ್ಯಾಸಮಾಡುತ್ತ ಬಂದರೆ ಸುಖವಾಗಿ ಉತ್ತೀರ್ಣನಾಗುವನು. ಹಾಗೆಮಾಡದೆಯೂ ಶಾಲೆಯ ನಿಯಮಗಳನ್ನು ಪಾಲಿಸಲು ಅಗದೆಯೂ ಕಷ್ಟಪಟ್ಟು ಅಭ್ಯಾಸಮಾಡದೆಯೂ ಮುಂದು ಮುಂದಣ ಪಾಠಶಾಲೆಗಳಿಗೆ ಅಲೆಯುತ್ತ ಹೋದರೆ ಉತ್ತೀರ್ಣನಾಗಬಲ್ಲನೆ? ಎಲ್ಲಾ ಪಾಠಶಾಲೆಗಳ ಧ್ಯೇಯವೂ ಒಂದೇ ಆಗಿದೆ. ಕಷ್ಟಪಟ್ಟು ಓದದವನು ಯಾವ ಪಾಠಶಾಲೆಗಳಿಗೆ ಹೋದರೂ ಆತನಿಗೆ ವಿದ್ಯಾಧಿದೇವತೆಯು ಪ್ರತ್ಯಕ್ಷಳಾಗುವುದಿಲ್ಲ. ಹೀಗೆ ಕಂಡ ಕಂಡ ವೈದ್ಯರನ್ನಾಶ್ರಯಿಸಿ ಮಿತಿಯಿಲ್ಲದ ಔಷಧವನ್ನು ಸೇವಿಸುವ ಜಿಹ್ವಾಚಾಪಲ್ಯವುಳ್ಳ ರೋಗಿಯಂತೆಯೂ ಕಷ್ಟಪಟ್ಟು ಅಭ್ಯಾಸಮಾಡದೆ ತನ್ನ ಮನೆಯ ಮುಂದಿನ ಶಾಲೆಯನ್ನು ಬಿಟ್ಟು ದೂರ ದೂರ ಅಲೆಯುತ್ತಿರುವ ಮೂರ್ಖವಿದ್ಯಾರ್ಥಿಯಂತೆಯೂ ಒಂದು ಮತವನ್ನು ಬಿಟ್ಟು ಒಂದು ಮತಕ್ಕೆ ಹೋಗುವವನಿಗೆ ಖಂಡಿತವಾಗಿಯೂ ಭವರೋಗವು ನಿವಾರಣೆಯಾಗದು. ಭಗವಂತನೊಲುಮೆಯಂತೂ ಆಗುವುದೇ ಇಲ್ಲ. ಆದುದರಿಂದ ಮಹರ್ಷಿಗಳಿಂದ ಅನುಭವಪೂರ್ವಕವಾಗಿ ಹೇಳಲ್ಪಟ್ಟ ಉಪಾಸನಾಮಾರ್ಗಗಳೊಳಗೆ ತನ್ನ ಗುರುಹಿರಿಯರ ಕಾಲದಿಂದಲೂ ತನ್ನ ಬಳಿಕೆಯಲ್ಲಿ ಬಂದ ಉಪಾಸನಾಮಾರ್ಗದಲ್ಲಿದ್ದು ಒಂದೊಂದು ಔಷಧಸೇವನೆಗೆ ಒಂದೊಂದು ಚಿಕಿತ್ಸಾಕ್ರಮಗಳು ಏರ್ಪಟ್ಟಿರುವಂತೆ ಆಯಾಯ ಮತಾಚಾರ್ಯರು ಹೇಳಿರುವ ಭವರೋಗನಿವಾರಣಸಾಧನವಾದ ಏಕದೇವತೋಪಾಸನಾಕ್ರಮವನ್ನವಲಂಬಿಸಿ ಬೇರೆಬೇರೆ ಮತಗಳನ್ನವಲಂಬಿಸಬೇಕೆಂಬ ಚಂಚಲವೃತ್ತಿಗೆ ಮನಸ್ಸನ್ನು ಕೊಡದೆ ಪ್ರತಿಯೊಬ್ಬರೂ ಅನಾದಿಕಾಲದಿಂದ ತಾವು ಯಾವ ಉಪಾಸನಾಮಾರ್ಗದಲ್ಲಿದ್ದು ದೇವರನ್ನಾರಾಧಿಸುತ್ತಬಂದರೋ, ಅದೇಕ್ರಮದಿಂದ ಆರಾಧಿಸುವುದೇ ವಿವೇಕಿಯಾದ ಮಾನವನ ಕರ್ತವ್ಯವಾಗಿದೆ.

ವೇ|| ಪಂಡಿತಶ್ರೀಕಾಶೀನಾಥಶಾಸ್ತ್ರಿಗಳವರು ತಮ್ಮ ಸಂಚಾರವನ್ನು ಮುಗಿಸಿಕೊಂಡು ನಿನ್ನೆಯದಿವಸ ರಾಜಧಾನಿಗೆ ಆಗಮಿಸಿದರು.

ಒಳದೇಶದ ವೃತ್ತಾಂತಗಳು.

ಕೋಲಾರದ ಚಿನ್ನದಗಣಿಯಲ್ಲಿ ಕೆಲಸಮಾಡುತ್ತಿದ್ದ ಡಾಡ್ಲಿಂಗ್ ಎಂಬವರು ತಮ್ಮ ಬಳಿಯಲ್ಲಿ ಕಳುವಿನ ಚಿನ್ನವನ್ನು ಇಟ್ಟುಕೊಂಡಿದ್ದರೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅಪರಾಧಿಗೆ 6 ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ಮೈಸೂರು ಸರಕಾರದವರು ಸೊಂಡೂರು ರಾಜರು ಕುಳಿತುಕೊಂಡು ಹೋಗುವ ಮೋಟಾರುಗಳಿಂದ ಸಂಸ್ಥಾನದ ಯಾವ ಸುಂಕದಕಟ್ಟೆಯಲ್ಲಿಯೂ ಸುಂಕವನ್ನು ವಸೂಲು ಮಾಡಕೂಡದೆಂದೂ, ಇದು ಬರುವ ಜುಲೈ 1 ನೇ ತಾರೀಖಿನಿಂದ ಜಾರಿಗೆ ಬರುವುದೆಂದೂ ಅಪ್ಪಣೆ ಮಾಡಿರುತ್ತಾರೆ.

ಚಿಂತಾಮಣಿ ತಾಲೂಕು ಬೊಮ್ಮನಹಳ್ಳಿಯಲ್ಲಿರುವ ಗಾಣಿಗರ ಗುರಪ್ಪನ ಮಗಳು 16 ವರ್ಷದ ಮುನಿವೆಂಕಟಮ್ಮನೆಂಬ ತರುಣಿಯನ್ನು ಅದೇ ಊರಿನ ಹೈದರಸಾಬನೆಂಬ ಮುಸಲ್ಮಾನನು ಅಪಹರಿಸಿಕೊಂಡು ಹೋಗಿದ್ದನೆಂಬ ಕಾರಣದ ಮೇಲೆ ಪೋಲೀಸರು ಹೈದರಸಾಬನನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

1932 ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಶಿವಮೊಗ್ಗೆಯಲ್ಲಿ ಲಂಬಾಣಿಗರ ಲಚ್ಚಿ ಎಂಬವಳನ್ನು ಅಪಹರಿಸಿದರೆಂಬ ಕಾರಣದ ಮೇಲೆ ಪೋಲೀಸರು ಪಟ್ಟೆಪರೀಫ್, ಬಾಬಾಸಾಹೇಬ ಮೊದಲಾದ 11 ಜನರ ಮೇಲೆ ಮೊಕದ್ದಮೆಯನ್ನು ಹೂಡಿದ್ದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ 3 ಜನರನ್ನು ಬಿಟ್ಟು ಉಳಿದ 8 ಜನರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಬೆಂಗಳೂರು ಬಿನ್ನಿಮಿಲ್ಲಿನಲ್ಲಿ ಗುಮಾಸ್ತನಾಗಿದ್ದ ಟಿ. ಆರ್. ದಾಮೋದರಂ ಎಂಬವನು ಮಿಲ್ಲಿನ ಬಾಬ್ತು 200 ರೂ. ಗಳನ್ನು ದುರುಪಯೋಗಪಡಿಸಿಕೊಂಡನೆಂಬ ಕಾರಣದಮೇಲೆ ಸಿಟಿಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ, ಅಪರಾಧಿಗೆ ಆರುತಿಂಗಳ ಕಠಿಣಶಿಕ್ಷೆ ಮತ್ತು 500 ರೂ. ದಂಡವನ್ನು ವಿಧಿಸಿ, ದಂಡವು ವಸೂಲಾದರೆ ಅದರಲ್ಲಿ 200 ರೂ. ಗಳನ್ನು ಕಂಪೆನಿಗೆ ಪಾವತಿಮಾಡಬೇಕೆಂದು ಅಪ್ಪಣೆಮಾಡಿರುತ್ತಾರೆ.

ಮೈಸೂರು ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು ಬರುವ ಜೂನ್ 14 ನೇ ತಾರೀಖು ಗುರುವಾರ ದಿವಸ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ನಡೆಯುವದು. ಈ ಮಧ್ಯೆ ಡೆಪ್ಯುಟಿ ಕಮಿಷನರುಗಳು ಏಪ್ರಿಲ್ 26 ನೇ ತಾರೀಖಿನೊಳಗಾಗಿ ತಮ್ಮ ತಮ್ಮ ಡಿಸ್ಟ್ರಿಕ್ಟಿನಲ್ಲಿರುವ ಪ್ರತಿನಿಧಿಗಳೆಲ್ಲರ ಸಭೆಯನ್ನು ನಡೆಯಿಸಿ, ಅಧಿವೇಶನದಲ್ಲಿ ಚರ್ಚೆಗೆ ಬರುವ ಪ್ರಶ್ನೆ ಮತ್ತು ನಿರ್ಣಯಗಳನ್ನು ಸರಕಾರಕ್ಕೆ ತಿಳುಹಿಸಬೇಕೆಂದು ಅಪ್ಪಣೆ ಮಾಡಿರುತ್ತಾರೆ.

ಮೈಸೂರು ರಾಜಧಾನಿಯಲ್ಲಿ ಲೇಟ್ ಬಿಡಾರ್ ಕೃಷ್ಣಪ್ಪನವರು ಕಟ್ಟಿಸಿರುವ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪದ್ಧತಿಪ್ರಕಾರ ನಡೆಯುತ್ತಿರುವ ಶ್ರೀರಾಮೋತ್ಸವವು ಈ ವರ್ಷ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಡುವುದೆಂದು ಕೇಳುತ್ತೇವೆ. ಇದೇ ತಿಂಗಳು 24 ನೆಯ ತಾರೀಖಿನಿಂದ ಹದಿನೇಳು ದಿವಸಗಳವರೆಗೂ ಸುಪ್ರಸಿದ್ಧ ಸಂಗೀತ ವಿದ್ವಾಂಸರಾದ ಮ|| ಮುಸರಿ ಸುಬ್ರಹ್ಮಣ್ಯಯ್ಯರ್, ಚಂಪೆ ಭಾಗವತರು, ರಾಮಭಾಗವತರು, ಮುಂತಾದವರ ಸಂಗೀತಗಳು ಪ್ರತಿದಿವಸವೂ ನಡೆಯುವುದರಿಂದ ಸಂಗೀತವನ್ನು ಕೇಳಿ ಸಂತೋಷಪಡುವ ಇಂಥ ಸುಸಮಯವು ಸಿಕ್ಕಲಾರದು.

ಕಳೆದ ಶನಿವಾರ ರಾಜಧಾನಿಯಲ್ಲಿರುವ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಕಟ್ಟಡದಲ್ಲಿ ಶ್ರೀ|| ಜಿ. ಆರ್. ಜೋಸ್ಯರವರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆಯು ಸೇರಿ, ಪತ್ರಿಕೋದ್ಯೋಗಿಗಳಿಗಿರುವ ತೊಂದರೆಗಳನ್ನು ತಪ್ಪಿಸುವುದಕ್ಕಾಗಿಯೂ, ಪತ್ರಿಕೋದ್ಯೋಗಿಗಳಲ್ಲಿ ಏಕಮತ್ಯವನ್ನುಂಟುಮಾಡುವುದಕ್ಕಾಗಿಯೂ ಒಂದು ಸಂಘವು ಸ್ಥಾಪಿಸಲ್ಪಡಬೇಕೆಂದು ತೀರ್ಮಾನವಾಯಿತು. ಸ್ವಲ್ಪ ಹೊತ್ತು ಸಮಯೋಚಿತವಾದ ಚರ್ಚೆಯು ನಡೆದು, ಅನಂತರ ಶ್ರೀ|| ಜಿ. ಆರ್. ಜೋಸ್ಯರವರು ನೂತನ ಸಂಘದ ಅಧ್ಯಕ್ಷರಾಗಿಯೂ, ಮ|| ರಾ|| ಜೀವಣ್ಣರಾಯರು ಕಾರ್ಯದರ್ಶಿಗಳಾಗಿಯೂ ನಿಯಮಿಸಲ್ಪಟ್ಟರು.

ಕಳೆದ ಮಾರ್ಚಿ 3 ನೇ ತಾರೀಖಿನ ದಿವಸ ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ನಡೆದ ಚುನಾವಣೆಗಳಲ್ಲಿ ಮುಂದೆ ಕಂಡ ಮಹಾಶಯರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಚುನಾಯಿಸಲ್ಪಟ್ಟಿರುತ್ತಾರೆ— ಮ|| ರಾ|| ಎಚ್. ಸಿ. ದಾಸಪ್ಪನವರು, ಮ|| ರಾ|| ಎಂ. ಸಿ. ಲಿಂಗೇಗೌಡರು, ಮ|| ರಾ|| ಬಿ. ಕೆ. ಗರುಡಾಚಾರ್ರು, ಮ|| ರಾ|| ವಿ. ವೆಂಕಟಪ್ಪನವರು, ಮ|| ರಾ|| ಸಿ. ಚಂಗಲ್ರಾಯರೆಡ್ಡಿಯವರು, ಮ|| ರಾ|| ಎಚ್. ಬಿ. ಗುಂಡಪ್ಪಗೌಡರು, ಮ|| ರಾ|| ಡಿ. ವಿ. ಗುಂಡಪ್ಪನವರು, ಮ|| ರಾ|| ಎಂ. ರಾಮಚಂದ್ರರಾವ್ ಸಿಂಧೆಯವರು, ಮ|| ರಾ|| ಎಂ. ಸಿದ್ದಯ್ಯನವರು, ಮ|| ರಾ|| ಡಿ. ಎಸ್. ಮಲ್ಲಪ್ಪನವರು, ಮ|| ರಾ|| ಡಿ. ಎಚ್. ಚಂದ್ರಶೇಖರಯ್ಯನವರು, ಮತ್ತು ಮ|| ರಾ|| ಟಿ. ಬಿ. ಮಲ್ಲೇಗೌಡರು.

ವರ್ತಮಾನಸಂಗ್ರಹ.

ಫೆಬ್ರವರಿ 24 ಕ್ಕೆ ಅಖೈರಾದ ಒಂದು ವಾರದಲ್ಲಿ ಬಂಗಾಳ ಪ್ರಾಂತದಲ್ಲಿ 84 ದರೋಡೆಗಳು ನಡೆದಿರುವುವು.

ವೈಸರಾಯರವರು ಕಳೆದವಾರ ಬೀಹಾರಪ್ರಾಂತದಲ್ಲಿ ಭೂಕಂಪದ ಆಘಾತಕ್ಕೆ ಸಿಕ್ಕಿದ ಪ್ರದೇಶಗಳನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಬಂದರು.

ಚೀಣಾದೇಶಕ್ಕೆ ಸೇರಿದ ಕ್ವಾಂಗ್ಸಿ ಪ್ರಾಂತದಲ್ಲಿ ಕೇವಲ ಸ್ತ್ರೀಯರಿಂದಲೇ ಒಂದು ರಸ್ತೆಯನ್ನು ಮಾಡಿಸುತ್ತಿರುವರು. ಆ ರಸ್ತೆಯ ಕೆಲಸಕ್ಕಾಗಿ 5000 ಜನ ಹೆಂಗಸರು ನೇಮಿಸಲ್ಪಟ್ಟಿರುವರು.

ರಷ್ಯಾದೇಶದ ರಾಜಧಾನಿಯಾದ ಮಾಸ್ಕೋನಗರದ ಸಮೀಪದಲ್ಲಿ ಎರಡು ರೈಲುಗಾಡಿಗಳು ಒಂದಕ್ಕೊಂದು ಢಿಕ್ಕಿ ಹೊಡೆದು 16 ಜನರು ಮೃತಪಟ್ಟರು. 44 ಜನರಿಗೆ ಗಾಯಗಳಾಗಿರುವುವು.

ಇಂಗ್ಲೆಂಡಿನ ಕಬ್ಬಿಣದ ಕೈಗಾರಿಕೆಯ ಸಂಘದವರು ಬೀಹಾರ್ ಭೂಕಂಪಗಳಿಂದ ಮನೆಗಳನ್ನು ಕಳೆದುಕೊಂಡಿರುವವರ ಉಪಯೋಗಕ್ಕಾಗಿ 100 ಟನ್ ಜಿಂಕ್ ತಗಡುಗಳನ್ನು ಕಳುಹಿಸಿರುತ್ತಾರೆ.

ನೇಪಾಳದ ಮಹಾರಾಜರು ತಮ್ಮ ರಾಜ್ಯದಲ್ಲಿ ಭೂಕಂಪದಿಂದ ಕಷ್ಟಪಡುವವರ ಸಹಾಯಕ್ಕಾಗಿ 3 ಲಕ್ಷ ರೂಪಾಯಿಗಳನ್ನೂ, ಮಹಾರಾಣಿಯವರು 1 ಲಕ್ಷ ರೂಪಾಯಿಗಳನ್ನೂ ಕೊಟ್ಟಿರುತ್ತಾರೆ.

ತಿರುಪತಿಯಲ್ಲಿ ಮಂಗಗಳ ಕಾಟವು ದಿನದಿನಕ್ಕೆ ಹೆಚ್ಚುತ್ತಿರುವುದರಿಂದ ಅಲ್ಲಿಯ ಮುನಿಸಿಪಾಲಿಟಿಯವರು ಅವುಗಳನ್ನು ಹಿಡಿದು ದೂರದೇಶಕ್ಕೆ ಸಾಗಿಸಿದವರಿಗೆ 250 ರೂ. ಗಳ ಬಹುಮಾನವನ್ನು ಕೊಡುವುದಾಗಿ ಪ್ರಕಟಿಸಿರುತ್ತಾರೆ.

ಅಮೇರಿಕೆಯ ಸಂಯುಕ್ತಸಂಸ್ಥಾನಗಳಿಗೆ ಸೇರಿದ ನೀಯಾಗರ್ ಫಾಲ್ಸ್ ಎಂಬಲ್ಲಿ ಆರು ಜನರು ಸಶಸ್ತ್ರರಾಗಿ ಬ್ಯಾಂಕಿಗೆ ನುಗ್ಗಿ ಅಪಾರವಾದ ಹಣವನ್ನೂ, ಬ್ಯಾಂಕಿನಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಹುಡುಗಿಯನ್ನೂ ಅಪಹರಿಸಿಕೊಂಡು ಹೋಗಿರುವರು.

ಕಾವೇರಿ ನದಿಗೆ ಮೆಟ್ಟೂರಿನಲ್ಲಿ ಕಟ್ಟಿರುವ ಅದ್ಭುತವಾದ ಅಣೆಕಟ್ಟೆಯು ಬರುವ ಮೇ ತಿಂಗಳಿಗೆ ಸಂಪೂರ್ಣವಾಗುವುದೆಂದೂ, ಆಗಸ್ಟ್ 21 ನೇ ತಾರೀಖಿನ ದಿವಸ ಸರ್ ಜಾರ್ಜ್ ಸ್ಟ್ಯಾನ್ಲಿಯವರು ಅಣೆಕಟ್ಟಿನ ಪ್ರಾರಂಭೋತ್ಸವವನ್ನು ನೆರವೇರಿಸುವರೆಂದೂ ತಿಳಿದುಬಂದಿದೆ.

ಕಲ್ಕತ್ತಾನಗರದ ಜದಾನಲ್ಲಿ ಎಂಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನು ಒಂದು ಕಳುವಿನ ಮೊಕದ್ದಮೆಯನ್ನು ತನಿಖೆ ಮಾಡುವ ಸಂದರ್ಭದಲ್ಲಿ ಒಂದು ಚಿನ್ನದ ಸರಪಣಿಯನ್ನು ಕದ್ದು, ಸರಪಣಿಯ ಮಾಲಕನನ್ನು ಬೆದರಿಸಿ ಬಂಧನದಲ್ಲಿಟ್ಟನೆಂಬ ಆಪಾದನೆಯ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಸಬ್ ಇನ್ಸ್‌ಪೆಕ್ಟರನಿಗೆ 1½ ವರ್ಷ ಕಠಿಣಶಿಕ್ಷೆ ಮತ್ತು 300 ರೂ. ಜುಲ್ಮಾನೆಯನ್ನು ವಿಧಿಸಿದರು.

ಅಮೇರಿಕೆಯ ಪ್ರಸಿದ್ಧ 'ಫೋರ್ಡ್' ಮೋಟಾರ್ ಕಂಪೆನಿಯ ಮಾಲಕರಾದ ಹೆನ್ರಿ ಫೋರ್ಡ್‌ರವರ ಮಗನಾದ ಎಡ್ಸೆಲ್ ಫೋರ್ಡನನ್ನು ಅಪಹರಿಸಿಕೊಂಡು ಹೋಗಿ ತನ್ಮೂಲಕವಾಗಿ ಅಪಾರ ಹಣವನ್ನು ವಸೂಲು ಮಾಡಬೇಕೆಂದು ಕೆಲವು ದರೋಡೆಖೋರರು ಬಹುದಿವಸಗಳಿಂದಲೂ ಹೊಂಚುಹಾಕುತ್ತಿದ್ದರು. ಈ ವಿಷಯವು ಹೇಗೋ ಬಹಿರಂಗವಾಗಿ, ಸದ್ಯಃ ಸಶಸ್ತ್ರಪೋಲೀಸರು ಮಗುವನ್ನು ರಕ್ಷಿಸುತ್ತಿರುವರು.

ನವಲಹಾಳದಲ್ಲಿ ಗಾಂಧೀಸಭೆಗೆ ಅಡ್ಡಿ!

ಕೊಲ್ಲಾಪುರ ಸಂಸ್ಥಾನಾಧೀಶ್ವರರು ನವಲಹಾಳದಲ್ಲಿ ಗಾಂಧಿಯವರ ಸಭೆಯನ್ನು ಕೂಡಿಸಕೂಡದೆಂದು ಅಪ್ಪಣೆಮಾಡಿರುತ್ತಾರೆ.

ಭಾರೀಕಳ್ಳತನ!

ದಕ್ಷಿಣಾಫ್ರಿಕಾದಿಂದ ಲಂಡನ್ನಿಗೆ ರವಾನಿಸಲ್ಪಟ್ಟ 930 ಔನ್ಸ್ ಭಂಗಾರವನ್ನು ಯಾರೋ ಕೆಲವರು ಬಹು ಚಮತ್ಕಾರದಿಂದ ಅಪಹರಿಸಿರುವರು. ಚಿನ್ನವನ್ನಿಟ್ಟಿದ್ದ ಪೆಟ್ಟಿಗೆಯು ಲಂಡನ್ನಿಗೆ ತಲುಪಿದಾಗ ಅದರಲ್ಲಿ ಚಿನ್ನದ ಬದಲು ಸಿಮೆಂಟ್ ಇದ್ದಿತಂತೆ! ಪೋಲೀಸರು ಕಳ್ಳರನ್ನು ಪತ್ತೆಮಾಡಲು ತರದೂದುಮಾಡುತ್ತಿರುವರು.

ಹೈದರಾಬಾದಿನಲ್ಲಿ ರಕ್ತದಮಳೆ!

ಹೈದರಾಬಾದ ಸಂಸ್ಥಾನಕ್ಕೆ ಸೇರಿದ ಸಿದ್ದೀಪೇಟೆಯ ಹತ್ತಿರದಲ್ಲಿ ಈಗ್ಗೆ ಕೆಲವು ದಿವಸಗಳ ಹಿಂದೆ ರಕ್ತದ ಬಣ್ಣದ ಮಳೆಯು ಸುರಿಯಿತೆಂದೂ, ನಾಲ್ಗೊಂಡಾ ಜಿಲ್ಲೆಗೆ ಸೇರಿದ ಹನುಮಾನಕೊಂಡದ ಸಮೀಪದಲ್ಲಿದ್ದ ಒಂದು ದೊಡ್ಡ ಬಂಡೆಯು ಎರಡು ಭಾಗವಾಗಿ ಸೀಳಿ ಹೋಗಿದೆಯೆಂದೂ, ಆದರೂ ಯಾರಿಗೂ ಅಪಾಯ ಸಂಭವಿಸಲಿಲ್ಲವೆಂದೂ ತಿಳಿದುಬಂದಿದೆ.

ಚಿತ್ತಗಾಂಗಿನ ತರುಣರಿಗೆ ಹೊಸನಿರ್ಬಂಧ!

ಚಿತ್ತಗಾಂಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು 25 ವರ್ಷದೊಳಗಿರುವ ಹಿಂದೂ ಯುವಕರಾರೂ ಸಾಯಂಕಾಲವಾದನಂತರ ಮನೆಯನ್ನು ಬಿಟ್ಟು ಹೊರಕ್ಕೆ ಬರಕೂಡದೆಂದೂ, ಬೈಸಿಕಲ್‌ಗಳ ಮೇಲೆ ಸವಾರಿ ಮಾಡಕೂಡದೆಂದೂ, ಯಾವ ಕಾಲದಲ್ಲಿ ಕೇಳಿದರೂ ಐಡೆಂಟಿಫಿಕೇಷನ್ ಕಾರ್ಡುಗಳನ್ನು ತೋರಿಸಬೇಕೆಂದೂ ಅಪ್ಪಣೆ ಮಾಡಿರುತ್ತಾರೆ.

ಎರಡನೇ ದೆಹಲೀ ದರ್ಬಾರ್!

1935 ನೇ ವರ್ಷಕ್ಕೆ ಚಕ್ರವರ್ತಿ ಸಾರ್ವಭೌಮರವರು ಸಿಂಹಾಸನಾರೋಹಣಮಾಡಿ 25 ವರ್ಷಗಳಾಗುವದರಿಂದ ಆ ಕಾಲದಲ್ಲಿ ನಡೆಯಲಿರುವ 'ರಜತಮಹೋತ್ಸವ' (ಸಿಲ್ವರ್ ಜೂಬಿಲಿ) ದ ಸಂಬಂಧದಲ್ಲಿ ಮತ್ತೊಂದು ದೆಹಲಿ ದರ್ಬಾರು ನಡೆಯುವದೆಂದೂ, ಲಾರ್ಡ್ ವಿಲಿಂಗ್‌ಡನ್‌ರವರು ಇನ್ನು ಕೆಲವು ದಿವಸಗಳಲ್ಲಿ ಲಂಡನ್ನಿಗೆ ಹೋದಾಗ ಮಂತ್ರಿಮಂಡಲಿಯವರೊಡನೆ ಈ ವಿಚಾರವನ್ನು ತೀರ್ಮಾನಮಾಡಿಕೊಂಡು ಬರುವರೆಂದೂ ತಿಳಿದುಬಂದಿದೆ.

ಹಾಸನ ತಾಲೂಕು ಅಮಲ್ದಾರರಾದ ಮಿ|| ವೈ. ಶ್ರೀಕಂಠಯ್ಯ ಬಿ.ಎ., ಇವರು ಶಿವಮೊಗ್ಗ ಡಿ|| ಟ್ರೆಜರಿ ಆಫೀಸರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ತುಮಕೂರು ಡಿ|| ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಕೆ. ಶೇಷಾದ್ರಿ ಅಯ್ಯರ್ ಬಿ.ಎ., ಇವರು ತುಮಕೂರು ಡಿ|| ಟ್ರೆಜರಿ ಆಫೀಸರಾಗಿಯೂ, ಚಿಕ್ಕಮಗಳೂರು ಡಿ|| ಟ್ರೆಜರಿ ಆಫೀಸರಾದ ಮಿ|| ಕೆ. ತಿಪ್ಪೇರುದ್ರಯ್ಯ ಬಿ.ಎ., ಇವರು ತುಮಕೂರು ಡಿ|| ಪೋಲೀಸ್ ಸೂಪರಿಂಟೆಂಡೆಂಟರಾಗಿಯೂ, ಶಿವಮೊಗ್ಗ ಡಿ|| ಟ್ರೆಜರಿ ಆಫೀಸರಾದ ಮಿ|| ಆರ್. ರಾಮಯ್ಯನಾಯ್ಡು ಬಿ.ಎ., ಇವರು ಚಿಕ್ಕಮಗಳೂರು ಡಿ|| ಟ್ರೆಜರಿ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಸ್ವೀಕಾರ

ಧಾರವಾಡ ಡಿ|| ಗದಗ ನಿವಾಸಿಗಳಾದ ಮ|| ರಾ|| ವೀರಪ್ಪ ಮಲಕಾಜಪ್ಪ ಶಿಗ್ಲಿ ಇವರ ಪುತ್ರಿಯನ್ನು ಮ|| ರಾ|| ರಾಚಪ್ಪಾ ಹರ್ತಿ ಇವರ ಪುತ್ರನಿಗೆ ಕೊಟ್ಟು ನಿಶ್ಚಯಮಾಡಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧುವಿನಕಡೆಯಿಂದ ತೆಗೆಯಿಸಿದ 1 ರೂ. ವರನಕಡೆಯಿಂದ ತೆಗೆಯಿಸಿದ 1 ರೂ. ಒಟ್ಟು 2 ರೂ. ಗಳು ಶ್ರೀ|| ಸಂಗನಬಸಪ್ಪ ಕಾಶಪ್ಪ ಬೇಲೇರಿ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿಜಿಲ್ಲಾ ಆದವಾನಿ ತಾ|| ರಾಮಪುರದ ಮಠದ ದಾನಯ್ಯನವರ ಪುತ್ರರಾದ ವೇ|| ರಾಮಲಿಂಗಯ್ಯನವರು ತಾವು ನೂತನವಾಗಿ ಕಟ್ಟಿಸಿದ ಮಠಕ್ಕೆ ಶ್ರೀ ಜಗದ್ಗುರು ಹಿಮವತ್ಕೇದಾರ ಜಗದ್ಗುರುಗಳವರು ಆಗಮಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಹುಬ್ಬಳ್ಳಿಶಹರದಲ್ಲಿರುವ ಮ|| ರಾ|| ಕರವೀರಪ್ಪ ಕುಬೇರಪ್ಪನವರ ಇವರ ಪುತ್ರರಾದ ಚಿ|| ರಾ|| ವಿರುಪಾಕ್ಷಪ್ಪನಿಗೆ ಮ||ರಾ|| ಫಕೀರಪ್ಪನವರು ಚಟ್ಟಿ ಇವರ ಪುತ್ರಿ ಸೌ|| ಗಂಗವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ಯು ವೇ|| ಚನ್ನಬಸವಾರ್ಯ ಗಂಜಿಗಟ್ಟಿ ಹಿರೇಮಠ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(1ನೇ ಪುಟದಿಂದ ಮುಂದುವರಿದುದು).

ಯೊಬ್ಬ ಮುಖಂಡರೂ ಇದೇ ವಿಷಯವನ್ನೇ ಸಾರಿ ಸಾರಿ ಹೇಳಿರುತ್ತಾರೆ. ಆದರೆ ಗಾಂಧಿಯವರು ಕಾಂಗ್ರೆಸ್ಸಿನ ಮೂಲಧ್ಯೇಯವನ್ನೇ ತ್ಯಜಿಸಿ, ಭರತಖಂಡದಲ್ಲಿ ಸ್ವಲ್ಪಭಾಗ ಜನರ ಮನಸ್ಸಿಗೆ ಮಾತ್ರ ಒಪ್ಪಿಗೆಯಾಗುವ ಮತಸಂಬಂಧವಾದ ಚಳುವಳಿಗೆ ಕೈಹಾಕಿರುತ್ತಾರೆ. ಇಂಥ ಮತಸಂಬಂಧವಾದ ಚಳುವಳಿಯು, ಅದು ನಿಜವಾಗಿಯೂ ನೀತಿಸಮ್ಮತವಾಗಿದ್ದರೆ ಯಾರಾದರೊಬ್ಬ ಮತಾಚಾರ್ಯರಿಂದ ಕೈಕೊಳ್ಳಲ್ಪಡಬೇಕು. ಆದರೆ ಕಾಂಗ್ರೆಸ್ ಎಂಬುದು ಕೇವಲ ರಾಜಕೀಯ ಸಂಸ್ಥೆಯಾದುದರಿಂದ ಅದು ಎಂದೆಂದಿಗೂ ಇದಕ್ಕೆ ಪ್ರವೇಶಿಸಬಾರದು. ಸರ್ವದಾ ರಾಜಕೀಯ ರಂಗದಲ್ಲಿಯೇ ಇದ್ದ ಗಾಂಧಿಯವರು ಇದಕ್ಕಿದ್ದ ಹಾಗೆ ಈ ರೀತಿ ಮತಸಂಬಂಧವಾದ ವಿಷಯಕ್ಕೆ ತಲೆಹಾಕಿದ್ದು ಆಶ್ಚರ್ಯವೇ ಸರಿ! ಯಾವಾಗಲೂ ಏನಾದರೊಂದು ಗೊಂದಲವನ್ನು ಎಬ್ಬಿಸುವುದರಲ್ಲಿಯೇ ತೃಪ್ತಿಹೊಂದುವ ಕೆಲ ಉಗ್ರವಾದಿಗಳೂ ಇವರಿಗೆ ಬೆಂಬಲವಾಗಿದ್ದಾರೆ.

ಒಟ್ಟಿನಲ್ಲಿ ವಿಚಾರಮಾಡಿ ನೋಡಿದರೆ ಸನಾತನಿಗಳಿಗಾಗಲಿ, ಅಸ್ಪೃಶ್ಯರಿಗಾಗಲಿ ಈ ಚಳುವಳಿಯಲ್ಲಿ ಸ್ವಲ್ಪವೂ ಪ್ರೇಮವಿಲ್ಲ. ಗಾಂಧಿಯವರು ಉದ್ಧರಿಸುವುದಾಗಿ ಹೇಳುತ್ತಿರುವ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶದಲ್ಲಿ ಏನೂ ಕುತೂಹಲವಿಲ್ಲ. ಆದರೆ ಗಾಂಧಿಯವರು ಇಲ್ಲದ ಜವಾಬ್ದಾರಿಯನ್ನು ಸ್ವತಃ ಕಲ್ಪಿಸಿಕೊಂಡು ಯಾವಪಕ್ಷದವರಿಗೂ ಬೇಡವಾಗಿರುವ ಸುಧಾರಣೆಯನ್ನು ಮಾಡಲು ಮುಂದೆ ಬಂದಿರುತ್ತಾರೆ. ಇದರಿಂದ ಅವರು ಜಾತಿಭೇದವನ್ನು ಹೆಚ್ಚುಮಾಡಿ ಹಿಂದುಗಳಲ್ಲಿಯೇ ದ್ವೇಷವನ್ನು ಹೆಚ್ಚಿಸುತ್ತಿರುವರು. ಹೆಜ್ಜೆ ಹೆಜ್ಜೆಗೂ ಏಕಮತ್ಯವನ್ನುಂಟುಮಾಡುತ್ತಿರುವುದಾಗಿ ಅವರು ತಿಳಿದಿದ್ದರೂ, ಅವರು ನಿಜವಾಗಿಯೂ ಉದ್ದಿಷ್ಟಫಲದಿಂದ ದೂರದೂರ ಹೋಗುತ್ತಿರುವರಲ್ಲದೆ, ಕ್ಷಿಪ್ರದಲ್ಲಿಯೇ ಜನರಲ್ಲಿ ದ್ವೇಷಾಗ್ನಿಯು ಮಿತಿಮೀರಿ ರಕ್ತಪಾತಾದಿ ಅನಾಹುತಗಳುಂಟಾಗದಿರುವುದಿಲ್ಲ. ಪ್ರಾರಂಭದಿಂದಲೂ ಅಹಿಂಸಾತತ್ವವನ್ನೇ ಉಪದೇಶಿಸುತ್ತಿರುವ ಗಾಂಧಿಯವರು ಅಂತ್ಯದಲ್ಲಿ ಹಿಂಸೆಗೆ ತಾನೇ ಮೂಲಕಾರಣವಾಗುವುದನ್ನು ನೋಡುವರು. ವಿದ್ಯಮಾನಗಳು ಈಗಿನಂತೆಯೇ ಮುಂದುವರಿದರೆ, ಇದರ ಫಲವು ಜಾಗ್ರತೆಯಾಗಿ ಬರುವುದರಲ್ಲಿ ಸಂದೇಹವಿಲ್ಲ. ಆದುದರಿಂದ ರಾಷ್ಟ್ರವು ಈ ವಿಪತ್ತಿನಿಂದ ಪಾರಾಗುವಂತೆ ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ.

ಶಿವದೀಕ್ಷಾ ಸಮಾರಂಭವು.

ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ೧೦೮ ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಚಂದ್ರಗಿರಿ ಮಜರಾ ಅಭಿನವಶಂಕರಪುರವೆಂಬ ಗ್ರಾಮಕ್ಕೆ ಆಳಿದ ಸಾಲಿನಲ್ಲಿ ದಯಮಾಡಿಸಿದ್ದಾಗ್ಗೆ ಭಕ್ತಾದಿಗಳ ಸದ್ಗುಣಗಳನ್ನು ಪರಾಂಬರಿಸಿ ಜೀವಿಗಳೆಲ್ಲರೂ ಶಿವದೀಕ್ಷಾಸಂಸ್ಕಾರವನ್ನು ಹೊಂದಬೇಕೆಂದು ಅಲ್ಲಿ ನೆರೆದಿದ್ದ ಮ|| ರಾ|| ಶಿವರದ ಲಿಂಗಪ್ಪನವರು, ಮಾಚಯ್ಯನವರ ಮಲ್ಲಯ್ಯನವರ ದೊಡ್ಡೇರಿ ಗಂಗಪ್ಪನವರು, ಅ|| ಮಲ್ಲಯ್ಯನವರು, ಹಮಂದಿಮಲ್ಲಯ್ಯನವರು, ವೀರಣ್ಣನವರ ಮಲ್ಲಯ್ಯನವರು ಮುಂತಾದ ಪ್ರಮುಖರಿಗೆ ಅಪ್ಪಣೆಕೊಡಿಸಿದ್ದರು. ಗುರುವಾಕ್ಯವನ್ನು ಪರಿಪಾಲಿಸಬೇಕೆಂದು ಮ|| ರಾ|| ಸಾಹುಕಾರ್ ಶಿವರದಲಿಂಗಪ್ಪನವರು ಬಹಳ ಪ್ರಯಾಸಪಟ್ಟು ವೇ|| ಮಧುಂದಿ ಸಾಲಂಕಿಮಠದ ದೊಡ್ಡರುದ್ರಯ್ಯನವರನ್ನು ಬರಮಾಡಿಕೊಂಡು ಅವರ ಕುಮಾರ ಶಿವರುದ್ರಾರಾಧ್ಯನೆಂಬ ವಟುವಿನ ಹೆಸರಿಗೆ ದೀಕ್ಷಾಮಹೋತ್ಸವ ಲಗ್ನವನ್ನು ಕ್ಲಪ್ತಯಮಾಡಿ ಸದರಿ ದೊಡ್ಡರುದ್ರಯ್ಯನವರು ಉದಾರಮನಸ್ಕರಾಗಿ ತಮ್ಮ ಬಂಧುಮಿತ್ರಮಂಡಲಿಯ ಸಮೇತ ದಯಮಾಡಿಸಿ ಮೇಲ್ಕಂಡ ಅಭಿನವಶಂಕರಪುರದಲ್ಲಿ ಶಿವರದ ಲಿಂಗಪ್ಪನವರ ಸೂತಪಗೃಹದಲ್ಲಿ ವಿಧ್ಯುಕ್ತವಾಗಿ ವೇ|| ಸಾಗ್ಗೆರೆಮಠದ ಚನ್ನಬಸವಶಾಸ್ತ್ರಿಗಳಿಂದ ಶಿವದೀಕ್ಷಾಕಾರ್ಯವನ್ನು ಭಕ್ತರಿಗೂ ಮಾಹೇಶ್ವರವಟುಗಳಿಗೂ ಸಾಂಗವಾಗಿ ನೆರವೇರಿಸಿದರು. ಈ ಲಗ್ನಕಾಲಕ್ಕೆ ದಯಮಾಡಿಸಿದ್ದ ಶ್ರೀ ಮಹಾಲಿಂಗಸ್ವಾಮಿಗಳು ವೇದಾಂತ ವಿಷಯವಾಗಿಯೂ ವೇ|| ದೊಡ್ಡೇರಿಮಠದ ಚಿಕ್ಕಪಟ್ಟಯ್ಯನವರು ಭಕ್ತಮಾಹೇಶ್ವರರ ನಡವಳಿ ವಿಷಯದಲ್ಲಿಯೂ ವೇ|| ಸಾಗ್ಗೆರೆಮಠದ ಚನ್ನಬಸವಶಾಸ್ತ್ರಿಗಳು ಶಿವದೀಕ್ಷಾ ಮತ್ತು ಗೃಹಸ್ಥಾಶ್ರಮ ಸಂಬಂಧವಾಗಿಯೂ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಜಯಘೋಷದಿಂದ ಜಗದ್ಗುರು ಪಂಚಾಚಾರ್ಯರ ಮಂಗಳದೊಡನೆ ಸಭೆಯು ಮುಕ್ತಾಯವಾಯಿತು. ಈ ಕಾರ್ಯಕ್ಕೆ ಬಹುದೂರದಿಂದ ಅನೇಕ ದೊಡ್ಡಮನುಷ್ಯರು ದಯಮಾಡಿಸಿದ್ದರು. ದೊಡ್ಡೇರಿ ಭಸ್ಮಾಂಗಿಮಠದ ವೇ|| ಚನ್ನಬಸವಶಾಸ್ತ್ರಿಗಳು ವೇ|| ಪುಳಾರದ ಕಾವರಗೆರೆ ಮಠದ ಈಶ್ವರಯ್ಯನವರು ಪುಲಮಘಟ್ಟದ ಮಠದ ವೇ|| ಚನ್ನಬಸವಾರಾಧ್ಯರು ಮುಂತಾದವರು ದಯಮಾಡಿದ್ದರು. ಸಮಾರಂಭವು ಅತಿವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಇದಕ್ಕೆ ಜಗದ್ಗುರು ಶಿವಾನಂದರಾಜೇಂದ್ರಮಹಾಸ್ವಾಮಿಗಳ ಆಶೀರ್ವಾದಬಲವೇ ಕಾರಣವಾಗಿರುತ್ತದೆ. ಇದರಂತೆ ಇತರರು ಜಗದ್ಗುರು ವಾಕ್ಯವನ್ನು ನೆರವೇರಿಸಿ ತಮ್ಮೊಳಗೆ ಗುರುಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಪ್ರತ್ಯಕ್ಷ ದರ್ಶಿ.

ಚಾಣಕ್ಯನ ಅರ್ಥಶಾಸ್ತ್ರ.

(ಲೇಖಕ—ಮ|| ಕನ್ನಡಕವಿ ಅಸ್ಥಾನವಿದ್ವಾನ್ ಆನವಟ್ಟಿ ರಾಮರಾಯರಿಂದ)

9 ನೆಯ ಅಧ್ಯಾಯ.

(ಉಪಧಾಭಿಶ್ಶೌಚಾಶೌಚಜ್ಞಾನಾಮಮಾತ್ಯಾನಾಂ)

ಎಂದರೆ ಉಪಾಧ್ಯಾಯ ಮತ್ತು ಮಂತ್ರಿ ಇವರುಗಳ ಯೋಗ್ಯತೆಯನ್ನು ಪರೀಕ್ಷಿಸುವ ಮಾರ್ಗಗಳು.

1. ಮಹಾರಾಜನು ತನ್ನ ಮುಖ್ಯಮಂತ್ರಿ ಮತ್ತು ಪುರೋಹಿತನು ಪ್ರತಿನಿತ್ಯದಲ್ಲಿಯೂ ನಡಿಸುತ್ತಿರುವ ರಾಜಕೀಯಕಾರ್ಯಗಳಲ್ಲಿ ಅಮಾತ್ಯನ ಗುಣಾತಿಶಯಗಳನ್ನು ತಿಳಿಯಬೇಕಾದರೆ ಅವನಿಗೆ ಮನೋವೈಕಲ್ಯವನ್ನುಂಟುಮಾಡುವ ಕಾರ್ಯಗಳನ್ನು ರಚಿಸಿ ಪರೀಕ್ಷಿಸಬೇಕು. ಅವು ಯಾವುವೆಂದರೆ—

1. ಧರ್ಮೋಪಧಾ.

ಎಂದರೆ ಅಮಾತ್ಯನಿಗೆ ಜಾತ್ಯಭಿಮಾನವಿರುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸತಕ್ಕ ವಿಚಾರ.

2. ಜಾತಿಭ್ರಷ್ಟನಾದವನೊಬ್ಬನಿಗೆ ವೇದಾಭ್ಯಾಸ ಮಾಡಿಸಬೇಕೆಂದಾಗಲಿ, ಅಥವಾ ಅಯೋನಿಜನೊಬ್ಬನು ಮಾಡುವ ಯಜ್ಞಕರ್ಮಗಳಲ್ಲಿ ನಿಂತು ಕಾರ್ಯಗಳನ್ನು ನೆರವೇರಿಸಬೇಕೆಂದಾಗಲಿ ಪುರೋಹಿತನಿಗೆ ರಾಜನು ಅಪ್ಪಣೆ ಮಾಡಿದಮೇಲೂ ಅವನು ತಿರಸ್ಕರಿಸುವುದಾದರೆ, ಅಂತವನನ್ನು ಮೊದಲು ಕೆಲಸದಿಂದ ನಿವೃತ್ತಿಗೊಳಿಸಬೇಕು.

3. ಅನಂತರ ಕೆಲಸವನ್ನು ಕಳೆದುಕೊಂಡ ಆ ಪುರೋಹಿತನು, ಬೇಹುಗಾರರ ಮುಖಾಂತರವಾಗಿ, ಶಾಸ್ತ್ರೀಯನಾದ ತಾನು ಒಬ್ಬ ಸ್ನೇಹಿತನೆಂಬ ವೇಷವನ್ನು ತಾಳಿಕೊಂಡು, ಪ್ರತಿಯೊಬ್ಬ ಮಂತ್ರಿಯಹತ್ತಿರಕ್ಕೆ ಹೋಗಿ—ಸ್ವಾಮಿ! ರಾಜನು ಅಯೋಗ್ಯನಾಗಿರುವಂತೆ ಕಂಡುಬರುವನು. ಇವನ ಸ್ಥಳದಲ್ಲಿ ಯೋಗ್ಯನಾದ ಮತ್ತೊಬ್ಬನನ್ನಾದರೂ ನೇಮಕಮಾಡಿಕೊಳ್ಳಬಾರದೆ? ಅಥವಾ ಈ ರಾಜನ ವಂಶೀಯರಲ್ಲಿ ಜನಿಸಿದ ಮತ್ತೊಬ್ಬನನ್ನಾದರೂ ಏರ್ಪಡಿಸೋಣವೆ? ಹಾಗಿಲ್ಲದಿದ್ದರೆ ಕಾರಾಗಾರದಲ್ಲಿ ಹಾಕಲ್ಪಟ್ಟಿರುವ ಮತ್ತೊಬ್ಬ ರಾಜನನ್ನಾದರೂ ನಿಯಮಿಸೋಣವೆ? ಅಥವಾ ನೀವೇ ರಾಜನಾದರೂ ಆಗುವಿರಾ? ಅಥವಾ ಮತ್ತೊಬ್ಬ ದುಷ್ಟಸ್ವಭಾವದವನನ್ನಾಗಲಿ ಅಥವಾ ನೀಚಸ್ಥಿತಿಯಲ್ಲಿದ್ದವನನ್ನಾಗಲಿ ಕಾರಣಾಂತರದಿಂದ ಒಳ್ಳೆಯ ಪದವಿಗೆ ಬಂದವನನ್ನಾಗಲಿ (ಔಪಾಧಿಕ) ರಾಜಸ್ಥಾನದಲ್ಲಿ ತಂದಿಡೋಣವೆ? ಎಂಬೀ ರೀತಿಯಾಗಿ ನಡೆಯುವುದು ನಮ್ಮಗಳಿಗೆಲ್ಲಾ ತುಂಬ ತೃಪ್ತಿಕರವಾಗಿರುವುದು. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು" ಎಂದು ಪ್ರಶ್ನೆ ಕೇಳಬೇಕು. ಇವುಗಳನ್ನು ಕೇಳಿ ಆ ಅಮಾತ್ಯನು ಏನು ಅಭಿಪ್ರಾಯಕೊಡುವನೋ ಎಂಬುದನ್ನು ತಿಳಿಯಲು ಪ್ರಶ್ನೆ ಮಾಡಿದಮೇಲೆ, ಮಂತ್ರಿಗಳಲ್ಲಿ ಒಬ್ಬನಾಗಲಿ, ಅಥವಾ ಎಲ್ಲರೂ ಈ ವಿಷಯಗಳನ್ನು ನಿರಾಕರಿಸುವಪಕ್ಷಕ್ಕೆ ಆ ಮಂತ್ರಿಗಳೆಲ್ಲರೂ ನಿರ್ಮಲಚಿತ್ತರೆಂದೇ ಭಾವಿಸಬೇಕು. ಈ ವಿಧವಾದ ರೀತಿಯಿಂದ ಅವರ ಮನೋಭಿಪ್ರಾಯಗಳನ್ನು ತಿಳಿದುಕೊಳ್ಳುವ ಮಾರ್ಗಕ್ಕೆ ಮತಾಶಾಪ್ರೇರಕ ತಂತ್ರವೆಂದು ತಿಳಿಯಬೇಕು.

2. ಅರ್ಥೋಪಧಾ.

ಎಂದರೆ ದ್ರವ್ಯಾಶೆಯನ್ನು ತೋರಿಸಿ ಯೋಗ್ಯತೆಯನ್ನು ಪರೀಕ್ಷಿಸತಕ್ಕ ಮಾರ್ಗವೆಂದರ್ಥ.

4. ರಾಜನ ಬೇಹುಗಾರನೊಬ್ಬನು, ಅನ್ಯಾಯಮಾರ್ಗದಲ್ಲಿ ವರ್ತಿಸುತ್ತಿರುವನೆಂದು ತಿಳಿದುಬಂದುದರಿಂದ ಕೆಲಸದಿಂದ ನಿವರ್ತನಾದ, ಒಬ್ಬಾನೊಬ್ಬ ಸೈನ್ಯಾಧಿಪತಿಯು ಪೂರ್ವಸ್ನೇಹಿತನೆಂಬ ಭ್ರಾಂತಿ ಹುಟ್ಟಿಸುವ ವೇಷವನ್ನಳವಡಿಸಿಕೊಂಡು, ಪ್ರತಿಯೊಬ್ಬ ಮಂತ್ರಿಯ ಹತ್ತಿರಕ್ಕೆ ಹೋಗಿ "ಸ್ವಾಮಿ! ಅಪಾರವಾದ ಹಣವು ನಮ್ಮ ಕರಗತವಾಗಿರುವ ಸಮಯಬಂದಿದೆ. ಈಗ ನಾವು ಏತಕ್ಕೆ ರಾಜನನ್ನು ಕೊಂದುಹಾಕಬಾರದು? ಈ ಕಾರ್ಯವು ನಮ್ಮಗಳಿಗೆಲ್ಲಾ ಒಪ್ಪಿತವಾಗಿದೆ. ಏಕೆ ಪ್ರಯತ್ನ ಮಾಡಬಾರದು?" ಎಂದು ಪ್ರಶ್ನೆಹಾಕಬೇಕು.

5. ಇಂತಹ ಸಂದರ್ಭದಲ್ಲಿ ಅವರು ನಿರಾಕರಿಸಿ, ದ್ರವ್ಯಾಶಾವಿದೂರರಾಗಿದ್ದರೆ, ಅವರು ಯೋಗ್ಯರೆಂದು ತಿಳಿಯಬೇಕು. ಇದಕ್ಕೆ ದ್ರವ್ಯಾಶಾಪ್ರೇರಣೆಯೆಂದು ಹೇಳಬೇಕು.

3. ಕಾಮೋಪಧಾ.

ಎಂದರೆ ಸ್ತ್ರೀವ್ಯಾಮೋಹವನ್ನು ತೋರಿಸಿ ಯೋಗ್ಯತೆಯನ್ನು ಕಂಡುಹಿಡಿದುಕೊಳ್ಳುವ ಮಾರ್ಗವೆಂದು ತಿಳಿಯಬೇಕು.

6. ರಾಜಾಂತಃಪುರದಲ್ಲಿದ್ದು ಚತುರೆಯಾದ ಗೂಢಚಾರಳೊಬ್ಬಳು ಸನ್ಯಾಸಿನೀವೇಷವನ್ನು ಧರಿಸಿ ಪ್ರತಿಯೊಬ್ಬ ಮಂತ್ರಿಯ ಹತ್ತಿರಕ್ಕೆ ಹೋಗಿ—"ಸ್ವಾಮಿ! ಮಹಾರಾಣಿಯು ನಿಮ್ಮಲ್ಲಿ ವಿಶೇಷ ಅನುರಾಗವುಳ್ಳವಳಾಗಿದ್ದಾಳೆ. ಆಕೆಯು ತಮ್ಮ ಆಗಮನಕ್ಕಾಗಿ ಅಂತಃಪುರಕ್ಕೆ ಬರಮಾಡಿಕೊಳ್ಳಲು ಪ್ರತ್ಯೇಕಮಾರ್ಗವನ್ನೇ ಏರ್ಪಡಿಸಿಕೊಂಡಿರುವಳು. ತಾವು ಹೀಗೆ ಮಾಡುವುದರಿಂದ ತಮಗೆ ವಿಶೇಷ ಐಶ್ವರ್ಯವು ಲಭಿಸುವುದಲ್ಲವೆ? ಎಂಬದಾಗಿ ಪ್ರಶ್ನೆಮಾಡಬೇಕು. ಅವರು ಈ ವಿಷಯದಲ್ಲಿ ವಿಮುಖರಾಗುವುದಾದರೆ ಅವರು ಯೋಗ್ಯರೆಂದು ಭಾವಿಸಬೇಕು. ಇದಕ್ಕೆ ಸ್ತ್ರೀವ್ಯಾಮೋಹಪರೀಕ್ಷೆಯೆಂದು ಹೆಸರು.

5. ಭಯೋಪಧಾ.

ಎಂದರೆ ಭಯವನ್ನು ಹುಟ್ಟಿಸಿ ಯೋಗ್ಯತೆಯನ್ನರಿಯುವ ವಿಧಾನ.

7. ಮಂತ್ರಿಗಳಲ್ಲಿ ಒಬ್ಬನು ಒಂದು ಯಾಗಮಾಡಬೇಕೆಂಬ ಯೋಚನೆ ಮಾಡಿಕೊಂಡು ಇತರ ಮಂತ್ರಿಗಳೂ ತನ್ನಂತೆಯೇ ಅನುಮತಿಸುವರೋ ಇಲ್ಲವೋ ನೋಡೋಣವೆಂದು ಅವರಿಗೆ ಪ್ರೇರಣೆ ಮಾಡಬೇಕು. ರಾಜನು ತನಗಾವುದೋ ಒಂದು ಅಪಾಯವುಂಟಾದೀತೆಂಬ ಭೀತಿಯಿಂದ ಮಂತ್ರಿಗಳನ್ನೆಲ್ಲಾ ನಿರ್ಬಂಧದಲ್ಲಿಡುವುದು. ಇಂತಹ ಸಂದರ್ಭದಲ್ಲಿ ರಾಜನ ಸಹಾಧ್ಯಾಯಿಯಾಗಿದ್ದ ಬೇಹುಗಾರನೊಬ್ಬನು ಬಂದು ಮಂತ್ರಿಗಳನ್ನು ಕುರಿತು—"ಸ್ವಾಮಿ! ನಾನು ರಾಜನ ಸ್ನೇಹಿತನಾಗಿದ್ದರೂ ಅವನು ನನ್ನನ್ನು ಕಾರಾಗೃಹಪ್ರವೇಶ ಮಾಡಿಸಿರುವನು. ಈ ರೀತಿ ನಮ್ಮಗಳ ಘನತೆಯನ್ನು ಹಾಳುಮಾಡಿಸಿ, ಐಶ್ವರ್ಯವನ್ನೆಲ್ಲಾ ಸುಲಿಗೆಸೇವೆಮಾಡಿಸಿ ಬಿಟ್ಟಾನು. ಆದುದರಿಂದ ರಾಜನು ಅಜ್ಞಾನಮಾರ್ಗವನ್ನು ಹಿಡಿದಿರುವನು. ಈಗ ನಾವೆಲ್ಲಾ ಸೇರಿ, ರಾಜನನ್ನು ಕೊಂದುಹಾಕಿ, ಅವನಸ್ಥಾನದಲ್ಲಿ ಮತ್ತೊಬ್ಬನನ್ನು ಏರ್ಪಡಿಸೋಣ, ಇದು ನಿಮ್ಮೆಲ್ಲರಿಗೂ ಇಷ್ಟವೆ? ಎಂದು ಪ್ರಶ್ನೆಹಾಕಬೇಕು. ಮಂತ್ರಿಗಳೆಲ್ಲಾ ಇವನ ಅಭಿಪ್ರಾಯವು ಅಸಂಗತವೆಂದು ತಿಳಿದು ಒಪ್ಪದೆ ಹೋಗುವುದಾದರೆ ಅವರು ಯೋಗ್ಯರೆಂದು ಭಾವಿಸಬೇಕು. ಇದಕ್ಕೆ ಭಯೋಪಧಾ ಎಂದು ಹೆಸರು.

ಈ ರೀತಿಯಾಗಿ ಪರೀಕ್ಷಿಸಲ್ಪಟ್ಟ ಮಂತ್ರಿಗಳಲ್ಲಿ ಜಾತ್ಯಾಸಕ್ತಿಯುಳ್ಳ ಮಂತ್ರಿಯನ್ನು ಸಿವಿಲ್ ಮತ್ತು ಕ್ರಿಮಿನಲ್ (ಧರ್ಮಸ್ಥಿತಿ ಯರ್ಾಕಂಟಕಶೋಧನೇಷು) ಪದವಿಯ ಕೋರ್ಟಿನಲ್ಲಿ ಏರ್ಪಡಿಸಬೇಕು. ದ್ರವ್ಯಾಭಿಲಾಷಾವಿದೂರನೆಂದು ತಿಳಿಯಬಂದವನನ್ನು ಅಂತಃಪುರದ ಅಧಿಕಾರವನ್ನು ಮತ್ತು ರಾಜಾದಾಯದ ವಿಚಾರಕರ್ತನನ್ನಾಗಿ ನೇಮಕಮಾಡಬೇಕು. ಕಾಮಾಸಕ್ತನಲ್ಲದೆ ನಿಷ್ಕಳಂಕನೆಂದು ತೋರಿಬಂದವನನ್ನು ರಾಜನ ಅಂತಃಪುರ ಮತ್ತು ವಿಹಾರ ಸ್ಥಾನಗಳ ಅಧಿಕಾರಿಯನ್ನಾಗಿ ಏರ್ಪಡಿಸಬೇಕು. ಭೀತಿ ಹುಟ್ಟಿಸಿದ್ದರಿಂದ ಮನೋವಿಕಲತೆಹೊಂದಲಿಲ್ಲವೆಂದು ತೋರಿಬಂದವರನ್ನು ತನ್ನ ಸಮೀಪದಲ್ಲಿರುವ ಸೇವೆಗಳಲ್ಲಿ ಏರ್ಪಡಿಸಬೇಕು.

9. ಎಲ್ಲಾ ವಿಧವಾದ ಮಾರ್ಗಗಳಲ್ಲಿಯೂ ಪರೀಕ್ಷಿಸಲ್ಪಟ್ಟು ಯೋಗ್ಯನೆಂದರಿತವನನ್ನು ಮಂತ್ರಿಪದವಿಗೆ ಯೋಗ್ಯನೆಂದು ತಿಳಿದು ಆ ಪದವಿಗೆ ನಿಯಾಮಕಮಾಡಬೇಕು. ಮೊದಲು ಹೇಳಿದ ಮಾರ್ಗಗಳಲ್ಲಿ ಒಂದರಲ್ಲಾಗಲಿ ಅಥವಾ ಮಿಕ್ಕವುಗಳಲ್ಲಾಗಲಿ ಅಯೋಗ್ಯನೆಂದು ತಿಳಿದುಬಂದವರನ್ನೆಲ್ಲಾ ಗಣಿಗಳಲ್ಲಿಯೂ, ವನ ಮತ್ತು ಆನೆಯ ಕಾಡುಗಳಲ್ಲಿಯೂ, ಮತ್ತು ಕೈಗಾರಿಕೆಯು ನಡೆಯುವ ಸ್ಥಳಗಳಲ್ಲಿಯೂ ನೇಮಕಮಾಡಬೇಕು.

10. ಯಾರುಯಾರು ಯಾವಯಾವದರಲ್ಲಿ ಅಂದರೆ, ಮತ, ಐಶ್ವರ್ಯ, ಅನುರಾಗಗಳಲ್ಲಿ ಪರೀಕ್ಷಿಸಲ್ಪಟ್ಟವರನ್ನು ಅವರವರ ಯೋಗ್ಯತಾನುಸಾರವಾದ ರೀತಿಯಿಂದ ಕಾಗದಪತ್ರಗಳನ್ನು ನಡಿಸುವ ಕಾರ್ಯಗಳಲ್ಲಿ ನಿಯಾಮಕಮಾಡಬೇಕೆಂದು ಬುದ್ಧಿವಂತರು ಮೊದಲೇ ತೀರ್ಮಾನಿಸಿರುವರು.

11. ಚಾಣಕ್ಯನು ಮೇಲೆ ಹೇಳಿದಂತೆ ಮಂತ್ರಿಗಳ ಯೋಗ್ಯತೆಗಳನ್ನು ಪರೀಕ್ಷಿಸಬೇಕೆಂದು, ರಾಜನು ತನ್ನನ್ನಾಗಲಿ ಅಥವಾ ಮಹಾರಾಣಿಯು ಯೋಗ್ಯತೆಯನ್ನಾಗಲಿ ಈ ರೀತಿಯಾಗಿ ಪರೀಕ್ಷಿಸಬೇಕೆಂದು ಎಂದಿಗೂ ಅಭಿಪ್ರಾಯಪಡುವುದಿಲ್ಲ. ಏಕೆಂದರೆ, ನಿಷ್ಕಳಂಕರಾದವರನ್ನು ನಮ್ಮ ಪ್ರಯತ್ನದಿಂದ ಕಳಂಕಿಗಳನ್ನಾಗಿ ನಾವಾಗಿಯೇ ಮಾಡಿದಂತಾಗುವುದರಿಂದ ನಿರ್ಮಲವಾದ ವರಿಗೆ ವಿಷಬೆರಸಿದಂತಾಗುವುದೆಂದು ಖಂಡಿತವಾಗಿ ಹೇಳುವನು.

ಒಂದೊಂದುವೇಳೆ ನಿಶ್ಚಿತವಾದ ರೋಗಕ್ಕೆ ತಕ್ಕ ಔಷಧವನ್ನು ಪ್ರಯೋಗಮಾಡಿದರೂ ಗುಣವು ಕಾಣದಂತಾಗುವ ಸಂದರ್ಭದಲ್ಲಿ ಅಂದರೆ—ಮೇಲೆ ಹೇಳಿದ ನಾನಾ ಮಾರ್ಗಗಳಿಂದ ಒಂದುವೇಳೆ ಜಿತವಾಗಿದ್ದ ಮನುಷ್ಯನಾದರೂ ಚಾಂಚಲ್ಯಕ್ಕೆಡೆಗೈಸಿ, ನಾವೇ ವ್ಯತ್ಯಾಸಹೊಂದಿಸಿದ ಮೇಲೆ, ಪೂರ್ವಭಾವಿಯುಳ್ಳದ್ದ ಮನಸ್ಸು ಪೂರ್ವಸ್ಥಿತಿಗೆ ಬಾರದೇ ಇದ್ದರೂ ಇರಬಹುದು. ಇದಕ್ಕಾಗಿ ಅಸಂಗತವಾದ ಮಾರ್ಗಪ್ರಯೋಗವೇ ತಪ್ಪೆಂದು ಸ್ಥಿರಪಟ್ಟಂತಾಗುವುದು.

13. ಹೀಗೆ ಮಾಡುವುದಕ್ಕೆ ಪ್ರತಿಯಾಗಿ ನಾಲ್ಕು ವಿಧವಾದ ಮಾರ್ಗಗಳಲ್ಲಿಯೂ ಬೇಹುಗಾರರ ಮೂಲಕ ಮಾನವನ ಯೋಗ್ಯತೆಗಳನ್ನರಿತು ತಕ್ಕ ಪದವಿಗಳನ್ನು ಕೊಡುವುದೇ ಸಂಗತವೆಂದು ತೋರಿಬರುವುದು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ.| 19

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 27

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ

ವೀರಶೈವ ಮಾಡರ್ನ ಹೋಟಲ್

ನಂ. 8, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನೂತನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (2)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ ಪ್ರೊಪ್ರೈಟರ್.

ಮಲೇರಿಯಾಕ್ಕೆ
ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಖಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14. ½ ಡಜನ್ 8-8-0 ಮತ್ತು ರೂ. 5

ರ್‍ಹುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶನೋವು, ಗಂಟಲುನೋವು ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವ ಕಡಿತ, ಗಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿಲಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕಾಮದ್ದುಗಳು, ಹೊಮ್ಯೊಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುಳಮೇಯುವ ರೋಗ, ದದ್ದು, ತುರಸುವ ನಂಜಿ ಹುಣ್ಣುಗಳನ್ನು ಕಲ್ಪ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವಿ ಕುಹನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮುದುಳು ಕಾಯಗಳು ಜಸ್ತೇಜಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಅತ್ಯಸಂದರ್ಭ ಕವನಂತೆಯೇ ಯುವಕನಾಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರ:— ಮಲೇರಿಯಾನ ಕಂಪೆನಿ,

[28] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (18)

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್,

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ಸಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಛಾಯಾಸಹಿತ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಪಂಚ ಪೀಠಾಧೀಶರಾದ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೨. ವಿ. ಪಿ. ೦-೪-೨

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[10] ಪೋ. ಬಾ. ೫೧೦, ಮದರಾಸು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯೋ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಮಾರ್ಚಿ ೧೯೩೪ [ಸಂಚಿಕೆ ೪೮

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಕಲಿಯುಗದ-ಮಹಾತ್ಮರು.

ಬರೆದವ—ದೈವಜ್ಞ ವಿನೋದ.

ಮೊದಲೇ ಕಲಿಕಲ್ಮಷದಿಂದ ಸನಾತನಧರ್ಮವೃಕ್ಷದ ಮೂಲಕ್ಕೆ ಹುಳಹತ್ತಿರುವಾಗ ಗಾಂಧಿಯವರು ಅದನ್ನು ಕತ್ತರಿಸಿ ಹಾಕಲು ಕಸ್ತ್ರವೆತ್ತಿರುವದು ಅತ್ಯಂತ ವಿಷಾದದ ಸಂಗತಿಯಾಗಿದೆ. ಆದರೆ ಅವರು ಸನಾತನಧರ್ಮವು ಯಾರಿಂದಲೂ ನಾಶವಾಗದಷ್ಟು ಭಾರತೀಯ ಭೂಮಿಯನ್ನೆಲ್ಲ ವ್ಯಾಪಿಸಿ ಬೇರುಬಿಟ್ಟಿರುವದೆಂದು ದಿಟವಾಗಿ ನಂಬಲಿ. ಇಷ್ಟೇ ಅಲ್ಲ; ಈ ನಮ್ಮ ಸನಾತನಧರ್ಮವು ಸಮಸ್ತ ಭೂಭಾಗವನ್ನೆಲ್ಲಾ ಎತ್ತಿ ಹಿಡಿದಿರುವದು. ಗಾಂಧಿಯವರ ಕುಂಟಬೇಷ್ಟಿಗೆ ಕಮರುವಂಥ ಹೇಡಿಯಾದ ಸನಾತನಧರ್ಮವಲ್ಲ. ಅಲಾಘ್ಯವಾದ ಈ ಧರ್ಮಧ್ವಜವನ್ನು ಎತ್ತಿಹಿಡಿಯುವ ಸನಾತನಿಗಳು ಜಾಗ್ರತರಾಗಿದ್ದಾರೆ. ಸನಾತನಿಗಳು ಸೌಮ್ಯವಾದಿಗಳಾದರೂ ತಮ್ಮ ಧರ್ಮದ ಮೇಲೆ ಬರುತ್ತಲಿರುವ ವಿಪತ್ಪರಂಪರೆಗಳನ್ನು ಪರಿಹರಿಸಲು ಉಗ್ರವಾದಿಗಳಾಗಿದ್ದಾರೆ. ಗಾಂಧಿಯವರು ಭಾರತದೇಶದಲ್ಲಿ ಎಂದೂ ಇಲ್ಲದಿರುವ ಕೆಟ್ಟ ಚಳವಳಿಯನ್ನೆಬ್ಬಿಸಿರುತ್ತಾರೆ. ಈ ಮಹಾನುಭಾವರ ಅಮಂಗಲಮಹೋತ್ಸವಕ್ಕೆ ನಮ್ಮ ಕರ್ನಾಟಕದಲ್ಲಿ ಮಂಗಳಾರತಿಯು ಚನ್ನಾಗಿ ಆಯಿತು. ಕನ್ನಡನಾಡಿನ ಅಸ್ಪೃಶ್ಯರೇ 'ಛೀ' ಹಾಕಿ ಕಳುಹಿಸಿದರು. ಅಸ್ಪೃಶ್ಯರ ಹೊಲೆತನವನ್ನು ಕಳೆಯುವದನ್ನು ಬಿಟ್ಟು ಊರವರನ್ನು ಈಗಲೇ ಹೊಲೆಗೇರಿಗೆ ಹೋಗಿಸುವ ಈ ಗಾಂಧೀಜನ ಬೆನ್ನುಹತ್ತಿದರೆ ನಾಳೆಗೆ ನಾವು ಊರೊಳಗೆ ಹೋಗಿ ರೊಟ್ಟಿಯ ತುಣುಕನ್ನು ಕಾಣಲಾರೆವು" ಎಂದು ಅಸ್ಪೃಶ್ಯರು ಗುಣುಗುಟ್ಟಿದರು. ಕನ್ನಡನಾಡಿನಲ್ಲಿರುವ ಅಸ್ಪೃಶ್ಯರ ಹಿತಾಹಿತಗಳನ್ನು ಲೆಕ್ಕಿಸದೆ ಕನ್ನಡನಾಡಿನ ಸಹಸ್ರಗಟ್ಟಲೆ ದುಡ್ಡಿನರಾಶಿಯನ್ನು ಸೆಳೆದೊಯ್ದು ಇಲ್ಲಿಯವರಿಗೆ ಕವಡೆಯಷ್ಟು ಸಹಾಯಮಾಡದೆ ಹೊರಟುಹೋದ ಗಾಂಧಿಯವರ ಅಂತರ್ಯವೇನಿರುವದೋ ತಿಳಿಯದು. ಭಾರತಾಂಬೆಯ ಪಾರತಂತ್ರ್ಯದ ಪಾಶವನ್ನು ಕತ್ತರಿಸಿ ಹಾಕಲು ಸಿದ್ಧರಾದ ಗಾಂಧಿಯವರೆತ್ತ? ಈಗಿನ ಊರುಹೊಲೆಗೇರಿಯನ್ನು ಒಂದು ಮಾಡುವೆನೆಂಬ ಸನಾತನಧರ್ಮವಿರೋಧಿಗಳಾದ ಗಾಂಧಿಯವರೆತ್ತ? ಭಾರತಮಾತೆಯ ದುರದೃಷ್ಟವು ಗಾಂಧಿಯವರಿಂದಲೇ ಪರಿಹಾರವಾಗುವದೆಂದು ಸನಾತನಧರ್ಮನಿಷ್ಠರಾದ ಭಾರತೀಯರಲ್ಲಿದ್ದ ನಂಬಿಗೆಯು ಇಂದು ಹಾರಿಹೋಯಿತು. ಗಾಂಧಿಯವರ ಸತ್ಯಾಗ್ರಹ ಸಮರವಾರ್ತೆಯು ತಿರುಕನ ಕನಸಿನಂತಾಯಿತು. ನಲವತ್ತು ವರುಷಗಳಿಂದ ಬೆಳೆದುಬಂದು ಪರಿಪುಷ್ಟವಾದ ಕಾಂಗ್ರೆಸ್ಸು ಗಾಂಧಿಯವರ ಮುಂದಾಳುತನದಲ್ಲಿ ಮರಣಹೊಂದಿತು. ಅರವತ್ತು ವರುಷದ ಮೇಲೆ ಅರಿವು ಮರೆಯಾಗುವದೆಂಬ ನಾಣ್ಣುಡಿಯನ್ನು ಗಾಂಧಿಯವರೊಬ್ಬರು ಸಾರ್ಥಕಗೊಳಿಸಿಕೊಂಡರು. ನಮ್ಮ ಕನ್ನಡನಾಡಿನಲ್ಲಿಯೂ ಓರ್ವವೇಷಧಾರಿಯು ಗಾಂಧಿಯವರಂತೆ ಕುಣಿಯುತ್ತಲಿರುವನು. ಇವನು ತನ್ನ ನಿಜರೂಪವನ್ನು ಕೆಡಹಿದ ಪ್ರಾಂತವನ್ನು ಬಿಟ್ಟು ಅನ್ಯಪ್ರಾಂತದಲ್ಲಿ ತಿರುಗುತ್ತಲಿರುವನು. ಗಾಂಧಿಯವರ ವೇಷಕ್ಕೆ ಮರುಳಾಗಿ ತಾಳವನ್ನು ಹಿಡಿಯುವದರಲ್ಲಿ ಒಂದು ರೀತಿಯ ಲಾಭವಿದೆ. ಅಸ್ಪೃಶ್ಯರ ಫಂಡಿಗೆ ಸೇರುವ ಹಣದಲ್ಲಿ ಮಧ್ಯದಲ್ಲಿ ಕತ್ತರಿಸಿ ಹಾಕುವದು ಅನಾಯಾಸವಾಗಿ ದೊರೆಯುವದು. ಕರ್ನಾಟಕದಲ್ಲಿ ಈ ರೀತಿ ಮಾಡಿದ ಉದಾಹರಣೆಗಳು ಬೇಕಾದಷ್ಟು ದೊರೆಯುತ್ತವೆ. ಕರ್ನಾಟಕ ಪ್ರವಾಸವನ್ನು ತೀವ್ರ ಮುಗಿಸಿದ ಗಾಂಧಿಯವರು ಮುಂದೆ ಯಾವ ವೇಷವನ್ನು ಹಾಕುವರೋ ನಿರೀಕ್ಷಿಸಬೇಕಾಗಿದೆ.

ಹೊಸದೆಹಲಿಯ ಮುನಸಿಪಾಲಿಟಿಯವರು ಪ್ರತಿಯೊಂದು ಎಮ್ಮೆಗೆ 5 ರೂಪಾಯಿ ತೆರಿಗೆಯನ್ನು ಹಾಕಿರುತ್ತಾರೆ. ಇದರಿಂದ ಅಲ್ಲಿಯ ಗೌಳಿಗರೆಲ್ಲರೂ ಒಟ್ಟುಗೂಡಿ 15 ದಿವಸಗಳೊಳಗಾಗಿ ಮೇಲ್ಕಂಡ ತೆರಿಗೆಯನ್ನು ವಜಾಮಾಡದಿದ್ದರೆ ತಾವ್ಯಾರೂ ಹಾಲನ್ನು ಮಾರುವದಿಲ್ಲವೆಂದೂ, ಹಾಲನ್ನು ಕರೆಯುವದೂ ಇಲ್ಲವೆಂದೂ ಮುನಿಸಿಪಾಲಿಟಿಗೆ ನೋಟೀಸನ್ನು ಕೊಟ್ಟಿರುವರು. ಇದರಿಂದ ಆ ಊರಲ್ಲಿ ಹಾಲಿನಕ್ಷಾಮವೆಲ್ಲಿ ಬರುವುದೋ ಎಂದು ಜನರು ಆಲೋಚಿಸುತ್ತಿರುವರು.

ಸ್ವೀಕಾರ

ಧಾರವಾಡ ಡಿ|| ಹಾವೇರಿಯಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ನಡುವಿನಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಅನಂತಪುರ ಡಿ|| ಗೂಳಪಾಳ್ಯಗ್ರಾಮದ ಪಾಟೀಲ ದೊಡ್ಡರಾಚನಗೌಡರು ನೂತನ ಗೃಹವನ್ನು ಕಟ್ಟಿಸಿ ಅದರ ಪ್ರವೇಶೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2ರೂ. ಗಳು ವೇ|| ಕೊಂಡಕುಂದಿ ಶಿಲಾಮಠದ ಶಿವಯೋಗೀಶ್ವರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪುರ ಡಿ|| ಧೋತ್ರಿಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವಸಮಯದಲ್ಲಿ ಸಮರ್ಪಿಸಿದ 1 ರೂ. ಯು ಮ|| ರಾ|| ರೇವಣಸಿದ್ಧ ಭೋಜಪ್ಪ ಪಾಟೀಲ ಇವರ ದ್ವಾರಾ ತಲ್ಪಿರುತ್ತದೆ.

ಅರಸಿಕೆರೆ ತಾ|| ದಿಬ್ಬೂರುಗ್ರಾಮದ ಮ|| ರಾ|| ಚನ್ನಬಸವೇಗೌಡರ ಮಕ್ಕಳು ಲಿಂಗಪ್ಪನವರಿಗೆ ಗರುಗದಹಳ್ಳಿ ಮ|| ರಾ|| ಬುದ್ಧಿವಂತ ಕಲ್ಲಪ್ಪನವರ ಪುತ್ರಿ ಚಿ|| ಸೌ|| ಸಂಜಮ್ಮನನ್ನು ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ಮ|| ರಾ|| ಗರುಗದಹಳ್ಳಿ ಜಿ. ಎಂ. ರಾಮಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನೂತನ ವಿಮಾನ ನಿರ್ಮಾಣ !

ರಷ್ಯಾದೇಶದಲ್ಲಿ 99 ಅಡಿ ಉದ್ದವಾಗಿದ್ದು 207 ಅಡಿ ಉದ್ದವಾದ ರೆಕ್ಕೆಗಳುಳ್ಳ ಒಂದು ಅದ್ಭುತ ವಿಮಾನವು ತಯಾರಿಸಲ್ಪಟ್ಟಿರುವದು. ಅದರಲ್ಲಿ 60 ಜನರು ಕುಳಿತುಕೊಳ್ಳಬಹುದಲ್ಲದೆ, ಪ್ರಯಾಣಿಕರ ಮನೋರಂಜನೆಗಾಗಿ ಒಂದು ಸಣ್ಣ ನಾಟಕಶಾಲೆಯೂ, ಒಂದು ಸಣ್ಣ ಚಲನಚಿತ್ರಪ್ರದರ್ಶನವೂ, ವಿದ್ಯುದ್ಯಂತ್ರಗಳೂ, ವೃತ್ತಪತ್ರಿಕೆಗಳನ್ನು ತಯಾರಿಸುವ ಸಲುವಾಗಿ ಒಂದು ಮುದ್ರಾಯಂತ್ರವೂ, ಟೆಲಿಫೋನ್ ಮತ್ತು ರೇಡಿಯೋ ಯಂತ್ರಗಳೂ ಇಡಲ್ಪಟ್ಟಿರುವವು. ಇದು ಗಂಟೆಗೆ 150 ಮೈಲುಗಳ ದೂರ ಪ್ರಯಾಣಮಾಡುವದು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವ್ಯಾಯಾಮ.

(ಲೇ|| ವಾಗೀಶಶಿವಾಚಾರ್ಯ ಬೃಹನ್ಮಠ, ಮುದೇನೂರು ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲ ಕಾಶೀಕ್ಷೇತ್ರ.)

ಶರೀರೋಪಚಯಃಕಾಂತಿರ್ಗಾತ್ರಾಣಾಂ ಸುವಿಭಕ್ತತಾ |
ದೀಪ್ತಾಗ್ನಿತ್ವಮನಾಲಸ್ಯಂ ಸ್ಥಿರತ್ವಂ ಲಾಘವಂ ಮೃಜಾ ||
ಶ್ರಮಕ್ಲಮಪಿಪಾಸೋಷ್ಣಶೀತಾದೀನಾಂಸಹಿಷ್ಣುತಾ |
ಆರೋಗ್ಯಂಚಾಪಿಪರಮಂ ವ್ಯಾಯಾಮಾದುಪಜಾಯತೇ ||
(ಸುಶ್ರುತಸಂಹಿತಾ)

ವ್ಯಾಯಾಮದಿಂದ ಶರೀರದಕಾಂತಿಯು ಹೆಚ್ಚುತ್ತದೆ, ಮೈಕಟ್ಟು ಅಂದವಾಗುತ್ತದೆ, ಜಠರಾಗ್ನಿಯು ವೃದ್ಧಿಹೊಂದುತ್ತದೆ, ಆಲಸ್ಯವು ದೂರಾಗುತ್ತದೆ, ಚಿತ್ತವು ಸ್ಥಿರವಾಗುತ್ತದೆ, ಶರೀರವು ಹಗುರವಾಗುತ್ತದೆ, ರೋಗವು ನಾಶವಾಗುತ್ತದೆ; ಮತ್ತು ಶ್ರಮ, ಸಂತಾಪ, ಉಷ್ಣ, ಶೀತ, ತೃಷೆ ಮುಂತಾದವುಗಳನ್ನು ಸಹಿಸಮಾಡುವಶಕ್ತಿಯೂ, ಆರೋಗ್ಯವೂ ಉಂಟಾಗುತ್ತವೆ.

ನಮ್ಮ ದೇಶದ ಜನರು ವ್ಯಾಯಾಮದ ಮಹತ್ವವನ್ನು ಪ್ರಾಯಃ ಅರಿತವರಾಗಿದ್ದಾರೆ. ಪೂರ್ವಕಾಲದಲ್ಲಿ ಹಿಂದೂ ಜನಾಂಗವು ಇದರಿಂದ ಅತ್ಯಧಿಕಲಾಭವನ್ನು ಸಂಪಾದಿಸಿದ್ದಿತು. ಈಗಲೂ ಕೂಡ ಎಷ್ಟೋಜನರು ಒಂದಿಲ್ಲೊಂದು ಬಗೆಯಾದ ವ್ಯಾಯಾಮವನ್ನು ಮಾಡುತ್ತಿರುವುದು ಕಂಡುಬರುತ್ತಿದೆ. ವ್ಯಾಯಾಮದಿಂದ ಅಶಕ್ತರೂ ಕೂಡ ಶಕ್ತಿವಂತರಾಗುವರು.

ವ್ಯಾಯಾಮಕ್ಕೊಂದು ನಿಯಮವಿರಬೇಕು. ಅಂಗಪ್ರತ್ಯಂಗಗಳ ಯಾವವ್ಯವಹಾರದಿಂದ ಶರೀರದ ಧೃಡತೆಯೂ, ಬಲವೂ ಬೆಳೆಯುವವೋ ಅದಕ್ಕೆ ವ್ಯಾಯಾಮವೆನ್ನುತ್ತಾರೆ. ಇದನ್ನು ನಿಯಮಪೂರ್ವಕವಾಗಿ ನಿತ್ಯವೂ ಆಚರಿಸಬೇಕು. ಇದರಿಂದ ದೇಹದಲ್ಲಿ ಚಟುವಟಿಕೆ, ಕೆಲಸಮಾಡುವಸಾಮರ್ಥ್ಯ, ಸ್ಥೈರ್ಯ, ಸಹನಶಕ್ತಿಗಳು ಬಲಿಯುವವು. ಮತ್ತು ವಾತಪಿತ್ತಶ್ಲೇಷ್ಮಗಳಿಂದುಂಟಾಗುವ ದೋಷಗಳು ನಾಶವಾಗಿ ಪಾಚಕಶಕ್ತಿಯು ವೃದ್ಧಿಹೊಂದುವುದು. ಯಾವವ್ಯಾಯಾಮದಿಂದ ಶಿಥಿಲತೆ, ಕ್ಷೀಣತೆ, ತೃಷೆಗಳೂ, ಶ್ವಾಸ, ಕಾಸ, ಜ್ವರಗಳೂ ಉತ್ಪನ್ನವಾಗುವವೋ ಅಂತಹ ವ್ಯಾಯಾಮವನ್ನು ಎಂದೂ ಮಾಡಬಾರದು.

ಈ ಕಾಲದಲ್ಲಿ ಅನೇಕವ್ಯಾಯಾಮಗಳು ಪ್ರಚಾರದಲ್ಲಿವೆ. ಆದರೆ ಅವುಗಳಲ್ಲೆಲ್ಲಾ ಸ್ವದೇಶೀಯ ವ್ಯಾಯಾಮವೇ ಉತ್ತಮವಾದುದು. ಸ್ವದೇಶೀಯ ವ್ಯಾಯಾಮಗಳಿಗೆ ಸಂಬಂಧಪಟ್ಟವುಗಳಲ್ಲಿ ಸಾಮು, ದಂಡೇಳುವುದು, ಲೋಡುತಿರುವುದು, ಮಲ್ಲಗಂಬವನ್ನೇರುವುದು, ಓಡುವುದು, ಕುಸ್ತಿಯಾಡುವುದು ಇವೇ ಮುಂತಾದವುಗಳು ಮುಖ್ಯವಾದವುಗಳು. ವೀರ್ಯರಕ್ಷಣೆಗೆ ವ್ಯಾಯಾಮವು ಅತ್ಯುತ್ತಮವಾದ ಉಪಾಯವು. ಯಾವನು ವೀರ್ಯರಕ್ಷಣೆಮಾಡಿಕೊಳ್ಳುವುದಿಲ್ಲವೋ ಆತನು ವ್ಯಾಯಾಮದಿಂದ ಫಲಹೊಂದಲಾರನು. ಆದಕಾರಣವೇ ಕುಸ್ತಿಹಿಡಿಯುವ ಜನರು ವೀರ್ಯರಕ್ಷಣೆಯ ಕಡೆಗೆ ಹೆಚ್ಚು ಲಕ್ಷ್ಯಕೊಡುವರು. ನಿಯಮಪೂರ್ವಕವಾಗಿ ಒಂದುವರ್ಷದವರೆಗೆ ಯಾವುದೇಕರವಾದ ವ್ಯಾಯಾಮವನ್ನು ಮಾಡುವುದರಿಂದ ಶರೀರವು ಗಟ್ಟಿಯೂ, ಪುಷ್ಟವೂ, ಸುಂದರವೂ ಆಗುತ್ತದೆ. ಬ್ರಹ್ಮಚಾರಿಗಳಿಗಂತೂ ವ್ಯಾಯಾಮವು ಬಹಳ ಉಪಕಾರಕವಾದುದು.

ವ್ಯಾಯಾಮವನ್ನು ಒಂದು ದಿನದಲ್ಲಿ ಎರಡುಸಾರೆ ಮಾಡಬೇಕಾಗುವುದು. ಸಾಧ್ಯವಾಗದ ಪಕ್ಷಕ್ಕೆ ಒಂದುಸಾರೆಯಾದರೂ ಬೆಳಗ್ಗೆ ಅವಶ್ಯವಾಗಿ ಮಾಡಬೇಕು. ವ್ಯಾಯಾಮಮಾಡುವುದರಿಂದ ಶರೀರದಲ್ಲಿ ರಕ್ತಸಂಚಾರವು ಬಹಳ ವೇಗವಾಗಿ ನಡೆಯುವುದು. ಇಂತಹ ಸಮಯದಲ್ಲಿ ವ್ಯಾಯಾಮವಾದ ಮೇಲೆ ಕೆಲಹೊತ್ತು ತಡೆದು ಸುಲಭವಾಗಿ ಪಚನವಾಗುವ ಯಾವುದೋ ಒಂದು ಅಲ್ಪಾಹಾರವನ್ನು ತೆಗೆದುಕೊಳ್ಳುವುದೊಳ್ಳೆಯದು.

ಒಬ್ಬ ಡಾಕ್ಟರನು 'ಜರ್ಮನ್‌ದೇಶದವರು ಫ್ರಾನ್ಸ್‌ದೇಶದವರನ್ನು ಹೇಗೆ ಗೆದ್ದರು'? ಎಂದು ತನ್ನನ್ನು ತಾನೇ ಪ್ರಶ್ನೆಮಾಡಿಕೊಂಡು ಅದಕ್ಕುತ್ತರವಾಗಿ—ಜರ್ಮನ್ ದೇಶದವರು ವ್ಯಾಯಾಮದಲ್ಲಿಯೂ ಆಟಪಾಟಗಳಲ್ಲಿಯೂ ನಿಪುಣರಾಗಿದ್ದರು. ಅಲ್ಲದೆ ಪರಿಶ್ರಮಮಾಡುವುದರಲ್ಲಿ ಸಮರ್ಥರಾಗಿದ್ದರು; ಇತ್ತ ಫ್ರಾನ್ಸ್ ದೇಶದವರು ಪರಿಶ್ರಮಮಾಡುವುದರಲ್ಲಿ ಅಷ್ಟೊಂದು ಸಮರ್ಥರಾಗಿರಲಿಲ್ಲವೆಂದು ಹೇಳಿ ವ್ಯಾಯಾಮ ಸಾಧನೆಯ ಅತ್ಯಾವಶ್ಯಕತೆಯನ್ನು ಸ್ಪಷ್ಟಪಡಿಸಿದ್ದಾನೆ. ಮನುಷ್ಯನು ತನ್ನ ಶರೀರದ ಬಲ ಆಯುಷ್ಯವೃದ್ಧಿಗಳನ್ನನುಸರಿಸಿ ಅವಶ್ಯವಾಗಿ ಪರಿಶ್ರಮಮಾಡಬೇಕು. ಹಾಗಿಲ್ಲದೆ "ವ್ಯಾಯಾಮಮಾಡಲಿಕ್ಕೆ ಸಮಯವೇ ಇಲ್ಲ. ಏನುಮಾಡುವುದು?" ಎಂದು ನುಡಿಯುವುದಾದರೆ ಕೆಲವು ದಿನಗಳಲ್ಲಿಯೇ ಈ ಶರೀರವೆಂಬ ಮನೆಯನ್ನು ರೋಗಗಳಿಗೆ ಬಾಡಿಗೆಗೆ ಕೊಡಬೇಕಾಗುವುದು. ಅದಕ್ಕಾಗಿ ವ್ಯಾಯಾಮವನ್ನು ಎಂದೂ ಬಿಡಬಾರದು.

ಶುದ್ಧವಾಯುವುಳ್ಳ ಬೈಲಿನಲ್ಲಿ ಸಂಜೆಮುಂಜಾವುಗಳಲ್ಲಿ ಕಾಲುನಡಿಗೆಯಿಂದ ನಡೆಯುವುದೂ, ಕುದುರೆಯಮೇಲೆ ಸವಾರಿ ಮಾಡುವುದೂ ಉತ್ತಮವಾದ ವ್ಯಾಯಾಮಗಳು. ಕಡಿಮೆ ಕಡಿಮೆ ಮೂರುನಾಲ್ಕು ಮೈಲುಗಳವರೆಗೆ ಸುತ್ತಿಕೊಂಡು ಬರುವುದರಿಂದ ಬಹಳ ಮಂದಿ ರೋಗಗಳುಶಾಂತವಾಗುವವು. ಕುದುರೆಯ ಸವಾರಿಯನ್ನು ಎಂಟು ಮೈಲುಗಳ ವರೆಗೆ ಮಾಡುವುದು ಬಹಳ ಹಿತಕರವಾದುದು.

ಚಿಕ್ಕಮಕ್ಕಳಿಗೆ ಕಣ್ಣುಮುಚ್ಚಾಲೆ, ಕಪ್ಪಡೀವಾಳಿ, ತಿಳ್ಳಿ ಮುಂತಾದ ಆಟಗಳು ಶರೀರಬಲವನ್ನೂ, ಬುದ್ಧಿಯನ್ನೂ ಉಂಟುಮಾಡುವವು. ಟೆನಿಸ್, ಕ್ರಿಕೇಟ್, ಫುಟ್‌ಬಾಲ್, ಹಾಕೀ ಮುಂತಾದ ಇಂಗ್ಲೀಷ್ ಆಟಗಳೂ ಚೆನ್ನಾಗಿವೆ. ಆದರೆ ಇವುಗಳಿಂದ ಹಣವು ಬಹಳ ಖರ್ಚಾಗುವುದಲ್ಲದೆ ಇವನ್ನು ಹಣವಂತರ ಹೊರತಾಗಿ ಉಳಿದವರಾಡಲು ಸಾಧ್ಯವಿಲ್ಲ. ಅಥವಾ ವಿದ್ಯಾರ್ಥಿಯ ಅವಸ್ಥೆಯು ಎಲ್ಲಿಯವರೆಗಿರುವುದೋ ಅಲ್ಲಿಯವರೆಗೆ ಮಾತ್ರ ಈ ಆಟಗಳು ಸುಲಭವಾಗಿ ಸಾಗಿ ಮುಂದೆ ಸಾಂಸಾರಿಕ ತೊಂದರೆಗಳಿಂದ ಸಮಯವು ದೊರೆಯದೆ ನಿಂತುಹೋಗುವವು. ಅದುದರಿಂದ ಸರ್ವಸಾಮಾನ್ಯವಾಗಿ ಎಲ್ಲರೂ ನಮ್ಮ ದೇಶದ ವ್ಯಾಯಾಮಗಳನ್ನು ಸಾಧನೆ ಮಾಡಿ ಸ್ಕೂಲು ಕಾಲೇಜು ವಿದ್ಯಾರ್ಥಿಗಳಲ್ಲಿ ಅವುಗಳನ್ನು ವಿಶೇಷವಾಗಿ ಪ್ರಚಾರಮಾಡಬೇಕು. ನಮ್ಮ ದೇಶದ ಜನಗಳ ಮೇಲೆ ಕ್ರಮವಾಗಿ ದೃಷ್ಟಿಯಿಡುತ್ತ ಹೋದರೆ ಬಹಳ ಮಂದಿ ಧನಿಕರೂ, ಅವರ ಮಕ್ಕಳೂ ರೋಗಿಗಳಾಗಿ ಬಳಲುತ್ತಿರುವುದು ಕಂಡು ಬರುವುದು. ಹೀಗಾಗುವುದಕ್ಕೆ ತಾವು ವ್ಯಾಯಾಮ ಮಾಡದಿರುವುದೂ, ಮಕ್ಕಳಿಗೆ ಮಾಡಿಸದಿರುವುದೂ ಬಲವಾದಕಾರಣಗಳಾಗಿವೆ.

ಪ್ರತಿನಿತ್ಯದಲ್ಲಿ ಸಾಧಿಸುವ ವ್ಯಾಯಾಮದಿಂದ ಮನವು ಯಾವಾಗಲೂ ಶಾಂತವಾಗಿಯೂ, ಹರ್ಷವಾಗಿಯೂ ಇರುವುದು. ಎಂತಹ ಕಷ್ಟಗಳಾದ ಕಾರ್ಯಗಳೂ ಸುಲಭವಾಗಿ ತೋರುವವು. ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಳ್ಳುವ ಶಕ್ತಿ ದೊರೆಯುವುದು. ವಿಷಯ ಭೋಗಾಸಕ್ತಿಯು ಕಡಿಮೆಯಾಗುವುದು, ನಾನಾ ಪ್ರಕಾರಗಳಾದ ಶಾರೀರಿಕ ಮಾನಸಿಕದುಃಖಗಳು ದೂರಾಗುವವು.

ಯಾವನು ತನ್ನ ಮಲಮೂತ್ರಾದಿಗಳನ್ನು ತಡೆಯುವುದಿಲ್ಲವೋ, ಯಾವನು ಅತಿಶ್ರಮದಿಂದ ಕಾರ್ಯವನ್ನು ಮಾಡುವುದಿಲ್ಲವೋ, ಯಾವನು ಆಲೋಚನೆಮಾಡದೆ ಆಲೋಚನೆ ಮಾಡಿದ್ದನ್ನು ತಿಳಿದುಕೊಳ್ಳದೆ ಮಾತನಾಡುವುದಿಲ್ಲವೋ, ಯಾವನು ಲೋಭ, ಮೋಹ, ಭಯ, ಕ್ರೋಧ, ದುರಭಿಮಾನ, ದುರ್ವಚನ, ನಿರ್ಲಜ್ಜತೆ, ಈರ್ಷ್ಯೆ, ಕಲ್ಪಕತನ ಮುಂತಾಗಿ ನಡೆಯಬಹುದಾದ ಮನೋವಿಕಾರಗಳನ್ನು ಸ್ವೀಕರಿಸುವನೋ, ಯಾವನು ಯೋಗ್ಯಗಳಾದ ಆಹಾರಗಳನ್ನು ಮಾಡುವನೋ, ಯಾವನು ಗೊತ್ತುಪಡಿಸಿಕೊಂಡ ಹೊತ್ತಿಗೆ ಸರಿಯಾಗಿ ಮಲಗುವುದನ್ನೂ ಏಳುವುದನ್ನೂ ಮಾಡುವನೊ, ಯಾವನು ನಿಯಮಪೂರ್ವಕವಾಗಿ ವ್ಯಾಯಾಮ ಮಾಡುವನೊ ಅವನೇ ರೋಗರಹಿತನಾಗಿ ಬಾಳುವನು. ಒಂದು ನಿಶ್ಚಿತವಾದ ನಿಯಮವನ್ನು ಮಾಡಿಕೊಂಡು ಅದರಂತೆ ಕೆಲಸಮಾಡುವಾಗ ಕೆಲಸವನ್ನೂ, ವಿಹಾರಮಾಡುವಾಗ ವಿಹಾರವನ್ನೂ ಮಾಡಬೇಕಲ್ಲದೆ ಕೆಲಸದ ವೇಳೆಯಲ್ಲಿ ವಿಹಾರವನ್ನೂ, ವಿಹಾರದ ವೇಳೆಯಲ್ಲಿ ಕೆಲಸವನ್ನೂ ಮಾಡಬಾರದು; ಇಷ್ಟಲ್ಲದೆ ಕೆಲಸದ ನೆಪದಿಂದ ಯಾವಾಗಲೂ ದುಡಿದು ದುಡಿದು ಹಣ್ಣಾಗಿ ಸಾಯುವುದಾಗಲೀ, ವಿಹಾರದ ನೆಪದಿಂದ ಮನಬಂದಂತೆ ತಿರುಗಿ ತಿರುಗಿ ಇದ್ದ ಹಣವನ್ನೆಲ್ಲ ಕಳೆದು ಕಪಿಯಾಗುವುದಾಗಲೀ, ಒಳ್ಳೆಯದಲ್ಲ. ಯಾರು ಬಹಳ ಹೊತ್ತಿನವರೆಗೆ ಓದುವರೋ ಅವರು ಅವಶ್ಯವಾಗಿ ಸ್ವಲ್ಪ ವೇಳೆಯನ್ನು ಆಟಪಾಟಗಳಿಗಾಗಿ ಕೊಟ್ಟು ಆನಂದಪಟ್ಟು ಮನಸ್ಸಿಗೆ ವಿಶ್ರಾಂತಿಯನ್ನೀಯುವುದೊಳ್ಳೆಯದು.

ಯೋಗಶಾಸ್ತ್ರದಲ್ಲಿ ಆಸನವನ್ನೂ ಆ ಶಾಸ್ತ್ರದ ಒಂದು ಅಂಗವನ್ನಾಗಿ ಹೇಳಿದ್ದಾರೆ. ಈ ಆಸನಕ್ಕೆ ಒಂದು ಬಗೆಯಾದ ವ್ಯಾಯಾಮವೆಂತಲೂ ಹೇಳಬಹುದು. ಇದು ಶರೀರಕ್ಕೆ ಅತ್ಯಂತ ಉಪಕಾರಿಯಾಗಿದೆ. ಅಲ್ಲದೆ ಇದರಿಂದ ಮಾನಸಿಕ ಲಾಭವೂ ವಿಶೇಷವಾಗುವುದು. ಎಲ್ಲಿಯವರೆಗೆ ಆಸನದ ಸಿದ್ಧಿಯಾಗುವುದಿಲ್ಲವೋ ಅಲ್ಲಿಯವರೆಗೆ ಮನಸ್ಸಿನ ಚಂಚಲತನವು ಹೋಗುವುದಿಲ್ಲ. ಅದುದರಿಂದಲೇ ಮನಸ್ಸಿನಲ್ಲಿ ವಿಷಯವಾಸನೆಗಳು ಹಬ್ಬಿಕೊಂಡಿರುತ್ತವೆ. ಈ ಆಸನಗಳಲ್ಲಿ ವೀರ್ಯವನ್ನು ಕಾಪಾಡಿ ಇಂದ್ರಿಯಗಳನ್ನು ಶಾಂತವಾಗಿಡಲು ಸಮರ್ಥವಾದವುಗಳೂ ಕೆಲವಿವೆ. ಅದಕ್ಕಾಗಿಯೇ ಯೋಗಿಗಳು ಆಸನಗಳನ್ನು ಪ್ರಾಯಃ ಅಭ್ಯಾಸಮಾಡಿರುತ್ತಾರೆ.

ನೆಟ್ಟಗೆ ಕೊಡ್ರುವುದು, ನೆಟ್ಟಗೆ ನಡೆಯುವುದು ಮುಂತಾದವುಗಳೂ ಆಸನಗಳ ಅಂಗಗಳಾಗಿವೆ. ಬಹಳಮಂದಿ ಜನರು ಇತ್ತ ಕಡೆಗೆ ಚಿತ್ತವನ್ನೇ ಕೊಡುವುದಿಲ್ಲ. ಅಂತೆಯೇ ಶರೀರವನ್ನು ರೋಗರಹಿತವಾಗಿಟ್ಟುಕೊಳ್ಳುವದಕ್ಕೆ ಅತ್ಯಾವಶ್ಯಕವಾದ ಅವರ ಶ್ವಾಸೋಚ್ಛ್ವಾಸಕ್ರಿಯೆಯೂ ಸಹ ಯೋಗ್ಯರೀತಿಯಿಂದ ನಡೆಯುವುದಿಲ್ಲ; ಅಂದಮೇಲೆ ರೋಗವು ತಗ್ಗುವುದಾದರೂ ಹೇಗೆ? ಜೀವನಶಕ್ತಿಯು ಹೆಚ್ಚುವುದಾದರೂ ಹೇಗೆ?

ಆಸನಗಳಲ್ಲಿ ಸಿದ್ಧಾಸನವು ಸರ್ವಸಾಮಾನ್ಯವಾಗಿ ಅತ್ಯಂತ ಉಪಕಾರಿಯಾಗಿದೆ. ಇದರಿಂದ ಯಾರಿಗೂ ಯಾವ ಬಗೆಯಾದ ಹಾನಿಯೂ ಇಲ್ಲ. ಅಲ್ಲದೆ ಇದು ಸರಳವಾಗಿಯೂ ಇದೆ. ಇದಕ್ಕೆ ಹೊರತಾದ ಆಸನಗಳು ಕಷ್ಟಸಾಧ್ಯಗಳಾಗಿವೆ. ಹಾಗೂ ದೇಶ, ಕಾಲ, ಬಲ ಮುಂತಾದವುಗಳನ್ನು ವಿಚಾರಮಾಡಿಕೊಂಡು ಪ್ರಾರಂಭಿಸತಕ್ಕವುಗಳೂ ಆಗಿವೆ; ಅವುಗಳನ್ನಾಚರಿಸುವಾಗ ಅಲ್ಪಸ್ವಲ್ಪ ವ್ಯತ್ಯಾಸವುಂಟಾದರೆ ಶಾರೀರಿಕ ಮಾನಸಿಕ ಹಾನಿಗಳೊದಗುವ ಸಂಭವವೂ ಉಂಟು. ಪುಸ್ತಕದನ್ನೋದಿಕೊಂಡು ಇವುಗಳನ್ನು ಸಾಧಿಸುವ ವಿಚಾರದಲ್ಲಿ ಎಂದೂ ಉದ್ಯುಕ್ತರಾಗಬಾರದು. ಬಲ್ಲವರಿಂದ ಮೊದಲು ಕಲಿತುಕೊಳ್ಳಬೇಕು; ಪುಸ್ತಕಗಳಲ್ಲಿ ಎಲ್ಲಾ ವಿಷಯವೂ ಬರೆಯಲ್ಪಟ್ಟಿರುತ್ತದೆ. ಆದರೆ ವ್ಯಾವಹಾರಿಕ ಜ್ಞಾನವು ಗುರುವಿಲ್ಲದೆ ಎಂದೂ ಫಲಿಸುವುದಿಲ್ಲ.

ಆಸನಗಳನ್ನು ಸಮವಾದ ಭೂಮಿಯಮೇಲೆ ಸಾಧಿಸಬೇಕು. ಮೊದಲು ಶೌಚವಿಧಿ, ದಂತಧಾವನವಿಧಿ, ಸ್ನಾನವಿಧಿಗಳನ್ನು ಮುಗಿಸಿಕೊಂಡಿದ್ದರೇನೇ ಆಸನಗಳಿಂದುಂಟಾಗುವ ಫಲವು ಪೂರ್ಣವಾಗಿ ದೊರೆಯುವುದು. ಎಲ್ಲಾ ಆಸನಗಳ ಸಾಧನೆಗೂ ಪ್ರಾತಃಕಾಲವೇ ಉತ್ತಮವಾದುದು. ಸಿದ್ಧಾಸನವನ್ನು ಹಾಕಿಕೊಂಡು ಒಂದು ಘಂಟೆಯವರೆಗೂ ಕುಳಿತುಕೊಳ್ಳಬಹುದು. ಹೀಗೆ ಮಾಡುವುದರಿಂದ ಯಾವ ಹಾನಿಯೂ ಇಲ್ಲ. 'ಯೋಗಸೋಪಾನ' ದಲ್ಲಿ ಈ ಸಿದ್ಧಾಸನದ ವಿಧಿಯನ್ನು ಈ ಪ್ರಕಾರವಾಗಿ ಬರೆದಿದ್ದಾನೆ.

ಗುದದ ಮೇಲಂಡಗಳನುದ್ಧರದೊ |
ಳೊದವಿದುದ್ದನ ನರದೆ ಹಿಮ್ಮಡ |
ವದುಮಿ ಮೇಣ್‌ಗುಹ್ಯೋರ್ಧ್ವದೇಶದೆ ಬೇರೆ ಹಿಮ್ಮಡವ ||
ಅದುಮಿ ಎದೆಮೇಲ್ಗಡೆಯೆ ಗದ್ದವ |
ನದುಮಿ ದೇಹವ ನೆಟ್ಟಗಿರಿಸುತ |
ಮುದದಿ ಭ್ರೂಮಧ್ಯವನು ನೋಳ್ಪಾಸನವೆ "ಸಿದ್ಧಾಖ್ಯಂ" ||

ಈ ಆಸನದಿಂದ ಮನಸ್ಸು ಬಹುಶಾಂತವಾಗಿರುವುದೆಂದೂ, ಆರೋಗ್ಯವು ಹೆಚ್ಚುವುದೆಂದೂ, ನಾಡಿಗಳು ಶುದ್ಧವಾಗುವವೆಂದೂ ಗೃಹಸ್ಥರಿಗಿಂತ ನೈಷ್ಠಿಕಬ್ರಹ್ಮಚಾರಿಗಳಿಗೆ ಅಧಿಕಲಾಭವಾಗುವುದೆಂದೂ 'ಯೋಗಸೋಪಾನ' ದಲ್ಲಿಯೇ ಬರೆದಿದ್ದಾನೆ.

ನಮ್ಮ ಭಾರತ ದೇಶದ ಪ್ರಾಚೀನ ಪದ್ಧತಿಯಂತೆ ಸ್ತ್ರೀಯರೂ ಶಕ್ತಿಮತಿಯರಾಗಿರಬೇಕು. ಆದರೆ ಆ ಶಕ್ತಿಯು ಪಾತಿವ್ರತ್ಯದಿಂದ ಬಂದುದಾಗಿರಬೇಕು; ಪಾಪದೃಷ್ಟಿಯಿಂದ ನೋಡಿದ ಕಣ್ಣು ಕುರುಡಾಗಬೇಕು. ಪಾಪವಿಚಾರದಿಂದಾಡುವ ನಾಲಿಗೆ ಹೋಗಬೇಕು. ಪಾಪಬುದ್ಧಿಯಿಂದ ಕೇಳಿದ ಕಿವಿ ಕಿವುಡಾಗಬೇಕು. ಇಂಥವರಲ್ಲವೇ ನಮ್ಮ ಪೂರ್ವದ ಪತಿವ್ರತೆಯರು? ಈಗಿನವರೂ ಪೂರ್ವಕಾಲದ ಪತಿವ್ರತೆಯರಾಗಬೇಕು. ಅವರಂತೆ ಪತಿಸೇವೆಯನ್ನು ಮಾಡಬೇಕು. ಪವಿತ್ರವಾದ ಈ ಪತಿಸೇವೆಯೇ ಇವರಿಗೆ ಮಹಾಶಕ್ತಿಯನ್ನುಂಟುಮಾಡುವ ವ್ಯಾಯಾಮವು. ಪತಿಸೇವೆಯೆಂದರೆ ಪತಿಯ ಸ್ನಾನಮಾಡಿಸಿ ಊಟಕ್ಕಿಡುವುದಿಷ್ಟೇ ಎಂದು ಎಷ್ಟೋ ಪತಿವ್ರತೆಯರು ತಿಳಿದುಕೊಂಡಿರಬಹುದು. ಅದು ಹಾಗಲ್ಲ. ಪತಿಗೆ ಸಂಬಂಧಪಟ್ಟ ಸಮಸ್ತ ಗೃಹಕೃತ್ಯವನ್ನು ಸಾಗಿಸಿಕೊಂಡು ಹೋಗುವುದೂ ಪತಿಸೇವೆಯಲ್ಲಿ ಒಂದು ಅಂಗವಾಗಿದೆ. ಅಡಿಗೆಮಾಡುವುದು, ನೀರುತರುವುದು, ಕಸಮುಸುರೆಗಳನ್ನು ತೆಗೆಯುವುದು, ಬೀಸುವುದು ಇವೇ ಮುಂತಾದ ಎಷ್ಟೋ ಕೆಲಸಗಳೂ ಪತಿಸೇವೆಯಲ್ಲಿಯೇ ಸೇರುವವು. ಮಹಿಳೆಯರಿಗೆ ಇವೇನು ಸಾಮಾನ್ಯ ವ್ಯಾಯಾಮಗಳಲ್ಲ. ಪುರುಷನು ತನ್ನ ಶಕ್ತಿವೃದ್ಧಿಗಾಗಿ ಮಾಡಬೇಕಾದ ವ್ಯಾಯಾಮಗಳು ಅನಂತವಿಧವಾಗಿರುವವಾದರೂ ಎಲ್ಲವನ್ನೂ ಮಾಡಲು ಹೇಗೆ ಸಮರ್ಥನಾಗುವುದಿಲ್ಲವೋ ಹಾಗೆಯೇ ಮಹಿಳೆಯರೂ ಮನೆಯಲ್ಲಿಯ ಎಲ್ಲಾ ಕೆಲಸಗಳನ್ನು ಮಾಡಲಾಗದೆ ತಮ್ಮ ಪತಿಯನ್ನೂ ಸಹಾಯಕ್ಕಾಗಿ ಕರೆಯುವುದು ಉಚಿತವಹುದಾದರೂ ಗೃಹಕೃತ್ಯಗಳು ಸಾಮಾನ್ಯವಾಗಿ ಮಹಿಳೆಯರ ವ್ಯಾಯಾಮಗಳೆಂತಲೇ ಹೇಳಬೇಕಾಗುವುದು. ಈ ಗೃಹಕೃತ್ಯಗಳಲ್ಲಿ ತೊಡಗಿರುವ ಮಹಿಳೆಯರಿಗೆ ಪ್ರತ್ಯೇಕವ್ಯಾಯಾಮಗಳೇ ಬೇಕಾಗಿಲ್ಲ. ಇನ್ನು ಪತಿಯು ಕ್ಷತ್ರಿಯವೀರನಾಗಿದ್ದು ಆತನ ಸಂಸರ್ಗದಿಂದ ಸತಿಯಲ್ಲಿಯೂ ಕ್ಷಾತ್ರಗುಣಗಳು ಬರುವ ಮಾತುಬೇರೆ. ಮಹಿಳೆಯರು ಎಷ್ಟು ಪರಾಕ್ರಮವತಿಯರಾಗಿ ಮೆರೆದರೂ ಅಬಲೆಯರೆಂಬ ನಾಮವು ಅವರನ್ನು ಬಿಟ್ಟು ಬೇರೆ ಕಡೆ ಹೋಗುವಂತಿಲ್ಲ.

ಈ ನವನಾಗರಿಕತೆಯಲ್ಲಿ ಅಂಗ್ಲವಿದ್ಯಾಪ್ರಚಾರದಿಂದಲೋ, ಶ್ರೀಮಂತಿಕೆಯ ಕಾರಣದಿಂದಲೋ ನಮ್ಮ ಮಹಿಳೆಯರು ತಾವು ಮಾಡುವ ಗೃಹಕೃತ್ಯಗಳನ್ನು ಆಳುಗಳಿಂದ ಮಾಡಿಸುತ್ತಿರಲೂಬಹುದು, ತಾವು ರೋಗಿಗಳಾಗಿ ಮೂಲೆಗೆ ಕುಳಿತಿರಲೂಬಹುದು. ಇದನ್ನು ಅಲ್ಲಗಳೆಯುವುದು ನಮಗೆ ಸಾಧ್ಯವಲ್ಲವಾದರೂ ಈ ತಪ್ಪು ಮಹಿಳೆಯರದಲ್ಲವೇ? ನಿಜವಾದ ಈ ಕಾರಣವನ್ನರಿಯದ ನೂತನ ಪತಿಗಳು ತಮ್ಮ ಪ್ರಿಯ ಪತ್ನಿಯರ ರೋಗನಿವಾರಣೆಗಾಗಿ ಬಹಳ ಹಣವನ್ನು ವ್ಯಯಮಾಡುತ್ತಿರುವರು. ಅದುದರಿಂದ ಮಹಿಳೆಯರು ತಮ್ಮ ಗೃಹಕೃತ್ಯಗಳನ್ನು ಸಾಧ್ಯವಾದಮಟ್ಟಿಗೂ ತಾವೇ ಮಾಡುತ್ತ ಆರೋಗ್ಯಶಾಲಿಯರಾಗಿ ಹಣವು ವ್ಯರ್ಥವಾಗಿ ಹಾಳಾಗದಂತೆ ಮಾಡುವುದುತ್ತಮ. ಒಟ್ಟಿನಮೇಲೆ ಸ್ತ್ರೀಪುರುಷರಿಬ್ಬರಿಗೂ ವ್ಯಾಯಾಮ ಬೇಕು. ನಮ್ಮ ದೇಶದಲ್ಲಿ ಸ್ತ್ರೀಯರು ರೋಗಿಗಳಾಗಿರುವುದು ಹೆಚ್ಚು. ಅದುದರಿಂದ ಇವರಲ್ಲಿ ಹುಟ್ಟುವ ಮಕ್ಕಳೂ ಕೂಡ ಅಶಕ್ತರೂ ರೋಗಿಗಳೂ ಆಗಿರುತ್ತಾರೆ. ಯಾವ ಮನುಷ್ಯನು ಯಾವಾಗಲೂ ರೋಗಿಯೇ ಆಗಿರುವನೋ ಆತನ ಆಯುಷ್ಯವು ಕಡಿಮೆಯಾಗುವುದು ಸಹಜವಾಗಿದೆ. ರೋಗವುಳ್ಳ ಮನುಷ್ಯನ ಶ್ವಾಸಕ್ರಿಯೆಯು ಬಹಳ ವೇಗವಾಗಿ ನಡೆಯುತ್ತಿರುವುದಾದ್ದರಿಂದಲೇ ಆಯುಷ್ಯವು ಕ್ಷೀಣವಾಗುತ್ತದೆ.

ಯಾವ ಮನುಷ್ಯನು ತಾನು ಸುಖವಾಗಿ ಜೀವಿಸಬೇಕೆಂದೂ, ಸಂಸಾರದಲ್ಲಿಯ ಸಮಸ್ತ ಪದಾರ್ಥಗಳ ಆನಂದವನ್ನು ತೆಗೆದುಕೊಳ್ಳಬೇಕೆಂದೂ ಬಯಸುವನೋ ಅವನು ಯಾವಾಗಲೂ ತನ್ನ ಜಾಗ್ರತೆಯಿಂದ ನೀರೋಗಿಯಾಗಿರುವುದಕ್ಕಾಗಿ ಪ್ರಯತ್ನಪಡಬೇಕು. ಸಂಸಾರದಲ್ಲಿ ಯಾವಕಾರ್ಯಗಳು ಪೂರೈಯಾಗಬೇಕಾದರೂ ಪುರುಷಸೋದ್ಯಮವು ಬೇಕೇಬೇಕು. ಆಪುರುಷನಾದರೂ ನೀರೋಗಿಯಾಗಿದ್ದರೇನೇ ಎಲ್ಲಾ ಕಾರ್ಯಗಳನ್ನು ಸುಲಭವಾಗಿ ಮಾಡಲು ಸಮರ್ಥನಾಗುತ್ತಾನೆ. ಮನುಷ್ಯನ ಶರೀರವು ಒಂದು ಬಗೆಯಾದ ಯಂತ್ರವು. ಈ ಯಂತ್ರವನ್ನು ಯಾವಾಗಲೂ ಜೋಪಾನವಾಗಿ ಮಾಡಬೇಕು; ಹಾಗೆ ಮಾಡದಿದ್ದರೆ ಚಲನಕ್ರಿಯೆಯು ಕಡಿಮೆಯಾಗುತ್ತಾಗುತ್ತ ಒಂದು ದಿನ ಸಂಪೂರ್ಣವಾಗಿ ನಿಂತುಹೋಗುವುದು.

ವ್ಯಾಯಾಮವು ಶಾರೀರಿಕ, ಮಾನಸಿಕವೆಂಬುದಾಗಿ ಎರಡು ತೆರನಾಗಿದೆ, ಮನುಷ್ಯನು ಆಯಾಯ ಅವಯವವನ್ನು ಪುಷ್ಟಗೊಳಿಸಬೇಕೆಂದು ಬಯಸಿ ಆ ಅವಯವಕ್ಕೆ ತಕ್ಕ ಯಾವ ವ್ಯಾಯಾಮವನ್ನು ಮಾಡಬೇಕಾಗುವುದೋ ಅದಕ್ಕೆ ಶಾರೀರಿಕ ವ್ಯಾಯಾಮವೆನ್ನುವರು. ಶರೀರದ ಈ ಅಂಗವು ಇಂದು ಪುಷ್ಟವಾಗಿದೆ, ಇನ್ನೂ ಪುಷ್ಟವಾಗುವುದು, ಕಾಂತಿಯುಳ್ಳದಾಗುವುದು ಮುಂತಾಗಿ ಇಚ್ಛಾಶಕ್ತಿಯ ಆಲೋಚನೆಗಳನ್ನು ಮನಸ್ಸಿನೊಡನೆ ಸಂಬಂಧಗೊಳಿಸಿ ಆ ಇಚ್ಛಾಶಕ್ತಿಯಿಂದಲೂ ಅವಯವಗಳನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಮಾನಸಿಕ ವ್ಯಾಯಾಮವೆನ್ನುವರು. ಹೀಗೆ ಎರಡು ಬಗೆಯಾದ ಈ ವ್ಯಾಯಾಮಸಾಧನೆಯಿಂದ ಸ್ವಲ್ಪ ದಿನಗಳಲ್ಲಿಯೇ ಶರೀರವು ಪುಷ್ಟವೂ ಸುಂದರವೂ ಆಗುವುದು. ಔಷಧಿಯಿಂದ ಗುಣವಾಗದ ರೋಗವು ವ್ಯಾಯಾಮದಿಂದಲೂ, ಯೋಗಾಭ್ಯಾಸದಿಂದಲೂ, ಆಸನ ಸಾಧನೆಗಳಿಂದಲೂ ಅವಶ್ಯವಾಗಿ ಗುಣವಾಗುವುದು. ಈ ಸಾಧನೆಗಳನ್ನು ಮಾಡುವವನಿಗೆ ವಿಶ್ವಾಸವೂ, ಅದಕ್ಕೆ ತಕ್ಕ ಪರಿಶ್ರಮವೂ ಬೇಕಾಗುವುದು. ವ್ಯಾಯಾಮಮಾಡುವುದರಿಂದ ದೊಡ್ಡದೊಡ್ಡ ರೋಗಗಳೂ ದೂರಾಗಬಲ್ಲವು. ವ್ಯಾಯಾಮಶಾಸ್ತ್ರವು ವೈದ್ಯಶಾಸ್ತ್ರಕ್ಕೇನೂ ಕಡಿಮೆಯಾದುದಲ್ಲ. ಆದರೆ ಇದನ್ನು ತಿಳಿದುಕೊಳ್ಳುವ ಜನಸಂಖ್ಯೆಯು ಕಡಿಮೆಯಾಗಿದೆ.

(ಸನಾತನಧರ್ಮ.)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಮುಕ್ತಿಯಮಾರ್ಗ.

(ಲೇಖಕರು—ಶ್ರೀ ಚನ್ನವೀರ ಶಿವಾಚಾರ್ಯರು ಬೃಹನ್ಮಠ ಹೋಟಗಿ.)

ಮುಕ್ತಿಯಮಾರ್ಗವನ್ನು ಹುಡುಕುವುದು ಪ್ರತಿಯೊಬ್ಬ ಮಾನವನ ಅದ್ಯಕರ್ತವ್ಯವಿರಲು ಅದಕ್ಕೆ ವ್ಯತಿರಿಕ್ತವಾಗಿ ಕೇವಲ ಯಮರಾಜನ ಪ್ರೀತಿಪುತ್ರರಾಗುವಮಾನವರನ್ನು ಕಂಡು ಸಖೇದಾಶ್ಚರ್ಯವಾಗುತ್ತದೆ. ನಮಗೆ ಮುಕ್ತಿಯಮಾರ್ಗವು ಗೊತ್ತಿಲ್ಲದ ಮೂಲಕ ಪರಮಾತ್ಮನ ಗುರುರೂಪದಿಂದ ಬಂದು ಆ ಮುಕ್ತಿಮಾರ್ಗವನ್ನು ತೋರಿಸಲಿಕ್ಕೆ ಕಂಕಣಬದ್ಧನಾಗಿರಲು ಆತನ ಕಡೆಗೆ ಲಕ್ಷ್ಯಗೊಡದೆ ತಮ್ಮ ಅಮೂಲ್ಯವಾದ ಜನ್ಮವನ್ನು ವ್ಯರ್ಥಹಾಳು ಮಾಡುತ್ತಿರುವದು ಎಂಥ ಶೋಚನೀಯ ಸ್ಥಿತಿಯು? ಅಪ್ಪಾ! ಮಾನವರೇ? ನೀವು ನಿಮ್ಮ ಶರೀರದ ಮೇಲಿನ ಮಮತೆಯನ್ನು ಶಿವರೂಪನಾದ ಗುರುವಿನಲ್ಲಿಟ್ಟರೆ ಮುಕ್ತಿಮಾರ್ಗವು ಸ್ವಚ್ಛದರ್ಪಣದಲ್ಲಿ ಮುಖವು ಕಂಡಹಾಗೆ ಕಾಣುತ್ತಿದೆ. ನೀವು ನಿಮ್ಮ ನಿಮ್ಮ ಪ್ರಾಪಂಚಿಕ ವಿಷಯವಾಸನೆಯಲ್ಲಿ ಎಷ್ಟು ದಿವಸಗಳ ಪರ್ಯಂತ ವಾಸಿಸಿದರೂ ನಿಮಗೆ ಅದು ಸಾಕೆನಿಸದು. ಬಡವನು ಶ್ರೀಮಂತನಾಗಬೇಕೆನ್ನುವನು. ಶ್ರೀಮಂತನು ಲಕ್ಷಾಧೀಶನಾಗಲಪೇಕ್ಷಿಸುವನು. ಲಕ್ಷಾಧೀಶನು ಕೋಟ್ಯಧೀಶನಾಗಿ ರಾವಸಾಹೇಬ, ರಾವಬಹದ್ದೂರ, ಇತ್ಯಾದಿ ಪದವಿಗಳನ್ನೂ ಪಡೆದರೂ ಕಡೆಗೆ ಅವನಿಗೆ ಸಾಕೆನಿಸದು. ಕಾರಣವೇನೆಂದರೆ, ಅದು ನಿಜವಾದ ಸುಖವಲ್ಲದ ಮೂಲಕ ಸಾಕೆನಿಸದು. ಮನುಷ್ಯನು ಸುಲುಕರಿಯನ್ನು ಎಷ್ಟು ತಿಂದರೂ ಸಾಕೆನಿಸದೆ ಹಲ್ಲುಗಳು ನೋಯುವವಲ್ಲದೆ ಹಸ್ತಗಳೂ ನೋಯುವವು ವೇಳೆಯೂ ವ್ಯರ್ಥ ಹೋಗುವದು ಆದರೆ ಹೊಟ್ಟೆ ತುಂಬುವದಿಲ್ಲ. ಕಡೆಗೆ ಯಾವ ಅನ್ನದಿಂದ ಹೊಟ್ಟೆ ತುಂಬುವದೋ ಅದನ್ನು ಭಕ್ಷಿಸಲಿಕ್ಕೇಬೇಕಾಗುತ್ತದೆ ಹಾಗೆಯೇ ಪ್ರಾಪಂಚಿಕಸುಖವು ಸಾಕಾಗದು. ಅಂತಕ್ಕೆ ನಿಜವಾದ ಸುಖವೆಂದರೆ ಮುಕ್ತಿಮಾರ್ಗನಿರೀಕ್ಷಣವೇ! ಆ ಮುಕ್ತಿಯಮಾರ್ಗವು ಪರಮಾತ್ಮನ ಧ್ಯಾನ, ಧಾರಣ, ಜಪ, ತಪ, ಅನುಷ್ಠಾನಾದಿಗಳಿಂದ ದೊರೆಯುವದೇ ಹೊರತು ಇತರಕ್ರಿಯೆಗಳಿಂದ ದೊರೆಯಲಾರದು. ಪ್ರಾಪಂಚಿಕ ವಿಷಯಗಳಿಗಾಗಿ ಎಷ್ಟು ಕಷ್ಟವನ್ನನುಭವಿಸುವಿರೋ, ಅಷ್ಟು ಕಷ್ಟವನ್ನು ಪರಮಾತ್ಮನ ಧ್ಯಾನಾದಿಗಳಲ್ಲಿ ವಹಿಸಿದರೆ ನಾವೇ ಪರಮಾತ್ಮರಾಗುವದರಲ್ಲಿ ಸಂಶಯವಿಲ್ಲ. ನನ್ನಮನೆ, ನನ್ನ ಹೊಲ, ನನ್ನ ಧನಧಾನ್ಯ ಎಂದು ಹೇಗೆ ನೀವು ಅನ್ನುವಿರೋ ಹಾಗೆ ಆಯಾಪದಾರ್ಥಗಳು ನಿಮ್ಮನ್ನು ಕುರಿತು ನನ್ನ ಮಾಲಕ ನನ್ನ ಮಾಲಕನೆಂದು ಯಾಕೆ ಅನ್ನುವದಿಲ್ಲ? ಮನೆಯಲ್ಲಿ ಕೂಡಿದ ಮಟ್ಟಿಗೆ ನನ್ನ ಹೆಂಡಿರು, ನನ್ನ ಮಕ್ಕಳು, ಬಂಧುಬಾಂಧವರು, ನನ್ನವರೆನ್ನುವದಾದರೆ ನಿಮ್ಮ ಮರಣಕಾಲದಲ್ಲಿ ಅವರು ನಿಮ್ಮನ್ನು ಅನುಸರಿಸುವದಿಲ್ಲೇಕೆ? ಇವೆಲ್ಲವುಗಳೂ ಸುಳ್ಳೇ. ನೀವು ಇವುಗಳ ಬೆನ್ನುಹತ್ತಿ ಕೆಟ್ಟಿರುವಿರಾದ್ದರಿಂದ ನೀವು ಇವುಗಳಲ್ಲಿ ಮಮತೆಯನ್ನು ಬಿಟ್ಟು ಆ ಮಮತೆಯನ್ನು ಪರಮಾತ್ಮನ ಪಾದದಲ್ಲಿಟ್ಟರೆ ಸರ್ವವೂ ಸಾಧ್ಯವೇ!

(ಕ್ರಮಶಃ)

ನಮಗೆ ಯಾರಾದರೂ ದುಷ್ಟವಾಕ್ಯಗಳಿಂದ ತಿರಸ್ಕರಿಸಿದರೆ ತಗ್ಗುವದೇಕೆ? ಪುರಸ್ಕರಿಸಿದರೆ ಹಿಗ್ಗುವದೇಕೆ? ಅವರ ವಾಕ್ಯದಲ್ಲೇನು ಮಹತ್ವವಿದೆ? ಇತರರ ತಿರಸ್ಕಾರಪುರಸ್ಕಾರಗಳಿಗೆ ಮನಗೊಟ್ಟರೆ ನಮ್ಮ ಸರ್ವಸ್ವವೂ (ನಿತ್ಯಸುಖ) ನಷ್ಟವಾಗುತ್ತದೆ. ಕಣ್ಣುಬೇನೆ ಬಂದವನಿಗೆ ನಿಂಬೆಹಣ್ಣಿನ ರಸವನ್ನು ಹಿಂಡಿದಾಗ್ಗೆ ಕಣ್ಣು ವಿಶೇಷ ಉರಿದರೂ, ಅಂತ್ಯದಲ್ಲಿ ಅವನ ಕಣ್ಣೇ ಸ್ವಚ್ಛವಾಗುತ್ತದೆ. ಕಣ್ಣುರಿಯುವಾಗ್ಗೆ ರಸಹಿಂಡಿದವನನ್ನು ತಿರಸ್ಕರಿಸಿದರೆ ಉಪಯೋಗವೇನು? ನಮ್ಮ ಕಣ್ಣನ್ನು ಸ್ವಚ್ಛಮಾಡಿದವನು ನಮ್ಮ ಹಿತಕಾರಿಯಲ್ಲವೇ? ಹಾಗೆಯೇ ಅಜ್ಞಾನರೂಪ ಕಣ್ಣುಬೇನೆಯು ನಮ್ಮನ್ನು ಬಾಧಿಸುವಾಗ್ಗೆ ಇತರರು ನಮ್ಮನ್ನು ತಿರಸ್ಕರಿಸಿದರೆ ಹೀಗೆ ತಿಳಿಯಬೇಕಲ್ಲ. ನಾನು ಈ ಸರಜನ್ನವನ್ನು ಧರಿಸದಿದ್ದರೆ ಅವರೇಕೆ ನನ್ನನ್ನು ತಿರಸ್ಕರಿಸುತ್ತಿದ್ದರು? ಅವರದೇನೂ ತಪ್ಪಿರದೆ ಈ ಅಸ್ಥಿರಜನ್ಮವನ್ನು ಧರಿಸಿದ್ದು ನನ್ನದೇ ಅಪರಾಧವೆಂದು ಮೌನಧರಿಸುವದು ಒಳಿತಲ್ಲವೇ? ಅವರ ತಿರಸ್ಕಾರದಿಂದ ಈ ಸಂಸಾರದ ಬಗ್ಗೆ ನಮ್ಮಲ್ಲಿಯೂ ಹೆಚ್ಚು ತಿರಸ್ಕಾರವು ಉತ್ಪನ್ನವಾದರೆ ಹಿತವಲ್ಲವೇ? ನಮ್ಮನ್ನು ಈ ಸಂಸಾರಚಕ್ರದಿಂದ ಅಡಿಗೆ ಮಾಡಿದ ನಿಂದಕರು ನಮ್ಮ ಹಿತಕಾರಿಗಳಾದ ಆಪ್ತರಲ್ಲವೇ? ನಮ್ಮನ್ನು ತಿರಸ್ಕರಿಸುವವರನ್ನು ಪ್ರತಿಯಾಗಿ ನಾವು ತಿರಸ್ಕರಿಸಿದರೆ ಅವರ ಅನರ್ಥಕ್ಕೂ ನನ್ನ ಅನರ್ಥಕ್ಕೂ ಕಿಂಬಹುನಾ ಸರ್ವರ ಅನರ್ಥಕ್ಕೂ ನಾನೇ ಕಾರಣನಾಗುವದಿಲ್ಲವೇ? ಹೇಗೆಂದರೆ ಇತರರ ತಿರಸ್ಕಾರಕ್ಕೆ ಪ್ರತಿಯಾಗಿ ತಿರಸ್ಕರಿಸಿದರೆ ಅವರು ಇನ್ನೂ ಹೆಚ್ಚು ತಿರಸ್ಕರಿಸುವರು. ಪುನಃ ನಾನೂ ತಿರಸ್ಕರಿಸಿದರೆ ಅವರು ಪ್ರತಿಯಾಗಿ ಎಲ್ಲಿಲ್ಲಿಯೋ ವಿಶೇಷಗಳಾದ ಬಿಸಿಬಿಸಿ ಶಬ್ದಗಳನ್ನು ಹುಡುಕಿ ಹುಡುಕಿ ತಿರಸ್ಕರಿಸಿ, ಕಡೆಗೆ ಹೊಡೆದಾಟವಾಗಿ ಖಟ್ಲೆಯಾದನಂತರ ಅವರಕಡೆ ನಾಲ್ಕಾರು ಜನರು ಸಾಕ್ಷೀದಾರರು. ನನ್ನ ಕಡೆ ನಾಲ್ಕಾರು ಜನರು ಸಾಕ್ಷೀದಾರರು ಹೀಗಾಗಿ ಎಷ್ಟೋ ಜನರು ಸಟೆಯನ್ನು ನುಡಿಯುವ ಪ್ರಸಂಗಬರಬಹುದು. ಕೆಲಜನರು ಶುರಂಗಸೇರುವ ಪ್ರಸಂಗವೊದಗಬಹುದು. ಕೆಲವರಿಗೆ ದಂಡವಾಗಬಹುದು. ಹೀಗಾದ ಮೇಲೆ ಅವರು ದಂಡಶುರಂಗಗಳಿಂದ ಪಾರಾದ ಮೇಲೆಯೂ, ಅವರ ಮನಸ್ಸಿನಲ್ಲಿ ಕಲ್ಮಷ ಉಳಿಯಬಹುದು. ಅವರು ಪುನಃ ಸೇಡು ತೀರಿಸಿಕೊಳ್ಳುವದಕ್ಕಾಗಿ ಅನೇಕ ಅನರ್ಥಗಳನ್ನು ಮಾಡಬಹುದು. ಪುನಃ ಸಾಕ್ಷಿಗಾಗಿ ಎಷ್ಟೋ ಜನರು ನಿಲ್ಲಬಹುದು. ಹೀಗಾದ ಮೇಲೆ ಸರ್ವರನ್ನೂ ಸುಳ್ಳಾಡಲಿಕ್ಕೂ, ಶುರಂಗಭೋಗಿಸಲಿಕ್ಕೂ, ದಂಡವಸೂಲಿ ಸಲಿಕ್ಕೂ ನಾನೇ ಕಾರಣನಾದಂತಾಗಲಿಲ್ಲವೇ? ತಿರಸ್ಕರಿಸುವಾಗ್ಗೆ ನಾನು ಮೌನವನ್ನು ತಾಳಿದ್ದರೆ ಇಷ್ಟು ಅನರ್ಥಕ್ಕೆ ಕಾರಣವೇನು? ನಾನು ಪ್ರತಿಯಾಗಿ ತಿರಸ್ಕರಿಸುವುದಕ್ಕಾಗಿ ಇಬ್ಬರಲ್ಲಿದ್ದ ಕ್ರೋಧವು ನಾಲ್ಕು ಜನರಲ್ಲುಂಟಾಗಿ, ನಾಲ್ವರಲ್ಲಿದ್ದುದು ಹತ್ತು ಜನರಲ್ಲಿ, ಹತ್ತು ಜನರಲ್ಲಿದ್ದುದು ಇಪ್ಪತ್ತು ಜನರಲ್ಲಿ, ಹೀಗೆ ಕ್ರೋಧವು ಹಬ್ಬಿ ಇಡೀ ಸಮಾಜವನ್ನೇ ನುಂಗುತ್ತದೆ. ಇಷ್ಟು ಜನರ ವ್ಯರ್ಥಜನ್ಮ ಹಾಳುಮಾಡಿದ ದೋಷವು ನನ್ನನ್ನು ತಟ್ಟಲಿಕ್ಕಿಲ್ಲವೇ? ಇಷ್ಟು ದೋಷಪಾತ್ರವಾದ ಮೇಲೆ ಇನ್ನೇನು ಗತಿ? ನರಕಯಾತನವೇ ಮಿಗಿಲಾದ ಗತಿ! ಇಷ್ಟು ದೋಷವನ್ನು ಕಟ್ಟಿಕೊಂಡು ಎಷ್ಟೋ ಜನ್ಮಗಳಲ್ಲಿ ನರಕಯಾತನೆ ಭೋಗಿಸುವದಕ್ಕಿಂತಲೂ ಒಂದರ್ಧಘಂಟೆಯವರೆಗೆ ಇತರರ ತಿರಸ್ಕಾರಶಬ್ದಗಳನ್ನೇಕೆ ಸಹಿಸಬಾರದು? ಸುಮ್ಮಸುಮ್ಮನೆ ನಮ್ಮನ್ನು ಇತರರು ತಿರಸ್ಕರಿಸುತ್ತಿದ್ದರೂ ಮೌನವೇ ಮಿಗಿಲಾದ ಔಷಧವು. ~~ಹೀಗೆ ನಾವು ಮಾರ್ಗದಲ್ಲಿ ಹೋಗುವಾಗ್ಗೆ ಒಂದು ನಾಯಿಯು ನಮ್ಮನ್ನು ಕಂಡು ಬೊಗಳುತ್ತದೆ. ನಾವು ಏನು ಮಾಡಿದ್ದರೂ ನನ್ನಂಥ ದೊಡ್ಡಮನುಷ್ಯನನ್ನು ಯಃಕಶ್ಚಿತ್ ಒಂದು ನಾಯಿಯು ಕಂಡು ಬೊಗಳುತ್ತಿದೆಂದು ತಿಳಿದು ಪ್ರತಿಯಾಗಿ ಅದಕ್ಕೆ ನಾನೂ ಅದರ ಸೇಡು ತೀರಿಸಿಕೊಳ್ಳುವದಕ್ಕಾಗಿ ಅದರಂತೆ ಬೊಗಳಿದರೆ ಅದಕ್ಕೆ ನಾಯಿಯನ್ನುವರೋ ಅಥವಾ ನಮಗೆ ನಾಯಿಯೆನ್ನುವರೋ? ಇದನ್ನು ನಾವೇ ವಿಚಾರಿಸತಕ್ಕದ್ದಿರುತ್ತದೆ. ಅದೇ ಪ್ರಕಾರ ಜನರು ಹೇಗೆ ಬೈದರೂ~~ "ಮೌನಂ ಸರ್ವತ್ರ ಸಾಧನಂ" ಎನ್ನುವಂತೆ ಮೌನವನ್ನು ಧರಿಸುವದು ಒಳಿತಲ್ಲವೇ?

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಜಿಗಿಯಿಲ್ಲದವರ ಜಿಗಿದಾಟ.

"ಸತ್ಯಮೇವ ಜಯತೇ" ಎಂಬ ಆರ್ಯೋಕ್ತಿಯು ನಿಜವಾದುದು. ಜಗತ್ತಿನಲ್ಲಿ ಸತ್ಯಕ್ಕೆ ಜಯವಿರುವುದಲ್ಲದೆ ಅಸತ್ಯಕ್ಕೆ ಎಂದೂ ಜಯವಿರುವುದಿಲ್ಲ. ಸದ್ಯಃ ತಮ್ಮನ್ನು ಯಾರೂ ಕೇಳುವವರಿಲ್ಲೆಂದು ಭಯರಹಿತರಾದ ಕೆಲವಿರಕ್ತರು ವಿರಕ್ತಪದಕ್ಕೆ ಅನುಚಿತಗಳಾದ ಐಶ್ವರ್ಯಾದಿಗಳಿಂದ ಕೂಡಿಕೊಂಡು ಮೆರೆಯುವರಲ್ಲದೆ ಅರಬರುತ್ತ ವಿರಕ್ತಪದಕ್ಕೆ ಕಳಂಕವನ್ನುಂಟುಮಾಡುವ ಅನೇಕ ಸಂಸಾರದ ಕಾರ್ಯಗಳಲ್ಲಿ ತೊಡಗಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ವಿರಕ್ತರು ಗುರುಭಕ್ತಿಶೂನ್ಯರಾಗಿ ನಾಸ್ತಿಕರಂತೆ ನಾವೇ ಶ್ರೇಷ್ಠರೆಂತಲೂ ನಮಗಿಂತಲೂ ಹೆಚ್ಚಿನವರಾರೂ ಇಲ್ಲವೆಂತಲೂ ನುಡಿಯುತ್ತ ಪಾಪಭಾಗಿಗಳಾಗುತ್ತಿರುವರು. ಮದವಿಶಿಷ್ಟನಾದ ಪುರುಷನು ಶರೀರದಲ್ಲಿ ಮದವಿರುವತನಕ ಹೇಗೆ ಕುಣಿದಾಡುವನೋ, ಹಾಗೆ ತಮ್ಮಲ್ಲಿ ಮೂಢಭಕ್ತರ ಸಹಾಯವಿರುವತನಕ ಇವರು ಕುಣಿದಾಡುವರು. ಮದವಿಳಿದನಂತರ ಆ ಮನುಷ್ಯನು ತನ್ನ ಹಿಂದಿನ ಅವಿಚಾರಗಳನ್ನು ನೆನಸಿಕೊಂಡು ಪಶ್ಚಾತ್ತಾಪಪಡುವನಷ್ಟೆ! ಇವರಾದರೋ ಶಾಸ್ತ್ರವಿರುದ್ಧವಾದ ವರ್ತನದಿಂದ ಮುಂದೆ ಆಗುವ ಪಶ್ಚಾತ್ತಾಪವನ್ನು ಈಗಲೇ ಮನಸ್ಸಿನಲ್ಲಿ ತಂದುಕೊಂಡು ಗುರುಭಕ್ತಿಮಾರ್ಗದಿಂದ ಆಚರಿಸುವದು ಯೋಗ್ಯವಾಗಿದೆ. ಶಿವದೀಕ್ಷಾಸಂಸ್ಕಾರದಲ್ಲಿ ಅಷ್ಟಾವರಣಗಳನ್ನೂ ಅವುಗಳ ಮಹತ್ವವನ್ನೂ ತಿಳಿಸಿಕೊಟ್ಟ ಮಹಾಗುರುವನ್ನು ತಿರಸ್ಕರಿಸುವುದು ಮಹಾಪಾಪವಲ್ಲವೇ? ಮಹಾಚಾರ್ಯರನ್ನು ತಿರಸ್ಕರಿಸುವವರಿಗೆ ಶಿವನು ಯಾವ ಶಿಕ್ಷೆಯನ್ನು ವಿಧಿಸಬಹುದೆನ್ನುವದನ್ನು ವಾಚಕರೇ ಯೋಚಿಸಬೇಕು. ಹಿಂದೂಜನರಿಗೆ ಮುಸಲ್ಮಾನರು ಹೇಗೆ ಪರಮವೈರಿಗಳಾಗಿದ್ದಾರೆಯೋ, ಹಾಗೆ ಗುರುವರ್ಗದವರಿಗೆ ವಿರಕ್ತರು ಪರಮವೈರಿಗಳಾಗಿದ್ದಾರೆ. ತಮಗೆ ಮುಸಲ್ಮಾನರ ಸಂಬಂಧವಿರುವಕಾರಣದಿಂದಲೋ ಏನೋ, ನಾವು ಹಿಂದುಗಳೇ ಅಲ್ಲವೆಂದು ಪತ್ರಿಕೆಗಳಲ್ಲಿ ಬರೆಯುತ್ತಲಿದ್ದಾರೆ. "ಯಥಾಬೀಜಸ್ತಥಾಂಕುರಃ" ಎಂಬ ನ್ಯಾಯದಂತೆ ಅವರ ಮುಖದಿಂದ ಈ ರೀತಿ ನುಡಿಸುತ್ತಿರುವಂತೆ ತೋರುತ್ತದೆ. ಅಸ್ತು! ಗುರುರ್ದೇವೋ ಮಹಾದೇವೋ ಗುರುರ್ದೇವಸ್ಸದಾಶಿವಃ | ಗುರುರ್ದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ || ಈ ಗುರುಸ್ತೋತ್ರವನ್ನು ಸರ್ವರೂ ಮಾನ್ಯಮಾಡುತ್ತಾರಷ್ಟೆ! ಮಾನ್ಯಮಾಡದವರು ಕೆಲವು ನಾಸ್ತಿಕರು ಇದ್ದರೂ ಇರಬಹುದು. ಈ ಗುರುಸ್ತೋತ್ರ ಪದಗಳಲ್ಲಿರುವ ಅರ್ಥವನ್ನು ವಿಚಾರಿಸಿ ನೋಡಿದರೆ ಗುರುವಿಗಿಂತಲೂ ಅಧಿಕವಾದ ವಸ್ತುವು ಈ ಜಗತ್ತಿನಲ್ಲಿ ಯಾವುದೂ ಇಲ್ಲವೆಂದು ಸಿದ್ಧವಾಗುತ್ತದೆ. "ಗುರುದೇವಾತ್ಪರಂನಾಸ್ತಿ" ಹೀಗೆನ್ನುವದರಿಂದ ಸರ್ವ ಮಾನವೀಕರ್ಮಕ್ಕೆ ಗುರುವೇ ನಿಯಂತ್ರಕನಾಗುವನು. ಅದುದರಿಂದಲೇ ವೇದವಾಕ್ಯವೂ ಸಹ "ನಗುರೋರಧಿಕಂ" ಎಂದು ಮುಕ್ತಕಂಠದಿಂದ ಸಾರಿರುವದು. ಈ ಪ್ರಕಾರ ಸರ್ವಶಕ್ತ್ಯಸ್ತ ಶಕ್ತಿಯುಳ್ಳ ಗುರುವನ್ನು ತಿರಸ್ಕರಿಸಿ ವಿರಕ್ತರೇ ಶ್ರೇಷ್ಠರೆಂತಲೂ, ಜಂಗಮರೆಂತಲೂ ನುಡಿಯುತ್ತಿರುವುದು 'ಕಾಗಿಯು ತನ್ನ ಮರಿಗೆ ಕೋಗಿಲೆ' ಎಂದು ಹೆಸರಿಟ್ಟಂತೆಯೇ ಸರಿ! ಈ ಕಾಲದಲ್ಲಿ ಕೆಲಜನ ದುರ್ವಿರಕ್ತರು ಭಕ್ತರಿಗೆ ಮಂಕುಬೂದಿಯನ್ನು ಚೆಲ್ಲಿ ಗುರುಗಳ ಬಗ್ಗೆ ದುರ್ಬೋಧೆಮಾಡಿ ತಮ್ಮ ಜಾತಿಸಾಂಕರ್ಯಕತ್ವವನ್ನು ಸಾಧಿಸಹತ್ತಿದ್ದಾರೆ. ಸರ್ಪವು ಕಚ್ಚಿದ ಪುರುಷನು ತನ್ನಲ್ಲಿರುವ ವಿಷದೋಷದಿಂದ ಜಗತ್ತು ಹಚ್ಚಗಿರುತ್ತದೆಂದು ಅದರಲ್ಲಿ ಹೇಗೆ ದೋಷವನ್ನು ತೋರಿಸುವನೋ, ಅದರಂತೆ ವಿರಕ್ತರು ಅಹಂಕಾರಾದಿ ದೋಷಗಳುಳ್ಳವರಾಗಿರುವದರಿಂದ ಸಮಸ್ತಕ್ಕೂ ಆಧಾರಭೂತನಾದ ಗುರುವಿನಲ್ಲಿ ದೋಷವನ್ನು ಹೊರಿಸಿ, ಕಡೆಗೆ ಅಗಸರ ನಾಯಿಯು ಹಳ್ಳವನ್ನೂ ಕಾಣಲಿಲ್ಲ, ಮನೆಯನ್ನೂ ಕಾಯಲಿಲ್ಲ ವೆಂಬಂತೆ ವರ್ತಿಸುತ್ತಿದ್ದಾರೆ. ಈ ವಿರಕ್ತರು ತಮ್ಮ ಹೆಸರಿಗೆ ತಕ್ಕಂತೆ ನಿಜವಾದ ವಿರಕ್ತಮಾರ್ಗದಂತೆ ಆಚರಿಸಬೇಕು. ಇಲ್ಲವಾದರೆ ಆ ವಿರಕ್ತಪದವನ್ನು ಬಿಟ್ಟು ಸರ್ವಗೃಹಸ್ಥಾಶ್ರಮಿಗಳಂತೆ ವರ್ತಿಸಬೇಕು.

ಇವೆರಡೂ ಮಾರ್ಗಗಳನ್ನು ಬಿಟ್ಟು ಅತ್ತಹಾದಿಯನ್ನು ಹಿಡಿದರೆ ಇವರಿಗೆ ಯಾವ ಪ್ರಯೋಜನವೂ ಆಗದೆ ದೇವರ ಶಿಕ್ಷೆಗೆ ಗುರಿಯಾಗಬೇಕಾಗುವದು. ಇವರು ಇನ್ನಾದರೂ ಈ ತರಹದ ತಮ್ಮ ವಕ್ರಮಾರ್ಗವನ್ನು ಬಿಟ್ಟು ಗುರುವರ್ಗದವರಲ್ಲಿ ಅಸಾಧಾರಣಭಕ್ತಿಯನ್ನು ವಹಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕೆಂದಾಶಿಸುವ,

ಓರ್ವ ಮತಾಭಿಮಾನಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ನೂತನಗೃಹಪ್ರವೇಶ ಸಮಾರಂಭ ಮಹೋತ್ಸವ.

ಅನಂತಪುರ ಜಿಲ್ಲಾ ಗುತ್ತಿ ತಾಲೂಕು ಗೋಳಪಾಳ್ಯ ಗ್ರಾಮದ ಅಗರ್ಭ ಶ್ರೀಮಂತರಾದ ಪಾಟೀಲು ದೊಡ್ಡರಾಚನಗೌಡರು ಮಲ್ಲೇಶಗೌಡರು ಚನ್ನನಗೌಡರ ಸುಪುತ್ರರಾದ ರಾಚನಗೌಡರು ಈ ಮಹಾಶಯರು ಭವ್ಯತರವಾದ ನೂತನಗೃಹವನ್ನು ಕಟ್ಟಿಸಿ ಸದರಿ ಗೃಹದಲ್ಲಿ ಇದೇ ಮಾಘ ಶು|| ೫ ಮಂದವಾರ ಲಗಾಯತು ಶು|| ೧೦ ಗುರುವಾರ ಪರ್ಯಂತ ಶ್ರೀ ಸಿದ್ಧರಾಮೇಶ್ವರ ಪುರಾಣಶ್ರವಣವನ್ನು ವೇ|| ವೆಲುಗೊಂಡೆಮಠದ ವೀರಭದ್ರ ಶಾಸ್ತ್ರಿಗಳವರಿಂದ ಮಾಡಿಸಿದರು. ಸದರಿ ಶ್ರೀಮಂತಗೌಡರ ಗುರುಗಳಾದ ಕೊಂಡಕುಂದಿ ಶಿಲಾಮಠದ ವೇ|| ಶಿವಯೋಗಿ ಶಾಸ್ತ್ರಿಗಳವರ ಕಡೆಯಿಂದ ವಿಧ್ಯುಕ್ತಪ್ರಕಾರ ನೂತನಗೃಹಪ್ರವೇಶ ಕಾರ್ಯಗಳು ಜರುಗಿಸಲ್ಪಟ್ಟವು. ಗೌಡರು ಸದ್ಗುರುಸೇವಾಪೂಜಾಸಕ್ತಿಯುಳ್ಳವರಾದಕಾರಣ ತಮ್ಮ ಪರಮಗುರುವರ್ಯರಾದ ಶ್ರೀಮತ್‌ಕೊಂಡಿಕ್ಯಪುರೀ ಶಿಲಾಮಠದ ಶಿವಶಂಕರ ಶಿವಾಚಾರ್ಯ ಪಟ್ಟದಸ್ವಾಮಿಗಳು (ವೇದಾಂತಭೂಷಣ) ಇವರನ್ನು ಈ ಮಂಗಲ ಕಾರ್ಯಕ್ಕೆ ಆಗಮಿಸಬೇಕೆಂದು ಪ್ರಾರ್ಥಿಸಿ ವಿನ್ನೈಸಿಕೊಂಡ ಪ್ರಕಾರ ಶ್ರೀಗಳವರು ಸದರಿ ಮಿತಿಗೆ ಸರಿಯಾಗಿ ತಮ್ಮ ಮಠದಿಂದ ಮಠಪರಿವಾರದೊಡನೆ ಹೊರಟು ಗೋಳಪಾಳ್ಯ ಗ್ರಾಮದ ಈಶ್ವರ ದೇವಸ್ಥಾನವನ್ನು ತಲುಪುವದರೊಳಗಾಗಿಯೇ ಗುರುಸೇವಾಧುರೀಣರಾದ ಗೌಡರು ಬಾಜಾಭಜಂತ್ರಿ ಮುಂತಾದ ಮಂಗಲ ವಾದ್ಯವೈಭವದೊಡನೆ ಗುರುಗಳನ್ನು ಎದುರುಗೊಂಡು ಫಲಪುಷ್ಪಾಹಾರವನ್ನು ಸಾಷ್ಟಾಂಗ ಪ್ರಣತಿಪೂರ್ವಕ ಅರ್ಪಿಸಿದರು. ಅನಂತರ ಉತ್ಸವವು ಹೊರಟು ಗೌಡರ ಗೃಹವನ್ನು ತಲಪಿತು. ಶ್ರೀಗಳವರು ಅಲ್ಲಿ ಅಲಂಕರಿಸಲ್ಪಟ್ಟ ಭವ್ಯತರವಾದ ವೇದಿಕೆಯ ಮೇಲೆ ಮೂರ್ತಮಾಡಿ ತಮ್ಮ ಅಮೃತವಾಣಿಯಿಂದ "ಜಂತೂನಾಂ ನರಜನ್ಮ ದುರ್ಲಭಂ" "ಧರ್ಮಕೀರ್ತಿದ್ವಯಂ ಸ್ಥಿರಂ" "ನಾಸ್ತಿತತ್ತ್ವಂಗುರೋಃ ಪರಂ" ಎಂಬ ಉಕ್ತಿಗಳಿಗನುಸಾರವಾಗಿ ಅನೇಕ ಲೌಕಿಕೋದಾಹರಣೆಗಳನ್ನು ಕೊಟ್ಟು ಸರ್ವಸಭಿಕರಿಗೆ ಮನಾನಂದವಾಗುವಂತೆ ಬೋಧಿಸಿದರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಶಿಷ್ಯಶಿರೋಮಣಿಗಳ ಮನೆತನದವರೆಲ್ಲರೂ ಶ್ರೀ ಗುರುಗಳವರ ಪಾದಕ್ಕೆ ರುದ್ರಾಭಿಷೇಕ ಅಷ್ಟೋತ್ತರಶತ ಬಿಲ್ವಾರ್ಚನ ಪಾದಪೂಜಾ ತೀರ್ಥಪ್ರಸಾದ ಸೇವನಾದಿಗಳನ್ನು ಮಾಡಿದನಂತರ ಮಹಾಗಣಾರಾಧನೆಯು ನೆರವೇರಿ ಸಾವಿರಾರು ಜನರು ತೃಪ್ತಿಹೊಂದಿದರು. ಮಾಹೇಶ್ವರರಿಗೆ ಸದಕ್ಷಿಣಾಂಬೂಲವನ್ನು ಕೊಟ್ಟು ಆನಂದಗೊಳಿಸಿದರು. ಕೈಲಾಸವಾಸಿಗಳಾದ ತಮ್ಮ ಮಾತಾಪಿತೃಗಳಾದ ದೊಡ್ಡನಗೌಡರು ಜೀಲಮ್ಮನವರಿಗೆ ಶಿವಲೋಕಪ್ರಾಪ್ತ್ಯರ್ಥವಾಗುವದಕ್ಕಾಗಿಯೂ ಉತ್ತರೋತ್ತರ

[6ನೆಯ ಪುಟವನ್ನು ನೋಡಿರಿ.]

ಪಂಚಾಚಾರ್ಯ ಪ್ರಭಾ.

೧೯೩೨ನೇ ಮಾರ್ಚಿ ತಾ|| ೨೮ ನೇ ಸೋಮವಾರ.

ಪೀಠಾಚಾರ್ಯರ ಸಂಚಾರ.

ವೀರಶೈವಮತರಾಜ್ಯಪಾಲಕರಾಗಿರುವ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು ಬಹುಕಾಲದಿಂದ ಸಂಚರಿಸದೆ ಇರೋಣದರಿಂದ ಈ ಮತೀಯರು ತಮ್ಮ ತಮ್ಮ ಮನಸ್ಸಿಗೆ ಬಂದಹಾಗೆ ವರ್ತಿಸುತ್ತ ಬಂದಿರುತ್ತಾರೆ. ಗುರುಮುಖದಿಂದ ಪಾಠವನ್ನು ಕಲಿಯದ ವಿದ್ಯಾರ್ಥಿಗಳು ತಮ್ಮ ತಮ್ಮ ಮನಸ್ಸಿಗೆ ಬಂದುದನ್ನು ಓದಿಕೊಳ್ಳುತ್ತ ನಿಜವಾದ ಮಾರ್ಗವನ್ನು ಕಾಣದೆ ಕಾಡುದಾರಿಯನ್ನು ಹಿಡಿದು ತಾವು ಹೋಗುವ ದಾರಿಯೇ ಸರಿಯೆಂದು ವಾದಿಸುತ್ತ ಪರಿಣಾಮದಲ್ಲಿ ಬಹುವಿಧ ಕಷ್ಟಗಳಿಗೆ ಗುರಿಯಾಗುವದು ಸರ್ವಾನುಭವಸಿದ್ಧವಾಗಿರುತ್ತದಷ್ಟೆ! ಬಹುಕಾಲದಿಂದ ನಮ್ಮ ವೀರಶೈವಮತದಲ್ಲಿ ಮೇಲಿಂದಮೇಲೆ ಧರ್ಮಕರ್ತೃಗಳಾದ ಪೀಠಾಚಾರ್ಯರು ಅಲ್ಲಲ್ಲಿ ಸಂಚರಿಸುತ್ತ ಶಿಷ್ಯರಿಗೆ ಮುಕ್ತಿಸಾಧನಗಳಾದ ಆಚಾರವಿಚಾರಗಳನ್ನು ತಿದ್ದದೆ, ಧರ್ಮೋಪದೇಶ ಮಾಡದೆ, ನೀತಿಮಾರ್ಗವನ್ನುಪದೇಶಿಸದೆ ಕರ್ತವ್ಯಶೂನ್ಯರಾಗಿ ತಮ್ಮ ತಮ್ಮ ಪೀಠಗಳಲ್ಲಿ ಸ್ವಸ್ಥಚಿತ್ತರಾಗಿ ಕುಳಿತದ್ದರಿಂದ ಪವಿತ್ರವಾದ ವೀರಶೈವರಾಜ್ಯದಲ್ಲಿ ವಾಸಮಾಡಿದ ಪ್ರಜೆಗಳು ಗುರುಭಕ್ತಿಶೂನ್ಯರಾಗಿ ಸಿದ್ಧಾಂತರೀತಿಯಾದ ರಾಜಮಾರ್ಗವನ್ನು ಬಿಟ್ಟು ಯಾವುಯಾವುದೋ ಒಂದೊಂದು ಚಿಕ್ಕಚಿಕ್ಕ ದಾರಿಯಲ್ಲಿ ಹೊರಟು ಜಗದಾದಿಯಿಂದ ವೇದಾಗಮಸಮ್ಮತವಾಗಿ ಬಂದ ಶೈವಸಿದ್ಧಾಂತವೆಂಬ ಸ್ವಚ್ಛಸರೋವರವನ್ನು ಮಲಿನಗೊಳಿಸಿರುತ್ತಾರೆ. ಇತ್ತೀಚೆಗೆ ದೈವಯೋಗದಿಂದ ಕ್ರಮಕ್ರಮವಾಗಿ ಗುಣಾಢ್ಯರೂ, ತಪಸ್ವಿಗಳೂ, ಆಚಾರನಿಷ್ಠರೂ, ವಿದ್ವಾಂಸರೂ ಆಗಿರುವವರೇ ಆಯಾಯ ಧರ್ಮಪೀಠಗಳನ್ನಾರೋಹಣ ಮಾಡುತ್ತ ಬಂದಿದ್ದರಿಂದ ಬಿಸಿಲಿನ ತಾಪದಿಂದ ಕಂದಿಹೋಗುತ್ತಿದ್ದ ಬಳ್ಳಿಗಳಮೇಲೆ ಸುವೃಷ್ಟಿಯಾದಂತೆ ಕ್ಷೀಣೋನ್ಮುಖವಾಗುತ್ತಿದ್ದ ವೀರಶೈವಧರ್ಮವು ಪುನಃ ಏಳ್ಗೆಯನ್ನು ಹೊಂದಲು ಅವಕಾಶವಾಯಿತು. ಸದ್ಯಃ ಪೀಠಾರೋಹಣ ಮಾಡಿದ ಜಗದಾಚಾರ್ಯರು ಅಸಾಧಾರಣವಾದ ವೈದುಷ್ಯವನ್ನು ಸಂಪಾದಿಸಿ ಶಮದಮಾದಿಗಳಿಗಾಕರರಾಗಿ ದೇಶಮಧ್ಯದಲ್ಲಿರುವ ತಮ್ಮ ಶಿಷ್ಯರಿಗೆ ಧರ್ಮೋಪದೇಶ ಮಾಡುವುದಕ್ಕಾಗಿ ಗುರುತ್ವದ್ಯೋತಕಗಳಾದ ತಮ್ಮ ತಮ್ಮ ಮರ್ಯಾದೆಗಳೊಂದಿಗೆ ದೇಶಮಧ್ಯದಲ್ಲಿ ಸಂಚರಿಸುತ್ತಿರುವುದು ಭಕ್ತರ ಪುಣ್ಯೋದಯವೆಂದೇ ಹೇಳಬೇಕಾಗಿದೆ. ಹೀಗೆ ಪದೇಪದೇ ಧರ್ಮಗುರುಗಳ ದರ್ಶನಲಾಭವು ಭಕ್ತರಿಗಾಗುತ್ತಿದ್ದರೆ ಎಲ್ಲಶಿಷ್ಯರೂ ವೀರಶೈವಸಿದ್ಧಾಂತಮಾರ್ಗವನ್ನು ಬಿಟ್ಟು ಅಚೆಈಚೆ ಕದಲುತ್ತಿದ್ದಿಲ್ಲ. ದೈವಸಾಕ್ಷಾತ್ಕಾರಸಾಧನವಾದ ಗುರುಭಕ್ತಿಲತೆಯು ಸರ್ವತೋಮುಖವಾಗಿ ಚಿಗುರುತ್ತ ಮುಕ್ತಿಫಲವು ಸರ್ವರ ಕರಗತವಾಗಬಹುದಾಗಿತ್ತು. ಪೀಠಾಚಾರ್ಯರು ಹಾಗೆ ಮಾಡದ್ದರಿಂದ ನೀರಿನಂತಿರುವ ಭಕ್ತರ ಮನಸ್ಸು ಅಧರ್ಮಗರ್ತವನ್ನು ಪ್ರವೇಶಿಸಿ ಪಾಚಿಗಟ್ಟಿಹೋಗಿದೆ. ಸದ್ಯಃ ಮಹಾವೈದುಷ್ಯವನ್ನು ಪಡೆದ ಪೀಠಾಚಾರ್ಯರು ಶಿಷ್ಯರ ಮನಸ್ಸೆಂಬ ನೀರಿನ ಮೇಲೆ ಆವರಿಸಿರುವ ಪಾಚಿಯನ್ನು ಧರ್ಮೋಪದೇಶವೆಂಬ ಚಿಲ್ಲದಬೀಜದಿಂದ ಪರಿಶುದ್ಧಗೊಳಿಸಬೇಕಾಗಿದೆ. ಮತಧರ್ಮಪಾಲಕರಾದ ಪೀಠಾಚಾರ್ಯರು ತಮ್ಮ ತಮ್ಮ ಶಿಷ್ಯರಿದ್ದ ದೇಶಗಳಲ್ಲಿ ಸಂಚರಿಸುವದು ಶ್ರೇಯಸ್ಕರವಾಗಿದ್ದರೂ ಅಲ್ಲಲ್ಲಿಯೇ ಕೆಲವು ಜನರು ಧರ್ಮಗುರುಗಳ ಶುಭಾಗಮನಕ್ಕೆ ವಿಘ್ನವನ್ನುಂಟುಮಾಡಬೇಕೆಂಬ ಮನೋರಥವುಳ್ಳವರಾಗಿದ್ದಾರೆಂಬುದನ್ನು ನೋಡಿ ಬಹಳ ವ್ಯಸನಪಡಬೇಕಾಗಿದೆ. ಈ ವಿಘ್ನಕಾರಿಗಳಾದರೂ ಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತಗಳಾದ ಅಷ್ಟಾವರಣ ಪಂಚಾಚಾರಗಳನ್ನೇ ಅವಲಂಬಿಸಿರುತ್ತಾರೆ. ಅವರು ಅನುಗ್ರಹಿಸಿದ ಶಿವಲಿಂಗವನ್ನೇ ಧರಿಸಿರುತ್ತಾರೆ. ತಮ್ಮ ವಂಶಗುರುಗಳಿಂದಲೇ ಶಿವದೀಕ್ಷೆಯನ್ನು ಪಡೆಯುತ್ತಾರೆ. ಹೀಗಿದ್ದರೂ ಅಂಥ ಧರ್ಮಗುರುಗಳ ಆಗಮನಕ್ಕೆ ಅಡ್ಡಿಯನ್ನು ಆಚರಿಸುವುದೆಂದರೆ ಎಂಥ ಅತ್ಯಾಚಾರವೆಂಬುದು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತದೆ. ಒಂದುಪಕ್ಷ ಇದು ಅವರ ದೋಷವೆಂದು ಹೇಳಲೂ ಆಗುವುದಿಲ್ಲ. ಬಹುಕಾಲದಿಂದ ಮೂಲಗುರುಗಳ ಧರ್ಮೋಪದೇಶವೂ ದರ್ಶನ ಸಂಭಾಷಣೆಗಳೂ ನಡೆಯಲು ಅವಕಾಶವೇ ತಪ್ಪಿಹೋಗಿ ಮಧ್ಯಮಧ್ಯದಲ್ಲಿ ಬೇರೆ ಬೇರೆ ಬಲವಾದ ಸಂಸರ್ಗದೋಷಗಳು ಒದಗಿದ್ದರಿಂದ ಕುಲಗುರುಗಳ ಸ್ಮರಣೆಯೇ ತಪ್ಪಿಹೋಗಿದೆ. ಇದು ಭ್ರಾಂತಿಯಿಂದ ಬಂದ ದೋಷವಲ್ಲದೆ ಯಥಾರ್ಥವಾದ ದೋಷವಲ್ಲ. ಮಹಾಶೂರನೂ, ದೈವಭಕ್ತನೂ ಆದ ಕರ್ಣನೂ ಸಹ ತಾನು ಪಾಂಡವಕುಲದಲ್ಲಿ ಹುಟ್ಟಿದ್ದರೂ ಬಹುಕಾಲ ರಾಧೆಯ ಸಂಸರ್ಗದಲ್ಲಿಯೇ ಬೆಳೆದದ್ದರಿಂದ ನಾನು ರಾಧೇಯನೇ ಹೊರತು ಪಾಂಡವರಲ್ಲಿ ಸೇರಿದವನಲ್ಲವೆಂದು ತಿಳಿದುಕೊಂಡು ಪಾಂಡವರಿಗೇನೇ ಅನೇಕ ತೊಂದರೆಗಳನ್ನುಂಟುಮಾಡಿದನೆಂದುಹೇಳುವಲ್ಲಿ, ಇನ್ನು ಬಹುವರ್ಷಗಳಿಂದ ತಮ್ಮ ಕುಲಗುರುಗಳ ಸಂದರ್ಶನ ಸಂಭಾಷಣಗಳೇ ತಪ್ಪಿದುದರಿಂದ ಬೇರೆ ಬೇರೆಯವರಿಗೆ ಶರಣಾಗತರಾಗಿ ಅವರೇ ಗುರುಗಳೆಂದು ಭ್ರಮಿಸಿವಾಗಿ ನಿಜಗುರುಗಳಮೇಲೆ ಪ್ರತಿಭಟಿಸಹತ್ತಿ ಇಂಥ ನಿಜಗುರುಗಳ ಶುಭಾಗಮನದಲ್ಲಿ ನಾನಾವಿಧಗಳಾದ ವಿಘ್ನಗಳನ್ನು ಆಚುತ್ತಾರಲ್ಲದೆ ಗುರುನಿಂದೆಯನ್ನೂ ಮಾಡುತ್ತಾರೆ. ಗುರುನಿಂದಕರು ಚಂಡಾಲಯೋನಿಯಲ್ಲಿ ಜನಿಸುವರೆಂಬ ಶಾಸ್ತ್ರಭೀತಿಯನ್ನು ಮೀರಿ ನಾಸ್ತಿಕರಿಗಿಂತಲೂ ನಾಸ್ತಿಕರಾಗಿ ವರ್ತಿಸುತ್ತಾರೆ. ಇದಕ್ಕೆಲ್ಲಾ ಈಗಿನ ಕೆಲಸನ್ಯಾಸಿಗಳ ದುರುಪದೇಶವೇ ಮೂಲಕಾರಣವಾಗಿದೆಯೆನ್ನುವುದು ಪ್ರತಿಯೊಬ್ಬರಿಗೂ ತಿಳಿದ ವಿಷಯವಾಗಿದೆ ಎಲ್ಲಿಯಾದರೂ ಒಂದೊಂದು ಊರಲ್ಲಿ ಈ ತರಹದ ಗುಂಪು ಇದ್ದೀತಾದೆ. ಜಗದಾಚಾರ್ಯರು ಇವರ ಗೊಡ್ಡುಬೆದರಿಕೆಗೆ ಬೆದರಿ ತಮ್ಮ ಧರ್ಮರಕ್ಷಣಕಾರ್ಯವನ್ನು ಬಿಟ್ಟುಬಿಡುವರೆ? ಮಂದೇಹರೆಂಬ ರಾಕ್ಷಸರು ಅಡ್ಡಗಟ್ಟುವರೆಂಬ ಭೀತಿಯಿಂದ ಜಗಚ್ಚಕ್ಷುವಾದ ಸೂರ್ಯನು ಉದಯಿಸದೆ ಇರುವನೆ? "ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಆರ್ಯೋಕ್ತಿಯಂತೆ ಇಂಥ ಶುಭಕಾರ್ಯವನ್ನು ಮಾಡುವ ಸಮಯದಲ್ಲಿ ಅನೇಕ ವಿಧವಾದ ತೊಂದರೆಗಳು ಉಂಟಾಗುವುದು ಸಹಜವಾಗಿದೆ. ಆದರೂ ಚಾಲಕರು ದೃಢನಿಶ್ಚಯದಿಂದ ಕಾರ್ಯವನ್ನು ಮಾಡಬೇಕಾಗಿದೆ. ಬಿಲ್ವಪತ್ರವನ್ನು ಎತ್ತಿ ತಂದು ಶಿವಪೂಜೆಯನ್ನು ಮಾಡುವದು ಪುಣ್ಯಕಾರ್ಯವೆಂದು ತಿಳಿದಿರುವ ಮನುಷ್ಯನು ಬಿಲ್ವವೃಕ್ಷದ ಮುಳ್ಳು ಚುಚ್ಚುವುದೆಂದು ತಿಳಿದಿದ್ದರೂ ಉಪಾಯದಿಂದ ಪತ್ರವನ್ನು ಎತ್ತದೆ ಬಿಡುವುದಿಲ್ಲ. ಒಂದು ವೇಳೆ ಮುಳ್ಳು ಚುಚ್ಚಿದರೂ ಆ ನೋವನ್ನು ಸಹಿಸಿಕೊಳ್ಳುವನೇ ಹೊರತು ಪತ್ರವನ್ನೆತ್ತುವ ಕೆಲಸವನ್ನೇ ಬಿಡುವುದಿಲ್ಲ. ಏಕೆಂದರೆ ಶಿವಪೂಜೆಗೆ ಕಂಟಕವನ್ನುಂಟುಮಾಡಬೇಕೆಂಬ ಉದ್ದೇಶವು ಆ ಮುಳ್ಳಿಗೇನೂ ಇರುವುದಿಲ್ಲವೆಂಬುದನ್ನು ಅವನು ಚೆನ್ನಾಗಿ ತಿಳಿದಿರುತ್ತಾನೆ. ಹಾಗೆಯೇ ಗುರುಸೇವೆಯನ್ನು ಮಾಡಿ ಧರ್ಮವನ್ನು ಗಳಿಸಬೇಕೆಂಬ ಆಯಾಯ ಊರ ಪ್ರಮುಖರು ಸಹ ಗುರುಸೇವೆಗೆ ವಿಘ್ನವನ್ನುಂಟುಮಾಡುವವರನ್ನು ನೋಡಿ ಇವರು ವಾಸ್ತವವಾಗಿಯೂ ಗುರುಸೇವೆಗೆ ವಿಘ್ನಗಳನ್ನುಂಟುಮಾಡುವ ಮನೋಭಾವವುಳ್ಳವರಲ್ಲವೆಂದು ತಿಳಿದು ತಾವು ಹಿಡಿದ ಕಾರ್ಯವನ್ನು ಬಿಡದೆ ಅವರಿಂದ ಎಷ್ಟು ತೊಂದರೆಗಳು ಸಂಭವಿಸಿದರೂ ವಿಜಯಯಾತ್ರೆಯನ್ನು ಹೊರಟ ಪೀಠಾಧಿಪತಿಗಳನ್ನು ತಮ್ಮ ಊರಿಗೆ ಬರಮಾಡಿಕೊಂಡು ಗುರುಸೇವಾಭಾಗಿಗಳಾಗಬೇಕು. ಇದೇ ಪ್ರತಿಯೊಬ್ಬ ವೀರಶೈವನ ಕರ್ತವ್ಯವೆಂಬುದನ್ನು ಯಾರೂ ಮರೆಯಲಾಗದು. ಕರ್ಣನು ಮಧ್ಯಕಾಲದಲ್ಲಿ ಸಂಸರ್ಗದೋಷದಿಂದ ತಾನು ರಾಧಾಪುತ್ರನೆಂದು ತಿಳಿದರೂ ಕೊನೆಯಲ್ಲಿ ಅವನಿಗೆ ನಿಜವಾದ ಜ್ಞಾನೋದಯವಾದಂತೆ ಈಗ ಗುರುಗಳ ಶುಭಾಗಮನಕ್ಕೆ ವಿಘ್ನಗಳನ್ನಾಚರಿಸುವವರೆಲ್ಲರಿಗೂ ಜ್ಞಾನೋದಯವಾಗದಿರಲಾರದು. ಈ ತರಹದ ಜನರು ಅಂತ್ಯದಲ್ಲಿ ದಾರಿಗೆಬರುವುದಕ್ಕಿಂತಲೂ ಮೊದಲೇ ದಾರಿಗೆ ಬಂದು ಗುರುಕಾರ್ಯದಲ್ಲಿ ಭಾಗಿಗಳಾಗುವುದು ಶ್ರೇಯಸ್ಕರವಾಗಿದೆ.

ಒಳದೇಶದ ವೃತ್ತಾಂತಗಳು.

1932 ನೇ ವರ್ಷದ ದಸರಾ ಗಲಭೆ ಮೊಕದ್ದಮೆಯ ತೀರ್ಮಾನವು ಈ ತಿಂಗಳ 31 ನೇ ತಾರೀಖು ದಿವಸ ಹೇಳಲ್ಪಡುವದೆಂದು ತಿಳಿದುಬರುತ್ತದೆ.

ಮೊನ್ನೆ 23 ನೇ ತಾರೀಖು ಶುಕ್ರವಾರದ ದಿವಸ ಮೈಸೂರು ಅನಾಥಾಲಯದ ಸಮೀಪದಲ್ಲಿ ಪಲನಿಶೆಟ್ಟಿ ಎಂಬ 50 ವರ್ಷದ ವೃದ್ಧನು ಒಂದು ಮರಕ್ಕೆ ನೇಣು ಹಾಕಿಕೊಂಡಿದ್ದು ಪೋಲೀಸರು ಮಹಜರು ಮಾಡಿ ತನಿಖೆಕ್ರಮಗಳನ್ನು ಜರುಗಿಸಿರುತ್ತಾರೆ.

ಕಳೆದವರ್ಷ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ನೇತೃತ್ವದಲ್ಲಿ ಹಿಂದೂಸ್ಥಾನದ ಮುಖ್ಯಮುಖ್ಯ ನಗರಗಳಲ್ಲೆಲ್ಲಾ ನಡೆದ 'ಇಂಡಿಯನ್ ಎಂಪೈರ್ ಹೆಲ್ತ್ ಮತ್ತು ಬೇಬಿವೀಕ್' ಸಂಬಂಧದಲ್ಲಿ ಮೈಸೂರು ಸಂಸ್ಥಾನಕ್ಕೆ ಪ್ರಥಮಸ್ಥಾನವು ದೊರಕಿ, ಇರ್ವಿನ್ ಕಪ್ ಕೊಡಲ್ಪಟ್ಟಿತೆಂದು ತಿಳಿದುಬಂದಿದೆ.

ಮೈಸೂರು ಸರಕಾರದವರು ಸೊರಬ ತಾಲೂಕಿನಲ್ಲಿ ಈ ವರ್ಷ ತರೀವ್ಯವಸಾಯ ನಡೆದಿರುವ ಜಮೀನುಗಳ ಮತ್ತು ಸಾಗುವಳಿ ಕಂದಾಯದಲ್ಲಿ ಅರ್ಧಭಾಗವನ್ನು ಅಂದರೆ 25,580—10—0 ರೂ. ಗಳನ್ನು ಡೆಪ್ಯುಟಿ ಕಮಿಷನರು ಮತ್ತು ರೆವಿನ್ಯೂಕಮಿಷನರುಗಳ ಸಲಹೆಯ ಮೇರೆಗೆ ವಜಾಮಾಡಿರುತ್ತಾರೆ.

ನಂಜನಗೂಡು ಕ್ಷೇತ್ರಕ್ಕೆ ರೈಲ್ವೆ ಅಥವಾ ಇತರ ವಾಹನಗಳ ಮಾರ್ಗವಾಗಿ ಹೋಗತಕ್ಕ ಪ್ರಯಾಣಿಕರ ಮೇಲೆ 'ಯಾತ್ರಿಕರ ತೆರಿಗೆ'ಯನ್ನು ಹಾಕಬೇಕೆಂದು ನಂಜನಗೂಡು ಮುನಿಸಿಪಲ್ ಕೌನ್ಸಿಲ್‌ನವರು ನಿರ್ಧರಿಸಿರುತ್ತಾರೆ. ಈ ತೆರಿಗೆಯನ್ನು ಹಾಕುವ ವಿಚಾರದಲ್ಲಿ ಏನಾದರೂ ಆಕ್ಷೇಪಣೆಗಳಿದ್ದರೆ ಏಪ್ರಿಲ್ 14ನೇ ತಾರೀಖಿನೊಳಗಾಗಿ ಮುನಿಸಿಪಲ್ ಪ್ರೆಸಿಡೆಂಟರವರಿಗೆ ತಿಳುಹಿಸತಕ್ಕದ್ದೆಂದು ಪ್ರಕಟಿಸಲ್ಪಟ್ಟಿದೆ.

ರಾಜಧಾನಿಯ ಮೃಗಾಲಯಕ್ಕೆ ಒಂದು ವಿಚಿತ್ರವೂ ಅದ್ಭುತವೂ ಆದ ಕೃಷ್ಣಸರ್ಪವು ಬಂದಿರುವುದು. ಇದು ಸುಮಾರು 12 ಅಡಿಗಳಷ್ಟು ಉದ್ದವಾಗಿದ್ದು, ಮೈಮೇಲೆಲ್ಲಾ 1½—2 ಅಂಗುಲದಷ್ಟು ಉದ್ದವಾದ ಕೂದಲುಗಳು ಬೆಳೆದಿರುವವು. ಇದನ್ನು ಯಾರೋ ಒಬ್ಬರು ಶಿವಮೊಗ್ಗಾ ಪ್ರಾಂತದ ಕಾಡಿನಲ್ಲಿ ಹಿಡಿದು ಇಲ್ಲಿಗೆ ತಂದು ಒಪ್ಪಿಸಿದರೆಂದೂ, ಶ್ರೀಮನ್ಮಹಾರಾಜರವರು ಆತನಿಗೆ 300 ರೂಪಾಯಿಗಳ ಬಹುಮಾನ ಮಾಡಿದರೆಂದೂ ತಿಳಿದುಬಂದಿದೆ.

ಬೆಂಗಳೂರು ಕಂಟೋನ್ಮೆಂಟನ್ನು ಮೈಸೂರಿಗೆ ಹಿಂತಿರುಗಿ ಪಡೆಯುವ ವಿಷಯದಲ್ಲಿ ಇಂಡಿಯಾ ಸರಕಾರದೊಡನೆ ಅವಶ್ಯಕವಾಗಿರುವ ಆಲೋಚನೆಗಳನ್ನು ಮಾಡಿ ಬರುವುದಕ್ಕಾಗಿ ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರೂ, ಬ್ರಿಟಿಷ್ ರೆಸಿಡೆಂಟರವರೂ ಇದೇ ಮಾರ್ಚ 16 ನೇ ತಾರೀಖು ಶುಕ್ರವಾರರಾತ್ರಿ ಬೆಂಗಳೂರಿನಿಂದ ದೆಹಲಿನಗರಕ್ಕೆ ಪ್ರಯಾಣ ಬೆಳೆಸಿದರು. ಸರ್ ಮಿರ್ಜಾರವರು ಈ ತಿಂಗಳ ಅಂತ್ಯದಲ್ಲಿ ಹಿಂತಿರುಗಿ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ.

ಮಳವಳ್ಳಿ ಟೌನ್ ಸಬ್ ಪೋಸ್ಟ್‌ಮಾಸ್ಟರಾಗಿದ್ದ ಎನ್. ಎಸ್. ರಾಜಾರಾವ್ ಎಂಬವರು ಪಾರ್ವತಮ್ಮ ಎಂಬವರಿಂದ ಸೇವಿಂಗ್ಸ್‌ಬ್ಯಾಂಕ್ ಲೆಕ್ಕಕ್ಕಾಗಿ ಕೊಡಲ್ಪಟ್ಟಿದ್ದ 25 ರೂಪಾಯಿಗಳನ್ನು ಲೆಕ್ಕಕ್ಕೆ ಜಮಾ ಕಟ್ಟದೆ ಪಾಸ್‌ಬುಕ್ಕನ್ನೂ ಹಿಂತಿರುಗಿ ಕೊಡದೆ ಹಣವನ್ನು ದುರುಪಯೋಗಪಡಿಸಿಕೊಂಡರೆಂಬ ಅಪಾದನೆಯಮೇಲೆ, ಅಸಿಸ್ಟೆಂಟ್ ಸೆಷನ್ಸ್ ಜಡ್ಜರವರು ವಿಚಾರಣೆಯನ್ನು ನಡೆಯಿಸಿ, ಅಪರಾಧಿಗೆ ಎರಡುವರ್ಷಗಳ ಕಠಿಣ ಶಿಕ್ಷೆಯನ್ನೂ 100 ರೂ. ದಂಡವನ್ನೂ ವಿಧಿಸಿರುತ್ತಾರೆ. ಇವರು ಪೋಸ್ಟ್ ಇಲಾಖೆಯಲ್ಲಿ 21 ವರ್ಷಗಳ ಕಾಲ ನೌಕರಿಮಾಡಿದ್ದರು.

ಇದೇ ಮಾರ್ಚಿ 19ನೇ ತಾರೀಖಿನ ದಿವಸ ಮಧ್ಯಾಹ್ನ 11 ಘಂಟೆಯ ಸಮಯದಲ್ಲಿ ನಂಜನಗೂಡು ಗವರ್ನ್‌ಮೆಂಟ್ ಮಿಡಲ್‌ಸ್ಕೂಲು ಸಮೀಪದಲ್ಲಿರುವ ಮೆಸ್ಸರ್ಸ್ ಆರ್. ಎನ್. ಬಾಯ್ಸ್ ಕಂಪೆನಿಯಲ್ಲಿ ನೌಕರನಾಗಿ

ಮುಕುಂದ ಎಂಬ ತರುಣನನ್ನು ರಂಗಯ್ಯನೆಂಬ ಪೋಲೀಸ್ ಕಾನ್‌ಸ್ಟೆಬಲನು ಹೊಟ್ಟೆ ಮತ್ತು ಬೆನ್ನಿನ ಮೇಲೆ ತಿವಿದು ಘಾಯಪಡಿಸಿದನು. ಆ ಸಮಯದಲ್ಲಿ ರಸ್ತೆಯಲ್ಲಿ ನೂರಾರು ಜನರು ಓಡಾಡುತ್ತಿದ್ದರು. ಈ ವಿಷಯವು ಕೂಡಲೇ ಇನ್‌ಸ್ಪೆಕ್ಟರಿಗೆ ತಿಳಿದು, ಅವರು ಬಂದು ಮುಕುಂದನ ಹೇಳಿಕೆಯನ್ನು ತೆಗೆದುಕೊಂಡರು. ಅನಂತರ ಡಾಕ್ಟರನ್ನು ಕರೆಯಿಸಿ ಚಿಕಿತ್ಸೆಮಾಡಿಸಿದರೂ ಪ್ರಯೋಜನವಾಗದೆ, ಮ್ಯಾಜಿಸ್ಟ್ರೇಟರು ಬರುವುದರೊಳಗಾಗಿ ಮೃತಪಟ್ಟನು. ಇನ್‌ಸ್ಪೆಕ್ಟರು ಜಾಗ್ರತೆಯಾಗಿ ಬರದಿದ್ದರೆ ಮತ್ತೆರಡು ಖೂನಿಗಳಾಗುತ್ತಿದ್ದವಂತೆ! ಪೋಲೀಸರು ರಂಗಯ್ಯನನ್ನು ದಸ್ತಗಿರಿಮಾಡಿರುವರು. ಅಪರಾಧಿಯು ತನ್ನ ಹೇಳಿಕೆಯಲ್ಲಿ ಈಗ್ಗೆ 3 ತಿಂಗಳ ಹಿಂದೆ ಮೃತಪಟ್ಟ ತನ್ನ ಹೆಂಡತಿಗೂ, ಮುಕುಂದನಿಗೂ ಅಂತರಂಗಸ್ನೇಹವಿದ್ದುದೇ ಖೂನಿಗೆ ಕಾರಣವೆಂದು ತಿಳುಹಿಸಿರುವನಂತೆ!

ರಾಜಧಾನಿಯ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಚಿತ್ರಕಲೆಯ ಅಭ್ಯಾಸವನ್ನು ಮಾಡಿ, ಮುಂಬಯಿ, ಕಲ್ಕತ್ತಾ, ಮೊದಲಾದ ಸ್ಥಳಗಳಲ್ಲಿ ಪೇಂಟಿಂಗ್ ಮತ್ತು ಫೋಟೋಗ್ರಾಫಿ ಕೆಲಸಗಳಲ್ಲಿ ನಿಪುಣತೆಯನ್ನು ಪಡೆದು, ಕಳೆದ 1½ ವರ್ಷಗಳಿಂದಲೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸಿನಲ್ಲಿ ಫೋಟೋ ಕೆಲಸವನ್ನು ಮಾಡುತ್ತಿದ್ದ ಮಿ|| ಎಸ್. ಸುಬ್ಬಕೃಷ್ಣನ್‌ರವರು ಇದೇ ಮಾರ್ಚಿ 18 ನೇ ತಾರೀಖು ಭಾನುವಾರ ಸಾಯಂಕಾಲ ಜನರಲ್ ಪೋಸ್ಟಾಫೀಸ್ ರಸ್ತೆಯಲ್ಲಿ ತಾವು ನೂತನವಾಗಿ ಸ್ಥಾಪಿಸಿರುವ "ಮಾಡರ್ನ್ ಎಲೆಕ್ಟ್ರಿಕ್ ಸ್ಟೂಡಿಯೊ" ಎಂಬ ಚಿತ್ರಕಲಾಶಾಲೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಸಮಾರಂಭಕ್ಕೆ ರಾಜಧಾನಿಯ ಅನೇಕ ಜನ ವರ್ತಕರೂ, ವಿಶ್ವವಿದ್ಯಾಲಯದ ಅಧ್ಯಾಪಕರೂ, ವಕೀಲರೂ ಮತ್ತು ಇನ್ನೂ ಅನೇಕ ಜನ ದೊಡ್ಡಮನುಷ್ಯರುಗಳೂ ಆಗಮಿಸಿ, ನೂತನ ಸ್ಟೂಡಿಯೋದಲ್ಲಿ ಪ್ರದರ್ಶಿಸಲ್ಪಟ್ಟಿದ್ದ ಚಿತ್ರಗಳನ್ನು ನೋಡಿ ಅತ್ಯಾನಂದಭರಿತರಾದರು. ಈಗ್ಗೆ 1-2 ತಿಂಗಳ ಹಿಂದೆ ನಮ್ಮ ಶ್ರೀಮನ್ಮಹಾರಾಜರವರು ಇವರಿಂದ ತಮ್ಮ ಫೋಟೋಗಳನ್ನು ತೆಗೆಯಿಸಿಕೊಂಡು, ಇವರ ಕಲಾಕೌಶಲ್ಯವನ್ನು ನೋಡಿ ವಿಶೇಷ ಸಂತೋಷಪಟ್ಟು, ಇವರಿಗೆ 1000 ರೂ. ಗಳ ವರೆಗೂ ಬಹುಮಾನವನ್ನು ದಯಪಾಲಿಸಿರುತ್ತಾರೆಂದು ತಿಳಿದುಬರುತ್ತದೆ. ಈ ತರುಣಕಲಾಭಿಜ್ಞರಿಗೆ ಜಗದೀಶ್ವರನು ಇತೋಪ್ಯತಿಶಯವಾದ ಶ್ರೇಯಸ್ಸನ್ನುಂಟುಮಾಡಲೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ.

ರಷ್ಯಾದೇಶದಲ್ಲಿ ಧರ್ಮವಿರುದ್ಧ ಚಳುವಳಿಯು ಪುನಃ ಪ್ರಾರಂಭವಾಗಿದೆ.

ಬಂಗಾಳಾ ಸರಕಾರದವರು ಚಿತ್ತಗಾಂಗಿನ ಆಯುಧಶಾಲೆಯ ದರೋಡೆಗೆ ಸಂಬಂಧಪಟ್ಟ 8 ಜನ ಅಪರಾಧಿಗಳನ್ನು ಪತ್ತೆಹಚ್ಚಿ ಕೊಟ್ಟವರಿಗೆ 3,000 ರೂ ಗಳ ಬಹುಮಾನವನ್ನು ಕೊಡುವುದಾಗಿ ಪ್ರಕಟಿಸಿರುತ್ತಾರೆ.

ಬ್ರಿಟಿಷ್ ಸರಕಾರದವರು ಆಕಾಶವಿಮಾನಗಳಲ್ಲಿ ಸಂಚರಿಸುವವರ ಅನುಕೂಲಕ್ಕಾಗಿ ಇಂಗ್ಲೆಂಡಿನ ಪ್ರತಿಯೊಂದು ನಗರ ಮತ್ತು ಗ್ರಾಮಕ್ಕೂ ಒಂದೊಂದು ಬೋರ್ಡನ್ನು ಬರೆಯಿಸಿ ಮೇಲ್ಭಾಗಕ್ಕೆ ಕಾಣಿಸುವಂತೆ ಹಾಕಬೇಕೆಂದು ನಿರ್ಧರಿಸಿರುತ್ತಾರೆ.

ಇದೇ ಮಾರ್ಚಿ 17 ನೇ ತಾರೀಖು ಬೆಳಗ್ಗೆ ಸಿಕಂದರಾಬಾದಿಗೆ ಹೋಗುತ್ತಿದ್ದ ರೈಲ್ವೆಗಾಡಿಯ ಗಾರ್ಡನು ಗಾಡಿಗೆ ಹೊರಡುವದಕ್ಕೆ ಸಂಜ್ಞೆ ಮಾಡಿದ ನಂತರ, ಅದು ಚಲಿಸುತ್ತಿರುವಾಗ ಗಾಡಿಯನ್ನು ಹತ್ತಲು ಪ್ರಯತ್ನಿಸಿ ಕಾಲುಜಾರಿ ಗಾಡಿಯ ಕೆಳಕ್ಕೆ ಬಿದ್ದು ಮೃತಪಟ್ಟನೆಂದು ತಿಳಿದುಬಂದಿದೆ.

ಹೊಸಪೇಟೆ, ಹಂಪೆ ಮೊದಲಾದ ಕಡೆಗಳಲ್ಲಿ ಪ್ಲೇಗುರೋಗವು ವಿಶೇಷವಾಗಿರುವುದರಿಂದ ಇದೇ ಚೈತ್ರ ಶುದ್ಧ ಪೂರ್ಣಿಮಾ ದಿನ ಹಂಪೆಯಲ್ಲಿ ನಡೆಯುವ ಶ್ರೀ ವಿರೂಪಾಕ್ಷಸ್ವಾಮಿಯ ರಥೋತ್ಸವಕ್ಕೆ ಹೋಗುವದು ಅಪಾಯಕರವೆಂದು ಬಳ್ಳಾರಿ ಜಿಲ್ಲೆಯ ಆರೋಗ್ಯ ಶಾಖಾಧಿಕಾರಿಗಳು ಪ್ರಕಟಿಸಿರುತ್ತಾರೆ.

ಕಲ್ಕತ್ತಾನಗರದ ಸಮೀಪದಲ್ಲಿ ಭೂಕಂಪದ ಸಮಯದಲ್ಲಿ ಒಬ್ಬ ಬ್ರಿಟಿಷ್ ಅಧಿಕಾರಿಯು ರಸ್ತೆಯಲ್ಲಿ ಹೋಗುತ್ತಿದ್ದಾಗ ಭೂಮಿಯು ಇದ್ದಕ್ಕಿದ್ದಂತೆ ಸೀಳಿ ಆ ಅಧಿಕಾರಿಯನ್ನು ನುಂಗಿಕೊಂಡಿತೆಂದೂ, ಆಕ್ಷಣದಲ್ಲಿಯೇ ಆ ಡೊಗರಿನಿಂದ ಗಂಧಕಮಿಶ್ರವಾದ ನೀರು ಉಕ್ಕಿ ಅಧಿಕಾರಿಯನ್ನು ಮೇಲಕ್ಕೆ ಎತ್ತಿ ಹಾಕಿತೆಂದೂ ತಿಳಿದುಬಂದಿದೆ.

ಇದೇ ಮಾರ್ಚಿ 21ನೇ ತಾರೀಖಿನ ದಿವಸ ಜಪಾನ್ ದೇಶಕ್ಕೆ ಸೇರಿದ ಹಕಾಡೋಟ್ ಎಂಬ ನಗರಕ್ಕೆ ಅಕಸ್ಮಾತ್ ಬೆಂಕಿಹತ್ತಿ ಇಡೀನಗರವೇ ಸಂಪೂರ್ಣವಾಗಿ ಸುಟ್ಟು ಭಸ್ಮವಾಯಿತೆಂದೂ 2 ಲಕ್ಷ ಜನರು ನಿರಾಶ್ರಿತರಾಗಿರುವರೆಂದೂ, ನಗರವು ಉರಿಯುತ್ತಿದ್ದ ಜ್ವಾಲೆಗಳು ಗಗನಚುಂಬಿಗಳಾಗಿ 20 ಮೈಲುಗಳವರೆಗೆ ಕಾಣಿಸುತ್ತಿದ್ದವೆಂದೂ ತಿಳಿದುಬಂದಿದೆ.

ಇಂಗ್ಲೆಂಡ್‌ದೇಶದ ಒಂದಾನೊಂದು ಟಪ್ಪಾಲಾಫೀಸಿನಲ್ಲಿ 1915 ನೇ ಇಸವಿಯಲ್ಲಿ ಅಂಚೆಗೆ ಹಾಕಲ್ಪಟ್ಟಿದ್ದ 13 ಕಾಗದಗಳನ್ನು, ಪೋಸ್ಟ್‌ಮಾಸ್ಟರ್ ಜನರಲ್‌ರವರು ಈಗತಾನೇ ವಿಳಾಸದಾರರಿಗೆ ತಲಪಿಸಿರುವರಂತೆ! ಸದರಿ ಕಾಗದಗಳು ಟಪ್ಪಾಲ್‌ಗಾಡಿಯ ಒಂದು ಸಂದಿನಲ್ಲಿ ಸಿಕ್ಕಿಕೊಂಡಿದ್ದು, ಇದುವರೆಗೂ ಯಾರ ದೃಷ್ಟಿಗೂ ಗೋಚರವಾಗಿರಲಿಲ್ಲವಂತೆ!

ಜಿ. ಐ. ಪಿ. ರೈಲ್ವೆ ಕಂಪೆನಿಯವರು ಈವರೆಗೆ ಮೇಲ್‌ಗಾಡಿಯಲ್ಲಿ ಪ್ರಯಾಣಮಾಡುವವರಿಗೆ ಮೈಲು 1 ಕ್ಕೆ 4½ ಕಾಸಿನಂತೆಯೂ, ಪ್ಯಾಸೆಂಜರು ಗಾಡಿಯಲ್ಲಿ ಪ್ರಯಾಣಮಾಡುವವರಿಗೆ 3½ ಕಾಸಿನಂತೆಯೂ ಚಾರ್ಜ್ ಮಾಡುತ್ತಿದ್ದರು. ಆದರೆ ಬರುವ ಏಪ್ರಿಲ್ 1 ನೇ ತಾರೀಖಿನಿಂದ 50 ಮೈಲುಗಳಿಗಿಂತಲೂ ಹೆಚ್ಚುದೂರ ಪ್ರಯಾಣಮಾಡುವ ಜನರಿಗೆ ಎಲ್ಲಾ ಗಾಡಿಗಳಲ್ಲಿಯೂ ಮೈಲು 1 ಕ್ಕೆ 3 ಕಾಸಿನಂತೆ ಚಾರ್ಜು ಮಾಡಬೇಕೆಂದು ನಿರ್ಧರಿಸಿರುತ್ತಾರೆ.

ಅಮೇರಿಕೆಯ ಮನಶ್ಶಾಸ್ತ್ರಜ್ಞರ ಭವಿಷ್ಯ !

ನ್ಯೂಯಾರ್ಕ್ ನಗರದ ಮಿ|| ಡೇವಿಡ್ ಸೀಬರಿ ಎಂಬ ಮನಶ್ಶಾಸ್ತ್ರಜ್ಞರು ಪ್ರಪಂಚವು ಈಗಿನಂತೆಯೇ ಮುಂದುವರಿಯುವುದಾದರೆ, 2139 ನೇ ವರ್ಷದ ವೇಳೆಗೆ ಎಲ್ಲರೂ ಹುಚ್ಚರಾಗುವರೆಂದು ಭವಿಷ್ಯ ಹೇಳಿರುವರು !

ಆಕಾಶದ ಪ್ರಮಾಣ !

ನಮ್ಮ ದೃಷ್ಟಿಗೆ ಗೋಚರವಾಗುವ ನಕ್ಷತ್ರಗಳನ್ನೆಲ್ಲಾ ಒಟ್ಟುಗೂಡಿಸಿ ಅವುಗಳನ್ನೆಲ್ಲಾ ಸಣ್ಣ ಆಕಾರದ ಗೋಲಿಗಳನ್ನಾಗಿ ಮಾಡಿ, ಆಕಾಶದಲ್ಲಿ ಸಮದೂರದಲ್ಲಿ ಇರಿಸಿದರೆ ಒಂದೊಂದು ಗೋಲಿಯೂ ಮತ್ತೊಂದು ಗೋಲಿಗೆ ಸುಮಾರು 62,500 ಮೈಲುಗಳ ದೂರದಲ್ಲಿರುವದಂತೆ !

160 ವರ್ಷದ ಮನುಷ್ಯ !

ವಾಯವ್ಯಪ್ರಾಂತಕ್ಕೆ ಸೇರಿದ ಕೋಹತ್ ಎಂಬ ನಗರದ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ 160 ವರ್ಷ ವಯಸ್ಸಿನ ಒಬ್ಬ ವೃದ್ಧನಿದ್ದು ಆರೋಗ್ಯ ದೃಢಕಾಯನಾಗಿ ನೇತ್ರಪಾಟವವೂ ಚೆನ್ನಾಗಿರುವದೆಂದೂ, ಅವನಿಗೆ 90 ಮತ್ತು 100 ವರ್ಷದ ಇಬ್ಬರು ಮಕ್ಕಳಿರುವರೆಂದೂ ತಿಳಿದುಬಂದಿದೆ.

ವಿಚಿತ್ರ ಶಿಶು !

ಹೆರ್ಜ ಎಂಬ ಗ್ರಾಮದಲ್ಲಿ ಎಲ್ಲ ಹಲ್ಲುಗಳೂ, ಗಡ್ಡ ಮತ್ತು ಮೈಮೇಲೆಲ್ಲಾ ಕೂದಲು ಬೆಳೆದಿರುವ ಒಂದು ವಿಚಿತ್ರ ಗಂಡುಮಗುವು ಜನಿಸಿದ್ದು, ಕೇಳಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಡುವುದಂತೆ! ಜನರು ಅದನ್ನು ದೇವರ ಅವತಾರವೆಂದು ಭಾವಿಸಿ ಅದನ್ನು ನೋಡಲು ತಂಡೋಪತಂಡವಾಗಿ ಹೋಗುತ್ತಿರುವರು !

ವಿಚಿತ್ರ ದ್ವೀಪ !

ಅಟ್ಲಾಂಟಿಕ್ ಸಮುದ್ರದಲ್ಲಿ 'ಭಾನ್‌ವೆಟ್' ಎಂಬ ವಿಚಿತ್ರ ದ್ವೀಪವಿರುವುದು. ಇದು ಕೆಲವುವೇಳೆ ಕಣ್ಣಿಗೆ ಕಾಣಿಸುವಂತೆ ಮೇಲಕ್ಕೆ ಬರುತ್ತಲೂ, ಕೆಲವು ವೇಳೆ ಕಣ್ಣಿಗೆ ಕಾಣಿಸದಂತೆ ಮುಳುಗುತ್ತಲೂ ಇರುವುದಂತೆ! 1739 ನೇ ಇಸವಿಯಿಂದಲೂ ಈ ದ್ವೀಪವು ಹೀಗೆಯೇ ತೇಲುತ್ತಾ ಮುಳುಗುತ್ತಾ ಇರುವುದಂತೆ!

ಮಾತನಾಡುವ ಬೊಂಬೆ !

ಇಂಗ್ಲೆಂಡಿನ ಮಿ|| ಪೋಲಕ್ ಎಂಬವರು ಒಂದು ವಿಚಿತ್ರ ಯಾಂತ್ರಿಕ ಬೊಂಬೆಯನ್ನು ತಯಾರಿಸಿ ಅದನ್ನು ಲಂಡನ್ನಿನ 'ಬ್ರಿಟಿಷ್ ಇಂಡಸ್ಟ್ರೀಸ್ ಫೇರ್' ಎಂಬ ಪ್ರದರ್ಶನದಲ್ಲಿಟ್ಟಿರುವರು. ಅದು ಮನುಷ್ಯರಂತೆ ನಗುವುದು, ಮಾತನಾಡುವುದು, ಕೋಪಿಸಿಕೊಳ್ಳುವುದು ಮತ್ತು ನಾಚಿಕೊಳ್ಳುವುದು, ಇತ್ಯಾದಿ ಕಾರ್ಯಗಳನ್ನು ಮಾಡುವುದಂತೆ !

ಸಿಕ್ ತರುಣನ ಸಾಹಸ.

ಸರ್ವಣಸಿಂಗ್ ಎಂಬ 22 ವರ್ಷದ ಸಿಕ್ ತರುಣನು ಒಂದು ಒಂಟೆಯೊಡನೆ 21 ಗಂಟೆಗಳಲ್ಲಿ 122 ಮೈಲುಗಳ ದೂರ ಓಡಿ ಒಂಟೆಯನ್ನು 3 ಮೈಲು ಹಿಂದಕ್ಕೆ ಹಾಕಿರುತ್ತಾನೆ. ಇಷ್ಟು ದೂರ ಓಡಿದರೂ ಆ ತರುಣನಿಗೆ ಯಾವ ಬಾಧೆಯೂ ಆಗದೆ ಆರೋಗ್ಯವಾಗಿಯೇ ಇರುವನು. ಆದರೆ ಒಂಟೆಯು ಮಾತ್ರ 1 ವಾರದೊಳಗಾಗಿ ಮೃತಪಟ್ಟಿತು.

ಸರ್ಪಕ್ಕೂ ಬಾಲನಿಗೂ ವಿಚಿತ್ರಸ್ನೇಹ.

ಕಡಪಾಜಿಲ್ಲೆಗೆ ಸೇರಿದ ಪ್ರೊದ್ದುಟೂರು ಗ್ರಾಮದ 6 ವರ್ಷದ ಒಬ್ಬ ಮಹಮ್ಮದೀಯರ ಬಾಲಕನಿಗೂ ಒಂದು ಸರ್ಪಕ್ಕೂ ವಿಚಿತ್ರ ಸ್ನೇಹವುಂಟಾಗಿರುವುದು. ಬಾಲಕನ ಮನೆಯವರು ಈವರೆಗೆ ಎರಡು ಸಾರೆ ಅದನ್ನು ಕೊಂದುಹಾಕಿದರೂ ಅದು ಹೇಗೋ ಜೀವಿಸಿ ಪುನಃ ಆ ಬಾಲಕನ ಬಳಿಗೆ ಬಂದು ಅವನ ಕುತ್ತಿಗೆಯಲ್ಲಿ ಸುತ್ತಿಕೊಂಡಿರುವದಂತೆ! ಆ ಸರ್ಪವನ್ನು ಪುನಃ ಕೊಂದುಹಾಕಬೇಕೆಂದು ಪ್ರಯತ್ನಿಸಿದಾಗಲೆಲ್ಲ ಆ ಹುಡುಗನು ನನ್ನ ಸಹೋದರನನ್ನು ಕೊಲ್ಲಬೇಡಿರಿ ಎಂದು ಬೇಡಿಕೊಳ್ಳುವನಂತೆ !

ಹೊಸಯಂತ್ರ !

ಕಾನಡಾದೇಶದ ಒಟ್ಟಾವದ ಡಾಕ್ಟರ್ ಫ್ರಾಂಕೋ ಎಂಬವನು ೧೬ ವರ್ಷಗಳಿಂದ ದುಡಿದು ವಿದ್ಯುದ್ದೃಷ್ಟಿ ಎಂಬುದೊಂದನ್ನು ಕಂಡುಹಿಡಿದಿರುವನು. ಇದರಮೂಲಕ ಈಗಿನ ನಕ್ಷತ್ರಮಂಡಲದ ಬಗ್ಗೆ ನಮಗಿರುವ ಜ್ಞಾನಕ್ಕಿಂತ ಇಮ್ಮಡಿಯಷ್ಟು ಹೆಚ್ಚಿನದನ್ನು ತಿಳಿದುಕೊಳ್ಳಬಹುದು. ಮಂಗಳ ಗ್ರಹವು ಚಂದ್ರನಷ್ಟು ದೊಡ್ಡದಾಗಿ ಕಾಣಬಹುದು. ಇಂದಿನವರೆಗೆ ಕಂಡು ಹಿಡಿಯಲ್ಪಡದ ಸಾವಿರಾರು ನಕ್ಷತ್ರಗಳು ಗೋಚರವಾಗಬಹುದು. ಇಂಗ್ಲೆಂಡಿನ ಗೋದಿಯ ವ್ಯಾಪಾರಿಯೊಬ್ಬನಿಗೆ ಕಾನಡಾದೇಶದ ತನ್ನ ಗೋದಿಯ ಬೆಳೆ ಹೇಗಿರುವುದೆಂದು ನೋಡುವ ಮನಸ್ಸಿದ್ದವನು ಇಂಗ್ಲೆಂಡಿನ ತನ್ನ ಆಫೀಸಿನಲ್ಲಿ ಕುಳಿತು ಕೂಡಲೇ ನೋಡಬಹುದು. ಫೋಟೋ ಎಲೆಕ್ಟ್ರಿಕ್ ಸೆಲ್ ಎಂಬ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವ ಕೆಮರಾವನ್ನು ತಂತಿ ವಿರಹಿತವಾರ್ತಾ ಪ್ರಚಾರಕ ಯಂತ್ರಕ್ಕೆ ಜೋಡಿಸಿದರೆ ಕೆಮರಾದ ವಿದ್ಯುದ್ದೃಷ್ಟಿಯ ಕಣ್ಣಿಗೆ ಏನುಬೀಳುವದೋ ಅದೆಲ್ಲ ಎಷ್ಟುದೂರವಾದರೂ ಸ್ವಾಭಾವಿಕ ಬಣ್ಣಗಳಿಂದ ತೋರಿಬರುವುದು. ಈ ಕ್ಯಾಮರಾದ ಯಂತ್ರಸಂಯೋಜನೆಯು ಅತಿ ಸುಲಭವಿದ್ದು ಅದನ್ನು ಮಗುವೂ ಸಹ ಉಪಯೋಗಿಸಬಹುದಂತೆ !

[3ನೆಯ ಪುಟದಿಂದ ಮುಂದುವರಿದುದು.]
ಮನೆತನದವರೆಲ್ಲರ ಪುರೋಭಿವೃದ್ಧಿಗಾಗಿಯೂ ಚತುರ್ವಿಧಪುರು ಷಾರ್ಥಸಿದ್ಧಿಗಾಗಿಯೂ ಶ್ರೀ ಗುರುಗಳವರಿಗೆ ಶಿವಲಿಂಗಪೂಜೆಗೋಸ್ಕರ ೧೦-೧೨ ಎಕರೆ ಭೂಮಿಯನ್ನು ಸಭಾಮಧ್ಯದಲ್ಲಿ ಮನೆಯವರೆಲ್ಲರೂ ಸಾಷ್ಟಾಂಗಪೂರ್ವಕ ಸ್ವಾಮಿಗಳವರ ಪಾದಕ್ಕೆ ಅರ್ಪಿಸಿ, ಫಲಾಶೀರ್ವಾದಗಳನ್ನು ಹೊಂದಿದರು. ಸದರಿ ಗೌಡರು ನೂತನಗೃಹಪ್ರವೇಶ ಸಮಯದಲ್ಲಿ ಶ್ರೀಗುರುಗಳವರಿಗೆ ಪೂಜಾ ಪವನ್ನು ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಎರಡು ರೂಪಾಯಿಗಳನ್ನು ಸಮರ್ಪಿಸಿದರು. ಈ ರೂಪಾಯಿಗಳು ವೇ|| ಶಿವಯೋಗೀಶ್ವರಶಾಸ್ತ್ರಿಗಳು ಶಿಲಾಮಠ ಕೋಂಡಳಂದಿ ಇವರ ವಶಕ್ಕೆ ಕೊಡಲ್ಪಟ್ಟವು.

ಪ್ರತ್ಯಕ್ಷದರ್ಶಿ.

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವಗಳು.

ಸೊಲ್ಲಾಪುರ.

ಯಾವ ಮಹಾತ್ಮರಿಂದ ಪರಮಪವಿತ್ರವಾದ ವೀರಶೈವ ಮತವು ಸ್ಥಾಪಿಸಲ್ಪಟ್ಟಿತೋ, ಯಾರಿಂದ ಅಗಸ್ತ್ಯಾದಿ ಮಹಾ ಮಹಾಮುನಿಗಳಿಗೆ ಶಿವಸಿದ್ಧಾಂತವು ಉಪದೇಶಿಸಲ್ಪಟ್ಟಿತೋ, ಯಾರಿಂದ ವಿಭೀಷಣ ಮೊದಲಾದ ಚಕ್ರವರ್ತಿಗಳು ಧನ್ಯರಾದರೋ ಆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಸಮಸ್ತರೂ ಮುಖ್ಯವಾಗಿ ಆಚರಿಸಬೇಕಾಗಿದೆ. ಪ್ರತಿಯೊಂದು ವೈದಿಕಮತದವರು ತಮ್ಮ ತಮ್ಮ ಮತಸ್ಥಾಪನಾಚಾರ್ಯರ ಜಯಂತಿಯನ್ನು ಎಷ್ಟು ಭಕ್ತಿಯಿಂದ ಮಾಡುತ್ತಾರೆಯೋ ಅದರಂತೆ ನಾವುಗಳು ನಮ್ಮ ಮತಸ್ಥಾಪನಾಚಾರ್ಯರ ಜಯಂತಿಯನ್ನು ಅತ್ಯಂತ ಭಕ್ತಿಯಿಂದ ಆಚರಿಸಲೇಬೇಕು. ಸದ್ಯಃ ಮತಸ್ಥಾಪನಾಚಾರ್ಯರ ಜಯಂತಿಗಳೆಂದರೆ ವೀರಶೈವರಿಗೆ ಅಪೂರ್ವಗಳಾಗಿ ಕಾಣಿಸಲಿಕ್ಕೆ ಹತ್ತಿವೆ. ಹೀಗಾಗಲಿಕ್ಕೆ ಗುರುವರ್ಗದವರ ಅನಾದರಣೆಯೇ ಮೂಲಕಾರಣವಾಗಿರುವದು. ಗುರುವರ್ಗದವರು ಇನ್ನು ಮೇಲೆಯಾದರೂ ಸ್ವಾರ್ಥವನ್ನು ಬಿಟ್ಟು ತಮ್ಮ ಅಧಿಕಾರಕ್ಕನುಸರಿಸಿ ಮತದ ಕಡೆಗೆ ಲಕ್ಷ್ಯವನ್ನು ಕೊಟ್ಟಿದ್ದಾದರೆ ಜಗದಾಚಾರ್ಯರ ಕಾಲದಲ್ಲಿ ವೀರಶೈವ ಮತವು ಹೇಗೆ ಜಗದ್ವ್ಯಾಪಿಯಾಗಿತ್ತೋ ಅದರಂತೆ ಈಗಾದರೂ ಜಗದ್ವ್ಯಾಪಿಯಾಗುವದರಲ್ಲಿ ಸಂಶಯವಿಲ್ಲ. ಅಸ್ತು! ಪ್ರತಿವರ್ಷದಂತೆ ಈ ವರ್ಷವೂ ಸೊಲ್ಲಾಪುರದಲ್ಲಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ತಾ|| ೨೮-೨-೩೪ನೆಯ ದಿವಸ ಶ್ರೀಯುತ ಜಂಗಮಮಾಸ್ತರ ಗೃಹದಲ್ಲಿ ವೈಭವದಿಂದ ನೆರವೇರಿತು. ಅಗ್ಗಿ ಶ್ರೀ|| ಷ|| ಬ್ರ|| ಗುರುವರ್ಯಸ್ವಾಮಿ ಸುತ್ತಗಟ್ಟಿ ಅವರ ಅಧ್ಯಕ್ಷತೆಯಲ್ಲಿ ಸಭೆ ಗೂಡಿ ಅನೇಕರು ಶ್ರೀ ರೇಣುಕಾಚಾರ್ಯರ ಮಹಿಮೆಯನ್ನು ವರ್ಣಿಸಿದ್ದಲ್ಲದೆ ಅಧ್ಯಕ್ಷರು ಆಚಾರ್ಯರ ವಿಷಯವನ್ನೂ ವೀರಶೈವ ಮತದ ಪ್ರಾಶಸ್ತ್ಯವನ್ನೂ ಬಹು ಮನೋಹರವಾಗಿ ಬೋಧಿಸಿದರು. ಆ ಮೇಲೆ ಮಂಗಳವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ರೇಣುಕಸಂಘ ಸೊಲ್ಲಾಪುರ ಸಿಟಿ.

ಹಾವೇರಿ.

ಶ್ರೀ ಜಗದಾಚಾರ್ಯರ ಜಯಂತೀಮಹೋತ್ಸವವನ್ನು ಅಖಿಲವೀರಶೈವರೂ ಆಚರಿಸಬೇಕೆಂಬುದು ಸರ್ವರಿಗೂ ತಿಳಿದವಿಷಯವೇ ಆಗಿದೆ. ಆದರೂ ಕೆಲವರು ಗುರುಜಯಂತಿಯನ್ನು ಮಾಡುವುದೇ ಇಲ್ಲವು. ಇದಕ್ಕೆ ಮೂರು ಕಾರಣಗಳನ್ನು ಹೇಳಬಹುದು. (೧) ತಿಳಿಯದೆ ಬಿಡುವವರು ಕೆಲವರು. (೨) ತಿಳಿದೂತಿಳಿದು ತಮ್ಮ ಪ್ರಾಪಂಚಿಕ ಅಡಚಣೆಯಿಂದ ಬಿಡುವವರು ಕೆಲವರು. (೩) ಪಕ್ಷಾಂಧತೆಯಿಂದ ಬಿಡುವವರು ಕೆಲವರು. (೧) ತಿಳಿಯದವರಿಗೆ ತಿಳಿದವರು ಆಚಾರ್ಯರ ಜಯಂತೀಮಹೋತ್ಸವದ ಮಹತ್ವವನ್ನು ಅವರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಹೇಳಿ ಸರ್ವತ್ರಪ್ರಚಾರವನ್ನಾಗಿ ಪುಣ್ಯಕ್ಕೆ ಭಾಗಿಗಳಾಗಬೇಕು. (೨) ಪ್ರಾಪಂಚಿಕ ತೊಂದರೆಗಳನ್ನು ತೋರಿಸುವ ಅನೇಕರು ವೀರಶೈವಧರ್ಮಕ್ಕೇನೇ ಸಂಬಂಧಪಡದ ಧರ್ಮವಿರುದ್ಧವೂ ಅಶಾಸ್ತ್ರೀಯವೂ ಆದ ಎಷ್ಟೋ ಹಬ್ಬಗಳಲ್ಲಿ ತಮ್ಮ ಶಕ್ತಿಮೀರಿ ದುಂದುವೆಚ್ಚ ಮಾಡುವದನ್ನು ಅನೇಕರು ನೋಡಿಯೂ ನೋಡುತ್ತಲೂ ಇರುವರು. ಇಂಥ ಹಬ್ಬಗಳನ್ನು ಕಡಿಮೆಮಾಡಿ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತಭಕ್ತಿಯಿಂದ ಆಚರಿಸುವದರ ಮೂಲಕ ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕು. (೩) ಜನರ ಮನೋವಿಚಾರಗಳು ಹೇಗೇ ಇರಲಿ, ಮಗನು ಎಂಥ ಪದವೀಧರನಾದರೂ ವರಿಷ್ಠನಾದ ತಂದೆಗೆ ಮಗನೇ ಅಲ್ಲವೇ? ಧನಮಗದಿಂದಲೋ ಅಥವಾ ಅಧಿಕಾರಮದದಿಂದಲೋ ತಂದೆಗೆ ತಂದೆಯೆನ್ನಲು ಸಂಕೋಚಪಟ್ಟರೆ, ತಾಯಿಗೆ ಕಳಂಕವು ಬಂದು ವಿಮಲಕುಲವೇ ಕಲಂಕಿತವಾಗುವದೆಂಬುದು ನಿರ್ವಿವಾದವಷ್ಟೆ! ತದ್ವತ್ ಯಾವ ಗುರುವು ಸಕಲೇಷ್ಟಪ್ರದಾಯಕವಾದ ಶಿವಲಿಂಗವನ್ನು ಅನುಗ್ರಹಿಸಿ ಮಾಂಸಪಿಂಡವನ್ನು ಅಳಿದು ಮಂತ್ರಪಿಂಡವನ್ನಾಗಿಮಾಡಿ ಮೋಕ್ಷದಪಥವನ್ನು ತೋರಿಸಿದನೋ, ಆ ಮಹಾಗುರುವಿನ ನಾಮಸ್ಮರಣೆಯನ್ನು ಮಾಡದಿದ್ದಲ್ಲಿ ರೌರವ ನರಕಪ್ರಾಪ್ತನಾಗುವದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅದುದರಿಂದ ಎಲೈ ವೀರಶೈವಬಾಂಧವರೇ! ಇನ್ನಾದರೂ ಎಲಿ!

ಸ್ವಧರ್ಮದಕಡೆಗೆ ಲಕ್ಷ್ಯಗೊಡಿರಿ!! ನಿಮ್ಮ ಮನಸಾಕ್ಷಿಯಾಗಿ ಸತ್ಯದ ಹಾದಿಯನ್ನು ಹಿಡಿಹಿರಿ! ಧಾರವಾಡಜಿಲ್ಲಾ ಹಾವೇರಿ ಗ್ರಾಮದಲ್ಲಿ ಫಾಲ್ಗುಣ ಶುದ್ಧ ೧೪ ಬುಧವಾರ ತಾ|| ೨೮-೨-೧೯೩೪ ನೇ ದಿವಸ ಪದ್ಧತಿಗನುಸರಿಸಿ ಗುರುಭಕ್ತಿಯುತರಾದ ಸಕಲಜನರು ತಮ್ಮ ತಮ್ಮ ಗೃಹದಲ್ಲಿ ಜಯಂತಿಯನ್ನು ದೊಡ್ಡಹಬ್ಬದಂತೆ ಆಚರಿಸಿದರು. ನಡುವಿನ ಮಠದಲ್ಲಿ ಉದಯದ ೮ ಘಂಟೆಯಿಂದ ೧೦ ಘಂಟೆಯವರೆಗೆ ಶ್ರೀ ಜಗದ್ಗುರುಗಳ ಭಾವಪಟಕ್ಕೆ ರುದ್ರಾಭಿಷೇಕವು ಚಂದ್ರಶೇಖರಯ್ಯನವರು ನಡುವಿನ ಮಠ ಇವರಿಂದ ಮಾಡಲ್ಪಟ್ಟಿತು. ಅನಂತರ ೧೧ ಘಂಟೆಯಿಂದ ೨ ರವರೆಗೆ ಗಣಾರಾಧನೆಯೂ, ಮಧ್ಯಾಹ್ನ ೩ ರಿಂದ ೫ ರವರೆಗೆ ಜಯಂತಿಯ ಬಗ್ಗೆ ವ್ಯಾಖ್ಯಾನಗಳೂ ನಡೆದವು. ಬಳಿಕ ಅಂದೋಲಿಕೋತ್ಸವವು ನಡುವಿನಮಠದಿಂದ ಹೊರಟು ಶಹರದ ಎಲ್ಲಾ ಬೀದಿಗಳಲ್ಲಿ ಹಾಯ್ದು ಸಕಲಭಕ್ತರ ಭಕ್ತಿಯನ್ನು ಸ್ವೀಕರಿಸುತ್ತ ರಾತ್ರಿ ೧೨ ಘಂಟೆಗೆ ತಿರುಗಿ ಮಠಕ್ಕೆ ಬಂದು ಮುಟ್ಟಿತು. ಹಾವೇರಿ ತಾಲೂಕು ವೀರಾಪುರದ ಭಜನಾಸಂಘದವರು ಬಂದು ತ್ರಿಕರಣಪೂರ್ವಕವಾಗಿ ಗುರುಸೇವೆಯನ್ನು ಮಾಡಿದರು. ಈ ಜಯಂತಿಯ ಅನ್ನತೃಪ್ತಿಗಾಗಿ ೫೧ ರೂಪಾಯಿಗಳನ್ನು ಹಾವೇರಿ ಮ|| ರಾ|| ರಾಚಪ್ಪ ಚನ್ನಬಸಪ್ಪ ಯರೇಶೀಮೆ ಇವರು ಕೊಟ್ಟು ತಾವು ಹೊಸದಾಗಿ ಕಟ್ಟಿಸಿದ ಜವಳಿ ಅಂಗಡಿಯಲ್ಲಿ ಕಾರ್ಯವನ್ನು ನೆರವೇರಿಸಿದರು. ಈ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸುಖಸಂಪತ್ತುಗಳನ್ನೀಯಲೆಂದು ಪ್ರಾರ್ಥನೆ.

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ, ಹಾವೇರಿ.

ಸಿಂಗಟಾಲೂರು.

ಶಕ್ತಿವಿಶಿಷ್ಟಾದ್ವೈತಮತವನ್ನು ಸ್ಥಾಪನೆಮಾಡಿದ ಶ್ರೀ ಜಗದಾಚಾರ್ಯ ರೇಣುಕಾದಿ ಪಂಚಾಚಾರ್ಯರ ಜಯಂತಿಯನ್ನು ಆಯಾಯ ಪುಣ್ಯದಿವಸಗಳಲ್ಲಿ ವೀರಶೈವರೆಲ್ಲರೂ ಅತ್ಯವಶ್ಯವಾಗಿ ಮಾಡುವದು ವಿಹಿತವಾಗಿರುವದು. ಮತಸ್ಥಾಪಕರ ಜಯಂತಿಯನ್ನು ಮಾಡದೆ ಬಿಟ್ಟರೆ ಜನೋಪಜನಕರ ಉಪಕಾರಸ್ಮರಣೆಯಿಲ್ಲದ ಮೂರ್ಖರ ಗಣನೀಡಾಗಬೇಕಾಗುತ್ತದೆ. ಹೇ, ಭಕ್ತೋತ್ತಮರೇ! ಇನ್ನಾದರೂ ವಿಚಾರಶೀಲರಾಗಿ ಎಚ್ಚರಿಕೆಯನ್ನು ಹೊಂದಿರಿ. ಇರಲಿ, ಮಾಗಳದ ಪ್ರಸನ್ನದೇವರ ಮಠಾಧ್ಯಕ್ಷರಾದ ವೇ|| ಸಿದ್ಧಾಂತಿ ಗಂಗಾಧರಶಾಸ್ತ್ರಿಗಳವರು ಗುರುಜಯಂತಿಯನ್ನು ಸರ್ವರೂ ಆಚರಿಸಿ ಧನ್ಯರಾಗಬೇಕೆಂದು ಸೂಚಿಸಿದ್ದರಿಂದ ಫಾಲ್ಗುಣ ಶುದ್ಧ ೧೪ ಬುಧವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಬಹು ವೈಭವದಿಂದ ನೆರವೇರಿತು. ಈ ಮಹಾಗುರುಕಾರ್ಯವನ್ನು ವೇ|| ಬಸಲಿಂಗಯ್ಯ ಗುರುಸೇವಕಸಿಂಹ ಹಿರೇಮಠ, ಮ|| ರಾ|| ಕೊಟ್ರೂರಪ್ಪ ಬೆಳ್ಳಿಳ್ಳಿ, ಗ್ರಾಮ ಮ್ಯಾಜಿಸ್ಟ್ರೇಟು ದೇವೇಂದ್ರಗೌಡ, ಶಿ|| ರುದ್ರಯ್ಯ, ಮ|| ಗುಡದೀರಪ್ಪ ಶೆಟ್ಟರ, ಗುಡದೀರಪ್ಪ ದೀವಟಿರ. ಇವರೇ ಮೊದಲಾದವರು ಅತ್ಯಂತಶ್ರಮವಹಿಸಿ ಮಾಡಿದ್ದಕ್ಕಾಗಿ ಈ ಮಹಾಶಯರಿಗೆ ಜಗದಾಚಾರ್ಯರು ಇಹಲೋಕಸ್ಥಿತಿಯುಗಳಾದ ಧನಕನಕಕೀರ್ತಿ ಸೌಭಾಗ್ಯಗಳನ್ನಿತ್ತು ರಕ್ಷಿಸಲೆಂದು ಕೋರುವ,

ರುದ್ರಮುನಿಸ್ವಾಮಿ ಗಂಗಾಧರಶಾಸ್ತ್ರಿ.
ಪ್ರಸನ್ನದೇವ ಮಠ, ಮಾಗಳ.

ಪ್ರಕಟಣೆ.

ಕಲ್ಲೇದೇವರಪುರದ ಶ್ರೀ ಕಲ್ಲೇಶ್ವರಸ್ವಾಮಿಯ ರಥೋತ್ಸವವು ಪುರಾತನ ಪದ್ಧತಿಗನುಸರಿಸಿ ಇದೇ ಭಾವನಾಮ ಸಂ|| ರದ ಚೈತ್ರ ಕೃಷ್ಣಪಕ್ಷ ತಾ|| 5-4-34 ನೇ ಗುರುವಾರದ ದಿವಸ ನಡೆಯುವುದು. ರಥೋತ್ಸವಕ್ಕೆ ಸಂಬಂಧಪಟ್ಟ ಪೂರ್ವೋಕ್ತಕಾರ್ಯಗಳು ಚೈತ್ರ ಬಹುಳ ೧ ರಿಂದ ಬ|| ೫ ವರೆಗೆ ನಡೆಯುತ್ತವೆ. ಬ|| ೬ ನೇ ಗುರುವಾರ ಸಾಯಂಕಾಲ 4 ಘಂಟೆಗೆ ದೊಡ್ಡ ರಥೋತ್ಸವವು ನಡೆಯುತ್ತದೆ. ಅಲ್ಲದೆ ಮಾಮೂಲು ಪದ್ಧತಿಯ ಪ್ರಕಾರ ದಯಾಳು ಸರ್ಕಾರದವರಿಂದ ಏರ್ಪಡಿಸಿರುವ ದನಗಳ ಪ್ರದರ್ಶನವು ಈ ಸಾರೆಯೂ ಸಹ ಅನುಕೂಲವಾಗಿರುತ್ತದೆ. ಅಲ್ಲದೆ ಕುಸ್ತಿ ಕಾಳಗಗಳು ನಡೆಯುತ್ತವೆ. ಈ ಪ್ರದೇಶದಲ್ಲಿ ಯಾವ ವಿಧವಾದ ಸಾಂಕ್ರಾಮಿಕ ಜಾಡ್ಯಗಳು ಇರುವುದಿಲ್ಲ. ಪ್ರಯುಕ್ತ ಸರ್ವರೂ ದಯವಿಟ್ಟು ಆಗಮಿಸಿ ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗುವಿರೆಂದು ನಂಬಿದ್ದೇವೆ.

ಸೂಚನೆ—ನಮ್ಮ ದೇವಸ್ಥಾನಕ್ಕೆ ಭಾರಿ ಉತ್ಪತ್ತಿಯಿಲ್ಲದಿರೋಣದಿಂದ ಸದ್ಯಃ ನಡೆಯಬೇಕಾದ ಹಲಕೆಲವು ಜೀರ್ಣೋದ್ಧಾರ ಕಾರ್ಯಗಳು ಕಟಿಕ್ಯವಾಗಿವೆ. ಆದಕಾರಣ ಪ್ರತಿಯೊಬ್ಬರೂ ತಂತಮ್ಮ ಶಕ್ತ್ಯನುಸಾರವಾಗಿ ದೇವಸ್ಥಾನದಲ್ಲಿರತಕ್ಕ ಧರ್ಮದಾಯದ ಡಬ್ಬಿಗೆ ದುಡ್ಡನ್ನು ಹಾಕಿ ದೇವಸ್ಥಾನವನ್ನು ಉನ್ನತಸ್ಥಿತಿಗೆ ತರಬೇಕೆಂದು ಪಾರ್ಥಿಸುತ್ತೇವೆ.

ಕೆ. ದೊಡ್ಡಲಿಂಗಪ್ಪ.
ಪಂಚಕಮಿಟಿ ಪ್ರೆಸಿಡೆಂಟ್ ಕಲ್ಲೇದೇವರಪುರ.

ಸೃಷ್ಟಿ ವೈಚಿತ್ರ್ಯ.

ವಿಚಿತ್ರ ವೃಕ್ಷಗಳು.

ಅಮೆರಿಕೆಯ ನ್ಯಾಷನಲ್‌ಪಾರ್ಕಿನಲ್ಲಿ ೫೦೦೦ ವರ್ಷಗಳ ಒಂದು ಗಿಡವಿರುವುದು. ಅದರ ಎತ್ತರ ೨೦೦ ಮೊಳಗಳು.

ಬಂಗಾಳ ಪ್ರಾಂತದಲ್ಲೊಂದು ಗಿಡ ವಿರುವುದು; ಅದು ಸೂರ್ಯಾಸ್ತವಾದೊಡನೆ ಮಲಗುವುದು ಮತ್ತು ಸೂರ್ಯೋದಯವಾದರೆ ಏಳುವುದು.

ಅಮೇರಿಕೆಯಲ್ಲಿ ಇನ್ನೊಂದು ತರದಗಿಡವಿದೆ. ಗಾಳಿ ಬೀಸಿದಾಗ ಅದರ ಎಲೆಗಳು ಅಲ್ಲಾಡಹತ್ತಿ ಕರ್ಣಮಧುರವಾದ ಗಾನವು ಪ್ರಾರಂಭವಾಗುವುದು.

ದಕ್ಷಿಣ ಅಫ್ರಿಕದಲ್ಲಿ ಒಂದು ಗಿಡವಿರುವುದು. ಅದರ ಹತ್ತಿರ ಹೋದವನಿಗೆ ಅದರ ಮಕರಂದವನ್ನು ಸವಿದು ಸೀನುಗಳು ಪಟಪಟನೆ ಹತ್ತುವುವು.

ರೆಜಿಸ್ಥಾನದಲ್ಲೊಂದು ಗಿಡವಿದೆ. ಅದು ನೀರಡಿಸಿ ಬಂದ ದಾರಿಗರಿಗೆ ನೀರು ಕೊಟ್ಟು ತೃಪ್ತಿಪಡಿಸುವುದು. ಆ ಗಿಡದ ಗರ್ಭದಲ್ಲಿ ಸಿಹಿನೀರು ಇರುವುದು. ಮಾರ್ಗಸ್ಥರು ಅದನ್ನು ಕುಡಿದು ತೃಪ್ತಿಪಡುವರು.

ದಕ್ಷಿಣ ಅಫ್ರಿಕದೊಳಗಿನ ದಟ್ಟಡವಿಯಲ್ಲಿ ಒಂದು ತರಹದ ಗಿಡವಿದೆ. ಅದರ ಎಲೆಗಳಮೇಲೆ ತೆಳ್ಳನೆ ಬೆಳ್ಳಿಯಂತೆ ಹೊಳೆಯುವ ಪದಾರ್ಥವು ಇರುವುದು. ಅದುದರಿಂದ ಅದನ್ನು ಬೆಳ್ಳಿಯಗಿಡವೆಂದು ಕರೆಯುವರು.

ಉತ್ತರ ಅಮೇರಿಕೆಯಲ್ಲಿ ಒಂದು ಮರವಿರುವುದು. ಅದರ ಬೀಜವನ್ನು ಹೇಗೆ ನಟ್ಟರೂ ಅದು ಪೂರ್ವದಿಕ್ಕಿನಿಂದಲೇ ಉದ್ದಕ್ಕೆ ಬೆಳೆಯುವುದು. ಅದರಿಂದ ಆ ಗಿಡಕ್ಕೆ ಹೋಕಾಯಂತ್ರದ ಗಿಡವೆಂದು ಅಲ್ಲಿಯ ಜನರು ಹೆಸರಿಟ್ಟಿರುವರು.

ಜಾವಾದ್ವೀಪದ ನಡುಗಡ್ಡೆಯಲ್ಲಿ ಒಂದು ಜಾತಿಯ ಗಿಡಗಳಿರುವುವು. ಅವು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ಗಿಡಗಳ ರಸವನ್ನು ಹೀರಿಕೊಂಡು ತಾವು ಪುಷ್ಟವಾಗುತ್ತವೆ.

ಇಲ್ಲಿಯೇ ಇನ್ನೊಂದು ತರದ ಗಿಡವಿದೆ. ಅದರ ಎಲೆಗಳ ಮೇಲೆ ಸಿಂಬಳದಂತಹ ಪದಾರ್ಥದ ತಂತುಜಾಲವಿರುವುದು. ಯಾವುದಾದರೂ ಕ್ರಿಮಿಯು ಅದರಮೇಲೆ ಕುಳಿತರೆಸಾಕು; ಕೂಡಲೆ ಎಲೆಯು ಮುಚ್ಚುವುದು. ಆ ಹುಳವನ್ನು ತಿಂದು ಬಿಟ್ಟು ಮತ್ತೆ ತೆರೆಯುವುದು. ಅದರ ಮೇಲೆ ಮಾಂಸದ ತುಂಡನ್ನಿಟ್ಟರೂ ಅದೇ ರೀತಿಯಾಗಿ ತಿನ್ನುತ್ತದೆ.

ದಕ್ಷಿಣ ಅಫ್ರಿಕದ ಫಿಜೀ ನಡುಗಡ್ಡೆಯಲ್ಲಿ ಒಂದು ತರದ ಗಿಡವುಂಟು. ಅದನ್ನು ಅಲ್ಲಿಯವರು 'ಯೋಬಿಪ್ಪೊ' ಎಂದು ಕರೆಯುವರು. ಅಪ್ಪಿ ತಪ್ಪಿ ಯಾರಾದರೂ ಅದರ ಕೆಳಗೆ ಕುಳಿತರೆ ಅವರನ್ನು ಹಿಡಿದು ಬಿಗಿದಪ್ಪಿ ತನ್ನ ತೀಕ್ಷ್ಣವಾದ ಟೊಂಗೆಗಳಿಂದ ಗಟ್ಟಿಯಾಗಿ ಹಿಡಿದುಕೊಳ್ಳುವುದು. ಅನಂತರ ಅವನ ರಕ್ತವನ್ನೆಲ್ಲಾ ಹೀರುವುದು. ಅದುದರಿಂದ ಅಲ್ಲಿಯ ಸರ್ಕಾರದವರು ಗಲ್ಲಿನ ಶಿಕ್ಷೆಗಾಗಿ ಈ ಮರವನ್ನು ಪಯೋಗಿಸಿಕೊಳ್ಳುತ್ತಿರುವರು. ಅದು ಒಮ್ಮೊಮ್ಮೆ ಅತಿ ಸಿಟ್ಟಿಗೇಳುವುದಂತೆ!

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಶ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪಿಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 28

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (3)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬುಡಸಹಿತ ಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜ಼ನ್ 8-8-0 ಮತ್ತು ರೂ. 5

ರ್ಯುಮೊ ಬಾಮ.
ಕೆಮ್ಮು, ಶೀತ, ತಲೆಸಿಡಿತ, ಪಾರ್ಶಶೂಲೆ, ಗಂಟು ನೋವು ಸಂದು ಗಂಟು ನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ಶಮಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0 ಚಿಕ್ಕಮಕ್ಕಳ ಮದ್ದುಗಳು. ಹೋಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.
The Malariana Co., Mangalore (21)

ರಿಂಗ್ ವರ್ಮ್ ಬಾಮು.
ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಸುವ ರೋಗ, ದದ್ದು, ತುರಸುವ ನಂಜೆ ಹುಣ್ಣುಗಳನ್ನು ಶಿಘ್ರ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.
ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವಿ ಮುಚ್ಚಿ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.
½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮುದುಕರಾಯಿಗಳು ಪತ್ರೇಜಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದದಿಂದ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಆತ್ಮಸಂರಕ್ಷಕನಂತೆಯೇ ಯುವಕರಿಗಿರುವನು.
ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರತ್ಯಾತಿಪಟ್ಟ ವಾರ್ಮ ಎಕ್ಸ್‌ಪೆಲ್ಲರ್ ಬಿಲ್ಲೆಗಳು.
ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.
ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.
ಪತ್ತೆ:— ಮಲೇರಿಯಾನ ಕಂಪೆನಿ,
[29] (ಹಂಪನಕಟ್ಟೆ), 21, ಮಂಗಳೂರು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕ್ಕಿಪೇಟೆ ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅಕ್ಕಿಪೇಟೆ ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 20

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಉಬ್ಬುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.
ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.
ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.
1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.
ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (19)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾ ಸಹಿತ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕೋದ್ಧಾರಕರಾದ ಅಗಸ್ತ್ಯ, ದಧೀಚ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಜ್ಞಾನೋಪದೇಶ ಮಾಡುವ ಫೋಟೋ ಸೈಜು ೧೦×೧೪ ಬೆಲೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೬
ಶ್ರೀ ಜಗದ್ಗುರುಗಳ ಫೋಟೋ	೦—೦—೬
ಶ್ರೀಮದ್ರಂಭಾಪುರೀ (ಬಾಳೇಹಳ್ಳಿ) ಜಗದ್ಗುರುಗಳವರ ಫೋಟೋ	೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಲಂಕಾಪಟ್ಟಣದಲ್ಲಿಯೇ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪನೆಮಾಡಿ ಮುಕ್ತಿನೀಡುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನಾಧೀಶ್ವರರ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಕೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೬

ಸೂಚನೆ:—೧ಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ ಗುರವಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬದ ಪದ್ಧತಿಯಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[11] ಪೋ. ಬಾ. ೫೧೧, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಮಾಪವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿಸಲ್ಪಟ್ಟಿತು.

REGISTERED No. M. ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ||
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂನ್ ಮುನಿವರಾನ್ ಪಾಲಿಷ್ಣುವೀರೋತ್ಕರಾನ್ ||

ಸಂಪಾದಕರು—ಅಸ್ಮಾಕ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೪ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಏಪ್ರಿಲ್ ೧೯೩೪ [ಸಂಚಿಕೆ ೪೮

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಆಗಮನ, ಬೆಂಗಳೂರು.

(ತಾ|| ೨೭—೪—೧೯೩೪)

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಸುವರ್ಣ ರಜತಾಂದೋಲಿಕ ಮಹೋತ್ಸವವು ಮೈಸೂರು ಸೀಮೆಯ ದ್ವಿತೀಯ ರಾಜಧಾನಿಯೆನಿಸಿದ ಬೆಂಗಳೂರು ಪಟ್ಟಣದಲ್ಲಿ **ತಾ|| ೨೭—೪—೧೯೩೪ ನೆಯ ಶುಕ್ರವಾರ ಪ್ರಾತಃಕಾಲ ೮|| ಘಂಟೆಗೆ** ಸಕಲ ರಾಜಮರ್ಯಾದೆಗಳೊಡನೆ ಅಸಾಧಾರಣ ವೈಭವದಿಂದ ನೆರವೇರುವುದೆಂದು ನಿಶ್ಚಯವಾಗಿದೆ. ಆ ಕಾಲಕ್ಕೆ ಸಮಸ್ತ ಗುರುಭಕ್ತರೂ ಆಗಮಿಸಿ ಶ್ರೀ ಜಗದ್ಗುರುಗಳವರ ದರ್ಶನಾಶೀರ್ವಾದಗಳಿಂದ ಧನ್ಯರಾಗಬೇಕೆಂದಾಶಿಸುತ್ತೇವೆ.

(5ನೇ ಪುಟದಿಂದ ಮುಂದುವರಿದುದು.)

ಶಿಕ್ಷೆಯನ್ನು ಕಡಿಮೆಮಾಡಿದೆ

ಮೊದಲನೆ ಅಪರಾಧಿಗೆ ೩ ವರ್ಷಗಳ ಕಠಿಣ ಸಜಾ. ೩-೪ ನೇ ಅಪರಾಧಿಗಳಿಗೆ ಎರಡು ವರ್ಷ, ೨ ನೇ ಅಪರಾಧಿಗೆ ಒಂದು ವರ್ಷ. ಒಂದನೇ ಅಪರಾಧಿಗೆ ೩೦೦ ರೂ. ಗಳ ಜುಲ್ಮಾನೆ. ೩-೪ ನೇ ಅಪರಾಧಿಗಳಿಗೆ ಮೊದಲಿದ್ದ ಜುಲ್ಮಾನೆಯೇ ಖಾಯಂ! ಜುಲ್ಮಾನೆಗೆ ತಪ್ಪಿದರೆ ಮೊದಲನೇ ಅಪರಾಧಿಗೆ ೬ ತಿಂಗಳು ಕಠಿಣ ಶಿಕ್ಷೆ! ಉಳಿದವರಿಗೆ ೩ ತಿಂಗಳು. ಆ ಹುಡುಗಿಯು ಯಾವ ಪರಿಹಾರ ದ್ರವ್ಯಕ್ಕೂ ಅರ್ಹಳಲ್ಲ.

ಅಧಿಕಾರಿಗಳ ಕರ್ತವ್ಯಲೋಪ.

ಪೋಲೀಸು ಇನ್ಸಪೆಕ್ಟರನ ಉಪೇಕ್ಷೆಯು ಸಾಧುವಾದುದಲ್ಲ! ಆತನು ತಂದೆ ಮಕ್ಕಳ ಹೇಳಿಕೆಯನ್ನು ಮಾಡಿಕೊಂಡಿದ್ದು ಸದ್ಬುದ್ಧಿಯಿಂದ ಅಲ್ಲವೇ ಅಲ್ಲ! ಹಿಂದೂ ಮುಸಲ್ಮಾನರ ವೈಷಮ್ಯವಿದ್ದೆಂದು ಅಮಲ್ದಾರರಿಗೆ ತಿಳಿಸಲೇ ಇಲ್ಲ! ಅಮಲ್ದಾರರು ಕರೆಯಿಸಿ ಕೇಳಿದಾಗ ಹುಡುಗಿಗೆ ೧೮ ವರ್ಷದ ಮೇಲೆ ಆದಂತೆ ಕಾಣುತ್ತದೆಂದು ಹೇಳುತ್ತಾನೆ. ಹುಡುಗಿಯನ್ನು ಹಾಜರ್ಮಾಡು ನಂತೆ ಅಮಲ್ದಾರರು ಹೇಳಿದಾಗ, ಅಲ್ಲಿಗೆ ಹೋಗಿ ಒಂದು ಹುಡುಗಿಗೆ ಮದುವೆ ಆಗಿಹೋಯಿತೆಂದು ಹೇಳುತ್ತಾನೆ. ಅದನ್ನು ಕೇಳಲು ಅಮಲ್ದಾರರಿಗೆ ಏನು ಅಧಿಕಾರವಿದೆಯೆಂದು ಕೇಳಿದ್ದಾನೆ. ಹುಡುಗಿಯ ಅಣ್ಣನು ಮಾರನೇ ದಿನ ಹುಡುಗಿಗೆ ೧೫ ವರ್ಷವೆಂದು ಹೇಳಿದಾಗ ಏನೂ ಮಾಡಲೇ ಇಲ್ಲ. ಪೋ|| ಸೂಪರಿಂಟೆಂಡೆಂಟರಿಗೆ ತಪ್ಪು ಸಮಾಚಾರಗಳನ್ನು ಹೇಳಿದ್ದಾನೆ. ಈ ಕೃತ್ಯದಲ್ಲಿ ಅಪರಾಧಿಗಳಿಗೆ ಬೇಕಾದಷ್ಟು ಮದ್ದತ್ತು ಮಾಡಿದ್ದಾನೆಂದು ಸೆಷನ್ ಜಡ್ಜರು ಹೇಳುವುದು ಸರಿಯಾಗಿದೆ. ಸಬ್ ಇನ್ಸಪೆಕ್ಟರೂ ಕೂಡ, ಇನ್ಸಪೆಕ್ಟರನ ಕೃಗೊಂಬೆಯಂತೆ ವರ್ತಿಸಿ ಸ್ಟೇಟುಮೆಂಟುಗಳನ್ನು ಮಾಡಿಕೊಂಡಿದ್ದು ಅಪರಾಧವೇ ಸರಿ. ಪೋಲೀಸು ಸೂಪರಿಂಟೆಂಡೆಂಟರ ವರ್ತನೆಯೂ ಸರಿಯಿಲ್ಲ. ಸ್ಥಳೀಯ ಅಧಿಕಾರಿಗಳು ಸರಿಯಾಗಿ ನಡೆವಳಿಕೆ ನಡೆಸಲಿಲ್ಲವೆಂದು ಅವರಿಗೆ ತಂತಿಯು ಬಂದಿದ್ದರೂ ಗಮನಿಸದೆ ಇದ್ದದ್ದು ತಪ್ಪು. ಇವರು ಕೂಡಲೇ ಚಿಂತಾಮಣಿಗೆ ಹೋಗಿ ವಿಚಾರ ಮಾಡಬೇಕಾಗಿತ್ತು. ಇದನ್ನು ಅವರು ಮಾಡಲಿಲ್ಲ. ಅವರು ಚಿಂತಾಮಣಿಗೆ ಹೋದಾಗಲೂ ತಂತಿಕೊಟ್ಟ ಹುಡುಗಿಯ ಬಂಧುಗಳನ್ನು ವಿಚಾರಿಸಲೇ ಇಲ್ಲ. ಅಮಲ್ದಾರರು ಕಾಲಕ್ಕೆ ಸರಿಯಾಗಿ ಅಧಿಕಾರವನ್ನು ಚಲಾಯಿಸಲಿಲ್ಲ. ಈ ಸಂದರ್ಭದಲ್ಲಿ ಅಮಲ್ದಾರರೇ ಖುದ್ದು ಪ್ರವೇಶಿಸಿ ಹುಡುಗಿಯನ್ನು ಉದ್ಧಾರ ಮಾಡಬೇಕಾಗಿತ್ತು. ಇನ್ಸಪೆಕ್ಟರಿಗೆ ಹೇಳಿದಷ್ಟು ಅವರು ತಮ್ಮ ಮಾತು ಕೇಳದೆ ಇದ್ದಾಗ ತಕ್ಕ ನಡವಳಿಕೆಯನ್ನು ನಡೆಯಿಸಲಿಲ್ಲ. ಮೇಲಕ್ಕೆ ತಿಳಿಸಲೂ ಇಲ್ಲ.

ಚೀಫ್ ಜಡ್ಜರ ಅಭಿಪ್ರಾಯ.

ಸ್ಥಳಾಧಿಕಾರಿಗಳು ಈ ಸಂದರ್ಭಗಳನ್ನೆಲ್ಲಾ ಬಹಳ ತಪ್ಪುತಪ್ಪಾಗಿ ನಡೆಸಿದ್ದಾರೆ. ಇನ್ಸಪೆಕ್ಟರ್ ಮತ್ತು ಸಬ್-ಇನ್ಸಪೆಕ್ಟರ ನಡವಳಿಕೆಗಳು ತತ್‌ಕ್ಷಣವೇ ಅವರಲ್ಲಿ ನಂಬಿಕೆಯನ್ನು ಹೋಗಲಾಡಿಸಿಬಿಡುತ್ತವೆ. ಇನ್ಸಪೆಕ್ಟರಿಗೆ ಮಾರನೇ ದಿನವೇ ಹುಡುಗಿಗೆ ೧೫ ವರ್ಷವೆಂದು ತಿಳಿಯಿತು. ಆದರೂ ಕೂಡಲೇ ಕೇಸು ರಿಜಿಸ್ಟರು ಮಾಡಿಕೊಳ್ಳಲು ಅಮಲ್ದಾರರಿಗೆ ಸಂಗತಿಗಳನ್ನು ತಿಳಿಸಲೇ ಇಲ್ಲ. ಅವರು ತಾಕೀತು ಮಾಡಿದಾಗಲೂ ನಿಮಗೇನು ಅಧಿಕಾರವಿದೆಯೆಂದು ಕೇಳಿದನು. ಸೂಪರಿಂಟೆಂಡೆಂಟರು ಕೇಸು ರಿಜಿಸ್ಟ್ರು ಮಾಡೆಂದು ಹೇಳಿದಾಗಲೂ, ಹಾಗೆ ಮಾಡಲಿಲ್ಲ. ಅವರಿಗೆ ಮೇಲ್ಪಟ್ಟ ಆಫೀಸರಾದ ಅಮಲ್ದಾರರಾದರೂ ಚೆನ್ನಾಗಿ ನಡೆದಿದ್ದರೆ ಇಷ್ಟೊಂದು ಅವಾಂತರಗಳನ್ನು ತಪ್ಪಿಸಬಹುದಾಗಿತ್ತು. ಅವರಿಗೆ ಊರಿನ ಗಲಭೆಯಾಗಿದೆಯೆಂದು ತಿಳಿದಾಗಲೂ, ಸಮಯಕ್ಕೆ ತಕ್ಕಹಾಗೆ ಅಧಿಕಾರವನ್ನು ಚಲಾಯಿಸಲಿಲ್ಲ. ಅವರು ಆ ಕೂಡಲೆ ಹೋಗಿ ಮದುವೆಯನ್ನು ನಿಲ್ಲಿಸಬೇಕಾಗಿತ್ತು. ಹಾಗೆ ಮಾಡಲಿಲ್ಲ. ಈ ಸಂದರ್ಭದಲ್ಲಿ ಅವರ ಅಸಾಮರ್ಥ್ಯ ಮತ್ತು ಔದಾಸೀನ್ಯವು ಬಹಳ ವಿಷಾದಕರವಾಗಿದೆ. ಪೋಲೀಸು ಸೂಪರಿಂಟೆಂಡೆಂಟರು ಅಪರಾಧಿಗಳ ಪರ ಸಾಕ್ಷಿಯಾಗಿ ಕರೆಯಲ್ಪಟ್ಟಿದ್ದಾರೆ. ಅವರಿಗೆ ಆ ಸೂಪರಿಂಟೆಂಡೆಂಟಲ್ಲಿ ಎಷ್ಟು ಅಭಿಮಾನವಿದೆ ಎಂಬುದು ವ್ಯಕ್ತವಾಗುತ್ತದೆ. ಅವರ ನಡತೆಯು ಸಮಾಧಾನಕರವಾಗಿಲ್ಲ. ಕೆಳಕೋರ್ಟಿನಲ್ಲಿ ನಡುಗಡೆಯಾದ ಅಪರಾಧಿಯೇ ಈ ವರ್ತಮಾನವನ್ನು ತಿಳಿಸಿದನೆಂದು ಸೂಪರಿಂಟೆಂಡೆಂಟರೇ ಹೇಳುತ್ತಾರೆ. ಈ ವರ್ತಮಾನವನ್ನು ಹುಡುಗಿಗೆ ತಿಳಿಸಿ, ಸೂಪರಿಂಟೆಂಡೆಂಟರು ತಮ್ಮ ಕಡೆ ಇದ್ದಾರೆಂದು ಹುಡುಗಿಗೆ ಧೈರ್ಯ ಕೊಡಲು ಪ್ರಯತ್ನ ನಡೆದಿದೆ. ಆದ್ದರಿಂದ ಸೆಷನ್ ಜಡ್ಜರು ಹೇಳಿದಂತೆ ಚಿಂತಾಮಣಿ ತಾಲೂಕು ಅಧಿಕಾರಿಗಳೆಲ್ಲಾ ಕರ್ತವ್ಯವಿಮುಖರಾಗಿದ್ದಾರೆ. ಸೂಪರಿಂಟೆಂಡೆಂಟರ ನಡವಳಿಕೆಯೂ ಕೂಡ ಸಂದೇಹಗ್ರಸ್ತವಾಗಿದೆ.

ಬೆಂಗಳೂರುನಗರಕ್ಕೆ ಶ್ರೀ ಬಾಳೇಹೊನ್ನೂರು ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಆಗಮನ.

ಶ್ರೀಮಜ್ಜಗದ್ಗುರು ಶ್ರೀ ರಂಭಾಪುರೀ ಮಹಾಸ್ವಾಮಿಗಳವರನ್ನು ಬೆಂಗಳೂರಿಗೆ ಬಿಜಮಾಡಿಕೊಳ್ಳುವ ವಿಚಾರದಲ್ಲಿ ಎಲ್ಲಾ ವಿಧವಾದ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಸ್ಥಾಪಿತವಾದ ಸ್ವಾಗತಸಮಿತಿಯ ಸಭೆಯು ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆ.ಟಿ.ಸಿ. ಐ. ಇ. ಇವರ ಅಧ್ಯಕ್ಷತೆಯಲ್ಲಿ ಇದೇ ಮಾಹೆ ತಾ|| 25-3-34 ನೆಯ ಭಾನುವಾರ ಸಾಯಂಕಾಲ ಬೆಂಗಳೂರುಸಿಟಿ ಚಿಕ್ಕಪೇಟೆ ಮಹಾಂತಿನಮಠದಲ್ಲಿ ಸೇರಿತ್ತು. ಶ್ರೀಗಳವರನ್ನು 1934 ನೇ ಏಪ್ರಿಲ್ ತಿಂಗಳು 27 ನೇ ಶುಕ್ರವಾರ ಪ್ರಾತಃಕಾಲ 8-45 ಘಂಟೆಗೆ ಸಮಸ್ತ ಬಿರುದಾವಳಿಗಳೊಡನೆ ಬೆಂಗಳೂರುನಗರಕ್ಕೆ ಬಿಜಮಾಡಿಸಿಕೊಳ್ಳಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯಿತು.

ಈ ಸಂದರ್ಭದ ಕಾರ್ಯಕ್ರಮಗಳ ನಿರ್ವಹಣಕ್ಕಾಗಿ ಕೆಲವು ಉಪಸಮಿತಿಗಳು ನೇಮಿಸಲ್ಪಟ್ಟವು.

ಸ್ವಾಗತಸಮಿತಿಯ ತೀರ್ಮಾನದಮೇರೆಗೆ ವಿಕ್ಟೋರಿಯಾ ಆಸ್ಪತ್ರೆಯ ಶ್ರೀಮಾನ್ ಬಿ. ನಂಜಪ್ಪ ಎಂ.ಬಿ.ಸಿ.ಎಂ. ರವರು ಮತ್ತೊಬ್ಬ ಸಹಾಯಕಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ವಿ. ಚನ್ನಯ್ಯ ಬಿ. ಎ., ಬಿ.ಎಲ್., ಅಡ್ವೊಕೇಟ್,
ಬೆಂಗಳೂರುಸಿಟಿ, ಕೆ. ನಾಗಪ್ಪ, ಕಾರ್ಯದರ್ಶಿಗಳು,
ತಾ|| 25-3-34. ಸ್ವಾಗತಸಮಿತಿ.

ಗಾಂಧಿಯವರ ಚಳವಳಿಯ ಪರಿಣಾಮಗಳು.

(ವಿವೇಕಾಭ್ಯುದಯ ಪತ್ರಿಕೆಯಿಂದ)

ಈಗ್ಗೆ ಸುಮಾರು ಇಪ್ಪತ್ತು ವರುಷಗಳ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗೆ ಅಲ್ಲಿಯ ಶಾಸಕ ರಿಂದ ಕಷ್ಟವು ಪ್ರಾಪ್ತವಾದ ಕಾಲದಲ್ಲಿ ಗಾಂಧಿಯವರು ಪ್ರತಿಭಟಿಸಿ ತಾವೂ ಕಷ್ಟವನ್ನನುಭವಿಸಿದರು. ಅಂದಿನಿಂದ ಲೋಕದಲ್ಲಿ ಇವರ ಕೀರ್ತಿಯು ಪಸರಿಸಲಾರಂಭಿಸಿತು. ಮೊದಮೊದಲು ದೇಶಹಿತಕಾರಿಗಳೆಂದು ಭಾವಿಸಲ್ಪಟ್ಟ ಗಾಂಧಿಯವರ ಕೆಲವು ಕಾರ್ಯಗಳಿಂದ ಸಂತುಷ್ಟರಾಗಿ ಜನಗಳು ಇವರನ್ನು ಹೆಚ್ಚುಹೆಚ್ಚಾಗಿ ಗೌರವಿಸುತ್ತ ಬಂದರು. ಗಾಂಧಿಯವರ ಮಾತೆಂದರೆ ಸರ್ವಸ್ವವನ್ನು ಅರ್ಪಿಸುವುದಕ್ಕೂ ಕೆಲವರು ಸಿದ್ಧರಾದರು. ಸಾಮಾನ್ಯವಾಗಿ ಮನುಷ್ಯನಿಗೆ ಜನಬಲವೂ ಧನಬಲವೂ ಬೆಳೆದ ಹಾಗೆಲ್ಲ ಅವನ ಆಶಾಲತೆಯೂ ಬೆಳೆಯುವುದು ಸ್ವಾಭಾವಿಕವಾಗಿದೆ. ಗಾಂಧಿಯವರಾದರೂ ಮನುಷ್ಯತ್ವವನ್ನತಿಕ್ರಮಿಸದವರಾಗಿರುವುದರಿಂದ ಇವರ ಆಶಾಲತೆಯೂ ಬೆಳೆಯುತ್ತ ಬಂದು, ಸ್ವರಾಜ್ಯವನ್ನು ಸಂಪಾದಿಸಿ ಆಧಿಪತ್ಯವನ್ನು ಮಾಡಬೇಕೆಂಬಲ್ಲಿಯವರೆಗೆ ಮುಟ್ಟಿತು. ಹಿಂದುಸ್ಥಾನದಲ್ಲಿ ಅವರು ಅದ್ವಿತೀಯ ವ್ಯಕ್ತಿಯೆಂದು ಜನರು ತಿಳಿದಿದ್ದಂತೆ ನಡೆನುಡಿಗಳಲ್ಲಿ ಅಲ್ಲದಿದ್ದರೂ ಭಾವದಲ್ಲಿ ಅವರೂ ಹಾಗೆ ತಿಳಿದಿದ್ದರು. ಈ ಭಾವವು ಬೆಳಗಾವಿಯಲ್ಲಿ ನಡೆದ ರಾಷ್ಟ್ರೀಯ ಸಭೆಯ ಸಮ್ಮೇಳನದಲ್ಲಿ ಅವರು ಮಾಡಿದ ಭಾಷಣದ "ಎಲ್ಲರೂ ಒಗ್ಗಟ್ಟಾಗದಿದ್ದರೆ ನನಗೆ ಸ್ವರಾಜ್ಯ ಬೇಡ" ಇತ್ಯಾದಿ ನುಡಿಗಳಿಂದಲೂ ಸೂಚಿತವಾಗುವುದು. ಸ್ವರಾಜ್ಯವು ದೊರಕಿದ್ದರೆ ನಿಜವಾಗಿಯೂ ಅದರ ಮುಖ್ಯಪಟ್ಟವು ಗಾಂಧಿಯವರ ಕೈಸೇರಿ ಹೋಗುತ್ತಿರಲಿಲ್ಲ.

ಗಾಂಧಿಯವರು ಅಂತರ್ಗೂಢವಾದ ತಮ್ಮ ಉದ್ದೇಶದ ಸಾಧನೆಗೆ ಸಾಧಕವಾಗುವುದೆಂದು ಮಹಾಯುದ್ಧಕಾಲದಲ್ಲಿ ಹಿಂದೂಸ್ಥಾನದಿಂದ ಆಂಗ್ಲಚಕ್ರಾಧಿಪತ್ಯಕ್ಕೆ ಜನಧನಬಲವನ್ನೊದಗಿಸಲು ಪ್ರಯತ್ನಿಸಿದರು. ಯುದ್ಧವು ಮುಗಿದ ಮೇಲೆ ತಮ್ಮ ಧ್ಯೇಯವನ್ನು ಸಾಧಿಸಲು ಶಾಸಕರೊಡನೆ ಹೋರಾಡಿ ಆ ಹೋರಾಟವು ಸಫಲವಾಗದಿರಲು ಅವರಲ್ಲಿ ಅನೇಕ ದೋಷಗಳನ್ನು ಜನತೆಗೆ ತೋರಿಸಿ ಭಾರತೀಯರನ್ನು ಹುರಿದುಂಬಿಸಿ ೧೯೨೧ ರಲ್ಲಿ ತಮ್ಮ ಉದ್ದೇಶಸಾಧನೆಗಾಗಿ ಅಸಹಕಾರದ ಚಳವಳಿಯನ್ನು ಹೂಡಿದರು. ನ್ಯಾಯವಿಧಾಯಕಸಭೆಗಳಲ್ಲಿ ಪ್ರತಿನಿಧಿಗಳಾಗಬೇಡಿರೆಂದೂ, ಬಿರುದುಗಳನ್ನು ತಿರಸ್ಕರಿಸಿರೆಂದೂ, ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗಬಾರದೆಂದೂ, ನ್ಯಾಯವಾದಿ (ವಕೀಲರು) ಗಳೂ ಪಟೇಲ ಶ್ಯಾನುಭೋಗರೂ ತಮ್ಮತಮ್ಮ ಉದ್ಯೋಗಗಳನ್ನು ಬಿಟ್ಟು ಬಿಡಬೇಕೆಂದೂ ಬೋಧಿಸಿದರು. ಒಂದು ವರುಷದೊಳಗೆ ಸ್ವರಾಜ್ಯವನ್ನು ಸಂಪಾದಿಸಿಕೊಡುವುದಾಗಿಯೂ ಪ್ರತಿಜ್ಞೆಯಾಗಿಹೋಯಿತು. ಇದಕ್ಕೆ ಮರುಳಾಗಿ ಅನೇಕಾನೇಕ ವಿದ್ಯಾರ್ಥಿಗಳು ಸ್ಕೂಲು ಕಾಲೇಜುಗಳನ್ನೂ ನ್ಯಾಯವಾದಿಗಳೂ ಪಟೇಲ ಶ್ಯಾನುಭೋಗರುಗಳೂ ತಮ್ಮತಮ್ಮ ಉದ್ಯೋಗಗಳನ್ನೂ ಪ್ರತಿನಿಧಿಗಳು ಪ್ರತಿನಿಧಿತ್ವವನ್ನೂ ಬಿರುದಾಂಕಿತರು ಬಿರುದುಗಳನ್ನೂ ಬಿಟ್ಟು ಸ್ವರಾಜ್ಯವೆಂಬ ಕನಸಿನ ಗಂಟನ್ನು ಈ ಗಾಂಧಿಯವರೊಡನೆ ಬಯಸಿ ಅವರಲ್ಲಿ ಅನೇಕರು ಇತೋಭ್ರಷ್ಟಸ್ತತೋಭ್ರಷ್ಟರಾಗಿ ಅದರ ಪರಿಣಾಮದ ಫಲವನ್ನು ಇದುವರೆಗೂ ಅನುಭವಿಸುತ್ತ "ಸಾಕಪ್ಪಾ" ಎನ್ನುವಷ್ಟು ಚೆನ್ನಾಗಿ ಬುದ್ಧಿಗಲಿತರು. ಕೆಲವರು ಪೂರ್ವೇತಿಪೂರ್ವ ತಮ್ಮ ಆ ಉದ್ಯೋಗಗಳನ್ನೇ ಮರೆಹೊಕ್ಕರು.

ಇತ್ತ ಗಾಂಧಿಯವರು ತಮ್ಮ ಅಸಹಕಾರವು ಅಸಫಲವಾದುದನ್ನು ಕಂಡು ಅದನ್ನು ಬಿಟ್ಟು ನಿರಾಯುಧರಾದ ಭಾರತೀಯರಲ್ಲಿ ಸತ್ಯಾಗ್ರಹದ ಚಳವಳಿಯೇ ತಕ್ಕುದೆಂದೂ ಅದಕ್ಕೆ ಪಿಕೆಟಿಂಗ್ ಅಂಗವೆಂದೂ ಬಗೆದು ಸತ್ಯಾಗ್ರಹವನ್ನೂ ಪಿಕೆಟಿಂಗನ್ನೂ ಹೂಡಿದರು. ಈ ಸಂದರ್ಭಗಳಲ್ಲಿ ಲಾಠಿಗಳಿಂದ ಏಟುಗಳನ್ನು ಕೊಡುವ ರಾಜದೂತರಿಗೆ ದಯೆಯುಂಟಾಗಲೆಂಬ ಉದ್ದೇಶದಿಂದಲೂ ಸತ್ಯಾಗ್ರಹಿಗಳು ಪ್ರತಿಭಟಿಸಿದರೆ ಗಲಾಟೆಯಾಗಿ ತಮ್ಮ ಧ್ಯೇಯಕ್ಕೆ ಭಂಗವೂ ಸರ್ವನಾಶವೂ ಆದೀತೆಂಬ ಅಭಿಪ್ರಾಯದಿಂದಲೂ ಭಾರತೀಯರಿಗೆ ಅಹಿಂಸಾಧರ್ಮವನ್ನೂ ಕ್ಷಮೆಯನ್ನೂ ಬೋಧಿಸಿದರು. ಇವರಿಗೆ ನಿಜವಾಗಿಯೂ ಅಹಿಂಸಾಧರ್ಮದಲ್ಲಿ ಶ್ರದ್ಧೆಯಿರುವ ಪಕ್ಷದಲ್ಲಿ ಮತ್ತು ಅದರ ಸೂಕ್ಷ್ಮತತ್ತ್ವವನ್ನು ತಿಳಿದಿರುವ ಪಕ್ಷದಲ್ಲಿ ಇವರು ಅಹಮದಾಬಾದಿನಲ್ಲಿ ಒಂದು ಬಟ್ಟೆಯ ಕಾರ್ಖಾನೆಯ ಆವರಣದೊಳಗೆ ಸೇರಿಸಲ್ಪಟ್ಟಿದ್ದ ಅನೇಕ ಹುಚ್ಚುನಾಯಿಗಳನ್ನು ಕೊಂದು ಹಾಕುವಂತೆ ಸಲಹೆಯನ್ನು ಕೊಡುತ್ತಿರಲಿಲ್ಲ. ಅಂತು ಇವರ ಉದ್ದೇಶವು ಹೇಗಾದರೂ ಇರಲಿ, ಇವರ ಉಪದೇಶದಿಂದ ಅಹಿಂಸಾಧರ್ಮಕ್ಕೇನೋ ಬೆಂಬಲವು ದೊರೆಯಿತು. ಪ್ರಯಾಣಿಕರಿಗೆ ನೆರಳನ್ನು ಕೊಟ್ಟು ಸುಖವನ್ನುಂಟುಮಾಡಬೇಕೆಂದು ದೊಡ್ಡಮರಕ್ಕೆ ಉದ್ದೇಶವಿಲ್ಲದಿದ್ದರೂ ಅದರ ಬುಡದಲ್ಲಿ ವಿಶ್ರಮಿಸುವ ಪ್ರಯಾಣಿಕರಿಗೆ ಅದರ ನೆರಳಿನಿಂದ ಸುಖವೇನೋ ಉಂಟಾಗುವುದು.

ಗಾಂಧಿಯವರ ಸತ್ಯಾಗ್ರಹಚಳವಳಿಯಿಂದಲೂ ಪಿಕೆಟಿಂಗ್ ಚಳವಳಿಯಿಂದಲೂ ಅನೇಕರಿಗೆ ಕಷ್ಟನಷ್ಟಗಳೂ ಲಾಠಿಯ ಏಟುಗಳೂ ಕಾರಾಗೃಹವಾಸವೂ ದೇಶದಲ್ಲೆಲ್ಲ ಮಹಾಕ್ಷೋಭೆಯೂ ಉಂಟಾದುದಲ್ಲದೆ ಇವರ ಉದ್ದೇಶವು ಈಡೇರಲಿಲ್ಲ. ಯಾವುದೊಂದು ಮಹತ್ಫಲವೂ ಉಂಟಾಗಲಿಲ್ಲ. ಬೊಂಬೈ ಮೊದಲಾದ ಕೆಲವು ಕಡೆಗಳಲ್ಲಿ ಕೆಲವು ಸತ್ಯಾಗ್ರಹಿಗಳ ಪಾಡಾದರೋ ಬಹು ಶೋಚನೀಯವಾಗಿತ್ತು.

ಸತ್ಯಾಗ್ರಹದಲ್ಲಿಯೂ ಪಿಕೆಟಿಂಗಿನಲ್ಲಿಯೂ ಸ್ತ್ರೀಯರೂ ಭಾಗಿಗಳಾಗಬೇಕೆಂದು ಇವರು ಬೋಧಿಸಿದರು. ಈ ಮಾತು ವೇದವಾಕ್ಯಕ್ಕಿಂತಲೂ ಹೆಚ್ಚೆಂದು ತಿಳಿದು ಮರುಳಾಗಿ "ಅನರ್ಥ್ಯಂಶಶಾಸ್ತ್ರ ರಾಜದಾರಾಃ" ಎನ್ನುವಂತೆ ಸುಖದಲ್ಲಿದ್ದ ಅನೇಕಕೋಮಲೆಯರು-ಅಬಲೆಯರು ಖ್ಯಾತಿಪೂಜೆಯ ಲಾಲಸೆಯಿಂದಲೂ ಅವಿವೇಕತನದಿಂದಲೂ ಸತ್ಯಾಗ್ರಹದಲ್ಲಿಯೂ ಪಿಕೆಟಿಂಗಿನಲ್ಲಿಯೂ ಭಾಗವನ್ನು ವಹಿಸಿ ಪಡಬಾರದ ಕಷ್ಟವನ್ನು ಪಟ್ಟರು. ಅನೇಕ ಸ್ತ್ರೀಯರ ಮಾನಭಂಗವಾಯಿತು. ಆಭರಣವಸ್ತ್ರಗಳು ಅಪಹರಿಸಲ್ಪಟ್ಟುವು. ಕೆಲವು ಸ್ತ್ರೀಯರ ಪತ್ತೆಯೇ ಇಲ್ಲವಾಯಿತು. ಬೊಂಬೈಯಲ್ಲಿ ಆ ಚಿತ್ರವೆಲ್ಲ ಜನತೆಯ ಹೃದಯದಲ್ಲಿ ಚೆನ್ನಾಗಿ ಚಿತ್ರಿತವಾಯಿತು. ಸ್ವಲ್ಪ ಕಡಿಮೆಯಾಗಿ ಗುಜರಾತಿನಲ್ಲಿ—ಬಾರ್ಡೋಲಿಯಲ್ಲಿ. ಕೊನೆಗೆ ಈ ಚಳವಳಿಯೂ ತಣ್ಣಗಾಯಿತು.

ಖಾದಿಯನ್ನು ಪ್ರಚಾರಮಾಡುವ ಭರಭರಾಟದಲ್ಲಿ ಗಾಂಧಿಯವರು ಪರದೇಶದ ಬಟ್ಟೆಯನ್ನು ತರಿಸಬೇಡಿರೆನ್ನುವುದರಲ್ಲಿಯೂ ಅದನ್ನು ಬಹಿಷ್ಕರಿಸಿರೆನ್ನುವುದರಲ್ಲಿಯೂ ತೃಪ್ತರಾಗದೆ ಹಿಂದೆ ತರಿಸಿದ್ದುದನ್ನು ರಾಶಿಮಾಡಿ ಸುಟ್ಟುಬಿಡಿರೆಂದು ಬೋಧಿಸಿದರು. ಸರಿ, ವಿವೇಕಶೂನ್ಯರಾದ ಕೆಲವರು, ವೈರಿಗೆ ಅಪಶಕುನವಾಗಬೇಕೆಂಬ ಉದ್ದೇಶದಿಂದ ತನ್ನ ಮೂಗನ್ನು ಕೊಯ್ದುಕೊಳ್ಳುವವನಂತೆ, ತಾವು ದುಡ್ಡುಕೊಟ್ಟು ತೆಗೆದುಕೊಂಡಿರುವ ಬಟ್ಟೆಯನ್ನು ಸುಟ್ಟರೆ ತಮಗೇ ನಷ್ಟವೆಂಬ ಪರಿಜ್ಞಾನವಿಲ್ಲದೆ, ಲಕ್ಷಗಟ್ಟಲೆ ರೂಪಾಯಿಗಳ ಬಟ್ಟೆಗಳನ್ನು ಅಲ್ಲಲ್ಲಿ ರಾಶಿಮಾಡಿ ಅಗ್ನಿನಾರಾಯಣನಿಗೆ ಆಹುತಿಗೊಟ್ಟರು. ಬಹಿಷ್ಕಾರವು ಮಾತಿನಲ್ಲೇ ಕೊನೆಗೊಂಡು ಅದೂ ತಣ್ಣಗಾಯಿತು. ಪರದೇಶದ ಬಟ್ಟೆಯು ಅನುದೇನೋ ಯಥಾಪ್ರಕಾರವೇ ಆದೆ.

ಗಾಂಧಿಯವರು ಈಗ್ಗೆ ಸುಮಾರು ಮೂರು ವರುಷಗಳ ಹಿಂದೆ ತಮ್ಮ ಸಬರಮತಿ ಆಶ್ರಮದಿಂದ ಉಪ್ಪಿನ ಸತ್ಯಾಗ್ರಹಕ್ಕೆ ಹೊರಟು ವಿಜಯಧ್ವಜವನ್ನೇರಿಸದೆ ಹಿಂದಿರುಗುವುದಿಲ್ಲವೆಂದು ಶಪಥವನ್ನು ಮಾಡಿಕೊಂಡು ಜೈತ್ರಯಾತ್ರೆಗೆ ಹೋದರು. ಎಲ್ಲರೂ ಉಪ್ಪನ್ನು ತಯಾರಿಸಬೇಕೆಂದು ಉಪದೇಶಮಾಡಿದರು. ಇದರಿಂದ ಸಾವಿರಾರು ಜನರು ಲಾಠಿಯ ಏಟಿಗೂ ಕಾರಾಗೃಹವಾಸಕ್ಕೂ ಗುರಿಯಾದರು. ಹಲವರು ಅಂತಕನಿಗೆ ತುತ್ತಾದರು. ಗಾಂಧಿಯವರ ಶಪಥವು ಮಿಂಚಿನಂತೆ ಹೊಳೆದು ಹೋಯಿತು. ಕೊನೆಗೆ ಚಳವಳಿಯೂ ತಣ್ಣಗಾಯಿತು.

ಗಾಂಧಿಯವರಿಗೆ 'ದೇಶಹಿತಕ್ಕಾಗಿ' ಎಂದು ಕಾರಾಗೃಹವಾಸವನ್ನು ಮಾಡಬೇಕಾದ ಸಂದರ್ಭಗಳೊದಗಿದ್ದರೂ 'ಯರವಾಡಾಪ್ಯಾಲೇಸ್' ಎಂದು ಅವರೇ ಹೇಳಿರುವಂತೆ ನ್ಯಾಯಪ್ರಿಯರಾದ ಆಂಗ್ಲ ಶಾಸಕರು ಅರಮನೆಯಲ್ಲಿರಿಸುವಂತೆಯೇ ಇವರನ್ನು ಸುಖವಾಗಿರಿಸಿದ್ದರು. ಇವರ ಶರೀರಸ್ಥಿತಿಯನ್ನು ನೋಡಿಕೊಳ್ಳುವುದಕ್ಕೆ ವೈದ್ಯರು ನೇಮಿಸಲ್ಪಟ್ಟಿದ್ದರು. ಸಾಧಾರಣವಾದ ಕೆಲವು ನಿರ್ಬಂಧಗಳ ಹೊರತು ಬೇರೆ ಯಾವ ಕಷ್ಟವೂ ಇವರಿಗಿರಲಿಲ್ಲ. ಆದುದರಿಂದ ಇತರ ಸಾಮಾನ್ಯ ಸತ್ಯಾಗ್ರಹಿಗಳ ಪಾಲಿಗೆ ಬಂದ ಲಾಠಿಯ ಏಟಿನ ಸುಖವಾಗಲಿ, ಕಾರಾಗೃಹವಾಸದ ಸುಖವಾಗಲಿ ಗಾಂಧಿಯವರ ಸ್ವಾನುಭವಕ್ಕೆ ಬರಲು ಅವಕಾಶವಿರಲಿಲ್ಲ.

ಸಾಧ್ಯವಾಗಿದ್ದರೆ ಆಂಗ್ಲಚಕ್ರಾಧಿಪತ್ಯವನ್ನೇ ತಲೆಕೆಳಗು ಮಾಡಲಿದ್ದ ಗಾಂಧಿಯವರ ಒಂದು ದೊಡ್ಡ ಚಳವಳಿಯೆಂದರೆ ಸಿವಿಲ್ ಡಿಸ್ಒಬಿಡಿಯನ್ಸ್—ಕಾಯಿದೆಯ ನಿರಾಕರಣ. ಗುಜರಾತಿನಲ್ಲಿರುವ ಬಾರ್ಡೋಲಿಯನ್ನು ಈ ಚಳವಳಿಯ ಪರೀಕ್ಷಾಕ್ಷೇತ್ರವನ್ನಾಗಿ ಮಾಡಿಕೊಂಡು ಗಾಂಧಿಯವರು ಅಲ್ಲಿ ಇದನ್ನು ಪ್ರಾರಂಭಿಸಿದರು. ಆದರೆ ಸರಕಾರದವರು ಪುನಃ ಆ ಸುದ್ದಿಗೆ ಹೋಗದಂತೆ ಆ ಚಳವಳಿಯನ್ನು ಅಡಗಿಸಿದರು. ಅದರಿಂದ ಅಲ್ಲಿಯ ಪ್ರಜೆಗಳು ಅನಿರ್ವಚನೀಯವಾದ ಕಷ್ಟನಷ್ಟಗಳನ್ನನುಭವಿಸಿದರು.

ಹೀಗೆ ಗಾಂಧಿಯವರ ಚಳವಳಿಗಳಿಂದ ದೇಶದಲ್ಲಿ ಅಪಾರವಾದ ಅರ್ಥಹಾನಿಯೂ ಪ್ರಾಣಹಾನಿಯೂ ಕಷ್ಟಪರಂಪರೆಗಳೂ ಕ್ಷೋಭೆಯೂ ಉಂಟಾಗಿರುವುದು ಕಂಡುಬರುತ್ತದಲ್ಲದೆ ಯಾವುದೊಂದು ಮಹಾಪ್ರಯೋಜನವೂ ಕಂಡುಬರುವುದಿಲ್ಲ. ಕೆಲವು ಕಡೆಗಳಲ್ಲಿ ಹಿಂದೂ ಮಹಮ್ಮದೀಯರೊಳಗೆ ನಡೆದ ಬಹುಭಯಂಕರವಾದ ಕೆಲವು ಕಡಿದಾಟಗಳಿಗೆ ಇವರ ಕೆಲವು ಚಳವಳಿಗಳೂ ಕಾರಣಗಳಾಗಿದ್ದುವೆಂದು ಹೇಳಬಹುದು.

ಈ ಗಾಂಧಿಯವರು ತಮ್ಮ ಬಲಾಬಲವನ್ನು ವಿಚಾರಮಾಡದೆ ಒಂದೊಂದಾಗಿ ಕೈಗೊಂಡ ಕಾರ್ಯಗಳಲ್ಲಿ ಯಾವುದನ್ನೂ ಕೊನೆಮುಟ್ಟಿಸದೆ ಮುಂದೆ ಮುಂದೆ ಬೇರೆ ಬೇರೆ ಕಾರ್ಯಗಳಿಗೆ ಹಾರುತ್ತ ಹೋಗಿರುವುದರಿಂದಲೇ ಇವರ ಅದೂರದರ್ಶಿತೆಯೂ ಚಿತ್ತಚಾಂಚಲ್ಯವೂ ವ್ಯಕ್ತವಾಗುವುದು. ಮಹಾಪುರುಷರು ಬಾರಿಬಾರಿಗೆ ವಿಘ್ನಗಳೊದಗಿದರೂ ತಾವು ಪ್ರಾರಂಭಿಸಿದ ಕಾರ್ಯವನ್ನು ಬಿಡುವುದಿಲ್ಲವೆಂಬ ವಿಷಯವು 'ವಿಘ್ನೈರ್ಮುಹುರ್ಮುಹುರಪಿ ಪ್ರತಿಹನ್ಯಮಾನಾಃ ಪ್ರಾರಬ್ಧಮುತ್ತಮಗುಣಾ ನ ಪರಿತ್ಯಜಂತಿ' ಎಂಬ ಆರೋಕ್ತಿಯಿಂದ ಗೊತ್ತಾಗುವುದು.

ಈ ಗಾಂಧಿಯವರು ಸ್ವರಾಜ್ಯಪ್ರಾಪ್ತಿಗೆ ಮಾಡಿದ ತಮ್ಮ ಯಾವುದೊಂದು ಪ್ರಯತ್ನವೂ ಸಫಲವಾಗದಿರುವುದನ್ನು ಕಂಡು 'ಕೆಲವು ಕಾಲದವರೆಗೆ' ಎಂದು ರಾಜಕೀಯಾಂದೋಲನವನ್ನು ಬಿಟ್ಟು 'ಎಲ್ಲ ಬಿಟ್ಟ ಬಂಗಿನಟ್ಟ' ಎನ್ನುವಂತೆ ಪವಿತ್ರ ಋಷಿಪರಂಪರೆಯಾಗಿ—ಅನಾದಿಕಾಲದಿಂದ ಬಂದ ವರ್ಣಾಶ್ರಮಧರ್ಮಗಳನ್ನು ಧ್ವಂಸಮಾಡಲು ಬದ್ಧಕಂಕಣರಾಗಿ ಹೊರಟಿದ್ದಾರೆ. ಅವರವರ ಉಚ್ಚನೀಚ ಆಚರಣೆಗಳಿಂದಲೂ ಉಚ್ಚನೀಚ ಶೀಲಸ್ವಭಾವಗಳಿಂದಲೂ ಬಂದಿರುವ ಉಚ್ಚನೀಚಭಾವವನ್ನೂ ಜಾತಿಭೇದವನ್ನೂ ವರ್ಣಾಶ್ರಮಧರ್ಮಗಳನ್ನೂ ಧ್ವಂಸಮಾಡಿ ಎಲ್ಲರನ್ನೂ ಒಟ್ಟುಗೂಡಿಸಿದರೆ ಸ್ವರಾಜ್ಯಪ್ರಾಪ್ತಿಗೆ ಇದೊಂದು ಎಲ್ಲಕ್ಕಿಂತಲೂ ಪ್ರಬಲವಾದ ಸಾಧನವಾಗುವುದೆಂದು ಇವರ ನಂಬಿಕೆ. ಅಂತು ತಮ್ಮ ಜೀವಿತಕಾಲದಲ್ಲಿ ಹೇಗಾದರೂ ಮಾಡಿ ಸ್ವರಾಜ್ಯವನ್ನು ದೊರಕಿಸಿ ಬಿಡಬೇಕೆಂದು ಇವರ ಆಶಯವಿರಬೇಕು. ಸ್ವರಾಜ್ಯವು ಯಾರಿಗೂ ಅನಭಿಮತವಲ್ಲದಿದ್ದರೂ ಅಲ್ಲಲ್ಲಿ ನಡೆದೂ ನಡೆಯುತ್ತಲೂ ಇರುವ ಹೃದಯಭೇದ್ಯವಾದ ಕದನ ಕಡಿದಾಟಗಳ ವಾರ್ತೆಗಳನ್ನು ಕೇಳಿದರೆ ಸ್ವರಾಜ್ಯವನ್ನು ಜೀರ್ಣಿಸಿಕೊಳ್ಳುವ ಶಕ್ತಿಯು ಪ್ರಾಪ್ತವಾಗಿದೆಯೇ ಎಂದೂ, ಈಗಲೇ ಹೀಗಿರುವಾಗ ಸ್ವರಾಜ್ಯವು ಪ್ರಾಪ್ತವಾದರೆ ಬಲಿಷ್ಠರಿಂದ ಬಲಹೀನರಿಗೆ ಮಹಾವಿಪತ್ತಿಯು ಪ್ರಾಪ್ತವಾದೀತೋ ಎಂದೂ ಅನೇಕರು ಸಂದೇಹಪಡುತ್ತಿರುವರು. ಎಲ್ಲಿಯಾದರೂ ಭಯಂಕರವಾದ ಕದನವು ನಡೆದರೆ ಅದನ್ನು ಶಮನಮಾಡಲು ಶಾಸಕರ ಶರಣವನ್ನೇ ಹೊಂದುತ್ತಿರುವುದು ಕಂಡುಬರುತ್ತದೆ. ಶಾಸಕರು ತಮ್ಮ ಸಾಹಸೋತ್ಸವನ್ನು ಸ್ವಲ್ಪ ಸಡಲಿಸಿದರೆ ಏನೇನು ಅನರ್ಥಗಳಾಗುವವೋ ಎಂಬ ಭೀತಿಯು ಅನೇಕರಿಗಿರುವುದು. ಆದರೂ ಗಾಂಧಿಯವರ ಪ್ರಯತ್ನಪ್ರವಾಹವು ಪ್ರವಹಿಸುತ್ತಲೇ ಬಂದು ಈಗ ಸನಾತನಧರ್ಮವೆಂಬ ಬೆಟ್ಟವನ್ನು ಬುಡಸಹಿತವಾಗಿ ಉರುಳಿಸಲು ಪ್ರಯತ್ನಿಸುತ್ತಿದೆ. ಈ ಪ್ರಯತ್ನವು ಎಷ್ಟರಮಟ್ಟಿಗೆ ಸಫಲವಾಗುವುದೋ ಗೊತ್ತಿಲ್ಲ.

ಅನಾದಿಕಾಲದಿಂದಲೂ ಧಾರ್ಮಿಕಭಾವದಿಂದಲೇ ಸರ್ವೋತ್ಕೃಷ್ಟವೆನಿಸಿರುವ ಭಾರತವರ್ಷದ ಧಾರ್ಮಿಕಭಾವವನ್ನು ಧ್ವಂಸಮಾಡಿ ಜನಬಲವನ್ನು ಹೆಚ್ಚಿಸಿ ಪಾಶವಿಕಭಾವದಿಂದ ತಮ್ಮ ಧ್ಯೇಯವನ್ನು ಸಾಧಿಸಬೇಕೆನ್ನುವುದು ಗಾಂಧಿಯವರ ಉದ್ದೇಶ ಮತ್ತು ಪ್ರಯತ್ನ. ಇವರು ಹೋದಕಡೆಗಳಲ್ಲೆಲ್ಲ ಉತ್ತಮವರ್ಣದವರಿಂದ ಅಸ್ಪೃಶ್ಯರಿಗೆ ಬಹಳ ಅನ್ಯಾಯವಾಗಿರುವುದೆಂದೂ ಉತ್ತಮವರ್ಣದವರು ಅಸ್ಪೃಶ್ಯರನ್ನು ತುಳಿದುಬಿಟ್ಟಿದ್ದಾರೆಂದೂ ಮೊದಲಾಗಿ ಅಭಿಪ್ರಾಯವು ಬರುವಂತೆ ಉಪದೇಶಿಸುತ್ತಿರುವರು. ಉತ್ತಮವರ್ಣದವರು ಅಸ್ಪೃಶ್ಯರೊಡನೆ ಸಂಪರ್ಕವನ್ನು ಮಾಡದಿರುವುದೇ ಬಹಳ ಅನ್ಯಾಯವನ್ನು ಮಾಡಿದಂತಾಗಿರುವುದೆಂದೂ ತುಳಿದುಬಿಟ್ಟಂತಾಗಿರುವುದೆಂದೂ ಇವರ ಅಭಿಪ್ರಾಯವೋ ಏನೋ ಗೊತ್ತಾಗಲಿಲ್ಲ. ಬೇರೆ ಯಾವ ವಿಧದಿಂದಲೂ ಇವರು ಹೇಳುವಂತೆ ಅನ್ಯಾಯವಾಗಿರುವುದು ತಿಳಿದುಬರುವುದಿಲ್ಲ. ಆಯಾ ವರ್ಣಾಶ್ರಮದವರು ಮತ್ತು ಜಾತಿಯವರು ತಮ್ಮತಮ್ಮ ಆಚಾರಪದ್ಧತಿಗಳನ್ನೂ ವೃತ್ತಿಗಳನ್ನೂ ಪಾಲಿಸುತ್ತ ನೆಮ್ಮದಿಯಾಗಿದ್ದರು. ಈಗ ಇವರ ಈ ಚಳವಳಿಯಿಂದ ಭರತಖಂಡದಲ್ಲಿ ಎಲ್ಲೆಲ್ಲಿಯೂ ಕ್ಷೋಭೆಯುಂಟಾಗಿದೆ. ಗುರುವಾಯೂರು ಮೊದಲಾದ ಕೆಲವು ಕಡೆಗಳಲ್ಲಿ ಹೊಡೆದಾಟಗಳೂ ಆಗಿರುವುವು. ಉತ್ತಮವರ್ಣದವರಲ್ಲಿಯೂ ಅಸ್ಪೃಶ್ಯರಲ್ಲಿಯೂ ಇದ್ದ ಪರಸ್ಪರ ಸೌಹಾರ್ದಭಾವವು ಇವರ ಚಳವಳಿಯಿಂದ ಶಿಥಿಲವಾಗುವಂತಾಗಿದೆ. ಅನೇಕ ಸ್ಥಳಗಳಲ್ಲಿ ಸನಾತನಧರ್ಮಾಭಿಮಾನಿಗಳು ಸಭೆ ಸೇರಿ ಗಾಂಧಿಯವರ ಈ ಚಳವಳಿಯನ್ನು ಅನಿವಾರ್ಯಪಕ್ಷದಿಂದ ಖಂಡಿಸುತ್ತಿರುವರು. ಇದರಿಂದ ಅಸ್ಪೃಶ್ಯರಿಗೆ ಸನಾತನಧರ್ಮೀಯರ ಮೇಲೆ ವಿರಸವುಂಟಾಗುವುದು ಸ್ವತಃ ಸಿದ್ಧವಾಗಿದೆ. ಉತ್ತಮವರ್ಣದವರು ತಮ್ಮ ಪೂಜ್ಯಋಷಿಪ್ರಣೀತಪವಿತ್ರಶಾಸ್ತ್ರಾಜ್ಞಾನುಸಾರವಾಗಿ ಅಸ್ಪೃಶ್ಯರ ಸಂಪರ್ಕವನ್ನು ಮಾಡದಿರುವರಲ್ಲದೆ ಅವರಲ್ಲಿ ದ್ವೇಷಭಾವದಿಂದಾಗಲಿ ಅವರಿಗೆ ಅನ್ಯಾಯವನ್ನು ಮಾಡಬೇಕೆಂದಾಗಲಿ ಅಲ್ಲ. ಉತ್ತಮ ವರ್ಣದವರು ತಾವು ಶುಚಿರ್ಭೂತರಾಗಿರುವಾಗ ತಮ್ಮ ಮಕ್ಕಳನ್ನು ಕೂಡ ಸ್ಪರ್ಶಿಸುವುದಿಲ್ಲ. ಆದರೆ ಅದು ದ್ವೇಷದಿಂದೆಂದು ಹೇಳಲಾಗುವುದೇ?

ಹಿಂದುಗಳಿಗೆಲ್ಲ ದೇವಾಲಯಕ್ಕಿಂತಲೂ ಹೆಚ್ಚಿನ ಪವಿತ್ರಸ್ಥಾನವು ಮತ್ತೊಂದಿಲ್ಲ. ಅಲ್ಲಿಗೆ ಅಸ್ಪೃಶ್ಯರನ್ನು ಪ್ರವೇಶಮಾಡಿಸಿಬಿಟ್ಟರೆ ತಮ್ಮ ಅಸ್ಪೃಶ್ಯತಾನಿವಾರಣೆಯ ಮಾರ್ಗವು ಸುಗಮವಾಗುವುದೆಂದು ಬಗೆದು ಗಾಂಧಿಯವರು ದೇವಸ್ಥಾನಗಳಿಗೆ ಅಸ್ಪೃಶ್ಯರನ್ನು ಪ್ರವೇಶಮಾಡಿಸಬೇಕೆಂದು ಮೊದಲು ಹೇಳುತ್ತ ಬಂದರು. ಮಲಬಾರಿನಲ್ಲಿರುವ ಗುರುವಾಯೂರು ದೇವಸ್ಥಾನದಲ್ಲಿ ಅಸ್ಪೃಶ್ಯರ ಪ್ರವೇಶಕ್ಕೆ ಅವಕಾಶವನ್ನು ಕೊಡಿಸಬೇಕೆಂದು ಸಾಹಸವನ್ನು ಮಾಡಿ ಬೆದರಿಸಿದರು. ಆದರೂ ಆ ದೇವಾಲಯದ ಧರ್ಮಾಧಿಕಾರಿಗಳು ಬೆದರದೆ ಅವಕಾಶವನ್ನು ಕೊಡಲಿಲ್ಲ. ಗಾಂಧಿಯವರ ಪ್ರಯತ್ನಸಾಹಸಗಳು ವಿಫಲವಾದುವು. ಈಚೆಗೆ ಅದೇಕೋ ಸೋಮವಾರದ ಮೌನವ್ರತದ ಜತೆಗೆ ಸ್ವಲ್ಪ ಈ ದೇವಸ್ಥಾನಪ್ರವೇಶದ ಮೌನವ್ರತವನ್ನೂ ಸೇರಿಸಿದಂತೆ ತೋರುತ್ತದೆ.

ಈ ಗಾಂಧಿಯವರು ತಮ್ಮ ಮಾರ್ಗದರ್ಶಿತ್ವವನ್ನು ಇತರರೂ ಅನುಸರಿಸಲೆಂಬ ಉದ್ದೇಶದಿಂದ ಅಸ್ಪೃಶ್ಯಕನ್ಯೆಯನ್ನು ತಮ್ಮ ಆಶ್ರಮದಲ್ಲಿಟ್ಟು ಪೋಷಿಸಿದರು. ತಮ್ಮ ಗುಣರಾಶಿಯು ನೀಲನಾಗಿಣಿಯನ್ನು ಆಕರ್ಷಿಸಲಾರದೆ ಹೋಯಿತು. ಅವಳು ಹಠೋಟಿಯನ್ನು ಏರಿದಳು. ಕಡೆಗೆ ಪರಾರಿಯಾದಳು. ಇನ್ನೂ ಏನೇನೋ.

ಈ ಗಾಂಧಿಯವರು ವರ್ಣಸಾಂಕರ್ಯವನ್ನು ಮಾಡಿ ತೋರಿಸಿ ತಾವು ಮಾರ್ಗದರ್ಶಕರಾಗಬೇಕೆಂಬ ಉದ್ದೇಶದಿಂದ ಬ್ರಾಹ್ಮಣವರ್ಣದ ಒಬ್ಬ ಬಡಹುಡುಗನಿಗೆ ಅಸ್ಪೃಶ್ಯಕನ್ಯೆಯೊಡನೆ ಮದುವೆ ಮಾಡಿಸಿದರು. ಆದರೆ ತಮ್ಮ ಮಕ್ಕಳಿಗೆ ಅಸ್ಪೃಶ್ಯಕನ್ಯೆಯರನ್ನು ತಂದು ಮದುವೆಮಾಡುವ ವಿಷಯದಲ್ಲಿ ಮಾತ್ರ ಇವರ ಮಾರ್ಗದರ್ಶಿತ್ವವು ಅವಿತುಕೊಂಡಿತು. 'ಊಹು' ಇವರ ಓರ್ವ ಮಗನಿಗೆ ಉತ್ತಮಬ್ರಾಹ್ಮಣಕನ್ಯೆಯೇ-ರಾಜಗೋಪಾಲಾಚಾರ್ಯರ ಪುತ್ರಿಯೇ ಬೇಕಾಯ್ತು. ಬಹುಶಃ ಮಕ್ಕಳಲ್ಲೊಬ್ಬರೂ ಇವರ ಮಾತನ್ನು ಕೇಳದಿರಬಹುದು. ಹಾಗಾದರೆ ಇಡೀ ಭರತಖಂಡದ ಜನಾಂಗವನ್ನು ತಮ್ಮ ಹಠೋಟಿಯಲ್ಲಿಟ್ಟುಕೊಂಡು ಆಳುವೆನೆಂಬ ಆಶೆಯು ದುರಾಶೆಯಲ್ಲವೇ? ಗಾಂಧಿಯವರೇನೋ ಯಾವ ಮಾತಿನಲ್ಲಿಯೂ ಸಿಕ್ಕಿಬೀಳುವವರಲ್ಲ—ಪಕ್ಕಾ ಬನಿಯ!

ಇಷ್ಟಾದರೂ ಕೆಲವರು 'ಗಾಂಧಿಯವರೇನು ಅಸ್ಪೃಶ್ಯರೊಡನೆ ಊಟಉಪಚಾರವನ್ನೂ ಹೆಣ್ಣುಕೊಡುವುದು ತರುವುದನ್ನೂ ಮಾಡಿದರೆಂದು ಹೇಳುತ್ತಾರೆಯೇ? ಅದು ಅವರವರ ಇಷ್ಟ!' ಎಂದು ಹೇಳುತ್ತಿರುವುದು ಆಶ್ಚರ್ಯಕರವಾಗಿದೆ. ಇದು ಗಾಂಧಿಯವರ ಈ ಮಾರ್ಗದರ್ಶಿತೆಗಳು ಜನತೆಗೆ ಏನನ್ನು ಸೂಚಿಸುತ್ತವೆಂಬ ರಹಸ್ಯವನ್ನು ತಿಳಿಯಲಾರದ ವಿಚಾರಶೂನ್ಯತೆಯ ಲಕ್ಷಣವೆನ್ನಬೇಕು.

ಕೆಲವರು 'ಕಾಲವೇ ಹಾಗೆ ಬಂದೊದಗಿದೆ, ನಾವು ತಡೆದರೆ ನಿಲ್ಲುವುದೇ?' ಎಂದು ಹೇಳುವುದುಂಟು. ಅಹುದು—ಪ್ರತಿಯೊಬ್ಬ ಮನುಷ್ಯನೂ ತನಗೆ ಮರಣವು ತಪ್ಪಿದುದಲ್ಲವೆಂದು ತಿಳಿದು ತಾನಾಗಿ ಬುದ್ಧಿಪೂರ್ವಕವಾಗಿ ಮೊದಲೇ ಆತ್ಮಘಾತವನ್ನು ಮಾಡಿಕೊಂಡರೆ ಅದು ಅವಿವೇಕತನವೆನ್ನಿಸುವುದಿಲ್ಲವೇ? ಅಂತಹ ಕಾಲವು ಪ್ರಾಪ್ತವಾದಾಗ ಪ್ರಯತ್ನವು ಸಫಲವಾಗದಿದ್ದರೆ ಅದು ಅವನ ತಪ್ಪಲ್ಲ.

ಗಾಂಧಿಯವರು ಅಸ್ಪೃಶ್ಯರಿಗೆ 'ಹರಿಜನರು' ಎಂದು ನಾಮಕರಣವನ್ನು ಮಾಡಿ ತಮಗೆ ಅವರ ಸೇವೆಯಲ್ಲದೆ ಮುಕ್ತಿಗೆ ಬೇರೆ ದಾರಿಯೇ ಇಲ್ಲವೆಂದು ತಮ್ಮ ಭಾಷಣದಲ್ಲಿ ಹೇಳಿರುವರು. ಈ ಮಾತು ನಿಜವಾದರೆ ನಮ್ಮ ತೀರ್ಥಂಕರರೂ ಮಹರ್ಷಿಗಳೂ ಹೇಳಿರುವ 'ಸಮ್ಯಗ್ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ' ಎನ್ನುವ ಮಾತು ಸುಳ್ಳಾಗಬೇಕಾಯಿತು.

ಅಸ್ಪೃಶ್ಯರ ಸೇವೆಯನ್ನು ಮಾಡುವುದಕ್ಕೆಂದು ಸ್ಥಾಪಿತವಾಗಿರುವ 'ಹರಿಜನ ಸೇವಾಸಂಘ'ಗಳ ಮಾತು ಹಾಗಿರಲಿ, ಈ ಪತಿತಪಾವನರು ಅಸ್ಪೃಶ್ಯರನ್ನು ಪಾವನಮಾಡುವ ಭರಾಟೆಯಲ್ಲಿ ಅವರ ಪಾಯಿಖಾನೆಗಳನ್ನು ಶುದ್ಧಮಾಡುವುದು ಉತ್ತಮವರ್ಣದವರಿಗೆ ಪುಣ್ಯಕರವೆಂದು ಬೋಧಿಸಿರುತ್ತಾರೆ. ಈ ಮರುಳುಮಾತಿಗೆ ಮರುಳಾಗಿ ಕೆಲವು ಮರುಳರು ಅದಕ್ಕೂ ಸಿದ್ಧರಾಗಿರುತ್ತಾರೆ. ಅಹುದು, ಬಹುಕಾಲದಿಂದ ಪತಿತರು ಅಪತಿತರ ಸೇವೆಯನ್ನು ಮಾಡುತ್ತ ಬಂದಿರುವಾಗ ಈ ಹನ್ನೊಂದನೆಯ ಅವತಾರಿಗಳು ಆ ಪದ್ಧತಿಯನ್ನು ಬದಲಾಯಿಸಿ ಪತಿತರಿಗೂ ಒಂದು ಛಾನ್ಸ್ ಕೊಡಬೇಡವೇ? ಆದರೆ ಇವರ ಬೋಧೆಯಲ್ಲಿ ಒಂದು ನ್ಯೂನತೆಯಿದೆ. ಅದೇನೆಂದರೆ, ಅಪತಿತರು ತಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಪತಿತರಿಗೆ ಸಮರ್ಪಿಸಿ ಅವರ ವೃತ್ತಿಯನ್ನು ತೋರಿಕೆಗೋಸ್ಕರ ಸ್ವಲ್ಪಕಾಲದವರೆಗೆ ಮಾಡಿದರೆ ಸಾಲದು—ಜೀವಾವಧಿ ಮಾಡಬೇಕೆಂದು ಬೋಧಿಸಬೇಕಾಗಿದ್ದಿತು. ಆಗ ಇವರ ಬೋಧೆಯನ್ನು ಅನುಸರಿಸುವವರು ಎಷ್ಟುಮಂದಿಗಳೆಂಬುದು ಗೊತ್ತಾಗುತ್ತಿತ್ತು.

ಗಾಂಧಿಯವರು ಹಿಂದೊಂದುಸಲ ಸ್ವರಾಜ್ಯನಿಧಿಗೆಂದೂ ಖಾದಿಪ್ರಚಾರಕ್ಕೆಂದೂ ದೇಶದಲ್ಲೆಲ್ಲ ಸುತ್ತಿ ಭಾರತೀಯರಿಂದ ಕೋಟಿಗಟ್ಟಲೆ ರೂಪಾಯಿಗಳನ್ನು ಶೇಖರಿಸಿಕೊಂಡು ಹೋದರು. ಅನೇಕ ಸ್ತ್ರೀಯರು ಕೂಡ, ಕೆಲವರು ಪ್ರೀತಿಯಿಂದಲೂ ಕೆಲವರು ದಾಂಭಿಕತನದಿಂದಲೂ ಕೆಲವರು ಕೀರ್ತಿಯನ್ನು ಪಡೆಯಬೇಕೆಂಬುದರಿಂದಲೂ ತಮ್ಮ ಆಭರಣಗಳನ್ನು ಕೂಡ ತೆಗೆದುಕೊಟ್ಟು ಕಳೆದುಕೊಂಡರು. ಪುನಃ ಪುನಃ ಅವುಗಳ ಹರಾಜಿನಿಂದ ಬೇರೆ ಹಣವಿನ ರಾಶಿ. ಹಾಗೆಲ್ಲ ಶೇಖರವಾದ ದ್ರವ್ಯದ ರಾಶಿಯು ಎಲ್ಲೆಲ್ಲಿ ಯಾವ ಯಾವುದಕ್ಕೆ ಎಷ್ಟೆಷ್ಟು ಸದ್ವ್ಯಯವಾಯ್ತೆಂಬ ವಿವರವೂ ಅದರಿಂದ ದೇಶಕ್ಕೆ ಯಾವ ಯಾವ ಪ್ರಯೋಜನವಾಯ್ತೆಂಬ ವಿವರವೂ ಗಾಂಧಿಯವರಿಂದಲೇ ವಿವರಿಸಲ್ಪಡಬೇಕಾಗಿದೆ. ಅವರು ದೊಡ್ಡವರು. ಲಕ್ಷಾಂತರರೂಪಾಯಿಗಳ ಆಸ್ತಿಪಾಸ್ತಿಗಳು ಸರಕಾರದವರ ಮುಟ್ಟುಗೋಲಿಗೆ ತುತ್ತಾಗಿ ಮಾಡಲ್ಪಟ್ಟುವು.

ಈಗ ಪುನಃ ಈ ಗಾಂಧಿಯವರು ಪ್ರಪಂಚದಲ್ಲೆಲ್ಲ ಹಾಹಾಕಾರವನ್ನುಂಟುಮಾಡಿರುವ ಆರ್ಥಿಕಸಂಬಂಧವಾದ ಮುಗ್ಗಟ್ಟಿನ ಕಾಲದಲ್ಲಿ 'ಅಸ್ಪೃಶ್ಯೋದ್ಧಾರ ನಿಧಿ'ಯ ನೆವದಿಂದ ದೇಶದಲ್ಲಿ ಸಂಚರಿಸುತ್ತ ಕಾಣಿಕೆಗಳನ್ನು ಒಪ್ಪಿಸಿಕೊಳ್ಳುತ್ತಿದ್ದಾರೆ. ದೇಶದಲ್ಲಿ ಆರ್ಥಿಕದುಃಸ್ಥಿತಿಯಾದರೂ ಗಾಂಧಿಯವರ ಕಾಣಿಕೆ ವಸೂಲಿಗೆ ದುಃಸ್ಥಿತಿಯಿಲ್ಲ. ಅಸ್ಪೃಶ್ಯರಂತೆ ಇತರ ಅಸಂಖ್ಯ ಭಾರತೀಯಪ್ರಜೆಗಳೂ ದಾರಿದ್ರ್ಯದುಃಖವನ್ನನುಭವಿಸುತ್ತಿರುವರಾದರೂ ಅವರೂ ಒಂದಿಷ್ಟು ಇವರ ಕೃಪಾದೃಷ್ಟಿಗೆ ಪಾತ್ರರಾಗುವ ಪುಣ್ಯವನ್ನು ಪಡೆದಿಲ್ಲ. ಮೊದಲು ಇವರಿಗೆ ಅರ್ಪಿತವಾದ ಕೋಟ್ಯಂತರ ರೂಪಾಯಿಗಳ ನಿಧಿಯು ಎಷ್ಟರಮಟ್ಟಿಗೆ ಸದ್ವಿನಿಯೋಗವಾಗಿ ದೇಶಕ್ಕೆ ಕ್ಷೇಮವಾಯಿತೋ ಅಷ್ಟೇ ಈ ಎರಡನೆಯ ಸಲದ ನಿಧಿಯಿಂದಲೂ ಆಗುವುದೋ ಎಂಬ ಸಂದೇಹವು ಅನೇಕರಿಗಿರುತ್ತದೆ. ಕೆಲವರಿಗೇನೋ ಇವರು ವಸೂಲುಮಾಡುತ್ತಿರುವ ಕಾಣಿಕೆಯನ್ನು ತೆಗೆದುಕೊಂಡು ಹೋಗಿ ಒಂದು ಕಡೆಯಲ್ಲಿ ಒಟ್ಟಿಗೆ ರಾಶಿಮಾಡಿ ಆಮೇಲೆ ಆಯಾ ಪ್ರಾಂತಕ್ಕೆ ಹೆಚ್ಚುಹೆಚ್ಚಾಗಿ ರವಾನೆ ಮಾಡುತ್ತಾರೆಂಬ ಭ್ರಮೆಯಿದೆ. ಅದು ಕೊನೆಗೂ ಭ್ರಮೆಯಾಗಿಯೇ ಪರಿಣಮಿಸದಿದ್ದರೆ ಪುಣ್ಯವೆನ್ನಬೇಕು. ಇವರು ನಿಜವಾಗಿಯೂ ಅಸ್ಪೃಶ್ಯೋದ್ಧಾರಕ್ಕೆಂಬ ಉದ್ದೇಶದಿಂದಲೇ ಕಾಣಿಕೆಯನ್ನು ವಸೂಲುಮಾಡುತ್ತಿರುವುದಾದರೆ ಆಯಾ ಪ್ರಾಂತದಲ್ಲಿ ವಸೂಲಾದ ನಿಧಿಯಲ್ಲಿ ಸ್ವಲ್ಪಭಾಗವನ್ನು ತಾವು ಕಮಿಷನ್ ತೆಗೆದುಕೊಂಡು ಹೆಚ್ಚಿನ ಭಾಗವನ್ನು ಆಯಾ ಪ್ರಾಂತದಲ್ಲೇ ಸರಿಯಾದ ವ್ಯವಸ್ಥೆಯಿಂದ ಅಸ್ಪೃಶ್ಯೋದ್ಧಾರಕ್ಕೆ ವಿನಿಯೋಗಿಸುವುದು ಇವರ ಕರ್ತವ್ಯವಾಗಿದ್ದಿತು. ಹಾಗೆ ಮಾಡದೆ ಅಸ್ಪೃಶ್ಯಸಂಘದವರು 'ಏನಾದರೂ ಸಹಾಯಮಾಡಿ' ಎಂದು ಅಂಗಲಾಚಿ ಬೇಡಿಕೊಂಡರೂ ಮೂರುಕಾಸನ್ನು ಕೊಡದೆ ಥೈಲಿ ಥೈಲಿ ಕಾಣಿಕೆಗಳನ್ನು ಬಾಚಿಕೊಂಡು ಹೋಗಿ ರಾಶಿಮಾಡಿ ಆಮೇಲೆ ಹೆಚ್ಚಾಗಿ ಕಳುಹಿಸಿಕೊಡುತ್ತಾರೆನ್ನುವ ಮಾತು 'ತಾನು ಹೋದರೆ ಮಜ್ಜಿಗೆಯಿಲ್ಲ, ಮೊಸರಿಗೆ ಚೀಟು' ಎನ್ನುವಂತೆ ತೋರುತ್ತದೆ.

ಪರಿಸ್ಥಿತಿಯು ಹೀಗಿದ್ದರೂ ಕೆಲವರು 'ಗಾಂಧಿಯವರು ನಿಃಸ್ಪೃಹರು; ಅವರಿಗೆ ಸ್ವಾರ್ಥತೆಯೇನೂ ಇಲ್ಲ; ಅವರು ಮಾಡುವುದೆಲ್ಲ ದೇಶಹಿತಕ್ಕಾಗಿ' ಎಂದು ಮೊದಲಾಗಿ ರಾಗಾಲಾಪನೆಯನ್ನು ಮಾಡುತ್ತಿರುವರು. ಈ ನಿಃಸ್ಪೃಹಚಕ್ರವರ್ತಿಗಳ ನಿಃಸ್ಪೃಹತ್ವ ಮತ್ತು ನಿಃಸ್ವಾರ್ಥತೆಯ ವಿಷಯವಾಗಿ ಅನೇಕ ಉದಾಹರಣೆಗಳನ್ನು ಕೊಡಬಹುದಾದರೂ ಲೇಖವಿಸ್ತಾರವಾಗುವುದರಿಂದ ಇಲ್ಲಿ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡುವೆವು. ಇವರ ನಿಃಸ್ಪೃಹತ್ವ ನಿಃಸ್ವಾರ್ಥತ್ವಗಳ ದೃಶ್ಯವು ಪುರುಷರ ಸಭೆಗಳಲ್ಲಿ ದರ್ಶಿತವಾಗುವುದಕ್ಕಿಂತಲೂ ಸ್ತ್ರೀಯರ ಸಭೆಗಳಲ್ಲಿ ಹೆಚ್ಚಾಗಿ ದರ್ಶಿತವಾಗುವುದು. ಅಲ್ಲಿ 'ಒಡವೆ ವಸ್ತುಗಳನ್ನು ಕೊಡಿ' ಎನ್ನುವುದೂ ಅವುಗಳನ್ನು ಪುನಃ ಪುನಃ ಹರಾಜುಮಾಡಿ ಗಂಟುಮಾಡುವುದೂ ಇವರ ಉದ್ಯೋಗ. ಮದ್ರಾಸಿನಲ್ಲಿ ಅನೇಕ ಜನರ ಗುಂಪಿನಲ್ಲಿ ಹೇಗೋ ಕಷ್ಟಪಟ್ಟು ಒಬ್ಬ ಹುಡುಗನು ಈ ಗಾಂಧಿಯವರ ಹತ್ತಿರಕ್ಕೆ ಹೋಗಿ ನಿಮ್ಮ ಹೆಸರನ್ನು ಸ್ವಹಸ್ತಾಕ್ಷರದಿಂದ ಬರೆದುಕೊಡಿ ಎಂದನಂತೆ! ಅದಕ್ಕೆ ಐದನೂರು ರೂಪಾಯಿಗಳ ಥೈಲಿಯನ್ನಪೇಕ್ಷಿಸಿದರು ಈ ನಿಃಸ್ವಾರ್ಥಿಗಳು. ಆಗ ಆ ಬಾಲಕನು 'ಐದನೂರು ರೂಪಾಯಿಗಳು ನನ್ನಲ್ಲಿಲ್ಲವಲ್ಲ' ಎಂದನಂತೆ! ಗಾಂಧಿಯವರು 'ನಿನ್ನಲ್ಲಿ ಎಷ್ಟಿದೆ?' ಎಂದು ಕೇಳಿದರಂತೆ! ಬಾಲಕನು 'ನನ್ನಲ್ಲಿ ಐದುರೂಪಾಯಿಗಳಿವೆ' ಎಂದನಂತೆ! ಆ ಐದುರೂಪಾಯಿಗಳನ್ನೇ ಕಸುಗೊಂಡು ತಮ್ಮ ಹೆಸರನ್ನು ಬರೆದುಕೊಟ್ಟರಂತೆ! ಆ ಹೆಸರನ್ನು ಕಟ್ಟಿಕೊಂಡು ಆ ಬಾಲಕನು ಯಾವ ಪುರುಷಾರ್ಥವನ್ನು ಸಾಧಿಸಲಿರುವನೋ ತಿಳಿಯದು.

[6ನೆಯ ಪುಟವನ್ನು ನೋಡಿರಿ.]

ಪಂಚಾಚಾರ್ಯ ಪ್ರಭಾ.

೧೯೩೪ ನೇ ಏಪ್ರಿಲ್ ತಾ|| ೨ ನೇ ಸೋಮವಾರ.

ಗುರುವೇ ಮುಕ್ತಿಗೆ ಮೂಲ.

ಪ್ರತಿಯೊಬ್ಬ ವೀರಶೈವನೂ ಗುರು-ಲಿಂಗ-ಜಂಗಮ-ಪಾದೋದಕ-ಪ್ರಸಾದ-ವಿಭೂತಿ-ರುದ್ರಾಕ್ಷ-ಮಂತ್ರಗಳೆಂಬ ಎಂಟು ವಸ್ತುಗಳಿಂದ ಕೂಡಿರಬೇಕೆಂಬುದು ಧರ್ಮಶಾಸ್ತ್ರದಲ್ಲಿ ಪ್ರಬಲವಾದ ನಿಯಮವುಂಟು. ಈ ಎಂಟುವಸ್ತುಗಳಿಗೆ ಅಷ್ಟಾವರಣಗಳೆಂದು ಕರೆಯುತ್ತಾರೆ. ಈ ಎಂಟುಪದಾರ್ಥಗಳು ಒಟ್ಟುಗೂಡಿದರೆ ಮುಕ್ತಿಯೆಂಬ ಕಾರ್ಯವುಂಟಾಗುವುದರಿಂದ, ಈ ಎಂಟು ಪದಾರ್ಥಗಳೂ ಸಾಮಾನ್ಯವಾಗಿ ಮುಕ್ತಿಗೆ ಕಾರಣಗಳೆಂದು ಸ್ಪಷ್ಟವಾಗುತ್ತದೆ. ಆದರೂ ಈ ಎಂಟು ಪದಾರ್ಥಗಳಲ್ಲಿ ಕೆಲವು ಮುಖ್ಯಕಾರಣಗಳಾಗಿಯೂ, ಕೆಲವು ಸಹಕಾರಿಕಾರಣಗಳಾಗಿಯೂ ಇರುತ್ತವೆ. ಆದರೆ ಮುಖ್ಯಕಾರಣಗಳಿದ್ದರೂ ಸಹಕಾರಿಕಾರಣಗಳಿಲ್ಲದಿದ್ದರೆ ಲೋಕದಲ್ಲಿ ಯಾವ ಕಾರ್ಯವೂ ಆಗುವುದಿಲ್ಲ. ಘಟವನ್ನು ಮಾಡಬೇಕಾದರೆ ಘಟಕ್ಕೆ ಮಣ್ಣೇ ಪ್ರಧಾನವಾಗಿದ್ದರೂ ಕುಲಾಲ-ಚಕ್ರ-ಚೀವರ ಮುಂತಾದ ಸಹಕಾರಿಕಾರಣಗಳು ಬೇಕೇಬೇಕು. ಇದರಂತೆ ಜೀವಾತ್ಮನು ಮುಕ್ತಿಯೆಂಬ ಮಹಾಕಾರ್ಯವನ್ನು ಪಡೆಯಬೇಕಾದರೆ ಈ ಎಂಟು ಪದಾರ್ಥಗಳು ಅವಶ್ಯಕವಾಗಿರಬೇಕಾಗಿವೆ. ಇವುಗಳಲ್ಲಿ ಗುರುವೇ ಮುಖ್ಯಕಾರಣನು. ವಿಭೂತಿರುದ್ರಾಕ್ಷಪಾದೋದಕ ಮುಂತಾದ ಪದಾರ್ಥಗಳು ಸಹಕಾರಿಕಾರಣಗಳಾಗಿರುತ್ತವೆ. ಉಪಾದಾನಕಾರಣನಾದ ಗುರುವಿದ್ದರೂ ಉಳಿದ ಭಸ್ಮರುದ್ರಾಕ್ಷಾದಿಗಳಿಲದಿದ್ದರೆ ಮುಕ್ತಿಯೆಂಬ ಮಹಾಫಲವು ಯಾರಿಗೂ ದೊರೆಯಲಾರದು. ಈ ಮುಕ್ತಿಸಾಧನಗಳಾದ ಅಷ್ಟಾವರಣಗಳಲ್ಲಿ ಶ್ರೌತಾಷ್ಟಾವರಣ ಅಶ್ರೌತಾಷ್ಟಾವರಣವೆಂದು ಎರಡು ಭಾಗವಾಗಿರುವುದು. ಯಾವ ವಸ್ತುಗಳು ವೇದೋಕ್ತವಿಧಾನದಿಂದ ಸಂಸ್ಕರಿಸಲ್ಪಡದೆ ಇದ್ದಹಾಗೆಯೇ ಇರುವುವೋ ಅವೇ ಅಶ್ರೌತ (ಲೌಕಿಕ) ಗಳೆನಿಸುತ್ತವೆ. ಯಾವ ಪದಾರ್ಥಗಳು ವಿಧಾನಪರಿಕು ಸಂಸ್ಕರಿಸಲ್ಪಡುತ್ತವೆಯೋ ಅವೇ ಶ್ರೌತಗಳೆನಿಸಿಕೊಳ್ಳುತ್ತವೆ. ಶ್ರೌತಾಷ್ಟಾವರಣಗಳಲ್ಲಿ ಗೂಢ(ಅಲೌಕಿಕ) ವಾದ ಶಕ್ತಿಯೊಂದಿರುವುದು. ಈ ಶಕ್ತಿಯು ಮುಕ್ತಿಯೆಂಬ ಮಹಾಫಲವನ್ನು ಕೊಡುವವರೆಗೂ ತಾನು ಆಯಾಯ ಪದಾರ್ಥಗಳಲ್ಲಿ ಸ್ಥಾಯಿಯಾಗಿರುವುದು. ವೇದೋಕ್ತವಿಧಾನದಿಂದ ಸಂಸ್ಕರಿಸಲ್ಪಡದ ಅಷ್ಟಾವರಣಗಳಾದರೋ ಗೂಢಶಕ್ತಿಶೂನ್ಯಗಳಾದುದರಿಂದ ಚಿತ್ರದಲ್ಲಿ ಬರೆಯಲ್ಪಟ್ಟ ಬೊಂಬೆಗಳಂತೆ ಕೇವಲ ಆಕಾರಮಾತ್ರದಿಂದ ಅಷ್ಟಾವರಣಗಳಾಗುವುವಲ್ಲದೆ ಪ್ರಯೋಜನಕಾರಿಗಳಾದ ಅಷ್ಟಾವರಣಗಳಾಗುವುದಿಲ್ಲ. ಇವುಗಳಲ್ಲಿ ನಿಗೂಢವಾದ ಶಕ್ತಿಯಿರುವುದಿಲ್ಲ. ನಿಗೂಢವಾದ ಆ ಶಕ್ತಿಯು ಶ್ರೌತಸಂಸ್ಕಾರದಿಂದಲೇ ಉದ್ಬೋಧವಾಗುವುದು. ಶಕ್ತಿಯುದ್ಬೋಧವಿಲ್ಲದ ಪದಾರ್ಥಗಳು ಇದ್ದರೂ ಇಲ್ಲದಂತೆಯೇ ಸರಿ! ಶರೀರದಲ್ಲಿ ಉದ್ಭವಿಸಿದ ರೋಗಗಳನ್ನು ನಾಶಮಾಡುವ ಶಕ್ತಿಯು ಮೂಲಿಕೆಗಳಲ್ಲಾಗಲಿ ಪಾಷಾಣಗಳಲ್ಲಾಗಲಿ ಇದ್ದರೂ ರೋಗನಿದಾನವನ್ನು ತಿಳಿದ ವೈದ್ಯನು ಆಯಾಯ ಮೂಲಿಕಾಪಾಷಾಣಾದಿದ್ರವ್ಯಗಳನ್ನು ತೆಗೆದುಕೊಂಡುಬಂದು ಅವುಗಳನ್ನು ಆಯುರ್ವೇದನಿದಾನದಂತೆ ಸಂಸ್ಕರಿಸಬೇಕಾಗುವುದು. ಹಾಗೆ ಸಂಸ್ಕರಿಸದೆಇರುವ ಪಾಷಾಣಾದಿಗಳನ್ನು ರೋಗಿಯು ಉಪಯೋಗಿಸಿದ್ದಾದರೆ ಅದರಿಂದ ಸಂಭವಿಸಿದ ರೋಗವು ಪರಿಹಾರವಾಗದೆ ಮತ್ತಿಷ್ಟು ಉಲ್ಬಣಾವಸ್ಥೆಯನ್ನು ಹೊಂದಲೂಬಹುದು. ಅದರಂತೆ ಜನನಮರಣರೂಪವಾದ ಭವರೋಗವನ್ನು ನಾಶಮಾಡುವ ಶಕ್ತಿಯು ಯದ್ಯಪಿ ಭೂತಿರುದ್ರಾಕ್ಷಾದಿ ವಸ್ತುಗಳಲ್ಲಿ ಸ್ವಾಭಾವಿಕವಾಗಿದ್ದರೂ ಅದು ಬಹುಗುಪ್ತವಾಗಿರುವುದರಿಂದ ಜೀವಾತ್ಮನಿಗೆ ಸಂಭವಿಸಿದ ಭವರೋಗವನ್ನು ಹೋಗಲಾಡಿಸುವುದಿಲ್ಲ. ಗುರುವೆಂಬ ಮಹಾವೈದ್ಯನು ವೇದಮಂತ್ರರಹಸ್ಯವನ್ನು ಬಲ್ಲವನಾಗಿ ನಿದಾನವರಿತು ಈ ಅಷ್ಟಾವರಣಗಳನ್ನು ಸಂಸ್ಕರಿಸಿ ದೀಕ್ಷೆಯಿಂದ ಪರಿಶುದ್ಧರಾದ ಭಕ್ತರ ಸ್ಥೂಲದೇಹದಲ್ಲಿ ಧರಿಸುವುದಲ್ಲದೆ, ಸೂಕ್ಷ್ಮದೇಹದಲ್ಲಿಯೂ ಸೂಕ್ಷ್ಮರೂಪದಿಂದ ಪ್ರವೇಶಿಸುವಂತೆ ಮಾಡುವನು. ಇದರಿಂದ ಮೆಲ್ಲಮೆಲ್ಲನೆ ಬಹುಕಾಲದಿಂದ ಜೀವಾತ್ಮನನ್ನಾವರಿಸಿರುವ ಭವರೋಗಬೀಜಭೂತವಾದ ಮಹಾಮಾಯೆಯೆಂಬ ಪರೆಯು ಶಿಥಿಲವಾಗುತ್ತ ಬಂದು ಆತ್ಮನು ಬೆಳಗಿದ ದರ್ಪಣದಂತೆ ಸ್ವಚ್ಛನಾಗುತ್ತ ಬರುವನು. ಆದುದರಿಂದ ಗುರುಮುಖದಿಂದಬಂದ ಅಷ್ಟಾವರಣಗಳೇ ಶ್ರೌತಾಷ್ಟಾವರಣಗಳೆನಿಸಿಕೊಳ್ಳುತ್ತವೆ. ಇವುಗಳಲ್ಲಿಯೇ ಭವರೋಗವನ್ನು ನಾಶಗೊಳಿಸುವ ಶಕ್ತಿಯು ಉದ್ಬೋಧವಾಗುವದು. ಗುರುವಿಲ್ಲದೆ ಸ್ವೇಚ್ಛೆಯಾಗಿ ಉಪಯೋಗಿಸುವ ಅಷ್ಟಾವರಣಗಳಲ್ಲಿ ಯಾವ ಶಕ್ತಿಯೂ ಇರುವುದಿಲ್ಲ. ಅಂಥ ಅಶ್ರೌತಾಷ್ಟಾವರಣಗಳಿಂದ ಕೂಡಿದವನು ನಾಟಕದಲ್ಲಿ ರಾಜವೇಷವನ್ನು ಧರಿಸಿ ಅಭಿನಯಿಸುವ ದರಿದ್ರನಂತೆ ತಾನೊಬ್ಬ ಅಷ್ಟಾವರಣಸಂಪನ್ನನಾದ ನಾಮಧಾರಿ ವೀರಶೈವನೆಂದು ಹೇಳಿಸಿಕೊಳ್ಳಲ್ಪಡುತ್ತಾನಲ್ಲದೆ ನಿಜವೀರಶೈವನೆನಿಸಿಕೊಳ್ಳಲ್ಪಡುವುದಿಲ್ಲ. ಗುರುವಿನಿಂದ ವಿಧಾನೋಕ್ತವಾಗಿ ಸಂಸ್ಕರಿಸಲ್ಪಟ್ಟ ಅಷ್ಟಾವರಣಗಳನ್ನು ವೀರಶೈವಸಿದ್ಧಾಂತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ವಿಶೇಷವಾಗಿ ಪ್ರಶಂಸಿಸಿರುತ್ತಾರೆ.—

ಯಸ್ಯ ಸ್ಯಾಜ್ಜನ್ಮ ಚರಮಂ ತಸ್ಯ ರುದ್ರಾಕ್ಷಧಾರಣೇ |
ತ್ರಿಪುಂಡ್ರಧಾರಣೇ ಚೈವ ಪಂಚಾಕ್ಷರಜಪೇ ತಥಾ ||
ಶರಾಕುದ್ಧಾ ಭವೇತ್ಪುಂಸಾಮನ್ಯೇಷಾಂ ದುರ್ಲಭೋ ಭವೇತ್ |
ಯಸ್ಯ ದೇಹೇ ಭವೇದೇಕೋ ರುದ್ರಾಕ್ಷಶ್ಶಿವಭಾವಿತಃ ||
ಶಿವಾಲಯಸ್ತು ತದ್ದೇಹೋ ಸಾಕ್ಷಾಚ್ಛಂಭುಶ್ಶಿವಃಸ್ವಯಂ |
ನ ದೇಹೇ ಯಸ್ಯ ರುದ್ರಾಕ್ಷಾಃ ನ ತ್ರಿಪುಂಡ್ರಸ್ಯ ಧಾರಣಂ ||
ಶ್ಮಶಾನಮೇವ ತದ್ದೇಹೋ ತನ್ಮುಖಂ ಗಿರಿಗಹ್ವರಂ ||

ಯಾವ ಆತ್ಮನು ಅನಂತ ಶರೀರಗಳನ್ನು ಧರಿಸಿ ಪುಣ್ಯಕರ್ಮಾಚರಣೆಯನ್ನು ಮಾಡಿರುವನೋ ಯಾವನ ದೇಹದಲ್ಲಿ ಗುರುವಿನಿಂದ ಅನುಗ್ರಹಿಸಲ್ಪಟ್ಟ ಶ್ರೌತಭಸ್ಮ-ಶ್ರೌತರುದ್ರಾಕ್ಷ-ಶ್ರೌತಲಿಂಗಾದಿಗಳು ಇರುತ್ತವೆಯೋ ಆತನ ದೇಹವೇ ದೇವಾಲಯವು. ಆತನೇ ಸಾಕ್ಷಾತ್ ಶಿವನು. ಇಂಥ ಶ್ರೌತರುದ್ರಾಕ್ಷ ಶ್ರೌತಭಸ್ಮಗಳಿಲ್ಲದ ದೇಹವು ಶ್ಮಶಾನಪ್ರಾಯವು. ಮಂತ್ರವಿಲ್ಲದ ಮುಖವು ಬೆಟ್ಟದಲ್ಲಿರುವ ಗವಿಗೆ ಸಮಾನವಾದುದು.

ಹೀಗೆ ಶ್ರೌತಾಷ್ಟಾವರಣಗಳಿಗೆ ವೀರಶೈವ ಸಿದ್ಧಾಂತದಲ್ಲಿ ವಿಶೇಷವಾದ ಮಹತ್ತ್ವವು ಕೊಡಲ್ಪಟ್ಟಿದೆ. ಭವರೋಗವನ್ನು ತೊಲಗಿಸುವ ಇಂಥ ಅಷ್ಟಾವರಣಗಳನ್ನು ಅನುಗ್ರಹಿಸಿರುವ ಮಹಾಗುರುಗಳ ಮಹೋಪಕಾರವನ್ನು ವೀರಶೈವ ಮತದಲ್ಲಿ ಜನ್ಮಧಾರಣಮಾಡಿದವನಾವನೂ ಮರೆಯುವಂತಿಲ್ಲ. ತಂದೆಯಲ್ಲಿರುವ ಸ್ವತ್ತಿನಲ್ಲಿ ಆಶೆಯುಳ್ಳವನು ತಂದೆಯನ್ನು ಯಾವಾಗಲೂ ತ್ರಿಕರಣಶುದ್ಧಿಯಿಂದ ಸೇವಿಸುವಂತೆ ಮುಕ್ತಿಸಾಧನಗಳಾದ ಅಷ್ಟಾವರಣಗಳಲ್ಲಿ ಆಶೆಯುಳ್ಳ ಪ್ರತಿಯೊಬ್ಬ ವೀರಶೈವನೂ—

ಕರ್ಮಣಾಮನಸಾವಾಚಾ ಗುರೋಃ ಕ್ರೋಧಂ ನ ಕಾರಯೇತ್
ತಸ್ಯ ಕ್ರೋಧೇನ ದಹ್ಯಂತೇ ಹ್ಯಾಯುಶ್ಶ್ರೀಜ್ಞಾನಸತ್ಕ್ರಿಯಾಃ ||

ಮುಕ್ತಿಯೆಂಬ ಮಹಾಫಲವನ್ನು ಕೊಡುವುದರಲ್ಲಿ ಉಪಾದಾನಕಾರಣೀಭೂತರಾದ ಮೂಲಗುರುಗಳ ವಿಷಯದಲ್ಲಿ ಕಾಯವಾಕ್‌ಮನಸ್ಸುಗಳಲ್ಲಿಯೂ ಸಹ ಕೋಪವನ್ನುಂಟುಮಾಡುವ ಕೆಲಸವನ್ನು ಮಾಡಬಾರದು. ಹಾಗೆ ಕ್ರೋಧವನ್ನುಂಟುಮಾಡುವವನ ಆಯುಸ್ಸು, ಸಂಪತ್ತು, ತಿಳಿವಳಿಕೆ, ಕ್ರಿಯೆ ಇತ್ಯಾದಿಗಳು ನಶಿಸಿಹೋಗುವವು. ಗುರುಭಕ್ತಿಶೂನ್ಯರು ಆಚರಿಸುವ ಜಪತಪಾದಿಗಳೆಲ್ಲವೂ ನಿಷ್ಫಲಗಳಾಗಿ ಹೋಗುವವೆಂದು ಕ್ರಿಯಾಸಾರಕಾರರು ಮುಕ್ತಿಮೂಲವಾದ ಗುರುವನ್ನು ಕೊಂಡಾಡಿರುವುದರಿಂದ ಪ್ರತಿಯೊಬ್ಬ ಮುಮುಕ್ಷುವಾದ ವೀರಶೈವನೂ ಗುರುಗಳಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರನಾಗಿ ವೀರಶೈವ ಎಂಬ ನಾಮವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಕೋರುವೆವು.

ವರ್ತಮಾನಸಂಗ್ರಹ.

ಲಾಡ್ಜ್ ನಗರದ ಒಬ್ಬ ಗಿರಣಿ ಯಜಮಾನನು ತಲೆನೋವನ್ನು ಸಹಿಸಲಾರದೆ ಆತ್ಮಹತ್ಯಮಾಡಿಕೊಂಡನು.

ಹಂಗೇರಿಯಾದೇಶದ ಒಬ್ಬ ಸ್ತ್ರೀಯು 50 ಸಾರಿ ಆತ್ಮಹತ್ಯಮಾಡಿಕೊಳ್ಳಬೇಕೆಂದು ಪ್ರಯತ್ನಿಸಿ, ಸಾಧ್ಯವಾಗದೆ, ಕಡೆಗೆ ಜೀವಿಸಿರುವುದಾಗಿ ನಿರ್ಧರಿಸಿರುವಳಂತೆ!

ಮಿಚಿಗನ್ ವಿಶ್ವವಿದ್ಯಾಲಯದವರು ಪ್ರಪಂಚದಲ್ಲೆಲ್ಲಾ ಅತ್ಯಂತ ಸೂಕ್ಷ್ಮವಾದ ಮೊನೆಯುಳ್ಳ ಒಂದು ಸೂಜಿಯನ್ನು ತಯಾರಿಸಿರುವರು. ಇದರ ಮೊನೆಯು ಒಂದು ಸಾವಿರದ ಒಂದನೇ ಅಂಗುಲದಷ್ಟು ಸಣ್ಣದಾಗಿದ್ದು ಉಕ್ಕಿಗೆ ಸೇರಿಸಿದ ಸಣ್ಣ ವಜ್ರವಾಗಿರುವದಂತೆ!

ಲಾಹೋರಿನ ನಾಜ್‌ಬೇಗಂ ಎಂಬ ಸಿನಿಮಾ ನಟಿಯು ಬರ್ಮಾದೇಶದಿಂದ 'ಕೋಕೇನ್' ಎಂಬ ಮಾದಕವಸ್ತುವನ್ನು ಕಳ್ಳತನದಿಂದ ತಂದು ಮಾರುತ್ತಿದ್ದಳೆಂಬ ಕಾರಣದಮೇಲೆ 10 ತಿಂಗಳು ಕಠಿಣಶಿಕ್ಷೆ ಮತ್ತು 300 ರೂ. ಗಳ ದಂಡಕ್ಕೆ ಗುರಿಯಾದಳು.

ಪೆಷಾವರ್ ನಗರದ ದಿವಾನ್ ದೀನಾನಾಥ ಎಂಬ ಬಾರ್-ಅಟ್-ಲಾ ರವರು ಆದಾಯದ ತೆರಿಗೆಯನ್ನು ಮೊದಲೇ ಪಾವತಿಮಾಡಿದ್ದರೂ ಅಧಿಕಾರಿಗಳು ತಮ್ಮನ್ನು ನಿಷ್ಕಾರಣವಾಗಿ ಬಂಧನದಲ್ಲಿಟ್ಟಿದ್ದರೆಂಬ ಕಾರಣದಮೇಲೆ ಸ್ಟೇಟ್ ಸೆಕ್ರೆಟರಿಯವರ ಮೇಲೆ 11000 ರೂ. ಗಳ ಪರಿಹಾರಕ್ಕೆ ದಾವೆಯನ್ನು ಹೂಡಿರುತ್ತಾರೆ.

ಕಲ್ಕತ್ತಾ ಮುನಿಸಿಪಲ್ ಕಾರ್ಪೋರೇಷನ್ನಿನ ಎಲೆಕ್ಟ್ರಿಕ್ ಇನ್ಸ್‌ಪೆಕ್ಟರಾದ ಮಿ|| ಎಸ್. ಸಿ. ರಾಯ ಚೌಧರಿಯವರು ಆಟೋ ಸ್ವಿಚ್ ಎಂಬ ಹೊಸ ತರಹ ಎಲೆಕ್ಟ್ರಿಕ್ ಸ್ವಿಚ್ಚನ್ನು ತಯಾರಿಸುವರು. ಈ ಸ್ವಿಚ್ಚಿನಿಂದ ದೀಪವನ್ನು ಹತ್ತಿಸಿದನಂತರ ನಾವು ಅಪೇಕ್ಷಿಸಿದ ಹೊತ್ತಿಗೆ ತಾನಾಗಿ ಆರಿಹೋಗುವದಂತೆ!

ಭವಾನೀಪುರದ ಜೀವನಭಟ್ಟಾಚಾರ್ಯಜೀ ಎಂಬವರು ಇನ್ಷೂರೆನ್ಸ್ ಹಣವನ್ನು ಪಡೆಯುವುದಕ್ಕಾಗಿ ತನ್ನ ಹೆಂಡತಿಯನ್ನು ವಿಷಹಾಕಿ ಕೊಂದರೆಂಬ ಕಾರಣದಮೇಲೆ ಪೋಲೀಸರು ಆತನನ್ನೂ, ಆತನ ಸಹೋದರನನ್ನೂ, ತಾಯಿಯನ್ನೂ ಮತ್ತು ಅಪರಾಧಿಯ ಪತ್ನಿಯು ಕಾಲರಾರೋಗದಿಂದ ಮೃತಪಟ್ಟಳೆಂದು ಸರ್ಟಿಫಿಕೇಟು ಕೊಟ್ಟಿದ್ದ ಡಾಕ್ಟರನ್ನೂ ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಕಾನ್‌ಪುರದಲ್ಲಿ ಕೆಲವು ದಿವಸಗಳಿಂದೀಚೆಗೆ 4 ಜನ ಸ್ತ್ರೀಯರು ಖೂನಿಮಾಡಲ್ಪಟ್ಟಿದ್ದು, ಅಪರಾಧಿಗಳಾರೆಂಬುದು ಈವರೆಗೂ ಪತ್ತೆಯಾಗಿಲ್ಲವಂತೆ! ಕೊನೆಯಲ್ಲಿ ಖೂನಿಮಾಡಲ್ಪಟ್ಟ ರಾಂ ದುಲಾರಿ ಎಂಬೊಬ್ಬ ತರುಣಿಯ ಶರೀರವು ಊರಹೊರಗೆ ಹೊಲಗಳಲ್ಲಿ ಬಿದ್ದಿದ್ದು, ಅಪರಾಧಿಗಳು ಆಕೆಯ ಕೈಕಾಲುಗಳನ್ನು ಕಟ್ಟಿ ಬಾಯಿಗೆ ಬಟ್ಟೆಯನ್ನು ತುರುಕಿ, ಮೈಮೇಲಿನ ಆಭರಣಗಳನ್ನೆಲ್ಲಾ ಅಪಹರಿಸಿಕೊಂಡು ಹೋಗಿದ್ದರಂತೆ!

ಟಿಬೆಟ್‌ದೇಶದ ಗುರುಗಳಾದ ಡಲೈ ಲಾಮಾರವರು ತಮ್ಮ ಮರಣಪೂರ್ವದಲ್ಲಿ 'ಲ್ಹಾಸ' ನಗರಕ್ಕೆ ಎಲೆಕ್ಟ್ರಿಕ್ ದೀಪವನ್ನು ಹಾಕಿಸಲು ತಮ್ಮ ಒಪ್ಪಿಗೆಯನ್ನಿತ್ತು ಇಂಗ್ಲೆಂಡಿನ ಜನರಲ್ ಎಲೆಕ್ಟ್ರಿಕ್ ಕಂಪೆನಿಗೆ ಆರ್ಡರ್ ಕೊಟ್ಟಿರುವಂತೆ! 'ಲ್ಹಾಸ' ನಗರವು ಯಕ್ಷಿಣಿ ಮತ್ತು ಗುಪ್ತವಿದ್ಯೆಗಳ ನೆಲೆಯಾಗಿದ್ದು ಅಲ್ಲಿಯ ರಹಸ್ಯಗಳು ಪರಕೀಯರಿಗೂ ತಿಳಿಯದಂತೆ ಬಹು ಜಾಗರೂಕತೆಯಿಂದ ರಕ್ಷಿಸಲ್ಪಟ್ಟಿರುವುದರಿಂದ, ಮೇಲೆ ಹೇಳಿದ ಎಲೆಕ್ಟ್ರಿಕ್ ದೀಪಗಳ ಏರ್ಪಾಡು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿರುವದು. ಡಲೈ ಲಾಮಾರವರು ಕಂಪೆನಿಗೆ ಬರೆದ ಪತ್ರವು 2 ಅಡಿ ಉದ್ದ ಮತ್ತು 4 ಅಡಿ ಅಗಲವಾದ ಅಕ್ಕಿಯಿಂದ ತಯಾರಿಸಲ್ಪಟ್ಟ ಒರಟು ಕಾಗದದ ಸುರುಳಿಯಾಗಿತ್ತೆಂದೂ, ಅದು 'ನೀರಿನ ಪಕ್ಷಿಯ' ವರ್ಷದ 4 ನೇ ತಿಂಗಳಿನ 21 ನೇ ದಿವಸದಲ್ಲಿ ಬರೆಯಲ್ಪಟ್ಟಿತೆಂದೂ ತಿಳಿದುಬಂದಿದೆ. 'ನೀರಿನ ಪಕ್ಷಿಯ' ವರ್ಷವೆಂದರೆ ಏನೆಂಬುದು ಯಾರಿಗೂ ಗೊತ್ತಿಲ್ಲ!

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆ

ಮೈಸೂರು ಹೈಕೋರ್ಟಿನ ತೀರ್ಮಾನ.

ಹುಡುಗಿಯು ಮೈನರಳು, ಅತ್ಯಾಚಾರವು ನಡೆದಿದೆ.

ಸ್ಥಳೀಯ ಅಧಿಕಾರಿಗಳು ಕರ್ತವ್ಯವಿಮುಖರಾಗಿದ್ದಾರೆ.

ಸೂಪರಿಂಟೆಂಡೆಂಟರ ನಡತೆಯು ನಂಬಿಕೆಗೆ ಅರ್ಹವಾಗಿಲ್ಲ.

೧ನೇ ಅಪರಾಧಿಗೆ ೩ ವರ್ಷ ಕಠಿನ ಶಿಕ್ಷೆ ೩೦೦ ರೂ. ಜುಲ್ಮಾನೆ ತಪ್ಪಿದರೆ ೬ ತಿಂಗಳು ಕಠಿನ ಶಿಕ್ಷೆ.

೨ನೇ ಅಪರಾಧಿಗೆ ೧ ವರ್ಷ ಕಠಿನ ಶಿಕ್ಷೆ. ೧೦೦ ರೂ. ಜುಲ್ಮಾನೆ, ತಪ್ಪಿದರೆ ೩ ತಿಂಗಳ ಕಠಿನ ಶಿಕ್ಷೆ.

೩-೪ನೇ ಅಪರಾಧಿಗಳಿಗೆ ೨ ವರ್ಷ ಕಠಿಣ ಶಿಕ್ಷೆ ೧೦೦ ರೂ. ಜುಲ್ಮಾನೆ, ತಪ್ಪಿದರೆ ಮೂರು ತಿಂಗಳ ಕಠಿನಶಿಕ್ಷೆ.

ಹೈಕೋರ್ಟಿನ ತೀರ್ಮಾನ.

ಹೈಕೋರ್ಟಿನ ಜಡ್ಜ್‌ಮೆಂಟಿನಲ್ಲಿ ಮೊದಲು ಮೊಕದ್ದಮೆಯ ವಿದ್ಯಮಾನಗಳನ್ನು ವಿವರಿಸುತ್ತ ಹುಡುಗಿಯ ವಯಸ್ಸೆಷ್ಟು ಎಂಬುದನ್ನು ನಿರ್ಣಯಿಸಲು ಹೊರಟಿದ್ದಾರೆ. ಜಾತಕವು ಈ ಮೊಕದ್ದಮೆಯಲ್ಲಿ ಬಲವಾದ ಆಧಾರವೆಂದು ಹೈಕೋರ್ಟಿನವರು ಒಪ್ಪಿಕೊಂಡಿಲ್ಲ. ಡಾಕ್ಟರರ ಸರ್ಟಿಫಿಕೇಟಿನ ಮೇಲೆಯೂ ಅವಲಂಬಿಸಲು ಸಾಧ್ಯವಿಲ್ಲ. ಆದರೆ ಸ್ಕೂಲ್ ರಿಜಿಸ್ಟರುಗಳು ಕಿತ್ತುಹಾಕಲಾರದ ಆಧಾರವನ್ನು ಕೊಡುತ್ತವೆ. ಅದರಂತೆ ಹುಡುಗಿಯು ನಿಸ್ಸಂದೇಹವಾಗಿ ಮೈನರಳೆಂದು ನಿಶ್ಚಯವಾಗಿರುತ್ತದೆ.

ಗಾರ್ಡಿಯನ್ ಯಾರು?

ತಂದೆಯು ಗಾರ್ಡಿಯನ್ನೋ? ಮಾವನು ಗಾರ್ಡಿಯನ್ನೋ? ಎಂಬ ಅಂಶದ ಮೇಲೆ ಅರ್ಜೀದಾರರ ವಕೀಲರು ಬಹಳ ಚರ್ಚೆಮಾಡಿರುತ್ತಾರೆ. ಮಾವನು ಆ ಹುಡುಗಿಯು ಏಕೆ ತಂದೆಯಮನೆಗೆ ಹೋದಳು? ಅಲ್ಲಿ ಏಕೆ ಇದ್ದಳು? ಎಂಬುದನ್ನು ಹೇಳಿದ್ದಾನೆ. ಆ ಬಗ್ಗೆ ಆ ಹುಡುಗಿಯ ಗಂಡನ ಹಸ್ತಾಕ್ಷರದ ಕಾಗದವೇ ಇದೆ. ಆ ಹುಡುಗಿಯು ಕಾನೂನು ಪ್ರಕಾರ ಮಾವನ ಗಾರ್ಡಿಯನ್‌ಷಿಪ್ಪಿನಲ್ಲೇ ಇದ್ದಾಳೆಂಬುದು ದೃಢವಾದ ಅಂಶ! ಆ ಮಾವನು ಹುಡುಗಿಯನ್ನು ಕೇಳಲಿಲ್ಲವೆಂಬ ವಾದವು ಬಲವಿಲ್ಲದ್ದು. ಕಾನೂನು ಪ್ರಕಾರ ಅವನೇ ಅರ್ಜಿಹಾಕಬೇಕೆಂಬುದಿಲ್ಲ; ಯಾವನಾದರೂ ಬೀದಿಯಲ್ಲಿ ಹೋಗುವವನೂ ಕೂಡ, ಕಾನೂನನ್ನು ಜಾರೀಮಾಡಿಸಲು ಆರಂಭಿಸಬಹುದು.

ಲಾಫುಲ್ ಗಾರ್ಡಿಯನ್ ಅಂದರೆ ಅದೇ ಅರ್ಥ! ಆ ಹುಡುಗಿಯು ಗಾರ್ಡಿಯನ್ ಅಪ್ಪಣೆಯಂತೆ ಯಾರ ಜೊತೆಯಲ್ಲಿ ವಾಸವಾಗಿದ್ದಳೋ ಅದೇ ಸಾಕು. ಕಾನೂನಿನ ಅನ್ವಯಕ್ಕೆ ಈ ದೇಶದಲ್ಲಿ ಮೈನರು ಹುಡುಗಿಯು ವೇಶ್ಯೆಯಲ್ಲದೆ ಇದ್ದು ಅವಳನ್ನು ಯಾರಾದರೂ ತೆಗೆದುಕೊಂಡುಹೋದರೆ ಅದು ಗಾರ್ಡಿಯನ್ ಅನುಮತಿಯನ್ನು ಪಡೆದಿದೆ ಎಂಬುದನ್ನು ಅವರೇ ಸಾಬೀತು ಮಾಡಬೇಕು.

ಪೋಲೀಸ್ ಇನ್ಸ್‌ಪೆಕ್ಟರನ ಸಲಹೆ.

ಈ ಮೊಕದ್ದಮೆಯಲ್ಲಿ ಪ್ರತಿಯೊಂದು ಘಟ್ಟದಲ್ಲಿಯೂ ಈ ಅಪರಾಧಿಗಳು ಪೋಲೀಸ್ ಇನ್ಸ್‌ಪೆಕ್ಟರನ ಆಲೋಚನೆ-ಮತ್ತು ಸಹಾಯದಿಂದ ನಡೆಸಿದಂತೆ ತಿಳಿದುಬರುತ್ತದೆ. ಹುಡುಗಿಯು ತಾ|| ೨೩ ನೇ ಪ್ರಾತಃಕಾಲ ಪೋಲೀಸು ಸ್ಟೇಷನ್ನಿನಲ್ಲಿ ಹಿಂದೂಮತದಲ್ಲಿ ಇರಲು ಇಷ್ಟವಿಲ್ಲವೆಂಬ ಅರ್ಜಿಯೊಡನೆ ಬಂದದ್ದು ಒಳ್ಳೇ ನಾಟಕದಂತೆ ಇದೆ. ಅದೇ ಬಹಳ ಸಂದೇಹವನ್ನುಂಟುಮಾಡುತ್ತದೆ. ಇನ್ಸ್‌ಪೆಕ್ಟರನು ಸಬ್ ಇನ್ಸ್‌ಪೆಕ್ಟರಲ್ಲಿ ಹೇಳಿದ್ದಾನೆ. ಈ ಹುಡುಗಿಯು ಮುಸಲ್ಮಾನ ಮತಕ್ಕೆ ಸೇರಲು ಸ್ಟೇಷನ್ನಿಗೆ ಬರುತ್ತಾಳೆಂದೂ, ಆದರಿಂದಲೇ ಅವರಿಗೆ ಎಲ್ಲಾ ಪೂರ್ವಭಾವಿಯಾಗಿ ಗೊತ್ತಿದೆಯೆಂದೂ ಪ್ರತ್ಯಕ್ಷವಾಗಿಯೇ ಅದರಲ್ಲಿ ಅವನ ಕೈ ಉಂಟೆಂದೂ ಚನ್ನಾಗಿ ವ್ಯಕ್ತವಾಗುತ್ತದೆ. ಆದೇನು ಜಾತಿಯ ಏರ್ಪಾಡುಗಳನ್ನು ಮಾಡುವ ರಿಜಿಸ್ಟ್ರಾಫೀಸೇನು? ಈ ಪೋಲೀಸು ಅಧಿಕಾರಿಗಳು ಇಂಥ ಅರ್ಜಿಯನ್ನು ತೆಗೆದುಕೊಳ್ಳುವುದಕ್ಕೆ ಇಂಥ ವಿಚಾರಣೆ ಮಾಡುವುದಕ್ಕೆ ಕ್ರಿಮಿನಲ್ ಲಾದಲ್ಲಿ ಎಲ್ಲಿ ಆಸ್ಪದವಿದೆ? ಅಧಿಕಾರವಿದೆ? ತಂದೆಯು ಹುಡುಗಿಯನ್ನು ಒದ್ದು ಓಡಿಸಿಬಿಟ್ಟಿದ್ದರೆ ಅವಳು ಅರ್ಜಿ ಕೊಡಬೇಕಾದರೆ ಮ್ಯಾಜಿಸ್ಟ್ರೇಟರಲ್ಲಿ ಕೊಡಬೇಕು. ಪೋಲೀಸಿನವರು ಅವಳನ್ನು ಮ್ಯಾಜಿಸ್ಟ್ರೇಟ್ ಹತ್ತಿರ ಕಳಿಸಬೇಕು. ಹಾಗೆಮಾಡದಿದ್ದದ್ದು ಅವರ ವಿಷಯದಲ್ಲಿ ಸಂದೇಹವನ್ನುಂಟುಮಾಡುತ್ತದೆ. ಅವರು ತೆಗೆದುಕೊಂಡಿರುವ ಹೇಳಿಕೆಯಲ್ಲೇ ಆಕೆಯು ಮಹಮ್ಮದೀಯ ಮತಕ್ಕೆ ಸೇರುತ್ತಾಳೆಂಬುದನ್ನು ವಿಚಾರಣೆಮಾಡುವ ಆಸಕ್ತಿಯು ಅವರಿಗೆ ಇತ್ತೆಂಬುದು ವ್ಯಕ್ತವಾಗುತ್ತದೆ.

ತಂದೆಯೇ ಬಟ್ಟೆಗಳನ್ನೂ ಟ್ರಂಕನ್ನೂ ಕೊಟ್ಟು ಹುಡುಗಿಯನ್ನು ಓಡಿಸಿಬಿಟ್ಟಿದ್ದರೆ ಕಳವು ತಪ್ಪನ್ನು ಹೊರಿಸುತ್ತಾನೆಂಬ ಭಯವೆಲ್ಲಿ ಬಂತು? ಅವಳು ತಂದೆಯ ಮೇಲೆ ಅರ್ಜಿಕೊಡುವುದಕ್ಕೇ ಹೋಗಿದ್ದರೆ ೨೨ ನೇ ರಾತ್ರಿಯೇ ಸೀದಾ ಪೋಲೀಸ್ ಸ್ಟೇಷನ್ನಿಗೆ ಏಕೆ ಹೋಗಲಿಲ್ಲ? ಇವೆಲ್ಲಾ ಕಾರಣಗಳಿಂದ ಸೆಷನ್ ಜಡ್ಜರು ಈ ಹೇಳಿಕೆಯು ದುರ್ಬೋಧನೆಯಿಂದ ಆದದ್ದೆಂದು ತೀರ್ಮಾನಿಸಿದ್ದು ಸರಿಯಾಗಿಯೇ ಇದೆ. ಆ ದಿನದ ಪೋಲೀಸು ಡೈರಿಯಲ್ಲಿ ಮತ್ತೇನೂ ಇಲ್ಲ. ಅವಳು ಮುಸಲ್ಮಾನ್ ಮತಕ್ಕೆ ಸೇರುತ್ತೇನೆಂಬುದೇ ಮುಖ್ಯ! ಈ ಹೇಳಿಕೆಯ ಮೇಲೆಯೇ ಡಿಫೆನ್ಸು ಎಲ್ಲಾ ಕಟ್ಟಲ್ಪಟ್ಟಿದೆ.

ಮದುವೆಯು ಖುದ್ ರಾಜಿಯಿಂದ ಆದದ್ದೇ?

ಅಪರಾಧಿಗಳ ಹೇಳಿಕೆಗಳನ್ನೆಲ್ಲಾ ವಿಕತ್ರ ಓದಿದರೆ, ಹುಡುಗಿಯ ಮದುವೆಯು ಅವಳ ಇಷ್ಟಪ್ರಕಾರ ಖುದ್ ರಾಜಿಯಿಂದ ಆದದ್ದಲ್ಲವೆಂದು ವ್ಯಕ್ತವಾಗುತ್ತದೆ.

ಅಪರಾಧಿಗಳ ಹೇಳಿಕೆಯಂತೆಯೇ ಹುಡುಗಿಯು ಟೋಲ್‌ಗೇಟಿನ ಹತ್ತಿರ ತಾ|| ೨೩ ನೇ ಸಂಧ್ಯಾಕಾಲ ಇದ್ದಳು. ಮೊದಲನೇ ಅಪರಾಧಿಯ ಮನೆಯಲ್ಲಿ ರಾತ್ರಿ ಹೊಸ ಶೀರೆಯನ್ನುಟ್ಟು ಹುವ್ವು ಮುಡಿದುಕೊಂಡು ಇದ್ದಳು. ಆ ಹುಡುಗಿಯನ್ನು ಅಲ್ಲಿಗೆ ಕರೆತಂದು ಹೀಗೆ ಅಲಂಕರಿಸಿದವರಾರು? ಮದುವೆಯು ಅವಸರವಸರವಾಗಿ ನಡೆಯಿತು. ಮದುವೆಯ ವರನು ತನ್ನ ಬಂಧುಗಳನ್ನು ಕೇಳುವುದಕ್ಕೂ ಪುರಸತ್ತು ಸಿಕ್ಕಲಿಲ್ಲ. ವಯಸ್ಸು ಇಷ್ಟೇ ಎಂದು ಅಪರಾಧಿಗಳಿಗೆ ಸರಿಯಾಗಿ ಗೊತ್ತಿರಲಿಲ್ಲ. ಅಷ್ಟೇ ಅಲ್ಲ, ಜಂಗಮಕೋಟೆಯ ಜನನಮರಣದ ರಿಜಿಸ್ಟರನ್ನು ತಿದ್ದಿರುವ ಚೇಸಿಗೆಯೊಂದು ಕಂಡುಬಂದಿದೆ. ಹುಡುಗಿಯು ಮೈನರು ಹೌದೇ ಅಲ್ಲವೇ ಎಂಬುದನ್ನು ನಿರ್ಣಯಿಸುವುದು ಅಪರಾಧಿಗಳ ಜವಾಬ್ದಾರಿ, ಅದನ್ನು ಮಾಡಿದ್ದಲ್ಲದೆ ಅವರ ಕ್ರಿಮಿನಲ್ ತಕ್ಸೀರು ಪಾರಾಗುವುದಿಲ್ಲ. ಇದರಿಂದ ಏನೋ ತೊಂದರೆ ಇದೆಯೆಂದು ಅಪರಾಧಿಗಳಿಗೆ ಗೊತ್ತೇ ಇತ್ತು. ಅದಕ್ಕಾಗಿ ಕೆಲವು ಡಿಫೆನ್ಸುಗಳನ್ನು ಮೊದಲಿಂದ ಅವರು ಮಾಡಿದ್ದಾರೆ. ಅದರಲ್ಲಿ ಮೊದಲನೆಯದು ಅವಳನ್ನು ಪೋಲೀಸು ಸ್ಟೇಷನ್ನಿಗೆ ಕಳಿಸಿದ್ದು. ಇದು ಸಹಜವಾದ ಮದುವೆಯಾಗಿದ್ದರೆ, ಇಂಥ ಡಿಫೆನ್ಸುಗಳನ್ನೆಲ್ಲಾ ತಯಾರು ಮಾಡಿಕೊಳ್ಳುವ ಅವಶ್ಯಕವಿರಲಿಲ್ಲ.

೨೨ ನೇ ರಾತ್ರಿ ಎಲ್ಲೋ ಗುಪ್ತಸ್ಥಳದಲ್ಲಿದ್ದಿರಬಹುದೆಂದು ಅಪರಾಧಿಗಳ ಲಾಯರು ಹೇಳುತ್ತಾರೆ. ಇದರಲ್ಲಿ ನಿಜವಿದೆ. ಪ್ರಾತಃಕಾಲ ಸ್ಟೇಷನ್ನಿಗೆ ಬಂದದ್ದು ಅದನ್ನು ಪುಷ್ಟೀಕರಿಸುತ್ತದೆ. ಇದರಲ್ಲಿ ಅಪರಾಧಿಗಳ ಒಳಸಂಚು ಇಲ್ಲವೆಂದು ಅವರು ತೋರ್ಪಡಿಸಿಕೊಂಡಿಲ್ಲ. ತಂದೆಯ ನಡತೆಯು ಎಷ್ಟೇ ತಪ್ಪಿರಲಿ, ಹುಡುಗಿಯ ಹೇಳಿಕೆಯು ಎಷ್ಟೇ ಅಸಂಬದ್ಧವಿರಲಿ, ಪ್ರಾಸಿಕ್ಯೂಷನವರು ಮುಖ್ಯ ಅಂಶವನ್ನೇನೇ ಸಾಬೀತು ಮಾಡಿದ್ದಾರೆ.

ಗರುಡಾಚಾರ್ಯರಲ್ಲಿ ಹೇಳಿಕೆ.

ಗರುಡಾಚಾರ್ಯರಲ್ಲಿ ಕೊಟ್ಟ ಹೇಳಿಕೆಯಲ್ಲಿ ಮುಸಲ್ಮಾನರು ಬಲಾತ್ಕಾರ ಮಾಡಿದ ಅಂಶಗಳಿಲ್ಲವೆಂದೂ, ಮ್ಯಾಜಿಸ್ಟ್ರೇಟರಲ್ಲಿ ಕೊಟ್ಟ ಹೇಳಿಕೆಯು ಬೇರೆ ರೀತಿಯಾಗಿದೆಯೆಂದೂ, ಅವಳು ಗರುಡಾಚಾರ್ಯರಲ್ಲಿ ಹೇಳಿಕೆ ಕೊಟ್ಟಾಗ ತಂದೆಯ ರಕ್ಷಣೆಯಲ್ಲಿದ್ದಳೆಂದೂ, ಅಪರಾಧಿಗಳ ಪರ ಚಾಣಾಕ್ಷರಾದ ಲಾಯರು ಬಹಳ ವಾದಮಾಡಿದ್ದಾರೆ. ಅವಳು ಆ ಸಮಯದಲ್ಲಿ ತಂದೆಯ ಮನೆಯಲ್ಲಿದ್ದದ್ದು ನಿಜ. ಆದರೆ ಅತ್ತ ಮುಸಲ್ಮಾನರ ಸಂಬಂಧವೂ ಹರಿದಿಲ್ಲ, ಮನೆಯ ವಾತಾವರಣವೂ ಚಂಚಲ, ಇಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿದ್ದಳು. ಆಗ ಏನಾಗುತ್ತೋ ಅವಳಿಗೇ ಗೊತ್ತಿಲ್ಲ. ಅಂಥ ಸ್ಥಿತಿಯಲ್ಲಿ ಗರುಡಾಚಾರ್ಯರಲ್ಲಿ ಹೇಳಿಕೆ ಕೊಟ್ಟಳು. ಅವಳು ಆ ಸಮಯದಲ್ಲಿ ಬಹಳ ಭಯಗ್ರಸ್ತಳಾಗಿದ್ದಳೆಂದೂ ಗರುಡಾಚಾರ್ಯರು ಹೇಳುತ್ತಾರೆ. ಇದನ್ನೆಲ್ಲಾ ನೋಡಿದರೆ ಹುಡುಗಿಯು ಬಹಳ ಬುದ್ಧಿಚಾಂಚಲ್ಯದ ಸ್ಥಿತಿಯಲ್ಲಿದ್ದಳೆಂದು ಧಾರಾಳವಾಗಿ ಹೇಳಬಹುದು.

ಬಲಾತ್ಕಾರವಿದೆಯೇ?

ಹುಡುಗಿಯು ಮನೆಯಿಂದ ಹೊರಡುತ್ತಲೇ ಆ ಓಣಿಯಲ್ಲಿ ೩-೪ ಜನ ಮುಸಲ್ಮಾನರು ಬಂದು ತಡೆದು ನಿಲ್ಲಿಸಿ, ತಮ್ಮ ಜಾತಿಗೆ ಸೇರೆಂದು ಹೇಳಿ ಮುಖದ ಮೇಲೆ ಉಗುಳಿದರೆಂದು ಹೇಳುತ್ತಾಳೆ. ಆ ಮೇಲೆ ಸ್ಕೂಲು ಜಗಲಿಯ ಮೇಲೆ ಹೆದರಿಸಿ ಕೂಡಿಸಿದ್ದರೆಂದೂ, ಪ್ರಾತಃಕಾಲ ಇನಸ್ಪೆಕ್ಟರನ ಮನೆಗೆ ಕರೆದುಕೊಂಡು ಹೋದರೆಂದೂ ಹೇಳುತ್ತಾಳೆ. ಇದನ್ನೆಲ್ಲಾ ಪರಿಶೀಲಿಸಿದರೆ ತಕ್ಸೀರು ೩೬೧ ನೇ ಸೆಕ್ಷನ್ ಪ್ರಕಾರ ಅನ್ವಯಿಸುತ್ತದೆ. ಅನಂತರ ಹುಡುಗಿಯು ಹೇಳುತ್ತಾಳೆ. ಇಬ್ಬರು ಮುಸಲ್ಮಾನರು ಸ್ಕೂಲು ವರಾಂಡದಿಂದ ವೆಂಕಟಗಿರಿಕೋಟೆಗೆ ಕರೆದುಕೊಂಡುಹೋದರೆಂದೂ, ಅಲ್ಲಿ ಒಂದು ಸ್ಕೂಲಿನಲ್ಲಿಟ್ಟರೆಂದೂ, ಮದುವೆಮಾಡಿಕೊಳ್ಳುವಂತೆ ಹೇಳಿದರೆಂದೂ, ಅವಳು ಒಪ್ಪಲಿಲ್ಲವೆಂದೂ ಅನಂತರ ಮೊದಲನೇ ಅಪರಾಧಿಯ ಮನೆಗೆ ಕರತಂದು ಖಲಂಮಂತ್ರ ಹೇಳಿದರೆಂದೂ, ಮದುವೆಯು ಆಗಿಹೋಯಿತೆಂದೂ ಪುಸ್ತಕಕ್ಕೆ ರುಜು ತೆಗೆದುಕೊಂಡರೆಂದೂ ತಿಳಿಯುತ್ತದೆ. ಈ ಪರಿಸ್ಥಿತಿಯಲ್ಲಿ ಹುಡುಗಿಯು ತಾನಾಗಿ ಮುಸಲ್ಮಾನಳಾದಳೆಂದಾಗಲಿ ಖುದ್ ರಾಜಿಯಿಂದ ಮದುವೆಯಾದಳೆಂದಾಗಲಿ ಹೇಗೆ ನಂಬಲಾದೀತು? ಇದನ್ನೆಲ್ಲಾ ನೋಡಿದರೆ ಹುಡುಗಿಯನ್ನು ಮುಸಲ್ಮಾನ್ ಮತಕ್ಕೆ ಸೇರಿಸಲು ಬಲಾತ್ಕರಿಸಿದ್ದಾರೆ. ಬಲಾತ್ಕಾರದಿಂದ ೨ ನೇ ಅಪರಾಧಿಗೆ ಮದುವೆ ಮಾಡಿದ್ದಾರೆ. ಅವನೇ ಅವಳ ಬುದ್ಧಿಯನ್ನು ವಶಪಡಿಸಿಕೊಂಡು ಆ ಕಾಗದಕ್ಕೆ ರುಜು ಮಾಡಿಸಿದ್ದಾನೆ.

ಅವಳನ್ನು ಯಾರವಶದಿಂದ ತೆಗೆದುಕೊಂಡು ಹೋದರು?

ಈ ವಿಷಯದ ಮೇಲೆ ಲಾಯರು ಬಹಳ ವಾದಿಸಿದ್ದಾರೆ. "ಗಾರ್ಡಿಯನ್ ವಶದಿಂದ ತೆಗೆದುಕೊಂಡು ಹೋಗುವುದು" ಎಂಬುದಕ್ಕೆ ಶರೀರವೇ ಅವರ ವಶದಲ್ಲಿರಬೇಕೆಂದು ಅರ್ಥವಲ್ಲ. ಮನಸ್ಸನ್ನು ಸೆಳೆದು ಸ್ವಾಧೀನಪಡಿಸಿಕೊಂಡರೆ ಸಾಕು. ಅವಳ ಇಷ್ಟವೂ ಗಣನೀಯವಲ್ಲವೆಂದು ಕಾನೂನು ಹೇಳುತ್ತದೆ. ಗಾರ್ಡಿಯನ್ನಿನ ಅಧೀನದಲ್ಲಿರುವುದು ಬಿಡುವುದು, ಮೈನರ ಹುಡುಗಿಯ ಇಷ್ಟದಂತೆ ಅಲ್ಲ, ಅದು ಕಾನೂನಿನ ವಿಷಯ.

(೬ನೇ ಪುಟವನ್ನು ನೋಡಿರಿ.)

[೩ನೆಯ ಪುಟದಿಂದ ಮುಂದುವರಿದುದು.]

ಪತ್ರಿಕೆಗಳಲ್ಲೇನೋ ಪ್ರಸಿದ್ಧಿಯನ್ನು ಹೊಂದಿದನು. ನಾಳೆ. ಇನ್ನೇನಾಗಬೇಕು?

ಕೆಲವರು ಬಾಲಿಕೆಯರು ಈ ಗಾಂಧಿಯವರ ಸ್ವಾಗತಕ್ಕಾಗಿ ಹೋಗಿ ಹಾಡನ್ನು ಹಾಡಿ ಆರತಿಯನ್ನೆತ್ತುವಾಗ ಓರ್ವ ಬಾಲಿಕೆಯ ಕೈಯಲ್ಲಿ ಒಂದು ಉಂಗುರವಿರುವುದು ಇವರ ದೃಷ್ಟಿಗೆ ಬಿತ್ತು, ಅಥವಾ ಇವರ ದೃಷ್ಟಿಯು ಅದರ ಮೇಲೆ ಬಿತ್ತು. ಸರಿ 'ಏನಮ್ಮಾ ಇದನ್ನು ನನಗೆ ಕೊಡುವೆಯಾ?' ಎಂದರಂತೆ! ಆ ಬಾಲಿಕೆಯು ಸಮ್ಮತಿಸಿ ಉಂಗುರವನ್ನು ಕೈಯಿಂದ ತೆಗೆಯಲು ಪ್ರಯತ್ನಿಸಿತು. ಬಿಗಿಯಾಗಿದ್ದುದರಿಂದ ಬರಲಿಲ್ಲ. ಆ ಮೇಲೆ ಗಾಂಧಿಯವರೇ ತೆಗೆಯಲು ಪ್ರಯತ್ನಿಸಿದರು. ಸಾಧ್ಯವಾಗಲಿಲ್ಲ. ಬಳಿಕ ಸಮೀಪದಲ್ಲಿದ್ದವರಿಗೆ ಅದನ್ನು ನೀರಿನಿಂದ ತೇವಮಾಡಿ ತೆಗೆಯುವಂತೆ ಉಪಾಯವನ್ನು ಹೇಳಿಕೊಟ್ಟರಂತೆ! ಆಗ ಆ ಬಾಲಿಕೆಯು ಮುಖವನ್ನು ಖಿನ್ನಮಾಡಿ ಪಕ್ಕಕ್ಕೆ ತಿರುಗಿಸಿತಂತೆ! ಕೊನೆಗೆ ಉಂಗುರವು ಗಾಂಧಿಯವರ ಜೇಬಿಗೆ ಅಲ್ಲ (ಗಾಂಧಿ ಮಹಾತ್ಮರಿಗೆ ಕವಚನೇ ಇಲ್ಲದಿರುವಾಗ ಜೇಬೆಲ್ಲಿ ಬಂತು?) ಚೀಲಕ್ಕೆ ಬಿತ್ತಂತೆ!! ಈ ನಿರ್ದಯದೃಶ್ಯವೂ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆ. ಇಂತಹ ದೃಶ್ಯಗಳೂ ಈ ಹನ್ನೊಂದನೆಯ ಅವತಾರಪುರುಷರೆನ್ನಿಸಿಕೊಳ್ಳುವರ ಅತಿಶಯಗಳೆಂದು ತಿಳಿದು ಕೆಲವರು ಹಾಡುತ್ತಿರುವುದು ಆತ್ಯಾಶ್ಚರ್ಯವಾಗಿದೆ.

ಕೊನೆಗೆ ನಾವು ಹೇಳುವುದಿಷ್ಟು—ಯಾವ ಮನುಷ್ಯನೇ ಆಗಲಿ, ಧರ್ಮಕ್ಕೂ ಪಾಪಕ್ಕೂ ಸಾಧ್ಯವಾದಷ್ಟು ಲೋಕಕ್ಕೂ ಅಂಜಿ ನಡೆಯಬೇಕು. ಕೇವಲ ಐಹಿಕೋನ್ನತಿಯ ದುರಾಶೆಯಿಂದ ಧರ್ಮದ ಪತನಕ್ಕೆ ಪ್ರಯತ್ನಿಸಿದರೆ ತಾನು ಎಷ್ಟೋ ಉನ್ನತಿಯನ್ನು ಹೊಂದಿದ್ದರೂ 'ಅತ್ಯುನ್ನತಿಃ ಪತನಹೇತುಃ' ಎನ್ನುವಂತೆ ತನ್ನ ಪತನವು ಒಂದೇ ಸಲವಲ್ಲದಿದ್ದರೂ ಕ್ರಮವಾಗಿಯಾದರೂ ಸಿದ್ಧವಾಗಿರುವುದು. ಯಾವ ವಸ್ತುವಿಗಾದರೂ ಒಂದು ಎಲ್ಲೆಯಿರಬೇಕು. ಸಮುದ್ರಕ್ಕಾದರೂ ಒಂದು ಎಲ್ಲೆಯಿರುವುದು. ಎಲ್ಲೆ ಮೀರಿದರೆ ಲೋಕದಲ್ಲಿ ಮಹಾನರ್ಥವಾಗುವುದು. ಮನುಷ್ಯನಿಗೂ ಮಹರ್ಷಿಪರಂಪರೆಯಾಗಿ ಬಂದ ಆಯಾ ಜಾತಿ ಮತ ಧರ್ಮಪದ್ಧತಿಯೂ ವರ್ಣಾಶ್ರಮಪದ್ಧತಿಯೂ ಎಲ್ಲೆಗಳಾಗಿರುವುವು. ಪಶುಗಳಂತೆ ಕೇವಲ ಐಹಿಕಸುಖಾಪೇಕ್ಷೆಯಿಂದ 'ಸೆಟ್ ಏಕ್' ಆಗಿ ಸ್ವಚ್ಛಂದಪ್ರವೃತ್ತರಾಗುವುದು ಧರ್ಮವಲ್ಲ—ಎಲ್ಲೆಯಲ್ಲ. ಆದುದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮಪದ್ಧತಿಯನ್ನು ಬಿಡದೆ ಬೇರೆಯವರ ಶ್ರೇಯಸ್ಸನ್ನು ಕೋರುತ್ತ ಪರಸ್ಪರ ಪ್ರೀತಿಯಿಂದ ಬಾಳಬೇಕೆನ್ನುವುದೂ 'ಸರ್ವೇಜನಾಃ ಸುಖಿನೋ ಭವಂತು' ಎನ್ನುವುದೂ ದಿವ್ಯಜ್ಞಾನಿಗಳಾದ್ದ ನಮ್ಮ ಮಹರ್ಷಿಗಳ ಪವಿತ್ರಾಜ್ಞೆ! ಇದನ್ನು ಪಾಲಿಸುವುದರಿಂದ ಶಾಂತಿಸಮಾಧಾನವೂ ದೇಶಕ್ಷೇಮವೂ ಇಹಪರಸುಖವೂ ಆಗುವುವಲ್ಲದೆ ನಮ್ಮಂತೆ ಅಲ್ಪಜ್ಞರಾದ ಗಾಂಧಿಯವರಂತಹವರು ಹೇಳುವಂತೆ ನಡೆದರೆ ಮೇಲೆಹೇಳಿದ ಪಾಡಲ್ಲದೆ ಎಂದೂ ಶಾಂತಿಸಮಾಧಾನಾದಿಗಳುಂಟಾಗಲಾರವು.

ಬೊಂಬಾಯಿ ವರ್ತಕಸಂಘದಲ್ಲಿ ಗವರ್ನರರ ಭಾಷಣ.

ಬಾಂಬೇ ಚೇಂಬರ ಆಫ್ ಕಾಮರ್ಸ್ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುವಾಗ್ಗೆ ಮುಂಬೈ ಇಲಾಖೆಯ ಗವರ್ನರರಾದ ಲಾರ್ಡ ಬ್ರೇಬನರು ಹಿಂದೂಸ್ಥಾನದ ಪ್ರಗತಿಯ ವಿಷಯದಲ್ಲಿ ಯುರೋಪಿಯನ್ ಸಮಾಜವು ಮಾಡಿದ ಕಾರ್ಯಭಾಗದ ಮಹತ್ವವನ್ನು ಕುರಿತು ವಿವೇಚಿಸಿದರು. ಮುಂಬೈಪಟ್ಟಣದ ವರ್ತಕ ಸಮಾಜದೊಡನೆ ತಾವು ಸಂಪೂರ್ಣ ಸಹಕಾರದಿಂದ ನಡೆಯುವೆವೆಂದು ಹೇಳಿದರು.

ಬೊಂಬಾಯಿ ಪಟ್ಟಣದ ವ್ಯಾಪಾರವು ಒಡೆದು ಹೋಗುತ್ತಿರುವ ವಿಷಯಕ್ಕೆ ಸಂಘದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿಸ್ತಾರವಾಗಿ ವಿವೇಚನೆ ಮಾಡಿದ್ದರು. ಈ ಬಗ್ಗೆ ಗವರ್ನರರು ಮುಂಬೈ ಪಟ್ಟಣದಲ್ಲಿ ನಾನು ವಾಸವಾಗಿರುವ ಅಲ್ಪಾವಧಿಯಲ್ಲಿಯೇ ಈ ವಿಷಯದ ಮಹತ್ವವೆಷ್ಟೆಂಬುದನ್ನು ಅರಿತುಕೊಂಡಿದ್ದೇನೆ. ಈ ವಿಷಯವು ಪ್ರಾಮುಖ್ಯವಾಗಿ ಹಿಂದೂಸ್ಥಾನ ಸರಕಾರಕ್ಕೆ ಸಂಬಂಧಿಸಿದ್ದಾದರೂ ಮುಂಬೈಪಟ್ಟಣ ಮತ್ತು ಮುಂಬೈ ಬಂದರುಗಳ ಹಕ್ಕುಗಳನ್ನು ಮುಂಬೈ ಸರಕಾರವು ಹಿಂದೂಸ್ಥಾನ ಸರಕಾರದ ಮುಂದೆ ಯಾವಾಗಲೂ ಅಗ್ರಹಯುಕ್ತವಾಗಿಯೇ ಪ್ರತಿಪಾದಿಸುತ್ತ ಬಂದಿದೆ.

ಧೋರಣವನ್ನನುಸರಿಸಿಯೇ ನಾನು ಮೊನ್ನೆ ದಿಲ್ಲಿಗೆ ಹೋಗುವ ಮೊದಲು ಈ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನೆಲ್ಲ ಕೂಡಿಹಾಕಿಕೊಂಡು ಹೋದೆನು. ಈ ಸಂದರ್ಭದಲ್ಲಿ ಮುಂಬೈಗೆ ಒದಗಿರುವ ವಿಪತ್ತನ್ನೂ ವರ್ತಕ ಸಮಾಜದಲ್ಲಿ ಈ ವಿಷಯದಲ್ಲಿ ಹುಟ್ಟಿರುವ ಭಾವನೆಯನ್ನೂ ಹಿಂದೂಸ್ಥಾನ ಸರಕಾರದ ಪ್ರತಿನಿಧಿಗಳಿಗೆ ಹೇಳದಿದ್ದರೆ ನಾನು ನನ್ನ ಕರ್ತವ್ಯದಲ್ಲಿ ತಪ್ಪಿದಂತಾಗುತ್ತಿದ್ದಿತು.

ಈ ವಿಷಯವು ಬಹಳ ಕಠಿಣವೂ ತೊಡಕಿನದೂ ಆಗಿರುವದರಿಂದ ನನ್ನ ಕಾರ್ಯಕ್ಕೆ ತತ್ಕಾಲದಲ್ಲಿ ಪರಿಣಾಮವಾಗದಿದ್ದರೂ ನೀವು ನಿರಾಶರಾಗಬಾರದು. ನನ್ನ ಹೇಳಿಕೆಯನ್ನು ಸಂಪೂರ್ಣವಾಗಿ ಹೇಳಲು ನನಗೆ ಅನುವು ದೊರೆಯಿತು. ನಾನು ಶಕ್ಯವಿದ್ದುದನ್ನೆಲ್ಲ ಮಾಡಿರುವೆನೆಂದು ಹೇಳಬಹುದು. ಹಿಂದುಸ್ಥಾನ ಸರಕಾರದವರು ಹೊಸಸುಂಕಗಳನ್ನು ಹೇರಿರುವದರಿಂದ ಉಂಟಾಗುತ್ತಿರುವ ಪ್ರಾಪ್ತಿಯಲ್ಲಿ ಮುಂಬೈಗೇನೂ ಪಾಲು ದೊರೆಯದಿರುವ ವಿಷಯಕ್ಕೆ ಚೇಂಬರದವರು ವ್ಯಕ್ತಮಾಡಿದ ವಿಚಾರಗಳು ಮುಂಬೈ ಸರಕಾರಕ್ಕೂ ಸಮ್ಮತವಾಗಿವೆ. ಮೆಸ್ಟನ್ ಯೋಜನೆಯಿಂದ ಬಂಗಾಲಕ್ಕಾದಷ್ಟೇ ಹಾನಿಯು ಮುಂಬೈ ಇಲಾಖೆಗೂ ಆಗಿದೆ. ಅಂದಾಜು ಪತ್ರಿಕೆಯ ವಿಷಯವಾಗಿ ಹೂಸ್ಟರರು ಮಾಡಿದ ಭಾಷಣವು ಪ್ರಸಿದ್ಧವಾದ ಕೂಡಲೆ ಮುಂಬೈ ಸರಕಾರವು ಹಿಂದುಸ್ಥಾನ ಸರಕಾರದ ಮುಂದೆ ಮತ್ತೊಮ್ಮೆ ತನ್ನ ಪಕ್ಷವನ್ನು ಮಂಡಿಸಿತು. ಅಸೆಂಬ್ಲಿಯಲ್ಲಿ ಈ ವಿಷಯಕ್ಕೆ ಚರ್ಚೆನಡೆದಾಗ ನಾನು ದಿಲ್ಲಿಯಲ್ಲಿಯೇ ಇದ್ದುದರಿಂದ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳೊಡನೆ ಖಾಸಗಿ ರೀತಿಯಿಂದ ಚರ್ಚೆಮಾಡಿ ಈ ಸಂದರ್ಭದಲ್ಲಿ ಸಾಧ್ಯವಿದ್ದಷ್ಟು ಪ್ರಯತ್ನವನ್ನು ಮಾಡಿದೆನು.

ಮುಂಬೈ ಇಲಾಖೆಯ ಹಕ್ಕು, ಹೇಳುವವರಿಲ್ಲದೆ ಬಿದ್ದುಹೋಗಬಾರದೆಂಬ ನಮ್ಮ ಸ್ವಾಭಾವಿಕ ಇಚ್ಛೆಯ ವಿಷಯಕ್ಕೆ ಟೀಕೆಮಾಡುವ ಪ್ರವೃತ್ತಿಯು ಬಂಗಾಲದಲ್ಲಿ ಕಂಡುಬರುತ್ತಿರುವದು ಶೋಚನೀಯವಾಗಿದೆ. ನಾನು ದಿಲ್ಲಿಗೆ ಹೋದದ್ದರ ಉದ್ದೇಶವೇ ಬಂಗಾಲಕ್ಕೆ ಕೆಡಕು ಬಗೆಯುವದಾಗಿತ್ತೆಂದೂ ಇದೇ ಕಾರ್ಯಕ್ಕಾಗಿ ನನ್ನ ದಿಲ್ಲಿ ಪ್ರಮಾಣವು ನಿಶ್ಚಿತವಾಯಿತೆಂದೂ ಕೆಲವೆಡೆಗಳಲ್ಲಿ ಹೇಳಲಾಗುತ್ತಿದೆ. ಇದು ಶುದ್ಧಸುಳ್ಳು. ನಾನು ಮುಂಬೈಗೆ ಬರುವದಕ್ಕೆ ಇನ್ನೂ ಹಲವು ದಿನಗಳಿರುವಾಗಲೇ ಲೇಡಿ ವಿಲಿಂಗ್ಡನ್ನರು ದಿಲ್ಲಿಗೆ ಬರುವಂತೆ ನನಗೆ ಆಮಂತ್ರಣ ಕೊಟ್ಟದ್ದರು. ಇದಕ್ಕಾಗಿ ಬಂಗಾಲಿ ಮಿತ್ರರು ಹೆದರಿಹೋಗುವ ಕಾರಣವಿಲ್ಲ.

ಏಕೆಂದರೆ, ಹಿಂದುಸ್ಥಾನ ಸರಕಾರದವರ ಮುಂದೆ ನಮ್ಮ ಹೇಳಿಕೆಯನ್ನು ಎಷ್ಟೇ ತೋಡಿಕೊಂಡರೂ ಬರೀ ಸಹಾನುಭೂತಿಯ ಶಬ್ದಗಳ ಹೊರತು ಮತ್ತೇನೂ ದೊರೆಯಲಾರದೆಂದು ನನಗೆ ತೋರಹತ್ತಿದೆ. ಆಪತ್ಕಾಲದ ಬಗ್ಗೆ ಹೇರಲಾಗಿರುವ ಕರಭಾರದ ಸಂಬಂಧದಲ್ಲಿ ಸರಕಾರದವರು ಸಂಘಕ್ಕೆ ಸಹಾಯ ಮಾಡಬೇಕೆಂಬ ಬೇಡಿಕೆಯ ವಿಷಯಕ್ಕೆ ಭಾಷಣ ಮಾಡುವಾಗ ಗವರ್ನರರುಗಳಿಗೆ ಬಳಿಕೆಗಳ ಬಾಯಿಗೂಡುವಂಥ ಮುಂಗಡ ಪತ್ರಿಕೆಯನ್ನು ಸಿದ್ಧಪಡಿಸುವದೇ ಆರ್ಥಿಕ ಸಮತೆಯ ಮೊದಲಿನ ಮೆಟ್ಟಾಗಿದೆಯೆಂದು ಹೇಳಿದರು. ಈ ವರ್ಷ ಮುಂಬೈ ಸರಕಾರದ ಲೆಕ್ಕವು ಬಾಯಿಗೂಡುವಂತಾದ್ದರಿಂದ ಈ ವಿಷಯದಲ್ಲಿ ಒಂದು ಹೆಜ್ಜೆಯನ್ನಿಟ್ಟಂತಾಯಿತೆಂದು ಭಾವಿಸಿದ್ದೆವು. ಆದರೆ ಹತ್ತಿಯಮೇಲಿನ ಊರಸುಂಕವನ್ನು ತೆಗೆದು ಹಾಕುವದರಿಂದ ಸರಕಾರಕ್ಕೆ ಹತ್ತು ಲಕ್ಷ ರೂಪಾಯಿಗಳ ನಷ್ಟವಾಗಿ ಈಹೆಜ್ಜೆಯೂ ಸುಳ್ಳಾದಂತಾಗಿದೆ. ಆದುದರಿಂದ ಸರಕಾರದ ಆರ್ಥಿಕಪರಿಸ್ಥಿತಿಯು ಗಟ್ಟಿಮುಟ್ಟಾಗುವವರೆಗೆ, ಅವರು ಯಾವ ಯಾವ ಉಪಾಯಗಳನ್ನು ಕೈಕೊಳ್ಳಬಹುದೆಂಬ ಬಗ್ಗೆ ಈಗ ನಾನು ಏನೂ ಹೇಳಲಾರೆನು.

ವೀರಶೈವ ಧರ್ಮೋನ್ನತಿಪರಿಷತ್ತು.

ಈ ಪರಿಷತ್ತು ಸೊಲ್ಲಾಪುರ ಡಿ॥ ಧೋತ್ರಿಗ್ರಾಮದಲ್ಲಿ ಮಾರ್ಚ ೨೮-೨೯ ನೆಯ ತಾರೀಖಿನ ದಿವಸ ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವಿಶೇಷ ವೈಭವದಿಂದ ನೆರವೇರಿತೆಂಬ ವಿಷಯವನ್ನು ಕೇಳಿ ಅತ್ಯಾನಂದವೆನಿಸುತ್ತದೆ. ಈ ಧಾರ್ಮಿಕಪರಿಷತ್ತು, ಮಹಾರಾಷ್ಟ್ರದೇಶೀಯ ವೀರಶೈವಸಮಾಜವನ್ನುದ್ಧರಿಸಲು ಬದ್ಧಕಂಕಣರಾಗಿರುವ ಹೋಟಗಿ ಬೃಹನ್ಮಠಾಧೀಶ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರ ನೇತೃತ್ವದಿಂದ ಕೊನೆಗಂಡಿತು. ಹೋಟಗಿ ಶ್ರೀಗಳವರು ಸದಾ ಧರ್ಮೋದ್ಧಾರಕಾರ್ಯದಲ್ಲಿಯೇ ಮನಸ್ಸನ್ನಿಟ್ಟು ಇದೇ ಮಹಾತಪಸ್ಸೆಂದು ಭಾವಿಸಿ ಸಮಾಜೋದ್ಧಾರಕಾರ್ಯವನ್ನು ಮಾಡುತ್ತಿರುವುದು ಅತ್ಯಂತ ಪ್ರಶಂಸನೀಯವಾಗಿದೆ. ಇವರು ತಮ್ಮ ಪವಿತ್ರವಾದ ಆಚರಣೆಯಿಂದ "ಬಾಲತಪಸ್ವಿ" ಗಳೆಂಬ ಬಿರುದನ್ನಾಂತು ವಿರಾಜಿಸುತ್ತಿರುವರು. ಪ್ರತಿಯೊಂದು ಪ್ರಾಂತದ ಗುರುವರ್ಗದ ಪಟ್ಟಚರಾಧಿಕಾರಿಗಳು ಇವರಂತೆ ಧರ್ಮೋದ್ಧಾರಕಾರ್ಯವನ್ನು ಮಾಡಲು ಪ್ರಾರಂಭಿಸಿದರೆ ವೀರಶೈವಸಮಾಜವು ಕ್ಷಣಮಾತ್ರದಲ್ಲಿ ತನ್ನ ಪೂರ್ವದ ವೈಭವವನ್ನು ತಾಳಿ ಗುರುದ್ರೋಹಿಗಳ ಗುಂಪು ಭಸ್ಮೀಭೂತವಾಗುವುದರಲ್ಲಾವ ಸಂದೇಹವೂ ಇಲ್ಲ. ಆದುದರಿಂದ ಪ್ರತಿಯೊಬ್ಬ ಅಧಿಕಾರಿಗಳೂ ಇವರು ಕೈಕೊಂಡಿರುವ ಮಾರ್ಗವನ್ನು ಅನುಸರಿಸಿ ಈ ಮತದ ವೈಭವವನ್ನು ಹೆಚ್ಚಿಸಬೇಕೆಂದಾಶಿಸುತ್ತೇವಲ್ಲದೆ, ಹೋಟಗಿ ಶ್ರೀಗಳವರ ಪವಿತ್ರಧ್ಯೇಯದಿಂದ ಮಹಾರಾಷ್ಟ್ರದೇಶದ ವೀರಶೈವ ಸಮಾಜವು ದಿನೇ ದಿನೇ ಅಭಿವೃದ್ಧಿಯನ್ನು ಹೊಂದಲೆಂದು ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಗ್ವಾಲಿಯಾರ್ ಮಹಾರಾಜರ ಊಟದ ಟ್ರೇನು!

ಗ್ವಾಲಿಯರ್ ಮಹಾರಾಜರು ಅತಿಥಿಗಳ ಊಟದ ಸಮಾರಂಭದಲ್ಲಿ ಉಪಯೋಗಿಸುವುದಕ್ಕಾಗಿ ಒಂದು ಹೊಸತರಹದ ಟ್ರೇನನ್ನು ತಯಾರಿಸಿರುವರು. ಇದು ಆಕೃತಿಯಲ್ಲಿ ಚಿಕ್ಕದಾಗಿದ್ದರೂ ಜನರು ತಿರುಗಾಡುವ ಟ್ರೇನುಗಳಂತೆ ಒಂದು ಇಂಜೀನ ಮತ್ತು ಏಳು ಪೆಟ್ಟಿಗೆಗಳಿಂದ ಕೂಡಿದೆ. ಇಂಜಿನ್ನು ಬೆಳ್ಳಿಯಿಂದ ಗಿಲ್ಟುಮಾಡಲ್ಪಟ್ಟಿದ್ದು, ಇತರ ಪೆಟ್ಟಿಗೆಗಳು ಸಂಪೂರ್ಣ ಬೆಳ್ಳಿಯಿಂದಲೇ ತಯಾರಿಸಲ್ಪಟ್ಟಿರುತ್ತವೆ. ಇಂಜನ್ನಿನ ಒಳಭಾಗದಲ್ಲಿ ಒಂದು ಎಲೆಕ್ಟ್ರಿಕ್ ಮೋಟಾರು ಇರುವದು. ಪ್ರತಿಯೊಂದು ಪೆಟ್ಟಿಗೆಯ ಮೇಲೂ ಆಹಾರಪದಾರ್ಥಗಳಿಂದ ಕೂಡಿದ ಒಂದು ತಟ್ಟೆಯಾಗಲಿ, ಪಾನೀಯದ ಪಾತ್ರೆಯಾಗಲಿ ಇರುವದು. ಈ ಟ್ರೇನು ರೈಲುಗಾಡಿಯಂತೆ ತೇಗದಮರದ ಪಟ್ಟಿಗಳ ಮೇಲೆ ಊಟದ ಮೇಜಿನ ಸುತ್ತಲೂ ಸಾವಕಾಶವಾಗಿ ಸುತ್ತುತ್ತಿರುವುದು. ಯಾರಿಗಾದರೂ ಏನಾದರೂ ಪದಾರ್ಥವು ಬೇಕಾದರೆ, ಆ ಪದಾರ್ಥವಿರುವ ತಟ್ಟೆಯನ್ನು ಕೈಗೆ ತೆಗೆದುಕೊಂಡರೆ, ಟ್ರೇನು ಕೂಡಲೆ ನಿಂತುಹೋಗುವದು. ತಟ್ಟೆಯನ್ನು ಹಿಂತಿರುಗಿ ಇರಿಸಿದನಂತರ ಟ್ರೇನು ಪುನಃ ಮುಂದಕ್ಕೆ ಹೊರಡುವದು. ಈ ಟ್ರೇನಿನ ಮೇಲೆ 'ಸಿಂಧಿಯಾ' ಎಂಬ ಹೆಸರು ಇಂಗ್ಲೀಷ ಭಾಷೆಯಲ್ಲಿ ಕೆಂಪು ಬಣ್ಣದ ಎನಾಮಲ್ ಅಕ್ಷರಗಳಲ್ಲಿ ಬರೆಯಲ್ಪಟ್ಟಿರುವದು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೩೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಒಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 21

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 29

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (4)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, $\frac{1}{2}$ ಡಜನ್ 8-8-0 ಮತ್ತು ರೂ. 5

ರ್ಹುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶನೋವು, ಗಂಟು ನೋವು ಸಂದು ಗಂಟು ನೋವು ಎಲ್ಲಾ ತರದ ವಾಯು, ಸೊಂಟನೋವು, ಅಜೀರ್ಣ ದ ವ ಕಡಿತ, ಗಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕುಮದ್ದುಗಳು. ಹೊಮ್ಯೊಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಕೆಯುವ ರೋಗ, ದದ್ದು, ತುರಿಸುವ ನಂಜಿ ಹುಣ್ಣುಗಳನ್ನು ಕ್ಷಣದಲ್ಲಿ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಔನ್ಸಿಗೆ ಆಣೆ 8, $\frac{1}{2}$ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮದುಳು ಕಾಯಿಗಳು ನಿಸ್ತೇಜನಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತ ಹಿಂಸೆಯಲ್ಲವೇ? ಪ್ರಾಥ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಂಸವನ** ಆತ್ಮಸಂರಕ್ಷಕನಂತೆಯೇ ಯುವಕರಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ ಎಲ್ಲಿವೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವುದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರ:— ಮಲೇರಿಯಾನ ಕಂಪೆನಿ,

[30] **(ಹಂಪನಕಟ್ಟೆ), 21, ಮಂಗಳೂರು.**

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಉರಿಯುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧ ಹಸ್ತ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (20)

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್,

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಸಟೀಕ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	२ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅಮ್ಮಕಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟಾಭಿಷೇಕಮಾಡಿದಕಳ್ಳೆ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿರು ರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ ಧಿಗಳು ಯಾವವೆಂ ರೆ:—ಪೀನಸಿ, ಒಂ ತಲೆನೋವು, ತಲೆ ಲ್ಲಿಯ ರೋಗಗಳ ಕಣ್ಣುಗಳಲ್ಲಿ ಉಂಟಾ ಗತಕ್ಕ ಸರ್ವವ್ಯಾಧಿಗಳು, ಚಿಲದೋಷ ಮುಂತಾ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೬
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[13] ಪೋ. ಬಾ. ೫೧೦, ಮದರಾ

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶ್ರೀ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಏಪ್ರೆಲ್ ೧೯೩೪ [ಸಂಚಿಕೆ ೫೦

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಜೀಯಾಚ್ಛ್ರೀ ರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ | ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಸುವರ್ಣರಜತಾಂದೋಲಿಕೋತ್ಸವಾಹ್ವಾನಪತ್ರಿಕಾ.

ಆಸ್ತಿಕಮಹಾಶಯರಲ್ಲಿ ವಿಜ್ಞಾಪನೆ.

ಬೆಂಗಳೂರುಪಟ್ಟಣದ ದೇಶದ ಶೆಟ್ಟರು ಯಜಮಾನರು, ಸ್ವಾಗತಸಂಘದ ಸದಸ್ಯರು ಮತ್ತು ದೈವದವರು ಇವರ ಪ್ರಾರ್ಥನೆಯ ಮೇರೆಗೆ ಮಹಾ || || ಸ್ವಾರಿಯು ಇದೇ ಭಾವನಾಮ ಸಂ|| ಅಧಿಕ ವೈಶಾಖ ಶುದ್ಧ ೧೪ **(ತಾ|| 27-4-1934) ಶುಕ್ರವಾರ ಪ್ರಾತಃಕಾಲ 8 ಘಂಟೆ 45 ನಿಮಿಷಕ್ಕೆ** ಧರ್ಮಪ್ರಭುಗಳಾದ ಮೈಸೂರು ಶೀಮೆಯ ಶ್ರೀಮ್ಮ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ದಯಪಾಲಿಸಿರುವ ಸಮಸ್ತ ರಾಜಮರ್ಯಾದೆಗಳೊಡನೆ ಮಹೋತ್ಸವಪೂರ್ವಕ ದಯಮಾಡಿಸುವದರಿಂದ ತಾವು ತಮ್ಮ ಬಂಧುಮಿತ್ರರೊಡನೆ ಆಗಮಿಸಿ ಶ್ರೀಗುರುಕೃಪೆಗೆ ಪಾತ್ರರಾಗಬೇಕೆಂದು ಕೋರುವ,

ಮಹಾಂತಿನ ಮಠ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ದೇಶದ ಶೆಟ್ಟರು ಯಜಮಾನರು,
ವಿ. ಚೆನ್ನಯ್ಯ, ಬಿ.ಎ., ಬಿ.ಎಲ್., ಅಡ್ವೊಕೇಟ್. ಕೆ. ನಾಗಪ್ಪ,
ಸೆಕ್ರೆಟರಿಗಳು, ಸ್ವಾಗತಸಂಘ.

ಮಹೋತ್ಸವಕ್ಕೆ ಪರಸ್ಥಳದಿಂದ ಬರುವ ಮಹಾಜನರೂ, ಸ್ವಯಂಸೇವಕರಾಗಲಿಚ್ಛಿಸುವ ಮಹನೀಯರೂ ತಮಗೆ ವಸತಿ ವಗೈರೆ ಅನುಕೂಲತೆಗಳನ್ನು ಅಪೇಕ್ಷಿಸುವ ಪಕ್ಷದಲ್ಲಿ ತಾವು ಬರುವ ತಾರೀಖು, ರೈಲ್ವೆಕಾಲ, ಜನಸಂಖ್ಯೆ ವಗೈರೆ ನಮೂದಿಸಿ ಸೆಕ್ರೆಟರಿಯವರಿಗೆ ತಾ|| 22—4—1934 ರ ಒಳಗಾಗಿ ತಲುಪುವಂತೆ ಪತ್ರವನ್ನು ಬರೆಯಬೇಕು.

ರೈಲ್ವೆ ಪ್ರಯಾಣದ ಸೌಕರ್ಯಕ್ಕಾಗಿ ಒಂದೆರಡು ದಿವಸಗಳ ಮುಂಚಿತವಾಗಿ ಆಯಾಯ ಸ್ಟೇಷನ್‌ನವರಿಗೆ ತಿಳಿಸಿದಲ್ಲಿ ರೈಲ್ವೆಕನ್ಸೆಷನ್ ವಗೈರೆ ಅನುಕೂಲವು ದೊರೆಯುತ್ತದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸನಾತನಧರ್ಮವೂ ಪಂಡಿತ ಕಾಶೀನಾಥ ಶಾಸ್ತ್ರಿಗಳವರೂ.

ಮಹಾಶಯರೇ !

ಕುಟಿಲಪ್ರಪಂಚದ ಸ್ಥಿತಿಯನ್ನು ತಿಳಿಯಲು ಯಾರಿಗೂ ಸಾಧ್ಯವಿಲ್ಲ. ಇದರ ವಿಚಾರದಲ್ಲಿ ಪೂಜ್ಯರು ಅಪೂಜ್ಯರಾಗಿದ್ದಾರೆ. ಅಪೂಜ್ಯರು ಪೂಜ್ಯರಾಗಿದ್ದಾರೆ. ಈ ತರಹದ ಸ್ಥಿತಿಯಿಂದಕೂಡಿದ ಕಲಿಯೇ! ನಿನ್ನ ಸಾಹಸಕ್ಕೆ ನಮಸ್ಕಾರ! ವರ್ಣಾಶ್ರಮಗಳು ವೇದಾಗಮಗಳ ದ್ವಾರಾ ಪರಮಾತ್ಮನಿಂದಲೇ ಹೇಳಲ್ಪಟ್ಟಿವೆ. ಇವುಗಳನ್ನು ಮಹಾಚಾರ್ಯರು ಜಗತ್ತಿನಲ್ಲಿ ಪ್ರತಿಷ್ಠೆಗೊಳಿಸಿರುವ ...

ಸ್ನಾನ.

...

ಇನ್ನು ಜ್ವರ ಬಂದಾಗಲೂ, ವಿಶೇಷ ಭೇದಿಹತ್ತಿದಾಗಲೂ, ವಾಯುರೋಗ (ಅಪಸ್ಮಾರ) ಬಂದಾಗಲೂ, ಅಜೀರ್ಣದಿಂದ ಹೊಟ್ಟೆಯುಬ್ಬಿದಾಗಲೂ, ಊಟಮಾಡಿದಮೇಲೆ ಮೂರು ಘಂಟೆಯವರೆಗೂ, ದುಡಿದು ಬಹಳ ದಣಿದಾಗಲೂ, ಬೆವರು ಬರುತ್ತಿರುವಾಗಲೂ, ರಾತ್ರಿ ಒಂಭತ್ತು ಘಂಟೆಯವರೆಗೂ, ಅಪರರಾತ್ರಿ ಮೂರು ಘಂಟೆಯವರೆಗೂ, ದಪ್ಪನ್ನ ಬಟ್ಟೆಗಳನ್ನುಟ್ಟುಕೊಂಡು, ದಿನದಲ್ಲಿ ಎಷ್ಟೋ ಸಾರಿಯೂ, ಕೊಳಕಾದ ಮತ್ತು ರಾಡಿಯಾದ ನೀರಿನಲ್ಲಿಯೂ ಸ್ನಾನಮಾಡಬಾರದು.

'ಸರ್ವೇ ಭದ್ರಾಣಿ ಪಶ್ಯಂತು'

(ಸನಾತನಧರ್ಮ).

ಮೈಸೂರು ದಸರಾ ಮೊಕದ್ದಮೆಗಳು.

ಸಿಟಿ ಮ್ಯಾಜಿಸ್ಟ್ರೇಟರವರ ತೀರ್ಮಾನ.

ಮೈಸೂರು ಸಿಟಿಯಲ್ಲಿ 1932 ನೇ ಅಕ್ಟೋಬರ್ ತಾ. 9 ರಲ್ಲಿ ನವರಾತ್ರಿ ದಿವಸ ಶ್ರೀಮನ್ಮಹಾರಾಜರವರ ಉತ್ಸವವು ಬೆಳೆಯುತಪ್ಪೆ! ಮೆರವಣಿಗೆಯು ವಾಪಸು ಅರಮನೆಗೆ ಬರುತ್ತಿದ್ದಾಗ ಸಿಲ್ವರ್‌ಜ್ಯೂಬಿಲಿ ದೊಡ್ಡಗಡಿಯಾರದ ಮೈದಾನದಲ್ಲಿ ದೊಂಬಿ ಆಯ ...

ಟಾಂಗಾ ಗಾಡಿ ಕಳುವಿನ ಮೊಕದ್ದಮೆ.

...

ದೊಂಬಿಮಾಡಿದರೆಂಬ ಮೊಕದ್ದಮೆ.

...

ನರಸಿಂಹಯ್ಯಂಗಾರ್, ನರಸಿಂಹಯ್ಯ, ಲಕ್ಷ್ಮಣದಾಸ್, ಸುಂದರರಾಜನಾಯಕರ್, ಕೃಷ್ಣಪ್ಪ, ಎಂ. ಆರ್. ಸದಾಶಿವಶಾಸ್ತ್ರಿ, ಶಂಭುಲಿಂಗಯ್ಯ. (ಇವರ ಪರವಾಗಿ ಮೊಕದ್ದಮೆ ನಡಿಸಿದ ಲಾಯರುಗಳು—ಮ|| ಗಳಾದ ಎಂ. ಶ್ರೀನಿವಾಸಯ್ಯಂಗಾರ್, ಕೆ. ಶೇಷಾದ್ರಿ, ಎ. ಚನ್ನಕೇಶವಯ್ಯ, ಎಚ್. ರಾಜಗೋಪಾಲಯ್ಯಂಗಾರ್, ಎಸ್. ಸುಂದರರಾವ್, ಎಸ್. ಕೆ. ಸುಬ್ಬರಾವ್, ಎಂ. ಎಸ್. ಕೃಷ್ಣಸ್ವಾಮಿರಾವ್, ಕೆ. ಕಸ್ತೂರಿ, ಪ್ರಾಣೇಶರಾವ್, ಪಿ. ರಂಗಸ್ವಾಮಯ್ಯಂಗಾರ್, ಎಂ. ವೆಂಕಟರಾಮಯ್ಯ, ಇವರು.)

ಸರ್ಕಾರದವರು ಅಪರಾಧಿಗಳ ಮೇಲೆ ಹೊರಿಸಿದ ತಕ್ಸೀರಿನ ವಿವರವೇನೆಂದರೆ—ವಿಜಯದಶಮಿ ಉತ್ಸವದ ರಾತ್ರಿ (ತಾ. 9ನೇ ಅಕ್ಟೋಬರ್, 1932) ಪೋಲೀಸಿನವರು ಸಿಲ್ವರ್ ಜ್ಯೂಬಿಲಿ ದೊಡ್ಡಗಡಿಯಾರದ ಚೌಕದಲ್ಲಿ ಸೋಟಕರ ಜನಸಂದಣಿಯನ್ನು ಕಡದು ಮೆರವಣಿಗೆಗೆ ರಸ್ತೆಯನ್ನು ಬಿಡಿಸುತ್ತಿದ್ದಾಗ ಒಬ್ಬ ಪೋಲೀಸಿನವನು ಯುವಕನೊಬ್ಬನನ್ನು ಹೊಡೆದನೆಂದೂ, ಅಪರಾಧಿಗಳು ಅವನನ್ನು ಒಂದು ಟಾಂಗಾ ಗಾಡಿಯ ಮೇಲೆ ಮಲಗಿಸಿಕೊಂಡು ರಸ್ತೆಗೆ ಅಡ್ಡಕಟ್ಟಿದ್ದ ಬೊಂಬುಗಳನ್ನೂ ಕಟಕಟೆಗಳನ್ನೂ ಮುರಿದುಹಾಕಿ ಮೆರವಣಿಗೆ ರಸ್ತೆಯ ಮಧ್ಯಕ್ಕೆ ತಂದು ನಿಲ್ಲಿಸಿ ಪೋಲೀಸಿನವರ "ದುರಾಗತ ಕೃತ್ಯವನ್ನು" ಶ್ರೀಮನ್ಮಹಾರಾಜರ ...

ಮೆನಿಂಜೈಟಿಸ್ ಜಾಯಿಲೆ—ಎಚ್ಚರಿಕೆ!!

(ಮೈಸೂರು ಸಂಸ್ಥಾನದ ಆರೋಗ್ಯ ಇಲಾಖೆಯಿಂದ.)

ಈಗ ಕೆಲವು ವಾರಗಳಿಂದಲೂ ಅಹಮದಾಬಾದು, ಬೊಂಬಾಯಿ, ದೆಹಲಿ, ಕಲ್ಕತ್ತಾ ಮತ್ತು ಹೈದರಾಬಾದು (ದಕ್ಷಿಣ)ನಗರಗಳಲ್ಲಿ 'ಮೆನಿಂಜೈಟಿಸ್' ಎಂಬ ಜಾಯಿಲೆಯು ಪ್ರಾಪ್ತವಾಗಿದೆ ಎಂಬ ಅಂಶವು ವರ್ತಮಾನಪತ್ರಿಕೆಗಳಿಂದ ತಿಳಿಯಬರುತ್ತದೆ. ಬೆಂಗಳೂರು ದಂಡಿನಲ್ಲಿಯೂ ಈ ಜಾಯಿಲೆಯಿಂದ ಒಂದು ಮರಣವಾಯಿತೆಂಬುದಾಗಿ ತಾ|| 26 ನೇ 'ಡೈಲಿ ಪೋಸ್ಟು' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದ್ದರಿಂದ ಈ ಜಾಯಿಲೆಯು ನಮ್ಮ ಮೈಸೂರು ದೇಶದಲ್ಲಿಯೂ ವ್ಯಾಪಿಸುವ ಸಂಭವವು ಇರುತ್ತದೆ.

ಮೆನಿಂಜೈಟಿಸ್ ಜಾಯಿಲೆಯು ಹರಡದಂತೆ ಮಾಡಬೇಕಾದರೆ ಈ ಜಾಯಿಲೆಯಿಂದ ಪೀಡಿತರಾದವರನ್ನು ಮೊಟ್ಟಮೊದಲು ಪ್ರತ್ಯೇಕವಾಗಿರಿಸಿ ಇಲಾಜುಮಾಡಿಸಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸಮಾಡುವ ವೈದ್ಯರೂ, ಖಾಸಗಿ ವೈದ್ಯರೂ ಮೆನಿಂಜೈಟಿಸ್ ಜಾಯಿಲೆಯಿಂದ ನರಳುವವರು ಅವರ ಅವಗಾಹನೆಗೆ ಬಂದ ಕೂಡಲೆ ಸ್ಥಳೀಯ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಬೇಕಾಗಿ ಕೋರಿದೆ.

...

ಬೊಂಬು ಸೀರಿಗೆ ಬೆರಸಿ ಬಾಯಿಯೊಳಗೆ ಹಾಕಿಕೊಂಡು ಗಂಟಲನ್ನು ತೊಳೆದು ಮುಕ್ಕಳಿಸುವುದಲ್ಲದೆ ಮೂಗಿನ ಹೊಳ್ಳೆಗಳನ್ನು ತೊಳೆದುಕೊಳ್ಳಬೇಕು.

1919 ನೇ ಇಸವಿಯಲ್ಲಿ ಅಮೇರಿಕೆಯ ಸಂಯುಕ್ತಸಂಸ್ಥಾನಗಳಲ್ಲಿ 65 ಜನ ಕೋಟ್ಯಧೀಶ್ವರರಿದ್ದು 1929 ನೇ ಇಸವಿಯಲ್ಲಿ 513 ಜನ ಕೋಟ್ಯಧೀಶ್ವರರಿದ್ದರು. 1930 ನೇ ಇಸವಿಯಲ್ಲಿ ಅಲ್ಲಿ ಭಯಂಕರ ಆರ್ಥಿಕವಿಪ್ಲವವುಂಟಾಗಿ 363 ಜನ ಕೋಟ್ಯಧೀಶ್ವರರು ದಿವಾಳಿಯನ್ನು ತೆಗೆದು 150 ಜನರು ಮಾತ್ರ ಉಳಿದುಕೊಂಡರು. ಬರಬರುತ್ತ ಈ ಸಂಖ್ಯೆಯು ಮತ್ತೂ ಕಡಮೆಯಾಗಿ ಈಗ ಅಮೇರಿಕೆಯಲ್ಲಿ 20 ಜನ ಕೋಟ್ಯಧೀಶ್ವರರೂ, ಇಂಗ್ಲೆಂಡಿನಲ್ಲಿ 144 ಜನ ಕೋಟ್ಯಧೀಶ್ವರರೂ ಇರುವರು.

ಚಂದಾದಾರರಲ್ಲಿ ನಿವೇದನ.

ನಮ್ಮ ಪತ್ರಿಕೆಯು ಇಲ್ಲಿಯವರೆಗೆ ರಜಿಷ್ಟರ್ ಆಗದಿದ್ದುದರಿಂದ ಇದೇ ಎಪ್ರಿಲ್ ೧ ನೇ ತಾರೀಖಿನಿಂದ ಜಾರಿಯಲ್ಲಿ ಬಂದಿರುವ ಬುಕ್‌ಪೋಸ್ಟಿನ ಹೊಸ ರೂಲ್ಸಿಗನುಸಾರವಾಗಿ ಪ್ರತಿಯೊಂದು ಪತ್ರಿಕೆಗೆ ೩ ಪೈ ಸ್ಟಾಂಪಿನ ಬದಲು ೯ ಪೈ ಸ್ಟಾಂಪ್ ಹಚ್ಚುವ ಸಮಯವು ಪ್ರಾಪ್ತವಾಗಿದೆ. ಈ ಸ್ಥಿತಿಯು "ವ್ರಣಸ್ಯೋಪರಿ ಪಿಟಕಃ ಸಂವೃತ್ತಃ" ಎಂದು ಕಾಳಿದಾಸ ಮಹಾಕವಿಯು ನುಡಿದಂತೆ ಹುಣ್ಣಿನ ಮೇಲೆ ಗುಳ್ಳೆ ಎದ್ದಂತಾಗಿದೆ. ಈ ವಿಷಮಸನ್ನಿವೇಶವು ಎಂದು ದೂರಾಗುವುದೋ ನೋಡಬೇಕಾಗಿದೆ.

ಸಂ—

ಪಂಚಾಚಾರ್ಯ ಪ್ರಭಾ.

೧೯೩೪ನೇ ಏಪ್ರಿಲ್ ತಾ॥ ೯ನೇ ಸೋಮವಾರ.

ಗುರುಸರ್ವೋತ್ತಮತ್ವ.

ಗುರುರ್ದೇವೋ ಮಹಾದೇವೋ ಗುರುರ್ದೇವಃ ಸದಾಶಿವಃ |
ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ ||

ಶ್ರೀಗುರುದೇವನೇ ದೇವದೇವೋತ್ತಮನೆಂದೂ, ಗುರುದೇವನೇ ಸದಾಶಿವನೆಂದೂ, ಗುರುದೇವನಿಗಿಂತಲೂ ಅಧಿಕವಾದ ವಸ್ತುವು ಈ ಜಗತ್ತಿನಲ್ಲಿ ಯಾವುದೂ ಇಲ್ಲವೆಂದೂ, ಅದುದರಿಂದ ದೇವೋತ್ತಮನಾದ ಶ್ರೀಗುರುವನ್ನಾಶ್ರಯಿಸಬೇಕೆಂದೂ ಗುರುಗೀತೆಯು ಗುರುವಿನ ಆಧಿಕ್ಯವನ್ನು ಮುಕ್ತಕಂಠದಿಂದ ಸಾರುತ್ತದೆ. ಮಾನವಜನ್ಮವು ಅಜ್ಞಾನಾವರಕವಾಗಿರುವುದು. ಮನುಷ್ಯನು ಅಜ್ಞಾನಾವೃತನಾಗಿ ಸದ್ಬೋಧೆಯಿಲ್ಲದೆ ಘೋರಸಂಸಾರಸಾಗರದಲ್ಲಿ ಮುಳುಗುತ್ತ ತೇಲುತ್ತ ಬಾಯಿಬಿಡುತ್ತಿರುವ ಸಮಯದಲ್ಲಿ— ಯಾವ ಮಹಾತ್ಮನು ಜ್ಞಾನೋಪದೇಶರೂಪನೌಕಾಸಹಾಯದಿಂದ ಭವಾಬ್ಧಿಪತಿತನ್ನು ತೀರಕ್ಕೆ ತಂದು ಬಿಡುವನೋ ಅವನೇ ಸಂಸಾರದುಃಖಮೋಚಕ ಶ್ರೀಗುರುವೆಂದು ಜಗತ್ತಿನಲ್ಲೆಲ್ಲಾ ಖ್ಯಾತಿಗೊಂಡಿರುತ್ತಾನೆ. ಇಂಥ ಗುರುಮೂರ್ತಿಯಿಂದಲೇ ಸಕಲ ಪ್ರಾಣಿಗಳ ಉದ್ಧಾರವಾಗಬೇಕಾಗಿದೆ. ನಮ್ಮ ಭರತಖಂಡದಲ್ಲಿ ಅನೇಕ ಜನ ಮಹಾತ್ಮರು ಅವತರಿಸಿ ತಮ್ಮ ದಿವ್ಯಜ್ಞಾನಬೋಧೆಯಿಂದ ಒಂದೊಂದು ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ. ಆಯಾ ಸಿದ್ಧಾಂತಗಳು ಇಂದಿನವರೆಗೂ ಆಯಾ ಮತೀಯ ಶಿಷ್ಯರಿಂದ ಆಚರಿಸಲ್ಪಡುತ್ತವೆ. ಆಯಾ ಮತಾನುಯಾಯಿಗಳು ತಮ್ಮ ಮೂಲಾಚಾರ್ಯರ ಸಿದ್ಧಾಂತದಲ್ಲಿ ಅಸಾಧಾರಣವಾದ ವಿಶ್ವಾಸವನ್ನಿಟ್ಟು ತಮ್ಮ ಗುರುಗಳ ವಿಷಯದಲ್ಲಿ ಸರ್ವಸ್ವವನ್ನೊಪ್ಪಿಸಲು ಸಹ ಸಿದ್ಧರಾಗಿರುವರು. ಇದನ್ನು ನಾವು ಸರ್ವತ್ರ ನೋಡುತ್ತಲಿದ್ದೇವೆ. ಆದರೆ ಲಿಂಗಧಾರಿಗಳಲ್ಲಿ ಮಾತ್ರ ಈ ಸ್ಥಿತಿಯು ವಿರುದ್ಧವಾಗಿ ಪರಿಣಮಿಸಿದೆಯೆಂದು ಬಹು ವಿಷಾದದಿಂದ ಹೇಳಬೇಕಾಗಿದೆ. ಈ ಮತೀಯರಲ್ಲಿ ಕೆಲವರು ಸಂಸರ್ಗಪ್ರಭಾವದಿಂದಲೋ ಅಥವಾ ಇನ್ನಾವ ಪ್ರಭಾವದಿಂದಲೋ ತಮ್ಮ ಮೂಲಾಚಾರ್ಯರನ್ನೇ ಹಳಿಯಹತ್ತಿದ್ದಾರೆ. ತಮಗೆ ಮೋಕ್ಷದಾಯಕವಾದ ಶಿವಲಿಂಗವನ್ನೂ, ಭಸ್ಮರುದ್ರಾಕ್ಷಾದಿಗಳನ್ನೂ, ಸಂಸಾರಸಾಗರತಾರಣತರಣಿಸ್ವರೂಪವಾದ ಶಿವಪಂಚಾಕ್ಷರೀಮಹಾಮಂತ್ರವನ್ನೂ ಇವೇ ಮೊದಲಾದ ಇನ್ನೂ ಅನೇಕ ಮೋಕ್ಷಸಾಧನೀಭೂತಸಾಮಗ್ರಿಗಳನ್ನೂ ಒದಗಿಸಿಕೊಟ್ಟ ಮಠಾಚಾರ್ಯರಲ್ಲಿ ಸ್ವೇಚ್ಛೆಯಾಗಿ ವರ್ತಿಸುವುದನ್ನು ಪರಿಶೀಲಿಸಿದರೆ ಇವರ ದುರ್ದೈವಕ್ಕೆ ಸೀಮೆಯೇ ಇಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀಮಾಂಶ್ಚಾಪಿ ತಪಸ್ವೀ ಚ ಶಾಸ್ತ್ರಜ್ಞಃ ಕುಲಶೀಲವಾನ್ |
ಕುರ್ಯಾದ್ದಂಡನಮಸ್ಕಾರಂ ನಿರ್ಲಜ್ಜೋ ಗುರುಸನ್ನಿಧೌ ||

ಕೋಟೀಶ್ವರನೇ ಆಗಲಿ, ಮಹಾತಪಸ್ವಿಯೇ ಆಗಲಿ, ಷಟ್‌ಶಾಸ್ತ್ರಸಂಪನ್ನನೇ ಆಗಲಿ, ಸರ್ವೋತ್ಕೃಷ್ಟವಂಶಸಂಜಾತನೇ ಆಗಲಿ, ಶ್ರೀಗುರುವಿನ ಸನ್ನಿಧಿಯಲ್ಲಿ ಅಭಿಮಾನವನ್ನು ವಹಿಸದೆ ದೀರ್ಘದಂಡನಮಸ್ಕಾರವನ್ನು ಮಾಡಬೇಕೆಂದು ಧರ್ಮಗ್ರಂಥಗಳು ಸಾರುತ್ತವೆ.

ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ |
ಆಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾಧಿಕಾ ||
ಗುರೋಃ ಸಂದರ್ಶನಾರ್ಥಂ ತು ಭಕ್ತ್ಯಾ ಯಾತ್ರಾಂ ಕರೋತಿ ಯಃ |
ಪುಣ್ಯದೇಹೀ ಸ ವಿಜ್ಞೇಯಃ ಸಮಸ್ತಾಮರವಲ್ಲಭಃ ||

ಜಗತ್ತಿನಲ್ಲಿ ಗುರುಯಾತ್ರೆಯೆಂದೂ, ದೇವಯಾತ್ರೆಯೆಂದೂ, ತೀರ್ಥಯಾತ್ರೆಯೆಂದೂ ಮೂರುವಿಧವಾದ ಯಾತ್ರೆಗಳುಂಟು. ಈ ಮೂರುವಿಧ ಯಾತ್ರೆಗಳಲ್ಲಿ ಗುರುಯಾತ್ರೆಯೇ ವಿಶೇಷಫಲದಿಂದ ಕೂಡಿರುವುದು. ಯಾವನು ಗುರುದರ್ಶನಕ್ಕಾಗಿ ಅಸಾಧಾರಣವಾದ ಭಕ್ತಿಯಿಂದ ಗುರುಯಾತ್ರೆಯನ್ನು ಮಾಡುತ್ತಾನೆಯೋ ಅವನೇ ಪುಣ್ಯದೇಹಿಯೆಂದೂ, ಅವನೇ ಸಮಸ್ತದೇವತಾಸಾರ್ವಭೌಮನೆಂದೂ ಶಿವಾಗಮಗಳು ಹಸ್ತವನ್ನೆತ್ತಿ ಉದ್ಘೋಷಿಸುತ್ತಿರುವುವು. ಕೈವಲ್ಯಕಲ್ಪದ್ರುಮನಾದ ಇಂಥ ಮಹಾಗುರುವಿನ ಮಹಿಮೆಯನ್ನರಿಯದೆ ಬಳಲುತ್ತಿರುವುದು ಯಾವ ಕರ್ಮದ ವಾಸನೆಯೋ ತಿಳಿಯದಾಗಿದೆ. ಗುರುಮೂರ್ತಿಯ ಅದ್ಭುತ ಮಹಿಮೆಯು ಈರೀತಿಯಾಗಿರುವುದರಿಂದಲೇ ಜಗನ್ಮಾತೆಯಾದ ಶ್ರುತಿಮಾತೆಯೂ ಕೂಡ ಆ ಗುರುದೇವನ ಮಹಿಮೆಯನ್ನು "**ಆಚಾರ್ಯದೇವೋಭವ-ನಾಸ್ತಿತತ್ತ್ವಂಗುರೋಃಪರಂ-ನಗುರೋರಧಿಕಂ**" ಇತ್ಯಾದಿ ಸಹಸ್ರಾವಧಿ ವಾಕ್ಯಗಳಿಂದ ಉದ್ಘೋಷಿಸಿರುತ್ತಾಳೆ. ಇತ್ಯಾದಿ ವಿಷಯಗಳನ್ನಾದರೂ ಗುರುಭಕ್ತಿಶೂನ್ಯರು ತ್ರಿಕರಣಪೂರ್ವಕವಾಗಿ ಪರಾಮರ್ಶಿಸಿ ಶ್ರೀಗುರುವಿನ ಸರ್ವೋತ್ತಮೋತ್ತಮತೆಯನ್ನು ತಿಳಿದುಕೊಂಡು ಆ ಭವಸಾಗರತಾರಕನ ಚರಣಾರವಿಂದವನ್ನಾಶ್ರಯಿಸಿ ನಿತ್ಯಾನಂದವನ್ನು ಹೊಂದಬೇಕೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶಿರಾ ತಾಲೂಕು ಅಕ್ಕಪಟ್ಟಣ ಹೋಬಳಿಗೆ ಸೇರಿದ ಕುರೇಹಳ್ಳಿಗ್ರಾಮವನ್ನು ಇನ್ನುಮುಂದೆ ರಾಮಲಿಂಗಪುರವೆಂದು ಕರೆಯಬೇಕೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಬೆಂಗಳೂರಿನ ಸೋಮಶೇಖರಯ್ಯನೆಂಬ ವಿದ್ಯಾರ್ಥಿಯು ಲೈಸೆನ್ಸ್ ಇಲ್ಲದೆ ಬಂದೂಕವನ್ನು ಇಟ್ಟುಕೊಂಡಿದ್ದನೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅಪರಾಧಿಗೆ 20 ರೂಪಾಯಿಗಳ ದಂಡವನ್ನು ವಿಧಿಸಿರುತ್ತಾರೆ.

ಕಳೆದ ಮಾರ್ಚಿ 30ನೇ ತಾರೀಖಿನ ರಾತ್ರಿ ಬೆಂಗಳೂರು ಕಂಟೋನ್ಮೆಂಟಿನ ಸೌತ್‌ಪರೇಡಿನಲ್ಲಿರುವ ನಾರ್ಥ್‌ಕರ್ವೀಸ್ ಕಂಪೆನಿಯ ಮಾಲಕರಾದ ಮಿ॥ ಸಿ. ಟಿ. ನಾರ್ಥ್‌ಕರ್ವೀಸ್‌ರವರು ಬಾಯಿಯ ಮುಖಾಂತರ ಎರಡು ಗುಂಡುಗಳನ್ನು ಹೊಡೆದುಕೊಂಡು ಮೃತಪಟ್ಟಿರುತ್ತಾರೆ.

ಬೆಂಗಳೂರು ಕಂಟೋನ್ಮೆಂಟನ್ನು ಮೈಸೂರು ಸರಕಾರಕ್ಕೆ ಹಿಂತಿರುಗಿ ಕೊಡುವ ವಿಷಯದಲ್ಲಿ ವೈಸರಾಯರೊಡನೆ ಅವಶ್ಯಕವಾದ ಚರ್ಚೆಗಳನ್ನು ನಡೆಯಿಸುವುದಕ್ಕಾಗಿ ದೆಹಲಿಗೆ ಪ್ರಯಾಣಮಾಡಿದ್ದ ದಿವಾನ್ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರು ಕಳೆದ ಮಾರ್ಚಿ 31 ನೇ ಶನಿವಾರದ ದಿವಸ ಬೆಂಗಳೂರಿಗೆ ಆಗಮಿಸಿದರು.

ಕಾರಾಗೃಹದಿಂದ ಬಿಡುಗಡೆಹೊಂದಿದ ಜನರನ್ನು ಒಂದು ಸ್ಥಳದಲ್ಲಿಟ್ಟು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೋಸ್ಕರವಾಗಿ ಬೆಂಗಳೂರಿನಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಒಂದು ಸಂಸ್ಥೆಯು ಏರ್ಪಾಡಾಗಿರುತ್ತದೆ. ಸರಕಾರದವರು ಅದಕ್ಕಾಗಿ ಒಂದು ನಿಲಯವನ್ನು ಕಟ್ಟಿಸಲು ಒಂದು ಖಾಲಿ ನಿವೇಶನವನ್ನು ಕೊಟ್ಟಿರುತ್ತಾರೆ.

ಬೆಂಗಳೂರು ಬಸವನಗುಡಿ ಬಡಾವಣೆಯಲ್ಲಿರುವ ರೆವಿನ್ಯೂ ಕಮಿಷನರವರ ಬಂಗಲೆಯಲ್ಲಿ ಕೆಲವು ಆಭರಣಗಳನ್ನು ಕಳುವುಮಾಡಿದರೆಂಬ ಕಾರಣದಮೇಲೆ ಪೋಲೀಸರು 4 ಜನರನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದರು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ 1-2 ನೇ ಅಪರಾಧಿಗಳಿಗೆ 2 ವರ್ಷ ಕಠಿಣಶಿಕ್ಷೆಯನ್ನೂ, ಮತ್ತೊಬ್ಬನಿಗೆ ಒಂದುವರ್ಷ ಕಠಿಣಶಿಕ್ಷೆಯನ್ನೂ ವಿಧಿಸಿ, ನಾಲ್ಕನೇ ಅಪರಾಧಿಯನ್ನು ಬಿಡುಗಡೆ ಮಾಡಿರುತ್ತಾರೆ.

ಚಿತ್ರದುರ್ಗ ಡಿ॥ ಗೆ ಸೇರಿದ ಪಾಳ್ಯೆಗಟ್ಟ ಎಂಬಲ್ಲಿ ಕೆಲವು ಜನರು ಸಿದ್ದಪ್ಪನೆಂಬವನನ್ನು ಬಲಾತ್ಕಾರವಾಗಿ ಕತ್ತೆಯಮೇಲೆ ಕುಳ್ಳಿರಿಸಿ ವಾದ್ಯಸಮೇತವಾಗಿ ಮೆರವಣಿಗೆ ಮಾಡಿದರೆಂಬ ಕಾರಣದಮೇಲೆ ಪೋಲೀಸರು 22 ಜನರಮೇಲೆ ಮೊಕದ್ದಮೆಯನ್ನು ಹೂಡಿದ್ದರು. ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ 10 ಜನರನ್ನು ಬಿಡುಗಡೆಮಾಡಿ ಉಳಿದ 14 ಜನರಿಗೆ ಪ್ರತಿಯೊಬ್ಬರಿಗೂ 1 ತಿಂಗಳ ಕಠಿಣಶಿಕ್ಷೆ ಮತ್ತು 20 ರೂ. ದಂಡವನ್ನು ವಿಧಿಸಿದರು.

ಶಿವಮೊಗ್ಗಾ ಟೌನ್ ರೈಲ್ವೇಸ್ಟೇಷನ್ ಸಮೀಪದಲ್ಲಿರುವ ಶ್ರೀ ದತ್ತಾತ್ರೇಯ ರೈಸ್ ಮತ್ತು ಪ್ಲೋರು ಮಿಲ್ಲಿನಲ್ಲಿ ಎಡ್ವರ್ಡ್ ಎಂಬವನು ಬಟ್ಟೆಗಳನ್ನಿಡುವ ಒಂದು ಪೆಟ್ಟಿಗೆಯನ್ನೂ, ರೆಂಚ್‌ಬೇರ್ ಎಂಬ ಸಲಪಣಿಯನ್ನೂ ಕದ್ದು ಅಮೂರ್‌ವುದ್ದೀನ್ ಎಂಬವನಿಗೆ ಮಾರಿದನೆಂಬ ಕಾರಣದ ಮೇಲೆ ಪೋಲೀಸರು ಅವರಿಬ್ಬರ ಮೇಲೂ ಮೊಕದ್ದಮೆಯನ್ನು ಹೂಡಿದ್ದರು. ಶಿವಮೊಗ್ಗಾ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಕದ್ದವನಿಗೆ ಆರುತಿಂಗಳ ಕಠಿಣಶಿಕ್ಷೆಯನ್ನೂ ಕಳುವುಮಾಲೆಂದು ತಿಳಿದೂ ಕೊಂಡುಕೊಂಡವನಿಗೆ 3 ತಿಂಗಳ ಕಠಿಣಶಿಕ್ಷೆಯನ್ನೂ ವಿಧಿಸಿದರು.

ವರ್ತಮಾನಸಂಗ್ರಹ.

ಅಮೇರಿಕೆಯ ಹಡ್ಸನ್‌ನದಿಯಲ್ಲಿ ಅತಿವೃಷ್ಟಿಯಿಂದ ಪ್ರವಾಹವು ಮಿತಿಮೀರಿ 37 ಜನರು ಜಲಸಮಾಧಿಯನ್ನು ಹೊಂದಿದರು.

ಲಂಡನ್ ನಗರದ ಮೇಯರರು ವೈಸರಾಯರ ಬೀಹಾರ್ ಭೂಕಂಪದ ನಿಧಿಗಾಗಿ 6,00,000 ರೂಪಾಯಿಗಳನ್ನು ಕಳುಹಿಸಿರುವರು!

ಅಮೇರಿಕೆಯ 'ಗ್ರೆಟಗಾರ್ಬೋ' ಎಂಬ ಸಿನಿಮಾನಟಿಗೆ ಪ್ರತಿಯೊಂದು ಚಿತ್ರಪಟಕ್ಕೂ 7,50.000 ರೂಪಾಯಿಗಳನ್ನು ಕೊಡುವರಂತೆ!

ಕ್ಯಾಂಟನ್‌ನಗರದಲ್ಲಿ ಇಬ್ಬರು ಬೌದ್ಧಸನ್ಯಾಸಿಗಳು ಬೈಸಿಕಲ್ ಸವಾರಿಮಾಡುತ್ತಿದ್ದರೆಂಬ ಕಾರಣದಮೇಲೆ ದಸ್ತಗಿರಿಮಾಡಲ್ಪಟ್ಟಿರುತ್ತಾರೆ.

ಮೆಕ್ಸಿಕೋ ದೇಶಕ್ಕೆ ಸೇರಿದ ಲಿರಹ್ವಾಟೋ ಎಂಬಲ್ಲಿ ನಡೆದ ಮುನಿಸಿಪಲ್ ಚುನಾವಣೆಯು 15 ಜನರ ಮರಣದಲ್ಲಿ ಪರ್ಯವಸಾನವಾಯಿತಂತೆ!

ಕೊಲಂಬೋನಗರದ ಎಲ್ವರ್ಟನ್ ಟೀ ಫ್ಯಾಕ್ಟರಿಗೆ ಅಕಸ್ಮಾತ್ ಬೆಂಕಿಬಿದ್ದು ಸಂಪೂರ್ಣವಾಗಿ ಸುಟ್ಟು ಲಕ್ಷಾಂತರ ರೂಪಾಯಿಗಳ ನಷ್ಟವಾಗಿರುತ್ತದೆ.

1908 ನೇ ವರ್ಷದಿಂದ ಇಲ್ಲಿಯವರೆಗೆ ಬಂಗಾಳ ಪ್ರಾಂತದಲ್ಲಿ 50 ಜನ ಸರಕಾರೀ ನೌಕರರು ಕ್ರಾಂತಿಕಾರರಿಂದ ಕೊಲೆಮಾಡಲ್ಪಟ್ಟಿರುವರಲ್ಲದೆ, 53 ಜನರು ಘಾಯಹೊಂದಿರುವರಂತೆ!

ಚೀನಾರಾಜ್ಯಕ್ಕೆ ಸೇರಿದ ಕ್ವಾಂಗ್ಟಿಂಗ್ ಎಂಬಲ್ಲಿ ಭಯಂಕರವಾದ ಸುಂಟರಗಾಳಿಯು ಬೀಸಿ 300 ಬೆಸ್ತರ ದೋಣಿಗಳು ಮುಳುಗಿಹೋದವು. ಸುಮಾರು 400 ಜನರು ಮೃತರಾದರು.

ಜಪಾನ್ ಸರಕಾರದವರು ಇಟಲಿಯ ಸರ್ವಾಧಿಕಾರಿಗಳಾದ ಸೀನಾರ್ ಮುಸ್ಸೋಲಿನಿಯವರಲ್ಲಿ ತಮಗಿರುವ ಗೌರವವನ್ನು ಪ್ರಕಾಶಗೊಳಿಸಲು ಜಪಾನ್ ದೇಶದ 4 ಬಿಡ್ಡಗಳನ್ನು ಬಹುಮಾನವಾಗಿ ಕೊಡುವರಂತೆ!

ಮಾರ್ಚಿ 18 ನೇ ತಾರೀಖಿನ ದಿವಸ ನೇಪಾಳದ ಮಹಾರಾಜರು ಒಂದು ದರ್ಬಾರನ್ನು ನಡೆಯಿಸಿ, 5 ಜನ ರಾಜವಂಶಸ್ಥರಿಗೆ ಇದ್ದ ಸಿಂಹಾಸನದ ಹಕ್ಕನ್ನು ರದ್ದುಮಾಡಿದರು. ಅವರೆಲ್ಲರೂ ಶುದ್ಧರಾಜಮನೆತನದವರಲ್ಲವೆಂಬುದೇ ಇದಕ್ಕೆ ಕಾರಣವಂತೆ!

ಅಮೇರಿಕಾದೇಶಕ್ಕೆ ಸೇರಿದ ಚಿಕಾಗೋ ನಗರದ ಬೇಸಿಲ್ ಹ್ಯೂಗ್ ಬ್ಯಾಂಫಾರ್ಟ್ ಎಂಬವನು ಜೇಕಬ್ ಫ್ಯಾಕ್ಟರ್ ಎಂಬವರನ್ನು ಅಪಹರಿಸಿಕೊಂಡು ಹೋಗಿದ್ದನೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ಅವನಿಗೆ 99 ವರ್ಷಗಳ ಕಾರಾಗೃಹವಾಸವನ್ನು ವಿಧಿಸಿರುತ್ತಾರೆ.

ಬಿಹಾರ್‌ಪ್ರಾಂತಕ್ಕೆ ಸೇರಿದ ಹಾಜೀಪುರದಲ್ಲಿ ಒಬ್ಬ ಮನುಷ್ಯನು ನಿದ್ರೆಯಲ್ಲಿ ಭಯಂಕರ ಭೂಕಂಪವಾದಂತೆ ಕನಸುಕಂಡು, ಭೀತಿಯಿಂದ ಹೊರಕ್ಕೆ ತಪ್ಪಿಸಿಕೊಂಡು ಹೋಗಬೇಕೆಂದು ಎದ್ದು ಓಡುತ್ತಾ ಒಂದು ಗೋಡೆಗೆ ಢಿಕ್ಕಿಹೊಡೆದು ವಿಶೇಷ ಘಾಯಪಟ್ಟಿರುತ್ತಾನೆ.

ಸೀತಾಮರ್ಹಿ ಡಿವಿಜನ್ನಿಗೆ ಸೇರಿದ ಚಂದುಪುರವೆಂಬ ಗ್ರಾಮಕ್ಕೆ ಇದೇ ಏಪ್ರಿಲ್ 3 ನೇ ತಾರೀಖಿನ ದಿವಸ ಅಕಸ್ಮಾತ್ ಬೆಂಕಿಬಿದ್ದು ಒಬ್ಬ ಮನುಷ್ಯನೂ, 4 ಹುಡುಗರೂ, 6 ಹುಡುಗಿಯರೂ ಸುಟ್ಟು ಭಸ್ಮವಾದರು. ನೂರಾರು ಮನೆಗಳೂ ಡಿ॥ ಬೋರ್ಡಿನ ಆಸ್ಪತ್ರೆಯೂ ಸುಟ್ಟು ಭಸ್ಮವಾಗಿವೆ.

ಅಮೇರಿಕಾದೇಶಕ್ಕೆ ಸೇರಿದ ಆರ್ಲಿನ್ಸ್ ನಗರದಲ್ಲಿ ಭಯಂಕರವಾದ ಬಿರುಗಾಳಿಯು ಹುಟ್ಟಿ 7 ದೊಡ್ಡ ಕಟ್ಟಡಗಳು ನೆಲಸಮವಾದುವು. ಬಿರುಗಾಳಿಯು ಒಂದು ದೊಡ್ಡ ಮನೆಯನ್ನು ಅನಾಮತ್ತಾಗಿ ರಸ್ತೆಯ ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಎತ್ತಿಹಾಕಿರುತ್ತದೆ. ನೂರಾರು ಜನರು ಮೃತಪಟ್ಟಿರುವರು.

ಇದೇ ಏಪ್ರಿಲ್ 4 ನೇ ತಾರೀಖಿನ ದಿನ ಸಿಂಗಪೂರ ನಗರದ ಪೋಲೀಸರು ಅನುಮಾನದಮೇಲೆ ಒಂದು ಚೀಣೀಜನರ ಮನೆಯನ್ನು ಶೋಧಿಸಿದಾಗ 1000 ಸಿಡಿಮದ್ದುಗಳೂ, ಅನೇಕ ರಿವಾಲ್ವರುಗಳೂ, ಮದ್ದುಗುಂಡುಗಳೂ ದೊರೆತಿರುತ್ತವೆ. ಪೋಲೀಸರು ಇಬ್ಬರು ಚೀನೀಗಳನ್ನು ದಸ್ತಗಿರಿಮಾಡಿ ತನಿಖೆಮಾಡುತ್ತಿದ್ದಾರೆ.

ರೀವಾಸಂಸ್ಥಾನದ ಸರದಾರ ರಾಜಭಾನು ಸಿಂಗ್ ತಿವಾರಿ ಎಂಬ ಜಮೀನುದಾರರು ಬೀಹಾರ್ ಭೂಕಂಪನಿಧಿಗೆಂದು ಚಂದಾ ವಸೂಲ್ಮಾಡುತ್ತಿದ್ದರೆಂಬ ಕಾರಣದಮೇಲೆ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾರೆ. ಇವರು ಈ ಮೊದಲು ಒಂದುಸಾರೆ ವಿಚಾರಣೆಯಿಲ್ಲದೆ 23 ತಿಂಗಳುಗಳವರೆಗೆ ಕಾರಾಗೃಹದಲ್ಲಿಡಲ್ಪಟ್ಟಿದ್ದರಂತೆ!

ಶ್ರೀಮಂತಭಿಕ್ಷುಕ!

ಪೋರ್ಚುಗಲ್ ದೇಶಕ್ಕೆ ಸೇರಿದ ಸೆರ್ಪಾ ಎಂಬಲ್ಲಿ ಪೋಲೀಸರು ಒಬ್ಬ ಭಿಕ್ಷುಕನನ್ನು ದಸ್ತಗಿರಿಮಾಡಿ ಶೋಧನೆಮಾಡಿದಾಗ ಅವನ ಬಳಿಯಲ್ಲಿ 15,000 ರೂ. ಬೆಲೆಬಾಳುವ ಸರಕಾರೀ ಬಾಂಡುಗಳಿದ್ದವಂತೆ!

ನೀಲನಾಗಿಣಿಯ ವಿವಾಹ!

ಗಾಂಧಿಯವರ ಶಿಷ್ಯಳಾಗಿದ್ದು ಇಂಡಿಯಾದಿಂದ ಅಮೇರಿಕೆಗೆ ಗಡೀಪಾರುಮಾಡಲ್ಪಟ್ಟ ನೀಲನಾಗಿಣಿ ಅಥವಾ ಮಿಸ್ ನೀಲಾಕಾನ್ಟಂಕುಕ್ಕಳು ನ್ಯೂಯಾರ್ಕ್ ನಗರದ ಅಫ್ರಿಡಾ ದೇನಿಚ್ ಎಂಬವನನ್ನು ಮದುವೆ ಮಾಡಿಕೊಂಡಿರುತ್ತಾಳೆ.

ವಿಚಿತ್ರವಾದ ಆಜ್ಞೆ.

ಸ್ಮಿರ್ನಾ ನಗರದ ಅಧಿಕಾರಿಗಳು, ತಮ್ಮ ನಗರದಲ್ಲಿರುವ ಪ್ರತಿಯೊಬ್ಬ ಗಂಡಸೂ ತಿಂಗಳಿಗೆ ಒಂದು ಕಾಗೆಯನ್ನಾದರೂ ಕೊಂದು ಅಧಿಕಾರಿಗಳಿಗೆ ತಂದು ತೋರಿಸಬೇಕೆಂದೂ, ಇಲ್ಲವಾದರೆ ಜುಲ್ಮಾನೆಯನ್ನು ವಿಧಿಸಲಾಗುವುದೆಂದೂ ಒಂದು ವಿಚಿತ್ರಶಾಸನವನ್ನು ಮಾಡಿರುವರು!

ಪಕ್ಷಿಗಳೊಡನೆ ಮಾತು!

ಇಂಗ್ಲೆಂಡ್‌ದೇಶಕ್ಕೆ ಸೇರಿದ ಪ್ಲಿಮತ್‌ನಗರದಲ್ಲಿನ ಮೇರಿರ್ಯಾ ವೆಸ್ಟ್‌ಕಾಟ್ ಎಂಬ 10 ವರ್ಷದ ಹುಡುಗಿಯು ವಿಲಕ್ಷಣವಾಗಿ ಶಿಳ್ಳುಹಾಕುವುದನ್ನು ಕಲಿತಿರುವಳು. ಇವಳು ಶಿಳ್ಳು ಹೊಡೆದಕೂಡಲೇ ಪಕ್ಷಿಗಳು ಇವಳ ಸುತ್ತಲೂ ನೆರೆದು ಉತ್ತರ ಕೊಡುವವಂತೆ!

ವಿಚಿತ್ರ ಕತ್ತಿಗಳು.

ಯುಗೋ-ಸ್ಲೇವಿಯಾ ದೇಶಕ್ಕೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಒಂದು ಕೋಳಿಯು 3 ಕತ್ತಿಗಳನ್ನಿಟ್ಟಿದ್ದು ಅವುಗಳ ಮೇಲೆ 1, 2, 3 ಎಂಬ ಅಂಕಿಗಳು ಚೆನ್ನಾಗಿ ಮೂಡಿರುವುವಂತೆ! ಆ ಕತ್ತಿಗಳನ್ನು 50 ರೂ. ಗಳಿಗೆ ಅಪೇಕ್ಷಿಸಿದರೂ ಯಜಮಾನನು ಅವುಗಳನ್ನು ಮಾರಲು ಇಷ್ಟಪಡಲಿಲ್ಲ.

ಸಾರಾಯಿ ಮಹಿಮೆ!

ಸಿಕಂದರಾಬಾದಿನಲ್ಲಿ ರಾಜಲಿಂಗಂ ಎಂಬವನು ಸಾರಾಯಿ ಅಂಗಡಿಯಲ್ಲಿ ಸಾರಾಯಿ ಕುಡಿಯುತ್ತಿದ್ದಾಗ ಸಮೀಪದಲ್ಲಿ ನಿಂತಿದ್ದ ಒಂದು ಗಾಡಿಯ ಕುದುರೆಯು ಅವನ ಕಿವಿಯನ್ನು ಕಚ್ಚಿ ಕಿತ್ತುಹಾಕಿತು. ಇದರಿಂದ ರಾಜಲಿಂಗನು ಇನ್ನು ಎಂದೆಂದೂ ಸಾರಾಯಿ ಕುಡಿಯುವದಿಲ್ಲವೆಂದು ಪ್ರತಿಜ್ಞೆಮಾಡಿರುವನಂತೆ!

ನೀರಿಗಾಗಿ ಮರಣ!

ಮುಲ್ತಾನ್‌ನಗರದ ಅಮೀರ್ ಬಕ್ಷ ಎಂಬಾತನು ಮಸೀದಿಯಲ್ಲಿ ಸ್ನಾನಕ್ಕಾಗಿ ಇಟ್ಟಿದ್ದ ಒಂದು ಪಾತ್ರೆ ನೀರನ್ನು ಅತನ ಚಿಕ್ಕಪ್ಪನು ಉಪಯೋಗಿಸಿಕೊಂಡನೆಂಬ ಕಾರಣದಮೇಲೆ ಒಬ್ಬರಿಗೊಬ್ಬರಿಗೆ ಜಗಳವಾಗಿ ಅಮೀರ್ ಬಕ್ಷನು ಚಿಕ್ಕಪ್ಪನನ್ನು ಚೂರಿಯಿಂದ ತಿವಿದು ಕೊಂದನು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿರುತ್ತಾರೆ.

ಹಿಂದೂಸ್ಥಾನದ ಮೊದಲನೆಯ ಕಳ್ಳ!

ಕಲ್ಕತ್ತಾನಗರದ ಷೇಕ್ ಇಸ್ಮಾಯಿಲ್ ಎಂಬಾತನು ಬೋ ಬಜಾರ್ ರಸ್ತೆಯಲ್ಲಿ ಬೆಳಗಿನ ಝಾವದ ಸಮಯದಲ್ಲಿ ಅನುಮಾನಾಸ್ಪದವಾದ ರೀತಿಯಲ್ಲಿ ಓಡಾಡುತ್ತಿದ್ದನೆಂಬ ಕಾರಣದಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ 3 ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿರುತ್ತಾರೆ. ಇವನಿಗೆ ಈವರೆಗೆ 51 ಸಾರೆ ಶಿಕ್ಷೆಯಾಗಿದ್ದು ಇಡೀ ಭರತಖಂಡದಲ್ಲಿ ಹೆಚ್ಚುಸಾರೆ ಶಿಕ್ಷೆಯನ್ನು ಅನುಭವಿಸಿರುತ್ತಾನಂತೆ!

ಅಮೂಲ್ಯವಜ್ರಗಳ ಪತ್ತೆ!

ಬರ್ಮಾದೇಶಕ್ಕೆ ಸೇರಿದ ಮೋಗೋಕ್ ನಗರದ ಸಮೀಪದಲ್ಲಿರುವ ಕೆಸಾಗೋಪ್ ಎಂಬ ಪರ್ವತದ ಗಣಿಯಲ್ಲಿ 44¾ ಕ್ಯಾರೆಟ್ ತೂಕವುಳ್ಳ ಒಂದು ಅಮೂಲ್ಯ ವಜ್ರವು ದೊರೆತಿರುವುದು. ವಜ್ರವು ಅತ್ಯಂತ ಪರಿಶುದ್ಧವಾಗಿದ್ದು, ಕೋಟ್ಯಂತರ ರೂಪಾಯಿಗಳ ಬೆಲೆಯಾಗುವುದೆಂದು ಊಹಿಸಲ್ಪಟ್ಟಿದೆ. ಟ್ರಾನ್ಸ್‌ವಾಲಿನಲ್ಲಿ ಜೋಂಕರ್ ಎಂಬ ಮತ್ತೊಂದು ವಜ್ರವು ದೊರೆತಿದ್ದು ಅದರ ಬೆಲೆಯು 15 ಲಕ್ಷ ರೂಪಾಯಿಗಳಾಗಬಹುದೆಂದು ಊಹಿಸಲ್ಪಟ್ಟಿದೆ.

ಕ್ರೈಸ್ತನ ವಿಗ್ರಹದಿಂದ ರಕ್ತ.

ಇಟಲಿ ದೇಶಕ್ಕೆಸೇರಿದ ಅಸ್ತಿ ಎಂಬ ಗ್ರಾಮದಲ್ಲಿರುವ ಒಂದು ಕ್ರಿಸ್ತದೇವಾಲಯದಲ್ಲಿ ಒಂದು ಸಣ್ಣ ಶಿಲುಬೆಯ ಮೇಲಿರುವ ಕ್ರೈಸ್ತನ ವಿಗ್ರಹದ ನ್ಯಾಯದಿಂದ ನಿಜವಾದ ರಕ್ತವು ಸುರಿಯುವುದಂತೆ! ಈ ಆಶ್ಚರ್ಯವನ್ನು ನೋಡಲು ಜನರು ತಂಡೋಪತಂಡವಾಗಿ ಹೋಗುತ್ತಿರುವರು. ದೇವಾಲಯದ ಪೂಜಾರಿಗಳು ಈ ವಿಚಿತ್ರ ವಿಷಯವನ್ನು ಸಂಪೂರ್ಣವಾಗಿ ನಂಬದೆ, ವಿಗ್ರಹದಿಂದ ಸುರಿಯುವ ಕೆಂಪುದ್ರಾವಕವನ್ನು ಪರೀಕ್ಷೆಗೆ ಕಳುಹಿಸಿರಲು, ವೈದ್ಯರು ಅದನ್ನು ಪರೀಕ್ಷಿಸಿ ಅದು ನಿಜವಾಗಿಯೂ ಮನುಷ್ಯರ ರಕ್ತವೇ ಎಂದು ನಿರ್ಧರಿಸಿರುವರಂತೆ!

ದಕ್ಷಿಣ ಅಮೇರಿಕೆಯಲ್ಲಿ ಯುದ್ಧಸನ್ನಾಹ!

ದಕ್ಷಿಣ ಅಮೇರಿಕಾ ದೇಶಕ್ಕೆ ಸೇರಿದ ಪೆರು ಮತ್ತು ಕೊಲಂಬಿಯಾ ರಾಜ್ಯಗಳಿಗೆ ಪರಸ್ಪರ ಯುದ್ಧಾರಂಭವಾಗಬಹುದೆಂದು ತಿಳಿದು ಬಂದಿರುತ್ತದೆ. ಅಮೆಜಾನ್ ನದೀತೀರದಲ್ಲಿರುವ ಲೆಟಿಸಿಯಾ ಪ್ರಾಂತವನ್ನು ಕೊಲಂಬಿಯಾ ಸರಕಾರದವರಿಂದ ಪೆರು ಸರಕಾರದವರು ಬಲಾತ್ಕಾರದಿಂದ ವಶಪಡಿಸಿಕೊಂಡಿರುವುದೇ ಇದಕ್ಕೆ ಮೂಲಕಾರಣವಾಗಿದೆ. ಲೆಟಿಸಿಯಾ ಪ್ರಾಂತದ ಗಡಿನಾಡಿನಲ್ಲಿ ಉಭಯಪಕ್ಷದ ಸೈನಿಕರೂ ಯುದ್ಧಕ್ಕೆ ಸಿದ್ಧರಾಗಿ ನಿಂತಿರುತ್ತಾರೆ.

ಅದ್ಭುತವಾದ ಈಜು!

ಪ್ರಪಂಚದಲ್ಲೆಲ್ಲಾ ಅತ್ಯಂತ ದೀರ್ಘಕಾಲ ಈಜುವವರೆಂದು ಪ್ರಖ್ಯಾತಿಯನ್ನು ಪಡೆದಿರುವ ಕಲ್ಕತ್ತೆಯ ಮಿ॥ ಘೋಷ್‌ರವರು ಕಳೆದ ಮಾರ್ಚಿ 31 ನೇ ತಾರೀಖಿನ ದಿವಸ ಸಾಯಂಕಾಲ 5-34 ರಿಂದ ಮರುದಿವಸ 5-44 ರವರೆಗೆ ಅಂದರೆ 24 ಗಂಟೆಗಳು ಮತ್ತು 10 ನಿಮಿಷಗಳ ಕಾಲ ಕೈಗಳನ್ನು ಅಲ್ಲಾಡಿಸದೆ ಬರೀಕಾಲುಗಳಿಂದಲೇ ಈಜಿರುತ್ತಾರೆ. ಇವರ ಈ ಸಾಹಸವು ಪ್ರಪಂಚದಲ್ಲೆಲ್ಲಾ ಅತ್ಯಂತ ಮಹತ್ವವುಳ್ಳದ್ದೆಂದು ಭಾವಿಸಲ್ಪಟ್ಟಿದೆ.

ಹಿಂದೀ ಸಾಹಿತ್ಯಪ್ರಚಾರ!

ಅಖಿಲಭಾರತ ಹಿಂದೀ ಸಾಹಿತ್ಯಸಮ್ಮೇಳನವು ದೆಹಲಿಯಲ್ಲಿ ಬರೋಡಾ ಮಹಾರಾಜರಾದ ಸರ್ ಸಯ್ಯಾಜಿರಾವ ಗಾಯಕವಾಡರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಹಿಂದೀ ಭಾಷೆಯ ಪ್ರಚಾರಕ್ಕಾಗಿ 5 ಲಕ್ಷ ರೂಗಳ ನಿಧಿಯೊಂದನ್ನು ಏರ್ಪಡಿಸಬೇಕೆಂದು ತೀರ್ಮಾನಿಸಲ್ಪಟ್ಟು ಅದಕ್ಕಾಗಿ 20 ಜನ ಮೆಂಬರರಿಂದ ಕೂಡಿದ ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿತು. ಹಿಂದೀಸಮ್ಮೇಳನದ ಮುಂದಿನ ಅಧಿವೇಶನವು ಇಂದೂರಿನಲ್ಲಿ ಕೂಡುವುದು.

ಕ್ರಾಂತಿಕಾರಕಪ್ರೊಫೆಸರರು!

ಇದೇ ಏಪ್ರಿಲ್ 4 ನೇ ತಾರೀಖಿನ ದಿವಸ ರಾತ್ರಿ ಭಾರಿಸಾಲ್‌ನಗರದ ಪೋಲೀಸರು ಅಲ್ಲಿಯ ಕಾಲೇಜಿನ ಪ್ರೊಫೆಸರಾದ ಮಿ॥ ಕ್ಷೇತ್ರಮೋಹನ್‌ಘೋಷ್ ಎಂಬವರ ಮನೆಯನ್ನು ಶೋಧಿಸಿದರು. ಮನೆಯ ಒಂದು ಕೊಠಡಿಯಲ್ಲಿ ಒಂದು ನೆಲಮಾಳಿಗೆಯೂ ಅದರಲ್ಲಿ 24 ಬಾಂಬ್ ಶೆಲ್‌ಗಳೂ, ಬಂದೂಕದ ಗುಂಡುಗಳೂ, 2 ಚಂದ್ರಾಯುಧಗಳೂ, 4 ಕೊಡಲಿಗಳೂ ಸಿಕ್ಕಿದುವು. ಇದರಮೇಲೆ ಪೋಲೀಸರು ಆಶ್ಚರ್ಯಗೊಂಡು ಮನೆಯ ಹಿತ್ತಲಿನಲ್ಲಿ ಅಗೆದು ನೋಡಲು ಅಲ್ಲಿಯೂ ಒಂದು ದೊಡ್ಡ ಮಣ್ಣಿನ ಪಾತ್ರೆಯಲ್ಲಿ 12 ಬಾಂಬ್‌ಶೆಲ್‌ಗಳೂ ಕೆಲವು ರಿವಾಲ್ವರುಗಳೂ ದೊರೆತವು. ಪೋಲೀಸರು ಪ್ರೊಫೆಸರನ್ನೂ ಅವರ ಮನೆಯಲ್ಲಿದ್ದ ಸೂರ್ಯದಾಸನೆಂಬ ತರುಣನನ್ನೂ ದಸ್ತಗಿರಿಮಾಡಿರುತ್ತಾರೆ.

ಮ್ಯಾಜಿಸ್ಟ್ರೇಟರಕೊಲೆ!

ತಂಜಾವೂರಿನ ಸಮೀಪದಲ್ಲಿ ವೀರಸಿಂಗನಪೇಟೆ ಎಂಬ ಊರಿನಲ್ಲಿ ಮಾರಮ್ಮನ ಜಾತ್ರೆಯಕಾಲಕ್ಕೆ ಒಬ್ಬ ಮನುಷ್ಯನ ಬೆನ್ನುಮೂಳೆಯನ್ನು ಕೊರೆದು ಅವನನ್ನು 'ಶಿಡಿ' ಮರಕ್ಕೆ ನೇತುಹಾಕಿ ಉತ್ಸವಮಾಡುವ ಪದ್ಧತಿಯು ಬಹುಕಾಲದಿಂದ ನಡೆದುಬಂದಿರುವುದು. ಆದರೆ ಈ ವಿಧವಾದ ಕ್ರೂರ ವರ್ತನವನ್ನು ನಿಲ್ಲಿಸಬೇಕೆಂದು ಸಬ್ ಮ್ಯಾಜಿಸ್ಟ್ರೇಟರು ಜಾತ್ರೆಯಕಾಲಕ್ಕೆ ಪ್ರತಿಬಂಧಕ ಆಜ್ಞೆಯನ್ನು ಹೊರಡಿಸಿದರು. ಇದರಿಂದ ಜನರು ದಂಗೆಯೆದ್ದರು. ಪೋಲೀಸರು ಗುಂಪನ್ನು ಚದುರಿಸಲು ಜನರ ಮೇಲೆ ಗುಂಡು ಹಾರಿಸಿದರು. ಇಬ್ಬರು ಸತ್ತು ಅನೇಕರು ಘಾಯಹೊಂದಿದರು. ಇದರಿಂದ ಜನರು ಮತ್ತಷ್ಟು ಕೋಪಾನ್ವಿತರಾಗಿ ಅಧಿಕಾರಿಗಳ ಮೇಲೆ ಬಿದ್ದು ಮ್ಯಾಜಿಸ್ಟ್ರೇಟರನ್ನು ಕೊಂದರು. ಪೋಲೀಸ್ ಇನ್ಸ್‌ಪೆಕ್ಟರವರು ಕಣ್ಣುಗಳನ್ನು ಕಳೆದುಕೊಂಡು ಆಸ್ಪತ್ರೆಯಲ್ಲಿ ಅಪಾಯಸ್ಥಿತಿಯಲ್ಲಿರುತ್ತಾರೆ. ಗಲಾಟೆಯ ವರ್ತಮಾನವು ತಿಳಿದನಂತರ ಕುಂಭಕೋಣ ಮೊದಲಾದ ಕಡೆಗಳಿಂದ ಹೆಚ್ಚಿನ ಪೋಲೀಸರು ಬಂದು ಗಲಾಟೆಯನ್ನು ನಿಲ್ಲಿಸಿ ಅತ್ಯಾಚಾರಕ್ಕೆ ಕಾರಣರಾದ ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಹರಪುರಿಗೆ ರಾಮೋತ್ಸವಕ್ಕಾಗಿ ಆಗಮಿಸಿದ ಮೈಸೂರಿನ ದಾಸರು.

ಈ ದಾಸರು ಹರಪನಹಳ್ಳಿಯಲ್ಲಿ ಇದೇ ಚೈತ್ರ ಶುದ್ಧ ಬಿದಿಗೆ ಶನಿವಾರ (17-3-34) ರಾತ್ರಿ ಶ್ರೀರಾಮಮಂದಿರದಲ್ಲಿ ಹರಿಕಥೆಯೆಂದಾರಂಭಿಸಿ ಮೋಹನದಾಸಗಾಂಧಿಯ ಕಥೆಯನ್ನು ಹೇಳುತ್ತ, 'ಲೋಕದಲ್ಲಿ ಧರ್ಮವೆಲ್ಲಿದೆ? ಎಂದು ಹೋಟೆಲು, ಮೋಟಾರು, ರೈಲುಗಳು ಅದುವೋ ಅಂದೇ ಧರ್ಮವು ಹೋಯಿತು. ಧರ್ಮವೆಲ್ಲಿದ್ದೀನೆಂದು ಹೇಳುವ ಶೂರರು ಯಾರು? ನನ್ನ ಮುಂದೆ ಬನ್ನಿರಿ? ಎಲಿರಿ ಹತ್ತಲಾಚಾರ್ರೇ! ಸಂದಿಗೆ ಆಚಾರ್ರೇ!! ಧರ್ಮಾತ್ಮ, ಮಹಾತ್ಮ ಎಂದರೆ ಪವಿತ್ರ ಗಾಂಧಿಯೊಬ್ಬನೇ ಅಲ್ಲವೆ?' ಇತ್ಯಾದಿ, ಇತ್ಯಾದಿ ರೋಷಾವೇಶದಿಂದ ಆಚಾರವನ್ನು ಕಿತ್ತುಹಾಕುವವರೋ ಎಂಬಂತೆ ಕೈಯಿಂದ ತಮ್ಮ ಆಚಾರವನ್ನು ಎಳೆದೆಳೆದು ತೋರಿಸುತ್ತ ಒದರಲಾರಂಭಿಸಿದರು.

ಮೊದಲೇ ವಿಲಕ್ಷಣದಾಸರು, ಮೇಲೆ ಗಾಂಧೀಭಕ್ತ ಪಿಶುನ ವ್ಯಕ್ತಿಕರಂಕರು. ಇದರಮೇಲೆ ಗಾಂಧಿಮಹಾಮೋಹಗ್ರಹಾವಿಷ್ಟರೂ ಆದುದರಿಂದ ಈ ದಾಸರ ಕೋಲಾಹಲಕ್ಕೆ ಪಾರವೇ ಇಲ್ಲದಂತಾಯಿತು.

ಹೀಗಿರುತ್ತಿರಲು ಹಠಾತ್ತಾಗಿ ಧರ್ಮವೀರರಿಬ್ಬರು ಸಿಡಿಲೆರಗುವಂತೆ ದಾಸರ ಮೇಲೆರಗಿ ಏಕಗ್ರಾಹವರ್ಷಗಳಿಂ ಸುರಿಸಿ ದಾಸರ ಮೋಹಾಂಧಕಾರವನ್ನು ಧ್ವಂಸಮಾಡುತ್ತಿರಲು, ಸಬ್‌ಮ್ಯಾಜಿಸ್ಟ್ರೇಟ್, ತಹಶೀಲ್ದಾರರು ಮುಂತಾದ ಆಫೀಸರು ನಡೆದ ವಿಷಯವನ್ನು ಪರಾಮರ್ಶಿಸುತ್ತಿರಲು, ಆಕಸ್ಮಿಕವಾಗಿ ಜಂಗಮಮೂರ್ತಿಯೊಬ್ಬರು ಪ್ರಚಂಡನಾದದಿಂದ 'ಈ ದಾಸನು ಹರಟೆ ಹೊಡೆಯಲು ಬಂದನು; ಕಥೆಮಾಡಲು ಬಂದಿಲ್ಲ. ಎಳಿರಿ' ಎಂದು ಚಂಡವೀರಭದ್ರನಂತೆ ಅಬ್ಬರಿಸಲು ದಾಸರ ಮೋಹಗ್ರಹವು ಓಡಿಹೋಯಿತು. ಆಗ ದಾಸರು ಎಚ್ಚೆತ್ತು ಕ್ಷಮಾಪಣೆಯನ್ನು ಬೇಡಿದರು.

ಸಭಾಸದರೆಲ್ಲರೂ ದಾಸರನ್ನು ಅಮಂಗಲಸಹಸ್ರನಾಮಗಳಿಂದ ಆಶೀರ್ವದಿಸುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಶಿವಪೂಜೆಯಲ್ಲಿ ಕರಡಿಯನ್ನು ಬಿಟ್ಟಂತೆ ಹರಿಕಥೆಯಲ್ಲಿ ಗಾಂಧೀಕರಡಿಯನ್ನು ಬಿಟ್ಟು ಕಥಾಸ್ವಾರಸ್ಯವನ್ನೇ ಹಾಳುಮಾಡಿಬಿಟ್ಟರೀ ಗಾಂಧೀದಾಸರು.

ಅಂದು ಕಲಿಯನ್ನು ಬಗ್ಗಿಸಿದ ದಾಸರು ಹರಪುರಿಯಲ್ಲಿ ಮುಂದೆಂದೂ ಕಲಿಯೆತ್ತಲೇ ಇಲ್ಲವು. 'ಅವಶ್ಯಮನುಭೋಕ್ತವ್ಯಂ ಕೃತಂಕರ್ಮಶುಭಾಶುಭಂ' ಎಂಬ ರೀತ್ಯಾ ದಾಸರು ತಮ್ಮ ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸಲೇ ಬೇಕಾಯಿತು.

ಹರಪನಹಳ್ಳಿ, ಎಸ್. ವಿ. ವೆಂಕಟಸುಬ್ಬಯ್ಯ,
23-3-34. ಮೆಂಬರ್ ಆಫ್ ಸನಾತನಧರ್ಮೋಜ್ಜೀವಿನೀಸಭಾ.

ವಿಜ್ಞಾಪನೆ.

ಪಾತಾಳಗಂಗೆಗೆ ಎದುರುಭಾಗದಲ್ಲಿರುವ, ಶ್ರೀಶೈಲ ದೇವಾಲಯದ ಪೂರ್ವದಿಕ್ಕಿನ ಗೋಪುರವು, ಅತ್ಯಂತ ಜೀರ್ಣವಸ್ಥೆಯಲ್ಲಿರುತ್ತದೆ. ಆದುದರಿಂದ ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡಿನವರು ಭಕ್ತರ ಸಹಾಯದ ಮೇಲೆ ನಂಬುಗೆಯನ್ನಿಟ್ಟು ಗೋಪುರದ ಜೀರ್ಣೋದ್ಧಾರಕಾರ್ಯಕ್ಕೆ ಕೈಹಾಕಿರುತ್ತಾರೆ. ಶ್ರೀಶೈಲ ದೇವಾಲಯದ ಆದಾಯವು ವಾರ್ಷಿಕೋತ್ಸವಗಳ ಕಾಲದಲ್ಲಿ ಭಕ್ತಾದಿಗಳಿಂದ ವಸೂಲಾಗುವ ಹಣದಿಂದ ನಡೆಯಿಸಲ್ಪಡುತ್ತಿರುವುದೆಂಬ ವಿಷಯವು ಎಲ್ಲರಿಗೂ ತಿಳಿದೇ ಇದೆ. ಹೀಗೆ ಭಕ್ತಾದಿಗಳಿಂದ ವಸೂಲಾಗುವ ಹಣವು ಮ್ಯಾನೇಜ್‌ಮೆಂಟಿನ ಖರ್ಚಿಗೂ ಪೂರೈಸುವಂತಿಲ್ಲ. ಆಕಸ್ಮಾತ್ತಾಗಿ ಅಲ್ಪಸ್ವಲ್ಪ ಉಳಿದರೂ ಅದರಿಂದ ಶಾಶ್ವತವಾದ ಯಾವ ಅಭಿವೃದ್ಧಿಕಾರ್ಯವನ್ನೂ ಕೈಕೊಳ್ಳುವಂತಿಲ್ಲ.

ಈಗ ಕೈಕೊಂಡಿರುವ ಭವನಾದ ಕಾರ್ಯಕ್ಕೆ 10,000 ರೂ. ಖರ್ಚಾಗುವುದೆಂದು ಅಂದಾಜುಮಾಡಿದೆ. ಶ್ರೀ ಮಲ್ಲಿಕಾರ್ಜುನಸ್ವಾಮಿಯು ಅಸಂಖ್ಯಾಕಭಕ್ತರ ಹೃದಯಕಮಲದಲ್ಲಿ ದಾಕ್ಷಿಣ್ಯವು ನಾಶವಾಗಿಲ್ಲವೆಂದು ನಂಬಿ, ಗೋಪುರದ ಕೆಲಸವನ್ನು ಪ್ರಾರಂಭಿಸಿರುತ್ತೇವೆ.

ದೇವಾಲಯವನ್ನು ನಿರ್ಮಿಸುವುದು ಹಿಂದುಗಳಿಗೆ ಬಹು ಪವಿತ್ರವಾದ ಕಾರ್ಯವಾಗಿದೆ. ಶಾಸ್ತ್ರಾದಿಗಳು ಅದನ್ನು ಸ್ತುತಿಸುತ್ತವೆ. ಆದರೆ ಮೊದಲೇ ಕಟ್ಟಿದ ದೇವಾಲಯಕ್ಕೆ ಅವಶ್ಯಕವಾದ ಜೀರ್ಣೋದ್ಧಾರವನ್ನು ಮಾಡದೆ ಅದು ಹಾಳಾಗಲು ಅವಕಾಶ ಕೊಡುವುದು ಪಾಪವೆನಿಸುವುದು. ಅದರಲ್ಲಿಯೂ, ಭೂಕೈಲಾಸವೆಂದು ಪ್ರಖ್ಯಾತಿಯನ್ನು ಪಡೆದು, ಪಾತಾಳಗಂಗೆಯೆನಿಸಿರುವ ಕೃಷ್ಣಾನದಿಯ ತೀರದಲ್ಲಿ ಮನೋಹರಗಳಾದ ಅರಣ್ಯಗಳಿಂದ ಕೂಡಿರುವ 'ನಲ್ಲಮಲ' ಗುಡ್ಡಗಳ ಮೇಲೆ ಅನೇಕಾನೇಕ ಶತಮಾನಗಳ ಹಿಂದೆ ಸ್ಥಾಪಿಸಲ್ಪಟ್ಟಿರುವ ದೇವಸ್ಥಾನದ ವಿಷಯದಲ್ಲಿ ಯಾರೂ ಅನಾದರಣೆಯನ್ನಾಗಲಿ ಸಹಾಯಮಾಡುವ ವಿಷಯದಲ್ಲಿ ಸಾವಕಾಶವನ್ನಾಗಲಿ ಮಾಡಬಾರದು.

ಆದುದರಿಂದ ಕಮಿಟಿಯವರು ಸಮಸ್ತರನ್ನೂ, ಅದರಲ್ಲಿಯೂ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಭಕ್ತರನ್ನೂ ಈಗ ಕೈಕೊಂಡಿರುವ ಕಾರ್ಯಕ್ಕೆ ಉದಾರವಾದ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತಾರೆ. ಸಹಾಯ ದ್ರವ್ಯವನ್ನು (ಹೆಚ್ಚು ಕಡಿಮೆಯೆಂದು ಸಂಕೋಚಪಡದೆ) "ಕರ್ನೂಲ್ ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡ್ ಸೆಕ್ರೆಟರಿ" ಯವರಿಗೆ ಮನಿಯಾರ್ಡರ ಮೂಲಕವಾಗಲಿ ಖುದ್ದಾಗಿಯಾಗಲಿ ಪಾವತಿಮಾಡಬಹುದು.

ಪ್ರೆಸಿಡೆಂಟ್, ಮತ್ತು ಸೆಕ್ರೆಟರಿ,
ಶ್ರೀಶೈಲಂ ಮ್ಯಾನೇಜ್‌ಮೆಂಟ್ ಬೋರ್ಡ್,
ಕರ್ನೂಲ್.

ಭಾವಸಂವತ್ಸರದ ಫಲ.

ಶ್ರೀಭಾವಾಬ್ದಪತಿರ್ಗುರುಃ ಸಚಿವಃ ಸೇನಾಧ್ಯಮೇಘಾಧಿಪಃ | ಜೀವಸ್ಸಸ್ಯಪತಿಃ ಶಶೀ ರಸಪತಿಸ್ಸಾ ಮ್ಯಶ್ಚ ನೀರಾಧಿಪಃ ||
ಅರ್ಘೋ ನೀರಸಪಶ್ಚ ಭೃತ್ಸ್ನ ನೃಪತೇಃ ಕುಜಾರ್ಘದೇವೇ ಶಿಖಃ |
ಸರ್ವೇ ಕಿಂಚ ವರಾಂ ಶ್ರಿಯಂ ವಿದಧತಾಮಾಯುಶ್ಚಿರಂಭಾವುಕಂ ||

ಚೈತ್ರಮಾಸಫಲ.

31-3-34 ರ ವರೆಗೆ ದುರ್ಭಿಕ್ಷ ಅನಾವೃಷ್ಟಿ ಪ್ರಜೆಗಳಿಗೆ ರೋಗ, ಹೆಚ್ಚುಗಾಳಿ.

31-3-34 ರಿಂದ 12-4-34 ರ ವರೆಗೆ ಸುಭಿಕ್ಷ, ಪ್ರಜೆಗಳಿಗೆ ಸೌಖ್ಯ. ಬಿಳಿಗೆ ವಿಶೇಷವಾಗಿ ಧಾನ್ಯಗಳು ಬರುವಿಕೆ, ವರ್ತಕರಿಗೆ ಸ್ವಲ್ಪ ಲಾಭ, ಮಗಧದೇಶದ ರಾಜರಿಗೆ ಜಯ ಧನದ ಜವಾಬ್ದಾರಿಯುಳ್ಳ ಅಧಿಕಾರಿಗಳಿಗೆ ಅಭಿವೃದ್ಧಿ. ಪ್ರಜಾಸಂತೋಷ, ಒಳ್ಳೆಮಳೆ. ಮಾರ್ಚಿ 30-31 ಏಪ್ರಿಲ್ 1 ಈ ತಾರೀಖುಗಳಲ್ಲಿ ಧಾನ್ಯಸಂಗ್ರಹಮಾಡಿದರೆ, 4ನೇ ತಿಂಗಳಲ್ಲಿ ಲಾಭ.

ತಾ|| 14-4-34—13-5-34 ರವರೆಗೆ ಅಧಿಕವೈಶಾಖಮಾಸ.

ದುರ್ಭಿಕ್ಷ-ರೋಗೋಪದ್ರವ-ನವಣೆ-ರಾಗಿ-ಜೋಳ ಈ ಇವುಗಳಿಗೆ ಮತ್ತು ಕಲ್ಲುಗಳಿಗೆ ಹೆಚ್ಚುಬೆಲೆ. ಮಳೆ ಇಲ್ಲದೆ ನೀರಿನ ತೊಂದರೆ, ಪೈರುಗಳ ಬೆಳವಣಿಗೆಯಿಂದಲೂ-ಜಗಳ, ಕೆಲವು ಬ್ರಾಹ್ಮಣರಿಗೂ ಕೆಲವು ಊರುಗಳಿಗೂ ತೊಂದರೆ, ರಾಜರಿಗೆ ವ್ಯಸನ, ರಾಜವಂಶೀಯರಿಗೆ ತೊಂದರೆ, ಪಶು ಪಕ್ಷಿಗಳಿಗೆ ಸುಖ, ಅರಿಶಿನ, ಕುಂಕುಮ ವಸ್ತುಗಳಿಗೆ ಬೆಲೆ ಹೆಚ್ಚುವಿಕೆ, ಕೆಲವು ಕಡೆಗಳಲ್ಲಿ ಸ್ವಲ್ಪಮಟ್ಟಿಗೆ ಮಳೆ. ಏಪ್ರಿಲ್ 28, 29 30ನೇ ತಾರೀಖುಗಳಲ್ಲಿ ಧಾನ್ಯಸಂಗ್ರಹಮಾಡಿ 6ನೇ ತಿಂಗಳಲ್ಲಿ ಮಾರಿದರೆ ಹೆಚ್ಚಾದ ಧನಲಾಭ.

ತಾ|| 14-5-34—12-6-34 ರವರೆಗೆ ನಿಜವೈಶಾಖಮಾಸ.

ಪ್ರಜೆಗಳಿಗೆ ಸುಖ, ಕೆಲವು ಕಾಲದಲ್ಲಿ ಹೆಚ್ಚುಭಯ, ಸ್ವಲ್ಪ ವ್ಯಸನ, ರಾಜರಿಗೆ ಪೀಡೆ, ಪ್ರಜಾಕಲಹ, ಕೆಂಪುಧಾನ್ಯಗಳಿಗೂ, ಹತ್ತಿ, ನೂಲು ಇವುಗಳಿಗೂ, ಬೆಲೆ ಹೆಚ್ಚುವದು. ಬೀಳುಧಾನ್ಯಗಳಿಗೆ ಸಮನಾದ ಬೆಲೆ, 19-5-34—24-6-34ರ ಒಳಗೆ ದೇಶಕ್ಷೋಭೆ, ಯತಿಗಳಿಗೆ ಬಾಧೆ, ಮರಗಳಿಗೆ ಪೀಡೆ, ಹುಲಿ, ಚಿರತೆ ಮುಂತಾದ ದುಷ್ಟಮೃಗಗಳಿಗೆ ರೋಗ, ಮೇ-ಮಾಹೇ 27, 28, 29ನೇ ತಾರೀಖುಗಳಲ್ಲಿ ಧಾನ್ಯಸಂಗ್ರಹಮಾಡಿದರೆ 4ನೇ ತಿಂಗಳಲ್ಲಿ ಲಾಭ, ಹೆಚ್ಚಾದ ಮಳೆ.

ತಾ|| 13-6-34—11-7-34 ರವರೆಗೆ ಜ್ಯೇಷ್ಠಮಾಸ.

ಜನಗಳಿಗೆ ಸುಖ, ಬ್ರಾಹ್ಮಣರಿಗೆ ಪೀಡೆ, ಸ್ವಲ್ಪ ಮೋಡ, ಕೆಲವುಕಡೆಯಲ್ಲಿ ಯುದ್ಧದ ಪ್ರಸ್ತಾಪ, ಹತ್ತಿ-ಎಳ್ಳು-ನೂಲು ಇವುಗಳಿಗೆ ಹೆಚ್ಚು ಬೆಲೆ, ಗಾಳಿಯಿಂದ ಕೂಡಿದ ಮಳೆ, ಗೋಧಿ-ಉದ್ದು ಇವುಗಳಿಗೆ ಒಂದೇಸಮನಾದ ಬೆಲೆ, ಮಕ್ಕಳಿಗೆ ಪೀಡೆ, ಕೆಲವುಕಡೆ ಮಳೆಯೂ, ಕೆಲವುಕಡೆ ಇಲ್ಲದಿರುವಿಕೆಯೂ, ದುರ್ಭಿಕ್ಷ, ಕಬ್ಬು ಮೊದಲಾದ ರಸವಸ್ತುಗಳಿಗೆ ಹಾನಿ. ಕೆಲವು ಸಮಯದಲ್ಲಿ ಪ್ರಜೆಗಳಿಗೆ ಭಯ, ಪೈರುಗಳು ಚೆನ್ನಾಗಿದ್ದಾಗ್ಯೂ, ಅರ್ಧ ಬೆಲೆ. ಜೂನ್ 26-27-28ನೇ ತಾರೀಖುಗಳಲ್ಲಿ ಎಳ್ಳು-ಎಣ್ಣೆ ಸಂಗ್ರಹಿಸಿದರೆ 4 ನೇ ತಿಂಗಳಲ್ಲಿ ಲಾಭ, ಹತ್ತಿ ಬೆಳೆ ನಷ್ಟ, ಚೋರಭಯ, ಪ್ರಜಾನಾಶ.

ತಾ|| 12-7-34—10-8-34 ರವರೆಗೆ ಆಷಾಢಮಾಸ.

ಜನಗಳಿಗೆ ಶುಭ-ಸುಭಿಕ್ಷ-ಪ್ರಜಾವೃದ್ಧಿ ಕೆಲವು ಸ್ಥಳಗಳಲ್ಲಿ ಅತಿವೃಷ್ಟಿ, ಜನಗಳಿಗೆ ರೋಗ, ಸುಖವು, ಮರ, ಗೆಡ್ಡೆ, ಗೆಣಸು, ಹಣ್ಣು ಇವುಗಳಿಗೆ ಹಾನಿ. ಆಫ್ರಿಕಾಖಂಡದ ದಕ್ಷಿಣಭಾಗದಲ್ಲಿರುವ ರಾಜರುಗಳಿಗೆ ಯುದ್ಧ, ಮುಖಂಡರಾದ ಪುರುಷರಿಗೆ ನಾಶವು, ಹಿತ್ತಾಳೆ, ಕೆಂಪುಪದಾರ್ಥ, ಎಣ್ಣೆ, ಗಂಧ ಇವುಗಳ ಸಂಗ್ರಹದಿಂದ ಲಾಭ, ಕರೀಪದಾರ್ಥಗಳಿಗೆ ಬೆಲೆ ಹೆಚ್ಚುವಿಕೆ, ಒಳ್ಳೇಮಳೆ, ಇತರ ಧಾನ್ಯಗಳಿಗೆ ಸಮನಾದ ಬೆಲೆ, ಹತ್ತಿ ನಷ್ಟ, ಇಲ್ಲಿಂದ ನಾಲ್ಕನೇ ತಿಂಗಳಲ್ಲಿ ದುಃಖ, ದುರ್ಭಿಕ್ಷ.

11-8-34—8-9-34 ರವರೆಗೆ ಶ್ರಾವಣಮಾಸ.

ದುರ್ಭಿಕ್ಷ, ಮಧ್ಯಮವಾದ ಮಳೆ, ಆಗಸ್ಟ 24, 25, 26ನೇ ತಾರೀಖುಗಳಲ್ಲಿ ಧಾನ್ಯಸಂಗ್ರಹಿಸಿದರೆ 6ನೇ ತಿಂಗಳಲ್ಲಿ 2ರಷ್ಟು ಲಾಭ, ಪ್ರಜಾದುಃಖ ಮೊದಲು ಸಂಗ್ರಹಮಾಡಿರುವ ಪದಾರ್ಥಗಳನ್ನೂ ಧಾನ್ಯಗಳನ್ನೂ ಬಿಕರಿಮಾಡಿದರೆ ಲಾಭ, ಚತುಷ್ಪಾತ್ತುಗಳಿಗೆ ರೋಗೋಪದ್ರವ, ಗೋಧಿ-ಭತ್ತ-ಸಕ್ಕರೆ-ಬೆಲ್ಲ-ಎಣ್ಣೆ-ಉದ್ದು ಇವುಗಳಿಗೆ ಬೆಲೆಹೆಚ್ಚುವದು. ಸೌರಾಷ್ಟ್ರ ಅಂದರೆ ಗುಜರಾತದೇಶದಲ್ಲಿ ಶೂದ್ರರಿಗೂ, ಪಂಚಮರಿಗೂ ಕಷ್ಟ, ಮ್ಲೇಚ್ಛದೇಶದಲ್ಲಿ ರೋಗೋಪದ್ರವ, ದಕ್ಷಿಣದೇಶದಲ್ಲಿ ಕೆಲವು ಸ್ಥಳಗಳಲ್ಲಿ ಮಳೆಯು, ಎಳ್ಳು-ಎಣ್ಣೆ-ನಾಶ, ಚೋರಭಯ, ಜನವಿರೋಧದಿಂದ ಕಲಹ, ರಾಜರಿಗೆ ಬಲಹೀನತೆ, ಯುದ್ಧದಿಂದ ಭಯ ಮತ್ತು ಜಯ, ಹೆಚ್ಚು ಮಳೆಯಿಂದ ಕೆಲವು ಸಮಯದಲ್ಲಿ ಧಾನ್ಯನಾಶ, ಪ್ರಜಾಭಯ, ಉದ್ದು-ಹೆಸರು ಇವುಗಳ ಬೆಳಸು ಕಡಿಮೆ.

ತಾ|| 9-9-34—8-10-34 ರವರೆಗೆ ಭಾದ್ರಪದಮಾಸ.

ಜನಗಳಿಗೆ ರೋಗೋಪದ್ರವ ಉಂಟಾಗಿ ಸುಖವಾಗುವದು, ರಸಪದಾರ್ಥ ನಷ್ಟ, ಸುಭಿಕ್ಷ, ಧಾನ್ಯವೃದ್ಧಿ, ದಾಸಿ-ಶಿಲ್ಪಿ-ಬ್ರಾಹ್ಮಣ ಇವರುಗಳಿಗೆ ತೊಂದರೆ, ಅಲ್ಪವೃಷ್ಟಿ, ವಿಷಜಂತುಭಯ, ಎಳ್ಳು-ಉದ್ದು-ಹೆಸರು ಇವುಗಳಿಗೆ ನಾಶ, ರಾಜರಿಗೆ ಯುದ್ಧ, ಪಶ್ಚಿಮದೇಶದಲ್ಲಿ ಸ್ವಲ್ಪ ಪ್ರಜಾನಷ್ಟ. ಸೆಪ್ಟಂಬರ್ 22-23-24 ರಿಂದ 6 ತಿಂಗಳಲ್ಲಿ ಜನಗಳಿಗೆ ಕಲಹ, ಮಾರ್ಗಶೀರ್ಷ-ಪುಷ್ಯಮಾಸಗಳಲ್ಲಿ ಧಾನ್ಯವನ್ನು ಸಂಗ್ರಹಿಸಿದರೆ, 5 ನೇ ತಿಂಗಳಲ್ಲಿ ಲಾಭ.

ತಾ|| 9-10-34—7-11-34 ರವರೆಗೆ ಆಶ್ವಯುಜಮಾಸ.

ಪ್ರಜೆಗಳಿಗೆ ಹೆಚ್ಚು ಭಯ, ಸುಖ, ಬ್ರಾಹ್ಮಣರಿಗೆ ತೊಂದರೆ, ಧಾನ್ಯಗಳಿಗೆ ಸಮಬೆಲೆ, ಕಣ್ಣುನೋವಿನ ಉಪದ್ರವ, ಮಳೆ ಇಲ್ಲ, ಎಳ್ಳು-ಉದ್ದು-ಹೆಸರು ಧಾನ್ಯ ನಷ್ಟ, ಪ್ರಜೆಗಳಿಗೆ ಪೀಡೆ, ಎಣ್ಣೆ ಬೆಲೆ ಹೆಚ್ಚುವುದು, ಸುಭಿಕ್ಷ, ಕೆಲವು ಕಡೆಗಳಲ್ಲಿ ವ್ಯಾಧಿ, ಸ್ವಲ್ಪ ದುರ್ಭಿಕ್ಷ, ಪಶುಗಳಿಗೆ ಪೀಡೆ, ಈ ಲಾಗಾಯ್ತು 3 ತಿಂಗಳವರೆಗೆ ಧಾನ್ಯಗಳಿಗೆ ಬೆಲೆಹೆಚ್ಚುವದು, ರಸಪದಾರ್ಥಗಳಿಗೆ ನಾಶ, ಅಕ್ಟೋಬರ್ 22-23-24 ಈ ತಾರೀಖುಗಳಲ್ಲಿ ಧಾನ್ಯ ಸಂಗ್ರಹಿಸಿದರೆ 5 ನೇ ತಿಂಗಳಲ್ಲಿ ಲಾಭ.

8-11-34—6-12-34 ರವರೆಗೆ ಕಾರ್ತಿಕಮಾಸ.

ಪ್ರಜಾಸುಖ, ರಾಜರಿಗೆ ಸುಖ, ಗರ್ಭಿಣೀಸ್ತ್ರೀಯರುಗಳು ಕಡಿಮೆ, ಸ್ವಲ್ಪ ಮಳೆ, ಪ್ರಜೆಗಳಿಗೆ ವ್ಯಾಧಿಭಯ, ಸ್ವಲ್ಪವಾದ ಬೆಲೆ, ಕೆಲವುಕಡೆ ದುರ್ಭಿಕ್ಷ, ಚತುಷ್ಪಾತ್ತುಗಳಿಗೆ ಪೀಡೆ, ಮಾಳವ, (ಇಂದೂರ್ ಸಂಸ್ಥಾನ) ಭೂಜರದೇಶಗಳಲ್ಲಿ ಭಯ, ರಾಜರಿಗೆ ಯುದ್ಧ, ಖುರಾಸಾನಾದೇಶದಲ್ಲಿ ಕ್ಷೋಭೆ, ದ್ರವನಾಶ, ಅಧಿಕವಾದ ದಂಗೆ, ಚಿನ್ನ-ಬೆಳ್ಳಿ ಇವುಗಳಿಗೆ ಹೆಚ್ಚು ಬೆಲೆ, ಜನರಿಗೆ ವ್ಯಾಧಿ, ಡೆಲ್ಲಿಯಲ್ಲಿ ಅಧಿಕಾರದ ಬದಲಾವಣೆ, ನವಂಬರ್ 21-22-23 ನೇ ತಾರೀಖುಗಳಲ್ಲಿ ಎಳ್ಳು-ಎಣ್ಣೆ ಸಂಗ್ರಹಿಸಿದರೆ 2 ತಿಂಗಳೊಳಗೆ 2 ರಷ್ಟು ಲಾಭ, ಪಕ್ಷಿಗಳಿಗೆ ಪೀಡೆ, ಕೆಲವುಕಡೆಗಳಲ್ಲಿ ಸ್ವಲ್ಪ ಮಳೆ, ಸುಭಿಕ್ಷ, ಭಯ.

7-12-34—5-1-35 ರವರೆಗೆ ಮಾರ್ಗಶೀರ್ಷಮಾಸ.

ಪ್ರಜಾಸುಖ, ಗುಜರಾತ್‌ದೇಶದಲ್ಲಿ ಪ್ರಾಣಭಯ, ದುರ್ಭಿಕ್ಷ, ಹಜದ ಪೇಚಾಟ, ರೇಷ್ಮೆಬಟ್ಟೆಗಳಿಗೆ ಹೆಚ್ಚುಬೆಲೆ, ಮುಖಂಡರಾದ ಜನರಿಗೆ ನಾಶ, ಮುಂದಿನ ಮಳೆಗೆ ತೊಂದರೆ, ಧಾನ್ಯಗಳಿಗೆ ಹೆಚ್ಚು ಬೆಲೆ, ಹತ್ತಿ-ನೂಲು ಇವುಗಳನ್ನು ಸಂಗ್ರಹಿಸಿದರೆ ಮುಂದಿನ ವೈಶಾಖದಲ್ಲಿ ಲಾಭ. ಡಿಸಂಬರ್ 20, 21, 22ನೇ ತಾರೀಖುಗಳಲ್ಲಿ ಶುಷ್ಕ-ಧಾನ್ಯ ಸಂಗ್ರಹಿಸಿದರೆ 5ನೇ ತಿಂಗಳಲ್ಲಿ ಲಾಭ, ಮಳೆಕಡಿಮೆ, ಕಬ್ಬು-ಭತ್ತ-ಕುಷ್ಠ ಇವುಗಳಿಗೆ ಹೆಚ್ಚು ಬೆಲೆ ಪಶುಪಕ್ಷಿ-ಮಕ್ಕಳುಗಳಿಗೆ ಪೀಡೆ.

ತಾ|| 6-1-35—3-2-35 ರವರೆಗೆ ಪುಷ್ಯಮಾಸ.

ಪ್ರಜಾರೋಗ, ಕೆಲವು ಪದಾರ್ಥಗಳಿಗೆ ಹೆಚ್ಚು ಲಾಭ, ಕೆಲವು ಪದಾರ್ಥಗಳಿಗೆ ಹೆಚ್ಚು ಬೆಲೆ, ದುರ್ಭಿಕ್ಷ, ಜನವರಿ 19, 20, 21 ರಿಂದ 5 ತಿಂಗಳಲ್ಲಿ ಪಾಪಿಗಳಿಗೆ ನಾಶ, ಅಮೇರಿಕಾ ಖಂಡದ ಉತ್ತರಭಾಗದಲ್ಲಿ ರಾಜರಿಗೆ ಯುದ್ಧ, ಪ್ರಧಾನಪುರುಷರಿಗೆ ನಾಶ, ಮಳೆ-ನೇತ್ರರೋಗ-ಅತಿಸಾರ-ಅಗ್ನಿಭಯ-ಹಸುವಿನಹಾಲು-ತುಪ್ಪ ಕಡಿಮೆ, ಮರಗಳಲ್ಲಿ ಹಣ್ಣು ಕಡಿಮೆ, ಚೋರಭಯ, ಎಣ್ಣೆ ಗಂಧದ ಪದಾರ್ಥಗಳನ್ನು ಸಂಗ್ರಹಿಸುವದರಲ್ಲಿ ಲಾಭ, ಕೆಂಪು ಪದಾರ್ಥಗಳಿಗೆ ಹೆಚ್ಚು ಬೆಲೆ, ಬ್ರಾಹ್ಮಣ, ಕ್ಷತ್ರಿಯರುಗಳಿಗೆ ಕೆಡುಕು, ಮಂತ್ರಿ-ಮಾಂತ್ರಿಕ-ವೈದ್ಯ-ಶಿಪಾಯಿ ಇವರುಗಳಿಗೆ ನಾಶ.

4-2-35—5-3-35 ರವರೆಗೆ ಮಾಘಮಾಸ.

ಪ್ರಜಾಸುಖ, ಭಯ, ರಾಜರಿಗೆ ಕಲಹ, ಸುಭಿಕ್ಷ, ಆರೋಗ್ಯ, ಧಾನ್ಯಸಮೃದ್ಧಿ. ಫೆಬ್ರುವರಿ 18-19-20 ರಿಂದ 4 ನೇ ತಿಂಗಳಲ್ಲಿ ಧಾನ್ಯಲಾಭ. ಈ ತಿಂಗಳಿಂದ 8 ತಿಂಗಳವರೆಗೂ ಮನೆಮನೆಗಳಲ್ಲಿ ಕುಟುಂಬವಿರೋಧ, ಬರುವ ಭಾದ್ರಪದ ಆಶ್ವಯುಜ ಕಾರ್ತಿಕಮಾಸಗಳಲ್ಲಿ ಧಾನ್ಯಗಳಿಗೆ ಹೆಚ್ಚು ಬೆಲೆ ಮತ್ತು ಚಿನ್ನ-ಬೆಳ್ಳಿ-ಕಂಚು-ತಾಮ್ರ-ಎಳ್ಳು-ಕುಷ್ಠ ಇವುಗಳಿಗೂ ಹೆಚ್ಚು ಬೆಲೆ, ನಾಗಪುರದಲ್ಲಿ ಪ್ರಜೆಗಳಿಗೆ ತೊಂದರೆ, ಯುದ್ಧದಿಂದ ಹೆಚ್ಚು ಪ್ರಜಾ ನಷ್ಟ, ಕೆಲವುಕಡೆ ಹೆಚ್ಚಾದ ರೋಗಬಾಧೆ, ಭತ್ತ-ಗೋಧಿಗಳಿಗೆ ಸಮಬೆಲೆ, ಶೂದ್ರರುಗಳಿಗೆ ರೋಗ, ಹಸುಗಳಿಗೆ ಪೀಡೆ.

ತಾ|| 6-3-35—4-4-35 ರವರೆಗೆ ಫಾಲ್ಗುನಮಾಸ.

ಜನಗಳಿಗೆ ಭಯ, ಸುಖ, ರಸಪದಾರ್ಥಗಳಿಗೆ ನಾಶ, ಮಾರ್ಚಿ 20, 21, 22ನೇ ತಾರೀಖುಗಳಲ್ಲಿ ಧಾನ್ಯಸಂಗ್ರಹಿಸಿದರೆ 4ನೇ ತಿಂಗಳಲ್ಲಿ ಲಾಭ, ಪ್ರಜಾರೋಗ, ಚೋರೋಪದ್ರವ, ಭತ್ತ-ಗೋಧಿಗಳಿಗೆ ಸಮಬೆಲೆ, ಪಶುಗಳಿಗೆ ಪೀಡೆ, ಶೂದ್ರರಿಗೆ ಖಾಯಿಲೆ, ದುರ್ಭಿಕ್ಷ ಕೆಲವು ಸಮಯಗಳಲ್ಲಿ ಜನಗಳಿಗೆ ಆರೋಗ್ಯ, ರಾಜರಿಗೆ ಕ್ಲೇಶ, ಪಶುಪಕ್ಷಿಗಳಿಗೆ ಸೌಖ್ಯ.

ಹೊಸ ಭಾವಸಂವತ್ಸರದ ವೃಕ್ಷಿದ್ಧ ಪಂಚಾಂಗವನ್ನು ಮುದ್ರಿಸಿ ಪ್ರಚಾರಪಡಿಸಲು ಸಾಧ್ಯವಾಗದೇ ಹೋದುದರಿಂದ ಎಲ್ಲರೂ ಗಮನಿಸಬೇಕಾದ ಕೆಲವು ಮುಖ್ಯವಾದ ಅಂಶವನ್ನು ಮಹನೀಯರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡಿರುತ್ತೇವೆ.

ಕನೂರು ಪೀಠಾಚಾರ್ಯ, ಸಂಸ್ಥಾನಮಹಾವಿದ್ವಾನ್,
ಜ್ಯೋತಿಶ್ಶಾಸ್ತ್ರಪ್ರಧಾನೋಪಾಧ್ಯಾಯ
ಟಿ. ವಿ. ನರಸಿಂಹಾಚಾರ್ಯ, ಸಂಸ್ಥಾನ ಜ್ಯೋತಿಷವಿದ್ವಾನ್

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೋಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಔಷಧಿ ಹೆಸರು	ತೋಲ	ಮೂಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 22

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ಖರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 30

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,
(L. A. ಫೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (5)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು ಮಲೇರಿಯಾನವೇ ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, $\frac{1}{2}$ ಡಜ಼ 8-8-0 ಮತ್ತು ರೂ. 5

ರ್ಯುನೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶನೋವು, ಗಂಟುನೋವು ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಅಜ್ಜಿ ಪ ವ ಕಡಿತ, ಗಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿಶಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕುಮದ್ದುಗಳು, ಹೊಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ಹುಳಮೇಯುವ ರೋಗ, ದದ್ದು, ತುರಸುವ ನಂಜಿ ಹುಣ್ಣುಗಳನ್ನು ಶೀಘ್ರ ಗುಣಪಡಿಸುವದು. ಡಬ್ಬಿಗೆ ಆ. 5

ಹೇಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಔನ್ಸಿಗೆ ಆಣೆ 8, $\frac{1}{2}$ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ಕಾಯಗಳು ಶಕ್ತಿಹೀನಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತ ಹಿಂಸೆಯಲ್ಲವೇ? ಪ್ರಾಥ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ ಸಿರಪ್-ಸಾಲಿಸವನ ಅತ್ಯಂತಶ್ರೇಷ್ಠ ಕನಂತೆಯೇ ಯುವಕನಾಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ ಎಕ್ಸಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,
[31] (ಹಂಪನಕಟ್ಟೆ), 21, ಮಂಗಳೂರು.

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ನೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0;
2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (21)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು (ತೆಲುಗು)	೬ ಆಣೆ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಶಕ್ತಿಕ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	१ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸತ್ಯ! ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[13] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ ನೇ ಏಪ್ರಿಲ್ ೧೯೩೪ [ಸಂಚಿಕೆ ೫೧

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಜೀಯಾಚ್ಛ್ರೀ ರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ | ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ

ಸುವರ್ಣರಜತಾಂದೋಲಿಕೋತ್ಸವಾಹ್ವಾನಪತ್ರಿಕಾ.

ಆಸ್ತಿಕಮಹಾಶಯರಲ್ಲಿ ವಿಜ್ಞಾಪನೆ.

ಬೆಂಗಳೂರುಪಟ್ಟಣದ ದೇಶದ ಶೆಟ್ಟರು ಯಜಮಾನರು, ಸ್ವಾಗತಸಂಘದ ಸದಸ್ಯರು ಮತ್ತು ದೈವದವರು ಇವರ ಪ್ರಾರ್ಥನೆಯ ಮೇರೆಗೆ ಮಹಾ || || ಸ್ವಾರಿಯು ಇದೇ ಭಾವನಾಮ ಸಂ|| ಅಧಿಕ ವೈಶಾಖ ಶುದ್ಧ ೧೩ **(ತಾ|| 27-4-1934) ಶುಕ್ರವಾರ ಪ್ರಾತಃಕಾಲ 8 ಘಂಟೆ 45 ನಿಮಿಷಕ್ಕೆ** ಧರ್ಮಪ್ರಭುಗಳಾದ ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ದಯಪಾಲಿಸಿರುವ ಸಮಸ್ತ ರಾಜಮರ್ಯಾದೆಗಳೊಡನೆ ಮಹೋತ್ಸವಪೂರ್ವಕ ದಯಮಾಡಿಸುವದರಿಂದ ತಾವು ತಮ್ಮ ಬಂಧುಮಿತ್ರರೊಡನೆ ಆಗಮಿಸಿ ಶ್ರೀಗುರುಕೃಪೆಗೆ ಪಾತ್ರರಾಗಬೇಕೆಂದು ಕೋರುವ,

ಮಹಾಂತಿನ ಮಠ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ದೇಶದ ಶೆಟ್ಟರು ಯಜಮಾನರು,
ವಿ. ಚನ್ನಯ್ಯ, ಬಿ.ಎ., ಬಿ.ಎಲ್., ಅಡ್ವೊಕೇಟ್. ಕೆ. ನಾಗಪ್ಪ,
ಸೆಕ್ರೆಟರಿಗಳು, ಸ್ವಾಗತಸಂಘ.

ಮಹೋತ್ಸವಕ್ಕೆ ಪರಸ್ಥಳದಿಂದ ಬರುವ ಮಹಾಜನರೂ, ಸ್ವಯಂಸೇವಕರಾಗಲಿಚ್ಛಿಸುವ ಮಹನೀಯರೂ ತಮಗೆ ವಸತಿ ವಗೈರೆ ಅನುಕೂಲತೆಗಳನ್ನು ಅಪೇಕ್ಷಿಸುವ ಪಕ್ಷದಲ್ಲಿ ತಾವು ಬರುವ ತಾರೀಖು, ರೈಲ್ವೆಕಾಲ, ಜನಸಂಖ್ಯೆ ವಗೈರೆ ನಮೂದಿಸಿ ಸೆಕ್ರೆಟರಿಯವರಿಗೆ ತಾ|| 22—4—1934 ರ ಒಳಗಾಗಿ ತಲುಪುವಂತೆ ಪತ್ರವನ್ನು ಬರೆಯಬೇಕು. ರೈಲ್ವೆ ಪ್ರಯಾಣದ ಸ್ಥಳವಸತಿಗೆ ಒಂದೆರಡು ದಿನಗಳ ಮುಂಚಿತವಾಗಿ ಆಯಾಯ ಸ್ಟೇಷನ್ ಮಾಸ್ಟರಿಗೆ ತಿಳಿಸಿದಲ್ಲಿ ರೈಲ್ವೆ ಕ್ಯಾರೇಜು ವಗೈರೆ ಅನುಕೂಲವು ದೊರೆಯುತ್ತದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಹರಪನಹಳ್ಳಿಯೂ ಗಾಂಧಿಯವರೂ.

ಮಿ|| ಗಾಂಧಿಯವರು ಹರಪನಹಳ್ಳಿಗೆ ಬರುವರೆಂಬ ಸುದ್ದಿಯನ್ನು ಕೇಳಿದಕೂಡಲೆ ಇಲ್ಲಿಯ ಮುಖಂಡರು ನೂರಾರು ಜನರು ಸೇರಿ ಗಾಂಧಿಯು ಹರಪನಹಳ್ಳಿಗೆ ಬರಬಾರದೆಂದು ಮಹಜರೊಂದನ್ನು ತಯಾರ್ಮಾಡಿ ಸರಕಾರಕ್ಕೆ ಎಂದರೆ ಗೌರ್ನರವರಿಂದ ಹಿಡಿದು ತಾಲೂಕು ಸಬ್ ಮ್ಯಾಜಿಸ್ಟ್ರೇಟರವರೆಗೆ ಕಳುಹಿಸಿದುದರ ಮೇಲೆ ಈ ಊರಲ್ಲಿರುವ ಬೆರಳೆಣಿಂದೆಣಿಸುವಷ್ಟು ಸಂಖ್ಯೆಯನ್ನುಳ್ಳ ಗಾಂಧೀ ಭಕ್ತರು ಬೆದರಿ 'ಗಾಂಧಿಯು ಸುಮ್ಮನೆ ಬಂದು ಹೋಗುವುದಕ್ಕೆ ಅವಕಾಶವನ್ನು ಕೊಡಿ; ಜಾತಿಸಂಕರ ಕಾರ್ಯವೊಂದನ್ನೂ ಮಾಡುವುದಿಲ್ಲ' ಎಂದು ಹೇಳಿ ತಮ್ಮ ಪ್ರೋಗ್ರಾಮನ್ನು ಬದಲಾಯಿಸಿದುದಲ್ಲದೆ ಈ ಊರಿನ ಮುಖಂಡರನ್ನೂ, ಸ್ಥಳೀಯ ಸರ್ಕಾರದವರನ್ನೂ ಬಹುವಾಗಿ ಬೇಡಿಕೊಂಡುದರ ಮೇಲೆ ಎಲ್ಲರೂ ಒಪ್ಪಿ ಗಾಂಧಿಯು ಬಂದುಹೋಗಲು [illegible]

[illegible]

ಗ್ರಸ್ತವಾಗಿದೆಯೆಂದೂ, ಇದನ್ನು ಶೀಘ್ರವಾಗಿ ಪರಿಹರಿಸೆಂದೂ' ಪರಶಿವನನ್ನು ಧ್ಯಾನಿಸುತ್ತ ಶಿವಧ್ಯಾನೈಕಪರರಾಗಿದ್ದರು.

ಕೆಲವರು ಗಾಂಧೀದೋಷಕ್ಕೆ ಮರುಳಾಗಿ ಪಾರವಶ್ಯರಾದರು. 'ಜನಮರುಳೋ! ಜಾತ್ರೆಮರುಳೋ!!' ಎಂಬಂತೆ [illegible]

[illegible]

ಕೊಟ್ಟೂರೇಶನ ಯಾತ್ರೆ.

[illegible]

ಗಣಾರಾಧನೆಗೀ ಆರಾಧನೆಗಳು! ಇದು ಆ ವಿಭೂತಿಗಳ ಮಹಿಮೆಯೇ ಸರಿ! ಇಂಥ ಗುರುವರ್ಗ ಪುರುಷರ ಕೃಪಾದೃಷ್ಟಿಯು ಪೂರ್ಣವಿದ್ದುದರಿಂದಲೇ ವೀರಶೈವಧರ್ಮವು ಇಂದಿಗೂ ವಿರಾಜಿಸುತ್ತಿರುವದು.

[illegible]

ಶಿವಸಾಯುಜ್ಯ.

[illegible]

ಅಂಗುಲಿಸ್ಪರ್ಶವಂಮಾಡುತ್ತ ಮಾನಸಿಕವಾಗಿ ಗುರುಮಂತ್ರಜಪವಂ ಮಾಡಿ ಶಿವ-ಶಿವ- ಎಂದು ಮೆಲ್ಲಮೆಲ್ಲರಿಸಿ ಎರಡೂ ಕಣ್ಣುಗಳನ್ನು ಮುಚ್ಚಿ ಶಿವಧ್ಯಾನದಲ್ಲಿಯೇ ಮಗ್ನರಾಗಿರಲು [illegible]

[illegible]

ವಿಜ್ಞಾನವೂ ನಿರುದ್ಯೋಗವೂ.

[illegible]

ದು ಗಂಟೆಯಲ್ಲಿ ಸಾವಿರಾರು ವೃತ್ತಪತ್ರಿಕೆಗಳು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗುವುದೆಂಬುದನ್ನು ಕೇಳಿ ಮೂಗಿನಮೇಲೆ ಬೆರಳಿಡುತ್ತೇವೆ. ಈಗ ಕೊಟ್ಟ ಮರದಿಂದ ಅರ್ಧಗಂಟೆಯಲ್ಲಿ [illegible]

[illegible]

ಲ್ಲದೆಯೆಂದು ಧೈರ್ಯವಾಗಿ ಹೇಳಬಹುದು. ಒಂದು ಕಾಯಿಲೆಯಲ್ಲಿ ತಯಾರಿಕೆಯನ್ನೂ ಖರ್ಚನ್ನೂ ಸರಿದೂಗುವಂತೆ ಮಾಡಲು ಮಾನವನಿಂದಲ್ಲದೆ ಮತ್ತಾರಿಂದ ಸಾಧ್ಯ?

ಕರ್ನಾಟಕ ಸಾಹಿತ್ಯಪರಿಷತ್ತು ಪರಿಷತ್ತಿನ ಹೊಸಹಬ್ಬ.

ಕರ್ನಾಟಕ ಸಾಹಿತ್ಯಪರಿಷತ್ತು ಹೊಸದಾಗಿ ಕೈಕೊಂಡಿರುವ ಎರಡು ಸಮಾರಂಭಗಳಿಗೂ ಆಗಬೇಕಾದ ಏರ್ಪಾಟುಗಳು ಪರಿಷತ್ಕಾರ್ಯಾಲಯ ಸಮಾರಂಭದಲ್ಲಿ ಉತ್ಸಾಹದಿಂದ ನಡೆಯುತ್ತಿವೆ. ಆದರೂ ಕಾಲಾವಕಾಶ ಸ್ವಲ್ಪವಾಗಿರುವುದರಿಂದ ಮಹಾಜನರ ಸಹಕಾರವು ಬೇಗಬೇಗನೆ ದೊರೆಕುಬರಬೇಕೆಂದು ವಿಜ್ಞಾಪಿಸಬೇಕಾಗಿದೆ.

1. ಗ್ರಂಥಪ್ರದರ್ಶನ.

[illegible]

1. ವಿಚಾರೋಪನ್ಯಾಸಗಳು.

ಈ ಏಪ್ರಿಲಿಗೆ ವಿದ್ಯಾಭ್ಯಾಸದ ಆರಂಭದ ಸಹಕಾರವು [illegible]

[illegible]

ವರ್ತಮಾನಕೊಡಬೇಕೆಂದು ಬೇಡಿಕೆ.

ಎಂ. ಆರ್. ಶ್ರೀನಿವಾಸಮೂರ್ತಿ,
ವ್ಯವಸ್ಥಾಪಕ.

ಶ್ರೀ ಜಗದ್ಗುರು ಶ್ರೀಶೈಲಪರ್ವತಮಹಾಸಂಸ್ಥಾನದ ಸರ್ಕೀಟಿನ ಶುಭಾಗಮನ, ತಂಬ್ರಹಳ್ಳಿ.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಪಟ್ಟಾಧ್ಯಕ್ಷ ಶ್ರೀಮನ್ಮಾಗಲೂಟ ಭಕ್ತಾವರ್ ಶಿವಾಚಾರ್ಯರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ ಸರ್ಕೀಟಿನ [illegible]

[illegible]

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸುವರ್ಣರಜತಾಂದೋಲಿಕಾಮಹೋತ್ಸವ, ಬೆಂಗಳೂರು.

ಶ್ರೀ ಜಗದ್ಗುರುಗಳವರ ಮಹೋತ್ಸವವು ಬೆಂಗಳೂರು ನಗರದಲ್ಲಿ ಇದೇ ತಿಂಗಳು ೨೭ನೆಯ ತಾರೀಖು ಶುಕ್ರವಾರ ದಿವಸ ಪ್ರಾತಃಕಾಲ ೮||| ಘಂಟೆಗೆ, ನಮ್ಮನ್ನಾಳುವ ಮಹಾಪ್ರಭುಗಳವರು ದಯಪಾಲಿಸಿರುವ ಸಮಸ್ತ ರಾಜಮರ್ಯಾದೆಗಳೊಡನೆ ಅಸಾಧಾರಣ ವೈಭವದಿಂದ ನೆರವೇರುವುದು. ಬೆಂಗಳೂರು ನಗರವು ಮೈಸೂರುದೇಶದ ದ್ವಿತೀಯ ರಾಜಧಾನಿಯೆಂದು ಜಗದ್ವಿಖ್ಯಾತವಾಗಿರುವುದು ಸರ್ವರಿಗೂ ವೇದ್ಯವೇ ಅದೆ. ಇಂಥ ಮಹಾನಗರದಲ್ಲಿ ನೆರವೇರುವ ಮಹೋತ್ಸವದ ಸ್ವಾಗತಮಂಡಲಕ್ಕೆ ಜಗದ್ವಿಖ್ಯಾತರಾದ ದಿವಾನ್‌ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಅಧ್ಯಕ್ಷರಾಗಿಯೂ, ಮೈಸೂರು ಸೀಮೆಯ ಹೈಕೋರ್ಟಿನ ಪ್ರಧಾನಜಡ್ಜರಾದ ರಾಜಧರ್ಮಪ್ರವೀಣ ಮೆ|| ಪಿ. ಮಹಾದೇವಯ್ಯನವರು ಉಪಾಧ್ಯಕ್ಷರಾಗಿಯೂ ನಿಯಾಮಕರಾಗಿರುವುದರಿಂದ ಈ ಮಹೋತ್ಸವದ ವೈಭವವನ್ನು ವರ್ಣಿಸಲು ಸಾಧ್ಯವೇ? ಈ ರೀತಿಯಾಗಿ ಅನಿತರಸಾಧಾರಣ ವೈಭವದಿಂದ ನೆರವೇರುವ ಮಹೋತ್ಸವಕ್ಕೆ ಭರತಖಂಡದ ಪ್ರತಿಯೊಂದು ಭಾಗದಲ್ಲಿಯೂ ವಾಸವಾಗಿರುವ ಗುರುಭಕ್ತರು ಅವಶ್ಯವಾಗಿ ಆಗಮಿಸಿ ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕು. ಪ್ರತಿಯೊಂದು ಗ್ರಾಮದಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಅವಶ್ಯವಾಗಿ ಬಂದು ಜಗದಾಚಾರ್ಯರ ಸೇವೆಯಲ್ಲಿ ಭಾಗಿಗಳಾಗಬೇಕು. ಸಕಲವೈಭವಯುತವಾದ ಇಂಥ ಮಹೋತ್ಸವವು ಭರತಖಂಡದಲ್ಲಿ ಎಲ್ಲಿಯೂ ನೆರವೇರಲಾರದು. ಆದುದರಿಂದ ಇಂಥ ಸುಸಮಯವನ್ನು ಕಳೆದುಕೊಳ್ಳದೆ ಸಮಸ್ತ ಗುರುಭಕ್ತರೂ ತಮ್ಮ ಪುತ್ರಮಿತ್ರಕಳತ್ರಬಂಧುಬಾಂಧವರೊಡನೆ ಆಗಮಿಸಿ ಜಗದಾಚಾರ್ಯರ ದರ್ಶನಾಶೀರ್ವಾದಗಳಿಂದ ಧನ್ಯರಾಗಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ನ್ಯೂಜಿಲೆಂಡ್ ಸರಕಾರದವರು ಪುರಾತನಕಾಲದ ಒಂದು ಓತಿಕಾಟವನ್ನು ಬಹು ಜೋಪಾನದಿಂದ ಕಾಪಾಡುತ್ತಿರುವರು. ಅದಕ್ಕೆ 3 ಕಣ್ಣುಗಳಿರುವುವಂತೆ!

ಲಂಡನ್‌ನಗರದಲ್ಲಿ ಒಂದು 'ಸ್ತ್ರೀವಿರೋಧಕಸಂಘ'ವು ಸ್ಥಾಪಿಸಲ್ಪಟ್ಟಿರುವದು. ಇದರಲ್ಲಿ 18 ಜನ ಮೆಂಬರಿದ್ದು ಅವರೆಲ್ಲರೂ ಸ್ತ್ರೀಯರ ಪ್ರೇಮದಿಂದ ವಂಚಿತರಾಗಿರುವರಂತೆ!

ನಾರ್ಫಕ್ ದೇಶಕ್ಕೆ ಸೇರಿದ ಟೆರಿಂಗ್‌ಟನ್ ಸೇಂಟ್ ಕ್ಲೆಮೆಂಟ್ಸ್ ಗ್ರಾಮದ ಬ್ರೌನ್ ಎಂಬ ಒಬ್ಬ ರೈತನ ಹೆಂಡತಿಯು 11 ತಿಂಗಳುಗಳಲ್ಲಿ ಎರಡು ಸಾರೆ ಅವಳಿ ಮಕ್ಕಳನ್ನು ಪ್ರಸವಿಸಿರುವಳಂತೆ!

ರಷ್ಯಾ ಸರಕಾರದವರು ಮಾಸ್ಕೋನಗರದಿಂದ ಮಾಂಚೂಕೊ ರಾಜ್ಯದ ಸಮೀಪದಲ್ಲಿರುವ ಖಾಬಾರೋವಸ್ಕ್ ನಗರಕ್ಕೆ ಟೆಲಿಫೋನ್ ಹಾಕಬೇಕೆಂದಿರುವರು. ಇದು 5,600 ಮೈಲುಗಳ ಉದ್ದವಾಗಿ ಪ್ರಪಂಚದಲ್ಲೆಲ್ಲಾ ಅತ್ಯಂತ ಉದ್ದವಾದ ಟೆಲಿಫೋನ್ ಲೈನ್ ಆಗುವುದು.

ಈದ್‌ಹಬ್ಬದ ಕಾಲದಲ್ಲಿ ಮುಸಲ್ಮಾನರು ಗೋಹತ್ಯ ಮಾಡಬಹುದೆಂದು ಸರಕಾರದವರು ಅಪ್ಪಣೆಮಾಡಿರುವುದರಿಂದ ಶಿಕಾರಗ್ರಾಮದ ಹಿಂದೂ ನಿವಾಸಿಗಳೆಲ್ಲರೂ ಒಟ್ಟಾಗಿ ಆ ಗ್ರಾಮವನ್ನೇ ಬಿಟ್ಟುಹೋಗಿರುತ್ತಾರೆ. ಸರಕಾರದವರು ಗೋಹತ್ಯೆಯನ್ನು ನಿಲ್ಲಿಸುವವರೆಗೆ ಯಾರೂ ಹಿಂತಿರುಗಿ ಬರುವುದೇ ಇಲ್ಲವಂತೆ!

ಬ್ರೂಕ್‌ಲಿನ್‌ನಗರದ ಮಿಸ್ ಮೇಬಲ್ ಉಲ್ಫ್ ಎಂಬಾಕೆಯು ದೀರ್ಘಕಾಲ ಹೊಟ್ಟೆಶೂಲೆಯಿಂದ ನರಳುತ್ತಿದ್ದು, ಡಾಕ್ಟರರು ಆಕೆಯ ಹೊಟ್ಟೆಯನ್ನು ಆಪರೇಷನ್ ಮಾಡಲು ಅದರಲ್ಲಿ 80 ಸ್ಕ್ರೂಗಳು, 77 ಬೋಲ್ಟುಗಳು, 83 ಗುಂಡುಸೂಜಿಗಳು ಮತ್ತು 728 ಸಣ್ಣ ಮೊಳೆಗಳು ಇದ್ದು, ವಿನೋದಕ್ಕಾಗಿ ಅವುಗಳನ್ನು ತಿಂದೆನೆಂದು ಹೇಳಿದಳಂತೆ!

ಇಂಗ್ಲೆಂಡಿನ ಸಿನಿಮಾ ಮತ್ತು ನಾಟಕ ಶಾಲೆಗಳಲ್ಲಿ 'ಅಪ್ಲಾಸೋಮಿಟರ್' ಎಂಬ ಒಂದು ಹೊಸತರಹದ ಎಲೆಕ್ಟ್ರಿಕ್ ಯಂತ್ರವು ಇಡಲ್ಪಟ್ಟಿರುವುದು. ಈ ಯಂತ್ರದಿಂದ ಪ್ರದರ್ಶನದ ಕಾಲದಲ್ಲಿ ಎಷ್ಟು ಜನ ಪ್ರೇಕ್ಷಕರು ಕರತಾಡನಗಳನ್ನು ಮಾಡಿದರೆಂಬುದನ್ನು ಸುಲಭವಾಗಿ ಗೊತ್ತುಮಾಡಬಹುದಂತೆ! ಯಾವನಾದರೊಬ್ಬ ನಟನ ಅಥವಾ ನಟಿಯ ವಿಷಯದಲ್ಲಿ ಪ್ರೇಕ್ಷಕರ ಆದರವು ಎಷ್ಟರಮಟ್ಟಿಗಿರುವುದೆಂಬುದನ್ನು ಇದರಿಂದ ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ.

ತರೀಕೆರೆ ರೇಲ್ವೆ ಅನಾಹುತದ ತೀರ್ಪು.

ಚಿಕ್ಕಮಗಳೂರು ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಕೃಷ್ಣಮೂರ್ತಿರಾಯರು ತರೀಕೆರೆ ರೈಲ್ವೇ ಅನಾಹುತದ ಮೊಕದ್ದಮೆಯಲ್ಲಿ ಡ್ರೈವರ್ ಶಿವಾನಂದಂ ಮತ್ತು ಚೀಫ್ ಗಾರ್ಡ್ ಪ್ರಸಾದ ಇವರಿಬ್ಬರಿಗೂ 4 ತಿಂಗಳ ಕಠಿಣ ಶಿಕ್ಷೆಯನ್ನೂ 100 ರೂ. ಜುಲ್ಮಾನೆಯನ್ನೂ ವಿಧಿಸಿ, 3 ನೇ ಅಪರಾಧಿ ಅಂಡರ್ ಗಾರ್ಡ್ ನಾಗರತ್ನಂರವರನ್ನು ಬಿಡುಗಡೆ ಮಾಡಿರುತ್ತಾರೆ.

ಶಿವಮೊಗ್ಗಾ ದೊಂಬೀಕೇಸಿನ ತೀರ್ಪು.

ಶಿವಮೊಗ್ಗೆಯ ದೊಂಬಿ ಮೊಕದ್ದಮೆಯಲ್ಲಿ ಸೆಷನ್ಸ್ ಜಡ್ಜರಾದ ಮಿ|| ಎಚ್. ಎಂ. ಕೃಷ್ಣಸ್ವಾಮಿಯವರು 17 ಜನ ಅಪರಾಧಿಗಳ ಪೈಕಿ ಕಾಳ ಎಂಬವನಿಗೆ 12 ವರ್ಷಗಳ ಕಠಿಣ ಶಿಕ್ಷೆಯನ್ನೂ, ವಿಠಲರಾವ್ ಗಣೇಶರಾವ್, ಭವಾನಿಸಿಂಗ್, ರಾಮರಾವ್ ಪವಾರ್ ನಾರಾಯಣರಾವ್, ಈ 5 ಜನರಿಗೆ 7 ವರ್ಷಗಳ ಕಠಿಣ ಶಿಕ್ಷೆಯನ್ನೂ ವಿಧಿಸಿ ಮಿಕ್ಕ 11 ಜನರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿರುತ್ತಾರೆ. ಶಿಕ್ಷಿಸಲ್ಪಟ್ಟವರು ಹೈಕೋರ್ಟಿನಲ್ಲಿ ಅಪೀಲು ಮಾಡುವರೆಂದು ತಿಳಿದುಬಂದಿದೆ.

ಈಗ್ಗೆ ಸುಮಾರು 100 ವರ್ಷಗಳ ಹಿಂದೆ ಈಸ್ಟ್‌ಇಂಡಿಯಾ ಕಂಪೆನಿಯವರು ಅಪಾರವಾದ ಚಿನ್ನವನ್ನು ಇಂಡಿಯಾದಿಂದ ಇಂಗ್ಲೆಂಡಿಗೆ ರವಾನಿಸಿದರು. ಚಿನ್ನವನ್ನು ತೆಗೆದುಕೊಂಡುಹೋಗುತ್ತಿದ್ದ ಹಡಗುಗಳ ಪೈಕಿ ಕೆಲವು ಹಡಗುಗಳು ಆಫ್ರಿಕಾದೇಶಕ್ಕೆ ಸೇರಿದ ಟೇಬಲ್‌ಕೊಲ್ಲಿಯಲ್ಲಿ ಮುಳುಗಿಹೋದುವು. ಅಂದಿನಿಂದಲೂ ಆ ಚಿನ್ನವು ಸಮುದ್ರದಲ್ಲಿಯೇ ಇರುವುದು. ಈಗ ದಕ್ಷಿಣಆಫ್ರಿಕಾ ಸರಕಾರದವರು ಆ ಚಿನ್ನವನ್ನು ಮೇಲಕ್ಕೆತ್ತುವ ಕೆಲಸವನ್ನು ಒಂದು ಬ್ರಿಟಿಷ್ ಕಂಪೆನಿಗೆ ವಹಿಸಿರುತ್ತಾರೆ. ಆ ಚಿನ್ನದ ಬೆಲೆಯು ಸುಮಾರು 300 ಕೋಟಿ ರೂ. ಗಳಾಗಬಹುದೆಂದು ನಂಬಲ್ಪಟ್ಟಿದೆ.

ಚಿಕಾಗೋ ನಗರದ ಡಾ|| ಜೇನ್ ಪಾಲ್ ಫರ್ನೆಲ್ ಎಂಬವರು ರತ್ ಎಂಬ ಒಬ್ಬ ಸಾಮಾನ್ಯ ಹುಡುಗಿಯ ಮೂಗು ಮತ್ತು ಬಾಯಿಯನ್ನು ಆಪರೇಷನ್ ಮಾಡಿದರು. ಇದರಿಂದ ಆಕೆಗೆ ಅಸಾಧಾರಣವಾದ ಸೌಂದರ್ಯವು ಪ್ರಾಪ್ತವಾಗಲು, ಡಾ|| ಜೇನ್‌ರವರೇ ಅವಳನ್ನು ಮದುವೆಯಾದರು. ಆಕೆಯ ಸೌಂದರ್ಯಕ್ಕೆ ಅನೇಕರು ಬೆರಗಾದರು. ಕೊನೆಗೆ ಅವಳಿಗೆ ಒಬ್ಬ ಕೋಟ್ಯಧೀಶ್ವರನ ಸ್ನೇಹವುಂಟಾಯಿತು. ಡಾ|| ಫರ್ನೆಲ್‌ರವರು ಇದನ್ನು ತಿಳಿದು ಕೋಟ್ಯಧೀಶ್ವರನ ಮೇಲೆ ದಾವೆಯನ್ನು ಹೂಡಿ 16,00,000 ರೂಪಾಯಿಗಳ ಪರಿಹಾರವನ್ನು ಪಡೆದರು. ಇಷ್ಟರಲ್ಲಿ ಕೋಟ್ಯಧೀಶ್ವರನಿಗೂ ಆ ಹುಡುಗಿಗೂ ಏನೋ ಮನಸ್ತಾಪ ಹುಟ್ಟಿ ಹುಡುಗಿಯು ಕೋಟ್ಯಧೀಶ್ವರನಮೇಲೆ 9,00,000 ರೂಪಾಯಿಗಳ ಪರಿಹಾರಕ್ಕೆ ದಾವೆಯನ್ನು ಹೂಡಿದಳು. ಅಂತೂ ಇದರಿಂದ ಹುಡುಗಿಯು ತನ್ನ ಪ್ರೀತಿಯ ಗಂಡನನ್ನು ಕಳೆದುಕೊಂಡಳು! ಶ್ರೀಮಂತನು 25 ಲಕ್ಷ ರೂಪಾಯಿಗಳನ್ನು ಕಳೆದುಕೊಂಡನು!

ಜೇನಿನ ಉಪಯೋಗ!

ಪಕ್ವವಾದ ಮಾವು, ಬಾಳೆ ಮುಂತಾದ ಹಣ್ಣುಗಳನ್ನು ಚೆನ್ನಾಗಿ ತೊಳೆದು ಒಂದು ಶುಭ್ರವಾದ ಗಾಜಿನ ಪಾತ್ರೆಯಲ್ಲಿ ತಿಳಿಜೇನಿನ ತುಪ್ಪದಲ್ಲಿರಿಸಿದ್ದರೆ ಅವುಗಳ ರುಚಿಯು ಎಷ್ಟು ದಿನಗಳಾದರೂ ಕೆಡುವುದಿಲ್ಲವಂತೆ!

ಭೂಕಂಪದ ವೈಚಿತ್ರ್ಯ!

ಪೂರ್ಣಿಯಾ ಡಿಸ್ಟ್ರಿಕ್ಟಿಗೆ ಸೇರಿದ ಹುಮರಾವ ಗ್ರಾಮದಲ್ಲಿ ಒಬ್ಬ ಬಡ ರೈತನು ಹೊಲದಲ್ಲಿ ಹುಲ್ಲು ಕೊಯ್ಯುತ್ತಿದ್ದಾಗ ಭೂಕಂಪದಿಂದ ಭೂಮಿಯು ಇಬ್ಭಾಗವಾಗಿ ಸೀಳಿ ಡೊಗರಿನಲ್ಲಿ ರೈತನು ಮಾಯವಾದನು. 5-6 ದಿವಸಗಳನಂತರ ಅದೇ ಡೊಗರಿನಿಂದ ನೀರು ಉಕ್ಕಲಾರಂಭಿಸಿ ಅದರೊಡನೆ ರೈತನೂ ಸಜೀವನಾಗಿ ಈಚೆಗೆ ಬಂದನಂತೆ!

ಬಹುಪುತ್ರವತಿಯರು!

ಬರ್ಮಿಂಗ್‌ಹ್ಯಾಂ ನಗರದ ಮಿಸೆಸ್ ಹಿಚಿನ್ಸ್ ಎಂಬ 23 ವರ್ಷದ ಸ್ತ್ರೀಯು ಏಕಕಾಲದಲ್ಲಿ 4 ಮಕ್ಕಳನ್ನು ಪ್ರಸವಿಸಿದಳೆಂಬ ಕಾರಣದ ಮೇಲೆ ಅಧಿಕಾರಿಗಳು ನಿರುದ್ಯೋಗಿಯಾಗಿದ್ದ ಆಕೆಯ ಗಂಡನಿಗೆ ಒಂದು ಕೆಲಸವನ್ನು ಕೊಟ್ಟರು. ಇದರಂತೆಯೇ ಅರ್ಜಂಟಿನಾ ದೇಶಕ್ಕೆ ಸೇರಿದ ಬೋಗೋಟಾ ಎಂಬಲ್ಲಿ ಒಬ್ಬ ರೈತನ ಪತ್ನಿಯು ಏಕಕಾಲದಲ್ಲಿ 7 ಮಕ್ಕಳನ್ನು ಪ್ರಸವಿಸಿದಳಂತೆ! ಅಧಿಕಾರಿಗಳು ಅವನಿಗೆ ಒಂದು ಸ್ಪೆಷಲ್ ಗ್ರ್ಯಾಂಟನ್ನು ಕೊಡುವಂತೆ ಅಪ್ಪಣೆಮಾಡಿರುವರು!

ಪ್ಯಾರಿಸ್ಸಿನಲ್ಲಿ ಭಯಂಕರ ಕೊಲೆ!

ಪ್ಯಾರಿಸ್ಸಿನ ಪೋಲಿನೋ ಎಂಬ ಅತ್ಯಂತ ಸುಂದರ ಸ್ತ್ರೀಯು ತನ್ನ ಪ್ರಣಯಪತಿಯಾದ ಮಿ|| ಕೊನೆರೆಟ್ ಎಂಬವರನ್ನು ತನ್ನ ಅಂತಃಪುರದಲ್ಲಿ ಪಿಸ್ತೂಲಿನಿಂದ ಹೊಡೆದು ಕೊಲೆಮಾಡಿದಳು. ಕೊನೆರೆಟನು ಪ್ಯಾರಿಸ್ ಪೋಲೀಸ್ ಇಲಾಖೆಯಲ್ಲಿ ಒಬ್ಬ ದೊಡ್ಡ ಅಧಿಕಾರಿಯಾಗಿದ್ದನು. ಪೋಲಿನೋಳು ಪ್ಯಾರಿಸ್ ನಗರದಲ್ಲೆಲ್ಲಾ ಅತ್ಯಂತ ಸುಂದರಿಯಾದವಳೆಂದು ಹೆಸರಾಗಿದ್ದಳು. ಆಕೆಯ ಲಾವಣ್ಯರಾಶಿಗೆ ಮೋಹಿತನಾಗಿ ಆಕೆಯೊಡನೆ ಪ್ರಣಯ ಸಂಬಂಧವನ್ನಿಟ್ಟುಕೊಂಡಿದ್ದ ಕೊನೆರೆಟನು ಅನ್ಯಸ್ತ್ರೀಯಳನ್ನು ಮೋಹಿಸಿದನೆಂದು ಸಂದೇಹಪಟ್ಟು, ಆಕೆಯು ಅವನನ್ನು ಕೊಲೆ ಮಾಡಿದಳಂತೆ! ಪೋಲೀಸರು ಆಕೆಯನ್ನು ಅರೆಸ್ಟು ಮಾಡಿ, ಆಕೆಯ ಅಂತಃಪುರವನ್ನು ಶೋಧಿಸಲು ಅಲ್ಲಿ ಎಷ್ಟೋ ವಿಚಿತ್ರಪ್ರಕರಣಗಳು ಹೊರಗೆ ಬಂದಿವೆ. ಆಕೆಯ ಪ್ರಣಯಕ್ಕೆ ಹಲವು ಮಂದಿ ದೊಡ್ಡಮನುಷ್ಯರು ತುತ್ತಾಗಿರುವ ನಿದರ್ಶನದ ಕಾಗದಪತ್ರಗಳು ದೊರೆತಿವೆ. ಆ ಕಾಗದ ಪತ್ರಗಳಲ್ಲಿ ಇಂಡಿಯಾ ದೇಶದ ರಾಜರುಗಳೂ, ಶ್ರೀಮಂತರೂ, ಪರ್ಷಿಯಾದ ಲಕ್ಷಾಧೀಶರೂ, ಪ್ಯಾರಿಸ್ಸಿನ ಪ್ರಸಿದ್ಧ ಬ್ಯಾರಿಸ್ಟರುಗಳೂ ಆಕೆಗೆ ಬರೆದಿರುವ ಪ್ರಣಯಪತ್ರಗಳು ಸಿಕ್ಕಿವೆ. ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಆಕೆಯನ್ನು ತಂದು ನಿಲ್ಲಿಸಿದಾಗ ಕೋರ್ಟಿನಲ್ಲಿ ವಿಪರೀತ ಕೋಲಾಹಲವುಂಟಾಯಿತು. ಆಕೆಯ ದಿವ್ಯ ಸೌಂದರ್ಯವು ಎಲ್ಲರನ್ನೂ ಆಕರ್ಷಿಸಿತು. ಮ್ಯಾಜಿಸ್ಟ್ರೇಟರು ಆಕೆಯ ಅಂತಃಪುರದಲ್ಲಿ ಸಿಕ್ಕ ಪ್ರಣಯಪತ್ರಗಳನ್ನು ಕುರಿತು ಆಕೆಯನ್ನು ಪ್ರಶ್ನಿಸಿದಾಗ ಆಕೆಯು ಅತ್ತುಬಿಟ್ಟಳು. ಆಗ ಕೋರ್ಟಿನಲ್ಲಿ ನೆರೆದಿದ್ದ ಜನಸಮೂಹವೆಲ್ಲಾ ದುಃಖಾಕ್ರಾಂತವಾಯಿತು. ವಿಚಾರಣೆಯು ಇನ್ನೂ ನಡೆಯುತ್ತಿದೆ.

ಜರ್ಮನಿಯಲ್ಲಿ ಸೈನ್ಯದ ಸಿದ್ಧತೆ!

ಮೊನ್ನೆ ಮೊನ್ನೆ ಸೇರಿದ ಬ್ರಿಟಿಷ್ ಪಾರ್ಲಿಮೆಂಟ್ ಮಹಾಸಭೆಯಲ್ಲಿ ಜರ್ಮನ್ ಸೈನ್ಯಸಿದ್ಧತೆಯನ್ನು ಕುರಿತು ಹೆಚ್ಚಿನ ರಹಸ್ಯಗಳು ಹೊರಬಿದ್ದಿವೆ. ಇಂಗ್ಲೆಂಡಿನ ಫಾರಿನ್ ಸೆಕ್ರೆಟರಿಗಳಾದ ಸರ್ ಜಾನ್ ಸೈಮನ್ ಸಾಹೇಬರು ಒಂದು ಮಹತ್ತ್ವಪೂರ್ಣವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. "ಈವರ್ಷ ಜರ್ಮನಿಯಲ್ಲಿ ಅದ್ಭುತವಾದ ಸೈನ್ಯಸಿದ್ಧತೆಯೂ ಶಸ್ತ್ರಸಂಚಯವೂ ಮಾಡಲ್ಪಟ್ಟಿವೆ. ಜರ್ಮನಿಯು ತನ್ನ ನೌಕಾಪಡೆಯ ವೆಚ್ಚವನ್ನು ಕಳೆದ ವರ್ಷಕ್ಕಿಂತ ೫ ಕೋಟಿ ಏರಿಸಿದೆ. ವೈಮಾನಿಕ ದಳದ ಮೇಲೆ ೧೬|| ಕೋಟಿ ಮಾರ್ಕ್ ಹೆಚ್ಚಾಗಿ ಖರ್ಚುಮಾಡಲು ನಿರ್ಧರವಾಗಿದೆ. ಈ ವಿಧವಾಗಿ ಜರ್ಮನಿಯು ತನ್ನ ಸೈನ್ಯಶಕ್ತಿಯನ್ನು ಹೆಚ್ಚಿಸುತ್ತಿರುವುದು ಇಂಗ್ಲೆಂಡಿನಲ್ಲಿ ಕಳವಳವನ್ನುಂಟುಮಾಡಿದೆ. ಬರ್ಲಿನ್ ನಗರದಲ್ಲಿರುವ ನಮ್ಮ ರಾಯಭಾರಿಗಳು ಈ ನಮ್ಮ ಅಸಮಾಧಾನವನ್ನು ಜರ್ಮನ್ ಸರ್ಕಾರಕ್ಕೆ ತಿಳುಹಿಸಬೇಕಾಗಿ ಕೋರಿದ್ದೇವೆ. ನಾಳೆದಿನ ಜೆನೀವಾ ನಗರದಲ್ಲಿ ನಡೆಯಲಿರುವ ಶಸ್ತ್ರಸನ್ಯಾಸ ಸಭೆಯಲ್ಲಿಯೂ ನಮ್ಮ ಮನೋಗತವನ್ನು ಜರ್ಮನಿಗೆ ವ್ಯಕ್ತಮಾಡುತ್ತೇವೆ. ಜರ್ಮನಿಯು ತನ್ನ ಸೈನ್ಯಶಕ್ತಿಯನ್ನು ಹೆಚ್ಚಿಸುತ್ತಿರುವುದನ್ನು ನಾವು ಜನಾಂಗ ಸಭೆಯ ಅವಗಾಹನೆಗೆ ತಂದೇತರುತ್ತೇವೆ. ಜರ್ಮನ್ ರಾಷ್ಟ್ರವು ರಹಸ್ಯವಾಗಿ ಮಾಡುತ್ತಿರುವ ಯುದ್ಧಸಿದ್ಧತೆಯು ಯೂರೋಪಿನ ಎಲ್ಲ ರಾಷ್ಟ್ರಗಳಿಗೂ ತಿಳಿದುಬಿಟ್ಟಿದೆ"

ಸ್ವೀಕಾರ

ಕೊಪ್ಪಳ ತಾಲೂಕು ಅಳವುಂಡಿ ಗ್ರಾಮ ನಿವಾಸಿಗಳಾದ ವೇ|| ಗೊಂಡಬಾಳ ಸಾಲಿಮಠದ ಗುರಯ್ಯನವರು ಶ್ರೀ ಕೊಟ್ಟೂರೇಶನ ರಥೋತ್ಸವಕ್ಕೆ ಹೋಗಿ ತಮ್ಮ ಮನೋರಥವನ್ನು ಪೂರೈಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ.ಗಳು ವೇ|| ಶಿವಯ್ಯನವರು ಸ್ಕೂಲ್ ಮಾಸ್ತರ್ ಅಳವುಂಡಿ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಬಂಕಾಪುರ ತಾ|| ಬಸನಾಳ ಮಠದ ವೇ|| ರುದ್ರಾರಾಧ್ಯರ ಮಠೋದ್ಧಾರ ಕಾರ್ಯದ ಸಂತೋಷಕ್ಕಾಗಿ ಭಕ್ತಜನರು 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಗುರುಭ್ಯೋ ನಮಃ

ಅಗ್ನಿಯ ಅನಾಹುತ.

ದೇಶಬಾಂಧವರೇ. ಎಲ್ಲಿ ನೋಡಿದರಲ್ಲಿ ಅಸಂತೋಷವೇ ವ್ಯಾಪಿಸಿರುವದು. 'ನೋಡಬಾರದ್ದು ನೋಡಿರಿ ಆಗಬಾರದ್ದು ಆದೀತು'—ಎಂಬ ಪೂರ್ವೋಕ್ತಿಗಳು ವರ್ತಮಾನಯುಗದಲ್ಲಿ ನಿಜವಾಗುತ್ತಿವೆ. ಅನೇಕಾನೇಕ ವರ್ಷಗಳಿಂದ ಯಾರಾದರೂ ಭೂಕಂಪವೆಂಬ ಸಂಗತಿಯನ್ನು ಕೇಳಿದ್ದರೋ ಅಥವಾ ನೋಡಿದ್ದರೋ ? ಪೂರ್ವೇತಿಹಾಸಗಳಿಂದಲೂ ಮತ್ತು ಹಿರಿಯರ ಹೇಳಿಕೆಯಿಂದಲೂ ಕೆಲವರರಿತವರಿದ್ದರೂ ಅವರು ಅರಿಯದವರಾಗಿದ್ದರು. ಕೆಲವು ದಿವಸಗಳ ಹಿಂದೆ ನಡೆದ ಭಯಂಕರ ಧರಣೀಕಂಪದ ಅನಾಹುತವನ್ನು ಕೇಳುತ್ತಲೇ ವಿಚ್ಛೇದವಾಗದ ಹೃದಯವಾವುದೋ? ಅನೇಕ ಸಹಸ್ರ ಜನರು ಸತ್ತರು; ಅನೇಕ ಸುಂದರ ಕಟ್ಟಡಗಳು ನೆಲಸಮವಾದವು. ಅನೇಕರು ನಿರಾಶ್ರಿತರಾಗಿ ಕಾಂತಾರದಲ್ಲಿ ಸಂಚರಿಸಹತ್ತಿದರು. ಇಂಥ ಯಾವ ವಿಪರೀತ ವಿಪತ್ತಿಯ ಭೀಕರ ಚಿತ್ರವನ್ನು ನೆನೆಸಿಕೊಂಡರೆ ಮೈಮೇಲೆ ರೋಮಾಂಚಗಳೇಳುವುವು. ಈಶ್ವರೇಚ್ಛೆಯನ್ನರಿಯಲು ಯಾರು ತಾನೆ ಸಮರ್ಥರು ? ಹೀಗೆ ಭೂಕಂಪದಿಂದ ಎಲ್ಲೆಲ್ಲಿಯೂ ಹಾ-ಹಾಕಾರವುಂಟಾಗಿರುವಲ್ಲಿ ಅಗ್ನಿಯಿಂದ ಅನಾಹುತಬೇರೆ! ನೈಜಾಂ ಪ್ರಾಂತಾಂತರ್ಗತ ಇಲಾಖಾ ಪಾಯಗಳ್ಳಿ ಸೇರಿದ ಕೊಲ್ಹಾರು ಗ್ರಾಮದಲ್ಲಿ ತಾ|| 27-3-34 ದಿವಸ ೨೫ ಗುಡಿಸಲುಗಳು ಸುಟ್ಟು ಅದರಲ್ಲಿ ರಕ್ಕೆ ಸಾವಿರಾರು ರೂಪಾಯಿಗಳ ಆಸ್ತಿಯು ಹಾಗೂ ಪಶುಪ್ರಾಣಿಗಳು ಸಹ ಹೋಮವಾಗಿವೆ. ಅಲ್ಲದೆ ಸದರಿ ಗ್ರಾಮಕ್ಕೆ ಸಮೀಪವಾಗಿರುವ ವಾಡಿ ಜಂಕ್ಷನ್ ಶಿರವಾಳ, ಇಟ್ಟಗಿ, ನಾಯಕಲ್, ರಸ್ತಾಪೂರ ಹೀಗೆ ಇನ್ನು ಅನೇಕ ಗ್ರಾಮಗಳಲ್ಲಿ ಸಾವಿರಾರು ಗುಡಿಸಲುಗಳು ಅಗ್ನಿದೇವನಿಂದ ಭಸ್ಮೀಭೂತವಾಗಿರುತ್ತವೆ. ಇದರಿಂದ ಮಹಾಕಷ್ಟನಷ್ಟಗಳಿಗೆ ಗುರಿಯಾಗಿರುವ ಅನಾಥರನ್ನು ದೀನಬಂಧುವಾದ ಪರಮೇಶ್ವರನು ತನ್ನ ಕೃಪಾಕಟಾಕ್ಷದಿಂದ ಕಾಪಾಡಬೇಕೆಂದು ಹಾರೈಸುವ,

ಕಾಂತವೀರ ಕೊಲ್ಹಾರ.

ಮಾರಮ್ಮನ ಜಾತ್ರೆ ಕ್ಯಾಸನೂರು.

ಕ್ಯಾಸನೂರುಗ್ರಾಮವು ಶೈವ ಮತ್ತು ವೀರಶೈವರಿಗೆ ಪೂಜ್ಯಸ್ಥಾನವಾಗಿದೆ. ಇಲ್ಲಿ ಮೂರುವರ್ಷಕ್ಕೆ ಒಂದಾವರ್ತಿ ಮಾರಮ್ಮನವರ ರಥೋತ್ಸವ ನಡೆಯುತ್ತದೆ. ಈಶ್ವರ, ಬಸವಣ್ಣ, ಮತ್ತು ಭೈರವನ ನಿತ್ಯಪೂಜೆಯು ನಡೆಯುತ್ತದೆ. ಮಾರ್ಚಿ ತಾ|| ೨೬ ನೇ ಸೋಮವಾರ ಅಭಿಷೇಕವು ವಿಜೃಂಭಣೆಯಿಂದ ನಡೆಯಿತು. ದಿಂದಿನ ಪೂಜೆಯೂ ನಡೆಯಿತು. ಶ್ರೀ ಕ್ಯಾಸನೂರು ಸಂಸ್ಥಾನದಲ್ಲಿರುವ ಗಿರಿಜಾದೇವಿಯು ಮತ್ತು ೨ ಜನ ಬಾಲಕರು ಮಂಗಳಾರತಿಯನ್ನು ಹಾಡಿದರು. ಮಾರ್ಚಿ ತಾ|| ೨೭ನೇ ಮಂಗಳವಾರ ರಾತ್ರಿ ರಥೋತ್ಸವಕ್ಕೆ ಪ್ರಾರಂಭವಾಯಿತು. ಮರೂರು ಪಟ್ಟಿತಗೌಡರು, ಗೊಗ್ಗಿಹಳ್ಳಿ ವೀರಣ್ಣ, ಶೂಕಾನವರ ದ್ಯಾವಣ್ಣ, ಗೊಗ್ಗಿಹಳ್ಳಿ ಚೆಟ್ಟಿಣ್ಣ, ಪಟೇಲ ರಾಮಣ್ಣ, ಇಟ್ಟಿಂಣ್ಣ ಮುಂತಾದ ಗ್ರಾಮಸ್ಥರು ಪ್ರಾಣಿಹಿಂಸೆ ಮಾಡಕೂಡದೆಂದು ಭಾಷಣವನ್ನು ಮಾಡಿದರು. ಅವರ ಭಾಷಣಕ್ಕೆ ಅನುಕೂಲವಾಗಿ ಅಸಂಖ್ಯ ಜನರು ಕೈಯೆತ್ತಿ ಜಯಘೋಷವನ್ನು ಮಾಡಿದರು. ಆಗ ಹಿಂಸೆಯನ್ನು ಮಾಡುವದನ್ನು ನಿಲ್ಲಿಸಿ ದೇವಿಕಾರ್ಯವು ಚನ್ನಾಗಿ ನಡೆಯಿತು. ಸುಮಾರು ೪೦೦೦ ತೆಂಗಿನಕಾಯಿಗಳು ಮಾರಮ್ಮಗೆ ಸಮರ್ಪಿತವಾದವು. ಬಂದ ಜನಗಳಿಗೆ ನೀರಿಗೆ ಬಹಳ ತೊಂದರೆಯಾಗಿ ಬಹಳ ಜನರು ತಾಪಗೊಳ್ಳುವಾಗ ಗೊಗ್ಗಿಹಳ್ಳಿಯವರ ವೀರಣ್ಣನು ಅರವಟ್ಟಿಗೆಯನ್ನು ಇಟ್ಟಿದ್ದನು. ಅದೂ ಸಾಲದೆ ಬಹಳ ತೊಂದರೆಯಾಯಿತು. ಮಾರಮ್ಮನು ಸರ್ವರಿಗೂ ಸುಖಶಾಂತಿಯನ್ನೀಯಲೆಂದು ಹಾರೈಸುವ,

ಓರ್ವ ಪ್ರತ್ಯಕ್ಷದರ್ಶಿ.

ಬಲ್ಲಿರಾ ?

(ವಿಜ್ಞಾನಪರಿಚಯ)

೧. ಈರುಳ್ಳಿ ಕೊಯ್ಯುವಾಗ ಕಣ್ಣಿನಲ್ಲಿ ನೀರು ಏಕೆ ಬರುತ್ತದೆ?

ನಮ್ಮ ಕಣ್ಣಿನಲ್ಲಿ ಯಾವಾಗಲೂ ಒಂದು ವಿಧವಾದ ದ್ರವವು ಉತ್ಪತ್ತಿಯಾಗುತ್ತಲೇ ಇರುವುದು. ಇದನ್ನೇ ನಾವು ಕಣ್ಣೀರು ಎನ್ನುವುದು. ಕಣ್ಣುಗುಡ್ಡೆಗಳನ್ನು ಶುಭ್ರವಾಗಿಡಲು ಇದು ಸಹಕಾರಿಯಾಗಿದೆ. ನಾವು ಕಣ್ಣು ಮಿಟುಕಿಸುವಾಗ ಅದರ ಮೇಲ್ಭಾಗದಲ್ಲಿ ಉತ್ಪತ್ತಿಯಾಗುವ ನೀರು ಕೆಳಭಾಗಕ್ಕೆ ಹರಿಯುವುದು. ಆಗ ಕಣ್ಣುಗುಡ್ಡೆಯ ಮೇಲಿರುವ ಕಶ್ಮಲಗಳು ನೀರಿನಜತೆಯಲ್ಲಿ ಬರುವುವು. ಅಕಸ್ಮಾತ್ತಾಗಿ ಕಣ್ಣೀರಿನ ಉತ್ಪತ್ತಿಯು ಹೆಚ್ಚಾದಲ್ಲಿ, ಹೆಚ್ಚಿನ ನೀರು ಹೊರಗೆ ಬರುವುದು. ಈರುಳ್ಳಿಯನ್ನು ಕೊಯ್ಯುವಾಗ ಅದರಲ್ಲಿರುವ ಒಂದು ಪದಾರ್ಥವು ಗಾಳಿಯ ಮೂಲಕ ಕಣ್ಣೀರನ್ನು ಉತ್ಪತ್ತಿಮಾಡುವ ಗ್ರಂಥಿಗಳನ್ನು ಸೇರಿ ಹೆಚ್ಚು ನೀರು ಉತ್ಪತ್ತಿಯಾಗುವಂತೆ ಮಾಡುತ್ತದೆ. ಅದ್ದರಿಂದಲೇ ನಮ್ಮ ಕಣ್ಣಿನಿಂದ ಹೆಚ್ಚಾದ ನೀರು ಹೊರಗೆ ಬರುವುದು. ಹೀಗೆ ಉತ್ಪತ್ತಿಯಾಗುವ ನೀರಿನಿಂದಲೇ ಮೇಲೆ ಹೇಳಿದ ಪದಾರ್ಥದಿಂದ ಕಣ್ಣಿಗೆ ಉಂಟಾಗುವ ಅಪಾಯವು ತಪ್ಪುವುದು.

೨. ಸಾಬೂನಿನಿಂದ ಕೊಳೆಹೋಗುವುದು ಹೇಗೆ?

ಕೊಳೆಯು ಸಾಮಾನ್ಯವಾಗಿ ಕೊಬ್ಬು ಅಥವಾ ಎಣ್ಣೆ ಮತ್ತು ಧೂಳು ಇವುಗಳಿಂದುಂಟಾಗುತ್ತದೆ. ನಮ್ಮ ಶರೀರದಿಂದ ಎಣ್ಣೆಯಂತಿರುವ ಬೆವರು ಯಾವಾಗಲೂ ಬರುತ್ತಿರುತ್ತದೆ. ಬೆವರಿನಿಂದ ನೆನೆದ ಬಟ್ಟೆಗಳ ಮೇಲೆ ಗಾಳಿಯಲ್ಲಿರುವ ಧೂಳಿನ ಕಣಗಳು ಕುಳಿತರೆ ಅವು ಕೊಳೆಯಾಗುತ್ತವೆ. ಈ ರೀತಿ ಉಂಟಾದ ಕೊಳೆಯನ್ನು ಹೋಗಲಾಡಿಸಲು ಸಾಬೂನನ್ನು ಉಪಯೋಗಿಸುತ್ತೇವೆ.

ಸಾಬೂನುಗಳಲ್ಲಿ ಅಲ್ಕಲಿ (alkali) ಎಂಬ ಪದಾರ್ಥವಿರುವುದು. ಇದಕ್ಕೆ ಎಣ್ಣೆಯೊಡನೆ ಬೆರೆತುಕೊಳ್ಳುವ ಶಕ್ತಿಯಿರುವುದು. ಇದು ಬಟ್ಟೆಗಳಲ್ಲಿರುವ ಎಣ್ಣೆಯ ಭಾಗದೊಡನೆ ಬೆರೆತುಕೊಳ್ಳುವುದರಿಂದ ಅದು ಬಟ್ಟೆಯಿಂದ ಬೇರೆಮಾಡಲ್ಪಡುತ್ತದೆ. ಒಗೆಯುವಾಗ ಅದರೊಡನೆ ಧೂಳೂ ಹೊರಟುಹೋಗಿ ಬಟ್ಟೆಯು ಶುಭ್ರವಾಗುತ್ತದೆ.

ಸಾಬೂನೂ ಎಣ್ಣೆಯೂ ಬೆರೆತುಕೊಳ್ಳುವಂತೆ ನೀರೂ ಎಣ್ಣೆಯೂ ಬೆರೆಯಲಾರವು. ಆದುದರಿಂದಲೇ ಬರೀ ನೀರಿನಿಂದ ಬಟ್ಟೆಯ ಎಲ್ಲ ಕೊಳೆಯನ್ನೂ ಹೋಗಲಾಡಿಸಲು ಅಸಾಧ್ಯ. ನಾವು ಬಟ್ಟೆಯೊಗೆಯುವ ನೀರಿನಲ್ಲಿ ಸ್ವಲ್ಪ ಸಾಬೂನನ್ನು ಕರಗಿಸಿದ್ದರೆ ಅದು ಬಟ್ಟೆಗಳಲ್ಲಿರುವ ಕೊಳೆಯನ್ನು ಬೇರೆಮಾಡುವುದು.

೩. ಇದ್ದಲು ಕಪ್ಪಗಿದ್ದರೂ ಅದರ ಬೂದಿಯು ಬೆಳ್ಳಗಿರುವುದೇಕೆ ?

ಬೂದಿಯ ಬಣ್ಣವು ಅದರಲ್ಲಿರುವ ಬೇರೆ ಬೇರೆ ಪದಾರ್ಥಗಳ ಬಣ್ಣವನ್ನೇ ಅನುಸರಿಸಿರುವುದು. ಇದ್ದಲಿನಲ್ಲಿ ಇಂಗಾಲವಲ್ಲದೆ ಇನ್ನೂ ಬೇರೆಬೇರೆ ಪದಾರ್ಥಗಳಿರುತ್ತವೆ. ಅದು ಉರಿಯುವಾಗ ಇಂಗಾಲವು ಗಾಳಿಯಲ್ಲಿರುವ ಆಮ್ಲಜನಕದೊಡನೆ ಬೆರೆತು ಇಂಗಾಲಾಮ್ಲವನ್ನು ಕೊಡುತ್ತದೆ. ಕಡೆಯಲ್ಲಿ ಉಳಿಯುವ ಪದಾರ್ಥದಲ್ಲಿ ಪೊಟಾಸಿಯಂ, ಸುಣ್ಣ ಮುಂತಾದ ಲೋಹಗಳ ಉಪ್ಪಿರುತ್ತದೆ. ಇವುಗಳು ಸಾಮಾನ್ಯವಾಗಿ (ಮಾಸಲು) ಬೆಳ್ಳಗಿರುತ್ತವೆ.

ಹೊಗೆಬತ್ತಿಯು ಉರಿದ ಮೇಲೆ ಮಾಸಲು ಬಿಳಿಯ ಬೂದಿಯು ಉಳಿಯುವುದಕ್ಕೂ ಇದೇ ಕಾರಣ; ಸಾಮಾನ್ಯವಾಗಿ ಈ ಪದಾರ್ಥಗಳು ಆಮ್ಲಜನಕದೊಡನೆ ಸೇರುವುದಿಲ್ಲ. ಆದುದರಿಂದಲೇ ಹಿಂದೆ ನಿಲ್ಲುವುವು. ಅದನ್ನೇ ನಾವು 'ಬೂದಿ' ಎನ್ನುವುದು.

೪. ಮನುಷ್ಯನ ದೇಹದ ಬೆಲೆಯೆಷ್ಟು ?

ಲಂಡನ್ನಿನ 'ಸಂಡೆ ಎಕ್ಸ್‌ಪ್ರೆಸ್' ಎಂಬ ಪತ್ರಿಕೆಯ ಲೇಖಕರೊಬ್ಬರು ಮನುಷ್ಯನ ದೇಹದ ಬೆಲೆಯು ನೂರೂವರೆ ಷಿಲಿಂಗ್ (ಸುಮಾರು 2½ ರೂ. ಗಳು) ಎಂದು ಕಂಡುಹಿಡಿದಿರುವರು.

ಅಂದರೆ ಮನುಷ್ಯನ ದೇಹದಲ್ಲಿ, ಒಂದು ಸಣ್ಣ ಕೋವಿಗಾಗುವಷ್ಟು ಗಂಧಕವೂ, ಆರು ಚಾರು ಸೋಪುಗಳಿಗಾಗುವಷ್ಟು ಸುಣ್ಣವೂ, ಒಂದು ದಪ್ಪಮೊಳೆಗಾಗುವಷ್ಟು ಕಬ್ಬಿಣವೂ, ಇಪ್ಪತ್ತು ದೀಪದ ಪೆಟ್ಟಿಗೆಗಳಿಗಾಗುವಷ್ಟು ರಂಜಕವೂ, ಹತ್ತು ಬಟ್ಟಲು ಕಾಫಿಗಾಗುವಷ್ಟು ಸಕ್ಕರೆಯೂ, ಆಟದ ಸಾಮಾನಿನಂತಿರುವ ಒಂದು ಸಣ್ಣ ಬಂದೂಕವನ್ನು ಹೊತ್ತಿಸುವಷ್ಟು ಪೊಟಾಸಿಯಂ ಲೋಹವೂ ಇದೆಯೆಂದು ಬರೆಯುತ್ತಾರೆ.

ಮತ್ತೊಬ್ಬ ಲೇಖಕರ ಅಭಿಪ್ರಾಯ.

ಸುಮಾರು 150 ಪೌಂಡು ತೂಕವುಳ್ಳ ಮನುಷ್ಯನ ದೇಹದಲ್ಲಿ 1200 ಮೊಟ್ಟೆಗಳಲ್ಲಿರುವ ಪದಾರ್ಥವಿದೆ. ಅವನಲ್ಲಿರುವ ವಾಯುವಿನಿಂದ 3649 ಘನಅಡಿಯುಳ್ಳ ಒಂದು ಗ್ಯಾಸೋಮೀಟರನ್ನು ತುಂಬಬಹುದು; ಅಲ್ಲದೆ, ನಾಲ್ಕು ಸಣ್ಣ ಮೊಳೆಗಳನ್ನು ಮಾಡುವಷ್ಟು ಕಬ್ಬಿಣವೂ, 75 ಮೇಣದ ಬತ್ತಿಗಳಿಗಾಗುವಷ್ಟು ಕೊಬ್ಬೂ, 8064 ದೀಪದ ಪೆಟ್ಟಿಗೆಗಳಿಗಾಗುವಷ್ಟು ರಂಜಕವೂ, ಒಂದು ವಿಮಾನವನ್ನು ಮೇಲಕ್ಕೆತ್ತಲು ಸಾಕಾಗುವಷ್ಟು ಜಲಜನಕವೂ (Hydrogen) ಆರು ಟೀ ಚಮಚದಷ್ಟು ಉಪ್ಪೂ, ಒಂದು ಬಟ್ಟಲು ಸಕ್ಕರೆಯೂ, 10 ಗ್ಯಾಲನ್‌ಗಳಷ್ಟು ನೀರೂ ಇರುವುವೆಂದು ಕಂಡುಹಿಡಿದಿದ್ದಾರೆ.

ಇನ್ನೊಂದು ದೃಷ್ಟಿಯಿಂದ.

ಮನುಷ್ಯನದೇಹದಲ್ಲಿ 500 ಮಾಂಸಖಂಡಗಳೂ, 10,00,00,00,00,000 ಸಣ್ಣ ಸಣ್ಣ ಗೂಡುಗಳೂ (cells), 206 ಬೇರೆ ಬೇರೆ ಮೂಳೆಗಳೂ, 4 ಗ್ಯಾಲನ್ ರಕ್ತವೂ, ನೂರಾರು ಅಡಿಗಳು ರಕ್ತನಾಳಗಳೂ, ಲಕ್ಷಗಟ್ಟಲೆ ರಂಧ್ರಗಳೂ ಇವೆ.

ಹೃದಯದ ತೂಕ ಸುಮಾರು 8-12 ಔನ್ಸುಗಳು. ಹೃತ್ಕುಕ್ಷಿಗಳಲ್ಲಿ ಸುಮಾರು 4-6 ಔನ್ಸುಗಳಷ್ಟು ದ್ರವವನ್ನು ತುಂಬಬಹುದು. ಅದರ ಅಳತೆ $5 \times 3\frac{1}{2} \times 2\frac{1}{2}$ ಇಂಚುಗಳು. ಹೃದಯವು ಪ್ರತಿ ನಿಮಿಷದಲ್ಲಿಯೂ 22½ ಪೌಂಡು ರಕ್ತವನ್ನು 'ಪಂಪ್' ಮಾಡುತ್ತದೆ. ಒಂದು ವರ್ಷದಲ್ಲಿ ಒಬ್ಬ ಸಾಮಾನ್ಯ ಮನುಷ್ಯನ ಹೃದಯವು 1,16,80,000 ಪೌಂಡು ರಕ್ತವನ್ನು 'ಪಂಪ್' ಮಾಡುತ್ತದೆ.

ಗಾಂಧಿಯವರ ಮೇಲೆ ಸರೋಜಿನೀ ದೇವಿಯವರ ಟೀಕೆ!

"ಗಾಂಧಿಯವರ ಪ್ರಕಟನಪತ್ರವು ನನಗೆ ವಿಸ್ಮಯವನ್ನುಂಟುಮಾಡಿದೆ. ಪ್ರಕಟನೆಯು ಕೇವಲ ಅವಮಾನಕರವಾಗಿದೆ. ಗಾಂಧಿಯವರೇನೋ ತಮ್ಮ ಪ್ರತಿಯೊಂದು ಅವಮಾನ ಅನಿಶ್ಚಿತ ಮನೋವೃತ್ತಿಗಳನ್ನು ಒಂದು ವಿಧವಾದ ತಪಸ್ಸೆಂದು ಹೇಳುವುದನ್ನು ಬಿಡುವುದಿಲ್ಲ. ತಮ್ಮ ತಪ್ಪು ಕೆಲಸಗಳನ್ನೂ, ತಪ್ಪು ಅಭಿಪ್ರಾಯಗಳನ್ನೂ ತಮಗೆ ಕೇಳಿಸುತ್ತಿರುವ ದೇವದತ್ತ ಅಂತರ್ಧ್ವನಿಯ ಪ್ರೇರಣೆಗಳೆಂದು ಕರೆಯುವುದೇ ಅವರ ವಿಲಕ್ಷಣ ಸ್ವಭಾವವಾಗಿದೆ. ಈ ಪ್ರಕಟನೆಯಿಂದ ಅವರು ತಮ್ಮ ಅಸಂಖ್ಯಾತ ಅನುಯಾಯಿಗಳನ್ನು ಅಲ್ಲಗಳೆದಿದ್ದಾರೆ. ಗಾಂಧಿಯವರ ಸತ್ಯಾಗ್ರಹದಲ್ಲಿ ಶ್ರದ್ಧೆಯಿಂದ ಕಾರ್ಯದಕ್ಷತೆಯನ್ನು ತೋರಿಸಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡವರನ್ನು ಮೋಸಮಾಡಿದಂತಾಗಿದೆ. ಇಂತಹ ಸಂದರ್ಭದಲ್ಲಿ ಗಾಂಧಿಯವರು ಮಾಡಿದ ಪ್ರಕಟನೆಗೆ ಪನೂ ಬೆಂಬಲ ದೊರೆಯಲಾರದು. ಆಲ್‌ಇಂಡಿಯಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯನ್ನು ಆದಷ್ಟು ಬೇಗನೆ ಸೇರಿಸಿ, ಈ ಕುರಿತು ಯೋಗ್ಯವಾದುದೊಂದು ನಿರ್ಧಾರಕ್ಕೆ ಬರದೆ ಗತ್ಯಂತರವಿಲ್ಲ. ಅ. ಇಂ. ಕಾ. ಕಮಿಟಿಯ ಸಮ್ಮತಿಯಿಲ್ಲದೆ ಗಾಂಧಿಯವರಾಗಲಿ ಅಥವಾ ಬೇರಾವ ವ್ಯಕ್ತಿಯಾಗಲಿ ಮಾಡುವ ಪ್ರಕಟನೆಯು ಸಾರ್ವತ್ರಿಕವಾಗಿ ಅಂಗೀಕೃತವಾಗಲಾರದು. ಗಾಂಧಿಯವರ ಈ ನೂತನ ನಿರ್ಧಾರವನ್ನು ಕೊಂಡಾಡುವ ಮಹಾನುಭಾವರು ಗಾಂಧಿಯವರ ಪ್ರಕಟನೆಯ ಅಂತರ್ಯವನ್ನು ತಿಳಿದಂತೆ ತೋರುವುದಿಲ್ಲ. ಸತ್ಯಾಗ್ರಹದ ನಿಷ್ಫಲತೆಗೆ ಈ ಸ್ವರಾಜ್ಯಪಾರ್ಟಿಯ ಮುಖಂಡರ ನಿರ್ಬಲತೆಯೇ ಕಾರಣವಲ್ಲದೆ, ಗಾಂಧಿಯವರ ಕಾರ್ಯಕ್ರಮಗಳಲ್ಲವೆಂಬಂಶವು ಆ ಪ್ರಕಟನೆಯನ್ನು ಚೆನ್ನಾಗಿ ಓದುವವರಿಗೆ ತಿಳಿಯದೆ ಇರದು. ಆ ಪ್ರಕಟನೆಯು ಬರೇ ಒಂದು ಸಲಹೆಯೇ ಹೊರತು, ಕಾನೂನುಭಂಗ ನಿರೋಧದ ಆಜ್ಞೆಯಲ್ಲ. ಈ ಪ್ರಕಟನೆಯಿಂದ ಉಂಟಾದ ಮಹೋದ್ವೇಗವೂ, ರಾಜಕೀಯ ಅರಾಜಕತೆಯೂ, ದೇಶಾಭ್ಯುದಯಕ್ಕೆ ಹಾನಿಕರವಾಗಿವೆ." ಎಂದು ಸರೋಜಿನೀದೇವಿಯವರು ಕೋಪೋದ್ರೇಕದಿಂದ ಗಾಂಧಿಯವರನ್ನು ಪ್ರತಿಭಟಿಸಿದ್ದಾರೆ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨-೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨-೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 31

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (6)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೆಜ್ವರಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಅಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬಿ. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ರ್‍ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವನೋವು, ಗಂಟುನೋವು ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಅಜೀರ್ಣದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕುಮದ್ದುಗಳು, ಹೋಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮು ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಯುವ ರೋಗ, ಪದ್ದು, ತುರಿಸುವ ನಂಜು ಹುಣ್ಣುಗಳನ್ನು ಕ್ಷಣ ಗುಣಪಡಿಸುವದು. ಡಬ್ಬಿಗೆ ಅ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವಿ ಹುಣ್ಣು, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ 'ಮಾರ್ಸ್ಪೊ' ಮೊಡವೆ ಕಾಯಿಗಳು ಚಕ್ಕೆ... ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಟ್ಟು ಹಿಂಸೆಯಲ್ಲವೇ ? ಪ್ರಾಯ ದೇಹವಂತನಾಗಿ ಸದಾ ಆನಂದದಲ್ಲಿ ಬೇರುವಂತೆ ಮಾಡುವ **ಸಿರಪ್-ಸಾಲಿಸನ್** ಆತ್ಮಸಂರಕ್ಷಣೆಯಂತೆಯೇ ಯುವಕರಿಗಿರುವದು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಬಾಧಿಸುವುದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು : ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರ:— ಮಲೇರಿಯಾನ ಕಂಪೆನಿ,

[32] (ಹಂಪನಕಟ್ಟೆ), 21, ಮಂಗಳೂರು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 23

ಅನುಭವಸಿದ್ಧ ಔಷಧಗಳು.

(1) **ಧಾತುಪುಷ್ಟಿ ಲೇಹ್ಯ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟು ದೋಷಗಳು, ಮುಟುಸ್ರಾವವು ಹೆಚ್ಚು ಕಡಿಮೆಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) **ಮೇಹಕುಠಾರ**—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರರೋಗದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0

(4) **ಮಲೇರಿಯಾ ನಿವಾರಿಣಿ**—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) **ಬಾಲಗ್ರಹಗುಟಿಕೆ**—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) **ಮಹಾಮದನಕಾಮೇಶ್ವರೀ ಲೇಹ್ಯ**—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (22)

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್,

ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಅಣಾ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦X೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚ ಪೀಠಾರೋಹಣವಾದಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[14] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಖ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ ನೇ ಏಪ್ರೆಲ್ ೧೯೩೪ [ಸಂಚಿಕೆ ೫೨

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು **"ವೀರಶೈವರತ್ನ"** ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಕನ್ನಡ ಗ್ರಂಥಪ್ರದರ್ಶನ.
ಕರ್ನಾಟಕ ಸಾಹಿತ್ಯಪರಿಷತ್ತು.

ಗ್ರಂಥಪ್ರದರ್ಶನಕ್ಕಾಗಿ ಪುಸ್ತಕಗಳನ್ನು ಕಳುಹಿಸಿಕೊಡಬೇಕೆಂದು ಲೇಖಕರನ್ನೂ, ಪ್ರಕಾಶಕರನ್ನೂ ಪ್ರಾರ್ಥಿಸಿಕೊಂಡಿದ್ದುದು ಸರಿಯಷ್ಟೆ. ಕ್ರಿ. ಶ. ೧೯೦೧ ರಿಂದ ಈಚೆಗೆ ಸುಮಾರು ಮೂರು ಸಾವಿರದಮೇಲೆ ಗ್ರಂಥಗಳು ಪ್ರಕಟವಾಗಿರುವ ಹಾಗೆ ನಮಗೆ ಕೆಲವು ದಾಖಲೆಗಳಿಂದ ತಿಳಿದುಬಂದಿದೆ. ಆದರೆ ಈ ಪ್ರದರ್ಶನಕ್ಕೆ ಎಲ್ಲ ಗ್ರಂಥಗಳೂ ಬಂದಿಲ್ಲ. ಇನ್ನೂ ಅನೇಕವಾಗಿ ಗ್ರಂಥಗಳು ಬರಬೇಕಾಗಿವೆ. ಈ ಮೂವತ್ತು ವರ್ಷಗಳಲ್ಲಿ ಪ್ರಕಟವಾಗಿರುವ ಕನ್ನಡಗ್ರಂಥಗಳನ್ನು ಸಿಂಹಾವಲೋಕನಕ್ರಮದಲ್ಲಿ ವಿಮರ್ಶೆಮಾಡಿ ಕನ್ನಡ ಭಾಷಾಸಾಹಿತ್ಯಗಳ ಅಭಿವೃದ್ಧಿಯನ್ನು ಇತರ ಭಾಷಾಸಾಹಿತ್ಯಗಳ ಬೆಳವಣಿಗೆಯೊಂದಿಗೆ ಹೋಲಿಸಿ ಕನ್ನಡನಾಡಿನ ಶ್ರೇಯಸ್ಸಿಗೆ ಸಾಧಕಗಳಾದ ಅನೇಕ ವಿಚಾರ ಸಮಸ್ಯೆಗಳನ್ನು ಕರ್ನಾಟಕಪರಿಷತ್ತು ಆಲೋಚನೆಗೆ ತೆಗೆದುಕೊಳ್ಳಬೇಕಾಗಿದೆ. ಈ ಮಹತ್ಕಾರ್ಯವು ಸಾಕ್ಷಾತ್ತಾಗಿ ಪುಸ್ತಕಗಳನ್ನು ಪ್ರದರ್ಶಿಸಿ, ಮಹಾಜನರ ಸದಭಿಪ್ರಾಯವನ್ನು ಪಡೆಯುವುದರಿಂದ ಬಹುಮಟ್ಟಿಗೆ ಸಾಧ್ಯವಾಗುವುದು. ಆದುದರಿಂದ ಎಲ್ಲರೂ ಕೂಡಲೆ ಗ್ರಂಥಗಳನ್ನು ಕಳುಹಿಸಿಕೊಡಬೇಕು ಎಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಎಂ. ಆರ್. ಶ್ರೀನಿವಾಸಮೂರ್ತಿ,
ವ್ಯವಸ್ಥಾಪಕ.

ಕಾಗೆಗಳ ನಾಶ!

ಚಿಕಾಗೋ ನಗರದಲ್ಲಿ ಕಾಗೆಗಳು ಪ್ರಜಾಸಮ್ಮುದಿಗೆ ಭಂಗಕಾರಿಗಳೆಂದು ಅಧಿಕಾರಿಗಳು ಅವುಗಳನ್ನು ನಾಶಪಡಿಸುವುದಕ್ಕಾಗಿ ಕೆಲವು ಜನ ವಾಲಂಟಿಯರನ್ನು ನೇಮಿಸಿರುವರಂತೆ!

ಚಿರಂಜೀವಿತ್ವ.

ಡಾ|| ಇಂಗೋ ಡಬ್ಲ್ಯು. ಡಿ. ಹಾಕ್ ಮತ್ತು ಡಾ|| ಇ. ಎಚ್. ವೆಸ್ಟ್ಲಿಂಗ್ ಎಂಬ ಅಮೇರಿಕೆಯ ಇಬ್ಬರು ಸುಪ್ರಸಿದ್ಧ ಡಾಕ್ಟರರು ಇನ್ನುಮುಂದೆ ಜನರಲ್ಲಿ ರೋಗಾದ್ಯುಪದ್ರವಗಳೇ ತಲೆದೋರದಂತೆಯೂ, ಎಲ್ಲರೂ ಸರ್ವದಾ ತಾರುಣ್ಯವನ್ನೇ ಅನುಭವಿಸುವಂತೆಯೂ ಮಾಡಬಹುದೆಂದು ಪ್ರಕಟಿಸಿರುವರು. ನಾವು ಪ್ರತಿನಿತ್ಯ ಕುಡಿಯುವ ನೀರಿನಲ್ಲಿ ಹಗುರವಾದ ನೀರು ಮತ್ತು ಭಾರವಾದ ನೀರು ಎಂದು ಎರಡು ಭಾಗಗಳಿರುವವು. ಮೇಲ್ಕಂಡ ಡಾಕ್ಟರರು ಭಾರವಾದ ನೀರನ್ನು ಹಗುರವಾದ ನೀರಿನಿಂದ ಪ್ರತ್ಯೇಕಿಸಿ, ಅನೇಕ ಪ್ರಯೋಗಗಳಿಂದ ಮನುಷ್ಯರು ಮುಪ್ಪಾಗುವುದಕ್ಕೆ ನೀರಿನ ಭಾರವಾದ ಭಾಗವೇ ಕಾರಣವೆಂದು ನಿರ್ಧರಿಸಿರುವರು. ನೀರಿನಲ್ಲಿ ಪ್ರತಿ 5000 ಭಾಗಕ್ಕೆ 1 ಭಾಗ ಮೇಲ್ಕಂಡ ಭಾರವಾದ ನೀರಿರುವದಂತೆ! ನಮ್ಮ ಶರೀರವು ಈ ಭಾರವಾದ ನೀರಿನ ಭಾಗವನ್ನು ಸುಲಭವಾಗಿ ಪ್ರತ್ಯೇಕಿಸಲಾರದಂತೆ! ಭಾರವಾದ ನೀರಿನ ಭಾಗವು ನಮ್ಮ ಶರೀರದಲ್ಲಿ ಹೆಚ್ಚಿದ ಹಾಗೆಲ್ಲಾ ನಮ್ಮ ಶಕ್ತಿಯು ಕುಂದುತ್ತ ಬರುವುದಂತೆ! ಆದುದರಿಂದ ನೀರಿನಲ್ಲಿರುವ ಭಾರವಾದ ಭಾಗವನ್ನು ತೆಗೆದುಹಾಕಿ ಸೇವಿಸುವುದಾದರೆ ಮನುಷ್ಯನು ಚಿರಕಾಲ ಬಾಳಬಹುದೆಂದು ನಿರ್ಧರಿಸಿರುವರಲ್ಲದೆ, ನೀರನ್ನು ಮೇಲೆ ಹೇಳಿದಂತೆ ಪ್ರತ್ಯೇಕಿಸುವುದಕ್ಕೆ ಅತ್ಯಂತ ಸುಲಭವಾದ ಮಾರ್ಗವನ್ನು ಕಂಡುಹಿಡಿಯುತ್ತಿರುವರು.

ನೂತನ ಶಬ್ದವರ್ಧಕ ಯಂತ್ರ!

ನ್ಯೂಯಾರ್ಕ್‌ನಗರದ ಡಾಕ್ಟರ್ ಇ. ಇ. ಫ್ರೀ ಎಂಬವರು ಕಳೆದ 8 ವರ್ಷಗಳಿಂದಲೂ ಕಷ್ಟಪಟ್ಟು ಒಂದು ಹೊಸತರದ ಶಬ್ದವರ್ಧಕ ಯಂತ್ರವನ್ನು ತಯಾರಿಸಿರುವರು. ಈ ಯಂತ್ರವು ಶಬ್ದವನ್ನು 10 ಲಕ್ಷ ಪಾಲು ಹೆಚ್ಚಿಸುವುದರಿಂದ, ಇದರ ಸಹಾಯದಿಂದ ಹಣ್ಣುಗಳ ಮತ್ತು ಮರಗಳ ಒಳಭಾಗದಲ್ಲಿ ಕೊರೆಯುವ ಕ್ರಿಮಿಗಳ ಶಬ್ದವನ್ನು ಸಹ ಅತ್ಯಂತ ಸುಲಭವಾಗಿ ಪತ್ತೆಮಾಡಬಹುದಂತೆ!

ಮುಂದಿನ ಯುದ್ಧ!

ಲಂಡನ್ನಿನ ಒಬ್ಬ ಪ್ರಸಿದ್ಧ ಗಣಿತಶಾಸ್ತ್ರಪ್ರವೀಣರು ಮುಂದಿನ ಘೋರಯುದ್ಧವು 1937 ನೇ ಇಸವಿಯಲ್ಲಿ ನಡೆಯುವುದೆಂದು ಹೇಳಿ, ಅದಕ್ಕೆ ಕಾರಣವನ್ನು ಕೆಳಗೆ ಕಂಡ ಗಣಿತರೂಪದಲ್ಲಿ ಸಿದ್ಧಮಾಡಿರುವರು.

ಜುಲು ಯುದ್ಧವು ಪ್ರಾರಂಭವಾದದ್ದು	1880 ರಲ್ಲಿ
ಯುದ್ಧದ ಕಾಲ	1 ವರ್ಷ
ಒಟ್ಟು ಸಂಖ್ಯೆ	1881
	1
ಅದೇ ಸಂಖ್ಯೆಯನ್ನು ಕ್ರಮವಾಗಿ	8
	8
ಕೂಡಿಸಿರಿ 1,8,8,1	1
ಬೋಯರ್‌ಯುದ್ಧವು ಪ್ರಾರಂಭವಾದದ್ದು	1899 ರಲ್ಲಿ
ಯುದ್ಧದ ಕಾಲ	3 ವರ್ಷ
	1902
	1
ಪುನಃ ಅದೇ ಸಂಖ್ಯೆಯನ್ನು	9
	0
ಕ್ರಮವಾಗಿ ಕೂಡಿಸಿರಿ 1,9,0,2	2
ಘೋರಯುದ್ಧವು ಪ್ರಾರಂಭವಾದದ್ದು	1914 ರಲ್ಲಿ
ಯುದ್ಧದ ಕಾಲ	4 ವರ್ಷ
	1918
	1
ಮತ್ತು ಅದೇ ಸಂಖ್ಯೆಯನ್ನು	9
	1
ಕ್ರಮವಾಗಿ ಕೂಡಿಸಿರಿ 1,9,1,8	8
ಮುಂದಿನ ಯುದ್ಧವು ಪ್ರಾರಂಭವಾಗುವುದು.	1937 ರಲ್ಲಿ

ಪತ್ರವ್ಯವಹಾರ.

ಜಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ನಮೋನಮಃ ಶ್ರೀಗುರುಪಂಚಕಾಯ.

ಶ್ರೀಮದ್ವೀರಶೈವಧರ್ಮೋನ್ನತಿ ಪರಿಷತ್ತು, ಧೋತ್ರಿ ಮೊದಲನೆಯ ಅಧಿವೇಶನ.

ಮೊದಲೇ ಪ್ರಸಿದ್ಧಪಡಿಸಿದ ಪ್ರಕಾರ ೧೯೩೪ನೆಯ ಮಾರ್ಚ ತಾ|| ೨೮-೨೯ ರಲ್ಲಿ ಸೇರುವ ಶ್ರೀ ವೀರಶೈವ ಧರ್ಮೋನ್ನತಿ ಪರಿಷತ್ತಿನ ಅಧ್ಯಕ್ಷರಾದ ಶ್ರೀಸದ್ಗುರುಮೂರ್ತಿ ಷ|| ಬ್ರ|| ಶ್ರೀ|| ಗಂಗಾಧರ ಶಿವಾಚಾರ್ಯರು ಮಹಂತಿನಮಠ ಬೆಂಗೇರಿಯವರು ಈ ಮಹನೀಯರು ಅದೇ ದಿವಸ ೧೦ ಘಂಟೆಗೆ ದಯಮಾಡಿಸಿದರು. ಆಗ್ಗೆ ಧೋತ್ರೀಗ್ರಾಮದ ಪ್ರಮುಖರು ಶ್ರೀ ಸ್ವಾಮಿಗಳವರನ್ನು ಸ್ವಾಗತಮಾಡಿ ಭವ್ಯವಾದ ಪಲ್ಲಕ್ಕಿಯಲ್ಲಿ ಮೆರವಣಿಗೆಯು ತೆಗೆಯಲ್ಪಟ್ಟಿತು. ಆಗ್ಗೆ ಎತ್ತನೋಡಿದತತ್ತ ಆಚಾರ್ಯ ಜಯಘೋಷವೇ ಜಯಘೋಷವಾಗಿತ್ತು. ಜನಸಂದಣಿಯು ಕಿಕ್ಕಿರಿದಿತ್ತು. ಪ್ರೇಕ್ಷಕಮಹಾಜನರು ಶ್ರೀಗಳವರನ್ನು ನೋಡಿ ಇದೇನು ಪಂಚಮಶಕದ ಸಮಾರಂಭವೋ? ವೀರಶೈವರಲ್ಲಿರುವ ಅಜ್ಞಾನತತ್ತಲೆಯನ್ನು ಬಡಿದೋಡಿಸಲೋಸುಗ ಸೂರ್ಯನೇ ಈ ರೂಪದಿಂದ ಬಂದಿರುವನೋ ಎಂದು ಅನೇಕರು ಅನೇಕ ಪ್ರಕಾರ ತಮ್ಮ ತಮ್ಮೊಳಗೆ ಮಾತನಾಡುತ್ತಿದ್ದರು. ಮೆರವಣಿಗೆಯು ಸಭಾಮಂಟಪಕ್ಕೆ ಬರಲು ಸ್ವಾಗತಾಧ್ಯಕ್ಷರು ಸದರೀ ಶ್ರೀಗಳವರ ಹಸ್ತಾವಲಂಬನದಿಂದ ಸ್ವಾಗತಗೊಳಿಸಿಕೊಂಡನಂತರ ಸ್ವಾಗತಾಧ್ಯಕ್ಷರಾದ ಶ್ರೀಗುರುಸಿದ್ಧಪ್ಪ ದರೇಕರ ಇವರು ದೂರಪ್ರದೇಶಗಳಿಂದ ಬಂದಿರುವ ಸರ್ವ ವೀರಶೈವರನ್ನು ಸ್ವಾಗತಮಾಡಿದರು. "ಶ್ರೀ ವೀರಶೈವ ಧರ್ಮಸುಧಾರಣಾಸಂಘ"ದ ಸೆಕ್ರೆಟರಿಗಳಾದ ಗಣಪತಿ ಗುರುಮೂರ್ತಿಪಾಟೀಲ, ಇವರು ತಮ್ಮ ಸಂಘದ ಮಾಹಿತಿಗೂ ಸಂಘಸ್ಥಾಪನೆಗೂ ಮತ್ತು ಸದ್ಯ ಪರಿಷತ್ತು ನೆರವೇರುವದಕ್ಕೂ ಹೋಟಗೀ ಶ್ರೀಗಳೇ ಮುಖ್ಯಕಾರಣರೆಂದು ಹೇಳಿ ಸಂಘಕ್ಕೆ ವಿಶೇಷ ಸಹಾಯಮಾಡಿದವರಾದ ವೀರಶೈವ ಧರ್ಮಮಂದಿರಕ್ಕೆ ಸ್ತಂಭದಂತಿರುವ ಪಂಡಿತಾಗ್ರಣಿಗಳಾದ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರು ತಮ್ಮಲ್ಲಿಯ ವೀರಶೈವ ಧಾರ್ಮಿಕ ಗ್ರಂಥಗಳನ್ನೂ ಮತ್ತು ಜಗದಾಚಾರ್ಯರ ಲೀಲಾರೂಪ ಭಾವಪಟಗಳನ್ನೂ ಅನುಗ್ರಹಿಸಿರುತ್ತಾರೆ. ಸದರಿ ಪಂಡಿತಕುಲಮಣಿಗಳು ದಯಪಾಲಿಸಿದ ಫೋಟೋಗಳಿಂದಲೇ ಈ ಸಭಾಮಂಟಪವು ವಿಶೇಷಶೋಭೆಯನ್ನು ಹೊಂದಿದೆ. ಧರ್ಮಾವತಾರಿಗಳಾದ ಕೈ|| ರಾ|| ಬ|| ಅಪ್ಪಾಸಾಹೇಬ ವಾರದ ಇವರ ಸತ್ಪುತ್ರರಾದ ಬಾಬಾಸಾಹೇಬವಾರದ ಸೋಲಾಪೂರ ಈ ಮಹನೀಯರು ಅನೇಕ ಗ್ರಂಥಗಳನ್ನೂ ಕೊಟ್ಟಿರುವದರಿಂದ ನಮಗೆ ಈ ಪರಿಷತ್ತು ನೆರವೇರಿಸುವ ಪ್ರಸಂಗ ಒದಗಿದೆಂದು ಹೇಳಿ ಸದರೀ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವ ಬಗ್ಗೆ ಅಧ್ಯಕ್ಷರನ್ನು ಪ್ರಾರ್ಥಿಸಿಕೊಂಡರು. ಶಂಕರಭಾದುಲಿ ಪಂಢರಪುರ ಇವರು ಅನುಮೋದನವಿತ್ತರು. "ಭಾಗೀರಥೀಬಾಯಿ ಕಟಿಪ ಸೋಲಾಪೂರ" ಇವರು ಸ್ತ್ರೀಸಮಾಜದ ಪರವಾಗಿ ಪುಷ್ಟಿಯನ್ನಿತ್ತಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀಜಯ ಗಂಗಾಧರ ಶಿವಾಚಾರ್ಯಮಹಾರಾಜಕೀಜಯ, ಎಂಬುವ ಜಯಕಾರಗಳೂ ಕರತಾಡನಗಳೂ ಆಗುತ್ತಿರಲು ಶ್ರೀಗಳು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು.

ಸಭೆಯ ಬಗ್ಗೆ ಆಶೀರ್ವಾದ ರೂಪದಿಂದ ಬಂದ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ, ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರ, ಶ್ರೀ ಪರಾಂಡಕರಸ್ವಾಮಿಗಳವರ ಪತ್ರಗಳೋದಲ್ಪಟ್ಟವು. ಅನಂತರ ಅಧ್ಯಕ್ಷರು ತಮ್ಮ ಅಮೃತವಾಣಿಯಿಂದ ಮಹತ್ವಪೂರ್ಣವಾದ ವ್ಯಾಖ್ಯಾನವನ್ನು ಮಾಡಿದರು. ಸದರೀ ಅಧ್ಯಕ್ಷರ ಭಾಷಣವು ವೀರಶೈವ ಪ್ರಾಚೀನತೆ, ಗುರುವರ್ಗದ ಕರ್ತವ್ಯ, ಸ್ವಧರ್ಮನಿಷ್ಠೆ, ಪರಧರ್ಮಸಹಿಷ್ಣುತೆ, ಸಂಸ್ಕಾರಗಳ ಆವಶ್ಯಕತೆ, ವಿದ್ಯಾಪ್ರಚಾರ, ಸ್ತ್ರೀಶಿಕ್ಷಣ, ಕೃಷಿಕರ್ಮ (ಒಕ್ಕಲತನ) ಇತ್ಯಾದಿ ವಿಷಯಗಳಿಂದೊಡಗೂಡಿದ್ದಿತು. ಅದನ್ನು ಕ್ರಮೇಣ ಪ್ರಭಾಪಾಠಕರ ಅವಗಾಹನೆಗೆ ತರುವೆನು. ಆಚಾರ್ಯರ ಜಯಘೋಷದೊಡನೆ ಆ ದಿವಸದ ಸಭೆಯು ಮುಗಿಯಿತು.

ಮರುದಿವಸ ಪ್ರಾತಃಕಾಲದಲ್ಲಿ ವಿಷಯ ನಿಯಾಮಕ ಕಮಿಟಿಯು ನೆರೆದು ಆಗ್ಗೆ ಅನೇಕಾನೇಕ ವಿಷಯಗಳು ಚರ್ಚಿಸಲ್ಪಟ್ಟವು. ಪುನಃ ಮಧ್ಯಾಹ್ನ ೩ ಘಂಟೆಗೆ ಸಭೆಯು ಸೇರಿ ಕೆಳಗೆ ಕಾಣಿಸಿದ ಠರಾವುಗಳು ಸರ್ವಾನುಮತದಿಂದ ಪಾಸಾದವು.

೧ನೇ ಠರಾವು—ಸೋಲಾಪುರದ ಸುಪ್ರಸಿದ್ಧ ವೀರೇಶಪ ಮಹಿಮುಕರ ಇವರ ಶೋಚನೀಯ ನಿಧನದ ವಿಷಯದಲ್ಲಿ ಈ ಸಭೆಯು ದುಃಖಪ್ರದರ್ಶನ ಮಾಡುತ್ತಿದೆ. (ಬಿ) ಅಕ್ಕಲಕೋಟೆ ಸಂಸ್ಥಾನದ ನವೀನ ರಾಣೀಸಾಹೇಬರ ಶೋಚನೀಯ ಮರಣದ ಬಗ್ಗೆ ಈ ಸಭೆಯು ದುಃಖಪ್ರದರ್ಶನಗೊಳಿಸುತ್ತದೆ. ಈ ಠರಾವುಗಳು ಅಧ್ಯಕ್ಷರಿಂದ ಸೂಚಿಸಲ್ಪಟ್ಟು ಸರ್ವಾನುಮತದಿಂದ ಪಾಸಾದವು.

೨ನೇ ಠರಾವು—ಪ್ರತ್ಯೇಕವೀರಶೈವರು ತಮ್ಮ ಕುಲಗುರುವಿನಿಂದ ಶಾಸ್ತ್ರಾನುಸಾರ ೮ನೇ ವರ್ಷದಲ್ಲಿ ದೀಕ್ಷೆಯನ್ನು ಹೊಂದಲಿಕ್ಕೇಬೇಕು.

ಸೂಚಕ; ಗಣಪತಿ ಗುರುಮೂರ್ತಿ ಪಾಟೀಲ ಧೋತ್ರಿ.

ಅನುಮೋದಕರು—ಹೋಟಗೀ ಬೃಹನ್ಮಠಾಧ್ಯಕ್ಷರು.

೩ನೇ ಠರಾವು—ವೀರಶೈವರು ಸಗೋತ್ರವಿವಾಹವಮಾಡಬಾರದು. ಈ ಪ್ರಕಾರ ಈ ಸಭೆಯು ವಿನಂತಿಮಾಡುತ್ತದೆ.

ಸೂಚಕ; ರಾಮಚಂದ್ರಪ್ಪಾ ಮುಳಕಪ್ಪಾ ಪಾಟೀಲ ಸರಸಂಬಿ.

ಅನುಮೋದಕ; ಅಣ್ಣಾರಾವ ಪಾಟೀಲ ಬಾಸಾಪುರ.

೪ನೇ ಠರಾವು—ಪ್ರತ್ಯೇಕ ಹಳ್ಳಿಗಳಲ್ಲಿರುವ ವೀರಶೈವರ ಉನ್ನತಿಯ ದೆಸೆಯಿಂದ 'ಸಂಘ' ವಾಚನಾಲಯಗಳನ್ನು ಆರಂಭಿಸಬೇಕೆಂದು ಈ ಸಭೆಯು ವಿನಂತಿಯಿದೆ.

ಸೂಚಕರು—ಹೋಟಗೀಸ್ವಾಮಿಗಳು.

ಅನುಮೋದಕ; ನಾಗಯ್ಯಸ್ವಾಮಿ ಧೋತ್ರೀ, ಮತ್ತು ಗುರುಸಿದ್ಧಪ್ಪಾ ಅವಜೆ ಧೋತ್ರೀ.

೫ನೇ ಠರಾವು—ವೀರಶೈವ ಧರ್ಮಜ್ಞಾನದ ದೆಸೆಯಿಂದ ಸ್ತ್ರೀಯರಿಗೆ ಶಿಕ್ಷಣವು ಅತ್ಯವಶ್ಯವಿದೆಂದು ಈ ಸಭೆಯು ಅನುಮತಿಸಿರುತ್ತದೆ.

ಸೂಚಕ: ಸೌ|| ಭಾಗೀರಥೀಬಾಯಿ ಕಟಿಪ ಸೋಲಾಪೂರ.

ಅನುಮೋದಕ; ಶ್ರೀಶಂಕರರಾವ ಕಟಿಪ ಪಂಢರಪುರ.

೬ನೇ ಠರಾವು—ಇನ್ನು ಮುಂದೆ ಪಟ್ಟಾಧಿಕಾರಿಗಳಾಗುವ ವಟುಗಳು ಸುಶಿಕ್ಷಿತರೂ, ಪ್ರೌಢರೂ ಇರತಕ್ಕದ್ದು. ವೀರಶೈವ ಧರ್ಮಜ್ಞಾನವಿಲ್ಲದೆ ಪಟ್ಟಾಧಿಕಾರವಮಾಡಕೂಡದು. ಹೀಗೆ ಈ ಸಭೆಯು ಪ್ರಸಿದ್ಧಿಸುವದಲ್ಲದೆ ಈ ಬಗ್ಗೆ ಶ್ರೀ ೧೦೮ ಜಗದ್ಗುರು ಮೂಲಪಂಚಾಚಾರ್ಯರೂ ಮತ್ತು ಭಕ್ತವರ್ಗದವರೂ, ಜರೂರು ಈ ವಿಷಯ ಪ್ರಚಾರವಾಗುವಂತೆ ಪ್ರಯತ್ನಿಸಬೇಕೆಂದು ಈ ಸಭೆಯ ವಿನಂತಿಇದೆ.

ಸೂಚಕ: ಶಂಕರರಾವ್ ಭಾದುಲಿ ಪಂಢರಪುರ.

ಅನುಮೋದಕ: ರೇವಣಸಿದ್ಧಪ್ಪಾ ಪಾಟೀಲ ಹೋಟಗೀ.

೭ನೇ ಠರಾವು—ಯಾವ ಜನರು ವೀರಶೈವಧರ್ಮವು ಬಸವನ ಕಾಲದ್ದೆನ್ನುವರೋ, ಅವರನ್ನು ನಿಷೇಧಿಸಿ ವೀರಶೈವಧರ್ಮದ ಪ್ರಾಚೀನತ್ವವನ್ನು ಈ ಸಭೆಯು ಸಿದ್ಧಮಾಡುತ್ತದೆ.

ಸೂಚಕರು—ಹೋಟಗಿ ಪಟ್ಟಾಧ್ಯಕ್ಷರು.

ಅನುಮೋದಕ: ಸದಾನಂದ ಬುವಾಜೋಶಿ ಜವಳೇಕರ ಮತ್ತು ಶಂಕರರಾವ ಭಾದುಲಿ ಪಂಢರಪುರ.

೮ನೇ ಠರಾವು—ಮಠದವರು ಮತ್ತು ಮಠಪತಿಗಳು ಶಾಸ್ತ್ರಾನುಸಾರ ಮತ್ತು ತಮ್ಮ ಕರ್ತವ್ಯಾನುಸಾರ ತಮ್ಮ ತಮ್ಮ ಕರ್ತವ್ಯದಲ್ಲಿ ತತ್ಪರರಾಗಬೇಕೆಂದು ಈ ಸಭೆಯು ಸೂಚಿಸುತ್ತದೆ.

ಸೂಚಕರು—ಶ್ರೀ ಗುರುವರ್ಯಸ್ವಾಮಿಗಳು, ಸುತ್ತಟ್ಟಿ.

ಅನುಮೋದಕ: ಸದಾನಂದಬುವಾಜೋಶಿಜವಳೇಕರ.

೯ನೇ ಠರಾವು—ಸ್ಥಿರಪಟ್ಟಾಧಿಕಾರಿಗಳು ತಮ್ಮ ತಮ್ಮ ಶಿಷ್ಯರಿಗೆ ಮೇಲಿಂದಮೇಲೆ ಧರ್ಮೋಪದೇಶಮಾಡಿ ಧರ್ಮೋನ್ನತಿಯನ್ನು ಮಾಡುವದರಲ್ಲಿ ವಿಶೇಷಪ್ರಯತ್ನಮಾಡತಕ್ಕದೆಂದು ಸದರೀ ಶ್ರೀಗಳನ್ನು ಈ ಸಭೆಯು ಪ್ರಾರ್ಥಿಸುತ್ತದೆ.

ಸೂಚಕ: ಶರಣಾರ್ಯಶರ್ಮಾ ಅಚಲೇರ.

ಅನುಮೋದಕ: ಶ್ರೀಪಟ್ಟಾಧ್ಯಕ್ಷ ಮುರಳ್ಯರು (ಚಿತ್ತರಗಿ).

೧೦ನೇ ಠರಾವು—ಪ್ರತ್ಯೇಕವೀರಶೈವರು ಶಾಸ್ತ್ರಾನುಸಾರ ಶಿಖೆಯನ್ನು ಧರಿಸಬೇಕೆಂದು ಸೂಚನೆ.

ಸೂಚಕರು—ಶ್ರೀ ಗುರುವರ್ಯಸ್ವಾಮಿಗಳು, ಸುತ್ತಟ್ಟಿ.

ಅನುಮೋದಕ: ಶ್ರೀ ಸದಾನಂದಬುವಾಜೋಶಿ ಜವಳೇಕರ್.

(ಸದರೀ ಸದಾನಂದಬುವಾ ಇವರು ಶಿಖೆಯಬಗ್ಗೆ ಅನುಮೋದನ ಕೊಡುವಾಗ್ಗೆ ನುಡಿದ ಒಂದು ಶಬ್ದವನ್ನು ಇಲ್ಲಿ ಕೊಟ್ಟರೆ ಅಪ್ರಾಸಂಗಿಕವಾಗಲಿಕ್ಕಿಲ್ಲ. ಅದೇನೆಂದರೆ, ಜೋಶಿಪಂಥಿಮಹಾಶಯರು ನಮ್ಮ ತಲೆಯಮೇಲಿನ ಕೂದಲನ್ನು ಬೋಳಿಸಿದಂತೆ ನಮ್ಮ ಸ್ತ್ರೀಯರ ಕೂದಲುಗಳನ್ನು ಬೋಳಿಸದೆ ಬಿಟ್ಟಿದುದಕ್ಕಾಗಿ ನಾವು ಅವರನ್ನು ಆಭಾರಿಗಳನ್ನಾಗಿ ತಿಳಿಯುತ್ತೇವೆ.)

೧೧ ನೇ ಠರಾವು—ವೀರಶೈವಧರ್ಮೋನ್ನತಿಯ ದೆಸೆಯಿಂದ ವರ್ತಮಾನಪತ್ರ, ವಾಙ್ಮಯ, ಯೋಗ್ಯಶಾಸ್ತ್ರೀಯವಿಷಯಗಳನ್ನು ಪ್ರತಿಪಾದಿಸುವ ಧರ್ಮಗ್ರಂಥ ಮತ್ತು ಇತರ ಚಿಕ್ಕ ಪುಟ್ಟಗ್ರಂಥಗಳ ಅವಶ್ಯಕತೆಯಿರುವದರಿಂದ ಸರ್ವರೂ ಆ ಬಗ್ಗೆ ಶಕ್ತ್ಯನುಸಾರ ಸಹಾಯಮಾಡಬೇಕೆಂದು ಈ ಸಭೆಯ ವಿನಂತಿಯಿದೆ.

ಸೂಚಕ: ಶ್ರೀರಾಮಲಿಂಗಪ್ಪಾ ಶಕ್ರೆ, ಬಾರ್ಶೀ.

ಅನುಮೋದಕ: ಸದಾನಂದಬುವಾಜೋಶಿ ಜವಳೇಕರ.

೧೨ನೇ ಠರಾವು—ಯಾವ ಕೆಲವು ಜನರು ಆಯಾ ಸೂತ್ರ ಗೋತ್ರಗಳಾಧಿಕಾರಿಗಳಾದ ಪಂಚಾಚಾರ್ಯರ ಆಜ್ಞಾಧಿಕಾರವು ಆಯಾ ಸೂತ್ರ ಗೋತ್ರೀಯಜನರ ಮೇಲೆಯೇ ನಡೆಯುತ್ತದೆಂದು ನುಡಿಯುವರೋ ಅವರ ನುಡಿಯುಕೆಯು ತಪ್ಪಿದ್ದು, ಪಂಚಸಿಂಹಾಸನಾಧೀಶ್ವರರ ಅಧಿಕಾರವು ಸರ್ವ ವೀರಶೈವರ ಮೇಲೆ ನಡೆಯುತ್ತದೆ. ಆ ಪ್ರಕಾರ ಸರ್ವರೂ ಪಂಚಾಚಾರ್ಯರ ಆಜ್ಞೆಯನ್ನು ಪಾಲಿಸಬೇಕೆಂದು ಈ ಸಭೆಯು ಸಮ್ಮತಿಸುತ್ತದೆ.

ಸೂಚಕರು: ಅಧ್ಯಕ್ಷ ಮಹಾಶಯರು.

೧೩ನೇ ಠರಾವು—ಸರ್ವತ್ರ ಸರ್ವವೀರಶೈವರು ಶ್ರೀಮದ್ವೀರಶೈವ ಮಹಾಮತಸ್ಥಾಪಕರಾದ ಶ್ರೀ ೧೦೮ ಜಗದ್ಗುರು ಪಂಚಾಚಾರ್ಯ ಜಯಂತೀಮಹೋತ್ಸವಗಳನ್ನು ಪಾಲಿಸುವದು ಅವಶ್ಯಕರ್ತವ್ಯವಿದ್ದುದರಿಂದ ಆ ಪ್ರಕಾರ ವರ್ತಿಸಲಿಕ್ಕೆ ಈ ಸಭೆಯು ಸೂಚಿಸುತ್ತದೆ.

ಸೂಚಕ: ಶ್ರೀ ಶಂಕರರಾವ ಕಟಿಪ ಪಂಢರಪುರ.

ಅನುಮೋದಕ: ದತ್ತಾತ್ರಯ ರುಪಾಕೆ ಬಾರ್ಶೀ.

೧೪ನೇ ಠರಾವು—ಸೋಲಾಪುರದಲ್ಲಿರುವ ವಾರದ ಸಂಸ್ಕೃತ ಪಾಠಶಾಲೆಗೆ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ೫೦೦೦ ರೂಪಾಯಿಗಳನ್ನು ಆಶೀರ್ವದಿಸಿದುದಕ್ಕಾಗಿ ಈ ಸಭೆಗೆ ಆನಂದವಾಗುವುದಲ್ಲದೆ ಸದರಿ ಜಗದ್ಗುರು ಪುಂಗವರ ವಿಷಯದಲ್ಲಿ ಪ್ರಾರ್ಥನಾಪೂರ್ವಕ ಅಭಿನಂದನವನ್ನು ವ್ಯಕ್ತಮಾಡುತ್ತದೆ.

ಸೂಚಕ: ಶ್ರೀ ಶಂಕರರಾವು ಕಟಿಪ ಪಂಢರಪುರ.

ಅನುಮೋದಕ: ಶ್ರೀ ಶಂಕರರಾವ ಭಾದುಲೆ, ಪಂಢರಪುರ.

ಮೇಲೆ ನಿರ್ದಿಷ್ಟಗಳಾದ ೧೪ ಠರಾವುಗಳು ಸರ್ವಾನುಮತದಿಂದ ಪಾಸಾದವು. ಸಭೆಯು ನಿರ್ವಿಘ್ನತೆಯಿಂದ ನೆರವೇರಿದ ಬಗ್ಗೆ ಹೋಟಗೀ ಸ್ವಾಮಿಗಳು ಆನಂದವ್ಯಕ್ತಮಾಡಿದರು. ಅನಂತರ ಧೋತ್ರೀಜನರ ಪರವಾಗಿ ಶ್ರೀ ದತ್ತಾತ್ರಯ ನೀಲಕಂಠ ರುಪಾಕೆ ಬಾರ್ಶೀ ಇವರು ಅಧ್ಯಕ್ಷರ ಹೋಟಗೀಶ್ರೀಗಳ ಪರದೇಶಗಳಿಂದಾಗಮಿಸಿದ ವೀರಶೈವರ, ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳ, ಬಾಬಾಸಾಹೇಬರ ಹಾಗೂ ತಮ್ಮ ರಾಜಧಾನಿಯ ವಟಾರದಲ್ಲಿ ಸಭೆಯ ಉದ್ದಿಷ್ಟ ಸ್ಥಲವನ್ನಿತ್ತು ಸಹಾಯಮಾಡಿದ ಭಗವಂತರಾವ ದೇಶಪಾಂಡೆ ಇವರೆಲ್ಲರ ಆಭಾರಮನ್ನಿಸಿದರು. 'ಶ್ರೀ ಪಂಚಾಚಾರ್ಯ ಭಜನಾಸಂಘದ ವತಿಯಿಂದ ಶ್ರೀ ಶಿವಲಿಂಗಪ್ಪಾ ಮಾಳಗೆ ಇವರು ಆಮಂತ್ರಣವನ್ನಿತ್ತರು. ಜಗದಾಚಾರ್ಯರ ಆರತಿಯಾದನಂತರ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾರಾಜಕೀಜಯ' ಎಂಬುವ ಜಯಜಯಕಾರದೊಡನೆ ಸಭೆಯು ಬರಖಾಸ್ತಾಯಿತು.

ಶ್ರೀರಾಮಚಂದ್ರಪ್ಪಾ ಭೀಮರಾಯ ಮೋಘೇಕರ,
ಸೋಲಾಪುರ.

ಸಂಸ್ಕೃತಸಾಹಿತ್ಯದಲ್ಲಿ ಶಿವ.

('ಶಿವಾಂಕ'ದಿಂದ)

'ಕಾವ್ಯತೀರ್ಥ' ಚಂದ್ರಶೇಖರಶರ್ಮಾ ಆರಾಧ್ಯಮಠ
(ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ, ಶ್ರೀಕ್ಷೇತ್ರ ಕಾಶಿ.)

ಸಂಸ್ಕೃತ ಸಾಹಿತ್ಯವು ಅಧ್ಯಾತ್ಮಿಕ ತತ್ವಗಳಿಂದ ತುಂಬಿಕೊಂಡಿರುವುದಲ್ಲದೆ ಅದು ಅತ್ಯಂತ ವಿಸ್ತಾರವಾಗಿದೆ. ಇದೇ ಸಾಹಿತ್ಯದಿಂದಲೇ ಅನೇಕ ಭಾಷೆಗಳು ವಿಕಾಸವನ್ನು ಹೊಂದಿರುತ್ತವೆ. ಮತ್ತು ರಕ್ಷಿಸಲ್ಪಟ್ಟಿವೆ. ಇದರಲ್ಲಿ ಬೇರೆ ಬೇರೆ ವಿಷಯಗಳ ಮೇಲೂ ಅನೇಕ ವಾದವಿವಾದಗಳಾಗಿರುತ್ತವೆ. ಇದು ಯಾರಿಗೆ ಗೊತ್ತಿಲ್ಲ? ಆದರೆ ಅಧ್ಯಾತ್ಮಿಕ ವಿಷಯಗಳ ಮೇಲಂತೂ ಇಷ್ಟು ವಿಚಾರಿಸಲ್ಪಟ್ಟಿದೆ. ಅದಕ್ಕೆ ಸೀಮೆಯೇ ಇಲ್ಲ. ಈ ಅಧ್ಯಾತ್ಮಮಯತತ್ವದ ಕಾರಣದಿಂದ ಈ ಭಾಷೆಗೆ ಎಷ್ಟೋಜನ ಆಂಗ್ಲವಿದ್ವಾಂಸರು 'ಅಧ್ಯಾತ್ಮಭಾಷಾ' ಎಂದು ಕರೆದಿದ್ದಾರೆ. ಅತ್ಯವರ್ತನಶಾಸ್ತ್ರವು ಪ್ರತಿಯೊಂದು ಪದಾರ್ಥವನ್ನು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂದು ಮೂರು ರೂಪಗಳಲ್ಲಿ ವ್ಯಾಖ್ಯಾನವನ್ನು ಮಾಡಿ ತೋರಿಸಿಕೊಡುತ್ತದೆ.

ಶಿವನ ವರ್ಣನೆಯು ಸಂಸ್ಕೃತಸಾಹಿತ್ಯದಲ್ಲಿ ಅತ್ಯಂತವ್ಯಾಪಕರೂಪದಿಂದಿರುತ್ತದೆ. ವೇದದಿಂದ ಮೊದಲುಗೊಂಡು ಈಗಿನ ಲೇಖಕರವರೆಗೂ ಶಿವನ ವರ್ಣನೆಯು ನಾನಾ ಪ್ರಕಾರವಾಗಿ ವರ್ಣಿಸಲ್ಪಟ್ಟಿದೆ. ಮತ್ತು ಶಿವನ ಸಂಬಂಧದ ಎಷ್ಟೋ ವಿಷಯಗಳನ್ನು ಬರೆದಿದ್ದಾರೆ. ದಾರ್ಶನಿಕ ವಿದ್ವಾಂಸನು ಮತ್ತು ಭಕ್ತನು ಯಜುರ್ವೇದದ ಶ್ರೀ ರುದ್ರಾಧ್ಯಾಯದಲ್ಲಿ ತಮ್ಮ ತಮ್ಮ ಇಚ್ಛಾನುಸಾರವಾಗಿ ಅರ್ಥವನ್ನು ಹೊರಡಿಸುತ್ತಾರೆ. ದಾರ್ಶನಿಕಗಣವು ಶಿವತತ್ವದ ವ್ಯಾಖ್ಯಾನವನ್ನು ಅತ್ಯಂತ ಗಂಭೀರತೆಯಿಂದ ಮಾಡಿದಾಗ್ಯೂ ಭಕ್ತಗಣವು ಶಿವನ ಮನೋಹರವಾದ ಚರಿತ್ರೆಯ ವರ್ಣನೆಯನ್ನು ಮಾಡಿ ಅವನ ಮಹಿಮೆಯನ್ನು ಸರ್ವಸಾಧಾರಣರಿಗೂ ಪ್ರಕಟವಾಗುವಂತೆ ಮಾಡಲು ಇಚ್ಛಿಸುತ್ತದೆ. ಉಪನಿಷತ್ತು 'ಸತ್ಯಂ ಶಿವಂ ಸುಂದರಂ' ಎಂದು ಹೇಳಿ ಅಧ್ಯಾತ್ಮಿಕಪದ್ಧತಿಯಿಂದ ಶಿವನ ರಹಸ್ಯವನ್ನು ತಿಳಿಸಿಕೊಡುತ್ತದೆ. ಆದರೆ ಪುರಾಣಗಳು ಶಿವಮಹಿಮೆಯು ವರ್ಣನೆಯನ್ನು ಬೇರೆ ಪ್ರಕಾರದಿಂದಲೇ ಮಾಡಲುಪಕ್ರಮಿಸುತ್ತವೆ. ಪುರಾಣಗಳಲ್ಲಿ ಶಿವನ ಸ್ವರೂಪವು, ಅವನ ಕ್ರೀಡೆಯು, ಅವನ ನಿವಾಸಸ್ಥಾನವು, ಅವನ ಗುಣಗಳು, ಅವನ ಸೇವಕರು, ಅವನ ಶೃಂಗಾರವು, ಅವನ ಚರಿತ್ರೆಯು, ಅವನ ಸ್ವಭಾವವು, ಮತ್ತು ಅವನ ಸಮೂಹವು ಇವೆಲ್ಲವೂ ಅತ್ಯಂತ ಆಶ್ಚರ್ಯಕರವಾಗಿ ತೋರಿಸಲ್ಪಟ್ಟಿರುತ್ತವೆ. ಎಲ್ಲಿಯವರೆಗೆ ಶಿವನ ನಿಜವಾದ ತತ್ವವು ತಿಳುವಳಿಕೆಯಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಮನುಷ್ಯನು ತನ್ನ ಇಚ್ಛೆಯ ಅನುಸಾರವಾಗಿ ಅವನನ್ನು ಅನೇಕ ತರಹದಿಂದ ಆಲೋಚಿಸಿ ವಿಮರ್ಶಿಸುತ್ತಾನೆ.

ಜಟೆಯಲ್ಲಿ ಧರಿಸಿದ ಗಂಗೆ ಹಾಗೂ ಕಂಠದಲ್ಲಿ ಇಟ್ಟುಕೊಂಡ ಹಾಲಾಹಲ ಈ ಎರಡು ವಿಷಯಗಳನ್ನು [illegible] ಲ ಆಗಲಿ [illegible]! ಇವೆರಡರುಗಳ ಮೇಲೆ ಜನರ ಅನೇಕ [illegible]ತ್ತವೆ. ಶಿವನು ವಿಷ್ಣುವಿನ ಪರಮಭಕ್ತನಿದ್ದನು. ಅವನು ತನ್ನನ್ನು ಪವಿತ್ರನನ್ನಾಗಿ ಮಾಡಿಕೊಳ್ಳಲೋಸುಗ ಅವನ ಕಾಲಿನ ನೀರಿನ ಸ್ವರೂಪವಾದ ಗಂಗೆಯನ್ನು ಭಕ್ತಿಭಾವದಿಂದ ಮಸ್ತಕದಲ್ಲಿ ಧರಿಸಿದ್ದಾನೆಂದು ಕೆಲವರು ಹೇಳುತ್ತಾರೆ. ಹಾ[illegible]

ಅದರಂತೆಯೇ ಶಿವನು ಕಾಮಸಾಕ್ಷಾತ್ಸ್ವರೂಪನಿದ್ದಾನೆ. ಅವನಿಗೆ ವಿಷಧತ್ತೂರಾದಿ ಪದಾರ್ಥಗಳು ಸೇರುತ್ತವೆ. ಆದ್ದರಿಂದಲೇ ತನ್ನ ರುಚಿಗಾಗಿ ಅವನು ವಿಷವನ್ನು ಪಾನಮಾಡಿದ್ದಾನೆಂದು ಒಬ್ಬ ನೊಬ್ಬ ವಾದಿಯು ಹೇಳುತ್ತಾನೆ. ಈ ಎರಡು ಮಾತುಗಳ ಮೇಲೆ ಎರಡನೇ ಪಕ್ಷದವರಾದ ಅಪ್ಪಯ್ಯದೀಕ್ಷಿತರು ಉತ್ತರವನ್ನು ಹೇಳುವದೇನೆಂದರೆ—

ಗಂಗಾ ಧೃತಾ ನ ಭವತಾ ಶಿವ ಪಾವನೇತಿ |
ನಾಸ್ವಾದಿತೋ ಮಧುರ ಇತ್ಯಪಿ ಕಾಲಕೂಟಃ ||
ತ್ರೈಲೋಕ್ಯರಕ್ಷಣಕೃತಾ ಭವತಾ ದಯಾಲೋ |
ಕರ್ಮದ್ವಯಂ ಕಲಿತಮೇತದನನ್ಯಸಾಧ್ಯಂ ||

ಎಲೈ ಪರಮಾತ್ಮನೇ! ಗಂಗೆಯು ಪವಿತ್ರಮಾಡತಕ್ಕವಳೆಂಬ ಬುದ್ಧಿಯಿಂದ ನೀನು ಆಕೆಯನ್ನು ಧರಿಸಿರುವದಿಲ್ಲ. ಹಾಗೂ ನಿನಗೆ ಮಧುರವಾಗುತ್ತದೆಂಬ ಬುದ್ಧಿಯಿಂದಲೂ ನೀನು ವಿಷವನ್ನು ಪಾನಮಾಡಿರುವದಿಲ್ಲ. ನೀನು ಮೂರೂ ಲೋಕಗಳ ರಕ್ಷಣೆಯನ್ನು ಮಾಡತಕ್ಕವನಿದ್ದೀ. ಆದ್ದರಿಂದಲೇ ಲೋಕದ ರಕ್ಷಣೆಯನ್ನು ಮಾಡಲೋಸುಗ ದಯಾಳುತನದಿಂದ ಮಹಾಮಹಾದೇವತೆಗಳಿಂದಲೂ ಮಾಡಲಶಕ್ಯವಾದ ಈ ಎರಡು ದೊಡ್ಡ ಕಾರ್ಯಗಳನ್ನು ಮಾಡಿರುವಿ.

ಶಿವನಿಂದ ಸಂಬಂಧವನ್ನಿಟ್ಟುಕೊಳ್ಳತಕ್ಕ ಇಂಥ ಪೌರಾಣಿಕವಿಷಯಗಳ ವರ್ಣನೆಯೂ ಕೂಡ ಮೇಲೆ ಹೇಳಿದ ವರ್ಣನೆಯಲ್ಲಿಯೇ ಚನ್ನಾಗಿ ಸಮಾವೇಶವಾಗುತ್ತದೆ. ಯಾಕೆಂದರೆ— ಸಂಸ್ಕೃತಸಾಹಿತ್ಯಶಬ್ದವು ವ್ಯಾಪಕವಿರುತ್ತದೆ. ಪರಂತು ವೇದ, ದರ್ಶನ, ಪುರಾಣಾದಿಗಳಿಂದ ಹೇಳಲ್ಪಟ್ಟ ಶಿವನ ವರ್ಣನೆಯ ನಿಬಂಧಗಳು "ನಿಬಂಧಸೂಚಿ"ಯಲ್ಲಿ ಬೇರೆ ಬೇರೆ ಪ್ರಕಾರವಾಗಿ ಎಣಿಸಲ್ಪಟ್ಟಿವೆ. ಈ ಕಾರಣದಿಂದಲೇ ಅವನ್ನೆಲ್ಲ ಬಿಟ್ಟು ಇಲ್ಲಿ ನನಗೆ ಕೇವಲ ಸಂಸ್ಕೃತ ಸಾಹಿತ್ಯಕವಿಗಳ ವರ್ಣನೆಯನ್ನೇ ತೆಗೆದುಕೊಳ್ಳಬೇಕಾಗಿದೆ. ಯಾಕೆಂದರೆ "ಸಂಸ್ಕೃತ ಸಾಹಿತ್ಯ" ಈ ಶಬ್ದದಿಂದ ಇಲ್ಲಿ ಕೇವಲ ಅಲಂಕಾರ, ಶಾಸ್ತ್ರ, ಕಾವ್ಯ, ಇತ್ಯಾದಿಗಳಿಂದಲೇ ಹೇಳತಕ್ಕವನ ಪ್ರಯೋಜನೆಯು ಗೊತ್ತಾಗುತ್ತದೆ. ಶಿವನು ಸಂಸ್ಕೃತ ಕವಿಗಳಿಗೆ ಪ್ರಧಾನರೂಪದಿಂದ ವರ್ಣನೀಯನಿದ್ದಾನೆ, ಸಂಸ್ಕೃತ ಕವಿಗಳ ಸಮಾಜದಲ್ಲಿ ಯಾವ ಯಾವ ದೇವತೆಯು ಸೂಕ್ತಿಗಳೆಂಬ ಪುಷ್ಪಗಳಿಂದ ಪೂಜಿಸಲ್ಪಟ್ಟಿರುವುದಿಲ್ಲ? ಎಲ್ಲಾ ದೇವತೆಗಳ ವರ್ಣನೆಯು ಅಥವಾ ಸ್ತುತಿಯು ಒಂದಕ್ಕಿಂತ ಒಂದು ಹೆಚ್ಚಾಗಿ ಸಿಗುತ್ತವೆ. ಪರಂತು ದಯಾಮಯ ಶಂಕರನ ವಿಷಯದಲ್ಲಂತೂ ಕವಿಗಳ ಭಕ್ತಿಭಾವವು ಸ್ವಲ್ಪ ಬೇರೆ ದಂತೆಯೇ ಕಂಡುಬರುತ್ತದೆ. 'ವಿದ್ಯಾಕಾಮಸ್ತು ಗಿರಿಶಂ' ಎಂಬುವ ವಾಕ್ಯದ ಮೇಲೆ ಕವಿಗಳ ನಿಜವಾದ ಆಸ್ತಿಕತನವು ಗೊತ್ತಾಗುತ್ತದೆ. ದಕ್ಷಿಣಭಾರತದ ವೇದಾಂತಾಚಾರ್ಯ, ವೆಂಕಟಾಧ್ವರಿ, ಜಗನ್ನಾಥರನ್ನು ಹಾಗೂ ಪೂರ್ವ ಭಾರತದ ಕರ್ಣಪೂರ ಗೋಸ್ವಾಮಿ, ಜೀವಗೋಸ್ವಾಮಿ, ಜಯದೇವ ಮೊದಲಾದ ವೈಷ್ಣವ ಪಂಡಿತರನ್ನು ಬಿಟ್ಟು ಬೇರೆ ಬೇರೆ ದೇಶಗಳ ಪ್ರಾಯಶಃ ಎಲ್ಲಾ ಸಂಸ್ಕೃತ ಕವಿಗಳು ತಮ್ಮ ತಮ್ಮ ಗ್ರಂಥಗಳ ಆದಿಯಲ್ಲಿ ಶಿವನ ವಿಷಯಕ ಮಂಗಲಾಚರಣೆಯನ್ನು ಮಾಡಿರುತ್ತಾರೆ. ಹಾಗೂ ಶಿವನ ಚರಿತ್ರೆಗಳಿಂದ ಸೂಕ್ತಿಯೆಂಬುವ ನದಿಯನ್ನು ಪವಿತ್ರವನ್ನಾಗಿ ಮಾಡಿರುತ್ತಾರೆ.

ಕಾಶ್ಮೀರದೇಶದವರು ತಮ್ಮ ದೇಶವನ್ನು ಬಿಟ್ಟು ಎರಡನೇ ದೇಶದಲ್ಲಿಯೂ ಕವಿತ್ವವು ಹಾಗೂ ಕೇಶರವು ಹುಟ್ಟುವದೇ ಇಲ್ಲವೆಂದನ್ನುತ್ತಾರೆ. ಬಿಲ್ಹಣನೆಂಬುವರು ಹೇಳುವದೇನೆಂದರೆ—

ಸಹೋದರಾಃ ಕುಂಕುಮಕೇಸರಾಣಾಂ |
ಭವಂತಿ ನೂನಂ ಕವಿತಾವಿಲಾಸಾಃ ||
ನ ಶಾರದಾದೇಶಮಪಾಸ್ಯ ಯೇಷಾಂ |
ಮಯ್ಯಾವಿದ್ಯ ದೃಷ್ಟಃ ಕ್ವಚನಃ ಪ್ರರೋಹಃ ||

ಕವಿತಾವಿಲಾಸವು ಮತ್ತು ಕೇಶರವು ಇವೆರಡೂ ಅಣ್ಣತಮ್ಮಂದಿರಿದ್ದಂತೆ ನನಗೆ ತೋರುತ್ತದೆ. ಯಾಕೆಂದರೆ, ಶಾರದಾ ದೇಶ ಅರ್ಥಾತ್ ಸರಸ್ವತೀದೇಶವಾದ ಈ ಕಾಶ್ಮೀರವನ್ನು ಬಿಟ್ಟು ನಾನು ಬೇರೆ ಎಲ್ಲಿಯೂ ಇವೆರಡರುಗಳ ಹುಟ್ಟುವಿಕೆಯನ್ನು ಕಂಡಿಲ್ಲ. ವಿಚಾರಮಾಡಿದ್ದೇ ಆದರೆ ನಿಜವೇ ಅದೆ. ಇದು ಎಂಥ ಅಭಿಮಾನದ ಮಾತಾಗಿದೆ? ಕೇಶರದ ಹೊಲಗಳು ಕಾಶ್ಮೀರದೇಶವನ್ನು ಬಿಟ್ಟು ಹೇಗೆ ಮತ್ತೆಲ್ಲಿಯೂ ಸಿಗುವದಿಲ್ಲವೋ ಹಾಗೆಯೇ 'ಕವಿತಾ' ಎಂದು ಯಾವುದಕ್ಕೆ ಅನ್ನುತ್ತಾರೆಯೋ ಅದು ಬೇರೆಕಡೆಗೆ ಎಲ್ಲಿಯೂ ಸಿಗುವದಿಲ್ಲ. ಆದರೆ ಕವಿಯು ಇವರ ಕೂಡ ಒಂದು ಮಾತನ್ನು ಹೇಳಿದ್ದಾನೆ. ಅವನು ಹೇಳುವದೇನೆಂದರೆ—ಸರಸ್ವತೀದೇಶವು ಒಂದುಪಕ್ಷ ಇದ್ದದ್ದೇ ಆದರೆ ಅದು ಇದೇ ಕಾಶ್ಮೀರದೇಶವಿರುತ್ತದೆ. ಅಸ್ತು! ಉತ್ತಮವಾದ ಕವಿತೆಯು ಕಾಶ್ಮೀರದೇಶದ್ದೇ ಇರುತ್ತದೆ. ಎಂದು ಕಾಶ್ಮೀರದೇಶವಾಸಿಯಾದ ಬಿಲ್ಹಣನು ಬೇಕಾದರೆ ಹೇಳಲಿ. ಪರಂತು ಇದರ ವಿಷಯಕ್ಕೆ ಎಷ್ಟೋ ವಾದವಿವಾದಗಳಿರುತ್ತವೆ. ಕವಿತೆಯಲ್ಲಿ ವೈದರ್ಭೀರೀತಿಯು ಪ್ರಧಾನವಾಗಿ [illegible] 'ವೈದರ್ಭ'ವು ಕಾಶ್ಮೀರದ [illegible] ಎದುರಿಗಿದ್ದ ದೇಶದಲ್ಲಿ [illegible] ವಿಚಾರಿಸಿರಿ. ಈ [illegible] ಯು 1½ ಮೈಲು [illegible] 8 ಮೈಲು [illegible]

ಗಳ ಬಗ್ಗೆ ಒಂದು ಲೇಖದ ವಿಷಯವೇ ಇರುತ್ತದೆ. ಇಲ್ಲಿ ನಾನು ಅದನ್ನು ತೆಗೆದುಕೊಳ್ಳುವದಿಲ್ಲ. ಆದರೆ ಕಾಶ್ಮೀರದ ಕವಿಗಳು ಈ ವಿಷಯದಲ್ಲಿ ಸಂಪೂರ್ಣವಾಗಿ ಸಫಲತೆಯನ್ನು ಹೊಂದಿದ್ದಾರೆ.

ಕಾಶ್ಮೀರದ ಕವಿಗಳನ್ನು ಬಿಟ್ಟು ಮುಂದೆ ನಡೆಯಿರಿ. ಮಹಾಕವಿಯಾದ ಕಾಳಿದಾಸನು ತನ್ನ 'ಶಕುಂತಲಾ' ಪೆರಳಿನಿಂದ ಮೊದಲು ಮೊದಲು ಎಣಿಸುತ್ತಾ ಹೋಗಿ ಎರಡನೇ ಬೆರಳಿಗೆ ಯಥಾರ್ಥವಾಗಿಯೇ 'ಅನಾಮಿಕಾ' ಎಂದು ಮಾಡಿದ್ದಾನೆ. ಆ ಕವಿಯೂ ಕೂಡ ತನ್ನ ಪ್ರತಿಯೊಂದು ಗ್ರಂಥದಲ್ಲಿ ಶಿವನ ಮಂಗಲಾಚರಣವನ್ನು ಮಾಡಿದ್ದಾನೆ. ಇಷ್ಟೇ ಏಕೆ? ಶಿವಚರಿತ್ರೆಯ ವರ್ಣನೆಯನ್ನು ಇವನು ಯಾವ 'ಕುಮಾರಸಂಭವ'ದಲ್ಲಿ ಮಾಡಿದ್ದಾನೆಯೋ ಅದಕ್ಕೆ ಸಮಾನವಾದ ಉತ್ತಮೋತ್ತಮಕಾವ್ಯಗಳಲ್ಲಿಯೂ ಅಂಥ ವರ್ಣನೆಯನ್ನು ಹೊಂದಲಾರಿರಿ. ಪಾರ್ವತಿಯ ಹಾಗೂ ವಟುವೇಷಧಾರಿಯಾದ ಶ್ರೀಶಿವನ ಸಂವಾದವು ಸಂಸ್ಕೃತಸಾಹಿತ್ಯಕ್ಕೆ ಮುಖ್ಯವಾದದ್ದಿರುತ್ತದೆ. ಪಾರ್ವತಿಯ ಮನೋಭಾವವನ್ನು ತಿಳಿದುಕೊಳ್ಳುವದಕ್ಕೋಸ್ಕರ ಶಿವನ ನಿಂದೆಯನ್ನು ಮಾಡುತ್ತಾ ವಟುವೇಷಧಾರಿಯು ಹೇಳುತ್ತಾನೆ—

ವಪುರ್ವಿರೂಪಾಕ್ಷಮಲಕ್ಷ್ಯಜನ್ಮತಾ |
ದಿಗಂಬರತ್ವೇನ ನಿವೇದಿತಂ ವಸು ||
ವರೇಷು ಯದ್ಬಾಲಮೃಗಾಕ್ಷಿ? ಮೃಗ್ಯತೇ |
ತದಸ್ತಿ ಕಿಂ ವ್ಯಸ್ತಮಪಿ ತ್ರಿಲೋಚನೇ ||

ಶರೀರದಲ್ಲಿ ಎಲ್ಲ ಅವಯವಕ್ಕಿಂತಲೂ ಮೊದಲು ಕಣ್ಣುಗಳ ಮೇಲೆಯೇ ದೃಷ್ಟಿಯು ಬೀಳುತ್ತದೆ. ಆದಕಾರಣ ಅವನ ಕಡೆಗೆ ನೋಡಿದರೆ ಅವನಿಗೆ ಮೂರು ಕಣ್ಣುಗಳವೆ ಇದಂತೂ ಶೋಭೆಗೆ ಘಾತಕವೇ ಅದೆ. ಕುಲದ ಕಡೆಗೆ ವಿಚಾರ ಮಾಡಿದರೆ ಯಾವ ಕುಲದಲ್ಲಿ ಯಾವಾಗ್ಗೆ ಇವನ ಜನ್ಮವಾಯಿತೆಂಬುವದು ಪತ್ತೆಯೇ ಹತ್ತುವಂತಿಲ್ಲ. ದ್ರವ್ಯದ ಮಾತನ್ನೆತ್ತಿದರೆ ಹಾಕಿಕೊಳ್ಳಲಿಕ್ಕೆ ಕೌಪೀನಕ್ಕೂ ಕೂಡ ಅಭಾವವೇ ಬತ್ತಲೆಯಾಗಿ ತಿರುಗುತ್ತಾನೆ. ವರನಲ್ಲಿ ರೂಪ ಕುಲ, ಧನಾದಿಯಾಗಿ ಯಾವವು ನೋಡಲ್ಪಡುತ್ತವೆಯೋ ಅವೆಲ್ಲವು ಇಲ್ಲದಿದ್ದರೂ ಮಹಾದೇವನಲ್ಲಿ ಅವುಗಳಲ್ಲಿ ಒಂದಾದರೂ ಅದೆ ಏನು?

ಕನ್ಯಾವರಯತೇರೂಪಂ ಮಾತಾವಿತ್ತಂ ಪಿತಾಶ್ರುತಂ |
ಬಾಂಧವಾ ಕುಲಮಿಚ್ಛಂತಿ ಮಿಷ್ಟಾನ್ನಮಿತರೇಜನಾಃ ||

ಕನ್ಯೆಯು ವರನ ರೂಪವನ್ನು ತಾಯಿಯು ಧನವನ್ನು ತಂದೆಯು ವಿದ್ಯೆಯನ್ನು ಬಾಂಧವರು ಕುಲವನ್ನು ಮತ್ತು ಬೇರೆ ಜನರು ಉತ್ತಮೋತ್ತಮ ಊಟಗಳಮೇಲೆ ದೃಷ್ಟಿಯನ್ನು ಕೊಡುತ್ತಾರೆ. ಈಗ ನೀನೇ ನೋಡು ಈ ವಿರೂಪಾಕ್ಷನಲ್ಲಿ ಇವುಗಳಲ್ಲಿ ಒಂದಾದರೂ ಅದೆಯೋ? ಅದಕ್ಕೆ ಪಾರ್ವತಿಯು ಉತ್ತರಕೊಡುತ್ತಾಳೆ.

ಅಕಿಂಚನಃಸನ್ ಪ್ರಭವಃ ಸ ಸಂಪದಾಂ |
ತ್ರಿಲೋಕನಾಥಃ ಪಿತೃಸದ್ಮಗೋಚರಃ ||
ಸಭೀಮರೂಪಃ ಶಿವಇತ್ಯುದೀರ್ಯತೆ |
ನ ಸಂತಿ ಯಾಥಾರ್ಥ್ಯವಿದಃ ಪಿನಾಕಿನಃ ||

ಅವನು ಸ್ವಂತವಾಗಿ ದರಿದ್ರನಿದ್ದರೂ ಜಗತ್ತಿನ ಎಲ್ಲಾ ಸಂಪತ್ತುಗಳು ಅವನಿಂದಲೇ ಹುಟ್ಟಿಸಲ್ಪಟ್ಟಿವೆ. ಅವನು ಸ್ಮಶಾನದಲ್ಲಿ ಇರುವವನಾದಾಗ್ಯೂ ಮೂರೂ ಲೋಕಗಳಿಗೆ ಒಡೆಯನಿದ್ದಾನೆ. ಅವನು ಭಯಂಕರ ರೂಪನಿದ್ದಾಗ್ಯೂ ಶಿವ ಅರ್ಥಾತ್ ಕಲ್ಯಾಣಕರವಾದ ಸೌಭಾಗ್ಯದ ಮೂರ್ತಿಯು ಇದ್ದಾನೆಂದು ಅನ್ನುತ್ತಾರೆ. ಶಿವನ ವಾಸ್ತವಿಕ ತತ್ವವನ್ನು ತಿಳಿಯತಕ್ಕವರು ಯಾರೂ ಇರುವದೇ ಇಲ್ಲ. ಇತ್ಯಾದಿ

(ಸಶೇಷ)

ಮಾರ್ಕೋನಿ.

(ರೇಡಿಯೋ ಮತ್ತು ಅದನ್ನು ಕಂಡುಹಿಡಿದ ವಿಜ್ಞಾನ ಶೋಧಕನ ಪರಿಚಯ)

ಈಗ ಮನುಷ್ಯನು ಸಾವಿರಾರು ಮೈಲು ಅಂತರದಲ್ಲಿರುವ ಮತ್ತೊಬ್ಬನೊಂದಿಗೆ ಮಾತನಾಡಬಲ್ಲನು; ಯಾವ ಸಮಾಚಾರವನ್ನು ಬೇಕಾದರೂ ಕಳುಹಿಸಬಲ್ಲನು; ವರ್ತಮಾನಗಳನ್ನು ಪಡೆಯಬಲ್ಲನು; ಆದರೆ ಈ ಕೆಲಸಗಳನ್ನು ತಂತಿಯ ಸಹಾಯವಿಲ್ಲದೆಯೇ ಮಾಡುತ್ತಿರುವುದು ಅದ್ಭುತವೇ ಸರಿ. ಈ ವೈರ್‌ಲೆಸ್ ಅಥವಾ ರೇಡಿಯೋ (Radio) ವು ಪ್ರಪಂಚದ ಎಲ್ಲಾ ಭಾಗಗಳನ್ನೂ ಹೆಣೆದಿದೆ. ತಂತಿಗಳ ಸಹಾಯವಿಲ್ಲದೆ ಒಂದು ಸ್ಥಳದಿಂದ ಮತ್ತೊಂದಕ್ಕೆ ಸಮಾಚಾರಗಳನ್ನು ಕಳುಹಿಸುವಂತೆ ಶಕ್ಯ ಸಾಧನವನ್ನು ಕಂಡುಹಿಡಿದವನೇ ಮಾರ್ಕೋನಿಯು.

ಮಾರ್ಕೋನಿಯು ಕ್ರಿ. ಶ. 1874 ರಲ್ಲಿ ಇಟಲಿಯಲ್ಲಿನ ಬೊಲೋಗ್ನ ಎಂಬ ಸ್ಥಳದಲ್ಲಿ ಜನಿಸಿದನು. ಅವನು ತನ್ನ 21 ನೇ ವಯಸ್ಸಿನಲ್ಲಿ ವೈರ್‌ಲೆಸ್ ಟೆಲಿಗ್ರಫಿಯಲ್ಲಿ ಮೊದಲನೆಯ ಪ್ರಯೋಗ [illegible] ತನ್ನ ಪ್ರಯೋಗಶಾಲೆಯಲ್ಲಿ ನಡೆಸಿದನು. ಆತನು [illegible] ತನ್ನ ಪ್ರಯತ್ನದಲ್ಲಿ ಜಯಶೀಲನಾದುದಲ್ಲದೆ ಈಗಲೂ [illegible]ದ ಈ ಶಾಖೆಯಲ್ಲಿ ಅನೇಕ ಸಿದ್ಧಾಂತಗಳ ಪ್ರಮಾಣವಾ[illegible]ಗ್ರಹಿಸಲು ಸುಲಭವಲ್ಲದ ವಿಜ್ಞಾನಶಾಸ್ತ್ರಗಳನ್ನು [illegible]ಯೇ ಆತನು ವೃತ್ತಪತ್ರಿಕೆಗಳನ್ನೂ ಓದುತ್ತಿದ್ದನು. [illegible]ಕಲಿಯುತ್ತಿದ್ದುದು ಮುಖ್ಯವಾಗಿ ವಿದ್ಯುತ್ತಿಗೆ [illegible]ಗಳು.

[illegible]ನಿಯು ಸ್ಥೂಲಪರಿಚಯವು ಪಾಠಕರಿಗೆ ಆಗಿರ[illegible]ನ್ನು 'ರೇಡಿಯೋ' ಅಥವಾ 'ವೈರ್‌ಲೆಸ್' ಎಂದರೇನೆಂದು ವಿಚಾರಿಸೋಣ. ತಂತಿಯ ಸಹಾಯವಿಲ್ಲದೆ, ಪ್ರಪಂಚದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ವರ್ತಮಾನಗಳನ್ನು ಕಳುಹಿಸುವುದು ಮತ್ತು ಪಡೆಯುವುದು ಇವನ್ನೇ ನಾವು 'ರೇಡಿಯೋ' ಎಂದು ಕರೆಯುವುದು. ವರ್ತಮಾನಗಳು ಸಂಜ್ಞೆಗಳ ಮೂಲಕವೋ ಅಥವಾ ಬೇರೆಬೇರೆ ಶಬ್ದಗಳ ಮೂಲಕವೋ ಕಳುಹಿಸಲ್ಪಡುವುವು.

ನಮ್ಮ ಸುತ್ತಮುತ್ತಲೂ ಇರುವ ಮನೆಮಠಗಳು, ಬೆಟ್ಟಗುಡ್ಡಗಳು, ಜನರು ಇವುಗಳೇ ಅಲ್ಲದೆ ಎಲ್ಲೆಲ್ಲಿಯೂ 'ಈಥರ್' (ether) ಎಂಬ ಪದಾರ್ಥವು ವ್ಯಾಪಿಸಿರುವುದು; ಈ ಪದಾರ್ಥದಲ್ಲಿಯೂ ಇನ್ನೂ ಇತರ ವಸ್ತುಗಳಲ್ಲಿಯೂ ವಿದ್ಯುತ್ತರಂಗಗಳು (Electric Waves) ಎಲ್ಲಾ ದಿಕ್ಕುಗಳಲ್ಲಿಯೂ ಪ್ರಸರಿಸಬಲ್ಲುವು. ಇಂತಹ ಅಲೆಗಳು ಅತ್ಯಂತ ವೇಗವಾಗಿಯೂ, ಅತ್ಯಂತ ನಿಧಾನವಾಗಿಯೂ ಚಲಿಸುವಂತೆ ಮಾಡಲಹುದು. ಅಲೆಗಳಿಲ್ಲದೆ ಶಾಂತವಾಗಿರುವ ಕೊಳದಲ್ಲಿ ಒಂದು ಕಲ್ಲನ್ನೆಸೆದರೆ ನೀರಿನ ತರಂಗಗಳು ಹೇಗೆ ಎಲ್ಲಾ ಕಡೆಗೂ ಹರಡುವುವೋ ಅದೇರೀತಿಯಲ್ಲಿ ಮೇಲೆಹೇಳಿದ ವಿದ್ಯುತ್ತರಂಗಗಳು ಚಲಿಸುತ್ತವೆ. ಇದನ್ನು ಮ್ಯಾಕ್ಸ್‌ವೆಲ್ (Maxwell) ಮೊದಲಾದವರು ಕಂಡುಹಿಡಿದಿದ್ದರೂ ಅದನ್ನು ಕಾರ್ಯತಃ ಉಪಯೋಗಿಸಿಕೊಂಡವರಲ್ಲಿ ಮಾರ್ಕೋನಿಯೇ ಮೊದಲನೆಯವನು. ಮೇಲೆ ಹೇಳಿದ ತರದ ಅಲೆಗಳು ಸಾವಿರಾರು ಮೈಲಿಗಳವರೆಗೆ ಹೋಗಬಲ್ಲವೆಂದು ಆತನ ವಿನಾ ಮತ್ತಾರಿಗೂ ತಿಳಿದಿರಲಿಲ್ಲ. ಅವನಿಗೆ ಇದು ನಿಜವೆಂದು ಕಂಡುಬಂದರೂ ಅದನ್ನು ನಂಬಲಾರದಾದನು; ಏಕೆಂದರೆ, ಎಲ್ಲರೂ ಒಂದು ರೀತಿಯಾಗಿ ತಿಳಿದಿರುವಾಗ ತಾನೇ ಬೇರೆ ರೀತಿಯಾಗಿ ಅಭಿಪ್ರಾಯಪಟ್ಟರೆ ಅಂತಹನನ್ನು ಹುಚ್ಚನೆನ್ನರೆ? ಆದರೆ ಇನ್ನೂ ಯೌವನಾವಸ್ಥೆಯಲ್ಲಿದ್ದ ಮಾರ್ಕೋನಿಯು ತಾನು ಕೈಕೊಂಡಿದ್ದ ಕಾರ್ಯವನ್ನು ಶಾಂತತೆಯಿಂದಲೂ ಶ್ರದ್ಧೆಯಿಂದಲೂ ಪರಿಶೀಲಿಸುತ್ತಿದ್ದನು. ಕೆಲವುವೇಳೆ ಆತನು ತನ್ನ ತಂದೆಯ ಪ್ರಯೋಗಶಾಲೆಯಲ್ಲಿ ದಿನಕ್ಕೆ 18 ಗಂಟೆಗಳ ಹೊತ್ತು ಕೆಲಸಮಾಡುತ್ತಿದ್ದನು. ಇಟಲಿಯಲ್ಲಿ ಇವನ ಪ್ರಯತ್ನಕ್ಕೆ ತಕ್ಕಷ್ಟು ಉತ್ತೇಜನವು ಸಿಗದಿದ್ದುದರಿಂದ 1896 ರಲ್ಲಿ ಇಂಗ್ಲೆಂಡಿಗೆ ಪ್ರಯಾಣಬೆಳಸಿ, ವೆಸ್ಟ್‌ಮೋರ್‌ಪಾರ್ಕನಲ್ಲಿ ತನ್ನ ಪ್ರಯೋಗಗಳನ್ನು ಸಾಗಿಸುತ್ತಿದ್ದನು. ಅವನ ಪ್ರಯತ್ನವು ಕೈಗೂಡಲು ಒಂದು ವರ್ಷಹಿಡಿಯಿತು; ಅದೇ ವರ್ಷವೇ ಅವನು ನ್ಯೂಫೌಂಡ್ಲೆಂಡಿಗೆ ಪ್ರಯಾಣಮಾಡಿದನು.

ಮಾರ್ಕೋನಿಯು ಇಂಗ್ಲೆಂಡಿನಿಂದ ಸಮಾಚಾರವನ್ನು (ತಾನು ಕಂಡುಹಿಡಿದಿದ್ದ ನೂತನ ಸಾಧನದಿಂದ) ಪಡೆಯುವುದಕ್ಕಾಗಿ ಒಂದು ಉನ್ನತಶಿಖರವನ್ನು ಕಟ್ಟಿಸಿದನು. ಹಿಂದೆ ನಿರ್ಧರಿಸಿದ್ದಂತೆಯೇ ಇಂಗ್ಲೆಂಡಿನಿಂದ ಸಂದೇಶವು ಸ್ಪಷ್ಟವಾಗಿ ಕೇಳಬಂದಿತು. ಆಗ ಮಾರ್ಕೋನಿಯು ಸಂತೋಷಕ್ಕೆ ಮೇರೆಯೇ ಇರಲಿಲ್ಲ. ತಂತಿಗಳಿಲ್ಲದೆ ವಿಶಾಲವಾದ ಅಟ್ಲಾಂಟಿಕ್ ಸಾಗರದ ಎರಡೂ ಕಡೆಗಳಿಂದ ಜನರು ಮಾತನಾಡಲಾರಂಭಿಸಿದರು ಇದೇ ಮೊದಲು. ಇದರಿಂದ ಪ್ರಪಂಚಕ್ಕೇ ಅಮೂಲ್ಯವಾದ ಹೊಸವಸ್ತುವೊಂದು ಬಂದಂತಾಯಿತು.

'ರೇಡಿಯೋ' ಯಂತ್ರದ ಉಪಯೋಗವು ಅಷ್ಟಿಷ್ಟಲ್ಲ: ಮಹಾಸಾಗರಗಳ ನಡುವೆ ಇರುವ ಹಡಗುಗಳು ಇತರ ಹಡಗುಗಳೊಡನೆಯೂ ತಾವು ಹೊರಟ ಬಂದರಿನೊಡನೆಯೂ ಒಂದು ವಿಧವಾದ ಐಕ್ಯತೆಯಿಂದ ಇರಬಹುದು, ಏಕೆಂದರೆ ಒಂದು ಸ್ಥಳದಿಂದ ಇನ್ನೊಂದಕ್ಕೆ ಸುದ್ದಿಗಳನ್ನು ಹೇಳಲೂ ಬಹುದು. ಕೇಳಲೂ ಬಹುದು. ಸಮುದ್ರಗಳ ನಡುವೆ ನೀರಿನ ಪಾಲಾಗುತ್ತಿದ್ದವರ ಪ್ರಾಣವನ್ನು ರೇಡಿಯೋವು ಬದುಕಿಸಿದೆ.

ಒಂದು ಸ್ಥಳದಿಂದ ಇನ್ನೊಂದಕ್ಕೆ ಟೆಲಿಫೋನ್ ಮೂಲಕ ವರ್ತಮಾನವನ್ನು ಕಳುಹಿಸಲು ಎರಡು ಸ್ಥಳಗಳನ್ನೂ ಸೇರಿಸುವಂತೆ ತಂತಿಗಳಿರಬೇಕು. ದೂರವು ಹೆಚ್ಚಾದಹಾಗೆಲ್ಲಾ ತಂತಿಹಾಕುವ ಬೆಲೆಯೂ ಹೆಚ್ಚಾಗುವುದು. ವೈರ್‌ಲೆಸ್ ಟೆಲಿಗ್ರಫಿಯಲ್ಲಿ ಇದರ ಅವಶ್ಯಕತೆಯೇ ಇಲ್ಲ. ಕೆಲವು ಹಡಗುಗಳಲ್ಲಿ ಪ್ರಪಂಚ ವಿಷಯಗಳನ್ನೊಳಗೊಂಡ ವೃತ್ತಪತ್ರಿಕೆಗಳು ಪ್ರತಿದಿನವೂ ಅಲ್ಲಿಯೇ ಪ್ರಿಂಟಾಗಿ ಪ್ರಕಟವಾಗುವುವಂತೆ! ಇದಕ್ಕೆ ವರ್ತಮಾನಗಳನ್ನು ಸಂಗ್ರಹಿಸಲು ರೇಡಿಯೋವು ಮುಖ್ಯಸಹಕಾರಿ, ನಾವು ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಸರಿಯೇ, ಪ್ರಪಂಚದ ಇತರ ಭಾಗಗಳಲ್ಲಿ ಆಗುತ್ತಿರುವ ವಿಷಯಗಳನ್ನು ರೇಡಿಯೋ ಮೂಲಕ ತಿಳಿಯಬಹುದು.

ಅಲ್ಲದೆ ವೈರ್‌ಲೆಸ್ಸಿನಿಂದ ಒಂದು ಕೊರತೆ (ಅದನ್ನು ಕೊರತೆ ಎನ್ನಬಹುದಾದರೆ) ಯುಂಟು, ಅದರಲ್ಲಿ ಗುಟ್ಟನ್ನು ಬಚ್ಚಿಡಲಾಗುವುದಿಲ್ಲ. ಟೆಲಿಫೋನಿನಲ್ಲಿ ಹೇಳುವವನೂ ಒಬ್ಬ, ಕೇಳುವವನೂ ಒಬ್ಬ; ಆದರೆ ರೇಡಿಯೋದಲ್ಲಿ ಹಾಗಲ್ಲ: ಹೇಳುವವನು ಒಬ್ಬನಾದರೆ ಕೇಳುವವರು ಸಹಸ್ರಗಟ್ಟಲೆ! ಒಂದು ಉತ್ತಮವಾದ 'ರೇಡಿಯೋ ಸೆಟ್ಟ'ನ್ನು ಇಟ್ಟುಕೊಂಡಿದ್ದರೆ ಸಾಕು. ಅನೇಕ ವಿಷಯಗಳನ್ನು ತಿಳಿಯಬಹುದು.

ಈಗ, ಮೇಲೆ ಹೇಳಿದ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಒಂದು ಯಂತ್ರ (Scrambling Machine) ವನ್ನು ಕಂಡುಹಿಡಿದಿದ್ದಾರೆ. ಈ ಯಂತ್ರಸಾಧನದ ಉಪಯೋಗದಿಂದ ವಿಷಯಗಳೆಲ್ಲವೂ ಅಡ್ಡಾದಿಡ್ಡಿಯಾಗಿ ಜೋಡಿಸಲ್ಪಟ್ಟು ಕೇಳುವವರಿಗೆ ಅರ್ಥವಾಗದಂತಿರುವುದು. ವರ್ತಮಾನವು ಯಾರಿಗಾಗಿ ಕಳುಹಿಸಲ್ಪಟ್ಟಿದೆಯೋ ಅವರ ಬಳಿಯಲ್ಲಿಯೂ ಮೇಲೆ ಹೇಳಿದ ಯಂತ್ರವಿರುತ್ತದೆ. ಅದರಿಂದ ಶಬ್ದಗಳು ಹೇಳುವವನಿಂದ ಹೊರಟಂತೆಯೇ ಕೇಳಿಸುತ್ತವೆ.

ವೈರ್‌ಲೆಸ್ ಟೆಲಿಗ್ರಫಿಯು ಇನ್ನೂ ಶೈಶವಾವಸ್ಥೆಯಲ್ಲಿದೆ. ಅದನ್ನು ಕಂಡುಹಿಡಿದ ವಿಜ್ಞಾನಿಯು ಇನ್ನೂ ಮಧ್ಯವಯಸ್ಕನು.

(೬ನೇ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೪ನೇ ಏಪ್ರೆಲ್ ತಾ॥ ೨೩ನೇ ಸೋಮವಾರ.

ಗಾಂಧಿಯವರ ಅಧರ್ಮಮಾರ್ಗ.

ಗಾಂಧಿಯವರು ಇದುವರೆಗೂ ಅಸ್ಪೃಶ್ಯತಾನಿವಾರಣವ್ಯಾಜದಿಂದ ಕರ್ಣಾಟಕದೇಶದಲ್ಲಿ ಸಂಚರಿಸುತ್ತ ಜನಗಳಿಗೆ ಮಂಕುಬೂದಿಯನ್ನು ಎರಚಿ ವಿಪುಲದ್ರವ್ಯವನ್ನು ಶೇಖರಿಸಿ ಉತ್ತರಹಿಂದೂಸ್ಥಾನವನ್ನು ಸೇರಿದರಷ್ಟೆ! ಅಲ್ಲಿಯವರು, ಗಾಂಧಿಯವರು ತಮ್ಮಲ್ಲಿಗೆ ಬಂದಿದ್ದು ಭಾಗ್ಯಲಕ್ಷ್ಮಿಯೇ ಬಂದಂತಾಯಿತು; ಇನ್ನು ನಮ್ಮ ಕಷ್ಟಗಳು ಪರಿಹರವಾಗುವುವೆಂದು ನಂಬಿದ್ದರು. ಗಾಂಧಿಯವರು ಶಾಸ್ತ್ರವಿಹಿತವಾದ ಸ್ಪೃಶ್ಯಾಸ್ಪೃಶ್ಯನಿಯಮವನ್ನು ತೆಗೆದುಹಾಕಿ ಧರ್ಮಸಾಂಕರ್ಯಗೊಳಿಸುವುದರಲ್ಲಿ ಎಷ್ಟು ಜಾಗರೂಕರಾಗಿರುವರೋ ಭೂಕಂಪದ ಹಾವಳಿಯಿಂದ ದುಃಖಾಗ್ನಿಯಲ್ಲಿ ಬೆಂದ ಬಿಹಾರಪ್ರಾಂತೀಯರಿಗೆ ಸಹಾಯಮಾಡಲು ಅಷ್ಟು ಜಾಗರೂಕರಾಗಿಲ್ಲವೆಂದು ಅವರು ಅಲ್ಲಲ್ಲಿ ಮಾಡಿರುವ ಉಪನ್ಯಾಸಗಳಿಂದಲೇ ಸ್ಪಷ್ಟವಾಗುತ್ತದೆ. ಕಳೆದ ತಿಂಗಳು ೧೩ ನೆಯ ತಾರೀಖಿನ ದಿವಸ ಪಾಟಣಾದಲ್ಲಿ ನಡೆದ ಒಂದು ದೊಡ್ಡ ಸಭೆಯಲ್ಲಿ ಈಗ ಬಿಹಾರಪ್ರಾಂತದಲ್ಲಿ ನಡೆದ ಭೂಕಂಪದ ಧಕ್ಕೆಯು ಅಷ್ಟೇನೂ ದೊಡ್ಡದಲ್ಲ. ಅಸ್ಪೃಶ್ಯರ ಧಕ್ಕೆಯೇ ದೊಡ್ಡ ಧಕ್ಕೆಯು, ಭೂಕಂಪಪೀಡಿತರಾದ ಜನಗಳು ಅಸ್ಪೃಶ್ಯತ್ವದ ಧಕ್ಕೆಯನ್ನು ನೋಡಿ ತಮ್ಮ ಕಷ್ಟವನ್ನು ಸಹಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಇದಲ್ಲದೆ ಹಿಂದೊಮ್ಮೆ ಇದೇ ಭೂಕಂಪದ ಸಮಸ್ಯೆಯಲ್ಲಿ ಅಸ್ಪೃಶ್ಯರನ್ನು ಬಹು ಕೀಳುದಶೆಗೆ ತಂದ ಮಹಾಪಾಪದಿಂದಲೇ ಬಿಹಾರ ಪ್ರಾಂತದಲ್ಲಿ ಭೂಕಂಪವುಂಟಾಯಿತೆಂದು ಹೇಳಿದ್ದರು. ಹೀಗೆ ಗಾಂಧಿಯವರು ಮುಪ್ಪಿನ ದೋಷದಿಂದ ಮನಸ್ಸಿಗೆ ಹೇಗೆ ಹೇಗೆ ತೋರುವುದೋ ಹಾಗೆ ಹಾಗೆ ನುಡಿಯುತ್ತಿರುವರು. ಇವರು ಕಲ್ಲನ್ನು ರತ್ನವೆಂದು ಹೇಳಿದರೂ ಸರಿ, ರತ್ನವನ್ನು ಕಲ್ಲೆಂದು ಹೇಳಿದರೂ ಸರಿ, ಅನೇಕರು ಇವರ ಮಾತಿಗೇನೇ ತಾಳಹಾಕುತ್ತ ಕುಣಿಯುತ್ತಿರುವರು. ಇದರಿಂದ ಗಾಂಧಿಯವರು ಹುಚ್ಚನಿಗೆ ಧೂಪ ಹಾಕಿದಂತೆ ಮತ್ತಿಷ್ಟು ಉಬ್ಬಿ ಉಬ್ಬಿ ಸನಾತನಿಗಳ ಕೈಯಲ್ಲಿರುವ ಧರ್ಮಧ್ವಜವನ್ನು ಮುರಿದುಹಾಕಲು ಮನಸ್ಸು ಬಂದಹಾಗೆಲ್ಲಾ ಶಾಸ್ತ್ರವಿರುದ್ಧವಾಗಿಯೂ ಲೋಕಾನುಭವವಿರುದ್ಧವಾಗಿಯೂ ಮಾತಾಡಲು ಹತ್ತಿರುವುದನ್ನು ನೋಡಿದರೆ ಸನಾತನಧರ್ಮವು ಇವರಿಗೆ ವಿಷವಾಗಿ ಪರಿಣಮಿಸಿದಂತೆ ಕಂಡುಬರುತ್ತದೆ. ಪವಿತ್ರವಾದಸನಾತನಧರ್ಮವು ತ್ರಿಕಾಲಜ್ಞಾನಿಗಳಾದ ಮಹರ್ಷಿಗಳಿಂದಲೂ ಮಹಾಚಾರ್ಯರಿಂದಲೂ ಫಲಾನುಭವಪೂರ್ವಕವಾಗಿ ಭಾರತಭೂಮಿಯಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಇದುವರೆಗೂ ಅನೇಕಜನ ಮಹಾತ್ಮರು ಈ ಮಾರ್ಗವನ್ನವಲಂಬಿಸಿ ಮುಕ್ತಿನಗರವನ್ನು ಸೇರಿರುವರಲ್ಲದೆ ಜಗದ್ರಕ್ಷಣಭಾರವನ್ನು ವಹಿಸಿದ ಮಹಾವಿಷ್ಣುವು ಸಹ ರಾಮಕೃಷ್ಣಾದ್ಯವತಾರಗಳನ್ನೆತ್ತಿ ಇದೇ ಸನಾತನಧರ್ಮಾನುಷ್ಠಾನಮಾಡಿ ಸೂರ್ಯಚಂದ್ರರಿರುವವರೆಗೂ ಯಶಃಕಾಯನಾಗಿರುತ್ತಾನೆ. ಸನಾತನಧರ್ಮವಾದರೂ ಸ್ವಭಾವತಃ ಅಮೃತದಂತೆ ಅತಿ ಮಾಧುರ್ಯರಸವುಳ್ಳದ್ದು. ಮತ್ತು ಹುಟ್ಟು ಸಾವುಗಳನ್ನು ತಪ್ಪಿಸುವ ಸಾಮರ್ಥ್ಯವುಳ್ಳದ್ದು. ಜ್ವರಪೀಡಿತನಾದ ಮನುಷ್ಯನಿಗೆ ಅಮೃತವೂ ಸಹ ವಿಷವಾಗಿ ಪರಿಣಮಿಸುವುದೆಂದರೆ ಅದು ಜ್ವರದ ದೋಷವಲ್ಲದೆ ಅಮೃತದ ದೋಷವಲ್ಲ. ಅಮೃತವು ಯಾವಾಗಲೂ ಅಮೃತವೇ ಆಗಿರುವಂತೆಯೂ ವಿಷವು ವಿಷವೇ ಆಗಿರುವಂತೆಯೂ ಧರ್ಮವು ಧರ್ಮವೇ ಆಗಿರುತ್ತದೆ. ಗಾಂಧಿಯವರು ಅಧರ್ಮವನ್ನು ಧರ್ಮವನ್ನಾಗಿಯೂ ಧರ್ಮವನ್ನು ಅಧರ್ಮವನ್ನಾಗಿಯೂ ಮಾಡಲು ಹೊರಟಿರುತ್ತಾರೆ. ಇದು ಪೂರ್ವದಲ್ಲಿ ಮೂಡುವ ಸೂರ್ಯನನ್ನು ಪಶ್ಚಿಮದಲ್ಲಿ ಮೂಡುವ ಹಾಗೆ ಮಾಡುತ್ತೇನೆಂದು ಹೊರಟಿರುವವನಂತೆ ಕೇವಲ ಹಾಸ್ಯಾಸ್ಪದವೇ ಸರಿ.

ಪ್ರಪಂಚವು ಎಂದು ಸೃಷ್ಟಿಯಾಯಿತೋ ಅಂದಿನಿಂದಲೂ ಇದು ಧರ್ಮ, ಇದು ಅಧರ್ಮ, ಇದು ಪುಣ್ಯ, ಇದು ಪಾಪ, ಇದು ಗುಣ, ಇದು ದೋಷ, ಇದು ಸ್ಪೃಶ್ಯ, ಇದು ಅಸ್ಪೃಶ್ಯ, ಇದು ಸ್ವರ್ಗ, ಇದು ನರಕ, ಇದು ಗ್ರಾಹ್ಯ, ಇದು ಅಗ್ರಾಹ್ಯ, ಇದು ಜನನ, ಇದು ಮರಣ. ಇದು ಹಸಿವು, ಇದು ತೃಷೆ ಇತ್ಯಾದಿಗಳು ದ್ವಂದ್ವದ್ವಂದ್ವವಾಗಿಯೇ ಬಂದಿರುತ್ತವೆ. ಸ್ವಭಾವಸಿದ್ಧವಾದ ನಿಯಮವನ್ನು ತಪ್ಪಿಸಲು ಯಾರೂ ಶಕ್ತರಲ್ಲ. ಪ್ರಕೃತದಲ್ಲಿ ಈ ವಿರೋಧಸ್ವಭಾವವನ್ನು ತಪ್ಪಿಸಿ ಎಲ್ಲವನ್ನೂ ಒಂದೇ ಮಾಡುತ್ತೇನೆಂದು ಹೊರಟಿರುವ ಗಾಂಧಿಯವರ ಪ್ರಯತ್ನವು ಈಶ್ವರಸಂಕಲ್ಪಕ್ಕೆ ವಿರುದ್ಧವಾದ ಕಾರ್ಯವೇ ಸರಿ. ಈ ಮಹಾಶಯರು ನ್ಯಾಯವಾಗಿ ಸನಾತನಧರ್ಮದಲ್ಲಿ ಶ್ರದ್ಧೆಯುಳ್ಳವರಾಗಿದ್ದರೆ ಅಸ್ಪೃಶ್ಯತೆಯ ಮಹಾಪಾಪಭಾರದಿಂದ ಭೂಕಂಪವಾಯಿತೆಂದೂ ಅಸ್ಪೃಶ್ಯತೆಯ ಧಕ್ಕೆಗಿಂತಲೂ ಭೂಕಂಪದ ಧಕ್ಕೆಯು ಅಷ್ಟು ದೊಡ್ಡದಲ್ಲವೆಂದೂ ಎಂದಿಗೂ ಹೇಳುತ್ತಿರಲಿಲ್ಲ.

> ಯಾಂತಿ ನ್ಯಾಯಪ್ರವೃತ್ತಸ್ಯ ತಿರ್ಯಂಚೋಽಪಿ ಸಹಾಯತಾಂ ।
> ಅಪಂಥಾನಂತು ಗಚ್ಛಂತಂ ಸೋದರೋಽಪಿ ವಿಮುಂಚತಿ ॥

ಯಾರು ಧರ್ಮದ ಎಲ್ಲೆಯನ್ನು ಮೀರುವುದಿಲ್ಲವೋ ಅಂಥವರಿಗೆ ಪಶುಪಕ್ಷಿಗಳೂ ಸಹ ಸಹಾಯಮಾಡುತ್ತವೆ. ಯಾರು ಧರ್ಮದ ಹದ್ದನ್ನು ಮೀರಿ ನಡೆಯುತ್ತಾರೆಯೋ ಅಂಥವರನ್ನು ಒಡಹುಟ್ಟಿದವರೂ ಸಹ ತಿರಸ್ಕರಿಸಿಬಿಡುತ್ತಾರೆ. ಕಾಡಿನಲ್ಲಿ ವಾಸಮಾಡಿದ ಶ್ರೀರಾಮನ ಪತ್ನಿಯನ್ನು ರಾವಣನು ಅಪಹರಿಸಿ ಧರ್ಮದ ಎಲ್ಲೆಯನ್ನು ಮೀರಿದ್ದರಿಂದ ಕಷ್ಟಕಾಲದಲ್ಲಿಯೂ ಧರ್ಮಮಾರ್ಗವನ್ನು ಬಿಡದಿರುವ ಶ್ರೀರಾಮನಿಗೆ ಕಾಡಿನಲ್ಲಿರುವ ಕಪಿಪಕ್ಷ್ಯಾದಿಗಳೂ ಸಹ ಸಹಾಯಮಾಡಿದವು. ರಾವಣನು ತನ್ನ ತಪಶ್ಶಕ್ತಿಯಿಂದ ಶಿವನನ್ನು ಪ್ರತ್ಯಕ್ಷೀಕರಿಸಿಕೊಂಡು ಶಿವಭಕ್ತಶಿಖಾಮಣಿಯೆಂದೂ, ರಾಕ್ಷಸಸಾರ್ವಭೌಮನೆಂದೂ ಹೆಸರನ್ನು ಪಡೆದಿದ್ದರೂ ಶಾಸ್ತ್ರನಿಷಿದ್ಧವಾದ ದುರ್ಮಾರ್ಗದಲ್ಲಿ ಕಾಲಿಟ್ಟಿದ್ದರಿಂದ ಒಡಹುಟ್ಟಿದ ವಿಭೀಷಣನು ಸಹ ಆತನ ದುರ್ವೃತ್ತಿಯನ್ನು ಖಂಡಿಸಬೇಕಾಯಿತು. ಅದರಂತೆ ಗಾಂಧಿಯವರ ಹೃದಯಮಿತ್ರರಾದ ಟಾಗೂರರವರು ಇದುವರೆಗೂ ಗಾಂಧಿಯವರ ಕಾರ್ಯದಲ್ಲಿ ಸಹಾನುಭೂತಿಯನ್ನು ತೋರಿಸುತ್ತಲಿದ್ದರು. ಈಗ ಅದೇ ಟಾಗೂರರವರು ಗಾಂಧಿಯವರು ಮೊದಲು ಕೈಗೊಂಡಿದ್ದ ಸ್ವರಾಜ್ಯಸಾಧನಮಹಾಯಜ್ಞದಲ್ಲಿ ಕಟ್ಟಿದ ಕಂಕಣವನ್ನು ಎಸೆದು ಧರ್ಮಸಾಂಕರ್ಯಕಾರಕವಾದ ಕಾರ್ಯದಲ್ಲಿ ಬದ್ಧದೀಕ್ಷೆಯುಳ್ಳವರಾಗಿ ತಮ್ಮ ಮುಖದ ಇಚ್ಛೆಗೆ ಬಿಹಾರಪ್ರಾಂತದ ಅನಿಷ್ಟಕ್ಕೂ ಅಸ್ಪೃಶ್ಯತ್ವಕ್ಕೂ ಕಾರ್ಯಕಾರಣಭಾವವನ್ನು ಕೊಟ್ಟಿರುವುದಕ್ಕಾಗಿ ಮನನೊಂದು ಗಾಂಧಿಯವರನ್ನು ಬಹಳವಾಗಿ ಟೀಕಿಸಿದ್ದಾರೆ. ಮತ್ತು ಗಾಂಧಿಯವರಿಗೆ ಬಲಗೈಯಂತಿದ್ದ ಸರೋಜಿನಿದೇವಿಯವರೂ ಸಹ ಗಾಂಧಿಯವರ ಅಸಾಧಾರಣಚಂಚಲಸ್ವಭಾವವನ್ನು ನೋಡಿ ಮೊನ್ನೆ ತಾನೆ "ಗಾಂಧಿಯವರೇನೋ ತಮ್ಮ ಪ್ರತಿಯೊಂದು ಅವಮಾನ ಅನಿಶ್ಚಿತ ಮನೋನಿವೃತ್ತಿಗಳನ್ನು ಒಂದು ವಿಧವಾದ ತಪಸ್ಸೆಂದು ಹೇಳುವದನ್ನು ಬಿಡುವುದಿಲ್ಲ. ತಮ್ಮ ತಪ್ಪು ಕೆಲಸಗಳನ್ನೂ ತಪ್ಪು ಅಭಿಪ್ರಾಯಗಳನ್ನೂ ತಮಗೆ ಕೇಳಿಸುತ್ತಿರುವ ದೇವದತ್ತ ಅಂತರ್ಧ್ವನಿಯ ಪ್ರೇರೇಪಣೆಗಳೆಂದು ಕರೆಯುವುದೇ ಅವರ ವಿಲಕ್ಷಣ ಸ್ವಭಾವವಾಗಿದೆ." ಎಂದು ಗಾಂಧಿಯವರನ್ನು ಚನ್ನಾಗಿ ಖಂಡಿಸಿದ್ದಾರೆ. ಇದರಂತೆಯೇ ಅನೇಕಜನ ಮೇಧಾವಿಗಳು ಗಾಂಧಿಯವರ ಅಮಂಗಲ ವರ್ತನವನ್ನು ಚನ್ನಾಗಿ ತಿರಸ್ಕರಿಸ ಹತ್ತಿದ್ದಾರೆ. ಧರ್ಮಸಂಕರಕಾರ್ಯದಲ್ಲಿ ತೊಡಗುವುದಕ್ಕಿಂತ ಮುಂಚೆ ಗಾಂಧಿಯವರೆಂದರೆ ನಮ್ಮ ಭಾರತಭೂಮಿಯಲ್ಲಿ ವಾಸಮಾಡಿದ ಪ್ರತಿಯೊಬ್ಬ ಬಾಲಕಬಾಲಿಕೆಯರು ಸಹ ಇವರಿಗೆ ಸಹಾಯಕರಾಗಿದ್ದುದಲ್ಲದೆ ಜಡೀಭೂತವಾದ ಪಶುಪಕ್ಷ್ಯಾದಿಗಳೂ ಸಹ ಶಿರಃಕಂಪನವ್ಯಾಜದಿಂದ ಗಾಂಧಿಯವರಿಗೆ ಸಹಾಯ ಮಾಡುವುದರಲ್ಲಿ ಒಪ್ಪಿಗೆಯನ್ನು ಕೊಡುತ್ತಿದ್ದುವೆಂದರೆ ಅತಿಶಯೋಕ್ತಿಯೆನಿಸದು. ಹೀಗಿದ್ದ ಗಾಂಧಿಯವರು ತಾವು ಕೈಕೊಂಡಿದ್ದ ಸ್ವರಾಜ್ಯಕ್ಷೇತ್ರದಿಂದ ಹಿಂದುರಿಗಿ ಮಹರ್ಷಿಪ್ರಣೀತವಾದ ಧರ್ಮಮಾರ್ಗದಲ್ಲಿ ಮುಳ್ಳೆಳೆಯುವುದಕ್ಕೆ ಹೊರಟಿದ್ದರಿಂದ ಪ್ರಬಲರಾದ ಮಿತ್ರರೂ ಸಹ ಶತ್ರುಗಳಾಗಿ ಪರಿಣಮಿಸಬೇಕಾಯಿತು. "ಅವರವರ ಮನವೊಲಿದುದೇ ಬ್ರಹ್ಮ, ಚೋರನಿಗೆ ಕದಿಯುವುದೇ ಬ್ರಹ್ಮ, ಕಾಮಿಗೆ ಸ್ತ್ರೀದರ್ಶನವೇ ಬ್ರಹ್ಮ" ಎಂದು ಓರ್ವಮಹನೀಯರು ದುರಳವೇದಾಂತಿಗಳ ಸ್ವಭಾವವನ್ನು ವರ್ಣಿಸಿರುವಂತೆ ಪ್ರಕೃತದಲ್ಲಿ ಗಾಂಧಿಯವರು ತಮ್ಮ ಮನಸ್ಸಿಗೆ ಏನು ತೋರುವುದೋ ಅದು ಅಧರ್ಮವಾಗಿದ್ದರೂ ಧರ್ಮವನ್ನಾಗಿಯೇ ಭಾವಿಸುವ ಸ್ವಭಾವದವರಾಗಿದ್ದಾರೆ. "ಗತಾನುಗತಿಕೋಲೋಕಃ ನಲೋಕಃಪಾರಮಾರ್ಥಿಕಃ" ಎಂಬಂತೆ ಅನೇಕರು ಇವರು ಹಿಡಿದ ಮಾರ್ಗವು ಇಹಪರಗಳೆರಡಕ್ಕೂ ಅನುಕೂಲವೋ ಪ್ರತಿಕೂಲವೋ ಎಂಬುದನ್ನು ಯೋಚಿಸದೆ ಗಾಂಧಿಯವರು ನನಗೆ ಅಂತರ್ಧ್ವನಿಯು ಕೇಳಿಸುತ್ತದೆ ದೇವರು ಪ್ರೇರಿಸಿದ್ದಾನೆ ಮುಂತಾಗಿ ಆಡುವ ಸುಳ್ಳುಮಾತುಗಳಿಗೆ ಬೆರಗಾಗಿ ತಮ್ಮ ಮಹರ್ಷಿಗಳಿಂದುಕ್ತವಾದ ಧರ್ಮಸಾಂಕರ್ಯಕಾರ್ಯಗಳಲ್ಲಿ ಪ್ರವೃತ್ತರಾಗಿ ತಾವು ಕೆಡುವುದಲ್ಲದೆ ಪ್ರಪಂಚವನ್ನೇ ಕೆಡಿಸಲು ಪ್ರಾರಂಭಿಸಿದ್ದಾರೆ. ಹೀಗೆ ಮಿಥ್ಯಾವಾದಿಗಳೂ ಕ್ಷಣಿಕವಾದಿಗಳೂ ಆದ ಗಾಂಧಿಯವರ ಇಂಥ ಅಧರ್ಮೋಪದೇಶಗಳಿಗೆ ಮರುಳಾಗಿ ಧರ್ಮವಿರುದ್ಧಮಾರ್ಗದಲ್ಲಿ ಯಾರೂ ಕಾಲಿಡಲಾಗದೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಚನ್ನಪಟ್ಟಣ ತಾಲ್ಲೂಕು ಅವ್ವೇರಹಳ್ಳಿ ಗ್ರಾಮದಲ್ಲಿ ಒಂದು ಗುಡಿಸಲಿಗೆ ಅಕಸ್ಮಾತ್ ಬೆಂಕಿಬಿದ್ದು ಅದರಿಂದ 8 ಗುಡಿಸಲುಗಳೂ ಒಂದು ಮಗುವೂ ಸುಟ್ಟು ಭಸ್ಮವಾದುವು.

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಕೆಲವು ದಿವಸಗಳ ಹಿಂದೆ, ಒಂದು ಮೊಕದ್ದಮೆಗೆ ಸಂಬಂಧಪಟ್ಟ ಕೆಲವು ಪದಾರ್ಥಗಳು ಕದಿಯಲ್ಪಟ್ಟಿರುವುವೆಂದೂ ಪೋಲೀಸರು ತನಿಖೆ ಮಾಡುತ್ತಿರುವರೆಂದೂ ತಿಳಿದುಬಂದಿದೆ.

ಬೆಂಗಳೂರು ಕಂಟೋನ್ಮೆಂಟಿಗೆ ಸೇರಿದ ಕ್ಯಾಕ್ಸ್‌ಟೌನ್ ಪೋಸ್ಟ್ ಆಫೀಸಿನ ಪೋಸ್ಟುಮಾಸ್ಟರವರು 1000 ರೂ. ಗಳನ್ನು ದುರುಪಯೋಗಪಡಿಸಿರುತ್ತಾರೆಂಬ ಕಾರಣದಮೇಲೆ ಪೋಲೀಸರು ಅವರನ್ನು ದಸ್ತಗಿರಿಮಾಡಿ ತನಿಖೆ ಮಾಡುತ್ತಿರುವರು.

ಬೆಂಗಳೂರು ಶಂಕರಪುರದ ಸಬ್ ಪೋಸ್ಟ್ ಆಫೀಸಿನ ಪೋಸ್ಟುಮಾಸ್ಟರಾದ ಡಿ. ಬಿ. ರಾಜಾರಾವ್ ಎಂಬವರು ಆಫೀಸಿನಬಾಬ್ತು 135 ರೂ. ಗಳನ್ನು ದುರುಪಯೋಗಪಡಿಸಿದರೆಂಬ ಕಾರಣದಮೇಲೆ ಪೋಲೀಸರು ಅವರನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಉರಿಗಾಮಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮಿ॥ ಜೆ. ಅಪ್ಪಾಜಿಗೌಡರು, ಖೋಟಾನಾಣ್ಯಗಳನ್ನು ತಯಾರಿಸಿದರೆಂಬ ಅಪಾದನೆಗೆ ಗುರಿಯಾಗಿದ್ದ ಮುನಿಯಪ್ಪ, ಮುನಿಸ್ವಾಮಿ, ತದಯ್ಯ ಮತ್ತು ಆರೋಗ್ಯಸ್ವಾಮಿ ಎಂಬ ನಾಲ್ಕು ಜನರ ವಿಚಾರಣೆಯನ್ನು ನಡೆಯಿಸಿ, ಅಪರಾಧಿಗಳನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ರಾಜಧಾನಿಯ ಪೋಲೀಸ್ ಜಮಾದಾರ್ ಸೈಟ್ ಸ್ವಾಮಿ ಎಂಬಾತನು ದುಸ್ಸಹದಿಂದ ಅ[illegible]ವನಾಗಿದ್ದನೆಂಬ ಕಾರಣದಮೇಲೆ ಡಿಸ್ಮಿ[illegible]ಸಿದ ಗಂಗೆ ಹಾಗೂ [illegible]ಟರು ತನಿಖೆಮಾ[illegible] ಈ ಎರಡು ವಿಷಯಗಳನ್ನು [illegible] ಮಾಡಿರುತ್ತಾ[illegible] [illegible]ರುಗಳ ಮೇಲೆ ಜನರ ಅನೇಕ [illegible] [illegible]ಷ್ಟು ವಿನ ಪರಮಧಕ್ತಿದ್ದನು. ಅ[illegible] ರಿಯನ್ನು ವ[illegible]ನವನ್ನಾಗಿ ಮಾಡಿಕೊಳ್ಳಲೋಸುಗ ಅ[illegible] ವನ್ನು ಪಡೆ[illegible] ಸ್ವರೂಪವಾದ ಗಂಗೆಯನ್ನು ಭಕ್ತಿ[illegible] ಧರಿಸಿದ್ದಾನೆಂದು ಕೆಲವರು ಹೇಳುತ್ತಾರೆ

ಚನ್ನಪಟ್ಟಣಕ್ಕೆ 1½ ಮೈಲು ದೂರದಲ್ಲಿ ನಡೆದ ಮಾದೇಶ್ವರ ಸ್ವಾಮಿಯ ಜಾತ್ರೆಯಲ್ಲಿ ರಥೋತ್ಸವದ ಮರುದಿವಸ ಹಿಂದೂಮುಸಲ್ಮಾನರಲ್ಲಿ ಜಗಳ ಹುಟ್ಟಿ ಮಾರಾಮಾರಿಯಾದ್ದರಿಂದ ಜಾತ್ರೆಯು ಅಷ್ಟಕ್ಕೇ ನಿಂತುಹೋಯಿತೆಂದೂ, ಒಬ್ಬ ಮಹಮ್ಮದೀಯನಿಗೆ ತುಂಬಾ ಏಟು ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ ತಿಳಿದುಬಂದಿದೆ.

ಶ್ರೀ ಜಯಚಾಮರಾಜ ಒಡೆಯರವರು ಬೇಸಿಗೆಯನ್ನು ಕಳೆಯಲು ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಕೆಮ್ಮಣ್ಣುಗುಂಡಿಗೆ ದಯಮಾಡಿಸಿರುತ್ತಾರೆ. ಅಲ್ಲಿ ಶ್ರೀಮನ್ಮಹಾರಾಜರವರ ಅಜ್ಞಾನುಸಾರವಾಗಿ ವಾಸಯೋಗ್ಯವಾದ ಅನೇಕ ಬಂಗಲೆಗಳೂ, ಮನೋಹರಗಳಾದ ಉದ್ಯಾನಗಳೂ, ಜಲಪಾತಗಳೂ ಮತ್ತು ಮೇಲಕ್ಕೆ ಹೋಗಿಬರಲು ದಿವ್ಯವಾದ ಮೋಟಾರುರಸ್ತೆಯೂ ತಯಾರಿಸಲ್ಪಟ್ಟಿರುವುವು.

ಶಿವಮೊಗ್ಗಾ ದೊಂಬಿ ಮೊಕದ್ದಮೆಯಲ್ಲಿ ಅಸಿಸ್ಟೆಂಟ್ ಡಿ॥ ಜಡ್ಜರವರು 44 ಜನ ಮಹಮ್ಮದೀಯರ ಮೇಲೆ ಮಾಡಿದ್ದ ಅಪಾದನೆಗಳನ್ನು ವಿಚಾರಣೆಮಾಡಿ ಅವರ ಪೈಕಿ ಬಾಬಾಸಾಬ್, ಮಹಮದ್‌ದಿವಾನ್, ಮಹಮದ್ ದಸ್ತಗೀರ್‌ಸಾಬ್, ಮತ್ತು ಅಬ್ದುಲ್ ರಸೂಲ್ ಈ 4 ಜನರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿ ಉಳಿದ 40 ಜನರಿಗೆ 5 ವರ್ಷಗಳಿಂದ 13 ವರ್ಷಗಳವರೆಗೆ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ. ಅಪರಾಧಿಗಳ ಕಡೆಯ ವಕೀಲರು ಹೈ ಕೋರ್ಟಿನಲ್ಲಿ ಅಪೀಲ್ ದಾಖಲ್ಮಾಡಿ ಅವರನ್ನು ಜಾಮೀನ್ ಮೇಲೆ ಬಿಡಬೇಕೆಂದು ಪ್ರಾರ್ಥಿಸಿರಲು ಜಡ್ಜರು 10 ವರ್ಷ ಮತ್ತು ಅದಕ್ಕೂ ಹೆಚ್ಚಿನ ಶಿಕ್ಷೆಗೆ ಗುರಿಯಾಗಿದ್ದ 7ಜನರ ಹೊರತು ಇತರ 33 ಜನರನ್ನು ಜಾಮೀನಿನಮೇಲೆ ಬಿಡಬಹುದೆಂದು ಆರ್ಡರ್ ಮಾಡಿರುತ್ತಾರೆ.

ವರ್ತಮಾನಸಂಗ್ರಹ.

ಪಾಂಪ್ಯೆ ನಗರದ ಬೀದಿಗಳಲ್ಲಿ ಪ್ರತಿನಿತ್ಯವೂ 30 ಸಾವಿರ ತಿರುಕರು ತಿರುಗುವರಂತೆ!

ಪೃಥ್ವಿಯ ವಿಸ್ತೀರ್ಣವು 19,70,00,000 ಚದರ ಮೈಲುಗಳೆಂದು ಈಚೆಗೆ ಕಂಡುಹಿಡಿಯಲ್ಪಟ್ಟಿದೆ.

ಜರ್ಮನಿಯಲ್ಲಿರುವ ನ್ಯೂಸ್ಟೀಂ ಕ್ರೈನಾನ್ ಎಂಬಲ್ಲಿ ಮರದಿಂದ ಸಕ್ಕರೆಯನ್ನು ತಯಾರ್ಮಾಡುವರಂತೆ!

ಭತ್ತದ ಬೆಳೆಯನ್ನು ಇಲಿಗಳ ಕಾಟದಿಂದ ತಪ್ಪಿಸುವುದಕ್ಕಾಗಿ ಸಿಲೋನಿನಲ್ಲಿ ಇಲಿಗಳನ್ನು ತಿನ್ನುವ ಹಾವುಗಳನ್ನು ಸಾಕುವರಂತೆ!

ಯೂರೋಪಿನ ರಾಷ್ಟ್ರಗಳು 1931ನೇ ವರ್ಷದಲ್ಲಿ ಯುದ್ಧಸಾಮಗ್ರಿಗಳಿಗಾಗಿ 20,00,00,00,000 ರೂಪಾಯಿಗಳನ್ನು ವೆಚ್ಚಮಾಡಿದರಂತೆ!

ಲಂಡನ್ನಿನ ಒಬ್ಬ ಶಾಸ್ತ್ರಜ್ಞನು ಘಂಟೆಗೆ 260 ಮೈಲಿಗಳ ವೇಗವಾಗಿ ಹಾರಬಲ್ಲ ಒಂದು ಹೊಸತರಹದ ವಿಮಾನವನ್ನು ತಯಾರಿಸಿರುವನು.

ಬೀವಾರ್‌ನಗರದ ನ್ಯಾಯಾಸ್ಥಾನಕ್ಕೆ ಸಾಕ್ಷಿಗಾಗಿ ಕರೆಯಿಸಲ್ಪಟ್ಟಿದ್ದ ಒಬ್ಬ ತರುಣ ಹಿಂದೂಸ್ತ್ರೀಯು ಕೋರ್ಟಿನಲ್ಲಿಯೇ ಹೆಣ್ಣುಶಿಶುವನ್ನು ಪ್ರಸವಿಸಿದಳು.

ಅಮೇರಿಕಾದೇಶದಲ್ಲಿ 2,38,875 ಜನ ದರೋಡೆ ಕೋರರಿದ್ದು, ಈ ಸಂಖ್ಯೆಯು ಸರಕಾರದ ಮಿಲಿಟರಿ ಮತ್ತು ನಾವಿಕಸೈನ್ಯಕ್ಕಿಂತಲೂ ಹೆಚ್ಚಾಗಿರುವುದಂತೆ!

ದಕ್ಷಿಣಧ್ರುವ ಪ್ರಾಂತದಲ್ಲಿ ಮನುಷ್ಯರು ಮಾತನಾಡುವ ಧ್ವನಿಯು 1½ ಮೈಲುಗಳವರೆಗೂ ನಾಯಿಯು ಬೊ[illegible]ಳುವ ಶಬ್ದವು 8 ಮೈಲುಗಳವರೆಗೂ ಕೇಳಿಸುವುದ[illegible]!

ಅಮೇರಿಕಾದೇಶದ ಹರ್ನಾಂಡೋ ಎಂಬ ಗ್ರಾಮದಲ್ಲಿ ಒಬ್ಬ ಬಿಳೀ ಹುಡುಗಿಯಮೇಲೆ ಅತ್ಯಾಚಾರ ನಡೆಸಿದರೆಂಬ ಕಾರಣದಮೇಲೆ 3 ಜನ ನೀಗ್ರೋ ತರುಣರು ಗಲ್ಲಿಗೇರಿಸಲ್ಪಟ್ಟರು.

ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವಾದ ಸೌಧವು ನ್ಯೂಯಾರ್ಕಿನಲ್ಲಿರುವ 'ದಿ ಎಂಪೈರ್ ಸ್ಟೇಟ್ ಬಿಲ್ಡಿಂಗ್' ಎಂಬುದು. ಇದರ ಎತ್ತರ 1258 ಅಡಿಗಳಿದ್ದು ಅದರಲ್ಲಿ 105 ಅಂತಸ್ತುಗಳಿರುವವು.

ಸೀಸದ ಕಡ್ಡಿಯಿಂದ ರಿವಾಲ್ವರಿನ ಚಿತ್ರವನ್ನು ಬರೆದು ಇಟ್ಟುಕೊಂಡಿದ್ದನೆಂಬ ಕಾರಣದ ಮೇಲೆ ಬಂಗಾಳಾ ಪೋಲೀಸರು ಕೋಮಿಲ್ಲಾ ಹೈಸ್ಕೂಲಿನ ಸುಕುಮಾರಸಿಂಹ ಎಂಬ ವಿದ್ಯಾರ್ಥಿಯನ್ನು ದಸ್ತಗಿರಿಮಾಡಿರುತ್ತಾರೆ.

ಪಾಟ್ನಾ ಡಿ॥ ಗೆ ಸೇರಿದ ವಿಕ್ರಮ ಎಂಬ ಗ್ರಾಮದಲ್ಲಿ ಒಂದು ಭಾವಿಯನ್ನು ಅಗೆಯುತ್ತಿದ್ದಾಗ ಹೊಗೆಯು ಬರಲಾರಂಭಿಸಿ ಒಂದು ಗಂಟೆಯಾದನಂತರ ನಿಂತು ಹೋಯಿತಂತೆ! ಅಧಿಕಾರಿಗಳು ಆ ಭಾವಿಯ ನೀರನ್ನು ಪರೀಕ್ಷೆಗಾಗಿ ಕಳುಹಿಸಿರುವರು.

ಅಮೃತಸರದ ಸಮೀಪದಲ್ಲಿರುವ ಟರ್ ಎಂಬ ಗ್ರಾಮದ ಭಗವಾನ್‌ಸಿಂಗ್ ಎಂಬ ಶ್ರೀಮಂತನು ತನ್ನ ಅಪಾರ ಐಶ್ವರ್ಯವನ್ನು ಮದ್ಯಪಾನದಲ್ಲಿ ವೆಚ್ಚಮಾಡಿ, ಕುಡಿಯುವುದಕ್ಕೆ ಕೈಲಿ ದುಡ್ಡಿಲ್ಲದಾಗಲು ಗುಂಡಿನಿಂದ ಹೊಡೆದುಕೊಂಡು ಮೃತಪಟ್ಟನು.

ಕಾಬೂಲಿನ ಬ್ರಿಟಿಷ್ ಸೈನ್ಯದ ಖಾತೆಯಲ್ಲಿ ಆಡಿಟರಾಗಿದ್ದ ಖಾನ್‌ಸಾಹೇಬ್ ಮಹಮುದ್‌ಖಾಸಿಂ ಎಂಬವರು 700 ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡರೆಂಬ ಕಾರಣದಮೇಲೆ 5 ವರ್ಷ ಕಠಿಣಶಿಕ್ಷೆ ಮತ್ತು 2½ ಸಾವಿರ ರೂ. ಜುಲ್ಮಾನೆಗೆ ಗುರಿಯಾದರು.

ಜಬ್ಬಲಪುರದಲ್ಲಿ ಒಬ್ಬ ಬ್ರಿಟಿಷ್ ಶಿಪಾಯಿಯು ನಾಯಿಗಳನ್ನು ಬಂದೂಕದಿಂದ ಹೊಡೆಯುತ್ತಿದ್ದಾಗ, ಒಂದು ಗುಂಡು ಅಕಸ್ಮಾತ್ ಒಬ್ಬ ಸಿಖ್ಖನಿಗೆ ತಗಲಿ ತುಂಬಾ ಘಾಯಪಡಿಸಿತು. ಪೋಲೀಸರು ಶಿಪಾಯಿಯನ್ನು ದಸ್ತಗಿರಿ ಮಾಡಿರುತ್ತಾರೆ. ಸಿಖ್ಖನು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವನು.

ಯುದ್ಧವು ಪ್ರಾರಂಭವಾದಪಕ್ಷದಲ್ಲಿ, ಪರದೇಶಗಳ ಗೂಢಚಾರರಿಂದ ಅಪಾಯವುಂಟಾಗದಂತೆ ಮದ್ದುಗುಂಡಿನ ಕಾರ್ಖಾನೆಗಳನ್ನೂ, ಸೇತುವೆಗಳನ್ನೂ, ರೈಲುಗಳನ್ನೂ ಮತ್ತು ಕೋಠಿಗಳನ್ನೂ ರಕ್ಷಿಸುವುದಕ್ಕಾಗಿ ಬ್ರಿಟಿಷ್ ಸರಕಾರದವರು 'ರಾಯಲ್ ಡಿಫೆನ್ಸ್ ಫೋರ್ಸ್' ಎಂಬ ಹೊಸ ಸೈನ್ಯವೊಂದನ್ನು ಏರ್ಪಡಿಸಿರುತ್ತಾರೆ.

ವಾರ್ಸಾ ನಗರದಲ್ಲಿ ಒಬ್ಬ ಮನುಷ್ಯನು ಒಂದು ಗೂಳಿಯನ್ನು ರಸ್ತೆಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದಾಗ ಒಂದಾನೊಂದು ಅಂಗಡಿಯ ಮುಂದೆ ಕಟ್ಟಿದ್ದ ಕನ್ನಡಿಯಲ್ಲಿ ಗೂಳಿಯು ತನ್ನ ಪ್ರತಿಬಿಂಬವನ್ನು ನೋಡಿ ಕನ್ನಡಿಯ ಕಡೆಗೆ ನುಗ್ಗಿ ಅದನ್ನು ಚೂರುಚೂರು ಮಾಡಿದನಂತರ ಯಜಮಾನನ ಬಳಿಗೆ ಹಿಂತಿರುಗಿತಂತೆ!

ಕಳೆದ ಘೋರಯುದ್ಧದ ಕಾಲದಲ್ಲಿ 4 ಜನ ಫ್ರೆಂಚ್ ಶಿಪಾಯಿಗಳು ಮೇಲಧಿಕಾರಿಗಳ ಆಜ್ಞೆಯಂತೆ ನಡೆಯಲಿಲ್ಲವೆಂಬ ಕಾರಣದಮೇಲೆ ಇತರ ಶಿಪಾಯರಿಂದ ಕೊಲ್ಲಲ್ಪಟ್ಟರು. ಮಿಲಿಟರಿ ಕೋರ್ಟಿನಲ್ಲಿ ಈ ಸಂಬಂಧವಾದ ಒಂದು ಮೊಕದ್ದಮೆಯು ನಡೆಯುತ್ತಿದ್ದು ಮೇಲ್ಕಂಡ ಶಿಪಾಯರು ನಿರಪರಾಧಿಗಳೆಂದು ಈಗ ತಾನೆ ತೀರ್ಮಾನಿಸಲ್ಪಟ್ಟಿದೆ.

ಜಪಾನ್ ಸರಕಾರದ ವಿಚಿತ್ರ ಆಜ್ಞೆ!

ಜಪಾನ್ ಸರಕಾರದವರು ಶಾಲಾವಿದ್ಯಾರ್ಥಿಗಳೆಲ್ಲರೂ ಎತ್ತರವಾಗಿ ಬೆಳೆಯಬೇಕೆಂದು ಹೊಸದೊಂದು ಆಪ್ಪಣೆಯನ್ನು ಮಾಡಿರುವರು. ಎತ್ತರವಾಗಿ ಬೆಳೆಯದಿದ್ದವರಿಗೆ ಅಂಗಾಲುಗಳಿಗೆ ಏಟು ಕೊಡುವರಂತೆ!

14 ಅಂಗುಲ ಮನುಷ್ಯ!

ತುರ್ಕಿದೇಶದಲ್ಲಿರುವ ಹ್ಯೂಮಿರ್ಜಾ ಬೇ ಎಂಬವನು ಪ್ರಪಂಚದಲ್ಲೆಲ್ಲಾ ಅತ್ಯಂತ ಗಿಡ್ಡನೆಂದು ಪ್ರಸಿದ್ಧಿ ಹೊಂದಿರುವನು. ಇವನಿಗೆ 36 ವರ್ಷ ವಯಸ್ಸಾಗಿದ್ದು ಕೇವಲ 14 ಅಂಗುಲ ಎತ್ತರವಾಗಿರುವನಂತೆ!

ಲೆಕ್ಕ ಮಾಡುವ ಯಂತ್ರ.

ಮೆಟ್ರೊಪಾಲಿಟನ್ ಎಂಬಲ್ಲಿ ಶೋಧಕರು ಒಂದು ಲೆಕ್ಕಮಾಡುವ ಯಂತ್ರವನ್ನು ಕಂಡುಹಿಡಿದಿರುವರು. ಇದು ಕೂಡುವುದು, ಕಳೆಯುವುದು, ಗುಣಾಕಾರ, ಭಾಗಾಕಾರ ಇಂತಹ ಲೆಕ್ಕಗಳನ್ನು ಮಾಡಬಲ್ಲುದಂತೆ!

ಜೇನುಕೊಡುವ ಗಿಡ.

ಈ ಗಿಡದ ಒಂದು ಎಲೆಯನ್ನೋ ಅಥವಾ ಕೊಂಬೆಯನ್ನೋ ಮುರಿದರೆ ಜೇನು ಬರುವುದು. ಇದರ ಹೂವು ಕೂಡ ಜೇನಿನಷ್ಟೇ ಮಧುರವಾಗಿರುವುದಂತೆ! ಇಂತಹ ಗಿಡದ ಬೆಳೆಯನ್ನು ಹೆಚ್ಚಿಸಲು ಶಾಸ್ತ್ರಜ್ಞರು ಪ್ರಯತ್ನಿಸುತ್ತಿರುವರು.

ಮಾತನಾಡುವ ಕೋಳಿ!

ಜಪಾನ್ ದೇಶಕ್ಕೆ ಸೇರಿದ ನಾಗಸಾಕಿ ನಗರದಲ್ಲಿ ಒಂದು ಕೋಳಿಯು ಜಪಾನಿ ಭಾಷೆಯಲ್ಲಿ 'ಚಿಕ್ಕಪ್ಪ' 'ಚಿಕ್ಕಮ್ಮ' ಎಂಬ ಶಬ್ದಗಳನ್ನೂ, ಪ್ರಾತಃಕಾಲ ಮತ್ತು ಸಾಯಂಕಾಲದ ವಂದನೆಗಳನ್ನೂ ಸ್ಪಷ್ಟವಾಗಿ ನುಡಿಯುವುದಂತೆ!

ಬ್ರಹ್ಮಸೃಷ್ಟಿಗೆ ಪ್ರತಿಸೃಷ್ಟಿ!

ಮಾಸ್ಕೋನಗರದ ಬಾಗ್ದಾಸರೋಲ್ ಇನ್‌ಸ್ಟಿಟ್ಯೂಟಿನ ಡಾಕ್ಟರುಗಳು ಒಂದು ಕೃತ್ರಿಮಹೃದಯವನ್ನು ತಯಾರಿಸಿರುವರು. ರೋಗಿಯ ಹೃದಯವು ಕೆಟ್ಟಿದ್ದರೆ, ಅದನ್ನು ಈಚೆಗೆ ತೆಗೆದುಕೃತ್ರಿಮ ಹೃದಯವನ್ನು ಅಲ್ಲಿಗೆ ಸೇರಿಸಿ ನಿಜವಾದ ಹೃದಯವನ್ನು ಕ್ರಮಪಡಿಸಬಹುದಂತೆ!

ರಕ್ತದ ಮಳೆ!

ಈಗ್ಗೆ ಕೆಲವು ದಿವಸಗಳ ಹಿಂದೆ ಗೋರಖಪುರ ಜಿಲ್ಲೆಗೆ ಸೇರಿದ ಒಂದು ಹಳ್ಳಿಯಲ್ಲಿ ಎರಡು ಎಕರೆಗಳಷ್ಟು ಪ್ರದೇಶದಲ್ಲಿ ರಾತ್ರಿಯವೇಳೆ ರಕ್ತದ ಮಳೆಯು ಸುರಿಯಿತಂತೆ! ಬೆಳಗ್ಗೆ ನೋಡಿದಾಗ ಆ ಪ್ರದೇಶವೆಲ್ಲವೂ ಕೆಂಪಾಗಿದ್ದು ಅಲ್ಲಲ್ಲಿ ರಕ್ತವು ನಿಂತಿದ್ದಿತಂತೆ! ಅಧಿಕಾರಿಗಳು ಆ ಪ್ರದೇಶದ ಮಣ್ಣನ್ನು ಪರೀಕ್ಷೆಗಾಗಿ ಕಳುಹಿಸಿರುವರು. ಈ ವಿಚಿತ್ರವು ಜನರಲ್ಲಿ ಬಹಳ ಭೀತಿಯನ್ನುಂಟುಮಾಡಿರುತ್ತದೆ.

ಮಳೆಗರೆಯುವ ಸಂಘ.

ರಷ್ಯಾದೇಶದಲ್ಲಿ ದ್ರಾಕ್ಷಿಹಣ್ಣಿನ ವ್ಯವಸಾಯವು ವಿಶೇಷವಾಗಿದ್ದು, ಅತಿವೃಷ್ಟಿಯ ದೆಸೆಯಿಂದ ಅನೇಕ ವೇಳೆಗಳಲ್ಲಿ ವ್ಯವಸಾಯಗಾರರಿಗೆ ವಿಶೇಷ ನಷ್ಟವು ಸಂಭವಿಸುತ್ತಿತ್ತು. ಇದನ್ನು ತಪ್ಪಿಸುವುದಕ್ಕಾಗಿ ರಷ್ಯಾ ಸರಕಾರದವರು ಈಗ 'ಕೃತ್ರಿಮ ಮಳೆಯ ಸಂಸ್ಥೆ' ಎಂಬ ಇಲಾಖೆಯೊಂದನ್ನು ಹೊಸದಾಗಿ ಸ್ಥಾಪಿಸಿರುತ್ತಾರೆ. ಈ ಸಂಸ್ಥೆಯವರು ದ್ರಾಕ್ಷಿವ್ಯವಸಾಯದ ಪ್ರದೇಶಗಳ ಸುತ್ತಲೂ ಆಕಾಶಬುಟ್ಟಿಗಳನ್ನು ಇಟ್ಟಿದ್ದು, ಆಕಾಶದಲ್ಲಿ ಮೇಘವು ಕಾಣಿಸಿಕೊಂಡ ಕೂಡಲೆ 'ರಾಕೆಟ್' ಎಂಬ ಬಾಣವನ್ನು ಅದರ ಕಡೆಗೆ ಬಿಡುವರು. ಅದರಿಂದ ಕೂಡಲೇ ಮಳೆಯು ಬಂದು ಅತಿವೃಷ್ಟಿಯು ನಿಂತುಹೋಗುವುದಂತೆ!

(೩ನೇ ಪುಟದಿಂದ ಮುಂದುವರಿದುದು)

ಆತನು ಇನ್ನೂ ಅದ್ಭುತವಾದ ಶೋಧನೆಗಳನ್ನು ಮಾಡಿ ಲೋಕೋಪಕಾರ ಮಾಡಬಹುದು. ಯಾರು ಬಲ್ಲರು?

'ರೇಡಿಯೋ' ದಿಂದ ಪ್ರಪಂಚದ ನಾನಾಭಾಗಗಳು ಒಂದರ ಬಳಿಯಲ್ಲೊಂದಿರುವಂತೆ ಇರಬಹುದು. ಇದರಿಂದ ಮನುಷ್ಯನು ಕಾಲವನ್ನೂ, ದೂರವನ್ನೂ ಮತ್ತು ಒಂಟಿಯಾಗಿರುವಿಕೆ (Isolation) ಯನ್ನೂ ಗೆದ್ದಂತೆಯೇ ಸರಿ. ಪ್ರತ್ಯೇಕ ಪ್ರಪಂಚದ ಮುಖ್ಯ ಮುಖ್ಯ ನಗರಗಳಲ್ಲಿನ ವರ್ತಮಾನವನ್ನು ರೇಡಿಯೋ ಮೂಲಕ ಎಲ್ಲಾ ಭಾಗಗಳಿಗೂ ಕಳುಹಿಸುತ್ತಾರೆ. ಅವುಗಳನ್ನು ಕೇಳುವವರ ಸಂಖ್ಯೆ ಲೆಕ್ಕವಿಲ್ಲದ್ದು! ಇದರಿಂದ ಜನರಿಗಾದ ಪ್ರಯೋಜನವು ಮತ್ತಾವ ಶೋಧನದಿಂದಲೂ ಆಗಿಲ್ಲವೆನ್ನಬಹುದು. ನಮ್ಮ ಹಿಂದೂಸ್ಥಾನದಲ್ಲಿ ಪ್ರತ್ಯೇಕ 11,000 ರೇಡಿಯೋ ಯಂತ್ರಗಳಿವೆ. ಅವುಗಳ ಪ್ರಯೋಜನವನ್ನು ಎಲ್ಲರೂ ಹೊಂದುವಂತೆ ಏರ್ಪಾಡು ನಡೆಯುತ್ತಿದೆಯೆಂದು ತಿಳಿಯುತ್ತೇವೆ.

ಈಚೆಗೆ 'ವೈರ್‌ಲೆಸ್' ಮೂಲಕ ಚಿತ್ರಗಳನ್ನೂ ಕಳುಹಿಸುವ ಮಾರ್ಗವನ್ನು ಕಂಡುಹಿಡಿದಿದ್ದಾರೆ. ಅಮೇರಿಕದಲ್ಲಿ ನಡೆದ ಒಂದು ಸಂಘಟನೆಯ ವರ್ತಮಾನವು ಅದೇ ದಿವಸವೂ, ಅದರ ಚಿತ್ರಗಳು ಒಂದು ವಾರದ ಮೇಲೂ ಇಂಗ್ಲೆಂಡನ್ನು ತಲುಪುತ್ತಿದ್ದುವಂತೆ. ಈಗ ವರ್ತಮಾನಗಳಂತೆಯೇ ಚಿತ್ರಗಳನ್ನೂ ಕೂಡ ಕ್ಷಣಮಾತ್ರದಲ್ಲಿ ಕಳುಹಿಸಬಹುದು. ಪತ್ರಿಕೆಗಳಲ್ಲಿ ಆ ಸಂಘಟನೆಯ ವಿಚಾರವಾಗಿ ಓದಬಹುದಲ್ಲದೆ ಅದರ ದೃಶ್ಯಗಳನ್ನೂ ನೋಡಬಹುದು. ಆದರೆ ಇಂತಹ ಚಿತ್ರಗಳು ಛಾಯಾ ಚಿತ್ರಗಳಷ್ಟು (Photographs) ಸ್ಪಷ್ಟವಾಗಿರುವುದಿಲ್ಲ.

ಹೊಗೆಬಂಡಿಯು ಮನುಷ್ಯನ ನಾಗರಿಕತೆಯಲ್ಲಿ ಅದ್ಭುತವಾದ ಬದಲಾವಣೆಗಳನ್ನು ತಂದಿರುವಂತೆಯೇ ಮಾರ್ಕೋನಿಯು ವೈರ್‌ಲೆಸ್ ಟೆಲಿಗ್ರಾಫಿಯಿಂದ ಜನಾಂಗಗಳ ತೃಪ್ತಿ ಮತ್ತು ಸೌಖ್ಯಗಳುಂಟಾಗುವುದರಲ್ಲಿ ಸಂಶಯವಿಲ್ಲ.

ಕೃಷ್ಣ.

ಶ್ರೀ ಜಗದ್ಗುರು ಕೇದಾರ ಮಹಾಸ್ವಾಮಿಗಳವರ ಅಡ್ಡಪಾಲಕಿ ಮಹೋತ್ಸವ, ಆದವಾನಿ.

ಸಮಾಜಬಂಧುಗಳೇ, ಬಳ್ಳಾರಿ ಜಿಲ್ಲಾ ಆದವಾನಿಗೆ ಶ್ರೀಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ ಶ್ರೀ ೧೦೮ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಸಕಲ ಸಿಬ್ಬಂದಿಸಮೇತವಾಗಿ ರಾಂಪುರ ಗ್ರಾಮದಿಂದ ಪ್ರೋಗ್ರಾಂ ನಿಶ್ಚಯಿಸಿದಪ್ರಕಾರ ತಾ|| 9-4-34ನೇ ದಿವಸ ಶ್ರೀಮಂತ ಯಲಿ ಮಲ್ಲೇಶಪ್ಪನವರ ಬಂಗಲೆಗೆ ದಯಮಾಡಿಸಿದರು. ಅಲ್ಲಿಗೆ ಆದವಾನಿ ದೈವದವರು ಹಾಗೂ ಸ್ಥಲ ಪರಸ್ಥಲ ಭಕ್ತಮಾಹೇಶ್ವರರು ಇಸ್ತಕಪಾಲಸಮೇತ ವಾದ್ಯವೈಭವದೊಡನೆ ಹೋಗಿ ಸಾಷ್ಟಾಂಗಪ್ರಣಾಮಗಳನ್ನು ಮಾಡಿ ಜಯಘೋಷದೊಡನೆ ಮಹಾಸ್ವಾಮಿಗಳನ್ನು ಪಲ್ಲಕ್ಕಿಯಲ್ಲಿ ಸಕಲ ಬಿರುದಾವಳಿಗಳೊಡನೆ ಬಿಜಮಾಡಿಸಿಕೊಂಡರು. ಶೃಂಗರಿಸಲ್ಪಟ್ಟ ರಾಜಬೀದಿಗಳಲ್ಲಿ ಮಹೋತ್ಸವವು ಹೊರಟಿತು. ಬೊಂಬಾಯಿ, ಮದ್ರಾಸ್, ಹೈದರಾಬಾದ್ ಮುಂತಾದ ದೂರಪ್ರದೇಶಗಳಿಂದ ಭಕ್ತಮಾಹೇಶ್ವರರು ಅಸಂಖ್ಯವಾಗಿ ಆಗಮಿಸಿದ್ದರು. ಯಾವ ಗಲಭೆಗೂ ಅವಕಾಶವಿಲ್ಲದಂತೆ ಉತ್ಸವವನ್ನು ನಡೆಯಿಸಲು ಸೂಪರಿಂಟೆಂಡೆಂಟ್ ಸಾಹೇಬರ ಆರ್ಡರ್ ಪ್ರಕಾರ ಗ್ರಾಮದ ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಸಬ್-ಇನ್ಸ್‌ಪೆಕ್ಟರವರು ಬಹಳ ಮುತುವರ್ಜಿಯಿಂದ ಇಂತಿಜಾಮು ಮಾಡುತ್ತಿದ್ದರು. ಸಕಲ ಬಿರುದಾವಳಿಸಮೇತವಾಗಿ ಜಗದ್ಗುರುಗಳವರ ಫೋಟೊಗಳನ್ನು ಅಲ್ಲಲ್ಲಿ ತೆಗೆಯುತ್ತಲೇ ಇದ್ದರು. ವೇದಪಾಠಕರು ವೇದವನ್ನು ಹೇಳುತ್ತಿದ್ದರು. ಭಕ್ತಮಂಡಳಿಯವರ ಜಯಜಯಕಾರಶಬ್ದಗಳು ನಭೋಮಂಡಲವನ್ನು ವ್ಯಾಪಿಸುತ್ತಿದ್ದುವು. ಈ ಉತ್ಸವದಲ್ಲಿ ಭಾಗಿಗಳಾದ ಸಂಸ್ಥಾನ ಸರ್ವಾಧಿಕಾರಿಗಳಾದ ಶಿರ್ಶಿ ಉಜ್ಜಯಿನಿಮಠದ ಶ್ರೀ ಸಿದ್ಧರಾಮಸ್ವಾಮಿಗಳು ಸಂಸ್ಥಾನ ಅವಾಕ್ಯರಾದ ನೋಳೆಮಠದ ಶ್ರೀ ಪಟ್ಟಾಧ್ಯಕ್ಷಸ್ವಾಮಿಗಳು, ಚಿಕ್ಕಮಣ್ಣೂರ ಹಿರೇಮಠದ ರೇವಣಸಿದ್ಧ ಪಟ್ಟಾಧ್ಯಕ್ಷಸ್ವಾಮಿಗಳು, ಸಂಸ್ಥಾನ ಏಜಂಟ ಕೆ. ಎಂ. ವೀರಯ್ಯನವರು, ಸಿರಿವಾರ ಹಿರೇಮಠದ ಬಸಪ್ಪಯ್ಯನವರು, ಬಳ್ಳಾರಿ ಗಡಿಗಿ ಶ್ರೀಮಂತ ಚೆನ್ನಪ್ಪನವರು, ಬಳ್ಳಾರಿ ಅರಳಿ ಶ್ರೀಮಂತ ದೊಡ್ಡ ಬಸಪ್ಪನವರು ಬಹಳ ಕಳಕಳಿಯಿಂದ ಸಾಂಗವಾಗಿ ಉತ್ಸವವನ್ನು ನಡೆಸಿ ಹೆಸರುವಾಸಿಗಳಾದರು. ಉತ್ಸವವು ಪ್ಯಾಟಿ ವೀರಭದ್ರದೇವಸ್ಥಾನಕ್ಕೆ ಬಂದು ಮಹಾಸ್ವಾಮಿಗಳವರು ಸಿಂಹಾಸನದಮೇಲೆ ಮೂರ್ತಮಾಡಿದ ಕೂಡಲೆ ಸರ್ವಭಕ್ತರು ಗುರುಭಕ್ತಿಯ ಪ್ರಭಾವವನ್ನು ವ್ಯಕ್ತಗೊಳಿಸಿದರು. ಆದವಾನಿ ಸ್ಕೂಲ್ ಟೀಚರ್ ವೇ|| ಶಂ|| ವಿರೂಪಾಕ್ಷಶಾಸ್ತ್ರಿಗಳು ಸುರಿಮಠ ಕವಳೆಕೊಳ್ಳ ಇವರು ಶ್ರೀ ಜಗದ್ಗುರುಗಳವರ ಮೇಲೆ ಮಾಡಿದ ಪದ್ಯರತ್ನಾವಳಿಯನ್ನು ಭಕ್ತರಿಗೆ ಹಂಚಿದರು. ಕೂಡಿರುವ ಭಕ್ತಮಾಹೇಶ್ವರರಿಗೆ ಪರಿಣಾಮವಾಗುವಂತೆ ಶ್ರೀ ಜಗದ್ಗುರುಗಳು ಶಾಸ್ತ್ರಉದಾಹರಣೆಯನ್ನು ಕೊಟ್ಟು ಅಮೃತವಾಣಿಯಿಂದ ಗುರುಮಹತ್ವವನ್ನು ಬೋಧಮಾಡಿದರು. ಅಲ್ಲಿಗೆ ಮಧ್ಯಾಹ್ನವಾದ ಕಾರಣ ಸಭೆಯು ಸಮಾಪ್ತವಾಯಿತು. ಆದವಾನಿ ಭಕ್ತಮಾಹೇಶ್ವರಮಂಡಳಿಯವರಂತೆ ಇತರ ಗ್ರಾಮದ ಭಕ್ತಮಾಹೇಶ್ವರರು ಜಗದಾಚಾರ್ಯರ ಉತ್ಸವಗಳನ್ನು ಇದರಂತೆ ಮಾಡಿಸಿ ಗುರುಪೀಠದ ಕಾಣಿಕೆಯನ್ನು ಸಲ್ಲಿಸಿ ಶ್ರೀ ಜಗದ್ಗುರುಗಳ ಜಯಾಶೀರ್ವಾದಗಳನ್ನು ಪಡೆದು ಕೃತಾರ್ಥರಾಗಬೇಕೆಂದು ಕೋರುವ,

ಪ್ರತ್ಯಕ್ಷದರ್ಶಿ.

ಮೈಸೂರು ಸಂಸ್ಥಾನದ ದಿವಾನರವರಾದ
ಅಮೀನ್-ಉಲ್-ಮುಲ್ಕ್
ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್, ಕೆ.ಟಿ.,
ಸಿ.ಐ.ಇ., ಒ.ಬಿ.ಇ., ಯವರ ದಿವ್ಯಸನ್ನಿಧಿಯಲ್ಲಿ,
ಎಡತೊರೆ ಬಿ. ಸಿದ್ಧಲಿಂಗಶೆಟ್ಟಿಯು ಒಪ್ಪಿಸಿದ
ವಿಜ್ಞಾಪನಾಪತ್ರಿಕಾ.

ಸ್ವಾಮಿ,

ನನ್ನ ಆಹ್ವಾನವನ್ನು ಸ್ವೀಕರಿಸಿ ತಾವು ಅನಂತ ರಾಜಕಾರ್ಯಗೌರವಗಳ ಸಂದಣಿಯಲ್ಲಿ ವಿರಾಮ ಮಾಡಿಕೊಂಡು ಪ್ರಯಾಣದ ಶ್ರಮವನ್ನು ಗಣನೆಗೆ ತಾರದೆ ಇಲ್ಲಿಗೆ ದಯಮಾಡಿಸಿದುದಕ್ಕಾಗಿ ನಾನು ತುಂಬಾ ಕೃತಜ್ಞನಾಗಿರುತ್ತೇನೆ. ಅಲ್ಲದೆ ಹೃತ್ಪೂರ್ವಕವಾಗಿ ತಮ್ಮನ್ನು ವಂದಿಸಿ ತಮಗೆ ಸುಸ್ವಾಗತವನ್ನು ಬಯಸುತ್ತೇನೆ. ಶ್ರೀಕೃಷ್ಣರಾಜಸಾಗರ ಜಲಾಶಯವು ಕಟ್ಟಲ್ಪಟ್ಟಮೇಲೆ ಹಳೆ ಎಡತೊರೆಯಲ್ಲಿ ವಾಸಮಾಡುವುದು ಅಸಾಧ್ಯವಾಗುವುದರಿಂದ ಈ ಹೊಸ ಪಟ್ಟಣವು ನಿರ್ಮಿತವಾಗಬೇಕಾದುದು ಅತ್ಯಾವಶ್ಯಕವೆಂದು ಅರಿತು ಸರ್ಕಾರದಿಂದ ಈ ಹೊಸ ಬಡಾವಣೆಗಾಗಿ ತಾವು ಬೇಕಾದ ಸೌಕರ್ಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವುದಲ್ಲದೆ ಮೇಲಿಂದ ಮೇಲೆ ಇಲ್ಲಿಗೆ ದಯಮಾಡಿಸಿ ಈ ಹೊಸ ಎಡತೊರೆಯು ಮಾದರಿ ಪಟ್ಟಣವಾಗುವಂತೆ ನಮಗೆ ಉತ್ತೇಜನವನ್ನು ಕೊಡುತ್ತಿರುವುದಕ್ಕಾಗಿ ಎಡತೊರೆಯ ನಿವಾಸಿಗಳಾದ ನಾವು ತಮಗೆ ಚಿರ ಋಣಿಗಳಾಗಿರುತ್ತೇವೆ, ಸ್ವಾಮಿ.

ಈಗ್ಗೆ ಸುಮಾರು ನಾಲ್ಕು ವರುಷಗಳ ಕೆಳಗೆ ನನ್ನ ಹೊಸ ಮನೆಯ ಪ್ರವೇಶೋತ್ಸವದ ಸಂದರ್ಭದಲ್ಲಿ ತಾವು ಈ ಊರಿಗೆ ದಯಮಾಡಿಸಿದ್ದಾಗ ನಮ್ಮ ಮಾತೃಶ್ರೀಯವರಾದ ಶ್ರೀಮತಿ ಪುಟ್ಟತಾಯಮ್ಮನವರ ಜ್ಞಾಪಕಾರ್ಥವಾಗಿ ಒಂದು ಧರ್ಮವನ್ನು ಮಾಡುವುದಾಗಿ ತಮ್ಮಲ್ಲಿ ವಾಗ್ದಾನಮಾಡಿದ್ದೆನು. ಸಕಲ ಜನಾಂಗದವರ ಮೇಲೆ ಅದರಲ್ಲಿಯೂ ಗರ್ಭಿಣೀ ಸ್ತ್ರೀಯರ ಮೇಲೆ ನಮ್ಮ ಮಾತೃಶ್ರೀಯವರಿಗೆ ಇದ್ದ ಅನಿರ್ವಚನೀಯವಾದ ಪ್ರೀತಿ ವಿಶ್ವಾಸಗಳನ್ನು ನೋಡಿ ಅವರ ಹೆಸರಿನಲ್ಲಿ ಒಂದು ಹೆಂಗಸರ ಆಸ್ಪತ್ರೆ ಕಟ್ಟಡವನ್ನು ದಾನ ಮಾಡುವುದಕ್ಕಿಂತಲೂ ಉತ್ತಮವಾದ ಬೇರೊಂದು ದಾನವಿಲ್ಲವೆಂದು ಭಾವಿಸಿ ಈ ಕಟ್ಟಡದ ನಿರ್ಮಾಣಕ್ಕೆ ಪ್ರಾರಂಭಿಸಿದೆನು. ನನ್ನ ಆಮಂತ್ರಣವನ್ನು ಮಹಾಸ್ವಾಮಿಯವರಾದ ಶ್ರೀಮದ್ಯುವರಾಜ ಸಾಹೇಬ್ ಬಹದ್ದೂರ್‌ರವರು ಸ್ವೀಕರಿಸಿ ಈ ಕಟ್ಟಡದ ಶಂಕುಸ್ಥಾಪನೆಯನ್ನು ಅವರ ಅಮೃತಹಸ್ತಗಳಿಂದಲೇ ನೆರವೇರಿಸಿ ನನ್ನನ್ನು ಕೃತಕೃತ್ಯನನ್ನಾಗಿ ಮಾಡಿರುತ್ತಾರೆಂದು ಬಹುಹೆಮ್ಮೆಯಿಂದ ವಿಜ್ಞಾಪಿಸಿಕೊಳ್ಳುತ್ತೇನೆ. ಕಟ್ಟಡದ ಕೆಲಸವು ಸುಮಾರು ಇಪ್ಪತ್ತು ಸಾವಿರ ರೂಪಾಯಿಗಳ ವೆಚ್ಚದಿಂದ ಬಹು ಶೀಘ್ರದಲ್ಲಿಯೇ ಪೂರೈಸ ಮಾಡಲ್ಪಟ್ಟು ಹೆರಿಗೆಯ ಆಸ್ಪತ್ರೆಗೆ ಅನುಕೂಲವಾಗಿರುತ್ತದೆಂದು ನಂಬಿರುತ್ತೇನೆ.

ನಾನು ಮಾಡಿದ ದಾನವು ಸಾರ್ಥಕವಾಗಿ ನಡೆಯಲು ಸಹಾಯಕರಾಗಿ ನಿಂತು ಇದರಲ್ಲಿ ಸ್ಥಾಪಿತವಾಗುವ ಆಸ್ಪತ್ರೆಯ ವೆಚ್ಚದಲ್ಲಿ ತಮ್ಮ ತಮ್ಮ ಭಾಗವನ್ನು ವಹಿಸಲು ಒಪ್ಪಿ ಈ ಆಸ್ಪತ್ರೆಯನ್ನು "ಪುಟ್ಟತಾಯಮ್ಮ" ನವರ ಆಸ್ಪತ್ರೆ ಎಂಬ ಅಭಿಧಾನದಿಂದ ಕರೆಯಲು ಸಹಾಯಮಾಡಿದ ಮೆಹರ್‌ಬಾನ್ ಘನ ಸರ್ಕಾರದವರಿಗೂ ಮೆಡಿಕಲ್ ಡಿಪಾರ್ಟ್‌ಮೆಂಟಿನವರಿಗೂ, ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರಿಗೂ, ಎಡತೊರೆಯ ಮುನಿಸಿಪಾಲಿಟಿಯವರಿಗೂ ನಾನು ತುಂಬಾ ಕೃತಜ್ಞನಾಗಿರುತ್ತೇನೆ. ಕಟ್ಟಡದ ನಿರ್ಮಾಣ ಸಂದರ್ಭದಲ್ಲಿ ಸಹಾಯಮಾಡಿದ ಇಂಜನಿಯರಿಂಗ್ ಇಲಾಖೆಯವರಿಗೂ, ನನಗೆ ಆಗಿಂದಾಗ ಸಲಹೆಕೊಡುತ್ತಿದ್ದ ಇತರ ಅಧಿಕಾರಿವರ್ಗದವರಿಗೂ ಮತ್ತು ನನ್ನ ಮಿತ್ರವರ್ಗದವರಿಗೂ ನಾನು ಕೃತಜ್ಞನಾಗಿರುತ್ತೇನೆ.

ಗ್ರಾಮಾಂತರಗಳಲ್ಲಿ ಡಾಕ್ಟರುಗಳಿಗೆ ವಾಸಕ್ಕೆ ತಕ್ಕ ಮನೆಗಳು ಸಿಕ್ಕದೆ ಬಹಳ ತೊಂದರೆ ಇರುವಕಾರಣ ಈ ಆಸ್ಪತ್ರೆಯ ಲೇಡಿ ಅಸಿಸ್ಟೆಂಟ್ ಸರ್ಜನ್‌ರವರ ವಾಸಕ್ಕಾಗಿ ಬಾಡಿಗೆ ಇಲ್ಲದೆ ಆಸ್ಪತ್ರೆಗೆ ಸೇರಿದಂತೆ ಒಂದು ಕಟ್ಟಡವನ್ನು ಸುಮಾರು ಮೂರು ಸಾವಿರ ರೂಪಾಯಿನ ವೆಚ್ಚದಿಂದ ಕಟ್ಟಿಸಬೇಕೆಂದು ಯೋಚಿಸಿ ಈಗಾಗಲೇ ಕೆಲಸಕ್ಕೆ ಪ್ರಾರಂಭಿಸಿರುತ್ತೇನೆ. ಅದು ಇಷ್ಟರಲ್ಲೇ ಪೂರೈಸಿಯಾಗುತ್ತದೆಂದು ನಂಬಿರುತ್ತೇನೆ.

ಈ ಆಸ್ಪತ್ರೆಯು ಈ ಊರಿನವರಿಗೂ ಸುತ್ತಮುತ್ತಲಿನ ಗ್ರಾಮಾಂತರದ ಜನರಿಗೂ ಅಂದರೆ ಸುಮಾರು ಲಕ್ಷಕ್ಕಿಂತಲೂ ಮೀರಿದ ಪ್ರಜೆಗಳಿಗೆ ಅನುಕೂಲಿಸುತ್ತದೆಯಾಗಿ ಈ ಪ್ರಾಂತದ ಜನರಿಗೆ ಬಹಳ ದಿವಸಗಳಿಂದ ಇದ್ದ ಕೊರತೆಯನ್ನು ನಿವಾರಿಸುತ್ತದೆ ಎಂಬುದರಲ್ಲಿ ಸ್ವಲ್ಪವೂ ಸಂಶಯವಿರುವುದಿಲ್ಲ.

ತಾವು ನನ್ನ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಗೆ ದಯಮಾಡಿಸಿದುದಕ್ಕಾಗಿ ಮತ್ತೊಮ್ಮೆ ನಾನು ತಮ್ಮನ್ನು ವಂದಿಸಿ, ಈ "ಪುಟ್ಟತಾಯಮ್ಮ" ನವರ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ತಾವು ದಯವಿಟ್ಟು ನೆರವೇರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಎಡತೊರೆ,
15—4—1934

ತಮ್ಮ ವಿಧೇಯ,
ಬಿ. ಸಿದ್ಧಲಿಂಗಶೆಟ್ಟಿ.

ಎಡತೊರೆಯಲ್ಲಿ ಪುಟ್ಟತಾಯಮ್ಮನವರ ನಾಮಾಂಕಿತದ ಮೇಲೆ ಕಟ್ಟಿರುವ ಹೆರಿಗೆ ಆಸ್ಪತ್ರೆಯ ಪ್ರವೇಶ ಮಹೋತ್ಸವವನ್ನು ನೆರವೇರಿಸುವಾಗ್ಗೆ ದಿವಾನ್ ಸಾಹೇಬರವರು ಮಾಡಿದ ಭಾಷಣ.

೧೯೩೪ನೆಯ ಇಸವಿ ಏಪ್ರಿಲ್ ೧೫ನೆಯ ತಾರೀಖು.

ಮಹಾಶಯರೇ,

ನೂತನವಾಗಿ ನಿರ್ಮಿತವಾಗಿರುವ ಈ ಊರಿಗೆ ಮತ್ತೊಮ್ಮೆ ಬಂದು ಈ ಉತ್ಸವದಲ್ಲಿ ನಿಮ್ಮೊಡನೆ ಸೇರಿರುವುದು, ನನಗೆ ವಿಶೇಷ ಸಂತೋಷಕರವಾಗಿದೆ. ನೀವುಗಳು ನನ್ನನ್ನು ಬಹಳ ಆದರದಿಂದ ಬರಮಾಡಿಕೊಂಡಿರುವಿರಿ. ಇದಕ್ಕಾಗಿ ನಿಮ್ಮೆಲ್ಲರಿಗೂ ಹೃತ್ಪೂರ್ವಕವಾಗಿ ವಂದನೆಗಳನ್ನು ಸಮರ್ಪಿಸುತ್ತೇನೆ. ಶ್ರೀಮಾನ್ ಸಿದ್ಧಲಿಂಗಶೆಟ್ಟಿಯವರು ನನಗೆ ಬಿನ್ನವತ್ತಳೆಯನ್ನೊಪ್ಪಿಸಿ ನನ್ನ ವಿಷಯವಾಗಿ ಅನೇಕ ನಲ್ನುಡಿಗಳನ್ನು ಸೂಚಿಸಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

ರೋಗಿಗಳ ಚಿಕಿತ್ಸೆಯ ವಿಷಯದಲ್ಲಿ—ಅದರಲ್ಲಿಯೂ ಮುಖ್ಯವಾಗಿ ಹೆಂಗಸರ ಮತ್ತು ಮಕ್ಕಳ ಚಿಕಿತ್ಸೆಯ ವಿಷಯದಲ್ಲಿ—ಶ್ರೀಮನ್ಮಹಾರಾಜರವರ ಸರ್ಕಾರದವರು ಯಾವಾಗಲೂ ತೀವ್ರಾಸಕ್ತಿಯನ್ನು ವಹಿಸಿ ಅನುಕೂಲಗಳನ್ನು ಕಲ್ಪಿಸುತ್ತ ಬಂದಿದ್ದಾರೆ. ಈ ಭಾಗದಲ್ಲಿ ಕಾರ್ಯವನ್ನುಂಟುಮಾಡಿ ಜನರಿಗೆ ಸಹಾಯಮಾಡುವುದು ನನಗೆ ಬಹಳ ಸಂತೋಷಕರವಾಗಿದೆ. ಸಂಸ್ಥಾನದ ಇತರ ಕೆಲವು ಊರುಗಳಲ್ಲಿ ಹೆಂಗಸರ ಆಸ್ಪತ್ರೆಗಳ ಪ್ರವೇಶ ಮಹೋತ್ಸವವನ್ನು ನೆರವೇರಿಸುವ ಸುಯೋಗವೂ ನನಗೆ ದೊರೆತಿದೆ; ಅಲ್ಲದೆ ಮತ್ತೆ ಕೆಲವು ಊರುಗಳಲ್ಲಿ ಸ್ತ್ರೀಯರಿಗಾಗಿ ಕಟ್ಟುವ ಆಸ್ಪತ್ರೆಗಳ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸುವ ಸುಯೋಗವೂ ನನಗೆ ಈ ಮೊದಲೇ ದೊರೆತಿದೆ. ಆ ಕೆಲಸಗಳನ್ನು ನಾನು ಆನಂದದಿಂದ ನೆರವೇರಿಸಿದ್ದೇನೆ. ನಮ್ಮ ಸಂಸ್ಥಾನದಲ್ಲಿ ವೈದ್ಯಸಹಾಯವನ್ನು ಹೆಚ್ಚಿಸುವುದು ಎಷ್ಟು ಅವಶ್ಯಕವೆಂಬುದನ್ನು ಆಗ್ಗೆ ಒತ್ತಿಹೇಳಿದ್ದೇನೆ. ಜನರಿಗೆ ತಕ್ಕಷ್ಟು ವೈದ್ಯಸಹಾಯವನ್ನು ಶೀಘ್ರವಾಗಿ ಕಲ್ಪಿಸುವ ಪ್ರಯತ್ನದಲ್ಲಿ ಸರ್ಕಾರದವರ ಜೊತೆಗೆ ಹಣಗಾರರೂ ಸೇರಿ ಒತ್ತಾಸೆಕೊಡಬೇಕಾದುದು ಬಹಳ ಅಗತ್ಯವೆಂಬುದನ್ನೂ ಆಗ್ಗೆ ಒತ್ತಿಹೇಳಿ ತಿಳಿಸಿದ್ದೇನೆ. ಅದರ ಪರಿಣಾಮವಾಗಿ ಅನೇಕ ಮಂದಿ ಅನುಕೂಲಸ್ಥರು ಉತ್ಸಾಹದಿಂದ ಸಹಾಯಮಾಡುತ್ತಿದ್ದಾರೆ. ಇದನ್ನು ಸೂಚಿಸುವುದು ನನಗೆ ಅತ್ಯಂತ ಸಂತೋಷಕರವಾಗಿದೆ. ಈಚಿನ ವರುಷಗಳಲ್ಲಿ ನಮ್ಮ ಸಂಸ್ಥಾನದ ಧನಿಕರಲ್ಲಿ ಅನೇಕರು ಉತ್ಸಾಹಶಾಲಿಗಳಾಗಿ ಮುಂದೆ ಬಂದು ಪಾಠಶಾಲೆಗಳ ಕಟ್ಟಡಗಳು, ಆಸ್ಪತ್ರೆಯ ಕಟ್ಟಡಗಳು ಮತ್ತು ಶುದ್ಧವಾದ ನೀರಿನ ವಸತಿಯ ಏರ್ಪಾಡು, ಇವುಗಳ ಸಂಬಂಧದಲ್ಲಿ ಉದಾರವಾಗಿ ಸಹಾಯಮಾಡಿದ್ದಾರೆ. ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದಕಾರಣ, ಈ ಊರಿನ ಹೆರಿಗೆ ಆಸ್ಪತ್ರೆಗಾಗಿ ಕಟ್ಟಿರುವ ಈ ಕಟ್ಟಡದ ಪ್ರವೇಶ ಮಹೋತ್ಸವವನ್ನು ನೆರವೇರಿಸುವುದು ನನಗೆ ಬಹಳ ಸಂತೋಷಕರವಾಗಿದೆಯೆನ್ನುವುದು ಎಳ್ಳಷ್ಟೂ ಉಪಚಾರದ ಮಾತಲ್ಲ. ಈ ಆಸ್ಪತ್ರೆಯಿಂದ ಈ ಊರಿನ ಹೆಂಗಸರಿಗೂ ಮಕ್ಕಳಿಗೂ ಬಹಳ ಸಹಾಯವಾಗುವುದಾಗಿದೆ. ಆದಕಾರಣ, ಇದರ ಪ್ರಾರಂಭಮಹೋತ್ಸವದಲ್ಲಿ ಭಾಗಿಯಾಗುವುದು ನನಗೆ ನಿಶ್ಚಯವಾಗಿಯೂ ಸಂತೋಷಕರವಾದ ವಿಚಾರ.

ಶ್ರೀಮಾನ್ ಸಿದ್ಧಲಿಂಗಶೆಟ್ಟಿಯವರು ಜನೋಪಕಾರ ಬುದ್ಧಿಯಿಂದ ಕೂಡಿ, ಹೆರಿಗೆ ಆಸ್ಪತ್ರೆಗಾಗಿ ಸೊಗಸಾದ ಈ ಕಟ್ಟಡವನ್ನು ಧರ್ಮಾರ್ಥವಾಗಿ ಕೊಟ್ಟಿದ್ದಾರೆ. ಆದಕಾರಣ, ನಿಮ್ಮೆಲ್ಲರ ಪರವಾಗಿಯೂ ಮತ್ತು ಸರ್ಕಾರದವರ ಪರವಾಗಿಯೂ ನಾನು ಅವರನ್ನು ಬಹುವಾಗಿ ಅಭಿನಂದಿಸಬಿಚ್ಛಿಸುವೆನು. ಶ್ರೀಮಾನ್ ಸಿದ್ಧಲಿಂಗಶೆಟ್ಟಿಯವರು ಈ ಊರಿನವರಿಗೆ ಬಹಳ ಉಪಕಾರ ಮಾಡಿದ್ದಾರೆ. ಈ ಹೊಸ ಊರಿನ ಸಂಬಂಧದಲ್ಲಿ ಮೊದಲಿನಿಂದಲೂ ಅವರು ತೀವ್ರಾಸಕ್ತಿಯನ್ನು ವಹಿಸಿ ಅದರ ನಿರ್ಮಾಣಕ್ಕಾಗಿ ಉತ್ಸಾಹದಿಂದ ಕೆಲಸಮಾಡಿದ್ದಾರೆ. ಉತ್ತಮರೀತಿಯಲ್ಲಿ ನಗರವು ನಿರ್ಮಿತವಾಗಿ ಊರಿನವರೆಲ್ಲರೂ ಹೆಮ್ಮೆ ಪಡುವಷ್ಟುಮಟ್ಟಿಗೆ ಅದು ವೃದ್ಧಿಹೊಂದಬೇಕೆಂಬ ಅಭಿಲಾಷೆಯಿಂದ ಕೂಡಿ ಅವರು ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ಅವಿಚ್ಛಿನ್ನವಾಗಿ ಕೆಲಸಮಾಡಿದ್ದಾರೆ. ಅವರು ಆರೋಗ್ಯವಂತರಾಗಿ ಸುಖದಿಂದ ಬಾಳಲೆಂದೂ, ಈ ಊರಿನಲ್ಲಿ ಬಗೆಬಗೆಯ ಸೌಕರ್ಯಗಳು ಒದಗಬೇಕೆಂಬ ವಿಚಾರದಲ್ಲಿ ಅವರ ಆಕಾಂಕ್ಷೆಗಳೆಲ್ಲವೂ ಈಡೇರಿದುದನ್ನು ಕಂಡು ಅವರು ಸಂತೋಷ ಪಡುವಂತಾಗಲೆಂದೂ, ನಾನು ಹಾರೈಸುವೆನು.

ಈ ಕಟ್ಟಡದಲ್ಲಿ ಕಾರ್ಯಾರಂಭವಾಗಲು ಅನುಮತಿಯನ್ನು ಕೊಟ್ಟು, ಶ್ರೀಮತಿ ಪುಟ್ಟತಾಯಮ್ಮನವರ ನಾಮಾಂಕಿತದ ಮೇಲೆ ನಿರ್ಮಿತವಾಗಿರುವ ಈ ಹೆರಿಗೆ ಆಸ್ಪತ್ರೆಯ ಪ್ರವೇಶ ಮಹೋತ್ಸವವನ್ನು ನಾನು ಅತ್ಯಂತ ಸಂತೋಷದಿಂದ ಇನ್ನು ನೆರವೇರಿಸುವೆನು.

ಕಾರ್ಜಪುರ ನಗರದ ಸಮೀಪದಲ್ಲಿರುವ ಹೆಂಡು ಗ್ರಾಮದಲ್ಲಿ ಒಂದು ಅಡಿಗೆ ಒಂದು ಅಡಿನ ಮರಿಯೂ, 2 ಅಡಿ ಉದ್ದವಾದ ಒಂದು ಹಾವಿನಮರಿಯೂ ಹುಟ್ಟಿರುವುವಂತೆ! ಅದರ ಕೆಲವು ಗಂಟೆಗಳೊಳಗಾಗಿ ಎರಡೂ ಮೃತಪಟ್ಟವು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕರ್ಪೂರ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅಕ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 24

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 32

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (7)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇಜ್ವರಕ್ಕೆ
ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ರ್ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವನೋವು, ಗಂಟುನೋವು ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕುಮದ್ದುಗಳು, ಹೊಮ್ಯೊಪಥಿ ಔಷಧಿಗಳು ನಮ್ಮಲ್ಲಿ ಸಿಗುತ್ತ.
The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ಹುಳಕೊಯುವ ರೋಗ, ದದ್ದು, ತುರಿಸುವ ನಂಜಿ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.
½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ 'ಮಾರ್ಪಟ್ಟು ಮೆದುಳು ಕಾಯಗಳು ನಿಸ್ತೇಜವಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕರ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪು-ಸಾಲಿಸವನ** ಆತ್ಮಸಂರಕ್ಷಕನಂತೆಯೇ ಯುವಕರಿಗಿರುವನು.
ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,
[33] (ಹಂಪನಕಟ್ಟೆ), 21, ಮಂಗಳೂರು

ಅನುಭವಸಿದ್ಧ ಔಷಧಗಳು.

(1) ಧಾತುಪುಷ್ಟಿ ಲೇಹ್ಯ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ತುಂಬಿಕೊಳ್ಳುವದು.

ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0

(2) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಕೈಕಾಲು ಸೆಳತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣಪಡಿಸುವುದು.

ಬಾಟ್ಲಿ 1ಕ್ಕೆ 1—2—0; 1 ಡಬ್ಬಿ ಮಾತ್ರೆಗೆ 1—0—0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4—4—0.

(3) ಮೇಹಕುಠಾರ—ಪ್ರಮೇಹ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2—8—0; 2 ಡಬ್ಬಿಗಳಿಗೆ 4—12—0.

(4) ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದುದಿನ ಯಾ ಎರಡುದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕಜ್ವರ, ಚಳಿಜ್ವರ, ಜ್ವರಗಡ್ಡೆ ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1—8—0; 2 ಬಾಟ್ಲಿಗಳಿಗೆ ರೂ. 2—12—0.

(5) ಬಾಲಗ್ರಹಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ಕ್ಕೆ 0—10—0; 3 ಬಾಟ್ಲಿಗಳಿಗೆ 1—12—0.

(6) ಮಹಾಮದನಕಾಮೇಶ್ವರೀ ಲೇಹ್ಯ—ಡಬ್ಬಿ 1ಕ್ಕೆ 2—0—0; 2ಕ್ಕೆ 3—12—0.

ಕ್ಯಾಟಲಾಗಿಗೆ ಬರೆಯಿರಿ. (23)

ಎಂ. ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್,
ನಂ. 271, ರಥಬೀದಿ, ಮಂಗಳೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಚಾರ್ಯಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ಗ್ಲೈ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಗ್ಲೈ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ಗ್ಲೈ	೦—೦—೯
ಪಂಚ ಪೀಠಾಧೀಶರನ್ನೊಳಗೊಂಡ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ಗ್ಲೈ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಗ್ಲೈ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ಗ್ಲೈ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ಗ್ಲೈ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಗ್ಲೈ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂ-ದರೆ:—ನೆಗಡಿ, ... ತಲೆನೋವು, ... ಲ್ಲಿಯ ರೋಗ... ಕಣ್ಣುಗಳಲ್ಲಿ ಉಂ...

(Registered Trade Mark)

ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೫೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಮೇತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ...
ಡಬ್ಬಿ ಒಂದಕ್ಕೆ ಕ್ರಯ ರೂ. ೨-೦-೦. ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ...

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್...

[15] ಪೋ. ಬಾ. ೫೧೦, ಮ...

ಮೈಸೂರು ಸುಬ್ಬಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕ...

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೭ನೇ ಮೇ ೧೯೩೪ [ಸಂಚಿಕೆ ೫೪

ಸನ್ಯಾಸಿಗಳ ಸಂಕ್ಷಿಪ್ತ ಇತಿಹಾಸ.

ಯಾವ ಯಾವ ಸಮಯದಲ್ಲಿ ಯಾರು ಹೇಗೆ ಹೇಗೆ ವರ್ತಿಸುವರೋ ಇದನ್ನು ಹೇಳಲಿಕ್ಕಾಗದು. ಗೃಹಸ್ಥರು ಸನ್ಯಾಸಿಗಳಾಗಲಪೇಕ್ಷಿಸುವರು. ಸನ್ಯಾಸಿಗಳು ಗೃಹಸ್ಥರ ಕೃತಿಯಲ್ಲಿ ತೊಡಗುವರು. ಜಗತ್ತಿನಲ್ಲಿರುವ ಯಾವ ವಸ್ತುವಿನಲ್ಲಿಯೂ ಮಮತೆ ಇರದೆ ಇರುವವರಿಗೆ ಸನ್ಯಾಸಿಗಳೆನ್ನುವರು. ಸನ್ಯಾಸಿಗಳಿಗೆ ಸರ್ವಸಂಗಪರಿತ್ಯಾಗವು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಶಾಸ್ತ್ರಗಳದೇನು ಗಂಟುಹೋಗುತ್ತದೆ? "ಶಾಸ್ತ್ರ ಹೇಳಲಿಕ್ಕೆ ಬಾನ ಉಣ್ಣಲಿಕ್ಕೆ" ಎಂಬಂತೆ ಆ ಶಾಸ್ತ್ರಗಳಿಗೆ ಅಷ್ಟೇಕೆ ಮಹತ್ವ ಕೊಡಬೇಕು? ಶಾಸ್ತ್ರಕಾರರು ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಬರೆದು ಸನ್ಯಾಸಿಗಳನ್ನು ಗೋಳಾಡಹಚ್ಚಿರುವರು. ಶಾಸ್ತ್ರಕಾರರು ಎಂಥ ಕೃತಘ್ನರು? ಒಬ್ಬರಿಗೊಂದು ಇನ್ನೊಬ್ಬರಿಗೊಂದು ಹೀಗೇಕೆ ಪಕ್ಷಪಾತದಿಂದ ಬರೆಯಬೇಕು? ಎಲ್ಲ ಪ್ರಪಂಚಿಕ (ಗೃಹಸ್ಥ)ರಂತೆ ಸನ್ಯಾಸಿಗಳಿಗೂ ಹೆಂಡರು ಮಕ್ಕಳು ಮೊದಲಾದ ವೈಭವವಿರತಕ್ಕದ್ದೆಂದು ಬರೆದರೆ ಅವರದೇನು ಹಾಳಾಗುತ್ತಿತ್ತು? ಅವರೇ ಬಂದು ಸಕಲಸಂಪತ್ತನ್ನು ಸನ್ಯಾಸಿಗಳಿಗೆ ಒದಗಿಸಿಕೊಡುತ್ತಿದ್ದರೇ? ಇನ್ನಾದರೂ ಏನಾಯಿತು? ಎಲೈ ಸನ್ಯಾಸಿಗಳೇ! ನೀವು ಒಂದು ಸಭೆ ನೆರವೇರಿಸಿ ಶಾಸ್ತ್ರಕಾರರ ಬಗ್ಗೆ ನಿಷೇಧಗೊಳಿಸಿರಿ. ಅಂದರೆ ಶಾಸ್ತ್ರಕಾರರು ಎಚ್ಚರಾಗಲಿಕ್ಕಿಲ್ಲ. ಆಮೇಲೆ ನಿಮ್ಮ ಇಚ್ಛಾನುಸಾರ ಶಾಸ್ತ್ರಗಳನ್ನು ಬರೆಯಿಸಿಕೊಳ್ಳಿರಿ. ಇಲ್ಲವೆ ನೀವೇ ಒಂದು ಶಾಸ್ತ್ರವನ್ನು ಹೊಸದಾಗಿ ಸಿದ್ಧಮಾಡಿರಿ. ನಿಮ್ಮಲ್ಲಿ ವಿದ್ವತ್ತೆಯು ಇಲ್ಲವೇ? ನಿಮ್ಮ ವಿದ್ವತ್ತೆಯಿಂದ ಕಾಲಬಂದಹಾಗೆ ಪ್ರವರ್ತಿಸುವದು ಒಳ್ಳೆಯದಾಗಿದೆ. ಕಾಲಬಂದಂತೆ ವರ್ತಿಸುವದರಿಂದ ಮಹತ್ವಲಭಿಸುವದು. ಅರ್ಜುನನು ಸಮಯಾನುಸಾರವಾಗಿ ಸನ್ಯಾಸವೇಷವನ್ನು ಧರಿಸಿದ್ದರಿಂದಲೇ ಸುಭದ್ರೆಯನ್ನು ಪಡೆದನು. ರಾವಣನೂ ಹೀಗೆ ವರ್ತಿಸಿದುದರಿಂದಲೇ ಸೀತೆಯನ್ನು ಒಯ್ಯುವ ಸಾಮರ್ಥ್ಯ ಪಡೆದನು. ಅಂಥ ರಾವಣ ಅರ್ಜುನಾದಿಗಳೇ ಹೀಗೆ ಮಾಡಿರುವಾಗಲಿಕ್ಕೆ ನೀವೇಕೆ ಹೆದರುತ್ತೀರಿ? ಹೆದರದೆ ರಾವಣಸನ್ಯಾಸಿಗಳಾಗಿರಿ.

ಸನ್ಯಾಸಿಗಳ ಸಮಯ.

ಈ ಸನ್ಯಾಸಿಗಳು ಯಾವ ಇಸ್ವಿಯಲ್ಲಿ ಹುಟ್ಟಿದರೋ ಎನ್ನುವದು ಯಾರಿಗೂ ತಿಳಿಯದಿದ್ದರೂ ಈ ಸನ್ಯಾಸಿಗಳು ತಾವು ಸ್ವತಃ ತಾವು ಆಧುನಿಕ ಸಂಪ್ರದಾಯದವರೆಂದು ಹೇಳುವದರಿಂದ ೭ ಅಥವಾ ೮ ನೂರು ವರ್ಷದವರೆಂದು ತರ್ಕಿಸಲಿಕ್ಕಾಗುವದು. ಆದರೆ ಪ್ರತ್ಯೇಕ ಕೆಲವರು ನಾವು ಪೂರ್ವದಿಂದಲೂ ಇದ್ದವರೆಂದು ಹೇಳುತ್ತಿರುವದು ಗಣನೆಗಾಗದುದೇ ಸರಿ!

ಸನ್ಯಾಸಿಗಳ ಶೂನ್ಯ (O) ಪೀಠ.

...ಮು ಶೂನ್ಯ (೦) ಸಿಂಹಾಸನವೆಂದು ಹೇಳುತ್ತ... ...ಮು ಯೋಗ್ಯವಾದುದು. ಇವರಿಗೆ ಎಲ್ಲಿಯೂ ಮನೆ, ...ಬಂಧಕ ಶೂನ್ಯವೆಂಬುದು ಕೇವಲ ನಿಜವಾದ ...ದ ಶೂನ್ಯಪೀಠವನ್ನು ಪಂಡಿತೋತ್ತಮರಾದ ...ಶಾಸ್ತ್ರಿಗಳವರು ಖಂಡಿಸಿರುವದನ್ನು ಕೇಳಿ ನಾವು ...ಪ್ಪು ಹೆಸರಿಡುವದಕ್ಕಿಂತಲೂ ಬೇರೆ ಯಾವದಾ...ದ್ದರೆ ಚೆನ್ನಾಗಿತ್ತೆಂದು ಈಗ ಆಲೋಚಿಸುವ ...ದು ಪೂರ್ವದಾಗಿರದೆ ನೊಸ್ಸೆ ನೊಸ್ಸೆ ಇವರೇ ...ದು ನಿಸ್ಸಂಶಯವಾಗಿ ಹೇಳಬಹುದು.

...ನ್ಯಾಸಿಗಳ ಸಾಹಸ.

...ಮನೆಮಠಗಳಿರದಿದ್ದರೂ ಭಕ್ತರನ್ನು ಅನೇಕ ...ಎಷ್ಟೋ ಸ್ಥಳಗಳಲ್ಲಿ ಮಠಗಳನ್ನು ಕಟ್ಟಿ ...ಭೂಮಿ ಮೊದಲಾದವುಗಳನ್ನೂ ಸಂಪಾ... ಭಕ್ತರಿಗೆ ನಿಮ್ಮ ಕಲ್ಯಾಣಕ್ಕಾಗಿಯೇ ಮಾಡುತ್ತಿದ್ದೇವೆ. ಹೊರತು ನಮ್ಮ ಹಿತಕ್ಕಲ್ಲವೆಂದೂ, ಪುರಾಣ, ಮಂಟಪ, ದಾಸೋಹ, ಇತ್ಯಾದಿಗಳನ್ನು ಮಾಡುತ್ತೇವೆಂದೂ, ಕೆಲವರು ಪಾಠಶಾಲಾ, ಕಾಲೇಜು, ಬೋರ್ಡಿಂಗುಗಳನ್ನು ಸ್ಥಾಪಿಸುತ್ತೇವೆಂದೂ ಇನ್ನು ಕೆಲವು ಸನ್ಯಾಸಿಗಳು ಯೋಗಾಭ್ಯಾಸದ ಸಂಸ್ಥೆಯನ್ನು ಏರ್ಪಡಿಸುತ್ತೇವೆಂದೂ ಹೇಳುತ್ತ ಭಕ್ತರನ್ನು ಮೋಸಗೊಳಿಸುತ್ತಿರುವರು. ಮಂಟಪ ಪುರಾಣ ಮಾಡಿಸುವವರು ಸಟ್ಟಾವ್ಯಾಪಾರದಂತೆ ೨೫ ಸಾವಿರ ರೂಪಾಯಿ ಅಂದರೆ ೫ ಸಾವಿರ ರೂಪಾಯಿ ಖರ್ಚುಮಾಡಿ ೨೦ ಸಾವಿರ ರೂಪಾಯಿ ಬ್ಯಾಂಕಿನಲ್ಲಿಟ್ಟು ಬಡ್ಡಿಯಿಂದ ಹುಗ್ಗಿ ಸಕ್ಕರೆ ತಿನ್ನುತ್ತಿರುವರು. ಈ ತರಹದ ಸನ್ಯಾಸಿಗಳು ಅಲ್ಲಲ್ಲಿ ಕಂಡುಬರುತ್ತಿರುವರು. ಮುಳ್ಳುಕಳ್ಳಿಯು ಹೊಲವನ್ನು ಸಂರಕ್ಷಿಸುತ್ತದೆಂದು ತಮ್ಮ ಹೊಲಮನೆಗಳ ಕಾವಲುಗಾಗಿ ಸುತ್ತಲೂ ಹಾಕುತ್ತಿದ್ದರು. ಅದು ವಿಶೇಷ ಹಬ್ಬಿದರೆ ಪ್ರತಿವರ್ಷ ಕಡಿಸಲಿಕ್ಕೆ ೧೦-೨೦ ರೂಪಾಯಿ ಕೂಲಿ ಬರುತ್ತಿತ್ತು. ಮುಳ್ಳುಕಳ್ಳಿಯು ಹೆಚ್ಚಿ ಹೆಚ್ಚಿ ಎಷ್ಟೋ ಜನರ ಹೊಲಮನೆಗಳನ್ನೆಲ್ಲ ನುಂಗಿಬಿಟ್ಟಿತು. ಸಂರಕ್ಷಕವೆಂದು ತಂದದ್ದು ಭಕ್ಷಕವಾಯಿತು. ಆಗ್ಗೆ ಎಷ್ಟೋ ಜನರು ದೇವಾ! ಜಗದ್ರಕ್ಷಕಾ! ಈ ಮುಳ್ಳುಕಳ್ಳಿಯು ನಮ್ಮನ್ನು ಕೊಲ್ಲಹತ್ತಿದೆ. ಇದನ್ನು ಸಂಹರಿಸುವದಕ್ಕೆ ನೀನೇ ಸಮರ್ಥನಲ್ಲದೆ ಇತರರಾರೂ ಸಮರ್ಥರಲ್ಲವೆಂದು ಮರೆಯಿಡುವದನ್ನು ಕೇಳಿ ಪರಮಾತ್ಮನು ಕಳ್ಳಿಯ ಸಂಹಾರಕ್ಕಾಗಿ ತನ್ನಂಶರೂಪ ಒಂದು ಪ್ರಾಣಿಯನ್ನು ಹುಟ್ಟಿಸಲಾಗಿ ಈಗ್ಗೆ ಆ ಮುಳ್ಳುಕಳ್ಳಿಯ ಸೊಕ್ಕು ಬಯಲಾಗಿ ಪಟಪಟನೆ ನೆಲಕ್ಕುರುಳಹತ್ತಿದೆ. ಅದರಂತೆ ಈ ಸನ್ಯಾಸಿವರ್ಗವು ತನ್ನ ಅನೇಕ ಪ್ರಕಾರದ ಕಪಟತನಗಳಿಂದ ಜನರನ್ನು ವಂಚಿಸುತ್ತ ಮುಳ್ಳುಕಳ್ಳಿಯಂತೆ ಅವರನ್ನೆಲ್ಲ ನುಂಗಹತ್ತಲು, ಆಗ್ಗೆ ಕೆಲವು ಗುರುಭಕ್ತಿಪರಾಯಣರು ಪರಶಿವನನ್ನು ಕುರಿತು ಬೇಡಿಕೊಂಡರು. ಆಗ್ಗೆ ಪರಮಾತ್ಮನು ತನ್ನಂಶರೂಪರಾದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರನ್ನು ಉದಯಿಸಿದಮೇಲೆ ಈ ಸನ್ಯಾಸಿಗಳು ತಗ್ಗಿ ಮೂಲೆಗೆ ಬೀಳಹತ್ತಿರುವರು.

ಸನ್ಯಾಸಿಗಳ ಸಾಹಿತ್ಯ.

ಇವರ ಸಾಹಿತ್ಯಗಳನ್ನು ತಿಳಿಯಬೇಕಾದರೆ ಬೃಹಸ್ಪತಿಯು ಸಹ ಸಮರ್ಥನಲ್ಲ. ಇವರು ಜನರಲ್ಲಿ ಒಂದು ಪ್ರಕಾರದ ವಿಶ್ವಾಸವನ್ನು ಹುಟ್ಟಿಸಲಿಕ್ಕೆ ಇವರಲ್ಲೇನು ಅಂಥ ಸಾಹಿತ್ಯವಿರಬಹುದೆಂದು ಅನೇಕರು ಶಂಕಿಸಬಹುದು. ಇವರಲ್ಲಿ ಅಂಥ ಸಾಹಿತ್ಯಗಳಿವೆ. ಅವು ಯಾವವೆಂದರೆ—

ಉಚ್ಚೈರಧ್ಯಯನಂ ಪುರಾತನಕಥಾ ಸ್ತ್ರೀಭಿಃಸಹಾಲಾಪನಂ |
ತಾಸಾಮರ್ಭಕಲಾಲನಂ ಪತಿನುತಿಸ್ತಾಸ್ವಾದವಿಖ್ಯಾಪನಂ ||
ಸಂದೇಶಸ್ಯ ಕರಾವಲಂಬನವಿಧಿಃ ಪಾಂಡಿತ್ಯಲೇಖಕ್ರಿಯಾ |
ಹೋರಾಗಾರುಡಮಂತ್ರತಂತ್ರಕವಿಧಿರ್ಭಿಕ್ಷೋರ್ಗುಣಾ ದ್ವಾದಶ ||

ಎಲ್ಲಿ ಯಾವದರೂ ನಾಲ್ಕು ವಚನ ಕಲಿತಿದ್ದರೆ ತೀರಿತು. ಅವನ್ನೇ ಗಟ್ಟಿಯಾಗಿ ಕೂಗುವದು ಹಿಂದಿನ ಪ್ರಮಥರು ಹೀಗೆ ಊಟ ಮಾಡಿಸುತ್ತಿದ್ದರು. ಹಾಗೆ ಮಾತಿಸುತ್ತಿದ್ದರೆಂದು ಹೇಳುವದು. (೨) ಹೆಂಗಸರೊಡನೆ ಮಾತನಾಡುವದು. (೩) ಅವರ ಮಕ್ಕಳನ್ನು ಯಾವಾಗಲೂ ಎತ್ತಿಕೊಂಡು ಮುದ್ದಿಡುತ್ತ ಆಡಿಸುವದು. (೪) ಆ ಸ್ತ್ರೀಯಳ ಮುಂದೆ ಆಹಾ! ಏನು ಹೇಳಲಿ ನಿಮ್ಮ ಗಂಡನ ವರ್ಣನವನ್ನು? ಇಂದ್ರನೋ, ಚಂದ್ರನೋ, ಕುಬೇರನೋ ಹೀಗೆ ಆಕೆಯ ಪತಿಯನ್ನು ವರ್ಣಿಸುವದು (೫) ಆಕೆಯು ಅಡಿಗೆಯನ್ನು ಹೇಗೇ ಮಾಡಿರಲಿ, ಥಾ.ಥಾ, ಎಂದು ನಾಲಿಗೆಯನ್ನು ಚಪ್ಪರಿಸುತ್ತ ಅಮ್ಮನವರೇ! ಏನು ಹೇಳಲಿ? ನಿಮ್ಮ ಅಡಿಗೆಯ ರುಚಿಯನ್ನು? ಇಷ್ಟು ದಿವಸಗಳ ವರೆಗೆ ನಾನೂ ಅನೇಕರ ಅನ್ನವನ್ನು ತಿಂದಿರುವೆನು. ಆದರೆ ಈ ಪ್ರಕಾರ ಎಲ್ಲಿಯೂ ರುಚಿಯಾಗಿರಲಿಲ್ಲ. ಹೀಗೆ ಸುಳ್ಳೇ ಪಾಕವರ್ಣನ ಮಾಡುವದು. (೬) ಪ್ರಾತಃಕಾಲವಾದ ಕೂಡಲೇ—ಏನು ಕೆಲಸ ಹೇಳ್ತೀರು ಯಾವಾಗ್ಗೆ ಮಾಡೇನು? ಎಂದು ಸಿದ್ಧವಾಗಿ ನಿಲ್ಲುವದು. (೭) ಪತ್ರ ವಗೈರೆ ಬರೆಯುವಿಕೆ. ಎಲ್ಲ ಸ್ತ್ರೀಯರ ಮುಂದೆ ತಮ್ಮ ಪಾಂಡಿತ್ಯ ತೋರಿಸುವದು. (೮) ಜೋಸ್ಯ. (೯) ಗಾರುಡ. (೧೦) ಮಂತ್ರ. (೧೧) ತಂತ್ರ (೧೨) ಹೀಗೆ ಹನ್ನೆರಡು ಗುಣಗಳೇ ಅವರ ಸಾಹಿತ್ಯಗಳಾಗಿರುತ್ತವೆ. ನಿಷ್ಕಲಮನಸ್ಸಿನಿಂದ ಹೇಳಬೇಕಾದರೆ ಎಲ್ಲಿ ನೋಡಿದರೂ ಇದೇ ಪ್ರಕಾರದ ಸನ್ಯಾಸಿಗಳೇ ಕಂಡುಬರುವರೇ ಹೊರತು ನಿಜವಾದ ಸನ್ಯಾಸಿಯು ಓರ್ವನೂ ಇಲ್ಲವು. ಆ ಸನ್ಯಾಸಿಯಲ್ಲಿ ಹೋದರೆ ದೆವ್ವ ಹೋಗುತ್ತದೆ. ಈ ಸನ್ಯಾಸಿಯನ್ನು ಬೈದರೆ ರಕ್ತಕಾರಿ ಸಾಯುವರು ಎಂದು ನುಡಿಯುತ್ತ ವೀರಶೈವರನ್ನು ವಂಚಿಸುತ್ತಾರೆ. ವೀರಶೈವರೇ! ಇನ್ನಾದರೂ ಎಚ್ಚರರಾಗಿರಿ!

ಸನ್ಯಾಸಿಗಳ ಸದಾಚಾರ.

ಆಚಾರವಿಚಾರಗಳ ವಿಷಯವಂತೂ ಇವರನ್ನು ಎಂದೋ ಬಿಟ್ಟುಹೋಗಿದೆ. ಇವರಿಗೆ ಮಾತ್ರ ಸ್ವಚ್ಛವಾದ ಕಫನಿಯನ್ನು ಹಾಕಿಕೊಂಡು ಪಾನಸುಪಾರಿ ಶಿವಪೂಜೆಮಾಡುವಂತೆ ತೋರಿಸಿ ಯಾವಾಗಲೂ ಅಂತರಂಗದಲ್ಲಿ ಗುರುನಿಂದಾರೂಪಕಳಂಕದಿಂದ ತುಂಬಿ ತುಳುಕುವದೇ ಇವರ ಸದಾಚಾರವು. 'ಯಥಾಜಾರವಧೂಯೋಃ ಸದಾಮೈಥುನಮಿಚ್ಛತಿ | ತಥಾಜಾರಜದೇವಾತು ಪರನಿಂದಾಮಪೇಕ್ಷತೆ ||' ಜಾರಸ್ತ್ರೀಯಳ ಯೋನಿಯು ಯಾವಾಗಲೂ ರತಿಕ್ರೀಡೆಯನ್ನೇ ಅಪೇಕ್ಷಿಸುವಂತೆ ದುರ್ಜನರ ನಾಲಿಗೆಯು ಯಾವಾಗಲೂ ಪರನಿಂದೆಯಲ್ಲಿಯೇ ತತ್ಪರವಾಗುವದನ್ನೇ ಇಚ್ಛಿಸುತ್ತದೆ ಎನ್ನುವಂತೆ ಈ ಸನ್ಯಾಸಿಗಳ ನಾಲಿಗೆಯು ಯಾವಾಗಲೂ ಗುರುನಿಂದೆಯೇ ನನ್ನ ಮೂಲಮಂತ್ರವೆಂದರಿತುಕೊಂಡಿರುತ್ತದೆ.

ಸನ್ಯಾಸಿಗಳ ಸಂದೇಶ.

ಇವರ ಸಂದೇಶವು 'ವೇದಗಳ ಮೂಗು ಕೊಯ್ಯುವೆ, ಆಗಮಗಳ ಹಲ್ಲು ಮುರಿಯುವೆ, ಇತ್ಯಾದಿ ಅಮಂಗಲಶಬ್ದಗಳನ್ನೇ ಆದರಿಸುವದು. ಸೂತ್ರಗೋತ್ರಗಳೇ ಇಲ್ಲವೆಂದು ಹೇಳಿ, ಎಲ್ಲಿಲ್ಲಿಯೂ ಸೂರ್ಯನೆಂಬುವ ದೀವಟಿಗೆಯನ್ನು ಹಿಡಿದು ಹುಡುಕಿದರೂ ಸಿಗದ ಚಿಲ್ಲಾಳ, ಮುಂಡಗಿ, ಕೆಂಪು, ಕುಮುದವೆಂಬುವ ಅಶಾಸ್ತ್ರೀಯಸಮಯಗಳನ್ನು ಹೇಳುತ್ತಿದೆ. ವೀರಶೈವರಿಗೆ ಶಿಖಾಧಾರಣವಿದೆಯೆಂದರೆ ಈ ವರ್ಗವು ಇಲ್ಲವೆನ್ನುವದು. ವೀರಶೈವಧರ್ಮವು ಪ್ರಾಚೀನವೆಂದರೆ ಕಲ್ಯಾಣಗುಡದ ಕಲ್ಯಾಣ ಬಸಪ್ಪನಿಂದ ಹುಟ್ಟಿದೆ ಎನ್ನುವದು. ವೀರಶೈವರಲ್ಲಿ ವರ್ಣಾಶ್ರಮಗಳುಂಟೆಂದರೆ ಇಲ್ಲವೆನ್ನುವದು. ಇನ್ನು ಸ್ವಲ್ಪ ದಿವಸಗಳಲ್ಲಿ ವೀರಶೈವರು ಲಿಂಗವನ್ನು ಧರಿಸಬೇಕೆಂದರೆ ಧರಿಸಕೂಡದೆಂದೂ ಹೇಳಬಹುದು. ಒಟ್ಟಿನಮೇಲೆ ಈ ವರ್ಗವು ವೀರಶೈವ ಧರ್ಮವನ್ನು ಹಾಳುಮಾಡುವಯತ್ನದಲ್ಲಿದೆ ಎನ್ನುವದನ್ನು ಯಾರೂ ಮರೆಯಕೂಡದು.

ಸನ್ಯಾಸಿಗಳಿಗೆ ಸದುಪದೇಶ.

ಎಲೈ ಸನ್ಯಾಸಿಗಳೇ! ನಿಜವಾಗಿ ನಿಮ್ಮ ಹಿತದದೆಶೆಯಿಂದ ನಾನು ಈಗ್ಗೆ ಬರೆದದ್ದನ್ನೆಲ್ಲ ನಿರ್ಮಲಮನಸ್ಸಿನಿಂದ ಓದಿರಿ. ನೀವು ಇನ್ನುಮೇಲೆ ನಿಮ್ಮ ನಿಜವಾದ 'ಕರತಲಭಿಕ್ಷಾ ತರುತಲವಾಸ' ವನ್ನು ಸ್ವೀಕರಿಸಿರಿ. ನಿಮ್ಮ ಗುರುವಿನನ್ನು ಮರೆಯದೆ ಅಹೋರಾತ್ರ ಧ್ಯಾನಮಾಡಿರಿ. ಹೀಗೆ ಮಾಡದೆ ನಿಮ್ಮ ಕುಟಿಲತನವನ್ನು ಬಿಡದಿದ್ದರೆ ಇನ್ನು ಮೇಲೆ ನಿಮ್ಮ ಆಟವು ನಡೆಯಲಿಕ್ಕಿಲ್ಲೆಂದು ಗಟ್ಟಿಗಟ್ಟಿಗಟ್ಟಿಯಾಗಿ ಗಂಟುಹಾಕಿಕೊಳ್ಳಿರಿ. ನಿಮಗೆ ಪ್ರಸಿದ್ಧಿಯನ್ನು ಹೊಂದುವ ಅಪೇಕ್ಷೆಯಿದ್ದರೆ ಸದ್ಗುರು ಪಂಚಾಚಾರ್ಯರ ಪಾದಾರವಿಂದವನ್ನು ಆಶ್ರಯಿಸಿರಿ. ಜಗದಾಚಾರ್ಯರು ಇಲ್ಲಿಯ ವರೆಗೆ ನೀವು ಮಾಡಿದ ಅಪರಾಧಗಳನ್ನು ಕ್ಷಮಿಸುವರು. 'ಹರೇಕೃದ್ಧೇ ಗುರುಸ್ತ್ರಾತಾ ಗುರೌಕೃದ್ಧೇನಕಶ್ಚನ' ಎನ್ನುವಂತೆ ನಿಮ್ಮ ಪಾಪವನ್ನು ಕಳೆಯಲು ಇತರರಾರೂ ಸಮರ್ಥರಲ್ಲವೆನ್ನುವದು ನಿಮಗೂ ತಿಳಿದಿದೆ. ಅಭಿಮಾನದಿಂದ ಕೆಟ್ಟುಕೊಳ್ಳಬೇಡಿರಿ. ತಂದೆಯ ಮುಂದೆ ಅದೇತರ ಅಭಿಮಾನವು? ನೀನಾದರೂ ತಿಳಿದವರೇ ಇರುತ್ತೀರಿ. ಈಗ ನೀವು ಬಗ್ಗದಿದ್ದರೂ ಯಮರಾಜನಲ್ಲಿ ಯಾವದರೂ ಬಗ್ಗೇ ಬಗ್ಗುತ್ತೀರಿ. ಹಾಗೆ ಮಾಡುವದಕ್ಕಿಂತಲೂ ಮೊದಲೇ ಬಗ್ಗಿ ಪಾಪಗಳನ್ನೆಲ್ಲ ಕಳೆಯಿರೆಂದು ನಿಮ್ಮ ಮೇಲಿರುವ ಪ್ರೇಮದಿಂದ ಸೂಚಿಸಿರುವೆನು.

ಓರ್ವ ಸತ್ಯವಾದಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ನಮಃ ಪಂಚಜಗದ್ಗುರುಭ್ಯಃ

ಮುಕ್ತಿಯ ಮಾರ್ಗ.

ಲೇಖಕ—ಶ್ರೀ ಚನ್ನವೀರ ಶಿವಾಚಾರ್ಯ ಬೃಹನ್ಮಠ ಹೋಟಗೀ

(ಹಿಂದಿನಿಂದ ಮುಂದೆಸಾಗಿದುದು.)

ಕ್ರೋಧ ಸಮಾನವಾದ ಪಾಪವೇ ಇಲ್ಲ. ಭೂಲೋಕದಲ್ಲಿ ಕೋಪದ ಹೊರತು ಘಾತುಕರು ಇನ್ನೊಬ್ಬರಿಲ್ಲ. ಯಾವ ಮನುಷ್ಯನು ಧೈರ್ಯಶಾಲಿಯೂ ಭಾಗ್ಯವಂತನೂ ಆಗಿರುವನೋ ಅವನಿಗೆ ಇಹಪರಗಳಲ್ಲಿ ಸೌಖ್ಯದರ್ಶಕವೆಂದರೆ ಕ್ಷಮಾಗುಣವೇ. ಕ್ಷಾಂತಿಯಂತೆ ಸಹನಶೀಲತಾ ಯಾವದಿರುವದೋ ಅದೇ ಕ್ಷಮಾಗುಣವು. ಹಿತಾಹಿತಗಳನ್ನರಿತು ಯಾವನೋರ್ವನು ತಿಳಿದೇ ಆಗಲಿ ತಿಳಿಯದೇ ಆಗಲಿ ಮಾಡಿದಂಥ ಅಪರಾಧವನ್ನು ಸಹಿಸುವನೋ ಅವನೇ ಧನ್ಯವಂತ ಕ್ಷಮಾಗುಣವುಳ್ಳವನು. ಯಾವನಲ್ಲಿ ಕ್ಷಮೆಯಿದೆಯೋ ಅವನಿಗೆ ತ್ರಿಲೋಕಗಳಲ್ಲಿ ಸಮಾನರಾರೂ ಇಲ್ಲವು. ಉತ್ತಮ ಕ್ಷಮೆಯಿಂದ ನರಕ ತಿರ್ಯಗ್ಯೋನ್ಯಾದಿಗಳು ದೂರ ಆಗುವವು. ಕ್ಷಮಾಗುಣದಿಂದ ಅನೇಕಾನೇಕ ಉತ್ತಮ ಗುಣಗಳು ಪ್ರಾಪ್ತವಾಗುತ್ತದೆ. ಕ್ಷಮಾಗುಣವನ್ನು ಯತೀಶ್ವರರು ಕೌಸ್ತುಭಮಣಿಯಂತೆ ರಕ್ಷಿಸುವರು. ಕ್ಷಮೆಯ ಹೊರತು ಮನಸ್ಸಿನ ಸ್ಥೈರ್ಯ, ಇಷ್ಟಫಲಗಳು ಸಿದ್ಧಿಸಲಾರವು. ಕ್ರೋಧವನ್ನು ಜಯಿಸಬೇಕಾದರೆ ಯಾರಾದರೂ ನಮಗೆ ದುಃಖಗೊಳಿಸಿ, ಕಳ್ಳ, ಪಾಪಿ, ದುರಾಚಾರಿ, ದುಷ್ಟ, ಚಂಡಾಲಾ ಹೀಗೆ ಅನೇಕಾನೇಕ ದುಷ್ಟ ವಾಕ್ಯಗಳಿಂದ ತಿರಸ್ಕರಿಸಿದರೂ ಕೂಡ ಜ್ಞಾನಿಯು ಹೀಗೆ ತಿಳಿಯುತ್ತಾನಲ್ಲಾ. ನಾನು ಈ ಪ್ರಕಾರ ಅಪರಾಧಿ ಇರಬಹುದೋ ಇಲ್ಲವೋ ಒಂದು ಪಕ್ಷದಲ್ಲಿ ಇವುಗಳ ಅಪರಾಧಿಯಾಗಿರಬಹುದೇ ; ಇಲ್ಲವೇ ? ರಾಗದ್ವೇಷಾಸಕ್ತನಾಗಿ ಯಾವ ಪ್ರಕಾರಗಳಿಂದಾದರೂ ಇವರಿಗೆ ನಾನು ದುಃಖಿಸಿರಬಹುದೊ ? ಹೀಗಿದ್ದರೆ ನಾನು ನಿಜವಾಗಿಯೂ ಅಪರಾಧಿಯು ನನಗೆ ಅವರು ಅನೇಕ ಪ್ರಕಾರ ತಿರಸ್ಕರಿಸುವದು ಯೋಗ್ಯವೇ. ನನಗೆ ಇದಕ್ಕಿಂತಲೂ ಹೆಚ್ಚಿನ ಶಿಕ್ಷೆಯು ಯೋಗ್ಯವಿತ್ತು. ನಾನು ಯಾವ ಕಾರಣದಿಂದ ಅಪರಾಧಿಯಾಗಿರುವೆನೋ, ಅದರ ದೆಶೆಯಿಂದ ಕ್ರೋಧಿಯಾಗಿರುವದು ಯೋಗ್ಯವಲ್ಲ. ಯಾಕೆಂದರೆ ಅಪರಾಧಿಯು ನಶಕವಾಶಿಯಾಗಬೇಕಾಗುತ್ತದೆ. ನನ್ನ ದೆಶೆಯಿಂದ ಅವರಿಗೆ ದುಃಖವಾಗಿದೆಯೆಂದು ಅವರು ಕ್ರೋಧಾವೇಶರಾಗಿ ನನ್ನನ್ನು ದುಷ್ಟ ವಾಕ್ಯಗಳಿಂದ ತಿರಸ್ಕರಿಸಿ ನಿರಪರಾಧಿಯನ್ನಾಗಿ ಮಾಡುತ್ತಾರೆಂದು ತಿಳಿದು ಕ್ಷಮಾಧರಿಸುವರಲ್ಲದೆ. ದುರ್ಜನರು ಸುಮ್ಮ ಸುಮ್ಮನೆ ತಿರಸ್ಕರಿಸುತ್ತಿದ್ದರೆ ಅವರಿಗೆ ಶಾಂತಿಯನ್ನು ಉಪದೇಶಿಸುತ್ತಾರೆ. ಇಲ್ಲವೇ ಮೌನಧಾರಿಯಾಗುತ್ತಾರೆ.

"ಕ್ಷಮಾಖಡ್ಗಃ ಕರೇ ಯಸ್ಯ ದುರ್ಜನಃ ಕಿಂಕರಿಷ್ಯತಿ |
ಅತೃಣೇ ಪತಿತೋ ವಹ್ನಿಃ ಸ್ವಯಮೇವೋಪಶಾಮ್ಯತಿ ||೧||"

ದುರ್ಜನನು ಕ್ರೋಧಾವೇಶದಿಂದ ನಮ್ಮನ್ನು ಕೊಲ್ಲುವದಕ್ಕೆ ಬಂದರೆ ಅದಕ್ಕೆ ಪ್ರತಿಯಾಗಿ ನಾವು ಕ್ಷಮಾ (ಶಾಂತಿಯಿಂದ) ಧನುರ್ಧಾರಿಗಳಾದರೆ ದುರ್ಜನನೇನು ಮಾಡುವನು ? ಹುಲ್ಲು ಇಲ್ಲದ ಪ್ರದೇಶದಲ್ಲಿ ಅಗ್ನಿಯು ಬಿದ್ದರೆ, ತನ್ನಿಂದ ತಾನೇ ಹೇಗೆ ಶಾಂತವಾಗುವದೋ ಹಾಗೆಯೇ ದುರ್ಜನನೂ ಶಾಂತವಾಗುತ್ತಾನೆ. ಆ ಕ್ರೋಧಿ ಮನುಷ್ಯನ ವಿನಯದಿಂದ ಮಹಾರಾಜ! ನಾನು ಅಜ್ಞಾನಿ ಇದ್ದು ಪ್ರಮಾದದಿಂದ ನಿಮಗೆ ದುಃಖಗೊಳಿಸಿದೆ; ಅದಕ್ಕಾಗಿ ತಾವು ಅಪರಾಧವನ್ನು ಕ್ಷಮಿಸಬೇಕು. ಇನ್ನು ಮೇಲೆ ಈ ಪ್ರಕಾರ ಪ್ರಮಾದವನ್ನೆಂದೂ ಮಾಡುವದಿಲ್ಲ. ಎಂದು ಬೇಡಬೇಕು. ಇಲ್ಲವೇ ಕ್ಷಮೆಯನ್ನೇ ಮಾಡದಿದ್ದರೆ ಹೊಟ್ಟೆಕಿಚ್ಚಿನಿಂದಾಗಲಿ, ವೈರತ್ವದಿಂದಾಗಲಿ, ದುರ್ಜನರು ತಿರಸ್ಕರಿಸಿದರೆ ಇಲ್ಲವೇ ದೋಷವನ್ನುಂಟುಮಾಡಿದರೆ, ಸತ್ಪುರುಷರು ಆ ಕಡೆಗೆ ಲಕ್ಷ್ಯಗೊಡದೆ ಸ್ವಲ್ಪಾದರೂ ದುಃಖಿಸದೆ ಹೀಗೆ ವಿಚಾರಪರರಾಗುವರಲ್ಲಾ ! ಒಂದುಪಕ್ಷದಲ್ಲಿ ನಾನು ಇವನ ಧನವನ್ನ ಪಹರಿಸಿರಬಹುದು, ಅಥವಾ ಹೊಲವನ್ನಾದರೂ ಅಪಹರಿಸಿರಬಹುದು. ಇಲ್ಲವೇ ಇವನ ಉಪಜೀವನಕ್ಕೆ ವಿಘ್ನವಾಗಿ ಬಾಧಿಯನ್ನಾದರೂ ಹೇಳಿ ಇವನ ದೋಷವನ್ನು ಹೊರಗೆಡಹಿ ನಾನು ಅಪರಾಧಿಯಾಗಿದ್ದರೆ, ನನಗೆ ಪಶ್ಚಾತ್ತಾಪಗೊಳಿಸುವದು ಯೋಗ್ಯವಾಗಿದೆ. ಇಲ್ಲವೇ ನಾನು ಅಪರಾಧಿಯಾಗದಿದ್ದರೆ ನಾನು ಯಾವ ವಿಷಯಗಳ ಬಗ್ಗೆಯೂ ಕಾಳಜಿವಹಿಸುವ ಅವಶ್ಯಕತೆಯಿಲ್ಲ. ಇವನು ಕೆಟ್ಟವಾಸನೆಯಿಂದ ನನ್ನ ಹೆಸರಿಗೆ ಇಲ್ಲದೆ ಕುಲಕ್ಕೆ ಅಪವಾದವನ್ನಿಡುವನು. ಹೆಸರಂತೂ ನನ್ನ ಸ್ವರೂಪವಾಗದೆ ಜಾತಿಗಳಿಗೂ ನನಗೂ ಸಂಬಂಧವಿಲ್ಲ. ನಾನು ಇವುಗಳನ್ನೆಲ್ಲ ತಿಳಿಯುವವನಿದ್ದೇನೆ. ಅವನು ಯಾವ ನನ್ನದ್ವೇಷಿಸಿ ಬೈಯುವನೋ ಅವನು ನಾನಲ್ಲ. ಕಮಲದ ಎಲೆಯು ನೀರಲ್ಲಿದ್ದರೂ ನೀರಿನ ಸಂಸರ್ಗವಿಲ್ಲದಂತೆ ನಾನು ಆ ಶರೀರದಲ್ಲಿದ್ದರೂ ನನ್ನನ್ನು ಆ ವಾಕ್ಯಗಳು ಸೋಂಕಲಾರವು. ಇದಕ್ಕಾಗಿ ನಾನು ಕ್ಷಮಾಧರಿಸುವದೇ ಯೋಗ್ಯವಾಗುತ್ತದೆ. ಸದ್ಯಃ ಹೊರಡುವ ನಿಂದ್ಯಗಳು, ಇವನ ಅಭಿಪ್ರಾಯ, ಇವನ ನಾಲಿಗೆ, ಇವನ ಹಲ್ಲು ತುಟಿ ಚಾಂಚಲ್ಯ ವಿಕಾರಗಳಿಂದ ಅವುಗಳೇ ಹೊರತು ನಿಜವಾಗಿಯು ಇವನಿಂದಾದವುಗಳಲ್ಲವು. ಈಗ ನಾನು ವಿಕಾರವಶನಾದರೆ ನನ್ನದೇ ಮಹತ್ತರವಾದ ಅಪರಾಧ

...

ಗಳದೆಡೆ ಪ್ರಥಮವ್ರತವದೆಕೆಯಿಂದ ಪ್ರಾಪ್ತಿಯಾಗುತ್ತದೆ. ಹೀಗೆಂದು ಕ್ಷಮಾಧರಿಸುವದೇ ಮಾನವಧರ್ಮಕ್ಕೆ ಯೋಗ್ಯವಾಗಿದೆ. ಖರೇ ಮಾನವರು ಈ ಪ್ರಕಾರವಾಗಿ ಈಗಲೂ ಪರರಿಗೆ ನಮಗೂ ಮಾರ್ಗದರ್ಶಕರಾಗಿದ್ದಾರೆ.

ಇತಿ ಮುಕ್ತಿಮಾರ್ಗದರ್ಶಕ ಪ್ರಥಮವ್ರತಂ ಸಂಪೂರ್ಣಂ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಸುಖದ ತಿರುಳು.

[ಲೇಖಕ—ಕಂಬಸವಪ್ಪನವರ, ಕೇಂದ್ರ ನೈಜಾಂ ಸ್ಟೇಟ್.]

ಜಗತ್ತಿನಲ್ಲಿ ಸುಖವು ಚಿರಾಯುವಾದ ಧನಸಂಗ್ರಹವು ಪ್ರತಿಯೊಬ್ಬರಿಗೂ ಅಪೇಕ್ಷಣೀಯವಾದುದು. ಅನೇಕರು ಇಂಥ ಸುಖವನ್ನು ಸಂಪಾದಿಸಬೇಕೆಂಬ ಕುತೂಹಲದಿಂದ ಹಗಲಿರುಳೂ ದುಡಿಯುತ್ತಿರುವರು. ...

...

ನಿಜಾಂಶದ ತಿರುಳನ್ನರಿತು ಮೋಕ್ಷಪಥಗಾಮಿಗಳಾಗಬೇಕು.

ಆಚಾರ್ಯಕಿಂಕರ ಕಂಬಸವಪ್ಪನವರ ಕೇಂದ್ರ.

ನಿಜವಾದ ತಾಯಿಯು ಯಾರು ?

ಓರ್ವ ಶ್ರೀಮಂತ ಗೃಹಸ್ಥನಿಗೆ ಇಬ್ಬರು ಸತಿಯರಿರಲು, ಮೊದಲನೆಯ ಸತಿಯಳಿಗೊಂದೇ ಗಂಡುಕೂಸು ಹುಟ್ಟಿತು. ಎರಡನೆಯ ಹೆಂಡತಿಗೆ ಮಕ್ಕಳೇ ಇರಲಿಲ್ಲವು. ಕಾಲಾಂತರದಲ್ಲಿ ಪತಿಯು ಮರಣಹೊಂದಲು ಮನೆಯಲ್ಲಿ ಆಸ್ತಿಯು ವಿಶೇಷವಿದ್ದ ...

...

ಆದ ವೀರಶೈವರೇ ! ವೀರಶೈವಧರ್ಮರೂಪ 'ಶಿಶುವಿಗೆ' ನಿಜವಾದ ತಾಯಿಯು ಯಾರು ? ಎಂಬುವದನ್ನು ತಿಳಿಯಿರಿ.

ಓರ್ವ ಸತ್ಯವಾದಿ.

ಆಯುರ್ವೇದ ಪರಿಚಯ.

ಲೇಖಾಂಕ ೪.

ಲೇಖಕ : ಶಿವಕುಮಾರಸ್ವಾಮಿ, ಬೆಂಗಳೂರು.

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಶ್ರೀಕ್ಷೇತ್ರಕಾಶೀ.

ಸಾರಾಸಾರವಿಚಾರಚಾತುರೀಶರಾದ ಸಹೃದಯವಾಚಕ ಮಹಾಶಯರು ಹಿಂದೆ ಪ್ರಕಟಿತವಾಗಿರುವ ಮೂರು ಲೇಖಗಳಿಂದ ಆಯುರ್ವೇದಪ್ರಾದುರ್ಭಾವ ಮತ್ತು ಆಯುರ್ವೇದಗ್ರಂಥಗಳ ಸಂಕ್ಷೇಪಪರಿಚಯವನ್ನು ಹೊಂದಿರಬಹುದು. ...

(ಒಂದು ಭಾಗವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೪ನೇ ಮೇ ತಾ॥ ೭ನೇ ಸೋಮವಾರ.

ಶ್ರೀಜಗದ್ಗುರುಗಳವರ ಆಗಮನ, ಬೆಂಗಳೂರು.

ಶ್ರೀಮದ್ವೀರಶೈವಮತಸ್ಥಾಪನಾಚಾರ್ಯ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶಿವಾನಂದ ರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರನ್ನು ಬೆಂಗಳೂರುನಗರದ ವೀರಶೈವರು ಕಳೆದ ತಿಂಗಳು 27 ನೆಯ ತಾರೀಖಿನ ದಿವಸ ಮಹಾವೈಭವದಿಂದ ಬರಮಾಡಿಕೊಂಡು ಪ್ರತಿದಿವಸವೂ ತಮ್ಮ ಸ್ವೈಜವಾದ ಗುರುಭಕ್ತಿಯನ್ನು ಪ್ರಕಟನಗೊಳಿಸುತ್ತಿರುವುದು ಸರಿಯಷ್ಟೆ! ಈ ಮಹಾಜನಗಳು ಶ್ರೀ ಜಗದ್ಗುರುಗಳನ್ನು ಬರಮಾಡಿಕೊಳ್ಳುವ ಸಮಯದಲ್ಲಿ ಸಮುದ್ರದಲ್ಲಿ ವಿಷವುದ್ಭವಿಸಿದಂತೆ ನಿರ್ಮಲವೀರಶೈವ ಸಮಾಜಸಾಗರದಲ್ಲಿ ಗುರುದ್ವೇಷವೆಂಬ ಹಾಲಾಹಲ ಉತ್ಪನ್ನವಾಗಿ ಅನೇಕ ವಿಘ್ನ ಪರಂಪರೆಯನ್ನೊಡ್ಡಿತು. ಆದರೂ ಇವರ ಗುರುಭಕ್ತಿಯ ಪ್ರಭಾವದಿಂದ ಬಂದ ವಿಘ್ನಗಳೆಲ್ಲವೂ ತರಂಗದಂತೆ ಮಾಯವಾದುವು. ಈ ಗುರುದ್ವೇಷಿಗಳ ದ್ವೇಷವು ಜಗದ್ಗುರುಗಳವರ ಉತ್ಸವಕ್ಕೆ ಮತ್ತಿಷ್ಟು ಉಜ್ವಲಸ್ಥಿತಿಯನ್ನುಂಟುಮಾಡಿದ್ದರಿಂದ ಗುರುದ್ವೇಷಿಗಳಾದರೂ ಒಂದುಭಾಗದಲ್ಲಿ ಸ್ತುತ್ಯರೇ ಸರಿ! ಹಿಂದೆ ಇದೇ ಪೀಠಾಧಿಕಾರವಿಷಯದಲ್ಲಿ ಇಪ್ಪತ್ತೈದು ಕೋಟಿನಾಲ್ಕು ವಿಗಿಲಾಗಿ ವಿಪಕ್ಷಿಗಳು ಚಳವಳಿಯನ್ನೆಬ್ಬಿಸಿದ್ದರಿಂದ ಕಾಲಗತಿಯಿಂದ ಮುದುಗಿಹೋಗಿದ್ದ ಮಹಾಮಹಿಮಾಗಾರನಾದ ಶ್ರೀ ರೇಣುಕನ ಪೀಠದ ವೈಭವವು ದಶದಿಕ್ಕುಗಳಲ್ಲಿ ಬೆಳಗಿ ಜನಜಾಗ್ರತಿಯನ್ನುಂಟುಮಾಡಿತೆಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಈಗಲೂ ಬೆಂಗಳೂರು ನಗರದ ವೀರಶೈವರಲ್ಲಿ ಬಿಂದುಮಾತ್ರರಾಗಿ ಕಾಣಿಸಿಕೊಂಡ ಗುರುದ್ವೇಷಾಂಕುರವು ಗುರುಪೀಠಗಳ ಪ್ರಕಾಶಕ್ಕೆ ಸಹಕಾರಿಕಾರಣವೆಂದೇ ಭಾವಿಸಬೇಕಾಗಿದೆಯೇ ಹೊರತು ಅಂಥವರನ್ನು ದೋಷದೃಷ್ಟಿಯಿಂದ ನೋಡಬಾರದಾಗಿದೆ. ಒಬ್ಬ ತಂದೆಯ ಹೊಟ್ಟೆಯಲ್ಲಿ ನಾಲ್ಕು ಜನ ಮಕ್ಕಳು ಹುಟ್ಟಿದರೆ ಅವರಲ್ಲಿ ಒಬ್ಬನು ಹಿಂದಿನಕರ್ಮಶೇಷದಿಂದ ವಂಶಮೂಲ ಪುರುಷನಾದ ಪಿತೃವನ್ನು ಯಾವುದೋ ಒಂದು ಸ್ವಾರ್ಥಬುದ್ಧಿಯಿಂದ ದ್ವೇಷಿಸಿದರೆ ಎಲ್ಲ ಮಕ್ಕಳಲ್ಲಿಯೂ ಪ್ರೇಮವನ್ನಿಟ್ಟಿರುವ ಪಿತೃವು ದ್ವೇಷಿಸುವುದಕ್ಕಾದೀತೆ? ಅದಷ್ಟು ಮಟ್ಟಿಗೆ ಅಂಥ ಕುಪುತ್ರನನ್ನು ದಾರಿಗೆ ಹಚ್ಚುವುದು ವಾತ್ಸಲ್ಯಶಾಲಿಗಳಾದ ಮಾತಾಪಿತೃಗಳ ಕರ್ತವ್ಯವಾಗಿರುವಂತೆ, ವೀರಶೈವ ಸಮಾಜಕ್ಕೆ 'ಗುರುರ್ಮಾತಾ ಗುರುಃಪಿತಾ' ಎಂಬ ಪ್ರಮಾಣಾನುಸಾರವಾಗಿ ಮಾತಾಪಿತೃಸ್ವರೂಪಿಗಳಾದ ಗುರುಗಳು ಸಹ ಪುತ್ರಸಮಾನರಾದ ಶಿಷ್ಯರ ಅಪರಾಧಗಳನ್ನು ಕ್ಷಮಿಸಿ ತತ್ವೋಪದೇಶವೆಂಬ ಸೂರ್ಯಕಿರಣವನ್ನೆರಚಿ ಬಹುಕಾಲ ಮುಕುಳನದಶೆಯಲ್ಲಿ ನರಳುತ್ತಿರುವ ವಿಪಕ್ಷಿಗಳ ಹೃದಯಪುಂಡರೀಕವನ್ನು ವಿಕಸನಗೊಳಿಸುವುದು ಗುರುಗಳ ಕರ್ತವ್ಯವಾಗಿದೆ. ಯಾರು ಯಾರು ಶ್ರೀ ರೇಣುಕನ ಧರ್ಮಪೀಠವನ್ನಾರೋಹಿಸುವರೋ ಅವರೆಲ್ಲರನ್ನೂ ಆ ಶ್ರೀ ರೇಣುಕನೆಂದು ಭಾವಿಸುವುದೇ ಸದ್ಭಕ್ತಿಯ ಲಕ್ಷಣವಾಗಿದೆ. ಆ ರೇಣುಕನ ಅಂಶವಿಲ್ಲದಿದ್ದವನು ಆ ರೇಣುಕನ ವೀರಪೀಠವನ್ನಾರೋಹಿಸಲಾರನು. ಕಸ್ತೂರಿ ಗಂಧದಿಂದ ಲಿಪ್ತವಾಗಿರುವ ಒಂದು ವಸ್ತ್ರದಮೇಲೆ ಯಾವ ವಸ್ತ್ರಗಳನ್ನಿಡುತ್ತೇವೆಯೋ ಆ ವಸ್ತ್ರಗಳೆಲ್ಲವೂ ಮೂಲವಸ್ತ್ರದ ಸಂಬಂಧ ವಿಶೇಷದಿಂದ ಗಂಧವಿಶಿಷ್ಟ ವಸ್ತ್ರಗಳೇ ಆಗುವವೆಂದು ಪ್ರತ್ಯಕ್ಷ ಅನುಭವವಿರುತ್ತದೆ. ಇದರಂತೆ ಆ ಜಗದಾಚಾರ್ಯನಾದ ರೇಣುಕನ ವೀರಪೀಠದ ಸಾಕ್ಷಾತ್ ಸಂಬಂಧದಿಂದ ಪೀಠಾರೋಹಣಮಾಡಿದ ಗುರುಗಳೆಲ್ಲರಲ್ಲಿಯೂ ಆ ರೇಣುಕನ ಮಹತ್ವಾಂಶಗಳು ತೋರದೆ ಹೋಗುವುದಿಲ್ಲ. ಹೀಗಿದ್ದರೂ ನಾವು ಮೂಲಪೀಠಾಧಿಪತಿಗಳನ್ನೇ ಮಾನಿಸುತ್ತೇವೆ; ಈಗಿನವರನ್ನು ಮಾನಿಸುವುದಿಲ್ಲವೆಂಬ ಅಪಭ್ರಂಶಾಲಾಪವು ಅಲ್ಲಲ್ಲಿ ಕೇಳಿಬರುತ್ತಲಿದೆ. ಇಂಥವರನ್ನು ದೇವರಿಲ್ಲ ಗುರುಗಳಿಲ್ಲ ಪರಲೋಕವಿಲ್ಲವೆಂದೆನ್ನುವ ನೂತನ ಚಾರ್ವಾಕರೆಂದೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಯಾರ ಎದೆಯಲ್ಲಿ ಶಿವಲಿಂಗವಿದೆಯೋ ಅವರಿಗೆಲ್ಲ ಪಂಚಪೀಠಾಧಿಪತಿಗಳೇ ಗುರುಗಳಾಗಿದ್ದಾರೆ. ಪಂಚಪೀಠಾಧಿಪತಿಗಳಲ್ಲಿ ಭಕ್ತಿಯಿಲ್ಲದವರು ಧರಿಸಿರುವ ಲಿಂಗವು ಲಿಂಗವಲ್ಲ. ಅವರು ಧರಿಸುವ ಭಸ್ಮವು ಭಸ್ಮವಲ್ಲ. ಜಪಿಸುವ ಮಂತ್ರವು ಮಂತ್ರವಲ್ಲ. ಪಾದೋದಕಪ್ರಸಾದಗಳ ಸುಳಿವಂತೂ ಅವರಿಗಿಲ್ಲವೇ ಇಲ್ಲ.

ಗುರುರ್ಲಿಂಗಂ ಚರಶ್ಚೈವ ಪ್ರಸಾದಃ ಪಾದವಾರಿಚ |
ಭೂತಿರುದ್ರಾಕ್ಷ ಮಂತ್ರಾಶ್ಚ ಅಷ್ಟಾವರಣಕಾಃ ||

ಎಂಬ ಸಿದ್ಧಾಂತೋಕ್ತಿಯಂತೆ ಗುರುಲಿಂಗಜಂಗಮ ಪಾದೋದಕ ಪ್ರಸಾದ ಭಸ್ಮ ರುದ್ರಾಕ್ಷ ಮಂತ್ರಗಳೆಂಬ ಅಷ್ಟಾವರಣಗಳಲ್ಲಿ ಮೊದಲನೆಯದಾದ ಗುರುವನ್ನೇ ತೆಗೆದುಹಾಕಿದರೆ ಭಕ್ತಕಂಠಾಭರಣವಾಗಿರುವ ಅಷ್ಟಾವರಣಮಾಲಿಕೆಯು ಉಳಿಯುವುದೇ? ಗುರುವಿನಿಂದಲೇ ಲಿಂಗ, ಗುರುವಿನಿಂದಲೇ ಜಂಗಮ, ಗುರುವಿನಿಂದಲೇ ಪ್ರಸಾದ, ಗುರುವಿನಿಂದಲೇ ಪಾದೋದಕ, ಗುರುವಿನಿಂದಲೇ ರುದ್ರಾಕ್ಷ, ಗುರುವಿನಿಂದಲೇ ಭಸ್ಮ, ಹೀಗೆ ಗುರುವೆಂಬವನು ಸೂತ್ರದಂತೆ ಅಷ್ಟಾವರಣಮಾಲಿಕೆಗೆ ಆಧಾರನಾಗಿರುವುದಲ್ಲದೆ ತಾನೇ ಪ್ರಧಾನವಾಗಿಯೂ ಇದ್ದಾನೆ. ಇಂಥ ಮಹಾಗುರುವಿನದೂಷಣೆಗೆ ಪ್ರಾರಂಭ ಮಾಡುವ ಜನಗಳನ್ನು ಅಷ್ಟಾವರಣಸಂಪನ್ನರಾದ ವೀರಶೈವರೆಂದು ಹೇಳುವ ಬಗೆಯೆಂತು?

ಪ್ರಕೃತದಲ್ಲಿ ಇಂಥ ಅಷ್ಟಾವರಣಗಳನ್ನು ಅನುಗ್ರಹಿಸಿ ವೀರಶೈವರೆಂದು ನಾಮಕರಣಮಾಡಿದ ಪಂಚಪೀಠಾಧೀಶ್ವರರಲ್ಲಿ ಒಬ್ಬರಾದ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ವಿಷಯದಲ್ಲಿ ಅಲ್ಪಜನರು ವಿರೋಧದಿಂದ ವರ್ತಿಸುತ್ತಿರುವುದು ಹೇಯವಾಗಿದೆ. 'ಶಿವೇ ಕ್ರುದ್ಧೇ ಗುರುಸ್ತ್ರಾತಾ ಗುರೌ ಕ್ರುದ್ಧೇ ನ ಕಶ್ಚನ' ಎಂಬ ವಾಕ್ಯವನ್ನು ಪರಿಶೀಲಿಸಿ ಇನ್ನಾದರೂ ಪರಪ್ರೇರಣೆಯಿಂದಾಗಲಿ, ಸ್ವಬುದ್ಧಿಯಿಂದಾಗಲಿ ವೀರಶೈವತತ್ವವಿರೋಧಿಯಾದ ಮಾರ್ಗದಿಂದ ಹಿಂದಿರುಗಿ ಗುರುಸೇವೆಯಲ್ಲಿ ಭಾಗಿಗಳಾಗುತ್ತ ಬಂದರೆ ವೀರಶೈವಸಮಾಜವು ಸರ್ವತೋಮುಖವಾಗಿ ಬೆಳಗುವದು. ಹಾಗಿಲ್ಲದೆ ಸಂದಿಗೊಂದಿಗಳಲ್ಲಿ ಗುರುದೂಷಣಮಾಡುತ್ತಬಂದರೆ ತಮ್ಮಲ್ಲಿರುವ ಕೌಟಿಲ್ಯವನ್ನು ಹೊರಗೆಡವಿದಂತಾಗುವುದಲ್ಲದೆ ಅದರಿಂದ ಗುರುವಿನ ಉತ್ಕರ್ಷತೆಗೇನೂ ಹಾನಿತಟ್ಟುವುದಿಲ್ಲ. ಆಕಾಶದಲ್ಲಿ ಬೆಳಗುತ್ತಿರುವ ಸೂರ್ಯನನ್ನು ದ್ವೇಷಿಸುತ್ತ ಸೂರ್ಯನ ಮೇಲೆ ಪೂತ್ಕರಿಸಿದರೆ ಆ ಪೂತ್ಕಾರವು ತನ್ನನ್ನು ಅಪವಿತ್ರತೆಗೊಳಿಸುವುದಲ್ಲದೆ ಸೂರ್ಯನಿಗೇನೂ ಕುಂದಕವಿಲ್ಲವೆಂಬ ಗಾದೆಯನ್ನಾದರೂ ಅರಿಸಿ ವೀರಶೈವಮತವನ್ನು ಬೆಳಗುತ್ತಿರುವ ಗುರುಗಳಲ್ಲಿ ಭಕ್ತಿಶೂನ್ಯರಾಗಿ ಪಾಪಿಗಳಾಗುವುದಕ್ಕಿಂತಲೂ ಬಾಯಿಮುಚ್ಚಿಕೊಂಡಿರುವುದು ಮೇಲು. ಶ್ರೀ ಜಗದ್ಗುರುಗಳ ಅಸಿತರಸಾಧಾರಣವಾದ ಪಾಂಡಿತ್ಯಾದಿ ಸದ್ಗುಣಾವಳಿಯನ್ನು ನೋಡಿ ಪರಮತದ ಮಹಾ ಮಹಾ ಪಂಡಿತೋತ್ತಮರೂ ಸಹ ನಾನಾಮುಖವಾಗಿ ಹೊಗಳುತ್ತಿರುವಲ್ಲಿ ಕೊಳಚೆಯಲ್ಲಿ ವಾಸಮಾಡಿಕೊಂಡು ದುರ್ದಿನವನ್ನು ಕಳೆಯುತ್ತಿರುವ ಮಂಡೂಕಗಳಂತೆ ಗೊಣಗುಟ್ಟುವದು ಮನುಷ್ಯರೆಂದು ಹೇಳಿಕೊಳ್ಳುತ್ತಿರುವವರಿಗೆ ಎಂದೂ ಭೂಷಣಾಸ್ಪದವಲ್ಲ. ಆಚಾರ್ಯರಿಗೆ ಅವಮಾನವಾಗಲೆಂದು ಯಾವ ವೀರಶೈವನು ಅಂತರಾತ್ಮನಲ್ಲಿ ಬಗೆಯುವನೋ ಅಂಥವನ ಆಯುಸ್ಸು ಶ್ರೇಯಸ್ಸು ಸಂಪತ್ತು ನಷ್ಟವಾಗಿ ಅವನು ಅಧೋಗತಿಗೀಡಾಗುವನೆಂದು ಧರ್ಮಶಾಸ್ತ್ರಗಳು ಬೋಧಿಸುತ್ತಿರುವಂತೆ ಬೆಂಗಳೂರಲ್ಲಿ ಈಗಾಗಲೇ ಒಬ್ಬರಿಗೆ ನಷ್ಟವಾಗಿರುವ ವಿಷಯವು ಸರ್ವತ್ರ ಪ್ರಸಿದ್ಧವಾಗಿದೆ. ಇನ್ನಾದರೂ ವಿಪಕ್ಷಿಗಳಿಗೆ ಶ್ರೀ ರೇಣುಕನು ಸದ್ಬುದ್ಧಿಯನ್ನೀಯಲೆಂದು ಹಾರೈಸುತ್ತೇವೆ.

ರಷ್ಯಾಸರಕಾರದ ವಿದ್ಯಾಭ್ಯಾಸದ ಇಲಾಖೆಯವರು ಈ ವರ್ಷ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ ಉಪಯೋಗಕ್ಕಾಗಿ 5,00,00,000 ಪಠ್ಯಪುಸ್ತಕಗಳನ್ನು ಪ್ರಸಿದ್ಧಪಡಿಸಿರುವರಂತೆ!

ಒಳದೇಶದ ವೃತ್ತಾಂತಗಳು.

ಮೈಸೂರು ರೈಲ್ವೆಯ ಡಿಸ್ಟ್ರಿಕ್ಟ್ ಟ್ರಾಫಿಕ್‌ಸೂಪರಿಂಟೆಂಡೆಂಟರಾದ ಮಿ॥ ಎಚ್. ರಂಗಾಚಾರ್ ಎಂ.ಎ., ಇವರು ಮೇ 1 ನೇ ತಾರೀಖಿನಿಂದ ಸ್ಪೆಷಲ್ ಡ್ಯೂಟಿಯ ಮೇಲೆ ಜನರಲ್ ಅಂಡ್ ರೆವಿನ್ಯೂ ಸೆಕ್ರೆಟರಿಯಟ್ಟಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಸರಕಾರದವರು ಸಂಸ್ಥಾನದ ಗಡಿಪ್ರದೇಶಗಳಲ್ಲಿರುವ ಸುಂಕದ ಕಟ್ಟೆಗಳಲ್ಲಿ, ಹೊರಗಿನಿಂದ ಬರುವ ಸೌದೆ ಬಂಬು ಮತ್ತು ಮರದ ಗಾಡಿಗಳಿಗೆ ಗಾಡಿ 1 ಕ್ಕೆ 1 ರೂ. ನಂತೆ ಸುಂಕವನ್ನು ವಸೂಲ್ಮಾಡತಕ್ಕದ್ದೆಂದು ಅಪ್ಪಣೆ ಮಾಡಿರುತ್ತಾರೆ.

ರಾಜಧಾನಿಯ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾಗಿದ್ದು ಅಂಗಸಾಧನೆ, ಕುಸ್ತಿಗಳಲ್ಲಿ ವಿಶೇಷ ಪ್ರಖ್ಯಾತಿಯನ್ನು ಪಡೆದು ಅನೇಕ ಬಹುಮಾನಗಳನ್ನು ಪಡೆದಿದ್ದ ಮಿ॥ ಸೀತಾರಾಮಾಚಾರ್ ಎಂಬ ತರುಣರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ವಿಷಮಶೀತಜ್ವರದಿಂದ ಮೃತಪಟ್ಟರು.

ಬಿಹಾರಿನ ಭೂಕಂಪದ ಕಷ್ಟನಿವಾರಣಾರ್ಥವಾಗಿ ಮೈಸೂರು ಸಂಸ್ಥಾನದ ಪ್ರತಿಯೊಂದು ಪರಸ್ಪರ ಸಹಾಯ ಸಂಘದವರೂ ತಮ್ಮ ಮೆಂಬರರಿಂದ ಸಾಧ್ಯವಾದಷ್ಟು ದ್ರವ್ಯವನ್ನು ಕೂಡಿಸಿ ರವಾನಿಸಬೇಕೆಂದು ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರವರು ಒಂದು ಸರ್ಕ್ಯುಲರ್ ಹೊರಡಿಸಿರುತ್ತಾರೆ.

ಮೈಸೂರು ಸ್ಯಾಂಡಲ್ ಆಯಿಲ್ ಫ್ಯಾಕ್ಟರಿಯ ಅಸಿಸ್ಟೆಂಟ್ ಡೈರೆಕ್ಟರಾದ ಮಿ॥ ಕೆ. ಪಾರ್ಥಸಾರಥಿಯವರಿಗೆ ಏಪ್ರಿಲ್ 26 ನೇ ತಾರೀಖಿನಿಂದ ಒಂದು ತಿಂಗಳವರೆಗೆ ಪ್ರಿವಿಲೇಜ್ ರಜೆಯು ಕೊಡಲ್ಪಟ್ಟಿದೆ. ಈ ಅವಧಿಯಲ್ಲಿ ಸೀನಿಯರ್ ಕೆಮಿಸ್ಟರಾದ ಮಿ॥ ಬಿ. ಎಸ್. ಅಯ್ಯಂಗಾರ್ಯರವರು ಅಸಿಸ್ಟೆಂಟ್ ಡೈರೆಕ್ಟರವರ ಕೆಲಸವನ್ನು ನೋಡಿಕೊಳ್ಳುವರು.

ಎರಡನೇ ತರಗತಿಯ ಡೆಪ್ಯುಟಿ ಕಮಿಷನರಾಗಿರುವ ಮಿ॥ ಟಿ. ಜಿ. ರಾಮಯ್ಯರ್ ಬಿ.ಎ., ಇವರು ಹಂಗಾಮಿಯಾಗಿ ಒಂದನೇ ತರಗತಿಯ ಡೆಪ್ಯುಟಿ ಕಮಿಷನರಾಗಿಯೂ, ಮೂರನೇ ತರಗತಿಯ ಡೆಪ್ಯುಟಿ ಕಮಿಷನರಾಗಿರುವ ಮಿ॥ ಟಿ. ವಿ. ಎ. ಈಶ್ವರ್ ಬಿ.ಎ., ಇವರು ಹಂಗಾಮಿಯಾಗಿ ಎರಡನೇ ತರಗತಿಯ ಡೆಪ್ಯುಟಿಕಮಿಷನರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಇದೇ ಮೇ 3 ತಾರೀಖಿನ ದಿವಸ ಮ[illegible] ಬೆಂಗಳೂರಿನ 18 ವರ್ಷದ ವೆಂಕಟಸ್ವಾಮಿಪ್ಪ[illegible] ವಿದ್ಯಾರ್ಥಿಯು ಕೆಂಪಾಂಬುಧಿ ಕೆರೆಗೆ ಈಜುವದ[illegible] ಸರಿಯಾಗಿ ಈಜು ಬಾರದ್ದರಿಂದ ನೀರಿನ[illegible] ತ್ತಿರಲು, ದಡದ ಮೇಲಿದ್ದ ಪುರೋಹಿತ[illegible]ವಾದ[illegible] ವರು ಕೂಡಲೇ ನೀರಿಗೆಬಿದ್ದು ಅವನನ್ನು [illegible]ದಿಯಿಂದ ಕರೆತಂದರೆಂದೂ, ಆದರೂ ಪ್ರಯೋಜನ[illegible]ಗುವ ವ್ಯಾ[illegible] ಹೊತ್ತಿನೊಳಗಾಗಿ ಮೃತಪಟ್ಟನೆಂ[illegible] ಬರುತ್ತದೆ.

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ [illegible] 1ಕ್ಕೆ 400-500 ಟನ್‌ಗಳ ಕಬ್ಬನ್ನು [illegible] ಯಂತ್ರವು ಸ್ಥಾಪಿಸಲ್ಪಟ್ಟಿದೆ. ಆದರೆ ಸ[illegible] ದಿನೇ ಗಿರಾಕಿಗಳು ಹೆಚ್ಚಾಗುತ್ತಿರುವುದ[illegible] 1400 ಟನ್‌ಗಳ ಕಬ್ಬನ್ನು ಹಿಂಡುವಷ್ಟು [illegible] ಯಂತ್ರವನ್ನು ಸ್ಥಾಪಿಸಬಹುದೆಂದೂ, ಅದಕ್ಕಾಗಿ [illegible] 7 ರೂ. ನಂತೆ ಬಡ್ಡಿಯುಳ್ಳ 20 ಲಕ್ಷ [illegible] ಕಂಪೆನಿಯವರು ಸಾಲವಾಗಿ [illegible] ದೂ, ಅದರಲ್ಲಿ ಶೇಕಡಾ 60 ಭಾಗ[illegible] ಗನ್ನು ತಾವೇ ಕೊಡುವೆವೆಂದೂ [illegible] ಣೆಮಾಡಿರುತ್ತಾರೆ.

ಕೋಲಾರದ ಫಸ್ಟ್‌ಕ್ಲಾಸ್ [illegible] ಕೋರ್ಟಿನ ಜಡ್ಜರಾಗಿರುವ ಮಿ॥ [illegible] ನವರು ಬಿ.ಎ., ಎಲ್.ಎಲ್.ಬಿ. [illegible] ನೆಯ ತಾರೀಖಿನಿಂದ 3 ತಿಂಗ[illegible] ಯು ಕೊಡಲ್ಪಟ್ಟಿದೆ. ನರಸಿಂಹ[illegible] ಗ್ರೇಡ್ ಮುನಸೀಫರಾಗಿರುವ [illegible] ಗಾರ್ ಬಿ.ಎ.,ಬಿ.ಎಲ್. ಇವರು [illegible]

ಕೋಲಾರದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನ ಜಡ್ಜರಾಗಿಯೂ, ಅಡ್ವೋಕೇಟ್ ಮಿ॥ ಎಂ. ಹಬೀಬುಲ್ಲಾಖಾನ್ ಬಿ.ಎ., ಬಿ.ಎಲ್., ಇವರು ಹಂಗಾಮಿಯಾಗಿ ನರಸಿಂಹರಾಜಪುರದ ಮುನ್ಸೀಫರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ವರ್ತಮಾನಸಂಗ್ರಹ.

ಬ್ರಿಟಿಷ್ ಸರಕಾರದವರು 17 ಹೊಸ ಯುದ್ಧದ ಹಡಗುಗಳನ್ನು ಕಟ್ಟುವದಕ್ಕೆ ಅಪ್ಪಣೆಯನ್ನು ಕೊಟ್ಟಿರುವರು.

ಗುಜರಾಥದಲ್ಲಿ ಒಬ್ಬ ಸುಂದರ ತರುಣಿಯು ತನ್ನನ್ನು ಕೆಣಕಲು ಬಂದ ಒಬ್ಬ ಮನುಷ್ಯನನ್ನು ಅವನ ಪಾದರಕ್ಷೆಯಿಂದಲೇ ಚೆನ್ನಾಗಿ ಪ್ರಯೋಗಮಾಡಿ ಓಡಿಸಿದಳಂತೆ!

ಜಪಾನ್ ವ್ಯಾಪಾರಸ್ಥರು 1928 ನೇ ಇಸವಿಯಲ್ಲಿ ಇಂಗ್ಲೆಂಡಿಗೆ 50,00,000 ಎಲೆಕ್ಟ್ರಿಕ್ ಬಲ್ಬುಗಳನ್ನು ರವಾನಿಸಿದ್ದರು. ಆದರೆ 1932 ನೇ ಇಸವಿಯಲ್ಲಿ 5,70,00,000 ಬಲ್ಬುಗಳನ್ನು ರವಾನಿಸಿದರಂತೆ!

ಅರೇಬಿಯಾದೇಶಕ್ಕೆ ಸೇರಿದ ಈಮೆನ್ ಪ್ರಾಂತದಲ್ಲಿ ಜನರು ದಂಗೆಯೆದ್ದು ಸಾನ ಎಂಬಲ್ಲಿ ಅರಮನೆಗೆ ನುಗ್ಗಿ ಇಮಾಮರನ್ನು ಕೊಂದು ಹಾಕಿರುತ್ತಾರೆ. ಬ್ರಿಟಿಷರು ತಮ್ಮ ಜನರ ರಕ್ಷಣೆಗಾಗಿ ಸೈನ್ಯವನ್ನು ಕಳುಹಿಸಿರುತ್ತಾರೆ.

ಸಿದ್ಧಾಪುರ ಎಂಬ ಊರಲ್ಲಿ ಸವರ್ಣ ಹಿಂದೂಬಾಲಕರ ಪಾಠಶಾಲೆಗೆ ಅಸ್ಪೃಶ್ಯರನ್ನು ಸೇರಿಸಿದರೆಂಬ ಕಾರಣದ ಮೇಲೆ ಹಿಂದೂಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ, ಅವರಿಗಾಗಿ ಬೇರೆ ಪಾಠಶಾಲೆಯನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿರುತ್ತಾರೆ.

ಬಂಗಾಳಾ ಸರಕಾರದವರು ಲೈಸೆನ್ಸನ್ನು ಪಡೆಯದೆ ಯಾರೂ ಅಫೀಮನ್ನು ಸೇವಿಸಕೂಡದೆಂದು ಒಂದು ಹೊಸ ಕಾನೂನನ್ನು ಮಾಡಿರುವರು. ಲೈಸೆನ್ಸ್ ಪಡೆಯದೆ ಅಫೀಂ ಸೇವಿಸಿದುದಕ್ಕಾಗಿ 3 ಜನ ಚೀಣೆಯರಿಗೆ ತಲಾ 25 ರೂ. ಗಳಂತೆ ಜುಲ್ಮಾನೆಯು ವಿಧಿಸಲ್ಪಟ್ಟಿತು.

ಕಲ್ಕತ್ತೆಯ ಪಯನೀಯರ್ ಅಷ್ಯೂರೆನ್ಸ್ ಕಂಪೆನಿಯ 3 ಜನ ಮ್ಯಾನೇಜಿಂಗ್ ಏಜೆಂಟರುಗಳು ಕೆಲವು ವಿಧವೆಯರಿಗೆ ಸಲ್ಲಬೇಕಾಗಿದ್ದ ಸುಮಾರು 22,000 ರೂ. ಗಳಷ್ಟು ಇನ್ಷ್ಯೂರೆನ್ಸ್ ಹಣವನ್ನು ದುರುಪಯೋಗಪಡಿಸಿಕೊಂಡು ಮೋಸಮಾಡಿದರೆಂಬ ಅಪಾದನೆಯ ಮೇಲೆ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾರೆ.

ಮೀನಿನ ಮಳೆ!

[illegible]ಯೋ ದೇಶಕ್ಕೆ ಸೇರಿದ ಪೋರ್ಟ್ ಕ್ಲಾರ್ಕ್ ಎಂಬ ರೇವುಪಟ್ಟಣದಲ್ಲಿ ದೊಡ್ಡ ಮಳೆಯು ಬಂದನಂತರ ರಸ್ತೆಗಳಲ್ಲೆಲ್ಲಾ ಅಸಂಖ್ಯಾತಗಳಾದ ಸಣ್ಣಸಣ್ಣ ಮೀನುಗಳು ಬಿದ್ದಿದ್ದುವಂತೆ!

ಮಿಂಚಿನ ವೇಗ!

ದಕ್ಷಿಣ ಆಫ್ರಿಕೆಯಲ್ಲಿ ಕೆಲವು ಜನ ಶಾಸ್ತ್ರಜ್ಞರು ಅನೇಕ ಪ್ರಯೋಗಗಳನ್ನು ನಡೆಯಿಸಿ ಮಿಂಚು ಒಂದು ಸೆಕೆಂಡಿಗೆ 14,900 ಮೈಲುಗಳಿಂದ 68,400 ಮೈಲು [illegible]ದೂರ ಹೋಗುವದೆಂದು ನಿರ್ಧರಿಸಿರುತ್ತಾರೆ.

ತಪ್ಪಿಗೆ ತಕ್ಕಶಿಕ್ಷೆ!

[illegible]ಗರದಲ್ಲಿ ಒಬ್ಬ ಅರಬನು ಒಬ್ಬ ಯಾತ್ರಿ[illegible]ಳವನ್ನು ಕದ್ದನು. ನ್ಯಾಯಾಧೀಶರು [illegible]ಯನ್ನು ಕತ್ತರಿಸಿ ಅದನ್ನು ಎಲ್ಲ[illegible]ವಂತೆ ಕಟ್ಟಬೇಕೆಂದು ಅಪ್ಪಣೆಮಾಡಿ[illegible]

[illegible]ನಾಲವುಳ್ಳ ಶಿಶು!

[illegible]ದಾನೊಂದು ಆಸ್ಪತ್ರೆಯಲ್ಲಿ ಒಂದು [illegible] ಜನಿಸಿದ್ದು, ಅದಕ್ಕೆ ಎರಡಂಗುಲ [illegible]ರುವುದಂತೆ! ಈ ವೈಚಿತ್ರ್ಯವನ್ನು ನೋಡಲು ಜನರು ತಂಡೋಪತಂಡವಾಗಿ ಬರುತ್ತಿರುವರು.

ಐಶ್ವರ್ಯದಿಂದ ಮರಣ!

ಜಿನೀವಾ ನಗರದ ಒಬ್ಬ ತರುಣಸ್ತ್ರೀಗೆ ಅಕಸ್ಮಾತ್ತಾಗಿ ಒಬ್ಬ ಸಮೀಪ ಬಂಧುವಿನ ಮರಣದಿಂದ 10,00,000 ರುಪಾಯಿಗಳ ಆಸ್ತಿಯು ದೊರೆಯಿತು. ಅವಳಿಗೆ ಅತ್ಯಾನಂದವಾಗಿ, ಹುಚ್ಚು ಹಿಡಿದು, ಕಡೆಗೆ ರೋನ್ ನದಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡಳು.

ವಿಚಿತ್ರ ಶಿಶು!

ಜಂಷೆಡ್‌ಪುರದ ಸಮೀಪದಲ್ಲಿರುವ ಸೊನಾರಿ ಎಂಬ ಗ್ರಾಮದಲ್ಲಿ ಒಬ್ಬ ಕೂಲಿಹೆಂಗಸು ಒಂದು ವಿಚಿತ್ರ ಶಿಶುವನ್ನು ಪ್ರಸವಿಸಿದಳು. ಶಿಶುವು ಅರ್ಧ ಗಂಡು ಮತ್ತು ಅರ್ಧ ಹೆಣ್ಣಾಗಿದ್ದು, ಎರಡು ತಲೆಗಳೂ, 4 ಕೈಗಳೂ, 4 ಕಾಲುಗಳೂ ಇದ್ದುವು. ಶಿಶುವು 2 ಗಂಟೆಗಳವರೆಗೆ ಮಾತ್ರ ಜೀವಿಸಿದ್ದಿತು.

ಕಲ್ಲುರಕ್ತದ ಮನುಷ್ಯ!

ವಾರ್‌ವಿಕ್‌ಷೈರಿನ ಕಾವೆಂಟ್ರಿ ಎಂಬಲ್ಲಿ 39 ವರ್ಷ ವಯಸ್ಸಿನ ಜಾರ್ಜ್ ಛಾರಲ್ಸ್ ಕ್ಲಾರ್ಕ್ ಎಂಬಾತನು 'ಮೇಲಾನೋಟಿಕ ಸಾರಕೋಮ' ಎಂಬ ರೋಗದಿಂದ ಮೃತಪಟ್ಟನು. ವೈದ್ಯರು ಆತನ ಶರೀರವನ್ನು ಪರೀಕ್ಷಿಸಿ ಅವನ ಹೃದಯವು ಕಲ್ಲುಚುಕ್ಕೆಗಳಿಂದ ಕೂಡಿದ್ದಿತೆಂದೂ, ಅವನ ರಕ್ತವೆಲ್ಲವೂ ಕಲ್ಲಿದ್ದಲಿನಂತೆ ಕಪ್ಪಾಗಿತ್ತೆಂದೂ ತಿಳುಹಿಸಿರುತ್ತಾರೆ.

ತಂದೆಯನ್ನು ಕೊಂದ ಪುತ್ರರು!

ಮೊರಾದಾಬಾದಿನಲ್ಲಿ ಅಣ್ಣ ತಮ್ಮಂದಿರಿಬ್ಬರು ತಂದೆಯನ್ನು ಖೂನಿಮಾಡಿದರೆಂಬ ಅಪಾದನೆಯಮೇಲೆ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತಾರೆ. ಕೋರ್ಟಿನಲ್ಲಿ ವಿಚಾರಣೆಯಾಗುವಾಗ್ಗೆ ಒಬ್ಬನಿಗೆ ತಲೆತಿರುಗಿದಂತಾಗಿ ನೀರು ಬೇಕೆಂದು ಕೇಳಿದನು. ಆದರೆ ನೀರನ್ನು ತರುವುದರೊಳಗಾಗಿ ಕೆಳಕ್ಕೆ ಬಿದ್ದು ಮೃತಪಟ್ಟನು. ವಿಚಾರಣೆಯು ಮುಂದಕ್ಕೆ ಹಾಕಲ್ಪಟ್ಟಿದೆ.

ಹೊಸ ತರಹ ಶಿಕ್ಷೆ!

ಹ್ಯಾಂಬರ್ಗ್ ನಗರದಲ್ಲಿ ಇಬ್ಬರು ಹಾಲುಮಾರುವವರು ಹಾಲಿಗೆ ನೀರನ್ನು ಬೆರಸಿ ಜನರನ್ನು ಮೋಸಪಡಿಸುತ್ತಿದ್ದರು. ಅಧಿಕಾರಿಗಳು ಅದನ್ನು ಪತ್ತೆಮಾಡಿ, ಅವರಿಬ್ಬರ ಕುತ್ತಿಗೆಗೂ 'ನಾವು ಹಾಲಿಗೆ ನೀರು ಬೆರೆಸುತ್ತಿದ್ದೆವು' ಎಂಬ ಒಂದೊಂದು ಬೋರ್ಡನ್ನು ನೇತುಹಾಕಿ, ನಗರದ ಮುಖ್ಯ ಮುಖ್ಯ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿಸಿದರಂತೆ!

ತೇಜಸ್ವಿನಿ!

ಟ್ರೀಸ್ಟ್ ನಗರದಲ್ಲಿ 'ಮೇರಿಯಾ ನೊನಾರೊ' ಎಂಬ ವಿಚಿತ್ರ ಸ್ತ್ರೀಯಿರುವಳು. ಪ್ರತಿನಿತ್ಯ ರಾತ್ರಿಯ ಕಾಲದಲ್ಲಿ 3-4 ಸಾರಿ ಆಕೆಯ ಎದೆಯಿಂದ ಒಂದು ವಿಧವಾದ ಬೆಳಕು ಹೊರಟು ಮುಖವನ್ನು ಪ್ರಕಾಶಗೊಳಿಸುವುದಂತೆ! ಟ್ರೀಸ್ಟ್ ನಗರದ ಸಿವಿಲ್ ಅಧಿಕಾರಿಗಳು ಮೇರಿಯಾಳು ವಾಸಮಾಡುವ ಮನೆಯ ಸುತ್ತಲೂ ಕಾವಲಿರಿಸಿ, ಈ ವೈಚಿತ್ರ್ಯಕ್ಕೆ ಕಾರಣವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿರುವರು.

ಬ್ರಹ್ಮಾಂಡದ ಪೂರ್ವಸ್ಥಿತಿ!

ಬೆಲ್ಜಿಯಂ ದೇಶದ ಅಬೆ ಜಾರ್ಜಸ್ ಲೆಮೇಟರ್ ಎಂಬ ಪ್ರಸಿದ್ಧ ಶಾಸ್ತ್ರಜ್ಞರ ಹೇಳಿಕೆಯ ಪ್ರಕಾರವಾಗಿ ನಾವು ವಾಸಮಾಡುವ ಭೂಮಿಯೂ, ಮತ್ತು ಆಕಾಶದಲ್ಲಿ ಕಾಣುವ ಸಮಸ್ತ ನಕ್ಷತ್ರಗಳೂ ಪೂರ್ವದಲ್ಲಿ ಒಂದೇ ಗೋಳವಾಗಿದ್ದು ಈಗ್ಗೆ ಸುಮಾರು 5,00,00,00,000 ವರ್ಷಗಳ ಪೂರ್ವದಲ್ಲಿ ಆ ಅದ್ಭುತ ಗೋಳವು ಮಹಾರಭಸದಿಂದ ಸಿಡಿದು, ಅದರ ತುಂಡುಗಳು ವಾಯುಮಂಡಲವನ್ನೆಲ್ಲಾ ಆಕ್ರಮಿಸಿಬಿಟ್ಟವಂತೆ! ಈಗ ನಮ್ಮ ಕಣ್ಣಿಗೆ ಕಾಣುವ ನಕ್ಷತ್ರಗಳೆಲ್ಲವೂ ಆ ಸಿಡಿತದಿಂದ ತುಂಡಾದ ಭಾಗಗಳಂತೆ! ಮತ್ತು ಅವು ಈಗಲೂ ಮಹಾವೇಗದಿಂದ ದೂರದೂರಕ್ಕೆ ಹೋಗುತ್ತಲೇ ಇರುವವಂತೆ!

ಬೆಂಗಳೂರು ನಗರದಲ್ಲಿ ನೆರವೇರಿದ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಮಹೋತ್ಸವದಲ್ಲಿ ಹಾಜರಿದ್ದ ಸರ್ಕಾರಿ ಅಧಿಕಾರಿಗಳು ಮತ್ತು ಇತರ ದೊಡ್ಡಮನುಷ್ಯರುಗಳು.

ಮ॥ ರಾ॥ ಶ್ರೀಗಳಾದ—

1. ಹೈಕೋರ್ಟ್ ಜಡ್ಜ್ ಯಂ. ರಾಮಚಂದ್ರರಾಯರು ಬಿ.ಎ., ಬಿ.ಎಲ್., 2. ಮುಜರಾಯಿಕಮಿಷನರ್ ಎನ್. ಮಾಧವರಾಯರು ಬಿ.ಎ., ಬಿ.ಎಲ್., 3. ಕೈಗಾರಿಕೆ ಮತ್ತು ವಾಣಿಜ್ಯ ಡೈರೆಕ್ಟರಾದ ಎ. ವಿ. ರಾಮನಾಥರವರು ಬಿ.ಎ., 4. ಡೆಪ್ಯುಟಿಕಮಿಷನರ್ ಕೆ. ವಿ. ಅನಂತರಾಮನ್‌ರವರು ಬಿ.ಎ., 5. ಮುನಸಿಪಲ್ ಕಮಿಷನರ್ ಪಿ. ಹೆಚ್. ಕೃಷ್ಣರಾಯರು, ಎಂ.ಎ., 6. ಮುನಸಿಪಲ್ ಪ್ರೆಸಿಡೆಂಟ್, ಬಿ. ಕೆ. ಗರುಡಾಚಾರ್‌ರವರು, 7. ಬೆಂಗಳೂರು ಅ॥ ಡಿ॥ ಜಡ್ಜ್ ಎನ್. ಕೆ. ಶ್ರೀನಿವಾಸರಾಯರು ಬಿ.ಎ.,ಬಿ.ಎಲ್., 8. ಬೆಂಗಳೂರು ಸ್ಮಾಲ್‌ಕಾಸ್ ಕೋರ್ಟ್ ಜಡ್ಜ್ ಸಿ. ಅಬ್ದುಲ್‌ಗನಿಯವರು, ಬಿ.ಎ., ಬಿ.ಎಲ್., 9. ಹೈಕೋರ್ಟ್ ರಿಜಿಸ್ಟ್ರಾರ್, ಎಸ್. ವೆಂಕಟರಂಗಅಯ್ಯಂಗಾರ್‌ರವರು, ಬಿ.ಎ., ಎಲ್.ಎಲ್., ಎಂ. 10. ರಾವ್ ಸಾಹೇಬ್, ಹೆಚ್. ಚನ್ನಯ್ಯನವರು, ರಿಟೈರ್ಡ್ ಸಬ್ ಜಡ್ಜ್, 11. ರಾಜಸಭಾಭೂಷಣ ವಿಶಾರದ ರಾವ್‌ಸಾಹೇಬ್, ಸಿ. ಹಯವದನರಾಯರು, ಬಿ.ಎ., ಬಿ.ಎಲ್., 12. ಲೋಕಸೇವಾನಿರತ ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪನವರು, 13. ಬೆಂಗಳೂರು ಹೆಲ್ತ್ ಆಫೀಸರು, ಪಿ. ಪಾರ್ಥಸಾರ್ಥಿಯವರು, ಎಲ್.ಎಮ್.ಎಸ್., 14. ಮುನಸಿಪಲ್ ಇಂಜನಿಯರ್, ಎಂ.ಎ. ರಾಮಾನುಜಂರವರು, ಬಿ.ಎ.ಸಿ.ಇ., 15. ಚಿತ್ರದುರ್ಗದ 2 ನೇ ಮ್ಯಾಜಿಸ್ಟ್ರೇಟ್, ಎ. ಎನ್. ಗೋವಿಂದರಾಜುಲು ನೊದಲಿಯಾರ್‌ರವರು, ಎಂ.ಎ., ಎಲ್.ಎಲ್.ಬಿ., 16. ಚಿತ್ರದುರ್ಗ ಎಸ್. ಶ್ರೀನಿವಾಸನ್‌ರವರು, ಬಿ.ಎ., ಬಿ.ಎಲ್., 17. ಹೈಕೋರ್ಟ್ ಡಿಪ್ಯುಟಿರಿಜಿಸ್ಟ್ರಾರ್, ಎ. ಎನ್. ಕುಪ್ಪುಸ್ವಾಮಿ ನೊದಲಿಯಾರ್‌ರವರು, 18. ಬೆಂಗಳೂರು ಡಿ॥ ಜಡ್ಜ್ ಕೋರ್ಟ್ ಶಿರಸ್ತೆದಾರ್, ಎ. ಪಿ. ಸಭಾಪತಿ ಮೊದಲಿಯಾರ್‌ರವರು, 19. ಗೌರ್ನಮೆಂಟ್ ಅಡ್ವೋಕೇಟ್, ಎ. ಆರ್. ನಾಗೇಶ್ವರಅಯ್ಯರ್‌ರವರು ಬಿ.ಎ., ಬಿ.ಎಲ್., 20. ಬಾಬಾಬುಡನ್‌ಗಿರಿ ದತ್ತಾತ್ರೇಯ ಪೀಠದವರ ಮಕ್ಕಳು, 21. ಬೆಂಗಳೂರು ಲಾ ಅಸೋಸಿಯೇಷನ್ ಪ್ರೆಸಿಡೆಂಟ್ ಮತ್ತು ಅಡ್ವೊಕೇಟರಾದ ಎನ್. ವಿ. ನರಸಿಂಹಅಯ್ಯಂಗಾರ್‌ರವರು, ಬಿ.ಎ., ಬಿ.ಎಲ್., 22. ಅಡ್ವೊಕೇಟ್, ಎಂ. ಬಿ., ವರದರಾಜ ಅಯ್ಯಂಗಾರ್‌ರವರು, ಬಿ.ಎ.,ಬಿ.ಎಲ್., 23. ರೆವಿನ್ಯೂ ಕಮಿಷನರ್ ಆಫೀಸ್ ಅಸಿಸ್ಟೆಂಟರಾದ ಜಿ. ರುದ್ರಪ್ಪನವರು ಎಂ.ಎ., ಬಾರ್-ಅಟ್-ಲಾ, 24. ಸಬ್ ಡಿವಿಜನ್‌ಆಫೀಸರ್ ಜಿ ಬಿ. ಮಲ್ಲಾರಾಧ್ಯರು ಎಂ.ಎ., 25. ಎಂ. ರಾಮಚಂದ್ರರಾವ್ ಸಿಂಧೆಯವರು, 26. ಎಸ್. ಸಜ್ಜನರಾಯರು, 27. ಪಾಮಡಿ ಸುಬ್ರಾಮಯ್ಯ ಶೆಟ್ಟರು, 28. ಲೆಜಿಸ್ಲೇಟಿವ್‌ಕೌನ್ಸಿಲ್ ಮೆಂಬರು ನೀಲಗಿರಿ ಸಂಜೀವಯ್ಯನವರು, 29. ಪೋಲೀಸ್ ಸೂಪರಿಂಟೆಂಡೆಂಟ್ ಸಿ. ಯಂ. ಎಚ್. ರಣಜೋಧಸಿಂಗ್‌ರವರು ಬಿ.ಎ., 30. ಪೋಲೀಸ್ ಸೂಪರಿಂಟೆಂಡೆಂಟ್ ಯು. ಕೆ. ಸೋಮಪ್ಪನವರು ಬಿ.ಎ., 31. ಡಿ॥ ಸೆಷನ್‌ಜಡ್ಜ್ ಹೆಚ್. ಕೆ. ವೀರಬಸವಯ್ಯನವರು ಬಿ.ಎ., ಬಿ.ಎಲ್., 32. ಹೈಕೋರ್ಟ್ ಛೀಫ್‌ಜಡ್ಜ್ ರಾಜಧರ್ಮಪ್ರವೀಣ ಪಿ. ಮಹಾದೇವಯ್ಯನವರು ಬಿ.ಎ.,ಬಿ.ಎಲ್., 33. ವಿಕ್ಟೋರಿಯಾ ಆಸ್ಪತ್ರೆ ಡಾ॥ ಬಿ. ಸಂಜಪ್ಪನವರು ಎಂ.ಬಿ., ಸಿ.ಎಂ., 34. ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಕೆ. ಆರ್. ಸೀತಾರಾಮಅಯ್ಯಂಗಾರ್‌ರವರು.

(೩ನೆಯ ಪುಟದಿಂದ ಮುಂದುವರಿದುದು.)

ಪರಿವರ್ತನಶೀಲವಾದೀ ಸಂಸಾರದಲ್ಲಿ ಮಹಾ ಕಾಲನಕರಾಲ ಮಹೋದರದಲ್ಲಿ ಇಂದಿನವರೆಗೆ ಎಷ್ಟೋ ಮಂದಿ ಅನಂತಶಾಸ್ತ್ರ ಪ್ರವರ್ತಕರಾದ ಮಹಾ ಮಹಾ ಋಷಿಗಳೂ, ಸಕಲವಿದ್ಯಾಪಾರಾ ಪಾರಪಾರಂಗತರಾದ ಅನಂತವಿದ್ವನ್ಮಣಿಗಳೂ, ವೀರ-ಶೂರ-ಧರ್ಮಾತ್ಮರಾದ ಅನಂತಸಾರ್ವಭೌಮನರಪತಿಗಳೂ, ವಿಲೀನರಾಗಿ ಹೋಗಿರುವರು. ಈ ತೇಜೋನಿಧಿಗಳಾದ ಮಹಾಪುರುಷರ ಅನಿಂದಿತದಿವ್ಯ ಚರಿತ್ರೆಯು ಸಕಲಜಿಜ್ಞಾಸುಗಳಾದ ಮಾನವರ ಮನೋಮಂದಿರಗಳಲ್ಲಿ ಅಂಕಿತವಾಗಿರುತ್ತದೆ. ಇಂತಹ ಜ್ಞಾನಸೂರ್ಯರ ಉದಯಕ್ಕೆ ಮೂಲಸ್ಥಾನವಾಗಿರುವ ನಮ್ಮ ಭರತಖಂಡವು ನಿಖಿಲದೇಶವಾಸಿಗಳ ಜ್ಞಾನವಿಜ್ಞಾನಗಳಿಗೆ ಆದಿಗುರುವಾಗಿರುವಂತೆ ಆಯುರ್ವಿಜ್ಞಾನಕ್ಕಾದರೂ ಪ್ರಧಾನಾಚಾರ್ಯಸ್ಥಾನವನ್ನು ಹೊಂದಿರುತ್ತದೆ. ಈ ಆಯುರ್ವೇದ ಚಿಕಿತ್ಸೆಯೇ ಸದ್ಯಃ ಪ್ರಚಲಿತಗಳಾಗಿರುವ ಸಕಲ ಚಿಕಿತ್ಸೆಗಳಿಗೆ ಆಧಾರಭೂತವಾಗಿರುವುದೆಂದು ನಿಷ್ಪಕ್ಷಪಾತಿಗಳಾದ ಅನೇಕ ಪಾಶ್ಚಾತ್ಯಪಂಡಿತರು ಅನುಮೋದಿಸಿ ತಮ್ಮ ಸದಭಿಪ್ರಾಯಗಳನ್ನು ಅನೇಕವಿಧವಾಗಿ ಪ್ರಕಾಶಗೊಳಿಸಿರುತ್ತಾರೆ.

'ರೈಟ್ ಆನರಬಲ್ ಎಲ್ಫಿನ್‌ಸ್ಟನ್' ಎಂಬವರು ತಮ್ಮ ಅಭಿಪ್ರಾಯವನ್ನೀರೀತಿಯಾಗಿ ಪ್ರಕಟಮಾಡಿರುವರು.

"ಭಾರತ ವರ್ಷದಿಂದಲೇ ಯೂರೋಪ್ ಖಂಡದವರು ಚಿಕಿತ್ಸಾವಿದ್ಯೆಯನ್ನು ಕಲಿತಿರುವರು. ಹಿಂದುಗಳ ಅನನ್ಯಸಾಧಾರಣವಾದ ರಸಾಯನ ಶಾಸ್ತ್ರಜ್ಞಾನವನ್ನು ನೋಡಿ ನಾವು ಆಶ್ಚರ್ಯ ಸಾಗರದಲ್ಲಿ ಮುಳುಗಿರುವೆವು. ಮತ್ತು ಇದರ ರಸಾಯನಕೌಶಲ್ಯವು ಅನುಮಾನಾತೀತವಾಗಿಯೂ, ಆಶಾತೀತವಾಗಿಯೂ, ಇರುತ್ತದೆ. 'ಪ್ರೊಫೆಸರ್‌ರಾಯಲೀ' ಎಂಬುವರ ಅಭಿಪ್ರಾಯವು ಈ ರೀತಿಯಾಗಿರುತ್ತದೆ. ಹಿಂದುಗಳ ಆಯುರ್ವೇದ ಶಾಸ್ತ್ರವು ಅತ್ಯಂತ ಪ್ರಾಚೀನವಾದುದು. ಈ ಚಿಕಿತ್ಸಾ ಪ್ರಣಾಳಿಯು 'ಅರಬ್' ಮತ್ತು 'ಯುನಾನೀ' ಚಿಕಿತ್ಸೆಗಳಿಗಿಂತಲೂ ಬಹು ಪುರಾತನವಾದುದಾಗಿದೆ.

ಪ್ರೊಫೆಸರ್ ವಿಲ್ಸನ್' ಅವರು ಹೀಗೆ ಹೇಳಿರುತ್ತಾರೆ. 'ಭರತಖಂಡವು ಅತಿಪ್ರಾಚೀನಕಾಲದಿಂದಲೂ ಚಿಕಿತ್ಸಾ, ಜ್ಯೋತಿಷ, ದರ್ಶನಶಾಸ್ತ್ರಗಳಲ್ಲಿ ಪಾರದರ್ಶಿಗಳಾದ ವಿದ್ವಾಂಸರಿಂದಲಂಕೃತವಾಗಿರುತ್ತದೆ'

'ಡಾಕ್ಟರ್ ರಾಯಲೀ' ಎಂಬುವರ ಅಭಿಪ್ರಾಯವೀರೀತಿಯಾಗಿರುತ್ತದೆ. 'ಭಾರತೀಯರ ರಸಾಯನಚಿಕಿತ್ಸೆಯು ಅತ್ಯಂತ ವಿಸ್ಮಯಜನಕವಾಗಿರುತ್ತದೆ. ಈ ಚಿಕಿತ್ಸಾಪ್ರಣಾಳಿಯು ಪ್ರಥಮದಲ್ಲಿ ಭಾರತೀಯರಿಂದಲೇ ಆವಿಷ್ಕೃತವಾಗಿರುತ್ತದೆ. ಅಭ್ರಕಾದಿ ಧಾತುಗಳ ಭಸ್ಮವಿಧಿಯೂ, ಈ ಭಸ್ಮನಿರ್ಮಿತಗಳಾದೌಷಧಿಗಳ ಸೇವನಪದ್ಧತಿಯೂ ಆರ್ಷಗ್ರಂಥಗಳಾದ ಚರಕಸುಶ್ರುತಾದಿಗಳಲ್ಲಿ ವರ್ಣಿತವಾಗಿರುತ್ತದೆ.'

'ಆಯುಲ್‌ಉಲ್' ಎಂಬ ಅರಬ್‌ಭಾಷೆಯ ಗ್ರಂಥದಲ್ಲೀ ರೀತಿಯಾಗಿರುತ್ತದೆ. 'ಎಂಟನೆಯ ಶತಮಾನದಲ್ಲಿ 'ಬಾಗದಾದ್' ರಾಜನ ಆಸ್ಥಾನದಲ್ಲಿ ಹಿಂದುಸ್ಥಾನದ ಪಂಡಿತರು ಆಯುರ್ವೇದ ಮತ್ತು ಜ್ಯೋತಿಶ್ಶಾಸ್ತ್ರಗಳ ಶಿಕ್ಷಕರಾಗಿ ನಿಯಮಿಸಲ್ಪಟ್ಟಿದ್ದರು. ಚರಕ, ಸುಶ್ರುತ, ವೇದಾಂತಗಳೆಂಬ ಮೂರು ಚಿಕಿತ್ಸಾಗ್ರಂಥಗಳು ಭಾರತದಿಂದಲೇ ಅರಬ್‌ದೇಶಕ್ಕೆ ತರಲ್ಪಟ್ಟುವು. ಅಲ್ಲಿಂದ ಈ ಗ್ರಂಥಗಳು ಅನುವಾದಿಸಲ್ಪಟ್ಟು ಯೂರೋಪಿಗೆ ತರಲ್ಪಟ್ಟುವು.'

'ನಿಯಾರ್ಕಸ್' ಎಂಬುವರು ಹೀಗೆ ಹೇಳಿರುತ್ತಾರೆ.

'ಸುಮಾರು ೨೩೦೦ ವರ್ಷಗಳ ಪೂರ್ವದಲ್ಲಿ ಸಿಕಂದರನು ಭಾರತದೇಶಕ್ಕೆ ಬಂದಾಗ ತನ್ನ ಸಮೀಪದಲ್ಲಿ ಹಿಂದುಗಳಾದ ವೈದ್ಯಪಂಡಿತರನ್ನು ಇಟ್ಟುಕೊಂಡಿದ್ದನು. ಈ ವೈದ್ಯರಿಂದ ವಿಷಚಿಕಿತ್ಸೆಯನ್ನೂ ಮತ್ತಿತರ ಭಯಂಕರ ರೋಗಗಳ ಚಿಕಿತ್ಸೆಯನ್ನೂ ಮಾಡಿಸುತ್ತಿದ್ದನು. ಪುನಃ ತನ್ನ ದೇಶಕ್ಕೆ ಹೋಗುವಾಗ ಕೆಲವು ವೈದ್ಯರನ್ನು ಸನ್ಮಾನಪೂರ್ವಕವಾಗಿ ತನ್ನೊಡನೆ ಕರೆದುಕೊಂಡು ಹೋದನು.'

'ಡೀಟ್ಸ್' ಎಂಬುವರು ಹೀಗೆ ಸಿದ್ಧಮಾಡಿರುತ್ತಾರೆ.

'ಯುನಾನೀ ಚಿಕಿತ್ಸಕರು ಭಾರತೀಯ ಚಿಕಿತ್ಸಾ ಗ್ರಂಥಗಳ ಅಧ್ಯಯನದಿಂದ ವಿಶೇಷಜ್ಞಾನವನ್ನು ಹೊಂದಿದ್ದರು. ಮತ್ತು ಆಯುರ್ವೇದೀಯೌಷಧಿವಿಜ್ಞಾನದ ಸಂಪಾದನೆಯಿಂದ ತಮ್ಮನ್ನು ಕೃತಾರ್ಥರಾದವರನ್ನಾಗಿ ತಿಳಿದುಕೊಂಡಿದ್ದರು.'

'ಹಕೀಮ್ ಜಾಲೀನೂಸ್' ಎಂಬ ಪ್ರಸಿದ್ಧ ಯುನಾನೀ ಚಿಕಿತ್ಸಕನು ತನ್ನ ಗ್ರಂಥದಲ್ಲೀ ರೀತಿಯಾಗಿ ಬರೆದಿರುತ್ತಾನೆ.

'ಆಯುರ್ವೇದ ವಿದ್ಯೆಯು ಆದಿಯಲ್ಲಿ ಭಾರತದೇಶದಿಂದ 'ಮಿಶ್ರ' ದೇಶಕ್ಕೂ, ಮಿಶ್ರದೇಶದಿಂದ 'ಯುನಾನ್' ಮತ್ತು 'ಅರಬ್' ದೇಶಗಳಿಗೂ ಪ್ರವೇಶಿಸಿತು. ನನ್ನ ಗುರುವಾದ 'ಹಕೀಮ್ ಅಫಲಾತೂನ' ನು ಭಾರತದೇಶಕ್ಕೆ ಹೋಗಿ ಅನೇಕ ಚಿಕಿತ್ಸಾಗ್ರಂಥಗಳನ್ನಧ್ಯಯನಮಾಡಿದನು. ಈ ಗ್ರಂಥಗಳ ಸಾರವನ್ನು ಸಂಕ್ಷೇಪರೀತಿಯಿಂದ ಒಂದು ಹಲಗೆಯ ಮೇಲೆ ಬರೆದು ಅದನ್ನು ಯಾವಾಗಲೂ ಕೊರಳಿನಲ್ಲಿಯೇ ಧರಿಸುತ್ತಿದ್ದನು. ಈ ಹಲಗೆಯಲ್ಲಿ ಬರೆದಿರುವ ವಿದ್ಯೆಯನ್ನಾರಿಗೂ ತಿಳಿಸುತ್ತಿರಲಿಲ್ಲ. ಇವನು ಮರಣಕಾಲದಲ್ಲಿ ತನ್ನ ಪತ್ನಿಯನ್ನು ಕುರಿತು 'ನಾನು ಸತ್ತ ಮೇಲೆ ಈ ಹಲಗೆಯನ್ನು ನನ್ನ ಸಮಾಧಿಯಲ್ಲಿಯೇ ಹಾಕಬೇಕು' ಎಂದೂ ಹೇಳಿದ್ದನು. ಅದೇ ರೀತಿಯಾಗಿ ಅವನ ಪತ್ನಿಯು ಗಂಡನಸಮಾಧಿಯಲ್ಲಿ ಆ ಹಲಗೆಯನ್ನು ಹಾಕಿದಳು. ಈ ಕಾರ್ಯದಿಂದ ನನಗೆ ಬಹಳ ವ್ಯಸನವಾಗಲು ಒಂದುದಿನ ನನ್ನ ಗುರುವಿನ ಸಮಾಧಿಯನ್ನು ಕಳುವಿನಿಂದ ತೋಡಿ ಆ ಹಲಗೆಯನ್ನು ಹೊರಗೆ ತಂದೆನು. ಬಹಳ ಪ್ರಯಾಸದಿಂದ ಆ ಹಲಗೆಯಲ್ಲಿ ಬರೆದಿರುವ ವಿಷಯವನ್ನು ತಿಳಿದುಕೊಂಡು ನಾನು ಚಿಕಿತ್ಸೆಯಲ್ಲಿ ಅಸಾಧಾರಣ ಜ್ಞಾನವನ್ನು ಸಂಪಾದಿಸಿದೆನು.'

ಪ್ರಾಚೀನಭಾರತದಲ್ಲಿ ಆಯುರ್ವೇದಚಿಕಿತ್ಸೆಯ ಉನ್ನತಿಯು ಯಾವ ವಿಧವಾಗಿದ್ದಿತೆಂಬುದನ್ನು ಕೌಟಿಲ್ಯ (ಚಾಣಕ್ಯ)ನ ಅರ್ಥಶಾಸ್ತ್ರವನ್ನು ನೋಡಿದರೆ ಗೊತ್ತಾಗುತ್ತದೆ. ಸುಮಾರು ೨೦೦೦ ವರ್ಷಗಳ ಪೂರ್ವದಲ್ಲಿ ಭಾರತಸಾರ್ವಭೌಮನಾಗಿದ್ದ ಚಂದ್ರಗುಪ್ತನ ರಾಜ್ಯವ್ಯವಸ್ಥೆಯು ಚಾಣಕ್ಯನ ಅರ್ಥಶಾಸ್ತ್ರಕ್ರಮವನ್ನೇ ಅನುಸರಿಸಿದ್ದಿತು. ರಾಜ್ಯದ ಸಕಲ ಕಾರ್ಯಗಳಿಗೂ ಈ ಅರ್ಥಶಾಸ್ತ್ರವೇ ಆಧಾರಸ್ತಂಭವಾಗಿದ್ದಿತು. ಆದುದರಿಂದ ಈ ಗ್ರಂಥದ ಅವಲೋಕನದಿಂದ ಚಂದ್ರಗುಪ್ತರಾಜ್ಯಶಾಸನಪದ್ಧತಿಯು ಹೇಗಿದ್ದಿತೆಂಬುದು ಸ್ಪಷ್ಟವಾಗುತ್ತದೆ.

ಚಂದ್ರಗುಪ್ತನ ಶಾಸನಕಾಲದಲ್ಲಿ ಪ್ರಜೆಗಳ ಸ್ವಾಸ್ಥ್ಯರಕ್ಷಣೆಯು ರಾಜ್ಯದ ಅಂಗಭೂತವಾಗಿದ್ದಿತು. ಈ ಸ್ವಾಸ್ಥ್ಯರಕ್ಷಣೆಗಾಗಿ ರಾಜ್ಯದ ಹಣದಿಂದ ಅನೇಕ ವಿದ್ಯಾಲಯಗಳೂ, ಚಿಕಿತ್ಸಾಲಯಗಳೂ ಸ್ಥಾಪಿತಗಳಾಗಿದ್ದುವು. ಈ ವಿಷಯವಾಗಿ ಅರ್ಥಶಾಸ್ತ್ರದ ಕೆಲವು ವಾಕ್ಯಗಳನ್ನಿಲ್ಲಿ ಉದ್ಧರಿಸುವುದು ಸಮಂಜಸವಾಗಲಾರದು.

'ಉತ್ತರ-ಪಶ್ಚಿಮಭಾಗಂ ಪುಣ್ಯಭೈಷಜ್ಯಗೃಹಂ | ಸರ್ವಸ್ನೇಹಧಾನ್ಯಕ್ಷಾರಲವಣಭೈಷಜ್ಯ ಶುಷ್ಕಶಾಕಯವ.........................
ಪಚೇಯಾನವೇಕವಸ್ತೋಃ ಪಭೋಗಸಹಾಕ್ ಕಾರಯೇತ್ | ನವೇ ನಾಪಮಂಶೋಧಯೇತ್ ||' (ಅ. ಶಾ. ಅಧಿಕರಣ ೨, ಅಧ್ಯಾಯ ೪.)

ನಗರದ ಉತ್ತರಪಶ್ಚಿಮಭಾಗಗಳಲ್ಲಿ ಔಷಧಾಲಯಗಳಿರಬೇಕು. ಇವುಗಳಿಗೆ ಸಂಬಂಧಿಸಿ ಸರ್ವೌಷಧಿಭಂಡಾರಗಳಿರಬೇಕು. (Store Rooms) ಈ ಭಂಡಾರಗಳಲ್ಲಿ ಒಂದು ವರ್ಷಕ್ಕೆ ಸಾಕಾಗುವಷ್ಟು ಔಷಧಸಾಮಗ್ರಿಗಳಿರಬೇಕು. ಇವುಗಳಲ್ಲಿ ಹಳೆಯದಾದ ಪದಾರ್ಥವನ್ನು ತೆಗೆದು ಆ ಸ್ಥಾನದಲ್ಲಿ ಹೊಸಪದಾರ್ಥವನ್ನಿಡಬೇಕು.

'ಚಿಕಿತ್ಸಕಾಃ ಶಸ್ತ್ರಯಂತ್ರಾಗದ ಸ್ನೇಹವಸ್ತ್ರಹಸ್ತಾಃ ಸ್ತ್ರಿಯಶ್ಚಾನ್ನಪಾನರಕ್ಷಿಣ್ಯಃ ಪುರುಷಾಣಾಮುದ್ಧರ್ಷಣೀಯಾ ಪೃಷ್ಠತಸ್ತಿಷ್ಠೇಯುಃ' (ಅ. ಶಾ. ಅಧಿ ೧೦ ಅಧ್ಯಾ. ೩).

ಸೇನೆಯು ಯುದ್ಧಕ್ಕೆ ಹೊರಟಾಗ ಸೇನೆಯಸಂಗಡ ವೈದ್ಯರು ಶಸ್ತ್ರ, ಯಂತ್ರ, ಔಷಧಿ, ತೈಲ, ವಸ್ತ್ರಗಳನ್ನು ತೆಗೆದುಕೊಂಡು ತಮ್ಮ ಸಂಗಡ ರೋಗಿಗಳನ್ನು ಅನ್ನಾದಿಗಳಿಂದುಪಚರಿಸಲು ಸಮರ್ಥೆಯರಾದ ಪರಿಚಾರಿಕೆಯರನ್ನು (Nurses) ಕರೆದುಕೊಂಡು ಹೋಗಬೇಕಿದ್ದು.

ಈ ಉಕ್ತಿಯಿಂದ ಪ್ರಾಚೀನಕಾಲದಲ್ಲಿ ನಮ್ಮ ವೈದ್ಯರು ಶಸ್ತ್ರಚಿಕಿತ್ಸೆಯಲ್ಲಿಯೂ ಸಿದ್ಧಹಸ್ತರಾಗಿದ್ದರೆಂದು ಸ್ಪಷ್ಟವಾಗುತ್ತದೆ.

ಅರ್ಥಶಾಸ್ತ್ರದಲ್ಲಿ ನಾನಾವಿಧಚಿಕಿತ್ಸಕರವರ್ಣನೆಯು ಇರುತ್ತದೆ. "ಭಿಷಕ್, (ಸಾಧಾರಣಚಿಕಿತ್ಸಕ). ಜಾಂಗಲೀವಿದಃ, (ವಿಷಚಿಕಿತ್ಸಕರು). ಗರ್ಭವ್ಯಾಧಿಚಿಕಿತ್ಸಕಾಃ, ಸೂತಿಕಾಚಿಕಿತ್ಸಕಾಃ, ಪಶುಚಿಕಿತ್ಸಕಾಃ.'

ಈ ವೈದ್ಯರೆಲ್ಲರಿಗೂ ರಾಜಾಶ್ರಯವಿದ್ದಿತು. ವೈದ್ಯರು ಚಿಕಿತ್ಸೆಯಲ್ಲಿ ಉದಾಸೀನ ಮಾಡಿದರೂ, ರೋಗಿಗಳಿಗೆ ಉಚಿತವಾದ ಔಷಧವನ್ನು ಕೊಡದೆ ಇದ್ದರೂ, ವಿರುದ್ಧೌಷಧಪ್ರಯೋಗದಿಂದ ರೋಗಿಗೆ ಪ್ರಾಣಾಪಾಯವುಂಟಾಗುವಸಂಭವವು ಒದಗಿದಾಗಲೂ ಅಂತಹವೈದ್ಯರಿಗೆ ಸರ್ಕಾರದಿಂದ ಉಚಿತವಾದ ದಂಡವು ವಿಧಿಸಲ್ಪಡುತ್ತಲಿದ್ದಿತು. ಪ್ರಜೆಗಳಾದರೂ ಔಷಧಿಸೇವನೆ, ಮತ್ತು ಪಥ್ಯಾದಿಗಳಲ್ಲಿ ಅಶ್ರದ್ಧೆಯನ್ನು ತೋರಿಸಿದರೆ ಇವರಿಗೂ ಯೋಗ್ಯದಂಡವು ಕೊಡಲ್ಪಡುತ್ತಲಿದ್ದಿತು. ಈ ಕಾರಣದಿಂದ ವೈದ್ಯರೂ ಪ್ರಜೆಗಳೂ ತಮ್ಮ ತಮ್ಮ ಕರ್ತವ್ಯಗಳನ್ನು ಪರಿಪಾಲಿಸುವುದರಲ್ಲಿ ಜಾಗ್ರತರಾಗಿರುತ್ತಿದ್ದರು. ಹೀಗಾಗಿ ಸಕಲ ದಿಕ್ಕುಗಳಲ್ಲಿಯೂ ಆಯುರ್ವೇದವೈಭವವು ತಾನೇ ತಾನಾಗಿ ಮೆರೆಯುತ್ತಲಿದ್ದಿತು. ರಾಜಪ್ರಜೆಗಳು ಆಯುರ್ವೇದ ಮಹತ್ವವನ್ನು ಅರಿತವರಾಗಿದ್ದರು. ಪೂರ್ವದಲ್ಲಿ ಯಾವ ವಿಧವಾದ ಚಿಕಿತ್ಸೆಗಾಗಲಿ ಇತರ ದೇಶೀಯರಲ್ಲಿ ಭಿಕ್ಷೆಯನ್ನು ಬೇಡಬೇಕಾಗಿರಲಿಲ್ಲ. ಆಯುರ್ವೇದದ ಅಷ್ಟಾಂಗಗಳೂ ನಮ್ಮಲ್ಲಿಯೇ ಪೂರ್ಣಗಳಾಗಿದ್ದುವು. ಪ್ರಾಚೀನರಾದ ನಮ್ಮವರು ಆಯುರ್ವೇದ ಶಾಸ್ತ್ರಾನುಸಾರವಾದ ದಿನಚರ್ಯೆಗಳನ್ನೂ ಋತುಚರ್ಯೆಯನ್ನೂ ಅನುಸರಿಸುತ್ತಿದ್ದರಾದುದರಿಂದ ಪ್ರಾಯಶಃ ರೋಗಬರುವ ಸಂಭವವೇ ಇರುತ್ತಿರಲಿಲ್ಲ.

ಕ್ರಿಸ್ತಶಕಕ್ಕಿಂತಲೂ ೪೦೦ ವರ್ಷಗಳ ಪೂರ್ವದಲ್ಲಿ ಮತ್ತು ಕ್ರಿ. ಪೂ. ೩೦೦ ವರ್ಷಗಳ ಸುಮಾರಿನಲ್ಲಿ ಗ್ರೀಕ್ ದೇಶದಿಂದ ಭಾರತಯಾತ್ರೆಗಾಗಿ ಬಂದಿದ್ದ 'ಕ್ಟೆಸಿಯಸ್ ಮತ್ತು ಮೆಗಾಸ್ಥನೀಸ್' ಎಂಬ ಗ್ರೀಕ್ ಚಿಕಿತ್ಸಕರು ಭಾರತೀಯರ ಆರೋಗ್ಯದ ವಿಷಯದಲ್ಲೀರೀತಿಯಾಗಿ ಬರೆದಿರುತ್ತಾರೆ.

ಭಾರತೀಯರಿಗೆ ಶಿರೋವೇದನೆ, ದಂತಶೂಲ, ಅಕ್ಷಿರೋಗ, ಮುಖಪಾಕ, ವ್ರಣ, ಈ ರೋಗಗಳು ಬರುತ್ತಿರಲಿಲ್ಲ.

ಈ ಚಿಕಿತ್ಸಕರಪರಿಶೀಲನಾತ್ಮಕವಾದ ಸದಭಿಪ್ರಾಯವು ಯಥಾರ್ಥವಾಗಿರುತ್ತದೆ.

'ಆಯುಃ ಕಾಮಯಮಾನೇನ ಧರ್ಮಾರ್ಥಸುಖಸಾಧನಂ | ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ || ಹಿತಾಹಾರವಿಹಾರಸೇವೀ ಸಮೀಕ್ಷ್ಯಕಾರೀ ವಿಷಯೇಷ್ವಸಕ್ತಃ | ದಾತಾಸಮಃ ಸತ್ಯಪರಃ ಕ್ಷಮಾವಾನಾಪ್ತೋಪಸೇವೀ ಚ ಭವತ್ಯರೋಗಃ ||' (ಅ. ಹೃ. ಸೂ.)

ಚತುರ್ವರ್ಗಸುಖಕ್ಕೆ ಸಾಧನರೂಪವಾಗಿರುವ ದೀರ್ಘಾಯುವನ್ನಪೇಕ್ಷಿಸುವ ಮನುಷ್ಯನು ಆಯುರ್ವೇದಶಾಸ್ತ್ರದಲ್ಲಿ ಗುರೂಪದೇಶಗಳಲ್ಲಿ ವಿಶ್ವಾಸವುಳ್ಳವನಾಗಿ ನಿತ್ಯದಲ್ಲಿ ಕಾಲದೇಶಾನುಸಾರಗಳಾದ ಹಿತಾಹಾರವಿಹಾರಗಳನ್ನು ಸೇವಿಸುತ್ತಲೂ ಯುಕ್ತಾಯುಕ್ತವಿಚಾರಪುರಸ್ಸರವಾದ ಆಚರಣೆಯುಳ್ಳವನಾಗಿಯೂ ವಿಷಯಗಳಲ್ಲಾಸಕ್ತನಾಗದೆ ಸತ್ಪಾತ್ರದಾನ, ಸರ್ವಸಮತೆ, ಸತ್ಯ, ಕ್ಷಮೆಗಳೆಂಬ ಸದ್ಗುಣಗಳಿಂದೊಡಗೂಡಿದವನಾಗಿಯೂ, ವಿಷಯಾದಿಗಳಿಂದ ಅಬಾಧಿತವಾದ ಪರಿಶುದ್ಧಜ್ಞಾನವುಳ್ಳ ಶಿಷ್ಟರನ್ನು ಸೇವಿಸುವವನಾಗಿಯೂ, ಇದ್ದುದಾದರೆ ಅವನಿಗೆ ಆರೋಗ್ಯವು ಸದಾ ಹಸ್ತಗತವಾಗಿರುತ್ತದೆ.

ನಮ್ಮ ಪೂರ್ವಜರು ಈ ಶಾಸ್ತ್ರವಿಹಿತಗಳಾದ ನಿಯಮಗಳನ್ನು ತ್ರಿಕರಣಪುರಸ್ಸರವಾಗಿ ಪರಿಪಾಲಿಸುತ್ತಿದ್ದರಾದುದರಿಂದ ಈಗಿನವರಂತೆ ಯಾವಾಗಲೂ ರೋಗಗಳಿಂದ ಪೀಡಿತರಾಗದೆ ಸಂಪೂರ್ಣಾರೋಗ್ಯಭಾಗ್ಯವನ್ನು ಹೊಂದಿದ್ದರು. ಈ ಆರೋಗ್ಯಪ್ರಭಾವದಿಂದ ಅಪ್ರತಿಹತವಾದ ಪ್ರತಿಭಾಶಕ್ತಿಯನ್ನು ಹೊಂದಿ ಸಕಲ ವಿದ್ಯಾನಿಧಿಗಳೆನಿಸಿಕೊಂಡು ಸಮಸ್ತ ಭೂಮಂಡಲದ ಮಾನವಸಮೂಹಕ್ಕೆ ಮಾರ್ಗಪ್ರದರ್ಶಕರಾಗಿದ್ದರು.

ಬಹು ಪ್ರಾಚೀನಕಾಲದಿಂದಲೂ ನಮ್ಮ ಭರತಖಂಡವು ಇತರದೇಶೀಯರ ಜ್ಞಾನವಿಜ್ಞಾನಗಳಿಗೆ ಪ್ರಧಾನಾಚಾರ್ಯಸ್ಥಾನವನ್ನು ಹೊಂದಿದ್ದಿತೆಂಬುದಕ್ಕೆ ಮೇಲೆ ಅನೇಕ ಉದಾಹರಣೆಗಳನ್ನು ಉದ್ಧರಿಸಿರುವುದಾಗಿದೆ. ಮತ್ತು ಮನುಸ್ಮೃತಿಯಾದರೂ ಈ ವಿಷಯವನ್ನು ಪುಷ್ಟೀಕರಿಸುತ್ತದೆ.

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ |
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ||
(ಮ. ಸ್ಮೃ. ಅ. ೨. ಶ್ಲೋ. ೨೦).

ಆರ್ಯಾವರ್ತದಲ್ಲಿ ಜನಿಸಿದ ಕ್ಷತ್ರಿಯರಾದ ಬ್ರಾಹ್ಮಣಪಂಡಿತೋತ್ತಮರೇ ಸಮಸ್ತ ಭೂಮಂಡಲದಲ್ಲಿರುವ ಮಾನವಸಮೂಹದ ಚರಿತ್ರಸುಧಾರಣೆಗೂ, ಸಕಲವಿಧ ಶಿಕ್ಷಣಗಳಿಗೂ ಗುರುಗಳಾಗಿರುತ್ತಾರೆ.

ನೋಡಿದಿರಾ ! ಸಕಲಭೂಮಂಡಲಕ್ಕೇ ಗುರುವೆನಿಸಿಕೊಂಡಿದ್ದ ನಮ್ಮ ಭಾರತದೇಶವು ಕಾಲಗತಿಯಿಂದ ಈಗ ಸಕಲ ಭೂಮಂಡಲದ ಶಿಷ್ಯಸ್ಥಾನವನ್ನು ಹೊಂದಿರುತ್ತದೆ.

'ದೈವೀವಿಚಿತ್ರಾಗತಿಃ' ಎಂಬುಕ್ತಿಯು ಈಗ ಸತ್ಯವಾಯಿತು.

ಸಾವಿರಾರು ಯೋಜನಗಳ ದೂರದಲ್ಲಿರುವ ಯೂರೋಪ್, ಇಟಲಿ, ಯುನಾನ್, ಗ್ರೀಸ್, ಅರಬ್ ಮೊದಲಾದ ದೇಶವಾಸಿಗಳು ಭಾರತ ದೇಶಕ್ಕೆ ಬಂದು ನಮ್ಮ ಪ್ರಾಚೀನ ಪಂಡಿತರಿಂದ ಚಿಕಿತ್ಸಾಶಾಸ್ತ್ರವನ್ನಧ್ಯಯನಮಾಡಿ ಆಶ್ಚರ್ಯಜನಕವಾದ ಔಷಧಿವಿಜ್ಞಾನವನ್ನು ಪಡೆಯುತ್ತಿದ್ದುದೊಂದುಕಾಲ! ದಿಗ್ವಿಜಯಿಯಾದ ಸಿಕಂದರನ ಸೇನೆಯಲ್ಲಿ ನಮ್ಮ ಭಾರತೀಯ ಪಂಡಿತರು ಚಿಕಿತ್ಸಕರಾಗಿದ್ದುದೊಂದುಕಾಲ! ಇರಾನ್‌ದೇಶದ ಖಲೀಫ ಹಾರೂನ್ ರಶೀದ್ ಎಂಬುವನಲ್ಲಿ ಭಾರತೀಯ ವೈದ್ಯರು ಪ್ರಧಾನಚಿಕಿತ್ಸಕರಾಗಿದ್ದುದೂ ಒಂದುಕಾಲ! ಈಗ ಆಯುರ್ವೇದ ಚಿ[illegible] ಕೆಲಸಕ್ಕೆ ಬಾರದೆಂದು ತಿಳಿದು ಅತಿ ನೀಚದೃಷ್ಟಿಯಿಂ[illegible] ಸುತ್ತಿರುವುದೊಂದು ಕಾಲ ಬಂದೊದಗಿತು! ಇದೇ[illegible] ಕಾಲವೈಚಿತ್ರ್ಯವು? ಪೂರ್ವಕಾಲದ ಈ ಚಿಕಿತ್ಸೆಯ[illegible] ಯೆಲ್ಲಿ? ಈಗಿನ ಕಾಲದ ಅವನತಿಯೆಲ್ಲಿ ? ಇವೆರಡಕ್ಕೂ[illegible] ಕಾಶದಷ್ಟು ಅಂತರವಿರುವುದಲ್ಲವೆ ?

ಈ ಪರಿಸ್ಥಿತಿಯನ್ನು ಪರ್ಯಾಲೋಚಿಸಿದರೆ ಸಹೃ[illegible] ಕರ ನೇತ್ರಗಳಿಂದ ಅಶ್ರುಧಾರೆಯು ಹೊರಟು ನದೀ[illegible] ಧರಿಸಲಾರದೆ? ಅತ್ಯುನ್ನತಾವಸ್ಥೆಯಲ್ಲಿದ್ದ ಈ ಚಿಕಿತ್ಸಾ[illegible] ಇಂದಿನ ದುರವಸ್ಥೆಯನ್ನು ನೋಡಿ ಮರುಗದಿರನಾವನು ?

(ಸ[illegible]

4000 ವರ್ಷದ ಹಿಂದಿನ ಗೋಧಿಯಬೆಳೆ[illegible]

ಸಿಂಧೂದೇಶದಲ್ಲಿ 4000 ವರ್ಷಗಳ [illegible] ಪಕಶಕ್ತಿ ಮಹೇಂಜೊವಾರ ಎಂಬ ನಗರವು ಇತಿಹಾಸಜ್ಞರು ಭೂ[illegible] ಗರ್ಭದಿಂದ ಅಗೆಯಿಸಲ್ಪಟ್ಟಿರುತ್ತದೆ. [illegible]ಧ ನಷ್ಟದವುಗಳ ನೊಂದು ಗೋರಿಯಲ್ಲಿ ಸಿಕ್ಕಿದ [illegible]ಡಿದರೆ ಎಲ್ಲವೂ ಕಾಳುಗಳನ್ನು, ಸರ್ ಡ್ಯಾನಿಯಲ್ ಹ[illegible] ಪ್ರಭುಗಳು ಪಾದ್ರಿಗಳು ತಮ್ಮ ಹೊಲದಲ್ಲಿ ಬ[illegible] ಉಪಯೋಗಿಸಿ[illegible]ರಿಸಲಾದೀ[illegible]ರಿಂದ ೫ ತೊಲೆ ಗೋಧಿಯು [illegible] ಅದನ್ನು ಪುನಃ ಬಿತ್ತುವವರೆಂದೂ [illegible] ನಮ್ಮಲ್ಲಿ ಬೆಳೆಯುವ ಗೋಧಿಗಿಂತ [illegible] ಯಾಗಿದ್ದು ಅತ್ಯುತ್ತಮವಾಗಿ [illegible] ಬಂದಿದೆ.

[illegible] ಲಿಮಿಟೆಡ್,
[illegible] ೫೧೦, ಮ[illegible]

ಮುದ್ರಿಸಿ ಪ್ರಕ[illegible]

[illegible]

8

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. | ಬಿಡಿ ಪ್ರತಿ ೧ಕ್ಕೆ ೯ ಪೈ. | ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ನೇ ಮೇ ೧೯೩೪ [ಸಂಚಿಕೆ ೧

ಶ್ರೀ ರೇಣುಕಜಗದ್ಗುರುಃ ಶರಣಮ್.

ಪ್ರಭಾಭ್ಯುದಯ.

(ಪಂಡಿತ ಬಿದಿರೆಮಠದ ವೀರಭದ್ರಶಾಸ್ತ್ರಿ, ಕಾಶಿ.)

ಪ್ರಾಕೃತಿಕ ಶಕ್ತಿಯ ಮುಖಾಂತರಗಳಾದ ನಿಖಿಲಪ್ರಾಂತಗಳೂ ಅಖಿಲಮತಗಳೂ ಅಧರ್ಮದಿಂದ ಪರಸ್ಪರವಾಗಿ ದ್ವೇಷಾಸೂಯೆಗಳನ್ನು ಪ್ರವರ್ಧಿಸಿಕೊಂಡು ರುಧಿರಪ್ರವಾಹದಲ್ಲಿ ಪತಿತವಾಗಹತ್ತಿವೆ. ಈ ಪ್ರವೃತ್ತಿಯೊಡನೆ ಹೋಗುತ್ತಿರುವ ಮಾನವರುಂಡಮುಂಡ ಮಂಡಲಿಯ ಪ್ರಚಂಡದೃಶ್ಯವನ್ನು ಸಹಿಸುವುದು ಹೇಗೆ? ನಿಜವಾಗಿಯು ಬಹುದುರ್ಧರವು! ಭೂದೇವಿಯು ಈ ಅಧರ್ಮಾನಲವನ್ನು ಧರಿಸಲಾರದೆ ಹಸ್ತದ್ವಯವನ್ನೆದೆಯಲ್ಲಿರಿಸಿಕೊಂಡು, ತನ್ನ ವಿಶಾಲನೇತ್ರಗಳಿಂದ ದುಃಖಾಶ್ರುಧಾರೆಗಳನ್ನು ಸುರಿಸುತ್ತ ಆಕ್ರಂದಿಸುತ್ತಿರುವಳು. ಈ ಮಾತೆಯ ದುರ್ಧರರೋದನದಿಂದ ಆಕಾಶವೆಲ್ಲ ರಕ್ತವರ್ಣಾತಲವಾಗಿ ಪ್ರಳಯಕಾಲರುದ್ರನ ಪ್ರಚಂಡಪಿನಾಕಧನುರ್ಜ್ಯಾಟಿಯು ಪ್ರಸರಿಸಿತೋ ಎನ್ನುವ ಹಾಗೆ ಭಯಾವಹವಾಗಿದೆ. ಭೂದೇವಿಯ ಸಂತಾಪಾಗ್ನಿಯನ್ನಾರಿಸಿ ಶಾಂತಿಯನ್ನು ಸ್ಥಾಪಿಸುವುದು ಹೇಗೆ? ಇಲ್ಲಿರುವ ಅಧರ್ಮಪಿಶಾಚಿಯನ್ನು ನಾಶಗೊಳಿಸಿ ಧರ್ಮಸ್ಥಾಪನೆಯನ್ನು ಮಾಡತಕ್ಕುದಾವುದು? ಗತಾಸುವಾದ ಪ್ರಾಣಿಕೋಟಿಯು ಮರಳಿ ನೂತನಜನ್ಮವನ್ನು ತಾಳುವದೋ? ಭಾವಿಸೃಷ್ಟಿಗೆ ಬೀಜವೆಲ್ಲಿಹುದು?

ಅಕಟಾ! ಈ ನೂತನಮತಗಳೂ ಈ ದುರಾಚಾರಗಳೂ ನೈಮಲ್ಯವನ್ನು ಬೆಳೆಯಿಸಿ ಮಹಾಶಾಂತಮೂರ್ತಿಯನ್ನೇ ಮುಚ್ಚುತ್ತಲಿರುವವು. ನಿತ್ಯಕಲ್ಯಾಣವೆನಿಸಿದ ಈಶ್ವರೀಯಧರ್ಮವು ಅವಿವೇಕದಿಂದ "ನಾಸ್ತಿಕತೆ" ಯಾಗಿ ಪರಿಣಮಿಸಹತ್ತಿದೆ. ಧರ್ಮಸೂರ್ಯನ ಪ್ರಖರಕಿರಣಗಳು ಅಂಧಕಾರವನ್ನೋಡಿಸುತ್ತಿದ್ದರೂ ಜ್ಞಾನಚಂದ್ರನ ಪ್ರಭಾವಳಿಯು ಕಾಲಗರ್ಭದಲ್ಲಿ ಲೀನವಾಗಿರುವದೊ? ಭೂಮಂಡಲಪರಿವೃತವಾದ ಜಲನಿಧಿಯ ಉತ್ತುಂಗತರಂಗಸಂಘರ್ಷನಿರ್ಘೋಷವು ನಿರಂತರದಲ್ಲಿ ಪ್ರತಿಧ್ವನಿಸುತ್ತಿರುವಾಗ ಜಗತ್ಪಾಲಕನಾದ ಪರಮೇಶ್ವರನ ಪ್ರಸಾದವಾಣಿಯು ಸ್ತಂಭಿಸಿತೋ? ಪಾಪಿಗಳಿಗೆ ಸುಖವೂ ಪುಣ್ಯವಂತರಿಗೆ ಕಷ್ಟವೂ ಲಭಿಸುತ್ತಿರುವಾಗ ಕಲಿಸಾಮ್ರಾಜ್ಯದ ಪ್ರಾಬಲ್ಯವು ನಿಸ್ಸೀಮವಲ್ಲವೇ?

ಬೇರೊಂದು ಕಡೆಯಿಂದ ಕರಾಳಕಾಲಮೇಘಗಳು ಆಕಾಶಭಾಗವನ್ನೆಲ್ಲಾ ಆವರಿಸತೊಡಗಿರುವವು. ಪ್ರಾಗಾರಾಸೆಹಸ್ರಾಂಶುವಿನ ಬಾಲಕಿರಣಗಳನ್ನು ನೋಡಲಾದರೂ ಕಾಣುವವೋ? ಅಥವಾ ತೇಜಃಪುಂಜನೆನಿಸಿದ ಆತನೇ ಸ್ವಪ್ರೇರಿತನಾಗಿ ತನ್ನ ಪ್ರಖರಮಯೂಖಗಳಿಂದ ಈತಮೋಕ್ಷ್ಯನ್ನೆಭವನ್ನೊಡೆದು ಓಡಿಸಬಹುವನೊ? ಊಹಿಸಲಾರದಾಗಿದೆ. ಅವಿವೇಕಜೃಂಭಿತವಾದೀ ಲೋಕದಲ್ಲಿ ಅಂಧಕಾರವೂ ನೆರೆಗೊಂಡಿರುವುದಾಗಿನ ಸ್ಥಿತಿಯನ್ನು ಬರೆಯುವುದು ಹೇಗೆ? ಇಲ್ಲವೆ ಈ ಮಹಾಂಧಕಾರವು ಭಾವ್ಯಭ್ಯುದಯಕ್ಕೆ ಸೂಚಕವೋ? ರಾತ್ರಿಯು ದ್ವಿತೀಯಯಾಮದ ಪ್ರಥಮಪಾದವನ್ನು ಪ್ರವೇಶಿಸುವದರೊಳಗಾಗಿಯೇ ಪ್ರಾಣಿಕೋಟಿಯು ನಿದ್ರಾಸಕ್ತವಾಯಿತು. ಹಗಲು ದಿವಾನದಿಂದ ಅಂತರಿಕ್ಷ ವಾಗ್ಮಿದಲ್ಲಿ ಸಂಚರಿಸುವ ಮೇಘಾವಾಲಿಯೂ ಸ್ವಪ್ನ ಪರಂಪರೆಗಳನ್ನು ಭುಂಜಿಸಿ ಜೀವನಯಾತ್ರೆಯನ್ನು ಮೂಕರಂತೆ ಕಳೆಯುವ ಪಶುಪಕ್ಷ್ಯಾದಿಗಳೂ ಒಂದೇ ಕಾಲದಲ್ಲಿ ಅಜಾಗ್ರದವಸ್ಥೆಯನ್ನು ಹೊಂದಿದರೆಂದರೆ ನಮಗೆ ವಿಸ್ಮಯವಾಯಿತು. ಅಹಾ! ಎಂಥ ಮಹಾಧ್ವಾಂತದ ವಿಜೃಂಭಣೆ? ಜಡವಾದ ಪ್ರಕೃತಿಯನ್ನು ಧ್ವಂಸಗೊಳಿಸಿರುವದಲ್ಲದೆ ನಿರ್ಮಲವಾದ ಚೈತನ್ಯವನ್ನೂ ಪ್ರಮೂದಗೊಳಿಸಿರುವುದು. ಕ್ರಮಕ್ರಮವಾಗಿ ಅರ್ಧರಾತ್ರಿ ಸಮಯವು ಕಳೆದಿದೆ.

ಶೀತಸುಗಂಧಬಂಧುರವಾದ ಮಂದಮಲಯಗಂಧವಾಹನನು ಎಚ್ಚರವಿಲ್ಲದೆ ಮಲಗಿದವರನ್ನು ಎಬ್ಬಿಸುವನೋ ಎನ್ನುವಹಾಗೆ ಮೆಲ್ಲಮೆಲ್ಲನೆ ಪ್ರಾಣಿದೇಹಗಳನ್ನು ಸ್ಪರ್ಶಿಸುತ್ತಿರುವನು. ನಿಖಿಲ ಶಕುಂತಗಳೆಲ್ಲ ತಮಗುಂಟಾಗಿರುವ ಅನರ್ಥಗಳನ್ನು ಕಲಕಲನಿನಾದದಿಂದ ನಿವೇದಿಸುತ್ತಿರುವವು. ದೈನಿಕ ಕೃತ್ಯಗಳುಳ್ಳವರು ದಿನಮಣಿಯ ದಿವ್ಯತೇಜಸ್ಸನ್ನು ಬೇಡುತ್ತಿದ್ದರೆ ಜಾರಚೋರಾದಿಗಳು ಮಹಾಂಧಕಾರವನ್ನೇ ಅಪೇಕ್ಷಿಸುತ್ತಿರುವರು. ಈಶ್ವರೀಯ ಸೃಷ್ಟಿಯೊಂದು ಕಡೆ ಆನಂದವನ್ನೂ ಬೇರೊಂದು ಕಡೆ ವಿಷಾದವನ್ನೂ ಪ್ರಸಾದಿಸುವದೋ? ಅಲ್ಲ! "ಕಷ್ಟಾನಂತರದಲ್ಲಿ ಸುಖವೂ ಸುಖಾನಂತರದಲ್ಲಿ ಕಷ್ಟವೂ" ಎಂದು ಪರಿಶೀಲಿಸಿದರಾಯಿತು. ಜಾರಚೋರಾದಿಗಳಿಗೂ ಇತರರಿಗೂ ಒಂದೇ ವಿಧಿಯನ್ನೀಯುತ್ತ ಈಶ್ವರನು ತನ್ನ ಸರ್ವಲೋಕಪಿತೃತ್ವವನ್ನು ಪ್ರಕಾಶಗೊಳಿಸುತ್ತಲೇ ಇರುವನು.

ಸುಪ್ರಭಾತಕ್ಕಾಗಿ ಮಾನವಕೋಟಿಯು ಸಂತಾಪಗೊಳ್ಳುತ್ತಿರುವುದು. ಭೂದೇವಿಯ ರೋದನವಿನ್ನೂ ಕ್ರಮಕ್ರಮವಾಗಿ ಹೆಚ್ಚುತ್ತಲೇ ಇರುವುದು. ವಾಚಕರೇ! ಅದು ಮರಣಯಾತನೆಯಲ್ಲ. ಪ್ರಸವವೇದನೆ! ಇಷ್ಟರಲ್ಲಿಯೇ ಪೂರ್ವದಿಕ್ಪ್ರಾಂತಾಗ್ರದಿಂದಲಾವುದೋ ಪ್ರಭೋದಯವಾಯಿತು. ಅಂಧಕಾರವೆಲ್ಲ ಓಡಿ ಪಶ್ಚಿಮಾಂಬುಧಿಯಲ್ಲಿ ಮುಳುಗಿತೋ ಎಂಬುವಂತೆ ಅದೃಶ್ಯವಾಯಿತು. ಆಹಾ ಎಂಥ ಪ್ರಭೋದಯವು! ಈ ನಿರ್ಮಲ ಪುಂಜವು!! ಈ ಶಾಂತಿಪ್ರದಮೂರ್ತಿಯು!!! ಈ ಜೀವಲಾಭಯುದಾಯಕವು!!!! ಒಂದುಕಡೆ ಮಂದಮಾರುತವೂ ಮತ್ತೊಂದುಕಡೆ ವಿಹಂಗಸ್ವಾನವೂ ಬೇರೊಂದುಕಡೆ ಸುಪ್ರಭಾತವೂ ಎಷ್ಟು ಆಹ್ಲಾದಕರವಾಗಿರುವವು! ರಾತ್ರಿಯ ದೀರ್ಘಕಾಲದಲ್ಲೆಲ್ಲ ತಹತಹ ಪಡುತ್ತಿರುವ ಸರ್ವಪ್ರಾಣಿಗಳಿಗೂ ಏಕಕಾಲದಲ್ಲಿ ಶಾಂತಿಯುಂಟಾಯಿತು! ಇದಕ್ಕಿಂತಲೂ ಮುಂಚೆ ಶವಗಳಂತೆ ಭೂಪತಿತರಾದ ಮಾನವರೆಲ್ಲರೂ ಈಗಾಗಲೇ ಏನೇನೋ ಮಾಡತೊಡಗಿರುವರು. ಇವರ ಕಾರ್ಯಗಳ ಶುದ್ಧಾಶುದ್ಧತೆಗಳನ್ನು ಮಾನವರಾದ ನಾವು ಪರಿಶೀಲಿಸಬಹುದೆ? ಇವರೆಲ್ಲ ದೈವೀಸಭ್ಯತೆಯನ್ನು ಹೇಗೆ ಪಡೆದುಕೊಂಡರು? ಈ ಲೋಕವನ್ನೆಲ್ಲ ಬರೀ ಮಣ್ಣಂತಲೇ ಊಹಿಸಿದೆವು, ಎಂದಿಗೂ ಅಲ್ಲ! ನೂತನ ಚೈತನ್ಯಾಂಕುರಕ್ಕೆ ಇದು ಬೀಜವೋ ಗೊಬ್ಬರವೋ ಆಗಿರಬಹುದು. ಇರಲಿ! ಇವರಿಗೀವಿಧವಾದ ಪ್ರಬಲಶಕ್ತಿಯೆಲ್ಲಿಂದ ಪ್ರಾಪ್ತವಾಯಿತು? ಓಹೋ ತಿಳಿಯಿತು! ಪ್ರಭೋದಯದಿಂದಲೇ! ಅದು "**ಪಂಚಾಚಾರ್ಯಪ್ರಭೆ**"

ಇದು ಮಿಂಚಿನಂತೆ ಕ್ಷಣಿಕವೂ ನಿರಾಧಾರವೂ ಆದುದಲ್ಲ. ಧರ್ಮಪ್ರಭೆ. ಪರಶಿವಪ್ರಭೆ. ಕಾಶೀನಾಥಪಂಡಿತರ ಪ್ರತಿಭಾಪ್ರಭೆ. ಜಗದ್ಗುರುಪ್ರಭೆ. "**ಪಂಚಾಚಾರ್ಯಪ್ರಭೆ**" ಇದು! ಪ್ರಭೋದಯದಿಂದ ಪ್ರಪಂಚದಲ್ಲಿ ಅದ್ಭುತಪರಿವರ್ತನೆಯಾಯಿತು. ಮೊದಲೇ ಅಲ್ಪಕಾಂತಿಯುಳ್ಳ ಕೆಲ 'ತಾರೆ' ಗಳು ಈಗ 'ಮಿಣಕ್ ಮಿಣಕ್' ಎನ್ನುತ್ತ ಮರಣಾಸನ್ನವಾಗಿವೆ. ಪ್ರಭೆಯ ಪ್ರಚಂಡಪ್ರವಾಹವನ್ನು ತಡೆಯಲಾರದ ಗೂಗೆಗಳು ಗುಹೆಸೇರಿ ಘೂತ್ಕಾರವನ್ನಷ್ಟೇ ಮಾಡಿದವು. ಕುಟಿಲೋಚ್ಚಾಟನಾಕ್ರೋಶವನ್ನಾಚರಿಸಿದವು. ಅಧೋಮುಖವಾಗಿ ವಿಕಟಿತಪದ ಸೋಗನ್ನು ತೋರಿಸಿದವು. ಎಲ್ಲಿಯೂ ಫಲವಿಲ್ಲದೊಂದಿರಲಿ! ಅಪಮಾನವನ್ನೂ ಅನುಭವಿಸಬೇಕಾಯಿತು. ದುರ್ಮತಿಗಳ ಕರ್ಮಫಲವಿದು ಸಹಜವೇ! ಪ್ರಭೆಯು ಬಾಲ್ಯದ ಸಪ್ತವರ್ಷಗಳನ್ನು ಸುಖವಾಗಿ ಕಳೆದಿದೆ. ಅದರ ಸಹಜ ರಮಣೀಯಗಳಾದ ಧರ್ಮಕಿರಣಗಳು ಧರಣಿಯಲ್ಲೆಲ್ಲ ಆದರಣೀಯಗಳಾದವು. ಅದಕ್ಕೆ ಅಷ್ಟಮವರ್ಷಾಭ್ಯುದಯವು ಪ್ರಾಪ್ತವಾಗಬೇಕಾದರೆ ಶಿವನ ಕೃಪೆಯೂ ಗುರುವಿನ ಅನುಗ್ರಹವೂ ಧರ್ಮದ ದಾಕ್ಷಿಣ್ಯವೂ ತ್ರಿವೃತ್ಸೂತ್ರದಂತೆ "ರಕ್ಷಾಬಂಧನ" ದ ಕಾರ್ಯವನ್ನು ಮಾಡುತ್ತಿದ್ದವು. ಶಿವನ ಭಜನೆಯನ್ನೂ ಗುರುವಿನ ಭಕ್ತಿಯನ್ನೂ ಧರ್ಮದ ಆಚರಣೆಯನ್ನೂ ಜಗದಲ್ಲಿ ಬೋಧಿಸಿದ "**ಪ್ರಭೆಗೆ**" ಅಭ್ಯುದಯವಾದುದರಲ್ಲಿ ಸಂದೇಹವೇ ಇಲ್ಲ! ಪ್ರಭಾಭ್ಯುದಯದಿಂದಲೇ ಧರ್ಮೋನ್ನತಿಯೂ ವಿವೇಕೋದಯವೂ ಯಶಃಪ್ರಾಪ್ತಿಯೂ ಆಗಲಿದೆ. ಮಾನವ ಕಲ್ಯಾಣವೆಂದರೆ. "ಧರ್ಮ". ಅದು "ವೇದಬೋಧಿತೇಷ್ಟಸಾಧನತಾಕ" ವಾಗಿಯೂ "ಅಭ್ಯುದಯನಿಶ್ರೇಯಸಸಿದ್ಧಿದಾಯಕ" ವಾಗಿಯೂ "ಸಕಲಕ್ಷಣಲಕ್ಷಿತ" ವಾಗಿಯೂ "ನೃತ್ತಿಮಾ" ನಾಗಿಯೂ ಇದೆ. ಅಂದರೆ ನೋಕ್ಷವೆಂದರೆ "ಧರ್ಮಾಭ್ಯುದಯ" ವೆಂತಲೇ ತಿಳಿಯತಕ್ಕದ್ದು! ಅದು "ಪ್ರಭಾಭ್ಯುದಯ" ದಿಂದಲೇ ಸಿದ್ಧಿಸುವುದು. ಈ ಅಭ್ಯುದಯಕಾಲದಲ್ಲಿ "ಪ್ರಭಾ" ನುಗಾಮಿಗಳಾಗಿ ಧರ್ಮವನ್ನಾಚರಿಸಿ ಅಭ್ಯುದಯವನ್ನು ಪಡೆಯಲು ಮಾನವರೆಲ್ಲರೂ ವಿಶೇಷಾಸಕ್ತಿಯನ್ನು ತೋರಿಸುತ್ತಿರುವುದು ಪುರುಷಾರ್ಥವೇಸರಿ! ಮಾನವರೇ! ಗತವನ್ನು ಚಿಂತಿಸದೆ ಈಗಲಾದರೂ ಭವಿಷ್ಯತ್ಕರ್ತವ್ಯವನ್ನು "ಪ್ರಭಾಭ್ಯುದಯ" ದಿಂದ ನಿರ್ವಹಿಸಿಕೊಳ್ಳಿರಿ. ಪರಂಜ್ಯೋತಿಯನ್ನನುಗ್ರಹಿಸುವ "ಪ್ರಭಾಭ್ಯುದಯ" ವು ಪ್ರಜಾಭ್ಯುದಯವಲ್ಲವೆ? ಇಂತಹ ಸುಸಮಯದಲ್ಲಿ ಅತುಲೋತ್ಸಾಹದಿಂದ ಮಹಾಘೋಷದೊಡನೆ "ಜಯಘೋಷ" ವು ಜಗತ್ತಿನಲ್ಲೆಲ್ಲ ಪ್ರಸರಿಸುವಾಗ 'ಓಂ' ನು ಮಾತ್ರ ಮೌನವನ್ನು ವಹಿಸುವದೇಕೆ? ನನ್ನಧ್ವನಿಯನ್ನೂ ಆ ಮಹಾನಾದದಲ್ಲಿ ಸಮ್ಮೇಳನ ಮಾಡಿ ಧನ್ಯನಾಗುತ್ತಿರುವೆನು.

"ಪಂಚಾಚಾರ್ಯಪ್ರಭಾ" ಕೀ ಜಯ!

ಸ್ವೀಕಾರ

ಅರಸೀಕೆರೆ ತಾಲ್ಲೂಕು ಹುಲ್ಯಾರು ಗ್ರಾಮನಿವಾಸಿಗಳಾದ ಮ|| ರಾ|| ಸಾಹುಕಾರ್ ವಿ. ರುದ್ರಪ್ಪಶೆಟ್ಟರು ತಾ|| ೩೦-೪-೧೯೩೪ ನೆಯ ಸೋಮವಾರ ದಿವಸ ತಮ್ಮ ಮಾವಂದಿರಾದ ಕೈ|| ಮರುಳಸಿದ್ಧಪ್ಪಶೆಟ್ಟರವರ ಆತ್ಮಶಾಂತ್ಯರ್ಥವಾಗಿ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ|| ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಶ್ರೀಮಂತ ಬೇಲೇರಿ ಮಲ್ಲಿಕಾರ್ಜುನಪ್ಪನವರು ಚೈತ್ರ ಶು|| ೧ ದಿವಸ ತಮ್ಮ ದಲಾಲಿ ಅಂಗಡಿಯ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಶ್ರೀಜಗದಾಚಾರ್ಯರ ಹೆಸರಿನಿಂದ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮತ್ತು ಇದೇಸ್ಥಳದಲ್ಲಿರುವ ಮ|| ರಾ|| ರುದ್ರಾಪುರದ ರುದ್ರಪ್ಪನವರ ಪುತ್ರಿ ಚಿ|| ಸೌ|| ಗುರುಬಸವ್ವನನ್ನು ಲಕ್ಷ್ಮೇಶ್ವರ ತಾ|| ವನಸಿಗ್ಗಲಿಯಲ್ಲಿರುವ ಮ|| ರಾ|| ಮಾಗಳದ ದುಂಡಪ್ಪನವರ ಪುತ್ರ ಚಿ|| ಮಹಾದೇವಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ವರನಕಡೆಯಿಂದ ತೆಗೆಯಿಸಿದ 2ರೂ. ವಧುವಿನ ಕಡೆಯಿಂದ ತೆಗೆಯಿಸಿದ 1ರೂ. ಒಟ್ಟು 8 ರೂ. ಗಳು ಮ|| ರಾ|| ಬೇಲೇರಿ ಮಲ್ಲಿಕಾರ್ಜುನಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಜನನ ವೈಚಿತ್ರ್ಯ!

ಅಫ್ಘಾನಿಸ್ಥಾನದಲ್ಲಿ ಒಬ್ಬ ಸ್ತ್ರೀಯು ಏಕಕಾಲದಲ್ಲಿ ಎರಡು ಹೆಣ್ಣು ಒಂದು ಗಂಡು ಮಗುವನ್ನು ಹೆತ್ತಿರುವಳು. ಹೆಣ್ಣುಮಕ್ಕಳೆರಡೂ ಬೆಳ್ಳಗಿದ್ದು ಗಂಡು ಮಗುವು ಮಾತ್ರ ಮಸಿಯಂತೆ ಕಪ್ಪಾಗಿರುವದಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

ಹಿಂದಿನ ಪ್ರಕರಣಗಳಲ್ಲಿ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿರುವ ಮೇರೆಗೆ ಅಪೌರುಷೇಯವಾದುದರಿಂದೇ ನಿರ್ದೋಷವಾಗಿರುವ ವೇದರೂಪವಾದ ಶಾಸ್ತ್ರವು ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಎಂಬೀ ವಿಭಾಗಾತ್ಮಕವಾಗಿರುವಂತೆ ಅಂಗೋಪಾಂಗರೂಪದಿಂದಲೂ ವಿಸ್ತೃತವಾಗಿರುವುದು. ಯಾಜ್ಞವಲ್ಕ್ಯನು (೧-೩)

ಪುರಾಣನ್ಯಾಯಮೀಮಾಂಸಾಧರ್ಮಶಾಸ್ತ್ರಾಂಗಮಿಶ್ರಿತಾಃ ।
ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ ॥

ಎಂಬುದಾಗಿ ಹೇಳುತ್ತಾನೆ. ಅವನ ಈ ಹೇಳಿಕೆಯಂತೆ ಋಗಾದಿ ನಾಲ್ಕು ವೇದಗಳೂ, ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ, ಕಲ್ಪವೆಂಬ ಆರು ಅಂಗಗಳೂ; ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರವೆಂಬ ನಾಲ್ಕು ಉಪಾಂಗಗಳೂ ಕೂಡಿ ವೇದವಿದ್ಯೆಯು ಹದಿನಾಲ್ಕು ವಿಧವಾಗಿದೆ. ಈ ಹದಿನಾಲ್ಕು ವಿದ್ಯೆಗಳೂ ಪುರುಷಾರ್ಥಸಾಧಕಗಳಾಗಿವೆ. ಮತ್ತು ಋಗಾದಿ ನಾಲ್ಕು ವೇದಗಳ ಉಪವೇದಗಳೂ ಅನುಕ್ರಮವಾಗಿ ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥವೇದ (ಅರ್ಥಶಾಸ್ತ್ರ)ವೆಂಬುದಾಗಿ ಪ್ರಸಿದ್ಧವಾಗಿರುತ್ತವೆ. ಮೇಲಿನ ಹದಿನಾಲ್ಕು ವಿದ್ಯೆಗಳೊಡನೆ ಈ ನಾಲ್ಕು ಉಪವೇದಗಳನ್ನೂ ಸೇರಿಸಿದರೆ ಹದಿನೆಂಟು ವಿದ್ಯೆಗಳಾಗುವವು.

ಹದಿನಾಲ್ಕು ವಿದ್ಯೆಗಳಲ್ಲಿ ಪರಿಗಣಿಸಲ್ಪಡುವ ಪುರಾಣಗಳಲ್ಲಿ ಉಪಪುರಾಣಗಳೂ ನ್ಯಾಯದಲ್ಲಿ ವೈಶೇಷಿಕಶಾಸ್ತ್ರವೂ, ಮೀಮಾಂಸೆಯಲ್ಲಿ ಬ್ರಹ್ಮಮೀಮಾಂಸೆಯೂ, ಧರ್ಮಶಾಸ್ತ್ರದಲ್ಲಿ (ಕಾಮಿಕಾದ್ಯಾಗಮವುಳ್ಳುದರಲ್ಲಿ) ಮನ್ವಾದಿಸ್ಮೃತಿಗಳೂ ಅಂತರ್ಭೂತಗಳಾಗಿವೆ. "**ಧರ್ಮಶಾಸ್ತ್ರ**" ವೆಂದರೆ ಶಿವೋಪದಿಷ್ಟವಾದ ಆಗಮಶಾಸ್ತ್ರವು. ಮನ್ವಾದಿಸ್ಮೃತಿಗಳು ಅದನ್ನು ಪುರಸ್ಕರಿಸಿಯೇ ಧರ್ಮಾಚರಣೆಗಳನ್ನು ಪ್ರತಿಪಾದಿಸುತ್ತವೆ. ಅದುಕಾರಣವೇ ಸರ್ವತಂತ್ರಸ್ವತಂತ್ರರು ಆಗಮಸಂಹಿತೆಗಳಿಗೂ ಸ್ಮೃತಿಗ್ರಂಥಗಳಿಗೂ ಸಬಲದುರ್ಬಲನ್ಯಾಯವಿರುವುದೆಂದು ಹೇಳುತ್ತಾರೆ. ಕಲ್ಪಗ್ರಂಥಗಳಲ್ಲಿಯೂ ಧರ್ಮಾಚರಣೆಗಳು ಪ್ರತಿಪಾದಿಸಲ್ಪಡುವುದರಿಂದ ಅವುಗಳಿಗೂ ಧರ್ಮಶಾಸ್ತ್ರಗಳೆನ್ನಬಹುದಾದರೂ, ಮೇಲೆ ಕಾಣಿಸಿದ ಹದಿನಾಲ್ಕು ವಿದ್ಯೆಗಳ ಪರಿಗಣನೆಯಲ್ಲಿ ಮುಖ್ಯವಾದ ಧರ್ಮಶಾಸ್ತ್ರವೆಂದರೆ ಶಿವೋಪದಿಷ್ಟಧರ್ಮಸಂಹಿತೆಯೆಂಬ ಅಭಿಪ್ರಾಯದಿಂದೇ 'ಧರ್ಮಶಾಸ್ತ್ರ' ವೆಂಬುದು ಪೃಥಕ್ಕಾಗಿ ತೋರಿಸಲ್ಪಟ್ಟಿದೆ. ಹಾಗೂ ಚಾತುರ್ವರ್ಣ್ಯಧರ್ಮಗಳಿಗೆ ಸಂಬಂಧಿಸಿದ ಸರ್ವವಿಧವಿಧಾನಗಳಿಗೂ ಮೂಲಭೂತಗಳಾದ ವಚನಗಳು ಕಾಮಿಕಾದ್ಯಾಗಮಸಂಹಿತೆಗಳಲ್ಲಿವೆ. ವೇದಾಗಮಸಂಹಿತೆಗಳ ಪ್ರವರ್ತಕರಲ್ಲಿ ಮುಖಂಡನಾದ ಶ್ರೀ ನಂದಿಕೇಶ್ವರನು ಶಿವಧರ್ಮಸಂಹಿತೆಯಲ್ಲಿ ಹೀಗೆ ನಿರೂಪಿಸುತ್ತಾನೆ:—

ಸ ಯೋನಿಃ ಸರ್ವವಿದ್ಯಾನಾಂ ಪುರುಷಃ ಕಾರಣಂ ಪರಃ ।
ನಿಃಶ್ವಾಸತುಲ್ಯಮುದ್ಭೂತಾನ್ಯಖಿಲಾನ್ಯಾಗಮಾನಪಿ ॥
ಸಾವಶೇಷಾನ್ ಕ್ರಿಯಾಭಾಗೈರವೇದ್ಯಾನ್ಪಶುಸಮ್ಮಿತೇಃ ।
ವಿಚಿನ್ತ್ಯ ಧರ್ಮಶಾಸ್ತ್ರಂ ತಚ್ಛೈವಮಾಖ್ಯಾತವಾನ್ಪುನಃ ।
ಅನನ್ತವೇದಸನ್ದಿಷ್ಟಸರ್ವಾರ್ಥಸ್ಯೋಪಬೃಂಹಣಮ್ ॥
ಕಾಮಿಕಾದಿಪ್ರಭೇದೇನ ಭಿನ್ನಮೇಕಾರ್ಥಶೋಭಿತಮ್ ।
ತತ್ರತ್ಯಾಲಾವತೀರ್ಣೈಸ್ತು ಮುನಿಭಿಃ ಶಂಸಿತವ್ರತೈಃ ।
ಶಾಸ್ತ್ರಂ ತದನುಸ್ಮೃತ್ಯೈವ ಕಥ್ಯತೇ ಧರ್ಮಸಂಗ್ರಹಃ ॥
ಆದಿತಃ ಶೈವಮೇವಾಹುರಾರ್ಷಂ ತದನುಸಾರತಃ ॥
ಧರ್ಮಶಾಸ್ತ್ರಮಿತಿ ಪ್ರಾಜ್ಞಾಃ ಶಾಸ್ತ್ರನಿರ್ಣಯತತ್ಪರಾಃ ॥

[ಸರ್ವವಿದ್ಯಾಧಿಪತಿಯಾದ ಪರಮೇಶ್ವರನು ನಿಶ್ವಾಸದಂತೆ ಆವಿರ್ಭವಿಸಿದ ಋಗಾದಿವೇದಗಳಲ್ಲಿ ಕ್ರಿಯಾಕಾಂಡವು (ಸರ್ವಜೀವಾನುಷ್ಠೇಯ ಕ್ರಿಯಾಭಾಗವು) ಸಾಂಗವಾಗಿಲ್ಲವೆಂದೂ, ಆ ವೇದಗಳ ಅರ್ಥವು ಜೀವಕೋಟಿಗೆ ಸರಿಯಾಗಿ ತಿಳಿಯದೆಂದೂ ಯೋಚಿಸಿ ನಿಶ್ಶೇಷ ಕ್ರಿಯಾಭಾಗವನ್ನು ತಿಳಿಸುವಂತಹದೂ, ಸಮಸ್ತವೇದಾರ್ಥದ ಉಪಬೃಂಹಣರೂಪವಾದುದೂ, ಏಕಾರ್ಥಬೋಧಕಗಳಾದ ಕಾಮಿಕಾದ್ಯನೇಕ ಸಂಹಿತೆಗಳನ್ನೊಳಗೊಂಡುದೂ ಆದ ಆಗಮಶಾಸ್ತ್ರವೆಂಬ ಧರ್ಮಶಾಸ್ತ್ರವನ್ನು ಬೋಧಿಸಿದನು. ಬಳಿಕ ಆ ಆ ಕಾಲದಲ್ಲಿ ಅವತರಿಸಿದ ಮುನಿವರ್ಯರಿಂದ ಶಿವಾಗಮವೆಂಬ ಮೂಲಧರ್ಮಶಾಸ್ತ್ರವನ್ನನುಸರಿಸಿಯೇ ಧರ್ಮಸಂಗ್ರಹವು ಹೇಳಲ್ಪಡುವುದು. ಅನಾದಿಧರ್ಮಶಾಸ್ತ್ರವೆಂದರೆ ಶಿವಸಂಹಿತಾಭಾಗವೆಂದೇ ಸಿದ್ಧವಾಗುವುದು. ಇದನ್ನು ಆಧಾರವಾಗಿಟ್ಟುಕೊಂಡೇ ಸ್ಮೃತಿಸಮೂಹವು ಧರ್ಮಶಾಸ್ತ್ರವೆಂಬ ಹೆಸರಿಂದ ಪ್ರಸಿದ್ಧವಾಗಿದೆಯೆಂದು ಶಾಸ್ತ್ರನಿರ್ಣಯತತ್ಪರರಾದ ಜಾಣರು ಅಭಿಪ್ರಾಯಪಡುತ್ತಾರೆ.]

ಎಂಬೀ ಪ್ರಮಾಣವಚನವು ಚತುರ್ದಶವಿದ್ಯೆಗಳಲ್ಲಿ ಪರಿಗಣಿಸಲ್ಪಡುವ ಮೂಲಧರ್ಮಶಾಸ್ತ್ರವೆಂದರೆ ಮುಖ್ಯವಾಗಿ ಶಿವಾಗಮವೆಂದೇ ಉದ್ಘೋಷಿಸುವುದು. ಇನ್ನು, ಉಪವೇದಗಳೆನಿಸುವ ಆಯುರ್ವೇದಾದಿಗಳ ಸ್ವರೂಪವು ಹೀಗಿರುವುದು.

ಆಯುರ್ವೇದವು :—ಇದರಲ್ಲಿ ಸೂತ್ರ, ಶಾರೀರ, ಐಂದ್ರಿಯ, ಚಿಕಿತ್ಸಾ, ನಿದಾನ, ವಿಮಾನ, ವಿಕಲ್ಪ, ಸಿದ್ಧಿ; ಎಂಬ ಎಂಟುಸ್ಥಾನಗಳು ಕಲ್ಪಿಸಲ್ಪಟ್ಟಿವೆ. ಬ್ರಹ್ಮ, ಪ್ರಜಾಪತಿ, ಅಶ್ವಿನೀಕುಮಾರ, ಧನ್ವಂತರಿ, ಇಂದ್ರ, ಭರದ್ವಾಜ, ಆತ್ರೇಯ, ಅಗ್ನಿವೇಶ್ಯ ಮೊದಲಾದವರಿಂದ ಈ ವೇದವು ಪರಂಪರೆಯಿಂದ ಬೋಧಿಸಲ್ಪಟ್ಟುದಾಗಿ ಚರಕನಿಂದ ಸಂಕ್ಷಿಪ್ತಗೊಳಿಸಲ್ಪಟ್ಟಿದೆ. ಸುಶ್ರುತನು ಇದರ ಪಂಚಸ್ಥಾನಾತ್ಮಕಗ್ರಂಥವನ್ನು ಪೃಥಕ್ಕಾಗಿ ಬರೆದಿದ್ದಾನೆ. ಈ ಆಯುರ್ವೇದೀಯ ವಿಷಯವೇ ವಾಗ್ಭಟ ವೃಷಭರಾಜೀಯಾದಿ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿರುತ್ತದೆ. ಈಗಣ ಪಾಶ್ಚಾತ್ಯರವರಿಂದ ನೂತನ ಸಂಶೋಧನರೂಪವಾದುದೆಂದು ಬಣ್ಣಿಸಲ್ಪಡುವ ಮೂತ್ರವನ್ನು ಪರಿಶೀಲಿಸಿ ಪರೀಕ್ಷಿಸುವ ಪದ್ಧತಿಯೆಂಬುದು ವೃಷಭರಾಜೀಯಗ್ರಂಥಕಾರನಿಗೆ ತಿಳಿಯದು! ಕಾಮಶಾಸ್ತ್ರವೂ ಆಯುರ್ವೇದದಲ್ಲಿಯೇ ಅಂತರ್ಭೂತವಾಗಿರುವುದು. ಸುಶ್ರುತನು 'ವಾಜೀಕರಣ' ಪ್ರಕರಣವನ್ನು ನಿರೂಪಿಸಿದ್ದಾನೆ. ವಾತ್ಸ್ಯಾಯನನಿಂದ ಪಂಚಾಧ್ಯಾಯಾತ್ಮಕವಾದ ಕಾಮಶಾಸ್ತ್ರವು ರಚಿಸಲ್ಪಟ್ಟಿದೆ. ರತಿರಹಸ್ಯ, ಅನಂಗರಂಗ ಮುಂತಾದ ಗ್ರಂಥಗಳೂ ಕಾಮಶಾಸ್ತ್ರವನ್ನು ವಿವರಿಸತಕ್ಕವುಗಳಾಗಿವೆ. ಶಾಸ್ತ್ರೋದ್ದಿಷ್ಟ ವಿಷಯೋಪಭೋಗವಾದರೂ ಅಂದರೆ ಕಾಮಶಾಸ್ತ್ರಾನುಸಾರವಾಗಿ ವಿಷಯಗಳನ್ನುಪಭೋಗಿಸಿದರೂ ಅದು ಕೊನೆಗೆ ದುಃಖದಲ್ಲಿಯೇ ಪರ್ಯವಸಾನ ಹೊಂದುವುದೆಂಬ ಸಂಗತಿಯು ಅನುಭವಸಿದ್ಧವಾಗಿ ವಿಷಯಗಳಲ್ಲಿ ವಿರಾಗವೃತ್ತಿಯುಂಟಾಗುವಿಕೆಯೇ ಕಾಮಶಾಸ್ತ್ರದ ಅಂತಿಮಧ್ಯೇಯವು. ರೋಗವೂ, ರೋಗಸಾಧನವೂ, ರೋಗನಿವೃತ್ತಿಯೂ, ಆರೋಗ್ಯೋಪಾಯವೂ ಎಂಬಿವುಗಳ ಜ್ಞಾನವಾಗುವಿಕೆಯೇ ಚಿಕಿತ್ಸಾಶಾಸ್ತ್ರದ ಪ್ರಯೋಜನವು. ಮನುಷ್ಯನು ಅಭ್ಯುದಯವನ್ನಾಗಲಿ, ನಿಃಶ್ರೇಯಸ್ಸನ್ನಾಗಲಿ ಸಂಪಾದಿಸಲು ಅವನ ಶರೀರವೇ ಮುಖ್ಯಸಾಧನವು; ಅದಾದರೋ ಆರೋಗ್ಯವುಳ್ಳದ್ದಾಗಿದ್ದರಲ್ಲವೇ! ಅದುಕಾರಣವೇ ದೇಹಸ್ವಾಸ್ಥ್ಯಕ್ಕಾಗಿ ಚಿಕಿತ್ಸಾಶಾಸ್ತ್ರದ ಆವಶ್ಯಕತೆಯುಂಟು.

ಧನುರ್ವೇದವು:—ಈ ಎರಡನೆಯ ಉಪವೇದದ ಪ್ರವರ್ತಕನು ವಿಶ್ವಾಮಿತ್ರನು. ಇದರಲ್ಲಿ ದೀಕ್ಷಾ, ಸಂಗ್ರಹ, ಸಿದ್ಧಿ, ಪ್ರಯೋಗಗಳೆಂಬ ನಾಲ್ಕು ಪಾದಗಳಿವೆ. ಮೊದಲನೆಯ ದೀಕ್ಷಾಪಾದದಲ್ಲಿ ಆಯುಧಗಳ ಲಕ್ಷಣವೂ, ಅಧಿಕಾರಿಗಳ ಸ್ವರೂಪವೂ ಮುಂತಾದ ವಿಷಯಗಳು ನಿರೂಪಿಸಲ್ಪಟ್ಟಿವೆ. ಆಯುಧಗಳು ಮುಕ್ತ, ಅಮುಕ್ತ, ಮುಕ್ತಾಮುಕ್ತ, ಯಂತ್ರಮುಕ್ತವೆಂಬುದಾಗಿ ನಾಲ್ಕು ವಿಧಗಳಾಗಿರುತ್ತವೆ. ಅವುಗಳಲ್ಲಿ ಚಕ್ರಾದಿಗಳು ಮುಕ್ತಾಯುಧಗಳೆಂದೂ, ಖಡ್ಗಾದಿಗಳು ಅಮುಕ್ತಗಳೆಂದೂ, ಶಲ್ಯವೇ ಮುಂತಾದ ಅವಾಂತರಾಯುಧಗಳು ಮುಕ್ತಾಮುಕ್ತಗಳೆಂದೂ ಶರಾದಿಗಳು ಯಂತ್ರಮುಕ್ತಗಳೆಂದೂ ಹೇಳಲ್ಪಡುತ್ತವೆ. ಮುಕ್ತಾಯುಧಕ್ಕೆ ಅಸ್ತ್ರವೆಂದೂ, ಅಮುಕ್ತಾಯುಧಕ್ಕೆ ಶಸ್ತ್ರವೆಂದೂ ಬೇರೆ ಹೆಸರುಗಳಿವೆ. ಅಸ್ತ್ರಗಳು ಬ್ರಾಹ್ಮ, ವೈಷ್ಣವ, ಪಾಶುಪತ, ಪ್ರಾಜಾಪತ್ಯ, ಆಗ್ನೇಯವೆಂಬೀ ಮೊದಲಾದ ಭೇದಗಳಿಂದ ಅನೇಕ ಪ್ರಕಾರವಾಗಿವೆ. ಆ ಆ ದೇವತೆಗಳಿಂದಲೂ, ಮಂತ್ರಗಳಿಂದಲೂ ಯುಕ್ತಗಳಾದ ಈ ನಾಲ್ಕು ವಿಧವಾದ ಆಯುಧಗಳಲ್ಲಿ ಕ್ಷತ್ರಿಯಕುಮಾರರಾಗಲಿ, ಅವರ ಅನುಯಾಯಿಗಳಾದ ಇತರರಾಗಲಿ, ಯಾರು ಅಧಿಕಾರಿಗಳಾಗಿರುವರೋ ಅವರೆಲ್ಲರೂ ಪದಾತಿಗಳೂ, ರಥಾರೂಢರೂ, ಗಜಾರೂಢರೂ, ಅಶ್ವಾರೂಢರೂ ಎಂಬುದಾಗಿ ನಾಲ್ಕು ತೆರನಾಗಿರುತ್ತಾರೆ. ಈ ವೇದದ ಮೊದಲನೆಯ ಪಾದದಲ್ಲಿಯೇ ದೀಕ್ಷಾ, ಅಭಿಷೇಕ, ಶಕುನ, ಮಂಗಲ, ಕರಣಮೊದಲಾದ ವಿಷಯಗಳೂ ಇವೆ. ಎರಡನೆಯ ಪಾದದಲ್ಲಿ ಸರ್ವವಿಶಿಷ್ಟ ಶಸ್ತ್ರಗಳ ಹಾಗೂ ಆಚಾರ್ಯರ ಲಕ್ಷಣಗಳೂ, ಆಚಾರ್ಯೋಪಸನ್ನತಿಯ ಪದ್ಧತಿಯೂ ಶಸ್ತ್ರಾಸ್ತ್ರಗಳ ಸಂಗ್ರಹಮರ್ಮವೂ ಮುಂತಾದ ವಿಷಯಗಳು ಪ್ರದರ್ಶಿತಗಳಾಗಿವೆ. ಮೂರನೆಯಪಾದದಲ್ಲಿ ಗುರುಸಂಪ್ರದಾಯದಿಂದ ಸಿದ್ಧಗಳಾದ ವಿಶಿಷ್ಟಶಸ್ತ್ರಾಸ್ತ್ರಗಳನ್ನು ಪುನಃ ಪುನಃ ಅಭ್ಯಾಸಿಸುವಿಕೆಯೂ, ಮಂತ್ರಾಧಿದೇವತೆಗಳ ಸಿದ್ಧೀಕರಣವೂ ಮೊದಲಾದ ವಿಷಯಗಳಿವೆ. ನಾಲ್ಕನೆಯ ಪಾದದಲ್ಲಿ ದೇವತಾರ್ಚನೆ, ಅಭ್ಯಾಸ ಮುಂತಾದುದರಿಂದ ಸಿದ್ಧಿಸಲ್ಪಟ್ಟ ಬೇರೆಬೇರೆ ಅಸ್ತ್ರಗಳ ಪ್ರಯೋಗಗಳು ತೋರಿಸಲ್ಪಟ್ಟಿವೆ. ದುಷ್ಟರನ್ನು ದಂಡಿಸುವುದೂ, ಕಳ್ಳರೂ, ಕಾಕುಜನರೂ ಮುಂತಾದವರಿಂದ ಬಾಧೆಯುಂಟಾಗದ ಹಾಗೆ ಪ್ರಜೆಗಳನ್ನು ಸಂರಕ್ಷಿಸುವುದೂ ಎಂಬುದೇ ಧನುರ್ವೇದದ ಪ್ರಯೋಜನವು. ವಿಶ್ವಾಮಿತ್ರನು ತನಗೆ ಮಹೇಶ್ವರ ಪ್ರಜಾಪತಿ ಮೊದಲಾದ ಗುರುಪರಂಪರೆಯಿಂದ ಪ್ರಾಪ್ತವಾದ ಈ ಧನುರ್ವೇದವನ್ನು ಕ್ಷತ್ರಿಯರ ಉಪಯೋಗಕ್ಕೋಸ್ಕರ ರಚಿಸಿದನು. ಈ ವೇದಾಂತರ್ಗತಗಳಾದ ಎಷ್ಟೋ ವಿಷಯಗಳು 'ಶುಕ್ರನೀತಿ' ಬೃಹಸ್ಪತಿತಂತ್ರ ಮೊದಲಾದ ರಾಜನೀತಿಶಾಸ್ತ್ರಗ್ರಂಥಗಳಲ್ಲಿ ವಿವರಿಸಲ್ಪಟ್ಟಿವೆ.

ಗಾಂಧರ್ವವೇದವು:—ಇದರ ಪ್ರವರ್ತಕನು ಭರತಮುನಿಯು. ಇದು ಗೀತ, ವಾದ್ಯ, ನೃತ್ಯವೆಂಬ ಭೇದಗಳಿಂದ ಅನೇಕ ಪ್ರಕಾರವಾಗಿದೆ. ದೇವತೆಗಳಾರಾಧನೆಯೂ, ನಿರ್ವಿಕಲ್ಪಸಮಾಧಿ ಮುಂತಾದುದೂ ಸಿದ್ಧಿಸುವುದೇ ಈ ವೇದದ ಪ್ರಯೋಜನವು. ಈ ವೇದವನ್ನನುಸರಿಸಿಯೇ ಸಂಗೀತವಿದ್ಯೆಯನ್ನು ಬೋಧಿಸತಕ್ಕ 'ಸಂಗೀತರತ್ನಾಕರ' ಮೊದಲಾದ ಗ್ರಂಥಗಳು ವಿಪುಲವಾಗಿವೆ.

ಅರ್ಥವೇದವು:—ಇದು ಬಹುವಿಧವಾದ ಅರ್ಥಶಾಸ್ತ್ರರೂಪವಾಗಿರುವುದು. ವ್ಯಾವಹಾರಿಕ ನೀತಿಶಾಸ್ತ್ರವೂ ಅಶ್ವಶಾಸ್ತ್ರವೂ, ಶಿಲ್ಪಶಾಸ್ತ್ರವೂ, ಸೂಪಶಾಸ್ತ್ರವೂ, ಚತುಷ್ಷಷ್ಟಿಕಲಾಶಾಸ್ತ್ರವೂ ಮೊದಲಾದ ಅನೇಕಶಾಸ್ತ್ರಗಳು ಇದರ ಅಂತರ್ಭೂತಗಳಾಗಿವೆ. ಇವುಗಳ ಪ್ರಯೋಜನಭೇದವು ವಿಶೇಷತಃ ವ್ಯಾವಹಾರಿಕ ವಿಷಯಗಳನ್ನೇ ಅನುಲಕ್ಷಿಸಿರುತ್ತದೆ. 'ಕೌಟಿಲ್ಯತಂತ್ರ' ವೆಂಬ ಅರ್ಥಶಾಸ್ತ್ರವಾದರೂ ಈ ವೇದವನ್ನನುಸರಿಸಿರುವುದು.

ವೇದವಿದ್ಯಾವಿಸ್ತಾರರೂಪಗಳಾಗಿರತಕ್ಕ ಹದಿನಾಲ್ಕು ವಿದ್ಯೆಗಳಲ್ಲಿ ಪರಿಗಣಿಸಲ್ಪಡತಕ್ಕ ವೇದದ ಅಂಗೋಪಾಂಗಗಳ ವಿಷಯಕವಾಗಿ ಬರೆಯಬೇಕಾದುದು ಪ್ರಾಸಂಗಿಕವಾದುದಷ್ಟೇ! ಅವುಗಳಲ್ಲಿ ಮೊದಲು ಶಿಕ್ಷಾ ಮೊದಲಾದ ಆರು ಅಂಗಗಳ ಸ್ವರೂಪವನ್ನು ವಿವರಿಸಲುಪಕ್ರಮಿಸುತ್ತೇವೆ. ಪಾಣಿನೀಯಶಿಕ್ಷೆಯಲ್ಲಿ ಹೀಗೆ ಹೇಳಲ್ಪಟ್ಟಿರುವುದು.

ಛನ್ದಃ ಪಾದೌ ತು ವೇದಸ್ಯ ಹಸ್ತೌ ಕಲ್ಪೋಽಥ ಪಠ್ಯತೇ ।
ಜ್ಯೋತಿಷಾಮಯನಂ ಚಕ್ಷುರ್ನಿರುಕ್ತಂ ಶ್ರೋತ್ರಮುಚ್ಯತೇ ॥
ಶಿಕ್ಷಾ ಘ್ರಾಣಂ ತು ವೇದಸ್ಯ ಮುಖಂ ವ್ಯಾಕರಣಂ ಸ್ಮೃತಮ್ ।
ತಸ್ಮಾತ್ಸಾಂಗಮಧೀತ್ಯೈವ ಬ್ರಹ್ಮಲೋಕೇ ಮಹೀಯತೇ॥

ಹೇಗೆ ಮನುಷ್ಯಾದಿ ಪ್ರಾಣಿಗಳ ಬಾಳುವೆಗೋಸ್ಕರ ಕೈ, ಕಾಲು, ಮೂಗು, ಮೋರೆ ಮೊದಲಾದ ಅವಯವಗಳ ಆವಶ್ಯಕತೆಯುಂಟೋ ಹಾಗೆ ವೇದಪುರುಷನಿಗಾದರೂ **ಛಂದಸ್ಸು, ಕಲ್ಪ, ಜ್ಯೋತಿಷ, ನಿರುಕ್ತ, ಶಿಕ್ಷಾ, ವ್ಯಾಕರಣ** ಎಂಬಿವು ಅನುಕ್ರಮವಾಗಿ ಕಾಲು, ಕೈ, ಕಣ್ಣು, ಮೂಗು, ಮೋರೆಯಂತಿರುತ್ತವೆ. ಶರೀರಕ್ಕೆ ಹಸ್ತಪಾದಾದಿಗಳಂತೆ ಛಂದಸ್ಸು ಮೊದಲಾದ ಅಂಗಗಳು ವೇದದ ಸಾಕ್ಷಾತ್ಸಂಬಂಧಗಳಾಗಿಯೂ ಪುರಾಣಾದ್ಯುಪಾಂಗಗಳು ಅಂಗುಲ್ಯಾದಿಗಳಂತೆ ಪರಂಪರಾಸಂಬಂಧಗಳಾಗಿಯೂ ಇವೆ.

ಪೂರ್ವಕಾಲದಲ್ಲಿ ಶಿಕ್ಷಾದಿಷಡಂಗಗಳು ಬೇರೆಬೇರೆ ವಿಧಗಳಾದ ವಿಶಿಷ್ಟಗ್ರಂಥಗಳೆಂದು ತಿಳಿಯಲ್ಪಡುತ್ತಿರಲಿಲ್ಲ. ವೇದಗಳ ಯಥಾರ್ಥಜ್ಞಾನವು ಯಾವ ನ್ಯೂನತೆಯಿಲ್ಲದಂತೆ ಸರಿಯಾಗಿ ಲಭಿಸಬೇಕೆಂಬ ಹೇತುವಿನಿಂದ ವೇದಶಾಲೆಗಳಲ್ಲಿ ಈ ಗ್ರಂಥಗಳನ್ನು ಅಭ್ಯಾಸಿಸುವ ಸಂಪ್ರದಾಯವಿದ್ದಿತು. ಅದು ಕಾರಣವೇ ಮುಂಡಕೋಪನಿಷತ್ತಿನಲ್ಲಿ (೧-೧-೫) "**ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋಜ್ಯೋತಿಷಮಿತಿ**" ಎಂಬುದಾಗಿ ಶಿಕ್ಷಾದಿಷಡಂಗಗಳು ನಿರೂಪಿಸಲ್ಪಟ್ಟಿವೆ. ವೇದಕಾಲೀನಗಳಾದ ಈ ಷಡಂಗಗಳು ಮುಂದೆ ಪ್ರತ್ಯೇಕವಾಗಿ ಉಪಗ್ರಂಥಸ್ವರೂಪವನ್ನು ತಳೆದು ವೇದಶಾಲೆಗಳಲ್ಲಿ ಬೇರೆಬೇರೆಯಾಗಿ ಸ್ವತಂತ್ರರೀತಿಯಿಂದ ಪದ್ಧತಿಯನ್ನನುಸರಿಸಿ ಅಭ್ಯಾಸಿಸಲ್ಪಡತಕ್ಕವುಗಳಾದುವು.

ವೇದದ ಆರುಅಂಗಗಳಲ್ಲಿ '**ಶಿಕ್ಷಾ**' ಎಂಬುದು ಪ್ರಧಾನಾಂಗವಾಗಿದೆ. ಈ ಅಂಗದ ಅರ್ಥವು ಪೂರ್ವಾಚಾರ್ಯರಿಂದ ಹೀಗೆ ಹೇಳಲ್ಪಟ್ಟಿದೆ. ೧. '**ಹ್ರಸ್ವದೀರ್ಘಾದಿ ವೈದಿಕಸ್ವರೋಚ್ಚಾರಣಪ್ರತಿಪಾದಕಂ ಶಾಸ್ತ್ರಮ್**' ಅಂದರೆ ಹ್ರಸ್ವದೀರ್ಘಾದಿವೈದಿಕಸ್ವರೋಚ್ಚಾರವನ್ನು ಪ್ರತಿಪಾದಿಸುವ ಶಾಸ್ತ್ರವು 'ಶಿಕ್ಷಾ' ಎನಿಸುವುದು. ೨. **ಸ್ವರಾದಿಕಂ ಶಿಕ್ಷ್ಯತೇ ಅನಯಾ ಇತಿಶಿಕ್ಷಾ**' ವರ್ಣಗಳನ್ನು ಉಚ್ಚರಿಸುವಲ್ಲಿ ಮುಖಸಂಬಂಧವಾದ ಸ್ಥಾನಗಳನ್ನು ಉಪದೇಶಿಸುವ ಶಾಸ್ತ್ರವು ಶಿಕ್ಷೆಯು. ಸಾರಾಂಶ, ಶಿಕ್ಷಾ ಅಂದರೆ ಸ್ಪಷ್ಟೋಚ್ಚಾರಪೂರ್ವಕವಾಗಿ ಸ್ವರಾಘಾತದೊಡನೆ ಸಂಹಿತೆಯನ್ನು ಪಠಿಸುವುದು. ಈ ಶಿಕ್ಷಾಂಗದಿಂದ ಉದಾತ್ತ, ಅನುದಾತ್ತ, ಸ್ವರಿತ, ಹ್ರಸ್ವ, ದೀರ್ಘ, ಪ್ಲುತ ಮೊದಲಾದ ಧರ್ಮವಿಶಿಷ್ಟವಾದ ಸ್ವರವ್ಯಂಜನಾತ್ಮಕವರ್ಣೋಚ್ಚಾರದ ಪದ್ಧತಿಯು ಅರಿಯಲ್ಪಡುವುದು.

ಈ ವೇದಾಂಗದ ಹೆಸರು ಪ್ರಥಮತಃ ತೈತ್ತಿರೀಯೋಪನಿಷತ್ತಿನಲ್ಲಿಯೇ ನಿರ್ದೇಶಿಸಲ್ಪಟ್ಟಿದೆ. (ತೈ. ೧-೨) ತೈತ್ತಿರೀಯಸಂಹಿತೆಗೆ ಸಂಬಂಧಿಸಿದ ಕಾಂಡತ್ರಯಾತ್ಮಕ ಬ್ರಾಹ್ಮಣಭಾಗದ ಪರಿಶಿಷ್ಟವೆನಿಸುವ ಹತ್ತು ಅಧ್ಯಾಯಗಳುಳ್ಳ ತೈತ್ತಿರೀಯಾರಣ್ಯಕದ ಕೊನೆಯ ೭-೮-೯ ಎಂಬೀ ಮೂರು ಅಧ್ಯಾಯಗಳೇ ತೈತ್ತಿರೀಯೋಪನಿಷತ್ಸಂಜ್ಞಕಗಳಾಗಿವೆ. ಹತ್ತನೆಯ ಅಧ್ಯಾಯವು ಮಹಾನಾರಾಯಣೋಪನಿಷತ್ತೆಂಬುದಾಗಿ ಪ್ರಸಿದ್ಧವಾಗಿರುವುದು. ತೈತ್ತಿರೀಯೋಪನಿಷತ್ತಿನ ಆ ಮೂರು ಅಧ್ಯಾಯಗಳಿಗೂ ಅನುಕ್ರಮವಾಗಿ ಶಿಕ್ಷಾವಲ್ಲೀ, ಬ್ರಹ್ಮಾನಂದವಲ್ಲೀ, ಭೃಗುವಲ್ಲೀ ಎಂಬ ಹೆಸರುಗಳಿವೆ. ವಾಚಕರ ಅವಗಾಹನೆಗಾಗಿ 'ಶಿಕ್ಷಾ' ಶಾಸ್ತ್ರದ ರಹಸ್ಯಾರ್ಥವನ್ನು ತೆರೆದಿಡಲುದ್ಯುಕ್ತರಾದ ನಮಗೆ 'ಶಿಕ್ಷಾವಲ್ಲಿ'ಯ ಸ್ವರೂಪವನ್ನೀಗ ವಿವರಿಸುವುದುಚಿತವಾದುದಷ್ಟೇ!

ತೈತ್ತಿರೀಯೋಪನಿಷತ್ತಿನೊಳಗಿನದೊಂದು ಭಾಗವೇ ಶಿಕ್ಷಾಧ್ಯಾಯವು. ಇದುವೇ 'ಶಿಕ್ಷಾವಲ್ಲಿ' ಎಂದು ಹೇಳಲ್ಪಡುವುದು. ಆದರೆ, ವೇದಗಳ ಅಧ್ಯಾಯಗಳಲ್ಲಿ ವಿಭಾಗಿಸಲ್ಪಟ್ಟ ಪ್ರಕರಣಗಳಿಗೆ ಅನುವಾಕಗಳೆನ್ನುತ್ತಾರೆ; ಕಠೋಪನಿಷತ್ತಿನ ಪ್ರತಿಯೊಂದು ಅಧ್ಯಾಯದಲ್ಲಿ ಮೂರು ವಲ್ಲಿಗಳಿವೆ. ಇದರಿಂದ "**ವಲ್ಲೀ**" ಅಂದರೆ ಅನುವಾಕವೆಂದರಿಯಲ್ಪಡುವುದು. ಹೀಗಿರುತಿರಲು ಅನೇಕ ಅನುವಾಕಗಳನ್ನೊಳಗೊಂಡ ಶಿಕ್ಷಾಧ್ಯಾಯಕ್ಕೆ 'ವಲ್ಲೀ' ಎಂಬ ಹೆಸರಿರುವುದು ಪ್ರಾಚೀನರೂಢಿಗೆ ವಿಲಕ್ಷಣವಾಗಿ ತೋರುವುದಲ್ಲವೇ? ಇನ್ನು, ಪ್ರತಿಯೊಂದು ಉಪನಿಷತ್ತಿನ ಆರಂಭದಲ್ಲಿ ಶಾಂತಿಮಂತ್ರವು ಪಠಿಸಲ್ಪಡುವುದು ಸರಿಯಷ್ಟೇ! ಇತರ ಉಪನಿಷತ್ತುಗಳ ಆರಂಭದಲ್ಲಿ ಪಠಿಸಲ್ಪಡುವ ಶಾಂತಿಮಂತ್ರಗಳು ಎಲ್ಲಿಯೂ ಬೇರೆ ತೆಗೆದುಕೊಳ್ಳಲ್ಪಟ್ಟವುಗಳಾಗಿವೆ. ಈ ಶಿಕ್ಷೋಪನಿಷತ್ತಿನ ಆರಂಭದಲ್ಲಿರುವ '**ಶಂ ನೋ ಮಿತ್ರಃ**' ಎಂಬ ಶಾಂತಿಮಂತ್ರವೇ ಇದರ (ಶಿಕ್ಷಾಧ್ಯಾಯದ) ಮೊದಲನೆಯ ಅನುವಾಕವೆನಿಸುವುದು. ಒಂದು ಅನುವಾಕರೂಪವೇ ಆಗಿರತಕ್ಕ ಈ ಶಾಂತಿಮಂತ್ರವು ಅಧ್ಯಾಯದ ಆರಂಭದಲ್ಲಿಯೂ ಸಮಾಪ್ತಿಯಲ್ಲಿಯೂ ಒಂದೇ ವಿಧವಾಗಿರುವುದು; ಆದರೂ ಕೊನೆಯ ಅನುವಾಕದೊಳಗಿನ ನಾಲ್ಕು ವಾಕ್ಯಗಳು ಬೇರೆತೆರನಾಗಿರುತ್ತವೆ. ಹೀಗೆ ಇತರ ಶಾಂತಿಮಂತ್ರಗಳಿಗಿಂತಲೂ ಶಿಕ್ಷಾಧ್ಯಾಯದ ಶಾಂತಿಮಂತ್ರವು ವಿಲಕ್ಷಣವಾಗಿರುವುದಾಗಿ ತೋರಿಬರುವುದರಿಂದ ಈ ಶಿಕ್ಷಾಧ್ಯಾಯಕ್ಕೆ 'ವಲ್ಲೀ' ಎಂದು ಹೇಳುವುದಕ್ಕಿಂತಲೂ ಪ್ರಪಾಠಕವು ಅಥವಾ ಅಧ್ಯಾಯವು ಎಂದು ಹೆಸರಿರುವುದು ಅನುಪಪನ್ನವಾದುದಲ್ಲ. ಆದ್ದರಿಂದ ಈಗ ನಾವು 'ಶಿಕ್ಷಾವಲ್ಲೀ' ಎಂದುಲ್ಲೇಖಿಸದೆ 'ಶಿಕ್ಷೋಪನಿಷದ್' ಅಥವಾ 'ಶಿಕ್ಷಾಧ್ಯಾಯ'ವೆಂಬ ಹೆಸರುಗಳನ್ನೇ ಪ್ರತಿಪಾದಿಸುವೆವು.

ಈ ಶಿಕ್ಷಾಧ್ಯಾಯದಲ್ಲಿ ವಿಷಯನಿರೂಪಣವು ಎರಡನೆಯ ಅನುವಾಕದಿಂದೇ ಆರಂಭಿಸಲ್ಪಡುವುದು. ಎರಡನೆಯ ಅನುವಾಕದಲ್ಲಿಯೇ ವಾಕ್ಯೋಚ್ಚಾರಣೆಗೆ ಸಂಬಂಧಪಟ್ಟ ವಿಷಯವಿರುವುದು. ಹೇಗೆಂದರೆ—

ಓಂ ಶಿಕ್ಷಾಂ ವ್ಯಾಖ್ಯಾಸ್ಯಾಮಃ ।
ವರ್ಣಃ ಸ್ವರಃ ಮಾತ್ರಾ ಬಲಮ್ ।
ಸಾಮಸನ್ತಾನಃ ಇತ್ಯುಕ್ತಃ ಶಿಕ್ಷಾಧ್ಯಾಯಃ ॥

ಪಠನಶಾಸ್ತ್ರದ ಭಾಗವನ್ನು ನಾವು ಸ್ಪಷ್ಟೀಕರಿಸುವೆವು. ವರ್ಣ, ಸ್ವರ, ಮಾತ್ರೆ, ಪ್ರಯತ್ನ, ಸಮತೆ, ಅಕ್ಷರಪರಂಪರೆ; ಎಂಬುದಾಗಿ ಶಿಕ್ಷಾಧ್ಯಾಯವು ಹೇಳಲ್ಪಟ್ಟಿದೆ.

ಅಂದರೆ ವೈದಿಕವಾಕ್ಯಗಳನ್ನು ಪಠಿಸುವಾಗ ಅಕಾರಾದಿವರ್ಣಗಳೂ, ಉದಾತ್ತಾದಿಸ್ವರಗಳೂ, ಆಭ್ಯಂತರಾದಿಪ್ರಯತ್ನಗಳೂ, ಧ್ವನಿಯ ಸಮತೆಯೂ, ಅಕ್ಷರಗಳ ಪರಂಪರೆಯೂ ಎಂಬಿಷ್ಟು ವಿಷಯಗಳನ್ನು ಸರಿಯಾಗಿ ಉಪಯೋಗಿಸತಕ್ಕದ್ದು. ಅದು ಹೇಗೆಂದರೆ, ವಾಕ್ಯೋಚ್ಚಾರಣೆಯಲ್ಲಿ ವರ್ಣಗಳ ವ್ಯತ್ಯಾಸವೂ, ಅಪಸ್ವರವೂ ಮುಂತಾದ ದೋಷಗಳು ಸಂಭವಿಸದಂತೆ ಎಚ್ಚರವಿರಬೇಕಾದುದು. ವೈದಿಕಕಾಲದಲ್ಲಿ ಈಗಿನಂತಹ ಬರವಣಿಗೆಯ ವ್ಯವಹಾರವು ವಿಶೇಷ ಪ್ರಚಾರದಲ್ಲಿದ್ದಿಲ್ಲ. ಅದುಕಾರಣವೇ ತತ್ಕಾಲೀನ ಜನರು ಉಚ್ಚರಿಸುವಿಕೆಯನ್ನೇ ಹೆಚ್ಚಾಗಿ ಬಳಕೆಯಲ್ಲಿಟ್ಟುಕೊಂಡಿದ್ದರು. ಹಾಗೆ ಉಚ್ಚರಿಸಲ್ಪಡತಕ್ಕ ವೈದಿಕವಾಙ್ಮಯದ ಅಕ್ಷರಗಳನ್ನೂ, ಸ್ವರಾದಿಗಳನ್ನೂ, ವ್ಯತ್ಯಾಸವಿಲ್ಲದಂತೆ ಈವರೆಗೆ ಕಾಪಾಡಿಕೊಂಡು ಬಂದವರು ವೈದಿಕಜನಾಂಗದವರೇ! ಈಗಲೂ ವೈದಿಕವಾಕ್ಯಗಳನ್ನು ಪಠಿಸುವಾಗ ಅಕ್ಷರಗಳ ಕ್ರಮವನ್ನೂ ಸ್ವರಾದಿನಿಯಮಗಳನ್ನೂ ಅನುಸರಿಸುವ ಪದ್ಧತಿಯಲ್ಲಿ ಒಂದು ವಿಧವಾದ ಹೆಚ್ಚಳವಿರುವುದು ಅಪರಿಹಾರ್ಯವಾಗಿದೆ. ಅಕ್ಷರ ಸ್ವರಾದಿ ವಿಷಯಗಳನ್ನು ಈ ಮೇಲೆ ಉಲ್ಲೇಖಿಸಿದ್ದೇವೆ. ಈಗ ಅವುಗಳ ಇಂಗಿತವನ್ನು ವಿವರಿಸುತ್ತೇವೆ.

(ಸಶೇಷ)

ಗುರುನಿಂದಕರಿಗೆ ಬುದ್ಧಿವಾದ.

ಬರೆದವ—ದೈವಜ್ಞ ವಿನೋದ.

ಗುರುವರ್ಗವಿರೋಧಿಗಳಾದ ಕೆಲವರು ಈಗ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುತ್ತಲಿರುವ ಲೇಖಗಳು ವೀರಶೈವ ಸಮಾಜದಲ್ಲಿ ಭಯಂಕರವಾದ ಕ್ರಾಂತಿಯನ್ನುಂಟುಮಾಡತಕ್ಕವುಗಳಾಗಿರುತ್ತವೆ. ಗುರುಪೀಠಗಳ ಮೇಲಿನ ಇವರ ಅಸೂಯಾಂಧತೆಗೆ ಬೆಲೆಯಿಲ್ಲದಾಗಿದೆ. ಪ್ರಾಚೀನ ಗುರುಪರಂಪರೆಯು ಇವರಿಗೆ ಬೇಡವಾಗಿದೆ. ವೀರಶೈವಧರ್ಮಸಿದ್ಧಾಂತದ ನೆಲೆಯನ್ನರಿಯದೆ ಅಲೆಯುತ್ತಿರುವ ಈ ಮಹಾನುಭಾವರಿಗೆ ನಿಜಸಿದ್ಧಾಂತೋಪದೇಶವು ಕರ್ಣಕಠೋರವಾಗಿರುವದು. ಕೇವಲ ಕಲ್ಯಾಣದ ಬಸವನನ್ನು ಮುಂದುಮಾಡಿಕೊಂಡು ಎಬ್ಬಿಸಿರುವ ಮಬ್ಬು ವಿಚಾರಗಳೆಲ್ಲವೂ ಕ್ಷಣಮಾತ್ರದಲ್ಲಿ ನಾಶವಾಗುವವೆಂಬುದನ್ನು ಇವರು ಚೆನ್ನಾಗಿ ಲಕ್ಷಿಸಲಿ. ಕಲ್ಯಾಣದ ಬಸವನ ನಿಜವಾದ ಚರಿತ್ರೆಯನ್ನು ಈಗ ವೀರಶೈವಸಮಾಜವು ಚನ್ನಾಗಿ ಅರಿತಿರುವದು. ಬಸವನ ಜೀವಿತವು ಹೇಗೆ ಸಾಗಿಹೋಗಿರುವದೆಂಬುದು ಪ್ರಭಾಪತ್ರಿಕೆಯ ಮೂಲಕ ಸರ್ವರಿಗೂ ಗೊತ್ತಾಗಿರುವದು. ವೀರಶೈವಮತಸಾಮ್ರಾಜ್ಯದಲ್ಲಿ ವರ್ಣಸಾಂಕರ್ಯದ ವಿಷಗಾಳಿಯನ್ನು ಬೀಸಿದ ವ್ಯಕ್ತಿಯು ಸಾಮಾನ್ಯವಾದುದಲ್ಲ.

ಬಸವನ ತರುವಾಯ ಅಂಧ್ರವಾಸಿಗಳು ಎಬ್ಬಿಸಿದ ಅಂಧಭಕ್ತಿಯು ಕರ್ನಾಟಕದಲ್ಲಿಯೂ ಪ್ರಚಾರವಾಯಿತು. ಇದು ಗುರುವರ್ಗದವರ ಪ್ರತಾಪದಿಂದ ನಾಶವಾಗಿ ಬಸವನ ನಿಜತತ್ವವು ಹೊರಬಿದ್ದಿತು. ಆದರೂ ಗುರುವರ್ಗದವರು ಈ ಮೌಢ್ಯಪರಂಪರೆಯನ್ನು ಕೂಡಲೇ ಕತ್ತರಿಸಿಹಾಕುವದರಿಂದ ಸಮಾಜವು ಇಬ್ಭಾಗವಾದೀತೆಂದು ಭಾವಿಸಿ ಕೇವಲ ವೀರಶೈವಸಿದ್ಧಾಂತ ನಿಜತತ್ವರತ್ನಗಳಿಂದ ಸಮಾಜವನ್ನು ಭೂಷಿಸಿ ಪೋಷಿಸ ತೊಡಗಿದರು. ಈ ಅಮೂಲ್ಯರತ್ನಹಾರಗಳನ್ನು ತ್ಯಜಿಸಿ ಕೆಲವರು ಸಾಂಕರ್ಯರೂಪವಾದ ಕಾಜಿನ ಮಣಿಗಳನ್ನು ಹಾಕಿಕೊಳ್ಳತೊಡಗಿರುವದು ಅತ್ಯಂತ ವಿಷಾದದ ಸಂಗತಿಯಾಗಿದೆ. ಇವರಿಗೆ ಇಂದಿಲ್ಲ ನಾಳೆಯಾದರೂ ಬುದ್ಧಿಯು ಬರುವದೆಂದು ಗುರುವರ್ಗದವರು ತಾಳಿರುವ ಶಾಂತಿಯು ಸಾಮಾನ್ಯವಾದುದಲ್ಲ. ಗುರುವರ್ಗದವರ ಮೇಲೆ ಇರುವ ಇವರ ದ್ವೇಷಾಸೂಯೆಗಳು ಇವರನ್ನೇ ನಾಶಮಾಡುವವಲ್ಲದೆ ಬೇರಿಲ್ಲ. ಕಳೆದ ತಿಂಗಳಿಂದಂತೂ ಗುರುನಿಂದಾತ್ಮಕ ಲೇಖಗಳ ಸುರಿಮಳೆಯಾಗತೊಡಗಿರುವದು. ನಿಂದಕರು ಹೆಚ್ಚಾದಂತೆ ಮಹಾತ್ಮರ ಪ್ರಭಾವವು ಮತ್ತಿಷ್ಟು ಹೆಚ್ಚಿಗೆ ಪ್ರಕಾಶಿಸುವದು. ಈಗ ಪ್ರಕಟವಾದ ಈ ಗುರುನಿಂದಕರ ಲೇಖಗಳಿಗೆ ಸಹಸ್ರಪಟ್ಟು ಮಿಗಿಲಾಗಿ ಬರೆದು ಇವರನ್ನು ಮುಖಭಂಗಿತರನ್ನಾಗಿ ಮಾಡಬಹುದಾಗಿತ್ತು; ಆದರೂ ಸದ್ಯಃ ನಾವು ಶಾಂತಿಯನ್ನು ತಾಳಬೇಕಾಗಿದೆ. ನಮ್ಮ ಶಾಂತಿಯು ಅವರಿಗೆ ಮತ್ತಿಷ್ಟು ಕ್ರಾಂತಿಕಾರಕಭಾವನೆಯನ್ನು ಹುಟ್ಟಿಸಬಹುದು; ಹುಟ್ಟಿಸಲಿ. ಗುರುನಿಂದೆಯಲ್ಲಿ ತೊಡಗಿದ ಪಾವಟೆ, ಬಳೆಅಂಗಡಿ ಮೊದಲಾದವರು ಈಗ ಬರೆಯುತ್ತಲಿರುವ ಲೇಖಗಳನ್ನು ನೋಡಿದ ಪ್ರತಿಯೊಬ್ಬ ವೀರಶೈವನಿಗೂ ಅತ್ಯಂತ ವಿಷಾದವಾಗುವದು. ಗುರುವಿನ ವಿಷಯದಲ್ಲಿ ಈ ರೀತಿ ಪಾಪಬುದ್ಧಿಯು ಪ್ರಬಲವಾಗಿರುವಾಗ್ಗೆ ಇವರಿಗೆ ಬುದ್ಧಿಯನ್ನು ಹೇಳುವವರಾರು? ಇವರು ಸಮಾಜದಲ್ಲಿ ತಮಗಿರುವ ಯೋಗ್ಯತೆಯನ್ನು ತಿಳಿಯದೆ ಜಗದ್ವಿಖ್ಯಾತರಾದ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರನ್ನೂ, ರಾಜಧರ್ಮಪ್ರವೀಣ ಪಿ. ಮಹಾದೇವಯ್ಯನವರನ್ನೂ ನಿಂದಿಸುವ ಕುಟಿಲಕಾರ್ಯವನ್ನು ಪ್ರಾರಂಭಿಸಿರುವದು ಪರಮವಿಷಾದದ ಸಂಗತಿಯಲ್ಲವೆ? ವೀರಶೈವರತ್ನಸ್ವರೂಪರಾದ ಈ ಮಹಾನುಭಾವರ ಬಗ್ಗೆ ಕುತ್ಸಿತಟೀಕೆಗಳನ್ನು ಬರೆಯುವದು ಸರಿಯಲ್ಲ. ಗುರುಸೇವಾಧುರೀಣರಾದ ಈ ಪುಣ್ಯಾತ್ಮರನ್ನು ಹೀಯಾಳಿಸುವವರಿಗೆ ಯಾವಗತಿಯು ಪ್ರಾಪ್ತವಾಗುವದೋ ತಿಳಿಯದಾಗಿದೆ. ಶಾಂತಮೂರ್ತಿಗಳಾದ ಈ ಮಹೋದಯರು ಇಂಥವರ ಕ್ಷುದ್ರವಿಚಾರಗಳಿಗೆ ಖಂಡಿತವಾಗಿಯೂ ಗಮನಕೊಡುವವರಲ್ಲ; ಇವರ ಹುಂಡಬುಂಡವಿಚಾರಗಳಿಗೆ ಸೊಪ್ಪುಹಾಕುವವರಲ್ಲ; ಸಮಾಜೋದ್ಧಾರಕರಾದ ಸರ್ ಶೆಟ್ಟರೂ, ಶ್ರೀಮಾನ್ ಪಿ. ಮಹಾದೇವಯ್ಯನವರೂ, ತಮ್ಮ ಜೀವಮಾನದಲ್ಲಿ ಮಾಡಿದ ಮಹತ್ಕಾರ್ಯಗಳ ವಿವರಣೆಯು ಸುವರ್ಣಾಕ್ಷರಗಳಿಂದ ಬರೆದಿಡುವಂಥದಾಗಿದೆ. ಅಸ್ತು! ವೀರಶೈವಮತದ ಅಂತಃಕಲಹಗಳಿಗೆ ಮುಖ್ಯಕಾರಣರಾದ ಪಾವಟೆಯವರು ಇದುವರೆಗೆ ಪ್ರಸಿದ್ಧಿಸಿದ ಸಮಾಜವಿಘಾತುಕಗಳಾದ ಗ್ರಂಥಗಳೇ ಸಾಕ್ಷಿಯಾಗಿವೆ. ಇವರು ಬರೆದಿರುವ ಅಸತ್ಯವಾದ ಬರವಣಿಗೆಯನ್ನು ಖಂಡಿಸಿ ಇವರಿಗೆ ಬುದ್ಧಿವಾದ ಹೇಳಿದರೂ ಕೂಡ "ಯೇನಕೇನ ಪ್ರಕಾರೇಣ ಪ್ರಸಿದ್ಧಃ ಪುರುಷೋಭವೇತ್" ಎಂದು ಮುಂದುವರಿಸತೊಡಗಿರುವುದು ಸಖೇದಾಶ್ಚರ್ಯಜನಕವಾಗಿರುವದು. ಮಹಾನುಭಾವರಾದ ಪಾವಟೆಯವರೇ? ಮಾಹೇಶ್ವರವರ್ಗವನ್ನತಿಕ್ರಮಿಸಬೇಕೆಂಬ ನಿಮ್ಮ ನೆಬ್ಬಾಶೆಯ ಮಬ್ಬನ್ನು ಅನೇಕಜನ ಗುರುವರ್ಗ ವಿರಕ್ತವರ್ಗದವರು ಚನ್ನಾಗಿ ಪರಿಹರಿಸಿದರೂ ನಿಮಗೆ ಬುದ್ಧಿಯು ಬರಲಿಲ್ಲ. ಈಗಲೂ ಆ ಭೂತವು ನಿಮ್ಮನ್ನು ಬಿಟ್ಟಿಲ್ಲ. ಆಗಲಿ, ಇದೇ ಬಡಬಡಿಕೆಯಿಂದಲೇ ಈ ಜನ್ಮವನ್ನು ನೀಗಿರಿ; ಮುಂದಿನ ಜನ್ಮದಲ್ಲಿಯಾದರೂ ಪರಮಾತ್ಮನು ನಿಮಗೆ ಉತ್ತಮಮಾರ್ಗವನ್ನು ತೋರಿಸಲಿ. ಗುರುವರ್ಗದವರು ಸ್ವಕರ್ತವ್ಯದಲ್ಲಿ ದಕ್ಷರಾಗಬೇಕೆಂದು **ಪ್ರತ್ಯಕ್ಷ ಧರ್ಮಾವತಾರಿಗಳಾದ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು** ಪ್ರಯತ್ನಿಸಿದ ಕಾರ್ಯಗಳಿಗೆ ನಿಮ್ಮಿಂದಾದ ವಿಘ್ನಪರಂಪರೆಗಳು ಸಾಮಾನ್ಯವಾದವುಗಳಲ್ಲ. ನಿಮ್ಮ ವಿಘ್ನಗಳ ತೊಡಕುಗಳನ್ನು ಬಿಡಿಸಿಕೊಂಡು ತಮ್ಮ ನಿಜವಾದ ಧ್ಯೇಯವನ್ನು ಮುಂದುಸಾಗಿಸಿದ ಪಂಡಿತರ ಧೈರ್ಯಸಾಹಸಗಳನ್ನು ಎಷ್ಟು ವರ್ಣಿಸಿದರೂ ತೀರದು. ಪಂಡಿತರು ಪ್ರಾರಂಭದಿಂದಲೂ ತಮ್ಮ ಉಚ್ಚವಾದ ಶಾಸ್ತ್ರೀಯಧ್ಯೇಯಗಳನ್ನು ಚ್ಯುತಿಯಿಲ್ಲದಂತೆ ನಡೆಯಿಸಿರುವುದು ಜಗತ್ಪ್ರಸಿದ್ಧವಾಗಿರುವದು. ಪಂಡಿತರ ದಿವ್ಯಪ್ರಕಾಶದ ಮುಂದೆ ನಿಮ್ಮ ಯಾವ ಆಟವೂ ಹಿಂದೆಸಾಗಿಲ್ಲ. ಮುಂದೆಯೂ ಸಾಗುವಂತಿಲ್ಲವೆಂಬುದನ್ನು ಚನ್ನಾಗಿ ಲಕ್ಷ್ಯದಲ್ಲಿಡಿರಿ. ಸುಮ್ಮನೆ ಅಸೂಯೆಪಟ್ಟರೆ ಬಂದ ಫಲವೇನು? ಪಂಡಿತರ ವಿಜಯಪ್ರಕರಣಗಳ ಜಯಭೇರಿಯ ನಾದವು ನಿಮಗೆ ಕರ್ಣಕಠೋರವನ್ನುಂಟುಮಾಡುವದು ಸಹಜವದೆ. ಅನೇಕಪ್ರಕರಣಗಳಲ್ಲಿ ತಣ್ಣಗಾದ ನೀವು ಬೆಂಗಳೂರಿನ ನಭೋಮಂಡಲವನ್ನು ವ್ಯಾಪಿಸಿದ ಆಂದೋಲಿಕೋತ್ಸವದ ಭವ್ಯನಾದವನ್ನು ಕೇಳಿ ಹೀಗೇಕೆ ವಿಕಾರವನ್ನು ಹೊಂದಿರುವಿರಿ. ಈ ರೀತಿಯಾದ ವಿಕಾರಜನ್ಯರೋಗಕ್ಕೆ ಪಂಡಿತರು ಔಷಧಿಯನ್ನು ಕೊಡುವ ಕ್ರಮಕ್ಕೆ ಬೀಳಬೇಕಾಗುತ್ತದೆ. ಅವರು ನಿಮ್ಮನ್ನು ಶಾಂತಗೊಳಿಸುವ ಕಾರ್ಯದಲ್ಲಿ ತೊಡಗಿದರೆ ವೀರಶೈವಮತೋನ್ನತಿಯ ಅಮೋಘವಾದ ಕಾರ್ಯಗಳೆಲ್ಲವೂ ತಟಸ್ಥವಾಗುವವು; ಆದ್ದರಿಂದ ಪಂಡಿತರ ಸಹವಾಸದಲ್ಲಿ ನುರಿತವರಾದ ನಮ್ಮಂಥವರಿಂದ ನಿಮಗೆ ಕೊಡುವ ಈ ಔಷಧಿಗಳನ್ನು ತೆಗೆದುಕೊಂಡು ಕೃತಾರ್ಥರಾಗಿರಿ. ಈಗ ನಿಮ್ಮಂಥವರಿಂದ ವೃತ್ತಪತ್ರಿಕೆಗಳಲ್ಲಿ ಬರೆಯಲ್ಪಡುತ್ತಿರುವ ಗುರುನಿಂದಾತ್ಮಕ ಲೇಖಗಳು ಅಖಿಲ ವೀರಶೈವಮತಕ್ಕೆ ಕುಂದನ್ನುಂಟುಮಾಡತಕ್ಕವುಗಳಾಗಿರುತ್ತವೆ. ಸಾವಧಾನದಿಂದ ಸಾಗಿರಿ. ಹಿಂದು ಮುಂದಿನ ವಿಚಾರವನ್ನು ಮಾಡಿರಿ. ಈಗಿನದು ಬಸಪ್ಪನ ರಾಜ್ಯವಲ್ಲ; ಬ್ರಿಟಿಷರ ರಾಜ್ಯವಿದು. ಈಗಿನ ವೀರಶೈವಮತವು ನಿಜತತ್ವವೇತ್ತರಿಂದ ಶೋಭಿಸುತ್ತಿರುವದು. ಸತ್ಯಸಂಶೋಧನಸಾಗರದಲ್ಲಿ ನಿಮ್ಮ ಅಮಂಗಳ ಜಾತಿಸಂಕರರೂಪ ಕಪ್ಪೆಚಿಪ್ಪುಗಳನ್ನಾರು ಕೇಳುವರು? ಬೆಲೆಬಾಳದ ಶುಷ್ಕವಚನಗಳ ಗಂಟನ್ನು ಕಟ್ಟಿಟ್ಟು ಬಿಡಿರಿ. ಗುರುಭಕ್ತಿಯುಕ್ತರಾಗಿರಿ. ಗುರುದ್ರೋಹಾತ್ಮಕ ಲೇಖಗಳನ್ನು ಬರೆಯುತ್ತ ಜಗದೀಶ್ವರನ ವಿಕೋಪಕ್ಕೆ ಪಾತ್ರರಾಗಬಾರದೆಂಬುದೇ ವಿನೋದನ ಅಭಿಲಾಷೆಯು.

ಹಲ್ಕ್ಯಾರು ಸಾಹುಕಾರ್ ಧರ್ಮಧುರಂಧರ ಮರುಳಸಿದ್ಧಪ್ಪಶೆಟ್ಟರ ನಿಧನ.

ಹಾಸನ ಡಿ|| ಅರಸೀಕೆರೆ ತಾಲೂಕು ಹಲ್ಕ್ಯಾರು ಗ್ರಾಮನಿವಾಸಿಗಳಾದ ಮ|| ರಾ|| ಸಾಹುಕಾರ್ ಮರುಳಸಿದ್ಧಪ್ಪಶೆಟ್ಟರವರು ತಾ|| 19-4-1934 ನೇ ಗುರುವಾರ ದಿವಸ ಮಧ್ಯಾಹ್ನ ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಹಾಸನ ಡಿಸ್ಟ್ರಿಕ್ಟಿನ ಪ್ರಜೆಗಳಲ್ಲೆಲ್ಲಾ ಅತ್ಯಂತ ಪ್ರಖ್ಯಾತಿಯನ್ನು ಪಡೆದು ಸರ್ವರ ಪ್ರೇಮಕ್ಕೂ ಪಾತ್ರರಾಗಿದ್ದರು. ತಮ್ಮ ಜೀವಮಾನದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿ ಅನೇಕ ಧರ್ಮಕಾರ್ಯಗಳನ್ನು ಮಾಡಿರುವದು ಸರ್ವತ್ರ ಪ್ರಸಿದ್ಧವಾಗಿದೆ. ಇವರು ತಮ್ಮ ಗ್ರಾಮದಲ್ಲಿ ಪರಸ್ಥಳದ ಜನರು ಇಳಿಯುವದಕ್ಕಾಗಿ ಒಂದು ಧರ್ಮಛತ್ರವನ್ನು ಕಟ್ಟಿಸಿರುವದಲ್ಲದೆ, ಜನರ ಆರೋಗ್ಯರಕ್ಷಣೆಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸಿ ಘನವಾದ ಸರಕಾರದವರಿಗೆ ಒಪ್ಪಿಸಿರುವರು. ಇದೇ ಗ್ರಾಮದಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚು

(6ನೆಯ ಪುಟವನ್ನು ನೋಡಿ.)

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

ಹಿಂದಿನ ಪ್ರಕರಣಗಳಲ್ಲಿ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿರುವ ಮೇರೆಗೆ ಅಪೌರುಷೇಯವಾದುದರಿಂದೇ ನಿರ್ದೋಷವಾಗಿರುವ ವೇದರೂಪವಾದ ಶಾಸ್ತ್ರವು ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಎಂಬೀ ವಿಭಾಗಾತ್ಮಕವಾಗಿರುವಂತೆ ಅಂಗೋಪಾಂಗರೂಪದಿಂದಲೂ ವಿಸ್ತೃತವಾಗಿರುವುದು. ಯಾಜ್ಞವಲ್ಕ್ಯನು (೧-೩)

ಪುರಾಣನ್ಯಾಯಮೀಮಾಂಸಾಧರ್ಮಶಾಸ್ತ್ರಾಂಗಮಿಶ್ರಿತಾಃ ।
ವೇದಾಃ ಸ್ಥಾನಾನಿ ವಿದ್ಯಾನಾಂ ಧರ್ಮಸ್ಯ ಚ ಚತುರ್ದಶ ॥

ಎಂಬುದಾಗಿ ಹೇಳುತ್ತಾನೆ. ಅವನ ಈ ಹೇಳಿಕೆಯಂತೆ ಋಗಾದಿ ನಾಲ್ಕು ವೇದಗಳೂ, ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ, ಕಲ್ಪವೆಂಬ ಆರು ಅಂಗಗಳೂ; ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರವೆಂಬ ನಾಲ್ಕು ಉಪಾಂಗಗಳೂ ಕೂಡಿ ವೇದವಿದ್ಯೆಯು ಹದಿನಾಲ್ಕು ವಿಧವಾಗಿದೆ. ಈ ಹದಿನಾಲ್ಕು ವಿದ್ಯೆಗಳೂ ಪುರುಷಾರ್ಥಸಾಧಕಗಳಾಗಿವೆ. ಮತ್ತು ಋಗಾದಿ ನಾಲ್ಕು ವೇದಗಳ ಉಪವೇದಗಳೂ ಅನುಕ್ರಮವಾಗಿ ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥವೇದ (ಅರ್ಥಶಾಸ್ತ್ರ) ವೆಂಬುದಾಗಿ ಪ್ರಸಿದ್ಧವಾಗಿರುತ್ತವೆ. ಮೇಲಿನ ಹದಿನಾಲ್ಕು ವಿದ್ಯೆಗಳೊಡನೆ ಈ ನಾಲ್ಕು ಉಪವೇದಗಳನ್ನೂ ಸೇರಿಸಿದರೆ ಹದಿನೆಂಟು ವಿದ್ಯೆಗಳಾಗುವುವು.

ಹದಿನಾಲ್ಕು ವಿದ್ಯೆಗಳಲ್ಲಿ ಪರಿಗಣಿಸಲ್ಪಡುವ ಪುರಾಣಗಳಲ್ಲಿ ಉಪಪುರಾಣಗಳೂ ನ್ಯಾಯದಲ್ಲಿ ವೈಶೇಷಿಕಶಾಸ್ತ್ರವೂ, ಮೀಮಾಂಸೆಯಲ್ಲಿ ಬ್ರಹ್ಮಮೀಮಾಂಸೆಯೂ, ಧರ್ಮಶಾಸ್ತ್ರದಲ್ಲಿ (ಕಾಮಿಕಾದ್ಯಾಗಮವುಳ್ಳ ಯದಲ್ಲಿ) ಮನ್ವಾದಿಸ್ಮೃತಿಗಳೂ ಅಂತರ್ಭೂತಗಳಾಗಿವೆ. "**ಧರ್ಮಶಾಸ್ತ್ರ**" ವೆಂದರೆ ಶಿವೋಪದಿಷ್ಟವಾದ ಆಗಮಶಾಸ್ತ್ರವು. ಮನ್ವಾದಿಸ್ಮೃತಿಗಳು ಅದನ್ನು ಪುರಸ್ಕರಿಸಿಯೇ ಧರ್ಮಾಚರಣೆಗಳನ್ನು ಪ್ರತಿಪಾದಿಸುತ್ತವೆ. ಅದುಕಾರಣವೇ ಸರ್ವತಂತ್ರಸ್ವತಂತ್ರರು ಆಗಮಸಂಹಿತೆಗಳಿಗೂ ಸ್ಮೃತಿಗ್ರಂಥಗಳಿಗೂ ಸಬಲದುರ್ಬಲನ್ಯಾಯವಿರುವುದೆಂದು ಹೇಳುತ್ತಾರೆ. ಕಲ್ಪಗ್ರಂಥಗಳಲ್ಲಿಯೂ ಧರ್ಮಾಚರಣೆಗಳು ಪ್ರತಿಪಾದಿಸಲ್ಪಡುವುದರಿಂದ ಅವುಗಳಿಗೂ ಧರ್ಮಶಾಸ್ತ್ರಗಳೆನ್ನಬಹುದಾದರೂ, ಮೇಲೆ ಕಾಣಿಸಿದ ಹದಿನಾಲ್ಕು ವಿದ್ಯೆಗಳ ಪರಿಗಣನೆಯಲ್ಲಿ ಮುಖ್ಯವಾದ ಧರ್ಮಶಾಸ್ತ್ರವೆಂದರೆ ಶಿವೋಪದಿಷ್ಟಧರ್ಮಸಂಹಿತೆಯೆಂಬ ಅಭಿಪ್ರಾಯದಿಂದೇ 'ಧರ್ಮಶಾಸ್ತ್ರ' ವೆಂಬುದು ಪೃಥಕ್ಕಾಗಿ ತೋರಿಸಲ್ಪಟ್ಟಿದೆ. ಹಾಗೂ ಚಾತುರ್ವರ್ಣ್ಯಧರ್ಮಗಳಿಗೆ ಸಂಬಂಧಿಸಿದ ಸರ್ವವಿಧ ವಿಧಾನಗಳಿಗೂ ಮೂಲಭೂತಗಳಾದ ವಚನಗಳು ಕಾಮಿಕಾದ್ಯಾಗಮಸಂಹಿತೆಗಳಲ್ಲಿವೆ. ವೇದಾಗಮಸಂಹಿತೆಗಳ ಪ್ರವರ್ತಕರಲ್ಲಿ ಮುಖ್ಯನಾದ ಶ್ರೀ ನಂದಿಕೇಶ್ವರನು ಶಿವಧರ್ಮಸಂಹಿತೆಯಲ್ಲಿ ಹೀಗೆ ನಿರೂಪಿಸುತ್ತಾನೆ:—

ಸ ಯೋನಿಃ ಸರ್ವವಿದ್ಯಾನಾಂ ಪುರುಷಃ ಕಾರಣಂ ಪರಃ ।
ನಿಃಶ್ವಾಸತುಲ್ಯಮುದ್ಭೂತಾನ್ಯಖಿಲಾನ್ಯಾಗಮಾನಪಿ ॥
ಸಾವಶೇಷಾನ್ ಕ್ರಿಯಾಭಾಗೈರವೇದ್ಯಾನ್ಪಶುಸಮ್ಮಿತೇಃ ।
ವಿಚಿನ್ತ್ಯ ಧರ್ಮಶಾಸ್ತ್ರಂ ತಚ್ಛೈವಮಾಖ್ಯಾತವಾನ್ಪ್ರಭುಃ ।
ಅನನ್ತವೇದಸನ್ನಿಷ್ಟಸರ್ವಾರ್ಥಸ್ತೋಮಸಬ್ಬಂಧಣಮ್ ॥
ಕಾಮಿಕಾದಿಪ್ರಭೇದೇನ ಭಿನ್ನಮೇಕಾರ್ಥಶೋಭಿತಮ್ ।
ತತ್ರತ್ಯಾಕಾಲವತೀರ್ಣೈಸ್ತು ಮುನಿಭಿಃ ಶಂಸಿತವ್ರತೈಃ ।
ಶಾಸ್ತ್ರಂ ತದನುಸ್ಮೃತ್ಯೈವ ಕಥ್ಯತೇ ಧರ್ಮಸಂಗ್ರಹಃ ॥
ಆದಿತಃ ಶೈವಮೇವಾಹುರಾರ್ಷಂ ತದನುಸಾರತಃ ॥
ಧರ್ಮಶಾಸ್ತ್ರಮಿತಿ ಪ್ರಾಜ್ಞಾಃ ಶಾಸ್ತ್ರನಿರ್ಣಯತತ್ಪರಾಃ ॥

[ಸರ್ವವಿದ್ಯಾಧಿಪತಿಯಾದ ಪರಮೇಶ್ವರನು ನಿಶ್ವಾಸದಂತೆ ಆವಿರ್ಭವಿಸಿದ ಋಗಾದಿವೇದಗಳಲ್ಲಿ ಕ್ರಿಯಾಕಾಂಡವು (ಸರ್ವಜೀವಾನುಷ್ಠೇಯ ಕ್ರಿಯಾಭಾಗವು) ಸಾಂಗವಾಗಿಲ್ಲವೆಂದೂ, ಆ ವೇದಗಳ ಅರ್ಥವು ಜೀವಕೋಟಿಗೆ ಸರಿಯಾಗಿ ತಿಳಿಯದೆಂದೂ ಯೋಚಿಸಿ ನಿಶ್ಶೇಷ ಕ್ರಿಯಾಭಾಗವನ್ನು ತಿಳಿಸುವಂತಹದೂ, ಸಮಸ್ತವೇದಾರ್ಥದ ಉಪಬೃಂಹಣರೂಪವಾದುದೂ, ಏಕಾರ್ಥಬೋಧಕಗಳಾದ ಕಾಮಿಕಾದ್ಯನೇಕ ಸಂಹಿತೆಗಳನ್ನೊಳಗೊಂಡುದೂ ಆದ ಆಗಮಶಾಸ್ತ್ರವೆಂಬ ಧರ್ಮಶಾಸ್ತ್ರವನ್ನು ಬೋಧಿಸಿದನು. ಬಳಿಕ ಆ ಆ ಕಾಲದಲ್ಲಿ ಅವತರಿಸಿದ ಮುನಿವರ್ಯರಿಂದ ಶಿವಾಗಮವೆಂಬ ಮೂಲಧರ್ಮಶಾಸ್ತ್ರವನ್ನನುಸರಿಸಿಯೇ ಧರ್ಮಸಂಗ್ರಹವು ಹೇಳಲ್ಪಡುವುದು. ಅನಾದಿಧರ್ಮಶಾಸ್ತ್ರವೆಂದರೆ ಶಿವಸಂಹಿತಾಭಾಗವೆಂದೇ ಸಿದ್ಧವಾಗುವುದು. ಇದನ್ನು ಆಧಾರವಾಗಿಟ್ಟುಕೊಂಡೇ ಸ್ಮೃತಿಸಮೂಹವು ಧರ್ಮಶಾಸ್ತ್ರವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆಯೆಂದು ಶಾಸ್ತ್ರನಿರ್ಣಯತತ್ಪರರಾದ ಜಾಣರು ಅಭಿಪ್ರಾಯಪಡುತ್ತಾರೆ.]

ಎಂಬೀ ಪ್ರಮಾಣವಚನವು ಚತುರ್ದಶವಿದ್ಯೆಗಳಲ್ಲಿ ಪರಿಗಣಿಸಲ್ಪಡುವ ಮೂಲಧರ್ಮಶಾಸ್ತ್ರವೆಂದರೆ ಮುಖ್ಯವಾಗಿ ಶಿವಾಗಮವೆಂದೇ ಉದ್ಘೋಷಿಸುವುದು. ಇನ್ನು, ಉಪವೇದಗಳೆನಿಸುವ ಆಯುರ್ವೇದಾದಿಗಳ ಸ್ವರೂಪವು ಹೀಗಿರುವುದು.

ಆಯುರ್ವೇದವು:—ಇದರಲ್ಲಿ ಸೂತ್ರ, ಶಾರೀರ, ಐಂದ್ರಿಯ, ಚಿಕಿತ್ಸಾ, ನಿದಾನ, ವಿಮಾನ, ವಿಕಲ್ಪ, ಸಿದ್ಧಿ; ಎಂಬ ಎಂಟುಸ್ಥಾನಗಳು ಕಲ್ಪಿಸಲ್ಪಟ್ಟಿವೆ. ಬ್ರಹ್ಮ, ಪ್ರಜಾಪತಿ, ಅಶ್ವಿನೀಕುಮಾರ, ಧನ್ವಂತರಿ, ಇಂದ್ರ, ಭರದ್ವಾಜ, ಆತ್ರೇಯ, ಅಗ್ನಿವೇಶ, ಮೊದಲಾದವರಿಂದ ಈ ವೇದವು ಪರಂಪರೆಯಿಂದ ಬೋಧಿಸಲ್ಪಟ್ಟುದಾಗಿ ಚರಕನಿಂದ ಸಂಕ್ಷಿಪ್ತಗೊಳಿಸಲ್ಪಟ್ಟಿದೆ. ಸುಶ್ರುತನು ಇದರ ಪಂಚಸ್ಥಾನಾತ್ಮಕಗ್ರಂಥವನ್ನು ಪೃಥಕ್ಕಾಗಿ ಬರೆದಿದ್ದಾನೆ. ಈ ಆಯುರ್ವೇದೀಯ ವಿಷಯವೇ ವಾಗ್ಭಟ ವೃಷಭರಾಜೀಯಾದಿ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿರುತ್ತದೆ. ಈಗಣ ಡಾಕ್ಟರರಿಂದ ನೂತನ ಸಂಶೋಧನರೂಪವಾದುದೆಂದು ಬಣ್ಣಿಸಲ್ಪಡುವ ಮೂತ್ರವನ್ನು ದಹಿಸಿ ಪರೀಕ್ಷಿಸುವ ಪದ್ಧತಿಯೆಂಬುದು ವೃಷಭರಾಜೀಯಗ್ರಂಥಕಾರನಿಗೆ ತಿಳಿಯದು! ಕಾಮಶಾಸ್ತ್ರವೂ ಆಯುರ್ವೇದದಲ್ಲಿಯೇ ಅಂತರ್ಭೂತವಾಗಿರುವುದು. ಸುಶ್ರುತನು 'ವಾಜೀಕರಣ' ಪ್ರಕರಣವನ್ನು ನಿರೂಪಿಸಿದ್ದಾನೆ. ವಾತ್ಸ್ಯಾಯನನಿಂದ ಪಂಚಾಧ್ಯಾಯಾತ್ಮಕವಾದ ಕಾಮಶಾಸ್ತ್ರವು ರಚಿಸಲ್ಪಟ್ಟಿದೆ. ರತಿರಹಸ್ಯ, ಅನಂಗರಂಗ ಮುಂತಾದ ಗ್ರಂಥಗಳೂ ಕಾಮಶಾಸ್ತ್ರವನ್ನು ವಿವರಿಸತಕ್ಕವುಗಳಾಗಿವೆ. ಶಾಸ್ತ್ರೋಕ್ತಪಿತ ವಿಷಯೋಪಭೋಗವಾದರೂ ಅಂದರೆ ಕಾಮಶಾಸ್ತ್ರಾನುಸಾರವಾಗಿ ವಿಷಯಗಳನ್ನುಪಭೋಗಿಸಿದರೂ ಅದು ಕೊನೆಗೆ ದುಃಖದಲ್ಲಿಯೇ ಪರ್ಯವಸಾನ ಹೊಂದುವುದೆಂಬ ಸಂಗತಿಯು ಅನುಭವಸಿದ್ಧವಾಗಿ ವಿಷಯಗಳಲ್ಲಿ ವಿರಾಗವೃತ್ತಿಯುಂಟಾಗುವಿಕೆಯೇ ಕಾಮಶಾಸ್ತ್ರದ ಅಂತಿಮಧ್ಯೇಯವು. ರೋಗವೂ, ರೋಗಸಾಧನವೂ, ರೋಗನಿವೃತ್ತಿಯೂ, ಆರೋಗ್ಯಸಾಧನವೂ ಎಂಬಿವುಗಳ ಜ್ಞಾನವಾಗುವಿಕೆಯೇ ಚಿಕಿತ್ಸಾಶಾಸ್ತ್ರದ ಪ್ರಯೋಜನವು. ಮನುಷ್ಯನು ಅಭ್ಯುದಯವನ್ನಾಗಲಿ, ನಿಃಶ್ರೇಯಸ್ಸನ್ನಾಗಲಿ ಸಂಪಾದಿಸಲು ಅವನ ಶರೀರವೇ ಮುಖ್ಯಸಾಧನವು; ಅದಾದರೋ ಆರೋಗ್ಯವುಳ್ಳದ್ದಾಗಿದ್ದರಲ್ಲವೇ? ಅದುಕಾರಣವೇ ದೇಹಸ್ವಾಸ್ಥ್ಯಕ್ಕಾಗಿ ಚಿಕಿತ್ಸಾಶಾಸ್ತ್ರದ ಆವಶ್ಯಕತೆಯುಂಟು.

ಧನುರ್ವೇದವು:—ಈ ಎರಡನೆಯ ಉಪವೇದದ ಪ್ರವರ್ತಕನು ವಿಶ್ವಾಮಿತ್ರನು. ಇದರಲ್ಲಿ ದೀಕ್ಷೆ, ಸಂಗ್ರಹ, ಸಿದ್ಧಿ, ಪ್ರಯೋಗಗಳೆಂಬ ನಾಲ್ಕು ಪಾದಗಳಿವೆ. ಮೊದಲನೆಯ ದೀಕ್ಷಾಪಾದದಲ್ಲಿ ಆಯುಧಗಳ ಲಕ್ಷಣವೂ, ಅಧಿಕಾರಿಗಳ ಸ್ವರೂಪವೂ ಮುಂತಾದ ವಿಷಯಗಳು ನಿರೂಪಿಸಲ್ಪಟ್ಟಿವೆ. ಆಯುಧಗಳು ಮುಕ್ತ, ಅಮುಕ್ತ, ಮುಕ್ತಾಮುಕ್ತ, ಯಂತ್ರಮುಕ್ತವೆಂಬುದಾಗಿ ನಾಲ್ಕು ವಿಧಗಳಾಗಿರುತ್ತವೆ. ಅವುಗಳಲ್ಲಿ ಚಕ್ರಾದಿಗಳು ಮುಕ್ತಾಯುಧಗಳೆಂದೂ, ಖಡ್ಗಾದಿಗಳು ಅಮುಕ್ತಗಳೆಂದೂ, ಶಲ್ಯವೇ ಮುಂತಾದ ಆಯುಧಗಳು ಮುಕ್ತಾಮುಕ್ತಗಳೆಂದೂ ಶರಾದಿಗಳು ಯಂತ್ರಮುಕ್ತಗಳೆಂದೂ ಹೇಳಲ್ಪಡುತ್ತವೆ. ಮುಕ್ತಾಯುಧಕ್ಕೆ ಅಸ್ತ್ರವೆಂದೂ, ಅಮುಕ್ತಾಯುಧಕ್ಕೆ ಶಸ್ತ್ರವೆಂದೂ ಬೇರೆ ಹೆಸರುಗಳಿವೆ. ಅಸ್ತ್ರಗಳು ಬ್ರಾಹ್ಮ, ವೈಷ್ಣವ, ಪಾಶುಪತ, ಪ್ರಾಜಾಪತ್ಯ, ಆಗ್ನೇಯವೆಂಬೀ ಮೊದಲಾದ ಭೇದಗಳಿಂದ ಅನೇಕ ಪ್ರಕಾರವಾಗಿವೆ. ಆ ಆ ದೇವತೆಗಳಿಂದಲೂ, ಮಂತ್ರಗಳಿಂದಲೂ ಯುಕ್ತಗಳಾದ ಈ ನಾಲ್ಕು ವಿಧವಾದ ಆಯುಧಗಳಲ್ಲಿ ಕ್ಷತ್ರಿಯಕುಮಾರರಾಗಲಿ, ಅವರ ಅನುಯಾಯಿಗಳಾದ ಇತರರಾಗಲಿ, ಯಾರು ಅಧಿಕಾರಿಗಳಾಗಿರುವರೋ ಅವರೆಲ್ಲರೂ ಪದಾತಿಗಳೂ, ರಥಾರೂಢರೂ, ಗಜಾರೂಢರೂ, ಅಶ್ವಾರೂಢರೂ ಎಂಬುದಾಗಿ ನಾಲ್ಕು ತೆರನಾಗಿರುತ್ತಾರೆ. ಈ ವೇದದ ಮೊದಲನೆಯ ಪಾದದಲ್ಲಿಯೇ ದೀಕ್ಷೆ, ಅಭಿಷೇಕ, ಶಕುನ, ಮಂಗಲ, ಕರಣಮೊದಲಾದ ವಿಷಯಗಳೂ ಇವೆ. ಎರಡನೆಯ ಪಾದದಲ್ಲಿ ಸರ್ವವಿಶಿಷ್ಟ ಶಸ್ತ್ರಗಳ ಹಾಗೂ ಆಚಾರ್ಯರ ಲಕ್ಷಣಗಳೂ, ಆಚಾರ್ಯರ ಸನ್ನಿಧಿಯ ಪದ್ಧತಿಯೂ ಶಸ್ತ್ರಾಸ್ತ್ರಗಳ ಸಂಗ್ರಹ ಮರ್ಮವೂ ಮುಂತಾದ ವಿಷಯಗಳು ಪ್ರದರ್ಶಿತಗಳಾಗಿವೆ. ಮೂರನೆಯಪಾದದಲ್ಲಿ ಗುರುಸಂಪ್ರದಾಯದಿಂದ ಸಿದ್ಧಗಳಾದ ವಿಶಿಷ್ಟಶಸ್ತ್ರಾಸ್ತ್ರಗಳನ್ನು ಪುನಃ ಪುನಃ ಅಭ್ಯಾಸಿಸುವಿಕೆಯೂ ಮಂತ್ರಾಧಿದೇವತೆಗಳ ಸಿದ್ಧೀಕರಣವೂ ಮೊದಲಾದ ವಿಷಯಗಳಿವೆ. ನಾಲ್ಕನೆಯ ಪಾದದಲ್ಲಿ ದೇವತಾರ್ಚನೆ, ಅಭ್ಯಾಸ ಮುಂತಾದುವರಿಂದ ಸಿದ್ಧಿಸಲ್ಪಟ್ಟ ಬೇರೆಬೇರೆ ಅಸ್ತ್ರಗಳ ಪ್ರಯೋಗಗಳು ತೋರಿಸಲ್ಪಟ್ಟಿವೆ. ದುಷ್ಟರನ್ನು ದಂಡಿಸುವುದೂ, ಕಳ್ಳರೂ, ಕಾಡುಜನರೂ ಮುಂತಾದವರಿಂದ ಬಾಧೆಯುಂಟಾಗದ ಹಾಗೆ ಪ್ರಜೆಗಳನ್ನು ಸಂರಕ್ಷಿಸುವುದೂ ಎಂಬುದೇ ಧನುರ್ವೇದದ ಪ್ರಯೋಜನವು. ವಿಶ್ವಾಮಿತ್ರನು ತನಗೆ ಮಹೇಶ್ವರ, ಪ್ರಜಾಪತಿ ಮೊದಲಾದ ಗುರುಪರಂಪರೆಯಿಂದ ಪ್ರಾಪ್ತವಾದ ಈ ಧನುರ್ವೇದವನ್ನು ಕ್ಷತ್ರಿಯರ ಉಪಯೋಗಕ್ಕೋಸ್ಕರ ರಚಿಸಿದನು. ಈ ವೇದಾಂತರ್ಗತಗಳಾದ ಎಷ್ಟೋ ವಿಷಯಗಳು 'ಶುಕ್ರನೀತಿ' ಬೃಹಸ್ಪತಿತಂತ್ರ ಮೊದಲಾದ ರಾಜನೀತಿಶಾಸ್ತ್ರಗ್ರಂಥಗಳಲ್ಲಿ ವಿವರಿಸಲ್ಪಟ್ಟಿವೆ.

ಗಾಂಧರ್ವವೇದವು:—ಇದರ ಪ್ರವರ್ತಕನು ಭರತಮುನಿಯು. ಇದು ಗೀತ, ವಾದ್ಯ, ನೃತ್ಯವೆಂಬ ಭೇದಗಳಿಂದ ಅನೇಕ ಪ್ರಕಾರವಾಗಿದೆ. ದೇವತೆಗಳಾರಾಧನೆಯೂ, ನಿರ್ವಿಕಲ್ಪಸಮಾಧಿ ಮುಂತಾದುದೂ ಸಿದ್ಧಿಸುವುದೇ ಈ ವೇದದ ಪ್ರಯೋಜನವು. ಈ ವೇದವನ್ನನುಸರಿಸಿಯೇ ಸಂಗೀತವಿದ್ಯೆಯನ್ನು ಬೋಧಿಸತಕ್ಕ 'ಸಂಗೀತರತ್ನಾಕರ' ಮೊದಲಾದ ಗ್ರಂಥಗಳು ವಿಪುಲವಾಗಿವೆ.

ಅರ್ಥವೇದವು:—ಇದು ಬಹುವಿಧವಾದ ಅರ್ಥಶಾಸ್ತ್ರರೂಪವಾಗಿರುವುದು. ವ್ಯಾವಹಾರಿಕ ನೀತಿಶಾಸ್ತ್ರವೂ ಅಶ್ವಶಾಸ್ತ್ರವೂ, ಶಿಲ್ಪಶಾಸ್ತ್ರವೂ, ಸೂಪಶಾಸ್ತ್ರವೂ, ಚತುಃಷಷ್ಟಿಕಲಾಶಾಸ್ತ್ರವೂ ಮೊದಲಾದ ಅನೇಕಶಾಸ್ತ್ರಗಳು ಇದರ ಅಂತರ್ಭೂತಗಳಾಗಿವೆ. ಇವುಗಳ ಪ್ರಯೋಜನಭೇದವು ವಿಶೇಷತಃ ವ್ಯಾವಹಾರಿಕ ವಿಷಯಗಳನ್ನೇ ಅನುಲಕ್ಷಿಸಿರುತ್ತದೆ. 'ಕೌಟಿಲ್ಯತಂತ್ರ' ವೆಂಬ ಅರ್ಥಶಾಸ್ತ್ರವಾದರೂ ಈ ವೇದವನ್ನನುಸರಿಸಿರುವುದು.

ವೇದವಿದ್ಯಾವಿಸ್ತಾರರೂಪಗಳಾಗಿರತಕ್ಕ ಹದಿನಾಲ್ಕು ವಿದ್ಯೆಗಳಲ್ಲಿ ಪರಿಗಣಿಸಲ್ಪಡತಕ್ಕ ವೇದದ ಅಂಗೋಪಾಂಗಗಳ ವಿಷಯಕವಾಗಿ ಬರೆಯಬೇಕಾದುದು ಪ್ರಾಸಂಗಿಕವಾದುದಷ್ಟೇ! ಅವುಗಳಲ್ಲಿ ಮೊದಲು ಶಿಕ್ಷಾ ಮೊದಲಾದ ಆರು ಅಂಗಗಳ ಸ್ವರೂಪವನ್ನು ವಿವರಿಸಲುಪಕ್ರಮಿಸುತ್ತೇವೆ. ಪಾಣಿನೀಯಶಿಕ್ಷೆಯಲ್ಲಿ ಹೀಗೆ ಹೇಳಲ್ಪಟ್ಟಿರುವುದು.

ಛನ್ದಃ ಪಾದೌ ತು ವೇದಸ್ಯ ಹಸ್ತೌ ಕಲ್ಪೋಽಥ ಪಠ್ಯತೇ ।
ಜ್ಯೋತಿಷಾಮಯನಂ ಚಕ್ಷುರ್ನಿರುಕ್ತಂ ಶ್ರೋತ್ರಮುಚ್ಯತೇ ॥
ಶಿಕ್ಷಾ ಘ್ರಾಣಂ ತು ವೇದಸ್ಯ ಮುಖಂ ವ್ಯಾಕರಣಂ ಸ್ಮೃತಮ್ ।
ತಸ್ಮಾತ್ಸಾಂಗಮಧೀತ್ಯೈವ ಬ್ರಹ್ಮಲೋಕೇ ಮಹೀಯತೇ ॥

ಹೇಗೆ ಮನುಷ್ಯಾದಿ ಪ್ರಾಣಿಗಳ ಬಾಳುವೆಗೋಸ್ಕರ ಕೈ, ಕಾಲು, ಮೂಗು, ಮೋರೆ ಮೊದಲಾದ ಅವಯವಗಳ ಆವಶ್ಯಕತೆಯುಂಟೋ ಹಾಗೆ ವೇದಪುರುಷನಿಗಾದರೂ **ಛಂದಸ್ಸು, ಕಲ್ಪ, ಜ್ಯೋತಿಷ, ನಿರುಕ್ತ, ಶಿಕ್ಷಾ, ವ್ಯಾಕರಣ** ಎಂಬಿವು ಅನುಕ್ರಮವಾಗಿ ಕಾಲು, ಕೈ, ಕಣ್ಣು, ಮೂಗು, ಮೋರೆಯುಂತಿರುತ್ತವೆ. ಶರೀರಕ್ಕೆ ಹಸ್ತಪಾದಾದಿಗಳಂತೆ ಛಂದಸ್ಸು ಮೊದಲಾದ ಅಂಗಗಳು ವೇದದ ಸಾಕ್ಷಾತ್ಸಂಬಂಧಗಳಾಗಿಯೂ ಪುರಾಣಾದ್ಯುಪಾಂಗಗಳು ಅಂಗುಲ್ಯಾದಿಗಳಂತೆ ಪರಂಪರಾಸಂಬಂಧಗಳಾಗಿಯೂ ಇವೆ.

ಪೂರ್ವಕಾಲದಲ್ಲಿ ಶಿಕ್ಷಾದಿಷಡಂಗಗಳು ಬೇರೆಬೇರೆ ವಿಧಗಳಾದ ವಿಶಿಷ್ಟಗ್ರಂಥಗಳೆಂದು ತಿಳಿಯಲ್ಪಡುತ್ತಿರಲಿಲ್ಲ. ವೇದಗಳ ಯಥಾರ್ಥಜ್ಞಾನವು ಯಾವ ನ್ಯೂನತೆಯಿಲ್ಲದಂತೆ ಸರಿಯಾಗಿ ಲಭಿಸಬೇಕೆಂಬ ಹೇತುವಿನಿಂದ ವೇದಶಾಲೆಗಳಲ್ಲಿ ಈ ಗ್ರಂಥಗಳನ್ನು ಅಭ್ಯಾಸಿಸುವ ಸಂಪ್ರದಾಯವಿದ್ದಿತು. ಅದು ಕಾರಣವೇ ಮುಂಡಕೋಪನಿಷತ್ತಿನಲ್ಲಿ (೧-೧-೫) "**ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋಜ್ಯೋತಿಷಮಿತಿ**" ಎಂಬುದಾಗಿ ಶಿಕ್ಷಾದಿಷಡಂಗಗಳು ನಿರೂಪಿಸಲ್ಪಟ್ಟಿವೆ. ವೇದಕಾಲೀನಗಳಾದ ಈ ಷಡಂಗಗಳು ಮುಂದೆ ಪ್ರತ್ಯೇಕವಾಗಿ ಉಪಗ್ರಂಥಸ್ವರೂಪವನ್ನು ತಳೆದು ವೇದಶಾಲೆಗಳಲ್ಲಿ ಬೇರೆಬೇರೆಯಾಗಿ ಸ್ವತಂತ್ರರೀತಿಯಿಂದ ಪದ್ಧತಿಯನ್ನನುಸರಿಸಿ ಅಭ್ಯಾಸಿಸಲ್ಪಡತಕ್ಕವುಗಳಾದುವು.

ವೇದದ ಆರುಅಂಗಗಳಲ್ಲಿ '**ಶಿಕ್ಷಾ**' ಎಂಬುದು ಪ್ರಧಾನಾಂಗವಾಗಿದೆ. ಈ ಅಂಗದ ಅರ್ಥವು ಪೂರ್ವಾಚಾರ್ಯರಿಂದ ಹೀಗೆ ಹೇಳಲ್ಪಟ್ಟಿದೆ. ೧. '**ಹ್ರಸ್ವದೀರ್ಘಾದಿ ವೈದಿಕಸ್ವರೋಚ್ಚಾರಣಪ್ರತಿಪಾದಕಂ ಶಾಸ್ತ್ರಮ್**' ಅಂದರೆ ಹ್ರಸ್ವದೀರ್ಘಾದಿವೈದಿಕಸ್ವರೋಚ್ಚಾರವನ್ನು ಪ್ರತಿಪಾದಿಸುವ ಶಾಸ್ತ್ರವು 'ಶಿಕ್ಷಾ' ಎನಿಸುವುದು. ೨. '**ಸ್ವರಾದಿಕಂ ಶಿಕ್ಷ್ಯತೇ ಅನಯಾ ಇತಿಶಿಕ್ಷಾ**' ವರ್ಣಗಳನ್ನು ಉಚ್ಚರಿಸುವಲ್ಲಿ ಮುಖ ಸಂಬಂಧವಾದ ಸ್ಥಾನಗಳನ್ನು ಉಪದೇಶಿಸುವ ಶಾಸ್ತ್ರವು ಶಿಕ್ಷೆಯು. ಸಾರಾಂಶ, ಶಿಕ್ಷಾ ಅಂದರೆ ಸ್ಪಷ್ಟೋಚ್ಚಾರಪೂರ್ವಕವಾಗಿ ಸ್ವರಾಘಾತದೊಡನೆ ಸಂಹಿತೆಯನ್ನು ಪಠಿಸುವುದು. ಈ ಶಿಕ್ಷಾಂಗದಿಂದ ಉದಾತ್ತ, ಅನುದಾತ್ತ, ಸ್ವರಿತ, ಹ್ರಸ್ವ, ದೀರ್ಘ, ಪ್ಲುತ ಮೊದಲಾದ ಧರ್ಮವಿಶಿಷ್ಟನಾದ ಸ್ವರವ್ಯಂಜನಾತ್ಮಕವರ್ಣೋಚ್ಚಾರದ ಪದ್ಧತಿಯು ಅರಿಯಲ್ಪಡುವುದು.

ಈ ವೇದಾಂಗದ ಹೆಸರು ಪ್ರಥಮತಃ ತೈತ್ತಿರೀಯೋಪನಿಷತ್ತಿನಲ್ಲಿಯೇ ನಿರ್ದೇಶಿಸಲ್ಪಟ್ಟಿದೆ. (ತೈ. ೧-೨) ತೈತ್ತಿರೀಯಸಂಹಿತೆಗೆ ಸಂಬಂಧಿಸಿದ ಕಾಂಡತ್ರಯಾತ್ಮಕ ಬ್ರಾಹ್ಮಣಭಾಗದ ಪರಿಶಿಷ್ಟವೆನಿಸುವ ಹತ್ತು ಅಧ್ಯಾಯಗಳುಳ್ಳ ತೈತ್ತಿರೀಯಾರಣ್ಯಕದ ಕೊನೆಯ ೭-೮-೯ ಎಂಬೀ ಮೂರು ಅಧ್ಯಾಯಗಳೇ ತೈತ್ತಿರೀಯೋಪನಿಷತ್ಸಂಜ್ಞಕಗಳಾಗಿವೆ. ಹತ್ತನೆಯ ಅಧ್ಯಾಯವು ಮಹಾನಾರಾಯಣೋಪನಿಷತ್ತೆಂಬುದಾಗಿ ಪ್ರಸಿದ್ಧವಾಗಿರುವುದು. ತೈತ್ತಿರೀಯೋಪನಿಷತ್ತಿನ ಆ ಮೂರು ಅಧ್ಯಾಯಗಳಿಗೂ ಅನುಕ್ರಮವಾಗಿ ಶಿಕ್ಷಾವಲ್ಲೀ, ಬ್ರಹ್ಮಾನಂದವಲ್ಲೀ, ಭೃಗುವಲ್ಲೀ ಎಂಬ ಹೆಸರುಗಳಿವೆ. ವಾಚಕರ ಅವಗಾಹನೆಗಾಗಿ 'ಶಿಕ್ಷಾ' ಶಾಸ್ತ್ರದ ರಹಸ್ಯಾರ್ಥವನ್ನು ತೆರೆದಿಡಲುದ್ಯುಕ್ತರಾದ ನಮಗೆ 'ಶಿಕ್ಷಾವಲ್ಲಿ'ಯ ಸ್ವರೂಪವನ್ನೀಗ ವಿವರಿಸುವುದುಚಿತವಾದುದಷ್ಟೇ!

ತೈತ್ತಿರೀಯೋಪನಿಷತ್ತಿನೊಳಗಿನದೊಂದು ಭಾಗವೇ ಶಿಕ್ಷಾಧ್ಯಾಯವು, ಇದುವೇ 'ಶಿಕ್ಷಾವಲ್ಲಿ' ಎಂದು ಹೇಳಲ್ಪಡುವುದು. ಆದರೆ, ವೇದಗಳ ಅಧ್ಯಾಯಗಳಲ್ಲಿ ವಿಭಾಗಿಸಲ್ಪಟ್ಟ ಪ್ರಕರಣಗಳಿಗೆ ಅನುವಾಕಗಳೆನ್ನುತ್ತಾರೆ; ಕಠೋಪನಿಷತ್ತಿನ ಪ್ರತಿಯೊಂದು ಅಧ್ಯಾಯದಲ್ಲಿ ಮೂರು ವಲ್ಲಿಗಳಿವೆ. ಇದರಿಂದ "**ವಲ್ಲೀ**" ಅಂದರೆ ಅನುವಾಕವೆಂದರಿಯಲ್ಪಡುವುದು. ಹೀಗಿರುತ್ತಿರಲು ಅನೇಕ ಅನುವಾಕಗಳನ್ನೊಳಗೊಂಡ ಶಿಕ್ಷಾಧ್ಯಾಯಕ್ಕೆ 'ವಲ್ಲೀ' ಎಂಬ ಹೆಸರಿರುವುದು ಪ್ರಾಚೀನರೂಢಿಗೆ ವಿಲಕ್ಷಣವಾಗಿ ತೋರುವುದಲ್ಲವೇ? ಇನ್ನು, ಪ್ರತಿಯೊಂದು ಉಪನಿಷತ್ತಿನ ಆರಂಭದಲ್ಲಿ ಶಾಂತಿಮಂತ್ರವು ಪಠಿಸಲ್ಪಡುವುದು ಸರಿಯಷ್ಟೇ! ಇತರ ಉಪನಿಷತ್ತುಗಳ ಆರಂಭದಲ್ಲಿ ಪಠಿಸಲ್ಪಡುವ ಶಾಂತಿಮಂತ್ರಗಳು ಎಲ್ಲಿಯೂ ಬೇರೆ ತೆಗೆದುಕೊಳ್ಳಲ್ಪಟ್ಟವುಗಳಾಗಿವೆ. ಈ ಶಿಕ್ಷೋಪನಿಷತ್ತಿನ ಆರಂಭದಲ್ಲಿರುವ '**ಶಂ ನೋ ಮಿತ್ರಃ**' ಎಂಬ ಶಾಂತಿಮಂತ್ರವೇ ಇದರ (ಶಿಕ್ಷಾಧ್ಯಾಯದ) ಮೊದಲನೆಯ ಅನುವಾಕವೆನಿಸುವುದು. ಒಂದು ಅನುವಾಕರೂಪವೇ ಆಗಿರತಕ್ಕ ಈ ಶಾಂತಿಮಂತ್ರವು ಅಧ್ಯಾಯದ ಆರಂಭದಲ್ಲಿಯೂ ಸಮಾಪ್ತಿಯಲ್ಲಿಯೂ ಒಂದೇ ವಿಧವಾಗಿರುವುದು; ಆದರೂ ಕೊನೆಯ ಅನುವಾಕದೊಳಗಿನ ನಾಲ್ಕು ವಾಕ್ಯಗಳು ಬೇರೆತೆರನಾಗಿರುತ್ತವೆ. ಹೀಗೆ ಇತರ ಶಾಂತಿಮಂತ್ರಗಳಿಗಿಂತಲೂ ಶಿಕ್ಷಾಧ್ಯಾಯದ ಶಾಂತಿಮಂತ್ರವು ವಿಶೇಷಭಿನ್ನವಾಗಿರುವುದಾಗಿ ತೋರಿಬರುವುದರಿಂದ ಈ ಶಿಕ್ಷಾಧ್ಯಾಯಕ್ಕೆ 'ವಲ್ಲೀ' ಎಂದು ಹೇಳುವುದಕ್ಕಿಂತಲೂ ಪ್ರಪಾಠಕವು ಅಥವಾ ಅಧ್ಯಾಯವು ಎಂದು ಹೆಸರಿಡುವುದು ಅನುಚಿತವಾದುದಲ್ಲ. ಆದ್ದರಿಂದ ಈಗ ನಾವು 'ಶಿಕ್ಷಾವಲ್ಲೀ' ಎಂದುಲ್ಲೇಖಿಸದೆ 'ಶಿಕ್ಷೋಪನಿಷದ್' ಅಥವಾ 'ಶಿಕ್ಷಾಧ್ಯಾಯ'ವೆಂಬ ಹೆಸರುಗಳನ್ನೇ ಪ್ರತಿಪಾದಿಸುವೆವು.

ಈ ಶಿಕ್ಷಾಧ್ಯಾಯದಲ್ಲಿ ವಿಷಯನಿರೂಪಣವು ಎರಡನೆಯ ಅನುವಾಕದಿಂದೇ ಆರಂಭಿಸಲ್ಪಡುವುದು. ಎರಡನೆಯ ಅನುವಾಕದಲ್ಲಿಯೇ ವಾಕ್ಯೋಚ್ಚಾರಣೆಗೆ ಸಂಬಂಧಪಟ್ಟ ವಿಷಯವಿರುವುದು. ಹೇಗೆಂದರೆ—

ಓಂ ಶಿಕ್ಷಾಂ ವ್ಯಾಖ್ಯಾಸ್ಯಾಮಃ ।
ವರ್ಣಃ ಸ್ವರಃ ಮಾತ್ರಾ ಬಲಮ್ ।
ಸಾಮ ಸನ್ತಾನಃ ಇತ್ಯುಕ್ತಃ ಶಿಕ್ಷಾಧ್ಯಾಯಃ ॥

ಪಠನಶಾಸ್ತ್ರದ ಭಾಗವನ್ನು ನಾವು ಸ್ಪಷ್ಟೀಕರಿಸುವೆವು. ವರ್ಣ, ಸ್ವರ, ಮಾತ್ರೆ, ಪ್ರಯತ್ನ, ಸಮತೆ, ಅಕ್ಷರಪರಂಪರೆ; ಎಂಬುದಾಗಿ ಶಿಕ್ಷಾಧ್ಯಾಯವು ಹೇಳಲ್ಪಟ್ಟಿದೆ.

ಅಂದರೆ ವೈದಿಕವಾಕ್ಯಗಳನ್ನು ಪಠಿಸುವಾಗ ಅಕಾರಾದಿವರ್ಣಗಳೂ, ಉದಾತ್ತಾದಿಸ್ವರಗಳೂ, ಅಭ್ಯಂತರಾದಿಪ್ರಯತ್ನಗಳೂ, ಧ್ವನಿಯಸಮತೆಯೂ, ಅಕ್ಷರಗಳ ಪರಂಪರೆಯೂ ಎಂಬಿಷ್ಟು ವಿಷಯಗಳನ್ನು ಸರಿಯಾಗಿ ಉಪಯೋಗಿಸತಕ್ಕದ್ದು. ಅದು ಹೇಗೆಂದರೆ, ವಾಕ್ಯೋಚ್ಚಾರಣಮಯದಲ್ಲಿ ವರ್ಣಗಳ ವ್ಯತ್ಯಾಸವೂ, ಅಪಸ್ವರವೂ ಮುಂತಾದ ದೋಷಗಳು ಸಂಭವಿಸದಂತೆ ಎಚ್ಚರವಿರಬೇಕಾದುದು. ವೈದಿಕಕಾಲದಲ್ಲಿ ಈಗಿನಂತಹ ಬರವಣಿಗೆಯು ವ್ಯವಹಾರವು ವಿಶೇಷ ಪ್ರಚಾರದಲ್ಲಿದ್ದಿಲ್ಲ. ಅದುಕಾರಣವೇ ತತ್ಕಾಲೀನ ಜನರು ಉಚ್ಚರಿಸುವಿಕೆಯನ್ನೇ ಹೆಚ್ಚಾಗಿ ಬಳಕೆಯಲ್ಲಿಟ್ಟುಕೊಂಡಿದ್ದರು. ಹಾಗೆ ಉಚ್ಚರಿಸಲ್ಪಡತಕ್ಕ ವೈದಿಕವಾಙ್ಮಯದ ಅಕ್ಷರಗಳನ್ನೂ, ಸ್ವರಾದಿಗಳನ್ನೂ, ವ್ಯತ್ಯಾಸವಿಲ್ಲದಂತೆ ಈ ವರೆಗೆ ಕಾಪಾಡಿಕೊಂಡು ಬಂದವರು ವೈದಿಕಜನಾಂಗದವರೇ! ಈಗಲೂ ವೈದಿಕವಾಕ್ಯಗಳನ್ನು ಪಠಿಸುವಾಗ ಅಕ್ಷರಗಳ ಕ್ರಮವನ್ನೂ, ಸ್ವರಾದಿನಿಯಮಗಳನ್ನೂ ಅನುಸರಿಸುವ ಪದ್ಧತಿಯಲ್ಲಿ ಒಂದು ವಿಧವಾದ ಹೆಚ್ಚಳವಿರುವುದು ಅಪರಿಹಾರ್ಯವಾಗಿದೆ. ಅಕ್ಷರ ಸ್ವರಾದಿ ವಿಷಯಗಳನ್ನು ಈ ಮೇಲೆ ಉಲ್ಲೇಖಿಸಿದ್ದೇವೆ. ಈಗ ಅವುಗಳ ಇಂಗಿತವನ್ನು ವಿವರಿಸುತ್ತೇವೆ.

(ಸಶೇಷ)

ಗುರುನಿಂದಕರಿಗೆ ಬುದ್ಧಿವಾದ.

ಬರೆದವ—ದೈವಜ್ಞ ವಿನೋದ.

ಗುರುವರ್ಗವಿರೋಧಿಗಳಾದ ಕೆಲವರು ಈಗ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುತ್ತಲಿರುವ ಲೇಖಗಳು ವೀರಶೈವ ಸಮಾಜದಲ್ಲಿ ಭಯಂಕರವಾದ ಕ್ರಾಂತಿಯನ್ನುಂಟುಮಾಡತಕ್ಕವುಗಳಾಗಿರುತ್ತವೆ. ಗುರುಪೀಠಗಳ ಮೇಲಿನ ಇವರ ಅಸೂಯಾಂಧತೆಗೆ ಬೆಲೆಯಿಲ್ಲದಾಗಿದೆ. ಪ್ರಾಚೀನ ಗುರುಪರಂಪರೆಯು ಇವರಿಗೆ ಬೇಡವಾಗಿದೆ. ವೀರಶೈವಧರ್ಮಸಿದ್ಧಾಂತದ ನೆಲೆಯನ್ನರಿಯದೆ ಅಲೆಯುತ್ತಿರುವ ಈ ಮಹಾನುಭಾವರಿಗೆ ನಿಜಸಿದ್ಧಾಂತೋಪದೇಶವು ಕರ್ಣಕಠೋರವಾಗಿರುವದು. ಕೇವಲ ಕಲ್ಯಾಣದ ಬಸವನನ್ನು ಮುಂದುಮಾಡಿಕೊಂಡು ಎಬ್ಬಿಸಿರುವ ಮಬ್ಬು ವಿಚಾರಗಳೆಲ್ಲವೂ ಕ್ಷಣಮಾತ್ರದಲ್ಲಿ ನಾಶವಾಗುವವೆಂಬುದನ್ನು ಇವರು ಚೆನ್ನಾಗಿ ಲಕ್ಷಿಸಲಿ. ಕಲ್ಯಾಣದ ಬಸವನ ನಿಜವಾದ ಚರಿತ್ರೆಯನ್ನು ಈಗ ವೀರಶೈವಸಮಾಜವು ಚನ್ನಾಗಿ ಅರಿತಿರುವದು. ಬಸವನ ಜೀವಿತವು ಹೇಗೆ ಸಾಗಿಹೋಗಿರುವದೆಂಬುದು ಪ್ರಭಾಪತ್ರಿಕೆಯ ಮೂಲಕ ಸರ್ವರಿಗೂ ಗೊತ್ತಾಗಿರುವದು. ವೀರಶೈವಮತಸಾಮ್ರಾಜ್ಯದಲ್ಲಿ ವರ್ಣಸಾಂಕರ್ಯದ ವಿಷಗಾಳಿಯನ್ನು ಬೀಸಿದ ವ್ಯಕ್ತಿಯು ಸಾಮಾನ್ಯವಾದುದಲ್ಲ.

ಬಸವನ ತರುವಾಯ ಅಂಧ್ರವಾಸಿಗಳು ಎಬ್ಬಿಸಿದ ಅಂಧಭಕ್ತಿಯು ಕರ್ನಾಟಕದಲ್ಲಿಯೂ ಪ್ರಚಾರವಾಯಿತು. ಇದು ಗುರುವರ್ಗದವರ ಪ್ರಕಾಶದಿಂದ ನಾಶವಾಗಿ ಬಸವನ ನಿಜತತ್ವವು ಹೊರಬಿದ್ದಿತು. ಆದರೂ ಗುರುವರ್ಗದವರು ಈ ಮೌಢ್ಯಪರಂಪರೆಯನ್ನು ಕೂಡಲೇ ಕತ್ತರಿಸಿಹಾಕುವದರಿಂದ ಸಮಾಜವು ಇಬ್ಭಾಗವಾದೀತೆಂದು ಭಾವಿಸಿ ಕೇವಲ ವೀರಶೈವಸಿದ್ಧಾಂತ ನಿಜತತ್ವರತ್ನಗಳಿಂದ ಸಮಾಜವನ್ನು ಭೂಷಿಸಿ ಪೋಷಿಸ ತೊಡಗಿದರು. ಈ ಅಮೂಲ್ಯರತ್ನಹಾರಗಳನ್ನು ತ್ಯಜಿಸಿ ಕೆಲವರು ಸಾಂಕರ್ಯರೂಪವಾದ ಕಾಜಿನ ಮಣಿಗಳನ್ನು ಹಾಕಿಕೊಳ್ಳ ತೊಡಗಿರುವದು ಅತ್ಯಂತ ವಿಷಾದದ ಸಂಗತಿಯಾಗಿದೆ. ಇವರಿಗೆ ಇಂದಿಲ್ಲ ನಾಳೆಯಾದರೂ ಬುದ್ಧಿಯು ಬರುವದೆಂದು ಗುರುವರ್ಗದವರು ತಾಳಿರುವ ಶಾಂತಿಯು ಸಾಮಾನ್ಯವಾದುದಲ್ಲ. ಗುರುವರ್ಗದವರ ಮೇಲೆ ಇರುವ ಇವರ ದ್ವೇಷಾಸೂಯೆಗಳು ಇವರನ್ನೇ ನಾಶಮಾಡುವವಲ್ಲದೆ ಬೇರಿಲ್ಲ. ಕಳೆದ ತಿಂಗಳಿಂದಂತೂ ಗುರುನಿಂದಾತ್ಮಕಲೇಖಗಳ ಸುರಿಮಳೆಯಾಗತೊಡಗಿರುವದು. ನಿಂದಕರು ಹೆಚ್ಚಾದಂತೆ ಮಹಾತ್ಮರ ಪ್ರಭಾವವು ಮತ್ತಿಷ್ಟು ಹೆಚ್ಚಿಗೆ ಪ್ರಕಾಶಿಸುವದು. ಈಗ ಪ್ರಕಟವಾದ ಈ ಗುರುನಿಂದಕರ ಲೇಖಗಳಿಗೆ ಸಹಸ್ರಪಟ್ಟು ಮಿಗಿಲಾಗಿ ಬರೆದು ಇವರನ್ನು ಮುಖಭಂಗಿತರನ್ನಾಗಿ ಮಾಡಬಹುದಾಗಿತ್ತು; ಆದರೂ ಸದ್ಯಃ ನಾವು ಶಾಂತಿಯನ್ನು ತಾಳಬೇಕಾಗಿದೆ. ನಮ್ಮ ಶಾಂತಿಯು ಅವರಿಗೆ ಮತ್ತಿಷ್ಟು ಕ್ರಾಂತಿಕಾರಕಭಾವನೆಯನ್ನು ಹುಟ್ಟಿಸಬಹುದು; ಹುಟ್ಟಿಸಲಿ. ಗುರುನಿಂದೆಯಲ್ಲಿ ತೊಡಗಿದ ಪಾವಟೆ, ಬಳೆಅಂಗಡಿ ಮೊದಲಾದವರು ಈಗ ಬರೆಯುತ್ತಲಿರುವ ಲೇಖಗಳನ್ನು ನೋಡಿದ ಪ್ರತಿಯೊಬ್ಬ ವೀರಶೈವನಿಗೂ ಅತ್ಯಂತ ವಿಷಾದವಾಗುವದು. ಗುರುವಿನ ವಿಷಯದಲ್ಲಿ ಈ ರೀತಿ ಪಾಪಬುದ್ಧಿಯು ಪ್ರಬಲವಾಗಿರುವಾಗ್ಗೆ ಇವರಿಗೆ ಬುದ್ಧಿಯನ್ನು ಹೇಳುವವರಾರು? ಇವರು ಸಮಾಜದಲ್ಲಿ ತಮಗಿರುವ ಯೋಗ್ಯತೆಯನ್ನು ತಿಳಿಯದೆ ಜಗದ್ವಿಖ್ಯಾತರಾದ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣ ಸೆಟ್ಟರವರನ್ನೂ, ರಾಜಧರ್ಮಪ್ರವೀಣ ಪಿ. ಮಹಾದೇವಯ್ಯನವರನ್ನೂ ನಿಂದಿಸುವ ಕುಟಿಲಕಾಯಕವನ್ನು ಪ್ರಾರಂಭಿಸಿರುವದು ಪರಮವಿಷಾದದ ಸಂಗತಿಯಲ್ಲವೆ? ವೀರಶೈವರತ್ನಸ್ವರೂಪರಾದ ಈ ಮಹಾನುಭಾವರ ಬಗ್ಗೆ ಕುತ್ಸಿತ ಟೀಕೆಗಳನ್ನು ಬರೆಯುವದು ಸರಿಯಲ್ಲ. ಗುರುಸೇವಾಧುರೀಣರಾದ ಈ ಪುಣ್ಯಾತ್ಮರನ್ನು ಹೀಯಾಳಿಸುವವರಿಗೆ ಯಾವಗತಿಯು ಪ್ರಾಪ್ತವಾಗುವದೋ ತಿಳಿಯದಾಗಿದೆ. ಶಾಂತಮೂರ್ತಿಗಳಾದ ಈ ಮಹೋದಯರು ಇಂಥವರ ಕ್ಷುದ್ರವಿಚಾರಗಳಿಗೆ ಖಂಡಿತವಾಗಿಯೂ ಗಮನ ಕೊಡುವವರಲ್ಲ; ಇವರ ಹುಂಡಬುಂಡವಿಚಾರಗಳಿಗೆ ಸೊಪ್ಪು ಹಾಕುವವರಲ್ಲ; ಸಮಾಜೋದ್ಧಾರಕರಾದ ಸರ್ ಶೆಟ್ಟರೂ, ಶ್ರೀಮಾನ್ ಪಿ. ಮಹಾದೇವಯ್ಯನವರೂ, ತಮ್ಮ ಜೀವಮಾನದಲ್ಲಿ ಮಾಡಿದ ಮಹತ್ಕಾರ್ಯಗಳ ವಿವರಣೆಯು ಸುವರ್ಣಾಕ್ಷರಗಳಿಂದ ಬರೆದಿಡುವಂಥದಾಗಿದೆ. ಅಸ್ತು! ವೀರಶೈವಮತದ ಅಂತಃಕಲಹಗಳಿಗೆ ಮುಖ್ಯಕಾರಣರಾದ ಪಾವಟೆಯವರು ಇದುವರೆಗೆ ಪ್ರಸಿದ್ಧಿಸಿದ ಸಮಾಜವಿಘಾತುಕಗಳಾದ ಗ್ರಂಥಗಳೇ ಸಾಕ್ಷಿಯಾಗಿವೆ. ಇವರು ಬರೆದಿರುವ ಅಸಭ್ಯವಾದ ಬರವಣಿಗೆಯನ್ನು ಖಂಡಿಸಿ ಇವರಿಗೆ ಬುದ್ಧಿವಾದ ಹೇಳಿದರೂ ಕೂಡ "ಯೇನಕೇನ ಪ್ರಕಾರೇಣ ಪ್ರಸಿದ್ಧಃ ಪುರುಷೋಭವೇತ್" ಎಂದು ಮುಂದುವರೆತೊಡಗಿರುವುದು ಸಖೇದಾಶ್ಚರ್ಯಜನಕವಾಗಿರುವದು. ಮಹಾನುಭಾವರಾದ ಪಾವಟೆಯವರೇ? ಮಾಹೇಶ್ವರವರ್ಗವನ್ನತಿಕ್ರಮಿಸಬೇಕೆಂಬ ನಿಮ್ಮ ನೆಬ್ಬಾಶೆಯ ಮಬ್ಬನ್ನು ಅನೇಕಜನ ಗುರುವರ್ಗ ವಿರಕ್ತವರ್ಗದವರು ಚನ್ನಾಗಿ ಪರಿಹರಿಸಿದರೂ ನಿಮಗೆ ಬುದ್ಧಿಯು ಬರಲಿಲ್ಲ. ಈಗಲೂ ಆ ಭೂತವು ನಿಮ್ಮನ್ನು ಬಿಟ್ಟಿಲ್ಲ. ಆಗಲಿ, ಇದೇ ಬಡಬಡಿಕೆಯಿಂದಲೇ ಈ ಜನ್ಮವನ್ನು ನೀಗಿರಿ; ಮುಂದಿನ ಜನ್ಮದಲ್ಲಿಯಾದರೂ ಪರಮಾತ್ಮನು ನಿಮಗೆ ಉತ್ತಮಮಾರ್ಗವನ್ನು ತೋರಿಸಲಿ. ಗುರುವರ್ಗದವರು ಸ್ವಕರ್ತವ್ಯದಲ್ಲಿ ದಕ್ಷರಾಗಬೇಕೆಂದು **ಪ್ರತ್ಯಕ್ಷ ಧರ್ಮಾವತಾರಿಗಳಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು** ಪ್ರಯತ್ನಿಸಿದ ಕಾರ್ಯಗಳಿಗೆ ನಿಮ್ಮಿಂದಾದ ವಿಘ್ನಪರಂಪರೆಗಳು ಸಾಮಾನ್ಯವಾದವುಗಳಲ್ಲ. ನಿಮ್ಮ ವಿಘ್ನಗಳ ತೊಡಕುಗಳನ್ನು ಬಿಡಿಸಿಕೊಂಡು ತಮ್ಮ ನಿಜವಾದ ಧ್ಯೇಯವನ್ನು ಮುಂದುಸಾಗಿಸಿದ ಪಂಡಿತರ ಧೈರ್ಯಸಾಹಸಗಳನ್ನು ಎಷ್ಟು ವರ್ಣಿಸಿದರೂ ತೀರದು. ಪಂಡಿತರು ಪ್ರಾರಂಭದಿಂದಲೂ ತಮ್ಮ ಉಚ್ಚವಾದ ಶಾಸ್ತ್ರೀಯ ಧ್ಯೇಯಗಳನ್ನು ಚ್ಯುತಿಯಿಲ್ಲದಂತೆ ನಡೆಯಿಸಿರುವುದು ಜಗತ್ಪ್ರಸಿದ್ಧವಾಗಿರುವದು. ಪಂಡಿತರ ದಿವ್ಯಪ್ರಕಾಶದ ಮುಂದೆ ನಿಮ್ಮ ಯಾವ ಆಟವೂ ಹಿಂದೆಸಾಗಿಲ್ಲ, ಮುಂದೆಯೂ ಸಾಗುವಂತಿಲ್ಲವೆಂಬುದನ್ನು ಚನ್ನಾಗಿ ಲಕ್ಷಿಸಿದಲ್ಲಿಡಿರಿ. ಸುಮ್ಮನೆ ಅಸೂಯೆಪಟ್ಟರೆ ಬಂದ ಫಲವೇನು? ಪಂಡಿತರ ವಿಜಯಪ್ರಕರಣಗಳ ಜಯಭೇರಿಯ ನಾದವು ನಿಮಗೆ ಕರ್ಣಕಠೋರವನ್ನುಂಟುಮಾಡುವದು ಸಹಜವದೆ. ಅನೇಕಪ್ರಕರಣಗಳಲ್ಲಿ ತಣ್ಣಗಾದ ನೀವು ಬೆಂಗಳೂರಿನ ನಭೋಮಂಡಲವನ್ನು ವ್ಯಾಪಿಸಿದ ಆಂದೋಲಿಕೋತ್ಸವದ ಭವ್ಯನಾದವನ್ನು ಕೇಳಿ ಹೀಗೇಕೆ ವಿಕಾರವನ್ನು ಹೊಂದಿರುವಿರಿ. ಈ ರೀತಿಯಾದ ವಿಕಾರಜನ್ಯರೋಗಕ್ಕೆ ಪಂಡಿತರು ಔಷಧಿಯನ್ನು ಕೊಡುವ ಕ್ರಮಕ್ಕೆ ಬೀಳಬೇಕಾಗುತ್ತದೆ. ಅವರು ನಿಮ್ಮನ್ನು ಶಾಂತಗೊಳಿಸುವ ಕಾರ್ಯದಲ್ಲಿ ತೊಡಗಿದರೆ ವೀರಶೈವಮತೋನ್ನತಿಯ ಅಮೋಘವಾದ ಕಾರ್ಯಗಳೆಲ್ಲವೂ ತಟಸ್ಥವಾಗುವವು; ಆದ್ದರಿಂದ ಪಂಡಿತರ ಸಹವಾಸದಲ್ಲಿ ನುರಿತವರಾದ ನಮ್ಮಂಥವರಿಂದ ನಿಮಗೆ ಕೊಡುವ ಈ ಔಷಧಿಗಳನ್ನು ತೆಗೆದುಕೊಂಡು ಕೃತಾರ್ಥರಾಗಿರಿ. ಈಗ ನಿಮ್ಮಂಥವರಿಂದ ವೃತ್ತಪತ್ರಿಕೆಗಳಲ್ಲಿ ಬರೆಯಲ್ಪಡುತ್ತಿರುವ ಗುರುನಿಂದಾತ್ಮಕ ಲೇಖಗಳು ಅಖಿಲ ವೀರಶೈವಮತಕ್ಕೆ ಕುಂದನ್ನುಂಟುಮಾಡತಕ್ಕವುಗಳಾಗಿರುತ್ತವೆ. ಸಾವಧಾನದಿಂದ ಸಾಗಿರಿ. ಹಿಂದು ಮುಂದಿನ ವಿಚಾರವನ್ನು ಮಾಡಿರಿ. ಈಗಿನದು ಬಸವನ ರಾಜ್ಯವಲ್ಲ; ಬ್ರಿಟಿಷರ ರಾಜ್ಯವಿದು. ಈಗಿನ ವೀರಶೈವಮತವು ನಿಜತತ್ವನೇತ್ರರಿಂದ ಶೋಭಿಸುತ್ತಿರುವದು. ಸತ್ಯಸಂಶೋಧನಸಾಗರದಲ್ಲಿ ನಿಮ್ಮ ಅಮಂಗಳ ಜಾತಿಸಂಕರರೂಪ ಕಪ್ಪೆಚಿಪ್ಪುಗಳನ್ನಾರು ಕೇಳುವರು? ಬೆಲೆಬಾಳದ ಶುಷ್ಕವಚನಗಳ ಗಂಟನ್ನು ಕಟ್ಟಿಟ್ಟು ಬಿಡಿರಿ. ಗುರುಭಕ್ತಿಯುಕ್ತರಾಗಿರಿ. ಗುರುದ್ರೋಹಾತ್ಮಕ ಲೇಖಗಳನ್ನು ಬರೆಯುತ್ತ ಜಗದೀಶ್ವರನ ವಿಕೋಪಕ್ಕೆ ಪಾತ್ರರಾಗಬಾರದೆಂಬುದೇ ವಿನೋದನ ಅಭಿಲಾಷೆಯು.

ಹಲ್ಮ್ಯಾರು ಸಾಹುಕಾರ್ ಧರ್ಮಧುರಂಧರ ಮುರುಳಸಿದ್ಧಪ್ಪಶೆಟ್ಟರ ನಿಧನ.

ಹಾಸನ ಡಿ॥ ಅರಸೀಕೆರೆ ತಾಲೂಕು ಹಲ್ಮ್ಯಾರು ಗ್ರಾಮನಿವಾಸಿಗಳಾದ ಮ॥ ರಾ॥ ಸಾಹುಕಾರ್ ಮುರುಳಸಿದ್ಧಪ್ಪಶೆಟ್ಟರವರು ತಾ॥ 19-4-1934 ನೇ ಗುರುವಾರ ದಿವಸ ಮಧ್ಯಾಹ್ನ ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಹಾಸನ ಡಿಸ್ಟ್ರಿಕ್ಟಿನ ಪ್ರಜೆಗಳಲ್ಲೆಲ್ಲಾ ಅತ್ಯಂತ ಪ್ರಖ್ಯಾತಿಯನ್ನು ಪಡೆದು ಸರ್ವರ ಪ್ರೇಮಕ್ಕೂ ಪಾತ್ರರಾಗಿದ್ದರು. ತಮ್ಮ ಜೀವಮಾನದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿ ಅನೇಕ ಧರ್ಮಕಾರ್ಯಗಳನ್ನು ಮಾಡಿರುವದು ಸರ್ವತ್ರ ಪ್ರಸಿದ್ಧವಾಗಿದೆ. ಇವರು ತಮ್ಮ ಗ್ರಾಮದಲ್ಲಿ ಪರಸ್ಥಳದ ಜನರು ಇಳಿಯುವದಕ್ಕಾಗಿ ಒಂದು ಧರ್ಮಛತ್ರವನ್ನು ಕಟ್ಟಿಸಿರುವದಲ್ಲದೆ, ಜನರ ಆರೋಗ್ಯರಕ್ಷಣೆಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸಿ ಘನವಾದ ಸರಕಾರದವರಿಗೆ ಒಪ್ಪಿಸಿರುವರು. ಇದೇ ಗ್ರಾಮದಲ್ಲಿ ಸಾವಿರಾರು ರೂಪಾಯಿಗಳನ್ನು ಖರ್ಚು

(6ನೆಯ ಪುಟವನ್ನು ನೋಡಿ.)

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಏಳುವರ್ಷಗಳು ತುಂಬಿ ಎಂಟನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೇ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ—

ಪಂಚಾಚಾರ್ಯ ಪ್ರಭಾ.

೧೯೩೪ ನೇ ಮೇ ತಾ|| ೨೧ ನೇ ಸೋಮವಾರ.

೮ ನೆಯವರ್ಷ ಪ್ರಾರಂಭ.

ಪಂಚಾಚಾರ್ಯಪ್ರಭಾಪತ್ರಿಕೆಗೆ ಈ ಭಾವನಾಮ ಸಂವತ್ಸರದ ವೈಶಾಖ ಶುದ್ಧ ಪಂಚಮಿಗೆ ೭ ವರ್ಷಗಳು ತುಂಬಿ ೮ ನೆಯ ವರ್ಷವು ಪ್ರಾರಂಭವಾಗಿರುವುದು. ಪ್ರಭಾಪತ್ರಿಕೆಯು ೭ ವರ್ಷಗಳವರೆಗೆ ಯಾವ ಚ್ಯುತಿಯೂ ಇಲ್ಲದಂತೆ ತಾನು ಕೈಕೊಂಡ ಕಾರ್ಯವನ್ನು ಅತ್ಯಾನಂದದಿಂದ ನೆರವೇರಿಸಿದುದು ಶ್ಲಾಘನೀಯವಾಗಿದೆ. ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಇಂದಿನವರೆಗೆ ವೀರಶೈವಸಮಾಜದಲ್ಲಿ ವಿಶೇಷವಾದ ಜಾಗೃತಿಯನ್ನುಂಟುಮಾಡಿದೆ. ಈ ಮತಸ್ಥಾಪಕರ ಸ್ವರೂಪವೇ ಜನಗಳಿಗೆ ಗೋಚರವಿದ್ದಿಲ್ಲ. ಮತಾಚಾರ್ಯರ ನಾಮವೇ ಲೋಪವಾಗುವ ಸಂಭವವೊದಗಿತ್ತು. ಇಂಥ ಸಮಯದಲ್ಲಿ ಈ ಪತ್ರಿಕೆಯು ಅವತರಿಸಿ ಮತಾಚಾರ್ಯರ ಸ್ವರೂಪವನ್ನೂ ಆ ಮಹನೀಯರ ಮಹಿಮಾವಿಶೇಷವನ್ನೂ ಇಡೀ ಜಗತ್ತಿನಲ್ಲಿ ಪ್ರಕಾಶಪಡಿಸುವಂತೆ ಮಾಡಿತು. ಆಂಧ್ರ ಮಹಾರಾಷ್ಟ್ರ ಮೊದಲಾದ ದೇಶಗಳಲ್ಲಿಯೂ ತನ್ನ ಪ್ರಭೆಯನ್ನು ಪ್ರಸರಿಸಿ ಅಲ್ಲಿಯ ವೀರಶೈವಜನಾಂಗವನ್ನುದ್ಧರಿಸುವಂತೆ ಮಾಡಿತು. ಮಹಾರಾಷ್ಟ್ರದೇಶದಲ್ಲಿ ಹೊರಡತಕ್ಕ ಕೆಲವು ಪತ್ರಿಕೆಗಳಿಗೆ ತನ್ನ ಸಹಾಯವನ್ನು ಕೊಟ್ಟು ತದ್ದ್ವಾರಾ ಆ ದೇಶೀಯ ವೀರಶೈವರ ಉದ್ಧಾರಕ್ಕೆ ಕಾರಣವಾಯಿತು. ಪ್ರತಿವಾರದಲ್ಲಿಯೂ ತಪ್ಪದೆ ಪ್ರಸಿದ್ಧವಾಗತಕ್ಕ ಧರ್ಮಸಂಬಂಧಿ ಲೇಖನಗಳಿಂದ ವೀರಶೈವಸಿದ್ಧಾಂತಜ್ಞಾನವನ್ನು ಸರ್ವರಲ್ಲಿಯೂ ಅಂಕುರಿಸುವಂತೆ ಮಾಡಿತು. ತನ್ನಲ್ಲಿ ಸಂಬಂಧಿಸಿರುವ ಅಮೂಲ್ಯ ಲೇಖರತ್ನಗಳಿಂದ ಪಂಡಿತೋತ್ತಮರನ್ನೂ ಸಹ ಸಂತೋಷಸಾಗರದಲ್ಲಿ ಮುಳುಗಿಸಿತು. ವೀರಶೈವೋದ್ಧಾರಕ್ಕಾಗಿ ಜನ್ಮವೆತ್ತಿರುವ ಈ ಪತ್ರಿಕೆಯ ವಿಷಯದಲ್ಲಿ ಅನೇಕ ಜನ ಮತಾಭಿಮಾನಿಗಳು ಇದರ ಪುರೋಭಿವೃದ್ಧಿಗಾಗಿ ವಿಶೇಷ ಪ್ರಯತ್ನವನ್ನು ಮಾಡುತ್ತಿರುವುದು ಅತ್ಯಾನಂದಕರವಾದ ವಿಷಯವಾಗಿದೆ. ಈಗ ಪ್ರಾಪ್ತವಾಗಿರುವ ಭಯಂಕರ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿಯೂಕೂಡ ಈ ಪತ್ರಿಕೆಯು ನಿರ್ವಿಘ್ನವಾಗಿ ಕಾರ್ಯವನ್ನು ಮಾಡುತ್ತಿರುವುದಕ್ಕೆ ಮತಾಭಿಮಾನಿಗಳ ವಿಶೇಷ ಪ್ರೋತ್ಸಾಹವೇ ಮೂಲ ಕಾರಣವೆಂದು ಹೇಳಬಹುದಾಗಿದೆ. ಆದರೆ ಜನವರಿ ತಿಂಗಳಿಂದ ಈ ಪತ್ರಿಕೆಗೆ ಪೋಸ್ಟಸಂಬಂಧವಾದ ದೊಡ್ಡದೊಂದು ತೊಂದರೆಯು ಪ್ರಾಪ್ತವಾಗಿದೆ. ಈ ವಿಷಯವು ಚಂದಾದಾರರೆಲ್ಲರಿಗೂ ತಿಳಿದುದಾಗಿದೆ. ಪೋಸ್ಟಖಾತೆಯ ಹೊಸರೂಲ್ಸಿನ ಪ್ರಕಾರವಾಗಿ ನಮ್ಮ ಪತ್ರಿಕೆಯು ಇನ್ನೂವರೆಗೆ ರಜಿಷ್ಟರ್ ಆಗಿರುವುದಿಲ್ಲ. ಆದಾಗ್ಯೂ ಏಪ್ರೈಲ್ ತಿಂಗಳವರೆಗೆ ಅರ್ಧ ಆಣೆಯ ಸ್ಟಾಂಪನ್ನು ಹಚ್ಚಿ ಕಳುಹಿಸುತ್ತ ಬಂದೆವು. ಇದರಲ್ಲಿ ನಮಗೆ ವಿಶೇಷ ದ್ರವ್ಯವು ನಷ್ಟವಾಯಿತು. ಪುನಃ ಏಪ್ರೈಲ್ ತಿಂಗಳ ೧ ನೆಯ ತಾರೀಖಿನಿಂದ ಪೋಸ್ಟಖಾತೆಯವರು ಬುಕ್ಕುಪೋಸ್ಟಿಗೆಲ್ಲಾ ೯ ಪೈ ಸ್ಟಾಂಪನ್ನು ಹಚ್ಚಬೇಕೆಂದು ಬೇರೊಂದು ರೂಲ್ಸು ಮಾಡಿದ್ದರಿಂದಂತೂ ಹುಣ್ಣಿನ ಮೇಲೆ ಹುಣ್ಣು ಹುಟ್ಟಿದಂತಾಗಿ ವಿಶೇಷ ತೊಂದರೆಗೆ ಕಾರಣವಾಗಿದೆ. ಅಂದಿನಿಂದ ಈಗ ಎರಡುವಾರಗಳ ಪತ್ರಿಕೆಗಳನ್ನು ಕೂಡಿಸಿ ೧೫ ದಿವಸಗಳಿಗೊಮ್ಮೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಹೀಗೆ ಮಾಡಿದರೂ ಕೂಡ ನಮಗೆ ವಿಶೇಷ ನಷ್ಟವಾಗುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಪೋಸ್ಟಿನವರ ಈ ತರಹದ ಹೊಸರೂಲ್ಸಿನಿಂದ ಕೆಲವು ಪತ್ರಿಕೆಗಳು ನಿಂತೇಹೋಗಿವೆ. ನಾವು ಮಾತ್ರ ಹಾಗೆ ಮಾಡದೆ ಈ ಘನವಾದ ತೊಂದರೆಯನ್ನು ಸಹಿಸುತ್ತ ನಡೆಯಿಸುತ್ತ ಬಂದಿದ್ದೇವೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಪತ್ರವ್ಯವಹಾರವನ್ನು ನಡೆಯಿಸುತ್ತಿದ್ದೇವೆ. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಆರ್ಡರ್ ದೊರೆಯುವ ಸಂಭವವಿದೆ. ಹುಕುಂ ದೊರೆಯುವವರೆಗೂ ಚಂದಾದಾರರು ಅನುತ್ಸಾಹಗೊಳ್ಳದೆ ಪ್ರೋತ್ಸಾಹವನ್ನೀಯಬೇಕೆಂದು ಕೋರುತ್ತೇವೆ. ಮತಾಚಾರ್ಯರ ಪ್ರಭಾವವನ್ನು ಪ್ರಕಾಶಪಡಿಸುವುದು ಇದೊಂದೇ ಪತ್ರಿಕೆಯಾಗಿದೆ. ಈ ಪತ್ರಿಕೆಯ ಅಭಿವೃದ್ಧಿಯ ಬಗ್ಗೆ ಸಮಸ್ತ ಗುರುಭಕ್ತರೂ ಕಾರ್ಯವನ್ನು ಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಜಗದಾಚಾರ್ಯರ ಆಶೀರ್ವಾದ ಬಲದಿಂದ ಪ್ರಭಾಪತ್ರಿಕೆಯು ಚಿರಕಾಲಬಾಳಿ ತನ್ನ ಪ್ರಭೆಯಿಂದ ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ಜಗತ್ತನ್ನು ಪ್ರಭಾಮಯವನ್ನಾಗಿ ಮಾಡುವ ಶಕ್ತಿಯನ್ನು ಪಡೆಯಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಬ್ರಿಟಿಷ್‌ಸೀಮೆಯ ಮ್ಯಾಜಿಸ್ಟ್ರೇಟರ ವಾರಂಟಿನ ಮೇಲೆ

ಮೈಸೂರು ಹೈಕೋರ್ಟಿನ ಅಮೂಲ್ಯ ತೀರ್ಮಾನ.

ಬೆಂಗಳೂರು ಸಿಟಿ ಮುನಸಿಪಲ್ ಕೌನ್ಸಿಲರೂ, ವಕೀಲರೂ ಆಗಿರುವ ಮ|| ರಾ|| ವೆಂಕಟರಂಗಯ್ಯನವರು ಮೋಟಾರ್‌ಕಾನೂನುಪ್ರಕಾರ ಸುಂಕವನ್ನು ಕೊಡಲಿಲ್ಲವೆಂದು ತಿರುಪತಿ ಸಬ್-ಮ್ಯಾಜಿಸ್ಟ್ರೇಟರು ಅವರ ಮೇಲೆ ಜಾಮೀನುವಾರಂಟನ್ನು ಹೊರಡಿಸಿದರು. ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಾರಂಟನ್ನು ಸದರಿಯವರ ಮೇಲೆ ಜಾರಿಮಾಡಲುದ್ಯುಕ್ತರಾಗಲು, ವಕೀಲರು ನ್ಯಾಯವಿಮರ್ಶೆಗಾಗಿ ಮೈಸೂರು ಹೈಕೋರ್ಟಿನಲ್ಲಿ ಅಪೀಲುಮಾಡಿದರು. ಈ ಕೇಸಿನ ವಿಷಯವು ಬಹು ಮಹತ್ತ್ವವುಳ್ಳದಾದುದರಿಂದ ಮೂರು ಜನ ಜಡ್ಜರವರ ಮುಂದೆ ಕೂಲಂಕಷವಾಗಿ ಚರ್ಚಿಸಲ್ಪಟ್ಟಿತು.

"ತಿರುಪತಿ ಮ್ಯಾಜಿಸ್ಟ್ರೇಟರು ಕೊಟ್ಟಿರುವ ವಾರಂಟಿಗೆ ಕಾಯಿದೆಪ್ರಕಾರವಾಗಿ ಬಲವಿದೆಯೆ? ೧೮೭೮ ರಲ್ಲಿ ಚೀಫ್‌ಕಮಿಷನರವರು ಮಾಡಿದ ಆಜ್ಞೆಗನುಸಾರವಾಗಿ ಈ ವಾರಂಟನ್ನು ಜಾರಿಮಾಡಬಹುದೆ?"

ಎಂಬೀ ಎರಡು ವಿಷಯಗಳು ಈ ಕೇಸಿನಲ್ಲಿ ಮುಖ್ಯವಾದವು. ಈ ಬಗ್ಗೆ ನ್ಯಾಯಾಧೀಶರು ೪೦ ಪುಟಗಳಷ್ಟು ಜಡ್ಜ್‌ಮೆಂಟನ್ನು ಬರೆದಿರುತ್ತಾರೆ. ನ್ಯಾಯಾಧೀಶರು ತಮ್ಮ ಜಡ್ಜ್‌ಮೆಂಟಿನಲ್ಲಿ—

"ತಿರುಪತಿಯ ಸಬ್-ಮ್ಯಾಜಿಸ್ಟ್ರೇಟರಿಗೆ ಬ್ರಿಟಿಷ್ ಸಂಸ್ಥಾನದ ಹೊರಗಿನ ದೇಶಗಳಿಗೆ ವಾರಂಟನ್ನು ಹೊರಡಿಸಲು ಅಧಿಕಾರವಿಲ್ಲದಿರುವುದರಿಂದ ಅವರ ವಾರಂಟಿಗೆ ಬೆಲೆಯಿಲ್ಲ; ಅವರಿಗೆ ವಾರಂಟು ಹೊರಡಿಸಲು ಅಧಿಕಾರವೂ ಇಲ್ಲ; ಮೈಸೂರು ದೇಶವು ಅವರ ಕೋರ್ಟಿನ ಆಡಳಿತಕ್ಕೆ ಸೇರುವುದೂ ಇಲ್ಲ. ಚೀಫ್ ಕಮಿಷನರ ಆಜ್ಞೆಗೆ ಸಂಸ್ಥಾನದಲ್ಲಿ ಮಹತ್ತ್ವವಿದ್ದರೂ ಅವರ ಆಜ್ಞೆಯನ್ನು ಎಲ್ಲಾ ತರಹದ ಅಪರಾಧಗಳಿಗೆ ಅನ್ವಯಿಸಲಾಗುವುದಿಲ್ಲ"

ಎಂದು ಬರೆದಿರುತ್ತಾರೆ. ಈ ಜಡ್ಜ್‌ಮೆಂಟಿನ ಮಹತ್ತ್ವವು ಅಷ್ಟಿಷ್ಟೆಂದು ವರ್ಣಿಸುವಂತಿಲ್ಲ. ಇದರಿಂದ ಮೈಸೂರು ದೇಶಕ್ಕೆ ವಿಶೇಷವಾದ ಗೌರವವು ಪ್ರಾಪ್ತವಾಯಿತೆಂದು ಸಾರಿಸಾರಿ ಹೇಳಬಹುದಾಗಿದೆ. ಒಂದು ಸಾಧಾರಣ ತಪ್ಪಿಗೂ ಕೂಡ ಬ್ರಿಟಿಷ್ ಸೀಮೆಯ ಮ್ಯಾಜಿಸ್ಟ್ರೇಟರು ಮೈಸೂರು ಸೀಮೆಯ ಪ್ರಜೆಗಳ ಮೇಲೆ ವಾರಂಟನ್ನು ಜಾರಿಮಾಡುತ್ತಿದ್ದರು. ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಸ್ವಾತಂತ್ರ್ಯವೆನ್ನುವುದೇ ಇದ್ದಿಲ್ಲ. ಚೀಫ್ ಕಮಿಷನ್‌ರವರ ಆಜ್ಞೆಯು ಈ ದೇಶದ ಪ್ರಜೆಗಳನ್ನು ರಸಾತಳಕ್ಕೆ ಮೆಟ್ಟಿ ನಿರ್ವೀರ್ಯರನ್ನಾಗಿ ಮಾಡಿತ್ತು. ಇಂಥ ಪರಿಸ್ಥಿತಿಯಲ್ಲಿ ಕಾಯಿದೆಮಾರ್ಗವನ್ನವಲಂಬಿಸಿ, ಧೈರ್ಯದಿಂದಲೂ, ವಿಚಾರದೃಷ್ಟಿಯಿಂದಲೂ, ವಿಶಾಲವಾದ ಕಾನೂನಿನ ಬಲದಿಂದಲೂ ತೀರ್ಪುಕೊಟ್ಟು ಮೈಸೂರು ದೇಶದ ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟ ಕೀರ್ತಿಯು ಮುಖ್ಯನ್ಯಾಯಾಧೀಶರಾದ ರಾಜಧರ್ಮಪ್ರವೀಣ ಮಿ|| ಪಿ. ಮಹಾದೇವಯ್ಯನವರಿಗೆ ಸಲ್ಲತಕ್ಕದಾಗಿದೆ. ಈ ತೀರ್ಪಿನಲ್ಲಿ ರಾಜಧರ್ಮಪ್ರವೀಣರು ತೋರಿಸಿರುವ ಕಾಯಿದೆ ಪಾಂಡಿತ್ಯವು ಇಂಡಿಯಾದೇಶದ ಮಹಾಮಹಾ ನ್ಯಾಯಾಧೀಶರನ್ನೆಲ್ಲಾ ದಂಗುಬಡಿಸುವಂಥದಾಗಿದೆ. ರಾಜಧರ್ಮಪ್ರವೀಣರ ರಾಜಕಾರಣಪಟುತ್ವವೂ, ದೂರದರ್ಶಿತ್ವವೂ, ಕಾಯಿದೆ ಪಾಂಡಿತ್ಯವೂ, ನ್ಯಾಯಾನ್ಯಾಯವಿಮರ್ಶಕತ್ವವೂ, ಅನುಪಮಬುದ್ಧಿಪ್ರತಿಭಾಶಾಲಿತ್ವವೂ, ಧೈರ್ಯೋತ್ಸಾಹಪೂರಿತಲೇಖನಸಾಮರ್ಥ್ಯವೂ ಮೈಸೂರು ದೇಶದ ಚರಿತ್ರೆಯಲ್ಲಿ ಮಾತ್ರವೇ ಅಲ್ಲ, ಇಂಡಿಯಾದೇಶದ ಚರಿತ್ರೆಯಲ್ಲಿಯೂ ಸುವರ್ಣಾಕ್ಷರಗಳಿಂದ ಬರೆಯಡತಕ್ಕದಾಗಿದೆ. ಇಂಥ ನ್ಯಾಯಾಧೀಶರಿಂದ ಅಲಂಕೃತವಾಗಿರುವ ಮೈಸೂರು ಹೈಕೋರ್ಟಿನ ಗದ್ದುಗೆಯ ಪ್ರಕಾಶವು ಇಂದಿಗೆ ನಾನಾ ದೇಶಗಳಲ್ಲಿ ಹರಡುವಂತಾಯಿತು; ಮೈಸೂರು ದೇಶದ ಪ್ರಜೆಗಳು ಇಂದಿಗೆ ತಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಂತಾಯಿತು. ಅತ್ಯದ್ಭುತಬುದ್ಧಿಪ್ರತಿಭಾಭೂಷಿತರಾದ ಇಂಥ ನ್ಯಾಯಾಧೀಶರಿಂದ ರಾರಾಜಿಸುತ್ತಿರುವ ದೇಶವೇ ಧನ್ಯ! ಇಂಥ ದೇಶವೇ ಮಾನ್ಯ!! ದಯಾಳುಗಳಾದ ಮೈಸೂರು ಸರಕಾರದವರು ಆದಷ್ಟು ಶೀಘ್ರವಾಗಿ ಈ ತೀರ್ಮಾನವಿಷಯವನ್ನು ಕಾನೂನನ್ನಾಗಿ ಮಾಡಿ ಪ್ರಜೆಗಳ ಸ್ವಾತಂತ್ರ್ಯವನ್ನು ಕಾಪಾಡಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮಾನ್ ಎಚ್. ಕೆ. ವೀರಬಸಯ್ಯನವರು ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಅಕ್ಕಲಕೋಟೆ ಸಂಸ್ಥಾನದ ಮಹಾರಾಜರವರು ರಾಜ್ಯಾಡಳಿತ ಕ್ರಮದಲ್ಲಿ ಅನುಭವವನ್ನು ಹೊಂದುವುದಕ್ಕೋಸ್ಕರ ಬೆಂಗಳೂರಿಗೆ ಆಗಮಿಸಿರುತ್ತಾರೆ.

ದಿವಾನರವರ ಪರ್ಸನಲ್ ಅಸಿಸ್ಟೆಂಟರಾಗಿರುವ ಮಿ|| ಹುಮಾಯೂನ್ ಮಿರ್ಜಾರವರು ಪ್ರೊಬೇಷನರಿ ಅಸಿಸ್ಟೆಂಟ ಕಮಿಷನರಾಗಿ ನೇಮಿಸಲ್ಪಟ್ಟಿರುತ್ತಾರೆ.

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯ ಕಾಲದಲ್ಲಿ ಚಿಂತಾಮಣಿಯ ಪೋಲೀಸ್ ಇನ್ಸ್‌ಪೆಕ್ಟರಾಗಿದ್ದ ಜಹಿರುದ್ದೀನರವರನ್ನು ಸರಕಾರದವರು 2 ವರ್ಷಗಳ ವರೆಗೆ ಸಬ್ ಇನ್ಸ್‌ಪೆಕ್ಟರ ದರ್ಜೆಗೆ ಕಡಿಮೆ ಮಾಡಿರುತ್ತಾರೆಂದು ತಿಳಿದುಬಂದಿದೆ.

ತುಮಕೂರು ಡಿಸ್ಟ್ರಿಕ್ಟ್ ಚಿಕ್ಕನಾಯಕನಹಳ್ಳಿ ತಾಲೂಕು ಕಂದಿಕೆರೆ ಹೋಬಳಿ ಮದನಮಡು ಗ್ರಾಮದ ಸುತ್ತುಮುತ್ತಲ ಕಾಡುಗಳಲ್ಲಿ ಮೂರು ತಿಂಗಳುಗಳ ವರೆಗೆ ಯಾರು ಬೇಕಾದರೂ ಹುಲೀ ಶಿಕಾರಿ ಮಾಡಬಹುದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಮೈಸೂರು ಸರಕಾರದವರು ಮಿಸೆಸ್ ಪಿ. ಜೆ. ಡಿಸೌಜಾ, ಶ್ರೀಮತಿ ಕಮಲಮ್ಮ ಶ್ರೀ|| ಕೆ. ಡಿ. ರುಕ್ಮಿಣಮ್ಮ, ಶ್ರೀ|| ಡಿ. ಸಾಕಮ್ಮ ಮತ್ತು ಧರ್ಮಪಂಡಿತೆ ಶ್ರೀ|| ಆಲಮ್ಮ ಇವರನ್ನು ಪ್ರಜಾಪ್ರತಿನಿಧಿ ಸಭೆಗೆ ಸ್ತ್ರೀಯರ ಪರವಾಗಿ ಮೆಂಬರರನ್ನಾಗಿ ನೇಮಿಸಿರುತ್ತಾರೆ.

ನೆಲಮಂಗಲ ತಾಲೂಕು ಚನ್ನಲಿಂಗಯ್ಯನ ಪಾಳ್ಯದ ಮುನಿಯ ಎಂಬವನು ಈರಯ್ಯನೆಂಬುವನ ಪತ್ನಿಯಾದ ಮುನಿಯೆಂಬವಳನ್ನು ಅಪಹರಿಸಿಕೊಂಡು ಹೋದನೆಂಬ ಆಪಾದನೆಯಮೇಲೆ ಬೆಂಗಳೂರು ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ 3 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಬರುವ ಜೂನ್ ತಿಂಗಳಲ್ಲಿ ರಾಜಧಾನಿಯಲ್ಲಿ ನೆರವೇರುವ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ ಸಮಯದಲ್ಲಿ ಪರಸ್ಥಳಗಳಿಂದ ಆಗಮಿಸುವ ಅತಿಥಿಗಳ ಸತ್ಕಾರಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಲು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ರಜಿಸ್ಟ್ರಾರರಾದ ಮಿ|| ಸಿ. ಎಸ್. ಶ್ರೀನಿವಾಸಾಚಾರ್, ಬಿ.ಎ. ರವರು ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ. ಇದೇ ಸಮಯದಲ್ಲಿ ರಾಜಧಾನಿಯಲ್ಲಿ ಸೇರುವ ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನಕ್ಕೆ ತಕ್ಕ ಸಿದ್ಧತೆಗಳನ್ನು ಮಾಡುವುದಕ್ಕೂ ಮೇಲ್ಕಂಡವರೇ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ.

ಈಗ್ಗೆ ಕೆಲವು ದಿವಸಗಳ ಹಿಂದೆ ರಾಜಧಾನಿಯ ಕೃಷ್ಣರಾಜಮೊಹಲ್ಲಾ ಚಿಕ್ಕ ಬಸವೇಶ್ವರ ದೇವಾಲಯದ ಸಮೀಪದಲ್ಲಿ ಒಂದು ಭೀಕರ ಕೊಲೆಯು ನಡೆದಿತ್ತಷ್ಟೆ! ಪೋಲೀಸರು ಕೊಲೆಪಾತಕನನ್ನು ನಂಜನಗೂಡು ತಾಲೂಕು ಸಮೀಪದಲ್ಲಿ ದಸ್ತಗಿರಿಮಾಡಿರುತ್ತಾರೆ. ಅಪರಾಧಿಯು ಮೃತನ ಸಹೋದರನೆಂದೂ, ಮೃತನ ಪತ್ನಿಗೂ ಈತನಿಗೂ ಪರಸ್ಪರ ಸ್ನೇಹವಿದ್ದು ಅದೇ ಕಾರಣದಿಂದಲೇ ಖೂನಿಯು ನಡೆಯಿತೆಂದೂ ಅಪರಾಧಿಯು ತಾನೇ ಉದ್ದೇಶಪೂರ್ವಕವಾಗಿ ಒಂದು ದೊಡ್ಡಕಲ್ಲಿನಿಂದ ತನ್ನ ಅಣ್ಣನ ತಲೆಯನ್ನು ಒಡೆದು ಕೊಂದೆನೆಂದು ಒಪ್ಪಿಕೊಂಡಿರುತ್ತಾನೆಂದೂ ತಿಳಿದು ಬಂದಿರುತ್ತದೆ.

ಇದೇ ಮೇ 17 ನೇ ತಾರೀಖಿನ ದಿವಸ ಮೈಸೂರು ಸೆಷನ್ಸ್ ಜಡ್ಜರವರು ದಸರಾ ಗಲಭೆಗಳಿಗೆ ಸಂಬಂಧಪಟ್ಟ ಟಾಂಗಾ ಗಾಡಿ ಕಳುವಿನ ಮೊಕದ್ದಮೆಯ ಅಪ್ಪೀಲ್ ತೀರ್ಮಾನವನ್ನು ಹೇಳಿದರು. ಅದರಲ್ಲಿ ಮೊದಲನೇ ಅಪರಾಧಿಯಾದ ಸೂರ್ಯನಾರಾಯಣರಾವ್ ಎಂಬವರಿಗೆ ವಿಧಿಸಲ್ಪಟ್ಟಿದ್ದ 2 ವರ್ಷಗಳ ಶಿಕ್ಷೆಯು 9 ತಿಂಗಳುಗಳಿಗೂ, 100 ರೂ. ನ ದಂಡವು 50 ರೂ. ಗಳಿಗೂ, ರಾಮಸೇತು ಎಂಬವರಿಗೆ ವಿಧಿಸಲ್ಪಟ್ಟಿದ್ದ 2 ವರ್ಷಗಳ ಶಿಕ್ಷೆಯು 1 ವರ್ಷಕ್ಕೂ, 100 ರೂ. ನ ದಂಡವು 50 ರೂ. ಗಳಿಗೂ, ವೆಂಕಟಕೃಷ್ಣ ಎಂಬವರಿಗೆ ವಿಧಿಸಲ್ಪಟ್ಟಿದ್ದ 2 ವರ್ಷಗಳ ಶಿಕ್ಷೆಯು 6 ತಿಂಗಳಿಗೂ ಕಡಿಮೆ ಮಾಡಲ್ಪಟ್ಟಿತು. ಅಪರಾಧಿಗಳು ಇದರ ಮೇಲೆ ಪುನಃ ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡುವರೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ.

ಅಮೇರಿಕಾಖಂಡಕ್ಕೆ ಸೇರಿದ ಬ್ರೆಜಿಲ್ ದೇಶದಲ್ಲಿ ಕಾಫೀಬೆಳೆಯು ವಿಶೇಷವಾಗಿ, ಕಾಫಿಯ ಬೆಲೆಯು ಬಹಳ ಕಡಿಮೆಯಾಗುವುದೆಂದು ತಿಳಿದು ಬಂದದ್ದರಿಂದ 2 ಕೋಟಿ 70 ಲಕ್ಷ ಕಾಫಿಯ ಮೂಟೆಗಳು ನಾಶಮಾಡಲ್ಪಟ್ಟವು.

ಕಳೆದ ಮೇ 3 ನೇ ತಾರೀಖಿನ ರಾತ್ರಿ ಭವಾನಿಗೆ ಆರು ಮೈಲುಗಳ ದೂರದಲ್ಲಿರುವ ದಳವಾಯಿಪೇಟೆಯ ಸಮೀಪದಲ್ಲಿ ಒಬ್ಬ ಸ್ತ್ರೀಯೂ, ಆಕೆಯ 4 ಜನ ಮಕ್ಕಳೂ ಖೂನಿಮಾಡಲ್ಪಟ್ಟರು. ಪೋಲೀಸರು ಸಂಶಯದ ಮೇಲೆ ಆ ಹೆಂಗಸಿನ ಗಂಡನನ್ನು ದಸ್ತಗಿರಿಮಾಡಿರುತ್ತಾರೆ.

ಅಸ್ಸಾಂದೇಶದಲ್ಲಿ ಕೆಲವು ದಿವಸಗಳಹಿಂದೆ ಭಯಂಕರ ಗಾಳಿ ಮತ್ತು ಮಳೆಯು ಪ್ರಾಪ್ತವಾಗಿ ಗೋಲ್ಸಾಗಂಜ್, ಬಲಗಂಜ್, ಸಿಲ್ಹೆಟ್ ಮೊದಲಾದ ಸ್ಥಳಗಳಲ್ಲಿ ವಿಶೇಷ ಅನರ್ಥಗಳು ಸಂಭವಿಸಿರುತ್ತವೆ. ಒಟ್ಟು 83 ಜನರು ಮೃತಪಟ್ಟಿರುವರು. 305 ಜನರು ಗಾಯಪಟ್ಟಿರುವರು. 4,800 ಮನೆಗಳು ಬಿದ್ದು ಹೋಗಿರುವುವು.

ಮುಂಬಯಿಯ ಭಗವಾನ್‌ದಾಸ್ ಮಾಧವರಾಂ, ಬ್ಯಾಂಕರ್ಸ್ ಇವರು ಫ್ರಾಂಟಿಯರ್ ಮೇಲಿನಲ್ಲಿ ಪಾರ್ಸಲ್ ಮೂಲಕ ರವಾನಿಸಿದ್ದ 30 ಸೇರು ಭಂಗಾರದ ಗಟ್ಟಿಯು ಬಹು ಆಶ್ಚರ್ಯಕರವಾದ ರೀತಿಯಲ್ಲಿ ಮಾಯವಾಗಿದೆ. ಪೋಲೀಸರು ಈ ಸಂದರ್ಭದಲ್ಲಿ ಅಮೃತಸರದ ಕೆಲವು ಜನ ಪೋರ್ಟರುಗಳ ಮನೆಗಳನ್ನು ಶೋಧಿಸಿ, 6 ಜನರನ್ನು ದಸ್ತಗಿರಿ ಮಾಡಿರುತ್ತಾರೆ. ವಿಚಾರಣೆ ನಡೆಯುತ್ತಿದೆ.

ಪಾಟ್ನಾ ಡಿಸ್ಟ್ರಿಕ್ಟಿಗೆ ಸೇರಿದ ಚಂಪಾರಣ್ಯ ಎಂಬ ಊರಿಗೆ ಸಮೀಪದಲ್ಲಿರುವ ನಾರ್‌ಕಟಿಯಾಗಂಜ್ ಎಂಬಲ್ಲಿ ಬಹಳ ಜೋರಾಗಿ ಆಣೆಕಲ್ಲಿನ ಮಳೆಯು ಒಂದು ಘಂಟೆಯವರೆಗೆ ಸುರಿದು ಆ ಗ್ರಾಮದಲ್ಲಿದ್ದ ಮನೆಗಳೆಲ್ಲವೂ ನಾಶವಾದುವೆಂದೂ, ಅನೇಕ ದನಕರುಗಳು ಮೃತಪಟ್ಟವೆಂದೂ, ಭೂಮಿಯಿಂದ ಒಂದು ವಿಚಿತ್ರವಾದ ಹೊಗೆಯು ಹುಟ್ಟಿ ಎಲ್ಲ ಕಡೆಗೂ ಹರಡಿಕೊಂಡಿರುವುದೆಂದೂ, ಪರಿಸ್ಥಿತಿಯು ಭೀಕರವಾಗಿರುವುದೆಂದೂ ತಿಳಿದುಬಂದಿದೆ.

ಕಣ್ಣು ಮುಚ್ಚಿಕೊಂಡು ಓದುವಿಕೆ!

ಕೆನಡಾದೇಶದ ಒಬ್ಬ ಡಾಕ್ಟರರು ಒಂದು ಹೊಸ ತರಹ ಎಕ್ಸ್-ರೇ ಯಂತ್ರವನ್ನು ತಯಾರಿಸಿದ್ದು, ಅದರ ಸಹಾಯದಿಂದ ಕಣ್ಣುಗಳನ್ನು ಮುಚ್ಚಿಕೊಂಡು ಓದಬಹುದಂತೆ!

ಭೂಮಿಯು ಗುಂಡಾಗಿಲ್ಲವಂತೆ!

ಭೂಗೋಳಶಾಸ್ತ್ರಜ್ಞರು ಅನೇಕ ಶೋಧಗಳನ್ನು ನಡೆಯಿಸಿ ಭೂಮಿಯು ಗುಂಡಾಗಿರುವದೆಂದೂ, ಅದು ಸರ್ವದಾ ತನ್ನ ಅಕ್ಷದಮೇಲೆ ಸುತ್ತುತ್ತಿರುವದೆಂದೂ ನಿರ್ಧರಿಸಿರುವರು. ಆದರೆ ಲಾಹೋರಿನ ಅಲ್ಲಾರಕ್ಷ ಎಂಬೊಬ್ಬ ತರುಣಯಂತ್ರವಿದ್ಯಾನಿಪುಣನು ಒಂದು ನೂತನ ಯಂತ್ರವನ್ನು ನಿರ್ಮಾಣಮಾಡಿ, ಅದರಿಂದ ಭೂಮಿಯು ಗುಂಡಾಗಿಲ್ಲವೆಂದೂ, ಅದು ತನ್ನ ಅಕ್ಷದಮೇಲೆ ಸುತ್ತುವದಿಲ್ಲವೆಂದೂ ನಿರ್ಧರಿಸಿರುವನಂತೆ! ಈಗ ಆತನು ತನ್ನ ಯಂತ್ರವನ್ನು ಅಲಿಘಡದ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿ, ತನ್ನ ಹೊಸ ಶೋಧವನ್ನು ಸಿದ್ಧಮಾಡಿಕೊಡುವುದಾಗಿ ಹೇಳಿರುವನಂತೆ!

ತಾಯಿಯು ಮಗನನ್ನು ಕೊಲ್ಲಿಸಿದಳು.

ಈಜಿಪ್ಟದೇಶದ ಕಾಫರ್-ಎಲ್-ಆವಾರ್ ಎಂಬ ಊರಿನ ಒಬ್ಬ ಹೆಂಗಸು ತನ್ನ ಸೊಸೆಯ ಮೇಲಿನ ದ್ವೇಷವನ್ನು ತೀರಿಸಿಕೊಳ್ಳುವದಕ್ಕಾಗಿ ತನ್ನ ಮಗನನ್ನು ಕೊಲ್ಲುವದಕ್ಕೆ 3 ಜನರಿಗೆ 15 ಪೌಂಡುಗಳ ಲಂಚವನ್ನು ಕೊಟ್ಟಳು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಮಗನನ್ನು ಕೊಲೆಮಾಡಿದ ಜನರಿಗೆ ಮರಣದಂಡನೆಯನ್ನೂ ತಾಯಿಗೆ 15 ವರ್ಷಗಳ ಕಠಿಣ ಶಿಕ್ಷೆಯನ್ನೂ ವಿಧಿಸಿರುತ್ತಾರೆ.

ಸ್ವತಃ ತೂಗುವ ತೊಟ್ಟಿಲು!

ಅಮೇರಿಕೆಯ ಒಬ್ಬಾನೊಬ್ಬ ಎಲೆಕ್ಟ್ರಿಕ್ ಇಂಜನಿಯರು ತನ್ನ ಮಗುವಿನ ಉಪಯೋಗಕ್ಕಾಗಿ ಒಂದು ತೊಟ್ಟಿಲನ್ನು ತಯಾರಿಸಿರುವರು. ಮಗುವು ಅಳುವುದಕ್ಕೆ ಪ್ರಾರಂಭಿಸಿದ ಕೂಡಲೇ ಅಳುವಿನ ಶಬ್ದದಿಂದ ಶಬ್ದವರ್ಧಕ ಯಂತ್ರದಲ್ಲಿ ವಿದ್ಯುಚ್ಛಕ್ತಿಯು ಪ್ರವಹಿಸಲಾರಂಭಿಸಿ ಅದರಿಂದ ತೊಟ್ಟಿಲು ತೂಗುವುದಕ್ಕೆ ಪ್ರಾರಂಭಿಸುವುದಂತೆ! ಮಗುವು ಅಳುವುದನ್ನು ನಿಲ್ಲಿಸಿದ ಕೂಡಲೇ ತೊಟ್ಟಿಲೂ ನಿಂತುಹೋಗುವದಂತೆ!

ಗಾಜಿನ ತಳದ ಹಡಗು!

ಜಪಾನ್ ದೇಶಕ್ಕೆ ಸೇರಿದ ಕಾಮಕುರ ಎಂಬಲ್ಲಿ ಗಾಜಿನ ತಳವುಳ್ಳ ಒಂದು ಹಡಗು ತಯಾರಿಸಲ್ಪಟ್ಟಿರುವದು. ಈ ಹಡಗಿನ ತಳಭಾಗಕ್ಕೆ 6 ದಪ್ಪಗಾಜಿನ ಕಿಟಕಿಗಳಿದ್ದು, ಪ್ರತಿಯೊಂದು ಗಾಜಿನ ಮೇಲೂ 10,000 ಮೇಣದಬತ್ತಿಯ ಪ್ರಕಾಶವುಳ್ಳ ಒಂದೊಂದು ಎಲೆಕ್ಟ್ರಿಕ್ ದೀಪವು ಇಡಲ್ಪಟ್ಟಿರುವುದು. ಈ ಆರು ಕಿಟಕಿಗಳ ಮುಖಾಂತರ ಏಕಕಾಲದಲ್ಲಿ 120 ಜನರು ಸಮುದ್ರ ತಳವನ್ನು ನೋಡಬಹುದು. ಇದರಿಂದ ಸಮುದ್ರದ ಒಳಭಾಗದಲ್ಲಿ 100 ಅಡಿಗಳ ವರೆಗೆ ಇರುವ ಜಲಚರಗಳೆಲ್ಲವೂ ಸ್ಪಷ್ಟವಾಗಿ ಕಾಣಿಸುವುವಂತೆ!

ಉತ್ತರ ಮಾಂಚೂರಿಯಾ ದೇಶದಲ್ಲಿ ದರೋಡೆಕೋರರ ಹಾವಳಿ!

ಉತ್ತರ ಮಾಂಚೂರಿಯಾ ದೇಶದ ಚೈನೀಸ್ ಈಸ್ಟರ್ನ್ ರೈಲ್ವೆಯ ಮ್ಯಾನೇಜರವರು ಕಳೆದ ವರ್ಷ ದರೋಡೆಕೋರರು ರೈಲ್ವೇ ಗಾಡಿಗಳನ್ನು 11 ಸಾರೆ ಉರುಳಿಸಿದರೆಂದೂ, 39 ಸಾರೆ ರೈಲನ್ನು ಉರುಳಿಸಲು ಪ್ರಯತ್ನಿಸಿ ವಿಫಲರಾದರೆಂದೂ, 38 ಸಾರೆ ಸಶಸ್ತ್ರರಾಗಿ ರೈಲನ್ನು ನಿಲ್ಲಿಸಿ ದರೋಡೆ ಮಾಡಿದರೆಂದೂ, 18 ಸಾರೆ ರೈಲಿಗೆ ಬೆಂಕಿಹಾಕಿ ಸುಟ್ಟರೆಂದೂ, 60 ಜನ ರೈಲ್ವೇ ನೌಕರರನ್ನು ಕೊಲೆಮಾಡಿದರೆಂದೂ, 197 ಸಾರೆ ರೈಲ್ವೇ ಅಧಿಕಾರಿಗಳನ್ನು ಹಿಡಿದು ತೊಂದರೆಪಡಿಸಿದರೆಂದೂ, ಮೇಲಾಗಿ 400 ಜನರನ್ನು ಅಪಹರಿಸಿಕೊಂಡು ಹೋದರೆಂದೂ ಪ್ರಕಟಿಸಿರುತ್ತಾರೆ!

ಅಖಿಲಭಾರತೀಯ ವೀರಶೈವ ಧರ್ಮಪರಿಷತ್ತು. ಖಾಮಗಾಂವ.

ಬುಲಢಾಣಜಿಲ್ಲಾ ಖಾಮಗಾಂವ ಶಹರದಲ್ಲಿ ಇದೇ ತಿಂಗಳು ೨೭ ಮತ್ತು ೨೮ ನೆಯ ತಾರೀಖಿನ ದಿವಸ ಮೇಲ್ಕಂಡ ಧಾರ್ಮಿಕ ಸಭೆಯು ನೆರವೇರುವುದು. ಸದರಿ ಪರಿಷತ್ತಿಗೆ ಶ್ರೀ ಶಂಭುಲಿಂಗಶಿವಾಚಾರ್ಯರು ಬೃಹನ್ಮಠ ವಿಜಾಪುರ, ಶ್ರೀ ಗಂಗಾಧರಶಿವಾಚಾರ್ಯರು ಮಹಂತಿನಮಠ ಬೆಂಗಳೂರು, ಶ್ರೀ ಚನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ, ಶ್ರೀ ರಾಚಲಿಂಗ ಶಿವಾಚಾರ್ಯರು ಪರಂಡಕರಮಠ ಬಾರ್ಶಿ ಇವರೇ ಮೊದಲಾದ ಪ್ರಸಿದ್ಧ ಸ್ವಾಮಿಗಳೂ, ಪಂಡಿತರೂ ಆಗಮಿಸುತ್ತಾರೆ. ಆದುದರಿಂದ ಮತಾಭಿಮಾನಿಗಳು ಆ ಕಾಲಕ್ಕೆ ಆಗಮಿಸಿ ಸಭಾಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕಾಗಿ ಪ್ರಾರ್ಥನೆ.

ಸೆಕ್ರೆಟರಿ.

ಸೂಚನೆ—ಖಾಮಗಾಂವ ಶಹರವು ಭುಸಾವಳ ನಾಗಪುರ ರೇಲ್ವೆ ಮಧ್ಯದಲ್ಲಿರುವುದು.

(೩ನೆಯ ಪುಟದಿಂದ ಮುಂದುವರಿದುದು.)

ಮೂಡಿ ಈಶ್ವರನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದರು. ಆ ಪ್ರಾಂತದಲ್ಲಿ ಸುಪ್ರಸಿದ್ಧವಾದ ಕುಪ್ಪೂರು ಗದ್ದುಗೆಯ ದಾಸೋಹಕ್ಕಾಗಿ 1000 ರೂ. ಬೆಲೆಬಾಳುವ ಜಮೀನನ್ನು ಕೊಡಿಸಿದರು. ಇದಲ್ಲದೆ ಅರಸೀಕೆರೆಯಲ್ಲಿ ಆಂಗ್ಲಭಾಷಾಭ್ಯಾಸಾರ್ಥಕ್ಕಾಗಿ 'ವೀರಶೈವಹಾಸ್ಟಲ್' ಗೋಸ್ಕರ ಒಂದು ದೊಡ್ಡ ಬಿಲ್ಡಿಂಗನ್ನು ಕಟ್ಟಿಸಿರುವರು. ಇದೇ ಅರಸೀಕೆರೆಯಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕಾಗಿ ಒಂದು ಗರ್ಲ್ಸ್ ಸ್ಕೂಲನ್ನು ಕಟ್ಟಿಸಿ ಗವರ್ನಮೆಂಟಿನವರಿಗೆ ಒಪ್ಪಿಸಿರುವರು. ಶ್ರೀಜಗದ್ಗುರು ರಂಭಾಪುರೀ ಪೀಠಕ್ಕೆ ಒಂದು ತೆಂಗಿನ ತೋಟವನ್ನು ದಾನಮಾಡಿರುವರು. ಇದೇ ರೀತಿಯಾಗಿ ಇವರು ತಮ್ಮ ಜೀವಮಾನದಲ್ಲಿ 60-70 ಸಾವಿರ ರೂಪಾಯಿಗಳವರೆಗೆ ದಾನಮಾಡಿರುವ ವಿಷಯವನ್ನು ನೋಡಿ ಯಾರಿಗೆ ತಾನೇ ಸಂತೋಷವಾಗಲಿಕ್ಕಿಲ್ಲ? ಇವರು ಭರತಖಂಡದಲ್ಲಿ ಸುಪ್ರಸಿದ್ಧಗಳಾದ ಕಾಶೀರಾಮೇಶ್ವರ, ಶ್ರೀಶೈಲ ಮೊದಲಾದ ಪುಣ್ಯಕ್ಷೇತ್ರಗಳಿಗೆ ಹೋಗಿ ಅನೇಕ ವಿಧವಾದ ಪುಣ್ಯಕಾರ್ಯಗಳನ್ನು ಮಾಡಿದರು. ಇವರಲ್ಲಿ ವಾಸಮಾಡಿಕೊಂಡಿರುವ ಧರ್ಮಬುದ್ಧಿಯನ್ನು ನೋಡಿ ಕಾಶೀಜಗದ್ಗುರುಗಳು ಇವರಿಗೆ "ಧರ್ಮಧುರಂಧರ" ಎಂಬ ಪದವಿಯನ್ನು ಅನುಗ್ರಹಿಸಿದ್ದರು. ಇವರು ತಮ್ಮ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಧರ್ಮಪೀಠಗಳಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರು. ಇಂಥ ಗುರುಪುತ್ರರನ್ನು ಕಳೆದುಕೊಂಡುದು ಈ ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ. ಇವರು ಈ ರೀತಿಯಾಗಿ ಧರ್ಮಕಾರ್ಯಗಳಲ್ಲಿ ಪ್ರವೇಶಮಾಡಿದ್ದಲ್ಲದೆ ರಾಜಕೀಯಕಾರ್ಯಗಳಲ್ಲಿಯೂ ಪ್ರವೇಶಿಸಿ ಸರ್ಕಾರ ಪ್ರೀತಿಗೆ ಪಾತ್ರರಾಗಿದ್ದರು. ಇವರು ಅನೇಕ ಸಾರೆ, ಪ್ರಜಾಪ್ರತಿನಿಧಿಸಭೆಗೆ ಮೆಂಬರರಾಗಿದ್ದರಲ್ಲದೆ, ಹಾಸನ ಡಿ|| ಬೋರ್ಡಿನ ಮೆಂಬರು ಸಹ ಆಗಿದ್ದರು. ಅರಸೀಕೆರೆಯಲ್ಲಿ ಕೆಲವು ಕಾಲ ಬೆಂಚ್‌ಮ್ಯಾಜಿಸ್ಟ್ರೇಟರೂ ಆಗಿದ್ದರು. ಇವರಲ್ಲಿ ವಾಸಮಾಡಿಕೊಂಡಿರುವ ಧಾರ್ಮಿಕ ರಾಜಕೀಯ ವಿಷಯಗಳನ್ನು ನೋಡಿ ನಮ್ಮನ್ನಾಳುವ ಮಹಾಪ್ರಭುಗಳವರು ಇವರಿಗೆ ಪಬ್ಲಿಕ್ ಸರ್ವಿಸ್ ಮೆಡಲುಗಳನ್ನೂ ಅನುಗ್ರಹಿಸಿರುತ್ತಾರೆ. ಈ ಮಹಾತ್ಮರ ಅಂತ್ಯೇಷ್ಟಿವಿಧಿಯು ಶಾಸ್ತ್ರವಿಧಿಗನುಸಾರವಾಗಿ ನೆರವೇರಿಸಲ್ಪಟ್ಟಿತು. ಇದಕ್ಕಂಗಭೂತವಾದ ಆರಾಧನಾಕಾರ್ಯವನ್ನು ಇವರ ಅಳಿಯಂದಿರಾದ ಮ|| ರಾ|| ಸಾಹುಕಾರ್ ವಿ. ರುದ್ರಪ್ಪಶೆಟ್ಟರವರು ತಾ|| 30-4-34 ನೇ ಸೋಮವಾರ ದಿವಸ ಹಲ್ಕೂರು ಗ್ರಾಮದಲ್ಲಿ ವಿಶೇಷ ವೈಭವದಿಂದ ನೆರವೇರಿಸಿದರು. ಆ ಸಮಯಕ್ಕೆ ಅವರ ಆತ್ಮಶಾಂತ್ಯರ್ಥವಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಹೆಸರಿನಿಂದ ಪ್ರಭಾಪೋಷಣೆಕ್ಕೋಸ್ಕರ 5 ರೂ ಗಳು ಸಮರ್ಪಿಸಲ್ಪಟ್ಟವು. ಶ್ರೀ ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಅಶೇಷ ಕುಟುಂಬವರ್ಗಕ್ಕೆ ದುಃಖಶಮನವನ್ನೂ ಉಂಟುಮಾಡಲೆಂದು ಕೋರುವ.

ಓರ್ವ ದುಃಖಭಾಗಿ

ನಾರುಹುಳದ ವ್ಯಾಧಿಯನ್ನು ನಿವಾರಿಸುವ ಮಾರ್ಗಗಳು.

ಲೆಪ್ಟಿನೆಂಟ್ ಕರ್ನಲ್ ಕೆ ಜಿ. ಫರ್‌ಘೂ, ಐ.ಎಮ್.ಎಸ್.
ಸಿವಿಲ್ ಸರ್ಜನ್, ಬೆಳಗಾಮ್ ಇವರಿಂದ.

ಕೆಲಕೆಲವು ಜಿಲ್ಲೆಗಳಲ್ಲಿ ಅನೇಕ ಗ್ರಾಮಗಳೊಳಗೆ ಮೇಲ್ಕಂಡ ನಾರುಹುಳಗಳಿಂದುಂಟಾಗುವ ವ್ಯಾಧಿಯು ಜನರನ್ನು ಪೀಡಿಸುತ್ತಿದೆ. ಈ ವ್ಯಾಧಿಯಿಂದ ಪೀಡಿತರಾದ ಜನಗಳ ಕಷ್ಟವೂ, ಬಾಧೆಯೂ, ಅದರಿಂದ ಅವರಲ್ಲಿ ಉಂಟಾಗತಕ್ಕ ಬಲಹೀನತೆಯೂ ನೋಡುವವರಿಗೆ ಬಹಳ ಪರಿತಾಪಕರವಾಗಿದೆ. ಇದು ಕಠಿನ ವ್ಯಾಧಿಯಾಗಿದ್ದರೂ, ಇದನ್ನು ಬಾರದಂತೆ ನಿವಾರಿಸುವುದೇನೋ ಅಸಾಧ್ಯವಲ್ಲ. ಹಾಗಿದ್ದ ಪಕ್ಷದಲ್ಲಿ ಜನಗಳು ಇದನ್ನು ನಿವಾರಿಸದೆ, ಅದರಿಂದ ಬಾಧೆಪಡುತ್ತಿರುವುದೇಕೆಂಬ ಪ್ರಶ್ನೆ ಬರಬಹುದು. ಜನಗಳಲ್ಲಿರುವ ಅಶ್ರದ್ಧೆಯೂ, ಅಜ್ಞತೆಯೂ ಇವೆರಡೂ ಆ ವ್ಯಾಧಿಯು ಹರಡುವುದಕ್ಕೆ ಮುಖ್ಯಕಾರಣಗಳಾಗಿವೆ. ಈಗ್ಗೆ ನೂರಾರು ವರ್ಷಗಳಿಗೆ ಹಿಂದೆ ಇದ್ದಂತೆಯೇ ಈಗಲೂ ಜನರು ಅಜ್ಞತೆಯಿಂದಲೇ ನಡೆದುಕೊಳ್ಳುತ್ತಿರುವರು. ಈಗ ರೋಗಗಳ ವಿಷಯದಲ್ಲಿ ಎಷ್ಟೋ ಪರಿಶೋಧನೆಗಳೆಲ್ಲ ನಡೆದು, ವ್ಯಾಧಿನಿವಾರಣೆಗೆ ಬೇಕಾದ ಏರ್ಪಾಡುಗಳೆಲ್ಲ ನಡೆದಿರುವುದರಿಂದ, ಜನರು ಎಚ್ಚರಿಕೆಯಿಂದ ಅದನ್ನು ನಿವಾರಿಸಬೇಕಾದುದವಶ್ಯಕವು.

ಈ ನಾರುಹುಳಗಳ ಜೀವನಚರಿತ್ರೆಯನ್ನು ಕೇಳಿದರೆ ಬಹಳ ಆಶ್ಚರ್ಯವಾಗುವುದು. ಯಾವನಾದರೂ ಒಬ್ಬನಿಗೆ ಕಾಲಿನಲ್ಲಿಯೋ, ಅಥವಾ ಅಂಗಾಲಿನಲ್ಲಿಯೋ ಈ ನಾರುಹುಣ್ಣಿದ್ದಾಗ, ಅವನು ಒಂದು ಕೆರೆಯ ನೀರಿನಲ್ಲಿಳಿದರೆ, ಒಡನೆಯೇ ಅವನ ದೇಹದಲ್ಲಿರುವ ಹುಳುವು ಅಲ್ಲಿ ಕೋಟಿಸಂಖ್ಯೆಯಿಂದ ಮೊಟ್ಟೆಗಳನ್ನಿಟ್ಟು ಬಿಡುವುದು. ಈ ಮೊಟ್ಟೆಗಳು ನೀರಿನಲ್ಲಿ ಜೀವಿಸುತ್ತಿರುವ ಸೈಕ್ಲಾಪ್ಸ್ ಎಂಬ ಹುಳಗಳ ಹೊಟ್ಟೆಯೊಳಗೆ ಸೇರುವುವು. ಈ ಸೈಕ್ಲಾಪ್ಸ್ ಎಂಬ ಹುಳುಗಳು ಗುಂಡುಸೂಜಿಯ ತಲೆಯಷ್ಟೇ ಪ್ರಮಾಣವುಳ್ಳುದಾಗಿ ಚಿಗಟೆಯ ಆಕಾರಕ್ಕಿರುವುವು. ಇವು ನೀರಿನಲ್ಲಿ ಈಜಾಡುತ್ತಿರುವುವು. ಆ ನಾರುಹುಳದ ಮೊಟ್ಟೆಗಳು ಈ ಕ್ರಿಮಿಗಳ ಹೊಟ್ಟೆಗೆ ಸೇರಿದೊಡನೆ ಐದುವಾರದವರೆಗೆ ಅಲ್ಲಿ ಬೆಳೆಯುತ್ತಿರುವುವು. ಮಲೇರಿಯಕ್ಕೂ, ಸೊಳ್ಳೆಗೂ ಹೇಗೆ ಅನ್ಯೋನ್ಯ ಸಂಬಂಧವುಂಟೋ ಅದೇವಿಧವಾದ ಸಂಬಂಧವೇ ಸೈಕ್ಲಾಪ್ಸಿಗೂ, ನಾರುಹುಳಗಳಿಗೂ ಏರ್ಪಟ್ಟಿರುವುದು. ಈ ಸೈಕ್ಲಾಪ್ಸ್ ಹುಳುಸೇರಿದ ನೀರನ್ನು ಕುಡಿಯುವುದರಿಂದ, ಜನಗಳಿಗೆ ನಾರುಹುಣ್ಣು ವ್ಯಾಧಿಗಳು ಬರುವುವು. ಹೇಗೆಂದರೆ, ಆ ಸೈಕ್ಲಾಪ್ಸ್ ಹುಳುಗಳು ಮನುಷ್ಯರ ಹೊಟ್ಟೆಗೆ ಹೋದೊಡನೆಯೇ, ಅವುಗಳೊಳಗಿನ ನಾರುಹುಳದ ಮೊಟ್ಟೆಗಳು ಮನುಷ್ಯರ ಜಠರಕ್ಕೆ ಬಂದು ತಂಗುವುವು. ಆ ಮೇಲೆ ಆ ನಾರುಹುಳುಗಳು ಸ್ನಾಯುಗಳನ್ನು ಕೊರೆದುಕೊಂಡು ಹೋಗಿ, ಅಲ್ಲಿಯೇ ವೃದ್ಧಿಯಾಗುತ್ತ, ಕೊನೆಗೆ ಅದೊಂದು ದೊಡ್ಡ ಹುಳುವಾಗುವುದು. ಹೀಗೆ ಆ ಕ್ರಿಮಿ ಸಂಬಂಧವುಳ್ಳ ನೀರನ್ನು ಕುಡಿದಮೇಲೆ ಒಂಭತ್ತು, ಹತ್ತು, ಅಥವಾ ಹನ್ನೆರಡು ತಿಂಗಳ ಕಾಲದೊಳಗಾಗಿ ಆ ದೊಡ್ಡ ಹುಳುವು ಚರ್ಮದ ಸಮೀಪಕ್ಕೆ ಬಂದು ಸೇರುವುದು. ಆ ಮೇಲೆ ಚರ್ಮದಲ್ಲಿ ದ್ವಾರಮಾಡಿಕೊಂಡು ಬರುವುದರಿಂದ, ಅಲ್ಲಿ ಹುಣ್ಣಾಗುವುದು. ಆ ಚರ್ಮದ ಬಳಿಗೆ ಬಂದೊಡನೆ ಆ ಹುಳುವು ತನ್ನ ಮೊಟ್ಟೆಯನ್ನಿಡುವುದಕ್ಕಾಗಿ ನೀರು ಸಿಕ್ಕುವ ಸಂದರ್ಭವನ್ನೇ ಇದಿರುನೋಡುತ್ತಿರುವುದು. ನೀರು ಸಿಕ್ಕಿದೊಡನೆ ಅದರಲ್ಲಿ ಮೊಟ್ಟೆಯಿಟ್ಟು ಆಮೇಲೆ ಆ ದೊಡ್ಡ ಹುಳುವು ಸತ್ತುಹೋಗುವುದು. ಈ ನಾರುಹುಳುವೆಂಬುದು ಬಹಳ ಉದ್ದವಾಗಿಯೂ, ಸಣ್ಣದಾಗಿಯೂ ಇರುವ ಒಂದು ಜಂತು. ಇದು ಸಾಧಾರಣವಾಗಿ ಒಂದು ಮೊದಲು ಮೂರಡಿಯ ಉದ್ದಕ್ಕಿರುವುದು. ನೋಟಕ್ಕೆ ದಪ್ಪವಾದ ಒಂದು ಬಿಳೀ ನೂಲಿನಂತೆ ಕಾಣುವುದು. ಅದರ ಬಾಲವು ಕೊಕ್ಕೆಯಂತೆ ಬಗ್ಗಿರುವುದು. ಆ ಕೊಕ್ಕೆಯಿಂದಲೇ ಆ ಹುಳುವು ಸ್ನಾಯುಗಳಲ್ಲಿ ಭದ್ರವಾಗಿ ಸಿಗುಲಿಕೊಂಡು ನಿಲ್ಲಬಲ್ಲದು. ಈ ಹುಳುಗಳ ವಿಷಯವಾಗಿ ನಾವು ಎಚ್ಚರ ತೆಗೆದುಕೊಳ್ಳಬೇಕಾದರೆ ಈ ಕೆಳಗೆಕಂಡ ನಾಲ್ಕು ವಿಷಯಗಳಲ್ಲಿ ಬಹಳ ಜಾಗರೂಕರಾಗಿರಬೇಕು.

(೧) ನಾರುಹುಣ್ಣಿನ ವ್ಯಾಧಿಯಿಂದ ಪೀಡಿತರಾದ ಜನರು.

(೨) ಜನಗಳು ಧಾರಾಳವಾಗಿ ಇಳಿದುಹೋಗಬಹುದಾದ ನಡೆಬಾವಿಗಳು ಮುಂತಾದ ಜಲಾಶಯಗಳು. ಇಂತಹ ಜಲಾಶಯಗಳಲ್ಲಿ ಅನೇಕ ರೋಗಿಗಳು ಬಂದು ಕಾಲಿಡುವ ಸಂಭವವಿರುವುದರಿಂದ, ಆ ನೀರಿನಲ್ಲಿ ಎಷ್ಟೋ ಹುಳುಗಳ ಮೊಟ್ಟೆಗಳು ಸೇರಿರಬಹುದು.

(೩) ಇಂತಹ ನಡೆಬಾವಿಗಳ ನೀರಿನಲ್ಲಿ ಸೇರಿರುವ ಸೈಕ್ಲಾಪ್ಸ್ ಎಂಬ ಸಣ್ಣ ಕ್ರಿಮಿಗಳು. ನಾರುಹುಣ್ಣಿನ ಕ್ರಿಮಿಗಳ ಮೊಟ್ಟೆಗಳು ಈ ಸೈಕ್ಲಾಪ್ಸ್ ಕ್ರಿಮಿಗಳಲ್ಲಿ ಸೇರಿ ವೃದ್ಧಿಹೊಂದುವುವು.

(೪) ಕುಡಿಯುವ ನೀರಿನಲ್ಲಿ ಸೇರಿರಬಹುದಾದ ಸೈಕ್ಲಾಪ್ಸ್ ಮೊದಲಾದ ಕ್ರಿಮಿಗಳು.

ಮೇಲೆ ಹೇಳಿದವು ನಾಲ್ಕೂ ಏಕೀಭವಿಸದಂತೆ ತಕ್ಕ ಎಚ್ಚರಿಕೆಯನ್ನು ತೆಗೆದುಕೊಂಡರೆ ಈ ವ್ಯಾಧಿಯು ಬಾರದಂತೆ ಮಾಡಬಹುದು. ಅದಕ್ಕೆ ಮಾರ್ಗಗಳೇನೆಂದರೆ.

(೧) ನಾರುಹುಣ್ಣಿನ ವ್ಯಾಧಿಯುಳ್ಳ ಜನಗಳ ಸಂಪರ್ಕವಿರಬಾರದು.

(೨) ಅಂತಹ ರೋಗಿಗಳು ಇಳಿಯಬಹುದಾದ ನಡೆಬಾವಿ ಮುಂತಾದ ಜಲಾಶಯಗಳಾವುದೂ ಇರಬಾರದು.

(೩) ಈ ನಾರುಹುಣ್ಣಿನ ಕ್ರಿಮಿಗಳ ಮೊಟ್ಟೆಗಳು ವೃದ್ಧಿಹೊಂದಲು ಅವಕಾಶ ಕೊಡತಕ್ಕ ಸೈಕ್ಲಾಪ್ಸ್ ಕ್ರಿಮಿಗಳು ನೀರಿನಲ್ಲಿರಬಾರದು.

(೪) ಈ ಸೈಕ್ಲಾಪ್ಸ್ ಹುಳುಗಳಿದ್ದ ನೀರನ್ನು ಜನರು ಕುಡಿಯದಂತೆ ನಿವಾರಿಸಬೇಕು.

(a) ಮೇಲೆ ಹೇಳಿದ ಮಾರ್ಗಗಳಿಂದ ಈ ವ್ಯಾಧಿಯನ್ನು ಸಂಪೂರ್ಣವಾಗಿ ನಿವಾರಿಸುವ ಪ್ರಯತ್ನವನ್ನು ಮಾಡಿದ ಹೊರತು ಆ ರೋಗಪೀಡಿತರಾದ ಜನರು ಇಲ್ಲದಿರುವುದು ಸಾಧ್ಯವಲ್ಲ.

(b) ನಾರುಹುಣ್ಣಿನ ವ್ಯಾಧಿಯುಳ್ಳ ಜನಗಳನ್ನು ನೀರಿನಲ್ಲಿ ಕಾಲಿಡದಂತೆ ಮಾಡುವುದೇನೋ ಸುಲಭವೇ. ಹೇಗೆಂದರೆ ಇಳಿಯುವುದಕ್ಕೆ ಅನುಕೂಲವಾದ ಸೋಪಾನಗಳನ್ನು ಒಡೆದುಹಾಕಿ, ಬಾವಿಯ ಸುತ್ತಲೂ ಎತ್ತರವಾದ ಗೋಡೆಗಳನ್ನು ಹಾಕಿಸಿ, ನೀರನ್ನು ಬಾವಿಯಿಂದ ಸೇದುವಹಾಗೆಯೇ ಮಾಡಬಹುದು.

(c) ಸೈಕ್ಲಾಪ್ಸ್ ಕ್ರಿಮಿಗಳು ನೀರಿನಲ್ಲಿ ವೃದ್ಧಿಯಾಗದಂತೆ ತಡೆಯುವುದೂ ಸುಲಭವೇ. ಹೇಗೆಂದರೆ, ವಿಷಹಾರಕ ಔಷಧಿಗಳಿಂದ ಈ ಕಾರ್ಯಗಳನ್ನು ಮಾಡಬಹುದು. ಸ್ವಲ್ಪ ಕಾಸ್ಟಿಕ್ ಪೊಟಾಷ್ ಅಥವಾ ಸುಣ್ಣದ ನೀರನ್ನು ಉಪಯೋಗಿಸಿದರೆ ಆ ಕ್ರಿಮಿಗಳೆಲ್ಲವೂ ಸಾಯುವುವು. ಹಾಗಿಲ್ಲವೇ ಮೊದಲು ನೀರಿಗೆ ಮೈಲುತುತ್ತವನ್ನು ಹಾಕಿ, ಆ ಮೇಲೆ ಫರ್‌ಕ್ಲೋರಿನ್ ಎಂಬುದನ್ನು ಉಪಯೋಗಿಸಿದರೂ ಆ ಹುಳುಗಳು ಸಾಯುವುವು. ಆದರೆ, ಈ ವಿಷಹಾರಕ ಮದ್ದುಗಳು ಸೈಕ್ಲಾಪ್ಸ್ ಹುಳುಗಳನ್ನು ಮಾತ್ರವೇ ಕೊಲ್ಲಬಲ್ಲವೇ ಹೊರತು ಆ ಸೈಕ್ಲಾಪ್ಸ್ ಹುಳುಗಳ ಮೊಟ್ಟೆಗಳು ಅದರಿಂದ ಸಾಯುವುದಿಲ್ಲ. ಆದುದರಿಂದ ತಿರುಗಿ ಒಂದು ತಿಂಗಳೊಳಗಾಗಿಯೇ ಆ ಮೊಟ್ಟೆಗಳೆಲ್ಲಾ ಬಲಿತು ಹುಳುಗಳಾಗಿ ಪರಿಣಮಿಸುವುವು. ಮತ್ತು ಈ ವಿಷಹಾರಕ ಮದ್ದುಗಳನ್ನು ಪ್ರಯೋಗಿಸುವುದರಲ್ಲಿಯೂ ಒಳ್ಳೇ ಸುಶಿಕ್ಷಿತರಾದ ಡಾಕ್ಟರ ಸೂಚನೆಯಂತೆಯೇ ನಡೆಯಬೇಕು.

(d) ನಾರುಹುಣ್ಣಿನ ವ್ಯಾಧಿಯಿರುವ ಸ್ಥಳಗಳಲ್ಲಿ ಜನರು ನಡೆಬಾವಿಗಳಲ್ಲಿಳಿದು ನೀರನ್ನು ತೆಗೆಯಲು ಅವಕಾಶ ಕೊಡಬಾರದು. ಈ ಕಾರ್ಯವನ್ನು ಸುಲಭವಾಗಿಯೇ ಮಾಡಬಹುದಾದರೂ ಜನಗಳು ಅದನ್ನು ಆಸಕ್ತಿಯಿಂದ ನಡೆಸುವುದಿಲ್ಲ. ಕೆಲವು ಮೆಟ್ಟಿಲುಗಳನ್ನಿಳಿದು ಹೋಗಿ ನೀರನ್ನು ಕುಡಿಯುವುದರಿಂದ, ತಮಗೆ ಹೆಚ್ಚು ಶ್ರಮವಿಲ್ಲವೆಂದು ಭಾವಿಸಿರುವರು.

ನೀರನ್ನು ಕುಡಿಯುವ ಮೊದಲು ಒಂದು ಸಣ್ಣ ಬಟ್ಟೆಯಿಂದ ಆ ನೀರನ್ನು ಶೋಧಿಸಿದರೂ, ಸೈಕ್ಲಾಪ್ಸ್ ಹುಳುಗಳೆಲ್ಲ ಆ ಬಟ್ಟೆಯಲ್ಲಿ ತಂಗಿಸಲ್ಪಡುವುವು. ಆಗ ಕ್ರಿಮಿಗಳು ಹೊಟ್ಟೆಗೆ ಸೇರುವ ಸಂಭವವಿಲ್ಲ. ಈ ವಿಧವಾಗಿ ಒಬ್ಬೊಬ್ಬರೂ ಎಚ್ಚರಿಕೆಯನ್ನು ತೆಗೆದುಕೊಂಡರೆ ಎಷ್ಟೋ ಕ್ಷೇಮವುಂಟು. ಈ ಮಾರ್ಗವನ್ನನುಸರಿಸುವುದು ಅಷ್ಟು ಕಷ್ಟವೂ ಅಲ್ಲ. ಪ್ರತಿಯೊಬ್ಬರೂ ಮೈಮೇಲೆ ಅಂಗಿಯನ್ನೋ, ಧೋತಿಯನ್ನೋ ಅಥವಾ ತಲೆಪಾಗನ್ನೋ ಇಟ್ಟುಕೊಂಡೇ ಇರುವರು. ಹೆಂಗಸರು ತಮ್ಮ ಸೀರೆಯ ಸೆರಗಿನಿಂದಲೇ ನೀರನ್ನು ಶೋಧಿಸಿ ಕುಡಿಯಬಹುದು. ಮುಖ್ಯವಾಗಿ ನಾರುಹುಣ್ಣಿನ ವ್ಯಾಧಿಯು ಅಧಿಕವಾಗಿ ವ್ಯಾಪಿಸಿರುವ ಪ್ರದೇಶಗಳಲ್ಲಿ ಈ ಸ್ವಲ್ಪ ಎಚ್ಚರಿಕೆಯನ್ನು ತೆಗೆದುಕೊಂಡರೆ ಆ ವ್ಯಾಧಿಯನ್ನು ಪೂರ್ಣವಾಗಿ ನಿವಾರಿಸಬಹುದು. ಜನರು ಇದನ್ನು ಮನಸ್ಸಿಗೆ ತಂದುಕೊಂಡು, ಅದರಂತೆ ಎಚ್ಚರದಿಂದ ನಡೆಯಬೇಕಾದುದು ಮುಖ್ಯವು. ಪಾತ್ರವೇನೂ ಇಲ್ಲದಿದ್ದ ಪಕ್ಷದಲ್ಲಿ ಕೂಡ ಬಾಯಿಗೆ ನೇರವಾಗಿ ಬಟ್ಟೆಯಿಂದ ನೀರನ್ನು ಶೋಧಿಸಿಕೊಳ್ಳಬೇಕು. ಈ ವಿಷಯದಲ್ಲಿ ಜನಸಾಮಾನ್ಯಕ್ಕೆ ತಿಳವಳಿಕೆಯನ್ನು ಹುಟ್ಟಿಸಿದಾಗಲೇ ಆ ಪದ್ಧತಿಯು ಸರಿಯಾಗಿ ನಡೆದುಬರುವುದು.

ಆಯಾ ಜಿಲ್ಲೆಗಳಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡಿನವರೂ, ತಾಲೂಕು ಬೋರ್ಡಿನವರೂ, ಗ್ರಾಮಪಂಚಾಯತರೂ, ಆರೋಗ್ಯಸಂಘಗಳೂ ಆಯಾ ಜಿಲ್ಲೆಗಳ ಇತರ ಉದ್ಯೋಗಸ್ಥರೂ ಮೇಲೆ ಹೇಳಿದ ೩ ನೇ ಮತ್ತು ೪ ನೇ ಏರ್ಪಾಡುಗಳನ್ನು ನಡೆಸಬಹುದು. ಆದರೆ ಆ ಕಾರ್ಯದಲ್ಲಿ ಅವರಿಗೆ ಸ್ವಲ್ಪ ತಾಳ್ಮೆಯು ಬೇಕು. ನಾರುಹುಣ್ಣಿನ ವ್ಯಾಧಿಯು ಎಲ್ಲೆಲ್ಲಿ ಕಾಣಿಸುತ್ತಿದೆಯೋ ಅಂತಹ ಗ್ರಾಮಗಳಲ್ಲಿರುವ ಭಾವಿಗಳು, ನಡೆಬಾವಿಗಳು, ಇವನ್ನೆಲ್ಲ ಲೆಕ್ಕಹಾಕಿಟ್ಟು, ಅವನ್ನೆಲ್ಲ ಶುದ್ಧವಾಗಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಡಬೇಕು. ಆಯಾ ಗ್ರಾಮಗಳಲ್ಲಿ ಕುಡಿಯುವುದಕ್ಕಾಗಿ ಉಪಯೋಗಿಸುವ ನೀರಿನ ವಸತಿಗಳು ನಡೆಭಾವಿಗಳಾಗಿದ್ದಾಗ, ಅವನ್ನೆಲ್ಲ ಸೇದುವ ಬಾವಿಗಳನ್ನಾಗಿ ಮಾರ್ಪಡಿಸಬೇಕು. ಹೀಗೆ ಒಂದೊಂದು ಗ್ರಾಮದಲ್ಲಿಯೂ ನಡೆಸುತ್ತಾ ಬಂದರೆ ಹತ್ತುವರ್ಷ ಕಾಲದೊಳಗಾಗಿ ಆ ವ್ಯಾಧಿಯ ಹುಟ್ಟೇ ಇಲ್ಲದಂತೆ ಮಾಡಬಹುದು.

ಈ ಕಾರ್ಯವು ನಡೆಯುವುದಕ್ಕೆ ಹಣವೂ, ಕಾಲವೂ ಸ್ವಲ್ಪ ಹೆಚ್ಚಾಗಿ ಬೇಕಾದುದರಿಂದ, ಆ ಕಾರ್ಯವನ್ನು ನಡೆಸುವುದಕ್ಕೆ ಮುಂದಾಗಿ ಆ ವ್ಯಾಧಿಯಿರುವ ಕಡೆಗಳಲ್ಲಿ ಆರೋಗ್ಯ ಇಲಾಖೆಯ ಉದ್ಯೋಗಸ್ಥರು ಅಲ್ಲಿನ ಬಾವಿಗಳಿಗೆಲ್ಲ ವಿಷಹಾರಕ ಮದ್ದನ್ನು ಹಾಕಿ ಶುದ್ಧಪಡಿಸುತ್ತಿರಬೇಕು. ಮುಖ್ಯವಾಗಿ ಈ ವ್ಯಾಧಿಗೆ ಮಾರ್ಚಿಮೊದಲು ಜೂನ್ ತಿಂಗಳವರೆಗೆ ಉದ್ರೇಕವು ಹೆಚ್ಚು. ಆ ಕಾಲದಲ್ಲಿ ಸೋಂಕುಗುಣವೂ ಅಧಿಕವಾಗುವುದು.

ನಡೆಬಾವಿಗಳನ್ನು ಸೇದುವ ಬಾವಿಗಳನ್ನಾಗಿ ಮಾಡುವುದೊಂದೇ ಈ ವ್ಯಾಧಿಯನ್ನಡಗಿಸುವುದಕ್ಕೆ ಉತ್ತಮೋಪಾಯವೆಂಬುದೇಕೆ? ಎಂದು ಕೇಳಿದರೆ ಆ ವಿಷಯದಲ್ಲಿ ನನಗೆ ಪ್ರತ್ಯಕ್ಷಾನುಭವವುಂಟು. ನಾನು ಸೋಲಾಪುರ ಜಿಲ್ಲೆಯಲ್ಲಿ ನಾಲ್ಕೈದು ವರ್ಷಗಳಕಾಲ ಸಿವಿಲ್‌ಸರ್ಜನನಾಗಿ ಕೆಲಸಮಾಡುತ್ತಿದ್ದೆನು. ಆಗ ಅಲ್ಲಿನ ಮದಾ ಎಂಬ ತಾಲೂಕಿಗೆ ಮುಖ್ಯಸ್ಥಳವಾದ ಮದಾ ಎಂಬ ಪಟ್ಟಣದಲ್ಲಿ ನಾರುಹುಣ್ಣು ವ್ಯಾಧಿಯು ವಿಶೇಷವಾಗಿ ಹರಡಿದ್ದಿತು. ಅಲ್ಲಿ ನಡೆಬಾವಿಗಳನ್ನೆಲ್ಲ ಸಾಧಾರಣಬಾವಿಗಳಂತೆ ಮಾಡಿಸಿದ ಮೇಲೆ ಅಲ್ಲಿದ್ದ ವ್ಯಾಧಿಯ ಹೆಸರೇ ಇಲ್ಲದಂತೆ ಮಾಯವಾಯಿತು.

ಈ ವ್ಯಾಧಿಯು ಎಲ್ಲಿ ಹೆಚ್ಚಾಗಿ ವ್ಯಾಪಿಸಿದೆಯೋ ಅಂತಹ ಕಡೆಗಳಲ್ಲಿಯೇ ಈ ಪ್ರಚಾರಕಾರ್ಯವನ್ನು ಅಧಿಕವಾಗಿ ನಡೆಸಬೇಕು. ಜನಗಳಿಗೆ ಆ ಕ್ರಿಮಿಗಳನ್ನು ನಾಶಮಾಡುವ ಮಾರ್ಗಗಳನ್ನೆಲ್ಲ ಬೋಧಿಸುತ್ತಿರಬೇಕು. ಕೊನೆಪಕ್ಷ ಕೆಲವು ವರ್ಷಗಳವರೆಗೂ ಎಡೆಬಿಡದೆ ಈ ಬೋಧನಾಕಾರ್ಯವನ್ನು ಮುಂದುವರಿಸುತ್ತಿರಬೇಕು. ಆಗಾಗ ಇದಕ್ಕಾಗಿ ಹಸ್ತಪತ್ರಿಕೆಗಳನ್ನು ಪ್ರಕಟಿಸಿ, ಶಾಲೆಯ ಉಪಾಧ್ಯಾಯರಿಗೂ ಗ್ರಾಮಾಧಿಕಾರಿಗಳಿಗೂ ಹಂಚುತ್ತಿರಬೇಕು. ನೀರನ್ನು ಶೋಧಿಸಿಯೇ ಕುಡಿಯಬೇಕೆಂದೂ ನಾರುಹುಣ್ಣಿನ ವ್ಯಾಧಿಯುಳ್ಳವರನ್ನು ನೀರಿನಲ್ಲಿಳಿಯದ ಹಾಗೆ ತಡೆಯಬೇಕೆಂದೂ ಇವೇ ಮೊದಲಾದ ಪದ್ಧತಿಗಳನ್ನು ಬೋಧಿಸಬೇಕು.

ನಾರುಹುಣ್ಣಿನ ವ್ಯಾಧಿಕ್ರಿಮಿಗಳನ್ನು ಕುರಿತು ಕೆಲವು ವಿಷಯಗಳು.

ಸಾಮಾನ್ಯವಾಗಿ ಈ ವ್ಯಾಧಿಕ್ರಿಮಿಗಳು ಚರ್ಮದಮೇಲೆ ತಲೆದೋರಿ ವ್ಯಾಧಿಯನ್ನು ಹರಡುವ ಕಾಲವು ಮಾರ್ಚಿ ಮೊದಲು ಜೂನ್‌ವರೆಗೆ ಮಾತ್ರವೇ! ಆದುದರಿಂದ ಈ ಕಾಲದಲ್ಲಿ ಮಾತ್ರ ತಪ್ಪದೆ ವ್ಯಾಧಿನಿವಾರಣಮಾರ್ಗಗಳನ್ನು ಎಡೆಬಿಡದೆ ನಡೆಸುತ್ತಿರಬೇಕು.

'ಜೀನಸ್ ಬಾರ್ಬಸ್' ಎಂಬ ಜಾತಿಯ ಮೀನುಗಳು ಸೈಕ್ಲಾಪ್ಸ್ ಹುಳುಗಳನ್ನು ನಾಶಮಾಡುವುವು. ಆದರೆ, ಈ ಜಾತಿಯ ಮೀನುಗಳು ನಡೆಬಾವಿಗಳಲ್ಲಿ ಹೆಚ್ಚಾಗಿ ಬದುಕಿರಲಾರವು.

ಈ ನಾರುಹುಣ್ಣು ವ್ಯಾಧಿಯು ಮನುಷ್ಯರಿಗೆ ಮಾತ್ರವೇ ಅಲ್ಲದೆ, ಇತರ ಪ್ರಾಣಿಗಳಿಗೂ ಬರುವುದುಂಟು. ನಾಯಿ, ಆಡುಕುರಿಗಳು, ಆಕಳುಗಳು, ಕುದುರೆ, ಕಪಿ, ನಾಗರಹಾವು ಮುಂತಾದುವುಗಳೂ ಈ ವ್ಯಾಧಿಯಿಂದ ಪೀಡಿತವಾಗುವುದುಂಟು.

ಮನುಷ್ಯರ ಜಠರದಲ್ಲಿ ಉತ್ಪನ್ನವಾಗುವ ಹೈಡ್ರೋಕ್ಲೋರಿಕ್ ದ್ರಾವಕವು 1·6 ಮೊದಲು 1% ರ ವರೆಗಿನ ಬಲವುಳ್ಳುದಾಗಿದ್ದರೆ, ಅದೇ ನಾರುಹುಣ್ಣು ಕ್ರಿಮಿಗಳ ಮೊಟ್ಟೆಗಳನ್ನು ಕೊಂದುಬಿಡುವುದು.

ಬಿದಿರಿನ ಎಲೆಗಳನ್ನು ಒಂದು ಹಿಡಿಯಷ್ಟು ತೆಗೆದು, ಒಂದು ಗಡಿಗೆಯ ನೀರಿನಲ್ಲಿ ಹಾಕಿಟ್ಟರೆ, ಆ ನೀರಿನೊಳಗಿರುವ ಸೈಕ್ಲಾಪ್ಸ್ ಕ್ರಿಮಿಗಳೆಲ್ಲ ಸಾಯುವುವು. ಅದರಂತೆಯೇ ಬಿದಿರಿನ ಪಟ್ಟೆಯ ರಸವೂ ಅದಕ್ಕೆ ನಾಶಕರವಾಗಿದೆ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೨—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ 7 ಅಕರ್ಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 28

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 35

ವಿಳಾಸ—ಬ್ರ. **ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,**
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ
ವೀರಶೈವ ಮಾಡರ್ನ್ ಹೋಟೆಲ್

ನಂ. 8, ಚಿಕ್ಕಪೇಟೆ, ದಿವಾನ್
ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (11)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾ ರಕ್ಷಕ
ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬುಡಸಹಿತ ಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14. ½ ಡಜನ್ 8-8-0 ಮತ್ತು ರೂ. 5

ರ್ಯುಮೊ ಬಾಮು.

ಕೆಮ್ಮು, ಶೀತ, ತಲೆನೋವು, ಪಾರ್ಶ್ವನೋವು, ಗಂಟು ನೋವು ಸಂದು ಗಂಟು ನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಚುಮದ್ದುಗಳು, ಹೋಮಿಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಯುವ ರೋಗ, ದದ್ದು, ಸೋರುವ ನಂಜಿ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಠಿಣ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ಕಾರ್ಯಗಳು ನಿಸ್ತೇಜನಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತ ಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪು-ಸಾಲಿಸವನ** ಆಶ್ರಸಂರಕ್ಷ ಕನಂತೆಯೇ ಯುವಕನಾಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಮಾಡಿ ಹಾಕುವುದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,
[37] (ಹಂಪನಕಟ್ಟೆ), 21, ಮಂಗಳೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೨೦ ಪುಟಗಳುಳ್ಳುದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ

(Registered Trade Mark)

ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯುಳ್ಳಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

ಪೋ. ಬಾ. ೫೧೦, ಮದರಾಸು.

[19]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಷಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ನೇ ಮೇ ೧೯೩೪ [ಸಂಚಿಕೆ ೨

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಅಮಂಗಲವಿಚಾರ ವಿಮರ್ಶೆ.

ವಿಮರ್ಶಕ—ಎಸ್. ಎಚ್. ಪಂಚಾಕ್ಷರಶರ್ಮಾ.

ಕರ್ಲಮಂಗಲಂ ಶ್ರೀಕಂಠಯ್ಯ ಎಂಬವರು ಆಚಾರ್ಯರ ಕಾಲಮಾನದ ಬಗ್ಗೆ ಒಂದು ಚಿಕ್ಕ ಅನುಂಗಲ ಪುಸ್ತಕವನ್ನು ಬರೆದು ಮುದ್ರಿಸಿ ಪ್ರಸಿದ್ಧಿಸಿದ್ದಾರೆ. ಇವರು ಯಾವಮತದವರೋ, ಯಾವಜಾತಿಯವರೋ ತಿಳಿಯದಾಗಿದೆ. ಬಸವನಕುಲದ ಒಬ್ಬಿಬ್ಬರು ಈ ಪುಸ್ತಕವನ್ನು ಬರೆದು ಮೇಲ್ಕಂಡವರ ಹೆಸರಿನಿಂದ ಮುದ್ರಿಸಿದ್ದಾರೆಂದು ದಟ್ಟವಾದ ವರ್ತಮಾನವಿದೆ. ಅದು ಹೇಗೆ ಇರಲಿ. ಇವರು ಬರೆದಿರುವ ವಿಷಯವು ಕೇವಲ ಅಸೂಯೆಯಿಂದ ತುಂಬಿರುವುದೇ ಹೊರತು ಬೇರೊಂದಿಲ್ಲವೆನ್ನುವುದು ಚಿಕ್ಕಮಕ್ಕಳಿಗೂ ಕೂಡ ತಿಳಿಯುವಂತಿದೆ. ಈ ಲೇಖಕರು ತಮ್ಮ ಲೇಖನವನ್ನು ಕೇವಲ ವಿಷಪೂರಿತಹೃದಯರಾಗಿ ಬರೆದಿರುವುದರಿಂದ ಇವರಿಗೆ ಶ್ರೀಕಂಠಯ್ಯ (ವಿಷಕಂಠಯ್ಯ) ಎಂಬ ಹೆಸರು ಸಾರ್ಥಕವಾಗಿದೆ. ಈ ಲೇಖನದಲ್ಲಿ ವಿಷಕಂಠಯ್ಯನವರ ಬುದ್ಧಿಯು ಕೇವಲ ವಿಷವಾಗಿ ಪರಿಣಮಿಸಿ ಅಮೂಲ್ಯ ವಿಷಯಗಳನ್ನೆಲ್ಲಾ ವಿಷಮಗೊಳಿಸಿದೆ. ವಿಷಯವಿಚಾರವು ಒಂದಕ್ಕೊಂದು ಸಂಬಂಧವಿರುವುದಿಲ್ಲ. ಇವರ ಬರವಣಿಗೆಯನ್ನು ಪರಿಶೀಲಿಸಿದರೆ ಇವರಿಗೆ ಸಂಸ್ಕೃತದಲ್ಲಾಗಲಿ, ಕನ್ನಡದಲ್ಲಾಗಲಿ ಎಷ್ಟು ಜ್ಞಾನವಿರುವದಿಲ್ಲವೆನ್ನುವುದು ಜ್ಞಾನಿಗಳಿಗೆ ತಿಳಿಯುವಂತಿದೆ. ಇಂಥ ಘನಪಂಡಿತರ ವಿಚಾರರಮಣೀಯತೆಯು ಎಷ್ಟರ ಮಟ್ಟಿಗಿರಬೇಕೆಂಬ ವಿಷಯವನ್ನು ಕುಶಲರೇ ಯೋಚಿಸಬೇಕು. ಕನ್ನಡ ಪದ್ಯಗಳಿಗೆ ಈ ಮಹಾಪಂಡಿತರು ಅರ್ಥಮಾಡುವ ರೀತಿಯಂತೂ ಬಹುವಿಚಿತ್ರವಾಗಿದೆ. ಕನ್ನಡ ಭಾಷಾಭ್ಯಾಸಿಗಳು ಇವರನ್ನಾಶ್ರಯಿಸಿ ಭಾಷಾಶಿಕ್ಷಣವನ್ನು ಸಂಪಾದಿಸಿ ಕೀರ್ತಿಶಾಲಿಗಳಾಗಬೇಕಾಗಿದೆ. ಇವರ ಕನ್ನಡ ಭಾಷಾಪಾಂಡಿತ್ಯವಿಷಯವನ್ನು ಮುಂದೆ ಕಲ್ಪಿತಶಾಸನವಿಚಾರಸಮಯದಲ್ಲಿ ವಿಮರ್ಶಿಸೋಣ! ಈ ಮಹಾಮೇಧಾವಿಗಳು ತಮ್ಮಿಂದ ಬರೆಯಲ್ಪಟ್ಟ ಮಹಾಗ್ರಂಥಕ್ಕೆ ಪೀಠಿಕೆಯೊಂದನ್ನು ಬರೆದಿದ್ದಾರೆ. ಇವರ ಪೀಠಿಕೆಯಲ್ಲಿ ವೇದ-ಆಗಮ-ಪುರಾಣ-ಉಪನಿಷತ್ತುಗಳು ಕುಣಿದಾಡಿಹೋಗಿವೆ. ವೇದಾಗಮಾದಿಗಳಲ್ಲಿ ಹೊಸದಾಗಿ ಬರೆದ ವಿಷಯಗಳು ವಿಶೇಷವಾಗಿ ಸೇರಿವೆಯಂತೆ! ಈ ಮಹಾಪಂಡಿತರ ಕಾಲದಲ್ಲಿಯಾದರೂ ಇವುಗಳ ವಿಭಜನೆಯಾದದ್ದಾದರೆ ಇವರ ಕೀರ್ತಿಯು ಈ ಧರಾತಳದಲ್ಲಿ ಆಚಂದ್ರಾರ್ಕವಾಗಿ ಪ್ರಕಾಶಿಸುವುದು. ಇಷ್ಟು ಕೆಲಸವನ್ನು ಈ ಕರ್ಲಮಂಗಲಂರವರು ಮಾಡಬಹುದೇ? ಇಂಗ್ಲೀಷಭಾಷೆಯನ್ನು ಕಲಿತ ಕೆಲಜನ ನಾಸ್ತಿಕರು ಬರೆದ ಪುಸ್ತಕದಲ್ಲಿರುವ ಎಂಜಲು ಮಾತುಗಳನ್ನೇ ಇವರು ಬರೆದು ಪರಮಪವಿತ್ರಗಳಾದ ಆರ್ಯಧರ್ಮಗ್ರಂಥಗಳಮೇಲೆ ಕುಠಾರವನ್ನೆತ್ತಿದ್ದಾರೆ. ಯುಗಯುಗಾಂತರದಲ್ಲಿ ಅವತರಿಸಿ ಆಯಾ ಯುಗದ ಸಮಾಚಾರವನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಂಡವರಂತೆ ವೇದಕಾಲದಲ್ಲಿ ಹೀಗಾಯಿತು, ಬ್ರಾಹ್ಮಣಕಾಲದಲ್ಲಿ ಹಾಗಾಯಿತು, ಆಗಮಕಾಲದಲ್ಲಿ ಹೀಗಾಯಿತು, ಪುರಾಣಕಾಲದಲ್ಲಿ ಹಾಗಾಯಿತು, ಎಂದು ಬರೆದಿರುವ ಇವರ ಮಹಾಬುದ್ಧಿಯ ಪ್ರಭಾವವನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. "ವೇದಗಳಅರ್ಥವನ್ನು ತಿಳಿಯದಕೆಲವರು ಅದನ್ನು ಜಗ್ಗಿಸಿ ತಮಗೆ ಬೇಕಾದಂತೆ ಎಳೆದಾಡತೊಡಗಿದರು." ಎಂದು ಕರ್ಲಮಂಗಲಂರವರು ಘನವಾದ ವೇದಜ್ಞರಂತೆ ಬರೆದಿರುವುದನ್ನು ನೋಡಿದರೆ ನಗೆಬರುತ್ತದೆ. ಸರಿಯಾಗಿ ಸಂಸ್ಕೃತಶ್ಲೋಕಗಳನ್ನು ಓದಲಿಕ್ಕೂ ಕೂಡ ಬಾರದ ಈ ಮಹಾಶಯರು ವೇದದ ವಿಷಯದಲ್ಲಿ ಕೈಹಾಕಿರುವುದು ಹಾಸ್ಯಾಸ್ಪದವಾಗಿದೆ. ಹಿಂದಿನವರು ವೇದಗಳ ಅರ್ಥವನ್ನು ತಿಳಿಯದೆ ಎಳೆದಾಡತೊಡಗಿದರಂತೆ! ಅಂದಮೇಲೆ ವೇದಾರ್ಥವನ್ನು ನಿಜವಾಗಿ ತಿಳಿದುಕೊಂಡವರು ಯಾರೋ ಎನುವುದು ಯಾರಿಗೂ ತಿಳಿಯದಾಗಿದೆ. ಬಹುಶಃ ಇವರೇ ನಿಜವಾದ ವೇದಾರ್ಥವನ್ನು ತಿಳಿದುಕೊಂಡಂತೆ ಕಾಣುತ್ತದೆ. ಆಹಾ! ನಮ್ಮ ಭರತಖಂಡದಲ್ಲಿ ಇಂಥ ಮಹಾಮೂರ್ತಿಗಳು ಅವತಾರ ಮಾಡಿದಮೇಲೆ ವೈದಿಕಮತಗಳ ಸೌಭಾಗ್ಯಕ್ಕೆ ಬೆಲೆಯೆ? ಅಸ್ತು! ಮುಂದೆ ಕೆಲವು ಕಾಲದಮೇಲೆ ವೈದಿಕಧರ್ಮವು ಹ್ರಾಸವಾಗಿ ಬ್ರಾಹ್ಮಣಕಾಲವು ಬಂದಿತಂತೆ! ಬಳಿಕ ಉಪನಿಷತ್ತುಗಳ ಕಾಲವು ಬಂದಿತಂತೆ! ಅಬ್ಬಬ್ಬಾ! ಏನು ವಿಚಾರಸರಣಿಯಿದು? ಎಂಥ ಪ್ರಚಂಡಬುದ್ಧಿಯಿದು? ಈ ವಿಚಾರವನ್ನು ಈ ಮಹಾಪಂಡಿತರು ಯಾವ ಮಹಾಪಾಠಶಾಲೆಯಲ್ಲಿ ಓದಿ ತಿಳಿದುಕೊಂಡಿರುವರೋ? ಕರ್ಲಮಂಗಲಪಂಡಿತರೇ! ಬ್ರಾಹ್ಮಣಗಳೂ ಉಪನಿಷತ್ತುಗಳೂ ವೇದದೊಳಗಿನ ಭಾಗಗಳಾಗಿದ್ದು, ಅವು ವೇದಗಳಲ್ಲವೇನು? ವೇದದ ಗಂಧವನ್ನರಿಯದ ನೀವು ಪರಮಪೂಜ್ಯಗಳಾದ ವೇದಗಳ ವಿಷಯದಲ್ಲಿ ವಿಚಾರಮಾಡತೊಡಗಿರುವುದು ಹಾಸ್ಯಾಸ್ಪದವಲ್ಲವೇ? ನಿಮಗೆ ವೈದಿಕವಿಷಯದ ಗಂಧವೇ ಅಂಟದಿರುವುದರಿಂದ ನಿಜವಾದ ವೈದಿಕರಲ್ಲಿಯಾದರೂ ಹೋಗಿ ಈ ಪವಿತ್ರ ವಿಷಯವನ್ನು ತಿಳಿಯಬಹುದಾಗಿತ್ತಲ್ಲವೆ? "ವೇದಕ್ಕೆ ಹೊರೆಯಕಟ್ಟುವೆ, ಆಗಮಗಳ ಮೂಗು ಕೊಯ್ಯುವೆ;" ಎಂದು ನುಡಿದು ವೇದವಿರೋಧಿಯಾದ ಬಸವನ ಕುಲದವರ ಸಹವಾಸದಿಂದ ಎಂಥ ಭಯಂಕರವಾದ ಅರಣ್ಯಮಾರ್ಗವನ್ನು ಹಿಡಿದಿರುವಿರಲ್ಲ? ಪವಿತ್ರವಾದ ವೇದದ ಸ್ವರೂಪವು ವೈದಿಕರಿಗೆ ತಿಳಿದೀತೇ ಹೊರತು ವೇದವಿರೋಧಿಗಳಿಗೆ ಎಂದಾದರೂ ತಿಳಿದೀತೆ? ಇದು ಬಸವನಕುಲದವರ ಸಂಸರ್ಗದ ಫಲವಲ್ಲದೆ ಬೇರೆಯಲ್ಲ!

ಮುಂದೆ ಈ ಮಹಾಮೇಧಾವಿಗಳು ಉಪನಿಷತ್ತುಗಳ ಕಾಲವಾದಮೇಲೆ ಪುರಾಣಗಳ ಕಾಲವು ಬಂದಿತೆಂದೂ ಅನಂತರ ಆಗಮಗಳ ಕಾಲವು ಬಂದಿತೆಂದೂ ಬರೆದಿರುತ್ತಾರೆ. ಆಹಾ! ಸರ್ವಜ್ಞಮೂರ್ತಿಗಳೆಂದರೆ ಇವರಿಗೇ ಅನ್ನಬೇಕು. ಪ್ರತ್ಯಕ್ಷವಾಗಿ ಬದನೇಕಾಯಿ, ಹೀರೆಕಾಯಿ, ಸೋರೆಕಾಯಿಗಳನ್ನು ನೋಡಿದಂತೆ ಪುರಾಣಾಗಮಗಳ ವಿಷಯವನ್ನು ಪ್ರತ್ಯಕ್ಷವಾಗಿ ನೋಡಿದವರಂತೆ ಬರೆದಿರುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಯಾವ ಗ್ರಂಥಗಳನ್ನೂ ನೋಡಲು ಶಕ್ತಿಯಿಲ್ಲದ ಇವರು ಇಂಥ ಮಹೋದ್ಯಮಕ್ಕೆ ಕೈಹಾಕಿರುವುದನ್ನು ನೋಡಿದರೆ ಇವರ ಧೈರ್ಯಕ್ಕೆ ಪಾರವೇ ಇಲ್ಲವೆಂದು ಹೇಳಬೇಕಾಗುತ್ತದೆ. ಕರ್ಲಮಂಗಲಮಹಾಶಯರೇ! ಇನ್ನಾದರೂ ನೀವು ಸಂಸ್ಕೃತಭಾಷೆಯನ್ನು ಕಲಿತು ವ್ಯಾಸನ ಪುರಾಣಗಳನ್ನು ನೋಡಿರಿ! ವ್ಯಾಸಮಹರ್ಷಿಯು ತನ್ನ ಪುರಾಣಗಳಲ್ಲಿ ವೇದಗಳ ಮತ್ತು ಆಗಮಗಳ ಸ್ವರೂಪವನ್ನು ಯಾವ ರೀತಿಯಾಗಿ ಪ್ರತಿಪಾದಿಸಿದ್ದಾನೆನ್ನುವುದನ್ನು ತಿಳಿದುಕೊಳ್ಳಿರಿ; ಅರ್ಧಮರ್ಧಕಲಿತು ಯದ್ವಾತದ್ವಾ ಬರೆಯುತ್ತ ಹೋದರೆ ಅದರಿಂದಾಗುವ ಪ್ರಯೋಜನವೇನು? ಬುದ್ಧಿಶಾಲಿಗಳಿಂದ "ಛೀ" ಹಾಕಿಸಿಕೊಳ್ಳುವುದೇ ಪ್ರಯೋಜನವಲ್ಲದೆ ಮತ್ತಾವ ಪ್ರಯೋಜನವೂ ಇಲ್ಲ.

ಇಂಥ ಜನರು ಭಾರತಭೂಮಿಯಲ್ಲಿ ಜನಿಸಿ ಆರ್ಯಗ್ರಂಥಗಳ ಸ್ವರೂಪವನ್ನು ತಿಳಿಯದೆ ಮನಸ್ಸಿಗೆ ಬಂದಂತೆ ಬರೆದುಕೊಳ್ಳಹತ್ತಿದುದರಿಂದ ಆರ್ಯಧರ್ಮಗಳೆಲ್ಲಾ ನಷ್ಟಗಳಾಗಿ ಪರಧರ್ಮಗಳು ಪ್ರಚಾರದಲ್ಲಿ ಬರತೊಡಗಿದುವು. ಈಶ್ವರಪ್ರೋಕ್ತಗಳೆಂದೂ, ನಿತ್ಯವಾದುವುಗಳೆಂದೂ ತ್ರಿಕಾಲಜ್ಞಾನಿಗಳಿಂದ ನಿರ್ಣಯಿಸಲ್ಪಟ್ಟ ವೇದಾಗಮಗಳು ಇಂಥ ಪಂಡಿತರ ಕಾಲದಲ್ಲಿ ಪೌರುಷೇಯಗಳಾಗಿಯೂ, ಆಧುನಿಕಗಳಾಗಿಯೂ ಪರಿಣಮಿಸಿಹೋಗಿವೆ. ಇದು ಅಲ್ಪಜ್ಞಾನದ ಫಲವಲ್ಲದೆ ಬೇರೆಯಲ್ಲ. ಸ್ಮೃತಿ, ಪುರಾಣಕಾಲದಲ್ಲಿ ಶೈವ-ವೈಷ್ಣವ ಧರ್ಮಗಳು ಹುಟ್ಟಿ ಯುದ್ಧಮಾಡತೊಡಗಿದವೆಂದು ಈ ಮಹಾಪಂಡಿತರು ಬರೆದಿರುತ್ತಾರೆ. ಇದರಮೇಲಿಂದ ವಿಚಾರಮಾಡಿದರೆ ಸ್ಮೃತಿಪುರಾಣಗಳನ್ನು ರಚಿಸಿದ ಮಹರ್ಷಿಗಳು ದ್ವೇಷಾಸೂಯಾಗ್ರಸ್ತರಾಗಿದ್ದರೆಂದು ಹೇಳಬೇಕಾಗುತ್ತದೆ. ದಿವ್ಯಜ್ಞಾನಿಗಳಾದ ಮಹರ್ಷಿಗಳಿಗೆ ಈ ತರಹದ ಕಳಂಕವನ್ನು ಹಚ್ಚಬೇಕಾದರೆ ಇವರ ಹೃದಯವು ಎಷ್ಟು ಪರಿಶುದ್ಧವಾಗಿರಬಹುದೆನ್ನುವುದನ್ನು ಕುಶಲರೇ ಯೋಚಿಸಬೇಕು. ಕರ್ಲಮಂಗಲಂರವರೇ ಉಪನಿಷತ್ತುಗಳಲ್ಲಿ ಶೈವವೈಷ್ಣವಧರ್ಮಗಳು ಹೇಳಲ್ಪಟ್ಟಿಲ್ಲವೇನು? ನೀವು ಯಾವ ಉಪನಿಷತ್ತುಗಳನ್ನಾದರೂ ಪರಿಶೀಲಿಸಿರುವಿರಾ? ಅಥವಾ ಆ ಶಬ್ದವನ್ನು ಮಾತ್ರ ಕೇಳಿರುವಿರಾ? ಅಲ್ಪಜ್ಞರು ಏನನ್ನಾದರೂ ಹೇಳಿದರೆ ಅದನ್ನೇ ಮಹಾವಾಕ್ಯವೆಂದು ಭಾವಿಸಿ ಮನಸ್ಸಿಗೆ ಬಂದಂತೆ ಬರೆಯುವುದು ಯೋಗ್ಯವಲ್ಲ. ಈಶ್ವರ ಗ್ರಂಥಗಳ ಮೇಲೆ ಮನಸ್ಸಿಗೆ ಬಂದಂತೆ ಮಾತನಾಡುವವರು ಈಶ್ವರನ ವ್ಯಾಕೋಪಕ್ಕೆ ಪಾತ್ರರಾಗಿ ಇಹಪರದಲ್ಲಿ ಅಪಾರವಾದ ಕಷ್ಟಗಳನ್ನನುಭವಿಸುವರೆಂಬುದನ್ನು ಪೂರ್ಣಲಕ್ಷ್ಯದಲ್ಲಿಡಿರಿ; ಅಡ್ಡದಾರಿಯನ್ನು ಹಿಡಿದು ಶಿವನ ಶಿಕ್ಷೆಗೆ ಗುರಿಯಾಗಬೇಡಿರಿ; ನಿಮ್ಮ ದುರುದ್ದೇಶವನ್ನು ಸಾಧಿಸುವುದಕ್ಕೋಸ್ಕರ ನೀವು ಹಿಡಿದಿರುವ ಮಾರ್ಗವು ಅತ್ಯಂತ ಹೇಯವಾಗಿದೆ. ಇದು ಆಸ್ತಿಕತನದ ಲಕ್ಷಣವಲ್ಲ! (ಮುಂದೆಸಾಗುವುದು).

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು,
ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

ಓದುಗರಿಗೆ ವರ್ಣೋಚ್ಚಾರ ಶಿಕ್ಷಣವು ಅವಶ್ಯವಾದುದು. ಯಾವ ವರ್ಣವನ್ನು ಹೇಗೆ ಉಚ್ಚರಿಸಬೇಕೆಂಬ ಪರಿಜ್ಞಾನವಿಲ್ಲದವರು ಓದುಗರೇ ಅಲ್ಲ. ಆದರೆ ಓದುಗರಲ್ಲಿ ಮುಂದಾಳುಗಳೆಂದು ಹೆಸರು ವಾಸಿಗಳಾದವರಲ್ಲಿಯೇ ಕೆಲಂಬರು ಅಕ್ಷರಗಳನ್ನು ನುಡಿವಲ್ಲಿ ಮುಗ್ಗರಿಸುತ್ತಲಿರುವುದನ್ನು ಕಂಡರೆ ಎಗ್ಗರಿಗೂ ಎಳನಗೆಯು! ಅಂತಾಗಲು ಆ ಪಂಡಿತವಕ್ತಿಗಳು ವರ್ಣೋಚ್ಚಾರಪದ್ಧತಿಯನ್ನು ದುರ್ಲಕ್ಷಿಸಿರುವುದೇ ಕಾರಣವಲ್ಲವೇ? ಆದ್ದರಿಂದ ಲೌಕಿಕಗ್ರಂಥಗಳನ್ನೋದುವಲ್ಲಿಯೂ, ವ್ಯಾವಹಾರಿಕ ಭಾಷೆಯನ್ನು ನುಡಿವಲ್ಲಿಯೂ ಅಕ್ಷರೋಚ್ಚಾರ ಪದ್ಧತಿಯ ಶಿಕ್ಷಣವು ಉಪಯೋಗವಾಗಿರುತ್ತಿರಲು ವೇದಪಠನವೃತ್ತಿಯುಳ್ಳವರಿಗಾದರೋ ಅದು ಅತ್ಯಂತೋಪಯುಕ್ತವಾಗುವುದೆಂಬಲ್ಲಿ ಸಂದೇಹವೇ ಇಲ್ಲ.

ಹಾಗೂ, ಓದುವಲ್ಲಿಯೂ ಮಾತಾಡುವಲ್ಲಿಯೂ ಉಚ್ಚರಿಸಲ್ಪಡತಕ್ಕ ಅಕ್ಷರಗಳ ಅರ್ಥದೊಳಗಿನ ಭಾವವ್ಯಂಜಕಗಳಾದ ಸ್ವರಗಳ ಆವಶ್ಯಕತೆಯುಂಟು. ಈ ಹೇತುವಿನಿಂದೇ ವೈದಿಕಭಾಷೆಯಲ್ಲಿ ಮೇಲೆಯೂ ಕೆಳಗೂ '|—' ಎಂಬ ಸ್ವರಚಿಹ್ನಗಳು ಬರೆಯಲ್ಪಟ್ಟಿರುತ್ತವೆ. ಅಥವಾ ಆ ಸ್ವರಗಳು ತಲೆಯಿಂದಾಗಲಿ ಕೈಯಿಂದಾಗಲಿ ಸನ್ನೆಮಾಡಿತೋರಿಸಲ್ಪಡುತ್ತವೆ; ಅವುಗಳಿಗೇ ಅನುಕ್ರಮವಾಗಿ ಉದಾತ್ತವೂ ಅನುದಾತ್ತವೂ ಎಂಬ ಸಂಜ್ಞೆಗಳಿವೆ. ವ್ಯಾವಹಾರಿಕ ಭಾಷೆಗಳಲ್ಲಿ ಈ ಸಂಜ್ಞೆಗಳನ್ನು ಯಾರೂ ಉಪಯೋಗಿಸುವುದಿಲ್ಲ. ಆದರೂ ಉದಾತ್ತಾನುದಾತ್ತಸ್ವರಗಳು ಅವುಗಳಲ್ಲಿ ಇಲ್ಲವೇ ಇಲ್ಲವೆಂದು ಹೇಳಲಿಕ್ಕಾಗದು. ಪ್ರಶ್ನೆ, ಉದ್ಗಾರ, ಒತ್ತಾಯದಿಂದ ನುಡಿಯುವಿಕೆ ಮುಂತಾದ ಪ್ರಸಂಗಗಳಲ್ಲಿ ಬೇರೆಬೇರೆ ಶಬ್ದಗಳನ್ನು ಉಚ್ಚರಿಸುವಾಗ ಆ ಆ ಶಬ್ದಗಳಿಂದ ಹುಟ್ಟತಕ್ಕ ಧ್ವನಿಗಳಲ್ಲಿ ಈ ಸ್ವರಗಳು ಕೇಳಲ್ಪಡುತ್ತವೆ. ಒಂದೇ ಕನ್ನಡನುಡಿಯು ಅಟ್ಟಂಬ ಸುಟ್ಟಂಬ ಬೇರೆಬೇರೆ ನಾಡಿನವರ ಬಾಯಿಂದುಚ್ಚರಿಸಲ್ಪಡುವಾಗ ಧ್ವನಿಯಲ್ಲಿ ತೋರಿಬರುವ ತಳುಕು ಒಂದೇ ತೆರನಾಗಿರುವುದೇ? ಮತ್ತು ಯಾವ ಶಬ್ದಗಳನ್ನುಚ್ಚರಿಸುವಲ್ಲಿಯೂ ಆ ಶಬ್ದಗಳಲ್ಲಿರುವ ಹ್ರಸ್ವದೀರ್ಘಗಳನ್ನಾದರೂ ಚೆನ್ನಾಗಿ ಉಚ್ಚರಿಸಬೇಕು. ಹಾಗಲ್ಲದ ಪಕ್ಷದಲ್ಲಿ ಅಕ್ಷರಗಳ ವ್ಯತ್ಯಾಸಮೂಲಕ ಆ ಶಬ್ದಗಳು ವಿಪರೀತಾರ್ಥವಾಚಕಗಳಾಗುತ್ತವೆ. ಹೀಗೆ ಶಬ್ದಗಳನ್ನು ಶುದ್ಧವಾಗಿ ಉಚ್ಚರಿಸುವಾಗ ಎದೆಯು ತ್ರಾಣವಾದರೂ ಬೇಕಲ್ಲವೇ? ಎದೆಯೊಳಗಿಂದ ಉಸಿರು ಬಲವಾಗಿ ಅಕ್ಷರಗಳು ಹೊರಹೊಮ್ಮದಿದ್ದರೇ ಶಬ್ದಗಳು ಸರಿಯಾಗಿ ಉಚ್ಚರಿಸಲ್ಪಡುವುವು. ಇಲ್ಲವಾದರೆ ಆ ನುಡಿಗಳು 'ವಿಭೂತಿ(?)' ದವರ ಮಾತುಗಳನ್ನು ಹೋಲುವುವು! ಆದ್ದರಿಂದ ಗದ್ಯ ಪದ್ಯಾತ್ಮಕವಾಕ್ಯಗಳನ್ನುಚ್ಚರಿಸುವಾಗ ಉರಃಪಿಂಡಸಾಮರ್ಥ್ಯದ ಉಪಯೋಗವಿದೆ.

ಸಾಮವು ಅಂದರೆ, ಧ್ವನಿಯ ಸಮತೆಯು; ಇದು ಛಂದೋಮಯಪದ್ಯಗಳನ್ನು ಪಠಿಸುವಾಗಲೂ ಹಾಡುವಾಗಲೂ ಉಪಯೋಗವಾಗುವುದು. ಧ್ವನಿಯ ಸಮತೆಯು ಶಿಥಿಲವಾದರೆ ಆ ಕ್ಷಣವೇ ಧ್ವನಿಯು ಅಪಸ್ವರವಾಗುವುದು. ಧ್ವನಿಸಮತೆಯು ಸಿದ್ಧಿಗೆ ಸಂಗೀತವಿದ್ಯಾನುಭವದ ನೆರವು ಸ್ವಲ್ಪವಾದರೂ ಬೇಕಾಗುವುದು. ಗಾನವಿದ್ಯೆಯು ವಾಙ್ಮಾತ್ರೇಣ ಸಾಧ್ಯವಾದುದಲ್ಲ. ಭೂಪಕರಾಗಕ್ಕೆ 'ಮ-ನಿ' ಗಳೂ ಸಾರಂಗರಾಗಕ್ಕೆ 'ಗ-ಧ' ಗಳೂ ಅಗ್ರಾಹ್ಯಗಳೆಂಬೀ ಮುಂತಾದ ವಿಷಯಗಳನ್ನು ಗಾಯಕರ ಮುಖದಿಂದ ಕೇಳಿಯೋ ತತ್ಪ್ರತಿಪಾದಕ ಪುಸ್ತಕಗಳನ್ನವಲೋಕಿಸಿಯೋ ಬದಿಯುವ ಬಂಟನು 'ವಾಗದ್ವೈತಿ' ಯಂತೆ ಹಾಸ್ಯಾಸ್ಪದನಾಗಿರುವನು. 'ಪ-ಸಾ-ಪ-ಮ-ಗ-ಸ-ರಿ; ಪ-ಮ-ಧ-ಸಾ-ಪ-ಮ-ಗ; ಪ-ಮ-ಮ-ಗ-ಸಾ-ಪ-ಮ-ಗ; ನಿ-ಮ-ಮ-ಮ-ಗ-ಸಾ-ಪ-ಮ-ಗ; ಪ-ಸಾ-ಪ-ಮ-ಗ-ಸ-ರಿ |' ಎಂಬ ಅವಾಂತರವರ್ಣಾನುಭವಿಯು ಪ್ರಮುಖವರ್ಣಸಂಸ್ಕೃತಾತ್ಮನನ್ನು ಹೋಲಬಲ್ಲನೇ? ಸ್ವರಗಳೆಂದರೆ ರಾಗವೆಂಬ ವ್ಯಕ್ತಿಯ ಘಟಕಾವಯವಗಳು. ಅಂದರೆ ಸ್ವರಸಮುದಾಯವೇ ರಾಗವು. ಸ್ವರಪಾರಿಶುದ್ಧ್ಯವಿಲ್ಲದ ಧ್ವನಿಯು ಅಪಸ್ವರವಾಗಿ ಕೇಳಬರುವುದು. ಆದ್ದರಿಂದ ಓದುಗಾರರೂ, ಹಾಡುಗಾರರೂ ಮೊದಲು ಸ್ವರಗಳ ಸ್ವರೂಪವನ್ನು ಮನನಮಾಡಿ ಆ ಸ್ವರಗಳು ಕಂಠಧ್ವನಿಯಿಂದ ಸಕ್ರಮವಾಗಿ ಅಭಿವ್ಯಕ್ತಗಳಾಗುವಂತೆ ಅಭ್ಯಾಸಿಸಬೇಕು. ಏಕೆಂದರೆ—ಗಾನವು ಶ್ರುತಿಸಾಧ್ಯವೈಸೆ? ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದವೆಂಬ ಏಳು ಮುಖ್ಯಸ್ವರಗಳಿಗೆ ಅನುಕ್ರಮವಾಗಿ 'ಸ-ರಿ-ಗ-ಮ-ಪ-ಧ-ನಿ' ಎಂಬ ಸಂಜ್ಞೆಗಳಿವೆ. ಸ್ವಾಭಾವಿಕವಾಗಿ ಶುದ್ಧವಾಗಿರುವ ಈ ಏಳು ಮೂಲಭೂತಸ್ವರಗಳಲ್ಲಿಯೇ ಆರೋಹಣ, ಅವರೋಹಣಮೂಲಕವಾಗಿಯೂ, ವಿಕೃತ, ಅಗ್ರಾಹ್ಯಗಳೆಂಬ ನಿಯಮಗಳನ್ನನುಸರಿಯೂ, ವಾದಿ, ಸಂವಾದಿ, ಅನುವಾದೀ ಎಂಬೀ ಸ್ವರಪರಿಣಾಮಗಳನ್ನು ಲಕ್ಷೀಕರಿಸಿಯೂ ಕಿವಿಗಿಂಪಾಗುವಂತೆ ಕಂಠಧ್ವನಿಯಿಂದುದ್ಭೂತವಾಗುವ ಸ್ವರಮಾಲಿಕೆಯಿಂದ ಹುಟ್ಟುವ ಭಾವ (ಅಥವಾ ರಸ)ವೇ 'ರಾಗ' ವೆನಿಸುವುದು. ಸಾರಾಂಶ, ಕೇಳುವವರ ಮನಸ್ಸಿಗೆ ಆಹ್ಲಾದವನ್ನುಂಟುಮಾಡತಕ್ಕ ಸ್ವರಮಾಲಿಕೆಯೇ ರಾಗವು. ಅಯ್ಯತ್ತೈಂತರವಿರುವ ಸ್ವರಗಳಿಂದ ರಾಗವೆಂಬುದು ಸಿದ್ಧಿಸದು. ಇಂತಹ ರಾಗಗಳು ನೂರರ ಮೇಲ್ಪಟ್ಟು ಇರುವುವೆಂದು ಹೇಳುತ್ತಾರೆ. ಅಷ್ಟೇ ಏಕೆ? ನಮಗೆ ಕೃತ್ಯತಃ ಪರಿಚಯವುಳ್ಳ ಶುದ್ಧಗಳೂ, ವಿಕೃತಗಳೂ ಆದ ಸ್ವರಗಳ ಜೋಡಣೆಯಿಂದಲೂ ಅಥವಾ ಒಂದೆರಡು ಸ್ವರಗಳನ್ನು ವರ್ಜಿಯೂ ಅವಕ್ಕೂ ಹೆಚ್ಚು ರಾಗ (ಸ್ವರಮಾಲಿಕೆ)ಗಳನ್ನು ಸಿದ್ಧಪಡಿಸಬಹುದೆಂದು ನಾವು ಸ್ವಾನುಭವದಿಂದ ಹೇಳುತ್ತೇವೆ. ಈಗಾದರೋ ೫೦-೬೦ ರಾಗಗಳೇ ಸುಪ್ರಸಿದ್ಧಗಳಾಗಿಯೂ ಲೋಕಪ್ರಿಯಗಳಾಗಿಯೂ ಇರುತ್ತವೆ. ಇರಲಿ; ಒಟ್ಟಿನಲ್ಲಿ ರಸಿಕಮಹಾಶಯರು ತಕ್ಕಮಟ್ಟಿಗಾದರೂ ಸ್ವರಾಭ್ಯಾಸವನ್ನು ಮಾಡಿಯೇ ಪದ್ಯವಾಙ್ಮಯವನ್ನು ಓದುವುದರಲ್ಲಿಯೂ ಹಾಡುವುದರಲ್ಲಿಯೂ ಪ್ರವೃತ್ತರಾಗುವುದುತ್ತಮವು. ಹಾಗಿಲ್ಲದೆ ಒತರಜಾಗಟೆಯಂತೆ ಅಪಸ್ವರವನ್ನು ಹೊರಡಿಸಿ ಸುತ್ತಮುತ್ತಲೂ ಕೂತವರಿರುತ್ತಿದ್ದರೆ ಅವುಗಳಿಗೂ ಸಹ ಶಿರೋವೇದನೆಯುಂಟಾಗುವಂತೆ ಮಾತ್ರ ಪ್ರಯತ್ನಿಸಬಾರದೆಂದು ಸೂಚಿಸುತ್ತೇವೆ.

ಮಾತನಾಡುವುದಾದರೂ ಧ್ವನಿಸಾಮ್ಯವನ್ನವಲಂಬಿಸಿರುವುದರಿಂದ ಓದುವಾಗಲೂ ಹಾಡುವಾಗಲೂ ಮತ್ತು ನುಡಿವಾಗಲೂ ಧ್ವನಿಯು ಸಮನಾಗಿರುವುದಾದರೆ ಅದರಿಂದ ಓದುಗಾರಿಕೆ ಮುಂತಾದುದು ಕಿವಿಗೆ ಇಂಪಾಗಿ ಕೇಳಬರುವುದು.

ಸಂತಾನವು ಅಂದರೆ ಅವಿಚ್ಛಿನ್ನವಾದ ವರ್ಣೋಚ್ಚಾರವಾಹವು. ಇದಾದರೂ ಅಭ್ಯಾಸಸಾಧ್ಯವು. ಈ ರೀತಿಯಾಗಿ ಶಿಕ್ಷಾಧ್ಯಾಯದ ದ್ವಿತೀಯಾನುವಾಕಮಂತ್ರಪ್ರತಿಪಾದ್ಯವಿಷಯಗಳ ವಿವರಣೆಯಾಗಿರುವುದು. ಆದರೆ ಇದು ಉಪನಿಷದ್ಭಾಗಾಂತರ್ಗತವಾದ 'ಶಿಕ್ಷಾ' ಬೋಧವರೀತಿಯು. ಇನ್ನು ಅರ್ವಾಚೀನ ಶಿಕ್ಷಾಶಾಸ್ತ್ರದಲ್ಲಿ ವೇದಪಠನ ಪದ್ಧತಿವಿಷಯಕವಾದ ನಿಯಮಗಳು ಆವಾವುವೆಂಬುದನ್ನು ಪರಾಮರ್ಶಿಸುವಾ! ಪಾಣಿನೀಯಮತಾನುಸಾರವಾದುದೆಂದು ಹೇಳಲ್ಪಡುವ ಸುಪ್ರಸಿದ್ಧವಾದ ಶಿಕ್ಷಾಶಾಸ್ತ್ರವು ಹೀಗೆ ಶಾಸನಗೊಳಿಸುವುದು.

ಮನ್ತ್ರೋ ಹೀನಃ ಸ್ವರತೋ ವರ್ಣತೋ ವಾ।
ಮಿಥ್ಯಾ ಪ್ರಯುಕ್ತೋ ನ ತಮರ್ಥಮಾಹ॥
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ।
ಯಥೇನ್ದ್ರಶತ್ರುಃ ಸ್ವರತೋಽಪರಾಧಾತ್ ॥೫೧॥

ಸ್ವರ ವರ್ಣಗಳ ಕ್ರಮವಿಲ್ಲದೆ ವಿಪರ್ಯಾಸದಿಂದ ಪ್ರಯೋಗಿಸಲ್ಪಡುವ ಮಂತ್ರವು ವಿಪರೀತವಾದ ಅರ್ಥಪ್ರದವಾದುದಾಗಿ ವಜ್ರದಂತೆ ಪರಿಣಮಿಸಿ ಪಠಿಸುವವನನ್ನು ನಾಶಗೊಳಿಸುವುದೆಂಬ ವಿಷಯದಲ್ಲಿ ಸ್ವರವ್ಯತ್ಯಾಸದೊಡನೆ ತನ್ನಿಂದ ಪಠಿಸಲ್ಪಟ್ಟ ಮಂತ್ರದಿಂದ ತನ್ನನ್ನೇ ನಾಶಮಾಡಿಕೊಂಡು ಇಂದ್ರನ ವೈರಿಯಾದ 'ತ್ವಷ್ಟಾ' ಎಂಬಾತನು ದೃಷ್ಟಾಂತರೂಪನಾಗಿರುವನು. ಅಂದರೆ ಯಥಾಯೋಗ್ಯವಾದ ಸ್ವರದಿಂದಲೂ ಅಥವಾ ವರ್ಣದಿಂದಲೂ ಹೀನವಾದ ಮಂತ್ರೋಚ್ಚಾರವಾದರೋ ಅದೊಂದು ಪ್ರತ್ಯಕ್ಷವಾದ ವಿಪರೀತ ಪ್ರಯೋಗವಾಗಿಯೇ ಪರಿಣಮಿಸುವುದು; ಅಂತಹ ಮಂತ್ರವು ಇಷ್ಟಿತಾರ್ಥಪ್ರತಿಪಾದಕವಾಗಲಾರದು. ಇಷ್ಟೇ ಅಲ್ಲ. ಆ ದುರ್ಮಂತ್ರವೆಂಬ ಶಬ್ದಾತ್ಮಕವಜ್ರವು ಪೂರ್ವದಲ್ಲಿ ಸ್ವರ ವ್ಯತ್ಯಾಸಮೂಲಕ ಇಂದ್ರನ ಶತ್ರುವನ್ನು ನಾಶಗೊಳಿಸಿದಂತೆ ಯಜಮಾನನಿಗೆ ಕೇಡುಮಾಡುವುದು. ಈಗಲಾದರೋ ಅನೂಚಾನಪದ್ಧತಿಚ್ಯುತರಾದ ಕೆಲಂಬರು ಸುಲಭಕ್ರಯದಿಂದ ಸಂಪಾದಿಸಲ್ಪಟ್ಟ ವೈದಿಕಸಾಹಿತ್ಯವನ್ನು ಮುಂದಿಟ್ಟುಕೊಂಡು ತದಂತರ್ಗತವಾದ 'ರಾತ್ರೀಸೂಕ್ತ' ಮುಂತಾದುದನ್ನು ಆಚಾರ್ಯರ ಹಂಗು ತಮಗೇತಕೆಂಬ ದುರ್ಭಾವನೆಯಿಂದ ತಾವೇ ಪಠಿಸಬಹುದೆಂದು ಗಳಹುತ್ತಿರುವರಷ್ಟೇ! ಅಂತಹ ಅಸಂಸ್ಕೃತಾತ್ಮರು ಈ ವಿಷಯವನ್ನು ಮಾತ್ಸರ್ಯಹೀನವಾದ ಮತಿಯೊಡನೆ ಚೆನ್ನಾಗಿ ಅವಲೋಕಿಸಿ ಸ್ಮರಣದಲ್ಲಿಟ್ಟುಕೊಳ್ಳುವುದು ವಿಹಿತವಾಗಿರುವುದು.

ಇಂದ್ರನ ವೈರಿಯಾದ ಆ ವೃತ್ರನ ಕಥೆಯು ತೈತ್ತಿರೀಯಸಂಹಿತೆಯಲ್ಲಿಯೂ (೨-೫-೨) ಶತಪಥಬ್ರಾಹ್ಮಣದಲ್ಲಿಯೂ (೧-೫) ಭಾಗವತಾದಿ ಗ್ರಂಥಗಳಲ್ಲಿಯೂ ಹೇಳಲ್ಪಟ್ಟಿದೆ. ಇಂದ್ರನು ತ್ವಷ್ಟನ ಪುತ್ರನಾದ ವಿಶ್ವರೂಪನೆಂಬಾತನನ್ನು ಕೊಂದನೆಂಬುದರಿಂದ ತ್ವಷ್ಟನು (ವೃತ್ರನು) ಸೋಮಯಾಗದಲ್ಲಿ ಇಂದ್ರನನ್ನು ಬರಮಾಡಿಕೊಳ್ಳಲಿಲ್ಲ. ಇಂದ್ರನಾದರೋ ಆ ಯಾಗಕ್ಕೆ ವಿಘ್ನವನ್ನುಂಟುಮಾಡಿ ಬಲಾತ್ಕಾರದಿಂದ ಸೋಮರಸವನ್ನೆಲ್ಲ ಕುಡಿದನು. ಉಳಿದ ಸೋಮರಸದಿಂದ ಇಂದ್ರನನ್ನು ನಾಶಗೊಳಿಸುವುದಕ್ಕೋಸ್ಕರ ಅಭಿಚಾರಕರ್ಮವನ್ನು (ಮಾರಣಕ್ರಿಯೆಯನ್ನು) ಮಾಡಲೆಳಸಿ ತ್ವಷ್ಟನು—**"ಸ್ವಾಹೇನ್ದ್ರಶತ್ರುರ್ವರ್ಧಸ್ವ"** ಎಂಬ ಮಂತ್ರೋಚ್ಚಾರಪೂರ್ವಕವಾಗಿ ಹೋಮವನ್ನೆಸಗಿದನು. 'ಇನ್ದ್ರಶತ್ರುಃ' ಎಂಬಲ್ಲಿ 'ಶತ್ರು' ಶಬ್ದದರ್ಥವು ಘಾತಕನು, ನಾಶಕನು; ಎಂಬಭಿಪ್ರಾಯದಿಂದೇ 'ಎಲೈ ಜಪಿಸುವ ಪುರುಷನೇ? ಇಂದ್ರ ಘಾತುಕನಾದ ನೀನು ಬೆಳೆಯುವವನಾಗು;' ಎಂಬ ವಿವಕ್ಷೆಯೊಡನೆ ಮಂತ್ರವನ್ನುಚ್ಚರಿಸಿದನು. 'ಇಂದ್ರಶತ್ರುಃ' ಎಂಬಲ್ಲಿ 'ಇನ್ದ್ರಸ್ಯ ಶತ್ರುಃ;' ಅಥವಾ 'ಇನ್ದ್ರಃ ಶತ್ರುಃ (ಶಾತಯಿತಾ) ಯಸ್ಯ' ಎಂದು ವಿಗ್ರಹವು ಎರಡು ವಿಧವಾಗಿದೆ. ತ್ವಷ್ಟನಿಂದ ಆ ಮಂತ್ರವು ಯಾವ ವಿವಕ್ಷೆಯಿಂದುಚ್ಚರಿಸಲ್ಪಟ್ಟಿತೋ ಆಗ ತತ್ಪುರುಷಸಮಾಸತ್ವದಿಂದ ಅಂತೋದಾತ್ತವಿರಬೇಕಾದುದು; ಆದರೆ ಪ್ರಮಾದದಿಂದ ಆದ್ಯುದಾತ್ತವಾದ ಮಂತ್ರವು ಪ್ರಯೋಗಿಸಲ್ಪಟ್ಟಿತು. ಆ ಸ್ವರವು ಬಹುವ್ರೀಹಿಸಮಾಸದಲ್ಲಿ ಪರಿಣಮಿಸಿ 'ಇನ್ದ್ರೋ ಘಾತಕೋ ಯಸ್ಯ' ಎಂಬರ್ಥದಲ್ಲಿ ಪರ್ಯವಸಾನವನ್ನು ಹೊಂದಿ 'ಇಂದ್ರನಿಂದ ವೃತ್ರನು ವಧಿಸಲ್ಪಡತಕ್ಕವನು' ಎಂಬ ಫಲಪ್ರದವಾದುದು. ಈ ಆಖ್ಯಾಯಿಕೆಯಿಂದ ಸ್ವರವ್ಯತ್ಯಾಸದೊಡನೆ ಪಠಿಸಲ್ಪಡುವ ಮಂತ್ರವು ವಿಪರೀತ ಫಲಪ್ರದವಾಗುವುದೆಂಬಭಿಪ್ರಾಯವು ಸಿದ್ಧಿಸುವುದು.

ಇಲ್ಲಿ ಸ್ವರಾಪರಾಧದ ಉದಾಹರಣೆಯು ತೋರಿಸಲ್ಪಟ್ಟಿರುವಂತೆ ವರ್ಣಾಪರಾಧದ ಉದಾಹರಣೆಯು ಏಕೆ ನಿರೂಪಿಸಲ್ಪಟ್ಟಿರುವುದಿಲ್ಲವೆಂಬ ಸಂಗತಿಯಾದರೋ ಸ್ಫುಟವಾಗಿಯೇ ಇರುವುದಲ್ಲವೇ? 'ಸಕಲ' ವೆಂಬ ಶಬ್ದವನ್ನು 'ಶಕಲ' ವೆಂದೂ 'ಸಕೃತ್' ಎಂಬ ಶಬ್ದವನ್ನು 'ಶಕೃತ್' ಎಂದೂ ಉಚ್ಚರಿಸಿದರೆ ವರ್ಣಗಳ ಭೇದ ಮೂಲಕ ಅರ್ಥವೈಪರೀತ್ಯವು ಹೇಗೆ ಸಂಭವಿಸುತ್ತಿರುವುದೆಂಬುದನ್ನು ವಾಚಕ ಮಹಾಶಯರರಿಯರೇ? ಈ ಮೇಲೆ ನಿರ್ದಿಷ್ಟಪ್ರಕಾರ ಸ್ವರಭೇದವು ಇಷ್ಟು ಹಾನಿಕರವಾಗಿರುವುದೆಂಬುದಾಗಿ ಅರಿಯಲ್ಪಡುತ್ತಿರಲು ವರ್ಣಭೇದವು ಅದೆಷ್ಟು ಹಾನಿಕರ (ನಾಶಕ್ಕೆ ಕಾರಣ) ವಾಗಿರುವುದೆಂಬ ಸಂಗತಿಯಾದರೋ ಕೈಮುತಿಕ ನ್ಯಾಯದಿಂದೇ ಸಿದ್ಧವಾಗಿರುವುದರಿಂದ ಆ ವಿಷಯಕವಾಗಿ ಹೆಚ್ಚು ಬರಹವನ್ನು ಬೆಳೆಸುವುದೇಕೆ?

ಆಧುನಿಕ ಸುಶಿಕ್ಷಿತರಿಗೆ ಈ ವಿಧವಾದ ನಿಯಮಪೂರ್ವವಾದುಚ್ಚಾರವೈಶಿಷ್ಟ್ಯವು ಮಹತ್ವಪೂರ್ಣವೆನಿಸುವುದಿಲ್ಲ. ಆದರೆ ನಮ್ಮ ದೃಷ್ಟಿಯಿಂದಾದರೋ ಸಾಂಪ್ರದಾಯಿಕ ಉಚ್ಚಾರಕ್ಕೆ ಬಹುಮಹತ್ವವಿದೆ. ಈ ಸಾಂಪ್ರದಾಯಿಕ ಉಚ್ಚಾರಬಲದಿಂದೇ ಏಕಶಾಖೆಯ ಬೇರೆಬೇರೆ ದೇಶದವರು ಒಂದು ಸ್ಥಳದಲ್ಲಿ ನೆರೆದಾಗ ಸಮಸ್ವರದಿಂದ ವೇದಪಠನದಲ್ಲಿ ಸಮರ್ಥರಾಗಿರುವರು. ಹೇಗೆಂದರೆ ಕರ್ಣಾಟಕದಲ್ಲಿರುವ ಋಕ್‌ಶಾಖೆಕರಾದ ನಾವು ಗೌಡ, ಮಹಾರಾಷ್ಟ್ರ, ಆಂಧ್ರ, ದ್ರಾವಿಡ ಮೊದಲಾದ ದೇಶಗಳಲ್ಲಿರುವ ಋಕ್‌ಶಾಖೀಯ ಬ್ರಾಹ್ಮಣರೊಡನೆ ಹ್ರಸ್ವ, ದೀರ್ಘ, ಉದಾತ್ತ, ಅನುದಾತ್ತ ಮೊದಲಾದ ಉಚ್ಚಾರಗಳಲ್ಲಿ ಪದ, ಮಾತ್ರಾ, ಸ್ವರ, ವರ್ಣ ಮುಂತಾದವುಗಳ ಸೂಕ್ಷ್ಮಾತಿಸೂಕ್ಷ್ಮತರವೂ ಸಹ ಭೇದವಾಗಗೊಡದಂತೆ ಒಂದೇ ಸ್ವರದಲ್ಲಿ ನಿರರ್ಗಳವಾಗಿ ಪಠಿಸಬಲ್ಲೆವು.

ಇದೇ ಮೇರೆಗೆ ತ್ರಿಲಿಂಗ (ತೆಲುಗು) ದೇಶೀಯಬ್ರಾಹ್ಮಣನು ಋಗ್ವೇದವನ್ನು ಪಠಿಸಲು ಮಹಾರಾಷ್ಟ್ರೀಯಬ್ರಾಹ್ಮಣರ ಜೊತೆಯಲ್ಲಿ ನಿರ್ಭಯದಿಂದ ಕುಳಿತುಕೊಳ್ಳುವನು. ಮಹಾರಾಷ್ಟ್ರ, ಕರ್ಣಾಟಕ, ದ್ರಾವಿಡ ಮೊದಲಾದ ದಾಕ್ಷಿಣಾತ್ಯರಲ್ಲಿ ಪರಸ್ಪರ ಮುಖಪರಿಚಯವು ಕೂಡ ಇಲ್ಲದವರಾದರೂ ಉತ್ತರದೇಶದಲ್ಲಿ ಅಂದರೆ, ಶ್ರೀಕಾಶಿಯೇ ಮುಂತಾದ ಪುಣ್ಯಕ್ಷೇತ್ರಗಳಲ್ಲಿ ಅಧ್ಯಯನಮಾಡಿದ ತೈತ್ತಿರೀಯರೊಡನೆ ಸೇರಿ ನಿರಾಯಾಸವಾಗಿ ಪಠಿಸುವರು. ಇದು ಸಂಪ್ರದಾಯದ ಪ್ರಭಾವವಲ್ಲವೇ? 'ಸರ್ವಂ ವೇದಾಧ್ಯಯನಂ ಗುರ್ವಧ್ಯಯನಪೂರ್ವಕಮ್' ಎಂಬ ವೈದಿಕನಿಯಮವು ನಿತ್ಯವಾಗಿರದಿದ್ದರೆ ಅಧ್ಯಯನದಲ್ಲಿ ಇಷ್ಟು ತಂತೋತಂತವಾದ ಶುದ್ಧತೆಯು ದೀರ್ಘಕಾಲದವರೆಗೆ ಉಳಿದಿರಲು ಶಕ್ಯವಿದ್ದಿತೇ?

ಇದಕ್ಕೆ ವಿಪರೀತವಾದ ಉದಾಹರಣೆಯಾದರೋ ಏತದ್ದೇಶೀಯರಾದ ಆಧುನಿಕಸುಶಿಕ್ಷಿತರೂ, ವಿದೇಶದ ಸಂಸ್ಕೃತಜ್ಞರೂ ಉಚ್ಚರಿಸುವ ಪರಿಯು! ಈ ಮಹಾಭಾಗರು ಮುಂದಿರುವ ಅಕ್ಷರಗಳನ್ನೇ ಸರಳವಾಗಿ ಉಚ್ಚರಿಸಲರಿಯರು; ಇನ್ನು ಹ್ರಸ್ವ ದೀರ್ಘ, ಉದಾತ್ತ, ಅನುದಾತ್ತ ಮೊದಲಾದವುಗಳ ಶುದ್ಧೋಚ್ಚಾರವನ್ನಾದರೋ ಕೇಳುವುದೇಕೆ! ಇದು ಸಂಸ್ಕೃತಶಬ್ದಗಳ ಉಚ್ಚಾರವಿಷಯಕವಾದ ಮಾತಾಯ್ತು; ಏತದ್ದೇಶೀಯ ಹಾಗೂ ಪರಕೀಯ ಪ್ರಾಕೃತ ಭಾಷೆಗಳನ್ನುಚ್ಚರಿಸುವ ಬಗೆಯಾದರೂ ಹೀಗೆಯೇ ವಿಲಕ್ಷಣವಾಗಿದೆ. ಹೆಚ್ಚು ಮಾತೇಕೆ? ಈಗ ಎತ್ತ ನೋಡಿದತ್ತ 'ಇಂಗ್ಲಿಷ್' ಎಂಬುದು ಅಧಿಕಪ್ರಮಾಣದಿಂದ ಹಿಂದೂಸ್ಥಾನದ ವ್ಯಾವಹಾರಿಕ ಭಾಷೆಯಾಗಿರುವುದಲ್ಲವೇ? ಆದರೆ ಆ ಭಾಷೆಯ ಉಚ್ಚಾರದಲ್ಲಿಯೂ ಬೇರೆ ಬೇರೆ ಪ್ರಾಂತಗಳ ಜನರು ಹೇಗೆ ವೈಚಿತ್ರ್ಯವನ್ನುಂಟುಮಾಡಿರುವರೆಂಬುದು ಅವರಾಡುವ ನುಡಿಗಳು ನಮ್ಮ ಕಿವಿಗೆ ಬಿದ್ದಾಗ ಸಹಜವಾದ ಲಕ್ಷ್ಯಕ್ಕೆ ಬರುವುದು. ಇದರಿಂದ ಶಿಕ್ಷಾಶಾಸ್ತ್ರದಲ್ಲಿ ಮಂತ್ರಗಳು ಸರಿಯಾಗಿ ಉಚ್ಚರಿಸಲ್ಪಡದಿದ್ದರೆ ಅದರಿಂದ ಯಾವ ಪ್ರತ್ಯವಾಯವು ಸಂಭವಿಸುವದೆಂದು ಹೇಳಲ್ಪಡುವುದೋ ಅದರ ಮಹತ್ವವನ್ನಾದರೋ ಯಾರೂ ಮರೆಯುವಂತಿಲ್ಲ. 'ಅಥ ಶಿಕ್ಷಾಂ ಪ್ರವಕ್ಷ್ಯಾಮಿ' ಎಂಬ ವಾಕ್ಯಾರಂಭಪೂರ್ವಕವಾಗಿ ಪಂಚಪಂಚಾಶತ್ಕವಾದ ಗ್ರಂಥದಿಂದ ಸರ್ವವೇದ ಸಾಧಾರಣವಾದ ಶಿಕ್ಷೆಯನ್ನು ಪ್ರಕಾಶಪಡಿಸುವ ಶಾಸ್ತ್ರವನ್ನೇ 'ಪಾಣಿನೀಯ ಶಿಕ್ಷಾ' ಗ್ರಂಥವೆಂದು ಹೇಳುವ ವಾಡಿಕೆಯಿದೆ. ಮತ್ತು ಇದು ಪಾಣಿನಿಮುನಿಯಿಂದೇ ರಚಿಸಲ್ಪಟ್ಟಿರುವುದೆಂಬುದಾಗಿ ಬಹು ಜನರು ಅಭಿಪ್ರಾಯಪಡುತ್ತಾರೆ. ಆದರೆ ಆ ಆಶಯವು ನಮಗೆ ರುಚಿಸದು. ಏಕೆಂದರೆ, ಶಿಕ್ಷಾಕಾರನೇ ಮೊದಲನೆಯ ಪ್ರತಿಜ್ಞಾರೂಪವಾದ ಶ್ಲೋಕದಲ್ಲಿ ತನ್ನ ಗ್ರಂಥವು ಪಾಣಿನೀಯಮತಾನುಸಾರವಾದುದೆಂದು ಸ್ವತಃ ಹೇಳುತ್ತಾನೆ. ಇದರಿಂದ ಪ್ರಾಚೀನಕಾಲದಲ್ಲಿ ಪಾಣಿನಿಯಿಂದೇ ರಚಿಸಲ್ಪಟ್ಟ ಶಿಕ್ಷಾಗ್ರಂಥವನ್ನು ಆಧಾರವಾಗಿಟ್ಟುಕೊಂಡು ಈ ಗ್ರಂಥವು ಅವನ ಅನುಯಾಯಿಯಾದ (ಶಿಷ್ಯನಾದ) ಯಾವನೋ ಒಬ್ಬನಿಂದ ಬರೆಯಲ್ಪಟ್ಟಿರುವುದೆಂದು ಹೇಳಲಾಸ್ಪದವಿದೆ. ಮತ್ತು ಈ ಗ್ರಂಥದಲ್ಲಿ ಪಾಣಿನಿಯು ಅನೇಕಸಾರೆ ವಂದನಪೂರ್ವಕವಾಗಿ ಸ್ತುತಿಸಲ್ಪಟ್ಟಿದ್ದಾನೆ. ಈ ಶಾಸ್ತ್ರಪ್ರವರ್ತಕರಾದ ಆಚಾರ್ಯರ ಪಾರಂಪರ್ಯವು ಹೀಗೆ ಹೇಳಲ್ಪಡುವುದು.—

ಶಂಕರಃ ಶಾಂಕರೀಂ ಪ್ರಾದಾದ್ದಾಕ್ಷೀಪುತ್ರಾಯ ಧೀಮತೇ।
ವಾಙ್ಮಯೇಭ್ಯಃ ಸಮಾಹೃತ್ಯ ದೇವೀಂ ವಾಚಮಿತಿಸ್ಥಿತಿಃ ॥೫೬॥

ಮೊಟ್ಟಮೊದಲು ಶ್ರೀಶಂಕರನು ಕಲ್ಯಾಣಕಾರಕವೂ (ಶಾಂಕರೀಂ ದೇವೀಂ ವಾಚಂ ಸ್ವಸಮವೇತ ಚಿಚ್ಛಕ್ತ್ಯವಷ್ಟಂಭರಜ್ಞಾನಶಕ್ತ್ಯವಬೋಧರೂಪವೂ) ವ್ಯಾಕರಣ ಪ್ರಕಾಶವೂ (ವ್ಯಕ್ತಾತ್ಮಕವೂ) ಆದ 'ಅ ಇ ಉಣ್' ಮೊದಲಾದ ಚತುರ್ದಶ (೧೪) ಸೂತ್ರರೂಪವಾಣಿಯನ್ನು ವೇದ (ಜ್ಞಾನ) ರಾಶಿಯಿಂದ ತೆಗೆದುಕೊಂಡು ದಾಕ್ಷೀಪುತ್ರನಾದ ಪಾಣಿನಿಗೆಕೊಟ್ಟು ನೀನು ಶಾಸ್ತ್ರಕರ್ತನಾಗುವಿಯೆಂದು ಅನುಗ್ರಹಿಸಿದನು. ಮುಂದೆ ಪಾಣಿನಿಯು ಆ ಹದಿನಾಲ್ಕು ಸೂತ್ರಗಳ ಸಹಾಯದಿಂದೇ ಪ್ರತ್ಯಾಹಾರಪೂರ್ವಕವಾಗಿ ವ್ಯಾಕರಣಶಾಸ್ತ್ರವನ್ನು ರಚಿಸಿದನು. ಈ ಶಿಕ್ಷಾಗ್ರಂಥಕಾರನಾದರೂ ಅವನ ಅನುಯಾಯಿಯೇ. ಆದ್ದರಿಂದ ಅವನು ಕಲ್ಪಿಸಿದ ಪ್ರತ್ಯಾಹಾರ ಮೊದಲಾದವುಗಳ ಸಹಾಯದಿಂದ ರಚಿಸಲ್ಪಟ್ಟಿರುವ ಮೂಲಕ ಶಿಕ್ಷಾಕಾರನ ಮತ್ತು ಪಾಣಿನಿಮುನಿಯ ಆಚಾರ್ಯಪಾರಂಪರ್ಯವು ಒಂದೇ ಆಗಿರುವುದು; ಆದಕಾರಣವೇ ಈ ಶ್ಲೋಕದಲ್ಲಿ ಆ ಪರಂಪರೆಯನ್ನು ಅಧಿಕವಾದ ಗೌರವದೊಡನೆ ನಿರ್ದೇಶಮಾಡಿದ್ದಾನೆ. ಈ ಮುಂತಾದ ಹೆಗ್ಗುರುತುಗಳಿಂದ ಪಾಣಿನಿಯೂ ಅವನ ಅನುಯಾಯಿಯಾದ ಶಿಕ್ಷಾಕಾರನೂ ಶಿವೋಪಾಸಕರೆಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ಇಷ್ಟೇ ಅಲ್ಲ, ಮೇಲಿನ ಶ್ಲೋಕದ 'ಶಂಕರಃ ಶಾಂಕರೀಂ ದೇವೀಂವಾಚಂ ವಾಙ್ಮಯೇಭ್ಯಃ ಸಮಾಹೃತ್ಯ ಧೀಮತೇ ದಾಕ್ಷೀಪುತ್ರಾಯ ಪ್ರಾದಾತ್, ಇತಿಸ್ಥಿತಿಃ (ಅಸ್ತಿ)' ಎಂಬ ಅನ್ವಯಪದಗಳ ಗೂಢಾರ್ಥವನ್ನು ಚೆನ್ನಾಗಿ ಪರಾಮರ್ಶಿಸಿದರೆ ೨೬೦೦ ವರ್ಷಗಳ ಹಿಂದೆ ಪ್ರಸಿದ್ಧನಾಗಿದ್ದ ಪಾಣಿನಿಯೂ ಅವನ ಅನುಯಾಯಿಯಾದ ಶಿಕ್ಷಾಕಾರನೂ 'ಶಾಂಭವ' ಜನಾಂಗದವರೇ ಇದ್ದರೆಂಬ ದೃಢಾಭಿಪ್ರಾಯವಾದರೂ ವ್ಯಕ್ತವಾಗದಿರದು.

ಪಾಣಿನಿಮುನಿಯ ಆಖ್ಯಾಯಿಕೆಯು ಕಥಾಸರಿತ್ಸಾಗರದಲ್ಲಿ ಕಥಾಪೀಠಲಂಬಕದೊಳಿರುವ ನಾಲ್ಕನೆಯ ತರಂಗದಲ್ಲಿ ಸಂಕ್ಷಿಪ್ತವಾಗಿ ಪ್ರತಿಪಾದಿಸಲ್ಪಟ್ಟಿದೆ. ಹೇಗೆಂದರೆ:—ಪೂರ್ವದಲ್ಲಿ ಮಗಧದೇಶದೊಳಿರುವ ಪಾಟಲೀಪುತ್ರವೆಂಬ ನಗರದಲ್ಲಿರುತ್ತಿದ್ದ ವರ್ಷನೆಂಬ ಪಂಡಿತನ ಬಳಿಯಲ್ಲಿ ವರರುಚಿಯೇ ಮೊದಲಾದ ಶಿಷ್ಯೋತ್ತಮರು ಶಾಸ್ತ್ರಾಧ್ಯಯನವನ್ನು ಮಾಡುತ್ತಿದ್ದರು. ಅವರಲ್ಲಿ ಪಾಣಿನಿಯೆಂಬ ಶಿಷ್ಯನು ವಿಶೇಷವಾದ ಮಂದಮತಿಯುಳ್ಳವನಾದುದರಿಂದ ಅವನಿಗೆ ವಿದ್ಯಾಸಂಸ್ಕಾರವು ಸ್ವಲ್ಪವಾದರೂ ಲಭಿಸಲಿಲ್ಲ. ಇದನ್ನು ತಿಳಿದವಳಾದ ವರ್ಷನ ಪತ್ನಿಯು ಅವನಿಗೆ ಬುದ್ಧಿವಿಕಾಸವಾಗುವುದಕ್ಕೋಸ್ಕರ ತಪಸ್ಸನ್ನಾಚರಿಸಲು ಹಿಮಾಲಯಕ್ಕೆ ಹೋಗೆಂದು ಸೂಚಿಸಿದಳು. ಪಾಣಿನಿಯು ಅವಳ ಅನುಜ್ಞೆಯ ಮೇರೆಗೆ ಹಿಮಾಲಯಕ್ಕೆಹೋಗಿ ಅಲ್ಲಿ ಬಹುಕಾಲದವರೆಗೆ ಮಹೇಶ್ವರನನ್ನು ಕುರಿತು ತಪಸ್ಸನ್ನೆಸಗಲು ಅವನ ದೃಢನಿಷ್ಠಾತ್ಮಕವಾದ ಆ ತಪಸ್ಸಿಗೆ ಶಂಕರನು ಮೆಚ್ಚಿ ಅವನಿಗೆ **"ಅ ಇ ಉಣ್"** ಮೊದಲಾದ ಹದಿನಾಲ್ಕು ಸೂತ್ರಗಳನ್ನೂ ಶಾಸ್ತ್ರಕರ್ತೃತ್ವಸಾಮರ್ಥ್ಯವನ್ನೂ ಅನುಗ್ರಹಿಸಿದನು. ಬಳಿಕ ಪಾಣಿನಿಯು ಪ್ರತ್ಯಾಹಾರಗಳನ್ನು ಕಲ್ಪಿಸಿ ಅಷ್ಟಾಧ್ಯಾಯಾತ್ಮಕವಾದ ವ್ಯಾಕರಣಶಾಸ್ತ್ರವನ್ನು ರಚಿಸಿದನು. ಮತ್ತು ಪಾಣಿನಿಯು ಮರಳಿ ಪಾಟಲೀಪುತ್ರನಗರಕ್ಕೆ ಬಂದು ಬುದ್ಧಿಶಾಲಿಯಾದ ವರರುಚಿಯೊಡನೆ ಶಾಸ್ತ್ರವಾದವನ್ನಾರಂಭಿಸಿದನು. ಈ ಶಾಸ್ತ್ರಾರ್ಥವು ಎಂಟು ದಿವಸಗಳವರೆಗೆ ಜರುಗಿತು. ಎಂಟನೆಯ ದಿವಸದಲ್ಲಿ ಪಾಣಿನಿಯು ಪರಾಭವ (ಸೋಲು) ವಾಗುತ್ತಿರುವಷ್ಟರಲ್ಲಿಯೇ ಆಕಾಶದಲ್ಲಿ ಮಹೇಶ್ವರ **"ಹುಂ"** ಕಾರವನ್ನು ಮಾಡಿದುದರಿಂದ ಮೊದಲು ಪ್ರಚಲಿತವಾಗಿದ್ದ ಐಂದ್ರವ್ಯಾಕರಣವು ನಷ್ಟವಾಗಿ ವರರುಚಿಯೇ ಮೊದಲಾದ ಸರ್ವಪಂಡಿತರೂ ಮೌಢ್ಯವೃತ್ತಿಯುಳ್ಳವರಾಗಿ ಪರಾಭವವನ್ನು ಹೊಂದಿದರು. ಮುಂದೆ ವರರುಚಿಯೂ ಮಹೇಶ್ವರನ ಪ್ರಸನ್ನತೆಗೆ ಪಾತ್ರನಾಗಿ ಪಾಣಿನೀಯಶಾಸ್ತ್ರದ ಪೂರ್ಣಜ್ಞಾನವನ್ನು ಸಂಪಾದಿಸಿದನು.

"ಅ ಇ ಉಣ್" ಎಂಬ ಮೊದಲಾದ ಹದಿನಾಲ್ಕು ಸೂತ್ರಗಳು ನಿಶ್ಚ ವೇದಗಳಂತೇ ಅನಾದಿಸಿದ್ಧಗಳಾಗಿವೆ. ಅದು ಕಾರಣವೇ ಅವುಗಳಿಗೆ ಅಕ್ಷರಸಮಾಮ್ನಾಯವೆಂಬ ಹೆಸರಿರುವುದು. ಕೊನೆಯ ಣ್, ಲ್, ಮೊದಲಾದ ಇತ್ಸಂಜ್ಞಕವರ್ಣಗಳು ಮಾತ್ರ ಮಹೇಶ್ವರನಿಂದಭಿವ್ಯಕ್ತಗೊಳಿಸಲ್ಪಟ್ಟಿರುವುದರಿಂದಲೂ ಆ ಸೂತ್ರಗಳ ಪ್ರಕಾಶಕನಾದರೂ ಆ ಮಹೇಶ್ವರನೇ ಆದ ಮೂಲಕವೂ ಅವುಗಳನ್ನು ಮಾಹೇಶ್ವರಸೂತ್ರಗಳೆಂಬುದಾಗಿಯೇ ಹೇಳುತ್ತಾರೆ. ಈ ಸೂತ್ರಗಳು ಚಿಚ್ಛಕ್ತಿವಿಶಿಷ್ಟಬ್ರಹ್ಮಪ್ರತಿಪಾದಕಗಳೂ ಆಗಿರುತ್ತವೆಂಬುದು ಇವುಗಳಿಗೆ ಶ್ರೀ ನಂದಿಕೇಶ್ವರನು ಬರೆದ **"ಕಾಶಿಕಾ"** ಎಂಬ ವ್ಯಾಖ್ಯೆಯಿಂದ ಸ್ಪಷ್ಟವಾಗಿ ಗೋಚರವಾಗುವುದು. ಈ "ಕಾಶಿಕೆ" ಯು ಕಾರಿಕಾರೂಪವಾಗಿರುವುದರಿಂದ ಇದಕ್ಕೆ ಉಪಮನ್ಯುಕೃತ **"ವಿಮರ್ಶಿನೀ"** ಎಂಬ ವ್ಯಾಖ್ಯೆಯೂ ಇರುತ್ತದೆ. ಈ ಉಪಮನ್ಯುವು ವ್ಯಾಘ್ರಪಾದ ಮುನಿಯ ಮಗನಲ್ಲವೆಂದು ನಮ್ಮ ಅಭಿಪ್ರಾಯವು. ಈ ಸೂತ್ರಗಳ ವೇದತ್ವವಿಷಯಕಗಳಾದ ಅಧಿಕಪ್ರಮಾಣಗಳು 'ಶಬ್ದೇನ್ದುಶೇಖರ' ದ ಪ್ರಾರಂಭದಲ್ಲಿಯೇ ನಾಗೇಶಭಟ್ಟನಿಂದ ತೋರಿಸಲ್ಪಟ್ಟಿವೆ.

ಪ್ರಸ್ತುತದಲ್ಲಿ ಪಾಣಿನೀಯ ಮತಾನುಸಾರವಾದ ಶಿಕ್ಷಾಗ್ರಂಥದಲ್ಲಿ ಪ್ರತಿಪಾದಿತವಾದ ಮುಖ್ಯವಿಷಯವನ್ನವಲೋಕಿಸಬೇಡಾಮುವಲ್ಲವೇ? ಶಿಕ್ಷಾಕರ್ತನು—

ಉದಾತ್ತಾನುದಾತ್ತಶ್ಚ ಸ್ವರಿತಶ್ಚ ಸ್ವರಾಸ್ತ್ರಯಃ।
ಹ್ರಸ್ವೋ ದೀರ್ಘಃ ಪ್ಲುತ ಇತಿ ಕಾಲತೋ ನಿಯಮಾ ಅಚಿ ॥೧೧॥

ಎಂಬ ಸೂತ್ರದಿಂದ ಸ್ವರವೂ ಕಾಲವೂ ಎಂಬ ಮೊದಲಾದ ಆಯ್ದು ವಿಧವಾಗಿ ಅಚತಕ್ಕ ವರ್ಣವಿಭಾಗಗಳನ್ನು ವಿವರಿಸಿಸುತ್ತಾನೆ. ಉದಾತ್ತ, ಅನುದಾತ್ತ, ಸ್ವರಿತವೆಂಬ ಈ ಮೂರು ಸ್ವರಗಳೂ ಸ್ವರ (ಅಚ್) ವಿಭಾಜಕಗಳಾಗಿರುವಂತೆ ಹ್ರಸ್ವ, ದೀರ್ಘ, ಪ್ಲುತವೆಂಬ ಈ ಸ್ವರಧರ್ಮಗಳೂ ಕಾಲದ್ವಾರಾ ಸ್ವರವಿಭಾಜಕಗಳೇ ಆಗಿರುತ್ತವೆ.

ಶಿಕ್ಷಾಗ್ರಂಥದಲ್ಲಿರುವ ಅಚ್, ಯಣ್, ಮುಂತಾದ ಸಂಜ್ಞೆಗಳು ಪಾಣಿನೀಯ (ಅಷ್ಟಾಧ್ಯಾಯ) ಶಾಸ್ತ್ರಾನುಸಾರವಾಗಿರುತ್ತವೆ. 'ಅಇಉಣ್' ಮೊದಲಾದ ಶಿವಸೂತ್ರಗಳ ಆಧಾರದಿಂದ ಜೋಡಿಸಲ್ಪಟ್ಟ ವರ್ಣಗಳ ಸಂಕ್ಷಿಪ್ತ ಸಂಜ್ಞೆಗಳನ್ನು ಪ್ರತ್ಯಾಹಾರಗಳೆನ್ನುತ್ತಾರೆ. ಈ ಪ್ರತ್ಯಾಹಾರಗಳನ್ನು ಸಿದ್ಧಪಡಿಸುವರೀತಿಯನ್ನು ಪಾಣಿನಿಯು 'ಆದಿರನ್ತ್ಯೇನ ಸಹೇತಾ' ಎಂಬ ಸೂತ್ರದಿಂದ ತೋರಿಸಿದ್ದಾನೆ.

ಈ ಮೇಲೆ ನಿರ್ದಿಷ್ಟವಾದ **'ಉದಾತ್ತಶ್ಚಾನುದಾತ್ತಶ್ಚ'** ಎಂಬ ಶಿಕ್ಷಾಸೂತ್ರಾಂತರ್ಗತ 'ಅಚ್' ಎಂಬುದು ಪ್ರತ್ಯಾಹಾರವು 'ಅಇಉಣ್' ಸೂತ್ರದಲ್ಲಿರುವ 'ಅ' ಎಂಬುದು 'ಐ ಔಚ್' ಎಂಬ ಸೂತ್ರದೊಳಗಿನ 'ಚ್' ಪರಿಯಂತರವಿರುವ ಸ್ವರವರ್ಣಗಳ ಸಂಜ್ಞೆಯಾಗಿರುವುದರಿಂದ 'ಅಚ್' ಅಂದರೆ ಅ ಇ ಉ ಋ ೠ ಎ ಓ ಐ ಔ ಎಂಬ ವರ್ಣಗಳೆಂದು ತಿಳಿಯತಕ್ಕದ್ದು. ವಿಧೇಯರೂಪಗಳಲ್ಲದ ಅ ಇ ಉ ಋ ೠ ಮೊದಲಾದ 'ಅಣ್' ಪ್ರತ್ಯಾಹಾರದೊಳಗಿನ ವರ್ಣಗಳು ತಮ್ಮ ತಮ್ಮ ಜಾತಿಯ ದೀರ್ಘ ಮುಂತಾದ ಸರ್ವವಿಧವಾದ ಸಂಗ್ರಾಹಕಗಳಾಗಿರುತ್ತವೆಂದು **"ಅಣುದಿತ್ಸವರ್ಣಸ್ಯ ಚಾಪ್ರತ್ಯಯಃ"** ಎಂಬ ಸೂತ್ರದಲ್ಲಿ ಪಾಣಿನಿಯು ನಿರೂಪಿಸಿದ್ದಾನೆ. 'ಅಚ್' ಪ್ರತ್ಯಾಹಾರದೊಳಗಿನ ವರ್ಣಗಳನ್ನೇ ಸ್ವರಗಳೆನ್ನುತ್ತಾರೆ. ಅದರೆ ಇವು ಅಲ್ಲದೆ 'ಅಚ್' ಎಂಬುದರ ವಿಶೇಷಧರ್ಮಗಳೆನಿಸುವ ಉದಾತ್ತ, ಅನುದಾತ್ತ, ಸ್ವರಿತವೆಂಬಿವುಗಳೂ ಸ್ವರಾಭಿಧಾನವುಳ್ಳವುಗಳಾಗಿವೆ. ಈ ಹೆಸರುಗಳು ಆ 'ಉದಾತ್ತ' ಮೊದಲಾದ ಅರ್ಥಗಳಿಂದೇ ಶಿಕ್ಷಾಶಾಸ್ತ್ರದಲ್ಲಿಯೂ ವೇದದಲ್ಲಿಯೂ ಪ್ರಸಿದ್ಧವಾಗಿರುತ್ತವೆ. ಕಂಠ, ತಾಲು ಮೊದಲಾದ ವರ್ಣೋತ್ಪತ್ತಿಸ್ಥಾನಗಳಲ್ಲಿ ಕೆಳಗಿನ ಭಾಗವೆಂದೂ ಮೇಲಿನ ಭಾಗವೆಂದೂ ಎರಡುಭಾಗಗಳು ಕಲ್ಪಿಸಲ್ಪಟ್ಟಿವೆ. ಮೇಲಿನಭಾಗದಲ್ಲಿ ಉಚ್ಚರಿಸಲ್ಪಡುವ ಸ್ವರವನ್ನು ಉದಾತ್ತವೆಂದೂ ಅಲ್ಲಿಯೇ ಕೆಳಗೆ ಉಚ್ಚರಿಸಲ್ಪಡುವ ಸ್ವರವನ್ನು ಅನುದಾತ್ತವೆಂದೂ ಉದಾತ್ತಾನುದಾತ್ತ ಮಿಶ್ರಿತಸ್ವರವನ್ನು ಸ್ವರಿತವೆಂದೂ ಹೇಳುತ್ತಾರೆ. ಸ್ವರಿತದಲ್ಲಿ ಮೊದಲಿನ ಅರ್ಧಭಾಗವನ್ನು ಉದಾತ್ತವೆಂದೂ ಎರಡನೆಯ (ಕೊನೆಯ) ಅರ್ಧಭಾಗವನ್ನು ಅನುದಾತ್ತವೆಂದೂ ತಿಳಿಯುವುದುಂಟು. ಮತ್ತು

ಉದಾತ್ತೇ ನಿಷಾದಗಾನ್ಧಾರಾವನುದಾತ್ತ ಋಷಭಧೈವತೌ।
ಸ್ವರಿತಪ್ರಭವಾಹ್ಯೇತೇ ಷಡ್ಜಮಧ್ಯಮ ಪಂಚಮಾಃ ॥೧೨॥

ಸಂಗೀತಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಏಳುಸ್ವರಗಳಲ್ಲಿ ನಿಷಾದ ಗಾಂಧಾರ (ನಿ.ಗ;) ಗಳು ಉದಾತ್ತಸ್ವರಗಳೆಂದೂ ಋಷಭ ಧೈವತ (ರಿ.ಧ;) ಗಳು ಅನುದಾತ್ತಸ್ವರಗಳೆಂದೂ ತಿಳಿಯಲ್ಪಡುತ್ತವೆ. ಷಡ್ಜ ಮಧ್ಯಮ ಪಂಚಮಸ್ವರ (ಸ-ಮ-ಪ;) ಗಳಾದರೋ ಸ್ವರಿತ ಸ್ವರಜನಿತಗಳಾಗಿವೆ. ಈ ಸಪ್ತಸ್ವರಗಳ ಪರಿಚಯವು ವಿಶೇಷತಃ ಸಾಮವೇದವನ್ನನುಲಕ್ಷಿಸಿರುವುದು. ಋಗ್ವೇದದಲ್ಲಿಯೂ ಯಜುರ್ವೇದದಲ್ಲಿಯೂ ಉದಾತ್ತಾನುದಾತ್ತಸ್ವರಿತಗಳೆಂಬಿವು ಮೂರುಸ್ವರಗಳೇ ಪ್ರಸಿದ್ಧವಾಗಿವೆ. ಸಾಮವೇದದಲ್ಲಿ ಮಾತ್ರ ಐದು ಅಥವಾ ಏಳುಸ್ವರಗಳಿರುತ್ತವೆ.

(ಸಶೇಷ.)

ವರ್ಣಸಂಕರ ಗಜಕೇಸರಿ.

ಬರೆದವ—ದೈವಜ್ಞವಿನೋದ.

ಕೆಲವು ವರುಷಗಳಿಂದ ವರ್ಣಸಂಕರ ಪ್ರಲಾಪವನ್ನು ಬರವಣಿಗೆಯಿಂದ ಮಾಡುತ್ತಲಿದ್ದ ಪಾವಟೆಯವರು ಪುನಃ ಈಗ ವೃತ್ತಪತ್ರಿಕೆಗಳಲ್ಲಿ ಇದನ್ನು ಪ್ರಾರಂಭಿಸಿದ್ದಾರೆ. ಹಿಂದೊಮ್ಮೆ ಶಿವಾನುಭವ ಪತ್ರಿಕೆಯಲ್ಲಿ ವರ್ಣಾಶ್ರಮ ವಿಚಾರವು ಪ್ರಕಟವಾದೊಡನೆ ಇವರು ರೇಗಿಕೊಂಡು ಎತ್ತು ಉಚ್ಚೆಹೊಯ್ಯುವಂತೆ ಲಂಬವಾದ ಲೇಖನವನ್ನು ಬರೆಯುತ್ತಿರುವಾಗ 'ವರ್ಣಾಶ್ರಮ ಪ್ರಕಾಶಿಕಾ' ಲೇಖಾಸ್ತ್ರದಿಂದ ಝುರ್ಝುರಿತರಾಗಿ ತಣ್ಣಗೆ ಕುಳಿತರು. ಮತ್ತೆ ಈಗ ತಮ್ಮ ಸಾಂಕರ್ಯಕಾರ್ಯವನ್ನು ವಿಕಾಸಗೊಳಿಸತೊಡಗುವ ಭರದಲ್ಲಿ ಶ್ರೀ ಜಗದ್ಗುರು ಪೀಠಾಧಿಪತಿಗಳನ್ನೂ ವೀರಶೈವ ಮಹಾಬ್ಧಿಚಂದ್ರೋಪಮಾನರಾದ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣಚೆಟ್ಟಿಯರನ್ನೂ ತಮ್ಮಂತೆ ಪಕ್ಷಾಂಧರಾಗಿರುವರೆಂದು ಬಾಯಿಬಿಚ್ಚಿ ಬರೆಯುವ ಇವರ ಬುದ್ಧಿಗೆ ಬೆಲೆಯನ್ನು ಕಟ್ಟುವರಾರು? ಈಗಿನ ಶ್ರೀಮದುಜ್ಜಯಿನೀ ಪೀಠದಲ್ಲಿ ವಿರಾಜಿಸುವ ಜಗದ್ಗುರುಗಳ ದಿವ್ಯತೇಜಸ್ಸಿನ ಪ್ರಭಾವಲಯವನ್ನು ಪಾವಟೆಯವರ ಹಕ್ತಪಾತಹೃದಯವು ತಿಳಿಯಲಾರದು. ಇದು ಸಾಂಕರ್ಯಾಂಧಕಾರದ ಪ್ರಭಾವವು. ಇದರಿಂದ ಕುರುಡರಾದ ಇವರಿಗೆ ಜಗದಾಚಾರ್ಯರೂ, ಜಗದ್ವಿಭೂತಿಗಳೂ ಕಾಣುವ ಬಗೆ ಎಂತು? ಅಂತೇ ಶ್ರೀ ಜಗದ್ಗುರುಗಳ ವಿಷಯದಲ್ಲಿ ವಿಷವನ್ನು ಕಾರುತ್ತಲಿರುವರು. ವರ್ಣಭೇದ, ಜಾತಿಭೇದಗಳು ಶಾಸ್ತ್ರೀಯವಾಗಿಯೂ, ರೂಢಿಯಲ್ಲಿಯೂ ಸುಪ್ರಸಿದ್ಧವಾಗಿರುವಾಗ ಕೈಬರಹದ ಕಿಂಡಿಯನ್ನು ವೃತ್ತಪತ್ರಿಕೆಗಳಲ್ಲಿ ತೀಂಚಿಕೊಳ್ಳುತ್ತಿರುವದು ಆಶ್ಚರ್ಯವಲ್ಲವೇ? ಬಾಳೇಹಳ್ಳಿ ಪೀಠಾಧಿಕಾರದ ಚುನಾವಣೆಯ ಕಾರ್ಯದಲ್ಲಿ ತಮಗೆಷ್ಟೂ ಗೌರವವಿಲ್ಲದೆ ತಮ್ಮ ಸ್ವಾರ್ಥಭಾವನೆಗೆ ಫಲವು ಸಿಗದೆ ವಿಷಣ್ಣಹೃದಯರಾದ ಪಾವಟೆಯವರು ಆ ಅಸಮಾಧಾನಾಂಕುರವನ್ನು ಅಂತರಂಗದಲ್ಲಿಟ್ಟುಕೊಂಡು ಅಸೂಯಾಭಾವಪ್ರದರ್ಶನವನ್ನು ಆಗಾಗ್ಗೆ ಮಾಡತೊಡಗುತ್ತಲಿದ್ದಾರೆ. ಪ್ರತಿಸಾರೆಯೂ ಇದಕ್ಕೆ ಮಂಗಳಾರತಿಯಾಗುತ್ತಲಿದೆ. ಮಾಹೇಶ್ವರವರ್ಗದ ಮೇಲಿನ ಮಾತ್ಸರ್ಯಾಗ್ನಿಯಿಂದ ಇವರ ಹೃದಯವಲ್ಲ ಸಂತಪ್ತವಾಗಿದೆ. ಅಷ್ಟಾದರೂ ಈ ಪುಣ್ಯಾತ್ಮರು ಕೃತಿಯಲ್ಲಿ ಮಾಹೇಶರರನ್ನು ಬಿಟ್ಟಿಲ್ಲ. ತಮ್ಮ ಮಕ್ಕಳಮಗಳ ಲಗ್ನಗಳನ್ನು ಪಂಚಕಲಶಗಳನ್ನು ಸ್ಥಾಪಿಸಿ ಗುರುವರ್ಗದ ಮಾಹೇಶ್ವರರಿಂದಲೇ ಮಾಡಿಸುತ್ತಲಿದ್ದಾರೆ. ಇದುವರೆಗೆ ತಮ್ಮ ಜಾತಿಯವರಲ್ಲಿಯೇ ಶರೀರಸಂಬಂಧ ವ್ಯವಹಾರವನ್ನಿಟ್ಟುಕೊಂಡಿದ್ದಾರೆ. ಸಜಾತೀಯರಲ್ಲಿಯೂ ಮೇಲುಗೀಳು ಎಳೆಗುಲಗಳನ್ನು ಸಂಶೋಧಿಸಿ ಶುದ್ಧಸಂತತಿಯನ್ನು ವಿಚಾರಿಸುವದರಲ್ಲಿ ಶಿವಸಿಂಪಿಗಸಮಾಜದಲ್ಲಿ ಮ|| ರಾ|| ಪಾವಟೆಯವರಷ್ಟು ಅನುಭವಿಕರು ಯಾರೂ ಇಲ್ಲ. ಇವರು ತಮ್ಮ ಪುತ್ರಿಯರನ್ನು ಕೊಡುವಾಗಲೂ ತಮ್ಮ ಪುತ್ರರಿಗೆ ಕನ್ಯೆಯನ್ನು ತರುವಾಗಲೂ ಸಂಶೋಧಿಸಿದ ವಿಚಾರಗಳು ಮನನೀಯವಾಗಿರುತ್ತವೆ. ನಾನೊಮ್ಮೆ ಇವರನ್ನು ಪ್ರತ್ಯಕ್ಷವಾಗಿ ಕಂಡು ಗೋತ್ರಸೂತ್ರಗಳನ್ನು ಕೇಳಿದಾಗ ತಮ್ಮ ಗುರುವಿನ ಗೋತ್ರಸೂತ್ರಗಳನ್ನು ಹೇಳಿದರು. ಹೀಗಿರುವ ಪಾವಟೆಯವರು ವೃತ್ತಪತ್ರಿಕೆಗಳಲ್ಲಿ ಪಕ್ಷಾಂಧರಾಗಿ ಲೇಖನಗಳನ್ನು ಬರೆಯುತ್ತಿರುವದು ಪರಮಾಶ್ಚರ್ಯವಾಗಿರುವದು. ಇವರ ವರ್ಣಸಂಕರಲೇಖನಗಳನ್ನು ನೋಡಿದರೆ ಇವರು ಸನಾತನ ವಿರೋಧಿಗಳೂ ಜಾತಿ-ಕುಲಾಶ್ರಮಬಾಹಿರರೂ ಗುರುಭಕ್ತಿಶೂನ್ಯರೂ ಇರಬೇಕೆಂದು ಸ್ಪಷ್ಟವಾಗುತ್ತದೆ. ಇವರು ಆಚರಣೆಯಲ್ಲಿ ನೋಡಿದರೆ ಸ್ವಕುಲಾಭಿಮಾನವು ತುಂಬಿತುಳುಕುತ್ತಲಿದೆ. ಇವರ ತಮ್ಮ ಬರಹದ ಪ್ರಕಾರ ನಾವು ಶಿವಕುಲದವರು, ಶಿವಗೋತ್ರದವರು, ಶಿವಸೂತ್ರದವರು, ಶಿವಬಂಧುಗಳು ಎಂದು ಹೇಳುತ್ತಿದ್ದರೆ ಇವರಿಗೆ ಯಾರೂ ಕನ್ಯೆಯನ್ನು ಕೊಡುತ್ತಿದ್ದಿಲ್ಲ. ಇವರ ಕನ್ಯೆಯನ್ನು ಯಾರೂ ತೆಗೆದುಕೊಳ್ಳುತ್ತಿದ್ದಿಲ್ಲ. ಅಖಿಲಜಗತ್ತೇ ಶಿವಮಯವಾಗಿರುವಾಗ ಪಾವಟೆಯವರೊಬ್ಬರೇ ಶಿವಕುಲದವರು ಶಿವಗೋತ್ರದವರು ಶಿವಬಂಧುಗಳೆಂದು ಹೇಳಿಕೊಳ್ಳುವದರಲ್ಲೇನು ಫಲಿತಾಂಶವದೆಯೋ ತಿಳಿಯದಾಗಿದೆ. ಕೇವಲ ಬರಹದಲ್ಲಿ 'ವರ್ಣಭೇದಗಜಾಂಕುಶರಾಗಿ ಕೃತಿಯಲ್ಲಿ ವರ್ಣಸಂಕರಗಜಕೇಸರಿಯಂತೆ ನಟಿಸುವ ವೇಷವನ್ನು ಹಾಕುವದರಿಂದಾಗುವ ಪ್ರಯೋಜನವು ಅವರಿಗೇನೇ ಗೊತ್ತು. ಇಂಥವರು ನಟಿಸುವ ಈ ಕೃತ್ರಿಮ ಪೊಳ್ಳುಬೆದರಿಕೆಗೆ ಯಾರೂ ಸೊಪ್ಪು ಹಾಕುವದಿಲ್ಲ. ವೀರಶೈವಬ್ರಾಹ್ಮಣಾದಿ ಚತುರ್ವರ್ಣಾಶ್ರಮಧರ್ಮಕ್ಕೂ ವ್ಯಾಕ್ತ(?)ಕಮತ ಚತುರ್ವರ್ಣಾಶ್ರಮಧರ್ಮಕ್ಕೂ ಅಂತರವದೆ. ಈ ವಿಷಯವನ್ನು ಸಿದ್ಧಾಂತಶಿಖಾಮಣಿಯಲ್ಲಿ ಸ್ವಲ್ಪ ಚನ್ನಾಗಿ ಹಣಿಕಿಹಾಕಿ ನೋಡಿರಿ. ನಿಮಗೆ ಸಂಸ್ಕೃತಸಾಹಿತ್ಯದಲ್ಲಿ ಗತಿ ಇರದಿದ್ದರೆ ಬಲ್ಲವರಿಂದ ಸೋಡಿಸಿ ಭ್ರಮೆಯಿಂದ ದೂರರಾಗಿರಿ. ೧೫-೧೬ ನೇ ಶತಮಾನದ ಕನ್ನಡವಚನವಾಙ್ಮಯವನ್ನು ಬಸವನಕಾಲಕ್ಕೆ ಜೋಡಿಸಿ ಕರ್ಣಾಟಕಸಾಹಿತ್ಯಕ್ಕೆ ಕುಂದನ್ನುಂಟುಮಾಡುವದು ಹಿತವಲ್ಲ. ಕರ್ಣಾಟಕಸಾಹಿತ್ಯಪ್ರೇಮಿಗಳಿಗೆ ನಿಮ್ಮ ವಿಪರೀತ ಬಗ್ಗರಣೆಯು ವಿಷಾದವನ್ನುಂಟುಮಾಡುವದಿಲ್ಲವೇ?

ಶ್ರೀ ಜಗದ್ಗುರು ಪಂಚಪೀಠಗಳ ಯಶೋಧ್ವಜದ ಉತ್ಸಾಹಕರಾದ ವೇ|| ಶಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಮೇಲಿನ ನಿಮ್ಮ ದ್ವೇಷವು ಅವರನ್ನು ಏನುಮಾಡಬಲ್ಲುದು? ಆ ದ್ವೇಷದಿಂದ ಅಮಂಗಲಬರವಣಿಗೆಯನ್ನು ಪ್ರಾರಂಭಿಸಿದಿರಿ. ಶ್ರೀ ಪಂಚಾಚಾರ್ಯರ ಬಗ್ಗೆ ಬರೆದಿರುವ ನಿಮ್ಮ ಗ್ರಂಥಗಳು ನಿಮ್ಮ ದೂಷಿತಹೃದಯವನ್ನು ಸೂಚಿಸುವ ಸಾಕ್ಷಿಗಳಾಗಿತ್ತವೆ. ನಿಮ್ಮ ಅಸೂಯಾಪೂರಿತ ಗ್ರಂಥಗಳನ್ನೆಲ್ಲ ಚನ್ನಾಗಿ ಖಂಡಿಸಿ ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಭೆಯನ್ನೂ ವೀರಶೈವಮತಸಿದ್ಧಾಂತವನ್ನೂ ಪ್ರಕಾಶಗೊಳಿಸುವ ಗ್ರಂಥರತ್ನಗಳು ಪ್ರಾದುರ್ಭವಿಸಿದವು. ಈ ಚಳವಳಿಯು ಪ್ರಾರಂಭದಲ್ಲಿ ಪಕ್ಷಾಂಧಕಾರಮಯವಾದ ಗ್ರಂಥಗಳು ನಿಮ್ಮಿಂದಲೇ ಮೊದಲು ಹೊರಟಬಳಿಕ ಆಮೇಲೆ ನಿಮ್ಮ ಅಜ್ಞಾನಾಂಧಕಾರಮಯ ಗ್ರಂಥಗಳಿಗೆ ಸಿದ್ಧಾಂತಭಾಸ್ಕರಗ್ರಂಥಗಳು ಪ್ರಕಟವಾದವೆಂಬುದನ್ನು ಚನ್ನಾಗಿ ಜ್ಞಾಪಕದಲ್ಲಿ ತಂದುಕೊಳ್ಳಿರಿ. ವ್ಯಕ್ತಿವೈಷಮ್ಯದಿಂದ ಸಮಾಜವಿಘಾತುಕರಾಗಬೇಡಿರಿ. ಸಮಾಜದ್ರೋಹವು ಸಾಮಾನ್ಯವಾದುದಲ್ಲ. ಜೀವನಾಂತ್ಯಾವಸ್ಥೆಯು ಯಾರಿಗೂ ತಿಳಿದಿಲ್ಲವಾದುದರಿಂದ ಮತಸ್ಥಾಪನಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಕೃತಾರ್ಥರಾಗಿರಿ. ಆಧುನಿಕಕಾಲದ ಸನಾತನಧರ್ಮವಿರೋಧವಾದ ಕುಲ, ಜಾತಿ ವರ್ಣಸಂಕರರೂಪ ಹೇಯವಾದ ಕಾರ್ಯದಿಂದ ಹಿಮ್ಮುಖರಾಗುವಿರಾ?

ಮೇ 21 ನೇ ತಾರೀಖಿನ ದಿವಸ ಮಧ್ಯಾಹ್ನಾಂತಕ್ಕೆ ಸೇರಿದ ಭಾತ್‌ಗಾಂವ ಎಂಬ ಹಳ್ಳಿಗೆ ಬೆಂಕಿಬಿದ್ದು ಅಲ್ಲಿದ್ದ 200 ಮನೆಗಳೂ ಸುಟ್ಟು ಭಸ್ಮವಾದುವು. ಅನೇಕರು ಬೆಂಕಿಗೆ ಸಿಕ್ಕಿ ಬೆಂದುಹೋದರು. ಅಮಲ್ದಾರರೂ ಸಬ್ ಡಿವಿಜನ್ ಆಫೀಸರೂ ಕೂಡಲೇ ಅಲ್ಲಿಗೆ ಹೋಗಿ ನಿರಾಶ್ರಿತರಾದವರಿಗೆ ತಕ್ಕ ಸಹಾಯಗಳನ್ನು ಮಾಡುತ್ತಿರುವರು.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಏಳುವರ್ಷಗಳು ತುಂಬಿ ಎಂಟನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೇ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ—

ಪಂಚಾಚಾರ್ಯ ಪ್ರಭಾ.

೧೯೩೪ನೇ ಮೇ ತಾ|| ೨೮ ನೇ ಸೋಮವಾರ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರ.

ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಪ್ರತಿಯೊಂದು ಯುಗದಲ್ಲಿಯೂ ಶಿವಲಿಂಗಮುಖದಿಂದ ಅವತರಿಸಿರುವ ವಿಷಯವು ವೀರಾಗಮ-ಸುಪ್ರಭೇದಾಗಮ-ಸ್ವಯಂಭುವಾಗಮ-ಪಾಶುಪತತಂತ್ರ ಮೊದಲಾದ ಶಿವೋಕ್ತಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುದು ಸರ್ವರಿಗೂ ತಿಳಿದ ವಿಷಯವಾಗಿದೆ. ಈ ವಿಷಯವು ಅನೇಕಾನೇಕ ಮತಗ್ರಂಥಗಳಲ್ಲಿಯೂ ಘಂಟಾಘೋಷವಾಗಿ ಹೇಳಲ್ಪಟ್ಟಿರುವುದು. ಇಂಥ ಜಗನ್ಮಾನ್ಯವಾದ ವಿಷಯವನ್ನು ಗುರುದ್ವೇಷಾಸಕ್ತರಾದ ಕೆಲಜನ ವಿರಕ್ತಪಂಥಾಭಿಮಾನಿಗಳು ಈಗೀಗ ಅಪಲಪಿಸತೊಡಗಿರುವುದು ಕಾಲಮಹಿಮೆಯೆಂದೇ ಹೇಳಬೇಕಾಗಿದೆ. ಈ ಕಾಲದಲ್ಲಿ ಪ್ರಾಚೀನರು ಅರ್ವಾಚೀನರಾಗಿದ್ದಾರೆ; ಅರ್ವಾಚೀನರು ಪ್ರಾಚೀನರಾಗಿದ್ದಾರೆ: ಪೂಜ್ಯರು ಅಪೂಜ್ಯರಾಗಿದ್ದಾರೆ: ಅಪೂಜ್ಯರು ಪೂಜ್ಯರಾಗಿದ್ದಾರೆ. ಇದೆಲ್ಲಾ ಕಾಲಮಹಿಮೆಯಲ್ಲದೆ ಬೇರೆಯಲ್ಲ. ಅಸ್ತು! ಯಾರು ವಿರಕ್ತಾಭಿಮಾನವನ್ನು ವಹಿಸಿ ಮನಸ್ಸಿಗೆ ಬಂದಂತೆ ಬರೆಯುತ್ತಿರುವರೋ ಆ ಮಹಾಶಯರು ಈ ಮುಂದಿನ ವಿಷಯವನ್ನು ವಿಶೇಷವಾದ ಆದರಬುದ್ಧಿಯಿಂದ ಅವಲೋಕಿಸಬೇಕು. ವಿರಕ್ತವರ್ಗಕ್ಕೆಲ್ಲಾ ಪರಮಪೂಜ್ಯರೂ, ತಪೋನಿಧಿಗಳೂ, ಲೋಕವಿಖ್ಯಾತರೂ, ಪ್ರಾಚೀನರೂ ಆಗಿರುವ **ಅನಾದಿತೋಂಟದಸಿದ್ಧಲಿಂಗೇಶ್ವರರು ತಮ್ಮಿಂದ** ರಚಿಸಲ್ಪಟ್ಟಿರುವ ವಚನದಲ್ಲಿ—

"ಆದಿಯಲ್ಲಿ ಶಿವತತ್ತ್ವದಲ್ಲಿ ರೇಣುಕನುದಯವಾಗಿರ್ದರೆ ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತೊ! ಆ ಶಿವಲಿಂಗದಲ್ಲಿಯೇ ಹುಟ್ಟಿ ಶಿವಲಿಂಗದಲ್ಲಿಯೇ ಲಯವಾದ ರೇವಣಸಿದ್ಧೇಶ್ವರನು ಅನಾದಿಮುಕ್ತನಲ್ಲ, ಆದಿಮುಕ್ತನೆಂದು ಆಡುವ ಅಜ್ಞಾನಿಗಳಿಗೆ ನಾಯಕನರಕತಪ್ಪದು."

ಎಂದು ಉಲ್ಲೇಖಿಸಿದ್ದಾರೆ. ವಿರಕ್ತಶಿಖಾಮಣಿಗಳ ಈ ವಚನದಿಂದ ಶ್ರೀ ರೇಣುಕಾಚಾರ್ಯರ ಅನಾದಿತ್ವವೂ ಪೂಜ್ಯತ್ವವೂ ಎಷ್ಟರಮಟ್ಟಿಗಿರಬಹುದೆಂಬುದನ್ನು ವಿರಕ್ತಾಭಿಮಾನಿಗಳು ಚನ್ನಾಗಿ ಮನನಮಾಡಿಕೊಳ್ಳಬೇಕು. ತೋಂಟದ ಸಿದ್ಧಲಿಂಗೇಶ್ವರರ ವಚನವು ಎಲ್ಲಾ ಕಡೆಗೆ ಮುದ್ರಿತವಾಗಿ ಸರ್ವತ್ರ ದೊರೆಯುತ್ತದೆ. ವಿರಕ್ತಾಭಿಮಾನಿಗಳು ಆ ವಚನದಲ್ಲಿರುವ ಈ ಪವಿತ್ರವಿಷಯವನ್ನು ನೋಡಿ ತಮ್ಮ ಅಮಂಗಲಾಂತಃಕರಣವನ್ನು ಪವಿತ್ರಮಾಡಿಕೊಳ್ಳಬೇಕೆಂದು ಹಾರೈಸುತ್ತೇವೆ. ವಿರಕ್ತರ ಮೂಲಪುರುಷರೇ ಈ ರೀತಿಯಾಗಿ ಅಸಾಧಾರಣವಾದ ಪೂಜ್ಯಬುದ್ಧಿಯಿಂದ ಶ್ರೀ ರೇಣುಕಭಗವತ್ಪಾದರನ್ನು ಕೊಂಡಾಡಿರುವಾಗ, ಅವರ ಅನುಯಾಯಿಗಳು ಇದಕ್ಕೆ ವಿರುದ್ಧವಾಗಿ ಆಚರಿಸುವುದು ಅಧರ್ಮವೂ ಪಾಪಹೇತುವೂ ಅಲ್ಲವೇ? ದ್ವೇಷವನ್ನು ಸಾಧಿಸುವುದಕ್ಕೆ ಮಿತಿಯಿಲ್ಲವೇ? ದ್ವೇಷದಿಂದ ಮೂಲಾಚಾರ್ಯರಮೇಲೆಯೇ ಕುಠಾರವನ್ನೆತ್ತಿದರೆ ಆ ಗುರುದ್ವೇಷಾಗ್ನಿಯು ಇವರವಂಶವನ್ನೆಲ್ಲಾ ಸುಟ್ಟು ಧ್ವಂಸಮಾಡಲಿಕ್ಕಿಲ್ಲವೇ? ಅಲ್ಲದೆ ಪರಲೋಕದಲ್ಲಿ ಘೋರವಾದ ಶಿಕ್ಷೆಯನ್ನು ಅನುಭವಿಸಲಿಕ್ಕಿಲ್ಲವೇ? ಹಿಂದಕ್ಕೆ ಗುರುದ್ವೇಷವನ್ನು ಮಾಡಿದ ವೀರಾಧಿವೀರರ ವಂಶವೂ ಸಂಪತ್ತೂ ನಷ್ಟವಾಗಿ ಇಂದಿಗೂ ಆ ವಂಶದವರು ಬಳಲುತ್ತಿರುವುದನ್ನು ಕೇಳಿಲ್ಲವೇ? ವಿರಕ್ತಾಭಿಮಾನಿಗಳು ಇದನ್ನೆಲ್ಲಾ ಪೂರ್ಣವಿಚಾರಮಾಡಿ ಗುರುಸಾರ್ವಭೌಮರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ತಮ್ಮ ವಂಶೋದ್ಧಾರಮಾರ್ಗವನ್ನು ನೋಡಿಕೊಳ್ಳಬೇಕು. ಹಾಗೆ ಮಾಡದೆ ಅಸುರಮಾರ್ಗದಲ್ಲಿಯೇ ಪ್ರವೇಶಿಸಿದ್ದಾದರೆ ಅದಕ್ಕೆ ತಕ್ಕ ಫಲವನ್ನು ಈ ಜನ್ಮದಲ್ಲಿಯೇ ಅನುಭವಿಸಬೇಕಾಗುವುದೆಂದು ಬೇರೆ ಹೇಳಬೇಕಾಗಿಲ್ಲ. ಇರಲಿ; ಈ ವಿರಕ್ತಾಭಿಮಾನಿಗಳು ತಮ್ಮ ಅಸೂಯೆಯ ಭರಭರಾಟೆಯಲ್ಲಿ ಶ್ರೀ ರೇಣುಕಾಚಾರ್ಯರು ೧೨ನೆಯ ಶತಮಾನದವರೆಂದು ಸಾಧಿಸಲು ಹೊರಟಿರುತ್ತಾರೆ. ಇದಂತೂ ಮಹಾಪಾಪಕಾರ್ಯವಾಗಿದೆ. ಇವರು ೧೨ನೆಯ ಶತಮಾನದವರೆಂದು ಬರೆದ ಮಾತ್ರಕ್ಕೆ ಅವರು ಆ ಕಾಲದವರಾಗಬಲ್ಲರೇ? ೫೦ ವರ್ಷದವನಿಗೆ ೫ ವರ್ಷದವನೆಂದು ಬರೆದರೆ ಅವನು ೫ ವರ್ಷದವನಾಗಬಲ್ಲನೇ? ಯಾರಾದರೂ ಒಬ್ಬಿಬ್ಬರು ಅವಿವೇಕಬಲದಿಂದ ಬೆಂಗಳೂರಿಗೆ ಮಂಗಳೂರೆಂದು ಬರೆದರೆ, ಬೆಂಗಳೂರು ಮಂಗಳೂರಾಗಬಲ್ಲುದೇ? ಯಾವಾಗಲೂ ಬೆಂಗಳೂರು ಬೆಂಗಳೂರೇ! ಮಂಗಳೂರು ಮಂಗಳೂರೇ! ಅಸ್ತು!

ಶ್ರೀಕರಭಾಷ್ಯವನ್ನು ಬರೆದು ಸುಪ್ರಸಿದ್ಧರಾಗಿರುವ ಶ್ರೀಪತಿಪಂಡಿತರು ಕ್ರಿ. ಶ. ೧೦೬೦ ರಲ್ಲಿದ್ದರೆಂದು ಕೆಲವರೂ, ಅದಕ್ಕಿಂತಲೂ ಮೊದಲಿದ್ದರೆಂದು ಕೆಲವರೂ "ಮಾಡರ್ನ ರಿವ್ಯೂ" ಮೊದಲಾದ ಇಂಗ್ಲೀಷ್ ಪತ್ರಿಕೆಗಳಲ್ಲಿ ಇತಿಹಾಸದೃಷ್ಟಿಯಿಂದ ಸಿದ್ಧಮಾಡಿರುವುದು ಸರ್ವತ್ರ ಪ್ರಸಿದ್ಧವದೆ. ಇಷ್ಟು ಪ್ರಾಚೀನರಾಗಿರುವ ಶ್ರೀಪತಿಪಂಡಿತರು ತಮ್ಮ ಬ್ರಹ್ಮಸೂತ್ರ ಭಾಷ್ಯಾರಂಭದಲ್ಲಿ—

"ಶ್ರೀಮಚ್ಛಿವಾಚಾರವಿಚಾರದೀಕ್ಷಂ
ಸ್ವಶಿಷ್ಯಸಚ್ಛ್ರೇಣಿಸ ಪೂರ್ಣಪಕ್ಷಂ।
ದುರ್ವಾರಕಾಮಾದಿವಿದಾರದಕ್ಷಂ
ಭಜಾಮ್ಯಹಂ ರೇವಣಕಲ್ಪವೃಕ್ಷಂ॥

ಎಂದು ರೇಣುಕಗುರುಸಾರ್ವಭೌಮರನ್ನು ಸ್ತುತಿಸಿದ್ದಾರೆ. ಈ ವಿಷಯವನ್ನಾದರೂ ಈ ಪುಣ್ಯಪುರುಷರು ಕಣ್ತೆರೆದು ನೋಡಬಾರದೇ? ಶ್ರೀಪತಿಪಂಡಿತರು ತಮ್ಮ ಭಾಷ್ಯದಲ್ಲಿ ಸಂದರ್ಭಾನುಸಾರವಾಗಿ ಅನೇಕಕಡೆಗೆ **ಸಿದ್ಧಾಂತಶಿಖಾಮಣಿಯ** ಉದಾಹರಣೆಗಳನ್ನು ತೆಗೆದುಕೊಂಡಿದ್ದಾರೆ. ಇದರಿಂದ ಸಿದ್ಧಾಂತಶಿಖಾಮಣಿಯು ಶ್ರೀಕರಭಾಷ್ಯಕ್ಕಿಂತಲೂ ಪ್ರಾಚೀನವೆಂದು ಸಿದ್ಧವಾಗುವುದಿಲ್ಲವೇ? ಇಂಥ ಅತಿಪ್ರಾಚೀನವಾದ ಸಿದ್ಧಾಂತಶಿಖಾಮಣಿಯಲ್ಲಿ ಶ್ರೀರೇಣುಕಾಚಾರ್ಯರು ಭೂಮಂಡಲದಲ್ಲೆಲ್ಲಾ ೧೪೦೦ ವರ್ಷಗಳವರೆಗೆ ಸಂಚರಿಸಿ ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಲಿಂಗೈಕರಾದ ವಿಷಯವು ಉಕ್ತವಾಗಿಲ್ಲವೇ? ಇಂಥ ಲೋಕಪೂಜ್ಯವಾದ ಗ್ರಂಥಸ್ಥವಿಷಯವನ್ನಾದರೂ ಪರಿಶೀಲಿಸದೆ ವಿಪರೀತವಾಗಿ ಬರೆಯುತ್ತಿರುವುದು ಮಹಾಪಾಪವಲ್ಲವೇ? ಇದನ್ನೆಲ್ಲಾ ವಿರಕ್ತಾಭಿಮಾನಿಗಳು ಶುದ್ಧಹೃದಯದಿಂದ ಪರಿಶೀಲಿಸಿ ಗುರುಭಕ್ತಿಪರಾಯಣರಾಗಿ ಪರಶಿವನಕೃಪೆಗೆ ಪಾತ್ರರಾಗಬೇಕು. ಈಗ್ಗೆ ಆರುತಿಂಗಳುಗಳ ಕೆಳಗೆ (ತಾ|| ೨೭-೧೧-೧೯೩೩ ರಲ್ಲಿ) ಬನಾರಸ್ ಜಜ್ಜ್ ಕೋರ್ಟಿನಲ್ಲಿ ಕಾಶೀಪೀಠದಬಗ್ಗೆ ಆಗಿರುವ ತೀರ್ಮಾನವನ್ನಾದರೂ ಈ ಮಹಾಶಯರು ನೋಡಬಾರದೇ? ಕೋರ್ಟಿನಲ್ಲಿ ವಿಶೇಷಚರ್ಚೆಯಾಗಿ ಆ ಪೀಠದ ಪ್ರಾಚೀನತ್ವವು ಎಷ್ಟರಮಟ್ಟಿಗೆ ಸ್ಥಿರಪಡಿಸಲ್ಪಟ್ಟಿರುವುದೆಂಬುದನ್ನಾದರೂ ಪರಿಶೀಲಿಸಬಾರದೇ? ಯಾವುದನ್ನೂ ನೋಡದೆ ಮನಸ್ಸಿಗೆ ಬಂದಹಾಗೆ ಬರೆಯುತ್ತ ಹೋಗುವುದು ಎಷ್ಟೂ ಭೂಷಣವಲ್ಲ; ಹೀಗೆ ಆಚರಿಸುವುದು ಶಿವಪ್ರೀತಿಕರವೂ ಅಲ್ಲ. ಇನ್ನು ಮುಂದಾದರೂ ಇವರು ಗುರುಸಾರ್ವಭೌಮರ ವಿಷಯದಲ್ಲಿ ಪೂಜ್ಯಬುದ್ಧಿಯನ್ನಿಟ್ಟು ಇಹಪರಸುಖಭಾಗಿಗಳಾಗಬೇಕೆಂದೂ, ಇವರಿಗೆ ಶ್ರೀ ಜಗದೀಶ್ವರನು ಈ ತರಹದ ಸದ್ಬುದ್ಧಿಯನ್ನೀಯಲೆಂದೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬರುವ ಜೂನ 1 ನೇ ತಾರೀಖಿನಿಂದ 3 ವರ್ಷಗಳವರೆಗೆ ಗೋರೀಬಿದನೂರು ತಾಲೂಕಿನಲ್ಲಿ ಬಲಾತ್ಕಾರವಾಗಿ ಸಿಡುಬು ಹಾಕತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಮೈಸೂರು ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನವು ಜೂನ 14 ನೇ ತಾರೀಖು ಗುರುವಾರ ಮಧ್ಯಾಹ್ನ 12 ಘಂಟೆಗೆ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುವುದು.

ಈಗ್ಗೆ ಕೆಲವು ದಿವಸಗಳಹಿಂದೆ ಕೋಲಾರದ ಚಿನ್ನದಗಣಿಯಲ್ಲಿ ವಾಸವಾಗಿದ್ದ ಶಿಗಾಮಣಿ ಎಂಬ ಕ್ರೈಸ್ತತರುಣನೊಬ್ಬನು 15 ವರ್ಷ ವಯಸ್ಸಿನ ಅಸ್ಪೃಶ್ಯರ ಹುಡುಗಿಯೊಬ್ಬಳನ್ನು ಅಪಹರಿಸಿಕೊಂಡು ಹೋಗುತ್ತಿದ್ದನೆಂಬ ಕಾರಣದಮೇಲೆ ಪೋಲೀಸರು ಶಿಗಾಮಣಿಯನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುವರು.

ಮೈಸೂರು ಸರಕಾರದವರು ಸಂಸ್ಥಾನದ ಹೊರಗಿನಿಂದ ಆಮದಾಗಿ ಬರುವ ದೀಪದಕಡ್ಡಿಯ ಪೆಟ್ಟಿಗಗಳ ಮೇಲೆ 40 ಕಡ್ಡಿಗಳುಳ್ಳ ಪೆಟ್ಟಿಗೆಗಳು 144 ಕ್ಕೆ 1 ರೂ. ಸಂತೆಯೂ, 60 ಕಡ್ಡಿಗಳುಳ್ಳ ಪೆಟ್ಟಿಗೆಗಳು 144 ಕ್ಕೆ 1 ರೂ. 8 ಆಣೆಯಂತೆಯೂ ಅದಕ್ಕಿಂತಲೂ ಹೆಚ್ಚು ಕಡ್ಡಿಗಳಿರುವ ಪೆಟ್ಟಿಗೆಗಳು 144 ಕ್ಕೆ 2 ರೂ. ಸಂತೆಯೂ ಸುಂಕವನ್ನು ಹಾಕಿರುತ್ತಾರೆ.

ಮೈಸೂರು ಸರಕಾರದ 1934-35 ನೇ ವರ್ಷದ ಆಯವ್ಯಯದ ಅಂದಾಜು ಪಟ್ಟಿಯಲ್ಲಿ 1 ಲಕ್ಷ ರೂ. ಗಳ ಉಳಿತಾಯವು ಸೂಚಿಸಲ್ಪಟ್ಟಿರುವುದೆಂದೂ, ಇದಕ್ಕೆ ಬೆಂಕಿಕಡ್ಡಿಯಮೇಲೆ ಹಾಕಿರುವ ಸುಂಕವೂ, ಹೊಗೆಯಲ್ಲಿ ಕಡಿಮೆಯಾಗಿರುವುದೂ ಮತ್ತು ಉತ್ಪತ್ತಿಯಲ್ಲಿ ಸುಮಾರು 2 ಲಕ್ಷ ರೂ. ಗಳು ಹೆಚ್ಚಿರುವುದೂ ಕಾರಣಗಳಾಗಿರುವುವೆಂದೂ ತಿಳಿದುಬರುತ್ತದೆ.

ಮೈಸೂರು ಗವರ್ನಮೆಂಟ್ ಸೋಪ್ ಫ್ಯಾಕ್ಟರಿಯ ಸೂಪರಿಂಟೆಂಡೆಂಟರಾದ ಮ|| ರಾ|| ಎಸ್. ವಿ. ಶಾಸ್ತ್ರಿಗಳ ತಂದೆಯವರೂ, ಆಸ್ಥಾನ ಮಹಾವಿದ್ವಾಂಸರೂ ಆಗಿದ್ದ ಕವಿತಿಲಕ ಗರಳಪುರಿ ಅಯ್ಯಾಶಾಸ್ತ್ರಿಗಳವರು ರಾಜಧಾನಿಯಲ್ಲಿ ಕಳೆದವಾರ ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಶ್ರೀಮನ್ಮಹಾರಾಜರವರಿಗೆ ಬಾಲ್ಯದಲ್ಲಿ ವಿದ್ಯಾಗುರುಗಳಾಗಿದ್ದರಲ್ಲದೆ, ವಿದ್ವನ್ಮಂಡಲಿಯಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದರು. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಬೆಂಗಳೂರು ಕೆಂಪಾಂಬುಧಿಕೆರೆಯಲ್ಲಿ 12 ಗಂಟೆಗಳ ಕಾಲ ಈಜಿ ಪ್ರಸಿದ್ಧಿಹೊಂದಿದ್ದ ಪ್ರೈರಮ್ಮನೆಂಬ 10 ವರ್ಷದ ಬಾಲಿಕೆಯು ಕಳೆದ 19 ನೇ ತಾರೀಖು ಶನಿವಾರ ರಾತ್ರಿ 12 ಘಂಟೆಯಿಂದ ಭಾನುವಾರ ಸಾಯಂಕಾಲ 6-13 ಘಂಟೆಯವರೆಗೆ ಅಂದರೆ ಸುಮಾರು 18¼ ಗಂಟೆಗಳ ಕಾಲ ಕೆಂಪಾಂಬುಧಿ ಕೆರೆಯಲ್ಲಿ ಈಜಿದಳು. ಜಸ್ಟಿಸ್ ಶ್ರೀ|| ಕೆ. ಶಂಕರನಾರಾಯಣರಾಯರು ಆ ಹುಡುಗಿಯ ಸಾಮರ್ಥ್ಯವನ್ನು ಕೊಂಡಾಡಿ ಅನೇಕ ಬಹುಮಾನಗಳನ್ನು ಕೊಟ್ಟರು. ಈ ಹುಡುಗಿಯ ಸಾಹಸಕ್ಕೆ ಮೆಚ್ಚಿ ಬೆಂಗಳೂರು ಪೌರಸಭೆಯವರು 50 ರೂ. ಗಳನ್ನು ಬಹುಮಾನಮಾಡಿದರು.

ಸ್ಟಾರ್‌ಪತ್ರಿಕೆಯು ನಿಂತುಹೋಯಿತು.

ರಾಜಧಾನಿಯಲ್ಲಿ ಬಹುದಿವಸಗಳಿಂದ ಹೊರಡುತ್ತಿದ್ದ ಸ್ಟಾರ್ ಪತ್ರಿಕೆಯು ಕೆಲವು ತೊಂದರೆಗಳ ಮೂಲಕ ಇನ್ನು ಮುಂದೆ ಹೊರಡುವುದಿಲ್ಲವೆಂದು ಆ ಪತ್ರಿಕೆಯ ಸಂಪಾದಕರು ಪ್ರಸಿದ್ಧಪಡಿಸಿ ಪತ್ರಿಕೆಯನ್ನು ಪೂರ್ಣವಾಗಿ ನಿಲ್ಲಿಸಿಬಿಟ್ಟರು.

ವರ್ತಮಾನಸಂಗ್ರಹ.

ಬೀಹಾರ್ ಪ್ರಾಂತದಿಂದ ಒಬ್ಬ ಮುಸಲ್ಮಾನ ತರುಣನು ಕಾಲ್ನಡಿಗೆಯಿಂದ ಮಕ್ಕಾಯಾತ್ರೆಗೆ ಹೊರಟಿರುವನು! ಇವನು ಪ್ರತಿ 5 ಹೆಜ್ಜೆಗೂ ಒಂದಾವರ್ತಿ ಪ್ರಾರ್ಥನೆಗಾಗಿ ನಿಲ್ಲುವನಂತೆ!

ಬೀಹಾರ್ ಭೂಕಂಪದ ಸಹಾಯನಿಧಿಗೆ ಅಫ್‌ಘಾನಿಸ್ಥಾನದ ಚಕ್ರವರ್ತಿಗಳು 2000 ರೂ. ಗಳನ್ನೂ ಮುಖ್ಯ ಪ್ರಧಾನರು ಮತ್ತು ಮಂತ್ರಿಗಳು ಒಂದೊಂದು ಸಾವಿರ ರೂಪಾಯಿಗಳನ್ನೂ ದಾನಮಾಡಿರುವರು.

ಒಂದಾವರ್ತಿ ಉಪಯೋಗಿಸಿದ ಸ್ಟಾಂಪುಗಳನ್ನು ಪುನಃ ಉಪಯೋಗಿಸಿದ ಕಾರಣದ ಮೇಲೆ ಅಮೃತಸರದ 'ರಾಮನಾಥ' ನೆಂಬ ಟಪ್ಪಾಲಾಫೀಸಿನ ಕ್ಲಾರ್ಕನಿಗೆ 3 ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

ಐರ್ಲೆಂಡಿನಲ್ಲಿ ಖರ್ಚಿಗಿಂತಲೂ 2,00,00,000 ರೂ. ಗಳು ಹೆಚ್ಚಾಗಿ ಉತ್ಪತ್ತಿಯಾಗಿರುವುದರಿಂದ. ಸರಕಾರದವರು ಆದಾಯದ ತೆರಿಗೆಯನ್ನೂ, ಟೀಸೊಪ್ಪಿನ ಮೇಲಿನ ಸುಂಕವನ್ನೂ ಕಡಿಮೆಮಾಡಬೇಕೆಂದು ಆಲೋಚಿಸುತ್ತಿರುವರು.

ಪಂಜಾಬ್ ಆಧಿಪತ್ಯದ ವಿದ್ಯಾರ್ಥಿಗಳಿಗೆ ಕೈಗಾರಿಕೆಯ ಶಿಕ್ಷಣವನ್ನು ಕೊಡುವುದಕ್ಕಾಗಿ ಒಂದು ಸಂಸ್ಥೆಯನ್ನು ಏರ್ಪಡಿಸಲೋಸುಗ ಅಮೃತಧಾರಾ ನಗರದ ಠಾಕೂರ್‌ದತ್ತಶರ್ಮವೈದ್ಯ ಎಂಬ ಶ್ರೀಮಂತರು 50,000 ರೂ. ಗಳನ್ನು ದಾನಮಾಡಿರುತ್ತಾರೆ.

ತಿನ್ನವೆಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ಶನರಾಯಪುರದಿಂದ ಒಬ್ಬನು ತುತ್ತುಕುಡಿ ಊರಿನಲ್ಲಿದ್ದ ತನ್ನ ಬಂಧುವಿಗೆ ಒಬ್ಬ ವರ್ತಕನ ಮೂಲಕ ಒಂದು ಬುಟ್ಟಿ ಕಾಯಿಪಲ್ಯಗಳನ್ನು ಕಳುಹಿಸಿದನು. ವರ್ತಕನು ಆ ಬಂಧುವು ಸಿಕ್ಕಲಿಲ್ಲವೆಂದು ಕಾಯಿಪಲ್ಯಗಳ ಬುಟ್ಟಿಯನ್ನು ತನ್ನ ಮನೆಗೆ ತೆಗೆದುಕೊಂಡುಹೋದನು. ಅವನ ಹೆಂಡತಿಯು ಬುಟ್ಟಿಯನ್ನು ತೆಗೆದುನೋಡಲು ಒಳಗೆ ಬರೀ ಹಾವುಗಳಿದ್ದುವಂತೆ!

ಕೃಷ್ಣಾ ಜಿಲ್ಲೆಗೆ ಸೇರಿದ ವುಯ್ಯೂರಿನಲ್ಲಿ ದಿನ 1ಕ್ಕೆ 300 ಟನ್ ಸಕ್ಕರೆಯು ತಯಾರಾಗುವ ಒಂದು ದೊಡ್ಡ ಸಕ್ಕರೆ ಕಾರ್ಖಾನೆಯು ಸದ್ಯದಲ್ಲಿಯೇ ಸ್ಥಾಪಿಸಲ್ಪಡುವುದು. ಅದಕ್ಕಾಗಿ 13 ಲಕ್ಷ ರೂಪಾಯಿಗಳ ಯಂತ್ರಸಾಧನಗಳು ತರಿಸಲ್ಪಡುವುವು. ಮದರಾಸ್ ಆಧಿಪತ್ಯದ ಕೋ-ಆಪರೇಟಿವ್ ಬ್ಯಾಂಕಿನ ಕಮಿಟಿಯವರು ಮೇಲ್ಕಂಡ ಕಾರ್ಖಾನೆಗೆ 10,00,000 ರೂಪಾಯಿಗಳನ್ನು ಸಾಲರೂಪವಾಗಿ ಕೊಡುವವರಿರುತ್ತಾರೆ.

ಇದೇ ಮೇ 23 ನೇ ತಾರೀಖಿನ ದಿವಸ ಮದ್ರಾಸಿನ 'ರೇ ಬೆಸೆಟ್' ಕಂಪೆನಿಯ ಮುಂಭಾಗದಲ್ಲಿ ಒಬ್ಬ ದೊಡ್ಡ ಮನುಷ್ಯರು ತಮ್ಮ ಮೋಟಾರನ್ನು ನಿಲ್ಲಿಸಿ ಅಂಗಡಿಯೊಳಕ್ಕೆ ಹೋದರು. ಮೋಟಾರಿನಲ್ಲಿ ಕುಳಿತಿದ್ದ ಹುಡುಗರು ತಾವೂ ಮೋಟಾರು ನಡೆಸಬೇಕೆಂಬ ಆಸೆಯಿಂದ ಒಬ್ಬನು 'ಸ್ಟಾರ್ಟಿಂಗ್‌ಹ್ಯಾಂಡಲ' ನ್ನು ಎಳೆದನು. ಮತ್ತೊಬ್ಬನು 'ಸ್ಟಿಯರಿಂಗ್ ಚಕ್ರ' ವನ್ನು ತಿರುಗಿಸಿದನು. ಮೋಟಾರು ಕೂಡಲೇ ಮುಂದಕ್ಕೆ ಹೊರಟಿತು. ಹುಡುಗರಿಗೆ ಮೋಟಾರನ್ನು ನಿಲ್ಲಿಸುವುದಕ್ಕೆ ತಿಳಿಯದೆ ಹತೋಟಿ ತಪ್ಪಿ ಅದೇ ಮಾರ್ಗವಾಗಿ ಬರುತ್ತಿದ್ದ ಒಂದು 'ರಿಕ್ಷಾ' ಗಾಡಿಗೆ ಢಿಕ್ಕಿ ಹೊಡೆದು ರಿಕ್ಷಾಗಾಡಿಯು ಬೀದಿಯ ಪಕ್ಕದಲ್ಲಿದ್ದ ಬೇವಿನಮರಕ್ಕೂ ಮೋಟಾರಿಗೂ ಮಧ್ಯದಲ್ಲಿ ಸಿಕ್ಕಿ ಪುಡಿಪುಡಿಯಾಯಿತು. ರಿಕ್ಷಾಗಾಡಿಯನ್ನು ಎಳೆಯುತ್ತಿದ್ದವನು ಕೂಡಲೇ ಮೃತಪಟ್ಟನು. ಇತ್ತ ಮೋಟಾರೂ ಮುರಿದು ಹೋಯಿತು!

ಜರ್ಮನಿಯಲ್ಲಿ ಯುದ್ಧದ ಸಿದ್ಧತೆ!

ಜರ್ಮನ ಸರಕಾರದವರು ಯುದ್ಧಾರಂಭವಾದಲ್ಲಿ ಪ್ರಜೆಗಳ ರಕ್ಷಣೆಗಾಗಿ ಸಿಡಿಮದ್ದಿನಿಂದ ಅಪಾಯವನ್ನು ಹೊಂದದ ಕಟ್ಟಡಗಳನ್ನು ಕಟ್ಟುವುದಕ್ಕಾಗಿ 5,00,00,000 ಮಾರ್ಕುಗಳನ್ನು ವೆಚ್ಚಮಾಡತಕ್ಕವರಿದ್ದಾರೆ.

ಪುರುಷಸಂಸರ್ಗವಿಲ್ಲದೆ ಪುತ್ರಸಂತಾನ!

ಅಮೇರಿಕೆಯ ಇಬ್ಬರು ಪ್ರಸಿದ್ಧ ಡಾಕ್ಟರರು ಪುರುಷನ ಸಂಸರ್ಗವೇ ಇಲ್ಲದೆ ಸ್ತ್ರೀಯರು ಗರ್ಭವತಿಯರಾಗುವಂತಹ ಒಂದು ಪ್ರಯೋಗವನ್ನು ಕಂಡುಹಿಡಿದಿರುವರಂತೆ! ಇವರು ಇದುವರೆಗೆ 13 ಜನ ಸ್ತ್ರೀಯರಿಗೆ ಈ ಪ್ರಯೋಗವನ್ನು ಮಾಡಿದ್ದು, ಅದರಲ್ಲಿ 8 ಜನರು ಮಕ್ಕಳನ್ನು ಹಡೆದಿರುವರಂತೆ!

ಎರಡು ಮೋಟಾರುಗಳ ಕೆಳಗೆ ಸಿಕ್ಕರೂ ಮೃತಳಾಗದ ಹುಡುಗಿ!

ಜೂಗೊಸ್ಲೇವಿಯಾ ದೇಶದ ಒಬ್ಬ ಕೂಲಿಕಾರನ 6 ವರ್ಷದ ಹುಡುಗಿಯು ರಸ್ತೆಯಲ್ಲಿ ಹೋಗುತ್ತಿದ್ದಾಗ ಕಾಲುಜಾರಿ ಕೆಳಕ್ಕೆ ಬಿದ್ದಿತು. ಅಷ್ಟರಲ್ಲಿ ಅದೇ ಮಾರ್ಗವಾಗಿ ವೇಗದಿಂದ ಬರುತ್ತಿದ್ದ ಒಂದು ದೊಡ್ಡ ಮೋಟಾರ್‌ಲಾರಿಯೂ ಅದರಹಿಂದೆಯೇ ಮತ್ತೊಂದು ಮೋಟಾರೂ ಆ ಹುಡುಗಿಯ ಮೇಲೆ ಹರಿದುಹೋದವು. ಆದರೂ ಹುಡುಗಿಗೆ ಯಾವ ಅಪಾಯವೂ ಆಗಿರಲಿಲ್ಲ!

ಇನ್ಷೂರೆನ್ಸ್ ಕಂಪನಿಗಳಿಗಾಗಿ ಕಾನೂನು.

ಹಿಂದೂಸ್ಥಾನದಲ್ಲಿರುವ ಇನ್ಷೂರೆನ್ಸ್ ಕಂಪೆನಿಗಳು ಜನರಿಗೆ ನಾನಾ ರೀತಿಗಳಲ್ಲಿ ಮೋಸಮಾಡುವುವೆಂದು ತಿಳಿದುಬಂದಿರುವ ಕಾರಣದಿಂದ ಇಂಡಿಯಾ ಸರಕಾರದವರು ಇನ್ಷೂರೆನ್ಸ್ ಕಂಪೆನಿಗಳ ಕಾನೂನನ್ನು ಬದಲಾಯಿಸಬೇಕೆಂದೂ ಜನರಿಗೆ ಮೋಸವಾಗದಂತೆ ಬಲವಾದ ಕಾನೂನುಗಳನ್ನು ರಚಿಸಬೇಕೆಂದೂ ನಿರ್ಧರಿಸಿ, ಅದಕ್ಕಾಗಿ ಒಂದು ಕಮಿಟಿಯನ್ನು ನೇಮಕಮಾಡುವರೆಂದು ತಿಳಿದುಬಂದಿರುತ್ತದೆ.

ಚಿಕಾಗೋ ನಗರದಲ್ಲಿ ಬೆಂಕಿಯಿಂದ ಹಾನಿ!

ಅಮೇರಿಕೆಯ ಚಿಕಾಗೋನಗರದಲ್ಲಿ ಒಂದು ದೊಡ್ಡ ಕಟ್ಟಡಕ್ಕೆ ಅಕಸ್ಮಾತ್ತಾಗಿ ಬೆಂಕಿಬಿದ್ದು 6 ಸಂಗ್ರಹಾಲಯಗಳೂ, 75 ಕೂಲಿಕಾರರ ಗುಡಿಸಲುಗಳೂ ನಾಶವಾಗಿರುತ್ತವೆ. ಬೆಂಕಿಯ ದೆಸೆಯಿಂದ 1500 ಜನರಿಗೆ ವಿಶೇಷ ಗಾಯಗಳಾಗಿರುತ್ತವೆ. ಬೆಂಕಿಯನ್ನು ಆರಿಸುವ ಕೆಲಸಗಾರರಲ್ಲಿ 400 ಜನರಿಗೆ ಮೈಯ್ಯೆಲ್ಲಾ ಸುಟ್ಟು ಹೋಗಿರುತ್ತವೆ. 68 ಬೆಂಕಿ ಆರಿಸುವ ಯಂತ್ರಗಳು ಸತತವಾಗಿ ಕೆಲಸಮಾಡುತ್ತಿದ್ದರೂ ಬೆಂಕಿಯು ಇನ್ನೂ ಆರಿಯೇ ಇಲ್ಲ. ಇದರಿಂದ ಕೋಟ್ಯಂತರ ರೂಪಾಯಿಗಳ ನಷ್ಟವು ಸಂಭವಿಸಿರುವುದು.

ರಂಗೂನಿನಲ್ಲಿ ಬಿರುಗಾಳಿಯಿಂದ ಅನಾಹುತ!

ಮೇ 22 ನೇ ತಾರೀಖಿನ ದಿವಸ ರಂಗೂನ ನಗರದಲ್ಲಿ ಒಂದು ಘಂಟೆಯಕಾಲ ಭಯಂಕರವಾದ ಬಿರುಗಾಳಿ ಮಿಂಚು ಮತ್ತು ಗುಡುಗು ಪ್ರಾಪ್ತವಾಗಿ ಅಲ್ಲಿದ್ದ ಒಂದಾನೊಂದು ಪ್ರಸಿದ್ಧ ಬೌದ್ಧರ ದೇವಾಲಯವೂ, ಅದರ ಮುಂಭಾಗದಲ್ಲಿದ್ದ ಆರು ದೊಡ್ಡ ಕಟ್ಟಡಗಳೂ ಅನೇಕ ವಿದ್ಯುಚ್ಛಕ್ತಿಯ ಕಂಭಗಳೂ ನೆಲಸಮವಾದವು. ರಸ್ತೆಯ ಪಕ್ಕಗಳಲ್ಲಿರುವ ಮರಗಳು ಬೇರು ಸಹಿತ ಕಿತ್ತುಹೋಗಿರುವುವಲ್ಲದೆ ನಗರದ ಸುತ್ತಮುತ್ತಲಿದ್ದ ಹಳ್ಳಿಗಳಲ್ಲಿಯೂ ಅನೇಕ ಮನೆಗಳು ಬಿದ್ದುಹೋಗಿರುತ್ತವೆ. 20 ಜನರಿಗಿಂತಲೂ ಹೆಚ್ಚಾಗಿ ಮೃತಪಟ್ಟಿರುತ್ತಾರೆ.

ಜರ್ಮನಿಯಲ್ಲಿ ಅದ್ಭುತವಿಮಾನದ ನಿರ್ಮಾಣ!

ಬರ್ಲಿನ ನಗರದಲ್ಲಿ LZ 129 ಎಂಬ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಒಂದು 'ಜೆಪ್ಲಿನ' ವಿಮಾನವು ತಯಾರುಮಾಡಲ್ಪಟ್ಟಿರುವುದು. ಇದು 813 ಅಡಿ ಉದ್ದವಾಗಿಯೂ, 133 ಅಡಿ ಅಗಲವಾಗಿಯೂ, 190 ಟನ್‌ಗಳನ್ನು ಮೇಲಕ್ಕೆ ಹೊತ್ತುಕೊಂಡು ಹೋಗುವಷ್ಟು ಶಕ್ತಿಯುಳ್ಳದ್ದಾಗಿಯೂ ಇರುತ್ತದೆ. ಇದಕ್ಕೆ 1000 ಕುದುರೆ ಶಕ್ತಿಯುಳ್ಳ 4 ಯಂತ್ರಗಳು ಜೋಡಿಸಲ್ಪಟ್ಟಿರುತ್ತವೆ. ಪ್ರಯಾಣಿಕರ ಅನುಕೂಲಕ್ಕಾಗಿ 25 ವಿಶಾಲವಾದ ಕೊಠಡಿಗಳಿರುತ್ತವೆ. ವಿಮಾನದ ತಳಭಾಗದಲ್ಲಿ ಮೋಟಾರುಗಳನ್ನು ಕೇಬರಿಸಬಹುದು!

ವಿಚಿತ್ರರೋಗ!

ಅಮೇರಿಕೆಯ ಬೆಂಟ್ಲೀವಿಲ್ ನಗರದ ಜಾರ್ಜ ಗಾಸ್ನೆ ಎಂಬಾತನಿಗೆ ಒಂದು ವಿಚಿತ್ರರೋಗವು ಪ್ರಾಪ್ತವಾಗಿ ಅಮೇರಿಕೆಯ ಪ್ರಸಿದ್ಧ ಡಾಕ್ಟರರನ್ನೆಲ್ಲಾ ಆಶ್ಚರ್ಯಪಡಿಸಿರುವುದು. ವಾಯುಗುಣವು ಚೆನ್ನಾಗಿದ್ದಾಗ ಈತನಿಗೆ ಕೈಕಾಲುಗಳೆಲ್ಲಾ ಹಿಡಿದು ಶರೀರದ ಯಾವ ಭಾಗವನ್ನೂ ಅಳ್ಳಾಡಿಸದಂತೆ ಆಗುವದಂತೆ! ಆದರೆ ವಾಯುವಿನಲ್ಲಿ ಶೈತ್ಯವು ಹೆಚ್ಚಿದಾಗೆಲ್ಲಾ ಇವನು ಹುಷಾರಾಗಿ ಹೊರಗೆ ತಿರುಗಾಡಲು ಹೊರಡುವನಂತೆ! ಬಿಸಿಲಿನಲ್ಲಿ ಇವನ ಕಣ್ಣುಗಳೇ ಕಾಣದಂತಾಗಿ ಹೊರಕ್ಕೆ ಹೊರಡುವುದಕ್ಕೇ ಆಗುವುದಿಲ್ಲವಂತೆ!

ವೀರತರುಣಿಗೆ ಸನ್ಮಾನ!

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಮೋಗಾ ತಾಲೂಕು ಚೌಭಾರಿವಾಲ ಎಂಬ ಗ್ರಾಮದಲ್ಲಿ ಕಳ್ಳರು ಒಂದು ಮನೆಗೆ ನುಗ್ಗಿದಾಗ ಆ ಮನೆಯಲ್ಲಿದ್ದ ಹರನಾಮಕೌರ್ ಎಂಬ ತರುಣಿಯು ಕಳ್ಳರೊಡನೆ ಹೋರಾಡಿ ಅವರಲ್ಲಿ 3 ಜನರನ್ನು ಕೊಂದಳು. ಸರಕಾರದವರು ಅವಳ ಸಾಹಸಕ್ಕೆ ಮೆಚ್ಚಿ ಅವಳಿಗೆ 2 ಎಕರೆ ಜಮೀನನ್ನೂ, 1000 ರೂ. ಗಳನ್ನೂ ಬಹುಮಾನವಾಗಿ ಕೊಡುವಂತೆ ಅಪ್ಪಣೆ ಮಾಡಿದ್ದಾರೆ. ಹಾಗೂ ಈ ಹೊಡೆದಾಟದಲ್ಲಿ ತನ್ನ ಪತಿಯನ್ನು ಕಳೆದುಕೊಂಡ ಆ ಹುಡುಗಿಯ ತಾಯಿಗೆ 10 ರೂ. ಪೆನ್ಷನ್ನನ್ನೂ, ಅವಳ 3 ಜನ ಸಹೋದರರಿಗೆ 10 ರೂ. ವೇತನವನ್ನೂ ಜಮೀನನ್ನೂ ಕೊಡುವಂತೆ ಅಪ್ಪಣೆ ಮಾಡಿರುತ್ತಾರೆ.

ಸ್ವೀಕಾರ

ರಾಜಧಾನೀನಿವಾಸಿಗಳಾದ ಹೊಸಮಠಾಧ್ಯಕ್ಷ ಶ್ರೀಮನ್ನಿರಂಜನ ಶ್ರೀಬಸವಲಿಂಗ ಸ್ವಾಮಿಗಳವರು ತಮ್ಮ ಮಠದಲ್ಲಿ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಾರ್ಥಕ್ಕೋಸ್ಕರ **1** ರೂ. ಯನ್ನು ಕಳುಹಿಸಿರುತ್ತಾರೆ.

ಮಡಕಶಿರಾ ತಾ|| ಜಂಬಲಬಂಡೆ ಗ್ರಾಮದಲ್ಲಿರುವ ಮ|| ರಾ|| ಪಾಟೀಲ ಭೋಜೇಗೌಡರು ಜಗದಾಚಾರ್ಯರ ಜಯಂತೀಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಾರ್ಥಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನೋಟೀಸ್.

ಶ್ರೀಮತಿ ಚಿಕ್ಕಬಸಮ್ಮಯ್ಯನವರ ಧರ್ಮಛತ್ರಕ್ಕೆ ಸೇರಿ ವಿದ್ಯಾಭ್ಯಾಸಮಾಡಲಿಚ್ಛಿಸುವ ವೀರಶೈವ ವಿದ್ಯಾರ್ಥಿಗಳು ಬರುವ ಜೂನ ಮಾಹೆ ತಾರೀಖು 10 ರೊಳಗೆ ಈ ಕೆಳಗೆ ರುಜುಮಾಡಿರುವವರಿಗೆ ಬರೆದುಕೊಳ್ಳತಕ್ಕದ್ದು.

ಎಂ. ಪಿ. ಚನ್ನಪ್ಪ,
ರಿಟೈರ್ಡ್ ಶಿರಸ್ತೇದಾರ್
"ಅಂಕನಾಥನಿಲಯ"
ಕಿಲ್ಲೆಮೊಹಲ್ಲಾ, ಮೈಸೂರು.

ಮೈಸೂರು,
26—5—34.

ಶ್ರೀಜಗದ್ಗುರು ಪಂಚಾಚಾರ್ಯರ್ಗಳ ಪ್ರಸೀದಂತು.

ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯ ಶ್ರೀಜಗದ್ಗುರುಗಳವರ ಜಯಂತೀ ಮಹೋತ್ಸವ.

ಅನಂತಪುರಜಿಲ್ಲಾ ಮಡಕಶಿರಾ ತಾಲ್ಲೂಕು ಜಂಬಲಬಂಡೆ ಗ್ರಾಮದ ಶ್ರೀಮದ್ವೀರಶೈವ ಸದ್ಧರ್ಮಶಿರೋಮಣಿಗಳಾದ ಮ|| ರಾ|| ಶ್ರೀ ಪಟೇಲ್ ಭೋಜೇಗೌಡರವರು ತಮಗೆ ಶರೀರ ಅನಾರೋಗ್ಯದಿಂದಲೂ ತಮಗೆ ೬೦ ನೆಯ ವರ್ಷದ ಗಂಡದೋಷದ ನಿವಾರಣಾರ್ಥವಾಗಿಯೂ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥನೆಮಾಡಿಕೊಂಡ ಮೇರೆಗೆ ತಮ್ಮ ಕಷ್ಟಪರಿಹಾರವಾದುದರಿಂದ ತಾವು ಕಟ್ಟಿಸಿರುವ ಧರ್ಮಸತ್ರದಲ್ಲಿ ಶ್ರೀಜಗದಾಚಾರ್ಯರ ಜಯಂತ್ಯುತ್ಸವವನ್ನು ನಡೆಸಲು ರಂಭಾಸ್ತಂಭಗಳಿಂದಲೂ, ತಳಿರುತೋರಣಗಳಿಂದಲೂ, ಚಪ್ಪರಗಳಿಂದಲೂ, ಅಲಂಕಾರವನ್ನು ಮಾಡಿ ಶ್ರೀ ಜಗದ್ಗುರುಗಳ ಭಾವಚಿತ್ರವನ್ನಿಟ್ಟು ತಮ್ಮ ಬಂಧುಮಿತ್ರಾದಿಗಳನ್ನೂ ತಮ್ಮ ಗುರುಗಳಾದ ಶ್ರೀ ರೇಣುಕಸೂತ್ರಾನುವರ್ತಿ ಗುಡಿಬಂಡೆ ಮಠದ ವೇ|| ಪ್ರಸನ್ನಸ್ವಾಮಿಗಳನ್ನೂ ಕೋಂಕಲ್ ಮಠದ ಪಟ್ಟಾಧ್ಯಕ್ಷರನ್ನೂ ಕೊರಟಗೆರೆ ತಾಲ್ಲೂಕು ಬುರುಗನಹಳ್ಳಿ ಟಿ. ಎಂ. ಗಂಗಾಧರಶಾಸ್ತ್ರಿಗಳವರನ್ನೂ ಕೊರಟಗೆರೆ ಟೌನ್‌ನಲ್ಲಿರುವ ರಿಟೈರ್ಡ್ ಸ್ಕೂಲ್ ಹೆಡ್ಮಾಸ್ಟರ್ ಮ|| ರಾ|| ಶ್ರೀ. ಬಿ. ಚನ್ನಮಲ್ಲಪ್ಪನವರನ್ನೂ ಗುಡಿಬಂಡೆ ಪಟೇಲ್ ಮ|| ಚಿಕ್ಕಮಲ್ಲೇಗೌಡರು, ಚನ್ನಬಸವೇಗೌಡರು, ಕೇಶಾತಿ ಗ್ರಾಮದ ಮ|| ಮುಂಡೇಗೌಡರು, ಜಂಬಲ್‌ಬಂಡೆ ಮ|| ರುದ್ರೇಗೌಡರು, ಮ|| ಗುದ್ದದಹಳ್ಳಿ ಹನುಮಂತಪ್ಪನವರು ಇವರೇ ಮುಂತಾದ ಸಮಸ್ತವೀರಶೈವ ಪ್ರಮುಖರನ್ನೂ ಪರಸ್ಥಳದಿಂದ ಅನೇಕ ಗಣಾಧೀಶ್ವರರನ್ನೂ ಬರಮಾಡಿಕೊಂಡು ಈ ಭಾವನಾಮ ಸಂ|| ದ ವೈಶಾಖ|| ಶುದ್ಧ ೩ ಗೆ (16-5-1934) ಬುಧವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರವರ ಜಯಂತಿ ಹಬ್ಬವನ್ನು ನಡೆಯಿಸಿದರು. ಆ ದಿನ ರೇಣುಕವಿಜಯ ಪುರಾಣವನ್ನು ಶಿವಪುರಾಣಿಕರೂ ಮತ್ತು ಶಿವಕಥಾ ಸಂಕೀರ್ತನಕಾರರೂ ಆದ ಮ|| ಬಿ. ಚನ್ನಮಲ್ಲಪ್ಪನವರಿಂದ ಹೃದಯಂಗಮವಾಗಿ ಶ್ರವಣಮಾಡಿಸಿದರು. ಶುದ್ಧ ೪ ಗುರುವಾರ (17-5-34) ದಿವಸ ಹಗಲು ಪಂಚಾಚಾರ್ಯರ ಭಜನಾ ಮತ್ತು ಪುರಾಣ ಮತ್ತು ಗಣಸಂತರ್ಪಣಾದಿಗಳು ನಡೆದ ನಂತರ ಪುಷ್ಪಗಂಧ ತಾಂಬೂಲಾದಿಗಳಿಂದ ಎಲ್ಲಾ ಜನಗಳನ್ನೂ ತೃಪ್ತಿಪಡಿಸಿದರು. ರಾತ್ರಿ ಶಿವಕಥೆಯು ನಡೆಸಲ್ಪಟ್ಟಿತು. ಶು|| ೫ ಶುಕ್ರವಾರ (18-5-34) ದಿವಸ ಏಕಾದಶವಾರ ರುದ್ರಾಭಿಷೇಕವನ್ನು ಟಿ. ಎಂ. ಗಂಗಾಧರಶಾಸ್ತ್ರಿಗಳಿಂದ ಸಾಂಗೋಸಾಂಗವಾಗಿ ನಡೆಯಿಸಿ ದಾರುಕ ಜಯಂತಿಯನ್ನು ನೆರವೇರಿಸಿದರು. ರಾತ್ರಿ ೧|| ಹೆ|| ಮಾ|| ಮ|| ಬಿ. ಚನ್ನಮಲ್ಲಪ್ಪನವರಿಂದ ಶಿವಕಥಾಸಂಕೀರ್ತನೆಯು ನಡೆಸಲ್ಪಟ್ಟಿತು. ಶುದ್ಧ|| ೬ ಶನಿವಾರ ಶ್ರೀ|| ಟಿ. ಎಂ. ಗಂಗಾಧರಶಾಸ್ತ್ರಿಗಳಿಂದ ನವಗ್ರಹಪೂಜೆಯು ನೆರವೇರಿಸಲ್ಪಟ್ಟಿತು. ಗುರುಲಿಂಗಜಂಗಮಾದಿಗಳಿಗೆ ದಾನಧರ್ಮಗಳು ನಡೆಸಲ್ಪಟ್ಟವು. ಹಗಲು ಪಂಚಾಚಾರ್ಯ ಭಜನೆಯು ಮಾಡಲ್ಪಟ್ಟಿತು. 1000 ಜನಗಳಿಗೆ ಮೇಲ್ಪಟ್ಟು ಅನ್ನದಾನವು ಮಾಡಲ್ಪಟ್ಟಿತು. ಆ ದಿನ ರಾತ್ರಿ ಶ್ರೀಜಗದ್ಗುರು ಪಂಚಾಚಾರ್ಯರ ಭಾವಚಿತ್ರವನ್ನು ನಂದಿಧ್ವಜ ವಾದ್ಯವೈಭವಗಳಿಂದ ಪುರದಲ್ಲಿ ಉತ್ಸವ ಮಾಡಿಸಿದರು. ಆ ಸಮಯದಲ್ಲಿ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ ಮ|| ಪಟೇಲ್ ಭೋಜೇಗೌಡರವರು ಭಕ್ತಿಪೂರ್ವಕವಾಗಿ 2-0-0 ರೂಪಾಯಿಗಳನ್ನು ಸಮರ್ಪಿಸಿದರು. ಎಲ್ಲಾ ಭಕ್ತಮಹೇಶ್ವರರೂ ಬಂಧುಮಿತ್ರಾದಿಗಳೂ ಇವರು ಏರ್ಪಡಿಸಿದ್ದ ಸಮಾರಂಭ-ಪುರಾಣ ಶಿವಕೀರ್ತನಾದಿಗಳನ್ನು ನೋಡಿ ನೇತ್ರಾನಂದವನ್ನೂ ಕರ್ಣಾನಂದವನ್ನೂ ಹೊಂದಿದರು. 19-5-34 ರ ಸಾಯಂಕಾಲ ೦|| ಸ್ಕೂಲ್|| ಹೆ|| ಮ|| ಚನ್ನಮಲ್ಲಪ್ಪನವರು ಗುರುಕರುಣಾಪ್ರಭಾವ ಮತ್ತು ಧರ್ಮ 2 ಲಿಂಗಾಂಗಸಾಮರಸ್ಯ ಇವುಗಳ ವಿಚಾರದಲ್ಲಿ ಹೃದಯಂಗಮವಾಗುವಂತೆ ಸ್ವಾರಸ್ಯವಾದ ಬೋಧೆಯನ್ನು ಮಾಡಿದರು.

ಈ ಕಾರ್ಯಗಳನ್ನು ಸಾಂಗಗೊಳಿಸಲು ಮ|| ಪಟೇಲ್ ಭೋಜೇಗೌಡರವರ ಅಳಿಯಂದಿರಾದ ಮ|| ನಂಜೇಗೌಡರವರು ಅಧ್ಯಕ್ಷರಾಗಿನಿಂತು ಕಾರ್ಯಗಳನ್ನು ನೆರವೇರಿಸಿ ಎಲ್ಲಾ ಬಂಧುವರ್ಗ ಮೊದಲಾದವರನ್ನೂ ಸಂತೋಷಸಾಗರದಲ್ಲಿ ಮುಳುಗಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯರು ಮ|| ಪಟೇಲ್ ಭೋಜೇಗೌಡರವರಿಗೂ ಇವರ ಕುಟುಂಬವರ್ಗಕ್ಕೂ ಪುತ್ರಪೌತ್ರ ಧನಕನಕಾಭಿವೃದ್ಧಿಯನ್ನು ದಯಪಾಲಿಸುತ್ತ ಮೋಕ್ಷಸಾಮ್ರಾಜ್ಯವನ್ನೀಯಲೆಂದು ಪ್ರಾರ್ಥಿಸುವ,

ಟಿ. ಎಂ. ಗಂಗಾಧರಶಾಸ್ತ್ರಿ,
ಜಂಬಲಬಂಡೆ.

ಕರ್ಣಾಟಕಸಾಹಿತ್ಯಪರಿಷತ್ತು.

ಕರ್ಣಾಟಕಸಾಹಿತ್ಯಪರಿಷತ್ತು ಕೈಕೊಂಡಿದ್ದ ಆಧುನಿಕವಿಚಾರೋಪನ್ಯಾಸಗಳು ಮತ್ತು ಕನ್ನಡ ಗ್ರಂಥಪ್ರದರ್ಶನ ಎಂಬ ಎರಡು ಸಮಾರಂಭಗಳು, ಮಹಾಜನಗಳ ಪ್ರೋತ್ಸಾಹಸಹಕಾರಗಳಿಂದ ಯಶಸ್ವಿಯಾಗಿ ನಡೆದುವೆಂದು ತಿಳಿಸಲು ಸಂತೋಷಿಸುತ್ತೇನೆ. ಇದಕ್ಕಾಗಿ ಎಲ್ಲರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ಗ್ರಂಥಪ್ರದರ್ಶನಕ್ಕಾಗಿ ಕಳುಹಿಸಿದ ಕೆಲವು ಗ್ರಂಥಗಳನ್ನು ಗ್ರಂಥಕರ್ತರು ಮತ್ತು ಪ್ರಕಾಶಕರು ಪರಿಷತ್ತಿನ ಸರಸ್ವತೀ ಭಂಡಾರಕ್ಕೆ ಉಚಿತವಾಗಿ ಕೊಟ್ಟು ಉಪಕಾರಮಾಡಿದ್ದಾರೆ. ಭಂಡಾರಕ್ಕೆ ಸೇರಿಸಿಕೊಳ್ಳಬಹುದೆಂಬುದಾಗಿ ಈಗಲೂ ಪತ್ರಗಳು ಪರಿಷತ್ತಿಗೆ ಬರುತ್ತಿವೆ. ಇವರಿಗೆಲ್ಲ ಪರಿಷತ್ತು ಕೃತಜ್ಞತೆಯನ್ನು ಸೂಚಿಸುತ್ತದೆ. ಉಚಿತವಾಗಿ ದೊರೆತಿರುವ ಗ್ರಂಥಗಳನ್ನೂ, ಮಾರಾಟವಾಗಿರುವ ಗ್ರಂಥಗಳನ್ನೂ ಸರಸ್ವತೀಭಂಡಾರಕ್ಕೆ ಸೇರಿಸಿಕೊಳ್ಳಬೇಕಾದ ಗ್ರಂಥಗಳನ್ನೂ ವಿಂಗಡಿಸುವ ಕೆಲಸವು ಆರಂಭವಾಗಿದೆ. ಇನ್ನು ಕೆಲವು ದಿನಗಳೊಳಗಾಗಿ ಮಾರಾಟದಿಂದ ಬಂದ ಹಣವನ್ನೂ ಉಳಿದ ಪುಸ್ತಕಗಳನ್ನೂ ಹಿಂದಕ್ಕೆ ಕಳುಹಿಸಿಕೊಡುತ್ತೇವೆ.

ಕರ್ಣಾಟಕಸಾಹಿತ್ಯಪರಿಷತ್ತಿನ ಪುಸ್ತಕಭಂಡಾರದಲ್ಲಿ ಕನ್ನಡದ ಪ್ರತಿಯೊಂದು ಗ್ರಂಥವೂ ಇರಬೇಕಾದುದು ಆವಶ್ಯಕ. ಭಾಷಾಸಾಹಿತ್ಯಗಳ ಬೆಳವಣಿಗೆಯನ್ನು ಶೋಧಿಸಿ ತಿಳಿಯತಕ್ಕ ವಿದ್ವಾಂಸರಿಗೆ ಅನುಕೂಲ್ಯಗಳನ್ನು ಒದಗಿಸಿಕೊಡಬೇಕೆಂಬುದಾಗಿ ಪರಿಷತ್ತು ಆಲೋಚಿಸುತ್ತಿದೆ. ಈ ಆಲೋಚನೆ ಕಾರ್ಯರೂಪಕ್ಕೆ ಬಂದು ಫಲಕಾರಿಯಾಗಬೇಕಾದರೆ ಪುಸ್ತಕಭಂಡಾರದಲ್ಲಿ ಎಲ್ಲ ಪುಸ್ತಕಗಳೂ ಇದ್ದೇ ಇರಬೇಕು. ಪರಿಷತ್ತಿನ ಆರ್ಥಿಕಸ್ಥಿತಿ ಉತ್ತಮವಾಗಿಲ್ಲವೆಂಬುದು ಮಹಾಜನಗಳಿಗೆಲ್ಲ ತಿಳಿದವಿಷಯ. ಇಂತಹ ಸಂದರ್ಭದಲ್ಲಿ ಪುಸ್ತಕಗಳನ್ನು ಶೇಖರಿಸಬೇಕಾದರೆ ಗ್ರಂಥಕರ್ತರ ಮತ್ತು ಪ್ರಕಾಶಕರ ಸಹಾಯವು ಅತ್ಯಾವಶ್ಯಕವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪರಿಷತ್ತು ಇಂತಹ ಸಹಾಯಗಳನ್ನು ಬಹಳ ಕೃತಜ್ಞತೆಯಿಂದ ಅಂಗೀಕರಿಸಿ, ಉಪಕಾರಮಾಡಿದವರ ಹೆಸರುಗಳನ್ನು ಪುಸ್ತಕಭಂಡಾರದಲ್ಲಿ ಇಡುವ ಏರ್ಪಾಟನ್ನು ಮಾಡುತ್ತದೆ. ಪುಸ್ತಕಗಳನ್ನು ಉಚಿತವಾಗಿ ಕೊಡಲಾಗದವರು ಧಾರಾಳವಾದ ರಿಯಾಯಿತಿಯನ್ನು ತೋರಿಸಿದರೂ ಬಹಳಉಪಕಾರವಾಗುತ್ತದೆ. ಕರ್ಣಾಟಕಸಾಹಿತ್ಯಪರಿಷತ್ತನ್ನು ಬೆಳೆಸಿಕೊಂಡು ಬರುವುದು ಎಲ್ಲ ಕನ್ನಡಿಗರ ಕರ್ತವ್ಯವೇ ಆಗಿರುವುದರಿಂದ ಹೆಚ್ಚು ಬರೆಯಲಾವಶ್ಯಕವಿಲ್ಲವೆಂದು ತಿಳಿಯುತ್ತೇನೆ.

ಎಂ. ಆರ್. ಶ್ರೀನಿವಾಸಮೂರ್ತಿ,
ವ್ಯವಸ್ಥಾಪಕ.

ಶ್ರೀಮಜ್ಜಗದ್ಗುರು ಶ್ರೀಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಪಟ್ಟಾಧ್ಯಕ್ಷ ಮಹಾಸ್ವಾಮಿನಾಂ ಸನ್ನಿಧಿಸರ್ವಾಧಿಕಾರಿ ಗಳವರ ಆಫೀಸಿನಿಂದ

No S. P./34.

ಮೈಸೂರು, ಮದ್ರಾಸ್, ಬೊಂಬಾಯಿ ನೈಜಾಂ ವಗೈರೆ ಇಲಾಖಾ ಜಿಲ್ಲಾ ತಾಲ್ಲೂಕುವಾರು ಗ್ರಾಮಗಳ ವೀರಶೈವ ಮಂಡಲಿಯವರಿಗೂ, ವೀರಶೈವ ಸಮಾಜದ ಅನುಯಾಯಿಗಳಿಗೂ ಸಹ ಇದರಿಂದ ಪ್ರಕಟಗೊಳಿಸುವದೇನೆಂದರೆ—

ಚಿತ್ರದುರ್ಗ ಡಿಸ್ಟ್ರಿಕ್ಟ್ ತಾಲ್ಲೂಕು ತುರುವನೂರು ಸಮ್ಮತು, ಕೊನ್‌ಚೇವು ಗ್ರಾಮದ, ಬಿ. ಎಂ. ವೀರಭದ್ರಯ್ಯ ಇವರ ಸಹೋದರ ಚನ್ನಬಸಯ್ಯ ಎಂಬವರು ಈ ಅಧಿಕಾರಸ್ಥಾನದಿಂದ 1932ನೇ ಇಸ್ವಿ ಜನವರಿ ಮಾಹೆಯಲ್ಲಿ ಈ ಪೀಠದ ಹೆಸರಿನಿಸಿ ಬಹುದೂರ ಪ್ರಾಂತ್ಯ ಸಂಚರಿಸುವ, ಅಧಿಕಾರಿಗಳ ಅವತಾರ ಕ್ರಮನಿಕಿಗಳನ್ನು ದೇಶಮಧ್ಯೆ ಸಮಾಜದವರಿಗೆ ವಿಸ್ತರಿಸಿ ಸೂಚಿಸುವದರ ಮೂಲಕ ಯಾರೂ ಮೋಸಹೋಗದಂತೆ, ಜಾಗರೂಕರಾಗಿರುವಂತೆ ಮಾಡತಕ್ಕ ಬಗ್ಗೆ ನೈಜಾಂಸ್ಟೇಟ್ ನಾಂದೇಡುಜಿಲ್ಲಾಕ್ಕೆ ಒಂದು ಟೆಂಪರರಿ ಹುಕುಂ ಮಾಡಿತ್ತು. ಸದರಿಯವರು ಹುಕುಂ ಮೇರೆ ಆಚರಿಸದೆಯೂ, ತಮ್ಮ ಸಂಚಾರ ಕಾರ್ಯಗಳ, ಮಾಹೇವಾರಿ ರಿಪೋರ್ಟುವಗೈರೆ ಕಳುಹಿಸದೆ ಮನಸ್ವಿ ಸಂಚಾರಕರಾಗಿರುವರೆಂದು ತಿಳಿದು ಸದರಿ ಹುಕುಂ ರದ್ದುಪಡಿಸಿದೆ. ಸದರಿಯವರಿಗೆ, ರಿಜಿಸ್ಟ್ರ್ ನೋಟೀಸ್ ಮಾಡಿದ್ದಾಗ್ಯೂ—

ಈಗ ಹೈದರಾಬಾದು (ನೈಜಾಂ) ಸ್ಟೇಟಿಗೆ 40 ಮೈಲ್ ದೂರದಲ್ಲಿರುವ ಮೆದುಗು ಜಿಲ್ಲಾ ಕಲ್ಲಿಗುರು ತಾಲೂಕು ಸದಾಶಿವಪೇಟೆ, ವಗೈರೆ ಗ್ರಾಮಾಂತರಗಳಲ್ಲಿ ಈ ಪೀಠದ ಹೆಸರಿನಿಂದ ಕಾಣಿಕೆವಗೈರೆ ಬೇಜವಾಬುರೀತಿಯಿಂದ ವಸೂಲ್ಮಾಡುತ್ತಾರಾಗಿ ಅಂಕಿತವಾಗಿರುತ್ತದೆ.

ಸದರಿಯವರು ಈ ಪ್ರಸಿದ್ಧಪತ್ರಿಕೆ ಪ್ರಕಟನೆ ಆದ 2 ವಾರದಾಯ್ದೆಯಲ್ಲಿ ಏಜಂಟರವರ ಆಫೀಸ್ ರೂಬರೂಬು ಹಾಜರಾಗಿ ತಮ್ಮಲ್ಲಿರುವ ಸರ್ಟಿಫಿಕೇಟು ವಗೈರೆ ಒಪ್ಪಿಸಬೇಕು.

ತಪ್ಪಿ ಮನಸ್ವಿ ಸಂಚಾರಕರಾದರೆ ಈ ಪೀಠದ ಹೆಸರಿನ ಮೇಲೆ ಗೈರ್ ಸಮಜೂತು ಯಾವ ನಡವಳಿಕೆ ನಡಸದಂತೆ, ಕ್ರಮಜರುಗಿಸಲು ನೈಜಾಂ ವಗೈರೆ ಸ್ಟೇಟ್ ಜಿಲ್ಲಾಗಳ ಅವ್ವಲ್ ತಾಲ್ಲೂಕುದಾರ್ (ಕಲೆಕ್ಟರ್) ಸಾಹೇಬರವರಿಗೆ ಯಾದಾಸ್ತು ಬರೆಸಲಾಗುತ್ತೆಂದು ಸಂಸ್ಥಾನದಿಂದ, 2 ನೇ ಹುಕ್ಕುಂ ಸಾದರಾಗುವತನಕ ಸದರಿಯವರ ನಡವಳಿಕೆ ವಿಚಾರದಲ್ಲಿ ಆ ಪ್ರಾಂತ್ಯ ಸಮಾಜದವರು ನಿಗಾಇಟ್ಟು ಗಂತಕಲ್ ಮೊಕ್ಕಾಂ ದರ್ಜಾಗಾ ಸಂಸ್ಥಾನಕ್ಕೆ ಬಿನ್ನೈಸಿಕೊಳ್ಳಬೇಕೆಂದು ಸಂಸ್ಥಾನ ಅಪ್ಪಣೆ ಆಗಿರುತ್ತೆ.

(Sd.) R. C. Aradhyaswamy
Hiremutt.
ಶ್ರೀಶೈಲಪಟ್ಟಸಂಸ್ಥಾನ ಸರ್ವಾಧಿಕಾರಿ.

ಸನಾತನಧರ್ಮಾನುಯಾಯಿಗಳಲ್ಲಿ ಸವಿನಯಸೂಚನೆ.

ಬೆಳಗಾಂವ ಜಿಲ್ಲಾ ಸವದತ್ತಿ ತಾಲೂಕ ಮೈಕಿ ಉಗರಗೊಳ್ಳದ ಶ್ರೀಮಂತರೂ, ಪಾಟೀಲರೂ, ಬೆಳಗಾಂವ ಕೊ-ಆ-ಸೊ. ದಾಯರೆಕ್ಟರರೂ, ಲೋ-ಬೋ ಸಭಾಸದರೂ, ಶ್ರೀಯಲ್ಲಮ್ಮ ದೇವಿಯ ಅರ್ಚಕರೂ, ಸದಾಚಾರಸಂಪನ್ನರೂ ಆದ ಶ್ರೀಯುತ ಗೋವಿಂದಗೌಡರ ಸಹೋದರರಾದ ಪರಸನಗೌಡರ ಸತ್ಪುತ್ರ ಗುರಪ್ಪಗೌಡ ಎಂಬ ಸಣ್ಣ ಶಿಶುವಿಗೆ ಏಕಾಏಕಿ ಮೈಯ್ಯಲ್ಲಿ ರೋಗವು ಉತ್ಪನ್ನವಾಗಲು ಈ ರೋಗದ ಚಿಕಿತ್ಸೆಗೋಸುಗ ಅನೇಕ ಜನ ಡಾಕ್ಟರು ಪ್ರಯತ್ನಪಟ್ಟರು. ಆದರೂ ರೋಗವು ವಾಸಿಯಾಗದಿರಲು ಹೂಲಿ ಬೃಹನ್ಮಠದ ಸಿದ್ಧಾಂತಿಗಳಿಂದ ಈ ರೋಗದ ಗುಣವನ್ನು ತಿಳಿದುಕೊಂಡು ಅವರ ಹೇಳಿಕೆಯ ಪ್ರಕಾರ ಮೃತ್ಯುಂಜಯ ಮಹಾಮಂತ್ರದ ಜಪವನ್ನು ಪ್ರಾರಂಭಿಸಲು ಶಿಶುವಿನ ರೋಗವು ದಿನೇದಿನೇ ಕ್ಷೀಣತ್ವವನ್ನು ಹೊಂದಿ ಪೂರ್ಣಗುಣಕಾರಿಯಾಯಿತು. ಆ ಮೇಲೆ ಶ್ರೀಯುತ ಗೌಡರು ಹೂಲಿ ಪಂಚವಣ್ಣಿಗಿಯ ಬೃಹನ್ಮಠದ ಶ್ರೀಸಿದ್ಧನಂಜೇಶ್ವರನ ಗದ್ದುಗೆಗೂ ಶ್ರೀಯಲ್ಲಮ್ಮನ ಕ್ಷೇತ್ರದಲ್ಲಿರುವ ಶ್ರೀಮಲ್ಲಿಕಾರ್ಜುನ ದೇವರಿಗೂ ಶ್ರೀರುದ್ರಾಭಿಷೇಕವನ್ನೂ, ಸಹಸ್ರದಲ ಬಿಲ್ವಾರ್ಚನೆಯನ್ನೂ, ಎಲ್ಲಮ್ಮ ದೇವಿಗೆ ಕುಂಕುಮಾರ್ಚನೆಯನ್ನೂ, ಹೂಲಿಯ ಧರ್ಮಾರ್ಥ ಜ್ಯೋತಿಷ್ಯ ವೈದಿಕ ಪಾಠಶಾಲೆಯ ವಿದ್ಯಾರ್ಥಿಗಳವರಿಂದ ವಿಧಾನೋಕ್ತವಾಗಿ ಮಾಡಿಸಿ ತಮ್ಮ ಶಕ್ತ್ಯನುಸಾರ ಅನ್ನಸಂತರ್ಪಣೆಯನ್ನು ಮಾಡಿಸಿದರು. ಎಲ್ಲರೂ ಇದನ್ನು ನೋಡಿ ಗುರುಮಹಿಮೆಯನ್ನು ಕೊಂಡಾಡಿದರು. ಅಸ್ತು!

ಈಗಿನ ನವೀನ ನಾಸ್ತಿಕ ಪಂಗಡದವರಾದ ಗಾಂಧಿ ಭಕ್ತರು ಮೊನ್ನೆ ಗಾಂಧಿಯವರು ಬಂದಾಗ್ಗೆ ಇವರನ್ನು ಪವಿತ್ರವಾದ ರೇಣುಕಾದೇವಿಯ ದೇವಸ್ಥಾನದಲ್ಲಿ ಪ್ರವೇಶಮಾಡಿಸಿ, ಅಸ್ಪೃಶ್ಯರ ಪ್ರವೇಶವಾಯಿತೆಂದು ಸುಳ್ಳುಸುದ್ದಿಯನ್ನು ಬೀರುವ ವರ್ತಮಾನಪತ್ರಗಳಲ್ಲಿ ಪ್ರಕಟಿಸುವರೆಂಬ ಒಳಸಂಚಿನ ವಾರ್ತೆಯನ್ನು ಜನರು ತಿಳಿದು ಕೋಲಾಹಲವನ್ನೆಬ್ಬಿಸಿದರು. ಗಾಂಧಿಪೂಜಾರಿಗಳು ಇದನ್ನು ತಿಳಿದುಕೊಂಡು ಗಾಂಧಿಯವರನ್ನು ಮುಂದಕ್ಕೆ ಪ್ರಯಾಣಮಾಡಿಸಿದರು. ಈ ಬಗ್ಗೆ ಸವದತ್ತಿ ಯಲ್ಲಮ್ಮದೇವಿಯ ಮುನಸಿಪಾಲಿಟಿಯವರೂ ತಾಲೂಕ ಲೋ-ಬೋ ಸಭಾಸದರೂ ಅನಾದರವನ್ನು ತೋರಿಸಿದರು. ಸನಾತನ ಧರ್ಮಾನುಯಾಯಿಗಳು ಗುರುಭಕ್ತಿಯುಕ್ತರಾಗಿ ತಮ್ಮ ಸನಾತನ ಧರ್ಮವನ್ನು ಕಾಪಾಡಿಕೊಳ್ಳಬೇಕೆಂದು ಕೋರಿಕೆ.

ಸಿದ್ದಪ್ಪ ಹೂಗಾರ.

ಮುಸ್ಸೋಲಿನಿಯವರ ನ್ಯಾಯವಿಮರ್ಶೆ!

ಒಬ್ಬಾನೊಬ್ಬ ಇಂಗ್ಲೀಷ್ ಸ್ತ್ರೀಯು 'ರೋಂ' ನಗರಕ್ಕೆ ಹೋಗಿದ್ದು ಅಲ್ಲಿಯ ಒಬ್ಬ ವ್ಯಾಪಾರಿಯಲ್ಲಿ 35 ಪೌಂಡುಗಳಿಗೆ ಒಂದು ಗಡಿಯಾರವನ್ನು ಕೊಂಡುಕೊಂಡಳು. ಗಡಿಯಾರವು ನೋಡುವುದಕ್ಕೆ ಬಹಳ ಸುಂದರವಾಗಿದ್ದು, ಆಕೆಯು ಲಂಡನ್ನಿಗೆ ಹಿಂತಿರುಗಿದ ನಂತರ, ಅದನ್ನು ತನ್ನ ಮಿತ್ರರಿಗೆಲ್ಲಾ ತೋರಿಸಿದಳು. ಒಬ್ಬ ವರ್ತಕನು ಅದನ್ನು ಚೆನ್ನಾಗಿ ಪರೀಕ್ಷಿಸಿ, ಗಡಿಯಾರವು ಬಹಳ ಸಾಧಾರಣ ತರಹದ್ದೆಂದೂ, ಅದರ ಬೆಲೆಯು 1 ಪೌಂಡಿಗಿಂತಲೂ ಹೆಚ್ಚಾಗುವುದಿಲ್ಲವೆಂದೂ ಹೇಳಿದನು. ಇದರಿಂದ ಆಕೆಗೆ ಬಹಳ ಕೋಪವುಂಟಾಗಿ ಏನು ಮಾಡುವುದಕ್ಕೂ ತೋಚದೆ ಕಡೆಗೆ ಇಟಲಿಯ ಸರ್ವಾಧಿಕಾರಿಗಳಾದ ಮುಸ್ಸೋಲಿನಿಯವರಿಗೆ ಇಟಲಿಯ ಜನರು ಇಂಥ ಮೋಸಗಾರರೆಂದು ತಾನೆಂದೂ ಭಾವಿಸಿರಲಿಲ್ಲವೆಂದು ಒಂದು ದೀರ್ಘವಾದ ಪತ್ರವನ್ನು ಬರೆದಳು. 15 ದಿವಸಗಳೊಳಗಾಗಿ ಅದಕ್ಕೆ ಉತ್ತರವು ಬಂದಿತು. ಅದರಲ್ಲಿ ಮುಸ್ಸೋಲಿನಿಯವರು, ವರ್ತಕನು ಮಾಡಿದ ಮೋಸಕ್ಕಾಗಿ ತಾವು ಕ್ಷಮಾಪಣೆಯನ್ನು ಕೇಳುವೆನೆಂದೂ, ಆದರೆ ಒಬ್ಬನ ತಪ್ಪಿಗೋಸ್ಕರ ಇಟಲಿ ದೇಶದ ಜನರೆಲ್ಲರನ್ನು ದೂಷಿಸುವುದು ತಪ್ಪೆಂದೂ ಬರೆದು 35 ಪೌಂಡುಗಳ ಚೆಕ್ಕನ್ನು ಜತೆಯಲ್ಲಿಟ್ಟಿದ್ದರು. 15 ದಿನಗಳು ಕಳೆಯುವದರೊಳಗಾಗಿ 'ರೋಂ' ನಗರದಿಂದ ಆಕೆಗೆ ಮತ್ತೊಂದು ಪತ್ರವು ಬಂದಿತು. ಅದರಲ್ಲಿ ಆಕೆಗೆ ಮೋಸಮಾಡಿದ ವರ್ತಕನು, ತಾನು ಮಾಡಿದ್ದ ಮೋಸಕ್ಕೆ ಪ್ರತಿಯಾಗಿ ಸರಕಾರದವರು ತನ್ನ ಅಂಗಡಿಯನ್ನು ಮುಚ್ಚಿಸಿ, ಜುಲ್ಮಾನೆಯನ್ನು ವಿಧಿಸಿದುದಲ್ಲದೆ, 6 ತಿಂಗಳ ಕಾರಾಶಿಕ್ಷೆಯನ್ನು ವಿಧಿಸಿರುವರೆಂದು ಬರೆದಿದ್ದನು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 29

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 36

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. 8, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದೇಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (12)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾಕ್ಕೆ
ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಪಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, ½ ಡಜ಼ನ್ 8-8-0 ಮತ್ತು ರೂ. 5

ರ್ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವಸೋವು, ಗಂಟುನೋವು ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಚಜ್ಜದವ ಕಡಿತ, ಗಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಚುಮದ್ದುಗಳು, ಹೋಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ಹುಳಮೇಯುವ ರೋಗ, ದದ್ದು, ತುರಿಸುವ ನಂಜೆ ಹುಣ್ಣುಗಳನ್ನು ಶೀಘ್ರ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಆಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ಮಾರ್ಪಟ್ಟು ಮೊದಲು ಕಾಯಗಳು ನಿಸ್ತೇಜವಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪು-ಸಾಲಿಸವನ** ಆತ್ಮಸಂರಕ್ಷಕನಂತೆಯೇ ಯುವಕನಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,
[38] (ಹಂಪನಕಟ್ಟೆ), 21, ಮಂಗಳೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚ ಪೀಠಾರೋಹಣಮಾಡಿದಕಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯುಳ್ಳಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಬಹು ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು. [20]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೩ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ವೀರಶೈವಮತಪರಾಮಾಂಸಾ	೬ ಆಣೆ
ಶಿವಶಕ್ತಿವಿಲಾಸ	೩ ಆಣೆ
ಶ್ರೀಗುರುತತ್ವಪದಗಳು	೩ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೬ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೬ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೩ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೩ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೩ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೩ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ನೇ ಜೂನ್ ೧೯೩೪ [ಸಂಚಿಕೆ ೩

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಅಮಂಗಲವಿಚಾರವಿಮರ್ಶೆ.

—

ವಿಮರ್ಶಕ—ಎಸ್. ಎಚ್. ಪಂಚಾಕ್ಷರಶರ್ಮಾ.

(ಹಿಂದಿನಿಂದ ಮುಂದೆಸಾಗಿದುದು.)

ಮಹಾಮೇಧಾವಿಗಳಾದ ಕರ್ಲಮಂಗಲಂರವರು "ಧರ್ಮಯುದ್ಧಗಳಿಗೆ ಪುರಾಣಗಳೂ ಇದರಿಂದಿತ್ತೀಚೆಯ ಆಗಮಗಳೂ ಕಾರಣವಾದವು. ಈ ಕಾಲದಲ್ಲಿಯೇ ಪಂಥಗಳೂ ಆ ಪಂಥಗಳನ್ನು ಸ್ಥಾಪಿಸಿದವರೂ ಹೆಸರಾದವರು. ಈ ಕಾಲದ ಶೈವವೈಷ್ಣವಾಚಾರ್ಯರ ಹೆಸರು ಇತಿಹಾಸದಲ್ಲಿ ಸಿಕ್ಕುವುದಿಲ್ಲ." ಎಂದು ಬರೆದಿರುತ್ತಾರೆ. ಆಗಮಗಳು ಪುರಾಣಗಳಿಗಿಂತ ಇತ್ತೀಚಿನವೆಂದು ಬರೆದಿರುವ ಇವರ ಬುದ್ಧಿಯು ಜೇರಿಗೆಯಂತೆ ಬಹು ಸೂಕ್ಷ್ಮವಿರಬಹುದೆಂದು ತೋರುತ್ತದೆ. ವ್ಯಾಸಮಹರ್ಷಿಯು ತನ್ನ ಪುರಾಣಗಳಲ್ಲಿ ಆಗಮಗಳ ವಿಷಯವನ್ನು ಅನೇಕಕಡೆಗೆ ಪ್ರತಿಪಾದಿಸಿದ್ದಾನೆ. ಲಿಂಗಪುರಾಣಮೊದಲಾದವುಗಳಲ್ಲಿ ಆಗಮಗಳ ಸಾರವನ್ನೇ ಸಂಗ್ರಹಿಸಿ ಶ್ಲೋಕರೂಪವಾಗಿ ಬರೆದಿದ್ದಾನೆ. ಇದನ್ನೆಲ್ಲಾ ಕೂಲಂಕಷವಾಗಿ ವಿಚಾರಮಾಡಿನೋಡದೆ ಹುಚ್ಚರಂತೆ ಬರೆಯುವುದು ಹೇಯವೂ ನಿಂದ್ಯವೂ ಆಗಿದೆ. ಶಾಸ್ತ್ರಕಾರರು ವೇದಗಳಿಗೆ ಅನಾದಿತ್ವವನ್ನು ಒಪ್ಪಿಕೊಂಡಿರುವಂತೆ ಆಗಮಗಳಿಗೂ ಅನಾದಿತ್ವವನ್ನು ಒಪ್ಪಿಕೊಂಡಿರುವರು. ವೇದಗಳೂ ಆಗಮಗಳೂ ಸಮಾನಯೋಗ್ಯತೆಯುಳ್ಳವುಗಳೆಂದೂ, ಇವೆರಡೂ ಸಾಕ್ಷಾತ್ ಶಿವನಿಂದ ಹೇಳಲ್ಪಟ್ಟವುಗಳೆಂದೂ ನೀಲಕಂಠಶಿವಾಚಾರ್ಯರು ಕ್ರಿಯಾಸಾರದಲ್ಲಿ ಈ ರೀತಿಯಾಗಿ ಹೇಳಿರುವರು.

> ಪರಸ್ಪರಾವಿರುದ್ಧಾರ್ಥಾಃ ಶಿವೋಕ್ತಾ ನಿಗಮಾಗಮಾಃ |
> ಅಲ್ಪಬುದ್ಧಿಭಿರನ್ಯೋನ್ಯಂ ವಿರೋಧಃ ಪರಿಕಲ್ಪ್ಯತೇ ||

ಶಿವನಿಂದ ಹೇಳಲ್ಪಟ್ಟ ವೇದಾಗಮಗಳು ಪರಸ್ಪರವಾಗಿ ಅವಿರುದ್ಧಾರ್ಥವುಳ್ಳವುಗಳೆಂದೂ, ಇವುಗಳ ರಹಸ್ಯವನ್ನು ತಿಳಿಯದ ಮಂದಮತಿಗಳು ಇವುಗಳಿಗೆ ಪರಸ್ಪರ ವಿರೋಧವನ್ನು ಕಲ್ಪಿಸುವರೆಂದೂ ಈ ಶ್ಲೋಕದ ತಾತ್ಪರ್ಯವು. ಕರ್ಲಮಂಗಲಂರವರು ಈ ಶ್ಲೋಕಾರ್ಥವನ್ನು ಪುನಃ ಪುನಃ ಪುನಃ ಪುನಃ ತಿಳಿದುಕೊಂಡು ಆಸ್ತಿಕಧರ್ಮವಿರೋಧವಾದ ತಮ್ಮ ವಕ್ರಮಾರ್ಗವನ್ನು ಬಿಟ್ಟು ಸನ್ಮಾರ್ಗದಲ್ಲಿ ಪ್ರವೇಶಿಸಿ ಶಿವನ ಕೃಪೆಗೆ ಪಾತ್ರರಾಗಬೇಕೆಂದು ಬಯಸುತ್ತೇನೆ. ಇವರು ತಾವು ಕೈಕೊಂಡಿರುವ ಅಮಂಗಲಕಾರ್ಯವನ್ನು ಸಾಧಿಸುವುದಕ್ಕೋಸ್ಕರ ಶಿವೋಕ್ತಗ್ರಂಥಗಳಿಗೆ ಬರೆ ಎಳೆಯಲು ಪ್ರಯತ್ನಿಸಿರುವುದು ಅತ್ಯಂತ ಹೇಯಕಾರ್ಯವಾಗಿದೆ. ಅಹಾ! ಮತಾಚಾರ್ಯರ ಮೇಲಿನ ದ್ವೇಷವು ಮಾಡಬಾರದ ಕಾರ್ಯಗಳನ್ನು ಮಾಡಿಸಲು ಹಚ್ಚಿರುವುವಲ್ಲ! ಇದೆಲ್ಲಾ ಕಲಿಪುರುಷನ ಲೀಲಾವಿಶೇಷವು! ಕಲಿಪುರುಷನೇ! ನಿನ್ನ ಜನ್ಮವು ಇದೀಗ ಸಾರ್ಥಕವು! ನಿನ್ನ ಸಾಹಸಕ್ಕೆ ಫಲವು ಈಗ ದೊರೆಯಹತ್ತಿದೆ; ಧರ್ಮಕ್ಕೊಂದುಕಾಲವಿದ್ದರೆ ನಿನಗೊಂದು ಕಾಲವಿರಬೇಕಲ್ಲವೇ? ಇದೇ ನಿನ್ನಕಾಲ! ನಿನ್ನ ಅಮಂಗಲಕರವಾದ ಆಟವನ್ನೆಲ್ಲಾ ಆಡಿ ಈ ಸಮಯದಲ್ಲಿಯೇ ಪೂರ್ತಿಮಾಡಿಕೊಳ್ಳು. ನೀನೇ ಧನ್ಯ! ಧನ್ಯ!!

ಪುರಾಣಾಗಮಗಳ ಕಾಲದಲ್ಲಿ ಪಂಥಸ್ಥಾಪಕರು ಹೆಸರಾದರಂತೆ! ಆದರೂ ಅವರ ಹೆಸರು ಇತಿಹಾಸದಲ್ಲಿ ಸಿಕ್ಕುವುದಿಲ್ಲವಂತೆ! ಆಹಾ! ಏನು ಅಮೂಲ್ಯವಾದ ಬರವಣಿಗೆಯಿದು? ವಾಚಕರು ಈ ಬರವಣಿಗೆಯ ಅರ್ಥವನ್ನು ಮಾಡಿಕೊಳ್ಳಬೇಕಾದರೆ ಬಹುದಿವಸಗಳವರೆಗೆ ಇವರಲ್ಲಿಯೇ ಅಭ್ಯಾಸಮಾಡಬೇಕಾಗುವ ಪ್ರಸಂಗವು ಬಂದರೂ ಬರಬಹುದು. ಪುರಾಣಾಗಮಗಳ ಕಾಲವು ಯಾವುದೋ? ಆ ಕಾಲದಲ್ಲಿ ಹೆಸರುಪಡೆದ ಪಂಥ ಸ್ಥಾಪಕರು ಯಾರೋ? ಈ ಮಹಾಶಯರು ಅವರ ಹೆಸರುಗಳನ್ನಾದರೂ ಬರೆದಿದ್ದರೆ ವಾಚಕರಿಗೆ ಮಹೋಪಕಾರವನ್ನು ಮಾಡಿದಂತಾಗುತ್ತಿತ್ತು. ಅವರ ಹೆಸರುಗಳು ಇತಿಹಾಸದಲ್ಲಿ ಸಿಕ್ಕುವುದಿಲ್ಲವಂತೆ! ಯಾವ ಇತಿಹಾಸದಲ್ಲಿ ಸಿಕ್ಕುವುದಿಲ್ಲವೋ ತಿಳಿಯದಾಗಿದೆ. ಆಹಾ! ತಾಮ್ರಮುಖದವರ ಇತಿಹಾಸದಲ್ಲಿ ಸಿಕ್ಕಂತೆ ಕಾಣುವುದಿಲ್ಲ; ತಾಮ್ರಮುಖದವರ ಇತಿಹಾಸವೇ ಇವರಿಗೆ ಸಾಕ್ಷಾದ್ಬ್ರಹ್ಮ! ಅವರ ಇತಿಹಾಸವೇ ಇವರಿಗೆ ಮನೆಯ ದೇವರು! ತಾಮ್ರಮುಖದವರು ವೇದಗಳು ಹುಟ್ಟಿ 3 ಸಾವಿರ ವರ್ಷಗಳೆಂದು ಬರೆದರೆ, ಅಹುದು-ಅಹುದು ಎಂದು ಕೌಲೆತ್ತಿನಂತೆ ತಲೆಹಾಕುತ್ತಿರುವುದೇ ಇವರ ಕಾಯಕ! ಇಂಥ ಇತಿಹಾಸಸಂಶೋಧಕರು ನಮ್ಮ ಕರ್ಣಾಟಕರಾಜ್ಯದಲ್ಲಿ ಜನ್ಮವೆತ್ತಿದ ಮೇಲೆ ಕರ್ಣಾಟಕಮಾತೆಯ ಪುಣ್ಯಕ್ಕೆ ಎಣೆಯೇ?

"ಬುದ್ಧದೇವನು ಈ ಪಂಥಗಳನ್ನು ಬಿಟ್ಟು ಬೇರೊಂದು ಮತಸ್ಥಾಪನೆ ಮಾಡಿದನು." ಎಂದು ಈ ಮಹಾಶಯರು ಬರೆದಿದ್ದಾರೆ. ಇದರ ಮೇಲಿಂದ ವಿಚಾರ ಮಾಡಿನೋಡಿದರೆ ಬುದ್ಧದೇವನು ಮೊದಲು ಶೈವ ಮತ್ತು ವೈಷ್ಣವಗಳೆಂಬೀ ಎರಡೂ ಪಂಥಗಳಲ್ಲಿದ್ದನೆಂದು ತೋರಿಬರುತ್ತದೆ. ಈ ಪಂಥಗಳನ್ನು ಅವಲಂಬಿಸಿದಾಗ (ಬಿಡುವುದಕ್ಕಿಂತ ಮೊದಲೇ) ಬುದ್ಧನಿಗೆ ಯಾರು ಗುರುಗಳಾಗಿದ್ದರೋ? ಶೈವರೋ? ವೈಷ್ಣವರೋ? ಈ ವಿಷಯದಲ್ಲಿ ಯಾವಾದರೂ ಆಧಾರಗಳುಂಟೋ? ಎನ್ನುವದನ್ನು ಕರ್ಲಮಂಗಲಂರವರು ತೋರಿಸಿದ್ದರೆ ವಾಚಕರಿಗೆ ಪರ್ವತದಷ್ಟು ಉಪಕಾರವನ್ನು ಮಾಡಿದಂತಾಗುತ್ತಿತ್ತು. ಯಾಕೆ ಮಾಡಲಿಲ್ಲವೋ? ಪಾಪ! ಬರವಣಿಗೆಯು ಹನುಮಂತನ ಬಾಲದಂತೆ ಬೆಳೆದೀತಲ್ಲ! ಎಂದು ಬಹುದೂರ ಯೋಚಿಸಿ ಬಿಟ್ಟಂತೆ ತೋರುತ್ತದೆ. ಅಸ್ತು!

"ಬುದ್ಧನಕಾಲವೇ ಮತಾಚಾರ್ಯರ ಉಗಮಕಾಲವೆನ್ನಬಹುದು" ಎಂದು ಈ ಮಹಾಶಯರು ಬರೆದಿರುತ್ತಾರೆ. ಕರ್ಲಮಂಗಲರವರ ಮಾತುಗಳು ಒಂದಕ್ಕಿಂತಲೂ ಒಂದು ಮಿಗಿಲಾಗಿವೆ. ಇವುಗಳನ್ನೆಲ್ಲಾ ದೊಡ್ಡದೊಡ್ಡ ಪ್ರದರ್ಶನಗಳಿಗೆ ಕಳುಹಿಸಿದರೆ ಯಾವಯಾವ ಬಹುಮಾನವು ದೊರೆಯುವುದೋ ಎನ್ನುವುದನ್ನು ಯೋಚಿಸುವುದೇ ಅಸಾಧ್ಯವಾಗಿದೆ. ಯೋಗಶಾಸ್ತ್ರಕರ್ತೃವಾದ ಪತಂಜಲಿಮುನಿಯು ಯೋಗಮತವನ್ನು ಸ್ಥಾಪಿಸಿರುವ ವಿಷಯವು ಸರ್ವಶ್ರುತವಷ್ಟೆ! ಆ ಕಾಲದಲ್ಲಿ ಯೋಗಮತವನ್ನವಲಂಬಿಸಿದ ಯೋಗಿಗಳೆಲ್ಲರೂ ಪತಂಜಲಿಮುನಿಯನ್ನೇ ಮೂಲಾಚಾರ್ಯನನ್ನಾಗಿ ಹೇಳುತ್ತಿದ್ದರು. ಬರಬರುತ್ತ ಕಾಲಮಹಿಮೆಯಿಂದ ಯೋಗಮತವು ಹ್ರಾಸವನ್ನು ಹೊಂದಿ ಯೋಗಿ ಜನಸಮೂಹವು ಕಡಿಮೆಯಾಗುತ್ತ ಬಂದಿತು. ಈಗಲೂ ಹಿಮಾಲಯಪ್ರಾಂತದ ಅರಣ್ಯಗಳಲ್ಲಿ ವಾಸವಾಗಿರುವ ಯೋಗಿಜನಸಮೂಹವು ಪತಂಜಲಿಯನ್ನೇ ಮೂಲಾಚಾರ್ಯನನ್ನಾಗಿ ಹೇಳುವುದನ್ನು ಈ ಮಹಾಶಯರು ಕೇಳಿಲ್ಲವೇ? ಪತಂಜಲಿಮಹರ್ಷಿಗಳು ಬುದ್ಧನಕಾಲಕ್ಕಿಂತಲೂ ಬಹು ಪ್ರಾಚೀನರೆನ್ನುವ ವಿಷಯವು ಜಗತ್ಪ್ರಸಿದ್ಧವೇ ಇದೆ. ಆದರೆ ಕರ್ಲಮಂಗಲರವರು ತಮ್ಮ ಅಮಂಗಲವಾದವನ್ನು ಸಾಧಿಸುವುದಕ್ಕಾಗಿ ಪತಂಜಲಿ ಮಹರ್ಷಿಗಳನ್ನಾದರೂ ಬುದ್ಧನಕಾಲಕ್ಕಿಂತ ಇತ್ತೀಚಿನವರೆಂದು ಹೇಳಲು ಹಿಂಜರಿಯುವವರಲ್ಲವೆಂದು ತೋರುತ್ತದೆ. ಇವರಿಗೆ ಪರಮ ಪ್ರಮಾಣೀಭೂತವಾದ ತಾಮ್ರಮುಖದವರ ಇತಿಹಾಸವನ್ನು ವಿಚಾರಮಾಡಿದರೂ ಕೂಡ ಬೌದ್ಧಮತಕ್ಕಿಂತಲೂ ಜೈನಮತವು ಮೊದಲಿನದೆಂದು ಸಿದ್ಧವಾಗುತ್ತದೆ. ಕ್ರಿ.ಶ. ಪೂರ್ವ ೮ನೆಯ ಶತಮಾನದಲ್ಲಿ ಪಾರ್ಶ್ವನಾಥನೆಂಬ ಯತಿಯು ಜೈನಮತವನ್ನು ಸ್ಥಾಪಿಸಿದನೆಂದೂ, ಕ್ರಿ. ಶ. ಪೂರ್ವ ೫ನೆಯ ಶತಮಾನದಲ್ಲಿ ಬುದ್ಧನು ಬೌದ್ಧಮತವನ್ನು ಸ್ಥಾಪಿಸಿದನೆಂದೂ ತಾಮ್ರಮುಖದವರ ಇತಿಹಾಸಗಳೇ ಸಾರುತ್ತವೆ. ಇವರ ಇತಿಹಾಸವನ್ನೇ ಅವಲಂಬಿಸಿ ವಿಚಾರಮಾಡಿನೋಡಿದರೆ ಬೌದ್ಧಮತಕ್ಕಿಂತಲೂ ಜೈನಮತವು ೩೦೦ ವರ್ಷಗಳ ಪೂರ್ವದ್ದೆಂದು ಸಿದ್ಧವಾಗುವುದು. ಹೀಗಿದ್ದರೂ ಈ ಮಹಾಶಯರು "ಬುದ್ಧನ ಕಾಲವೇ ಮತಾಚಾರ್ಯರ ಉಗಮಕಾಲವೆನ್ನಬಹುದು" ಎಂದು ಬರೆದಿರುವುದು ಅಸಂಬದ್ಧವಾಗುವುದಿಲ್ಲವೇ? ಬುದ್ಧನ ವಿಷಯವನ್ನು ಬುದ್ಧಿಯಲ್ಲಿ ಕೇಳರಿಸಿಕೊಂಡು ಬುದ್ಧಿಶಾಲಿಗಳು ನಗುವಂತೆ ಅಬದ್ಧವಾಗಿ ಬರೆದಿರುವುದು ಬುದ್ಧಿಮಂತರ ಲಕ್ಷಣವೇ? ಯುಗಯುಗಾಂತರಗಳಲ್ಲಿಯೂ ಅವತರಿಸಿ ವೀರಶೈವಮತವನ್ನು ಸ್ಥಾಪಿಸಿ ಶಿವಾಗಮಪ್ರಸಿದ್ಧರೂ ಭುವನಪ್ರಸಿದ್ಧರೂ ಆದ ಶ್ರೀ ಜಗದ್ಗುರು ಪಂಚಾಚಾರ್ಯರ ಕಾಲವು ಇತ್ತೀಚಿನದೆಂದು ಸಾಧಿಸಲು ಹೊರಟಿರುವ ಇವರ ವಕ್ರಮಾರ್ಗಕ್ಕೆ ಎಷ್ಟು ಧಿಕ್ಕಾರವನ್ನಿಟ್ಟರೂ ತೀರದು. ಇಂಥವರು ಕೋಟಿ ಕೋಟಿ ಜನರು ಕೋಟಿ ಕೋಟಿ ಅಮಂಗಲ ಲೇಖಗಳನ್ನು ಬರೆದು ಪ್ರಸಿದ್ಧಮಾಡಿದರೂ ಕೂಡ ಆ ಮಹನೀಯರು ಅರ್ವಾಚೀನರಾಗಬಲ್ಲರೆ? ಪ್ರಾಚೀನರು ಎಂದಾದರೂ ಪ್ರಾಚೀನರೇ! ಅರ್ವಾಚೀನರು ಎಂದಾದರೂ ಅರ್ವಾಚೀನರೇ! ಆಚಾರ್ಯರ ಬಗ್ಗೆ ಬಸವನ ಕುಲದವರಿಂದ ಬರೆಯಿಸಲ್ಪಟ್ಟ ಅಮಂಗಲ ಬರವಣಿಗೆಯು ಮುಂದೆ ಗಾಳಿಗೆ ಗಾಳಿ, ಧೂಳಿಗೆ ಧೂಳಿಯಾಗಿ ಮಾಡಲ್ಪಡುವುದು. ಇರಲಿ;

(ಮುಂದೆಸಾಗುವುದು)

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು,
ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

ವೇದಪಠನದಲ್ಲಿ ತೋರಿಬರುವ ಗುಣದೋಷಗಳ ಬಗ್ಗೆ ಶಿಕ್ಷಾಶಾಸ್ತ್ರದಲ್ಲಿ ಹೀಗೆ ಹೇಳಲ್ಪಡುವುದು:—

ಗೀತೀ ಶೀಘ್ರೀ ಶಿರಃಕಂಪೀ ತಥಾ ಲಿಖಿತ
ಪಾಠಕಃ ।
ಅನರ್ಥಜ್ಞೋಽಲ್ಪಕಣ್ಠಶ್ಚ ಷಡೇತೇ ಪಾಠ
ಕಾಧಮಾಃ ॥೩೨॥

ಗಾನಸ್ವರದಿಂದ ಪಠಿಸುವವನೂ, ಶವಕಪಡುವವನೂ, ಬರಿದೆ ತಲೆಯಲ್ಲಾಡಿಸುವವನೂ ಬರೆದಿಡಲ್ಪಟ್ಟುದನ್ನೇ ಓದುವಾತನೂ (ಮುಖೋದ್ಗತವಿಲ್ಲದಿರುವಾತನೂ) ಪಠಿಸಲ್ಪಡುವ ಪದ ಪದಾರ್ಥಗಳ ಪರಿಜ್ಞಾನವಿಲ್ಲದವನೂ, ಕೀರಧ್ವನಿಯವನೂ, ಎಂಬ ಈ ಆರುವಿಧವಾಗಿರುವ ಪಾಠಕರು ವೇದವನ್ನು ಪಠಿಸುವವರಲ್ಲಿ ಅಧಮರೆಂದು ಹೇಳಲ್ಪಡುತ್ತಾರೆ.

ಹೀಗೆ ವೇದಪಠನದಲ್ಲಿ ಆವಾವ ದೋಷಗಳುಂಟಾಗುವದೆಂಬುದು ಪ್ರತಿಪಾದಿಸಲ್ಪಟ್ಟು, ಮುಂದಿನ ಸೂತ್ರದಿಂದ ಗುಣಪ್ರಾಶಸ್ತ್ಯವಾದರೂ ಸೂಚಿಸಲ್ಪಡುವುದು:—

ಮಾಧುರ್ಯಮಕ್ಷರವ್ಯಕ್ತಿಃ ಪದಚ್ಛೇದಸ್ತು
ಸುಸ್ವರಃ ।
ಧೈರ್ಯಂ ಲಯಸಮರ್ಥಂ ಚ ಷಡೇತೇ
ಪಾಠಕಾ ಗುಣಾಃ ॥೩೩॥

ಎಲೈ ವೇದಪಾಠಕರೇ? ಕರ್ಣಮಧುರವೂ, ವರ್ಣಗಳ ಸ್ಪಷ್ಟತೆಯೂ, ಪದಚ್ಛೇದವೂ (ಅಂದರೆ ಪದಗಳನ್ನು ವಿಂಗಡಿಸಿ ನುಡಿವುದೂ,) ಉತ್ತಮವಾದ ಸ್ವರೋಚ್ಚಾರವೂ, ಗಾಂಭೀರ್ಯವೂ (ಹುದುಗದಿರುವುದೂ) ಇತರರು ನುಡಿಯುವುದರೊಡನೆ ಬೆರೆಯುವ ಸಮರ್ಥತೆಯೂ ಅಥವಾ ಒಬ್ಬನೇ ಪಠಿಸುವಾಗ ಹಿಂದುಮುಂದಿನ ಮಂತ್ರೋಚ್ಚಾರಗಳಲ್ಲಿ ಸಮತೆಯೂ ಎಂಬಿವು ವೇದಪಠನದ ಉತ್ತಮವಾದ ಆರು ಗುಣಗಳೆಂದು ಅರಿಯಲ್ಪಡುತ್ತವೆ.

ಒಟ್ಟಿನಲ್ಲಿ, ವೇದಾಂಗವೆನಿಸುವ ಈ 'ಶಿಕ್ಷಾ' ಶಾಸ್ತ್ರಾಧ್ಯಯನದಿಂದುಂಟಾಗುವ ಫಲಿತಾಂಶವೇನೆಂದರೆ—ಉದಾತ್ತ, ಅನುದಾತ್ತ, ಸ್ವರಿತ, ಹ್ರಸ್ವ, ದೀರ್ಘ, ಪ್ಲುತ, ಮೊದಲಾದವುಗಳಿಂದ ಕೂಡಿದ ಸ್ವರವ್ಯಂಜನಾತ್ಮಕವರ್ಣಗಳ ಉಚ್ಚಾರವಿಶೇಷಜ್ಞಾನ ಪ್ರಾಪ್ತಿಯೇ 'ಶಿಕ್ಷೆ' ಯೆಂಬ ಅಂಗದ ಮುಖ್ಯವಾದ ಪ್ರಯೋಜನವು. ಅದಿಲ್ಲದೆ ಹೋದರೆ ಮಂತ್ರಗಳಿಗೆ ಅನರ್ಥವು ಸಂಭವಿಸುವುದೆಂಬ ಸಂಗತಿಯಾದರೋ ಈ ಹಿಂದೆ ದೃಷ್ಟಾಂತಪೂರ್ವಕವಾಗಿ ಪ್ರತಿಪಾದಿಸಲ್ಪಟ್ಟಿರುವುದಷ್ಟೇ!

ಮುಖ್ಯವಾಗಿ ಶಿಕ್ಷಾಶಾಸ್ತ್ರದಿಂದ ಮಾಡಲ್ಪಟ್ಟ ತೀರ ಹಳೆಯ ಕೆಲಸಗಳಾವುವೆಂದರೆ-ಸಂಹಿತಾಪಾಠವೂ ಪದಪಾಠವೂ ಎಂಬಿವೆರಡೇ. ಶಿಕ್ಷಾಶಾಸ್ತ್ರವೆಂಬ ಈ ವೇದಾಂಗದ ಬಹುಪುರಾತನಗ್ರಂಥಗಳು ಪ್ರಾತಿಶಾಖ್ಯಗಳೇ ಎಂದು ಹೇಳಲಭ್ಯಂತರವಿಲ್ಲ. ಇವುಗಳಲ್ಲಿ ಪದಪಾಠರಚನೆಯ ನಿಯಮದ ಗೊತ್ತುವಳಿಯು ಮಾಡಲ್ಪಟ್ಟಿದೆ; ಅಂದರೆ ಉಚ್ಚಾರವೂ, ಅಘಾತವೂ, ಶಬ್ದಸಂಧಿಗಳೊಳಗಿನ ವಾಕ್ಯಗಳೊಳಗಿನ ಮೊದಲು ಕೊನೆಯುಶಬ್ದಗಳ ಸ್ವರೋಚ್ಚಾರಭೇದವೂ, ಮುಂತಾದುದರ ಪರಿಚಯವು ಈ ಪ್ರಾತಿಶಾಖ್ಯಗಳಿಂದೇ ಉಂಟಾಗುವುದು. ಶಿಕ್ಷಾ, ಛಂದಸ್ಸು, ವ್ಯಾಕರಣಗಳೆಂಬ ಶಾಸ್ತ್ರಗಳಿಂದ ನಾಲ್ಕು ವೇದಗಳಿಗೂ ಭಾಷೆಗೂ ಉಪಯುಕ್ತಗಳಾದ ನಿಯಮಗಳು ಮಾತ್ರವೇ ತಮ್ಮ ತಮ್ಮ ವಿಷಯಾನುಸಾರವಾಗಿ ಹೇಳಲ್ಪಡುತ್ತವೆ. ಆದರೆ ಅವುಗಳ ಅಪವಾದಕಗಳಾದ ವಿಶೇಷನಿಯಮಗಳೂ ವ್ಯವಸ್ಥೆಯೂ ಮುಂತಾದ ವಿಷಯಗಳು ಆ ಆ ವೇದಶಾಖೆಯ ಪ್ರಾತಿಶಾಖ್ಯಗಳೆಂಬ ಸ್ವತಂತ್ರಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಪ್ರಾತಿಶಾಖ್ಯಗಳಲ್ಲಿ ಸಂಹಿತೆಯನ್ನು ಪಠಿಸುವ ಪದ್ಧತಿಯ ಪೂರ್ಣವಿವೇಚನೆಯು ಮಾಡಲ್ಪಟ್ಟಿದೆ. ಪತರೇಯಾರಣ್ಯಕಪ್ರಸಿದ್ಧನಾದ ಶಾಕಲ್ಯನೆಂಬಾಚಾರ್ಯನೇ ಋಗ್ವೇದದ ಪದಪಾಠವನ್ನು ಬಳಕೆಯಲ್ಲಿ ತಂದನೆಂದು ಹೇಳುತ್ತಾರೆ.

ಈ ವಿಧವಾದ ಪಾಠಪುಸ್ತಕವು (ಶಿಕ್ಷಾಶಾಸ್ತ್ರವು) ಆ ಆ ಸಂಹಿತೆಯ ಪ್ರತಿಯೊಂದು ಶಾಖೆಗೆ ಸಂಬಂಧಪಟ್ಟುದಾಗಿರುವ ಮೂಲಕ "**ಪ್ರಾತಿಶಾಖ್ಯ**" ವೆಂದು ಹೇಳಲ್ಪಡುವುದು. ಈ ಸಮಯದಲ್ಲಿ ಅಂತಹ ಪ್ರಾತಿಶಾಖ್ಯಗಳು ಆರು ಉಪಲಬ್ಧಗಳಾಗಿವೆ. ಅವುಗಳಲ್ಲಿ ಮೊದಲನೆಯದು ಋಕ್ ಪ್ರಾತಿಶಾಖ್ಯವು. ಇದುವೇ '**ಪಾರ್ಷದ ಸೂತ್ರ**' ವೆಂದೂ ಹೇಳಲ್ಪಡುವುದು. ಇದರ ಕರ್ತನು ಅಶ್ವಲಾಯನನ ಗುರುವಾದ ಶೌನಕ ಮಹರ್ಷಿಯು. ಈ ಗ್ರಂಥವು ಛಂದೋಬದ್ಧ (ಪದ್ಯಮಯ) ವಾಗಿದೆ. ಆದರೆ ಈ ರಚನೆಯು ಪೂರ್ವದ ಒಂದಾನೊಂದು ಸೂತ್ರಪಾಠವನ್ನೇ ಪರಿಷ್ಕರಿಸಿ ಬೆಳೆಸಿದ ಆವೃತ್ತಿಯೆಂದು ತಿಳಿದುಬರುವುದು. ಈ ಗ್ರಂಥವು ಮೂರು ಅಧ್ಯಾಯಗಳುಳ್ಳದ್ದಾಗಿ ಹದಿನೆಂಟು ಪಟಲಗಳಲ್ಲಿ ವಿಭಕ್ತವಾಗಿದೆ. ಉವ್ವಟಭಾಷ್ಯೋಪೇತವಾದ ಈ ಗ್ರಂಥವು ಕಾಶಿಯಲ್ಲಿ ಮುದ್ರಿತವಾಗಿದೆ.

ಎರಡನೆಯದು 'ತೈತ್ತಿರೀಯಪ್ರಾತಿಶಾಖ್ಯ' ವೆಂಬ ಹೆಸರುಳ್ಳ ಕೃಷ್ಣಯಜುರ್ವೇದೀಯ ಪ್ರಾತಿಶಾಖ್ಯವು. ಇದರ ಕರ್ತನಾವನೆಂಬುದು ಇಂದಿನವರೆಗೂ ಗೊತ್ತಾಗಿರುವುದಿಲ್ಲ. ಇದು ಸೂತ್ರರೂಪವಾಗಿಯೇ ಇರುವುದು. ಇದರಲ್ಲಿ ೨೪ ಅಧ್ಯಾಯಗಳಿವೆ.

ಮೂರನೆಯದು ಶುಕ್ಲಯಜುಃಪ್ರಾತಿಶಾಖ್ಯವು. ಇದು ಕಾತ್ಯಾಯನ ಮುನಿಯಿಂದ ರಚಿಸಲ್ಪಟ್ಟಿದೆ. ಇದರಲ್ಲಿ ೮ ಅಧ್ಯಾಯಗಳಿವೆ. ಇದುವೇ 'ವಾಜಸನೇಯೀ ಪ್ರಾತಿಶಾಖ್ಯಸೂತ್ರ' ವೆಂದು ಪ್ರಸಿದ್ಧವಾಗಿರುವುದು.

ನಾಲ್ಕನೆಯದು ಸಾಮವೇದಪ್ರಾತಿಶಾಖ್ಯವೆಂಬುದು. ಇದನ್ನು ಪುಷ್ಪಮಹರ್ಷಿಯು ರಚಿಸಿದ್ದಾನೆ; ಇದುವೇ 'ಪುಷ್ಪಸೂತ್ರ' ವೆಂದೂ ಹೇಳಲ್ಪಡುವುದು.

ಐದನೆಯದು ಅಥರ್ವಪ್ರಾತಿಶಾಖ್ಯವು. ಇದು ಸೂತ್ರನಿಬದ್ಧವಾಗಿದೆ. ಆರನೆಯದು 'ಚತುರಧ್ಯಾಯೀ' ಎಂಬ ಹೆಸರುಳ್ಳ ಗ್ರಂಥವು ಅಥರ್ವವೇದದ ಪ್ರಾತಿಶಾಖ್ಯರೂಪದಿಂದೇ ಪ್ರಸಿದ್ಧವಾಗಿರುತ್ತದೆ.

ಈ ಪ್ರಾತಿಶಾಖ್ಯಗಳಿಂದೇ ಭರತಖಂಡದಲ್ಲಿ ವ್ಯಾಕರಣಾಧ್ಯಯನವು ಆರಂಭಿಸಲ್ಪಟ್ಟಿರುವುದು. ಇವು ಪ್ರತ್ಯಕ್ಷವಾಗಿ ವೈಯಾಕರಣಗ್ರಂಥಗಳಲ್ಲ; ಆದರೂ ವ್ಯಾಕರಣ ಸಂಬಂಧವಾದ ವಿಷಯಗಳು ಇವುಗಳಲ್ಲಿ ವಿವೇಚಿಸಲ್ಪಟ್ಟಿವೆ. ಈ ಗ್ರಂಥಗಳಲ್ಲಿ ಅನೇಕ ವೈಯಾಕರಣವಾಕ್ಯಗಳು ಉದ್ಧೃತಗಳಾಗಿವೆ. ಇದರಿಂದ ಪ್ರಾತಿಶಾಖ್ಯಗಳ ಪ್ರಚಾರಕಾಲದಲ್ಲಿಯೂ ವ್ಯಾಕರಣದ ಅಧ್ಯಯನವು ಬಲವಾಗಿ ನಡೆದಿದ್ದಿತೆಂದು ಹೇಳಬಹುದಾಗಿದೆ. ಮತ್ತು, ಈಗ ಉಪಲಬ್ಧವಿರುವ ಋಗಾದಿಸಂಹಿತಾಪಾಠಗಳು ಪ್ರಾತಿಶಾಖ್ಯಗಳ ರಚನಾಕಾಲದಿಂದ ಇಂದಿನವರೆಗೆ (ಎಷ್ಟೋ ಶತಮಾನಗಳ ಪರಿಯಂತರವಾಗಿ) ಇದ್ದಕ್ಕಿದ್ದಂತೇ ಉಳಿದಿವೆ. ಈಗಣ ಋಕ್‌ಸಂಹಿತೆಯ ಪಾಠವು ಋಕ್ಪ್ರಾತಿಶಾಖ್ಯದ ನಿಯಮಾನುಸಾರವಾಗಿರುವುದಷ್ಟೇ! ಋಕ್ಸಂಹಿತಾಂತರ್ಗತಗಳಾದ ಹತ್ತು ಮಂಡಲ (ಅವಯವ) ಗಳು ಈಗಿರುವಂತೇ ಮೊದಲಾದರೂ ಇದ್ದಿರಬಹುದು. ಇಷ್ಟೇ ಅಲ್ಲ, ಆ ಮಂಡಲಗಳಲ್ಲಿಯ ಸೂಕ್ತಗಳ ಅನುಕ್ರಮವಾದರೂ ಈಗಿರುವಂತೆ ಮೊದಲಾದರೂ ಇದ್ದಿರಲೇಬೇಕು. ಶೌನಕಾಚಾರ್ಯನ ಅತಿಸೂಕ್ಷ್ಮ ನಿಯಮಗಳನ್ನನುಸರಿಸಿ ಈಗ ಉಪಲಬ್ಧವಿರುವ ಮುದ್ರಿತ ಪ್ರತಿಗಳಲ್ಲಿ ಋಕ್ಸಂಹಿತೆಯು ಪದಶಃ ಹಾಗೂ ಶಬ್ದಶಃ ಎಂತಿರುವುದೋ ಅಂತೆ ಆ ಕಾಲದಲ್ಲಿಯೂ ಇದ್ದಿತೆಂಬ ವಿಷಯದಲ್ಲಿ ಸಂದೇಹವೇ ಇಲ್ಲ. ಈ ರೀತಿಯಾಗಿ ವ್ಯಾಕರಣಾಧ್ಯಯನವೂ ಸಂಹಿತಾಪಾಠವೂ ಎಂಬಿವೆರಡು ದೃಷ್ಟಿಯಿಂದಲೂ ಪ್ರಾತಿಶಾಖ್ಯಗಳು ಬಹು ಮಹತ್ತ್ವವುಳ್ಳವುಗಳೆಂದು ತಿಳಿಯಲ್ಪಡುತ್ತವೆ. ಅದು ಕಾರಣವೇ ಈ ಪ್ರಾತಿಶಾಖ್ಯಗಳು 'ಪುರಾತನ ವೇದಾಂಗಶಿಕ್ಷಾಶಾಸ್ತ್ರಗಳು' ಎಂಬುದಾಗಿ ಹೇಳಿಸಿಕೊಳ್ಳಲ್ಪಡುತ್ತವೆ. ಇವಲ್ಲದೆ ಅರ್ವಾಚೀನಗಳಾದ ಶಿಕ್ಷಾಬೋಧಕಗ್ರಂಥಗಳೂ ಅನೇಕವಾಗಿವೆ. ಅವುಗಳ ಕರ್ತರು ಭಾರದ್ವಾಜ, ವಸಿಷ್ಠ, ವ್ಯಾಸ, ಯಾಜ್ಞವಲ್ಕ್ಯ ಮೊದಲಾದವರೆಂದು ತಿಳಿಯಲ್ಪಡುತ್ತಾರೆ. ಅವು ಒಂದೊಂದು ಪ್ರಾತಿಶಾಖ್ಯಕ್ಕೆ ಸಂಬಂಧಪಟ್ಟವುಗಳಾಗಿವೆ. ಇಲ್ಲಿ ಉದಾಹರಣೆಗಾಗಿ ತೈತ್ತಿರೀಯ ಪ್ರಾತಿಶಾಖ್ಯಾನುಸಾರವಾಗಿ ವ್ಯಾಸಸೂತ್ರ (ಶಿಕ್ಷಾಗ್ರಂಥ) ವಿರುವಂತೆ, ಶುಕ್ಲಯಜುಃಪ್ರಾತಿಶಾಖ್ಯಾನುಸಾರವಾಗಿ ಯಾಜ್ಞವಲ್ಕ್ಯಪ್ರಣೀತ ಶಿಕ್ಷಾಗ್ರಂಥವಿರುವುದೆಂದು ತಿಳಿದುಕೊಂಡರೆ ಸಾಕಲ್ಲವೇ!

ಋಕ್ಪ್ರಾತಿಶಾಖ್ಯವೇ ಮುಂತಾದ ಪುರಾತನ ಶಿಕ್ಷಾಶಾಸ್ತ್ರಗಳಿಗೆ ಉವ್ವಟ ಮೊದಲಾದ ವಿದ್ವಾಂಸರಿಂದ ಬರೆಯಲ್ಪಟ್ಟ ವ್ಯಾಖ್ಯಾನಗಳಿರುತ್ತವೆ; ಆದರೂ ತದ್ಗ್ರಂಥ ಪ್ರತಿಪಾದ್ಯವಿಷಯಗಳು ಆ ಶಾಸ್ತ್ರಸಂಪ್ರದಾಯಸಿದ್ಧರಾದ ಆಚಾರ್ಯರ ಬಳಿಯಲ್ಲಿ ಅರ್ಥವತ್ತಾಗಿ ಪಠಿಸದವರಿಗೆ ಅನುಭವಗಮ್ಯವಾಗಲಾರವು. ಆ ಪ್ರಾತಿಶಾಖ್ಯಗಳಲ್ಲಿರುವ ವಿಷಯಗಳ ದಿಗ್ದರ್ಶನವಿಂತಿರುವುದು. ೧ ವರ್ಣಸಮಾಮ್ನಾಯ, ಸ್ವರವ್ಯಂಜನಗಳ ಗಣನೆಯು; ಮತ್ತು ಅವುಗಳನ್ನು ಉಚ್ಚರಿಸುವುದೇ ಮೊದಲಾದವುಗಳ ನಿಯಮವು. ೨ ಸಂಧಿಗಳು (ಅಚ್, ಹಲ್ ವಿಸರ್ಗ ಮೊದಲಾದುವು.) ೩ ಪ್ರಗೃಹ್ಯಸಂಜ್ಞಾ, ಅವಗ್ರಹ (ಪದವಿಭಾಗನಿಯಮ). ಮತ್ತು ಇದರ ಅಪವಾದಸೂತ್ರಗಳು. ೪ ಉದಾತ್ತ ಅನುದಾತ್ತ ಶಬ್ದಗಳ ಗಣನೆಯು, ಸ್ವರಿತಭೇದ, ಅಪ್ರಾಕೃತಸ್ವರಗಳು ಮುಂತಾದುವು. ೫ ಸಂಹಿತಾಪಾಠಕ್ಕೂ ಪದಪಾಠಕ್ಕೂ ಇರತಕ್ಕ ಭೇದಪ್ರದರ್ಶಕನಿಯಮಗಳು, ಸತ್ವ, ಷತ್ವ, ದೀರ್ಘ ಮೊದಲಾದವುಗಳ ವಿವರಣೆಯು. ೬ ಅಥರ್ವಪ್ರಾತಿಶಾಖ್ಯದಲ್ಲಿ ಸಂಹಿತಾಪಾಠಪದಪಾಠಗಳ ನಿಯಮಗಳಲ್ಲದೆ, ಕ್ರಮಪಾಠದ ನಿಯಮಗಳಾದರೂ ತೋರಿಸಲ್ಪಟ್ಟಿವೆ. ತೈತ್ತಿರೀಯ ಪ್ರಾತಿಶಾಖ್ಯದಲ್ಲಿ ಈ ಮೂರುತೆರದ ನಿಯಮಗಳೂ ಜಟಾಪಾಠದ ನಿಯಮಗಳೂ ಉಲ್ಲೇಖಿಸಲ್ಪಟ್ಟಿವೆ. ೭ ಸಾಮಪ್ರಾತಿಶಾಖ್ಯದಲ್ಲಿ ಸಾಮವೇದದ ಬೇರೆ ಬೇರೆ ವಿಧಗಳಾದ ಗೀತ (ಗಾನ)ಗಳಲ್ಲಿರತಕ್ಕ ಪ್ರಶ್ಲೇಷ, ವಿಶ್ಲೇಷ, ವೃದ್ಧ, ಅವೃದ್ಧ, ಗತ, ಅಗತ, ಉಚ್ಚ, ನೀಚ, ಕೃಷ್ಟ, ಅಕೃಷ್ಟ, ಸಂಕೃಷ್ಟ ಮೊದಲಾದ ಉಚ್ಚಾರಣ ಪ್ರಕಾರಭೇದಗಳ ವರ್ಣನೆಯುಂಟು.

ಪ್ರಾತಿಶಾಖ್ಯಗಳ ಪ್ರವರ್ತಕರಲ್ಲಿ ಮುಖಂಡರಾದ ಶೌನಕನೂ ಕಾತ್ಯಾಯನನೂ ವೇದವಾಙ್ಮಯದೊಡನೆ ನಿಕಟಸಂಬಂಧವುಳ್ಳ 'ಅನುಕ್ರಮಣೀ' ಎಂಬಭಿಧಾನವುಳ್ಳ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಿಗೆ 'ಷಡ್ಗುರುಶಿಷ್ಯ' ನೆಂಬಾತನು ವ್ಯಾಖ್ಯಾನಗಳನ್ನು ಬರೆದಿದ್ದಾನೆ. ಷಡ್ಗುರುಗಳ ಪಂಕ್ತಿಯಲ್ಲಿ ಕೊನೆಯ ಗುರುವು "**ಶಿವಯೋಗಿ**" ಯೆಂಬವನಿದ್ದಾನೆ. ಇರಲಿ. ಈ ಷಡ್ಗುರು ಶಿಷ್ಯಕೃತವ್ಯಾಖ್ಯಾನೋಪೇತಗಳಾದ ಆ ಅನುಕ್ರಮಣೀ ಗ್ರಂಥಗಳು ಬರ್ಲಿನ್ ಶಹರದಲ್ಲಿ ಮುದ್ರಣ ಸಂಸ್ಕಾರವನ್ನು ಪಡೆದು ಭಾರತೀಯರ ಹಸ್ತಪೀಠಗಳನ್ನಲಂಕರಿಸಿವೆ. ಈ ಗ್ರಂಥಗಳಿಂದ ವೈದಿಕ ಸಂಹಿತೆಗಳ ಬೇರೆಬೇರೆ ಭಾಗಗಳಲ್ಲಿ ಯಾವ ಯಾವ ವಿಷಯಗಳು ವಿವೇಚಿಸಲ್ಪಡುವುವೆಂಬುದು ಗೊತ್ತಾಗುವುದು. ಶೌನಕನು ವೈದಿಕ ಸೂಕ್ತಗಳಲ್ಲಿಯ ಋಷಿವರ್ಗದ ಅನುಕ್ರಮಣಿಯನ್ನೂ, ಬೇರೆಬೇರೆಯಾಗಿರುವ ಛಂದಸ್ಸುಗಳನ್ನೂ, ದೇವತೆಗಳನ್ನೂ, ಸೂತ್ರಗಳನ್ನೂ ವಿವರಿಸಿ ಬರೆದಿದ್ದಾನೆ. ಕಾತ್ಯಾಯನನು ಋಗ್ವೇದದೊಳಗಿನ ಸರ್ವಸಂಗತಿಯನ್ನೂ ಸೂಚಿಸತಕ್ಕ "**ಸರ್ವಾನುಕ್ರಮಣೀ**" ಎಂಬುದನ್ನು ರಚಿಸಿದ್ದಾನೆ. ಈ ಗ್ರಂಥದಲ್ಲಿ ಸೂತ್ರಪದ್ಧತಿಯಿಂದ ಪ್ರತಿಯೊಂದು ಸೂಕ್ತದ ಆದಿಶಬ್ದವೂ ಋಚೆಗಳ ಸಂಖ್ಯೆಯೂ, ಯಾವ ಋಷಿಯಿಂದ ಆ ಋಚೆಗಳು ಪ್ರಕಟವಾದುವೆಂಬುದನ್ನೂ ಹೇಳುವಾಗ ಆ ಋಷಿಯ ಅಭಿಧಾನಗೋತ್ರಗಳೂ, ಯಾವ ದೇವತೆಗಳ ಪ್ರೀತ್ಯರ್ಥವಾಗಿ ಆ ಋಚೆಗಳು ಹೊರಹೊಮ್ಮಿದವೋ ಆ ದೇವತೆಗಳ ಹೆಸರುಗಳೂ, ಆ ಋಚೆಗಳು ಯಾವ ಛಂದೋಬದ್ಧ (ವೃತ್ತ) ಗಳಾಗಿರುವುವೋ ಆ ವೃತ್ತಗಳೂ ಪ್ರತಿಪಾದಿಸಲ್ಪಟ್ಟಿವೆ.

ಮತ್ತು, ಶೌನಕನು "**ಬೃಹದ್ದೇವತಾ**" "**ಋಗ್ವಿಧಾನ**" ಎಂಬಿವೆರಡು ಪದ್ಯಾತ್ಮಕಗ್ರಂಥಗಳನ್ನೂ ರಚಿಸಿದ್ದಾನೆ. 'ಬೃಹದ್ದೇವತಾ' ಅಂದರೆ ಋಗ್ವೇದದೊಳಗಿನ ಬೇರೆ ಬೇರೆ ಸೂಕ್ತಗಳಿಂದ ಆಹ್ವಾನಿಸಲ್ಪಡುವ ದೇವತೆಗಳನ್ನು ವಿವರಿಸುವ ಗ್ರಂಥವು. ಈ ಗ್ರಂಥದಲ್ಲಿ ಆ ಆ ದೇವತೆಗಳ ಸಂಬಂಧವಾದ ಪೌರಾಣಿಕ ಕಥೆಗಳೂ ಇವೆ; ಇದರಿಂದ ಈ ಗ್ರಂಥವು ಭಾರತೀಯ ಕಥಾವಾಙ್ಮಯ ದೃಷ್ಟಿಯಿಂದಲೂ ಬಹು ಮಹತ್ವವುಳ್ಳದ್ದಾಗಿದೆ. ಮುಂದೆ ನಾವು ಋಕ್ಸಂಹಿತೆಯ ಸಾರವನ್ನು ಪ್ರತಿಪಾದಿಸುವ ಪ್ರಸಂಗದಲ್ಲಿ ಈ ಗ್ರಂಥದ ಮೇಲೆ ಸ್ವಲ್ಪ ಕೈಯೂರುವ ಪ್ರಸಂಗವಿರುವದಲ್ಲವೇ? ಆಗಲಿ.

"**ಋಗ್ವಿಧಾನ**" ವೆಂಬ ಗ್ರಂಥದಲ್ಲಿ ಋಗ್ವೇದಾಂತರ್ಗತಗಳಾದ ಅನೇಕ ಸೂಕ್ತಗಳ ಜಪವಿನಿಯೋಗರೀತಿಗಳೂ ತತ್ಫಲಗಳೂ ವಿಧಿಸಲ್ಪಟ್ಟಿವೆ ಹೇಗೆಂದರೆ—

(೧-೩-೨೬) ಕದ್ರುದ್ರಾಯ ಜಪೇತ್ಸೂಕ್ತಂ
ಶೀತಜ್ವರವಿನಾಶನಮ್ ।
ಲಿಂಗಂ ಸ್ಪೃಷ್ಟ್ವಾಯುತಂ ಧೀಮಾನ್ನಿರೋಗೀ
ಶೀಘ್ರತಸ್ತದಾ ॥
(೪-೭-೩೧)-ಉರುಂ ನಃ ಪ್ರಜಪೇನ್ಮಂತ್ರಂ
ಶತವಾರಂ ದಿನೇದಿನೇ ।
ಶಿವೇನ ಸಹ ವಕ್ತ್ರಾಚ ಶಿವಲೋಕೇ ಮಹೀ
ಯತೇ ॥

ಎಂಬಿವೇ ಮುಂತಾದ ವಾಕ್ಯಗಳು ಋಗ್ವೇದಾಂತರ್ಗತಗಳಾದ ಬೇರೆಬೇರೆ ಸೂಕ್ತಗಳ ಜಪದಿಂದ ಜ್ಞಾತಾಜ್ಞಾತಪಾಪಗಳ ನಿವೃತ್ತಿಯೂ, ಚಿತ್ತಶುದ್ಧಿಯೂ, ದೀರ್ಘಾಯುರಾರೋಗ್ಯಭಾಗ್ಯವೂ ಮುಂತಾದ ಅಭೀಷ್ಟಾರ್ಥಸಿದ್ಧಿಗಳುಂಟಾಗುವುವೆಂದು ನಿರೂಪಿಸುತ್ತವೆ.

ವ್ಯಾಕರಣವು—ವೇದದ ಷಡಂಗಗಳಲ್ಲಿ ಪರಿಗಣಿಸಲ್ಪಡುವ ವ್ಯಾಕರಣಶಾಸ್ತ್ರವೆಂಬುದು ಇದೇ ಎಂದು ಹೇಳಲ್ಪಡತಕ್ಕ ತೀರ ಹಳೆಯ ಗ್ರಂಥವಾವುದೂ ಈವರೆಗೆ ಉಪಲಬ್ಧವಿಲ್ಲ. ವೇದಾರ್ಥವಿವರಣೆಯೊಡನೆ ನಿಕಟಸಂಬಂಧವುಳ್ಳ ಶಾಬ್ದಿಕಗ್ರಂಥಗಳೇ ವ್ಯಾಕರಣಶಾಸ್ತ್ರಗಳೆಂದು ಹೇಳಲ್ಪಡುತ್ತವೆ. ಆರಣ್ಯಕಗಳಲ್ಲಿ ಕೆಲವೆಡೆ ವ್ಯಾಕರಣದ ಪಾರಿಭಾಷಿಕಶಬ್ದಗಳು ಕಂಡುಬರುತ್ತವೆ. ಪಾಣಿನಿಯ '**ಅಷ್ಟಾಧ್ಯಾಯೀ**' ಎಂಬ ಗ್ರಂಥವು ವ್ಯಾಕರಣದ ದೃಷ್ಟಿಯಿಂದ ವೇದಾಂಗವೆನಿಸಿಕೊಳ್ಳುವುದು. ಆದರೆ ಆ ನುಡಿಗಟ್ಟಾದರೋ ಬಳಕೆಯ ಸಕ್ಕದಮಾತುಗಳ ಬೊಕ್ಕಳಿಕೆಯ ಕಟ್ಟಳೆಗಾಗಿ ಹುಟ್ಟಿದುದೆಂದು ಗಟ್ಟಿಯಾಗಿ ಹೇಳಬಹುದಲ್ಲವೇ? ವೈದಿಕವ್ಯಾಕರಣದ ವಿಚಾರವು ಅದರಲ್ಲಿ ಪ್ರಸಂಗೋಪಾತ್ತವಲ್ಲದೆ ಮುಖ್ಯವಾದುದಲ್ಲ; ಆದ್ದರಿಂದ ವೇದಾಂಗಭೂತಗಳಾದ ವ್ಯಾಕರಣಗ್ರಂಥಗಳಲ್ಲಿ ಪ್ರತಿಯೊಂದು ಶಾಖೆಯನ್ನನುಸರಿಸಿರುವ ಮೇಲೆ ಹೇಳಲ್ಪಟ್ಟ ಪ್ರಾತಿಶಾಖ್ಯಗಳೇ ಪುರಾತನವಾದುವೆಂದು ಹೇಳಿದರೆ ತಾನೇ ದೋಷವೇನು? ಇನ್ನು, ಶಿಕ್ಷಾಶಾಸ್ತ್ರಪ್ರವರ್ತಕನಾದ ಪಾಣಿನಿಮುನಿಯೇ ಮಹೇಶ್ವರಪ್ರಸಾದದಿಂದ ರಚಿಸಿದ ವ್ಯಾಕರಣಶಾಸ್ತ್ರವು ಕೇವಲ ಲೌಕಿಕಪ್ರಯೋಗಗಳ ಜ್ಞಾನವನ್ನುಂಟುಮಾಡಿಕೊಡುವುದಕ್ಕೋಸ್ಕರವಾಗಿಯೇ ಇರುವುದೆಂದು ಹೇಳಲಿಕ್ಕಾಗದು. ಈ ಮಾತನೊಡಂಬಟ್ಟರೆ ಪಾಣಿನೀಯವ್ಯಾಕರಣಕ್ಕೆ ವೇದಾಂಗತ್ವವು ಸಿದ್ಧಿಸುವುದು. ಈ ವ್ಯಾಕರಣಶಾಸ್ತ್ರದ ಪ್ರಥಮಸೂತ್ರವು 'ವೃದ್ಧಿರಾದೈಚ್' ಎಂಬುದು. ಈ ಶಾಸ್ತ್ರದಲ್ಲಿ ಎಂಟು ಅಧ್ಯಾಯಗಳೂ ಮೂವತ್ತೆರಡುಪಾದಗಳೂ ಇವೆ. ಈ ಪಾಣಿನೀಯ ಸೂತ್ರಗಳಿಗೆ ಕಾತ್ಯಾಯನಮುನಿಯು ವಾರ್ತಿಕವನ್ನು ರಚಿಸಿದ್ದಾನೆ. 'ವಾರ್ತಿಕ'ವು ಅಂದರೆ—

ಉಕ್ತಾನುಕ್ತದುರುಕ್ತಾನಾಂ ಚಿಂತಾ ಯತ್ರ
ಪ್ರವರ್ತತೇ !

...ಟ್ಟನವಾರ್ತಿಕವೂ, ಬಾದರಾಯಣಮುನಿಯ ವಿಚಾರಸೂತ್ರಗಳಿಗೇ ಶಿವಾದ್ವೈತ, ಕೇವಲಾದ್ವೈತ, ದ್ವೈತಾದಿ ಬೇರೆಬೇರೆ ಮತಪ್ರಕ್ರಿಯಾನುಸಾರಗಳಾದ ಬೇರೆಬೇರೆ ಭಾಷ್ಯಗಳೂ, ವಾರ್ತಿಕಗಳೂ, ಗೌತಮಕೃತನ್ಯಾಯಸೂತ್ರಗಳಿಗೆ ವಾತ್ಸ್ಯಾಯನ ಪ್ರಣೀತಭಾಷ್ಯವೂ, ಶಕ್ತಿಲಮುನಿಕೃತವಾರ್ತಿಕವೂ ಎಂಬಿವು ಮುಂತಾದವುಗಳಿವೆ.

ಮೇಲೆ ಹೇಳಲ್ಪಟ್ಟ ಲಕ್ಷಣಗಳು ಈ ಸರ್ವವಾರ್ತಿಕಗಳಲ್ಲಿಯೂ ಭಾಷ್ಯಗಳಲ್ಲಿಯೂ ಸ್ಪಷ್ಟವಾಗಿರುವುದರಿಂದೇ ಆ ಆ ವಿಷಯಗಳಮೇಲೆ ಅನ್ಯ ವಿದ್ವಾಂಸರಿಂದ ಇತರ ಅನೇಕ ಸಂಸ್ಕೃತ ಗ್ರಂಥಗಳು ರಚಿಸಲ್ಪಟ್ಟಿದ್ದರೂ ಅವುಗಳನ್ನು ಯಾರೂ 'ವಾರ್ತಿಕ' ಗಳೆಂದಾಗಲಿ, ಭಾಷ್ಯಗಳೆಂದಾಗಲಿ ಹೇಳದೆ ಟೀಕೆ, ವ್ಯಾಖ್ಯಾನ, ವಿವರಣಾದಿನಾಮಗಳಿಂದೇ ಪ್ರಸಿದ್ಧಪಡಿಸಿದ್ದಾರೆ.

ಟಿಪ್ಪಣಿ—* ಈ ಮತಸಿದ್ಧಾಂತಪ್ರತಿಪಾದಕ ಭಾಷ್ಯವಾರ್ತಿಕಗಳಲ್ಲಿ ಒಂದಾದರೂ ಸದ್ಯಃ ನಮ್ಮ ಬಳಿಯಲ್ಲಿ ಇಲ್ಲದಿರುವುದರಿಂದ ಅವುಗಳ ಅಂತರಂಗವಿಷಯಗಳ ಪ್ರತಿಪಾದನೆಯಲ್ಲಿ ನಮ್ಮ ಬುದ್ಧಿವೃತ್ತಿಯು ಕುಂಠಿತವಾಗುವುದು ಸಾಹಜಿಕವೇ ಸರಿ.

...ದನು; ಆದರೂ ಕೊನೆಗಾಣಲಿಲ್ಲ. ಬೃಹಸ್ಪತಿಯು ಅಧ್ಯಾಪಕನು, ಇಂದ್ರನು ಅಧ್ಯಯನಮಾಡತಕ್ಕವನು, ದಿವ್ಯಸಹಸ್ರವರ್ಷಗಳವರೆಗೆ ಅಧ್ಯಯನಕಾಲವು; ಹೀಗಿದ್ದರೂ ಇಂದ್ರನಿಗೆ ಶಬ್ದಜ್ಞಾನವು ಪೂರ್ಣವಾಗಲಿಲ್ಲ! ಈ ವಿಷಯಕವಾಗಿ ವರ್ತಮಾನಕಾಲದಲ್ಲಿ ಹೇಳುವುದೇನು? ಈಗ ನೂರುವರುಷಗಳವರೆಗೆ ಬಾಳತಕ್ಕ ಮಾನವರು ಎಷ್ಟುಮಂದಿ ಸಿಕ್ಕಬಹುದು? ಒಂದುಕಡೆಯಲ್ಲಿ ಕೆಲವರು ನೂರುವರುಷಗಳವರೆಗಾದರೂ ಬದುಕಿರುವರೆಂದು ತಿಳಿಯುವಾ! ಅವರಲ್ಲಿ ಓರ್ವನ ಆ ಸಂಪೂರ್ಣಾಯುಷ್ಯದ ವಿಶೇಷಾಂಶವು ವಿದ್ಯೆಯ ಆಗಮಕಾಲವೂ, ಅಧ್ಯಯನಕಾಲವೂ ಪ್ರವಚನಕಾಲವೂ, ವ್ಯವಹಾರಕಾಲವೂ ಎಂಬೀ ನಾಲ್ಕು ವಿಧವಾಗಿ ಉಪಯೋಗಿಸಲ್ಪಡುವುದು. ಆದರೆ ಆಗಮಕಾಲದಿಂದೇ ಸರ್ವಾಯುಷ್ಯವೂ ಮುಗಿದುಹೋದರೆ ಮುಂದೆ ಸ್ವಾಧ್ಯಾಯ, ಪ್ರವಚನ, ವ್ಯವಹಾರಗಳಿಗೆ ಕಾಲವೆಲ್ಲಿದೆ? ವ್ಯಾಕರಣಶಾಸ್ತ್ರವೆಂಬೀ ಸ್ವಲ್ಪಮಾದುಪಾಯದಿಂದ ಶಬ್ದಗಳ ಜ್ಞಾನವಾಗಲಭ್ಯಂತರವಿಲ್ಲವಾದುದರಿಂದ ವ್ಯಾಕರಣವನ್ನು ಅವಶ್ಯವಾಗಿ ಅಧ್ಯಯನಮಾಡತಕ್ಕದ್ದು. ವ್ಯಾಕರಣವನ್ನು ಕಲಿತಬಳಿಕ ಶಬ್ದಜ್ಞಾನಕ್ಕೋಸ್ಕರ ಪ್ರತಿಪದಪಾಠದ ಅವಶ್ಯಕತೆಯಿರುವುದಿಲ್ಲ.

"**ಅಸಂದೇಹ**" ವೆಂಬುದು ಶಬ್ದಾನುಶಾಸನದ ಐದನೆಯ ಪ್ರಯೋಜನವು. ಸಂದೇಹವು ಉಳಿಯಕೂಡದೆಂದೇ ವ್ಯಾಕರಣವನ್ನು ಕಲಿಯಬೇಕಾಗಿದೆ. ಯಾಜ್ಞಿಕರು—"**ಸ್ಥೂಲಪೃಷತೀಂ, ಅಗ್ನಿವಾರುಣೀಂ, ಅನಡ್ವಾಹೀಂ, ಆಲಭೇತ್**" ಎಂದುಚ್ಚರಿಸುತ್ತಾರೆ. ಆ ಪದಗಳಲ್ಲಿ 'ಸ್ಥೂಲಪೃಷತೀಮ್' ಎಂಬುದರ ವಿಗ್ರಹವನ್ನು ಹೇಗೆ ಮಾಡಬೇಕು? ಕರ್ಮಧಾರಯವನ್ನು ಮಾಡಬೇಕೋ? ಬಹುವ್ರೀಹಿಯನ್ನೋ? ಎಂಬ ಸಂದೇಹವುಂಟಾಗುವುದು. ವೈಯಾಕರಣನು ಪದಗತಸ್ವರದ ಮೇಲಿಂದ ಆ ಸಮಾಸವನ್ನು ನಿಶ್ಚಿತಗೊಳಿಸುತ್ತಾನೆ. ಅವನಿಗೆ ಪೂರ್ವಪದ ಪ್ರಕೃತಿಸ್ವರತ್ವವಿದ್ದರೆ ಅಂದರೆ ಸ್ಥೂಲವೆಂಬ ಪೂರ್ವಪದದ ಯಾವ ಪ್ರಕೃತಿಸ್ವರವಿರುವುದೋ ಅದುವೇ ಸ್ವರವಾಗಿದ್ದರೆ ಅದನ್ನು ಬಹುವ್ರೀಹಿಯೆಂದೂ ಅಂತೋದಾತ್ತಸ್ವರವಿದ್ದರೆ ಕರ್ಮಧಾರಯವೆಂದೂ ತಿಳಿಯುತ್ತಾನೆ. ಯಾವನು ವ್ಯಾಕರಣವನ್ನು ಕಲಿತಿಲ್ಲವೋ ಅವನು ಹಾಗೆ ನಿರ್ಣಯಗೊಳಿಸಲಾರನು. ಹಾಗೂ ಅಪಶಬ್ದಗಳೂ, ಸ್ವರತಃ ಅಥವಾ ವರ್ಣತಃ ದುಷ್ಟಶಬ್ದಗಳೂ, ಅಸಂಗತಶಬ್ದಗಳೂ ಎಂಬಿವು ಮುಂತಾದವುಗಳ ಪ್ರಯೋಗಗಳು ಸಂಭವಿಸಕೂಡದೆಂಬ ಹೇತುವಿನಿಂದಲೂ ವ್ಯಾಕರಣಾಧ್ಯಯನವು ಅವಶ್ಯವಾದುದು. ಹೀಗೆ ಅನೇಕ ಸೋದಾಹರಣಪ್ರಯೋಜನಗಳು ಪಾತಂಜಲಮಹಾಭಾಷ್ಯದಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಇರಲಿ.

(ಸಶೇಷ).

ಬೆಂಗಳೂರು ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿತೋಟದಪ್ಪನವರ ಸ್ಟೂಡೆಂಟ್ಸ್ ಫ್ರೀ ಬೋರ್ಡಿಂಗ್ ಹೋಮ್.

ಮೈಸೂರು ದೇಶದ ಎಲ್ಲಾ ವೀರಶೈವ ವಿದ್ಯಾರ್ಥಿಗಳೂ (Old and New) ಸೀಟಿಗೋಸ್ಕರ ತಾ|| 20-6-1934 ರೊಳಗಾಗಿ ಗೊತ್ತಾದ ಫಾರಂನಲ್ಲಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಅರ್ಜಿದಾರರು ಕಡೇಪಕ್ಷ S.S. L.C. ಪರೀಕ್ಷೆಯಲ್ಲಿ (E.C & P.S.) ತೇರ್ಗಡೆಹೊಂದಿದವರಾಗಿರಬೇಕು.

ಕಾಲೇಜುಗಳಲ್ಲಿಯೂ, ಟೆಕ್ನಿಕಲ್ ಸ್ಕೂಲ್‌ಗಳಲ್ಲಿಯೂ ಮತ್ತು ಸಂಸ್ಕೃತಕಾಲೇಜಿನಲ್ಲಿಯೂ, ಓದತಕ್ಕ ವಿದ್ಯಾರ್ಥಿಗಳೂ ಸಹ ಸೀಟಿಗೋಸ್ಕರ ಅಪ್ಲಿಕೇಷನ್ ಹಾಕಿಕೊಳ್ಳಬಹುದು.

ಅಪ್ಲಿಕೇಷನ್ ಜೊತೆಯಲ್ಲಿ ಅಪ್ಲಿಕೇಷನ್ ಫೀ 1 ರೂ ಅಡ್ಮಿಷನ್ ಫೀ 5 ರೂ. ಒಟ್ಟು 6 ರೂ. ಗಳನ್ನು ಕಳುಹಿಸತಕ್ಕದ್ದು. ಅಲ್ಲದೆ ಫೈನಲ್ (Final) ಪರೀಕ್ಷೆಯಲ್ಲಿ ಪಡೆದ ಪ್ರತಿಯೊಂದು ಸಬ್‌ಜೆಕ್ಟ (Subject) ನ, ನಂಬರುಗಳನ್ನೂ ಸಹ ಕಳುಹಿಸತಕ್ಕದ್ದು.

ಸ್ಥಳದೊರೆಯದವರಿಗೆ ಅಡ್ಮಿಷನ್ ಫೀ 5 ರೂ. ಮಾತ್ರ ವಾಪಸ್ ಮಾಡಲಾಗುತ್ತೆ. ತಾ||24,25-6-34 ನೇ ದಿವಸಗಳಲ್ಲಿ (Intervfew) ಗೆ ಬರತಕ್ಕದ್ದು.

ಪ್ರತಿಯೊಬ್ಬರೂ ಹಾಸ್ಟಲಿನ ರೂಲ್ಸಿಗೆ ಬದ್ಧರಾಗಿರಬೇಕು. ಸ್ಟಾಂಪು ಕಳುಹಿಸಿದಲ್ಲಿ ಅಪ್ಲಿಕೇಷನ್ ಫಾರಂಗಳನ್ನು ಕಳುಹಿಸಲಾಗುತ್ತೆ. ಸ್ಟಾಂಪು ಕಳುಹಿಸದೆ ಇದ್ದಲ್ಲಿ ಅಪ್ಲಿಕೇಷನ್ ಫಾರಂಗಳನ್ನು ಕಳುಹಿಸಲಾಗುವುದಿಲ್ಲ. ಮೇಲ್ಕಂಡ ಅಂಶಗಳನ್ನು ವಿಚಾರಿಬರತಕ್ಕ ಅಪ್ಲಿಕೇಷನ್‌ಗಳನ್ನು ಅಂಗೀಕಾರಮಾಡಲಾಗುವುದಿಲ್ಲ.

ಬೋರ್ಡಿಂಗ್ ಹೋಮಿನಿಂದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಫರ್‌ನೀಚರ್ಸ್ (Furnitures) ತಟ್ಟೆ, ತಂಬಿಗೆ, ಬಕೀಟ್, ಕಪ್ ವಗೈರೆ ಸಾಮಾನುಗಳು ಕೊಡಲ್ಪಡುತ್ತೆ. ವಿದ್ಯಾರ್ಥಿಗಳು ಜೊತೆಯಲ್ಲಿ ಚಿಕ್ಕ ಒಂದು ಹಾಸಿಗೆಯೊಂದನ್ನು ತರತಕ್ಕದ್ದು.

ಸೀಟುದೊರೆತ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಕ್ಲಾಸಿಗೆ ಸಂಬಂಧಪಟ್ಟ ಎಲ್ಲಾ ಪುಸ್ತಕಗಳನ್ನು ಪಡೆದುಕೊಂಡಿರಬೇಕು. ಇಲ್ಲದ ಪಕ್ಷಕ್ಕೆ ಸೀಟು ನಿರಾಕರಿಸಲ್ಪಡುವುದು.

Sd. S. ಶಿವಪ್ಪ
ಆನರರಿ ಸೆಕ್ರೆಟರಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

ವೇದಪಠನದಲ್ಲಿ ತೋರಿಬರುವ ಗುಣದೋಷಗಳ ಬಗ್ಗೆ ಶಿಕ್ಷಾ ಶಾಸ್ತ್ರದಲ್ಲಿ ಹೀಗೆ ಹೇಳಲ್ಪಡುವುದು:—

ಗೀತೀ ಶೀಘ್ರೀ ಶಿರಃಕಂಪೀ ತಥಾ ಲಿಖಿತ ಪಾಠಕಃ ।
ಅನರ್ಥಜ್ಞೋಽಲ್ಪಕಂಠಶ್ಚ ಷಡೇತೇ ಪಾಠಕಾಧಮಾಃ ॥೩೨॥

ಗಾನಸ್ವರದಿಂದ ಪಠಿಸುವವನೂ, ತವಕಪಡುವವನೂ, ಬರೆದು ತಲೆಯಲ್ಲಾಡಿಸುವವನೂ ಬರೆದಿಟ್ಟದನ್ನೇ ಓದುವಾತನೂ (ಮುಖೋದ್ಗತವಿಲ್ಲದಿರುವಾತನೂ) ಪಠಿಸಲ್ಪಡುವ ಪದ ಪದಾರ್ಥಗಳ ಪರಿಜ್ಞಾನವಿಲ್ಲದವನೂ, ತೀಕ್ಷ್ಣಧ್ವನಿಯವನೂ, ಎಂಬ ಈ ಆರುವಿಧವಾಗಿರುವ ಪಾಠಕರು ವೇದವನ್ನು ಪಠಿಸುವವರಲ್ಲಿ ಅಧಮರೆಂದು ಹೇಳಲ್ಪಡುತ್ತಾರೆ.

ಹೀಗೆ ವೇದಪಠನದಲ್ಲಿ ಆವಾವ ದೋಷಗಳಿರಕೂಡದೆಂಬುದು ಪ್ರತಿಪಾದಿಸಲ್ಪಟ್ಟು, ಮುಂದಿನ ಸೂತ್ರದಿಂದ ಗುಣವ್ಯಾಖ್ಯಾನವೂ ಸೂಚಿಸಲ್ಪಡುವುದು:—

ಮಾಧುರ್ಯಮಕ್ಷರವ್ಯಕ್ತಿಃ ಪದಚ್ಛೇದಸ್ತು ಸುಸ್ವರಃ ।
ಧೈರ್ಯಂ ಲಯಸಮರ್ಥಂ ಚ ಷಡೇತೇ ಪಾಠಕಾ ಗುಣಾಃ ॥೩೩॥

[illegible]

ಶ್ರೀ ರಂಭಾಪುರೀ ಜಗದ್ಗುರ

(ಅಲ್ಲ



Sree Panchacharya Electric Press, Mysore.

[illegible]

ಉಕ್ತಾನುಕ್ತದುರುಕ್ತಾನಾಂ ಚಿಂತಾ ಯತ್ರ ಪ್ರವರ್ತತೇ ।

ತಂ ಗ್ರಂಥಂ ವಾರ್ತಿಕಂ ಪ್ರಾಹುರ್ವಾರ್ತಿಕಜ್ಞಾ ಮನೀಷಿಣಃ ॥

ಯಾವ ಗ್ರಂಥದಲ್ಲಿ ಮೂಲಸೂತ್ರಾದಿಗಳಿಂದ ಉಕ್ತವೂ, ಅನುಕ್ತವೂ ದುರುಕ್ತವೂ ಆದ ಅರ್ಥಗಳ ವಿಚಾರವು ಮಾಡಲ್ಪಡುವುದೋ ಆ ಗ್ರಂಥವನ್ನು ವಾರ್ತಿಕಜ್ಞರಾದ ವಿಬುಧರು 'ವಾರ್ತಿಕ' ವೆಂದು ಹೇಳುತ್ತಾರೆ. ವ್ಯಾಕರಣ, ನ್ಯಾಯ, ಮೀಮಾಂಸಾದಿ ಪ್ರಸಿದ್ಧಗ್ರಂಥಗಳಿಗೆ ಇಂತಹ ಬೇರೆಬೇರೆ ವಾರ್ತಿಕಗಳಿವೆ.

ವ್ಯಾಕರಣದಿಂದಾವ ಪ್ರಯೋಜನವೆಂದರೆ—ವೈದಿಕಪದಗಳ ಸಾಧುತ್ವಜ್ಞಾನಮೂಲಕ ಊಹಾದಿಗಳನ್ನು ಮಾಡಲಿಕ್ಕೆ ಬರುವುದೇ ವ್ಯಾಕರಣಾಧ್ಯಯನದ ಪ್ರಯೋಜನವು. 'ಊಹ' ವು ಅಂದರೆ ಅಧ್ಯಾಹಾರವು. ಅನ್ವಯಕ್ಕೆ ಯೋಗ್ಯವಾದ ವಿಭಕ್ತ್ಯಾದಿಗಳನ್ನು ಕಲ್ಪಿಸುವಿಕೆಯು. ಹೇಗೆಂದರೆ, ಪಾವರಣ ಪ್ರಾಪ್ತದಲ್ಲಿ "[ಪರೇತಪಿತರಃ] ಸೌಮ್ಯಾಸಃ" ಎಂಬ ಬಹುವಚನ [illegible]

[illegible]

ನಮ್ಮ ಪ್ರಾಚೀನ ಶಾಸ್ತ್ರಪದ್ಧತಿಯಂತೆ ಸೂತ್ರ, ಭಾಷ್ಯ, ವಾರ್ತಿಕವೆಂಬಿವು ಮೂರರಿಂದೇ ಆ ಆ ಶಾಸ್ತ್ರಗಳ ಪೂರ್ತತೆಯುಂಟಾಗುವುದು. ಮತ್ತು ಅವುಗಳನ್ನು ಪ್ರಮಾಣವೆಂದು ಭಾವಿಸಿಯೇ ಆ ಆ ಶಾಸ್ತ್ರಗಳ ಟೀಕಾದಿಗ್ರಂಥಗಳು ಬರೆಯಲ್ಪಡುತ್ತವೆ. ವ್ಯಾಕರಣಶಾಸ್ತ್ರದ ಪಾಣಿನಿಮುನಿಯ ಸೂತ್ರಗಳೂ, ಕಾತ್ಯಾಯನಮುನಿಯ ವಾರ್ತಿಕವೂ, ಪತಂಜಲಿಮುನಿಯ ಭಾಷ್ಯವೂ ಎಂಬಿವು ಮೂರೂ ಪ್ರಮಾಣಭೂತಗ್ರಂಥಗಳಾಗಿರುವುದರಿಂದೇ ಈ ಶಾಸ್ತ್ರಕ್ಕೆ 'ತ್ರಿಮುನಿವ್ಯಾಕರಣ' ವೆನ್ನುತ್ತಾರೆ.

ಪತಂಜಲಿಮುನಿಯು ತನ್ನ ಗ್ರಂಥಕ್ಕೆ "ಭಾಷ್ಯ" ವೆಂಬ ಸಂಜ್ಞೆಯಿರುವುದು ಸಾರ್ಥಕವಾದುದೆಂಬುದನ್ನು ತೋರಿಸುವುದಕ್ಕೋಸ್ಕರವೇ '**ರಕ್ಷೋಹಾಗಮಲಘ್ವಸಂದೇಹಾಃ ಪ್ರಯೋಜನಮ್**' ಎಂಬ ಸೂತ್ರರೂಪವಾದ ವಾಕ್ಯವನ್ನೇ ಕ್ರಮವಾಗಿ ವಿವರಿಸಿದ್ದಾನೆ. ಮೊದಲು 'ರಕ್ಷಾ' ಎಂಬ ಪ್ರಯೋಜನದ ವ್ಯಾಖ್ಯೆಯನ್ನು ಹೀಗೆಮಾಡಿದ್ದಾನೆ. ವೇದಗಳ ರಕ್ಷಣೆಗಾಗಿ [illegible]

[illegible]

"ಅಸಂದೇಹ"ವೆಂಬುದು ಶಬ್ದಾನುಶಾಸನದ ಐದನೆಯ ಪ್ರಯೋಜನವು. ಸಂದೇಹವು ಉಂಟಾಗಬಾರದೆಂದೇ ವ್ಯಾಕರಣವನ್ನು ಕಲಿಯಬೇಕಾಗಿದೆ. ಯಾಜ್ಞಿಕರು—"**ಸ್ಥೂಲಪೃಷತೀಂ, ಅಗ್ನಿವಾರುಣೀಂ, ಅನಡ್ವಾಹೀಂ, ಆಲಭೇತ್**" ಎಂದುಚ್ಚರಿಸುತ್ತಾರೆ. ಆ ಪದಗಳಲ್ಲಿ 'ಸ್ಥೂಲಪೃಷತೀಮ್' ಎಂಬುದರ ವಿಗ್ರಹವನ್ನು ಹೇಗೆ ಮಾಡಬೇಕು? ಕರ್ಮಧಾರಯವನ್ನು ಮಾಡಬೇಕೋ? ಬಹುವ್ರೀಹಿಯನ್ನೋ? ಎಂಬ ಸಂದೇಹವುಂಟಾಗುವುದು. ವೈಯಾಕರಣನು ಪದಗಳ ಸ್ವರದ ಮೇಲಿಂದ ಆ ಸಮಾಸವನ್ನು ನಿಶ್ಚಿತಗೊಳಿಸುತ್ತಾನೆ. ಅದಕ್ಕೆ ಪೂರ್ವಪದ ಪ್ರಕೃತಿಸ್ವರತ್ವವಿದ್ದರೆ ಅಂದರೆ ಸ್ಥೂಲವೆಂಬ ಪೂರ್ವಪದದ ಯಾವ ಪ್ರಕೃತಿಸ್ವರವಿರುವುದೋ ಅದುವೇ ಸ್ಥಿರವಾಗಿದ್ದರೆ ಅದನ್ನು ಬಹುವ್ರೀಹಿಯೆಂದೂ ಅಂತೋದಾತ್ತಸ್ವರವಿದ್ದರೆ ಕರ್ಮಧಾರಯವೆಂದೂ ತಿಳಿಯುತ್ತಾನೆ. ಯಾವನು ವ್ಯಾಕರಣವನ್ನು ಕಲಿತಿಲ್ಲವೋ ಅವನು ಹಾಗೆ ನಿರ್ಣಯಗೊಳಿಸಲಾರನು. ಹಾಗೂ ಅಪಶಬ್ದಗಳೂ, ಸ್ವರತಃ ಅಥವಾ ವರ್ಣತಃ ದುಷ್ಟಶಬ್ದಗಳೂ, ಅಸಂಗತಶಬ್ದಗಳೂ ಎಂಬಿವು ಮುಂತಾದವುಗಳ ಪ್ರಯೋಗಗಳು ಸಂಭವಿಸಕೂಡದೆಂಬ ಹೇತುವಿನಿಂದಲೂ ವ್ಯಾಕರಣಾಧ್ಯಯನವು ಅವಶ್ಯವಾದುದು. ಹೀಗೆ ಅನೇಕ ಸೋದಾಹರಣಪ್ರಯೋಜನಗಳು ಪಾತಂಜಲಮಹಾಭಾಷ್ಯದಲ್ಲಿ ಪ್ರತಿಪಾದಿಸಲ್ಪಟ್ಟವೆ. ಇರಲಿ,

(ಸಶೇಷ).

ಬೆಂಗಳೂರು ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿತೋಟದಪ್ಪನವರ ಸ್ಟೂಡೆಂಟ್ಸ್ ಫ್ರೀ ಬೋರ್ಡಿಂಗ್ ಹೋಮ್.

ಮೈಸೂರು ದೇಶದ ಎಲ್ಲಾ ವೀರಶೈವ ವಿದ್ಯಾರ್ಥಿಗಳೂ (Old and New) ಸೀಟಿಗೋಸ್ಕರ ತಾ|| 29-6-1934 ರೊಳಗಾಗಿ ಗೊತ್ತಾದ ಫಾರಂನಲ್ಲಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಅರ್ಜಿದಾರರು ಕಡೇ ಪಕ್ಷ S.S. L.C. ಪರೀಕ್ಷೆಯಲ್ಲಿ (E.C. & P.S.) ತೇರ್ಗಡೆಹೊಂದಿದವರಾಗಿರಬೇಕು.

ಕಾಲೇಜುಗಳಲ್ಲಿಯೂ, ಟೆಕ್ನಿಕಲ್ ಸ್ಕೂಲ್‌ಗಳಲ್ಲಿಯೂ ಮತ್ತು ಸಂಸ್ಕೃತಕಾಲೇಜಿನಲ್ಲಿಯೂ, ಓದತಕ್ಕ ವಿದ್ಯಾರ್ಥಿಗಳೂ ಸಹ ಸೀಟಿಗೋಸ್ಕರ ಅಪ್ಲಿಕೇಷನ್ ಹಾಕಿಕೊಳ್ಳಬಹುದು.

ಅಪ್ಲಿಕೇಷನ್ ಜೊತೆಯಲ್ಲಿ ಅಪ್ಲಿಕೇಷನ್ ಫೀ 1 ರೂ ಅಡ್ಮಿಷನ್ ಫೀ 5 ರೂ. ಒಟ್ಟು 6 ರೂ. ಗಳನ್ನು ಕಳುಹಿಸತಕ್ಕದ್ದು. ಅಲ್ಲದೆ ಫೈನಲ್ (Final) ಪರೀಕ್ಷೆಯಲ್ಲಿ ಪಡೆದ ಪ್ರತಿಯೊಂದು ಸಬ್‌ಜೆಕ್ಟ (Subject) ನ, ನಂಬರುಗಳನ್ನೂ ಸಹ ಕಳುಹಿಸತಕ್ಕದ್ದು.

ಸ್ಥಳದೊರೆಯದವರಿಗೆ ಅಡ್ಮಿಷನ್ ಫೀ 5 ರೂ. ಮಾತ್ರ ವಾಪಸ್ ಮಾಡಲಾಗುತ್ತೆ. ತಾ||24.25-6-34 ನೇ ದಿವಸಗಳಲ್ಲಿ (Intervfew) ಗೆ ಬರತಕ್ಕದ್ದು.

ಪ್ರತಿಯೊಬ್ಬರೂ ಹಾಸ್ಟಲಿನ ರೂಲ್ಸಿಗೆ ಬದ್ಧರಾಗಿರಬೇಕು. ಸ್ಟಾಂಪು ಕಳುಹಿಸಿದಲ್ಲಿ ಅಪ್ಲಿಕೇಷನ್ ಫಾರಂಗಳನ್ನು ಕಳುಹಿಸಲಾಗುತ್ತೆ. ಸ್ಟಾಂಪು ಕಳುಹಿಸದೆ ಇದ್ದಲ್ಲಿ ಅಪ್ಲಿಕೇಷನ್ ಫಾರಂಗಳನ್ನು ಕಳುಹಿಸಲಾಗುವುದಿಲ್ಲ. ಮೇಲ್ಕಂಡ ಅಂಶಗಳನ್ನು ವಿಚಾರಿಬರತಕ್ಕ ಅಪ್ಲಿಕೇಷನ್‌ಗಳನ್ನು ಅಂಗೀಕಾರಮಾಡಲಾಗುವುದಿಲ್ಲ.

ಬೋರ್ಡಿಂಗ್ ಹೋಮಿನಿಂದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಫರ್ನೀಚರ್ಸ್ (Furnitures) ಕಟ್ಟಿ, ತಂಬಿಗೆ, ಬಕೀಟ್, ಕಪ್ ವಗೈರೆ ಸಾಮಾನುಗಳು ಕೊಡಲ್ಪಡುತ್ತೆ. ವಿದ್ಯಾರ್ಥಿಗಳು ಜೊತೆಯಲ್ಲಿ ಚಿಕ್ಕ ಒಂದು ಹಾಸಿಗೆಯೊಂದನ್ನು ತರತಕ್ಕದ್ದು.

ಸೀಟುದೊರೆತ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಕ್ಲಾಸಿಗೆ ಸಂಬಂಧಪಟ್ಟ ಎಲ್ಲಾ ಪುಸ್ತಕಗಳನ್ನು ಪಡೆದುಕೊಂಡಿರಬೇಕು. ಇಲ್ಲದ ಪಕ್ಷಕ್ಕೆ ಸೀಟು ನಿರಾಕರಿಸಲ್ಪಡುವುದು.

Sd. S. ಶಿವಪ್ಪ
ಆನರರಿ ಸೆಕ್ರೆಟರಿ.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಏಳುವರ್ಷಗಳು ತುಂಬಿ ಎಂಟನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೇ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ—

ಪಂಚಾಚಾರ್ಯ ಪ್ರಭಾ.

೧೯೩೪ನೇ ಜೂನ್ ತಾ|| ೪ ನೇ ಸೋಮವಾರ.

ಶ್ರೀವಾಣೀವಿಲಾಸ ಮಹಾಸನ್ನಿಧಾನಚರಿತಂ.

ಮೈಸೂರು ರಾಜಧಾನಿಯಲ್ಲಿ ರಾಜಿಸುವ ಓರಿಯಂಟಲ್ ಲೈಬ್ರರಿಯ ಅಸಿಸ್ಟೆಂಟ್ ಕ್ಯೂರೇಟರ್ ಮ|| ರಾ|| ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್., ಇವರು ನಮ್ಮನ್ನಾಳುವ ಮಹಾಪ್ರಭುಗಳವರ ಮಹಾಮಾತೃಶ್ರೀಯವರಾದ ಶ್ರೀವಾಣೀವಿಲಾಸ ಮಹಾಸನ್ನಿಧಾನದವರ ಚರಿತ್ರವನ್ನು "ಶ್ರೀವಾಣೀವಿಲಾಸ ಮಹಾಸನ್ನಿಧಾನಚರಿತಂ" ಎಂಬ ಹೆಸರಿನಿಂದ ಕರ್ನಾಟಕ ಭಾಷೆಯಲ್ಲಿ ಭಾಮಿನೀಷಟ್ಪದೀರೂಪವಾಗಿ ರಚಿಸಿ ಮುದ್ರಿಸಿ ನಮ್ಮ ಕಡೆಗೆ ವಿಮರ್ಶೆಗಾಗಿ ಕಳುಹಿಸಿದ್ದಾರೆ. ಗ್ರಂಥವನ್ನು ಸಂಪೂರ್ಣವಾಗಿ ಓದಿನೋಡಿದೆವು. ಈ ಗ್ರಂಥವು ಆರುಸಂಧಿಗಳಾಗಿ ವಿಭಾಗಿಸಲ್ಪಟ್ಟು ಅತ್ಯುತ್ತಮ ವಿಷಯಗಳಿಂದ ರಂಜಿಸುತ್ತಿರುವುದು. ಈವರೆಗೆ ಮಹಾಮಾತೃಶ್ರೀಯವರ ಚರಿತ್ರವನ್ನು ಪದ್ಯರೂಪವಾಗಿ ಯಾರೂ ರಚಿಸಿರಲಿಲ್ಲ. ಈ ಕಾರ್ಯವನ್ನು ಈ ಮಹಾಶಯರು ಕೈಕೊಂಡು ಪೂರ್ತಿಗೊಳಿಸಿದುದು ಅತ್ಯಂತಸಂತೋಷದ ಸಂಗತಿಯಾಗಿದೆ. ಈ ಗ್ರಂಥದಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ವಿಷಯವೂ, ಶ್ರೀ ಚಾಮರಾಜ ಒಡೆಯರವರ ವಿಷಯವೂ, ನಮ್ಮನ್ನಾಳುವ ಮಹಾಪ್ರಭುಗಳವರ ವಿಷಯವೂ, ರಾಜಮನೆತನದವರ ವಿಷಯವೂ ಸಂದರ್ಭಾನುಸಾರವಾಗಿ ಬಹುಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಮಹಾಮಾತೃಶ್ರೀಯವರು ೭ ವರ್ಷಗಳವರೆಗೆ ರಾಜ್ಯವಾಳಿದ ರೀತಿಯೂ, ಅವರ ಆಳ್ವಿಕೆಯಲ್ಲಿ ಮೈಸೂರು ರಾಜ್ಯದಲ್ಲಾದ ಸುಧಾರಣೆಗಳೂ ಬಹುಮನೋಹರವಾಗಿ ವರ್ಣಿತಗಳಾಗಿವೆ. ನಮ್ಮ ಮಹಾಪ್ರಭುಗಳವರು ವಯಸ್ಸಿಗೆ ಬಂದ ಮೇಲೆ ಬ್ರಿಟಿಷ್‌ಚಕ್ರವರ್ತಿಗಳವರ ಆಜ್ಞೆಯ ಮೇರೆಗೆ ಪಟ್ಟಾಧಿಕಾರವನ್ನು ವಹಿಸಲು ಆಗಮಿಸಿದ ಸುಪ್ರಸಿದ್ಧ ಲಾರ್ಡ್ ಕರ್ಜನ್‌ರವರು ರಾಜಪಟ್ಟಾಧಿಕಾರದ ಸಮಯದಲ್ಲಿ ಮಾಡಿದ ಅಮೋಘವಾದ ಇಂಗ್ಲೀಷ್ ಭಾಷಣವೂ, ಲಾರ್ಡ್ ಕರ್ಜನ್‌ರವರು ಮಾಡಿದ ಭಾಷಣಕ್ಕೆ ನಮ್ಮ ಮಹಾಪ್ರಭುಗಳವರು ದಯಪಾಲಿಸಿದ ಉತ್ತರರೂಪ ಭಾಷಣವೂ, ಮಹಾಮಾತೃಶ್ರೀಯವರು ತಮ್ಮ ಪುತ್ರವರ್ಯರಿಗೆ ಮಾಡಿದ ಸದುಪದೇಶವೂ ಅಕ್ಷರಾಕ್ಷರಶಃ ಭಾಮಿನೀಷಟ್ಪದಿಯಲ್ಲಿ ಅನುವಾದಮಾಡಿರುವುದನ್ನು ನೋಡಿದರೆ ಗ್ರಂಥಕರ್ತರ ಯೋಗ್ಯತೆಯು ಎಷ್ಟರಮಟ್ಟಿಗಿರಬಹುದೆನ್ನುವುದು ಪಾಠಕರಿಗೆ ವೇದ್ಯವಾಗುವುದು. ಈ ಮೂರು ಸನ್ನಿವೇಶಗಳಲ್ಲಿ ಗ್ರಂಥಕರ್ತರು ಸ್ವಭಾವೋಕ್ತ್ಯಲಂಕಾರದಿಂದ ಬಣ್ಣಿಸಿರುವ ರೀತಿಯು ಅತ್ಯಂತ ಶ್ಲಾಘನೀಯವಾಗಿದೆ. ವಾಚಕರ ಅವಗಾಹನೆಗಾಗಿ ಆ ಸಂದರ್ಭದಲ್ಲಿ ಉಲ್ಲಿಖಿತಗಳಾಗಿರುವ ಒಂದೆರಡು ಪದ್ಯಗಳನ್ನು ಇಲ್ಲಿ ಉದಾಹರಿಸೋಣ! ಲಾರ್ಡ್ ಕರ್ಜನ್‌ರವರ ಭಾಷಣದಲ್ಲಿ ಭೂಷಿಸುವ ವಾಕ್ಯಗಳಿವು—

ರಾಜ್ಯವನು ಸಲೆಯಾಳ್ವೆ ನಿನ್ನನು |
ಪೂಜಿಪುದು ಜನವಲ್ಲದಿರ್ದೊಡೆ |
ಸಾಜಮೆನೆ ತೋರ್ದಪುದು ನೈರಾಶ್ಯವನನಾದರವ ||
ರಾಜಪದವಿಯನೀವುದಾಂ ನಿನ |
ಗೋಜೆಯಿಂ ಜನದೇಳ್ಗೆಗಲ್ಲದೆ |
ನೈಜಸುಖಕೆಂದರಿದೊಡದಕಿಂ ಭ್ರಮೆಯು
ಪೆರತಿಹುದೆ ||

ಅರಸ ನಿನ್ನೀ ಜೀವಮಾನದ |
ತಿರುವಿನೊಳಗಿದನೆಲ್ಲವನು ನೀಂ |
ಮರೆಯದಿರಬೇಕೆಂದು ನಿನ್ನನು ಬೇಡಿಕೊಳ್ಳುವೆನು ||
ಇರಿಸು ಹೃದಯವ ನಿನ್ನ ಕೃತ್ಯದೊ |
ಳುರುವ ಸತ್ಯವ ಧೈರ್ಯವನು ಬಿಡ |
ದಿರು ವಿಪನ್ನರೊಳೆಸಗು ದಯೆಯನು ಮಾನಿಸೆಲ್ಲರನು ||

ಧರಣಿಯೊಳಗೈವತ್ತುವರುಷದ |
ವರೆಗವಿರ್ಪೆನೆನುತ್ತೆ ಬಗೆಯದೆ |
ಬರಿಸವೈದೇ ಬಾಳ್ವೆನೆನ್ನುತ್ತೆಸಗು ಕೃತ್ಯಗಳ ||
ಮರೆಯೆ ಮಾಳ್ಪುದನೊಮ್ಮೆ ಮತ್ತದು |
ಮರಳಿ ದೊರೆಯದು ಶೂನ್ಯಪತ್ರವ |
ದಿರಲುಬಾರದು ರಾಜನಾದಿನಚರ್ಯದೋಲೆಯಲಿ ||

ಇದೇ ರೀತಿಯಾಗಿ ಪ್ರತಿಯೊಂದು ವಿಷಯವೂ ಬಹುಲಲಿತವಾಗಿ ವರ್ಣಿಸಲ್ಪಟ್ಟಿದೆ.

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ವರ್ಣನಾವಸರದಲ್ಲಿ—

ರಾಜನೀತಂ ಶ್ರಿತಜನಕೆ ಸುರ |
ಭೂಜನೀತಂ ಬುಧಸಮಾಜಕೆ |
ಭೋಜನೀತಂ ಸತ್ಯಚರಿತನು ಸದ್ಗುಣಾಕರನು ||
ಈ ಜಗದೆ ಸದ್ಧರ್ಮವೇ ಸ |
ದ್ರಾಜನೀತನ ರೂಪದಿಂ ಸಲೆ |
ರಾಜಿಪುದು ತಾನೆನ್ನುತಾತನ ಜನವು ಪೊಗಳುತಿರೆ ||

ಈ ರೀತಿಯಾಗಿ ಹೃದಯಂಗಮ ಪದ್ಯಗಳು ರಚಿಸಲ್ಪಟ್ಟಿವೆ. ಇತ್ಯಾದಿ ಪದ್ಯಗಳನ್ನು ಪರಿಶೀಲಿಸಿದರೆ ಗ್ರಂಥಕರ್ತರ ರಚನಾರೀತಿಯು ಪಾಠಕರಿಗೆ ವೇದ್ಯವಾಗದಿರದು. ಈ ಗ್ರಂಥವು ಶಬ್ದಸೌಷ್ಠವದಿಂದಲೂ, ಪದಲಾಲಿತ್ಯದಿಂದಲೂ, ಶಬ್ದಾರ್ಥಾಲಂಕಾರಗಳಿಂದಲೂ ರಂಜಿಸುತ್ತಿರುವುದು. ಗ್ರಂಥಕರ್ತರು ಇಂಗ್ಲೀಷ ಭಾಷಾಭೂಷಿತರಾಗಿದ್ದರೂ, ಕರ್ನಾಟಕಭಾಷೆಯಲ್ಲಿ ಸುಲಭವಾಗಿ ಪಂಡಿತಪಾಮರರಿಗೆ ಅರ್ಥವಾಗುವಂತೆ ಈ ಪದ್ಯಕಾವ್ಯವನ್ನು ಬರೆದಿರುವುದು ಶ್ಲಾಘನೀಯವಾಗಿದೆ.

ಈ ಗ್ರಂಥಕ್ಕೆ ಸುಪ್ರಸಿದ್ಧ ಕವಿಗಳಾದ ಶ್ರೀಮಾನ್ ರಾಜಕವಿಭೂಷಣ ಎಚ್. ಲಿಂಗರಾಜಅರಸರವರೂ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರೊಫೆಸರರಾದ ಬಿ. ಎಂ. ಶ್ರೀಕಂಠಯ್ಯನವರೂ ಮುನ್ನುಡಿಯನ್ನು ಬರೆದಿರುವುದು ಸುವರ್ಣಕ್ಕೆ ರತ್ನವನ್ನು ಕೆಚ್ಚಿದಂತಾಗಿದೆ. ಮಹಾಪ್ರಭುಗಳವರು ಈ ಗ್ರಂಥವನ್ನು ಪರಿಶೀಲಿಸಿ ಗ್ರಂಥಕರ್ತರಿಗೆ ೨೦೦ ರೂಪಾಯಿಗಳನ್ನೂ ನೂತನ ದಿವ್ಯಾಂಬರಗಳನ್ನೂ ಬಹುಮಾನರೂಪವಾಗಿ ದಯಪಾಲಿಸಿದರೆಂಬ ವಿಷಯವನ್ನು ಕೇಳಿ ಅತ್ಯಂತ ಸಂತೋಷವೆನಿಸುತ್ತದೆ. ಈ ಗ್ರಂಥಕರ್ತರು ಇದೇರೀತಿಯಾಗಿ ಇನ್ನೂ ಅನೇಕ ಗ್ರಂಥಗಳನ್ನು ಬರೆದು ಕರ್ನಾಟಕ ಭಾಷಾಸೇವೆಯನ್ನು ಮಾಡಿ ಕರ್ನಾಟಕಮಾತೆಯ ಕೃಪೆಗೆ ಪಾತ್ರರಾಗಲೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಇದೇ ತಿಂಗಳು 18ನೇ ತಾರೀಖಿನಿಂದ 27 ರವರೆಗೆ ರಾಜಧಾನಿಯಲ್ಲಿ ಸ್ವದೇಶೀವಸ್ತುಪ್ರದರ್ಶನವು ನಡೆಯುವದು.

ಮೈಸೂರು ಮುನಿಸಿಪಾಲಿಟಿಯವರು 1933 ನೇ ವರ್ಷದಲ್ಲಿ ಕ್ಷಯರೋಗದ ನಿವಾರಣಾರ್ಥವಾಗಿ ಕೈಕೊಂಡ ಕಾರ್ಯಕ್ರಮಗಳನ್ನು ಮೆಚ್ಚಿ ಸಿಮ್ಲಾದ 'ಕಿಂಗ್ ಜಾರ್ಜ್ ಥ್ಯಾಂಕ್ಸ್‌ಗಿವಿಂಗ್ ಫಂಡಿ'ನವರು ಮೈಸೂರು ಪೌರಸಭೆಗೆ ಒಂದು ಬೆಳ್ಳಿಗುರಾಣಿಯನ್ನು ಬಹುಮಾನಮಾಡಿರುತ್ತಾರೆ.

ಮಳವಳ್ಳಿಯ ಪೋಸ್ಟ್‌ಮಾಸ್ಟರಾಗಿದ್ದ ರಾಜಾರಾಯರು ಪೋಸ್ಟ್‌ಆಫೀಸಿನ ಹಣವನ್ನು ದುರುಪಯೋಗಪಡಿಸಿದರೆಂಬ ಅಪಾದನೆಯಮೇಲೆ ಮೈಸೂರು ಸ್ಪೆಷಲ್ ಮ್ಯಾಜಿಸ್ಟ್ರೇಟರವರು ವಿಚಾರಣೆನಡೆಯಿಸಿ ಅಪರಾಧಿಗೆ 3 ವರ್ಷಗಳ ಕಠಿಣಶಿಕ್ಷೆ ಮತ್ತು 200ರೂ. ಜುಲ್ಮಾನೆಯನ್ನೂ ತಪ್ಪಿದರೆ ಪುನಃ ಒಂದು ವರ್ಷ ಕಠಿಣಶಿಕ್ಷೆಯನ್ನೂ ವಿಧಿಸಿದರು.

ಮೈಸೂರು ಸರಕಾರದವರು ತಿರಮಕೂಡ್ಲು ನರಸೀಪುರದ ಸಮೀಪದಲ್ಲಿ ಕಪಿಲಾನದಿಗೆ ದೊಡ್ಡಸೇತುವೆಯನ್ನು ಕಟ್ಟಿಸುತ್ತಿರುವರು. ಇದಕ್ಕೆ 3,45,000 ರೂ. ಗಳು ವೆಚ್ಚವಾಗುವವೆಂದು ಅಂದಾಜಾಗಿರುತ್ತದೆ. ಇದಕ್ಕಾಗಿ ಇಂಡಿಯಾಸರಕಾರದವರು 'ಇಂಡಿಯಾ ರೋಡ್‌ಸೆಸ್‌ರಿಜರ್ವ್‌ಫಂಡಿ'ನಿಂದ 1,40,000 ರೂ. ಗಳನ್ನು ಕೊಡುವುದಾಗಿ ತೀರ್ಮಾನಮಾಡಿರುತ್ತಾರೆ.

ಮಳವಳ್ಳಿ ತಾಲೂಕು ಕಂದಾಗಾಲದ ಶ್ರೀಮತ್ತಿತಾಳೇಶ್ವರಸ್ವಾಮಿದೇವಸ್ಥಾನದ ಆಗಮಿಕರಾದ ವೇ|| ಸಿದ್ಧಲಿಂಗಾರಾಧ್ಯರು ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ವಿಷಾದವೆನಿಸುತ್ತದೆ. ಇವರು ಒಳ್ಳೆ ಆಚಾರಶೀಲರೂ ಧರ್ಮಾಭಿಮಾನಿಗಳೂ ಆಗಿದ್ದು, ಆ ಪ್ರಾಂತದ ಎಲ್ಲಾ ಜನಾಂಗದವರ ಪ್ರೇಮಕ್ಕೆ ಪಾತ್ರರಾಗಿದ್ದರು. ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುತ್ತೇವೆ.

ಕಳೆದ ಮೇ 26 ನೇ ತಾರೀಖಿನ ದಿವಸ ಬೆಂಗಳೂರಿನಲ್ಲಿ ಭಯಂಕರ ಬಿರುಗಾಳಿಯು ಹುಟ್ಟಿ ದೊಡ್ಡಪೇಟೆಯಲ್ಲಿ ಒಂದು ತೆಂಗಿನ ಮರವು ಎಲೆಕ್ಟ್ರಿಕ್ ತಂತಿಯಮೇಲೆ ಬಿದ್ದು ತಂತಿಯನ್ನು ಕತ್ತರಿಸಿಹಾಕಿತು. ಅದೇ ಮಾರ್ಗವಾಗಿ ಬರುತ್ತಿದ್ದ ಒಬ್ಬ ಕೂಲಿಯವನು ತಂತಿಯನ್ನುತುಳಿದು ಕೂಡಲೇ ಮೃತಪಟ್ಟನು. 27ನೇ ತಾರೀಖಿನ ದಿವಸ ಸಾಯಂಕಾಲ ಬಿರುಗಾಳಿ ಗುಡುಗು ಮಿಂಚುಗಳ ಆರ್ಭಟವು ಮಿತಿಮೀರಿ ಮಲ್ಲೇಶ್ವರದಲ್ಲಿ ಅನೇಕ ಮನೆಗಳಿಗೆ ನಷ್ಟವಾದುದಲ್ಲದೆ ಸಾಲುಮರಗಳು ಉರುಳಿದುವು. ಮಿಂಚಿನದೆಸೆಯಿಂದ ಸಿಟಿಮಾರ್ಕೆಟ್ಟಿನ ಬಳಿ ಇಬ್ಬರು ಮೃತಪಟ್ಟರು. ಕಂಟೋನ್ಮೆಂಟಿನಲ್ಲಿ 3 ಜನರು ಕುಳಿತುಕೊಂಡು ಹೋಗುತ್ತಿದ್ದ ಒಂದು 'ಬೇಬಿ ಆಸ್ಟಿನ್' ಮೋಟಾರು ಬಿರುಗಾಳಿಯ ದೆಸೆಯಿಂದ 200 ಗಜಗಳ ದೂರ ಹಾರಿಹೋಯಿತು. ಅದೃಷ್ಟವಶಾತ್ ಯಾರಿಗೂ ಅಪಾಯವಾಗಲಿಲ್ಲ.

ರಾಜಧಾನಿಯ ಇಟ್ಟಿಗೆಗೂಡಿನಲ್ಲಿ ಓರ್ವ ಮದ್ದಿನ ವ್ಯಾಪಾರಿಯು ಮದುವೆಮನೆಗಳಿಗೆ ಮದ್ದು ಸಪ್ಲೈ ಮಾಡುವುದಕ್ಕಾಗಿ ಮೊನ್ನೆ ರಾತ್ರಿ ಒಬ್ಬ ಆಳಿನಿಂದ ಮದ್ದನ್ನು ಅರಿಸುತ್ತಿದ್ದನು. ಆಕಸ್ಮಿಕವಾಗಿ ಆ ಮದ್ದು ಹತ್ತಿಕೊಂಡು ಎಡಬಲದಲ್ಲಿಟ್ಟಿದ್ದ ಮದ್ದಿಗೆಲ್ಲಾ ಹತ್ತಿ ಭಯಂಕರ ಶಬ್ದವಾಗಿ ಮನೆಯೆಲ್ಲಾ ಉರಿದುಹೋಯಿತು. ಮನೆಯೊಳಗೆ ಮಲಗಿದ್ದ ಯಜಮಾನನು ಆತನ ಹೆಂಡತಿಯು ಪ್ರಾಯಸಮರ್ಥರಾದ ಇಬ್ಬರು ಗಂಡುಮಕ್ಕಳು ಹೊರಗೆಬರಲವಕಾಶವಿಲ್ಲದೆ ಮದ್ದಿನ ಹೊಡೆತದಿಂದ ಸುಟ್ಟುಹೋಗಿ ಆಗಲೆ ಇಬ್ಬರು ಮೃತಿಯನ್ನು ಹೊಂದಿದರಲ್ಲದೆ, ಇನ್ನಿಬ್ಬರು ಬೆಳಗೆ ಆಸ್ಪತ್ರೆಯಲ್ಲಿ ಮೃತಿಹೊಂದಿದರು. ಹೀಗೆ ಆತನು ಹೆಂಡತಿ ಮಕ್ಕಳು ಸಹಿತವಾಗಿ ಒಟ್ಟಿಗೆ ಏಕಕಾಲದಲ್ಲಿ ಪರಲೋಕಯಾತ್ರೆಗೆ ಹೊರಟ ಈ ದೃಶ್ಯವು ಶ್ರೋತೃಗಳಿಗೆ ಹೃದಯದ್ರಾವಕವೂ, ದ್ರಷ್ಟೃಗಳಿಗೆ ಅಪಾರ ದುಃಖಕರವೂ ಆಗಿದೆ. ಮದ್ದು ಅರಿಯುತ್ತಿದ್ದ ಆಳುಮಾತ್ರ ಅಪಾಯಸ್ಥಿತಿಯಲ್ಲಿರುತ್ತಾನೆ. ನಿನ್ನೆ ದಿವಸ ಈ ನಾಲ್ಕು ಜನಗಳೂ ಆಸ್ಪತ್ರೆಯಿಂದ ಏಕಕಾಲದಲ್ಲಿ ವಿಮಾನಗಳಲ್ಲಿ ಸಾಗಿಸಲ್ಪಡುತ್ತಿದ್ದ ಹೃದಯದ್ರಾವಕವಾದ ದೃಶ್ಯವು ಪ್ರೇಕ್ಷಕರಿಗೆ ಖೇದವನ್ನುಂಟುಮಾಡುತ್ತಿದ್ದಿತು. ಹಿರಿಯಮಗನಿಗೆ ಇನ್ನು ಮೂರುನಾಲ್ಕು ದಿವಸಗಳಲ್ಲಿ ಮದುವೆಯನ್ನು ಮಾಡಬೇಕೆಂದಿರುವಲ್ಲಿ ವಿಧಿವಿಲಾಸವು ಹೀಗೆ ಸಮೂಲವಾಗಿ ವಂಶವೃಕ್ಷವನ್ನೇ ಕತ್ತರಿಸಿತು. ದೈವೀ ವಿಚಿತ್ರಾ ಗತಿಃ!

ವರ್ತಮಾನಸಂಗ್ರಹ.

ಮಛಲೀ ಪಟ್ಟಣದಲ್ಲಿ ಬಿಸಲಿನ ತಾಪವನ್ನು ಸಹಿಸಲಾರದೆ ಜನರು ಸಾಯುತ್ತಿರುವರು. ಬೀದಿಯಲ್ಲಿ ಎಲ್ಲಿ ನೋಡಿದರೂ ನಾಯಿ, ಬೆಕ್ಕು, ಪಕ್ಷಿಗಳು ಮತ್ತು ಹಾವುಗಳ ಮೃತಶರೀರಗಳು ಲೆಕ್ಕವಿಲ್ಲದಹಾಗೆ ಬಿದ್ದಿರುವವಂತೆ!

ತಿರುಪತಿ ದೇವಸ್ಥಾನದ ಆಡಳಿತ ಕಮಿಟಿಯವರು 1934-35 ನೇ ಸಾಲಿನಲ್ಲಿ ದೇವಸ್ಥಾನದಲ್ಲಿ 14 ಲಕ್ಷ ರೂ. ಗಳ ಆದಾಯವಾಗುವದೆಂದೂ 14 ಲಕ್ಷ 44 ಸಾವಿರ ರೂ. ಗಳು ವೆಚ್ಚವಾಗುವುದೆಂದೂ ಅಂದಾಜು ಹಾಕಿರುತ್ತಾರೆ. ದೇವಸ್ಥಾನಕ್ಕೆ ಒಟ್ಟು 20 ಲಕ್ಷ ರೂ. ಗಳು ಬಾಕಿ ಬರಬೇಕಾಗಿದ್ದು ವಸೂಲಾಗಿಲ್ಲವಂತೆ!

ಜರ್ಮನ್ ಸರ್ಕಾರದ ಅಧ್ಯಕ್ಷರಾದ ಹಿಂಡೆನ್‌ಬರ್ಗ್‌ರವರು ರೋಗಪೀಡಿತರಾಗಿರುವರು. ಹಿಂಡೆನ್‌ಬರ್ಗ್‌ರವರು ವೃದ್ಧರಾಗಿದ್ದು, ಕಾಯಿಲೆಯೂ ಪ್ರಬಲಿಸುತ್ತಿರುವದರಿಂದ ಎಲ್ಲರೂ ಅವರ ಜೀವಿತದಲ್ಲಿ ನಿರಾಶರಾಗಿರುವರು. ಅವರು ನಿಜವಾಗಿಯೂ ಮೃತರಾದರೆ ಮುಂದೆ ಅಧ್ಯಕ್ಷಸ್ಥಾನಕ್ಕೆ ಯಾರು ಬರುವರೆಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ. ಪ್ರಾಯಶಃ ಹಿಟ್ಲರವರು ತಾವೇ ಅಧ್ಯಕ್ಷರಾಗಿ, ಛಾನ್ಸಲರ ಸ್ಥಾನಕ್ಕೆ ತಮ್ಮ ಕೈಕೆಳಗಿನ ಅಧಿಕಾರಗಳಲ್ಲಿ ಯಾರನ್ನಾದರೂ ನೇಮಿಸಬಹುದು. ಅಥವಾ ಹೆಸರಿಗೆ ಮಾತ್ರ ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿ, ಅಧಿಕಾರ ಸೂತ್ರವನ್ನು ತಾವೇ ವಹಿಸಬಹುದು. ಅಂತೂ ಈ ಸನ್ನಿವೇಶವು ಯಾವರೀತಿ ಪರ್ಯವಸಾನವಾಗುವುದೋ ಎಂದು ಎಲ್ಲ ರಾಷ್ಟ್ರಗಳವರೂ ಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಚೀಣಾದಲ್ಲಿ ವೈಮಾನಿಕ ಶಿಕ್ಷಣಶಾಲೆಯ ಸ್ಥಾಪನೆ!

ಚೀಣಾಸರಕಾರದವರು 1937 ನೇ ವರ್ಷದೊಳಗಾಗಿ 1500 ಯುದ್ಧದ ವಿಮಾನಗಳನ್ನು ಹೊಂದಿರುವ ಒಂದು ದೊಡ್ಡ ವೈಮಾನಿಕ ಸೈನ್ಯವನ್ನು ಸಿದ್ಧಗೊಳಿಸಬೇಕೆಂದು ನಿರ್ಧರಿಸಿರುತ್ತಾರೆ. ಅದಕ್ಕಾಗಿ ಹಾಂಗ್‌ಕಾಂಗಿನಲ್ಲಿ ಏಷ್ಯಾಖಂಡದಲ್ಲೆಲ್ಲಾ ಅತ್ಯಂತ ದೊಡ್ಡದಾದ ವೈಮಾನಿಕ ಶಿಕ್ಷಣಶಾಲೆಯು ಸ್ಥಾಪಿಸಲ್ಪಟ್ಟಿರುವುದು.

136 ವರ್ಷದ ಮನುಷ್ಯ!

ಬೆಲ್‌ಗ್ರೇಡ್ ನಗರದ ಸಮೀಪದಲ್ಲಿರುವ ನೋವ ಸೇಲ ಎಂಬಲ್ಲಿ ವಾಸವಾಗಿರುವ ಜೆಲಿಂಕೊ ಬ್ಯಾಬಿಚ್ ಎಂಬಾತನಿಗೆ 136 ವಯಸ್ಸಾಗಿರುವುದು. ಅವನ ವಿವಾಹದ ಸರ್ಟಿಫಿಕೇಟಿನಿಂದ ಅವನಿಗೆ 1891 ರಲ್ಲಿ ವಿವಾಹವಾಯಿತೆಂದೂ, ಆಗ ಅವನಿಗೆ 21 ವರ್ಷ ವಯಸ್ಸಾಗಿತ್ತೆಂದೂ ತಿಳಿದು ಬರುತ್ತದೆ. ಅವನಿಗೆ ಇದುವರೆಗೆ 386 ಜನ ಮಕ್ಕಳು ಮೊಮ್ಮಕ್ಕಳು ಮತ್ತು ಮರಿಮಕ್ಕಳು ಜನಿಸಿದ್ದು ಅವರಲ್ಲಿ ಸದ್ಯಃ 219 ಜನರು ಜೀವಂತರಾಗಿರುವರಂತೆ!

ಗಲಗಲಿ ಬೃಹನ್ಮಠದ ಶ್ರೀಚರಮೂರ್ತಿ ಸ್ವಾಮಿಗಳವರ ನಿಧನ.

ಗಲಗಲಿ ಬೃಹನ್ಮಠದ ಶ್ರೀಚರಮೂರ್ತಿಸ್ವಾಮಿಗಳವರು ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಕಾಶೀ ಮೊದಲಾದ ಸ್ಥಳಗಳಿಗೆ ಹೋಗಿ ವೈದಿಕವಿದ್ಯೆಯನ್ನು ಉತ್ತಮವಾಗಿ ಸಂಪಾದಿಸಿಕೊಂಡಿದ್ದರಲ್ಲದೆ, ಅಸಾಧಾರಣ ಧರ್ಮಾಭಿಮಾನಿಗಳಾಗಿದ್ದರು. ಇವರ ವಿಯೋಗದಿಂದ ವೀರಶೈವಸಮಾಜಕ್ಕೆ ದೊಡ್ಡದೊಂದು ಕೊರತೆಯುಂಟಾದಂತೆ ಹೇಳಬೇಕಾಗಿದೆ. ಜಗದಾಚಾರ್ಯರು ಮೃತರಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುತ್ತೇವೆ.

ದೇವತೆಗಳ ಅಸ್ತಿತ್ವವನ್ನು ಸಿದ್ಧಮಾಡುವಸಂಘ!

ದೇವತೆಗಳ ಅಸ್ತಿತ್ವವನ್ನು ಶಾಸ್ತ್ರೀಯ ದೃಷ್ಟಿಯಿಂದ ಸಿದ್ಧಮಾಡಿತೋರಿಸುವುದಕ್ಕಾಗಿ ಲಕ್ನೋನಗರದಲ್ಲಿ ಒಂದು ಸಂಘವು ಏರ್ಪಟ್ಟಿರುವುದು. ಪ್ರೊಫೆಸರ್ ರಾಧಾಕುಮುದ ಮುಕರ್ಜಿ ಎಂಬವರು ಇದಕ್ಕೆ ಒಬ್ಬ ಮೆಂಬರರಾಗಿರುವರು. ಹಿಮಾಲಯ ನಿವಾಸಿಗಳಾಗಿ ಮಹಾತಪಸ್ವಿಗಳೆಂದು ಪ್ರಸಿದ್ಧಿಹೊಂದಿರುವ ಪಂಡಿತ ದುರ್ಗಾದತ್ತಪಂತರವರು ಇದರ ಮುಖ್ಯ ಸಂಚಾಲಕರಾಗಿದ್ದು, ಇದೇ ಕಾರ್ಯೋದ್ದೇಶದಿಂದ ಇವರು ಕಳೆದ 25 ವರ್ಷಗಳಿಂದಲೂ ಪ್ರಯತ್ನಿಸುತ್ತಿರುವರಂತೆ!

ದಕ್ಷಿಣ ಅಮೇರಿಕೆಯಲ್ಲಿ ಜಪಾನರ ಪೈಪೋಟಿ!

ದಕ್ಷಿಣ ಅಮೇರಿಕೆಯ ನಗರಗಳಲ್ಲಿ ಬ್ರಿಟಿಷರು ಬಟ್ಟೆಯ ವ್ಯಾಪಾರವನ್ನು ವಿಶೇಷವಾಗಿ ಮಾಡುತ್ತಿದ್ದು ಜಪಾನರ ಪೈಪೋಟಿಯಿಂದ ಅದು ಬಹಳ ಮಟ್ಟಿಗೆ ಕಡಿಮೆಯಾಗಿ ಹೋಗಿರುತ್ತದೆ. ಜಪಾನೀಯರು 3 ಕಾಸಿಗೆ ಒಂದು ಜೊತೆ ಕಾಲುಚೀಲವನ್ನೂ, 2 ಆಣೆಗೆ ಒಂದು ಪಠಾಯನ್ನೂ, 12 ಆಣೆಗೆ ಸಂಪೂರ್ಣ ಉಡುಪುಗಳನ್ನೂ ಮಾರುತ್ತಿರುವರು. ಈ ಮೊಬಲಗು ಆ ಪದಾರ್ಥಗಳನ್ನು ತಯಾರಿಸುವ ಅಸಲು ವೆಚ್ಚವು ಸಹ ಆಗುವುದಿಲ್ಲವಾದ್ದರಿಂದ ಜಪಾನ್ ಸರಕಾರದವರು ಬ್ರಿಟಿಷರ ವ್ಯಾಪಾರವನ್ನು ಸಂಪೂರ್ಣವಾಗಿ ಹಾಳುಮಾಡುವುದಕ್ಕಾಗಿ ವರ್ತಕರಿಗೆ ಗುಪ್ತವಾಗಿ ಸಹಾಯಮಾಡಿ ಪದಾರ್ಥಗಳನ್ನು ಅತ್ಯಂತ ಕಡಿಮೆ ಕ್ರಯಕ್ಕೆ ಮಾರಿಸುತ್ತಿರುವರೆಂದು ಊಹಿಸಲ್ಪಟ್ಟಿದೆ.

30,000 ರೂ ಬೆಲೆಯುಳ್ಳ ಮೂಗು!

ಮಕ್ಕಾ ನಗರದ ಷೇಕ್ ಜಲಾಲ್ ಖುರೇಷಿ ಎಂಬಾತನು ಲಂಡನ್ನಿನ ಒಂದಾನೊಂದು ಕಂಪೆನಿಯಲ್ಲಿ ತನ್ನ ಮೂಗನ್ನು 30,000 ರೂಪಾಯಿಗಳಿಗೆ ಇನ್ಷೂರ್ ಮಾಡಿರುವನು! ಸುಗಂಧದ್ರವ್ಯಗಳನ್ನು ಮೂಸಿನೋಡುವುದರಲ್ಲಿ ಈತನು ಅತ್ಯಂತ ಚತುರನು! ಮೂಸಿನೋಡಿದ ಮಾತ್ರದಿಂದಲೇ ಅದು ಇಂಥ ಸುಗಂಧವೆಂದೂ, ಅದರಲ್ಲಿ ಇಂಥಿಂಥ ಪದಾರ್ಥಗಳನ್ನು ಇಷ್ಟಿಷ್ಟೇ ಪ್ರಮಾಣದಲ್ಲಿ ಸೇರಿಸಿರುವರೆಂದೂ ಹೇಳಬಲ್ಲನು. ಈತನು ಇದುವರೆಗೆ ಸಹಸ್ರಾರು ಮೈಲುಗಳ ದೂರ ಪ್ರಯಾಣಮಾಡಿ ನೂರಾರು ತರಹದ ಅಪೂರ್ವಗಳಾದ ಸುಗಂಧವಸ್ತುಗಳನ್ನು ಶೇಖರಿಸಿರುವನು. ಈತನು ಶೇಖರಿಸುವ ಸುಗಂಧಗಳಲ್ಲಿ "ಟೂಟೆನ್‌ಖಾಮೆನ್" ಎಂಬ ಗೋರಿಯಿಂದ ತೆಗೆಯಲ್ಪಟ್ಟ ಸುಗಂಧದ ಶೀಸೆಯೊಂದಿರುವದು. ಅದು ಸುಮಾರು 4,000 ವರ್ಷಗಳ ಹಿಂದೆ ತಯಾರಿಸಲ್ಪಟ್ಟಿರುವದಂತೆ!

ಜರ್ಮನಿಯಲ್ಲಿ ವಿವಾಹವಿಚ್ಛೇದಕ್ಕೆ ವಿರೋಧ!

ಬರ್ಲಿನ್‌ನಗರದ 'ನಾಜಿ ನ್ಯಾಯವಾದಿಗಳ ಸಂಘ'ದವರು ವಿವಾಹವಿಚ್ಛೇದವನ್ನು ಸಾಧ್ಯವಾಗುವಷ್ಟುಮಟ್ಟಿಗೆ ನಿಲ್ಲಿಸುವುದಕ್ಕಾಗಿ ಒಂದು ಹೊಸ ಕಾನೂನನ್ನು ಪ್ರಕಟಿಸಿರುವರು. ಈ ಕಾನೂನಿನ ಪ್ರಕಾರವಾಗಿ ಕೇವಲ ಅನಿವಾರ್ಯಗಳಾದ ಸಂದರ್ಭಗಳ ಹೊರತು ಇತರ ಯಾವ ಕಾರಣಗಳಿಂದಲೂ ಒಂದಾವರ್ತಿ ಮದುವೆಯಾದ ಸತಿಪತಿಗಳು ವಿವಾಹವಿಚ್ಛೇದವನ್ನು ಹೊಂದಲಾಗುವುದಿಲ್ಲ. ಹಾಗೂ ಮದುವೆಯಾಗುವ ಸತಿಪತಿಗಳು ಪೂರ್ವಭಾವಿಯಾಗಿ ಸರಕಾರದಿಂದ ಅಪ್ಪಣೆಯನ್ನು ಪಡೆಯಬೇಕಾಗುವುದು. ಮತ್ತು ಮಕ್ಕಳಿಲ್ಲದ ದಂಪತಿಗಳು ಇತರರ ಮಕ್ಕಳ ಪೋಷಣೆಗೆ ತಮ್ಮ ಆದಾಯದಲ್ಲಿ ಅಲ್ಪಸ್ವಲ್ಪ ಸಹಾಯಮಾಡಬೇಕಾಗುತ್ತದೆ. ಇದನ್ನು ಜರ್ಮನ್ ಸರಕಾರದವರು ಕಾನೂನನ್ನಾಗಿ ಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ.

ಅನರ್ಥಕಾರಿಯಾದ ರತ್ನ!

ನಾಗಪುರದಲ್ಲಿ ಒಂದು ಅಮೂಲ್ಯವಾದ ನೀಲಮಣಿಯ ದೆಸೆಯಿಂದ ಅನರ್ಥಪರಂಪರೆಯು ಸಂಭವಿಸಿರುತ್ತದೆ. ಇದು ಪ್ರಥಮತಃ ಒಬ್ಬ ವರ್ತಕನ ಬಳಿಯಲ್ಲಿತ್ತು. ಅದನ್ನು ಕೊಂಡು ಕೊಂಡ 4 ದಿನಗಳೊಳಗಾಗಿ ವರ್ತಕನು ಒಂದುಮೋಟಾರ್ ಅನಾಹುತದಲ್ಲಿ ವಿಶೇಷ ಗಾಯಹೊಂದಿದುದಲ್ಲದೆ ಅವನಿಗೆ ವ್ಯಾಪಾರದಲ್ಲಿ ದಿನೇ ದಿನೇ ನಷ್ಟವುಂಟಾಗುತ್ತ ಬಂದಿತು. ವರ್ತಕನು ಇದರಿಂದ ಗಾಬರಿಯಾಗಿ ಅದನ್ನು ತನ್ನ ಮನೆಯ ಸಮೀಪದಲ್ಲಿದ್ದ ಒಬ್ಬ ವಕೀಲರಿಗೆ ಮಾರಿದನು. ವಕೀಲರು ಅದನ್ನು ಕೊಂಡುಕೊಂಡ 12 ಗಂಟೆಗಳೊಳಗಾಗಿ ಸೀತಾಬುಲ್ಡಿಯಲ್ಲಿರುವ ಶಾಂತಿದೇವಾಲಯದ ಹತ್ತರ ಟಾಂಗಾದಿಂದ ಬಿದ್ದು ಗಾಯಹೊಂದಿದರು. ಅವರು ಅದನ್ನು ಮತ್ತೊಬ್ಬ ವಕೀಲರಿಗೆ ಮಾರಿಬಿಟ್ಟರು. ಅವರ ಹೆಂಡತಿಯು ಕೂಡಲೇ ರೋಗಗ್ರಸ್ತಳಾಗಿ, ಸತ್ತಳು. ಎರಡನೇ ವಕೀಲರು ತಾವು ಕೊಂಡುಕೊಂಡ ರತ್ನವೇ ಇದಕ್ಕೆ ಕಾರಣವೆಂದು ತಿಳಿದು ಅದನ್ನು ಹಿಂತಿರುಗಿಕೊಡಲು ಮೊದಲನೇ ವಕೀಲರ ಮನೆಗೆ ಹೋದರು. ಆ ವೇಳೆಯಲ್ಲಿ ಅವರು ಮನೆಯಲ್ಲಿಲ್ಲದಿರಲು ರತ್ನವನ್ನು ವಕೀಲರ ಅಡಿಗೆಯವನ ವಶಕ್ಕೆ ಕೊಟ್ಟು ಹಿಂತಿರುಗಿದರು. ಇದಾದ 2 ಗಂಟೆಗಳೊಳಗಾಗಿ ಆ ಅಡಿಗೆಯವನ ತಾಯಿಯೂ ಮತ್ತು ಮಗನೂ ಕೈಕಾಲುಗಳನ್ನೆಲ್ಲಾ ಸುಟ್ಟುಕೊಂಡರು. ಅನಂತರ ಅದು ಮತ್ತೊಬ್ಬ ತರುಣ ವಕೀಲರ ಕೈಸೇರಿತು. ಅವರು ಒಂದು ದಿನ ಮೋಟಾರ್ ಬೈಸಿಕಲ್ಲಿನ ಮೇಲೆ ಕುಳಿತುಕೊಂಡು ತೆಲಿನ್‌ಖೇರಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಮುಗ್ಗರಿಸಿ ಕೆರೆಯೊಳಕ್ಕೆ ಬಿದ್ದು, ಜೀವಸಹಿತ ಬರುವದೇ ಪ್ರಯಾಸವಾಯಿತು. ಸದ್ಯಃ ಈಗ ಆ ರತ್ನವು ಒಬ್ಬ ಪಾರ್ಶಿಸ್ತ್ರೀಯಳ ಕೈಸೇರಿರುವುದು. ಮುಂದೇನಾಗುವುದೋ ನೋಡಬೇಕಾಗಿದೆ.

ಸ್ವೀಕಾರ

ಬೆಳಗಾಂವ ಡಿ|| ತೇರದಾಳಗ್ರಾಮದಲ್ಲಿ ನೆರವೇರಿದ ಮ|| ರಾ|| ವೀರಭದ್ರಪ್ಪ ಯಾದವಾಡ ಮತ್ತು ವಿರೂಪಾಕ್ಷಪ್ಪ ಯಾದವಾಡ ಇವರ ವಿವಾಹಸಮಯದಲ್ಲಿ ವಧೂವರರಿಂದ ತೆಗೆಯಿಸಿದ 3 ರೂ. ಗಂಗಪ್ಪ ಪರಪ್ಪಶೆಟ್ಟಿ ಮತ್ತು ಬಾಳಪ್ಪ ಪರಪ್ಪಶೆಟ್ಟಿ ಇವರ ವಿವಾಹಸಮಯದಲ್ಲಿ ತೆಗೆಯಿಸಿದ 1 ರೂ. ಅಲ್ಲಪ್ಪ ದಾನಪ್ಪಶೆಟ್ಟಿ ಇವರ ವಿವಾಹಸಮಯದಲ್ಲಿ ತೆಗೆಯಿಸಿದ 1 ರೂ. ಮ|| ರಾ|| ಬಾಳಪ್ಪಶೆಟ್ಟಿ ಇವರ ನಿಷೇಕ ಸಮಯದಲ್ಲಿ ತೆಗೆಯಿಸಿದ 1 ರೂ. ಒಟ್ಟು 6 ರೂ. ಗಳು ತೇರದಾಳ ಹಿರಿಯಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಬೆಲವಂತರಗ್ರಾಮದ ಹಿರಿಯಮಠದ ಶ್ರೀ ಶಿವಯೋಗಿಗಳವರ ತಮ್ಮಂದಿರ ಪುತ್ರ ಚಿ|| ಗಂಗಯ್ಯಸ್ವಾಮಿ ಎಂಬ ವರನಿಗೆ ಗಂಜಿಗಟ್ಟಿ ಹಿರಿಯಮಠದ ವೇ|| ಚನ್ನವೀರಯ್ಯನವರ ಪುತ್ರಿ ಚಿ|| ಸೌ|| ಗದಿಗವ್ವನೆಂಬ ವಧುವನ್ನು ತಂದು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ವಧೂವರರಿಂದ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ವೇ|| ಬಸವಯ್ಯಸ್ವಾಮಿ ಹಿರಿಯಮಠ ಬೆಲವಂತರ ಇವರ ದ್ವಾರಾ ತಲ್ಪಿರುತ್ತವೆ.

ಕರವೀರ ಇಲಾಖೆಗೆ ಸೇರಿದ ಬನ್ನೂರುಗ್ರಾಮದ ಹಿರಿಯಮಠದ ಪಟ್ಟಾಧಿಕಾರವನ್ನು ಶ್ರೀ ಶಾಂತವೀರ ಶಿವಾಚಾರ್ಯರೆಂಬವರಿಗೆ ವಹಿಸಿ ಅಧಿಕಾರಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಗಳು ರಾಮದುರ್ಗ ಹಿರಿಯಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ|| ಗಲಗಲಿ ಹಿರಿಯಮಠದ ಶ್ರೀ ಚರಮೂರ್ತಿಸ್ವಾಮಿಗಳವರು ತಾ|| 27-4-1934 ನೆಯ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಶ್ರೀ ಬೀಳಗಿ ಹಿರಿಯಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರುಗಳಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಟಿ. ರೇವಣ್ಣನ ಆಕ್ರೋಶ.

ಟಿ. ರೇವಣ್ಣ ಎಂಬಾತನು ಪ್ರಜಾಬಂಧುವಿನಲ್ಲಿ ಮನಸ್ಸಿಗೆ ಬಂದಂತೆ ಲೇಖವನ್ನು ಬರೆದು ತನ್ನ ಬಾಯಿತೀಟೆಯನ್ನು ತೀರಿಸಿಕೊಂಡಿದ್ದಾನೆ. ಹೀಗೆ ಯದ್ವಾತದ್ವಾ ಬರೆಯೋಣದರಿಂದ ಈತನು ತನ್ನ ಯೋಗ್ಯತೆಯನ್ನು ಸಮಾಜದಲ್ಲಿ ತೋರಿಸಿಕೊಂಡನೇ ಹೊರತು ಬೇರೆಂದಿಲ್ಲವೆನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಮೇಲಂತೂ ತನ್ನ ಅಸೂಯಾಸ್ವಭಾವವನ್ನು ಮಿತಿಮೀರಿ ತೋರಿಸಿದ್ದಾನೆ. ಈವರೆಗೆ ಅವರ ಮೇಲೆ ಬಿದ್ದ ಅನೇಕ ಪ್ರಾಣಿಗಳು ಮಣ್ಣುಮುಕ್ಕಿಹೋಗಿವೆ. ಇದು ಜಗತ್ತಿಗೆಲ್ಲಾ ತಿಳಿದೇ ಇದೆ. ಹೀಗಿದ್ದರೂ ಈ ಪ್ರಾಣಿಯು ವ್ಯರ್ಥವಾಗಿ ಜಗಿದಾಡಿರುವುದು ಹಾಸ್ಯಾಸ್ಪದವಾಗಿದೆ. ಅವರ ಕಡೆಯಿಂದ ಈವರೆಗೆ ಖಂಡನಾತ್ಮಕವಾಗಿ ಹೊರಟ ಅನೇಕ ಗ್ರಂಥಗಳು ಜಗತ್ತಿನಲ್ಲಿ ಕೋಟಿಸೂರ್ಯರಂತೆ ಪ್ರಕಾಶಿಸುತ್ತಿರುವುದನ್ನು ಈ ಪ್ರಾಣಿಯು ನೋಡಿದಂತೆ ತೋರಲಿಲ್ಲ. ನೋಡಿದ್ದರೆ ಹೀಗೆಂದಿಗೂ ಬರೆಯುತ್ತಿರಲಿಲ್ಲ. ಆ ಗ್ರಂಥಗಳು ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕು ಐದುಸಾರೆ ಪುನಃ ಪುನಃ ಮುದ್ರಿತಗೊಂಡು ಜಗತ್ತಿನಲ್ಲಿ ಜಯಭೇರಿಯನ್ನು ಹೊಡೆಯುತ್ತಿರಲು, ಆ ಜಯಧ್ವನಿಯು ಈ ಪ್ರಾಣಿಯ ಕರ್ಣಕುಹರವನ್ನು ಪ್ರವೇಶಿಸಿದಂತೆ ತೋರಲಿಲ್ಲವೆಂದು ತೋರುತ್ತದೆ. ಸುಮ್ಮನೆ ಅಸೂಯಾಧರದಲ್ಲಿ ಉದ್ವೇಗಕರ ವಾಕ್ಯಗಳನ್ನು ಬರೆಯುವುದು ಈತನಿಗೆ ಎಷ್ಟು ಭೂಷಣವಲ್ಲ. ಶಾಂತಿಯನ್ನವಲಂಬಿಸಬೇಕು. ಈತನು ಗುರುಸಾರ್ವಭೌಮನ ಪುಣ್ಯಾಭಿಧಾನವನ್ನು ಇಟ್ಟುಕೊಂಡಿದ್ದರೂ, ಆ ಗುರುವರ್ಯನ ದ್ವೇಷಿಗಳನ್ನು ಸ್ತುತಿಸಿರುವುದೂ, ಆ ಗುರುವರ್ಯನ ಭಕ್ತರನ್ನು ನಿಂದಿಸಿರುವುದೂ ಈತನ ಹೆಸರಿಗೆ ಕಳಂಕವೆಂದೇ ಹೇಳಬೇಕಾಗಿದೆ. ಇನ್ನು ಮುಂದಾದರೂ ರೇವಣ್ಣನು ಶ್ರೀ ಜಗದ್ಗುರು ರೇವಣಸಿದ್ಧನಲ್ಲಿ ನೈಜವಾದ ಭಕ್ತಿಯನ್ನಿಟ್ಟು ಗುರುದ್ವೇಷಿಗಳನ್ನು ಖಂಡಿಸಿ ತನ್ನ ಹೆಸರಿಗೆ ಗೌರವವನ್ನು ತಂದುಕೊಳ್ಳಲೆಂದಾಶಿಸುವ.

ಎಸ್. ಬಿ. ಸಿದ್ಧಲಿಂಗಪ್ಪ.

ಹಿಮಾಲಯಪ್ರಾಂತದ ಸಮಾಚಾರ.

ತಾ|| 24-4-34 ರಲ್ಲಿ ಹಿಮಾಲಯ ಪ್ರಾಂತೀಯಸಾಹಿತ್ಯ ಸಮ್ಮೇಲನವು ಪ್ರತಿವರ್ಷದ ನಿಯಮಾನುಸಾರವಾಗಿ ಶ್ರೀ ಜಗದ್ಗುರು ಕೇದಾರ ಪೀಠ ಉಖಾಮಠದಲ್ಲಿ ಪಂಡಿತ ಭೋಲಾದತ್ತ ಶಾಸ್ತ್ರೀ ಕಾವ್ಯಾಚಾರ್ಯ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಗತವರ್ಷದ ಸಾಹಿತ್ಯ ಸಮ್ಮೇಲನದಲ್ಲಿ ಉತ್ತಮ ಕವಿತೆಯನ್ನು ಮಾಡಿದ ಕೋಣೆತಪುರಪಾಠಶಾಲಾಧ್ಯಕ್ಷ ಪಂಡಿತ ಬಾಲಕೃಷ್ಣ ಶಾಸ್ತ್ರಿ ಇವರಿಗೆ "ಕವಿತಾಕೋವಿದ" ಎಂಬ ಪದವಿಯಿಂದ ಅಂಕಿತವಾದ ಸುವರ್ಣ ಪದಕವನ್ನು ಅಧ್ಯಕ್ಷರು ಬಹುಮಾನವಾಗಿ ಕೊಟ್ಟರು. ಈ ವರ್ಷದ ಕವಿಸಮ್ಮೇಲನದಲ್ಲಿ ಸರ್ವೋತ್ತಮವಾದ ಕವಿತೆಯನ್ನು ರಚಿಸಿದ ಮಹಿಕೋಟಿ ಪಾಠಶಾಲಾಧ್ಯಕ್ಷ ಪಂಡಿತ ತುಲಸೀರಾಮಶಾಸ್ತ್ರಿಗಳಿಗೆ "ಕವಿರತ್ನ" ಎಂಬ ಪದವಿಯನ್ನೂ, ಹಿಂದುಸ್ಥಾನಿ ಭಾಷೆಯಲ್ಲಿ ಸರ್ವೋತ್ತಮವಾದ ಕವಿತೆಯನ್ನು ರಚಿಸಿದ ಉಖಾಮಠದ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ವರ್ನಾಕ್ಯುಲರ್ ಮಿಡಲ್ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರ್ ಪಂಡಿತ ಆತ್ಮಾರಾಂ ಇವರಿಗೆ "ಕವಿತಾ ಕೌಶಲ" ಎಂಬ ಪದವಿಯನ್ನೂ ಕೊಡಲಾಯಿತು. ಈ ಉಭಯರೂ ಸಂಸ್ಕೃತ ಮತ್ತು ಹಿಂದೀ ಕವಿತೆಗಳಲ್ಲಿ ಶ್ರೇಷ್ಠತೆಯನ್ನು ತೋರಿಸಿದ್ದರಿಂದ ಇವರಿಗೆ 1935 ರಲ್ಲಿ ನಡೆಯುವ ಸಾಹಿತ್ಯ ಸಮ್ಮೇಲನದಲ್ಲಿ ಸುವರ್ಣ ಪದಕವನ್ನು ಕೊಡಲಾಗುವದೆಂದು ಸಭೆಯಲ್ಲಿ ನಿರ್ಧರಿಸಲ್ಪಟ್ಟಿತು. ಮಹಾಸ್ವಾಮಿಗಳಾದ ಕೈಲಾಸಲಿಂಗ ಶಿವಾಚಾರ್ಯರ ಕರಕಮಲದಿಂದ ಶ್ರೀಕೇದಾರನಾಥ ಸಂಸ್ಕೃತ ಮಹಾವಿದ್ಯಾಲಯದ ನ್ಯಾಯ, ವ್ಯಾಕರಣ, ವೇದ, ವೇದಾಂತ, ಜ್ಯೋತಿಷ್ಯಶಾಸ್ತ್ರಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೂ ಮಿಡಲ್, ಅಪ್ಪರ್ ಸ್ಕೂಲಿನ ವಿದ್ಯಾರ್ಥಿಗಳಿಗೂ, ಪುಸ್ತಕಾದಿ ವಸ್ತುಗಳೂ ಕೊಡಲ್ಪಟ್ಟವು.

ಪ್ರಕಾಶಕ
ಮಹಿಮಾನಂದ ಶಾಸ್ತ್ರೀ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪಟ್ಟಾಧಿಕಾರಮಹೋತ್ಸವ.

ಬನ್ನೂರು.

ಕರವೀರ ಇಲಾಖೆಗೆ ಸೇರಿದ ಬನ್ನೂರು ಗ್ರಾಮದ ಹಿರೇಮಠಾಧಿಪತಿಗಳಾದ ಶ್ರೀ|| ಷ|| ಬ್ರ|| ಚನ್ನವೀರ ಶಿವಾಚಾರ್ಯ ಪಟ್ಟಾಧ್ಯಕ್ಷಸ್ವಾಮಿಗಳರ ಭಾವಿ ಉತ್ತರಾಧಿಕಾರಿಗಳಾದ ಶ್ರೀ ಶಾಂತವೀರಶಿವಾಚಾರ್ಯರೆಂಬವರಿಗೆ ತಾ|| 21-5-1934 ನೇ ಸೋಮವಾರ ದಿವಸ ಮಂಗಳೂರು ಅರಳೆಲೆಮಠದ ಪಟ್ಟಾಧ್ಯಕ್ಷರವರಿಂದ ಅಧಿಕಾರ ಸಮಾರಂಭವೂ ಪಂಚಮುದ್ರಾಧಾರಣ ಮಂತ್ರೋಪದೇಶಾದಿಕಾರ್ಯಗಳೂ ನೆರವೇರಿದುವು. ಈ ಸಮಾರಂಭಕ್ಕೆ ಬಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀಶಂಭುಲಿಂಗಶಿವಾಚಾರ್ಯರವರು ಆಗಮಿಸಿ 5 ದಿವಸಗಳವರೆಗೆ ಸಿದ್ಧಾಂತಶಿಖಾಮಣಿಯ ಪ್ರವಚನವನ್ನು ಮಾಡಿದರು. ಈ ಸಮಾರಂಭಕ್ಕೆ ಬೆಳಗಾಂವ, ಸತ್ತೀಗೇರಿ, ಬಾರ್ಸಿ, ಕಟಕೋಳ, ಬರಿಗಿ, ಲೋಕಾಪೂರ, ರಾಮದುರ್ಗ ಇತ್ಯಾದಿ ಗ್ರಾಮಗಳ ಪಟ್ಟಚರಾಧಿಕಾರಿಗಳು ದಯಮಾಡಿಸಿದ್ದರು. ಸಾವಿರಾರುಜನ ಮಾಹೇಶ್ವರರಿಗೆ ಅನ್ನಸಂತರ್ಪಣೆಯು ನೆರವೇರಿತು. ಸದರಿ ಗ್ರಾಮದಲ್ಲಿ ನೂತನ ಅಧಿಕಾರಿಗಳ ಅಡ್ಡಪಲ್ಲಕ್ಕಿಮಹೋತ್ಸವವು ವಿಶೇಷ ವಿಜೃಂಭಣೆಯಿಂದ ಸಾಗಿತು. ಈ ಸಮಾರಂಭ ಸಮಯದಲ್ಲಿ ಜಗದಾಚಾರ್ಯರ ಹೆಸರಿನಿಂದ ಪ್ರಭಾಪೋಷಣಕ್ಕಾಗಿ ೨ ರೂ. ಗಳು ಸಮರ್ಪಿಸಲ್ಪಟ್ಟವು.

ಪಟ್ಟಾಧಿಕಾರಿಗಳು, ಹಿರೇಮಠ,
ರಾಮದುರ್ಗ.

ಬಲ್ಲಿರಾ ?

೧. ರಕ್ತದಲ್ಲಿ ಕಬ್ಬಿಣದ ಅಂಶವಿರುವುದೇಕೆ ?

ಮನುಷ್ಯದೇಹದ ರಕ್ತದಲ್ಲಿ ಕಬ್ಬಿಣದ ಅಂಶವಿರುವುದೇಕೆ? ರಕ್ತಕ್ಕೆ ಅದರಿಂದೇನು ಉಪಯೋಗ? ಕಬ್ಬಿಣವಾದರೋ ಉಳಿ, ಕೊಡಲಿ, ಪಾತ್ರೆಗಳನ್ನು ಮಾಡಲು ಬರುವಂಥದು. ಆದರೆ ಶಾಸ್ತ್ರೀಯದೃಷ್ಟಿಯಿಂದ ನೋಡಿದರೆ ರಕ್ತದ ಕಣಗಳಲ್ಲಿ ಕಬ್ಬಿಣವು ಮಿಶ್ರಿತವಾಗಿರುವುದು ಕಂಡುಬರುವುದು. ಪುರುಷರ 1 ಪಿಂಟು (Pint) ರಕ್ತದಲ್ಲಿ ನೂರರಲ್ಲಿ ಒಂದಂಶ ಕಬ್ಬಿಣವಿರುತ್ತದೆ. ಮತ್ತು 1 ಪಿಂಟು ಸ್ತ್ರೀರಕ್ತದಲ್ಲಿ ನೂರಿಪ್ಪತ್ತರಲ್ಲಿ ಒಂದಂಶ ಕಬ್ಬಿಣವಿರುತ್ತದೆ. ನಾವು ಶ್ವಾಸದಲ್ಲಿ ತೆಗೆದುಕೊಳ್ಳುವ ಪ್ರಾಣವಾಯುವು ಪುಪ್ಪುಸಮಾರ್ಗವಾಗಿ ನಮ್ಮ ದೇಹವನ್ನೆಲ್ಲಾ ವ್ಯಾಪಿಸದೆ ಸರಳವಾಗಿ ದೇಹದ ಅಣುಕೋಣಗಳನ್ನು ವ್ಯಾಪಿಸುತ್ತದೆ. ಈ ಪ್ರಾಣವಾಯು ಕೆಂಪುರಕ್ತಕಣಗಳಿಗೆ ವಿಶೇಷವಾಗಿ ಬೇಕಾಗುತ್ತದೆ. ಆ ಕೆಂಪುಕಣಗಳಿಗಾದರೋ ಚೈತನ್ಯವನ್ನು ಕೊಡುವುದಕ್ಕೆ ಕಬ್ಬಿಣವು ಬೇಕೇಬೇಕು. ಆದುದರಿಂದ ಪ್ರಾಣವಾಯುವು ಕಬ್ಬಿಣ ಮತ್ತು ಚೈತನ್ಯ ಇವುಗಳಲ್ಲಿಯ ಪರಸ್ಪರ ಸಂಬಂಧವು ಇನ್ನೂ ಶೋಧನಾಗಿಲ್ಲವಾದರೂ ಕಬ್ಬಿಣವಿಲ್ಲದೆ ಪುಪ್ಪುಸಗಳು ಸರಿಯಾಗಿ ನಡೆಯಲಾರವೆಂದು ಕಂಡುಬಂದಿದೆ. ಅಂದಮೇಲೆ ಕಬ್ಬಿಣಮಿಶ್ರವಾದ ಆಹಾರ ನೀರುಗಳನ್ನು ಸೇವಿಸುವ ಮನುಷ್ಯನಿಗೆ ಕ್ಷಯ ಮುಂತಾದ ಪುಪ್ಪುಸರೋಗಗಳುಬಾಸಿಯಾಗುತ್ತವೆ ಎಂಬ ಮಾತು ಸಕ್ಯವಿರಬಹುದಲ್ಲವೆ?

೨. ಸಾರಾಯಿಯು ಮೆದುಳಿನಮೇಲೆ ಪರಿಣಮಿಸುವುದು ಹೇಗೆ ?

ಅನೇಕ ಪದಾರ್ಥಗಳು ರಕ್ತನಾಳಗಳಂತಹ ತೆಳುವಾದ ಪೊರೆಗಳನ್ನು ಹಾದುಹೋಗಬಲ್ಲವು. ನಾವು ಬಾಯಿಗೆ ಸಕ್ಕರೆ ಹಾಕಿಕೊಂಡೊಡನೆಯೇ ಅದು ತತ್ಕ್ಷಣವೇ ಕರಗಿ ರಕ್ತಗತವಾಗುವುದು. ಅಂದರೆ ಸಕ್ಕರೆಯು ರಕ್ತನಾಳದ ಗೋಡೆಗಳನ್ನು ಭೇದಿಸಿಕೊಂಡು ರಕ್ತವನ್ನು ಸೇರುತ್ತದೆ. ಅಂತಹ ವಸ್ತುಗಳಲ್ಲಿ ಸಾರಾಯಿಯೂ ಒಂದು. ಅದನ್ನು ಸೇವಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಅದು ರಕ್ತವನ್ನು ಸೇರಿ ತನ್ಮೂಲಕ ಮೆದುಳನ್ನು ಸೇರುತ್ತದೆ. ಕಡೆಗೆ ಅಲ್ಲಿರುವ ಕೂದಲಿಗಿಂತ ಸೂಕ್ಷ್ಮವಾದ ರಕ್ತನಾಳಗಳ ಮಾರ್ಗವಾಗಿ ಮೆದುಳಿನ 'ಗ್ರೇಮ್ಯಾಟರ್' ನ್ನು ಸೇರುತ್ತದೆ.

ಸಾರಾಯಿಯು ಒಂದು ನರವನ್ನೋ ಅಥವಾ ನರಗಳ ಕೇಂದ್ರವನ್ನೋ ಸೇರಿದಾಗ ಆಗುವ (ರಸಾಯನಿಕ) ಬದಲಾವಣೆಗಳನ್ನು ಯಾರೂ ಸರಿಯಾಗಿ ತಿಳಿದಿಲ್ಲ. ಆದರೂ ಅದು ಸೇರುವ ನರ ಅಥವಾ ನರಗಳ ಕೇಂದ್ರದ (Nerve-Centre) ಕಾರ್ಯಗಳು ನಿಲ್ಲುವುವೆಂದು ಕಂಡುಹಿಡಿಯಲ್ಪಟ್ಟಿದೆ. ಸಾರಾಯಿಯು ಮೊದಲು ಅತಿಸೂಕ್ಷ್ಮವಾದ ಹಾಗೂ ಮುಖ್ಯವಾದ ನರಗಳ ಕೇಂದ್ರಗಳನ್ನು ಚೈತನ್ಯಹೀನವನ್ನಾಗಿಮಾಡಿ ಅನಂತರ ಕ್ರಮವಾಗಿ ಕಡಿಮೆದರ್ಜೆಯ ಕಾರ್ಯವನ್ನು ನಿಲ್ಲಿಸುವುದು.

ಬೇರೆಬೇರೆ ದರ್ಜೆಯ ಮೆದುಳುಳ್ಳವರು ಸಾರಾಯನ್ನು ಸೇವಿಸುವುದರಿಂದ(ಅವರವರ ಮೆದುಳಿನ ಗುಣಗಳಿಗನುಸಾರವಾಗಿ) ವಿವಿಧ ಪರಿಣಾಮಗಳುಂಟಾಗುವುವು. ಅವುಗಳಲ್ಲಿ ಮೊದಲನೆಯದು—ಯಾವುದಾದರೂ ಒಂದು ಉತ್ತೇಜಕವಸ್ತುವನ್ನು ತೆಗೆದುಕೊಂಡರೆ ಉಂಟಾಗುವಂತಹುದು. ಆದುದರಿಂದಲೇ ನಾವು ಸಾರಾಯವನ್ನು ಮೊದಕವಸ್ತು (Stimulant) ವೆನ್ನುವುದು. ಮೆದುಳಿನ ಯಾವಭಾಗದ ದೆಸೆಯಿಂದ ಮಾತನಾಡುವುದು, ನಗುವುದು ಇಂಥ ಕಾರ್ಯಗಳು ನಡೆಯುತ್ತವೋ ಆ ಭಾಗಗಳು ಸಾರಾಯಿನ ಸೇವನೆಯಿಂದ ನಿಶ್ಚೇತನವಾಗುವುದರಿಂದ ಮೆದುಳಿಗೆ ಆ ಭಾಗಗಳ ಹಿಡಿತವಿರುವುದಿಲ್ಲ. ಕುಡುಕರಲ್ಲಿ ಕಂಡುಬರುವ ವಕ್ರಸ್ವಭಾವಗಳಿಗೂ ವಿಚಿತ್ರಮಾತುಗಳಿಗೂ ಇದೇಕಾರಣ.

ಸಾರಾಯಿಯು ಅಧಿಕಸೇವನೆಯಿಂದ ಆಗುವ ಬದಲಾವಣೆಗಳು ಇಂಥವೇ ಎಂದು ಹೇಳಲಾಗುವುದಿಲ್ಲ. ಇದು ನರಗಳ ಗೂಡುಗಳ (Nerve-Cells) ಪದಾರ್ಥವು ಅಧಿಕವಾಗಿ ಬೆಳೆಯುವಂತೆ ಮಾಡುತ್ತದೆ. ಕ್ರಮೇಣ ಮೆದುಳಿನ ನಾಶವೇ ಇದರಿಂದಾಗುವ ಪರಿಣಾಮ.

೩. ಸುಳಿಗಳಾಗುವುದು ಹೇಗೆ?

ನಾವು ಕಾಫಿಯನ್ನಾರಿಸಲು ಬಟ್ಟಲನ್ನು ನಿದಾನವಾಗಿ ತಿರುಗಿಸುವಾಗ ಅದರಲ್ಲಿ ಒಂದು ಸಣ್ಣ ಸುಳಿಯಾಗುವುದು. ನೀರಿನ ಮೇಲೆ ಗಾಳಿಯು ಬೀಸುವಾಗಲೂ ಸ್ವಲ್ಪಹೊತ್ತು ಸುಳಿಯುಂಟಾಗುವುದು. ಪ್ರಕೃತಿಯಲ್ಲಿಯೂ ಅನೇಕ ಕಡೆಗಳಲ್ಲಿ ಸುಳಿಗಳಿವೆ. ಅವುಗಳು ಅನೇಕ ವರ್ಷಗಳಿಂದಲೂ, ಏಕೆ, ಶತಮಾನಗಳಿಂದೂ ಇವೆ. ಸುಳಿಯುಂಟಾಗುವುದು ಎದುರುಬದುರಾಗಿ ಹರಿಯುವ ಎರಡು ನೀರಿನ ಪ್ರವಾಹಗಳ ಸಂಘರ್ಷಣದಿಂದ. ನೀರಿನ ಮೇಲೆ ಎರಡು ವಾಯುಪ್ರವಾಹಗಳು ಎದುರುಬದುರಾಗಿ ಸಂಧಿಸಿದರೂ ಸುಳಿಯುಂಟಾಗುವುದು. 'ಸುಂಟರಗಾಳಿ' ಎನ್ನುವುದೂ ಈ ಕಾರಣದಿಂದಲೇ ಆಗುವುದು. ಸಯಾಗರ ಜಲವಾತದ ಕೆಳಭಾಗದಲ್ಲೂ, ನಾರ್ವೇ ದೇಶದ ತೀರದಲ್ಲೂ ಇನ್ನೂ ಕೆಲವೆಡೆಗಳಲ್ಲೂ ಪ್ರಪಂಚದಲ್ಲಿ ಮುಖ್ಯವಾದ ಸುಳಿಗಳಿವೆ. ಇವುಗಳಲ್ಲೆಲ್ಲಾ ಮೆಸ್ಸೀನ ಜಲಸಂಧಿಯಲ್ಲಿರುವ 'ಚೆರೆಬ್ಡಿಸ್' ಎಂಬುದು ಅತ್ಯಂತ ದೊಡ್ಡದು; ಇದು ಸಾವಿರಾರು ವರ್ಷಗಳಿಂದಲೂ ಇದೆ. ಆದರೆ ಆ ಭಾಗದಲ್ಲಿ ಆಗಾಗ್ಗೆ ಆಗುವ ಭೂಕಂಪಗಳ ಪರಿಣಾಮವಾಗಿ ಆ ಸುಳಿಯಿರುವ ಸ್ಥಳವು ಸ್ವಲ್ಪ ಬದಲಾಯಿಸಿದೆ. ಅಂತಹ ಕಡೆಗಳಲ್ಲಿ ಹಡಗುಗಳ ಸಂಚಾರವು ಬಹುಕಷ್ಟ. ಅನೇಕ ಹಡಗುಗಳು ಅದರ ಹತ್ತಿರ ಹೋಗಿ ಸೆಳೆತದಿಂದ ತಪ್ಪಿಸಿಕೊಂಡು ಬರಲಾರದೆ ಮುಳುಗಿವೆ.

ಭಾಗಲ್ಪುರದಲ್ಲಿ ಭಯಂಕರ ಬಿರುಗಾಳಿಯಿಂದ ಅನೇಕ ಮನೆಗಳ ಮೇಲ್ಛಾವಣಿಗಳು ಹಾರಿಹೋಗಿರುವುವು. ಅನೇಕ ಗಿಡಗಳು ಬುಡಸಹಿತ ಉರುಳಿರುವುವು. ರೈಲ್ವೇಯಾರ್ಡಿನಲ್ಲಿ ನಿಂತಿದ್ದ 40 ವ್ಯಾಗನ್‌ಗಳು 600 ಗಜಗಳ ದೂರ ಹಾರಿ ಬಿದ್ದಿರುವುವು.

ಅಲ್ಯುಮಿನಿಯಮ್ಮಿನ ಕನ್ನಡಿ!

ಅಮೇರಿಕೆಯ ಡಾಕ್ಟರ್ ಆರ್. ಬಿ. ಪೋರ್ಟರ್ ಎಂಬವರು ಗಾಜಿಗೆ ಪ್ರತಿಯಾಗಿ ಅಲ್ಯುಮಿನಿಯಮ್ಮಿನಿಂದ ಹೊಸತರಹದ ಕನ್ನಡಿಗಳನ್ನು ಮಾಡುವ ವಿಧಾನವನ್ನು ಕಂಡು ಹಿಡಿದಿರುವರು. ಇವು ಗಾಜಿನ ಕನ್ನಡಿಗಳಿಗಿಂತಲೂ ಹಗುರವೂ ಅಗ್ಗವೂ ಆಗಿರುವುವಲ್ಲದೆ, ಗಾಜಿನಂತೆ ಒಡೆಯುವವೆಂಬ ಭಯವೂ ಇಲ್ಲದಂತಾಗಿರುವದು. ಅಮೇರಿಕೆಯ ಸುಪ್ರಸಿದ್ಧ ವಿಲ್ಸನ್ ಅಬ್ಸರ್ವೇಟರಿಯಲ್ಲಿ ಆಕಾಶದಲ್ಲಿ ಬಹಳ ದೂರದಲ್ಲಿರುವ ನಕ್ಷತ್ರಗಳನ್ನು ನೋಡುವುದಕ್ಕಾಗಿ 300 ಅಂಗುಲ ದಪ್ಪವಾದ ಕನ್ನಡಿಯುಳ್ಳ ಒಂದು ದೂರದರ್ಶಕ ಯಂತ್ರವು ತಯಾರಿಸಲ್ಪಡುತ್ತಿರುವದು. ಈ ದೂರದರ್ಶಕ ಯಂತ್ರಕ್ಕೆ ಇತರ ಯಂತ್ರಗಳಂತೆ ಬೆಳಕನ್ನು ಪ್ರತಿಬಿಂಬಿಸಲು ಗಾಜನ್ನು ಉಪಯೋಗಿಸದೆ ಅಲ್ಯುಮಿನಿಯಮ್ಮನ್ನು ಉಪಯೋಗಿಸುವರಂತೆ! ಏಕೆಂದರೆ, ಅಲ್ಯುಮಿನಿಯಂ ಲೋಹಕ್ಕೆ 'ಅಲ್ಟ್ರಾ-ವಯೊಲೆಟ್' ಎಂಬ ಕಿರಣಗಳನ್ನು ಪ್ರತಿಬಿಂಬಿಸುವ ಶಕ್ತಿಯಿರುವುದಂತೆ! ಶಾಸ್ತ್ರಜ್ಞರು ಈ 'ಅಲ್ಟ್ರಾ-ವಯೊಲೆಟ್' ಕಿರಣಗಳ ಸಹಾಯದಿಂದ ಕೋಟ್ಯಂತರ ಮೈಲುಗಳ ದೂರದಲ್ಲಿರುವ ನಕ್ಷತ್ರಗಳ ನಿಜಸ್ವರೂಪವನ್ನು ಸುಲಭವಾಗಿ ಕಂಡುಹಿಡಿಯುವರಂತೆ!

...ಗರದಲ್ಲಿ ನೆರವೇರಿದ
...ರ ಅಭೂತಪೂರ್ವ ಮಹೋತ್ಸವ.

(...ಉತ್ಸವಚಿತ್ರಗಳು)

(ತಾ|| ೨೭—೯—೧೯೩೪)

ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 30

...ಜಶೇಖರವಿಲಾಸ
...ಮಾಡರ್ನ್ ಹೋಟೆಲ್
...ಚಿಕ್ಕಪೇಟೆ, ದಿವಾ...
...ರಪ್ಪನವರ ಗಲ್ಲಿ,
...ಲ್ ಕಂಪೆನಿಯ ಪಕ್ಕದ ಸಂದಿ)
...ಗಳೂರು ಸಿಟಿ.

...ರಶೈವ ಬಾಂಧವರು ಬೆಂಗಳೂರಿಗೆ ...ತೊಂದರೆಯನ್ನು ಹೋಗಲಾಡಿಸುವ ...ವ ದೊಡ್ಡ ಮನುಷ್ಯರ ಪ್ರೋತ್ಸಾ...ಹ ಹೋಟೆಲ್ ನವೀನ ರೀತಿಯಿಂದ ...ರಶೈವ ಬಾಂಧವರು ಬೆಂಗಳೂರಿಗೆ ...ವರ್ತಿ ಬಂದು ಪರೀಕ್ಷಿಸಿ ನೋಡಿ...ಗಿ ವಿನಂತಿ. (13)

ಕೆ. ಶಿವಲಿಂಗಪ್ಪ.
ಪ್ರೊಪ್ರೈಟರ್.

...ರಿಂಗ್ ವರ್ಮ್ ಬಾಮು.
...ಆಯಾ ಭಾಗದಲ್ಲಿ ಹರಡಿರುವ ಹುಳಕಡ್ಡಿ, ...ಗ, ದದ್ದು, ತುರಿಸುವ ನಂಜಿ ಹುಣ್ಣುಗ...ಳ ಗುಣಪಡಿಸುವದು. ಡಬ್ಬಿಗೆ ಆ. 5
...ಹೇಯರ್ ಆಯಿಲ್.
...ಉದುರುವದು, ದುರ್ವಾಸನೆ ಬರುವುದು, ಕಿವಿ...ಯ ಒಳಗೆ ಕಡಿತ ನೋವು ಇತ್ಯಾದಿ...ನ್ನು ಖಂಡಿತ ಗುಣಪಡಿಸುವದು.
...ಗೆ ಆಣೆ 8, 1/2 ಡಜನಿಗೆ ರೂ. 2.12-0
...ಗಳು ವಿಕಾರಕ್ಕೆ ಮಾರ್ಪಟ್ಟು ಮೆದುಳು ...ಸೊಂದಿ, ಆರೋಗ್ಯ ಕೆಡುತ್ತಾ ಬರುವದು ...ನೆಯಲ್ಲವೇ? ಪ್ರಾಥ ದೇಹವಂತನಾಗಿ ...ರುವಂತೆ ಮಾಡುವ ಸಿರಪ್-ಸಾರಿ...ವನಂತೆಯೇ ಯುವಕನಾಗಿರುವನು.
...ರೂ. 3-8-0 ಮತ್ತು ರೂ. 1-14-0
...ವಾರ್ಮ್ ಎಕ್ಸಪೆಲ್ಲರ್ ಬಿಲ್ಲೆಗಳು.
...ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸು...ಷಧಿ ಡಜನಿಗೆ 5 ಆಣೆ.
...ದ ನೀತಿಸೂತ್ರ'ವೆಂಬ ಪುಸ್ತಕ ...ಧರ್ಮಾರ್ಥ.
...ರ್ ಎ. ಕೆ. ರಾವ್, ತುಮಕೂರು.
...ಕೇರಿಯಾನ ಕಂಪೆನಿ,
...ಂಪನಕಟ್ಟೆ), 21, ಮಂಗಳೂರು

...ತ್ನ

...ಎರಡು ಭಾಷಣಗಳನ್ನು ಲಕ್ಷಾಂತರ ...ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಟಿ. ರೇವಣ್ಣನ ಆಕ…

ಟಿ. ರೇವಣ್ಣ ಎಂಬಾತನು ಪ್ರಜಾಬ…
ಬಂದಂಥ ಲೇಖವನ್ನು ಬರೆದು ತನ್ನ ಬಾ…
ಕೊಂಡಿದ್ದಾನೆ. ಹೀಗೆ ಯದ್ವಾತದ್ವಾ ಬರೆ…
ತನ್ನ ಯೋಗ್ಯತೆಯನ್ನು ಸಮಾಜದಲ್ಲಿ ತೋ…
ತು ಬೇರೆಂದಿಲ್ಲವೆನ್ನುವುದು ಎಲ್ಲರಿಗೂ…
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ವ…
ಯೊಸ್ತಭಾವವನ್ನು ಮಿತಿಮೀರಿ ತೋರಿಸಿದ…
ಮೇಲೆ ಬಿದ್ದ ಅನೇಕ ಪ್ರಾಣಿಗಳು ವ…
ಇದು ಜಗತ್ತಿಗೆಲ್ಲಾ ತಿಳಿದೇ ಇದೆ. ಹೀಗಿ…
ವ್ಯರ್ಥವಾಗಿ ಜಗಿದಾಡಿರುವುದು ಶಾಸ್ತ್ರ…
ವತಿಯಿಂದ ಈವರೆಗೆ ಖಂಡನಾತ್ಮಕವಾ…
ಗ್ರಂಥಗಳು ಜಗತ್ತಿನಲ್ಲಿ ಕೋಟಿಸೂರ್ಯ…
ವುದನ್ನು ಈ ಪ್ರಾಣಿಯು ನೋಡಿದಂತೆ…
ದ್ದರೆ ಹೀಗೆಂದಿಗೂ ಬರೆಯುತ್ತಿರಲಿಲ್ಲ. ಆ…
ಎರಡಲ್ಲ, ಮೂರಲ್ಲ, ನಾಲ್ಕು ಐದುಸಾರಿ…
ಗೆಳಾಗಿ ಜಗತ್ತಿನಲ್ಲಿ ಜಯಭೇರಿಯನ್ನು…
ಆ ಜಯಧ್ವನಿಯು ಈ ಪ್ರಾಣಿಯ ಕರ್ಣಕೆ…
ದಂತೆ ತೋರಲಿಲ್ಲವೆಂದು ತೋರುತ್ತದೆ. ಸ…
ದಲ್ಲಿ ಉದ್ವೇಗಕರ ವಾಕ್ಯಗಳನ್ನು ಬ…
ಎಷ್ಟು ಭೂಷಣವಲ್ಲ. ಶಾಂತಿಯನ್ನವಲಂ…
ಗುರುಸಾರ್ವಭೌಮನ ಪುಣ್ಯಾಭಿಧಾನವನ್ನು…
ಆ ಗುರುವರ್ಯನ ದ್ವೇಷಿಗಳನ್ನು ಸ್ತುತಿ…
ವರ್ಯನ ಭಕ್ತರನ್ನು ನಿಂದಿಸಿರುವುದೂ ಈ…
ವೆಂದೇ ಹೇಳಬೇಕಾಗಿದೆ. ಇನ್ನು ಮುಂ…
ಶ್ರೀ ಜಗದ್ಗುರು ರೇವಣಸಿದ್ಧನಲ್ಲಿ ನೈಜ…
ಗುರುದ್ವೇಷಿಗಳನ್ನು ಖಂಡಿಸಿ ತನ್ನ ಹೆಸರಿಗೆ…
ಕೊಳ್ಳಲೆಂದಾಶಿಸುವ.

ಹಿಮಾಲಯಪ್ರಾಂತದ ಸ…

ತಾ|| 24-4-34 ರಲ್ಲಿ ಹಿಮಾಲಯ…
ಸಮ್ಮೇಲನವು ಪ್ರತಿವರ್ಷದ ನಿಯಮಾನ…
ದ್ಗುರು ಕೇದಾರ ಪೀಠ ಉಖಾಮಠದಲ್ಲಿ…
ಶಾಸ್ತ್ರೀ ಕಾವ್ಯಾಚಾರ್ಯ ಇವರ ಅಧ್ಯಕ್ಷ…
ಗತವರ್ಷದ ಸಾಹಿತ್ಯ ಸಮ್ಮೇಲನದಲ್ಲಿ ಆ…
ಮಾಡಿದ ಶೋಣಿತಪುರಪಾಠಶಾಲಾಧ್ಯಕ್ಷ…
ಶಾಸ್ತ್ರಿ ಇವರಿಗೆ "ಕವಿತಾಕೋವಿದ…
ಅಟ್ಟಿಂಕಿತವಾದ ಸುವರ್ಣ ಪದಕವನ್ನು ಆ…
ವಾಗಿ ಕೊಟ್ಟರು. ಈ ವರ್ಷದ ಕವಿಸಮ್ಮೇ…
ಮವಾದ ಕವಿತೆಯನ್ನು ರಚಿಸಿದ ಮಹಿಕೋ…
ಪಂಡಿತ ತುಲಸೀರಾಮಶಾಸ್ತ್ರಿಗಳಿಗೆ "ಕವಿ…
ಯನ್ನೂ, ಹಿಂದುಸ್ಥಾನಿ ಭಾಷೆಯಲ್ಲಿ ಸರ್ವೋ…
ಯನ್ನು ರಚಿಸಿದ ಉಖಾಮಠದ ಶ್ರೀ ೧೦…
ಕೇಶಲಿಂಗ ಶಿವಾಚಾರ್ಯ ವರ್ನಾಕ್ಯುಲರ್…
ಅಸಿಸ್ಟೆಂಟ್ ಮಾಸ್ತರ್ ಪಂಡಿತ ಆತ್ಮಾರಾ…
ಕುಶಲ" ಎಂಬ ಪದವಿಯನ್ನೂ ಕೊಡಲಾ…
ರೂ ಸಂಸ್ಕೃತ ಮತ್ತು ಹಿಂದೀ ಕವಿಗಳಲ್ಲಿ…
ರಿಸಿದ್ದರಿಂದ ಇವರಿಗೆ 1935 ರಲ್ಲಿ ನಡೆಯು…
ದಲ್ಲಿ ಸುವರ್ಣ ಪದಕವನ್ನು ಕೊಡಲಾ…
ನಿರ್ಧರಿಸಲ್ಪಟ್ಟಿತು. ಮಹಾಸ್ವಾಮಿಗಳಾದ…
ಚಾರ್ಯರ ಕರಕಮಲದಿಂದ ಶ್ರೀಕೇದಾರನ…
ವಿದ್ಯಾಲಯದ ನ್ಯಾಯ, ವ್ಯಾಕರಣ, ವೇದ,…
ಹ್ಯತಾಸ್ತ್ರಗಳನ್ನು ಅಭ್ಯಾಸಮಾಡುವ ವಿದ್ಯಾ…
ಅಪ್ಪರ್ ಸ್ಕೂಲಿನ ವಿದ್ಯಾರ್ಥಿಗಳಿಗೂ, ಪ…
ಕೊಡಲ್ಪಟ್ಟವು.

ಮಹಿವದಾನಂದ ಶಾಸ್ತ್ರೀ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪಟ್ಟಾಧಿಕಾರಮಹೋತ್ಸವ.

ಬನ್ನೂರು.

ಕರವೀರ ಇಲಾಖೆಗೆ ಸೇರಿದ ಬನ್ನೂರು ಗ್ರಾಮದ ಹಿರೇಮಠಾಧಿಪತಿಗಳಾದ ಶ್ರೀ|| ಷ|| ಬ್ರ|| ಚನ್ನವೀರ ಶಿವಾಚಾರ್ಯ ಪಟ್ಟಾಧ್ಯಕ್ಷಸ್ವಾಮಿಗಳರ ಭಾವಿ ಉತ್ತರಾಧಿಕಾರಿಗಳಾದ ಶ್ರೀ ಶಾಂತವೀರಶಿವಾಚಾರ್ಯರೆಂಬವರಿಗೆ ತಾ|| 21-5-1934 ನೇ ಸೋಮವಾರ ದಿವಸ ಮಂಗಳೂರು ಅರಳೆಲೆಮಠದ ಪಟ್ಟಾಧ್ಯಕ್ಷರವರಿಂದ ಅಧಿಕಾರ ಸಮಾರಂಭವೂ ಪಂಚಮುದ್ರಾಧಾರಣ ಮಂತ್ರೋಪದೇಶಾದಿಕಾರ್ಯಗಳೂ ನೆರವೇರಿದುವು. ಈ ಸಮಾ

ಗಳ ಕೇಂದ್ರವಿನ್ನೂ ಸೇರದಾಗ ಆಗುವ (ರಸಾಯನಿಕ) ಬದಲಾವಣೆಗಳನ್ನು ಯಾರೂ ಸರಿಯಾಗಿ ತಿಳಿದಿಲ್ಲ. ಆದರೂ ಅದು ಸೇರುವ ನರ ಅಥವಾ ನರಗಳ ಕೇಂದ್ರದ (Nerve-Centre) ಕಾರ್ಯಗಳು ನಿಲ್ಲುವವೆಂದು ಕಂಡುಹಿಡಿಯಲ್ಪಟ್ಟಿದೆ. ಸಾರಾಯಿಯು ಮೊದಲು ಅತಿಸೂಕ್ಷ್ಮವಾದ ಹಾಗೂ ಮುಖ್ಯವಾದ ನರಗಳ ಕೇಂದ್ರಗಳನ್ನು ಚೈತನ್ಯಹೀನವನ್ನಾಗಿಮಾಡಿ ಅನಂತರ ಕ್ರಮವಾಗಿ ಕಡಿಮೆದರ್ಜೆಯ ಕಾರ್ಯವನ್ನು ನಿಲ್ಲಿಸುವುದು.

ಬೇರೆಬೇರೆ ದರ್ಜೆಯ ಮೆದುಳುಳ್ಳವರು ಸಾರಾಯನ್ನು ಸೇವಿಸುವುದರಿಂದ(ಅವರವರ ಮೆದುಳಿನ ಗುಣಗಳಿಗನುಸಾರವಾಗಿ) ವಿವಿಧ ಪರಿಣಾಮಗಳುಂಟಾಗುವುವು. ಅವುಗಳಲ್ಲಿ ಮೊದಲನೆಯದು—ಯಾವುದಾದರೂ ಒಂದು ಉತ್ತೇಜಕವಸ್ತುವನ್ನು ತೆಗೆದುಕೊಂಡರೆ ಉಂಟಾಗುವಂತಹುದು. ಆದುದರಿಂದಲೇ ನಾವು

ಗಾಜಿನಂತೆ ಒಡೆಯುವವೆಂಬ ಭಯವೂ ಇಲ್ಲದಂತಾಗಿರುವದು. ಅಮೇರಿಕೆಯ ಸುಪ್ರಸಿದ್ಧ ವಿಲ್ಸನ್ ಅಬ್ಸರ್ವೇಟರಿಯಲ್ಲಿ ಆಕಾಶದಲ್ಲಿ ಬಹಳ ದೂರದಲ್ಲಿರುವ ನಕ್ಷತ್ರಗಳನ್ನು ನೋಡುವುದಕ್ಕಾಗಿ 300 ಅಂಗುಲ ದಪ್ಪವಾದ ಕನ್ನಡಿಯುಳ್ಳ ಒಂದು ದೂರದರ್ಶಕ ಯಂತ್ರವು ತಯಾರಿಸಲ್ಪಡುತ್ತಿರುವದು. ಈ ದೂರದರ್ಶಕ ಯಂತ್ರಕ್ಕೆ ಇತರ ಯಂತ್ರಗಳಂತೆ ಬೆಳಕನ್ನು ಪ್ರತಿಬಿಂಬಿಸಲು ಗಾಜನ್ನು ಉಪಯೋಗಿಸದೆ ಅಲ್ಯುಮಿನಿಯಮ್ಮನ್ನು ಉಪಯೋಗಿಸುವರಂತೆ! ಏಕೆಂದರೆ, ಅಲ್ಯುಮಿನಿಯಂ ಲೋಹಕ್ಕೆ 'ಅಲ್ಟ್ರಾ-ವಯೊಲೆಟ್' ಎಂಬ ಕಿರಣಗಳನ್ನು ಪ್ರತಿಬಿಂಬಿಸುವ ಶಕ್ತಿಯಿರುವುದಂತೆ! ಶಾಸ್ತ್ರಜ್ಞರು ಈ 'ಅಲ್ಟ್ರಾ-ವಯೊಲೆಟ್' ಕಿರಣಗಳ ಸಹಾಯದಿಂದ ಕೋಟ್ಯಂತರ ಮೈಲುಗಳ ದೂರದಲ್ಲಿರುವ ನಕ್ಷತ್ರಗಳ ನಿಜಸ್ವರೂಪವನ್ನು ಸುಲಭವಾಗಿ ಕಂಡುಹಿಡಿಯುವರಂತೆ!

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೫೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೫—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೧—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 30

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 37

ವಿಳಾಸ—ಬ್ರ. **ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,**

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ
ವೀರಶೈವ ಮಾಡರ್ನ್ ಹೋಟಲ್

ನಂ. 8, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಫೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನೂತನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (13)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. **ಪ್ರೊಪ್ರೈಟರ್.**

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, $\frac{1}{2}$ ಡಜನ್ 8-8-0 ಮತ್ತು ರೂ. 5

ರ್ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶ್ವಸೋವು, ಗಂಟ್ಲುನೋವು ಸಂದು ಗಂಟ್ಲುನೋವು ಎಲ್ಲಾ ತರದ ವಾಯು, ಸೊಂಟನೋವು, ಚಜ್ಜದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಚಿಕ್ಕುಮದ್ದುಗಳು, ಹೋಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿಯವ ಹುಳಮೇಯುವ ರೋಗ, ದದ್ದು, ತುರಸುವ ನಂಜೆ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವಿ ಚುಚನ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಔನ್ಸಿಗೆ ಆಣೆ 8, $\frac{1}{2}$ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ 'ಮಾರ್ಪಟ್ಟು ಮೆದುಳು ಕಾಯಗಳು ನಿಸ್ತೇಜನಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಪಾಲಿಸವನೆ** ಆತ್ಮಸಂರಕ್ಷಕನಂತೆಯೇ ಯುವಕರಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,

[39] **(ಹಂಪನಕಟ್ಟೆ), 21, ಮಂಗಳೂರು**

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಭ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[21] ಪೋ. ಬಾ. ೫೧೧, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ನೇ ಜೂನ್ ೧೯೩೪ [ಸಂಚಿಕೆ ೪

ಆರೋಗ್ಯರಕ್ಷಣೆ.

ಲೇ|| ವಾಗೀಶಶಿವಾಚಾರ್ಯ ಬೃಹನ್ಮಠ, ಮುದೇನೂರು.
ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲಂ, ಕಾಶೀಕ್ಷೇತ್ರ.

[ಸ-ಧ-ಲೇಖಗಳಾಧಾರದಿಂದ]

'ಧರ್ಮಾರ್ಥಕಾಮಮೋಕ್ಷಾಣಾಮಾರೋಗ್ಯಂ ಮೂಲಸಾಧನಂ'

ಮನುಷ್ಯನು ಧರ್ಮಾರ್ಥಕಾಮಮೋಕ್ಷಗಳನ್ನು ಸಾಧಿಸಲು ಸಮರ್ಥನಾಗಬೇಕಾದರೆ, ಮೊಟ್ಟಮೊದಲು ಆರೋಗ್ಯಬೇಕು. ಆದುದರಿಂದ ಶರೀರವನ್ನು ಆರೋಗ್ಯವಾಗಿಟ್ಟುಕೊಳ್ಳುವುದು ಮೊದಲನೆಯ ಕರ್ತವ್ಯವು. ಸಾಧಾರಣವಾದ ನಿಯಮಪಾಲನೆಯಿಂದಲೇ ಮನುಷ್ಯನು ಆರೋಗ್ಯವನ್ನು ಸಂಪಾದಿಸಿಕೊಳ್ಳಬಹುದು. ಸಾಧಿಸಲು ಸುಲಭಗಳಾದ ಇಂತಹ ನಿಯಮಗಳನ್ನೇ ಉಲ್ಲಂಘನೆಮಾಡಿಮಾಡಿ ಜನರು ರೋಗಿಗಳಾಗುತ್ತಲಿದ್ದಾರೆ. ರೋಗಿಯಾದ ಸಂಸಾರಿಯು ತನ್ನ ಪರಿವಾರದವರಿಗೆ ದುಃಖವನ್ನುಂಟುಮಾಡುತಕ್ಕವನಾಗುವನಲ್ಲದೆ, ತನ್ನ ಸಂತಾನವನ್ನು ಬೇನೆಗೆ ಬಿಡಾರಗೊಳಿಸತಕ್ಕವನೂ ಆಗುವುದರಿಂದ ಅಲ್ಪಸ್ವಲ್ಪ ಕಷ್ಟವಾದರೂ ಪಡೆದುಕೊಂಡು ಆರೋಗ್ಯವನ್ನು ಸಂಪಾದಿಸಲು ಪ್ರಯತ್ನಪಡಬೇಕು. ಸಂಸಾರದಲ್ಲಿ ಪ್ರಾಣವಿಲ್ಲದೆ ಬದುಕುವುದೂ, ಧನವಿಲ್ಲದೆ ಬಾಳುವುದೂ, ಪರಲೋಕವೊಂದಿಲ್ಲದೆ ನಿತ್ಯಶಾಂತಿಯನ್ನು ಪಡೆಯುವುದೂ ಯಾರಿಗೂ ಸಾಧ್ಯವಿಲ್ಲದಿರುವುದರಿಂದ ಪ್ರಾಣ, ಧನ, ಪರಲೋಕಗಳೆಂಬೀ ವಸ್ತುಗಳನ್ನು ಪ್ರತಿಯೊಬ್ಬರೂ ಬಯಸುವರಲ್ಲದೆ, ಇವುಗಳನ್ನಾಶ್ರಯಿಸಿ ಯಾವಾಗಲೂ ಸುಖವಾಗಿರಬೇಕೆಂದು ನಿಶ್ಚಯಮಾಡಿಕೊಂಡಿರುವರು. ಪೂರ್ಣವಾದ ಸುಖವು ದೊರೆಯಬೇಕಾದರೆ, ತನುಮನಗಳು ಪ್ರಸನ್ನವಾಗಿರಬೇಕು. ಈ ಪ್ರಸನ್ನತೆ (ಶಾಂತಿ) ಗಾಗಿಯೇ ಆಯುರ್ವೇದಶಾಸ್ತ್ರವನ್ನು ಬರೆದ ಧನ್ವಂತರಿಯೇ ಮೊದಲಾದ ಋಷಿಗಳು ಆರೋಗ್ಯರಕ್ಷಣೆಯ ಪರಮಾವಶ್ಯಕತೆಯನ್ನು ಉಪದೇಶಮಾಡಿರುವರು. ಹೀಗೆಯೇ ಧರ್ಮಾವತಾರಿಗಳೂ ಆರೋಗ್ಯಕ್ಕೂ, ಧರ್ಮಕ್ಕೂ ಪರಸ್ಪರ ಸಂಬಂಧವನ್ನು ಕಂಡುಹಿಡಿದು ಸದಾಚರಣೆಗಳ ಮೂಲಕ ಆರೋಗ್ಯವನ್ನು ಪ್ರತಿಪಾದಿಸಿದ್ದಾರೆ. ಈ ವಿಷಯದಲ್ಲಿ—

ಯುಕ್ತಾಹಾರ ವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು |
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ||

ಎಂಬ ಗೀತೋಕ್ತಿಯು ಪ್ರಮಾಣವಾಗಿದೆ. ಆರೋಗ್ಯವೆಂಬುದು ಬಂಗಾರನಾಣ್ಯಕ್ಕಿಂತಲೂ ಎಷ್ಟೋ ಪಾಲು ಮಿಗಿಲಾದುದು. ಇದು ಮನಸ್ಸನ್ನು ವಿಕಾಸಗೊಳಿಸುವುದರಲ್ಲಿಯೂ, ಜ್ಞಾನವನ್ನು ವೃದ್ಧಿಹೊಂದಿಸುವದರಲ್ಲಿಯೂ, ಉತ್ತಮವಾದ ಗುಣಗಳನ್ನೂ, ವಿಮಲವಾದ ಶಕ್ತಿಯನ್ನೂ ತಂದುಕೊಡುವುದರಲ್ಲಿಯೂ ಹೆಸರುಗೊಂಡಿದೆ. ಆರೋಗ್ಯವುಳ್ಳ ಮನುಷ್ಯನಿಗೆ ಕಂಡಕಂಡ ವಸ್ತುಗಳ ಮೇಲೆ ಅಪೇಕ್ಷೆಯಾಗುವುದಿಲ್ಲವೆಂಬುದು ಅನುಭವಸಿದ್ಧವಾದ ಮಾತು. ಮನುಷ್ಯನು ಸಮಯವನ್ನು ಸದುಪಯೋಗಮಾಡಿಕೊಂಡರೆ ಶಾರೀರಕ, ಮಾನಸಿಕ, ಪಾರಲೌಕಿಕೋನ್ನತಿಗಳನ್ನು ಸಂಪಾದಿಸಲು ತಡವಾಗುವುದಿಲ್ಲ. ಈವಾಗ ನಮ್ಮ ದೇಶದವರು ಸಮಯವನ್ನು ಸದುಪಯೋಗಮಾಡಿಕೊಳ್ಳುತ್ತಿಲ್ಲ. ಆದುದರಿಂದಲೇ ಸಭೆಯಾಗಲಿ, ಉತ್ಸವವಾಗಲಿ, ಆಟವಾಗಲಿ, ಊಟವಾಗಲಿ ಯಾವುದೂ ಹೊತ್ತಿಗೆ ಸರಿಯಾಗಿ ನಡೆಯುವುದಿಲ್ಲ. ಹೀಗೆ ವೇಳೆಯ ವ್ಯತ್ಯಾಸದಿಂದ ಎಂತೆಂತಹ ಕಾರ್ಯಗಳೂ ನಿಷ್ಫಲವಾಗಿ ಹೋಗಿವೆ. ಆದುದರಿಂದ ಯಾವಕಾರ್ಯವನ್ನು ಮಾಡಬೇಕಾದರೂ ನಾವು ವೇಳೆಯಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು.

ಆರೋಗ್ಯರಕ್ಷಣೆಯ ವಿಷಯವು ಬಲುದೊಡ್ಡದು. ಈ ವಿಷಯದಲ್ಲಿ ಇಲ್ಲಿಯವರೆಗೆ ಎಷ್ಟೋ ಪುಸ್ತಕಗಳು ಹೊರಹೊರಟಿವೆ. ಹೀಗಾದರೂ ನೂರರಲ್ಲಿ ತೊಂಬತ್ತು ಮಂದಿ ಅಸ್ವಸ್ಥರಾಗಿ ನರಳುತ್ತಿರುವುದು ಎಲ್ಲೆಲ್ಲಿಯೂ ಕಂಡುಬರುತ್ತದೆ. ಹೀಗಾಗಿರುವುದಕ್ಕೆ ಕಾರಣವನ್ನು ಎಲ್ಲರೂ ತಿಳಿದುಕೊಳ್ಳುವುದು ಅತ್ಯಾವಶ್ಯಕವು. ಆರೋಗ್ಯರಕ್ಷಣೆಯನ್ನು ಮನ, ವಚನ, ಕರ್ಮ ಈ ಮೂರರಿಂದಲೂ ಮಾಡಿಕೊಳ್ಳಬೇಕಾಗುವುದು. ಮನುಷ್ಯನು ಈ ಪದ್ಧತಿಯನ್ನರಿಯದಿರುವುದರಿಂದಲೂ, ಒಂದುವೇಳೆ ಅರಿತವನಾದರೂ ಇದಕ್ಕನುಕೂಲವಾಗಿ ನಡೆಯದಿರುವುದರಿಂದಲೂ ತನ್ನ ಆರೋಗ್ಯವನ್ನು ಕಳೆದುಕೊಳ್ಳುವನೆಂಬುದು ಸತ್ಯವೂ, ಸುಲಭವೂ ಆದಮಾತು.

ಮನುಷ್ಯನು ತಿಳುವಳಿಕೆಯುಳ್ಳವನಾದ ಹಾಗೆ ಸ್ವಭಾವಸಿದ್ಧಗಳಾದ ಪ್ರಕೃತಿನಿಯಮಗಳನ್ನು ಮರೆಯುಹತ್ತುವನು. ಆ ಮರವೆಯಿಂದಲೇ ಆರೋಗ್ಯವನ್ನು ಕೆಡಿಸಿಕೊಂಡು ಕೃತ್ರಿಮೋಪಾಯಗಳನ್ನು ಮಾಡಲನುವಾಗುವನು. ಈ ಕೃತ್ರಿಮೋಪಾಯಗಳು ಆ ಕಾಲದಮಟ್ಟಿಗೆ ಅನುಕೂಲವಾದವುಗಳೆಂದು ಕಂಡರೂ ಅವುಗಳಲ್ಲಿ ಸತ್ಯಾಂಶವಿರುವುದಿಲ್ಲ. ನಾವು ಆರೋಗ್ಯರಕ್ಷಣೆಯನ್ನು ಮಾಡಿಕೊಂಡರೆ ಸೌಂದರ್ಯರಕ್ಷಣೆಯು ತನ್ನಿಂದತಾನೇ ಆಗುವುದು. ಸೌಂದರ್ಯವೃದ್ಧಿಗಾಗಿ ಬೇರೆಕಡೆ ಹೋಗಬೇಕಾದ ಅವಶ್ಯಕತೆಯೇನೂ ಇಲ್ಲ. ಈ ಸಮಯದಲ್ಲಿ ಸೌಂದರ್ಯವೃದ್ಧಿಗಾಗಿ ಬಾಹ್ಯೋಪಚಾರಗಳೇ ಬಹಳ ನಡೆದಿವೆ. ಆದುದರಿಂದಲೇ ಪೌಮೇಡ್, ಕ್ರೀಮ್ಸ್ ಮುಂತಾದವುಗಳ ವ್ಯಾಪಾರವು ದಿನೇದಿನೇ ವೃದ್ಧಿಹೊಂದುತ್ತ ನಡೆದಿದೆ. ಖಾದೀಬಟ್ಟೆಯನ್ನು ತೊಡುವುದು ಕಡಿಮೆಯಾಗುತ್ತ ನಡೆದಿದೆ. ಚಿತ್ರವಿಚಿತ್ರನಾಗಿ ಕತ್ತರಿಸಿ ಹೊಲಿದ ಪರದೇಶದ ಬಟ್ಟೆಗಳ ಮೇಲೆ ಜನರ ದೃಷ್ಟಿಯು ಸರ್ರನೆ ಬೀಳುತ್ತಿದೆ. ಕೃತ್ರಿಮವಸ್ತುಗಳೆಲ್ಲವೂ ಆರೋಗ್ಯವು ನೆಟ್ಟಗಿರುವವರೆಗೆ ಮಾತ್ರ ಶರೀರದಲ್ಲಿ ಅಂದವಾಗಿದ್ದು ಆರೋಗ್ಯವು ಕೆಟ್ಟು ಶರೀರವು ಕೃಶವಾದಮೇಲೆ ಕಡಗೋಲಿಗೆ ಬಟ್ಟೆಯನ್ನುಡಿಸಿ, ಪಟ್ಟೆಯನ್ನಿಟ್ಟಂತೆ ತೋರುವವು. ಆರೋಗ್ಯವೊಂದು ಚನ್ನಾಗಿರದಿದ್ದರೆ ಬಾಹ್ಯೋಪಚಾರಗಳಿಂದ ಏನೂ ಲಾಭವಿಲ್ಲ. ಅಂತೆಯೇ ಪೂರ್ವಿಕರು—'ಅಂತಸ್ಸಾರ ವಿಹೀನಾನಾಂ ಸಹಾಯಃ ಕಿಂಕರಿಷ್ಯತಿ' ಎಂದು ಹೇಳಿರುವ ಮಾತು ಸತ್ಯವು. ಬಿದಿರು ಪೊಳ್ಳಾಗಿರುವುದರಿಂದಲೇ ಮಲಯಪರ್ವತದ ಸುಗಂಧವಾಯುವು ಅದನ್ನು ಶ್ರೀಗಂಧವನ್ನಾಗಿಮಾಡಲು ಸಮರ್ಥವಾಗಿಲ್ಲ.

ಆರೋಗ್ಯರಕ್ಷಣೆಗೆ ವಾಚಾಶುದ್ಧಿಯೂ ಅವಶ್ಯವಾಗಿರುವುದರಿಂದ ಸಮಯದೊರೆತಾಗ ಆರೋಗ್ಯರಕ್ಷಣೆಯವಿಷಯದಲ್ಲಿಯೂ, ಸದಾಶ್ರಮತಾಲಿಗಳ ವಿಷಯದಲ್ಲಿಯೂ ವಾರ್ತಾಲಾಪವನ್ನು ಅವಶ್ಯವಾಗಿ ಮಾಡುತ್ತಿರಬೇಕು. ಇದೇ ವಿಷಯವನ್ನು ಓದುವುದಾಗಲಿ, ಬರೆಯುವುದಾಗಲಿ, ವ್ಯಾಖ್ಯಾನಮಾಡುವುದಾಗಲಿ ಆಲೋಚನೆಮಾಡುವುದಾಗಲಿ ಇದೆಲ್ಲವೂ ನಮ್ಮ ಉನ್ನತಿಗೆ ಸಹಾಯಕವಾಗುವುದು.

(ಮುಂದುವರಿಯುವದು.)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವಿವಾಹಮಹೋತ್ಸವ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ಮ|| ರಾ|| ದೇವರ ಶೆಟ್ಟರ ವೀರಪ್ಪಮಹೋದಯರು ತಮ್ಮ ಗೃಹದಲ್ಲಿ ಇದೇ ಭಾವನಾಮ ಸಂ|| ನಿಜವೈಶಾಖ ಬ|| ಪಂಚಮಿಯ ದಿವಸ ತಮ್ಮ ಚಿರಂಜೀವಿಗಳ ವಿವಾಹಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಶ್ರೀ ಪಂಚಾಚಾರ್ಯರ ಕೃಪಾಶೀರ್ವಾದಬಲದಿಂದ ಈ ಉತ್ಸವಕ್ಕೆ ಅನಂತಮಹಾಜನರು ಸೇರಿದ್ದಾಗ್ಯೂ ಯಾವ ಗಲಭೆಗೂ ಅವಕಾಶವಿಲ್ಲದರೀತಿಯಿಂದ ಕಾರ್ಯವು ಶಾಂತಿಮಯವಾಗಿ ನಡೆಯಿತು. ಈ ಶುಭಕಾರ್ಯಕ್ಕಾಗಿ ಆಗಮಿಸಿದ್ದ ಲೌಕಿಕ, ವೈದಿಕ ಪದವೀಪ್ರತಿಷ್ಠಿತರನ್ನೂ ಬಂಧುಮಿತ್ರರನ್ನೂ ಸಹ ಯಥೋಚಿತಸತ್ಕಾರಗಳಿಂದ ಗೌರವಿಸಿ ಶ್ರೀಗುರುಭಜನೆ ಕೀರ್ತನೆಗಳಿಂದ ಸಂತೋಷಗೊಳಿಸಿದ ತರುವಾಯ ನವದಂಪತಿಗಳ ಶ್ರೇಯೋಭಿವೃದ್ಧಿಗಾಗಿ ಗುರುಸಾರ್ವಭೌಮರ ಜಯಘೋಷವನ್ನು ಮಾಡಿ ತಮ್ಮ ತಮ್ಮ ಹೃದ್ಗತವಾದ ಪ್ರೇಮಾಭಿಮಾನವನ್ನು ವ್ಯಕ್ತಗೊಳಿಸಿದರು. ಕಾರ್ಯಕರ್ತರುಗಳಿಗೆ ಮುಖ್ಯವಾಗಿರಬೇಕಾದ ಸತ್ಯನಿಷ್ಠೆ, ಸಹನಶೀಲತೆ, ಉದಾರತೆ, ವಿಚಕ್ಷಣತೆ, ಗುರುಭಕ್ತಿತತ್ಪರತೆ ಮೊದಲಾದ ಸದ್ಗುಣಸಮೂಹವು ಶ್ರೀಯುತ ವೀರಪ್ಪಶ್ರೇಷ್ಠಿಯವರಲ್ಲಿ ಸಹಜವಾಗಿಯೂ ಇದ್ದು ಕಾರ್ಯರೂಪದಲ್ಲಿ ಪ್ರಕಾಶಿಸುತ್ತಬರೀ ಒಣ ಹೊಗಳಿಕೆಯ ಬಾಹ್ಯಾಡಂಬರದಲ್ಲಿರಕ್ಕೆ ಸ್ವಲ್ಪವೂ ಎಡೆಗೊಡದಿದ್ದುದನ್ನು ನೋಡಲಲ್ಲಿ ಸಂಶಯವಿಲ್ಲ. ಪವಿತ್ರಗೃಹಸ್ಥಾಶ್ರಮ ಸ್ವೀಕಾರ ಸಮಯದಲ್ಲಿ ತಮ್ಮ ಗೋತ್ರಾಧಿಪ ಶ್ರೀ ರಂಭಾಪುರೀ ವೀರಸಿಂಹಾಸನಾಧೀಶ್ವರ ಮಹಾಸ್ವಾಮಿಗಳವರ ಕೃಪಾಶೀರ್ವಾದಭಾಗ್ಯವು ಈ ನವದಂಪತಿಗಳಿಗೆ ಲಭ್ಯವಾಗಿ ಸುದೀರ್ಘವಾಗಿ ಸುಖೋನ್ನತಿಯಿಂದ ಬಾಳಲೆಂಬಾಕಾಂಕ್ಷೆಯಿಂದ ಶ್ರೀಮಹಾಸನ್ನಿಧಿಗೆ ಅರಿಕೆಮಾಡಿಕೊಂಡ ವಿನ್ನಹಪತ್ರದೊಂದಿಗೆ ಯಥಾಶಕ್ತಿ ಕಾಣಿಕೆಯನ್ನೂ ಸಮರ್ಪಿಸಿದುದಲ್ಲದೆ ಶ್ರೀ ಪಂಚಾಚಾರ್ಯಪ್ರಭಾಪತ್ರಿಕಾಪೋಷಣಾರ್ಥವಾಗಿ ಎರಡು ರೂಪಾಯಿಗಳನ್ನು ಸಹ ಕಳುಹಿಸಿರುವರು. ವೇ|| ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ಪಠನೆಯಿಂದ ತಮ್ಮ ನೈಜವಾದ ಗುರುಭಕ್ತಿಯನ್ನು ತೋರ್ಪಡಿಸಿದ ದೇಶಪಶೆಟ್ಟರು ವೀರಪ್ಪನವರಿಗೂ ಇವರ ಅನೇಕ ಕುಟುಂಬವರ್ಗಕ್ಕೂ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಸುಖವನ್ನೀಯಲೆಂದು ಸದಾ ಪಾರ್ಥಿಸುವ,

ಓರ್ವ ಗುರುಚರಣಸೇವಾಭಿಲಾಷಿ.

ಸಂತೋಷವಾರ್ತೆ.

ಧಾರವಾಡ ಡಿ|| ಗದಗ ಬೆಟಗೇರಿ ಮುನಸಿಪಾಲಟಿ ಚುನಾವಣೆಯು ತಾ|| ೧೭-೫-೧೯೩೪ ನೆಯ ಗುರುವಾರ ದಿವಸ ನೆರವೇರಿತು. ೩ನೆಯ ವಾರ್ಡಿನ ಉಮೇದುವಾರರಲ್ಲೊಬ್ಬರಾದ ಶ್ರೀಮಾನ್ ಚನ್ನಬಸವಯ್ಯ ಬಸವಣ್ಣಯ್ಯ ರಾಚಯ್ಯನವರ ಬಿ.ಎ., ಎಲ್‌ಎಲ್.ಬಿ., ವಕೀಲ ಇವರು ಮೆಂಬರರಾಗಿ ಆರಿಸಿಬಂದರೆಂಬ ವಿಷಯವನ್ನು ತಿಳುಹಿಸಲು ಅತ್ಯಾನಂದವೆನಿಸುತ್ತದೆ. ಈ ಮಹಾಶಯರು ಹೊಸಬರಾದಾಗ್ಯೂ ಇವರಲ್ಲಿ ವಾಸವಾಗಿರುವ ಶಾಂತಿ, ನೀತಿ, ಸತ್ಯ, ಪರೋಪಕಾರ, ಮನೋಧೈರ್ಯ, ಗುರುಭಕ್ತಿ ಮೊದಲಾದ ಸದ್ಗುಣಗಳೇ ಇವರು ೧ನೆಯ ನಂಬರಾಗಿ ಆರಿಸಿಬಂದುದಕ್ಕೆ ಸಾಕ್ಷಿಗಳಾಗಿವೆ. ಇದರಿಂದ ಇವರ ವಿಷಯದಲ್ಲಿ ಜನರ ಪ್ರೇಮವು ಎಷ್ಟರಮಟ್ಟಿಗಿರಬಹುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಮುಂದೆ ಇವರು ಸಾರ್ವಜನಿಕಕಾರ್ಯಗಳಲ್ಲಿ ಪ್ರವೇಶಿಸಿ ಮುಂದಾಳುಗಳಾಗಿ ನಿಂತು ಪ್ರಜೆಗಳಿಗೆ ಎಲ್ಲಾ ವಿಧದಿಂದಲೂ ಸೌಕರ್ಯವನ್ನೊದಗಿಸಿಕೊಡುವುದರಲ್ಲಿ ನಿರತರಾಗಲೆಂದೂ, ಜಗದಾಚಾರ್ಯರ ಆಶೀರ್ವಾದಬಲದಿಂದ ಇವರು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲೆಂದೂ ಕೋರುತ್ತೇನೆ. ವಕೀಲರು ಈ ಸಮಯದಲ್ಲಿ ೧ನೆಯ ನಂಬರಾಗಿ ಆರಿಸಿಬಂದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ೫ ರೂ. ಗಳನ್ನು ತೆಗೆಯಿಸಿ ಕಳುಹಿಸಿದರು.

ಸಿದ್ಧನಗೌಡ ಚಿಕ್ಕನಗೌಡರ.

ಪತ್ರವ್ಯವಹಾರ.

ಜಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರಃ ಪ್ರಸೀದಂತು.

ಅಮಂಗಲವಿಚಾರವಿಮರ್ಶೆ.

ವಿಮರ್ಶಕ—ಎಸ್. ಎಚ್. ಪಂಚಾಕ್ಷರಶರ್ಮಾ.

(ಹಿಂದಿನಿಂದ ಮುಂದೆಸಾಗಿದುದು.)

ಆಚಾರ್ಯರ ಪವಿತ್ರಾಭಿಧಾನಗಳು ಶಿವೋಕ್ತಗಳಾದ ಅನೇಕಾಗಮಗಳಲ್ಲಿ ವಿರಾಜಿಸುತ್ತಿರುವ ವಿಷಯವು ಪ್ರತಿಯೊಬ್ಬರಿಗೂ ತಿಳಿದುದಾಗಿದೆ. ಶಿವಾಗಮಗಳಲ್ಲಿ ಈ ಮಹಾಚಾರ್ಯರ ಹೆಸರುಗಳು ಕಂಡುಬರುವುದರಿಂದ ಇವರು ಅತಿ ಪ್ರಾಚೀನರಾಗುತ್ತಾರಲ್ಲ! ಇದಕ್ಕೆ ಏನು ಕುಯುಕ್ತಿಯನ್ನು ಕಲ್ಪಿಸಬೇಕೆಂದು ಬಸವನ ಕುಲದವರು ಬಹುದಿವಸಗಳವರೆಗೆ ಯೋಚಿಸಿ ಕರ್ಲಮಂಗಲರವರಿಂದ "ಯಾವ ಯಾವ ವ್ಯಕ್ತಿಗಳು ಯಾವ ಯಾವ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟರೋ ಆ ಗ್ರಂಥಗಳು ಅವರ ಕಾಲದಿಂದೀಚಿನವೆಂಬುದು ವ್ಯಕ್ತವಾಗಿಹೋಯಿತು" ಎಂದು ಬರೆಯಿಸಿದ್ದಾರೆ. ಹೀಗೆ ಬರೆದ ಈ ಮಹಾಶಯರ ವಿಚಾರಸರಣಿಗೆ ಬೆಲೆಯೇ? ಸರ್ವಜ್ಞನಾದ ಪರಮೇಶ್ವರನೂ, ತ್ರಿಕಾಲಜ್ಞಾನಿಗಳಾದ ಮಹರ್ಷಿಗಳೂ ತಮ್ಮಿಂದುಕ್ತಗಳಾದ ಪವಿತ್ರಗ್ರಂಥಗಳಲ್ಲಿ ಮುಂದೆ ಅವತರಿಸುವ ಮಹಾವಿಭೂತಿಗಳ ವಿಷಯವೇ ಮೊದಲಾದುವುಗಳನ್ನು ಪ್ರತಿಪಾದಿಸಿದ್ದಾರೆ. ಈಶ್ವರನ ಭವಿಷ್ಯದ್ವಾಣಿಗೆ ಅಸತ್ಯವೆಂದು ನುಡಿಯುವುದು ಅಸ್ತಿಕತನದ ಲಕ್ಷಣವೇ? ಅಲ್ಪಜ್ಞಾನಿಗಳಾದ ನಮ್ಮ ಶಕ್ತಿಯನ್ನು ನೋಡಿಕೊಂಡು ಜಗನ್ನಿಯಾಮಕನಾದ ಈಶ್ವರನಲ್ಲಿಯೂ ಅದೇ ಭಾವನೆಯನ್ನು ಮಾಡುವುದು ಬುದ್ಧಿಮಂತಿಕೆಯೇ? ಈ ಮಹಾಶಯರ ವಿಚಾರದಂತೆ ಹೋದರೆ ಶಿವನ ಪಂಚವಿಂಶತಿ ಲೀಲೆಗಳ ಬಗ್ಗೆ ಜಗದಾದಿಯಲ್ಲಿಯೇ ಆಗಮಾದಿಗಳಲ್ಲಿ ಬರೆಯಲ್ಪಟ್ಟ ಬರವಣಿಗೆಗಳಿಗೆಲ್ಲಾ ಕಲ್ಪಿತಗಳೆಂದೇ ಹೇಳಬೇಕಾಗುವ ಪ್ರಸಂಗವು ಬರುವುದಲ್ಲವೇ? ಶಿವನ ಲೀಲಾವಿಷಯವು ಶಿವಾಗಮಗಳಲ್ಲಿ ಹೇಳಲ್ಪಟ್ಟಿರುವುದರಿಂದ ಇವುಗಳಿಗೆ ಬರಿ ಎಳೆದಂತಾಗುವುದಿಲ್ಲವೇ? ದುರುದ್ದೇಶವನ್ನು ಸಾಧಿಸುವ ಭರದಲ್ಲಿ ಪೂರ್ವಾಪರವಿಚಾರಮಾಡದೆ ಮನಸ್ಸಿಗೆ ಬಂದಂತೆ ಬರೆಯುವುದು ಆರ್ಯಧರ್ಮಾನುಯಾಯಿಗಳಿಗೆ ಎಷ್ಟೂ ಭೂಷಣವಲ್ಲ! ಪ್ರತಿಯೊಂದರಲ್ಲಿಯೂ ತಾಮ್ರಮುಖದವರ ಮಾರ್ಗವನ್ನು ಅನುಸರಿಸುವುದು ಶುದ್ಧ ತಪ್ಪು. ಅವರಲ್ಲಿಯೇ ಈಗೀಗ ಎಷ್ಟೋ ಜನರು ಆರ್ಯಗ್ರಂಥಗಳ ವಿಷಯದಲ್ಲಿ ಪೂಜ್ಯಬುದ್ಧಿಯುಳ್ಳವರಾಗಿದ್ದಾರೆ. ಜರ್ಮನ್ ದೇಶದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಆರ್ಯಗ್ರಂಥಗಳನ್ನು ಮುದ್ರಿಸಿ ಜಗತ್ತಿನಲ್ಲೆಲ್ಲಾ ಪ್ರಸಿದ್ಧಪಡಿಸಹತ್ತಿದ್ದಾರೆ. ಈ ವಿಷಯವು ಇಡೀ ಜಗತ್ತಿಗೆಲ್ಲಾ ಗೊತ್ತೇ ಇದೆ. ವಿದೇಶೀಯರೇ ಆರ್ಯಗ್ರಂಥಗಳಲ್ಲಿ ಇಷ್ಟು ಪೂಜ್ಯಬುದ್ಧಿಯನ್ನಿಟ್ಟು ವರ್ತಿಸುತ್ತಿರುವಾಗ, ಭಾರತೀಯರು ಆರ್ಯಗ್ರಂಥಗಳ ಮೇಲೆ ಕುಠಾರವನ್ನೆತ್ತಿ ಕುಣಿದಾಡುತ್ತಿರುವುದು ಕುತ್ಸಿತತನವಲ್ಲವೇ? ಮೊನ್ನೆಮೊನ್ನೆ ಬಿಹಾರದಲ್ಲಿ ಸಂಭವಿಸಿದ ಅದ್ಭುತ ಭೂಕಂಪವಿಷಯವು ಸರ್ವರಿಗೂ ವೇದ್ಯವಿರುವುದಷ್ಟೆ! ಈ ಭೂಕಂಪದ ವಿಷಯವನ್ನು ಒಂದೆರಡು ತಿಂಗಳುಗಳ ಮೊದಲೇ ಭರತಖಂಡದಲ್ಲಿರುವ ಕೆಲಜನ ಜ್ಯೋತಿಷ ವಿದ್ವಾಂಸರು ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದ ವಿಷಯವಾದರೂ ಎಲ್ಲರಿಗೂ ತಿಳಿದೇ ಇದೆ ಅಷ್ಟೆ! ಲೌಕಿಕರಾದ ವಿದ್ವಾಂಸರೇ ಈ ರೀತಿಯಾಗಿ ಭವಿಷ್ಯವನ್ನು ಹೇಳಿ ಪ್ರತ್ಯಕ್ಷೀಕರಿಸುತ್ತಿರಲು ಸರ್ವಜ್ಞಮೂರ್ತಿಯ ಭವಿಷ್ಯದಲ್ಲಿ ಅಶ್ರದ್ಧೆಯನ್ನು ಕಲ್ಪಿಸುವುದು ಹೇಯವಲ್ಲವೇ? ಭೂಕಂಪದ ವಿಷಯವು ಜ್ಯೋತಿಷ ವಿದ್ವಾಂಸರಿಂದ ಮೊದಲೇ ಬರೆಯಲ್ಪಟ್ಟಿದ್ದರೂ, ಈ ಬರವಣಿಗೆಯು ಭೂಕಂಪವಾದ ಮೇಲೆ ಹುಟ್ಟಿದುದೆಂದು ಹೇಳುವವರ ಧೂರ್ತವಾದವೂ, ಕರ್ಲಮಂಗಲರವರ ವಾದವೂ ಈ ಎರಡೂ ಒಂದೇ ಮಾಲಿಕೆಯೊಳಗಿನ ಮಣಿಗಳಂತಿರುತ್ತವೆ. ಬಸವಭಕ್ತಭೂಷಾವೇಷ್ಟಿತರಾದ ಕರ್ಲಮಂಗಲರವರು ಇನ್ನು ಮೇಲಾದರೂ ವೇದಾಗಮವಿರೋಧಿಗಳಾದ ಬಸವನ ಕುಲದವರ ಸಹವಾಸದಲ್ಲಿ ಬೀಳದೆ, ಆಸ್ತಿಕಮತೀಯರ ವೇದಾಗಮಸಿದ್ಧಸಂಪ್ರದಾಯವನ್ನವಲಂಬಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗುವರೆಂದು ನಂಬಿದ್ದೇನೆ.

ಕರ್ಲಮಂಗಲಂರವರು ಆರ್ಯಗ್ರಂಥಗಳನ್ನು ಕಣ್ತೆರೆದು ನೋಡದೆ ಅವುಗಳ ರಹಸ್ಯವನ್ನು ತಿಳಿಯದೆ ಯದ್ವಾತದ್ವಾ ಬರೆದಿರುವುದು ನಿಂದ್ಯವಾಗಿದೆ. ಇವರು ತಾಮ್ರಮುಖದವರ ಇತಿಹಾಸದ ಮೇಲೆ ವಿಶೇಷವಾಗಿ ಕೈಯೂರಿದ್ದಾರೆ. ಇದು ಒಂದು ತರಹದ ಹುಚ್ಚು. ಪಾಶ್ಚಾತ್ಯರಲ್ಲಿ ಅನೇಕ ತರಹದ ತಪ್ಪುಗಳಿವೆ. ಅವರು ಲಿಂಗಪೂಜೆಗೆ ಶಿಶ್ನಪೂಜೆಯೆಂದು ಸಾರುತ್ತಾರೆ. ಪಾಶ್ಚಾತ್ಯರ ಅಭಿಪ್ರಾಯವನ್ನೇ ಮನ್ನಿಸಿದ್ದಾದರೆ ಬಸವನ ಕುಲದವರು ತಾವು ಪ್ರತಿದಿವಸ ಮಾಡತಕ್ಕ ಲಿಂಗಪೂಜೆಯು ಶಿಶ್ನಪೂಜೆಯೆನಿಸುವುದಿಲ್ಲವೇ? ಪಾಶ್ಚಾತ್ಯರ ಈ ಸಿದ್ಧಾಂತವನ್ನು ಅನುಸರಿಸಲಿಕ್ಕೆ ಬಸವನ ಕುಲದವರು ಸಿದ್ಧರಿರುವರೋ? ಜಾತಿಕುಲ ಮೊದಲಾದ ಎಲ್ಲಾ ವಿಷಯದ ಹಂಗುಬಿಟ್ಟ ಸಂಕರಜಾತಿಯವರು ಒಂದು ವೇಳೆ ಇದಕ್ಕೂ ಸಿದ್ಧರಾದರೂ ಆಗಬಹುದು. ಬಿಜ್ಜಳನ ನೌಕರನ ತತ್ತ್ವಗಳೇ ಅಂಥ ಉದಾತ್ತವಾದ ತತ್ತ್ವಗಳು. ಅಸ್ತು!

ಕರ್ಲಮಂಗಲರು ಮುಂದೆ ತಮ್ಮ ಪೀಠಿಕೆಯಲ್ಲಿ ಕೆಲವು ಅಪ್ರಾಸಂಗಿಕ ವಿಷಯಗಳನ್ನು ಬರೆದುಕೊಂಡು, ಶ್ರೀ ಜಗದ್ಗುರು ಪಂಚಾಚಾರ್ಯರು ಯುಗಯುಗಾಂತರಗಳಲ್ಲಿ ಅವತರಿಸಿಲ್ಲವೆಂದೂ, ಇವರೆಲ್ಲಾ ೧೬ನೆಯ ಶತಮಾನದಲ್ಲಿದ್ದವರೆಂದೂ ತಮ್ಮ ಮನೋಭಿಪ್ರಾಯವನ್ನು ಹೊರಗೆಡವಿದ್ದಾರೆ. ಬುದ್ಧಿಭ್ರಾಂತಿಯಿಂದ ಶಿವೋಕ್ತಗಳಾದ ಶಿವಾಗಮಾದಿಗಳನ್ನೆಲ್ಲಾ ಮೂಲೆಗೊತ್ತಿ, ಎಲ್ಲೆಲ್ಲಿಯೋ ತಿಪ್ಪೆಯಲ್ಲಿ ಬಿದ್ದಿರುವ ಹೊಲಸು ಮಾತುಗಳನ್ನು ಸಂಗ್ರಹಿಸಿ, ಆ ಹೊಲಸುಮಾತುಗಳು ಒಂದಕ್ಕೊಂದು ಸಂಬಂಧವಿಲ್ಲದಿದ್ದರೂ ಸಂಬಂಧಿಸಿರುವುವೆಂದು ಬರೆದುಕೊಳ್ಳುತ್ತ ಹೋಗಿರುವುದನ್ನು ನೋಡಿದರೆ ಈ ಮಹಾಶಯರ ಬುದ್ಧಿಯನ್ನು ಬ್ರಹ್ಮನು ಎಷ್ಟು ಗಡುತರವಾಗಿ ಮಾಡಿರಬಹುದೆಂದು ಆಶ್ಚರ್ಯವೆನಿಸುತ್ತದೆ. ವೇದಾಗಮಗಳಿಗಿಂತಲೂ ಇಂಗ್ಲೀಷ್ ಜನರು ಬರೆದ ಗ್ರಂಥಗಳಲ್ಲಿ ಅಸಾಧಾರಣವಾದ ಪೂಜ್ಯಬುದ್ಧಿಯನ್ನಿಟ್ಟಿರುವ ಕರ್ಲಮಂಗಲ ಮಹಾಶಯರೇ! ಜಗತ್ಪ್ರಸಿದ್ಧರಾದ **ಜೆ. ಎನ್. ಫರ್ಕುಹಾರ್ ಎಂ.ಎ., ಡಿ.ಲಿಟ್.**, ಎಂಬವರು ತಮ್ಮಿಂದ ಬರೆಯಲ್ಪಟ್ಟಿರುವ **"ರಿಲಿಜೆಸ್ ಕ್ವೆಸ್ಟ್ ಆಫ್ ಇಂಡಿಯಾ"** ಎಂಬ ಗ್ರಂಥದಲ್ಲಿ ಆಚಾರ್ಯರ ಬಗ್ಗೆ ಬರೆದಿರುವ ಈ ಕೆಳಗಿನ ವಾಕ್ಯಗಳನ್ನು ಚೆನ್ನಾಗಿ ನೋಡಿರಿ!

"The tradition is that the sect was founded by five ascetics—**Ekorama**, **Panditaradhya**, **Revana**, **Marula**, and **Vishwaradhya**—who are said to have sprung from the heads of Shiva, incarnate age after age."

"ಪ್ರತಿಯುಗದಲ್ಲಿಯೂ ಶಿವನ ಮುಖಗಳಿಂದ ಉದ್ಭವಿಸಿದ **ಏಕೋರಾಮಾರಾಧ್ಯ, ಪಂಡಿತಾರಾಧ್ಯ, ರೇವಣಾರಾಧ್ಯ, ಮರುಳಾರಾಧ್ಯ ಮತ್ತು ವಿಶ್ವಾರಾಧ್ಯ** ಎಂಬ 5 ಜನ ಯತಿಗಳಿಂದ ಈ ಮತವು ಸ್ಥಾಪಿಸಲ್ಪಟ್ಟಿತು" ಎಂದು ಬರೆದಿರುತ್ತಾರೆ—ಕರ್ಲಮಂಗಲರು ಇತ್ಯಾದಿ ವಿಷಯಗಳನ್ನು ನೋಡಿ ಇನ್ನು ಮುಂದಾದರೂ ಭ್ರಾಂತಿಯಿಂದ ದೂರಾಗಬೇಕು. ಕರ್ಲಮಂಗಲರು ತಮ್ಮ ಮನಸ್ಸಿಗೆ ತಿಳಿದಂತೆ ಪೀಠಿಕೆಯಲ್ಲಿ ಕೆಲವು ಅಮಂಗಲವಿಷಯಗಳನ್ನು ಬರೆದಿರುತ್ತಾರೆ. ಅವುಗಳನ್ನೆಲ್ಲಾ ಇಲ್ಲಿಯವರೆಗೆ ಸಂಕ್ಷೇಪವಾಗಿ ಖಂಡಿಸಿದ್ದಾಯಿತು. ಇನ್ನು ಮುಂದೆ ಮುಖ್ಯ ವಿಮರ್ಶನೀಯವಾಗಿರುವ ಮಹಾಚಾರ್ಯರ ಕಾಲವಿಮರ್ಶದ ಕಡೆಗೆ ಗಮನಕೊಡೋಣ! ಮೊದಲು ಶ್ರೀಜಗದ್ಗುರು ಕಾಶೀಪೀಠದ ವಿಷಯವನ್ನು ವಿಮರ್ಶಿಸುವಾ!

ಕಾಶ್ಯಾಂ ವಿಶ್ವೇಶ್ವರೇ ಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ। ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ ||

ಎಂದು ಸ್ವಯಂಭುವಾಗಮದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರು ನಾಲ್ಕೂ ಯುಗಗಳಲ್ಲಿ ಕಾಶೀವಿಶ್ವನಾಥಲಿಂಗದಿಂದ ಅವತರಿಸಿ ಕಾಶೀಕ್ಷೇತ್ರದಲ್ಲಿಯೇ ವಾಸಿಸುತ್ತಿದ್ದರೆಂದು ಉಲ್ಲಿಖಿತವಾಗಿದೆ. ಈ ರೀತಿ ಅನಾದಿಸಂಸಿದ್ಧರಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಪೂಜ್ಯಪಾದರ ಕಾಲವನ್ನು ಕರ್ಲಮಂಗಲರವರು ೧೬ ನೆಯ ಶತಮಾನವನ್ನಾಗಿ ಸಾಧಿಸಲುದ್ಯುಕ್ತರಾಗಿರುವುದು ಕೇವಲ ಹಾಸ್ಯಾಸ್ಪದವಾಗಿದೆ. ಶಿವಾಗಮಪ್ರತಿಪಾದ್ಯರಾದ ಮಹಾಚಾರ್ಯರ ಕಾಲನಿರ್ಣಯವನ್ನು ಮಾಡಲು ಹರಿಬ್ರಹ್ಮಾದಿಗಳಿಗೂ ಕೂಡ ಸಾಧ್ಯವಿಲ್ಲದಿರುವಾಗ, ಅಲ್ಪಜ್ಞರಾದ ಕರ್ಲಮಂಗಲಮಹಾಶಯರು ಈ ಕಾರ್ಯದಲ್ಲಿ ಕೈಹಾಕಿರುವುದು ಅತ್ಯಂತ ಹಾಸ್ಯಾಸ್ಪದವಾಗಿದೆ. ಈ ವಿಷಯದಲ್ಲಿ ಇವರಿಗೆ "ಕೆಳದಿನೃಪವಿಜಯ" ಎಂಬ ಅಸಂಬದ್ಧ ಗ್ರಂಥವೇ ಬಲವಾದ ಪ್ರಮಾಣವಾಗಿರುವುದು. ಈ ಗ್ರಂಥವು ಈಗ್ಗೆ ಸುಮಾರು ೧೫೦ ವರ್ಷಗಳ ಕೆಳಗೆ ಲಿಂಗಣ್ಣನೆಂಬ ಸ್ವಾರ್ಥಕವಿಯಿಂದ ರಚಿಸಲ್ಪಟ್ಟಿದೆ. ಲಿಂಗಣ್ಣಕವಿಯು ಈ ಗ್ರಂಥವನ್ನು ಎಷ್ಟು ಅಸಂಬದ್ಧವಾಗಿ ಬರೆದಿರುವನೆನ್ನುವುದನ್ನು ಮೊದಲು ವಿಮರ್ಶಿಸುವಾ!

ಕಾಶೀಮಠದ ವಿಷಯವು ಈ ಗ್ರಂಥದ ಮೂರನೆಯ ಆಶ್ವಾಸದಲ್ಲಿ ಬಂದಿರುತ್ತದೆ. ಈ ಆಶ್ವಾಸವು ಕೆಳದಿರಾಜನಾದ ದೊಡ್ಡಸಂಕಣ್ಣನಾಯಕನೆಂಬವನ ವರ್ಣನಾತ್ಮಕವಾಗಿದೆ. ಈ ದೊಡ್ಡಸಂಕಣ್ಣನಾಯಕನು ಶಾಲಿವಾಹನ ಶಕ ೧೪೭೮ ನೆಯ ವಿಶ್ವಾವಸು ಸಂವತ್ಸರದ ವೈಶಾಖ ಶು|| ೫ ದಿವಸ ರಾಜಪಟ್ಟವನ್ನು ವಹಿಸಿದನೆಂದೂ, ಶಾಲಿವಾಹನಶಕ ೧೪೯೧ ನೆಯ ಕಾಳಯುಕ್ತಿಸಂವತ್ಸರದ ಆಶ್ವಯುಜ ಶು|| ೪ ಯ ವರೆಗೆ ಅರ್ಥಾತ್ ೧೩ ವರ್ಷ ೫ ತಿಂಗಳುಗಳವರೆಗೆ ರಾಜ್ಯವಾಳಿದನೆಂದೂ ಕವಿಯು ತನ್ನ ಗ್ರಂಥದಲ್ಲಿಯೇ ಬರೆದಿದ್ದಾನೆ. ಈ ೧೩ ವರ್ಷ ೫ ತಿಂಗಳುಗಳಲ್ಲಿ ದೊಡ್ಡಸಂಕಣ್ಣನಾಯಕನು ಮಾಡಿದ ಲೀಲೆಗಳನ್ನು ಕವಿಯು ವರ್ಣಿಸಿರುವುದನ್ನು ನೋಡಿದರೆ ಹುಚ್ಚರೂ ಕೂಡ ನಗುವಂತಿದೆ. ಈ ಅಬದ್ಧಕವಿಯು ಬರೆದ ಅಸಂಬದ್ಧ ವಿಷಯವನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸೋಣ!

ದೊಡ್ಡಸಂಕಣ್ಣನಾಯಕನು ತನಗೆ ರಾಜಪಟ್ಟವಾದ ಕೂಡಲೆ ಜಂಬೂರುಕೋಟೆಯನ್ನು ವಶಮಾಡಿಕೊಂಡನಂತೆ! ಆಮೇಲೆ ಪತ್ನೀಸಮೇತನಾಗಿ ವಿಜಯನಗರ (ಹಂಪೆ)ಕ್ಕೆ ಹೋಗಿ ಅಲ್ಲಿಯ ರಾಜನಾದ ರಾಮರಾಯನಲ್ಲಿ (ಕತಿಪಯವತ್ಸರಂವರ್ತಿಸುತ್ತುಂ) ಕೆಲವು ವರ್ಷಗಳವರೆಗೆ ಇದ್ದನಂತೆ! ಕೆಲವು ವರ್ಷಗಳಾದ ಮೇಲೆ ಅವನಿಗೆ ರಾಮರಾಜ, ವೆಂಕಟರಾಜ ಎಂಬ ಇಬ್ಬರು ಗಂಡುಮಕ್ಕಳಾದುವಂತೆ! ಕೆಲವು ದಿವಸಗಳಾದಮೇಲೆ ಅಲ್ಲಿಂದ ಪತ್ನೀಪುತ್ರರೊಡನೆ ತನ್ನ ಊರಿಗೆ ಹೋದನಂತೆ! ಅಲ್ಲಿ ಕೆಲವು ದಿವಸಗಳವರೆಗೆ ಇದ್ದು, ಅಲ್ಲಿಂದ ಗೋವೆಗೆ ಹೋಗಿ ಆ ದೇಶವನ್ನು ಗೆದ್ದು, ಅಲ್ಲಿಂದ ಹಂಪೆಗೆ ಹೋಗಿ ಅಲ್ಲಿಯ ರಾಜರಿಂದ ಬಿರುದುಗಳನ್ನು ಪಡೆದುಕೊಂಡು ಪುನಃ ತನ್ನ ಊರಿಗೆ ಬಂದನಂತೆ! ಆಮೇಲೆ ತನ್ನ ಇಬ್ಬರು ಗಂಡುಮಕ್ಕಳುಗಳಿಗೆ ಅತ್ಯಂತ ರೂಪವತಿಯರಾದ ಕನ್ಯೆಯರನ್ನು ತಂದು ಲಗ್ನಮಾಡಿದನಂತೆ! ಬಳಿಕ ತನ್ನ ಪಟ್ಟಣದಲ್ಲಿ ಕೆಲವುಕಾಲ ಸುಖದಿಂದಿದ್ದು ರಾಜ್ಯಭಾರವನ್ನು ತನ್ನ ತಮ್ಮನಿಗೆ ವಹಿಸಿ, ತಾನು ಜಂಗಮವೇಷವನ್ನು ಧರಿಸಿಕೊಂಡು ದೇಶಸಂಚಾರಕ್ಕೆ ಹೊರಟನಂತೆ! ಮೊದಲು ತನ್ನರಾಜಧಾನಿಯಿಂದ ಶಿವಗಂಗೆಗೆ ಹೋದನಂತೆ! ಅಲ್ಲಿಂದ ಕಂಚಿ, ಚಿದಂಬರ, ಗೌರೀಮಯೂರ, ಮಧ್ಯಾರ್ಜುನ, ಕುಂಭಕೋಣ, ಪಂಚನದ, ನವಪಾಷಾಣ, ಬೇತಾಳಪಟ್ಟಣ, ರಾಮೇಶ್ವರ ಇತ್ಯಾದಿ ಸ್ಥಾನಗಳಿಗೆ ಹೋದನಂತೆ! ರಾಮೇಶ್ವರದಿಂದ ನಾನಾದೇಶಗಳನ್ನು ನೋಡುತ್ತ ದಿಲ್ಲಿಗೆ ಹೋದನಂತೆ! ದಿಲ್ಲಿಯ ಚಕ್ರವರ್ತಿಯಲ್ಲಿ ಅಂಕುಶಖಾನನೆಂಬ ಪ್ರಬಲಮಲ್ಲನಿದ್ದನಂತೆ! ಅವನನ್ನು ಯಾರೂ ಸೋಲಿಸಿರಲಿಲ್ಲವಂತೆ! ಇವನು ಚಕ್ರವರ್ತಿಯ ಆಜ್ಞೆಯ ಮೇರೆಗೆ ಅವನೊಡನೆ ಕಾಳಗಮಾಡಿ ತನ್ನಲ್ಲಿರುವ ಕತ್ತಿಯಿಂದ ಅವನನ್ನು ಕೊಂದನಂತೆ! ಶರೀರವು ಎರಡುಭಾಗವಾದಾಗ್ಯೂ ಅಂಕುಶಖಾನನು ಹಾಗೆಯೇ ನಿಂತಿದ್ದನಂತೆ! ಚಕ್ರವರ್ತಿಯು ಈ ಆಶ್ಚರ್ಯಕರವಾದ ದೃಶ್ಯವನ್ನು ನೋಡಿ ಈತನ ಸಾಮರ್ಥ್ಯಕ್ಕೆ ಬೆರಗಾಗಿ ಈತನ ಪರ

ಚಯವನ್ನು ಮಾಡಿಕೊಂಡು ಸಂತೋಷದಿಂದ ಅನೇಕ ರತ್ನಾಭರಣಗಳನ್ನು ಕೊಡಲು ಪ್ರಯತ್ನಿಸಿದನಂತೆ! ಸಂಕಣ್ಣನಾಯಕನು ಅವುಗಳನ್ನು ತೆಗೆದುಕೊಳ್ಳದೆ ನಿನ್ನ ರಾಜ್ಯದ ಪ್ರಸಿದ್ಧಸ್ಥಳಗಳಲ್ಲಿ ನಾನು ಮಠಗಳನ್ನು ಸ್ಥಾಪಿಸಬೇಕಾಗಿರುವುದರಿಂದ ನನ್ನೀ ಮನೋರಥವನ್ನು ನಡೆಯಿಸಿಕೊಡಬೇಕೆಂದು ಕೇಳಿಕೊಂಡನಂತೆ! ಅದಕ್ಕೆ ಚಕ್ರವರ್ತಿಯು ಒಪ್ಪಿಕೊಂಡು ಈ ವಿಷಯವನ್ನು ತನ್ನ ರಾಜ್ಯದಲ್ಲಿರುವ ಸರಕಾರಿ ಅಧಿಕಾರಿಗಳಿಗೆಲ್ಲಾ ತಿಳುಹಿಸಿದನಂತೆ! ದಿಲ್ಲಿಯಲ್ಲಿ ಒಂದು ಮಠವನ್ನೂ, ಪ್ರಯಾಗದಲ್ಲಿ ಒಂದು ಮಠವನ್ನೂ ಕಟ್ಟಿಸಿದನಂತೆ! ಆಮೇಲೆ ಕಾಶೀಕ್ಷೇತ್ರಕ್ಕೆ ಬಂದು ಜಂಗಮವಾಟಿ ಎಂಬ ಮಠವನ್ನೂ, ಬೇರೆ ೫ ಮಠಗಳನ್ನೂ ಕಟ್ಟಿಸಿದನಂತೆ! ಕಪಿಲಾಧಾರಾತೀರ್ಥ, ಮಾನಸಸರೋವರ, ಗಂಧರ್ವಸಾಗರ, ಕರ್ದಮೇಶ್ವರ, ನರ್ಮದೇಶ್ವರ, ಭೀಮಚಂಡಿಕೆ, ವೃಷಭಧ್ವಜೇಶ್ವರ ಈ ಸ್ಥಾನಗಳನ್ನೆಲ್ಲಾ ಜೀರ್ಣೋದ್ಧಾರಗೊಳಿಸಿದನಂತೆ! ಆಮೇಲೆ ಗಯೆಗೆ ಹೋಗಿ ಅಲ್ಲಿ ೧ ಮಠವನ್ನೂ, ಅಲ್ಲಿಂದ ನೇಪಾಳಕ್ಕೆ ಹೋಗಿ ಅಲ್ಲಿ ೧ ಮಠವನ್ನೂ, ಅಲ್ಲಿಂದ ಕೇದಾರಕ್ಕೆ ಹೋಗಿ ಅಲ್ಲಿ ೧ ಮಠವನ್ನೂ ಕಟ್ಟಿಸಿದನಂತೆ!

(ಕವಿಯು ದೊಡ್ಡ ಸಂಕಣ್ಣನಾಯಕನ ಧರ್ಮಕಾರ್ಯಕ್ಕೆ ಇಷ್ಟೆಲ್ಲಾ ಸಹಾಯಮಾಡಿದ ಚಕ್ರವರ್ತಿಯ ಹೆಸರನ್ನೇ ಯಾಕೋ ಬರೆದಿಲ್ಲ! ಪಾಪ! ಸಂಕಣ್ಣನ ಧರ್ಮಕಾರ್ಯವರ್ಣನಭರದಲ್ಲಿ ಮರೆತುಬಿಟ್ಟಂತೆ ತೋರುತ್ತದೆ. ಅಥವಾ ನಿಜವಾದ ಚಕ್ರವರ್ತಿಯು ಸಹಾಯಮಾಡಿದ್ದರಲ್ಲವೇ ಕವಿಯು ಬರೆಯುವುದು? ಕವಿಗೆ ಆಕಾಲಕ್ಕೆ ಯಾರು ಏನು ಹೇಳಿದರೋ! ಹತ್ತಿದರೆ ಹತ್ತಲಿ, ಹಾರಿದರೆ ಹಾರಲಿ, ಎಂದು ಬರೆದುಬಿಟ್ಟಿದ್ದಾನೆ. ಪಾಪ! ಇದರಲ್ಲಿ ಕವಿಯ ತಪ್ಪೇನು?)

ಕೇದಾರದಿಂದ ಹರದ್ವಾರಕ್ಕೆ ಬಂದು ಪುನಃ ಅಲ್ಲಿಂದ ಕಾಶ್ಮೀರಕ್ಕೆ ಹೋದನಂತೆ! ಅಲ್ಲಿಂದ ಕುರುಕ್ಷೇತ್ರ, ಪೈಠಣದೇಶಗಳಿಗೆ ಹೋಗಿ ಅಲ್ಲಿಂದ ಪಂಪಾಕ್ಷೇತ್ರಕ್ಕೆ ಬಂದನಂತೆ! ಅಲ್ಲಿಂದ ಕೆಳದಿಗೆ ಬಂದು ವೀರಭದ್ರದೇವಾಲಯವನ್ನೂ, ಅಘೋರೇಶ್ವರ ದೇವಾಲಯವನ್ನೂ ಕಟ್ಟಿಸಿ ದೇವತೆಗಳನ್ನು ಪ್ರತಿಷ್ಠಿಸಿದನಂತೆ! ಆ ಮೇಲೆ ತುರುಕರೊಡನೆ ಯುದ್ಧ ಮಾಡಿದನಂತೆ! ಬಳಿಕ ಜಂಬೂರ ಕೋಟೆಯನ್ನೂ, ಮಾದೇವಪುರವನ್ನೂ ವಶಮಾಡಿಕೊಂಡನಂತೆ! ಅನಂತರ ಭೈರಸ ಒಡೆಯರು, ಸಾಳುವ ತಿಮ್ಮ ಇವರೇ ಮೊದಲಾದವರನ್ನು ನಿಗ್ರಹಿಸಿ ಸುಖದಿಂದ ರಾಜ್ಯವಾಳಿದನಂತೆ! ಇಷ್ಟೆಲ್ಲಾ ಕಾರ್ಯಗಳು ೧೩ ವರ್ಷ ೫ ತಿಂಗಳುಗಳಲ್ಲಿ ನೆರವೇರಿದುವಂತೆ! ಇಷ್ಟು ಅಲ್ಪಾವಧಿಯಲ್ಲಿ ಇವೆಲ್ಲಾ ಕಾರ್ಯಗಳು ಆಗಲಿಕ್ಕೆ ಸಾಧ್ಯವೇ? ಎನ್ನುವುದನ್ನು ಕುಶಲರು ಯೋಚಿಸಬೇಕು. ಇಬ್ಬರು ಗಂಡುಮಕ್ಕಳುಗಳನ್ನು ಹುಟ್ಟಿಸಿ ಅವರಿಗೆ ಲಗ್ನಮಾಡಬೇಕಾದರೆ ಆ ಹುಡುಗರಿಗೆ ಕನಿಷ್ಠಪಕ್ಷ ೧೫-೧೬ ವರ್ಷಗಳಾದರೂ ಆಗಬೇಕಲ್ಲವೇ? ಅಥವಾ ಸಂಕಣ್ಣನಾಯಕನು ಕನ್ಯಾರತ್ನಗಳನ್ನು ತಂದು ತೊಟ್ಟಿಲಲ್ಲಿದ್ದ ಬಾಲಕರಿಗೆ ಲಗ್ನಮಾಡಿದನೋ! ಯಾರಿಗೆ ಗೊತ್ತು? ಅದು ಬರೆದ ಕವಿಗೇ ಗೊತ್ತು! ಕರ್ಲಮಂಗಲ ಮಹಾಶಯರೊಬ್ಬರಿಗೆ ಮಾತ್ರ ಗೊತ್ತಿದ್ದರೂ ಇರಬಹುದು. ಅಸ್ತು! ರೇಲ್ವೆ ಮೋಟಾರು ಮೊದಲಾದ ಸೌಕರ್ಯವಿಲ್ಲದ ಆ ಕಾಲದಲ್ಲಿ ಇಡೀ ಇಂಡಿಯಾದೇಶವನ್ನೂ, ನೇಪಾಳದೇಶವನ್ನೂ ಸುತ್ತಿ, ಅಲ್ಲಲ್ಲಿ ಅಗಣಿತಮಠದೇವಾಲಯಗಳನ್ನು ಕಟ್ಟಿಸಬೇಕಾದರೆ ಎಷ್ಟು ವರ್ಷಗಳು ಹಿಡಿಯಬಹುದು? ಇದಲ್ಲದೆ ಅನೇಕ ರಾಜರೊಡನೆ ಯುದ್ಧಮಾಡಿ ಅವರನ್ನೆಲ್ಲಾ ಜಯಿಸಬೇಕಾದರೆ ಎಷ್ಟು ವರ್ಷಗಳು ಹಿಡಿದಿರಬಹುದು? ಇವೆಲ್ಲಾ ಕಾರ್ಯಗಳಾಗಬೇಕಾದರೆ ಕನಿಷ್ಠಪಕ್ಷ ೫೦-೬೦ ವರ್ಷಗಳಾದರೂ ಬೇಕಲ್ಲವೇ? ಇಷ್ಟೆಲ್ಲಾ ಅಬದ್ಧದ ಕಂತೆಯನ್ನು ಬರೆದ ಕವಿಯು, ದೊಡ್ಡ ಸಂಕಣ್ಣನಾಯಕನು ೬೦ ವರ್ಷಗಳವರೆಗೆ ರಾಜ್ಯವಾಳಿದನೆಂದು ಬರೆದಿದ್ದರೆ ಚನ್ನಾಗಿತ್ತು. ಹಾಗೆ ಮಾಡದೆ ೧೩ ವರ್ಷ ೫ ತಿಂಗಳುಗಳಲ್ಲಿಯೇ ಇಷ್ಟೆಲ್ಲಾ ಮಾಡಿದನೆಂದು ಬರೆದಿರುವುದು ಕವಿಯ ಅವಿವೇಕತನವನ್ನು ವ್ಯಕ್ತಗೊಳಿಸುತ್ತದೆ. ದೊಡ್ಡ ಸಂಕಣ್ಣನಾಯಕನು ಮಹಾಮಹಾ ಮಠಾದಿಗಳನ್ನು ಕಟ್ಟಿಸುವುದೊತ್ತಟ್ಟಿಗಿರಲಿ, ೧೩ ವರ್ಷಗಳಲ್ಲಿ ಇಬ್ಬರು ಮಕ್ಕಳನ್ನು ಹಡೆದು ಅವರನ್ನು ದೊಡ್ಡವರನ್ನಾಗಿ ಮಾಡಿ ಕನ್ಯಾರತ್ನಗಳನ್ನು ವಿವಾಹಮಾಡಿದ್ದೇ ಸೋಜಿಗವೆನಿಸುತ್ತದೆ. ಹೀಗೆ ಈ ಕವಿಯು ಒಂದಕ್ಕೊಂದು ಸಂಬಂಧವಿಲ್ಲದೆ ಜನರು ನಗುವಂತೆ ದೊಡ್ಡಸಂಕಣ್ಣನಾಯಕನ ಚರಿತ್ರವನ್ನು ಬರೆದಿರುವುದನ್ನು ನೋಡಿದರೆ ಈತನ ಅವಿಚಾರತನಕ್ಕೆ ಬೆಲೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಕಾಶೀ-ಕೇದಾರ-ಗಯಾ-ಪ್ರಯಾಗ-ನೇಪಾಳ ಮೊದಲಾದ ಪ್ರಸಿದ್ಧಸ್ಥಾನಗಳಲ್ಲಿಅನಾದಿಕಾಲದಿಂದಿದ್ದ ಪುರಾತನಮಠಗಳ ಹೆಸರುಗಳನ್ನುಕೇಳಿ, ಅವೆಲ್ಲವೂ ತಮ್ಮ ರಾಜನಿಂದಲೇ ಸ್ಥಾಪಿಸಲ್ಪಟ್ಟವೆಂದು ಬರೆದರೆ ರಾಜನಿಗೆ ಬಹು ಗೌರವವು ಬರಬಹುದೆಂದು ತಿಳಿದು ಕವಿಯು ಬರೆದಿದ್ದಾನಲ್ಲದೆ ಬೇರೊಂದಿಲ್ಲವೆನ್ನುವುದು ಸರ್ವರಿಗೂ ತಿಳಿಯುವಂತಿದೆ. ಈ ರೀತಿಯಾಗಿ ಒಂದಕ್ಕೊಂದು ಸಂಬಂಧವಿಲ್ಲದಂತೆ ಬರೆದಿರುವ ದೊಡ್ಡಸಂಕಣ್ಣನಾಯಕನ ಚರಿತ್ರವೆಲ್ಲಾ ಕೇವಲ ಕಲ್ಪನಾತ್ಮಕವಾಗಿರುವುದಲ್ಲದೆ ಇದರಲ್ಲಿ ನಿಜವಾದ ಅಂಶವು ಯಾವುದೂ ಇರುವುದಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಈ ಪುಸ್ತಕವನ್ನು ಮುದ್ರಣಮಾಡಿಸಿದ ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯವರು ತಮ್ಮ ಪೀಠಿಕೆಯ ಟಿಪ್ಪಣಿಯಲ್ಲಿ—

(ದೊಡ್ಡ ಸಂಕಣ್ಣನಾಯಕನು ದಿಲ್ಲಿಗೆಹೋಗಿ ಅಂಕುಶಖಾನನೊಡನೆ ಹೋರಾಡಿ ಅವನನ್ನು ಗೆದ್ದುದು, ಮುಂತಾದ ಕೆಲವು ಸಂಗತಿಗಳು ಕೇವಲ ಅಸಜಾತವಾದ ಕಥೆಗಳೆಂದು ತೋರುತ್ತದೆ.)

ಎಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿರುತ್ತಾರೆ. ಇವರೀಬರವಣಿಗೆಯಿಂದಲೂ ಈ ಕಥೆಯು ಕೇವಲ ಕಲ್ಪನಾತ್ಮಕವಾಗಿರುವುದೆಂದು ಸ್ಪಷ್ಟವಾಗುತ್ತದೆ. ಅಂಕುಶಖಾನನವಿಷಯವೇ ಕಲ್ಪಿತಕಥೆಯೆಂದ ಮೇಲೆ, ಅವನನ್ನವಲಂಬಿಸಿ ಬಂದಿರುವ ಮಠ ದೇವಾಲಯಪ್ರತಿಷ್ಠಾದಿಗಳು ಸುತರಾಂ ಕಲ್ಪಿತಗಳೆಂದೇ ಸಿದ್ಧವಾಗುವುದು.

ಜಂಗಮಭಿಕ್ಷುಕಾಕಾರವನ್ನು ತೊಟ್ಟ ಸಂಕಣ್ಣನಾಯಕನ ಯೋಗ್ಯತೆಯೆಂದರೇನು? ಕಾಶೀ, ಕೇದಾರ, ನೇಪಾಳ, ಗಯಾ, ಪ್ರಯಾಗಗಳಲ್ಲಿ ಮಹಾಮಹಾ ಮಠಗಳನ್ನು ಕಟ್ಟಿಸುವುದೆಂದರೇನು? ಇವನು ದೇಶಮಧ್ಯದಲ್ಲಿ ಸಂಚರಿಸಬೇಕಾದರೆ ಜಂಗಮ ವೇಷವನ್ನು ಧರಿಸುವ ಆವಶ್ಯಕತೆ ಏನಿತ್ತು? ವಿಚಾರಮಾಡಿ ನೋಡಿದರೆ ಇದೆಲ್ಲಾ ಕಲ್ಪಿತಕಥೆಯೆನ್ನುವುದು ಚಿಕ್ಕಮಕ್ಕಳಿಗೂ ಕೂಡ ತಿಳಿಯುವಂತಿದೆ. ಇಷ್ಟು ಸ್ಥಾನಗಳಲ್ಲಿ ಇವನು ಮಠಗಳನ್ನು ಕಟ್ಟಿಸಿದ್ದರೆ ಇವನ ಹೆಸರು ಆ ಆ ಮಠಗಳಲ್ಲಿ ಯತ್ಕಿಂಚಿತ್ತಾದರೂ ಇರಬೇಕಲ್ಲವೇ? ಅವನ ಹೆಸರನ್ನು ಇಂದಿನವರೆಗೆ ಯಾವ ಮಠದವರಾದರೂ ಕೇಳಿದ್ದಾರೆಯೇ? ಈಗ ಮಾತ್ರ ಕರ್ಲಮಂಗಲರು ಅವನ ಹೆಸರನ್ನು ಎಲ್ಲರಿಗೂ ತೋರಿಸಿಕೊಟ್ಟರು. ಸಂಕಣ್ಣನಾಯಕನ ಧರ್ಮದಲ್ಲಿ ಅರ್ಧ ಧರ್ಮ ಕರ್ಲಮಂಗಲರಿಗೆ ಸೇರತಕ್ಕದ್ದೇ ನ್ಯಾಯವಾಗಿದೆ. ತಥಾಸ್ತು! ಇದನ್ನೆಲ್ಲಾ ವಿಚಾರಮಾಡಿ ನೋಡದೆ ಕರ್ಲಮಂಗಲರವರು ಉಬ್ಬಿ ಉಬ್ಬಿ ಬರೆದು ತಮ್ಮ ಮಬ್ಬುಬುದ್ಧಿಯನ್ನು ಜನತೆಯಲ್ಲಿ ಪ್ರಕಾಶಪಡಿಸಿಕೊಂಡಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ.

ಮಹಾಮೇಧಾವಿಗಳಾದ ಕರ್ಲಮಂಗಲರವರು ದಿಲ್ಲಿಯಲ್ಲಿ ಹುಮಾಯೂನನು ಆಳುವ ಕಾಲಕ್ಕೆ ದೊಡ್ಡಸಂಕಣ್ಣನಾಯಕನು ಹೋಗಿ ಅಂಕುಶಖಾನನೊಡನೆ ಯುದ್ಧಮಾಡಿ ಇಷ್ಟುಕಾರ್ಯವನ್ನೆಲ್ಲಾ ಮಾಡಿದನೆಂದು ಬರೆದಿರುತ್ತಾರೆ. ಚಕ್ರವರ್ತಿಯ ಹೆಸರನ್ನು ಕವಿಯು ಹೊರಗೆ ಹಾಕದಿದ್ದರೂ ಕರ್ಲಮಂಗಲರು ಹೊರಗೆ ಹಾಕಿದ್ದಾರೆ. ಕೊಲೊಂಬಸನು ಅಮೆರಿಕಾಖಂಡವನ್ನು ಹೊಸದಾಗಿ ಶೋಧಿಸಿದಂತೆ ಇದೊಂದು ಹೊಸ ಶೋಧ! ಕರ್ಲಮಂಗಲರು ಈ ಸಂದರ್ಭದಲ್ಲಿ ಹುಮಾಯೂನನ ಹೆಸರನ್ನೆತ್ತಿರುವುದು ಅತ್ಯಂತ ಹಾಸ್ಯಾಸ್ಪದ ವಿಷಯವಾಗಿದೆ. ಏಕೆಂದರೆ—ದೊಡ್ಡ ಸಂಕಣ್ಣನಾಯಕನಿಗೆ ಕ್ರಿ.ಶ. ೧೫೫೬ರಲ್ಲಿ ಪಟ್ಟವಾಯಿತೆನ್ನುವ ವಿಷಯವು ಕೆಳದಿ ನೃಪವಿಜಯದಿಂದ ತಿಳಿದು ಬರುವುದು. ಇವನು ತನಗೆ ಪಟ್ಟವಾದ ಮೇಲೆ ಒಂದುಪಕ್ಷ ದಿಲ್ಲಿಗೆ ಹೋಗಿದ್ದರೆ ಆ ಸಮಯದಲ್ಲಿ ಹುಮಾಯೂನನು ದಿಲ್ಲಿಯಲ್ಲಿ ರಾಜನಾಗಿರಲಿಲ್ಲ. ಹುಮಾಯೂನನು ಕ್ರಿ. ಶ. ೧೫೩೦ ರಿಂದ ೧೫೪೦ ರ ವರೆಗೆ ದಿಲ್ಲಿ ಸಿಂಹಾಸನವನ್ನಾರೋಹಣಮಾಡಿದ್ದನು. ಆ ಮೇಲೆ ಹುಮಾಯೂನನಿಗೂ ಪಠಾಣವಂಶದ ಶೇರ್‌ಖಾನನಿಗೂ ಯುದ್ಧವಾಗಲು, ಹುಮಾಯೂನನು ಸೋತು ಕಾಬೂಲರಾಜ್ಯವನ್ನು ಸೇರಿದನು. ಆಗ ಶೇರ್‌ಖಾನನು ದಿಲ್ಲಿ ಸಿಂಹಾಸನವನ್ನಾರೋಹಣಮಾಡಿ ಕ್ರಿ. ಶ. ೧೫೪೦ ರಿಂದ ೧೫೪೫ ರ ವರೆಗೆ ರಾಜ್ಯವಾಳಿದನು. ಬಳಿಕ ಅವನ ಮಗನಾದ ಸೇಲೀಮನು ೯ ವರ್ಷಗಳವರೆಗೆ ರಾಜ್ಯವಾಳಿದನು. ದೊಡ್ಡಸಂಕಣ್ಣನಿಗೆ ರಾಜಪಟ್ಟಾಧಿಕಾರವಾಗುವಾಗ್ಗೆ ದಿಲ್ಲಿ ಸಿಂಹಾಸನವನ್ನು ಪಠಾಣವಂಶದ ಸೇಲೀಮನು ಅಲಂಕರಿಸಿದ್ದನು. ಆದರೆ ಸಂಕಣ್ಣನಾಯಕನು ನಿಜವಾಗಿ ದಿಲ್ಲಿಗೆ ಹೋಗಿದ್ದ ಪಕ್ಷದಲ್ಲಿ ಆಗ್ಗೆ ಅಕಬರನು ಚಕ್ರವರ್ತಿಯಾಗಿದ್ದನೆಂದು ಹೇಳಬಹುದಾಗಿದೆ. ಇತಿಹಾಸಸಂಶೋಧಕಶಿಖಾಮಣಿಗಳಾದ ಕರ್ಲಮಂಗಲರು ಹೀಗೇಕೆ ಉಲಟಾಪಲಟಾ ಬರೆದರೋ ತಿಳಿಯದಾಗಿದೆ. ವಿಷಯವು ಸತ್ಯವಾಗಿದ್ದರೆ. ಎಲ್ಲಾ ಸರಿಯಾಗಿರುತ್ತದೆ: ಅಸತ್ಯವಾಗಿದ್ದರೆ ಹೀಗಾಗುವುದೇ ಸ್ವಾಭಾವಿಕವಾಗಿದೆ. ಇರಲಿ; ದೊಡ್ಡ ಸಂಕಣ್ಣನಾಯಕನಿಗೆ ಪಟ್ಟವಾಗುವುದಕ್ಕಿಂತ ೧೬ ವರ್ಷಗಳ ಪೂರ್ವದಲ್ಲಿಯೇ ಅಂದರೆ ಕ್ರಿ. ಶ. ೧೫೩೦ ರಲ್ಲಿ ಹುಮಾಯೂನನು ಕಾಶಿಯಲ್ಲಿರುವ ಜಂಗಮವಾಡೀಮಠಕ್ಕೆ ೩೦೦ ಬಿಘೆ (೧೨೦೦ ಎಕರೆ) ಜಮೀನನ್ನು ದಾನಮಾಡಿದ್ದಾನೆ. ಹುಮಾಯೂನನು ಕೊಟ್ಟ ದಾನಶಾಸನವು ಈಗಲೂ ಕಾಶೀ ಜಗದ್ಗುರು ಪೀಠದಲ್ಲಿ ರಾರಾಜಿಸುತ್ತಿರುವುದು. ಇದೇ ವಿಷಯವನ್ನು, ಬನಾರಸ್ ಜಡ್ಜ ಸಾಹೇಬರವರು ತಾ|| ೨೭-೧೧-೧೯೩೩ರಲ್ಲಿ ತೀರ್ಮಾನಿಸಲ್ಪಟ್ಟ ಕಾಶೀಪೀಠದ ಒಂದಾನೊಂದು ಮೊಕದ್ದಮೆಯ ಜಡ್ಜ ಮೆಂಟಿನಲ್ಲಿ—

"It appears that **Humayun** made a grant of about three hundred bighas of land in the outskirts of Benares and Chunar (Dist. Mirzapur)...................... The firmans and the ancient documents range from **1530 to 1748 A. D.** They prove the following facts—By Ex. 39 (a) **Humayun** made a grant of three hundred bighas of land."

ಈ ರೀತಿಯಾಗಿ ಬರೆದಿದ್ದಾರೆ. "ಹುಮಾಯೂನನು ಬನಾರಸ್ ಮತ್ತು ಚುನಾರ್ (ಮಿರ್ಜಾಪುರಡಿ||)ಗಳ ಹೊರಭಾಗದಲ್ಲಿ ೩೦೦ ಬಿಘೆಜಮೀನನ್ನು ದಾನಮಾಡಿದನೆಂದು ತೋರುವುದು"........ "ಈ ಫರ್ಮಾನಗಳು ಮತ್ತು ಹಳೆದಾಖಲೆಗಳು ಕ್ರಿ.ಶ. ೧೫೩೦ ರಿಂದ ೧೭೪೮ ರ ವರೆಗೆ ಇರುತ್ತವೆ. ಅವುಗಳಿಂದ ಈ ಕೆಳಗಿನ ವಿಷಯಗಳು ಸ್ಥಿರಪಡುತ್ತವೆ. ೩೯ ನೇ ನಂ. (ಎ) ಶಾಸನದಿಂದ ಹುಮಾಯೂನನು ೩೦೦ ಬಿಘೆ (೧೨೦೦ ಎಕರೆ) ಜಮೀನನ್ನು ದಾನಮಾಡಿದನು."

ಇದು ಇಂಗ್ಲೀಷ್ ಜಡ್ಜಮೆಂಟಿನ ತಾತ್ಪರ್ಯ!

ದೊಡ್ಡ ಸಂಕಣ್ಣನಾಯಕನು ಕಾಶಿಗೆ ಹೋಗುವುದಕ್ಕಿಂತ ಎಷ್ಟೋ ವರ್ಷಗಳ ಮೊದಲೇ ಹುಮಾಯೂನ ಬಾದಶಹನು ಜಂಗಮವಾಡೀ ಮಠಕ್ಕೆ ಮಿರ್ಜಾಪುರ ಡಿಸ್ಟ್ರಿಕ್ಟಿಗೆ ಸೇರಿದ ಚುನಾರಿನಲ್ಲಿಯೂ ಮತ್ತು ಕಾಶೀಕ್ಷೇತ್ರದಲ್ಲಿಯೂ ಒಟ್ಟು ೧೨೦೦ ಎಕರೆ ಜಮೀನನ್ನು ದಾನಮಾಡಿರುವಾಗ, ಕೆಳದಿನೃಪವಿಜಯಕಾರನು, ಸಂಕಣ್ಣನಾಯಕನು ಮಠವನ್ನು ಕಟ್ಟಿಸಿ ಅದಕ್ಕೆ ಕಾಶಿಯಲ್ಲಿ ಜಮೀನನ್ನು ಕೊಡಿಸಿದನೆಂದು ಸುಳ್ಳುಸುಳ್ಳಾಗಿ ಬರೆದಿರುವುದು ಮಹಾಪಾಪಕಾರ್ಯವಲ್ಲವೇ? ಆಮೂಲಾಗ್ರವಾಗಿ ಗ್ರಂಥವನ್ನು ಪರಿಶೀಲಿಸದೆಯೂ, ಪೂರ್ವಾಪರ ರಿಕಾರ್ಡುಗಳನ್ನು ನೋಡದೆಯೂ ಅಸತ್ಯಮಯವಾದ ದೊಡ್ಡಸಂಕಣ್ಣನಾಯಕನ ಚರಿತ್ರವನ್ನು ನೋಡಿ ಸುಮ್ಮಸುಮ್ಮನೆ ಜಿಗಿದಾಡುತ್ತ ಪುಸ್ತಕವನ್ನು ಪ್ರಿಂಟುಮಾಡಿಸಿರುವುದು ಲಜ್ಜಾಕರವಲ್ಲವೇ? ಕರ್ಲಮಂಗಲಂರವರು ಇನ್ನು ಮೇಲಾದರೂ ಈ ತರಹದ ತಮ್ಮ ಅಮಂಗಲಪುಸ್ತಕವನ್ನು ಪ್ರಚಾರಮಾಡುವುದಕ್ಕಿಂತಲೂ "ಅಗ್ನಯೇ ಸ್ವಾಹಾ" ಎಂಬ ಮಂತ್ರಪೂರ್ವಕವಾಗಿ ಅದಕ್ಕೆ ಅಗ್ನಿಸಂಸ್ಕಾರವನ್ನು ಮಾಡುವುದು ಮೇಲು! ಹೀಗೆ ಮಾಡುವುದು ಲೋಕಕ್ಕೆ ಕ್ಷೇಮ! ಪರಮೇಶ್ವರನಿಗೆ ಪ್ರೇಮ !!

(ಮುಂದೆ ಸಾಗುವುದು.)

ದಿವಾನ್‌ಬಹದ್ದೂರ್

ರಾಜಧರ್ಮಪ್ರವೀಣ ಶ್ರೀಮಾನ್ ಪಿ. ಮಹಾದೇವಯ್ಯನವರು.

ಇಂಡಿಯಾ ಚಕ್ರವರ್ತಿಗಳಾದ ಜಾರ್ಜಸಾರ್ವಭೌಮರವರು ತಮ್ಮ ವರ್ಧಂತೀ ಸಮಯದಲ್ಲಿ ಮೈಸೂರು ಸೀಮೆಯ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿರುವ ಮೆ|| ಪಿ. ಮಹಾದೇವಯ್ಯನವರಿಗೆ **"ದಿವಾನ್‌ಬಹದ್ದೂರ್"** ಎಂಬ ಶ್ರೇಷ್ಠವಾದ ಬಿರುದನ್ನು ದಯಪಾಲಿಸಿರುವ ವಿಷಯವನ್ನು ಕೇಳಿ ಅತ್ಯಂತವಾಗಿ ಸಂತೋಷಿಸುತ್ತೇವೆ. ಕಳೆದ ನವರಾತ್ರಮಹೋತ್ಸವ ಸಮಯದಲ್ಲಿ ನಮ್ಮನ್ನಾಳುವ ಮಹಾಪ್ರಭುಗಳವರು ಈ ಮಹೋದಯರಿಗೆ **"ರಾಜಧರ್ಮಪ್ರವೀಣ"** ಎಂಬ ಅಮೋಘವಾದ ಪದವಿಯನ್ನು ದಯಪಾಲಿಸಿರುವ ವಿಷಯವು ಸರ್ವರಿಗೂ ತಿಳಿದುದಾಗಿದೆ. ಈ ಎರಡೂ ಮಹಾ ಪದವಿಗಳ ಸಂಬಂಧವು ಸುವರ್ಣ ಮತ್ತು ರತ್ನಗಳ ಸಂಬಂಧದಂತೆ ಈ ಮಹೋದಯರಿಗೆ ಅತ್ಯಂತ ಶೋಭೆಯನ್ನುಂಟುಮಾಡತಕ್ಕುದಾಗಿದೆ. ಕಾಯಿದೆ ಪಾಂಡಿತ್ಯದಲ್ಲಿ ಅಸಾಧಾರಣ ಪ್ರತಿಭಾಶಾಲಿಗಳೆಂದು ಇಂಡಿಯಾದೇಶದಲ್ಲೆಲ್ಲಾ ಕೀರ್ತಿವೆತ್ತಿರುವ ಈ ಮಹೋದಯರು ಜಗದಾಚಾರ್ಯರ ಆಶೀರ್ವಾದ ಬಲದಿಂದ ಇತೋಪ್ಯತಿಶಯಗಳಾದ ಮಹಾ ಮಹಾ ಪದವಿಗಳಿಂದ ಭೂಷಿತರಾಗಿ ವೀರಶೈವಮತಸಾಮ್ರಾಜ್ಯದಲ್ಲಿ ದಿನಮಣಿಯಂತೆ ದೇದೀಪ್ಯಮಾನವಾಗಿ ಮೆರೆಯಲೆಂದೂ, ಶ್ರೀ ಜಗದಾಚಾರ್ಯರು ಈ ಮಹೋದಯರಿಗೆ ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನಿತ್ತು ರಕ್ಷಿಸಲೆಂದೂ ಆ ಪೂಜ್ಯಪಾದರನ್ನು ಅನನ್ಯ ಸಾಧಾರಣವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಏಳುವರ್ಷಗಳು ತುಂಬಿ ಎಂಟನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೇ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ—

ಒಳದೇಶದ ವೃತ್ತಾಂತಗಳು.

ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ಅರಸಾಳು ಆನಂದಪುರ ರೈಲ್ ರಸ್ತೆಯ ಸಮೀಪದಲ್ಲಿ ಒಂದು ದೊಡ್ಡ ಬಂಡೆಯನ್ನು ಒಡೆಯುತ್ತಿದ್ದಾಗ ಅದು ನೊಗ್ಗಿಕೊಂಡು, ಇಬ್ಬರು ಕೂಲಿಗಳು ಮೃತಪಟ್ಟರು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ದಿವಂಗತ ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರ ಸ್ಮಾರಕನಿಧಿಗೆ 100 ರೂ. ಗಳನ್ನು ಆಶೀರ್ವದಿಸಿರುತ್ತಾರೆ.

ಮೈಸೂರು ಸರಕಾರದವರು ಈ ಸಾರೆ ನ್ಯಾಯವಿಧಾಯಕ ಸಭೆಯು ರಾಜಧಾನಿಯಲ್ಲಿ ನಡೆಯುವದೆಂದು ಪ್ರಕಟಿಸಿದ್ದರಷ್ಟೆ. ಈಚೆಗೆ ಅದನ್ನು ರದ್ದುಮಾಡಿ ನ್ಯಾಯವಿಧಾಯಕಸಭೆಯು ಬೆಂಗಳೂರಿನಲ್ಲಿಯೇ 26 ನೇ ತಾರೀಖಿನ ದಿವಸ ಪ್ರಾರಂಭವಾಗುವುದೆಂದು ಪ್ರಕಟಿಸಿರುತ್ತಾರೆ.

ಬೆಂಗಳೂರು ಚಾಮರಾಜಪೇಟೆಯ ಮಿಡಲ್ ಸ್ಕೂಲಿನಲ್ಲಿ ಲೋವರ್ ಸೆಕೆಂಡರಿ ಕ್ಲಾಸಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಬೈರಯ್ಯನೆಂಬ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲವೆಂಬ ಕಾರಣದ ಮೇಲೆ ಬಿನ್ನಿಮಿಲ್ಲಿನ ಕೆರೆಯಲ್ಲಿ ಬಿದ್ದು ಆತ್ಮಹತ್ಯಮಾಡಿಕೊಂಡಿರುತ್ತಾನೆ.

ಕೋಲಾರದ ಚಿನ್ನದ ಗಣಿ ಕಂಪೆನಿಯವರು ಮೈಸೂರು ಸರಕಾರದೊಡನೆ ಈ ಮೊದಲು ಒಂದು ಕರಾರನ್ನು ಮಾಡಿಕೊಂಡಿದ್ದು ಅದು 1940 ನೇ ವರ್ಷಕ್ಕೆ ಮುಕ್ತಾಯವಾಗುವುದರಿಂದ, ಕಂಪೆನಿಯವರು ಮುಂದೆ 30 ವರ್ಷಗಳವರೆಗೆ ಮತ್ತೊಂದು ಹೊಸಕರಾರನ್ನು ಮಾಡಿಕೊಂಡಿರುತ್ತಾರೆ. ಕಂಪೆನಿಯವರು ಇದುವರೆಗೆ ಮೈಸೂರು ಸರಕಾರಕ್ಕೆ ಒಟ್ಟು ಭಂಗಾರದ ಮಾರಾಟದಲ್ಲಿ ಶೇಕಡಾ 5 ರಂತೆಯೂ, ಒಟ್ಟು ಲಾಭದಲ್ಲಿ ಶೇಕಡಾ 2½ ಯಂತೆಯೂ ಕೊಡುತ್ತಿದ್ದರು. ಹೊಸಕರಾರಿನ ಪ್ರಕಾರವಾಗಿ ಕಂಪೆನಿಯವರು ಮೈಸೂರು ಸರಕಾರಕ್ಕೆ ಹೆಚ್ಚು ಲಾಭವನ್ನು ಕೊಡುವುದಾಗಿ ಒಪ್ಪಿರುತ್ತಾರೆ.

ಇಟಲಿಯ "ನ್ಯಾಷನಲ್ ರೀಸರ್ಚ ಕೌನ್ಸಿಲ್" ನವರು ವಿದ್ಯುಚ್ಛಕ್ತಿಯಿಂದ ಪೈರುಗಳ ಬೆಳೆಯನ್ನು ಹೆಚ್ಚಿಸುವ ಬಗ್ಗೆ ಪರೀಕ್ಷೆಗಳನ್ನು ನಡೆಯಿಸಿರುವರು.

ವರ್ತಮಾನಸಂಗ್ರಹ.

ನ್ಯೂಯಾರ್ಕ್ ನಗರದಲ್ಲಿ ಬಿಸಲಿನ ತಾಪದಿಂದ 30 ಜನರು ಮೃತಪಟ್ಟಿರುತ್ತಾರೆ.

ಕ್ರೀಸ್ ಐರ್ಲ್ಯಾಂಡಿನಲ್ಲಿ ಒಂದು ಕೋಳಿಯು 152 ದಿವಸಗಳಲ್ಲಿ 152 ತತ್ತಿಗಳನ್ನು ಹಾಕಿತಂತೆ!

ಹೈದರಾಬಾದ್ ಸಂಸ್ಥಾನದಲ್ಲಿ ಸಿಡುಬಿನ ಉಪದ್ರವದಿಂದ 3 ತಿಂಗಳಲ್ಲಿ 1197 ಮರಣಗಳಾಗಿರುವುವಂತೆ!

ಜೂನ್ 2ನೇ ತಾರೀಖಿನ ದಿವಸ ರಾತ್ರಿ ಬಂಗಾಳಾ ಪ್ರಾಂತದ ರಾಕಸ್ಸಾಲ್, ಢಕ್ಕಾ, ಅಗರ್ತಾ, ಕುಲ್ನಾ, ಸಿಲ್ಹೆಟ ಮತ್ತು ಬೀಹಾರು ಮೊದಲಾದ ಕಡೆಗಳಲ್ಲಿ ಭೂಕಂಪವಾಯಿತು.

ಶಿಕಾರಿಪುರ (ಸಿಂಧ) ದಲ್ಲಿ ಭಾವಿಯಲ್ಲಿ ನೀರನ್ನು ಸೇದುತ್ತಿದ್ದ ಒಬ್ಬ ರೈತರ ಸ್ತ್ರೀಯು ನೀರು ಕೊಡಲಿಲ್ಲವೆಂಬ ಕಾರಣದ ಮೇಲೆ ಒಬ್ಬ ಪಠಾಣನು ಆಕೆಯನ್ನು ಕೊಲೆಮಾಡಿರುವನು.

ರಂಗೂನಿನಲ್ಲಿ ಭಾರತೀಯ ವೈಮಾನಿಕ ಶಿಕ್ಷಣಶಾಲೆಯೊಂದು ಇಷ್ಟರಲ್ಲಿಯೇ ಪ್ರಾರಂಭವಾಗುವುದು. ಸದ್ಯದಲ್ಲಿ ಅಲ್ಲಿ 23 ಜನ ವಿದ್ಯಾರ್ಥಿಗಳಿಗೆ ಮಾತ್ರ ಶಿಕ್ಷಣವು ಕೊಡಲ್ಪಡುವುದು.

ಬರೇಲಿಯ ಸುಪ್ರಸಿದ್ಧ ಜ್ಯೋತಿಷ್ಕರಾದ ಪಂಡಿತ ಲಕ್ಷ್ಮೀಕಾಂತ ಕನ್ನ್ಯಾಲರವರು ಜರ್ಮನ ದೇಶದಲ್ಲಿ ಜ್ಯೋತಿಷ್ಯ ಶಾಸ್ತ್ರದ ತತ್ತ್ವಗಳನ್ನು ಪ್ರಚಾರ ಮಾಡುವುದಕ್ಕಾಗಿ ಪ್ರಯಾಣಮಾಡಿರುವರು.

ಇಟಲಿಯ ಸುಪ್ರಸಿದ್ಧ ವೈಮಾನಿಕರಾದ ರೆನಾಟೊ ಡೊನಾಟಿ ಎಂಬವರು 47,500 ಅಡಿಗಳ ಎತ್ತರದಲ್ಲಿ ವಿಮಾನವನ್ನು ಹಾರಿಸಿರುವರು. ಇಷ್ಟು ಎತ್ತರದಲ್ಲಿ ವಿಮಾನವನ್ನು ಇದುವರೆಗೆ ಯಾರೂ ನಡೆಯಿಸಿಲ್ಲವಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಮತ್ತು ಹೆಚ್ಚು ಮರಿಗಳನ್ನು ಹಾಕಿದ ಹಂದಿಯು ಇಂಗ್ಲೆಂಡಿನಲ್ಲಿರುವದು. ಅದು 7 ಅಡಿ 9 ಅಂಗುಲಗಳ ಉದ್ದವಾಗಿದ್ದು, 11 ವರ್ಷಗಳಲ್ಲಿ 375 ಮರಿಗಳನ್ನು ಹಾಕಿರುವದಂತೆ!

ಲಾಹೋರಿನ ಆರ್ಯಪ್ರತಿನಿಧಿ ಸಭೆಯವರು ಸಣ್ಣ ಸಣ್ಣ ಕೈಗಾರಿಕೆಗಳ ಮೂಲಕ ನಿರುದ್ಯೋಗದ ಪರಿಹಾರಕ್ಕೆ ಉತ್ತಮವಾದ ಸಲಹೆಯನ್ನು ಕೊಡುವವರಿಗೆ 200 ರೂ. ಗಳ ಬಹುಮಾನವನ್ನು ಮಾಡುವುದಾಗಿ ಪ್ರಕಟಿಸಿರುತ್ತಾರೆ.

ಭಾವನಗರದ ಸರಕಾರದವರು ಯೂರೋಪಿಯನ್ ಮತ್ತು ಇತರ ಮುಖ್ಯ ಮುಖ್ಯ ಅತಿಥಿಗಳ ಸತ್ಕಾರಕ್ಕಾಗಿ 60,000 ರುಪಾಯಿಗಳ ವೆಚ್ಚದಿಂದ ಒಂದು ಹೊಸ ಹೊಟೇಲನ್ನು ಕಟ್ಟಿಸುತ್ತಿರುವರು. ಸರಕಾರದವರೇ ಹೋಟಲಿನ ಮೇಲ್ವಿಚಾರಣೆಯನ್ನು ವಹಿಸುವರು.

ನೇತ್ರೋಕೋಣ ಎಂಬಲ್ಲಿ 1931 ನೇ ಇಸವಿಯಲ್ಲಿ ಒಬ್ಬ ವಕೀಲರ ಬಳಿಯಲ್ಲಿದ್ದ ಬಂದೂಕವು ಕಳುವಾಯಿತೆಂಬ ಕಾರಣದಮೇಲೆ ಒಬ್ಬ ತರುಣ ಬಂಗಾಲಿ ವಿದ್ಯಾರ್ಥಿಯು ಕಾರಾಗೃಹದಲ್ಲಿಡಲ್ಪಟ್ಟಿದ್ದನು. ಬಂದೂಕವು ಈಚೆಗೆ ಢಾಕ್ಕಾ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದಲ್ಲಿ ದೊರೆತುದರಿಂದ ಅಪರಾಧಿತನನ್ನು ಜೈಲಿನಿಂದ ಬಿಡುಗಡೆಮಾಡಿರುತ್ತಾರೆ.

ಬೇಲಿಯೆದ್ದು ಹೊಲವನ್ನು ಮೇಯಿತು.

ದೆಹಲಿಯಲ್ಲಿ 3 ಜನ ಪೋಲೀಸ್ ಕಾನ್ಸ್ಟೇಬಲರು ಒಂದು ಮನೆಗೆ ಕನ್ನ ಹಾಕಲು ಪ್ರಯತ್ನ ಮಾಡುತ್ತಿದ್ದರು. ಬೇರೆ ಪೋಲೀಸರು ಅದನ್ನು ಕಂಡು ಅವರನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಆಡಿನ ಹೊಟ್ಟೆಯಿಂದ ಕೋತಿಯು ಹುಟ್ಟಿತು.

ನಾಂಫಿರ್ ನಗರದ ಪಶುವೈದ್ಯಶಾಲೆಯಲ್ಲಿ ಒಂದು ಆಡು ಒಂದು ವಿಚಿತ್ರಮರಿಯನ್ನು ಹಾಕಿರುವದು. ಅದು ಅರ್ಧ ಮನುಷ್ಯನಂತೆಯೂ ಅರ್ಧ ಕೋತಿಯಂತೆಯೂ ಇರುವದು. ಈ ವೈಚಿತ್ರ್ಯವು ಎಲ್ಲರನ್ನೂ ಆಶ್ಚರ್ಯಗೊಳಿಸಿರುವದು.

3000 ವರ್ಷಗಳ ಹಿಂದಿನ ಪೌರ್ಟಬಲ್ ಸ್ಟೌ!

ಅಮೇರಿಕೆಯ ಸಂಯುಕ್ತ ಪ್ರಾಂತದ ಗಡಿನಾಡಿನಲ್ಲಿ 'ರಿಯೊಗ್ರಾಂಡ್' ನದಿಯ ತೀರದಲ್ಲಿ ಭೂಗರ್ಭವನ್ನು ಶೋಧಿಸುತ್ತಿದ್ದಾಗ 3000 ವರ್ಷಗಳ ಹಿಂದಿನ, ಜಿಗರಿಯ ಮೂಳೆಯಿಂದ ತಯಾರಿಸಲ್ಪಟ್ಟ ಒಂದು 'ಪೌರ್ಟಬಲ್ ಸ್ಟೌ' ದೊರೆತಿರುವದಂತೆ!

ಮಳೆಗಾಗಿ ನರಬಲಿ!

ಯೂರೋಪಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಮಳೆಯಿಲ್ಲದೆ ಬಿಸಲ ತಾಪವು ಅತ್ಯಂತ ಭಯಂಕರವಾಗಿರುವದು. ಗ್ರಾಮಗಳಲ್ಲಿ ಜನರು ಬಿಸಲಿನ ತಾಪವನ್ನು ಸಹಿಸಲಾರದೆ ಬರೀ ಮೈಯಲ್ಲಿ ದೇವತಾಪ್ರಾರ್ಥನೆ ಮಾಡುತ್ತ ಮೆರವಣಿಗೆ ಹೊರಡುವರು. ಅನೇಕ ಕಡೆಗಳಲ್ಲಿ ಹಳ್ಳಿಗರು ಮಳೆಯು ಬರಲೆಂದು ಅಶ್ವಿನೀ ದೇವತೆಗೆ ನರಬಲಿಯನ್ನು ಕೊಟ್ಟಿರುವರಂತೆ!

ಸಿಮ್ಲಾದಲ್ಲಿ ಭೂಕಂಪ!

ಜೂನ್ 5ನೇ ತಾರೀಖು ಸಾಯಂಕಾಲ 5 ಘಂಟೆಯ ಸಮಯದಲ್ಲಿ ಸಿಮ್ಲಾ ನಗರದಲ್ಲಿ 5 ಸೆಕೆಂಡುಗಳ ಕಾಲ ಭೂಕಂಪವಾಗಿ ಜನರೆಲ್ಲರೂ ವಿಶೇಷ ಭಯಗ್ರಸ್ತರಾದರು. ಅನೇಕ ಕಟ್ಟಡಗಳು ನಡುಗಿದುವು. ಆದರೆ ಯಾರಿಗೂ ಪ್ರಾಣಾಪಾಯವಾಗಲಿಲ್ಲ. ಸೆಸಿಲ್ ಹೊಟೇಲಿನ ಮಾಳಿಗೆಯ ಮೇಲೆ ಕುಳಿತಿದ್ದ ಒಂದು ಕೋತಿಯು ಮಾತ್ರ ಕೆಳಕ್ಕೆ ಬಿದ್ದು ಮೃತಪಟ್ಟಿತು.

15 ವರ್ಷಗಳಿಂದಲೂ ಆಹಾರವಿಲ್ಲ!

ಸ್ಪೇನ್‌ದೇಶಕ್ಕೆ ಸೇರಿದ ಪಾಂಬಸಿಲ್ ಬರ್ಗಾಸ್ ಎಂಬಲ್ಲಿರುವ ಅಮಾಲಿಯಾ ಬಾರಂಡಾ ಎಂಬ ಒಬ್ಬ ಹುಡುಗಿಯು 15 ವರ್ಷಗಳಿಂದಲೂ ಏನನ್ನೂ ತಿನ್ನದೆ, ನೀರೂ ಇಲ್ಲದೆ ಇರುವಳಂತೆ! ಕೇಳಿದವರಿಗೆ 'ದೇವತೆಗಳು ನನಗೆ ಆಹಾರವನ್ನು ಕೊಡುವರು' ಎಂದು ಹೇಳುವಳು. ಡಾಕ್ಟರರು ಇವಳ ಅನ್ನಕೋಶವನ್ನು ಪರೀಕ್ಷಿಸಿ ಅದರಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂದು ಹೇಳಿರುವರು. ದೇವರ ಲೀಲೆಯು ವಿಚಿತ್ರವಾದುದು!

ಲಂಡನ್ನಿನಲ್ಲಿ ಶ್ರೀಮನ್ಮಹಾರಾಜರವರ ವರ್ಧಂತಿ.

ಲಂಡನ್ನಿನಲ್ಲಿ ಮೈಸೂರು ಸಂಸ್ಥಾನದ ಟ್ರೇಡ್ ಕಮಿಷನರಾಗಿರುವ ಮಿ|| ಸಿ. ರಂಗನಾಥರಾವ್ ಸಾಹೇಬರವರು ಶ್ರೀಮನ್ಮಹಾರಾಜರವರ ವರ್ಧಂತೀಮಹೋತ್ಸವದ ನಿಮಿತ್ತವಾಗಿ ಜೂನ್ 23 ನೇ ತಾರೀಖಿನ ದಿವಸ ಅಲ್ಲಿಯ ಸುಪ್ರಸಿದ್ಧ ಡಾರ್ಚೆಸ್ಟರ್ ಹೊಟೇಲಿನಲ್ಲಿ ಒಂದು ಭಾರಿ ಔತಣವನ್ನು ಏರ್ಪಡಿಸಿರುವರು. ಲಂಡನ್ನಿನಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ನಡೆಯುವದು ಇದೇ ಮೊದಲನೆಯದಾಗಿದೆ.

ಭಾರೀಕಳ್ಳನ ದಸ್ತಗಿರಿ!

ಕಲ್ಕತ್ತಾ ನಗರದಲ್ಲಿ ಕಳ್ಳತನ ಮಾಡಿದ್ದಕ್ಕಾಗಿ ಒಬ್ಬ ಮಹಮ್ಮದೀಯನನ್ನು ದಸ್ತಗಿರಿ ಮಾಡಿ ಪರೀಕ್ಷಿಸಿದಾಗ, ಅವನ ಕಂಠದಲ್ಲಿದ್ದ ಟೊಳ್ಳಾದ ಸರದಲ್ಲಿ 200 ಅಮೂಲ್ಯ ವಜ್ರಗಳು ದೊರೆತವು. ಅವುಗಳೆಲ್ಲವೂ ಕಳ್ಳಮಾಲೆಂದೂ, ಅವುಗಳ ಬೆಲೆ ಸುಮಾರು 90 ಸಹಸ್ರ ರೂ. ಗಳಾಗುವುದೆಂದೂ, ಇವನು ಇನ್ನೂ ಅನೇಕ ವಜ್ರಗಳನ್ನು ವರ್ತಕರಿಗೆ ಮಾರಿರುವನೆಂದೂ ತಿಳಿದು ಬಂದಿದೆ. ಪೋಲೀಸರು ಈ ಸಂದರ್ಭದಲ್ಲಿ ವಜ್ರಗಳನ್ನು ಕೊಂಡುಕೊಂಡ ಕೆಲವರನ್ನು ಬಂಧಿಸಿರುತ್ತಾರೆ. ಈ ವಜ್ರಗಳು ರಾಂಪುರದ ನವಾಬರ ಸಹೋದರರ ಬಂಗಲೆಯಲ್ಲಿ 2 ತಿಂಗಳುಗಳ ಹಿಂದೆ ಅಪಹರಿಸಲ್ಪಟ್ಟಿದ್ದವೆಂದು ತಿಳಿದುಬರುತ್ತದೆ.

ಭೂಮಿಯು ಹಳ್ಳಿಯನ್ನು ನುಂಗಿತು!

ಬ್ರಿಟಿಷ್ ಇಂಡಿಯಾಕ್ಕೂ ಅಫ್‌ಘಾನಿಸ್ಥಾನಕ್ಕೂ ಮಧ್ಯದಲ್ಲಿರುವ ಮೈನರ್ ಪ್ರದೇಶಕ್ಕೆ 9 ಮೈಲು ದೂರದಲ್ಲಿರುವ ಪಟ್ರಾ ಎಂಬ ಗ್ರಾಮವು ಸುಮಾರು 150 ಮನೆಗಳುಳ್ಳ ಒಂದು ಹಳ್ಳಿ. ಈಗ 10-12 ದಿವಸಗಳ ಹಿಂದೆ ಜೋರಾಗಿ ಮಳೆ ಬಂದು ಭೂಮಿಯು ನಡುಗಲಾರಂಭಿಸಲು, ಗ್ರಾಮಸ್ಥರೆಲ್ಲರೂ ಭೀತರಾಗಿ ಮನೆ ಮಠಗಳನ್ನೆಲ್ಲಾ ಬಿಟ್ಟು ಊರ ಹೊರಗೆ ಬಯಲಿಗೆ ಹೋದರು. ಅಷ್ಟರಲ್ಲಿ ಭೂಮಿಯು ಎರಡುಭಾಗವಾಗಿ ಸೀಳಿ ಇಡೀ ಗ್ರಾಮವನ್ನು ನುಂಗಿತು. ಅನಂತರ ಭೂಮಿಯು ಮೊದಲಿನಂತೆ ಕೂಡಿಕೊಂಡಿತು. ಅನೇಕ ದನಕರುಗಳೂ ಮತ್ತು ಇತರ ಪ್ರಾಣಿಗಳೂ ಭೂಗರ್ಭವನ್ನು ಸೇರಿದರೂ ಜನರಾರೂ ಈ ಅನಾಹುತಕ್ಕೆ ತುತ್ತಾಗದಿದ್ದುದು ಆಶ್ಚರ್ಯದ ಸಂಗತಿಯು! ಅಫ್ಘನ್ ಸರಕಾರದವರು ಆ ಗ್ರಾಮಸ್ಥರಿಗೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಿರುವರು.

ಸ್ವೀಕಾರ

ಗದಗ ಬೆಟಗೇರಿ ಮುನಸಿಪಾಲಟಿಯ ಚುನಾವಣೆಯಲ್ಲಿ ಶ್ರೀಮಾನ್ ಚನ್ನಬಸವಯ್ಯನವರು ಬಿ.ಎ., ಎಲ್‌ಎಲ್.ಬಿ., ಇವರು ಮೆಂಬರರಾಗಿ ಆರಿಸಿ ಬಂದ ಸಂತೋಷಕ್ಕಾಗಿ ಜಗದಾಚಾರ್ಯರ ಹೆಸರಿನಿಂದ ಸಮರ್ಪಿಸಿದ **5** ರೂ. ಗಳು ವೇ|| ಪುರದಯ್ಯನವರು ಮುಳಗುಂದ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಹಾರನಹಳ್ಳಿ ವಾಸಿಗಳಾದ ಮ|| ರಾ|| ದೇಶದಶೆಟ್ಟರ ವೀರಪ್ಪನವರ ಗೃಹದಲ್ಲಿ ನೆರವೇರಿದ ವಿವಾಹಮಹೋತ್ಸವಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಲ್ಪಟ್ಟ **2** ರೂ. ಸದರಿ ಹಾರನಹಳ್ಳಿಯಲ್ಲಿ ನೆರವೇರಿದ ಶ್ರೀ ನಂದೀಶ್ವರ ಪ್ರತಿಷ್ಠಾಮಹೋತ್ಸವಸಮಯದಲ್ಲಿ ತೆಗೆಯಿಸಲ್ಪಟ್ಟ **2** ರೂ. ಒಟ್ಟು **4** ರೂ. ಗಳು ಗುಬ್ಬಿ ಶಿವಕಥಾಪಂಡಿತ ವೇ|| ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಕಾಶೀಕ್ಷೇತ್ರನಿವಾಸಿಗಳಾದ ವೇ|| ನೇರಲಗಿ ಹಿರೇಮಠದ ಕಲ್ಯಾಣಯ್ಯನವರ ಪುತ್ರಿ ಚಿ|| ಸೌ|| ಅನ್ನಪೂರ್ಣಮ್ಮನನ್ನು ವಿಜಾಪುರ ಡಿ|| ಹಿಂಚಗೇರಿ ಹಿರೇಮಠದ ವೇ|| ಸಂಗಾರ್ಯರ ಪುತ್ರ ಚಿ|| ಚನ್ನಾರ್ಯನಿಗೆ ಕೊಟ್ಟು, ಶ್ರೀ ಕಾಶೀಜಗದ್ಗುರು ಮಹಾಸನ್ನಿಧಿಯಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ **2** ರೂ. ಗಳು ವೇ|| ಪಂಡಿತ ಭಾಲಾಕ್ಷಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಗದಗ ಶಹರನಿವಾಸಿಗಳಾದ ಮ|| ರಾ|| ವೀರಭದ್ರಪ್ಪ ಗೊಡಚಿ ಇವರ ಪುತ್ರ ಚಿ|| ದೇವಪ್ಪನಿಗೆ ಬಾಗಲಕೋಟೆಯ ಮ|| ರಾ|| ಗಂಗಪ್ಪ ಸಾಂಬಣ್ಣನವರ ಇವರ ಪುತ್ರಿ ಚಿ|| ಸೌ|| ಚನ್ನಬಸವವ್ವನನ್ನು ತಂದು ನೆರವೇರಿಸಿದ ವಿವಾಹಸಮಯದಲ್ಲಿ ಮ|| ರಾ|| ಹೊಸಮನಿ ಲಿಂಗನಗೌಡರು ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ತೆಗೆಯಿಸಿದ **2** ರೂ. ವಧುವಿನ ಕಡೆಯಿಂದ ತೆಗೆಯಿಸಿದ **1** ರೂ. ಒಟ್ಟು **3** ರೂ. ಗಳು ವೇ|| ಗುರುಸ್ವಾಮಿಮಠದ ಶಿವಲಿಂಗಾರ್ಯರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ತಾ|| ಹಾಳಕುಸುಗಲ್ಲನಿವಾಸಿಗಳಾದ ಬಸವಂತಪ್ಪ ನಿಡವಣಿ ಇವರಿಗೆ ಗದಗಿನಲ್ಲಿರುವ ಬಸಪ್ಪ ಸರ್ವಿ ಇವರ ಮನೆಯಲ್ಲಿ ಕನ್ಯಾನಿಶ್ಚಯಮಾಡಿದ ಸಮಯದಲ್ಲಿ ವರನು ಸಮರ್ಪಿಸಿದ **1** ರೂ. ಯು ವೇ|| ಗುರುಸ್ವಾಮಿಮಠದ ಶಿವಲಿಂಗಾರ್ಯರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಹುವಿನಹಡಗಲಿ ತಾಲೂಕು ಹಿರೇಹಡಗಲಿ ಗ್ರಾಮದ ಮ|| ರಾ|| ಹೂಗಾರ ಅಡಿವಪ್ಪನವರ ದತ್ತಪುತ್ರ ಚಿ|| ಸೌ|| ಬಸಪ್ಪನಿಗೆ ಧಾರವಾಡ ಡಿ|| ಹಾವೇರಿ ತಾಲೂಕು ಹಾವನೂರು ಗ್ರಾಮದ ಮ|| ರಾ|| ಗಂದಬಂಡಿ ಸೋಮಪ್ಪನವರ ಅಣ್ಣ ಲೇಟ್ ರುದ್ರಪ್ಪನವರ ಪುತ್ರಿ ಚಿ|| ಸೌ|| ಶಿವಗಂಗವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ **1** ರೂ. ಯು ಮ|| ರಾ|| ಹೂಗಾರ ಅಡಿವಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಧರ್ಮರಕ್ಷಣೆಗೆ ಭಗವದಾಶ್ರಯದ ಅವಶ್ಯಕತೆಯು.

ವೇ|| ಚಂದ್ರಶೇಖರಶರ್ಮಾ ಸುಬ್ಬಾಕಲ್ಲು ಬಿದರಿ ಆರಾಧ್ಯಮಠ. (ಶ್ರೀ ಜಗದ್ಗುರು ವಿಶ್ವಾರಾಧ್ಯಗುರುಕುಲ ಶ್ರೀಕ್ಷೇತ್ರ ಕಾಶಿ.)

ಧರ್ಮವು ಶಿಕ್ಷವಾದುದು ಈಶ್ವರಸೃಷ್ಟಿಯಲ್ಲಿ ಧರ್ಮವು ಎಂದೂ ನಾಶವಾಗುವದಿಲ್ಲ. ಧರ್ಮಮಾರ್ಗದಲ್ಲಿ ನಡೆಯತಕ್ಕ ಮನುಷ್ಯರೇ ನ್ಯಾನಾಧಿಕಭಾವವನ್ನು ಪಡೆಯುತ್ತಾರೆ. ಧರ್ಮವನ್ನ ವಲಂಬಿಸಿರತಕ್ಕ ಜನರ ಸಂಖ್ಯೆಯು ಹೆಚ್ಚಿದಹಾಗೆಲ್ಲಾ ಧರ್ಮವು ಹೆಚ್ಚುತ್ತಾ ಹೋಗುತ್ತದೆ. ಮತ್ತು ಅವರ ಸಂಖ್ಯೆಯು ಕಡಿಮೆಯಾದಾಗ ಧರ್ಮವು ಹ್ರಾಸವಾಗುತ್ತ ಹೋಗುವದು. ಈ ಕಾರಣದಿಂದ ಧರ್ಮರಕ್ಷಣೆಯ ಅರ್ಥವು ಧಾರ್ಮಿಕಮನುಷ್ಯರ ರಕ್ಷಣೆಯು ಮತ್ತು ವೃದ್ಧಿಯೇ ಇರುತ್ತದೆ. ಯಾವಾಗ್ಗೆ ಯುಗಪ್ರಭಾವ, ಕುಸಂಗತಿ ಕುಸಂಸ್ಕಾರ, ರಾಜ್ಯದೋಷ ಮೊದಲಾದ ಕಾರಣಗಳಿಂದ ಜಗತ್ತಿನಲ್ಲಿ ಅನಾಚಾರವು ಬೆಳೆಯುತ್ತದೆಯೋ ಆವಾಗ್ಗೆ ಧರ್ಮವನ್ನೂ, ಧಾರ್ಮಿಕರನ್ನೂ ವಿರೋಧಿಸುವುದೇ ಉನ್ನತಿಯ ಸ್ವರೂಪವೆಂದು ತಿಳಿಯುತ್ತಾರೆ. ಆ ಸಮಯದಲ್ಲಿ ವಿಷಯವಿಲಾಸಮೋಹಿತರೂ, ಕಾಮಭೋಗಪರಾಯಣರೂ ಆದ ಮನುಷ್ಯರ ದಿನಚರ್ಯೆಯು ಈಶ್ವರನ ಹಾಗೂ ಧರ್ಮದ ನಾಶಕಾರ್ಯವೇ ಆಗುತ್ತದೆ. ಅವರ ಬುದ್ಧಿಯು ವಿಪರೀತವಾಗುವದರಿಂದ ತಿಳುವಳಿಕೆಯುಳ್ಳವರಾಗಿದ್ದರೂ ಒಳ್ಳೇ ನೀತಿಯುಳ್ಳವರಾಗಿದ್ದರೂ ಹೀಗೆ ಮಾಡಲು ಹತ್ತುವರು. ಇಂಥ ಸಮಯದಲ್ಲಿ ಅವರನ್ನು ವಿರೋಧಿಸುವದೂ ಅವರಿಗೋಸುಗ ಮನುಧರ್ಮದಂತೆ ದಂಡವನ್ನು ಕೊಡುವದೂ ಅಥವಾ ಶ್ರದ್ಧೆ ಹಾಗೂ ಸಾಧನದಿಂದ ಆಗ ತಕ್ಕ ತತ್ತ್ವಗಳನ್ನು ಅವರಿಗೆ ತಿಳಿಸುವದೂ ಶಕ್ಯವಾಗುವದಿಲ್ಲ ಎಲ್ಲಿಯವರೆಗೆ ಅವರ ತಿಳುವಳಿಕೆಯಲ್ಲಿ ಪರಿವರ್ತನವಾಗುವದಿಲ್ಲವೋ ಅಲ್ಲಿಯವರೆಗೆ ಅವರು ತಮ್ಮ ನಡವಳಿಯನ್ನು ಎಂದೂ ಬಿಡರು. ಮತ್ತು ತ್ಯಾಗ ತಪ ಮುಂತಾದ ಉತ್ತಮ ಉಪಾಯಗಳಿಂದಲೂ ಹಾಗೂ ಛಲ ಬಲಾದಿ ಮಧ್ಯಮ ಉಪಾಯಗಳಿಂದಲೂ ಕಾರ್ಯವನ್ನು ಮಾಡುವದು ತಮ್ಮ ಮುಖ್ಯಧರ್ಮವೆಂದು ತಿಳಿದುಕೊಳ್ಳುವರು. ಈಗಿನಕಾಲದಲ್ಲಂತೂ ಇಂಥವರ ಬುದ್ಧಿಯನ್ನು ಪರಿವರ್ತನೆ ಮಾಡತಕ್ಕ ಉಪಾಯವೆಂದರೆ ಕೇವಲ ಒಂದೇ ಒಂದು ಉಪಾಯವದೆ. ಅದು ಯಾವದೆಂದರೆ—ಈಶ್ವರನ ಆರಾಧನೆಯೇ ಇರುತ್ತದೆ. ಪ್ರಾಚೀನಕಾಲದಲ್ಲಿ ಆಚಾರ್ಯರು ಈ ಕಾರ್ಯವನ್ನೇ ಮಾಡುತ್ತಿದ್ದರು. ಹಾಗೂ ಸಾಫಲ್ಯವನ್ನು ಹೊಂದುತ್ತಿದ್ದರು.

ಈಗ ಸದ್ಯಃ ಜಗತ್ತಿನಲ್ಲಿ ಅನಾಚಾರವು ವೃದ್ಧಿಯಾಗುತ್ತಾ ಇದೆ. ಮತ್ತು ವಿರೋಧಿಗಳ ಸಂಖ್ಯೆಯು ದಿನದಿನಕ್ಕೆ ಬೆಳೆಯುತ್ತಾ ನಡೆದಿರುತ್ತದೆ. ಸದ್ಯಃ ಶಿಕ್ಷಾಲಯ ಉಪದೇಶಕ ಹಾಗೂ ಮಾರ್ಗದರ್ಶಕರಕ್ಕ ಜನರ ಮುಖ್ಯಧರ್ಮವು ಎಲ್ಲರಿಗೂ ಇದೇ ಶಿಕ್ಷಣವನ್ನು ಕೊಡುವದು ಹಾಗೂ ಇದೇ ಮಾರ್ಗದಲ್ಲಿ ನಡೆಯಿಸಲಿಕ್ಕೆ ಹಚ್ಚುವದಾಗಿದೆ. ಈ ಕಾರಣದಿಂದಲೇ ಈಗ ಧರ್ಮದ ನಾಶ ಅಥವಾ ಹ್ರಾಸವಾಗುತ್ತಾ ಇದೆ. ಆದರೆ ಇದರ ಮುಖ್ಯಪ್ರತೀಕಾರವು ಭಗವದಾರಾಧನೆಯಿಂದಲೇ ಆಗಲು ಶಕ್ಯವಿದೆ. ಯಾರಲ್ಲಿ ಸ್ವಾಭಾವಿಕವಾಗಿ ತಮ್ಮ ಪ್ರತಿದ್ವಂದಿಗಳಿಗೆ ಇದುರಾಗಲು ಶಕ್ತಿಯಿಲ್ಲವೋ ಅವರು ಉದಾಸೀನರಾಗಿಹತ್ತುವರಲ್ಲದೆ ಅವರ (ಧರ್ಮದ್ರೋಹಿಗಳ) ಛಲ, ಬಲ, ಕೌಶಲಾದಿ ಉಪಾಯಗಳ ಆಶ್ರಯವನ್ನು ಮಾಡಹತ್ತಿದ್ದಾರೆ. ಇದರಿಂದ ಲಾಭವಿಲ್ಲ. ಧರ್ಮರಕ್ಷಣೆಯ ಸಲುವಾಗಿ ಯತ್ನವನ್ನು ಮಾಡುವದಿಲ್ಲವೆಂದಲ್ಲ. ಯಾವ ಜನರು ಧರ್ಮರಕ್ಷಣೆಗೆ ಶಾಸ್ತ್ರವಿಹಿತಗಳಾದ ಹಾಗೂ ನಿರ್ದೋಷಗಳಾದ ಉಪಾಯಗಳ ಅವಲಂಬನೆಯನ್ನು ಮಾಡುತ್ತಾರೆಯೋ ಅವರು ಅತ್ಯಂತ ಆದರಣೀಯರೂ ಹಾಗೂ ಸ್ತುತ್ಯರೂ ಇದ್ದಾರೆ. ಈ ಧರ್ಮವಿರೋಧವಾತಾವರಣದಲ್ಲಿ ಅವರ ಈ ಸಾಹಸವೂ ಧರ್ಮದ ಆಗ್ರಹವೂ ಅತ್ಯಂತ ಆದರಣೀಯವಾಗಿದೆ. ಮತ್ತು ಪ್ರತಿಯೊಬ್ಬ ಸ್ತ್ರೀಪುರುಷರು ಧರ್ಮರಕ್ಷಣೆಯ ಕಾರ್ಯದಲ್ಲಿ ತನುಮನಧನಗಳಿಂದ ಶಕ್ತ್ಯನುಸಾರವಾಗಿ ಸಹಾಯಮಾಡಿರಿ. ಅಧರ್ಮವು ಬೇಕಾದರೆ ಯುಗಪ್ರಭಾವಾದಿಕಾರಣಗಳಿಂದ ಬೆಳೆಯುತ್ತದೆಂದು ಕಂಡು ಬಂದಾಗ್ಯೂ ಅಂತ್ಯದಲ್ಲಿ ಧರ್ಮಕ್ಕೇನೇ ಜಯವಾಗುತ್ತದೆ. ಆದರೂ ಈಶ್ವರನ ಆಶ್ರಯ ಹಾಗೂ ಈಶ್ವರನ ಪೂಜೆಯು ಹೊರತು ಶೀಘ್ರವಾಗಿ ಸಫಲವಾಗುವದಿಲ್ಲವೆಂದು ನನ್ನ ಅಲ್ಪಮತಿಗೆ ತಿಳಿಯುತ್ತದೆ. ಈಶ್ವರಾಶ್ರಯವಿಲ್ಲದ ಧರ್ಮವು ಧರ್ಮವೇ ಅಲ್ಲ. ಆ ಕಾರಣದಿಂದಲೇ ಧರ್ಮರಕ್ಷಣೆಗೋಸುಗ ಪ್ರತಿಯೊಬ್ಬ ಧರ್ಮಪ್ರೇಮಿಯು ಈಶ್ವರನನ್ನು ಆಶ್ರಯಮಾಡಿಕೊಂಡು ಈಶ್ವರನ ಪೂಜೆಯನ್ನು ಮಾಡುತ್ತ ಧರ್ಮರಕ್ಷಣೆಗೋಸುಗ ಬೇರೆಬೇರೆ ಉಪಾಯಗಳಿಂದ ಪ್ರಯತ್ನವನ್ನು ಮಾಡಿದರೆ ಶೀಘ್ರವಾಗಿ ಸಂಪೂರ್ಣಸಾಫಲ್ಯವು ಕೈಗೂಡುವದು.

ಕಲ್ಯಾಣ.

ವಿವಾಹ ಮಹೋತ್ಸವ.

ಹಣಮಾಪೂರ (ಗೂಗ್ಯಾಳ)

ಬಿಜಾಪೂರ ಡಿ|| ಬಾಗೇವಾಡಿ ತಾಲೂಕ ಪೈಕಿ ಹಣಮಾಪೂರ (ಗೂಗ್ಯಾಳ) ಗ್ರಾಮದ ಸುಪ್ರಸಿದ್ಧ ಪಾಟೀಲರಾದ ಶ್ರೀಮಾನ್ ಮಲ್ಲನಗೌಡರು ತಮ್ಮ ಸುಪುತ್ರರಾದ ಚಿ|| ಶಿವಶಂಕರಗೌಡರಿಗೆ ಮಸೂತಿಗ್ರಾಮದ ಪಾಟೀಲರಾದ ಶ್ರೀಮಾನ್ ರುದ್ರಗೌಡರಪುತ್ರಿ ಹ|| ಕುಂ|| ಸೌ|| ಮಲ್ಲಾಂಬೆಯನ್ನು ತಂದು ನಿಜವೈಶಾಖ ಶು|| ೧೦ ಗುರುವಾರ ದಿವಸ ವಿವಾಹ ಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರೆಂದು ತಿಳಿಸಲು ಪರಮ ಸಂತೋಷವಾಗುತ್ತದೆ. ಈ ವಿವಾಹಮಹೋತ್ಸವ ಸಮಾರಂಭದ ವರ್ಣನೆಯು ಅಸದೃಶವಾದುದಾಗಿದೆ. ಕೇವಲ ಹಳ್ಳಿಯಲ್ಲಿ ವಾಸಿಸಿದ ಪಾಟೀಲರು ಈ ವಿವಾಹಮಹೋತ್ಸವದಸಮಯದಲ್ಲಿ 'ಹಳ್ಳಿಯು ದಿಲ್ಲಿಯಾಗುವಂತೆ' ಮಂಟಪ ಶೋಭೆಯನ್ನು ಹೆಚ್ಚಿಸಿದರು. ರಾಜದರ್ಬಾರ ಪದ್ಧತಿಯಿಂದ ಸುವ್ಯವಸ್ಥೆಗೊಳಿಸಿದ ಮಂಟಪ ಶೋಭೆಯನ್ನೂ ಆಗಮಿಸಿದ ಈ ಜನಗಳ ಆದರಸತ್ಕಾರಗಳಲ್ಲಿ ಶಿಷ್ಟಾಚಾರ ವಿಶಿಷ್ಟ ಶ್ರೇಷ್ಠತೆಯನ್ನೂ ಎಷ್ಟು ಬಣ್ಣಿಸಿದರೂ ಕಡಿಮೆಯೇ ಆಗಿರುವದು. ಈ ಮಂಗಲಮಹೋತ್ಸವಕ್ಕೆ ಗುರುವಗರ್ದ ಪಟ್ಟದ ಸ್ವಾಮಿಗಳೂ ವೈದಿಕರೂ ಶಾಸ್ತ್ರಿಗಳೂ ಆಗಮಿಸಿದ್ದರು. ಸರಕಾರ ವರಿಷ್ಠಾಧಿಕಾರಿಗಳಾದ ಡಿ|| ಪೋಲೀಸ ಸೂಪರಿಂಟೆಂಡೆಂಟರೂ ತಾಲೂಕ ಮಾಮಲೆದಾರರೂ, ಜಿಲ್ಲಾ ಅಮಲ್ದಾರರೂ, ವಕೀಲರೂ, ಡಾಕ್ಟರರೇ ಮೊದಲಾದ ಮಹಾಜನಗಳೂ ಆಗಮಿಸಿದ್ದರಿಂದ ಮಂಟಪ ಶೋಭೆಗೆ ವಿಶೇಷ ಕಳೆಯೇರಿತ್ತು. ವಿವಾಹದ ಧಾರ್ಮಿಕ ಕಾರ್ಯಗಳೆಲ್ಲವೂ ಶಿರೋಳ ಬೃಹನ್ಮಠದ ವೇ|| ಪಂಚಾಕ್ಷರ ಶಾಸ್ತ್ರಿಗಳವರಿಂದ ಶಾಸ್ತ್ರೀಯವಾಗಿ ಸಾಗಿದವು. ಈ ಸುಸಮಯದಲ್ಲಿ ಪಾಟೀಲರು ಧರ್ಮಾರ್ಥ ಲಗ್ನಗಳನ್ನು ಸಹ ತಮ್ಮ ಸ್ವಂತ ಖರ್ಚಿನಿಂದಲೇ ಮಾಡಿದ್ದು ಸ್ತುತ್ಯವಾಗಿದೆ. ೫-೬ ಸಹಸ್ರಜನಗಳಿಗೆ ಮಿಷ್ಟಾನ್ನ ಭೋಜನವು ಪ್ರತಿದಿವಸವೂ ನಡೆಯುತ್ತಿತ್ತು. ವೈದಿಕವರ್ಗವನ್ನೂ, ಮಾಹೇಶ್ವರರನ್ನೂ ಅನಾಥರನ್ನೂ, ಭೂರಿಫಲದಕ್ಷಿಣೆಗಳಿಂದ ಸಂತುಷ್ಟಪಡಿಸಿದರು. ಶ್ರೀಯುತ ಪಾಟೀಲರು ತಮ್ಮ ಪೂರ್ವಪರಂಪರೆಯ ಗೌರವ ಪದ್ಧತಿಯಂತೆ ತಮ್ಮ ಸುಪುತ್ರನ ವಿವಾಹ ಸಮಾರಂಭವನ್ನು 'ನಭೂತೋನಭವಿಷ್ಯತಿ' ಎಂಬಂತೆ ಜರುಗಿಸಿ ಕೀರ್ತಿಯನ್ನು ಪಡೆದರು. ಶ್ರೀಯುತ ಪಾಟೀಲರು ಧರ್ಮನಿಷ್ಠರೂ, ರಾಜಕಾರ್ಯ ಪ್ರವೀಣರೂ, ಶಿಷ್ಟಸಂಪ್ರದಾಯವುಳ್ಳವರೂ ಗುರುಭಕ್ತಿಶೀಲರೂ ಆಗಿರುವದು ಸುಪ್ರಸಿದ್ಧವೇ ಆಗಿದೆ.

ಈ ಪ್ರಾಂತದಲ್ಲಿ ಇವರು ಅನ್ನದಾನಾದಿ ಔದಾರ್ಯ ಗುಣಗಳಿಂದ ಹೆಸರುವಾಸಿಯಾಗಿದ್ದಾರೆ. ಜಗದಾಚಾರ್ಯರು ನೂತನ ವಧೂವರರಿಗೆ ಚಿರಾಯುರಾರೋಗ್ಯಾದಿ ಸಂಪದಭಿವೃದ್ಧಿಯನ್ನುಂಟು ಮಾಡಲೆಂದು ಪ್ರಾರ್ಥಿಸುವ

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀನಂದೀಶ್ವರಪ್ರತಿಷ್ಠಾಮಹೋತ್ಸವ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ವೀರಶೈವಮಹಾಜನರ ಸಹಾಯದಿಂದ ಪುನರುದ್ಧಾರವಾದ ಶ್ರೀ ನಂದೀಶ್ವರ ದೇವಾಲಯದಲ್ಲಿ ಇದೇ ಭಾವನಾಮ ಸಂ|| ನಿಜವೈಶಾಖ ಶು|| ದಶಮಿ ಗುರುವಾರ ಶುಭ ಮುಹೂರ್ತದಲ್ಲಿ ಶ್ರೀ ನಂದೀಶ್ವರ ಪ್ರತಿಷ್ಠಾಕಾರ್ಯವೂ ವಿಧ್ಯುಕ್ತಮಾಹೇಶ್ವರ ದೀಕ್ಷಾಸಂಸ್ಕಾರವೂ ಸಹ ನೆರವೇರಿಸಲ್ಪಟ್ಟಿತು.

ಈ ಪ್ರತಿಷ್ಠಾಂಗಗಳಾದ ಕಾರ್ಯಕಲಾಪಗಳು ಅಷ್ಟಮಿ ಮಂಗಳವಾರದಿಂದ ಪ್ರಾರಂಭಿಸಲ್ಪಟ್ಟು ಪ್ರತಿನಿತ್ಯವೂ ನಡೆಯುತ್ತಿದ್ದ ಆಚಾರ್ಯಭಜನ ಭೂರುದ್ರಗಣಸಂತರ್ಪಣಾದಿಗಳಿಂದ ಸ್ಥಳಪರಸ್ಥಳದ ಜನಸಮುದಾಯವು ಭಕ್ತಿಯಿಂದೊಡಗೂಡಿ ಗುರುಸಾರ್ವಭೌಮರ ಮಹತ್ವವನ್ನು ಕೊಂಡಾಡುವದರಲ್ಲಿಯೇ ಕಾಲಯಾಪನೆಯನ್ನು ಮಾಡುತ್ತಿದ್ದಿತು. ಇಂತಹ ಮಹತ್ಕಾರ್ಯವು ಯಾವ ಮಹಿಮರ ಕೃಪೆಯಿಂದ ನೆರವೇರಿದರೆ ಪುಣ್ಯಫಲವು ಪ್ರಾಪ್ತಿಯಾಗುವದೋ ಅಂತಹ ದಿವ್ಯತೇಜೋಮೂರ್ತಿಗಳಾದ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯನ್ನು ದಯಮಾಡಿಸಿಕೊಳ್ಳುವ ಬಗ್ಗೆ ಊರಿನ ಸದ್ಭಕ್ತಮಹಾಶಯರು ಬಿನ್ನಹಪತ್ರದೊಂದಿಗೆ ಶ್ರೀ ಸನ್ನಿಧಿಗೆ ಹೋಗಿ ಪ್ರಾರ್ಥಿಸಿಕೊಳ್ಳಲು ಶ್ರೀ ಮಹಾಸನ್ನಿಧಿಯವರು ಕಾರಣಾಂತರದಿಂದ ಚಿತ್ತೈಸಲು ಅವಕಾಶವು ದೊರಕದೇ ಹೋದಾಗ್ಯೂ ತತ್ಕಾರ್ಯವು ಸುಲಲಿತವಾಗಿ ನಡೆದು ಮದ್ಭಕ್ತರ ಸತ್ಸಂಕಲ್ಪವು ಪರಿಪೂರ್ಣವಾಗಿ ಪುಣ್ಯವನ್ನಾರ್ಜಿಸಲೆಂದು ಮಹದಾಶೀರ್ವಚನವನ್ನಿತ್ತುದರ ಫಲವಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರತಿನಿಧಿಗಳಾದ ಶ್ರೀಮನ್ನಾಗಲೀ ಬೃಹನ್ಮಠದ ಪಟ್ಟಾಧ್ಯಕ್ಷ ಶ್ರೀಗುರು ನಾಗಾರ್ಜುನಶಿವಾಚಾರ್ಯಮಹಾಸ್ವಾಮಿಗಳವರು, ಧಾರವಾಡ ಡಿ|| ಸಿಗ್ಗಾವಿ ಬೃಹನ್ಮಠದ ಚರಪಟ್ಟಾಧ್ಯಕ್ಷ ಶ್ರೀ ಸಿದ್ಧರಾಮಶಿವಾಚಾರ್ಯಮಹಾಸ್ವಾಮಿಗಳವರು, ಕವಲೇದುರ್ಗದ ಮಹಂತಿನ ಬೃಹನ್ಮಠದ ಚರಪಟ್ಟಾಧ್ಯಕ್ಷ ಶ್ರೀ ವೃಷಭಲಿಂಗಶಿವಾಚಾರ್ಯಮಹಾಸ್ವಾಮಿಗಳವರು, ಶಿವಮೊಗ್ಗಾ ಡಿ|| ದುಮ್ಮಳ್ಳಿ ಬೃಹನ್ಮಠದ ಪಟ್ಟಾಧ್ಯಕ್ಷ ಶ್ರೀ ಶಿವಲಿಂಗಶಿವಾಚಾರ್ಯಮಹಾಸ್ವಾಮಿಗಳವರು, ಹಾರನಹಳ್ಳಿ ಶ್ರೀಮದುಜ್ಜಯಿನೀ ಬೃಹನ್ಮಠದ ಚರಪಟ್ಟಾಧ್ಯಕ್ಷ ಶ್ರೀ ಗುರುಸಿದ್ಧಶಿವಾಚಾರ್ಯಮಹಾಸ್ವಾಮಿಗಳವರು ಸಹ ಈ ಮಹಾಕಾರ್ಯಕ್ಕೆ ಏಕಕಾಲದಲ್ಲಿ ಮಿಲಿತರಾಗಬೇಕಾದರೆ, ಭಕ್ತರ ಭಕ್ತಿಯೂ ಗುರುವಿನ ಮಹಿಮೆಯೂ ಸಹ ಅಸಾಧಾರಣವಾದುದೇ ಸರಿ. ನಿರಾಯಾಸವಾಗಿ ಈ ಉಪಾಚಾರ್ಯಪಂಚಕವು ಆಗಮಿಸಿದುದು ಹಾರನಹಳ್ಳಿಯ ವೀರಶೈವರ ಭಾಗ್ಯೋದಯವೇ ಸರಿ. ಈ ಮಹಾಗುರುಮೂರ್ತಿಗಳ ಸನ್ನಿಧಿಯಲ್ಲಿ ಶ್ರೀ ನಂದೀಶ್ವರ ಪ್ರತಿಷ್ಠಾಕಾರ್ಯವೂ ಶಿವದೀಕ್ಷಾಸಂಸ್ಕಾರಕಾರ್ಯವೂ ಶ್ರೀ ರುದ್ರಾಭಿಷೇಕಕಾರ್ಯವೂ ಸಹ ಅಪೂರ್ವವಾಗಿ ನಡೆದು ಸಮಸ್ತ ಜನರೂ ಧನ್ಯರಾಗಬೇಕಾದ ಸುಯೋಗವಿದು ಸಾಮಾನ್ಯವೇ? ಕಾರ್ಯಪರಿಸಮಾಪ್ತಿಯಾದ ಬಳಿಕ, ಜನಸಂದೋಹದಿಂದ ಕಿಕ್ಕಿರಿದಿದ್ದ ಬಹಿರಂಗ ಸಭೆಯಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದ ಈ ಉಪಾಚಾರ್ಯರೈವರೂ ತಮ್ಮತಮ್ಮ ಅಮೃತವಾಣಿಯಿಂದ ಅಪ್ಪಣೆಕೊಡಿಸಿದ ಧರ್ಮಸಂಬಂಧವಾದ ಉಪದೇಶಾಮೃತವನ್ನು ಪಾನಮಾಡಿದವರೇ ಸುಕೃತಿಗಳು. ಈ ಗುರುಶ್ರೇಷ್ಠರ ಅಜ್ಞೆಯಂತೆ ವೇ|| ಗುಬ್ಬೀ ಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳವರು ವೈದಿಕಪಾಠಶಾಲಾ ಸ್ಥಾಪನಾಸಂಬಂಧವಾಗಿಯೂ, ಗುರುಭಕ್ತಿವಿಚಾರಪರವಾಗಿಯೂ ಆನಂದಕರವಾದ ಭಾಷಣವನ್ನು ಮಾಡಿದರು. ಸ್ವಾಮಿತಿ ಹಾರನಹಳ್ಳಿಯ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಇಂಪಾದ ಗಾಯನದಿಂದ ಮಾಡಿದ ಗುರುಭಜನೆಯು ಸಹ ಸರ್ವರನ್ನೂ ಭಕ್ತಿಪರವಶರನ್ನಾಗಿ ಮಾಡಿತು. ಈ ಗುರುಪಂಚಕವು ಸಂದರ್ಶನ ಕುತೂಹಲಮಾನಸರಾಗಿ ತಂಡೋಪತಂಡವಾಗಿ ಬರುತ್ತಿದ್ದ ಜನವರ್ಗವನ್ನೀಕ್ಷಿಸಿ ಹಸನ್ಮುಖಿಯಾಗಿ ಶಾಂತಭಾವದಿಂದ ಆಶೀರ್ವಚನವನ್ನೀಯುತ್ತಿದ್ದುದನ್ನು ನೋಡಿ ಪ್ರತಿಯೊಬ್ಬ ಗುರುಭಕ್ತನೂ ಆನಂದಸಾಗರದಲ್ಲಿ ಮುಳುಗುತ್ತಿದ್ದನು. ಇಂತಹ ಮಹೋತ್ಸವಸಮಾರಂಭವು ನಿರ್ವಿಘ್ನವಾಗಿ ನೆರವೇರಿದುದಕ್ಕಾಗಿ ಶ್ರೀ ಪಂಚಾಚಾರ್ಯ ಪ್ರಭಾ ಪೋಷಣಾರ್ಥವಾಗಿ ವೀರಶೈವಮಂಡಲಿಯ ಕಡೆಯಿಂದ ಎರಡು ರೂ. ಗಳು ತೆಗೆಯಿಸಲ್ಪಟ್ಟವು. ಕಾರ್ಯಾಂತ್ಯದ ದಿನ ಈ ಪಂಚಮಠಾಧಿಪತಿಗಳಿಗೂ ಯಥಾಶಕ್ತಿ ಕಾಣಿಕೆಯನ್ನರ್ಪಿಸಿ ಅವರವರಾವಾಸಸ್ಥಾನಕ್ಕೆ ಬೀಳ್ಕೊಟ್ಟು ಮರುದಿನ ಸಾಯಂಕಾಲ ಪಲ್ಲವಾದಿಗಳಿಂದಲಂಕೃತವಾಗಿದ್ದ ರಾಜವೀಧಿಗಳಲ್ಲಿ ಶೃಂಗರಿಸಲ್ಪಟ್ಟಾಂದೋಳನದಲ್ಲಿ ಶ್ರೀ ನಂದೀಶ್ವರಸ್ವಾಮಿಯನ್ನು ಮೂರ್ತಗೊಳಿಸಿ ಮನೋಹರವಾದ ವಾದ್ಯನಿನಾದಗಳಿಂದಲೂ ಶ್ರೀ ಪಂಚಾಚಾರ್ಯ ಭಜನೆಯಿಂದಲೂ ಮಹೋತ್ಸವವನ್ನು ನಡೆಯಿಸಿ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಂಡರು ಶ್ರೀಗುರುಸಾರ್ವಭೌಮರು ಇನ್ನೂ ಮಹತ್ತರವಾದ ಧರ್ಮಕಾರ್ಯಗಳನ್ನೆಸಗಿ ದಿಗಂತವಿಶ್ರುತಕೀರ್ತಿಯನ್ನಾರ್ಜಿಸುವ ಸಮರ್ಥತೆಯನ್ನು ಇಲ್ಲಿನ ಮಹಾಜನರಿಗೀಯಲೆಂದು ಸದಾ ಹಾರೈಸುವ,

ಓರ್ವ ಉತ್ಸವಭಾಗಿ.

ಚಂದ್ರಲೋಕಕ್ಕೆ ಪ್ರಯಾಣ!

ಬರ್ಲಿನ್ ನಗರದ ಹೆರ್ ಜೋರ್ಜ್ ವಿಂಕ್ಲರ್ ಎಂಬ ಶಾಸ್ತ್ರಜ್ಞರು 'ರೀ-ಮೋಟಾರ್' ಎಂಬ ಒಂದು ನೂತನ ಯಂತ್ರವನ್ನು ತಯಾರಿಸಿರುವರು. ಈ ಯಂತ್ರವನ್ನು ಹೊಸಪದ್ಧತಿಯ ಮೇಲೆ ತಯಾರಿಸಿದ್ದು ಅದರ ಸಹಾಯದಿಂದ ಆಕಾಶಮಾರ್ಗದಲ್ಲಿ ಹೆಚ್ಚು ವೇಗದಿಂದ ಪ್ರಯಾಣ ಮಾಡಬಹುದಂತೆ! ಈ ಯಂತ್ರದ ಸಂಬಂಧವಾಗಿ ವಿಂಕ್ಲರ್‌ರವರು ಇನ್ನೂ ಕೆಲವು ಹೊಸ ಶೋಧಗಳನ್ನು ಮಾಡುತ್ತಿರುವರು. ಅವರ ಆಲೋಚನೆಯಂತೆ ಯಂತ್ರವು ಸಂಪೂರ್ಣ ಮಾಡಲ್ಪಟ್ಟರೆ ಘಂಟೆಯೊಂದಕ್ಕೆ 25,000 ಮೈಲಿಗಳ ದೂರ ಪ್ರಯಾಣ ಮಾಡಬಲ್ಲ ಹೊಸತರಹ ವಿಮಾನಗಳಲ್ಲಿ ಭೂಲೋಕದಿಂದ ಚಂದ್ರಗ್ರಹಕ್ಕೆ ಪ್ರಯಾಣಮಾಡಬಹುದಂತೆ!

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 31

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 38

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ್ ಹೋಟೆಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (14)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, $\frac{1}{2}$ ಡಜನ್ 8-8-0 ಮತ್ತು ರೂ. 5

ರ್ಹುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶನೋವು, ಗಂಟು ನೋವು ಸಂದು ಗಂಟು ನೋವು ಎಲ್ಲಾ ತರದ ವಾಯು, ಸೊಂಟನೋವು, ಜಜ್ಜಿದ ವ ಆಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕುಮದ್ದುಗಳು, ಹೋಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಮೋಯುವ ರೋಗ, ದದ್ದು, ತುರಿಸುವ ನಂಜಿ ಹುಣ್ಣುಗಳನ್ನು ಶೀಘ್ರ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವಿ ಕುಹರ, ಕಿವಿಯ ಒಳಗೆ ಕಟಕ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಔನ್ಸಿಗೆ ಆಣೆ 8, $\frac{1}{2}$ ಡಜನಿಗೆ ರೂ. 2-12-0

ಮುಖ ರೂಪಗಳು ವಿಕಾರಕ್ಕೆ ನಿಮಾರ್ಪಟ್ಟು ಮುದುಕರಾಯಗಳು ನಸ್ತೇಜಪಡಿಸುವಂದ, ಆರೋಗ್ಯ ಕೆಡುತ್ತಾ ಬರುವದು ಯುವಕರ ಗುಪ್ತ ಹಿಂಸೆಯಲ್ಲವೇ? ಪ್ರಾಥ ದೇಹವಂತವಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಆತ್ಮಸಂರಕ್ಷಣೆಯೇ ಯುವಕರಾಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಬಾಧಿಸುವುದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರ:— ಮಲೇರಿಯಾನ ಕಂಪೆನಿ,
[40] (ಹಂಪನಕಟ್ಟೆ), 21, ಮಂಗಳೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಪಟ್ಟಾಭಿಷೇಕಾರೋಹಣವಾದಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[22] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ವ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M.

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ನೇ ಜೂನ್ ೧೯೩೪ [ಸಂಚಿಕೆ ೫

ಶ್ರೀಮದ್ವೇದಾಗಮೋಪನಿಷತ್ಪ್ರತಿಪಾದಿತ ವಿಮಲವೀರಶೈವಮಹಾಮತಸ್ಥಾಪನಾಚಾರ್ಯ
ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ
ದಿವ್ಯವಾದ ಸನ್ನಿಧಾನಂಗಳಲ್ಲಿ

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿಗೆ ಸೇರಿದ ಹಲಸೂರು ಭಕ್ತರು ಶ್ರದ್ಧಾಭಕ್ತಿಪೂರ್ವಕವಾಗಿ ಸಮರ್ಪಿಸಿದ ವಿಜ್ಞಾಪನಾಪತ್ರಿಕೆ.

ಪೂಜ್ಯಪಾದ ಮಹಾಸ್ವಾಮಿಗಳವರೇ!

ತಪೋಧನರೂ, ಸನಾತನ ವೈದಿಕಧರ್ಮೋದ್ಧಾರಕರೂ, ಭಕ್ತಹಿತಕಾಂಕ್ಷಿಗಳೂ, ಸರ್ವಜನಾಂಗದ ಉನ್ನತಿಯನ್ನು ಬಯಸುವವರೂ ಆದ ತಮ್ಮನ್ನು ನಾವು ಅತ್ಯಾನಂದದಿಂದಲೂ ಭಕ್ತಿಭಾವದಿಂದಲೂ ಸ್ವಾಗತಿಸುತ್ತೇವೆ.

ಗುರುವರ್ಯರೇ! ಜಗದ್ವಂದ್ಯರಾದ ಶ್ರೀಮದ್ರೇಣುಕಾಚಾರ್ಯರವರ ಪವಿತ್ರ ಹಸ್ತದಿಂದ ಸ್ಥಾಪಿಸಲ್ಪಟ್ಟು ಈಗ ಮಹಾಸ್ವಾಮಿಗಳವರಿಂದ ಅಲಂಕರಿಸಲ್ಪಟ್ಟಿರುವ ವೀರಸಿಂಹಾಸನ ಮಹಾಪೀಠವು ಅನಾದಿಕಾಲದಿಂದ ರಾಜಾಧಿರಾಜರ ಮನ್ನಣೆಗೆ ಪಾತ್ರವಾಗಿದ್ದುಕೊಂಡು ಇತಿಹಾಸ ಪ್ರಸಿದ್ಧವಾಗಿರುವ ಸಂಗತಿಯು ಎಲ್ಲರಿಗೂ ಗೊತ್ತಿರುತ್ತದೆ. ಶ್ರೀ ಭಗವತ್ಪಾದರೇಣುಕಾಚಾರ್ಯರು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಹಿಂದೆ ಭರತಖಂಡದ ನಾನಾ ಪ್ರದೇಶಗಳಲ್ಲಿಯೂ, ನಮಗೆ ಈಗ ಕಾಣುತ್ತಿರುವ ದಕ್ಷಿಣ ಮತ್ತು ಮೈಸೂರು ದೇಶಗಳಲ್ಲಿ ಅಂದರೆ ಕಂಚಿ, ಕುಂಭಕೋಣ, ರಾಮೇಶ್ವರ, ಶಿವಗಂಗೆ, ರೇವಣಸಿದ್ಧೇಶ್ವರಬೆಟ್ಟ, ಸಿದ್ಧರಬೆಟ್ಟ, ವಿಭೂತಿಪುರ, ರಾಜಾಪುರ, ನಾಗಲಾಪುರ ಮುಂತಾದ ಸ್ಥಳಗಳಲ್ಲಿ ಅನಂತಾನಂತ ಲೀಲೆಗಳನ್ನು ವಿಶೇಷವಾಗಿ ತೋರಿಸಿ ಆಯಾಯ ಪ್ರಾಂತ್ಯದ ಭಕ್ತೋದ್ಧಾರಕ್ಕಾಗಿ ಉಪಾಚಾರ್ಯಮಠಗಳನ್ನು ಸ್ಥಾಪಿಸಿ ವೀರಶೈವಮತ ತತ್ವೋಪದೇಶವು ಸದರಿ ಮಠಗಳ ಮೂಲಕವಾಗಿಯೂ ಹರಡುವಂತೆ ದೇಶದಲ್ಲೆಲ್ಲಾ ಮಾಡಿರುವ ಮಹದುಪಕಾರವು ಬಲವಾದ ಸಾಕ್ಷಿಯಾಗಿದೆ, ಮಹಾಸ್ವಾಮಿ!

ಮಹಾಸ್ವಾಮಿಯವರು ತಾ|| ೨೨-೧೧-೧೯೩೨ರಲ್ಲಿ ಈ ಜಗದ್ಗುರುಪೀಠಾರೋಹಣಮಾಡಿ ಶಿಷ್ಯೋದ್ಧಾರಕ್ಕಾಗಿ ದೇಶಮಧ್ಯದಲ್ಲಿ ವಿಶೇಷ ವೈಭವದಿಂದ ಸಂಚರಿಸುವದರ ಮೂಲಕ ಅನಂತವಾಗಿ ಅಲ್ಲಲ್ಲಿ ಮಹಿಮೆಗಳನ್ನು ತೋರಿಸುತ್ತ ಸಮಸ್ತಜನರಿಗೂ ಸುಖಶಾಂತಿಗಳನ್ನೀಯುತ್ತ ಅಲ್ಪಾವಧಿಯಲ್ಲಿಯೇ ಈ ಮಹಾಪೀಠದ ಪ್ರಕಾಶವನ್ನು ದಶದಿಕ್ಕುಗಳಲ್ಲಿಯೂ ವ್ಯಾಪಿಸುವಂತೆ ಮಾಡಿರುವ ಸಂಗತಿಯನ್ನು ಕೇಳಿ ಪರಮಾನಂದವೆನಿಸುತ್ತದೆ.

ಭಕ್ತೋದ್ಧಾರಕರೇ! ಪ್ರಾಚೀನಕಾಲದಿಂದ ಪರಂಪರೆಯಾಗಿ ಈ ಮಹಾಪೀಠವನ್ನು ಅಲಂಕರಿಸಿಕೊಂಡು ಬಂದ ಗುರುವರ್ಯರ ಉದಾಹರಣೆಯನ್ನೇ ಆದರ್ಶವಾಗಿಟ್ಟುಕೊಂಡು ತಾವೂ ಸಹ ವಿದ್ವಾಂಸರುಗಳಿಗೂ, ಕಲೆಗಾರರಿಗೂ, ಅನೇಕ ಮಂದಿ ವಿದ್ಯಾರ್ಥಿಗಳಿಗೂ ಆಶ್ರಯ ಪ್ರೋತ್ಸಾಹಗಳನ್ನು ಕೊಟ್ಟು ಆಶೀರ್ವದಿಸುತ್ತಿರುವುದಲ್ಲದೆ ಸದುಪದೇಶಗಳನ್ನು ಮಾಡುತ್ತಿರುವುದು ದೇಶೋನ್ನತಿಗೆ ತುಂಬಾ ಸಹಾಯವಾಗಿರುತ್ತೆಂಬ ಅಂಶವನ್ನು ಮಹಾಸನ್ನಿಧಾನದಲ್ಲಿ ವಿಜ್ಞಾಪಿಸಿಕೊಳ್ಳಲು ಅತ್ಯಾನಂದವಾಗಿರುತ್ತದೆ.

ಮಹಾಮಹಿಮರೇ! ತಮ್ಮ ಘನವಾದ ಪೀಠಕ್ಕೆ ಸಮಾನವಾದ ಬ್ರಿಟಿಷ್ ಇಂಡಿಯಾದಲ್ಲಿರುವ ಹಿಮವತ್ಕೇದಾರ, ಕಾಶೀ, ಉಜ್ಜಯಿನಿ, ಶ್ರೀಶೈಲ ಕ್ಷೇತ್ರಗಳಲ್ಲಿರುವ ಮಹಾಪೀಠಗಳು ಬ್ರಿಟಿಷ್ ಸಾರ್ವಭೌಮರಿಂದ ವಿಶೇಷವಾಗಿ ಗೌರವಿಸಲ್ಪಡುತ್ತಿರುವುವಲ್ಲದೆ ಧರ್ಮಾವತಾರ, ರಾಜರ್ಷಿಪುಂಗವ ಮೈಸೂರು ಶ್ರೀಮನ್ಮಹಾರಾಜ ಮಹಾಪ್ರಭುಗಳವರ ರಾಜ್ಯದಲ್ಲಿರುವ ತಮ್ಮ ಪೀಠಕ್ಕೂ ಬ್ರಿಟಿಷ್ ಸರಕಾರದವರು ವಿಶೇಷ ಗೌರವವನ್ನು ತೋರಿಸುತ್ತಿರುವದು ನಮ್ಮೆಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಅದ್ಯಾಪಿ ನಮ್ಮ ಘನವನ್ನೈದಿದ ಬ್ರಿಟಿಷ್ ರೆಸಿಡೆಂಟ್ ಸಾಹೇಬರವರು, ಕಲೆಕ್ಟರ್ ಸಾಹೇಬರವರು ನಮ್ಮಗಳ ಪ್ರಾರ್ಥನೆಯ ಮೇರೆಗೆ ಸಿಂಹಲಲಾಟ ಪಂಚಕಲಶಯುಕ್ತ ಅಡ್ಡಪಾಲಕಿ ಮೊದಲಾದ ಸಮಸ್ತ ರಾಜಮರ್ಯಾದೆಗಳೊಡನೆ ಶ್ರೀ ಮಹಾಸ್ವಾಮಿಯವರ ಸ್ವಾರಿಯು ಉತ್ಸವದೊಡನೆ ದಯಮಾಡುವಂತೆ ರಹದಾರಿಯನ್ನು ದಯಪಾಲಿಸಿ ಗೌರವವನ್ನುಂಟುಮಾಡಿದುದಕ್ಕಾಗಿ ಈ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ನಿನ ಭಕ್ತಸಮಾಜವೆಲ್ಲಾ ಅವರಿಗೂ, ಘನ ಸರ್ಕಾರದವರಿಗೂ ಚಿರಋಣಿಯಾಗಿರುವುದೆಂದು ಉದ್ಘೋಷಿಸಲು ಅತ್ಯಾನಂದವೆನ್ನಿಸುತ್ತದೆ, ಮಹಾಸ್ವಾಮಿ!

ಮಹಾಗುರುಗಳೇ! ಅನೇಕ ವಿದ್ವಾಂಸರ ಮನ್ನಣೆಗೆ ಪಾತ್ರರೂ, ಉದಾರ ಹೃದಯರೂ, ತಪೋನಿಧಿಗಳೂ ಆದ ತಾವು ನಮ್ಮ ವಿಜ್ಞಾಪನೆಯನ್ನಾಲಿಸಿ ಶ್ರೀ ಮಾಂಡವ್ಯಮುನಿಶ್ರೇಷ್ಠರಿಂದ ತಪಸ್ಸುಮಾಡಿದ ಸ್ಥಾನವಾಗಿರುವ ಸಮೀಪ ಪ್ರಾಂತಕ್ಕೆ ದಯಮಾಡಿಸಿರುವುದನ್ನು ಭಕ್ತರಾದ ನಾವು ನಮ್ಮ ಸೌಭಾಗ್ಯವೆಂದು ಭಾವಿಸುತ್ತೇವೆ. ವಿದ್ಯಾವಿನಯಸಂಪನ್ನರೂ, ಶಿವಾನುಭವಿಗಳೂ, ಅಭಿನವರೇಣುಕರೂ ಆದ ತಮ್ಮ ಸನ್ನಿಧಾನದಲ್ಲಿ ಸಮರ್ಪಿಸಿದ ಈ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ ಭಕ್ತರಾದ ನಮ್ಮನ್ನು ಧರ್ಮಮಾರ್ಗದಲ್ಲಿ ಮುಂದರಿಯುವಂತೆ ಅನುಗ್ರಹಿಸಬೇಕೆಂದು ಅಂಜಲಿಬದ್ಧರಾಗಿ ಅತ್ಯಂತ ಶ್ರದ್ಧಾಭಕ್ತಿಯಿಂದ ಪ್ರಾರ್ಥಿಸಿಕೊಳ್ಳುತ್ತೇವೆ, ಮಹಾಸ್ವಾಮಿ!

ತಾ|| ೧೦—೬—೧೯೩೪

ಒಳದೇಶದ ವೃತ್ತಾಂತಗಳು.

ಮೈಸೂರು ಪ್ರಜಾಪ್ರತಿನಿಧಿಸಭೆಯ ಬಜೆಟ್ ಅಧಿವೇಶನವು ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಜೂನ್ 14ನೇ ತಾರೀಖು ಗುರುವಾರ ಮಧ್ಯಾಹ್ನ 12 ಗಂಟೆಗೆ ದಿವಾನರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಶಿವಮೊಗ್ಗ ಡಿ|| ಸಂತವೇರಿಗ್ರಾಮದ ಸುತ್ತಲೂ 5 ಮೈಲು ಪ್ರದೇಶದಲ್ಲಿ ಸೇರಿಕೊಂಡು ಜನರಿಗೂ ಪ್ರಾಣಿಗಳಿಗೂ ವಿಶೇಷ ತೊಂದರೆಮಾಡುತ್ತಿರುವ ಹುಲಿಯನ್ನು ಎರಡು ತಿಂಗಳೊಳಗಾಗಿ ಯಾರುಬೇಕಾದರೂ ಶಿಕಾರಿಮಾಡಬಹುದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಇದೇ ಜೂನ್ 23 ನೇ ತಾರೀಖು ಶನಿವಾರ ರಾಜಧಾನಿಯಲ್ಲಿ ನಡೆಯಲಿರುವ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವಕ್ಕೆ ಇಂದೂರ್ ಸಂಸ್ಥಾನದ ಮಹಾರಾಜರಾದ ಸರ್ ತುಕ್ಕೋಜೀರಾವ್ ಹೋಳ್ಕರ್ ರವರೂ, ಗಂಗಾಪುರದ ಮಹಾರಾಣಿಯವರೂ, ಮದರಾಸಿನ ಹಂಗಾಮಿ ಗವರ್ನರಾದ ಸರ್ ಮಹಮದ್ ಉಸ್ಮಾನ್‌ರವರೂ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ದಯಮಾಡಿಸುವರೆಂದು ತಿಳಿದುಬಂದಿದೆ.

ಶ್ರೀಮನ್ಮಹಾರಾಜರವರು ಮೊನ್ನೆ ಶನಿವಾರ (ತಾ|| 16-6-1934) ಬೆಳಗ್ಗೆ ಎಡತೊರೆಯ ಹೊಸ ನಗರದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಬೆಳಗ್ಗೆ 8½ ಗಂಟೆಗೆ ಮಹಾರಾಜರು ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರೊಡನೆ ದಿವ್ಯವಾದ ಮೋಟಾರಿನಲ್ಲಿ ನೂತನ ನಗರಕ್ಕೆ ಚಿತ್ತೈಸಿದರು. ಹೊಸ ಎಡತೊರೆಯ ಪೌರಸಭೆಯವರು ಮಾನಪತ್ರವನ್ನರ್ಪಿಸಿದನಂತರ ಪ್ರಭುಗಳು ನೂತನ ನಗರದ ಮಧ್ಯದಲ್ಲಿ ನಿರ್ಮಿಸಲ್ಪಟ್ಟಿದ್ದ ಸ್ಮಾರಕ ಕಟ್ಟಡದ ಅನಾವರಣ ಮಹೋತ್ಸವವನ್ನು ನೆರವೇರಿಸಿದರು.

ಸ್ವೀಕಾರ

ಶಿಕಾರಿಪುರ ತಾಲೂಕು ಕಡೇನಂದೀಹಳ್ಳಿ ಮ|| ರಾ|| ಶಿವಲಿಂಗಪ್ಪ ವೀರಶೆಟ್ಟರ ಶಿದ್ದಪ್ಪನವರ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ರಟ್ಟೀಹಳ್ಳಿ ಶ್ರೀ|| ಸಿದ್ಧಲಿಂಗ ಸ್ವಾಮಿಗಳವರು ಶಿವಾಧೀನರಾದ ಸಮಯದಲ್ಲಿ ತೆಗೆಯಿಸಿದ 1 ರೂ. ಒಟ್ಟು 2 ರೂ. ಗಳು ಮಾಸೂರು ಹಿರೇಮಠದ ವೇ|| ಚೆನ್ನವೀರಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು,
ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

ನಿರುಕ್ತವು:—

ಈ ರೀತಿಯಾಗಿ ಶಿಕ್ಷೆಯೂ ವ್ಯಾಕರಣವೂ ಎಂಬ ಎರಡು ಅಂಗಗಳ ಅಧ್ಯಯನದಿಂದ ವರ್ಣೋಚ್ಚಾರದ ಮತ್ತು ಪದಗಳ ನಿರ್ದೋಷತ್ವದ ಜ್ಞಾನವುಂಟಾದಬಳಿಕ ವೈದಿಕಮಂತ್ರಗಳೊಳಗಿನ ಪದಗಳ ಅರ್ಥಾಕಾಂಕ್ಷೆಯು ಹೆಚ್ಚುವುದು. ಅದರ ಸಫಲತೆಗಾಗಿಯೇ ವೈದಿಕ ಶಬ್ದಗಳ ವ್ಯುತ್ಪತ್ತಿಯನ್ನು ತಿಳುಹಿ ಋಚೆಗಳರ್ಥವನ್ನು ನಿರ್ಣಯಿಸಲೋಸುಗ ಈ ಶಾಸ್ತ್ರದ ಉದಯವಾಗಿದೆ. ಬಹುಕಾಲದಿಯಿಂದಲೂ ಭಾರತೀಯ ಪಂಡಿತರು ವೇದಗಳೊಳಗಣ ಕಠಿಣಶಬ್ದಗಳ ಅರ್ಥವನ್ನು ಬಿಡಿಸಲು ಬಿಡುವಿಲ್ಲದೆ ಹೆಣಗುತ್ತಿದ್ದರೆಂದು ತಿಳಿದುಬರುವುದು. ಆ ಕಾಲದಲ್ಲಿ ಜಾಣರು ಋಗಾದಿವೇದಗಳಲ್ಲಿಯ ದುರ್ಬೋಧ ಶಬ್ದಗಳನ್ನು ಆರಿಸಿ ಬೇರೆಬೇರೆ ಪಟ್ಟಿಗೆ ಸೇರಿಸಿ ಪ್ರತಿಯೊಂದು ವೇದದ ಕಠಿಣಶಬ್ದಗಳ ಕೋಶಗಳನ್ನು ತಯಾರಿಸುವ ಕೆಲಸವನ್ನು ಮೊದಲು ಕೈಕೊಂಡರು. ಪ್ರಜಾಪತಿಯಾದ ಕಶ್ಯಪನು ವೇದಗಳಲ್ಲಿರುವ ದುರೂಹಗಳೂ, ವ್ಯಾಪಕಗಳೂ, ಏಕಾರ್ಥಕಗಳೂ ಆದ ಅನೇಕ ಶಬ್ದಗಳನ್ನೂ ಕೆಲವು ಅನೇಕಾರ್ಥಕಶಬ್ದಗಳನ್ನೂ ಸಂಗ್ರಹಿಸಿದನು. ಹೀಗೆ ಸಂಗ್ರಹೀತವಾದ ಶಬ್ದಸಮುದಾಯವೇ 'ನಿಘಂಟು' ಎಂಬ ಹೆಸರುಳ್ಳದ್ದಾಯಿತು. 'ನಿಘಂಟು' ಅಂದರೆ ವೇದಾರ್ಥಗಮನ (ಬೋಧ) ಸಾಧನವೆಂದರ್ಥವು. ಇದರ ತರುವಾಯ ಅನೇಕ ವೈದಿಕ ಮತ್ತು ಲೌಕಿಕ ನಿಘಂಟುಗಳು ರಚಿಸಲ್ಪಟ್ಟವು. ಇಂಥ ನಿಘಂಟುಗಳನ್ನೇ 'ಕೋಶ' ಗಳೆಂಬ ಪರ್ಯಾಯವಾಚಕವಾಗಿ ಹೇಳುವುದು ಹೆಚ್ಚಾಗಿ ಬಳಕೆಯಲ್ಲಿದೆ. ಅಮರಕೋಶಾದಿಗ್ರಂಥಗಳಿಗೆ ನಿಘಂಟುಗಳೆನ್ನುತ್ತಾರೆ. ಕಶ್ಯಪನಿಂದ ಸಂಗ್ರಹೀತವಾದ ಆ ವೈದಿಕ ನಿಘಂಟುವಿಗೆ ಯಾಸ್ಕಾಚಾರ್ಯನಿಂದ ವ್ಯಾಖ್ಯೆಯು ಬರೆಯಲ್ಪಟ್ಟಿದೆ. 'ನಿಘಂಟು' ಎಂಬ ಈ ವೈದಿಕ ಕೋಶವೂ ಯಾಸ್ಕನಿಂದೇ ರಚಿಸಲ್ಪಟ್ಟಿರುವುದೆಂದು ಕೆಲಂಬರು ಹೇಳುತ್ತಾರೆ. ಆದರೆ ಈ ಮಾತು ನಮಗೆ ಸರಿದೋರದು. ಯಾಸ್ಕನೇ ಸ್ವತಃ 'ಈ ನಿಘಂಟುಗ್ರಂಥವು ಪ್ರಾಚೀನ ಋಷಿವಂಶಜರಿಂದ ಸಂಗ್ರಹೀತವಾದುದು.' ಎಂದು ನುಡಿವನಲ್ಲವೇ? ಈ ನಿಘಂಟುವಿಗೆ ಅವನಿಂದ ಬರೆಯಲ್ಪಟ್ಟ ವ್ಯಾಖ್ಯೆಯು 'ನಿರುಕ್ತ' ವೆಂದು ವ್ಯವಹೃತವಾಗಿದೆ. ಸಾಯಣಾಚಾರ್ಯನು ಋಗ್ವೇದ ಭಾಷ್ಯದ ಭೂಮಿಕೆಯಲ್ಲಿ 'ನಿಘಂಟು' ವಿಗೆ 'ನಿರುಕ್ತ' ವೆಂಬ ನಿರ್ದೇಶನದೊಡನೆ ಲಾಕ್ಷಣಿಕರೂಪದಿಂದ ನಿಘಂಟುವಿನ ವ್ಯಾಖ್ಯೆಗೆ ನಿರುಕ್ತವೆಂದು ಹೇಳುತ್ತಾನೆ. ಆದರೆ ವಸ್ತುತಃ 'ನಿಘಂಟು' ವು ಬೇರೆ, 'ನಿರುಕ್ತ' ವೆಂಬುದು ಬೇರೆ. ಕೇವಲ ನಿಘಂಟುವಿನಲ್ಲಿ 'ನಿರುಕ್ತ' ಲಕ್ಷಣಗಳಿರುವುದಿಲ್ಲ. ನಿರುಕ್ತದ ಲಕ್ಷಣವಾದರೋ ಹೀಗಿರುವುದು:—

ವರ್ಣಾಗಮೋ ವರ್ಣವಿಪರ್ಯಯಶ್ಚ
ದ್ವೌಚಾಪರೌ ವರ್ಣವಿಕಾರನಾಶೌ ।
ಧಾತೋಸ್ತದರ್ಥಾತಿಶಯೇನ ಯೋಗ
ಸ್ತದುಚ್ಯತೇ ಪಂಚವಿಧಂ ನಿರುಕ್ತಮ್ ॥

ಆದ್ದರಿಂದ, ವರ್ಣಾಗಮವರ್ಣವಿಪರ್ಯಯಾದಿಗಳು ನಿಘಂಟುವಿನಲ್ಲಿರುವುದಿಲ್ಲ; ಅದರ ವ್ಯಾಖ್ಯೆಯಲ್ಲಿ ಇರುತ್ತವೆ. ಇಂತಿರುವುದೇ ನಿರುಕ್ತವು. ಅರ್ಥಾಕಾಂಕ್ಷೆಯನ್ನು ಕಳೆಯಿಸುವುದಕ್ಕೋಸ್ಕರವೇ ಯಾಸ್ಕಮುನಿಯು:—'ಸಮಾಮ್ನಾಯಃ ಸಮಾಮ್ನಾತಃ ಸವ್ಯಾಖ್ಯಾತವ್ಯಃ' ಎಂಬುದು ಮೊದಲಾಗಿ ತ್ರಯೋದಶಾಧ್ಯಾಯಾತ್ಮಕವಾದ 'ನಿರುಕ್ತ' ವನ್ನು ರಚಿಸಿದ್ದಾನೆ. ಈ ಗ್ರಂಥದಲ್ಲಿ ನಾಮ ಆಖ್ಯಾತ, ನಿಪಾತ, ಉಪಸರ್ಗವೆಂಬ ಭೇದರೂಪಗಳಾದ ಚತುರ್ವಿಧಪದಗಳನ್ನು ನಿರೂಪಿಸಿ ವೈದಿಕ ಮಂತ್ರಾಂತರ್ಗತಪದಗಳ ಅರ್ಥವನ್ನೂ ಪ್ರಕಾಶಪಡಿಸಿದ್ದಾನೆ. ಅನುಷ್ಠೇಯವಾದರ್ಥವನ್ನು ಪ್ರಕಾಶಗೊಳಿಸುವ ಮೂಲಕವೇ ಮಂತ್ರಗಳಿಗೆ ಕರಣತ್ವವಿರುವುದು. ಪ್ರತಿಯೊಂದು ಪದದ ಅರ್ಥಜ್ಞಾನವಾದರೇನೇ ವಾಕ್ಯಾರ್ಥಜ್ಞಾನವಾಗುವುದು. ಆದ್ದರಿಂದ ಮಂತ್ರಗಳಲ್ಲಿಯ ಪದಗಳ ಅರ್ಥಜ್ಞಾನಕ್ಕೋಸ್ಕರ 'ನಿರುಕ್ತ' ವೆಂಬ ವೇದಾಂಗವು ಅತ್ಯಂತಾಪೇಕ್ಷಿತವಾಗಿದೆ. ಪದಾರ್ಥಜ್ಞಾನಪೂರ್ವಕವಾಗಿ ವಾಕ್ಯಾರ್ಥಜ್ಞಾನವಾಗದಿರುವ ಪಕ್ಷದಲ್ಲಿ ಅನುಷ್ಠಾನವೆಂಬುದೇ ಸಂಭವಿಸದು. ಹಾಗೂ, **'ಸೃಣ್ಯೇವಜರ್ಭರೀತುರ್ಫರೀತೂ'** (ಋ. ೧೦-೧೦೬-೬) ಎಂಬ ಮೊದಲಾದ ದುಜ್ಞೇಯಶಬ್ದಗಳ ಅರ್ಥಜ್ಞಾನವಾದರೂ ನಿರುಕ್ತಸಹಾಯವಿಲ್ಲದೆ ಅನ್ಯ ಯಾವ ಸಾಧನದಿಂದಲೂ ಆಗಲಾರದು. ವೈದಿಕದ್ರವ್ಯ (ದೇವತಾತ್ಮಕ ಪದಾರ್ಥ) ಗಳ ಪರ್ಯಾಯ ಶಬ್ದರೂಪ ನಿಘಂಟೂ ನಿರುಕ್ತದಲ್ಲಿ ಅಂತರ್ಭೂತವಾಗಿರುವುದು.

ಅತಿಗಂಭೀರಗಳಾದ ವೇದಗಳ ಅರ್ಥವನ್ನು ಸ್ಪಷ್ಟೀಕರಿಸುವುದಕ್ಕೋಸ್ಕರವೇ ಅವುಗಳ ಷಡಂಗಗಳು (ಶಿಕ್ಷಾದಿಗ್ರಂಥಗಳು) ಪ್ರವೃತ್ತಗಳಾಗಿರುವುವಷ್ಟೇ! ಈ ಆರು ಅಂಗಗಳಲ್ಲಿ 'ನಿರುಕ್ತ' ವಾದರೂ ಮುಖ್ಯವಾಗಿರುತ್ತದೆ. ಏಕೆಂದರೆ ಇದರ ಸಹಾಯವಿಲ್ಲದೆ ಸಾಮಾನ್ಯಜನರಿಗೆ ವೇದಾರ್ಥಜ್ಞಾನವಾಗುವಿಕೆಯು ಪ್ರಾಯಃ ಅಸಂಭವವೇ ಸರಿ. ಇದು ನಿರ್ವಚನಪ್ರಧಾನಶಾಸ್ತ್ರವು. ಆದ್ದರಿಂದ ಇದರಲ್ಲಿ ವ್ಯಾಕರಣಾದಿ ವಿಷಯಗಳೂ ಅಡಕವಾಗಿವೆ. ಸ್ವತಃ ಯಾಸ್ಕಮುನಿಯೇ—'ಯಾವನು ಚೆನ್ನಾಗಿ ವ್ಯಾಕರಣವನ್ನರಿತವನಲ್ಲವೋ ಅವನು ನಿರುಕ್ತವನ್ನು ಪಠಿಸಲನರ್ಹನು' ಎಂಬುದಾಗಿ ವ್ಯಾಕರಣದೊಡನೆ ನಿರುಕ್ತದ ಘನಿಷ್ಠವಾದ ಸಂಬಂಧವನ್ನು ಸೂಚಿಸಿದ್ದಾನೆ. ಆದರೆ, ವ್ಯಾಕರಣವೂ ನಿರುಕ್ತವೂ ಒಂದೇ ಎಂದು ತಿಳಿಯಕೂಡದು ವ್ಯಾಕರಣದ ವಿಷಯವು ಸಂಕುಚಿತವಾದುದು. ನಿರುಕ್ತ ಪ್ರತಿಪಾದ್ಯ ವಿಷಯವಾದರೋ ವ್ಯಾಪಕವಾಗಿದೆ; ಈ ಅಭಿಪ್ರಾಯವನ್ನು ಯಾಸ್ಕಮುನಿಯು (೧-೧೫) **"ತದಿದಂ ವಿದ್ಯಾಸ್ಥಾನಂ ವ್ಯಾಕರಣಸ್ಯ ಕಾರ್ತ್ಸ್ನ್ಯಮ್ ।"** ಎಂಬುದಾಗಿ ನಿರೂಪಿಸಿದ್ದಾನೆ. ಆದ್ದರಿಂದ ಈ ನಿರುಕ್ತಶಾಸ್ತ್ರವು ಸರ್ವವಿದ್ಯೆಗಳ ಸ್ಥಾನವೂ ವ್ಯಾಕರಣದ ಪೂರ್ಣತೆಯುಳ್ಳದ್ದೂ ಆಗಿದೆ. ಸಾರಾಂಶ, ಈ ಶಾಸ್ತ್ರವು ಅನೇಕ ವಿದ್ಯೆಗಳಿಗಾಶ್ರಯವಾಗಿರುವುದಾದರೂ ಇದರಲ್ಲಿ ವ್ಯಾಕರಣ ವಿಷಯವು ಪ್ರಾಧಾನ್ಯವಾಗಿರುವುದರಿಂದ ಇದನ್ನು ಅಭ್ಯಾಸಿಸದೆ ವ್ಯಾಕರಣಮಾತ್ರವನ್ನು ಕಲಿತವನು ಪೂರ್ಣ ವೈಯಾಕರಣನೆನಿಸಲಾರನು. ವೇದಮಂತ್ರಗಳ ಪದವಿಭಾಗ ಪರಿಜ್ಞಾನವು ನಿರುಕ್ತಶಾಸ್ತ್ರದಿಂದೇ ಉಂಟಾಗುವುದಲ್ಲವೇ?

ಪೂರ್ವದಲ್ಲಿ ನಿರುಕ್ತವಿಷಯಕವಾದ ಅನೇಕ ದೊಡ್ಡ ದೊಡ್ಡ ಗ್ರಂಥಗಳಿದ್ದವೆಂಬುದು ಯಾಸ್ಕೀಯನಿರುಕ್ತದ—**"ಶಾಸನ್ಯೇಕೇ ಸಮಾಮನನ್ತಿ ।"** (೭-೧೩) ಎಂಬ ವಾಕ್ಯದಿಂದ ಗೊತ್ತಾಗುವುದು. ಹಾಗೂ, ಯಾಸ್ಕಮುನಿಯು ತನಗಿಂತಲೂ ಮುಂಚಿನವರಾದ ಔಪಮನ್ಯವ, ಔದುಂಬರಾಯಣ ಮುಂತಾದ ನಿರುಕ್ತಕಾರರ ಪರಸ್ಪರ ಮತಭೇದಗಳನ್ನು ವ್ಯಕ್ತಪಡಿಸಿರುವನಲ್ಲದೆ ಅವರಲ್ಲಿ ಕೆಲವರ ಅಭಿಪ್ರಾಯಗಳ ಬಗ್ಗೆ ತನ್ನ ಅರುಚಿಯನ್ನೂ ತೋರಿಸಿದ್ದಾನೆ. ಅವುಗಳಲ್ಲಿ ಈಗ ಕೌತ್ಸವ್ಯಕೃತನಿರುಕ್ತವೂ, ಶಾಕಪೂಣಿವಿರಚಿತನಿರುಕ್ತವೂ ಎಂಬೆರಡು ಗ್ರಂಥಗಳು ನೂತನವಾಗಿ ಲಾಹೋರಿನಲ್ಲಿಯೂ, ಪೂನಾದಲ್ಲಿಯೂ ಮುದ್ರಿತಗಳಾಗಿವೆ. ಹೀಗೆ ಯಾಸ್ಕ, ಕೌತ್ಸವ್ಯ, ಶಾಕಪೂಣಿಯೆಂಬಿವು ಮೂರು ನಿರುಕ್ತಗಳನ್ನು ಬಿಟ್ಟು ಬೇರೆ ಮತ್ತಾವ ಪ್ರಾಚೀನನಿರುಕ್ತಗ್ರಂಥಗಳೂ ಈಗ ಉಪಲಬ್ಧಗಳಿಲ್ಲ. ವೇದಾರ್ಥಬೋಧಕಗಳಾದ ಆ ಔಪಮನ್ಯವಾದಿನಿರುಕ್ತಗ್ರಂಥಗಳು ಈ ಸಮಯದಲ್ಲಿ ಉಪಲಬ್ಧವಿಲ್ಲದಿರುವುದು ನಮ್ಮ ದುರ್ದೈವವಲ್ಲವೇ? ಉಳಿದ ಆ ಹಳೆಯ ನಿರುಕ್ತಗಳು ಈಗ ಉಪಲಬ್ಧಗಳಾಗಿಲ್ಲವಾದರೂ ನಿರುಕ್ತಶಾಸ್ತ್ರದ ಆವಶ್ಯಕತೆಯು ಬಹುಕಾಲದಿಯಿಂದಲೂ ಇದ್ದಿತೆನ್ನುವುದಕ್ಕೇನೂ ಅಭ್ಯಂತರವಿಲ್ಲ.

ಈಗ ಸರ್ವತ್ರ ಪ್ರಸಿದ್ಧವಾಗಿರುವ ಯಾಸ್ಕೀಯ ನಿರುಕ್ತವು ನೈಘಂಟುಕ, ನೈಗಮ, ದೈವತವೆಂಬ ಮೂರು ಕಾಂಡಗಳುಳ್ಳದ್ದಾಗಿದೆ. ಯಾಸ್ಕನು ತನ್ನಿಂದ ಬರೆಯಲ್ಪಡುವ ವ್ಯಾಖ್ಯೆಯ ಆರಂಭದಲ್ಲಿ ಉತ್ತಮವಾದ ಭೂಮಿಕೆಯನ್ನು ಬರೆದಿದ್ದಾನೆ. ಇದರಲ್ಲಿ ಗ್ರಂಥದ ಪ್ರಯೋಜನವನ್ನು ಹೇಳುವುದರೊಡನೆ ನಿಘಂಟುವಿನ ರಚನೆಯು ಏಕೆ ಉಂಟಾದುದು? ಮತ್ತು ಹೇಗೆ ಮೈದೋರಿತು? ಎಂಬುದರ ಪರಿಯನ್ನೂ ವಿವರಿಸಿದ್ದಾನೆ. ವೇದಾರ್ಥದ ಪರಿಜ್ಞಾನದಲ್ಲಿ ನಿರುಕ್ತದ ಆವಶ್ಯಕತೆಯುಂಟೆಂಬುದನ್ನು ನಿರೂಪಿಸುವ ಸಂದರ್ಭದಲ್ಲಿ ವೇದವಿರೋಧಿಗಳ ಶಂಕೆಗಳನ್ನು ಸಮಂಜಸವಾಗಿ ಖಂಡಿಸಿದ್ದಾನೆ. ಹಾಗೂ ಅನೇಕ ಪ್ರಾಸಂಗಿಕವಾಕ್ಯಗಳನ್ನೂ ಬರೆದಿದ್ದಾನೆ. ಪದವಿಭಾಗಾದಿಗಳನ್ನೂ ನಿರ್ವಚನರೀತಿಯನ್ನೂ ಚೆನ್ನಾಗಿ ನಿರೂಪಿಸಿರುವನಲ್ಲದೆ, ಅರ್ಥದ ಮರ್ಮವನರಿಯದೆ ಕೇವಲ ವೇದಪಾಠದಿಂದ ಪ್ರಯೋಜನವಿಲ್ಲವೆಂಬುದೇ ಮುಂತಾದ ವಿಷಯಗಳನ್ನೊಳಗೊಂಡ ಭೂಮಿಕೆಯನ್ನು ಬರೆದ ತರುವಾಯ 'ಗೌಃ' ಎಂದು ಮೊದಲಾಗಿ 'ದೇವಪತ್ನ್ಯಃ' ಎಂಬುದರವರೆಗಿರುವ ಎಲ್ಲ ನಿಘಂಟುವಿಗೆ ಉತ್ತಮವಾದ ವ್ಯಾಖ್ಯೆಯನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿ ವ್ಯಾಕರಣವೂ ಭಾಷಾವಿಜ್ಞಾನವೂ ಎಂಬೆರಡೇ ವಿಷಯಗಳು ಪ್ರಾಧಾನ್ಯವಾದವುಗಳಾದರೂ ವಿಜ್ಞಾನ, ಸಾಹಿತ್ಯ ಮೊದಲಾದ ಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳೂ ಅಲ್ಲಲ್ಲಿ ನಿರ್ದಿಷ್ಟಗಳಾಗಿವೆ.

ಈ ಯಾಸ್ಕೀಯ ನಿರುಕ್ತಕ್ಕೆ ಸ್ಕಂದಸ್ವಾಮಿಯೂ ದುರ್ಗಾಚಾರ್ಯನೂ ಟೀಕೆಯನ್ನು ಬರೆದಿದ್ದಾರೆ. ನಮಗೆ ದುರ್ಗಾಚಾರ್ಯನ ಟೀಕೆಯ ಅಂತರಂಗದ ಪರಿಚಯವಿರುವುದು. ಈ ಟೀಕೆಯಲ್ಲಿ ಪ್ರತಿಪಾದಿಸಲ್ಪಡತಕ್ಕ ಕಾರ್ಯಕಾರಣರೂಪವಾದ ಭಾವದ್ವೈವಿಧ್ಯದ ವಿವೇಚನೆಯನ್ನು ಮಾಡುವಾಗ (೧-೨) ಉದ್ಧೃತವಾದ **"ಸನ್ಮಾತ್ರಂ ಭಾವಲಿಂಗಂ ಸ್ಯಾತ್"** ಎಂಬ ಆಗಮಿಕ ವಚನವು ವಿಮರ್ಶನೀಯವಾಗಿರುವುದಲ್ಲವೇ? ದುರ್ಗಾಚಾರ್ಯನು ಕೆಲವೆಡೆಗಳಲ್ಲಿ ಮೂಲ (ನಿರುಕ್ತ) ವಾಕ್ಯಗಳನ್ನೇ ಲಕ್ಷೀಕರಿಸದಿರುವುದು ಆಶ್ಚರ್ಯಜನಕವಾಗಿದೆ. ಅದು ಹೇಗೆಂದರೆ, ವೇದಗಳಲ್ಲಿ ಪಶುಪಕ್ಷ್ಯಾದಿ ಪ್ರಾಣಿಗಳ ಹಿಂಸೆಯು ಪ್ರಸಿದ್ಧವಾಗಿರುವ ಪಕ್ಷದಲ್ಲಿ ಅದನ್ನು ಹೇಗೆತಾನೇ ಅಂಗೀಕರಿಸತಕ್ಕದ್ದು? ಎಂಬುದಾಗಿ ಯಾಸ್ಕಮುನಿಯು (ನಿರುಕ್ತಕಾರನು) ವೇದಗಳ ಬಗ್ಗೆ ಪೂರ್ವಪಕ್ಷವನ್ನು ಮಾಡಿಕೊಂಡು ಆ ಆಕ್ಷೇಪವನ್ನು ತಾನೇ ಹೀಗೆ ನಿರಸನಗೊಳಿಸಿದ್ದಾನೆ—**"ಆಮ್ನಾಯವಚನಾತ್ ಅಹಿಂಸಾಪ್ರತೀಯತೇ ।"** (೧-೧೬) ವೇದವಚನದಿಂದಾದರೋ ಅಹಿಂಸೆಯೇ ಸ್ಪಷ್ಟವಾಗಿ ಗೋಚರವಾಗುವುದು. ಇನ್ನು, ಯಾರು ವೇದದ ಹೆಸರಿಂದ ಪಶುಬಲಿಯು ಮುಂತಾದ ಹಿಂಸಾತ್ಮಕ ಕರ್ಮಗಳಲ್ಲಿ ನಿರತರಾಗಿರುವರೋ, ಅವರೇ ಆ ಕರ್ಮಾಪರಾಧಿಗಳಲ್ಲದೆ ವೇದಕ್ಕೆ ಆ ಸಂಬಂಧವಾದ ಯಾವ ದೋಷವೂ ತಟ್ಟದು. ಸಾರಾಂಶ, ವೇದವಾಙ್ಮಯದಲ್ಲಿ ಸಾರ್ವತ್ರಿಕವಾಗಿ ಅಹಿಂಸೆಯೇ ಪುರಸ್ಕೃತವಾಗಿರುವುದು. ವಸ್ತುಸ್ಥಿತಿಯು ಹೀಗಿರುತ್ತಿರಲು ಅದನ್ನು ವಿಪರ್ಯಾಸಗೊಳಿಸುವುದಾದರೋ:—**"ನೈಷ ಸ್ಥಾಣೋರಪರಾಧೋ ಯದೇನಮನ್ಧೋ ನ ಪಶ್ಯತಿ ।"** ಕುರುಡನಿಗೆ ಕೊರಡು ಕಾಣದಿದ್ದರೆ ಅದಾರ ತಪ್ಪು? ಕೊರಡು ಅಪರಾಧಿಯೆನಿಸಲಾರದಷ್ಟೆ! ಇದು ವಸ್ತುವಿನ ದೋಷವಲ್ಲ; ನೋಡುವಾತನಲ್ಲಿರುವ ನ್ಯೂನತೆಯು. ಎಂಬುದಾಗಿ ನಿರುಕ್ತಕಾರನ ಉತ್ತರರೂಪವಾಕ್ಯಗಳಿರುತ್ತಿರಲು, ದುರ್ಗಾಚಾರ್ಯನು ಆ ವಾಕ್ಯಗಳರ್ಥವನ್ನು ನೈಸರ್ಗಿಕವಾದ ಸ್ವೀಯಸ್ವರಾಲಾಪದಲ್ಲಿ ಪರ್ಯವಸಾನಗೊಳಿಸಿರುವನು. ಹೇಗೆಂದರೆ:—**"ಪಶುಮೃಗಪಕ್ಷಿಸರೀಸೃಪಾಃ ಸಮ್ಯಗುಪಯುಕ್ತಾಃ ಸನ್ತೋ ಯಜ್ಞೇ ಪರಮುತ್ಕರ್ಷತಾಂ ಪ್ರಾಪ್ನುವನ್ತಿ । ಸೋಽಯಮಭ್ಯುದಯ ಏವ ಸಂಪದ್ಯತೇ, ನ ಹಿಂಸಾ ।"** ಅಂದರೆ ಯಜ್ಞದಲ್ಲಿ ಕೊಲ್ಲಲ್ಪಡತಕ್ಕ ಅಶ್ವ, ವರಾಹ, ಶ್ಯೇನಾದಿ ಪ್ರಾಣಿಗಳು ಸ್ವರ್ಗವೇ ಮುಂತಾದ ಪರಮೋತ್ಕರ್ಷತೆಯನ್ನು ಪಡೆಯುವುವು; ಆದ್ದರಿಂದ ಅವುಗಳನ್ನು ಕೊಲ್ಲುವುದು ಹಿಂಸೆಯಲ್ಲವು. ಮತ್ತೇನೆಂದರೆ ಅದು ಅವುಗಳ ಅಭ್ಯುದಯಕ್ಕಾಗಿರುವುದು; ಈ ಕಾರಣದಿಂದ ವೈದಿಕ ಹಿಂಸೆಯು ಹಿಂಸೆಯೆನಿಸದು. ಎಂದು ಹೇಳುವ ದುರ್ಗಾಚಾರ್ಯನ ಈ 'ಅಭ್ಯುದಯ' ನುಡಿಗೆ ತಕ್ಕ ಬೆಲೆಯು ಪ್ರಸಂಗಾನುಗುಣವಾಗಿ ಅವನ ಅನುಯಾಯಿಗಳಲ್ಲಿಯೇ ಸಿಕ್ಕಬಹುದಲ್ಲವೇ? ಇರಲಿ.

ವೇದಗಳು ಬಹಳ ಪುರಾತನಗಳಾದುದರಿಂದ ವೈದಿಕಭಾಷೆಗೂ, ತದನಂತರದ ಸಂಸ್ಕೃತದ ಭಾಷೆಗೂ, ಬದಲಾವಣೆಯುಂಟಾಗಿ ಆ ವೇದಗಳ ಅರ್ಥವನ್ನು ಅರಿತುಕೊಳ್ಳುವುದು ಕಠಿಣವಾದ ಸ್ಥಿತಿಯಲ್ಲಿ ವ್ಯುತ್ಪತ್ತಿ ಶಾಸ್ತ್ರವು ಬಹಳ ಅನುಕೂಲವಾದ ಸಾಧನವಾಗಿರುವುದು; ಅದು ಹೇಗೆಂದರೆ ವ್ಯುತ್ಪತ್ತಿಯ ನೆರವಿನಿಂದ ಯಾವ ಯಾವ ಶಬ್ದವು ಯಾವ ಯಾವ ಧಾತುವಿನಿಂದ ಸಿದ್ಧವಾಗಿರುವುದೆಂಬುದು ಗೋಚರವಾಗುವುದರಿಂದ ತೀರ ಬಿಕ್ಕಟ್ಟಿನ ಶಬ್ದದ ಅರ್ಥವಾದರೂ ಈ ಶಾಸ್ತ್ರದ ಆಸರದಿಂದ ಅರಿಯಲ್ಪಡುವುದು. ಇದುವೇ ವ್ಯುತ್ಪತ್ತಿಶಾಸ್ತ್ರದ ಮೊದಲನೆಯ ಮಹತ್ತರವಾದ ಉಪಯೋಗವಿದೆ.

ವೇದಗಳ ಅರ್ಥವನ್ನು ತಿಳಿಯದಿರುವಾತನಿಗೆ ವೇದಗಳಲ್ಲಿರುವ ಸ್ವರಗಳ ಜ್ಞಾನವಾಗಲೂ ಶಕ್ಯವಿಲ್ಲ. ಹಾಗೂ ವ್ಯಾಕರಣರೀತಿಯಿಂದ ಸಿದ್ಧಗೊಳಿಸಿದ ಶಬ್ದಗಳ ರೂಪಗಳಾದರೂ ಗೋಚರವಾಗುವುದಿಲ್ಲ. ಏಕೆಂದರೆ, ವೇದಮಂತ್ರಗಳಲ್ಲಿರುವ ಉದಾತ್ತ, ಅನುದಾತ್ತ, ಸ್ವರಿತವೆಂಬೀ ಮೂರು ಬಗೆಯ ಸ್ವರಗಳು ಅರ್ಥವನ್ನವಲಂಬಿಸಿಯೇ ಇರುತ್ತವೆ. ಯಾವ ಭಾಷೆಯಲ್ಲಾದರೂ ಮಾತನಾಡುವಾಗ ವಕ್ತೃವಿನ ಇಚ್ಛಾನುಸಾರವಾಗಿ ಸಂದರ್ಭಕ್ಕೆ ಸರಿಯಾಗಿರುವ ಬೇರೆ ಬೇರೆ ಅರ್ಥಗಳನ್ನು ವ್ಯಕ್ತಪಡಿಸುವಿಕೆಯಾದರೋ, ವಾಕ್ಯಗಳಲ್ಲಿರುವ ಶಬ್ದಗಳ ಅಥವಾ ಅಕ್ಷರಗಳ ಮೇಲೆ ಮಾಡಲ್ಪಡುವ ಸ್ವರಾಘಾತಗಳನ್ನಾಶ್ರಯಿಸಿಯೇ ಇರುವುದೆಂಬಭಿಪ್ರಾಯವನ್ನು ಹಿಂದೆಯೇ ಹೇಳಿದ್ದೇವೆ. ವೇದವಾಕ್ಯಗಳ ಪಠನದಲ್ಲಿಯೂ ಸ್ವರಗಳ ಆವಶ್ಯಕತೆಯಿರುವುದರಿಂದ ಅಂತಹ ಸ್ವರಜ್ಞಾನವಾಗುವುದಕ್ಕಾಗಿ ಮೊದಲು ಅರ್ಥಜ್ಞಾನವು ಬೇಕಾಗುವುದು. ಅರ್ಥಜ್ಞಾನವಾದರೋ ವ್ಯುತ್ಪತ್ತಿಶಾಸ್ತ್ರಜ್ಞಾನವಿಲ್ಲದೆ ಸಂಭವಿಸದು. ಅದುಕಾರಣ ಪರ್ಯಾಯದಿಂದ ಸ್ವರಜ್ಞಾನಕ್ಕೋಸ್ಕರ ವ್ಯುತ್ಪತ್ತಿಯಜ್ಞಾನವು ಅವಶ್ಯವಾದುದೆಂಬಭಿಪ್ರಾಯವೇ ಸಿದ್ಧಿಸುವುದು. ವ್ಯಾಕರಣದ ರೂಪಗಳ ಜ್ಞಾನವಾದರೂ ವ್ಯುತ್ಪತ್ತಿಯನ್ನೇ ಅವಲಂಬಿಸಿರುವುದು. ಅಂದರೆ ವ್ಯುತ್ಪತ್ತಿಶಾಸ್ತ್ರವು ತನ್ನ ಮುಖ್ಯಕೆಲಸವನ್ನು ಮಾಡುವುದರೊಡನೆ ವ್ಯಾಕರಣದ ನ್ಯೂನತೆಯನ್ನು ಹೋಗಲಾಡಿಸುವ ಕಾರ್ಯವನ್ನೂ ಕೈಕೊಳ್ಳುವುದು. ಹೇಗೆ ವೇದಾರ್ಥಪರಿಜ್ಞಾನಕ್ಕಾಗಿ ವೇದಗಳೊಳಗಣ ವ್ಯಾಕರಣದ ರೂಪಗಳನ್ನೂ ಸ್ವರಗಳನ್ನೂ ತಿಳಿಯಲು ವ್ಯುತ್ಪತ್ತಿಯ ಆವಶ್ಯಕತೆಯುಂಟೋ ಹಾಗೆ ಋಚೆಗಳ ಪದಗಳನ್ನು ಬಿಡಿಸುವುದಕ್ಕೂ ವ್ಯುತ್ಪತ್ತಿಯ ನೆರವು ಬೇಕು. ಅಕ್ಷರಗಳ ಸಂಧಿಯಾಗಿ ಸಂಹಿತಾಪಾಠದ ಮೇಲಿಂದ ಪದಪಾಠವನ್ನು ತಯಾರಿಸಬೇಕಾದರೆ ಮೊದಲು ಮಂತ್ರದ (ಋಕ್ಕಿನ) ಅರ್ಥವನ್ನು ಅರಿತುಕೊಂಡು ಅರ್ಥಕ್ಕೆ ಸರಿಯಾಗಿ ಪದಚ್ಛೇದವನ್ನು ಮಾಡತಕ್ಕದ್ದು. ಉದಾಹರಣೆಗಾಗಿ ನಾವು ಒಂದು ಮಂತ್ರದ ಭಾಗವನ್ನು ತೆಗೆದುಕೊಳ್ಳುವಾ! 'ಅವಸಾಯ ಪದ್ವತೇ ರುದ್ರಮೃಳ' ಎಂಬಲ್ಲಿ 'ಅವಸಾಯ' ಎಂಬುದರ ಪದಚ್ಛೇದವು ಮಾಡಲ್ಪಡುವುದಿಲ್ಲ. ಏಕೆಂದರೆ 'ಅವಸಾಯ ಶಬ್ದವು 'ಅವ್'—ಹೋಗು; ಎಂಬ ಧಾತುವಿನಿಂದಾಗಿದೆ. ಆದರೆ ಇದರ ರೂಪವು ಮತ್ತೊಂದು ಕಡೆ ಬಂದರೆ ಪದಚ್ಛೇದವು ಮಾಡಲ್ಪಡುವುದು. ಹೇಗೆಂದರೆ 'ಅವಸಾಯಾಶ್ವಾನ್' ಕುದುರೆಗಳನ್ನು ಬಿಟ್ಟು (ಬಿಡುಗಡೆಮಾಡಿ) ಎಂಬಲ್ಲಿ 'ಅವ—ಸಾಯ' ಎಂದು ಪದವಿಭಾಗವು ಮಾಡಲ್ಪಡುವುದು. 'ಅವಸಾಯ' ಎಂಬ ರೂಪವು 'ಅವ' ಉಪಸರ್ಗಪೂರ್ವಕವಾದ 'ಸಾ' ಎಂಬ ಧಾತುವಿನಿಂದ ಸಿದ್ಧವಾಗಿದೆ. ಆದ್ದರಿಂದ ಉಪಸರ್ಗವನ್ನೂ ಧಾತುವನ್ನೂ ಬಿಂಗಡಿಸಿ ತೋರಿಸುವುದಕ್ಕಾಗಿಯೇ 'ಅವಸಾಯ' ಶಬ್ದದ ಪದಚ್ಛೇದವನ್ನು ಮಾಡಬೇಕಾಗುವುದು. ಪದವಿಭಾಗವೆಂಬುದು ಅತ್ಯಂತವಾಗಿ ಅರ್ಥವನ್ನೂ, ಅರ್ಥವು ವ್ಯುತ್ಪತ್ತಿಯನ್ನೂ, ಅವಲಂಬಿಸಿರುವ ಮೂಲಕವಾಗಿಯೇ ಪರ್ಯಾಯದಿಂದ ಪದವಿಭಾಗವಾದರೂ ವ್ಯುತ್ಪತ್ತಿಯನ್ನಾಶ್ರಯಿಸಿಯೇ ಇರುವುದು. ಆ ಆ ಋಚೆಗಳಿಂದ ಬೋಧಿಸಲ್ಪಡುವ ದೇವತೆಗಳ ಸ್ವರೂಪವನ್ನೂ, ಕರ್ಮಕಲಾಪವನ್ನೂ, ತಿಳಿಯಬೇಕಾದರೆ, ಋಚೆಗಳ ಅರ್ಥಜ್ಞಾನದ ಆವಶ್ಯಕತೆಯುಂಟು. ಋಚೆಗಳ ಅರ್ಥವಾದರೋ ವ್ಯುತ್ಪತ್ತಿಯ ಜ್ಞಾನವಿಲ್ಲದವನಿಗೆ ಗೋಚರವಾಗದೆಂಬುದನ್ನು ಇಲ್ಲಿ ಮಗುಳೊಮ್ಮೆ ಹೇಳುತ್ತೇವೆ. ಆದ್ದರಿಂದ ವೈದಿಕವಿಧಿಯು ಯಥಾಸಾಂಗವಾಗಿ ನೆರವೇರಬೇಕಾದರೆ ವ್ಯುತ್ಪತ್ತಿ (ನಿರುಕ್ತ) ಶಾಸ್ತ್ರದ ಬೆಂಬಲವುಬೇಕು.

ಮಂತ್ರಾಧಿಷ್ಠಿತ ದೇವತೆಯನ್ನು ತಿಳಿಯುವುದಕ್ಕಾಗಿ ಮಂತ್ರದ ಅರ್ಥವನ್ನು ಅರಿತುಕೊಳ್ಳಲೇಬೇಕೆಂಬ ಕಟ್ಟಳೆಯೇಕೆ? ಯಾವ ಮಂತ್ರದಲ್ಲಿ ಯಾವ ದೇವತೆಯ ಹೆಸರು ಕಂಡುಬರುವುದೋ ಆ ಮಂತ್ರದ ದೇವತೆಯೆಂದು ಅರ್ಥಜ್ಞಾನದ ಹಂಗಿಲ್ಲದೆ ನಿರ್ಮಾಣಿಸಬಹುದಷ್ಟೆ! ಎಂದು ಶಂಕಿಸುವುದು ಭ್ರಮಮೂಲಕವಾದುದೇ ಸರಿ. ಒಂದೇ ಮಂತ್ರದಲ್ಲಿ ಹಲವುಬಾರಿ ಎರಡು ಅಥವಾ ಅದಕ್ಕೂ ಹೆಚ್ಚು ದೇವತೆಗಳ ಹೆಸರುಗಳು ಬಂದಿರುತ್ತವೆ. ಯಾವ ದೇವತೆಯ ಮಂತ್ರವಿದೆಯೋ ಆ ದೇವತೆಯ ಹೆಸರು ಆ ಮಂತ್ರದಲ್ಲಿಲ್ಲದೆ ಅನ್ಯದೇವತೆಯ ಹೆಸರಿರುವುದು ಕಾಣಬರುವ ಸ್ಥಳದಲ್ಲಿ ಅರ್ಥಜ್ಞಾನವಿಲ್ಲದೆ ದೇವತೆಯನ್ನು ನಿಶ್ಚಯಿಸಲಾಗದು. ಹೇಗೆಂದರೆ:—'ಇನ್ದ್ರಂ ನಕ್ಷ್ಯಾ ಶವಸಾ ದೇವತಾ ವಾಯುಂ ಪೃಣನ್ತಿ' ದೇವತೆಗಳು ನಿನ್ನನ್ನು ಇಂದ್ರನಂತೆಯೂ, ವಾಯುವಿನಂತೆಯೂ, ಸಾಮರ್ಥ್ಯವುಳ್ಳವನನ್ನಾಗಿಮಾಡುತ್ತಾರೆ. ಎಂಬ ಈ ಅಗ್ನಿದೇವತಾಕಮಂತ್ರದಲ್ಲಿ ಇಂದ್ರ ವಾಯುದೇವತೆಗಳ ಹೆಸರುಗಳು ಬಂದಿವೆ. ಮತ್ತು 'ಅಗ್ನಿರಿವ ಮನ್ಯೋ ತ್ವಿಷಿತಃ ಸಹಸ್ವ' ಅಗ್ನಿಯಂತೆ ಪ್ರಕಾಶಿಸುತ್ತಲಿರುವ ಎಲೈ ಮನ್ಯುವೇ? ನೀನು ಸಾಮರ್ಥ್ಯವುಳ್ಳವನಾಗು. ಎಂಬ ಈ ಋಕ್ಕು ಮನುವಿನದಾಗಿದೆ. ಆದರೆ ಇದರಲ್ಲಿ ಅಗ್ನಿಯ ಹೆಸರಿದೆ. ಇವೇ ಮುಂತಾದ ಪ್ರಮಾಣಭೂತಗಳಾದ ಉದಾಹರಣೆಗಳಿಂದ ವೇದವನ್ನು ಅರ್ಥಪೂರ್ವಕವಾಗಿ ಪಠಿಸಬೇಕೆಂಬ ತಿರುಳು ನೆಲೆಗೊಳ್ಳುವುದು.

(ಸಶೇಷ)

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಮಾಡಿದ ಭಾಷಣ.

ಬಡ್ಜೆಟ್ ಅಧಿವೇಶನ—೧೪ ನೆಯ ಜೂನ್ ೧೯೩೪.

ಪ್ರಜಾಪ್ರತಿನಿಧಿ ಸಭೆಯ ಸದಸ್ಯರೇ,

ಈ ಸಭೆಯು ಪುನರ್ವ್ಯವಸ್ಥಿತವಾಗಿ ಏರ್ಪಟ್ಟು, ಇದರ ಮೊದಲನೆಯ ಅಧಿವೇಶನವು ಈಗ ನಡೆಯುವುದಾಗಿದೆ. ಇದರಲ್ಲಿ ಕಾರ್ಯಭಾರವನ್ನು ವಹಿಸಿ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಈಗ ಪ್ರವೃತ್ತರಾಗುತ್ತಿರುವ ತಮ್ಮಗಳಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸಿ, 1934-35 ನೆಯ ಸಾಲಿನ ಆಯವ್ಯಯಗಳ ವಿಚಾರವನ್ನು ಪ್ರಸ್ತಾಪಿಸುವ ಸುಯೋಗವು ನನಗೆ ದೊರೆತಿದೆ.

ಪೀಠಿಕೆ.

ತಮಗೆ ಮೊದಲು ಸದಸ್ಯರಾಗಿದ್ದವರನ್ನು ಆದರದಿಂದ ಬರಮಾಡಿಕೊಂಡಾಗ, ನಮ್ಮ ಆರ್ಥಿಕಸ್ಥಿತಿಯು ಪ್ರಚಂಡ ಮಾರುತನ ಸುಳಿವನ್ನು ಸೂಚಿಸುವ ವಾಯುಮಾಪಕ ಯಂತ್ರದಂತೆ ಮರ್ದಿತಗಳನ್ನು ಸೂಚಿಸುತ್ತಿದ್ದಿತು. ಆರ್ಥಿಕದುಸ್ಥಿತಿಯೆಂಬ ಝಂಝಾವಾತದ ಪ್ರಬಲವಾದ ಹೊಡೆತಕ್ಕೆ ಸಿಕ್ಕಿ, ಅದರಿಂದ ಪಾರಾಗುವುದಕ್ಕೆ ಅನುಕೂಲಿಸುವಂತೆ, ನಮ್ಮ ಸಂಸ್ಥಾನವೆಂಬ ಹಡಗಿನ ಪಟಗಳನ್ನು ಆದಷ್ಟು ವೇಗವಾಗಿ ಇಳಿಸುವುದರಲ್ಲಿ ಆಗ ಪ್ರವೃತ್ತರಾಗಿದ್ದೆವು. ಈ ಅಧಿವೇಶನಕ್ಕೆ ಹಿಂದೆ ವ್ಯವಸ್ಥಿತವಾಗಿದ್ದ ಸಭೆಯ ಅವಧಿಯ ಪೈಕಿ ಉಳಿದಿದ್ದ ಕಾಲದಲ್ಲಿ ಅಭಿವೃದ್ಧಿಯ ಏರ್ಪಾಡುಗಳೆಂಬ ಬಹು ಅಮೂಲ್ಯವಾದ ಸರಕುಗಳನ್ನು ಆ ಹಡಗಿನಲ್ಲಿ ಇನ್ನು ಮುಂದೆ ಸಾಗಿಸುವುದಕ್ಕೆ ಸಾಧ್ಯವಿಲ್ಲದೆ ಅವುಗಳನ್ನು ತೆಗೆದೊಗೆದು ಆ ಪ್ರಚಂಡ ಮಾರುತನಿಗೆ ಅಭಿಮುಖವಾಗಿ ಹಡಗನ್ನು ತಿರುಗಿಸಿ ಪಾರಾಗುವ ತೀವ್ರವಾದ ಪ್ರಯತ್ನದಲ್ಲಿ ನಿರತರಾಗಿರಬೇಕಾಯಿತು. ಆದರೆ ತಮ್ಮಗಳ ಸದಸ್ಯತನದ ಅವಧಿಯು ಸುಖಕರವಾದುದಾಗಿ ಪರಿಣಮಿಸುವುದೆಂದು ನಂಬಿರುತ್ತೇನೆ. ಹಿಂದಣ ವಿಷಮಾವಸ್ಥೆಯಲ್ಲಿ ತಗ್ಗಿಸಿದ್ದ ಪಟಗಳನ್ನು ವಿಸ್ತರಿಸದೆ, ಹಾಗೆಯೇ ಇನ್ನೂ ಕೆಲವು ಕಾಲ ಹಡಗನ್ನು ಮುಂದುವರಿಸಬೇಕಾಗಿದೆ, ಎಂದರೆ, ಇನ್ನು ಮುಂದೆಯೂ ಸಂಸ್ಥಾನದಲ್ಲಿ ವೆಚ್ಚವನ್ನು ಅನೇಕ ಬಾಬುಗಳಲ್ಲಿ ಕಡಿಮೆ ಮಾಡಿರಬೇಕಾಗಿದೆ. ಇದನ್ನು ಪೂರ್ವಸ್ಥಿತಿಗೆ ತರಬೇಕೆಂಬ ಆಸೆ ಇದ್ದರೂ ಅವಕಾಶವಿಲ್ಲವಾಗಿದೆ. ಆದರೆ ಆ ಹಡಗು ಏರುಪೇರುಗಳಿಲ್ಲದೆ ಸಮುಮಟ್ಟದಲ್ಲಿ ಸಾಗುವ ಸ್ಥಿತಿಗಾದರೂ ಅದನ್ನು ತಂದಿದ್ದೇವೆ. ಎಂದರೆ, ಬಡ್ಜೆಟ್ಟಿನಲ್ಲಿ ಆಯವ್ಯಯಗಳನ್ನು ಸಮತೂಕಕ್ಕೆ ತಂದಿದ್ದೇವೆ. ನಭೋಮಂಡಲದಲ್ಲಿ ಮುಸುಕಿದ್ದ ಮೇಘಮಾಲೆಯನ್ನು ಭೇದಿಸಿಕೊಂಡು ಸೂರ್ಯಕಿರಣಗಳು ಲೋಕವನ್ನು ಬೆಳಗುವಂತೆ, ಆರ್ಥಿಕಸ್ಥಿತಿಯಲ್ಲಿ ಇದುವರೆಗೆ ಒದಗಿದ್ದ ವಿಷಮಾವಸ್ಥೆಯನ್ನು ನಿವಾರಿಸಿಕೊಂಡು ಸುಸ್ಥಿತಿಯ ದಿನಗಳು ತಲೆದೋರುತ್ತಿರುವುದನ್ನು ಕಾಣಬಹುದೆಂದು ನಾನು ಭಾವಿಸುತ್ತೇನೆ.

ಕೈಗಾರಿಕೆಯ ಪ್ರಮುಖನಾಯಕನೊಬ್ಬನು ಪ್ರಪಂಚದ ಅತ್ಯಂತ ಭಾರಿ ಕಂಪೆನಿಗಳ ಪೈಕಿ ಒಂದು ಕಂಪೆನಿಯಲ್ಲಿ ನಡೆದ ಕಾರ್ಯಸಾಧನೆಗಳನ್ನು ಕ್ರೋಡೀಕರಿಸಿ ಹೇಳಿದ ಸಂದರ್ಭದಲ್ಲಿ, ಆ ವರುಷದ ಆರ್ಥಿಕಸ್ಥಿತಿಯು ತಕ್ಕಮಟ್ಟಿಗೆ, ಆದರೆ ಸರ್ವಸಾಮಾನ್ಯವಾದ ರೀತಿಯಲ್ಲಿ ಚೇತರಿಸಿಕೊಳ್ಳುವಹಾಗೆ ಉತ್ತಮಗೊಂಡಿದೆಯೆಂದು ತಿಳಿಸಿರುತ್ತಾನೆ. 1934 ನೆಯ ಇಸವಿಯಲ್ಲಿನ ಸ್ಥಿತಿಗಳನ್ನು ಕುರಿತು ಆತನು ಹೇಳತಕ್ಕ ಮಾತುಗಳು ಮೈಸೂರು ದೇಶದಲ್ಲಿ ನಮ್ಮಗಳಿಗೂ ಸಹ ಅನ್ವಯಿಸುವಂತಿವೆ. ಆತನು ಹೇಳಿದುದೇನೆಂದರೆ—ಮುಗ್ಗಟ್ಟಿನ ಸ್ಥಿತಿಯಿಂದಲೂ ಮತ್ತು ವಾಣಿಜ್ಯವಿನಿಮಯದ ಬೆಲೆಯು ಇಳಿದುಹೋಗುವುದರಿಂದಲೂ ಪ್ರಬಲವಾದ ಪೈಪೋಟಿಯು ಹುಟ್ಟುತ್ತದೆ. ಉದಾಹರಣಾರ್ಥವಾಗಿ ಜಪಾನ್ ದೇಶವನ್ನು ತೆಗೆದುಕೊಳ್ಳೋಣ. ಈಚಿನ ವರುಷಗಳಲ್ಲಿ ಆ ದೇಶವು ಕೈಗಾರಿಕೆಯ ಅನೇಕ ವಸ್ತುಗಳನ್ನು ತಯಾರಿಸುವುದರಲ್ಲಿ ವಿಶೇಷವಾಗಿ ಸ್ವಾವಲಂಬನೆಯುಳ್ಳದಾಗಿರುವುದು ಮಾತ್ರವಲ್ಲದೆ ರಫ್ತುವ್ಯಾಪಾರವನ್ನೂ ಸಹ ತೀವ್ರವಾಗಿ ಬೆಳೆಸಿಕೊಂಡು ಹೋಗುತ್ತಿರುವ ದೇಶವಾಗಿದೆ. ಈ ವಿಧವಾದ ಪೈಪೋಟಿಯಲ್ಲಿ ಅನುಸರಿಸಬೇಕಾದ ಪರಿಹಾರೋಪಾಯಗಳು, ಮುಖ್ಯವಾಗಿ ನಾಲ್ಕು ವಿಧವಾಗಿವೆ. ಅವು ಯಾವುವೆಂದರೆ, ಕಾರ್ಯಕಲಾಪಗಳನ್ನು ದಕ್ಷತೆಯಿಂದ ನಿರ್ವಹಿಸುವುದು, ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಗಳನ್ನು ನಡೆಯಿಸುವುದು, ನಾಣ್ಯಗಳ ಚಲಾವಣೆಯನ್ನು ಸ್ಥಿಮಿತಕ್ಕೆ ತರುವುದು ಮತ್ತು ಉದ್ಯಮಗಳಲ್ಲಿ ಸಹಕಾರಭಾವವನ್ನು ವಹಿಸುವುದು.

ಶ್ರೇಷ್ಠವಾದ ಈ ನಾಲ್ಕು ಉಪಾಯಾಂತರಗಳ ಪೈಕಿ, ನಾಣ್ಯದ ಬೆಲೆಯನ್ನು ಸ್ಥಿಮಿತಗೊಳಿಸುವ ವಿಚಾರವು ಇಂಡಿಯಾ ಸರಕಾರದವರಿಗೆ ಸೇರಿದುದಾಗಿದೆ. ಮತ್ತು ಶೀಘ್ರದಲ್ಲಿಯೇ ಆ ವಿಚಾರವು ರಿಜರ್ವ್ ಬ್ಯಾಂಕಿನವರ ಪರ್ಯಾಲೋಚನೆಗೆ ಒಳಪಡತಕ್ಕದ್ದಾಗಿದೆ. ಆ ಬ್ಯಾಂಕಿನಲ್ಲಿ, ಯಾವ ರಾಜಕೀಯ ಸಂಬಂಧವಾದ ಪ್ರೇರೇಪಣೆಗಳಿಗೂ ಒಳಗಾಗದಿರುವ, ಅನುಭವಸ್ಥರಾದ ನಿಪುಣರ ಮಂಡಲಿಯಿಂದ ಆ ವಿಷಯವು ವ್ಯವಸ್ಥೆಮಾಡಲ್ಪಡುವುದೆಂದು ಭಾವಿಸುತ್ತೇನೆ. ಏತನ್ಮಧ್ಯೆ, ರೂಪಾಯಿಯನ್ನು ಸ್ಟರ್ಲಿಂಗು ನಾಣ್ಯದ ಬೆಲೆಗೆ ಹೊಂದಿಕೆಗೊಳಿಸಿ ಅದರ ಬೆಲೆಯಿರುವ ವ್ಯತ್ಯಾಸಗಳನ್ನು ಸಾಧ್ಯವಾದಮಟ್ಟಿಗೆ ಮಿತಪಡಿಸುವ ಕಾರ್ಯಕ್ರಮವನ್ನು ಇಂಡಿಯಾ ಸರಕಾರದವರು ಅನುಸರಿಸಿದ್ದಾರೆ. ಇದರಿಂದ ಮೈಸೂರು ಸೀಮೆಯಲ್ಲಿರುವ ನಮ್ಮಗಳಿಗೆ ಪ್ರಯೋಜನ ಉಂಟಾಗಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲವೆಂಬುದಾಗಿ ಭಾವಿಸುತ್ತೇನೆ. ಚಿನ್ನವು ಉತ್ಪತ್ತಿಯಾಗತಕ್ಕ ದೇಶಗಳ ಪೈಕಿ ಸ್ಟರ್ಲಿಂಗ್ ನಾಣ್ಯವನ್ನು ನಿಗದಿಯಾದ ಪ್ರಮಾಣವನ್ನಾಗಿ ಅಂಗೀಕರಿಸಿರುವ ಇತರ ದೇಶಗಳವರಂತೆಯೇ ನಮಗೂ ಕೂಡ ಈ ಅನಿರೀಕ್ಷಿತ ಸಹಾಯ ದೊರೆತಿದೆಯೆಂಬ ವಿಷಯವನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಗಣಿಯ ಗುತ್ತಿಗೆ ಹುಟ್ಟುವಳಿ.

ಕೋಲಾರದ ಚಿನ್ನದ ಗಣಿಯ ಕಂಪೆನಿಗಳವರೊಡನೆ ಹಾಲಿ ಮಾಡಿಕೊಂಡಿರತಕ್ಕ ಒಪ್ಪಂದಗಳ ಅವಧಿಯು 1940 ನೆಯ ಇಸವಿಯಲ್ಲಿ ಮುಗಿದುಹೋಗುತ್ತದೆ. ಈ ಕಂಪೆನಿಗಳವರ ಪ್ರತಿನಿಧಿಗಳ ಕೋರಿಕೆಯ ಮೇರೆ, 1940ನೆಯ ಇಸವಿಯ ತರುವಾಯ ಈ ಒಪ್ಪಂದಗಳನ್ನು ನವೀಕರಿಸುವ ವಿಷಯವನ್ನು ಈಗ ಸ್ವಲ್ಪ ಕಾಲದ ಹಿಂದೆ ತೆಗೆದುಕೊಳ್ಳಲಾಯಿತು; ಮತ್ತು ಆ ಲಾಗಾಯಿತು ಇನ್ನೂ ಮೂವತ್ತು ವರ್ಷಗಳ ಅವಧಿಯವರೆಗೆ ಈ ಏರ್ಪಾಡುಗಳು ಜಾರಿಯಲ್ಲಿರುವಂತೆ ಹೊಸದಾಗಿ ಮಾಡಿಕೊಂಡ ಕರಾರಿನ ಷರತ್ತುಗಳನ್ನು ಒಪ್ಪಿಕೊಳ್ಳಲಾಯಿತು. ಗಣಿಗಳ ಕಂಪೆನಿಗಳವರು ತಮ್ಮ ಕಾರ್ಯಕಲಾಪಗಳನ್ನು ಕ್ರಮಗೊಳಿಸಲನುಕೂಲಿಸುವಂತೆ ಸಾಕಾದಷ್ಟು ಮುಂಚಿತವಾಗಿಯೇ ಒಂದು ನಿರ್ದಿಷ್ಟವಾದ ಭರವಸೆಯನ್ನು ಪಡೆಯಲು ಆತುರರಾಗಿದ್ದರು. ಇದು ಸ್ವಾಭಾವಿಕವಾದುದೇ ಆಗಿದೆ. ಸರ್ಕಾರದವರಿಗಾದರೋ, ಇನ್ನೂ ಉತ್ತಮ ರೀತಿಯಲ್ಲಿ ರಾಜಧನವನ್ನು ಪಡೆಯುವ ಅಪೇಕ್ಷೆಯಿದ್ದಿತು. ತತ್ರಾಪಿ ಚಿನ್ನದ ಬೆಲೆಯು ಈಗ ಹೆಚ್ಚಿರುವುದರಿಂದ, ಇನ್ನೂ ಹೆಚ್ಚು ರಾಜಧನವು ಸರ್ಕಾರಕ್ಕೆ ಸಲ್ಲುವಂತೆ ಕರಾರು ಮಾಡಿಕೊಳ್ಳುವುದು ಆವಶ್ಯಕವೆಂದು ಸರ್ಕಾರದವರು ಭಾವಿಸಿದ್ದರು. ಈ ವಿಷಯದಲ್ಲಿ ಉಭಯಪಕ್ಷದವರೂ ಮುಖಾಮುಖಿ ಕಲೆತು, ಪರಸ್ಪರ ಸೌಹಾರ್ದ ಮತ್ತು ಅನುಸರಣೆಯ ಮನೋಧರ್ಮದಿಂದ ಕೂಡಿದವರಾಗಿ ಚರ್ಚೆ ನಡೆಸಿದುದರಲ್ಲಿ ಉಭಯಪಕ್ಷದವರಿಗೂ ತೃಪ್ತಿಕರವಾದುದೆಂದು ಭಾವಿಸಲ್ಪಟ್ಟಿರತಕ್ಕ ಒಂದು ತೀರ್ಮಾನಕ್ಕೆ ಬಂದಿರುತ್ತಾರೆ. ಈ ಸಂಗತಿಯನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ. ಉತ್ಪತ್ತಿಯಾದ ಚಿನ್ನದ ಮೇಲೆ ಶೇಕಡ 5 ರಂತೆಯೂ, ಮತ್ತು ಕಂಪನಿಗಳವರು ಪ್ರಕಟಿಸಿದ ನಫೆ ಹಂಚಿಕೆಯ (ಡಿವಿಡೆಂಡುಗಳ) ಮೇಲೆ ಶೇಕಡ ಎರಡುವರೆಯಂತೆಯೂ ನಮಗೆ ಈಗ ರಾಜಧನವು ಸಂದಾಯವಾಗುತ್ತಿದೆ. ಈಗ ಮಾಡಿಕೊಂಡಿರತಕ್ಕ ಹೊಸ ಕರಾರಿನ ಷರತ್ತುಗಳ ಪ್ರಕಾರ, ಸಂಸ್ಥಾನಕ್ಕೆ 1940ನೆಯ ಇಸವಿಯ ಲಾಗಾಯಿತು, ಉತ್ಪತ್ತಿಯಾದ ಚಿನ್ನದ ಮೇಲೆ ಶೇಕಡ 5ರಂತೆ ಬರತಕ್ಕ ರಾಜಧನದ ಜೊತೆಗೆ, ನಫೆಗಳ ಶೇಕಡಾವಾರು ಹೆಚ್ಚಿದ ಹಾಗೆಲ್ಲಾ ನಫೆಗಳ ಮೇಲೆ ಶೇಕಡ ಎರಡುವರೆಯಿಂದ ಹಿಡಿದು ಶೇಕಡ 40ರ ವರೆಗೂ ರಾಜಧನವು ಸಲ್ಲುತ್ತದೆ. ಇದರ ಜೊತೆಗೆ ನಮಗೆ 1934ನೆಯ ಇಸವಿಯಿಂದ 1940ನೆಯ ಇಸವಿಯ ವರೆಗೂ, ನಫೆಗಳ ಮೇಲೆ ಶೇಕಡ ಎರಡುವರೆಯಂತೆ ಹಾಲಿ ಗೊತ್ತುಮಾಡಿರತಕ್ಕ ದರಕ್ಕೆ ಬದಲಾಗಿ, ಹೊಸಗೇಣಿಯ ವಿಷಯದಲ್ಲಿ ಗೊತ್ತುಮಾಡಿರತಕ್ಕ ದರದ ಮೂರನೇ ಎರಡು ಭಾಗದಂತೆ ಎಣಿಕೆಮಾಡಿ ರಾಜಧನವು ಸಲ್ಲುತ್ತದೆ. ಈ ಏರ್ಪಾಡಿನಿಂದ ನಮ್ಮ ಸಂಸ್ಥಾನವು ಕಂಪೆನಿಗಳಿಗೆ ಬರತಕ್ಕ ನಫೆಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗಿಯಾಗುವುದಕ್ಕೆ, ಅದರಲ್ಲಿಯೂ, ಚಾಲ್ತಿ ನಡೆಯುತ್ತಿರುವ ಗೇಣಿಯ ಸಂಬಂಧದಲ್ಲಿ ಬಾಕಿ ಉಳಿದಿರತಕ್ಕ ಅವಧಿಯಲ್ಲೂ ಕೂಡ ಕಂಪೆನಿಗಳಿಗೆ ಬರತಕ್ಕ ನಫೆಗಳಲ್ಲಿ ಮೊದಲಿಗಿಂತಲೂ ಹೆಚ್ಚಾಗಿ ಭಾಗಿಯಾಗುವುದಕ್ಕೆ, ಅವಕಾಶವುಂಟಾಗಿದೆ. ಈ ಏರ್ಪಾಡಿನಿಂದ ಕಂಪೆನಿಗಳವರಿಗಾದರೋ, ಚಾಲ್ತಿಗೇಣಿಯು ಮುಗಿದನಂತರ ಇನ್ನೂ ಮೂವತ್ತು ವರ್ಷಗಳವರೆಗೆ ಹೊಸದಾಗಿ ಗೇಣಿಯನ್ನು ಮಾಡಿಕೊಳ್ಳುವ ನಿರ್ದಿಷ್ಟವಾದ ಭರವಸೆಯು ದೊರೆತಿರುವುದರಿಂದ ಮುಂದೆ ಕೆಲಸ ನಡೆಸುವ ಕಾರ್ಯಕ್ರಮವನ್ನು ಏರ್ಪಡಿಸಿಕೊಳ್ಳಲು ಅವಕಾಶವುಂಟಾಗಿದೆ. ಈಗ ಮಾಡಿರತಕ್ಕ ತಿದ್ದುಪಾಟಾದ ಷರತ್ತುಗಳ ಪ್ರಕಾರ, ಮುಂದಣ ವರ್ಷ ನಫೆ ಹಂಚಿಕೆಗಳ ಮೇಲೆ ಸಂದಾಯವಾಗಬೇಕಾದ ಹೆಚ್ಚಿಗೆ ರಾಜಧನವು ಒಂಭತ್ತುವರೆ ಲಕ್ಷ ರೂಪಾಯಿಗಳಾಗುವುದೆಂದು ಅಂದಾಜುಮಾಡಲ್ಪಟ್ಟಿದೆ. ಅದನ್ನು ಮುಂದಣ ಸಾಲಿನ ಬಡ್ಜೆಟ್ಟಿನಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ.

ಪರಿವರ್ತನೆಯ ಸಾಲ.

ನಾಣ್ಯದ ಚಲಾವಣೆಯ ವಿಷಯವು ಸಾಲ ತೆಗೆಯುವ ವಿಷಯಕ್ಕೆ ವಿಶೇಷ ಸಂಬಂಧಪಟ್ಟುದಾಗಿದೆ. ಆದರೆ ಹೀಗೆ ಸಾಲ ತೆಗೆಯುವುದರಲ್ಲಿ ನಾವು ಹುಟ್ಟುವಳಿಯನ್ನು ಹೆಚ್ಚಿಸಿಕೊಂಡಿಲ್ಲ. ಒಂದು ಪರಿವರ್ತನೆಯ ಸಾಲವನ್ನು ಏರ್ಪಡಿಸುವುದರ ಮೂಲಕ ವೆಚ್ಚವನ್ನು ಬಹಳವಾಗಿ ಕಡಿಮೆಮಾಡಿಕೊಂಡಿದ್ದೇವೆ. ಈ ವಿಷಯವನ್ನು ಕಳೆದ ವರ್ಷ ಈ ಸಭೆಯ ಬಡ್ಜೆಟ್ ಅಧಿವೇಶನದಲ್ಲಿ ಸರ್ ಎಂ. ಎನ್. ಕೃಷ್ಣರಾಯರವರು ಮಾಡಿದ ಭಾಷಣದಲ್ಲಿ ಪ್ರಸ್ತಾಪಿಸಿರುತ್ತಾರೆ. ಆಗ ಮಾಡಲ್ಪಟ್ಟ ಸೂಚನೆಗನುಸಾರವಾಗಿ ಶೇಕಡ 4ರಂತೆ ಬಡ್ಡಿಯುಳ್ಳ ಮತ್ತು ತೆರಿಗೆಗೆ ಗುರಿಯಾಗದಿರುವ ಒಂದು ಸಾಲವನ್ನು 1933ನೆಯ ಇಸವಿ ಅಕ್ಟೋಬರಿನಲ್ಲಿ ಒಂದು ಸಲ, ಮತ್ತು 1933 ನೆಯ ಇಸವಿ ಡಿಸೆಂಬರಿನಲ್ಲಿ ಒಂದು ಸಲ ಈ ರೀತಿಯಾಗಿ ಎರಡು ಕಂತವಾಗಿ ಸಾದರಾ ಪಡಲಾಯಿತು. ಈ ಸಾಲವು ಸರ್ಕಾರದವರ ಇಷ್ಟಾನುಸಾರ ಇಪ್ಪತ್ತು ವರ್ಷಗಳ ಅಥವಾ ಮೂವತ್ತು ವರ್ಷಗಳ ತರುವಾಯ ವಾಪಸು ಪಾವತಿಯಾಗತಕ್ಕದ್ದಾಗಿದೆ. ಕೇಳಿದಾಗ ವಾಪಸು ಕೊಡತಕ್ಕ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳನ್ನು ಇಟ್ಟಿದ್ದವರಿಗೂ, ಮತ್ತು ಸಾಲಿಯಾನಾ ಶೇಕಡ 4ರಂತೆ ಬಡ್ಡಿಯು ಸಲ್ಲತಕ್ಕ ಖಾಯಂ ಠೇವಣಾತಿಗಳನ್ನು ಇಟ್ಟಿದ್ದವರಿಗೂ ಮಾತ್ರವೇ ಈ ಸಾಲಪತ್ರಗಳನ್ನು, ಅವುಗಳ ಮೇಲೆ ನಮೂದಿಸಿದ್ದ ಬೆಲೆಗೆ, ಪಡೆಯುವುದಕ್ಕೆ ಮೊದಲು ಅವಕಾಶಕೊಡಲಾಗಿದ್ದಿತು. ಆದರೆ, ಆ ಮೇಲೆ ಏಳು ವರ್ಷಗಳಿಗಾಗಲಿ ಅಥವಾ ಐದು ವರ್ಷಗಳಿಗಾಗಲಿ ಖಾಯಂ ಠೇವಣಾತಿಗಳನ್ನಿಟ್ಟಿರತಕ್ಕವರಲ್ಲದೂ ಮತ್ತು ಶೇಕಡ 5½ಯಂತೆ ಬಡ್ಡಿಯನ್ನುಳ್ಳ 1938 ನೆಯ ಇಸವಿಯ ಮೈಸೂರು ಸರ್ಕಾರಿ ಸಾಲಪತ್ರಗಳನ್ನೂ, ಶೇಕಡ 6 ರಂತೆ ಬಡ್ಡಿಯುಳ್ಳ 1940 ನೆಯ ಇಸವಿಯ ಸಾಲಪತ್ರಗಳನ್ನೂ ಮತ್ತು ಶೇಕಡ 6½ ಯಂತೆ ಬಡ್ಡಿಯನ್ನುಳ್ಳ 1941-51 ನೆಯ ಇಸವಿಯ ಸಾಲಪತ್ರಗಳನ್ನೂ ಪಡೆದಿರತಕ್ಕವರಿಗೂ ಪರಿವರ್ತನೆಯ ಸಾಲಪತ್ರಗಳನ್ನು ಪಡೆಯುವುದಕ್ಕೆ ಅವಕಾಶಕೊಡಲಾಯಿತು, ಶೇಕಡ 4 ಕ್ಕಿಂತ ಹೆಚ್ಚಾದ ಬಡ್ಡಿಯುಳ್ಳ ಠೇವಣಾತಿಗಳನ್ನೂ ಮತ್ತು ಸೆಕ್ಯೂರಿಟಿ ಪತ್ರಗಳನ್ನೂ ಪಡೆದಿರತಕ್ಕವರಿಗೆ ಅವರ ಠೇವಣಾತಿಗಳ ಅವಧಿಯು ಅಥವಾ ಸೆಕ್ಯೂರಿಟಿಪತ್ರಗಳ ಅವಧಿಯು ಪೂರೈಸುವವರೆಗೂ, ಹಳೆಯ ಸಾಲಪತ್ರಗಳ ಬಡ್ಡಿಯ ದರಕ್ಕೂ, ಹೊಸ ಸಾಲಪತ್ರಗಳ ಬಡ್ಡಿಯ ದರಕ್ಕೂ ಇರುವ ವ್ಯತ್ಯಾಸದ ಮೊಬಲಗನ್ನು ಸಲ್ಲಿಸುವಂತೆ ಏರ್ಪಾಡು ಮಾಡಲಾಯಿತು. ಈ ಪರಿವರ್ತನೆಯ ಸಾಲಕ್ಕಾಗಿ ಒಟ್ಟು ಸುಮಾರು 2½ ಕೋಟಿ ರೂಪಾಯಿಗಳಷ್ಟು ಮೊಬಲಗು ಸಂದಾಯವಾಯಿತು. ಈ ಹಣವನ್ನೂ, ಮತ್ತು ಸಾಲಿಯಾನಾ 18·78 ಲಕ್ಷ ರೂಪಾಯಿಗಳಂತೆ ಮಾಮೂಲು ದರದಲ್ಲಿ ಕೊಡಬೇಕಾಗತಕ್ಕ ಸಾಲತೀರ್ವೆಯ ನಿಧಿಯ ಹಣವನ್ನೂ ಸೇರಿಸಿದಲ್ಲಿ, ಪ್ರಸಕ್ತ ಸಾಲಕ್ಕೆ ಪರಿವರ್ತನೆಯಾಗದೆ, 1941 ನೆಯ ಇಸವಿಗೆ ಮುಂಚೆ ತೀರಿಸಬೇಕಾಗಿರುವ ಸಾಲ ಪತ್ರಗಳ ಬಾಬತು ಸುಮಾರು 3 ಕೋಟಿ 80 ಲಕ್ಷ ರೂಪಾಯಿಗಳನ್ನು ಪುನಃ ಜನಗಳಿಂದ ಸಾಲ ಪಡೆಯದೆಯೇ ಸರ್ಕಾರದವರು ತೀರಿಸಲು ಸಾಧ್ಯವಾಗುತ್ತದೆ. ಇವುಗಳನ್ನು ತೀರಿಸಿದಮೇಲೆ, ಶೇಕಡ 3ರಂತೆ ಬಡ್ಡಿಯುಳ್ಳ 1955ನೆಯ ಇಸವಿಯ ಸಾಲ ಮತ್ತು ಶೇಕಡ 4ರಂತೆ ಬಡ್ಡಿಯುಳ್ಳ 1953-63ನೆಯ ಇಸವಿಯ ಹೊಸ ಸಾಲ—ಈ ಎರಡುಸಾಲಗಳು ಮಾತ್ರ ಉಳಿಯುವುವು. ಆ ಪೈಕಿ 1955ನೆಯ ಇಸವಿಯ ಸಾಲದ ಮೊಬಲಗು ಸುಮಾರು 1½ ಕೋಟಿ ರೂಪಾಯಿಗಳೂ, 1953-63ನೆಯ ಇಸವಿಯ ಸಾಲದ ಮೊಬಲಗು 2½ ಕೋಟಿ ರೂಪಾಯಿಗಳೂ ಆಗಿದೆ.

ಮೇಲ್ಕಂಡಂತೆ ಹಳೆಯ ಸಾಲಗಳನ್ನು ಹೊಸ ಸಾಲಕ್ಕೆ ಪರಿವರ್ತನಗೊಳಿಸಿರುವುದರಿಂದ ಬಡ್ಜೆಟ್ಟಿನ ಮೇಲೆ ಯಾವ ರೀತಿ ಪರಿಣಾಮವಾಗುತ್ತದೆಂಬುದು 1938ನೆಯ ಇಸವಿಯ ಅನಂತರವೇ ಕಂಡುಬರುವುದಾಗಿದೆ. ಏಕೆಂದರೆ, ಹೊಸ ಸಾಲಕ್ಕೆ ಪರಿವರ್ತನೆಗೊಂಡಿರತಕ್ಕ ಸಾಲಪತ್ರಗಳನ್ನುಳ್ಳವರಿಗೆ, ಹಳೆಯ ಸಾಲಪತ್ರಗಳ ವಾಯಿದೆಯು ಪೂರೈಸುವವರೆಗೂ ಹೆಚ್ಚಿಗೆ ದರದ ಬಡ್ಡಿಗಳನ್ನೇ ಕೊಡಬೇಕಾಗಿರುತ್ತದೆ. ಶೇಕಡ 4ರಂತೆ ಬಡ್ಡಿಯುಳ್ಳ ಈ ಹೊಸ ಸಾಲವು ಮೈಸೂರು ಸಂಸ್ಥಾನದ ಒಳಗೂ ಮತ್ತು ಹೊರಗೂ ಇರತಕ್ಕ ಜನಗಳಲ್ಲಿ ವಿಶೇಷ ಆದರಣೆಯನ್ನು ಪಡೆದಿದೆ. ಈಗಾಗಲೇ ಈ ಸಾಲಪತ್ರಗಳನ್ನು ಅವುಗಳಗಳಮೇಲೆ ನಮೂದಿಸಿರತಕ್ಕ ಮೊಬಲಗಿನ ಮೇಲೆ ಶೇಕಡ 3 ರೂಪಾಯಿಗಳಷ್ಟು ಹೆಚ್ಚಾದ ಬೆಲೆಗೆ ಕೇಳುತ್ತಿದ್ದಾರೆ.

(6ನೆಯ ಪುಟವನ್ನು ನೋಡಿ).

ಬೆಂಗಳೂರು ಕಂಟೋನ್ಮೆಂಟ್ ಹಲಸೂರಿನಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವವು.

ಇದೇ ತಿಂಗಳು ಹತ್ತನೆಯ ತಾರೀಖು ಭಾನುವಾರ ದಿವಸ ಶ್ರೀಮದ್ವೀರಶೈವಮತಸ್ಥಾಪನಾಚಾರ್ಯ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಮಹೋತ್ಸವವು ಪಂಚಕಲಶ ಸಿಂಹಲಲಾಟ ಮೊದಲಾದ ಸಮಸ್ತ ರಾಜಬಿರುದುಗಳೊಡನೆ ಬೆಂಗಳೂರು ಕಂಟೋನ್ಮೆಂಟ್ ಹಲಸೂರಿನಲ್ಲಿ ವಿಶೇಷ ವೈಭವದಿಂದ ನಡೆಯಿತು. ಉತ್ಸವವು ಪ್ರಾತಃಕಾಲ ೯ ಘಂಟೆಗೆ ಸರಿಯಾಗಿ ಹೊರಟಿತು. ರಾಜಮಾರ್ಗಗಳು ನವಪಲ್ಲವಾವಳಿಗಳಿಂದಲೂ ರಂಭಾಸ್ತಂಭಗಳಿಂದಲೂ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದವು. ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಅಪೂರ್ವ ವೈಭವವನ್ನು ನೋಡುವುದಕ್ಕಾಗಿ ಅಪರಿಮಿತ ಜನಗಳು ಸೇರಿದ್ದರು. ಪ್ರೇಕ್ಷಕರ ಹೃದಯದಿಂದ ಉಕ್ಕುತ್ತಿರುವ ಆನಂದಾತಿಶಯವು ವರ್ಣನಾತೀತವಾಗಿದ್ದಿತು.

ಅಂಗಡಿಬೀದಿಗೆ ಉತ್ಸವವು ಬಂದೊಡನೆಯೇ ಓರ್ವ ಗುರುಭಕ್ತನು ಭಕ್ತಿಭರದಿಂದ ಮಹಾಸ್ವಾಮಿಗಳವರ ದೃಷ್ಟಿಪರಿಹಾರಾರ್ಥವಾಗಿ ೧೦೮ ಕಾಯಿಗಳನ್ನು ಒಡೆದನು. ಪ್ರತಿಯೊಂದು ಮನೆಯವರೂ ಭಕ್ತಿಯುತರಾಗಿ ಮಹಾಸ್ವಾಮಿಗಳವರಿಗೆ ಫಲಪುಷ್ಪಾವಳಿಯನ್ನು ಸಮರ್ಪಿಸುತ್ತಿದ್ದರು. ಸದ್ಬೋಧ ಭಜನಾಸಂಘದವರು ಖದ್ದರ್‌ಮಾಲಿಕೆಯನ್ನು ಸಮರ್ಪಿಸಿದರು. ಪೋಲೀಸ್ ಸ್ಟೇಷನ್ನಿನ ಹತ್ತಿರ ಮಹಮ್ಮದೀಯರು ವಿಜ್ಞಾಪನಾಪತ್ರವನ್ನೊಪ್ಪಿಸಿದರು. ಪ್ರತಿಯೊಂದು ರಾಜಬೀದಿಯಲ್ಲಿಯೂ ಸುವಾಸಿನಿಯರು ಗುರುಭಕ್ತಿಯುತರಾಗಿ ಗುರುಗಳಿಗೆ ಆರತಿಯನ್ನು ಬೆಳಗುತ್ತಿದ್ದರು.

ಶ್ರೀ ಜಗದಾಚಾರ್ಯರ ಅಡ್ಡಪಲ್ಲಕ್ಕಿಮಹೋತ್ಸವದಲ್ಲಿ ಸುಪ್ರಸಿದ್ಧರೂ ಲೋಕಮಾನ್ಯರೂ ವೃದ್ಧಪಿತಾಮಹರೂ ಆಗಿರುವ ರಾಜಸಭಾಭೂಷಣ ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆ.ಟಿ., ಸಿ.ಐ.ಇ. ಯವರೂ, ಮೈಸೂರು ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾದ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ಪಿ. ಮಹಾದೇವಯ್ಯನವರೂ, ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಹೆಚ್. ಕೆ. ವೀರಬಸವಯ್ಯನವರೂ, ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾದ ಡಾಕ್ಟರ್ ಬಿ. ನಂಜಪ್ಪನವರೂ, ಬೆಂಗಳೂರು ದಂಡಿನ ಮುನ್ಸಿಫ್ ಮ್ಯಾಜಿಸ್ಟ್ರೇಟರಾದ ರಾವ್‌ಬಹದ್ದೂರ್ ಕುನಿ ರಾಮನ್ ನಾಯರ್‌ರವರೂ, ಕರ್ನಲ್ ಗ್ರೋಗನ್‌ದಂಪತಿಗಳೂ, ಮಿ|| ಮೆಕ್‌ಹ್ಯೂರವರು ಮತ್ತು ಇವರ ಪುತ್ರಿಯವರೂ, ಸಾಹುಕಾರ್ ಮ|| ಬೋರಣ್ಣನವರೂ, ಗೌಡರ ಅಯ್ಯಪ್ಪನವರೂ, ಮುನಿಸಿಪಲ್ ಕಮಿಷನರ್ ಮತ್ತು ಕಂಟ್ರಾಕ್ಟರ್ ಮ|| ಸಿ. ಆರ್. ನಾಗಪ್ಪನವರೂ, ಕಂಟ್ರಾಕ್ಟರ್ ಮ|| ಕಪ್ಪಣ್ಣನವರೂ, ಮ|| ಎಂ. ವಿ. ರುದ್ರಪ್ಪಶೆಟ್ಟರೂ, ಮ|| ಕಾಳಪ್ಪನವರ ಮಕ್ಕಳೂ, ಮ|| ಬುಳ್ಳಪ್ಪನವರ ನಂಜುಂಡಪ್ಪನವರೂ, ಬೆಂಗಳೂರು ಸಿಟಿಯ ಶೆಟ್ಟಿ ಯಜಮಾನರುಗಳೂ, ಪೋಲೀಸ್ ಅಧಿಕಾರಿಗಳೂ, ಸ್ಕೌಟುದಳದವರೂ ಮುಂತಾದ ಪ್ರಮುಖರು ಭಾಗಿಗಳಾಗಿದ್ದರು. ಮಹೋತ್ಸವವು ಮಧ್ಯಾಹ್ನ ೧೨-೩೦ ಘಂಟೆಗೆ ಮ|| ರಾ|| ಸುಬ್ಬರೆಡ್ಡಿಯವರ ಧರ್ಮಪತ್ನಿಯವರಾದ ಶ್ರೀಮತಿ ಅಂಕಮ್ಮನವರ ನಾಮಾಂಕಿತದಿಂದ ಸುಂದರವಾಗಿ ಕಟ್ಟಲ್ಪಟ್ಟಿರುವ ನೂತನ ಛತ್ರಕ್ಕೆ ತಲ್ಪಿತು. ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವಾಗುತ್ತಿರಲು ಶ್ರೀಗಳವರು ಪಲ್ಲಕ್ಕಿಯಿಂದಿಳಿದು ಸಿಂಹಾಸನಾರೂಢರಾದರು. ಶ್ರೀಮಾನ್ ಸುಬ್ಬರೆಡ್ಡಿಯವರು ತಮ್ಮ ಧರ್ಮಪತ್ನಿಯವರಾದ ಶ್ರೀಮತಿ ಅಂಕಮ್ಮನವರೊಂದಿಗೆ ಅಷ್ಟೋತ್ತರಶತನಾಮಾವಳಿಯನ್ನುಚ್ಚರಿಸುತ್ತ ಮಹಾಸ್ವಾಮಿಗಳವರ ಪಾದಪೂಜೆಯನ್ನು ಮಾಡಿ ೧೦೮ ರೂಪಾಯಿಗಳನ್ನರ್ಪಿಸಿದ ತರುವಾಯ ಅದೇ ಶುಭಮುಹೂರ್ತದಲ್ಲಿಯೇ ಮಹಾಸ್ವಾಮಿಗಳ ಅಮೃತಹಸ್ತದಿಂದ ಶ್ರೀಮತಿ ಅಂಕಮ್ಮ ನಾಮಾಂಕಿತ ಧರ್ಮಛತ್ರದ ನೂತನ ಪ್ರವೇಶಮಹೋತ್ಸವವೂ ಸಹ ಜರುಗಿಸಲ್ಪಟ್ಟಿತು. ಈ ಸಮಯದಲ್ಲಿ ಶ್ರೀ ಜಗದ್ಗುರುಗಳು ಭಕ್ತಿಯ ಮಹತ್ವವನ್ನುದ್ದೇಶಿಸಿ ಮಿತವಾದ ಭಾಷಣವನ್ನು ಮಾಡಿ ಹಲಸೂರು ಗುರುಭಕ್ತರ ಭಕ್ತಿಯನ್ನೂ ಮ|| ರಾ|| ಸುಬ್ಬರೆಡ್ಡಿ ಶ್ರೀಮತಿ ಅಂಕಮ್ಮನವರ ಔದಾರ್ಯವನ್ನೂ ಪ್ರಶಂಸಿಸಿ ಈ ಛತ್ರವು ಅನೇಕ ಶಿವಯೋಗಿಗಳಿಗೂ ಮಹಾತ್ಮರಿಗೂ ತಪಸ್ವಿಗಳಿಗೂ ಆಶ್ರಯವಾಗುವುದರ ಮೂಲಕ ಇವರು ಯಶಸ್ವಿಗಳಾಗಲೆಂದು ಆಶೀರ್ವದಿಸಿದರು. ಅನಂತರ ಬ್ರಿಟಿಷ್ ಸಾರ್ವಭೌಮ ಸರ್ಕಾರದ ಮತ್ತು ಧರ್ಮಾವತಾರಿಗಳಾದ ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಬಳಿಕ ಪೂಜಾಸಮಯವು ಸಮಿಪಿಸಿದ್ದರಿಂದ ಮಹಾಸ್ವಾಮಿಗಳವರ ಸ್ವಾರಿಯು ಬಿಡಾರಕ್ಕೆ ಚಿತ್ತೈಸಿತು.

ಅದೇ ದಿವಸ ಸಾಯಂಕಾಲ 7 ಘಂಟೆಗೆ ಶ್ರೀಮತಿ ಅಂಕಮ್ಮನವರ ಛತ್ರದಲ್ಲಿ ಶ್ರೀಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಪ್ರಚಂಡಸಭೆಯು ನಡೆಯಿತು. ಸರ್ ಕೆ. ಪಿ. ಪುಟ್ಟಣ್ಣಶೆಟ್ಟರೇ ಆದಿಯಾಗಿ ಅನೇಕ ಮಹಾಜನಗಳೂ ಪುರಪ್ರಮುಖರೂ ಅನೇಕಜನ ಮಹಿಳೆಯರೂ ಸಭೆಗೆ ಆಗಮಿಸಿದ್ದರು. ಪ್ರಥಮತಃ ಗುರುಸ್ತವಸವು ನಡೆದಬಳಿಕ ಶ್ರೀ ರಾಮಾನುಜಾಚಾರ್ಯರು ತಾವು ರಚಿಸಿದ್ದ ನವರತ್ನಮಾಲಿಕೆಯನ್ನು ಸುಶ್ರಾವ್ಯವಾಗಿ ಓದಿ ಒಪ್ಪಿಸಿದರು. ಬಳಿಕ ಬೆಂಗಳೂರು ಸಿಟಿ ಚಿಕ್ಕಪೇಟೆ ಮಹಾಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳು 'ಗುರುಭಕ್ತಿಯ ಮಹತ್ತ್ವ' ಎಂಬ ವಿಷಯವಾಗಿ ಅಮೋಘವಾದ ಭಾಷಣವನ್ನು ಮಾಡಿದರು. ಇವರ ಭಾಷಣ ವೈಖರಿಯನ್ನು ಕೇಳಿ ಸಭಿಕರು ತಲೆದೂಗುತ್ತಿದ್ದರು. ಅನಂತರ ಹಲಸೂರಿನ ಮ|| ರಾ|| ನೀಲಕಂಠಾರಾಧ್ಯ ಬಿ.ಎ, ಇವರು ಅಲ್ಲಿಯ ಭಕ್ತಮಂಡಲಿಯ ಪರವಾಗಿ ಮಹಾಸ್ವಾಮಿಗಳವರಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಿದರು. ಅನಂತರ ಶ್ರೀ ಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ಸನಾತನವೈದಿಕಧರ್ಮರಹಸ್ಯದಮೇಲೆ ಶ್ರುತಿ, ಸ್ಮೃತಿ, ಯುಕ್ತಿ, ಅನುಭವಪೂರ್ವಕವಾಗಿ ಭವ್ಯವಾದ ದೀರ್ಘಭಾಷಣವನ್ನು ಮಾಡಿ ಬಿನ್ನವತ್ತಳೆಗೆ ಉತ್ತರವನ್ನು ದಯಪಾಲಿಸಿ, ಹಲಸೂರು ಗುರುಭಕ್ತರ ಭಕ್ತಿಯನ್ನೂ ನೂತನ ಧರ್ಮಛತ್ರವನ್ನು ಕಟ್ಟಿಸಿದ ಸತೀಪತಿಗಳ ಧರ್ಮವನ್ನೂ ಶ್ಲಾಘಿಸಿ ಸಭಿಕರಿಗೆಲ್ಲಾ ಆಶೀರ್ವದಿಸಿದರು. ಅಲ್ಲಿಗೆ ಸಭಾಕಾರ್ಯವು ಸಮಾಪ್ತಿಗೊಂಡಿತು.

ಪಂಚಪೀಠಗಳಲ್ಲಿ ಒಂದಾದ ಶ್ರೀಜಗದ್ಗುರು ರೇಣುಕಾಚಾರ್ಯನ ಧರ್ಮಪೀಠವನ್ನು ವೀರಶೈವರ ಭಾಗ್ಯೋದಯದಿಂದ ಅಸಾಧಾರಣ ವಿದ್ವಾಂಸರೂ ತಪಸ್ವಿಗಳೂ ಕರುಣಾಳುಗಳೂ ತೇಜಸ್ವಿಗಳೂ ಆಗಿರುವ ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಆರೋಹಣಮಾಡಿದಂದಿನಿಂದ ಮಹಾಮಹಿಮರಾದ ಪೀಠಾಚಾರ್ಯರ ಮಹತ್ತ್ವವೂ ಹುದುಗಿಹೋಗಿದ್ದ ವೀರಶೈವಧರ್ಮದ ಪ್ರಕಾಶವೂ ದಶದಿಕ್ಕುಗಳಲ್ಲಿಯೂ ವ್ಯಾಪಿಸಹತ್ತಿರುವುದು ವೀರಶೈವಮತದ ಪುಣ್ಯೋದಯವೆಂದೇ ಹೇಳಬೇಕಾಗಿದೆ. ಈಗ ಸ್ವಲ್ಪದಿವಸಗಳಲ್ಲಿ ಬೆಂಗಳೂರು ಸಿಟಿಯಲ್ಲಿ ನಡೆದ ಮಹಾಸ್ವಾಮಿಗಳವರ ಭವ್ಯೋತ್ಸವದ ಸಂತೋಷದ ಜತೆಯಲ್ಲಿ ಈಗ ಬೆಂಗಳೂರು ಕಂಟೋನ್ಮೆಂಟ್ ಹಲಸೂರಲ್ಲಿ ನಡೆದ ಅಡ್ಡಪಲ್ಲಕ್ಕಿಮಹೋತ್ಸವದ ಸಂತೋಷವೂ ಸೇರಿ ವೀರಶೈವ ಮಹಾಜನಗಳು ಮಹಾಸಂತೋಷಸಾಗರದಲ್ಲಿ ಲೋಲಾಡುತ್ತಲಿದ್ದಾರೆ. ಹಿಂದಕ್ಕೆ ಕೆಲವರು ಬೆಂಗಳೂರು ಕಂಟೋನ್ಮೆಂಟಿನಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವದ ಬಗ್ಗೆ ಬೇಕಾದಷ್ಟು ಪ್ರಯತ್ನಪಟ್ಟರೂ ಸಫಲವಾಗಲಿಲ್ಲ. ಸದ್ಯಃ ಈ ಪೀಠಕ್ಕೆ ಈ ಮಹಾಗೌರವವು ದೊರೆತುದು ವೀರಶೈವಮತೀಯರ ಭಾಗ್ಯವೆಂದೇ ಉದ್ಘೋಷಿಸಬೇಕಾಗಿದೆ. ಇಂಥ ರಾಜಾಧಿರಾಜಮಾನ್ಯಗುರುಪೀಠಾಚಾರ್ಯರನ್ನು ಪ್ರತಿಯೊಂದು ನಗರ ಗ್ರಾಮಗಳ ಗುರುಭಕ್ತರು ಬಿಜಮಾಡಿಸಿಕೊಂಡುಹೋಗಿ ಶ್ರೀ ಜಗದಾಚಾರ್ಯರ ಸೇವೆಯನ್ನು ಮಾಡಿ ಧನ್ಯಾತ್ಮರಾಗಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ರಷ್ಯಾದೇಶದಲ್ಲಿ ಕುದುರೆಗಳ ಕಳ್ಳರನ್ನು ಪತ್ತೆಮಾಡಲು ವಿರೋಪ್ಲೇನುಗಳನ್ನು ಉಪಯೋಗಿಸುವರು.

ಲೇವಾದೇವಿ ಹಣದಮೇಲೆ ಶೇಕಡಾ 10 ಕ್ಕಿಂತಲೂ ಹೆಚ್ಚು ಬಡ್ಡಿಯನ್ನು ಹಾಕಕೂಡದೆಂದು ಮಧ್ಯಪ್ರಾಂತದ ಸರಕಾರದವರು ಅಪ್ಪಣೆಮಾಡಿರುತ್ತಾರೆ.

ಎರ್ನಾಕುಲದಲ್ಲಿ ಒಬ್ಬ ಸ್ತ್ರೀಯು ಒಂದು ಮಗುವನ್ನು ಹೆತ್ತು 15 ದಿನಸಗಳನಂತರ ಮತ್ತೊಂದು ಮಗವನ್ನು ಹೆತ್ತಿರುವಳು. ಮಕ್ಕಳೂ ಬಾಣಂತಿಯೂ ಆರೋಗ್ಯವಾಗಿರುತ್ತಾರೆ.

ಇಂಡಿಯಾಸರಕಾರದವರು ಕೈಮಗ್ಗದ ಕೈಗಾರಿಕೆಯನ್ನು ಅಭಿವೃದ್ಧಿಮಾಡುವದಕ್ಕಾಗಿ 5 ವರ್ಷಗಳವರೆಗೆ ವರ್ಷಕ್ಕೆ 5 ಲಕ್ಷ ರೂಪಾಯಿಗಳಂತೆ ಗ್ರಾಂಟ್ ಕೊಡುವುದಾಗಿ ತೀರ್ಮಾನಮಾಡಿರುತ್ತಾರೆ.

ಲಾಹೋರಿನ ಡಾಕ್ಟರ್ ಅನ್‌ವಾರ್ ಹುಸೇನ್ ಎಂಬವರು ಲಂಡನ್ನಿನಲ್ಲಿ ಪ್ರಶಸ್ತಿಯನ್ನು ಪಡೆದು ಬಂದಿರುವೆವೆಂದು ಹೇಳಿಕೊಳ್ಳುತ್ತಿದ್ದರೆಂಬ ಅಪಾದನೆಯ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ 150 ರೂ. ಗಳ ದಂಡವನ್ನು ವಿಧಿಸಿದರು.

ಪ್ಯಾರಿಸ್ಸಿನ ಸಮೀಪದಲ್ಲಿ ನಡೆದ ಒಂದು ಪ್ರದರ್ಶನದಲ್ಲಿ ಒಂದು ಗೂಳಿಯು ಕಾಳಗದಲ್ಲಿ ಗೆದ್ದಿತು. ಗೂಳಿಯನ್ನು ಸಾಕಿದ್ದ ರೈತನು ಸಂತೋಷದಿಂದ ಬಹುಮಾನವನ್ನು ಸ್ವೀಕರಿಸುತ್ತಿರುವಾಗ ಗೂಳಿಯು ಹಿಂದಿನಿಂದ ಬಂದು ತಿವಿಯಿತು. ರೈತನು ಕೂಡಲೇ ಮೃತಪಟ್ಟನು!

ಲಾಹೋರಿನ ಸಮೀಪದಲ್ಲಿ ಒಬ್ಬ ಹುಡುಗನು ಚಲಿಸುತ್ತಿದ್ದ ರೈಲಿನ ಮೇಲೆ ಕಲ್ಲನ್ನು ಎಸೆದನೆಂಬ ಕಾರಣದ ಮೇಲೆ ರೈಲ್ವೇ ಮ್ಯಾಜಿಸ್ಟ್ರೇಟರು ಹುಡುಗನ ತಂದೆಗೆ ಹುಡುಗನ ಒಳ್ಳೆಯ ನಡತೆಯ ಬಗ್ಗೆ 1 ವರ್ಷದವರೆಗೆ 200 ರೂ. ಜಾಮೀನು ಕೊಡಬೇಕೆಂದು ಅಪ್ಪಣೆಮಾಡಿರುವರು.

ಮೈಮನ್‌ಸಿಂಗ್ ಡಿಸ್ಟ್ರಿಕ್ಟಿಗೆ ಸೇರಿದ ದೌಲತ್ ಪುರದಲ್ಲಿ ಒಂದು ಹುಣಿಸೇಮರದಿಂದ ಒಂದು ವಿಧವಾದ ರಸವು ಒಂದೇ ಸಮನೆ ಸುರಿಯುತ್ತಿದ್ದು, ಅದರ ಸೇವನೆಯಿಂದ ದೀರ್ಘಕಾಲದ ರೋಗಗಳೆಲ್ಲವೂ ನಿವಾರಣೆಯಾಗುವುವಂತೆ! ಜನರು ತಂಡೋಪತಂಡವಾಗಿ ಹೋಗಿಬರುತ್ತಿರುವರು.

ಅಹಮದನಗರದ ಸಮೀಪದಲ್ಲಿರುವ ರಹುಬಾ ಎಂಬ ಹಳ್ಳಿಯಲ್ಲಿ ಗಾಳಿ ಮತ್ತು ಮಳೆಯು ವಿಶೇಷವಾಗಿ ಒಂದು ದೊಡ್ಡ ಮರವು ಬುಡಸಹಿತ ಕಿತ್ತು ಅಲ್ಲಿಯ ಧರ್ಮಶಾಲೆಯಮೇಲೆ ಉರುಳಿತು. ಮಳೆಯ ದೆಸೆಯಿಂದ ಧರ್ಮಶಾಲೆಯಲ್ಲಿ ನಿಂತಿದ್ದ 50 ಜನರು ಕೂಡಲೇ ಮೃತಪಟ್ಟರು.

ಸಿಂಹಳದ್ವೀಪದ ಪೂರ್ವರಾಜರ ಸಿಂಹಾಸನವನ್ನು ಬ್ರಿಟಿಷ್ ಸರಕಾರದವರು ಈಗ್ಗೆ ಸುಮಾರು 100 ವರ್ಷಗಳ ಹಿಂದೆ ಇಂಗ್ಲೆಂಡಿಗೆ ತೆಗೆದುಕೊಂಡು ಹೋಗಿ 'ವಿಂಡ್ಸರ್ ಕ್ಯಾಸಲ್' ಎಂಬ ರಾಜಮಂದಿರದಲ್ಲಿ ಇಟ್ಟಿದ್ದರು. ಚಕ್ರವರ್ತಿಸಾರ್ವಭೌಮರು ಅದನ್ನು ಸಿಂಹಳದ್ವೀಪದ ಸರಕಾರಕ್ಕೆ ಹಿಂತಿರುಗಿ ಕೊಡತಕ್ಕದ್ದೆಂದು ಅಪ್ಪಣೆ ಮಾಡಿರುತ್ತಾರೆ. ಸದ್ಯದಲ್ಲಿಯೇ ಆಸ್ಟ್ರೇಲಿಯಾ ಖಂಡಕ್ಕೆ ಪ್ರಯಾಣ ಮಾಡಲಿರುವ ಚಕ್ರವರ್ತಿಯವರ ತೃತೀಯ ಕುಮಾರರಾದ ಡ್ಯೂಕ್ ಆಫ್ ಗ್ಲೌಸ್ಟರ್‌ರವರು ಮೇಲ್ಕಂಡ ಸಿಂಹಾಸನವನ್ನು ತಮ್ಮೊಡನೆ ತೆಗೆದುಕೊಂಡು ಬಂದು ಸಿಲೋನಿಗೆ ಒಪ್ಪಿಸುವರೆಂದು ತಿಳಿದುಬಂದಿದೆ.

ಸಿಲೋನಿನ ಗವರ್ನರಾದ ಸರ್ ಸ್ಟಬ್ಸ್‌ರವರ ಪತ್ನಿಯವರು ಮಟ್ಟಕುಲೀಯ ಎಂಬ ನಗರಕ್ಕೆ ಹೋಗಿದ್ದ ಸಮಯದಲ್ಲಿ ಅವರ ಸನ್ಮಾನಕ್ಕಾಗಿ ಒಬ್ಬರು ಮುನಿಸಿಪಾಲಿಟಿಯ ಅಪ್ಪಣೆಯನ್ನು ಪಡೆಯದೆ ಚಪ್ಪರವನ್ನು ಹಾಕಿಸಿದ್ದರು. ಇದು ಕಾಯಿದೆಗೆ ವಿರೋಧವೆಂದು ಮುನಿಸಿಪಾಲಿಟಿಯವರು ಅವರ ಮೇಲೆ ಮೊಕದ್ದಮೆಯನ್ನು ಹೂಡಿದರು. ಕೊಲಂಬೋನಗರದ ಪೋಲೀಸ್ ಕೋರ್ಟಿನಲ್ಲಿ ವಿಚಾರಣೆಯಾಗಿ ಅವರಿಗೆ 20 ರೂ. ದಂಡವು ಹಾಕಲ್ಪಟ್ಟಿತು. ಈ ವಿಷಯವು ಗವರ್ನರಿಗೆ ತಿಳಿದುಬಂದು ತಮ್ಮ ಪತ್ನಿಯ ಸತ್ಕಾರಕ್ಕೆ ಚಪ್ಪರಹಾಕಿದ ತಪ್ಪಿಗೆ ದಂಡವನ್ನು ತೆರುವುದು ಸರಿಯಲ್ಲವೆಂದು 20 ರೂಪಾಯಿಗಳಿಗೆ ಒಂದು ಚೆಕ್ಕನ್ನು ಮುನಿಸಿಪಾಲಿಟಿಗೆ ಕಳುಹಿಸಿಕೊಟ್ಟರು. ಮುನಿಸಿಪಾಲಿಟಿಯವರು ಚೆಕ್ಕನ್ನು ವಾಪಸ್ ಕಳುಹಿಸಿ ಅಪರಾಧಿಯನ್ನು ಬಿಡುಗಡೆ ಮಾಡಿದರು.

5 ಮಕ್ಕಳ ತಾಯಿ!

ಅಮೇರಿಕಾ ದೇಶಕ್ಕೆ ಸೇರಿದ ಕ್ಯಾಲೆಂಡರ್ ನಗರದಲ್ಲಿ 26 ವರ್ಷ ವಯಸ್ಸಿನ ಒಬ್ಬ ಸ್ತ್ರೀಯು ಏಕಕಾಲದಲ್ಲಿ 5 ಮಕ್ಕಳನ್ನು ಪ್ರಸವಿಸಿರುವಳು!

ಮೂರು ಕಾಲಿನ ಮಗು!

ಅಮೃತಸರದ ಸಮೀಪದಲ್ಲಿರುವ ರಾಮದಾಸ ಎಂಬ ಗ್ರಾಮದಲ್ಲಿ ಒಬ್ಬ ಸ್ತ್ರೀಯು 3 ಕಾಲುಗಳುಳ್ಳ ಒಂದು ಶಿಶುವನ್ನು ಪ್ರಸವಿಸಿರುವಳು. ಮಗುವು ಸೌಖ್ಯವಾಗಿರುವದು.

ಕಾಗೆಗಳ ಗಾಯನ!

ಇಂಗ್ಲೆಂಡಿನ ಫ್ರೆಂಡ್‌ಬಿಕಾರ್ ಎಂಬವರು 4 ಕಾಗೆಗಳನ್ನು ಸಾಕಿ ಅವುಗಳಿಗೆ ಸಂಗೀತವನ್ನು ಕಲಿಸಿರುವರಂತೆ! ಅವುಗಳ ಗಾನವನ್ನು ಕೇಳಿದವರೆಲ್ಲರೂ ಸಂತೋಷದಿಂದ ತಲೆದೂಗುವರಂತೆ!

700 ರೂ. ಗೆ ಒಂದು ಮೋಟಾರು!

ಜರ್ಮನ್‌ದೇಶದಲ್ಲಿ ತಯಾರಾದ ಮೋಟಾರುಗಳು ಮದರಾಸಿನಲ್ಲಿ ಇಷ್ಟರಲ್ಲಿಯೇ 700 ರೂ. ಗೆ 1 ರಂತೆ ವಿಕರಿಗೆ ಸಿದ್ಧವಾಗುವುವಂತೆ! ಇವು ನೋಡುವದಕ್ಕೆ ಬ್ರಿಟಿಷ್ ಆಸ್ಟಿನ್ ಕಾರುಗಳಂತೆಯೇ ಇದ್ದು, 'ದಕ್ಸನ್' ಎಂದು ಕರೆಯಲ್ಪಡುವುವಂತೆ!

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಧರ್ಮಶಾಲೆಯಲ್ಲಿ ಸ್ವದೇಶೀವಸ್ತುಪ್ರದರ್ಶನವೂ, ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಚಿತ್ರಕಲಾಪ್ರದರ್ಶನವೂ ಇಂದಿನಿಂದ ಪ್ರಾರಂಭವಾಗಿರುವುವು.

ಹಾಲಿನಿಂದ ಬೆಂಕಿಯನ್ನು ಆರಿಸಿದರು!

ಲಂಡನ್ನಿನಲ್ಲಿ ಹಾಲನ್ನು ಒಯ್ಯುತ್ತಿದ್ದ ಒಂದು ಮೋಟಾರ್ ಲಾರಿಯು ಮತ್ತೊಂದು ಮೋಟಾರಿನೊಡನೆ ಢಿಕ್ಕಿ ಹೊಡೆದು ಲಾರಿಯು ಹತ್ತಿ ಉರಿಯಲಾರಂಭಿಸಿತು. ಫೈರ್‌ಬ್ರಿಗೇಡಿನವರು ಬಂದು ಲಾರಿಯಲ್ಲಿದ್ದ ಹಾಲಿನಿಂದಲೇ ಉರಿಯನ್ನು ಆರಿಸಿದರಂತೆ!

7 ಲಕ್ಷ ರೂಪಾಯಿಗಳ ಅಪಹಾರಕ್ಕೆ 20 ಲಕ್ಷ ರೂ. ಗಳ ದಂಡ!

ಪ್ಯಾರಿಸ್ಸಿನ ಜನ್ನಿ ಡಾಲಿ ಎಂಬ ಪ್ರಸಿದ್ಧ ಸಿನಿಮಾ ನಟಿಯು 7,50,000 ರೂ. ಗಳ ಬೆಲೆಯುಳ್ಳ ಒಂದು ಉಂಗುರವನ್ನು ಕದ್ದಳು. ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ, ಅಪರಾಧಿಗೆ 20,00,000 ರೂಪಾಯಿಗಳ ದಂಡವನ್ನು ವಿಧಿಸಿದರು.

ತತ್ತಿಯೊಳಗೆ ಒಂದು ತತ್ತಿ!

ಅಮೇರಿಕಾದೇಶಕ್ಕೆ ಸೇರಿದ ಫೇರ್‌ಪೋರ್ಟ್ ಎಂಬಲ್ಲಿ ಒಂದು ಹೇಂಟೆಯು ಕೆಲವು ತತ್ತಿಗಳನ್ನು ಹಾಕಿತು. ಯಜಮಾನನು ತತ್ತಿಗಳನ್ನು ತೆಗೆದಿಡುವಾಗ ಒಂದು ತತ್ತಿಯ ಒಳಭಾಗದಲ್ಲಿ ಏನೋ ಶಬ್ದವಾಗುವದನ್ನು ಕೇಳಿ ಅದನ್ನು ಒಡೆಯಲು ಒಳಗಡೆ ಮತ್ತೊಂದು ತತ್ತಿಯಿದ್ದಿತಂತೆ!

48 ಘಂಟೆಗಳಲ್ಲಿ ಚಂದ್ರಗ್ರಹಕ್ಕೆ ಪ್ರಯಾಣ!

'ಲರ್ಯಸ್ ಅಸ್ಟ್ರನಾಮಿಕಲ್ ಸೊಸೈಟಿ' ಯ ಡೈರೆಕ್ಟರಾದ ಪ್ರೊಫೆಸರ್ 'ಇಸಿಡೋರ್ ರೇ' ರವರು 'ರೇಡಿಯಂ' ಎಂಬ ಅಮೂಲ್ಯವಸ್ತುವಿನ ಸಹಾಯದಿಂದ ಭೂಮಿಯಿಂದ ಚಂದ್ರಗ್ರಹಕ್ಕೆ 48 ಗಂಟೆಗಳ ಕಾಲದಲ್ಲಿ ಪ್ರಯಾಣ ಮಾಡಬಹುದಾದ ಯಂತ್ರವನ್ನು ತಯಾರಿಸಬಹುದೆಂದು ಲೆಕ್ಕಹಾಕಿರುವರು!

ಕೋಮಿಲ್ಲಾದಲ್ಲಿ ಪುರಾತನ ಪ್ರತಿಮೆಗಳ ಪತ್ತೆ.

ಕೋಮಿಲ್ಲಾದಲ್ಲಿ ನೆಲವನ್ನು ಅಗೆಯುತ್ತಿದ್ದಾಗ 4½ ಅಡಿ ಉದ್ದ ಮತ್ತು 2½ ಅಡಿ ಅಗಲವಿರುವ ಒಂದು ಕಲ್ಲಿನ ಹಲಗೆಯು ದೊರೆತಿದ್ದು ಅದರಲ್ಲಿ ರಥಾರೂಢರಾದ ಚಂಡಿ, ಬ್ರಹ್ಮ, ವಿಷ್ಣು, ಈಶ್ವರ, ಗಣೇಶ ಮತ್ತು ಸ್ಕಂದರ ವಿಗ್ರಹಗಳೂ, ರಥಗಳಿಗೆ ಕಟ್ಟಿರುವ ಆನೆ ಕುದುರೆಗಳೂ ಬಹುಸುಂದರವಾಗಿ ಕೆತ್ತಲ್ಪಟ್ಟಿರುವವಂತೆ! ಇದು ಅನೇಕ ಶತಮಾನಗಳ ಹಿಂದಿನದೆಂದು ಊಹಿಸಲ್ಪಟ್ಟಿದೆ.

ವಿಚಿತ್ರವಿಮೆ!

ಕ್ಯಾಲಿಫೋರ್ನಿಯಾನಗರದ ಹ್ಯಾರಿಕ್ಲಿನ್‌ಟೀ ಎಂಬವರು ಪ್ರಪಂಚದಲ್ಲೆಲ್ಲಾ ಅತ್ಯಂತ ವಿಚಿತ್ರವಾದ ವಿಮೆಯನ್ನು ಮಾಡಿರುವರು: ಆತನ ಪತ್ನಿಯು ಗರ್ಭಿಣಿ! ಅವಳು ಅವಳಿ ಮಕ್ಕಳನ್ನು ಪ್ರಸವಿಸಬಹುದೆಂಬ ಭೀತಿಯಿಂದ 3000 ರೂ. ಗಳಿಗೆ ವಿಮೆ ಮಾಡಿರುವರು. ಇನ್‌ಷ್ಯೂರೆನ್ಸ್ ಕಂಪೆನಿಯವರು ಅವಳಿ ಮಕ್ಕಳು ಜನಿಸಿದಲ್ಲಿ ಕ್ಲಿನ್‌ಟನ್ನನಿಗೆ 3000 ರೂ. ಗಳನ್ನು ಕೊಡಬೇಕಾಗುವುದು!

ಮಿದುಳಿನಲ್ಲಿ ತವರ!

ಡಾಕ್ಟರ್ ಬರ್ಟ್ರ್ಯಾಂಡ್ ಎಂಬ ಸುಪ್ರಸಿದ್ಧ ಫ್ರೆಂಚ್ ಶಾಸ್ತ್ರಜ್ಞರು ಮನುಷ್ಯನ ಶರೀರರಚನೆಯನ್ನು ಅನೇಕ ದಿವಸಗಳಿಂದ ಶೋಧಮಾಡುತ್ತಿರುವರು. ಅವರ ಹೇಳಿಕೆಯಂತೆ ನಮ್ಮ ಮಿದುಳಿನಲ್ಲಿ ಹೆಚ್ಚಿನಭಾಗ ತವರವು ಸೇರಿರುವದಂತೆ! ನಮ್ಮ ಶರೀರದ ಎಲ್ಲ ಭಾಗಗಳಲ್ಲಿಯೂ ಕಬ್ಬಿಣವು ಸೇರಿರುವದು. ಹೃದಯಕೋಶದಲ್ಲಿ ಸ್ವಲ್ಪ ತಾಮ್ರವೂ, ಅಲ್ಯುಮಿನಿಯಂ ಮತ್ತು ಬೆಳ್ಳಿಯೂ ಇರುವುವು. ಶ್ವಾಸಕೋಶದಲ್ಲಿ ಟಿಟಾನಿಯಂ ಎಂಬ ಲೋಹವಿರುವದು.

ನಾಯಿಗಳ ವಿಚಿತ್ರವರ್ತನೆ!

ಸಿಂಧ್‌ದೇಶಕ್ಕೆ ಸೇರಿದ ಛರಿಯಾ ಎಂಬ ಗ್ರಾಮದಲ್ಲಿ ಎರಡು ವಿಚಿತ್ರನಾಯಿಗಳಿರುವುವು. ಆ ಗ್ರಾಮದಲ್ಲಿ ಯಾರಾದರೂ ಮೃತಪಟ್ಟರೆ ಆ ನಾಯಿಗಳು ಶವದ ಹಿಂದೆ ಸ್ಮಶಾನಕ್ಕೆ ಹೋಗಿ ಸಂಸ್ಕಾರವು ಪೂರ್ತಿಯಾದನಂತರ ಸಮೀಪದಲ್ಲಿರುವ ನದಿಯಲ್ಲಿ ಸ್ನಾನಮಾಡಿ ಗ್ರಾಮಕ್ಕೆ ಹಿಂತಿರುಗಿ ಬರುವವಂತೆ! ಈಗ ಕೆಲಜನ ಅನಾಚಾರಿಗಳು ಸ್ಮಶಾನಕ್ಕೆ ಹೋದರೂ ಸ್ನಾನಮಾಡುವುದಿಲ್ಲ. ಇವರಿಗೆ ಈ ನಾಯಿಗಳಿಗಿಂತಲೂ ಕಡೆ ಎಂದರೆ ತಪ್ಪಾಗಲಾರದಷ್ಟೆ!

ಭಾರತೀಯ ವಿದ್ಯಾರ್ಥಿಗಳಿಗೆ ಇಟಲಿಯಲ್ಲಿ ವಿಶೇಷ ಸೌಕರ್ಯಗಳು!

ಇಟಲೀದೇಶದ ಫ್ಯಾಸಿಸ್ಟ್ ಸರಕಾರದವರು ಇಟಲಿಯ ವಿಶ್ವವಿದ್ಯಾನಿಲಯಗಳಲ್ಲಿ ಓದುವ ಭಾರತೀಯ ವಿದ್ಯಾರ್ಥಿಗಳಿಗೆ ಈ ಕೆಳಗೆಕಂಡ ವಿಶೇಷಸೌಕರ್ಯಗಳನ್ನು ಕಲ್ಪಿಸಿರುವುದಾಗಿ ಆಗ್ರಾದಲ್ಲಿರುವ ಇಟಾಲಿಯನ್ ಇನ್‌ಫರ್ಮೇಷನ್ನಿನವರು ಪ್ರಕಟಿಸಿರುವರು (1) ಇಟಲಿಯ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಯಾವ ಫೀಜನ್ನೂ ಕೊಡಬೇಕಾಗಿಲ್ಲ. (2) ಇಟಲೀದೇಶಕ್ಕೆ ಸೇರಿದ ಜಹಜುಗಳಲ್ಲಿ ಪ್ರಯಾಣಮಾಡುವ ಭಾರತೀಯ ವಿದ್ಯಾರ್ಥಿಗಳಿಗೆ ಚಾರ್ಜಿನಲ್ಲಿ ಶೇಕಡಾ 75 ರಂತೆ ರಿಯಾಯತಿಯು ತೋರಿಸಲ್ಪಡುವುದು. (3) ವಿದ್ಯಾಭ್ಯಾಸಕಾಲದಲ್ಲಿ ಇಟಲಿ ದೇಶದಲ್ಲಿ ರೈಲಿನಲ್ಲಿ ಪ್ರಯಾಣಮಾಡುವ ಭಾರತೀಯ ವಿದ್ಯಾರ್ಥಿಗಳಿಗೆ ರೈಲ್ವೇ ಚಾರ್ಜಿನಲ್ಲಿ ಸ್ವಲ್ಪ ರಿಯಾಯತಿಯು ತೋರಿಸಲ್ಪಡುವದು. (4) ಇಟಲಿಯ ವಿಶ್ವವಿದ್ಯಾಲಯಗಳಲ್ಲಿ ಓದುವ ಭಾರತೀಯ ವಿದ್ಯಾರ್ಥಿಗಳು 3 ತಿಂಗಳುಗಳಲ್ಲಿ ಇಟಾಲಿಯನ್ ಭಾಷೆಯನ್ನು ಅಭ್ಯಾಸಮಾಡುವುದಕ್ಕಾಗಿ ಇಟಲಿ ದೇಶದಲ್ಲೆಲ್ಲಾ ಅತ್ಯಂತ ಆರೋಗ್ಯಕರವಾದ ಪೆರುಗಿಯಾದಲ್ಲಿ ಒಂದು ಪ್ರತ್ಯೇಕ ಶಾಲೆಯು ತೆರೆಯಲ್ಪಟ್ಟಿರುವದು.

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ, ವೈಶಾಖ ಶು|| ಪಂಚಮಿಗೆ ಏಳುವರ್ಷಗಳು ತುಂಬಿ ಎಂಟನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು **ವಿ. ಪಿ.** ಮಾಡಬೇಕಾಗುತ್ತದೆ. **ವಿ. ಪಿ.** ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. **ವಿ. ಪಿ.** ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೇ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ—

(3ನೆಯ ಪುಟದಿಂದ ಮುಂದುವರೆದುದು).

ದೇಶೀಯ ಸಂಸ್ಥಾನಗಳವರಿಂದ ಸಾದರಾಗಲ್ಪಟ್ಟವರಕ್ಕೆ ಸೆಕ್ಯೂರಿಟಿ ಪತ್ರಗಳನ್ನು, ಇಂಪೀರಿಯಲ್ ಬ್ಯಾಂಕಿನವರು, ಗವರ್ನರ್ ಜನರಲ್‌ರವರ ಮಂಜೂರಾತಿಗೊಳಪಟ್ಟು ಬಡ್ಡಿಗೆ ಹಾಕುವುದಕ್ಕೋಸ್ಕರ ಅವುಗಳನ್ನು ಅಂಗೀಕರಿಸುವುದಕ್ಕಾಗಿ ಈಚೆಗೆ ರಚಿಸಲ್ಪಟ್ಟಿರುವ "ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ" ತಿದ್ದುಪಾಟಿನ ಮಸೂದಾ ಕಾನೂನಿನಲ್ಲಿ ನಿಯಮವು ಕಲ್ಪಿಸಲ್ಪಟ್ಟಿದೆ. ಈ ಉದ್ದೇಶಕ್ಕಾಗಿ ನಮ್ಮ ಸೆಕ್ಯೂರಿಟಿ ಪತ್ರಗಳನ್ನು ಅಂಗೀಕರಿಸಿ ಅವಶ್ಯಕವಾದ ಇಸ್ತಿಹಾರ್‌ನಾಮೆಯನ್ನು ಸಾದರಾಪಡಿಸುವಂತೆ ಇಂಡಿಯಾ ಸರ್ಕಾರದವರನ್ನು ಕೋರಲಾಗಿದೆ. ಅಲ್ಲದೆ, ನಮ್ಮ ಸೆಕ್ಯೂರಿಟಿ ಪತ್ರಗಳನ್ನು ಟ್ರಸ್ಟ್ ಸೆಕ್ಯೂರಿಟಿಗಳನ್ನಾಗಿ ಅಂಗೀಕರಿಸುವುದಕ್ಕೆ ಅವಕಾಶವುಂಟಾಗುವಂತೆ "ಇಂಡಿಯನ್ ಟ್ರಸ್ಟ್ಸ್ ಆಕ್ಟ್" ಎಂಬ ಕಾನೂನನ್ನು ತಿದ್ದುಪಾಟು ಮಾಡುವಂತೆಯೂ ಸಹ ಅವರನ್ನು ಕೋರಲಾಗಿದೆ. ಈ ವಿಷಯದಲ್ಲಿಯೂ ಸಹ ನಮ್ಮ ಸೆಕ್ಯೂರಿಟಿಗಳ ವಿಷಯದಲ್ಲಿರತಕ್ಕ ಕೊರತೆಯು ನಿವಾರಿಸಲ್ಪಟ್ಟಿರುವ ಶುಭವಾರ್ತೆಯನ್ನು ಶೀಘ್ರದಲ್ಲೇ ಕೇಳುವವರಾಗುತ್ತೇವೆಂದು ನಾನು ನಿರೀಕ್ಷಿಸುತ್ತೇನೆ.

ಸಕ್ಕರೆ ಕೈಗಾರಿಕೆಯ ಅಭಿವೃದ್ಧಿ.

ಸರ್ ಹ್ಯಾರಿ ಮ್ಯಾಕ್‌ಗೊವಾನ್ ರವರು ಸಲಹೆಮಾಡಿರುವ ಇತರ ಮೂರು ಪರಿಹಾರೋಪಾಯಗಳನ್ನು, ಎಂದರೆ, ದಕ್ಷತೆ, ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಣೆ ಮತ್ತು ಸಹಕಾರ—ಇವುಗಳನ್ನು ಸಂಸ್ಥಾನದಲ್ಲಿನ ಉದ್ಯಮಗಳ ವಿಚಾರದಲ್ಲಿ ಆಚರಣೆಗೆ ತರುವುದಕ್ಕೆ ನಾವು ಯಾವ ಪ್ರಯತ್ನಗಳನ್ನು ನಡೆಸುತ್ತಿದ್ದೇವೆಂಬುದನ್ನು ತಿಳಿಸಲು, ಸಕ್ಕರೆಯ ವಿಷಯದಲ್ಲಿ ಪರಾಪೇಕ್ಷೆಯಿಲ್ಲದೆ, ಈ ಸಂಸ್ಥಾನಕ್ಕೆ ಅವಶ್ಯಕವಾಗಿರುವಷ್ಟು ಸಕ್ಕರೆಯನ್ನು ಇಲ್ಲಿಯೇ ತಯಾರುಮಾಡುವುದಕ್ಕಾಗಿ ಈ ವರ್ಷದಲ್ಲಿ ನಡೆಸಿರುವ ಕೆಲಸವು ಅತ್ಯುತ್ತಮವಾದ ಒಂದು ನಿದರ್ಶನವಾಗಿದೆ. ವ್ಯವಸಾಯದ ಇಲಾಖೆಯ ಡೈರೆಕ್ಟರವರಾಗಿದ್ದ ಡಾ|| ಲೆಸ್ಲಿ ಸಿ. ಕೋಲ್ಮನ್ ರವರಿಗೆ ಈ ಉದ್ಯಮದ ಸಂಬಂಧವಾಗಿ ನಾವು ಅತ್ಯಂತ ಕೃತಜ್ಞರಾಗಿರಬೇಕಾಗಿದೆ.

ಕೃಷ್ಣರಾಜಸಾಗರದ ನೀರನ್ನು ಉಪಯೋಗಿಸುವುದರ ಸಂಬಂಧವಾಗಿ ವಿವರಗಳನ್ನು ಪರ್ಯಾಲೋಚಿಸಿ ತಿಳಿಸುವ ಕಾರ್ಯವನ್ನು ಸಮಿತಿಯವರಿಗೆ ವಹಿಸಲಾಗಿದ್ದಿತಷ್ಟೆ. ಆ ಸಮಿತಿಯವರು ಮಾಡಿದ ಪ್ರಥಮ ಸಮಾಲೋಚನೆಗಳು ಮೊದಲ್ಗೊಂಡು, ಕಾರ್ಖಾನೆಯಲ್ಲಿ ಉತ್ಪತ್ತಿಯಾದ ಚಿಲ್ಲರೆ ಪದಾರ್ಥಗಳನ್ನೆಲ್ಲಾ ಲಾಭಕರವಾಗಿ ಉಪಯೋಗಿಸಿಕೊಳ್ಳಲು ಈಗ ನಾವು ಕೈಗೊಂಡಿರುವ ಪ್ರಾಜೆಕ್ಟುಗಳವರೆಗೆ, ಈ ಏರ್ಪಾಡಿಗೆ ಸಂಬಂಧಪಟ್ಟ ಚರಿತ್ರೆಯನ್ನು ಪ್ರಾರಂಭದಿಂದ ಯಾರು ಪರಿಶೀಲಿಸಿದರೂ ಮೇಲೆ ಕಂಡ ಮೂರು ಗುಣಗಳು ಅದರಲ್ಲಿ ವ್ಯಕ್ತಪಟ್ಟಿರುವುದು ಗೊತ್ತಾಗುವುದೆಂದು ನಾನು ಭಾವಿಸುತ್ತೇನೆ.

ಜಮೀನುಗಳಿಗೆ ನೀರನ್ನು ಇನ್ನು ಬಿಡಬಹುದೆಂದು ಯೋಚಿಸುವಷ್ಟರಲ್ಲಿಯೇ ದವಸಧಾನ್ಯಗಳ ಬೆಲೆಯು ತೀವ್ರವಾಗಿ ಇಳಿದುಹೋಯಿತು. ನೀರಾವರಿ ಸಾಗುವಳಿಯ ಹೊಸ ಏರ್ಪಾಡಿಗೆ ಕಾರಣಭೂತರಾದ ಜನರಿಗೆ ಇದರಿಂದ ಭಾರಿ ತೊಂದರೆಯುಂಟಾಯಿತು. ಬತ್ತಕ್ಕಿಂತಲೂ ಹೆಚ್ಚು ಲಾಭಕರವಾದ ಹೊಸ ಬೆಳೆಯೊಂದನ್ನು, ಎಂದರೆ, ಕಬ್ಬಿನ ಬೆಳೆಯನ್ನು ಕೈಗೊಳ್ಳುವುದಕ್ಕಾಗಿ ಅದೃಷ್ಟವಶಾತ್ ಅವರು ಆಗಲೇ ಪರ್ಯಾಲೋಚಿಸಿ ಆ ಬೆಳೆಗೆ ತಕ್ಕ ಸೌಕರ್ಯಗಳನ್ನು ತಮ್ಮ ಏರ್ಪಾಡಿನಲ್ಲಿಯೇ ಕಲ್ಪಿಸಿದ್ದರು. ಆದರೆ ಕಬ್ಬನ್ನು ಬೆಳೆಯುವಂತೆ ಜನರಿಗೆ ಬೋಧಿಸುವುದಕ್ಕೂ, ಕಾರ್ಖಾನೆಯಲ್ಲಿನ ಉಪಯೋಗಕ್ಕೆ ಒದಗುವಷ್ಟುಮಟ್ಟಿನ ಪರಿಣಾಮದಲ್ಲಿ ಕಬ್ಬನ್ನು ಬೆಳೆಯುವ ಏರ್ಪಾಡನ್ನು ಮಾಡುವುದಕ್ಕೂ ವಿಶೇಷ ವ್ಯತ್ಯಾಸವಿದೆ. ಆದುದರಿಂದ ಹೊಸ ಜಾತಿಯ ಕಬ್ಬುಗಳನ್ನು ಬೆಳೆದು, ಸಾಗುವಳಿಯ ಹೊಸವಿಧಾನಗಳನ್ನೂ ಪರೀಕ್ಷೆಮಾಡಿ ಅವುಗಳನ್ನು ರೂಢಿಯಲ್ಲಿ ತರಬೇಕಾಯಿತು. ಮತ್ತು ಸರದಿಯ ಮೇಲೆ ಬೆಳೆಗಳನ್ನಿಡತಕ್ಕ ಒಂದು ತೃಪ್ತಿಕರವಾದ ಏರ್ಪಾಡನ್ನೂ ಗೊತ್ತುಮಾಡಿಕೊಳ್ಳಬೇಕಾಯಿತು. ಅಲ್ಲದೆ ಯುಕ್ತವಾದ ಷರತ್ತುಗಳ ಮೇಲೆ ರೈತರುಗಳಿಗೆ ಹಣವನ್ನು ಮುಂಗಡವಾಗಿ ಕೊಡುವುದಕ್ಕೂ ಮತ್ತು ಅವರು ಬೆಳೆದ ಬೆಳೆಗೆ ನ್ಯಾಯವಾದ ಮೊಬಲಗು ದೊರೆಯುವಂತೆ ಮಾಡಲಾಗುವುದೆಂದು ಅವರಿಗೆ ಖಾತರಿ ಕೊಡುವುದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಬೇಕಾಯಿತು. ಇದಲ್ಲದೆ ಕಾರ್ಖಾನೆಯಲ್ಲಿ ದಿನವಹಿ ಎಷ್ಟು ಕಬ್ಬನ್ನು ಉಪಯೋಗಿಸಲಾಗುವುದೋ ಅಷ್ಟು ಕಬ್ಬು ಕಾರ್ಖಾನೆಗೆ ಪ್ರತಿದಿನವೂ ಒದಗುವಂತೆಯೂ ಮತ್ತು ಒಂದು ಕಾಲದಲ್ಲಿ ಅದು ಕಾರ್ಖಾನೆಯ ಉಪಯೋಗಕ್ಕೆ ಮಿತಿಮೀರಿದಷ್ಟು ಒದಗಿಸಲ್ಪಟ್ಟು ಮತ್ತೊಂದು ಕಾಲದಲ್ಲಿ ಅದರ ಸರಬರಾಯಿಯು ಸಾಲದೆ ಕಾರ್ಖಾನೆಯಲ್ಲಿ ಕೆಲಸವು ನಿಂತುಹೋಗುವ ಹಾಗೆ ಆಗದಂತೆಯೂ ನೋಡಿಕೊಳ್ಳುವುದಕ್ಕಾಗಿ ತಕ್ಕ ಏರ್ಪಾಟುಗಳನ್ನೂ ನಡೆಸಬೇಕಾಯಿತು. ಈಗಾಗಲೇ ಕಬ್ಬನ್ನು ಬೆಳೆಮಾಡುತ್ತಿರುವ ಸುಮಾರು 3000 ಎಕರೆಗಳಷ್ಟು ಜಮೀನಿನಲ್ಲಿ ಈ ಎಲ್ಲಾ ಕೆಲಸಗಳನ್ನೂ ನಡೆಸಲಾಗುತ್ತಿದೆ. 1934 ನೆಯ ಇಸವಿ ಜನವರಿ 15 ನೆಯ ತಾರೀಖಿನಿಂದ ಮೇ 31 ನೆಯ ತಾರೀಖಿನವರೆಗೆ 3,022 ಟನ್ನುಗಳಷ್ಟು ಸಕ್ಕರೆಯು ಈ ಕಾರ್ಖಾನೆಯಲ್ಲಿ ತಯಾರಾಗಿದೆ. 1400 ಎಕರೆಗಳಲ್ಲಿ ಬೆಳೆದು ಬಂದ 30,448 ಟನ್ನುಗಳಷ್ಟು ಕಬ್ಬಿನಿಂದ ಮೇಲ್ಕಂಡ ಪ್ರಮಾಣದ ಸಕ್ಕರೆಯು ತಯಾರಿಸಲ್ಪಟ್ಟಿದೆ. ಇನ್ನೂ 900 ಎಕರೆಗಳಲ್ಲಿ ಬೆಳೆದ ಕಬ್ಬು ಹಾಗೆಯೇ ಉಳಿದಿದೆ. ಮತ್ತು ಇದರಿಂದ ಇನ್ನೂ 2000 ದಿಂದ 2500 ಟನ್ನುಗಳಷ್ಟು ಸಕ್ಕರೆಯು ತಯಾರಾಗಬಹುದೆಂದು ನಿರೀಕ್ಷಿಸಿದೆ. ಈ ಮಧ್ಯೆ, ಮೈಸೂರು ದೇಶದಲ್ಲಿ 1668 ಟನ್ನುಗಳಷ್ಟು ಸಕ್ಕರೆಯನ್ನೂ ಮತ್ತು ಮೈಸೂರುದೇಶದ ಅಕ್ಕಪಕ್ಕಗಳಲ್ಲಿರುವ ಬ್ರಿಟಿಷ್ ಇಂಡಿಯಾಕ್ಕೆ ಸೇರಿದ ಪ್ರದೇಶಗಳಲ್ಲಿ 1190 ಟನ್ನುಗಳಷ್ಟು ಸಕ್ಕರೆಯನ್ನೂ, ಎಂದರೆ, ಒಟ್ಟು 2858 ಟನ್ನುಗಳಷ್ಟು ಸಕ್ಕರೆಯನ್ನು ಒಟ್ಟು 7,58,280 ರೂಪಾಯಿಗಳ ಬೆಲೆಗೆ ಮಾರಲಾಗಿದೆ. ಜಮೀನಿನ ಹಿಡುವಳಿದಾರರು ಹೆಚ್ಚು ಕಬ್ಬನ್ನು ಬೆಳೆಯಲು ಈಗ ಉತ್ಸುಕರಾಗಿದ್ದಾರೆ. ಇದಕ್ಕೆ ತಕ್ಕಂತೆ ಕೆಲಸ ನಡೆಸುವುದಕ್ಕಾಗಿ, ದಿನವೊಂದಕ್ಕೆ 1400 ಟನ್ನುಗಳಷ್ಟು ಕಬ್ಬನ್ನು ಹಿಂಡುವಷ್ಟು ಮಟ್ಟಿಗೆ ಈ ಕಾರ್ಖಾನೆಯನ್ನು ವಿಸ್ತಾರಗೊಳಿಸಬೇಕೆಂದು ಉದ್ದೇಶಿಸಿದೆ. ಹೀಗೆ ವಿಸ್ತಾರಗೊಳಿಸಲ್ಪಟ್ಟ ಕಾರ್ಖಾನೆಯ ಕೆಲಸವು ಆರಂಭವಾದಾಗ ಇದು ಇಂಡಿಯಾದೇಶದಲ್ಲೆಲ್ಲಾ ಅತ್ಯಂತ ದೊಡ್ಡದಾದ ಕಾರ್ಖಾನೆಯಾಗಿ ಪರಿಣಮಿಸುವುದು. ಮತ್ತು ಮೊದಲನೆಯ ವರ್ಷದಲ್ಲಿ ಸುಮಾರು 15,000 ಟನ್ನುಗಳಷ್ಟು ಸಕ್ಕರೆಯನ್ನೂ ಮತ್ತು ಅಲ್ಲಿಂದಾಚೆಗೆ ವರ್ಷವೊಂದಕ್ಕೆ 25,000 ಟನ್ನುಗಳಷ್ಟು ಸಕ್ಕರೆಯನ್ನೂ ಅದರಲ್ಲಿ ತಯಾರಿಸಬಹುದಾಗಿದೆ.

ಏತನ್ಮಧ್ಯೆ, ಈ ಕಾರ್ಖಾನೆಯ ಚಿಲ್ಲರೆ ಉತ್ಪನ್ನಗಳು ವ್ಯರ್ಥವಾಗುವುದನ್ನು ತಪ್ಪಿಸಲು ಸಾಧ್ಯವಿರುವ ಸಂದರ್ಭಗಳಲ್ಲಿ, ಅವು ಸ್ವಲ್ಪವೂ ವ್ಯರ್ಥವಾಗದಂತೆ ನೋಡಿಕೊಳ್ಳತಕ್ಕದು ಯುಕ್ತವಾಗಿದೆ. ಆದುದರಿಂದ ಕಾರ್ಖಾನೆಯಲ್ಲಿ ತಯಾರಾಗುವ ಕಾಕಂಬಿಯನ್ನು, ಪಾನಕ್ಕೆ ಯೋಗ್ಯವಾದ ಆಲ್ಕೊಹಾಲ್ ಎಂಬ ಮಾದಕ ದ್ರವ್ಯವನ್ನೂ ಮತ್ತು ಕೈಗಾರಿಕೆಗೆ ಉಪಯೋಗಕರವಾದ ಆಲ್ಕೊಹಾಲ್ ದ್ರಾವಕವನ್ನೂ ಭಟ್ಟಿಯಿಳಿಯಿಸುವುದಕ್ಕಾಗಿ ಉಪಯೋಗಿಸತಕ್ಕದೆಂದು ತೀರ್ಮಾನಿಸಲಾಗಿದೆ; ಸೆಂಟ್ರಲ್ ಡಿಸ್ಟಿಲರಿಯನ್ನು ಬೆಂಗಳೂರಿನಿಂದ ಮಂಡ್ಯಕ್ಕೆ ಬದಲಾಯಿಸಲು ಸರ್ಕಾರದವರು ಒಪ್ಪಿದ್ದಾರೆ. ಅಲ್ಲದೆ, ದೇಶೀಯ ಮದ್ಯಗಳನ್ನು ತಯಾರ್ ಮಾಡುವುದಕ್ಕೆ ಸಂಬಂಧಪಟ್ಟ ಕಂಟ್ರಾಕ್ಟನ್ನು ಪ್ರಥಮತಃ ಹತ್ತುವರ್ಷಗಳ ಅವಧಿಯವರೆಗೆ ಮೈಸೂರು ಸಕ್ಕರೆಯ ಕಂಪೆನಿಯವರಿಗೆ ವಹಿಸಿಕೊಡುವುದಕ್ಕೂ ಸರ್ಕಾರದವರು ಒಪ್ಪಿದ್ದಾರೆ. ಕಂಪೆನಿಯವರು, ಅತ್ಯಂತ ಆಧುನಿಕ ಮಾದರಿಯಲ್ಲಿರುವ ಭಟ್ಟಿಯಿಳಿಸುವ ಯಂತ್ರವನ್ನು ತರಿಸಿಕೊಳ್ಳುವುದಕ್ಕಾಗಿ, ಆ ಯಂತ್ರಗಳು ತಯಾರಾಗುವ ಕಂಪೆನಿಯವರಿಗೆ ಬರೆದಿದ್ದಾರೆ. ಆ ಯಂತ್ರದ ಬೆಲೆಯು ಸುಮಾರು 1,50,000 ರೂಪಾಯಿಗಳಾಗಬಹುದೆಂದು ಅಂದಾಜಾಗಿದೆ. ಈ ಕೈಗಾರಿಕೆಯ ಮೊದಲನೆಯ ವರ್ಷದ ಲೆಕ್ಕಗಳು ದೊರಕುವುದಕ್ಕಿಂತ ಮುಂಚೆಯೇ, ಈ ಕಂಪೆನಿಯ ಷೇರುಗಳ ಬೆಲೆಯು 10 ರೂಪಾಯಿಗಳಿಂದ $12\frac{1}{2}$ ರೂಪಾಯಿಗಳಿಗೆ ಈಗಾಗಲೇ ಏರಿರುವುದು. ಈ ಏರ್ಪಾಡುಗಳೆಲ್ಲವೂ ಸಫಲವಾಗಿ ನೆರವೇರುತ್ತವೆಂಬುದನ್ನು ಈ ಅಂಶವು ಪ್ರಶಸ್ತರೀತಿಯಲ್ಲಿ ಸೂಚಿಸುವುದಾಗಿದೆ. ಸರ್ಕಾರದವರು ಈ ಉದ್ಯಮದಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಷೇರುಗಳನ್ನು ಪಡೆದಿರುವುದರಿಂದ ಮೊದಲನೆಯ ವರುಷದ ನಫೆಯ ಹಂಚಿಕೆಯಲ್ಲಿ ತಮ್ಮ ಭಾಗಕ್ಕೆ ಬರಬಹುದಾದ 1·20 ಲಕ್ಷ ರೂಪಾಯಿಗಳ ಮೊಬಲಗನ್ನು ಬಡ್ಡಿಯ ಲೆಕ್ಕದಲ್ಲಿ ಜಮೆಗೆ ತೆಗೆದುಕೊಂಡಿದ್ದಾರೆ.

ಲಾಭದಾಯಕವಾಗಿ ತೋರುವ ಇತರ ಅಭಿವೃದ್ಧಿಯ ಉದ್ಯಮಗಳು.

ಕಾರ್ಯದಕ್ಷತೆ, ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಣೆ ಮತ್ತು ಸಹಕಾರ—ಈ ಗುಣಗಳು ಮಿಳಿತವಾಗಿರುವ ಒಂದು ಉದ್ಯಮವು ಗಣನೀಯವಾದ ರೀತಿಯಲ್ಲಿ ಫಲಕಾರಿಯಾಗುವುದಕ್ಕೆ ಇವು ಹೇಗೆ ಸಾಧಕವಾಗಿದೆಯೆಂಬುದನ್ನು ತೋರಿಸುವ ವಿಷಯದಲ್ಲಿ ಸಕ್ಕರೆ ಕೈಗಾರಿಕೆಯನ್ನು ಪ್ರಾಮುಖ್ಯವಾದ ನಿದರ್ಶನವನ್ನಾಗಿ ತೆಗೆದುಕೊಂಡೆನಷ್ಟೆ. ನಮ್ಮ ಸಂಸ್ಥಾನಕ್ಕೆ ಬೇಕಾದ ವಸ್ತುಗಳನ್ನು ನಾವೇ ತಯಾರ್ಮಾಡಿಕೊಳ್ಳುವುದಕ್ಕಾಗಿ ನಾವು ನಡೆಸುತ್ತಿರುವ ಪ್ರಯತ್ನಗಳು ಯಾವ ರೀತಿಯಲ್ಲಿಯೂ ನಿಷ್ಫಲವಾಗಿಲ್ಲವೆಂಬುದಕ್ಕೆ ಇತರ ಸಣ್ಣಪುಟ್ಟ ನಿದರ್ಶನಗಳೂ ಇವೆಯೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಈಗ ಸುವ್ಯವಸ್ಥಿತವಾಗಿ ಸ್ಥಾಪಿಸಲ್ಪಟ್ಟಿರುವ ಸಾಬೂನು ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ನಫೆಯನ್ನು ತೋರಿಸಿದೆ. ಸಿಡುಬು ತಾಕಳವ ರಸವನ್ನು ತಯಾರಿಸುವ ಸೀರಂ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯಿಂದ ಅದಕ್ಕೆ ತಗಲುವ ವೆಚ್ಚಕ್ಕಿಂತಲೂ ಹೆಚ್ಚಾದ ವರಮಾನವು ಬರಲಾರದೆಂದು ನಿರೀಕ್ಷಿಸಿದ್ದೆವು. ಆದರೆ, ಈ ಸಂಸ್ಥೆಗಾಗಿ ಒಟ್ಟು 90,000 ರೂಪಾಯಿಗಳು ವೆಚ್ಚವಾದುದಕ್ಕೆ ಪ್ರತಿಯಾಗಿ, ಅದರಲ್ಲಿ ತಯಾರಿಸಿದ ವಸ್ತುಗಳ ಮಾರಾಟದಿಂದ 1,30,000 ರೂಪಾಯಿಗಳ ಹುಟ್ಟುವಳಿ ಬಂದಿತು. ವಿದ್ಯುಚ್ಛಕ್ತಿ ಇಲಾಖೆಗೆ ಬೇಕಾದ ಟ್ರಾನ್ಸ್‌ಫಾರ್ಮರುಗಳನ್ನು ತಯಾರುಮಾಡುವ ವಿಷಯದಲ್ಲಿ ನಾವು ಹಿಂದೆ ನಡೆಸುತ್ತಿದ್ದ ವೆಚ್ಚದಲ್ಲಿ ಬಹುಮಟ್ಟಿಗೆ ಉಳಿತಾಯವನ್ನು ಮಾಡುವುದು ಸಾಧ್ಯವಾಗಿ ನೆರವೇರಿರುವುದು ಮಾತ್ರವೇ ಅಲ್ಲದೆ, ನಾವು ತಯಾರಿಸಿ ಒದಗಿಸಬಹುದಾಗಿರುವುದಕ್ಕಿಂತಲೂ ಹೆಚ್ಚು ಟ್ರಾನ್ಸ್‌ಫಾರ್ಮರುಗಳಿಗೆ ಇಂಡಿಯಾದೇಶದ ಇತರ ಭಾಗಗಳಿಂದ ಗಿರಾಕಿಯು ಬರುವ ಸೂಚನೆಗಳು ಈಗಾಗಲೆ ಕಂಡುಬಂದಿವೆ. ನಮ್ಮ ತಿಂಗಾಣಿ ಕಾರ್ಖಾನೆಯಲ್ಲಿ ನಮಗೆ ಬೇಕಾಗುವಷ್ಟು ಇನ್‌ಸ್ಯುಲೇಟರುಗಳೂ ಮತ್ತು ವಿದ್ಯುಚ್ಛಕ್ತಿಯ ಉಪಕರಣಗಳೂ ತಯಾರಾಗುತ್ತಿವೆ. ಇವುಗಳ ಜತೆಗೆ ಉಪಯುಕ್ತವಾದ ಮತ್ತು ಆಕರ್ಷಣೀಯವಾದ ಇತರ ಹಲವು ವಸ್ತುಗಳೂ ಈ ಕಾರ್ಖಾನೆಯಲ್ಲಿ ತಯಾರಾಗುತ್ತಿವೆ. ಕೈಗಾರಿಕೆಯ ಪ್ರಯೋಗಶಾಲೆಯೂ ತೀವ್ರವಾಗಿ ಅಭಿವೃದ್ಧಿಗೊಳ್ಳುತ್ತಿದೆ. ಮತ್ತು ಅದರಲ್ಲಿ ತಯಾರಾಗುವ ಸಾಮಾನುಗಳಿಗಿರುವ ಗಿರಾಕಿಗೆ ತಕ್ಕಷ್ಟನ್ನು ಒದಗಿಸುವುದೇ ಕಷ್ಟವಾಗಿದೆ. ಬೇರೆ ಇನ್ನೊಂದು ಇಲಾಖೆಯನ್ನೇ ತೆಗೆದುಕೊಳ್ಳೋಣ. ಕುದುರೆಗಳನ್ನು ಪರದೇಶಗಳಿಂದ ತರಿಸುವುದಕ್ಕಾಗಿ ನಮಗೆ ತಗಲುತ್ತಿರುವ ವೆಚ್ಚಕ್ಕಿಂತಲೂ ಎಷ್ಟೋ ಕಡಿಮೆ ವೆಚ್ಚದಲ್ಲಿ, ಸೈನ್ಯದ ಇಲಾಖೆಗೆ ಬೇಕಾದ ಕುದುರೆಗಳ ಪೈಕಿ ಕೆಲವನ್ನು ಇಲ್ಲಿಯೇ ಒದಗಿಸಿಕೊಳ್ಳುವ ಪ್ರಯತ್ನಗಳು ಫಲದಾಯಕವಾಗಿ ಪರಿಣಮಿಸುತ್ತವೆಂದೂ ಮತ್ತು ಕುಣಿಗಲಿನ ಅಶ್ವಶಾಲಾಕ್ಷೇತ್ರದ ಆಡಳಿತದಿಂದ ಉಂಟಾಗುತ್ತಿದ್ದ ನಷ್ಟವು ಇನ್ನು ಕೆಲವು ವರುಷಗಳೊಳಗಾಗಿಯೇ ಲಾಭವಾಗಿ ಪರಿಣಮಿಸುವುದೆಂದೂ ನನಗೆ ಪೂರ್ಣ ಭರವಸೆಯಿದೆ.

ಕೆಲವು ಹಳೆಯ ಉದ್ಯಮಗಳು.

ವಿದ್ಯುಚ್ಛಕ್ತಿಯ ಇಲಾಖೆ—ಇಲ್ಲಿಯವರೆಗೆ ವಿವರಿಸಿದುವು ಬಹುಮಟ್ಟಿಗೆ ಹೊಸ ಉದ್ಯಮಗಳು. ಇನ್ನು ಕೆಲವು ಹಳೆಯ ಉದ್ಯಮಗಳನ್ನು ಈಗ ಪರಿಶೀಲಿಸೋಣ. ವಿದ್ಯುಚ್ಛಕ್ತಿಯ ಇಲಾಖೆಯಿಂದ ಇನ್ನೂ ಲಾಭವೇನೋ ಬರುತ್ತಿದೆ. ಆದರೆ ಅದಕ್ಕೆ ವೆಚ್ಚಮಾಡಿದ ಬಂಡವಾಳದ ಮೇಲೆ ಮೊದಲಿನ ವರ್ಷಗಳಲ್ಲಿ ಬರುತ್ತಿದ್ದಷ್ಟು ಹೆಚ್ಚು ದಾಮಾಷಾದಲ್ಲಿ ಈಗ ಬರುತ್ತಿಲ್ಲ. ಇದರ ಕಾರಣವು ಎರಡು ಬಗೆಯಾಗಿದೆ. ಒಂದನೆಯದಾಗಿ, ಇಲಾಖೆಯು ಪ್ರಾರಂಭವಾದ ಕಾಲದಲ್ಲಿ ಸ್ಥಾಪನೆಮಾಡಿದ್ದ ಯಂತ್ರಗಳು ಮತ್ತು ಯಂತ್ರಸಾಮಗ್ರಿಗಳ ಪೈಕಿ ಅನೇಕವನ್ನು ಈಗ ನವೀಕರಿಸಬೇಕಾಗಿದೆ. ಆದರೆ ಇನ್ನೊಂದು ಕಾರ್ಯವು ಇದಕ್ಕಿಂತ ಮುಖ್ಯವಾದುದಾಗಿದೆ. ನಮ್ಮ ದೇಶದ ಜನರ ಜೀವನದ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವಷ್ಟೆ. ಈ ಪ್ರಯತ್ನವನ್ನು ನೆರವೇರಿಸುವುದಕ್ಕೆ ವಿದ್ಯುಚ್ಛಕ್ತಿಯು ಸಾಧ್ಯವಾದಷ್ಟು ಗ್ರಾಮಗಳಲ್ಲಿ ಬಳಕೆಗೆ ಬರುವಂತೆ ಮಾಡುವುದೂ ಒಂದು ಸಾಧನವಾಗಿದೆ. ವ್ಯಾಪಾರೋದ್ದೇಶಗಳಿಗಾಗಿ ವಿದ್ಯುಚ್ಛಕ್ತಿಯನ್ನೊದಗಿಸುವುದರಿಂದ ಬರುವಷ್ಟು ಲಾಭವು ಮೇಲ್ಕಂಡ ರೀತಿಯ ಉದ್ದೇಶಗಳಿಗೆ ಅದನ್ನು ಒದಗಿಸುವುದರಿಂದ ಬರಲಾರದೆಂಬುದು ಸ್ವತಸ್ಸಿದ್ಧವಾಗಿದೆ.

ರೇಷ್ಮೆ—ರೇಷ್ಮೆ ಕೈಗಾರಿಕೆಯು ಇನ್ನೂ ಮುಗ್ಗಟ್ಟಿನ ಸ್ಥಿತಿಯಲ್ಲಿಯೇ ಇದೆ. ಇಂಡಿಯಾ ಸರ್ಕಾರದವರು ಈ ಕೈಗಾರಿಕೆಯ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ರಕ್ಷಣೆಯ ಏರ್ಪಾಡನ್ನು ನಡೆಸಿರುತ್ತಾರೆ. ಮತ್ತು ರೇಷ್ಮೆ ಕೈಗಾರಿಕೆಯ ಸಂಬಂಧದಲ್ಲಿ ಪರಿಶೋಧನೆಗಳನ್ನು ನಡೆಸುವುದಕ್ಕಾಗಿ ಒಂದು ಗ್ರಾಂಟನ್ನು ಕೊಡುವುದಾಗಿಯೂ ತೀರ್ಮಾನಿಸಿದ್ದಾರೆ. ಇದು ಸಂತೋಷಕರವಾದ ಸಂಗತಿಯಾಗಿದೆ. ಆದಾಗ್ಯೂ, ಈ ಕೈಗಾರಿಕೆಗೆ ಇಂಡಿಯಾ ಸರ್ಕಾರದವರು ಎಷ್ಟು ಮಟ್ಟಿನ ರಕ್ಷಣೆಯನ್ನು ಕಲ್ಪಿಸುವುದು ಯುಕ್ತವೆಂದು ನಾವು ಭಾವಿಸಿದ್ದೆವೋ ಅಷ್ಟು ಮಟ್ಟಿನ ರಕ್ಷಣೆಯು ಅವರಿಂದ ದೊರೆತಿಲ್ಲವೆಂಬುದನ್ನು ತಿಳಿಸಲು ವಿಷಾದಿಸುತ್ತೇನೆ. ನೆಯ್ಗೆ ಕೈಗಾರಿಕೆಗೆ ರಕ್ಷಣೆಯನ್ನು ಕೊಡುವುದಕ್ಕಾಗಿ ಏರ್ಪಟ್ಟ ಇಂಡಿಯಾದೇಶದ ಆಕ್ಟನ್ನು ತಿದ್ದುಪಾಟುಮಾಡುವ ಕಾನೂನು ಜಾರಿಗೆ ಬರುವುದೆಂಬ ನಿರೀಕ್ಷಣೆಯ ಮೇಲೆ ಪ್ರಸಕ್ತ ಸಾಲಿನ ಮೊದಲನೆಯ ಮೂರು ತಿಂಗಳಲ್ಲಿ ರೇಷ್ಮೆಯ ಸರಕುಗಳು ಬಹಳವಾಗಿ ಆಮದಾಗಿ ಬಂದ ಪ್ರಯುಕ್ತ ಪೇಟೆಯಲ್ಲಿ ವಿಶೇಷ ದಾಸ್ತಾನು ಬಿದ್ದಿರುವುದರಿಂದ, ನಮ್ಮ ರೇಷ್ಮೆಯ ಕಾರ್ಖಾನೆಯಲ್ಲಿ ತಯಾರಾದ ಸರಕುಗಳೂ ಕೂಡ ಬಹಳವಾಗಿ ದಾಸ್ತಾನು ನಿಂತಿವೆ.

ಕೃಷ್ಣರಾಜೇಂದ್ರ ಹತ್ತಿಯ ಗಿರಣಿ—ಸರ್ಕಾರದವರು ಈ ಒಂದು ಹತ್ತಿಯ ಗಿರಣಿಯ ವಿಷಯದಲ್ಲಿ ಮಾತ್ರವೇ ಆಸಕ್ತಿಯುಳ್ಳವರಾಗಿದ್ದಾರೆ: 1933ನೆಯ ಇಸವಿಯಲ್ಲಿ ಇತರ ಎಲ್ಲ ನೆಯ್ಗೆಯ ಕೈಗಾರಿಕೆಗೆ ಒದಗಿದ್ದಂತೆಯೇ ಈ ಕಾರ್ಖಾನೆಗೂ ಕೂಡ ವಿಶೇಷ ಬಿಕ್ಕಟ್ಟಿನ ಪರಿಸ್ಥಿತಿಯೊದಗಿದ್ದಿತು. ವ್ಯಾಪಾರದ ಮುಗ್ಗಟ್ಟು ಹಿಂದಿನಂತೆಯೇ ಈ ವರುಷವೂ ಬಲವತ್ತರವಾಗಿದ್ದಿತು. ಜಪಾನ್ ದೇಶದಿಂದಲೂ ಮತ್ತು ನಾಡ್ಯದ ಬೆಲೆಯು ಇಳಿದುಹೋದ ಇತರ ದೇಶಗಳಿಂದಲೂ ಆಮದು ಮಾಡಲ್ಪಟ್ಟ ಸರಕುಗಳ ಪೈಪೋಟಿಯು ಪ್ರಬಲವಾಗಿದ್ದಿತು. ಮತ್ತು ದವಸಧಾನ್ಯಗಳ ಬೆಲೆಯು ವಿಪರೀತವಾಗಿ ಇಳಿದುಹೋದುದರ ಪರಿಣಾಮವಾಗಿ ಪದಾರ್ಥಗಳನ್ನು ಕೊಂಡುಕೊಳ್ಳತಕ್ಕ ಸಾಮರ್ಥ್ಯವು ಜನರಲ್ಲಿ ಕಡಿಮೆಯಾಯಿತು. ಈ ಎಲ್ಲ ಕಾರಣಗಳಿಂದ, ಈ ಗಿರಣಿಯ ಆಯವ್ಯಯಗಳನ್ನು ಸರಿದೂಗಿಸುವುದೇ ಬಹಳ ಕಷ್ಟವಾಯಿತು. ಈ ಗಿರಣಿಯ ಆಡಳಿತದ ವೆಚ್ಚದಲ್ಲಿ ಅಲ್ಲಿನ ಅಧಿಕಾರಿಗಳು ವಿಶೇಷ ಮಿತವ್ಯಯವನ್ನುಂಟುಮಾಡಿರುತ್ತಾರೆ. ಮತ್ತು ಸಾಧ್ಯವಾದ ಕಡೆಗಳಲ್ಲೆಲ್ಲಾ ಕಾರ್ಯದಕ್ಷತೆಯನ್ನು ಹೆಚ್ಚಿಸಲು ತಕ್ಕ ಕ್ರಮಗಳನ್ನು ನಡೆಸಿರುತ್ತಾರೆ. ಮಗ್ಗಗಳನ್ನು ಸ್ಥಾಪಿಸತಕ್ಕ ಏರ್ಪಾಡೊಂದು ಅವರ ಪರ್ಯಾಲೋಚನೆಯಲ್ಲಿದೆ. ಈ ಗಿರಣಿಯ ಕೆಲಸವನ್ನು ಸರ್ಕಾರದವರು ವಿಶೇಷ ಔತ್ಸುಕ್ಯದಿಂದ ಅವಲೋಕಿಸುತ್ತಿದ್ದಾರೆ. ಮತ್ತು ಕಳೆದ ಕೆಲವು ತಿಂಗಳುಗಳಲ್ಲಿ ಗಿರಣಿಯ ಪರಿಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮಗೊಂಡಿರುವ ಚಿಹ್ನೆಯು ಕಂಡುಬಂದಿದೆಯೆಂದು ನಂಬುತ್ತಾರೆ.

[ಸಶೇಷ]

ಅಮೃತಸರದಲ್ಲಿ ಒಬ್ಬ ಮೋಟಾರ್ ಡ್ರೈವರನು ಒಬ್ಬ ಗುರುಗಳ ಉಪದೇಶದಂತೆ 8 ವರ್ಷಗಳಿಂದಲೂ ದೇವರನ್ನು ಹುಡುಕುತ್ತಿದ್ದನಂತೆ! ಕಡೆಗೆ ದೇವರು ಪ್ರಸನ್ನನಾಗದಿರಲು, ಕೋಪದಿಂದ ಗುರುಗಳ ಮೇಲೆ 8,000 ರೂಪಾಯಿಗಳಿಗೆ ದಾವೆಯನ್ನು ಮಾಡಿದನು. ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ, ದೇವರು ಕಣ್ಣಿಗೆ ಕಾಣಿಸುವುದು ಅಸಾಧ್ಯವೆಂದು ಡ್ರೈವರನಿಗೆ 20 ರೂ. ದಂಡವನ್ನು ವಿಧಿಸಿದರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೆರಡು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ವಾರಸ್ಯಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 39

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬುರ್ಗಾ.

ಶ್ರೀರಾಜಶೇಖರವಿಲಾಸ

ವೀರಶೈವ ಮಾಡರ್ನ ಹೋಟೆಲ್

ನಂ. 8, ಚಿಕ್ಕಪೇಟೆ, ದಿವಾನ್

ಸೂರಪ್ಪನವರ ಗಲ್ಲಿ,

(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನೂತನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (15)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ ಪ್ರೊಪ್ರೈಟರ್.

ಮಲೇರಿಯಾಕ್ಕೆ ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಆಣೆ 14, $\frac{1}{2}$ ಡಜನ್ 8-8-0 ಮತ್ತು ರೂ. 5

ರ್‍ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ವಾತಶೂಲೆ, ಗಂಟುನೋವು ಸಂದುಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಚಜ್ಜಿ ದ ವ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಶಿಸುವದು. ಡಬ್ಬಿಗೆ 8 ಆಣೆ. $\frac{1}{2}$ ಡಜನಿಗೆ 2-12-0. ಡಜನಿಗೆ 5-4-0

ಚಿಲ್ಲರೆಮದ್ದುಗಳು. ಹೊಮ್ಯೋಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಯುಳ್ಳ ರೋಗ, ದದ್ದು, ತುರಿಸುವ ನಂಜಿ ಹುಣ್ಣುಗಳನ್ನು ತಕ್ಷಣ ಗುಣಪಡಿಸುವದು. ಡಬ್ಬಿಗೆ ಆ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಠಿಣ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

$\frac{1}{2}$ ಡಬ್ಬಿಗೆ ಆಣೆ 8, $\frac{1}{2}$ ಡಜನಿಗೆ ರೂ. 2-12-0

ಮುಖ ರೂಪಗಳು ವಿಕಾರಕ್ಕೆ ನಿಮೂರ್ಲಟ್ಟು ಮುದುಳು ಕಾಯಗಳು ನಿಸ್ತೇಜವಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕನ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪು-ಸಾರಿಸವನ** ಅತ್ಯಂತರ ಕನಂತೆಯೇ ಯುವಕನಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಆಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ತೆ:— ಮಲೇರಿಯಾನ ಕಂಪೆನಿ,

[41] (ಹಂಪನಕಟ್ಟೆ), 21, ಮಂಗಳೂರು

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 32

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು **"ವೀರಶೈವರತ್ನ"** ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆರೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆರೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆರೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆರೆ ೧ಕ್ಕೆ	೦—೦—೬
ಪಟ್ಟಾಭಿಷೇಕಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆರೆ ೧ಕ್ಕೆ	೦—೦—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗಿಘರದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆರೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯೊಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[23] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ನೇ ಜೂನ ೧೯೩೪ [ಸಂಚಿಕೆ ೬

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಒಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಅದ್ವೈತಖಂಡನಪೂರ್ವಕ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ಸಿದ್ಧಾಂತಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಧನ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ

ಧಾರವಾಡ ಡಿ|| ಗದಗಬೆಟಗೇರಿ ನಿವಾಸಿಗಳಾದ ಮ|| ರಾ|| ವೀರಪ್ಪಾ ಗೋಡಿ ಇವರ ಪುತ್ರಿ ಚಿ|| ಸೌ|| ವೀರವ್ವನನ್ನು ಅಬ್ಬಿಗೇರಿಯಲ್ಲಿರುವ ಮ|| ರಾ|| ಸಂಗಪ್ಪಾ ಬಯಲಣ್ಣನವರ ಪುತ್ರ ಚಿ|| ಶಿವಪ್ಪನಿಗೂ, ಸದರಿಯವರ ದ್ವಿತೀಯ ಪುತ್ರಿ ಚಿ|| ಸೌ|| ಗಂಗವ್ವನನ್ನು ಸದರಿಯವರ ದ್ವಿತೀಯ ಪುತ್ರ ಚಿ|| ಬಸಪ್ಪನಿಗೂ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 3 ರೂ. ಗಳು ಮ|| ರಾ|| ನೀಲಪ್ಪಗೌಡ ಶಿವನಗೌಡ ಹಿರೇಮನಿ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಬಸಪ್ಪ ನಾಗಪ್ಪ ಬೀಲೇರಿ ಇವರ ಪುತ್ರ ಚಿ|| ನಾಗಪ್ಪನಿಗೆ, ಹೊಂಬಳ ಗ್ರಾಮದ ಮ|| ರಾ|| ಶಿವಪ್ಪಮುಧೋಳ ಇವರ ಪುತ್ರಿ ಚಿ|| ಸೌ|| ವೀರವ್ವನನ್ನೂ, ಮೇಲ್ಕಂಡ ಮ|| ರಾ|| ಬಸಪ್ಪ ನಾಗಪ್ಪ ಬೀಲೇರಿ ಇವರ ತಮ್ಮಂದಿರಾದ ಮ|| ರಾ|| ಚನ್ನವೀರಪ್ಪ ಬೀಲೇರಿ ಇವರ ಪುತ್ರ ಚಿ|| ನಾಗಪ್ಪನಿಗೆ ಚಳಗೇರಿ ಗ್ರಾಮದ ಮ|| ರಾ|| ಚನ್ನಪ್ಪ ಹಿರೇಮನಿ ಇವರ ಪುತ್ರಿ ಚಿ|| ಸೌ ಕಳಕವ್ವನನ್ನೂ ಕೊಟ್ಟು ನಿಜವೈಶಾಖ ಬಹುಳ ೯ ದಿವಸ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರತಿಯೊಬ್ಬವರನ ಕಡೆಯಿಂದ 2 ರೂ. ಗಳಂತೆ ಸಮರ್ಪಿಸಲ್ಪಟ್ಟ 4 ರೂ. ಗಳು ಪ್ರತಿಯೊಬ್ಬ ವಧುವಿನ ಕಡೆಯಿಂದ 1 ರೂ. ಯಂತೆ ಸಮರ್ಪಿಸಲ್ಪಟ್ಟ 2 ರೂ. ಗಳು ಒಟ್ಟು 6 ರೂ. ಗಳು ಮ|| ರಾ|| ಮಲ್ಲಿಕಾರ್ಜುನಪ್ಪಾ ಚನ್ನವೀರಪ್ಪಾ ಬೀಲೇರಿ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಬ್ಯಾಡಗಿ ನಿವಾಸಿಗಳಾದ ಮ|| ರಾ|| ಪುಟ್ಟಪ್ಪನವರು ತೊಪ್ಪಲದ ಇವರ ಪುತ್ರ ಚಿ|| ಮಲ್ಲಿಕಾರ್ಜುನಪ್ಪನಿಗೆ ದಾವಣಗೇರಿ ನಿವಾಸಿಗಳಾದ ಮ|| ರಾ|| ಅಲ್ಲಿ ಬಸಪ್ಪನವರ ಪುತ್ರಿ ಚಿ|| ಸೌ|| ಗಂಗವ್ವನನ್ನು ಕೊಟ್ಟು ನೇರವೇರಿಸಿದ ವಿವಾಹಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ಯು ವೇ|| ಸಿದ್ಧರಾಮೇಶ್ವರ ಸ್ವಾಮಿ ಹಿರೇಮಠ ಬೆಲವಂತರ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಚಂದಾದಾರರಲ್ಲಿ ಸಂತೋಷದ ಸೂಚನೆ.

ನಮ್ಮ ಪತ್ರಿಕೆಯು ಹೊಸದಾಗಿ ರಜಿಸ್ಟರಾಗಿ ೩ ಪೈ. ಸ್ಟಾಂಪಿನ ಹುಕುಂ ಈ ವಾರದಲ್ಲಿ ಬಂದುದು ಅತ್ಯಂತ ಸಂತೋಷಕರವಾದ ಸಂಗತಿಯಾಗಿದೆ. ಇನ್ನು ಮುಂದೆ ಪತ್ರಿಕೆಯು ಪೂರ್ವದಂತೆ ವಾರಕ್ಕೊಮ್ಮೆ ಸರಿಯಾಗಿ ಕಳುಹಿಸಲ್ಪಡುವುದೆಂಬ ವಿಷಯವನ್ನು ಸರ್ವರೂ ಗ್ರಹಿಸತಕ್ಕದ್ದು.

ಸಂ.—

ಜಾಹೀರ ನೋಟೀಸು.

ಕೆಳಗೆ ಸಹಿಮಾಡಿದವರಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ—ನಮ್ಮ ಅಣ್ಣನ ಮಗನಾದ ಗುರುಶಾಂತಪ್ಪಾ ಹುಂಚಿನಾಳ ಈತನು ಇದುವರೆಗೆ ಏಕತ್ರವಾಗಿ ಇದ್ದು ತಾ|| ೨-೬-೧೯೩೪ನೇ ದಿವಸ ನಮ್ಮ ಘರಾಣೇದ ಆಸ್ತಿಯ ವ ದಲಾಲಿ ಅಂಗಡಿಯ ಮೇಲಿನ ಯಾವತ್ತು ಹಕ್ಕು ಬಿಟ್ಟು ಪತ್ರ ಬರೆದುಕೊಟ್ಟು ನೋಂದಣಿಮಾಡಿಸಿಕೊಟ್ಟಿದ್ದಾನೆ. ಕಾರಣ ಆತನ ಕೂಡ "ವಿರೂಪಾಕ್ಷಪ್ಪಾ ವ ಮುರಿಗೆಪ್ಪಾ ಹುಂಚಿನಾಳ" ಈ ನಾಮೇದಿಂದ ಯಾರೂ ಯಾವ ತರಹದ ವ್ಯವಹಾರ ಮಾಡಬಾರದು. ಸದರ ಅಂಗಡಿಯು ಲೇವಾದೇವಿ ಮಾಲ್ಕಿ ನನ್ನದಿರುತ್ತದೆ. ತಿಳಿಯುವದು.

ಸಹಿ ಮುರಿಗೆಪ್ಪಾ ಗುರುಶಾಂತಪ್ಪಾ,
ತಾ|| ೧೬-೬-೩೪. **ಹುಂಚಿನಾಳ, ಗದಗ.**

ಸ್ವಾಗತಯಂತ್ರ !

ವ್ಯಾಂಕೂವರ್ ನಗರದ 'ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾನಿಲಯ'ದ ಡಾಕ್ಟರ್ ಜೆ. ಎಂ. ಷ್ರಂರವರು ಒಂದು ವಿಚಿತ್ರಯಂತ್ರವನ್ನು ತಯಾರಿಸಿರುವರು. ಈ ಯಂತ್ರವು ಸಕಾಲದಲ್ಲಿ ಬರುವ ವಿದ್ಯಾರ್ಥಿಗಳಿಗೆ ಬಾಗಿಲಿನ ಮೇಲ್ಭಾಗದಲ್ಲಿರುವ ಬೋರ್ಡಿನಲ್ಲಿ 'ಸುಸ್ವಾಗಮನ' ಎಂಬುದಾಗಿಯೂ, ಕಾಲಮೀರಿ ಬರುವವರಿಗೆ 'ಪುನಃ ಸಾವಕಾಶ' ಎಂಬುದಾಗಿಯೂ ತೋರಿಸುವುದಲ್ಲದೆ ಯಾರಾದರೂ ಬಹಳ ಸಾವಕಾಶವಾಗಿ ಬಂದರೆ ಗಂಟೆಯನ್ನೂ ಬಾರಿಸುವುದಂತೆ!

ನ್ಯೂಯಾರ್ಕ್ ನಗರದ ಜೇಮ್ಸ್‌ಟೌನಿನಲ್ಲಿ 2000 ಗ್ಯಾಲನ್ ಪೆಟ್ರೋಲ್ ಇದ್ದ ಒಂದು ದೊಡ್ಡ ತೊಟ್ಟಿಗೆ ವಿದ್ಯುಚ್ಛಕ್ತಿಯಿಂದ ಬೆಂಕಿಹತ್ತಿ ಮಹಾರಭಸದಿಂದ ಸಿಡಿಯಿತು. 12 ಜನರು ಸತ್ತರು. 50 ಜನರಿಗೆ ಮೇಲ್ಪಟ್ಟು ಗಾಯಗಳಾಗಿರುತ್ತವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಅಮಂಗಲವಿಚಾರ ವಿಮರ್ಶೆ.

ಲೇಖಕ:—ಎಸ್. ಎಚ್. ಪಂಚಾಕ್ಷರಪ್ಪನವರು.

(ಹಿಂದಲಿಂದ ಮುಂದೇಸಾಗಿದುದು.)

ಅಸತ್ಯಮಯ ಚರಿತ್ರವನ್ನು ಬರೆಯುವದರಲ್ಲಿ ಅಗ್ರೇಸರನಾಗಿರುವ ಕೆಳದಿ ನೃಪವಿಜಯಕಾರನು ತನ್ನ ಪುಸ್ತಕದ ೩ ನೆಯ ಆಶ್ವಾಸದಲ್ಲಿ ದೊಡ್ಡ ಸಂಕಣ್ಣನಾಯಕನು ಕಾಶಿಗೆ ಹೋಗಿ ಕಪಿಲಧಾರಾತೀರ್ಥ-ಮಾನಸಸರೋವರ ಮೊದಲಾದುವುಗಳನ್ನು ಜೀರ್ಣೋದ್ಧಾರಮಾಡಿ ತನ್ನ ಮಗ ವೆಂಕಟಪ್ಪನಾಯಕನ ಹೆಸರಿನಿಂದ ಶಿಲಾಶಾಸನವನ್ನು ಬರೆಯಿಸಿದನೆಂದು ಬರೆದಿರುತ್ತಾನಷ್ಟೆ! ಈ ಅಸತ್ಯವಿಷಯವನ್ನು ಸ್ವಲ್ಪ ವಿಮರ್ಶಿಸೋಣ! ಕಾಶಿಗೆ ಸಮೀಪದಲ್ಲಿರುವ ಕಪಿಲಧಾರಾತೀರ್ಥದಲ್ಲಿ ಕೆಳದಿರಾಜರ ಸಂಬಂಧವಾದುದೊಂದು ಶಿಲಾಶಾಸನವಿರುವುದು ನಿಜ! ಆ ಶಾಸನದಲ್ಲಿ—

ಶ್ರೀ ಸ್ವಸ್ತಿಶ್ರೀ ವಿಕ್ರಮಶಕ ೧೬೧೩ ಶಾಲಿವಾಹನಶಕ ೧೫೭೭ ರ ಸಮಯದಲ್ಲಿ ಕೆಳದಿ ಸದಾಶಿವನಾಯಕರವರ ಮರಿಮೊಮ್ಮಕ್ಕಳೂ ಸಂಕಣ್ಣನಾಯಕರ ಮೊಮ್ಮಕ್ಕಳೂ ಸಿದ್ದಪ್ಪನಾಯಕರ ಮಕ್ಕಳೂ ಆದ ಶಿವಪ್ಪನಾಯಕ ವೆಂಕಟಪ್ಪನಾಯಕರು ಕಪಿಲಧಾರೆಯಲ್ಲಿ ಕಟ್ಟಿಸಿದ ಕೊಳ.

ಈ ರೀತಿಯಾಗಿ ವಾಕ್ಯಗಳು ಕೆತ್ತಲ್ಪಟ್ಟಿವೆ. ದೊಡ್ಡಸಂಕಣ್ಣನಾಯಕನು ಮೃತಪಟ್ಟ ೯೭ ವರ್ಷಗಳ ಮೇಲೆ ಶಿವಪ್ಪನಾಯಕ ವೆಂಕಟಪ್ಪನಾಯಕರೆಂಬುವರು ಕಾಶಿಗೆ ಹೋಗಿ ಆ ತೀರ್ಥವನ್ನು ಕಟ್ಟಿಸಿದರೆಂದು ಈ ಶಾಸನದಿಂದ ತಿಳಿದುಬರುತ್ತದೆ. ಕೆಳದಿ ನೃಪವಿಜಯಕಾರನು ಈ ರೀತಿಯಾಗಿರುವ ನಿಜವೃತ್ತಾಂತವನ್ನು ತಿಳಿದುಕೊಳ್ಳದೆ ವೆಂಕಟಪ್ಪನಾಯಕನ ಹೆಸರನ್ನು ಕೇಳಿ ಆ ಹೆಸರಿನವನು ಸಂಕಣ್ಣನ ಮಗನಿರಬೇಕೆಂದು ಭಾವಿಸಿ ಈ ವಿಷಯವನ್ನು ಸಂಕಣ್ಣನ ಚರಿತ್ರೆಯಲ್ಲಿ ಸೇರಿಸಿಬಿಟ್ಟಿದ್ದಾನೆ. ಈ ರೀತಿಯಾಗಿ ಕವಿಯು ಒಂದಕ್ಕೊಂದು ಸಂಬಂಧವಿಲ್ಲದೆ ಬರೆದು ಎಲ್ಲಾ ವಿಷಯಗಳನ್ನು ಹೊಲಸೆಬ್ಬಿಸಿಬಿಟ್ಟಿದ್ದಾನೆ. ಶಿವಪ್ಪನಾಯಕ, ವೆಂಕಟಪ್ಪನಾಯಕರು ಕಾಶಿಗೆ ಹೋದುದು ನಿಜವಾಗಿರುವುದರಿಂದ ಅವರ ಹೆಸರಿನ ಶಾಸನವು ಈಗಲೂ ಕಪಿಲಧಾರೆಯಲ್ಲಿ ವಿರಾಜಿಸುತ್ತಿರುವುದು. ಇವರಂತೆಯೇ ದೊಡ್ಡಸಂಕಣ್ಣನಾಯಕನು ಕಾಶಿಗೆ ಹೋಗಿ, ಈ ಕವಿಯು ಬರೆಯುವಂತೆ ನಿಜವಾಗಿ ಅಪರಿಮಿತ ದಾನಧರ್ಮಗಳನ್ನು ಮಾಡಿದ್ದಪಕ್ಷದಲ್ಲಿ ಅವನ ಹೆಸರು ಕಾಶಿಯಲ್ಲಿ ಯಾವುದೊಂದಾದರೂ ಮೂಲೆಯಲ್ಲಾದರೂ ಉಳಿಯುತ್ತಿತ್ತು. ಆ ರೀತಿಯಾಗಿ ಅವನ ಹೆಸರು ಎಲ್ಲಿಯೂ ಉಳಿಯದಿದ್ದುದರಿಂದ ಸಂಕಣ್ಣನಾಯಕನು ಕಾಶೀ ಮೊದಲಾದ ಕ್ಷೇತ್ರಗಳಿಗೆ ಹೋಗಿಲ್ಲವೆಂದೂ, ಸಂಕಣ್ಣನಾಯಕನ ಕೀರ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ ಈ ಅಪ್ರಬುದ್ಧಕವಿಯು ಸುಮ್ಮಸುಮ್ಮನೆ ವರ್ಣಿಸಿದ್ದಾನೆಂದೂ ಘಂಟಾಘೋಷವಾಗಿ ಹೇಳಬಹುದಾಗಿದೆ. ಅಸ್ತು!

ಇನ್ನು ಇದೇ ಸಂದರ್ಭದಲ್ಲಿ ಉಕ್ತವಾಗಿರುವ ಶೀಲವಂತನಾಯಕ ಉರ್ಫ್ ಕಲಿಕೇತ (ಕಿಳ್ಳಿಕೇತ) ಬ್ರಹ್ಮಯ್ಯನ ವಿಷಯವನ್ನು ಸ್ವಲ್ಪ ವಿಮರ್ಶಿಸೋಣ! ಕರ್ಲಮಂಗಲಪ್ಪನವರು ವೀರಶೈವಾನಂದಚಂದ್ರಿಕೆಯಲ್ಲಿ ಶೀಲವಂತನಾಯಕ ಎಂಬ ಹೆಸರು ಕಲಿಕೇತ ಬ್ರಹ್ಮನಿಗೆ ಹೇಳಲ್ಪಟ್ಟಿರುವುದೆಂದು ತಿಳಿದುಕೊಂಡು ಕಾಶೀ ಜಗದ್ಗುರು ಪೀಠವು ಬಸಪ್ಪನ ಕಾಲದ್ದಾಯ್ತು! ಬಸಪ್ಪನ ಕಾಲದ್ದಾಯ್ತು! ಬಸಪ್ಪನ ಕಾಲದ್ದಾಯ್ತು! ಎಂದು ಆನಂದೋದ್ರೇಕದಿಂದ ಕುಣಿಕುಣಿದಾಡಿ ಹೋಗಿರುವರು. ಸಂಸ್ಕೃತಜ್ಞಾನಶೂನ್ಯರಾದ ಇವರಿಗೆ ವೀರಶೈವಾನಂದ ಚಂದ್ರಿಕೆಯನ್ನು ಓದಿ ನೋಡಲು ಶಕ್ತಿಯಂತೂ ಇಲ್ಲವೇ ಇಲ್ಲ. ಆದರೆ ಈ ವಿಷಯವನ್ನು ಇವರಿಗೆ ಯಾವನೋ ಒಬ್ಬ ಬೆಪ್ಪನು ಹೇಳಿದಂತೆ ಕಾಣುತ್ತದೆ. ಗ್ರಂಥವನ್ನು ನೋಡದೆ ಸುಮ್ಮಸುಮ್ಮನೆ ಸುಳ್ಳುವಿಷಯಗಳನ್ನು ಬರೆದು ವಾಚಕವೃಂದವನ್ನು ವಂಚಿಸುವುದು ಮಹಾಪಾಪಕರವು. ವೀರಶೈವಾನಂದ ಚಂದ್ರಿಕೆಯ ಪಾದಕಾಂಡದ ೧೦ ನೆಯ ಪ್ರಕರಣದ ಆದಿಯಲ್ಲಿ—

ಕಲಿಕೇತಬ್ರಹ್ಮನಾಮ್ನಾ ಪುರಾ ಶೀಲವತಾಸ್ಫುಟಂ

ಎಂಬೀಶ್ಲೋಕವಿದೆ. ಈ ಶ್ಲೋಕದಲ್ಲಿ ಕಲಿಕೇತಬ್ರಹ್ಮನಿಗೆ 'ಶೀಲವತಾ' ಎಂಬ ವಿಶೇಷಣವು ತೃತೀಯಾಂತವಾಗಿ ಕೊಡಲ್ಪಟ್ಟಿದೆ. 'ಆಚಾರಶೀಲನಾದ ಕಲಿಕೇತಬ್ರಹ್ಮನಿಂದ' ಎಂದು ಇದರ ಅರ್ಥವಾಗುತ್ತದೆ. ಹೀಗಿದ್ದರೂ ಇವರಿಗೆ "ಶೀಲವತಾ" ಎನ್ನುವುದಕ್ಕೆ ಶೀಲವಂತನಾಯಕನೆಂದು ಯಾವ ಅರ್ಥಪಂಡಿತನು ಅರ್ಥವನ್ನು ಹೇಳಿದನೋ ತಿಳಿಯದಾಗಿದೆ. ಸಂಸ್ಕೃತಜ್ಞಾನವಿಲ್ಲದೆ ಮನಸ್ಸಿಗೆಬಂದಂತೆ ಅಪಾರ್ಥವನ್ನು ಕಲ್ಪಿಸಿಕೊಂಡು ತಮ್ಮ ದುರುದ್ದೇಶವನ್ನು ಸಾಧಿಸುವುದಕ್ಕೆ ಹೊಂಟಿರುವುದು ಅತ್ಯಂತ ಅಯೋಗ್ಯಕಾರ್ಯವಾಗಿದೆ. ಈ ತರಹದ ವಕ್ರಮಾರ್ಗದಿಂದ ಇವರಿಗೆ ಯಾವ ಪುರುಷಾರ್ಥವು ದೊರೆಯುವುದೋ ತಿಳಿಯದಾಗಿದೆ. ಕಲಿಕೇತಬ್ರಹ್ಮನಿಗೆ ಶೀಲವಂತನಾಯಕನೆಂಬ ಹೆಸರುಂಟೆಂದು ಮನಸೋಕ್ತವಾಗಿ ಕುಣಿದಾಡಿ ಬರೆದುಕೊಂಡಿರುವ ಕರ್ಲಮಂಗಲರು ಈಗ ಮುಖಭಂಗಿತರಾಗಲಿಲ್ಲವೇ? ಯಾರೇ ಆಗಲಿ ತಮಗೆ ತಿಳಿದಕಾರ್ಯದಲ್ಲಿ ಕೈಹಾಕಬೇಕು; ತಿಳಿಯದ ಕಾರ್ಯದಲ್ಲಿ ದೂರಾಗಿರಬೇಕು. ಬಸವನ ಕುಲದವರು ಅವಿವೇಕಬಲದಿಂದ ಏನನ್ನಾದರೂ ಹೇಳಿದರೆ ಅದೇ ವೇದವಾಕ್ಯವೆಂದು ನಂಬಿ ಕುಣಿದಾಡಬಾರದು. ಪ್ರತಿಯೊಂದು ಕಾರ್ಯದಲ್ಲಿಯೂ ಸ್ವಬುದ್ಧಿಯನ್ನು ಉಪಯೋಗಿಸಿ, ಇದು ಸಾಧುವೋ ಅಸಾಧುವೋ ಎನ್ನುವುದನ್ನು ಯೋಚಿಸಬೇಕು. ಹೀಗೆ ಮಾಡುವುದೇ ಜಾಣರ ಲಕ್ಷಣ!

ಕಾಶೀಕ್ಷೇತ್ರದಲ್ಲಿರುವ ವೀರಶೈವಧರ್ಮಪೀಠವು ಯುಗಯುಗಾಂತರಗಳಲ್ಲಿಯೂ ಶ್ರೀ ಜಗದ್ಗುರು ವಿಶ್ವಾರಾಧ್ಯರಿಂದ ಸ್ಥಾಪಿಸಲ್ಪಟ್ಟಿತೆಂದು ಶಿವಾಗಮಗಳೂ ಸಾವಿರಾರು ವೀರಶೈವ ಮತಗ್ರಂಥಗಳೂ ಘಂಟಾಘೋಷವಾಗಿ ಸಾರುತ್ತಿರುವಾಗ, ಆ ಪೂಜ್ಯಪಾದರ ಹೆಸರನ್ನೇ ಕರ್ಲಮಂಗಲರೂ ಕೂಡ ಪಂಚಾಚಾರ್ಯರ ಪಂಕ್ತಿಯಲ್ಲಿ ಬರೆಯುತ್ತಿರುವಾಗ, ಯಾವುದೋ ಗ್ರಹಚೇಷ್ಟೆಯಿಂದಲೋ ಅಥವಾ ಮತ್ತಾವ ಕಾರಣದಿಂದಲೋ ವಿಶ್ವಾರಾಧ್ಯರ ಸ್ಥಾನದಲ್ಲಿ ಶೀಲವಂತನಾಯಕನನ್ನು ಸೇರಿಸಿರುವುದು ಅತ್ಯಂತ ನಿಂದ್ಯವಾಗಿದೆ. ನಾಯಕ (ಬ್ಯಾಡ) ನು ಎಂದಾದರೂ ಆಚಾರ್ಯನಾಗಬಲ್ಲನೇ? ಇಷ್ಟು ವಿಷಯವು ಸಹ ಕರ್ಲಮಂಗಲರಿಗೆ ತಿಳಿಯಲಿಲ್ಲವೆಂದಮೇಲೆ ಈ ಮಹಾಶಯರ ಬುದ್ಧಿಸಂಸ್ಕಾರವು ಯಾವತರಹದ್ದಿರಬಹುದೆಂಬುದನ್ನು ಕುಶಲರಾದ ವಾಚಕರೇ ಯೋಚಿಸಬೇಕಾಗಿದೆ.

ಶೀಲವಂತನಾಯಕನೆಂಬವನು ಪರ್ವತದಿಂದ ಕಾಶಿಗೆ ಬಂದು ಮೊರವನ್ನು ರೆಕ್ಕೆಗಳನ್ನಾಗಿ ಮಾಡಿಕೊಂಡು ಹಾರಿ ೧೩ ನೆಯ ಶತಮಾನದಲ್ಲಿ ಕಾಶಿಯನ್ನಾಳುತ್ತಿದ್ದ ಜಯಚಂದ್ರ ನರೇಂದ್ರನನ್ನು ಮೆಚ್ಚಿಸಿ ಕಾಶಿಯಲ್ಲಿ ಮಠವನ್ನು ಕಟ್ಟಿಸಿದನೆಂದು ಕರ್ಲಮಂಗಲರು ಬರೆದಿದ್ದಾರೆ. ಈ ವಿಷಯವನ್ನು ಸ್ವಲ್ಪ ವಿಮರ್ಶಿಸೋಣ! ಆಚಾರ್ಯರ ಲಿಂಗಾವತಾರ ವಿಷಯವನ್ನು ಒಪ್ಪಿಕೊಳ್ಳದ ಕರ್ಲಮಂಗಲಪ್ಪನವರು (ಇಂಗ್ಲಿಷ್ ಮ್ಯಾನ್) ಮೊರವನ್ನು ರೆಕ್ಕೆಗಳನ್ನಾಗಿ ಮಾಡಿ ಹಾರಿದ ಶೀಲವಂತನಾಯಕನ ವಿಷಯವನ್ನು ಹೇಗೆ ಒಪ್ಪಿಕೊಳ್ಳುವರೋ ಆಶ್ಚರ್ಯಕರವಾಗಿದೆ. ಆಚಾರ್ಯರ ವಿಷಯವನ್ನು ಬಿಟ್ಟು ಉಳಿದವರ ವಿಷಯವು ಅದು ಹೇಗೇ ಇರಲಿ, ಈ ಪುಣ್ಯಪುರುಷರಿಗೆ ಮಾನ್ಯವಿದ್ದಂತೆ ತೋರುತ್ತದೆ. ಈ ರೀತಿಯಾಗಿ ಮಹಾಪಕ್ಷಪಾತಿಗಳಾಗಿರುವ ಇವರು ನಾನು ಪಕ್ಷಪಾತದಿಂದ ಬರೆಯುವುದಿಲ್ಲವೆಂದು ಬರೆದಿರುವುದನ್ನು ನೋಡಿದರೆ ಇವರ ಧೂರ್ತತನಕ್ಕೆ ಬೆಲೆಯಿಲ್ಲವೆಂದೇ ಹೇಳಬೇಕಾಗಿದೆ. ಅಸ್ತು!

ಕೆಳದಿ ನೃಪವಿಜಯಕಾರನು ಶೀಲವಂತನಾಯಕನಿಗೂ ಜಯಚಂದ್ರನರೇಂದ್ರನಿಗೂ ಒಂದು ವಿಲಕ್ಷಣವಾದ ಸಂಬಂಧವನ್ನು ಕಲ್ಪಿಸಿದ್ದಾನೆ. ಇವನು ಕಲ್ಪಿಸಿದ ಸಂಬಂಧವನ್ನು ಇಂದಿನವರೆಗೆ ಯಾರೂ ಕೇಳಿಲ್ಲ. ಕವಿಯು ಆ ಸಂದರ್ಭದಲ್ಲಿ ಜಯಚಂದ್ರನರೇಂದ್ರನು ಯಾವ ದೇಶದ ರಾಜನೆಂಬುದನ್ನು ಸ್ಪಷ್ಟವಾಗಿ ಬರೆದಿಲ್ಲ. ಆದರೆ ಇದೇ ಕವಿಯು ತನ್ನ ಗ್ರಂಥದ ೯ನೆಯ ಆಶ್ವಾಸದಲ್ಲಿ (ಪುಟ ೧೪೦) ದಿಲ್ಲಿ ಸಿಂಹಾಸನವನ್ನೇರಿದ ರಾಜರ ಪರಂಪರೆಯನ್ನು ಬರೆಯುವ ಸಂದರ್ಭದಲ್ಲಿ ಈ ಜಯಚಂದ್ರ ನರೇಂದ್ರನ ಹೆಸರನ್ನು ತೆಗೆದುಕೊಂಡಿರುವುದರಿಂದ ಈ ರಾಜನು ಯಾವ ಕಾಲದಲ್ಲಿದ್ದನೆಂಬುದನ್ನು ನಿಶ್ಚಯಿಸಬಹುದಾಗಿದೆ. ಆ ಗ್ರಂಥದಲ್ಲಿ—

"ರಜಪೂತಸಂತತಿಯೊಳುದಿಸಿದ ಜಯಚಂದ್ರ ನರೇಂದ್ರನಾಳ್ದನಾತನ ತರುವಾಯ ತದ್ವಂಶಜನಾದ ಅನಂಗಪಾಲಂ ವರ್ಷ ೩೬"

ಎಂದು ಬರೆಯಲ್ಪಟ್ಟಿದೆ. ಇದರ ಮೇಲಿಂದ ವಿಚಾರಮಾಡಿ ನೋಡಿದರೆ ಜಯಚಂದ್ರನರೇಂದ್ರನು ಕ್ರಿ. ಶ. ೯೮೦ ರಲ್ಲಿದ್ದನೆಂದು ಸಿದ್ಧವಾಗುತ್ತದೆ. ಯಾಕೆಂದರೆ— ಅನಂಗಪಾಲನಿಗೆ ಕ್ರಿ. ಶ. ೧೦೦೧ ರಲ್ಲಿ ರಾಜಪಟ್ಟಾಭಿಷೇಕವಾಗಿರುವ ವಿಷಯವೂ, ಘಜನಿಮಹಮ್ಮದನಿಗೂ ಅನಂಗಪಾಲನಿಗೂ ಕ್ರಿ. ಶ. ೧೦೦೮ ರಲ್ಲಿ ಘೋರವಾದ ಯುದ್ಧವಾಗಿರುವ ವಿಷಯವೂ ಇತಿಹಾಸಪ್ರಸಿದ್ಧವಷ್ಟೆ! ಈ ಕವಿಯು ಜಯಚಂದ್ರನರೇಂದ್ರನ ಹೆಸರನ್ನು ಸಂದರ್ಭಾನುಸಾರವಾಗಿ ೩ ನೆಯ ಆಶ್ವಾಸದಲ್ಲಿಯೂ ೯ ನೆಯ ಆಶ್ವಾಸದಲ್ಲಿಯೂ ತಾನೇ ಉಲ್ಲೇಖಿಸಿರುವುದರಿಂದ ಜಯಚಂದ್ರನರೇಂದ್ರನೆಂಬವನು ಕಲಿಕೇತ (ಕಿಳ್ಳಿಕೇತ) ಬ್ರಹ್ಮನಿಗಿಂತಲೂ ೨೦೦ ವರ್ಷಗಳ ಪೂರ್ವದಲ್ಲಿದ್ದನೆಂದು ಸಿದ್ಧವಾಗುತ್ತದೆ. ಕರ್ಲಮಂಗಲಪ್ಪನವರು ಈ ವಿಷಯವನ್ನು ನೋಡಿ ಅಳುವರೋ ನಗುವರೋ ನೋಡಬೇಕಾಗಿದೆ.

ಕರ್ಲಮಂಗಲರು ಜಯಚಂದ್ರ ನರೇಂದ್ರನ ಕಾಲಮಾನವನ್ನು ಅದೇ ಗ್ರಂಥದಿಂದಲೇ ಮಾಡಬೇಕಾಗಿತ್ತು. ಹಾಗೆಮಾಡದೆ ಕನೋಜಿನ ಜಯಚಂದ್ರನ ಹೆಸರನ್ನೆತ್ತಿಕೊಂಡು ವ್ಯರ್ಥವಾಗಿ ಬಾದರಾಯಣ ಸಂಬಂಧವನ್ನು ಕಲ್ಪಿಸಿ ಬರೆದಿರುವುದು ಕೇವಲ ಹಾಸ್ಯಾಸ್ಪದವಾಗಿದೆ. ಜಯಚಂದ್ರನೇ ಬೇರೆ, ಜಯಚಂದ್ರನರೇಂದ್ರನೇ ಬೇರೆಯಾಗಿದ್ದಾರೆ. ಜಯಚಂದ್ರ ನರೇಂದ್ರನೆಂಬವನು ಕ್ರಿ. ಶ. ೧೦ ನೆಯ ಶತಮಾನದಲ್ಲಿ ದಿಲ್ಲಿಯಲ್ಲಿದ್ದನೆಂಬುದು ಕೆಳದಿನೃಪವಿಜಯದಿಂದಲೇ ಗೊತ್ತಾಗುತ್ತದೆ. ಜಯಚಂದ್ರನೆಂಬವನು ೧೩ ನೆಯ ಶತಮಾನದಲ್ಲಿ ಕನೋಜಿನಲ್ಲಿದ್ದನೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಈ ರೀತಿಯಾಗಿ ಈ ಇಬ್ಬರೂ ಬೇರೆ ಬೇರೆ ಹೆಸರುಗಳಿಂದ ಬೇರೆ ಬೇರೆ ಕಾಲಗಳಲ್ಲಿದ್ದರೂ ಈ ರಹಸ್ಯವನ್ನು ತಿಳಿಯದೆ ಉಲಟಾಪಲಟಾ ಬರೆದಿರುವುದು ಅವಿಚಾರರಮಣೀಯವಾಗಿದೆ.

ಇನ್ನು ಜಯಚಂದ್ರನರೇಂದ್ರನೆಂಬವನು ೧೦ನೆಯ ಶತಮಾನದಲ್ಲಿದ್ದನೆಂದು ಅದೇ ಗ್ರಂಥದಿಂದ ಸಿದ್ಧವಾದರೂ ಇವನ ಕಾಲದಲ್ಲಿಯೇ ಕಾಶಿಯಲ್ಲಿ ಮಠವು ಸ್ಥಾಪಿಸಲ್ಪಟ್ಟಿತೆಂದು ಕವಿಯು ಬರೆದಿರುವುದು ಉನ್ಮತ್ತಾಲಾಪಸದೃಶವಾಗಿದೆ. ಶ್ರೀ ಜಗದ್ಗುರು ವಿಶ್ವಾರಾಧ್ಯರ ಪೀಠಕ್ಕೆ ೫೧ ನೆಯ ಪಟ್ಟಾಧಿಕಾರಿಗಳಾದ ಮಲ್ಲಿಕಾರ್ಜುನಶಿವಾಚಾರ್ಯಮಹಾಸ್ವಾಮಿಗಳವರಿಗೆ ಕ್ರಿ. ಶ. ೫೭೪ರಲ್ಲಿ ಕಾಶೀಜಯನಂದದೇವ ಮಹಾರಾಜನು ಭೂಮಿಯನ್ನು ದಾನಮಾಡಿರುವಾಗ, ಕೆಳದಿನೃಪವಿಜಯಕಾರನು ವಿಚಾರವಿಲ್ಲದೆ ಹೀಗೆ ಬರೆದಿರುವುದು ಉನ್ಮತ್ತತನವೆನಿಸುವುದಿಲ್ಲವೇ? ಈ ಉನ್ಮತ್ತಕವಿಯು ಅನೇಕ ವಿಷಯಗಳನ್ನು ಇದರಂತೆಯೇ ವ್ಯತ್ಯಾಸ ಮಾಡಿ ಬರೆದಿರುತ್ತಾನೆ. ವಾಚಕರ ಅವಗಾಹನೆಗಾಗಿ ಕೆಲವು ವಿಷಯಗಳನ್ನು ಇಲ್ಲಿ ಉದಾಹರಿಸೋಣ!

ಕೆಳದಿನೃಪವಿಜಯಕಾರನು ೧ ನೆಯ ಆಶ್ವಾಸದಲ್ಲಿ-(ಪುಟ ೧೪) ಶ್ರೀಶಂಕರಾಚಾರ್ಯರ ವಿಷಯವನ್ನು ಬರೆಯುವಾಗ, ಆದ್ಯಶಂಕರಾಚಾರ್ಯರಿಗೆ ವಿದ್ಯಾಶಂಕರರು ಶಿಷ್ಯರಾದರೆಂದೂ, ಅವರಿಗೆ ವಿದ್ಯಾರಣ್ಯರು ಶಿಷ್ಯರಾದರೆಂದೂ ಬರೆದಿದ್ದಾನೆ. ಆದ್ಯಶಂಕರಾಚಾರ್ಯರು ಗತಿಸಿದ ಸಾವಿರಾರು ವರ್ಷಗಳಮೇಲೆ ವಿದ್ಯಾಶಂಕರರು ಶೃಂಗೇರಿ ಮಠಕ್ಕೆ ಅಧಿಪತಿಗಳಾಗಿರುವ ವಿಷಯವು

ಜಗತ್ಪ್ರಸಿದ್ಧವಾಗಿದ್ದರೂ ಇದಕ್ಕೆ ವಿರುದ್ಧವಾಗಿ ಬರೆದಿರುವುದು ಹಾಸ್ಯಾಸ್ಪದವಲ್ಲವೇ?

ಶ್ರೀಜಗದ್ಗುರು ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯವು ಜಗದ್ವಿಖ್ಯಾತವಾಗಿದ್ದರೂ, ಈ ಅಬದ್ಧಕವಿಯು ೧ನೆಯ ಆಶ್ವಾಸದಲ್ಲಿ—(ಪುಟ ೧೬) ಆ ಲಿಂಗವನ್ನು ಶ್ರೀ ರೇಣುಕಾಚಾರ್ಯರು (ಶ್ರೀ ರೇವಣಸಿದ್ಧರು) ವಿದ್ಯಾರಣ್ಯರಿಗೆ ಅನುಗ್ರಹಿಸಿದರೆಂದು ಬರೆದಿದ್ದಾನೆ.

೧ನೆಯ ಆಶ್ವಾಸದಲ್ಲಿ (ಪುಟ ೮)—ಕೆಳದಿ ಮೂಲಪುರುಷ ಚೌಡಪ್ಪನಾಯಕನ ತಂದೆಯಾದ ಬಸವಪ್ಪನೆಂಬವನು ನಿರಾಭಾರಿವೀರಶೈವಾಚರಣಸಂಪನ್ನನಾಗಿದ್ದನೆಂದು ಬರೆದಿದ್ದಾನೆ. ಧರ್ಮಶಾಸ್ತ್ರಾನುಸಾರವಾಗಿ ಪತ್ನೀಪುತ್ರಾದಿಗಳನ್ನು ಪರಿತ್ಯಾಗಮಾಡಿದವನೇ ನಿರಾಭಾರಿ (ಸನ್ಯಾಸಿ) ಎನಿಸುವನು. ಪತ್ನಿಯಿಂದೊಡಗೂಡಿ ಬಾಳುವೆಮಾಡುತ್ತಿದ್ದ ಬಸವಪ್ಪನಿಗೆ ಈ ರೀತಿ ವಿಶೇಷಣವನ್ನು ಕೊಟ್ಟಿರುವುದು ಅವಿವೇಕವಲ್ಲವೇ?

ಲೋಕವಿಖ್ಯಾತನೂ ಹಿಂದೂಧರ್ಮೋದ್ಧಾರಕನೂ ಅವತಾರಪುರುಷನೂ ಎಂದು ಖ್ಯಾತಿವೆತ್ತಿರುವ ಶಿವಾಜಿಯು ಸುಪ್ರಸಿದ್ಧ ಮರಾಠಾ ವೀರನಾದ ಶಾಹುಜಿ ಭೋಂಸಲೆಯ ಪುತ್ರನಾಗಿರುವ ವಿಷಯವು ಲೋಕವಿಶ್ರುತವಾಗಿದ್ದರೂ ಈ ಅಮಂಗಲಕವಿಯು ಈ ವಿಷಯವನ್ನು ಬರೆಯದೆ ೯ನೇ ಆಶ್ವಾಸದಲ್ಲಿ-(ಪುಟ ೧೩೭)

"ರಾಣಿನೋಂದವಸರದೊಳ್ ಸ್ವಾರಿಮಾರ್ಗಮಂ ಪೋಗಿ ಬರುತ್ತುಂ ತತ್ಪುರದೊಳಿರ್ಪೋರ್ವ ವರ್ಧಕಿಯ ಮಗಳಂ ಕಂಡು ಕಾಮಿಸಿ ಆಕೆಯಂ ಪರಿಗ್ರಹಿಸಿ ಕೆಲಕಾಲಂ ವರ್ತಿಸುತ್ತುಮಿರಲಾ ಬಡಗಿಯ ಮಗಳ ಗರ್ಭದೊಳಿರ್ವರ್ ಕುಮಾರರುದ್ಭವಿಸಲವರ್ಗೆ ಶಿವಾಜಿ ಸಾಂಬಾಜಿ ಎಂಬ ನಾಮಕರಣಮಂ ರಚಿಸಿ"

ಎಂದು ಬರೆದು, ಶಿವಾಜಿಯು ಬಡಗಿಯ ಮಗಳ ಹೊಟ್ಟೆಯಲ್ಲಿ ವ್ಯಭಿಚಾರದಿಂದ ಹುಟ್ಟಿದನೆಂದು ಬರೆದಿರುತ್ತಾನೆ. ಈ ವಿಷಯವು ಎಂಥ ನೀಚವಾದುದೆಂಬುದನ್ನು ವಾಚಕರೇ ಯೋಚಿಸಬೇಕು. ಅಲ್ಲದೆ ಶಿವಾಜಿಗೆ "ವೆಂಕೋಜಿ" ಎಂಬ ತಮ್ಮನಿದ್ದುದು ಸುಪ್ರಸಿದ್ಧವಿದ್ದರೂ ಇವನು "ಸಾಂಬಾಜಿ" ಎಂಬ ತಮ್ಮನಿದ್ದನೆಂದು ಬರೆದಿದ್ದಾನೆ. ಶಿವಾಜಿಯ ಮಗನ ಹೆಸರನ್ನು ಅವನ ತಮ್ಮನಿಗೆ ಸಂಬಂಧಿಸಿದ್ದಾನೆ.

ಇದರಂತೆಯೇ ಈ ಗ್ರಂಥಕರ್ತನು ಅನೇಕ ವಿಷಯಗಳನ್ನು ಯದ್ವಾತದ್ವಾ ಬರೆದು ತನ್ನ ಗ್ರಂಥವನ್ನೆಲ್ಲಾ ಹೊಲಸೆಬ್ಬಿಸಿಬಿಟ್ಟಿದ್ದಾನೆ. ಇದನ್ನೆಲ್ಲಾ ತಿಳಿದೇ ಈ ಗ್ರಂಥವನ್ನು ಮುದ್ರಣಮಾಡಿಸಿದ ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯವರು ತಮ್ಮ ಪೀಠಿಕೆಯಲ್ಲಿ—

"ಈ ಗ್ರಂಥದ ಮಧ್ಯದಲ್ಲಿ ಅಲ್ಲಲ್ಲಿ ಬರುವ ಇತರ ರಾಜರ ಚರಿತ್ರೆಗಳು ಜನರ ಹೇಳಿಕೆಯ ಮಾತಿನಮೇಲೆ ಬರೆದಹಾಗೆ ಕಾಣುತ್ತವೆ. ಅದುದರಿಂದ ಅವುಗಳಲ್ಲಿ ಯಾವುದಕ್ಕೂ ಗಮನಕೊಡಬೇಕಾದುದಿಲ್ಲ."

ಎಂದು ಬರೆದು ಈ ಗ್ರಂಥಕರ್ತನ ಮುಖಕ್ಕೆ ಮಂಗಳಾರತಿಯೆತ್ತಿದ್ದಾರೆ. ಇಂಥ ಅಪ್ರಬುದ್ಧವೂ, ಅಮಂಗಲಕರವೂ, ಅವಿಚಾರಪೂರಿತವೂ, ದೋಷಪುಂಜರಂಜಿತವೂ ಆದ ಪುಸ್ತಕವನ್ನು ಪ್ರಮಾಣವನ್ನಾಗಿ ತೆಗೆದುಕೊಂಡು ಮನಬಂದಂತೆ ಜಿಗಿದಾಡಿರುವ ಕರ್ಲಮಂಗಲಪ್ಪನವರು ತಮ್ಮ ಮುಖಕ್ಕೆ ಮಹಾಜನಗಳಿಂದ ಮಂಗಳಾರತಿಯನ್ನೆತ್ತಿಸಿಕೊಂಡಂತಾಗಲಿಲ್ಲವೇ?

ಕಾಶೀಪೀಠಕ್ಕೆ **ಕಾಶೀ-ರೀವಾ-ಮೈಹರ-ಮೈಸೂರು ಮೊದಲಾದ ರಾಜ್ಯಗಳ ಹಿಂದೂ ಮಹಾರಾಜರೂ, ಹುಮಾಯೂನ್-ಅಕಬರ್-ಜಹಂಗೀರ-ಷಹಜಹಾನ್- ಔರಂಗಜೇಬ- ಮಹಮ್ಮದಷಾ** ಮೊದಲಾದ ಮುಸಲ್ಮಾನ ಚಕ್ರವರ್ತಿಗಳೂ ವಿಶೇಷವಾಗಿ ದಾನಮಾಡಿರುತ್ತಾರೆ. ಆ ದಾನಶಾಸನಗಳು ಈಗಲೂ ಮಠದಲ್ಲಿ ರಾರಾಜಿಸುತ್ತಿರುವುವು. ಈ ಎಲ್ಲಾ ದಾನಶಾಸನಗಳಲ್ಲಿ ಕಾಶೀರಾಜನಾದ ಜಯನಂದದೇವಮಹಾರಾಜನು ಬರೆದುಕೊಟ್ಟಿರುವ ದಾನಶಾಸನವೇ ಬಹು ಪ್ರಾಚೀನವಾದುದು. ಜಯನಂದದೇವನು ಆ ಶಾಸನವನ್ನು ವಿಕ್ರಮಾರ್ಕಸಂವತ್ ೬೩೧ ಕಾರ್ತಿಕ ಶು|| ೧೧ ದಿವಸ ಬರೆದುಕೊಟ್ಟಿರುತ್ತಾನೆ. ವಿಕ್ರಮಾರ್ಕ ಸಂವತ್ ೬೩೧ ಕ್ಕೆ ಕ್ರಿ. ಶ. ೫೭೪ ಆಗುತ್ತದೆ. ಅರ್ಥಾತ್ ಆ ಶಾಸನವನ್ನು ಬರೆದುಕೊಟ್ಟು ಇಂದಿಗೆ ೧೩೬೦ ವರ್ಷಗಳಾದವು. ಈ ಶಾಸನವು ಬಹು ಪ್ರಾಚೀನವಾಗಿರುವುದರಿಂದ ಕೈಯಿಂದ ಮುಟ್ಟಲಿಕ್ಕೂ ಕೂಡ ಆಗದಂತಿದೆ. ಇದನ್ನು ತಿಳಿದು ಈಗಿನ ಕಾಶೀ ಮಹಾರಾಜರವರ ತಂದೆಯವರಾದ ಕೈ|| ಪ್ರಭುನಾರಾಯಣಸಿಂಹ ಮಹಾರಾಜರವರು ಈ ಶಾಸನವು ತಮ್ಮ ವಂಶದ ಪೂರ್ವಜರಿಂದ ಕೊಡಲ್ಪಟ್ಟಿರುವುದರಿಂದ ಇದನ್ನು ಉದ್ಧರಿಸಬೇಕೆಂದು ಯೋಚಿಸಿ ತಮ್ಮ ಕಾಲದಲ್ಲಿ ಆ ಶಾಸನವನ್ನು ತಾಮ್ರಪತ್ರದಲ್ಲಿ ಕೆತ್ತಿಸಿ ಅದಕ್ಕೆ ತಮ್ಮ ಸಹಿ (ರುಜು) ಮಾಡಿ ಚಿರಸ್ಥಾಯಿಯಾಗಿರುವಂತೆ ಮಾಡಿರುತ್ತಾರೆ. ೧೯೩೩ ನೆಯ ಇಸ್ವಿಯಲ್ಲಿ ಬನಾರಸ್ ಸಬ್‌ಜಡ್ಜ್ ಕೋರ್ಟಿನಲ್ಲಿ ನಡೆದ ೧೩ ನೆಯ ನಂಬರಿನ ದಾವೆಯಲ್ಲಿ ಈ ಪ್ರಾಚೀನ ಶಾಸನದ ವಿಷಯವಾಗಿ ವಿಶೇಷವಾದ ಚರ್ಚೆಯು ನಡೆಯಿತು. ಈ ವಿಷಯವಾಗಿ ಜಡ್ಜರವರು ಬರೆದಿರುವ ಜಡ್ಜ್‌ಮೆಂಟ್ ಬಹು ಮಹತ್ವವುಳ್ಳದಾಗಿರುವುದರಿಂದ ವಾಚಕರು ಈ ಕೆಳಗೆ ಉಲ್ಲೇಖಿಸಿದ ಜಡ್ಜ್‌ಮೆಂಟಿನ ಅಭಿಪ್ರಾಯವನ್ನು ಚನ್ನಾಗಿ ತಿಳಿದುಕೊಳ್ಳಬೇಕು.

"The earliest document is the **Danapatra**, by the **Raja of Kashi**. It is of Sambat **631** corresponding to **574 A.D.** A gift of an area of land on the banks of the Ganges is made to **Mallikarjuna, Gosain of Sri Vishwaradhya Simhasana.** It lays down that the grant is for the Gosain and members of his sect. **The deed is written on paper which is on the face of it very old—so old that it is difficult to handle it.** It is in a frame. It is marked Ex. (1). **The father of the present Maharaja renewed the deed and got its contents inscribed on a Copper plate marked Ex. (2).**

The deed is not of any great importance so far as the properties in dispute are concerned as it has been proved by evidence that the land granted was in the village of **Jangampur** where Kardameshwar Mahadeo referred to in this deed is situated and this land has been acquired for the Hindu University and the Math is no longer in its possession. Its significance lies in the fact that so far back as **574 A.D.** this Simhasan or pontifical throne existed and received a grant from the Maharaja of Benares for the support and maintenance of the sect.

The genuineness of this deed has been challenged by the defdts on various grounds. First, I am referred to **Imperial Gazetteer of India**, Vol. III page 106 (1907 edition) wherein it is said that paper was introduced into India by the Mohammedans who had learnt its use from the Chinese. As the Mohammedan invasion of India was in about 10th or 11th century, it is urged that it was impossible for any deed in India to have been written on paper, in the sixth century. I may in this connection invite attention to the researches of **Rai Bahadur Pandit Gauri Shanker Ojha** as contained in his book entitled "**The Calaeography of India**" a book on which the defdts also rely as regards another point. At page 144 after referring to the records of Alexander's invasion, points out that in India paper was being made even prior to 4th century B. C. from cotton though it was not much in vogue. The defdt's contention, therefore falls to the ground. **Mr. Gauri Shanker's book is more scientific and carries greater weight than the Imperial Gazetteer.**

Secondly it is urged that the script of the deed Ex. 1 is quite different from what was prevalant in the sixth century A. D. and I am referred to pages 62 and 63 and the alphabets as contained in plate XIX of **Pandit Gouri Shanker's** book and to **Barnet's Antiquities of India** p. 226 and **Bhandarkar's** commemoration volume page 309. It would appear from these references that the script in India was rather different from what we find in Ex. 1.

A reference to **Epigraphia Carnatica by B. Lewis Rice C. I. E. Late Director of Public Instruction, Mysore and Coorg,** (1905 Edition) at page 53 (a) will show that the script in the Danapatra Ex. 1 is some-what similar to that reproduced in this book at p. 53 (a). This is the script of about the period when the Danapatra is said to have been written.

After all, it is a matter of about 1400 years back and no one can exactly say as to what the script then was. This is a land with variety of scripts and languages. No wonder therefore, if the script of the Danapatra then prevailed.

Thirdly it is urged that **Jainanda Deo** was not the ruler of Benares in **574 A.D.** How could he make a grant?

True, history shows that about the 5th century the Raja of Kanauj had obtained mastery over Benares, but there is nothing to show that the Raja of Benares was deprived of all his powers. What appears to have happened was that Raja of Kanauj became the suzerain power, but the Raja of Kashi continued under him. He continues upto this day.

The defendants' contentions as regards this document therefore fails. I hold that Ex. 1 is a genuine document and Ex. 2 is its copy on copper plate. True about the copper plate theory, there is the evidence of the plff only, but it stands un-rebutted and although the defdts had ample opportunity to prove that it was not genuine, yet they did not summon any one from Benares State to establish it. The presumption is in favour of genuineness."

(ಕನ್ನಡಭಾಷೆಯ ಅನುವಾದ)

"**ಕಾಶೀರಾಜರ ದಾನಪತ್ರವು** ಎಲ್ಲಕ್ಕಿಂತಲೂ ಪ್ರಾಚೀನವಾಗಿದೆ. ಇದರ ಕಾಲ ಸಂವತ್ **೬೩೧** ಅಥವಾ ಕ್ರಿ. ಶ. **೫೭೪** ಆಗಿರುವುದು. ಇದರಲ್ಲಿ ಶ್ರೀ ವಿಶ್ವಾರಾಧ್ಯ ಸಿಂಹಾಸನದ ಮಲ್ಲಿಕಾರ್ಜುನ ಸ್ವಾಮಿಗಳವರಿಗೆ ಗಂಗಾನದಿಯ ತೀರದಲ್ಲಿ ಸ್ವಲ್ಪ ಜಮೀನು ದಾನಮಾಡಲ್ಪಟ್ಟಿರುವುದು. ಈ ದಾನವು ಆ ಸ್ವಾಮಿಗಳಿಗಾಗಿ ಮತ್ತು ಅವರ ಅನುಯಾಯಿಗಳಿಗಾಗಿ ಎಂದು ನಮೂದಿಸಲ್ಪಟ್ಟಿದೆ. **ಈ ದಾನಪತ್ರದ ಕಾಗದವು ಬಹಳ ಹಳೆಯದಾಗಿದ್ದು ಅದನ್ನು ಕೈಯಲ್ಲಿ ಮುಟ್ಟುವದಕ್ಕೂ ಸಹ ಅಗದಂತಿದೆ.** ಅದು

(೬ನೆಯ ಪುಟವನ್ನು ನೋಡಿರಿ.)

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಏಳುವರ್ಷಗಳು ತುಂಬಿ ಎಂಟನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೇ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ—

ಪಂಚಾಚಾರ್ಯ ಪ್ರಭಾ.

೧೯೩೪ ನೇ ಜೂನ್ ತಾ|| ೨೫ ನೇ ಸೋಮವಾರ.

ಶ್ರೀಮನ್ಮಹಾರಾಜರವರ ೫೧ ನೆಯ ವರ್ಧಂತೀಮಹೋತ್ಸವ.

ಧರ್ಮಮೂರ್ತಿಗಳಾಗಿ ಅವತರಿಸಿ ಮೈಸೂರು ಮಹಾಸಂಸ್ಥಾನವನ್ನಾಳುತ್ತಿರುವ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ೫೧ ನೆಯ ವರ್ಷದ ವರ್ಧಂತ್ಯುತ್ಸವವು ಪದ್ಧತಿಪ್ರಕಾರ ಮೊನ್ನೆ ದಿವಸ ರಾಜಧಾನಿಯಲ್ಲಿ ಅತಿವೈಭವದಿಂದ ನೆರವೇರಿತು. ಪ್ರಾತಃಕಾಲ ಮಂಗಲಸ್ನಾನಾವಸರದಲ್ಲಿ ಮಹಾಪ್ರಭುಗಳ ಆಯುರ್ವರ್ಷಸೂಚಕಗಳಾದ ೫೧ ತೋಪುಗಳು ಹಾರಿಸಲ್ಪಟ್ಟುವು. ಅಸ್ತಿಕಶಿಖಾಮಣಿಗಳಾದ ಮಹಾಪ್ರಭುಗಳು ತಮ್ಮ ಸಂಧ್ಯಾವಂದನೇಷ್ಟದೇವತಾಪೂಜಾದಿ ನಿತ್ಯಕರ್ಮಗಳನ್ನು ಪೂರೈಸಿಕೊಂಡು ದಿವ್ಯವಸ್ತ್ರಾಭರಣ ಭೂಷಿತರಾಗಿ ೧೦-೩೦ ಘಂಟೆಗೆ ಸರಿಯಾಗಿ ಕಲ್ಯಾಣಮಂಟಪಕ್ಕೆ ದಯಮಾಡಿಸಿ ಗುರುಪೂಜೆಯನ್ನು ನಡೆಯಿಸಿ ಸುಂದರತರವಾದ ಭದ್ರಾಸನವನ್ನಲಂಕರಿಸಿದರು. ರಾಜಭಕ್ತಿದ್ಯೋತಕಲಕ್ಷಣಗಳಿಂದೊಡಗೂಡಿದ ರಾಜಬಂಧುಗಳೂ, ಮಂತ್ರಿಗಳೂ, ಉಪಮಂತ್ರಿಗಳೂ, ಇತರ ಸರ್ಕಾರಿಯುದ್ಯೋಗಿಗಳೂ ಪುರಪ್ರಮುಖರೂ ಮುಜರೆಯನ್ನು ಮಾಡಿ ನಿಯಮಿತವಾದ ಸ್ಥಾನಗಳಲ್ಲಿ ಸಾಲ್ಗಿಡಿದು ಕುಳಿತರು. ಸುಪ್ರಸಿದ್ಧ ವಾದ್ಯಗಾರರ ನಾನಾವಿಧ ವಾದ್ಯಧ್ವನಿಗಳೂ, ಮೃದುಮಧುರವಾದ ವಿದ್ವಾಂಸರ ಗಾನಾಲಾಪಗಳೂ, ಜಯಜಯಧ್ವನಿಗಳೂ, ಭೂವ್ಯೋಮಾಂತರಿಕ್ಷಗಳನ್ನು ವ್ಯಾಪಿಸಿದ್ದುವು. ಮಠಾಧಿಕಾರಿಗಳ ಮತ್ತು ವೈದಿಕೋತ್ತಮರ ಆಶೀರ್ವಾದಗಳೂ, ಸಭಿಕರ ಮತ್ತು ಸೈನಿಕರ ಮುಜುರೆಗಳೂ ನಡೆದ ಬಳಿಕ ಸಭಿಕರಿಗೆ ಪುಷ್ಪಹಾರಾದಿ ವಿನಿಯೋಗವು ನಡೆದು ಸಭೆಯು ಉಪಸಂಹೃತವಾಯಿತು.

ಸಾಯಂಕಾಲ ೬ ಘಂಟೆಯ ಸಮಯಕ್ಕೆ ಮಹಾಪ್ರಭುಗಳ ಉತ್ಸವವು ಗಜಾಶ್ವಾದಿಚತುರಂಗಮಹಾಬಲಸಹಿತವಾಗಿಯೂ, ಸಕಲರಾಜಬಿರುದಾವಳಿಸಹಿತವಾಗಿಯೂ ಅರಮನೆಯಿಂದ ದೊಡ್ಡಪೇಟೆ ಮಾರ್ಗವಾಗಿ ಹೊರಟಿತು. ಮಹಾಪ್ರಭುಗಳು ರತ್ನಖಚಿತವಾದ ಸುವರ್ಣಾಭರಣಗಳಿಂದ ಅಲಂಕೃತವಾದ ದಿವ್ಯಾಶ್ವವನ್ನು ಆರೋಹಣಮಾಡಿದ್ದರು. ಶ್ರೀಮದ್ಯುವರಾಜರವರು ಭವ್ಯವಸ್ತ್ರಾಭರಣ ಭೂಷಿತರಾಗಿ ದಿವ್ಯಾಶ್ವವನ್ನಾರೋಹಿಸಿ ಮಹಾಪ್ರಭುಗಳ ಎಡಪಾರ್ಶ್ವದಲ್ಲಿ ಶೋಭಿಸುತ್ತಿದ್ದರು. ಪ್ರೇಕ್ಷಕರಾಗಿ ಬಂದ ಪ್ರಜಾಸಮುದಾಯವು ರಾಜಭಕ್ತಿಯಿಂದಲೂ ಶಿಸ್ತಿನಿಂದಲೂ ದಾರಿಯುದ್ದಕ್ಕೂ ಉಭಯಪಾರ್ಶ್ವಗಳಲ್ಲಿ ನಿಂತುಕೊಂಡಿದ್ದು ಪ್ರಭುದರ್ಶನದಿಂದುಂಟಾದ ಸಂತೋಷದಿಂದ ಹಸ್ತಗಳನ್ನು ಮೊಲಕ್ಕೆತ್ತಿ ಜಯಜಯಕಾರಗಳನ್ನು ಮಾಡುತ್ತಿದ್ದಿತು. ಶ್ರೀ ಮಹಾರಾಜರವರ ಅಮೃತಮಯ ಕಟಾಕ್ಷಧಾರೆಯು ಉಭಯಪಾರ್ಶ್ವಗಳಲ್ಲಿ ಕಿಕ್ಕಿರಿದುನಿಂತಿರುವ ಪ್ರಜಾಮಂಡಲಿಯಮೇಲೆ ಪ್ರವಹಿಸುತ್ತಿದ್ದಿತು. ಉತ್ಸವವು ಕ್ಲಾರ್ಕಟವರಿನ ಬಳಿ ಬಂದೊಡನೆಯೇ ಮಹಡಿಯಮೇಲೆ ನಿಂತುಕೊಂಡಿದ್ದ ಯೂರೋಪಿಯನ್ನರು ಪುಷ್ಪವೃಷ್ಟಿಗರೆಯುತ್ತ ಜಯಘೋಷವನ್ನು ಮಾಡಿದರು. ದೊಡ್ಡಪೇಟೆಯಲ್ಲಿರುವ ಪ್ರಮುಖವರ್ತಕರು ತಮ್ಮ ತಮ್ಮ ಅಂಗಡಿಯ ಮುಂಭಾಗದಲ್ಲಿ ಮಹಾರಾಜರವರ ಚಿತ್ರಪಟವನ್ನು ಅಲಂಕರಿಸಿ ನಯವಿನಯಭಯಭಕ್ತಿಯಿಂದೊಡಗೂಡಿ ಉಭಯ ಪ್ರಭುಗಳಿಗೆ ಹಾರತುರಾಯಿಗಳನ್ನು ಸಮರ್ಪಿಸುತ್ತಿದ್ದರು. ಉತ್ಸವವು ಹಳೇ ಬಾಡಿಗಾರ್ಡ್ ಲೈನಿನವರೆಗೆ ಹೋಗಿ ಬಲಭಾಗಕ್ಕೆ ತಿರುಗಿ ಗೌರ್ನಮೆಂಟ್ ಹೌಸನ್ನು ಸೇರಿತು. ಸೈನ್ಯದ ಮರ್ಯಾದೆಯು ನಡೆಯುತ್ತಿರಲು ಮಹಾಪ್ರಭುಗಳವರು ಅಶ್ವದಿಂದಿಳಿದು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಹೊಂದಿ ಮೈದಾನದಲ್ಲಿ ಚತುರಂಗಬಲವನ್ನು ಪರಾಮರ್ಶಿಸಿದನಂತರ ರಾತ್ರಿ ವಿದ್ಯುದ್ದೀಪಮಾಲಿಕೆಗಳಿಂದಲೂ ಮಲ್ಲಿಕಾಕುಟ್ಮಲಗಳಿಂದಲೂ ಅಲಂಕೃತವಾದ ಭವ್ಯಮೋಟಾರಿನಲ್ಲಿ ಮಂಡಿಸಿದರು. ಉತ್ಸವವು ಗೌರ್ನಮೆಂಟ್‌ಹೌಸಿನ ಪಶ್ಚಿಮಭಾಗದಲ್ಲಿರುವ ಹೆಬ್ಬಾಗಲಿನಿಂದ ಹೊರಟು ಸೆಂಟ್ರಲ್ ಪೋಲೀಸ್ ಸ್ಟೇಷನ್ನಿನ ಹತ್ತಿರ ನಕ್ಷತ್ರಮಾಲೆಯಂತೆ ಶೋಭಿಸುತ್ತಿರುವ ವಿದ್ಯುದ್ದೀಪಗಳ ತೋರಣಮಾಲೆಗಳಿಂದ ಝಗಝಗಿಸುತ್ತಿರುವ ದೊಡ್ಡಪೇಟೆಯಲ್ಲಿ ಹಾಯ್ದು ಸುಮಾರು ೧೦-೩೦ ಘಂಟೆಯ ಸಮಯಕ್ಕೆ ಅರಮನೆಯನ್ನು ಸೇರಿತು.

ಪ್ರಜಾಭ್ಯುದಯವೇ ಸ್ವಾಭ್ಯುದಯವೆಂದು ತಿಳಿದು ರಾಜ್ಯವಾಳುತ್ತಿರುವುದೇ ರಾಜಧರ್ಮವೆಂದು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿರುವಂತೆ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಕಾಯ ವಾಕ್ ಮನಸ್ಸುಗಳಲ್ಲಿಯೂ ದೇಶಾಭ್ಯುದಯಸಾಧಕಗಳಾದ ಕಾರ್ಯಗಳನ್ನೆಸಗುತ್ತ ಪ್ರಜಾಯೋಗಕ್ಷೇಮಕಾರಿಗಳಾದುದರಿಂದ ಪ್ರಪಂಚದಲ್ಲಿರುವ ರಾಜರಿಗೆಲ್ಲಾ ಆದರ್ಶಪ್ರಾಯರಾಗಿದ್ದಾರೆ. ಇವರ ಪ್ರಜಾಪಾಲನ ಧುರೀಣತೆಯೂ, ದೈವನಿಷ್ಠೆಯೂ, ಶಮದಮಾದಿಗುಣಸಂಪನ್ನತೆಯೂ, ಧರ್ಮರಕ್ಷಣಚತುರತೆಯೂ, ಗುರುದೇವತಾಭಕ್ತಿಪರತೆಯೂ, ನೀತಿಕುಶಲತೆಯೂ ಅನಿತರಸಾಧಾರಣವಾದುದು.

> ಯದ್ಯಪಿ ಕ್ಷಿತಿಪಾಲಾನಾಮಾಜ್ಞಾ ಸರ್ವತ್ರಗಾ ಸ್ವಯಂ |
> ತಥಾಪಿ ಶಾಸ್ತ್ರದೀಪೇನ ಚರೇತ್ಯೇವ ಸತಾಂ ಮತಿಃ ||

ಎಂಬ ರಾಜನೀತಿಯಂತೆ, ನಮ್ಮ ಮಹಾರಾಜರವರು ಧರ್ಮಶಾಸ್ತ್ರವೆಂಬ ದೀಪದ ಸಹಾಯದಿಂದ ಪ್ರಭುತ್ವಶಕ್ತಿಯನ್ನು ಉಪಯೋಗಿಸುತ್ತ ರಾಜ್ಯವಾಳುತ್ತಿರುವುದರಿಂದಲೇ ದೇಶೀಯಪ್ರಜೆಗಳೂ ವಿದೇಶೀಯಪ್ರಜೆಗಳೂ ಏಕಕಂಠದಿಂದ ನಮ್ಮ ಮಹಾರಾಜರವರ ರಾಜ್ಯವನ್ನು ರಾಮರಾಜ್ಯಕ್ಕೂ, ನಮ್ಮ ಮಹಾರಾಜರನ್ನು ಶ್ರೀರಾಮನಿಗೂ, ಜನಕಮಹರ್ಷಿಗಳಿಗೂ ಹೋಲಿಸುತ್ತಿರುವರು.

ಸ್ವೇಚ್ಛಾವಿಹಾರಕ್ಕೆ ಪ್ರತಿಬಂಧಕವನ್ನಾಚರಿಸುತ್ತಿರುವ ಧರ್ಮವೆಂಬ ಮಹಾಪುರುಷನನ್ನು ನುಗ್ಗುಬಡಿಯುವುದಕ್ಕಾಗಿ ಪಾಪಮಯವಾದ ಕಲಿಪುರುಷನ ಬಾಯಿಯಿಂದ ಹೊರಡುತ್ತಿರುವ ಘೋರ ವಿಷಮಯವಾದ ಗಾಳಿಯು ಈಗ ಎತ್ತನೋಡಿದಡತ್ತ ಬೀಸುತ್ತಿರುವದು. ಈ ಗಾಳಿಯ ಏಟನ್ನು ಅನುಭವಿಸಲಾರದೆ ಧರ್ಮವೆಂಬ ಮಹಾಪುರುಷನು ಶ್ರೀಕೃಷ್ಣಭೂಪಾಲನನ್ನಾಶ್ರಯಮಾಡಿ ಸುಖವಾಗಿರುವನು.

> ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ |
> ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ||

ಎಂಬ ಶ್ರೀ ಕೃಷ್ಣನುಕ್ತಿಯಂತೆ ಧರ್ಮಸಂಸ್ಥಾಪನೆಗಾಗಿ ಯದುಕುಲಾಬ್ಧಿಯಲ್ಲಿ ಸಂಜನಿಸಿದ ಅಪರ ಕೃಷ್ಣನಂತೆ ಪರಿಶೋಭಿಸುತ್ತಿರುವ ಶ್ರೀಕೃಷ್ಣಭೂಪಾಲರು ಗ್ಲಾನಿ ಹೊಂದಿರುವ ಧರ್ಮವೆಂಬ ಮಹಾಪುರುಷನಿಗೆ ಸಂಪೂರ್ಣ ಕರಾವಲಂಬನವನ್ನಿತ್ತು ಗೌರವಿಸುತ್ತಿರುವುದರಿಂದ ಭಾರತಧರ್ಮವು ಇನ್ನೂ ಉಜ್ಜೀವಿತವಾಗಿದೆ. ಹಾಗೆ ನಮ್ಮ ಮಹಾರಾಜರವರೂ ಈ ಧರ್ಮಕ್ಕಾಶ್ರಯಕೊಡದಿದ್ದಲ್ಲಿ "ನಾಮಾಪಿ ನಶ್ಯೂಯತೇ" ಎಂಬಂತೆ ಧರ್ಮವು ನಿರ್ನಾಮವಾಗಿ ಹೋಗುತ್ತಿದ್ದಿತು. ಅಲ್ಲದೆ ಧರ್ಮವೃಕ್ಷದ ಛಾಯೆಯಲ್ಲಿ ವಾಸಮಾಡಿದ ಗುರುಜನಗಳೂ, ವೈದಿಕರೂ, ಪಂಡಿತೋತ್ತಮರೂ, ಸಾಧುಸತ್ಪುರೂ ಅಧರ್ಮದ ಬಿಸಿಲಿನ ತಾಪದಿಂದ ಬಳಲಿ ಬೆಂಡಾಗುತ್ತಿದ್ದರು.

ಇಂಥ ಧರ್ಮಾವತಾರಿಗಳಾದ ಶ್ರೀಕೃಷ್ಣಭೂಪೋತ್ತಮರು ಲೌಕಿಕಧರ್ಮಗಳನ್ನೂ, ವೈದಿಕಧರ್ಮಗಳನ್ನೂ ಸದಾ ಅಭಿವೃದ್ಧಿಗೊಳಿಸುತ್ತಿರುವರು. ಇವೆರಡು ಧರ್ಮಗಳೂ ನಮ್ಮ ಪ್ರಭುಗಳವರಿಗೆ ಎರಡು ನೇತ್ರಗಳಂತೆ ಪರಿಶೋಭಿಸುತ್ತಿರುವವು. ಅನೇಕ ರಾಜರು ಲೌಕಿಕಧರ್ಮದೃಷ್ಟಿಯನ್ನು ತೆರೆದು ವೈದಿಕಧರ್ಮದೃಷ್ಟಿಯನ್ನು ಮುಚ್ಚಿಕೊಂಡಿರುವುದರಿಂದ ವಿಷಮದೃಷ್ಟಿಯುಳ್ಳವರಾಗಿದ್ದಾರೆ. ನಮ್ಮ ಪ್ರಭುಗಳು ಮಾತ್ರ ಎರಡು ದೃಷ್ಟಿಗಳನ್ನೂ ಸಮವಾಗಿ ತೆರೆದಿರುವುದರಿಂದ ಸಮದೃಷ್ಟಿಯುಳ್ಳವರಾಗಿರುತ್ತಾರೆ. ಇಂಥ ಸಾಕ್ಷಾದ್ಧರ್ಮಮೂರ್ತಿಗಳ ಜನ್ಮದಿನೋತ್ಸವವನ್ನು ಪ್ರತಿಯೊಬ್ಬ ಸನಾತನ ಧರ್ಮಿಯೂ ಗುರುಜಯಂತಿಯನ್ನು ಮಾಡುವಂತೆ ಮಾಡುವುದು ನ್ಯಾಯವೂ, ಧರ್ಮವೂ ಆಗಿದೆ. ನಮ್ಮನ್ನಾಳುವ ಮಹಾಪ್ರಭುಗಳಿಗೆ ಈಶ್ವರಾನುಗ್ರಹದಿಂದ ಇಂದಿಗೆ ೫೦ ವರ್ಷಗಳು ತುಂಬಿ ೫೧ನೆಯ ವರ್ಷವು ಪದಾರ್ಪಣಮಾಡಿತು. ಆ ದಯಾಘನನಾದ ಪರಶಿವಮೂರ್ತಿಯು ಧರ್ಮಾವತಾರಿಗಳಾದ ನಮ್ಮ ಮಹಾಪ್ರಭುಗಳಿಗೆ ಅನಂತ ಸಂವತ್ಸರಗಳವರೆಗೂ ದೀರ್ಘಾಯುಭಾಗ್ಯವನ್ನು ಕರುಣಿಸಿ ಇಂಥ ಅನಂತ ವರ್ಧಂತ್ಯುತ್ಸವಗಳು ನಡೆಯುವಂತೆ ಅನುಗ್ರಹಿಸಲೆಂದು ಆ ಜಗನ್ನಿಯಾಮಕನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಗೆಜೆಟ್ಟನ್ನು ಗ್ರಾಮಪಂಚಾಯಿತಿಗಳಿಗೆ ಅರ್ಧಚಂದಾಹಣಕ್ಕೆ ಕಳುಹಿಸಿಕೊಡತಕ್ಕದ್ದೆಂದು ಸರಕಾರದವರು ಅಪ್ಪಣೆಮಾಡಿರುತ್ತಾರೆ.

ಈ ಸಾರೆ ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವಕ್ಕೆ ಇಂದೂರು ಮಹಾರಾಜರವರು, ಜೋಧಪುರ ಮಹಾರಾಜರು, ಮದ್ರಾಸ್ ಗವರ್ನರವರೇ ಮೊದಲಾದವರು ರಾಜಧಾನಿಗೆ ಆಗಮಿಸಿದ್ದರು.

ಶೃಂಗೇರಿ ಮಠದ ಏಜೆಂಟರಾಗಿದ್ದ ರಾವ್‌ಬಹದ್ದೂರ್ ಎ. ಎಸ್. ನಂಜುಂಡಯ್ಯನವರು ರಾಜೀನಾಮೆಯನ್ನು ಕೊಟ್ಟಿರುವುದರಿಂದ, ಕಡೂರು ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದ, ಪ್ರಜಾಪ್ರತಿನಿಧಿಸಭೆಯ ಮೆಂಬರ್ ಶ್ರೀ|| ಹೊಸಕೊಪ್ಪ ಕೃಷ್ಣರಾಯರು ಮಠದ ಏಜೆಂಟರಾಗಿ ನಿಯಮಿಸಲ್ಪಡುವರೆಂದು ತಿಳಿದುಬಂದಿದೆ.

ಶ್ರೀಮದ್ರಂಭಾಪುರೀ ಜಗದ್ಗುರು ಶಿವಾನಂದರಾಜೇಂದ್ರ ಮಹಾಸ್ವಾಮಿಗಳು 20 ನೆಯ ತಾರೀಖಿನ ದಿವಸ ತಮ್ಮ ಶಾಖಾಮಠವೆನಿಸಿದ ವಿಭೂತಿಪುರ ಮಠಕ್ಕೆ ದಯಮಾಡಿಸಿರುತ್ತಾರೆ. ಇನ್ನು ಮೂರು ನಾಲ್ಕು ದಿವಸಗಳವರೆಗೂ ಮುಕ್ಕಾಮು ಅಲ್ಲಿಯೇ ಇದ್ದು ಪುನಃ ಅಲ್ಲಿಂದ ಬೆಂಗಳೂರಿಗೆ ದಯಮಾಡಿಸುವರು.

ಕೋಲಾರದ ಚಿನ್ನದಗಣಿಗಳಿಗೆ ಸೇರಿದ ರಾಬರ್ಟ್‌ಸನ್‌ಪೇಟೆಯಲ್ಲಿ ಮುನಿಯಪ್ಪ, ಆರೋಗ್ಯಸ್ವಾಮಿ, ಮುನಿಸಾಮಿ ಮತ್ತು ಜದಯ ಎಂಬ 4 ಜನರು ಖೋಟಾನಾಣ್ಯಗಳನ್ನು ತಯಾರುಮಾಡುತ್ತಿದ್ದರೆಂಬ ಕಾರಣದಮೇಲೆ ಸೆಷನ್ಸ್‌ಜಡ್ಜರು ವಿಚಾರಣೆಯನ್ನು ನಡೆಯಿಸಿ 1 ನೇ ಅಪರಾಧಿಗೆ 5 ವರ್ಷ ಕಠಿಣಶಿಕ್ಷೆಯನ್ನೂ, 2 ನೇ ಅಪರಾಧಿಗೆ 6 ತಿಂಗಳ ಸಾದಾ ಶಿಕ್ಷೆ ಮತ್ತು 100 ರೂ. ದಂಡವನ್ನೂ, 3 ನೇ ಅಪರಾಧಿಗೆ

ಬೆಂಗಳೂರು ಕಂಟೋನ್ಮೆಂಟ್ ಹಲಸೂರಿನಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ

ಅಡ್ಡಪಲ್ಲಕ್ಕಿಮಹೋತ್ಸವವು.



10—6—1934 ಭಾನುವಾರ ಬೆಂಗಳೂರು ಹಲಸೂರಿನಲ್ಲಿ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಸಿಂಹಲಲಾಟ, ಪಂಚಕಲಶದಿಂದ ಕೂಡಿದ ಅಡ್ಡಪಲ್ಲಕ್ಕಿಮಹೋತ್ಸವವು.

18 ತಿಂಗಳ ಕಠಿಣಶಿಕ್ಷೆಯನ್ನೂ ವಿಧಿಸಿದರು. 4 ನೇ ಅಪರಾಧಿಯು ಬಿಡುಗಡೆಹೊಂದಿದನು.

ಶ್ರೀಮನ್ಮಹಾರಾಜರವರು ಕಳೆದ ೨೨ನೆಯ ತಾರೀಖಿನ ದಿವಸ ಮೈಸೂರು ರಾಜಧಾನಿಯಲ್ಲಿ ಕೃಷ್ಣರಾಜ ಆಸ್ಪತ್ರೆಯ ಆವರಣದಲ್ಲಿ ಮದರಾಸಿನ ಸರ್ ಮುತ್ತಯ್ಯಶೆಟ್ಟಿಯಾರ್‌ರವರ ನಾಮಾಂಕಿತದಿಂದ ಕಟ್ಟಲ್ಪಟ್ಟಿರುವ ಕಣ್ಣಾಸ್ಪತ್ರೆಯ ಮತ್ತು ಶ್ರೀಮಾನ್ ಬಾಲರಾಜೆ ಅರಸಿನವರ ಮಕ್ಕಳ ವಾರ್ಡಿನ ಆರಂಭೋತ್ಸವಗಳನ್ನು ನೆರವೇರಿಸಿದರು. ಶ್ರೀಮನ್ಮಹಾರಾಜರವರ ಸವಾರಿಯು ಶ್ರೀಮದ್ಯುವರಾಜರೊಂದಿಗೆ ಅಶ್ವದ್ವಯವನ್ನು ಹೂಡಿದ ಸಾರೋಟಿನಲ್ಲಿ ಕುಳಿತು ಪರಿವಾರದೊಂದಿಗೆ ಪ್ರಾತಃಕಾಲ ೯ ಘಂಟೆಗೆ ಆಸ್ಪತ್ರೆಗೆ ಬಿಜಮಾಡಿತು. ಮಿ|| ರಾಬಿನ್‌ಸನ್ ಮುಂತಾದವರು ಎದುರುಗೊಂಡು ಸ್ವಾಗತವನ್ನು ಮಾಡಿದರು. ಮಿ|| ರಾಬಿನ್‌ಸನ್‌ರವರು ಶ್ರೀ ಮಹಾಪ್ರಭುಗಳಿಗೆ ಒಂದು ವಿಜ್ಞಾಪನಾಪತ್ರವನ್ನೊಪ್ಪಿಸಿದರು. ಅನಂತರ ಮಹಾಪ್ರಭುವರ್ಯರು ಒಂದು ದಿವ್ಯ ಭಾಷಣವನ್ನು ಮಾಡಿ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಜೈನ ಮಹಾಗುರುಗಳಾದ ಶ್ರವಣಬೆಳಗೊಳದ ಸ್ವಸ್ತಿ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಗಳವರು ಕಳೆದ 20 ನೆಯ ತಾರೀಖು ಬುಧವಾರ ಪ್ರಾತಃಕಾಲ ರಾಜಧಾನಿಗೆ ಆಗಮಿಸಿದರು. ಜೈನಮಂಡಲಿಯೂ ಇತರ ಪ್ರಮುಖರೂ ಶ್ರೀಗಳವರನ್ನು ಎದುರುಗೊಂಡು ದೊಡ್ಡಪೇಟೆ ಮಾರ್ಗವಾಗಿ ರಾಜಮರ್ಯಾದೆಯೊಡನೆ ಉತ್ಸವಪೂರ್ವಕವಾಗಿ ಎಂ. ಎಲ್. ವರ್ಧಮಾನಯ್ಯನವರ ಜೈನವಿದ್ಯಾರ್ಥಿನಿಲಯಕ್ಕೆ ಬಿಜಮಾಡಿಸಿಕೊಂಡು ಬಂದರು. ಪ್ರತಿ ಸಾಯಂಕಾಲವೂ ಶ್ರೀಗಳವರ ಧರ್ಮೋಪನ್ಯಾಸಗಳು ನಡೆಯುತ್ತಲಿವೆ. ಶ್ರೀಗಳವರು ದೊಡ್ಡ ಪಂಡಿತರೂ, ಶಾಂತಾತ್ಮರೂ, ದೈವನಿಷ್ಠರೂ, ವಾಗ್ಮಿಗಳೂ, ಜೈನಸಿದ್ಧಾಂತಕೋವಿದರೂ ಆದುದರಿಂದ ಇವರ ಧಾರ್ಮಿಕೋಪನ್ಯಾಸಗಳನ್ನು ಕೇಳುವುದಕ್ಕೆ ಪ್ರತಿದಿವಸವೂ ಬಹುಜನಗಳು ಹೋಗುತ್ತಿರುವರು. ಇತರ ಸಿದ್ಧಾಂತಗಳಿಗೂ ಜೈನಸಿದ್ಧಾಂತಕ್ಕೂ ಇರುವ ಏಕಾಭಿಪ್ರಾಯವನ್ನು ಪ್ರಮಾಣಯುಕ್ತ್ಯನುಭವಗಳಿಂದ ಪಂಡಿತಪಾಮರರಿಗೆಲ್ಲಾ ತಿಳಿಯುವಂತೆ ಬೋಧಿಸುತ್ತಿರುವರು. ಶ್ರೀಗಳವರ ಉಪನ್ಯಾಸ ಚಾತುರ್ಯವನ್ನು ನೋಡಿ ಸಕಲರೂ ತಲೆದೂಗುತ್ತಿರುವರು. ಇಂಥ ಮಹಾಪಂಡಿತರು ದೊರೆತುದು ಜೈನಮಂಡಲಿಯ ಪುಣ್ಯಪರಿಪಾಕವೇ ಸರಿ.

ಅದ್ಭುತವಾದ ಅಣೆಕಟ್ಟು!

ಅಮೇರಿಕೆಯ ಅರಿಜೋನಾ-ನೆವಾಡಾದಲ್ಲಿ ಕೊಲರಾಡೊನದಿಗೆ ಕಟ್ಟಲ್ಪಡುತ್ತಿರುವ 'ಹೂವರ್' ಅಣೆಕಟ್ಟೆಯು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾಗಿರುತ್ತದೆ. ಪೂರ್ಣವಾದನಂತರ ಅಣೆಕಟ್ಟೆಯು 750 ಅಡಿ ಎತ್ತರವಾಗಿದ್ದು ಕಟ್ಟೆಯಲ್ಲಿ 50,000 ಚದರ ಮೈಲುಗಳನ್ನು ಆಕ್ರಮಿಸುವಷ್ಟು ನೀರು ನಿಲ್ಲುವುದು. ಕಟ್ಟೆಯು 115 ಮೈಲುಗಳ ಉದ್ದವಾಗಿರುವದು. ಕಟ್ಟೆಯು ನಿರ್ಮಾಣವಾಗುವಕಾಲದಲ್ಲಿ ನದೀಪಾತ್ರದಲ್ಲಿ ನೀರು ಸ್ವಲ್ಪವೂ ನಿಲ್ಲದಂತೆ 4 ದೊಡ್ಡ ಸುರಂಗಗಳನ್ನು ಕಟ್ಟಿ, ನದಿಯನೀರನ್ನು ಸಂಪೂರ್ಣವಾಗಿ ಬೇರೆಕಡೆಗೆ ತಿರುಗಿಸಿರುವರು. ಈ ಸುರಂಗಗಳು ಪ್ರತಿಯೊಂದೂ 3000 ಅಡಿ ಉದ್ದವಾಗಿಯೂ 56 ಅಡಿ ಅಗಲವಾಗಿಯೂ ಇರುವುದು. ಇದರ ನೀರಿನಿಂದ ಸುಮಾರು 20 ಲಕ್ಷ ಎಕರೆ ಭೂಮಿಯು ಸಾಗುವಳಿಯಾಗುವುದಂತೆ! ಅರಿಜೋನಾದಲ್ಲಿರುವ ದ್ರಾಕ್ಷಿತೋಟಗಳಿಗೆ ನೀರನ್ನು ಒದಗಿಸುವುದಕ್ಕಾಗಿ ಕಟ್ಟಲ್ಪಡುವ ಯೂಮಾ ಕಾಲುವೆಯು ತಳಭಾಗದಲ್ಲಿ 34 ಅಡಿ ಅಗಲವಾಗಿಯೂ ಮೇಲ್ಭಾಗದಲ್ಲಿ 200 ಅಡಿ ಅಗಲವಾಗಿಯೂ 22 ಅಡಿ ಆಳವಾಗಿಯೂ ಇರುವುದಂತೆ!

ನೂತನ ಗ್ರಾಮಾಫೋನ್ ಯಂತ್ರ!

ಎಂ. ರೆನೆ ಸುಬ್ಲಾಟ್ ಎಂಬವರು ಒಂದು ಹೊಸ ತರಹ ಗ್ರಾಮಾಫೋನನ್ನು ಕಂಡುಹಿಡಿದಿರುವರು. ಅದರ ಸಂಬಂಧವಾಗಿ ಅವರು ಹೇಳಿರುವುದು ನಿಜವಾದರೆ, ಈಗಿನ ಗ್ರಾಮಾಫೋನುಗಳಲ್ಲಿ ವಿಶೇಷ ಬದಲಾವಣೆಯಾಗುವುದು. ಏಕೆಂದರೆ, ಸುಬ್ಲಾಟ್‌ರವರು ತಯಾರಿಸಿರುವ 'ಗ್ರಾಮೋ ಫಿಲಂ' ಎಂಬ ಯಂತ್ರಕ್ಕೆ ಇತರ ಗ್ರಾಮಾಫೋನ್‌ಗಳಿಗಿರುವಂತೆ ಶಬ್ದವರ್ಧಕ ಯಂತ್ರವಾಗಲಿ, ತಟ್ಟೆಯಾಗಲಿ, ಸೂಜಿಯಾಗಲಿ ಯಾವುದೂ ಇಲ್ಲ. ಚಲನಚಿತ್ರದಲ್ಲಿ ಉಪಯೋಗಿಸುವಂತಹ ಫಿಲ್ಮಿನ ಒಂದು ಸಣ್ಣ ತುಂಡು, 1 ಆಣೆ ಬೆಲೆಯುಳ್ಳ ಒಂದು ಸಣ್ಣ ಬಲ್ಬಿನಿಂದ ಸೂಜಿಯ ಮೊನೆಯಷ್ಟು ಬೆಳಕು, ಇಷ್ಟಾದರೆ ಸಾಕು. ಬಲ್ಬಿನ ಮುಂದೆ ಒಂದು ಕಾಗದದ ತುಂಡನ್ನು ಇಟ್ಟರೆ ಸಂಗೀತವು ನಿಲ್ಲುವುದು. ಕಾಗದವನ್ನು ತೆಗೆದ ಕೂಡಲೇ ಪುನಃ ಸಂಗೀತಕ್ಕೆ ಪ್ರಾರಂಭವಾಗುವುದು. ಗ್ರಾಮಾಫೋನ್ ತಟ್ಟೆಗಳನ್ನು ತಯಾರಿಸುವುದಕ್ಕಿಂತಲೂ ಮೇಲ್ಕಂಡ ಫಿಲಂ ತುಂಡುಗಳನ್ನು ತಯಾರಿಸುವುದು ಬಹಳ ಸುಲಭ ಮತ್ತು ಅತ್ಯಲ್ಪ ವೆಚ್ಚ. ಫಿಲಂ ಒಡೆಯುವಂತಿಲ್ಲ. ಬೆಂಕಿಯಿಂದ ನಾಶವಾಗುವಂತಿಲ್ಲ ಮತ್ತು ಎಷ್ಟು ಸಾವಿರ ವೇಳೆ ಉಪಯೋಗಿಸಿದರೂ ಸವೆಯುವಂತಿಲ್ಲ. ಮೇಲಾಗಿ ಈಗಿನ ಗ್ರಾಮಾಫೋನ್ ತಟ್ಟೆಯಷ್ಟು ಅಗಲವಾದ ಫಿಲ್ಮಿನಿಂದ ಎರಡು ಗಂಟೆಗಳ ಕಾಲ ಸಂಗೀತವನ್ನು ಕೇಳಬಹುದಂತೆ! ಎಂ. ಸುಬ್ಲಾಟ್‌ರವರು ಒಂದು ದಿನ ತಮ್ಮ ಗ್ರಾಮಾಫೋನಿನ ತಟ್ಟೆಯನ್ನು ಬದಲಾಯಿಸುವಾಗ ಶಬ್ದವರ್ಧಕ ಯಂತ್ರವು ಕೈಯಿಂದ ಜಾರಿ ಅದರ ಮುಳ್ಳು ಅವರ ಬೆರಳಿಗೆ ಚುಚ್ಚಿಕೊಂಡಿತಂತೆ! ಅದರಿಂದ ಅವರು ಮುಳ್ಳಿಲ್ಲದ ಗ್ರಾಮಾಫೋನನ್ನು ತಯಾರಿಸಬೇಕೆಂದು ನಿರ್ಧರಿಸಿ 5 ವರ್ಷಗಳ ಕಾಲ ಕಷ್ಟಪಟ್ಟು 20,00,000 ರೂಪಾಯಿಗಳನ್ನು ವೆಚ್ಚಮಾಡಿ, ಮೇಲ್ಕಂಡ ನೂತನ ಯಂತ್ರವನ್ನು ತಯಾರಿಸಿರುವರು. ಇವರ ಪದ್ಧತಿಯು ಮೇರೆ ವಾಕ್ಚಲನಚಿತ್ರಗಳನ್ನು ತಯಾರಿಸುವುದಾದರೆ, ಈಗ 100 ರೂ.ಗಳನ್ನು ವೆಚ್ಚಮಾಡಿ ತಯಾರಿಸಬಹುದಾದಷ್ಟು ಉದ್ದವಾದ ಫಿಲ್ಮನ್ನು ಕೇವಲ 5 ಆಣೆಗಳಿಗಿಂತಲೂ ಕಡಿಮೆ ವೆಚ್ಚದಲ್ಲಿ ತಯಾರಿಸಬಹುದಂತೆ!

(೩ನೆಯ ಪುಟದಿಂದ ಮುಂದುವರಿದುದು.)

ಚೌಕಟ್ಟಿನಲ್ಲಿದೆ. ಅದನ್ನು (ದಾಖಲೆ ೧) ಎಂದು ಗುರುತುಮಾಡಿದೆ. **ಈಗಿನ ಕಾಶೀ ಮಹಾರಾಜರ ತಂದೆಯವರು ಈ ದಾನಪತ್ರವನ್ನು ನೂತನವಾಗಿ ತಾಮ್ರಪತ್ರದ ಮೇಲೆ ಕೆತ್ತಿಸಿಕೊಟ್ಟಿರುತ್ತಾರೆ.** (ದಾಖಲೆ ೨).

ಮೊಕದ್ದಮೆಗೆ ಸಿಕ್ಕಿರುವ ಆಸ್ತಿಗಳ ಸಂಬಂಧದಲ್ಲಿ ಈ ದಾನಪತ್ರಕ್ಕೆ ಯಾವ ಮಹತ್ತ್ವವೂ ಇರುವುದಿಲ್ಲ. ಏಕೆಂದರೆ—ಇದರಲ್ಲಿ ಕಂಡ ಭೂಮಿಯು, 'ಕರ್ದಮೇಶ್ವರ ಮಹಾದೇವ' ಇರತಕ್ಕ **ಜಂಗಮಪುರ** ಗ್ರಾಮದಲ್ಲಿ ಇದ್ದಿತೆಂದು ಸಾಕ್ಷಿಗಳಿಂದ ನಿಶ್ಚಯಿಸಲ್ಪಟ್ಟಿರುತ್ತದೆ. ಸದ್ಯಃ ಈ ಭೂಮಿಯು ಹಿಂದೂ ವಿಶ್ವವಿದ್ಯಾಲಯದವರಿಂದ ಆಕ್ರಮಿಸಲ್ಪಟ್ಟಿರುವದರಿಂದ ಅದು ಮಠದವರ ವಶದಲ್ಲಿರುವದಿಲ್ಲ. ಆದರೆ ಕ್ರಿ. ಶ. ೫೭೪ ರಷ್ಟು ಪ್ರಾಚೀನಕಾಲದಲ್ಲಿ ಈ ಸಿಂಹಾಸನವು ಇದ್ದಿತೆಂದೂ, ಇದರ ಪೋಷಣೆಗಾಗಿ ಕಾಶೀ ಮಹಾರಾಜರಿಂದ ಸಹಾಯವು ದೊರಕಿತ್ತೆಂದೂ ಅದರಿಂದ ವ್ಯಕ್ತವಾಗುತ್ತದೆ.

ಪ್ರತಿವಾದಿಗಳು ಈ ದಾನಪತ್ರವು ನಿಜವಾದುದಲ್ಲವೆಂದು ಅನೇಕ ಕಾರಣಗಳನ್ನು ಪ್ರತಿಪಾದಿಸಿರುತ್ತಾರೆ. ಮೊದಲನೆಯದು—೧೯೦೭ರಲ್ಲಿ ಪ್ರಿಂಟಾಗಿರುವ 'ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾ' ವಾಲ್ಯುಂ ೩, ಪುಟ ೧೦೬ ರಲ್ಲಿ ಕಾಗದವು ಹಿಂದೂದೇಶಕ್ಕೆ ಮುಸಲ್ಮಾನರಿಂದ ತರಲ್ಪಟ್ಟಿತೆಂದೂ, ಮುಸಲ್ಮಾನರು ಅದರ ಉಪಯೋಗವನ್ನು ಚೀನಾದೇಶದವರಿಂದ ಕಲಿತಿದ್ದರೆಂದೂ ಬರೆಯಲ್ಪಟ್ಟಿದೆ. ಮಹಮ್ಮದೀಯರು ೧೦, ೧೧ ನೇ ಶತಮಾನಗಳಲ್ಲಿ ಹಿಂದೂಸ್ಥಾನಕ್ಕೆ ಮುತ್ತಿಗೆಯನ್ನು ಹಾಕಿದುದರಿಂದ, ೬ ನೇ ಶತಮಾನದಲ್ಲಿ ಹಿಂದೂಸ್ಥಾನದಲ್ಲಿ ಕಾಗದದ ಮೇಲೆ ದಾನಪತ್ರವನ್ನು ಬರೆಯುವುದು ಕೇವಲ ಅಸಂಭವವೆಂದು ಪ್ರತಿಪಾದಿಸಿರುತ್ತಾರೆ. ಆದರೆ ಈ ಸಂದರ್ಭದಲ್ಲಿ ನಾನು **ರಾಯ್‌ಬಹದ್ದೂರ್ ಗೌರೀಶಂಕರ ಓಝಾ** ರವರ **'ದಿ ಪ್ಯಾಲಿಯೋಗ್ರಾಫಿ ಆಫ್ ಇಂಡಿಯಾ'** ಎಂಬ ಗ್ರಂಥದಲ್ಲಿರುವ ವಿಷಯವನ್ನು ಪ್ರತಿವಾದಿಗಳ ಗಮನಕ್ಕೆ ತರಲಪೇಕ್ಷಿಸುತ್ತೇನೆ. ಇದೇ ಗ್ರಂಥವನ್ನೇ ಪ್ರತಿವಾದಿಗಳು ಮತ್ತೊಂದು ವಿಷಯದ ಸಂಬಂಧದಲ್ಲಿ ದಾಖಲೆಯನ್ನಾಗಿ ತೋರಿಸಿರುತ್ತಾರೆ. ಈ ಗ್ರಂಥದ ೧೪೪ ನೇ **ಪುಟದಲ್ಲಿ** ಅಲೆಗ್ಝಾಂಡರನ ಮುತ್ತಿಗೆಯ ವಿಷಯಕ್ಕೆ ಸಂಬಂಧಪಟ್ಟ ದಾಖಲೆಗಳ ನಂತರ ಹಿಂದೂಸ್ಥಾನದಲ್ಲಿ ಕ್ರಿಸ್ತಪೂರ್ವ ೪ ನೇ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಅರಳೆಯಿಂದ ಕಾಗದವನ್ನು ತಯಾರಿಸುತ್ತಿದ್ದರೆಂದೂ, ಆದರೂ ಅದು ವಿಶೇಷವಾಗಿ ಪ್ರಚಾರದಲ್ಲಿರಲಿಲ್ಲವೆಂದೂ ಬರೆದಿರುತ್ತಾರೆ. ಆದುದರಿಂದ ಪ್ರತಿವಾದಿಗಳ ವಾದವು ಸರಿಯಾಗಿ ಕಾಣುವುದಿಲ್ಲ. **ಮಿ|| ಗೌರೀಶಂಕರರವರ ಗ್ರಂಥವು ಹೆಚ್ಚು ಶಾಸ್ತ್ರೀಯವಾಗಿರುವುದಲ್ಲದೆ ಇಂಪೀರಿಯಲ್ ಗೆಜೆಟಿಯರಿಗಿಂತಲೂ ಹೆಚ್ಚು ಮಹತ್ತ್ವವುಳ್ಳದಾಗಿದೆ.**

ಎರಡನೆಯದು—ಈ ದಾನಪತ್ರದ ಅಕ್ಷರಕ್ಕೂ ೬ ನೆಯ ಶತಮಾನದಲ್ಲಿ ಪ್ರಚಾರದಲ್ಲಿದ್ದ ಅಕ್ಷರಕ್ಕೂ ಸಂಪೂರ್ಣ ವ್ಯತ್ಯಾಸವಿರುವುದಾಗಿ ವಾದಿಸುತ್ತಾರೆ. ಇದಕ್ಕಾಗಿ **ಪಂಡಿತ ಗೌರೀಶಂಕರರವರ** ಗ್ರಂಥದ ೬೨ ಮತ್ತು ೬೩ ನೇ **ಪುಟಗಳ** ೧೯ ನೆಯ ಚಿತ್ರದಲ್ಲಿ ಕಂಡ ಅಕ್ಷರಗಳು, **ಬಾರ್ನೆಟ್‌ರವರ "ಆಂಟಿಕ್ವಿಟೀಸ್ ಆಫ್ ಇಂಡಿಯಾ"** ಎಂಬ ಗ್ರಂಥದ ೨೨೬ ನೇ **ಪುಟ** ಮತ್ತು ಭಾಂಡಾರಕರವರ ಗ್ರಂಥದ ೩೦೯ ನೆಯ **ಪುಟ** ಇವುಗಳು ದಾಖಲೆಗಾಗಿ ಕೊಡಲ್ಪಟ್ಟಿವೆ. ಇವುಗಳ ಪ್ರಕಾರವಾಗಿ ಹಿಂದೂಸ್ಥಾನದಲ್ಲಿ ಆ ಕಾಲದಲ್ಲಿದ್ದ ಅಕ್ಷರಗಳು ದಾನಪತ್ರದಲ್ಲಿ ಕಂಡ ಅಕ್ಷರಗಳಿಗೆ ವ್ಯತ್ಯಾಸವಾಗಿರುವುವೆಂದು ತೋರುವದು.

ಮೈಸೂರು ಮತ್ತು ಕೊಡಗುದೇಶಗಳ ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರಾಗಿದ್ದ **ಬಿ. ಲೂಯಿ ರೈಸ್ ಸಿ. ಐ. ಇ. ರವರ "ಎಪಿಗ್ರಾಫಿಯಾ ಕರ್ನಾಟಿಕಾ"** (೧೯೦೫ ನೇ ವರ್ಷದ ಪ್ರಿಂಟ್) ಎಂಬ ಗ್ರಂಥದ ೫೩ ನೇ (ಎ) ಪುಟದಲ್ಲಿಯ ಅಕ್ಷರಗಳು ದಾನಪತ್ರ (ದಾಖಲೆ ೧)ದ ಅಕ್ಷರಗಳಂತೆಯೇ ಇರುತ್ತವೆ. ಆ ಅಕ್ಷರಗಳು ಈ ದಾನಪತ್ರವು ಬರೆಯಲ್ಪಟ್ಟ ಕಾಲದವೇ ಆಗಿರುತ್ತವೆ.

ಒಟ್ಟಿನಲ್ಲಿ ಇದು ಸುಮಾರು **೧೪೦೦** ವರ್ಷಗಳ ಹಿಂದಿನ ವಿಷಯವಾಗಿರುವುದರಿಂದ, ಆಗಿನ ಕಾಲದಲ್ಲಿ ಯಾವ ಲಿಪಿಯು ಪ್ರಚಾರದಲ್ಲಿದ್ದಿತೆಂಬುದನ್ನು ಯಾರೂ ನಿರ್ಧರಿಸಿ ಹೇಳಲಾರರು. ಈ ದೇಶವು ನಾನಾಲಿಪಿಗಳ ಮತ್ತು ನಾನಾ ಭಾಷೆಗಳ ನೆಲೆಯಾಗಿರುತ್ತದೆ. ಆದುದರಿಂದ ದಾನಪತ್ರದಲ್ಲಿ ಕಂಡ ಲಿಪಿಯು ಆಗಿನ ಕಾಲದಲ್ಲಿ ಪ್ರಚಾರದಲ್ಲಿತ್ತೆನ್ನುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಮೂರನೆಯದು—ಕ್ರಿ. ಶ. ೫೭೪ ರಲ್ಲಿ ಜಯನಂದದೇವನು ಕಾಶಿಯ ರಾಜನಾಗಿರಲಿಲ್ಲ; ಹೀಗಿರುವಲ್ಲಿ ಈ ದಾನಪತ್ರವನ್ನು ಅವನು ಹೇಗೆ ಕೊಟ್ಟನು? ಎಂದು ಪ್ರತಿವಾದಿಸಲ್ಪಟ್ಟಿದೆ.

ನಿಶ್ಚಯ! ಚರಿತ್ರೆಯಪ್ರಕಾರವಾಗಿ ೫ ನೆಯ ಶತಮಾನದಲ್ಲಿ ಕನೋಜಿನ ರಾಜನು ಕಾಶಿಯಮೇಲೆ ಸ್ವಾಮಿತ್ವವನ್ನು ಹೊಂದಿದ್ದನು. ಆದರೆ ಕಾಶೀರಾಜರ ಅಧಿಕಾರಗಳೆಲ್ಲವೂ ಕಿತ್ತುಕೊಳ್ಳಲ್ಪಟ್ಟಿದ್ದವೆಂಬುದಕ್ಕೆ ಯಾವ ದಾಖಲೆಯೂ ಇಲ್ಲ. ಪ್ರಾಯಶಃ ಕನೋಜ್ ರಾಜರು ಶ್ರೇಷ್ಠಾಧಿಕಾರವನ್ನು ಪಡೆದಿರಬಹುದು. ಆದರೆ ಕಾಶೀರಾಜರು ಅವರ ಸಾಮಂತರಾಜರಾಗಿರಬಹುದು. ಇಂದಿನವರೆಗೂ ಅವರು ಅದೇ ರೀತಿಯಾಗಿರುತ್ತಾರೆ.

ಆದುದರಿಂದ ಈ ದಾನಪತ್ರದ ವಿಷಯದಲ್ಲಿ ಪ್ರತಿವಾದಿಗಳ ಹೇಳುವಿಕೆಯು ನಿರಾಧಾರವಾದುದು. ಆದ ಕಾರಣ ಈ ದಾನಪತ್ರವು (ದಾಖಲೆ ೧) ನಿಜವಾದುದೆಂದೂ, ಎರಡನೆಯ ದಾಖಲೆಯು ತಾಮ್ರಪತ್ರದ ಮೇಲೆ ಮಾಡಿದ ಅದರ ನಕಲೆಂದೂ ನಾನು ಒಪ್ಪಿಕೊಳ್ಳುತ್ತೇನೆ. ತಾಮ್ರಶಾಸನದ ವಿಷಯದಲ್ಲಿ ವಾದಿಗಳು ಮಾತ್ರ ಸಾಕ್ಷಿಯನ್ನು ಹೇಳಿರುವುದು ನಿಶ್ಚಯ; ಆದರೆ ಆ ಸಾಕ್ಷಿಯು ಯಾರಿಂದಲೂ ವಿರೋಧಿಸಲ್ಪಟ್ಟಿಲ್ಲ. ಅದು ನಿಜವಲ್ಲವೆಂದು ರುಜುವಾತುಕೊಡಲು ಪ್ರತಿವಾದಿಗಳಿಗೆ ಬೇಕಾದಷ್ಟು ಅವಕಾಶವಿದ್ದರೂ, ಅವರು ತಮ್ಮ ಹೇಳಿಕೆಯನ್ನು ಸಮರ್ಥಿಸಲು ಕಾಶೀಸರಕಾರದಿಂದ ಯಾರನ್ನೂ ಕರೆಯಿಸಲಿಲ್ಲ. ಆದುದರಿಂದ ಶಾಸನವು ನಿಜವಾದದ್ದೆಂದೇ ಒಪ್ಪಿಕೊಳ್ಳಬೇಕಾಗುವುದು.

ಕರ್ಲಮಂಗಲರು ಈ ಜಡ್ಜ್‌ಮೆಂಟಿನ ವಿಷಯವನ್ನು ಚನ್ನಾಗಿ ಮನನಮಾಡಿಕೊಳ್ಳಬೇಕು. ಈ ವಿಷಯವು ಕೋರ್ಟಿನಲ್ಲಿ ಬಹುಕೂಲಂಕಷವಾಗಿ ಚರ್ಚಿಸಲ್ಪಟ್ಟು ನಿರ್ಣೀತವಾಗಿದೆ. ಈ ದಾನವು ಶ್ರೀ ಜಗದ್ಗುರು ವಿಶ್ವಾರಾಧ್ಯರ ಪೀಠಕ್ಕೆ ಅಧಿಕಾರಿಗಳಾಗಿ ಬಂದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳವರಿಗೆ ದೊರೆತಿದೆ. ಈ ಮಹಾಸ್ವಾಮಿಗಳವರು ಆ ಜಗದ್ಗುರು ಪೀಠಕ್ಕೆ ೫೧ ನೆಯ ಪಟ್ಟದವರೆಂದು ತಿಳಿದುಬರುತ್ತದೆ. ೫೧ ನೆಯ ಪಟ್ಟದವರ ಕಾಲವೇ ಇಷ್ಟು ಪ್ರಾಚೀನವಿರುವಾಗ ಇನ್ನು ಮೂಲಾಚಾರ್ಯರ ಕಾಲವನ್ನು ನಿರ್ಣಯಿಸುವುದು ಕರ್ಲಮಂಗಲ ಮಂದಬುದ್ಧಿಗೆ ಸಾಧ್ಯವೇ? ಅಸ್ತು! ಇಲ್ಲಿಯುವರೆಗೆ ನಾನು ಪ್ರತಿಪಾದಿಸಿದ ಕಾಶೀಪೀಠದ ವಿಷಯವನ್ನು ತಿಳಿದು ಕರ್ಲಮಂಗಲರನ್ನಾವರಿಸಿಕೊಂಡಿದ್ದ ದುರಾಗ್ರಹಭೂತವು ಅವರನ್ನು ಬಿಟ್ಟು ಬಹುದೂರ ಓಡಿಹೋಗಿರಬಹುದೆಂದು ಭಾವಿಸುತ್ತೇನೆ. ಇನ್ನು ಮುಂದಾದರೂ ಕರ್ಲಮಂಗಲರು ದುರಾಗ್ರಹಪ್ರೇರಿತರಾಗಿ ಇಂಥ ಅಮಂಗಲಕಾರ್ಯದಲ್ಲಿ ಕೈಹಾಕುವುದನ್ನು ಬಿಟ್ಟು ಸಚ್ಚಿಂತನೆಯಲ್ಲಿ ಕಾಲವನ್ನು ಕಳೆದು ಪರಮೇಶ್ವರನ ಪ್ರೀತಿಗೆ ಪಾತ್ರರಾಗಬೇಕೆಂದಾಶಿಸುತ್ತೇನೆ.

(ಮುಂದೆಸಾಗುವುದು.)

ದೆಹಲಿನಗರದ ಭರಟಾ ಎಂಬೊಬ್ಬ ತರುಣನು ಸಾಲಮಾಡಿ ಒಬ್ಬ ಯುವತಿಯನ್ನು ಮದುವೆಯಾದನು. ಎಷ್ಟುಕಾಲಕಳೆದರೂ ಸಾಲವನ್ನು ತೀರಿಸಲಾಗಲಿಲ್ಲ. ಸಾಲಗಾರರ ತಗಾದೆ ಹೆಚ್ಚಾಗಲು ಕೊಡಬೇಕಾಗಿದ್ದ ಹಣಕ್ಕೆ ಬದಲಾಗಿ ತನ್ನ ಹೆಂಡತಿಯನ್ನೇ ಸಾಲಗಾರರಿಗೆ ಕೊಟ್ಟನು!

ಓಂ ನಮಃ ಶ್ರೀ ಜಗದ್ಗುರುಭ್ಯಃ

ಶ್ರೀಜಗದ್ಗುರು (ಶ್ರೀಶೈಲ) ಪರ್ವತಸಂಸ್ಥಾನದ ಸಂಚಾರ್ಯಟನ ಶುಭಾಗಮನಮಹೋತ್ಸವ. ಮೋರಿಗೇರಿ ಗ್ರಾಮ.

ಶ್ರೀಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಪಟ್ಟಾಧ್ಯಕ್ಷ ಶ್ರೀಮನ್ನಾಗಲೂಟಿ ಭಿಕ್ಷಾವರ್ತಿ ಶಿವಾಚಾರ್ಯರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸಂಚಾರ್ಯಟನ ಗುರುಸ್ಥಾಧಿಕಾರಿಗಳಾದ ಶ್ರೀ|| ಷ|| ಬ್ರಂ|| ಗಳಾದ ಕೌಂಡಿನ್ಯಪುರ ಶ್ರೀ ಶಿವಶಂಕರಶಿವಾಚಾರ್ಯ ಪಟ್ಟದ ಸ್ವಾಮಿಗಳು ಶಿರಾಮಠ (ವೇದಾಂತ ಭೂಷಣ) ಇವರು ಧರ್ಮೋದ್ಧಾರಾರ್ಥವಾಗಿ ದೇಶಮಧ್ಯದಲ್ಲಿ ಸಂಚರಿಸುತ್ತ ಹುವ್ವಿನಹಡಗಲಿ ತಾಲೂಕು ತಂಬ್ರಹಳ್ಳಿ ಹಂಪಸಾಗರ ಬನ್ನಿಕಲ್ಲು ಮುಂತಾದ ಗ್ರಾಮಾದಿ ಗ್ರಾಮಗಳ ಸದ್ಭಕ್ತಮಾಹೇಶ್ವರರುಗಳಿಗೆ ಸದ್ಬೋಧೆಯನ್ನು ಮಾಡಿ ಸದರಿಯವರ ಕಡೆಯಿಂದ ಮಹಾಸಂಸ್ಥಾನಕ್ಕೆ ಸಲ್ಲತಕ್ಕ ದೇಶಕಾಣಿಕೆ ಸರಬರಾಯಿವಗೈರೆ ಸ್ವೀಕರಿಸಿ ಫಲಾಶೀರ್ವಾದವನ್ನು ಕೊಟ್ಟು ಮಹಾಸಂಸ್ಥಾನದ ಸರ್ವಾಧಿಕಾರಿಗಳಾದ ಕೆ. ಎಂ. ಸಿ. ಮಲ್ಲಯ್ಯನವರು ಪ್ರೋಗ್ರಾಂ ಪಕ್ಷೀಕರಿಸಿದ ಪ್ರಕಾರ ತಾ|| 9-6-34 ಮಂದವಾರ ಸಾಯಂಕಾಲ 5 ಘಂಟೆಗೆ ಬನ್ನಿಕಲ್ಲು ಮುಕ್ಕಾಮಿನಿಂದ ಆನೆ ಕುದುರೆ ಮುಂತಾದ ಸಿಬ್ಬಂದಿಯೊಡನೆ ಮಹಾಸವಾರಿ ಈ ಮೋರಿಗೇರಿ ಮುಕ್ಕಾಂಗೆ ದಯಮಾಡಿಸಿತು. ಪುರಪ್ರಮುಖರಾದ ವೇ|| ಹಿರೇಮಠದ ಹೋರಿಹೊಳೆಯ್ಯನವರು ಹಂಗೂರು ಮಠದ ಶಿವಯ್ಯನವರು, ಸುರಗಿ ಮಠದ ಗುರುಕಾಂತಯ್ಯನವರು ಪಾಟೀಲು ಹಿರೇಗೌಡ್ರ ಲಿಂಗನಗೌಡ್ರು, ಶೀಲವಂತಗೌಡ್ರ ದೊಡ್ಡಲಿಂಗನಗೌಡ್ರು, ಶರಣ ಶಿವರಾಮ, ಕೊಟ್ಟುಜ್ಜ ಸಂಗಪ್ಪ, ಭಾವಿಚಿಟ್ಟಪ್ಪ, ಕೋಟೆಕಂಚಪ್ಪ ಪಲ್ಲಾಗಟ್ಟಿ ಲೋಕಪ್ಪ, ಮೈದೂರುಗುರುಸಿದ್ದಪ್ಪ, ರೋಣದ ಕರಿವೀರಪ್ಪ, ಬಣಜಿಗರ ವೀರಭದ್ರಪ್ಪ, ಶೀಲಗುಂದ ಹನುಮಜ್ಜಪ್ಪನವರೇ ಮುಂತಾದ ಸದ್ಭಕ್ತ ಮಂಡಳಿಯವರು ಇಸ್ತಕವಾಲಯುಳ್ಳರಾಗಿ ಬಾಜಾಭಜಂತ್ರೀ ಮುಂತಾದ ಮಂಗಲವಾದ್ಯವೈಭವದೊಡನೆ ಮಹಾಸನ್ನಿಧಿಯವರನ್ನು ಇದಿರುಗೊಂಡು ಫಲಪುಷ್ಪಹಾರಗಳನ್ನರ್ಪಿಸಿದನಂತರ ಉತ್ಸವವು ಸಕಲ ಬಿರುದಾವಳಿಗಳೊಡನೆಯೂ ಅನೇಕವಿಧ ವಾದ್ಯವೈಭವದೊಡನೆಯೂ ತಳಿರುತೋರಣರಂಭಾಸ್ತಂಭಗಳಿಂದಲಂಕರಿಸಲ್ಪಟ್ಟ ರಾಜಬೀದಿಗಳಲ್ಲಿ ಹೊರಟು ಹಿರೇಮಠದ ಬಳಿಯಲ್ಲಿ ರಾರಾಜಿಸುತ್ತಿರುವ ಮಳೇಮಲ್ಲೇಶ್ವರ ದೇವಸ್ಥಾನದಲ್ಲಿ ಅಲಂಕರಿಸಲ್ಪಟ್ಟ ಸಿಂಹಾಸನದ ಮೇಲೆ ಆರೋಹಣಮಾಡಿದ ನಂತರ ಶ್ರೀಗಳವರು ಶ್ರೀ ಜಗದ್ಗುರು ಪಂಚಾಚಾರ್ಯ ಭಗವತ್ಪಾದರಿಂದ ಸ್ಥಾಪಿಸಲ್ಪಟ್ಟ ಪರಮಪವಿತ್ರವಾದ ಶಕ್ತಿವಿಶಿಷ್ಟಾದ್ವೈತಸಿದ್ಧಾಂತ ತತ್ವವನ್ನು ಸಪ್ರಮಾಣವಾಗಿ ಸರ್ವರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಬೋಧಿಸಿ ಸಭಿಕರನ್ನು ಸಂತೋಷಪಡಿಸಿದರು. ಬಳಿಕ ಸಂಸ್ಥಾನದ ಸರ್ವಾಧಿಕಾರಿಗಳು 'ಉಭಾಭ್ಯಾಮೇವಪಕ್ಷಾಭ್ಯಾಂ ಯಥಾಖೇಪಕ್ಷಿಣಾಂಗತಿಃ | ತಥೈವಜ್ಞಾನಕರ್ಮಭ್ಯಾಂ ಜಂತೋರ್ಮುಕ್ತಿರ್ಧ್ರುವಾಯತೇ || ಎನ್ನುವ ಶಿವಾಗಮೋಕ್ತ ಶ್ಲೋಕಗಳಿಂದ ಮನುಷ್ಯರುಗಳಿಗೆ ಕ್ರಿಯಾಜ್ಞಾನವೇ ಮೋಕ್ಷಕ್ಕೆ ಸಾಧನವೆಂಬ ವಿಷಯದ ಮೇಲೆ ಸಂಭಾಷಿಸಿದರು ಅನಂತರ ಹಿರೇಮಠದ ಹೋರಿಹೊಳೆಯ್ಯನವರು 'ನಗುರೋರಧಿಕಂ ತತ್ವಂ | ನಗುರೋರಧಿಕಂತಪಃ || ತತ್ವಜ್ಞಾನಾತ್ಪರಂನಾಸ್ತಿ | ತಸ್ಮೈಶ್ರೀಗುರವೇನಮಃ ||' ಎಂದು ಶ್ರೀಗುರುಮಹಾತ್ಮ್ಯವನ್ನು ಪಂಡಿತ ಪಾಮರರಿಗೂ ತಿಳಿಯುವಂತೆ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಸರ್ವರೂ ಕರತಾಡನದೊಡನೆ ಶ್ರೀಜಗದ್ಗುರು ಪಂಚಾಚಾರ್ಯ ಮಹಾರಾಜಕೀಜೈ ಶ್ರೀಮನ್ನಾಗಲೂಟಿ ಭಿಕ್ಷಾವರ್ತಿ ಮಹಾರಾಜಕೀಜೈ ಎಂಬುವ ಜಯಘೋಷದೊಡನೆ ಮಂಗಲವನ್ನು ಮಾಡಿದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶ್ರೀಜಗದ್ಗುರು ಪಾದಸೇವಾ ಧುರಂಧರ
ಶೀಲವಂತಗೌಡ್ರ ಬಸವನಗೌಡ,
ಮೋರಿಗೇರಿ, ತಾಲ್ಲೂಕು ಹಡಗಲಿ.

ಸಮುದ್ರದ ತಳದಲ್ಲಿ ವಾಸ.

ಸಮುದ್ರದಲ್ಲಿ ಮುಳುಗಿಕೊಂಡು ಹೋಗಬಲ್ಲ ಸಬ್‌ಮೆರಿನ್‌ಗಳು ಉಸಿರಾಡಲು ಹೊಸಗಾಳಿಯನ್ನು ಒದಗಿಸಿಕೊಳ್ಳುವದಕ್ಕಾಗಿ ಕೆಲವು ಗಂಟೆಗಳಿಗೊಂದಾವರ್ತಿ ಮೇಲಕ್ಕೆ ಬರಲೇಬೇಕು. ಆದರೆ ಜರ್ಮನಿಯ ಒಬ್ಬ ಇಂಜನಿಯರು ಮೇಲಕ್ಕೆ ಬರದೆ ಸಮುದ್ರದ ಒಳಗಡೆಯೇ ಒಂದು ತಿಂಗಳ ಮೇಲ್ಪಟ್ಟು ಇರಲವಕಾಶವಾಗುವಂತೆ ಒಂದು ಹೊಸ ಮಾರ್ಗವನ್ನು ಕಂಡುಹಿಡಿದಿರುವರು. ಇವರ ಶೋಧದಂತೆ ವಿದ್ಯುಚ್ಛಕ್ತಿಯು ಸಮುದ್ರದ ನೀರನ್ನು ಬೇರ್ಪಡಿಸಿ ಉಸಿರಾಡುವುದಕ್ಕೆ ಅವಶ್ಯಕವಾದ ಆಮ್ಲಜನಕವನ್ನು ಯಥೇಚ್ಛವಾಗಿ ಒದಗಿಸುವುದಂತೆ!

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 33

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 40

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನೂತನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (16)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. **ಪ್ರೊಪ್ರೈಟರ್.**

ಮಲೇರಿಯಾಕ್ಕೆ
ಮಲೇರಿಯಾನ

ಗುಡುಗುಡು ಎಂಬ ಚಳಿಜ್ವರಕ್ಕೂ, ಸುಡುಸುಡು ಎಂಬ ಉರಿ ಜ್ವರಕ್ಕೂ ಗಟ್ಟಿಯಾದ ಜ್ವರಗಡ್ಡೆಗೂ ಗುಣಕರವಾದ ಮದ್ದು ಯಾವದೆಂದು ತಿಳಿದಿ? ಇಗೋ! ರಾಜಮದ್ದು **ಮಲೇರಿಯಾನವೇ** ಸಂಪೂರ್ಣ ಜ್ವರವನ್ನು ಗುಣಪಡಿಸಿ, ಗಡ್ಡೆಯನ್ನು ಬಾತ್ರಿಯಿಂದ ಕರಗಿಸಿಬಿಡುತ್ತದೆಂದು ಸ್ಥಿರ ನಂಬು. ಬಾಟ್ಲಿಗೆ 1-8-0 ಮತ್ತು ಅಣೆ 14, ½ ಡಜನ್ 8-8-0 ಮತ್ತು ರೂ. 5

ರ್ಯುಮೊ ಬಾಮು.

ಕೆಮ್ಮು, ಶೀತ, ತಲೆಸಿಡಿತ, ಪಾರ್ಶನೋವು, ಗಂಟುನೋವು, ಸಂದು ಗಂಟುನೋವು ಎಲ್ಲಾ ತರದ ವಾಯು, ಸೊಂಟನೋವು, ಚೇಳು ಜೇನ್ನೊಣ ಕಡಿತ, ಘಾಯ ಇತ್ಯಾದಿಗಳನ್ನು ರಾಮಬಾಣದಂತೆ ನಿಲಿಸುವದು. ಡಬ್ಬಿಗೆ 8 ಅಣೆ. ½ ಡಜನಿಗೆ 2-12-0. ಡಜನಿಗೆ 5-4-0

ಟಿಕ್ಕುಮದ್ದುಗಳು, ಹೊಮ್ಯೊಪತಿ ಔಷಧಿಗಳು ನಮ್ಮಲ್ಲಿ ಸಿಗುತ್ತೆ.

The Malariana Co., Mangalore (21)

ರಿಂಗ್ ವರ್ಮ್ ಬಾಮು.

ದೇಹದ ಆಯಾ ಭಾಗದಲ್ಲಿ ಹರಡಿರುವ ತುರಿಸುವ ರೋಗ, ದದ್ದು, ಸುರಸುವ ನಂಜಿ ಹುಣ್ಣುಗಳನ್ನು ಶಾಶ್ವತ ಗುಣಪಡಿಸುವದು. ಡಬ್ಬಿಗೆ ಅ. 5

ಈಯರ್ ಆಯಿಲ್.

ಕಿವಿ ಸೋರುವದು, ದುರ್ವಾಸನೆ ಬರುವುದು, ಕಿವಿ ತುರಿಕೆ, ಕಿವಿಯ ಒಳಗೆ ಕಡಿತ ನೋವು ಇತ್ಯಾದಿ ಅಸ್ವಸ್ಥಗಳನ್ನು ಖಂಡಿತ ಗುಣಪಡಿಸುವದು.

½ ಔನ್ಸಿಗೆ ಅಣೆ 8, ½ ಡಜನಿಗೆ ರೂ. 2.12-0

ಮುಖ ರೂಪಗಳು ವಿಕಾರಕ್ಕೆ ತಿರುಗಿ, ಮೆದುಳು ಕಾಯಗಳು ಶಕ್ತಿಹೀನಹೊಂದಿ, ಆರೋಗ್ಯ ಕೆಡುತ್ತಾ ಬರುವದು ಯುವಕರ ಗುಪ್ತಹಿಂಸೆಯಲ್ಲವೇ? ಪ್ರೌಢ ದೇಹವಂತನಾಗಿ ಸದಾ ಆನಂದರಸ ಬೀರುವಂತೆ ಮಾಡುವ **ಸಿರಪ್-ಸಾಲಿಸವನ** ಆತ್ಮಸಂರಕ್ಷಕನಂತೆಯೇ ಯುವಕರಿಗಿರುವನು.

ಬಾಟ್ಲಿಗೆ ರೂ. 3-8-0 ಮತ್ತು ರೂ. 1-14-0

ಪ್ರಖ್ಯಾತಿಪಟ್ಟ ವಾರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು.

ಸಕಲ ತರದ ಹೊಟ್ಟೆಹುಳಗಳನ್ನು ನಾಶಪಡಿಸಿ ಜಾಡಿಸುವದರಲ್ಲಿ ಮುಖ್ಯ ಔಷಧಿ ಡಜನಿಗೆ 5 ಅಣೆ.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಏಜಂಟರು: ಡಾಕ್ಟರ್ ಎ. ಕೆ. ರಾವ್, ತುಮಕೂರು.

ಪತ್ರೆ:— ಮಲೇರಿಯಾನ ಕಂಪೆನಿ,
[42] **(ಹಂಪನಕಟ್ಟೆ), 21, ಮಂಗಳೂರು**

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು **"ವೀರಶೈವರತ್ನ"** ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಹ್ಯಾದ್ರಿ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೨—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[24] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟೀಕಾ ಸಹಿತ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಜುಲೈ ೧೯೩೪ [ಸಂಚಿಕೆ ೭

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಅದ್ವೈತಖಂಡನಪೂರ್ವಕ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ಸಿದ್ಧಾಂತಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ

ಶಿವಮೊಗ್ಗ ಡಿ|| ಹಾರನಹಳ್ಳಿಯಲ್ಲಿರುವ ಮ|| ರಾ|| ಗಾಜನೂರು ನಂಜಪ್ಪನವರ ಮೊಮ್ಮಗ ಚಿ|| ವೀರಭದ್ರಪ್ಪನೆಂಬ ಶಿಶುವಿಗೆ ಗ್ರಹಪೀಡೆಯು ಸಂಭವಿಸಿದ್ದು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೆ ಸಮರ್ಪಿಸಲ್ಪಟ್ಟ 1 ರೂ. ಗುಬ್ಬಿ ಶಿವಕಥಾಪಂಡಿತ ವೇ|| ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ಬಂಕಾಪುರದಲ್ಲಿರುವ ಮ|| ರಾ|| ಬಸವಣ್ಣೆಪ್ಪಾ ಕೊತ್ತುಂಬರಿ ಇವರ ಅಣ್ಣ ಬೂದೆಪ್ಪನವರ ಪುತ್ರ ಚಿ|| ಸ|| ಫಕೀರಪ್ಪನಿಗೆ ಸದರಿ ಗ್ರಾಮದ ಮ|| ರಾ|| ಚನ್ನಪ್ಪ ಯಲಿಗಾರ ಇವರ ಪುತ್ರಿ ಚಿ|| ಸೌ|| ನೀಲವ್ವನನ್ನೂ, ಮೇಲ್ಕಂಡ ಮ|| ರಾ|| ಬಸವಣ್ಣೆಪ್ಪಾ ಕೊತ್ತುಂಬರಿ ಇವರ ಪುತ್ರ ಚಿ|| ಸ|| ಕೊಟ್ರೇಶಪ್ಪನಿಗೆ ಬಂಕಾಪುರ ತಾ|| ತಡ್ಲಘಟ್ಟ ಗ್ರಾಮದ ಮ|| ರಾ|| ಅಡಿವಪ್ಪ ಕಟನೂರು ಇವರ ಪುತ್ರಿ ಚಿ|| ಸೌ|| ಪಾರ್ವತವ್ವನನ್ನೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಬಂಕಾಪುರದ ವೇ|| ಅರಳೆಲೆ ಮಠದ ಗುರುಪಾದಯ್ಯನವರ ಪ್ರಥಮ ಪುತ್ರಿ ಚಿ|| ಸೌ|| ಗಂಗಾಂಬೆಯನ್ನು ಜಮಖಂಡಿ ಸಂಸ್ಥಾನ ಪೈಕಿ ಸಂಸಿಗ್ರಾಮದ ವೇ|| ಮಳೆಮಠದ ಸಂಗಯ್ಯನವರ ಪುತ್ರ ಚಿ|| ಸ|| ವೀರಭದ್ರಯ್ಯ. ಬಿ.ಎ., ಇವರಿಗೂ, ಮೇಲ್ಕಂಡ ವೇ|| ಅರಳೆಲೆಮಠದ ಗುರುಪಾದಯ್ಯನವರ ದ್ವಿತೀಯ ಪುತ್ರಿ ಚಿ|| ಸೌ|| ಗೌರಾಂಬೆಯನ್ನು ಸಾಂಗ್ಲಿ ಸಂಸ್ಥಾನ ಪೈಕಿ ಬಟ್ಟೂರು ಗ್ರಾಮದ ವೇ|| ಹಿರೇಮಠದ ಶಿದ್ರಾಮಯ್ಯನವರ ಪುತ್ರ ಚಿ|| ಸ|| ಮುರಿಗಯ್ಯನವರಿಗೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಒಟ್ಟು 2 ರೂ. ಗಳು ಕಣೇಕಲ್ ಹಿರೇಮಠದ ವೇ|| ಚನ್ನವೀರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ರಿಜರ್ವ್ ಬ್ಯಾಂಕ್.

ಆರ್. ಎಸ್. ಆರಾಧ್ಯ, ಜಟ್ಟಿಅಗ್ರಹಾರ,
ಕೊರಟಗೆರೆ ತಾಲ್ಲೂಕು.

ಹಿಂದೆ ನಡೆದ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಇಂಡಿಯಾ ದೇಶದ ರಿಜರ್ವ್‌ಬ್ಯಾಂಕಿನ ರಚನೆಯ ಬಗ್ಗೆ ಸಲಹೆ ಮತ್ತು ಅಭಿಪ್ರಾಯಗಳನ್ನು ಕೊಡಲು ಸೆಲೆಕ್ಟ್ ಕಮಿಟಿಯನ್ನು ಏರ್ಪಡಿಸಿದ್ದರು. ಆದರೆ ಆ ಕಮಿಟಿಯವರು ಕೊಟ್ಟಿರುವ ಸೂಚನೆಗಳು ಅಷ್ಟು ಸಮರ್ಪಕವಾಗಿಲ್ಲ. ಕಮಿಟಿಯ ಸದಸ್ಯರುಗಳಲ್ಲೇ ಪರಸ್ಪರ ಭಿನ್ನಾಭಿಪ್ರಾಯಗಳು ಹುಟ್ಟಿ ಅತಿ ಮುಖ್ಯಸಲಹೆಗಳ ವಿಚಾರವಾಗಿ ಬೇಕಾದಷ್ಟು ತೀರ್ಪುಗಳನ್ನು ಕೊಟ್ಟಿಲ್ಲವೆಂದು ಹೇಳಬಹುದು.

ಈ ರಿಜರ್ವ್ ಬ್ಯಾಂಕು ಷೇರುದಾರರ ಬ್ಯಾಂಕಾಗಿರಬೇಕೆ ಅಥವಾ ಸ್ಟೇಟ್ ಬ್ಯಾಂಕಾಗಿರಬೇಕೇ ಎಂಬುದೊಂದು ಚರ್ಚಿತವಾದ ಪ್ರಶ್ನೆ. ಷೇರುದಾರರ ಬ್ಯಾಂಕಾದ ಪಕ್ಷದಲ್ಲಿ ಅದರ ಆಡಳಿತವನ್ನು ಅವರ ಕೈಯಲ್ಲಿಯೇ ಕೊಡಬೇಕು. ಅದ್ದರಿಂದ ಮುಂದೆ ಷೇರುದಾರರು ಲಾಭಾಪೇಕ್ಷಿಗಳಾದರೆ ಬ್ಯಾಂಕಿನ ವಿಷಯವೇ ಕೆಟ್ಟುಹೋಗಬಹುದು. ಅದ್ದರಿಂದ ಈ ರಿಜರ್ವ್‌ಬ್ಯಾಂಕು ಸ್ಟೇಟ್ ಬ್ಯಾಂಕಾಗಿರುವುದು ಉತ್ತಮ. ಯಾಕೆಂದರೆ ಇಂಡಿಯಾ ದೇಶದ ಅರ್ಥಿಕರಂಗದ ಕೇಂದ್ರವಾಗಿ ಪರಿಣಮಿಸಲಿರುವ ಈ ರಿಜರ್ವ್ ಬ್ಯಾಂಕು ಸಾಕಾದಷ್ಟು ಭದ್ರಸ್ಥಿರವಾಗಿರಬೇಕು.

ಸರ್ಕಾರದವರಿಗೆ ಈ ಬ್ಯಾಂಕಿನ ಆಡಳಿತ ಮತ್ತು ಪಾಲಿಸಿಗಳ ಮೇಲೆ ಬಹಳ ಆಸೆ ಇದ್ದರೂ ಇದನ್ನು ಸ್ಟೇಟ್ ಬ್ಯಾಂಕನ್ನಾಗಿ ಮಾಡಲು ಇಷ್ಟಪಡಲಿಲ್ಲವೆಂಬ ವಿಷಯವನ್ನು ಹೇಳಲು ಬಹಳ ವಿಷಾದಿಸಬೇಕಾಗುತ್ತದೆ. ಈ ರಿಜರ್ವ್ ಬ್ಯಾಂಕು ಷೇರ್ ಹೋಲ್ಡರುಗಳ ಬ್ಯಾಂಕಾದರೂ, ಇದರ ಅಧಿಕಾರವನ್ನು ಮಾತ್ರ ಸರ್ಕಾರದ ಕೈಯಲ್ಲಿಯೇ ಬಿಟ್ಟುಬಿಟ್ಟರು.

ಯಾವ ಬ್ಯಾಂಕೇ ಆಗಲಿ ನೋಟುಗಳು ಮತ್ತು ನಾಣ್ಯಗಳನ್ನು ತಯಾರಿಸುವ ಹಕ್ಕಿದ್ದ ಪಕ್ಷದಲ್ಲಿ ನಾಣ್ಯದ ದರವನ್ನು ಗೊತ್ತುಮಾಡುವ ಅಧಿಕಾರವು ಅದೇ ಬ್ಯಾಂಕಿಗೆ ಕೊಟ್ಟಿರುತ್ತದೆ. ಆದರೆ ಈ ನವೀನ ರಿಜರ್ವ್‌ಬ್ಯಾಂಕಿಗೆ ಸರ್ಕಾರದವರು ರೂಪಾಯಿನ ಸ್ಥಾನನಿರ್ಣಯದ ಅಧಿಕಾರವನ್ನು ಕೊಡದಿರುವದು ಬಹಳ ಶೋಚನೀಯವಾದ ವಿಚಾರ. ಅಲ್ಲದೆ ಈ ವಿಷಯವನ್ನು ಬ್ಯಾಂಕಿನ ಮಸೂದೆಯಲ್ಲಿ ಕೂಡ ಸೇರಿಸದಿರುವುದು ಆಶ್ಚರ್ಯಕರವಾದ ವಿಚಾರವೆಂದು ಹೇಳಬೇಕು.

ಇಂಡಿಯಾ ದೇಶದ ವ್ಯಾಪಾರಾದಿಗಳು ಅಭಿವೃದ್ಧಿಯಾಗಬೇಕಾದರೆ ಮತ್ತು ಅರ್ಥಿಕಸ್ಥಿತಿಯು ಸರಿಯಾದ ರೀತಿಯಲ್ಲಿರಬೇಕಾದರೆ ರೂಪಾಯಿಗೆ ಸ್ಥಾನನಿರ್ಣಯವಾಗಿರಬೇಕು. ಅದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಮತ್ತು ಬ್ಯಾಂಕಿನ ಆಡಳಿತಗಾರರು ರೂಪಾಯಿಯ ದರವನ್ನು ಗೊತ್ತುಮಾಡಿ ಆ ದರವನ್ನು ರಕ್ಷಿಸುವ ಅಧಿಕಾರವನ್ನು ರಿಜರ್ವ್‌ಬ್ಯಾಂಕಿಗೆ ಕೊಡಲು ಪ್ರಯತ್ನಿಸಬೇಕಾದುದು ಮೊದಲನೆಯ ಕೆಲಸವಾಗಿದೆ.

ಷೇರು ದರಗಳನ್ನು 500 ರೂಪಾಯಿಯಿಂದ ನೂರು ರೂಪಾಯಿಗಳಿಗಿಳಿಸಿರುವುದೂ, ಐದು ಷೇರುಗಳಿಗೆ ಕಡಿಮೆ ತೆಗೆದುಕೊಂಡಿರುವವರಿಗೆ ಬ್ಯಾಂಕಿನ ಚುನಾವಣೆಗಳಲ್ಲಿ ಅಭಿಮತಕೊಡುವ ಅಧಿಕಾರವನ್ನು ಕೊಡದಿರುವದೂ, ಇಂಪೀರಿಯಲ್ ಬ್ಯಾಂಕಿಗೂ ಮತ್ತು ರಿಜರ್ವ್ ಬ್ಯಾಂಕಿಗೂ ಇರುವ ಸಂಬಂಧವನ್ನು ಇನ್ನು ಹದಿನೈದು ವರ್ಷಗಳ ಕಾಲ ಮಾತ್ರ ಇರಬೇಕೆಂದು ಮಾಡಿರುವುದೂ ಅಷ್ಟು ನ್ಯಾಯವಲ್ಲವೆಂದು ಹೇಳಬಹುದು.

ರೀವಾಸಂಸ್ಥಾನದ 54 ಜನ ಜಮೀನ್ದಾರರು ದುರ್ನಡತೆಯುಳ್ಳವರಾಗಿ, ಸರಕಾರಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವರೆಂಬ ಅಪಾದನೆಯಮೇಲೆ ಸರಕಾರದವರು ಅವರ ಆಸ್ತಿಯನ್ನೆಲ್ಲಾ ಜಪ್ತುಮಾಡಿರುವರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರು ಮಾಡಿದ ಭಾಷಣ.

ಬಜೆಟ್ ಅಧಿವೇಶನ—೧೪ ನೆಯ ಜೂನ್ ೧೯೩೪.

(ಮುಂದೆಸಾಗಿದುದು.)

ಭದ್ರಾವತಿ ಕಬ್ಬಿಣದ ಕಾರ್ಖಾನೆ.

ಕಬ್ಬಿಣದ ವ್ಯಾಪಾರವೂ ಸಹ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಇಳಿದು ಹೋಗಿದೆಯೆಂಬ ಅಂಶವು ತಮಗೆ ತಿಳಿದೇ ಇದೆ. ಆದರೆ ಕಳೆದ ಕೆಲವು ತಿಂಗಳುಗಳಲ್ಲಿ ಇತರ ದೇಶಗಳಲ್ಲಿ ಇದು ಸ್ವಲ್ಪಮಟ್ಟಿಗೆ ಉತ್ತಮಗೊಂಡಿರುವ ಹಾಗೆ ಕಂಡುಬಂದಿದೆ. 1933-34 ನೆಯ ಸಾಲಿನಲ್ಲಿ ಭದ್ರಾವತಿಯಲ್ಲಿ ನಡೆಸುವ ಕೆಲಸಗಳಿಗಾಗಿ 1·09 ಲಕ್ಷ ರೂಪಾಯಿಗಳ ನಷ್ಟವುಂಟಾಗಬಹುದೆಂದು ಮೊದಲು ನಿರೀಕ್ಷಿಸಲಾಗಿದ್ದಿತು. ಆದರೆ ಈ ನಷ್ಟವು 2·52 ಲಕ್ಷ ರೂಪಾಯಿಗಳ ವರೆಗೆ ಹೆಚ್ಚಬಹುದೆಂದು ಈಗ ನಿರೀಕ್ಷಿಸಿದೆ. ಹೀಗೆ ಇದು ಹೆಚ್ಚುವುದಕ್ಕೆ ಕಾರಣಗಳು ಯಾವುವೆಂದರೆ— ಮೊದಲನೆಯದಾಗಿ, ಎಂದಿಗಿಂತಲೂ ಮುಂಚಿತವಾಗಿಯೇ ಮಳೆಗಾಲವು ಆರಂಭವಾದಕಾರಣ ಕಾಡುಗಳಿಂದ ಬರುತ್ತಿದ್ದ ಇದ್ದಲಿನ ಸರಬರಾಯಿಯು ಸಾಕಾದಷ್ಟು ನಡೆಯಲಿಲ್ಲ. ಇದರ ಫಲಿತಾಂಶವಾಗಿ, ಮತ್ತು ಕಬ್ಬಿಣದ ಉತ್ಪತ್ತಿಯು ಮೊದಲು ನಿರೀಕ್ಷಿಸಿದುದಕ್ಕಿಂತಲೂ ಕಡಿಮೆಯಾಯಿತು. ಇದೇ ಕಾಲದಲ್ಲಿ, ಸರ್ವಸಾಮಾನ್ಯವಾಗಿ ಒದಗಿದ್ದ ವ್ಯಾಪಾರದ ಮುಗ್ಗಟ್ಟಿನಿಂದಲೂ ಮತ್ತು ರೈಲ್ವೆಗಳವರಿಂದ ನಡೆಸಲ್ಪಡುವ ಮೂಲಧನದ ಕಾಮಗಾರಿಗಳನ್ನು ಕಡಿಮೆಮಾಡಿದುದರಿಂದಲೂ ನಾಡು ಕಬ್ಬಿಣಕ್ಕೂ ಮತ್ತು ಬೀಡು ಕಬ್ಬಿಣದ ಕೊಳಾಯಿಗಳಿಗೂ ಗಿರಾಕಿಯು ಕಡಿಮೆಯಾಯಿತು. ಇದಲ್ಲದೆ ಪರದೇಶದ ಪೈಪೋಟಿಯ ದೆಸೆಯಿಂದ ಬೀಡು ಕಬ್ಬಿಣದ ಕೊಳಾಯಿಗಳ ಬೆಲೆಯನ್ನು ಕಡಿಮೆ ಮಾಡಬೇಕಾಯಿತು. ಈ ಮಧ್ಯೆ, ಮರವನ್ನು ಭಟ್ಟಿ ಇಳಿಸುವ ಸಂಬಂಧವಾಗಿ ಉತ್ಪತ್ತಿಯಾದ ಚಿಲ್ಲರೆ ಪದಾರ್ಥಗಳ ಗಿರಾಕಿಯೂ ಕೂಡ ಉತ್ತಮಗೊಂಡಿರುವುದಿಲ್ಲ. ಸಿಬ್ಬಂದಿಯ ವೆಚ್ಚವನ್ನು ಕಡಿಮೆಮಾಡುವುದಕ್ಕಾಗಿ, ಈಗಿರುವ ಸಿಬ್ಬಂದಿಯನ್ನೂ ಮತ್ತು ಅವರು ಮಾಡುತ್ತಿರುವ ಕೆಲಸವನ್ನೂ ಪುನರ್ವ್ಯವಸ್ಥೆಗೊಳಿಸುವ ಏರ್ಪಾಡುಗಳನ್ನು ಈ ಕಾರ್ಖಾನೆಯಲ್ಲಿಯೂ ಸಹ ನಡೆಸಲಾಗುತ್ತಿದೆ ಮತ್ತು ಈ ಸಮಗ್ರ ಪರಿಸ್ಥಿತಿಯನ್ನು ಸರ್ಕಾರದವರು ಕುತೂಹಲದಿಂದ ಅವಲೋಕಿಸುತ್ತಿದ್ದಾರೆ. ಈ ಕಾರ್ಖಾನೆಯಲ್ಲಿನ ಹಣಕಾಸಿನ ಪರಿಸ್ಥಿತಿಯು ಉತ್ತಮಗೊಳ್ಳಬೇಕಾದರೆ ಉಕ್ಕಿನ ಸಾಮಾನುಗಳನ್ನೂ ಮತ್ತು 'ಅಸೆಟಿಕ್ ಆಸಿಡ್' ಎಂಬ ದ್ರಾವಕವನ್ನೂ ಇಲ್ಲಿ ತಯಾರಿಸತಕ್ಕುದೊಂದೇ ಮಾರ್ಗವೆಂದು ಸದ್ಯಃ ಕಾಣಬರುತ್ತದೆ.

ಮೈಸೂರು ರೈಲ್ವೆಗಳು.

ರೈಲ್ವೆಗಳ ಬಾಬಿನಲ್ಲಿ 1933-34 ನೆಯ ಸಾಲಿನಲ್ಲಿ 13·80 ಲಕ್ಷ ರೂಪಾಯಿಗಳ ಹುಟ್ಟುವಳಿಯಾಗಿರುವುದಕ್ಕೆ ಬದಲಾಗಿ ಮುಂದಣ ಸಾಲಿನಲ್ಲಿ 12·76 ಲಕ್ಷ ರೂಪಾಯಿಗಳ ಹುಟ್ಟುವಳಿಯಾಗುವುದೆಂದು ನಿರೀಕ್ಷಿಸಲಾಗಿದೆ. 1937 ನೆಯ ಇಸವಿಯಲ್ಲಿ ಬೆಂಗಳೂರು—ಹರಿಹರ ಲೈನನ್ನು ನಮ್ಮ ಸರಕಾರಕ್ಕೆ ವಹಿಸಿಕೊಳ್ಳುತ್ತೇವಷ್ಟೆ. ಈ ನಿರೀಕ್ಷಣೆಯಿಂದ ರೈಲ್ವೆ ವರ್ಕ್‌ಷಾಪುಗಳನ್ನು ಹೊಸರೀತಿಯಲ್ಲಿ ಏರ್ಪಡಿಸಬೇಕಾಗಿದೆ. ಇದರ ಸಂಬಂಧದಲ್ಲಿ ಬಂಡವಾಳದ ವೆಚ್ಚವನ್ನು ನಡೆಸಲು ಬಹಳ ಭಾರಿ ಕಾರ್ಯಕ್ರಮವೊಂದನ್ನು ನಾವು ಕೈಗೊಳ್ಳಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ರೈಲ್ವೆ ಲೈನುಗಳೂ ಒಂದೇ ಆಡಳಿತಕ್ಕೆ ಒಳಪಟ್ಟನಂತರ, ಈ ಇಲಾಖೆಯಲ್ಲಿ ನಡೆಯುವ ಹೆಚ್ಚು ವೆಚ್ಚಗಳನ್ನು ಎಲ್ಲಾ ಲೈನುಗಳಿಗೂ ಹಂಚಿಹಾಕುವುದರಿಂದ ಉತ್ತಮ ಫಲಿತಾಂಶಗಳನ್ನು ತೋರಿಸಲು ಸಾಧ್ಯವಾಗುವುದೆಂದು ನಂಬುತ್ತೇನೆ.

ಈ ರೀತಿ, ಸಂಸ್ಥಾನದಲ್ಲಿನ ಮುಖ್ಯ ಉದ್ಯಮಗಳ ಅಭಿವೃದ್ಧಿಯ ವಿಷಯವಾಗಿ ಸ್ವಲ್ಪಮಟ್ಟಿಗೆ ಹೇಳಿಯಾದ ಮೇಲೆ 1932-33, 1933-34 ಮತ್ತು 1934-35 ನೆಯ ವರುಷಗಳಲ್ಲಿನ ಲೆಕ್ಕಗಳನ್ನು ಕ್ರೋಡೀಕರಿಸಿ ತಿಳಿಸಲು ಬಯಸುತ್ತೇನೆ.

1932-33 ನೆಯ ಸಾಲಿನ ವಾಸ್ತವಿಕ ಲೆಕ್ಕಗಳು.

18·78 ಲಕ್ಷ ರೂಪಾಯಿಗಳನ್ನು ಸಾಲತೀರುವೆಯ ನಿಧಿಗೆ ಪೂರ್ತಿಯಾಗಿ ಒದಗಿಸಿಕೊಟ್ಟ ಮೇಲೆ, ತಿದ್ದುಪಾಟು ಅಂದಾಜಿನಲ್ಲಿ ಹುಟ್ಟುವಳಿಗಿಂತ ವೆಚ್ಚವು 21 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗುವುದೆಂದು ನಿರೀಕ್ಷಿಸಿದುದಕ್ಕೆ ಬದಲಾಗಿ 1932-33 ನೆಯ ಸಾಲಿನ ಕಚ್ಚಾ ಲೆಕ್ಕಗಳ ಮೇರೆಗೆ, ಹುಟ್ಟುವಳಿಗಿಂತ ವೆಚ್ಚವು 19 ಲಕ್ಷ ರೂಪಾಯಿಗಳಾಗಬಹುದೆಂದು ನಿರೀಕ್ಷಿಸಲಾಗಿದ್ದಿತು. ಈ ಅಂಶವನ್ನು ಕಳೆದ ಸೆಪ್ಟೆಂಬರು ತಿಂಗಳಿನಲ್ಲಿ ತಮ್ಮ ಮುಂದೆ ನಾನು ಭಾಷಣಮಾಡಿದಾಗ ತಿಳಿಸಿರುತ್ತೇನೆ. ಈ ವರ್ಷದ ಅಖೈರು ಲೆಕ್ಕಗಳ ಪ್ರಕಾರವಾಗಿ ಮೇಲೆ ಹೇಳಿದಂತೆ ವೆಚ್ಚಕ್ಕೆ ಕಡಿಮೆ ಬೀಳುವ ಮೊಬಲಗು ಒಂದು ಲಕ್ಷ ರೂಪಾಯಿಗಳಷ್ಟು ತಗ್ಗಿರುವಂತೆ ಕಂಡುಬಂದಿದೆ; ಎಂದರೆ ಈ ಸಾಲಿನಲ್ಲಿ ಹುಟ್ಟುವಳಿಯು ವೆಚ್ಚಕ್ಕಿಂತ 17·88 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿದೆ; 1931-32 ನೆಯ ಸಾಲಿನಲ್ಲಿ ಹದಿನೆಂಟುವರೆ ಲಕ್ಷ ರೂಪಾಯಿಗಳಷ್ಟು ಮೊಬಲಗು ಹೀಗೆ ಕಡಿಮೆಯಾಗಿದ್ದಿತು. ಈ ರೀತಿಯಾಗಿ ಸಾಲತೀರುವೆಯ ನಿಧಿಗೆ ಒದಗಿಸಿದ 18·78 ಲಕ್ಷ ರೂಪಾಯಿಗಳನ್ನು ಲೆಕ್ಕದಿಂದ ಬಿಟ್ಟುಬಿಟ್ಟರೆ ಕಳೆದ ಎರಡು ವರ್ಷಗಳಲ್ಲಿ ಹುಟ್ಟುವಳಿಯಾದ ಹಣಕ್ಕಿಂತಲೂ ವೆಚ್ಚವಾದ ಹಣವು ಕಡಿಮೆಯಾಗಿರುತ್ತದೆ.

1933-34 ನೆಯ ಸಾಲಿನ ತಿದ್ದುಪಾಟಾದ ಅಂದಾಜುಗಳು.

ಕಳೆದ ಜೂನ್ ತಿಂಗಳಲ್ಲಿ 1933-34 ನೆಯ ಸಾಲಿನ ಬಜೆಟ್ಟನ್ನು ತಯಾರಿಸಿದಾಗ, 343·63 ಲಕ್ಷ ರೂಪಾಯಿಗಳ ಒಟ್ಟು ಹುಟ್ಟುವಳಿಯು ಸಂಸ್ಥಾನಕ್ಕೆ ಬರುವುದೆಂದು ನಿರೀಕ್ಷಿಸಿದ್ದೆವು. ಮತ್ತು ಎಂದಿನಂತೆ ಸಾಲ ತೀರುವೆಯ ನಿಧಿಗೆ ಒದಗಿಸಿದ 18·78 ಲಕ್ಷ ರೂಪಾಯಿಗಳ ಮೊಬಲಗೂ ಸೇರಿ ವೆಚ್ಚಕ್ಕೆ 362·33 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು. ಇದುವರೆಗೆ ಗೊತ್ತಾಗಿರುವ ವಾಸ್ತವಿಕ ಲೆಕ್ಕಗಳ ಆಧಾರದ ಮೇಲೆ ರಚಿಸಲ್ಪಟ್ಟ ತಿದ್ದುಪಾಟು ಅಂದಾಜುಗಳ ಮೇರೆಗೆ ಹುಟ್ಟುವಳಿಯ ಬಾಬಿನಲ್ಲಿ ·74 ಲಕ್ಷ ರೂಪಾಯಿಗಳು ಹೆಚ್ಚಿರುತ್ತವೆಂದೂ ಮತ್ತು ಖರ್ಚಿನ ಬಾಬಿನಲ್ಲಿ 3·59 ಲಕ್ಷ ರೂಪಾಯಿಗಳು ಹೆಚ್ಚಿರುತ್ತವೆಂದೂ ಕಂಡುಬರುತ್ತದೆ. ಇದರಿಂದ ಅಂದಾಜಿನಲ್ಲಿ ನಿರೀಕ್ಷಣೆ ಮಾಡಿದ್ದುದಕ್ಕಿಂತಲೂ 2·85 ಲಕ್ಷ ರೂಪಾಯಿಗಳಷ್ಟು ವೆಚ್ಚವು ಹೆಚ್ಚಿರುತ್ತದೆ.

1934-35ನೆಯ ಸಾಲಿನ ಆಯವ್ಯಯದ ಅಂದಾಜುಗಳು.

ಇನ್ನು, ಮುಂದಣಸಾಲಿನ ಬಜೆಟ್ಟನ್ನು ಕುರಿತು ಈಗ ಪ್ರಸ್ತಾಪಿಸುತ್ತೇನೆ. ಕಳೆದ ನಾಲ್ಕು ವರ್ಷಗಳಿಂದಲೂ ಏಕಪ್ರಕಾರವಾಗಿ ವರಮಾನಕ್ಕಿಂತಲೂ ವೆಚ್ಚವು ಹೆಚ್ಚಾಗಿರುವ ಬಜೆಟ್ಟುಗಳನ್ನು ನೋಡಿ ನೋಡಿ ಮನಗುಂದುತ್ತಿದ್ದೇವಷ್ಟೆ. ಆದರೆ, ಮುಂದಣ ಸಾಲಿನ ಬಜೆಟ್ಟಿನಲ್ಲಿಯಾದರೂ ಆಯವ್ಯಯಗಳು ಸಮತೂಕಕ್ಕೆ ಬಂದಿರುವುದನ್ನು ನೋಡಿ ನಿಮಗೆಲ್ಲರಿಗೂ ಸಂತೋಷವುಂಟಾಗುವುದೆಂಬುದಾಗಿ ನಾನು ನಂಬಿರುತ್ತೇನೆ. ಆದರೆ ಈ ರೀತಿ ಆಯವ್ಯಯಗಳು ಸಮಸ್ಥಿತಿಗೆ ಬಂದಿರುವುದೂ ಕೂಡ ನಾನು ಮೊದಲೇ ಸೂಚಿಸಿರುವಂತೆ, ಬಹುಮಟ್ಟಿಗೆ ದೈವಯೋಗದಿಂದಲೇ ಆಗಿದೆ. ಮುಂದಣ ವರ್ಷವು, ಪ್ರಕೃತ ಒದಗಿರತಕ್ಕ ದುಸ್ಥಿತಿಯಿಂದ ತಕ್ಕಮಟ್ಟಿಗೆ ಚೇತರಿಸಿಕೊಳ್ಳಬಹುದಾದ ವರ್ಷವೆಂದು ನಾನು ಮೊದಲೇ ತಿಳಿಸಿರುವೆನಷ್ಟೆ. ಆದರೆ ಹುಟ್ಟುವಳಿಯಲ್ಲಿ ಚೇತರಿಸಿಕೊಳ್ಳುವ ಸುಯೋಗವು ಮೊದಲು ಕಂದಾಯದಾರರಿಗೆ ಲಭಿಸಿ, ತದನಂತರ ಸರ್ಕಾರದವರಿಗೆ ಪ್ರಾಪ್ತವಾಗುತ್ತದೆ. ಇದನ್ನು ತಿಳಿಸಲು ನಾನು ಸಂತೋಷಿಸುತ್ತೇನೆ. ಜಮೀನು ಕಂದಾಯದ ವಿಷಯದಲ್ಲಿ ಕಂದಾಯ ತೆರತಕ್ಕವರ ಪೈಕಿ ಅನೇಕರು ತಾವು ಕಂದಾಯದ ಭಾರದಿಂದ ಚೇತರಿಸಿಕೊಳ್ಳುವ ಕಾಲವು ಇನ್ನೂ ಪ್ರಾಪ್ತವಾಗಿಲ್ಲವೆಂದು ಈಗಲೂ ಭಾವಿಸುತ್ತಿದ್ದಾರೆ. ವ್ಯವಸಾಯದಿಂದ ಉತ್ಪತ್ತಿಯಾದ ಅನೇಕ ಪದಾರ್ಥಗಳ ಧಾರಣೆಗಳು ಇನ್ನೂ ವಿಪರೀತ ತಗ್ಗಿಹೋಗಿವೆ, ಮತ್ತು ಅನೇಕ ಮಂದಿ ರೈತರಿಗೆ ಕಂದಾಯವನ್ನು ಕೊಡುವುದು ಕಷ್ಟವಾಗಿದೆಯೆಂಬುದನ್ನು ನಾವು ಒಪ್ಪುತ್ತೇವೆ. ಎಕ್ಸೈಜು ಬಾಬಿನ ಹುಟ್ಟುವಳಿಯನ್ನು ನೋಡಿದರೂ ಕೂಡ ಜನಗಳ ಸ್ಥಿತಿಯು ಎಷ್ಟು ದುರ್ಘಟವಾಗಿದೆಯೆಂಬುದು ಕಂಡುಬರುತ್ತದೆ. ಏಕೆಂದರೆ ಜನಸಾಮಾನ್ಯದಲ್ಲಿ ಅನುಕೂಲಸ್ಥಿತಿಯು ಕಡಿಮೆಯಾಗಿ ತೊಂದರೆಗಳುಂಟಾದಾಗ, ಶೇಂದಿ ಬಾಬುಗಳ ಸೇವನೆಯೂ ಕೂಡ ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ಶೇಂದಿ ದುಕಾನುಗಳ ಹರಾಜಿನಿಂದ ಸರ್ಕಾರಕ್ಕೆ ಬರತಕ್ಕ ಫೀಜುಗಳ ವರಮಾನವೂ ಕಡಿಮೆಯಾಗುತ್ತದೆ. ಅದಕ್ಕೆ ಪ್ರತಿಯಾಗಿ ಜನಗಳಲ್ಲಿ ಹೆಚ್ಚಾಗಿ ಹಣವಿರುವಾಗ, ಮದ್ಯಗಳ ಸೇವನೆಯೂ ಹೆಚ್ಚುತ್ತದೆ. ಮತ್ತು ಸರ್ಕಾರಕ್ಕೆ ಬರತಕ್ಕ ಹರಾಜು ಫೀಜಿನ ಹುಟ್ಟುವಳಿಯೂ ಹೆಚ್ಚುತ್ತದೆ. ಆದರೆ ಈ ಹುಟ್ಟುವಳಿಯು ಹೆಚ್ಚಬೇಕಾದರೆ ಜನಗಳಲ್ಲಿ ಶೇಂದಿ ಸೇವನೆಯು ಹೆಚ್ಚಾಗತಕ್ಕುದು ಮೊದಲು ಆವಶ್ಯಕವಾಗಿದೆ. ಹೀಗೆ ಸೇವನೆಯು ಹೆಚ್ಚಾಗುವಂಥ ಸ್ಥಿತಿಯು ಇನ್ನೂ ಪ್ರಾಪ್ತವಾಗಿಲ್ಲ. ಸ್ಟಾಂಪುಗಳ ಬಾಬಿನಲ್ಲಿ ಬರತಕ್ಕ ವರಮಾನವು ವ್ಯಾಪಾರದ ವಹಿವಾಟುಗಳು ಎಷ್ಟರಮಟ್ಟಿಗೆ ನಡೆಯುತ್ತವೆಂಬಂಶವನ್ನು ಅವಲಂಬಿಸಿರುತ್ತದೆ. ಆದರೆ ಇದುವರೆಗೆ ಈ ವಹಿವಾಟುಗಳು ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಾ ಬರುತ್ತಿಲ್ಲ. ಇದರಂತೆಯೇ ಅನೇಕ ಹುಟ್ಟುವಳಿಯ ಸಾಮಾನ್ಯಬಾಬುಗಳ ಪರಿಸ್ಥಿತಿಯೂ ಆಗಿದೆ. ಆದರೆ ಇಂಥ ವಿಷಮಸ್ಥಿತಿಯಲ್ಲಿ, ಅನಿರೀಕ್ಷಿತವಾಗಿ ಬಂದ ಕೆಲವು ವರಮಾನದ ಬಾಬುಗಳಿಂದ ಪರಿಹಾರವು ದೊರೆತಿರುತ್ತದೆ. ಅದರಲ್ಲಿ ಈಗ ವಿಶೇಷತಃ, ಚಿನ್ನದ ಉತ್ಪತ್ತಿಯಿಂದ ಬರುವ ಹೆಚ್ಚಿಗೆ ವರಮಾನವೂ, ಸಕ್ಕರೆಯ ಮೇಲಣ ಮತ್ತು ಬೆಂಕಿಕಡ್ಡಿಗಳ ಮೇಲಣ ಎಕ್ಸೈಜು ಸುಂಕಗಳಿಂದ ಬರುವ ವರಮಾನವೂ ಮೇಲ್ಕಂಡ ವಿಷಮಸ್ಥಿತಿಯಿಂದ ಪಾರಾಗುವುದಕ್ಕೆ ತಕ್ಕ ಪರಿಹಾರವನ್ನೊದಗಿಸಿವೆ. ಇವುಗಳಿಗೆ ಸಂಬಂಧಪಟ್ಟ ಲೆಕ್ಕಗಳನ್ನು ಮೊದಲೇ ಕೊಟ್ಟಿರುತ್ತೇನೆ. ಅಪೀಸದಿಯ ಸೇತುವೆಗೆ ತಗಲಿದ ವೆಚ್ಚಕ್ಕಾಗಿ ರಸ್ತೆನಿಧಿಯ ರಿಜರ್ವಿನಿಂದ ಇಂಡಿಯಾ ಸರ್ಕಾರದವರು 1·73 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಕ್ಕಾಗಿ ಈ ಸಂದರ್ಭದಲ್ಲಿ ಅವರಿಗೆ ನಮ್ಮ ವಂದನೆಗಳನ್ನು ಸಮರ್ಪಿಸಲಿಚ್ಛಿಸುತ್ತೇನೆ.

ಆದರೆ, ಇವೆಲ್ಲ ಹುಟ್ಟುವಳಿಗಳನ್ನು ಒಟ್ಟುಗೂಡಿಸಿದಾಗಲೂ ಕೂಡ, ವೆಚ್ಚವನ್ನು ಮೊದಲು ಇದ್ದ ಪ್ರಮಾಣಕ್ಕೇ ಗೊತ್ತುಮಾಡಿದ್ದಲ್ಲಿ ಆಯವ್ಯಯಗಳನ್ನು ಸಮತೂಕಕ್ಕೆ ತರಲು ಸಾಧ್ಯವಾಗುತ್ತಿರಲಿಲ್ಲ. ಶ್ರೀಮನ್ ಮಹಾರಾಜರವರು ತಮ್ಮ ಖಾಸಾ ಬೊಕ್ಕಸದಿಂದ ಒಂದು ಲಕ್ಷ ರೂಪಾಯಿಗಳಷ್ಟು ಭಾರಿ ಮೊಬಲಗನ್ನು ಕೊಟ್ಟು, ಹಿಂದಿನ ವರ್ಷದಲ್ಲಿ ಸಹಾಯಮಾಡಿದ್ದಂತೆ ಈ ವರ್ಷದಲ್ಲಿಯೂ ಸಹಾಯಮಾಡಿರುತ್ತಾರೆ. ಇದರಿಂದ ವೆಚ್ಚದ ಬಾಬಿನಲ್ಲಿ ತಕ್ಕಷ್ಟು ಉಳಿತಾಯವಾಗಿರುತ್ತದೆ. ಈ ಮಹೋಪಕಾರಕ್ಕಾಗಿ ನಾವುಗಳೆಲ್ಲರೂ ಶ್ರೀಮನ್ ಮಹಾರಾಜರವರಿಗೆ ಅತ್ಯಂತ ಋಣಿಗಳಾಗಿದ್ದೇವೆಂಬುದನ್ನು ನೀವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ. ರಾಜಮನೆತನದ ಇತರರೂ ಸಹ ಹಿಂದಿನ ವರ್ಷಗಳಲ್ಲಿ ಕೊಟ್ಟಿರುವಂತೆ ಈ ವರ್ಷವೂ ಸಹ ಹಣವನ್ನು ಕೊಟ್ಟು ಸಹಾಯಮಾಡಿರುವುದಕ್ಕಾಗಿ ಅವರಿಗೂ ನಾವು ಕೃತಜ್ಞರಾಗಿದ್ದೇವೆ. ಈ ಘನವಾದ ದೃಷ್ಟಾಂತಗಳನ್ನು ನೋಡಿದಲ್ಲಿ, ಸರಕಾರಿ ಅಧಿಕಾರಿಗಳೂ ಮತ್ತು ನೌಕರರೂ ತಮ್ಮ ಸಂಬಳದಲ್ಲಿ ಖೋತಾ ಆಗಿರುವುದನ್ನು ಸಹಿಸಿಕೊಂಡಿರುವುದು ಹೆಚ್ಚು ಸರಾಗವಾಗುತ್ತದೆ. ನಮಗೆ ಇಷ್ಟವಿಲ್ಲದಿದ್ದಾಗ್ಯೂ ಕೂಡ, ಸಂಬಳಗಳ ಖೋತಾ ಏರ್ಪಾಡನ್ನು ಮುಂದಣ ಸಾಲಿನಲ್ಲಿಯೂ ಸಹ ನಡೆಸಿಕೊಂಡು ಬರಬೇಕಾಗಿದೆ. ವಿಶೇಷವಾಗಿ ಖರ್ಚು ಕಡಿಮೆ ಮಾಡಲ್ಪಟ್ಟಿರುವ ಇತರ ಸಂದರ್ಭಗಳನ್ನೂ ನಾನು ಮೊದಲೇ ತಿಳಿಸಿರುತ್ತೇನೆ. ಬಜೆಟ್ಟಿನಲ್ಲಿ ಉದ್ದಕ್ಕೂ ಹೀಗೆ ಖರ್ಚು ಕಡಿಮೆಮಾಡಲ್ಪಟ್ಟಿರುವ ಬಾಬುಗಳು ನಿಮಗೆ ಕಂಡುಬರುತ್ತವೆ. ಆದರೆ ಇವುಗಳ ಪೈಕಿಯೆಲ್ಲ ಅತ್ಯಂತ ಗಣನೀಯವಾಗಿ ಕಂಡುಬರತಕ್ಕ ಬಾಬೆಂದರೆ, ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಒದಗಿಸತಕ್ಕ ಗ್ರಾಂಟು ಮೊಬಲಗು. ಬಂಡವಾಳದ ವೆಚ್ಚಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಿಗಾಗಿ ಒಂದಾನೊಂದು ಕಾಲದಲ್ಲಿ ಎಂದರೆ 1921-22 ನೆಯ ಸಾಲಿನಲ್ಲಿ, 112·96 ಲಕ್ಷ ರೂಪಾಯಿಗಳಷ್ಟು ಹಣವನ್ನೂ, 1933-34 ನೆಯ ಸಾಲಿನಲ್ಲಿ, 35 ಲಕ್ಷ ರೂಪಾಯಿಗಳಷ್ಟು ಹಣವನ್ನೂ ಒದಗಿಸಿದ್ದಿತು. ಆದರೆ 1934-35 ನೆಯ ಸಾಲಿನಲ್ಲಿ ಈ ವೆಚ್ಚವನ್ನು 20 ಲಕ್ಷ ರೂಪಾಯಿಗಳಿಗೆ ತಗ್ಗಿಸಲಾಗಿದೆ. ಈ ಸಂಬಂಧದಲ್ಲಿ ಇನ್ನೂ ಹೆಚ್ಚು ವಿವರಗಳು ಬೇಕಾದಲ್ಲಿ ಫೈನಾನ್ಷಿಯಲ್ ಸೆಕ್ರಿಟರಿಯವರ ಮೆಮೊರ್‍ಯಾಂಡಂನಲ್ಲಿ ಅವುಗಳನ್ನು ನೋಡಬಹುದು.

ಪೊಗದಿ.

ಈ ಎಲ್ಲ ಪರಿಸ್ಥಿತಿಗಳ ಫಲಿತಾಂಶವಾಗಿ, ಬಜೆಟ್ಟನ್ನು ಸಮತೂಕಕ್ಕೆ ತಂದಿದ್ದಾಗ್ಯೂ, ವೆಚ್ಚಗಳಿಗಾಗಿ ಹಂಚಿಕೊಡುವುದಕ್ಕೆ ಮಿಗುತಾಯವಾದ ಹೆಚ್ಚಿಗೆ ಮೊಬಲಗು ಯಾವುದೂ ಇಲ್ಲ. ಸಕ್ಕರೆಯ ಮೇಲಣ ಎಕ್ಸೈಜು ಸುಂಕದಿಂದಾಗಲಿ ಅಥವಾ ಬೆಂಕಿಕಡ್ಡಿಗಳ ಮೇಲಣ ಎಕ್ಸೈಜು ಸುಂಕದಿಂದಾಗಲಿ, ಈ ಸಂಸ್ಥಾನದಲ್ಲಿರುವ ಯಾರೊಬ್ಬರಿಗೂ ವಿಶೇಷ ರೀತಿಯಲ್ಲಿ ಬಾಧಕವಾಗುವುದಿಲ್ಲವೆಂದು ನಂಬಿದ್ದಾಗ್ಯೂ, ಹೊಸ ತೆರಿಗೆ ವಿಧಿಸುವ ವಿಷಯವನ್ನು ವಸ್ತುತಃ ತಿಳಿಸಲೇ ಬೇಕಾಗಿದೆ. ಮುಂದಣ ಸಾಲಿನ ಆಯವ್ಯಯದ ಅಂದಾಜಿನ ಮೇರೆಗೆ ಹುಟ್ಟುವಳಿಯಲ್ಲಿ ವೆಚ್ಚವು ಕಳೆದು ಸ್ವಲ್ಪ ಹಣವು ಮಿಗುತಾಯವಾಗುವಂತೆ ಮಾಡಲು ನಮಗೆ ಸಾಧ್ಯವಾಗಿದೆ. ಆದರೆ ವಿಶೇಷ ರೀತಿಯಲ್ಲಿ ಬರತಕ್ಕ ಹುಟ್ಟುವಳಿಗಳು ಇದಕ್ಕೆ ಕಾರಣವೇ ಹೊರತು, ಸಾಮಾನ್ಯ ಪರಿಸ್ಥಿತಿಗಳಲ್ಲಿನ ಮೇಲ್ಪಾಟು ಕಾರಣವಲ್ಲವೆಂದು ಒಪ್ಪಿಕೊಳ್ಳಲೇ ಬೇಕಾಗಿದೆ. ಬ್ರಿಟಿಷ್ ಸರ್ಕಾರದ ಪ್ರಮುಖ ಕೋಶಾಧ್ಯಕ್ಷರವರು 'ಹೌಸ್ ಆಫ್ ಕಾಮನ್ಸ್' ಸಭೆಯಲ್ಲಿ ಈಚೆಗೆ ಭಾಷಣಮಾಡುವ ಸಂದರ್ಭದಲ್ಲಿ ಮುಂದಣ ಆರ್ಥಿಕ ಸ್ಥಿತಿಯನ್ನು ಕುರಿತು ಆಶೋತ್ತರಗಳನ್ನು ಸೂಚಿಸಿರುತ್ತಾರೆ. ಅದೇ ರೀತಿಯಾದ ಆಶೋತ್ತರಗಳನ್ನು ನಮ್ಮ ಸಂಸ್ಥಾನದ ವಿಷಯದಲ್ಲಿ ನಾನು ಸೂಚಿಸಲಾರದವನಾಗಿದ್ದೇನೆ.

ಆದರೆ ಮೈಸೂರು ಸಂಸ್ಥಾನದಲ್ಲಿ ನಮಗೆ ಒಂದು ನಿರೀಕ್ಷಣೆಯು ಯಾವಾಗಲೂ ಇದೆ. ನಮ್ಮ ಬಜೆಟ್ಟಿನ ಮೇಲೆ ಬಿದ್ದಿರುವ ಒಂದು ಭಾರಿ ವೆಚ್ಚವು ವಜಾ ಆಗುತ್ತದೆಯೆಂಬುದೇ ಈ ನಿರೀಕ್ಷಣೆಯೆಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಈ ಭಾರಿ ಖರ್ಚಿನ ಮೊಬಲಗು ವಜಾ ಆದಲ್ಲಿ, ಹಣಕಾಸಿನ ನಮ್ಮ ತೊಂದರೆಗಳೆಲ್ಲವೂ ನಿವಾರಣೆಯಾಗಿ ಹಣವು ಮಿಗುತಾಯವಾಗುವ ಸ್ಥಿತಿಗೆ ನಾವು ಬರುವಂತಾಗುವುದು. ಮತ್ತು ಆ ಮೊಬಲಗು ಚಾಲ್ತಿಸಾಲಿನಲ್ಲಿ ನಮ್ಮ ಜಮೆಗೆ ಸೇರಿದಲ್ಲಿ, ನಮ್ಮ ಮೂಲಧನದ ಕಾರ್ಯಕ್ರಮವನ್ನು ಮುಂದುವರಿಸಿ ನಡೆಯಿಸುವುದಕ್ಕೂ, ನಾವು ನಿಲ್ಲಿಸಬೇಕಾಗಿ ಬಂದ ಅನೇಕ ಏರ್ಪಾಟುಗಳನ್ನು ನಿರಾತಂಕವಾಗಿ ನೆರವೇರಿಸುವುದಕ್ಕೂ ಅನುಕೂಲವಾಗುವುದು. ನಾವು ಸಲ್ಲಿಸುತ್ತಿರುವ ಪೊಗದಿಯೇ ಆ ಭಾರಿ ಖರ್ಚು. ನಮ್ಮ ಸಾಧನಸಂಪತ್ತುಗಳ ಮೇಲೆ ಬಿದ್ದಿರುವ ಈ ಭಾರಿ ಖರ್ಚಿನ ಮೊಬಲಗನ್ನು ಮುಂದೆ ಸಂದಾಯಮಾಡುವುದು ತಪ್ಪಬಹುದಾದ ಕಾಲವೂ, ಈ ಸಂಸ್ಥಾನದ ತೆರಿಗೆಗಳಿಂದ ಹುಟ್ಟುವಳಿಯಾದ ಹಣವನ್ನೆಲ್ಲಾ ಈ ಸಂಸ್ಥಾನಕ್ಕಾಗಿಯೂ, ಈ ಸಂಸ್ಥಾನದ ಜನರಿಗಾಗಿಯೂ ವೆಚ್ಚಮಾಡುವ ಸ್ಥಿತಿಗೆ ಬರಬಹುದಾದ ಕಾಲವೂ ಬಹಳ ದೂರವಾಗಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ. ಮತ್ತು ನನ್ನಂತೆಯೇ ತಾವುಗಳೆಲ್ಲರೂ ಇದೇ ನಂಬಿಕೆಯುಳ್ಳವರಾಗಿರುವರೆಂಬ ಭರವಸೆಯೂ ನನಗಿದೆ. ನನಗೆ ಹಿಂದೆ ಇದ್ದ ದಿವಾನರವರು ಹಲವು ವರುಷಗಳ ಹಿಂದೆ ಹೇಳಿದ ಪ್ರಕಾರ, ಈ ಭಾರಿ ವೆಚ್ಚವು ಎಷ್ಟು ಕಾಲ ಬೀಳುತ್ತಲೇ ಇರುವುದೋ ಅಷ್ಟು ಕಾಲದವರೆಗೆ ನಮ್ಮ ಆರ್ಥಿಕಸ್ಥಿತಿಯು ವಾಸ್ತವಿಕವಾಗಿಯೂ ಸಮರ್ಪಕವಾದ ಸ್ಥಿತಿಗೆ ಎಂದಿಗೂ ಬರಲಾರದು.

ಪರಿಸಮಾಪ್ತಿ.

ಮಹಿಳೆಯರೆ ಮತ್ತು ಮಹನೀಯರೆ, ಸಂಸ್ಥಾನದ ಆಯವ್ಯಯದ ಸ್ಥಿತಿಯನ್ನು ಕುರಿತು ನಾನು ಹೇಳಬೇಕೆಂದಿದ್ದ ಅಂಶಗಳನ್ನೆಲ್ಲಾ ಈಗ ತಮಗೆ ತಿಳಿಸಿರುತ್ತೇನೆ. ನಾನು ವಿವರಿಸಿರುವ ಪರಿಸ್ಥಿತಿಯು ವಿಶೇಷ ಆತಂಕಜನಕವಾಗಿಲ್ಲದಿದ್ದರೂ, ಕೇವಲ ನಿರಾಶೆಯನ್ನು ಹುಟ್ಟಿಸತಕ್ಕುದಾಗಿಲ್ಲವೆಂದು ನಂಬುತ್ತೇನೆ. ಸಾಮಾನ್ಯವಾಗಿ ಪ್ರಪಂಚದಲ್ಲಿ ಈಗ ಉಂಟಾಗಿರತಕ್ಕ ಆರ್ಥಿಕಸ್ಥಿತಿಯನ್ನು ನೋಡಿದರೆ, ನಮ್ಮ ದೇಶದ ಸ್ಥಿತಿಯು ಎಷ್ಟೋ ಉತ್ತಮವಾಗಿದೆಯೆಂದು ಕಂಡು ಬರುತ್ತದೆ. ಇದರಿಂದ ನಾವು ಸಮಾಧಾನ ಹೊಂದಬಹುದಾಗಿದೆ. ಆದುದರಿಂದ ಸ್ಥಿತಿಗತಿಗಳು ಮುಂದೆ ಉತ್ತಮರೀತಿಯಲ್ಲಿ ಪರಿಣಮಿಸುವುವೆಂಬ ಸಂಪೂರ್ಣ ಭರವಸೆಯಿಂದಲೂ ಹೊಸಹುರುಪಿನಿಂದಲೂ ಕೂಡಿದವರಾಗಿ ನಮ್ಮ ಕಷ್ಟಗಳನ್ನು ಎದುರಿಸಲು ಸಿದ್ಧರಾಗೋಣ. ಕಷ್ಟಗಳು ಎಲ್ಲಿಯೂ ಇರುತ್ತವೆ. ಮತ್ತು ಯಾವಾಗಲೂ ಇದ್ದೇ ಇರುತ್ತವೆ. ಆದರೆ, ಕಷ್ಟಗಳು ಅವಶ್ಯಕವಾಗಿ ಪರಿಹರಿಸಿಕೊಳ್ಳಬೇಕಾಗಿರುವ ಪ್ರತಿಬಂಧಕಗಳೇ ಅಲ್ಲವೆ ? ಕಷ್ಟವೊದಗಿದ ಕಾಲವೆಂದರೆ ನಮ್ಮ ಸಾಹಸವನ್ನೂ ಬುದ್ಧಿಶಕ್ತಿಯನ್ನೂ ವ್ಯಕ್ತಪಡಿಸುವುದಕ್ಕೆ ತಕ್ಕ ಅವಕಾಶವನ್ನುಂಟುಮಾಡುವ ಕಾಲವೇ ಅಲ್ಲವೆ ? ಪರಸ್ಪರ ನೆರವಾಗತಕ್ಕ ಮನೋವೃತ್ತಿಯನ್ನು ಹೊಂಗೆಡಹುವುದಕ್ಕೆ ಕಷ್ಟಗಳೇ ಪ್ರೇರಕಗಳಲ್ಲವೆ ? ಹಾಗಾದರೆ, ಭಾವೀ ಪರಿಸ್ಥಿತಿಯು ಉತ್ತಮಗೊಳ್ಳುವುದೆಂಬ ಭರವಸೆಯನ್ನು ನಮ್ಮಲ್ಲಿ ನಾವು ದೃಢವಾಗಿ ತಾಳಿದವರಾಗಿ ಮುಂದುವರಿಯೋಣ. ಆಳುವ ಮಹಾಸ್ವಾಮಿಯವರ ಕೀರ್ತಿಶೇಷರಾದ ಪಿತೃವರೇಣ್ಯರು ಇತಿಹಾಸ ಪ್ರಸಿದ್ಧವಾದ ಮೈಸೂರು ಸಿಂಹಾಸನದಲ್ಲಿ ಪ್ರತಿಷ್ಠಿತರಾಗಿ, ಪಾರಂಪರ್ಯವಾಗಿ ಬಂದ ರಾಜ್ಯಸೂತ್ರವನ್ನು ವಹಿಸಿದ ಶುಭದಿವಸದಿಂದಲೂ ನಮ್ಮ ಸಂಸ್ಥಾನವು, ಪ್ರಖ್ಯಾತರಾದ ಪ್ರಭುಗಳವರ ವಿವೇಕಯುಕ್ತವಾದ ಮತ್ತು ಉದಾರವಾದ ನೇತೃತ್ವದಲ್ಲಿ, ಒಂದೇ ಸಮನಾಗಿ ಅನುಸರಿಸಿಕೊಂಡು ಬಂದಿರುವ ಮಾರ್ಗವನ್ನೇ ಇನ್ನು ಮುಂದೆಯೂ ಅನುಸರಿಸೋಣ. ಈ ಮಾರ್ಗದಲ್ಲಿ ನಾವು ನಿಧಾನವಾಗಿ ಮುಂದುವರಿದರೂ ಚಿಂತೆಯಿಲ್ಲ, ಸ್ಥಿರವಾಗಿ ಮುಂದುವರಿಯೋಣ.

ನೂತನ ರಾಜ್ಯಾಂಗ ವ್ಯವಸ್ಥೆಯಿಂದ ಮಾರ್ಪಡುವುದಾಗಿರುವ ಭಾವೀಭರತ ಖಂಡದಲ್ಲಿ ನಮ್ಮ ಮೈಸೂರು ಸಂಸ್ಥಾನವು ಮಹತ್ತರವಾದ ಮತ್ತು ತನ್ನ ಗೌರವಕ್ಕೆ ಯೋಗ್ಯವಾದ ಪಾತ್ರವನ್ನು ವಹಿಸತಕ್ಕುದಾಗಿದೆಯೆಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಅಪರಿಮಿತವಾದ ಅಭ್ಯುದಯದ ಸಾಧನಗಳಿಂದ ಕೂಡಿದುದಾಗಿ ನವಚೈತನ್ಯದಿಂದ ಕಳಕಳಿಸುತ್ತಿರುವ ಭರತಖಂಡವೆಂಬ ಭಾಸ್ಕರನು ಮೆಲ್ಲಮೆಲ್ಲನೆ ಉದಯಿಸಿ ಕಂಗೊಳಿಸುತ್ತಿರುವುದು ನಮ್ಮ ದೃಷ್ಟಿಪಥಕ್ಕೆ ಗೋಚರಿಸುತ್ತಿದೆ.

ಮಿರ್ಜಾ ಎಂ. ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನ್‌ರವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆರೋಗ್ಯರಕ್ಷಣೆ.

ಲೇಖಕ:—ವಾಗೀಶಶಿವಾಚಾರ್ಯ ಬೃಹನ್ಮಠ ಮುದೇನೂರು ಶ್ರೀ ಕ್ಷೇತ್ರಕಾಶೀ

(ಹಿಂದಿನಿಂದ ಮುಂದುವರಿದುದು.)

ಮನಸ್ಸು ಕೆಟ್ಟುದನ್ನು ತಿಳಿದುಕೊಳ್ಳಲು ಎಷ್ಟು ಬೇಗನೆ ಓಡಿಹೋಗುವುದೋ ಒಳ್ಳೆಯದನ್ನು ತಿಳಿದುಕೊಳ್ಳಲು ಅಷ್ಟು ಬೇಗ ಹೋಗುವುದಿಲ್ಲ. ಆದುದರಿಂದಲೇ ಅನುಭವಿಕರು :— 'ಮನವೆಂಬ ಮರ್ಕಟನ ತಡೆಯಲಾರೆನು ದೇವ ! ಎನಿತವರ ಚಪಲ ಚೇಷ್ಟೆಗಳ ವರ್ಣಿಸಲಿ' ಎಂದು ಹಾಡಿದ್ದಾರೆ. ಇದು ಸತ್ಯವು. ಆದರೂ ಮನುಷ್ಯನು ಮನವನ್ನು ಸುಜ್ಞಾನಪಾಶದಿಂದ ಕಟ್ಟುವುದಕ್ಕಾಗಿ ಯಾವಾಗಲೂ ಪ್ರಯತ್ನ ಪಡಬೇಕು.

ಇದೀಗ ಜಗತ್ತು ಸುಧಾರಿಸುತ್ತಲಿದೆ ಎಂದ ಹಾಗೆಲ್ಲಾ ಶ್ರೀಮಂತರ ಮಾತು ಒತ್ತಟ್ಟಿಗಿರಲಿ ಹೊಟ್ಟೆ ತುಂಬಾ ಅನ್ನದೊರೆಯದ ಕೂಲಿಕಾರನ ಮನೆಯಲ್ಲಿಯೂ ಕಾಣ ಸಿನಿಮಾದಲ್ಲಿ ಪಾಟೀಮಾಡುವ ಸೂಳೆಯರ ಚಿತ್ರಗಳೇ ಚಿತ್ರಗಳು ; ಇದಾವ ಸುಧಾರಣೆಯೋ ದೇವರಿಗೇ ಗೊತ್ತು. ತರುಣರೇ ! ನಿಮ್ಮ ತಾರುಣ್ಯವನ್ನು ಮುಗಿಲು ನೋಡುತ್ತಲೇ ಕಳೆಯಬೇಡಿರಿ. ಭೂಕಂಪ ಮೊದಲಾದ ಈಶ್ವರ ದಂಡಗಳಿಗಾದರೂ ಭಯಪಟ್ಟು ಬೇಗನೆ ಸನ್ಮಾರ್ಗವನ್ನು ಹಿಡಿಯಿರಿ. ನಾಲ್ಕು ಹೊತ್ತು ಹೆಚ್ಚಾಗಿ ಬದುಕಿ ಮನುಷ್ಯರೆಂಬ ಹೆಸರನ್ನು ಸಾರ್ಥಕಮಾಡಿಕೊಳ್ಳಬೇಕೆಂಬ ಬಯಕೆಯಿದ್ದರೆ ಈ ದಿನವೇ ದುಷ್ಟ ಚಿತ್ರಗಳನ್ನು ಸುಟ್ಟು ಹಾಕಿರಿ. ವ್ಯಾಯಾಮದಿಂದ ಪರಿಪುಷ್ಟರಾಗಿ ಹೊಳೆಯುತಕ್ಕವರ, ಯೋಗದಿಂದ ಕೃತರಾಗಿ ಮೆರೆಯುತಕ್ಕವರ, ತಂತ್ರಕೌಶಲ್ಯದಿಂದ ಮಂತ್ರಿಯಾದವರ, ಮಂತ್ರೋಪದೇಶದಲ್ಲಿ ಸ್ವತಂತ್ರರಾದವರ, ತಾವು ಹಿಂಸೆಯ ಹೊಂದಿ ಪರಹಿಂಸೆಯಮಾಡದವರ, ದುಡಿದವರ, ದುಡಿದ ಧನವನ್ನೆಲ್ಲಾ ವಿದ್ಯೆಗೆ ದಾನಮಾಡಿದವರ, ದೇಶಕ್ಕಾಗಿ ಪ್ರಾಣಕೊಟ್ಟವರ, ಧರ್ಮಕ್ಕಾಗಿ ಅಭಿಮಾನಕೊಟ್ಟವರ ಚಿತ್ರಗಳನ್ನು ಹಾಕಲು ಪ್ರಾರಂಭಮಾಡಿರಿ.

ಮನೋ ಮಧುಕರೋ ಮೇಘೋ ಮಾನಿನೀ ಮದನೋ ಮರುತ್ |
ಮಾ ಮದೋ ಮರ್ಕಟೋ ಮತ್ಸ್ಯೋ ಮಕಾರಾ ದಶಚಂಚಲಾಃ ||

ಎಂಬುದಾಗಿ ಮಕಾರವೇ ಆದಿಯಾಗುಳ್ಳ ಈ ದಶ ವಸ್ತುಗಳು ಲೋಕದಲ್ಲಿ ಚಂಚಲವಾದವುಗಳು. ಆದರೆ ಇವುಗಳೆಲ್ಲಾ ಮನಸ್ಸೇ ಒಂದನೆಯದು. ಯಾವುದನ್ನು ಸ್ವಾಧೀನಮಾಡಿಕೊಂಡರೂ ಮನಸ್ಸನ್ನು ಸ್ವಾಧೀನಮಾಡಿಕೊಳ್ಳುವುದು ಬಹುಕಷ್ಟ. ಮನುಷ್ಯನು ಮನಸ್ಸೊಂದನ್ನು ಸ್ವಾಧೀನಪಡಿಸಿಕೊಂಡರೆ ಈ ಜಗತ್ತೆಲ್ಲವನ್ನೂ ಸ್ವಾಧೀನಪಡಿಸಿಕೊಂಡಂತೆಯೇ ಸರಿ ! ಅವನಿಗೆ ಸಂಸಾರವು ಕಲ್ಪವೃಕ್ಷಪ್ರಾಯವಾಗುವುದು ; ಅವನು ಬೇಡಿದುದೆಲ್ಲವೂ ಕರವಶವಾಗುವುದು ; ಆದುದರಿಂದ ಪ್ರತಿಯೊಬ್ಬನೂ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಮನಸ್ಸನ್ನು ವಶಮಾಡಿಕೊಳ್ಳಲು ಪ್ರಯತ್ನಿಸಬೇಕು. ಮನಸ್ಸನ್ನು ವಶಮಾಡಿಕೊಳ್ಳಲಿಕ್ಕೆ ವ್ಯಾಯಾಮವೂ, ಅದರ ಜೊತೆಗೆ ಆಸನ, ಪ್ರಾಣಾಯಾಮ ಮುಂತಾದ ಯೋಗಕ್ರಿಯೆಗಳೂ ಸರ್ವೋತ್ತಮವಾದುಪಾಯಗಳು. ವ್ಯಾಯಾಮದ ಮಹಿಮೆಯನ್ನು ಎಷ್ಟು ಬಣ್ಣಿಸಿದರೂ ತೀರದಾಗಿದೆ. ಆಯುರ್ವೇದವಿಜ್ಞಾನವು ಇದೇ ವಿಷಯವನ್ನು—

ಲಾಘವಂ ಕರ್ಮಸಾಮರ್ಥ್ಯಂ ವಿಭಕ್ತಘನಗಾತ್ರತಾ |
ದೋಷಕ್ಷಯೋಗ್ನಿವೃದ್ಧಿಶ್ಚ ವ್ಯಾಯಾಮಾದುಪಜಾಯತೇ ||
ವ್ಯಾಯಾಮದೃಢಗಾತ್ರಸ್ಯ ವ್ಯಾಧಿರ್ನಾಸ್ತಿ ಕದಾಚನ |
ವಿರುದ್ಧಂ ವಾ ವಿದಗ್ಧಂ ವಾ ಭುಕ್ತಂ ಶೀಘ್ರಂ ವಿಪಚ್ಯತೇ ||
ಭವಂತಿ ಶೀಘ್ರಂ ನೈತಸ್ಯ ದೇಹೇ ಶಿಥಿಲತಾದಯಃ |
ನ ಚೈನಂ ಸಹಸಾಕ್ರಮ್ಯ ಜರಾ ಸಮಧಿರೋಹತಿ ||
ನ ಚಾಸ್ತಿ ಸದೃಶಂ ತೇನ ಕಿಂಚಿತ್ ಸ್ಥೌಲ್ಯಾಪಕರ್ಷಣಂ |
ಸ ಸದಾ ಗುಣಮಾಧತ್ತೇ ಬಲಿನಾಂ ಸ್ನಿಗ್ಧಭೋಜಿನಾಂ ||
ವಸಂತೇ ಶೀತಸಮಯೇ ಸುತರಾಂ ಸಹಿತೋ ಮತಃ |
ಅತಿವ್ಯಾಯಾಮತಃ ಕಾಸೋ ಜ್ವರಚ್ಛರ್ದಿಃ ಶ್ರಮಃ ಕ್ಲಮಃ |
ತೃಷ್ಣಾ ಕ್ಷಯಃ ಪ್ರತಮಕೋ ರಕ್ತಪಿತ್ತಂಚ ಜಾಯತೇ ||

ಮುಂತಾಗಿ ಮುಕ್ತಕಂಠದಿಂದ ಪ್ರತಿಪಾದಿಸಿದೆ. ಈ ವ್ಯಾಯಾಮವು ಸಾಧ್ಯವಾಗುವಂತೆ, ಯೋಗವಿದ್ಯೆಯು ಎಲ್ಲರಿಗೂ ಸಾಧ್ಯವಾಗುವುದು ಸುಲಭವಲ್ಲ. ಇದನ್ನು ಸಾಧಿಸಬೇಕಾದರೆ ಮೊದಲು ಅಲ್ಪಾಹಾರಿಗಳಾಗಬೇಕು. ಅಂತೆಯೇ—'ಅಲ್ಪಾಹಾರಂ ವಿನಾ ಯಸ್ತು ಯೋಗಾರಂಭಂತು ಕಾರಯೇತ್ | ನಾನಾವ್ಯಾಧಿರ್ಭವೇತ್ತಸ್ಯ ಕಿಂಚಿದ್ಯೋಗೋ ನ ಸಿದ್ಧ್ಯತಿ ||' ಎಂದು ಯೋಗಿಗಳು ಹೇಳಿದ್ದಾರೆ. ಅಲ್ಪಾಹಾರವಿಧಿಯನ್ನು ಸಾಧಿಸಿಕೊಂಡಮೇಲೆ ಆಸನಗಳನ್ನೂ, ಪ್ರಾಣಾಯಾಮವನ್ನೂ ಸಾಧಿಸಬೇಕಾಗುವುದು. ಇದು ಸರ್ವಸಾಮಾನ್ಯವಾದುದಲ್ಲ. ಇಷ್ಟೊಂದು ಪ್ರಯತ್ನಪಡಲು ಸಾಧ್ಯವಾಗದಿದ್ದರೆ ಕಟ್ಟಕಡೆಗೆ ಆಹಾರಕ್ರಮವನ್ನಾದರೂ ಸುಧಾರಿಸಿಕೊಂಡು ಆಸನಗಳಮಟ್ಟಿಗೆ ಸಾಧನೆಯನ್ನು ಮಾಡಿ ಆರೋಗ್ಯವನ್ನು ರಕ್ಷಿಸಿಕೊಳ್ಳಬಹುದು. ಎಲ್ಲರೂ ಸಾಧಿಸಬಹುದಾದ ಕೆಲವು ಆಸನಗಳ ಕ್ರಮವನ್ನೂ, ಲಾಭವನ್ನೂ ಇದೀಗ ಇಲ್ಲಿ ಬರೆಯುವುದು ಯೋಗ್ಯವಾಗಿ ಕಾಣುವುದರಿಂದ ಸ್ವಲ್ಪ ಪ್ರಯತ್ನಪಡೋಣ.

ಆಸನಗಳು ಎಂಭತ್ತುನಾಲ್ಕು ತೆರನಾಗಿವೆ. ಇವುಗಳಲ್ಲಿ ಕೆಲವು ಒಂದೊಂದೇ ಬೇನೆಯನ್ನೂ, ಕೆಲವು ಎಷ್ಟೋ ಬೇನೆಗಳನ್ನೂ ಕಳೆಯುತಕ್ಕವುಗಳಾಗಿವೆ ; ಇನ್ನು ಕೆಲವು ಕೇವಲ ದಣುವಾರಿಸತಕ್ಕವುಗಳೇ ಆಗಿವೆ. ಸರ್ವರೀತಿಯಿಂದಲೂ ಲಾಭದಾಯಕವಾದವುಗಳೆಂದರೆ—ಸಿದ್ಧಾಸನ, ಸರ್ವಾಂಗಾಸನ, ಪಶ್ಚಿಮತಾನಾಸನ, ಮಹಾಮುದ್ರಾಸನಗಳು ; ಸಿದ್ಧಾಸನಕ್ರಮವನ್ನು ಈ ಮುಂಚೆ 'ವ್ಯಾಯಾಮ' ವೆಂಬ ಲೇಖದಲ್ಲಿ ಬರೆದಿರುವೆವು. ಸಿದ್ಧಾಸನದ ಸಾಧನೆಯಿಂದ ಮನಸ್ಸಿಗೆ ಶಾಂತಿಯೂ, ದೇಹಕ್ಕೆ ಆರೋಗ್ಯವೂ, ನರಗಳಿಗೆ ನಿರ್ಮಲತೆಯೂ ಉಂಟಾಗುವುವು.

ಸರ್ವಾಂಗಾಸನದ ಕ್ರಮವು—

ಮೊದಲೆರಡು ಕಾಲುಗಳ ಚಾಚುತ |
ಲಿದೆಯನುಂ ಮೇಲ್ಮಾಡಿ ಕೈಗಳ |
ನಮುಕಿಯುತ್ತಂ ತೊಡೆಬಳಿಯೊಳಾಬಳಿಕ ಮಲಗುತ್ತಂ ||
ಉದರವನು ಕಾಲ್ಗಳನುಮನ್ನೆಳೆ |
ದಿದಿರನಂದದೆ ನೆಟ್ಟಗಿರಿಸುತ |
ಮುದದಿ ಭುಜಗಳಮೇಲೆ ನಿಲುವಾಸನವೆ ಸರ್ವಾಂಗಂ ||

ಎಂಬುದಾಗಿದೆ. ಈ ಆಸನದ ಸಾಧನೆಯಿಂದ ಶರೀರದೊಳಗಿನ ಕುಪಿತ (ಕೆಟ್ಟ) ವಾಯುವು ಶಾಂತವಾಗುವುದು. ಮಲಮೂತ್ರಗಳು ತಡೆಯಿಲ್ಲದೆ ಹೊತ್ತಿಗೆ ಸರಿಯಾಗಿ ಹೊರಬೀಳುವವು. ಸ್ವಪ್ನದೋಷವು ಸಂಪೂರ್ಣವಾಗಿ ನಾಶವಾಗುವುದು. ವೀರ್ಯವು ದೋಷರಹಿತವಾಗಿ, ಓಜವಾಗಿ ಶರೀರವನ್ನೆಲ್ಲಾ ವ್ಯಾಪಿಸಿಕೊಳ್ಳುವುದು ; ಅಂಗಪ್ರತ್ಯಂಗಗಳಲ್ಲಿ ಕಾಂಚನಕಾಂತಿಯುಂಟಾಗುವುದು.

ಪಶ್ಚಿಮತಾನಸಕ್ರಮವು—

ಎರಡುಕಾಲ್ಗಳ ಚಾಚುತವುಗಳೊ |
ಳೆರಡು ಮುಂಬೆರಳುಗಳ ಬೇಗನೆ |
ಕರಗಳಿಂ ಪಿಡಿ ಮೇಣ್ ಲಲಾಟವ ಮಂಡೆಗಳೊಳಿರಿಸೈ ||
ನರಗಳೊಳ್ ಬಲಮೊದಗುತುದರಂ |
ಕರಗಿ ಜಠರಾನಲವು ಬೆಳೆವುದು |
ಪರಮಯೋಗಿಗಳದನೆ 'ಪಶ್ಚಿಮತಾನ' ಮೆಂಬುವರೈ ||

ಎಂಬುದಾಗಿದೆ. ಇದರಿಂದಾಗುವ ಲಾಭವು ಪದ್ಯದಲ್ಲಿ ವಿವರಿಸಲ್ಪಟ್ಟಿದೆ. ಆದರೂ ವಾಯುರೋಗವನ್ನು ನಾಶಮಾಡುವುದರಲ್ಲಿಯೂ ಹೊಟ್ಟೆಯೊಳಗಿನ ಗಂಟುಗಳನ್ನು ಕರಗಿಸುವುದರಲ್ಲಿಯೂ ಇದು ಹೆಸರುಗೊಂಡಿದೆ ಎಂಬುದನ್ನು ಎಲ್ಲರೂ ನೆನಪಿನಲ್ಲಿಡಬೇಕು.

ಮಹಾಮುದ್ರಾಸನಕ್ರಮವು—

ಗುದದ ಮೂಲದೆ ವಾಮದೊಳಭಾ |
ಗದೊಳಿರುವ ಗ್ರಂಥಿಯನು ಯತ್ನದೊ |
ಳೊದವಿಸುತ ಬೇರೊಂದು ಪಾದವ ದೀರ್ಘವನಾಗಿರಿಸಿ ||
ಅದನು ಕರವೆರಡರೊಳು ಪಿಡಿಯುತ |
ವದನವನು ಕೆಳಮಾಡಿ ಭ್ರೂವನು |
ದೃಢದೊಳುದಿಟ್ಟಿಯನಿಡೆ ಮಹಾಮುದ್ರಾಸನಮಿದಕ್ಕುಂ ||

ಎಂಬುದಾಗಿದೆ. ಇದರ ಸಾಧನೆಯಿಂದ ಕ್ಷಯ, ಕಫ ಮುಂತಾದ ಸಕಲರೋಗಗಳೂ ನಾಶವಾಗುವವು. ಬ್ರಹ್ಮಚಾರಿಗಳಂತೂ ಈ ಆಸನಗಳನ್ನು ಅವಶ್ಯಸಾಧಿಸಬೇಕು. ಆಸನಗಳು ಸಿದ್ಧಿಸಿದವೆಂದರೆ ಬಲುಬೇಗನೆ ಫಲಕಾರಿಗಳಾಗುವವು. ಇವುಗಳ ಸಾಧನೆಮಾಡುವಾಗ ಹಾಲು, ಬೆಣ್ಣೆ, ತುಪ್ಪಗಳನ್ನು ತಿನ್ನಲೇಬೇಕು. ಹೊಟ್ಟೆಯಲ್ಲಿ ಇನ್ನೂ ನಾಲ್ಕು ತುತ್ತುಗಳಿಗೆ ಸ್ಥಳವಿದೆ ಎನ್ನುವದನ್ನು ತಿಳಿಯುತ್ತಲೇ ಊಟವನ್ನು ಮುಗಿಸಿಬಿಡಬೇಕು. ಚೀಲವು ಮುಗಿಯುವವರೆಗೆ ಕಾಳುತುಂಬುವಂತೆ ಹೊಟ್ಟೆತುಂಬುವವರೆಗೆ ಊಟಮಾಡಿ ಆಸನಗಳನ್ನು ಸಾಧಿಸಹೋದರೆ ಯಾವ ಲಾಭವೂ ಆಗದೆ ರೋಗಗಳುಮಾತ್ರ ವೃದ್ಧಿಹೊಂದುವುವೆಂಬುದನ್ನು ವಾಚಕರು ಮರೆಯಬಾರದು.

ಈವಾಗ ಎಲ್ಲೆಲ್ಲಿಯೂ—ಇದು ಕಲಿಯುಗ, ಯಾರ ಆಟವೂ ನಡೆಯುವುದಿಲ್ಲ, ಕಾಲವೇ ಅಂಥಾದ್ದು, ಅದಕ್ಕಾಗಿಯೇ ಮನುಷ್ಯನ ಆಯುಷ್ಯವು ಈಗ ೪೦-೫೦ ವರ್ಷಕ್ಕೆ ಮುಗಿದುಹೋಗುವುದೆಂತಲೂ ಕೆಲವರು ತಮಗೆ ೩೦-೩೫ ವರ್ಷಗಳು ಮುಗಿದವೆಂದರೆ ತೀರಿತು, 'ಇನ್ನೇನಪ್ಪಾ ! ನಮಗೆ ಅರ್ಧ ಆಯುಷ್ಯ ಮುಗಿದಂತೆಯೇ ಸರಿ' ಎಂತಲೂ ಮಾತಾಡುತ್ತಿರುವುದು ಕೇಳಬರುತ್ತಿದೆ. ಓಹೋ ! ಇದೇನಾಶ್ಚರ್ಯ !! ತರುಣರೇ ! ತಣ್ಣಗಾಗಬೇಡಿರಿ. 'ಯಥಾಮನಸ್ತಥಾಫಲಂ' ಎಂಬುದನ್ನು ನೀವು ಕೇಳಿಲ್ಲವೇನು ? 'ಮನಸ್ಸಿನಂತೆ ಮಹಾದೇವ' ಎಂಬುದನ್ನರಿಯಿರಾ ? ಉತ್ಸಾಹರಹಿತವಾದ ನಿಮ್ಮ ಮಾತೇ ನಿಮ್ಮನ್ನು ಮುದುಕರನ್ನಾಗಿ ಮಾಡುತ್ತಿದೆ. ಏಳಿರಿ ? ಕೆಲಸವಿಲ್ಲದೆ ಹೇಡಿಮಾತುಗಳನ್ನಾಡುತ್ತ ಮಲಗಿಕೊಳ್ಳಬೇಡಿರಿ, ನೀವು ಮಾಡಬೇಕಾದ ಒಳ್ಳೆಯ ಕೆಲಸಗಳು ಲೆಕ್ಕಮಾಡದಷ್ಟಿವೆ. ತರುಣರು ತಮ್ಮ ತಾರುಣ್ಯಕ್ಕೆ ತಕ್ಕಂತೆ ಯಾವಾಗಲೂ ಎದೆಗಾರಿಕೆಯುಳ್ಳವರಾಗಿರಬೇಕು. ಮಾಡಬೇಕಾದ ಕಾರ್ಯದಲ್ಲಿ ಹಿಂಜರಿಯಬಾರದು. ಹೇಡಿಯು ಆತ್ಮೋನ್ನತಿಯನ್ನು ಎಂದೂ ಮಾಡಿಕೊಳ್ಳಲಾರನು. ಉನ್ನತಿಯು ಮನೋಜಯವುಳ್ಳವನನ್ನು ಮಾತ್ರ ಹಿಂಬಾಲಿಸುವುದೆಂತಲೇ 'ಮನಕ್ಕೆ ಸೋಲುವುದು ಸೋಲು, ಮನವನ್ನು ಗೆಲುವುದೇ ಗೆಲುವು' ಎಂಬುದಾಗಿ ಹಿರಿಯರು ಹೇಳಿದ್ದಾರೆ. ನಮ್ಮ ಆರೋಗ್ಯವೊಂದು ಚನ್ನಾಗಿರದಿದ್ದರೆ ಕೋಟಿಗಟ್ಟಲೆ ದ್ರವ್ಯವೂ ಸುಖ, ಶಾಂತಿ, ಮಾನ, ಮರ್ಯಾದೆಗಳನ್ನುಂಟುಮಾಡಲು ಸಮರ್ಥವಾಗಲಾರದು. ಸಂಸಾರವು ಗಟ್ಟಿಗರಿಗಾಗಿ ನಿರ್ಮಿಸಲ್ಪಟ್ಟಿದೆಯೇ ಹೊರತು ಹೇಡಿಗಳಿಗಲ್ಲವೆಂಬುದನ್ನು ತಿಳಿದೇ ನಮ್ಮವರು 'ವೀರಭೋಗ್ಯಾ ವಸುಂಧರಾ' ಎಂಬುದಾಗಿ ಹೇಳುತ್ತ ಬಂದಿದ್ದಾರೆ. ಹೇಡಿಯು ಬಟ್ಟಬಯಲಿನಲ್ಲಿ ಕೆಟ್ಟದೇವತೆಗೆ ಕುರಿ ಕೋಣಗಳಿಗೆ ಬದಲಾಗಿ ಬಲಿಕೊಡುವುದಕ್ಕೆ ಮಾತ್ರ ಯೋಗ್ಯನೆಂದು ನಮಗೆ ತಿಳಿಯಬರುತ್ತದೆ. ತರುಣರೇ ! ಆಯುಷ್ಯವನ್ನು ವೃದ್ಧಿಮಾಡಿಕೊಳ್ಳುವುದಕ್ಕಾಗಿ ಪ್ರಯತ್ನಪಡಿರಿ. ಪೂರ್ವಿಕರ ಸತ್ಯಸಿದ್ಧಾಂತಗಳನ್ನಲ್ಲಗಳೆಯಬೇಡಿರಿ.

ಪ್ರಕೃತಿಯ ಪ್ರಧಾನಸಂಪತ್ತುಗಳೆಂದರೆ ಗಾಳಿ, ನೀರು, ಅನ್ನಗಳು. ಇವುಗಳನ್ನು ಯೋಗ್ಯವಾಗಿ ಉಪಯೋಗಿಸುತ್ತ ಬಂದರೆ ಆರೋಗ್ಯವು ಅವಶ್ಯವಾಗಿ ವೃದ್ಧಿಹೊಂದುವುದು. ವಿಚಾರಮಾಡಿ ನೋಡಿದರೆ ಮನುಷ್ಯನು ಇವುಗಳ ಉಪಯೋಗವನ್ನು ಚನ್ನಾಗಿ ಮಾಡಿಕೊಳ್ಳುವದಿಲ್ಲವೆಂದು ಕಂಡು ಬರುತ್ತದೆ. ಅನ್ನನೀರುಗಳ ಸೇವನೆಗೆ ಸ್ವಲ್ಪ ಹೊತ್ತಾದರೂ ತಡೆದುಕೊಳ್ಳಬಹುದು, ವಾಯುಸೇವನೆಗೆ ಮಾತ್ರ ಹಾಗೆ ಸಾಧ್ಯವಿಲ್ಲ. ಶರೀರದಲ್ಲಿ ವಾಯುಸಂಚಾರವು ಸ್ವಲ್ಪನಿಂತಿತೆಂದರೆ ಸಾಕು, ಕಣ್ಣುಗಳು ಬೆಳ್ಳಗಾಗುವವು. ಈ ವಾಯುವು ಯಾರೊಬ್ಬರ ಮನೆಯಗಂಟಲ್ಲ, ಇದರ ಮೇಲೆ ಎಲ್ಲರದೂ ಅಧಿಕಾರವಿದೆ. ಹೀಗಿದ್ದೂ ಇದನ್ನು ನಾವು ಪೂರ್ಣರೀತಿಯಿಂದ ಉಪಯೋಗಮಾಡಿಕೊಳ್ಳದೆ ನರಳುತ್ತ ಕುಳಿತಿರುವುದು ತಿಳಿಗೇಡಿತನವಲ್ಲವೇನು ? ನಾವು ಯಾವಾಗಲೂ ವಿಶಾಲವಾದ ಪ್ರದೇಶದಲ್ಲಿದ್ದುಕೊಂಡು ವಿಪುಲವಾದ ಗಾಳಿಯನ್ನು ಸೇವಿಸಿ ನೀರೋಗಿಗಳಾಗಿ ಬಾಳುವುದಕ್ಕೆ ಹಿಂಜರಿಯಬಾರದು.

ನೀರಿನ ಆವಶ್ಯಕತೆಯು ಮುಖ್ಯವಾಗಿ ಸ್ನಾನಪಾನಗಳನ್ನುದ್ದೇಶಿಸಿಕೊಂಡಿದೆ. ತಮ್ಮ ಮೈಯೊಳಗಿನ ಉಷ್ಣತೆಯು ದೂರಾಗಿ ಶಾಂತತೆಯುಂಟಾಗುವದಕ್ಕೂ, ಅವಯವಗಳು ನಿರ್ಮಲವಾಗಿರುವುದಕ್ಕೂ ಎಲ್ಲರೂ ಸ್ನಾನಮಾಡಬೇಕು. ಸ್ನಾನಕ್ಕೆ ಮುಂಚೆ ಮೈಗೆಲ್ಲಾ ಎಣ್ಣೆಹಚ್ಚಿಕೊಂಡು ತಲೆಕಾಲುಗಳನ್ನು ಸ್ವಲ್ಪ ಹೆಚ್ಚಾಗಿಯೂ ಕಿವಿಗಳನ್ನು ಅದಕ್ಕೂ ಸ್ವಲ್ಪ ಕಡಿಮೆಯಾಗಿಯೂ ತಿಕ್ಕಿಕೊಳ್ಳಬೇಕು. ಎಣ್ಣೆಯ ಜಿಡ್ಡು ಹೋಗುವುದಕ್ಕೂ, ಕೊಳೆಯನ್ನು ಕಳೆಯುವುದಕ್ಕೂ ಸೀಗೆಪುಡಿಯನ್ನು ಉಪಯೋಗಿಸುವುದು ಹೆಚ್ಚು ಬೆಲೆಯ ಸಬಕಾರದ ಉಪಯೋಗಕ್ಕಿಂತಲೂ ಹಿತಕರವಾಗಿದೆ.

ನೀರನ್ನು ಕುಡಿಯಬೇಕಾದರೂ ನಾವು ಒಂದು ಕ್ರಮವನ್ನಿಟ್ಟುಕೊಂಡಿರುವುದಿಲ್ಲ. ಆದುದರಿಂದ ಪಚನಕ್ರಿಯೆಯು ಚನ್ನಾಗಿ ನಡೆಯುವುದಿಲ್ಲ. ಬಾಯಾರಿದಾಗ ಸ್ವಾಭಾವಿಕವಾದ ನೀರನ್ನು ಬಿಟ್ಟು ಕೃತ್ರಿಮಪೇಯಪದಾರ್ಥಗಳನ್ನು ತೆಗೆದುಕೊಳ್ಳುವುದು ನೆಟ್ಟಗಲ್ಲ. ಇಂತಹ ಪೇಯವು ಕೇವಲ ನಾಲಗೆಗೆ ರುಚಿಯನ್ನುಂಟುಮಾಡುವುದೇ ಹೊರತು ಸ್ವಾಭಾವಿಕವಾದ ನೀರಿನಿಂದಾಗುವ ಶಾಂತಿಯನ್ನು ಎಂದಿಗೂ ಕೊಡಲಾರದು. ಕೃತ್ರಿಮವಸ್ತುಗಳೆಲ್ಲವೂ ಹೀಗೇ ಎಂದು ತಿಳಿಯಬೇಕು. ನಾವು ಸ್ವಾಭಾವಿಕವಸ್ತುಗಳಿಂದಾಗುವ ಕಾರ್ಯವನ್ನು ಕೃತ್ರಿಮವಸ್ತುಗಳಿಂದ ಪೂರ್ಣಮಾಡಲು ಎಂದೂ ಪ್ರಯತ್ನಪಡಬಾರದು.

ನಾವು ಆಹಾರವನ್ನು ತೆಗೆದುಕೊಳ್ಳುವಾಗಲೂ ಅವುಗಳನ್ನರಿಯದೆ ಮುಖ್ಯವಾಗಿ ಸೂಕ್ಷ್ಮತೆಯ ಕಡೆಗೆ ಚಿತ್ತಗೊಡುವವರಾದುದರಿಂದ ಧಾನ್ಯ ಮುಂತಾದವುಗಳನ್ನು ಕುಟ್ಟಿಯೋ, ಬೀಸಿಯೋ, ಸೋಸಿಯೋ ಅವುಗಳಲ್ಲಿರುವ ಮುಖ್ಯ ಸತ್ವವನ್ನೇ ತೆಗೆದುಹಾಕುತ್ತಿರುವೆವು. ಆಹಾರದಲ್ಲಿಯ ರುಚಿಯ ಕಡೆಗೆ ಲಕ್ಷ್ಯಕೊಡದೆ ವಿಶೇಷವಾಗಿ ಗುಣದ ಕಡೆಗೆ ಲಕ್ಷ್ಯಕೊಡುವುದೇ ಒಳ್ಳೆಯದು. ಒಮ್ಮೊಮ್ಮೆ ನಾವು ಹಸಿವನ್ನು ತಡೆಯಲಾರದೆ ರುಚಿಯಿಲ್ಲದ, ಗುಣವಿಲ್ಲದ ತಂಗಳು ತಿನ್ನುವುದಕ್ಕೆ ಕೂಡುತ್ತೇವೆ. ಇಂತಹ ಆಹಾರದಿಂದ ಬುದ್ಧಿಮಾಂದ್ಯ, ಅಗ್ನಿಮಾಂದ್ಯಗಳುಂಟಾಗಿ ನಾಲಿ

(6ನೆಯ ಪುಟವನ್ನು ನೋಡಿರಿ.)

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ಏಳುವರ್ಷಗಳು ತುಂಬಿ ಎಂಟನೆಯ ವರ್ಷವು ಪ್ರಾರಂಭವಾಗಿರುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೩ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಾ ಒಟ್ಟುಗೂಡಿಸಿ ಒಂದೇ ಸಾರೆ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೇ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ—

ಪಂಚಾಚಾರ್ಯ ಪ್ರಭಾ.

೧೯೩೪ ನೇ ಜುಲೈ ತಾ|| ೨ ನೇ ಸೋಮವಾರ.

ಗಾಂಧಿಯವರಮೇಲೆ ಬಾಂಬು.

ಅಸ್ಪೃಶ್ಯಸುಧಾರಣಾಬದ್ಧದೀಕ್ಷೆಯನ್ನು ವಹಿಸಿರುವ ಗಾಂಧಿಯವರು ಪುಣೆಯಲ್ಲಿ ಕಳೆದ ೨೬ ನೆಯ ತಾರೀಖಿನ ಸಾಯಂಕಾಲ ೭ ಘಂಟೆ ಸಮಯದಲ್ಲಿ ಮುನಸಿಪಾಲಟಿಯವರಿಂದ ಒಪ್ಪಿಸಲ್ಪಡುವ ಮಾನಪತ್ರಸ್ವೀಕಾರ ಸಮಾರಂಭಕ್ಕಾಗಿ ಹೋಗುವಾಗ್ಗೆ ಅವರ ಮೇಲೆ ಯಾರೋ ದ್ವೇಷಿಗಳು ಬಾಂಬು ಚೆಲ್ಲಿದರೆಂದೂ ದೈವವಶಾತ್ ಬಾಂಬು ಮುಂದುಹೋಗುತ್ತಿರುವ ಮೋಟಾರಿನಲ್ಲಿ ಕುಳಿತಿರುವವರಿಗೆ ತಗುಲಿ ಮೋಟಾರಿನ ಮುಂಭಾಗವೆಲ್ಲಾ ಚೂರುಚೂರಾಯಿತೆಂದೂ ಕೆಲವರಿಗೆ ಗಾಯಗಳಾದುವೆಂದೂ ಅಪಾಯವೇನೂ ಸಂಭವಿಸಲಿಲ್ಲವೆಂದೂ ಕೇಳುತ್ತೇವೆ. ಈ ಭಯಂಕರವಾದ ಕಾರ್ಯವು ಸನಾತನ ಧರ್ಮಾವಲಂಬಿಗಳಿಂದಲೇ ನಡೆಯಿಸಲ್ಪಟ್ಟಿರಬಹುದೆಂದು ಗಾಂಧಿಯವರ ಅನುಯಾಯಿಗಳು ಊಹಿಸಿರುತ್ತಾರೆ. ಗಾಂಧಿಯವರು ಸನಾತನ ಧರ್ಮಕ್ಕೆ ವಿರುದ್ಧವಾದ ಮಾರ್ಗದಲ್ಲಿ ಹೆಜ್ಜೆಯಿಟ್ಟಿರುವುದರಿಂದ ಇಂಥ ಊಹೆಗಳಿಗೆ ಅವಕಾಶವುಂಟಾಗಿದೆ. ಯಾರೇ ಆಗಲಿ ಇಂಥ ಕ್ರೂರಕೃತ್ಯಗಳನ್ನು ನಡೆಯಿಸುವುದೆಂದರೆ ಅದು ಬಹಳ ಪಾಪಮಯವಾದ ಕಾರ್ಯವೇ ಸರಿ! ಆದರೆ ಯಾವನು ಸನಾತನಧರ್ಮಾವಲಂಬಿಯಾಗಿರುವನೋ ಅವನು ಸರ್ವಾತ್ಮನಾ ಅಹಿಂಸಾಪಾಲನೆಯಲ್ಲಿ ಬದ್ಧಾದರನಾಗಿರಬೇಕೆಂಬುದೇ ಸನಾತನಧರ್ಮಶಾಸ್ತ್ರದ ತಿರುಳಾಗಿದೆ. ಗಾಂಧಿಯವರು ಪ್ರಕೃತದಲ್ಲಿ ಸನಾತನಧರ್ಮವಿರುದ್ಧವಾದ ಅಸ್ಪೃಶ್ಯತಾ ನಿವಾರಣ ಚಳವಳಿಯನ್ನು ಬಹು ಜೋರಾಗಿ ಮುಂದುವರಿಸುತ್ತಿದ್ದುದರಿಂದ ಗಾಂಧಿಯವರು ಹೋದ ಕಡೆಯಲ್ಲೆಲ್ಲಾ ಸನಾತನಧರ್ಮಿಗಳು ತಮ್ಮ ಅಸಹಕಾರವನ್ನು ಬಹು ವೇಗದಿಂದ ನಡೆಯಿಸುತ್ತಿರುವರು. ಈ ಸಮಯದಲ್ಲಿ ನಡೆದ ಬಾಂಬಿನ ದುರ್ಘಟಪ್ರಸಕ್ತಿಯ ಅಪವಾದನೆಯು ಈ ಸನಾತನಿಗಳ ಮೇಲೆ ಆರೋಪಿಸಲ್ಪಡುವುದು ಸ್ವಾಭಾವಿಕವೇ ಆದರೂ ಈ ಕಾರ್ಯವು ಸನಾತನಿಗಳಿಂದಲೇ ನಡೆಯಿಸಲ್ಪಟ್ಟಿತೆಂದು ನಿರ್ಧರಿಸಲು ಶಕ್ಯವಲ್ಲ. ಯಾಕೆಂದರೆ ಗಾಂಧಿಯವರಿಗೆ ವಿರೋಧಿಗಳು ಸನಾತನಧರ್ಮಾವಲಂಬಿಗಳೊಬ್ಬರೇ ಅಲ್ಲ, ಇನ್ನೂ ಎಷ್ಟೋಜನ ವಿರೋಧಿಗಳು ಇದ್ದೇ ಇದ್ದಾರೆ. ಇದೇ ಸ್ವರಾಜ್ಯವಾದಿಗಳಲ್ಲಿ ಉಗ್ರವಾದಿಗಳಪಕ್ಷವೊಂದು ಇದ್ದೇ ಇದೆ. ಇಂಥವರಿಂದ ಈ ಕ್ರೂರಕಾರ್ಯವು ನಡೆದಿರಬಹುದೆಂಬ ಊಹೆಗೂ ಅವಕಾಶವುಂಟು. ಈ ಉಗ್ರವಾದಿಗಳಾದರೂ ಬಾಂಬುಹಾಕುವ ಕೆಲಸವನ್ನು ಬಹುಕಾಲದಿಂದಲೂ ಅಭ್ಯಾಸಮಾಡಿದ್ದಾರೆ. ಆಗಾಗ್ಗೆ ಅನೇಕ ರಾಜಕೀಯಉದ್ಯೋಗಿಗಳಮೇಲೆ ಈ ಕ್ರೂರಪ್ರಯತ್ನವನ್ನು ಮಾಡುತ್ತಲೇ ಬಂದಿರುವರೆಂಬ ವಿಷಯವು ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಗಿರುವಲ್ಲಿ ಅಹಿಂಸಾಧಾರದಮೇಲೆ ನಿಂತಿರುವ ಸಾಧುಸನಾತನಧರ್ಮಾವಲಂಬಿಗಳಮೇಲೆ ಈ ಅಪವಾದನೆಯನ್ನು ಹೊರಿಸುವುದು ಬಹು ದುರ್ಬಲವೇ ಸರಿ. ಅಂತೂ ಸನಾತನಪಕ್ಷದವರೇ ಆಗಲಿ ಉಗ್ರಪಕ್ಷದವರೇ ಆಗಲಿ ಇತರರೇ ಆಗಲಿ ಇಂಥ ದುಷ್ಟಕಾರ್ಯದಲ್ಲಿ ಯಾರು ಪ್ರೇರಕರೋ ಯಾರು ಪ್ರೇರ್ಯರೋ ಅವರೆಲ್ಲರನ್ನೂ ದೂರೀಕರಿಸಲೇಬೇಕು. ಪ್ರಭುತ್ವದವರು ಘೋರಶಿಕ್ಷೆಗೊಳಪಡಿಸಲೇಬೇಕು. ಇದುವರೆಗೂ ಸನಾತನಧರ್ಮವನ್ನವಲಂಬಿಸಿದ್ದ ಗಾಂಧಿಯವರು ಈಗ ಯಾವುದೋ ಒಂದು ಕ್ಷಣಿಕ ಸೌಖ್ಯಕ್ಕಾಗಿ ಭಾರತಧರ್ಮದ ತಳಹದಿಯನ್ನು ಒಡೆದುಹಾಕಲು ಹೊರಟಿರುವುದನ್ನು ನೋಡಿ ವೇದಶಾಸ್ತ್ರಾವಲಂಬಿಗಳಾದ ಸನಾತನಿಗಳು ವ್ಯಾಕೋಪದಿಂದ ಗಾಂಧಿಯವರ ವಕ್ರಮಾರ್ಗವನ್ನು ಖಂಡಿಸುತ್ತಾರಲ್ಲದೆ ಬೇರೆಯಲ್ಲ. ಗಾಂಧಿಯವರು ಸ್ವರಾಜ್ಯಲಾಭಕ್ಕೂ ಅಸ್ಪೃಶ್ಯತಾನಿವಾರಣೆಗೂ ಕಾರ್ಯಕಾರಣಭಾವವನ್ನು ಕಲ್ಪಿಸಿಕೊಂಡು ಅಸ್ಪೃಶ್ಯತಾನಿವಾರಣೆಯಿಂದ ಸ್ವರಾಜ್ಯಲಾಭವಾಗುವುದೆಂಬ ಭ್ರಮಜ್ಞಾನದಿಂದೊಡಗೂಡಿ, ಪವಿತ್ರದೇವಾಲಯಗಳಿಗೆ ಅಸ್ಪೃಶ್ಯರನ್ನು ನುಗ್ಗಿಸುವದಲ್ಲಿ ಕಟಿಬದ್ಧರಾದುದರಿಂದ ಗಾಂಧಿಯವರಲ್ಲಿ ವೈದಿಕ ಲೌಕಿಕ ಸಾಮಾನ್ಯವಾಗಿ ನಿರರ್ಗಳವಾಗಿ ಪ್ರವಹಿಸುತ್ತಿದ್ದ ಪ್ರೇಮಲಹರಿಯು ಕಡಿಮೆಯಾಗುತ್ತ ಬಂದಿತು. ಹೋದಹೋದಕಡೆಗಳಲ್ಲೆಲ್ಲಾ ಗಾಂಧಿಯವರಿಗೆ ಅಸ್ಪೃಶ್ಯತಾನಿವಾರಣವೆಂಬುದೇ ಮೂಲಮಂತ್ರವಾಗಿ ಪರಿಣಮಿಸಿತು. ಇದರಿಂದ ಅಸಹಕಾರವು ಹೆಚ್ಚಿತು. ಧರ್ಮಭೀರುಗಳಾದ ಸನಾತನಿಗಳಲ್ಲಿ ಸ್ವರಾಜ್ಯವು ಲಭಿಸದಿದ್ದರೂ ಚಿಂತೆಯಿಲ್ಲ. ಆತ್ಮೋನ್ನತಿಗೆ ಸಾಧನವಾದ ಧರ್ಮವು ಉಳಿದರೆ ಸಾಕು ಎಂಬ ಬುದ್ಧಿಯು ಹುಟ್ಟಲಾರಂಭಿಸಿತು. ಹಿಂದೆ ಅನೇಕ ರಾಜಾಧಿರಾಜರೂ ಮಹಾತ್ಮರೂ ಧರ್ಮಕ್ಕಾಗಿ ರಾಜ್ಯವನ್ನೂ ದೇಹವನ್ನೂ ಬಿಟ್ಟಿರುತ್ತಾರಲ್ಲದೆ ರಾಜ್ಯಕ್ಕಾಗಲಿ ದೇಹಸುಖಕ್ಕಾಗಲಿ ಧರ್ಮವನ್ನು ಬಿಟ್ಟಿರುವುದಿಲ್ಲ. ಯಾವ ರಾಜ್ಯವೇ ಆಗಲಿ ಯಾವ ಪ್ರಜೆಯೇ ಆಗಲಿ ಯಾವ ಐಶ್ವರ್ಯವೇ ಆಗಲಿ ಎಲ್ಲವೂ ಧರ್ಮಸಾಧನೆಗೆ ಅನುಕೂಲವಾಗಿರಬೇಕು. ಧರ್ಮವಿರುದ್ಧ ರಾಜ್ಯದಿಂದ ಧರ್ಮವಿರುದ್ಧ ಪ್ರಜೆಗಳಿಂದ ಧರ್ಮಪ್ರತಿಕೂಲ ಐಶ್ವರ್ಯದಿಂದ ಜನಗಳು ತಾತ್ಕಾಲಿಕ ಸೌಖ್ಯವನ್ನು ಪಡೆದರೂ ಆತ್ಮೋದ್ಧಾರರೂಪವಾದ ನಿತ್ಯಸುಖವನ್ನು ಪಡೆಯಲಾರರು. ಈಗಿನ ವಾತಾವರಣದಲ್ಲಿ ಪುಣ್ಯಪಾಪಸಾಧನಗಳಾದ ಧರ್ಮಾಧರ್ಮಗಳೇ ತಲೆಕೆಳಗಾಗುತ್ತಿವೆ. ಹಿಂದಿನ ಮಹರ್ಷಿಗಳು ಕೇವಲ ಆತ್ಮೋದ್ಧಾರ ದೃಷ್ಟಿಯಿಂದ ಜನ್ಮಾಂತರಗಳನ್ನೂ ಆ ಜನ್ಮಾಂತರಗಳಿಗೆ ಸಾಧನಗಳಾದ ಧರ್ಮಾಧರ್ಮಗಳನ್ನೂ ಬಲವತ್ತರವಾಗಿ ಪ್ರತಿಪಾದಿಸಿದ್ದರೂ ಈಗ ಅನೇಕರು ಕೇವಲ ಐಹಿಕಸೌಖ್ಯದಲ್ಲಿಯೇ ಲೀನರಾಗಿ ಗುರುದೇವತಾವಾಕ್ಯಗಳಲ್ಲಿ ನಂಬಿಗೆಯನ್ನಿಡದೆ ತಾನು ಏನುಮಾಡಿದರೇನು? ತಾನಿರುವವರೆಗೂ ಸ್ವತಂತ್ರನಾಗಿದ್ದು ಸ್ವೇಚ್ಛೆಯಾಗಿದ್ದರೆ ಅದೇ ಪುರುಷಜನ್ಮದ ಪರಮಾವಧಿಯೆಂದು ಭಾವಿಸಿಕೊಂಡಿದ್ದಾರೆ. ಇಂಥವರಿಗೆ ಧರ್ಮವಿರುದ್ಧವಾಗಿ ಹೊರಟಿರುವ ಗಾಂಧಿಯವರ ಅಸ್ಪೃಶ್ಯತಾನಿವಾರಣೆಯ ಚಳವಳಿಯೊಂದು ಸಂಪೂರ್ಣ ಸಹಾಯಕವಾದಂತಾಗಿದೆ. ಸನಾತನಿಗಳು ಇಂಥ ಅಧರ್ಮಾಂಧಕಾರವನ್ನು ಶಾಸ್ತ್ರವೆಂಬ ಸೂರ್ಯನಿಂದ ಚದುರಿಸಿ ಎಲ್ಲರನ್ನೂ ಆಸ್ತಿಕರನ್ನಾಗಿ ಮಾಡಬೇಕೆಂಬುದರಲ್ಲಿ ಮಾತ್ರ ಬದ್ಧಾದರರೇ ಹೊರತು ಹಿಂಸಾರೂಪವಾದ ರಾಕ್ಷಸೀಕೃತಿಯಲ್ಲಿ ತೊಡಗುವವರಲ್ಲ. ಹಾಗೆ ಹಿಂಸಾಕೃತಿಯಲ್ಲಿ ತೊಡಗಿದವನು ಸನಾತನಧರ್ಮರಾಜ್ಯದಲ್ಲಿ ಇರಲು ಯೋಗ್ಯನೂ ಅಲ್ಲ. ಪುಣೆಯಲ್ಲಿ ನಡೆದ ಅನಾಹುತವು ಈಶ್ವರ ಕೃಪೆಯಿಂದ ತಪ್ಪಿದುದಕ್ಕಾಗಿ ಸರ್ವರೂ ಸಂತೋಷಪಡಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಜೂನ್ 28 ನೇ ತಾರೀಖಿನ ಮಧ್ಯಾಹ್ನ ಉರಿಗಾಂ ಚಿನ್ನದಗಣಿಯಲ್ಲಿ ಕಿಡಿತವುಂಟಾಗಿ ಒಬ್ಬ ಮೇಸ್ತ್ರಿಯು 53 ಅಡಿಗಳ ಕೆಳಕ್ಕೆ ಬಿದ್ದು ಮೃತಪಟ್ಟನು.

1934 ನೇ ವರ್ಷದ ದಸರಾ ವಸ್ತು ಪ್ರದರ್ಶನವು ಅಕ್ಟೋಬರ್ 9 ನೇ ತಾರೀಖಿನಿಂದ 23 ನೇ ತಾರೀಖಿನವರೆಗೆ ನಡೆಯುವದೆಂದು ತಿಳಿದುಬಂದಿದೆ.

ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಜೂನ್ 26 ನೇ ತಾರೀಖು ಮಂಗಳವಾರ ಮಧ್ಯಾಹ್ನ ಬೆಂಗಳೂರು ಅಠಾರಾಕಛೇರಿಯಲ್ಲಿ ರಾಜಮಂತ್ರಪ್ರವೀಣ ದಿವಾನ್‌ಬಹದ್ದೂರ್ ಮಿ|| ಕೆ. ಮ್ಯಾಥ್ಯೂರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಬೆಂಗಳೂರು ಹೈಕೋರ್ಟಿನ ವಕೀಲರಲ್ಲೊಬ್ಬರಾದ ಮಿ|| ಡಿ. ಕೆ. ಹನುಮಂತರಾಯರು ಉದ್ಯೋಗದ ನಿಬಂಧನೆಗಳಿಗೆ ವಿರುದ್ಧವಾಗಿ ವರ್ತಿಸಿದರೆಂಬ ಕಾರಣದಮೇಲೆ ಚೀಫ್‌ಜಡ್ಜರು ಮೇಲ್ಕಂಡ ವಕೀಲರಿಗೆ ಒಂದು ವರ್ಷಕಾಲ ವಕೀಲವೃತ್ತಿಯನ್ನು ನಡೆಯಿಸಕೂಡದೆಂದು ಸಸ್ಪೆಂಡ್ ಮಾಡಿರುತ್ತಾರೆ.

ಬೆಂಗಳೂರಿನಲ್ಲಿ ಕೃತಕ ನಾಣ್ಯಗಳನ್ನು ತಯಾರಿಸುತ್ತಿದ್ದರೆಂಬ ಕಾರಣದ ಮೇಲೆ ಕ್ರೈಂ ಬ್ರಾಂಚ್ ಪೋಲೀಸರು ಜೋಸಫ್ ಎಂಬವನ ಮನೆಯನ್ನು ಜಪ್ತುಮಾಡಿ ಅವನನ್ನೂ ಬೇರೆ ಇಬ್ಬರನ್ನೂ ದಸ್ತಗಿರಿ ಮಾಡಿರುತ್ತಾರೆ. ಜೋಸೆಫನ ಮನೆಯಲ್ಲಿ ಕೆಲವು ಕೃತಕನಾಣ್ಯಗಳೂ, ನಾಣ್ಯವನ್ನು ತಯಾರಿಸುವ ಅಚ್ಚುಗಳೂ ದೊರೆತಿರುತ್ತವೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಬೆಂಗಳೂರಿನ ಅಬ್ದುಲ್ ಸತ್ತಾರ್ ಎಂಬ ಟ್ಯಾಕ್ಸೀ ಡ್ರೈವರನು ಮಲ್ಲೇಶ್ವರದ ರಸ್ತೆಯಲ್ಲಿ ಒಬ್ಬ ಸೈಕಲ್ ಸವಾರನ ಮೇಲೆ ಟ್ಯಾಕ್ಸಿಯನ್ನು ಬಿಟ್ಟು ಘಾಯಪಡಿಸಿದನೆಂಬ ಕಾರಣದ ಮೇಲೆ ಬೆಂಗಳೂರು ಸಿಟಿ ಎರಡನೆಯ ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ 1,500 ರೂ. ದಂಡ ತಪ್ಪಿದರೆ ಒಂದು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಬೆಂಗಳೂರು ದಂಡಿನ ಥಾಂಸನ್ ಎಂಬವರ ಅಡಿಗೆಯವನಾದ ಪರಶುರಾಮ ಎಂಬವನು ಅಡಿಗೆಮಾಡಿ ಯಜಮಾನನಿಗೆ ಬಡಿಸಿದನಂತರ ಉಳಿದುದನ್ನು ಮನೆಗೆ ತೆಗೆದುಕೊಂಡು ಹೋಗಿ ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳೊಡನೆ ಊಟಮಾಡಿದನು. ಊಟವಾದ ಸ್ವಲ್ಪ ಹೊತ್ತಿನನಂತರ ಎಲ್ಲರಿಗೂ ವಾಂತಿಯಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಪರಶುರಾಮನು ಮೃತಪಟ್ಟನು. ಇತರರು ಚಿಕಿತ್ಸೆಹೊಂದುತ್ತಿರುವರು.

ರಾಜಧಾನಿಯಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸ್ವಾಗತಕಮಿಟಿ ಮೀಟಿಂಗ್.

ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ರಾಜಧಾನಿಗೆ ಬಿಜಯಂಗೈಸಿಕೊಳ್ಳುವುದಕ್ಕಾಗಿ ತಾ|| ೨೯-೬-೧೯೩೪ ನೆಯ ಶುಕ್ರವಾರ ದಿವಸ ರಾವಬಹದ್ದೂರ್ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಡಾಕ್ಟರ್ ಟಿ. ಎನ್. ಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ನೆರವೇರಿತು. ಸದರಿ ಮೀಟಿಂಗಿನಲ್ಲಿ ಶ್ರೀ ಜಗದ್ಗುರುಗಳವರ ಸ್ವಾಗತ ಕಮಿಟಿಗೆ ಡಾ|| ಟಿ. ಎನ್. ಸಿದ್ಧಪ್ಪನವರು ಅಧ್ಯಕ್ಷರಾಗಿಯೂ, ಮ|| ರಾ|| ಎಂ. ಪಿ. ಭೋಗಯ್ಯನವರು, ಬಿ.ಎ., ಬಿ.ಎಲ್., ಅಡ್ವೊಕೇಟ್ ಮತ್ತು ರಾಜಾ ಮಹಾದೇವರಾಯಲ್ ಯಶವಂತ ಬಹದ್ದೂರ್ ಪುಂಗನೂರು ಇವರು ಉಪಾಧ್ಯಕ್ಷರಾಗಿಯೂ, ಮ|| ರಾ|| ಜಿ. ಮಲ್ಲಣ್ಣನವರು ಡಿ|| ಬೋ|| ಮೆಂಬರ್ ಮತ್ತು ಮ|| ರಾ|| ಕೆ. ಎಚ್. ಸಿದ್ಧಲಿಂಗಪ್ಪನವರು ಸೆಕ್ರೆಟರಿಗಳಾಗಿಯೂ, ಮ|| ರಾ|| ಎಂ. ಎಸ್. ಮಾದಪ್ಪನವರು ಇಂಜನಿಯರ್ ಮತ್ತು ಮ|| ರಾ|| ಬಿ. ಎನ್. ಸುಬ್ಬಣ್ಣನವರು ಅ|| ಸೆಕ್ರೆಟರಿಗಳಾಗಿಯೂ, ಮ||ರಾ||

ಕೆ. ಎಚ್. ತಿಮ್ಮಪ್ಪಯ್ಯನವರು ರಿ|| ಪೋ|| ಇನ್‌ಸ್ಪೆಕ್ಟರ್ ಇವರು ಕೋಶಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟರು.

ವರ್ತಮಾನಸಂಗ್ರಹ.

ಪೈಸರಾಯರ ಭೂಕಂಪದ ನಿಧಿಗೆ ಇದುವರೆಗೆ 55 ಲಕ್ಷ ರೂಪಾಯಿಗಳು ಕೂಡಿರುವುವು.

ರಷ್ಯಾದೇಶದ ಸೈನ್ಯದಲ್ಲಿ 13,00,000 ಸೈನಿಕರಿದ್ದು, ಯುದ್ಧಕಾಲದಲ್ಲಿ 75,00,000 ಸೈನಿಕರು ಒದಗುವರಂತೆ !

ಗಂಟೆಗೆ ಒಂದು ಸಾವಿರ ಮೈಲುಗಳ ದೂರ ಹೋಗಬಲ್ಲ ಒಂದು ಹೊಸತರಹದ ವಿಮಾನವು ಜರ್ಮನಿಯಲ್ಲಿ ತಯಾರಿಸಲ್ಪಡುತ್ತಿರುವದು.

ಅಮೇರಿಕಾ ದೇಶಕ್ಕೆ ಸೇರಿದ ಬೊಲಿವಿಯಾ ಮತ್ತು ಪಾರಗ್ವೆ ಎಂಬ ಎರಡು ರಾಜ್ಯಗಳವರು 50,000 ಸೈನ್ಯದೊಡನೆ ಘೋರಯುದ್ಧವನ್ನು ಪ್ರಾರಂಭಿಸಿರುತ್ತಾರೆ.

ಮುಂಬಯಿಯ ಕರೆನ್ಸಿ ಆಫೀಸಿನಲ್ಲಿ 61,000 ರೂ. ಬೆಲೆ ಬಾಳುವ ಕೆಟ್ಟುಹೋಗಿದ್ದ ಕರೆನ್ಸಿನೋಟುಗಳು ಮಾಯವಾಗಿರುವುವು. ಈ ಸಂಬಂಧದಲ್ಲಿ ಪೋಲೀಸರು ಕಾನ್ಪುರದಲ್ಲಿ ಒಬ್ಬ ಯುರೋಪ್ಯನನ್ನು ದಸ್ತಗಿರಿ ಮಾಡಿರುವರು.

ಇಟಲಿ ಸರ್ಕಾರಕ್ಕೆ ಸಂಬಂಧಪಟ್ಟ ಕೆಲವು ಗುಪ್ತವಿಷಯಗಳನ್ನು ಪರರಾಜ್ಯದವರಿಗೆ ತಿಳುಹಿಸಿದರೆಂಬ ಅಪವಾದನೆಯ ಮೇಲೆ ಸಿನಾರ್ ಎಂಬರ್ಟೋ ಎಂಬವರಿಗೆ 17 ವರ್ಷಗಳ ಕಠಿಣ ಶಿಕ್ಷೆಯೂ, ವೈಮಾನಿಕ ದಳದ ಒಬ್ಬ ಕ್ಯಾಪ್ಟನನಿಗೆ 15 ವರ್ಷ ಶಿಕ್ಷೆಯೂ, ಮತ್ತೊಬ್ಬ ಸಾರ್ಜೆಂಟನಿಗೆ 16 ವರ್ಷಗಳ ಕಠಿಣಶಿಕ್ಷೆಯೂ ವಿಧಿಸಲ್ಪಟ್ಟಿರುವುದು.

ಅಮೇರಿಕೆಯ ಲಾಂಗ್‌ಬೀಚ್ ಎಂಬ ಸಮುದ್ರತೀರದಲ್ಲಿ ಒಬ್ಬ 8 ವರ್ಷದ ಹುಡುಗನು ಫೆಬ್ರವರಿ ತಿಂಗಳಲ್ಲಿ ನೀರಿನಲ್ಲಿ ಮುಳುಗಿ ಸತ್ತನು. ಹುಡುಗನ ತಾಯಿಯು ಮಗನ ಮೃತಶರೀರವಾದರೂ ದೊರಕಲೆಂದು ಪ್ರತಿನಿತ್ಯವೂ ಸಮುದ್ರತೀರದಲ್ಲಿ ಪ್ರಾರ್ಥಿಸುತ್ತಿದ್ದಳು. 75 ನೇ ದಿವಸ ರಾತ್ರಿ ಅಲೆಗಳು ಹುಡುಗನ ಶರೀರವನ್ನು ತಾಯಿಯ ಸಮೀಪದಲ್ಲಿ ತಂದು ಹಾಕಿದುವಂತೆ !

ಛತ್ರಪುರದಲ್ಲಿ 6 ಅಂಗುಲ ಉದ್ದವಾದ ಒಂದು ಮೀನು ಮಳೆಯಲ್ಲಿ ಬಿದ್ದಿತೆಂದೂ, ಛತ್ರಪುರದ ಮಹಾರಾಜರು ಇದನ್ನು ಪ್ರತ್ಯಕ್ಷವಾಗಿ ಕಂಡು ಅದನ್ನು ಜೀವಸಹಿತ ಹಿಡಿಸಿಟ್ಟಿರುವರೆಂದೂ ತಿಳಿದುಬಂದಿದೆ. ಅನೇಕ ಕಡೆಗಳಲ್ಲಿ ಮಳೆಯ ಜೊತೆಯಲ್ಲಿ ಸಣ್ಣಸಣ್ಣ ಮೀನುಗಳು ಬಿದ್ದಿರುವುವಾದರೂ ಇಷ್ಟು ದೊಡ್ಡದಾದ ಒಂದೇ ಒಂದು ಮೀನು ಎಲ್ಲಿಯೂ ಬಿದ್ದಿಲ್ಲ. ಶಾಸ್ತ್ರಜ್ಞರು ಈ ವೈಚಿತ್ರ್ಯಕ್ಕೆ ಯಾವ ಸಮಾಧಾನವನ್ನೂ ಹೇಳದೆ ಮೌನವಾಗಿರುವರು.

ಕಳೆದ 8 ವರ್ಷಗಳಿಂದೀಚೆಗೆ ಇಟಲೀ ದೇಶವು ಶೇಕಡಾ 9½ ಯಂತೆಯೂ, ಅಮೇರಿಕೆಯ ಸಂಯುಕ್ತಸಂಸ್ಥಾನವು ಶೇಕಡಾ 10 ರಂತೆಯೂ, ಜರ್ಮನಿಯು ಶೇಕಡಾ 12 ರಂತೆಯೂ, ಜಪಾನು ಶೇಕಡಾ 80 ರಂತೆಯೂ, ರಷ್ಯಾವು ಶೇಕಡಾ 200 ರಂತೆಯೂ, ಯುದ್ಧಸಾಮಗ್ರಿಗಳ ಖರ್ಚನ್ನು ಹೆಚ್ಚಿಸಿರುತ್ತವೆ. ಆದರೆ ಬ್ರಿಟಿಷ್ ಸರ್ಕಾರದವರು ಮಾತ್ರ ಈ ಖರ್ಚನ್ನು ಶೇಕಡಾ 16½ ಯಷ್ಟು ಕಡಿಮೆಮಾಡಿರುತ್ತಾರೆ. ಆದರೆ ಈಗ ಎಲ್ಲೆಲ್ಲಿಯೂ ಯುದ್ಧವು ಸನ್ನಿಹಿತವಾಗಿರುವುದೆಂಬ ವಾರ್ತೆಯೇ ಕೇಳಿಬರುತ್ತಿರುವುದರಿಂದ ಬ್ರಿಟಿಷ್ ಸರ್ಕಾರದವರು ತಮ್ಮ ವಿಮಾನ ದಳವನ್ನು ಎರಡರಷ್ಟು ಹೆಚ್ಚಿಸಬೇಕೆಂದು ತೀರ್ಮಾನಿಸಿರುತ್ತಾರೆ.

6½ ವರ್ಷ ವಯಸ್ಸಿನ ತಾಯಿ !

ದೆಹಲಿಯ ವಿಕ್ಟೋರಿಯಾ ಜನಾನಾ ಆಸ್ಪತ್ರೆಯಲ್ಲಿ ಕಳೆದ ಜೂನ್ 7ನೇ ತಾರೀಖಿನ ದಿವಸ 6½ ವರುಷ ವಯಸ್ಸುಳ್ಳ ಒಬ್ಬ ಹುಡುಗಿಯು ಒಂದು ಹೆಣ್ಣು ಮಗುವನ್ನು ಹೆತ್ತಿರುವಳು. ಡಾಕ್ಟರುಗಳೆಲ್ಲರೂ ಆಶ್ಚರ್ಯಪಡುತ್ತಿರುವರು.

ರಕ್ತದ ಮಳೆ.

ಗ್ವಾಲಿಯರ್ ಸಂಸ್ಥಾನದಲ್ಲಿ ಒಂದೇ ಸಮನೆ 3 ಗಂಟೆಗಳಕಾಲ ರಕ್ತದ ಮಳೆಯು ಸುರಿಯಿತೆಂದು ತಿಳಿದುಬಂದಿದೆ.

ನೀರಿನಿಂದ ಸಕ್ಕರೆ.

ಲಿವರ್‌ಪೂಲ್‌ನಗರದ ಡಾಕ್ಟರ್ ಬೇಲಿ ಎಂಬವರು ಹತ್ತು ವರ್ಷಗಳಕಾಲ ಕಷ್ಟಪಟ್ಟು ನೀರಿನಿಂದ ಸಕ್ಕರೆಯನ್ನು ತಯಾರಿಸುವ ವಿಧಾನವನ್ನು ಕಂಡುಹಿಡಿದಿರುವರಂತೆ !

ಏಕಕಾಲದಲ್ಲಿ 8 ಮಕ್ಕಳ ಜನನ !

ದಕ್ಷಿಣ ಚೀನಾದೇಶಕ್ಕೆ ಸೇರಿದ ಕರ್ನ ಯಾಂ ಪಾ ಎಂಬಲ್ಲಿ ಒಬ್ಬ ನಾವಿಕನ ಪತ್ನಿಯು ಒಂದೇ ಸಾರೆಗೆ 7 ಗಂಡು ಮಕ್ಕಳನ್ನೂ ಒಂದು ಹೆಣ್ಣು ಮಗುವನ್ನೂ ಜನಿಸಿರುವಳು. ಮಕ್ಕಳೂ ತಾಯಿಯೂ ಆರೋಗ್ಯವಾಗಿರುವರು.

ಕಾಶಿಯಲ್ಲಿ ಗಾಂಧಿಯವರಿಗೆ ಬಹಿಷ್ಕಾರ.

ಕಾಶೀಕ್ಷೇತ್ರದ ಸನಾತನಿಗಳು ಜುಲೈ ತಿಂಗಳಲ್ಲಿ ಗಾಂಧಿಯವರು ಅಲ್ಲಿಗೆ ಬಂದ ಕಾಲದಲ್ಲಿ ಪ್ರಚಂಡವಾದ ಕರೀ ನಿಶಾನಿಗಳ ಮೆರವಣಿಗೆಯೊಂದನ್ನು ಹೊರಡಿಸಬೇಕೆಂದು ನಿರ್ಧರಿಸಿರುವರು. ಇದಕ್ಕಾಗಿ 10,000 ಜನ ವಾಲಂಟಿಯರನ್ನು ಕೂಡಿಸುವರಂತೆ!

ಕಲ್ಲಿಗೆ ಸಿಡುಬಿನರೋಗ !

ಫೈಜಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಅಕ್ಬರ್‌ಪುರದಲ್ಲಿ ಸಿಡುಬಿನ ರೋಗವು ವಿಶೇಷವಾಗಿತ್ತು. ಜನರು ಗ್ರಾಮದೇವತೆಯ ಹೆಸರಿನಲ್ಲಿ ದೊಡ್ಡ ಹಬ್ಬವನ್ನು ಮಾಡಿದರು. ಈಗ ಸಿಡುಬು ಮನುಷ್ಯರಿಗೆ ತಗಲುವುದನ್ನು ಬಿಟ್ಟು ಪ್ರತಿಯೊಂದು ಮನೆಯಲ್ಲಿಯೂ ಇರುವ ಅರೆಯುವ ಕಲ್ಲುಗಳ ಮೇಲೆ ಸಣ್ಣದಾಗಿ, ಗುಂಡಾದ ಕಪ್ಪುಚುಕ್ಕೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವುದಂತೆ !

ಆಸ್ಸಾಮಿನಲ್ಲಿ ಪ್ರವಾಹದ ಹಾವಳಿ !

ಅಸ್ಸಾಮಿನಲ್ಲಿ ಸುಮಾರು 800 ಚದರಮೈಲಿಗಳಷ್ಟು ವಿಸ್ತೀರ್ಣವುಳ್ಳ ಪ್ರದೇಶವು ಪ್ರವಾಹದಿಂದ ತುಂಬಿಹೋಗಿರುವುದು. ಸುಮಾರು 20 ಲಕ್ಷ ರೂಪಾಯಿಗಳ ನಷ್ಟವು ಸಂಭವಿಸಿರುವುದು. ಸರಕಾರದವರು ಪ್ರವಾಹದಿಂದ ಕಷ್ಟಪಡುತ್ತಿರುವವರಿಗೆ ಪರಿಹಾರದ ಏರ್ಪಾಡುಗಳನ್ನು ಕೈಕೊಂಡಿದ್ದು ಇದುವರೆಗೆ ಸುಮಾರು 5 ಲಕ್ಷ ರೂ. ಗಳ ಬಟ್ಟೆಬರೆಗಳನ್ನು ಹಂಚಿರುತ್ತಾರೆ.

ವಿಚಿತ್ರ ದಾನ !

ಇಟಲಿ ದೇಶದ ಎಟ್ಟೋರೋ ಫಿಫಿ ಎಂಬೊಬ್ಬ ಶ್ರೀಮಂತನು ರೈಲ್, ಮೋಟಾರ್ ಮೊದಲಾದ ನೂತನ ವಾಹನಗಳನ್ನೆಲ್ಲಾ ಸಂಪೂರ್ಣವಾಗಿ ದ್ವೇಷಿಸುತ್ತಿದ್ದನು. ಅವನು ಎಂದೂ ಅವುಗಳಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಅವನು ಸಾಯುವುದಕ್ಕೆ ಮುಂಚೆ ತನ್ನ ವಿಶಿಷ್ಟ ಆಸ್ತಿಯನ್ನೆಲ್ಲಾ ತನ್ನ ನಗರದಲ್ಲಿ ಕುದುರೆಗಾಡಿಗಳನ್ನು ಹೊಡೆಯುವವರಿಗೆ ಕೊಡತಕ್ಕದ್ದೆಂದು ಮರಣಶಾಸನವನ್ನು ಬರೆದನು. ಕುದುರೆಗಾಡಿಗಳನ್ನು ಹೊಡೆಯುವವರು ಅತ್ಯಂತ ಸಂತೋಷಭರಿತರಾಗಿ ಫಿಫಿಯವರ ಶವಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಹೋಗಿದ್ದರಂತೆ !

ಕಾರಣವಿಲ್ಲದೆ ಬೆಂಕಿ !

ಜಬ್ಬಲಪುರದಲ್ಲಿ ಒಂದು ಮನೆಯಲ್ಲಿ 1,00,000 ಕಂತೆ ಹುಲ್ಲನ್ನು ಇಟ್ಟಿದ್ದು ಇದ್ದಕ್ಕಿದ್ದ ಹಾಗೆ ಬೆಂಕಿಹತ್ತಿ ಹುಲ್ಲು ಸಂಪೂರ್ಣವಾಗಿ ಸುಟ್ಟು ಭಸ್ಮವಾಯಿತು. ಆದರೆ ಕಟ್ಟಡಕ್ಕೆ ಅದರಿಂದ ಸ್ವಲ್ಪವೂ ಅಪಾಯವಾಗದಿರುವುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿರುವುದು. ಮನೆಯ ಯಜಮಾನನು ಬೆಂಕಿಯನ್ನು ನೋಡಿದ ಕೂಡಲೇ ಮೂರ್ಛೆಹೋಗಿ, ಎಚ್ಚರವೊಂದಿದನಂತರ ಯಾವುದೋ ಒಂದು ಬಿಳಿವ್ಯಕ್ತಿಯು ಕಟ್ಟಡದೊಳಗೆ ಓಡಾಡುತ್ತಿತ್ತೆಂದು ಹೇಳಿರುತ್ತಾನೆ. ಬೆಂಕಿಗೆ ಕಾರಣವೇನೆಂಬುದು ಯಾರಿಗೂ ತಿಳಿದಿಲ್ಲ.

ಪುರಾತನ ಯಾಂತ್ರಿಕ ವಿಗ್ರಹ !

ಈಗಿನ ನವನಾಗರಿಕ ಪ್ರಪಂಚದಲ್ಲಿ ನಿರ್ಜೀವಿಗಳಾಗಿದ್ದರೂ ವಿದ್ಯುಚ್ಛಕ್ತಿಯ ದೆಸೆಯಿಂದ ಬೇಕಾದ ಕೆಲಸಗಳನ್ನು ಮಾಡಬಲ್ಲ ಯಾಂತ್ರಿಕ ವಿಗ್ರಹಗಳ ನಿರ್ಮಾಣವನ್ನು ಕೇಳಿ ನಾವು ಆಶ್ಚರ್ಯಪಡುವೆವು. ಆದರೆ ನಮ್ಮ ಪೂರ್ವಜರು ಇಂತಹ ಯಾಂತ್ರಿಕ ವಿಗ್ರಹಗಳನ್ನು ನಿರ್ಮಿಸುವ ಕೌಶಲ್ಯವನ್ನು ಬಹು ಪುರಾತನ ಕಾಲದಿಂದಲೂ ಅಭ್ಯಾಸಮಾಡಿದ್ದರು. ಇದಕ್ಕೆ ನಿದರ್ಶನವಾಗಿ ಹಿಸ್ಸಾರ್ ಪ್ರಾಂತಕ್ಕೆ ಸೇರಿದ ಸಿರ್ಸಾ ಎಂಬ ಊರಿನಿಂದ ಒಂದು ವಿಚಿತ್ರವಿಷಯವು ಪ್ರಚಾರವಾಗಿರುವುದು. ಒಬ್ಬ ಕಳ್ಳರ ಯಜಮಾನನು ಊರಿನ ಹೊರಭಾಗದಲ್ಲಿ ಒಂದು ದಿನ ಅಕಸ್ಮಾತ್ತಾಗಿ ಒಂದು ಗುಹೆಯನ್ನು ಕಂಡನು. ಆತನು ತನ್ನ ಕಡೆಯವರೊಡನೆ ಅದನ್ನು ಶೋಧಿಸಿದಾಗ, ಅದು ಗುಪ್ತಸುರಂಗವೆಂದು ತಿಳಿದುಬಂದಿತು. ಸುರಂಗದಲ್ಲಿ ವಿಷದ ಗಾಳಿಯು ತುಂಬಿದ್ದುದರಿಂದ ಕಳ್ಳರು ಬಹು ಪ್ರಯಾಸಪಟ್ಟು ಕಡೆಗೆ ಅವರಲ್ಲಿ ಕೆಲವರು ಸುರಂಗದ ಕೊನೆಯನ್ನು ಸೇರಿದರು. ಅಲ್ಲೊಂದು ಕೊಠಡಿ; ಬಾಗಿಲು ತೆರೆದಿದ್ದಿತು. ಒಂದು ವಿಧವಾದ ಕೆಂಪು ಬೆಳಕು ದ್ವಾರಪ್ರದೇಶವನ್ನು ಬೆಳಗುತ್ತಿದ್ದಿತು. ಕೊಠಡಿಯ ದ್ವಾರದಲ್ಲಿ 3 ಮೆಟ್ಟಲುಗಳು. ಮೊದಲನೆಯ ಮೆಟ್ಟಲಿನಮೇಲೆ ಮುಮ್ಮುಖವಾಗಿದ್ದ ಒಂದು ಶಿಲಾವಿಗ್ರಹ! ಕಳ್ಳರ ಯಜಮಾನನು ಮೊದಲನೆಯ ಮೆಟ್ಟಲಮೇಲೆ ಕಾಲಿಟ್ಟಕೂಡಲೇ ಶಿಲಾವಿಗ್ರಹವು ಎದ್ದು ಕುಳಿತುಕೊಂಡಿತು! ಎರಡನೇ ಮೆಟ್ಟಲಮೇಲೆ ಕಾಲಿಟ್ಟಕೂಡಲೇ ವಿಗ್ರಹವು ಅದ್ಭುತಾಕಾರದಿಂದ ಎದ್ದು ನಿಂತಿತು. ಕಳ್ಳರಲ್ಲಿ ಒಬ್ಬನು ಆ ವಿಗ್ರಹದ ದರ್ಶನಮಾತ್ರದಿಂದಲೇ ಕೆಳಗೆ ಬಿದ್ದು ಸತ್ತನು. ಇತರರು ಭೀತಿಯಿಂದ ಹಿಂದಕ್ಕೆ ಸರಿದು ಒಂದು ದೊಡ್ಡ ತೊಲೆಯನ್ನು ತಂದು ಅದನ್ನು ಮೂರನೇ ಮೆಟ್ಟಲಿನ ಮೇಲಿಟ್ಟರು. ಶಿಲಾವಿಗ್ರಹವು ಕೂಡಲೇ ಅದನ್ನು ತುಂಡುತುಂಡಾಗಿ ಕತ್ತರಿಸಿಬಿಟ್ಟಿತು ! ಅನಂತರ ಕಳ್ಳರು ಒಳಗೆ ಪ್ರವೇಶಿಸುವುದು ಅಪಾಯಕರವೆಂದು ಭಾವಿಸಿ, ಕೊಠಡಿಯಲ್ಲಿ ಒಂದು ಗೂಟದ ಮೇಲೆ ನೇತುಹಾಕಿದ್ದ ಅಂಗಿಯನ್ನು ಒಂದು ಜಲ್ಲೆಯಿಂದ ಈಚೆಗೆ ಸೆಳೆದುಕೊಂಡರು. ಆಮೇಲೆ ಕಳ್ಳರು ಆ ಶಿಲಾವಿಗ್ರಹದ ಮರ್ಮವನ್ನು ಪತ್ತೆಮಾಡಲು ಒಬ್ಬ ಕಮ್ಮಾರನನ್ನು ಕರೆದುಕೊಂಡು ಹೋದರು. ಮೊದಲನೆಯ ಮೆಟ್ಟಲನ್ನು ಕೀಳಲು ಪ್ರಯತ್ನಿಸಿದ ಕೂಡಲೇ, ಎಲ್ಲ ಮೆಟ್ಟಲುಗಳೂ ಭೂಮಿಯೊಳಕ್ಕೆ ಇಳಿಯಲು ಪ್ರಾರಂಭಿಸಿದುದರಿಂದ ಮುಂದಿನ ಪ್ರಯತ್ನವನ್ನು ಅಷ್ಟಕ್ಕೇ ನಿಲ್ಲಿಸಿದರು. ಇತ್ತ ಕಮ್ಮಾರನು ಫಿರೋಜಪುರದಲ್ಲಿದ್ದ ಒಬ್ಬ ಶ್ರೀಮಂತನಿಗೆ ಗುಹೆಯ ವಿಷಯವನ್ನು ಹೇಳಲು ಅವನು ಸಿರ್ಸಾ ಗ್ರಾಮಕ್ಕೆ ಗುಹೆಯಿದ್ದ ಪ್ರದೇಶದ ಮಾಲಕನ ಬಳಿಗೆ ಹೋಗಿ ಆ ಪ್ರದೇಶವನ್ನು ಖರೀದಿಗೆ ಕೇಳಿದನು. ಅವನು ಖರೀದಿಗೆ ಕೊಡಲೊಪ್ಪದೆ, ತನಗೆ ಪ್ರಥಮತಃ 2000 ರೂ ಗಳನ್ನೂ ಗುಹೆಯಲ್ಲಿ ಸಿಕ್ಕುವ ಐಶ್ವರ್ಯದಲ್ಲಿ ಅರ್ಧಭಾಗವನ್ನೂ ಕೊಡುವುದಾದರೆ ಗುಹೆಯನ್ನು ಶೋಧಿಸಲು ಅವಕಾಶವನ್ನು ಕೊಡುವುದಾಗಿ ಹೇಳಿದನು. ಶ್ರೀಮಂತನು ಅದನ್ನು ಕಲೆಕ್ಟರಿಗೆ ತಿಳುಹಿಸಿದನು. ಕಲೆಕ್ಟರವರು ಅದನ್ನು ಭೂಗರ್ಭಶೋಧಕ ಇಲಾಖೆಯವರಿಗೆ ತಿಳುಹಿಸಿದರು. ಭೂಗರ್ಭಶೋಧಕ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಖಾನ್ ಬಹದ್ದೂರ್ ಮೌಲ್ವಿ ಜಾಫರ್ ಹಸನ್‌ರವರು ಮುಂದಿನ ಕಾರ್ಯಕ್ರಮವನ್ನು ಕೈಕೊಂಡಿರುತ್ತಾರೆ. ಸಿರ್ಸಾ ಮತ್ತು ಹಿಸ್ಸಾರ್ ನಗರಗಳು ಬಹಳ ಪುರಾತನ ಕಾಲದವುಗಳಾಗಿದ್ದು ಷಹಾಬ್-ಉ-ದ್ದೀನ್ ಘೋರಿ ಮತ್ತು ಪೃಥ್ವೀರಾಜರ ಕಾಲದಲ್ಲಿ ಅತ್ಯಂತ ಅಭಿವೃದ್ಧಿಯಲ್ಲಿದ್ದ ನಗರಗಳಾಗಿದ್ದುವು. ಗುಹೆಯು ಸಿಕ್ಕಿರುವ ಪ್ರದೇಶದಲ್ಲಿ ಪುರಾತನ ಕಟ್ಟಡವಾಗಲಿ, ದೇವಾಲಯವಾಗಲೀ ಇರಬೇಕೆಂದು ಊಹಿಸಲ್ಪಟ್ಟಿರುವುದು.

(3ನೆಯ ಪುಟದಿಂದ ಮುಂದುವರಿದುದು.)

ಗೆಯ ರಸಗ್ರಾಹಕಶಕ್ತಿಯು ನಷ್ಟವಾಗುವುದು : ಆಸಮಯದಲ್ಲಿ ನಾಲಗೆಯು ರುಚಿ ಕೆಟ್ಟಿದೆ ಎಂದು ಹುರಿದ ಕರಿದ ದಿನಸುಗಳನ್ನು ತಿಂದರಂತೂ ವಿಷಪಾನಕ್ಕೆ ಸಮಾನವಾಗುವುದು.

ಚನ್ನಾಗಿ ಜೀರ್ಣವಾಗುವಷ್ಟು ಆಹಾರವೇ ಊಟದ ಪರಿಮಾಣವು. ಹಗುರಾದ ಆಹಾರವಿದ್ದರೆ ಹೊಟ್ಟೆತುಂಬಾ ಉಣ್ಣುವುದಕ್ಕೆ ಯಾವ ಬಾಧಕವೂ ಇಲ್ಲ. ಉಣ್ಣುವಾಗ ಪ್ರತಿಯೊಬ್ಬನೂ ತನ್ನ ಹೊಟ್ಟೆಯು ನಾಲ್ಕು ಭಾಗವಾಗಿದೆ ಎಂದು ತಿಳಿದುಕೊಂಡು ಎರಡು ಭಾಗವನ್ನು ಆಹಾರದಿಂದಲೂ, ಒಂದು ಭಾಗವನ್ನು ನೀರಿನಿಂದಲೂ ಪೂರ್ಣಮಾಡಿ ಉಳಿದೊಂದು ಭಾಗವನ್ನು ವಾಯು ಸಂಚಾರಕ್ಕಾಗಿ ಬರಿದಾಗಿಡಬೇಕು. ಅನ್ನ, ನೀರು, ಗಾಳಿಗಳನ್ನು ಪೂರ್ಣರೂಪವಾಗಿ ಸೇವಿಸಬಾರದು. ಮುಖದಿಂದ ಉಸಿರಾಡಿಸಲಿಕ್ಕೂ ಮೇಲೆ ಮೇಲೆ ಸ್ವಲ್ಪ ನೀರುಕುಡಿಯುವುದಕ್ಕೂ ಹೊಟ್ಟೆಯಲ್ಲಿ ಅವಕಾಶವಾಗಿ ಸ್ಥಳವಿರಬೇಕು. ಊಟವನ್ನು ದಿವಸದಲ್ಲಿ ಎರಡು ಸಾರೆ ಮಾಡಬೇಕೆಂಬುದೂ ಹೀಗೆ ಮಾಡಿದರೆ ಆರೋಗ್ಯವು ಸರಿಯಾಗಿರುವುದೆಂಬುದೂ ಎಲ್ಲರಿಗೂ ಗೊತ್ತು. ಆದರೆ ನವೀನಮಾಷವಸಮೂಹವೆಂದು ತಿಳಿದುಕೊಳ್ಳುತ್ತ ನಡೆದಿದೆ ; ಹೀಗೆ ತಿಳಿಯುತ್ತ ನಡೆದಿರುವುದೇ ಅಪಮೃತ್ಯುವುಂಟಾಗುವುದಕ್ಕೆ ಕಾರಣವೆಂದು ನಮಗೆ ಕಂಡುಬಂದಿದೆ. ಊಟದ ವಿಷಯದಲ್ಲಿ—'ಒಪ್ಪತ್ತುಂಡವಯೋಗಿ, ಎರಡೊತ್ತುಂಡವಭೋಗಿ, ಮೂರೊತ್ತುಂಡುವರೋಗಿ, ನಾಲ್ಕೊತ್ತುಂಡವನ ಹುಡುಗಾಡಿಗೆ ಹೊತ್ತುಕೊಂಡು ಹೋಗಿ' ಎಂದು ಹೇಳುವ ಆದೊಂದು ನೀತಿಪದ್ಯವನ್ನಾದರೂ ಹೊಸಬರು ಓದಿ ವಿಚಾರಮಾಡಿಕೊಂಡರೆ ಉಪಕಾರವಾಗುವಂತಿದೆ. ಹೊಟ್ಟೆತುಂಬಿದ ಮೇಲೂ ಊಟಮಾಡತಕ್ಕವರು ೧೦೦ಕ್ಕೆ ೯೯ ರಂತೆ ಹೊರಡುತ್ತಿದ್ದಾರೆಂದು ಪರದೇಶದ ಪ್ರಸಿದ್ಧ ಡಾಕ್ಟರರೂ ಕೂಡ ಅಭಿಪ್ರಾಯಪಡುತ್ತಾರೆ. ಹೊಟ್ಟೆತುಂಬಿದ ಮೇಲೆ ಉಣ್ಣಬಾರದೆಂಬುದೊಂದು ಸಣ್ಣಮಾತು. ಅಕ್ಷರವನ್ನರಿಯದವನೂ ಕೂಡ ತಿಳಿದುಕೊಳ್ಳುವಂತಿದೆ; ಹೀಗಿದ್ದೂ ಓದಿದವರೂ ಈ ವಿಷಯದಲ್ಲಿ ದಾರಿತಪ್ಪುತ್ತಿದ್ದಾರೆಂಬುದು ಬಹಳ ಆಶ್ಚರ್ಯ ! ಪಾಪ ! ಮಾಡುವುದೇನು? ಆಕೆ ಅಂಥದು ! (ಸಶೇಷ.)

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಶ್ರೀಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರ ಆಗಮನದ ಸ್ವಾಗತಕಮಿಟಿ ಸ್ಥಾಪನೆಯ ಮೀಟಿಂಗ್.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಮೈಸೂರು ರಾಜಧಾನಿಗೆ ದಯಮಾಡಿಸಿಕೊಳ್ಳುವುದಕ್ಕಾಗಿ ಒಂದು ಸ್ವಾಗತಸಂಘವನ್ನು ಸ್ಥಾಪಿಸಬೇಕಾಗಿರುವುದರಿಂದ ಈ ಸಂಘಸ್ಥಾಪನೆಗೆ ಸಹಕರಿಸುವ ಗುರುಪೀಠಾಭಿಮಾನಿಗಳು ಮಾತ್ರ ತಾ|| 29—6—34 ನೆಯ ಶುಕ್ರವಾರ ಸಾಯಂಕಾಲ 7 ಗಂಟೆಯ ಸಮಯಕ್ಕೆ ಧರ್ಮಪ್ರಕಾಶ ರಾವ್‌ಬಹದ್ದೂರ್ ಡಿ. ಬನುಮಯ್ಯನವರ ಹೈಸ್ಕೂಲಿಗೆ ತಪ್ಪದೆ ಆಗಮಿಸಿ ಈ ಸಂಘಸ್ಥಾಪನೆಯ ಕಾರ್ಯವನ್ನು ನೆರವೇರಿಸಬೇಕಾಗಿ ಪ್ರಾರ್ಥನೆ. ಈ ಮೀಟಿಂಗಿನಲ್ಲಿ ಇನ್ನುಳಿದ ಯಾವ ಚರ್ಚೆಗೂ ಅವಕಾಶವಿರುವುದಿಲ್ಲ.

ಕೆ. ಎಚ್. ತಿಮ್ಮಪ್ಪಯ್ಯ, ರಿ|| ಪೋ|| ಇನ್‌ಸ್ಪೆಕ್ಟರ್.
ಎಂ. ಎಸ್. ಮಾದಪ್ಪ, ಇಂಜನಿಯರ್.
ಎಂ. ಎನ್. ವೀರಣ್ಣ, ಮರ್ಚಂಟ್.
ಟಿ. ಎಸ್. ಸಿದ್ದಪ್ಪ, ಎಲ್.ಎಂ. ಅಂಡ್ ಎಸ್., ರಿ|| ಡಿ|| ಮೆಡಿಕಲ್ ಆಫೀಸರ್.
ಎಂ. ಪಿ. ಭೋಗಯ್ಯ, ಬಿ.ಎ., ಬಿ.ಎಲ್., ಅಡ್ವೋಕೇಟ್.
ಬಿ. ಹುಚ್ಚವೀರಪ್ಪ, ಮರ್ಚಂಟ್.
ಡಿ. ಶಿವರುದ್ರಪ್ಪ.
ಎಂ. ಎಸ್. ದೇವಣ್ಣ, ಜಹಗೀರ್‌ದಾರ್.
ಬಿ. ಎಸ್. ರುದ್ರಪ್ಪ, ಕ್ಲಾತ್‌ಮರ್ಚಂಟ್.
ಬಕ್ಷಿ ಸಿ. ಸೋಮಶೇಖರಪ್ಪ, ಸಾಹುಕಾರ್.
ದಿನಸಿ ಅಂಗಡಿ ಕೆಂಪಣ್ಣ.
ಎಂ. ಕೆ. ದೇವಣ್ಣ, ಜವಾಹಿರಿವ್ಯಾಪಾರಿ.
ಟಿ. ಎನ್. ಸಿದ್ದಪ್ಪ, ಇನ್‌ಫೆಂಟ್ರಿ ಸುಬೇದಾರ್.
ಎಂ. ಎನ್. ನಾಗಣ್ಣ, ಲ್ಯಾಂಡ್‌ಲಾರ್ಡ್ ಅಂಡ್ ಮರ್ಚಂಟ್.
ಎಂ. ವೀರಭದ್ರಯ್ಯ, ಮುನಿಸಿಪಲ್ ಕ್ವಾರೀಜ್ ಇನ್‌ಸ್ಪೆಕ್ಟರ್.
ಎಚ್. ಕೆ. ಶಿವಲಿಂಗಪ್ಪ, ಮರ್ಚಂಟ್.
ಎಂ. ಎಸ್. ನಂಜಪ್ಪ, ಮರ್ಚಂಟ್.
ದೇಶದಶೆಟ್ಟಿ ಕೆ. ಬಸಪ್ಪಶೆಟ್ಟಿ.
ಬಸವಲಿಂಗಪ್ಪ, ಗುರುಕಾರ್, ಪ್ಯಾಲೇಸ್.
ರಾಜಾ ಮಹದೇವರಾಯಲ್ ಯಶವಂತ ಬಹದ್ದೂರ್ ಪುಂಗನೂರು.
ಎಂ. ಪಿ. ಲಿಂಗಪ್ಪಯ್ಯ, ಸೂಪರಿಂಟೆಂಡೆಂಟ್, ತಿರಕಣಾಂಬಿ ಖಾದಿ ಸೆಂಟರ್.
ಎಂ. ಪಿ. ಚನ್ನಪ್ಪ, ರಿ|| ಶಿರಸ್ತೇದಾರ್.
ಬಿ. ರುದ್ರಪ್ಪ, ಮರ್ಚಂಟ್.
ಕಂತಿ ಮಲ್ಲಣ್ಣ, ಮರ್ಚಂಟ್.
ಜಿ. ಮಲ್ಲಣ್ಣ, ಲ್ಯಾಂಡ್‌ಲಾರ್ಡ್ ಮತ್ತು ಡಿ|| ಬೋರ್ಡ್ ಮೆಂಬರ್.
ಯಜಮಾನ್ ಚಿಕ್ಕಚಂದ್ರಯ್ಯ.
ಪಿ. ಮಲ್ಲಣ್ಣ, ಮಂಡಿ ಮರ್ಚಂಟ್.
ಬಿ. ಎನ್. ಸುಬ್ಬಣ್ಣ, ಮರ್ಚಂಟ್.
ಎಂ. ಎಸ್. ಸದಾಶಿವಯ್ಯ, ಸಂಗೀತವಿದ್ವಾನ್.
ಕಲ್ಯಾಣಿ ಮಹದೇವಪ್ಪ, ಸಾಹುಕಾರ್.
ಎಲ್. ಮಹದೇವಪ್ಪ, ಕ್ರೈಸ್ಟ್ ವರ್ಕ್‌ಷಾಪ್.
ಬೆಜವಾಡದ ಬಸಪ್ಪ.
ಎಂ. ನಂಜುಂಡಪ್ಪ, ಕ್ಲಾತ್‌ಮರ್ಚಂಟ್.
ಶೆಟ್ಟಿಪ್ಪ ಸಿದ್ದಪ್ಪ, ಮರ್ಚಂಟ್.
ಸಿ. ಬಸವಲಿಂಗಶೆಟ್ಟಿ ಮು|| ಚೀಫ್ ಇನ್‌ಸ್ಪೆಕ್ಟರ್.
ಜೀವನಹಳ್ಳಿ ಶಿವಪ್ಪ, ಪಟೇಲ್.
ಕೆ. ಪಿ. ಸ್ವಾಮಿ, ಇನ್ಷೂರೆನ್ಸ್ ಏಜೆಂಟ್.
ಎಂ. ಬಸಪ್ಪ, ಕ್ಲಾರ್ಕ್, ಮೈಸೂರು ಹಾಸ್ಟೆಲ್.
ಎಂ. ಸಿ. ಮಹದೇವಪ್ಪ, ಕಂಟ್ರಾಕ್ಟರ್.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಆಗಮನದ ಸ್ವಾಗತಕಮಿಟಿ ಸ್ಥಾಪನೆಯ ಮೀಟಿಂಗು.

ಮೊದಲೇ ಪ್ರಸಿದ್ಧಪತ್ರಿಕೆಯ ಮೂಲಕ ಪ್ರಸಿದ್ಧಪಡಿಸಿದ ಪ್ರಕಾರ ಮೇಲ್ಕಂಡ ಮೀಟಿಂಗು ತಾ|| 29—6—1934 ಶುಕ್ರವಾರ ಸಾಯಂಕಾಲ ಧರ್ಮಪ್ರಕಾಶ ರಾವ್‌ಬಹದ್ದೂರ್ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯಿತು. ಸಭಿಕರ ಅನುಮೋದನೆಯಂತೆ ಡಾ|| ಟಿ. ಎಸ್. ಶಿದ್ದಪ್ಪನವರು ಅಧ್ಯಕ್ಷತೆಯನ್ನು ವಹಿಸಿದರು. ಶ್ರೀ ಜಗದ್ಗುರುಗಳವರನ್ನು ರಾಜಧಾನಿಗೆ ಆಗಮಿಸಿಕೊಳ್ಳುವುದಕ್ಕಾಗಿ ಏರ್ಪಾಡುಮಾಡುವ ವಿಷಯದಲ್ಲಿ ಕೆಲವು ವಿಚಾರಗಳು ನಡೆದವು. ಆಗ್ಗೆ ಮ|| ರಾ|| ನಂಜುಂಡಪ್ಪನವರ ಮಕ್ಕಳಾದ ಬಸಪ್ಪನವರೂ ಮತ್ತು ಮಲ್ಲಯ್ಯನವರೂ ಅರಮನೆಯ ಕೆಲಸದಲ್ಲಿರುವ ಮ|| ರಾ|| ಕಾಳಲಿಂಗಯ್ಯನವರೂ ಈ ಮೂವರು ಪ್ರಸಿದ್ಧಪತ್ರಿಕೆಗೆ ವಿರುದ್ಧವಾಗಿ ಮೀಟಿಂಗಿನಲ್ಲಿ ಗೊಂದಲವನ್ನೆಬ್ಬಿಸಿದರು. ಅರಮನೆಯಲ್ಲಿ ಕೆಲಸ ಮಾಡುತ್ತಿರುವ ಕಾಳಲಿಂಗಯ್ಯನವರು ಈ ರೀತಿಯಾಗಿ ಸಭೆಯ ಕಾರ್ಯಕ್ರಮಕ್ಕೆ ವಿರೋಧವಾಗಿ ಕೋಲಾಹಲವನ್ನು ಮಾಡಿದ್ದು ಅತ್ಯಂತ ಅನುಚಿತವಾದುದು. ಈ ವಿಷಯವನ್ನು ಅರಮನೆಯ ಅಧಿಕಾರಿಗಳು ಗಮನಕ್ಕೆ ತಂದುಕೊಳ್ಳಬೇಕೆಂದು ಪ್ರಾರ್ಥನೆ. ಈ ಇಬ್ಬರು ಮೂವರು ಗಲಾಟೆಯನ್ನು ಮಾಡಿದರೂ ಕೂಡ ಅಧ್ಯಕ್ಷರು ಅದಕ್ಕೆ ಗಮನಕೊಡದೆ ಧೈರ್ಯದಿಂದಲೂ ಉತ್ಸಾಹದಿಂದಲೂ ಮೀಟಿಂಗಿನ ಕಾರ್ಯವನ್ನು ಸಾಂಗಗೊಳಿಸಿದರು. ಈ ಸ್ವಾಗತಕಮಿಟಿಗೆ ಮ|| ರಾ|| ಡಾಕ್ಟರ್ ಟಿ. ಎಸ್. ಶಿದ್ದಪ್ಪನವರು ಅಧ್ಯಕ್ಷರಾಗಿಯೂ, ಮ|| ರಾ|| ಎಂ. ಪಿ. ಭೋಗಯ್ಯನವರು, ಬಿ.ಎ., ಬಿ.ಎಲ್., ಅಡ್ವೋಕೇಟ್ ಮತ್ತು ರಾಜಾಮಹಾದೇವರಾಯಲ್ ಯಶವಂತ ಬಹದ್ದೂರ್ ಪುಂಗನೂರು ಇವರು ಉಪಾಧ್ಯಕ್ಷರಾಗಿಯೂ, ಮ|| ರಾ|| ಜಿ. ಮಲ್ಲಣ್ಣನವರು, ಡಿ|| ಬೋರ್ಡ್ ಮೆಂಬರ್ ಮತ್ತು ಮ|| ರಾ|| ಎಚ್. ಕೆ. ಶಿದ್ದಲಿಂಗಪ್ಪನವರು ಸೆಕ್ರೆಟರಿಗಳಾಗಿಯೂ, ಮ|| ರಾ|| ಎಂ. ಎಸ್. ಮಾದಪ್ಪನವರು, ಇಂಜನಿಯರ್ ಮತ್ತು ಮ|| ರಾ|| ಬಿ. ಎನ್. ಸುಬ್ಬಣ್ಣನವರು ಅಸಿಸ್ಟೆಂಟ್ ಸೆಕ್ರೆಟರಿಗಳಾಗಿಯೂ, ಮ|| ರಾ|| ಕೆ. ಎಚ್. ತಿಮ್ಮಪ್ಪಯ್ಯನವರು, ರಿ|| ಪೋಲೀಸ್ ಇನ್‌ಸ್ಪೆಕ್ಟರವರು ಕೋಶಾಧ್ಯಕ್ಷರಾಗಿಯೂ, ಉಳಿದ ಅನೇಕಜನ ಪ್ರಮುಖರು ಮೆಂಬರರಾಗಿಯೂ ಚುನಾಯಿಸಲ್ಪಟ್ಟರು. ಶ್ರೀ ಜಗದ್ಗುರುಗಳವರ ಆಗಮನದ ವಿಷಯದಲ್ಲಿ ರಾಜಧಾನಿಯ ನಿವಾಸಿಗಳೆಲ್ಲರೂ ಅಸಾಧಾರಣ ಸಂತೋಷದಿಂದ ಕಾರ್ಯವನ್ನು ಕೈಕೊಂಡಿರುವಾಗ, ಒಬ್ಬಿಬ್ಬರು ಈ ಕಾರ್ಯದಲ್ಲಿ ಭಾಗ ವಹಿಸದೆ ವಿರೋಧವನ್ನು ತೋರ್ಪಡಿಸುತ್ತಿರುವುದು ಎಷ್ಟು ಸರಿಯಾಗಿ ತೋರುವುದಿಲ್ಲ. ಮುಂದಿನ ಕಾರ್ಯಕ್ರಮಗಳು ಯಥಾಪ್ರಕಾರವಾಗಿ ನೆರವೇರುವುವು.

ಪ್ರತ್ಯಕ್ಷದರ್ಶಿ.
ಹೆಚ್. ಕೆ. ಶಿದ್ಧಲಿಂಗಪ್ಪ,

ಪಾವಟೆಯವರ ಪ್ರತಾಪ.

ಈಗಿನ ಪೀಠಾಧಿಪತಿಗಳು ಬಸವಾದಿಗಳನ್ನು ತಿರಸ್ಕರಿಸುತ್ತಿರುವುದರಿಂದ ಅವರನ್ನು ಪೀಠದಿಂದ ತೆಗೆದುಹಾಕಲಿಕ್ಕೆ ಕೋರ್ಟಿನಲ್ಲಿ ವ್ಯಾಜ್ಯಹೂಡಬೇಕೆಂದೂ, ಇದಕ್ಕಾಗಿ ಯಾರಾದರೂ ೫ ಸಾವಿರ ರೂಪಾಯಿಗಳನ್ನು ಕೊಟ್ಟರೆ ಆ ಕಾರ್ಯವನ್ನು ಪ್ರಾರಂಭಿಸುತ್ತೇನೆಂದೂ ಪಾವಟೆಯವರು ಕೆಲವು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿ ತಮ್ಮ ಪ್ರತಾಪವನ್ನು ಕೊಚ್ಚಿಕೊಂಡಿರುವುದನ್ನು ನೋಡಿ ಚಿಕ್ಕ ಮಕ್ಕಳೂ ಕೂಡ ನಗುತ್ತಿರುವರು. ಈ ಮಹಾಶಯರು ಯಾವ ಕಾರಣದಿಂದಲೋ ೫ ಸಾವಿರ ರೂಪಾಯಿಗಳಿಗೆ ಸಮಾಜದಲ್ಲಿ ಜಾಲವನ್ನು ಬೀಸಿರುವುದು ಆಶ್ಚರ್ಯಕರವಾಗಿದೆ. ಸುಧಾರಿಸಿದ ಈ ಕಾಲದಲ್ಲಿ ಯಾರೂ ಇವರ ಮಾಯಾಜಾಲದಲ್ಲಿ ಬೀಳದೆ ಇವರಿಗೆ ೫ ಕಾಸನ್ನೂ ಕೂಡ ಕೊಡುವುದಿಲ್ಲವೆಂಬುದನ್ನು ಪಾವಟೆಯವರು ಪೂರ್ಣವಾಗಿ ತಿಳಿಯಲಿ. ಪಾವಟೆಯವರು ತಮ್ಮ ಮಹಾ ವಕಾಲತ್ತಿನಿಂದ ಮನೆ ಹಿಡಿಸಲಾರದಷ್ಟು ದುಡ್ಡನ್ನು ಗಳಿಸಿರುವರೆಂದು ವದಂತಿಯಿದೆ. ಈ ಮಹಾಶಯರು ತಾವೇ ೫ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ವ್ಯಾಜ್ಯಮಾಡಬಹುದಲ್ಲವೇ? ಜನರನ್ನು ಏಕೆ ಬೇಡುವರೋ ಎನ್ನುವುದು ಯಾರಿಗೂ ತಿಳಿಯದಾಗಿದೆ. ಇದರಲ್ಲಿ ಏನೋ ಒಂದು ರಹಸ್ಯವಿದ್ದಂತೆ ತೋರುತ್ತದೆ. ಇವರ ರಹಸ್ಯವನ್ನು ರಹಸ್ಯಜ್ಞರು ಚನ್ನಾಗಿ ಅರಿತುಕೊಳ್ಳಬೇಕು. ಪಾವಟೆಯವರು ೯೨ನೆಯ ಸೆಕ್ಷನ್ನಿಗನುಸರಿಸಿ ವ್ಯಾಜ್ಯಹೂಡುವರಂತೆ! ಇವರ ಸೆಕ್ಷನ್ನನ್ನು ನೋಡಿ ಇಂಡಿಯಾದೇಶದಲ್ಲಿರುವ ಪ್ರತಿಯೊಬ್ಬ ವಕೀಲರೂ ಚಪ್ಪಾಳೆಹೊಡೆದು ನಗುತ್ತಿರುವರು. ಮಠಾಚಾರ್ಯರು ಮತಸಿದ್ಧಾಂತವನ್ನು ಬೋಧಿಸಿದರೆ ೯೨ ನೆಯ ಸೆಕ್ಷನ್ನು ಸಂಬಂಧಿಸುವದಂತೆ! ಆಹಾ! ಏನು ಕಾಯಿದೆ ಪಾಂಡಿತ್ಯವಿದು? ಈ ಮಹಾಶಯರು ಹೇಳುವ ವಿಷಯಕ್ಕೂ ೯೨ ನೆಯ ಸೆಕ್ಷನ್ನಿಗೂ ಯಾವ ಸಂಬಂಧವೂ ಇಲ್ಲವೆಂದು ಮಹಾ ಮಹಾಕಾಯಿದೆ ಪಂಡಿತರು ಸಾರುತ್ತಿರುವಾಗ ಪಾವಟೆಯವರು ಈ ಸೆಕ್ಷನ್ನನ್ನು ಯಾವ ಮೂಲೆಯೊಳಗಿಂದ ಹುಡುಕಿ ತೆಗೆದರೋ! ಇವರೀತರಹದ ಅದ್ಭುತವಾದ ಕಾಯಿದೆಪಾಂಡಿತ್ಯವು ಜಗತ್ತನ್ನೆಲ್ಲಾ ದಂಗುಬಡಿಸಿಬಿಟ್ಟಿದೆ. ಇರಲಿ; ಇವರು ಇಲ್ಲಿಯವರೆಗೆ ಗುರುವರ್ಗದವರ ವಿರುದ್ಧವಾಗಿ ಕೇಸು ನಡೆಯಿಸಿ ಮಣ್ಣುಮುಕ್ಕಿರುವ ವಿಷಯವು ಎಲ್ಲರಿಗೂ ತಿಳಿದೇ ಇದೆ. ಹೀಗಿದ್ದರೂ ಈ ಮಹಾಶಯರು ವರ್ತಮಾನಪತ್ರಿಕೆಗಳಲ್ಲಿ ಪ್ರತಾಪವನ್ನು ಕೊಚ್ಚಿಕೊಂಡಿರುವುದು ಹಾಸ್ಯಾಸ್ಪದವಲ್ಲವೇ? ಬಹುಕಾಲದಿಂದ ಮೂಲಾಚಾರ್ಯರ ಮೇಲೂ ಅವರ ಪೀಠಗಳ ಮೇಲೂ ಲೇಖಗಳ ಮೂಲಕ ಅಸಾಧಾರಣ ದ್ವೇಷವನ್ನು ಸಾಧಿಸುತ್ತಿರುವ ಇವರಿಗೆ ವ್ಯಾಜ್ಯವನ್ನು ತರಲಿಕ್ಕೆ ಯಾವ ಅಧಿಕಾರವುಂಟೋ! ಇದು ಯಾರಿಗೂ ತಿಳಿಯದಾಗಿದೆ. ಮೂಲಾಚಾರ್ಯದ್ವೇಷಿಗಳಿಗೆ ಅವರ ಪೀಠಗಳ ವಿಷಯದಲ್ಲಿ ಒಂದು ಮಾತನ್ನು ಕೂಡ ಆಡಲಿಕ್ಕೆ ಅಧಿಕಾರವಿಲ್ಲವೆಂಬುದನ್ನು ಮಹಾವಕೀಲರಾದ ಪಾವಟೆಯವರು ಚನ್ನಾಗಿ ಗ್ರಹಿಸಬೇಕು. ಶಿವದೇವಸ್ಥಾನ ದೂಷಕರಾದ ವೈಷ್ಣವರು ಶಿವದೇವಸ್ಥಾನಗಳ ಬಗ್ಗೆ ವ್ಯಾಜ್ಯವನ್ನು ಮಾಡುತ್ತೇವೆನ್ನುವುದೂ, ಮೂಲಾಚಾರ್ಯದೂಷಕರಾದ ಪಾವಟೆಯವರು ಆ ಆಚಾರ್ಯ ಪೀಠಾಧಿಪತಿಗಳ ಬಗ್ಗೆ ವ್ಯಾಜ್ಯವನ್ನು ಮಾಡುತ್ತೇವೆನ್ನುವುದೂ ಇವೆರಡೂ ಒಂದೇ ಮಾಲಿಕೆಯೊಳಗಿನ ಮಣಿಗಳಂತಿರುತ್ತವೆ ಅಸ್ತು!

ಪಾವಟೆಯವರೇ! ಈಗಿನಕಾಲದಲ್ಲಿ ನಿಮ್ಮ ಯಾವ ಆಟವೂ ನಡೆಯುವುದಿಲ್ಲವೆನ್ನುವುದನ್ನು ಪೂರ್ಣಲಕ್ಷ್ಯದಲ್ಲಿಡಿರಿ! ಯಾರಾದರೂ ಬೆಪ್ಪಜನರನ್ನು ಮುಂದೆ ತಳ್ಳಿ ಮೋಜುನೋಡಬೇಡಿರಿ! ಕೋರ್ಟು ಖರ್ಚು ಮೊದಲಾದವುಗಳಿಗೆಲ್ಲಾ ಅವರ ಮೇಲೆ ಡಿಕ್ರಿ ಆಗಿ, ಅವರು ತಮ್ಮ ಹೊಲ ಮನೆಗಳನ್ನೆಲ್ಲಾ ಕಳೆದುಕೊಂಡು ಮುಂದೆ ಭಿಕ್ಷಾಪಾತ್ರೆಯನ್ನು ಹಿಡಿಯುವ ಪ್ರಸಂಗ ಬಂದರೆ ಆಗ್ಗೆ ನೀವು ಎಲ್ಲಿರುವಿರೋ? ಪಾವಟೆಯವರು ಬೀಸಿರುವ ಈ ಮಾಯಾಜಾಲದಿಂದ ಮಹಾಜನಗಳು ದೂರಾಗಿರಬೇಕು.

ಓರ್ವ ಗುರುಭಕ್ತ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮುಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಔಷಧಿ ಹೆಸರು	ತೊಲಿ	ಮುಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ.
ಬೆಂಗಳೂರು ಸಿಟಿ. 33

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿರೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 40

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. 8, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (16)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. **ಪ್ರೊಪ್ರೈಟರ್.**

ಮಲೇರಿಯಾಕ್ಕೆ ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ಮಲೇರಿ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8.

The Malariana Co., Mangalore (21)

ಬೇಬಿಟೋನ್ : ಈ ಅಮೃತವು ಮಕ್ಕಳ ಅಜೀರ್ಣತೆ, ಗ್ರಹಣಿ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಗೊಳಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್ ಕಫ್ ರೆಮೆಡಿ : ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಇಪ್ಪಕೆಮ್ಮು ಇವನ್ನು ನೀರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು : ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5.

ಸಿರಪ್ ವೆಸಿಥೂಜ : ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ತೋರುವ ಕೀವು, ಮೂತ್ರ ಬಿಂದು ಬಿಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡಸೀಸೆ ರೂ. 3-8-0. ಸಣ್ಣಸೀಸೆ ರೂ. 1-14-0.

ಟಿಕ್ಕು, ಹೊಮ್ಯೋಪತಿ ಮದ್ದುಗಳೂ, ಸ್ಪೆಷ್ಯಾಲಿಟಿಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಪರಿಮಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಪತ್ರ:— ಮಲೇರಿಯಾನ ಕಂಪೆನಿ,
[43] (ಹಂಪನಕಟ್ಟೆ), 21, ಮಂಗಳೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳ ವಿವಿಧ ವರ್ಣದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಧ್ಯಃ ಪೀಠಾರೋಹಣಮಾಡಿದವರು ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿ ತಲೆನೋವು, ತಲೆಯೊಳ್ಳಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[25] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಶಾಸ್ತ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಅಣಾ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಜುಲೈ ೧೯೩೪ [ಸಂಚಿಕೆ ೮

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೆ ಪ್ರಖ್ಯಾತಿಯಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಅದ್ವೈತಖಂಡನಪೂರ್ವಕ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ಸಿದ್ಧಾಂತಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಪಾವಟೆಯವರು ಪ್ರಕಟಿಸಿದ ದುಷ್ಟಲೇಖಕ್ಕೆ ಎಲ್ಲೆಲ್ಲಿಯೂ ಧಿಕ್ಕಾರ!

ಪಾವಟೆಯವರು ಈಗಿನ ಜಗದ್ಗುರು ಪೀಠಾಧಿಪತಿಗಳ ವಿಷಯದಲ್ಲಿ ಒಂದು ದುಷ್ಟವಾದ ಲೇಖವನ್ನು ಬರೆದು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿರುವುದು ಸರಿಯಷ್ಟೆ! ಸಾಕ್ಷಾದ್ಭಗವದ್ರೂಪಿಗಳಾದ ಜಗದಾಚಾರ್ಯರ ವಿಷಯದಲ್ಲಿ ಬರೆದ ಅಮಂಗಲ ಲೇಖವನ್ನು ಖಂಡಿಸುವುದಕ್ಕಾಗಿ, ಪಂಢರಪುರ, ಬಾರ್ಶಿ, ಲಾತೂರು, ಕಿನಗಾಂವ ಮೊದಲಾದ ಪಟ್ಟಣಗಳಲ್ಲಿ ವೀರಶೈವ ಮಹಾಜನಗಳು ಪ್ರಚಂಡಸಭೆಗಳನ್ನೇರ್ಪಡಿಸಿ ಆ ದುಷ್ಟಲೇಖವನ್ನು ತೀವ್ರವಾಗಿ ನಿಷೇಧಿಸಿದರು. ಭರತಖಂಡದಲ್ಲಿರುವ ಪ್ರತಿಯೊಂದು ಗ್ರಾಮದ ವೀರಶೈವರೂ ಇದರಂತೆಯೇ ಸಭೆಗೂಡಿ ಪಾವಟೆಯವರು ಬರೆದ ಗುರುದ್ರೋಹಾತ್ಮಕ ಲೇಖವನ್ನು ಖಂಡಿಸಿ ಅವರು ಕೈಕೊಂಡಿರುವ ವಕ್ರಮಾರ್ಗಕ್ಕೆ ಧಿಕ್ಕಾರವನ್ನಿಟ್ಟು ಗುರುಕೃಪೆಗೆ ಪಾತ್ರರಾಗಬೇಕೆಂದು ಕೋರುವ,

ಗುರುಭಕ್ತ.

ಸ್ವೀಕಾರ

ಬಳ್ಳಾರಿ ಟವನ್ ನಿವಾಸಿಗಳಾದ ಮ॥ ರಾ॥ ಹಾವಿನಹಾಳು ಕರಿಬಸವಪ್ಪನವರು ತಮ್ಮ ಪುತ್ರ ಚಿ॥ ಲಿಂಗಪ್ಪನ ಮತ್ತು ತಮ್ಮ ತಮ್ಮಂದಿರ ಪುತ್ರ ಚಿ॥ ಮಹಾದೇವಪ್ಪನ ವಿವಾಹಮಹೋತ್ಸವವನ್ನು ಜ್ಯೇಷ್ಠ ಶು॥ ೧೩ ದಿವಸ ಅಸಾಧಾರಣ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂಪಾಯಿಗಳು ಮ॥ ರಾ॥ ಶೀಲವಂತರ ಬಸವರಾಜಶೆಟ್ಟರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಶ್ರೇಯಃಪ್ರಾರ್ಥನಾಷ್ಟಕಂ.

ವರವೇದಾಗಮಶಾಸ್ತ್ರಸಾರವಿದನಂ ಸದ್ಭಕ್ತಿಸಂಗೆಯ್ವವಂ |
ಪರಮಾನಂದವಿಹಾರಸತ್ಕಚರಿತಂ ಭಕ್ತಾಬ್ಧಿಚಂದ್ರೋಪಮಂ ||
ನಿರುತಂ ಪೂರ್ವಮತಪ್ರಚಾರಣಪರಂ ಸನ್ಮಾರ್ಗಸಂಶೋಧಕಂ |
ಮೆರೆವಂ ಶಂಕರನಲ್ಲಿ ವೇಪ್ಪ ಸತತಂ ಶ್ರೀಕಾಶಿನಾಥಾಹ್ವಯಂ ||೧||

ಧರೆಗೆ ಮಿಗಿಲಹ ನಾಗನೂರಿನ |
ಹಿರಿಯಮಳೆದೊರೆತನದ ಪಡೆದಿಹ |
ಪರಮಪಂಚಾಚಾರ್ಯರೊಲುಮೆಯ ಪುತ್ರ ಶುಭಗಾತ್ರ ||
ಧರದಿ ಶಿವಮತಸಾರವೆಲ್ಲವ |
ನರಿದು ಧರೆಯೊಳು ಸಾರುತನವು |
ಮೆರೆವ ಗುರುಕುಲಜಾತ ಕಾಶೀನಾಥಶಾಸ್ತ್ರಿವಲಂ ||೨||

ಸ್ಕಂದಗೋತ್ರದೆ ಜನಿಸಿ ಮುದದಲಿ |
ಇಂದುಧರನನು ಪೂಜೆಗೆಯ್ಯುತ |
ಕುಂದುಸೊಗಗಳನೊಂದನೆಣಿಸದೆ ಚೆಂದದಿಂದಿರುವ ||
ಅಂದು ನಿನ್ನನು ಪೆತ್ತ ತಾಯ್ತನೆ |
ಯಂದು ನೆರೆ ಜಸವಾಂತು ಮೆರೆವುದು |
ಕಂದುಗೊರಳನು ನಿನ್ನ ದಯೆಯಿಂ ಪೊರೆಯಲನವರತಂ ||೩||

ವೀರಶೈವರ ಮೂಲಗುರುಗಳ |
ಧಾರಿಮಹಿಮೆಯ ಪೇಳುತನುದಿನ |
ಸಾರವರಿಯದೆ ಧರ್ಮತತ್ತ್ವವ ಗಳಹುತಿರ್ಪವರಂ ||
ಕೋರಿ ಶಿವಮತಕನ್ನೆ ಬರುವವ |
ಪಾರುಗಾಣಿಸಲ್ಕೆದೆ ಕೆಡಿಸಿದ |
ಚಾರುಗುಣಗಂಭೀರ ಕಾಶೀನಾಥಶಾಸ್ತ್ರಿವರಾ ||೪||

ವಿನಯವಿಕರಣಗೂಡಿ ಜನರೊಳ |
ಗನುನಯದಿ ನಡೆಯುತ್ತ ಸಂತತ |
ಮನಕೆ ಹರುಷವ ಬೀರುತಲಿಪ ಶಾಂತನೆನಿಸಿರುವ ||
ತನುವ ಸವೆಸುತ ಗುರುವಿನೆಸಕದೆ |
ಮನವ ನಿಲಿಸಿಹ ತತ್ತ್ವನಿಚಯದೆ |
ಚಿನುಮಯಾತ್ಮಕನೀಗೆ ನಿನಗೆ ಚಿರಾಯುಸಂಪದವ ||೫||

ಕಡುಭೀಕರ ವ್ರತದ ಪಾಲಿಸು |
ಕಡಿಗಡಿಗೆತ್ತರ ವಿಘ್ನರಾಶಿಯ ಗೆಲುತಂ |
ಪೊಡವಿಪರೊಲ್ಮೆಯ ಪಡೆದಿಹೆ |
ಘನ ಕಾಶೀನಾಥಶಾಸ್ತ್ರಿವರ್ಯ ಸುಧೈರ್ಯಾ ||೬||

ಕರಹಿಡಿದುಪಡೆಲಿವರೆದು ಮತ್ಸರ |
ಕೆರಹದೋರದ ಪರಿಯಸವಿಸುತ |
ಪರಮಪಂಚಾಚಾರ್ಯಗುರುಗಳ ಚರಣಭಜಿಸುತಲಿ ||
ನಿರಿಗೆ ಮರುಗದೆ ದುರಿತವೆಸಗದೆ |
ಗರುವನಾಗಿಯುದಾರಿಯೆನಿಸುತ |
ಮೆರೆವೆ ಬುಧಜನಮಾನ್ಯ ಕಾಶೀನಾಥಶಾಸ್ತ್ರಿವರಾ ||೭||

ವರವೀರಶೈವಧರ್ಮವು |
ನೆರೆ ರಂಜಿಸುತಿರ್ಪುದೈಸೆ ನಿನ್ನಯ ಕತದಿಂ ||
ಮರುಳರ ಮನಕೇಂ ಬುಧ ನೀ |
ನುರುತರಧರ್ಮವಿವರಣೆಯೆಂಬುದೆ ಜಿಟಿಲ್ಯ ||೮||

ಪಂಡಿತ ಎಸ್. ಎಂ. ಬಸಪ್ಪ,
ಗೌರ್ನಮೆಂಟ್ ಹೈಸ್ಕೂಲ್, ಶಿವಮೊಗ್ಗ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಇನ್ನು, ವೇದವಾಕ್ಯಗಳಲ್ಲಿ ನಿಸರ್ಗಸಿದ್ಧವಾದ ದೈವಿಕ ಪ್ರಭಾವವಿರುವುದರಿಂದ ಪಾಠಮಾತ್ರದಿಂದ ಏನೂ ಫಲವಿಲ್ಲವೆಂದು ಹೇಳಲಾಗುವುದಿಲ್ಲ. ವೇದಾಭ್ಯಾಸವು—

ವೇದಸ್ವೀಕರಣಂ ಪೂರ್ವಂ ವಿಚಾರೋಽಭ್ಯಸನಂ ಜಪಃ ।
ತದ್ದಾನಂ ಚೈವ ಶಿಷ್ಯೇಭ್ಯೋ ವೇದಾಭ್ಯಾಸೋ ಹಿ ಪಂಚಧಾ ॥

ಎಂಬುದಾಗಿ ಐದು ಬಗೆಯಾಗಿದೆ. ಪುಶ್ಪಾಶ್ರಿತಾಖ್ಯದ ಪಡಿನೈದನೆಯ ಪಟಲದಲ್ಲಿ ವಿಧಿಸಲ್ಪಟ್ಟಿರುವಮೇರೆಗೆ, ಆಚಾರ್ಯನ ಬಳಿಯಲ್ಲಿ ಬ್ರಹ್ಮಚರ್ಯಾದಿ ವ್ರತಧಾರಣಪೂರ್ವಕವಾದ ವೇದಗ್ರಹಣವು ಅಧ್ಯಯನವೆನಿಸುವುದು. ಮಂತ್ರಗಳ ಲಕ್ಷಣವನ್ನೂ ಅರ್ಥವನ್ನೂ ಸರಿಯಾಗಿ ಅರಿತುಕೊಳ್ಳುವ ರೀತಿಯು ವಿಚಾರವು; ಚಿಂತನವೇ ಅಭ್ಯಸನವು; ವಿನಿಯೋಗ ಜ್ಞಾನಪೂರ್ವಕವಾಗಿ ವಿಹಿತ ದೇವತೆಯಾನುಸಂಧಾನದೊಡನೆ ಪಠಿಸುವಿಕೆಯೇ ಜಪವು; ಸುಸಂಸ್ಕೃತರೂ ವ್ರತಿಗಳೂ ಆದ ಶಿಷ್ಯರಿಗೆ ವೇದಗ್ರಹಣಮಾಡಿಸುವಿಕೆಯು ಅಧ್ಯಾಪನರೂಪವಾದ ದಾನವೆನಿಸುವುದು. "**ಪಾರಾಯಣಂ ವರ್ತಯೇದ್ಬ್ರಹ್ಮಚಾರೀ ಗುರುಃ ಶಿಷ್ಯೇಭ್ಯಸ್ತದನುವ್ರತೇಭ್ಯಃ ।**" (ಋ. ಪ್ರಾ. ಪ. ೧೫; ೧) ಎಂಬ ವಚನಾನುಸಾರವಾಗಿ ಪಾರಾಯಣವೆಂಬ ಅಧ್ಯಾಪನವೂ ಅಭ್ಯಾಸವರ್ಗದಲ್ಲಿಯೇ ಸೇರಿದೆ. ವೇದಗಳ ಬೇರೆ ಬೇರೆ ಸೂಕ್ತಗಳನ್ನು ಜಪಿಸುವ ಮಾತ್ರದಿಂದಲೂ ಜಾಪಕನಿಗೆ ಅನಿಷ್ಟನಿವೃತ್ತಿ ದ್ವಾರಾ ಇಷ್ಟಫಲಪ್ರಾಪ್ತಿಯಾಗುವುದೆಂದು ಆ ಆ ವೇದವಿಧಾನಗ್ರಂಥಗಳಲ್ಲಿ ನಿರೂಪಿಸಲ್ಪಟ್ಟಿದೆ. ಅವುಗಳಲ್ಲಿ ಋಗ್ವಿಧಾನಾಂತರ್ಗತಗಳಾದ ಎರಡು ಶ್ಲೋಕಗಳನ್ನು ಈ ಹಿಂದೆ ಉಲ್ಲೇಖಿಸಿದ್ದೇವೆ.

ಬ್ರಹ್ಮತೇಜಸ್ಸುಳ್ಳವನೇ ಬ್ರಾಹ್ಮಣನು. ತೇಜಸ್ಸು ಅಂದರೆ ವರ್ಚಸ್ಸು; ಆ ತೇಜಸ್ಸಾದರೋ ಬ್ರಾಹ್ಮಣೋಚಿತವಾದ ವೇದಾಧ್ಯಯನ ರೂಪವಾದುದು. ಒಬ್ಬನು ಎಲ್ಲಾ ವೇದಶಾಖೆಗಳನ್ನೂ ಅಧ್ಯಯನ ಮಾಡಲಾರನೆಂಬುದೇನೋ ನಿಜ; ಆದರೆ ಸ್ವಶಾಖೆಯ ಅಧ್ಯಯನವಾದರೂ ಮಾಡಲ್ಪಡದಿರುವುದು ವಿಹಿತವೇ? ಸ್ವಾಧ್ಯಾಯ (ಸ್ವಶಾಖಾಧ್ಯಯನ) ಪರಿತ್ಯಾಗದಿಂದ ಶೂದ್ರತ್ವವು ಸಂಭವಿಸುವುದು; ಅಂದರೆ ಸ್ವಾಧ್ಯಾಯವಿಮುಖನಾದ ಬ್ರಾಹ್ಮಣನು ಶೂದ್ರತುಲ್ಯನಾಗುವನು. ಇದೇ ಅಭಿಪ್ರಾಯವನ್ನು ಮನುವು (೨-೧೬೮)—'**ಯೋಽನಧೀತ್ಯ ದ್ವಿಜೋ ವೇದಾನ್**' ಎಂಬುದಾಗಿ ಹೇಳಿರುವನಷ್ಟೆ! ಈ ವಾಕ್ಯದಿಂದ ಸ್ವಾಧ್ಯಾಯಹೀನನಾದ ಬ್ರಾಹ್ಮಣನು ಸ್ವಲ್ಪ ಕಾಲದಲ್ಲಿಯೇ ತನ್ನ ಸಂತತಿಯೊಡನೆ ಶೂದ್ರಸಮಾನನಾಗುವನೆಂದು ಹೇಳಲ್ಪಟ್ಟಿರುವುದು ಮನನೀಯವಾಗಿರುವುದು. ಮುಖ್ಯವಾದ ಸ್ವಾಧ್ಯಾಯವನ್ನೇ ದುರ್ಲಕ್ಷಿಸಿ ಅನ್ಯದೀಕ್ಷಾಧ್ಯಯನಾಭ್ಯಾಸೋತ್ಸುಕರಾಗಿರುವ ಬ್ರಾಹ್ಮಣರಲ್ಲಿ '**ಪಿತರಮುಪೇಕ್ಷ್ಯ ಶ್ವಶುರೇ ಗಾಢಾನುರಾಗಃ**' ಎಂಬ ಗಾದೆಯ ಮಾತು ಚೆನ್ನಾಗಿ ಅನ್ವಯಿಸುವುದಲ್ಲವೇ? ಕೆಲವರು ಅಂಗೋಪಾಂಗಗಳಲ್ಲಿ ಪರಿಗಣಿಸಲ್ಪಡುವ ವ್ಯಾಕರಣ, ಜ್ಯೋತಿಷ, ನ್ಯಾಯಾದಿ ಶಾಸ್ತ್ರಗಳಲ್ಲಿ ಯಾವುದಾದರೊಂದನ್ನು ಅಲ್ಪಸ್ವಲ್ಪಮಭ್ಯಾಸಿಸಿ ತಾವದರಿಂದ ಕೃತಾರ್ಥರಾಗುವೆವೆಂದು ಭಾವಿಸಿ ಸ್ವಾಧ್ಯಾಯವಿಮುಖರಾಗುವುದು ವಿಹಿತವಲ್ಲ. ಉತ್ತರ ಕರ್ನಾಟಕದಲ್ಲಿ ಒಬ್ಬಾನೊಬ್ಬ ಪಂಚಾಂಗಕರ್ತನು ಪ್ರತಿವರ್ಷವೂ ತನ್ನಿಂದ ಪ್ರಕಟಿಸಲ್ಪಡುವ 'ಪಂಚಾಂಗ' ದ ಆರಂಭದಲ್ಲಿ ಜ್ಯೋತಿಷಶಾಸ್ತ್ರದ ಪ್ರಾಶಸ್ತ್ಯದ್ಯೋತಕ ಪ್ರಸ್ತಾವನೆಯನ್ನು ಬರೆಯಲು ತೊಡಗಿ ಅದರ ಪುಷ್ಟಿಗಾಗಿ—'ಯಥಾ ಶಿಖಾ ಮಯೂರಾಣಾಂ ನಾಗಾನಾಂ ಮಣಯೋ ಯಥಾ |' ಎಂಬ ಶ್ಲೋಕವನ್ನು ಉಲ್ಲೇಖಿಸಿ ಇದು ಋಗ್ವೇದದ ೭ ನೆಯ ಖಂಡದೊಳಗಿನದೆಂದು ಅಪ್ಪಣೆಕೊಡಿಸಿದ್ದಾನೆ. ಇದು 'ಬ್ರ. ಶ್ರೀ.' ಗಳ ಖಂಡಿತ ವಚನವು! ಸಿದ್ಧಾಂತಿಗಳ ರಾದ್ಧಾಂತದಲ್ಲಿ ಇದೊಂದು ಪ್ರಮಾಣವಾಕ್ಯೋದ್ಧಾರವು! ಋಗ್ವೇದದಲ್ಲಿ 'ಖಂಡ' ವೇ? ಮೊಗಲಾಯಿ! ಈ ದಿವ್ಯಪುರೋಹಿತನಿಂದ ಪ್ರತಿವರ್ಷವೂ ಪ್ರಕಟಿಸಲ್ಪಟ್ಟ ಹತ್ತು ಹನ್ನೆರಡು ವರ್ಷಗಳಿಂದ ಈ ವರೆಗಿನ ಪಂಚಾಂಗ ಪ್ರತಿಗಳಲ್ಲಿ ಆ ಶ್ಲೋಕವು ಋಙ್ಮಂತ್ರರೂಪವಾಗಿಯೇ ಗಟ್ಟಿಗೊಂಡಿರುವುದು ಆ ಪಂಚಾಂಗಕರ್ತನ ದಿಟ್ಟತನ ನಿದರ್ಶಕವಾಗಿರುವುದಲ್ಲವೇ? ಅನ್ಯನೊಬ್ಬ ಮುಂಡೀಸಮಯಮಂಡನಮಿಶ್ರನು, ತನ್ನದೊಂದು ಬರವಣಿಗೆಯಲ್ಲಿ '**ರುದ್ರೇಣಾತ್ತಮಶ್ನನ್ತಿ**' ಎಂಬ ಪ್ರಮಾಣ ವಾಕ್ಯವನ್ನು ಋಗ್ವೇದದೊಳಗಿನದೆಂದು ಉಲ್ಲೇಖಿಸಿದ್ದಾನೆ; ಇದಲ್ಲವೇ ಅವನ ಸರ್ವೋಪಜೀವ್ಯಬುದ್ಧಿವೈಭವದ ಪ್ರಭಾವವು? ಸ್ವಾಧ್ಯಾಯವಿಮುಖರಾಗಿ ಬ್ರಾಹ್ಮಣ್ಯವನ್ನೂ ಕಾಯ್ದುಕೊಳ್ಳಬೇಕೆಂಬವರ ಹಂಬಲವು ಅರ್ಧಜರತೀನ್ಯಾಯವನ್ನು ಅನುಕರಿಸುವುದೆಂದು ಹೇಳಬಾರದೇಕೆ? ಇಂತಹ ಮಹಾಭಾಗರು ಸ್ವಾತ್ಮೋನ್ನತಿಗೆ ಹೇತುಭೂತವಾದ ವೇದವಿದ್ಯೆಯ ಅಭಿರುಚಿಯುಳ್ಳವರಾಗಿರುವುದಾದರೆ ಆ ಪಾಠ್ಯಯಾಸ್ವಾದನೆಯಲ್ಲಿ ಶ್ರದ್ಧೆಯೊಡನೆ ಯಥಾವಿಧಿ ಪ್ರಯತ್ನಿಸುವುದೊಳಿತು. ಅದಿಲ್ಲದೆ ಎಣ್ಣೆಯಲ್ಲಿ ಬಾಲವನ್ನಿಳಿಬಿಟ್ಟು ಸೀಪುವ ಇಲಿಗಳಂತೆ ಏಕೆ ಹೆಣಗಾಡುವರೋ!

ಪ್ರಕೃತವನನುಸರಿಸುವಾ! '**ಸ್ವಾಧ್ಯಾಯೋಽಧ್ಯೇತವ್ಯಃ**' (ತೈ. ಆ. ೧೬) ಎಂಬ ವಿಧಿವಾಕ್ಯಾನುಸಾರವಾಗಿ ಶಿಷ್ಯರಿಗೆ ಸ್ವಾಧ್ಯಾಯದ ಆವಶ್ಯಕತೆಯುಂಟು. ಈ ವಾಕ್ಯವು ಶತಪಥ ಬ್ರಾಹ್ಮಣದಲ್ಲಿಯೂ (೧೧-೫; ೬-೧) ನಿರೂಪಿಸಲ್ಪಟ್ಟಿರುವುದು. ಈ ವಿಧಿವಾಕ್ಯದಲ್ಲಿರುವ 'ಅಧ್ಯೇತವ್ಯಃ' ಎಂಬ ಶಬ್ದವು ಪಾಠಮಾತ್ರ ವಾಚಕವಾಗಿರುವುದರಿಂದ 'ವೇದವನ್ನು ಪಠಿಸತಕ್ಕದ್ದು' ಎಂಬ ಇಷ್ಟೇ ಅರ್ಥವಾಗುವುದಲ್ಲವೇ? ಇದರಿಂದ ವೇದಾರ್ಥಜ್ಞಾನದ ಉಪಯುಕ್ತತೆಯೇ ತೋರುವುದಿಲ್ಲ ' ಎಂಬ ಆಕ್ಷೇಪಕ್ಕೆ ಭಟ್ಟಮತಾನುಯಾಯಿಗಳಾದ ಮೀಮಾಂಸಕರು ಸಮರ್ಪಕವಾದ ಉತ್ತರವನ್ನು ಹೇಳಿ 'ಸ್ವಾಧ್ಯಾಯ' ಶಬ್ದದಲ್ಲಿ 'ಪಠನ' ವೆಂಬರ್ಥವಿರುವಂತೆ 'ಬೋಧನ' ವೆಂಬರ್ಥವೂ ಅಂತರ್ಭೂತವಾಗಿರುವುದೆಂಬ ತಾತ್ಪರ್ಯವನ್ನು ಅಂದವಾಗಿ ವಿವರಿಸಿದ್ದಾರೆ. ವೇದದ ಅರ್ಥಪರಿಜ್ಞಾನವಿಲ್ಲದೆ ಕೇವಲ ಅಧ್ಯಯನರೂಪವಾದ ಭಾರಮಾತ್ರವನ್ನು ಹೊತ್ತಿರುವವನ ಪರಿಯಾದರೋ ಕಾಸೆ ಎಲೆ, ಹೂ, ಹಣ್ಣುಗಳನ್ನು ತಾನು ತಳೆದಿದ್ದರೂ ಅವುಗಳ ರೂಪ, ರಸ, ಗಂಧ, ಸ್ಪರ್ಶೋಪಭೋಗಸುಖವಿಲ್ಲದಿರುವ ವೃಕ್ಷದಂತೆಯೇ ಸರಿ. ಅತ್ತೆಯು ಚಂದನಕಟ್ಟಿಗೆಗಳ ಹೊರೆಯನ್ನೇ ಬೆನ್ನ ಮೇಲೆ ಹೊತ್ತುಕೊಂಡಿದ್ದಾಗಲಾದರೂ ಅದರ ಉಪಭೋಗದ ವಿಷಯವಾಗಿ ತಾನೇನೂ ಸಂಬಂಧಪಡದಿರುವ ಹಾಗೇ ವೇದದ ಅರ್ಥಪರಿಜ್ಞಾನವಿಲ್ಲದೆ ಅಧ್ಯಯನ (ಪಾಠ) ಮಾತ್ರದಿಂದೇ ನಾನು ಕೃತಾರ್ಥನಾಗುವೆನೆಂಬುವವನ ಬಗೆಯಾಗಿರುವುದೆಂಬಭಿಪ್ರಾಯವುಳ್ಳ ವಾಕ್ಯವು ನಿರುಕ್ತದಲ್ಲಿ (೧-೧೮) ಹೀಗಿರುವುದು—"**ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯ ವೇದಂ ನ ವಿಜಾನಾತಿ ಯೋಽರ್ಥಂ ।**" ಮತ್ತು ಋಕ್ಸಂಹಿತೆಯಲ್ಲಿ (೧೦.೭೧-೪)—

ಉತ ತ್ವಃ ಪಶ್ಯನ್ನ ದದರ್ಶ ವಾಚಮುತ ತ್ವಃ ಶೃಣ್ವನ್ನ ಶೃಣೋತ್ಯೇನಾಮ್ । ವಿ ಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥

ವೇದಪಾಠಕರಾದ ಬಹುಜನರಲ್ಲಿ ಯಾವನೋ ಒಬ್ಬನು ಮಾತ್ರ ಮನಃಪೂರ್ವಕವಾಗಿ ಅಧ್ಯಯನಮಾಡುತ್ತಿರಬಹುದು. ಆದರೂ ಅರ್ಥಪರಿಜ್ಞಾನವಿಲ್ಲದೆ ಹೀಗೆ ವೇದವನ್ನು ಪಠಿಸುವದರಿಂದಲೂ ಆ ವೇದಘೋಷವನ್ನು ಶ್ರವಣಮಾಡುವದರಿಂದಲೂ ವೇದವಾಣಿಯು ನಿಜಸ್ವರೂಪವೇ ಚೆನ್ನಾಗಿ ಗೋಚರವಾಗುವುದಿಲ್ಲ. ಸುಕುಸ್ವಾಂತಳಾದ ತಾರುಣ್ಯ ಲಾವಣ್ಯವಿಶಿಷ್ಟಸಾಧ್ವಿಯು ಪತಿಯನ್ನು ಕಾಮಿಸಿ ತನ್ನ ದೇಹವನ್ನು ಅವನಿಗೆ ಮಾಜದೆ ಇಷ್ಟನಾಗುವಹಾಗೆ ತೋರಲು, ಅವಳ ರಮಣನಾದರೋ ಆ ಮನದನ್ನೆಯನ್ನು ಮನವಾರೆ ನೋಡಿ ಮನದ ಬಯಕೆಯನೀಡೇರಿಸಿಕೊಳ್ಳುವಹಾಗೆ, ತುಂಬಾ ಬಟ್ಟೆಯ ಹೊದಿಕೆಯುಳ್ಳ ಆ ಗರತಿಯ ಸುಕುಮಾರಶರೀರವನ್ನು ಅನ್ಯಪುರುಷನು ಯಥಾವತ್ತಾಗಿ ನೋಡಲು ಕೂಡ ಶಕ್ಯವಿಲ್ಲವಷ್ಟೇ? ಅರ್ಥವು ವಾಕ್ಕಿನ ಶರೀರವು. (ವಾಕ್ ಎಂಬ ಶಬ್ದವು ಸ್ತ್ರೀಲಿಂಗವಿದೆ.) ಆ ವಾಣಿಯ ನಿಜಸ್ವರೂಪವನ್ನು ಅರ್ಥಜ್ಞನು ಚೆನ್ನಾಗಿ ಗ್ರಹಿಸುವನಲ್ಲದೆ ಕೇವಲ ಪಾಠಕರು ಸರಿಯಾಗಿ ಕಂಡುಕೊಳ್ಳಲಾರರು.

ಎಂಬುದಾಗಿ ಅರ್ಥಜ್ಞನ ಪ್ರಶಂಸೆಯು ಮಾಡಲ್ಪಟ್ಟಿದೆ. ಒಟ್ಟಿನಲ್ಲಿ ವೇದವಾಕ್ಯ ಅರ್ಥಪರಿಜ್ಞಾನವೂ ಶಕ್ತಿಪ್ರಯುಕ್ತವಾದ ಅನುಷ್ಠಾನವೂ ಮುಂತಾದ ಪರಮಧ್ಯೇಯವುಳ್ಳದ್ದಾಗಿದೆ.

ಛಂದಃಶಾಸ್ತ್ರವು—ಶಿಕ್ಷಾ, ವ್ಯಾಕರಣ, ನಿರುಕ್ತಗಳೆಂಬ ಈ ಮೂರು ಅಂಗಗಳಂತೆ 'ಛಂದಸ್ಸು' ಎಂಬುದೂ ವೇದಾಂಗವೆನಿಸುವುದು. ಋಗ್ವೇದಮಂತ್ರಗಳು ಛಂದೋವಿಶೇಷವಿಶಿಷ್ಟಗಳಾಗಿರುತ್ತವೆ. ಅಂದರೆ ಮಂತ್ರಗಳ ಪಾದಗಳು ಬೇರೆ ಬೇರೆ ಛಂದಸ್ಸುಗಳಲ್ಲಿ ರಚಿಸಲ್ಪಟ್ಟಿವೆ. ಪಾಠಕರಿಗೂ ಕರ್ಮಕರ್ತರಿಗೂ ಆ ಛಂದಸ್ಸುಗಳ ಜ್ಞಾನವು ಅವಶ್ಯವಾಗಿರಬೇಕಾದುದು. ಅವುಗಳ ತಿಳವಳಿಕೆಯಿಲ್ಲದವರು ವೈದಿಕಮಂತ್ರಪಾಠಕ್ಕೂ ಕರ್ಮಾನುಷ್ಠಾನಕ್ಕೂ ಅನರ್ಹರೆಂದು ತಿರಸ್ಕರಿಸಲ್ಪಡುತ್ತಾರೆ—"**ಯೋ ಹ ವಾ ಅವಿದಿತಾರ್ಷೇಯಚ್ಛನ್ದೋದೈವತ ಬ್ರಾಹ್ಮಣೇನ ಮನ್ತ್ರೇಣ ಯಾಜಯತಿ ವಾಽಧ್ಯಾಪಯತಿ ಸ್ಥಾಣುಂ ವರ್ಚ್ಛತಿ ಗರ್ತಂ ವಾ ಪ್ರತಿಪದ್ಯತೆ ವಾ ಪ್ರಮೀಯತೆ ಪಾಪೀಯಾನ್ಭವತಿ, ತಸ್ಮಾದೇತಾನಿ ಮನ್ತ್ರೇ ವಿದ್ಯಾತ್ ।**" ಎಂಬ ಆರ್ಷೇಯ ಬ್ರಾಹ್ಮಣವಚನವು ಋಷಿ ಛಂದಸ್ಸು ದೇವತೆಗಳ ಪರಿಜ್ಞಾನವಿಲ್ಲದೆ ಪಠಿಸಲ್ಪಡುವ ಮಂತ್ರವು ಶ್ರೇಯಸ್ಕರವಾದುದಲ್ಲವೆಂದು ಹೇಳುವುದು. ಶೌನಕಮುನಿಯಾದರೂ (ಅನುಕ್ರ. ೧-೧) ಹೀಗೆ ಹೇಳಿದ್ದಾನೆ—'**ಏತಾನ್ಯವಿದಿತ್ವಾ ಯೋಽಧೀತೇಽನುಬ್ರೂತೆ ಜಪತಿ ಜುಹೋತಿ ಯಜತೇ ಯಾಜಯತೇ ತಸ್ಯ ಬ್ರಹ್ಮ ನಿರ್ವೀರ್ಯಂ ಯಾತಯಾಮಂ ಭವತ್ಯಥಾನ್ತರಾಶ್ವಗರ್ತಂ ವಾ ಪ್ರತಿಪದ್ಯತೇ ಸ್ಥಾಣುಂ ವರ್ಚ್ಛತಿ ಪ್ರಮೀಯತೇವಾ ಪಾಪೀಯಾನ್ಭವತಿ।**'

ಯಾವ ಮನುಷ್ಯನು ಋಷಿಯನ್ನೂ ಛಂದಸ್ಸನ್ನೂ ದೇವತೆಯನ್ನೂ ವಿನಿಯೋಗವನ್ನೂ ಅರಿತುಕೊಳ್ಳದೆ ವೇದದ ಅಧ್ಯಯನ, ಅಧ್ಯಾಪನ, ಜಪ, ಹವನ, ಯಜನ, ಯಾಜನಾದಿಗಳನ್ನು ಮಾಡುವನೋ ಅವನ ವೇದವು ನಿಷ್ಫಲವೂ ದೋಷಯುಕ್ತವೂ ಆಗುವುದು; ಮತ್ತು ಅವನು ಅಶ್ವಗರ್ತವೆಂಬ ನರಕದಲ್ಲಿ ಬೀಳುವನು, ಅಥವಾ ಮೃತನಾದ ಬಳಿಕ ವೃಕ್ಷವೃತ್ತನಾಗುವನು (ಸ್ಥಾವರಯೋನಿಯಲ್ಲಿ ಜನಿಸುವನು); ಇಲ್ಲವೆ ಮನುಷ್ಯಯೋನಿಯಲ್ಲಿ ಹುಟ್ಟಿದರೂ ಅಲ್ಪಾಯುಷ್ಯವುಳ್ಳವನಾಗಿ ಸ್ವಲ್ಪ ದಿವಸಗಳಲ್ಲಿಯೇ ಸಾಯುವನು. ಅಥವಾ ಪಾಪಾತ್ಮನಾದರೂ ಆಗುವನು. ಇನ್ನು, ಯಾವನು ಋಷ್ಯಾದಿಗಳನ್ನರಿತು ವೇದಾಧ್ಯಯನಾದಿಗಳಲ್ಲಿ ಪ್ರವೃತ್ತನಾಗುವನೋ ಅವನಿಗೆ ಯೋಗ್ಯವಾದ ಫಲವು ದೊರಕುವುದು. ಈ ವಿಷಯವಾದರೂ ಅನುಕ್ರಮಣಿಯಲ್ಲಿ ಹೇಳಲ್ಪಟ್ಟಿದೆ. '**ಅಥ ವಿಜ್ಞಾಯೈತಾನಿ ಯೋಽಧೀತೇ ತಸ್ಯ ವೀರ್ಯವದಥ ಯೋಽರ್ಥವಿತ್ತಸ್ಯ ವೀರ್ಯವತ್ತರಂ ಭವತಿ, ಜಪಿತ್ವಾ ಹುತ್ವೇಷ್ಟ್ವಾ ತತ್ಫಲೇನಯುಜ್ಯತೇ ।**' ಯಾವ ದ್ವಿಜನು ಋಷಿ, ಛಂದಸ್ಸು ಮೊದಲಾದವುಗಳನ್ನು ತಿಳಿದು ವೇದಾಧ್ಯಯನವೇ ಮುಂತಾದ ವಿಹಿತಕರ್ಮಗಳನ್ನನುಷ್ಠಿಸುವನೋ ಅವನಿಗೆ ವೇದವು ಫಲಪ್ರದವಾಗಿರುವುದು; ಅವನು ವೇದದರ್ಥವನ್ನೂ ಅರಿತವನಾದರೆ ಅಧಿಕ ಫಲವನ್ನು ಪಡೆವನು. ಹೀಗೆ ಛಾಷ್ಯಾದಿಗಳ ಪರಿಜ್ಞಾನಪೂರ್ವಕವಾಗಿ ವೇದಪಾಠದಲ್ಲಿಯೂ ತದರ್ಥಾನುಸಂಧಾನದಲ್ಲಿಯೂ ಆಸಕ್ತನಾಗಿರುವ ಪುರುಷನಿಂದ ಅನುಷ್ಠಿಸಲ್ಪಡುವ ಜಪ, ಹವನ, ಯಜನಾದಿ ಕರ್ಮಗಳಾದರೂ ಸಫಲಗಳಾಗುತ್ತವೆ.

ವೇದಾಂಗರೂಪವಾದ ಛಂದಃಶಾಸ್ತ್ರದ ಸ್ವರೂಪವನ್ನು ಪ್ರತಿಪಾದಿಸಲುದ್ಯುಕ್ತರಾದ ನಾವು ಈಗ ಋಷ್ಯಾದಿ ಶಬ್ದಗಳ ಅರ್ಥವನ್ನಾದರೂ ವಿವರಿಸುವುದು ಅಕ್ರಮವಲ್ಲವೆಂದು ಭಾವಿಸುತ್ತೇವೆ. 'ಋಷಿ' ಯು ಅಂದರೆ ಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡವನು, ಅಥವಾ ಸ್ಮರಿಸಿದವನು; ಹೀಗೆಯೇ ಕಾತ್ಯಾಯನಮುನಿಯು ಸರ್ವಾನುಕ್ರಮಣಿಯಲ್ಲಿ—'**ದ್ರಷ್ಟಾರ ಋಷಯಃ ಸ್ಮರ್ತಾರಃ ।**' ಎಂದು ಹೇಳಿದ್ದಾನೆ. ಔಪಮನ್ಯವಾಚಾರ್ಯನಾದರೂ ಸ್ವರಚಿತ ನಿರುಕ್ತದಲ್ಲಿ ಹೀಗೆಯೇ ಋಷಿಶಬ್ದದ ನಿರ್ವಚನವನ್ನು ತೋರಿಸಿದ್ದಾನೆಂಬುದನ್ನು ಯಾಸ್ಕನು ತನ್ನ ಗ್ರಂಥದಲ್ಲಿ (ನಿರು. ನೈ. ೩-೧೧) ಉಲ್ಲೇಖಿಸಿದ್ದಾನೆ—'**ಸ್ತೋತ್ರ ಮೃಷಿರ್ಋಷೀದರ್ಶನಾತ್ ಸ್ತೋಮಾನ್ದದರ್ಶೇತ್ಯೌಪಮನ್ಯವಃ ।**' ಎಂಬುದಾಗಿ ಋಷಿಶಬ್ದಾರ್ಥದ ವಿಷಯದಲ್ಲಿ ಔಪಮನ್ಯವಮುನಿಯ ನಿರುಕ್ತಿಯನ್ನು ತೋರಿಸಿ, '**ತದ್ಯೇನಾಂಸ್ತಪಸ್ಯಮಾನಾನ್ಬ್ರಹ್ಮ ಸ್ವಯಂಭ್ವಭ್ಯಾನರ್ಷತ್ತ ಋಷಯೋಽಭವಂಸ್ತದೃಷೀಣಾಮೃಷಿತ್ವಮ್ । (ತೈ. ಆ. ೨-೯) ಇತಿ ವಿಜ್ಞಾಯತೆ**' ಎಂದು ತೈತ್ತಿರೀಯಾರಣ್ಯಕವಾಕ್ಯಪ್ರಮಾಣವನ್ನು ಮುಂದುವರಿಸಿದ್ದಾನೆ. ಈ ಎಲ್ಲ ವಾಕ್ಯಗಳ ತಾತ್ಪರ್ಯವೇನೆಂದರೆ—ಮಂತ್ರಸಮೂಹವನ್ನು ಸಾಕ್ಷಾತ್ಕರಿಸಿಕೊಂಡವರು ಋಷಿಗಳೆಂದು ಹೇಳಲ್ಪಡುತ್ತಾರೆ. ಮೊದಲಿಗರಾದ ಮಹರ್ಷಿಯರು ಸ್ವರೂಪತಃ ನಿರ್ಮಲರಾಗಿರುವವರಾದರೂ ಪುನಃ ತಪಸ್ಸನ್ನಾಚರಿಸಲು ಅದರಿಂದ ತುಷ್ಟನಾದ ಪರಶಿವನು (ಸ್ವತಃಸಿದ್ಧನಾದ ಪರಬ್ರಹ್ಮನು) ಆ ಮುನಿಗಳನ್ನು ಅನುಗ್ರಹಿಸಲಭಿಮುಖನಾಗಿ ಸ್ವಸ್ವರೂಪಾತ್ಮಕವಾದ ಸ್ವಾತ್ಮೀಯಾನುಗ್ರಹಶಕ್ತಿ ಕಿರಣಗಳನ್ನು ಅವರ ಹೃದಯಗಳಲ್ಲಿ ವ್ಯಾಪಿಸುವಂತೆ ಮಾಡಿದನು. ಇಂತು ಸಾಕ್ಷಾತ್ಪರಶಿವನಿಂದನುಗೃಹೀತರಾದ ಆ ಪುರಾತನ ಮುನಿಗಳೇ ಋಷಿಗಳೆಂದು ಹೇಳಿಸಿಕೊಳ್ಳಲ್ಪಡತಕ್ಕವರಾದರು. ಅದುಕಾರಣವೇ ಅಂತಿರುವವರಾದ ಅನ್ಯಮುನಿಗಳಾದರೂ ಈ ಹೇತುವಿನಿಂದೇ ಋಷಿತ್ವವುಂಟಾಗಿದೆ. ಅಂದರೆ ಈ ಕಲ್ಪದ ಆದಿಯಲ್ಲಿ ಆವಿರ್ಭೂತರಾದ ಋಷಿಗಳು ಪೂರ್ವಕಾಲದಲ್ಲಿ ಅನುಭೂತವಾದ ಪರಾಪರವಿದ್ಯಾತ್ಮಕ ವೇದ (ಜ್ಞಾನ) ವನ್ನು ಪರಶಿವಾನುಗ್ರಹದಿಂದ ಸುಪ್ತಪ್ರಬುದ್ಧನ್ಯಾಯದಂತೆ ಪ್ರಬೋಧಜಾಗರಣದಿಂದ ಅನುಭವಗಮ್ಯವಾಗುವ ಹಾಗೆ ಸ್ವಾತಿಶಯಕ್ಕೆ ತಂದುಕೊಂಡರು. ಅವರೇ ವೇದದೊಳಗಿನ ಆ ಆ ಮಂತ್ರಗಳ ಪ್ರವರ್ತಕರಾದ ಋಷಿಗಳು. ಈಗಲೂ ಸ್ಮರಣಾರ್ಥವಾಗಿ ಅವರ ಹೆಸರುಗಳು ಮಂತ್ರಗಳ ಆದಿಯಲ್ಲಿ ಉಚ್ಚರಿಸಲ್ಪಡುತ್ತವೆ. ಶತಪಥಬ್ರಾಹ್ಮಣದಲ್ಲಿ—'**ಪ್ರಜಾಪತಿಃ ಪ್ರಥಮಾಂ ಚಿತಿಮಪಶ್ಯತ್ಪ್ರಜಾಪತಿರೇವ ತಸ್ಯ ಆರ್ಷೇಯಮ್ ।**' ಇತ್ಯಾದಿ ವಾಕ್ಯಗಳಿಂದ ಮಂತ್ರೋಚ್ಚಾರಾದಿಗಳಲ್ಲಿ ಆ ಆ ಮಂತ್ರಪ್ರವರ್ತಕರಾದ ಋಷಿಗಳ ಜ್ಞಾನವು ಆವಶ್ಯಕವಾದುದೆಂಬಭಿಪ್ರಾಯವು ಪ್ರತಿಪಾದಿಸಲ್ಪಟ್ಟಿದೆ. ಅದ್ದರಿಂದ ಆರ್ಷೇಯ (ಋಷಿಯೊಡನೆ ಸಂಬಂಧ) ವಿಲ್ಲದುದು ಮಂತ್ರವೇ ಅಲ್ಲ. '**ಯೇನ ಯ ಋಷಿಣಾ ದೃಷ್ಟೋ ಮನ್ತ್ರಃ ಸಿದ್ಧಿಶ್ಚ ತೇನ ವೈ ಮನ್ತ್ರೇಣ ತಸ್ಯ ಸಂಪ್ರೋಕ್ತ ಋಷಿಭಾವಸ್ತದಾತ್ಮಕಃ ।**' ಎಂಬ ವಾಕ್ಯಾನುಸಾರವಾಗಿ ಯಾವ ಮಂತ್ರವು ಯಾವ ಋಷಿಯಿಂದ ಸಾಕ್ಷಾತ್ಕರಿಸಲ್ಪಟ್ಟಿರುವುದೋ ಆ ಮಂತ್ರವನ್ನು ತತ್ಪ್ರವರ್ತಕನಾದ ಆ ಋಷಿಯ ಸ್ಮರಣಪೂರ್ವಕವಾಗಿಯೇ ಜಪಾದಿ ಕ್ರಿಯೆಗಳಲ್ಲಿ ವಿನಿಯೋಗಿಸತಕ್ಕದ್ದು. ಈ ಸಂಗತಿಯನ್ನು ಸಂಪ್ರದಾಯಶುದ್ಧರು ಮರೆಯಕೂಡದು.

ಇನ್ನು 'ದೇವತಾ' ಅಂದರೆ ಮಂತ್ರಪ್ರತಿಪಾದನೀಯ ವಿಷಯವು. ದೇವತೆಯು ಅಥವಾ ದೇವರು ಎಂಬಿವೆರಡೂ ಶಬ್ದಗಳ ಅರ್ಥವು ಒಂದೇ ಆಗಿರುವುದು. ಋಗ್ವೇದದ ಪ್ರಥಮಾಷ್ಟಕದೊಳಗಿನ ೩೪ನೆಯ ಸೂಕ್ತಾಂತರ್ಗತವಾದ ೧೧ನೆಯ ಮಂತ್ರದಲ್ಲಿಯೂ ಅದೇ ಅಷ್ಟಕದ ೪೫ ನೆಯ ಸೂಕ್ತದ ೨ ನೆಯ ಮಂತ್ರದಲ್ಲಿಯೂ ೩೩ ದೇವತೆಗಳ ಉಲ್ಲೇಖವಿದೆ. ತೈತ್ತಿರೀಯ ಸಂಹಿತೆಯಲ್ಲಿ (೧-೪-೧೦-೧) ಆಕಾಶಪೃಥಿವಿಗಳಲ್ಲಿಯೂ ಅಂತರಿಕ್ಷದಲ್ಲಿಯೂ ೧೧-೧೧ ದೇವತೆಗಳಿರುತ್ತವೆಂದು ನಿರೂಪಿಸಲ್ಪಟ್ಟಿದೆ. ಇರಲಿ.

ಕೆಲವು ಮಂತ್ರಗಳಲ್ಲಿ ಸ್ಥಾವರಪದಾರ್ಥಗಳಿಗೂ ದೇವತಾಭಾವವು ಸೂಚಿಸಲ್ಪಡುವುದು. ಇದರಿಂದ ಅಚೇತನ ವಸ್ತುಗಳಿಗೂ ದೇವತ್ವವಿರುವುದೆಂದು ಹೇಳಲ್ಪಟ್ಟಂತಾಗುವುದಲ್ಲವೇ? ಎಂದು ಶಂಕಿಸಕೂಡದು. ಯಾವ ಮಂತ್ರದಿಂದ ಯಾವುದು ಸ್ತುತಿಸಲ್ಪಡುವುದೋ ಆ ವಸ್ತುವು ಆ ಮಂತ್ರದ ದೇವತೆಯು. ಅದ್ದರಿಂದ ತಾದಾತ್ಮ್ಯಚೇತನ ಪದಾರ್ಥಗಳಿಗೂ ದೇವತ್ವವು ಸಂಭವಿಸುವುದು. ಅಥವಾ '**ಮೃದಬ್ರವೀತ್**' '**ಆಪೋಽಬ್ರುವನ್**' ಇತ್ಯಾದಿ ಶ್ರುತಿವಾಕ್ಯಗಳಿಂದಲೂ '**ಅಭಿಮಾನಿವ್ಯಪದೇಶಸ್ತು**' (೨-೧-೧-೫) ಎಂಬ ವ್ಯಾಸಸೂತ್ರದಿಂದಲೂ ಆ ಆ ವಸ್ತ್ವಭಿಮಾನಿದೇವತೆಗಳು ಅಂಗೀಕರಿಸಲ್ಪಡುತ್ತಾರೆ. ಯಾಸ್ಕೀಯನಿರುಕ್ತದಲ್ಲಿ (ದೈ. ೧-೫)—'**ಅಪಿ ಹ್ಯದೇವತಾ ದೇವತಾವತ್ ಸ್ತೂಯನ್ತೇ ಯಥಾಶ್ವಪ್ರಭೃತೀನ್ಯೋಷಧಿಪರ್ಯನ್ತಾನಿ ।**' ಅಶ್ವ ಮೊದಲಾಗಿ ಔಷಧಿಪರ್ಯಂತಗಳಾದ ಕೆಲವು ವಸ್ತುಗಳು ದೇವತೆಗಳಲ್ಲವಾದರೂ ದೇವತೆಗಳಂತೆ ಸ್ತುತಿಸಲ್ಪಡುವುವೆಂದು ಹೇಳಲ್ಪಟ್ಟಿದೆ.

ಪ್ರಕೃತದಲ್ಲಿ 'ಛಂದಸ್ಸು' ಎಂಬುದರ ಸ್ವರೂಪವಿಚಾರವೇ ಮುಖ್ಯವಾದುದಷ್ಟೇ? 'ಛನ್ದಯತಿ—ಆಹ್ಲಾದಯತೀತಿ ಛನ್ದಃ; ಛಾದಯತಿ—ರಕ್ಷತೀತಿ ಛನ್ದಃ |' ಎಂದು ಛಂದಃಶಬ್ದದ ನಿರ್ವಚನವಿರುವುದು. ಯಾಸ್ಕನು 'ಛನ್ದಃ' ಎಂಬ ಶಬ್ದದರ್ಥವನ್ನು ಹೀಗೆ ತೋರಿಸಿದ್ದಾನೆ—"**ಮನ್ತ್ರಾ ಮನನಾತ್, ಛಂದಾಂಸಿ ಛಾದನಾತ್, ಸ್ತೋಮಃ ಸ್ತವನಾತ್, ಯಜುರ್ಯಜತೇರಿತ್ಯಾದಿ ।**' (ದೈ. ೧-೧೨) ಮನನ ಮಾಡುವುದರಿಂದ ಅಕಾಮ್ಯೇಷ್ಟತೆಯನ್ನುಂಟುಮಾಡುವ ವರ್ಣಗಳಿಗೆ ಮಂತ್ರಗಳೆಂದೂ, ಯಾವುಗಳಿಂದ ವಿಧ್ಯುಕ್ತಕರ್ಮಗಳು ರಕ್ಷಿಸಲ್ಪಡುವುವೋ ಅವುಗಳಿಗೆ ಛಂದಸ್ಸುಗಳೆಂದೂ, ಯಾವುದರಿಂದ ದೇವತೆಯು ಸ್ತುತಿಸಲ್ಪಡುವುದೋ ಅದನ್ನು ಸ್ತೋಮವೆಂದೂ, ಯಾವುದರಿಂದ ಯಜ್ಞವು ಮಾಡಲ್ಪಡುವುದೋ ಅದನ್ನು ಯಜುಸ್ಸೆಂದೂ ಹೇಳುತ್ತಾರೆ.

ಮಂತ್ರಗಳ ಛಂದೋಜ್ಞಾನವನ್ನು ಕಾತ್ಯಾಯನಾದಿ ಪ್ರಣೀತ ಸರ್ವಾನುಕ್ರಮಸೂತ್ರಗಳಿಂದಲೂ ಪಿಂಗಲಸೂತ್ರಾದಿ ಗ್ರಂಥಗಳಿಂದಲೂ ಅರಿತುಕೊಳ್ಳತಕ್ಕದ್ದು. ಕಾತ್ಯಾಯನಮುನಿಯು ಬರೆದ ಸರ್ವಾನುಕ್ರಮಣಿಯಲ್ಲಿ (೧-೧)—

"**ಬೃಹತೀ ಪಂಕ್ತಿ ತ್ರಿಷ್ಟುಬ್ಜಗತ್ಯತಿಜಗತೀ ಶಕ್ವರ್ಯತಿಶಕ್ವರ್ಯಷ್ಟ್ಯತ್ಯಷ್ಟಿ ಧೃತ್ಯತಿಧೃತಯಃ ಕೃತಿಪ್ರಕೃತ್ಯಾಕೃತಿವಿಕೃತಿ ಸಂಕೃತ್ಯಭಿಕೃತ್ಯುತ್ಕೃತಯಶ್ಚತುರ್ವಿಂಶತ್ಯಕ್ಷರಾದೀನಿ ಚತುರುತ್ತರಾಣ್ಯಾನಾಧಿಕೇನೈಕೇನ ನಿಚೃದ್ಭೂರಿಜೌ ದ್ವಾಭ್ಯಾಂ ವಿರಾಟ್ ಸ್ವರಾಜಾವಿತ್ಯಾದಿ ।**"

ಎಂಬುದಾಗಿ ೨೧ ಛಂದಸ್ಸುಗಳು ನಿರೂಪಿಸಲ್ಪಟ್ಟಿವೆ. ಅವುಗಳನ್ನು ಅಕ್ಷರಸಂಖ್ಯೆಯೊಡನೆ ಇಲ್ಲಿ ಬರೆದು ತೋರಿಸುತ್ತೇವೆ—

ಗಾಯತ್ರೀ ಛಂದಸ್ಸು	೨೪	ಅಕ್ಷರಗಳುಳ್ಳದ್ದು
ಉಷ್ಣಿಕ್	೨೮	,,
ಅನುಷ್ಟುಪ್	೩೨	,,
ಬೃಹತೀ	೩೬	,,
ಪಂಕ್ತಿ	೪೦	,,
ತ್ರಿಷ್ಟುಪ್	೪೪	,,
ಜಗತೀ	೪೮	,,
ಅತಿಜಗತೀ	೫೨	,,
ಶಕ್ವರೀ	೫೬	,,
ಅತಿಶಕ್ವರೀ	೬೦	,,
ಅಷ್ಟಿ	೬೪	,,
ಅತ್ಯಷ್ಟಿ	೬೮	,,
ಧೃತಿ	೭೨	,,
ಅತಿಧೃತಿ	೭೬	,,
ಕೃತಿ	೮೦	,,
ಪ್ರಕೃತಿ	೮೪	,,
ಆಕೃತಿ	೮೮	,,
ವಿಕೃತಿ	೯೨	,,
ಸಂಕೃತಿ	೯೬	,,
ಅಭಿಕೃತಿ	೧೦೦	,,
ಉತ್ಕೃತಿ	೧೦೪	,,

ಈ ಪ್ರಕಾರವಾಗಿ ೨೪ ಅಕ್ಷರಗಳಿಂದ ಮೊದಲುಮಾಡಿ ೧೦೪ ಅಕ್ಷರಗಳವರೆಗಿರುವ ಗಾಯತ್ರೀ ಮೊದಲಾದ ೨೧ ಛಂದಸ್ಸುಗಳಿರುತ್ತವೆ. ಇವುಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದು ಅಕ್ಷರವು ಕಡಿಮೆಯಾಗುವುದರಿಂದ 'ನಿಚೃತ್' ಎಂಬ ವಿಶೇಷಣವೂ, ಒಂದು ಅಕ್ಷರವು ಹೆಚ್ಚಾಗುವುದರಿಂದ 'ಭೂರಿಜ್' ಎಂಬ ವಿಶೇಷಣವೂ, ಎರಡಕ್ಷರಗಳು ಕಡಿಮೆಯಾಗುವುದರಿಂದ 'ವಿರಾಟ್' ಎಂಬ ವಿಶೇಷಣವೂ, ಎರಡಕ್ಷರಗಳು ಅಧಿಕವಾಗುವುದರಿಂದ 'ಸ್ವರಾಟ್' ಎಂಬ ವಿಶೇಷಣವೂ ಸೇರಿಸಲ್ಪಡುವುವೆಂಬುದೇ ಮುಂತಾದ ಹೆಚ್ಚಿನ ವಿಷಯಗಳು ಸರ್ವಾನುಕ್ರಮಣಿಯಲ್ಲಿಯೂ ಪಿಂಗಲಸೂತ್ರಗ್ರಂಥದಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವುದರಿಂದ ಜಿಜ್ಞಾಸುಗಳು ಆ ಗ್ರಂಥಗಳನ್ನವಲೋಕಿಸಬಹುದು.

ಪಿಂಗಲಮುನಿಯಿಂದ ರಚಿಸಲ್ಪಟ್ಟ ಛಂದಃಶಾಸ್ತ್ರವು ಎಂಟು ಅಧ್ಯಾಯಗಳುಳ್ಳದ್ದಾಗಿದೆ. ಇದಕ್ಕೆ ಹಲಾಯುಧನು ವೃತ್ತಿಯನ್ನು ಬರೆದಿದ್ದಾನೆ. ಇದರಲ್ಲಿ ಗಾಯತ್ರೀ ಮೊದಲಾದ ಛಂದಸ್ಸುಗಳ ವಿವೇಚನೆಯಿದೆ. ಮೊದಲನೆಯ ಮೂರು ಅಧ್ಯಾಯಗಳಲ್ಲಿ ಗಾಯತ್ರೀ, ಉಷ್ಣಿಕ್ ಮೊದಲಾದ ವೈದಿಕಛಂದಸ್ಸುಗಳೂ 'ಅಥಲೌಕಿಕಮ್' ಎಂಬ ಸೂತ್ರ ಮೊದಲಾಗಿ ಮುಂದಿನ ಐದು ಅಧ್ಯಾಯಗಳಲ್ಲಿ ಪುರಾಣೇತಿಹಾಸಕಾವ್ಯನಾಟಕಾದಿಗಳಲ್ಲಿ ಉಪಯುಕ್ತಗಳಾದ ಛಂದಸ್ಸುಗಳೂ ಪ್ರಸಂಗಾನುಗುಣವಾಗಿ ನಿರೂಪಿಸಲ್ಪಟ್ಟಿವೆ. ಮುಖ್ಯವಾಗಿ '**ಗಾಯತ್ರ್ಯಾ ವಸವಃ**' ಎಂಬೀ ಮೊದಲಾದ ಸೂತ್ರಗಳಿಂದ ಛಂದಸ್ಸುಗಳ ಪ್ರತಿಯೊಂದು ಪಾದದಲ್ಲಿರುವ ಅಕ್ಷರಸಂಖ್ಯೆಯು ನಿರ್ಣಯಿಸಲ್ಪಡುವುದರಿಂದ ವೇದ ಋಚೆಗಳ ವೃತ್ತಗಳಿಗೆ ಸಂಬಂಧಿಸಿದ ವಿಚಾರವನ್ನು ಅರಿತುಕೊಳ್ಳಲು ಛಂದೋವಿಧಾನವು ಸಾಧನವಾಗಿರುವುದೆಂದು ತಿಳಿಯತಕ್ಕದ್ದು. (ಸಶೇಷ.)

ಆರೋಗ್ಯರಕ್ಷಣೆ.

ಲೇಖಕ:—ವಾಗೀಶಶಿವಾಚಾರ್ಯ ಬೃಹನ್ಮಠ ಮುದೇನೂರು ಶ್ರೀ ಕ್ಷೇತ್ರಕಾಶೀ

(ಹಿಂದಿನಿಂದ ಮುಂದುವರಿದುದು.)

ಆರೋಗ್ಯರಕ್ಷಣೆಗೆ ಆಹಾರಪರಿಜ್ಞಾನವು ಅತ್ಯಾವಶ್ಯಕವಾದುದೆಂಬುದು ಸರಿಯಷ್ಟೆ? ಇನ್ನೀ ಆಹಾರವಿಷಯವನ್ನು ಧರ್ಮದೃಷ್ಟಿಯಿಂದ ಸ್ವಲ್ಪ ವಿಚಾರಮಾಡೋಣ.—ಮಾನವಪ್ರಾಣಿಗೆ ಆಹಾರವು ಒಂದು ಪರಮಾವಶ್ಯಕವಾದ ವಸ್ತುವು. "ಅನ್ನಂ ಬ್ರಹ್ಮೇತಿ ವ್ಯಜಾನಾತ್, ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ" ಎಂಬ ಶ್ರುತಿಗನುಸಾರವಾಗಿ ನಮ್ಮ ಶರೀರವು ಅನ್ನದ ಎರಡನೆಯ ರೂಪವಾಗಿದೆ. ಕಾರಣವು ಯಾವ ಗುಣ ಅಥವಾ ಯಾವ ಶಕ್ತಿಯಿಂದೊಡಗೂಡಿರುವುದೋ ಕಾರ್ಯವೂ ಅದೇ ಗುಣ ಅದೇ ಶಕ್ತಿಯುಳ್ಳದಾಗುವಂತೆ ನಾವು ಉಣ್ಣುವ ಅನ್ನವು ಹೇಗಿರುವುದೋ ಅದಕ್ಕನುಸಾರವಾಗಿಯೇ ಶೌರ್ಯ, ವೀರ್ಯ ರೂಪಗಳು ನಮ್ಮ ಶರೀರದಲ್ಲಿ ಉತ್ಪನ್ನವಾಗುವುವು. ಪೂರ್ವಿಕರು ಆಹಾರವಸ್ತುಗಳನ್ನು ಸಾತ್ವಿಕ, ರಾಜಸ, ತಾಮಸಗಳೆಂಬುದಾಗಿ ಮೂರುಭಾಗಮಾಡಿದ್ದಾರೆ. ಸತ್ವರಜಸ್ತಮೋಗುಣಮಯವಾದ ದೇಹವು ಈ ಮೂರುತೆರನಾದ ಆಹಾರಸಮ್ಮೇಲನದಿಂದ ಪರಿಪುಷ್ಟವಾಗುವುದು. ಕೇವಲ ಸಾತ್ವಿಕಾಹಾರದಿಂದಲೋ ಅಥವಾ ರಾಜಸ ತಾಮಸಾಹಾರಗಳಿಂದಲೋ ಒಂದೊಂದರಿಂದಲೇ ಶರೀರವು ಸ್ವಸ್ಥವಾಗಿರುವುದು ಕಡಿಮೆ. ಹೀಗಾಗಿ ಯಾವ ಪದಾರ್ಥವನ್ನು ಊಟಮಾಡುವೆವೋ ಆ ಪದಾರ್ಥಕ್ಕೆ ಸರಿಯಾದ ಗುಣಗಳೇ ಶರೀರ ಮನಸ್ಸುಗಳಲ್ಲಿ ತುಂಬಿಕೊಳ್ಳುವವಾದುದರಿಂದ ನಮ್ಮ ಸನಾತನ ಹಿಂದೂಶಾಸ್ತ್ರವು ಭೋಜನವಸ್ತುಸಂಬಂಧವಾಗಿ ಬಹು ಕಠಿಣವಾದ ವಿಧಿನಿಷೇಧಗಳ ವ್ಯವಸ್ಥೆಯನ್ನು ಮಾಡಿದೆ.

ಮಾನವಶರೀರಕ್ಕೆ ಪಿತೃಪಿತಾಮಹ ಮಾತೃ ಮಾತಾಮಹ ವಂಶದ ಒಂದು ಪರಂಪರೆಯುಂಟು. ಅದಕ್ಕಾಗಿಯೇ ನಮ್ಮ ವಂಶದ ಪೂರ್ವಿಕರು ಆಚರಿಸಿಕೊಂಡುಬಂದ ಆಹಾರಪದ್ಧತಿಯನ್ನು ನಾವೂ ಅನುಸರಿಸಬೇಕಾಗುವುದು; ಅದಕ್ಕೆ ವಿಪರೀತವಾಗಿ ನಡೆದರೆ ನಮ್ಮ ಶರೀರವು ತೇಜೋಮಯವೂ, ಸುಶಕ್ತಿಯುಕ್ತವೂ ಪುಷ್ಟವೂ, ರೋಗರಹಿತವೂ ಆಗಿರಲು ಸಾಧ್ಯವಿಲ್ಲ. ಶಾಸ್ತ್ರವು ನಿಷೇಧಮಾಡಿರುವ ಆಹಾರವನ್ನು ತಿನ್ನುವುದರಿಂದ ಶರೀರವು ಕೆಡುವುದಲ್ಲದೆ ಆಯುಷ್ಯವೂ ಕಡಿಮೆಯಾಗುವುದು ಸತ್ಯ. ಅದುದರಿಂದ ಹಿಂದೂಶಾಸ್ತ್ರದ ಹಾಗೂ ಹಿಂದೂಸಮಾಜದ ವಿಧಿನಿಷೇಧಗಳನ್ನೊಪ್ಪಿಕೊಂಡು, ಉಣ್ಣುವ ಪದಾರ್ಥ, ಎರಡನೆಯವರ ಎಂಜಲು, ಪಾತ್ರೆ, ಜಾತಿ ಮುಂತಾದವುಗಳ ಕಡೆಗೆ ವಿಶೇಷ ದೃಷ್ಟಿಯಿಟ್ಟು ನಡೆಯುವುದು ಉಚಿತವಾಗಿದೆ.

ಪ್ರತಿಯೊಂದು ಜನಾಂಗದಿಂದ ತಯಾರಿಸಲ್ಪಟ್ಟ ಅನ್ನವನ್ನು ಪ್ರತಿಯೊಂದು ಜನಾಂಗದೊಡನೆ ಬೆರೆತು, ಅಥವಾ ಪ್ರತಿಯೊಂದು ಸ್ಥಾನದಲ್ಲಿ ಕುಳಿತು ಉಣ್ಣುವುದು ಎಂದಿಗೂ ಯೋಗ್ಯವಲ್ಲ. ನಾವು ಹೀಗೆ ಹೇಳುವುದು ಯಾವುದೊಂದು ಜಾತಿ, ಅಥವಾ ಜನಾಂಗದೊಡನೆ ದ್ವೇಷಮಾಡಬೇಕೆಂದಲ್ಲ. ಒಂದುವೇಳೆ ದ್ವೇಷವೆಂದೇ ತಿಳಿದುಕೊಂಡರೆ—ಬ್ರಾಹ್ಮಣರೂ ಕೂಡ ಊಟಮಾಡುವಾಗ ಹೆಂಡರು ಮಕ್ಕಳೇ ಮುಂತಾದವರನ್ನು ಮುಟ್ಟಬಾರದೆಂತಲೂ, ಮುಟ್ಟಿಕೊಂಡರೆ ಅಲ್ಲಿಗೇ ಊಟವನ್ನು ಮುಗಿಸಬೇಕೆಂತಲೂ, ಹೀಗೆಯೇ ಬ್ರಾಹ್ಮಣನು ಊಟಮಾಡುವಾಗ ಶೂದ್ರಸ್ಪರ್ಶದಿಂದ ಭೋಜನವಸ್ತುವು ಸ್ವೀಕಾರಕ್ಕೆ ಅಯೋಗ್ಯವಾಗುವುದೆಂತಲೂ ಶಾಸ್ತ್ರವು ಹೇಳುತ್ತಿದೆ. ಎಂದಮೇಲೆ ಇದನ್ನೂ ದ್ವೇಷವೆಂದೇ ತಿಳಿಯಬೇಕಾದೀತು. ಯಥಾರ್ಥವಿಷಯವು ಹೀಗಿದ್ದರೂ ಮತ್ಸರಬುದ್ಧಿಯುಳ್ಳ ಜನರು ಇದನ್ನೇ ವಿಪರೀತವಾಗಿ ತಿಳಿದುಕೊಂಡು, ಜಾತಿಜಾತಿಗಳಲ್ಲಿ ವಿರೋಧವನ್ನುಂಟುಮಾಡುವುದು ತರವಲ್ಲ. ಶಾಸ್ತ್ರದೃಷ್ಟಿಯು ಬಹು ಸೂಕ್ಷ್ಮವಾದುದು, ಅಂತೆಯೇ ಮನುಷ್ಯನು ಅಸಮರ್ಥನಾಗಿದ್ದರೆ ತನ್ನ ವರ್ಗದವರು ಮಾಡಿದುದನ್ನು ಊಟಮಾಡುವವನಾತು ಬೇರೆ, ಆದರೆ ತನ್ನ ಸಲುವಾಗಿ ಅಡಿಗೆಯನ್ನು ತಾನೇ ಮಾಡಿಕೊಳ್ಳುವುದುತ್ತಮವೆಂದು ಹೇಳುವ ದಕ್ಷಸ್ಮೃತಿ ಧರ್ಮಶಾಸ್ತ್ರವು ಹಿಂದೆ ಸರಿದಿಲ್ಲ; ಆದುದರಿಂದ ಯಾರು ದುರಾಚಾರವುಳ್ಳವರೋ, ಯಾರು ತಮೋಗುಣವುಳ್ಳವರೋ, ಯಾರು ನಾನಾಪ್ರಕಾರವಾದ ದೂಷಿತವ್ಯಾಧಿಯುಳ್ಳವರೋ ಅಂತಹ ಜನರು ಮಾಡಿದ ಅಥವಾ ಮುಟ್ಟಿದ ಅನ್ನವನ್ನು ಊಟಮಾಡಬಾರದು; ಮಾಡಿದರೆ ಆ ಕೂಡಲೇ ದೂಷಿತಪರಮಾಣುಗಳು ಹುಟ್ಟಿ ಊಟಮಾಡುವವನ ಶರೀರದಲ್ಲಿ ಹೊಕ್ಕು ಸ್ವಾಸ್ಥ್ಯವನ್ನು ಕೆಡಿಸಿಬಿಡುವುವು. ಈ ಸಂಸಾರದಲ್ಲಿ ಒಳ್ಳೆಯವರಾರು ಕೆಟ್ಟವರಾರೆಂಬುದನ್ನು ನಿಶ್ಚಯಮಾಡುವುದು ಬಹುಕಠಿಣವಾದ ಕೆಲಸ. ಒಂದುವೇಳೆ ಬ್ರಾಹ್ಮಣನು ಬ್ರಾಹ್ಮಣನಲ್ಲವೆಂತಲೂ, ಚಂಡಾಲನು ಚಂಡಾಲನಲ್ಲವೆಂತಲೂ ಹೇಳಿಸಿಕೊಳ್ಳಬಹುದು, ಆದರೆ ಹೊರಗಿನ ಆಚಾರವಿಚಾರಗಳಿಂದ ಅಥವಾ ಆಕಾರಸ್ವಭಾವಗಳಿಂದ ಬ್ರಾಹ್ಮಣನನ್ನು ಚಂಡಾಲನನ್ನಾಗಿಯೂ, ಚಂಡಾಲನನ್ನು ಬ್ರಾಹ್ಮಣನನ್ನಾಗಿಯೂ ಯಾರೂ ಸಾಧಿಸಲಾಗುವುದಿಲ್ಲ. ಸಣ್ಣ ದೊಡ್ಡ ಎಲ್ಲಾ ವರ್ಣಗಳಲ್ಲಿಯೂ ಪವಿತ್ರಚಿತ್ತವುಳ್ಳ, ಒಳ್ಳೆಯ ಅಭಿಪ್ರಾಯವುಳ್ಳ, ಜಿತೇಂದ್ರಿಯರಾದ ಸಜ್ಜನರು ಇದ್ದೇ ಇರುವರು; ಆದರೂ ಬ್ರಾಹ್ಮಣನಾದವನು ಈತನು ಸತ್ವಗುಣಸಂಪನ್ನನೆಂದು ತಿಳಿದು ಚಂಡಾಲನು ಬೇಯಿಸಿದ ಅಥವಾ ಮುಟ್ಟಿದ ಅನ್ನವನ್ನು ಊಟಮಾಡಲಪೇಕ್ಷಿಸುವುದು ಮಹಾಪರಾಧವು.

ಮಾತೃ ಪಿತೃ ಕುಲವು ಯಾವುದಾದರೂ ಅಯಾ ವರ್ಣದವರಿಗೆ ಅದು ಪವಿತ್ರವಾದುದೇ ಸರಿ! ಇದನ್ನರಿಯದ ಜನರು ನಿಮ್ಮ ವರ್ಣವಾವುದೆಂದು ಯಾರಾದರೂ ಕೇಳಿದರೆ ಅವರ ಮೇಲೆ ಕೋಪಗೊಂಡು ಯಾವ ವರ್ಣದಲ್ಲೇನಿದೆ? ನಾನೂ ಬ್ರಾಹ್ಮಣನೇ ಎಂದು ಉತ್ತರ ಕೊಡುತ್ತಿರುವುದು ಇದೀಗ ಎಲ್ಲೆಲ್ಲಿಯೂ ಕಂಡುಬರುತ್ತಿದೆ; ತಾವು ಹುಟ್ಟಿದ ಕುಲವು ಕೆಟ್ಟದೆಂದು ತಿಳಿದುಕೊಂಡಿರುವುದೇ ಹೀಗೆ ಉತ್ತರ ಕೊಡುವುದಕ್ಕೆ ಮೂಲಕಾರಣವಾಗಿದೆ. ಆದುದರಿಂದ ಯಾರೂ ಹಾಗೆ ತಿಳಿದುಕೊಳ್ಳದೆ ಧರ್ಮಶಾಸ್ತ್ರರೀತ್ಯಾ ಪೂರ್ವಪರಂಪರಾಗತವಾದ ತಮ್ಮ ತಮ್ಮ ಜಾತಿ ಅಥವಾ ಜಾತಿರೂಪವಾದ ಮೇರೆಯೊಳಗಿರುವುದು ಎಲ್ಲಾ ರೀತಿಯಿಂದಲೂ ಸುಖಪ್ರದವಾಗಿದೆ. ಹಾಗೆಯೇ ವ್ಯಭಿಚಾರಿ, ಮದ್ಯಾಸಕ್ತ ಮುಂತಾದ ಸ್ವಜಾತೀಯ ಜನಗಳ ಅನ್ನವನ್ನು ಗ್ರಹಿಸುವುದೂ ಪಾಪಕರವಾಗಿದೆ.

ಇನ್ನು ಪಾಶ್ಚಾತ್ಯ ಪಂಡಿತ ಸಮುದಾಯವೂ, ಆ ದೇಶದ ನಡಾವಳಿಗೆ ಮೆಚ್ಚಿ ಅವರನ್ನನುಕರಿಸುತ್ತಿರುವ ನಮ್ಮ ಭಾರತದೇಶದ ವಿದ್ವಾಂಸರ ಸಮುದಾಯವೂ ಬ್ರಾಹ್ಮಣ ಮತ್ತು ಚಂಡಾಲರ ಅನ್ನದಲ್ಲಿ ಸ್ವಲ್ಪವೂ ಭೇದವನ್ನು ಕಾಣುತ್ತಿರಲಿಕ್ಕಿಲ್ಲ. ಆದರೆ ದೀರ್ಘಾಯುಗಳೂ ತ್ರಿಕಾಲಜ್ಞಾನಿಗಳೂ ಆದ ನಮ್ಮ ಪೂರ್ವದ ಆಚಾರ್ಯರ ಮತ್ತು ಮಹರ್ಷಿಗಳ ಸಿದ್ಧಾಂತವು ಇದರಿಂದೇನು ಸುಳ್ಳಾಗುವಂತಿಲ್ಲ. ಹಿಂದೂಶಾಸ್ತ್ರವು ಇತರರು ಮುಟ್ಟಿದ ಇಲ್ಲವೇ ಬೇಯಿಸಿದ ಅನ್ನವನ್ನು ಗ್ರಹಿಸುವುದು ದೋಷಯುಕ್ತವಾದುದೆಂದು ಹೇಳಿ ಯಾವ ಸತ್ಯಸಿದ್ಧಾಂತವನ್ನು ಪ್ರಚಾರಮಾಡಿದೆಯೋ ಅದು ಅಕ್ಷರಶಃ ಯಥಾರ್ಥವಾಗಿದೆ. ಒಂದೇ ಹಾಸಿಗೆಯಲ್ಲಿ ನಿದ್ದೆಮಾಡುವುದನ್ನೂ, ಒಂದೇ ಪಂಕ್ತಿಯಲ್ಲಿ ಊಟಮಾಡುವುದನ್ನೂ, ಒಂದೇ ಆಸನದಲ್ಲಿ ಕೂಡ್ರುವುದನ್ನೂ, ಪಾತ್ರಮಿಶ್ರಣ, ಪಕ್ವಾನ್ನಮಿಶ್ರಣಗಳನ್ನೂ, ಪುರೋಹಿತಕೃತ್ಯವನ್ನೂ, ಓದಿಸುವುದನ್ನೂ, ಶರೀರ ಸಂಬಂಧವನ್ನೂ, ಕೂಡಿ ಉಣ್ಣುವುದನ್ನೂ ಪತಿತ (ಜಾತಿಹೀನನ) ರೊಡನೆ ಮಾಡಬಾರದೆಂತಲೂ, ಮಾಡಿದರೆ ಮನುಷ್ಯರಿಗೆ ಪಾಪವು ಅಂಟಿಕೊಳ್ಳುವುದೆಂತಲೂ ವ್ಯಾಸಮಹರ್ಷಿಗಳು ಕೂರ್ಮಪುರಾಣದ ಆಚಾರಾಧ್ಯಾಯದಲ್ಲಿ—

> ಏಕಶಯ್ಯಾಽಽಸನಂ ಪಂಕ್ತಿ ಭಾಂಡಪಕ್ವಾನ್ನಮಿಶ್ರಣಂ |
> ಯಜನಾಧ್ಯಾಪನೇ ಯೋನಿಸ್ತಥೈವ ಸಹಭೋಜನಂ ||
> ನವಧಾಸಂಕರಃ ಪ್ರೋಕ್ತೋ ನಕರ್ತವ್ಯೋಽಧಮೈಸ್ಸಹ |
> ಸಮೀಪೇ ಚಾಪ್ಯವಸ್ಥಾನಾತ್ಪಾಪಂ ಸಂಕ್ರಮತೇ ನೃಣಾಂ ||
> ತಸ್ಮಾತ್ ಸರ್ವಪ್ರಯತ್ನೇನ ಸಂಕರಂ ವರ್ಜಯೇದ್ಬುಧಃ |

ಎಂತಲೂ ಹೀಗೆಯೇ ಪರಾಶರಮಹರ್ಷಿಗಳು—

> ಆಸನಾಚ್ಛಯನಾದ್ಯಾನಾದ್ಭಾಷಣಾತ್ ಸಹಭೋಜನಾತ್ |
> ಸಂಕ್ರಾಮಂತಿ ಹಿ ಪಾಪಾನಿ ತೈಲಬಿಂದುರಿವಾಂಭಸಿ ||

ಎಂತಲೂ ಹೇಳಿರುವರು. ಹಿಂದೂಶಾಸ್ತ್ರವು ಇದೇ ಅರ್ಥವುಳ್ಳದಾದುದರಿಂದ ಅದು ಭೋಜನ ವಿಷಯದಲ್ಲಿ ಹೇಳುವ ವಿಧಿನಿಷೇಧಗಳನ್ನು ಎಲ್ಲರೂ ಒಪ್ಪಲೇಬೇಕು.

ಇಲ್ಲಿಯ ವರೆಗೆ ಪರರೊಡನೆ ಪಂಕ್ತಿಭೋಜನವು ನಿಷೇಧಿಸಲ್ಪಟ್ಟಿತು. ಇದು ದ್ವೇಷೋಕ್ತಿಯೆಂದು ಯಾರೂ ತಿಳಿಯಕೂಡದು. ಶಾಸ್ತ್ರಕ್ಕೆ ಯಾರ ಮೇಲೂ ದ್ವೇಷವಿಲ್ಲ. ಸತ್ಯಸಿದ್ಧಾಂತವನ್ನು ಪ್ರತಿಪಾದಿಸುವುದೇ ಅದರ ಕರ್ತವ್ಯವಾಗಿದೆ; ಅಂತೆಯೇ ಸ್ವಕೀಯರೊಡನೆ ಪಂಕ್ತಿಭೋಜನವನ್ನೂ—

> ಅಪ್ಯೇಕಪಂಕ್ತ್ಯಾನ್ನಾಶ್ನೀಯಾತ್ ಸಂಯತಃ ಸ್ವಜನೈರಪಿ |
> ಕೋಹಿ ಜಾನಾತಿ ಕಿಂ ಕಸ್ಯ ಪ್ರಚ್ಛನ್ನಂ ಪಾತಕಂ ಮಹತ್ ||

ಎಂದು ನಿಷೇಧಮಾಡುತ್ತ ಗೃಹಸ್ಥಸಮಾಜದಲ್ಲಿ ಪಂಕ್ತಿಭೋಜನವು ನಡೆಯುದಿದ್ದರೆ ಸಾಮಾಜಿಕನಿಯಮರಕ್ಷಣೆಯಾಗುವುದಿಲ್ಲವೆಂದು ತಿಳಿದು ಅಂತಹ ಸಮಯದಲ್ಲಿ ಭಸ್ಮಸ್ತಂಭಾದಿಗಳಿಂದ ಪಂಕ್ತಿಗಳನ್ನು ವಿಭಾಗಮಾಡಬೇಕೆಂದು "ಭಸ್ಮಸ್ತಂಭಜಲದ್ವಾರಮಾರ್ಗೈಃ ಪಂಕ್ತಿಂಚ ಭೇದಯೇತ್ |" ಮುಂತಾಗಿ ಹೇಳಿರುವುದು ಸ್ಪಷ್ಟವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಪೂರ್ವ

(೬ನೆಯ ಪುಟವನ್ನು ನೋಡಿರಿ)

ಪಂಚಾಚಾರ್ಯ ಪ್ರಭಾ.

೧೯೩೪ ನೇ ಜುಲೈ ತಾ|| ೯ ನೇ ಸೋಮವಾರ.

ಭಾರತೀಯಧರ್ಮ.

ನಮ್ಮ ಭಾರತಭೂಮಿಯಲ್ಲಿ ಜನ್ಮಧಾರಣಮಾಡಿದ ಜನಗಳು ದೇವರಲ್ಲಿಯೂ ಗುರುಜನಗಳಲ್ಲಿಯೂ ಮಾತಾಪಿತೃಗಳಲ್ಲಿಯೂ ವೇದಶಾಸ್ತ್ರಪುರಾಣಾದಿಗಳಲ್ಲಿಯೂ ಶ್ರದ್ಧೆಯುಳ್ಳವರಾಗಿದ್ದಾರೆ. ಅಲ್ಲದೆ ಪುಣ್ಯಪಾಪಕಾರ್ಯಗಳ ಪರಿಶೀಲನೆಯುಳ್ಳವರಾಗಿ ಪ್ರಾಯಶಃ ಪಾಪಕಾರ್ಯದಿಂದ ನಿವೃತ್ತರಾಗಿ ಪುಣ್ಯಕಾರ್ಯಗಳಲ್ಲಿ ಸ್ವಭಾವತಃ ಪ್ರವೃತ್ತಿಯುಳ್ಳವರೂ ಆಗಿದ್ದಾರೆ. ಮತ್ತು ತಾವೆಷ್ಟು ಸುಧಾರಣೆಯ ಶಿಖರವನ್ನೇರಬೇಕಾಗಿದ್ದರೂ ಗುರುದೇವರಿಗೆ ಪುರಸ್ಕಾರವನ್ನಿತ್ತೇ ತಾವು ಮುಂದುವರೆಯುವ ಸ್ವಭಾವವುಳ್ಳವರೂ ಆಗಿದ್ದಾರೆ. ತಾವು ಯಾವ ಕಾರ್ಯವನ್ನು ಮಾಡಬೇಕಾಗಿದ್ದರೂ ಪ್ರಥಮತಃ ತಮ್ಮ ಕುಲದೇವರನ್ನೂ ಗುರುಗಳನ್ನೂ ಸ್ಮರಿಸಿಯೇ ಕಾರ್ಯವನ್ನು ಮಾಡುತ್ತಾರೆ. ಪ್ರಜಾಪಾಲಕನಾದ ಮಹಾರಾಜನನ್ನು ಸಾಕ್ಷಾತ್ ದೈವಾಂಶೀಪುರುಷನೆಂದೇ ತ್ರಿಕರಣದಲ್ಲಿ ಭಾವಿಸುತ್ತ ಪ್ರಭುಗಳ ಆಜ್ಞೆಯನ್ನು ಪುಷ್ಪಮಾಲಿಕೆಯಂತೆ ಬಹು ಪೂಜ್ಯಬುದ್ಧಿಯಿಂದ ಶಿರಸಾಧಾರಣಮಾಡುತ್ತ, ರಾಜಭಕ್ತಿಯುಳ್ಳವರೂ ಆಗಿದ್ದಾರೆ. ಭಾರತೀಯ ಸ್ತ್ರೀಯರು ಮಾನವತಿಯರಾಗಿ, ಬೀದಿಬೀದಿಗಳಲ್ಲಿ ಸ್ವತಂತ್ರರಾಗಿ ಅಲೆಯದೆ, ತಮ್ಮ ತಮ್ಮ ಪತಿಗಳನ್ನೇ ಸಾಕ್ಷಾದ್ದೇವರೆಂದು ಭಾವಿಸುತ್ತ, ಪತಿಗಳ ಸುಖದುಃಖಗಳಲ್ಲಿ ತಾವೂ ಭಾಗಿಗಳಾಗಿ ಸಂಸಾರವೆಂಬ ಮಹಾಭಾರವನ್ನು ವಹಿಸುತ್ತಲಿದ್ದಾರೆ. ಭಾರತೀಯರ ಧರ್ಮಶಾಸ್ತ್ರವಾದರೂ, ಹೀಗಿರಬೇಕೆಂಬುದನ್ನೇ ವಿಧಿಸುತ್ತದೆ. ಸೃಷ್ಟಿಕಾಲದಿಂದಲೂ ರೂಢಮೂಲವಾಗಿ ಬಂದಿರುವ ಈ ಪರಿಶುದ್ಧಗಳಾದ ಸಂಪ್ರದಾಯಗಳು ಈಗ ಬದಲಾವಣೆಹೊಂದುವುದಕ್ಕೆ ಉಪಕ್ರಮವಾಗಿವೆ. ಅನಾದಿಕಾಲದಿಂದ ಜನಗಳ ಹೃದಯಭೂಮಿಯಲ್ಲಿ ನಾಟಿದ್ದ ಆರ್ಯಸಂಸ್ಕೃತಿಯವೃಕ್ಷವನ್ನು ಕೆಡವಿ ನಾಸ್ತಿಕಬೀಜಾವಾಪನೆ ಮಾಡಲು ಕೆಲವರು ಟೊಂಕ ಕಟ್ಟಿದ್ದಾರೆ. ಈ ವಿಷಬೀಜದ ವ್ಯಾಪನೆಯಿಂದ ಸನಾತನಧರ್ಮವೃಕ್ಷವು ಒಣಗಿಹೋಗಲುಪಕ್ರಮವಾಗುತ್ತ ಬಂದಿದೆ. ಎಲ್ಲಿನೋಡಿದರೂ ಧರ್ಮವಿರುದ್ಧಕಾರ್ಯಗಳೇ ಕಂಡುಬರುತ್ತಲಿವೆ. ಪ್ರಜೆಗಳು ಪ್ರಜಾಸತ್ತಾತ್ಮಕರಾಜ್ಯವನ್ನು ಬಯಸುತ್ತ ಪ್ರಭುತ್ವದವರಮೇಲೆ ಹೋರಾಡುತ್ತಲಿರುವರು. ಆರ್ಯಮಹಿಳೆಯರು ಪುರುಷರಂತೆ ಸ್ವತಂತ್ರರಾಗಬಯಸುವರು. ಶಿಷ್ಯವರ್ಗವು ಗುರುಗಳನ್ನು ಓಡಿಸಲು ಪ್ರಯತ್ನಪಡುವುದು. ಒಟ್ಟಿಗೆ ಇದು ಪುಣ್ಯಕರ್ಮ, ಇದು ಪಾಪಕರ್ಮವೆಂಬ ಭಯವೇ ತಪ್ಪಿಹೋಗುತ್ತಲಿದೆ. ಮಹರ್ಷಿಪ್ರಣೀತಗಳಾದ ಶಾಸ್ತ್ರಗಳನ್ನು ಹುಲ್ಲಿಗಿಂತಲೂ ಹಗುರಾಗಿ ಕಾಣಹತ್ತಿರುವರು. ದೇವತಾರಾಧನ ಗುರುಪೂಜೆ ಮುಂತಾದ ಸತ್ಕಾಲಕ್ಷೇಪವೆಂದರೆ ಇವರಿಗೆ ಘೋರರೂಪವಾಗಿ ಕಾಣಿಸಹತ್ತಿದೆ.

ನಮ್ಮ ಭಾರತಭೂಮಿಯಲ್ಲಿ ಇಂಥ ವಿಷಮಾಚರಣೆಗಳು ಕಾಲಿಡಲು ಕಾರಣವೇನೆಂದು ನಾವು ವಿಚಾರಮಾಡಿನೋಡಿದರೆ ಈಗಿನ ವಿದ್ಯಾಭ್ಯಾಸಕ್ರಮವೂ, ವಿದೇಶೀಯರ ಒಡನಾಟವೂ, ವಿಷಯಾಭಿಲಾಷೆಯ ಪರಾಕಾಷ್ಠತೆಯೂ, ಜನ್ಮಾಂತರ ಭೀತಿಶೂನ್ಯತೆಯೂ, ದೈವಪ್ರೇಮರಾಹಿತ್ಯವೂ ಇವೇ ಕಾರಣಗಳಾಗಿರುವುವೆಂದು ಹೇಳಬಹುದಾಗಿದೆ. ಪೂರ್ವಕಾಲದಲ್ಲಿ ನಮ್ಮ ಭಾರತೀಯರ ಯಾವ ವಿಧವಾದ ವಿದ್ಯಾಭ್ಯಾಸಗಳಾದರೂ ಅಧ್ಯಾತ್ಮವಿದ್ಯೆಯೆಂಬ ತಳಹದಿಯಮೇಲೆಯೇ ನಡೆಯುತ್ತಿದ್ದವು. ಎಂಥ ಉಚ್ಚವಾದ ನಾಗರಿಕತೆಯಾದರೂ ದೈವಗುರುಗಳನ್ನವಲಂಬಿಸಿಯೇ ಮುಂದುವರೆಯುತ್ತಿದ್ದಿತು. ದೊರೆತನವನ್ನು ಮಾಡುವವರೂ ಕಲಾಕೌಶಲದಲ್ಲಿ ನಿಪುಣರಾದವರೂ ವ್ಯಾಪಾರೋದ್ಯೋಗಗಳಲ್ಲಿ ನಿರತರಾಗಿರುವವರೂ ಯುದ್ಧೋತ್ಸವಗಳಲ್ಲಿ ಭಾಗಿಗಳಾದವರೂ ಎಲ್ಲರೂ ಪಾರಮಾರ್ಥಿಕದೃಷ್ಟಿಯನ್ನು ಮುಂದಿರಿಸಿಯೇ ಕೆಲಸಮಾಡುತ್ತಿದ್ದರಲ್ಲದೆ ಗುರುದೈವವಿಮುಖರಾಗಿ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಆದ್ದರಿಂದಲೇ ದೈವಶಕ್ತಿಯು ಇವರ ಕಾರ್ಯಗಳನ್ನೆಲ್ಲಾ ಈಡೇರಿಸುತ್ತಿದ್ದಿತು. ದೈವಶಕ್ತಿಯ ಮುಂದೆ ಬುದ್ಧಿಶಕ್ತಿಯಾಗಲಿ ವಿದ್ಯಾಶಕ್ತಿಯಾಗಲಿ ದ್ರವ್ಯಶಕ್ತಿಯಾಗಲಿ ಪ್ರಭುಶಕ್ತಿಯಾಗಲಿ ಒಂದೂ ನಿಲ್ಲಲಾರವು. ಅಂಥ ಪ್ರಬಲವಾದ ದೈವಶಕ್ತಿಯೊಂದಿಗೆ ಇನ್ನುಳಿದ ಶಕ್ತಿಗಳೊಂದುಗೂಡಿದರೆ ಚಿನ್ನಕ್ಕೆ ಪರಿಮಳ ಬಂದಂತೆ ಮತ್ತಿಷ್ಟು ಉಜ್ವಲಸ್ಥಿತಿಯನ್ನು ಕೊಡುತ್ತದೆ. ನಮ್ಮ ಭಾರತೀಯರು ಯಾವಾಗಲೂ ದೈವಶಕ್ತಿಯ ಆಧಾರದಲ್ಲಿಯೇ ಇತರ ಶಕ್ತಿಗಳನ್ನು ಆರ್ಜಿಸುವ ಸ್ವಭಾವವುಳ್ಳವರೆಂಬುದು ಹಿಂದಿನ ಇತಿಹಾಸಾದಿಗಳಿಂದ ಗೊತ್ತಾಗುವುದು. ನಲ ನಹುಷಮಾಂಧಾತೃ ಪಾಂಡವರಾಮಾದಿಮಹಾಪುರುಷರು ತಾವು ಅಖಂಡೈಕಚ್ಛತ್ರಾಧಿಪತ್ಯವನ್ನು ಮಾಡುತ್ತಿದ್ದರೂ ಒಂದು ನಿಮಿಷಾರ್ಧದಲ್ಲಿಯೇ ಪ್ರಪಂಚವನ್ನೆಲ್ಲಾ ಪ್ರಳಯಗೊಳಿಸುವ ಮಹಾಶಕ್ತಿಯನ್ನು ಪಡೆದಿದ್ದರೂ ಒಂದು ಹೆಜ್ಜೆಯನ್ನಾದರೂ ಧರ್ಮಶಾಸ್ತ್ರದ ಹದ್ದನ್ನು ಮೀರಿ ನಡೆಯುತ್ತಿರಲಿಲ್ಲ. ದೇವರಲ್ಲಿ ಶರಣಾಗತರಾಗಿದ್ದರೂ ಗುರುಜನಗಳ ವಚನವನ್ನು ಅತಿಕ್ರಮಿಸುತ್ತಿರಲಿಲ್ಲ. ಇಂಥ ಸಚ್ಚರಿತ್ರವುಳ್ಳವರಾದುದರಿಂದಲೇ ಅವರ ಯಶೋವಲ್ಲರಿಯು ದಿಕ್ತಟಗಳಲ್ಲಿ ಹಬ್ಬುತ್ತಲೇ ಬಂದಿದೆ. ಅವರ ಆಳ್ವಿಕೆಯಲ್ಲಿರುವ ಪ್ರಜೆಗಳಾದರೂ "ನಾವಿಷ್ಣುಃ ಪೃಥಿವೀಪತಿಃ" ಎಂಬ ಆರ್ಯೋಕ್ತಿಯಂತೆ ರಾಜ್ಯಪಾಲಕರಾದ ಮಹಾರಾಜರನ್ನು ಸಾಕ್ಷಾತ್ ವಿಷ್ಣುವನ್ನಾಗಿ ಭಾವಿಸುತ್ತಿದ್ದರು. ಗುರುಜನಗಳ ವಚನವೆಂದರೆ ಶಿಷ್ಯರು ಪ್ರತ್ಯಕ್ಷ ಈಶ್ವರನ ವಚನವನ್ನಾಗಿಯೇ ಪೂಜ್ಯಬುದ್ಧಿಯಿಂದ ಗೌರವಿಸುತ್ತಿದ್ದರು. ಗೃಹಭಾಗ್ಯದೇವತೆಯಂತಿರುವ ಸತಿಯರಾದರೂ ತಮ್ಮ ತಮ್ಮ ಪತಿಗಳೊಡನೆ ಪ್ರಾಣ ಕೊಡಲಿಕ್ಕೂ ಸಿದ್ಧರಾಗಿದ್ದರು. ಹೀಗಿದ್ದುದರಿಂದಲೇ ಅವರ ಯೋಗಕ್ಷೇಮಗಳನ್ನೆಲ್ಲಾ ದೇವರೇ ಸ್ವತಃ ವಹಿಸಿದ್ದನು. ಈಗಿನ ವಿಪರೀತವರ್ತನೆಗಳನ್ನು ನೋಡಿದರೆ, ಇವರ ಪಾಲಿಗೆ ದೇವರು ಕಣ್ಣುಮುಚ್ಚಿದ್ದಾನೆಂದು ಹೇಳಬಹುದು. ದೈವಾಯತ್ತವಾದ ರಾಜ್ಯಭಾರವನ್ನು ಮಾಡುವ ಮಹಾರಾಜರ ಮೇಲೆ ಪ್ರಜೆಗಳ ಟೀಕೆ; ದೇವಾಂಶಪುರುಷರಾದ ಗುರುಗಳಮೇಲೆ ಶಿಷ್ಯರ ಟೀಕೆ; ಪೂಜ್ಯನಾದ ಪಿತೃವಿನಮೇಲೆ ಪುತ್ರನ ಟೀಕೆ; ಹೀಗೆ ಎಲ್ಲೆಲ್ಲಿಯೂ ರಾಜದ್ರೋಹ, ಗುರುದ್ರೋಹ, ಪಿತೃದ್ರೋಹ, ಪತಿದ್ರೋಹ ಕಾರ್ಯಗಳು ಹೇಳಲಸದಳವಾಗಿವೆ. ಆದರೆ ಭಾರತದೇವಿಯ ಅನುಗ್ರಹದಿಂದ ಅಂಥ ಪೂರ್ವದ ಸಚ್ಚರಿತೆಯು ನಮ್ಮ ಭಾರತಭೂಮಿಯಲ್ಲಿ ಗಟ್ಟಿಗೊಂಡಿರುವುದರಿಂದ ಇವರು ಎಷ್ಟು ಸಾಹಸಪಟ್ಟರೂ ಪವಿತ್ರ ಸನಾತನಧರ್ಮವು ಒಂದಿಲ್ಲ ಒಂದು ಕಡೆಗೆ ಅಪ್ರಕಂಪ್ಯವಾಗಿ ನಿಂತುಕೊಂಡಿರುತ್ತದಲ್ಲದೆ ಎಂದೂ ನಿಶ್ಶೇಷವಾಗಲಾರದು. ಆದರೆ ಟೀಕೆಯನ್ನು ಮಾಡುವವರಾರೋ, ಅವರು ಒಳ್ಳೇ ವರ್ತನವುಳ್ಳವರೂ, ಗುಣಾಢ್ಯರೂ, ಲೋಕೋಪಕಾರಿಗಳೂ, ಸ್ವಾರ್ಥರಹಿತರೂ, ಪವಿತ್ರಚರಿತ್ರರೂ, ಮಹಾಮೇಧಾವಿಗಳೂ ಪುಣ್ಯಪಾಪಭೀರುಗಳೂ ಆಗಿರಬೇಕಲ್ಲವೆ? 'ಯುಕ್ತಿಯುಕ್ತಂವಚೋಗ್ರಾಹ್ಯಂ ಬಾಲಾದಪಿಶುಕಾದಪಿ' ಎಂಬ ನೀತಿಯಂತೆ ಅಂಥವರ ಮಾತನ್ನಾದರೂ ಗ್ರಹಿಸಬಹುದು. ಹಾಗಿಲ್ಲದೆ ಮಧುಪಾನಮತ್ತರಾದ ಜನಗಳಂತೆ ಸ್ವಪ್ರತಿಷ್ಠೆಗಾಗಿ ಪ್ರಭುತ್ವದಮೇಲೂ ಗುರುತ್ವದಮೇಲೂ ದಾಳಿಯಿಡುವ ನವತರುಣರು ನಮ್ಮ ಭಾರತಭೂಮಿಯಲ್ಲಿ ಈಗೀಗ ಒಡಮೂಡುತ್ತಲಿದ್ದಾರೆ. ಇವರ ವರ್ತನವಾದರೋ ಅತಿ ಹೇಯವಾಗಿದೆ. ಇವರಲ್ಲಿ ಒಂದೆರಡು ಡಿಗ್ರಿಗಳನ್ನು ಪಡೆದರಂತೂ ಇವರನ್ನು ಹಿಡಿದು ನಿಲ್ಲಿಸುವವರೇ ಇಲ್ಲ. ಅದರಲ್ಲೂ ಇಂಗ್ಲೆಂಡ್ ಅಮೇರಿಕಾ ಮುಂತಾದ ಸ್ಥಲಗಳಿಗೆ ಹೋಗಿ ಬಂದರಂತೂ ಪಿಶಾಚಿಗೆ ಸುರಾಪಾನಮಾಡಿಸಿದಂತೆ ಹುಚ್ಚುಹುಚ್ಚಾಗಿ ಕುಣಿಯಹತ್ತುವರು. ಅಷ್ಟರಲ್ಲಿ ಪ್ರಭುತ್ವದವರಾಗಲಿ ಗುರುತ್ವದವರಾಗಲಿ ಯಾವುದಾದರೂ ಒಂದು ದ್ರವ್ಯಸಹಾಯವನ್ನು ಒದಗಿಸಿಕೊಟ್ಟರೆ ತಣ್ಣಗಾಗಿ ಕುಳಿತುಕೊಳ್ಳುವರು. ಇಲ್ಲವಾದರೆ ಪ್ರಭುತ್ವದಮೇಲೂ ಗುರುತ್ವದಮೇಲೂ ಹಾರಿ ಹಾರಿ ಬೀಳುವರು. ಇವರಿಷ್ಟದಂತೆ ಪ್ರಭುತ್ವದವರು ಇವರಿಗೆಲ್ಲಾ ಕೆಲಸಕೊಡಲು ಶಕ್ಯವೇ? ಗುರುತ್ವದವರು ದುಡ್ಡುಕೊಡಲು ಶಕ್ಯವೇ? ತಾವು ಓದಿ ಬಂದು ತಮ್ಮ ಪೂರ್ವಿಕರು ಮಾಡುವ ಕೆಲಸಕಾರ್ಯಗಳಲ್ಲಿ ತೊಡಗಿ ತಮ್ಮ ಪೂರ್ವಿಕರ ಆಚರಣೆಯನ್ನು ಬಿಡದೆ ತಮ್ಮ ಧರ್ಮವನ್ನು ಕಾಪಾಡುತ್ತ ಪ್ರಭುಭಕ್ತಿ ಗುರುಭಕ್ತಿ ದೈವಭಕ್ತಿ ಸಂಪನ್ನರಾಗಿದ್ದು ಖ್ಯಾತಿಪಡೆಯಬೇಕಲ್ಲದೆ ಅದಕ್ಕೆ ವಿರುದ್ಧವಾಗಿ ನಡೆದು ಧರ್ಮಲಂಡರೆನಿಸಿ ಅಧೋಗತಿಗೀಡಾಗಬಾರದೆಂದಾಶಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಅಸಿಸ್ಟೆಂಟ್ ಕಮಿಷನರ್ ಮಿ|| ಟಿ. ಹನುಮಂತರಾವ್, ಬಿ.ಎ., ಇವರು ಕೋಲಾರ ಸಬ್‌ಡಿವಿಜನ್ನಿನಿಂದ ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರು ಸಬ್‌ಜಡ್ಜರಾಗಿರುವ ಮಿ|| ಎಸ್. ಆರ್. ರಾಮಸ್ವಾಮಿ ಅಯ್ಯರ್, ಬಿ.ಎ., ಬಿ.ಎಲ್. ಇವರು ಕೋಲಾರದ ಫಸ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಜಡ್ಜರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಅಕ್ಕಲಕೋಟೆಯ ಮಹಾರಾಜರವರು ರಾಜ್ಯಾಡಳಿತದಲ್ಲಿ ಅನುಭವವನ್ನು ಹೊಂದುವುದಕ್ಕಾಗಿ ತಮ್ಮ ಅಧ್ಯಾಪಕರಾದ ಕರ್ನಲ್ ಹಾರಿಸ್‌ರವರೊಡನೆ ಇಷ್ಟರಲ್ಲಿಯೇ ಬೆಂಗಳೂರಿಗೆ ಬರುವರೆಂದು ತಿಳಿದುಬಂದಿದೆ.

ಶ್ರೀಮನ್ಮಹಾರಾಜರವರು ಮೈಸೂರು ಸಂಸ್ಥಾನದ ದ್ವಿತೀಯಸಚಿವರಾದ ರಾಜಮಂತ್ರಪ್ರವೀಣ ದಿವಾನ್‌ಬಹದ್ದೂರ್ ಕೆ. ಮ್ಯಾಥ್ಯೂರವರ ಅಧಿಕಾರದ ಅವಧಿಯನ್ನು 1935 ನೇ ಅಕ್ಟೋಬರ್ ವರೆಗೆ ಹೆಚ್ಚಿಸಿರುತ್ತಾರೆ.

ಬೆಂಗಳೂರು ನಗರದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರಶೋಧನಸಂಸ್ಥೆಗೆ ಹೈದರಾಬಾದ್ ಸಂಸ್ಥಾನದವರು ವರ್ಷಕ್ಕೆ 10,000 ರೂ. ಗಳಂತೆ 3 ವರ್ಷಗಳವರೆಗೆ ದ್ರವ್ಯಸಹಾಯಮಾಡುವುದಾಗಿ ವಾಗ್ದಾನ ಮಾಡಿರುತ್ತಾರೆ.

ಶಿವಮೊಗ್ಗಾ ಮುನಿಸಿಪಾಲಿಟಿಯ ಅಧಿಕಾರಿಗಳು ಕಂದಾಯದ ಬಾಕಿಗಾಗಿ ಒಂದು ಮನೆಯ ಹೆಂಚುಗಳನ್ನು ಜಪ್ತುಮಾಡಿ ತೆಗೆದುಕೊಂಡುಹೋದುದಕ್ಕಾಗಿ ಮನೆಯ ಯಜಮಾನರು ಮುನಿಸಿಪಾಲಿಟಿಯಮೇಲೆ ಅಕ್ರಮಪ್ರವೇಶಮಾಡಿದರೆಂದು ಕ್ರಿಮಿನಲ್‌ದಾವೆಯನ್ನು ಹೂಡಿರುತ್ತಾರೆ.

ಚಿಂತಾಮಣಿ ಮಹಾಲಕ್ಷ್ಮಮ್ಮನ ಮೊಕದ್ದಮೆಯ ಕಾಲದಲ್ಲಿ ಕೋಲಾರದ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದು ಈಚೆಗೆ ಫ್ರೆಂಚ್‌ರಾಕ್ಸ್ ಸರ್ಕಲ್ಲಿನ ಪೋಲೀಸ್ ಸೂಪರಿಂಟೆಂಡೆಂಟರಾಗಿರುವ ಮಿ|| ಅಬ್ದುಲ್ ರಜಾಕ್‌ರವರನ್ನು ಸರಕಾರದವರು ಅಮಲ್ದಾರ್ ದರ್ಜೆಗೆ ಕಡಿಮೆಮಾಡಿರುತ್ತಾರೆ.

ಶಿಡ್ಲಘಟ್ಟ ತಾಲ್ಲೂಕು ಪುರವೆಂಬ ಗ್ರಾಮದಲ್ಲಿ ಒಂದು ಕೊಲೆಯ ಸಂಬಂಧದಲ್ಲಿ ಪೋಲೀಸರು ಗಂಡಹೆಂಡರಿಬ್ಬರನ್ನು ದಸ್ತಗಿರಿ ಮಾಡಿರುತ್ತಾರೆ. ಅಪಾದಿತನು ಹೆಂಗಸಿನ ವೇಷದಲ್ಲಿ ಖೂನಿಯನ್ನು ಮಾಡಿದನೆಂದೂ, ಅವನ ಹೆಂಡತಿಯು ಇದಕ್ಕೆ ಮೂಲಕಾರಣಳೆಂದೂ ತಿಳಿದುಬಂದಿದೆ. ಪೋಲೀಸರು ತನಿಖೆಮಾಡುತ್ತಿರುವರು.

ನಂಜನಗೂಡು ತಾಲ್ಲೂಕಿನಲ್ಲಿರುವ 'ನಗು' ನಾಲೆಗೆ ಸಂಬಂಧಪಟ್ಟ ಒಂದು ಕಾಲುವೆಯು ಕುಸಿದುಹೋಗಿ, ಅದರಿಂದ ಸಾಗುವಳಿಯಾಗುತ್ತಿದ್ದ ಜಮೀನುಗಳಲ್ಲಿ ಸರಿಯಾಗಿ ಬೆಳೆಯಾಗದೆ ರೈತರಿಗೆ ವಿಶೇಷನಷ್ಟವಾಗಿರುವುದನ್ನು ತಿಳಿದು ಸರಕಾರದವರು ರೆವಿನ್ಯೂ ಕಮಿಷನರವರ ಸಲಹೆಯಂತೆ, ಸ್ವಲ್ಪವೂ ಬೆಳೆಯಾಗದಿರುವ ಸುಮಾರು 904 ಎಕರೆ ಜಮೀನುಗಳಿಗೆ ಮುಕ್ಕಾಲು ಭಾಗ ಕಂದಾಯವನ್ನೂ, ಕಾಲುಭಾಗ ಬೆಳೆಯಾಗಿರುವ 346 ಎಕರೆ ಜಮೀನುಗಳಿಗೆ ಅರ್ಧಭಾಗ ಕಂದಾಯವನ್ನೂ, ಅರ್ಧಭಾಗ ಬೆಳೆಯಾಗಿರುವ 891 ಎಕರೆ ಜಮೀನುಗಳಿಗೆ ಕಾಲುಭಾಗ ಕಂದಾಯವನ್ನೂ ವಜಾಮಾಡಿರುತ್ತಾರೆ.

ಮಹಾಮಾತೃಶ್ರೀಯವರ ನಿಧನ.

ನಮ್ಮ ಶ್ರೀಮನ್ಮಹಾಪ್ರಭುಗಳವರ ಮಹಾಮಾತೃಶ್ರೀಯವರಾದ ಶ್ರೀ ವಾಣೀವಿಲಾಸಮಹಾಸನ್ನಿಧಾನದವರು ಮೊನ್ನೆ ಶನಿವಾರ ದಿವಸ ರಾತ್ರಿ ಶಿವಾಧೀನರಾದರೆಂಬ ವಿಷಯವನ್ನು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ. ಮಹಾಮಾತೃಶ್ರೀಯವರಿಗೆ ಅವಸಾನಕಾಲದಲ್ಲಿ ೬೮ ವರ್ಷಗಳು ತುಂಬಿ ೬೯ನೆಯ ವರ್ಷವು ಪ್ರಾಪ್ತವಾಗಿತ್ತು. ನಿನ್ನೆದಿವಸ ಪ್ರಾತಃಕಾಲ ೮ಘಂಟೆಗೆ ಮಹಾರಾಜ್ಞಿಯವರ ಶರೀರವು ಭವ್ಯವಾದ ಪುಷ್ಪಮಯ ಪಲ್ಲಕ್ಕಿಯಲ್ಲಿರಿಸಲ್ಪಟ್ಟು ಸಮಸ್ತ ರಾಜವೈಭವದೊಡನೆ ಸಂಸ್ಕಾರಭೂಮಿಗೆ ಸಾಗಿಸಲ್ಪಟ್ಟಿತು. ಆಗ್ಗೆ ಗೌರವಾರ್ಥವಾಗಿ ೬೯ ತೋಪುಗಳು ಹಾರಿಸಲ್ಪಟ್ಟವು. ಪಲ್ಲಕ್ಕಿಯ ಮುಂಭಾಗದಲ್ಲಿ ಶ್ರೀಮನ್ಮಹಾರಾಜರವರು, ಶ್ರೀಮದ್ಯುವರಾಜರವರು, ದಿವಾನ್‌ಸಾಹೇಬರವರು, ಸಮಸ್ತರಾಜಬಂಧುಗಳು, ಮುಖ್ಯ ಮುಖ್ಯ ಸರಕಾರಿ ಅಧಿಕಾರಿಗಳು ದುಃಖಮುದ್ರೆಯಿಂದೊಡಗೂಡಿ ಸಾಗಿದ್ದರು. ಸಂಸ್ಕಾರಭೂಮಿಯಲ್ಲಿ ಅಂತ್ಯಸಂಸ್ಕಾರಗಳು ಯಥಾವಿಧಿಯಾಗಿ ನೆರವೇರಿದುವು. ನಿನ್ನೆ ಬೆಳಗ್ಗೆ ಈ ವಿಷಾದವಾರ್ತೆಯು ವಿದ್ಯುಲ್ಲತೆಯಂತೆ ವ್ಯಾಪಿಸಿ ರಾಜಧಾನಿಯನ್ನೆಲ್ಲಾ ಶೋಕಸಾಗರದಲ್ಲಿ ಮುಳುಗಿಸಿಬಿಟ್ಟಿತು. ಕೂಡಲೇ ರಾಜಧಾನಿಯ ಎಲ್ಲಾ ಅಂಗಡಿಗಳೂ ಮುಚ್ಚಲ್ಪಟ್ಟವು. ರಾಜಧಾನಿಯ ಪ್ರಜೆಗಳು ತಂಡೋಪತಂಡವಾಗಿ ಹೋಗಿ ಸಂಸ್ಕಾರಭೂಮಿಯಲ್ಲಿ ಸಮ್ಮಿಲಿತರಾಗಿದ್ದರು. ಮೈಸೂರು ದೇಶದ ಪ್ರಜೆಗಳು ಮಂಗಲಮೂರ್ತಿಯೆನಿಸಿದ ಮಹಾಮಾತೃಶ್ರೀಯವರಲ್ಲಿ ನಿರತಿಶಯವಾದ ಭಕ್ತಿಯನ್ನಿಟ್ಟಿದ್ದರು. ಇವರು ನಮ್ಮ ಮಹಾಪ್ರಭುಗಳವರಿಗೆ ಅಧಿಕಾರವಾಗುವುದಕ್ಕಿಂತ ಮೊದಲು ೬ ವರ್ಷಗಳವರೆಗೆ ಈ ರಾಜ್ಯವನ್ನು ಅತ್ಯುತ್ತಮರೀತಿಯಿಂದಾಳಿ ಪ್ರಜೆಗಳಿಗೆ ಅನೇಕವಿಧವಾದ ಸೌಕರ್ಯಗಳನ್ನುಂಟುಮಾಡಿಕೊಟ್ಟದ್ದೇ ಇದಕ್ಕೆ ಮೂಲಕಾರಣವು. ಮಹಾಮಾತೃಶ್ರೀಯವರು ಭರತಭೂಮಿಯನ್ನಲಂಕರಿಸಿರುವ ಸಮಸ್ತ ಮಹಾರಾಜ್ಞೀವರ್ಗಕ್ಕೆ ಆದರ್ಶಪ್ರಾಯರಾಗಿದ್ದರು. ಧರ್ಮಾಚರಣೆಯ ವಿಷಯದಲ್ಲಿ ಇಂದೋರ್ ಮಹಾರಾಣಿ ಅಹಲ್ಯಾಬಾಯಿಯ ಪ್ರತಿಬಿಂಬದಂತಿದ್ದರು. ಇವರು ತಮ್ಮ ಆಯುಸ್ಸನ್ನೆಲ್ಲಾ ಕೇವಲ ಧರ್ಮಾಚರಣೆಯಲ್ಲಿಯೇ ಕಳೆದರು. ಗುರುದೇವತೆಗಳ ವಿಷಯದಲ್ಲಂತೂ ಇವರಿಗೆ ಅಸಾಧಾರಣವಾದ ಭಕ್ತಿಯಿತ್ತು. ನಮ್ಮ ಮಹಾಪ್ರಭುಗಳವರಲ್ಲಿ ನಿತ್ಯವಾಗಿ ವಾಸಮಾಡಿಕೊಂಡಿರುವ ಗುರುದೇವತಾಭಕ್ತಿವೃದ್ಧಿಗೆ ಮಹಾಮಾತೃಶ್ರೀಯವರ ಸದ್ಬೋಧೆಯೇ ಮೂಲಕಾರಣವೆಂದು ಸಾರಿಸಾರಿ ಹೇಳಬಹುದಾಗಿದೆ. ಮಾತೃಶ್ರೀಯವರು ದೀನಜನಗಳಲ್ಲಿಟ್ಟಿದ್ದ ದಯಾಭಾವವು ಅವರ್ಣನೀಯವಾದುದು. ಇವರು ದೀನಜನಸಮುದಾಯಕ್ಕೆ ಸುರಧೇನುಸದೃಶರಾಗಿದ್ದರು. ದೀನಬಂಧುಗಳೂ, ದಯಾರ್ದ್ರಹೃದಯರೂ, ಧರ್ಮಮೂರ್ತಿಗಳೂ ಆದ ಮಾತೃಶ್ರೀಯವರನ್ನು ಕಳೆದುಕೊಂಡುದು ಈ ದೇಶದ ದೌರ್ಭಾಗ್ಯವೆಂದೇ ಹೇಳಬೇಕಾಗಿದೆ. ಜಗದೀಶ್ವರನು ಸಮಸ್ತಕಲ್ಯಾಣಗುಣಗಣಮಂಡಿತರಾದ ಮಹಾಮಾತೃಶ್ರೀಯವರ ಆತ್ಮಕ್ಕೆ ನಿತ್ಯಶಾಂತಿಯನ್ನೀಯಲೆಂದೂ, ಮಹಾಪ್ರಭುಗಳವರಿಗೂ, ಸಮಸ್ತ ರಾಜಬಂಧುವರ್ಗಕ್ಕೂ, ಪ್ರಜಾವರ್ಗಕ್ಕೂ ಉಂಟಾಗಿರುವ ದುಃಖವನ್ನು ಶಮನಗೊಳಿಸಲೆಂದೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

ಇಂಗ್ಲೆಂಡಿನಲ್ಲಿ 154 ಜನ ಸ್ತ್ರೀ ಪೋಲೀಸರಿರುವರಂತೆ!

3000 ವರ್ಷಗಳ ಹಿಂದಿನ ಒಂದು ಪಗಡೆ ಆಟದ ದಾಳವು ಬಾಬಿಲೋನಿಯಾದಲ್ಲಿ ದೊರೆತಿರುವುದಂತೆ!

ಗಾಂಧಿಯವರ ಮೇಲೆ ಗುಂಡುಹಾರಿಸಿದವರನ್ನು ಪತ್ತೆಮಾಡಿಕೊಟ್ಟವರಿಗೆ 1000 ರೂ. ಬಹುಮಾನ ಕೊಡುವುದಾಗಿ ಮುಂಬಯಿ ಸರಕಾರದವರು ಪ್ರಸಿದ್ಧಪಡಿಸಿರುತ್ತಾರೆ.

ಲಾರ್ಡ್ ವಿಲಿಂಗ್‌ಡನ್‌ರವರ ಅನಂತರ, ಲಾರ್ಡ್ ಲಿನ್‌ಲಿತ್‌ಗೋರವರು ಭರತಖಂಡದ ವೈಸರಾಯರಾಗುವರೆಂದು ತಿಳಿದುಬಂದಿದೆ. ಇವರು ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯ ಅಧ್ಯಕ್ಷರಾಗಿದ್ದರು.

ಪಂಜಾಬ್ ದೇಶದಲ್ಲಿ ಹರಿಯುವ ಸಟ್ಲೇಜ್ ಮತ್ತು ಚೀನಾಬ್ ನದಿಗಳಲ್ಲಿ ಪ್ರವಾಹವು ಮಿತಿಮೀರಿ ಲೂಧಿಯಾನಾ ಜಿಲ್ಲೆಗೆ ಸೇರಿದ ಚಹೌಲಿ ಮತ್ತು ನಾನೇವಾಲ್ ಎಂಬ 2 ಗ್ರಾಮಗಳು ಸಂಪೂರ್ಣವಾಗಿ ಕೊಚ್ಚಿಕೊಂಡು ಹೋಗಿರುತ್ತವೆ.

ಇಂಗ್ಲೆಂಡಿನ ಒಬ್ಬ ಶಿಪಾಯಿಯು ತನ್ನ ಹೆಂಡತಿಯನ್ನು "ತಂಗಿ" ಎಂಬದಾಗಿ ಹೇಳಿ ಅವಳನ್ನು ಇನ್ನೊಬ್ಬನಿಗೆ ಮದುವೆಮಾಡಿಕೊಟ್ಟನು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ಗಂಡನಿಗೆ 6 ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ಪ್ರಪಂಚದಲ್ಲೆಲ್ಲಾ ಅತ್ಯಂತವೃದ್ಧನೆಂದು ಪ್ರಸಿದ್ಧನಾಗಿದ್ದ 160 ವರ್ಷ ವಯಸ್ಸಿನ ಜಾರೋ ಆಗಾನು ಕೆಲವು ದಿವಸಗಳಿಂದ ಕಾಯಿಲೆಯಿದ್ದು ಮೃತಪಟ್ಟಿರುವನು. ಇವನು 12 ಸಾರಿ ಮದುವೆಯಾಗಿದ್ದನು. ಇವನ ಜ್ಯೇಷ್ಠಪುತ್ರಿಗೆ 80 ವರ್ಷ ವಯಸ್ಸಾಗಿರುವುದು.

ಆಫ್ರಿಕಾದೇಶಕ್ಕೆ ಸೇರಿದ ಟಾಂಗನೀಕ ಸರೋವರದ ಸಮೀಪದಲ್ಲಿ 92 ಚದರ ಮೈಲುಗಳ ವಿಸ್ತಾರವುಳ್ಳ ಒಂದು ಹೊಸ ಚಿನ್ನದಗಣಿಯು ಶೋಧಿಸಲ್ಪಟ್ಟಿರುವುದು. ಆ ಪ್ರದೇಶದಲ್ಲಿರುವ ಕಾಡನ್ನು ನಿರ್ಮೂಲಮಾಡುವುದಕ್ಕೆ 20 ಲಕ್ಷ ರೂ. ಗಳು ವೆಚ್ಚವಾಗುವುವಂತೆ!

ಅಫಘಾನಿಸ್ಥಾನದಲ್ಲಿ ಪ್ರವಾಹದ ದೆಸೆಯಿಂದ 32 ಜನರೂ 333 ಪ್ರಾಣಿಗಳೂ ನಾಶಹೊಂದಿರುವುವು. ಕೋಹಿಕಾಕ್ ಬೆಟ್ಟದಿಂದ ಬಂಡೆಗಳು ಉರುಳಿ ಚಕ್ರಾಕ್ಷಕಲಕ ಎಂಬ ಗ್ರಾಮವು ಸಂಪೂರ್ಣವಾಗಿ ಹೂತುಹೋಗಿದೆ. ಆ ಹಳ್ಳಿಯ ಜನರಲ್ಲಿ ಮೂವರು ಮಾತ್ರ ಬದುಕಿಕೊಂಡಿರುತ್ತಾರೆ.

ಬೆಜವಾಡದಿಂದ ಮದರಾಸಿನ ಒಬ್ಬ ಸಾಹುಕಾರರಿಗೆ ಕಳುಹಿಸಲ್ಪಟ್ಟಿದ್ದ 2 ಇನ್ಶೂರ್ ಕವರುಗಳು ಯಾರಿಂದಲೋ ಅಪಹರಿಸಲ್ಪಟ್ಟಿರುತ್ತವೆ. ಒಂದರಲ್ಲಿ 1000 ರೂ. ಗಳ ನೋಟೂ, ಮತ್ತೊಂದರಲ್ಲಿ 500 ರೂ. ಗಳ ನೋಟೂ ಇದ್ದವಂತೆ. ಪೋಲೀಸರು ತನಿಖೆ ಕ್ರಮಗಳನ್ನು ಜರುಗಿಸಿರುತ್ತಾರೆ.

ಜರ್ಮನಿದೇಶಕ್ಕೆ ಸೇರಿದ ಬ್ರೂಚ್‌ಸಾಲ್ ನಗರದಲ್ಲಿರುವ ಸಾರ್ವಜನಿಕ ಈಜುವ ಕೊಳದಲ್ಲಿ ಯಹೂದ್ಯರು ಯಾರೂ ಸ್ನಾನಮಾಡಕೂಡದೆಂದೂ ಆರ್ಯರು ಮಾತ್ರ ಸ್ನಾನ ಮಾಡಬಹುದೆಂದೂ ಅಲ್ಲಿಯ ಪೌರಸಭೆಯವರು ಅಪ್ಪಣೆಮಾಡಿರುತ್ತಾರೆ. ಇತರ ಅನೇಕ ನಗರಗಳವರು ಇದೇರೀತಿ ಕಾನೂನು ಮಾಡಿರುತ್ತಾರೆ.

ಫ್ರೆಂಚರಿಗೆ ಸೇರಿದ ಗೋವಾನಗರದಲ್ಲಿರುವ ಜಾಂಜಿಸಸ್ ಕಾನ್ವೆಂಟ್ ಎಂಬ ಸಂಸ್ಥೆಗೆ ಕಳ್ಳರು ನುಗ್ಗಿ ಸುಮಾರು 1 ಲಕ್ಷ ರೂ. ಬೆಲೆಬಾಳುವ ಆಭರಣಗಳನ್ನು ಅಪಹರಿಸಿರುತ್ತಾರೆ. ಅದರಲ್ಲಿ ರತ್ನಖಚಿತವಾದ ಒಂದು ಕಿರೀಟವಿತ್ತೆಂದೂ, ಅದರಲ್ಲಿ 7,000 ರೂ. ಗಳ ಬೆಲೆಬಾಳುವ ಒಂದು ಅಮೂಲ್ಯ ವಜ್ರವಿತ್ತೆಂದೂ ತಿಳಿದುಬಂದಿದೆ.

ಫ್ರಾನ್ಸ್ ಸರಕಾರದವರು ಯುದ್ಧಕಾಲದಲ್ಲಿ ಪೆಟ್ರೋಲಿನ ರಕ್ಷಣೆಗಾಗಿ ಭೂಮಿಯ ತಳದಲ್ಲಿ ಕೆಲವು ದೊಡ್ಡ ದೊಡ್ಡ ತೊಟ್ಟಿಗಳನ್ನು ಕಟ್ಟಿಸಬೇಕೆಂದು ನಿರ್ಧರಿಸಿರುವರು. ಫ್ರೆಂಚ್ ಸರಕಾರದವರು ಇದಕ್ಕಾಗಿ 12 ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ನಿರ್ಧರಿಸಿರುವರು. ಹಾಗೂ ಉತ್ತರ ಆಫ್ರಿಕಾ ತೀರಪ್ರದೇಶಗಳು, ಮೆಡಿಟರೇನಿಯನ್ ಸಮುದ್ರದ ತೀರಪ್ರದೇಶಗಳು ಮತ್ತು ಡೋವರ್ ಜಲಸಂಧಿಯ ಪ್ರದೇಶಗಳ ರಕ್ಷಣೆಯನ್ನು ಬಲಪಡಿಸಲು 1½ ಕೋಟಿ ರೂಪಾಯಿಗಳನ್ನೂ, ವೈಮಾನಿಕ ಬಲವನ್ನು ಹೆಚ್ಚಿಸಲು 3 ಕೋಟಿ ರೂಪಾಯಿಗಳನ್ನೂ ವೆಚ್ಚಮಾಡುವರು.

ಮಾತನಾಡುವ ಕಾಗೆ!

ರಂಗೂನ್‌ದೇಶಕ್ಕೆ ಸೇರಿದ ಮಾಂಡೀ ಎಂಬ ಗ್ರಾಮದಲ್ಲಿ ಒಂದು ಕಾಗೆಯು "ಪಾಯ, ಪಾಯ" ಎಂದು ಮನುಷ್ಯರಂತೆ ಸ್ಪಷ್ಟವಾಗಿ ಕೂಗುವುದಂತೆ. ಅದನ್ನು ನೋಡುವುದಕ್ಕಾಗಿ ನೂರಾರು ಜನರು ಹೋಗಿ ಬರುತ್ತಿರುವರು.

ದೀಪಹಚ್ಚುವ ಯಂತ್ರ.

ಲ್ಯಾಂಕಾಷೈರ್ ನಗರದಲ್ಲಿ ಒಂದು ವಿಚಿತ್ರವಾದ ದೀಪಹಚ್ಚುವ ಯಂತ್ರವು ತಯಾರಿಸಲ್ಪಟ್ಟಿರುವುದು. ಈ ಯಂತ್ರವು ಸಾಯಂಕಾಲವಾದ ಕೂಡಲೇ ದೀಪವನ್ನು ಹಚ್ಚಿಸದಿರುವ ಮೋಟಾರ್‌ಕಾರುಗಳ ಹಿಂಭಾಗದ ಮತ್ತು ಮುಂಭಾಗದ ದೀಪಗಳನ್ನು ಹಚ್ಚಿಸುವುದಂತೆ!

ಜರ್ಮನಿಯಲ್ಲಿ ಭಯಂಕರ ಕ್ರಾಂತಿ!

ಜರ್ಮನಿಯ ಮಂತ್ರಿಮಂಡಲದಲ್ಲೂ, ಪೋಲೀಸ್ ಮತ್ತು ಮಿಲಿಟರಿ ಇಲಾಖೆಗಳಲ್ಲೂ ಮುಖ್ಯ ಮುಖ್ಯ ಅಧಿಕಾರಗಳನ್ನು ವಹಿಸಿದ ಮುಖಂಡರನೇಕರು ಒಟ್ಟಾಗಿ ಈಗಿನ ಸರಕಾರವನ್ನು ತಲೆಕೆಳಗು ಮಾಡುವ ಒಳಸಂಚು ಮಾಡಿದರೆಂಬ ಆಪಾದನೆಯ ಮೇಲೆ ಸರಕಾರದವರು ನೂರಾರು ಜನ ಮುಖಂಡರನ್ನು ದಸ್ತಗಿರಿ ಮಾಡಿ, ಅವರಲ್ಲಿ ಹೆಚ್ಚಿನ ಜನರಿಗೆ ಮರಣದಂಡನೆಯನ್ನು ವಿಧಿಸಿರುತ್ತಾರೆ. ಅನೇಕರು ತಾವಾಗಿ ಆತ್ಮಹತ್ಯ ಮಾಡಿಕೊಂಡರು. ಹಿಟ್ಲರ್‌ರವರ ಈ ಉಗ್ರವರ್ತನವು ಜರ್ಮನಿಯಲ್ಲಿ ಮಾತ್ರವೇ ಅಲ್ಲ; ಇಡೀ ಯೂರೋಪಿನಲ್ಲಿ ಗಡಿಬಿಡಿಯನ್ನುಂಟುಮಾಡಿದೆ.

ಅಚಲಸ್ನೇಹ.

ಜೆಕೊಸ್ಲೋವೇಕಿಯಾದಲ್ಲಿ ಜಾನ್ ಕಾಜಲರ್ ಮತ್ತು ಜನಿ ಸ್ಕಾಯಿಫ ಎಂಬ ಇಬ್ಬರು ತರುಣರಿಗೆ ಅಚಲವಾದ ಸ್ನೇಹವಿದ್ದಿತು. ಶಾಲೆಯಲ್ಲಿ ಇಬ್ಬರೂ ಒಟ್ಟಿಗೆ ವ್ಯಾಸಂಗಮಾಡುತ್ತಿದ್ದು, ದೊಡ್ಡವರಾದನಂತರ ಇಬ್ಬರೂ ಒಟ್ಟಿಗೆ ಒಂದೇ ಕಡೆಯಲ್ಲಿ ಕೆಲಸಮಾಡುತ್ತಿದ್ದರು. ಆರ್ಥಿಕ ಮುಗ್ಗಟ್ಟಿನ ಸಂದರ್ಭದಲ್ಲಿ ಇಬ್ಬರೂ ಒಟ್ಟಿಗೆ ಕೆಲಸವನ್ನು ಕಳೆದುಕೊಂಡರು. ಕೆಲಸಕ್ಕಾಗಿ ಎಷ್ಟು ಪ್ರಯತ್ನಿಸಿದರೂ ಫಲವಾಗದಿರಲು, ಕಡೆಗೆ ಇಬ್ಬರೂ ಒಟ್ಟಿಗೆ ಒಬ್ಬರನ್ನೊಬ್ಬರು ಗುಂಡಿನಿಂದ ಹೊಡೆದು ಮೃತಪಟ್ಟರು. ಅವರು ಬರೆದು ಇಟ್ಟಿದ್ದ ಒಂದು ಕಾಗದದ ಪ್ರಕಾರವಾಗಿ ಇಬ್ಬರೂ ಒಂದೇ ಸಮಾಧಿಯಲ್ಲಿ ಹೂಳಲ್ಪಟ್ಟರು!

'ಧೂಮಕೇತು' ವಿನ ಆಗಮನ.

ದೆಹಲಿಯ ಇಬ್ಬರು ಜ್ಯೋತಿಷ್ಕರು ಇನ್ನು ಕೆಲವು ದಿವಸಗಳೊಳಗಾಗಿ ಮಹಾ ಅನರ್ಥಕಾರಕವಾದ ಒಂದು ಧೂಮಕೇತುವು ಅಂತರಿಕ್ಷದಲ್ಲಿ ಕಾಣಿಸಿಕೊಳ್ಳುವುದೆಂದೂ, 1934 ನೇ ವರ್ಷದ ಅಂತ್ಯದೊಳಗಾಗಿ ಈ ಪ್ರಪಂಚದ ಒಟ್ಟು ಜನಾಂಗದಲ್ಲಿ 100 ಕ್ಕೆ 83 ಜನರಂತೆ ನಾಶಹೊಂದುವರೆಂದೂ ಭವಿಷ್ಯ ಹೇಳಿರುವರು. ಈಗ್ಗೆ ಕೆಲವು ತಿಂಗಳುಗಳಿಂದಲೂ ಪ್ರಪಂಚದ ನಾನಾ ಕಡೆಗಳಲ್ಲಿ ಆಗುತ್ತಿರುವ ಭೂಕಂಪಗಳೂ, ಅತಿವೃಷ್ಟಿಯೂ, ಹಾಗೂ ಪ್ರವಾಹದ ಹಾವಳಿಗಳೂ ಧೂಮಕೇತುವಿನ ಆಗಮನವನ್ನು ಮುಂದಾಗಿ ಸೂಚಿಸುತ್ತಿರುವುವಂತೆ! ಈ ಸಂವತ್ಸರದಲ್ಲಿ ಉಂಟಾದ ಗೋಳಯೋಗವೂ, ಚಂದ್ರಗ್ರಹಣವಾದ 15 ದಿವಸಗಳನಂತರ ಪ್ರಾಪ್ತವಾದ ಸೂರ್ಯಗ್ರಹಣವೂ, ವೈಶಾಖಮಾಸದಲ್ಲಿ ಪ್ರಾಪ್ತವಾದ 13 ದಿವಸಗಳ ಪಕ್ಷವೂ, ಮಾನವಕೋಟಿಯ ನಾಶವನ್ನೇ ಸೂಚಿಸುವುವಂತೆ!

(೩ನೆಯ ಪುಟದಿಂದ ಮುಂದುವರಿದುದು.)

ಶಾಸ್ತ್ರಸಿದ್ಧಾಂತದಂತೆ ನಡೆದು ಆರೋಗ್ಯವನ್ನು ಸಂಪಾದಿಸಿ ಆನಂದದಿಂದಿರುವುದು ಉತ್ತಮವು.

ಇದೀಗ ಪ್ರಸಂಗಾನುಕೂಲವಾಗಿ ಆಹಾರವಸ್ತುಗಳ ಹಿತಾಹಿತವಿಷಯವನ್ನಷ್ಟು ಪ್ರತಿಪಾದಿಸೋಣ.—ಪ್ರಪಂಚದಲ್ಲಿ ಆಹಾರವು ಒಳ್ಳೆಯದೋ ಕೆಟ್ಟುದೋ ಎಂಬುದನ್ನರಿತು ಊಟಮಾಡತಕ್ಕವರ ಸಂಖ್ಯೆ ಬಹಳ ಕಡಿಮೆ. ಅದರಿಂದ ಒಳ್ಳೆಯದರೊಡನೆ ಕೆಟ್ಟ ಆಹಾರವೂ ಹೊಟ್ಟೆಯನ್ನು ಸೇರಲು ಅವಕಾಶವಾಗುವುದು. ಎಲ್ಲರೂ ಈ ವಿಷಯವನ್ನು ತಿಳಿದುಕೊಂಡಿದ್ದರೆ ಪ್ರಕೃತಿಯು ವಿಕೃತವಾಗದಂತೆ ನೋಡಿಕೊಳ್ಳಬಹುದು. ಒಳ್ಳೆಯ ಆಹಾರಗಳಿಂದ ನಮ್ಮ ಶರೀರವು ಪುಷ್ಟವಾಗಿ, ಶಕ್ತಿಯುಳ್ಳದಾಗಿ, ಆರೋಗ್ಯವಾಗಿರುವುದೆಂಬುದೂ, ಹಾಗೆಯೇ ಕೆಟ್ಟ ಆಹಾರಗಳಿಂದ ತೇಜೋಹೀನವಾದುದಾಗಿ, ಅಲಸ್ಯವುಳ್ಳದಾಗಿ, ಕ್ಷೀಣವಾದುದಾಗಿ, ರೋಗಿಯಾಗಿರುವುದೆಂಬುದೂ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಾಗುವುದು. ಇದೇ ವಿಷಯವನ್ನು ಆತ್ರೇಯ ಮಹರ್ಷಿಗಳು ತಮ್ಮ ಶಿಷ್ಯನಾದ ಅಗ್ನಿವೇಶನನ್ನು ಕುರಿತು— "ಯದಾಹಾರಜಾತಮಗ್ನಿವೇಶ! ಸಮಾಂಶ್ಚೈವಶರೀರಧಾತೂನ್ ಪ್ರಕೃತೌಸ್ಥಾಪಯತಿ, ವಿಷಮಾಂಶ್ಚ ಸಮೀಕರೋತಿ, ಇತ್ಯೇತದ್ಧಿತಂ ವಿದ್ಧಿ: ಅಹಿತಂವಿಪರೀತಂ, ಇತ್ಯೇತದ್ಧಿತಾಹಿತಲಕ್ಷಣಮನಪವಾದಂಭವತಿ" "ಯಾವ ಆಹಾರಸಮೂಹವು ಶರೀರದ ಸಮಧಾತುಗಳನ್ನು ಉತ್ತಮವಾಗಿ ಕಾಪಾಡುವುದೋ, ಹಾಗೆಯೇ ವಿಷಮಧಾತುಗಳನ್ನು ಸರಿಪಡಿಸುವುದೋ ಅದನ್ನೇ ಒಳ್ಳೆಯ ಆಹಾರವನ್ನಾಗಿಯೂ, ಇದಕ್ಕೆ ವಿರುದ್ಧವಾಗಿ ಫಲವೀಯುವುದನ್ನು ಕೆಟ್ಟ ಆಹಾರವನ್ನಾಗಿಯೂ ತಿಳಿ" ಎಂದು ಹೇಳಿದ್ದಾರೆ.

ಚರಕಸಂಹಿತೆಯನ್ನನುಸರಿಸಿನೋಡಿದರೆ ಸ್ವಲ್ಪ ಹೆಚ್ಚು ಕಡಿಮೆ ಕೆಂಪುಬಣ್ಣವುಳ್ಳಕಾಳು, ವಿಶೇಷವಾಗಿ ಹೆಸರು, ಸೈಂಧಲವಣ, ಹಸಿಯಕುಂಬಳ, ಬೀಜದ್ರಾಕ್ಷಿ, ಸಕ್ಕರೆ, ಎಳ್ಳೆಣ್ಣೆ, ತಿರಕಸಾಲೆ, ಮತ್ತು ಕಿರಿಹಾಲೆ ಸೊಪ್ಪುಗಳು, ಆಕಳಹಾಲು ತುಪ್ಪಗಳು ಸ್ವಾಭಾವಿಕವಾಗಿ ಹಿತವನ್ನುಂಟುಮಾಡತಕ್ಕವುಗಳೆಂದೂ, ಅವುಗಳನ್ನು ಯಾವಾಗ ಸೇವಿಸಿದರೂ ಯಾವ ವಿಧವಾದ ವಿಕಾರಗಳುಂಟಾಗವೆಂದೂ ತಿಳಿಯಬರುವುದು. ಕಾಯಿಸೊಪ್ಪುಗಳು ಸುಲಭವಾದ ಬೆಲೆಗೆ ದೊರೆತರೂ ಅವುಗಳಲ್ಲೇ ಗುಣವು ಹೆಚ್ಚಾಗಿರುವುದೆಂಬುದನ್ನು ಎಲ್ಲರೂ ನೆನಪಿನಲ್ಲಿಡಬೇಕು. ಒಳ್ಳೆಯ ಆಹಾರಗಳಲ್ಲಿ ಜೀವದ್ರವ್ಯವು ವಿಶೇಷವಾಗಿರುವುದರಿಂದ ಅಂಥವುಗಳ ಸೇವನೆಯಿಂದ ಮನುಷ್ಯನು ಬಲುಬೇಗನೆ ಶಕ್ತಿವಂತನಾಗುವನು. ವಿಶೇಷಶಕ್ತಿಯನ್ನುಂಟುಮಾಡುವ ಆಹಾರಗಳೆಂದರೆ—ಬಾದಾಮಿ, ಸೇವಾಹಣ್ಣು, ಅಂಜೂರಹಣ್ಣು, ರಸಬಾಳೆಹಣ್ಣು, ದಾಳಿಂಬರಹಣ್ಣು, ಸಿಹಿಕಿತ್ತಲೆಹಣ್ಣು, ಅನಾನಸ, ಚಪ್ಪರಬದನೆಕಾಯಿ, ಗಜ್ಜರಿ ಹಸಿಯದ್ರಾಕ್ಷಿ, ಟೆಂಗಿನಕಾಯಿ, ಉಳ್ಳಗೆಡ್ಡೆ, ಬೇಯಿಸಿ ಸಿಪ್ಪೆ ತೆಗೆದ ಆಲೂಗೆಡ್ಡೆ, ಗೋಧಿ ಜೋಳ ಅಕ್ಕಿಗಳ ರೊಟ್ಟಿ, ಹಾಲಕೆನೆ, ಬೆಣ್ಣೆ, ಆಗಲೇ ಹಿಂಡಿದಹಾಲು ಮುಂತಾದುವುಗಳು.

(ಸಶೇಷ).

ಸಮರಸನ್ನಾಹ!

(ವಾಚ್‌ಮನ್ ಪತ್ರಿಕೆಯ ಅನುವಾದ).

ಶಾಂತಿಸ್ಥಾಪನೆಗಾಗಿ ಎಷ್ಟು ಪ್ರಯತ್ನಗಳನ್ನು ಮಾಡಿದರೂ ಪುನಃ ಯುದ್ಧವು ಪ್ರಾಪ್ತವಾಗುವದೆಂದೇ ತೋರುತ್ತಿರುವುದು. ಶಾಂತಿಸ್ಥಾಪಕರ ಮಾತಿನಲ್ಲಿ ನಂಬಿಕೆಯು ಕಡಿಮೆಯಾಗುತ್ತಿರುವದೇ ಇದಕ್ಕೆ ಕಾರಣವಾಗಿದೆ. ಶಸ್ತ್ರಸನ್ಯಾಸವೇ ಮೊದಲಾದ ಸಮ್ಮೇಳನಗಳಲ್ಲಿ ಎಲ್ಲರಿಗೂ ಸಂಶಯವೇ ಹೆಚ್ಚುತ್ತಿರುವುದು. ಈ ಪ್ರಯತ್ನಗಳು ಯುದ್ಧವನ್ನು ಕೆಲವುಕಾಲ ತಡೆಯಬಹುದಾದರೂ, ಯುದ್ಧವು ಸಿದ್ಧವೆಂದೇ ಎಲ್ಲರೂ ಹೇಳುವರು. ಮುಂದಿನ ಭೀಕರ ಪರಿಣಾಮದ ಅರಿವೇ ಇಲ್ಲದೆ ಎಲ್ಲರೂ ಯುದ್ಧದ ವಿಷಯವನ್ನೇ ಚರ್ಚಿಸುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುವುದು. ಯುದ್ಧದ ಭೀಕರತೆಯನ್ನೂ ಅದರಿಂದ ಸಂಭವಿಸುವ ಅಪಾರ ಕಷ್ಟನಷ್ಟಗಳನ್ನೂ ಎಲ್ಲರೂ ಮರೆತಂತೆ ತೋರುವುದು. ಇಂದಿನ ತರುಣರಿಗೆ 1914-18 ವರ್ಷಗಳ ಘೋರಯುದ್ಧವು ಕೇವಲ ಚಾರಿತ್ರಿಕವಿಷಯವಾಗಿದೆ. ಅಂದಿನ ಬಾಲಕಬಾಲಿಕೆಯರು ಇಂದಿನ ತರುಣತರುಣಿಯರಾಗಿರುತ್ತಾರೆ. ಅವರ ತಂದೆತಾಯಿಗಳೂ ಬಂಧುಬಾಂಧವರೂ ಸಹೋದರರೂ ಯುದ್ಧದಲ್ಲಿ ಮಡಿದರೆಂಬುದನ್ನು ಕೇಳಿದ್ದರೂ ಅವರು ಪಟ್ಟ ಕಷ್ಟಪರಂಪರೆಗಳ ನಿಜಸ್ವರೂಪವನ್ನು ಅರಿಯರು. ಯುದ್ಧದ ವಿಷಯವಾಗಿ ಹಿರಿಯರು ಕಥೆಯರೂಪದಲ್ಲಿ ಹೇಳಿದುದನ್ನೋ, ವಿನೋದವಾಗಿ ಚಲನ ಚಿತ್ರಗಳಲ್ಲಿ ನೋಡಿದುದನ್ನೋ, ಅಥವಾ ಕಾದಂಬರಿಗಳಲ್ಲಿ ಓದಿದುದನ್ನೋ ಬಲ್ಲರೇ ವಿನಾ, ಅನೇಕಾನೇಕ ಮೈಲುಗಳುದ್ದ ಕೆಸರಿನಲ್ಲಿ ನಡೆಯುವದನ್ನಾಗಲಿ, ಜಲಮಯವಾದ ಕಂದಕಗಳಲ್ಲಿ ನಿಂತು ಕಡಿದಾಡುವುದನ್ನಾಗಲಿ, ಸಿಡಿಮದ್ದುಗಳಿಂದ ಮಾಡಲ್ಪಟ್ಟ ಹಳ್ಳಗಳಲ್ಲಿ ಅಡಗಿಕೊಂಡು ಚಳಿಯಲ್ಲಿ ನಡುಗುವುದನ್ನಾಗಲಿ, ಅವರು ಅರಿಯರು. ಯುದ್ಧರಂಗದಲ್ಲಿ ಅಂಗಾಂಗಗಳನ್ನು ಕಳೆದುಕೊಂಡವರ ಕಷ್ಟವನ್ನೂ, ವಿಷದಗಾಳಿಯ ಸೇವನೆಯಿಂದ ಉಸಿರಾಡಲು ಸಹ ಮಾರ್ಗವಿಲ್ಲದೆ ಸಂಕಟಪಡುವುದನ್ನೂ, ಅವರು ಅರಿಯರು. ವಿಮಾನಗಳ ಜ್ವಾಲೆಯಿಂದ ಸಹಸ್ರಾರು ಜನರು ಪ್ರಾಣಬಿಡುವುದನ್ನಾಗಲಿ, ಸಿಡಿಮದ್ದುಗಳ ದೆಸೆಯಿಂದ ಸೈನಿಕರು ಛಿದ್ರಛಿದ್ರವಾಗುವುದನ್ನಾಗಲಿ, ಅವರು ಕಂಡರಿಯರು. ದೊಡ್ಡದೊಡ್ಡ ನಗರಗಳೆಲ್ಲವೂ ಧಗಧಗಿಸಿ ಉರಿಯುವುದನ್ನೂ, ರಕ್ಷಕರಿಲ್ಲದ ಬಡಪ್ರಜೆಗಳು ಹೆಂಗಸರು ಮತ್ತು ಮಕ್ಕಳು ದಿಕ್ಕೆಟ್ಟು ಪ್ರಾಣಭೀತಿಯಿಂದ ಓಡಿಹೋಗುವುದನ್ನೂ ಅವರು ಕಂಡರಿಯರು.

ಈ ವಿಷಮ ಸನ್ನಿವೇಶಕ್ಕೆ ಪೂರ್ವದ ದ್ವೇಷವೇ ಮುಖ್ಯಕಾರಣವಾಗಿರುವುದು. ಕಳೆದ ಘೋರಯುದ್ಧದ ಅಂತ್ಯದಲ್ಲಿ ನಡೆದ ವಾರ್ಸೇಲ್ಸ್ ಒಪ್ಪಂದದಲ್ಲಿ, ಗೆದ್ದವರು ಯೂರೋಪಿನ ರಾಜ್ಯವಿಭಾಗದಲ್ಲಿ ಕೆಲವು ಹೆಚ್ಚು ಕಡಿಮೆಗಳನ್ನು ಮಾಡಿ, ತಮ್ಮ ತೀರ್ಮಾನವನ್ನು ಜನರು ಸಂತೋಷದಿಂದ ಒಪ್ಪಿಕೊಳ್ಳುವರೆಂದು ಭಾವಿಸಿದರು. ಈಗ 'ಪಾಲಿಷ್ ಕಾರಿಡರ್' ಎಂದು ಕರೆಯಲ್ಪಡುವ ಭೂಭಾಗವನ್ನು ಜರ್ಮನಿಯಿಂದ ಬೇರೆಮಾಡಿ ಪೋಲೆಂಡ್ ಸರಕಾರಕ್ಕೆ ವಹಿಸಿದುದು ಅತ್ಯಂತ ದೊಡ್ಡ ತಪ್ಪಾಗಿದೆ. ಆತ್ಮಾಭಿಮಾನವುಳ್ಳ ಯಾವ ರಾಜ್ಯವೂ ಇಂಥ ವಿಭಜನೆಯನ್ನು ಬಹುಕಾಲ ಸಹಿಸಿಕೊಂಡಿರುವುದಿಲ್ಲ. ಪೋಲೆಂಡ್ ಸರಕಾರವು ಇದನ್ನು ಚೆನ್ನಾಗಿ ಬಲ್ಲದು. ಅದಕ್ಕಾಗಿಯೇ ಯೂರೋಪಿನ ಎಲ್ಲ ರಾಜ್ಯಗಳಿಗಿಂತಲೂ ಅವರೇ ಹೆಚ್ಚು ಯುದ್ಧೋತ್ಸಾಹಿಗಳಾಗಿರುವರು. ಅಲ್ಲಿ ಅಪಾರವಾದ ಯುದ್ಧದ ಸಿದ್ಧತೆಯು ನಡೆದಿರುವದೆಂದು ಕಂಡವರು ಹೇಳುವರು. ಲಂಡನ್ನಿನ ಒಬ್ಬಾನೊಬ್ಬ ಪತ್ರಿಕಾಪ್ರತಿನಿಧಿಯು 'ಪಾಲಿಷ್ ಕಾರಿಡರ್' ನಲ್ಲಿ ಎಲ್ಲೆಲ್ಲೂ ಸೈನಿಕರೇ ತುಂಬಿಹೋಗಿರುವರೆಂದೂ ಬರೆದಿರುವನು.

ವಾರ್ಸೇಲ್ಸ್ ಒಪ್ಪಂದದಲ್ಲಿ ವಿಭಾಗಮಾಡಲ್ಪಟ್ಟ ರಾಜ್ಯಗಳಲ್ಲಿ ಹಂಗೇರಿಯೂ ಒಂದು. 'ಆಸ್ಟ್ರಿಯಾ-ಹಂಗೇರಿ' ಸಾಮ್ರಾಜ್ಯವನ್ನೇ ಸಂಪೂರ್ಣವಾಗಿ ಮುರಿಯಬೇಕೆಂಬ ಉದ್ದೇಶದಿಂದ ಸಂಧಾನಕಾರರು ಅವುಗಳನ್ನು ಪ್ರತ್ಯೇಕ ಮಾಡಿದರು. ಅದರ ಪ್ರಾಂತಗಳು ವಿಂಗಡಿಸಲ್ಪಟ್ಟು ಬೇರೆಯವರಿಗೆ ಕೊಡಲ್ಪಟ್ಟವು. ಅದರಿಂದ ಜೆಕೊ-ಸ್ಲೋವೇಕಿಯಾ, ಮತ್ತು ಯೂಗೊಸ್ಲೇವಿಯಾ ಎಂಬ ಎರಡು ಹೊಸ ರಾಜ್ಯಗಳು ಹುಟ್ಟಿದುವು. ಆಸ್ಟ್ರಿಯಾ ಮತ್ತು ಹಂಗೇರಿ ರಾಜ್ಯಗಳು ಮೊದಲಿಗಿಂತಲೂ ಅಲ್ಪವಿಸ್ತೀರ್ಣವುಳ್ಳವುಗಳಾದವು. ಆದರೆ ಅಲ್ಲಿಯ ಜನರು ಅದನ್ನು ಮರೆತಿಲ್ಲ. ಹಂಗೇರಿಯಲ್ಲಿ ಎಲ್ಲಿ ನೋಡಿದರೂ ಅಶಾಂತಿಯೇ ಕಂಡುಬರುವುದು.

ಸರ್ ಫಿಲಿಪ್ ಗಿಬ್ಸ್ ಎಂಬವರು ಕೆಲವು ಕಾಲದ ಹಿಂದೆ ಹಂಗೇರಿ ದೇಶವನ್ನು ಚೆನ್ನಾಗಿ ಸುತ್ತಿ, 'Since Then' ('ಅಂದಿನಿಂದ ಈಚೆಗೆ') ಎಂಬ ಪುಸ್ತಕವನ್ನು ಬರೆದಿರುವರು. ಹಂಗೇರಿ ದೇಶದ ಒಬ್ಬ ರೈತನು ಅವರಿಗೆ ಈ ರೀತಿ ಹೇಳಿರುವನಂತೆ!

"ಯುರೋಪಿನಲ್ಲಿ ಶಾಶ್ವತವಾದ ಶಾಂತಿಯಿಲ್ಲ. ಬಾಲ್ಕನ್ ರಾಜ್ಯಗಳು ಶಾಂತಿರಹಿತವಾಗಿವೆ. ಪುನಃ ಯುದ್ಧವು ಸಂಭವಿಸುವುದು. ಎಲ್ಲಿ ಯುದ್ಧವೋ ಅಲ್ಲಿ ಹಂಗೇರಿಯು ಇದ್ದೇ ಇರುವುದು. ಹೊಲಗಳಲ್ಲಿ ಕೆಲಸಮಾಡುವ ಹೆಂಗಸರು ಗಂಡಸರು ಮತ್ತು ಮಕ್ಕಳು ತಮ್ಮ ಶಸ್ತ್ರಗಳೊಂದಿಗೆ ಹೋಗಿ ನಮ್ಮ ಭೂಮಿಯನ್ನೂ ನಮ್ಮ ಆಸ್ತಿಪಾಸ್ತಿಗಳನ್ನೂ ನಮ್ಮ ಜನರನ್ನೂ ಅಪಹರಿಸಿರುವ ಶತ್ರುಗಳ ನಾಲಿಗೆಗಳನ್ನು ಕತ್ತರಿಸುವರು."

ಹಂಗೇರಿ ದೇಶದ ಪ್ರತಿ ಟ್ರಾಂ ಗಾಡಿಯಲ್ಲಿಯೂ, ಪ್ರತಿಯೊಂದು ಪಾಠಶಾಲೆಯ ಗೋಡೆಗಳ ಮೇಲೂ, ರೆಸ್ಟೋರೆಂಟುಗಳಲ್ಲಿಯೂ, ದೇವಾಲಯಗಳಲ್ಲಿಯೂ, ನರ್ತನಶಾಲೆಗಳಲ್ಲಿಯೂ, ಹಾಗೂ ಪ್ರತಿಯೊಂದು ಮನೆಯಲ್ಲಿಯೂ ಹಂಗೇರಿ ರಾಜ್ಯದ ನೂತನ ಸ್ವರೂಪದ ಭೂಪಟವು ತೂಗಹಾಕಲ್ಪಟ್ಟಿರುವುದು. ಹಂಗೇರಿಯು ಕಳೆದುಹೋದ ಭಾಗವು ಕಪ್ಪುಬಣ್ಣದಲ್ಲಿ ತೋರಿಸಲ್ಪಟ್ಟಿರುವುದು. ಭೂಪಟದ ಕೆಳಭಾಗದಲ್ಲಿ 'ಇದು ಹೀಗೆಯೇ ಇರಬಲ್ಲದೇ?' ಎಂಬ ಪ್ರಶ್ನೆಯೂ, ಅದಕ್ಕೂ ಕೆಳಗೆ 'ಇಲ್ಲ, ಇಲ್ಲ, ಎಂದಿಗೂ ಇಲ್ಲ!' ಎಂಬ ಉತ್ತರವೂ ದಪ್ಪ ಅಕ್ಷರಗಳಲ್ಲಿ ಬರೆಯಲ್ಪಟ್ಟಿರುವುವು.

ಇಂತಹ ಸ್ಥಿತಿಯಲ್ಲಿ ಶಸ್ತ್ರಸನ್ಯಾಸವು ಎಂದಿಗೂ ಸಾಧ್ಯವಿಲ್ಲ. ದ್ವೇಷಾಸೂಯೆಗಳು ಅದಕ್ಕೆ ಮುಖ್ಯ ಅಡಚಣೆಗಳಾಗಿರುವುವು. ನಿಜವಾಗಿಯೂ ಎಲ್ಲ ರಾಜ್ಯಗಳವರೂ ಶಸ್ತ್ರಸನ್ಯಾಸಮಾಡುವುದಾದರೆ, ಒಬ್ಬರಿಗೊಬ್ಬರು ಕೊಡಬೇಕಾಗಿರುವ ಸಾಲವನ್ನು ಬಹುಜಾಗ್ರತೆಯಾಗಿ ತೀರಿಸಬಹುದಲ್ಲದೆ, ದೇಶದ ಸ್ಥಿತಿಯನ್ನೂ ಉತ್ತಮಗೊಳಿಸಬಹುದು. ಆದರೆ ಒಬ್ಬರನ್ನೊಬ್ಬರು ನಂಬದಿರುವುದರಿಂದ ಅದು ಅಸಾಧ್ಯವಾಗಿರುವುದು. ಜಿನಿವಾ ನಗರದಲ್ಲಿರುವ ಅಂತರ ರಾಷ್ಟ್ರೀಯ ಮಹಾಸಭೆಯ ಸೆಕ್ರೆಟರಿಯಟ್ಟಿನವರು, ಯೂರೋಪಿನ ರಾಷ್ಟ್ರಗಳವರು ಯುದ್ಧ ಸಾಮಗ್ರಿಗಳಿಗಾಗಿ ಪ್ರತಿವರ್ಷವೂ 90 ಕೋಟಿ ಪೌಂಡುಗಳನ್ನು ವೆಚ್ಚಮಾಡುತ್ತಿರುವರೆಂದು ಲೆಕ್ಕಹಾಕಿರುವರು. ಅಂದರೆ ದಿನ 1ಕ್ಕೆ 4 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿದಂತಾಯಿತು! ಅಂದಮೇಲೆ ಪ್ರಪಂಚಕ್ಕೆ ಬಡತನವುಂಟಾಗಿರುವುದರಲ್ಲಿ ಆಶ್ಚರ್ಯವೇನು?

ಮುಂದಿನ ಯುದ್ಧವು ಇಡೀ ಪ್ರಪಂಚದ ಯುದ್ಧವಾಗುವುದು. ಸಮಸ್ತ ರಾಷ್ಟ್ರಗಳೂ ಅದರಲ್ಲಿ ಭಾಗವನ್ನು ವಹಿಸುವುವು. ಸ್ತ್ರೀಪುರುಷರಾದಿಯಾಗಿ ಸಮಸ್ತರೂ ಅದರಲ್ಲಿ ಭಾಗ ವಹಿಸುವರು. ವಿಷಗಾಳಿಯ ಸಿಡಿಮದ್ದುಗಳು ಎಂತಹ ರಕ್ಷಣೆಯನ್ನಾದರೂ ಭೇದಿಸಿ ನಿಮಿಷಮಾತ್ರದಲ್ಲಿ ಜನರನ್ನು ಕೊಲ್ಲುವುವು. 'ಫಾಸ್ಪರಸ್' ಸಿಡಿಮದ್ದುಗಳು ಅರ್ಧನಿಮಿಷದೊಳಗಾಗಿ ಜನರನ್ನು ಸುಟ್ಟು ಭಸ್ಮಮಾಡಬಲ್ಲವು. ಈ ಸಿಡಿಮದ್ದುಗಳನ್ನು ಯಾವ ಕಾರಣದಿಂದಲೂ ಆರಿಸಲಾಗುವುದಿಲ್ಲ. ಪ್ರತಿನಿಮಿಷವೂ ಸಹಸ್ರಾರು ಗುಂಡುಗಳನ್ನು ಹಾರಿಸಬಲ್ಲ ನೂರಾರು ಯಂತ್ರಗಳೂ, ವಿಮಾನಗಳೂ, ಯಾವ ಮಾರ್ಗದಿಂದಲೂ ರಕ್ಷಣೆಮಾಡಿಕೊಳ್ಳಲು ಸಾಧ್ಯವಿಲ್ಲದಂತೆ ಭಯಂಕರಗಳಾದ ಸಿಡಿಮದ್ದುಗಳನ್ನು ಸುರಿಸಿ ಸರ್ವನಾಶವನ್ನುಂಟುಮಾಡುವ ಸಹಸ್ರಾರು ವಿಮಾನಗಳೂ ಯುದ್ಧದಲ್ಲಿ ಭಾಗವಹಿಸುವುವು. ಮುಂದಿನ ಯುದ್ಧಕ್ಕೆ ಗೊತ್ತಾದ ರಣರಂಗವಿಲ್ಲ. ಇಡೀ ದೇಶವೇ ರಣರಂಗವಾಗುವುದು.

ಹಾವರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಕ್ಯಾನನ್ ಎಂಬವರು, ಮುಂದಿನ ಯುದ್ಧದಲ್ಲಿ ನಡೆಯುವ ಅಸಂಖ್ಯಾಕವಾದ ಪ್ರಾಣನಷ್ಟಕ್ಕೂ, ದೊಡ್ಡದೊಡ್ಡ ನಗರಗಳ ನಾಶಕ್ಕೂ ಹೋಲಿಸಬಹುದಾದಂತಹ ಅನರ್ಥವು ಕಳೆದ ಯುದ್ಧದಲ್ಲಿ ಏನೂ ನಡೆಯಲಿಲ್ಲವೆಂದು ಹೇಳಿರುತ್ತಾರೆ. 1914ನೇ ವರ್ಷದ ಯುದ್ಧದಲ್ಲಿ 30 ತರಹ ವಿಷದಗಾಳಿಗಳು ಉಪಯೋಗಿಸಲ್ಪಟ್ಟಿದ್ದವು. ಈಗ 1000 ತರಹದ ವಿಷದ ಗಾಳಿಗಳು ಪ್ರಾಣಿಕೋಟಿಯ ನಾಶಕ್ಕೆ ಸಿದ್ಧವಾಗಿರುವುವು.

ವಿಮಾನಗಳಿಂದ ಉಂಟಾಗಬಹುದಾದ ಅನಾಹುತವು ನಮ್ಮ ಆಲೋಚನಾಶಕ್ತಿಗೆ ಮೀರಿರುವುದು. ಗಂಟೆಯೊಂದಕ್ಕೆ 200 ರಿಂದ 250 ಮೈಲುಗಳ ವೇಗದಲ್ಲಿ ಪ್ರಯಾಣಮಾಡುವ ಅನೇಕಾನೇಕ ಏರೋಪ್ಲೇನುಗಳು, ಕಣ್ಣಿಗೆ ಕಾಣಿಸದಷ್ಟು ಎತ್ತರದಲ್ಲಿ ಬಂದು ಪ್ರತಿಯೊಂದೂ 1000 ದಿಂದ 3000 ಪೌಂಡುಗಳಷ್ಟು ಸಿಡಿಮದ್ದನ್ನು ನಗರಗಳಮೇಲೆ ಚೆಲ್ಲಬಲ್ಲವು. ಮುಂದಿನ ಏರೋಪ್ಲೇನುಗಳು ಸಂಪೂರ್ಣ ವಿದ್ಯುಚ್ಛಕ್ತಿಯಿಂದಲೇ ನಡೆಯುವುವು. ಮನುಷ್ಯರ ಸಹಾಯವಿಲ್ಲದೆ ತಮಗೆ ತಾವೇ ಅಂತರಿಕ್ಷದಲ್ಲಿ ಸಂಚರಿಸುವುವು ಮತ್ತು ಗೊತ್ತಾದಕಾಲಕ್ಕೆ ಸರಿಯಾಗಿ ಶತ್ರುಪಕ್ಷದ ನಗರಗಳ ಮೇಲೆ ಸಿಡಿಮದ್ದುಗಳನ್ನು ಸುರಿಸುವುವು.

ಶಾಂತಿಸಂಧಾನ ಪ್ರಯತ್ನಗಳು ಸಂಪೂರ್ಣವಾಗಿ ನಿಷ್ಫಲವಾದರೆ, ಇಂದಿನ ನವನಾಗರಕತೆಯೂ ಸಂಪೂರ್ಣವಾಗಿ ನಾಶಹೊಂದುವುದು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 34

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 41

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಫೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದೇಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (17)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾಕ್ಕೆ

ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ. 5

ಮಲೆರಿಗ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8,

The Malariana Co., Mangalore (21)

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣತೆ, ಗ್ರಹಣಿ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಕರಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್‌ಕೆಫ್‌ರೆಮೆಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಪ್ಪೆಕೆಮ್ಮು ಇವನ್ನು ಬೇರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5.

ಸಿರಪ್‌ನೆಸಿಫೂಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣುತೋರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡಸೀಸೆ ರೂ. 3-8-0, ಸಣ್ಣಸೀಸೆ ರೂ. 1-14-0.

ಬಿಚ್ಚು ಹೊಮ್ಯೋಪತಿ ಮದ್ದುಗಳೂ, ಸ್ಪಷ್ಟಾಚಕ್ರಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಪಿಂಮಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಪತ್ತೆ:— ಮಲೇರಿಯಾನ ಕಂಪೆನಿ,

[44] (ಹಂಪನಕಟ್ಟೆ), 21, ಮಂಗಳೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆರೆ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆರೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆರೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆರೆ ೧ಕ್ಕೆ	೦—೦—೯
ಷಟ್ಸ್ಥಲ ಶೀಲಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆರೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆರೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೮೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[26] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೬ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೬ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೬ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	२ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಜುಲೈ ೧೯೩೪ [ಸಂಚಿಕೆ ೯

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲಾ ಶಿರೋರತ್ನದಂತೆ ಒಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಅದ್ವೈತಖಂಡನಪೂರ್ವಕ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ಸಿದ್ಧಾಂತಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷದ ವ್ಯಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ರೇಣುಕವಿಜಯಮಹಾಪುರಾಣ.

(ಶ್ರಾವಣಮಾಸವು ಸಮೀಪಿಸಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀ ಜಗದ್ಗುರು ರೇಣುಕಾಚಾರ್ಯನ ಪುರಾಣವನ್ನು ತರಿಸಿಕೊಂಡು ಪುರಾತನಪದ್ಧತಿಯಂತೆ ಶ್ರಾವಣಮಾಸದಲ್ಲಿ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಪ್ರಾರಂಭಮಾಡಿ ಆ ಮಹಿಮನ ಸಚ್ಚರಿತ್ರವನ್ನು ಕೇಳಿ ತಮ್ಮ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ. ಬೆಲೆ ೧ ರೂ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಶ್ರೀಮನ್ ಮಹಾರಾಣೀ ರೀಜಂಟರವರ ನಿಧನದ ಬಗ್ಗೆ

ಸಂತಾಪಸೂಚನೆ

(ಅಶ್ರುಕುಸುಮಗಳು.)

(ಲೇಖಕ—ಕರ್ನಾಟಕಾಂಧ್ರಕವಿ ಹರಿಕಥಾವಿದ್ವಾನ್ ಬಿ. ಭೀಮರಾಜು ಅವರ ಭಕ್ತಿನಿವೇದನ.)

ಕಂ|| ಕನ್ನಡ ಭೂವನಿತೆಯುಮಂ |
ಕನ್ನಡ ಭೂರಮಣಯುಗಮು ಪೆತ್ತ ಜನನಿಯುಂ ||
ಕನ್ನಡಿಗರ ರಾಜ್ಞಿಯುಂ |
ಕನ್ನಡ ನಾಡೀದಿ ದಿವಸಮೇ ದುರ್ದಿವಸಂ ||೧||

ಸೀ|| ಚಿಕ್ಕತನದಿ ದಶರಥನನ್ನು ತೊರೆದಂಥ
ಕೌಸಲ್ಯೆ ನೆನಪಿಗೆ ಬರ್ಪಳೆಂಬ
ಅಕ್ಕಟಾ! ಬಾಲ್ಯದೆ ಪಾಂಡುವನ್ನಗಲಿದ
ಕುಂತಿಯೇ ಸ್ಮರಣೆಗೆ ಬರ್ಪಳೆಂಬ
ಮಕ್ಕಳೆಯಿಂದಲಿ ಮಕ್ಕಳ ಸಲಹಿದ
ರಾಜಮಾತೆಯರ ನೀಂ ಪೋಲ್ತೆಯೆಂಬ
ಅಕ್ಕರೆಯಿಂ ರಾಜನೀತಿಯ ಕಲಿಸುತ
ತಕ್ಕ ಪ್ರಭುಗಳ ನೀನಿತ್ತೆಯೆಂಬ

ಗೀ|| ಪ್ರಜೆಯ ನಿನ್ನಯ ಬಳಗವೆಂದರಿತೆಯೆಂಬ
ತ್ಯಜಿಸಿ ಸೌಖ್ಯವ ಪ್ರೀತಿಯೊಳಾಳ್ದೆಯೆಂಬ
ವಿಜಯ ಕೀರ್ತಿಯನಾರ್ಜಿಸಿ ಪೋದೆಯೆಂಬ
ಸುಜನಮಾತೆ ಕೆಂಪನ್ನನಂಜಮಾಂಬಾ ||೨||

ಕಂ|| ವಿಶ್ವೇಶ್ವರಿ ಮಹಾರಾಜ್ಞಿಯ |
ಸತ್ಪ್ರಮದಿಂ ಚಿಂತೆಯನಾಳ್ದ ಪೆಣ್ಣುಗಳ ನೀಂ ||
ಶಕ್ತಿಯೊಳು ವಿರಾಜಿಸಿದೆಯೋ |
ಭಕ್ತಿಯ ನೀಡಿಸುತ ಮುಕ್ತಿಯಾಂತೌ ಮಾತೇ ||೩||

ಸೀ|| ರಾಜರ್ಷಿ ಕೃಷ್ಣ ಮಹೀಶ ರತ್ನವನಿತ್ತ
ರಾಜಮಾತೆಯು ಕೆಂಪನಂಜಮಾಂಬ
ಕಮಲಾಪ್ತನಿಗೆ ಸುಧೀರ ಕಂಠೀರವಾಖ್ಯ
ಮಹಾ ವಜ್ರವಿತ್ತ ನೀಂ ನಂಜಮಾಂಬ
ಜಯಚಾಮರಾಜ ದೌಹಿತ್ರ ವೈಡೂರ್ಯ ಮದಯದೊಳಗಿತ್ತ ನೀಂ ನಂಜಮಾಂಬ
ಮಾತೃತ್ರಯರೊಳಿತ್ತ ಮಹಾಮಾತೆ
ಕೀರ್ತಿಶಾಲಿಯೆ ಆದಿಶಕ್ತಿಯಂಬ

ಗೀ|| ನಿನ್ನ ವರವಂಗ್ಲವಾಧಿಯೊಳ್ನಿಸಿದ
ಮನೆತ್ರಯಂಗಳ ದೇವಿಯ ಚರಣದಿರಿಸಿ
ಆದಿಶಕ್ತಿಯೊಳೈಕ್ಯವ ಪೊಂದಿ ನಲಿವ
ದಿವಿಯೊಳಾತ್ಮವು ಶಾಂತಿಯ ಪೊಂದಲೆಂಬಾ ||೪||

ಕಂ|| ಮಕ್ಕಳನಂತಾನಂತಂ |
ಅಕ್ಕಟ! ನೀಂ ತೊರೆದೆಯೆಂದು ಮರುಗುವರಂಬಾ ||
ತಕ್ಕುದೆ ನೀಂ ಪೇಳಲ್ಲದ |
ಸಕ್ಕರೆಯಿಂ ನೋಳ್ಪೆನೆಂದು ದಿವಿಯೊಳಗಮ್ಮಾ ||೫||

ಭರವಸೆಯನೀಯುವಿದೋ ಕರೆ |
ಮರುಗುತ್ತಂ ಕೊರಗಿ ನಿನ್ನ ಹಿಂಬಾಲಿಸರೇ ||
ಧರೆಯಾಳ್ವ **ಕೃಷ್ಣಭೂಪಂ** |
ಗರಿಮ ಮಹಾಶಾಂತಿಯುಳ್ಳನಾಗೆಂದೆನುತಂ ||೬||

ದೇವಕಿ ಯಶೋದೆಯರೆನಲ್ |
ದಾವ ಮಹಾ ಮಾತೃಭಕ್ತಿಪತ್ತನೆ ಕೃಷ್ಣಂ ||
ಆವಿಧದ ಮಾತೃಭಕ್ತಂ |
ಕೋವಿದ ನೀ **ಕೃಷ್ಣಭೂವರಂ** ಯದುಜಾತಂ ||೭||

ನರಸೇಂದ್ರಚಂದ್ರನುಂ ತಾಂ |
ವರ **ಜಯಚಾಮೇಂದ್ರ**ರಾದಿ ಬಂಧುವಿತತಿಯುಂ ||
ಕೊರೆಯುತಿ ದುಃಖದಿಂದಾ |
ಚಿರಮುಖಂ ನೋಳ್ಪ ವಿಧಿಗೆ ವಾತೆಗೆ ಮುನ್ನಂ ||೮||

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಒಟ್ಟಿನಲ್ಲಿ ಮಂತ್ರಪ್ರವರ್ತಕನು ಋಷಿಯೆಂದೂ, ಮಂತ್ರಪ್ರತಿಪಾದ್ಯನು ದೇವತೆಯೆಂದೂ, ಮಂತ್ರದ ನಿಯಮಿತಾಕ್ಷರ ಪಟದ್ದ್ರಶೈಲಿಯು ಛಂದಸ್ಸೆಂದೂ ಅರಿಯಲ್ಪಡುವುದರಿಂದ, ಆ ಆ ಮಂತ್ರಗಳ ಋಷಿ, ದೇವತೆ, ಛಂದಸ್ಸುಗಳು ಬೇರೆ ಬೇರೆಯವಾಗಿರುತ್ತವೆಂದು ಸಿದ್ಧವಾಗುವುದು. ಅವುಗಳಲ್ಲಿ ಮಂತ್ರಸಮುದಾಯಾತ್ಮಕವಾದ ಆ ಆ ಸಂಹಿತೆಯ ಶಾಖಾಪ್ರವರ್ತಕರ (ಋಷಿಗಳ) ಹೆಸರುಗಳನ್ನೂ ಋಕ್ಸಂಹಿತೆಯ ವಿಭಾಗ ವಿಶೇಷ ವಿಚಾರವನ್ನೂ ಪ್ರಥಮೋಲ್ಲಾಸದಲ್ಲಿಯೇ ವಿವರಿಸಿರುವೆವಷ್ಟೆ? ಈ ಸಂಹಿತೆಯ ಸರ್ವಮಂಡಲಗಳ ಸೂಕ್ತಗಳೂ ಛಂದೋಮಯಗಳಾದುದರಿಂದ ಋಗ್ವೇದವು ಪದ್ಯರೂಪವಾದುದೆಂಬುದು ಸ್ಪಷ್ಟವು. ಹೀಗೆ ಋಕ್ಸಂಹಿತೆಯ ಪದ್ಯಾತ್ಮಕಗಳಾದ ಸರ್ವಸೂಕ್ತಗಳಲ್ಲಿ ಕೆಲವು ಸ್ತೋತ್ರರೂಪಗಳಾಗಿಯೂ, ಕೆಲವು ಸಂವಾದರೂಪಗಳಾಗಿಯೂ, ಕೆಲವು ವೇದಕಾಲೀನ ಸ್ಥಿತಿಸೂಚಕಗಳಾಗಿಯೂ, ಕೆಲವು ಸಂಸ್ಕಾರಬೋಧಕಗಳಾಗಿಯೂ, ಕೆಲವು ಅಧ್ಯಾತ್ಮವಿದ್ಯೆಯ ಅಂದರೆ ಪರಾವಿದ್ಯೆಯ (ಶಿವಜ್ಞಾನದ) ವಿಚಾರಪರಗಳಾಗಿಯೂ, ಕೆಲವು ಪೂರ್ವವೃತ್ತಾಂತಪ್ರಾಶಕಗಳಾಗಿಯೂ ಇರುತ್ತವೆ. ವಿಶಿಷ್ಟಸೂಕ್ತಗಳ ಪ್ರವರ್ತಕರಾದ ಋಷಿಗಳು ಬೇರೆ ಬೇರೆಯಿರುವಂತೆ ಅವುಗಳ ದೇವತೆ ಛಂದಸ್ಸುಗಳಾದರೂ ಬೇರೆಬೇರೆಯವಾಗಿರುವುವು. ಈ ದೇವತಾ ಛಂದಸ್ಸುಗಳ ಪರಿಚಯಕ್ಕಾಗಿ ನಾವೀಗ ಋಕ್ಸಂಹಿತೆಯ ಪ್ರಥಮ ಮಂಡಲವನ್ನು ಉದಾಹರಣೆಗಾಗಿ ನಮ್ಮ ಮುಂದಿಟ್ಟುಕೊಳ್ಳುವಾ. ಈ ಮಂಡಲದಲ್ಲಿ ಬೇರೆ ಬೇರೆ ದೇವತೆಗಳನ್ನುದ್ದೇಶಿಸಿರುವ ಸೂಕ್ತಗಳ ಸಂಖ್ಯೆಯನ್ನೂ ಆ ಆ ಸೂಕ್ತಗಳ ಛಂದಸ್ಸುಗಳನ್ನೂ ಇಲ್ಲಿ ಬರೆಯುತ್ತೇವೆ—

ಇಂದ್ರ	ದೇವತಾಕ	ಸೂಕ್ತಗಳು	೪೪
ಅಗ್ನಿ	..	..	೩೪
ಅಶ್ವೀ	..	..	೧೫
ಮರುತ	..	..	೧೧
ವಿಶ್ವದೇವ	..	..	೮
ಉಷಾ	..	..	೫
ಋಭು	..	..	೪
ಇಂದ್ರಾಗ್ನೀ	..	..	೩
ಮಿತ್ರಾವರುಣ	..	..	೩
ದ್ಯಾವಾಪೃಥಿವೀ	..	..	೩
ಪೂಷನ್	..	..	೨
ವಿಷ್ಣು	..	..	೨
ಅಶ್ವ	..	..	೨
ಸೂರ್ಯ	..	..	೨
ವರುಣ	..	..	೧
ಇಂದ್ರಾವರುಣ	..	..	೧
ಬೃಹಸ್ಪತಿ	..	..	೧
ವಾಯು	..	..	೧
ಇಂದ್ರಾಮರುತ್	..	..	೧
ಸೋಮ	..	..	೧
ಅಗ್ನಿಷೋಮ	..	..	೧
ರುದ್ರ	..	..	೧
ದಾನಸ್ತುತಿ	..	..	೧
ಬೃಹಸ್ಪತಿ	..	..	೧
ಅನ್ನ	..	..	೧
ರಾತ್ರಿ	..	..	೧

ಎಂಬ ದೇವತೆಗಳ ಸೂಕ್ತಗಳಿರುತ್ತವೆ. ಇನ್ನು ಬೇರೆ ಮೂವತ್ತಾರು ದೇವತಾಸೂಕ್ತಗಳೂ ಮೂರು ಆಪ್ರೀಸೂಕ್ತಗಳೂ ಇವೆ. ಛಂದಸ್ಸಿನದೃಷ್ಟಿಯಿಂದ ಪರಿಶೀಲಿಸಿದರೆ—

ತ್ರಿಷ್ಟುಪ್	ಛಂದೋಬದ್ಧಗಳಾದ ಸೂಕ್ತಗಳು		೫೧
ಗಾಯತ್ರೀ	..		೩೪
ಜಗತೀ	..		೧೨
ಅತ್ಯಷ್ಟಿ	..		೬
ದ್ವಿಪದಾವಿರಾಜ	..		೬
ಅನುಷ್ಟುಪ್	..		೫
ಪಂಕ್ತಿ	..		೩
ಅತಿಶಕ್ವರಿ	..		೧
ಉಷ್ಣಿಕ್	..		೧
ವಿರಾಜ	..		೧

ಸಾಧಾರಣವಾಗಿ ೭೧ ಸೂಕ್ತಗಳು ಬೇರೆ ಬೇರೆ ಛಂದೋಬದ್ಧಗಳಾಗಿವೆ. ಇತರ ಮಂಡಲಗಳಲ್ಲಿರುವ ದೇವತಾ ಛಂದಸ್ಸುಗಳನ್ನು ಜಿಜ್ಞಾಸುಗಳು ಸರ್ವಾನುಕ್ರಮಣಿಯನ್ನವಲೋಕಿಸಿ ಅರಿತುಕೊಳ್ಳಬಹುದು.

ಜ್ಯೋತಿಷವು—

ಕಾಲವೆಂಬುದು ಅಂದರೆ ಸಮಯವು ವೈದಿಕ ಕರ್ಮಗಳಿಗಂಗಭೂತವಾಗಿರುವುದರಿಂದ ಅದರ ಜ್ಞಾನವುಂಟಾಗುವುದಕ್ಕೋಸ್ಕರವೇ ಆದಿತ್ಯ, ಗರ್ಗ ಮೊದಲಾದ ಮುನಿಗಳಿಂದ ಜ್ಯೋತಿಷವೆಂಬ ವೇದಾಂಗವು ರಚಿಸಲ್ಪಟ್ಟಿದೆ. ಈ ಜ್ಯೋತಿಷ ವಾಙ್ಮಯವು ಅನೇಕಪ್ರಕಾರವಾಗಿರುವುದು.

ಕಲ್ಪವು—

ಈ ಶಾಸ್ತ್ರವೂ ವೇದಾಂಗವೆಂದು ಹೇಳಲ್ಪಡುತ್ತದೆ. ಇದು ಸೂತ್ರರೂಪವಾಗಿರುವುದು. ಅನ್ಯಶಾಖಾಂತರ್ಗತಗಳಾದ ಸಂಗ್ರಹದೊಡನೆ ವೈದಿಕಕರ್ಮಾನುಷ್ಠಾನದ ವಿಶೇಷಕ್ರಮಗಳನ್ನು ನಿಶ್ಚಿತಗೊಳಿಸುವುದಕ್ಕೋಸ್ಕರವೇ ಕಲ್ಪಸೂತ್ರಗ್ರಂಥಗಳು ರಚಿಸಲ್ಪಟ್ಟಿವೆ. ಪ್ರಯೋಗತ್ರಯಭೇದಮೂಲಕ ಇವು ಮೂರು ತೆರನಾಗಿವೆ. ಆಶ್ವಲಾಯನ, ಸಾಂಖ್ಯಾಯನ ಮೊದಲಾದ ಆಚಾರ್ಯರು ಹೋತೃಪ್ರಯೋಗ ಪ್ರತಿಪಾದಕಕಲ್ಪಸೂತ್ರಗಳನ್ನೂ; ಬೋಧಾಯನ, ಆಪಸ್ತಂಬ, ಕಾತ್ಯಾಯನಾದಿಗಳು ಅಧ್ವರ್ಯು ಪ್ರಯೋಗಪ್ರತಿಪಾದಕ ಕಲ್ಪಸೂತ್ರಗಳನ್ನೂ; ಲಾಟ್ಯಾಯನ, ದ್ರಾಹ್ಯಾಯಣಾದಿಗಳು ಔದ್ಗಾತೃಪ್ರಯೋಗಪ್ರತಿಪಾದಕ ಕಲ್ಪಸೂತ್ರಗಳನ್ನೂ ರಚಿಸಿದ್ದಾರೆ.

ಶ್ರೌತಸೂತ್ರಗಳೂ ಗೃಹ್ಯಸೂತ್ರಗಳೂ, ಧರ್ಮಸೂತ್ರಗಳೂ ಕಲ್ಪವೆಂಬ ವೇದಾಂಗದ ವಿಭಾಗಗಳೆಂದು ಹೇಳಲ್ಪಡುತ್ತವೆ. ಅವುಗಳ ಸ್ವರೂಪವನ್ನು ಪರಿಚಯದಿಗ್ದರ್ಶನಗೊಳಿಸುವ ಮುನ್ನವೆಯಿಂದ ನಾವೀಗ ಸೂತ್ರವಾಙ್ಮಯದ ತಿರುಳನ್ನೂ ಸಂಕ್ಷೇಪವಾಗಿ ತೋರಿಸುತ್ತೇವೆ. 'ಸೂತ್ರ'ವು ಅಂದರೆ ಬಹ್ವರ್ಥಸೂಚಕವಾದುದು—

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋ ಮುಖಮ್ ।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

ಅಲ್ಪಾಕ್ಷರಗಳಿಂದ ಕೂಡಿದುದೂ, ಸಂದೇಹವಿಲ್ಲದುದೂ, ಸರ್ವತಃ ಸಾರಯುಕ್ತವೂ, ಸರಳವೂ ನಿರ್ದೋಷವೂ ಆಗಿರತಕ್ಕುದೇ ಸೂತ್ರವು.

ಇಂತಪ್ಪ ಸೂತ್ರರೂಪಗ್ರಂಥಗಳು ಶಬ್ದಪ್ರಧಾನವಾದುವೆಂದೂ, ಅರ್ಥಪ್ರಧಾನವಾದುವೆಂದೂ, ವ್ಯವಹಾರಪ್ರಧಾನವಾದುವೆಂದೂ ಮೂರು ವಿಧವಾಗಿರುತ್ತವೆ. ಅವುಗಳಲ್ಲಿ ಪಾಣಿನಿ ಮೊದಲಾದವರಿಂದ ರಚಿಸಲ್ಪಟ್ಟ ವ್ಯಾಕರಣಸೂತ್ರಗ್ರಂಥಗಳೇ ಶಬ್ದಪ್ರಧಾನವಾದುವು; ಅವುಗಳಿಗೆ ಶಬ್ದಶಾಸ್ತ್ರಗಳೆನ್ನುತ್ತಾರೆ: ಶಬ್ದಾತ್ಮಕವಾದ ಜಗತ್ತಿನ ವಿಚಾರಾವಸರದಲ್ಲಿ ಆ ಸೂತ್ರಗ್ರಂಥಗಳ ಅವಶ್ಯಕತೆಯುಂಟು.

೧. ಜೈಮಿನಿಕೃತ ಆಚಾರಸೂತ್ರಗಳೂ. ೨. ಬಾದರಾಯಣಪ್ರಣೀತವಿಚಾರಸೂತ್ರಗಳೂ. ೩. ಗೌತಮಪ್ರಣೀತ ನ್ಯಾಯಸೂತ್ರಗಳೂ. ೪. ಕಣಾದರಚಿತವೈಶೇಷಿಕಸೂತ್ರಗಳೂ. ೫. ಕಪಿಲಪ್ರಣೀತಸಾಂಖ್ಯಸೂತ್ರಗಳೂ. (ಈಗ ಪ್ರಚಿತ್ತಗಳಾಗಿರತಕ್ಕ ಸಾಂಖ್ಯಸೂತ್ರಗಳ ಪ್ರಾಚೀನತ್ವವಿಷಯದಲ್ಲಿ ವಾದವಿರುವುದಾದರೂ ಮತ್ತೆ ಬೇರೆ ಮೂಲಸೂತ್ರಗಳಿರಲಿಕ್ಕೇಬೇಕೆಂಬುದು ನಿರ್ವಿವಾದವು.) ೬. ಪತಂಜಲಿವಿರಚಿತಯೋಗಸೂತ್ರಗಳೂ ಎಂಬೀ ದಾರ್ಶನಿಕ ಸೂತ್ರಗಳು ಅರ್ಥಪ್ರಧಾನವಾದವು. ಇವು ಪ್ರಾಧಾನ್ಯವಾಗಿ ಜ್ಞಾನವಿಚಾರಪರಗಳಾದುದರಿಂದ ಅರ್ಥಾತ್ಮಕಜಗತ್ತಿನ ವಿಚಾರದಲ್ಲಿ ಸಹಾಯಕಗಳಾಗಿವೆ. ಶಿವಶಕ್ತ್ಯಾತ್ಮಕವಾದ ಈ ವಿಶ್ವಪ್ರಪಂಚವು ಶಬ್ದಾರ್ಥರೂಪವಾಗಿರುವುದಷ್ಟೆ? ಹೀಗೆ ಶಬ್ದಾರ್ಥಗಳೆಂಬ ಭಾಗದ್ವಯಾತ್ಮಕವಾದ ಜಗತ್ತಿನ ವಿಚಾರವು ಅವಶ್ಯವಾದುದರಿಂದ ಶಬ್ದಸೂತ್ರಗಳು ಶಬ್ದರೂಪವಾದ ಭಾಗವನ್ನೂ, ಅರ್ಥಪ್ರಧಾನಗಳಾದ ವಿವಿಧಾಂಗದರ್ಶನಸೂತ್ರಗಳು ಅರ್ಥರೂಪವಾದ ಭಾಗವನ್ನೂ ವಿಚಾರಿಸುವುದರಲ್ಲಿ ಪ್ರವೃತ್ತಗಳಾಗಿವೆ.

ವ್ಯವಹಾರಸೂತ್ರಗಳಾವುವೆಂದರೆ—ವ್ಯವಹಾರವಾದರೋ ಐಹಿಕ ಪಾರಲೌಕಿಕವೆಂಬುದಾಗಿ ಎರಡು ವಿಧವಾಗಿದೆ. ಇಹಲೋಕಸಂಬಂಧವಾದ ವ್ಯವಹಾರವಾದರೂ ಸುವ್ಯವಸ್ಥಿತವಾಗಿ ಸಾಗಬೇಕೆಂಬುದ್ದೇಶ್ಯವಾಗಿ ಕೆಲವು ಸೂತ್ರಗ್ರಂಥಗಳು ಮೈದೋರಿವೆ; ಅವುಗಳ ತಿರುಳನ ತಿಳುವಳಿಕೆಗಾಗಿ ಪ್ರತಿಯೊಂದು ಸೂತ್ರಗ್ರಂಥದ ಮೊದಲಿನವೊಂದೆರಡು ಸೂತ್ರಗಳನ್ನಿಲ್ಲಿ ತೋರಿಸುತ್ತೇವೆ—

೧. **'ಧರ್ಮಾರ್ಥಕಾಮೇಭ್ಯೋನಮಃ'** ೨. **'ಶಾಸ್ತ್ರೇ ಪ್ರಕೃತತ್ವಾತ್ ।'** (ಕಾಮಸೂ) ೧. **'ಅಥಾತೋ ಧಾತುಸ್ಯ ದೋಷಗತ್ಯವಿಕಾರಹೇತು ಭೂತಾರ್ಥವಾರ್ಥಕದ್ರವ್ಯಾಣ್ಯದ್ಯಾತ್ ।'** ೨. **'ಚಿರಾಯುರಿಚ್ಛಾ ಪ್ರವೃತ್ತಿರಾಯುರ್ವೇದಾರ್ಥ ಪುರುಷಾರ್ಥೋಪಪಾದಿಕಾ ।'** (ಆಯುರ್ವೇದೀಯ ಸೂ.) ೧. **'ಸುಖಸ್ಯಮೂಲಂ ಧರ್ಮಃ ।'** ೨. **'ಧರ್ಮಸ್ಯಮೂಲಮರ್ಥಃ ।'** (ಚಾಣಕ್ಯ ಸೂ) ಈ ಮುಂತಾದ ಸೂತ್ರಗಳ ಪ್ರವೃತ್ತಿಯಾದರೋ ಕೇವಲ ಇಹಲೋಕದ ವ್ಯವಹಾರವನ್ನು ಹೇಳುವುದಕ್ಕಾಗಿಯೇ ಇರುವುದು. ಈ ಸೂತ್ರಗ್ರಂಥಗಳ ಕೆಲವೆಡೆಯಲ್ಲಿ ಧರ್ಮವೂ ಮೋಕ್ಷವೂ ಶಬ್ದ ಧನಗಳೂ ಉಲ್ಲೇಖಿಸಲ್ಪಟ್ಟಿವೆ; ಆದರೂ ಆ ಸೂತ್ರಗಳು ಕೇವಲ ಧರ್ಮಪರವಾದುವೆಂದು ತಿಳಿಯಲ್ಪಡುವುದಿಲ್ಲ. ಪಾರಲೌಕಿಕ ವ್ಯವಹಾರ ಬೋಧಕಸೂತ್ರಗಳಾದರೋ ವೇದದೊಳಗಿನ ಮುಖ್ಯ ವಿಷಯವಿಚಾರಾತ್ಮಕಗಳಾದ ಕಲ್ಪಸೂತ್ರಗಳೇ.

ಮಂತ್ರಭಾಗದ ಸಂಹಿತೆಗಳೂ ವಿಧಿ ಮೊದಲಾದ ಭಾಗಗಳ ಬ್ರಾಹ್ಮಣಗಳೂ ಶಾಖಾಭೇದದಿಂದ ಅನೇಕವಾಗಿವೆ. ಈ ಮೂಲಕ ಅಧ್ಯಯನ ಸಂಪ್ರದಾಯವಾದರೂ ಗುರುಶಿಷ್ಯ ಪರಂಪರೆಯಿಂದ ಬಹಳ ಬೆಳೆಯಿತು. ಹೀಗೆ ಅಧ್ಯಯನ ಅಧ್ಯಾಪನ ಸಂಪ್ರದಾಯವು ಬೇರೆಬೇರೆಯಾಗಿ ಪಸರಿಸಲು, ಆವಾವ ಹೇತುವಿನಿಂದಲೋ ಆ ಆ ಸಂಪ್ರದಾಯದಲ್ಲಿ ವಿಚಾರಭಿನ್ನತೆಯುಂಟಾದುದರಿಂದೇ ಆಚಾರವನ್ನತಿಯೂ ಬೇರೆ ಬೇರೆ ವಿಧವಾಗಿ ಪರಿಣಮಿಸಿತು. ಆ ಸಮಯವೇ ಪಶ್ವಾದಿ ಪ್ರಾಣಿಹಿಂಸಾತ್ಮಕ ಯಜ್ಞಕರ್ಮಗಳ ಉಗಮಕಾಲವೆಂದೂಹಿಸಲ್ಪಡುವುದು. ಈ ಊಹೆಯು ನಿರಪವಾದವಾಗಿರುವುದೆಂಬಲ್ಲಿ ಸಂದೇಹವೇ ಇಲ್ಲ. ತತ್ಕಾಲೀನರಾದ ವೈದಿಕಪಂಡಿತರಿಂದ ಶತಪಥವೇ ಮುಂತಾದ ಬ್ರಾಹ್ಮಣಭಾಗಗಳೊಳಗಿನ ಯಾವ ಆಚಾರಗಳು ಯಥಾಕ್ರಮವಾಗಿ ಸಂಗ್ರಥಿತವಾದುವೋ ಅವೇ ಈಗ 'ಕಲ್ಪಸೂತ್ರ'ಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಈ ಸೂತ್ರಗ್ರಂಥಗಳು ರಚಿಸಲ್ಪಡದಿದ್ದ ಕಾಲದಲ್ಲಿ ಸರ್ವ ಶಾಖೀಯ ಬ್ರಾಹ್ಮಣಗಳೂ ಸಮಾನವಾಗಿಯೇ ಸರ್ವರಿಗೂ ಪ್ರಮಾಣಭೂತಗಳಾಗಿರುವುದರಿಂದ ಪ್ರತಿಯೊಬ್ಬನೂ ಸರ್ವಬ್ರಾಹ್ಮಣಗಳಲ್ಲಿ ಉಕ್ತಗಳಾದ ಆಚಾರಗಳನ್ನೂ ಅಂಗೀಕರಿಸಬೇಕಾಗುತ್ತಿತ್ತು; ಹಾಗೆ ಅನುಷ್ಠಿಸಲ್ಪಡುವುದಾದರೋ ಅಸದಳವೇ ಸರಿ! ಎಂದು ಅರಿತವರಾದ ಕೆಲವರು ಒಂದು ಪ್ರಸಂಗದಲ್ಲಿ ಒಂದು ವಿಧವಾದ ಆಚಾರವನ್ನು ಪರಿಗ್ರಹಿಸುವುದೂ ಅನ್ಯಪ್ರಸಂಗದಲ್ಲಿ ಬೇರೆ ವಿಧವಾದ ಆಚಾರವನ್ನೇ ಅಂಗೀಕರಿಸುವುದೂ ಎಂಬ ಅನವಸ್ಥೆಯು ಸಂಭವಿಸುತ್ತಿತು; ಹಾಗಾಗಬಾರದೆಂಬ ಉದ್ದೇಶದಿಂದೇ ಆ ಆ ಸೂತ್ರಕಾರರು—'ಈ ಶಾಖೆಯವರು ಈ ಆಚಾರಗಳನ್ನೇ ಅನುಷ್ಠಿಸತಕ್ಕದ್ದು' ಎಂಬ ಕಟ್ಟಳೆ ಮಾಡಿದರು. ಆ ನಿಯಮರೂಪವಾಕ್ಯಗಳೇ ಆ ಆ ಶಾಖೀಯರ ಸಲುವಾಗಿ ಬೇರೆ ಬೇರೆ ಸೂತ್ರರೂಪಗಳಾಗಿವೆ. ಇವೇ ಆಚಾರಸೂತ್ರಗಳು. ಇವು ಶ್ರೌತಸೂತ್ರಗಳೆಂದೂ ಗೃಹ್ಯಸೂತ್ರಗಳೆಂದೂ ಧರ್ಮಸೂತ್ರಗಳೆಂದೂ ಶುಲ್ಬಸೂತ್ರಗಳೆಂದೂ ಈಗ ಪ್ರಚಾರದಲ್ಲಿವೆ. ಈ ಎಲ್ಲ ಸೂತ್ರಗಳಿಗೂ ಕಲ್ಪಸೂತ್ರಗಳೆಂಬ ಒಂದೇ ಹೆಸರಿರುವುದು. ಅಂದರೆ, ಇವೆಲ್ಲ ಸೂತ್ರಗಳೂ ಕಲ್ಪಸೂತ್ರಗಳ ಅವಾಂತರಭೇದಗಳು.

ಈ ಸೂತ್ರಗ್ರಂಥಗಳಲ್ಲಿ ವಿದ್ವಾಂಸರು ಸೂಕ್ಷ್ಮರೀತಿಯಿಂದ ಕಲ್ಪಗಳೂ ಸೂತ್ರಗಳೂ ಎಂಬ ಎರಡು ಭಾಗಗಳನ್ನು ಕಲ್ಪಿಸಿದ್ದಾರೆ. ಹೇಗೆಂದರೆ, ಕುಮಾರಿಲಭಟ್ಟಕೃತ ತಂತ್ರವಾರ್ತಿಕದ ಸೂತ್ರಾಧಿಕರಣದಲ್ಲಿ (೨-೩-೬)—

ಆಹ । ಕೆ ಪುನಃ ಕಲ್ಪಾಃ ಕಾನಿ ಸೂತ್ರಾಣೀತಿ । ಉಚ್ಯತೆ ।

ಕಲ್ಪಗಳೂ ಸೂತ್ರಗಳೂ ಆವವು? ಎಂದರೆ, ಯಾವುಗಳಿಂದ ಸಿದ್ಧಪ್ರಯೋಗದ ಜ್ಞಾನವಾಗುವದೋ ಅವು ಕಲ್ಪಗಳೆಂದೂ, ಲಕ್ಷಣಪ್ರದರ್ಶಕಗಳೇ ಸೂತ್ರಗಳೆಂದೂ ತಿಳಿಯತಕ್ಕದ್ದು. ಸಿದ್ಧಪ್ರಯೋಗಬೋಧಕವಾದುದರಿಂದ ಕಲ್ಪವೆಂಬುದು ಅನುಷ್ಠಾನ ಸಾಧನವಾಗಿರುವುದು. ಸೂತ್ರದಲ್ಲಿ ಪ್ರಯೋಗದ ಸೂಚನೆಯಿರುವುದು, ಅದರಿಂದ ಪ್ರಯೋಗದ ಕಲ್ಪನೆಯು ಮಾಡಲ್ಪಡುವುದು. ಕಲ್ಪಗಳು ಪರಿಕಲ್ಪಿತಗಳು ಅಂದರೆ ಅವುಗಳು ಪಡಿಸಲ್ಪಟ್ಟಂತೆಯೇ ಪ್ರಯೋಗಗಳ ಅನುಷ್ಠಾನವು ಪ್ರತಿಯೊಂದು ಯಜ್ಞದಲ್ಲಿಯೂ ಮಾಡಲ್ಪಡುವುದು. ಈ ವಿಷಯದಲ್ಲಿ ಬೋಧಾಯನೀಯ, ವಾರಾಹ, ಮಾಶಕ ಮೊದಲಾದ ಸೂತ್ರಗಳು ಉದಾಹರಣೆಗಳಾಗಿವೆ. ಸೂತ್ರಗಳ ಸರ್ವ ಉದಾಹರಣೆಗಳಿಗೆ ಸಂಬಂಧಿಸಿದ ಲಕ್ಷಣವಾದರೋ ಆ ಆ ಸೂತ್ರಕಾರರಿಂದ ಸ್ವಸಂಜ್ಞೆಯ ಪರಿಭಾಷೆಯ ಮೂಲಕವಾಗಿ ಉತ್ಸರ್ಗಾಪವಾದಗಳೂ ಹೇತುವ್ಯಾಖ್ಯಾನಗಳೂ ಹೇಳಲ್ಪಡುವುದೇ ಆಗಿರುವುದು. ಸೂತ್ರಗಳು—ಆಶ್ವಲಾಯನೀಯ, ಬೈಜವಾಪೀಯ, ದ್ರಾಹ್ಯಾಯಣೀಯ, ಲಾಟ್ಯಾಯನೀಯ, ಕಾತ್ಯಾಯನೀಯ; ಎಂಬಿವು.

ಈ ರೀತಿಯಾಗಿ ವಿದ್ವಾಂಸರು ಕಲ್ಪಗಳೂ ಸೂತ್ರಗಳೂ ಎಂಬ ಭೇದವನ್ನು ತೋರಿಸುವುದರ ಹೇತುವೇನೆಂದರೆ, 'ಕಲ್ಪ'ವೂ 'ಸೂತ್ರ'ವೂ ಎಂಬೆರಡೂ ಶಬ್ದಗಳು ಪ್ರಾಮಾಣಿಕಪರಂಪರೆಯಲ್ಲಿ ಕಾಣಬರುತ್ತವೆ. ಜೈಮಿನಿಯ **'ಪ್ರಯೋಗಶಾಸ್ತ್ರಮಿತಿ ಚೇತ್'** ಎಂಬ ಸೂತ್ರದ ಭಾಷ್ಯದಲ್ಲಿ ಶಬರಸ್ವಾಮಿಯು, **'ಇಹ ಕಲ್ಪಸೂತ್ರಾಣಿ, ಉದಾಹರಣಮ್'** ಎಂದು ನುಡಿದು **'ಮಾಶಕಂ, ಹಾಸ್ತಿಕಂ, ಕೌಂಡಿನ್ಯಕಂ; ಇತ್ಯೇನಂ ಲಕ್ಷಣಾನಿ'** ಎಂದು ನಪುಂಸಕಲಿಂಗೀಪ್ರಯೋಗವನ್ನು ತೋರಿಸಿದ್ದಾನೆ.

'ಕಲ್ಪ'ವೆಂಬ ಶಬ್ದವಾದರೂ ಕೃತ್ತಿರೀಯಾರಣ್ಯಕದಲ್ಲಿ (೨-೯) ಬ್ರಹ್ಮಯಜ್ಞವಿಧಿಪ್ರಸಂಗದೊಳು ಯಾವ ಯಾವ ಗ್ರಂಥಗಳು ಪಠಿಸಲ್ಪಡತಕ್ಕವೆಂಬುದನ್ನು ಸೂಚಿಸುವಾಗ **'ಕಲ್ಪಾನ್ ಗಾಥಾ ನಾರಾಶಂಸೀಃ'** ಎಂಬುದಾಗಿ ನಿರ್ದೇಶಿಸಲ್ಪಟ್ಟಿದೆ: ಇದುವೇ ಆಶ್ವಲಾಯನಸೂತ್ರದಲ್ಲಿ ಅನುವಾದಿಸಲ್ಪಟ್ಟಿರುವುದು. ಈ ಸೂತ್ರದ ದೇವತ್ರಾತಕೃತಸಿದ್ಧಾಂತಭಾಷ್ಯದಲ್ಲಿ ಕಲ್ಪಶಬ್ದದ ಊಹಾಪೋಹವು ಮಾಡಲ್ಪಟ್ಟಿದೆ. ಅದರಲ್ಲಿ 'ಕಲ್ಪ' ಶಬ್ದದಿಂದ ಬ್ರಾಹ್ಮಣಭಾಗದೊಳಗಿನ ವಿಧಿವಾಕ್ಯಗಳನ್ನೂ, 'ಬ್ರಾಹ್ಮಣ' ಶಬ್ದದಿಂದ ಬ್ರಾಹ್ಮಣಾಂತರ್ಗತಗಳಾದ ಅರ್ಥವಾದವಾಕ್ಯಗಳನ್ನೂ ಪರಿಗ್ರಹಿಸಬೇಕೆಂಬ ಒಂದು ಮತ (ಅಥ್ವಾಯ) ವನ್ನು ಪ್ರತಿಪಾದಿಸಿ, ಅನ್ಯಾಭಿಪ್ರಾಯದಿಂದಾದರೋ ಕಲ್ಪಶಬ್ದದಿಂದ ಸೂತ್ರಗಳೇ ಗ್ರಹಿಸಲ್ಪಡುವುವೆಂದು ನಿರೂಪಿಸಲ್ಪಟ್ಟಿದೆ. ಶಬ್ದಶಾಸ್ತ್ರಪ್ರವರ್ತಕರಲ್ಲಿ ಮುಂದಾಳುವೆನಿಸುವ ಭರ್ತೃಹರಿಯು—

ಇನ್ದ್ರಿಯಾಣಾಂ ಸ್ವವಿಷಯೇಷ್ವನಾದಿರ್ಯೋಗ್ಯತಾ ಯಥಾ ।
ಅನಾದಿರರ್ಥೈಃ ಶಬ್ದಾನಾಂ ಸಂಬಂಧೋ ಯೋಗ್ಯತಾ ತಥಾ ॥

ಎಂದು ಹೇಳುವಮೇರೆಗೆ, ವೇದಗಳಿಗೂ ಕಲ್ಪಸೂತ್ರಗಳಿಗೂ ಇರುವ ಸಂಬಂಧವಾದರೋ ವಿಷಯೇಂದ್ರಿಯಗಳಿಗೂ, ಶಬ್ದಾರ್ಥಗಳಿಗೂ, ಗುಣಗುಣಿಗಳಿಗೂ ಹೇಗೋ ಹಾಗೆ ನಿತ್ಯವಾದುದೆಂದು ಯಲ್ಪಡುವುದು.

ವೇದಗಳು ಅಪೌರುಷೇಯಗಳಾದುದರಿಂದ, ಅವುಗಳಲ್ಲಿ ಪ್ರಯೋಗ ಪ್ರಾಣುಭಾವ ಬೋಧಕತ್ವವು [ಅಂದರೆ ಪ್ರಯೋಗಗಳಲ್ಲಿರುವ ವಿಧಿಗಳನ್ನು ಒಂದರಹಿಂದೆ ಒಂದು ಮಾಡಲ್ಪಡತಕ್ಕ ತಿಳುವಳಿಕೆಯನ್ನುಂಟುಮಾಡಿಕೊಡುವಿಕೆಯೆಂಬುದು] ಇರುವುದಿಲ್ಲ; ಕಲ್ಪಸೂತ್ರಗ್ರಂಥಗಳಾದರೋ ಆ ಅನುಷ್ಠೇಯ ಪದಾರ್ಥಗಳ ವ್ಯವಸ್ಥೆಯನ್ನು ಮಾಡುವುದರಿಂದ ಅವು ವೇದಗಳೊಡನೆ ನಿತ್ಯಸಂಬಂಧಭೂತಗಳಾಗಿವೆ.

ಈ ಕಲ್ಪಗ್ರಂಥಗಳಲ್ಲಿರುವ ವಿಷಯಗಳನ್ನು ಪರಾಮರ್ಶಿಸಿದರೆ ಇವುಗಳನ್ನು ವೇದಾಂಗವಾಙ್ಮಯದಲ್ಲಿ ಸಮಾವೇಶಗೊಳಿಸಬೇಕಾದ ದಿಲ್ಲವೆಂದು ಹೇಳಬಹುದಾಗಿದೆ. ಇವುಗಳಲ್ಲಿ ಯಜ್ಞಕರ್ಮವಿಧಿಗಳು ಪರಿಚಯವುಳ್ಳ ಸಲ್ಪಟ್ಟಿವೆ. ಅದ್ದರಿಂದ, ಕಲ್ಪಗ್ರಂಥಗಳಲ್ಲಿ ಪ್ರಾಮುಖ್ಯವಾಗಿ ಬ್ರಾಹ್ಮಣಪ್ರತಿಪಾದ್ಯವಿಷಯಗಳೇ ಸಮಾವಿಷ್ಟಗಳಾಗಿರುವುವೆಂಬ ಸಂಗತಿಯು ಮಾತ್ರ ವಾಚಕರು ತಮ್ಮ ಸ್ಮೃತಿಪಥದಿಂದ ಚ್ಯುತವಾಗದಿರಲಿ! ಋತ್ವಿಜರು ಯಜ್ಞಯಾಗಾದಿನಿಯಮಗಳ ಮಂತ್ರಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಸುಲಭವಾಗುವುದಕ್ಕೋಸ್ಕರ ಸ್ವಲ್ಪವಾದ ಸಾಂಕೇತಿಕಶಬ್ದಗಳಿಂದ ಪದ್ಧತಿಯನನುಸರಿಸಿ ರಚಿಸಲ್ಪಟ್ಟ ಸೂತ್ರಗಳು ಅತ್ಯಂತ ಮಹತ್ವಗಳೆಂದು ತಿಳಿಯಬಂದಾಗಲೇ ಈ ಗ್ರಂಥಗಳು ಬರೆಯಲ್ಪಟ್ಟವು. ಬ್ರಾಹ್ಮಣಗಳಲ್ಲಿ ಹೇಳಲ್ಪಡುವ ಶ್ರೌತಸಂಸ್ಕಾರಗಳೂ, ನಿತ್ಯವ್ಯವಹಾರೋಪಯುಕ್ತಗಳಾದ ಗೃಹ್ಯಸಂಸ್ಕಾರಗಳೂ ಅಥವಾ ವಿಧಿಗಳೂ ಯಾವ ಕಲ್ಪಸೂತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುವೋ ಆ ಆ ವಿಷಯಾನುಸಾರವಾಗಿ ಅವುಗಳಿಗೆ ಕಲ್ಪಸೂತ್ರಗಳೂ ಗೃಹ್ಯಸೂತ್ರಗಳೂ ಎಂಬ ಬೇರೆ ಬೇರೆ ಸಂಜ್ಞೆಗಳಿವೆ.

ಗೃಹ್ಯಸೂತ್ರಗಳೂ, ಧರ್ಮಸೂತ್ರಗಳೂ, ಕಲ್ಪಸೂತ್ರಗಳ ಅಂತರ್ಭೂತವಾದುವೆಂದೇ ಅರಿಯಲ್ಪಡುತ್ತವೆ: ಆದರೆ ಪಾರಮಾರ್ಥಿಕ ವ್ಯವಹಾರವು ಅನುಷ್ಠಿಸಲು ಸುಗಮವಾಗಬೇಕೆಂದೂ, ಅಂಗಾಂಗೀಭಾವಗಳು ಸ್ಪಷ್ಟವಾಗಿ ತಿಳಿಯಲ್ಪಡಬೇಕೆಂದೂ, ಯೋಚಿಸಿ ಸ್ಮೃತಿಕಾರರೂ, ಕಲ್ಪನಿಬಂಧಕಾರರೂ, ಅಲ್ಲಲ್ಲಿ ಗೃಹ್ಯಸೂತ್ರಗಳೆಂದಲೂ ಧರ್ಮಸೂತ್ರಗಳೆಂದಲೂ ವಿಹಿತಗಳಾದ ಕರ್ಮಗಳ ವಿಷಯದಲ್ಲಿ ಹೇಳಲ್ಪಟ್ಟ ಶಾಸ್ತ್ರಾರ್ಥದ ಸಾಫಲ್ಯವು ಅನುಷ್ಠಿಸತಕ್ಕವರಿಗೆ ವ್ಯವಸ್ಥಿತ ರೀತಿಯಿಂದ ಗೋಚರವಾಗಲೆಂಬುದ್ದಿಷ್ಟವಾಗಿ ಗೃಹ್ಯಸೂತ್ರಗಳನ್ನೂ, ಧರ್ಮಸೂತ್ರಗಳನ್ನೂ ಮುಖ್ಯಸೂತ್ರಗ್ರಂಥಗಳಿಂದ ಬೇರ್ಪಡಿಸಿದ್ದಾರೆ.

ಈ ವಿಷಯಕವಾಗಿ ಕೆಲವರು ಶಂಕಿಸುವುದೇನೆಂದರೆ, ಗೃಹ್ಯಸೂತ್ರಗಳೂ ಧರ್ಮಸೂತ್ರಗಳೂ ಬೇರೆ ಬೇರೆಯೇ ಇರುತ್ತವೆ? ಏಕೆಂದರೆ, ಕೆಲವು ಶ್ರೌತಸೂತ್ರಗ್ರಂಥಗಳ ಕೊನೆಯಲ್ಲಿ ಆಚಾರ್ಯ ನಮಸ್ಕಾರದ ದ್ವಿರುಕ್ತಿಯಿರುವುದು; ಆಶ್ವಲಾಯನ ಶ್ರೌತಸೂತ್ರಗ್ರಂಥದ ೧೨ ನೆಯ ಅಧ್ಯಾಯದ ಕೊನೆಯಲ್ಲಿ—

'ನಮಃ ಶೌನಕಾಯ, ನಮಃ ಶೌನಕಾಯ' ಎಂಬುದಾಗಿ ಶಾಸ್ತ್ರವು ಸಮಾಪ್ತಿಗೊಳಿಸಲ್ಪಟ್ಟಿದೆ; ಮತ್ತು ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಅಧ್ಯಾಯ ಸಮಾಪ್ತಿಯ ದ್ಯೋತಕವೆಂದು ಕಡೆಯ ಶಬ್ದದ ದ್ವಿರುಕ್ತಿಯಿರುವುದು. ಪ್ರಥಮಾಧ್ಯಾಯದ ಸಮಾಪ್ತಿಯಲ್ಲಿ—**'ಉಪತಿಷ್ಠನ್ತೆ ಉಪತಿಷ್ಠನ್ತೆ'** ಎಂದೂ ದ್ವಿತೀಯಾಧ್ಯಾಯದ ಕೊನೆಯಲ್ಲಿ—**'ಚಾತುರ್ಮಾಸ್ಯಾನಿ ವಾ ಪುನಶ್ಚಾತುರ್ಮಾಸ್ಯಾನಿ ವಾ ಪುನಃ'** ಎಂದೂ, ಹೀಗೆಯೇ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿಯೂ ದ್ವಿರುಕ್ತಿಯುಂಟು. ಮತ್ತು ಹನ್ನೆರಡನೆಯ ಅಧ್ಯಾಯದ ಕೊನೆಯಲ್ಲಿಯೂ—**'ಪ್ರಕೃತಿಭಾನೆ ಪ್ರಕೃತಿಭಾನೆ'** ಎಂದು ದ್ವಿರುಕ್ತಿಯನ್ನು ತೋರಿಸಿ ಸರ್ವ ಅಧ್ಯಾಯಗಳ ನಿಯಮವು ಒಂದೇ ವಿಧವಾಗಿ ಪಾಲಿಸಲ್ಪಟ್ಟ ಬಳಿಕ—**'ನಮೋಬ್ರಹ್ಮಣೆ ನಮೋಬ್ರಹ್ಮಣೆ ನಮ ಆಚಾರ್ಯೇಭ್ಯೋ ನಮಃ ಶೌನಕಾಯ ನಮಃ ಶೌನಕಾಯ'** ಎಂದು ಆಚಾರ್ಯ ನಮಸ್ಕಾರಪೂರ್ವಕವಾಗಿ ಶಾಸ್ತ್ರವು ಸಮಾಪ್ತಿಗೊಳಿಸಲ್ಪಟ್ಟಿದೆ. ಇದರಿಂದ ಗೃಹ್ಯಾದಿ ಸೂತ್ರಗಳನ್ನು ಬೇರೆಯಾಗಿರತಕ್ಕವುಗಳೆಂದೇ ಹೇಳಬಹುದಲ್ಲವೆ? ಎಂಬೀ ಆಕ್ಷೇಪವು ಯುಕ್ತಿಯುಕ್ತವಲ್ಲ. ಹನ್ನೆರಡನೆಯ ಅಧ್ಯಾಯದ ಕೊನೆಯಲ್ಲಿ ಮಾಡಲ್ಪಡುವ ನಮಸ್ಕಾರವೆಂಬುದು ಒಂದು ವಿಧವಾದ ಮಂಗಲಾಚರಣವೆಂದು ಹೇಳಲ್ಪಡುವುದು. ಅದಾದರೋ 'ಗ್ರಂಥಾದೌ ಗ್ರಂಥಮಧ್ಯೇ ಚ' ಎಂಬ ಮೊದಲಾದ ಸ್ಮೃತಿವಾಕ್ಯವನ್ನೂ, ಶಿಷ್ಟಾಚಾರವನ್ನೂ ಅನುಸರಿಸಿರುವುದು. ಪಾತಂಜಲಮಹಾಭಾಷ್ಯದಲ್ಲಿಯೂ (೧-೧-೩)—**'ಮಂಗಲಾದೀನಿ ಮಂಗಲಮಧ್ಯಾನಿ ಮಂಗಲಾಂತಾನಿ ಚ ಶಾಸ್ತ್ರಾಣಿ ಪ್ರಥನ್ತೆ ।'** ಯಾವ ಶಾಸ್ತ್ರಗಳ ಆರಂಭದಲ್ಲಿಯೂ, ಮಧ್ಯದಲ್ಲಿಯೂ, ಕೊನೆಯಲ್ಲಿಯೂ, ಮಂಗಲವು ಅನುಷ್ಠಿಸಲ್ಪಡುವುದೋ ಆ ಶಾಸ್ತ್ರಗಳು ಪ್ರಸಿದ್ಧಿಯನ್ನು ಹೊಂದುತ್ತವೆ ಎಂಬುದಾಗಿ ಹೇಳಲ್ಪಡುವುದರಿಂದ ಆಶ್ವಲಾಯನ ಗೃಹ್ಯಸೂತ್ರದ ಕೊನೆಯಲ್ಲಿ ಶೌನಕಾಚಾರ್ಯನನ್ನು ಕುರಿತು ಮಾಡಲ್ಪಟ್ಟ ನಮಸ್ಕಾರಾತ್ಮಕವಾದ ಅಂತಿಮಮಂಗಲವೇ ಶಾಸ್ತ್ರಸಮಾಪ್ತಿದ್ಯೋತಕವಾಗಿರುವುದು. ಆದಕಾರಣವೇ ಶ್ರೌತವೂ, ಗೃಹ್ಯವೂ, ಧರ್ಮವೂ, ಶುಲ್ಬವೂ ಎಂಬಿವೆಲ್ಲ ಕೂಡಿ ಒಂದೇ ಸೂತ್ರಗ್ರಂಥವೆಂದು ಹೇಳುವುದು ಯುಕ್ತಿಸಿದ್ಧವಾದುದು.

(ಸಶೇಷ.)

ಆರೋಗ್ಯರಕ್ಷಣೆ.

ಲೇಖಕ—ನಾಗೇಶಶಿವಾಚಾರ್ಯ ಬೃಹನ್ಮಠ ಮುದೇನೂರು ಶ್ರೀ ಕ್ಷೇತ್ರ ಕಾಶೀ

(ಹಿಂದಿನಿಂದ ಮುಂದುವರಿದುದು.)

ಬೆಲೆಯಿಂದ ಕಡಿಮೆಯಾಗಿ ಗುಣಗಳನ್ನುಂಟುಮಾಡುವುದರಲ್ಲಿ ಮಿಗಿಲಾಗಿರುವ ಆಹಾರಗಳಲ್ಲೆಲ್ಲಾ ಮೊದಲನೆಯ ಹೆಸರು ಹಾಲಿನದಾಗಿದೆ. ಇದರ ಗುಣಗಳನ್ನು ಪೂರ್ವದವರು ಬರೆದಿಟ್ಟಿರುವರಾದರೂ ಅತ್ತಕಡೆ ನಮ್ಮ ದೃಷ್ಟಿಯೇ ಬೀಳುವುದಿಲ್ಲ. ಹೀಗಾಗಿರುವುದು ಈ ವಿಜ್ಞಾನಜಗತ್ತಿನ ಮಹಿಮೆ; ಈ ವಿಷಯದಲ್ಲಿ ಪಾಶ್ಚಾತ್ಯದೇಶದವರೇನಾದರೂ ಬರೆದಿರುವರೋ ಎಂದು ಕೇಳುವುದೊಂದು ರೂಢಿಬಿದ್ದುಹೋಗಿದೆ.

ಮಧುರಂ ಮಾನುಷೀಕ್ಷೀರಂ ಕಷಾಯಂಚ ಹಿಮಂ ಲಘು ।
ಚಕ್ಷುಷ್ಯಂ ದೀಪನಂ ಪಥ್ಯಂ ಪಾಚನಂ ರೋಚನಂ ತತ್ ॥

ತಾಯಿಯ ಹಾಲು ತಂಪು, ಒಗರು, ಹಗುರ, ಅಗ್ನಿವರ್ಧಕ, ಶೀಘ್ರಪಾಚಕ, ಹಿತಕಾರಿ, ನೇತ್ರರೋಗಹಾರಿ ಎಂದು ನಿಘಂಟುಕಾರನು ಎಂದೋ ಬರೆದಿಟ್ಟಿರುವುದನ್ನು ಯಾರು ನೋಡಬೇಕು? 'ಹಾಲು ಮನುಷ್ಯನಿಗೆ ಸರ್ವೋತ್ತಮವಾದ ಆಹಾರವು, ಶಿಶುವೃದ್ಧಿಯ ಗುಣವು ಅಧಿಕವಾಗಿರುವ ತಾಯಿಯ ಹಾಲೇ ಎಲ್ಲಾ ಹಾಲಿಗಿಂತಲೂ ಮಿಗಿಲಾದುದೆಂದು, ಮೆಕ್ಲರನೂ ಬರೆದಿರುವನೆಂದರೆ ತಿಳಿದು, ಓಹೋ! ಹಾಲಿನ ವಿಷಯದಲ್ಲಿಯೂ ಪಾಶ್ಚಾತ್ಯರು ಬರೆದಿರುವರೇ? ಎಂಬ ಆಶ್ಚರ್ಯಸೂಚಕ ವಾಕ್ಯಗಳು ಹೊರಡುವುದು ಮಾತ್ರ ಸತ್ಯ. ಪಾಪ! ಪಾಶ್ಚಾತ್ಯರೇನುಮಾಡ್ಯಾರು? ಇದು ನಮ್ಮ ತಪ್ಪು. ಪ್ರಾಚೀನಸಂಸ್ಕೃತಸಾಹಿತ್ಯದಲ್ಲಿ ಜಗತ್ತಿನ ಸಮಸ್ತ ವಿಚಾರವೂ ತುಂಬಿದೆ ಎಂಬುದು ಯಾರಿಗೆ ತಾನೆ ಗೊತ್ತಿಲ್ಲ? ಹೀಗಿದ್ದೂ ನಾವು ಸಂಸ್ಕೃತಸಾಹಿತ್ಯವನ್ನು ಅಲ್ಲಗಳೆಯುವವರಲ್ಲವೆ? ಮಿತ್ರರೇ! ನಾವು ಸಂಸ್ಕೃತದ ಮೇಲೆ ಇಷ್ಟೇಕೆ ಅಸೂಯೆಪಡಬೇಕು? ಇದು ಬಹಳ ಕಠಿಣಭಾಷೆ, ಏನುಮಾಡಿದರೂ ನಮಗೆ ತಿಳಿಯುವುದಿಲ್ಲವೆಂತಲೋ? ಹಾಗಾದರೆ ತಾಯಿನುಡಿಯಾದ ಕನ್ನಡವು ಕಠಿಣವಲ್ಲವೇನು? ಅದನ್ನು ಶಾಲೆಯಲ್ಲಿ ಅ ಆ ಮೊದಲುಮಾಡಿ ಕಲಿಯುವುದಿಲ್ಲವೇನು? ಕನ್ನಡಭಾಷೆಗೆ ಮಾಡುವ ಪರಿಶ್ರಮದಲ್ಲಿ ಸಂಸ್ಕೃತಭಾಷೆಗೂ ನಾಲ್ಕಾಣೆ ಪಾಲು ಕೊಟ್ಟರೆ ಅದು ಕನ್ನಡಾಗುವಷ್ಟು ಪ್ರತ್ಯುಪಕಾರ ಮಾಡುತ್ತ ನಿಮ್ಮಲ್ಲಿಯೇ ವಾಸಮಾಡಿಕೊಂಡಿರುವುದು. ಈ ವಿಷಯದಲ್ಲಿ ಒಂದು ಕಾಸಿನ ಪ್ರಯತ್ನವನ್ನೂ ಮಾಡದೆ ಹಳಿಯುವುದರಿಂದ ಏನೂ ಲಾಭವಿಲ್ಲ; ನಮ್ಮ ನಾಡಲ್ಲದ ಜರ್ಮನಿಯಲ್ಲಿಯೂ ಕೂಡ ಸಂಸ್ಕೃತಕ್ಕೆ ಸದ್ಯ ಎಷ್ಟು ಬೆಲೆಯಿದೆ ಎಂಬುದನ್ನು ತಿಳಿದುಕೊಂಡಾದರೂ ಸಂಸ್ಕೃತದ ಮೇಲಿರುವ ದ್ವೇಷವನ್ನು ತ್ರಿಕರಣಶುದ್ಧವಾಗಿ ಬಿಡಲು ಪ್ರಯತ್ನಿಸುವುದೊಳ್ಳೆಯದಲ್ಲವೆ? ಹೀಗೆ ನಾವು ನಮ್ಮ ದೇಶಭಾಷೆಗಳ ಅಭಿಮಾನವನ್ನು ತೊರೆಯುತ್ತ ಬಂದಿರುವುದೇ ಪಾಶ್ಚಾತ್ಯರ ಪ್ರಭಾವವು ನಮ್ಮ ಮೇಲೆ ಬೀಳುವುದಕ್ಕೂ, ನಾವು ಅವರ ಮಾತುಗಳನ್ನು ವೇದದಂತೆ ಪ್ರಮಾಣವಾಗಿ ಒಪ್ಪುವುದಕ್ಕೂ ಕಾರಣವಾಗಿದೆ. ಹೆರವರ ಮಾತು ಕೇಳಬಾರದೆಂದು ನಮ್ಮ ಮತವಲ್ಲ, ಹಿತವನ್ನು ಹೇಳತಕ್ಕವರು ಎಲ್ಲಾ ದೇಶಗಳಲ್ಲಿಯೂ ಉಂಟು; ಆದರೆ 'ಮನೆಗೆದ್ದು ಮಾರುಗೆದ್ದು' ಎಂಬ ನುಡಿಯನ್ನು ವಿಚಾರಮಾಡಿಕೊಂಡು ಮೊದಲು ನಮ್ಮ ಪೂರ್ವಿಕರ ಸಿದ್ಧಾಂತವನ್ನು ತಿಳಿದುಕೊಂಡೇ ಪರರ ಸಿದ್ಧಾಂತಕ್ಕೆ ಕೈಹಾಕಬೇಕೆಂಬುದಿಷ್ಟೇ ಕೋರಿಕೆ. ಇದು ಭಾಷಾವಿಷಯವಾದುದರಿಂದ ಇದನ್ನಿಷ್ಟಕ್ಕೇ ಬಿಟ್ಟು ಪ್ರಸ್ತುತವನ್ನನುಸರಿಸೋಣ—

ಗವ್ಯಂ ಕ್ಷೀರಂ ಪಥ್ಯಮತ್ಯಂತರುಚ್ಯಂ ।
ಸ್ವಾದು ಸ್ನಿಗ್ಧಂ ಪಿತ್ತವಾತಾಮಯಘ್ನಂ ॥
ಕಾಂತಿಪ್ರಜ್ಞಾಬುದ್ಧಿಮೇಧಾಂಗಪುಷ್ಟಿಂ ।
ಧತ್ತೇ ಸ್ವಸ್ಥಂ ವೀರ್ಯವೃದ್ಧಿಂ ವಿಧತ್ತೇ ॥

ಆಕಳಹಾಲು ಹಿತಕರವೂ ರುಚಿಕರವೂ, ಪಿತ್ತವಾಯುರೋಗನಾಶಕರವೂ, ಕಾಂತಿ, ಬುದ್ಧಿ, ಜ್ಞಾನ, ಶಾರೀರಕಬಲ, ವೀರ್ಯವೃದ್ಧಿಕರವೂ, ಸಿಹಿಯೂ ಗಟ್ಟಿಯಾದ ಜೀವನಸತ್ವವುಳ್ಳದೂ ಆಗಿದೆ.

............ಮಹಿಷೀಕ್ಷೀರಂ ವಿಶಾಲೀ ಶೀತಲಂ ಗುರು ।
ಬಲಪುಷ್ಟಿಪ್ರದಂವೃಷ್ಯಂ ಪಿತ್ತದಾಹಾಸ್ರನಾಶನಂ ॥

ಎಮ್ಮೆಯಹಾಲು ಕಾಸಿದಮೇಲೆ ಶೀತಗುಣವುಳ್ಳದೂ, ಬಲಪುಷ್ಟಿಗಳನ್ನುಂಟುಮಾಡತಕ್ಕದ್ದೂ, ಪಿತ್ತದಾಹಗಳನ್ನು ನಾಶಮಾಡತಕ್ಕದ್ದೂ ಆಗಿದೆ. ಇದರಲ್ಲಿ ಗಟ್ಟಿಯಾದ ಜೀವನಸತ್ವವು ಆಕಳಹಾಲಿನಲ್ಲಿರುವುದಕ್ಕಿಂತಲೂ ಹೆಚ್ಚಾಗಿದೆ. ಇದರಿಂದ ಶರೀರವು ಪುಷ್ಟಿಯಾಗುವುದು ಹೊರತಾದರೂ ಬುದ್ಧಿಯ ವೃದ್ಧಿಯಾಗುವುದು ಸಾಧ್ಯವಿಲ್ಲ.

ಅಜಾನಾಂ ಲಘುಕಾಯತ್ವಾನ್ನಾನಾದ್ರವ್ಯನಿಷೇವಣಾತ್ ।
ನಾತ್ಯಂಬುಪಾನಾಯಾದ್ವ್ಯಾಯಾಮಾತ್ಸರ್ವವ್ಯಾಧಿಹರಂಪರಂ ॥

ಆಡಿನಹಾಲು ಸರ್ವರೋಗನಾಶಕವೂ, ಶಕ್ತಿವೃದ್ಧಿಯನ್ನುಂಟುಮಾಡುವುದರಲ್ಲಿ ಆಕಳಹಾಲಿಗಿಂತಲೂ ಅಧಿಕವೂ ಬಲಹೀನನಾದ ಮನುಷ್ಯನಿಗೆ ಲಾಭಕರವೂ ಆಗಿದೆ. ಇದರಲ್ಲಿ ಕಣ್ಣು, ಹೊಟ್ಟೆ, ಶ್ವಾಸಕೋಶ, ಕರುಳುಗಳಿಗೆ ಹಿತವನ್ನುಂಟುಮಾಡುತ್ತ ರಕ್ತವನ್ನು ವೃದ್ಧಿಪಡಿಸುವ ವಿಶೇಷ ಶಕ್ತಿಯಿದೆ. ಸಣ್ಣವರಿಗಂತೂ ದೊಡ್ಡ ಆಡಿನ ಹಾಲೇ ಒಳ್ಳೆಯದು.

ಹಾಲಿನಗುಣಗಳನ್ನು ವಿಚಾರಮಾಡಿಕೊಂಡನಂತರ ಅದನ್ನು ಉಪಯೋಗಿಸಿಕೊಳ್ಳುವ ವಿಧಿಯನ್ನೂ ಅವಶ್ಯವಾಗಿ ತಿಳಿದುಕೊಳ್ಳಬೇಕಾಗುವುದು. ಪದಾರ್ಥಗಳ ಗುಣಗಳು ತಿಳಿದಿದ್ದರೂ ಅವನ್ನು ಉಪಯೋಗಮಾಡಿಕೊಳ್ಳುವ ಗೊತ್ತಾಗದಿದ್ದರೆ ಲಾಭಕ್ಕೆ ಬದಲಾಗಿ ಹಾನಿಯೇ ಆಗುವುದು. ಪ್ರಾಯಶಃ ಜನಗಳು ಹಾಲನ್ನು ಕಾಸಿ ಆರಿಸಿ ಸಕ್ಕರೆ ಹಾಕಿಕೊಂಡು ಕುಡಿಯುತ್ತಿರುವರು. ಆದರೆ ಒಳ್ಳೆಯಹಾಲು ರೂಪಾಯಿನಲ್ಲಿ ನಾಲ್ಕಾರುಭಾಗದ ಜನಕ್ಕಾದರೂ ದೊರೆಯುವುದು ಕಷ್ಟವಾಗಿದೆ; ಒಂದುವೇಳೆ ದೊರೆತರೂ ಹಳೆಯದೋ, ಎರಡು ಮೂರು ಸಾರೆ ಕಾಸಿದುದೋ, ಎರಡೆರಡುದಿನಗಳವರೆಗಿಟ್ಟುದುದೋ ದೊರೆಯುವುದು. ಈ ಸಮಯದಲ್ಲಿ ಪಾಶ್ಚಾತ್ಯಸಭ್ಯತೆಯನ್ನನುಸರಿಸುತ್ತಿರುವ ವಿದ್ವಾಂಸರು ಚಹಾಕ್ಕೆ ಬಣ್ಣ ಬಣ್ಣವನ್ನುಂಟುಮಾಡುವುದಕ್ಕಾಗಿಯೇ ಹಾಲಿನ ಉಪಯೋಗವನ್ನು ಪ್ರಧಾನವಾಗಿಟ್ಟುಕೊಂಡಿರುತ್ತಾರೆ. ಹೀಗೆ ದುರುಪಯೋಗಪಡಿಸುವ ಹಾಲು ಶರೀರಕ್ಕೆ ಪುಷ್ಟಿಯನ್ನೋ, ಆರೋಗ್ಯವನ್ನೋ ಎಂದೂ ಉಂಟುಮಾಡಲಾರದು.

ಪಟ್ಟಣಗಳಲ್ಲಿ ವಾಸಮಾಡುವ ಎಷ್ಟೋ ಜನರಿಗೆ ಆಕಳನ್ನು ಕಟ್ಟುವದಕ್ಕೆ ಸ್ಥಳವೂ, ಅವುಗಳನ್ನು ತಿರುಗಾಡಿಸುವುದಕ್ಕೆ ಅಡವಿಯೂ ಇರುವುದೇ ಇಲ್ಲ. ಇಂತಹ ಸ್ಥಿತಿಯಲ್ಲಿ ಅವರು ಮಾರಿಗೆಯ ಹಾಲನ್ನೇ ನಂಬಿಕೊಂಡಿರಬೇಕಾಗುವುದು; ಹಾಲು ಮಾರತಕ್ಕವರಾದರೂ ಇತ್ತ ಕಾಂಗ್ರೆಸ್ಸಿನ ಸ್ವಯಂಸೇವಕರೂ ಅಲ್ಲ, ಅಥವಾ ದೇಶೀಯ ವೈದ್ಯರ ಆಳುಗಳೂ ಅಲ್ಲ; ಎಂದ ಮೇಲೆ ಅವರಿಗೆ ಹಾಲಿನ ಗುಣದೋಷಗಳ ವಿಚಾರವೇಕೆ ಬೇಕು? ಯಾವುದೋ ಒಂದುರೀತಿಯಿಂದ ಹೆಚ್ಚಾಗಿ ದುಡ್ಡು ಸೆಳೆಯುವ ಉಪಾಯವನ್ನೇ ಒಳ್ಳೆಯದನ್ನಾಗಿ ತಿಳಿದುಕೊಂಡಿರುವರು. ಒಂದು ಸೇರು ಹಾಲಲ್ಲಿ ಒಂದು ಸೇರೋ, ಅಥವಾ ಅದಕ್ಕೂ ಹೆಚ್ಚೋ ನೀರು ಬೆರೆಸುವುದಕ್ಕೆ ಅವರು ಎಂದೂ ಹೆದರಿಕೊಳ್ಳುವುದಿಲ್ಲ. ರಾತ್ರಿಯಲ್ಲಿ ಮಾರಿ ಉಳಿದ ಹಾಲನ್ನು ಮರುದಿನ ಹಿಂಡಿದ ಒಳ್ಳೆಯ ಹಾಲಿನಲ್ಲಿ ಸೇರಿಸಿ ಕಾಸಿದುದಕ್ಕಂತೂ ಅವರು ಎಂದೆಂದೂ ನಾಚಿಕೊಳ್ಳುವುದಿಲ್ಲ. ತಿಳಿಗೆಟ್ಟ ಜನರು ಇಂತಹ ಹಾಲನ್ನೇ ಹೇಳಿದಷ್ಟು ದುಡ್ಡುಕೊಟ್ಟು ಕೊಳ್ಳುತ್ತಲಿದ್ದಾರೆ. ಇಂತಹ ಹಾಲಿನಿಂದ ನಮಗೆ ಯಾವ ಲಾಭವೂ ಆಗುವುದಿಲ್ಲ. ಇನ್ನು ಚಹಾಕ್ಕೆ ಹಾಲು ಹಾಕಿ ಕುಡಿಯುಳ್ಳವರಿಗೆ ನಾವು ಏನೂ ಹೇಳುವಂತಿಲ್ಲ. ಏಕೆಂದರೆ ಇಂಥವರೆಲ್ಲರೂ ದೊಡ್ಡ ಪಂಡಿತರೇ ಆಗಿರುತ್ತಾರೆ; ಇವರ ದುಸ್ತರಕ್ಕೆ ಉತ್ತರಕೊಡಲು ನಾವು ಎಂದೂ ಸಮರ್ಥರಾಗುವುದಿಲ್ಲ. ಮುಖ್ಯವಾಗಿ ಹಾಲಿನಿಂದ ಲಾಭಹೊಂದಬೇಕೆಂದು ಬಯಸತಕ್ಕವರಿಗೆ ಮಾತ್ರ ಇಷ್ಟುದನ್ನು ಮುಚ್ಚುಮರೆ ಹೇಳಬೇಕಾಗಿದೆ. ಚಹಾಪಾನಮತ್ತರಾಗಿ ಪಟ್ಟಣದ ಕೊಳೆಗಾಳಿಯ ಸಂದುಗಳಲ್ಲಿ ಕೋಳಿಗಳಂತೆ ಸುಳಿದಾಡುವ ಈಗಿನ ಯುವಕರಿಗೆ ಹಾಲೆಂದರೆ ಅದೊಂದು ಸುಣ್ಣದ ನೀರಾಗಿ ಪರಿಣಮಿಸಿದೆ. ಇವರ ಸುಳಿದಾಟದ ಸುಗ್ಗಿಯು ಮುಗಿದು ಒಮ್ಮೆ ವ್ಯಾಧಿಗ್ರಸ್ತರಾಗಿ ನರಳ್ಳುತ್ತಿದ್ದರೆ ಮಾತ್ರ, ಹಾ! ಹಾಲೆ!! ಹಾ! ಹಾಲೆ!! ಎಂದು ಹಂಬಲಿಸಿ ಹಾಲಿಗೆ ಶರಣುಹೊಡೆಯಲೇಬೇಕಾಗುವುದು.

ದೇಶಗಳಲ್ಲೆಲ್ಲಾ ನಮ್ಮ ಭಾರತದೇಶವು ವಿಶಾಲವಾದುದು. ಅಂತೆಯೇ ಇಲ್ಲಿ ಗೋಮಹಿಷಗಳು ಸಂಚರಿಸುವುದಕ್ಕೆ ಬೇಕಾದಷ್ಟು ಅಡವಿಗಳೂ, ಅವು ಹೊಟ್ಟೆತುಂಬಾ ಮೇಯುವುದಕ್ಕೆ ಹುಲ್ಲೂ, ನೀರು ಕುಡಿಯುವುದಕ್ಕೆ ಹೊಳೆ ಹಳ್ಳ ಕೆರೆಕಟ್ಟೆಗಳೂ ಇವೆ. ಆದರೆ ಗೋಮಹಿಷಸಂಖ್ಯೆಯು ಇದೀಗ ಬಹಳ ಕಡಿಮೆಯಾಗುತ್ತ ಬಂದಿದೆ. ಗೋಪಾಲಕರೆನಿಸಿರುವ ನಮ್ಮ ಹಿಂದುಗಳ ಕಣ್ಮುಂದೆಯೇ ಪ್ರತಿದಿನವೂ ಸಾವಿರಾರು ಗೋವುಗಳು ನಾಶವಾಗುತ್ತಿವೆ. ಸಂಸಾರದಲ್ಲಿ ಸರ್ವಶ್ರೇಷ್ಠಾಹಾರವೆನಿಸಿರುವ ಹಾಲು ನಷ್ಟವಾಗುತ್ತ ನಡೆದಿದೆ ಎಂಬುದು ಯಾರಿಗೆ ತಾನೆ ಚಿಂತೆಯನ್ನುಂಟುಮಾಡಲಿಕ್ಕಿಲ್ಲ?

ಹಾಲಿನ ಸರ್ವೋತ್ಕೃಷ್ಟತೆಯನ್ನೆಷ್ಟು ವರ್ಣಿಸಿದರೂ ಮುಗಿಯುವಂತಿಲ್ಲ. ಸಮಸ್ತದೇಶಗಳಲ್ಲೆಲ್ಲಾ ಧನ ಕುಬೇರರೆನಿಸಿಕೊಂಡಿರುವ ಜೋನಡೀ ರೋಕಫೆಲರ್ ಎಂಬವರು ಇಂದಿಗೆ ೩೨ ವರ್ಷಗಳ ಹಿಂದೆ ತಮ್ಮ ಪಾಚನಶಕ್ತಿಯನ್ನು ಸುಧಾರಿಸಿಕೊಟ್ಟವರಿಗೆ ೩೦ ಲಕ್ಷ ರೂಪಾಯಿಗಳ ಬಹುಮಾನ ಕೊಡುವೆನೆಂಬುದಾಗಿ ಪ್ರಕಟಮಾಡಿದ್ದರು. ಇದಕ್ಕೆ ಯಾರ ಉತ್ತರವೂ ದೊರೆಯಲಿಲ್ಲ. ಕಡೆಗೆ ಯಾವ ಮಹಿಮರ ಉಪದೇಶದಿಂದಲೋ ಹಾಲನ್ನೇ ಮುಖ್ಯಾಹಾರವನ್ನಾಗಿಟ್ಟುಕೊಂಡು ಪ್ರಕೃತಿಯನ್ನು ಸುಧಾರಿಸಿಕೊಂಡು ಸದ್ಯ ವೃದ್ಧಾವಸ್ಥೆಯಲ್ಲೂ ಆರೋಗ್ಯವಾಗಿದ್ದಾರೆಂದು ತಿಳಿದುಬಂದಿದೆ.

ನಮ್ಮ ಆಯುರ್ವೇದಶಾಸ್ತ್ರದಲ್ಲಿ—

ಉಕ್ತಂ ಗವ್ಯಾದಿಕಂ ದುಗ್ಧಂ ಧಾರೋಷ್ಣಮಮೃತೋಪಮಂ ।
ಸರ್ವಾಮಯಹರಂ ಪಥ್ಯಂ ಚಿರಸ್ಥಂ ಕು ದೋಷದಂ ॥

(೬ನೆಯ ಪುಟವನ್ನು ನೋಡಿರಿ.)

ಪಂಚಾಚಾರ್ಯ ಪ್ರಭಾ.

೧೯೩೪ನೇ ಜುಲೈ ತಾ|| ೧೬ನೇ ಸೋಮವಾರ.

ದಿವಂಗತರಾದ ಮಹಾಮಾತೃಶ್ರೀಯವರು.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಶ್ರೀ ಕೆಂಪನಂಜಾಂಬಾ, ಸಿ. ಐ., ಮಹಾರಾಜ್ಞಿಯವರು ಮೈಸೂರು ರಾಜವರ್ಗದಲ್ಲಿ ಪ್ರಸಿದ್ಧರಾದ ಕಳಲೆಯ ನರಸರಾಜೆ ಅರಸಿನವರ ಧರ್ಮಪತ್ನೀ ಶ್ರೀಗುಣಾಂಬಾ ದೇವಿಯವರ ಗರ್ಭಾಂಬುಧಿಯಲ್ಲಿ ಶ್ರೀ ಶಾಲಿವಾಹನ ಶಕ ೧೭೮೮ ಅಕ್ಷಯಸಂವತ್ಸರದ ಜ್ಯೇಷ್ಠ ಬಹುಳ ಷಷ್ಠಿ ಬುಧವಾರ (1866) ದಿವಸ ಜನ್ಮಧಾರಣ ಮಾಡಿದರು. ಶ್ರೀ ನಂಜುಂಡೇಶ್ವರನ ವರಪ್ರಸಾದದಿಂದ ಹುಟ್ಟಿದುದರಿಂದಲೂ ತೇಜೋವತಿಯರಾದುದರಿಂದಲೂ ಜನನೀಜನಕರು ಈ ಮಹಾರಾಜ್ಞಿಯವರಿಗೆ ಶ್ರೀ ಕೆಂಪನಂಜಾಂಬಿಕಾ ಎಂಬ ಅನ್ವರ್ಥವಾದ ಹೆಸರನ್ನಿಟ್ಟರು. ಇವರು ಹುಟ್ಟಿದ ಶುಭಲಗ್ನದ ಆಧಾರದಿಂದ ದೈವಜ್ಞರು ಲೋಕಪಾಲಕನಾದ ಮಹಾರಾಜನ ಧರ್ಮಪತ್ನಿಯೆನಿಸಿ ರಾಜ್ಯಭಾರವನ್ನು ಮಾಡುತ್ತ ಯಶಸ್ವಿನಿಯರಾಗಿ ಮೆರೆಯುವರೆಂದು ಹೇಳುತ್ತಿದ್ದರು. ಬಳಿಕ ಕಾಂತಮ್ಮಣ್ಣಿ ಮತ್ತು ಕಾಂತರಾಜೆ ಅರಸು ಎಂಬ ಸಹೋದರೀ ಸಹೋದರರು ಹುಟ್ಟಿದರು. ಬಾಲ್ಯದಲ್ಲಿಯೇ ಮಹಾರಾಜ್ಞಿಯವರ ಚಟವಟಿಕೆಯನ್ನು ನೋಡಿ ತಂದೆತಾಯಿಗಳು ಆಶ್ಚರ್ಯಪಡುತ್ತಲೂ ಸಂತೋಷಪಡುತ್ತಲೂ ಇದ್ದು ಶಾಸ್ತ್ರೀಯವಾದ ನಾಮಕರಣಾದಿ ಸಂಸ್ಕಾರಗಳನ್ನು ಮಾಡಿಸುತ್ತ ವಿದ್ಯಾಭ್ಯಾಸಮಾಡಲು ಉಪಾಧ್ಯಾಯರನ್ನು ನಿಯಮಿಸಿದರು. ಮಹಾಕುಶಲಮತಿಯರಾದ ಶ್ರೀ ಕೆಂಪನಂಜಾಂಬಾ ಮಹಾರಾಜ್ಞಿಯವರು ಸ್ವಲ್ಪ ದಿವಸಗಳಲ್ಲೇ ಚೆನ್ನಾಗಿ ಓದುಬರಹಗಳನ್ನು ಕಲಿತು ರಾಮಾಯಣ ಭಾರತ ಭಾಗವತಾದಿ ಮಹಾಪುರುಷರ ಚರಿತ್ರೆಗಳನ್ನು ಓದಿ ಅವುಗಳಲ್ಲಿರುವ ನೀತಿಸಾರವನ್ನೆಲ್ಲಾ ಗ್ರಹಿಸಿ ರಾಜನೀತಿಜ್ಞರೆಂದೂ ಸುಶೀಲವತಿಯರೆಂದೂ ಸತ್ಯಧರ್ಮಗಳಲ್ಲಿ ಉಜ್ವಲಮತಿಗಳೆಂದೂ ಖ್ಯಾತಿಪಡೆದು ತಂದೆತಾಯಿಗಳಿಗೆ ಅಪಾರವಾದ ಸಂತೋಷವನ್ನುಂಟುಮಾಡುತ್ತಿದ್ದರು. ಅಷ್ಟರೊಳಗಾಗಿ ತಂದೆಯವರಾದ ನರಸರಾಜೆ ಅರಸಿನವರು ವಿಧಿವಶರಾದರು. ಜನನಿಯಾದ ಶ್ರೀ ಗುಣಾಂಬಾದೇವಿಯವರು ದುಃಖಸಾಗರದಲ್ಲಿ ಮುಳುಗಿದವರಾದರೂ ಧೈರ್ಯಗುಂದದೆ ಈ ಪುತ್ರರತ್ನತ್ರಯವನ್ನು ರಕ್ಷಿಸುವ ಭಾರವನ್ನು ತಾವೇ ವಹಿಸಿ ಮತ್ತಿಷ್ಟು ಉಜ್ವಲಮತಿಗಳನ್ನಾಗಿ ಮಾಡಿದರು. ಅಷ್ಟರೊಳಗಾಗಿ ಶ್ರೀ ಮಹಾರಾಜ್ಞಿ ಕೆಂಪನಂಜಾಂಬೆಯವರಿಗೆ ಹನ್ನೆರಡನೆ ವರ್ಷವು ಪ್ರಾರಂಭವಾಯಿತು. ಶ್ರೀ ಗುಣಾಂಬಾದೇವಿಯವರು ದಿನೇ ದಿನೇ ವೃದ್ಧಿಗೊಳ್ಳುತ್ತಿರುವ ಪುತ್ರೀರತ್ನದ ರೂಪಸೌಶೀಲ್ಯವಿನಯವಿನಯಾದಿ ಗುಣಗಳನ್ನು ನೋಡಿ ರತ್ನವು ಸುವರ್ಣದೊಡನೆ ಸೇರಿ ಪ್ರಕಾಶವನ್ನು ಹೊಂದುವಂತೆ ಈ ಪುತ್ರೀರತ್ನವನ್ನು ಅನುರೂಪನಾದ ಕ್ಷತ್ರಿಯೋತ್ತಮನಿಗೆ ಮದುವೆ ಮಾಡಬೇಕೆಂದು ವರಾನ್ವೇಷಣವನ್ನು ಮಾಡಲುಪಕ್ರಮಿಸಿದರು. ಅಷ್ಟರಲ್ಲಿ ಶ್ರೀ ಸೀತಾವಿಲಾಸ ಸನ್ನಿಧಾನದ ಮಹಾರಾಜ್ಞಿಯವರು ತಮ್ಮ ಪುತ್ರವರ್ಯರಾದ ಮೈಸೂರು ರಾಜ್ಯಸೂತ್ರಧಾರಿಗಳಾದ ಶ್ರೀ ಚಾಮರಾಜೇಂದ್ರ ಒಡೆಯರವರಿಗೆ ಅನುರೂಪವತಿಯಾದ ಕನ್ಯಾರತ್ನವನ್ನು ಶೋಧಿಸುತ್ತಲಿದ್ದರು. ಜಾತಕರೀತಿಯಾಗಿ ಸಂಪೂರ್ಣವಾದ ಅನುಕೂಲ್ಯವು ಕಂಡುಬಂದದ್ದರಿಂದ ಈ ಉಭಯರಿಗೂ ಬಹುಧಾನ್ಯ ಸಂವತ್ಸರದ ವೈಶಾಖ ಮಾಸದಲ್ಲಿ (26-5-1878) ಪಾಣಿಗ್ರಹಣಮಹೋತ್ಸವವು ನಡೆಯಿತು. ಆ ಸಮಯದಲ್ಲಿ ಪ್ರಪಂಚದಲ್ಲಿ ಪೀರಕ್ಷಾಮವು ಸಂಭವಿಸಿ ಮಳೆಬೆಳೆಗಳಿಲ್ಲದೆ ಪ್ರಜೆಗಳು ಸಂತಾಪಪಡುತ್ತಿದ್ದರು. ದನಕರುಗಳು ಹೊಟ್ಟೆಗಿಲ್ಲದೆ ಅಲೆಯುತ್ತಿದ್ದವು. ರೋಗಾದಿ ಉಪದ್ರವಗಳಿಂದ ಅಸಂಖ್ಯ ಜನರು ವ್ಯಥೆಯನ್ನು ಹೊಂದುತ್ತಿದ್ದರು. ವಿವಾಹಮಹೋತ್ಸವವು ಪೂರೈಸುವುದರೊಳಗಾಗಿ ಸಾಕ್ಷಾತ್ ಲಕ್ಷ್ಮೀಸ್ವರೂಪಿಣಿಯರಾದ ವಾಣೀವಿಲಾಸ ಸನ್ನಿಧಾನದ ಶ್ರೀ ಕೆಂಪನಂಜಮ್ಮಣ್ಣಿಯವರ ಮತ್ತು ಸಾಕ್ಷಾತ್ ವಿಷ್ಣುಸ್ವರೂಪರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಪುಣ್ಯಪರಿಪಾಕದಿಂದ ಕೋಪಗೊಂಡ ಮೇಘರಾಜನು ಪ್ರಸನ್ನನಾಗಿ ವೃಷ್ಟಿಗರೆಯಲಾರಂಭಿಸಿದನು. ಅಂದಿನಿಂದಲೂ ಭೂದೇವಿಯು ಶಾಂತಳಾಗಿ ಪೈರುಪಚ್ಚೆಗಳಿಂದ ಅಲಂಕೃತಳಾಗುತ್ತಬಂದಳು. ಸುಭಿಕ್ಷೆಯುಂಟಾಯಿತು. ಪ್ರಪಂಚದ ಹಾಹಾಕಾರವು ಶಾಂತವಾಯಿತು. ರೋಗಾದ್ಯುಪದ್ರವಗಳು ಮಾಯವಾದುವು. ಕ್ರಮವಾಗಿ ಕರ್ನಾಟಕ ರಾಜ್ಯಲಕ್ಷ್ಮಿಯು ಅಭಿವೃದ್ಧಿಯ ಸೋಪಾನವನ್ನೇರಬಯಸಿದಳು. ಈರ್ವರು ಪುತ್ರೀರತ್ನಗಳು ಜನಿಸಿದರು. ತರುವಾಯ ಕ್ರಿಸ್ತಶಕ ೧೮೮೪ನೆಯ ಜೂನ್ ನಾಲ್ಕರಲ್ಲಿ ಸಮುದ್ರದಲ್ಲಿ ಚಂದ್ರನುದಿಸಿದಂತೆ ನಮ್ಮನ್ನಾಳುವ ಧರ್ಮಾವತಾರಿಗಳಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರು ಉದಯಿಸಿದರು. ರಾಜ್ಯವು ಮತ್ತಿಷ್ಟು ಸುಖದ ಬೀಡಾಯಿತು. ಹೀಗಿರುವಲ್ಲಿ "ಸುಖಸ್ಯಾನಂತರಂ ದುಃಖಂ | ದುಃಖಸ್ಯಾನಂತರಂ ಸುಖಂ" ಎಂಬ ನೀತಿಯಂತೆ ಶ್ರೀ ಚಾಮರಾಜೇಂದ್ರ ಒಡೆಯರವರು ಅಕಸ್ಮಾತ್ತಾಗಿ ಕಲ್ಕತ್ತಾದಲ್ಲಿ ವಿಧಿವಶರಾದಪ್ರಯುಕ್ತ, ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನದವರಿಗೆ ಆಕಾಶವೇ ಕಳಚಿಬಿದ್ದಂತೆ, ಮಹಾವ್ಯಸನವು ಪ್ರಾಪ್ತವಾಯಿತು. ಮೂರುಜನ ಪುತ್ರೀರತ್ನಗಳೂ ಇಬ್ಬರು ಪುತ್ರರತ್ನಗಳೊಂದಿಗೆ ಪತಿಸೇವೆಯಲ್ಲಿಯೇ ನಿರತರಾಗಿದ್ದು "ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ" ಎಂಬ ನೀತಿಯಂತೆ ಅಭ್ಯುದಯದಲ್ಲಿ ಕ್ಷಮಾಗುಣವುಳ್ಳವರೂ ವಿಪತ್ತಿನಲ್ಲಿ ಧೈರ್ಯವುಳ್ಳವರೂ ಆದ ನಮ್ಮ ಮಹಾಮಾತೃಶ್ರೀ ಮಹಾರಾಜ್ಞಿಯವರು ಅಖಂಡ ಧೈರ್ಯವನ್ನವಲಂಬಿಸಿ ಕಾಳೀಘಟ್ಟದಲ್ಲಿ ಮಾಡಬೇಕಾದ ಅಪರಕ್ರಿಯೆಗಳನ್ನು ಮುಗಿಸಿ, ಮಕ್ಕಳೊಂದಿಗೆ ಮೈಸೂರಿಗೆ ದಯಮಾಡಿಸಿದರು. ಆಳುವ ಮಹಾಸ್ವಾಮಿಯವರಿಗೆ ಆಗ ಹತ್ತುವರ್ಷಗಳು ಮಾತ್ರ ತುಂಬಿದ್ದವು. ಶ್ರೀಮಹಾರಾಜ್ಞಿಯವರು ರೀಜಂಟರಾಗಿದ್ದು ದಕ್ಷತೆಯಿಂದ ತಾವೇ ರಾಜ್ಯಭಾರವನ್ನು ಮಾಡುತ್ತ ಬಂದರು. ಇವರ ರಾಜ್ಯಭಾರಕ್ರಮದಲ್ಲಿ ಮೈಸೂರು ದೇಶದಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಕಾವೇರಿ ವಿದ್ಯುಚ್ಛಕ್ತಿ ನಿರ್ಮಾಣ, ಮಾರಿಕಣಿವೆ ಕೆರೆಯ ಅಣೆಕಟ್ಟು ಮುಂತಾದ ಅನೇಕವಿಧ ಸೌಕರ್ಯಗಳುಂಟಾದವು. ಅಷ್ಟರಲ್ಲಿ ಆಳುವ ಮಹಾಸ್ವಾಮಿಯವರು ವಿದ್ಯಾಪಾರಂಗತರಾಗಿ ರಾಜ್ಯಭಾರವನ್ನು ವಹಿಸುವ ಶಕ್ತಿಯನ್ನು ಪಡೆದುದರಿಂದ ೧೯೦೨ರಲ್ಲಿ ಪಟ್ಟಾಭಿಷಿಕ್ತರಾಗಿ ರಾಜ್ಯಭಾರವನ್ನುವಹಿಸಿ ಮಹಾಮಾತೃಶ್ರೀಯವರಿಗೆ ವಿಶ್ರಾಂತಿಸುಖವನ್ನುಂಟುಮಾಡಿದರು. ಅಲ್ಲಿಂದೀಚೆಗೆ ಮಹಾರಾಜ್ಞಿಯವರು ಗುರುದೇವತಾಪೂಜೆಗಳಲ್ಲಿ ಆಸಕ್ತರಾಗಿ, ಕಾಲವರಿತು ಮಹಾಪ್ರಭುವರ್ಯರಿಗೆ ರಾಜ್ಯನೀತಿಯ ರಹಸ್ಯವನ್ನು ಬೋಧಿಸುತ್ತ ಪ್ರಜಾರಕ್ಷಣೆಯ ಸುವ್ಯವಸ್ಥೆಯಲ್ಲಿ ಜಾಗರೂಕರಾಗಿದ್ದು ಆಳುವ ಮಹಾಪ್ರಭುವರ್ಯರು ಸ್ವತಂತ್ರತೆಯಿಂದ ವಿಶ್ವತೋಮುಖವಾಗಿ ರಾಜ್ಯಭಾರಮಾಡುವ ಶಕ್ತಿಯನ್ನು ಪಡೆದಂದಿನಿಂದೀಚೆಗೆ ಮಹಾಮಾತೃಶ್ರೀಯವರು ನಿಶ್ಚಿಂತರಾಗಿ ಕೇವಲ ಭಗವನ್ನಾಮಸಂಕೀರ್ತನದಲ್ಲಿಯೂ ಸತ್ಕಥಾಶ್ರವಣದಲ್ಲಿಯೂ ಕಾಲಕಳೆಯುತ್ತ ಸ್ವದೇಶದ ಪ್ರಜೆಗಳನ್ನು ಪುತ್ರನಿರ್ವಿಶೇಷದಿಂದ ಪರಿಪಾಲಿಸುತ್ತಿರುವ ತಮ್ಮ ಪುತ್ರವರ್ಯರಾದ ಮಹಾಪ್ರಭುಗಳ ಅಸಾಧಾರಣಬುದ್ಧಿಯನ್ನೂ ಆಳ್ವಿಕೆಯ ಚಾತುರ್ಯವನ್ನೂ ಶಮದಮಾದಿಗುಣಸಂಪತ್ತಿಯನ್ನು ನೋಡಿಯೂ ಮತ್ತು ಪ್ರಭುಗಳು ಜನಕಮಹರ್ಷಿಗೆ ಸದೃಶರೆಂದೂ ರಾಜ್ಯವು ರಾಮರಾಜ್ಯಸದೃಶವೆಂದೂ ದೇಶವಿದೇಶೀಯರಿಂದ ಹೊಗಳಿಸಿಕೊಳ್ಳಲ್ಪಡುತ್ತಿರುವ ಕೀರ್ತಿವೈಭವವನ್ನು ಕೇಳಿಯೂ ಆನಂದಸಾಗರದಲ್ಲಿ ಲೋಲಾಡುತ್ತಲಿದ್ದರು. ಒಂದೆರಡು ವರ್ಷಗಳಿಂದೀಚೆಗೆ ಮಹಾಮಾತೃಶ್ರೀಗಳವರ ಶರೀರದಲ್ಲಿ ವಾರ್ಧಕಪ್ರಯುಕ್ತ ಅಸ್ವಸ್ಥತೆಯು ಸಂಭವಿಸಿದ್ದು ಆನಂದದಿಂದ ಭಗವಂತನ ಪಾದಾರವಿಂದಂಗಳನ್ನು ಹೊಂದಿ ಇವತ್ತಿಗೆ ಹತ್ತು ದಿವಸಗಳು ಕಳೆದವು. "ಮಾತೃದೇವೋಭವ" ಎಂಬುಕ್ತಿಯಂತೆ ಲೋಕದಲ್ಲಿರುವ ವಸ್ತುಗಳಲ್ಲಿ ತಾಯಿಗಿಂತಲೂ ಶ್ರೇಷ್ಠವಾದ ಪದಾರ್ಥವು ಮತ್ತೊಂದಿರುವುದೆ? ತಾಯಿಯು ಸಾಕ್ಷಾದ್ದೇವತಾಸ್ವರೂಪಿಣಿಯಲ್ಲವೆ? ಎಂಥ ವೈರಾಗ್ಯಶಾಲಿಯಾದ ಸನ್ಯಾಸಿಯನ್ನು ಸಹ ಮಾತೃವಿಯೋಗಜನ್ಯದುಃಖವು ಬಾಧಿಸುವುದೆಂದಮೇಲೆ ಇನ್ನು ಪೂಜ್ಯಮಾತೃಶ್ರೀ ಮಹಾರಾಜ್ಞಿಯವರ ಸಾಕ್ಷಾತ್ ಸಂಪೂರ್ಣ ಆಶೀರ್ವಾದಬಲದಿಂದಲೇ ದಿಗಂತವ್ಯಾಪಿನಿಯಾದ ಕೀರ್ತಿಯನ್ನು ಪಡೆದು ಧರ್ಮಾವತಾರಿಗಳೆನಿಸಿಕೊಂಡ ಆಳುವ ಮಹಾಪ್ರಭುಗಳಿಗೆ ಎಷ್ಟರಮಟ್ಟಿಗೆ ದುಃಖವುಂಟಾಗಿರುವುದೆಂಬುದನ್ನು ಹೇಳಲು ಯಾರೂ ಶಕ್ತರಲ್ಲ. ಸಕಲ ಧರ್ಮರಹಸ್ಯವನ್ನು ಕರತಲಾಮಲಕದಂತೆ ಬಲ್ಲ ನಮ್ಮ ಶ್ರೀಮನ್ಮಹಾರಾಜರವರು ಮಾತೃಶ್ರೀಯವರಲ್ಲಿ ನಿರವಧಿಕಭಕ್ತಿಯ ಪರಾಕಾಷ್ಠತೆಯ ಪಾರವಶ್ಯದಿಂದ ತಾವೇ ಕಾಲುನಡಿಗೆಯಲ್ಲಿ ಸಂಸ್ಕಾರಭೂಮಿಗೆ ದಯಮಾಡಿಸಿ ತಾಯಿಯ ಊರ್ಧ್ವಲೋಕಸಾಧನಗಳಾದ ದಹನಾದಿ ಸಂಸ್ಕಾರಗಳನ್ನೆಲ್ಲಾ ತಮ್ಮ ಕೈಯಿಂದಲೇ ನೆರವೇರಿಸಿ ಸನಾತನಧರ್ಮರಹಸ್ಯದ ಮಹತ್ವವನ್ನು ಪ್ರಜೆಗಳಿಗೆ ತೋರಿಸಿಕೊಟ್ಟಿರುತ್ತಾರೆ. ಇನ್ನು ಮೂರುನಾಲ್ಕು ದಿವಸಗಳವರಿವಿಗೂ ವಿಧ್ಯುಕ್ತ ಅಂತೇಷ್ಟಿಯ ಕಾರ್ಯಗಳು ನಡೆಯುವುವು. ಅಪರಸಂಸ್ಕಾರಾಂಗಗಳಾದ ಗೋ ಭೂ ಹಿರಣ್ಯಾದಿ ಮಹಾದಾನಗಳು ಯಥೇಷ್ಟವಾಗಿ ನಡೆಯುತ್ತಲೇ ಇವೆ. ಒಂದು ವಾರದಿಂದಲೂ ಛತ್ರಗಳಲ್ಲಿಯೂ ಗುರುಮಠಗಳಲ್ಲಿಯೂ ದೇವಾಲಯಗಳಲ್ಲಿಯೂ ಅತಿಥಿ ಅಭ್ಯಾಗತರಿಗೆ ವಿಶೇಷವಾದ ಅನ್ನಶಾಂತಿಯು ನಡೆಯುತ್ತಲಿದೆ

ಪವಿತ್ರವಾದ ಸನಾತನಧರ್ಮವು ಲುಪ್ತಪ್ರಾಯವಾಗುತ್ತಿರುವ ಇಂಥ ವಿಷಮಸಮಯದಲ್ಲಿ "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ" ಯಾವಾಗ ಭಾರತಧರ್ಮವು ಕ್ಷೀಣೋನ್ಮುಖವಾಗಲಾರಂಭಿಸುವುದೋ ಆಗ ನಾನೇ ಅವತಾರವೆತ್ತಿ ಪುನಃ ಧರ್ಮಸಂಸ್ಥಾಪನೆಗೆಯ್ಯುವೆನೆಂದು ಶ್ರೀಕೃಷ್ಣನು ಹೇಳಿರುವಂತೆ ಆ ಶ್ರೀಕೃಷ್ಣನೇ ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಎಂಬ ಅಪರಕೃಷ್ಣನಾಮದಿಂದ ಅದೇ ಯಾದವ ವಂಶದಲ್ಲಿ ಜನ್ಮವೆತ್ತಿ ನರಕಹೇತುವಾದ ಅಧರ್ಮವನ್ನು ತುಳಿದು ಧರ್ಮಸ್ಥಾಪನೆಮಾಡುವನೆಂಬುವಲ್ಲಿ ಇವರ ಧರ್ಮಾನುಷ್ಠಾನವೇ ಬಲವಾದ ಸಾಕ್ಷಿಯಾಗಿರುತ್ತದೆ. ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನದವರಿಂದ ಬಿತ್ತಲ್ಪಟ್ಟ ಪ್ರಜಾಸೌಕರ್ಯವೆಂಬ ಕಲ್ಪವೃಕ್ಷದ ಬೀಜವು ಈಗಾಗಲೇ ಅಂಕುರಿಸಿ ಪಲ್ಲವಿಸಿ ಅನಂತ ಶಾಖೋಪಶಾಖೆಗಳಿಂದ ಮನೋಹರವಾಗಿ ಅಭಿವೃದ್ಧಿಗೊಂಡು ಕುಸುಮಿತವಾಗಿ ಫಲಿತವಾದುದರಿಂದ ಸರ್ವತೋಮುಖವಾಗಿ ಪ್ರಜೆಗಳು ಅದರ ಅಮೃತಫಲಗಳನ್ನು ಸವಿಯುತ್ತಿರುವರು. ಮಹಾರಾಜ್ಞಿಯವರು ಈ ಪ್ರಜಾಸಂತೋಷವನ್ನು ಇನ್ನೂ ಕೆಲವು ವರ್ಷಗಳವರಿವಿಗೂ ನೋಡುತ್ತಾ ಇರಲೆಂದು ಪುತ್ರನಿರ್ವಿಶೇಷರಾದ ಪ್ರಜೆಗಳು ಹಾರೈಸಿಕೊಂಡಿರುವಲ್ಲಿ ದೈವದುರ್ವಿಲಾಸವು ಹಠಾತ್ಕಾರದಿಂದ ಮಹಾರಾಜ್ಞಿಯವರ ದಿವ್ಯಾತ್ಮವನ್ನು ಈಗಲೇ ಆಕರ್ಷಿಸಿ ಪ್ರಜೆಗಳಿಗೂ ಮಹಾಪ್ರಭುಗಳಿಗೂ ಮನೋವ್ಯಾಕುಲತೆಯನ್ನುಂಟುಮಾಡಿತು. 'ಭವಿತವ್ಯಂ ಭವತ್ಯೇವ' ಎಂಬುಕ್ತಿಯಂತೆ ಭಗವದಾಜ್ಞೆಯನ್ನು ಮೀರಲು ಶಕ್ತರಾರು?

ಒಳದೇಶದ ವೃತ್ತಾಂತಗಳು.

ತರೀಕೆರೆ ತಾಲೂಕು ಕಸಬಾ ಹೋಬಳಿಗೆ ಸೇರಿದ ಕೊಟ್ಟಿಗೆಹಳ್ಳಿಯನ್ನು ಇನ್ನು ಮುಂದೆ 'ಹೊಸೂರು' ಎಂದು ಕರೆಯತಕ್ಕದ್ದೆಂದು ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಈಗ್ಗೆ 2 ತಿಂಗಳುಗಳ ಹಿಂದೆ ರಾಜಧಾನಿಯ ಹಳೇ ಅಗ್ರಹಾರದಲ್ಲೂ, ಹೊಲಗೇರಿಯಲ್ಲೂ ನಡೆದ ಎರಡು ಖೂನಿಮೊಕದ್ದಮೆಗಳನ್ನು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ ಅಪರಾಧಿಗಳನ್ನು ಸೆಷನ್ ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಈ ತಿಂಗಳ ಅಂತ್ಯದಲ್ಲಿ ನಂಜನಗೂಡಿನಲ್ಲಿ ನಡೆಯಬೇಕೆಂದು ಏರ್ಪಾಡಾಗಿದ್ದ ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರವರ ಸ್ಮಾರಕೋತ್ಸವವು ಮಹಾಮಾತೃಶ್ರೀಯವರ ಪರಲೋಕಯಾತ್ರೆಯ ದೆಸೆಯಿಂದ ಸದ್ಯಕ್ಕೆ ನಿಲ್ಲಿಸಲ್ಪಟ್ಟಿರುತ್ತದೆ.

'ಸದ್ಗುರು' ಎಂಬ ಮಾಸಪತ್ರಿಕೆಯ ಸಂಪಾದಕರೂ ಪ್ರಸಿದ್ಧ ಕನ್ನಡ ಗ್ರಂಥಕರ್ತರೂ ಆದ ಶ್ರೀ|| ಗಳಗನಾಥರವರು ಕೆಲವು ಕಾಲದಿಂದ ಚಿತ್ರದುರ್ಗದಲ್ಲಿ ವಾಸಮಾಡಿಕೊಂಡಿದ್ದು, ಅಲ್ಲಿಯ ಪಾಳೇಗಾರರ ಐತಿಹಾಸಿಕ ಚರಿತ್ರೆಯನ್ನು 'ಬಿಚ್ಚುಗತ್ತಿ' ಎಂಬ ಕಾದಂಬರೀರೂಪದಲ್ಲಿ ಬರೆಯುತ್ತಿರುವರೆಂದು ತಿಳಿದುಬಂದಿದೆ.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನದವರ ನಿಧನದಬಗ್ಗೆ ಕಳೆದ ಸೋಮವಾರ ಸಂಸ್ಥಾನದ ಎಲ್ಲಾ ಸರಕಾರಿ ಕಚೇರಿಗಳೂ, ಪಾಠಶಾಲೆಗಳೂ, ರಾಜಧಾನಿಯ ಎಲ್ಲ ಟಪ್ಪಾಲಾಫೀಸುಗಳೂ ಮುಚ್ಚಲ್ಪಟ್ಟಿದ್ದುವು. ಅದರಂತೆ ಈದಿನ ನಾಳೆ ಮತ್ತು ನಾಡಿದ್ದು ಸಂಸ್ಥಾನದ ಎಲ್ಲಾ ಸರಕಾರೀ ಕಚೇರಿಗಳು ಮತ್ತು ಪಾಠಶಾಲೆಗಳು ಮುಚ್ಚಲ್ಪಡುವುವು.

ಮಹಾಮಾತೃಶ್ರೀಯವರ ನಿಧನದಬಗ್ಗೆ ಮೈಸೂರು ಪುರಜನರು ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿಯೂ, ಬೆಂಗಳೂರು ಪುರಜನರು ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿಯೂ, ಬಹಿರಂಗಸಭೆಗಳನ್ನು ಮಾಡಿ, ತಮಗುಂಟಾದ ಶೋಕಸಂತಾಪಗಳನ್ನು ಶ್ರೀಮನ್ಮಹಾರಾಜರಲ್ಲಿ ಅರಿಕೆಮಾಡಿಕೊಂಡಿರುತ್ತಾರೆ. ಇದರಂತೆ ಮೈಸೂರು ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ, ಶೋಕಪ್ರದರ್ಶನಗಳು ನಡೆದೂ ನಡೆಯುತ್ತಲೂ ಇರುವುವು.

ವರ್ತಮಾನಸಂಗ್ರಹ.

'ಕೊಡಕ್' ಫೋಟೋ ಕಂಪೆನಿಯವರು ಒಂದು ಸೆಕೆಂಡಿಗೆ 2500 ಫೋಟೋಗಳನ್ನು ತೆಗೆಯುವ ಒಂದು ಹೊಸತರಹ ಕ್ಯಾಮರಾವನ್ನು ತಯಾರಿಸಿರುತ್ತಾರೆ.

ದಕ್ಷಿಣ ಅಮೇರಿಕಾಕ್ಕೆ ಸೇರಿದ ಪೆರುಗ್ವೆ ಮತ್ತು ಬೊಲಿವಿಯಾ ದೇಶಗಳಿಗೆ ನಡೆಯುತ್ತಿರುವ ಯುದ್ಧದಲ್ಲಿ ಒಂದು ವಾರದೊಳಗಾಗಿ ಸುಮಾರು 11,000 ಜನ ಮೃತಪಟ್ಟಿರುವರು.

ತಿರುವಾಂಕೂರು ಸಂಸ್ಥಾನದ ಸಕ್ಕರೆ ಕಂಪೆನಿಯ ಮಿ|| ಎಚ್. ಎಸ್. ಟಿ. ಚಾರಿ ಎಂಬವರು ತೆಂಗಿನ ಹೆಂಡದಿಂದ ಉತ್ತಮವಾದ ಸಕ್ಕರೆಯನ್ನು ತಯಾರು ಮಾಡುವ ವಿಧಾನವನ್ನು ಕಂಡುಹಿಡಿದಿರುವರಂತೆ!

ಜರ್ಮನಿದೇಶಕ್ಕೆ ಸೇರಿದ ಬೇಡನ್ ನಗರದಲ್ಲಿ 1455 ನೆಯ ವರ್ಷದಲ್ಲಿ ಸ್ಥಾಪಿತವಾಗಿದ್ದ ಫ್ರೀಬರ್ಗ್ ವಿಶ್ವವಿದ್ಯಾನಿಲಯಕ್ಕೆ ಬೆಂಕಿ ಬಿದ್ದು ಕಟ್ಟಡವು ಸಂಪೂರ್ಣವಾಗಿ ನಾಶವಾಯಿತು. ಬೆಂಕಿಯನ್ನು ಆರಿಸುವ ಯಂತ್ರಗಳೂ, ವಿದ್ಯಾರ್ಥಿಗಳೂ ಮತ್ತು ಪ್ರೊಫೆಸರರೂ ವಿಶ್ವವಿದ್ಯಾನಿಲಯದ ಅಮೂಲ್ಯವಾದ ಪುಸ್ತಕ ಭಂಡಾರವನ್ನು ಉಳಿಸಲು ಬಹಳ ಸಾಹಸಪಟ್ಟರು. ಆದರೆ ನೀರಿನ ಅಭಾವದಿಂದ ಸಾಧ್ಯವಾಗಲಿಲ್ಲ.

ನರರಾಕ್ಷಸ!

ಲಾಹೋರಿನಲ್ಲಿ ಅಲಿ ಅಕ್ಬಾರ್ ಎಂಬೊಬ್ಬ ನರರಾಕ್ಷಸನು ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟಿರುವನು. ಇವನು ಇದುವರೆಗೆ 29 ಹುಡುಗರನ್ನು ಕೊಂದು, ಅವರ ರಕ್ತಪಾನವನ್ನು ಮಾಡಿರುವನಂತೆ!

ವಿಚಿತ್ರ ಬಂಡೆ!

ಅಫಘಾನಿಸ್ಥಾನಕ್ಕೆ ಸೇರಿದ ಬಾವರ್ಖಾ ಎಂಬಲ್ಲಿ ಒಂದು ವಿಚಿತ್ರ ಕಲ್ಲುಬಂಡೆಯು ಸಿಕ್ಕಿರುವುದು. ಅದರ ಮಧ್ಯದಲ್ಲಿ ಒಂದು ರಂಧ್ರವಿದ್ದು ಅದರಲ್ಲಿ ಯಾವಾಗಲೂ ನೀರು ತುಂಬಿರುವುದಂತೆ! ನೀರನ್ನು ಎಷ್ಟಾವರ್ತಿ ತೆಗೆದುಹಾಕಿದರೂ ಪುನಃಪುನಃ ನೀರು ಕೂಡಿಕೊಳ್ಳುವುದಂತೆ!

ಜಪಾನಿನಲ್ಲಿ ಪ್ರವಾಹದ ಹಾವಳಿ.

ಜಪಾನ್‌ದೇಶಕ್ಕೆ ಸೇರಿದ ಇಶಿಕಾವಾ ಮತ್ತು ತೊಯಾಮಾ ಪ್ರದೇಶಗಳಲ್ಲಿ ಪ್ರವಾಹದಿಂದ 20,000 ಮನೆಗಳು ಮುಳುಗಿಹೋಗಿರುತ್ತವೆ. ಸಾವಿರಾರು ಜನರು ಮೃತಪಟ್ಟಿರುತ್ತಾರೆ. ಒಂದು ಪಾಠಶಾಲೆಯಲ್ಲಿ ಬಾಲಕರು ವ್ಯಾಸಂಗಮಾಡುತ್ತಿದ್ದ ಹಾಗೆಯೇ ಪ್ರವಾಹವು ಬಂದು ಅನರ್ಥವು ಸಂಭವಿಸಿರುತ್ತದೆ.

ಯುದ್ಧಾರಂಭದ ಸೂಚನೆಗಳು.

ಇಂಗ್ಲೆಂಡ್ ಸರಕಾರದವರು ನಾರ್ವೇದೇಶದ ಸಮುದ್ರತೀರಕ್ಕೆ ಕೆಲವು ಯುದ್ಧದ ಹಡಗುಗಳನ್ನು ಕಳುಹಿಸಿರುತ್ತಾರೆ. ಈ ಸಂಬಂಧವಾಗಿ ಇಂಗ್ಲೆಂಡಿನ ನೌಕಾನಾಯಕರಾದ ಕ್ಯಾಪ್ಟನ್ ಎರ್ತ್‌ರವರು, 'ನಾರ್ವೇಸರ್ಕಾರದವರು ನಮ್ಮ ಹೇಳಿಕೆಗೆ ಒಪ್ಪದಿದ್ದಲ್ಲಿ ನಮ್ಮ ಕೆಲಸವನ್ನು ನಾವು ಮಾಡಬೇಕಾಗುವದು' ಎಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ಇದರ ಮೂಲಕಾರಣವು ಮಾತ್ರ ಸ್ಪಷ್ಟಪಡಿಸಲ್ಪಟ್ಟಿಲ್ಲ.

8 ಕೋಟಿ ರೂಪಾಯಿಗಳ ಕಿರೀಟ!

ಸೋವಿಯಟ್ ರಷ್ಯಾ ಸರಕಾರದವರು ಚಿಕಾಗೋ ನಗರದ ವಸ್ತುಪ್ರದರ್ಶನಕ್ಕೆ ಎರಡನೇ ಕ್ಯಾಥರೀನ್ ರಾಣಿಯು ಧರಿಸುತ್ತಿದ್ದ ಅಮೂಲ್ಯವಾದ ಕಿರೀಟವನ್ನು ಕಳುಹಿಸಿರುವರು. ಅದು 8 ಪೌಂಡುಗಳ ತೂಕವಿದ್ದು, ಅದರಲ್ಲಿ 5,000 ವಜ್ರಗಳೂ, ಅನೇಕಾನೇಕ ಕೆಂಪುಗಳೂ ಇರುವುವಂತೆ, ಅದರ ಬೆಲೆಯು ಎಷ್ಟೇ ಕಡಿಮೆಯೆಂದರೂ 8 ಕೋಟಿ ರೂಪಾಯಿಗಳಾಗುವುವಂತೆ!

ಲಂಡನ್‌ನಗರಕ್ಕೆ ತಂತಿಯಪಂಜರ!

ಯುದ್ಧಕಾಲದಲ್ಲಿ ಶತ್ರುಪಕ್ಷದ ವಿಮಾನಗಳಿಂದ ಲಂಡನ್‌ನಗರವನ್ನು ರಕ್ಷಿಸುವುದಕ್ಕಾಗಿ, ಅಂತರಿಕ್ಷದಲ್ಲಿ ಸಹಸ್ರಾರು ಅಡಿಗಳಮೇಲೆ ಆಕಾಶಬುಟ್ಟಿಗಳಿಂದ ಹೊಸತರಹ ಉಕ್ಕಿನ ತಂತಿಗಳನ್ನು ತೂಗಹಾಕಬೇಕೆಂದು ನಿರ್ಧರಿಸಿರುವರು. ಶತ್ರುಪಕ್ಷದ ವಿಮಾನಗಳು ಎಷ್ಟೇ ಸಾವಕಾಶವಾಗಿ ಹೋಗುತ್ತಿದ್ದರೂ ಈ ತಂತಿಗಳನ್ನು ಮುಟ್ಟಿದಕೂಡಲೇ ಸಣ್ಣಸಣ್ಣ ತುಂಡುಗಳಾಗಿ ಕತ್ತರಿಸಲ್ಪಡುವುವಂತೆ!

4 ವರ್ಷದ ಹುಡುಗಿಗೆ 45 ವರ್ಷದ ಗಂಡ!

ಎಟಾವಾ ಪ್ರಾಂತಕ್ಕೆ ಸೇರಿದ ನಾಗಪೋನಾ ಎಂಬ ಗ್ರಾಮದಲ್ಲಿ 4 ವರ್ಷದ ಒಂದು ಹೆಣ್ಣುಮಗುವಿಗೂ 45 ವರ್ಷದ ಮುದುಕನಿಗೂ ವಿವಾಹವು ನಡೆಯಿತು. ವರನು ಧನಿಕನಾಗಿದ್ದು ಹೆಣ್ಣಿನ ತಂದೆಗೆ 400 ರೂ. ಗಳನ್ನು ಕೊಟ್ಟು ಮದುವೆಗೆ ಸಮ್ಮತಿಯನ್ನು ಪಡೆದನು. ಆದರೆ ಆ ಊರಿನ ಜನರೆಲ್ಲರೂ ವಿವಾಹಕ್ಕೆ ಸಂಪೂರ್ಣ ವಿರೋಧಿಗಳಾಗಿದ್ದುದರಿಂದ ವಿವಾಹ ಕಾಲದಲ್ಲಿ ವರನಕಡೆಯ 50 ಜನರು ಲಾಠಿ ಮತ್ತು ಇತರ ಆಯುಧಗಳೊಡನೆ ಕಾವಲಿದ್ದರು.

ರಸಾಯನಶಾಸ್ತ್ರದ ನೂತನ ಭೂತ!

ಇಟಲಿಯ ಪ್ರೊಫೆಸರ್ ಫೆರ್ಮಿ ಎಂಬ ತರುಣ ಶಾಸ್ತ್ರಜ್ಞರು '93 ನೇ ಎಲಿಮೆಂಟ್' ಎಂಬ ಒಂದು ಶಕ್ತಿಯನ್ನು ಕಂಡುಹಿಡಿದಿರುವರು. ಇದರ ಸಹಾಯದಿಂದ ಯುದ್ಧಕಾಲದಲ್ಲಿ ದೊಡ್ಡ ದೊಡ್ಡ ನಗರಗಳನ್ನೂ, ಸೈನ್ಯಗಳನ್ನೂ, ಕ್ಷಣಮಾತ್ರದಲ್ಲಿ ನಾಶಮಾಡಬಹುದಂತೆ! ಈ ಶಕ್ತಿಯ ಮುಂದೆ ಯಾವುದೂ ನಿಲ್ಲಲಾರದು. ಈ ಶಕ್ತಿಯ ಸಹಾಯದಿಂದ 'ರಾಕೆಟ್-ಪ್ಲೇನ್' ಎಂಬ ವಿಮಾನಗಳಲ್ಲಿ ಒಂದೆರಡು ಗಂಟೆಗಳಲ್ಲಿ ಅಟ್ಲಾಂಟಿಕ್‌ಮಹಾಸಾಗರವನ್ನು ದಾಟಬಹುದಂತೆ! ಈ ಅದ್ಭುತಶಕ್ತಿಶೋಧನೆಯು ಇತರ ರಾಷ್ಟ್ರಗಳವರನ್ನು ಬಹಳ ಯೋಚನೆಗೀಡುಮಾಡಿದೆ.

ಚಿರತೆಯ ಸ್ವಾಮಿಭಕ್ತಿ!

ಮುಂಬಯಿಯ ಅಪೋಲೋ ಬಂದರಿನಲ್ಲಿ ಒಬ್ಬ ಸಾಧುವು ಒಂದು ಚಿರತೆಯನ್ನು ಸಾಕಿದ್ದನು. ಅದು ಸಾಧುವಿನೊಡನೆ ರಸ್ತೆಯಲ್ಲೆಲ್ಲಾ ಓಡಾಡಿಕೊಂಡಿದ್ದು ಯಾರಿಗೂ ತೊಂದರೆಯನ್ನು ಮಾಡದೇ ಇದ್ದಿತು. ಈ ಮಧ್ಯೆ ಮುಂಬಯಿ ಮ್ಯಾಜಿಸ್ಟ್ರೇಟರವರು ಕಾಡುಮೃಗವನ್ನು ಈ ರೀತಿ ರಸ್ತೆಯಲ್ಲಿ ತಿರುಗಾಡುವುದು ಅಪಾಯಕರವೆಂದೂ ಅದನ್ನು ಬೋನಿನಲ್ಲಿ ಸೇರಿಸಬೇಕೆಂದೂ ಅಪ್ಪಣೆಮಾಡಿದರು. ಸಾಧುವು ಅದರಂತೆ ಚಿರತೆಯನ್ನು ಬೋನಿನಲ್ಲಿ ಕೂಡಿದನು. ಆದರೆ ಚಿರತೆಯು ಆ ರೀತಿ ನಿರ್ಬಂಧದಲ್ಲಿರಲು ಒಪ್ಪದೆ, ಅಂದಿನಿಂದಲೂ ಆಹಾರವನ್ನೇ ಮುಟ್ಟದೆ ಕಡೆಗೆ ಮೃತಪಟ್ಟಿತು.

ಸಮಯವರಿತು ಸಿಡಿಯುವ ಸಿಡಿಮದ್ದು!

ಇಂಗ್ಲೆಂಡಿನ ಮಿಲಿಟರಿ ಇಲಾಖೆಯವರು ಲಂಡನ್ನಿನ ಸಮೀಪದಲ್ಲಿ ಒಂದು ಹೊಸತರಹ ಸಿಡಿಮದ್ದನ್ನು ಪರೀಕ್ಷಿಸುತ್ತಿರುವರು. ಈ ಸಿಡಿಮದ್ದನ್ನು ಯಂತ್ರದಿಂದ ಅಂತರಿಕ್ಷಕ್ಕೆ ಹೊಡೆಯುವರು. ಅದು ಆಕಾಶದಲ್ಲಿ ಒಂದು ನಿರ್ದಿಷ್ಟವಾದ ಎತ್ತರಕ್ಕೆ ಹೋದನಂತರ ಮುಂದಕ್ಕೆ ಹೋಗಲಾರದೆಯೂ, ಕೆಳಕ್ಕೆ ಬೀಳದೆಯೂ ಹಾಗೆಯೇ ನಿಂತುಬಿಡುವದು. ಭೂಮಿಯು ಸರ್ವದಾ ತನ್ನ ಅಕ್ಷದಮೇಲೆ ಸುತ್ತುತ್ತಿರುವುದಷ್ಟೇ! ಹೀಗೆ ಸುತ್ತುವಕಾಲದಲ್ಲಿ, ಯಾವುದಾದರೂ ಗೊತ್ತಾದ ನಗರವು ತೇಲಾಡುತ್ತಿರುವ ಸಿಡಿಮದ್ದಿನ ಕೆಳಭಾಗಕ್ಕೆ ಬಂದಕಾಲದಲ್ಲಿ ಸಿಡಿಮದ್ದು ಹಾರಿ, ಆ ನಗರದಮೇಲೆ ಬಿದ್ದು, ಅದನ್ನು ನಾಶಗೊಳಿಸುವುದಂತೆ!

ಜಪಾನಿನಲ್ಲಿ ಯುದ್ಧದ ಸಿದ್ಧತೆ! ಸ್ವಶಕ್ತಿಯ ಉಗ್ರಪರೀಕ್ಷೆ!

ಜಪಾನ್ ಸರಕಾರದವರು ತಮ್ಮ ಮುಖ್ಯ ಶತ್ರುಗಳಾದ ಬ್ರಿಟನ್, ರಷ್ಯಾ ಮತ್ತು ಅಮೇರಿಕಾ ದೇಶಗಳೊಡನೆ ತನ್ನ ಬಲವನ್ನು ನೋಡುವುದಕ್ಕಾಗಿ ಅನೇಕ ಉಗ್ರಪರೀಕ್ಷೆಗಳನ್ನು ಕೈಕೊಂಡಿರುವರು. ಅಮೇರಿಕೆಯ ನೌಕಾ ಶಾಖೆಯವರು ಅಲ್ಯೂಷಿಯನ್ ದ್ವೀಪಗಳಲ್ಲಿ ಮಾಡುತ್ತಿರುವ ಶೋಧಗಳು ಜಪಾನಿನ ಭೀತಿಯನ್ನು ಹೆಚ್ಚಿಸಿರುವುವು. ಆದಕ್ಕಾಗಿ ಜಪಾನಿನವರು ಕಾಮಶ್ಚಾಟಕಾ ಭೂಸಂಧಿಗೆ 4 ಯುದ್ಧದ ಹಡಗುಗಳನ್ನು ಕಳುಹಿಸಿರುವರು. ತಮ್ಮ ಕಡೆಯ ಬೆಸ್ತರ ರಕ್ಷಣೆಗಾಗಿ ಈ ಹಡಗುಗಳನ್ನು ಕಳುಹಿಸಿರುವುದಾಗಿ ಜಪಾನ್ ಸರಕಾರದವರು ಹೇಳುವರಾದರೂ, ನಿಜವಾಗಿಯೂ ಅಮೇರಿಕೆಯ ನೌಕಾ ಶಾಖೆಯವರ ಕಾರ್ಯಕ್ರಮವನ್ನು ಅರಿತುಕೊಳ್ಳುವುದಕ್ಕಾಗಿಯೇ ಈ ಹಡಗುಗಳು ಕಳುಹಿಸಲ್ಪಟ್ಟಿರುವುವು. ಅಲ್ಯೂಷಿಯನ್ ದ್ವೀಪಗಳ ಕಡೆಯಿಂದ ಅಮೇರಿಕೆಯ ನೌಕಾ ಮತ್ತು ವಿಮಾನ ಸೈನ್ಯದವರು ಜಪಾನಿನ ಮೇಲೆ ದಾಳಿಯಿಟ್ಟರೆ ಏನು ಮಾಡಬೇಕೆಂಬುದನ್ನು ಪರೀಕ್ಷಿಸುವುದಕ್ಕಾಗಿ ಜಪಾನಿಗೂ ಅಲ್ಯೂಷಿಯನ್ ದ್ವೀಪಕ್ಕೂ ಮಧ್ಯೆ ಇರುವ ಸಮುದ್ರದಲ್ಲಿ ಜಪಾನಿನ ನೌಕಾ ಮತ್ತು ವಿಮಾನಸೈನ್ಯದವರು ಒಂದು ದೊಡ್ಡ ಕೃತಕಯುದ್ಧವನ್ನು ನಡೆಯಿಸುವರು. ರಷ್ಯಾದ ವಿಮಾನಗಳು ಜಪಾನ್‌ದೇಶದ ಮೇಲೆ ನುಗ್ಗಿದರೆ ಏನುಮಾಡಬೇಕೆಂಬುದನ್ನು ಪರೀಕ್ಷಿಸುವುದಕ್ಕಾಗಿ ಟೋಕಿಯೋ ಕೋಬ್ ಮತ್ತು ಒಸಾಕಾ ಡಿಸ್ಟ್ರಿಕ್ಟುಗಳಲ್ಲಿ ದೊಡ್ಡ ವೈಮಾನಿಕ ಕೃತಕಯುದ್ಧವು ನಡೆಯುವದು. ಇದರಂತೆ ಬ್ರಿಟಿಷರು ನುಗ್ಗಿಬಂದರೆ ಏನುಮಾಡಬೇಕೆಂಬುದನ್ನು ಪರೀಕ್ಷಿಸಲು ಫಾರ್ಮೋಸಾದಲ್ಲಿ ಮತ್ತೊಂದು ಕೃತಕಯುದ್ಧವು ನಡೆಯುವದು. ಈ ಯುದ್ಧದ ಪರೀಕ್ಷೆಗಳೆಲ್ಲವೂ ಅತ್ಯಂತ ಗುಪ್ತವಾಗಿ ನಡೆಯುವುವು. ಇವುಗಳ ವಿಷಯವಾಗಿ ಯಾವ ವರ್ತಮಾನವನ್ನೂ ಪ್ರಕಟಿಸಕೂಡದೆಂದು ವೃತ್ತಪತ್ರಿಕೆಗಳಿಗೆ ಕಟ್ಟಾಜ್ಞೆಯಾಗಿರುವುದು. ಈ ಕೃತಕಯುದ್ಧಗಳಲ್ಲಿ ಜಪಾನ್‌ದೇಶದ ಪ್ರತಿಯೊಂದು ಯುದ್ಧದ ಹಡಗೂ ಮತ್ತು ಪ್ರತಿಯೊಂದು ವಿಮಾನವೂ ಭಾಗವಹಿಸುವುವು. ಈ ಕೃತಕ ಯುದ್ಧಗಳಲ್ಲಿ ಸಿಡಿಮದ್ದುಗಳನ್ನು ಮಾತ್ರ ಉಪಯೋಗಿಸುವುದಿಲ್ಲವೇ ವಿನಾ ಇತರ ಎಲ್ಲ ವಿಚಾರಗಳಲ್ಲಿಯೂ ಇವು ನಿಜವಾದ ಯುದ್ಧಗಳೇ ಆಗಿರುವುವು. ಒಸಾಕಾ ಮೊದಲಾದ ದೊಡ್ಡ ದೊಡ್ಡ ನಗರಗಳ ಮೇಲೆ ರಾತ್ರಿಯ ಕಾಲದಲ್ಲಿ ವೈಮಾನಿಕ ಯುದ್ಧವು ನಡೆಯುವದು. ಆಗ್ಗೆ ಆ ಪ್ರದೇಶದಲ್ಲಿ ಯಾವ ಬೆಳಕೂ ಇರುವುದಿಲ್ಲ. ಕಗ್ಗತ್ತಲೆಯಲ್ಲಿ ಸೈನಿಕರು ನಗರದಲ್ಲೆಲ್ಲಾ ಓಡಾಡುತ್ತಿರುವರು. ಸಮುದ್ರದ ತೀರಪ್ರದೇಶಗಳಲ್ಲಿ ಕತ್ತಲಲ್ಲಿಯೇ ಸೈನಿಕರು ಹಡಗನ್ನು ಹತ್ತುವರು ಮತ್ತು ಹಡಗಿನಿಂದ ಇಳಿಯುವರು. ಸಮುದ್ರದಲ್ಲಿಯೂ, ಹಡಗುಗಳು ಸ್ವಲ್ಪವೂ ಬೆಳಕಿಲ್ಲದೆ ಮುಂದುವರಿಯುವುವು.

(೩ನೆಯ ಪುಟದಿಂದ ಮುಂದುವರಿದುದು.)

ಆಕಳೇ ಮೊದಲಾದವುಗಳ ಧಾರೋಷ್ಣ (ಆಗಲೇ ಹಿಂಡಿದ) ಕ್ಷೀರವು ಸಮಸ್ತ ರೋಗನಾಶಕವೂ, ಹಿತಕರವೂ ಅಮೃತ ಸಮಾನವೂ, ಬಹಳ ಹೊತ್ತು ಇಟ್ಟು ಕುಡಿಯುವ ಹಸಿಯ ಹಾಲು ಹಾನಿಕರವೂ ಎಂಬುದಾಗಿ ಪ್ರಮಾಣವುಂಟು. ಇದೇ ವಿಷಯದಲ್ಲಿ ಮೆಕರ್ಸನ್ ಎಂಬವರು ಬರೆಯುವುದೇನಂದರೆ—ರೋಗಗಳನ್ನುಂಟುಮಾಡುವ ಕೀಟಾಣುಗಳು ಹಾಲಿನಲ್ಲಿ ಬೇಗನೆ ಉತ್ಪನ್ನವಾಗುವವು. ಅತಿಸಾರ ಮುಂತಾದವುಗಳು ಪ್ರಾಯಃ ಇಂತಹ ಕೀಟಾಣುಗಳಿಂದಲೇ ಆರಂಭವಾಗುವುದುಂಟು; ಆದುದರಿಂದ ಕಾಸದೇ ಕುಡಿಯಬೇಕೆಂಬವರು 'ಧಾರೋಷ್ಣ' ಕ್ಷೀರವನ್ನೇ ಕುಡಿಯಬೇಕು. ಇದಾಗದಿದ್ದರೆ ಕಾಸಿ ಕುಡಿಯುವುದೊಳ್ಳೆಯದು. ಕಾಸುವುದರಿಂದ ಹಾನಿಕರಗಳಾದ ಕೀಟಾಣುಗಳು ಸತ್ತುಹೋಗುವುವು. ಕಾಸಿದ ಮೇಲೂ ಹಾಲನ್ನು ಅರ್ಧಘಂಟೆಯೊಳಗಾಗಿಯೇ ಕುಡಿಯಬೇಕು; ಮುಂಜಾನೆ ಕಾಸಿ ಸಂಜೆಗೆ ಕಾದ ಹಾಲೆಂದು ಕುಡಿಯುವುದು ವಿಷಪಾನಕ್ಕೆ ಸಮಾನವಾದುದು. ಧಾರೋಷ್ಣ ಕ್ಷೀರವನ್ನು ಬಿಟ್ಟಮೇಲೆ ಮುಂದೆ ಮುಂದೆ ಹಾಲಿಗಾಗುವ ಎಲ್ಲಾ ಸಂಸ್ಕಾರಗಳೂ ಗುಣವನ್ನುಂಟುಮಾಡುವುದರಲ್ಲಿ ಅಲ್ಪ ಸಾಮರ್ಥ್ಯವುಳ್ಳವುಗಳೆಂದೇ ತಿಳಿಯಬೇಕು ಮುಂತಾಗಿ.

ಹಾಲನ್ನು ಉಪಯೋಗಿಸುವ ಹೊತ್ತು:—ಆಯುರ್ವೇದ ಶಾಸ್ತ್ರವು ಹಾಲಿನ ಗುಣದೋಷಗಳನ್ನು ವಿವೇಚನೆಮಾಡುವಾಗ ಇಂತಹ ಪ್ರಾಣಿಯ ಹಾಲು ಈ ಸಮಯಕ್ಕೆ ಒಳ್ಳೆಯದು, ಈ ಸಮಯಕ್ಕೆ ಕೆಟ್ಟದು ಎಂಬುದನ್ನೂ ನಿರ್ಣಯಮಾಡಿದೆ. ಈ ಹಿಂದೆ ನಾವು ಎಲ್ಲಾ ಹಾಲುಗಳಲ್ಲಿ ಆಕಳ ಹಾಲೇ ಮಿಗಿಲಾದುದೆಂದು ಪ್ರತಿಪಾದಿಸಿದ್ದೇವೆ. ಪ್ರಮಾಣಶಿರೋಮಣಿಯಾದ ಈ ಜಗತ್ತಿನಲ್ಲಿ ನಾವೂ ಕೂಡ ಆಯಾಯ ಪ್ರಮಾಣಗಳನ್ನು ತೋರಿಯೇ ಹಾಲನ್ನು ಕುಡಿಯಬೇಕಾದ ಸಮಯವನ್ನಿಷ್ಟೀಗ ಬರೆಯಬೇಕಾಗಿದೆ. ಹಾಲುಕುಡಿಯತಕ್ಕವರು ಮೊದಲು ಕಾದು ಬೆಚ್ಚಗಾಗಿರುವ ಕುರಿಯ ಹಾಲೂ, ಕಾದು ತಣ್ಣಗಾಗಿರುವ ಎಮ್ಮೆಯ ಹಾಲೂ, ಹಿಂಡಿಹಿಂಡುತ್ತಲೇ ಬೆಚ್ಚಗಿರುವ ಆಕಳ ಹಾಲೂ ಹಿತಕರವಾದುದೆಂದು ತಿಳಿದುಕೊಂಡಮೇಲೆ ಸಮಯದ ಕಡೆಗೆ ಲಕ್ಷ್ಯಕೊಡಬೇಕು:—

ವೃಷ್ಯಂ ಬೃಂಹಣಮಗ್ನಿವರ್ಧನಕರಂ ಪೂರ್ವಾಹ್ನ ಪೀತಂಪಯೋ |
ಮಧ್ಯಾಹ್ನೇ ಬಲದಾಯಕಂ ಹಿತಕರಂ ಕೃಚ್ಛ್ರಸ್ಯ ವಿಚ್ಛೇದಕಂ ||
ಬಾಲ್ಯೇ ವಹ್ನಿಕರಂ ತತೋ ಬಲಕರಂ ವೀರ್ಯಪ್ರದಂ ವಾರ್ಧಕೇ |
ರಾತ್ರೌ ಕ್ಷೀರಮನೇಕದೋಷಶಮನಂ ಸೇವ್ಯಂ ತತಃ ಸರ್ವದಾ ||

ಪ್ರಾತಃಕಾಲದಲ್ಲಿ ಹಾಲುಕುಡಿಯುವುದರಿಂದ ಪುಷ್ಟಿಯೂ ಜಠರಶಕ್ತಿಯೂ, ಮಧ್ಯಾಹ್ನ ಕುಡಿಯುವುದರಿಂದ ಬಲವೂ ಆನಂದವೂ, ರಾತ್ರಿಯಲ್ಲಿ ಕುಡಿಯುವುದರಿಂದ ಅನೇಕ ರೋಗನಾಶವೂ ಉಂಟಾಗುವುವು. ಈ ಹಾಲು ಅವರವರ ವಯಸ್ಸಿಗೆ ತಕ್ಕಂತೆ ಬಾಲಕರಿಗೆ ಜಠರಾಗ್ನಿವೃದ್ಧಿಯನ್ನೂ, ಯುವಕರಿಗೆ ಬಲವೃದ್ಧಿಯನ್ನೂ, ವೃದ್ಧರಿಗೆ ವೀರ್ಯವೃದ್ಧಿಯನ್ನೂ ಉಂಟುಮಾಡುವುದರಿಂದ ಬಾಲ್ಯ ಯೌವನ ವಾರ್ಧಕಗಳೆಂಬ ಮೂರವಸ್ಥೆಗಳಲ್ಲಿಯೂ ಹಿತಕರವಾದುದು. ರಾತ್ರಿಯಲ್ಲಿ ಯಾವಾಗಲೂ ಹಾಲು ಕುಡಿಯುವುದು ಬಹಳ ಒಳ್ಳೆಯದು.

ಹಾಲಿನ ವಿಷಯದಲ್ಲಿ ಹೆಚ್ಚಾಗಿ ನೆನಪಿಡತಕ್ಕುದೆಂದರೆ—ಹಾಲನ್ನು ಹಿಂಡಿದಮೇಲೆ ಕಾಸದೆ ಎರಡು ತಾಸುಗಳವರೆಗೆ ಹಾಗೆಯೇ ಇಟ್ಟರೆ ಕೆಟ್ಟುಹೋಗುವುದು, ಆಮೇಲೆ ಅದನ್ನೇ ಕಾಸಿ ಕುಡಿದರೆ ಹಾನಿಯುಂಟಾಗುವುದು. ಹೀಗೆ ಎಂಟು ತಾಸಿನವರೆಗೆ ಕಾಸದೆ ಹಾಗೇ ಇಟ್ಟ ಹಾಲು ವಿಷಕ್ಕೆ ಸಮಾನವಾಗುವುದು. ಆದುದರಿಂದ ಹಿಂಡಿ ಬಹಳ ಹೊತ್ತು ಹಾಗೆಯೇ ಇಟ್ಟು ಕಾಸಿ ಕುಡಿಯುವ ಹಾಲಿನಿಂದ ಲಾಭವಾಗುವುದಿಲ್ಲ ಮುಂತಾದುದು.

ಹಾಲುಕಾಸುವ ವಿಧಿಯನ್ನು ನಿಘಂಟುಕಾರನು—

ಚತುರ್ಥಭಾಗಂ ಸಲಿಲಂ ನಿಧಾಯ |
ಯತ್ನಾದ್ವಿದಾವರ್ತಿತ ಮುತ್ತಮಂ ತತ್ ||
ಸರ್ವಾಮಯಘ್ನಂ ಬಲಪುಷ್ಟಿಕಾರಕಂ |
ವೀರ್ಯಪ್ರದಂ ಕ್ಷೀರಮತಿಪ್ರಶಸ್ತಂ ||

ಹಾಲಿನಲ್ಲಿ ನಾಲ್ಕನೆಯ ಒಂದು ಭಾಗ ನೀರು ಬೆರಸಿ ಕಾಸುವುದರಿಂದ ಆ ಹಾಲು ಸಮಸ್ತ ರೋಗನಾಶಕವೂ, ಬಲ ಪುಷ್ಟಿ, ವೀರ್ಯಪ್ರದವೂ ಆಗುವುದೆಂದು ಬರೆದಿದ್ದಾನೆ. ಒಟ್ಟಿನಮೇಲೆ

ಗವ್ಯಂ ಪೂರ್ವಾಹ್ನ ಕಾಲೇ ಸ್ಯಾದಪರಾಹ್ಣೇತು ಮಾಹಿಷಂ |
ಕ್ಷೀರಂ ಸತತಗಂ ಪಥ್ಯಂ ಯದ್ವಾ ಸಾತ್ಮ್ಯಂ ತ ಸರ್ವದಾ ||

ಆಕಳ ಹಾಲನ್ನು ಮುಂಜಾವಿನಲ್ಲಿಯೂ ಎಮ್ಮೆಯ ಹಾಲನ್ನು ಸಂಜೆಯಲ್ಲಿಯೂ ಮಿತವಾಗಿ ಸಕ್ಕರೆ ಬೆರಸಿ ಕುಡಿಯುವುದೊಳ್ಳೆಯದು.

ಹಾಲಿನ ವಿಷಯದಲ್ಲಿ ಇಲ್ಲಿಯವರೆಗೂ ವಿಚಾರಿಸುತ್ತ ಬಂದುದರಲ್ಲಿ ನಮಗೆ ಮುಖ್ಯವಾಗಿ ಗುಣಕಾರಿಯಾಗಿ ಕಂಡುಬರುವುದೆಂದರೆ ಧಾರೋಷ್ಣ (ಆಗಲೇ ಹಿಂಡಿದ) ಕ್ಷೀರವು. ನಿಘಂಟುಕಾರನಾದರೂ ಈ ವಿಷಯದಲ್ಲಿ—

ಧಾರೋಷ್ಣಂ ಸ್ವಮೃತಂ ಪಯಃ ಶ್ರಮಹರಂ ನಿದ್ರಾಕರಂ ಕಾಂತಿದಂ | ವೃಷ್ಯಂ ಬೃಂಹಣಮಗ್ನಿವರ್ಧನಮತೀವಸ್ವಾದು ತ್ರಿದೋಷಾಪಹಂ ||

ಧಾರೋಷ್ಣಕ್ಷೀರವು ಅಮೃತಪ್ರಾಯವೂ ಶ್ರಮವನ್ನು ಕಳೆದು ನಿದ್ರೆಯನ್ನು ತಂದು ಕಾಂತಿಬಲಗಳನ್ನು ಕೊಡತಕ್ಕುದೂ ಆಗಿದೆ ಎಂದು ಹೇಳಿರುವನು.

ಇನ್ನು ಹಾಲುಗಳಲ್ಲಿ ಆಕಳ ಹಾಲು ಶ್ರೇಷ್ಠವಾಗಿರುವಂತೆ ತುಪ್ಪಗಳಲ್ಲಿಯೂ ಆಕಳ ತುಪ್ಪವೇ ಶ್ರೇಷ್ಠವಾಗಿದೆ. ಕ್ಷಯ ರೋಗಿಗೆವನಾತ್ರ ಆದಿನತುಪ್ಪವೇ ಬೇಕು. 'ಘೃತೇನ ವರ್ಧತೇ ಬುದ್ಧಿಃ ಕ್ಷೀರೇಣಾಯುಷ್ಯವರ್ಧನಂ' ಎಂಬಂತೆ ತುಪ್ಪವು ವಿಶೇಷ ಲಾಭದಾಯಕವೇನೋ ಹೌದು, ಆದರೆ ಕ್ಷಯ, ಕಫ, ಅಜೀರ್ಣ, ಮಾರಿಕಾ, ಉನ್ಮಾದ, ಜ್ವರ, ಅಗ್ನಿಮಾಂದ್ಯ, ಮುಟ್ಟಿಗೆ ಬೇನೆ ಮುಂತಾದವುಗಳಲ್ಲಿ ದೊಡ್ಡ ಹಗೆಯಾಗುವುದೆಂದು ತಿಳಿಯಬೇಕು. ರಾತ್ರಿಯಲ್ಲಿ ಮೊಸರುಣ್ಣುವುದರಿಂದ ಆಯುಷ್ಯವು ಕ್ಷೀಣವಾಗುವುದು. ಪ್ರಾತಃಕಾಲದ ಭೋಜನದಲ್ಲಿಯೂ ಮೊಸರನ್ನು ಮಿತವಾಗಿ ಉಪಯೋಗಿಸುತ್ತ ಹೆಚ್ಚಾಗಿ ಮಜ್ಜಿಗೆ ಕುಡಿಯುವ ಅಭ್ಯಾಸವನ್ನೇ ಇಟ್ಟುಕೊಳ್ಳಬೇಕು. ಮಜ್ಜಿಗೆಯಿಂದ ಅನೇಕ ರೋಗಗಳು ನಾಶವಾಗುವುವೆಂದು ಆಯುರ್ವೇದ ವಿಜ್ಞಾನದಲ್ಲಿ—

ನ ತಕ್ರಸೇವೀ ವ್ಯಥತೇ ಕದಾಚಿತ್ |
ನತಕ್ರದಗ್ಧಾಃ ಪ್ರಭವಂತಿ ರೋಗಾಃ ||
ಯಥಾ ಸುರಾಣಾಮಮೃತಂ ಸುಖಾಯ |
ತಥಾ ನರಾಣಾಂ ಭುವಿ ತಕ್ರಮಾಹುಃ ||

ಮುಂತಾಗಿ ವಿವರಿಸಲ್ಪಟ್ಟಿದೆ.

ಆರೋಗ್ಯಕರವಾದ ಇಂತಹ ಹಾಲು, ತುಪ್ಪ, ಮೊಸರು, ಮಜ್ಜಿಗೆ ಮುಂತಾದವುಗಳ ಅನುಕೂಲಕ್ಕಾಗಿ ಮನೆಮನೆಗಳಲ್ಲಿ ಗೋಮಹಿಷ ಮೊದಲಾದವುಗಳನ್ನು ಸಾಕಿಸಬೇಕೆಂದು ನಾವು ವಿಶ್ವಾಸದಿಂದ ಹೇಳುತ್ತೇವೆ. ಗೋವಿನ ಸೇವೆಯು ಕೇವಲ ಮನುಷ್ಯರಿಂದಲ್ಲ, ದೇವತೆಗಳಿಂದ ನಡೆದುಕೊಂಡುಬಂದಿದೆ. ವೇದಗಳೂ ಗೋಸ್ತುತಿಯನ್ನು ಮಾಡಿವೆ. ಹಿಂದುಗಳೆನಿಸಿಕೊಂಡಿರುವ ನಾವು ಗೋ ಶಬ್ದಕ್ಕೆ ಮಾತೃಶಬ್ದವನ್ನು ಸೇರಿಸಿ ಗೋಮಾತೆಯೆಂದು ಕರೆಯುತ್ತ ಬಂದಿರುವುದು? ಇಂದಲ್ಲ ನಿನ್ನೆಯಲ್ಲ ಸಾವಿರಾರು ವರ್ಷಗಳಿಂದ; ಇದೇಕೆ ಹೀಗೆ ಕರೆಯುವುದು. ಗೋವು ನಮ್ಮನ್ನು ಹಡೆದ ತಾಯಿಯೇ? ಎಂದು ಕೇಳಬಹುದು, ವಿಚಾರಮಾಡೋಣ; ಹಡೆದಮ್ಮನು ನಮ್ಮನ್ನು ಸ್ತನ್ಯಪಾನಗಳಿಂದ ನಾಲ್ಕೈದು ವರ್ಷಗಳವರೆಗೆ ಸಾಕಬಹುದಲ್ಲವೆ? ಈ ಗೋವು ನೋಡಿ. ಮುಂದೆ ಆರನೆಯ ವರ್ಷದಿಂದ ನಮ್ಮ ಆಯುಷ್ಯವು ಮುಗಿಯುವವರೆಗೂ ಪವಿತ್ರವಾದ ತನ್ನ ನಾಲ್ಕು ಮೊಲೆಗಳಿಂದ ಹಾಲು ಕೊಟ್ಟು ನಮ್ಮನ್ನು ಕಾಪಾಡುತ್ತಿಲ್ಲವೆ? ಅದಕ್ಕಾಗಿಯೇ ನಮ್ಮ ಪೂರ್ವಜರು ಹಡೆದವ್ವನ ಜೊತೆಗೆ ಇದೂ ಅವ್ವನೆನಿಸಿಕೊಳ್ಳಲು ಯೋಗ್ಯವಾಗಿದೆ ಎಂದು ಗೋಮಾತೆ! ಗೋಮಾತೆ!! ಎಂದು ಕರೆದಿರುವರು. ಆದುದರಿಂದ ಮನುಷ್ಯರೆನಿಸಿಕೊಂಡಿರುವ ಯಾರೂ ಈ ಗೋಮಾತೆಯ ಕೊಲೆಗಾಗಿ ಕೈಯೆತ್ತಬಾರದು. ದುರ್ಭಾಗ್ಯವಶದಿಂದ ಒಂದುವೇಳೆ ಎತ್ತುವುದಾದರೆ ಹಡೆದವ್ವನನ್ನು ಹಿಂಸೆಮಾಡಿದ ಪಾಪಕ್ಕೆ ಭಾಗಿಗಳಾಗಿ ಒಂದುಸಾವಿರ ವರ್ಷ ರೌರವನರಕದಲ್ಲಿ ಬೀಳಬೇಕಾಗುವುದಿಷ್ಟೇ ಅಲ್ಲ, ಬಾಲಹುಳುವಾಗಬೇಕಾಗುವುದು; ಇನ್ನು ಕಟುಗರಿಗೆ ಮಾರತಕ್ಕವರು ನಾಯಿಯಾಗಿ ಹುಟ್ಟಬೇಕಾಗುವುದೆಂಬುದೇ ಸತ್ಯ. ನಮ್ಮ ಆಯುಷ್ಯವೃದ್ಧಿಗಾಗಿ ಹಾಲುಗರೆಯುವ ಪ್ರಾಣಿಗಳು ನಮ್ಮನ್ನು ಕಟುಗರಿಗೆ ಮಾರುವಾಗಲೂ, ಕಟುಗರು ಕಡಿಯುವಾಗಲೂ ಕಣ್ಣುತುಂಬಿ ನೀರು ತಂದು—

ಹಾಲಾದ ಕರೆದವರೆ, ಮೊಸರಾದ ಹೆತ್ತರೆ |
ಮೇಲೆ ಕೆನೆಗಡೆದವರೆ ಬೆಣ್ಣೆಯಾದೆ ||
ಮೇಲಾದ ತುಪ್ಪವು ನಾನಾದೆ ಕಾಸಿದರೆ |
ಹೀನಾರಿಗಾದೆಯೋ ಎಲೆ ಮಾನವಾ! ||

ಎಂದು ಅಳುತ್ತಿರುವವಾದುದರಿಂದ ಗೃಹಸ್ಥರೇ! ನಿಮ್ಮ ವಂಶವು ನಾಶವಾಗುವುದೆಂಬುದನ್ನು ಲಕ್ಷ್ಯದಲ್ಲಿಡಿರಿ. ಕರ್ನಾಟಕಬಂಧುಗಳೇ! ನೀವು ಭಾರತದೇಶಕ್ಕೂ ವಿಶೇಷವಾಗಿ ನಮ್ಮ ಕರ್ನಾಟಕಕ್ಕೂ ಕಲ್ಯಾಣವನ್ನು ಬಯಸುವಿರಾದರೆ ಜಗದ್ವ್ಯಾಪಿಸಿರುವ ಗೋವಧೆಯನ್ನು ತನುಮನಗಳಿಂದ ತಡೆಯಿರಿ. ಬೇಗನೆ ಗೋರಕ್ಷಣಮಾಡಿರಿ. ಆ ಮೇಲೆ ನಿಮ್ಮ ಆರೋಗ್ಯರಕ್ಷಣೆಯು ತಾನೇ ಆಗುವುದು.

(ಸಶೇಷ).

ಮತಾಂತರಹೊಂದುವದೇಕೆ?

ಬರೆದವ—ದೈವಜ್ಞ ವಿನೋದ, ಶಿರೋಳ.

ತಾವು ಜನ್ಮವೆತ್ತಿದ ಮತವನ್ನು ತಿರಸ್ಕರಿಸಿ ಮತ್ತೊಂದು ಮತಧರ್ಮವನ್ನು ಸ್ವೀಕರಿಸುವವರ ತಾತ್ಪರ್ಯವೇನಿರಬಹುದು? 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಎಂಬ ಭಗವದ್ಗೀತೋಕ್ತಿಯಲ್ಲಿ ತಿರುಳಿಲ್ಲವೇ? ಸ್ವಮತಸಿದ್ಧಾಂತದ ತತ್ವಸಂಶೋಧನೆಮಾಡಿದಾಗ್ಯೂ ಆತ್ಮೋನ್ನತಿಯ ಸಾಧನಗಳಾಗಲಿ ಅಥವಾ ಆತ್ಮೋದ್ಧಾರವಾಗಲಿ ಸಾಧ್ಯವಾಗದೆಂದು ಬಲವಾದ ನಂಬಿಗೆಯಾದರೆ ಮಾತ್ರ ಮತ್ತೊಂದು ಅನುಕೂಲವಾಗಿದ್ದ ಮತಧರ್ಮವನ್ನು ಸ್ವೀಕರಿಸಬಹುದೆಂದು ನ್ಯಾಯಶಾಸ್ತ್ರವು ಹೇಳಬಹುದು. ಇಷ್ಟೇ ಅಲ್ಲ. ತಾನು ಸ್ವೀಕರಿಸಬಹುದಾದ ಪರಮತದ ಸಿದ್ಧಾಂತತತ್ವಗಳ ಸಾಗರದಲ್ಲಿ ಧರ್ಮಮುಕ್ತಿ ಮುಕ್ತಿರತ್ನಗಳನ್ನು ಕಂಡವನಾಗಿದ್ದರೆ ಆ ಮತವನ್ನು ಸ್ವೀಕರಿಸುವದು ವಿಹಿತವಾದ ಧರ್ಮವಾಗಿರುವದು. ತನ್ನದನ್ನು ತಿಳಿದಿಲ್ಲ, ಮತ್ತೊಂದನ್ನು ಅರಿತಿಲ್ಲ. ಹೀಗಿದ್ದು ಒಂದು ಮತಧರ್ಮದವರು ಮತ್ತೊಂದು ಮತಧರ್ಮಕ್ಕೆ ಹಾರುವದೆಂದರೆ ಹಾಸ್ಯಾಸ್ಪದವೆಂದು ಹೇಳಬೇಕಾಗುತ್ತದೆ. ಮತಾಂತರ ಹೊಂದುವದು ಮಾನವನ ಜನ್ಮಸಾರ್ಥಕವಾದ ಪಾರಮಾರ್ಥಿಕಸಾಧನೆಗಾಗಿರುವದಲ್ಲದೆ, ಸಾಂಸಾರಿಕ ವಿಷಯೋಪಭೋಗಗಳಿಗಾಗಿ ಅಲ್ಲವಷ್ಟೇ? ಹಿಂದಿನಕಾಲದಲ್ಲಿಯೂ ಮತಾಂತರದ ಸುಗ್ಗಿಯು ಇತ್ತು. ಆದರೆ ಈಗಿನಂತೆ ಕ್ಷಣಿಕವಿಷಯದ ಸಂಜೆಗಾಗಿರಲಿಲ್ಲ. ಹಿಂದಿನದಕ್ಕೂ ಇಂದಿನದಕ್ಕೂ ಭೂಮ್ಯಾಕಾಶದಷ್ಟು ಅಂತರವಿದೆ. ಇಂದು ನಡೆದಿರುವ ಮತಾಂತರದ ಮರ್ಮವು ಮರ್ಮಜ್ಞರಿಗೆ ತಿಳಿಯದಿರದು. ನಮ್ಮ ಮತಕ್ಕೆ ಇಂಥವರು ಸೇರಿದರೆಂದು ಆ ಮತೀಯರು ಡೋಲನ್ನು ಬಾರಿಸುವರಷ್ಟೆ? ಆದರೆ ತಮ್ಮ ಮತೀಯರು ಬೇರೊಂದು ಮತಕ್ಕೆ ಹೋಗುವಾಗ ತಡೆಯುವಷ್ಟು ಸಾಮರ್ಥ್ಯವಿಲ್ಲದ ಇವರ ಡೋಲಿನ ನಾದವನ್ನು ಕೇಳುವವರಾರು? ನಮ್ಮ ಮತಕ್ಕೆ ಸೇರಿದ ವ್ಯಕ್ತಿಯು ಯಾವ ಉದ್ದೇಶವಾಗಿ ಸೇರಿತ್ತೆಂಬುದನ್ನು ವಿಚಾರಿಸಬೇಕು. ವಿಷಯಸುಖಕ್ಕಾಗಿಯೋ ಪಾರಮಾರ್ಥಿಕ ಸಾಧನೆಗಾಗಿಯೋ ಅಥವಾ ಇಹಪರಗಳೆರಡರ ಸಾಧನೆಗಾಗಿಯೋ ಎಂಬುದನ್ನು ತಿಳಿದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುವದು ಯೋಗ್ಯವಾದುದೆಂದು ಕೈ ಎತ್ತಿ ಹೇಳಬಹುದು. ಹಿಂದೂಸ್ಥಾನದಲ್ಲಿ ಅತ್ಯಂತ ಪ್ರಾಚೀನ ಕಾಲದಲ್ಲಿ ಹಿಂದೂಧರ್ಮೀಯರ ಹೊರತು ಪರಕೀಯ ಧರ್ಮೀಯರಿದ್ದಿಲ್ಲ. ಕಾಲಾಂತರದ ಮೇಲೆ ಪರನಾಡಿನವರ ಬಳಕೆಯಿಂದ ನಮ್ಮ ದೇಶದಲ್ಲಿ ಪರಮತಗಳೂ ಪ್ರವೇಶಿಸಿ ನೆಲೆಯಾದವು. ಈಗ ಭರತಖಂಡದಲ್ಲಿ ಮಹಮ್ಮದೀಯರ ಜನಸಂಖ್ಯೆಯು ಎಂಟು ಕೋಟಿಗೆ ಬಂದಿರುವದು. ಕ್ರಿಶ್ಚನ್ ಮತೀಯರು ೩ ಕೋಟಿ ಇರುವರು. ಅಂತೂ ಹನ್ನೊಂದು ಕೋಟಿ ಪರಮತೀಯರಿದ್ದಾರೆ. ಇವರೆಲ್ಲರೂ ಶುದ್ಧ ಹಿಂದೂರಕ್ತದವರಿದ್ದು ಪರಧರ್ಮದ ಪರದೆಯೊಳಗೆ ಸೇರಿಕೊಂಡಿರುವರು. ಇದರಿಂದ ಹಿಂದೂಧರ್ಮಕ್ಕೆ ಕ್ಷಯರೋಗ ಹತ್ತಿ ನರಳುತ್ತಿರುವದನ್ನು ನೋಡಿ ಸ್ವಾಮಿ ದಯಾನಂದಸರಸ್ವತಿ ಸ್ವಾಮಿ ಶ್ರದ್ಧಾನಂದರವರು ಔಷಧ ಕೊಡುತ್ತಿರುವಾಗಲೇ ಕಾಲನ ಬಲೆ ಶಿಕ್ಕುಹೋದರು. ಮತಧರ್ಮರಕ್ಷಣೆಗಾಗಿ ಮಾಡತಕ್ಕ ಉಪಾಯಗಳು ಉಪಯುಕ್ತವಾಗಿದ್ದರೆ ಮತವು ಉತ್ಕೃಷ್ಟವಾಗುವದು. ಮತೋನ್ನತಿಯವರಿಗಾಗಿ ಸ್ವಧರ್ಮಕ್ಕೂ ಪರಧರ್ಮಕ್ಕೂ ಮೈತ್ರೀಯಭಾವನೆಯಿಂದ ಸಾಗಬೇಕೆಂದೇ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿರುವನು. ತಾನು ಹಿಡಿದಿರುವ ಮಾರ್ಗವನ್ನರಿಯದೆ ಮತ್ತೊಬ್ಬರು ಸಾಗಿರುವ ಹಾದಿಗೆ ಮರುಳಾಗಿ ಹೋಗುವದು ವಿಹಿತವಲ್ಲ.

ಅದರೂ ಆಗಲಿ ತನ್ನ ಮತವನ್ನು ತಿರಸ್ಕರಿಸಿ ಮತ್ತೊಂದು ಮತಕ್ಕೆ ಹೋಗುವದಾದರೂ ಯಾತಕ್ಕೆಂದು ತನ್ನ ಅಂತರಾತ್ಮನನ್ನು ಕೇಳಿಕೊಂಡು ಹೋಗಬೇಕು. ಕೇವಲ ಕಾಮಿನಿಗಾಗಿಯೋ ಕಾಂಚನಕ್ಕಾಗಿಯೋ ಕಾಮುಕನಾಗಿಯೋ ಪುರುಷ ಸ್ತ್ರೀಯರು ಧಾವಿಸಬಾರದಲ್ಲವೇ? ಈಗ ಹಿಂದೀಯ ಅನೇಕ ಕುಟುಂಬದವರು ಕ್ರಿಶ್ಚಿಯನ್ ಧರ್ಮಕ್ಕೆ ಯಾತಕ್ಕಾಗಿ ಸೇರಿಕೊಂಡಿರುವರೆಂಬುವದು ಎಲ್ಲರಿಗೂ ತಿಳಿದವಿಷಯವಾಗಿದೆ. ಅನ್ನವಿಲ್ಲದೆ ನರಳುತ್ತಿರುವ ಭಾರತೀಯ ಬಡತನದ ಕುಟುಂಬ ಪೋಷಣೆಗೆ ಕ್ರಿಶ್ಚಿಯನ್ ಮತಪ್ರಸಾರಕರು ಹಣದಾಸೆಯನ್ನು ಹಚ್ಚಿ ಹಿಂದುಗಳನ್ನು ಪಾದ್ರಿಗಳನ್ನಾಗಿ ಮಾಡಿದರು. ಪಾಶ್ಚಿಮಾತ್ಯರಿಗೆ ಭರತಖಂಡಕ್ಕೆ ಬರಗಾಲ ಬಂದರೆ ಬಲು ಹಿಗ್ಗು. ಅಂದರೆ ಅವರ ಮತಪ್ರಸಾರಕ್ಕೆ ಅನುಕೂಲವಾಗುವದು. ಅದು ಹಾಗೇ ಇರಲಿ. ಇದೀಗ ೨೦ ನೇ ಶತಮಾನದಲ್ಲಿ ಮತಾಂತರದ ಮೇಲಾಟವನ್ನು ಎಷ್ಟು ಬಣ್ಣಿಸಿ ಬರೆಯಬೇಕೆಂದರೂ ಪೂರೈಯಾಗುವಂತಿಲ್ಲ. ಪುರುಷ ವ್ಯಾಮೋಹದ ಬಲೆಗೆ ಶಿಕ್ಕು ನಾರಿಯರು ತಮ್ಮ ಮತಧರ್ಮವನ್ನು ತಿರಸ್ಕರಿಸಿ ಪುರುಷನ ಮತಧರ್ಮ ಸ್ವೀಕರಿಸುವದೂ ಸ್ತ್ರೀವ್ಯಾಮೋಹಕ್ಕೆ ಮರುಳಾಗಿ ಈ ಪುರುಷ ಸಿಂಹಗಳು ತಮ್ಮ ಮತವನ್ನಿಮ್ಮು ಪರಮತದ ಜಾಲದಲ್ಲಿ ಬೀಳುವದೂ ಈಗ ಸಾಂಪ್ರದಾಯವಾಗಿ ಬಿಟ್ಟಿದೆ. ಇದಕ್ಕಾರೇನು ಮಾಡುವದು? ಸಾಗಲಿ. ಕಲಿಮಾಹಾತ್ಮ್ಯೆಯು ಅಪಾರವು: ನೋಡಲಿ ಜಗತ್ತು. ಕುಣಿದಾಡಲಿ ಸಾಂಕರ್ಯ ಪಿಶಾಚಿಗಳು.

ವೇ|| ಗುರುಬಸವಾರ್ಯರ ಗಾಯನವು,

ಗುಳೇದಗುಡ್ಡ.

ಬಿಜಾಪುರ ಜಿ|| ಗುಳೇದಗುಡ್ಡಕ್ಕೆ ಕರೆದು ಹಿರೇಮಠದ ವೇ|| ಗುರುಬಸವಾರ್ಯರೆಂಬವರು ಬಂದಿದ್ದು, ಇವರ ಗಾಯನವು ಇಲ್ಲಿಯ ಸುಪ್ರಸಿದ್ಧ ಶ್ರೀಮಂತರಾದ ಮ|| ರಾ|| ಭಾವೀ ವಿರೂಪಾಕ್ಷಪ್ಪನವರ ಮನೆಯಲ್ಲಿಯೂ ಹಾಗೂ ಜಾಲಿಹಾಳ ಸಂಗನಬಸಪ್ಪನವರ 'ಮಿತ್ರಸಂಘ'ದಲ್ಲಿಯೂ ಜರಗಿತು. ಸಂಗೀತ ಕಲಾಭ್ಯಾಸಿಗಳಾದ ಗುರುಬಸಯ್ಯನವರು ಚಿಕ್ಕವಯಸ್ಸಿನವರಿದ್ದು ಇನ್ನೂ ಅಧ್ಯಯನವನ್ನು ಮಾಡುತ್ತಿರುವರು. ಈಗ ಇವರು ಮಿಜರಿಯಲ್ಲಿ ಸುಪ್ರಸಿದ್ಧರಾದ ನೀಲಕಂಠಬುವಾ ಇವರಲ್ಲಿ ಗಾಯನವನ್ನು ಕಲಿಯುತ್ತಿರುವರು. ಇದೀಗ ವಿದ್ಯಾರ್ಥಿದಶೆಯಲ್ಲಿ ಸಂಗ್ರಹಿಸಿದ ಸಂಗೀತಸಾಹಿತ್ಯಗಳು ಸಂಗೀತಜ್ಞರನ್ನು ಪರಮಾನಂದಗೊಳಿಸುತ್ತಲಿವೆ. ಇವರ ಗಾಯನಸಭೆಗೆ ಪುರಪ್ರಮುಖರೂ, ಮ್ಯುನಿಸಿಪಲ್ ಪ್ರೆಸಿಡೆಂಟರೂ, ಶೌಕಾರರೂ, ಬೆಂಚ್ ಮ್ಯಾಜಿಸ್ಟ್ರೇಟರೂ ಚೀಫ್ ಆಫೀಸರರೂ ಆಗಮಿಸಿದ್ದರು. ಗಾಯನಪಟುಗಳಾದ ಗುರುಬಸವಾರ್ಯರು ತಮ್ಮ ಆಲಾಪನೆಯಿಂದ ರಾಗವೈಚಿತ್ರ್ಯದ ವಿದ್ವತ್ತೆಯನ್ನು ತೋರಿಸಿ ಸಮಸ್ತರನ್ನು ಸಂತೋಷಸಾಗರದಲ್ಲಿ ಮುಳುಗಿಸಿದರು. ಸಂಗೀತವು ಅಂಥ ಅತ್ಯದ್ಭುತ ಶಕ್ತಿಯಿಂದ ಕೂಡಿರುವದಷ್ಟೆ? ಬಾಲ್ಯಾವಸ್ಥೆಯಲ್ಲಿಯೇ ಪ್ರಸಿದ್ಧಿಗೆ ಬಂದ ನಮ್ಮ ಗುರುಬಸವಾರ್ಯರು ಉತ್ತರೋತ್ತರ ಗಾಯನವಿದ್ಯಾಭಿವೃದ್ಧಿಯನ್ನು ಹೊಂದುವಂತೆ ಪರಮಾತ್ಮನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೆರಡು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿರೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 42

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ

ವೀರಶೈವ ಮಾಡರ್ನ ಹೋಟೆಲ್

ನಂ. 8, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನೂತನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (18)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೆಜ್ವರಕ್ಕೆ

ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2,3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜೆಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14. ½ ಡಜನ್ 8-8-0 ಮತ್ತು ರೂ. 5

ಮಲೆರಿನ್ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8.

The Malariana Co., Mangalore (21)

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣ, ಗ್ರಹಣಿ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಗೊಳಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್ ಕಫ್ ರೆಮೆಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಫದಕೆಮ್ಮು ಇವನ್ನು ನೀರುಮೂಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಸಕಲ ತರಹದ ಹೊಟ್ಟೆಹುಳಗಳನ್ನು ನಾಶಮಾಡಿ ಹಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5.

ಸಿರಪ್ ಮೆಸಿಹೂಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ತೋರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡಸೀಸೆ ರೂ. 3-8-0, ಸಣ್ಣಸೀಸೆ ರೂ. 1-14-0.

ಟಿಕ್ಕು, ಹೋಮಿಯೋಪತಿ ಮದ್ದುಗಳೂ, ಸ್ವಾಸ್ಥ್ಯಚಕ್ರಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ತರವಾಗಿ ದರದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಪತ್ತೆ:— ಮಲೇರಿಯಾನ ಕಂಪೆನಿ,

[45] **(ಹಂಪನಕಟ್ಟೆ), 21, ಮಂಗಳೂರು**

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆಕರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಆಕರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,

ಬೆಂಗಳೂರು ಸಿಟಿ. 35

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು **"ವೀರಶೈವರತ್ನ"** ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸತ್ಯಶಿವಾದೀಕ್ಷಾಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[27] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಪೆನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪೆನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಪಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೩ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಜುಲೈ ೧೯೩೪ [ಸಂಚಿಕೆ ೧೦

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆಯಿರುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಅದ್ವೈತಖಂಡನಪೂರ್ವಕ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ಸಿದ್ಧಾಂತಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ರೇಣುಕವಿಜಯಮಹಾಪುರಾಣ.

(ಶ್ರಾವಣಮಾಸವು ಸಮೀಪಿಸಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀ ಜಗದ್ಗುರು ರೇಣುಕಾಚಾರ್ಯನ ಪುರಾಣವನ್ನು ತರಿಸಿಕೊಂಡು ಪುರಾತನಪದ್ಧತಿಯಂತೆ ಶ್ರಾವಣಮಾಸದಲ್ಲಿ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಪ್ರಾರಂಭಮಾಡಿ ಆ ಮಹಿಮನ ಸಚ್ಚರಿತ್ರವನ್ನು ಕೇಳಿ ತಮ್ಮ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ. ಬೆಲೆ ೧ ರೂ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ

ಬಳ್ಳಾರಿ ಡಿ|| ಹರಪನಹಳ್ಳಿ ತಾ|| ಕತ್ತೆಬೆನ್ನೂರು ಗ್ರಾಮದ ಮ|| ರಾ|| ಗುತ್ತಲದ ಬಳ್ಳಪ್ಪನವರು ಜ್ಯೇಷ್ಠ ಬಹುಳ ೧೨ ದಿವಸ ಸ್ವಗೃಹದಲ್ಲಿ ನೆರವೇರಿಸಿದ ತಮ್ಮ ಚಿ|| ಗಳ ವಿವಾಹ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂ. ಗಳು ಹುಮ್ಮಿಗಿ ಕುರ್ತಕೋಟಿ ಶಿ|| ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗ ಡಿ|| ನ್ಯಾಮತಿ ವಾಸಿಗಳಾದ ಮ|| ರಾ|| ಗುಡಿಕೋಟಿ ಶಂಕರಪ್ಪನವರು ತಮ್ಮ ತಮ್ಮನಾದ ಚಿ|| ರಾ|| ಪರಮೇಶ್ವರಪ್ಪನಿಗೆ ಹಾರ್ನಹಳ್ಳಿ ಮ|| ರಾ|| ಜವಳಿ ಮುರಿಗೇರುದ್ರಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ತಂದು ಹಾರ್ನಹಳ್ಳಿಯಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಜಿಲ್ಲಾ ಶಿರುಗುಪ್ಪ ತಾಲೂಕು ಮಣೂರು ಗ್ರಾಮದಲ್ಲಿ ನೆರವೇರಿದ ಪಟ್ಟಾಧಿಕಾರ ಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ಹಿರೇಹಾಳು ಮಳೇಮಠದ ಶ್ರೀ ವಿರೂಪಾಕ್ಷ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

5 ಮಕ್ಕಳ ತಾಯಿ !

ಮಿಸೆಸ್ ಯೆಬೇರಿಡಿಯರ್ ಎಂಬ 25 ವರ್ಷದ ಒಬ್ಬ ಫ್ರೆಂಚ್ ಸ್ತ್ರೀಯು ಲಂಡನ್ನಿನಲ್ಲಿ ಏಕಕಾಲದಲ್ಲಿ 5 ಹೆಣ್ಣು ಮಕ್ಕಳನ್ನು ಪ್ರಸವಿಸಿರುವಳಂತೆ!

ಅದೃಷ್ಟ !

ಬರ್ಲಿನ್ ನಗರದಲ್ಲಿ ಒಬ್ಬಾನೊಬ್ಬ ಮನುಷ್ಯನು ಒಂದು ಫಲಹಾರ ಮಂದಿರಕ್ಕೆ ಹೋಗಿ ಬೇಕಾದುದನ್ನು ತಿಂದನಂತರ ದುಡ್ಡು ಕೊಡದೆ ಹೋಗುತ್ತಿದ್ದನು. ಕಾವಲಿದ್ದ ಜವಾನನು ಅವನನ್ನು ಹಿಡಿದುಕೊಳ್ಳಲು, ಆತನು ನಿಜವಾಗಿಯೂ ತನ್ನಲ್ಲಿ ದುಡ್ಡಿಲ್ಲನೆಂದು ಹೇಳಿ, ತನ್ನ ಬಳಿಯಲ್ಲಿದ್ದ ಒಂದು ಲಾಟರಿ ಟಿಕೆಟ್ಟನ್ನು ಕೊಟ್ಟು ಹೊರಟುಹೋದನು. ಕಾವಲುಗಾರನು ಲಾಟರಿ ಟಿಕೆಟ್ಟನ್ನು ತಾನೇ ಇಟ್ಟುಕೊಂಡು ಹೊಟೇಲಿಗೆ ಕೊಡಬೇಕಾಗಿದ್ದ ದುಡ್ಡನ್ನು ಕೊಟ್ಟನು. ಮರುದಿವಸ ಆ ಟಿಕೆಟ್ಟಿಗೆ 6000 ರೂ. ಗಳ ಬಹುಮಾನ ಬಂದಿತು. ಕಾವಲುಗಾರನು ಈಗ ಸ್ವತಃ ಬಂದು ಹೊಟೇಲಿನ ಯಜಮಾನನಾಗಿರುತ್ತಾನೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

—

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು,
ಬೃಹನ್ಮಠ, ಬಿಜಾಪುರ.

—

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಗೃಹ್ಯಸೂತ್ರಗಳ ರಚನೆಯಾದರೋ ಶ್ರೌತಸೂತ್ರಗಳಲ್ಲಿ ಹೇಳಲ್ಪಟ್ಟ ಕರ್ಮಗಳ ಸಾಮಾನ್ಯ, ವಿಶೇಷ, ಅತಿದೇಶ, ದೃಷ್ಟಾಂತ, ಪರಿಭಾಷೆಗಳೆಂಬೀ ಮುಂತಾದ ವಿವಿಧ ರಚನೆಗಳುಳ್ಳದ್ದಾಗಿದೆ; ಅಂದರೆ ಶ್ರೌತಸೂತ್ರಗಳಲ್ಲಿ ಹೇಳಲ್ಪಡತಕ್ಕ ಕರ್ಮಗಳ ಇತಿಕರ್ತವ್ಯತೆಯ ಸಂಪೂರ್ಣಜ್ಞಾನವಿಲ್ಲದೆ ಗೃಹ್ಯಸೂತ್ರಗಳೊಳಗಿನ ಒಂದಾದರೂ ಕರ್ಮವನ್ನು ಸಾಂಗೋಪಾಂಗವಾಗಿ ಮಾಡಲಿಕ್ಕೆ ಬರುವಂತಿಲ್ಲ. ಅದು ಹೇಗೆಂದರೆ, ಅಶ್ವಲಾಯನಗೃಹ್ಯಸೂತ್ರವು '**ತಸ್ಯಾಗ್ನಿಹೋತ್ರೇಣ ಪ್ರಾದುಷ್ಕರಣಹೋಮಕಾಲೌ ವ್ಯಾಖ್ಯಾತೌ**' ಗೃಹ್ಯಾಗ್ನಿ ಸಂಬಂಧವಾದ ಪ್ರಾದುಷ್ಕರಣವನ್ನೂ ಹೋಮಕಾಲವನ್ನೂ ಅಗ್ನಿಹೋತ್ರದಿಂದೇ ತಿಳಿಯತಕ್ಕದ್ದು ಎಂದು ಸೂಚಿಸುವುದರಿಂದ, ಶ್ರೌತಸೂತ್ರದಲ್ಲಿ ಹೇಳಲ್ಪಟ್ಟ—"**ಉತ್ಸರ್ಗೇಽಪರಾಹ್ಣೇ ಗಾರ್ಹಪತ್ಯಂ ಪ್ರಜ್ವಾಲ್ಯ**" ಎಂಬ ಮೊದಲಾದ ಕಾಲಗಳು ಇಲ್ಲಿ ಗ್ರಹಿಸಲ್ಪಡುತ್ತವೆ. ಅಶ್ವಲಾಯನ ಗೃಹ್ಯಸೂತ್ರವು—'**ಅಥಾಗ್ನೌ ಜುಹೋತಿ ಯಥೋಕ್ತಂ ಪುರಸ್ತಾತ್**' ಎಂಬುದಾಗಿ ಶ್ರೌತೋಕ್ತವಾದ (೪-೮-೪) ಪಿಂಡ ಪಿತೃಯಜ್ಞದಲ್ಲಿ ವಿಧಿಸಲ್ಪಟ್ಟಿರುವ ಮೇರೆಗೆ ಅಗ್ನೌಕರಣವನ್ನು ಮಾಡತಕ್ಕದ್ದೆಂದು ಸೂಚಿಸುವಲ್ಲಿ ಸ್ಪಷ್ಟವಾಗಿಯೇ—'**ಯಥೋಕ್ತಂ ಪುರಸ್ತಾತ್**' ಎಂಬ ವಾಕ್ಯವಿರುವುದು. ಅಶ್ವಲಾಯನ ಗೃಹ್ಯಸೂತ್ರವು "**ಪಿಂಡೈರ್ವ್ಯಾಖ್ಯಾತಮ್**" (೪-೭-೪) ಶ್ರೌತಸೂತ್ರದಿಂದ ಪಿಂಡಯಜ್ಞಪ್ರಕರಣದಲ್ಲಿ ನಿರೂಪಿಸಲ್ಪಡುವ ಪಿಂಡಪ್ರದಾನವಿಷಯಕಗಳಾದ ಕಲ್ಪಗಳೆಲ್ಲವೂ ಪಾರ್ವಣಾದಿಶ್ರಾದ್ಧಗಳನ್ನು ಲಕ್ಷಿಸಿರುತ್ತವೆ; ಎಂಬುದಾಗಿ ಶ್ರೌತಸೂತ್ರಗಳ ಆಧಾರವನ್ನು ತೋರಿಸುವುದು. ಪಾರಸ್ಕರಗೃಹ್ಯಸೂತ್ರದಲ್ಲಿ—'**ಚಾತುಷ್ಪ್ರಾಶ್ಯ ಪಚನವತ್ಸರ್ವಮ್**' ಶ್ರೌತಸೂತ್ರದಿಂದ ಆಧಾನವಿಧಿಯಲ್ಲಿ ಹೇಳಲ್ಪಟ್ಟ ಚಾತುಷ್ಪ್ರಾಶ್ಯಪಚನಕರ್ಮದಂತೆ ಇಲ್ಲಿಯೂ ಅನುಷ್ಠಿಸತಕ್ಕದ್ದು; ಎಂಬೀ ಸೂಚನೆಯಿಂದ ಶ್ರೌತಸೂತ್ರದ ಕಡೆಗೆ ಬೆಟ್ಟುಮಾಡಿ ತೋರಿಸಲ್ಪಟ್ಟಿದೆ. ಇದೂ ಅಲ್ಲದೆ—"**ಉಕ್ತಾನಿ ವೈತಾನಿಕಾನಿ ಗೃಹ್ಯಾಣಿ ವಕ್ಷ್ಯಾಮಃ**" ಎಂಬುದಾಗಿ ಅಶ್ವಲಾಯನ ಪ್ರಥಮ ಗೃಹ್ಯಸೂತ್ರವಿರುವುದು. ಮೊದಲು ತ್ರೇತಾಗ್ನಿಸಾಧ್ಯಗಳಾದ ಕರ್ಮಗಳನ್ನು ಹೇಳಿ, ಇನ್ನು ನಾವು ಗೃಹ್ಯಾಗ್ನಿಸಾಧ್ಯ ಕರ್ಮಗಳನ್ನು ಹೇಳುವೆವು; ಎಂಬುದಾಗಿ ಈ ಸೂತ್ರದಲ್ಲಿರುವ ಶಬ್ದಗಳಿಂದ ಯಾವ ಪೂರ್ವದ ಸಂಬಂಧವು ತೋರಿಸಲ್ಪಟ್ಟಿದೆಯೋ ಅದು ಪೂರ್ವಗ್ರಂಥವನ್ನು ಅಂದರೆ ಶ್ರೌತಸೂತ್ರವನ್ನು ಅವಲಂಬಿಸಿರುವುದು. ಕಾತ್ಯಾಯನ ಶ್ರೌತಸೂತ್ರವು—"**ಅಥಾತೋಽಧಿಕಾರಃ**" ಎಂಬ ವಾಕ್ಯದಿಂದಾರಂಭಿಸಲ್ಪಟ್ಟು, ಮುಂದೆ ಗೃಹ್ಯಸೂತ್ರವಾದರೋ—"**ಅಥಾತೋ ಗೃಹಸ್ಥಾಲೀಪಾಕಾನಾಂ ಕರ್ಮ**" ಎಂದು ಆರಂಭವಾಗಿದೆ. ಈ ಗೃಹ್ಯಸೂತ್ರದಲ್ಲಿರುವ '**ಅಥ**' ಶಬ್ದದ ಅರ್ಥವನ್ನು—ಕರ್ಕ, ಹರಿಹರ, ಗದಾಧರ, ಜಯರಾಮ, ವಿಶ್ವನಾಥನೆಂಬೀ ಐದುಮಂದಿ ಭಾಷ್ಯಕಾರರೂ, 'ಶ್ರೌತಸೂತ್ರಗಳನ್ನು ಹೇಳಿದ ತರುವಾಯ ಸ್ಮಾರ್ತಸೂತ್ರಗಳನ್ನು ಹೇಳುವೆವು' ಎಂದು ಏಕಕಂಠದಿಂದ ನುಡಿಯುತ್ತಾರೆ. ಇದರಿಂದ ಯಾವನು ಅಗ್ನಿತ್ರಯಸಾಧ್ಯಕರ್ಮಗಳ ಅನುಷ್ಠಾನಕ್ಕೋಸ್ಕರ ಶ್ರೌತಸೂತ್ರಗಳನ್ನು ರಚಿಸಿದನೋ ಅವನೇ ಗೃಹ್ಯಾಗ್ನಿಸಾಧ್ಯ ಕರ್ಮಾನುಷ್ಠಾನಸಿದ್ಧಿಗಾಗಿ ಗೃಹ್ಯಸೂತ್ರಗಳನ್ನು ಮಾಡಿದನೆಂಬ ತಾತ್ಪರ್ಯವು ಸಿದ್ಧಿಸುವುದು. ಹೀಗೆ ಶ್ರೌತಸೂತ್ರಗಳೂ, ಗೃಹ್ಯಸೂತ್ರಗಳೂ, ಒಬ್ಬ ಆಚಾರ್ಯನಿಂದೇ ರಚಿಸಲ್ಪಟ್ಟವುಗಳಾದ್ದರಿಂದ ಅವೆರಡೂ ಒಂದೇ ಸೂತ್ರಗ್ರಂಥವೆಂದು ಹೇಳಲಭ್ಯಂತರವಿಲ್ಲ. ಮತ್ತು ಆ ಆಚಾರ್ಯನಿಂದೇ ಗೃಹ್ಯಾಗ್ನಿ ಸಾಧ್ಯಗಳಲ್ಲದ ಕರ್ಮಗಳ ನಿರೂಪಣೆಗಾಗಿ ಧರ್ಮಸೂತ್ರಗಳೂ ವಿಹಾರ, ಅಗ್ನ್ಯಾಯತನ, ವೇದಿಕೆ ಮುಂತಾದ ಯಜ್ಞೋಪಯುಕ್ತಸ್ಥಳಗಳ ಮಾಪನೆಗಾಗಿ ಶುಲ್ಬಸೂತ್ರಗಳೂ ರಚಿಸಲ್ಪಟ್ಟವೆ. ಅದುಕಾರಣವೇ, ವಸ್ತುತಃ ಏಕಕರ್ತೃಕಗಳಾದ ಇವೆಲ್ಲ ಸೂತ್ರಗಳೂ ಕಲ್ಪಸೂತ್ರಾಂತರ್ಭೂತಗಳೆಂದು ಹೇಳಲ್ಪಡುತ್ತವೆ. ಇನ್ನು ನಾಮಸಾದೃಶ್ಯದಿಂದ ಶ್ರೌತಗೃಹ್ಯಾದಿಸೂತ್ರಗಳು ಭಿನ್ನಕರ್ತೃಕಗಳಾಗಿರುವುವೆಂದು ಹೇಳುವುದಾದರೆ, ಬೋಧಾಯನಸೂತ್ರಗಳಲ್ಲಿಯೂ ಕೂಡ ಭಿನ್ನಕರ್ತೃಕತೆಯು ಸಂಭವಿಸಬಹುದಲ್ಲವೇ? ಏಕೆಂದರೆ ಅವು ಈಗ ೧ ದ್ವೈಧಸೂತ್ರಗಳು ೨ ಕರ್ಮಾಂತಸೂತ್ರಗಳು ೩ ಪ್ರಾಯಶ್ಚಿತ್ತಸೂತ್ರಗಳು ೪ ಶುಲ್ಬಸೂತ್ರಗಳು ೫ ಪ್ರವರಸೂತ್ರಗಳು ಎಂಬುದಾಗಿ ಐದು ವಿಧವಾದ ಸೂತ್ರಗಳು ಉಪಲಬ್ಧವಾಗಿವೆ. ಇವು ಅಯ್ದು ಬೋಧಾಯನಸೂತ್ರಗ್ರಂಥಗಳೊಳಗಿನ ಬೇರೆಬೇರೆ ಪ್ರಕರಣಗಳೆಂದು ಹೇಳಲ್ಪಡುತ್ತವೆ. ಅದೇ ಮೇರೆಗೆ ಸರ್ವಕಲ್ಪಸೂತ್ರಗಳಲ್ಲಿಯೂ ೧ ಶ್ರೌತವೂ ೨ ಗೃಹ್ಯವೂ ೩ ಶುಲ್ಬವೂ ೪ ಧರ್ಮವೂ ಎಂಬ ಬೇರೆಬೇರೆ ಪ್ರಕರಣಗಳಿರುತ್ತವೆ. ಅದ್ದರಿಂದ ಗೃಹ್ಯಸೂತ್ರಾದಿಗಳು ಶ್ರೌತಸೂತ್ರಗ್ರಂಥದ ಅವಾಂತರ ಪ್ರಕರಣಗಳೆಂದು ತಿಳಿವುದೇ ಯುಕ್ತವು. ಅವಾಂತರಪ್ರಕರಣಗಳೂ ಬೇರೆ ಬೇರೆ ಗ್ರಂಥಗಳೇ ಎಂಬ ನುಡಿಯು ಅನವಕಾಶವಾಗದಿರದು. ಮಂಡಲಬ್ರಾಹ್ಮಣವೂ, ಉಪಸ್ಥಾನಬ್ರಾಹ್ಮಣವೂ, ಅನ್ತರ್ಯಾಮಿಬ್ರಾಹ್ಮಣವೂ, ವಂಶಬ್ರಾಹ್ಮಣವೂ ಎಂಬೀ ಮುಂತಾದುವು ಶತಪಥಬ್ರಾಹ್ಮಣದ ಭಾಗಗಳೆಂದು ಪ್ರಸಿದ್ಧಗಳಾಗಿರುವುದರಿಂದ ಆ ಬ್ರಾಹ್ಮಣಭಾಗಗಳು ಆ ಆ ಪ್ರಕರಣಬೋಧಕಗಳಾಗಿರುವುವು. ಮೇಲಿನ ಪದ್ಧತಿಯಿಂದ ನಾಮಸಾದೃಶ್ಯಮೂಲಕವಾಗಿ ಗ್ರಂಥಭಿನ್ನತೆಯನ್ನೊಡಂಬಟ್ಟರೆ ಮಂಡಲಬ್ರಾಹ್ಮಣಾದಿಭಾಗಗಳೆಲ್ಲ ಬೇರೆ ಬೇರೆಗ್ರಂಥಗಳೆನಿಸಬಹುದಲ್ಲವೇ? ಪ್ರಾಚೀನವಿಬುಧರು ಈಸರಣಿಯನ್ನೊಪ್ಪರು. ಅದ್ದರಿಂದ ಈ ಮೇಲೆ ನಾವು ಹೇಳಿದ ಸಹೇತುಕ ವಾಕ್ಯಗಳಿಂದ ಗೃಹ್ಯಾದಿಸೂತ್ರಗಳನ್ನು ಶ್ರೌತಸೂತ್ರಗ್ರಂಥಾಂತರ್ಭೂತವಾದವುಗಳೆಂದರಿವುದುಚಿತವು.

ವೇದಾರ್ಥವನ್ನರಿತುಕೊಳ್ಳಲು ಶ್ರೌತಸೂತ್ರಗಳೂ ಗೃಹ್ಯಸೂತ್ರಗಳೂ ಉಪಯುಕ್ತಗಳಾಗಿವೆ. ಇವುಗಳಲ್ಲಿ ಕೇವಲ ಯಜ್ಞಯಾಗಾದಿಗಳ ನಿಯಮಗಳೇ ಇರುವುದಿಲ್ಲ. ಮಂತ್ರಗಳ ವಿನಿಯೋಗರೀತಿಯೂ ಹೇಳಲ್ಪಟ್ಟಿದೆ. ಆ ಆ ವೇದಸಂಹಿತೆಗಳ ಮಂತ್ರಗಳೇ ಈ ಸೂತ್ರಗ್ರಂಥಗಳಲ್ಲಿ ತೆಗೆದುಕೊಳ್ಳಲ್ಪಟ್ಟಿವೆ. ಹಾಗೂ, ಯಾವ ಯಾವ ಯಾಜ್ಞಿಕಕ್ರಿಯೆಗಳಲ್ಲಿ ಯಾವ ಯಾವ ಮಂತ್ರಗಳನ್ನು ಪಠಿಸಬೇಕೆಂಬುದೂ ವಿಶದೀಕೃತವಾಗಿದೆ. ಆದರೆ ಅನೇಕ ವೈದಿಕ ಮಂತ್ರಗಳಿಗೂ ಯಾಜ್ಞಿಕಕರ್ಮಗಳಿಗೂ ಏನೊಂದೂ ಸಂಬಂಧವೇ ಇರುವುದಿಲ್ಲ! ಕೆಲವೆಡೆಯಲ್ಲಿ ಒಂದು ಕಾರ್ಯವನ್ನು ಸಾಧಿಸಲೋಸುಗ ಯಾವ ಮಂತ್ರವು ಉಪಯೋಗಿಸಲ್ಪಟ್ಟುದಾಗಿ ಕಂಡು ಬರುವುದೋ ಆ ಮಂತ್ರಕ್ಕೂ ಆ ಕಾರ್ಯಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲ! ಕೆಲವು ಪ್ರಸಂಗಗಳಲ್ಲಿ ಮಂತ್ರಗಳ ಅರ್ಥವನ್ನೇ ವಿಪರ್ಯಾಸಗೊಳಿಸಿ ಅವುಗಳಿಗೆ ವೈರೂಪ್ಯವನ್ನುಂಟುಮಾಡುವುದೂ ಆಶ್ಚರ್ಯಜನಕವಾಗಿದೆ! ಇರಲಿ. ಈ ಸೂತ್ರವಾಙ್ಮಯದಿಂದ ಕೆಲವು ಮಂತ್ರಗಳ ವಿನಿಯೋಗಜ್ಞಾನಮೂಲಕ ವೇದಗಳಲ್ಲಿಯ ಕಠಿಣಭಾಗಗಳನ್ನರಿತುಕೊಳ್ಳಲು ಸ್ವಲ್ಪವಾದರೂ ಸುಲಭವೆನಿಸದಿರಲಾರದೆಂದು ಹೇಳಲಡ್ಡಿಯಿಲ್ಲ.

ಶ್ರೌತ, ಗೃಹ್ಯ, ಧರ್ಮ, ಶುಲ್ಬ ಬೋಧಕ ಸೂತ್ರಗಳ ಲಕ್ಷಣವೇನೆಂದರೆ, ಅನೇಕಾಗ್ನಿಸಾಧ್ಯಕರ್ಮಗಳನ್ನು ಪ್ರತಿಪಾದಿಸುವ ಗ್ರಂಥಗಳು ಶ್ರೌತಸೂತ್ರಗಳೆಂದೂ, ಏಕಾಗ್ನಿಸಾಧ್ಯಕರ್ಮಗಳನ್ನು ಪ್ರತಿಪಾದಿಸುವ ಗ್ರಂಥಗಳು ಗೃಹ್ಯಸೂತ್ರಗಳೆಂದೂ ಹೇಳಲ್ಪಡುತ್ತವೆ. ಇದೇ ಅರ್ಥವು ಅಶ್ವಲಾಯನೀಯ ಗೃಹ್ಯಸೂತ್ರವೃತ್ತಿಯ ಆರಂಭದಲ್ಲಿ ಗಾರ್ಗ್ಯನಾರಾಯಣನಿಂದ ಹೀಗೆ ಹೇಳಲ್ಪಟ್ಟಿದೆ—

'**ವಿತಾನೋಽಗ್ನೀನಾಂ ವಿಸ್ತಾರಃ, ತತ್ರ ಭವಾನಿ ವೈತಾನಿಕಾನಿ; ಬಹ್ವಗ್ನಿಸಾಧ್ಯಾನಿ ಕರ್ಮಾಣೀತ್ಯರ್ಥಃ। ಗೃಹನಿಮಿತ್ತೋಽಗ್ನಿರ್ಗೃಹ್ಯಃ, ತತ್ರ ಭವಾನಿ ಕರ್ಮಾಣ್ಯಪಿ ಲಕ್ಷಣಯಾ ಗೃಹ್ಯಾಣೀತ್ಯುಚ್ಯನ್ತೇ।**'

ಧರ್ಮಸೂತ್ರಗಳೆಂದರೆ, ತತ್ಕಾಲೀನಗಳಾದ ಶಿಷ್ಟಾಚಾರಗಳಿಗೆ ಸಂಬಂಧಿಸಿದ ಧರ್ಮಗಳನ್ನು ಪ್ರತಿಪಾದಿಸತಕ್ಕ ಗ್ರಂಥಗಳು. ಇದೇ ಅರ್ಥವು ಆಪಸ್ತಂಬೀಯ ಧರ್ಮಸೂತ್ರಗ್ರಂಥದ ಪ್ರಾಥಮಿಕ ಸೂತ್ರದಿಂದ ಸೂಚಿಸಲ್ಪಡುವುದು—'**ಅಥಾತಃ ಸಾಮಯಾಚಾರಿಕಾನ್ ಧರ್ಮಾನ್ ವ್ಯಾಖ್ಯಾಸ್ಯಾಮಃ।**' ಎಂಬ ಸೂತ್ರದ ಉಜ್ವಲನಾಮಕವಾದ ವೃತ್ತಿಯಲ್ಲಿ ಹರದತ್ತನು—'**ಪೌರುಷೇಯೀ ವ್ಯವಸ್ಥಾ ಸಮಯಃ, ಸಮಯಮೂಲಾ ಆಚಾರಾಃ ಸಮಯಾಚಾರಾಃ; ತೇಷು ಭವಾಃ ಸಾಮಯಾಚಾರಿಕಾಃ, ಏವಂಭೂತಾನ್ ಧರ್ಮಾನಿತಿ।**' ಎಂದು ನಿರೂಪಿಸಿದ್ದಾನೆ.

ಈ ಧರ್ಮಸೂತ್ರಗ್ರಂಥಗಳು ಗೃಹ್ಯಸೂತ್ರಗಳೊಡನೆ ವಿಶೇಷ ಸಂಬಂಧವುಳ್ಳವುಗಳಾಗಿವೆ. ಹೇಗೆಂದರೆ, ಆ ಸೂತ್ರಗ್ರಂಥಗಳಲ್ಲಿರುವ ಮಂತ್ರಗಳೇ ಈ ಗ್ರಂಥಗಳಲ್ಲಿ ಸ್ಪಷ್ಟೀಕರಿಸಲ್ಪಡುತ್ತವೆ. ಇವುಗಳಲ್ಲಿ ಬ್ರಾಹ್ಮಣಾದಿ ನಾಲ್ಕುವರ್ಣಗಳ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳ ನಿಯಮಗಳೂ ಧರ್ಮಗಳೂ ವಿಶೇಷತಃ ವರ್ಣಿಸಲ್ಪಡುತ್ತವೆ.

ಶುಲ್ಬಸೂತ್ರಗಳೆಂದರೆ ಅಗ್ನ್ಯಾಯತನ, ವಿಹಾರ, ಪ್ರಾಗ್ವಂಶ ಮಂಡಪಾದಿಗಳ ನಿರ್ಮಾಣದಲ್ಲಿ ಅವುಗಳ ಅಳತೆಗೋಸ್ಕರ ದಾರದ ಪ್ರಮಾಣವನ್ನು ಹೇಳತಕ್ಕ ಸೂತ್ರಗಳು. ಈ ವಿಷಯವು ಕಾತ್ಯಾಯನಪ್ರಣೀತ ಶುಲ್ಬಸೂತ್ರದ ಆರಂಭದಲ್ಲಿ—'**ರಜ್ಜುಸಮಾಸಂ ವ್ಯಾಖ್ಯಾಸ್ಯಾಮಃ**' ಎಂದು ಹೇಳಲ್ಪಡುವ ವಾಕ್ಯದಿಂದಲೂ, ಇದನ್ನು ಸ್ಪಷ್ಟೀಕರಿಸತಕ್ಕ ಕರ್ಕಾಚಾರ್ಯನ ಭಾಷ್ಯದಿಂದಲೂ ಅರಿಯಲ್ಪಡುವುದು.

ಕಲ್ಪಸೂತ್ರಾದಿಗ್ರಂಥಗಳ ರಚನೆಯ ವೈಶಿಷ್ಟ್ಯವು ಮನನೀಯವಾಗಿರುವುದರಿಂದ ಅದನ್ನೂ ಸ್ವಲ್ಪ ಇಲ್ಲಿ ತೋರಿಸುತ್ತೇವೆ. ಕಲ್ಪಸೂತ್ರಗಳು ಶ್ರುತಿ, ನ್ಯಾಯ, ಮಂತ್ರ, ಲಿಂಗವೆಂಬೀ ಮುಂತಾದ ಸಹಕಾರಿಸಾಧನ ಸಾಮಗ್ರಿಗಳಿಂದ ಸುಶೋಭಿತಗಳೂ, ೧ ಅಧಿಕಾರಸೂತ್ರ ೨ ಪರಿಭಾಷಾಸೂತ್ರ ೩ ಉತ್ಸರ್ಗಸೂತ್ರ ೪ ಅಪವಾದಸೂತ್ರ ೫ ಉದಾಹರಣಸೂತ್ರಗಳೆಂಬ ಅಯ್ದು ಬಗೆಯ ವಿಭಾಗಾತ್ಮಕಗಳೂ ಆಗಿರುತ್ತವೆ. ಇವು ಸರ್ವಜ್ಞಕಲ್ಪಪುರುಷಪ್ರಣೀತಗಳಾದುದರಿಂದ ಪ್ರಕೃತಿಭೂತಗಳಾದ ಕರ್ಮಗಳ ಇತಿಕರ್ತವ್ಯತೆಯ ಪ್ರಯೋಗವನ್ನು ಸುಕರವೆನಿಸುವಹಾಗೆ ಪರಿವಿಡಿದು ಪ್ರತಿಪಾದಿಸಿ, ಬಳಿಕ ವಿಕೃತಿಭೂತಕರ್ಮಗಳ ಇತಿಕರ್ತವ್ಯತೆಯನ್ನು ನಿರೂಪಿಸುತ್ತವೆ. ಹೇಗೆಂದರೆ ದರ್ಶ, ಪೂರ್ಣಮಾಸ, ಆಧಾನ, ಅಗ್ನಿಹೋತ್ರ, ಪ್ರಾಯಶ್ಚಿತ್ತ, ಪಶುಕಲ್ಪ, ಸೋಮಯಾಗವು ಎಂಬೀಕ್ರಮವು ಸೂತ್ರಕಾರರಿಂದ ಅಂಗೀಕೃತವಾಗಿದೆ. ಈ ಹಿಂದೆ ಹೇಳಿದ ಮೇರೆಗೆ, ಅರ್ಥವಾದರಹಿತಗಳಾದ ಸ್ವಶಾಖೀಯಬ್ರಾಹ್ಮಣಾಂತರ್ಗತಕರ್ಮಗಳು ಸಾಂಗವಾಗಲು ಯಾವ ಪರಶಾಖೀಯ ಮಂತ್ರಗಳಪೇಕ್ಷೆಯಿರುವುದೋ ಆ ಮಂತ್ರಗಳನ್ನು ಸಂಪೂರ್ಣವಾಗಿ ತೆಗೆದುಕೊಂಡು, (ಇದುವೇ ಗುಣೋಪಸಂಹಾರ, ಅಥವಾ ಗುಣಸಂಗ್ರಹವೆನ್ನಲ್ಪಡುವುದು.) ಸ್ವಶಾಖೀಯ ಮಂತ್ರಗಳ ಪ್ರತೀಕಗಳನ್ನು ಮಾತ್ರ ತೋರಿಸುವುದರೊಡನೆ ಕಲ್ಪಸೂತ್ರಗ್ರಂಥಗಳಲ್ಲಿ ಕರ್ಮಗಳ ರಚನೆಯು ಮಾಡಲ್ಪಟ್ಟಿರುವುದು. ಇದರಿಂದ ಯಾವ ಶಾಖೆಯ ಮಂತ್ರವು ಇದರಲ್ಲಿ ಪ್ರತೀಕರೂಪವಾಗಿ ಪರಿಗ್ರಹಿಸಲ್ಪಡುವುದೋ ಈ ಸೂತ್ರವು ಆ ಶಾಖೀಯವಾದುದೆಂದರಿತುಕೊಳ್ಳಲು ಸುಲಭವಾಗಿರುವುದು. ಹೀಗೆ ಸರ್ವರೀತಿಯಿಂದಲೂ ಉಪಬೃಂಹಿತಗಳಾದ ಈ ಸೂತ್ರಗಳ ವ್ಯಾಖ್ಯಾನಾವಸರದಲ್ಲಿ ಭಾಷ್ಯಕಾರರು:—

ಉಪೋದ್ಘಾತಃ ಪದಂ ಚೈವ ಪದಾರ್ಥಃ ಪದವಿಗ್ರಹಃ।
ಆಕ್ಷೇಪಃ ಪ್ರತ್ಯವಸ್ಥಾನಂ ವ್ಯಾಖ್ಯಾ ಸೂತ್ರಸ್ಯ ಷಡ್ವಿಧಾ॥

ಎಂಬ ಷಡ್ವಿಧಪದ್ಧತಿಯನ್ನು ಅನುಸರಿಸಲೇಬೇಕಾಗುವುದು.

ಗೃಹ್ಯಸೂತ್ರಗಳು—

ಈ ನಿಬಂಧಗಳಲ್ಲಿ ಶ್ರೌತ, ಧರ್ಮ, ಶುಲ್ಬಗಳೆಂಬ ಸೂತ್ರಗಳಿಂದ ಪ್ರತಿಪಾದಿಸಲ್ಪಡುವ ಕರ್ಮಗಳ ವಿಚಾರವಿರುವುದಿಲ್ಲ. ಮತ್ತೇನೆಂದರೆ, 'ಗೃಹೇ ಭವಾನಿ ಗೃಹ್ಯಾಣಿ, ಗೃಹ-ಭಾರ್ಯಾಸಂಯೋಗಾದುತ್ಪನ್ನಾಗ್ನೌ ಭವಾನೀಮಾನಿ ಕರ್ಮಾಣಿ' ಎಂಬಂತೆ 'ಗೃಹ' ವೆಂಬ ಶಬ್ದಕ್ಕೆ ಪತ್ನಿಯೂ ಶಾಲೆ (ಮನೆ) ಯೂ ಎಂಬೆರಡು ಅರ್ಥಗಳಿವೆ. ಹೇಗೆಂದರೆ, 'ಸಗೃಹೋ ಗೃಹಮಾಗತಃ' ಎಂಬ ವಾಕ್ಯದಲ್ಲಿರುವ ಮೊದಲನೆಯ ಗೃಹಶಬ್ದವು ಭಾರ್ಯಾವಾಚಕವೂ, ಎರಡನೆಯ ಗೃಹಶಬ್ದವು ಶಾಲೆ (ಮನೆ) ಯ ವಾಚಕವೂ ಆಗಿರುವುದು. 'ದಾರಕಾಲೇ ದಾಯಾದ್ಯಕಾಲೇ ವಾ ಏಕೇಷಾಮ್' (ಪಾರ. ಗೃ. ಸೂ.) 'ಭಾರ್ಯಾದಿರಗ್ನಿರ್ದಾಯಾದಿರ್ವಾ ತಸ್ಮಿನ್ ಗೃಹ್ಯಾಣಿ' (ಗೌ. ಗೃ. ಸೂ.) ಇತ್ಯಾದಿ ಪ್ರಮಾಣಗಳಿಂದ ವಿವಾಹಸಮಯದಲ್ಲಿಯೂ, ಪಿತೃದ್ರವ್ಯವಿಭಾಗಕಾಲದಲ್ಲಿಯೂ ಅಗ್ನಿಸಂಧಾನಪ್ರಸಂಗವು ಹೀಗೆ ಎರಡುವೇಳೆ ಒದಗುತ್ತದೆ. ಅದ್ದರಿಂದ 'ಗೃಹನಿಮಿತ್ತೋ ಯಃ ಸಗೃಹ್ಯಃ' ಎಂಬ ವಿಗ್ರಹದಿಂದ ಎರಡೂ ನಿಮಿತ್ತಗಳ ಸಂಗ್ರಹವು ಗೃಹ್ಯವೆಂಬ ಶಬ್ದದಲ್ಲಿರುವುದು. ಅದುಕಾರಣವೇ, ವಿವಾಹಕಾಲದಲ್ಲಿ ಅಗ್ನಿಸಂಧಾನವು ಮಾಡಲ್ಪಡುವಾಗ ಗೃಹಶಬ್ದದರ್ಥವು ಭಾರ್ಯೆಯೆಂದೂ ದ್ರವ್ಯವಿಭಾಗಸಮಯದಲ್ಲಿ ಅಗ್ನಿಸಂಧಾನವು ಮಾಡಲ್ಪಡುವಾಗ ಗೃಹಶಬ್ದದರ್ಥವು ಶಾಲೆ (ಮನೆ) ಯೆಂದೂ ತಿಳಿಯಬೇಕೆಂಬ ತಾತ್ಪರ್ಯವನ್ನು ಈ ಮೇಲೆ ಹೇಳಿದೆವು. ಈ ಅರ್ಥಗಳನ್ನನುಲಕ್ಷಿಸಿಯೇ ಗೃಹ್ಯಸೂತ್ರಗಳೂ ಗೃಹ್ಯಕರ್ಮಗಳೂ ಎಂಬ ಸಂಜ್ಞೆಗಳು ಉತ್ಪನ್ನವಾಗಿವೆ. ಈ ಗೃಹ್ಯಕರ್ಮಗಳು ಅವಾವು? ಮತ್ತು ಅವನ್ನು ಹೇಗೆ ಅನುಷ್ಠಿಸಬೇಕು? ಎಂಬೀ ವಿಷಯಕವಾದ ಜಿಜ್ಞಾಸೆಯನ್ನು ಸಫಲಗೊಳಿಸತಕ್ಕ ವಿಚಾರಪ್ರತಿಪಾದಕ ಸೂತ್ರಗಳೇ ಗೃಹ್ಯಸೂತ್ರಗಳು. '**ಯಜ್ಞಂ ವ್ಯಾಖ್ಯಾಸ್ಯಾಮಃ**' ಎಂದು ಪ್ರವೃತ್ತರಾದ ಸೂತ್ರಕಾರರು ಶ್ರೌತಗಳೂ ಗೃಹ್ಯಗಳೂ ಎಂಬುದಾಗಿ ಒಟ್ಟು ೨೧ ವಿಧವಾದ ಯಾವ ಚಿಕ್ಕದೊಡ್ಡ ಮುಖ್ಯಯಜ್ಞಗಳನ್ನು ಪ್ರತಿಪಾದಿಸುವರೋ, ಅವುಗಳಲ್ಲಿ ೧ ಅಗ್ನಿಷ್ಟೋಮ ೨ ಅತ್ಯಗ್ನಿಷ್ಟೋಮ ೩ ಉಕ್ಥ ೪ ಷೋಡಶೀ ೫ ವಾಜಪೇಯ ೬ ಅತಿರಾತ್ರ ೭ ಅಪ್ತೋರ್ಯಾಮ ಎಂಬಿವೇಳು ಸೋಮಸಂಸ್ಥೆಗೆ ಸೇರಿದುವು; ೮ ಅಗ್ನಿಹೋತ್ರ ೯ ದರ್ಶಪೂರ್ಣಮಾಸ ೧೦ ಆಗ್ರಯಣ ೧೧ ಪಿಂಡಪಿತೃಯಜ್ಞ ೧೨ ಚಾತುರ್ಮಾಸ್ಯ ೧೩ ನಿರೂಢಪಶುಬಂಧ ೧೪ ಸೌತ್ರಾಮಣಿ ಎಂಬಿವೇಳು ಹವಿರ್ಯಜ್ಞಸಂಸ್ಥೆಗೆ ಸಂಬಂಧಿಸಿದವು. ಎಂಬುದಾಗಿರುವ ಹದಿನಾಲ್ಕು ಪ್ರಕಾರಗಳಾದ ಯಜ್ಞಗಳನ್ನು ಶ್ರೌತಸೂತ್ರಗಳಲ್ಲಿ ಹೇಳಿ ಉಳಿದ ೧. ಅಷ್ಟಕಾ. ೨. ಪಾರ್ವಣ (ಸ್ಥಾಲೀಪಾಕ) ೩. ಶ್ರಾದ್ಧಮ್. ೪. ಶ್ರಾವಣೀ. ೫. ಆಗ್ರಹಾಯಣೀ. ೬. ಚೈತ್ರೀ. ೭. ಆಶ್ವಯುಜೀ ಎಂಬುದಾಗಿರುವ ಪಾಕಯಜ್ಞಸಂಸ್ಥೆಗೆ ಸಂಬಂಧಿಸಿದ ಏಳು ಯಜ್ಞಗಳನ್ನು ನಿರೂಪಿಸುವುದಕ್ಕಾಗಿ ಪ್ರಾಧಾನ್ಯದಿಂದ ಗೃಹ್ಯಸೂತ್ರಗಳನ್ನು ರಚಿಸಿದರು. ಈ ಸಂಸ್ಥೆಯ ಹೆಸರುಗಳೇ ಅನೇಕ ಗೃಹ್ಯಸೂತ್ರಗಳಲ್ಲಿ ಬೇರೆ ಬೇರೆಯಾಗಿ ಕಂಡುಬರುತ್ತವೆ. 'ಸಂಸ್ಥಾ' ಅಂದರೆ ಸಮಾಪ್ತಿಯು; ಯಾವುದರ ಮೂಲಕವಾಗಿ ಕರ್ಮವು ಸಮಾಪ್ತಿಗೊಳಿಸಲ್ಪಡುವುದೋ ಆ ಕರ್ಮಕ್ಕೆ ಆ ಹೆಸರೇ ಬರುವುದು. ಅದ್ದರಿಂದ ಸೋಮಪ್ರಕೃತಿ ಸಂಸ್ಥೆಯನ್ನು ಸೋಮಸಂಸ್ಥೆಯೆಂದೂ, ಹವಿರ್ಯಜ್ಞದಿಂದ ಅಂದರೆ ಹವಿರ್ದ್ರವ್ಯಗಳನ್ನು ದೇವತೆಗಳಿಗರ್ಪಿಸಿ ಹೋಮಮಾಡಲ್ಪಡುವ ಮೂಲಕ ಯಾವುದರ ಸಮಾಪ್ತಿಯಾಗುವುದೋ ಅದನ್ನು ಹವಿರ್ಯಜ್ಞಸಂಸ್ಥೆಯೆಂದೂ ತಿಳಿಯತಕ್ಕದ್ದು. ಪಾಕಯಜ್ಞವು ಅಂದರೆ "**ಪಚ್ಯತೇ ಪ್ರಪಚ್ಯತೇ ಓದನಾದಿಕಮಸ್ಮಿನ್ನಿತಿ, ಪಾಕೋ ಗೃಹ್ಯಾಗ್ನಿಸ್ತಸ್ಮಿನ್ ಪಾಕೇ ಯಜ್ಞಃ, ತತ್ಸಂಸ್ಥಾಃ ಪಾಕ**

ಯಜ್ಞಸಂಸ್ಥಾಃ' ಎಂದು ಕೆಲವರು ಹೇಳುತ್ತಾರೆ. ಬೇರೆ ಕೆಲಂಬರು ಪಾಕವು ಅಂದರೆ ಪ್ರಶಸ್ತವು. ಪಾಕಯಜ್ಞಸಂಸ್ಥೆಗಳೆಂದರೆ ಪ್ರಶಸ್ತಗಳಾದ ಯಜ್ಞಸಂಸ್ಥೆಗಳೆನ್ನುವರು. ಮತ್ತೆ ಮಿಕ್ಕವರು ಪಾಕಯಜ್ಞವೆಂದರೆ ಸ್ವಲ್ಪವಾದ ಇತಿಕರ್ತವ್ಯತೆಯಿಂದ ನೆರವೇರಿಸಲ್ಪಡುವ ಯಜ್ಞವೆಂದು ಅರ್ಥಮಾಡುವರು. ಇರಲಿ:

ಭಾರತೀಯರಿಂದ ಏಕಾಗ್ನಿಯನ್ನವಲಂಬಿಸಿ ನೆರವೇರಿಸಲ್ಪಡತಕ್ಕ ವಿಧಿಗಳೂ ಹಳೆಯ ಪದ್ಧತಿಗಳೂ ಗೃಹ್ಯಸೂತ್ರಗಳಿಂದೇ ಅರಿಯಲ್ಪಡುತ್ತವೆ. ಜನ್ಮಸಂಸ್ಕಾರ ಮೊದಲುಮಾಡಿ ಅಂತ್ಯಸಂಸ್ಕಾರದವರೆಗಿರುವ ಸರ್ವವಿಧಸಂಸ್ಕಾರಗಳೂ ಈ ಸೂತ್ರಗಳಲ್ಲಿ ಬಣ್ಣಿಸಲ್ಪಟ್ಟಿವೆ. ಆದರೆ ಕೆಲವು ಸೂತ್ರೋಕ್ತಸಂಸ್ಕಾರಗಳು (ಶೂಲಗವ, ಮಾಂಸಮಧುಪರ್ಕಾದಿಗಳು) ಈಗ ಆಚರಿಸಲ್ಪಡುವುದಿಲ್ಲ. ಗರ್ಭಾಧಾನ, ಪುಂಸವನ, ಅನವಲೋಭನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೌಲ, ಉಪನಯನ, ವೇದಾರಂಭ, ಉಪನಿಷದ್ವ್ರತ, ಸಮಾವರ್ತನ, ವಿವಾಹ ಅಂತ್ಯಸಂಸ್ಕಾರ, ಶ್ರಾದ್ಧವಿಧಿಯೇ ಮುಂತಾದ ವಿಷಯಗಳು ಗೃಹ್ಯಸೂತ್ರಗಳಿಂದ ನಿರೂಪಿಸಲ್ಪಡುತ್ತವೆ. ಶತಪಥಬ್ರಾಹ್ಮಣದಲ್ಲಿ (೧೧-೫-೬) ಹೇಳಲ್ಪಡುವ ಪಂಚಮಹಾಯಜ್ಞಗಳು ಗೃಹ್ಯಸೂತ್ರಗಳಲ್ಲಿ ವಿಶದೀಕರಿಸಲ್ಪಟ್ಟಿವೆ. ಈ ಪಂಚಮಹಾಯಜ್ಞಗಳು ಪ್ರತಿಯೊಬ್ಬ ದ್ವಿಜನಿಂದಲೂ ಅನುಷ್ಠಿಸಲ್ಪಡತಕ್ಕವುಗಳೆಂದು ಸನಾತನ ಆರ್ಯವಂಶೀಯರು ತಿಳಿಯುತ್ತಾರೆ. ಇವುಗಳನ್ನು ಧರ್ಮಾಚರಣದ ಅಂಗಗಳೆಂದು ಭಾವಿಸಿ ದಿನಾಲೂ ಅನುಷ್ಠಿಸುವವರು ಈಗಲೂ ದ್ವಿಜರಲ್ಲಿ ಎಷ್ಟೋ ಜನರಿದ್ದಾರೆ. ಈ ಅಯ್ದು ಯಜ್ಞಗಳಲ್ಲಿ ದೇವ ಯಜ್ಞ, ಪಿತೃಯಜ್ಞ, ಅಸುರಯಜ್ಞವೆಂಬಿವುಗಳಿಗೆ ಮಾತ್ರ ಅಗ್ನಿಕುಂಡದಲ್ಲಿ ಹಾಕುವುದಕ್ಕೆ ಸಮಿತ್ತು, ಅನ್ನ ಮುಂತೆಯೂ, ನೀರೂ ಬೇಕಾಗುತ್ತವೆ. ಅತಿಥಿಗೆ ಅನ್ನದಾನಮಾಡುವುದೇ ನಾಲ್ಕನೆಯ ಮನುಷ್ಯಯಜ್ಞವು. ವೇದವನ್ನು (ಸ್ವಶಾಖೆಯನ್ನು) ಪಠಿಸುವುದೇ ಅಯ್ದನೆಯ ಬ್ರಹ್ಮಯಜ್ಞವು. ಸಾಯಂಪ್ರಾತರ್ಯಜ್ಞಗಳೂ, ದರ್ಶಪೂರ್ಣಮಾಸೇಷ್ಟಿಗಳೂ, ವಾರ್ಷಿಕಯಜ್ಞಯಾಗಾದಿಮಹೋತ್ಸವಗಳೂ ಗೃಹ್ಯಸೂತ್ರಗಳಲ್ಲಿ ಹೇಳಲ್ಪಡುತ್ತವೆ. ಅಗ್ನಿಹೋತ್ರವೂ, ದರ್ಶಪೂರ್ಣಮಾಸಗಳೂ ಚಾತುರ್ಮಾಸ್ಯ ಮುಂತಾದುವೂ ಮಹೋತ್ಸವಾಂಗಗಳಾಗಿವೆ. ಈ ಗೃಹ್ಯಸೂತ್ರಗ್ರಂಥಗಳಲ್ಲಿ ರೋಗಾದಿಪರಿಹಾರಕಮಂತ್ರಗಳೂ ವಶೀಕರಣವಿದ್ಯೆಯ ಮಂತ್ರತಂತ್ರಗಳೂ ಪ್ರತಿಪಾದಿಸಲ್ಪಟ್ಟಿವೆ.

(ಸಶೇಷ.)

—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ।

ಶ್ರೀಗುರು ಪಟ್ಟಾಭಿಷೇಕ ಮಹೋತ್ಸವವು.

ಮಣೂರು.

—

ಮಣೂರು ಗ್ರಾಮವು ಬಳ್ಳಾರಿ ಜಿಲ್ಲಾ ಸಿರುಗುಪ್ಪ ತಾಲೂಕಿನಲ್ಲಿರುತ್ತದೆ. ಮತ್ತು ನೈಜಾಮಿನಲ್ಲಿ ಪುಳೇನೂರು ಜಂಬುನಾಥನಹಳ್ಳಿ ಮಠಗಳೂ, ಇನಾಮುಗಳೂ ಬಳ್ಳಾರಿ ಜಿಲ್ಲಾದಲ್ಲಿ ಗುಂಡಿಗನೂರು ಹಾವಿನಹಾಳು ಮಠಗಳೂ, ಶಾಖಾಮಠಗಳಾಗಿರುತ್ತವೆ. ಈ ಮಠಕ್ಕೆ ಹಿಂದಣ ಮೂರನೇ ಪಟ್ಟಾಧಿಕಾರಿಗಳಾದ ಶ್ರೀ ಕೊಟ್ಟೂರು ಸ್ವಾಮಿಗಳೆಂಬುವರು ಸರ್ವಭೂಷಣ ಶಿವಯೋಗಿಗಳ ಸಹಯೋಗಾಭ್ಯಾಸಿಗಳಾಗಿಯೂ, ಜಿತೇಂದ್ರಿಯರಾಗಿಯೂ, ಪಂಡಿತರಾಗಿಯೂ, ಇದ್ದರಲ್ಲದೆ ಬಳ್ಳಾರಿಯಲ್ಲಿ ವೀರಶೈವಮತವು ಕಲ್ಯಾಣದ ಬಸವಣ್ಣನ ಕಾಲಕ್ಕಿಂತಲೂ ಹಿಂದೆಯದೆಂದೂ, ಮಹಾಚಾರ್ಯರೂ, ಹಿಂದೆಯವರೆಂದೂ, ವಾದಿಸಿದ್ದನ್ನು ಶಾಸ್ತ್ರೀಯವಾಗಿ ಗ್ರಂಥಾಧಾರಗಳಿಂದಲೂ, ದೃಷ್ಟಾಂತಗಳಿಂದಲೂ, ಖಂಡಿಸಿದ್ದಲ್ಲದೆ ಬಳ್ಳಾರಿಗೆ ಸಮೀಪದಲ್ಲಿರುವ ಕೋಳೂರು ಗ್ರಾಮದಲ್ಲಿರುವ ಪ್ರಸಿದ್ಧಶಿಲಾಲಿಪಿಯಲ್ಲಿ ಚಾಲುಕ್ಯಶಕ ೧೨ ನೆಯ ಸಂವತ್ಸರದಲ್ಲಿ ಲಿಂಗಧಾರಿ ಹಂದೇಕುರುಬ ಜಾತಿಯ ರೇವಣಗೌಡನೆಂಬುವನು ಶಿವಾಲಯಗಳಂ ಕಟ್ಟಿಸಿ, ತನ್ನ ಅಧಿಪತಿಯಾದ ಗುಪ್ತವಂಶದ ಚಾಲುಕ್ಯ ಚಕ್ರಿ ಸೋಮೇಶ್ವರನೆಂಬ ರಾಜನು ಕಲ್ಯಾಣ ಪಟ್ಟಣವನ್ನು ಆಳುತ್ತಿರಲು ಆತನಂ ತಾನು ಸೀಮಾಧಿಕಾರಿಯಾದ ಕಾರಣದಿಂದ ಸೂರ್ಯಗ್ರಹಣಕಾಲದಲ್ಲಿ ಕೋಳೂರಿಗೆ ಬರಮಾಡಿಕೊಂಡು, ಆತನಿಂದ ಆ ಶಿವಾಲಯಗಳಿಗೆ ಭೂದಾನವಂ ಮಾಡಿಸಿದನೆಂದು ತೋರಿಸಿ, ರೇವಣಗೌಡನೆಂಬ ಹೆಸರು ಶ್ರೀಮಜ್ಜಗದ್ಗುರು ರೇವಣಸಿದ್ಧರದೆಂದೇ ಸ್ಥಿರಪಡಿಸಿ, ಚಾಲುಕ್ಯಶಕವು ಬಿಜ್ಜಳನ ಕಾಲಕ್ಕಿಂತಲೂ ಮುನ್ನೂರು ವರ್ಷಗಳು ಪೂರ್ವವೆಂದು ನಿರ್ಧರಿಸಿ, ಆ ರೇವಣನೆಂಬ ಹೆಸರು ಅದಕ್ಕೂ ಪೂರ್ವದಲ್ಲಿಯೇ ಪ್ರಚಾರದಲ್ಲಿದ್ದಂತಾಯಿತು? ಅದಕಾರಣ ಶ್ರೀಮದ್ರೇವಣಸಿದ್ಧ ಜಗದ್ಗುರುಗಳು ಸನಾತನರೆಂದೂ, ಅವರಿಂದ ಸ್ಥಾಪಿತವಾದ ಮತವು ಸನಾತನವೆಂದೂ, ಬಿಜ್ಜಳನ ಕಾಲದಿಂದೀಚೆಗೆಂಬವರ ಬಾಯಿಗಳಿಗೆ ಬೀಗವಂ ಹಾಕಿದ್ದರು. ಮತ್ತು ಕಾಡಸಿದ್ಧನವರ ಚೌಕಿಯಲ್ಲಿ ನಡೆದೊಂದು ಸಮಾರಂಭದಲ್ಲಿ ಕೆಲಸನ್ಯಾಸಿಗಳು ಗುರುಪ್ರಸಾದಕ್ಕೆ ಜಡಪ್ರಸಾದವೆಂದ ದುರುಕ್ತಿಗೆ ಸಶಾಸ್ತ್ರೀಯವಾಗಿ 'ಒಡಲೊರೆಯುಲಾರದ ಬರಿಯವೈರಾಗ್ಯವಂ ತೋರಿಸುವ ಬಿಸಿಸನ್ಯಾಸಿಗಳಿಗೆ ಯಾವ ಅಧಿಕಾರವಿಲ್ಲ' ಎಂಬುದನ್ನು ಸ್ಥಾಪಿಸಿ ಗುರುಸ್ಥಲ ಪ್ರಕಾಶಕರಾಗಿದ್ದರು. ಆ ಮಹಾಸ್ವಾಮಿಗಳಿಗೆಗಾಗಿ ಪಡಲ್ಪರತ್ನನೆಂಬುವ ಶ್ರೀಮಂತರು ಬಳ್ಳಾರಿ ಹಿರೇಹಾಳು ಉಕ್ಕಡದಲ್ಲಿ ಒಂದು ಭವ್ಯವಾದ ಮಠವಂ ಕಟ್ಟಿಸಿ ಅದಕ್ಕೆ ತಕ್ಕ ಭಕ್ತಿಯನ್ನು ಸಹ ಸಮರ್ಪಿಸಿರುತ್ತಾರೆ. ಅದೇ ಮಠದಲ್ಲಿಯೇ ಅವರ ಸಮಾಧಿಯೂ ಅವರ ಅನಂತರಾಧಿಕಾರಿಗಳಾದ ಮಹಾಲಿಂಗಸ್ವಾಮಿಗಳ ಸಮಾಧಿಯೂ, ಇರುತ್ತವೆ. ಆ ಮಠಕ್ಕೆ ಪ್ರಕೃತ ಪಟ್ಟಾಧಿಕಾರವನ್ನು ಮಣೂರು ಮಠದ ಕೊಟ್ಟೂರು ಸ್ವಾಮಿಯೆಂಬುವರ ಪುತ್ರ, ಮಹಾಂತಯ್ಯನೆಂಬ ವಟುವಿಗೆ ಇದೇ ಭಾವನಾಮಸಂವತ್ಸರ ಜ್ಯೇಷ್ಠ ಬಹುಳ ೧೩ ಆದಿತ್ಯವಾರ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀಮಜ್ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಸಿದ್ಧಲಿಂಗರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಶ್ರೀಮುಖನಿರೂಪಪ್ರಕಾರ ಶ್ರೀ ಹಿರೇಹಾಳು ಮಳೇಮಠದ ಚರಪಟ್ಟಾಧ್ಯಕ್ಷ ವಿರೂಪಾಕ್ಷ ಶಿವಾಚಾರ್ಯರೂ, ತರೀಕೆರೆ ಹಿರೇಮಠದ ಚರಪಟ್ಟಾಧ್ಯಕ್ಷ ಚಂದ್ರಶೇಖರಶಿವಾಚಾರ್ಯರೂ ಇವರ ನೇತೃತ್ವದಿಂದಲೂ ಪಿ. ಬಿ. ಎಮ್. ಚಂದ್ರಶೇಖರಶಾಸ್ತ್ರಿಗಳು ಪಿ. ಎಂ. ಸೋಮಶೇಖರಶಾಸ್ತ್ರಿಗಳು ಬಿ. ಎಂ. ವಿದ್ವಾನ್ ಅಮರನಾಥಶಾಸ್ತ್ರಿಗಳು, ಇವರ ವೈದಿಕವಿಧಾನದಿಂದಲೂ ಭಕ್ತಮಾಹೇಶ್ವರರ ಸಮ್ಮತಿಯಿಂದಲೂ ಪಟ್ಟಾಧಿಕಾರವನ್ನು ಮಾಡಿ ನೂತನ ಶ್ರೀಗಳಿಗೆ ಕೊಟ್ಟೂರು ಸ್ವಾಮಿಗಳೆಂದು ನಾಮಕರಣವಂ ಮಾಡಿ, ಆ ಹೆಸರಿನ ಮಹಾಸ್ವಾಮಿಗಳಂತೆಯೇ ಇವರು ಜಗದ್ಗುರು ಪೀಠಾಭಿಮಾನಿಗಳಾಗಿ ಭಕ್ತೋದ್ಧಾರಕರಾಗಲೆಂದು ಹಾರೈಸಿ, ಪ್ರಭಾಪೋಷಣೆಗಾಗಿ ೨ ರೂಪಾಯಿಗಳನ್ನು ಮಣಿಯಾರ್ಡರ್ ದ್ವಾರಾ ರವಾನಿಸುವಂತೆ ಏರ್ಪಡಿಸಿ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಂಗಲದೊಡನೆ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

—

ಜಪಾನಿನ ವ್ಯಾಪಾರಾಭಿವೃದ್ಧಿ.

—

(By ಆರ್. ಎಸ್. ಆರಾಧ್ಯ, ಬಿ; ಕಾಂ: ವಿದ್ಯಾರ್ಥಿ ಅಗ್ರಹಾರ, ಕೊರಟಗೆರೆ ತಾ||)

ದೇಶೋನ್ನತಿಗೆ ವ್ಯಾಪಾರವು ಒಂದು ಮುಖ್ಯಕಾರಣ. ಈ ವ್ಯಾಪಾರವೇ ಜಪಾನ್ ದೇಶವನ್ನು ಇಷ್ಟು ಉನ್ನತಸ್ಥಿತಿಗೆ ತಂದಿರುವದು.

ಈಗ ಜಪಾನ್ ದೇಶದಲ್ಲಿ ನಡೆಯುವದರಲ್ಲಿ ಕಾಲುಪಾಲು ವ್ಯಾಪಾರವು ಹಿಂದೆ ನಡೆಯುತ್ತಿರಲಿಲ್ಲ; ಏಕೆಂದರೆ ಹಿಂದಿನವರು ತಮ್ಮ ದೇಶದೊಳಕ್ಕೆ ಇತರರನ್ನು ಬಿಡುತ್ತಿರಲಿಲ್ಲ, ಮತ್ತು ತಾವು ಇತರ ದೇಶಕ್ಕೆ ಹೋಗುತ್ತಿರಲಿಲ್ಲ. ಇದಲ್ಲದೆ ಜಪಾನಿನವರು ವ್ಯಾಪಾರಮಾಡುವುದು ಒಂದು ಹೀನವೃತ್ತಿಯೆಂದು ತಿಳಿದಿದ್ದರು. ಆದರೆ ಈಗ ಇದೆಲ್ಲವನ್ನು ತೊರೆದು ಇಂಗ್ಲೆಂಡ್, ಜರ್ಮನಿ ಅಮೇರಿಕಾ ಮುಂತಾದ ದೇಶಗಳೊಂದಿಗೆ ಸ್ನೇಹವನ್ನು ಬೆಳೆಯಿಸಿ ವ್ಯಾಪಾರವನ್ನು ಬಹಳ ಅಭಿವೃದ್ಧಿಗೆ ತಂದುಕೊಂಡಿದ್ದಾರೆ.

ಜಪಾನಿನವರು ಕೈಗಾರಿಕೆಯಲ್ಲಿ ಇತರ ಜನಾಂಗಗಳನ್ನು ಮೀರಿಸುವರೆಂಬುದರಲ್ಲಿ ಸಂದೇಹವಿಲ್ಲ. ನಯ ಮತ್ತು ಸುಂದರವಾದ ಪದಾರ್ಥಗಳನ್ನು ಮಾಡಲು ಇವರಿಗೆ ಬಹಳ ಆಸೆ. ಸಿಂಗಾರ ಮತ್ತು ಲಾಕಿ ಸಾಮಾನುಗಳನ್ನು ನೋಡಿದರೆ ಇವರ ಹಸ್ತಕೌಶಲ್ಯದ ಮಹಿಮೆಯು ಗೊತ್ತಾಗುವದು. ಹಿಂದೆ ಕೈಗಾರಿಕೆಯನ್ನು ಜನರು ತಮ್ಮ ಕೈಯಿಂದಲೇ ಮಾಡುತ್ತಿದ್ದರು. ಈಗಲಾದರೋ ಸಾಮಾನ್ಯವಾಗಿ ಎಲ್ಲವೂ ಯಂತ್ರಗಳಿಂದಲೇ ತಯಾರಾಗುತ್ತವೆ. ಇಂತಹ ಯಂತ್ರಗಳು ಈಗ ಸುಮಾರು 12000 ಕ್ಕೂ ಮೇಲ್ಪಟ್ಟಿವೆ. ಈ ಕೈಗಾರಿಕೆಯಿಂದಲೇ ಜಪಾನಿನವರಿಗೆ ಒಂದು ಕಡೆ ಒಟ್ಟಾಗಿ ಕೂಡುವ ಸಂದರ್ಭಗಳೂ ಸಂಘವೂ ಮತ್ತು ಐಕಮತ್ಯವೂ ಹೆಚ್ಚಿರುವುವು.

ವ್ಯಾಪಾರಕ್ಕೆ ತಕ್ಕ ಸೌಕರ್ಯಗಳು ಈ ದೇಶಕ್ಕೆ ಇವೆ. ಈ ದೇಶವು ಆಳವಾದ ಸಾಗರದ ನಡುವೆ ಇರುವುದರಿಂದ ದೊಡ್ಡದೊಡ್ಡ ಹಡಗುಗಳು ತೀರದವರೆವಿಗೂ ಬಂದು ನಿಲ್ಲಬಹುದು. ಜಪಾನಿನವರು ನೌಕಾಯಾನದಲ್ಲಿ ಬಹಳ ಚತುರರು ಮತ್ತು ಈಗ ತಾವೇ ಸ್ಟೀಮ್‌ಷಿಪ್ ಕಂಪನಿಗಳನ್ನು ತಯಾರಿಸಿ ಹಡಗುಗಳನ್ನು ಬಹಳ ಪ್ರಚಾರಕ್ಕೆ ತಂದಿದ್ದಾರೆ. ಇವರ ಹಡಗುಗಳನ್ನು ಯಾವ ಸಾಗರದಲ್ಲಿ ಬೇಕಾದರೂ ನೋಡಬಹುದು. ಒಳದೇಶದ ವ್ಯಾಪಾರಕ್ಕೆ ಅನುಕೂಲವು ಬಹಳವಾಗಿದೆ. ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಸುಮಾರು 5.6 ಸಾವಿರ ಮೈಲಿಗಳಷ್ಟು ರೈಲ್ವೆ ಇದೆ. ಇಲ್ಲಿ ಬಂಡಿಗಳಿಗೆ ಬದಲಾಗಿ 'ರಿಕ್ಷಾ' ಎಂಬ ಜನರು ಎಳೆಯುವ ಗಾಡಿಗಳನ್ನು ಉಪಯೋಗಿಸುತ್ತಾರೆ. ದೊಡ್ಡದೊಡ್ಡ ಪಟ್ಟಣಗಳಲ್ಲಿ ಟ್ರಾಂವೆಗಳಿವೆ. ಇದಲ್ಲದೆ ವ್ಯಾಪಾರಕ್ಕೆ ಕಣ್ಣುಕಿವಿಗಳಂತಿರುವ ಅಂಚೆಯು ಮತ್ತು ತಂತಿಇಲಾಖೆಗಳು ಬಹಳ ಸಹಾಯವಾಗಿವೆ. ಈಗ ತಂತಿಯ ಟಪಾಲು ಸುಮಾರು 12000 ಮೈಲಿಯಿರಬಹುದು. ಇಲ್ಲಿನ ಬ್ಯಾಂಕುಗಳನ್ನು ನೋಡಿದರೆ ಜಪಾನಿನ ವ್ಯಾಪಾರದ ಉನ್ನತಸ್ಥಿತಿಯನ್ನು ತಿಳಿಯಬಹುದು. ಈಗ ಸುಮಾರು 3000 ವ್ಯಾಪಾರದ ಬ್ಯಾಂಕುಗಳು ಇಲ್ಲಿನ ವ್ಯಾಪಾರವನ್ನು ಇಷ್ಟು ಅಭಿವೃದ್ಧಿಗೆ ತಂದಿವೆ. ಇಷ್ಟು ಬ್ಯಾಂಕುಗಳು ಇದ್ದರೂ ಒಂದೂ ದಿವಾಳಿಯಾಗದೆ ಸರಿಯಾಗಿ ನಡೆದುಕೊಂಡು ಬರುವುದನ್ನು ನೋಡಿದರೆ ಜಪಾನರು ಎಷ್ಟರಮಟ್ಟಿಗೆ ನಿರ್ವಂಚನೆಯಿಂದಲೂ ಮತ್ತು ಐಕಮತ್ಯದಿಂದಲೂ ಕೆಲಸಮಾಡಿ ಇತರರನ್ನು ಬದುಕಿಸಿ ತಾವೂ ಬದುಕುತ್ತಿರುವರೆಂಬುದು ಸ್ಪಷ್ಟವಾಗುತ್ತದೆ.

ಯಾವ ದೇಶವು ತನಗೆ ಬೇಕಾಗುವುದಕ್ಕಿಂತ ಹೆಚ್ಚಿಗೆ ಪದಾರ್ಥಗಳನ್ನು ಉತ್ಪತ್ತಿಮಾಡಿ ಹೊರದೇಶಕ್ಕೆ ಕಳುಹಿಸುವುದೋ, ಯಾವ ದೇಶವು ಪರದೇಶದ ವಸ್ತುಗಳ ಸಹಾಯವಿಲ್ಲದಿದ್ದರೂ ಕೊರತೆ ಪಡದಿರುವದೋ ಅಂತಹ ದೇಶವು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಜಪಾನ್ ದೇಶವೂ ಕೂಡ ಇತರ ದೇಶಗಳಿಗೆ ತನ್ನಲ್ಲಿಯ ಪದಾರ್ಥಗಳನ್ನು ಕಳುಹಿಸುತ್ತದೆಯೇ ಹೊರತು ಹೆಚ್ಚಾಗಿ ತರಿಸಿಕೊಳ್ಳುವುದಿಲ್ಲ. ಜಪಾನಿನವರು ಎಲ್ಲ ತರಹದ ಕೈಗಾರಿಕೆಗಳನ್ನೂ ಬಲ್ಲವರಾದ್ದರಿಂದ ಅವರ ದೇಶದಲ್ಲಿನ ಕೃಷಿ, ಸೀರಾವಿ ಕೆಲಸ, ವಿದ್ಯುಚ್ಛಕ್ತಿ, ಟೆಲಿಗ್ರಾಫ್, ಟೆಲಿಫೋನ್ ಮುಂತಾದುವುಗಳಿಗೆ ನಮ್ಮ ದೇಶದಂತೆ ಬೇರೆಯವರಿಗೆ ದುಡ್ಡನ್ನು ಕೊಡುವುದಿಲ್ಲ. ಎಲ್ಲ ಕೆಲಸಗಳನ್ನು ಮಾಡುವುದರಲ್ಲಿ ಅವರು ಬಹಳ ನಿಸ್ಸೀಮರು, ಅದ್ದರಿಂದ ಇತರರ ಸಹಾಯವಿಲ್ಲದೆ ತಮ್ಮ ಸ್ವಶಕ್ತಿಯಿಂದ ಮಾಡಿಕೊಳ್ಳುತ್ತಾರೆ.

ಜಪಾನಿನವರ ಈಗಿನ ವ್ಯಾಪಾರ ಎಷ್ಟು ವಿಶಾಲವಾದುದೆಂಬುದನ್ನು ಅವರ ದೇಶದಿಂದ ಬರುವ ಸಾಮಾನುಗಳಿಂದ ತಿಳಿಯಬಹುದು. ನಾವು ನಮಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಬಜಾರಿಗೆ ಹೋದರೆ ಜಪಾನಿನವರ ಸಾಮಾನುಗಳು ಅಂಗಡಿಯಲ್ಲಿ ತುಂಬಿರುತ್ತವೆ. ಯಾವ ಪದಾರ್ಥಗಳನ್ನು ನೋಡಿದರೂ ಮೇಲ್ಭಾಗದಲ್ಲಿ 'ಜಪಾನಿನಲ್ಲಿ ತಯಾರಾದದ್ದು' (Made in Japan) ಎಂದು ಬರೆದಿರುತ್ತದೆ. ಇದನ್ನು ನೋಡಿದರೆ ಜಪಾನಿನವರು ಮಾಡದಿರುವ ಪದಾರ್ಥವೇ ಇಲ್ಲವೆಂದು ಹೇಳಬಹುದು. ಅವರ ಪದಾರ್ಥಗಳು ಬಹಳ ಬಾಳಿಕೆ ಇಲ್ಲವೆಂದೂ ಅಷ್ಟು ಉಪಯೋಗಕ್ಕೆ ಬರುವದಿಲ್ಲವೆಂದೂ ಹೇಳುವರು. ಆದರೆ ಇವರು ಏತಕ್ಕೋಸ್ಕರ ಇಂತಹ ಬೆಲೆಬಾಳದ ಪದಾರ್ಥಗಳನ್ನು ಮಾಡುತ್ತಾರೆಂಬುದನ್ನು ತಿಳಿಯಬೇಕು. ಇತರದೇಶಗಳೊಡನೆ ವ್ಯಾಪಾರದ ಸ್ಪರ್ಧೆಯಲ್ಲಿ ನಿಂತು ಜಯಶೀಲರಾಗಬೇಕೆಂಬುದೇ ಇದಕ್ಕೆ ಕಾರಣ. ಅವರು ಇತರ ದೇಶಕ್ಕಿಂತ ಉತ್ತಮ ಪದಾರ್ಥಗಳನ್ನು ಮಾಡಬಲ್ಲವರಾದರೂ, ಹಾಗೆ ಮಾಡದೆ ಕಮ್ಮಿದರ್ಜೆಯ ಪದಾರ್ಥಗಳನ್ನು ಮಾಡಿ ಇತರರು ಮಾರುವುದಕ್ಕೆ ಶೇಕಡ 50ರಷ್ಟು ಒಂದೊಂದುಸಲ 75 ರಷ್ಟು ಕಮ್ಮಿ ಮಾರುತ್ತಾರೆ. ಹೀಗೆ ಮಾರುವುದರಿಂದ ಅವರ ಸಾಮಾನುಗಳಿಗೆ ಎಲ್ಲೆಲ್ಲಿಯೂ ಗಿರಾಕಿಗಳು ಹೆಚ್ಚಾಗಿ ಪ್ರಪಂಚದಲ್ಲೆಲ್ಲಾ ಜಪಾನಿನವರ ಸಾಮಾನು ತುಂಬಿ ತುಳುಕಾಡುತ್ತಿವೆ. ಮೊನ್ನೆ ಜಪಾನಿನವರು ರೂಪಾಯಿಗೆ ೨೫ ಸೇರು ಅಕ್ಕಿ ಕೊಡುತ್ತಾರೆಂಬ ಸುದ್ದಿ ಭೋರ್ಗರೆಯುತ್ತಿತ್ತು. ಆದರೆ ನಮ್ಮ ದೇಶದ ಚೇಂಬರ್ ಆಫ್ ಕಾಮರ್ಸಿನವರು ಈ ಅಕ್ಕಿಯು ನಮ್ಮ ದೇಶದೊಳಕ್ಕೆ ಬರಲು ಅವಕಾಶ ಕೊಡಲಿಲ್ಲ.

ಜಪಾನಿನವರು ವ್ಯಾಪಾರವನ್ನು ಅಷ್ಟು ನೀಚ ಕೆಲಸವೆಂದು ತಿಳಿದಿದ್ದವರು ಈಗ ಇಷ್ಟು ಅಭಿವೃದ್ಧಿಗೆ ಬಂದಿರುವದನ್ನು ನೋಡಿದರೆ ಆಶ್ಚರ್ಯವಾಗುವುದರಲ್ಲಿ ಸಂದೇಹವಿಲ್ಲ.

—

ಪರಂಧಾಮವನ್ನೈದಿದ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನದ ವಿಚಾರವಾಗಿ ಮೈಸೂರು ಮಹಾರಾಜರವರ ಹೈಸ್ಕೂಲು ಪಂಡಿತ ಎಂ. ಕೃಷ್ಣಪ್ಪನಿಂದ ರಚಿತಗಳಾದ ಚರಮ ಶ್ಲೋಕಗಳು.

—

ಕಂ|| ರಾಯ ಶ್ರೀ ಕೃಷ್ಣೇಂದ್ರನ |
ತಾಯಂ ಶ್ರೀ ಕೆಂಪನಂಜಮಾಂಬೆಯನಾಮಾ ||
ರಾಯತಿಯಂ ಕೊಂಡನೆ ವಿಧಿ |
ನೋಯದೆ ವಾಣೀವಿಲಾಸ ಪದಸನ್ನಿಧಿಯಂ ||೧||

ಬಿದಿಯುಕ್ತಮರಂ ಕೊಂಡಿಂ |
ತದಯಂ ನೋಡಿಕ್ಕೆ ಪಳಿಯೊಳಿದಮಂಗುಚಿತಂ ||
ಸದಯರು ಮರಸುತ ಪೂದೋಂ |
ಟದ ಗಮಗಮಿಸುತಿಹ ಪೂಗಳಂ ಕೊಯ್ವರೆ ಪೇಳ್ ||೨||

ಶ್ರೀಕೆಂಪನಂಜಮಾಂಬಾ |
ಶ್ರೀಕರ ವರರಾಜ್ಯಭಾರದಲಿ ಶಾಂತಿಸುಖಂ ||
ಆ ಕುಶಲಮಮಲ ಸಿರಿಯುಂ
ಬೇಕಾದಂತಿರ್ದವಮಮ ಮೈಸೂರ್ ಜನದೊಳ್ ||೩||

(ಭಾಮಿನೀಷಟ್ಪದಿ)

ತಂದೆಯೂ ಮನೆಗಾದೆ ಗೌರಿಯು |
ಬಂಧುಗಳ ಮನೆಯಿಷ್ಟದೇವತೆ |
ಬಂದುಸೇರಿದ ಪತಿಯ ಮನೆಗಾ ರಾಜ್ಯಸಂಪದವು ||
ಎಂದು ಹೊಗಳಿಸಿಕೊಂಡ ಸೀತಾ |
ನೊಂದ ಪಾರ್ಥಿವ ತನುವನೀದೊಡ |
ಮಿಂದು ಜನಮನದಿಂದ ಬೆಳಗುವೆ ಕೃಷ್ಣನೃಪಜನನಿ ||೪||

ತಾಯಿ ನಡೆನುಡಿಯಲ್ಲಿ ಪಲ್ಗಾ |
ಬಾಯು ನೀನಾಗಿದ್ದೆ ನಾಡಿನ |
ಪಾಯದಭಿವೃದ್ಧಿಯಲಿ ಏಳ್ಗೆಯೊಳಾಗಿನೆಯಾದೆ ||
ನ್ಯಾಯವೇನಿದು ಪ್ರಜೆಗಳೊಡನಾ |
ರಾಯ ಕೃಷ್ಣೇಂದ್ರನುಮಪಗಲುತ |
ಬಾಯ ಬಿಡಿಸಲು ಬಹುದೆ ನುಡಿಯಾ ಕೆಂಪನಂಜಾಂಬೆ ||೫||

ವೃ|| ಸಿರಿಚಾಮುಕ್ತಿ ಶಿವಾಪಥಂ ತನೆನೆದೆಗಾ ಸನ್ನೈದಬೇಕೆನ್ನುತಂ|
ವರವಾಣೀಸುವಿಲಾಸವಾಣಿ ಧರೆಯಿಂದಂ ಸತ್ಯಲೋಕಕ್ಕೆ ಸ ||
ತ್ವರದಿಂ ಪೋದೊಡದೇತೆದಂ ತಿಳಿಯದಾಗಾಂತರ್ ಕರಂ ದುಃಖಿಪರ್ |
ಪರಲೋಕಸ್ಥಿತಿಗಾಕೆ ಶಾಂತಿಸುಖಮಂ ತಾಂ ಕೊಳ್ಗೆ ಮಾದೇವನಂ ||೬||

ಪಂಚಾಚಾರ್ಯ ಪ್ರಭಾ.

೧೯೩೪ ನೇ ಜುಲೈ ತಾ|| ೨೩ ನೇ ಸೋಮವಾರ.

ಗುರುನಿಂದೆ.

ಲೋಕದಲ್ಲಿ ಯಾವ ವಸ್ತುವು ತನಗೆ ಇಷ್ಟವೂ ಅನುಕೂಲವೂ ಆಗಿ ತೋರುವುದೋ ಪ್ರತಿಯೊಬ್ಬನೂ ಅದನ್ನೇ ಹೊಗಳುತ್ತಾನೆ. ಅದನ್ನೇ ಅನುಸರಿಸುತ್ತಾನೆ. ಯಾವ ವಸ್ತುವು ತನಗೆ ಅನಿಷ್ಟವೆಂದೂ ಅನನುಕೂಲವೆಂದೂ ತಿಳಿದುಕೊಂಡಿರುತ್ತಾನೆಯೋ ಅದನ್ನು ಹೊಗಳುವುದೂ ಇಲ್ಲ, ಅನುಸರಿಸುವುದೂ ಇಲ್ಲ. ಸ್ವಾರ್ಥಿಗಳೂ ಸ್ವಾಭ್ಯುದಯಕಾಂಕ್ಷಿಗಳೂ ಆದ ಜನಗಳಲ್ಲಿ ಇದೊಂದು ಸ್ವಭಾವವು ರೂಢಮೂಲವಾಗಿ ಬಂದಿರುತ್ತದೆ. ಇಂಥವರು ಭೂಷಿಸುವುದರಿಂದಲೇ ಆಗಲಿ ದೂಷಿಸುವುದರಿಂದಲೇ ಆಗಲಿ ವಸ್ತುವಿನ ಯಾಥಾರ್ಥ್ಯಕ್ಕೆ ಯಾವ ಹಾನಿಯೂ ಸಂಭವಿಸುವುದಿಲ್ಲ. ನಿಂದೆಯಿಂದ ಗುಣವುಳ್ಳ ವಸ್ತುವು ನಿಂದ್ಯವಾಗುವುದಿಲ್ಲ. ಸ್ತುತಿಯಿಂದ ದುಷ್ಟವಸ್ತುವು ಸ್ತುತ್ಯವಾಗುವುದಿಲ್ಲ. ದೃಷ್ಟಿದೋಷದಿಂದ ಅವರವರ ಭಾವನಾನುಗುಣವಾಗಿ ಭಿನ್ನಭಿನ್ನವಾಗಿ ತೋರಿಬರುತ್ತದೆ. ಸಂಧ್ಯಾವಂದನೆಯಲ್ಲಿ ಶ್ರದ್ಧೆಯುಳ್ಳ ಆಸ್ತಿಕನು ಆಕಾಶದಲ್ಲಿ ಉದಿಸುವ ಸೂರ್ಯದೇವನನ್ನು ಭಕ್ತಿಯಿಂದ ಕಾಣುತ್ತಾನೆ. ಚೋರನು ಅದೇ ಜಗಚ್ಚಕ್ಷುವಾದ ಸೂರ್ಯನನ್ನು ತನ್ನ ಸ್ವೇಚ್ಛಾಚಾರಕ್ಕೆ ವಿರೋಧವಾಗಿರುವುದರಿಂದ ದೂಷಿಸುತ್ತಾನೆ. ಇಷ್ಟುಮಾತ್ರದಿಂದ ಸೂರ್ಯನಲ್ಲಿರುವ ಜಗತ್ಪ್ರಕಾಶಕತ್ವಕ್ಕೂ ಪವಿತ್ರತೆಗೂ ಯಾವ ಹಾನಿಯೂ ಸಂಭವಿಸುವುದಿಲ್ಲ.

ಪ್ರಕೃತದಲ್ಲಿ ಶಿಷ್ಯರ ಉದ್ಧಾರಾರ್ಥವಾಗಿ ವಿಜಯಯಾತ್ರೆಯನ್ನು ಹೊರಟಿರುವ ವೀರಶೈವಮತಸ್ಥಾಪಕರಾದ ಗುರುಪೀಠಾಧಿಕಾರಿಗಳ ಮೇಲೆ ಕೆಲ ನಾಮಧಾರಿ ವೀರಶೈವರು ಮನಸ್ವಿಯಾಗಿ ದೂಷಿಸಲುಪಕ್ರಮಿಸಿದ್ದಾರೆ. ಈ ದೂಷಣೆಯಿಂದ ಧರ್ಮಗುರುಗಳ ಪ್ರಭಾವವು ಮತ್ತಿಷ್ಟು ಹೆಚ್ಚುವುದಲ್ಲದೆ ಕುಂದಲಾರದೆಂಬುದನ್ನು ಚೆನ್ನಾಗಿ ಅರಿತುಕೊಳ್ಳಬೇಕಾಗಿದೆ. ಗುರುಗಳ ದರ್ಶನವು ಎಂದು ಲಭಿಸುವುದೋ ಅಂದೇ ನಾವು ಪವಿತ್ರಾತ್ಮರಾಗುವೆವೆಂದು ಪ್ರತಿನಿತ್ಯವೂ ಚಕೋರವು ಚಂದ್ರನನ್ನು ನಿರೀಕ್ಷಿಸಿಕೊಂಡಿರುವಂತೆ ಗುರುಗಳ ಆಗಮನವನ್ನೇ ನಿರೀಕ್ಷಿಸಿಕೊಂಡಿರುವುದು ದೈವಗುರುಗಳಲ್ಲಿ ಶ್ರದ್ಧೆಯುಳ್ಳ ಆಸ್ತಿಕನ ಲಕ್ಷಣವಾಗಿರುತ್ತದೆ. ದುಷ್ಟನಾದವನಿಗೆ ಗುರುಗಳನ್ನು ಕಂಡರೆ, ಗುರುಗಳು ಉಪದೇಶಿಸುವ ಧರ್ಮವನ್ನು ಕೇಳಿದರೆ, ಅವನಿಗೊಂದು ವಿಧವಾದ ಕ್ರೋಧಬುದ್ಧಿಯು ಉತ್ಪನ್ನವಾಗುತ್ತದೆ. ಧರ್ಮಶಾಸ್ತ್ರವಾದರೋ,

ಯಶ್ಶಿವಸ್ಸ ಗುರುಜ್ಞೇಯೋ ಯೋ ಗುರುಸ್ಸ ಶಿವಸ್ಸ್ಮೃತಃ |
ನತಯೋರಂತರಂ ಕುರ್ಯಾತ್ ಜ್ಞಾನಾದೇವ ಮಹಾಮತಿಃ ||
ಹಸ್ತಪಾದಾದಿಸಾಮ್ಯೇನ ನೇತರೈಸ್ಸದೃಶಂವದೇತ್ |
ಆಚಾರ್ಯಂ ಜ್ಞಾನದಂ ಶುದ್ಧಂ ಶಿವರೂಪತಯಾಸ್ಥಿತಂ ||
ಆಚಾರ್ಯಸ್ಯಾವಮಾನೇನ ಶ್ರೇಯಃಪ್ರಾಪ್ತಿರ್ವಿಹನ್ಯತೆ |
ತಸ್ಮಾತ್ಸಶ್ರೇಯಸಪ್ರಾಪ್ತ್ಯೈ ಪೂಜಯೇತ್ತಂ ಸಮಾಹಿತಃ ||
ಗುರುಭಕ್ತಿವಿಹೀನಸ್ಯ ಶಿವಭಕ್ತಿರ್ನಜಾಯತೇ |
ತಚ್ಛಿವೇ ಯಥಾಭಕ್ತಿಸ್ತಥಾಭಕ್ತಿರ್ಗುರಾವಪಿ ||

'ಗುರುವೇ ಶಿವನಾಗಿರುವನು, ಶಿವನೇ ಗುರುವಾಗಿರುವನು, ಗುರುಗಳಿಗೂ ಶಿವನಿಗೂ ಭೇದವನ್ನು ಮಾಡಲಾಗದು. ಗುರುಗಳಿಗೆ ಹಸ್ತಪಾದಾದ್ಯವಯವಗಳಿವೆ. ನಮಗೂ ಹಸ್ತಪಾದಾದ್ಯವಯವಗಳಿವೆ. ಆದ್ದರಿಂದ ನಮ್ಮಂತೆ ಅವರೊಬ್ಬರಲ್ಲದೆ ನಮ್ಮಗಳಿಗಿಂತಲೂ ಹೆಚ್ಚಿನವರಲ್ಲವೆಂಬ ದುಷ್ಟಬುದ್ಧಿಯನ್ನು ಮಾಡಕೂಡದು. ಗುರುಗಳಿಗೆ ಯಾವನು ಅಪಮಾನಗೊಳಿಸಬೇಕೆಂದು ಮನಸ್ಸಿನಲ್ಲಿ ಬಗೆಯುವನೋ ಅವನಿಗೆ ಮುಂದೆ ಉಂಟಾಗುವ ಶ್ರೇಯಃಪರಂಪರೆಯು ಹಾಳಾಗಿ ಹೋಗುವುದಲ್ಲದೆ ಹಿಂದೆ ಅಲ್ಪಸ್ವಲ್ಪ ಪುಣ್ಯದಿಂದ ಗಳಿಸಿದ್ದ ಶ್ರೇಯೋಲಾಭವೂ ನಷ್ಟವಾಗುವುದು. ಆದುದರಿಂದ ಗುರುಭಕ್ತನಾದವನು ಗುರುದರ್ಶನ ಗುರುಪೂಜೆಯಲ್ಲಿ ಆಸಕ್ತನಾಗಿರಬೇಕು. ಯಾವನು ಗುರುಭಕ್ತಿಗೆ ದೂರನಾಗಿರುವನೋ ಅವನು ಶಿವಭಕ್ತಿಗೂ ದೂರನೇ ಆಗುವನು. ಶಿವನಲ್ಲಿ ಭಕ್ತಿಯನ್ನಿರಿಸಿರುವಂತೆ ಗುರುಗಳಲ್ಲಿಯೂ ಭಕ್ತಿಯನ್ನಿಟ್ಟಿರುವವನೇ ವೀರಶೈವನು.' ಎಂದು ಗುರುಗಳ ಮಹತ್ವವನ್ನು ಬಹಳವಾಗಿ ಕೊಂಡಾಡಿರುತ್ತದೆ.

ಗುರುಗಳಾದವರು ಧರ್ಮಶಾಸ್ತ್ರವನ್ನು ಅನುಸರಿಸಿ ನಡೆಯುವರಲ್ಲದೆ ಜನಗಳ ಮನಸ್ಸನ್ನು ಅನುಸರಿಸಿ ನಡೆಯುವರಲ್ಲ. ಜನಗಳ ಮನಸ್ಸಾದರೂ ಒಂದು ವಿಧವಾಗಿಲ್ಲ. ಒಬ್ಬೊಬ್ಬನ ಮನಸ್ಸು ಒಂದೊಂದು ವಿಧವಾಗಿದೆ. ಒಬ್ಬನು ಗುರುಗಳ ಬಳಿಗೆ ಹೋಗಿ ನಮಗೆ ವಿಧವಾವಿವಾಹಕ್ಕವಕಾಶಕೊಡಬೇಕೆಂದು ಕೇಳುತ್ತಾನೆ. ಇನ್ನೊಬ್ಬನು ಅಸ್ಪೃಶ್ಯತಾನಿವಾರಣೆಗೆ ಅವಕಾಶಕೊಡಬೇಕೆಂದು ಕೇಳುತ್ತಾನೆ. ಮತ್ತೊಬ್ಬನು ವೀರಶೈವಮತದಲ್ಲಿ ವರ್ಣಾಶ್ರಮಧರ್ಮಗಳಿಲ್ಲವೆಂದು ಅಪ್ಪಣೆಯಾದರೆ ನಿಮ್ಮನ್ನು ಸಾಕ್ಷಾತ್ ಈಶ್ವರನೆಂದು ಭಾವಿಸಿ ಪೂಜಿಸುತ್ತೇನೆಂದು ಕೇಳುತ್ತಾನೆ. ಹೀಗೆ ಧರ್ಮದ ಹದ್ದನ್ನು ಮೀರಿ ಉನ್ಮತ್ತರಂತೆ ಮನಸ್ವಿಯಾಗಿ ಕೇಳುತ್ತ ಬಂದರೆ ಧರ್ಮಗುರುಗಳು ಇವರನ್ನೆಲ್ಲಾ ಸಂತೋಷಗೊಳಿಸಬೇಕೆಂದರೆ ಸಾಧ್ಯವೆ? ಪೂರ್ವಾಚಾರ್ಯರು ಮಾನವನ ಆತ್ಮೋದ್ಧಾರಕ್ಕಾಗಿ ನಿಷಿದ್ಧಧರ್ಮಗಳೆಂದೂ ವಿಹಿತಧರ್ಮಗಳೆಂದೂ ಎರಡು ಭಾಗವಾಗಿ ವಿಂಗಡಿಸಿರುವುದರಿಂದ ಧರ್ಮಕರ್ತೃಗಳಾದ ಗುರುಗಳು ತಮ್ಮಲ್ಲಿಗೆ ಯಾರು ಬಂದರೂ ನಿಷಿದ್ಧಧರ್ಮಗಳನ್ನು ಖಂಡಿಸುವುದೂ, ವಿಹಿತಧರ್ಮಗಳನ್ನು ಮಂಡಿಸುವುದೂ ಅವರ ಕರ್ತವ್ಯವಾಗಿದೆ. ಅವರವರ ಮುಖದ ಇಚ್ಛೆಯಂತೆ ನಿಷಿದ್ಧಧರ್ಮಗಳನ್ನು ವಿಧಿವಿಹಿತಗಳೆಂದು ಹೇಳುತ್ತ ಸಂತೋಷಗೊಳಿಸುತ್ತ ಅವರಿಂದ ಹೊಗಳಿಸಿಕೊಳ್ಳುತ್ತಬಂದರೆ ಧರ್ಮಗುರುಗಳೆಂಬ ಹೆಸರು ಅವರಲ್ಲಿ ಹೇಗೆ ತಾನೆ ಅನ್ವರ್ಥವಾದೀತು? ಈಶ್ವರದತ್ತವಾದ ಧರ್ಮಗುರುತ್ವವು ಸಾರ್ಥಕವಾಗಬೇಕಾದರೆ ಅಧರ್ಮವನ್ನು ಖಂಡಿಸಲೇಬೇಕು. ಧರ್ಮಪ್ರಕಾಶದಿಂದ ಯಾವ ಲಾಭವಾಗದಿದ್ದರೂ ಅದು ಶ್ರೇಯಸ್ಕರವೆ! ಅಧರ್ಮದಿಂದ ಕೋಟಿ ರೂಪಾಯಿಗಳು ದೊರೆಯುತ್ತಿದ್ದರೂ ಅದು ಶ್ರೇಯಸ್ಕರವಲ್ಲ. ಗುರುವೆಂಬವನು ದೇವರಿಗೆ ಪ್ರತಿನಿಧಿಯಾದುದರಿಂದಲೂ ಸಂಪೂರ್ಣ ಜವಾಬ್ದಾರನಾಗಿರುವುದರಿಂದಲೂ ತಾನು ತನ್ನ ಕರ್ತವ್ಯವನ್ನು ನೆರವೇರಿಸಲೇಬೇಕು. ಹಾಗಿಲ್ಲದೆ ಭಕ್ತರು ಒಲ್ಲೈಸುವರೆಂದು ಅಧರ್ಮವನ್ನು ಹೆಚ್ಚಿಸುತ್ತ ಬಂದಲ್ಲಿ ದೈವದ್ರೋಹವೆಂಬುವದು ಅವರ ಶಿರಗಿನಲ್ಲಿ ಕಟ್ಟಿರಲೇಬೇಕಾಗುವುದರಿಂದ ಧರ್ಮಗುರುಗಳು ಧರ್ಮಶಾಸ್ತ್ರ ವಿರುದ್ಧವಾಗಿ ಯಾರು ಹೇಳಿದರೂ ಆ ವಚನವನ್ನು ಸಂಪೂರ್ಣವಾಗಿ ನಿರಾಕರಿಸಿ ಧರ್ಮದಂಡದಿಂದ ಅಧರ್ಮಿಷರುಗಳನ್ನು ಶಿಕ್ಷಿಸುವುದೇ ಸಾಧುವಾದುದು. ರಾಜನು ತನ್ನ ಪ್ರತಿನಿಧಿಗಳಾದ ಮಂತ್ರಿಗಳ ವಶಕ್ಕೆ ರಾಜ್ಯಭಾರವ್ಯವಸ್ಥೆಯನ್ನು ವಹಿಸಿಕೊಟ್ಟ ಮೇಲೆ ಮಂತ್ರಿಗಳು ಹಗಲಿರುಳೂ ರಾಜಶಾಸನವನ್ನು ಪಾಲಿಸುತ್ತ ರಾಜಪ್ರೇಮವನ್ನು ಅರ್ಜಿಸುವುದರಲ್ಲಿ ಆಸಕ್ತರಾಗಿರದೆ, ರಾಜನೀತಿವಿರುದ್ಧನಾದ ಅಧರ್ಮಾಭಿವೃದ್ಧಿಗೆ ಅವಕಾಶಕೊಟ್ಟಲ್ಲಿ, ರಾಜದ್ರೋಹಿಗಳೆನಿಸುವಂತೆ "ಧರ್ಮಂಚರ, ಸತ್ಯಂವದ" ಎಂಬ ಸೃಷ್ಟಿಕರ್ತನಾದ ಈಶ್ವರನ ಶಾಸನವನ್ನು ಪ್ರತಿನಿಧಿಗಳಾದ ಗುರುಗಳು ಪಾಲಿಸದೆಹೋದರೆ ಕರ್ತವ್ಯಲೋಪವುಂಟಾಗಿ ದೈವಾಯತ್ತವಾದ ಮಹಾಗುರುತ್ವಕ್ಕೆ ಭಂಗಬರುವುದೆಂಬುವಲ್ಲಿ ಸಂಶಯವಿಲ್ಲ. ಆದುದರಿಂದ ಭಕ್ತರ ದೂಷಣಭೂಷಣಗಳಿಂದ ಗುರುಗಳು ತಗ್ಗುವುದಿಲ್ಲ. ಹಿಗ್ಗುವುದೂ ಇಲ್ಲ. ಅಧರ್ಮಕ್ಕವಕಾಶಕೊಡದೆ ಶಿವಾಜ್ಞೆಯಂತೆ ಧರ್ಮವನ್ನು ಪಾಲಿಸುವುದೊಂದೇ ಗುರುಗಳ ಕರ್ತವ್ಯವು. ಲೋಕದಲ್ಲಿ ವಿಷಯಾಸಕ್ತರಾದ ಜನಗಳು ತಮ್ಮ ಇಚ್ಛೆಗೆ ವಿರುದ್ಧವಾದರೆ ಸೃಷ್ಟಿಕರ್ತನಾದ ದೇವರನ್ನು ಸಹ ನಿಂದಿಸುವರು. ತಮ್ಮ ಮನೋರಥವು ಕೈಗೂಡಿದರೆ ಹೊಗಳುವರು ಅಂದಮೇಲೆ ಇನ್ನು ದೇವರ ಕೈಕೆಳಗಿರುವ ಗುರುಗಳನ್ನು ಬಿಡುವರೇ? ಆದುದರಿಂದ ಧರ್ಮಗುರುಗಳಾದ ಪೀಠಾಧಿಪತಿಗಳು ಇವಕ್ಕೆ ಲಕ್ಷ್ಯಕೊಡದೆ ಈಶ್ವರನು ತಮ್ಮ ಕೈಗೆ ಕೊಟ್ಟಿರುವ ಧರ್ಮಧ್ವಜವನ್ನು ಕೆಳಗಿಳಿಸದೆ ಮೆರೆಸುವುದೊಂದನ್ನು ಮಾತ್ರ ಎಂದೂ ಬಿಡಲಾರರೆಂಬುದನ್ನು ಗುರುನಿಂದಕರು ಮನದಟ್ಟು ಮಾಡಿಕೊಳ್ಳುವುದಲ್ಲದೆ,

ಪರೀವಾದಾತ್ ಖರೋ ಭವತಿ ಶ್ವಾವೈ ಭವತಿ ನಿಂದಕಃ |
ಪರಿಭೋಕ್ತಾ ಕ್ರಿಮಿರ್ಭವತಿ ಕೀಟೋ ಭವತಿ ಮತ್ಸರೀ ||

ಗುರುವಿನ ಪರೀವಾದದಿಂದ(ದೋಷವನ್ನು ಹೊರಗೆ ಹಾಕುವುದರಿಂದ) ಶಿಷ್ಯನು ಈ ಜನ್ಮವನ್ನು ನೀಗಿದ ಮೇಲೆ ಕತ್ತೆಯಾಗಿ ಹುಟ್ಟುವನು. ಗುರುನಿಂದೆಯಿಂದ (ಇಲ್ಲದಿರುವ ದೋಷವನ್ನು ಹುಟ್ಟಿಸುವುದರಿಂದ) ನಾಯಿಯಾಗಿ ಜನಿಸುವನು. ಗುರುದ್ರವ್ಯಾಪಹಾರಕನು ಕ್ರಿಮಿಯಾಗಿ ಹುಟ್ಟುವನು. ಗುರುವಿನ ವೈಭವವನ್ನು ನೋಡಿ ಹೊಟ್ಟೆಕಿಚ್ಚುಪಡುವವನು ಕ್ರಿಮಿಗಳಿಗಿಂತಲೂ ಸ್ವಲ್ಪ ದಪ್ಪವಾದ ಕೀಟಜನ್ಮವನ್ನು ಹೊಂದುವನು ಎಂದು ಧರ್ಮಶಾಸ್ತ್ರದಲ್ಲಿ ಹೇಳಿದ ಗುರುನಿಂದಕರಿಗಾಗುವ ದುರ್ಗತಿಗಳ ವಿವರವನ್ನು ಬಲ್ಲವರಿಂದ ಅರಿತು ಸನ್ಮಾರ್ಗಗಾಮಿಗಳಾಗಬೇಕು. ಮತ್ತು ಗುರುಭಕ್ತರಾದ ಸತ್ಪುರುಷರು ಇಂಥ ಗುರುದ್ರೋಹಿಗಳ ಬಳಿಗೆ ಪದೇ ಪದೇ ಹೋಗಿ ಅವಾಚ್ಯಶಬ್ದಗಳನ್ನು ಕೇಳುವುದಕ್ಕಿಂತಲೂ,

ಗುರೋರ್ಯತ್ರ ಪರೀವಾದಃ ನಿಂದಾವಾಪಿ ಪ್ರವರ್ತತೆ |
ಕರ್ಣೌ ತತ್ರ ಪಿಧಾತವ್ಯೌ ಗಂತವ್ಯಂ ವಾ ತತೋನ್ಯತಃ ||

ಎಂಬ ಧರ್ಮಶಾಸ್ತ್ರಪ್ರಕಾರವಾಗಿ ಗುರುನಿಂದೆಯನ್ನು ಕೇಳದಂತೆ ಕಿವಿಮುಚ್ಚಿಕೊಂಡು ಅಂಥ ಗುರುದೂಷಕರ ಬಳಿಗೆ ಹೋಗದಿರುವುದೇ ಲೇಸು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪ್ರಯಾಣ

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಹವಾಬದಲಾವಣೆಗಾಗಿ ಈ ತಿಂಗಳು ೧೨ ನೆಯ ತಾರೀಖಿನ ದಿವಸ ರಾಜಧಾನಿಯಿಂದ ಮದ್ರಾಸಿಗೆ ಪ್ರಯಾಣ ಮಾಡಿದರು. ಅವರು ಅಲ್ಲಿ ಒಂದೆರಡು ತಿಂಗಳುಗಳವರೆಗೆ ಇರುವವರಾಗಿದ್ದಾರೆ. ಅವರೊಡನೆ ಪತ್ರವ್ಯವಹಾರವನ್ನು ಮಾಡುವವರು ಈ ಕೆಳಗಿನ ಅಡ್ರೆಸ್ಸಿಗೆ ಪತ್ರಗಳನ್ನು ಬರೆಯಬೇಕು. ಮೇಲಿನ ವಿಳಾಸವನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

PANDIT KASHINATHA SHASTRI,
237, Angappa Naik Street,
MADRAS.

ಒಳದೇಶದ ವೃತ್ತಾಂತಗಳು.

ಕುಂಸಿ ಸಬ್-ತಾಲೂಕು ಮಂಡಗದ್ದೆ ಗ್ರಾಮದ ಅಣ್ಣಪ್ಪನೆಂಬ ಚಿನ್ನದ ಕೆಲಸಗಾರನು ಖೋಟಾ ರೂಪಾಯಿ ತಯಾರು ಮಾಡುತ್ತಿದ್ದನೆಂಬ ಕಾರಣದ ಮೇಲೆ ಶಿವಮೊಗ್ಗಾ ಸೆಷನ್ಸ್ ಜಡ್ಜರವರು ಎರಡು ವರುಷ ಕಠಿಣ ಶಿಕ್ಷೆಯನ್ನು ವಿಧಿಸಿದಾರೆ.

ಬೆಂಗಳೂರು ಹೈಕೋರ್ಟ್ ಜಡ್ಜರಾದ ಮ|| ಎಂ. ರಾಮಚಂದ್ರರಾಯರು ರಜಾ ಪಡೆದು ಉದ್ಯೋಗದಿಂದ ನಿವೃತ್ತರಾಗುವರೆಂದೂ, ಡಿಸ್ಟ್ರಿಕ್ಟ್ ಜಡ್ಜರಾದ ಮ|| ರಾ|| ಎ. ಶ್ರೀನಿವಾಸರಾಘವಾಚಾರ್ಯರು ಹೈಕೋರ್ಟ್ ಜಡ್ಜರಾಗಿ ನೇಮಿಸಲ್ಪಟ್ಟಿರುವರೆಂದೂ ತಿಳಿದು ಬಂದಿದೆ.

ಮೈಸೂರು ಸಂಸ್ಥಾನದಲ್ಲಿ ಕೌನ್ಸಿಲರಾಗಿದ್ದ ಲೇಟ್ ಮಿರ್ ಹಂಜಾ ಹುಸೇನರವರ ಕುಮಾರರಾದ ಮಿ|| ಮಿರ್ ಇಕ್ಬಲ್ ಹುಸೇನರವರಿಗೆ ಬಂಗನಪಲ್ಲಿ ಸಂಸ್ಥಾನದ ದಿವಾನಗಿರಿಯು ದೊರೆಯಿತೆಂದೂ, ಅವರು ಮುಂದಿನ ತಿಂಗಳು ಹೋಗಿ ದಿವಾನಗಿರಿಯನ್ನು ವಹಿಸುವರೆಂದೂ ತಿಳಿದುಬರುತ್ತದೆ.

ರಾಜಧಾನಿಯ ವಾಣೀವಿಲಾಸ ರಸ್ತೆಯಲ್ಲಿರುವ ಸಾ|| ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ ಮಂಗಳವಾರ ಸಾಯಂಕಾಲ ರಾಜಧಾನಿಯ ವೀರಶೈವ ಮಹಾಜನರು ಕಾರಾಗೃಹದ ಮುಖ್ಯಾಧಿಕಾರಿಗಳಾಗಿದ್ದ ಮ|| ಮಲ್ಲಿಕಾರ್ಜುನಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮಹಾಮಾತೃಶ್ರೀಯವರ ಮರಣದಿಂದ ತನುಗುಂಟಾದ ದುಃಖವನ್ನು ವ್ಯಕ್ತಪಡಿಸಿ ಶ್ರೀಮನ್ಮಹಾರಾಜರವರಿಗೆ ಅರಿಕೆಮಾಡಿಕೊಂಡರು.

ಮೈಸೂರು ಆಯುರ್ವೇದಿಕ್ ಆಸ್ಪತ್ರೆಯ ವಾರ್ಡ್ ಅಸಿಸ್ಟೆಂಟರಾದ ಮಿ|| ಬಿ. ವಿ. ಶಾಸ್ತ್ರಿಗಳವರು ಚಿಕಿತ್ಸೆಗೆ ಬಂದಿದ್ದ ಒಬ್ಬ ಸ್ತ್ರೀಯ ವಿಷಯದಲ್ಲಿ ಅಸಭ್ಯವರ್ತನವನ್ನು ತೋರಿಸಿದರೆಂಬ ಅಪಾದನೆಯ ಮೇಲೆ ಎರಡು ತಿಂಗಳಹಿಂದೆ ಕೆಲಸದಿಂದ ಸಸ್ಪೆಂಡ್‌ಮಾಡಲ್ಪಟ್ಟಿದ್ದರು. ಆಯುರ್ವೇದಿಕ್ ಕಾಲೇಜಿನ ಉಪಾಧ್ಯಕ್ಷರಾದ ಮಿ|| ಬಿ. ಟಿ. ಕೇಶವಯ್ಯಂಗಾರ್ಯರವರು ಈ ವಿಷಯವಾಗಿ ತನಿಖೆಮಾಡಿ, ಮಿ|| ಬಿ. ವಿ. ಶಾಸ್ತ್ರಿಗಳ ಮೇಲಿನ ಅಪಾದನೆಗಳು ರುಜುವಾತಾಗಲಿಲ್ಲವೆಂದು ಅವರನ್ನು ಪುನಃ ಕೆಲಸದ ಮೇಲೆ ತೆಗೆದುಕೊಂಡಿರುತ್ತಾರೆ.

ಬೆಂಗಳೂರು ದಂಡಿಗೆ ಸೇರಿದ ಕ್ಲೀವ್‌ಲೆಂಡ್ ಟೌನ್, ಕೋಲ್ಸ್ ರೋಡು, ಹೇಯಿನ್ಸ್‌ರೋಡು, ಮಾಸ್ಕ್ ರೋಡು ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸುವರ್ಣರಜತಾಂದೋಲಿಕೋತ್ಸವವು ನಿನ್ನೆ ದಿವಸ ಪ್ರಾತಃಕಾಲ ಬ್ರಿಟಿಷ್ ಸರಕಾರದವರು ದಯಪಾಲಿಸಿರುವ ಸಮಸ್ತ ರಾಜಮರ್ಯಾದೆಗಳೊಡನೆ ಕೇವಲ್ರಿ ರೋಡ್ ಅರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ರವರ ಮನೆಯ ಸಮೀಪದಿಂದ ಪ್ರಾರಂಭಿಸಿ ಮುಖ್ಯ ರಾಜಮಾರ್ಗಗಳಲ್ಲಿ ಹೊರಟು ಕೋಲ್ಸ್ ರೋಡಿನಲ್ಲಿರುವ ಮ|| ರಾ|| ಯಂ. ಜಿ. ನಾಗಪ್ಪನವರ ಬಂಗಲೆಗೆ ತಲುಪಿತು. ಸಾಯಂಕಾಲ ೬|| ಘಂಟೆಗೆ ಅಲ್ಲಿಯ ಭಕ್ತರು ಶ್ರೀ ಮಹಾಸ್ವಾಮಿಗಳವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಸಮರ್ಪಿಸಿದರು.

ದಿವಂಗತರಾದ ಶ್ರೀಮನ್ಮಹಾರಾಣಿ ವಾಣೀವಿಲಾಸ ಸನ್ನಿಧಾನದವರ ಆತ್ಮಶಾಂತ್ಯರ್ಥವಾಗಿ ರಾಜಧಾನಿಯಲ್ಲಿ 10-12 ದಿವಸಗಳವರೆಗೆ ವಿಶೇಷವಾದ ಅನ್ನದಾನವು ನಡೆಯಿತು. ಸ್ಮಾರ್ತರಿಗೂ, ಶ್ರೀವೈಷ್ಣವರಿಗೂ, ವೀರಶೈವರಿಗೂ, ಪ್ರತ್ಯೇಕವಾಗಿ ಊಟದ ಏರ್ಪಾಡುಗಳು ಮಾಡಲ್ಪಟ್ಟಿದ್ದುವು. 18 ನೇ ತಾರೀಖು ಬುಧವಾರದ ದಿವಸ ಮುಸಲ್ಮಾನರು, ಕ್ರಿಶ್ಚಿಯನ್ನರು, ಹರಿಜನರು ಮೊದಲಾದವರಿಗೆ ಮೊದಲಾಗಿ ಸಮಸ್ತ ಪಂಗಡದವರಿಗೂ ಪ್ರತ್ಯೇಕ ಪ್ರತ್ಯೇಕವಾದ ಊಟದ ಏರ್ಪಾಡುಗಳು ಮಾಡಲ್ಪಟ್ಟಿದ್ದುವು. ದೇವಾಲಯಗಳಲ್ಲಿ ವಿಶೇಷ ಪೂಜೆಗಳೂ, ಬಡಬಗ್ಗರಿಗೆ ವಸ್ತ್ರಗಳೂ, ಅರಮನೆಯಲ್ಲಿ ಗಜದಾನ, ಅಶ್ವದಾನ ಮೊದಲಾದ ಸಮಸ್ತದಾನಗಳೂ ಮಧ್ಯಾಹ್ನಾನಂತರ ಬ್ರಾಹ್ಮಣರಿಗೆ ಭೂರಿದಕ್ಷಿಣೆಯೂ ಸಾಂಗವಾಗಿ ನೆರವೇರಿದವು. ಶ್ರೀಮನ್ಮಹಾರಾಜರವರು ಅರಮನೆಯಲ್ಲಿ ದರ್ಬಾರನ್ನು ನಡೆಯಿಸಿ, ಬಂಧುಮಿತ್ರರು ಮತ್ತು ಅಧಿಕಾರವರ್ಗದವರಿಂದ ನಜರು ಮುಜುರೆಗಳನ್ನು ಸ್ವೀಕರಿಸಿದನಂತರ ಶುಭಸ್ವೀಕಾರ ಮಾಡಿದರು. ಶುಭಸ್ವೀಕಾರನಿಮಿತ್ತವಾಗಿ ದೇವತಾರ್ಚನೆಯೂ ಕುಲಗುರುಗಳಾದ ಪರಕಾಲಮಠದ ಶ್ರೀ ಸ್ವಾಮಿಗಳವರ ಪೂಜೆಯೂ ನಡೆಯಿತು. ಆನೆಯ ಮೇಲೆ ಕಲಶವನ್ನಿರಿಸಿ ಅರಮನೆಯ ಪ್ರಾಕಾರದಲ್ಲಿ ಉತ್ಸವವು ನೆರವೇರಿತು. ರಾಜಬಂಧುಗಳೂ ಅಸಂಖ್ಯ ವೈದಿಕರೂ ಕಪ್ಪಿನ ಬಿಲ್ಲೆಗಳನ್ನು ಹಿಡಿದುಕೊಂಡು ಸಾಗುತ್ತಿದ್ದುದರಿಂದ ಉತ್ಸವವು ದರ್ಶನೀಯವಾಗಿದ್ದಿತು. ಮುಖ್ಯವಾಗಿ ಶ್ರೀಮನ್ಮಹಾಮಾತೃಶ್ರೀಯವರ ಉತ್ತರಕ್ರಿಯೆಗೆ ಸಂಬಂಧಪಟ್ಟ ಸಮಸ್ತಕಾರ್ಯವೂ ಅತ್ಯಂತ ವಿಚಕ್ಷಣೆಯಿಂದ ನೆರವೇರಿದುವು.

ವರ್ತಮಾನಸಂಗ್ರಹ.

ಜಪಾನ್ ಸರಕಾರದವರು ತಮ್ಮ ವೈಮಾನಿಕಬಲವನ್ನು ಹೆಚ್ಚಿಸಬೇಕೆಂದು ನಿರ್ಧರಿಸಿರುವರು.

ಪ್ಯಾರಿಸ್ ನಗರದ ಪೋಲೀಸ್ ಪರ್ಫೆಕ್ಟ್‌ರವರು ನಗರದಲ್ಲಿ ಯಾರೂ ನೋಟೀಸುಗಳನ್ನು ಹಂಚಕೂಡದೆಂದು ಅಪ್ಪಣೆಮಾಡಿರುವರು.

ರೋಂನಗರದ ಸಮೀಪದಲ್ಲಿ ಹಿಡಿಯಲ್ಪಟ್ಟ ಒಂದು 'ಶಾರ್ಕ್' ಎಂಬ ಮೀನಿನ ಹೊಟ್ಟೆಯಲ್ಲಿ ಒಂದು ಟಿನ್ ಪೆಟ್ರೋಲ್ ಇದ್ದಿತಂತೆ!

ಜರ್ಮನ್‌ದೇಶಕ್ಕೆ ಸೇರಿದ ಬಿಟ್ಟರ್‌ಫೀಲ್ಡ್ ಎಂಬಲ್ಲಿ ಒಂದು ಹೇಂಟೆಯು ಒಂದು ವಾರ್ಷದಲ್ಲಿ ಮಟ್ಟವಾಗಿರುವ ಶಕ್ತಿಯನ್ನು ಹಾಕಿರುವುದಂತೆ!

ಫ್ರಾನ್ಸ್ ಸರಕಾರದವರು ಬಿರ್ಜುವೆಚ್ಚವನ್ನು ಕಡಿಮೆಮಾಡುವುದಕ್ಕಾಗಿ ಅಂಚೆಯ ಇಲಾಖೆಯಿಂದ 10,000 ಜನರನ್ನು ವಜಾಮಾಡಿರುತ್ತಾರೆ.

ಹಂಗೇರಿ ದೇಶದಲ್ಲಿ 'ಗಲ್ಲಿಗೆ ಏರಿಸುವ ಕೆಲಸ' ವು ಖಾಲಿಯಾಗಲು ಆ ಕೆಲಸಕ್ಕಾಗಿ ನೂರಾರು ಜನ ಪದವೀಧರರೂ, ಇಬ್ಬರು ಸ್ತ್ರೀಯರೂ ಅರ್ಜಿಗಳನ್ನು ಹಾಕಿಕೊಂಡಿದ್ದರಂತೆ!

ಜುಲೈ ತಾ|| 7 ಕ್ಕೆ ಅಖೈರಾದ ವಾರದಲ್ಲಿ ಮುಂಬಯಿ ನಗರದಿಂದ ಯೂರೋಪ್ ಮತ್ತು ಅಮೇರಿಕಾ ದೇಶಗಳಿಗೆ 1,99,49,008 ರೂಪಾಯಿ ಬೆಲೆ ಬಾಳುವಷ್ಟು ಚಿನ್ನವು ರಫ್ತಾಗಿರುತ್ತದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಈ ವರ್ಷ ಸಾರ್ವಜನಿಕ ಕಾರ್ಯಗಳಿಗಾಗಿ 1,100 ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ನಿರ್ಧರಿಸಿರುವರು.

ಇದೇ ಜುಲೈ 15 ನೇ ತಾರೀಖಿನ ದಿವಸ ಬೆಳಗ್ಗೆ 8 ಗಂಟೆಯ ಸಮಯದಲ್ಲಿ ಮೈಮನ್‌ಸಿಂಗ್, ಕುಚ್ ಬಿಹಾರ್ ಮತ್ತು ದೂಬ್ರಿ ಮೊದಲಾದ ಪ್ರದೇಶಗಳಲ್ಲಿ ಸಾಧಾರಣವಾಗಿ ಭೂಕಂಪವಾಯಿತು. ಯಾರಿಗೂ ಅಪಾಯವಾಗಿಲ್ಲ.

ಬರುವ ಆಗಸ್ಟ್ ತಿಂಗಳಲ್ಲಿ ಜಪಾನಿನವರು ತಮ್ಮ ಯುದ್ಧಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಕೆಲವು ಕೃತಕ ಯುದ್ಧಗಳನ್ನು ಏರ್ಪಡಿಸಿರುವರು. ಅದರಲ್ಲಿ 200 ವಿಮಾನಗಳೂ 280 ಯುದ್ಧದ ಹಡಗುಗಳೂ ಭಾಗವಹಿಸುವುವು.

ರಾಜಪದಚ್ಯುತರಾಗಿ ಸದ್ಯಃ ಮಸ್ಸೂರಿಯಲ್ಲಿ ಕಾಲಯಾಪನೆಮಾಡುತ್ತಿರುವ ಅಳ್ವಾರ್ ಮಹಾರಾಜರು ಅಲ್ಲಿಯ ಒಂದು ಸಿನಿಮಾಮಂದಿರದಲ್ಲಿ ಪ್ರದರ್ಶನದ ಮಧ್ಯಕಾಲದಲ್ಲಿ ಪ್ರತಿನಿತ್ಯವೂ ಧರ್ಮವಿಷಯಕವಾಗಿ ಉಪನ್ಯಾಸಮಾಡುತ್ತಿರುವರಂತೆ!

ಅಲಹಾಬಾದಿನ ನೋತಿವಾಲ್ಲಿ ಎಂಬ ಒಬ್ಬ ಪೋಲೀಸ್ ಹೆಡ್ ಕಾನ್‌ಸ್ಟಬಲನು ಪಟೇಲ್ ವಾಗ್ಜಿಭಾಯಿ ಎಂಬ ಕಾಂಗ್ರೆಸ್ ಮುಖಂಡರನ್ನು ಗುಂಡಿನಿಂದ ಹೊಡೆದು ಕೊಂದನೆಂಬ ಅಪಾದನೆಯ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ ಮರಣದಂಡನೆಯನ್ನು ವಿಧಿಸಿರುತ್ತಾರೆ.

ಮೊರೇವಿಯಾ ದೇಶಕ್ಕೆ ಸೇರಿದ ಬ್ರೆಕ್ಲೀವ ಎಂಬ ಗ್ರಾಮದ ಮಿಲ್ಲಾ ಜೋನ್ಸಕೋವ ಎಂಬ ಒಬ್ಬ ವೃದ್ಧಸ್ತ್ರೀಯು ಒಂದು ದಿನ ಸ್ಮಶಾನಕ್ಕೆ ಹೋಗುತ್ತಿದ್ದಳು. ದಾರಿಯಲ್ಲಿ ಕೇಳಿದವರಿಗೆಲ್ಲಾ ತನ್ನ ಸಮಾಧಿಗೆ ಸರಿಯಾದ ಸ್ಥಳವನ್ನು ನೋಡಿಕೊಂಡು ಬರುವುದಾಗಿ ಹೇಳುತ್ತಾ ಸ್ಮಶಾನದ ಬಾಗಿಲಿಗೆ ಹೋಗಿ ಅಲ್ಲಿ ಕೆಳಕ್ಕೆ ಬಿದ್ದು ಕೂಡಲೇ ಮೃತಪಟ್ಟಳು.

ಕಾನ್‌ಪೂರ ಡಿಸ್ಟ್ರಿಕ್ಟಿಗೆ ಸೇರಿದ ಭದ್ರಿ ಎಂಬ ಗ್ರಾಮದಲ್ಲಿ ಒಂದು ಗೂಳಿಯೂ ಒಂದು ಎಮ್ಮೆಯೂ ಒಂದು ಹುಲ್ಲುಗಾವಲಿನಲ್ಲಿ ಸೇರಿ ಕಾದಾಡಿದುವು. ಗೂಳಿಯ ಒಂದು ಕೊಂಬು ಮುರಿಯಿತು. ಅದೇ ಕಾರಣವಾಗಿ ಗೂಳಿಯ ಕಡೆಯವರಿಗೂ ಎಮ್ಮೆಯ ಕಡೆಯವರಿಗೂ ಕೈ ಕೈ ಹತ್ತಿ ಉಭಯಪಕ್ಷಗಳಲ್ಲಿಯೂ 12 ಕ್ಕಿಂತ ಹೆಚ್ಚು ಜನರು ಗಾಯಪಟ್ಟರು. ಪೋಲೀಸರು 9 ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಸಂತಾನ ನಿರೋಧ ಕಾನೂನು!

ಪ್ರಜಾಭಿವೃದ್ಧಿಯೇ ನಿರುದ್ಯೋಗಕ್ಕೆ ಮುಖ್ಯಕಾರಣವಾಗಿರುವುದರಿಂದ ಇನ್ನು ಮುಂದೆ ಮಕ್ಕಳನ್ನು ಪಡೆಯಬೇಕೆಂದು ಅಪೇಕ್ಷಿಸುವವರು ಮೊದಲು ಸರಕಾರದ ಅನುಮತಿಯನ್ನು ಪಡೆಯಬೇಕೆಂಬ ಬಗ್ಗೆ ಒಂದು ಕಾನೂನನ್ನು ರಚಿಸಬೇಕೆಂದು ಅಮೇರಿಕೆಯ ಬಜಾನೊಬ್ಬ ಸ್ತ್ರೀಯಳು ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ಸೂಚಿಸಿರುವಳಂತೆ!

ಸ್ತ್ರೀಬಾಹುಳ್ಯ.

'ಬಲಿ' ದೇಶದಲ್ಲಿ ಪ್ರತಿಯೊಬ್ಬ ಗಂಡಸಿಗೆ 7 ಜನ ಹೆಂಗಸರಿರುವರು! ಅಲ್ಲಿಯ ಜನರಿಗೆ ಆದಾಯದ ತೆರಿಗೆಯಿಲ್ಲ, ವಿವಾಹವಿಚ್ಛೇದವಿಲ್ಲ, ದೇಶರಕ್ಷಣೆಗಾಗಿ ಸೈನ್ಯವಿಲ್ಲ.

ಇಟಲಿಯಲ್ಲಿ ಪ್ರಜಾಭಿವೃದ್ಧಿಗೆ ಪ್ರೋತ್ಸಾಹ.

ರೋಂ ನಗರದಲ್ಲಿ ಒಬ್ಬ ಕೂಲಿಕಾರನ ಪತ್ನಿಯು ಟ್ರಾಂ ಗಾಡಿಯಲ್ಲಿ ಹೋಗುತ್ತಿದ್ದಾಗ ಅಲ್ಲಿಯೇ ಒಂದು ಶಿಶುವನ್ನು ಪ್ರಸವಿಸಿದಳು. ಅಧಿಕಾರಿಗಳು ಕೂಡಲೇ ಆ ಗಾಡಿಯನ್ನು ನಾನಾರೀತಿಯಲ್ಲಿ ಸಿಂಗರಿಸಿ ಜಯಘೋಷಮಾಡುತ್ತಾ ಟ್ರಾಮನ್ನು ಮುಂದಕ್ಕೆ ಹೊರಡಿಸಿದರು.

ಗಾಡಿಗಳ ಚಕ್ರಕ್ಕೆ ಬೆಣ್ಣೆ!

ಲಿಥ್ಯೂನಿಯಾ ದೇಶದಿಂದ ಜರ್ಮನಿಗೆ ಅಪಾರವಾದ ಬೆಣ್ಣೆಯು ರಫ್ತಾಗುತ್ತಿತ್ತು. ಆದರೆ ಈಗ ಬೆಣ್ಣೆಯನ್ನು ರಫ್ತುಮಾಡಕೂಡದೆಂದು ಜರ್ಮನ್ ಸರಕಾರದವರು ನಿರ್ಬಂಧ ಹಾಕಿರುವುದರಿಂದ, ಲಿಥ್ಯೂನಿಯಾ ದೇಶದ ಜನರು ಬೆಣ್ಣೆಯನ್ನು ಗಾಡಿಗಳ ಚಕ್ರಕ್ಕೆ ಎಣ್ಣೆಯಂತೆ ಉಪಯೋಗಿಸುತ್ತಿರುವರಂತೆ!

ಸ್ಟೇಟ್ ಸೆಕ್ರೆಟರಿಯವರ ಮೇಲೆ ೧ ಲಕ್ಷ ರೂಪಾಯಿಗೆ ನೋಟೀಸು!

ಅಮೃತಸರದ ಕಂಟ್ರಾಕ್ಟರಾದ ಸೈನ ಚರಕ ದಿನ್ ಎಂಬವರು ಸರಕಾರಕ್ಕೆ ನೋಟೀಸು ಕೊಟ್ಟು ೧ ಲಕ್ಷ ರೂಪಾಯಿಗಳ ನಷ್ಟವನ್ನು ಬೇಡಿರುತ್ತಾರೆ. ನೋಟೀಸಿನ ವಿವರವು ಈ ರೀತಿಯಾಗಿದೆ—"ನಾನು ದೊಡ್ಡ ವ್ಯಾಪಾರಿ; ಸರಕಾರಕ್ಕೆ ೩೦೦ ರೂ. ಇನ್‌ಕಮ್ ಟ್ಯಾಕ್ಸ್ ಕೊಡುತ್ತೇನೆ. ೧೯೩೦ರ ನೇ ಇಸ್ವಿಯಲ್ಲಿ ಅಧಿಕಾರಿಗಳು ನನ್ನ ಕಡೆ ಬಂದು ಸರಕಾರಕ್ಕೆ ಸಹಾಯಮಾಡಬೇಕೆಂದೂ, ಅದಕ್ಕೆ ತಗಲುವ ಯಾವತ್ತೂ ಖರ್ಚು ಸರಕಾರದಿಂದ ಸಿಗುವದೆಂದೂ, ನೆರವಾದವರಿಗೆಲ್ಲ ಪಾರಿತೋಷಕವನ್ನು ಕೊಡುವೆವೆಂದೂ ಹೇಳಿದರು. ಅದರಂತೆ ನಾನು 'ಕೈದ ಬಾನಿ ಮುಲ್ಕ ಮಂಡಳ' ಅಂದರೆ ಹಿಂದೀ ರಾಜನಿಷ್ಠ ಯುವಕಮಂಡಳವನ್ನು ಏರ್ಪಡಿಸಿ ಡೆಪ್ಯುಟಿ ಕಮಿಶನರ ಅಪ್ಪಣೆಯಂತೆ ಅದಕ್ಕೆ ಸಭಾಸದರನ್ನು ನೇಮಿಸಿಕೊಂಡು, ಅಧ್ಯಕ್ಷನಾದೆನು. ಸರಕಾರ ಅಧಿಕಾರಸ್ಥರ ಅಪ್ಪಣೆಯನ್ನು ಮುಂದಾಗಿ ಪಡೆದುಕೊಂಡು ಗೋಡೆಗೆ ಹಚ್ಚುವ ದೊಡ್ಡ ದೊಡ್ಡ ಜಾಹೀರಾತುಗಳನ್ನೂ, ಹಸ್ತಪತ್ರಿಕೆಗಳನ್ನೂ ಹೊರಡಿಸಿದೆನು. ಈ ಹಸ್ತಪತ್ರಿಕೆಗಳನ್ನು ಪಂಜಾಬ ಸರಕಾರದ ಕಾರ್ಯದರ್ಶಿಗಳು ಸಹ ಪ್ರಶಂಸೆಮಾಡಿದ್ದಾರೆ. ನಾನು ಮಾಡಿದ ಸರಕಾರ ಸೇವೆಯನ್ನು ಅಮೃತಸರದ ಸೆಷನ್ಸ್ ಜಡ್ಜರು ನನ್ನ ಮೇಲಾದ ಖಟ್ಲೆಯಲ್ಲಿ ಹೊಗಳಿದ್ದಾರೆ. ಸರಕಾರ ಪಕ್ಷಪಾತಿಯಾಗಿ ನಾನು ನಡೆಯಿಸುತ್ತಿರುವ ಪ್ರಚಾರಕಾರ್ಯದಿಂದ ನನ್ನ ಮೇಲೆ ಹಿಂದೀಯರು ದ್ವೇಷ ಹಿಡಿದರು. ನನ್ನ ಮನೆಯ ಮುಂದೆ ಪಿಕೆಟಿಂಗ್ ನಡೆಯಿತು. ಪೋಲೀಸರು ನನ್ನ ಮೇಲೆ ಸಂಶಯ ಹಿಡಿದು ನನ್ನ ಮನೆಯನ್ನು ಜಪ್ತಿಮಾಡಿ ಸರಕಾರಿ ಅಧಿಕಾರಿಗಳು ನನಗೆ ಬರೆದ ಗುಪ್ತ ಕಾಗದ ಪತ್ರಗಳನ್ನು ಒಯ್ದರು. ಆ ಸಂಬಂಧವಾಗಿ ನಾನು ಸರಕಾರಕ್ಕೆ ಅರ್ಜಿಹಾಕಿದೆನು. ಅವು ನನಗೆ ಇನ್ನೂ ಸಿಕ್ಕಿಲ್ಲ. ಪೋಲೀಸರು ನನ್ನ ಹೆಸರನ್ನು ಕಳ್ಳಕಾಕರ ರಜಿಸ್ಟರದಲ್ಲಿ ಸೇರಿಸಿ ನನ್ನನ್ನು ತೊಂದರೆಪಡಿಸಲಾರಂಭಿಸಿದರು. ಗವರ್ನರರ ಕಡೆಗೆ ಅರ್ಜಿಹಾಕಿದ ಬಳಿಕ, ನನ್ನ ಹೆಸರನ್ನು ಆ ರಜಿಸ್ಟರದೊಳಗಿಂದ ತೆಗೆದರು. ಇದರಿಂದ ನನಗೆ ೬೦ ಸಾವಿರ ರೂ. ಗಳು ಖರ್ಚಾದುವು; ೪೦ ಸಾವಿರ ರೂಪಾಯಿ ನನ್ನ ಇನಾಮಿನ ಬಗ್ಗೆ ಬರಬೇಕು. ಅಂತು ೧ ಲಕ್ಷ ರೂಪಾಯಿಗಳನ್ನು ೨ ತಿಂಗಳುಗಳಲ್ಲಿ ಕೊಡದಿದ್ದರೆ ಭಾರತ ಮಂತ್ರಿಗಳ ಮೇಲೆ ನಾನು ದಾವೆ ಮಾಡುತ್ತೇನೆ." ನೋಟಿಸಿನಿಂದ ಎಷ್ಟು ದೊಡ್ಡ ಕಾರಸ್ಥಾನ ಬೈಲಿಗೆ ಬಂತು ನೋಡಿ!

ಕೀರ್ತಿಶೇಷರಾದ ಶ್ರೀಮನ್ಮಹಾಮಾತೃಶ್ರೀ ವಾಣಿವಿಲಾಸ ಸನ್ನಿಧಾನ ಸಿ. ಐ. ಅವರ ವಿಯೋಗದುಃಖಶಾಂತಿಪದ್ಯಗಳು.

ಇಂದು ಬಯಲಾದಳೆ ಧರಿತ್ರಿಯೊ |
ಳಿಂದು ವಂಶೋದ್ಭೂತಯದುಕುಲ |
ಕೆಂದುಮಳಿಯದ ಜಸವ ತಂದಿತ ಕೃಷ್ಣನೃಪಮಣಿಯ ||
ಚಂದದಿಂ ನಿಜಗರ್ಭಶುಕ್ತಿಯೊ |
ಳೊಂದಿ ಪೆತ್ತದನೆಮ್ಮನಾಡಿಗ |
ಮುಂದಹರ್ಷದಿನಿತ್ತ ಜನನಿಯು ನಮಗೆ ಕಾಣಿಸಳೇ||೧||

ಕಳಚಿ ಬಿದ್ದುದೆ ನಾಡಲಕುಮಿಯ |
ಪೊಳೆವ ಮಕುಟದ ಜೀವರತ್ನವ |
ಪಳಿದುದೇ ಮೈಸೂರುದೇಶದ ಪುಣ್ಯಮೂರುತಿಯು ||
ಕೊಲಗಿಕೇ ಬೇಳ್ವರ್ಗೆ ಬೇಡಿದ |
ಫಲವನೀವಾ ದ್ರುಮವು ರಾಜನ |
ನಿಳಯದಧಿದೇವತೆಯು ತಿರಳ್ದಳೆ ಬಾರಳೇ ಮಗುಳೆ||೨||

ಅಂಬೆ ಶರಣಾಗತಜನೈಕಾ |
ಲಂಬೆ ಲೋಕಪ್ರಥಿತಸುಗುಣಕ |
ದಂಬೆ ಪಾಲಿತರಿಕ್ತದೀನಾನಾಥನಿಕುರುಂಬೆ ||
ಶಂಭುಜಾಯಾಪದಕಮಲರೋ |
ಲಂಬೆ ವಾಣೀವರವಿಲಾಸವ |
ದಿಂಬುಗೆಟ್ಟಿತೆ ಚಂದ್ರನಿಲ್ಲದ ರಾತ್ರಿ ತಾನಾಯ್ತೆ ||೩||

ಮಾತೆ ಕರುಣಾಭರಿತೆ ಸುಜನ |
ಪ್ರೀತೆ ಪಾಪವಿಭೀತೆ ಜನತಾ |
ಗೀತಸುಚರಿತೆ ದೇವಗುರುಜನಪೂಜನಾನಿರತೆ ||
ಪ್ರೀತಿಯಿಂ ನೀಂ ಪ್ರಜೆಗಳನು ನಿಜ |
ಮಾತೆಯೊಲು ಪೊರೆಯುತ್ತೆ ಸಗ್ಗವ |
ಸಾತಿಶಯದಿಂದಡರಿ ತಬ್ಬಲಿಗೆಯ್ದೆಯಾ ಜನವ ||೪||

ಮೇದಿನೀಪತಿಗುಚಿತವಿದ್ಯೆಯ |
ಬೋಧಿಸುತ ನಿನ್ನಾತ್ಮಜರ್ಗಾ |
ಹ್ಲಾದದಿಂ ಸುತನಾಳ್ವರೀತಿಯ ನೋಡಿ ನಲಿಯುತ್ತೆ ||
ಸಾಧಿಸುತ್ತೆನ್ನಯ ಪ್ರತಿಜ್ಞೆಯ |
ನೀದಿವಕ್ಕೈತಂದೆಯೆನ್ನುತೆ |
ಮೋದದಿಂದರುಪಲ್ಕೆ ನೀಂ ಪತಿಯೆಡೆಗೆ ತೆರಳಿದೆಯಾ

ಎನೆಯಲುತ್ತರದಯನನೇಕಾ |
ದಶಿಯ ಮರಣಂ ನರಗೆ ಮೋಕ್ಷದಾ |
ದಶಿಯ ದಹನಂ ಶ್ರೇಷ್ಠವೆನ್ನುತ್ತಿರೆವರರಿತವರು ||
ಕುತಲಮತಿ ನೀಂ ಮಾತೆಯಂತೆಯೆ |
ಬಿಸುಟಿಯೌ ನಶ್ವರಶರೀರವ |
ವಸುಧೆಯೊಳು ನೀಂ ಮಾಳ್ದ ಧರ್ಮಕ್ಕಿದುವೆ ಸಾಕ್ಷಿ ಗಡ

ಉತ್ತಮೋತ್ತಮಗುಣದೆ ರಾಜಿಪ |
ಮುತ್ತಿನಂತಹ ವೀರಭೂಪನ |
ನಿತ್ತುಲೋಕಕೆ ಜನನಿ ನಶ್ವರದೇಹವಂ ತೊರೆದು ||
ಸತ್ತುಚಿತ್ತಾನಂದರೂಪದ |
ಸತ್ತೆ ನೀನಾಗಿಹುದನರಿಯದೆ |
ಸತ್ತೆ ನೀಯೆಂದತ್ತರದು ವಿಭ್ರಮವು ತಾನಲ್ತೆ ||೭||

ವರಮಹಾಬಲಗಿರಿಯೊಳವಿರತ |
ಮಿರುತೆ ಯಾದವವಂಶಭೂಪಾ |
ಲರನು ಪೊರೆವಾವರದೆ ಚಾಮುಂಡಾಂಬೆ ಜಗದಂಬೆ ||
ಕರುಣಿಸಲಿ ನಿನ್ನಾತ್ಮಕಾವಗ |
ಮುರುವ ಶಾಂತಿಯನಂತೆ ಶಾಶ್ವತ |
ಪರಶಿವಾನಂದವನು ಮಾತೆಯೆ ಕೀರ್ತಿರಾಜಿತೆಯೆ ||೮||

ಇಂದು ಮಾತೃವಿಯೋಗದಿಂ ನೆರೆ |
ನೊಂದು ಶೋಕಿಪ ಕೃಷ್ಣನೃಪತಿಗ |
ಮಂದದುಃಖದೊಳಾಳ್ದ ಯುವನೃಪಗಂತೆ ವರಸುತೆಗೆ ||
ಒಂದಿದಖಿಲಕುಟುಂಬವರ್ಗಕ |
ಮಿಂದುಶೇಖರನೊಡನೆ ದಯೆಯಿಂ |
ನಂದಿಸುತೆ ಶೋಕವನು ಚಿತ್ತಸ್ಥೈರ್ಯವಂ ಕುಡುಗೆ||೯||

ಎಂ. ಎಸ್. ಬಸವಲಿಂಗಯ್ಯ, ಎಂ.ಎ.,ಬಿ.ಎಲ್.

ಅ|| ಕ್ಯೂರೇಟರ್, ಓರಿಯಂಟಲ್ ಲೈಬ್ರರಿ,

ತಾ|| 16-7-34. ಮೈಸೂರು.

ಮೈಸೂರು ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನದ ಚರಮಶ್ಲೋಕಗಳು.

ಶ್ಲೋ|| ಭಾವೇ ಭಾನಾವುದೀಚೀಂ ಗತವತಿ ಹರಿತಂ ಜ್ಯೇಷ್ಠಕೃಷ್ಣಾಖ್ಯಪಕ್ಷೇ | ದ್ವಾದಶ್ಯಾಮಗ್ನಿತಾರಾಂ ವಿಶತಿ ಶಶಧರೇ ಮಂದವಾರೇ ನಿಶಾಯಾಂ || ಅಶ್ರೀಯಾಬ್ಧೀಂದುಚಾಮಕ್ಷಿತಿಪತಿರಮಣೀ ಪ್ರಾಪ್ಯ ವಾಣೀವಿಲಾಸೆ | ಖ್ಯಾತಾಂಬಾ ಕೃಷ್ಣರಾಜಕ್ಷಿತಿಪತಿಜನನೀ ವೈಷ್ಣವಂ ಧಾಮ ಸಾಧ್ವೀ ||೧||

ಶ್ಲೋ|| ಭಾವಜ್ಯೇಷ್ಠಾಸಿತೇ ಪಕ್ಷೇ ದ್ವಾದಶ್ಯಾಂ ಮಂದವಾಸರೇ || ವಾಣೀವಿಲಾಸನಾಮ್ನ್ಯಂಬಾ ಪ್ರಾಗಾದ್ವೈಷ್ಣವಧಾಮ ತತ್ ||೨||

ವೃ|| ಇಂದೀಕಾಲದ ಭಾವದಲ್ಲಿ ಪುದುಗಲ್ ಗ್ರೀಷ್ಮರ್ತು ಮತ್ತಗ್ನಿಭಂ | ಸಂದಾದ್ವಾದಶಿ ಶುಕ್ರಕೃಷ್ಣಗರುತಂಗೊಂಡಂದಿರುಳ್ಪೊಳೊಳೇ || ನಂದಿತ್ತೊಮ್ಮೆಯೆ ಚಾಮರಾಜರಮಣೀವಾಣೀವಿಲಾಸಾಂಬೆಯಾ | ಕುಂದಂ ಕಾಣದ ಜೀವದೀವಿಗೆ ಜಗಂ ಕೂಡಿತ್ತು ನಿಸ್ತೇಜದಿಂ ||೩||

ವೃ|| ಎಮತೀಕನ್ನಡನಾಡತಾಯ್ಸಿರಿಗಿದೇನಿಂದಂತ ಮಾಯ್ತಂತ್ಕಟಾ | ಸುಮನೋವಲ್ಲಭ ಚಾಮರಾಜನೃಪನಂ ತಟ್ಟೈಸಲಾಪಗ ದೊಳ್ || ವಿಮಲಶ್ರೀಧರಕೃಷ್ಣರಾಜಜನನೀವಾಣೀವಿಲಾಸಾಂಬೆ ಮೇಣ್ | ಸುಮನರ್ ದುರ್ಮನರಾದರೆಲ್ಲ ಜನರುಂ ಕಣ್ಮಾಣದಾದರ್ ದಿಟಂ ||೪||

ವೃ|| ಮೊಗಮಂ ಮುಚ್ಚಿದ ನಾಡಮಂದಿಯಳಲಿಂ ಕಂಡುಬ್ಬೆಗಂದಾಳ್ದು ತಾಂ | ಮುಗಿಲಿಂ ಮುಚ್ಚಿದ ನೇಸರಂದುದಯದೊಳ್ ವೈಗಾಣದಾದಂ ದಿಟಂ || ಮುಗಿಲುಂ ಸೀರ್ಪನಿಯಿಕ್ಕಿತಂತೆಯಳಲಿಂ ಕಣ್ಣೀರವಿಟ್ಟಂದದಿಂ | ಬಗೆಯಲ್ತಾಯಳಲಾಂತ ನಾಡದೆಸೆಯಂ ಕಂಡರ್ಗದಾದುರ್ಃಖಿಸರ್ ||೫||

ವೃ|| ತಾಯೇ ವಾಣಿಯೆ ಕೃಷ್ಣರಾಜನೃಪತಿಶ್ರೀಮನ್ಮಹೇಂದ್ರರಂ | ಕಾಯಲ್ಕನ್ನಡನಾಡಿಗಿತ್ತು ಪೊರೆದುಂ ತದ್ಬಾಲ್ಯದೊಳ್ದೀಶದೀ || ಶ್ರೀಯುಂ ಮಂದಿಯನೊಲು ನಿನ್ನ ಬಸುರಲ್ಲಿಟ್ಟಿಂದಿವರ್ಕೆಯ್ಯೊಳೇ | ಕಾಯಲ್ಕಿಟ್ಟಿದೊ ಪೋದೆ ಚಾಮನೃಪನಂ ಸೇರಲ್ ಸೊಗಂಗೊಳ್ಳನಿಂ ||೬||

ಟಿ. ಶ್ರೀನಿವಾಸರಂಗಾಚಾರ್ಯ,

ಕನ್ನಡ ಸೀನಿಯರ್ ಪಂಡಿತ,

ಟ್ರೈನಿಂಗ್ ಕಾಲೇಜ್,

ತಾ|| ೧೬-೭-೧೯೩೪. ಮೈಸೂರು.

ಯಾದಗಿರಿ ಶಂಕರಸಂಸ್ಕೃತಕಾಲೇಜಿನ ಪರೀಕ್ಷಾಪರಿಣಾಮ.

ಮದ್ರಾಸ್ ಯೂನಿವರ್ಸಿಟಿ ಬಿ. ವಿದ್ವಾನ್ ಪರೀಕ್ಷೆಯಲ್ಲಿ.

(1) ರುದ್ರಮೂರ್ತಿ ನಾಗೇಪಲ್ಲಿ.

ಕಲಕತ್ತಾ ಕಾವ್ಯ ಮಧ್ಯಮ ಪರೀಕ್ಷೆಯಲ್ಲಿ.

(1) ಬಸವರಾಜ ಭೇರಿಗಿ.
(2) ಮಲ್ಲಿಕಾರ್ಜುನ ಗುಳೇದಗುಡ್ಡ.
(3) ವೀರಭದ್ರಶರ್ಮ ಎಡ್ರಾಮಿ.
(4) ಗುಂಡಾರಾಧ್ಯ ಮೇದನಾಪುರ

ಕಲಕತ್ತಾ ವ್ಯಾಕರಣಾದ್ಯ ಪರೀಕ್ಷೆಯಲ್ಲಿ.

(1) ಪಟ್ಟಾಚಾರ್ಯ ಇಲಿಯಾಳು.

ಕಲಕತ್ತಾ ಕಾವ್ಯಾದ್ಯ ಪರೀಕ್ಷೆಯಲ್ಲಿ.

(1) ಗುರುಸಿದ್ಧಯ್ಯಾ ನಾಯ್ಕಲ್
(2) ಗುರುಲಿಂಗಯ್ಯ

ಇದೇ ವರ್ಷದಿಂದಲೇ ಮದ್ರಾಸ್ ಯುನಿವರ್ಸಿಟಿ ಪರೀಕ್ಷೆಯ ಅಭ್ಯಾಸವು ಕಾಲೇಜಿನಲ್ಲಿ ಪ್ರಾರಂಭಿಸಲ್ಪಟ್ಟದ್ದು ಪರೀಕ್ಷೆಗೆ ಹೋದ ಇಬ್ಬರಲ್ಲಿ ಒಬ್ಬ ವಿದ್ಯಾರ್ಥಿಯು ಬಿ. ವಿದ್ವಾನ್ ಪರೀಕ್ಷೆಯಲ್ಲಿ ಪಾಸಾದುದು ಶ್ರೇಯಸ್ಕರವಾಗಿದೆ.

|| ಶ್ರೀ ಘುವಲ್ಲಿ [ಹೂಲಿ] ಸಿದ್ಧನಂಜೇಶ್ವರಾಯನಮಃ ||

ಪ್ರಸಿದ್ಧಪತ್ರಿಕೆಯು.

ದೃಷ್ಟ್ವಾ ಜನ್ಮ ಶತಂ ಪಾಪಂ | ಸ್ಪೃಷ್ಟ್ವಾ ಜನ್ಮ ಶತತ್ರಯಂ || ಸ್ನಾತ್ವಾ ಜನ್ಮ ಸಹಸ್ರಾಣಿ | ಇತಿ ಕೃಷ್ಣಾ ಕಲೌಯುಗೇ ||೧||

ಪರಮ ಆಸ್ತಿಕ ಮಹನೀಯರೇ: ಈ ವರ್ಷ— ಚೈತ್ರ ಶುದ್ಧ ಪ್ರತಿಪದೆಯಿಂದ ಶ್ರಾವಣ ಶು|| ೧೪ ಚತುರ್ದಶಿ ತಾ||೨೩-೮-೧೯೩೪ ನೇ ಇಸ್ವಿ, ಗುರುವಾರದ ವರೆಗೆ ಗುರುವು ಕನ್ಯಾರಾಶಿಯಲ್ಲಿರುವದರಿಂದ ಈ ಸುಸಮಯದಲ್ಲಿ ಮೇಲಿನ ಶ್ಲೋಕದಂತೆ ದರ್ಶನದಿಂದ ನೂರು ಜನ್ಮದ ಪಾಪವನ್ನೂ ಸ್ಪರ್ಶದಿಂದ ಮೂರು ನೂರು ಜನ್ಮದ ಪಾಪವನ್ನೂ ಅಲ್ಲಿ ಸ್ನಾನಮಾಡೋಣದರಿಂದ ಸಾವಿರ ಜನ್ಮದ ಪಾಪವನ್ನೂ ನಾಶಗೊಳಿಸುವ ಸಂಪತ್ಯುಕ್ತವಾದ ಶ್ರೀ ಕೃಷ್ಣಾನದಿಗೆ ಮಂಗಲವತಿಯಾದ ಶ್ರೀ ಭಾಗೀರಥೀಮಹಾತಾಯಿಯ ಪ್ರವೇಶವಾಗಿರುವದರಿಂದ ಈ ಅತ್ಯಂತ ಪವಿತ್ರವಾದ ವೇಳೆಯನ್ನು ತಾವು ಕಳೆದುಕೊಳ್ಳದೆ ಪ್ರತಿಮಾಸಗಳಲ್ಲಿ ಶ್ರೇಷ್ಠವಾದ ಈವತ್ತಿನ ಶ್ರಾವಣ ಮಾಸದ ಚತುರ್ದಶಿ ತಾ|| ೨೩ ನೇ ಆಗಷ್ಟು ಗುರುವಾರದ ಒಳಗಾಗಿ ಶ್ರೀ ಕೃಷ್ಣಾನದಿಯ ದರ್ಶನ-ಸ್ಪರ್ಶನ-ಸ್ನಾನಾದಿ ಸತ್ಕರ್ಮವನ್ನು ಪ್ರತಿಯೊಬ್ಬರು ತಮ್ಮ ತಮ್ಮ ಧರ್ಮದಂತೆ ಆಚರಿಸಿ ಸದ್ಯಃ ಅತಿ ಜೋರಿನಿಂದ ಪ್ರಾಪ್ತವಾಗುತ್ತಿರುವ ಅನೀತಿ-ಅಧರ್ಮ-ಅನಾಚಾರಾದಿ ಕುಕರ್ಮವೆಂಬ ಬಿರುಗಾಳಿಯ ಹೊಡತವನ್ನು ಆಸ್ತಿಕಮಹಾನುಭಾವರು ತಪ್ಪಿಸಿಕೊಂಡು ಪ್ರತಿಯೊಬ್ಬರ ಏಳ್ಗೆಗೆ ಮುಖ್ಯಕಾರಣವಾದ ಸುನೀತಿ-ಸುಧರ್ಮ,ಸದಾಚಾರ ಸಂಪನ್ನರಾಗಿ ಈ ಜನ್ಮದಿಂದ ಪುನೀತರಾಗಬೇಕೆಂದು ನಮ್ಮ ವಿನಯ ಸೂಚನೆಯು.

ಪಂಚಾಂಗಕರ್ತ,

ಜ್ಯೋತಿಷಾಲಂಕಾರ ವೇ|| ಬ್ರ|| ಶ್ರೀ ಸಿದ್ಧಾಂತಿ,

ಪ. ಶಿವಬಸವಶಾಸ್ತ್ರಿಗಳು ಪಂಚವಣ್ಣಿಗಿ

ಬೃಹನ್ಮಠ, ಹೂಲಿ ಡಿ|| ಬೆಳಗಾಂವ.

ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಮನುಷ್ಯನು ಪಾತ್ರೆಯನ್ನು ತೊಳೆಯುವುದಕ್ಕಾಗಿ ಒಂದು ಭಾವಿಯೊಳಕ್ಕೆ ಇಳಿದನು. ಅವನು ಎಷ್ಟು ಹೊತ್ತಾದರೂ ಮೇಲಕ್ಕೆ ಬರದಿರಲು ಮತ್ತೊಬ್ಬನು ಇಳಿದನು. ಅವನೂ ಬರದಿರಲು ಮತ್ತೊಬ್ಬನು ಇಳಿದನು. ಮೂವರೂ ಮೇಲಕ್ಕೆ ಬಾರದಿರಲು ನಾಲ್ಕನೆಯವನೊಬ್ಬನು ಸೊಂಟಕ್ಕೆ ಹಗ್ಗವನ್ನು ಕಟ್ಟಿಕೊಂಡು ಭಾವಿಯಲ್ಲಿ ಇಳಿದನು. ಸ್ವಲ್ಪ ಹೊತ್ತಿನ ನಂತರ ನಾಲ್ಕನೆಯವನು ಹಗ್ಗವನ್ನು ಅಲ್ಲಾಡಿಸುತ್ತಿದ್ದುದನ್ನು ಕಂಡು ಮೇಲ್ಭಾಗದಲ್ಲಿದ್ದವರು ಮೇಲಕ್ಕೆಳೆಯುವಷ್ಟರಲ್ಲಿ ಜ್ಞಾನವು ತಪ್ಪಿದ್ದಿತು. ಇತರ ಮೂರು ಜನರನ್ನು ಮೇಲಕ್ಕೆ ಕರೆತರಲು ಸಾಧ್ಯವಾಗದೆ ಹೋದದ್ದರಿಂದ ಭಾವಿಯೊಳಕ್ಕೆ ಸೌದೆಯನ್ನು ಹಾಕಿ ಅಲ್ಲಿಯೇ ಅವರನ್ನು ದಹನಮಾಡಿದರು.

ತಿನ್ನವೆಲ್ಲಿ ಜಿಲ್ಲಾ ಶಂಕರಂ ಕೋಯಿಲ್ ಸಮೀಪದಲ್ಲಿರುವ ಸೇಕಾಶತಿಯಾರು ಎಂಬ ಗ್ರಾಮದ ದೇವಸ್ಥಾನದಲ್ಲಿ ಈಗ 8-10 ದಿವಸಗಳ ಹಿಂದೆ ಸುಮಾರು 11 ಗಂಟೆ ಹೊತ್ತಿನಲ್ಲಿ ಪೂಜಾರಿಯು ವಿಶೇಷ ಪೂಜೆಯ ನಿಮಿತ್ತವಾಗಿ ಪ್ರಾಕಾರದಲ್ಲಿದ್ದ ಚಪ್ಪರದಲ್ಲಿ ಪಂಜುಗಳನ್ನು ಹಚ್ಚಿ ದೇವರಿಗೆ ಆರತಿ ಮಾಡುತ್ತಿದ್ದಾಗ ಪಂಜುಗಳ ಜ್ವಾಲೆಯು ಚಪ್ಪರದ ಮೇಲ್ಭಾಗದಲ್ಲಿದ್ದ ತೆಂಗಿನ ಮಟ್ಟೆಗಳಿಗೆ ತಗಲಿ ಉರಿಯಲಾರಂಭವಾಯಿತು. ಗಾಳಿ ಬೀಸುತ್ತಿದ್ದ ಕಾರಣ ಸಮೀಪದಲ್ಲಿದ್ದ ಹುಲ್ಲಿನ ಮೆದೆಯೂ ಹತ್ತಿಕೊಂಡಿತು. ಹೊರಗೆ ಬರುವುದಕ್ಕೆ ಒಂದೇ ಸಣ್ಣ ಬಾಗಿಲು ಇದ್ದದ್ದರಿಂದ ಜನಗಳು ಬೆಂಕಿಯಿಂದ ಪಾರಾಗಲು ಅವಕಾಶವಾಗಲಿಲ್ಲ. ಈ ಅನಾಹುತದಿಂದ 60 ಮಂದಿ ಮೃತಪಟ್ಟರೆಂದೂ 60 ಜನರಿಗೆ ಗಾಯಗಳಾದವೆಂದೂ, ತಿಳಿದು ಬಂದಿದೆ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ.

ಬೆಂಗಳೂರು ಸಿಟಿ. 36

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 43

ವಿಳಾಸ—ಬ್ರ. **ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,**

ಪಾಠಶಾಲಾ, ಮಹಾಗಾಂವ್,

ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟಲ್

ನಂ. ೩, ಚಿಕ್ಕಪೇಟೆ, ದಿವಾನ್ ಸೂರಪ್ಪನವರ ಗಲ್ಲಿ,

(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)

ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದೇಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟಲ್ ನೂತನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (19)

ಕೆ. ಶಿವಲಿಂಗಪ್ಪ.

ಬೆಂಗಳೂರು ಸಿಟಿ. **ಪ್ರೊಪ್ರೈಟರ್.**

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14, ½ ಡಜನ್ 8-8-0 ಮತ್ತು ರೂ 5

ಮಲೆರಿ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8.

The Malariana Co., Mangalore (21)

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣತೆ, ಗ್ರಹಣಿ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಗೊಳಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್‌ಕಫ್ ರೆಮೆಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಫಕೆಮ್ಮು ಇವನ್ನು ಬೇರುಸಹಿತ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಜಂತುಬಾಧೆಯ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5.

ಸಿರಪ್ ವೆಸಿಕೋಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ಕೀವು ತುಂಬಿರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡ ಸೀಸೆ ರೂ. 3-8-0, ಸಣ್ಣ ಸೀಸೆ ರೂ. 1-14-0.

ಟಿಕ್ಕು ಹೋಮ್ಯೋಪತಿ ಮದ್ದುಗಳೂ, ಶಸ್ತ್ರಾಯುಧಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಪ್ರಮಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಪತ್ತೆ:— ಮಲೇರಿಯಾನ ಕಂಪೆನಿ,

[46] (ಹಂಪನಕಟ್ಟೆ), 21, ಮಂಗಳೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೇರೆ ೧೪	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೇರೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೇರೆ ೧೪	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೇರೆ ೧೪	೦—೦—೯
ಪಂಚ ಪೀಠಾರೋಹಣವನಾದಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೇರೆ ೧೪	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೪	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೇರೆ ೧೪	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[28] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಜುಲೈ ೧೯೩೪ [ಸಂಚಿಕೆ ೧೧

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆಯಿರುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ರೇಣುಕವಿಜಯಮಹಾಪುರಾಣ.

(ಶ್ರಾವಣಮಾಸವು ಸಮೀಪಿಸಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀ ಜಗದ್ಗುರು ರೇಣುಕಾಚಾರ್ಯನ ಪವಿತ್ರ ಚರಿತ್ರವನ್ನು ಶ್ರವಣಮಾಡುವುದು ಪ್ರತಿಯೊಬ್ಬ ಗುರುಭಕ್ತರ ಆದ್ಯಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಆ ಮಹಿಮನ ಪುರಾಣವನ್ನು ತರಿಸಿಕೊಂಡು ಪುರಾತನ ಪದ್ಧತಿಯಂತೆ ಶ್ರಾವಣಮಾಸದಲ್ಲಿ ಪುರಾಣವನ್ನು ಪ್ರಾರಂಭಮಾಡಿ ಪ್ರಮಥಪುಂಗವನ ಸಚ್ಚರಿತ್ರವನ್ನು ಕೇಳಿ ತಮ್ಮ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೧ ರೂ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಬಾಲವುಳ್ಳ ಹುಡುಗ!

ಟ್ರಾವಂಕೂರು ಸಂಸ್ಥಾನದ ಮಾವಲಿಕರ ಎಂಬ ಹಳ್ಳಿಯಲ್ಲಿ ಬಾಲವುಳ್ಳ ಹುಡುಗನೊಬ್ಬನಿರುವನಂತೆ! ಮೂರು ವರ್ಷಗಳ ಕೆಳಗೆ ಸ್ವಲ್ಪ ಉದ್ದವಾದ ಒಂದು ಮಾಂಸದ ತುಂಡಿದ್ದು, ಈಗ ಅದು ಮೂರು ಅಂಗುಲ ಉದ್ದವಾಗಿ ಬೆಳೆದಿರುವದಂತೆ!

ಶಿಲಾವಿಗ್ರಹದಿಂದ ರಕ್ತ!

ತಿರುವಾಂಕೂರು ಜಿಲ್ಲೆಗೆ ಸೇರಿದ ಕೊಟ್ಟಾಯಂ ನಗರದ ಶಿವದೇವಸ್ಥಾನದಲ್ಲಿರುವ ನಂದಿಯ ಶಿಲಾವಿಗ್ರಹದ ಒಂದು ಪಾರ್ಶ್ವದಿಂದ ರಕ್ತವು ಸುರಿಯುವುದಕ್ಕೆ ಪ್ರಾರಂಭವಾಗಿದೆಯೆಂದೂ, ಹೀಗೆ ರಕ್ತ ಸುರಿಯುವುದು 5 ನೆಯ ಸಾರಿಯೆಂದೂ ತಿಳಿದುಬಂದಿದೆ. ಈ ರಕ್ತವನ್ನು ಒಂದು ಬಿಂದಿಗೆಗೆ ತುಂಬಿ ತಿರುವಾಂಕೂರು ಮಹಾರಾಜರಿಗೆ ಕಳುಹಿಸುವರಂತೆ!

ಕ್ಲೀವ್‌ಲೆಂಡ್ ದೇಶದ ಡಾಕ್ಟರ್ ಆಂಟೊನಿಸ್ ಲಾಂಗೋರಿಯಾ ಎಂಬ ಇಂಜನಿಯರು ಒಂದು ಹೊಸ ತರಹ ಕಿರಣಗಳನ್ನು ಕಂಡುಹಿಡಿದಿರುವರು. ಈ ಕಿರಣಗಳು ನೂರಾರು ಗಜಗಳ ದೂರದಲ್ಲಿರುವ ಪಶುಪಕ್ಷಿಗಳನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡುವ ಶಕ್ತಿಯನ್ನು ಹೊಂದಿರುವುವಂತೆ! ಅನೇಕ ಸರಕಾರಗಳವರು ಈ ಕಿರಣಗಳ ರಹಸ್ಯವನ್ನು ಸಂಪಾದಿಸಲು ಪ್ರಯತ್ನ ಮಾಡಿದರೆಂದೂ ಆದರೆ ಡಾಕ್ಟರ್ ಲಾಂಗೋರಿಯಾರವರು ಅದನ್ನು ಬಹಿರಂಗಪಡಿಸಲು ನಿರಾಕರಿಸಿದರೆಂದೂ ತಿಳಿದುಬರುತ್ತದೆ.

ಆಸ್ಟ್ರಿಯಾದಲ್ಲಿ ನಡೆದ ಗಲಭೆಗಳ ಸಂಬಂಧವಾಗಿ ಅಧಿಕಾರಿಗಳು ಇದುವರೆಗೆ 40 ಜನ ನಾಜಿಗಳನ್ನು ಗಲ್ಲಿಗೇರಿಸಿರುತ್ತಾರೆ. ಸ್ಟೀರಿಯಾದ ಉತ್ತರಭಾಗದಲ್ಲಿ ಇನ್ನೂ ಯುದ್ಧವು ನಡೆಯುತ್ತಲೇ ಇರುವುದು. ಪ್ರಿನ್ಸ್ ಸ್ಟಾರೆಂಬರ್ಗ್‌ರವರು ಯುದ್ಧಮಂಡಲವನ್ನು ಸೇರಿಸಿ, 3 ಲಕ್ಷ ಸೈನಿಕರನ್ನು ಒಟ್ಟುಗೂಡಿಸುವಂತೆ ದಳಪತಿಗಳಿಗೆ ಅಪ್ಪಣೆಮಾಡಿರುತ್ತಾರೆ. ಈಗ ನಡೆಯುತ್ತಿರುವ ಗಲಭೆಗಳು ಮತ್ತಷ್ಟು ಉಗ್ರರೂಪವನ್ನು ತಾಳಬಹುದೆಂಬ ಭೀತಿಯಿಂದ ಆಸ್ಟ್ರಿಯಾ ಸರಕಾರದವರು ತಮ್ಮ ದೇಶದ ಸುರಕ್ಷತೆಗಾಗಿ ಯೂರೋಪಿನ ಇತರರಾಷ್ಟ್ರಗಳ ಸಹಾಯವನ್ನು ಕೋರಿರುತ್ತಾರೆ. ಇದೇ ಸಂಬಂಧವಾಗಿ ಇಂಗ್ಲೆಂಡಿನ ಪರರಾಜ್ಯಗಳ ಮಂತ್ರಿಗಳಾದ ಸರ್ ಜಾನ್ ಸೈಮನ್ನರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ, 'ಒಪ್ಪಂದದ ಪ್ರಕಾರವಾಗಿ ಆಸ್ಟ್ರಿಯಾದೇಶದ ಸ್ವಾತಂತ್ರ್ಯ ರಕ್ಷಣೆಗೆ ಬ್ರಿಟಿಷರು ಯಾವಾಗಲೂ ಸಿದ್ಧರಾಗಿರುತ್ತಾರೆ' ಎಂದು ಹೇಳಿರುತ್ತಾರೆ.

ಪತ್ರವ್ಯವಹಾರ.

ಪತ್ರೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು.
ಬೃಹನ್ಮಠ, ಬಿಜಾಪುರ.

ಶ್ರುತಿಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಮನ್ವಾದಿ ಸ್ಮೃತಿಗಳಲ್ಲಿಯೂ ಗರ್ಭಾಧಾನಾದಿ ಸಂಸ್ಕಾರಗಳು ಹೇಳಲ್ಪಟ್ಟಿವೆ. ಆದರೂ ಆ ಸ್ಮೃತಿಗಳು ೧. ಆಚಾರ, ೨. ವ್ಯವಹಾರ, ೩. ಪ್ರಾಯಶ್ಚಿತ್ತಗಳನ್ನು ಹೇಳುವುದಕ್ಕಾಗಿಯೇ ಪ್ರವೃತ್ತಗಳಾಗಿರುವುವಲ್ಲದೆ ಸಂಸ್ಕಾರಾದಿಗೃಹ್ಯಕರ್ಮಗಳನ್ನು ಪ್ರತಿಪಾದಿಸುವುದೇ ಅವುಗಳ ಮುಖ್ಯವಾದ ಧ್ಯೇಯವಲ್ಲ. ಧಾರ್ಮಿಕಾಚರಣೆಗಳಿಂದ ಪುರುಷರು ಸುಸಂಸ್ಕೃತರಾಗಬೇಕೆಂಬ ಸದುದ್ದೇಶದಿಂದ, ಆ ಧಾರ್ಮಿಕಾಚಾರಗಳ ಸ್ವರೂಪವನ್ನೂ ಅರಸರ ಕರ್ತವ್ಯಗಳಾದ ಪ್ರಜಾಪಾಲನಾದಿ ವ್ಯವಹಾರಗಳನ್ನೂ ಬೇರೆಬೇರೆ ಪಾಪಗಳು ಸಂಭವಿಸಲು ಅವುಗಳ ಪ್ರಾಯಶ್ಚಿತ್ತಗಳನ್ನೂ ಹೇಳುವುದಕ್ಕೋಸ್ಕರವೇ ಸ್ಮೃತಿಕಾರರ ಪ್ರವೃತ್ತಿಯಿರುವುದು. ಮಧ್ಯದಲ್ಲಿ ಕೆಲವು ಸಂಸ್ಕಾರಗಳೂ ಅವುಗಳ ಅಂಗಗಳೂ ಹೇಳಲ್ಪಟ್ಟಿರುವುವಾದರೂ ಆ ಸರ್ವಸಂಸ್ಕಾರಾದಿ ಗೃಹ್ಯೋಕ್ತವಿಧಿಗಳು ಮುಖ್ಯವಾಗಿ ಸೂತ್ರಗಳಲ್ಲಿಯೇ ಹೇಳಲ್ಪಟ್ಟಿವೆ '**ವರ್ಣಾಶ್ರಮೇತರಾಣಾಂ ನೋ ಬ್ರೂಹಿ ಧರ್ಮಾನಶೇಷತಃ ।**' (ಯಾಜ್ಞ ೧-೨) ಎಂದು ಪ್ರಾರ್ಥಿಸುವ ಶಿಷ್ಯರ ಜಿಜ್ಞಾಸೆಗೆ ಉತ್ತರವೆಂದು ಸ್ಮೃತಿಗಳು ಬೋಧಿಸಲ್ಪಟ್ಟಿವೆ. '**ಗೃಹ್ಯಾಣಿವಕ್ಷ್ಯಾಮಃ**' (ಆಶ್ವ. ಗೃ. ಸೂ. ೧-೧) '**ಅಥಾತೋ ಗೃಹ್ಯಸ್ಥಾಲೀಪಾಕಾನಾಂ ಕರ್ಮ**' (ಪಾರ. ಗೃ. ಸೂ. ೧-೧) ಎಂಬುದಾಗಿ ಪ್ರತಿಜ್ಞೆಮಾಡಿ ಗೃಹ್ಯಕರ್ಮಗಳನ್ನು ಹೇಳುವುದಕ್ಕೆ ಸೂತ್ರಗಳು ಪ್ರವೃತ್ತಗಳಾಗಿವೆ; ಅಂದರೆ ಸ್ಮೃತಿಗಳು ಪುರುಷಾರ್ಥಬೋಧಕಗಳೂ ಸೂತ್ರಗಳು ಕ್ರತ್ವರ್ಥಬೋಧಕಗಳೂ ಆಗಿವೆ. ಯಾವ ಕರ್ಮಗಳಿಂದ ಅನುಷ್ಠಿಸುವ ಯಜಮಾನನಿಗೆ ಅಧಿಕಾರ ಸಂಪತ್ತಿಯುಂಟಾಗುವುದೋ ಅವುಗಳನ್ನು ಪುರುಷಾರ್ಥಕರ್ಮಗಳೆಂದೂ, ಯಾವುಗಳ ಮೂಲಕ ಕರ್ಮಸಾದ್ಗುಣ್ಯವುಂಟಾಗುವುದೋ ಅವುಗಳನ್ನು ಕ್ರತ್ವರ್ಥಗಳೆಂದೂ ಹೇಳುತ್ತಾರೆ.

ಹಾಗೂ, ಸ್ಮೃತಿಗಳು ಪ್ರಯೋಗಶಾಸ್ತ್ರಗಳೆನಿಸಲಾರವು. ಏಕೆಂದರೆ ಉತ್ಪತ್ತಿವಿಧಿಯನ್ನೂ ಮಿಕ್ಕ ಅಂಗಗಳನ್ನೂ ಪ್ರತಿಪಾದಿಸುವುದೇ ಪ್ರಯೋಗಶಾಸ್ತ್ರವು. ಇವೆಲ್ಲವೂ ಸೂತ್ರಗ್ರಂಥಗಳಲ್ಲಿಯೇ ಅನ್ವಯಿಸುವುದರಿಂದ ಅವುಗಳನ್ನು ಪ್ರಯೋಗಶಾಸ್ತ್ರಗಳೆಂದು ತಿಳಿಯಲಶಕ್ಯಂತರವಿಲ್ಲ. ವಿಧಿಗಳು ಉತ್ಪತ್ತಿ, ಅಧಿಕಾರ, ವಿನಿಯೋಗ, ಪ್ರಯೋಗಗಳೆಂಬುದಾಗಿ ನಾಲ್ಕು ವಿಧವಾಗಿವೆ. ಅವುಗಳಲ್ಲಿ ಯಾವುದು ಕೇವಲ ಕರ್ಮದ ಸ್ವರೂಪವನ್ನು ಬೋಧಿಸುವುದೋ ಅದು ಉತ್ಪತ್ತಿವಿಧಿಯು. ಹೇಗೆಂದರೆ—'**ಆಗ್ನೇಯೋಽಷ್ಟಾಕಪಾಲೋ ಭವತಿ**' ಅಗ್ನಿದೇವತೆಯನ್ನುದ್ದೇಶಿಸಿ ಎಂಟುಕಪಾಲಗಳಲ್ಲಿ ಸುಡಿಸಿ ಪುರೋಡಾಶವನ್ನು ಮಾಡುತ್ತಾರೆ. ಅದ್ದರಿಂದ ಆಗ್ನೇಯಪುರೋಡಾಶವು ಅಷ್ಟಾಕಪಾಲವಾಗಿದೆ. ಇಲ್ಲಿ ಕೇವಲ ಕರ್ಮದ ಸ್ವರೂಪವು ಬೋಧಿಸಲ್ಪಟ್ಟಿದೆ. ಇತಿಕರ್ತವ್ಯತೆಯೊಡನೆ ಯಾಗಾದಿಕರಣಗಳ ಫಲಸಂಬಂಧವನ್ನು ನಿರೂಪಿಸುವುದೇ ಅಧಿಕಾರವಿಧಿಯು. ಉದಾಹರಣೆಯು—'**ದರ್ಶಪೂರ್ಣಮಾಸಾಭ್ಯಾಂ ಸ್ವರ್ಗಕಾಮೋ ಯಜೇತ**' ಯಾವನಿಗೆ ಸ್ವರ್ಗದಪೇಕ್ಷೆಯುಂಟೋ ಅವನು ದರ್ಶಪೂರ್ಣಮಾಸಗಳಿಂದ ಯಾಗವನ್ನು ಮಾಡತಕ್ಕದ್ದು. ಅಂಗದ ಸಂಬಂಧವನ್ನು ಬೋಧಿಸುವುದೇ ವಿನಿಯೋಗ ವಿಧಿಯು. ಹೇಗೆಂದರೆ.—'**ವ್ರೀಹಿಭಿರ್ಯಜೇತ**' ವ್ರೀಹಿಗಳಿಂದ ಯಾಗವನ್ನು ಮಾಡತಕ್ಕದ್ದು. ಈ ಪೂರ್ವೋಕ್ತ ಮೂರು ವಿಧಿಗಳೂ ಕೂಡಿ ಒಂದು ಪ್ರಯೋಗವಿಧಿಯಾಗುವುದು. ಅಂದರೆ ಪ್ರಯೋಗವಿಧಿಯೆಂಬುದು ಅಂಗಗಳೊಡನೆ ಪ್ರಧಾನಕರ್ಮ ಪ್ರಯೋಗೈಕ್ಯ (ಅನುಷ್ಠಾನೈಕ್ಯ) ವನ್ನು ಬೋಧಿಸುವುದು. ಈ ಪ್ರಯೋಗವಿಧಿಯು ಶ್ರೌತ (ಶ್ರುತಿಬೋಧಿತ) ವೆಂದು ಕೆಲವರೂ, ಕಲ್ಪಿತ (ಕಲ್ಪಸೂತ್ರಬೋಧಿತ) ವೆಂದು ಕೆಲಂಬರೂ ಹೇಳುತ್ತಿರುವರು.

ಪ್ರಕೃತದಲ್ಲಿ ನಾವು ಹೇಳಬೇಕಾದುದಿಷ್ಟೇ! ಏನೆಂದರೆ ಸ್ಮೃತಿಗಳಲ್ಲಿ ಅಲ್ಪಸ್ವಲ್ಪ ಅಂಗಗಳು ನಿರೂಪಿಸಲ್ಪಟ್ಟಿರುವುವಾದರೂ ಉತ್ಪತ್ತಿವಿಧಿಯು ಹೇಳಲ್ಪಡುವುದಿಲ್ಲವಾದಕಾರಣ ಅವು (ಸ್ಮೃತಿಗಳು) ಪ್ರಯೋಗಶಾಸ್ತ್ರಗಳಲ್ಲ. ಅನುಷ್ಠಾನಪರರಾದವರಿಗೆ ಸೂತ್ರಗ್ರಂಥಗಳೇ ಸರ್ವರೀತಿಯಿಂದ ಅನುಕೂಲಗಳಾಗಿವೆ. ಕೇವಲ ಸ್ಮೃತಿಗಳನ್ನವಲಂಬಿಸಿದರೆ ಅನುಷ್ಠಾನವು ಸಾಂಗವಾಗಿ ಕೂಡಿಬಾರದು. ಮತ್ತು ಆ ವಿಧಿಗಳ ಅನುಷ್ಠಾನಪ್ರವೃತ್ತಿಹೇತುಭೂತವಾಕ್ಯಗಳೂ ಅವುಗಳಲ್ಲಿರುವುದಿಲ್ಲ. ಸ್ಮೃತ್ಯಾಧಾರದಿಂದ ರಚಿಸಲ್ಪಟ್ಟ ಹೇಮಾದ್ರಿ, ಪಾರಿಜಾತ ಮೊದಲಾದ ನಿಬಂಧಗ್ರಂಥಗಳ ಮೇಲೆಯೇ ಕೈಯಾಡಿದರೂ ಸಾಗದು. ಏಕೆಂದರೆ ಅವುಗಳಲ್ಲಿ ಪರಸ್ಪರ ವಿರೋಧವಾಕ್ಯಗಳು ಮನಸಾರೆ ಇರುವ ಪರಿಯನ್ನು ಅವರವರೇ ಗ್ರಂಥಗಳ ಅವಲೋಕನದಿಂದಾದರೂ ಅರಿತುಕೊಳ್ಳಬಹುದಾಗಿದೆ. ಆ ನಿಬಂಧಗ್ರಂಥಗಳನ್ನವಲಂಬಿಸಿ ಕರ್ಮಗಳನ್ನು ಮಾಡುವುದಕ್ಕಿಂತಲೂ ಸ್ವಶಾಖಾನುಸಾರವಾದ ಸೂತ್ರೋಕ್ತಪ್ರಕಾರವಾಗಿಯೇ ಕರ್ಮಗಳನ್ನು ನೆರವೇರಿಸುವುದು ಲೇಸು. ನಿಬಂಧಕಾರರು ಯಾವದೊಂದು ಕರ್ಮವಿಧಿಯನ್ನು ವಿವರಿಸುವಾಗ ಬೇರೆಬೇರೆ ಸ್ಮೃತಿವಚನಜಾಲವನ್ನೇ ತಂದೊತ್ತಿ, ಸೂತ್ರೋಕ್ತವಾದ ಮೂಲಸಂಸ್ಕಾರಾನುಷ್ಠಾನದ ಮುಖ್ಯಭಾಗಕ್ಕಿಂತಲೂ ಅವಾಂತರವಿಷಯಗಳನ್ನೇ ಹಬ್ಬಿಸಿರುವರು. ಇಲ್ಲಿ ಉದಾಹರಣೆಗಾಗಿ ಜಾತಕರ್ಮವೆಂಬ ಸಂಸ್ಕಾರವಿಧಿಯೊಂದನ್ನು ತೆಗೆದುಕೊಳ್ಳುವಾ! ಈ ಸಂಸ್ಕಾರವು ಹುಡುಗನು ಹುಟ್ಟಿದಾಕ್ಷಣವೇ ಮಾಡಲ್ಪಡುವುದು. ಗೃಹಸ್ಥರ ಈ ಸಂಸ್ಕಾರವಿಧಿಯನ್ನು ಸ್ವಶಾಖಾನುಸಾರವಾದ ಗೃಹ್ಯಸೂತ್ರೋಕ್ತಪ್ರಕಾರವಾಗಿ ಮಾಡುವರು. ಅಂದರೆ ಗಂಡುಕೂಸು ಹುಟ್ಟಿದಾಕ್ಷಣವೇ ನಾಲಕ್ಕೇದಕ್ಕಿಂತ ಮುಂಚಿತವಾಗಿ ತಂದೆಯು (ಯಜಮಾನನು) ಆಯುಷ್ಯ, ಮೇಧಾಜನನವೆಂಬೆರಡು ಕ್ರಿಯೆಗಳನ್ನು ಮಾಡುತ್ತಾನೆ. ಹೇಗೆಂದರೆ. ಉದಾಹರಣೆಗಾಗಿ ಅಶ್ವಲಾಯನಗೃಹ್ಯಸೂತ್ರೋಕ್ತಪ್ರಕಾರವಾದ ಜಾತಕರ್ಮಪ್ರಯೋಗವನ್ನು ಪಾಠಿಲ್ಲಿ ತೋರಿಸುತ್ತೇವೆ. ಪಶ್ಚಿಮಯಂತೆ ತಂದೆಯು ಸಂಕಲ್ಪವನ್ನು ಮಾಡಿದು ಜೇನನ್ನೂ ಹಸುವಿನ ತುಪ್ಪವನ್ನೂ ಕಲಸಿ ಕಲ್ಲಿನಮೇಲಿರಿಸಿ ಬಿಸುಬಿಸುವುಂಟುಜ್ಜಿ ಚಿಕ್ಕ ಬಟ್ಟಲಿನಲ್ಲಿ ಹಾಕಿ:—

ಪ್ರತೇ ದದಾಮಿ ಮಧುನೋ ಘೃತಸ್ಯ ।
ವೇದಂ ಸವಿತ್ರಾ ಪ್ರಸೂತಂ ಮಘೋನಾಮ್ ॥
ಆಯುಷ್ಮಾನ್ ಗುಪ್ತೋ ದೇವತಾಭಿಃ ।
ಶತಂ ಜೀವ ಶರದೋ ಲೋಕೇ ಅಸ್ಮಿನ್ ॥

ಎಂಬ ಮಂತ್ರೋಚ್ಚಾರಪೂರ್ವಕವಾಗಿ ಆ ಚಿನ್ನದಿಂದೇ ಅದನ್ನು ಪರಿಗ್ರಹಿಸಿ ಚಿನ್ನದ ಬಾಯಿಗೆಟ್ಟು ಸೀಪಿಸಿ, ತರುವಾಯ ಆ ಅಂಗಾರವನ್ನು ತೊಳೆದು ಕೂಸಿನ ಬಲಗಿವಿಗೆ ಸೋಂಕಿಸಿ ಅವನ ಮುಖದ ಬಳಿಗೆ ತನ್ನ ಮುಖವನ್ನು ಚಾಚಿ—

ಮೇಧಾಂ ತೇ ದೇವಃಸವಿತಾ ಮೇಧಾಂ ದೇವೀ ಸರಸ್ವತೀ ।
ಮೇಧಾಂ ತೇ ಅಶ್ವಿನೌ ದೇವಾವಾಧತ್ತಾಂ ಪುಷ್ಕರಸ್ರಜೌ ॥

ಎಂಬ ಮಂತ್ರವನ್ನು ಜಪಿಸಿ ಮತ್ತೆ ಆ ಹೊನ್ನನ್ನು ಎಡಗಿವಿಗೆ ಮುಟ್ಟಿಸಿ ಇದೇ ಮಂತ್ರವನ್ನು ಪಠಿಸಬೇಕು. ಬಳಿಕ—

ಅಶ್ಮಾಭವ ಪರಶುರ್ಭವ ಹಿರಣ್ಯಮಸ್ತೃತಂಭವ ।
ವೇದೋವೈ ಪುತ್ರನಾಮಾಸಿ ಸಜೀವ ಶರದಃ ಶತಮ್ ॥
ಇನ್ದ್ರ ಶ್ರೇಷ್ಠಾನಿ ದ್ರವಿಣಾನಿ ಧೇಹಿ ಚಿತ್ತಿಂ ದಕ್ಷಸ್ಯ ಸುಭಗತ್ವಮಸ್ಮೇ ।
ಪೋಷಂರಯೀಣಾಮರಿಷ್ಟಿಂ ತನೂನಾಂ ಸ್ವಾದ್ಮಾನಂ ವಾಚಃ ಸುದಿನತ್ವಮಹ್ನಾಮ್ ॥
ಅಸ್ಮೇಪ್ರಯಂಧಿಮಘವನ್ನೃಜೀಷಿನ್ನಿನ್ದ್ರರಾಯೋ ವಿಶ್ವವಾರಸ್ಯ ಭೂರೇಃ ॥
ಅಸ್ಮೈಶತಂ ಶರದೋ ಜೀವಸೇಧಾ ಅಸ್ಮೈವೀರಾಞ್ಛಶ್ವತ ಇನ್ದ್ರಶಿಪ್ರಿನ್ ॥

ಎಂಬ ಮಂತ್ರವನ್ನು ಜಪಿಸುತ್ತ ಶಿಶುವಿನ ಸ್ತನ ಬಾಹುಗಳ ಮಧ್ಯಭಾಗಗಳನ್ನು ಏಕಕಾಲದಲ್ಲಿಯೇ ಸೋಂಕಿದನಂತರ:—

ಅಙ್ಗಾದಙ್ಗಾತ್ಸಂಭವಸಿ ಹೃದಯಾದಧಿಜಾಯಸೇ ।
ಆತ್ಮಾವೈ ಪುತ್ರನಾಮಾಸಿ ಸಜೀವ ಶರದಃ ಶತಮ್ ॥

ಎಂಬ ಮಂತ್ರ ಪಠನದೊಡನೆ ಕೂಸಿನ ನೆತ್ತಿಯನ್ನು ಮೂರು ಸಾರಿ ಆಘ್ರಾಣಿಸಬೇಕು. ಕೊನೆಗೆ '**ಅನೇನಜಾತಕರ್ಮಾಖ್ಯೇನ ಕರ್ಮಣಾ ಶ್ರೀ ಪರಶಿವಃಪ್ರೀಯತಾಮ್**' ಎಂದು ನುಡಿದರಾಯ್ತು.

ಇಷ್ಟು ವಿಧಿಯನ್ನು ಕೆಲವು ನಿಮಿಷಗಳಲ್ಲಿಯೇ ಮಾಡಬಹುದಲ್ಲವೇ? ಆಗ ತಾನೇ ಹುಟ್ಟಿರುವ ಕೂಸು ಇನ್ನೂ ಹೊಕ್ಕಳ ತುರಿಯು ಕೊಯ್ಯಲ್ಪಟ್ಟಿಲ್ಲ: ಇಂತಹ ಪರಿಸ್ಥಿತಿಯಲ್ಲಿ ಸೂತ್ರೋಕ್ತಪ್ರಕಾರದ ಈ ವಿಧಿಯನ್ನು ಮೇಲೆ ಹೇಳಿದಂತೆ ಮಾಡಲು ಸಾಧ್ಯವಿದೆ. ಆದರೆ ಕೆಲವು ಪ್ರಯೋಗಗ್ರಂಥಗಳಲ್ಲಿ ಈ ಜಾತಕರ್ಮಸಂಸ್ಕಾರದಲ್ಲಿಯು ಕೂಡ ಪುಣ್ಯಾಹವಾಚನ, ನಾಂದೀ ಶ್ರಾದ್ಧ ಮೊದಲಾದ ಕರ್ಮಗಳ ಸಮುಚ್ಚಯವು ಹೇಳಲ್ಪಟ್ಟಿದೆ. ಇದರಿಂದ ಕೆಲವು ನಿಮಿಷಗಳಲ್ಲಿಯೇ ಮುಗಿಯಿಸಲ್ಪಡತಕ್ಕ ಈ ವಿಧಿಯನ್ನು ಆ ಪ್ರಯೋಗಗ್ರಂಥಗಳನ್ನು ಮುಂದಿಟ್ಟುಕೊಂಡು ಮಾಡಲಿಕ್ಕೆ ಪ್ರಾರಂಭಿಸಿದರೆ ಬಹುಮಟ್ಟಿಗೆ ಎರಡು ಘಂಟೆಕಾಲಾವಧಿಯಾದರೂ ಬೇಡವೇ? ಪ್ರಸೂತಿಸಮಯವು! ಬಾಣತಿಯು ಗತಿಯೇನು? ಇದನ್ನೆಲ್ಲ ಪರ್ಯಾಲೋಚಿಸಿದರೆ ಆರೋಗ್ಯದೃಷ್ಟಿಯಿಂದ ಈ ವಿಧಿಯನ್ನು ಪ್ರಯೋಗಕಾರರು ಹೇಳಿದಂತೆ ಮಾಡಲು ಸಾಧ್ಯವಿದೆಯೇ? ಬಾಣತಿಯು ಮತ್ತು ಕೂಸಿನ ಅವಸ್ಥೆಯು ಏನಾದರೂ ಆಗಲಿ, ನಾವು ಮಾತ್ರ ಎರಡು ಗಂಟೆವೇಳೆಯು ಪವಳವೇಳೆ, ಅದಕ್ಕೂ ಹೆಚ್ಚು ವೇಳೆಯವರೆಗಾದರೂ ಶುಷ್ಕ ಪ್ರಯೋಗಾನುಷ್ಠಾನವನ್ನು ಸಮಾಪ್ತಿಗೊಳಿಸಿಯೇ ಬಿಡುವಾ! ಎಂಬುದಾಗಿ ಹೇಳುವ ಅಲೌಕಿಕರ ನುಡಿಯು:—'**ನಹಿ ಪರವಿಘಾತಾಯ ಕಸ್ಯೋದ್ಯಾಹಃ ಕ್ರಿಯತೇ**' ಎಂಬ ವಾಕ್ಯದೊಳಗಣ ಉದಾಹರಣೆಯಂತೆ ಅಯೋಗ್ಯವಾಗಿರುವುದು. ಈ ಮೂಲಕವಾಗಿಯೇ ಎಷ್ಟೋ ಶ್ರದ್ಧಾಳು ಜನರಾದರೂ ಬೇಸರಗೊಂಡು ಬರುಬರುತ್ತ ಈ ಸಂಸ್ಕಾರವನ್ನೇ ಲೋಪಗೊಳಿಸಿದುದರಿಂದ ಈಗ ಎಲ್ಲ ದೇಶಗಳಲ್ಲಿಯೂ ಆ ಬಗ್ಗೆ ಮುಂಜಿ ಬಂಧನ ಕ್ರಿಯೆಯಲ್ಲಿ ಪ್ರಾಯಶ್ಚಿತ್ತವನ್ನನುಷ್ಠಿಸುವುದೇ ಪೇರಳವಾಗಿದೆ. ಹೀಗೆ ಮಾಡಲ್ಪಡುವುದರಿಂದ ಸಕಾಲಕ್ಕೆ ಆ ಸಂಸ್ಕಾರವು ನೆರವೇರಿಸಲ್ಪಟ್ಟಂತಾಯಿತೇ? ಈ ರೀತಿಯಾಗಿ ಆಚರಿಸುವುದಕ್ಕಿಂತ ಈ ಮೇಲೆ ನಾವು ಹೇಳಿದಮೇರೆಗೆ ಆ ಆ ಸೂತ್ರಾನುಯಾಯಿಗಳು ತಮ್ಮ ಗೃಹಗಳಲ್ಲಿ ಸ್ವಸೂತ್ರೋಕ್ತಪ್ರಕಾರವಾಗಿಯೇ ಸಕಾಲಕ್ಕೆ ಪ್ರಯೋಗವಿಧಿಗಳನ್ನು ನೆರವೇರಿಸುವುದೇ ಶ್ರೇಯಸ್ಕರವು.

ಸಾರಾಂಶ—ಶ್ರೌತಸೂತ್ರಗಳು ಅಂದರೆ ಮೂರಾಗಲಿ ಅಥವಾ ಹೆಚ್ಚಾಗಲಿ ಅಗ್ನಿಗಳಿಂದ ಆಚಾರ್ಯರ ಮುಖೇನ ಮಾಡಲ್ಪಡತಕ್ಕ ಶ್ರುತಿಮೂಲಕಗಳಾದ ಕರ್ಮಗಳನ್ನು ಬೋಧಿಸುವ ಗ್ರಂಥಗಳು.

ಗೃಹ್ಯಸೂತ್ರಗ್ರಂಥಗಳಾದರೋ ಗಾರ್ಹಪತ್ಯಾಗ್ನಿಯಿಂದ (ಒಂದೇ ಅಗ್ನಿಯಿಂದ) ದಿನಾಲೂ ಗೃಹಸ್ಥರು ಮನೆಗಳಲ್ಲಿ ಅನುಷ್ಠಿಸತಕ್ಕ ಕರ್ಮಗಳನ್ನು ಉಪದೇಶಿಸುತ್ತವೆ. ಈ ಕರ್ಮಗಳನ್ನು ಮಾಡುವಾಗ ಆಚಾರ್ಯರ ಅವಶ್ಯಕತೆಯಿರುವುದಿಲ್ಲ. ಮನೆಯ ಯಜಮಾನನೇ ತನ್ನ ಪತ್ನಿಯೊಡನೆ ನೆರವೇರಿಸುತ್ತಾನೆ. ಈ ಕರ್ಮಗಳು ಸ್ಮೃತಿಮೂಲಕಗಳಾದ್ದರಿಂದ ಇವುಗಳನ್ನು ಸ್ಮಾರ್ತಕರ್ಮಗಳೆನ್ನುತ್ತಾರೆ. ಜನ್ಮ, ವಿವಾಹ, ಮೃತ್ಯು ಮುಂತಾದ ಪ್ರಸಂಗಗಳಲ್ಲಿ ಮಾಡಲ್ಪಡತಕ್ಕ ಸಣ್ಣ ಪುಟ್ಟ ಸಂಸ್ಕಾರಗಳೂ ನಿತ್ಯದ ಹೋಮಹವನಗಳಿಗೂ ಸಂಬಂಧಪಟ್ಟ ನಿಯಮಗಳು ಈ ಗೃಹ್ಯಸೂತ್ರಗಳಲ್ಲಿ ದೊರೆಯುತ್ತವೆ. ಅಮಕಾರಣವೇ ಲಿಂಗಧಾರಣಚಂದ್ರಿಕಾಕಾರರೇ ಮೊದಲಾದ ವೀರಮಾಹೇಶ್ವರಾಚಾರ್ಯರಿಂದ ಗೃಹ್ಯಸೂತ್ರವಾಕ್ಯಯವು ಪುರಸ್ಕೃತವಾಗಿದೆ. ಗೃಹ್ಯಸೂತ್ರಗಳು ಅನೇಕವಾಗಿವೆಯಷ್ಟೇ! ಆ ಎಲ್ಲವುಗಳಲ್ಲಿಯೂ ಸಮಾನವಾದ ವಿಷಯಗಳೇ ಪ್ರತಿಪಾದಿಸಲ್ಪಡುತ್ತವೆ. ಆದರೆ ಆ ಆ ಕ್ರಿಯೆಗಳಲ್ಲಿ ಪಠಿಸಲ್ಪಡುವ ಮಂತ್ರಗಳಾದರೋ ಆ ಆ ಗೃಹ್ಯಸೂತ್ರಗಳಿಗೆ ಸಂಬಂಧಿಸಿದ ವೇದಶಾಖೆಗಳಿಂದುದ್ಧೃತವಾಗಿ ಹವೆಂಬುದಿಷ್ಟೇ ವಿಶೇಷವು. ಈ ಗೃಹ್ಯಸೂತ್ರಗ್ರಂಥಗಳು ತಮ್ಮ ತಮ್ಮ ಶಾಖೀಯಗಳಿಂದ ಶ್ರೌತಸೂತ್ರಗ್ರಂಥಗಳನ್ನು ಪರಾಮರ್ಶಿಸುವುವುಗಳಾಗಿ ತಮಗೂ ಅವುಗಳಿಗೂ ಇರುವ ಪರಿಚಯವನ್ನು ಸೂಚಿಸುತ್ತವೆ. ಆದರೂ 'ಶ್ರೌತ' ಮತ್ತು 'ಗೃಹ್ಯ' ವೆಂಬವೆರಡು ಮಾರ್ಗಗಳು ಒಂದೇ ಆಗಿರುವುದಿಲ್ಲ.

ಧರ್ಮಸೂತ್ರಗಳು ಅಂದರೆ, ಇವೂ ಸ್ಮೃತಿಮೂಲಕವಾದವುಗಳೇ; ಆದರೂ ಈ ಸೂತ್ರಗಳಿಗೂ ವೇದಗಳಿಗೂ ಸಾಕ್ಷಾತ್ಸಂಬಂಧವಿದ್ದುದಾಗಿ ತೋರುವುದು. ಹೇಗೆಂದರೆ ಇವು ವೇದವಾಕ್ಯಗಳನ್ನೇ ಮಿಗಿಲಾದ ಪ್ರಮಾಣಗಳೆಂದೊಪ್ಪುತ್ತವೆ. ಈ ಧರ್ಮಸೂತ್ರಗ್ರಂಥಗಳು ಭಾರತೀಯರ ಲೌಕಿಕವ್ಯವಹಾರಗಳಿಗೆ ಮೂಲಪ್ರಮಾಣಭೂತಗಳಾಗಿವೆ. 'ಧರ್ಮ' ವೆಂಬ ಶಬ್ದವು ವರ್ಣಾಶ್ರಮಧರ್ಮ, ಸದಾಚಾರವೆಂಬರ್ಥದ್ವಯವಾಚಕವಾಗಿದೆ. ಆದರೂ ಇಲ್ಲಿ ವರ್ಣಾಶ್ರಮಧರ್ಮವೇ ಪ್ರಾಧಾನ್ಯವಾಗಿ ವಿವಕ್ಷಿತವಾಗಿರುವುದರಿಂದ ಅದುವೇ ಪ್ರಕೃತಕ್ಕೆ ಸರಿಯಾಗಿ ಹೆಚ್ಚು ಸಮಂಜಸವು.

ಈ ರೀತಿಯಾಗಿ, ಸಾರತರ ವಿಷಯಗಳನ್ನು ಅತಿಪರಿಮಿತಶಬ್ದಗಳಿಂದ ಸಂಕ್ಷೇಪಗೊಳಿಸುವ ವಿಸ್ತೃತವೂ ಕ್ಲಿಷ್ಟವೂ ಆದ ಭಾಷೆಯ ಸರಣಿಯನ್ನನುಸರಿಸುವವುಗಳೂ ವೈದಿಕಸಾಹಿತ್ಯಕೋಟಿಯಲ್ಲಿ ಸೇರಿಸಿ ವಿಮರ್ಶಿಸಲ್ಪಡತಕ್ಕವುಗಳೂ ಆದ ಈ ಸೂತ್ರಗ್ರಂಥಗಳೆಲ್ಲವೂ ಬ್ರಾಹ್ಮಣಗ್ರಂಥಗಳಿಗೆ ಸಮಾನವಾದವುಗಳಲ್ಲವಾದರೂ ಬಹುವಾದಿ ಬ್ರಾಹ್ಮಣಗ್ರಂಥಗಳಲ್ಲಿ ವಿಷಯಗಳ ಜೋಡಣೆಯು ಸರಿಯಾಗಿಲ್ಲದಿದ್ದುದರಿಂದ ಕರ್ಮಗಳ ಸಂಬಂಧವಾದ ತಿಳುವಳಿಕೆಗೆ ಬಲುತೊಂದರೆಯಾಗಿರುತ್ತಿರಲು, ಸೂತ್ರಗ್ರಂಥಗಳು ಆ ಆ ಪ್ರಕರಣಗಳನ್ನು ಸಂದರ್ಭಕ್ಕೆ ಸರಿಯಾಗಿ ಜೋಡಿಸುವದಾದಿ ವಿಷಯಗಳನ್ನು ವ್ಯವಸ್ಥೆಗೊಳಿಸಿದವುಗಳಾಗಿ ಅನುಷ್ಠಿಸಲ್ಪಡತಕ್ಕ ಬೇರೆ ಬೇರೆ ಕರ್ಮಗಳ ನಿಜಸ್ವರೂಪವನ್ನು ನಿರಾಯಾಸವಾಗಿ ತಿಳಿದುಕೊಳ್ಳಲನುಕೂಲವಾಗುವಂತೆ ಮಾಡಿದುದರಿಂದ ಯಾಗಗಳನ್ನು ನೆರವೇರಿಸುವ ಪದ್ಧತಿಯನ್ನು ಪ್ರತ್ಯಕ್ಷವಾಗಿ ನೋಡದೆಯಾದರೂ ಇವುಗಳ ಪರಿಶೀಲನಬಲದಿಂದ ಸಾಂಗೋಪಾಂಗಗಳಾದ ಆ ಯಜ್ಞಗಳನ್ನು ಸರಿಯಾಗಿ ಮಾಡಲಿಕ್ಕೆ ಬರುವುದಾದಕಾರಣವೇ ಈ ಸೂತ್ರಗ್ರಂಥಗಳು ಧರ್ಮದ ಸ್ವರೂಪವನ್ನು ತಿಳಿದುಕೊಳ್ಳಬೇಕೆಂಬ ಬಯಕೆಯುಳ್ಳವರಿಗೆ ಪರೋಪಕಾರವನ್ನು ಮಾಡತಕ್ಕವುಗಳಾಗಿರುವುವೆಂದು ಧಾರಾಳವಾಗಿ ಹೇಳಬಹುದು.

ಇಂತಹ ಸೂತ್ರಗ್ರಂಥಗಳು ರಚಿಸಲ್ಪಟ್ಟ ಬಳಿಕ ಪದ್ಧತಿಗಳೂ, ತರುವಾಯ ಪ್ರಯೋಗ ಪದ್ಧತಿ ಮುಂತಾದುವೂ ಬರೆಯಲ್ಪಟ್ಟವು. ಈ ಸೂತ್ರಗ್ರಂಥಗಳು ಋಗಾದಿ ನಾಲ್ಕು ವೇದಗಳ ಆ ಆ ಶಾಖೆಯೊಡನೆ ನಿಕಟಸಂಬಂಧವುಳ್ಳವುಗಳಾಗಿರುವುದರಿಂದಲೇ ಆ ಆ ಶಾಖಾನುವರ್ತಿಗಳು ಸ್ವಶಾಖೀಯಸೂತ್ರಗಳನ್ನಾದರೂ ಬೇರೆ ಬೇರೆ ಹೇಳುವುದು ಉಚಿತವಾಗಿದೆ.

ಆ ಆ ವೇದಕ್ಕೆ ಸಂಬಂಧಿಸಿದ ಶ್ರೌತಸೂತ್ರಗಳೂ, ಗೃಹ್ಯಸೂತ್ರಗಳೂ, ಧರ್ಮಸೂತ್ರಗಳೂ ಈಗ ಉಪಲಬ್ಧವಿರುವವುಗಳೇ ಈ ಕೆಳಗೆ ಬರೆದಂತಿವೆ:—

	ಶ್ರೌತಸೂ.	ಗೃಹ್ಯಸೂ.	ಧರ್ಮಸೂ.
ಋ. ವೇ.—			
	೧ ಆಶ್ವಲಾಯನ	೧ ಆಶ್ವಲಾಯನ	೧ ವಸಿಷ್ಠ
	೨ ಸಾಂಖ್ಯಾಯನ (ಅಥವಾ ಕೌಷೀತಕೀ)	೨ ಸಾಂಖ್ಯಾಯನ (ಕೌಷೀತಕಿ)	
ಕೃ. ಯ. ವೇ.—			
	೧ ಆಪಸ್ತಂಬ	೧ ಆಪಸ್ತಂಬ	೧ ಆಪಸ್ತಂಬ
	೨ ಬೋಧಾಯನ	೨ ಬೋಧಾಯನ	೨ ಬೋಧಾಯನ
	೩ ಹಿರಣ್ಯಕೇಶೀ (ಸತ್ಯಾಷಾಢ)	೩ ಹಿರಣ್ಯಕೇಶೀ	೩ ಹಿರಣ್ಯಕೇಶೀ
	೪ ಭಾರದ್ವಾಜ	೪ ಭಾರದ್ವಾಜ	
	೫ ವೈಖಾನಸ	೫ ವೈಖಾನಸ	
	೬ ವಾಧೂಲ	೬ ಕಾಠಕ	
	೭ ಮಾನವ	೭ ಮಾನವ	
ಶು. ಯ. ವೇ.—			
	೧ ಕಾತ್ಯಾಯನ (ಪಾರಸ್ಕರ)	೧ ಕಾತ್ಯಾಯನ (ಪಾರಸ್ಕರ)	೧ ಕಾತ್ಯಾಯನ
	೨ ವೈಜವಾಪ	೨ ಕಾಠೀಯ	
ಸಾ. ವೇ.—			
	೧ ಖಾದಿರ	೧ ಖಾದಿರ	೧ ಗೌತಮ
	೨ ಲಾಟ್ಯಾಯನ	೨ ಗೋಭಿಲೀಯ	
	೩ ದ್ರಾಹ್ಯಾಯಣ	೩ ಗೌತಮ	
		೪ ಜೈಮಿನೀಯ	
ಅ. ವೇ.—			
	೧ ವೈತಾನ	೧ ಕೌಶಿಕ	೧ ಆಂಗಿರಸ

ಇನ್ನು ಸಾಂಖ್ಯ, ಯೋಗ, ಪಾಶುಪತ, ವೈಷ್ಣವಾದಿ ದರ್ಶನಗಳು ಧರ್ಮಶಾಸ್ತ್ರಗಳಲ್ಲಿಯೇ ಪರಿಗಣಿಸಲ್ಪಡುವುವೆಂದು ಕೆಲವರ ಅಭಿಪ್ರಾಯವಿರುವುದು; ಆದರೆ ತತ್ತ್ವಜ್ಞಾನವನ್ನೂ ತತ್ಸಾಧನ ವಿಚಾರಗಳನ್ನೂ ಲಕ್ಷೀಕರಿಸಿ ಬೇರೆ ಬೇರೆ ಮತಸಿದ್ಧಾಂತಬೋಧಕಗಳಾಗಿರುವುದರಿಂದ ಅವುಗಳನ್ನು ಕೇವಲ ಶ್ರುತ್ಯುಪಬೃಂಹಣಾತ್ಮಕವಾದುವೆಂದೇ ಹೇಳುವುದಕ್ಕಿಂತಲೂ ಭಿನ್ನವಿಟ್ಟು ನಿರ್ದೇಶಿಸುವುದುಚಿತವು.

ಸಾಂಖ್ಯಶಾಸ್ತ್ರವು—ಬೌಧ್ಯಸಂಹಿತೆಯಲ್ಲಿಯೂ, ಶ್ವೇತಾಶ್ವತರೋಪನಿಷತ್ತಿನಲ್ಲಿಯೂ, ಸಾಂಖ್ಯಮತವು ನಿರ್ದೇಶಿಸಲ್ಪಟ್ಟಿದೆ. ಮಹಾಭಾರತದಲ್ಲಿಯೂ, ತದಂತರ್ಗತವಾದ ಭಗವದ್ಗೀತೆಯಲ್ಲಿಯೂ ಸಾಂಖ್ಯಮತವು ಆದರದೊಡನೆ ಉಲ್ಲೇಖಿಸಲ್ಪಟ್ಟಿರುವುದು. ಸಾಂಖ್ಯಮತಪ್ರವರ್ತಕನು ಕಪಿಲಮಹಾಮುನಿಯು. ಶ್ವೇತಾಶ್ವತರೋಪನಿಷತ್ತಿನಲ್ಲಿ (೫-೨)—'**ಋಷಿಂ ಪ್ರಸೂತಂ ಕಪಿಲಂಯಸ್ತಮಗ್ರೇ ಜ್ಞಾನೈರ್ಬಿಭರ್ತಿ ಜಾಯಮಾನಂ ಚ ಪಶ್ಯೇತ್ ।**' ಎಂಬುದಾಗಿ ಅವನ ಹೆಸರು ಕಾಣಿಸಲ್ಪಟ್ಟಿದೆ. ಭಗವದ್ಗೀತೆಯಲ್ಲಿಯೂ—"**ಸಿದ್ಧಾನಾಂ ಕಪಿಲೋ ಮುನಿಃ ।**" ಎಂಬ ವಾಕ್ಯವಿದೆ. ಅವನ ಜನನ ಸಂಬಂಧವಾದ ಆಖ್ಯಾಯಿಕೆಯು ಇಂತಿರುವುದು—ಪುರಾತನಕಾಲದಲ್ಲಿ ಸ್ವಾಯಂಭುವಮನುವಿನ ಮಗಳಾದ ದೇವಹೂತಿಯೆಂಬ ಕನ್ಯೆಯು ಕರ್ದಮಮುನಿಯೊಡನೆ ತನ್ನ ಮದುವೆಯಾಗಬೇಕೆಂಬ ಲವಲವಿಕೆಯುಳ್ಳವಳಾಗಿದ್ದಳು. ಅವಳ ಈ ಮನೋಭಿಪ್ರಾಯವನ್ನರಿತವನಾದ ಸ್ವಾಯಂಭುವಮನುವು ಅವಳಿಗೆ ಕರ್ದಮಮುನಿಯ ಸೇವೆಯನ್ನು ಮಾಡುತ್ತಿರೆಂಬುದಾಗಿ ಆಜ್ಞಾಪಿಸಿದನು. ಜನಕನ ಅನುಜ್ಞೆಯ ಮೇರೆಗೆ ದೇವಹೂತಿಯು ಕರ್ದಮಮುನಿಯ ಸಾನ್ನಿಧ್ಯದಲ್ಲಿ ಕೆಲವು ವರುಷಗಳವರೆಗೆ ವ್ರತಾಚರಣೆಗಳಿಂದಲೂ, ತಪಶ್ಚರ್ಯೆಯಿಂದಲೂ ಕಾಲಕಳೆದಳು. ಕೊನೆಗೆ ಕರ್ದಮನು ತನ್ನ ಮನದ ಕಟ್ಟಳೆಯೊಂದು ಮಾತನ್ನು ಅವಳಿಗರುಹಿದನು. ಅದಾವುದೆಂದರೆ—'ಒಂದು ಪುತ್ರಸಂತಾನವಾಗುವ ವರೆಗೆ ಮಾತ್ರವೇ ವೈವಾಹಿಕದ ಸೀಮೆಯು, ನೀನದನ್ನೊಪ್ಪಿಕೊಂಡರೆ ನಾನು ನಿನ್ನನ್ನು ಲಗ್ನವಾಗುವೆನು;' ಎಂದು ನುಡಿಯಲು ದೇವಹೂತಿಯು ಅದನ್ನೊಪ್ಪಿದ ಬಳಿಕ ಇಬ್ಬರ ವಿವಾಹವಾಯಿತು. ಆ ವಿವಾಹದ ಆಶ್ಚರ್ಯಪ್ರಫಲವೇ ಕಪಿಲಮಹಾಮುನಿಯು.

ಮತ್ತು, ಭರತಕುಲೋತ್ಪನ್ನನಾದ ಸಗರಚಕ್ರವರ್ತಿಯ ಅರವತ್ತು ಸಾವಿರಮಕ್ಕಳ ದಿಗ್ವಿಜಯವನ್ನು ಸಹಿಸದೆ ಅವರನ್ನು ತನ್ನ ತಪಸ್ಸಿನ ತೇಜೋಬಲದಿಂದ ನಾಶಗೊಳಿಸಿದನೆಂಬುದಾಗಿ ಕಪಿಲಮುನಿಯ ಸಂಬಂಧವಾದ ಬೇರೊಂದು ಕಥೆಯುಂಟು. ಇದರಿಂದ ಸಾಂಖ್ಯಶಾಸ್ತ್ರಪ್ರವರ್ತಕಕಪಿಲನೂ, ಸಗರಪುತ್ರನಾಶಕಕಪಿಲನೂ ಎಂಬುದಾಗಿ ಕಪಿಲಾಭಿಧಾನವುಳ್ಳ ವ್ಯಕ್ತಿಗಳಿಬ್ಬರೋ? ಮೇಲಿನ ಎರಡೂ ಸಂಗತಿಗಳು ಒಬ್ಬನಲ್ಲಿಯೇ ಸಂಭವಿಸುವುವೋ? ಎಂಬ ಶಂಕೆಯುಂಟಾಗುವುದು. ಭಾಗವತಾದಿ ಭಕ್ತಿಮಾರ್ಗೀಯ ಗ್ರಂಥಗಳಲ್ಲಿ ಸಾಂಖ್ಯ ಮತಬೋಧಕನೂ ಸಗರಾತ್ಮಜನಾಶಕನೂ ಆದ ಕಪಿಲನೊಬ್ಬನೇ ಎಂಬರ್ಥವು ಸೂಚಿಸಲ್ಪಟ್ಟಿದೆ. ಆದರೆ ಶಂಕರಾಚಾರ್ಯರು (ಬ್ರ. ಸೂ. ಭಾ. ೨-೧-೧-೧)—'**ಯಾತು ಶ್ರುತಿಃ ಕಪಿಲಸ್ಯ ಜ್ಞಾನಾತಿಶಯಂ ಪ್ರದರ್ಶಯನ್ತೀ ಪ್ರದರ್ಶಿತಾ ನತಯಾಶ್ರುತಿವಿರುದ್ಧಮಪಿ ಕಾಪಿಲಂಮತಂ ಶ್ರದ್ಧಾತುಂ ಶಕ್ಯಂ, ಕಪಿಲಮಿತಿಶ್ರುತಿ ಸಾಮಾನ್ಯ ಮಾತ್ರತ್ವಾತ್ । ಅನ್ಯಸ್ಯ ಚ ಕಪಿಲಸ್ಯ ಸಗರಪುತ್ರಾಣಾಂ ಪ್ರತಪ್ತುರ್ವಾಸುದೇವನಾಮ್ನಃ ಸ್ಮರಣಾತ್ ॥**' ಎಂಬ ವಾಕ್ಯಗಳಿಂದ ಕಪಿಲಾಭಿಧಾನವುಳ್ಳ ಪುರುಷರು ಇಬ್ಬರಿರುವರೆಂಬಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಅದೆಂತಿರಲಿ. ಕಪಿಲನ ಸಾಂಖ್ಯಮತವು ಭಗವದ್ಗೀತೆಗಿಂತ ಮುನ್ನವೇ ಕೃವಾಗಿನೋಪನಿಷದ್ವಾಙ್ಮಯ ಪ್ರಚಾರಕಾಲದಲ್ಲಿ ಪ್ರಸಿದ್ಧವಾಗಿದ್ದಿತೆಂದು ಹೇಳಲಡ್ಡಿಯಂತರವೇನು?

ಕಪಿಲಸಿದ್ಧನ ಮತಕ್ಕಿರುವ 'ಸಾಂಖ್ಯ'ವೆಂಬ ಹೆಸರು 'ಸಂಖ್ಯಾ' ಶಬ್ದದಿಂದಾಗಿರುವುದು. ಬೌಧ್ಯರ ಸಂಹಿತೆಯ ವಿದ್ಯಾಖಾಂಡದಲ್ಲಿ—'**ಸಾಂಖ್ಯಂ ಸಂಖ್ಯಾತ್ಮಕತ್ವಾಚ್ಚ ಕಪಿಲಾದಿಭಿರುಚ್ಯತೇ ।**' ಎಂಬುದಾಗಿ ಸಾಂಖ್ಯಶಬ್ದದುತ್ಪತ್ತಿಯು ತೋರಿಸಲ್ಪಟ್ಟಿದೆ. ಸಾಂಖ್ಯಮತಪ್ರವರ್ತಕರು ಸರ್ವಸೃಷ್ಟಿಯ ವಿಸ್ತಾರವೆಲ್ಲವೂ ಒಟ್ಟಿಗೆ ಇಪ್ಪತ್ತೈದು (೨೫) ತತ್ತ್ವಗಳವೆಂಬ ಸಂಖ್ಯಾನಿರ್ಣಯವನ್ನು ಪ್ರತಿಪಾದಿಸುವುದರಿಂದ ಅವರಿಗೆ ಸಾಂಖ್ಯರೆಂಬ ಹೆಸರುಂಟಾಗಿರುವುದೆಂದು ಮೇಲಿನ ವಾಕ್ಯದ ತಾತ್ಪರ್ಯವು. ಅವರ ವಿಚಾರಸರಣಿಗೊಳಪಟ್ಟ ಇಪ್ಪತ್ತೈದು ತತ್ತ್ವಗಳಾವವು? ಅವುಗಳ ವಿಸ್ತಾರವೆಂತಹುದು? ಎಂಬ ಈ ಜಿಜ್ಞಾಸೆಯನ್ನು ಈಗ ಸರ್ವತ್ರ ಉಪಲಬ್ಧವಾದ ಸಾಂಖ್ಯಮತಬೋಧಕಗ್ರಂಥಾಧಾರದಿಂದ ಸ್ವಲ್ಪವಾದರೂ ಸಾರ್ಥಕಗೊಳಿಸಬೇಕೆಂಬ ಹವಣಿಕೆಯಿದೆ. ಈಶ್ವರ ಕೃಷ್ಣನು ಹೀಗೆ ಹೇಳುತ್ತಾನೆ—

ಮೂಲಪ್ರಕೃತಿರವಿಕೃತಿರ್ಮಹದಾದ್ಯಾ ವಿಕೃತಯಃ ಸಪ್ತ ।
ಷೋಡಶಕಸ್ತು ವಿಕಾರೋ ನ ಪ್ರಕೃತಿರ್ನ ವಿಕೃತಿಃ ಪುರುಷಃ ॥

ಈ ಕಾರಿಕೆಯಲ್ಲಿ ಸಾಂಖ್ಯಾಭಿಮತಗಳಾದ ೨೫ ತತ್ತ್ವಗಳು ಗ್ರಥಿತಗಳಾಗಿವೆ. ಈ ತತ್ತ್ವಗಳಲ್ಲಿ ಮೊದಲನೆಯದೆನಿಸುವ ಪ್ರಕೃತಿಯು (ಪ್ರಧಾನವು) ಅವಿಕೃತಿಯಾಗಿರುವುದು; ಅಂದರೆ ಅದು ಅನ್ಯ ಯಾವುದರಿಂದಲೂ ಜನಿಸಿದುದಲ್ಲ. ಮಹತ್ತು ಮೊದಲಾದ ಏಳು ದ್ರವ್ಯಗಳು ಅಂದರೆ ಮಹತ್ (ಬುದ್ಧಿ) ಎಂಬುದೂ, ಅಹಂಕಾರವೂ, ಪಂಚತನ್ಮಾತ್ರಗಳೂ ಎಂಬಿವೇಳು ಪದಾರ್ಥಗಳು ಪ್ರಕೃತಿಯ ವಿಕೃತಿಗಳು; ಅಂದರೆ ಒಂದು ವಸ್ತುವಿನ ಕಾರ್ಯಗಳು ಇತರ ವಸ್ತುಗಳಿಗೆ ಕಾರಣಭೂತಗಳೂ ಆಗಿವೆ. ಇತರ ವಸ್ತುಗಳು ಅಂದರೆ ಷೋಡಶ (೧೬) ಪದಾರ್ಥಗಳು. ಇವು ಕೇವಲ ವಿಕೃತಿ ಅಂದರೆ ವಿಕಾರ (ಕಾರ್ಯ)ರೂಪವಾದುವು. ಅದ್ದರಿಂದ ಇವು ಅನ್ಯ ಯಾವುದಕ್ಕೂ ಕಾರಣಗಳಾಗಿರುವುದಿಲ್ಲ. ಶ್ರೋತ್ರ, ನೇತ್ರ, ಸ್ಪರ್ಶ, ರಸನೆ, ಘ್ರಾಣವೆಂಬ ಪಂಚಜ್ಞಾನೇಂದ್ರಿಯಗಳೂ, ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥವೆಂಬ ಪಂಚಕರ್ಮೇಂದ್ರಿಯಗಳೂ, ಮನಸ್ಸೂ ಎಂಬುದಾಗಿರುವ ಈ ಹನ್ನೊಂದು ಇಂದ್ರಿಯಗಳನ್ನೂ ಪಂಚಮಹಾಭೂತಗಳೊಡನೆ ಸೇರಿಸಿ ಎಣಿಸಿದರೆ ಹದಿನಾರು ಪದಾರ್ಥಗಳೂ, ಆ ಪ್ರಕೃತಿಯೂ ಅದರ ವಿಕೃತಿಗಳೇಳೂ ಒಟ್ಟುಗೂಡಿದರೆ ೨೪ ಪದಾರ್ಥಗಳಾಗುತ್ತವೆ. ಇಪ್ಪತ್ತೈದನೆಯ ತತ್ತ್ವವಾದರೋ ಪುರುಷನು. ಇವನು ಯಾವುದಕ್ಕೂ ಪ್ರಕೃತಿಯೂ ಅಲ್ಲ ಯಾವುದರ ವಿಕೃತಿಯೂ ಅಲ್ಲ. ಈ ರೀತಿಯಾಗಿ ಸಾಂಖ್ಯರಿಗಭಿಮತಗಳಾದ ೨೫ ತತ್ತ್ವಗಳಿರುತ್ತವೆ. ಈಶ್ವರ ಕೃಷ್ಣನು ತನ್ನಿಂದ ರಚಿಸಲ್ಪಟ್ಟ ಕಾರಿಕೆಗಳಲ್ಲಿ ಗ್ರಥಿತಗಳಾದ ಈ ತತ್ತ್ವಗಳನ್ನು ಪರಿಪಡಿಸಿ ವಿವರಿಸಿದ್ದಾನೆ. ಈ ಶಾಸ್ತ್ರವಿಚಾರಕ್ಕೆ ಪ್ರತ್ಯಕ್ಷ, ಅನುಮಾನ, ಆಪ್ತವಚನ (ಶಬ್ದಪ್ರಮಾಣ) ವೆಂಬಿವು ಮೂರು ಪ್ರಮಾಣಗಳು ಸಾಧನಗಳಾಗಿರುವುವೆಂಬುದನ್ನು ಮೊದಲು ಪ್ರತಿಪಾದಿಸಿ ಬಳಿಕ ಸೃಷ್ಟಿಯ ಮೊದಲನೆಯ ತತ್ತ್ವವೆನಿಸುವ ಪ್ರಧಾನದ ವಿವೇಚನೆಯಲ್ಲಿ ತೊಡಗಿದ್ದಾನೆ. ಶಂಕರಾಚಾರ್ಯರು ಶಾರೀರಕಾದಿ ಭಾಷ್ಯಗಳಲ್ಲಿ ಆ ಕಾರಿಕೆಗಳನ್ನು ಉಲ್ಲೇಖಿಸಿದ್ದಾರೆ. ಸಾಂಖ್ಯಾದಿ ಸರ್ವಮತಗಳಿಗಾಧಾರಭೂತವಾದ ಶೈವಾಗಮವಾಙ್ಮಯದಲ್ಲಿ ಈ ೨೫ ತತ್ತ್ವಗಳೂ, ಇವುಗಳಿಗಾಚೆಗಿರುವ ೧೧ ತತ್ತ್ವಗಳೂ ಪ್ರತಿಪಾದಿಸಲ್ಪಟ್ಟಿವೆ. ಬ್ರಾಹ್ಮಣಭಾಗವು ವೇದೈಕದೇಶವಾದುದು. ಅದನ್ನವಲಂಬಿಸಿರುವ 'ತ್ರಯೀ' ಮತವು ವೇದೈಕದೇಶವರ್ತಿಯೆನಿಸುವುದು. ಇದೇಮೇರೆಗೆ ಪ್ರಕೃತಿವಿಕೃತಿರೂಪತತ್ತ್ವವಿಚಾರದೇ ಮುಖ್ಯಧ್ಯೇಯವಾಗಿ ಉಳ್ಳ ಸಾಂಖ್ಯಾದಿಮತಗಳಾದರೂ ವೇದೈಕದೇಶವರ್ತಿಗಳಾದುದರಿಂದ, ಅವು ಪರಮಪುರುಷಾರ್ಥಪ್ರಾಪ್ತಿಸಾಧನಗಳಲ್ಲವೆಂಬುದಾಗಿ ಶ್ರೀ ರೇಣುಕ ಭಗವತ್ಪಾದರು ಸಿ. ವೇದೈಕದೇಶವಿಚಾರಪರಾಯಣಮತಗಳಲ್ಲಿರುವ ನ್ಯೂನತೆಯನ್ನು ಉಪದೇಶಿಸಿದುದು ಸೋಪಪತ್ತಿಕವಾಗಿರುವುದಲ್ಲವೇ?

(ಸಶೇಷ.)

ಆರೋಗ್ಯರಕ್ಷಣೆ.

ಲೇಖಕ:—ವಾಗೀಶಶಿವಾಚಾರ್ಯ ಬೃಹನ್ಮಠ
ಮುಧೋಳರು ಶ್ರೀ ಕ್ಷೇತ್ರ ಕಾಶೀ

(ಹಿಂದಿನಿಂದ ಮುಂದುವರಿದುದು.)

ಹಿತಾಹಾರವಿಷಯವನ್ನರಿತುಕೊಂಡಂತೆ ಅಹಿತಾಹಾರವಿಷಯವನ್ನೂ ಸ್ವಲ್ಪ ಅರಿತುಕೊಳ್ಳೋಣ. ಸ್ವಾಭಾವಿಕವಾಗಿ ಕೆಲಕ ನ್ನಂಟುಮಾಡತಕ್ಕ ಆಹಾರಗಳಿಗೆ ಅಹಿತಾಹಾರಗಳೆನ್ನುವರು. ಈ ಅಹಿತಾಹಾರವರ್ಗದಲ್ಲಿ ಸಾಸುವೆ ಸೊಪ್ಪು, ಕುರಿಯ ತುಪ್ಪ, ಕುಸುಬೆ ಎಣ್ಣೆ, ಮಳೆಗಾಲದ ಹೊಳೆನೀರು, ಸಿಪ್ಪೆಯುಳ್ಳ ಅಲೂಗಡ್ಡೆ ಮುಂತಾಗಿ ಇನ್ನೂ ಕೆಲವು ಸೇರಿವೆ. ಮೈದಾ ಮುಂತಾದ ಬಹಳ ಸಣ್ಣಗಿರುವ ಹಿಟ್ಟಿನಿಂದಾದ ರೊಟ್ಟಿ, ಪೂರಿ, ಸೀರಾ, ಮಿಠಾಯಿ ಮುಂತಾದವು ಬಹಳ ಹೊತ್ತಿಗೆ ಜೀರ್ಣವಾಗತಕ್ಕವುಗಳಾದುದರಿಂದ ಅವಶ್ಯವಾಗಿಯೂ ಮಲಾವರೋಧವನ್ನುಂಟುಮಾಡುವವು. ಜನರು ಇವುಗಳಿಂದ ಶರೀರವು ಪುಷ್ಟವಾಗುವುದೆಂದು ತಿಳಿದುಕೊಂಡಿರುತ್ತಾರೆ. ಇದು ಶುದ್ಧ ತಪ್ಪು; ವಾಸ್ತವಿಕವಾಗಿ ಈ ವಸ್ತುಗಳಿಂದ ಶಕ್ತಿಬರುವುದೆಂತೂ ಬಹುದೂರವಿದೆ. ಆದರೆ ಶರೀರದಲ್ಲಿ ವಿಪುಲವಾದ ವಿಷಮವಾಯುವು ಉತ್ಪನ್ನವಾಗಿ ಅಂಗಾಂಗಗಳಲ್ಲಿ ಸೇರಿಕೊಂಡು ಜನರ ಕಣ್ಣಿಗೆ ಪುಷ್ಟನೆಂದು ತೋರಿದರೂ ಆತನಿಗೆ ಹೊಟ್ಟೆನೋವು, ಸೊಂಟನೋವು, ತಲೆನೋವೇ ಮುಂತಾಗಿ ಅನೇಕ ವ್ಯಾಧಿಗಳು ಗಂಟುಬಿದ್ದಿರುತ್ತವೆ. ಅದುದರಿಂದ ಇಂತಹ ವಸ್ತುಗಳನ್ನು ಪ್ರೇಮದಿಂದ ಅನ್ಯರಿಗೆ ಊಟಮಾಡಿಸುವುದಾಗಲಿ, ತಾನು ಊಟಮಾಡುವುದಾಗಲಿ ಒಳ್ಳೆಯದಲ್ಲ.

ಹೆಚ್ಚಾಗಿ ಮಿಠಾಯಿ ತಿನ್ನುವುದರಿಂದ ಪಚನಶಕ್ತಿಯಯು ಚನ್ನಾಗಿ ಸಾಗದೆ ಮಿಠಾಯಿಯೊಳಗಿನ ಗಟ್ಟಿ ಪದಾರ್ಥವು ಹೊಟ್ಟೆಯೊಳಗೆ ಹಾಗೇ ಅಂಟಿಕೊಂಡು ಕೊಳೆಯಹತ್ತುವುದು. ಆ ಮೇಲೆ ನರಗಳು ದುರ್ಬಲವಾಗುವವು. ಇದಾದಮೇಲೆ ಅಗ್ನಿಮಾಂದ್ಯವುಂಟಾಗಿ ಹೊಟ್ಟೆಯೊಳಗೆ ಹುಳುಗಳು ಉತ್ಪನ್ನವಾಗುವವು; ಇಷ್ಟಾದಮೇಲೆ ಕೇಳುವುದೇನು, ಒಮ್ಮೆ ಲೇ ಮೂತ್ರದೋಷವುಂಟಾಗಿ ಒಮ್ಮೆ ಕೆಂಪಾಗಿಯೂ, ಮತ್ತೊಮ್ಮೆ ಹಳದಿಯಾಗಿಯೂ ಮಗದೊಮ್ಮೆ ಬಿಳುಪಾಗಿಯೂ ಹೀಗೆ ಮೂತ್ರವು ಚಿತ್ರವಿಚಿತ್ರವಾಗಿ ಹೋಗುವುದಕ್ಕಾರಂಭವಾಗಿ ಪ್ರಮೇಹ ಮಧುಮೇಹವೆಂಬ ರೋಗವುಂಟಾಗುವುದಲ್ಲದೆ ಕಡೆಗೆ ಕೈಕಾಲು ಮುಂತಾಗಿ ಸಂದುಸಂದುಗಳೆಲ್ಲಾ ಹಿಡಿದುಕೊಂಡು ಬಿಡುವವು. ಮಿಠಾಯಿಯು ಹೀಗೆ ಬಹಳ ಅಹಿತವನ್ನುಂಟುಮಾಡತಕ್ಕದ್ದು. ಚಿಕ್ಕ ಮಕ್ಕಳಿಗೆ ಮಿಠಾಯಿಗೆ ಬದಲಾಗಿ ಉತ್ತತ್ತಿ, ಖರ್ಜೂರ, ದ್ರಾಕ್ಷಿ, ಬಾಳೇಹಣ್ಣು, ಕಲ್ಲುಸಕ್ಕರೆ, ಅಂಜೂರಹಣ್ಣು, ಕಿತ್ತಲೆಹಣ್ಣು ಮುಂತಾದವುಗಳೇ ಆರೋಗ್ಯವನ್ನುಂಟುಮಾಡಲು ಉತ್ತಮವಾದವುಗಳು.

ಊಟದಲ್ಲಿ ಸಕ್ಕರೆಗೆ ಬದಲಾಗಿ ಜೇನುತುಪ್ಪವನ್ನುಪಯೋಗಿಸುವುದಂತೂ ಬಹಳ ಒಳ್ಳೆಯದು, ಜೇನುತುಪ್ಪವು ರಕ್ತಶುದ್ಧಿಯನ್ನು ಮಾಡುವುದರಲ್ಲಿ ಹೆಸರುಗೊಂಡಿದೆ. ಮುಂಜಾನೆ ೨೦ ತೊಲೆಯ ೧ ಪಾವು ಹಳಿಯನೀರಿನಲ್ಲಿ ೨ ತೊಲೆಯಷ್ಟು ಜೇನುತುಪ್ಪವನ್ನು ಬೆರೆಸಿಕುಡಿಯುವುದರಿಂದ ಶರೀರಕ್ಕೆ ಬಹಳ ಲಾಭವಿದೆ. ಹೀಗೆಯೇ ಜೇನು ತುಪ್ಪವನ್ನು ರೊಟ್ಟಿಯೊಡನೆಯೂ ಸೇವಿಸಬಹುದು. ಊಟದಲ್ಲಿ ಸಕ್ಕರೆಯು ಅವಶ್ಯವಾಗಿಬೇಕಾದರೆ ತಾರುಣ್ಯವುಳ್ಳ ಒಬ್ಬ ಮನುಷ್ಯನು ದಿನವೊಂದಕ್ಕೆ ೧೨ ತೊಲೆಯವರೆಗೆ ಮಾತ್ರ ತೆಗೆದುಕೊಳ್ಳಬಹುದು. ಅಷ್ಟನ್ನೇ ತೆಗೆದುಕೊಂಡರೂ ಕೆಂಪುಸಕ್ಕರೆಯನ್ನು ತೆಗೆದುಕೊಳ್ಳಬೇಕೇ ಹೊರತು ಬಿಳಿಯ ಸಕ್ಕರೆಯನ್ನಲ್ಲ. ಹುಳಿಯಾಗಿರದ ಬೆಲ್ಲವು ಸಕ್ಕರೆಗಿಂತಲೂ ಪುಷ್ಟಿಕರವಾದುದು. ಬೆಲ್ಲವು ಒಳ್ಳೆಯದೆಂದು ಹಾಲಿನಲ್ಲಿ ಮಾತ್ರ ಎಂದೂ ಬೆರಸಿ ಉಪಯೋಗಿಸಬಾರದು. ಹೀಗೆ ಉಪಯೋಗಿಸುವುದರಿಂದ ಕುಷ್ಠ, ಪ್ರಮೇಹ ಮುಂತಾದ ರೋಗಗಳುಂಟಾಗುವುವು. ಹಾಲಿನಲ್ಲಿ ಸಕ್ಕರೆಗೆ ಬದಲಾಗಿ ಜೇನು ತುಪ್ಪವನ್ನು ಬೆರಸಿಕೊಳ್ಳಬಹುದು. ಜಾವಕಸ್ ಎಂಬ ಮಳಲು ಸಕ್ಕರೆಯನ್ನು ಎಂದೂ ತಿನ್ನಬಾರದು. ಇದನ್ನು ತಿನ್ನುವುದರಿಂದ ಹೃದಯದಲ್ಲಿನ ನಾಡಿಯುಬಲವು ಕಡಿಮೆಯಾಗಿ ಹಲ್ಲುನೋವು ಎದೆನೋವುಗಳುಂಟಾಗಿ ಅನಾಹುತಕ್ಕೆ ಹಾನಿಯುಂಟಾಗುವುದಲ್ಲದೆ ಅಮ್ಲಪಿತ್ತವೂ ಹುಟ್ಟುವುದು.

ಪೂಟದಲ್ಲಿ ಬಹಳವಲ್ಲ ಹುಸು ಬೆಣ್ಣೆಯನ್ನೋ ತುಪ್ಪವನ್ನೋ ಅವಶ್ಯವಾಗಿ ತೆಗೆದುಕೊಳ್ಳಬೇಕು. ಹಳೆ ತುಪ್ಪವನ್ನು ತೆಗೆದುಕೊಳ್ಳಬಾರದು. ತುಪ್ಪವನ್ನು ಹೆಚ್ಚಾಗಿ ತಿನ್ನುವುದರಿಂದ ಲಾಭವಿಲ್ಲ. ಹಾಗೆ ತಿನ್ನತಕ್ಕವರಿಗೆ ಹಸಿವು ಬಹಳ ಕಡಿಮೆ, ಇಷ್ಟಲ್ಲದೆ ಅವರ ಕಲೆಗೂದಲು ಬೇಗನೆ ಬೆಳ್ಳಗಾಗುವವೆಂದೂ ತಿಳಿದುಬಂದಿದೆ. ಅದುದರಿಂದ ಈ ಮೇಲೆ ಹೇಳಿದ ಮಾತುಗಳನ್ನು ನೆನಪಿಟ್ಟು ಹೀಗೆಯೇ ಅಹಿತಾಹಾರಗಳನ್ನು ನಿರ್ಣಯಮಾಡಿಕೊಳ್ಳಬೇಕು. ಅಹಿತಾಹಾರಗಳನ್ನೆಂದೂ ತೆಗೆದುಕೊಳ್ಳಬಾರದು. ಈ ವಿಷಯದಲ್ಲಿ ಚರಕಾಚಾರ್ಯರು—

ನರಾಣಾಂ ತ್ವವಿಜ್ಞಾನಾದಾಹಾರ ಮುಪಯೋಜಯೇತ್ ।
ಪರೀಕ್ಷ್ಯ ಹಿತಮಶ್ನೀಯಾದ್ದೇಹೋಹ್ಯಾಹಾರಸಂಭವಃ ॥

ಆಸೆಯಿಂದಾಗಲಿ, ಗುಣವು ತಿಳಿಯದಾಗಲಿ ಆಹಾರವನ್ನು ತೆಗೆದುಕೊಳ್ಳಬಾರದು. ಈ ಶರೀರವು ಆಹಾರದಿಂದುಂಟಾಗುವುದಾದುದರಿಂದ ಚನ್ನಾಗಿ ಪರೀಕ್ಷೆಮಾಡಿ ಒಳ್ಳೆಯ ಆಹಾರವನ್ನೇ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ.

ಆರೋಗ್ಯವನ್ನು ಕೆಡಿಸತಕ್ಕ ಆಹಾರಗಳು ಎಷ್ಟೋ ಇದ್ದರೂ ಸರ್ವಥಾ ತ್ಯಜಿಸಬೇಕಾದವುಗಳೆಂದರೆ ಮಾದಕಪದಾರ್ಥಗಳು. ಇವುಗಳ ವಾಸನೆ ಒಮ್ಮೆ ಹತ್ತಿತೆಂದರೆ ಮನುಷ್ಯನು ಪಾರಾಗುವುದೇ ಕಷ್ಟ; ಪವಿತ್ರವೂ ಶಕ್ತಿಶಾಲಿಯೂ ಆದ ನಮ್ಮ ಭಾರತದೇಶವು ಮಾದಕಪದಾರ್ಥಗಳ ಸೇವನೆಯಿಂದಲೇ ದಿನೇ ದಿನೇ ಕ್ಷೀಣಾವಸ್ಥೆಯನ್ನು ಹೊಂದುತ್ತಿದೆ. ವಾಸ್ತವಿಕವಾಗಿ ವಿಚಾರಮಾಡಿನೋಡಿದರೆ ಹಿಂದುಗಳಲ್ಲಿಯೂ ಕೂಡ ಈ ಮಾದಕ ಪದಾರ್ಥಗಳ ಸೇವನೆಯು ನಡೆಯುವುದೆಂದು ಕಂಡುಬರುವುದು. ವಿಶೇಷವಾಗಿ ಉತ್ತರದೇಶದ ಹಿಂದುಗಳಲ್ಲಿ ಸನ್ಯಾಸಿಗಳೂ, ಪಂಡಾ ಎಂಬ ಜನವೂ, ಪುರೋಹಿತ ಮುಂತಾದವರೂ ಒಂದಿಲ್ಲೊಂದು

[೬ನೇ ಪುಟವನ್ನು ನೋಡಿರಿ]

ಪಂಚಾಚಾರ್ಯ ಪ್ರಭಾ.

೧೯೩೪ ನೇ ಜುಲೈ ತಾ|| ೩೦ ನೇ ಸೋಮವಾರ.

ಮಧ್ಯಯೂರೋಪಿನಲ್ಲಿ ಯುದ್ಧಭಯ.

ಯೂರೋಪಿನ ವಿದ್ಯಮಾನಗಳು ಇಂದು ಮಹಾ ವೇಗದಿಂದ ಮುಂದುವರಿಯುತ್ತಿರುವುವು. ಈಗ್ಗೆ ಕೆಲವು ದಿವಸಗಳ ಹಿಂದೆ ಜರ್ಮನಿಯಲ್ಲಿ ನಡೆದ ಅನೇಕಾನೇಕ ನಾಜೀಮುಖಂಡರ ಭೀಕರ ಕೊಲೆಯೂ, ಈಗ ವಿಯನ್ನಾ ನಗರದಲ್ಲಿ ನಾಜಿ ಸಂಗಡದವರಿಂದಾದ ಡಾಕ್ಟರ್ ಡಾಲ್ಫಸ್‌ರವರ ಕೊಲೆಯೂ ಮತ್ತು ತತ್ಸಂಬಂಧವಾದ ವಿದ್ಯಮಾನಗಳೂ ಯೂರೋಪಿನ ರಾಜಕೀಯ ವಾತಾವರಣವು ಎಂತಹ ವಿಷಮಸ್ಥಿತಿಗೆ ಬಂದಿರುವುವೆಂಬುದನ್ನು ವ್ಯಕ್ತಗೊಳಿಸುವುವು. ನಮ್ಮ ಪತ್ರಿಕೆಯ ಮತ್ತೊಂದು ಕಡೆಯಲ್ಲಿ ವಿವರಿಸಿರುವ ಡಾ|| ಡಾಲ್ಫಸ್‌ರವರ ಕೊಲೆಗೆ ಸಂಬಂಧಪಟ್ಟ ವಿಷಯಗಳನ್ನು ನೋಡಿದರೆ, ಪ್ರಪಂಚವೆಲ್ಲವೂ ಭಯಭ್ರಾಂತಿಯಿಂದ ನಿರೀಕ್ಷಿಸುತ್ತಿದ್ದ ಮಹಾಯುದ್ಧವು ಅಗಲೇ ಸನ್ನಿಹಿತವಾಯಿತೋ ಎನ್ನುವಂತೆ ತೋರುವುದು. ಅಂತೂ ವಿಯನ್ನಾ ನಗರದ ಈ ಭೀಕರ ನಾಟಕವು ಇಷ್ಟಕ್ಕೇ ಶಾಂತವಾಗಿ ಮುಕ್ತಾಯವಾಗುವುದು ಅಸಂಭವವೆಂದೇ ತೋರುವುದು. ಏಕೆಂದರೆ ಆಸ್ಟ್ರಿಯಾ ದೇಶದ ಸರಕಾರವನ್ನು ತಲೆಕೆಳಗು ಮಾಡಿ ಅಲ್ಲಿಯೂ ನಾಜಿಗಳ ಅಧಿಕಾರವನ್ನೇ ಸ್ಥಾಪಿಸಿ, ತನ್ಮೂಲಕ ಆಸ್ಟ್ರಿಯಾ ದೇಶವನ್ನು ತಮ್ಮ ಅಧೀನಪಡಿಸಿಕೊಳ್ಳಬೇಕೆಂದು ಜರ್ಮನಿಯವರು ಬಹು ದಿವಸಗಳಿಂದಲೂ ಪ್ರಯತ್ನ ಮಾಡುತ್ತಲೇ ಇರುವರು. ಆದರೆ ಆಸ್ಟ್ರಿಯಾ ದೇಶದ ಛಾನ್ಸಲರಾಗಿದ್ದ ಡಾಕ್ಟರ್ ಡಾಲ್ಫಸ್‌ರವರು ತಮ್ಮ ದೇಶದಲ್ಲಿ ನಾಜಿಗಳ ಚಳವಳಿಯು ತಲೆಯೆತ್ತದಂತೆ ಸರ್ವಪ್ರಯತ್ನಗಳಿಂದಲೂ ಅದನ್ನು ಅಡಗಿಸುತ್ತ ಬಂದರು. ಈ ಕಾರಣದಿಂದ ಆಸ್ಟ್ರಿಯಾ ದೇಶದಲ್ಲಿ ಪದೇಪದೇ ನಾಜಿಗಳು ದಂಗೆಯೇಳುತ್ತಲೇ ಇದ್ದರು. ಆದರೆ ಡಾಲ್ಫಸ್‌ರವರು ಚಳುವಳಿಗಾರರನ್ನು ಅಡಗಿಸುವ ಕಾರ್ಯದಲ್ಲಿ ಸ್ವಲ್ಪವೂ ದಯಾದಾಕ್ಷಿಣ್ಯವನ್ನಿಡದೆ ಎಷ್ಟೋ ಸಾರಿ ರಕ್ತದ ಕೋಡಿಯನ್ನೇ ಹರಿಸಿಬಿಟ್ಟಿರುವರು. ಇದರಿಂದ ಡಾಲ್ಫಸ್‌ರವರು ಜೀವಿಸಿರುವವರೆಗೆ ತಮ್ಮ ಉದ್ದೇಶವು ನೆರವೇರುವುದು ಅಸಾಧ್ಯವೆಂದು ನಾಜಿಗಳಿಗೆ ಮನದಟ್ಟಾಯಿತು. ಆದ್ದರಿಂದಲೇ ಅವರು ಡಾಲ್ಫಸ್‌ರವರನ್ನು ಕೊಲ್ಲುವ ಯೋಚನೆಯನ್ನು ಮಾಡಿದರು.

ಆಸ್ಟ್ರಿಯಾದೇಶವು ಜರ್ಮನಿಯ ಅಧಿಪತ್ಯಕ್ಕೊಳಪಟ್ಟಲ್ಲಿ ತಮಗೆ ಏನು ತೊಂದರೆ ಸಂಭವಿಸುವುದೋ ಎಂದು ಇಟಲಿ, ಫ್ರಾನ್ಸ್ ಮೊದಲಾದ ರಾಜ್ಯಗಳು ಭೀತಗಳಾಗಿ ತಮ್ಮ ತಮ್ಮ ದೇಶದ ಗಡಿಗಳಲ್ಲಿ ಅಸಂಖ್ಯಾತ ಸೈನಿಕರನ್ನಿಟ್ಟು ಯುದ್ಧಕ್ಕೆ ಸಿದ್ಧರಾಗಿರುತ್ತಾರೆ. ಈ ಭೀಕರ ದೃಶ್ಯವು ಇಷ್ಟಕ್ಕೇ ಮುಗಿಯದೆ ಮತ್ತೊಂದು ಮಹಾಯುದ್ಧವು ಪ್ರಾರಂಭವಾಗಬಹುದೆಂಬ ಭೀತಿಯಿಂದ ಆಸ್ಟ್ರಿಯಾ ಸರಕಾರದವರು ಈಗಾಗಲೇ ಯೂರೋಪಿನ ಇತರ ರಾಷ್ಟ್ರಗಳ ಸಹಾಯವನ್ನು ಅಪೇಕ್ಷಿಸಿರುತ್ತಾರೆ. ಬ್ರಿಟಿಷ್ ಮತ್ತು ಇಟಲಿ ಸರಕಾರದವರು ಆಸ್ಟ್ರಿಯಾ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಲು ಸಿದ್ಧರಾಗಿರುವೆವೆಂದು ಸಾರಿರುತ್ತಾರೆ. ಕಳೆದ ಘೋರಯುದ್ಧಕ್ಕೆ ಇದೇ ಆಸ್ಟ್ರಿಯಾ ದೇಶದ ರಾಜಕುಮಾರರ ಕೊಲೆಯೇ ಮೂಲಕಾರಣವಾಗಿ ಪರಿಣಮಿಸಿತು. ಈಗಲೂ ಅದೇ ಆಸ್ಟ್ರಿಯಾ ದೇಶದ ಸರ್ವಾಧಿಕಾರಿಗಳ ಕೊಲೆಯೇ ಮತ್ತೊಂದು ಘೋರಯುದ್ಧಕ್ಕೆ ಮೂಲಕಾರಣವಾಗಿ ಪರಿಣಮಿಸುವುದರಲ್ಲಿ ಆಶ್ಚರ್ಯವೇನು?

ಯೂರೋಪಿನಲ್ಲಿ ಮಹಾಯುದ್ಧಾರಂಭದ ಸೂಚನೆಗಳು.

ಆಸ್ಟ್ರಿಯಾದೇಶದ ಸರ್ವಾಧಿಕಾರಿಗಳಾದ ಡಾಲ್ಫಸರ ಕೊಲೆ!

ವಿಯನ್ನಾ ಜುಲೈ ೨೫.

ಆಸ್ಟ್ರಿಯಾದೇಶದ ಪ್ರಧಾನಪುರುಷೋತ್ತಮರಾದ ಡಾ|| ಡಾಲ್ಫಸರು ಈ ದಿನ ಜರ್ಮನ್ ನಾಜಿಗಳಿಂದ ಕೊಲೆಮಾಡಲ್ಪಟ್ಟರು. ಈ ಘೋರ ಕೊಲೆಯ ಭಯಂಕರ ವೃತ್ತಾಂತವು ಯೂರೋಪ್ ಖಂಡವನ್ನೇ ನಡುಗಿಸಿಬಿಟ್ಟಿದೆ. ಇದರ ಪರಿಣಾಮವಾಗಿ ಮಧ್ಯ ಯೂರೋಪಿನಲ್ಲಿ ಮಹಾಯುದ್ಧಜ್ವಾಲೆಯು ತಲೆದೋರಿದೆ.

ಆಸ್ಟ್ರಿಯಾದೇಶದ ನಾಜಿಗಳ ಈ ಕ್ರೂರಕೃತ್ಯಕ್ಕೆ ಜರ್ಮನಿಯ ಪೂರ್ಣ ಬೆಂಬಲವಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಜರ್ಮನಿಯಿಂದ ಮದ್ದುಗುಂಡುಗಳೇ ಮುಂತಾದ ಯುದ್ಧಸಾಮಗ್ರಿಗಳನ್ನು ಗುಪ್ತವಾಗಿ ಆಸ್ಟ್ರಿಯಾದೇಶದ ನಾಜಿಗಳಿಗೆ ಕಳುಹಿಸುತ್ತಿರುವುದನ್ನು ಮುಖ್ಯಪ್ರಧಾನರಾದ ಡಾ|| ಡಾಲ್ಫಸರು ಖಂಡಿಸಿ, ಜರ್ಮನಿಯ ಸರ್ವಾಧಿಕಾರಿಗಳಾದ ಹಿಟ್ಲರ್ ದೊರೆಗಳಿಗೆ ಎಚ್ಚರಿಕೆಯ ಸಂದೇಶವನ್ನು ಕಳುಹಿಸಿದ್ದರು.

ಡಾ|| ಡಾಲ್ಫಸರ ಕೊಲೆಯ ಪ್ರಯತ್ನಗಳು ಬಹಳ ಗುಪ್ತವಾಗಿಯೇ ನಡೆಯುತ್ತಿದ್ದುವು. ಅವರ ಪ್ರಭಾವವನ್ನು ಕುಗ್ಗಿಸುವುದಕ್ಕಾಗಿ ನಾಜಿಗಳು ಅವರನ್ನು ಕುರಿತು ಸುಳ್ಳುಸುದ್ದಿಗಳನ್ನು ಹೇರಳವಾಗಿ ಪ್ರಚಾರಮಾಡುತ್ತಿದ್ದರು. “ಡಾಲ್ಫಸರ ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿತು; ಅವರ ಪ್ರಾರ್ಥನೆಯ ಮೇರೆಗೆ ಇಟಾಲಿಯನ್ ಮಂತ್ರಿಗಳು ನೂತನ ಮಂತ್ರಿಮಂಡಲವನ್ನು ಸ್ಥಾಪಿಸುತ್ತಾರೆ.” ಎಂಬ ಸುಳ್ಳುಸುದ್ದಿಯು ಆಸ್ಟ್ರಿಯಾ ದೇಶದ ದಶದಿಕ್ಕಿಗೂ ಹಬ್ಬಿತು. ಇದರಿಂದ ಜನರು ಡಾಲ್ಫಸರ ಮೇಲೆ ಅಸಮಾಧಾನವನ್ನು ತಾಳಿದರು.

ನಾಜಿಗಳು ಒಟ್ಟುಗೂಡಿ ವಿಯನ್ನಾನಗರದ ಎಲ್ಲಾ ಬ್ರಾಡ್‌ಕ್ಯಾಸ್ಟಿಂಗ್ (ವರ್ತಮಾನವನ್ನು ವಿದ್ಯುದ್ವೇಗದಿಂದ ಹರಡುವ) ಸ್ಟೇಷನ್ನುಗಳನ್ನು ಕೈವಶಮಾಡಿಕೊಳ್ಳಲೆತ್ನಿಸಿದರು. ಈ ಒಳಸಂಚು ತಿಳಿದುಬಂದ ಕೂಡಲೇ ಡಾಲ್ಫಸರ ಬಲಗೈಯಂತಿದ್ದ ಮೇಜರ್ ಫೇಯರವರು ಸಶಸ್ತ್ರ ಸೈನಿಕರನ್ನು ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನ್‌ಗಳ ಕಡೆಗೆ ಕಳುಹಿಸಿದರು. ಅಷ್ಟರಲ್ಲಿ ನಾಜಿಗಳ ದಂಗೆಯು ಪ್ರಬಲವಾಗಿ ಗುಂಡಿನ ಸುರಿಮಳೆಯಾಗುತ್ತಿದ್ದಿತು. ಕೂಡಲೇ ನಾಜಿಗಳಿಗೂ ಮೇಜರ್ ಫೇಯರವರ ಸೈನಿಕರಿಗೂ ಭಯಂಕರ ಯುದ್ಧವಾಯಿತು. ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನ್‌ಗಳ ಮುಂಭಾಗವೆಲ್ಲಾ ಯುದ್ಧಭೂಮಿಯಾಯಿತು. ಈ ಮಧ್ಯೆ ನಾಜಿಗಳು ವಿಯನ್ನಾನಗರದ ಪೋಲೀಸ್ ಮುಖ್ಯಾಧಿಕಾರಿಗಳನ್ನು ಗುಂಡುಹಾಕಿ ಕೊಂದರು.

ಡಾ|| ಡಾಲ್ಫಸರು ಮಂತ್ರಿಮಂಡಲದ ಮಹಾಭವನಕ್ಕೆ ಬರುವ ಹೊತ್ತಿಗೆ ನಾಜಿಗಳು ವೇಷಮರೆಸಿಕೊಂಡು ಮಹಾಭವನದ ಪಕ್ಕದಲ್ಲಿ ಕಾದಿದ್ದರು. ನಾಜಿಗಳ ಈ ಒಳಸಂಚನ್ನು ತಿಳಿಯದೆ ಡಾಲ್ಫಸರೂ, ಮೇಜರ್ ಫೇಯರವರೂ ಬಂದರು. ಅಷ್ಟರಲ್ಲೇ ದಂಗೆಕಾರರು ಅವರನ್ನು ಮುತ್ತಿಕೊಂಡರು. ಡಾಲ್ಫಸರು ದಂಗೆಕಾರರ ರೌದ್ರರೂಪವನ್ನು ನೋಡಿ ಸ್ತಂಭಿತರಾದರು. ಶಾಂತಚಿತ್ತದಿಂದ ಅವರನ್ನು ಶಾಂತಗೊಳಿಸಲೆತ್ನಿಸಿದರು. ಆದರೂ ಆ ಪ್ರಯತ್ನಗಳೆಲ್ಲಾ ವಿಫಲವಾಗಿ, ದಂಗೆಕಾರರು ಡಾಲ್ಫಸರನ್ನೂ, ಇತರ ಮಂತ್ರಿಗಳನ್ನೂ ಕೈಸೆರೆಹಿಡಿದರು.

ಡಾಲ್ಫಸರ ಅಂತ್ಯ.

ಈ ಅನಿರೀಕ್ಷಿತ ಘಟನೆಗಳು ಇಷ್ಟರಲ್ಲೇ ವಿಯನ್ನಾನಗರದ ನಾಲ್ಕು ಮೂಲೆಗಳಿಗೂ ಪ್ರಸರಿಸಿದುವು. ಭಯಭ್ರಾಂತರಾದ ಜನರು ತಂಡೋಪತಂಡವಾಗಿ ಮಂತ್ರಿಮಂಡಲದ ಮಹಾಭವನದ ಕಡೆಗೆ ಓಡಿಬಂದರು. ಇಷ್ಟುಹೊತ್ತಿಗೆ ರಾತ್ರಿ ೧೦ ಗಂಟೆಯಾಗಿತ್ತು. ಡಾಲ್ಫಸರನ್ನು ರಕ್ಷಿಸುವುದಕ್ಕಾಗಿ ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾದವು. ಭಯಂಕರವಾದ ಒಂದು ಗುಂಡಿನೇಟು ಡಾಲ್ಫಸರನ್ನು ಕೆಳಕ್ಕುರುಳಿಸಿತು. ಗುಂಡಿನೇಟು ಬಿದ್ದ ಉತ್ತರ ಕ್ಷಣದಲ್ಲೇ ದುಃಖದಾಯಕವಾದ ದೃಶ್ಯವು ಗೋಚರವಾಯಿತು. ನೆಲದ ಮೇಲೆ ಧೊಪ್ಪನೆ ಬೀಳುತ್ತಾ, ತಮ್ಮ ಅಚ್ಚುಮೆಚ್ಚಿನ ಗೆಳೆಯರೂ, ಬಲಗೈಯಂತೆ ಪ್ರಬಲ ಸಹಕಾರಿಗಳೂ ಆದ ಮೇಜರ್ ಫೇಯರವರನ್ನು ಕುರಿತು—“ನನಗೆ ಸಾವು ಬಂತು. ನನ್ನ ಸಂಸಾರವನ್ನು ಮಾತ್ರ ಜಾಗ್ರತೆಯಿಂದ ಕಾಪಾಡಿರಿ” ಎಂದು ಡಾಲ್ಫಸರು ಹೇಳಿದರು. ಅನಂತರ ಅವರನ್ನು ಮಂತ್ರಿಭವನದ ಆಫೀಸು ರೂಮಿಗೆ ಒಯ್ಯಲಾಯಿತು. ಅಲ್ಲಿ ಸ್ವಲ್ಪ ಹೊತ್ತಿನಲ್ಲೇ ಡಾಲ್ಫಸರು ದಿವಂಗತರಾದರು.

ಮಾರ್ಷಲ್ ಲಾ.

ಡಾಲ್ಫಸರ ಕೊಲೆಯಾದ ಉತ್ತರಕ್ಷಣದಲ್ಲಿಯೇ ಮೇಜರ್ ಫೇಯರವರೂ, ಉಳಿದ ಮಂತ್ರಿಗಳೂ ದಬ್ಬಾಳಿಕೆಯ ರೌದ್ರರೂಪವನ್ನು ತಾಳಿದರು. ಮಾರ್ಷಲ್ ಲಾ ಜಾರಿಮಾಡಲ್ಪಟ್ಟಿತು. ಭಯಂಕರವಾದ ಯುದ್ಧವು ನಡೆದು ೧೫೦ ಮಂದಿ ನಾಜಿ ಮುಖಂಡರು ಕೈಸೆರೆ ಹಿಡಿಯಲ್ಪಟ್ಟು ಗುಂಡಿನ ಬಾಯಿಗೆ ತುತ್ತಾದರು.

ಜರ್ಮನಿಯ ಸರ್ವಾಧಿಕಾರಿಗಳಾದ ಹೆರ್ ಹಿಟ್ಲರರು ವೊನ್‌ಪೇಪನರನ್ನು ವಿಯನ್ನಾಕ್ಕೆ ಶಾಂತಿ ಸಂದೇಶವನ್ನು ಸಾರುವುದಕ್ಕಾಗಿ ಕಳುಹಿಸಿದ್ದಾರೆ. ಡಾಲ್ಫಸರ ಅದ್ಭುತ ಪರಾಕ್ರಮವನ್ನೂ, ದೇಶಭಕ್ತಿಯನ್ನೂ ಕೊಂಡಾಡಿ ಹಿಟ್ಲರರು ಆಸ್ಟ್ರಿಯನ್ ಜನಾಂಗಕ್ಕೆ ಪತ್ರ ಬರೆದಿದ್ದಾರೆ. ಆಸ್ಟ್ರಿಯಾದೇಶದ ಗಲಭೆಗಳಿಗೆ ಮೂಲಕಾರಣರೆಂದೂಹಿಸಲ್ಪಟ್ಟ ಹೆರ್ ಹೆಬೀಚ್‌ರೆಂಬ ಜರ್ಮನ್ ಮುಖಂಡರು ಆಸ್ಟ್ರಿಯಾದಿಂದ ಗಡೀಪಾರು ಮಾಡಲ್ಪಟ್ಟಿದ್ದಾರೆ. ಘೋರ ಯುದ್ಧಾನಂತರ ಆಸ್ಟ್ರಿಯಾದ ಪ್ರಧಾನ ಅಮಾತ್ಯರಾಗಿದ್ದ ವೊರ್ಲೀನರ್‌ರವರೂ, ಸಾವಿರಾರು ಜನ ನಾಜಿಗಳೂ ದಸ್ತಗಿರಿಮಾಡಲ್ಪಟ್ಟಿರುತ್ತಾರೆ.

ಮುಸೋಲಿನಿಯವರ ಸಂತಾಪ.

ರೋಮ್ ಜು. ೨೮

ಡಾಲ್ಫಸರ ಕೊಲೆಯು ಇಟಲಿಯ ಪ್ರಧಾನಾಮಾತ್ಯರಾದ ಮುಸೋಲಿನಿಯವರಿಗೆ ಹೆಚ್ಚಿನ ದುಃಖವನ್ನುಂಟುಮಾಡಿದೆ. “ಯಾವ ಆಸ್ಟ್ರಿಯದ ಸ್ವಾತಂತ್ರ್ಯಕ್ಕಾಗಿ ಡಾಲ್ಫಸರು ಹೋರಾಡಿ ಮೃತಪಟ್ಟರೋ ಅದರ ರಕ್ಷಣೆಗಾಗಿ ಇಟಲಿಯು ಸಿದ್ಧವಾಗಿದೆ. ಡಾಲ್ಫಸರಿಗೂ ನನಗೂ ಇರುವ ಗಾಢವಾದ ಮೈತ್ರಿಯೂ, ರಾಜಕೀಯ ಏಕಾಭಿಪ್ರಾಯವೂ ನನ್ನನ್ನಿಂದು ಡಾಲ್ಫಸರ ಕೊಲೆಗಾಗಿ ಮುಯ್ಯಿತೀರಿಸಿಕೊಳ್ಳಲು ಪ್ರೇರೇಪಿಸುತ್ತಿದೆ.” ಎಂಬುವಾಗಿ ಮುಸೋಲಿನಿಯವರು ದುಃಖಾಶ್ರುಗಳನ್ನು ಸುರಿಸಿದರು.

ಜರ್ಮನಿಗೆ ಎಚ್ಚರಿಕೆ.

ರೋಂ ಜುಲೈ ೨೬.

ಇಟಾಲಿಯನ್ ಸರ್ಕಾರವು ಈ ದಿನ ಜರ್ಮನ್ ಸರ್ಕಾರಕ್ಕೊಂದು ತೀಕ್ಷ್ಣವಾದ ಮುಂಜಾಗ್ರತೆಯ ಸಂದೇಶವನ್ನಿತ್ತಿದೆ. ಜರ್ಮನಿಯೇ ಆಸ್ಟ್ರಿಯಾದ ಇಂದಿನ ಭಯಾನಕ ಪರಿಸ್ಥಿತಿಗೆ ಕಾರಣವಾಗಿದೆಯೆಂದೂ, ಇದರಿಂದ ಜರ್ಮನ್ ಇಟಲಿಗಳ ಪರಸ್ಪರ ಮೈತ್ರಿಯು ಸಮೂಲ ನಾಶವಾಗಿದೆಯೆಂದೂ, ಇಂಗ್ಲೆಂಡ್, ಫ್ರಾನ್ಸುಗಳು ಇಟಲಿಯೊಡನೆ ಜರ್ಮನಿಯ ವಿರುದ್ಧವಾಗಿ ಸಹಕರಿಸಬೇಕೆಂದೂ ಮುಸೋಲಿನಿಯವರು ಸಂದೇಶಗಳನ್ನು ಕಳುಹಿಸಿದ್ದಾರೆ.

ಬರ್ಲಿನ್ ಜುಲೈ ೨೭.

ಆಸ್ಟ್ರಿಯಾದೇಶದ ಪರಿಸ್ಥಿತಿಯು ಜರ್ಮನ್ ಜನಾಂಗಕ್ಕೆ ಸಂತೋಷವನ್ನುಂಟುಮಾಡಿದಂತಿದೆ. ಜರ್ಮನಿಯ ಎಲ್ಲಾ ಪತ್ರಿಕೆಗಳೂ ನಾಜಿ ದಂಗೆಯನ್ನು ಪ್ರಶಂಸಿಸಿ ಬರೆದಿರುತ್ತವೆ. ಆಸ್ಟ್ರಿಯಾದೇಶದ ಗಲಾಟೆಗೆ ಜರ್ಮನಿಯೇ ಮೂಲಕಾರಣವಲ್ಲವೆಂದೂ ಡಾಲ್ಫಸರ ಪ್ರಚಂಡ ದಬ್ಬಾಳಿಕೆಯೇ ಅದರ ಕಾರಣವೆಂದೂ ಎಲ್ಲಾ ಪತ್ರಿಕೆಗಳೂ ಬರೆದಿರುತ್ತವೆ.

ಗಡಿಭದ್ರತೆ.

ಆಸ್ಟ್ರಿಯಾದೇಶದ ನಾಲ್ಕು ಗಡಿಗಳೂ ಭದ್ರಗೊಳಿಸಲ್ಪಟ್ಟಿವೆ. ಇಟಲಿ ಮತ್ತು ಜರ್ಮನಿಯ ಸೈನ್ಯಗಳು ತಮ್ಮ ತಮ್ಮ ಗಡೀಸೀಮೆಗಳಲ್ಲಿ ಯುದ್ಧಕ್ಕೆ ಸಿದ್ಧವಾಗಿ ನಿಂತಿವೆ. ಆಸ್ಟ್ರಿಯಾದ ಪರಿಸ್ಥಿತಿಯನ್ನು ಯೂರೋಪಿನ ರಾಷ್ಟ್ರಗಳೆಲ್ಲವೂ ಕುತೂಹಲದಿಂದ ಇದಿರುನೋಡುತ್ತಿವೆ.

ಡಾಲ್ಫಸರ ಅಂತ್ಯಸಂಸ್ಕಾರ.

ಡಾಲ್ಫಸರ ಕೊಲೆಯ ಸಂಬಂಧದಲ್ಲಿ ಲಂಡನ್ನಿನಿಂದ ಬ್ರಿಟಿಷ್ ಚಕ್ರವರ್ತಿಗಳೂ, ಇಟಲಿಯಿಂದ ಪೋಪ್ ಜಗದ್ಗುರುಗಳೂ ಸಂತಾಪಸಂದೇಶಗಳನ್ನು ಕಳುಹಿಸಿದ್ದಾರೆ. ಡಾಲ್ಫಸರ ಅಂತ್ಯಕಾಲವು ಬಹಳ ದುಃಖದಾಯಕವಾಗಿತ್ತು. ಈ ದಿನ ಅವರ ಮೃತದೇಹವನ್ನು ಸಿಟಿ ಹಾಲಿಗೆ ಬಹಳ ವಿಜೃಂಭಣೆಯಿಂದ ಸಾಗಿಸಲಾಯಿತು. ೨೦ ಲಕ್ಷ ಜನಸ್ತೋಮವು ನೆರೆದಿದ್ದು, ದಾರಿಯುದ್ದಕ್ಕೂ ಹಾರ ತುರಾಯಿಗಳು ಶವದ ಮೇಲೆ ಎರಚಲ್ಪಟ್ಟವು. ಶನಿವಾರ ಪ್ರಾತಃಕಾಲ ಅಂತ್ಯಸಂಸ್ಕಾರಗಳು ನಡೆಯುತ್ತವೆ.

ಮುಂದೇನಾಗುವುದು ಎಂಬ ಪ್ರಶ್ನೆಯು ಬಹಳ ಕಠಿಣವಾದುದು. ನಾಜಿಗಳು ಆಸ್ಟ್ರಿಯವನ್ನು ಹಿಡಿದರೆ, ಜರ್ಮನಿಯ ಕೈಬಲವಾಗುವುದು. ಆಗ ಫ್ರಾನ್ಸು, ಇಟಲಿ ಎರಡೂ ಜರ್ಮನಿಯ ಮೇಲೆ ಬೀಳಬೇಕಾಗಿ ಬರುವುದು. ಅವೆರಡೂ ಪಕ್ಕದ ರಾಷ್ಟ್ರಗಳು. ಜರ್ಮನಿಯು ಬಲವಾದರೆ ತಮಗೆ ಅಪಾಯ ತಪ್ಪದು ಎಂದು ಅವರ ಭೀತಿ. ಆದುದರಿಂದ ಈ ಆಕ್ರಮಣವನ್ನು ನೋಡುತ್ತಾ ಅವರು ಸುಮ್ಮನಿರುವುದಿಲ್ಲ. ಈ ಮೂರು ರಾಷ್ಟ್ರಗಳೂ ಬೇಕಾದಷ್ಟು ಯುದ್ಧಸನ್ನಾಹಗಳನ್ನು ಮಾಡಿಕೊಂಡಿರುವುದರಿಂದ ಬರೀ ಮಾತಿನಲ್ಲಿ ಈ ಕಲಹವು ಮುಗಿಯುವಂತಿಲ್ಲ.

ಒಳದೇಶದ ವೃತ್ತಾಂತಗಳು.

ಮೈಸೂರು ಸರಕಾರದವರು ಸಂಸ್ಥಾನದ ನಾನಾ ಕಡೆಗಳಲ್ಲಿ ಸಿಹಿನೀರಿನ ಭಾವಿಗಳನ್ನು ಹೆಚ್ಚಿಸುವುದಕ್ಕಾಗಿ 25,000 ರೂ. ಗಳನ್ನು ಕೊಡುವುದಾಗಿ ನ್ಯಾಯವಿಧಾಯಕಸಭೆಯಲ್ಲಿ ತೀರ್ಮಾನಮಾಡಿರುತ್ತಾರೆ.

ಶಿವಮೊಗ್ಗ ತಾಲ್ಲೂಕು ಅಂಬಳೇಬೈಲಿನ ಸುತ್ತ ೩೦ ಮೂರು ಮೈಲಿ ಫಾಸಲೆಯೊಳಗೆ ಮನುಷ್ಯರಿಗೆ ತೊಂದರೆಮಾಡುತ್ತಿರುವ ಹುಲಿಯನ್ನು ಕೊಂದು ಚರ್ಮವನ್ನು ಭದ್ರಾವತಿ ಡಿ|| ಫಾರೆಸ್ಟ್ ಆಫೀಸರವರಲ್ಲಿ ಹಾಜರ್ಮಾಡಿದವರಿಗೆ 25 ರೂ. ಬಹುಮಾನ ಕೊಡುವುದಾಗಿ ಸರಕಾರದವರು ಪ್ರಕಟಿಸಿರುತ್ತಾರೆ.

ದಿವಂಗತ ಮಹಾಮಾತೃ ಶ್ರೀ ವಾಣೀವಿಲಾಸ ಸನ್ನಿಧಾನದವರ ಹೆಸರಿನಲ್ಲಿ ಒಂದು ದೇವಸ್ಥಾನವನ್ನು ಕಟ್ಟಬೇಕೆಂದು ರಾಜಧಾನಿಯ ಮ|| ರಾ|| ಹೈದ್ರಾಬಾದ್ ರಾಮದಾಸರವರು ಶ್ರೀಮನ್ಮಹಾರಾಜರಲ್ಲಿ ಪ್ರಾರ್ಥಿಸಿಕೊಂಡಿದ್ದಾರೆಂದೂ ಇದಕ್ಕಾಗಿ ಮುನಿಸಿಪಾಲಿಟಿಯವರು ಒಂಟಿಕೊಪ್ಪಲಿನಲ್ಲಿ ಒಂದು ನಿವೇಶನವನ್ನು ಕೊಟ್ಟಿರುತ್ತಾರೆಂದೂ ತಿಳಿದುಬಂದಿದೆ.

ಮದರಾಸ್ ಹೈಕೋರ್ಟ್ ಜಡ್ಜರಾಗಿದ್ದು ನಿವೃತ್ತರಾಗಿರುವ ಮಿ|| ಎಚ್. ಡಿ. ಸಿ. ರೀಲೇ ಐ.ಸಿ.ಎಸ್. ರವರು ತಿಂಗಳು 1ಕ್ಕೆ 2,500 ರೂ. ಗಳ ವೇತನದ ಮೇಲೆ 5 ವರ್ಷಗಳ ವರೆಗೆ ಮೈಸೂರು ಹೈಕೋರ್ಟಿನ ಚೀಫ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ. ಮಿ|| ರೀಲೇರವರು ನಾಳೆದಿನ ತಮ್ಮ ಅಧಿಕಾರದ ಚಾರ್ಜನ್ನು ವಹಿಸುವರೆಂದು ತಿಳಿದುಬಂದಿರುತ್ತದೆ.

ಬ್ರಿಟಿಷ್ ಇಂಡಿಯಾಸೈನ್ಯದ ಕಮ್ಯಾಂಡರ್-ಇನ್-ಚೀಫ್‌ರವರಾದ ಹಿಸ್ ಎಕ್ಸಲೆನ್ಸಿ ಫೀಲ್ಡ್‌ಮಾರ್ಷಲ್ ಸರ್ ಫಿಲಿಪ್ ಚೆಟ್‌ವುಡ್‌ರವರು ನಾಳೆಯದಿವಸ ಬೆಳಿಗ್ಗೆ 10 ಘಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಬೆಂಗಳೂರಿಗೆ ಆಗಮಿಸುವರೆಂದೂ, ಆಗಸ್ಟ್ 5 ನೇ ತಾರೀಖಿನವರೆಗೆ ಬ್ರಿಟಿಷ್ ರೆಸಿಡೆಂಟರ ಅತಿಥಿಗಳಾಗಿರುವರೆಂದೂ ತಿಳಿದುಬಂದಿದೆ.

ಕಾಡುಕಾಡುಹಳ್ಳಿ ತಾಲ್ಲೂಕಿನ ಒಡ್ಡರ ವೆಂಕಟನೆಂಬುವನು ಅದೇ ತಾಲ್ಲೂಕು ಸಂತೆಕೋಡಹಳ್ಳಿ ಗ್ರಾಮದ ದಾಸೇಗೌಡನ ೯ ವರ್ಷ ವಯಸ್ಸಿನ ಮಗಳನ್ನು ೧೭ ನೇ ತಾರೀಖಿನ ದಿನ ಉಪಾಹಾರಾನಂತರದಿಂದ ಬೆಂಗಳೂರಿಗೆ ಕರೆತಂದು ಸಿಟಿ ರೈಲ್ವೆ ಸ್ಟೇಷನ್ ಬಳಿ ಆಕೆಯನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದನೆಂದೂ, ಮಗಳನ್ನು ಹುಡುಕಿಕೊಂಡು ಬಂದಿದ್ದ ತಂದೆಯೂ ಇತರರೂ ಆತನನ್ನು ಹಿಡಿದು ಪೋಲೀಸರ ವಶ ಮಾಡಿರುವರೆಂದೂ ತಿಳಿದುಬರುತ್ತದೆ.

ತುಂಗಭದ್ರಾನದಿಗೆ ಮೈಸೂರು ಸಂಸ್ಥಾನದ ಸರಹದ್ದಿನಲ್ಲಿರುವ ಲಕ್ಕವಳ್ಳಿಯ ಹತ್ತಿರ ಅಣೆಕಟ್ಟನ್ನು ಕಟ್ಟಬೇಕೋ ಅಥವಾ ಮೈಸೂರು ಸರಹದ್ದು ಬಿಟ್ಟು ಮೈಸೂರು, ಮದರಾಸು, ಬೊಂಬಾಯಿ ಮತ್ತು ಹೈದರಾಬಾದು ಪ್ರಾಂತಗಳ ಮಧ್ಯಪ್ರದೇಶದಲ್ಲಿ ಅಣೆಕಟ್ಟನ್ನು ಕಟ್ಟಬೇಕೋ ಎಂಬ ವಿಚಾರವನ್ನೂ, ತುಂಗಭದ್ರಾನದಿಯ ನೀರನ್ನು ಯಾರು ಯಾರು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನೂ ಚರ್ಚಿಸಲು ನಾಲ್ಕು ಸರ್ಕಾರಗಳ ಪ್ರತಿನಿಧಿಗಳೂ ಜುಲೈ 24 ನೇ ತಾರೀಖಿನ ದಿವಸ ಬೆಂಗಳೂರು ಅಠಾರಾ ಕಚೇರಿಯಲ್ಲಿ ಸಭೆ ಸೇರಿ 3-4 ಗಂಟೆಗಳ ಕಾಲ ಚರ್ಚಿಸಿದರು. ಚರ್ಚೆಯ ಫಲಿತಾಂಶವು ಇನ್ನೂ ಪ್ರಕಟವಾಗಿಲ್ಲ.

ಮೈಸೂರು ಸಂಸ್ಥಾನದಲ್ಲಿರುವ ರೈತರ ಕಷ್ಟಸುಖಗಳನ್ನೂ ಅವರಿಗೆ ಯಾವರೀತಿಯಲ್ಲಿ ಸಹಾಯಮಾಡಬಹುದೆಂಬುದನ್ನೂ ವಿಚಾರಮಾಡಿ ರಿಪೋರ್ಟುಕೊಡುವುದಕ್ಕಾಗಿ ಸರ್ಕಾರದವರು ರೆವಿನ್ಯೂಕಮಿಷನರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿರುತ್ತಾರೆ. ಕಮಿಟಿಗೆ ಶ್ರೀಗಳಾದ ಕೆ. ಎ. ಅನಂತರಾಮ್, ಎ. ಕೆ. ಯಜ್ಞನಾರಾಯಣಯ್ಯರ್, ಟಿ. ಜಿ. ರಾಮಯ್ಯರ್, ಎಂ. ಜೆ. ಮೇತ್ರಿ, ಟಿ. ವಿ. ಎ. ಈಶ್ವರನ್, ಕೆ. ಆರ್. ಶ್ರೀನಿವಾಸಯ್ಯಂಗಾರ್, ಬಿ. ಕೆ. ಗರುಡಾಚಾರ್, ಜೆ. ಮಹಮದ್ ಇನಾಂ, ಕೆ. ಹಂಗಲ್ರಾಯರೆಡ್ಡಿ, ಬಿ. ಎಸ್. ಪುಟ್ಟಸ್ವಾಮಿ ಮತ್ತು ಹೊಸಕೊಪ್ಪ ಕೃಷ್ಣರಾಯರವರು ಮೆಂಬರುಗಳಾಗಿ ನೇಮಿಸಲ್ಪಟ್ಟಿರುತ್ತಾರೆ.

ದೊಡ್ಡಬಳ್ಳಾಪುರದಲ್ಲಿ ಕಳೆದ ಜುಲೈ 18 ನೇ ಬುಧವಾರ ರಾತ್ರಿ 7-30 ಗಂಟೆಯಲ್ಲಿ ಕಂಟ್ರಾಕ್ಟರ್ ಅಣ್ಣಯ್ಯಪ್ಪನವರ ಮನೆಯಲ್ಲಿ ತಾಯಿಯು ಮೂವರು ಮಕ್ಕಳಿಗೆ ಊಟಮಾಡಿಸಿ ವಿಸ್ತಾರವಾದ ನಡುಮನೆಯಲ್ಲಿ ಬಾಗಿಲ ಬಳಿ ಹಾಸಿಗೆ ಹಾಸಿ ಸ್ವಲ್ಪ ಹೊತ್ತು ಮಕ್ಕಳೊಂದಿಗೆ ಮಾತನಾಡುತ್ತಾ ಇರುವಲ್ಲಿ ಆಕಸ್ಮಿಕವಾಗಿ 4 ವರುಷದ ರಾಮು ಎಂಬ ಹುಡುಗನು ಅಮ್ಮಾ, ಈ ದಿನ ನಮ್ಮ ಮನೆಗೆ ಹಾವು ಬರುತ್ತದೆಂದು ಹೇಳಿದನು. ತಾಯಿಯು ಅವನನ್ನು ಗದರಿಸಿ ಗೋಡೆಯ ಮೇಲಿದ್ದ ಹಲ್ಲಿಯನ್ನು ತೋರಿಸಿ ಇದೇಯೋ ನೀನು ಹೇಳುವ ಹಾವು ಎಂದು ಹೇಳಿದ್ದಕ್ಕೆ ಆ ಹುಡುಗನು—ಅಲ್ಲಮ್ಮಾ, ದೊಡ್ಡ ಹಾವು ಎಂದು ಎರಡು ಕೈಗಳನ್ನೂ ಅಗಲಮಾಡಿ ತೋರಿಸಿದನು. ತಾಯಿಯು ಅವನ ಮಾತುಗಳನ್ನು ಮರೆಯಿಸಿ ಮಲಗಿಸಿದಳು. ಮುಂಭಾಗದ ಬಾಗಿಲು ಹಾಕಿ ನಡುಮನೆಯ ಬಾಗಿಲನ್ನು ಅಗಲವಾಗಿ ತೆರೆದು ತಾನೂ ಮಕ್ಕಳೊಂದಿಗೆ ಮಲಗಿ ಯಜಮಾನರು ಬರುವವರೆಗೂ ಕಾದುಕೊಂಡಿದ್ದಳು. ಸುಮಾರು 9-30 ಗಂಟೆಯಲ್ಲಿ ಹಟ್ಟಿಯ ನೀರು ಹೋಗಲು ಮಾಡಿದ್ದ ಸಣ್ಣ ಕಿಂಡಿಯ ದ್ವಾರದಿಂದ 5½ ಅಡಿ ಉದ್ದದ ಒಂದು ಏಳೇ ಸರ್ಪವು ಪ್ರವೇಶಿಸಿ ಬಾಗಿಲಬಳಿ ಕಾವಲಿದ್ದ ನಾಯಿಗೆ ಸಿಕ್ಕದೆ ಮೂರು ಮನೆಗಳಲ್ಲೂ ಹಟ್ಟಿಯಲ್ಲೂ ಎಲೆಕ್ಟ್ರಿಕ್ ದೀಪಗಳು ಉರಿಯುತ್ತಿರುವಲ್ಲಿ ನಡುಮನೆಗೆ ಬಂದು 4 ವರುಷ, 6 ವರುಷದ ಬಾಲಕರ ತಲೆಗಳ ಮೇಲೆಯೂ, ಮೈಮೇಲೆಯೂ ಹೊರಳಾಡುತ್ತಾ ಹೆಡೆಯನ್ನು ಆಡಿಸುತ್ತಾ ಇರುವಾಗ ಹೊರಗೆ ಹೋಗಿದ್ದ ಯಜಮಾನನು ಬಂದು ಬಾಗಿಲು ತಟ್ಟಲು ಯಜಮಾನಿಯು ಬಾಗಿಲು ತೆರೆದು ಮಕ್ಕಳ ತಲೆಯ ಮೇಲೂ ಮುಖದ ಮೇಲೂ ಹೆಡೆಯಾಡಿಸುತ್ತಿದ್ದ ಸರ್ಪವನ್ನು ನೋಡಿ ಕೂಗಿಕೊಂಡಳು. ತತ್‌ಕ್ಷಣವೇ ಸರ್ಪವು ಸ್ವಲ್ಪ ಓರೆಯಾಗಿ ಹೋಗಲು ಆಕೆಯು ಮಕ್ಕಳನ್ನು ಎತ್ತಿಕೊಂಡಳು. ಸುಮಾರು ಒಂದು ಗಂಟೆ ಹೊತ್ತು ಸರ್ಪವು ನಡುಮನೆಯಲ್ಲಿ ಆಡುತ್ತಾ ಗೋಡೆ ತಸ್ವೀರುಗಳ ಕೆಳಗೆ ಹೆಡೆಯಾಡಿಸುತ್ತಾ ಮನೆಯನ್ನು ಬಿಟ್ಟು ಹೋಗಲಿಲ್ಲ. ಅನಂತರ ಕಂಟ್ರಾಕ್ಟರವರು ಮಸ್ತಾನ್ ಎಂಬ ಮಂತ್ರವಾದಿಯನ್ನು ಕರೆಯಿಸಿ ಹಾವನ್ನು ಹಿಡಿಯಿಸಿ ಊರಿನ ಆಚೆ ಬಿಟ್ಟು ಬರುವಂತೆ ಹೇಳಿದರು.

ವರ್ತಮಾನಸಂಗ್ರಹ.

ಇಂಗ್ಲೆಂಡ್ ದೇಶದಲ್ಲಿ ಪ್ರತಿವರ್ಷವೂ ಬಾಲವುಳ್ಳ ಮೂರು ಮಕ್ಕಳು ಜನಿಸುವುವಂತೆ!

ಅಮೇರಿಕೆಯ ಟೆಕ್ಸಾಸ್ ಪರ್ವತಗಳ ಮೇಲಿರುವ ಬಂಡೇರಾ ಗ್ರಾಮದಲ್ಲಿ ನೂರರಲ್ಲಿ 17 ಜನರಿಗೆ ಪ್ರತಿ ಹಸ್ತದಲ್ಲೂ ಆರಾರು ಬೆರಳುಗಳಿರುವುವಂತೆ!

ಅಮೇರಿಕೆಯಲ್ಲಿ ಬಿಸಲಿನ ತಾಪದಿಂದ ಘಂಟೆಯೊಂದಕ್ಕೆ 11 ಜನರಂತೆ ಮೃತಪಡುತ್ತಿರುವರೆಂದೂ, ಇದುವರೆಗೆ 700-800 ಜನರು ಮೃತಪಟ್ಟಿರುವರೆಂದೂ ತಿಳಿದುಬಂದಿದೆ.

ಸಿಲೋನಿನಲ್ಲಿ ವಾಸವಾಗಿರುವ ಒಬ್ಬ ಮಳಯಾಳಿಯು ಸರ್ವದಾ ಗ್ರಾಮಾಫೋನು ಹಾಕುತ್ತಾ ನೆರೆಹೊರೆಯವರಿಗೆ ತೊಂದರೆಯನ್ನುಂಟುಮಾಡುತ್ತಿದ್ದನೆಂಬ ಕಾರಣದ ಮೇಲೆ 20 ರೂ. ಜುಲ್ಮಾನೆಗೆ ಗುರಿಯಾದನು.

ಪೂರ್ವ ಆಫ್ಘಾನಿಸ್ಥಾನಕ್ಕೆ ಸೇರಿದ ನೂರಿಸ್ಥಾನ ಎಂಬಲ್ಲಿ ಒಂದು ನೀರಿನ ಬುಗ್ಗೆಯು ಕಂಡುಹಿಡಿಯಲ್ಪಟ್ಟಿದೆ. ಇದರಿಂದ ಒಂದು ತರಹ ಹುಳಿಯಾದ ಕೆಂಪು ಬಣ್ಣದ ನೀರು ಹೊರಡುತ್ತಿದ್ದು ಅದರ ಸೇವನೆಯಿಂದ ಕ್ಷಯ, ಅಪಸ್ಮಾರ ಮೊದಲಾದ ಕ್ರೂರ ರೋಗಗಳು ಗುಣವಾಗುವುವಂತೆ!

ಲಾಯರುಗಳ ಸಂಖ್ಯೆಯು ಪ್ರತಿವರ್ಷವೂ ಹೆಚ್ಚುತ್ತಿರುವುದರಿಂದ ಇನ್ನು ಮುಂದೆ ಹೈಕೋರ್ಟು ಅಡ್ವೋಕೇಟುಗಳನ್ನೂ ಪ್ಲೀಡರುಗಳನ್ನೂ ಸೇರಿಸಿಕೊಳ್ಳಕೂಡದೆಂದು ರಾಯಬರೇಲಿಯ ಬಾರ್ ಅಸೋಸಿಯೇಷನ್ನಿನವರು ಸಂಯುಕ್ತ ಪ್ರಾಂತದ ಹೈಕೋರ್ಟಿಗೂ ಇತರ ಬಾರ್ ಅಸೋಸಿಯೇಷನ್ನುಗಳಿಗೂ ವಿನಂತಿ ಮಾಡಿಕೊಂಡಿದ್ದಾರೆ.

ಪೋಲೆಂಡ್ ದೇಶದ ವಿಸ್ಟುಲ ನದಿಯಲ್ಲಿ ಮಹತ್ತರವಾದ ಪ್ರವಾಹವು ಬಂದು 5 ಕೋಟಿ ಪೌಂಡಿನಷ್ಟು ನಷ್ಟವಾಗಿರುವದಲ್ಲದೆ ಸಾವಿರಾರು ಜನಗಳು ನದಿಯಲ್ಲಿ ಮುಳುಗಿ ಮೃತಪಟ್ಟಿರುತ್ತಾರೆ. ಲಕ್ಷಾಂತರ ಜನರ ಮನೆಮಠಗಳೆಲ್ಲ ಕೊಚ್ಚಿಹೋಗಿವೆ. ರಾಜಧಾನಿಯಾದ ವಾರ್ಸಾನಗರಕ್ಕೂ ನೀರು ನುಗ್ಗುವ ಸಂಭವವಿದೆ ಎಂದು ತಿಳಿದುಬಂದಿದೆ.

[೩ನೆಯ ಪುಟದಿಂದ ಮುಂದುವರಿದುದು.]

ಎಚ್ಚರಗೆಡಿಸುವ ಪದಾರ್ಥಸೇವನೆಯಲ್ಲಿ ಬದ್ಧ ಕಂಕಣರಾಗಿರುವುದು ಈಗಲೂ ಕಂಡುಬರುತ್ತಿದೆ. ನಿಮ್ನ ಜಾತಿಯ ಹಿಂದುಗಳಂತೂ ಹೆಂಡ, ಸಾರಾಯಿ, ಗಾಂಜ, ಬಂಗಿ, ಅಫೀಮು, ಗುಡುಗುಡೀ ತಂಬಾಕ ಮುಂತಾದವುಗಳನ್ನು ಹೊಟ್ಟೆಯನ್ನು ತುಂಬುವ ರೊಟ್ಟಿ ಬುತ್ತಿಗಳನ್ನುಂಬುವಂತೆ ದಿವಸದಲ್ಲಿ ಎಷ್ಟೋ ಸಾರೆ ಸೇವನೆ ಮಾಡುತ್ತಿರುವರು. ಇನ್ನು ಹೆಚ್ಚಾಗಿ ರೊಕ್ಕವುಳ್ಳ ಉಚ್ಚ ಜಾತಿಯ ಹಿಂದುಗಳು ಹೆಂಡ ಸರಾಯಿಗಳನ್ನು ಕುಡಿಯಲು ನಾಚಿಕೊಳ್ಳುವರಾದರೂ ಇಂಗ್ರೇಜಿಯವರ ಬ್ರಾಂಡಿಯನ್ನು ಮಾತ್ರ ಬಹಳ ಆನಂದದಿಂದ ಕುಡಿಯುವರು; ಇಂಥವರಲ್ಲಿಯೇ ಮಾಧ್ವಮತ ಜನರು ಕೆಲವರು—ಹೆಂಡವನ್ನು ಕಾಳೀ ದುರ್ಗಾದೇವಿಯರು ಕುಡಿದಿರುವರೆಂತಲೂ, ಬಂಗಿ, ಗಾಂಜಗಳನ್ನು ಮಹಾದೇವನು ಸ್ವೀಕರಿಸಿರುವನೆಂತಲೂ ಹೇಳಿಕೊಳ್ಳುತ್ತ ಹೋಳೀ ಹುಣ್ಣಿವೆ ಮುಂತಾದ ಹಬ್ಬಗಳಲ್ಲಿಯೂ, ಮದುವೆ ಮುಂತಾದ ಸಮಾರಂಭಗಳಲ್ಲಿಯೂ ವಿಶೇಷವಾಗಿ ಸೇವಿಸುತ್ತ ಎಚ್ಚರ ತಪ್ಪಿ ಒದರಾಡುತ್ತಿರುವುದಿಷ್ಟೇ ಅಲ್ಲ, ಕೆಲವರಂತೂ ಅನ್ನ ನೀರುಗಳನ್ನು ಸಹ ಬಿಟ್ಟು 'ಹಂಬರ್ಲಾ, ಹಂಬರ್ಲಾ' ಎಂದು ಚೀರಾಡುತ್ತ 'ಬಲುಮಜಾದಾರಿ ತಂಬಾಕಾ, ಸೇದಿನೋಡೊ ಅಪ್ಪ ಜೋಕಾ, ಕಾಡಸ್ತೀತಿ ಸವಗಲೋಕಾ' ಮುಂತಾಗಿ ಹಂಡಭಂಡ ಲಾವಣಿಗಳನ್ನು ಹಾಡಿ ಹಾಡಿ ಕುಣಿದಾಡುತ್ತಿರುವರು. ಬುದ್ಧಿವಂತರು ಇಂತಹ ಕೆಟ್ಟ ಹಾಡುಗಳನ್ನು ಕೇಳಿ ಕೇಳಿ ಬೆಚ್ಚಿ ಹೋಗುತ್ತಿರುವರು ಉಪಾಯವಿಲ್ಲ.

ನಮ್ಮ ಇಂಗ್ರೇಜೀ ಸರಕಾರಕ್ಕಾದರೂ ಈ ಮಾದಕವಸ್ತುಗಳಿಂದ ವಿಶೇಷ ಲಾಭವಿರುವುದರಿಂದ ಇವುಗಳ ಸೇವನೆಯು ಹಿಂತೆಗೆಯಲಿಲ್ಲ. 'ಮಾದಕವಸ್ತುವನ್ನು ಸೇವಿಸಿ ತಪ್ಪು ಮಾಡುವವನಿಗೆ ಶಿಕ್ಷೆಯು ವಿಧಿಸಲ್ಪಡುವುದೆಂಬ ಆಜ್ಞೆಯೇನೋ ನಮ್ಮ ಪ್ರಜಾಂತದಲ್ಲಿರುವುದಾದರೂ ಕೆಟ್ಟ ವಸ್ತುವನ್ನು ತಿನ್ನಿಸಿ ಕೆಡಬೇಡವೆಂದರೆ ಕೆಡದೇ ಇರುವುದು ಹೇಗೆ ತಾನೆ ಸಾಧ್ಯವೋ ನಮ್ಮ ದಯಾಳು ಸರಕಾರಕ್ಕೇ ಗೊತ್ತು. ಪ್ರತಿವರ್ಷವೂ ಲಕ್ಷಗಟ್ಟಲೆ ಜನರು ಮಾದಕವಸ್ತುವಿನ ವ್ಯಾಪಾರ ಮತ್ತು ಸೇವನೆಯ ವಿಷಯದಲ್ಲಿ ತಪ್ಪು ಮಾಡಿ ಶಿಕ್ಷೆಯನ್ನನುಭವಿಸುತ್ತಲೇ ಇದ್ದಾರೆ. ಮತ್ತೆ ಮತ್ತೆ ಮಾದಕಪದಾರ್ಥಗಳನ್ನು ತಿನ್ನುತ್ತಲೇ ಇದ್ದಾರೆ; ಇದಲ್ಲವೇ ಮೂರ್ಖತನವು?

ಇಂತಹ ಮಾದಕಪದಾರ್ಥಗಳ ಸೇವನೆಯಿಂದ ಮೊಟ್ಟಮೊದಲು ರಕ್ತವು ಕೆಟ್ಟು ಮುಂದೆ ಕ್ರಮವಾಗಿ ಎದೆ, ಶ್ವಾಸಕೋಶ, ಮೂತ್ರಕೋಶಗಳು ನಷ್ಟಭ್ರಷ್ಟವಾಗಿ ಹೋಗುವುದು ನಿಜವಾಗಿದೆ. ಇನ್ನು ತಿಳಿದೂ ತಿಳಿಯದವರಂತೆ ಓದುಬರಹ ಬಲ್ಲ ಎಷ್ಟೋ ಮಂದಿ ಕಾಲೇಜು ವಿದ್ಯಾರ್ಥಿಗಳೂ, ಉಪಾಧ್ಯಾಯರುಗಳೂ ತಮ್ಮ ಮುಖಗಳಿಂದ ಇಂಜನುಗಳಂತೆ ಹೊಗೆಯನ್ನು ಬಿಡುತ್ತಿರುವುದು ಎಷ್ಟು ಶೋಚನೀಯವಾದ ವಿಷಯವೆಂಬುದನ್ನು ವಾಚಕರೇ ಊಹಿಸಿಕೊಳ್ಳಲಿ. ಹೆಂಡಸಾರಾಯಿಗಳನ್ನು ಕದ್ದು ಮುಚ್ಚಿ ಕುಡಿದು ಮರ್ಯಾದೆಯನ್ನು ಕಾಯ್ದುಕೊಳ್ಳತಕ್ಕವರ ಸಂಖ್ಯೆಗೇನು ಕಡಿಮೆಯಿಲ್ಲ. ಅದರ ಜೊತೆಯಲ್ಲಿ ಸಿಗರೇಟು ಬೀಡಿಗಳನ್ನು ಸೇದತಕ್ಕವರ ಸಂಖ್ಯೆಯು ಅವರ ಸಂಖ್ಯೆಗಿಂತಲೂ ಹೆಚ್ಚಿ ಹೋಗಿದೆ; ಇನ್ನೂ ಹೆಚ್ಚುತ್ತಲೇ ಇದೆ. ಮಾಡುವುದೇನು? 'ಪಾಪಾಯತಸ್ಮೈ ನಮಃ.'

ಬೀಡಿ ಸಿಗರೇಟು ಮುಂತಾದವುಗಳಿಂದ ಆಗತಕ್ಕ ಲಾಭವಾದರೂ ಏನು? ಓಹೋ! ಹುಚ್ಚುತನ, ಕೆಮ್ಮು, ದಮ್ಮು, ಸಂಧಿವಾತ ಮುಂತಾದ ರೋಗಗಳುಂಟಾಗುವುದೆಂತಹ ಲಾಭ! ಅವುಗಳನ್ನು ಕೊಳ್ಳುಕೊಳ್ಳುವುದಕ್ಕಾಗಿ ದ್ರವ್ಯ ನಾಶವಾಗುವುದೆಂತಹ ಲಾಭ! ದೊಡ್ಡ ದೊಡ್ಡಗಳಿಂದ ಬಡಿದಾಟವಾಗುವುದೆಂತಹ ಲಾಭ! ಕೊನೆಗೆ ಕೋರ್ಟಿಗೆ ಹೋಗಿ ವ್ಯಾಜ್ಯಹೂಡಿ ಬುದ್ಧಿಗೇಡಿಯಾಗುವದೆಂತಹ ಲಾಭ! ಇದಕ್ಕೂ ಹೆಚ್ಚಿನದೇನಾಗಬೇಕು? ವಿಚಾರಮಾಡಿ ನೋಡಿದರೆ ಮಾದಕವಸ್ತು ಸೇವನೆಯಿಂದ ಇನ್ನೂ ಎಷ್ಟೋ ಹಾನಿಯುಂಟು. ವೀರ್ಯವು ಕೆಡುವುದಾಗಲಿ, ಬ್ರಹ್ಮಚರ್ಯವು ನಾಶವಾಗುವುದಾಗಲಿ, ರೋಗಿಯಾದ ಸಂತತಿಯುಂಟಾಗುವುದಾಗಲಿ, ಈ ಮಾದಕವಸ್ತು ಸೇವನೆಯ ಫಲವೇ ಆಹುದು. ಮನುಷ್ಯನನ್ನು ಎಚ್ಚರದಪ್ಪಿಸುವ ಎಲ್ಲಾ ಪದಾರ್ಥಗಳಲ್ಲಿಯೂ ಅಲ್ಪಾಲ್ಪಪ್ರಮಾಣದಿಂದ ವಿಷವು ಇದ್ದೇ ಇರುವುದು. ಒಂದು ಪೌಂಡು ತಂಬಾಕದಲ್ಲಿ ಮನುಷ್ಯನನ್ನು ತತ್ಕಾಲದಲ್ಲಿಯೇ ಕೊಲ್ಲಲು ಸಮರ್ಥವಾದ ೧ ತೊಲೆ ವಿಷವು ಹೊರಡುವುದೆಂದು ತಿಳಿದುಬಂದಿದೆ. ತಂಬಾಕದಲ್ಲಿ ಇಂತಹ ವಿಷವಿರುವುದರಿಂದಲೇ ಆ ಹೊಲದಲ್ಲಿ ಹಾವು ಕೂಡ ಹಾಯ್ದಾಡುವುದಿಲ್ಲವೆಂದು ಪ್ರವಾಣಿಕರು ಹೇಳುತ್ತಾರೆ. ಮನುಷ್ಯನು ಈ ಎಲ್ಲಾ ವಿಷಯವನ್ನು ತಿಳಿದು ತಿಳಿದೂ ಶರೀರಕ್ಕೆ ಹಾನಿಯಾಗುವುದೆಂಬುದನ್ನು ಲಕ್ಷಿಸದೆ ಕ್ರಿಮಿ, ಕೀಟ, ಪಶುಪಕ್ಷಿಗಳೂ ಸಹ ಮುಟ್ಟದಿರುವ ಮಾದಕ ಪದಾರ್ಥಗಳನ್ನು ತಿನ್ನುತ್ತಲೂ ಸೇಳುತ್ತಲೂ ಬೀಳುತ್ತಲೂ ಇರುವನೆಂದು ಬರೆಯಲು ಬಹಳ ವಿಷಾದವೆನಿಸುತ್ತದೆ.

ಸರಕಾರೀ ರಿಪೋರ್ಟನ್ನು ನೋಡಲಾಗಿ ಪ್ರತಿವರ್ಷದಲ್ಲಿ ೨೫ ವರ್ಷಕ್ಕಿಂತಲೂ ಕಡಿಮೆ ವಯಸ್ಸುಳ್ಳ ೧೯೨೫೩೧೯ ಜನರು ಕೇವಲ ಮಾದಕಪದಾರ್ಥಗಳನ್ನು ತಿಂದೇ ಸಾಯುತ್ತಿರುವರೆಂದು ಕಂಡುಬಂದಿದೆ. ಇದರಿಂದ ಈ ಕಾಲದ ಹಿಂದೂ ದೇಶದ ಜನರ ಆಯುಷ್ಯವು ೧೦೦ ರಿಂದ ೩೩ ಕ್ಕಿಳಿದಿದೆ ಎಂದು ಆಯುಃಪರಿಮಿತಿಕಾರರು ನಿರ್ಣಯಿಸಹತ್ತಿದ್ದಾರೆ. ಇದೇನು "ಶತಾಯುರ್ವೈಪುರುಷಃ" ಎಂಬ ವೇದವಾಣಿಯು ಅಸತ್ಯವಾಯಿತೆ? ಗಂಗನು ಹೆಂಡತಿಗೆ ತಾಳಿಯನ್ನು ಕಟ್ಟುವಾಗ "ತ್ವಂಜೀವ ಶರದಃಶತಂ" ಎಂದು ಆಶೀರ್ವದಿಸುತ್ತಿದ್ದ ಪುರಾಣ ಮಂತ್ರವು ಈಗಲೂ ಮದುವೆಯಲ್ಲಿ ಹಾಗೆಯೇ ಉಪಯೋಗಿಸಲ್ಪಡುತ್ತಿದೆ. ಕಾಲಕ್ಕೆ ಸರಿಯಾಗಿ ಧರ್ಮಶಾಸ್ತ್ರವನ್ನು ಬದಲಾಯಿಸಬೇಕೆಂದು ಈಗಿನವರು ಪ್ರಚಂಡವಾಗಿ ವಾದಿಸಹತ್ತಿದ್ದಾರೆ. ಇವರ ಚೊಳ್ಳುಮಾತಿಗಂಜಿ ನಾವು 'ತ್ವಂ ಜೀವ ಶರದಃ ಶತಂ' ಎಂಬುದನ್ನು ಬದಲಾಯಿಸಬೇಕಾಗುವುದೇನು? ಹೀಗೆ ಮಾಡುವುದೆಂದಿಗೂ ಸಾಧ್ಯವಿಲ್ಲ. ಶಾಸ್ತ್ರದಲ್ಲಿ ಹೇಳಿದಂತೆ ನಡೆಯದೆ ಹಾಳಾಗತಕ್ಕವರಿಗಾಗಿ ಶಾಸ್ತ್ರವನ್ನೇಕೆ ಬದಲಾಯಿಸಬೇಕು? ಶಾಸ್ತ್ರಕ್ಕೆ ತಕ್ಕಂತೆ ಮನುಷ್ಯರನ್ನೇ ಬದಲಾಯಿಸುವುದೊಳ್ಳೆಯದು. ಎಂದರೇನೇ ಇದರಿಂದ ಲಾಭವಿದೆ. ಈಗಿನ ಜಾಣರ ಹೇಳಿಕೆಯಂತೆ ಬದಲಾಯಿಸುವ ಶಬ್ದದಲ್ಲಿ ಆರೋಗ್ಯವುಳ್ಳವನೂ ಸಹ ೩೩ ವರ್ಷಕ್ಕೆ ಸರಿಯಾಗಿ ಕಲ್ಲುಕಟ್ಟಿಕೊಂಡು ಭಾವಿಯಲ್ಲಿ ಬೀಳಬೇಕಾಗುವುದಲ್ಲವೆ? ಧರ್ಮಶಾಸ್ತ್ರವನ್ನು ಕಾಲಕ್ಕೆ ಸರಿಯಾಗಿ ಬದಲಾಯಿಸಬೇಕೆಂದು ವಾದಿಸತಕ್ಕವರು ಈ ಮೇಲಿನ ನಿರ್ಣಯವನ್ನೊಪ್ಪಿಕೊಳ್ಳುವರೇನು? ಮಹಾಶಯರೇ! ನೂರು ವರುಷದ ಬಾಳುವೆ ಎಲ್ಲಿ? ೩೩ ವರುಷಕ್ಕೆ ಸಾಯುವುದೆಲ್ಲಿ? ಹೀಗಾಗಿರುವುದಕ್ಕೆ ಮೂಲಕಾರಣವೆಂದರೆ ಪ್ರಾಚೀನಧರ್ಮದ ಮೇಲುಂಟಾಗಿರುವ ಅಶ್ರದ್ಧೆಯೆಂತಲೇ ನಮಗೆ ತಿಳಿದುಬರುವುದು. ಆದುದರಿಂದ ದುರ್ವಾದವನ್ನು ಬಿಟ್ಟು ಸುವಾದವನ್ನು ಕೊಟ್ಟು ಇನ್ನಾದರೂ ಧರ್ಮಕ್ಕೆ ಶರಣಾಗತರಾಗಿ ಎಲ್ಲರೂ ಸತ್ಫಲಗಳನ್ನು ಹೊಂದುವುದು ಒಳಿತಾಗಿದೆ.

ಕೆಟ್ಟ ಆಹಾರವನ್ನು ತಿಂದರೆ ಹೊಟ್ಟೆ ಕೆಡುವುದೆಂಬ ಮಾತು ಸತ್ಯವಷ್ಟೇ? ಇಂತಹ ವೇಳೆಯಲ್ಲಿ ಆರೋಗ್ಯವುಂಟಾಗಬೇಕಾದರೆ ಲಂಘನ (ಉಪವಾಸ) ಕ್ರಿಯೆಯು ಅವಶ್ಯವಾಗಿ ಬೇಕು. ಆದುದರಿಂದಲೇ ಹಿರಿಯರು "ಲಂಘನಂ ಪರಮೌಷಧಂ" ಎಂದು ಹೇಳುತ್ತ ಬಂದಿದ್ದಾರೆ. ಇಂಜನುಗಳು ಬಹಳ ದಿವಸ ಬಾಳಿಕೆ ಬರಲೆಂಬುದ್ದೇಶದಿಂದ ಅವುಗಳನ್ನಾಗಾಗ್ಗೆ ನಿಲ್ಲಿಸಿ ಎಣ್ಣೆ ಮುಂತಾದವುಗಳಿಂದ ಸ್ವಚ್ಛಮಾಡುತ್ತಿರುವಂತೆ ನಾವೂ ನಮ್ಮ ದೀರ್ಘಾಯುಷ್ಯಲಾಭಕ್ಕಾಗಿ ಆಗಾಗ್ಗೆ ಉಪವಾಸವಿದ್ದು ಹಾಲು ಹಣ್ಣಿನ ರಸ, ತಣ್ಣೀರು ಮುಂತಾದವುಗಳನ್ನು ಸೇವಿಸುತ್ತ ದೇಹವನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಈ ಉಪವಾಸವ್ರತವನ್ನು ನಾವೀಗ ಹೊಸದಾಗಿ ಹೇಳಬೇಕಾಗಿಲ್ಲ. ಇದು ಎಷ್ಟೋ ದಿನಗಳಿಂದ ಎಡೆಬಿಡದೆ ಸಾಗಿಬಂದಿದೆ; ಆದರೆ ಈಗಿನ ಉಪವಾಸವ್ರತದಲ್ಲಿ ಕಂಡುಬಂದ ನ್ಯೂನತೆಗಳನ್ನು ತಿದ್ದುವುದಕ್ಕಾಗಿ ಸ್ವಲ್ಪ ಪ್ರಯತ್ನ ಪಡಬೇಕಾಗಿದೆ.

ಸಾಧಾರಣವಾಗಿ ಉಪವಾಸವೆಂಬುದರ ಅರ್ಥವು ಬಹಳ ಹೊತ್ತಿನವರೆಗೆ ಊಟಮಾಡದಿರುವಿಕೆ ಅಥವಾ ಸಾಧ್ಯವಾದ ಮಟ್ಟಿಗೂ ಸಂಪೂರ್ಣವಾಗಿ ಊಟಬಿಡುವಿಕೆ ಎಂದಾಗುವುದು. ಆದರೆ ಈ ಉಪವಾಸವನ್ನೇ ಧರ್ಮಬುದ್ಧಿಯಿಂದ ಆಚರಿಸಿದರೆ ಈಶ್ವರಪ್ರಾಪ್ತಿಯ ಮಾರ್ಗಗಳಲ್ಲಿ ಇದು ಪ್ರಧಾನವಾದ ಮಾರ್ಗವೆಂದು ತಿಳಿಯಲ್ಪಡುವುದು. ಹಿಂದಿನ ಕಾಲದಲ್ಲಿ ಉಪವಾಸ ಮಾಡುವ ಪದ್ಧತಿಯು ವಿಶೇಷವಾಗಿದ್ದಿತು. ನವೀನ ಸಭ್ಯತೆಯು ಈ ಕಾಲದಲ್ಲಿ ಉಪವಾಸಮಾಡುವವೆಂದರೆ ಹಾಸ್ಯಮಾಡಿ "ಏಕಾದಶ್ಯಾಂ ವಿಶೇಷೇಣ ಕರ್ತವ್ಯಂ ಭೋಜನದ್ವಯಂ" ಎಂದು ಹೇಳುವುದೊಂದು ರೂಢಿಯು ಜನರಲ್ಲಿ ಬಂದುಹೋಗಿದೆ. ಇಂಥವರ ಸಲುವಾಗಿ ನಾವು ಏನೂ ಹೇಳಲಾರೆವು. ಪೂರ್ವಿಕರು ಈ ಉಪವಾಸವ್ರತವನ್ನು ರೋಗನಿವಾರಣೆ, ಆರೋಗ್ಯರಕ್ಷಣೆ, ಮಾನಸಿಕ ಸ್ಥಿರತೆ, ನೈತಿಕ ಮತ್ತು ಆಧ್ಯಾತ್ಮಿಕೋನ್ನತಿಗಳನ್ನುದ್ದೇಶಿಸಿಕೊಂಡೇ ಮಾಡುತ್ತಿದ್ದರು. ಈಗಲಾದರೋ ಶರೀರವನ್ನಾರೋಗ್ಯವಾಗಿಟ್ಟುಕೊಳ್ಳುವುದಕ್ಕಾಗಿ ಉಪವಾಸವು ಮಿಗಿಲಾದ ಚಿಕಿತ್ಸೆಯೆಂದು ಅಲ್ಲಲ್ಲಿಯೇ ಕೆಲವರು ಹೇಳುತ್ತಲಿದ್ದಾರೆಂಬುದೊಂದು ಆನಂದದ ಸಂಗತಿಯು. ಉಪವಾಸಮಾಡುವುದರಿಂದ ಶಾರೀರಕ, ಮಾನಸಿಕ ವಿಕಾರಗಳೂ, ಅಜೀರ್ಣದಿಂದುಂಟಾಗುವ ಜ್ವರ ಮುಂತಾದ ರೋಗಗಳೂ ನಿವಾರಣೆಹೊಂದುವವೆಂದು ಆಯುರ್ವೇದ ಶಾಸ್ತ್ರದಲ್ಲಿಯೂ ಬರೆದಿದ್ದಾರೆ. ಆದುದರಿಂದ ದೇಹಕ್ಕೆ ಆಲಸ್ಯವುಂಟಾದಾಗ, ಅಜೀರ್ಣ ರೋಗ ಬಂದಾಗ ಒಂದೆರಡು ದಿನಗಳ ಉಪವಾಸವನ್ನೋ, ಆರೋಗ್ಯವಾಗಿದ್ದಾಗ ಅರ್ಧ ದಿನದ ಉಪವಾಸವನ್ನೋ ಸಾಧ್ಯವಾದರೆ ಪೂರ್ಣ ದಿನದ ಉಪವಾಸವನ್ನೋ ಮಾಡುತ್ತಿರುವುದು ಬಹಳ ಒಳ್ಳೆಯದು.

ಈ ಉಪವಾಸದ ಮಹಿಮೆಯನ್ನು ಮ|| ಗಾಂಧಿಯವರು ಚೆನ್ನಾಗಿ ಅರಿತುಕೊಂಡಿದ್ದಾರೆ. ಆದುದರಿಂದಲೇ ಅವರು ತಮಗೆ ಮಾನಸಿಕ ವಿಕಾರಗಳುಂಟಾದಾಗಲೆಲ್ಲಾ ಉಪವಾಸವನ್ನು ಮಾಡಿ ಆತ್ಮಶುದ್ಧಿಯನ್ನು ಮಾಡಿಕೊಳ್ಳುತ್ತಿರುವರಲ್ಲದೆ ದೀರ್ಘಾಯುಗಳಾಗುತ್ತಲಿದ್ದಾರೆಂಬುದು ಎಲ್ಲರಿಗೂ ಕಂಡುಬಂದಿದೆ. ಉಪವಾಸದಿಂದ ಸಹನಶಕ್ತಿಯು ಹೆಚ್ಚುವದಲ್ಲದೆ ಶರೀರವು ರೋಗರಹಿತವಾಗಿರುವುದೆಂಬುದು ಸಹಜವಾದ ಮಾತು.

ರಟ್ಟೀಹಳ್ಳಿ ಪಟ್ಟಾಧ್ಯಕ್ಷರ ನಿಧನ.

ಧಾರವಾಡ ಜಿಲ್ಲಾ ಹಿರೇಕೆರೂರು ತಾಲೂಕು ರಟ್ಟೀಹಳ್ಳಿ ಕಬ್ಬಿಣಕಂಥಿ ಷ|| ಬ್ರ|| ಪಟ್ಟಾಧ್ಯಕ್ಷ ಗುರುಸಿದ್ಧಲಿಂಗ ಶಿವಾಚಾರ್ಯರು ಈ ಭಾವ ಸಂವತ್ಸರದ ನಿಜಶ್ರಾವಣ ಬ|| ೭ ಸೋಮವಾರ ಉದಯಕ್ಕೆ ಶಿವೈಕ್ಯರಾದರು. ಇವರು ಷ|| ಬ್ರ|| ಕಡೇನಂದೀಹಳ್ಳಿ ಮಹಾಲಿಂಗಸ್ವಾಮಿಗಳಲ್ಲಿ ಸಾಹಿತ್ಯ, ವ್ಯಾಕರಣ, ವೇದಾಧ್ಯಯನ ಮೊದಲಾದ್ದಂತವನ್ನು ಅಭ್ಯಾಸಮಾಡಿ ಅಚಾರನಿಷ್ಠರಾಗಿ ಶಿಷ್ಯಮಂಡಳಿಗೆ ಸದ್ಬೋಧೆಯನ್ನು ಮಾಡುತ್ತ ಯಾವಾಗಲೂ ಸತ್ಕಾಲಕ್ಷೇಪ ಮಾಡುತ್ತಲಿದ್ದರು. ಅವಸಾನಕಾಲದಲ್ಲಿ ಕಡೇ ನಂದೀಹಳ್ಳಿ ಶ್ರೀಗಳನ್ನು ಕರೆಸಿ ತಾರಕ ಮಂತ್ರೋಪದೇಶವನ್ನು ಪಡೆದರು. ತಮ್ಮ ಉತ್ತರಾಧಿಕಾರಕ್ಕೆ ದಾರುಕಶಾಖಾವರ್ಗಗಳಾದ ಪುತ್ರವರ್ಗೀಯ ಶ್ರೀಜಯಸಿದ್ಧಲಿಂಗ ಮರಿದೇವರನ್ನು ತಮ್ಮ ಸನ್ನಿಧಿಯಲ್ಲಿ ಸಂಸ್ಕಾರಮಾಡಿ ವಿದ್ಯಾಭ್ಯಾಸಂಗದಲ್ಲಿ ತೊಡಗಿಸಿದ್ದರಲ್ಲದೆ ಆಚಾರವಂತರನ್ನಾಗಿಯೂ ಮಾಡಿ ಈ ಮುಂಚೆ ಬರೆಹಮೂಲಕ ಮಾಡಿದ ಸಮಾಚಾರವನ್ನು ಅಪ್ಪಣೆ ಕೊಟ್ಟು ತಮ್ಮ ಸಂಕಲ್ಪವು ನೆರವೇರುವಂತೆ ಮಾಡಬೇಕಾಗಿ ಕೂಡಿದ ಜನರಲ್ಲಿ ಹೇಳಿ ಶಿವಧ್ಯಾನತತ್ಪರರಾಗಿ ಶಿವಸಾಯುಜ್ಯವನ್ನು ಹೊಂದಿದರು. ಅನಂತರ ಸ್ವಾಮಿಗಳ ಕಳೇಬರದ ಉತ್ಸವವು ರುದ್ರಭೂಮಿಗೆ ಅನೇಕ ವೈಭವಗಳಿಂದಲೂ ಗುರುಭಜನೆಯಿಂದಲೂ ಸಾಗಿತು. ವೇ|| ಚನ್ನವೀರಶಾಸ್ತ್ರಿಗಳು ಮೈಸೂರ ಇವರ ಪೌರೋಹಿತ್ಯದಲ್ಲಿ ವಿಧ್ಯುಕ್ತಪ್ರಕಾರ ಅಂತ್ಯೇಷ್ಟಿಕಾರ್ಯಗಳೆಲ್ಲವೂ ಸಾಂಗವಾಗಿ ನಡೆಯಿಸಲ್ಪಟ್ಟವು. ಸ್ವಾಮಿಗಳ ಮಸ್ತಕದ ಕಿರೀಟವನ್ನು ಶ್ರೀ ಜಯಮರಿಸಿದ್ಧಲಿಂಗಸ್ವಾಮಿಗೆ ಹಾಕಿ ಪಂಚಾಚಾರ್ಯ ಜಯಘೋಷವು ಮಾಡಲ್ಪಟ್ಟಿತು. ಗುರುದಕ್ಷಿಣೆಯು ಕೊಡಲ್ಪಟ್ಟು ಪ್ರಭಾಪೋಷಣೆಗಾಗಿ ೧ ರೂಪಾಯಿ ಸಮರ್ಪಿಸಲ್ಪಟ್ಟಿತು.

ಗುರುಕಿಂಕರ
ವೈದಿಕಜ್ಯೋತಿಷಜ್ಞಾನ ಮಂದಿರ,
ವೇ|| ಚನ್ನವೀರಾರಾಧ್ಯಶಾಸ್ತ್ರಿಗಳು ಮೈಸೂರು ಹಿರೇಮಠ.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಕೆಂಪನಂಜಮ್ಮಣ್ಣಿಯವರ ನಿಧನಕ್ಕಾಗಿ ಸೇರಿದ ದುಃಖಪ್ರದರ್ಶನ ಸಭಾ. ದಾವಣಗೆರೆ.

ಶ್ರೀ ಜಗದ್ಗುರು ಅಭಿನವರೇಣುಕ ವೀರಶೈವ ವಿದ್ಯಾವರ್ಧಕ ಸಂಘದ ವತಿಯಿಂದ ದಾವಣಗೆರೆ ಶ್ರೀಮಂತ ಮ||ರಾ|| ಮಾಗಾನಹಳ್ಳಿ ಹಡಕ್ತರಪ್ಪನವರ ವಿಶಾಲವಾದ ಭವನದಲ್ಲಿ ದುಃಖಪ್ರದರ್ಶನ ಸಭೆಯು ತಾ|| 13.7.1934 ರಲ್ಲಿ ಸೇರಿದ್ದಿತು. ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ|| ಸಫ್ದರ್‌ಹುಸೇನ ಸಾಹೇಬರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮುನ್ಸಿಪಲ್ ಪ್ರೆಸಿಡೆಂಟರ್ ಮಿ|| ಸುಬ್ಬರಾಯರು, ಅಮಲ್ದಾರ್ ಮಿ|| ವೆಂಕಟರಾಮರಾವ್, ಹೈಸ್ಕೂಲ್ ಹೆಡ್‌ಮೇಸ್ಟರ್ ರಾಜಾರಾಯರವರು, ಡಾ|| ರಾಮರಾಯರು, ಡಾ|| ಪೇಟನ್ ಲೇಡಿ ಅಸಿಸ್ಟೆಂಟ್ ರಿಯವರೇ ಮೊದಲಾದ ಅಧಿಕಾರಿಗಳೂ ಮಿ|| ಹೆಚ್. ಎಂ. ಸಿದ್ದರಾಮಯ್ಯನವರು ಮಿ|| ಬಿ. ಹನುಮಂತರಾಯರು ಮಿ|| ಭೀಮಸೇನರಾಯರು ಮಿ|| ನಾಡಿಗಬಸವಪ್ಪನವರು ಮಿ|| ಜಿ. ಕೃಷ್ಣರಾಯರು ಇವರೇ ಮೊದಲಾದ ವಕೀಲರೂ ಶ್ರೀಮಂತ ಮ||ರಾ|| ಚನ್ನಗಿರಿ ರಂಗಪ್ಪನವರು ಮ||ರಾ|| ಮುದೇಗೌಡ, ಮುರಿಗಪ್ಪನವರು ಮ||ರಾ|| ಸೊಪ್ಪಿನ ಭರಮಪ್ಪನವರು, ಇಜಾರ್‌ದಾರ ಅಜೀಜ ಸಾಹೇಬರು, ಮ||ರಾ|| ಬಳ್ಳಾರಿ ಖಾಸಿಮಸಾಹೇಬರು ಮ|| ರಾ|| ಹುಸೇನಮಿಯಾ ಸಾಹೇಬರು ವೇ|| ಮಲೇಬೆಂನೂರುಮಠದ ಹಾಲಸಿದ್ಧಯ್ಯನವರು ಮ|| ರಾ|| ಯಜಮಾನ್ ಬೆಳ್ಳೂಡಿ ವೀರಪ್ಪನವರು ಇವರೇ ಮೊದಲಾದ ಪುರಪ್ರಮುಖರು ಹಾಜರಿದ್ದರು.

ಅಧ್ಯಕ್ಷರು ಗತಿಸಿದ ಶ್ರೀವರ್ಣ ಮಹಾರಾಣಿಯವರ ಗುಣಕಥನವನ್ನು ಮಾಡಿ ತಮಗುಂಟಾದ ದುಃಖವನ್ನು ವಿವರಿಸಿದರು. ಅನಂತರ ಕನ್ನಡಪಂಡಿತರಾದ ಮ|| ರಾ|| ಅನಂತರಾಮಯ್ಯನವರು ದಿವಂಗತ ಮಹಾಮಾತೃಶ್ರೀಯವರ ಸದ್ಗುಣಾವಳಿಗಳನ್ನೂ ಅವರು ಪ್ರಜೆಗಳಿಗೆ ಮಾಡಿರುವ ಮಹೋಪಕಾರವನ್ನೂ ವಿಸ್ತಾರವಾಗಿ ವರ್ಣಿಸಿದರು. ಪ್ರಾವಿನ್ಷಿಯಲ್ ಏಜಂಟರಾದ ವೇ|| ಮೂ|| ಜಿ. ಎಂ. ಮಹಾದೇವಯ್ಯನವರು ಶ್ರೀವರ್ಣ ಮಹಾರಾಣಿಯವರಿಂದ ಪ್ರಜೆಗಳಿಗಾಗಿರುವ ಸರ್ವತೋಮುಖವಾದ ಮಹೋಪಕಾರಗಳನ್ನು ಆಂಗ್ಲಭಾಷೆಯಲ್ಲಿ ವಿವರಿಸಿದರು.

ಅನಂತರ ಸಭಿಕರೆಲ್ಲರೂ ಎದ್ದು ನಿಂತಿರುವಾಗ ಈ ಕೆಳಗೆ ಕಂಡ ಗೊತ್ತುವಳಿಯು ಸರ್ವಾನುಮತಿಯಿಂದ ಪಾಸಾಯಿತು. 'ದಾವಣಗೆರೆ ಶ್ರೀಜಗದ್ಗುರು ಅಭಿನವ ರೇಣುಕ ವೀರಶೈವ ವಿದ್ಯಾವರ್ಧಕಸಂಘದ ಸದಸ್ಯರು ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಶ್ರೀ ಕೆಂಪನಂಜಮ್ಮಣ್ಣಿಯವರು ಪರಂಧಾಮವನ್ನೈದುದಕ್ಕಾಗಿ ತಮಗುಂಟಾಗಿರುವ ಅತ್ಯಂತ ರಾಜಭಕ್ತಿ ಪೂರ್ವಕವಾದ ದುಃಖಸಂತಾಪಗಳನ್ನು ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ಇತರ ರಾಜಕುಟುಂಬದವರಿಗೂ ಈ ಮೂಲಕ ಬಿನ್ನೈಸುತ್ತಾರಲ್ಲದೆ ದಿವಂಗತರ ಆತ್ಮಕ್ಕೆ ಸರ್ವಶಕ್ತನಾದ ಪರಮೇಶ್ವರನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತಾರೆ.

ಕೆ. ಟಿ. ಜಂಬಣ್ಣ, ಸೆಕ್ರಟರಿ
ಶ್ರೀಜಗದ್ಗುರು ಅಭಿನವ ರೇಣುಕ
ವೀರಶೈವ ವಿದ್ಯಾವರ್ಧಕಸಂಘ,
ದಾವಣಗೆರೆ.

ಬ್ರಿಟಿಷ ಸಾಮ್ರಾಜ್ಯಕ್ಕೆ ತಾವು ಮಾಡಿದ ಸೇವೆಗಾಗಿ ತಮಗೊಂದು ರಾಜ್ಯವನ್ನು ನಿರ್ಮಾಣಮಾಡಿ ಕೊಡಬೇಕೆಂದು ಅಗಾಖಾನರು ಬ್ರಿಟಿಷ ಸರಕಾರವನ್ನು ಪ್ರಾರ್ಥಿಸಿದ್ದರು. ಇದನ್ನು ಸಾರ್ವಭೌಮ ಸರಕಾರದವರು ನಿರಾಕರಿಸಿದ್ದಾರೆಂದು ತಿಳಿದುಬಂದಿದೆ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 44

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶ್ರೀರಾಜಶೇಖರವಿಲಾಸ ವೀರಶೈವ ಮಾಡರ್ನ ಹೋಟೆಲ್

ನಂ. ೫, ಚಿಕ್ಕಪೇಟೆ, ದಿವಾನ್
ಸೂರಪ್ಪನವರ ಗಲ್ಲಿ,
(L. A. ಪೋರ್‌ವಾಲ್ ಕಂಪೆನಿಯ ಪಕ್ಕದ ಸಂದಿ)
ಬೆಂಗಳೂರು ಸಿಟಿ.

ಪರಸ್ಥಳದ ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಇರುವ ತೊಂದರೆಯನ್ನು ಹೋಗಲಾಡಿಸುವ ಉದ್ದಿಶ್ಯ, ವೀರಶೈವ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ಮೇಲ್ಕಂಡ ಹೋಟೆಲ್ ನವೀನ ರೀತಿಯಿಂದ ಇಡಲ್ಪಟ್ಟಿದೆ. ವೀರಶೈವ ಬಾಂಧವರು ಬೆಂಗಳೂರಿಗೆ ಬಂದಾಗ್ಗೆ ಒಂದಾವರ್ತಿ ಬಂದು ಪರೀಕ್ಷಿಸಿ ನೋಡಿ ಪ್ರೋತ್ಸಾಹಿಸಬೇಕಾಗಿ ವಿನಂತಿ. (20)

ಕೆ. ಶಿವಲಿಂಗಪ್ಪ.
ಬೆಂಗಳೂರು ಸಿಟಿ. ಪ್ರೊಪ್ರೈಟರ್.

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗೆಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14. ½ ಡಜನ್ 8-8-0 ಮತ್ತು ರೂ. 5

ಮಲೆರಿ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8.

The Malariana Co., Mangalore (21)

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣ, ಗ್ರಹಣಿ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಗೊಳಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್‌ಕಫ್ ರೆಮಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಉಪ್ಪುಕೆಮ್ಮು ಇವನ್ನು ನೀರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಬ್ಬಿಗೆ ಆಣೆ 5.

ಸಿರಪ್ ವೆಸಿಕೋಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ತೋರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡಸೀಸೆ ರೂ. 3-8-0, ಸಣ್ಣಸೀಸೆ ರೂ. 1-14-0.

ಟಿಕ್ಕು ಹೊಮ್ಯೋಪತಿ ಮದ್ದುಗಳೂ, ಶಸ್ತ್ರಾಚಿಕಿತ್ಸ್ಯಗಳೂ, ಶುದ್ಧ ಜರ್ಮನಿ ಮತ್ತು ಅಮೇರಿಕದವಾಗಿದ್ದು ದೊಡ್ಡ ಪರಿಮಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ'ವೆಂಬ ಪುಸ್ತಕ ಧರ್ಮಾರ್ಥ.

ಪತ್ರ:— ಮಲೇರಿಯಾನ ಕಂಪೆನಿ,
[47] (ಹಂಪನಕಟ್ಟೆ), 21, ಮಂಗಳೂರು

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 37

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೩೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನೀಶ್ವರರಿಗೆ ಶಿವಾದ್ವೈತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೧—೪
ಪಟ್ಟಾಭಿಷೇಕೋತ್ಸವಮಾಡಿರತಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇರ್ಪ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮತ್ರಿಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೪
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೪
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೪
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೪
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೪
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೪
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೪
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೪
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೪
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೨೦] ಪೋ. ಬಾ. ೫೧೧, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶನಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಮಾನವಿದ್ಯಾರ್ಥ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ವದೀಲೋಕಮಂ ||

ಸಂಪಾದಕರು—ಅಸ್ಮಾನ ವಿದ್ಯಾರ್ಥ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ಆಗಸ್ಟ್ ೧೯೩೪ [ಸಂಚಿಕೆ ೧೩

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಬುದ್ಧಿನಶಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ರೇಣುಕವಿಜಯಮಹಾಪುರಾಣ.

(ಶ್ರಾವಣಮಾಸವು ಬಂದಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀ ಜಗದ್ಗುರು ರೇಣುಕಾಚಾರ್ಯನ ಪವಿತ್ರ ಚರಿತ್ರವನ್ನು ಶ್ರವಣಮಾಡುವುದು ಪ್ರತಿಯೊಬ್ಬ ಗುರುಭಕ್ತರ ಆದ್ಯಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಆ ಮಹಿಮನ ಪುರಾಣವನ್ನು ತರಿಸಿಕೊಂಡು ಪುರಾತನ ಪದ್ಧತಿಯಂತೆ ಶ್ರಾವಣಮಾಸದಲ್ಲಿ ಪುರಾಣವನ್ನು ಪ್ರಾರಂಭಮಾಡಿ ಪ್ರಮಥಪುಂಗವನ ಸಚ್ಚರಿತ್ರವನ್ನು ಕೇಳಿ ತಮ್ಮ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೧ ರೂ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವದೀಕ್ಷಾಮಹೋತ್ಸವ.

ಚಿಕ್ಕನಾಯಕನಹಳ್ಳಿ ತಾಲೂಕು ಕುಪ್ಪೂರು ಗದ್ದುಗೆ ಮಠದಲ್ಲಿ ಇದೇ ತಿಂಗಳು ೨೨ ನೆಯ ತಾರೀಖಿನ ದಿವಸ ಬೆಳಗ್ಗೆ ಕೈ|| ಶ್ರೀ ವೀರಪ್ಪದೇವರ ಸಮಾಧಿಯ ಮೇಲೆ ರಚಿಸಿರುವ ಮಂಟಪದ ಸಂಪ್ರೋಕ್ಷಣೆಯೂ, ೧೧| ಘಂಟೆಗೆ ಶಿವದೀಕ್ಷಾಸಂಸ್ಕಾರವೂ, ಸಾಯಂಕಾಲ ೫ ಘಂಟೆಗೆ 'ಶಿವದೀಕ್ಷಾ' ವಿಷಯದಲ್ಲಿ ಬೆಂಗಳೂರು ಮಹಾಂತಿನಮಠದ ಅಧ್ಯಕ್ಷರಾದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರ ಭವ್ಯಭಾಷಣವೂ ನಡೆಯುವುದರಿಂದ ಆ ಕಾಲಕ್ಕೆ ಸಕಲ ಸದ್ಭಕ್ತರೂ ಆಗಮಿಸಿ ಗುರುಕೃಪೆಗೆ ಪಾತ್ರರಾಗಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

ಸ್ವೀಕಾರ

ಒಳ್ಳಾರಿ ಜಿ|| ಹುವ್ವಿನಹಡಗಲಿ ತಾ|| ಮೊರಗೇರಿ ಗ್ರಾಮನಿವಾಸಿಗಳಾದ ಬಣಜಿಗರ ಶ್ರೀಮಂತ ವೀರಭದ್ರಪ್ಪನವರು ಶ್ರೀ ಜಗದ್ಗುರು (ಶ್ರೀಶೈಲ) ಪರ್ವತ ಸಂಸ್ಥಾನದ ಸರ್ಕೀಟಿನ ಗುರುತ್ವಾಧಿಕಾರಿಗಳವರ ತಿದ್ಯಗಾಂಡೋಳನ ಮಹೋತ್ಸವವನ್ನೂ, ಪಾದಪೂಜೆಯನ್ನೂ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 1 ರೂ. ಯು, ಸಂಸ್ಥಾನದ ಸರ್ವಾಧಿಕಾರಿಗಳಾದ ವೇ|| ಕೆ. ಎಂ. ಸಿ. ಮಲ್ಲಯ್ಯನವರ ದ್ವಾರಾ ತಲ್ಪಿರುತ್ತದೆ.

ರಾಜಧಾನಿಯ ನಿವಾಸಿಗಳಾದ ಶ್ರೀ|| ದೇಶದಶೆಟ್ಟಿ ಕೋರಿ ಗುಬ್ಬಿಶೆಟ್ಟರು ಇದೇ ಆಗಸ್ಟ್ 6ನೇ ತಾರೀಖು ಸೋಮವಾರ ಶಿವಾಧೀನರಾದ ಪ್ರಯುಕ್ತ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ಯು ಇವರ ಅಳಿಯಂದಿರಾದ ತುಂಕೂರು ಮಂಡಿ ಮ|| ರಾ|| ಕೆ. ವೀರಶೆಟ್ಟಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪುರಾತನ ಚಿನ್ನದಗಣಿ !

ಪೆರ್ರೂವಿಯಾ ದೇಶದ ಸರಕಾರದವರು ಆಂಡಿಸ್ ಪರ್ವತಗಳ ಮೇಲೆ 13,000 ಅಡಿಗಳ ಎತ್ತರದಲ್ಲಿ ಇರುವ ಕೆಲವು ಪುರಾತನ ಚಿನ್ನದ ಗಣಿಗಳನ್ನು ಹೊಸದಾಗಿ ಶೋಧಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿರುತ್ತಾರೆ. ಈ ಕಾರ್ಯದಲ್ಲಿ ಕೆಲವು ಜನ ಬ್ರಿಟಿಷ್ ಇಂಜನಿಯರುಗಳು ಭಾಗವಹಿಸಿರುವರು. ಈ ಗಣಿಗಳಿಂದ ಅನೇಕ ಶತಮಾನಗಳ ಹಿಂದೆ 'ಇಂಕಾಸ್' ಎಂಬ ಜನರು ಅಪಾರವಾದ ಚಿನ್ನವನ್ನು ತೆಗೆದು ಅದರಿಂದ ತಮ್ಮ ಆರಾಧ್ಯದೇವತೆಯಾದ ಸೂರ್ಯನ ದೇವಾಲಯವನ್ನು ಅಲಂಕರಿಸುತ್ತಿದ್ದರಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಇನ್ನು ‘ **ಜಾತೋ ವ್ಯಾಸಸ್ತು ಕೈವರ್ತ್ಯಾ** ’ ಇತ್ಯಾದಿ ವಾಕ್ಯಗಳಿಂದ ಕೆಲವು ಋಷಿಗಳುತ್ಪತ್ತಿಯು ನೀಚಜಾತಿಯಿಂದಾಗಿರುವುದೆಂದು ತಿಳಿದುಬರುತ್ತದೆ. ಆದ್ದರಿಂದ ‘ ಜಾತಿಯು ಜನ್ಮಸಿದ್ಧವಾದುದಲ್ಲ ’ ವೆಂದು ಕೆಲವರು ನುಡಿಯುತ್ತಾರೆ. ಹಾಗೆ ನುಡಿಯುವವರಲ್ಲಿ ಕುಂಟಗೋಳಕರ ಮುಂದಾಳುಗಳೇ ಹೆಚ್ಚಾಗಿದ್ದಾರೆ. ಆ ಅನಭಿಜ್ಞರು ಶಬ್ದಾರ್ಥಗಳನ್ನು ಸ್ವಜನದೋಷಾಚ್ಛಾದನಸಾಧನೀಭೂತವಾದವುಗಳೆಂದು ನಂಬಿದ್ದಾರೆ; ಪಾಪ! ಅವರಿಗೆ ಅಷ್ಟು ಮಾತ್ರವಾದರೂ ಅಧಾರವು ಬೇಡವೇ? ಇರಲಿ; ಪೂರ್ವಪಕ್ಷಿಗಳಿಂದುದಾಹೃತವಾದ ‘ **ಋಷ್ಯಶೃಂಗಸ್ತ್ರು ಮೃಗ್ಯಾ** ’ ಎಂಬ ವಚನವೇ ಅವರ ನುಡಿಗಳ ಸಮಾಧಿಯಾಗಿರುತ್ತದೆ. ಆ ವಚನದಲ್ಲಿಯೇ ಕುಳಕುಂಬಾಗಸ್ತ್ಯರು ಕುಂಭ ಪರ್ಣ ಘಟಗಳಿಂದ ಜನಿಸಿದರೆಂದು ಪ್ರತಿಪಾದಿಸಲ್ಪಟ್ಟಿರುವುದಿಲ್ಲವೇ? ಇದು ಹೇಗೆತಾನೇ ಸಂಘಟಿಸುವುದು? ಮೃಗ ಪಕ್ಷಿ ತೃಣಗಳಲ್ಲಿ ಅನುರಕ್ತನಾಗುವನೆಂದೂ ಅವು ಮನುಷ್ಯರನ್ನು ಹಡೆವವೆಂದೂ ಹೇಳುವ ಮಾತಿನಲ್ಲಿ ಯಾರಾದರೂ ವಿಶ್ವಾಸವನ್ನಿಡಬಹುದೇ? ದರ್ಭೆಯೂ ಘಟವೂ ಪ್ರಸವಧರ್ಮವುಳ್ಳವುಗಳೇ? ಹೀಗೆ ಅನುಭವವಿರುದ್ಧವಾದ ಸಂಗತಿಯನ್ನು ನಮ್ಮ ಪೂರ್ವಪಕ್ಷಿಗಳು ಅದೆಂತು ನಂಬುವರು? ಇನ್ನು, ಅವರು ತಿರ್ಯಗಸುರಾಗವಾದರೂ ಬಾಧಕವಲ್ಲವೆಂದು ನುಡಿಯುವುದಕ್ಕಾದರೂ ಹೇಸದ ಮಾನವರಾಗಿರಲಿಕ್ಕಿಲ್ಲವಷ್ಟೇ! ನಮ್ಮ ಅಭಿಪ್ರಾಯವೇನೆಂದರೆ ಪ್ರಾಚೀನ ಋಷಿಗಳು ತಪೋನಿಧಿಗಳು, ಅವರು ಅತಿಮಾನುಷಕ ಮಾರ್ಗಗಳನ್ನು ಅಪ್ರತಿಹತವಾಗಿ ಆಚರಿಸಲು ಅಧಿಕಾರವನ್ನು ಪಡೆದವರಾಗಿದ್ದರು. ವರ್ತಮಾನಕಾಲದಲ್ಲಿ ನಾವು ಅಂತಹ ಕಾರ್ಯಗಳನ್ನು ಮಾಡಲಸಾಧ್ಯವೆಂಬುದನ್ನು ಅಂಗೀಕರಿಸದಿರುವ ಪರ್ಯಂತವೂ ಪೂರ್ವಪಕ್ಷ್ಯುದಾಹೃತ ಪ್ರಮಾಣವನ್ನು ಅಸಾರ್ಥಕವಾದುದೆಂದೇ ಹೇಳತಕ್ಕದ್ದು.

ಮತ್ತು, ಗುಣಕರ್ಮಾನುರೋಧದಿಂದೇ ಜಾತಿಯು ಸಿದ್ಧಿಸುವುದೆಂಬಭಿಪ್ರಾಯವನ್ನು ಅಂಗೀಕರಿಸಿ ಬ್ರಹ್ಮಜ್ಞಾನಿಯು ಬ್ರಾಹ್ಮಣ್ಯವುಳ್ಳವನೆಂದೂ, ಯುದ್ಧದಿಂದಾತ್ಮರಕ್ಷಣೆ ಅನ್ಯರಕ್ಷಣಾದಿಗಳನ್ನು ಮಾಡುವವನು ಕ್ಷತ್ರಿಯತ್ವವುಳ್ಳವನೆಂದೂ, ಕೃಷಿವಾಣಿಜ್ಯಾದಿಗಳಲ್ಲಿ ವ್ಯಾಪೃತನಾದವನು ವೈಶ್ಯತ್ವವುಳ್ಳವನೆಂದೂ, ಶುಶ್ರೂಷೆಯನ್ನು ಮಾಡುವಾತನು ಶೂದ್ರತ್ವವುಳ್ಳವನೆಂದೂ ಹೇಳುವುದರಲ್ಲಿ ದೋಷವೇನು? ಎಂಬುದಾಗಿ ಪೂರ್ವಪಕ್ಷಿಗಳು ನುಡಿವಲ್ಲಿಯೂ ಅನೇಕ ಆಕ್ಷೇಪಗಳು ಸಂಭವಿಸುತ್ತವೆ. ಹೇಗೆಂದರೆ, ಒಬ್ಬ ವ್ಯಕ್ತಿಯೇ ಬ್ರಹ್ಮಜ್ಞಾನ ಸಮರವ್ಯಾಪಾರ ಕೃಷಿವ್ಯಾಪಾರವುಳ್ಳವನಾಗಿರುವಾತನು ಯಾವ ಯಾವ ಜಾತಿಯನ್ನವಲಂಬಿಸಿ ವ್ಯವಹರಿಸತಕ್ಕದ್ದು? ಬ್ರಹ್ಮಜ್ಞಾನವಿರುವುದರಿಂದ ಅದನ್ನು ಪುರಸ್ಕರಿಸಿ ‘ ಬ್ರಾಹ್ಮಣ ’ ನೆಂದು ಹೇಳಲ್ಪಡುವನಾದರೆ, ಕ್ಷತ್ರಿಯವ್ಯಾಪಾರವಾದ ಯುದ್ಧಮಾಡುವಿಕೆಯೂ, ವೈಶ್ಯವ್ಯವಹಾರವೆನಿಸುವ ಕೃಷ್ಯಾದಿಗಳೂ ಅವನಲ್ಲಿ ಕಂಡುಬರುವುದರಿಂದ ಅವನೊಬ್ಬನನ್ನೇ ಮೂರು ಜಾತಿಶಬ್ದಗಳಿಂದ [‘ ಬ್ರಾಹ್ಮಣ ಕ್ಷತ್ರಿಯ ವೈಶ್ಯ ’ ಎಂಬ ಶಬ್ದಗಳಿಂದ] ಕರೆಯಬೇಕಾಗುವುದಲ್ಲವೇ? ಇದಂದರೋ! ಶಾಸ್ತ್ರಕ್ಕೂ ಲೋಕಾಚಾರಕ್ಕೂ ಒಪ್ಪಿಗೆಯಾದುದೇ ಹೇಗೆಂಬುದನ್ನು ಪರಾಮರ್ಶಿಸತಕ್ಕದ್ದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ನಾಮಗಳ ಅಂತ್ಯದಲ್ಲಿ ಕ್ರಮವಾಗಿ ಶರ್ಮ, ವರ್ಮ, ಗುಪ್ತವೆಂಬ ಪದಗಳನ್ನು ಜೋಡಿಸಿ ನುಡಿಯಬೇಕೆಂಬ ಒಂದು ವಿಧಿಯಿರುವುದು. ಪೂರ್ವೋಕ್ತರೀತಿಯಿಂದ ಪರಿಭಾವಿಸಿದರೆ ಜಾತಿತ್ರಯ ಧರ್ಮವುಳ್ಳ ಪುರುಷನ ಹೆಸರಿನ ಕೊನೆಯಲ್ಲಿ ಯಾವ ಪದವನ್ನು ಪ್ರಯೋಗಿಸತಕ್ಕದ್ದೆಂಬ ವಿಷಯದಲ್ಲಿ ಅದಾವನು ನಿರ್ಧರಿಸಿ ಹೇಳಬಲ್ಲನು? ಈ ವಿಧಗಳಾದ ಆಕ್ಷೇಪಗಳು ಅನೇಕವಾಗಿರುತ್ತವೆ. ಇವುಗಳಿಗುತ್ತರವೇನು? ಪ್ರಮಾಣಶೂನ್ಯವೂ ಕುತರ್ಕಪ್ರಚುರವೂ ಆದ ಕುಂಟಗೋಳಕರ ಅಪಲಾಪವು ಸಮಂಜಸವಾದ ಸಮಾಧಾನವೆನಿಸಬಹುದೇ? ಆದ್ದರಿಂದ ಜಾತಿಯು ಜನ್ಮಸಿದ್ಧತ್ವಾಂಗೀಕಾರದ ಹೊರತು ಗತ್ಯಂತರವೇ ಇಲ್ಲ.

ಕುರುಕುಲಪ್ರತೀಪಾಯಮಾನನಾದ ಭೀಷ್ಮಾಚಾರ್ಯನು ಸರ್ವಜ್ಞನಾದರೂ ತಾನು ಬ್ರಾಹ್ಮಣನೆಂದು ವ್ಯವಹರಿಸಲಿಲ್ಲ. ಮತ್ತು:—

ಮುಖಾಗ್ರೇ ಚತುರೋ ವೇದಾಃ ಕರಾಗ್ರೇ ಸಶರಂ ಧನುಃ ।
ಉಭಯೋರ್ದ್ರೋಣಸಾಮರ್ಥ್ಯಂ ಶಾಪಾದಪಿ ಶರಾದಪಿ ॥

ಎಂಬಂತೆ ಬ್ರಾಹ್ಮಣಾಗ್ರಣಿಯಾದ ದ್ರೋಣಾಚಾರ್ಯನು ಬ್ರಹ್ಮಜ್ಞಾನಿಯಾಗಿದ್ದರೂ ಕ್ಷತ್ರಿಯೋಚಿತವಾದ ಯುದ್ಧಕರ್ಮದಲ್ಲಿಯೇ ತೊಡಗಿದ್ದನು; ಆದರೂ ಅವನು ತನ್ನನ್ನು ಕ್ಷತ್ರಿಯನೆಂದು ಹೇಳಿಕೊಳ್ಳಲಿಲ್ಲ. ತನ್ನ ಜನ್ಮಸಿದ್ಧವಾದ ಜಾತಿಯನ್ನಾಶ್ರಯಿಸಿಯೇ ‘ಬ್ರಾಹ್ಮಣ’ ನೆಂದು ವ್ಯವಹರಿಸಿದನು. ಅಲ್ಲಿ ‘ **ಅಹಿಜಾಹಂ ಪುರಾವಿಪ್ರೈರ್ಗರ್ಹಿತೋ ಬ್ರಾಹ್ಮಣೋ ವಸೇ** ’ ಎಂಬುದಾಗಿ ದ್ರೋಣಾಚಾರ್ಯನು ಕ್ಷತ್ರಿಯ ವ್ಯಾಪಾರಾವಲಂಬನದಲ್ಲಿಯೂ ತನ್ನನ್ನು ಬ್ರಾಹ್ಮಣನೆಂದೇ ಪ್ರತಿಪಾದಿಸುವುದು ಪರಮತ್ರಮಾಣವಾಗಿದೆ. ಈ ರೀತಿಯಾಗಿ ಯಾವುದಾದರೊಂದು ಕರ್ಮವು ಮಾಡಲ್ಪಡುತ್ತಿದ್ದರೂ ಸ್ವಜನ್ಮಸಿದ್ಧವಾದ ಜಾತಿಯೇ ಹೇಳಲ್ಪಡುವುದು ನ್ಯಾಯವಾದುದೆಂಬ ವಿಷಯದಲ್ಲಿ ಇಂತಹ ನಿದರ್ಶನಗಳು ಬಹಳವಾಗಿವೆ. ಆದ್ದರಿಂದ ಜಾತಿಯು ಗುಣಕರ್ಮಾನುಸಾರವಾದುದೆಂಬ ವಾದವು ಪ್ರಮಾಣಕ್ಕೂ ಯುಕ್ತಿಗೂ ಲೋಕಾಚಾರಕ್ಕೂ ಸರ್ವದಾ ವಿರುದ್ಧವಾದುದೆಂದರಿಯತಕ್ಕದ್ದು.

ಮತ್ತು ಜಾತಿಯು ಜನ್ಮಸಿದ್ಧವಾದುದಲ್ಲವೆಂಬಭಿಪ್ರಾಯವನ್ನು ಬೋಧಿಸುವುದಕ್ಕಾಗಿಯೇ:—

ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ ।
ವಿದ್ಯಯಾ ಯಾತಿ ವಿಪ್ರತ್ವಂ ಬ್ರಹ್ಮವಿದ್ಬ್ರಾಹ್ಮಣೋ ಭವೇತ್ ॥

ಎಂಬೀ ಮುಂತಾದ ವಾಕ್ಯಗಳು ಪ್ರವೃತ್ತವಾಗಿರುವುವಲ್ಲವೇ? ಎಂಬ ನುಡಿಗೆ ಪ್ರತ್ಯುತ್ತರವೇನೆಂದರೆ, ಈ ಮೇಲಿನ ಶ್ಲೋಕವು ಜಾತಿಯು ಗುಣಕರ್ಮಸಿದ್ಧವಾದುದೆಂಬಾಶಯವನ್ನು ಸಮರ್ಥಿಸುವುದಿಲ್ಲ. ಮತ್ತೇನೆಂದರೆ ಬ್ರಾಹ್ಮಣವರ್ಣದಲ್ಲಿ ಜನಿಸಿದ ಮಾತ್ರದಿಂದೇ ತನ್ನನ್ನು ಕೃತಕೃತ್ಯನನ್ನಾಗಿ ಭಾವಿಸಿಕೊಳ್ಳಬಾರದು. ಬ್ರಾಹ್ಮಣ್ಯಾಭಿವ್ಯಂಜಕವಾದ ಶರೀರಸಂಸ್ಕಾರವನ್ನೂ ವೇದಾಧ್ಯಯನವನ್ನೂ ಬ್ರಹ್ಮಜ್ಞಾನವನ್ನೂ ಪಡೆಯಕೊಳ್ಳಲುದ್ಯುಕ್ತನಾಗಬೇಕೆಂದೂ, ಶರೀರಸಂಸ್ಕಾರಶೂನ್ಯನು ಶೂದ್ರನಂತೆ ಭಾವಿಸಲ್ಪಡುವನೆಂದೂ, ಬೋಧಿಸುವುದಕ್ಕೋಸ್ಕರವೇ ಅಲ್ಲದೆ ಜಾತಿಯು ವಿಪರ್ಯಾಸವನ್ನು ಬೋಧಿಸಲು ಪ್ರವೃತ್ತವಾದುದಲ್ಲ.

ಬ್ರಾಹ್ಮಣ್ಯಾಭಿವ್ಯಕ್ತಿಯು ಸಂಸ್ಕಾರದಿಂದೇ ಅಲ್ಲದೆ ಬೇರೊಂದರಿಂದ ಸಂಭವಿಸದೆಂಬಾಶಯವು ಯಾಜ್ಞವಲ್ಕ್ಯಸ್ಮೃತಿಯಲ್ಲಿ:—

ಚಿತ್ರಕರ್ಮ ಯಥಾನೇಕೈರಂಗೈರುನ್ಮೀಲ್ಯತೇ ಪೃಥಕ್ ।
ಬ್ರಾಹ್ಮಣ್ಯಮಪಿ ತದ್ವತ್ಸ್ಯಾತ್ಸಂಸ್ಕಾರೈರ್ವಿಧಿಪೂರ್ವಕೈಃ ॥

ಎಂಬುದಾಗಿ ಉಪಮಾಪದೊಡನೆ ಹೇಳಲ್ಪಟ್ಟಿದೆ. ಅದೇ ಮೇರೆಗೆ ಇಲ್ಲಿಯೂ ಸಂಸ್ಕಾರಶಬ್ದ ಬೋಧ್ಯವಾದ ಉಪನಯನಾದಿಗಳಿಂದ ದ್ವಿಜತ್ವವು ಸಿದ್ಧಿಸುವುದೆಂದು ಹೇಳಲ್ಪಡುವುದು. ಸಂಸ್ಕಾರದಿಂದಲೂ ವಿದ್ಯೆಯಿಂದಲೂ ಯುಕ್ತನಾದ ಬ್ರಾಹ್ಮಣನಾವನೋ ಅವನಿಗೆ ತಕ್ಕ ಗೌರವಾವಹವಾದ ಹೆಸರನ್ನು ಕೊಡುವುದು ವೈದಿಕಶಾಸ್ತ್ರಪದ್ಧತಿಯುಂಟು. ಸಂಸ್ಕಾರಸಂಸ್ಕೃತನನ್ನು ದ್ವಿಜನೆಂದೂ ವೇದಾಧ್ಯಯನ ಮಾಡಿದವನನ್ನು ವಿಪ್ರನೆಂದೂ ಹೀಗೆ ಯೋಗ್ಯತಾನುಗುಣವಾದ ನಾಮಧೇಯದಿಂದ ಗೌರವಿಸುವುದು ಶಾಸ್ತ್ರಸಿದ್ಧವು. ‘ **ಜನ್ಮನಾ ಜಾಯತೇ ಶೂದ್ರಃ** ’ ಎಂಬ ಶ್ಲೋಕದಲ್ಲಿಯಾದರೂ ಇದೇ ಅರ್ಥವು ಹೇಳಲ್ಪಟ್ಟಿದೆ. ಹಾಗೂ ‘ **ಸಂಸ್ಕಾರಾದ್ದ್ವಿಜ ಉಚ್ಯತೇ** ’ ಎಂಬಲ್ಲಿ ‘ **ದ್ವಿಜ** ’ ಶಬ್ದವು ‘ **ಮಾತುರಗ್ರೇಽಧಿಜನನಂ ದ್ವಿತೀಯಂ ಮೌಂಜಿಬಂಧನೇ** ’ ಎಂಬ ಮನುವಚನಾನುಸಾರವಾಗಿ ಜನನೋಪನಯನ ಪ್ರಯುಕ್ತವಾದ ಜನ್ಮದ್ವಯವುಳ್ಳವನೆಂಬರ್ಥಪ್ರದವಾಗಿದೆ. ಈ ದ್ವಿಜಭಾವವು ಉಪನಯನಾಧಿಕಾರಿಗಳಾದ ತ್ರೈವರ್ಣಿಕರಲ್ಲಿಯೇ ಸಿದ್ಧಿಸುವುದು. ನಾಲ್ಕನೆಯವನಾದ ಶೂದ್ರನಿಗೆ ಉಪನಯನವಿಲ್ಲದುದರಿಂದ ಅವನನ್ನು ಕುರಿತು ‘ದ್ವಿಜ’ ನೆಂಬ ವ್ಯಪದೇಶವಿರದು. ಆದರೆ ಮಾತೆಯಿಂದುದಯಿಸಿದ ಪ್ರಯುಕ್ತವಾದ ಜನ್ಮಮಾತ್ರದಿಂದ ಶೂದ್ರನಿಗೆ ಏಕಜಾತಿಯು ಹೇಳಲ್ಪಡುವುದು. ಇದೇ ಅರ್ಥವನ್ನು ಸ್ಮೃತಿಕಾರರು—

ಬ್ರಾಹ್ಮಣಃ ಕ್ಷತ್ರಿಯೋವೈಶ್ಯಸ್ತ್ರಯೋವರ್ಣಾ ದ್ವಿಜಾತಯಃ ।
ಚತುರ್ಥ ಏಕಜಾತಿಸ್ತು ಶೂದ್ರೋನಾಸ್ತಿತು ಪಂಚಮಃ ॥

ಎಂದು ಪ್ರತಿಪಾದಿಸುತ್ತಾರೆ. ಹಾಗೂ, ‘ **ಅಶೂದ್ರಾಣಾಮದುಷ್ಟಕರ್ಮಣಾಮುಪನಯನಮ್** ’ ಎಂಬೀ ಮುಂತಾದ ಪ್ರಮಾಣಗಳಿಂದ ದ್ವಿಜಭಾವಾಪಾದಕಗಳಾದ ಉಪನಯನಾದಿ ಸಂಸ್ಕಾರಗಳು ಶೂದ್ರನಿಗಿರುವುದಿಲ್ಲವೆಂಬುದೂ ನಿರ್ಧರಿಸಲ್ಪಟ್ಟಿದೆ. ಈ ವಿಷಯದಲ್ಲಿ ಯಾವ ಮುನಿಯ ಮತಭೇದವೂ ಇರುವುದಿಲ್ಲ. ಶಾಸ್ತ್ರಸ್ಥಿತಿಯು ಇಂತಿರಲು ಪೂರ್ವಪಕ್ಷಿಗಳು ‘ **ಜನ್ಮನಾ ಜಾಯತೇ** ’ ಎಂಬ ಪದ್ಯವು ಉಪನಯನಾದಿಸಂಸ್ಕಾರಾರ್ಹತಾಸೂಚಕವಾದರ್ಥವುಳ್ಳದೆಂದು ನುಡಿವುದು ಪೂರ್ವಾಪರವಿರೋಧಾತ್ಮಕವಾಗಿದೆ. ಅವರು ‘ ಉಪಯನಕ್ಕಿಂತ ಮುಂಚೆ ಸರ್ವರೂ ಶೂದ್ರರೇ ’ ಎಂಬರ್ಥವನ್ನು ಸ್ವಚ್ಛಂದವಾಗಿ ಕಲ್ಪಿಸುತ್ತಾರಲ್ಲವೇ? ಹಾಗಾದರೆ ಅದಕ್ಕೂ ಪೂರ್ವದಲ್ಲಿ ಬ್ರಾಹ್ಮಣಕ್ಷತ್ರಿಯಾದಿ ಭೇದಸದ್ಭಾವವನ್ನು ಪ್ರತಿಪಾದಿಸುತ್ತಿರುವ ಶ್ರುತಿಸ್ಮೃತಿವಚನಗಳಿಗೆ ವಿರೋಧವು ಸಂಭವಿಸುವುದರಿಂದ ಅದರ ಪರಿಹಾರವೆಂತು? ಬ್ರಾಹ್ಮಣಾದಿಗಳ ಉಪನಯನಕಾಲವು ವೇದದಲ್ಲಿ ಹೀಗೆ ನಿರ್ಧರಿಸಲ್ಪಟ್ಟಿರುವುದು.—‘ **ಗರ್ಭಾಷ್ಟಮೇ ಬ್ರಾಹ್ಮಣಮುಪನೀಯತ, ಗರ್ಭೈಕಾದಶೇರಾಜನ್ಯಂ, ಗರ್ಭದ್ವಾದಶೇ ವೈಶ್ಯಂ** ’ ಇಲ್ಲಿ ಪೂರ್ವಪಕ್ಷಿಭಾಷಿತಾನುರೋಧದಿಂದ ಅದಕ್ಕೂ ಮುಂಚೆ ಸರ್ವರೂ ಶೂದ್ರರೇ ಆಗಿದ್ದಪಕ್ಷದಲ್ಲಿ ಆ ಆ ಜಾತಿಯನ್ನು ಪೃಥಕ್ಕಾಗಿ ನಿರ್ದೇಶಿಸಿ ಒಂದೊಂದು ಜಾತಿಯ ಬೇರೆ ಬೇರೆ ಕಾಲವನ್ನು ವಿಧಿಸುವುದು ಅದೆಂತು ಸಂಘಟಿಸುವುದು? ಅವರ ಅಭಿಪ್ರಾಯಾನುಸಾರವಾಗಿ ಸಂಸ್ಕಾರವೂ ಬ್ರಹ್ಮಜ್ಞಾನವೂ ಸಿದ್ಧಿಸಿದ ತರುವಾಯವೇ ಬ್ರಾಹ್ಮಣಾದಿ ಜಾತಿಗಳು ಸಿದ್ಧಿಸಬಹುದಲ್ಲವೇ? ವೇದಾಗಮಗಳು ಸಂಸ್ಕಾರಲೇಶಶೂನ್ಯನೂ ಗುಣಗಂಧರಹಿತನೂ ಆದ ಕುಮಾರನ ವಿಷಯದಲ್ಲಿ ಬ್ರಾಹ್ಮಣಾದಿ ಜಾತಿಶಬ್ದಗಳಿಂದೇ ಪ್ರತಿಪಾದಿಸುವುದನ್ನು ಮರಭಿನಿವೇಶವನ್ನುಳಿದು ಪರಾಮರ್ಶಿಸಿದರೆ ಪೂರ್ವಪಕ್ಷಿಗಳಿಂದ ಹೇಳಲ್ಪಡುವ ಅರ್ಥವು ಅಬದ್ಧವಾದುದೆಂದೇ ತೋರದಿರದು.

ಪೂರ್ವೋಕ್ತಪ್ರಮಾಣಸ್ಥವಾದ ‘ **ಜನ್ಮನಾ ಜಾಯತೇ ಶೂದ್ರಃ** ’ ಎಂಬುದರ ಸಮಾಧಾನವಾದರೋ ಅತೀವಸುಕರವಾಗಿದೆ. ಬ್ರಾಹ್ಮಣಸಮೂಹದಲ್ಲಿ ಯಾವನಾದರೊಬ್ಬನು ಬ್ರಾಹ್ಮಣೋಚಿತವಾದ ಕರ್ಮಗಳನ್ನನುಷ್ಠಿಸದೆ ಪಾಮರಾಚಾರವುಳ್ಳವನಾಗಿರುವನೋ ಅವನನ್ನು ಕುರಿತು ಸರ್ವರೂ ಶೂದ್ರನವನೆಂದು ಅಪಹಸಿಸುತ್ತಾರೆ. ಇದರ ತಾತ್ಪರ್ಯವೇನು? ಅವನು ಶೂದ್ರಜಾತಿಯಲ್ಲಿಯೇ ಹುಟ್ಟಿದವನೆಂಬಭಿಪ್ರಾಯದಿಂದ ಹಾಗೆ ಹೀಯಾಳಿಸಲ್ಪಡುವನೇ? ಇಲ್ಲ. ಹೇಗೆ ಶೂದ್ರಯೋನಿಯಲ್ಲಿ ಹುಟ್ಟಿದವನು ವೈದಿಕಕರ್ಮಾನುಷ್ಠಾನಹೀನನಾಗಿರುವನೋ ಹಾಗೇ ಇವನಾದರೂ ಇರುತ್ತಾನೆ; ಇಷ್ಟುಮಾತ್ರದಿಂದೇ ಇವನನ್ನು ಶೂದ್ರನೆಂಬ ಶಬ್ದದಿಂದಲ್ಲಗಳೆಯುತ್ತೇವೆ. ಇಲ್ಲಿ ಶೂದ್ರನಂತಿರುವನೆಂಬ ವ್ಯವಹಾರಪ್ರತಿಪತ್ತಿದಿಂದ ಶೂದ್ರಶಬ್ದವು ವ್ಯವಹರಿಸಲ್ಪಡುತ್ತದೆ. ‘ **ದೇವದತ್ತಃ ಸಿಂಹೋ ವದಸ್ತಿ** ’ ‘ **ಋಷಿರಗ್ನಿವದಸ್ತಿ** ’ ಎಂದು ಹೇಳಲ್ಪಡುವಲ್ಲಿ ದೇವದತ್ತನು ಸಿಂಹನೇ, ಋಷಿಯು ಅಗ್ನಿಯೇ ಎಂಬ ವ್ಯಪದೇಶವಿರುವಂತೆ ಮೇಲ್ಕಂಡ ಪ್ರಮಾಣಶ್ಲೋಕದಲ್ಲಿಯೂ ಜನನಕಾಲದೊಳು ಶೂದ್ರನಂತಿರುವನೆಂದು ಹೇಳುವುದಕ್ಕಾಗಿಯೇ ‘ ಶೂದ್ರ ’ ನೆಂಬ ವ್ಯಪದೇಶವಿದೆ. ಆದರೆ ಈ ಶ್ಲೋಕವು ಅವನನ್ನು ಶೂದ್ರಜಾತಿಯವನೆಂದು ಹೇಳಲು ತೊಡಗಿರುವುದಿಲ್ಲ.

ಬ್ರಾಹ್ಮಣಾದಿ ಜಾತಿಯವರಲ್ಲಿ ಜನಿಸಿದವರಿಗೆ ಉಪನಯನಕ್ಕಿಂತ ಮುಂಚೆ ಕರ್ಮಾನುಷ್ಠಾನವೂ ಆಹಾರಾದಿ ನಿರ್ಬಂಧವೂ ಅನಾವಶ್ಯಕವಾದುದೆಂಬುದಾಗಿ “ **ಪ್ರಾಗುಪನಯನಾತ್ಕಾಮಾಚಾರವಾದಭಕ್ಷಃ ।** ” (ಗೌ. ಧ. ೨-೧) ಇತ್ಯಾದಿ ವಾಕ್ಯಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಅವರ ಸ್ವಾಚ್ಛಂದ್ಯವು ಅನುಮತವಾಗಿದೆ. ಹೀಗೆ ಸ್ವಾಚ್ಛಂದ್ಯದಿಂದ ವರ್ತಿಸುವವರೇ ಲೋಕದಲ್ಲಿಯೂ ಶಾಸ್ತ್ರದಲ್ಲಿಯೂ ‘ ಶೂದ್ರ ’ ರೆಂಬ ಔಪಚಾರಿಕ ಶಬ್ದದಿಂದ ಕರೆಯಲ್ಪಡುತ್ತಾರೆ. ಈ ಅಭಿಪ್ರಾಯವು ಬೋಧಾಯನ ಧರ್ಮಸೂತ್ರದಲ್ಲಿಯೂ (೧-೨-೬)—

ನಾಸ್ಯಕರ್ಮ ನಿಯಚ್ಛಂತಿ ಕಿಂಚಿದಾಮೌಂಜಿಬಂಧನಾತ್ ।
ವೃತ್ತ್ಯಾಶೂದ್ರಸಮೋ ಹ್ಯೇಷಯಾವದ್ವೇದೇಷು ಜಾಯತೇ ॥

ಎಂಬುದಾಗಿ ಹೇಳಲ್ಪಟ್ಟಿದೆ. ಈ ಸೂತ್ರವ್ಯಾಖ್ಯಾನವು ಮನನೀಯವಾಗಿರುವುದರಿಂದ ಅದರಲ್ಲಿ ಬಹ್ವಂಶವನ್ನು ನಾವು ಇಲ್ಲಿ ಎತ್ತಿಬರೆಯುತ್ತೇವೆ—[**ಯಾವತಾ ಸೋಽಪಿ ತ್ರೈವರ್ಣಿಕ ಏವ । ಸತ್ಯಂ, ತಥಾಪಿ ‘ ವೃತ್ತ್ಯಾಶೂದ್ರಸಮೋ ಹ್ಯೇಷಃ ’ ವೃತ್ತಿರ್ವರ್ತನಮಾಚಾರಃ । ವೇದಜನನಮುಪನಯನಂ । ನನುಪ್ರಾಗುಪನಯನಾಚ್ಛೂದ್ರಸಾಮ್ಯೇ ಪಾನಾದಿಷ್ವಪ್ಯದೋಷಸ್ಸ್ಯಾತ್? ನೈತದೇವಂ; ‘ ಶೂದ್ರಸಮ ಇತ್ಯತಿದೇಶಾನ್ನಸ್ವಯಂ ಶೂದ್ರಃ, ತತಶ್ಚ ನ ಸ್ವಜಾತ್ಯಾಶ್ರಯಧರ್ಮನಿವೃತ್ತಿರ್ಭವತಿ, ಜಾತ್ಯಾಶ್ರಯಶ್ಚ ಮಧುಪಾನಾದಿಪ್ರತಿಷೇಧಃ ।]**

ಈ ಮೇಲಿನ ಸೂತ್ರವಾಕ್ಯದಿಂದ ಅನುಪನೀತರಿಗೆ ಶೂದ್ರಸಾಮ್ಯವು ಸುಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಹಾಗೂ ಉಪನಯನಕ್ಕಿಂತ ಮುಂಚೆ ಆಹಾರಾಹಾರ ನಿರ್ಬಂಧವಿಲ್ಲದುದರಿಂದ ಅನುಪನೀತನಾದ ದ್ವಿಜಕುಮಾರನು ಮದ್ಯವನ್ನು ಕುಡಿದರೂ ದೋಷವಿಲ್ಲವೇ? ಎಂಬಾಕ್ಷೇಪವನ್ನು ಗೌತಮನು—“ **ನಿತ್ಯಂ ಮದ್ಯಂ ಬ್ರಾಹ್ಮಣಸ್ಯ** ” ಎಂಬ ಮುಂದಿನ ಸೂತ್ರದಿಂದ ಬ್ರಾಹ್ಮಣನಿಗೆ ಸುರಾಪಾನವು ಯಾವಾಗಲೂ ತ್ಯಾಜ್ಯವಾದುದೆಂದು ನಿರಸನಗೊಳಿಸಿದ್ದಾನೆ. ಉಪನಯನಕ್ಕಿಂತ ಮುಂಚೆ ಸರ್ವರೂ ಶೂದ್ರರೇ ಆಗಿದ್ದಪಕ್ಷದಲ್ಲಿ ಈ ಸೂತ್ರದಲ್ಲಿರುವ ‘ಬ್ರಾಹ್ಮಣಸ್ಯ’ ಎಂಬ ವಾಕ್ಯಕ್ಕೆ ಬದಲಾಗಿ ‘ ಶೂದ್ರಸ್ಯ ’ ಎಂದು ಹೇಳಲ್ಪಡಬೇಕಾಗಿದ್ದಿತಲ್ಲವೇ? ಹಾಗೆ ಹೇಳಲ್ಪಡದೆ ಕೇವಲ ಏಕಜಾತೀಯ ನಾಮವನ್ನು ನಿರ್ದೇಶಿಸಿ ಆ ಜಾತಿಗೆ ಸುರಾಪಾನವು ದೋಷಾವಹವೆಂದು ಹೇಳಲ್ಪಡುವುದರಿಂದ ಅದಕ್ಕೂ ಮುಂಚೆಯಾದರೂ ಜಾತಿಭೇದವಿದ್ದಿತೆಂಬುದು ನಿರ್ವಿವಾದ ಸಿದ್ಧವಾಗುವುದು. ಆದ್ದರಿಂದ ‘ ಜಾತಿಯು ಕರ್ಮದಿಂದ ಸಿದ್ಧಿಸುವುದು. ಜನ್ಮದಿಂದಲ್ಲ ’ ವೆಂಬ ನುಡಿಯು ಅಪಹಾಸ್ಯಾಸ್ಪದವಾಗಿದೆ.

ಯಾರಿಗಾದರೂ ಅದೇ ಶರೀರದಲ್ಲಿಯೇ ಜಾತಿವಿಪರ್ಯಾಸವು ಸಂಭವಿಸದೆಂಬ ವಿಷಯದಲ್ಲಿ ವೈದಿಕಸಾಹಿತ್ಯದೊಳನೇಕ ಉದಾಹರಣೆಗಳುಂಟು. ಅವುಗಳಲ್ಲಿ ಸರ್ವತ್ರ ವಿದಿತವಾದ ರಾಮಾಯಣವೆಂಬ ಐತಿಹಾಸಿಕಗ್ರಂಥದೊಳಗಿನ ಪ್ರಸ್ತಾವವನ್ನಿಲ್ಲಿ ಉದಾಹರಣೆಗಾಗಿ ತೆಗೆದುಕೊಳ್ಳುವಾ. ಒಂದಾನೊಂದು ಸಮಯದಲ್ಲಿ ದಶರಥನು ಸರಯೂ ನದೀ ತೀರದಿಂದ ಕೊಡವನ್ನು ತುಂಬುತ್ತಲಿದ್ದ ಒಬ್ಬಾನೊಬ್ಬ ಋಷಿಯನ್ನು ಕಾಣದೆ ಗಜಭ್ರಾಂತಿಯಿಂದ ಅವನನ್ನು ಬಾಣದಿಂದ ಹೊಡೆದು ಕೊಲ್ಲುತ್ತಿರಲು ಬಳಿಕ ಅವನ ಆರ್ತಧ್ವನಿಯನ್ನು ಕೇಳಿ ಹತ್ತಿರಕ್ಕೆ ಬಂದು ಋಷಿಯೆಂದರಿದು ಖೇದದಿಂದ ಪಶ್ಚಾತ್ತಾಪವುಳ್ಳವನಾಗಲು ಆ ಋಷಿಯು ಸ್ವಲ್ಪ ಪ್ರಜ್ಞೆಯುಳ್ಳವನಾಗಿ ಕಣ್ದೆರೆದು ದಶರಥನನ್ನವಲೋಕಿಸಿ:—

ನದ್ವಿಜಾತಿರಹಂ ರಾಜನ್ ! ಮಾಭೂತ್ತೇ ಮನಸೋ ವ್ಯಥಾ ।
ಬ್ರಹ್ಮಹತ್ಯಾಕೃತಂ ಪಾಪಂ ಹೃದಯಾದಪನೀಯತಾಮ್ ॥

ಎಂಬ ವಾಕ್ಯಗಳಿಂದ ಅರಸನನ್ನು ಸಮಾಧಾನಪಡಿಸಿದನು. ವಾಲ್ಮೀಕಿಮಹರ್ಷಿಯು ಅದಾವ ಪುಣ್ಯಾತ್ಮನನ್ನು ‘ ಮುನಿಯು ’ ‘ ಋಷಿಯು ’ ಎಂಬ ಶಬ್ದಗಳಿಂದ ವರ್ಣಿಸುತ್ತಿಹನೋ ಅಂತಹ ತಪೋಜ್ಞಾನಾದಿ ಸಂಪನ್ನನಾದರೂ ‘ **ನದ್ವಿಜಾತಿರಹಂ** ’ ‘ **ಬ್ರಹ್ಮಹತ್ಯಾಕೃತಂ ಪಾಪಂ ಹೃದಯಾದಪನೀಯತಾಮ್** ’ ಎಂದು ಅದೇಕೆ ನುಡಿದನು? ಬ್ರಾಹ್ಮಣ್ಯಪ್ರಾಪಕ ಗುಣಕರ್ಮಗಳಿರುತ್ತಿದ್ದರೂ ಅವನು ತನಗೆ ಬ್ರಾಹ್ಮಣ್ಯವು ಪ್ರಾಪ್ತವಾಗಿರುವುದೆಂದು ತಿಳಿಯಲಿಲ್ಲವಷ್ಟೇ? ಆದ್ದರಿಂದ ಒಂದೇ ಶರೀರದಲ್ಲಿ ಯಾವನ ಜಾತಿಯಾದರೂ ವಿಪರ್ಯಾಸವನ್ನು ಹೊಂದುವದಿಲ್ಲವೆಂದು ಸಿದ್ಧವಾಗುವುದು.

ಹೇಗೆ ಸತ್ಕರ್ಮಗಳಿಂದ ಶೂದ್ರನ ಜಾತಿಯು ಅದೇ ಶರೀರದಲ್ಲಿಯೇ ಬದಲಾವಣೆಯನ್ನು ಹೊಂದದೋ ಹಾಗೇ ದುಷ್ಕರ್ಮಗಳಿಂದ ಉತ್ತಮಜಾತಿಯ ವಿಪರ್ಯಾಸವು ವರ್ತಮಾನಶರೀರದಲ್ಲಿ ಸಂಭವಿಸದು. ‘ **ಉತ್ಕರ್ಷಂಚಾಪಕರ್ಷಂಚ** ’ ‘ **ಬ್ರಾಹ್ಮಣಃ ಶೂದ್ರತಾಮಪಿ** ’ ಇತ್ಯಾದಿ ವಚನಾನುಸಾರವಾಗಿ ಹೇಗೆ ಗುಣಶಾಲಿಗಳಾದ ನಿಕೃಷ್ಟಜಾತಿಯವರಿಗಾದರೂ ಒಂದೇ ಜನ್ಮದಲ್ಲಿ “ **ದುರ್ಲಭಾಜಾತಿರುತ್ತಮಾ** ” ಎಂದು ಹೇಳಲ್ಪಟ್ಟಿರುವುದೋ ಹಾಗೇ ಹೀನಕರ್ಮಗಳನ್ನಾಚರಿಸುವ ಬ್ರಾಹ್ಮಣರಿಗಾದರೂ ಆ ಕರ್ಮಗಳ ಫಲರೂಪವಾದ ಅಧಮಜಾತಿಯು ಅನ್ಯಶರೀರದಲ್ಲಿಯೇ ಸಂಭವಿಸುವದಲ್ಲದೆ ವರ್ತಮಾನ ಶರೀರದಲ್ಲಿ ಸಂಭವಿಸದೆಂಬುದಾಗಿ ಮನುಯಾಜ್ಞವಲ್ಕ್ಯಾದಿ ವಚನಗಳಿಂದ ಸ್ಪಷ್ಟವಾಗುತ್ತದೆ. ಈ ವಿಷಯದಲ್ಲಿ:—‘ **ಅಧರ್ಮಚರ್ಯಯಾ ಪೂರ್ವೋ ವರ್ಣೋ ಜಘನ್ಯಂ ವರ್ಣಮಾಪದ್ಯತೇ ಜನ್ಮಪರಿವೃತ್ತೌ** ’ ಎಂಬ ಆಪಸ್ತಂಬವಚನವಾದರೂ ನಮ್ಮ ಅಭಿಪ್ರಾಯವನ್ನು ದೃಢಪಡಿಸುತ್ತದೆ. ಸ್ಮೃತಿಗಳಲ್ಲಿ ನೀಚಕರ್ಮಗಳನ್ನು ಮಾಡುತ್ತಿರುವ ಬ್ರಾಹ್ಮಣನನ್ನು ಶೂದ್ರನೆಂದೂ ಅಥವಾ ಪತಿತನೆಂದೂ ಹೇಳಿರುವುದೇನೋ ನಿಜ. ಆದರೂ ಅವನು ಬ್ರಾಹ್ಮಣಕರ್ಮಗಳನ್ನು ಅನುಷ್ಠಿಸದಿರುವ ಮೂಲಕವೇ ಹೇಳಲ್ಪಡುತ್ತಾನಲ್ಲದೆ ವರ್ತಮಾನಜನ್ಮದಲ್ಲಿಯೇ ಅವನು ಶೂದ್ರನಾಗಿರುವನೆಂಬಭಿಪ್ರಾಯವಿರುವುದಿಲ್ಲ. ಮನುಸ್ಮೃತಿಯಲ್ಲಿ—

ಯೋಽನಧೀತ್ಯದ್ವಿಜೋ ವೇದಮನ್ಯತ್ರಕುರುತೇ ಶ್ರಮಂ ।
ಸ ಜೀವನ್ನೇವ ಶೂದ್ರತ್ವಮಾಶು ಗಚ್ಛತಿ ಸಾನ್ವಯಃ ॥
ಸದ್ಯಃಪತತಿಮಾಂಸೇನ ಲಾಕ್ಷಯಾ ಲವಣೇನಚ ।
ತ್ರ್ಯಹೇಣಶೂದ್ರೋಭವತಿ ಬ್ರಾಹ್ಮಣಃ ಕ್ಷೀರವಿಕ್ರಯಾತ್ ॥

ಎಂಬುದಾಗಿ ಹೇಳಲ್ಪಟ್ಟಿರುವ ವಾಕ್ಯಗಳರ್ಥವನ್ನು ಪರಾಮರ್ಶಿಸಿದರೆ ಮೇಲೆ ನಾವು ಹೇಳಿದುದರ ಆಶಯವು ಚೆನ್ನಾಗಿ ಮನವರಿಕೆಯಾಗದಿರದು. ಈ ವಿಧವಾದ ವಾಕ್ಯಗಳು ವಿಶೇಷವಾಗಿವೆ. ಇತ್ಯಾದಿವಚನಗಳಲ್ಲಿಯೂ ‘ **ಬ್ರಾಹ್ಮಣಃ ಶೂದ್ರೋ ಭವತಿ** ’ ಎಂಬ ಮುಂತಾದುದರ ತಾತ್ಪರ್ಯವು ಇದೇ ಪ್ರಕಾರವಾಗಿರುವುದೆಂದರಿಯತಕ್ಕದ್ದು. ಆದ್ದರಿಂದ ‘ ಬ್ರಾಹ್ಮಣನು ಶೂದ್ರನಾಗುವನು ’ ಎಂಬಲ್ಲಿ ಜಾತಿಬ್ರಾಹ್ಮಣನು ನೀಚಕರ್ಮಗಳನ್ನೇ ಮಾಡುವಲ್ಲಿ ಆಸಕ್ತನಾಗಿರುತ್ತಿರಲು ಅವನು ಬ್ರಾಹ್ಮಣಕರ್ಮಗಳನ್ನನುಷ್ಠಿಸಲು ಅನರ್ಹನಾಗುತ್ತಾನೆ. ಅಷ್ಟುಮಾತ್ರದಿಂದೇ ಅವನ ಜಾತಿಯೇ ವಿಪರ್ಯಾಸವನ್ನು ಹೊಂದುವುದೆಂದು ಹೇಳುವುದು ಯುಕ್ತವಲ್ಲ. ಒಂದಾನೊಂದು ಉತ್ತಮಜಾತಿಯ ಅಶ್ವವು ಚೆನ್ನಾಗಿ ಪೋಷಣೆಯಿಲ್ಲದುದರಿಂದ ಕ್ರಮೇಣ ಕೊರಗುತ್ತಲಿರುವುದನ್ನು ಕಂಡು ಜನರು ಅಯ್ಯೋ, ಪಾಪ! ನೋಡಿದಿರಾ? ಈ ಕುದುರೆಯು ನಾಯಿಯಾಗಿರುವುದೆಂದು ನುಡಿವುದು ವಾಡಿಕೆಯಾಗಿದೆ. ಇಲ್ಲಿ ಅಶ್ವವನ್ನುದ್ದೇಶಿಸಿ ನಾಯಿಯೆಂದು ಹೇಳುವುದರ ತಾತ್ಪರ್ಯವೇನು? ಅಶ್ವದ ಸ್ವಜಾತಿಯು ನಾಶವಾಗಿ ಶುನಕಜಾತಿಯು ಪ್ರಾಪ್ತವಾಗಿರುವುದೆಂಬರ್ಥವೇನು? ಹಾಗಲ್ಲ. ಹೇಗೆ ಶುನಕವು ಭಾರವನ್ನು ಹೊರುವುದಕ್ಕೂ ಎಳೆವುದಕ್ಕೂ ಅಶಕ್ತವಾದುದೋ ಹಾಗೇ ಇದರ ಸ್ಥಿತಿಯಾಗಿರುವುದೆಂಬಭಿಪ್ರಾಯವಿರುವುದು. ಇದೇ ಮೇರೆಗೆ ಮನುಷ್ಯರಲ್ಲಿಯೂ ಯಾವನಾದರೊಬ್ಬನು ಕೆಟ್ಟಕೆಲಸಗಳನ್ನೇ ಮಾಡುತ್ತಿರುವುದನ್ನು ನೋಡಿ ಜನರು ‘ ಇವನು ಪಶುವು! ’ ಎಂದು ನುಡಿಯುತ್ತಿರುವರಲ್ಲವೇ? ಹೀಗೆ ನುಡಿವಲ್ಲಿ ಆ ಮೂರ್ಖನು ಮನುಷ್ಯತ್ವವನ್ನು ನೀಗಿ ‘ ದನವೇ ’ ಆಗಿರುವನೆಂದು ತಿಳಿಯಲ್ಪಡುವನೇ? ಆದ್ದರಿಂದ ಕುಕರ್ಮಗಳನ್ನಾಚರಿಸುವ ಬ್ರಾಹ್ಮಣನ ಜನ್ಮಸಿದ್ಧವಾದ ಬ್ರಾಹ್ಮಣ್ಯವು ವರ್ತಮಾನಕಾಲದಲ್ಲಿ ಲೋಪವಾಗದು. ಈ ಆಶಯವನ್ನು ಹೃದಯದಲ್ಲಿರಿಸಿಕೊಂಡೇ ‘ **ವಿದ್ಯಾತಪೋಭ್ಯಾಂ ಹೀನಸ್ತು ಜಾತಿಬ್ರಾಹ್ಮಣ ಉಚ್ಯತೇ ।** ’ ಎಂಬ ವಾಕ್ಯವು ಪ್ರತಿಪಾದಿಸಲ್ಪಟ್ಟಿದೆ. ಅದುಕಾರಣವೇ ಅನಾವಶಾಸ್ತ್ರವಚನಗಳು ಬ್ರಾಹ್ಮಣನಿಗೆ ಶೂದ್ರತ್ವವನ್ನೂ ಶೂದ್ರನಿಗೆ ಬ್ರಾಹ್ಮಣತ್ವವನ್ನೂ ಪ್ರತಿಪಾದಿಸುವುವೋ ಅವೆಲ್ಲ ಪೂರ್ವೋಕ್ತಸರಣಿಯನ್ನನುಸರಿಸಿರುವುವೆಂದರಿಯತಕ್ಕದ್ದು. ಶೈವಾಗಮಗಳಲ್ಲಿಯೂ ಶೈವಪುರಾಣಗಳಲ್ಲಿಯೂ, ಪರಮಶಿವಭಕ್ತರಾದ ಬೇಡರ ಕಣ್ಣಪ್ಪನೇ ಮುಂತಾದ ಪುರಾತನರ ಚರಿತ್ರೆಗಳನ್ನು ಬಣ್ಣಿಸುವ ಭಕ್ತಿಪ್ರಧಾನಗ್ರಂಥಗಳಲ್ಲಿಯೂ, ಶಿವಭಕ್ತಿಯಿಲ್ಲದ ಬ್ರಾಹ್ಮಣನನ್ನು ಶೂದ್ರನೆಂದೂ ಅದುಳ್ಳ ಶೂದ್ರನನ್ನು ಬ್ರಾಹ್ಮಣನೆಂದೂ ಪ್ರತಿಪಾದಿಸುವಲ್ಲಿ ‘ **ನ ಶೂದ್ರಾ ಭಗವದ್ಭಕ್ತಾಃ** ’ ಎಂದು ಮೊದಲಾಗಿರುವ ವಾಕ್ಯಗಳರ್ಥವಾದರೂ ಮೇಲೆ ಹೇಳಲ್ಪಟ್ಟಿರುವಂತೆ ಪೂರ್ವಾಚಾರ್ಯರಿಂದ ವ್ಯವಸ್ಥಾಪಿತವಾಗಿರುವುದು. ಮನುವು—

ಸರ್ವವರ್ಣೇಷು ತುಲ್ಯಾಸು ಪತ್ನೀಷ್ವಕ್ಷತಯೋನಿಷು ।
ಆನುಲೋಮ್ಯೇನ ಸಂಭೂತಾ ಜಾತ್ಯಾ ಜ್ಞೇಯಾಸ್ತ ಏವತೇ ॥

ಎಂದು ಹೇಳುವ ಮೇರೆಗೆ ಗಂಡನೂ ಹೆಂಡತಿಯೂ ಒಂದೇ ವರ್ಣದವರಿದ್ದು ಅವರಿಂದ ಉತ್ಪನ್ನವಾದ ಪ್ರಜೆಯು ಆ ಜಾತಿಯದು. ಮತ್ತು, ವರ್ಣಸಂಕರ ಕಾರಣಗಳನ್ನೂ ಅವನೇ ಹೀಗೆ ನಿರೂಪಿಸುತ್ತಾನೆ:—

ವ್ಯಭಿಚಾರೇಣ ವರ್ಣಾನಾಮವೇದ್ಯಾವೇದನೇನಚ ।
ಸ್ವಕರ್ಮಣಾಂಚ ತ್ಯಾಗೇನ ಜಾಯತೇ ವರ್ಣಸಂಕರಃ ॥

ಬ್ರಾಹ್ಮಣಾದಿ ವರ್ಣಗಳ ಪರಸ್ಪರ ಸ್ತ್ರೀಗಮನದಿಂದಲೂ, ಸ್ವಗೋತ್ರಾದಿ ಅವಿವಾಹ್ಯಕನ್ಯೆಯ ವಿವಾಹದಿಂದಲೂ, ಉಪನಯನಾದಿರೂಪ ಸ್ವಕರ್ಮತ್ಯಾಗದಿಂದಲೂ ವರ್ಣಸಂಕರವಾಗುತ್ತದೆ.

ತ್ರೈವರ್ಣಿಕ ಬಾಲಕರು ಯೋಗ್ಯಕಾಲದಲ್ಲಿ ಉಪನಯನವನ್ನು ಪಡೆಯದೆ ಹಾಗೆಯೇ ಇದ್ದುದಾದರೆ ಶೂದ್ರಸಮಾನರಾದ ಆ ಬಾಲಕರು ಪ್ರತ್ಯಕ್ಷ ಶೂದ್ರರೆನಿಸದೆ ತಮ್ಮ ತಮ್ಮ ವರ್ಣದ ವ್ರಾತ್ಯರೆನಿಸಿಕೊಳ್ಳುತ್ತಾರೆ. (ಮನು. ೧೦) ಉಪನಯನ ಸಂಸ್ಕಾರವು ಒಂದು ತಲೆಯವರೆಗೆ ಇಷ್ಟೇ ಅಲ್ಲ. ಬಹುಕಾಲದಿಂದ ಲುಪ್ತವಾಗಿದ್ದರೂ ಮೂಲವರ್ಣವು ನಷ್ಟವಾಗುವುದಿಲ್ಲ. ಪ್ರಾಯಶ್ಚಿತ್ತಾನಂತರದಲ್ಲಿ ಆ ವ್ರಾತ್ಯರು ತಮ್ಮ ತಮ್ಮ ಮೂಲವರ್ಣದವರೆನಿಸುವರು.

ಭಾರತವರ್ಷದಲ್ಲಿ ವರ್ಣಾಶ್ರಮಧರ್ಮಾನುಯಾಯಿಗಳು ಅನೇಕವಾಗಿದ್ದಾರೆ. ಆದರೆ ಅವರೆಲ್ಲ ವಿಸ್ಖಲಿತರಾಗಿದ್ದಾರೆ, ಸಂಘಟಿತವಾಗಿರುವುದಿಲ್ಲ. ಈ ಕಾಲದಲ್ಲಿ ಸಂಘಟನೆಯು ಅವಶ್ಯಕವಾದುದು. ‘ **ಸಂಘೇ ಶಕ್ತಿಃ ಕಲೌಯುಗೇ** ’ ಕಲಿಯುಗದಲ್ಲಿ ಸಂಘದಲ್ಲಿಯೇ ಶಕ್ತಿಯಿರುವುದು, ಎಂಬುದಾಗಿ ನಮ್ಮ ಪ್ರಾಚೀನರಾದ ದೀರ್ಘದರ್ಶಿಗಳು ಮೊದಲೇ ಹೇಳಿದ್ದಾರೆ. ಆದ್ದರಿಂದ ವರ್ತಮಾನಕಾಲದಲ್ಲಿ ನಮ್ಮ ಜನಾಂಗವು ಪಾರಸ್ಪರಿಕವಾದ ವೈಯಕ್ತಿಕದ್ವೇಷವೇ ಮುಂತಾದ ದುರ್ಭಾವನೆಗಳಿಗಿಂಬುಗೊಡದೆ ಏಕಮುಖದಿಂದ ವ್ಯವಹರಿಸುವುದೇ ಲೇಸು. ಸಮಾಜದಲ್ಲಿ ಪ್ರತಿಯೊಬ್ಬನು ತಾನೂ ಬಲ್ಲವನೇ, ತನಗಾರು ಬುದ್ಧಿಯನ್ನು ಕಲಿಸತಕ್ಕವರಿದ್ದಾರೆ; ಎಂಬೀ ಮುಂತಾದ ವೃತ್ತಿಯುಳ್ಳವನಾಗಿ ಯೋಗ್ಯಮಾರ್ಗದರ್ಶಕರ ನುಡಿಗಳಿಗೆ ಕಿವಿಗೊಡದೆ ತನ್ನ ಮನಬಂದಂತೆ ನಡೆಯುವವನೇ. ಆದರೆ ಆ ಸಮಾಜದಲ್ಲಿ ಸಂಘಶಕ್ತಿಯು ಸಂಭವಿಸುವ ಬಗೆಹೇಗೆ? ಸಂಘಶಕ್ತಿಯಿಲ್ಲದ ಸಮಾಜವು ಅವನತಿಪ್ರವಾಹಪತಿತವಾಗಿರುವುದೆಂದೇ ತಿಳಿಯಲಭ್ಯಂತರವಿಲ್ಲ. ಈ ವಿಷಯದಲ್ಲಿ ಒಂದು ಬೋಧಪ್ರದವಾದ ಕಥೆಯುಂಟು. ಮಹಾಭಾರತಾಂತರ್ಗತವಾದ ಉದ್ಯೋಗಮಹಾಪರ್ವದೊಳಗಿನ ಸೈನ್ಯನಿರ್ಯಾಣಪರ್ವದಲ್ಲಿ ದುರ್ಯೋಧನನು ಭೀಷ್ಮನಿಗೆ ಆ ಕಥೆಯನ್ನು ಹೇಳಿದ್ದಾನೆ. ಭೀಷ್ಮನು ಸೇನಾಪತಿಯಾಗಬೇಕೆಂದು ಪ್ರಾರ್ಥಿಸುವ ಪ್ರಸಂಗದಲ್ಲಿ ದುರ್ಯೋಧನನಿಂದ ಆ ಕಥೆಯು ಹೇಳಲ್ಪಟ್ಟಿದೆ. ನಮ್ಮ ಬ್ರಾಹ್ಮಣ ಮೊದಲಾದ ವಾಚಕಮಹಾಶಯರು ಅದನ್ನು ಅವಶ್ಯವಾಗಿ ಓದಿ ಅದರಿಂದ ತಮಗುಚಿತವಾದ ಬೋಧವನ್ನು ಗ್ರಹಿಸಬೇಕೆಂದು ಸೂಚಿಸಿ, ಆ ಕಥೆಯನ್ನು ಇಲ್ಲಿ ವಿವರಿಸಲುದ್ಯುಕ್ತರಾಗುತ್ತೇವೆ.

ದುರ್ಯೋಧನನು ಕುರುಕ್ಷೇತ್ರದ ಯೋಗ್ಯವಾದ ಸ್ಥಳದಲ್ಲಿ ತನ್ನ ಸರ್ವಸೈನ್ಯವನ್ನೂ ಒಟ್ಟುಗೂಡಿಸಿ, ಅದನ್ನು ಸಂಘಶಃ ಸುವ್ಯವಸ್ಥೆಗೊಳಿಸಿ, ಅಕ್ಷೋಹಿಣೀ ಪತಿಗಳನ್ನೂ ನೇಮಿಸಿ, ಆ ಪ್ರಧಾನ ವೀರರೊಡನೆ ಭೀಷ್ಮನ ಬಳಿಗೆ ಬಂದು ವಿನಯದಿಂದ ನುಡಿಯುತ್ತಾನೆ. ಈಗ ನಾವು ಒಬ್ಬ ಮುಖ್ಯ ಸೇನಾಪತಿಯನ್ನು ನೇಮಿಸಿಕೊಳ್ಳಬೇಕಾಗಿದೆ. ಏಕೆಂದರೆ ಅವನಿಲ್ಲದಿದ್ದರೆ ಬಹು ದೊಡ್ಡ ಸೇನೆ ಯಾದರೂ ಸುವ್ಯವಸ್ಥಿತಿಯಿಂದಿರದೆ ಇರುವೆಗಳಂತೆ ಅಸ್ತವ್ಯಸ್ತವಾಗಿ ಪರಾಭವವನ್ನೇ ಹೊಂದುವುದು. ಇಬ್ಬರು ಮಾನವರ ಬುದ್ಧಿಯೂ ಕಾರ್ಯವೂ ಎಂದೂ ಒಂದೇ ವಿಧವಾಗಿ ಇರಲಾರದಷ್ಟೇ! ಬಲಾಢ್ಯರಾದ ವೀರರಲ್ಲಿ ಪರಸ್ಪರ ಸ್ಪರ್ಧೆಯು ಹುಟ್ಟುವುದು; ಆದ್ದರಿಂದ ಮುಖ್ಯನಾದ ಸೇನಾಪತಿಯೋರ್ವನಿರುವುದು ಚಿತವು. ಈ ಬಗ್ಗೆ ಒಂದು ಕಥೆಯು ಶ್ರುತವಿದೆ. ಅದಾವುದೆಂದರೆ, ಪೂರ್ವದಲ್ಲಿ ಒಂದಾನೊಂದು ಸಮಯದೊಳು ಸರ್ವಬ್ರಾಹ್ಮಣರೂ ಹೈಹಯಕುಲೋತ್ಪನ್ನರಾದ ಕ್ಷತ್ರಿಯರ ತ್ರಾಸದಿಂದ ದುಗ್ಧರಾಗಿ ಅವರೊಡನೆ ಹೋರಾಡಲು ಹೊರಟರು. ಬ್ರಾಹ್ಮಣರು ತಮ್ಮ ತಮ್ಮ ವಿಚಿತ್ರಗಳಾದ ದರ್ಭಾಜ್ಯಾಸನಗಳ ಧ್ವಜಗಳನ್ನೆತ್ತಿ ಹಿಡಿದರು. ಕ್ಷತ್ರಿಯರ ಬಲಾತ್ಕಾರದಿಂದ ತ್ರಸ್ತರಾದ ವೈಶ್ಯರೂ ಶೂದ್ರರೂ ಅವರನ್ನು ಕೂಡಿಕೊಂಡರು. ಹೀಗೆ ಒಂದು ಕಡೆ ಬ್ರಾಹ್ಮಣರೂ, ವೈಶ್ಯರೂ, ಶೂದ್ರರೂ ಮತ್ತೊಂದು ಕಡೆ ಕ್ಷತ್ರಿಯರೂ ಎಂಬ ಎರಡು ಪಕ್ಷಗಳಾಗಿ ಅವಾಗ್ಗೆ ಯುದ್ಧ ಮಾಡತೊಡಗಿದರು. ಆದರೆ ಪ್ರತಿಯೊಂದು ಸಮಯದಲ್ಲಿಯೂ ಬ್ರಾಹ್ಮಣಾದಿಗಳ ಪಕ್ಷವು ಪರಾಭವವನ್ನು ಹೊಂದುತ್ತಿದ್ದುದರಿಂದ ಅಗ ಏನುಮಾಡತಕ್ಕದ್ದು? ತಮ್ಮ ಪಕ್ಷದ ವಿಜಯವೆಂತಹದು? ಎಂಬ ಮುಂತಾದ ಯೋಚನೆಯಲ್ಲಿ ಮಗ್ನರಾದ ಬ್ರಾಹ್ಮಣರು ಕ್ಷತ್ರಿಯರ ಬಳಿಗೆ ತಾವೇ ಹೋಗಿ ಅವರನ್ನು ಕುರಿತು—‘ ಪ್ರತಿಯೊಂದು ವೇಳೆಯಲ್ಲಿಯೂ ನಿಮಗೇ ಜಯವು ಸಿಕ್ಕುತ್ತಿರುವುದಲ್ಲಾ! ಇದಕ್ಕೆ ಕಾರಣವೇನಿರಬಹುದು? ನಮಗೆ ಒಮ್ಮೆಯಾದರೂ ಗೆಲವೆಂಬುದೇ ಇಲ್ಲವಷ್ಟೇ? ’ ಎಂಬುದಾಗಿ ವಿಚಾರಿಸಲು ಆಗ ಧರ್ಮಜ್ಞರಾದ ಕ್ಷತ್ರಿಯರು ಶ್ರೇಷ್ಠರಾದ ಆ ಬ್ರಾಹ್ಮಣರಿಗೆ ತತ್ತ್ವಾರ್ಥವನ್ನು ಹೀಗೆ ಅರುಹಿದರು. (೧೫೬-೮):—

ವಯಮೇಕಸ್ಯ ಶೃಣ್ವಾನಾ ಮಹಾಬುದ್ಧಿಮತೋ ರಣೇ ।
ಭವಂತಸ್ತು ಪೃಥಕ್ ಸರ್ವೇ ಸ್ವಬುದ್ಧಿವಶವರ್ತಿನಃ ॥

ಕ್ಷತ್ರಿಯರಾದ ನಾವು ಕಾಳಗದಲ್ಲಿ ಮಹಾಬುದ್ಧಿಶಾಲಿಯಾದ ಒಬ್ಬ ಮುಂದಾಳುವಿನ ಆಜ್ಞೆಯನ್ನು ಪಾಲಿಸುತ್ತೇವೆ. ಮತ್ತು ಹಾಗೆ ನಡೆವಳಿಕೆಯುಳ್ಳವರೂ ಆಗಿರುತ್ತೇವೆ. ಆದರೆ ನೀವೆಲ್ಲರೂ ಬೇರೆಬೇರೆ ನಿಮ್ಮ ಬುದ್ಧಿಯಂತೇ ವರ್ತಿಸುವವರಾಗಿದ್ದೀರಿ. ಅದುಕಾರಣವೇ ನಮಗೆ ಗೆಲವೂ ನಿಮಗೆ ಸೋಲೂ ಸಂಭವಿಸುವುದರಲ್ಲಿ ಸೋಜಿಗವೇನು?

ಧರ್ಮಜ್ಞರಾದ ಕ್ಷತ್ರಿಯರ ಈ ಹೇಳಿಕೆಯಲ್ಲಿ ತತ್ತ್ವಾರ್ಥವು ಪೂರ್ಣವಾಗಿ ತುಂಬಿದೆ. ಅದರಿಂದ ತಮ್ಮ ಉತ್ಕರ್ಷಕ್ಕೆ ಗೋಸ್ಕರ ಯತ್ನಿಸುವ ಪ್ರತಿಯೊಬ್ಬ ಮನುಷ್ಯನೂ ಬಹಳವಾಗಿ ಬುದ್ಧಿಗಲಿಯುವಂತಿರುವುದು. ಮನುಷ್ಯನು ಎಷ್ಟು ಬುದ್ಧಿಶಾಲಿಯೂ, ಸಾಮರ್ಥ್ಯಸಂಪನ್ನನೂ ಆಗಿದ್ದರೂ ಕೂಡ ಅವನು ಮನುಷ್ಯನೇ. ಅವನ ಬುದ್ಧಿಯೂ ಸಾಮರ್ಥ್ಯವೂ ಮರ್ಯಾದಿತವಾದುವೆಂಬುದು ಸ್ಪಷ್ಟವು. ಆದ್ದರಿಂದ ಅವನು ತನಗಭಿಮತವಾದ ಕಾರ್ಯದಲ್ಲಿ ತನಗಿಂತಲೂ ಹೆಚ್ಚಿನ ಬುದ್ಧಿಶಾಲಿಗಳೂ ಅಧಿಕವಾದ ಸಾಮರ್ಥ್ಯವುಳ್ಳವರೂ ಆದ ಶ್ರೇಷ್ಠರ ಸಹಾಯವನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕು. ಅದಿಲ್ಲದೆ ಅವನ ಕಾರ್ಯವು ಸಿದ್ಧಿಸಲಾರದು. ಪೂರ್ವೋಕ್ತ ಕಥೆಯಲ್ಲಿ ಮೂರು ವರ್ಣದ ಜನರದೊಂದು ಪಕ್ಷವಾಗಿಯೂ ಕ್ಷತ್ರಿಯ ಜನರದೊಂದು ಪಕ್ಷವಾಗಿಯೂ ಇರುತ್ತಿರಲು, ಅವೆರಡರಲ್ಲಿ ಎರಡನೆಯ ಪಕ್ಷವು ಪ್ರಮುಖಮನುಷ್ಯನಿಂದ ನಿಯಂತ್ರಿತವಾಗಿದ್ದಿತು. ಬ್ರಾಹ್ಮಣರೇ ಮುಂತಾದ ಮೊದಲನೆಯ ಪಕ್ಷದ ಜನರು ಸಂಖ್ಯೆಯಿಂದಧಿಕವಾಗಿದ್ದರೂ ಅವರೊಳಗಿನ ಪ್ರತಿಯೊಬ್ಬನೂ ತನ್ನನ್ನು ಜಾಣನೆಂದೇ ಭಾವಿಸಿಕೊಂಡು ಸ್ವಬುದ್ಧಿಯಿಂದ ವರ್ತಿಸುತ್ತಿದ್ದನು. ತಮ್ಮ ‘ ಬ್ರಾಹ್ಮಣ ’ ವರ್ಗದವರಾದರೋ ‘ ಬಹುಜಾಣರೇ ’ ಇರುತ್ತಾರೆ! ಪರಸ್ಪರ ಸ್ಪರ್ಧೆಯು ಅವರ ಜನ್ಮಸಿದ್ಧವಾದ ಸ್ವಭಾವವಾಗಿರುವುದು, ಅದರಿಂದ ಅವರು ತಮ್ಮ ಇಷ್ಟದಂತೇ ವ್ಯವಹರಿಸುವರು. ‘ ಮಾಡಿದುದನುಣ್ಣೋ ಮಹಾರಾಯಾ ’ ಎಂಬಂತೆ ಕೊನೆಗೆ ಅವರಿಗೆ ಪರಾಜಯವೇ! ಹೀಗೆ ಅವರ ಸ್ವಭಾವದಲ್ಲಿ ಮಹಾವೈಗುಣ್ಯವಿರುವುದರಿಂದೇ ಅವರು ಸದ್ಯಃ ಲೌಕಿಕ ಪುರುಷಾರ್ಥಾನಧಿಕಾರಿಗಳಾಗಿರುವರು. ಪಾರಮಾರ್ಥಿಕ ಪುರುಷಾರ್ಥದಲ್ಲಿ ‘ ಸಂಘ ’ ದ ಅವಶ್ಯಕತೆಯು ಅಷ್ಟೊಂದಿರುವುದಿಲ್ಲ. ಪ್ರತಿಯೊಬ್ಬನೂ ಸ್ವೀಯ ಸಾಧನಾನುಷ್ಠಾನದಂತೆ ಪಾರಮಾರ್ಥಿಕ ಪುರುಷಾರ್ಥವನ್ನು ಪಡೆಯಬಹುದು; ಆದರೆ ವ್ಯಾವಹಾರಿಕ ಪುರುಷಾರ್ಥದಲ್ಲಾದರೋ ‘ ಸಂಘ ’ ವಿಲ್ಲದೆ ಬಲವು ಸಂಭವಿಸದು. ಬಲವಿಲ್ಲದೆ ಇಷ್ಟಕಾರ್ಯ ಸಿದ್ಧಿಸದು. ಹೈಹಯರಕಾಲದಲ್ಲಿ ಈ ಮಾತು ಅನುಭವಸಿದ್ಧವಾಗಿ ಪರಿಣಮಿಸಿಲ್ಲವೇ? ಈಗಲಾದರೂ ಇದುವೇ ಅಡಿಗಡಿಗೆ ಗೋಚರವಾಗುತ್ತಿರುವುದು.

ಹೈಹಯರ ಕಾಲೀನರಾದ ಬ್ರಾಹ್ಮಣರು ಧರ್ಮಜ್ಞರಾದ ಕ್ಷತ್ರಿಯರ ನುಡಿಗಳನ್ನು ಮನ್ನಿಸಿ ತಮ್ಮ ಪಕ್ಷದೊಳಗಿನವನೇ ಆದ ಒಬ್ಬ ಚತುರನನ್ನು ಮುಂದಾಳುವನ್ನಾಗಿ ಮಾಡಿಕೊಂಡು ಅವನ ಹಿರಿಯತನದಲ್ಲಿ ಯುದ್ಧಮಾಡಿದುದರಿಂದ ಕೊನೆಗೆ ಅವರು ಜಯಶಾಲಿಗಳಾದರು. ಅದೇ ಮೇರೆಗೆ ವರ್ತಮಾನಕಾಲದಲ್ಲಿಯೂ ಸ್ವವರ್ಣಾಶ್ರಮಧರ್ಮಗಳ ಲೋಪವಾಗುವ ಪ್ರಸಂಗವು ಸಂಭವಿ

[೬ನೆಯ ಪುಟವನ್ನು ನೋಡಿರಿ.]

ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್

ಪಿ. ಮಹಾದೇವಯ್ಯನವರು.

ಮೈಸೂರು ಸೀಮೆಯ ಹೈಕೋರ್ಟಿನ ಪ್ರಧಾನ ನ್ಯಾಯಮೂರ್ತಿಗಳಾದ ರಾಜಧರ್ಮಪ್ರವೀಣ ದಿವಾನ್ ಬಹದ್ದೂರ್ ಪಿ. ಮಹಾದೇವಯ್ಯನವರು ಈ ತಿಂಗಳು ೧ ನೆಯ ತಾರೀಖಿಗೆ ತಮ್ಮ ಮಹೋದ್ಯಮದಿಂದ ನಿವೃತ್ತರಾದ ವಿಷಯವು ಸರ್ವತ್ರ ಪ್ರಸಿದ್ಧವಷ್ಟೆ! ಈ ಮಹೋದಯರು ವೀರಶೈವಮತದಲ್ಲಿ ಜನ್ಮವೆತ್ತಿ ಅಸದೃಶವಾದ ಬುದ್ಧಿಪ್ರತಿಭಾವಿಶೇಷದಿಂದ ಹೈಕೋರ್ಟಿನ ಮುಖ್ಯನ್ಯಾಯಸ್ಥಾನವನ್ನಲಂಕರಿಸಿ ವೀರಶೈವ ಮತಕ್ಕೆ ಅಸಾಧಾರಣವಾದ ಗೌರವವನ್ನುಂಟುಮಾಡಿದರೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಲ್ಲಿಯವರೆಗೆ ವೀರಶೈವಸಮಾಜದಲ್ಲಿ ಇಂಥ ಮಹೋನ್ನತಪದವಿಯು ಯಾರಿಗೂ ದೊರೆತಿದ್ದಿಲ್ಲ. ನಮ್ಮನ್ನಾಳುವ ಸಾಕ್ಷಾದ್ಧರ್ಮಾವತಾರಿಗಳಾದ ಮಹಾಪ್ರಭುಗಳವರು ಇವರಲ್ಲಿರುವ ಬುದ್ಧಿಪ್ರತಿಭಾವಿಶೇಷವನ್ನೂ, ನಿಷ್ಪಕ್ಷಪಾತ ಧರ್ಮವನ್ನೂ, ಕಾಯಿದೆಪಾಂಡಿತ್ಯವನ್ನೂ, ಧೀರೋದಾತ್ತತೆಯನ್ನೂ ಕಂಡು ಈ ಮಹೋದಯರಿಗೆ ಈ ಮಹಾಸ್ಥಾನವನ್ನನುಗ್ರಹಿಸಿದುದಕ್ಕಾಗಿ ಇಡೀ ವೀರಶೈವಸಮಾಜವೇ ಮಹಾಪ್ರಭುಗಳವರಿಗೆ ಚಿರಋಣಿಯಾಗಿದೆಯೆಂದು ಮುಕ್ತಕಂಠದಿಂದ ಉದ್ಘೋಷಿಸಬೇಕಾಗಿದೆ. ಈ ನ್ಯಾಯಮೂರ್ತಿಗಳು ತಮ್ಮ ಅಧಿಕಾರಕಾಲದಲ್ಲಿ ಅನೇಕ ಸುಧಾರಣೆಗಳನ್ನುಂಟುಮಾಡಿದರು. ಅವುಗಳಲ್ಲಿ ಒಂದು ಸುಧಾರಣೆಯು ಅತ್ಯಂತ ವರ್ಣನೀಯವಾಗಿದೆ. ಅದೇನೆಂದರೆ—ಇಲ್ಲಿಯವರೆಗೆ ಬ್ರಿಟಿಷ್ ಸೀಮೆಯ ಮ್ಯಾಜಿಸ್ಟ್ರೇಟರು ಒಂದು ಸಾಧಾರಣ ತಪ್ಪಿಗೂ ಕೂಡ ಮೈಸೂರು ದೇಶದ ಪ್ರಜೆಗಳನ್ನು ಕುರಿಗಳಂತೆ ಹಿಡಿದು ತರಿಸುವ ಪದ್ಧತಿಯನ್ನಿಟ್ಟುಕೊಂಡಿದ್ದರು. ಈ ಅನ್ಯಾಯ ಪದ್ಧತಿಯು ಮೈಸೂರು ದೇಶವನ್ನೇ ನಿರ್ವೀರ್ಯವನ್ನಾಗಿ ಮಾಡಿತ್ತು. ನ್ಯಾಯವಿರೋಧವಾದ ಈ ಪದ್ಧತಿಯನ್ನು ಇಲ್ಲಿಯವರೆಗೆ ಯಾವ ನ್ಯಾಯಾಧೀಶರೂ ಕಾಯಿದೆಗನುಸಾರವಾಗಿ ಖಂಡಿಸಿದ್ದಿಲ್ಲ. ಆದರೆ ಈ ಮಹೋದಯರು ಈ ಅನ್ಯಾಯಪದ್ಧತಿಯನ್ನು ತಮ್ಮ ಅತ್ಯದ್ಭುತವಾದ ಕಾಯಿದೆಪಾಂಡಿತ್ಯದಿಂದಲೂ ವಿಶಾಲವಾದ ಕಾನೂನಿನ ಬಲದಿಂದಲೂ ಖಂಡಿಸಿ ಮೈಸೂರುರಾಜ್ಯದ ಸತ್ತ್ವವನ್ನು ಇಂಡಿಯಾದೇಶದಲ್ಲಿ ಪ್ರಕಾಶಗೊಳಿಸಿ ಈ ರಾಜ್ಯದಲ್ಲಿ ವಾಸಿಸಿರುವ ಪ್ರಜೆಗಳಿಗೆ ಅಸಾಧಾರಣವಾದ ಸೌಖ್ಯವನ್ನುಂಟುಮಾಡಿದರು. ಈ ವಿಷಯವು ಕೇವಲ ಮೈಸೂರುದೇಶದ ಚರಿತ್ರದಲ್ಲಿಯೇ ಅಲ್ಲ, ಇಂಡಿಯಾದೇಶದ ಚರಿತ್ರದಲ್ಲಿಯೂ ಸುವರ್ಣಾಕ್ಷರಗಳಿಂದ ಬರೆದಿಡತಕ್ಕುದಾಗಿದೆ. ಈ ಬಗ್ಗೆ ಬರೆದ ಜಡ್ಜಮೆಂಟಿನಲ್ಲಿ ಈ ಮಹೋದಯರು ತೋರಿಸಿರುವ ಕಾಯಿದೆಪಾಂಡಿತ್ಯವು ಇಂಡಿಯಾದೇಶದಲ್ಲಿರುವ ಮಹಾಮಹಾಮೇಧಾವಿಗಳನ್ನೆಲ್ಲಾ ದಂಗುಬಡಿಸಿತು. ಈ ಮಹೋದಯರು ಈ ವಿಷಯವನ್ನು ತೀರ್ಮಾನಿಸಿದ ಮೇಲೆ ಬ್ರಿಟಿಷ್ ಮ್ಯಾಜಿಸ್ಟ್ರೇಟರಿಂದ ಬಂದಿದ್ದ ಒಂದೆರಡು ವಾರಂಟುಗಳು "ಬಂದ ದಾರಿಗೆ ಸುಂಕವಿಲ್ಲ' ವೆಂಬಂತೆ ತಮ್ಮ ಸ್ಥಾನಕ್ಕೆ ಹೊರಟುಹೋದುವು. ಇದನ್ನು ನೋಡಿದರೆ ಯಾವದೇಶಾಭಿಮಾನಿಗೆ ಸಂತೋಷವೆನಿಸಲಿಕ್ಕಿಲ್ಲ? ಈ ರೀತಿಯಾಗಿ ನಾನಾವಿಧದಿಂದಲೂ ಮೈಸೂರು ದೇಶಕ್ಕೆ ಮಹೋಪಕಾರವನ್ನು ಮಾಡಿ, ತಮ್ಮ ಕೀರ್ತಿಯನ್ನು ಮೈಸೂರು ರಾಜ್ಯದಲ್ಲಿ ಸ್ಥಿರವಾಗಿ ಉಳಿಸಿಕೊಂಡ ಈ ನ್ಯಾಯಮೂರ್ತಿಗಳ ಜನ್ಮವೇ ಧನ್ಯ! ಸದ್ಯಃ ವಿಶ್ರಾಂತಿಸುಖವನ್ನನುಭವಿಸುತ್ತಿರುವ ಈ ಮಹೋದಯರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಸಕಲಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೊನ್ನೆ ದಿವಸ ಮದ್ರಾಸಿನಿಂದ ರಾಜಧಾನಿಗೆ ಆಗಮಿಸಿದರು.

ಬೆಂಗಳೂರಿನ ಅಡ್ವೋಕೇಟ್ ಮಿ|| ಎಂ. ಸದಾಶಿವಯ್ಯ ಬಿ.ಎ.,ಬಿ.ಎಲ್. ರವರು ಕೋಲಾರದ ಎರಡನೇ ಗ್ರೇಡ್ ಮುನಸೀಫರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ದಿವಾನರಾದ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರು ಇದೇ ಆಗಸ್ಟ್ ತಿಂಗಳಿನಲ್ಲಿ ಈ ಕೆಳಗೆ ಕಂಡಂತೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸಂಚಾರಮಾಡುವವರಾಗಿರುತ್ತಾರೆ. ತಾ|| 15 ನೆಯ ಬುಧವಾರ ಮೈಸೂರಿಗೆ ಆಗಮನ. ತಾ|| 16 ನೆಯ ಗುರುವಾರ ಪ್ರಾತಃಕಾಲ ರಾಜಧಾನಿಯ ತನಿಖೆ, ಸಾಯಂಕಾಲ ನಂಜನಗೂಡಿಗೆ ಪ್ರಯಾಣ. ತಾ|| 17 ನೆಯ ಶುಕ್ರವಾರ ಪ್ರಾತಃಕಾಲ ಚಾಮರಾಜನಗರಕ್ಕೆ ಹೋಗಿ ಸಾಯಂಕಾಲ ನಂಜನಗೂಡಿಗೆ ಹಿಂತಿರುಗುವರು. ತಾ|| 18 ನೆಯ ಶನಿವಾರ ತಿರಮಕೂಡ್ಲು ನರಸೀಪುರಕ್ಕೆ ಹೋಗಿ ಸಾಯಂಕಾಲ ನಂಜನಗೂಡಿಗೆ ಹಿಂತಿರುಗುವರು ತಾ|| 19 ನೆಯ ಭಾನುವಾರ ಪ್ರಾತಃಕಾಲ ಗುಂಡ್ಲುಪೇಟೆಗೆ ಹೋಗಿ ಮಧ್ಯಾಹ್ನ ನಂಜನಗೂಡಿಗೆ ಹಿಂತಿರುಗುವರು. ಸಾಯಂಕಾಲ 4 ಗಂಟೆಗೆ ನಂಜನಗೂಡು ಟವನ್ನಿನ ತನಿಖೆ. 5 ಗಂಟೆಗೆ ನಂಜನಗೂಡಿನಿಂದ ಮೈಸೂರಿಗೆ ಪ್ರಯಾಣ.

ತಮ್ಮ ಪತಿಯ ನೇತ್ರಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದಿದ್ದ ಶ್ರೀಮತಿ ಸರೋಜಿನಿ ನಾಯಿಡುರವರು ಕಳೆದ ಭಾನುವಾರದ ದಿವಸ ರಾಜಧಾನಿಗೆ ಆಗಮಿಸಿ 4 ದಿವಸಗಳವರೆಗೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿದ್ದು ಬೆಂಗಳೂರಿಗೆ ಹಿಂತಿರುಗಿದರು. 6 ನೆಯ ತಾ|| ಸೋಮವಾರ ಸಾಯಂಕಾಲ ಮುನಿಸಿಪಲ್ ಪ್ರೆಸಿಡೆಂಟರಾದ ಮಿ|| ಬಿ. ಟಿ. ಕೇಶವಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಶ್ರೀಮತಿ ನಾಯಿಡುರವರ ಸಾರ್ವಜನಿಕ ಭಾಷಣವಾಯಿತು. ಮೈಸೂರು ಕಾಂಗ್ರೆಸ್ ಸಂಘ, ತರುಣ ಸಂಘ, ಹಿಂದೀಸಮಾಜ ಮೊದಲಾದ ಅನೇಕ ಸಂಘಗಳವರು ಶ್ರೀಮತಿಯವರಿಗೆ ಅಡ್ರೆಸ್ಸುಗಳನ್ನು ಒಪ್ಪಿಸಿದರು. ಶ್ರೀಮತಿಯವರು ತಮ್ಮ ಭಾಷಣದಲ್ಲಿ ಶ್ರೀಮನ್ಮಹಾರಾಜರವರ ಆಳ್ವಿಕೆಯ ವಿಚಕ್ಷಣತೆಯನ್ನೂ ಮೈಸೂರು ಸರಕಾರದವರು ಪ್ರಜೆಗಳ ಸೌಕರ್ಯಕ್ಕಾಗಿ ಮಾಡಿರುವ ಅನೇಕಾನೇಕ ಏರ್ಪಾಡುಗಳನ್ನೂ ಕೊಂಡಾಡಿ, ಮೈಸೂರು ದೇಶವು ಕಲೆಯ ನೆಲೆಯೆಂದೂ, ಸ್ವರ್ಗಸಮಾನವಾದುದೆಂದೂ ಹೇಳಿದರು.

ಇದೇ ಆಗಸ್ಟ 6 ನೇ ತಾರೀಖು ಸೋಮವಾರ ದಿವಸ ಬೆಂಗಳೂರು ಡಿ|| ಹೊಸಕೋಟೆಯಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಉತ್ಸವವು ಅತ್ಯಂತ ವೈಭವದಿಂದ ನಡೆಯಿತು. ಸ್ಥಳೀಯ ಮುನಿಸಿಪಾಲಿಟಿಯವರು ರಾಜಮಾರ್ಗದಲ್ಲಿ ಭವ್ಯವಾದ ಚಪ್ಪರವನ್ನು ಹಾಕಿ ಶ್ರೀಗಳವರನ್ನು ಸತ್ಕರಿಸಿದರು. ಸವಾರಿಯು ಮಧ್ಯಾಹ್ನ 12½ ಗಂಟೆಗೆ ಆ ಊರಿನ ವೀರಶೈವರಲ್ಲಿ ಪ್ರಮುಖರೂ ಗುರುಭಕ್ತಾಗ್ರಗಣ್ಯರೂ ಆದ ಶ್ರೀ|| ಚಟ್ಟಿ ಬಸಪ್ಪನವರ ಗೃಹಕ್ಕೆ ಆಗಮಿಸಿತು. ಜಗದ್ಗುರುಗಳವರ ಪಾದಪೂಜೆಯೂ, ಭಕ್ತರಿಗೆ ಅನ್ನದಾನವೂ ನಡೆದನಂತರ ಸಾಯಂಕಾಲ 7 ಗಂಟೆಗೆ ಪುರಜನರು ಬಹಿರಂಗಸಭೆಯಲ್ಲಿ ಜಗದ್ಗುರುಗಳವರಿಗೆ ಬಿನ್ನವತ್ತಳೆಯನ್ನು ಒಪ್ಪಿಸಿದರು. ಜಗದ್ಗುರುಗಳು ಪುರಜನರ ಬಿನ್ನವತ್ತಳೆಗೆ ಪ್ರತ್ಯುತ್ತರ ರೂಪವಾದ ಭಾಷಣವನ್ನು ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು. ಮರುದಿವಸ ಬೆಳಗ್ಗೆ ಜಗದ್ಗುರುಗಳವರು ನಂದುಗುಡಿಗೆದಯಮಾಡಿಸಿದರು. ಸಕಲ ಮರ್ಯಾದೆಗಳೊಡನೆ ಉತ್ಸವವು ನೆರವೇರಿತು. ಉತ್ಸವದಲ್ಲಿ ಅಮಲ್ದಾರರು, ಪೋಲೀಸ್ ಇನ್ಸ್‌ಪೆಕ್ಟರವರೇ ಮೊದಲಾದ ಪ್ರಮುಖ ಅಧಿಕಾರಿಗಳು, ಅಲ್ಲದೆ 5-6 ಸಾವಿರ ಜನರು ಸೇರಿದ್ದರು. ಸಾಯಂಕಾಲ ಬಹಿರಂಗ ಸಭೆಯು ನಡೆದು ಪುರಜನರಿಂದ ಬಿನ್ನವತ್ತಳೆಯು ಸಮರ್ಪಿಸಲ್ಪಟ್ಟಿತು. ವೇ|| ವೃಷಭಲಿಂಗಶಾಸ್ತ್ರಿಗಳು ಮತ್ತು ಶ್ರೀ|| ಗಂಗಾಧರಶಿವಾಚಾರ್ಯರ ಉಪನ್ಯಾಸಗಳೂ, ಜಗದ್ಗುರುಗಳವರ ಅನೋಘವಾದ ಭಾಷಣವೂ ನಡೆದನಂತರ ಸಭೆಯು ಮುಕ್ತಾಯವಾಯಿತು.

ವರ್ತಮಾನಸಂಗ್ರಹ.

ಸಮುದ್ರದ ನೀರಿನಲ್ಲಿ ಅಪಾರವಾದ ಚಿನ್ನ ಮತ್ತು ಬೆಳ್ಳಿಯು ಕರಗಿರುವುದೆಂದು ಶಾಸ್ತ್ರಜ್ಞರು ನಿರ್ಧರಿಸಿರುವರು. ಅದರಲ್ಲಿ ಒಂದುಪಾಲು ಚಿನ್ನವೂ, 1000 ಪಾಲಿನ ಬೆಳ್ಳಿಯೂ ಇರುವುದಂತೆ!

ಹೈದರಾಬಾದ್ ನೈಜಾಮರವರಿಗೆ ಬ್ರಿಟಿಷ್ ಸರಕಾರದವರು "ಹಿಸ್ ಮೆಜಸ್ಟಿ" ಎಂಬ ಬಿರುದನ್ನು ಕೊಡಲಿರುವರೆಂದು ಲಂಡನ್ನಿನ 'ಮಾರ್ನಿಂಗ್ ಪೋಸ್ಟ' ಪತ್ರಿಕೆಯು ಪ್ರಕಟಿಸಿರುತ್ತದೆ

ಪೋಲೆಂಡ್ ದೇಶದ ಟಾರ್ನೊ ಎಂಬ ಊರಿನಲ್ಲಿ [illegible] ಜನ ಬಾಲಕರು ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲವೆಂಬ ಕಾರಣದ ಮೇಲೆ ಒಂದು ಬಂದೂಕವನ್ನೂ [illegible] ಗುಂಡುಗಳನ್ನೂ ಕೊಂಡುಕೊಂಡು ಒಬ್ಬೊಬ್ಬರಾಗಿ ಆತ್ಮಹತ್ಯಮಾಡಿಕೊಂಡರು. ಸಾಯುವುದಕ್ಕೆ ಮುಂಚೆ ಎಲ್ಲರನ್ನೊಬ್ಬರು ಮುತ್ತಿಟ್ಟುಕೊಂಡು ಒಟ್ಟಾಗಿ ಒಂದು ಕಾಗದವನ್ನು ಬರೆದಿಟ್ಟಿದ್ದರಂತೆ!

ಆಸ್ಟ್ರಿಯಾದಲ್ಲಿ ಹಿಟ್ಲರರ ಪಕ್ಷದವರು ಸರಕಾರದ ವಿರುದ್ಧವಾಗಿ ಪುನಃ ಚಳವಳಿಯನ್ನು ಪ್ರಾರಂಭಿಸಿರುವರು. ಜರ್ಮನ್ ನಾಜಿಗಳು ಇಟಲಿ ದೇಶದ ಸರಕುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸುತ್ತಿರುವುದಲ್ಲದೆ ತಮ್ಮ ವೃತ್ತಪತ್ರಿಕೆಗಳಲ್ಲಿ ಡಾಲ್ಫಸರನ್ನು ಕೊಂದು ಗಲ್ಲಿಗೇರಿಸಲ್ಪಟ್ಟ ಪ್ಲಾನೆಟಾ ಮತ್ತು ಹೋಲ್ಜವೆಬರನ್ನು ಶೂರರೆಂದು ಹೊಗಳುತ್ತಿರುವರಂತೆ!

ಯೂರೋಪಿನ 3 ರಾಷ್ಟ್ರಗಳವರು ಒಂದು ಹೊಸ ತರಹದ ವಿಷವಾಯುವನ್ನು ತಯಾರಿಸಿ ಅದರ ಬಗ್ಗೆ ಶೋಧಗಳನ್ನು ನಡೆಯಿಸುತ್ತಿರುವರು. ಈ ವಾಯುವನ್ನು ದೊಡ್ಡದೊಡ್ಡ ಮದ್ದಿನ ಗುಂಡುಗಳಲ್ಲಿ ತುಂಬಿಸಿ ಫಿರಂಗಿಗಳಿಂದ ಮೇಲಕ್ಕೆ ಹಾರಿಸುವರು. ಇವು ಅಂತರಿಕ್ಷದಲ್ಲಿ ಸ್ವಲ್ಪದೂರ ಹೋದನಂತರ ಸಿಡಿದು ಒಳಗಿರುವ ವಾಯುವು ಸುತ್ತಲೂ ಹರಡಿಕೊಳ್ಳುವುದು. ಪ್ರತಿಪಕ್ಷದ ವಿಮಾನಗಳು ಆ ಮಾರ್ಗವಾಗಿ ಬಂದಲ್ಲಿ ಮುಂದಕ್ಕೆ ಹೋಗಲಾರದೆ ಕೆಳಕ್ಕೆ ಬೀಳುವುವಂತೆ!

ಫ್ರಾನ್ಸ್ ದೇಶದ ಮೇಡಂ ಲ್ವಾಲಾ ಎಂಬ ಪ್ರಸಿದ್ಧಜ್ಯೋತಿಷ ವಿದ್ಯಾನಿಪುಣೆಯು ಸದ್ಯಃ ಕೊಲಂಬೋ ನಗರಕ್ಕೆ ಬಂದಿರುವಳು. ಈಕೆಯು ಹಿಟ್ಲರರು ಜರ್ಮನಿಯ ಅಧ್ಯಕ್ಷರಾಗುವುದನ್ನೂ, ಡಾ|| ಡಾಲ್ಫರ ಕೊಲೆಯನ್ನೂ, ಚೀನಾ ಜಪಾನ್ ಯುದ್ಧವನ್ನೂ ಪೂರ್ವಭಾವಿಯಾಗಿಯೇ ಹೇಳಿದ್ದು ಅವೆಲ್ಲವೂ ನಿಜವಾಗಿಯೇ ಪರಿಣಮಿಸಿರುತ್ತವೆ. ಈಗ ಈಕೆಯು ಕ್ಷಿಪ್ರದಲ್ಲಿಯೇ ಜರ್ಮನಿಗೂ ಫ್ರಾನ್ಸಿಗೂ ಘೋರಯುದ್ಧವು ಪ್ರಾರಂಭವಾಗುವುದೆಂದೂ, ಜರ್ಮನ್ ರಾಜ್ಯವು 3 ಭಾಗಗಳಾಗಿ ಮಾಜಿ ಕೈಸರನ ಮೊಮ್ಮಗನೊಬ್ಬನು ಜರ್ಮನಿಯ ಸಿಂಹಾಸನವನ್ನೇರುವನೆಂದೂ ಭವಿಷ್ಯ ಹೇಳಿರುವಳು.

ಗೊಂಡಾಲ ಮಹಾರಾಜರ ಸುವರ್ಣೋತ್ಸವವು (Golden Jubilee) ಬರುವ ಅಕ್ಟೋಬರ್ ತಿಂಗಳಲ್ಲಿ ನಡೆಯುವದು. ಅದಕ್ಕಾಗಿ 4 ಲಕ್ಷ ರೂ. ಗಳು [illegible]ಯು ಕೂಡಿರುವುದು. ಮಹಾರಾಜರು ವೈದ್ಯಶಾಸ್ತ್ರನಿಪುಣರೂ ಸಾಹಿತ್ಯಪ್ರೇಮಿಗಳೂ ಆಗಿದ್ದು, ಗುಜರಾಥ ಭಾಷೆಯಲ್ಲಿ ಒಂದು ದೊಡ್ಡ ಕೋಶವನ್ನು [illegible]ಸಿರುತ್ತಾರೆ. ಇವರು ರಜಪೂತರಾದರೂ ಘೋಷಾ ಪದ್ಧತಿಯನ್ನು ಸಂಪೂರ್ಣವಾಗಿ ತ್ಯಜಿಸಿರುವರು. ಸುವರ್ಣೋತ್ಸವದ ದಿವಸ ಮಹಾರಾಜರು ಸುಮಾರು [illegible] ಲಕ್ಷ ರೂ. ಬಾಳುವಷ್ಟು ಭಂಗಾರವನ್ನು ತುಲಾಭಾರ ಮಾಡಿಸಿ ಅದನ್ನು ಬಡವರಿಗೆ ದಾನಮಾಡುವರು. ಪ್ರಜೆಗಳು ಭಂಗಾರದ ಹಾಳೆಗಳ ಮೇಲೆ [illegible]ಕ್ಷರಗಳನ್ನು ಕೆತ್ತಿ, ಪುಸ್ತಕರೂಪದಲ್ಲಿ ತಯಾರಿಸಿಟ್ಟ ಬಿನ್ನವತ್ತಳೆಯನ್ನು ಮಹಾರಾಜರಿಗೆ ಸಮರ್ಪಿಸುವರೆಂದೂ ತಿಳಿದುಬಂದಿದೆ.

ಉದಾರಸಹಾಯ !

ಮುಂಬಯಿಯ ಒಬ್ಬ ಪಾರ್ಸಿ ಸ್ತ್ರೀಯು ಅಸ್ಸಾಮಿನಲ್ಲಿ ಪ್ರವಾಹದ ದೆಸೆಯಿಂದ ಬತ್ತಲೆಯಾಗಿ ತಿರುಗುತ್ತಿರುವ ಸ್ತ್ರೀಯರಿಗಾಗಿ 2000 ಸೀರೆಗಳನ್ನು ಕೊಟ್ಟಿದ್ದಾರೆ.

ಸೃಷ್ಟಿವೈಚಿತ್ರ್ಯ!

ಅಮೇರಿಕಾ ದೇಶಕ್ಕೆ ಸೇರಿದ ಇಂಡಿಯಾನಾಪೊಲೀಸ್ ನಗರದಲ್ಲಿ ಒಂದು ಮಗುವಿಗೆ ಹುಟ್ಟುವಾಗಲೇ 50 ಮೂಳೆಗಳು ಮುರಿದು ಹೋಗಿರುವುವಂತೆ! ಡಾಕ್ಟರರು ಆ ಮೂಳೆಗಳನ್ನು ಯಾವ ರೀತಿಯಲ್ಲಿ ಕೂಡಿಸಬೇಕೆಂದು ಆಲೋಚಿಸುತ್ತಿರುವರು.

ಬಹಿರಂಗ ಸ್ಥಳದಲ್ಲಿ ಮರಣದಂಡನೆ !

ಇದೇ ಆಗಸ್ಟ 8 ನೇ ತಾರೀಖಿನ ದಿವಸ ಲಾರ್ ಖಾನಾದಲ್ಲಿ ಅಬ್ದುಲ್‌ರಹೀಂ ಮತ್ತು ಷೇಕ್ ಗುಲಾಂ ಹುಸೇನ್ ಎಂಬ ಇಬ್ಬರು ಪ್ರಸಿದ್ಧ ಥಕಾಯಿತರು ಬಹಿರಂಗವಾಗಿ ಗಲ್ಲಿಗೇರಿಸಲ್ಪಟ್ಟರು. ಇವರ ಹೆಸರುಗಳನ್ನು ಕೇಳಿದ ಮಾತ್ರಕ್ಕೆ ಗ್ರಾಮಸ್ಥರು ಗಡಗಡನೆ ನಡುಗುತ್ತಿದ್ದರಂತೆ!

ಅದ್ಭುತವಾದ ಅಸ್ಥಿಪಂಜರ !

ಅಲಹಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಒಂದು ನದೀ ತೀರದಲ್ಲಿ 31½ ಅಡಿ ಎತ್ತರವಾದ ಒಂದು ಅಸ್ಥಿಪಂಜರವು ದೊರೆತಿರುವದು. ಕಾಲುಗಳ ಮೂಳೆಗಳು 10 ಅಡಿ ಉದ್ದವಾಗಿದ್ದು, ಮನುಷ್ಯನ ಅಸ್ಥಿಪಂಜರದಂತೆ ಇರುವುವಂತೆ! ಇದನ್ನು ರಾಮಗಡದಲ್ಲಿ ಇಟ್ಟಿರುವರು.

ಬಿಸಿಲಿನಿಂದ ಮರಣ !

ಅಮೇರಿಕೆಯಲ್ಲಿ ಬಿಸಲಿನ ತಾಪವನ್ನು ತಡೆಯಲಾರದೆ ಇದುವರೆಗೆ 1,500 ಕ್ಕಿಂತಲೂ ಹೆಚ್ಚು ಜನರು ಮೃತಪಟ್ಟಿರುವರು. ಬೆಳೆಯು ನಾಶವಾಗುತ್ತಿರುವದರಿಂದ ದನಕರುಗಳು ವಿಶೇಷ ತೊಂದರೆಗೊಳಗಾಗಿರುವುವು. ಸರಕಾರದವರು ಚಿಕಾಗೋನಗರದಲ್ಲಿ ಈಗಾಗಲೇ 10 ಲಕ್ಷ ದನಕರುಗಳನ್ನು ಕೊಂದುಹಾಕಿದ್ದು ಇನ್ನೂ 8,50,000 ದನಕರುಗಳನ್ನು ಕೊಲ್ಲಿಸುವರಂತೆ!

ಭಾರೀ ಔತಣ !

ಜೂನ್ 30 ನೇ ತಾರೀಖಿನ ದಿವಸ ಪ್ಯಾರಿಸ್ ನಗರದಲ್ಲಿ ಒಂದು ದೊಡ್ಡ ಔತಣವು ನಡೆಯಿತು. ಇದಕ್ಕೆ 38,000 ಜನರು ಸಂಸಾರ ಸಮೇತರಾಗಿ ಆಹ್ವಾನಿಸಲ್ಪಟ್ಟಿದ್ದರು. ಎಲ್ಲರೂ ಒಂದೇ ಒಂದು ದೊಡ್ಡ ಟೇಬಲ್ಲಿನ ಸುತ್ತಲೂ ಕುಳಿತು ಊಟಮಾಡಿದರು. ಟೇಬಲು ಸುಮಾರು 4 ಮೈಲು ಉದ್ದವಾಗಿತ್ತೆಂದು ಅಂದಾಜುಮಾಡಲ್ಪಟ್ಟದೆ.

ಕದ್ದವನು ಕನಸಿನಲ್ಲಿ ಬಂದನು !

ಅಮೃತಸರ ನಗರದಲ್ಲಿ ಒಬ್ಬನ ಹಸುವು ಕಳುವಾಯಿತು. ಹಸುವನ್ನು ಸಾಕಿದ್ದವನು ರಾತ್ರಿ ನಿದ್ರೆಯನ್ನು ಮಾಡುವಾಗ ಕನಸಿನಲ್ಲಿ ಆ ಊರಿನ ಯಾವುದೋ ಒಂದು ಗೊತ್ತಾದ ಭಾಗದಲ್ಲಿ ಕಳ್ಳನು ತನ್ನ ಹಸುವನ್ನು ತೆಗೆದುಕೊಂಡು ಹೋಗುತ್ತಿರುವುದನ್ನು ಕಂಡನು. ಅವನು ಕೂಡಲೇ ಎದ್ದು ಅಸ್ಥಳಕ್ಕೆ ಹೋಗಿ ನೋಡಲು ಹಸುವು ಸಿಕ್ಕಿತು!

1 ಪೌಂಡ್ ತೂಕದ ಮಗು !

ಇಂಗ್ಲೆಂಡಿನ ವಾಲ್ಥಾಂಸ್ಟೊ ಎಂಬಲ್ಲಿ ಅಂಗೆಲಾ ಮಾರ್ಟಿನ್ ಎಂಬ 60 ತೊಲೆ ತೂಕವುಳ್ಳ ಒಂದು ಸಣ್ಣ ಮಗುವಿರುವುದು. ಅದು ಹುಟ್ಟುವಾಗ 40 ತೊಲೆ ತೂಕವಾಗಿದ್ದಿತಂತೆ! ಈ ಮಗುವಿಗೆ ಪ್ರತಿ ಘಂಟೆಗೊಂದಾವರ್ತಿ ಹಾಲನ್ನೂ ಬ್ರಾಂದಿಯನ್ನೂ ಕೊಡುವರು. ಮಗುವು ದಿನ 1 ಕ್ಕೆ 2½ ತೊಲೆಯಂತೆ ತೂಕದಲ್ಲಿ ಹೆಚ್ಚಾಗುತ್ತಿರುವದು.

ಅಪಾಯವಿಲ್ಲದ ವಿಮಾನ ಸಂಚಾರ !

ಫ್ರಾನ್ಸ್‌ದೇಶದ 4 ಜನ ಪ್ರೊಫೆಸರರು ಆಕಾಶ ವಿಮಾನಗಳನ್ನು ಅಪಾಯವಿಲ್ಲದೆ ಹಾರಿಸುವಂತೆ ಕೆಲವು ನೂತನ ಸಾಧನಗಳನ್ನು ಕಂಡುಹಿಡಿದಿರುವರು. ಇವುಗಳ ಸಹಾಯದಿಂದ ಚಿಕ್ಕಮಕ್ಕಳೂ ಕೂಡವಿಮಾನಗಳನ್ನು ನಡೆಸಬಹುದಂತೆ! ಅಥವಾ ವೈಮಾನಿಕರೇ ಇಲ್ಲದೆ, ರೇಡಿಯೋ ಸಹಾಯದಿಂದಲೇ ವಿಮಾನಗಳನ್ನು ಹಾರಿಸಿ ಇಳಿಸಬಹುದಂತೆ!

ಚೀನೆಯಲ್ಲಿ ಬೀರಕ್ಷಾಮ !

ಚೀನಾದೇಶದಲ್ಲಿ ಮಿತಿಮೀರಿದ ಪ್ರವಾಹವೂ ಅನಂತರ ಅನಾವೃಷ್ಟಿಯೂ ಉಂಟಾಗಿರುವುದರಿಂದ 50 ಲಕ್ಷ ಜನರು ಆಹಾರವೇ ಇಲ್ಲದೆ ಸಾಯುವ ಸ್ಥಿತಿಯುಂಟಾಗಿರುವುದೆಂದೂ, ಉಪವಾಸವನ್ನು ತಡೆಯಲಾರದೆ ಪ್ರತಿನಿತ್ಯವು ಅನೇಕ ಕುಟುಂಬಗಳವರು ಆತ್ಮಹತ್ಯ ಮಾಡಿಕೊಳ್ಳುತ್ತಿರುವರೆಂದೂ ತಿಳಿದು ಬಂದಿದೆ.

ಆಸ್ಟ್ರಿಯಾದ ಶತ್ರುಗಳಿಗೆ ಎಚ್ಚರಿಕೆ !

ಆಸ್ಟ್ರಿಯಾ ದೇಶದ ವೈಸ್ ಛಾನ್ಸಲರಾದ ಪ್ರಿನ್ಸ್ ಸ್ಟಾರೆಂಬರ್ಗ್‌ರವರು 3,10,000 ಜನರು ಸೇರಿದ್ದ ಒಂದು ಪ್ರಚಂಡಸಭೆಯಲ್ಲಿ, ಆಸ್ಟ್ರಿಯಾದೇಶದ ತಾಳ್ಮೆಯು ಮಿತಿಮೀರಿರುವದೆಂದೂ, ಇನ್ನು ಹೆಚ್ಚು ಕಾಲ ತಾವು ಶತ್ರುಗಳ ತೊಂದರೆಯನ್ನು ತಡೆಯುವುದಿಲ್ಲವೆಂದೂ, ಡಾ|| ಡಾಲ್ಫಸರ ಕೊಲೆಮಾಡಿದವರನ್ನು ತಾವೆಂದೂ ಕ್ಷಮಿಸುವುದಿಲ್ಲವೆಂದೂ ಹೇಳಿದರು.

ಇಂಗ್ಲೆಂಡಿನಲ್ಲಿ ಯುದ್ಧದ ಸಿದ್ಧತೆ !

ಇಂಗ್ಲೆಂಡಿನಲ್ಲಿ ಯುದ್ಧದ ಸಿದ್ಧತೆಯು ಅತ್ಯಂತ ಜೋರಾಗಿ ನಡೆದಿರುವದು. ಆಕಾಶಮಾರ್ಗದಲ್ಲಿ ಕಣ್ಣಿಗೆ ಕಾಣದಂತೆ ಸಂಚರಿಸುತ್ತ, ನೂರಾರು ಮೈಲುಗಳ ದೂರದಲ್ಲಿರುವ ಶತ್ರುಸೈನ್ಯದ ಮೇಲೆ ಸಿಡಿಮದ್ದುಗಳನ್ನು ಎಸೆಯುವಂತಹ ಕೆಲವು ನೂತನ ವಿಮಾನಗಳು ರಚಿಸಲ್ಪಡುತ್ತಿರುವುವು. ಬ್ರಿಟಿಷ್ ಸರಕಾರದವರು ಈ ವಿಮಾನಗಳ ತಯಾರಿಕೆಗಾಗಿ 90 ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್‌ಮಾಡಿರುತ್ತಾರೆ.

ಉದ್ದಬಾಲದ ಹುಂಜಗಳು.

ಜಪಾನ್ ದೇಶಕ್ಕೆ ಸೇರಿದ ಒಸಿನೋ ಮುರಾ ಎಂಬಲ್ಲಿ ಒಂದು ಜಾತಿಯ ಹುಂಜಗಳಿರುವುವು. ಇವುಗಳ ಬಾಲವು 26 ಅಡಿಗಳ ವರೆಗೂ ಉದ್ದವಾಗಿರುವವು. ಇವು 10 ವರ್ಷಗಳ ಕಾಲ ಮಾತ್ರ ಬದುಕುವುವು. ಇವುಗಳನ್ನು ಸಾಕುವುದು ಬಹಳ ಕಷ್ಟ. ಇವು ವರ್ಷಕ್ಕೆ 30 ತತ್ತಿಗಳನ್ನು ಇಡುವುವು. ಆದರೂ, 200 ತತ್ತಿಗಳಲ್ಲಿ ಒಂದು ತತ್ತಿಯಲ್ಲಾದರೂ ಮರಿಯಾಗುವುದು ಕಷ್ಟ. ಇವುಗಳ ಬೆಲೆ 1ಕ್ಕೆ 40 ರೂ ಗಿಂತಲೂ ಹೆಚ್ಚಾಗುವುದು.

ವಿಚಿತ್ರವೃಕ್ಷ !

ಭತ್ರಿ ಎಂಬ ಗ್ರಾಮದಲ್ಲಿ ಈಗ್ಗೆ ಸುಮಾರು 6 ತಿಂಗಳ ಹಿಂದೆ 60 ಅಡಿ ಎತ್ತರವುಳ್ಳ ಒಂದು ದೊಡ್ಡ ಮರವು ಬಿರುಗಾಳಿಯ ದೆಸೆಯಿಂದ ಕೆಳಕ್ಕೆ ಉರುಳಿ ಒಣಗಿಹೋಗಿತ್ತು. ಆದರೆ ಈಗ ಪುನಃ ಚಿಗುರಿ ಅದರಲ್ಲಿ ಎಲೆಗಳು ಬೆಳೆಯಲಾರಂಭಿಸಿರುವುವಲ್ಲದೆ ಮರವೂ ಮೆಲ್ಲಗೆ ಮೇಲಕ್ಕೆ ಏಳುತ್ತಾ ಇರುವುದಂತೆ! ಈ ಮರದಲ್ಲಿ ಯಾವುದೋ ಭೂತವು ವಾಸವಾಗಿರುವುದೆಂದೂ, ಇದೆಲ್ಲಾ ಭೂತಚೇಷ್ಟೆಯೆಂದೂ ಜನರು ಹೇಳುವರು.

ಇಂಗ್ಲೆಂಡಿನಲ್ಲಿ ಆಕಳುಗಳ ಬೆಲೆಯು ಹೆಚ್ಚಿತು !

ಪೂರ್ವದಲ್ಲಿ ಐರ್ಲೆಂಡ್ ದೇಶದಿಂದ ಇಂಗ್ಲಂಡಿಗೆ ಆಕಳುಗಳು ವಿಶೇಷವಾಗಿ ರಫ್ತಾಗುತ್ತಿದ್ದುವು. ಈಚೆಗೆ ಐರ್ಲೆಂಡಿಗೂ ಇಂಗ್ಲಂಡಿಗೂ ರಾಜಕೀಯ ವಿರೋಧವುಂಟಾಗಿ ಇಂಗ್ಲಂಡ್ ಸರಕಾರದವರು ಐರ್ಲೆಂಡ್ ದೇಶದಿಂದ ಬರುವ ಎಲ್ಲ ಪದಾರ್ಥಗಳ ಮೇಲೂ ಸುಂಕವನ್ನು ಹೆಚ್ಚಿಸಿದರು. ಇದರಿಂದ ಐರ್ಲೆಂಡ್ ಸರಕಾರದವರು ತಮ್ಮ ದೇಶದಿಂದ ಇಂಗ್ಲಂಡಿಗೆ ಹೆಚ್ಚು ಆಕಳುಗಳನ್ನು ರವಾನಿಸದಂತೆ ಮಾಡಿದರು. ಅದರಿಂದ ಇಂಗ್ಲಂಡಿನಲ್ಲಿ ಈಗ ಆಕಳುಗಳ ಖರೀದಿಯು ಹೆಚ್ಚಾಗಿರುವದು. ಲಂಡನ್ ನಗರದಲ್ಲಿ ಮೊದಲು 30-40 ರೂ. ಗಳಿಗೆ ಒಂದು ಆಕಳೆಯು ದೊರಕುತ್ತಿದ್ದು ಈಗ ಅವುಗಳ ಕ್ರಯವು 1 ಕ್ಕೆ 150 ರೂ. ಗಳಾಗಿರುವುದು !

[೩ನೆಯ ಪುಟದಿಂದ ಮುಂದುವರಿದುದು.]

ತಿಳಲು ನಮ್ಮವರಾದರೂ ತಮ್ಮ ಮನಸ್ಸಿನ ವೈಷಮ್ಯಾದಿವೃತ್ತಿಗಳನ್ನು ಕೆಲವು ಕಾಲದವರೆಗಾದರೂ ಬದಿಗಿಟ್ಟು ಸಂಘಟಿತರಾಗುವುದುಚಿತವು. ಬೇರೆಬೇರೆ ಶಾಖೆಯೊಳಗಿರತಕ್ಕವರು ವಿದ್ಯಾವಂತನೂ, ಪರಹಂಕಾರಿಯೂ, ಸದಾಚಾರಿಯೂ, ವ್ಯವಹಾರಚತುರನೂ ಆದ ಓರ್ವಪುರುಷನನ್ನು ಪ್ರಮುಖನನ್ನಾಗಿ ಗೊತ್ತುಮಾಡಿಕೊಂಡು ಶಕ್ತಿದೀಕ್ಷವಾಗಿರಿಂದ ನಡೆವುದು ಯೋಗ್ಯವು; ಅದರಿಂದ ಪ್ರತಿಪತ್ತಿಗಳುವಟಿಕವು ಸ್ವಲ್ಪಕಾಲದಲ್ಲಿಯೇ ಕಡಿಮೆಯಾಗುವುದರಲ್ಲಿ ಸಂದೇಹವೇ ಇಲ್ಲ.

(ಸಶೇಷ)

ಆರೋಗ್ಯರಕ್ಷಣೆ.

ಲೇಖಕ:—ವಾಗೀಶಶಿವಾಚಾರ್ಯ ಬ್ರಹನ್ಮಠ
ಮುದೇನೂರು ಶ್ರೀ ಕ್ಷೇತ್ರ ಕಾಶೀ

(ಹಿಂದಿನಿಂದ ಮುಂದುವರಿದುದು.)

ಇನ್ನು ಕೆಲವರಿಗೆ ಚಹಾ ಮುಂತಾದ ಕೃತ್ರಿಮೋಪಾಯಗಳಿಂದಲೂ ಮಲವಿಸರ್ಜನೆ ಸರಿಯಾಗಿ ಆಗುವದಿಲ್ಲ. ಹೀಗಾಗುವುದಕ್ಕೆ ಮುಖ್ಯ ಕಾರಣವೇನೆಂದರೆ—ಯಾವಾಗಲೂ ಸಿಕ್ಕಸಿಕ್ಕ ಔಷಧಿಗಳನ್ನು ತಿನ್ನುತ್ತಿರುವುದು. ಮನುಷ್ಯನು ರೋಗವಿಲ್ಲದೆ ಎಂದೂ ಔಷಧವನ್ನು ತಿನ್ನಬಾರದು. ಎಷ್ಟೋ ಜನರು ರಕ್ತಶುದ್ಧಿಯಾಗಬೇಕು, ವೀರ್ಯ ವೃದ್ಧಿಯಾಗಬೇಕು, ಶರೀರವು ಪುಷ್ಟವಾಗಬೇಕೆಂದು ಯಾವಾಗಲೂ ಔಷಧಗಳನ್ನು ತಿಂದೇ ತಿನ್ನುವರು. ಈ ಪದ್ಧತಿಯು ಆರೋಗ್ಯವಾಗಿರುವವರನ್ನು ರೋಗಿಯನ್ನಾಗಿ ಮಾಡುವದಕ್ಕೆ ಬಹಳ ಉಪಯುಕ್ತವಾಗಿದೆ. ರೋಗವಿಲ್ಲದೆ ಔಷಧವನ್ನು ತಿಂದು ರೋಗಿಗಳಾದವರು ಈಗಲೂ ಎಷ್ಟೋ ಜನರು ಸಿಗುತ್ತಾರೆ. ಆದ್ದರಿಂದ ಸಾಧ್ಯವಾದಮಟ್ಟಿಗೂ ರೋಗವಿಲ್ಲದೆ ಔಷಧ, ಔಷಧವೆಂದು ಯಾರೂ ಹಂಬಲಿಸಬಾರದು. ದುಷ್ಟಾಹಾರಗಳಿಂದಲೋ, ದುಷ್ಟೌಷಧಗಳಿಂದಲೋ ಹೊಟ್ಟೆಯೊಂದು ಕೆಟ್ಟಿತೆಂದರೆ ಮುಖ್ಯವಾಗಿ ಹೊಟ್ಟೆಯನ್ನೇ ಆಶ್ರಯಮಾಡಿಕೊಂಡಿರುವ ಸಕಲಾವಯವಗಳೂ, ಸಕಲೇಂದ್ರಿಯಗಳೂ ಶಕ್ತಿಹೀನಗಳಾಗಿ ಕೆಡಹತ್ತುವವು. ಮಲಾವರೋಧವೂ ಹೊಟ್ಟೆ ಕೆಡುವುದರಿಂದಲೇ ಉಂಟಾಗುವುದು. ಶಾರೀರಕ ಕಾರ್ಯಗಳಲ್ಲಿ ಚೆನ್ನಾಗಿ ಮಲವಿಸರ್ಜನೆಯಾಗಬೇಕಾದುದು ಮೊದಲನೆಯ ಕಾರ್ಯವು. ನೂರರಲ್ಲಿ ನಾಲ್ಕಾರು ಮಂದಿಯನ್ನು ಬಿಟ್ಟು ಉಳಿದವರೆಲ್ಲರಿಗೂ ಈ ಮಲಾವರೋಧವು ಅಲ್ಪಸ್ವಲ್ಪ ಇದ್ದೇ ಇರುವದರಿಂದ ಇದರ ನಿವಾರಣೋಪಾಯವನ್ನು ನಾವೀಗ ಹುಡುಕೋಣ—ಮಲವಿಸರ್ಜನೆಗಾಗಿ ಮೊದಲು ಒಂದು ಸಮಯವನ್ನು ಸರಿಯಾಗಿ ಗೊತ್ತುಮಾಡಿಕೊಳ್ಳಬೇಕು. ಆ ಸಮಯವಾದರೂ ಪ್ರಾತಃಕಾಲದ ಮಲವಿಸರ್ಜನೆಗೆ ಬೆಳಗು ಮುಂಜಾನೆ ೪ ಘಂಟೆಯಿಂದ ೮ ಘಂಟೆಯೊಳಗಾಗಿಯೇ ಇರಬೇಕು. ಎರಡನೆಯ ಮಲವಿಸರ್ಜನೆಗೆ ಮಧ್ಯಾಹ್ನ ೪ ಘಂಟೆಯಿಂದ ೬ ಘಂಟೆಯೊಳಗಾಗಿಯೇ ಇರಬೇಕು. ಈ ಎರಡೂ ಸಮಯಗಳ ಮಧ್ಯದಲ್ಲಿ ಊಟದ ಸಮಯವನ್ನು ಬಿಟ್ಟು, ಊಟವಾದ ಮೇಲೆ ಎರಡು ಘಂಟೆ ಸಮಯವನ್ನು ಬಿಟ್ಟು ಮತ್ತೊಂದು ಮಲವಿಸರ್ಜನೆಯನ್ನೂ ಮುಗಿಸಿಕೊಳ್ಳಬಹುದು. ಅಂತೂ ಬಹಳ ಹೆಚ್ಚಾದರೂ ದಿವಸದಲ್ಲಿ ಮೂರುಸಾರೆಗಿಂತ ಹೆಚ್ಚಾಗಬಾರದೆಂಬುದೇ ಭಾವಾರ್ಥವು. ಕೆಲವರು ಮಲವಿಸರ್ಜನೆಗೆ ದಿವಸದಲ್ಲಿ ಎಷ್ಟೋ ಸಾರೆ ಹೋಗುತ್ತಿರುವರು. ಇದು ಒಳ್ಳೆಯದಲ್ಲ. ನಿಶ್ಚಯಮಾಡಿಕೊಂಡ ಹೊತ್ತಿಗೆ ಸರಿಯಾಗಿ ಹೋಗುವದಾದರೆ ಮಲವಿಸರ್ಜನೆಯು ಅವಶ್ಯವಾಗಿಯೂ ಚನ್ನಾಗಿ ಆಗುವದು.

ಮಲವಿಸರ್ಜನೆಗಾಗಿ ಯಾವ ಕೃತ್ರಿಮೋಪಾಯಗಳೂ ಬೇಕಾಗಿಲ್ಲ. ಸ್ವಭಾವಸಿದ್ಧವೂ, ಶುದ್ಧವೂ ಆದ ಹಿಂದಿನ ದಿವಸದ ಒಂದು ಪಾವು ತಣ್ಣೀರು ಪ್ರಾತಃಕಾಲಕ್ಕೆ ಹೊಟ್ಟೆಯನ್ನು ಸೇರಿದರೆ ಸಾಕು. ಅದಕ್ಕಿಂತಲೂ ಹೆಚ್ಚಾಗಿ ಆರೋಗ್ಯವನ್ನುಂಟುಮಾಡುವ ಔಷಧಿಯು ಜಗತ್ತಿನಲ್ಲಿ ಮತ್ತೊಂದಿಲ್ಲವೆಂತಲೇ ಹೇಳಬಹುದು. ಹೀರಿನ್ನಾದರೂ ಒಮ್ಮೆಲೆ ಗಟಗಟನೆ ಕುಡಿಯಬಾರದು. ಪ್ರಾತಃಕಾಲದಲ್ಲಿ ಹೀಗೆ ತಣ್ಣೀರು ಕುಡಿಯುವುದರಿಂದ ಮಲವಿಸರ್ಜನೆ ಸರಿಯಾಗಿ ಆಗುವುದಲ್ಲದೆ ಇನ್ನೂ ಬೇರೆಬೇರೆ ಅಲಭ್ಯಲಾಭಗಳುಂಟಾಗುವವೆಂದು ಕಂಡುಬಂದಿದೆ; ಇದನ್ನು ಪರೀಕ್ಷಿಸಿನೋಡಿದವರಿಗೆ ಅವಶ್ಯವಾಗಿ ಸುಖವುಂಟಾಗದೆ. ತಣ್ಣೀರು ಅಂತಹ ವಸ್ತುವೇ ಅಹುದು. ಅದರ ಪ್ರಶಂಸೆಯನ್ನು ನೋಡಿರಿ—

ಅಪೋಽಮೃತರಸೋಹ್ಯಾಪಃ ಶುಕ್ರಮಾಪಃ ಪ್ರವರ್ತಕಃ |
ಸರ್ವಸ್ಯಬೀಜಮಾಪೋನ್ಯ ಸರ್ವಮಪ್ಸುಪ್ರತಿಷ್ಠಿತಂ ||

ನೀರು ನೀರಲ್ಲ, ಅದು ಅಮೃತ; ಅಮೃತವಷ್ಟೇ ಅಲ್ಲ, ಅದು ರಸ; ರಸವಷ್ಟೇ ಅಲ್ಲ, ಅದು ಶುಕ್ರ (ವೀರ್ಯ); ಶುಕ್ರವಷ್ಟೇ ಅಲ್ಲ, ಅದು ಎಲ್ಲದಕ್ಕೂ ಬೀಜ (ಕಾರಣ)ವಾಗಿದೆ ಎಂದ ಮೇಲೆ ಇನ್ನೆಷ್ಟು ವರ್ಣನೆ ಬೇಕು? ವಾಚಕರೇ! ನಿಜವಾಗಿಯೂ ನೀರು ಅಮೃತವೇ ಆಗಿದೆ, ಅಂತೆಯೇ ಅಮರಕೋಶವು ನೀರಿಗೆ 'ಪಯಃಕೀಲಾಲಮಮೃತಂ', ಎಂದೆಂದಿರುವದು. ಆದುದರಿಂದ ಮಲಶುದ್ಧಿಗಾಗಿ ಜಲಪಾನವು ಅವಶ್ಯಕವಾದುದೆಂದು ತಿಳಿಯಿರಿ. ಇನ್ನೂ ಮಲಶುದ್ಧಿಗಾಗಿ ಊಟದೊಡನೆಯೂ ಊಟವಾದ ಮೇಲೂ ಹಣ್ಣುಹಂಪಲು, ಕಾಯಿಸೊಪ್ಪುಗಳನ್ನೂ ಅವಶ್ಯವಾಗಿ ತೆಗೆದುಕೊಳ್ಳಬೇಕು. ಇವುಗಳಿಂದ ಮಲಬದ್ಧತೆಯು ಬೇಗನೆ ನಿವಾರಣೆ ಹೊಂದುವುದು. ಅನ್ನಡದಲ್ಲಿ 'ಪಾಲಕ' ವೆಂತಲೂ ಹಿಂದಿಯಲ್ಲಿ 'ಬತವಾ' ಎಂತಲೂ ಹೆಸರುಳ್ಳ ಸೊಪ್ಪು ಮಲಬದ್ಧತೆಯನ್ನು ದೂರಮಾಡುವುದರಲ್ಲಿ ಹೆಸರಾಗಿದೆ. ಈ ಸೊಪ್ಪನ್ನು ಮೆಂತೆಯಸೊಪ್ಪಿನಂತೆ ಬೇಳೆಯಲ್ಲೂ ಪ್ರತ್ಯೇಕವಾಗಿಯೂ ಬೇಯಿಸಿ ಅನ್ನರೊಟ್ಟಿಗಳೊಡನೆ ತೆಗೆದುಕೊಳ್ಳುತ್ತಾರೆ. ಕೆನೆದೆಗೆದ ಬೆಣ್ಣೆಸಹಾಲೂ ಇದೇ ಗುಣವುಳ್ಳದ್ದೆಂದು ತಿಳಿದಿರುವದರಿಂದ ರಾತ್ರಿ ಊಟವಾದ ಸ್ವಲ್ಪಹೊತ್ತಿನಮೇಲೆ ಒಂದು ಪಾವು ಇಲ್ಲವೆ ಎರಡು ಪಾವು ಹಾಲನ್ನು ತಮ್ಮ ಆರೋಗ್ಯವನ್ನು ನೋಡಿಕೊಂಡು ಕುಡಿಯುವುದು ಒಳ್ಳೆಯದು.

(ಸಶೇಷ.)

ಶ್ರೀಜಗದ್ಗುರು (ಶ್ರೀಶೈಲ) ಪರ್ವತ ಮಹಾಸಂಸ್ಥಾನದ ಸಕೀಟಿನ ಗುರುಸ್ವಾಧಿಕಾರಿಗಳವರ ತಿರ್ಯಗಾಂದೋಳನ ಮಹೋತ್ಸವ.

ಮೊರಗೇರಿ.

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೮ ಸ್ಥಿರಚಟ್ಟಾದ್ಯಕ್ಷ ಶ್ರೀಮನ್ಮಾಗಲೂಟಿ ಭಕ್ತಾವರ ಶಿವಾಚಾರ್ಯ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸಕೀಟಿನ ಗುರುಸ್ವಾಧಿಕಾರಿಗಳಾದ ಶ್ರೀಮತ್ಪಂಚಾಕ್ಷರಿ ಶ್ರೀ||ಷ|| ಬ್ರ|| ಗಳಾದ ಶಿವಶಂಕರ ಶಿವಾಚಾರ್ಯ ಪಟ್ಟದ ಸ್ವಾಮಿಗಳು ಭಕ್ತೋದ್ಧಾರಾರ್ಥವಾಗಿ ದೇಶಮಧ್ಯದಲ್ಲಿ ಸಂಚರಿಸುತ್ತ ಸದ್ಯಃ ಮೊರಗೇರಿ ಗ್ರಾಮಕ್ಕೆ ದಯಮಾಡಿಸಿ ಸದ್ಭಕ್ತಮಂಡಳಿಯವರಿಗೆ ದಿಸಂಪ್ರತಿ ಶಿವಾದ್ವೈತಮತತತ್ವವನ್ನು ಬೋಧಿಸುತ್ತಲೂ ಸದರಿಯವರ ಕಡೆಯಿಂದ ಮಹಾಸಂಸ್ಥಾನಕ್ಕೆ ಸಲ್ಲತಕ್ಕ ಗುರುಕಾಣಿಕಾದಿಗಳನ್ನು ಸ್ವೀಕರಿಸುತ್ತಲೂ ಫಲಾಶೀರ್ವಾದವನ್ನು ನೀಡುತ್ತಿರುವದು ಪ್ರಸಿದ್ಧವೇ ಇದೆ. ತಾ|| 15-7-34 ಭಾನುವಾರ ಸದರಿ ಗ್ರಾಮದ ಶ್ರೀಮಂತರಾದ ಮ|| ರಾ|| ಬಣಜಿಗರ ವೀರಭದ್ರಪ್ಪನವರು ಸನ್ನಿಧಿಗೆ ಮಹೋತ್ಸವಪೂರ್ವಕವಾಗಿ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡ ಪ್ರಕಾರಕ್ಕೆ ತಾ|| 16-7-34 ಸೋಮವಾರ ಉದಯ 9 ಘಂಟೆಗೆ ಸರಿಯಾಗಿ ಶ್ವೇತಛತ್ರಿ, ಚಾಮರ, ಮಕರತೋರಣ, ನಂದಿಧ್ವಜ ಮುಂತಾದ ಸಮಸ್ತ ಬಿರುದಾವಳಿಗಳಿಂದಲೂ ಗಗನಚುಂಬಿತಗಳಾದ ಅನೇಕ ಧ್ವಜಪತಾಕೆಗಳಿಂದಲೂ ಬಾಜಭಜಂತ್ರಿ ದೇವದುಂದುಭಿ ಮುಂತಾದ ವಾದ್ಯಗಳಿಂದಲೂ ಮಹೋತ್ಸವವು ಕಳಸತೋರಣ ರಂಭಾಸ್ತಂಭಗಳಿಂದ ಅಲಂಕರಿಸಲ್ಪಟ್ಟ ರಾಜವೀಧಿಯಲ್ಲಿ ಹೊರಟಿತು. ಮಾರ್ಗದಲ್ಲಿ ಸುವಾಸಿನಿಯರು ಮಂಗಳವನ್ನು ಪಾಡುತ್ತ ಆರತಿಗಳನ್ನು ಬೆಳಗುತ್ತಿದ್ದರು. ಭಜನಾಸಂಘದವರು ತಮ್ಮ ಮಂಜುಲವಾದ ಧ್ವನಿಯಿಂದ ಗುರುಭಜನೆಯನ್ನು ಮಾಡುತ್ತಿದ್ದರು. ಪಾಲಕಿಮುಂಭಾಗದಲ್ಲಿ ಹೆಚ್. ಎಮ್. ಕೊಟ್ರಾರಾಧ್ಯರು ಜಯಪರಾಕುಗಳನ್ನು ಹೇಳುತ್ತಿದ್ದರು. ಕಾರಭಾರಿ ಎಮ್. ಭೀಮಲಿಂಗಯ್ಯ, ಎಮ್. ವೀರಯ್ಯ ಇವರು ಉತ್ಸವಭಾಗಿಗಳಾಗಿ ಯಾವ ತೊಂದರೆಗೆ ಅವಕಾಶ ಆಗದಂತೆ ಇಂತೀಜಾಂಮಾಡುತ್ತಿದ್ದರು. ಉತ್ಸವವು 12 ಘಂಟೆಗೆ ಸರಿಯಾಗಿ ಸದರಿ ಸದ್ಗೃಹಸ್ಥರ ಮನೆಗೆಸಲ್ಲಿತು. ಮಹಾದ್ವಾರದಲ್ಲಿ ಸಂಕ್ಷಿಪ್ತ ಪೂಜಾನಡೆದನಂತರ ಅಲಂಕರಿಸಲ್ಪಟ್ಟ ಭವ್ಯತರವಾದ ಸಿಂಹಾಸನದ ಮೇಲೆ ಶ್ರೀಗಳವರು ಮೂರ್ಕವಾಡಿದರು. ವೀರಭದ್ರಪ್ಪನವರು ಪುತ್ರಮಿತ್ರಕಳತ್ರಾದಿಗಳೊಡನೆ ಶ್ರೀಗಳವರ ಚರಣಕ್ಕೆ ಪಂಚಾಮೃತ, ಅಚಮನಗಳಿಂದ ಪೂಜಿಸಿ ಅಷ್ಟೋತ್ತರ ಶತಬಿಲ್ವಾರ್ಚನಪೂಜೆಯು ವಿಧ್ಯುಕ್ತಪ್ರಕಾರವಾಗಿ ಸುರಿಗಮಠದ ಗುರುಶಾಂತಯ್ಯನವರ ಪೌರೋಹಿತ್ಯದೊಡನೆ ನೆರವೇರಿದ ನಂತರ ಮಹಾಪಾದಪೂಜೆಯು ನೆರವೇರಿತು. ಉತ್ಸವಕ್ಕಾಗಿ ಆಗಮಿಸಿದ್ದ ಸಾವಿರಾರು ಭಕ್ತಮಾಹೇಶ್ವರರನ್ನು ಸಂತೃಪ್ತಿಗೊಳಿಸಿದನಂತರ ಯಥೋಚಿತವಾಗಿ ದಕ್ಷಿಣೆ ತಾಂಬೂಲಾದಿಗಳು ಕೊಡಲ್ಪಟ್ಟವು ಸಾಯಂಕಾಲ ಉತ್ಸವವು ಅತ್ಯಂತ ವಿಜೃಂಭಣೆಯಿಂದ ಹೊರಟು ರಾತ್ರಿ 9 ಘಂಟೆಗೆ ದರ್ಬಾರುಕಟ್ಟೆಗೆ ಬಂದು ತಲ್ಪಿತು. ಅನಂತರ ಸಂಸ್ಥಾನ ಸರ್ವಾಧಿಕಾರಿಗಳಾದ ಕೆ. ಎ. ಸಿ. ಮಲ್ಲಯ್ಯನವರು ಶ್ಲೋ|| ಶ್ರವಣಂ ಕೀರ್ತನಂಶಂಭೋಃ ಸ್ಮರಣಂ ಪಾದಸೇವನಂ ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ || ಎಂಬ ವಿಷಯದಮೇಲೆ ಭಾಷಣವನ್ನು ಮಾಡಿದರು. ಶ್ರೀಗಳವರು ಅನ್ನದಾನದ ಫಲದ ವಿಷಯಕವಾಗಿ ಸತ್ಯಸಿಧಭೂಪಾಲನ ಚರಿತ್ರವನ್ನು ಮಾದರಿಯನ್ನಾಗಿಟ್ಟುಕೊಂಡು ಅನೇಕ ಉದಾಹರಣೆ ಶ್ಲೋಕಗಳಿಂದ ಸಮಸ್ತರ ಮನಸ್ಸನ್ನು ಆನಂದತುಂದಿಲವನ್ನಾಗಿ ಮಾಡಿದರು, ಅನಂತರ ಸಂಸ್ಥಾನಮುದ್ದೆ ಜೆ. ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ! ಶ್ರೀ ಜಗದ್ಗುರು ನಾಗಲೂಟಿಭಕ್ತಾವರ ಮಹಾರಾಜಕೀ ಜೈ!! ಎಂಬ ಜಯಘೋಷದೊಡನೆಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಉತ್ಸವಭಾಗಿ.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಶ್ರೀಮದ್ವೇದಾಗಮೋಪನಿಷತ್ಪ್ರತಿಪಾದಿತ ವಿಮಲ ವೀರಶೈವ ಮಹಾ ಮತಸ್ಥಾಪನಾಚಾರ್ಯ ಶ್ರೀಮಜ್ಜಗದ್ಗುರು ಭಗವತ್ಪಾದ ರೇಣುಕಾಚಾರ್ಯ ಪರಂಪರಾಗತ ಸಕಲಶಾಸ್ತ್ರ ಪಾರಾವಾರ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ,

ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಪಾದಪದ್ಮ ಸನ್ನಿಧಾನಂಗಳಲ್ಲಿ,

ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೂಕು ಕಸಬಾ ನಂದುಗುಡಿ ಗ್ರಾಮದ ಮಠಸ್ಥರು, ಶೆಟ್ರು, ಯಜಮಾನರು, ಗೌಡರು ಮತ್ತು ಭಕ್ತಮಂಡಳಿಯವರು ಶ್ರದ್ಧಾಭಕ್ತಿಯಿಂದ ಸಮರ್ಪಿಸಿದ ವಿಜ್ಞಾಪನಾಪತ್ರಿಕೆ.

ಪೂಜ್ಯಪಾದ ಮಹಾಸ್ವಾಮಿಗಳವರೆ,

ವೇದವೇದಾಂತಾದಿಶಾಸ್ತ್ರಬೋಧಕರೂ ಸರ್ವಾಗಮಸಾರಾಭಿಜ್ಞರೂ ಶಿವಯೋಗಾನುಸಂಧಾನ ವಿಚಕ್ಷಣರೂ ವೀರಸಿಂಹಾಸನಾಧೀಶ್ವರರೂ ವಾಗ್ಮಿವರೇಣ್ಯರೂ ಆದ ತಮ್ಮನ್ನು ನಾವು ಸತ್ಪಭಕ್ತಿಭಾವದಿಂದಲೂ ಮಹದಾನಂದದಿಂದಲೂ ಸ್ವಾಗತಿಸುತ್ತೇವೆ ಮಹಾಸ್ವಾಮಿ.

ಮಹಾತಪಸ್ವಿಗಳೇ,

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾದ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ (ಕ್ರಿಯಾಜ್ಞಾನ) ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವಾದ ಸದ್ವೀರಶೈವ ಮತವು ಪೂರ್ವಕಾಲದಲ್ಲಿ ಸೇತು ಹಿಮಾಚಲ ಪರ್ಯಂತವಾಗಿ ವಿಸ್ತರಿಸಿಕೊಂಡಿದ್ದಿತೆಂಬುದಕ್ಕೆ ಭರತಖಂಡದ ನಾನಾ ಭಾಗಗಳಲ್ಲಿ ವಿರಾಜಿಸುತ್ತ ವೀರಶೈವರಿಗೆ ಐಹಿಕಾಮುಷ್ಮಿಕ ಫಲಪ್ರದ ಕ್ಷೇತ್ರಗಳೆನಿಸುವ (ರಂಭಾಪುರೀ) ಬಾಳೇಹೊನ್ನೂರು, ಉಜ್ಜಯಿನಿ, ಹಿಮವತ್ಕೇದಾರ, ಶ್ರೀಶೈಲ, ಕಾಶೀಕ್ಷೇತ್ರಗಳೆಂಬ ಪಂಚ ಪುಣ್ಯಕ್ಷೇತ್ರಗಳಲ್ಲಿ ಪಂಚ ಧರ್ಮಪೀಠಗಳು ಪ್ರಕಾಶಿಸುತ್ತಿರುವುದೇ ಬಲವಾದ ಸಾಕ್ಷಿಯಾಗಿದೆ. ಭಗವತ್ಪಾದರುಗಳಾದ ಶ್ರೀ ರೇಣುಕಾಚಾರ್ಯರೂ ಶ್ರೀ ಶಂಕರಾಚಾರ್ಯರೂ ವಿಶೇಷ ಮೈತ್ರೀಭಾವದಿಂದ ವರ್ತಿಸುತ್ತಿದ್ದು ಲೋಕಾನುಗ್ರಹಮಾಡಿದರೆಂಬ ಅಂಶವೂ, ಅದೇ ಬಗೆಯ ಮನೋಭಾವವು ಅದ್ಯಾಪಿ ಉಭಯ ಪೀಠಾಧಿಪತಿಗಳಲ್ಲಿಯೂ ಪರಸ್ಪರವಾಗಿ ನಡೆದು ಬರುತ್ತಿರುವ ಅಂಶವೂ ನಮ್ಮೆಲ್ಲರಿಗೂ ಮಹದಾನಂದವನ್ನುಂಟುಮಾಡುವುದಾಗಿದೆ ಮಹಾಸ್ವಾಮಿ.

ಜಗದ್ವಂದ್ಯರೆ,

ಶಾಮಶೈಲೇಧಾದಿ ಅರಿಷಡ್ವರ್ಗರಹಿತರೂ, ಸಕಲಶಾಸ್ತ್ರಕೋವಿದರೂ, ತಪೋನಿಷ್ಠರೂ, ಅಂತರ್ಮುಖಿಗಳೂ, ಜಗದ್ವಂದ್ಯರೂ ಆದ ತಮ್ಮನ್ನು ಮಹಾಮಹಿಮರೂ, ಧರ್ಮಪ್ರಭುಗಳೂ, ಸತ್ಯಪ್ರಭುಗಳೂ, ರಾಜರ್ಷಿಗಳೂ ಆದ ನಮ್ಮನ್ನಾಳುವ ನಾಲ್ವಡಿ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರ್ ರವರು ಶ್ರೀಮದ್ರಂಭಾಪುರೀ ವೀರಸಿಂಹಾಸನ ಪೀಠಕ್ಕೆ ಅಧಿಪತಿಗಳನ್ನಾಗಿ ಮಾಡಿ ಇಡೀ ವೀರಶೈವ ಜನಾಂಗದ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಾರೆಂದು ಈ ಸಮಯದಲ್ಲಿ ಅತ್ಯಂತ ಸಂತೋಷದಿಂದ ವಿಜ್ಞಾಪಿಸಿಕೊಳ್ಳಲು ತಮ್ಮ ಅನುಮತಿಯನ್ನು ಬೇಡುತ್ತೇವೆ, ಮಹಾಸ್ವಾಮಿ.

ಜಗದಾಚಾರ್ಯರೇ,

ಮಹಾಸ್ವಾಮಿಯವರು 22-11-1925 ರಲ್ಲಿ ಈ ಜಗದ್ಗುರುಪೀಠಾರೋಹಣವನ್ನು ಮಾಡಿ ಶಿಷ್ಯೋದ್ಧಾರಕ್ಕಾಗಿಯೂ ಲೋಕಕಲ್ಯಾಣಕ್ಕಾಗಿಯೂ ದೇಶಮಧ್ಯದಲ್ಲಿ ಅತ್ಯಂತ ವೈಭವದಿಂದ ಸಂಚರಿಸುವದರ ಮೂಲಕ ವೀರಶೈವ ಜನಾಂಗಕ್ಕೆ ಮಾತ್ರವೇ ಅಲ್ಲದೆ ಇತರ ಮತೀಯರಿಗೂ ಧರ್ಮೋಪದೇಶವಂ ಮಾಡಿ ಸುಖಶಾಂತಿಗಳನ್ನೀಯುತ್ತಾ ಕೇವಲ ಅಲ್ಪಾವಧಿಯಲ್ಲಿಯೇ ಈ ಮಹಾ ಪೀಠದ ಧರ್ಮತೇಜಸ್ಸು ದಶ ದಿಕ್ಕುಗಳಲ್ಲಿಯೂ ದೃಗ್ಗೋಚರವಾಗುವಂತೆ ಮಾಡಿರುವದು ನಮ್ಮೆಲ್ಲರಿಗೂ ವಿಶೇಷ ಆನಂದದಾಯಕವಾಗಿದೆ. ಮಹಾಸ್ವಾಮಿ,

ಮಹಾಮಹಿಮರೇ,

ವೈದಿಕ ಮತ್ತು ಲೌಕಿಕ ವ್ಯವಹಾರ ವಿದ್ಯಾಭ್ಯಾಸದಲ್ಲಿ ನಮ್ಮ ಜನಾಂಗವನ್ನು ಸುಶಿಕ್ಷಿತಗೊಳಿಸಿ ಇತರೋತ್ಕರ್ಷಯಮವಾಗಿ ಅಭಿವೃದ್ಧಿಗೆ ತರಬೇಕೆಂಬ ಸತ್ಸಂಕಲ್ಪದಿಂದ ತಾವು ಅರುವತ್ತು (60,000) ಅರವತ್ತು ಸಾವಿರ ರೂಪಾಯಿಗಳ ವಿದ್ಯಾರ್ಥಿ ವೇತನಗಳನ್ನು ದಯಪಾಲಿಸಿರುವುದಲ್ಲದೆ ಬೆಂಗಳೂರು ನಗರದಲ್ಲಿ ಶ್ರೀಮದ್ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸನಾತನ ವೈದಿಕ ಪಾಠಶಾಲೆಯನ್ನು ಏರ್ಪಡಿಸುವುದರ ಜೊತೆಗೆ ವಿದ್ಯಾರ್ಥಿಗಳ ಅನ್ನೋದಕಗಳಿಗೂ ವಸತಿಯನ್ನು ಕಲ್ಪಿಸಿಕೊಟ್ಟಿರುವುದು ತಮ್ಮ ವಿದ್ಯಾಭಿಮಾನವನ್ನೂ ಜನಾಂಗದ ಮೇಲಿನ ಪ್ರೇಮವನ್ನೂ ಪ್ರಕಾಶಗೊಳಿಸಿರುತ್ತದೆ. ಮಹಾಸ್ವಾಮಿ,

ಜಗದ್ಗುರುವರೇಣ್ಯರೇ,

ಕೇವಲ ಗ್ರಾಮಾಂತರಗಳಲ್ಲಿ ವಾಸಮಾಡುವ ವೀರಶೈವರನ್ನು ವೈದಿಕ ಧಾರ್ಮಿಕ ಲೌಕಿಕ ಆಚಾರ ವಿಚಾರಗಳಲ್ಲಿ ಶಾಸ್ತ್ರೋಕ್ತವಾಗಿ ಸುಧಾರಿಸಲು ಮಹಾಸನ್ನಿಧಿಯ ಪೀಠಕ್ಕೆ ಅಧೀನವಾದ ಈ ಪ್ರಾಂತ್ಯದ ಶಾಖಾ ಮಠಗಳಿಗೆ ಸರಿಯಾದ ಯೋಗ್ಯತೆಯೂ ಅರ್ಹತೆಯೂ ಉಳ್ಳ ವೈದಿಕ ಧಾರ್ಮಿಕ ವಿದ್ಯಾಸಂಪನ್ನರಾದ ಉಪಾಚಾರ್ಯರನ್ನೇ ನಿಯಮಿಸಬೇಕಾದ ಅವಶ್ಯಕತೆಯನ್ನು ಈ ಸಮಯದಲ್ಲಿ ತಮ್ಮ ದಿವ್ಯ ಚಿತ್ತಕ್ಕೆ ಅರಿಕೆ ಮಾಡಿಕೊಳ್ಳಲು ತಮ್ಮ ಅನುಜ್ಞೆಯನ್ನು ಸವಿನಯದಿಂದ ಬೇಡುತ್ತೇವೆ. ಮಹಾಸ್ವಾಮಿ.

ಶ್ರೀ ಪೂಜ್ಯಪಾದ ಮಹಾಸ್ವಾಮಿಯವರೇ,

ಯಾವ ರೇಣುಕ ಭಗವತ್ಪಾದರ ಪಾದರೇಣುಸ್ಪರ್ಶನದಿಂದ ಭೂಮಂಡಲವು ಪರಮಪವಿತ್ರವಾಗಿತ್ತೋ ಆ ರೇಣುಕಾಚಾರ್ಯರ ಅವತಾರವಾಗಿಗಳಾದ ಮತ್ತು ಅಭಿನವರೇಣುಕರೆಂದು ಕೀರ್ತಿವೆತ್ತ ಮಹಾಸನ್ನಿಧಾನದ ಪಾದರೇಣುವಿನಿಂದ ಪಂಡೋರಾಜನಿಂದ ಆಳಿದ ನಂದುಗುಡಿಗ್ರಾಮವೂ ಇಲ್ಲಿರುವ ನಾವೂ ಪಾವನತ್ವವನ್ನು ಹೊಂದಿದ ವಿಷಯವನ್ನು ಮಹಾಸನ್ನಿಧಿಯಲ್ಲಿ ಬಿನ್ನಯಿಸುವ ಈ ಸನ್ನಿವೇಶದಲ್ಲಿ ನಮಗುಂಟಾಗಿರುವ ಹರ್ಷಸೂಚಕವಾದ ಜಯಘೋಷವನ್ನು ಈ ಮೂಲಕವಾಗಿ ಸಮರ್ಪಿಸುತ್ತೇವೆ. ಮಹಾಸ್ವಾಮಿ.

ನಂದುಗುಡಿ ಮಹಂತಿನಮಠದ ಎಚ್. ರುದ್ರಯ್ಯ,
ಪಿ. ಎ. ಸಿದ್ಧಲಿಂಗಾರಾಧ್ಯ,
ಪಟೇಲ್ ವೀರಾಸ್ವಾಮಿಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಪಂಚಾಯಿತಿ ಮೆಂಬರುಗಳು.
ಕಾಡುಮಲ್ಲಪ್ಪನವರ ನಂಜುಂಡಪ್ಪ,
ಟಿ. ಸಿದ್ದಲಿಂಗಪ್ಪ,
ಸುಬ್ಬದ ನಂಜುಂಡಪ್ಪ,
ಶೆಟ್ರು ಚಿಕ್ಕಮಲ್ಲಶೆಟ್ಟಪ್ಪ ಮತ್ತು ಭಕ್ತಮಂಡಲಿ.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳಿವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 46

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಮಲೇರಿಯಾಕ್ಕೆ
ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗೆಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14. ½ ಡಜನ್ 8-8-0, ರೂ. 5, 1 ಡಜನ್ ರೂ. 16-8-0, ರೂ. 9-12-0

ಮಲೆರಿನ್ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯಾಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0, 500, 1000ಕ್ಕೆ ರೂ. 7 ಮತ್ತು 13-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಡ್ರಮ್ ಆಣೆ 4, 8, 14, ರೂ. 1/3, 2.

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣತೆ, ಗ್ರಹಣಿ ಹುರದ ಉಪದ್ರ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತ ತುಂಬಿಸಿ ದೇಹವನ್ನು ಪುಷ್ಟಿಕರಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್‌ಕಫ್ ರೆಮೆಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಪ್ಪುಕೆಮ್ಮು ಇವನ್ನು ನೀರುವಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಸಕಲ ಬಗೆಯ ಹೊಟ್ಟೆಹುಳಗಳನ್ನು ನಾಶಮಾಡಿ ಹಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5. 100ಕ್ಕೆ ರೂ. 2-0-0.

ಸಿರಪ್ ಮೆಸಿಕೊಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ತೋರುವ ಕೀವು, ಮೂತ್ರ ಬಿಂದು ಬಿಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡ ಸೀಸೆ ರೂ. 3-8-0, ಸಣ್ಣ ಸೀಸೆ ರೂ. 1-14-0.

☞ ಬಿಕ್ಕು, ಹೋಮಿಯೋಪತಿ ಮದ್ದುಗಳೂ, ದೃಷ್ಟಿಚಕ್ರಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಹರವಾದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ' ವೆಂಬ ಪುಸ್ತಕಕ್ಕೆ ಬರಿರಿ ಧರ್ಮಾರ್ಥ.

ಪತ್ರ:— ಮಲೇರಿಯಾನ ಕಂಪೆನಿ,
(ಹಂಪನಕಟ್ಟೆ), 21, ಮಂಗಳೂರು

The Malariana Co., Mangalore (21) [49]

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು **"ವೀರಶೈವರತ್ನ"** ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಉತ್ತಮೋತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯಾಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಪಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿಯಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 39

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೪	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೪	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೪	೦—೦—೯
ಪಂಚ ಪೀಠಾಧೀಶ್ವರರಾದ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧೪	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮತ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೪	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೪	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ದೇವಾಲಯದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಅಂತಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[31] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೋಽಂ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಕ್ಷಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಂತ್ವಮೀ ಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಆಗಸ್ಟ್ ೧೯೩೪ [ಸಂಚಿಕೆ ೧೪

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೬೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಬುದ್ಧಿಸಹಜಿಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ರೇಣುಕವಿಜಯಮಹಾಪುರಾಣ.

(ಶ್ರಾವಣಮಾಸವು ಬಂದಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀ ಜಗದ್ಗುರು ರೇಣುಕಾಚಾರ್ಯನ ಪವಿತ್ರ ಚರಿತ್ರವನ್ನು ಶ್ರವಣಮಾಡುವುದು ಪ್ರತಿಯೊಬ್ಬ ಗುರುಭಕ್ತರ ಆದ್ಯಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಆ ಮಹಿಮನ ಪುರಾಣವನ್ನು ತರಿಸಿಕೊಂಡು ಪುರಾತನ ಪದ್ಧತಿಯಂತೆ ಶ್ರಾವಣಮಾಸದಲ್ಲಿ ಪುರಾಣವನ್ನು ಪ್ರಾರಂಭಮಾಡಿ ಪ್ರಮಥಪುಂಗವನ ಸಚ್ಚರಿತ್ರವನ್ನು ಕೇಳಿ ತಮ್ಮ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೧ ರೂ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಪಂಡಿತ ಚಿದರಿ ಮಠದ ವೀರಭದ್ರಶಾಸ್ತ್ರಿಗಳ ಸಂಕ್ಷಿಪ್ತ ಪರಿಚಯ !

ಪಂಡಿತ ವೀರಭದ್ರಶಾಸ್ತ್ರಿಗಳವರು ಆಂಧ್ರದೇಶ ನಿವಾಸಿಗಳು. ಇವರು ತಮ್ಮ ದೇಶದಿಂದ ಕರ್ನಾಟಕ ದೇಶಕ್ಕೆ ಬಂದು ಸಂಸ್ಕೃತ ಶಿಕ್ಷಣವನ್ನಾರಂಭಿಸಿ ೩-೪ ವರ್ಷಗಳಲ್ಲಿಯೇ ಸಾಹಿತ್ಯದಲ್ಲಿ ಪರಿಣತಿಯನ್ನು ಹೊಂದಿ ಕಾಶೀಕ್ಷೇತ್ರಕ್ಕೆ ಹೋಗಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿದ್ದು ವೇದಭಾಷ್ಯಗಳನ್ನೋದಿ ೧೯೩೦ ರಲ್ಲಿ ಕಲಕತ್ತೆಯಲ್ಲಿ "**ವೇದತೀರ್ಥ**" ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೩೧ ರಲ್ಲಿ "**ಕಾವ್ಯತೀರ್ಥ**" ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಈ ವರ್ಷ ಈ ಪಂಡಿತರು "**ಸ್ಮೃತಿತೀರ್ಥ**" ಪರೀಕ್ಷೆಯಲ್ಲಿಯೂ ಉತ್ತೀರ್ಣರಾಗಿರುವರೆಂಬ ವಿಷಯವನ್ನು ಕೇಳಿ ಸಮಸ್ತ ವೀರಶೈವರೂ ಸಂತೋಷಪಡಬೇಕಾಗಿದೆ. ಅಲ್ಲದೆ ಇವರು ಮಥುರಾವ್ರಜಮಂಡಲ ಯೂನಿವರ್ಸಿಟಿ ಎಂಬ ಪ್ರಜಾಸಂಘದವರು ಏರ್ಪಡಿಸಿದ "**ಸಾಹಿತ್ಯವಿಶಾರದ**" ಮತ್ತು "**ಧರ್ಮಾಚಾರ್ಯ**" ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾಗಿರುವರು. ಇಲ್ಲಿಯವರೆಗೆ ವೀರಶೈವ ಮಠದಲ್ಲಿ ಇಷ್ಟು ಪರೀಕ್ಷೆಗಳನ್ನು ಯಾರೂ ಕೊಟ್ಟಿರುವುದಿಲ್ಲ. ಇವರು ಚಿಕ್ಕವಯಸ್ಸಿನಲ್ಲಿ ಇಷ್ಟು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವುದನ್ನು ನೋಡಿದರೆ ಇದಕ್ಕೆ ಶ್ರೀಗುರುಕೃಪೆಯೇ ಮೂಲಕಾರಣವೆಂದು ಹೇಳಬೇಕಾಗುತ್ತದೆ. ಅಲ್ಲದೆ ಇವರು ಆಂಧ್ರದಲ್ಲಿ ಉದ್ದಾಮಕವಿಗಳಾಗಿದ್ದಾರೆ. ಕನ್ನಡ-ಆಂಧ್ರ-ಸಂಸ್ಕೃತ-ಹಿಂದೀ-ಮರಾಠಿ ಭಾಷೆಗಳಲ್ಲಿ ಉತ್ತಮಲೇಖಕರೆನಿಸಿಕೊಂಡಿದ್ದಾರೆ. ಈ ಎಲ್ಲಾ ಭಾಷೆಗಳಲ್ಲಿರುವ ಶಿಲಾಶಾಸನಗಳನ್ನೋದುವುದರಲ್ಲಿ ಅಗ್ರಗಣ್ಯರೆನಿಸಿದ್ದಾರೆ. ಉರ್ದು-ಬಂಗಾಳಿ-ಇಂಗ್ಲೀಷ್ ಭಾಷೆಗಳಲ್ಲಿಯೂ ತಕ್ಕಮಟ್ಟಿಗೆ ಪರಿಚಯುವುಂಟು. ಸದ್ಯಃ ಇವರು ಮೀಮಾಂಸಾಶಾಸ್ತ್ರವನ್ನು ಅಭ್ಯಾಸಮಾಡುತ್ತಿದ್ದು ಈ ವರ್ಷವೂ ಆ ಶಾಸ್ತ್ರದ ಒಂದು ಭಾಗದಲ್ಲಿ ಉತ್ತೀರ್ಣರಾಗಿದ್ದಾರೆ. ಮೀಮಾಂಸಾಶಾಸ್ತ್ರವು ಮತಗ್ರಂಥಗಳ ಪರಿಶೀಲನೆಗೆ ಮುಖ್ಯವಾದುದು. ಆ ಶಾಸ್ತ್ರವನ್ನು ಇಲ್ಲಿಯವರೆಗೆ ನಮ್ಮವರಲ್ಲಿ ಯಾರೂ ಸರಿಯಾಗಿ ಅಭ್ಯಾಸಮಾಡಿಲ್ಲ. ಇವರು ಆ ಶಾಸ್ತ್ರದಲ್ಲಿಯೂ ಉತ್ತೀರ್ಣರಾಗಿ ಅದಷ್ಟು ಬೇಗನೆ "**ಮೀಮಾಂಸಾತೀರ್ಥ**" ಎಂಬ ಪದವಿಯನ್ನು ಪಡೆಯುವರೆಂದು ನಂಬಿಕೆಯಿದೆ. ಅನೇಕ ಪದವೀಭೂಷಿತರಾದ ಈ ತರುಣಪಂಡಿತರಿಗೆ ಶ್ರೀ ಜಗದಾಚಾರ್ಯರು ವಿದ್ಯಾಯುರಾರೋಗ್ಯಭಾಗ್ಯಾದಿ ಸಕಲಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇವೆ.

ಕೋರ್ಟಿನಲ್ಲಿ ಕಳುವು !

ದೆಹಲಿಯ ಸ್ಮಾಲ್‌ಕಾಸ್ ಕೋರ್ಟಿನಲ್ಲಿ 24 ಕಂಪ್ಲೇಂಟ್ ಅರ್ಜಿಗಳು ಕಳುವಾಗಿರುವುವಂತೆ ! ಪೋಲೀಸರು ತನಿಖೆಕ್ರಮಗಳನ್ನು ಜರುಗಿಸುತ್ತಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು,
ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ನಮ್ಮವರಲ್ಲಿಯೇ ಈಗ ಅನೇಕ ಜನರು ಈಶ್ವರದ್ರೋಹಿಗಳೂ ಸ್ವಧರ್ಮದ್ರೋಹಿಗಳೂ ಆಗಿ ನಮಗೆ ಪ್ರತಿಪಕ್ಷಿಗಳಂತೇ ಪ್ರತಿಭಟಿಸುತ್ತಿರುವುದನ್ನು ನೋಡಿ ಸಖೇದಾಶ್ಚರ್ಯವೆನಿಸುತ್ತದೆ. ಈಶ್ವರದ್ರೋಹದಿಂದ ಮಹಾಪಾತಕವೇ ಸಂಭವಿಸುವಂತೆ ಸ್ವಧರ್ಮದ್ರೋಹದಿಂದಲೂ ಅಧಿಕವಾದ ಪಾತಕವುಂಟಾಗುವುದು. ಜಗತ್ಕರ್ತನಾದ ಈಶ್ವರನಿಲ್ಲವೆಂದು ವಾದಿಸುವವರೂ, ಸರ್ವಜ್ಞನೂ ಸರ್ವಕರ್ತನೂ ಆದ ಈಶ್ವರನ ನಿಯತಿವಿರುದ್ಧವಾಗಿ ಯತ್ನಮಾಡುತ್ತಿರುವವರೂ ತಮ್ಮಲ್ಲಿ ಈಶ್ವರ ಪಾರತಂತ್ರ್ಯವನ್ನು ಒಪ್ಪಿಕೊಳ್ಳದೆ ಸರ್ವ...

ಆರೋಗ್ಯರಕ್ಷಣೆ.

ಲೇಖಕ—ವಾಗೀಶಶಿವಾಚಾರ್ಯ ಬೃಹನ್ಮಠ
ಮುದೇನೂರು ಶ್ರೀ ಕ್ಷೇತ್ರ ಶಾಖೆ

(ಹಿಂದಿನಿಂದ ಮುಂದುವರಿದುದು.)

ನಾವು ಯಾವಾಗಲೂ ಕುಳಿತಿರುವುದರಿಂದಲೂ, ಶೀಘ್ರಪಚನವಾಗದ ಆಹಾರವನ್ನು ಹೆಚ್ಚಾಗಿ ತಿನ್ನುವುದರಿಂದಲೂ ಬಚ್ಚುಬೇಳೆ ದೇಹಬೆಳೆಯುವುದು. ಅಂತಹ ಸಮಯದಲ್ಲಿ ತಿರುಗಾಡುವುದೂ, ಆಸನಮುಂತಾದ ವ್ಯಾಯಾಮಗಳನ್ನು ಮಾಡುವುದೂ ಅತ್ಯಾವಶ್ಯಕವು. ಹೊಟ್ಟೆಯು ಯಾವಾಗಲೂ ಶುದ್ಧವಾಗಿರಬೇಕೆಂದರೆ ಮೊದಲು ಬಾಯಿಯು ಶುದ್ಧವಾಗಿರಬೇಕು. ಬಾಯಿಗೂ ಹೊಟ್ಟೆಗೂ ಬಹಳ ಸಂಬಂಧವಿದೆ. ಅನ್ನವು ಹೊಟ್ಟೆಯನ್ನು ಸೇರುವುದು ಬಾಯಿಯಿಂದಲೇ; ಬಾಯಿಯೊಂದು ಸ್ವಚ್ಛವಾಗಿರದಿದ್ದರೆ ಉಂಡನ್ನವೆಲ್ಲವೂ ವಿಷವಾಗುವುದರಲ್ಲಿ ಸಂಶಯವೇ ಇಲ್ಲ. ಆದುದರಿಂದ ಬಾಯಿಯನ್ನು ಯಾವಾಗಲೂ ಚೆನ್ನಾಗಿ ತೊಳೆದುಕೊಂಡು ಶಾಂತಚಿತ್ತನಾಗಿ ಊಟಕ್ಕೆ ಕುಳಿತು ಆಹಾರವನ್ನು ಎಷ್ಟೋ ಸಾರೆ ಜಗಿದುಜಗಿದು ಹೊಟ್ಟೆಯನ್ನು ತುಂಬಬೇಕು. ಚಪಗುಟ್ಟುತ್ತ ಗಡಗಡನೆ ತಿಂದು ಕುಡಿಯುವುದರಿಂದ ಅನಾರೋಗ್ಯದ ಹೊರತಾಗಿ ಯಾವ ಲಾಭವೂ ಇಲ್ಲ...

ಪಂಚಾಚಾರ್ಯ ಪ್ರಭಾ.

೧೯೩೪ ನೇ ಆಗಸ್ಟ್ ತಾ|| ೨೦ ನೇ ಸೋಮವಾರ.

ಗುರುಸೇವೆ.

ರಾಜಧಾನಿಯ ಗುರುಭಕ್ತಾಗ್ರಗಣ್ಯರಾದ ವೀರಶೈವರು, ಭಕ್ತರ ಭಾಗ್ಯೋದಯದಿಂದ ಬೆಂಗಳೂರಿಗೆ ದಯಮಾಡಿಸಿರುವ ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ರಾಜಧಾನಿಗೆ ಬಿಜಮಾಡಿಸಿಕೊಳ್ಳಬೇಕೆಂದು ಒಂದು ಸ್ವಾಗತಸಂಘವನ್ನೇರ್ಪಡಿಸಿ ಸಕಲ ಸನ್ನಾಹಗಳನ್ನು ಮಾಡಿಕೊಂಡು ಜಗದ್ಗುರುಗಳ ಸನ್ನಿಧಿಗೆ ಹೋಗಿ ಬಿನ್ನವತ್ತಳೆಯನ್ನರ್ಪಿಸಿ ಬಂದಿರುತ್ತಾರೆ. ಈ ಸಮಯದಲ್ಲಿ ಕೆಲವರು ಪಕ್ಷಾಂಧತೆಯಿಂದ ಜಗದ್ಗುರುಗಳ ಆಗಮನಕ್ಕೆ ತಡೆಯನ್ನುಂಟುಮಾಡಬೇಕೆಂದು ಮನಸ್ವಿಯಾಗಿ ಪ್ರಕಟನಪತ್ರಗಳನ್ನು ಹೊರಡಿಸುತ್ತಿರುವುದೂ, ಗುರುದೂಷಣೆ ಮಾಡುತ್ತಿರುವುದೂ ವಿಷಾದದ ಸಂಗತಿಯಾಗಿದೆ. ವೀರಶೈವಮತೀಯರಿಗೆ ಅಷ್ಟಾವರಣಗಳೇ ಮುಖ್ಯ ಧರ್ಮಗಳಾಗಿರುವುವಷ್ಟೆ! "ಗುರುರ್ಲಿಂಗಂ ಚರಶ್ಚೈವ" ಎಂಬ ಸಿದ್ಧಾಂತೋಕ್ತಿಯಂತೆ ಈ ಅಷ್ಟಾವರಣಗಳಲ್ಲಿ ಗುರುವೇ ಮೊದಲನೆಯವನು. ಯಾರು ಗುರುಗಳನ್ನು ನಿರಾಕರಿಸುವರೋ, ಅವರು ಲಿಂಗ ಜಂಗಮ ಪ್ರಸಾದ ಪಾದೋದಕ ವಿಭೂತಿ ರುದ್ರಾಕ್ಷ ಮಂತ್ರಗಳನ್ನೂ ನಿರಾಕರಿಸಿದಂತೆಯೇ ಸರಿ! ನಿಜವಾಗಿ ಅಷ್ಟಾವರಣಸಂಪನ್ನನಾದವನು—

ಪಕ್ಷಪೂಜಾಂ ಚ ಪರ್ವಾರ್ಥ ಸ್ವೇಷ್ಟಲಿಂಗಸ್ಯ ಭಕ್ತಿತಃ |
ಕೃತ್ವಾ ಗುರುಕಾಮಿಷ್ಟಂ ಗತ್ವಾ ಪೂರ್ವವದೇವಹಿ ||

ಸಮಸ್ತ್ಯಾತ್ಮಾಪಕ ಗಮಯೇತ್ ಸ್ವಗೃಹಂ ಪ್ರತಿ ತಂ ಗುರುಂ |
ಆಂದೋಳಿಕಾಯಾಮಾರೋಪ್ಯ ಗಜೇವಾಪಿ ತುರಂಗಮೆ ||

ಅನುಗಚ್ಛೇತ್ಸ್ವಯಂ ಭಕ್ತ್ಯಾ ವಾದ್ಯಘೋಷಸಮನ್ವಿತಃ |
ಗೃಹಂನೀತ್ವಾ ಗುರುಂಪಶ್ಚಾತ್ ಕ್ಷಾಳಯನ್ ತತ್ಪದದ್ವಯಂ ||
ತೇನೋದಕೇನ ಶಿರಃ ಸಂಪ್ರೋಕ್ಷ್ಯ ಸ್ವಜನೈಸ್ಸಹ ||

ಗುರುವು ಅನುಗ್ರಹಿಸಿದ ಶಿವಲಿಂಗವನ್ನು ಪೂಜಿಸಿ ಗುರುವಿನ ಬಳಿಗೆ ಹೋಗಿ ದೀರ್ಘದಂಡನಮಸ್ಕಾರವನ್ನು ಮಾಡಿ ಗುರುಗಳನ್ನು ಆಂದೋಳಿಕೆಯಲ್ಲಾಗಲಿ ಗಜದ ಮೇಲಾಗಲಿ ಕುಳ್ಳಿರಿಸಿಕೊಂಡು ವಾದ್ಯಘೋಷ ಸಮೇತವಾಗಿ ತನ್ನ ಮನೆಗೆ ಬಿಜಮಾಡಿಸಿಕೊಂಡು ಬಂದು ವಿಧ್ಯುಕ್ತ ಪೂಜೆಯನ್ನು ಮಾಡಿ ತನ್ನ ಬಂಧು ಬಾಂಧವರೊಡಗೂಡಿ ಗುರುಪಾದೋದಕವನ್ನು ಶಿರಸ್ಸಿಗೆ ಪ್ರೋಕ್ಷಿಸಿಕೊಳ್ಳಬೇಕೆಂದು ವೀರಶೈವಸಿದ್ಧಾಂತದಲ್ಲಿ ಗುರುವಿನ ಮಹತ್ತ್ವವು ಬಹಳವಾಗಿ ಕೊಂಡಾಡಲ್ಪಟ್ಟಿರುತ್ತದೆ.

ಹೀಗೆ ಪ್ರಯತ್ನಪೂರ್ವಕವಾಗಿ ಗುರುಗಳನ್ನು ಕರೆತರುವುದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದ್ದರೂ ಪ್ರಯತ್ನಿಸುವವರಿಗೆ ಆತಂಕಪಡಿಸುವವರ ಅವಿಚಾರರಮಣೀಯತೆಯನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ವೇದಶಾಸ್ತ್ರಪುರಾಣಗಳಲ್ಲಿ ಶ್ರದ್ಧೆಯಿಲ್ಲದ ಮಾನವನಿಗೆ "ನಾಸ್ತಿ ತತ್ತ್ವಂ ಗುರೋಃ ಪರಂ" ಎಂಬ ಶ್ರುತಿಯು ಮತ್ತಿಷ್ಟು ವ್ಯಾಕೋಪವನ್ನುಂಟುಮಾಡುವದಲ್ಲದೆ ಅಭಿರುಚಿಯನ್ನು ಹುಟ್ಟಿಸದಿರುವದು ಸ್ವಭಾವವಾಗಿದೆ.

ಮನಸಾ ಕರ್ಮಣಾ ವಾಚಾ ಗುರೋಃ ಕ್ರೋಧಂ ನಕಾರಯೇತ್ |
ತಸ್ಯ ಕ್ರೋಧೇನ ದಹ್ಯಂತೇ ಹ್ಯಾಯುಶ್ರೀಜ್ಞಾನಸತ್ಕ್ರಿಯಾಃ ||
ತತ್ಕ್ರೋಧಕಾರಿಣೋಯೇ ಸ್ಯುಸ್ತೇಷಾಂ ಯಜ್ಞಾಶ್ಚ ನಿಷ್ಫಲಾಃ |
ಯಮಾಶ್ಚ ನಿಯಮಾಶ್ಚೈವ ನಾತ್ರ ಕಾರ್ಯಾ ವಿಚಾರಣಾ ||
ಗುರೋರ್ವಿರುದ್ಧಂ ಯದ್ವಾಕ್ಯಂ ನವದೇಜ್ಞಾ ಮಚಿನ್ನರಃ |

ಅಷ್ಟಾವರಣಸಂಪನ್ನನಾದ ಯಾವ ವೀರಶೈವನೂ ಮನಸ್ಸಿನಲ್ಲಾಗಲಿ ಕಾರ್ಯದಲ್ಲಾಗಲಿ ಮಾತಿನಲ್ಲಾಗಲಿ ಗುರುಗಳಿಗೆ ಕೋಪವನ್ನುಂಟುಮಾಡಬಾರದು. ಹಾಗೆ ಗುರುಗಳಿಗೆ ಕೋಪವನ್ನುಂಟುಮಾಡುವುದರಿಂದ ಈಶ್ವರಾನುಗ್ರಹದಿಂದ ಬಂದಿರುವ ಆಯುಸ್ಸು ಸಂಪತ್ತು ಜ್ಞಾನಕ್ರಿಯೆಗಳೆಲ್ಲಾ ಹಾಳಾಗುತ್ತವೆ. ಮತ್ತು ಯಮನಿಯಮಾದಿಗಳೆಲ್ಲ ಫಲವಿಲ್ಲದಂತಾಗುತ್ತವೆ. ಈ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಆದುದರಿಂದ ಗುರುವಿಗೆ ಸಮ್ಮತವಲ್ಲದ ಮಾತುಗಳನ್ನಾರೂ ಯಾವಾಗಲೂ ಮಾತನಾಡಬಾರದು ಎಂಬ ಶಾಸ್ತ್ರದ ಉಪದೇಶವನ್ನು ಸರ್ವರೂ ಸ್ಮೃತಿಪಥಕ್ಕೆ ತಂದುಕೊಳ್ಳಬೇಕು. ಈ ರೀತಿಯಾಗಿ ಗುರುಸೇವೆ ಮಾಡುವುದನ್ನು ಬಿಟ್ಟು ಧೂರ್ತತನವನ್ನವಲಂಬಿಸುವುದು ಎಷ್ಟೂ ಭೂಷಣವಲ್ಲ. ಹಾಗೆ ಧೂರ್ತತನವನ್ನವಲಂಬಿಸುವವರಿಗೆ ನಮ್ಮ ಧರ್ಮಪ್ರಭುಗಳ ಧರ್ಮರಾಜ್ಯದಲ್ಲಿ ಅದಕ್ಕೆ ತಕ್ಕ ಪ್ರತೀಕಾರವಾಗುವುದರಲ್ಲಾವ ಸಂಶಯವೂ ಇಲ್ಲ. ಈ ವಿಷಯವನ್ನು ವಿರೋಧಿಗಳು ಚನ್ನಾಗಿ ತಿಳಿದುಕೊಳ್ಳಬೇಕು. ಅಸ್ತು! ಈ ಮತವನ್ನವಲಂಬಿಸಿದ ಪ್ರತಿಯೊಬ್ಬ ವೀರಶೈವರೂ ಶ್ರೀ ರೇಣುಕಾದಿ ಮಹಾಗುರುಗಳ ಹೆಸರನ್ನೇ ಹೇಳುತ್ತಾರಲ್ಲದೆ ಇನ್ನಾರ ಹೆಸರನ್ನೂ ಹೇಳುವ ವೀರಶೈವರನ್ನು ಇದುವರೆಗೆ ಕಂಡಿಲ್ಲ. ಇಂಥ ತಮ್ಮ ಕುಲಕೋಟಿಯನ್ನೇ ಪವಿತ್ರಗೊಳಿಸಿದ ರೇಣುಕಾದ್ಯಾಚಾರ್ಯರ ಸಿಂಹಾಸನಗಳನ್ನಾರೋಹಿಸಿದ ಪೀಠಾಧಿಪತಿಗಳನ್ನು ನಿಂದಿಸುವುದೆಂದರೆ ಎಂತಹ ಪಾಪಕಾರ್ಯವೆಂಬುದನ್ನು ವಾಚಕರೇ ಊಹಿಸಲಿ. ಹಿಂದೆ ಹೀಗೆ ಗುರುದೂಷಣೆಮಾಡಿ ಅನೇಕರು ಹೇಳಲು ಹೆಸರಿಲ್ಲದಂತಾಗಿದ್ದಾರೆ. ಇದಕ್ಕೆ ಬೇಕಾದಷ್ಟು ದೃಷ್ಟಾಂತಗಳು ಶಿಗುತ್ತವೆಂಬುದನ್ನು ಪ್ರತಿಯೊಬ್ಬರೂ ಚನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡು ಗುರುಕರುಣೆಯನ್ನು ಪಡೆದು ಧನ್ಯಾತ್ಮರಾಗಬೇಕೆಂದಾಶಿಸುತ್ತೇವೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸ್ವಾಗತಕಮಿಟಿಯವರ ಕಾರ್ಯ.

ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಮೇಲ್ಕಂಡ ಕಮಿಟಿಯವರು ಶ್ರೀ ಜಗದ್ಗುರುಗಳವರ ಆಗಮನದ ವಿಷಯದಲ್ಲಿ ಅತ್ಯುತ್ಸಾಹದಿಂದ ಸಕಲ ಸಿದ್ಧತೆಗಳನ್ನು ಮಾಡುತ್ತಿರುವರು. ಅನೇಕ ಜನ ಗುರುಭಕ್ತರು ಮಹೋತ್ಸವದ ಖರ್ಚಿಗಾಗಿ ಅಸಾಧಾರಣವಾದ ಭಕ್ತಿ ವಿಶೇಷದಿಂದ ದ್ರವ್ಯವನ್ನು ಸಮರ್ಪಿಸುತ್ತಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಮೈಸೂರು ದೇಶಕ್ಕೆಲ್ಲಾ ಮಾತೃಸ್ಥಾನವಾಗಿರುವ ಈ ರಾಜಧಾನಿಯಲ್ಲಿ ನೆರವೇರುವ ಮಹೋತ್ಸವವು ಈವರೆಗೆ ನೆರವೇರಿದ ಶ್ರೀಗಳವರ ಎಲ್ಲಾ ಮಹೋತ್ಸವಗಳಿಗಿಂತಲೂ ಮಿಗಿಲಾಗಬೇಕೆಂದು ಇಲ್ಲಿಯ ವೀರಶೈವಪ್ರಮುಖರ ಬಯಕೆಯಾಗಿರುವಂತೆ ತೋರುತ್ತದೆ. ನಮ್ಮ ಧರ್ಮ ಪ್ರಭುಗಳವರ ನಿತ್ಯಾವಾಸದಿಂದ ಧರ್ಮಭೂಮಿಯೆನಿಸಿರುವ ಈ ಧರ್ಮನಗರಿಯಲ್ಲಿ ಧರ್ಮಾಭಿಮಾನಿಗಳ ಸದಿಚ್ಛೆಯು ನೆರವೇರುವುದರಲ್ಲಾಶ್ಚರ್ಯವೇನು? ಪದ್ಧತಿಪ್ರಕಾರವಾಗಿ ಇಲ್ಲಿಯೂ ಒಂದೆರಡು ಪಾಲಕ್ಕಿಗಳ ಧ್ವನಿಯಾಗುತ್ತಿದೆ. "ಪಾಲಕ್ಕಿಗಳಿಲ್ಲದ ಊರು ಹಾಳೂರು" ಎಂಬ ಗಾದೆಯುಂಟಷ್ಟೆ?

ಒಳದೇಶದ ವೃತ್ತಾಂತಗಳು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಈ ತಿಂಗಳು 15 ನೆಯ ತಾರೀಖಿನ ದಿವಸ ಬೆಂಗಳೂರಿಂದ ಬಿಡದಿ ಎಂಬ ಗ್ರಾಮಕ್ಕೆ ದಯಮಾಡಿಸಿರುವರು.

ರಾಜಧಾನಿಯ ಪೋಲೀಸ್ ಕಾನ್ಸ್ಟೆಬಲ್ ಬಸವಯ್ಯನೆಂಬವನು ಕಳುವಾಗಿದ್ದ ಒಂದು ಬೈಸಿಕಲ್ಲಿನ ಭಾಗವನ್ನು ಮಾರಲು ಪ್ರಯತ್ನಿಸಿದನೆಂಬ ಅಪವಾದನೆಯಮೇಲೆ ದಸ್ತಗಿರಿಮಾಡಲ್ಪಟ್ಟಿರುತ್ತಾನೆ.

ಮೈಸೂರು ಸರಕಾರದವರು ಭದ್ರಾವತಿಯಲ್ಲಿ ಉಕ್ಕನ್ನು ತಯಾರಿಸುವ ಏರ್ಪಾಡು ಮಾಡಿರುತ್ತಾರೆ. ಇದಕ್ಕಾಗಿ 22 ಲಕ್ಷ ರೂಪಾಯಿಗಳು ವೆಚ್ಚವಾಗುವುವೆಂದೂ, ಅವಶ್ಯಕವಾದ ಯಂತ್ರಸಾಮುಗ್ರಿಗಳೆಲ್ಲವೂ ಜರ್ಮನಿಯಿಂದ ಬರುವುವೆಂತಲೂ ತಿಳಿದುಬಂದಿದೆ.

ರಾಜಧಾನಿಯ ದೇವಾಂಬಾ ಅಗ್ರಹಾರದಲ್ಲಿರುವ ರುಕ್ಮಿಣಿಯಮ್ಮ ಎಂಬವರ 13 ವರುಷದ ವಿಧವಾ ಪುತ್ರಿಯನ್ನು ಮಧುಗಿರಿಯ ವೈ. ರಾಮಚಂದ್ರರಾವ್ ಎಂಬಾತನು ಅಪಹರಿಸಿಕೊಂಡು ಹೋಗಿರುವನೆಂದೂ, ಪೋಲೀಸರು ಅಪರಾಧಿಯನ್ನು ಪತ್ತೆಮಾಡುತ್ತಿರುವರೆಂದೂ ತಿಳಿದುಬಂದಿದೆ.

ತರೀಕೆರೆ ತಾಲ್ಲೂಕು ಆನೆಗುಡ್ಡ, ಅಮೃತಮಹಲ್ ಕಾವಲು ಮತ್ತು ಅದರ ಸುತ್ತುಮುತ್ತಲ 5 ಮೈಲುಗಳ ಪ್ರದೇಶದಲ್ಲಿ ಸೇರಿಕೊಂಡು ಗ್ರಾಮವಾಸಿಗಳಿಗೆ ವಿಶೇಷ ಕಷ್ಟನಷ್ಟಗಳನ್ನುಂಟುಮಾಡುತ್ತಿರುವ ಹುಲಿಯನ್ನು 3 ತಿಂಗಳುಗಳೊಳಗಾಗಿ ಯಾರು ಬೇಕಾದರೂ ಶಿಕಾರಿಮಾಡಬಹುದೆಂದು ಸರಕಾರದವರು ಅಪ್ಪಣೆಮಾಡಿರುತ್ತಾರೆ.

ಮೈಸೂರು ರೈಲ್ವೆ ಇಲಾಖೆಯವರು ಪ್ರಯಾಣಿಕರ ಸೌಕರ್ಯಕ್ಕಾಗಿ ಒಂದು ಹೊಸ ಏರ್ಪಾಡನ್ನು ಮಾಡಿರುತ್ತಾರೆ. ಈ ಏರ್ಪಾಡಿನಂತೆ ಒಂದುವಾರದೊಳಗಾಗಿ ಮೈಸೂರು ರೈಲ್ವೆಯಲ್ಲಿ ಎಲ್ಲಿಂದ ಎಲ್ಲಿಗೆ ಬೇಕಾದರೂ ಪ್ರಯಾಣಮಾಡಿ ಬರಬಹುದು. 3 ನೆಯ ತರಗತಿಯ ಟಿಕೆಟ್ 1 ಕ್ಕೆ ರೂ. 7-8-0. ಈ ಏರ್ಪಾಡು ಈ ದಿವಸದಿಂದ ಜಾರಿಗೆ ಬರುವುದು.

ಇದೇ ಆಗಸ್ಟ್ 15 ನೇ ತಾರೀಖಿನ ದಿವಸ ಸಾಯಂಕಾಲ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳು ದಿವಾನರಾದ ಸರ್ ಮಿರ್ಜಾಮಹಮದ್ ಇಸ್ಮಾಯಿಲ್‌ರವರೊಡನೆ ರಾಜಧಾನಿಗೆ ಆಗಮಿಸಿದರು. ಮರುದಿವಸ ಬೆಳಗ್ಗೆ ದಿವಾನರವರು ರೈಟ್ ಆನರಬಲ್ ಶಾಸ್ತ್ರಿಗಳವರೊಡನೆ ನಗರದ ನಾನಾಭಾಗಗಳನ್ನು ಪರಾಮರ್ಶಿಸಿ ಸಾಯಂಕಾಲ ಸಂಜನಗೂಡಿಗೆ ದಯಮಾಡಿಸಿದರು.

ಯಶವಂತಪುರದ ಸಮೀಪದಲ್ಲಿ ತಾ. 7 ನೇ ಮಂಗಳವಾರ ಮಧ್ಯರಾತ್ರಿಯ ಸಮಯದಲ್ಲಿ ಕಾಡಿನಲ್ಲಿ ಪಕ್ಷಿಗಳನ್ನು ಹಿಡಿಯುವ 13 ಜನರ ಗುಂಪೊಂದು ಹೋಗುತ್ತಿದ್ದಿತು. ಅವರ ವಶದಲ್ಲಿ 500 ಹಕ್ಕಿಗಳಿದ್ದವು. ಬೆಂಗಳೂರು ಫಾರೆಸ್ಟ್ ರೇಂಜ್ ಆಫೀಸರು ತಮ್ಮ ಸಿಬ್ಬಂದಿಯೊಡನೆ ಹೋಗಿ ಅವರನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿದರು. ಆ ಗುಂಪಿನ ಪ್ರತಿಯೊಬ್ಬರಿಗೂ ತಲಾ 15 ರೂ. ಜುಲ್ಮಾನೆ ತಪ್ಪಿದರೆ 6 ವಾರಗಳ ಸಾದಾ ಶಿಕ್ಷೆಯನ್ನು ವಿಧಿಸಲಾಯಿತು.

ಒಂದಾಣೆ ವಸೂಲಿಗೆ ಮೊಕದ್ದಮೆ.

ಬೆಂಗಳೂರು 13 ನೇ ಇನ್‌ಫೆಂಟರಿ ರೋಡಿನಲ್ಲಿ ವಾಸವಾಗಿರುವ ಮಿ|| ಜೆ. ಇ. ರೊಸೇರ್ ಎಂಬವರು ಕಲ್ಕತ್ತಾನಗರದಲ್ಲಿ ಹೊರಡುವ 'ಅಡ್ವಾನ್ಸ್' ಎಂಬ ಪತ್ರಿಕೆಯಲ್ಲಿ ಪ್ರಕಟಿಸಲು ಒಂದು ಲೇಖನವನ್ನು ಬರೆದು ಅದಕ್ಕೆ 1/2 ಆಣೆ ಸ್ಟಾಂಪು ಹಚ್ಚಿ ಪೋಸ್ಟ್ ಮೂಲಕ ಕಳುಹಿಸಿದ್ದರು. ಅದಕ್ಕೆ ಹಚ್ಚಿದ್ದ ಸ್ಟಾಂಪು ಕಡಿಮೆಯಾಯಿತೆಂದೂ ಇನ್ನೂ ಒಂದಾಣೆ ಸಂದಾಯವಾಗಬೇಕೆಂದೂ ಪೋಸ್ಟ್ ಆಫೀಸಿನವರು ಕಲ್ಕತ್ತಾದಿಂದ ಅದನ್ನು ವಾಪಸು ಕಳುಹಿಸಿದರು. ಪೋಸ್ಟ್ ಮಾಸ್ಟರ್ ಜನರಲ್‌ರವರಲ್ಲಿಗೆ ಇವರು ಆ ಕವರನ್ನು ಕಳುಹಿಸಿ ರೂಲ್ ಪ್ರಕಾರ ಅಷ್ಟು ಕೊಡಬೇಕಾಗಿಲ್ಲವೆಂದು ತಿಳಿಸಿದರು. ಕೊನೆಗೆ ಈ ತಕರಾರು ಮುಫಸಿಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ ರೊಸೇರ್ ಎಂಬವರು ಒಂದಾಣೆಯನ್ನು ಕೊಟ್ಟರು.

ವರ್ತಮಾನಸಂಗ್ರಹ.

ಶ್ರೀಮದುಜ್ಜಯಿನೀ ಜಗದ್ಗುರುಗಳವರು ಸದ್ಯಃ ಬಳ್ಳಾರಿ ಜಿ|| ಕೊಟ್ಟೂರು ಗ್ರಾಮದಲ್ಲಿ ಮೊಕ್ಕಾಂ ಮಾಡಿರುವುದಾಗಿ ತಿಳಿದು ಬರುತ್ತದೆ.

ಜರ್ಮನ್ ಸರಕಾರದವರು ತನ್ನ ದೇಶದಲ್ಲಿರುವ ಆಸ್ಟ್ರಿಯನ್ ಸ್ಟಾರಂಟ್ರೂಪನ್ನು ರದ್ದುಮಾಡಿ ಅದನ್ನು ಜರ್ಮನ್ ಸ್ಟಾರಂಟ್ರೂಪನ್ನಾಗಿ ಮಾಡುತ್ತಿರುವರು. ಸೈನಿಕರು ಕೂಲಿಕಾರರ ಕ್ಯಾಂಪುಗಳಿಗೆ ಕಳುಹಿಸಲ್ಪಡುತ್ತಿರುವರು.

ಇಟಲಿಯ ಸರ್ವಾಧಿಕಾರಿಗಳಾದ ಮುಸೋಲಿನಿಯವರು ಇದೇ ಆಗಸ್ಟ್ 17 ನೇ ತಾರೀಖಿನಿಂದ 24 ನೇ ತಾರೀಖಿನ ವರೆಗೆ ಒಂದು ಸೇನಾಪ್ರದರ್ಶನವನ್ನು ಏರ್ಪಡಿಸಿರುವರು. ಇದರಲ್ಲಿ 1 ಲಕ್ಷ ಜನರು ಭಾಗವಹಿಸುವರೆಂದು ತಿಳಿದುಬಂದಿದೆ.

ವಿಯನ್ನಾದಲ್ಲಿ ಡಾಕ್ಟರ್ ಡಾಲ್ಫಸರ ಕೊಲೆಯಾದಾಗ ಇಟಲಿಸರಕಾರದವರು ಆಸ್ಟ್ರಿಯಾ ಗಡಿನಾಡಿಗೆ 50,000 ಸೈನಿಕರನ್ನು ಕಳುಹಿಸಿದ್ದರು. ಆಸ್ಟ್ರಿಯಾದಲ್ಲಿ

ಈಗ ಶಾಂತತೆಯು ನೆಲಸಿರುವುದರಿಂದ ಮುಸೋಲಿನಿಯವರು ಮೇಲ್ಕಂಡ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡಿರುತ್ತಾರೆ.

ಸ್ಪೇನ್‌ದೇಶದ ಪದಚ್ಯುತ ಚಕ್ರವರ್ತಿಗಳಾದ ಡಾನ್ ಅಲ್ಫಾನ್ಸೋರವರ ಹಿರಿಯ ಪುತ್ರರಾದ ಪ್ರಿನ್ಸ್ ಗೊನ್ಸಾಲೋರವರು ಒಂದು ಮೋಟಾರ್ ಅನಾಹುತದಲ್ಲಿ ಸಿಕ್ಕಿ ಮೃತಪಟ್ಟರು. ಇವರು ಬಹಳ ಗುಣವಂತರು. ಸ್ಪೇನ್‌ದೇಶದಲ್ಲಿ ಪುನಃ ರಾಜಪ್ರಭುತ್ವವು ಏರ್ಪಟ್ಟಿದ್ದರೆ, ಆಗ ಇವರೇ ಚಕ್ರವರ್ತಿಗಳಾಗುತ್ತಿದ್ದರಂತೆ!

ಇಟಲಿದೇಶಕ್ಕೆ ಸೇರಿದ ನೇಪಲ್ಸ್ ಎಂಬ ಪ್ರಸಿದ್ಧ ರೇವುಪಟ್ಟಣದ ಸಮೀಪದಲ್ಲಿ, 'ಆಂಟೋನಿಮೊಸೋಡಿಮಾರಿ' ಎಂಬ ಯುದ್ಧದ ಹಡಗವೂ, 'ಪಾಲೇಡಿ' ಎಂಬ ಹಡಗವೂ ಒಂದಕ್ಕೊಂದು ಢಿಕ್ಕಿಹೊಡೆದು 3 ಜನರು ಮೃತಪಟ್ಟರು. 17 ಜನರಿಗೆ ವಿಶೇಷ ಗಾಯವಾಗಿರುವುದು. ಯುದ್ಧದ ಹಡಗಿಗೆ ಢಿಕ್ಕಿಯಿಂದ ತೂತು ಬಿದ್ದಿರುವುದು.

ಇಂಡಿಯಾದೇಶದಲ್ಲಿ ದೇಶೀಯ ಭಾಷಾ ವಾಕ್ಚಲನಚಿತ್ರಗಳು ದಿನದಿನಕ್ಕೆ ಹೆಚ್ಚುತ್ತ ಆಂಗ್ಲೇಯ ಭಾಷಾಚಿತ್ರಗಳಿಗೆ ಪ್ರೋತ್ಸಾಹವು ಕಡಿಮೆಯಾಗುತ್ತಿರುವುದು. ಆದಕಾರಣ ಪರದೇಶದವರು ಹಿಂದೀಭಾಷೆಯ ಚಲನಚಿತ್ರಗಳನ್ನು ತಯಾರಿಸಿ ಸ್ವದೇಶೀ ಚಲನಚಿತ್ರಗಳ ಮೇಲೆ ಪೈಪೋಟಿಯನ್ನು ಮಾಡಲೆತ್ನಿಸಿರುತ್ತಾರೆ. ಈ ಪೈಪೋಟಿಯನ್ನು ಸಾಧ್ಯವಾದಷ್ಟು ತಡೆಯುವುದಕ್ಕಾಗಿ ಇಂಡಿಯಾ ಸರಕಾರದವರು ಪರದೇಶಗಳಿಂದ ಬರುವ ದೇಶಭಾಷಾ ಚಲನಚಿತ್ರಗಳ ಮೇಲೆ ಅಡಿ 1 ಕ್ಕೆ 3—8—0 ಯಂತೆ ಸುಂಕವನ್ನು ಹಾಕಬೇಕೆಂದು ನಿರ್ಧರಿಸಿರುತ್ತಾರೆ.

ಅಮೇರಿಕೆಯ ಸಂಯುಕ್ತಸಂಸ್ಥಾನಗಳ ಪ್ರೆಸಿಡೆಂಟರಾದ ರೂಜ್‌ವೆಲ್ಟರು, ತಮ್ಮ ದೇಶದಲ್ಲಿರುವ ಬೆಳ್ಳಿಯನ್ನೆಲ್ಲ ಸರಕಾರಕ್ಕೆ ಒಪ್ಪಿಸಬೇಕೆಂದು ಅಪ್ಪಣೆಮಾಡಿರುತ್ತಾರೆ. ಕಳೆದ ವರ್ಷ ಬೆಳೆಯು ಹೆಚ್ಚಿ ಬೆಲೆಯು ಬಹಳಮಟ್ಟಿಗೆ ಇಳಿದುಹೋದದ್ದರಿಂದ, ಜನರಲ್ಲಿ ದ್ರವ್ಯಾಭಾವವುಂಟಾಗಿರುವುದು. ಆದರೆ ಈ ಸಾರೆ ಬೆಳೆಯು ಕಡಿಮೆಯಾಗಿ ಧಾರಣೆಯು ಹೆಚ್ಚುವ ಸಂಭವವಿರುವುದು. ಆದಕಾರಣ 100 ಕೋಟಿ ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತರುವ ಉದ್ದೇಶದಿಂದ ಸರಕಾರದವರು ಮೇಲ್ಕಂಡಂತೆ ಅಪ್ಪಣೆಮಾಡಿರುತ್ತಾರೆ. ಈಗಾಗಲೇ ಜನರಿಂದ 620 ಲಕ್ಷ ಔನ್ಸ್ ಬೆಳ್ಳಿಯನ್ನು ಕೊಂಡುಕೊಂಡಿದ್ದು, ಇನ್ನೂ 450 ಲಕ್ಷ ಔನ್ಸನ್ನು ಕೊಂಡುಕೊಳ್ಳುವರಂತೆ!

ಕಾಲ್ನಡಿಗೆಯಿಂದ ಭೂಪ್ರದಕ್ಷಿಣೆ!

ಅಸ್ಸಾಂದೇಶದ ಸುಬೋಧರಂಜನದಾಸಗುಪ್ತ ಎಂಬೊಬ್ಬ ಯುವಕರು ಕಾಲ್ನಡಿಗೆಯಲ್ಲಿಯೇ ಪ್ರಪಂಚವನ್ನು ಸುತ್ತಿಬರುವುದಕ್ಕಾಗಿ ಕಲ್ಕತ್ತೆಯಿಂದ ಹೊರಟಿರುತ್ತಾರೆ.

5000 ವರ್ಷಗಳ ಹಿಂದಿನ ಸಮಾಧಿ!

ಮದ್ರಾಸಿನಲ್ಲಿ ಒಂದು ತೋಟವನ್ನು ಅಗೆದು ಸರಿಮಾಡುತ್ತಿದ್ದಾಗ ಒಂದು ಸಮಾಧಿಯು ಗೋಚರವಾಯಿತು. ಅದು 5,000 ವರ್ಷಗಳ ಹಿಂದಿನದೆಂದು ನಿರ್ಧರಿಸಲ್ಪಟ್ಟಿರುತ್ತದೆ.

ಫ್ರಾನ್ಸಿನಲ್ಲಿ ರೈಲ್ವೆ ಅನಾಹುತ.

ಫ್ರಾನ್ಸ್‌ದೇಶಕ್ಕೆ ಸೇರಿದ ಅವಿಗ್ನನ್ ರೈಲ್ವೇ ಸ್ಟೇಷನ್ ಸಮೀಪದಲ್ಲಿ ಜೆನೀವಾ ಎಕ್ಸ್‌ಪ್ರೆಸ್ ಗಾಡಿಯು ಬರ್ಲಿನ್ ಗೂಡ್ಸ್ ಟ್ರೇನಿನೊಡನೆ ಢಿಕ್ಕಿಹೊಡೆದು 6 ಜನರು ಮೃತಪಟ್ಟರು. 35 ಜನರಿಗೆ ಪೆಟ್ಟು ಬಿದ್ದಿರುವುದು.

ಪಂಡಿತ ಜವಾಹರಲಾಲನೆಹರೂರವರ ಹಂಗಾಮಿ ಬಿಡುಗಡೆ.

ಶ್ರೀಮತಿ ಕಮಲಾನೆಹರೂರವರಿಗೆ ವಿಶೇಷ ಕಾಯಿಲೆಯಾಗಿದ್ದು ಅವರ ಸ್ಥಿತಿಯು ಚಿಂತಾಜನಕವಾಗಿರುವುದರಿಂದ ಸರಕಾರದವರು ಪಂಡಿತ ಜವಾಹರಲಾಲ ನೆಹರೂರವರನ್ನು ತಾತ್ಕಾಲಿಕವಾಗಿ ಕಾರಾಗೃಹದಿಂದ ಬಿಡುಗಡೆ ಮಾಡಿರುತ್ತಾರೆ.

ಕಲಿಯುಗದ ಸೈಂಧವ!

ಚೀನಾದೇಶದಲ್ಲಿ 8 1/2 ಅಡಿ ಎತ್ತರವಿರುವ ಒಬ್ಬ ಮನುಷ್ಯನಿದ್ದು ಅವನ ಪಾದಗಳು 1 1/2 ಅಡಿ ಉದ್ದವಾಗಿಯೂ, ಕೈಗಳು 1 1/2 ಅಡಿ ಉದ್ದವಾಗಿಯೂ, ಆಕಾರಕ್ಕೆ ತಕ್ಕ ಹೊಟ್ಟೆಯೂ ಇರುವುವಂತೆ! ಈತನು ಸದ್ಯಃ ಅಮೇರಿಕೆಗೆ ಪ್ರಯಾಣ ಮಾಡಿರುತ್ತಾನೆ.

ಟಿಕೆಟ್ ಕಲೆಕ್ಟರಿಗೆ ಶಿಕ್ಷೆ.

ಲೂದಿಯಾನಾ ನಗರದ ಒಬ್ಬಾನೊಬ್ಬ ರೈಲ್ವೆ ಟಿಕೆಟ್ ಕಲೆಕ್ಟರು ಒಬ್ಬ ಮುದುಕಿಯಿಂದ 5 ಆಣೆಗಳನ್ನು ಪಡೆದು ಟಿಕೆಟ್ಟನ್ನು ತೆಗೆದುಕೊಡಲಿಲ್ಲವೆಂಬ ಕಾರಣದ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಒಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಆಸ್ಟ್ರಿಯಾಕ್ಕೆ ಹೆಚ್ಚು ಸೈನ್ಯ!

ಆಸ್ಟ್ರಿಯಾ ಸರಕಾರದವರು ತಮ್ಮ ದೇಶದಲ್ಲಿ ಸೈನ್ಯವನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಅಂತರ ರಾಷ್ಟ್ರೀಯ ಸಂಸ್ಥೆಯ ಸಮ್ಮತಿಯನ್ನು ಕೇಳಿದ್ದರು. ಇದಕ್ಕೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ಸರಕಾರದವರಿಬ್ಬರೂ ಸಮ್ಮತಿಯನ್ನಿತ್ತಿರುವರು. ಅದರಂತೆ ಆಸ್ಟ್ರಿಯಾ ಸೈನ್ಯವು 30,000 ಕ್ಕೆ ಹೆಚ್ಚಿಸಲ್ಪಡುವುದು.

ಪ್ರವಾಹದಿಂದ 170 ಜನರ ಮರಣ.

ಇದೇ ಆಗಸ್ಟ್ 16ನೇ ತಾರೀಖಿನ ದಿವಸ ಪಾಟ್ನಾನಗರದ ಸಮೀಪದಲ್ಲಿರುವ ಧಾರಿಹಾರಾ ಎಂಬ ಪ್ರದೇಶದ ಹತ್ತಿರ ನದಿಯಲ್ಲಿ ಹೋಗುತ್ತಿದ್ದ ಒಂದು ದೋಣಿಯು ಪ್ರವಾಹದ ವೇಗದಿಂದ ತಲೆಕೆಳಗಾಗಿ ಅದರಲ್ಲಿದ್ದ ಅನೇಕ ಎತ್ತುಗಳೂ ಸುಮಾರು 170 ಜನ ಗಂಡಸರು ಮತ್ತು ಹೆಂಗಸರೂ ನದಿಯಲ್ಲಿ ಮುಳುಗಿ ಹೋದರು. ದೋಣಿಯಲ್ಲಿ 200 ಜನರಿದ್ದರು. ಅಂಬಿಗರು 30 ಜನರನ್ನು ಮಾತ್ರ ರಕ್ಷಿಸಿದರು.

ಲಾರ್ಡ್ ವಿಲಿಂಗ್‌ಡನ್ನರ ಆಗಮನ.

ವೈಸರಾಯರಾದ ಲಾರ್ಡ್ ವೆಲಿಂಗ್‌ಡನ್‌ರವರು ಪತ್ನೀ ಸಮೇತರಾಗಿ 16 ನೆಯ ತಾರೀಖಿನ ದಿವಸ ಲಂಡನ್ನಿನಿಂದ ಕರಾಚಿಗೆ ಆಗಮಿಸಿದರು. ಅದೇ ದಿವಸ ಜೋಧಪುರಕ್ಕೆ ಪ್ರಯಾಣ ಮಾಡಿ, 17 ನೆಯ ತಾರೀಖಿನ ದಿವಸ ದೆಹಲಿಯಲ್ಲಿ ಹಂಗಾಮಿ ವೈಸರಾಗಿದ್ದ ಸರ್ ಜಾರ್ಜ್ ಸ್ಟಾನ್ಲಿಯವರನ್ನು ಭೇಟಿಮಾಡಿ ಅವರಿಂದ ವೈಸರಾಯ ಪದವಿಯನ್ನು ವಹಿಸಿಕೊಂಡನಂತರ 18 ನೆಯ ತಾರೀಖಿನ ದಿವಸ ಸಿಮ್ಲಾಕ್ಕೆ ಪ್ರಯಾಣ ಮಾಡಿದರು.

ಫೋಟೋ ತೆಗೆಯುವ ಬಂದೂಕ!

ಫೋಟೋ ತೆಗೆಯುವ ಕ್ಯಾಮರಾದಿಂದ ಕೂಡಿರುವ ಒಂದು ತರತದ ಬಂದೂಕವು ಹೊಸದಾಗಿ ತಯಾರಿಸಲ್ಪಟ್ಟಿರುವುದು. ಇದು ಕಳ್ಳರ ಬೆನ್ನು ಹತ್ತಿ ಹೋಗುವ ಪೋಲೀಸರಿಗೆ ವಿಶೇಷ ಸಹಾಯಕವಾಗಿರುವುದು. ಕಳ್ಳರನ್ನು ಅಟ್ಟಿಸಿಕೊಂಡು ಹೋಗುವಕಾಲದಲ್ಲಿ ಕಳ್ಳನು ಒಂದುವೇಳೆ ತಪ್ಪಿಸಿಕೊಂಡು ಹೋದರೂ ಬಂದೂಕವು ಕಳ್ಳನ ಫೋಟೋವನ್ನು ತೆಗೆದುಕೊಳ್ಳುವುದರಿಂದ, ಕಳ್ಳನು ಯಾರೆಂಬುದನ್ನು ಸುಲಭವಾಗಿ ಗುರ್ತಿಸಬಹುದಂತೆ!

ಇದೊಂದು ಭವಿಷ್ಯ!

ಜಗತ್ತಿನ ಹಾಸ್ಯಗಾರರಲ್ಲಿ ಶ್ರೇಷ್ಠನೆಂದೂ, ವ್ಯಂಗ್ಯ ಚಿತ್ರಗಳನ್ನು ಬರೆಯುವುದರಲ್ಲಿ ಮಹಾ ನಿಪುಣನೆಂದೂ ಪ್ರಸಿದ್ಧಿಹೊಂದಿರುವ ಲಾಸೆಲ್ಲೊ ಶ್ವಾರ್ಟಿಕೊ ಎಂಬವರು ಸದ್ಯಃ ಕರಾಚಿಗೆ ಬಂದಿದ್ದು, ಜಗತ್ತಿನ ಉದ್ಧಾರವು ಹಿಂದುಸ್ಥಾನದ ಉನ್ನತಿಯನ್ನೇ ಅವಲಂಬಿಸಿರುವದೆಂದೂ, ಗಾಂಧಿ ಮತ್ತು ಟಾಗೋರ ಇವರಿಬ್ಬರು ಅಂತರಿಕ್ಷದಲ್ಲಿ ಹೊಳೆಯುವ ಎರಡು ನಕ್ಷತ್ರಗಳಂತೆ ಪ್ರಕಾಶಿಸುತ್ತಿರುವರೆಂದೂ, ಗಾಂಧಿಯವರು ಒಂದಾನೊಂದು ದಿವಸ ಪತನಹೊಂದುವರೆಂದೂ ಒಂದು ಹೇಳಿಕೆಯನ್ನು ಕೊಟ್ಟಿರುವರು.

ಅದೃಷ್ಟ!

ಪೆರ್ಹೀಟೋ ಎಂಬ ಗ್ರಾಮದ ಜೋಸ್ ಎಂಬಾತನು 1931 ನೇ ವರ್ಷದಲ್ಲಿ ಪೋರ್ಚುಗೀಸ್ ದೇಶಕ್ಕೆ ಸೇರಿದ ಲಿಸ್ಬನ್ ನಗರಕ್ಕೆ ಹೋಗಿ ಒಂದಾನೊಂದು ಲಾಟರಿಯ ಟಿಕೆಟ್ಟಿನ ಇಪ್ಪತ್ತನೇ ಒಂದು ಭಾಗವನ್ನು ಕೊಂಡುಕೊಂಡು ಅದರಿಂದ 30,000 ರೂ. ಗಳ ಬಹುಮಾನವನ್ನು ಪಡೆದನು. 1932 ನೇ ವರ್ಷದಲ್ಲಿ ಜೋಸನು ಪುನಃ ಲಿಸ್ಬನ್ ನಗರಕ್ಕೆ ಹೋಗಿ ಒಂದು ಟಿಕೆಟ್ಟಿನಲ್ಲಿ ಅರ್ಧಭಾಗವನ್ನು ಕೊಂಡುಕೊಂಡು 3,00,000 ರೂ. ಗಳ ಬಹುಮಾನವನ್ನು ಪಡೆದನು. ಈ ವರ್ಷ ಪುನಃ ಅದೇ ಲಿಸ್ಬನ್ ನಗರಕ್ಕೆ ಹೋಗಿ ಒಂದು ಸಂಪೂರ್ಣ ಟಿಕೆಟ್ಟನ್ನು ಕೊಂಡುಕೊಂಡು 6,00,000 ರೂ. ಗಳ ಬಹುಮಾನವನ್ನು ಪಡೆದಿರುವನಂತೆ!

ಆಸ್ಟ್ರಿಯಾದ ಪರಿಸ್ಥಿತಿ.

ಆಸ್ಟ್ರಿಯಾ ಸರಕಾರದವರು ನಾಜಿಗುಂಪಿಗೆ ಸೇರಿದವರೆಂಬ ಅನುಮಾನದ ಮೇಲೆ ವಿಯನ್ನಾ ನಗರದ 260 ಜನ ಪೋಲೀಸರನ್ನು ದಸ್ತಗಿರಿ ಮಾಡಿರುತ್ತಾರೆ. ಡಾಕ್ಟರ್ ಡಾಲ್ಫಸರ ಕೊಲೆಯಲ್ಲಿ ಸಹಾಯಕರಾಗಿದ್ದರೆಂದು 4 ಜನ ಪೋಲೀಸರಿಗೆ ಮರಣದಂಡನೆಯನ್ನೂ ಒಬ್ಬ ಇನ್‌ಸ್ಪೆಕ್ಟರಿಗೆ 20 ವರ್ಷಗಳ ಶಿಕ್ಷೆಯನ್ನೂ ವಿಧಿಸಿರುತ್ತಾರೆ. ಪಿತೂರಿಕಾರರು ಸರ್ಕಾರೀ ಅಧಿಕಾರಿಗಳಿಗೂ, ರೈಲ್ವೆ ಕೆಲಸಗಾರರಿಗೂ ಅಂತಃಕಲಹವನ್ನು ಹುಟ್ಟಿಸಲು ಪ್ರಯತ್ನಿಸುತ್ತಿರುವರೆಂದೂ, ಡಾಲ್ಫಸರ ಕೊಲೆಯ ತಪ್ಪನ್ನು ಮೇಜರ್ ಫೇಯರವರ ಮೇಲೆ ಹೊರಿಸಬೇಕೆಂದು ಪಿತೂರಿ ಮಾಡುತ್ತಿರುವರೆಂದೂ ಒಂದಾನೊಂದು ಫ್ರೆಂಚ್ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ.

೨ ಸಾವಿರ ವರ್ಷಗಳ ಗೋಧಿ!

ಪುರಾತನ ಕಾಲದಲ್ಲಿ ಸತ್ತವರನ್ನು ಹೂಣದ ಸಂಗಡ ಧಾನ್ಯ ಮತ್ತು ಇತರ ಪದಾರ್ಥಗಳನ್ನೂ ಸೇರಿಸಿ ಅದರ ಮೇಲೆ ಸಮಾಧಿ ಕಟ್ಟುವ ವಾಡಿಕೆ ಇದ್ದಿತು. ಸಿಂಧುದೇಶದಲ್ಲಿ ಪ್ರಾಯಶಃ 2,000 ವರುಷಗಳ ಕೆಳಗೆ ಕಟ್ಟಿರಬಹುದಾದ ಕೆಲವು ಸಮಾಧಿಗಳಲ್ಲಿ ಸ್ವಲ್ಪ ದಿನಗಳ ಕೆಳಗೆ ಸ್ವಲ್ಪ ಗೋಧಿಯು ಸಿಕ್ಕಿತು. ಅಲ್ಲಿಯ ಅಗ್ರಿಕಲ್ಚರ್ ಕಾಲೇಜಿಗೆ ಸೇರಿದ ಜಮೀನಿನಲ್ಲಿ ಆ ಗೋಧಿಯನ್ನು ಬಿತ್ತನೆ ಮಾಡಿದರು. ಬಂದ ಫಸಲಿನಲ್ಲಿ ಸ್ವಲ್ಪವನ್ನು ಇಂಗ್ಲೆಂಡಿಗೆ ತೆಗೆದುಕೊಂಡು ಹೋದರು. ಇಂಡಿಯಾ ದೇಶದ ವ್ಯವಸಾಯದ ಇಲಾಖೆಯಲ್ಲಿ ಅಧಿಕಾರಿಯಾಗಿದ್ದು ಈಗ ವಿಶ್ರಾಂತಿಪಡೆದಿರುವ ಕರ್ನಲ್ ಗ್ಲಿಬ್ಬೊನ್ಸ್ ಎಂಬವರ ಜಮೀನಿನಲ್ಲಿ ಆ ಬೀಜವನ್ನು ಬಿತ್ತಲಾಯಿತು. ಈಗ ಆ ಗಿಡಗಳು 7 ಅಡಿ ಎತ್ತರವಾಗಿ ಬೆಳೆದು ಫಲಭರಿತವಾಗಿವೆಯಂತೆ! ಹೀಗೆ ಬೆಳೆದ ಗಿಡಗಳ ಮಾದರಿಯನ್ನು ಇಂಗ್ಲೆಂಡಿನ ವ್ಯವಸಾಯಶಾಸ್ತ್ರನಿಪುಣರನೇಕರಿಗೆ ತೋರಿಸಲಾಯ್ತು. ಆದರೆ ಆ ಬೀಜವು ಯಾವ ಜಾತಿಗೆ ಸೇರಿದ್ದೆಂಬುದನ್ನು ಕಂಡು ಹಿಡಿಯಲು ಸಾಧ್ಯವಿಲ್ಲವೆಂದು ಅವರು ಹೇಳುತ್ತಾರೆ. ಸಮಾಧಿಗಳಿಂದ ಧಾನ್ಯವನ್ನು ತೆಗೆದು ಬೆಳೆಮಾಡಬೇಕೆಂಬ ಪ್ರಯತ್ನವು ಹಿಂದೆ ಅನೇಕಸಾರೆ ನಡೆದಿದ್ದಿತು. ಆದರೆ ಆ ಪ್ರಯತ್ನವು ಕೈಗೂಡಿರಲಿಲ್ಲ.

ಶಿಂಗಟಾಲೂರು ಶ್ರೀ ವೀರಭದ್ರಸ್ವಾಮಿ ದೇವಾಲಯದ ವರದಿ.

ಧಾರವಾಡ ಜಿ|| ಮುಂಡರಗಿ ಪೇಟಕ್ಕೆ ಸೇರಿದ ಶಿಂಗಟಾಲೂರು ಶ್ರೀ ವೀರಭದ್ರಸ್ವಾಮಿ ದೇವಾಲಯದ ತ್ರೈವಾರ್ಷಿಕ ವರದಿಯು ನಮ್ಮ ಕಡೆಗೆ ಕಳುಹಿಸಲ್ಪಟ್ಟಿದೆ. ವರದಿಯನ್ನು ಸಂಪೂರ್ಣವಾಗಿ ಓದಿ ನೋಡಿದೆವು. ಸ್ವಾಮಿ ದೇವಾಲಯದ ಪ್ರತಿಯೊಂದು ವಿಷಯವೂ ಅದರಲ್ಲಿ ಸಮರ್ಪಕವಾಗಿ ವಿವರಿಸಲ್ಪಟ್ಟಿದೆ. ದೇವಸ್ಥಾನದ ಪಂಚಕಮಿಟಿಯ ಪ್ರೆಸಿಡೆಂಟರಾದ ಮ|| ರಾ|| ಗುರುಭಕ್ತ ಕೇಸರಿ ಹುಮ್ಮಿಗಿ ಶಾಂತಪ್ಪನವರು ದೇವಸ್ಥಾನದ ಅಭಿವೃದ್ಧಿಯ ವಿಷಯದಲ್ಲಿ ವಿಶೇಷ ದಕ್ಷತೆಯಿಂದ ಕಾರ್ಯವನ್ನು ಮಾಡುತ್ತಿರುವುದು ಅತ್ಯಂತ ಸಂತೋಷಕರವಾದ ಸಂಗತಿಯಾಗಿದೆ. ಶ್ರೀ ವೀರೇಶನ ಈ ಸುಪ್ರಸಿದ್ಧಸ್ಥಳವು ಪ್ರತಿವರ್ಷವೂ ಅಭಿವೃದ್ಧಿಯನ್ನು ಹೊಂದಲೆಂದು ಕೋರುತ್ತೇವೆ.

(೩ನೆಯ ಪುಟದಿಂದ ಮುಂದುವರಿದುದು.)

ಎಂದರೆ ಸ್ನಾನಾನಂತರ ದೇವಪೂಜೆಯನ್ನು ಮಾಡಬೇಕೆಂತಲೂ, ಆ ಮೇಲೆ ಊಟಮಾಡಬೇಕೆಂತಲೂ, ಹಾಗೆಮಾಡಿದ್ದರೆ ಪವಿತ್ರಪ್ರಾಪ್ತಿಯಾಗುವುದೆಂತಲೂ ಹೇಳಿದ್ದಾರೆ. (೧೦) ಊಟದ ಆರಂಭದಲ್ಲಿ ಬಲಗಡೆ ಮೂಗಿನ ಹೊಳ್ಳೆಯಿಂದ ಉಸಿರಾಡುತ್ತಿರುವುದು ಬಹಳ ಒಳ್ಳೆಯದು, ಆ ಸಮಯದಲ್ಲಿ ತೆಗೆದುಕೊಳ್ಳುವ ಆಹಾರವು ಬೇಗನೆ ಜೀರ್ಣವಾಗುವುದು. ಊಟಮಾಡುವಾಗ ವಿಶೇಷವಾಗಿ ಮಾತಾಡುವುದು ಹಾನಿಕರವು. ಊಟಮಾಡುವುದಕ್ಕಿಂತಲೂ ೧೫ ನಿಮಿಷಗಳ ಮುಂಚೆ ೪-೫ ಗುಟುಕು ನೀರು ಕುಡಿಯಬೇಕು. ಇದರಿಂದ ಲಾಲಾರಸವು ಹೆಚ್ಚಾಗಿ ಊಟವು ರುಚಿಯಾಗಿ ಜೀರ್ಣಶಕ್ತಿಯಿಗೆ ಅನುಕೂಲವುಂಟಾಗುವುದು. ಇನ್ನು ಪ್ರತಿದಿನವೂ ಬೆಳಗಿನ ಊಟಕ್ಕೆ ಮುಂಚೆ ೫ ನಿಮಿಷಗಳ ಮೊದಲು ೧ ತೊಲೆ ಹಸೀಶುಂಠಿಯ ಕತ್ತರಿಸಿದ ಚೂರುಗಳನ್ನು ಉಪ್ಪು ಬೆರಸಿಕೊಂಡು ತಿನ್ನುವುದರಿಂದ ಅಗ್ನಿಮಾಂದ್ಯವು ನಿವಾರಣೆ ಹೊಂದುವುದು. ಅಂತೆಯೇ ಆಯುರ್ವೇದ ವಿಜ್ಞಾನದಲ್ಲಿ 'ಭೋಜನಾಗ್ರೇ ಸದಾ ಪಥ್ಯಂ ಲವಣಾರ್ದ್ರಕಭಕ್ಷಣಂ |' ಎಂದು ಬರೆದಿದ್ದಾರೆ. ಶುಂಠಿಯನ್ನು ಹೀಗೆ ಬರೀಬಾಯಿಂದ ತಿನ್ನುವುದಕ್ಕಾಗದಿದ್ದರೆ ಅನ್ನದೊಡನೆ ಬೆರೆಸಿ ನಂಚಿಕೊಳ್ಳಬಹುದು. (೧೧) ರಾತ್ರಿಯ ಊಟವು ಬಹಳ ಹಗುರವಾಗಿರಬೇಕು. ಉಣ್ಣುವ ಪದಾರ್ಥಗಳಲ್ಲಿ ಎಣ್ಣೆ, ಮಸಾಲೆ, ಕಾರ, ಹುಳಿಗಳನ್ನು ಬಹಳ ಹಾಕಬಾರದು. ಊಟದಲ್ಲಿ ಬೆಣ್ಣೆ, ಹಣ್ಣು, ಹಸುರುಸೊಪ್ಪುಗಳನ್ನು, ಹಸುವಿನ ಹಾಲನ್ನು ಹೆಚ್ಚಾಗಿ ಉಪಯೋಗಿಸಬೇಕು. ಹಸಿವಾಗದೆ ಉಣ್ಣಬಾರದು. ಉಣ್ಣುವಾಗ ಮೇಲಿಂದ ಮೇಲೆ ನೀರು ಕುಡಿಯಬಾರದು. ಉತ್ತಿಗೆಯಲ್ಲಿ ಸಿಕ್ಕರೆ ಮಾತ್ರ ಕದವಾಡದೆ ಕುಡಿಯಬೇಕು 'ಆರ್ದ್ರಪಾದಸ್ತು ಭುಂಜಾನೋ ದೀರ್ಘಮಾಯುಃ ಪ್ರವಿಂದತಿ' ಎಂದಿರುವುದರಿಂದ ಊಟಕ್ಕೆ ಕೂಡ್ರುವ ಸ್ವಲ್ಪ ಮುಂಚೆ ಕಾಲುಗಳನ್ನು ಚನ್ನಾಗಿ ತೊಳೆದುಕೊಂಡಿರಬೇಕಲ್ಲದೆ, ಬಾಯನ್ನು ಚನ್ನಾಗಿ ಮುಕ್ಕಳಿಸಿ ತೊಳೆದುಕೊಳ್ಳಬೇಕು. (೧೨) ಬಹಳ ಸುಡುವ ಅನ್ನವು ಶಕ್ತಿಯನ್ನು ನಾಶಮಾಡುವುದೆಂತಲೂ, ಸಂಪೂರ್ಣವಾಗಿ ಆರಿಹೋದ ಅನ್ನವು ಬೇಗನೆ ಮುಪ್ಪನ್ನುಂಟುಮಾಡುವುದೆಂತಲೂ, ಹಳಸಿದ ಅನ್ನವು ರೋಗವನ್ನುಂಟುಮಾಡುವುದೆಂತಲೂ ಹೇಳಿರುವುದರಿಂದ ಇದಕ್ಕೆ ವಿರುದ್ಧವಾಗಿ ಹಿತ ಊಟವನ್ನು ಮಾಡಬೇಕು. ಉಣ್ಣುವಾಗ ವ್ಯಸನವನ್ನೂ, ಭಯವನ್ನೂ, ಕೋಪವನ್ನೂ ಸಂಪೂರ್ಣವಾಗಿ ಬಿಟ್ಟಿರಬೇಕು. ಬಾಯಾರಿದಾಗ ನೀರು ಕುಡಿಯಬೇಕು. ಹಸಿವಾದಾಗ ಉಣ್ಣಬೇಕು. ಇದಕ್ಕೆ ವಿಪರೀತವಾಗಿ ಬಾಯಾರಿಕೆಗೆ ಅನ್ನವನ್ನೂ, ಹಸಿವಿಗೆ ನೀರನ್ನೂ ಹಾಕಬಾರದು. ಒಂದು ವೇಳೆ ಹಾಗೆ ಹಾಕಿದರೆ ನೀರಡಿಸಿದ್ದವನು ಗುಲ್ಮರೋಗಿಯೂ, ಹಸಿದಿದ್ದವನು ಜಲೋದರರೋಗಿಯೂ ಆಗುವನು. ಎಲ್ಲ ಕಾಲಗಳಲ್ಲಿಯೂ ಒಂದೇ ವಿಧವಾದ ಆಹಾರವನ್ನು ತೆಗೆದುಕೊಳ್ಳುವುದಾಗಲಿ ಅಥವಾ ಅನೇಕ ವಿಧಗಳಾದ ಆಹಾರಗಳನ್ನು ಒಮ್ಮೆಲೇ ಒಟ್ಟುಗೂಡಿಸಿ ತೆಗೆದುಕೊಳ್ಳುವುದಾಗಲಿ ಆರೋಗ್ಯಕರವಲ್ಲವು. ಊಟವು ಹಾಲೇ ಕೊನೆಯದಾಗಿ ಮುಗಿಯಬೇಕಲ್ಲದೆ ಮೊಸರು ಕೊನೆಯದಾಗಿ ಮುಗಿಯಬಾರದೆಂದು ಆಯುರ್ವೇದವು ಹೇಳುತ್ತಲಿದೆ. (೧೩) ರಾತ್ರಿ ಕಳೆದು ಹಗಲು ಬರುತ್ತಿರುವಾಗಲೂ, ಹಗಲು ಕಳೆದು ರಾತ್ರಿ ಬರುತ್ತಿರುವಾಗಲೂ, ಮಧ್ಯಾಹ್ನದಲ್ಲಿಯೂ ಸ್ವಲ್ಪಹೊತ್ತು ಊಟ, ನಿದ್ದೆ, ಓದುವಿಕೆ, ಗಟ್ಟಿಯಾಗಿ ಮಾತಾಡುವಿಕೆ, ಪ್ರಯಾಣ ಮುಂತಾದವುಗಳನ್ನು ಮಾಡಕೂಡದು. ಹೀಗೆಯೇ ಊಟಮಾಡಿದಮೇಲೆ ೨ ಘಳಿಗೆ ಕಳೆಯುವವರೆಗೂ ವ್ಯಾಯಾಮ, ಓದುವಿಕೆ, ಪ್ರಯಾಣ, ಯುದ್ಧ, ಗಾನ, ಪಾಠ ಮುಂತಾದವುಗಳನ್ನು ಮಾಡಬಾರದು. (೧೪) ಮೈ, ಕಣ್ಣು, ಕೂದಲು, ಹಲ್ಲು, ಕಿವಿಗಳ ಶಕ್ತಿಯನ್ನು ನಾಶಮಾಡುವುದಾದುದರಿಂದಲೂ, ಮೂರ್ಛೆ, ಪಿತ್ತ, ರಕ್ತವಾತರೋಗಗಳನ್ನುಂಟುಮಾಡುವುದಾದುದರಿಂದಲೂ, ಶರೀರಕಾಂತಿಯನ್ನು ಕಡಿಮೆಮಾಡುವುದಾದುದರಿಂದಲೂ ತಾಂಬೂಲವನ್ನು ವಿಶೇಷವಾಗಿ ಹಾಕಬಾರದು. (೧೫) ಕ್ಷೌರಮಾಡಿಸುವಾಗ ಚಿಮುಟಿಗೆಯಿಂದ ಮೂಗಿನೊಳಗಿನ ಕೂದಲುಗಳನ್ನು ಕೀಳಿಸಬಾರದು. ಹೀಗೆ ಕೀಳಿಸುವುದರಿಂದ ಕಣ್ಣಿಗೆ ಬಹಳ ಅಪಾಯವುಂಟು.

ಹೀಗೆ ನಮ್ಮ ಪ್ರಾಚೀನ ಪುರುಷರು ಸೂಕ್ಷ್ಮದೃಷ್ಟಿಯಿಂದ ಕಂಡು ಹಿಡಿದಿರುವ ಶರೀರರಕ್ಷಣೆಯ ವಿಷಯವು ಅತ್ಯಂತ ಗಹನವಾಗಿದೆ, ಅವರ ತಾತ್ವಿಕ ಸಿದ್ಧಾಂತವು ಸರ್ವಜನಾನುಭವವಾಗಿದೆ. ಅವರು ತೋರಿಸಿರುವ ದಾರಿಯಿಂದ ಹೋದರೆ ಯಾರಿಗೂ ಕಷ್ಟವಿಲ್ಲ. ಆದುದರಿಂದ ಪ್ರತಿಯೊಬ್ಬರೂ ಈ ವಿಷಯಗಳನ್ನೋದಿ ಆರೋಗ್ಯವನ್ನು ಸಂಪಾದಿಸಿ ದೀರ್ಘಾಯುಗಳಾಗಿ ಬಾಳಲೆಂದು ಹೇಳಿ ಕಟ್ಟಕಡೆಗೆ ವೀರ್ಯರಕ್ಷಣೆಯ ವಿಷಯವಾಗಿ ಮುಖ್ಯವಾದ ಮಾತೊಂದನ್ನು ನಮ್ಮ ವಾಚಕರ ಹಿತಕ್ಕಾಗಿ ಹೇಳುವೆವು — ಅಯ್ಯಾ! ಅಯ್ಯಾ!! ಬಿಂದುವು ಬಂಧುರವಾಗಿರಲಯ್ಯಾ! ಬಿಂದುವೇ ಬೆಳ್ಳಿ, ಬಿಂದುವೇ ಬಂಗಾರ, ಬಿಂದುವೇ ರತ್ನವಯ್ಯಾ! ಬಿಂದುವನ್ನು ಕಾದರೆ ಬಹುಕಾಲ ಬದುಕುವಿ, ಬುದ್ಧಿಯುಳ್ಳವನಾಗುವಿ; ಮನುಷ್ಯನಾಗಿಯೇ ದೇವರೆನಿಸಿಕೊಳ್ಳುವಿ. ಬಿಂದುಜಾರಿದರೆ ಮರಣವು ಬೇಗ ಬರುವುದಯ್ಯಾ! ದುಷ್ಟಕಾಮಕ್ಕೆ ವಶನಾಗದಿರಯ್ಯಾ! ವ್ಯಾಯಾಮದಿಂದ ಕಡೆ, ಆಸನಸಾಧನೆಯಿಂದ ಕಡೆ, ಬಿಂದುವನ್ನು ಮನಸ್ಸಿನಿಂದ ಕಡೆಯಯ್ಯಾ! ಬಿಂದುವ ಕಡೆಯದವಗೆಲ್ಲಿಯೂ ಜಯವಿಲ್ಲವಯ್ಯಾ! ಆದುದರಿಂದ ಚಿತ್ತವು ಚಂಚಲವಾಗದಿರಲಿ. ಚಿತ್ತಚಾಂಚಲ್ಯವೇ ನರಕ. ಚಿತ್ತಸ್ಥೈರ್ಯವೇ ಸ್ವರ್ಗವಾಗಿಕೊ! ಹಿಂದಿನ ಸಂಕಟ ಸಕಲಂಟಾಸಕ್ಕಲ್ಲದೆ ಬೇರೆಯದಕ್ಕೆ ಬಿಂದುವಂ ಕಳೆದಿಲ್ಲ ಕಳೆದಿಲ್ಲ. ಎಚ್ಚರದಿಂದಿರು! ಮೋಕ್ಷಹೊಂದಿರುವುದುಗುವೆ!! ಜಾಗರೂಕನಾಗುವಿ!!!

ನೀನು ಕದ್ದುಮುಚ್ಚಿ ಮಾಡುವುದೆಲ್ಲವೂ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಿಂದುದ್ಭವಿಸಿದ ನಾರಾಯಣನಾದ, ಶಿಷ್ಯರಂಜನನಾದ, ಗುರುಸಾರ್ವಭೌಮನಾದ, ಶ್ರೀ ಜಗದ್ಗುರು ಪಂಡಿತ ಗುರುವಿಗೆ ತಿಳಿಯದಿರದು ಕಂಡ್ಯಾ!

ಸರ್ವೇ ಭದ್ರಾಣಿ ಪಶ್ಯಂತು ಸರ್ವೇ ಸಂತು ನಿರಾಮಯಾಃ |
ಸರ್ವೇಽಪಿ ಸುಖಿನಃ ಸಂತು ಮಾಕಶ್ಚಿದ್ದುಃಖಭಾಗ್ಭವೇತ್ ||
ಶಿವಂ ! ಶಿವಂ !! ಶಿವಂ !!!

ಹಿಟ್ಲರ್.

ಲೇಖಕ— ಆರ್. ಎಸ್. ಆರಾಧ್ಯ ಬಿ.ಕಾಂ. ವಿದ್ಯಾರ್ಥಿ, ಅಗ್ರಹಾರ, ಕೊರಟಗೆರೆ

1. ಹಿಟ್ಲರ್ ಮಹಾಶಯನು ಒಬ್ಬ ಕೂಲಿಗಾರನ ಮಗನು. ಮನೆಗಳಿಗೆ ಬಣ್ಣಹಾಕುವುದು, ಗಾರೆ ಬಳಿಯುವುದು ಇವೇ ಮೊದಲಾದವು ಈತನ ಪೂರ್ವದ ಕಸಬುಗಳು. ಆದರೆ ಈತನು ತನ್ನ ಸ್ವಸಾಮರ್ಥ್ಯದಿಂದಲೂ, ಮೇಧಾಶಕ್ತಿಯಿಂದಲೂ, ಜರ್ಮನಿಯ ವೈಸ್ ಛಾನ್ಸಲರ್ ಪದವಿಗೆ ಏರಿದನೆಂದರೆ ಯಾರಿಗೆ ತಾನೆ ಆಶ್ಚರ್ಯವಾಗಲಾರದು ?

2. ಹಿಟ್ಲರನು ಈಗ ಜರ್ಮನ್ ದೇಶದ ಸರ್ವಾಧಿಕಾರಿ. ಜರ್ಮನ್ ದೇಶದ ಪ್ರಜಾಧಿಪತ್ಯದ ಅಧ್ಯಕ್ಷನು. ವಾನ್ ಹಿಂಡೆನ್ ಬರ್ಗನು ಹೆಸರಿಗೆ ಮಾತ್ರ ಅಧ್ಯಕ್ಷನಾಗಿದ್ದವನೇಹೊರತು ಕಾರ್ಯತಃ ಎಲ್ಲವೂ ಹಿಟ್ಲರನಿಗೆ ಸೇರಿಹೋಗಿದೆ. ಇಟಲಿಯು ಮುಸೋಲಿನಿಯ ರಾಜ್ಯವಾಗಿರುವ ಹಾಗೆ ಜರ್ಮನಿಯು ಕೂಡ ಹಿಟ್ಲರನ ರಾಜ್ಯವಾಗಿದೆ. ಅನೇಕ ಮಹಾಪುರುಷರು ಚಿಕ್ಕಪದವಿಯಿಂದ ದೊಡ್ಡಪದವಿಗೆ ಬರುವರು; ಆದರೆ ಹಿಟ್ಲರನು ಈ ಪದವಿಗೆ ಬಂದು ಸಾಧಿಸಿರುವ ಕೆಲಸಗಳು ಬಹಳ ವಿಚಿತ್ರವಾದುವೆಂದೇ ಹೇಳಬೇಕು. ಇವನನ್ನು ಮೊದಮೊದಲು ಹರಟೆಮಲ್ಲ, ಹುಚ್ಚ, ಸಿಕ್ಕಿದಹಾಗೆ ಆಡುತ್ತಾನೆಂದು ಅನೇಕ ಜನರು ಹೇಳುತ್ತಿದ್ದರು. ಇವನ ಈಗಿನ ಪ್ರತಿಭಾಶಕ್ತಿಯನ್ನು ನೋಡಿದರೆ ಈ ಅಭಿಪ್ರಾಯಕ್ಕೆ ಮಾನ್ಯತೆಯೇ ದೊರೆಯುವುದಿಲ್ಲ.

ಜರ್ಮನಿಯಂತಹ ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿಯು ಸರಿಯಾಗಿಲ್ಲದಿರುವಾಗ, ಅಂತರರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಒಳ್ಳೆಯ ವಿವೇಚನೆ ಮಾಡಬೇಕಾದರೆ, ಸಾಮಾನ್ಯ ಮನುಷ್ಯನಿಂದ ಸಾಧ್ಯವಿಲ್ಲ. ಹಿಟ್ಲರನು ಇಂತಹ ದೊಡ್ಡ ವಿಷಯಗಳನ್ನು ಜರ್ಮನಿಯ ಹಿತದೃಷ್ಟಿಯಿಂದಲೇ ವಿಮರ್ಶಿಸುವನೆಂದು ಹೇಳಬಹುದು. ನೂರಾರು ವರ್ಷಗಳಿಂದ ಜರ್ಮನಿಯಲ್ಲೇ ನೆಲಸಿ ಮನೆಮಠಗಳನ್ನು ಮಾಡಿಕೊಂಡು ಆರ್ಯರ ದೇಶೀಯರಾಗಿ ಹೋಗಿದ್ದ 'ಯಹೂದ್ಯ'ರನ್ನು ಆರ್ಯವಂಶೀಯರಲ್ಲವೆಂದು ಹೇಳಿ ಜರ್ಮನಿಯಿಂದ ಹೊರಡಿಸಿದನು. ಅಲ್ಲದೆ ಐನ್‌ಸ್ಟೀನ್‌ರಂತಹ ಮಹಾವಿದ್ವಾಂಸರ ಮೇಲೆ ತೋರಿದ ಕ್ರೌರ್ಯವು ಅಷ್ಟು ನ್ಯಾಯವಲ್ಲವೆಂದು ಜನರು ಹೇಳಿದರೂ, ಹಿಟ್ಲರನು ಹೇಳುವ ರೀತಿಯಲ್ಲಿ ನ್ಯಾಯವೆಂದೇ ತೋರುವುದು. ಹಿಟ್ಲರನ ವಾದವೇನೆಂದರೆ, ಜರ್ಮನಿಯು ಅಧಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಪರದೇಶೀಯರು ಆ ದೇಶದಿಂದ ಯಾವ ಪ್ರಯೋಜನವನ್ನೂ ಹೊಂದದಂತೆ ಮಾಡಿ, ಅವರಿಗಿದ್ದ ಆದಾಯವೆಲ್ಲವನ್ನೂ ತಮ್ಮ ಜನರಿಗೆ ಬರುವಂತೆ ಮಾಡತಕ್ಕದು ಜರ್ಮನ್ ಸರ್ಕಾರದ ಕರ್ತವ್ಯವೆಂದು ಹಿಟ್ಲರನ ಭಾವನೆ. ಈಗ ನಿರುದ್ಯೋಗದ ಸಮಸ್ಯೆಯು ವಿಶ್ವಸಮಸ್ಯೆಯಾಗಿದೆ. ಆದ್ದರಿಂದ ಜರ್ಮನಿಯಲ್ಲಿ ಮೂಲಕಃ ಇರುವ ಆರ್ಯರಲ್ಲದೆ ಮಿಕ್ಕವರಿಗಾರಿಗೂ ಸ್ಥಾನವಿರಬಾರದು. ನಮ್ಮಲ್ಲಿ ಅಂದರೆ ಆರ್ಯರ ರಾಜ್ಯದಲ್ಲಿ ಆರ್ಯರಲ್ಲದವರನ್ನು ಸೇರಿಸಿಕೊಂಡು ಅವರು ಪ್ರಬಲರಾಗಿ ತಿಂದುತೇಗುವುದನ್ನು ಏಕೆ ನೋಡಬೇಕೆಂಬುದೇ ಹಿಟ್ಲರನ ವಾದ. ಈಗ್ಗೆ ಸುಮಾರು ಆರು ತಿಂಗಳುಗಳ ಮುಂಚೆ ಹಿಟ್ಲರನು ಒಂದು ಭಾಷಣದಲ್ಲಿ ಈ ರೀತಿ ಹೇಳಿದ್ದಾನೆ. "ಜರ್ಮನಿಯು ಹಾಯುದ್ಧಕ್ಕೆ ಜರ್ಮನರು ಎಂದೆಂದಿಗೂ ಕಾರಣರಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಆದ್ದರಿಂದ ಆ ಯುದ್ಧದ ಫಲವಾದ ವರ್ಸೇಲ್ಸ್ ಒಪ್ಪಂದದ ಭಾರವನ್ನು ಜರ್ಮನಿಯವರ ಮೇಲೆ ಹೊರಿಸಿರುವುದು ನ್ಯಾಯವಲ್ಲ. ಇದಲ್ಲದೆ ಈ ಒಪ್ಪಂದಗಳು ಎರಡು ತಪ್ಪುಭಾವನೆಗಳ ಮೇಲೆ ನಿರ್ಮಿಸಲ್ಪಟ್ಟಿವೆ. 'ಯುದ್ಧದಲ್ಲಿ ಗೆದ್ದವರು ಸೋತವರನ್ನು ನೆಲಸಮಾನವರನ್ನಾಗಿ ಕಾಣುತ್ತಿರಬೇಕೆಂಬುದೊಂದು; ಮತ್ತೊಂದು ಗೆದ್ದವರು ಸೋತವರನ್ನು ತಮ್ಮ ಲಾಭಕ್ಕಾಗಿ ಲೂಟಿ ಮಾಡುತ್ತಿರಬೇಕೆಂಬ ಭಾವನೆಯು.' ಈ ರೀತಿಯಿಂದ ನಾವು ಹದಿನೈದು ವರ್ಷಗಳಿಂದಲೂ ಪೀಡಿಸಲ್ಪಟ್ಟಿದ್ದೇವೆ. ಈ ಅವಿವೇಕವನ್ನು ಸರಿಪಡಿಸುವುದು ನಮ್ಮಿಂದ ಸಾಧ್ಯವಿಲ್ಲದೆ ಹೋದರೆ ನಮ್ಮ ಮುಂದಿನವರಾದರೂ ಸರಿಪಡಿಸಿಕೊಳ್ಳಲು ಅವಕಾಶಕೊಡಬೇಕು. ಈ ಅಭಿಪ್ರಾಯವು ಹಿಟ್ಲರನೊಬ್ಬನದೇ ಅಲ್ಲ. ಇಡೀ ಜರ್ಮನ್ ಜನಾಂಗವೇ ಒಪ್ಪಿದೆಯೆಂಬುದು ಕಳೆದ ನವಂಬರ್‌ನಲ್ಲಿನ ಅಭಿಪ್ರಾಯ ಸಂಗ್ರಹದಿಂದ ಗೊತ್ತಾಗುತ್ತದೆ.

ಹಿಟ್ಲರನ ರಾಜಕೀಯ ನೀತಿಯಲ್ಲಿ ಜರ್ಮನಿಯು ಹಿತಕ್ಕೆ ಪ್ರಥಮಸ್ಥಾನವುಂಟೆಂದು ಹೇಳಬಹುದು. "ವರ್ಸೇಲ್ಸ್" ಒಪ್ಪಂದದ ಪ್ರಕಾರ ಶಸ್ತ್ರಸಂಗ್ರಹಣ ವಿಚಾರದಲ್ಲಿ ಜರ್ಮನಿಗೆ ಮಿಕ್ಕ ರಾಷ್ಟ್ರಗಳಿಗಿರುವಷ್ಟು ಸ್ವಾತಂತ್ರ್ಯವಿಲ್ಲ. ವಸ್ತುತಃ ಈ ಒಪ್ಪಂದವೇ ಜರ್ಮನಿಯನ್ನು ಹಿಂಗಟ್ಟು ಮುಂಗಟ್ಟು ಕಟ್ಟಿ ಮೂಲೆಗೆ ಹಾಕಿಬಿಟ್ಟಿದೆ. ಇಂತಹ ಅನ್ಯಾಯವು ತೊಲಗಿ ಜರ್ಮನಿಗೆ ಇತರ ರಾಷ್ಟ್ರಗಳಿಗೆ ದೊರೆತಿರುವ ಶಸ್ತ್ರಸಂಗ್ರಹಸ್ವಾತಂತ್ರ್ಯವು ದೊರೆಯದಿದ್ದಲ್ಲಿ ಅದು ಯಾವ ಅಂತರರಾಷ್ಟ್ರೀಯ ಸಮಾವೇಶದಲ್ಲೂ ಭಾಗಿಯಾಗಕೊಡದೆಂದು ಹಿಟ್ಲರನ ಅಭಿಪ್ರಾಯ. ಸದ್ಯಕ್ಕಂತೂ ಬಿಡಿಸಿದ್ದು ಜರ್ಮನಿಯ ಇಂದಿನ ಸ್ಥಿತಿಯು ಬಹಳ ಶೋಚನೀಯವಾದದ್ದು. ಜರ್ಮನಿಯವರು ಅಂತರರಾಷ್ಟ್ರೀಯ ಸಭೆಯಿಂದ ಬೇರೆಯಾಗಿದ್ದರೂ, ವರ್ಸೇಲ್ಸ್ ಒಪ್ಪಂದದಿಂದ ಬಂಧಿಸಲ್ಪಟ್ಟಿರುವರು. ಅವರಿಗೆ ಶಸ್ತ್ರಶಕ್ತಿಯು ಅಲ್ಪವಾಗಿರುವುದರಿಂದ ವರ್ಸೇಲ್ಸ್ ಒಪ್ಪಂದವನ್ನು ಖಂಡಿಸುವ ಮನಸ್ಸಿದ್ದರೂ, ಸದ್ಯಕ್ಕೆ ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾಗಳಂತಹ ಪ್ರಬಲರಾಷ್ಟ್ರಗಳ ಮೇಲೆ ಕೈಮಾಡಲು ಶಕ್ತಿಯಿಲ್ಲ.

ಕಳೆದ ಜೂನ್ ತಿಂಗಳ ಕೊನೆಯಲ್ಲಿ ನಡೆದ ದುರ್ಘಟನೆಗಳನ್ನು ನೋಡಿದರೆ ಜರ್ಮನಿಯಲ್ಲಿ ದಂಗೆಕೋರರು ಹೆಚ್ಚಿರುವರೆಂದು ತಿಳಿಯುತ್ತದೆ. ನಾಜಿ ಪಕ್ಷದವರು ಹೈಸ್ಟಾರಂ ಟ್ರೂಪ್ (High Storm Troops) ಎಂಬ ದಳವನ್ನು ಸ್ಥಾಪಿಸಿ ಅಲ್ಲಿನ ಸರ್ಕಾರದ ಮುತ್ತಿಲ್ಲವನ್ನೂ ವ್ಯಯಮಾಡುತ್ತಿದ್ದರು. ಅಲ್ಲದೆ ಜನರಿಗೆ ಬಹಳವಾಗಿ ಕಿರುಕುಳಕೊಡುತ್ತಿದ್ದು ಅನೇಕ ಸಾರಿ ಎಷ್ಟೋ ಜನರು ಕಾರಣವಿಲ್ಲದೆ ಕೊಲ್ಲಲ್ಪಟ್ಟಿರುವರು. ಹಿಟ್ಲರನು ಮುಖ್ಯಪದವಿಗೆ ಬಂದೊಡನೆಯೇ ಇವರುಗಳನ್ನು ನಿರ್ಮೂಲವಮಾಡಬೇಕೆಂದು ಪ್ರತಿಜ್ಞೆಮಾಡಿಕೊಂಡನು. ಅಲ್ಲದೆ ಹೈಸ್ಟಾರಂಟ್ರೂಪಿನ ಮುಕ್ಕಾಲು ಭಾಗವನ್ನು ತೆಗೆದು ಇನ್ನು ಕಾಲು ಭಾಗವನ್ನು ಇಟ್ಟುಕೊಳ್ಳಬೇಕೆನ್ನುವಷ್ಟರಲ್ಲಿಯೇ ನಾಜೀಗಳು ಅಂತರರಾಷ್ಟ್ರೀಯ ಪಿತೂರಿಗಾರರೊಡನೆ ಸೇರಿ ಚಳುವಳಿಮಾಡಲು ಪ್ರಾರಂಭಿಸಿದರು. ಇದನ್ನು ತಿಳಿದ ದಿವಸವೇ ಹಿಟ್ಲರನು ಪೋಲೀಸ್ ದಳದವರೊಂದಿಗೆ ದಂಗೆಕೋರರ ಮುಖ್ಯಸ್ಥಾನವಾದ ಮ್ಯೂನಿಚ್‌ಗೆ ಹೋಗಿ ಸುಮಾರು 200 ಜನರನ್ನು ಕೈಸೆರೆ ಹಿಡಿದನು. ಇದಲ್ಲದೆ ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ಪಿತೂರಿಗಾರರನ್ನು ಹಿಡಿದು ಎಲ್ಲರನ್ನೂ ವಿಚಾರಣೆಗೆ ಒಳಮಾಡಿ ಸುಮಾರು 77 ಜನರನ್ನು ಸುಟ್ಟು ಬೂದಿಮಾಡಿದನು. ಇವನ ಉಗ್ರತೆಗೆ ಒಳಗಾದವರ ಪೈಕಿ 19 ಜನ ಹೈಸ್ಟಾರಂಟ್ರೂಪಿನವರು. 31 ಸಾಮಾನ್ಯ ಸೈನಿಕರು. 3 ಮಂದಿ ಕರಿಯಅಂಗಿದಾರಿಗಳು. 10 ಮಂದಿ ಸಿವಿಲ್ ಟ್ರೂಪಿನವರು ಮತ್ತು ಇವರ ಮುಖ್ಯಸ್ಥರುಗಳು ಇರುವರು. ಈಗ ಜರ್ಮನಿಯ ಪ್ರತಿಯೊಂದು ಗಡಿಯಲ್ಲಿಯೂ ಬಂದರಿನಲ್ಲಿಯೂ, ರೈಲ್ವೆ ಸ್ಟೇಷನ್ನಿನಲ್ಲಿ ಮತ್ತು ಸಮುದ್ರದ ಅಂಚಿನಲ್ಲಿಯೂ ಪೋಲೀಸಿನವರು ಕಾದಿರುವರು. ಕೆಲವು ದಿವಸಗಳವರೆಗೂ ದೇಶದಲ್ಲಿ ಅಶಾಂತತೆಯು ತಲೆದೋರಿ ಜನರನ್ನು ಬಹಳ ಭಯಕ್ಕೆ ಗುರಿಮಾಡಿದ್ದಿತು. ಈ ಕೊಲೆಯನ್ನು ಕೇಳಿ ಪ್ರತಿಯೊಂದು ದೇಶದ ಜನರು ಹಿಟ್ಲರನ ಕ್ರೌರ್ಯವನ್ನು ಖಂಡಿಸಿದರು. ಆದರೆ ನಾಜಿಗಳ ಕ್ರಾಂತಿಯು ಚಳವಳಿಯು ಉಗ್ರತೆಗೆ ಬರುವಷ್ಟರಲ್ಲಿಯೇ ಅದರ ವಾಸನೆಯನ್ನು ತಿಳಿದು ಇಷ್ಟು ಧೈರ್ಯದಿಂದ ಬುಡಮಟ್ಟ ಕಿತ್ತುಹಾಕಿರುವುದನ್ನು ನೋಡಿದರೆ ಹಿಟ್ಲರನ ಅಸಾಧಾರಣ ಶಕ್ತಿಯನ್ನು ತೋರಿಸುತ್ತದೆ.

(ಅಗಸ್ಟ್ 1 ನೇ ತಾರೀಖು ಬುಧವಾರ ರಾತ್ರಿ ವಾನ್ ಹಿಂಡನ್‌ಬರ್ಗನು ಮರಣ ಹೊಂದಲು ಈಗ ಹಿಟ್ಲರನೇ ಪ್ರಜಾಧ್ಯಕ್ಷನಾಗಿರುವನು.)

ನೂತನಕಾಲದ ಉದಯರಾಗದ ಪದ.

ಏಳಯ್ಯ ಬೆಳಗಾಯ್ತು ಫ್ರೆಂಚ್‌ಕಟ್ಟಿನವಮಗನೆ ಏಳಯ್ಯ ಬೇಗನೇಳು ||ಪ||

ಏಳಯ್ಯ ವರ್ಣಾಶ್ರಮಾಚಾರವಲ್ಲರಿಯ ಲೀಲೆಯಂ ಬೇರ ರಸಿಕಿತ್ತ ಕಂಟೀರ | ಏಳು ನಾಯಿಯು ನಿನ್ನ ಚುಂಬನಕೆ ಕಾದಿಹುದು | ಏಳಯ್ಯ ಇಂಗ್ಲೀಷ ಜನರ ಚೊಚ್ಚಲಮಗನೆ ಬೇಗನೇಳು ||೧||

ಏಳು ಕ್ಲಬ್ಬಿನ ಧೀರ ಏಳು ಕಾಫಿಯಕೋರ | ಏಳಯ್ಯ ಉಪ್ಪಿಟ್ಟು ಬಿಸಿಯದೋಸೆ | ಏಳಯ್ಯ ನಿನಗಾಗಿ ಸಿದ್ಧವಾಗಿರುತಿಹವು ಏಳಯ್ಯ ಓರೆಟೋಪಿಯು ಗಿಣಿಯೆ ||೨||

ಏಳಯ್ಯ ವೇಣಿಯನು ನುಣುಪುಮಾಡಲುಕತ್ತಿ ಕೀಲಿಯ ಪಿಯರ್ಸ್ ಸೋಪು ಬ್ರಷ್ಷು ತೈಲ | ಏಳಯ್ಯ ಬಿಸಿನೀರು ಸಿದ್ಧವಾಗಿರುತಿಹವು ಬೆಳಗಿನಾಚಾರವನು ತೀರಿಸೇಳಯ್ಯ ||೩||

ಏಳಯ್ಯ ಎಲ್ಲಲ್ಲಿ ಬೂಟ್ಸು ಸೂಟಲಿ ಮಲಗಿ ಲೀಲೆಯಂ ತಿರ್ರಿಸುವ ಕನ್ನಡಕದಯ್ಯ | ಏಳು ಕರೆಯುತ್ತಿಹವು ಕಾಫಿ ಕ್ಲಬ್ಬುಗಳೀಗ ಏಳು ಕೈಗಡಿಯಾರ ಚನ್ನಿಗನೆ ಏಳು ||೪||

ಮದ್ಯವೆರೆಸಿದ ಚುಟ್ಟ ಸಿಗರೇಟು ಬೆಂಕಿಯ ಮುದ್ದಾದ ಪೆಟ್ಟಿಗೆಯು ಸಿದ್ಧವಿಹುದು | ಸದ್ಯದಲಿ ಕೂಲವಿಲದ ಮಿತ್ರಮಂಡೇ ನಿನ್ನ ಕಾದಿಹುದು ಸೋಡಬೆರೆಸಿದ ವಿಸ್ಕಿಯನೆ ಏಳು ||೫||

ಏಳಯ್ಯ ಕುಲಧರ್ಮಗಳಿಂದ ಮುದ್ದಿನ ಕಳೆನೆಯೆ | ಏಳಯ್ಯ ಲಂತನ್ನಿನ ಸುಹಾರದವನೆಯೆ | ಏಳುವಳು ಏಳಯ್ಯ ಹಿಂದುಧರ್ಮವನು ಸಡೆ ಹೊಡೆಗಲಿಸಿ | ಕೀಲುಕನಕೆಳೆದಂತ ವೀರಪುತ್ರನೆ ಬೇಗನೇಳು ||೬||

ಏಳು ಗುರುಹಿರಿಯರನು ಜರೆವ ಸದ್ಗುಣಮಣಿಯೆ | ಏಳು ಹೀನ ಸುಮಡೆರೆಯ ಬೇಗನೇಳು | ಏಳಯ್ಯ ಸೈಕಲ್ಲು ಸಿದ್ಧವಾಗಿಹುದನೆ ಏಳು ಏಳಯ್ಯ ಕತ್ತಲೆಯನಿತು ತಿರುಗುವವ ಬೇಗನೇಳು ||೭||

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಅರಿದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂತ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ವಸ್ವಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮ ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 47

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗೆಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14. ½ ಡಜನ್ 8-8-0, ರೂ. 5, 1 ಡಜನ್ ರೂ. 16-8-0, ರೂ. 9-12-0

ಮಲೆರಿ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0; 500, 1000ಕ್ಕೆ ರೂ. 7 ಮತ್ತು 13-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಡಿನ್ಸ್ ಆಣೆ 4, 8, 14, ರೂ. 1/6, 2.

ಬೇಬಿಟೋನ್ : ಈ ಅಮೃತವು ಮಕ್ಕಳ ಅಜೀರ್ಣ, ಗ್ರಹಣಿ ಹುಳದ ಉಪದ್ರ, ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಕರಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್ ಕಫ್ ರೆಮೆಡಿ : ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಫಕೆಮ್ಮು ಇವನ್ನು ನೀರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು : ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5. 100ಕ್ಕೆ ರೂ. 2-0-0.

ಸಿರಪ್ ವೆಸಿಕೂಜ : ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ತೋರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡ ಸೀಸೆ ರೂ. 3-8-0, ಸಣ್ಣ ಸೀಸೆ ರೂ. 1-14-0.

☞ ಟಿಂಕ್ಚರ್, ಹೋಮಿಯೋಪತಿ ಮದ್ದುಗಳೂ, ದೃಷ್ಟಿಚಕ್ರಗಳೂ ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಕಡಿಮೆದರದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ' ವೆಂಬ ಪುಸ್ತಕಕ್ಕೆ ಬರೆರಿ ಧರ್ಮಾರ್ಥ.

The Malariana Co., Mangalore (21)

ಪತ್ರ:— ಮಲೇರಿಯಾನ ಕಂಪೆನಿ,
[50] (ಹಂಪನಕಟ್ಟೆ), 21, ಮಂಗಳೂರು

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡುಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 40

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನೀಶ್ವರರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಸಹ್ಯಾದ್ರಿ ಶಿಖರೋಪವನಾಂತರದಲ್ಲಿ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೯
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹೊಳ್ಳ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ದೇವಾಲಯದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿಸಿತಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[32]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಪದಚ್ಛೇದ ಸಹಿತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಮಾಕಮಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ‖ ಶ್ರೀ ಜಗದ್ಗುರು ಪಂಚಾಚಾರ್ಯರಾಃ ಪ್ರಸೀದಂತು ‖ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ | ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ‖
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ | ಪಂಚಾಚಾರ್ಯಜಗದ್ಗುರೂತ್ತಮವರಾನ್ಪಾಲಿಷ್ಟುದೀಲೋಕಯಂ ‖

ಸಂಪಾದಕರು—ಅಸ್ಮಾಕ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ಆಗಸ್ಟ್ ೧೯೩೪ [ಸಂಚಿಕೆ ೧೫

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳೆಲ್ಲೆಲ್ಲಾ ಶಿಖಾರತ್ನದಂತೆ ಶೋಭಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೬೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ರೇಣುಕವಿಜಯಮಹಾಪುರಾಣ.

(ಶ್ರಾವಣಮಾಸವು ಬಂದಿತು.)

ಯಾವ ಮಹಾತ್ಮನು ಈ ಭೂಮಂಡಲದಲ್ಲಿ ಸೋಮೇಶ್ವರಲಿಂಗಮುಖದಿಂದವತರಿಸಿ ತನ್ನ ಮಹಿಮಾಪ್ರಭಾವದಿಂದ ಸಮಸ್ತ ಮಾನವಕೋಟಿಯನ್ನುದ್ಧರಿಸಿದನೋ, ಆ ಗುರುಸಾರ್ವಭೌಮ ಶ್ರೀ ಜಗದ್ಗುರು ರೇಣುಕಾಚಾರ್ಯನ ಪವಿತ್ರ ಚರಿತ್ರವನ್ನು ಶ್ರವಣಮಾಡುವುದು ಪ್ರತಿಯೊಬ್ಬ ಗುರುಭಕ್ತರ ಆದ್ಯಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರೂ ಆ ಮಹಿಮನ ಪುರಾಣವನ್ನು ತರಿಸಿಕೊಂಡು ಪುರಾತನ ಪದ್ಧತಿಯಂತೆ ಶ್ರಾವಣಮಾಸದಲ್ಲಿ ಪುರಾಣವನ್ನು ಪ್ರಾರಂಭಮಾಡಿ ಪ್ರಮಥಪುಂಗವನ ಸಚ್ಚರಿತ್ರವನ್ನು ಕೇಳಿ ತಮ್ಮ ಗ್ರಾಮವನ್ನೂ ತಮ್ಮ ವಂಶವನ್ನೂ ಪಾವನಗೊಳಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೧ ರೂ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶ್ರೀಜಗದ್ಗುರುಗಳವರ ಸುವರ್ಣರಜತಾಂದೋಲಿಕೋತ್ಸವವು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರು ಮಾಗಡಿ ತಾಲೂಕು ತಾವರೆಕೆರೆ ಭಕ್ತಮಂಡಳಿಯ ಪ್ರಾರ್ಥನೆಯ ಮೇರೆಗೆ ಸಕಲ ಪರಿವಾರ ಸಮೇತ 15.8-34 ರ ಬುಧವಾರ ಪ್ರಾತಃಕಾಲ 10 ಘಂಟೆಗೆ ಬೆಂಗಳೂರಿಂದ ದಯಮಾಡಿಸಿದರು. ಗುರುಸೇವಾಧುರೀಣರೂ ಗುರುಪೀಠಾಭಿಮಾನಿಗಳೂ ಆದ ತಾವರೆಕೆರೆ ಯಜಮಾನ್ ಶಾಂತಪ್ಪನವರು ಮತ್ತು ಅಟ್ಟೆಪ್ಪನವರು ಇವರ ತಮ್ಮಂದಿರಾದ ಬಸವಲಿಂಗಪ್ಪನವರು ಇವರೇ ಮೊದಲಾದವರು ಅತ್ಯಂತ ಭಕ್ತಿಯಿಂದ ಶ್ರೀಜಗದ್ಗುರುಗಳವರ ಆಂದೋಲಿಕೋತ್ಸವವನ್ನು ಸಕಲ ರಾಜಮರ್ಯಾದೆಗಳೊಡನೆ ಮಾಡಿ ತಮ್ಮ ಜನ್ಮವನ್ನು ಸಫಲಮಾಡಿಕೊಂಡರು. ಉತ್ಸವಕ್ಕೆ ಅಕ್ಕಪಕ್ಕದ ಗ್ರಾಮಗಳ ಶಿಷ್ಯಮಂಡಳಿಯವರು ಸಂತೋಷಪೂರ್ವಕವಾಗಿ ಬಂದು ಉತ್ಸವಭಾಗಿಗಳಾಗಿದ್ದರು. ಈ ಉತ್ಸವದಲ್ಲಿ ಬೆಂಗಳೂರು ಕಂಟ್ರಾಕ್ಟರ್ ರಾಮಸ್ವಾಮಿ ಮೊದಲಿಯಾರರು ಯೂರೋಪಿಯನ್ ಗಾರ್ಡನರ್ ಮೆಕಾಲೆ ದೊರೆಗಳೂ ಅವರ ಪುತ್ರರೂ ಸಹ ಉತ್ಸವದಲ್ಲಿ ಭಾಗಿಗಳಾಗಿದ್ದರಿಂದ ಕುಂದಾಶೋಭೆಯುಂಟಾಗಿತ್ತು. ಮಾಗಡಿ ತಾಲೂಕು ಅಮಲ್ದಾರ್ ಸಾಹೇಬರವರೂ ಅಧಿಯಿಂದ ಸಮಾಪ್ತಿಯವರೆಗೂ ಇದ್ದು ಉತ್ಸವವನ್ನು ಶಾಂತರೀತಿಯಿಂದ ಜರುಗಿಸಿದರು. ಅದೇ ದಿವಸ ಕಂಟೋನ್‌ಮೆಂಟ್ ಯೂರೋಪಿಯನ್ ಬಿ. ಮುಲ್ಲರ್ ಸಾಹೇಬರು ಕುಟುಂಬ ಸಹಿತವಾಗಿಬಂದು ಪಾದಪೂಜೆಯನ್ನು ಒಪ್ಪಿಸಿ ದರ್ಶನಾಶೀರ್ವಾದವನ್ನು ಪಡೆದರು. ತಾರೀಖು 17.7-34 ಶುಕ್ರವಾರ ಯೂರೋಪಿಯನ್ ಗಾರ್ಡನರ್ ಸಾಹೇಬ ಮೆಕಾಲೆ ದೊರೆಗಳು ಮಹಾಸನ್ನಿಧಾನವನ್ನು ಅತ್ಯಂತ ಗೌರವದಿಂದ ತಮ್ಮ ಬಂಗಲೆಗೆ ದಯಮಾಡಿಸಿಕೊಂಡುಹೋಗಿ ತಾವು ಸಾಹಸಪಟ್ಟು ಮಾಡಿರುವ ಸೀಪು-ಕಿತ್ತಳೆ-ಚಕೋತ ಅನಾಂಸ ಮೊದಲಾದ ಫಲಭರಿತಗಳಾದ ವೃಕ್ಷಗಳಿಂದ ಶೋಭಿಸುವ ತೋಟದ ವೈಭವವನ್ನು ತೋರಿಸಿ ಅಲ್ಲಿ ಬೆಳೆದ ತರತರದ ಫಲಗಳ ಜೊತೆಗೆ ಪಾದಕಾಣಿಕೆಯನ್ನು ಒಪ್ಪಿಸಿ ಧನ್ಯವಾದವನ್ನು ಸಮರ್ಪಿಸಿದರು. ಯೂರೋಪಿಯನ್ನರಾದ ಅವರಲ್ಲಿರುವ ಆಸ್ತಿಕ್ಯ ಬುದ್ಧಿಗೂ ವಿನಯಾದಿ ಸದ್ಗುಣಗಳಿಗೂ ಸಂತೋಷಪಟ್ಟು ಜಗದ್ಗುರುಗಳವರು ಸಾಹೇಬರವರಿಗೂ ಅವರ ಕುಟುಂಬವರ್ಗಕ್ಕೂ ಆಶೀರ್ವದಿಸಿ ಸ್ವಸ್ಥಾನಕ್ಕೆ ದಯಮಾಡಿಸಿದರು. ಪದ್ಧತಿಯಂತೆ ಶ್ರಾವಣಮಾಸದಲ್ಲಿ ನಡೆಯಬೇಕಾದ ರೇಣುಕವಿಜಯವು ಸನ್ನಿಧಾನದಲ್ಲಿ ನಡೆಯುತ್ತಿದೆ. ಹಬ್ಬಗಳ ಆಚರಣೆಯು ನಡೆದಿರುವದು. ಮಾಗಡಿ ಟವನ್ನಿನ ಗುರುಭಕ್ತರು ಸವಾರಿಯನ್ನು ತಮ್ಮಲ್ಲಿಗೆ ದಯಮಾಡಿಸಿಕೊಳ್ಳಬೇಕೆಂದು ನಿರ್ಧರಿಸಿಕೊಂಡಿದ್ದಾರೆ. ಆಚಾರ್ಯರ ಸಂಚಾರದಿಂದ ಅಗಬೇಕಾದ ಧಾರ್ಮಿಕೋಪನ್ಯಾಸಗಳು ಮೇಲಿಂದ ಮೇಲೆ ನಡೆಯುತ್ತಿರುವದರಿಂದ ಶಿಷ್ಯಮಂಡಳಿಯು ಸಂತುಷ್ಟಮನಸ್ಸಿನಿಂದ ಮಹಾಪಾದದ ಸೇವೆಯಲ್ಲಿ ನಿರತರಾಗಿರುವರು. ಇದರಂತೆಯೇ ಸರ್ವರೂ ತಮ್ಮ ತಮ್ಮ ಗ್ರಾಮಗಳಿಗೆ ದಯಮಾಡಿಸಿಕೊಂಡು ಹೋಗಿ ತನುಮನಧನಗಳಿಂದ ಗುರುಸೇವೆಮಾಡಿ ಗುರುಕೃಪೆಗೆ ಪಾತ್ರರಾಗಿ ಧನ್ಯರಾಗಬೇಕೆಂದು ಹಾರೈಸುತ್ತೇನೆ.

ಓರ್ವ ಉತ್ಸವಭಾಗಿ

ಕೈದಿಗಳ ಪತ್ರಿಕೆ.

ಇಂಗ್ಲೆಂಡಿನಲ್ಲಿ ಕೈದಿಗಳದೇ ಒಂದು ವಾರ್ತಾಪತ್ರಿಕೆಯು ಹೊರಟಿದ್ದು ಅದು ಎಲ್ಲ ಕಾರಾಗೃಹಗಳಲ್ಲಿಯೂ ಹಂಚಲ್ಪಡುತ್ತಿರುವುವು. ಜೈಲಿನ ಅಧಿಕಾರಿಗಳು ಇದಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಡುತ್ತಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಕಾಶೀಪೀಠದ ಪ್ರಾಚೀನತ್ವ.

(ಸೋಲಾಪುರದ "ಸುದರ್ಶನ" ದಲ್ಲಿಯ ಲೇಖಕ್ಕೆ ಶಾಸ್ತ್ರೀಯ ಖಂಡನ.)

ಲೇಖಕ—ಪಂಡಿತ ಚಿಪರೆಮಠದ ವೀರಭದ್ರಶಾಸ್ತ್ರಿ,
ವೇದತೀರ್ಥ-ಸ್ಮೃತಿತೀರ್ಥ-ಕಾವ್ಯತೀರ್ಥ-ಸಾಹಿತ್ಯವಿಶಾರದ-
ಧರ್ಮಾಚಾರ್ಯ ಶ್ರೀಕ್ಷೇತ್ರಕಾಶೀ.

'**ಸುದರ್ಶನ**' ವೆಂಬ ಮರಾಠಿ ಪತ್ರಿಕೆಯು (ತಾ. ೧೯ ಮಾರ್ಚಿ ೧೯೩೪) ೯ ನೆಯ ಸಂಚಿಕೆಯಲ್ಲಿ '**ಉತ್ತರದೇಶದೊಳಗಿನ ವೀರಶೈವ ಮಠಗಳು**' ಎಂಬ ಲೇಖವನ್ನು ಅಪ್ರಸ್ತುತವಾಗಿ ಕೆಲವು ಕನ್ನಡ ಪುಸ್ತಕಗಳನ್ನೋದಿಕೊಂಡ ವಿರಕ್ತಮಠಾಭಿಮಾನಿಯೋರ್ವನು ಪ್ರಕಟಿಸಿದ್ದಾನೆ. ಅದರಲ್ಲಿ ಆತನು ಉದಾಹರಿಸಿದ ವಿಷಯಗಳು ಅಸಂಬದ್ಧವಾಗಿದ್ದರೂ ಚರಿತ್ರವೆಂಬ ನೆಪದಿಂದ '**ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠ**' (ಜಂಗಮವಾಡೀಮಠ) ದ ಪ್ರಾಚೀನತ್ವವನ್ನು ಅಲ್ಲಗಳೆಯಲು ಕೈಹಾಕಿದ್ದಾನೆ.

ಈ ಲೇಖವನ್ನು ಬರೆದ ಬೆಳಗಾಂ ಗುರುಲಿಂಗಪ್ಪನೆಂಬಾತನು ಈ ಮುಂಚೆ ನಾಲ್ಕಾರು ವರ್ಷಗಳ ಪರ್ಯಂತ ಶ್ರೀ ಜಗದ್ಗುರು ವಿಶ್ವಾರಾಧ್ಯಪೀಠದಲ್ಲಿ ಆಶ್ರಿತನಾಗಿದ್ದು ಈಗ ಕೆಲವು ದುರ್ವಿರಕ್ತರ ಜಾಲಕ್ಕೆ ಬಿದ್ದು ಗುರುಪೀಠಗಳ ಗೌರವವನ್ನು ಸಹಿಸಲಾರದೆ ಇಂತಹ ಅಸಂಬದ್ಧಪ್ರಲಾಪಗಳನ್ನು ಮಾಡುತ್ತಿರುವುದು ಆಶ್ಚರ್ಯವಲ್ಲ! ಇಂಥವರ ಲೇಖಗಳಿಗೆ ವಿಮರ್ಶೆಯನ್ನು ಪ್ರಕಟಿಸುವುದು ಅಷ್ಟೇನೂ ಅವಶ್ಯಕವಿಲ್ಲವಾದರೂ ವಾಚಕರನ್ನೆಮ್ಮ ಎಚ್ಚರಗೊಳಿಸುವ ಉದ್ದೇಶದಿಂದ ಈ ಕೆಳಗಿನ ವಿಷಯವನ್ನು ಪ್ರಕಟಿಸಲಾಗಿದೆ. ಗುರುಲಿಂಗಪ್ಪನ ಲೇಖವುಳ್ಳ ಪತ್ರಿಕೆಯು ನಮ್ಮ ಮಿತ್ರರಿಂದ ಅಲಕ್ಷ್ಯವಾಗಿ ದೊರೆತಮೂಲಕ ಈ ಲೇಖವನ್ನು ಪ್ರಕಟಿಸಲು ವಿಳಂಬವಾಯಿತೆಂಬ ವಿಷಯವನ್ನು ವಾಚಕರು ತಿಳಿಯಬೇಕು.

ವೀರಶೈವಮಠದ ಪ್ರಾಚೀನತ್ವ.

ಗುರುಲಿಂಗಪ್ಪನ ಲೇಖದಲ್ಲಿ ಮೊಟ್ಟಮೊದಲೇ 'ಬಸವನ ಕಾಲದಲ್ಲಿ ಉದಯವಾದ ವೀರಶೈವಮಠವು' ಎಂಬ ವಾಕ್ಯವು '**ಪ್ರಥಮಚುಂಬನೇ ದಂತಭಂಗಃ**' ಎಂಬಂತೆ ಲೇಖನ ಮೂರ್ಖತೆಯನ್ನು ಹೊರಗೆಡಹಿದ್ದಾಗಿದೆ. ಏಕೆಂದರೆ, ಈ ವಿಷಯವು ಕೆಲವು ಪರಮತೀಯ ಮೂರ್ಖರಿಂದ ಕಲ್ಪಿಸಲ್ಪಟ್ಟುದೇ ಹೊರತು ಇದು ಯಾವ ಐತಿಹಾಸಿಕ ಪ್ರಮಾಣಗಳಿಂದಲೂ ಸಿದ್ಧವಾಗುವುದಿಲ್ಲ. ಬಸವನ ಅನಂತರ ಮೂವತ್ತು ವರ್ಷಗಳಲ್ಲಿದ್ದವನಾದ **ಪಾಲ್ಕುರಿಕೆ ಸೋಮನಾಥ**ನಾಗಲಿ, **ಹರಿಹರ**ನಾಗಲಿ ತಮ್ಮ '**ಬಸವಕಥೆ**' ಗಳಲ್ಲಿ ಪ್ರಾಚೀನಕಾಲದಿಂದಲೂ ವೀರಶೈವಮಠವಿತ್ತೆಂಬುದನ್ನೇ ತೋರಿಸಿದ್ದಾರೆ. ಅಲ್ಲದೆ **ಸೋಮನಾಥನು** ತನ್ನ "**ಅನುಭವಸಾರ**" ವೆಂಬ ಆಂಧ್ರಭಾಷೆಯ ಗ್ರಂಥ (ಮದ್ರಾಸ್‌ಮುದ್ರಿತಪ್ರತಿ) ದಲ್ಲಿ ತಾನು (ಸೋಮನಾಥನು) ಭೃಂಗಿಗೋತ್ರದವನೆಂದು "**ಭೃಂಗಿರಿಟಿಗೋತ್ರುಡನು**" ಎಂಬ ಪದ್ಯದಿಂದ ಸ್ಪಷ್ಟವಾಗಿ ಹೇಳುವುದರಿಂದ ಅವನ ಕಾಲದಲ್ಲೂ ಈಗಿನಂತೆ **ಪಂಚಗೋತ್ರಗಳು** ಪ್ರಚಾರದಲ್ಲಿದ್ದವೆಂಬುದು ಘಂಟಾಘೋಷವಾಗಿದೆ. ಕ್ರಿ. ಶ. ೯೪೦ ರಲ್ಲಿ ಆಗಿಹೋದ **ನನ್ನೆ ಚೋಳದೇವ**ನೆಂಬ ಆಂಧ್ರರಾಜನು ತನ್ನಿಂದ ವಿರಚಿತವಾದ "**ಕುಮಾರಸಂಭವ**" ವೆಂಬ ಪ್ರಬಂಧವನ್ನು '**ಶ್ರೀ ಜಂಗಮ ಮಲ್ಲಿಕಾರ್ಜುನ ದೇವಾಚಾರ್ಯ**' ನಿಗೆ ಸಮರ್ಪಿಸಿ ಆತನ ಅಸದೃಶವಾದ ಪಾಂಡಿತ್ಯವನ್ನೂ 'ಮಹಾಯೋಗಿತ್ವ' ವನ್ನೂ '**ಜಗದ್ಗುರುತ್ವ**' ವನ್ನೂ ಸ್ಪಷ್ಟವಾದ ಶಬ್ದಗಳಿಂದ ಪ್ರತಿಪಾದಿಸಿರುವವನಲ್ಲದೆ ಆ ಜಂಗಮ ಮಲ್ಲಿಕಾರ್ಜುನನು **ಶ್ರೀಶೈಲಸಿಂಹಾಸನ**ದ ಸಂಬಂಧಿಯೆಂಬುದನ್ನೂ ಸೂಚಿಸಿದ್ದಾನೆ. ಇಂತಹ ಪರಮೋತ್ತಮ ಗ್ರಂಥವನ್ನು 1909 ನೆಯ ಇಸವಿಯಲ್ಲಿ ಪ್ರಕಟಿಸಿ ವೀರಶೈವರ ಇತಿಹಾಸಕ್ಕೆ ಮಹೋಪಕಾರವನ್ನುಂಟುಮಾಡಿದ **ರಾಜಮಹೇಂದ್ರ**ದ ಸುಪ್ರಸಿದ್ಧ ಪ್ರೊಫೆಸರಾದ '**ಎಂ. ವಿ. ರಾಮಕೃಷ್ಣಕವಿಗಾರು ಎಂ. ಎ.**' ಎಂಬ ಮಹೋದಯರಿಗೆ ವೀರಶೈವರು ಕೃತಜ್ಞತೆಯನ್ನು ತೋರಿಸಬೇಕಾಗಿದೆ— ಇದರಂತೆಯೇ 1. ವೀರಶೈವರತ್ನ 2. ವೀರಶೈವಾಂಚಿತ್ಸ್ಥಿತಿ (3) Vaishnavizm and Saivizm (4) Mysore & Coorg (5) Dynasties of Kanaresa Districts (6) Mysore Gazetteer (7) Karnatic Chronology (8) The Religious Quest of India (9) Castes & Tribes of Southren India ಮೊದಲಾದ ಅನೇಕ ಗ್ರಂಥಗಳಲ್ಲಿಯೂ ವೀರಶೈವ ಮತವು ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾಯಿತೆಂಬಲೂ ಅತ್ಯಂತ ಪ್ರಾಚೀನವೆಂಬಲೂ ಇತಿಹಾಸವಿಮರ್ಶೆಯಿಂದ ಸತ್ಯವಾಗಿ ನಿರೂಪಿಸಿ ಅನಾದಿಯಾಗಿ ಸುಪ್ರಸಿದ್ಧವಾಗಿರುವ ಶಿವಾಗಮಗಳ ಸಿದ್ಧಾಂತವನ್ನೇ ಸಮರ್ಥಿಸಿದ್ದಾರೆ ವಸ್ತುಸ್ಥಿತಿಯು ಹೀಗಿದ್ದು ವೀರಶೈವಮತವು ಬಸವಕಾಲದಲ್ಲಿ ಹುಟ್ಟಿತೆಂಬ ಭ್ರಮೆಯನ್ನು ಹರಡಲು ಮುಂದೆ ಬಂದಿರುವ ಕೆಲವು **ಮುಂದಿಗಳು** ಆತ್ಮದ್ರೋಹವನ್ನೇ ಮಾಡಲುದ್ಯುಕ್ತರಾಗಿರುವರೆಂದರೆ ಬೇರಲ್ಲ!

ಕೆಳದಿನೃಪವಿಜಯದ ಯೋಗ್ಯತೆ.

1921 ರಲ್ಲಿ ಮೈಸೂರು ಓರಿಯಂಟಲ್ ಲೈಬ್ರರಿಯವರು ಮುದ್ರಿಸಿದ "**ಕೆಳದಿನೃಪವಿಜಯ**" ವೆಂಬ ಕನ್ನಡಕಾವ್ಯವನ್ನು "**ಲಿಂಗಣ್ಣ**" ನೆಂಬ ಕವಿಯು ಸುಮಾರು ಕ್ರಿ. ಶ. ೧೮೦೪ ರಲ್ಲಿ ರಚಿಸಿದ್ದಾನೆ. ಎಂದರೆ ಇಂದಿಗೆ ೧೩೦ ವರ್ಷಗಳ ಹಿಂದೆ ಈ ಪುಸ್ತಕವು ಹುಟ್ಟಿದೆ. ಇದರಲ್ಲಿ ಕೆಳದಿರಾಜರ (ಕ್ರಿ. ಶ. ೧೫೦೦ ರಿಂದ ೧೭೬೩ ರವರೆಗೆ ಆಳಿದವರು) ಚರಿತ್ರೆಯನ್ನು ಕವಿಯು ವರ್ಣಿಸಿದ್ದಾನೆ. ಈ ಕೆಳದಿರಾಜರು ವಿಜಯನಗರದ ಮಹಾರಾಜರ ಸಾಮಂತರಾಗಿದ್ದುದರಿಂದ ಪ್ರಸಂಗವಶಾತ್ ವಿಜಯನಗರದ ಚರಿತ್ರೆಯೂ ಇದರಲ್ಲಿ ಬಂದಿದೆ. ಆದರೆ ಅದು ಸಮಂಜಸವಾಗಿಲ್ಲ. ಪ್ರಾಚೀನ ಚರಿತ್ರೆಯನ್ನು ಕಾವ್ಯರೂಪವಾಗಿ ಜನರಂಜನವಾಗುವಂತೆ ರಚಿಸಬೇಕಾದರೆ ಕೆಲವುಸತ್ಯ, ಕೆಲವು ಅಸತ್ಯ, ಕೆಲವು ಭ್ರಾಂತ, ಕೆಲವು ಕಲ್ಪನೆಗಳಿಂದ ಕೂಡಿದ್ದುಗಳನ್ನು ಸೇರಿಸದೆ ಯಾರೂ ಬಿಟ್ಟಿಲ್ಲ. ನಮ್ಮ ದೇಶದ "**ಚರಿತ್ರಗ್ರಂಥ**" ಗಳೆಂದು ಹೇಳಲ್ಪಡುವ **ರಾಜತರಂಗಿಣಿ** (ಕಲ್ಹಣ) **ಹರ್ಷಚರಿತ** (ಬಾಣ) **ನವಸಾಹಸಾಂಕಚರಿತ** (ಪದ್ಮಗುಪ್ತ). **ವಿಕ್ರಮಾಂಕಚರಿತ** (ಬಿಲ್ಹಣ) **ಹಮ್ಮೀರಕಾವ್ಯ, ಅಚ್ಯುತರಾಯಾಭ್ಯುದಯ, ಮಧುರಾವಿಜಯ, ಪೃಥ್ವೀರಾಜವಿಜಯ,** ಮುಂತಾದವುಗಳು ಚರಿತ್ರಾಂಶವನ್ನು ಹೇಳತಕ್ಕವಾಗಿದ್ದರೂ ಎಷ್ಟೋ ವರ್ಣನಾತ್ಮಕವಿಷಯಗಳಿಂದಲೂ ತುಂಬಿರುವವೆಂದು ಆ ಗ್ರಂಥಗಳನ್ನು ವಿಮರ್ಶಪೂರ್ವಕವಾಗಿ ಓದಿದವರಿಗೆ ಗೊತ್ತಾಗದಿರದು. ಅದರಂತೆಯೇ ಕೆಳದಿ ನೃಪವಿಜಯವೆಂಬ ಅರ್ವಾಚೀನಪುಸ್ತಕದಲ್ಲಿಯೂ ಅತಿಶಯೋಕ್ತಿಗಳೂ ಅಸಂಬದ್ಧಸಂಗತಿಗಳೂ ಬಂದಿರುವುದು ಆಶ್ಚರ್ಯವಲ್ಲ. ಆದುದರಿಂದಲೇ ಈ ಕೆಳದಿನೃಪವಿಜಯದ ಪರಿಶೋಧಕರಾದ **ಎ. ಆರ್. ಕೃಷ್ಣಶಾಸ್ತ್ರಿ**ಗಳು ತಮ್ಮ **ಉಪೋದ್ಘಾತ** (೬ ನೆಯ ಪುಟ) ದಲ್ಲಿ "**ಕೆಳದಿನೃಪವಿಜಯದಲ್ಲಿಯ ಕೆಳದಿರಾಜರ ಕಾಲ ಕಾರ್ಯಾದಿಗಳು ಸತ್ಯವೆಂದು ನಂಬಿದರೂ ಚೌಡಪ್ಪನಿಗೆ ಹಾವು ನಿಧಿಯನ್ನು ತೋರಿಸಿದುದೂ ದೊಡ್ಡ ಸಂಕಣ್ಣನಾಯಕನು ದಿಲ್ಲಿಗೆ ಹೋಗಿ ಅಂಕುಶಖಾನನನ್ನು ಗೆದ್ದುದೂ ಮುಂತಾದ ಕೆಲವು ಸಂಗತಿಗಳು ಕೇವಲ ಕಲ್ಪಿತಕಥೆಗಳೆಂದು ತೋರುತ್ತವೆ**" ಎಂದು ಬರೆದಿದ್ದಾರೆ. ಅಂದಮೇಲೆ ಕೆಳದಿ ನೃಪವಿಜಯವು ಇತಿಹಾಸಗ್ರಂಥವೆಂದು ಹಠತೊಟ್ಟುದೂ ಅದರಲ್ಲಿ ಬಂದ ವೀರಶೈವಮಠಗಳ ಸ್ಥಾಪನಾಕಥೆಗಳು ಸತ್ಯವೆಂಬುವುದೂ ಅವಿವೇಕವೇ ಸರಿ! ಉದಾಹರಣಾರ್ಥವಾಗಿ ಒಂದು ಸುಪ್ರಸಿದ್ಧ ವಿಷಯವನ್ನು ವಿಮರ್ಶಿಸೋಣ! ವಿಶ್ವವಿಖ್ಯಾತರಾದ **ಜಗದ್ಗುರು ರೇವಣಸಿದ್ಧರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು** ಅನುಗ್ರಹಿಸಿರುವ ವಿಷಯವು ಅನೇಕ ಇತಿಹಾಸಪ್ರಮಾಣಗಳಿಂದ ಗೊತ್ತಾಗಿರುವುದಲ್ಲದೆ ಪರಂಪರೆಯಿಂದಲೂ ಅಂಗೀಕೃತವಾಗಿದೆ. ಆದರೆ ಲಿಂಗಣ್ಣಕವಿಯು ಈ ಕೆಳದಿನೃಪವಿಜಯದಲ್ಲಿ "ಶ್ರೀ ರೇವಣಸಿದ್ಧರು ವಿದ್ಯಾರಣ್ಯರಿಗೆ ಲಿಂಗವನ್ನು ಕೊಟ್ಟ" ರೆಂದು (ಪುಟ ೧೬, ೩೨೧ ಗಳಲ್ಲಿ) ಬರೆದಿದ್ದಾನೆ. ಇದು ಎಷ್ಟು ವಿರುದ್ಧ ಮತ್ತು ಮಿಥ್ಯೆಯಾಗಿರುವುದೆಂಬುದು ಎಲ್ಲರಿಗೂ ತಿಳಿಯುವಂತಿದೆ. ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಕೊಟ್ಟ ವಿಷಯವನ್ನು ೧. **ವೇದಾಂತಸಾರವೀರಶೈವಚಿಂತಾಮಣಿ, ೨. ರೇಣುಕವಿಜಯ, ೩. ಗುರುವಂಶಕಾವ್ಯ** ಮೊದಲಾದ ಪ್ರಾಚೀನಗ್ರಂಥಗಳು ಪ್ರತಿಪಾದಿಸಿರುವದೊತ್ತಟ್ಟಿಗಿರಲಿ. ಯಾವ ಕೆಳದಿರಾಜರ ಚರಿತ್ರೆಯನ್ನು ಈ ಕೆಳದಿನೃಪವಿಜಯವೆಂಬ ಕಾವ್ಯವು ಹೇಳುತಿದೆಯೋ ಅದೇ ಕೆಳದಿರಾಜರ ವಂಶಜನಾದ ಹಿರಿಯ **ಬಸವಪ್ಪನಾಯಕನು** (ಬಸವರಾಜನು) ಕ್ರಿ. ಶ. ೧೭೦೦ ರಲ್ಲಿ ರಚಿಸಿದ **ಶಿವತತ್ತ್ವರತ್ನಾಕರ**ವೆಂಬ ಗ್ರಂಥದಲ್ಲಿ (ತರಂಗ ೫) ಶ್ರೀ ಜಗದ್ಗುರು ರೇವಣಸಿದ್ಧ ಪ್ರದತ್ತವಾದ ಶ್ರೀ ಚಂದ್ರಮೌಳೀಶ್ವರಲಿಂಗವು ವಿದ್ಯಾರಣ್ಯರಿಗೆ ಗುರುಪರಂಪರೆಯಿಂದ ಪ್ರಾಪ್ತವಾಯಿತೆಂಬ ಅಂಶವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಕೆಳದಿನೃಪವಿಜಯಕರ್ತನಾದ ಲಿಂಗಣ್ಣಕವಿಯು ಮೇಲೆ ಹೇಳಿದ ಶಿವತತ್ತ್ವರತ್ನಾಕರವನ್ನು ನೋಡಿರುತ್ತಾನೆಂಬುದಕ್ಕೆ ಕೆಳದಿ ನೃಪವಿಜಯದ ದಶಮಾಶ್ವಾಸದ ೧೫ನೆಯ ಪದ್ಯವು ಸಾಕ್ಷಿಯಾಗಿದೆ. ಲಿಂಗಣ್ಣಕವಿಯು ಸ್ಮಾರ್ತಬ್ರಾಹ್ಮಣನಾಗಿರುವಕಾರಣ ಶ್ರೀ ರೇವಣಸಿದ್ಧರಿಂದ ಶಂಕರಾಚಾರ್ಯರಿಗೆ ಲಿಂಗವು ದೊರೆತ ವಿಷಯವನ್ನು ಪ್ರಕಟಿಸಲು ಸಂಕೋಚಪಟ್ಟಿರುವಂತೆ ತೋರುತ್ತದೆ. ಆದರೂ ಇತಿಹಾಸವಿಷಯವನ್ನು ಸಂಪೂರ್ಣವಾಗಿ ಹಾರಿಸಿಬಿಟ್ಟರೆ ಚೆನ್ನಾಗಿಲ್ಲವೆಂದು ಭಾವಿಸಿ ರೇವಣಸಿದ್ಧರಿಂದ ವಿದ್ಯಾರಣ್ಯರಿಗೆ ಲಿಂಗವು ದೊರೆಯಿತೆಂದು ಕಲ್ಪಿಸಿ ತನ್ನ ಮತಕ್ಕೆ ಮಾತ್ರ ಸಮಾಧಾನವನ್ನು ಮಾಡಿಕೊಂಡಿರುವನು. ಆದರೆ ಇತಿಹಾಸಪರಿಶೋಧಕರು ವಿದ್ಯಾರಣ್ಯರ ಕಾಲದಲ್ಲಿ ರೇವಣಸಿದ್ಧರ ಅಸ್ತಿತ್ವವನ್ನು ಎಂದೂ ನಂಬಲಾರರು. ಇದಲ್ಲದೆ ಈ ಲಿಂಗಣ್ಣಕವಿಯು ಕೆಳದಿರಾಜರು ಅಲ್ಲಲ್ಲಿ ಮಾಡಿದ ದಾನಧರ್ಮಗಳನ್ನು ವಿಶೇಷವಾಗಿ ಕೊಂಡಾಡುತ್ತಾನೆ. ಇವನು ಕೆಳದಿರಾಜರ ಸಂಸ್ಥಾನದಿಂದಲೇ ಉಪಜೀವನವನ್ನು ನಡೆಯಿಸಿದಕಾರಣ ಹಾಗೆ ಮಾಡಲೇಬೇಕಾಯಿತು. ಆ ವರ್ಣನೆಯಲ್ಲಿಯೂ ಕೆಲವು ಚಮತ್ಕಾರಗಳನ್ನು ಮಾಡಿದ್ದಾನೆ. ಅದೇನೆಂದರೆ ಸ್ಮಾರ್ತರ ಮಠಗಳಿಗೆ ದಾನಮಾಡಿದ ವಿಷಯವು ಬಂದಾಗ ಸ್ವಲ್ಪವಾಗಿಯೇ (ಅಂದರೆ ಸಹಾಯಮಾಡಿದರೆಂಬುವದನ್ನು ಪ್ರಕಟಿಸುವ ಹಾಗೆ) ವಿವರಿಸಿ ವೀರಶೈವರ ಮಠಗಳಿಗೆ ದಾನಮಾಡಿದ ವಿಷಯಬಂದಾಗ ಅತಿಶಯವಾಗಿ (ಅಂದರೆ ಜಂಗಮ ಮಠಗಳನ್ನು ಕೇವಲ ಕೆಳದಿಅರಸರೇ ಸ್ಥಾಪನೆಮಾಡಿದರೆಂಬ ಅಭಿಪ್ರಾಯವು ತೋರುವಹಾಗೆ) ವರ್ಣಿಸುತ್ತಾನೆ. ಇದರಿಂದ ಈ ಪುಸ್ತಕವನ್ನು ಬರೆದ ಲಿಂಗಣ್ಣಕವಿಯು ವಿಶೇಷವಾಗಿ ಸ್ವಾರ್ಥಪರಾಯಣನುಳ್ಳವನಾಗಿರುವನೆಂಬುದು ಪರಿಶೋಧಕರಿಗೆ ಗೊತ್ತಾಗದಿರದು. ಅಂತಮೇಲೆ ಈ ಪುಸ್ತಕವು ವೀರಶೈವರ ಧಾರ್ಮಿಕೇತಿಹಾಸಗಳ ಸಮಾಚಾರವನ್ನು ತಿಳಿದುಕೊಳ್ಳಲು ಸಹಾಯಕವಾಗಲಾರದೆಂಬಲೂ ಇದು ಶುದ್ಧ ಇತಿಹಾಸಗ್ರಂಥವಲ್ಲವೆಂಬಲೂ ಹೇಳುವುದರಲ್ಲಿ ಸಂದೇಹವಿಲ್ಲ.

ಈ ಪುಸ್ತಕವನ್ನು ವಿಮರ್ಶಿಸುವ ಮುಖ್ಯಕಾರಣವೇನೆಂದರೆ—ಇದರಲ್ಲಿ ಪ್ರಸಂಗವಶಾತ್ ಕೆಳದಿಯ ದೊಡ್ಡ ಸಂಕಣ್ಣನಾಯಕನು ದಿಲ್ಲಿಯಿಂದ ಕಾಶಿಗೆ ಬಂದಾಗ ಶ್ರೀ ಜಗದ್ಗುರು ವಿಶ್ವಾರಾಧ್ಯಮಠಕ್ಕೆ ದಾನಧರ್ಮಗಳನ್ನು ಮಾಡಿದ ವಿಷಯವೂ ಬಂದಿದೆ. ಲಿಂಗಣ್ಣಕವಿಯು ಅತಿಶಯೋಕ್ತಿಶಬ್ದಗಳ ಮೂಲಕವಾಗಿ ಅಲ್ಲಿಯ ವಿಷಯವೇ ಅಸಂಗತವಾಗಿ ಹೋಗಿದೆ. ಆದರೂ ಬೆಳಗಾಂ ಗುರುಲಿಂಗಪ್ಪನೆಂಬಾತನು ಅಲ್ಲಿಯ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳದೆ ಕಾಶಿಯ ಜಂಗಮವಾಡಿಯ ಮಠವು ಕೆಳದಿರಾಜರಿಂದ ಸ್ಥಾಪಿತವಾಯಿತೆಂಬಲೂ ಮೊದಲು ಬಸವನಕಾಲದಲ್ಲೇ ಮಠವು ಪ್ರಚಾರಕ್ಕೆ ಬಂದಿತೆಂಬಲೂ ವಿಚಾರಶೂನ್ಯವಾದ ವಿಷಯವನ್ನು ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾನೆ. ಪರಂತು ಈ ಕೆಳಗಿನ ವಿಷಯವನ್ನು ಸಾವಧಾನವಾಗಿ ತಿಳಿದುಕೊಂಡವರಿಗೆ ಈ 'ಗುರುಲಿಂಗಪ್ಪ' ನು ಅನ್ವರ್ಥನಾಮವುಳ್ಳವನೆಂಬುದು ಗೊತ್ತಾಗದೆ ಬಿಡುವದಿಲ್ಲ!

ಶ್ರೀ ವಿಶ್ವಾರಾಧ್ಯರ ಪೀಠದ ಚರಿತ್ರೆ.

ಕೆಳದಿನೃಪವಿಜಯ (ಪುಟ ೫೯.) ದಲ್ಲಿ ಒಂದು ಅವಾಂತರ ಪ್ರಸಂಗಾನುಸಾರವಾಗಿ ಕಾಶೀ **ಶ್ರೀ ವಿಶ್ವಾರಾಧ್ಯ ಪೀಠದ** ವಿಷಯದಲ್ಲಿ—'ಬಹುಕಾಲದ ಹಿಂದೆ ಶ್ರೀ ನಂದೀಶ್ವರಾಂಶಭೂತನಾದ ಶೀಲವಂತನಾಯಕನೆಂಬ ಮಹಾಪುರುಷನು ಕಾಶಿಗೆ ಬಂದು ನೂರಾರ ರೆಕ್ಕೆ (ಪಕ್ಕೆ) ಗಳನ್ನು ಕಟ್ಟಿಕೊಂಡು ತಾರಿ ಮಹಿಮೆಗಳನ್ನು ತೋರಿಸಿ ಜಯಚಂದ್ರನರೇಂದ್ರನನ್ನು ಮೆಚ್ಚಿಸಿ 'ದಶಾಶ್ವಮೇಧ' ದ ಹತ್ತಿರದಲ್ಲಿ ಭೂಮಿಯನ್ನು ಪಡೆದು ಮಠವನ್ನು ಕಟ್ಟಿಸಿ ಅಲ್ಲಿ ಮಲ್ಲಿಕಾರ್ಜುನದೇವರಿಗೆ ಪಟ್ಟಾಭಿಷೇಕಮಾಡಿ ಸೇವೆಗೋಸ್ಕರ ತನ್ನ ಶಿಷ್ಯರನ್ನಿರಿಸಿ ತಾನಾ ಮಠದ ಮಧ್ಯಸ್ತಂಭಾಗ್ರದೊಳು ಯೋಗಾರೂಢನಾಗಿ ಕುಳಿತು ಅಂತರ್ಧಾನನಾದನು.'—ಎಂಬ ಅಂಶವು ಬರೆಯಲ್ಪಟ್ಟಿದೆ. ಆದರೆ ಇದು ಯಾವ ಆಧಾರದಿಂದ ಬರೆಯಲ್ಪಟ್ಟಿತೆಂಬುದನ್ನು ಸೂಚಿಸಿಲ್ಲವು. ಈತನು ಬರೆದ ವಿಷಯದಲ್ಲಿ ಎರಡು ದೊಡ್ಡ ತಪ್ಪುಗಳು ಕಾಣಿಸುತ್ತಿರುವದರಿಂದಲೂ ಒಂದು ಮುಖ್ಯ ವಿಷಯವು ಬಿಟ್ಟುಹೋಗಿರುವದರಿಂದಲೂ ಕೇವಲ ಕರ್ಣಾಕರ್ಣಿಯಿಂದ ಬರೆದಿರುವ ಹಾಗೆ ತಿಳಿದುಬರುತ್ತದೆ. ಅದೇನೆಂದರೆ—ಇಲ್ಲಿ ಲಿಂಗಣ್ಣಕವಿಯು '**ಜಯಚಂದ್ರ**' ರಾಜನೆಂದು ಬರೆದಿರುವದು ಶುದ್ಧ ತಪ್ಪಾಗಿದೆ. ಅದು '**ಜಯನಂದದೇವ**' ರಾಜ ಎಂದಿರಬೇಕು. 'ನಂದ' ಎಂಬ ಸ್ಥಾನದಲ್ಲಿ 'ಚಂದ' ಎಂದು ಬರೆದಿರುವದರಿಂದ ಕೆಲ ಮೂಢರು ಕ್ರಿ. ಶ. ೧೨ ನೆಯ ಶತಮಾನದಲ್ಲಿ ಕಾನ್ಯಕುಬ್ಜದೇಶವನ್ನಾಳಿದ 'ಜಯಚಂದ್ರ' ರಾಜನೆಂದು ಭ್ರಮಿಸುತ್ತಿರುವರು. ಆದರೆ ಇದು ಸರಿಯಲ್ಲ. '**ಜಯನಂದದೇವ**' ನೆಂಬ ಪ್ರಾಚೀನಕಾಲದ ಕಾಶೀರಾಜನು ಕ್ರಿ. ಶ. ೬ ನೆಯ ಶತಮಾನ (ವಿಕ್ರಮ ಸಂವತ್ ೬೩೧) ದಲ್ಲಿ ಒಂದು ದಾನಪತ್ರವನ್ನು ಬರೆದು ಶ್ರೀ ವಿಶ್ವಾರಾಧ್ಯಪೀಠ (ಜಂಗಮವಾಡಿಮಠ) ಕ್ಕೆ ಜಂಗಮಪುರ (ಈಗ ಬನಾರಸ್ ಹಿಂದೂ ಯೂನಿವರ್ಸಿಟಿಯಿರುವ) ವೆಂಬ ಭೂಮಿಯನ್ನು ದಾನಮಾಡಿರುತ್ತಾನೆ. ಈಗಿನ ಕಾಶೀಮಹಾರಾಜರ ತಂದೆಯವರಾದ "**ಶ್ರೀ ಪ್ರಭುನಾರಾಯಣಸಿಂಹ ಬಹದ್ದೂರ**" ರವರು ಈ ಶಾಸನದ ಪ್ರಾಮಾಣ್ಯವನ್ನು ಒಪ್ಪಿಕೊಂಡು ಕ್ರಿ. ಶ. ೧೯೦೭ ರಲ್ಲಿ ಇದರ ನಕಲನ್ನು ಬೇರೊಂದು **ತಾಮ್ರಪತ್ರದ ಮೇಲೆ ಕೆತ್ತಿಸಿ** ಸಹಿಮಾಡಿಕೊಟ್ಟಿರುತ್ತಾರೆ. ಜಯನಂದದೇವನ ದಾನಪತ್ರವು ಪ್ರಾಚೀನವೆಂದು ಅನೇಕ ಕೋರ್ಟುಗಳಲ್ಲಿ ಸ್ವೀಕರಿಸಲ್ಪಟ್ಟಿರುವದಲ್ಲದೆ, ಬನಾರಸ್ ಜಡ್ಜ ಕೋರ್ಟಿನಲ್ಲಿ ದಾಖಲೆಯಾಗಿದ್ದು ಜಡ್ಜರವರು ಈ ದಾನಪತ್ರದ ಪ್ರಾಮಾಣ್ಯವನ್ನು ತಮ್ಮ (ತಾ|| ೨೭-೧೧-೩೩) ನೆಯ **ಜಡ್ಜಮೆಂಟಿನಲ್ಲಿ** ಬಹಳ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಈ ಜಡ್ಜಮೆಂಟಿನ ಅವಿಕಲ ಪ್ರತಿಯು "**ಪಂಚಾಚಾರ್ಯಪ್ರಭಾ**" ಪತ್ರಿಕೆಯು (ತಾ|| ೧೮-೧೨-೧೯೩೩) ರಲ್ಲಿ ಮುದ್ರಿತವಾಗಿ ಪ್ರಚಾರವಾಗಿದೆ. ಒಟ್ಟಿನಮೇಲೆ ಹೇಳುವದೇನೆಂದರೆ—೧೩ ನೂರು ವರ್ಷಗಳ ಹಿಂದೆಯೇ ವಿಖ್ಯಾತವಾಗಿರುವ ವಿಶ್ವಾರಾಧ್ಯ ಮಹಾಪೀಠಕ್ಕೆ ಜಯನಂದದೇವರಾಜನು ಕೊಟ್ಟಿರುವ ಭೂಮಿಯಿಂದ ಅದರ ವಿಸ್ತಾರವು ಹೆಚ್ಚಿರಬಹುದೇ ಹೊರತು, ಅವನು ಕೊಟ್ಟ ಭೂಮಿಯಲ್ಲಿಯೇ ಹೊಸದಾಗಿ ಪೀಠವು ನಿರ್ಮಿಸಲ್ಪಟ್ಟಿತೆಂಬ ಲಿಂಗಣ್ಣಕವಿಯ ಬರಹವು ಎಷ್ಟೂ ವಿಶ್ವಾಸಾರ್ಹವಾಗಿಲ್ಲ.

ಈ ಲಿಂಗಣ್ಣಕವಿಯ ಮತ್ತೊಂದು ತಪ್ಪೇನೆಂದರೆ—ಶೀಲವಂತನಾಯಕನು ಮಠದ ಮಧ್ಯಸ್ತಂಭದಲ್ಲಿ ಕುಳಿತು ಅಂತರ್ಧಾನನಾದನೆಂಬುದಾಗಿದೆ. ಕಾಶೀಮಠದಲ್ಲಿ ಕೈಲಾಸಮಂಟಪವೆಂಬುದು ಶ್ರೀವಿಶ್ವಾರಾಧ್ಯರ ಪಾದುಕೆಗಳುಳ್ಳ 'ಪೀಠ' (ಜ್ಞಾನಸಿಂಹಾಸನ) ಸ್ಥಾನವಾಗಿದೆ. ಶ್ರೀವಿಶ್ವಾರಾಧ್ಯರ ಅನಂತರ ಮೊಟ್ಟಮೊದಲನೆ ಪಟ್ಟಾಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಜಗದ್ಗುರುಗಳು ವಿಶೇಷ ಮಹಿಮೆಗಳನ್ನು ತೋರಿಸಿ ೩೧೧ ವರ್ಷಗಳವರೆಗೆ ಇರುವ ಮೂಲಕ ಮುಂದೆ ಅಧಿಕಾರಿಗಳಾದ ಎಲ್ಲ ಜಗದ್ಗುರುಗಳಿಗೂ ಹಿಂದಿನವರ ಶ್ರೀ ಮಲ್ಲಿಕಾರ್ಜುನ ನಾಮಾಂಕಿತವು ಶ್ರೇಯಸ್ಕರವೆಂದು ತಿಳಿಯಲ್ಪಟ್ಟಿತಲ್ಲದೆ ಕೈಲಾಸ ಮಂಟಪದ ಸ್ತಂಭದಲ್ಲಿಯೂ ಶ್ರೀ ಜಗದ್ಗುರುಗಳ ಮೂರ್ತಿಯು ಜಿಂತಂತೆ ಕೆತ್ತಲ್ಪಟ್ಟಿದೆ. ಈಗಲೂ ಆ ಮೂರ್ತಿಯ ಕೆಳಗೆ 'ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮಿ' ಎಂದು ಹೆಸರು ಬರೆಯಲ್ಪಟ್ಟು ಪರಂಪರೆಯಿಂದಲೂ ವಿಖ್ಯಾತವಾಗಿದೆ. ಹೀಗಿದ್ದರೂ 'ಶೀಲವಂತನಾಯಕನು ಸ್ತಂಭದಲ್ಲಿ ಕುಳಿತು ಶಿವೈಕ್ಯನಾದ' ನೆಂಬ ಲಿಂಗಣ್ಣನ ಬರಹವು ಅಸಮಂಜಸವೇ ಸರಿ!

ಶ್ರೀ ವಿಶ್ವಾರಾಧ್ಯರ ನಾಮೋಲ್ಲೇಖವನ್ನು ಲಿಂಗಣ್ಣಕವಿಯು ತನ್ನ ಕೆಳದಿ ನೃಪವಿಜಯದಲ್ಲಿ ಮಾಡದಿರುವುದು ದೊಡ್ಡದೋಷವೆಂದೇ ಹೇಳಬೇಕಾಗಿದೆ. ಶ್ರೀ ವಿಶ್ವಾರಾಧ್ಯಮಹಾಪೀಠವು ಶಿವಾಗಮಗಳ ಕಾಲದಿಂದಲೂ ಪ್ರಸಿದ್ಧವಾಗಿರುವದೆಂಬುವದಕ್ಕೆ '**ಕಾಶ್ಯಾಂ ವಿಶ್ವೇಶ್ವರೇ ಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ। ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ||**' ಎಂಬ ಸ್ವಾಯಂಭುವಾಗಮದ ವಚನವು ಜಾಗೃತವಾಗಿಯೇ ಇದೆ. ಪಂಡಿತಾರಾಧ್ಯರ **ನಾರಾಯಣೋಪನಿಷತ್ತಿನ ಶೈವಭಾಷ್ಯದಲ್ಲಿ** (ಪುಟ ೫೦) '**ಅಸ್ಯಾಮುಪನಿಷದಿ ವಿಶ್ವಾರಾಧ್ಯಾದಯಸ್ತು ದಹರೋಪಾಸನಾವಿಷಯೇ**' ಎಂಬ ವಾಕ್ಯದಿಂದ ಶ್ರೀ ವಿಶ್ವಾರಾಧ್ಯರು ಈ ಉಪನಿಷದ್ವ್ಯಾಖ್ಯಾಕಾರರೆಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಈ ನಾರಾಯಣೋಪನಿಷತ್ತು ಅರವತ್ತು ವರ್ಷಗಳ ಹಿಂದೆ ಸಿಕಂದ್ರಾಬಾದ್ ದರ್ಪಣದಲ್ಲಿ ಮುದ್ರಿತವಾದ ಪ್ರಾಚೀನಗ್ರಂಥವಾಗಿದೆ. ಮತ್ತು ಮದ್ರಾಸ್ ಇಲಾಖೆಯ '**ಪಲೂರು**' ನಗರದ ಶ್ರೀ|| ವಾ|| ಮಲ್ಲಿಕಾರ್ಜುನಶಾಸ್ತ್ರಿಗಳವರು ೫ ಗ್ರಂಥಗಳನ್ನು ಒಟ್ಟುಗೂಡಿಸಿ ಈಗ್ಗೆ ೪೦ ವರ್ಷಗಳ ಪೂರ್ವದಲ್ಲಿ '**ಶಿವಾದ್ವೈತಪಂಚಕಂ**' ಎಂಬ ಹೆಸರಿನಿಂದ ಪ್ರಕಟಿಸಿರುತ್ತಾರೆ. ಅದರೊಳಗಿನ **ಶಂಕರಸಂಹಿತೆಯ** ಆದಿಯಲ್ಲಿ ಶ್ರೀ ವಿಶ್ವಾರಾಧ್ಯರ ಸ್ತುತಿಯು ಎಷ್ಟು ಪ್ರಭಾವಯುತವಾಗಿ ಮಾಡಲ್ಪಟ್ಟಿರುವುದೆಂಬುದನ್ನು ಪರಿಶೀಲಿಸಬೇಕು.

ಲಿಂಗಾಂಗೈಕ್ಯವಿಮರ್ಶದರ್ಶನವಿಧಂ ವೇದಾರ್ಥಸಂವೇದಿನಂ |
ಶಕ್ತಿಸ್ಥಾಪಿತಶೈವಧರ್ಮನಿಲಯಂ ಶಿಷ್ಯಪ್ರಶಿಷ್ಯಾನ್ವಿತಂ |
ವಿಶ್ವಾರಾಧ್ಯಗುರುಂ ನಮಾಮಿ ಸತತಂ ವಿಶ್ವಾಭಿವಂದ್ಯಂ ವಿಭುಂ ||

ಇದರಿಂದ ಶಂಕರಸಂಹಿತಾಕಾಲದಲ್ಲಿ ಶ್ರೀ ವಿಶ್ವಾರಾಧ್ಯನು ವೀರಶೈವಮತಾಚಾರ್ಯನೆಂಬುದು ಪ್ರಸಿದ್ಧವೇ ಸರಿ. ಒಂದು ಸಾವಿರ ವರ್ಷಗಳ ಹಿಂದೆ **ಸಿದ್ಧನಾಥಶಿವಾಚಾರ್ಯ**ರಿಂದ ವಿರಚಿತವಾದ **ರೇಣುಕವಿಜಯದ** ದ್ವಿತೀಯಮಂಜರಿಯಲ್ಲಿ (ಪುಟ ೧೬) ಯೂ ಪಂಚಮಮಂಜರಿಯಲ್ಲಿಯೂ ಶ್ರೀ ವಿಶ್ವಾರಾಧ್ಯರ ಮತ್ತು ಅವರ ಆಶ್ರಮದ ವರ್ಣನವು ಸುಸ್ಪಷ್ಟವಾಗಿ ಬಂದಿರುವದನ್ನು ಕಣ್ಣಿದ್ದವರು ನೋಡಲಿ! ಇದರಂತೆಯೇ ಶ್ರೀ ವಿಶ್ವಾರಾಧ್ಯನು ವೀರಶೈವಮತಸ್ಥಾಪಕನೂ ಕಾಶೀಸಿಂಹಾಸನಾಧಿಪತಿಯೂ ಆಗಿರುವನೆಂಬ ವಿಷಯವು, '**ವೀರಶೈವಸದಾಚಾರಸಂಗ್ರಹ**' (ಪುಟ ೬, ೭, ೮.) '**ವೀರಶೈವಾಚಾರಪ್ರದೀಪಿಕಾ**' (ಪುಟ ೩೩ ಮತ್ತು ಆಂಧ್ರಲಿಪಿಯ ಪ್ರತಿ ಪುಟ ೫೭) '**ವೀರಶೈವಾನ್ವಯಚಂದ್ರಿಕೆ**' (ಪುಟ೧೨೩) ಮುಂತಾದ ಅನೇಕ ಪ್ರಾಚೀನಗ್ರಂಥಗಳಲ್ಲಿ ಬಂದಿರುವ ಸಂಗತಿಯು ವೀರಶೈವವಾಙ್ಮಯಪರಿಶೀಲನಮಾಡಿದ ಪಂಡಿತರಿಗೆ ಗೊತ್ತಾಗದಿರದು. '**ಯಜುರ್ವೇದೀಯ ವೀರಲೈಂಗ್ಯೋಪನಿಷತ್ತು**' ಎಂಬ ಅತ್ಯಂತ ಪುರಾತನಗ್ರಂಥದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಉತ್ಪತ್ತಿ ವಿಷಯವನ್ನು ಹೇಳುವಾಗ '**ಈಶಾನಮುಖಮಾಸೀದ್ವಿಶ್ವಕರ್ಣಗಣೇಶಾರಾಧ್ಯಉದ್ಭವತಿ**' ಎಂದು ವೇದಪುರುಷನು ವಿಶ್ವಾರಾಧ್ಯನ ಉಪನಾಮವಾದ 'ವಿಶ್ವಕರ್ಣ' ನಾಮಧೇಯವನ್ನು ಘಂಟಾಘೋಷವಾಗಿ ಸಾರಿದ್ದಾನೆ. ಈಗಲೂ ದ್ರಾವಿಡಕರ್ನಾಟಕಾಂಧ್ರಮಹಾರಾಷ್ಟ್ರದೇಶಗಳ ವೀರಶೈವರ ವಿವಾಹಾದಿ ಶುಭಕಾರ್ಯಗಳಲ್ಲಿ ಪಂಚಕಲಶಾಂತರ್ಗತವಾಗಿ ಶ್ರೀ ವಿಶ್ವಾರಾಧ್ಯನ ಕಲಶಪೂಜೆಯು ಶಾಸ್ತ್ರದಿಂದಲೂ ಪರಂಪರಾರೂಢಿಯಿಂದಲೂ ಪ್ರಸಿದ್ಧವೇ ಆಗಿದೆ.

ಇವರೆಗೂ ತೋರಿಸಿದ ಅನೇಕಪ್ರಾಚೀನಪ್ರಬಲಪ್ರಮಾಣಗಳಿಂದ ಪರಮಪ್ರಖ್ಯಾತನಾದ ಶ್ರೀ ಜಗದ್ಗುರು ವಿಶ್ವಾರಾಧ್ಯನ ಜ್ಞಾನಸಿಂಹಾಸನ ಮಹಾಪೀಠವು ಶ್ರೀ ಕಾಶೀಕ್ಷೇತ್ರದಲ್ಲಿರುವದು ಸಿದ್ಧಾಂತವಾಗಿರುವಾಗ ಅಧುನಿಕನಾದ ಲಿಂಗಣ್ಣಕವಿಯು ತನ್ನ ಕೆಳದಿನೃಪವಿಜಯದಲ್ಲಿ ವಿಶ್ವಾರಾಧ್ಯಪೀಠದ ಹೆಸರನ್ನು ಬರೆಯದಿರುವುದು ಧಾರಾಳವಾಗಿ ಪ್ರಮಾದವೆಂದೇ ಹೇಳಬೇಕಾಗಿದೆ.

ಇಲ್ಲಿ ಬೆಳಗಾಂ ಗುರುಲಿಂಗಪ್ಪನು "ಬಸವನ ಕಾಲದಲ್ಲಿದ್ದ ಕಲಕೇತ ಬ್ರಹ್ಮಯ್ಯನಿಗೇನೆ ಶೀಲವಂತನಾಯಕನೆಂಬ ಹೆಸರಿತ್ತು: ಆತನೇ ಬಂದು ಕಾಶೀಮಠವನ್ನು ಸ್ಥಾಪಿಸಿದ್ದಾನೆ. ಶ್ರೀ ವಿಶ್ವಾರಾಧ್ಯಪೀಠವು ಬಸವನ ಕಾಲದಲ್ಲಿಯೇ ಹುಟ್ಟಿತು. ಮರಿತೋಂಟದಾರ್ಯನ 'ವೀರಶೈವಾನಂದಚಂದ್ರಿಕೆ' ಯಲ್ಲಿ ಕಲಕೇತಬ್ರಹ್ಮಯ್ಯನು ಶೀಲವಂತನಾಯಕನೆಂದು ಹೇಳಲ್ಪಟ್ಟಿದೆ' ಎಂದು ಬರೆಯುತ್ತಾನೆ. ಈ ಗೋಲಾಟವನ್ನಿಷ್ಟು ವಿಚಾರಿಸೋಣ! ಬಸವನ ಚರಿತ್ರೆಯನ್ನು ವರ್ಣಿಸುವ ಪುಸ್ತಕಗಳಲ್ಲಿ ಆಂಧ್ರಭಾಷೆಯ ಬಸವಪುರಾಣವೇ ಪ್ರಾಚೀನವಾಗಿದೆ. ಅದರ ಪಂಚಮಾಶ್ವಾಸದಲ್ಲಿ ಕಲಕೇತಬ್ರಹ್ಮಯ್ಯನ ಕಥೆಯು ವರ್ಣಿತವಾಗಿದೆ. ಆತನು "ಕಾಲಿಗೆ ಗೆಜ್ಜೆಕಟ್ಟಿಕೊಂಡು ಕುಪ್ಪಸತೊಟ್ಟುಕೊಂಡು ಟಗರಿನ ಕೋಡನ್ನು ಹಿಡಿದುಕೊಂಡು ಕುಣಿದಾಡುತ್ತ ಜಂಗಮರಿಗೆ ವಿನೋದವನ್ನುಂಟುಮಾಡುವ" ಶಿವಭಕ್ತನೆಂದು ಮಾತ್ರ ಗೊತ್ತಾಗುತ್ತದೆ. ಭೀಮಕವಿಯ ಕನ್ನಡ ಬಸವಪುರಾಣ (೫ ನೆಯ ಕಾಂಡ) ದಲ್ಲಿಯೂ ಇದೇ ಕಥೆಯು ಅನುವಾದಿಸಲ್ಪಟ್ಟಿದೆ. ವಾರದ ಅಪ್ಪಾಸಾಹೇಬರು ಮುದ್ರಿಸಿದ ಹೇಲಾಪುರದ ಬಸವಕವಿಯ ಸಂಸ್ಕೃತ ಬಸವಪುರಾಣ (೨೯ನೆಯ ಅಧ್ಯಾಯ) ದಲ್ಲಿಯೂ "ಕಲಕೇತ ಬ್ರಹ್ಮಯ್ಯನು ಹಾಸ್ಯವೇಷವನ್ನು ಧಾರಣಮಾಡಿ ಶಿವಭಕ್ತರನ್ನು ನಗಿಸುತ್ತಿದ್ದನೆಂದು ಸ್ಪಷ್ಟವಾಗಿಯೇ ಬರೆಯಲ್ಪಟ್ಟಿದೆ. ಅಂದರೆ ಈ **ಕಲಿಕೇತಬ್ರಹ್ಮಯ್ಯನು** ಕರ್ನಾಟಕದೇಶದಲ್ಲಿ ಈಗಲೂ ಪ್ರಚಾರದಲ್ಲಿರುವ **ಸಿಳ್ಳೆಕ್ಯಾತರ** ವಂಶಕ್ಕೆ ಸೇರಿದವನೆಂದು ಗೊತ್ತಾಗುತ್ತದೆಯೇ ಹೊರತು ಇವನಿಗೆ ಶೀಲವಂತನಾಯಕನೆಂಬ ಉಪನಾಮವಿದ್ದಂತೆಯಾಗಲಿ ಇವನು ಎಲ್ಲಿಗಾದರೂ ಹೋಗಿ ಮಠಸ್ಥಾಪನೆ ಮಾಡಿದನೆಂದಾಗಲಿ ಬಸವರಾಜಗಳೆ, ಚನ್ನಬಸಪುರಾಣ, ಪ್ರಭುಲಿಂಗಲೀಲೆ, ಶಿಂಗಿರಾಜಪುರಾಣ ಮುಂತಾದ ವಿರಕ್ತಧರ್ಮದ ಯಾವ ಪುಸ್ತಕಗಳಲ್ಲಿಯೂ ಹೇಳುವದಿಲ್ಲ. ಕಲಕೇತಬ್ರಹ್ಮಯ್ಯನೆಂಬ ಪ್ರಸಿದ್ಧ ನಾಮವನ್ನು ಬಿಟ್ಟು ಕೆಳದಿನೃಪವಿಜಯದಲ್ಲಿ ಅಪ್ರಸಿದ್ಧವಾದ ಶೀಲವಂತನಾಯಕನೆಂಬ ಹೆಸರನ್ನು ಬರೆಯುವ ಕಷ್ಟಪ್ರಸಂಗವಾದರೂ ಏನಿದ್ದಿತು? ವೀರಶೈವಾನಂದಚಂದ್ರಿಕೆಯ ಹತ್ತನೆಯ ಪ್ರಕರಣದಲ್ಲಿ ಪ್ರಾಸಂಗಿಕವಾಗಿ ಕಲಕೇತಬ್ರಹ್ಮಯ್ಯನ ವಿಷಯವು ಈ ಕೆಳಗೆ ಬರೆದಂತೆ ಬಂದಿದೆ.

ಕಲಿಕೇತಬ್ರಹ್ಮನಾಮ್ನಾ ಪುರಾ ಶೀಲವತಾ ಸ್ಮೃತಂ |
ಸ್ಥಾಪಿತಂ............ಪ್ರಮಥಾನಾಂ ಸಭಾಂತರೇ |
ವಿಶ್ವದ್ವರ್ಯ ತ್ವಯಾ ಪ್ರೋಕ್ತಮಷ್ಟಾವರಣವೈಭವಂ ||

ಇದರ ತಾತ್ಪರ್ಯವು ಹೀಗೆ—'ಎಲೈ ಪಂಡಿತವರ್ಯನೇ! ಹಿಂದೆ ಪ್ರಮಥರ ಸಭೆಯಲ್ಲಿ ಅರುವತ್ತುನಾಲ್ಕು ಶೀಲಗಳನ್ನಾಚರಿಸುವ ಕಲಿಕೇತಬ್ರಹ್ಮಯ್ಯನಿಂದ ಸ್ಪಷ್ಟವಾಗಿ ಸ್ಥಾಪಿಸಲ್ಪಟ್ಟಂತಹ ಅಷ್ಟಾವರಣವಿಷಯವನ್ನು ನೀನು ಬಹಳ ಚೆನ್ನಾಗಿ ಹೇಳಿರುವಿ' ಇದರ ಅರ್ಥವನ್ನು ನೋಡಿದಿರಾ? ಇದರಲ್ಲಿರುವ '**ಶೀಲವತಾ**' ಎಂಬ ಶಬ್ದಕ್ಕೆ ಗುರುಲಿಂಗಪ್ಪನು '**ಶೀಲವಂತನಾಯಕನೆಂಬ ಉಪನಾಮವುಳ್ಳ**' ಎಂದು ಅರ್ಥವನ್ನು ಮಾಡಿದ್ದಾನೆ. ಇದು ಗುರುಲಿಂಗಪ್ಪನ ಮುಸಲಾಗ್ರಬುದ್ಧಿಗೆ ಮುಖ್ಯ ಉದಾಹರಣವಾಗಿದೆ. ಪಾಪ! ಆತನ ಮರ್ಮವೇ ಹಾಗಿದೆ, ಯಾರೇನು ಮಾಡಬೇಕು? '**ಕಾಶೀಗಮನಮಾತ್ರೇಣ ನಾನ್ನಂ ಭಟ್ಟಾಯತೇ ದ್ವಿಜಃ**' ಎಂಬ ಅಯೋಕ್ತಿಯಂತೆ ಕಾಶಿಯಲ್ಲಿ ವಾಸಮಾಡಿದವರಿಗೆಲ್ಲ ಸಂಸ್ಕೃತವು ಬರುವಂತಿಲ್ಲ. ತಪ್ಪುಪಟ್ಟು ಕಾವ್ಯಗಳನ್ನಾದರೂ ಕಲಿಯದೆ ಶಬ್ದಗಳಿಗೆ ಮನಬಂದಂತೆ ಅರ್ಥವನ್ನು ಬರೆದರೆ ಅದು ಪಂಡಿತಸಮ್ಮತವಾಗಲಾರದು. ಅಥವಾ ಯಾವ ದೀಡುಪಂಡಿತನ ಹೇಳಿಕೆಯಂತೆ ಹೀಗೆ ಬರೆದನೋ ತಿಳಿಯಲಾಗದು ಇರಲಿ; ಅಯ್ಯಾ! ಗುರುಲಿಂಗಪ್ಪನೇ! '**ಶೀಲವತಾ**' ಎಂಬ ಶಬ್ದವು '**ಕಲಿಕೇತಬ್ರಹ್ಮನಾಮ್ನಾ**' ಎಂಬ ಪದಕ್ಕೆ ವಿಶೇಷಣವಾಗಿದೆ. ಅದಕ್ಕೆ '**ಆಚಾರ (ಶೀಲ) ಸಂಪನ್ನನಾದ ಕಲಿಕೇತಬ್ರಹ್ಮನಿಂದ**' ಎಂದು ಅರ್ಥವಾಗುತ್ತದೆ. ಕೆಳದಿನೃಪವಿಜಯದಲ್ಲಿಯ 'ಶೀಲವಂತನಾಯಕ' ಶಬ್ದಕ್ಕೂ ವೀರಶೈವಾನಂದಚಂದ್ರಿಕೆಯ 'ಶೀಲವತಾ' ಶಬ್ದಕ್ಕೂ ಯಾವ ಸಂಬಂಧವೂ ಇಲ್ಲ. ಈ ವಿಷಯವು ಸ್ವಲ್ಪ ಸಂಸ್ಕೃತವನ್ನೋದಿಕೊಂಡ ಹುಡುಗರಿಗೂ ಗೊತ್ತಾಗುವಂತಿದೆ. ಅಸ್ತು!

ವೀರಶೈವಾನಂದಚಂದ್ರಿಕೆಯನ್ನು ರಚಿಸಿದ ಮರಿತೋಂಟದಾರ್ಯನು ವಿರಕ್ತಕುಲದವನಾಗಿದ್ದರೂ ಧರ್ಮಶಾಸ್ತ್ರಜ್ಞನಾದುದರಿಂದ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ಅತ್ಯಂತ ಭಕ್ತಿಶ್ರದ್ಧೆಗಳುಳ್ಳವನಾಗಿದ್ದನು. ಈತನು '**ಸಿದ್ಧಾಂತ ಶಿಖಾಮಣಿ**' ಯೆಂಬ ಗ್ರಂಥಕ್ಕೆ '**ತತ್ತ್ವದೀಪಿಕೆ**' ಯೆಂಬ ವ್ಯಾಖ್ಯಾನವನ್ನು ವಿರಚಿಸಿದುದು ಪ್ರಸಿದ್ಧವೇ ಆದೆ. ಇದರಲ್ಲಿಯ ಗುರುಕಾರಣ್ಯಸ್ಥಲದ ೧೯ನೆಯ ಶ್ಲೋಕಕ್ಕೆ ವ್ಯಾಖ್ಯಾನವನ್ನು ಬರೆಯುವಾಗ '**ಋತ್ವಿಗ್ಭಿಃ**' ಎಂಬ ಪದಕ್ಕೆ '**ಭುವನಪ್ರಸಿದ್ಧ ಪಂಚಾಚಾರ್ಯ ಸಂಪ್ರದಾಯಾನುಗೈಃ**' ಎಂತಲೂ '**ಆಚಾರ್ಯೈಃ**' ಎಂಬ ಶಬ್ದಕ್ಕೆ '**ತತ್ಸಂಪ್ರದಾಯ ಏವ ಆಚಾರ್ಯ ಪಟ್ಟಾಧಿಷಿಕ್ತೈಃ**' ಎಂತಲೂ ಸ್ಪಷ್ಟವಾಗಿ ಅರ್ಥವನ್ನು ಬರೆದಿದ್ದಾನೆ. ಎಂದರೆ—ಶಿವದೀಕ್ಷಾಕಾಲದಲ್ಲಿ '**ಪಂಚಕಲಶ**' ಗಳನ್ನು ಸ್ಥಾಪನೆಮಾಡಿದಾಗ ಜಗತ್ಪ್ರಸಿದ್ಧರಾದ ಪಂಚಾಚಾರ್ಯರ ಗೋತ್ರ ಜಾತರೇ ಋತ್ವಿಜರನ್ನಾಗಿ ಆಗಬೇಕೆಂಬಲೂ ಶಿಷ್ಯೋಪದೇಶ ಮಾಡುವ ಮುಖ್ಯಾಚಾರ್ಯರು ಅವಶ್ಯವಾಗಿ ಪಟ್ಟಾಧಿಕಾರಿಗಳಾಗಿರಬೇಕೆಂಬಲೂ ಮುಂದಿನವರಿಗೆ ತಿಳಿಯುವ ಹಾಗೆ ಬರೆದಿದ್ದಾನೆ. ಎಂದಮೇಲೆ ಮರಿತೋಂಟದಾರ್ಯನಿಗೆ **ಪಂಚಾಚಾರ್ಯರಲ್ಲಿ** ಸುಪ್ರಸಿದ್ಧರಾದ **ಶ್ರೀ ವಿಶ್ವಾರಾಧ್ಯರ ಪರಿಚಯವು ಚೆನ್ನಾಗಿದ್ದಿ**ತೆಂದೇ ಸಿದ್ಧವಾಗುತ್ತದೆ. ಇಂತಹ ಆಚಾರ್ಯಭಕ್ತರಾದ ಮರಿತೋಂಟದಾರ್ಯರು ತಮ್ಮ ಒಂದು ಗ್ರಂಥದಲ್ಲಿ ಅನಾದಿಸಂಸಿದ್ಧರಾದ ಶ್ರೀ ವಿಶ್ವಾರಾಧ್ಯರನ್ನು ಸ್ಮರಿಸಿ ಮತ್ತೊಂದು ಗ್ರಂಥದಲ್ಲಿ ತಮ್ಮ ಬರಹಕ್ಕೆ ವಿರುದ್ಧವಾದ ವಿಷಯವನ್ನು ಎಂದಿಗೂ ಬರೆಯಲಾರರು. ಆತನೂ ಹಾಗೆ ಬರೆದೂ ಇಲ್ಲ! ಇಂತಹ ಗುರುಭಕ್ತರಾದ ಮರಿತೋಂಟದಾರ್ಯರ ಮೇಲೆ ದುರ್ಭ್ರಾಂತರಾರಾದರೂ ಗುರುದ್ರೋಹದ ಅಪವಾದವನ್ನು ಹೊರಿಸುವದಾದರೆ ಅಂತಹವರಿಗೆ ಪರಶಿವನು ಶಿಕ್ಷೆಯನ್ನು ಕೊಡದೆ ಬಿಡಲಾರನು.

ಈ ಮೇರೆಗೆ ಉದಾಹರಿಸಲ್ಪಟ್ಟ ಸ್ವಾಯಂಭುವಾಗಮ, ಯಜುರ್ವೇದ ವೀರಲೈಂಗೋಪನಿಷತ್, ನಾರಾಯಣೋಪನಿಷಚ್ಛೈವಭಾಷ್ಯ, ಶಿವಾದ್ವೈತಪಂಚಕ, ಸಿದ್ಧಾಂತಶಿಖಾಮಣಿ, ವೀರಶೈವಾಚಾರಪ್ರದೀಪಿಕಾ, ವೀರಶೈವಸದಾಚಾರಸಂಗ್ರಹ, ಮುಂತಾದ ಉದ್ಗ್ರಂಥಗಳಿಂದಲೂ ಜಯನಂದದೇವಮಹಾರಾಜನ ಶಾಸನದಿಂದಲೂ ಕಾಶೀಕ್ಷೇತ್ರದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪೀಠವು ಅನಾದಿಕಾಲದಿಂದಲೂ ವಿರಾಜಿಸುತ್ತಿರುವುದೆಂಬುದನ್ನು ಗುರುಲಿಂಗಪ್ಪನು ಚೆನ್ನಾಗಿ ತಿಳಿದುಕೊಳ್ಳಬೇಕು. ಶ್ರೀ ವಿಶ್ವಾರಾಧ್ಯಪೀಠದ ಅನೇಕ ಶಾಖಾಮಠಗಳು ಕರ್ನಾಟಕ ಮಹಾರಾಷ್ಟ್ರಾಂಧ್ರದೇಶಗಳಲ್ಲಿ ಈಗಲೂ ವಿರಾಜಿಸುತ್ತಿರುವವು. ಇವುಗಳಲ್ಲಿ ಹೂಲಿಯ (ಬೆಳಗಾಂಜಿಲ್ಲಾ) ಪಂಚವರ್ಣಬೃಹನ್ಮಠವು ಕ್ರಿ. ಶ. ೫ ನೆಯ ಶತಮಾನಕ್ಕಿಂತಲೂ ಪ್ರಾಚೀನವೆಂಬುದೀಗ ಗೊತ್ತಾಗಿದೆ. ('ಶಿವಾನುಭವ' ವರ್ಷ ೨. ಸ. ೩.) ಶಾಖಾಮಠಗಳೇ ಇಷ್ಟು ಪ್ರಾಚೀನವಾಗಿರುವಾಗ ಆದಿಮಠವಾದ ಶ್ರೀ ವಿಶ್ವಾರಾಧ್ಯಮಹಾಪೀಠದ ಪ್ರಾಚೀನತ್ವವನ್ನು ಸ್ವೀಕರಿಸಲು ಕಷ್ಟಪಡಬೇಕಾಗಿಲ್ಲವು.

ಜಂಗಮವಾಡೀಮಠದ ವಿಚಾರ.

ಲಿಂಗಣ್ಣಕವಿಯು ಕೆಳದಿನೃಪವಿಜಯದ ಮೂರನೆಯಾಶ್ವಾಸದಲ್ಲಿ ಕೆಳದಿ ರಾಜರಲ್ಲಿ ಮೂರನೆಯವನಾದ ದೊಡ್ಡಸಂಕಣ್ಣನಾಯಕನ ಚರಿತ್ರೆಯನ್ನು ಬಹಳ ವಿಶೇಷವಾಗಿ ವರ್ಣಿಸಿದ್ದಾನೆ. ಈ ಆಶ್ವಾಸವೇ ಕವಿಯ ಕಲ್ಪನಾಚಾತುರ್ಯಕ್ಕೆ ಉದಾಹರಣವಾಗಿದೆ. ಈ ಕಲ್ಪನಾವಿಷ್ಕಾರವಿಯದೆ ಬೆಳಗಾಂ ಗುರುಲಿಂಗಪ್ಪನು ಇದರಲ್ಲಿಯ ಕಲ್ಪನಾಕಥೆಯನ್ನು ಸತ್ಯವೆಂದು ಭಾವಿಸಿ ಜಂಗಮವಾಡಿ ಮಠದ ವಿಷಯದಲ್ಲಿ ಏನೇನೋ ಬರೆದು ನೋಡಹೋಗಿದ್ದಾನೆ. ಮೊದಲು ಆ ಪ್ರಕರಣದ ಮುಖ್ಯ ವಿಷಯವನ್ನಿಲ್ಲಿ ಬರೆದು ಆ ಮೇಲೆ ಅದರ ಶುದ್ಧವಿಮರ್ಶೆಯನ್ನು ಬರೆಯುವೆನಾದುದರಿಂದ ಕುಶಲರಾದ ವಾಚಕರು ಸಾವಧಾನವಾಗಿ ವಿಚಾರಿಸಿಕೊಳ್ಳಬೇಕೆಂದು ಸೂಚಿಸುವೆನು. ತೃತೀಯಾಶ್ವಾಸದಲ್ಲಿ ಲಿಂಗಣ್ಣಕವಿಯ ಬರಹವು ಹೀಗಿದೆ—

'ಶಾಲಿವಾಹನಶಕ ೧೪೬೮ ವಿಶ್ವಾವಸು ಸಂವತ್ಸರದಲ್ಲಿ ರಾಜ್ಯ ಪಟ್ಟಕ್ಕೆ ಬಂದ ದೊಡ್ಡಸಂಕಣ್ಣನಾಯಕನು ಕೆಲವು ವರ್ಷಗಳ ಪರ್ಯಂತರ ಧೈರ್ಯದಿಂದಲೂ ಧರ್ಮದಿಂದಲೂ ರಾಜ್ಯವಾಳಿದಮೇಲೆ ರಾಜ್ಯಭಾರವನ್ನು ತನ್ನ ತಮ್ಮನಾದ ಚಿಕ್ಕ ಸಂಕಣ್ಣನಾಯಕನಿಗೆ ಒಪ್ಪಿಸಿ ತಾನು ಜಂಗಮವೇಷವನ್ನು ತಾಳಿಕೊಂಡು, ನಾಲ್ಕು ಜನ ಆಳುಗಳನ್ನು ಹಿಂದಿರಿಸಿಕೊಂಡು ತೀರ್ಥಾಟನಕ್ಕೋಸುಗ ಹೊರಟು ರಾಮೇಶ್ವರಾದಿ ದಕ್ಷಿಣಯಾತ್ರೆಯನ್ನು ಮುಗಿಸಿಕೊಂಡು ದಿಲ್ಲಿಗೆ ಬಂದು 'ಅಂಕುಶಖಾನ' ನೆಂಬ ವಜೀರ (ಮಂತ್ರಿ)ನನ್ನು ಖಡ್ಗಯುದ್ಧದಲ್ಲಿ ಸೋಲಿಸಿಕೊಂಡು ದಿಲ್ಲೀ ಬಾದಶಹನಿಗೆ ಸಂತೋಷವನ್ನುಂಟುಮಾಡಿ 'ನಾನು ಕೆಲವು ಕಡೆ ಜಂಗಮರಿಗೆ ಮಠಗಳನ್ನು ಕಟ್ಟಿಸಬೇಕಾಗಿದೆ ಭೂಮಿಯನ್ನು ಕೊಡಿರಿ' ಎಂದು ದೊಡ್ಡಸಂಕಣ್ಣನಾಯಕನು ಯಾಚಿಸಲಾಗಿ ಬಾದಶಹನು ಭೂಮಿಯನ್ನು ಕೊಟ್ಟನು. ಆ ಮೇಲೆ ಸಂಕಣ್ಣನಾಯಕನು ದಿಲ್ಲಿಯಲ್ಲಿ ಒಂದು ಮಠವನ್ನು ಕಟ್ಟಿಸಿ ಜಂಗಮರಿಗೆ ದಾನಮಾಡಿ ಪ್ರಯಾಗದಲ್ಲೊಂದು ಮಠವನ್ನು ಜಂಗಮರಿಗರ್ಪಿಸಿ ಕಾಶಿಕ್ಷೇತ್ರಕ್ಕೆ ಬಂದನು. ಅಲ್ಲಿ ಬಹುಕಾಲದಿಂದಿರುವ ಜಂಗಮರ ಮಠವನ್ನು ಮುಸಲ್ಮಾನರು ಆಕ್ರಮಿಸಿರಲಾಗಿ ಅವರನ್ನು ಓಡಿಸಿ ಆ ಸ್ಥಳವನ್ನು ಸಂಪಾದಿಸಿ ನಾಲ್ಕುಕಡೆಗಳಲ್ಲಿ ಹದ್ದುಗಲ್ಲುಗಳನ್ನು ಹಾಕಿಸಿ ಜಂಗಮವಾಡಿ (ಗಾಟ) ಎಂದು ಹೆಸರಿಟ್ಟು ಅದರ ಧರ್ಮಕ್ಕೋಸ್ಕರ ಆ ಮಠದ ನೈರುತ್ಯದಿಕ್ಕಿನಲ್ಲಿ ಜಂಗಮಪುರವೆಂಬ ಗ್ರಾಮವನ್ನು ಬಿಡಿಸಿ ಸ್ಥಿರಶಾಸನವನ್ನು ಬರೆಯಿಸಿ ಜಂಗಮಮೂರ್ತಿಗಳಿಗೆ ಅರ್ಪಿಸಿ ಮತ್ತು ಪಂಚಮಠಗಳನ್ನು ಕಟ್ಟಿಸಿ ಶಿವಜಂಗಮರಿಗೆ ಕೊಟ್ಟು ಶ್ರಾದ್ಧಶಿಲ್ಪಿಗಳಿಂದ ಕಾಶಿಯಲ್ಲಿರುವ ಕಪಿಲಧಾರಾ ಮಾನಸಸರೋವರ ಗಂಧರ್ವಸಾಗರತೀರ್ಥಗಳನ್ನು ಶಿಲಾಮಯಮಾಡಿಸಿ ಕರ್ದಮೇಶ್ವರ ಭೀಮಚಂಡೀ ಮಂದಿರಗಳನ್ನು ಜೀರ್ಣೋದ್ಧಾರಮಾಡಿಸಿ ಸ್ವಪುತ್ರ ವೆಂಕಟಪ್ಪನಾಯಕರ ಹೆಸರಿನಿಂದ ಶಿಲಾಶಾಸನವನ್ನು ಬರೆಯಿಸಿದನು. ಆ ಮೇಲೆ ಗಯಾ, ನೇಪಾಳ, ಕೇದಾರಗಳಲ್ಲಿಯೂ ಮಠಗಳನ್ನು

[೬ ನೆಯ ಪುಟವನ್ನು ನೋಡಿರಿ.]

ಪಂಚಾಚಾರ್ಯ ಪ್ರಭಾ.

೧೯೩೪ ನೇ ಆಗಸ್ಟ್ ತಾ|| ೨೭ ನೇ ಸೋಮವಾರ.

ಸನ್ಯಾಸಾಶ್ರಮ.

ವೀರಶೈವಮತವನ್ನು ವೇದಾಗಮೋಪನಿಷತ್ತುಗಳ ಆಧಾರದಮೇಲೆ ಶ್ರೀ ರೇಣುಕಾದಿ ಪಂಚಾಚಾರ್ಯರು ಸ್ಥಾಪಿಸಿದರೆಂಬುದು ಲೋಕಪ್ರಸಿದ್ಧವಾಗಿದೆಯಷ್ಟೆ! ಆದರೆ ಯಾವ ಮತವು ಯಾರಿಂದ ಸ್ಥಾಪಿಸಲ್ಪಟ್ಟಿರುವುದೋ ಆ ಮತಕ್ಕೆ ಆ ಸ್ಥಾಪನಾಚಾರ್ಯರೇ ಮೂಲಗುರುಗಳಾಗುತ್ತಾರೆಂಬುದು ಸರ್ವರಿಗೂ ವೇದ್ಯವೇ ಆಗಿರುವುದು. ಆಯಾಯ ಮತಾಚಾರ್ಯರು ಸ್ಥಾಪಿಸಿದ ಮತಗಳನ್ನವಲಂಬಿಸಿರುವ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳೆಂಬ ನಾಲ್ಕಾಶ್ರಮದವರೂ ಆಯಾಯ ಮತಾಚಾರ್ಯರಿಗೆ ಶಿಷ್ಯರಾಗಿಯೇ ಇರಬೇಕೆಂಬುದು ಧರ್ಮಶಾಸ್ತ್ರನಿಬಂಧನೆಯಾಗಿದೆ. ಅದ್ವೈತಮತವನ್ನು ಸ್ಥಾಪಿಸಿದ ಶ್ರೀ ಶಂಕರಾಚಾರ್ಯರಲ್ಲಿ ಅದ್ವೈತಮತಾವಲಂಬಿಗಳಾದ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿಗಳೆಂಬವರು ಅಸಾಧಾರಣಭಕ್ತಿಯಿಂದ ನಡೆದುಕೊಳ್ಳುತ್ತಿರುವರಷ್ಟೆ! ಅನೇಕರು ಸನ್ಯಾಸಾಶ್ರಮವನ್ನು ಸ್ವೀಕರಿಸಿದ್ದರೂ ಸ್ಥಾಪನಾಚಾರ್ಯರನ್ನಾಗಲಿ ಅವರ ಪೀಠಗಳನ್ನಾರೋಹಿಸಿದವರನ್ನಾಗಲಿ ಪೂಜಿಸದೆಯೂ ಸ್ತುತಿಸದೆಯೂ ಧ್ಯಾನಿಸದೆಯೂ ಇರುವ ಒಬ್ಬ ಸನ್ಯಾಸಿಯೂ ಯಾವ ಸನಾತನಮತಗಳಲ್ಲಿಯೂ ಇದುವರೆಗೆ ಕಂಡುಬಂದಿಲ್ಲ. ದ್ವೈತಮತದ ಸನ್ಯಾಸಿಯು ದ್ವೈತಮತಸ್ಥಾಪನಾಚಾರ್ಯರಲ್ಲಿಯೂ ವಿಶಿಷ್ಟಾದ್ವೈತಮತದ ಸನ್ಯಾಸಿಯು ವಿಶಿಷ್ಟಾದ್ವೈತಮತ ಸ್ಥಾಪನಾಚಾರ್ಯರಲ್ಲಿಯೂ ಅದ್ವೈತಮತಸನ್ಯಾಸಿಯು ಅದ್ವೈತಮತಸ್ಥಾಪನಾಚಾರ್ಯರಲ್ಲಿಯೂ ಪೂಜ್ಯಬುದ್ಧಿಯನ್ನಿರಿಸಿರುವಂತೆ ಶಕ್ತಿವಿಶಿಷ್ಟಾದ್ವೈತಮತದಸನ್ಯಾಸಿಯು ಕೂಡ ಮತಸ್ಥಾಪನಾಚಾರ್ಯರಲ್ಲಿ ಪೂಜ್ಯಬುದ್ಧಿಯನ್ನಿರಿಸತಕ್ಕದ್ದು ಶಾಸ್ತ್ರೀಯವಾಗಿದ್ದರೂ ಸದ್ಯ ವೀರಶೈವಮತದಲ್ಲಿರುವ ಕೆಲವು ಸನ್ಯಾಸಿಗಳು ಮಾತ್ರ ವೀರಶೈವಮತಾಚಾರ್ಯರಲ್ಲಿ ಪೂಜ್ಯಬುದ್ಧಿಯನ್ನಿರಿಸದೆ ಮತಾಚಾರ್ಯರಿಗಿಂತಲೂ ತಮ್ಮಲ್ಲಿ ವಿಶೇಷವಾದ ಪೂಜ್ಯಬುದ್ಧಿಯನ್ನಾರೋಪಿಸಿಕೊಂಡು ಅನಾದಿಕಾಲದಿಂದ ಬಂದ ಗುರುಶಿಷ್ಯಭಾವವನ್ನು ವಿನಿಮಯಗೊಳಿಸಲು ಹವಣಿಸುತ್ತಿರುವದೊಂದು ಸಾಹಸವೇ ಸರಿ! ವಾಸ್ತವವಾಗಿ ವಿಚಾರಮಾಡಿನೋಡಿದರೆ ವೀರಶೈವಮತದಲ್ಲಿರುವ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥಾಶ್ರಮಿಗಳಿಗಿಂತಲೂ ಸನ್ಯಾಸಾಶ್ರಮಿಗಳಿಗೆ ಮತಾಚಾರ್ಯರಲ್ಲಿ ಅತಿಶಯ ಪೂಜ್ಯಬುದ್ಧಿಯಿರಬೇಕು. ಏಕೆಂದರೆ ವೀರಶೈವಮತಾಚಾರ್ಯರು ಲಿಂಗಾಂಗಸಾಮರಸ್ಯವೆಂಬ ಮುಕ್ತಿಯನ್ನೇರಲು ಭಕ್ತ ಮಾಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯಗಳೆಂಬ ಆರುಸೋಪಾನಗಳನ್ನು ರಚಿಸಿರುವರು. ಈ ಆರುಸೋಪಾನಗಳಲ್ಲಿ ಮೊದಲನೆಯ ಐದುಸೋಪಾನಗಳು ಸಾಧನಸ್ಥಲಗಳಾಗಿಯೂ ಆರನೆಯದು ಸಾಧ್ಯಸ್ಥಲವಾಗಿಯೂ ಇರುತ್ತವೆ. ಈ ಐದು ಸೋಪಾನಗಳಲ್ಲಿರುವ ಧರ್ಮಾಚರಣೆಯನ್ನು ಅನುಷ್ಠಿಸುತ್ತ ಗುರುವು ಅನುಗ್ರಹಿಸಿದ ಶಿವಲಿಂಗವೇ ಪತಿಯು ತಾನೇ ಸತಿಯು ಎಂಬ ಭಾವನಾಬೀಜವು ಬಲಿಯುತ್ತ ಬಂದಹಾಗೆಲ್ಲ ಪ್ರಪಂಚವ್ಯವಹಾರವನ್ನೆಲ್ಲ ತ್ಯಜಿಸುವನು. ಇಂಥವನು

ಕಾಯೇನ ಮನಸಾವಾಚಾ ಶ್ರುತ್ಯಭಿಹಿತ ಕರ್ಮಕಃ |
ತ್ಯಕ್ತ್ವಾ ಗೃಹ ಮಠಾದೀ ಐ ಮನುಷ್ಯಾದಿ ಸ್ಥಲಾನಿಚ ||
ಏಕಾಕಿತ್ವೇನ ಕಾಂತರ್ಯೇ ವನೇ ಗಿರಿಗುಹಾದಿಷು |
ತ್ಯಕ್ತೋತ್ಯ ಜಗಜ್ಜಾಲೋ ಲೌಕಿಕಾಚಾರವರ್ಜಿತಃ ||
ತ್ಯಕ್ತಪ್ರವರ ಗೋತ್ರಶ್ಚ ಸೂತ್ರವರ್ಣಾದಿಕಂ ತಥಾ |
ಪೂರ್ವಾಶ್ರಮ ಗತಾನ್ ಮಾತೃಪಿತ್ರಾದಿಪರಿತ್ಯಜೇತ್ ||
ಗೃಹಸ್ಥೇಷ್ವನ್ನಪಾನಂ ಯಾಚಮಾನೋ ಭವೇದ್ಯತಿಃ |
ಪತ್ರಂ ವೇದವಿಘುಂಜೀತ ನೋಚೇತ್ ಕ್ಷೀತಂ ನ ಕಾರಯೇತ್ ||
ಶಾಂತೋದಾಂತಃ ಸಮಾರೋಹೇದಷ್ಟಾರೋಹಣವರ್ಜಿತಃ |

ಎಂಬ ಪ್ರಮಾಣದಂತೆ ಕಾಯ ವಾಕ್ ಮನಸ್ಸುಗಳಿಂದ ಧೂದ್ರವ್ಯಸ್ತ್ರೀಸಂಬಂಧವಿಲ್ಲದವನಾಗಿಯೂ ಮನೆ ಮಠಗಳಲ್ಲಿ ವಾಸಮಾಡದವನಾಗಿಯೂ ಕಾಡುಮೇಡಗಳಲ್ಲಾಗಲಿ ಗಿರಿಗುಹೆಗಳಲ್ಲಾಗಲಿ ವಾಸಮಾಡುವವನಾಗಿಯೂ ಲೋಕವ್ಯವಹಾರವನ್ನೂ ಜೀವಭಾವವನ್ನೂ ತ್ಯಜಿಸಿದವನಾಗಿಯೂ ತಂದೆತಾಯಿಗಳ ಸೂತ್ರ ಗೋತ್ರಪ್ರವರಗಳಿಲ್ಲದವನಾಗಿಯೂ ಎರಡು ಮೂರು ಮನೆಗಳಲ್ಲಿ ಮಾತ್ರ ಭಿಕ್ಷೆಯನ್ನು ಬೇಡುತ್ತ ತನ್ನ ಶರೀರವೃತ್ತಿಯನ್ನು ನಡೆಸುವವನಾಗಿಯೂ ಆಂದೋಳಿಕಾಶ್ವಾದಿಗಳನ್ನು ತ್ಯಜಿಸಿದವನಾಗಿಯೂ ಇರುವುದೇ ಸನ್ಯಾಸಧರ್ಮದ ಮುಖ್ಯಲಕ್ಷಣಗಳಾಗಿರುತ್ತವೆ. ಆದುದರಿಂದ ಸನ್ಯಾಸವೆಂಬುದು ಶ್ರೀಗುರುಗಳಿಂದ ಮಾಡಲ್ಪಟ್ಟ ಶಿವದೀಕ್ಷಾಪ್ರಭಾವದಿಂದ ಲಬ್ಧವಾದ ಷಟ್‌ಸ್ಥಲಕ್ರಿಯಾಚರಣೆಯಿಂದುಂಟಾಗುವ ವೈರಾಗ್ಯಸಂಪತ್ತಿಯಿಂದುಂಟಾಗುವದು. ಲೋಕದಲ್ಲಿ ಹಸನಾದ ಭೂಮಿಯಲ್ಲಿ ಹದವರಿತು ಬಿತ್ತಿದ ಬೀಜವು ಉತ್ತ ರೋತ್ತರ ಪೋಷಣಕ್ರಿಯೆಗಳಿಂದ ಅಂಕುರಿಸಿ ಪಲ್ಲವಿಸಿ ಕುಸುಮಿತವಾಗುವಂತೆ ವೀರಶೈವನ ಹೃದಯವು ಕಾಲವರಿತು ದೀಕ್ಷಾಸಂಸ್ಕಾರದಿಂದ ಪರಿಶುದ್ಧವಾದ ಬಳಿಕ ಶ್ರೀ ಮಹಾಚಾರ್ಯರಿಂದ ಲಿಂಗಧಾರಣಪೂರ್ವಕ ಉಪದೇಶಿಸಲ್ಪಟ್ಟ ಶಿವಮಂತ್ರವು ಭಕ್ತ್ಯಾದಿ ಕ್ರಿಯಾಚರಣೆಗಳಿಂದ ವಿಕಸಿತವಾಗುತ್ತ ಬಂದಹಾಗೆಲ್ಲ ಐದನೆಯ ಸ್ಥಲವಾದ ಶರಣಸ್ಥಲವನ್ನು ಹೊಂದಿದ ಬಳಿಕ ಕ್ರಮೇಣ ವೈರಾಗ್ಯಸಾಮ್ರಾಜ್ಯಾಧಿಪತ್ಯವು ಕೈ ಸೇರುವುದು. ಆಗಲೇ ಇವನು ಸನ್ಯಾಸಾಶ್ರಮವನ್ನು ಅವಲಂಬಿಸಿದಂತಾಯಿತು. ಇದರಿಂದ ಗುರುವಿನಿಂದ ಶಿವದೀಕ್ಷೆಯನ್ನು ಪಡೆದವರೆಲ್ಲರೂ ಸನ್ಯಾಸಾಶ್ರಮಸ್ವೀಕಾರಮಾಡಲು ಅರ್ಹರಾಗಿರುವರೆಂದು ಸ್ಪಷ್ಟವಾಗುತ್ತದೆ. ತೀವ್ರಾಧಿಕಾರಿಯಾಗಿದ್ದರೆ ಗುರುವಿನಿಂದ ಬ್ರಹ್ಮಚರ್ಯಾಶ್ರಮ ಸ್ವೀಕಾರಮಾಡಿದ್ದು ಮಧ್ಯದಲ್ಲಿ ಗೃಹಸ್ಥಾಶ್ರಮ ವಾನಪ್ರಸ್ಥಾಶ್ರಮ ಸ್ವೀಕಾರವಿಲ್ಲದೆ ಸನ್ಯಾಸಾಶ್ರಮ ಸ್ವೀಕಾರ ಮಾಡಬಹುದು. ಚಿತ್ತವು ಎಷ್ಟರಮಟ್ಟಿಗೆ ಪರಿಪಾಕಾವಸ್ಥೆಯನ್ನು ಹೊಂದುತ್ತ ಬರುವುದೋ ಹಾಗೆ ಹಾಗೆ ಸನ್ಯಾಸಾಧಿಕಾರವು ಸಿದ್ಧವಾಗುವುದು. "ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್" ಎಂದು ವೈರಾಗ್ಯವು ಉದಿಸುವುದೋ ಅಂದೇ ಸನ್ಯಾಸಸ್ವೀಕಾರವೆಂದು ಶ್ರುತಿಯು ಇದೇ ಅರ್ಥವನ್ನು ಸಾರುವುದರಿಂದ ಪ್ರತಿಯೊಬ್ಬನೂ ನಾಲ್ಕಾಶ್ರಮಗಳನ್ನು ಹೊಂದಲು ಅರ್ಹನಾಗಿದ್ದಾನೆ. ಇದಲ್ಲದೆ ಸನ್ಯಾಸಾಶ್ರಮಕ್ಕೂ ಮುಕ್ತಿಗೂ ಅತ್ಯಂತ ಸಾಮೀಪ್ಯವಿರುವುದರಿಂದ ಮುಮುಕ್ಷುಗಳಾದವರೆಲ್ಲರೂ ಕ್ರಮೇಣ ಸೋಪಾನಗಳನ್ನೇರುತ್ತ ಸನ್ಯಾಸವೆಂಬ ಸೋಪಾನದಲ್ಲಿ ವಿಶ್ರಮಿಸಿಯೇ ಮುಂದಕ್ಕೆ ಹೋಗಬೇಕಾಗಿರುವುದು. ಮತಸ್ಥಾಪಕರಾದ ಶ್ರೀ ರೇಣುಕಾದ್ಯಾಚಾರ್ಯರಿಂದ ಲಿಂಗಧಾರಣಪೂರ್ವಕ ಉಪದೇಶಿಸಲ್ಪಟ್ಟ ಅಷ್ಟಾವರಣಗಳನ್ನಾಗಲಿ ಷಟ್‌ಸ್ಥಲಗಳನ್ನಾಗಲಿ ಬಿಟ್ಟು ಬೇರೊಂದು ಧರ್ಮವನ್ನು ಯಾರೂ ಅವಲಂಬಿಸಿಲ್ಲ. ಪ್ರತಿಯೊಂದು ರೋಮನಾಳಗಳಲ್ಲಿಯೂ ದೇಹವಿರುವವರೆಗೆ ಮತಸ್ಥಾಪನಾಚಾರ್ಯರು ಬೋಧಿಸಿದ ಧರ್ಮಗಳು ವ್ಯಾಪಿಸಿಕೊಂಡಿರುತ್ತವೆಂಬುವದು ಪ್ರತ್ಯಕ್ಷಪ್ರಮಾಣದಿಂದಲೂ ಸಿದ್ಧಾಂತವಾಕ್ಯಗಳಿಂದಲೂ ಸಿದ್ಧವಾಗುತ್ತದೆ. ಯಾವನು ಗುರೂಪದಿಷ್ಟವಾದ ಅಷ್ಟಾವರಣಗಳನ್ನು ಷಟ್‌ಸ್ಥಲಗಳನ್ನು ಬಿಟ್ಟಿರುವನೋ ಅವನು ಬ್ರಹ್ಮಚಾರಿಯಾಗಲಿ ಗೃಹಸ್ಥನಾಗಲಿ ವಾನಪ್ರಸ್ಥನಾಗಲಿ ಸನ್ಯಾಸಿಯಾಗಲಿ ಸರ್ವರೂ ವೀರಶೈವಮತಬಾಹ್ಯರಾಗುತ್ತಾರೆ.

ಕ್ರಿಯಾದೀಕ್ಷಾ ವಿನಾ ಪೂರ್ವೈರಾಚಾರ್ಯೈರ್ದತ್ತ ಮಂಜಸಾ |
ಸತ್ಕ್ರಿಯಾಸಂಯುತಂ ಚೇಷ್ಟಲಿಂಗಬ್ರಹ್ಮಮಯಂ ತಥಾ ||
ಗುರುವಕ್ತ್ರೇಣ ಸಂಪ್ರೋಕ್ತು ಶರೀರೇತು ಪ್ರತಿಷ್ಠಿತಂ |
ಇದಂ ಪ್ರಾಣಮಯಂ ಲಿಂಗಮಿತಿಸಂಭಾವಯೇತ್ತಥಾ ||
ತಚ್ಚೈವ ಪ್ರಾಣಲಿಂಗಂತು ಶರೀರೇ ಕಾರಣಾಹ್ವಯೇ |
ಭಾವಲಿಂಗಮಿತಿಜ್ಞಾತ್ವಾ ಚೇಷ್ಟಲಿಂಗಂ ಪ್ರಿಥಾಕೃತಂ ||
ಮಹಾಲಿಂಗಮಿತಿಜ್ಞಾತ್ವಾ ಕೇಚಿ ಭೇದಂ ನ ಭಾವಯೇತ್ |
ಇಷ್ಟಲಿಂಗಂ ತತೋಧೃತ್ವಾ ಪಂಚಾಚಾರ್ಯೈಸ್ತದೀಶ್ವರಂ ||
ಅಂತರಂಗೇ ಶಿವಧ್ಯಾನಂ ಭಾವಯಿತ್ವಾ ನ ದೂಷಯೇತ್ ||

ಇತ್ಯಾದಿ ಶಿವಾಗಮಪ್ರಮಾಣಗಳಿಂದಲೂ ಸನ್ಯಾಸಾಶ್ರಮಿಗಳು ಶ್ರೀ ಪಂಚಾಚಾರ್ಯರಿಂದ ಅನುಗ್ರಹಿಸಲ್ಪಟ್ಟ ಶಿವಲಿಂಗವನ್ನು ಧರಿಸಿದ ಮೇಲೆ ಶ್ರೀ ಪಂಚಾಚಾರ್ಯರನ್ನು ತಂದೆಯೋಪಾದಿಯಲ್ಲಿ ಭಾವಿಸುತ್ತಿರಬೇಕೆಂದು ಸ್ಪಷ್ಟವಾಗುತ್ತದೆ. ಹಿಂದೆ ಸನ್ಯಾಸಿಚೂಡಾಮಣಿಗಳಾದ ಅನೇಕಾನೇಕ ವಿರಕ್ತ ಮಹಾತ್ಮರು ತಮಗೆ ಷಟ್‌ಸ್ಥಲಗಳು ವಶವಾದ ಹಾಗೆಲ್ಲ ರೇಣುಕಾದ್ಯಾಚಾರ್ಯರಲ್ಲಿ ಅಸಾಧಾರಣ ಭಕ್ತಿಯಿಂದ ವರ್ತಿಸುತ್ತ ಲೋಕಪೂಜ್ಯರೆನಿಸಿಕೊಂಡರು. ಇತ್ತೀಚೆಗೆ ಇಂಥ ಸನ್ಯಾಸ ಧರ್ಮವು ತಪ್ಪಿಹೋಗಿ ಅಪಕ್ವಮತಿಗಳಾದವರು ಬಲಾತ್ಕಾರದಿಂದ ಸನ್ಯಾಸಿಗಳಾಗುತ್ತ ಶಾಸ್ತ್ರವಿರುದ್ಧವಾದ ಮಾರ್ಗದಲ್ಲಿ ಕಾಲಿಡುತ್ತ ಮೂಲಗುರುಗಳಿಗಿಂತಲೂ ತಾವು ಪೂಜ್ಯರೆಂಬ ವಿಪರೀತಭಾವನೆಯಿಂದೊಡಗೂಡಿರುವುದರಿಂದ ಸಮಾಜದಲ್ಲಿ ಗೊಂದಲಗಳಿಗವಕಾಶವುಂಟಾಗಿರುತ್ತದೆ. ಮತಸ್ಥಾಪನಾಚಾರ್ಯರಿಗಿಂತಲೂ ಪೂಜ್ಯವಾದ ವಸ್ತುವೆಂದರೆ ಸೃಷ್ಟಿಕರ್ತನಾದ ಆ ಈಶ್ವರನೊಬ್ಬನೇ ಹೊರತು ಬೇರೆ ಯಾರೂ ಆಗಲಾರರು.

ಶ್ರೀ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತವೆಂಬ ವೃಕ್ಷವನ್ನಾಶ್ರಯಿಸಿರುವ ನಾಲ್ಕಾಶ್ರಮಗಳೆಂಬ ಕೊಂಬೆಗಳಲ್ಲಿ ಸನ್ಯಾಸವೆಂಬುದೊಂದು ಪ್ರಧಾನ ಶಾಖೆಯಾಗಿರುವುದರಿಂದ ಬ್ರಹ್ಮಚರ್ಯಾದ್ಯಾಶ್ರಮಿಗಳಂತೆ ಸನ್ಯಾಸಾಶ್ರಮಿಗಳೂ ಸಹ ಮತಸ್ಥಾಪನಾಚಾರ್ಯರಲ್ಲಿ ಅಸಾಧಾರಣಭಕ್ತಿಯಿಂದ ನಡೆಯುತ್ತ ತಾವು ಪಡೆದಿರುವ ಅಷ್ಟಾವರಣ ಷಟ್‌ಸ್ಥಲ ಲಿಂಗಾಂಗ ಸಾಮರಸ್ಯವೆಂಬ ಗುರುಧನವನ್ನು ಪೋಷಿಸುತ್ತಿರುವುದೇ ಸನ್ಯಾಸಿಗಳ ಕರ್ತವ್ಯವಾಗಿದೆ.

ಒಳದೇಶದ ವೃತ್ತಾಂತಗಳು.

ಕಳೆದವಾರ ಕೋಲಾರದ ಚಿನ್ನದ ಗಣಿಗಳಿಂದ 13,37,983 ರೂಪಾಯಿ ಬೆಲೆಬಾಳುವಷ್ಟು ಭಂಗಾರವು ಮುಂಬಯಿಗೆ ರವಾನಿಸಲ್ಪಟ್ಟಿತು.

ಉರಿಗಾಂ ಚಿನ್ನದ ಗಣಿಯಲ್ಲಿ ಬಂಡೆಯು ಸಿಡಿದು ಒಬ್ಬ ಕೂಲಿಯವನು ಕೂಡಲೇ ಮೃತಪಟ್ಟನು. ಇನ್ನೂ ಕೆಲವರಿಗೆ ಗಾಯಗಳಾಗಿರುವುವು.

ತುಂಗಾ ನದಿಯಲ್ಲಿ ಪ್ರವಾಹವು ಜಾಸ್ತಿಯಾಗಿದ್ದು, ಅದು ಇನ್ನೂ ಹೆಚ್ಚಿದಲ್ಲಿ ನದೀ ತೀರದ ಗ್ರಾಮಗಳಲ್ಲಿ ತೊಂದರೆಯಾಗುವುದೆಂದು ತಿಳಿದುಬಂದಿದೆ.

ಬೆಂಗಳೂರು ಪೌರಸಭೆಯ ಹೆಲ್ತ್ ಆಫೀಸರಾದ ಡಾ|| ಪಾರ್ಥಸಾರಥಿಯವರು ಆರೋಗ್ಯ ಆಡಳಿತದ ಅನುಭವವನ್ನು ಪಡೆದು ಬರುವುದಕ್ಕಾಗಿ ಈ ತಿಂಗಳ ಅಂತ್ಯದಲ್ಲಿ ಅಮೇರಿಕೆಗೆ ಪ್ರಯಾಣಮಾಡುವರು.

ಅಕ್ಟೋಬರ್ ತಿಂಗಳಲ್ಲಿ ರಾಜಧಾನಿಯಲ್ಲಿ ನಡೆಯುವ ದಸರಾ ವಸ್ತುಪ್ರದರ್ಶನದಲ್ಲಿ ತೋಟಗಳ ಸ್ಪರ್ಧೆಯೂ ನಡೆಯುವುದೆಂದೂ, ಅಂದವಾದ ತೋಟಗಳನ್ನುಳ್ಳವರು ಅವುಗಳನ್ನು ಸ್ಪರ್ಧೆಯಲ್ಲಿ ಸೇರಿಸಬಹುದೆಂದೂ ತಿಳಿದುಬಂದಿದೆ.

ಮೈಸೂರು ಸಂಸ್ಥಾನದಲ್ಲಿ ಮಧ್ಯಪ್ರದೇಶವಾಗಿರುವ ಸ್ಥಳದಲ್ಲಿ ಒಂದು ಬ್ರಾಡ್‌ಕ್ಯಾಸ್ಟಿಂಗ್ ಸ್ಟೇಷನ್ನನ್ನು ಸ್ಥಾಪಿಸಬೇಕೆಂದು ಸರಕಾರದವರು ಆಲೋಚಿಸುತ್ತಿರುವರು. ಇದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರವರು, ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರವರು ಮತ್ತು ಡಾಕ್ಟರ್ ಎಂ. ಎ. ಗೋಪಾಲಸ್ವಾಮಿ ಇವರುಗಳಿಂದ ಕೂಡಿದ ಒಂದು ಸಮಿತಿಯು ನೇಮಕವಾಗಿದ್ದು, ಸಮಿತಿಯವರು ಆಗಲೇ ಈ ಸಂಬಂಧವಾದ ವಿವರಗಳನ್ನು ಕುರಿತು ಚರ್ಚಿಸುತ್ತಿರುವರು.

ರಾಜಧಾನಿಯ ಸಮೀಪದಲ್ಲಿರುವ ಪಡವಾರಹಳ್ಳಿ ಎಂಬ ಗ್ರಾಮದಲ್ಲಿ ಶ್ರೀರಾಮಕೃಷ್ಣಾಶ್ರಮದವರು ಗ್ರಾಮ ಪುನರುಜ್ಜೀವನದ ಕಾರ್ಯಗಳನ್ನು ಕೈಕೊಂಡಿರುವರು. ಸದ್ಯಃ ಆ ಗ್ರಾಮದಲ್ಲಿ ಒಂದು ಪಾಠಶಾಲೆಯನ್ನು ಪ್ರಾರಂಭಿಸಿ, ರಾತ್ರಿಯ ವೇಳೆಯಲ್ಲಿ ಮಾತ್ರ ಪಾಠವು ನಡೆಯುವಂತೆ ಏರ್ಪಾಡು ಮಾಡಿದ್ದಾರೆ. ರಾಜಧಾನಿಯ ಹೈಸ್ಕೂಲು ಉಪಾಧ್ಯಾಯರುಗಳು ಅಲ್ಲಿಗೆ ಹೋಗಿ ಪಾಠ ಹೇಳಲು ಒಪ್ಪಿಕೊಂಡಿರುತ್ತಾರೆ. ಅದರಂತೆ ಒಂಟಿಕೊಪ್ಪಲಲ್ಲಿ ವಾಸವಾಗಿರುವ ಕೆಲವು ಮಹಿಳೆಯರು ಅಲ್ಲಿ ಒಂದು ಹೆಣ್ಣುಮಕ್ಕಳ ಪಾಠಶಾಲೆಯನ್ನು ಪ್ರಾರಂಭಿಸಿರುತ್ತಾರೆ.

ಲಂಡನ್ ಸೇತುವೆಗೆ ಮೈಸೂರು ಶಿಲೆಗಳು!

ಲಂಡನ್ ನಗರದ ಮಧ್ಯಭಾಗದಲ್ಲಿ ಥೇಂಸ್ ನದಿಗೆ ಒಂದು ಹೊಸ ಸೇತುವೆಯು ಕಟ್ಟಲ್ಪಡುತ್ತಿರುವುದು. ಮೈಸೂರು ದೇಶದ ಟ್ರೇಡ್‌ಕಮಿಷನರಾಗಿ ಲಂಡನ್ ನಗರದಲ್ಲಿರುವ ರಾವ್‌ಸಾಹೇಬ್ ಸಿ. ರಂಗನಾಥರವರು ಮೇಲ್ಕಂಡ ಸೇತುವೆಗೆ ಮೈಸೂರು ದೇಶದ ಶಿಲೆಗಳನ್ನು ಉಪಯೋಗಿಸುವಂತೆ ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರು.

ವರ್ತಮಾನಸಂಗ್ರಹ.

1950 ನೇ ವರ್ಷದ ಹೊತ್ತಿಗೆ ಪ್ರಪಂಚದ ಜನಸಂಖ್ಯೆಯು ಪರಮಾವಧಿಯನ್ನು ಮುಟ್ಟುವುದಂತೆ!

ಜಪಾನ್ ಸರಕಾರಕ್ಕೆ 9,00,00,00,000 ಯೆನ್‌ಗಳ ಸಾಲವಿರುವುದಂತೆ! (1 ಯೆನ್‌ಗೆ ಸುಮಾರು ೨ ಶಿಲಿಂಗ್)

100 ವರ್ಷಗಳ ಹಿಂದೆ ಪ್ರಪಂಚದಲ್ಲೆಲ್ಲಾ ಒಟ್ಟು 4000 ವೃತ್ತಪತ್ರಿಕೆಗಳಿದ್ದುವು. ಈ ಸಂಖ್ಯೆಯು ಈಗ 94,000 ಕ್ಕೆ ಏರಿದೆ!

ಗಂಗಾನದಿಯಲ್ಲಿ ಪ್ರವಾಹವು ಮಿತಿಮೀರಿ ಮೊಹಿಯುದ್ದೀನ್ ನಗರದ ಸುತ್ತಮುತ್ತಿರುವ 50 ಗ್ರಾಮಗಳು ನಾಶವಾಗಿರುವುವು.

ದಕ್ಷಿಣ ಆಫ್ರಿಕೆಯ ಕ್ರೂಗರ್ ನ್ಯಾಷನಲ್ ಪಾರ್ಕಿನಲ್ಲಿ ಡೈರೆಕ್ಟರ್ ಎಕಬೇರ್ ಎಂಬವರು 6 ನಿಮಿಷಗಳಲ್ಲಿ 6 ಸಿಂಹಗಳನ್ನು ಹೊಡೆದು ಕೊಂದರು.

ಜಪಾನ್ ದೇಶದಲ್ಲಿ ಕೆಲವು ದಿನಗಳ ಹಿಂದೆ ಭಾರೀ ಭೂಕಂಪವಾಯಿತು. ಅನೇಕ ಮನೆಗಳು ಉರುಳಿದುವು. ಆದರೂ ವಿಶೇಷ ಪ್ರಾಣಹಾನಿಯೇನೂ ಸಂಭವಿಸಲಿಲ್ಲ.

ಪ್ರತಿಯೊಬ್ಬ ಮನುಷ್ಯನು ವರ್ಷವೊಂದಕ್ಕೆ ಸರಾಸರಿ 1,18,00,000 ಶಬ್ದಗಳನ್ನು ಮಾತನಾಡುವನೆಂದೂ, 9,46,00,000 ಸಾರಿ ಕಣ್ಣು ಮಿಟುಕಿಸುವನೆಂದೂ ಒಬ್ಬ ಶೋಧಕರು ಲೆಕ್ಕಹಾಕಿರುವರು.

ಈಗ್ಗೆ ಸುಮಾರು 12 ವರ್ಷಗಳ ಪೂರ್ವದಲ್ಲಿ 'ಈಜಿಪ್ಟ' ಎಂಬ ಬ್ರಿಟಿಷ್ ಜಹಜು ಸಮುದ್ರಮಧ್ಯದಲ್ಲಿ ಮುಳುಗಿಹೋಯಿತು. 'ಆರ್ಟಿಗ್ಲಿಯೋ' ಎಂಬ ಇಟಲಿಯ ಜಹಜು, ಹಡಗು ಮುಳುಗಿಹೋದ ಸ್ಥಳವನ್ನು ಪತ್ತೆಮಾಡಿ ಅದರಲ್ಲಿದ್ದ ಚಿನ್ನವನ್ನೆಲ್ಲಾ ತೆಗೆದುಕೊಂಡು 'ಪ್ಲಿಮತ್' ರೇವು ಪಟ್ಟಣವನ್ನು ತಲಪಿರುತ್ತದೆ.

ಕಳೆದ ಜುಲೈ ತಿಂಗಳಲ್ಲಿ ಆಸ್ಟ್ರಿಯಾದಲ್ಲಿ ನಡೆದ ದಂಗೆಯ ಮುಖಂಡರ ಪೈಕಿ ಒಬ್ಬರಾದ ಡಾ|| ರಿನ್‌ಟೆಲೀನ್‌ರವರ ಮನೆಯನ್ನೂ ಬ್ಯಾಂಕಿನಲ್ಲಿದ್ದ ಎಲ್ಲ ಹಣವನ್ನೂ ಸರಕಾರದವರು ಜಪ್ತುಮಾಡಿರುತ್ತಾರೆ. ಮನೆಯ ಬೆಲೆಯೇ 30,00,000 ರೂ. ಗಳಾಗುವುದಂತೆ! ದಂಗೆಯ ಸಮಯದಲ್ಲಿ ಡಾ|| ರಿನ್‌ಟೆಲೀನ್‌ರವರು ಗಾಯಹೊಂದಿದ್ದು ಈಗ ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವರು. ಅವರು ಸಂಪೂರ್ಣ ಗುಣಹೊಂದಿದನಂತರ ಮಿಲಿಟರಿ ಕೋರ್ಟಿನಲ್ಲಿ ಅವರ ವಿಚಾರಣೆಯಾಗುವುದೆಂದೂ ಸರಕಾರದವರಿಂದ ಜಪ್ತುಮಾಡಲ್ಪಟ್ಟಿರುವ ಆಸ್ತಿಗಳೆಲ್ಲವೂ ದಂಗೆಯಲ್ಲಿ ಆದ ನಷ್ಟಕ್ಕೆ ಪರಿಹಾರವಾಗಿ ತೆಗೆದುಕೊಳ್ಳಲ್ಪಡುವುದೆಂದೂ ತಿಳಿದುಬಂದಿದೆ.

ಕಪ್ಪೆಯ ಸಾಹಸ.

ಫ್ಲೋರಿಡಾ ಪ್ರಾಂತದಲ್ಲಿ ತರಪೇತು ಹೊಂದಿದ್ದ ಒಂದು ಕಪ್ಪೆಯು 13 ಅಡಿ 7 ಅಂಗುಲ ಹಾರಿತಂತೆ! ಈ ವಿಚಿತ್ರವನ್ನು ನೋಡಲು 5000 ಜನರು ನೆರೆದಿದ್ದರಂತೆ!

ಮರದಿಂದ ಆಹಾರ!

ಜರ್ಮನಿಯ ಒಬ್ಬ ಶಾಸ್ತ್ರಜ್ಞರು ಮರದಿಂದ ಆಹಾರಸಾಮಗ್ರಿಗಳನ್ನೂ, ನಾರಿನಿಂದ ಉಣ್ಣೆಯನ್ನೂ ತಯಾರುಮಾಡುವ ವಿಧಾನವನ್ನು ಕಂಡುಹಿಡಿದಿರುವರಂತೆ!

ಹೊಸ ಸಿನಿಮಾ ಏರ್ಪಾಡು.

ನ್ಯೂಯಾರ್ಕ್ ನಗರದ ಥಿಯೇಟರುಗಳಲ್ಲಿ ಒಂದೇ ರಂಗಭೂಮಿಯಲ್ಲಿ ಏಕಕಾಲದಲ್ಲಿ 6 ವಿಧವಾದ ನೋಟಗಳನ್ನು ತೋರಿಸುವ ಹೊಸ ಏರ್ಪಾಡು ಮಾಡಲ್ಪಟ್ಟಿರುವುದು.

ಮೀಸೆಯ ನಿರ್ಬಂಧ!

ಹಂಗೇರಿಯಾ ಸರಕಾರದವರು ಪೋಲೀಸರೆಲ್ಲರೂ "ಕೈಸರ್ ಬಿಲ್" ಎಂಬ ನಮೂನೆಯ ಮೀಸೆಗಳನ್ನೇ ಬಿಡಬೇಕೆಂದು ಅಪ್ಪಣೆಮಾಡಿರುತ್ತಾರೆ. ಮೀಸೆಯಿಲ್ಲದವರಿಗೆ ಕೆಲಸವೂ ಇಲ್ಲ.

ವಿಚಿತ್ರ ಜನನ!

ಜೈಪುರದಲ್ಲಿ ಉದ್ದವಾದ ಕೂದಲೂ, ಕಿವಿಯಲ್ಲಿ 2½ ಅಂಗುಲದ 2 ಕೊಂಬುಗಳೂ ಉಳ್ಳ ಒಂದು ವಿಚಿತ್ರಶಿಶುವು ಜನಿಸಿದ್ದು 19 ಗಂಟೆಗಳನಂತರ ಮೃತಪಟ್ಟಿತು. ಮಗುವು ಹುಟ್ಟಿದಕೂಡಲೇ ಸ್ವಲ್ಪಹೊತ್ತು ಎದ್ದು ನಿಂತಿದ್ದಿತಂತೆ!

ನೀರಿಲ್ಲದೆ ಕ್ಷೌರ!

ನೀರು, ಸಾಬೂನು, ಬ್ರಷ್ ಮತ್ತು ಕತ್ತಿ ಇಲ್ಲದೇ ಕೇವಲ ವಿದ್ಯುಚ್ಛಕ್ತಿಯ ಸಹಾಯದಿಂದಲೇ ಕ್ಷೌರ ಮಾಡಬಲ್ಲ ಒಂದು ಯಂತ್ರವು ಹೊಸದಾಗಿ ತಯಾರಿಸಲ್ಪಟ್ಟಿರುವದು. ಕ್ರಯ ಒಂದಕ್ಕೆ 90 ರೂ! ನಿಜವಾಗಿ ನೀರಿಲ್ಲದ ಕ್ಷೌರವೇ ಸರಿ!

ರಜತೋತ್ಸವದ ನಾಣ್ಯಗಳು!

ಚಕ್ರವರ್ತಿ ಸಾರ್ವಭೌಮರ ರಜತೋತ್ಸವವು 1935 ನೇ ಇಸವಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಡುವುದು. ವಿಕ್ಟೋರಿಯಾ ಮಹಾರಾಣಿಯವರ ಜ್ಯೂಬಿಲಿಮಹೋತ್ಸವಗಳಲ್ಲಿ ಮಾಡಿದ್ದಂತೆ ಈಗಲೂ ರಜತೋತ್ಸವದ ವಿಶೇಷ ತರಹ ನಾಣ್ಯಗಳೂ, ಸ್ಟಾಂಪುಗಳೂ ಪ್ರಚುರಪಡಿಸಲ್ಪಡುವುವು.

ಗ್ರೀಕ್‌ದೇಶದಲ್ಲಿ ಒಳಸಂಚು!

ಜನರಲ್ ಪ್ಲಾಸ್ಟಿರಾಸ್‌ರವರ ಮುಖಂಡತ್ವದಲ್ಲಿ ಗ್ರೀಕ್ ಸರಕಾರದವರನ್ನು ತಲೆಕೆಳಗುಮಾಡಿ ಅಲ್ಲಿ ಫ್ಯಾಸಿಸ್ಟ ಸರಕಾರವನ್ನು ಸ್ಥಾಪಿಸಲು ಒಳಸಂಚು ನಡೆಯಿಸಿದರೆಂಬ ಕಾರಣದ ಮೇಲೆ ಸರಕಾರದವರು ಇಬ್ಬರು ಜನರಲ್‌ಗಳನ್ನೂ, ಮೂವರು ಕರ್ನಲ್‌ಗಳನ್ನೂ, ಅನೇಕ ಅಧಿಕಾರಿಗಳನ್ನೂ ದಸ್ತಗಿರಿಮಾಡಿರುತ್ತಾರೆ.

ಎಲ್ಲರಿಗಿಂತಲೂ ಗಿಡ್ಡ.

ಅನಂತಪುರ ಡಿಸ್ಟ್ರಿಕ್ಟಿನ ನಿವಾಸಿಯಾದ ಕೆ. ಅಬಲರಾವ್ ಎಂಬವನು 30 ವರ್ಷದವನಾಗಿದ್ದು ಕೇವಲ 30 ಅಂಗುಲ ಎತ್ತರವಾಗಿರುವನು! ಇವನಿಗಿಂತಲೂ ಕುಳ್ಳ ಮನುಷ್ಯರು ಪ್ರಪಂಚದಲ್ಲಿ ಮತ್ತಾರೂ ಇಲ್ಲವಂತೆ! ಈತನು 6 ಭಾಷೆಗಳನ್ನು ಚನ್ನಾಗಿ ಅಭ್ಯಾಸಮಾಡಿದ್ದು, ಸದ್ಯಃ ತನ್ನ ಅಣ್ಣನೊಡನೆ ಬೈಸಿಕಲ್ ಮೇಲೆ ಪ್ರಪಂಚಪರ್ಯಟನಕ್ಕೆ ಹೊರಟಿರುವನು.

ಏಕಪತ್ನೀವ್ರತಸ್ಥ.

ಸಯಾಂದೇಶದ ರಾಜರು ತಮ್ಮ ಪ್ರೀತಿಗೆ ಪಾತ್ರನಾದ ಒಬ್ಬ ಅಧಿಕಾರಿಗೆ 'ಬಿಳೀ ಆನೆ' ಯ ಗೌರವವನ್ನಿತ್ತು, ಆತನು 20 ಜನ ಪತ್ನಿಯರನ್ನು ಹೊಂದಬಹುದೆಂದು ಅಪ್ಪಣೆಯನ್ನು ಮಾಡಿದರು. ಈ ವಿಷಯವನ್ನು ತಿಳಿದು ಅನೇಕ ಜನ ಯುವತಿಯರು ಅವನನ್ನು ಮದುವೆಯಾಗಬೇಕೆಂದು ಅವನ ಮನೆಯ ಮುಂದೆ ಓಡಾಡಲಾರಂಭಿಸಿದರು. ಆದರೆ ಆ ಅಧಿಕಾರಿಯು ಮೊದಲೇ ವಿವಾಹವಾಗಿದ್ದು ತನ್ನ ಪತ್ನಿಯಲ್ಲಿ ಸಂಪೂರ್ಣ ಅನುರಕ್ತನಾಗಿದ್ದುದರಿಂದ ಇತರ ಮೋಹಜಾಲಕ್ಕೆ ಬೀಳಲಿಲ್ಲವಂತೆ!

ಅಮೇರಿಕೆಯಲ್ಲಿ ಅಗ್ನಿಯ ಹಾವಳಿ!

ಕ್ಯಾಲಿಫೋರ್ನಿಯಾದಲ್ಲಿರುವ ನ್ಯಾಷನಲ್ ಫಾರೆಸ್ಟಿನಲ್ಲಿ ಭಯಂಕರವಾದ ಬೆಂಕಿಯು ಹುಟ್ಟಿ, 20,000 ಎಕರೆ ತೋಟಗಳು ಸುಟ್ಟು ಭಸ್ಮವಾಗಿರುವುವು. ಒಂದೇ ಸಮನೆ 850 ಜನರು ಬೆಂಕಿಯನ್ನು ಆರಿಸುವುದರಲ್ಲಿ ನಿರತರಾಗಿದ್ದರೂ, ಬೆಂಕಿಯು ಸ್ವಲ್ಪವೂ ಶಾಂತವಾಗದೆ ಇನ್ನೂ ಹೆಚ್ಚುತ್ತಲೇ ಇರುವುದು. 60 ಜನರು ಉರಿಯಲ್ಲಿ ಸಿಕ್ಕಿಬಿದ್ದು, ಅವರ ಜೀವಿತದ ಬಗ್ಗೆ ಎಲ್ಲರಿಗೂ ಸಂಶಯವುಂಟಾಗಿರುವುದು.

ಲಿಥ್ಯೂನಿಯಾದಲ್ಲಿ ನಾಜಿಗಳ ಒಳಸಂಚು!

ಆಸ್ಟ್ರಿಯಾದಲ್ಲಿ ನಾಜಿಗಳು ಸರಕಾರವನ್ನು ತಲೆಕೆಳಗು ಮಾಡಲು ಪ್ರಯತ್ನಮಾಡಿದಂತೆ ಲಿಥ್ಯೂನಿಯಾ ದೇಶದಲ್ಲಿಯೂ, ಎರಡು ನಾಜಿಸಂಸ್ಥೆಗಳು ಆರು ತಿಂಗಳಿಂದಲೂ ಒಳಸಂಚು ನಡೆಯಿಸುತ್ತಿರುವುವಂತೆ! ಸರಕಾರದವರು ಗುಪ್ತವಾಗಿ ಇವುಗಳ ಕಾರ್ಯಕ್ರಮಗಳನ್ನು ಪರಿಶೀಲಿಸುತ್ತಿದ್ದು ಈಗ 142 ಜನ ನಾಜಿಗಳನ್ನು ದಸ್ತಗಿರಿಮಾಡಿ. ಮಿಲಿಟರಿ ಕೋರ್ಟಿನ ವಿಚಾರಣೆಗೆ ಗುರಿಪಡಿಸಿರುತ್ತಾರೆ. ವಿಚಾರಣೆಯು ಸೆಪ್ಟಂಬರ್ ತಿಂಗಳಲ್ಲಿ ನಡೆಯುವುದು.

ನೌಕಾಸಮ್ಮೇಳನ.

ಲಂಡನ್ನಿನಲ್ಲಿ ನಡೆಯಲಿರುವ ನೌಕಾಸಮ್ಮೇಳನಕ್ಕೆ ಅಡ್ಮಿರಲ್ ಯಾಮಾಮೋಟೋರವರು ಜಪಾನಿನ ಪ್ರತಿನಿಧಿಗಳಾಗಿ ಹೋಗುವರು. ಜಪಾನಿನವರು ಈ ಕೆಳಗೆ ಕಂಡ ಕೋರಿಕೆಗಳನ್ನು ಸಮ್ಮೇಳನದ ಮುಂದಿಡುವರು. (1) ದೊಡ್ಡ ದೊಡ್ಡ ರಾಷ್ಟ್ರಗಳವರು ತಮ್ಮ ನೌಕಾಸೈನ್ಯವನ್ನು ಕಡಿಮೆ ಮಾಡಿ ಜಪಾನಿಗೆ ಉಂಟಾಗಿರುವ ಭೀತಿಯನ್ನು ಹೋಗಲಾಡಿಸಬೇಕು. (2) ಯುದ್ಧದ ಜಹಜುಗಳನ್ನೂ ಯುದ್ಧದ ವಿಮಾನಗಳನ್ನೂ ನಾಶಮಾಡಬೇಕು. (3) ಸ್ವದೇಶದ ರಕ್ಷಣೆಗಾಗಿ ನಿರ್ಮಿಸಲ್ಪಟ್ಟಿರುವ ಸಬ್‌ಮೆರೀನ್‌ಗಳ ಆಕಾರದಲ್ಲಿ ಯಾವ ಬದಲಾವಣೆಯನ್ನೂ ಮಾಡಬಾರದು.

ಮೆಟ್ಟೂರು ಅಣೆಕಟ್ಟು.

ಇದೇ ಜುಲೈ 21 ನೇ ತಾರೀಖಿನ ದಿವಸ ಮದರಾಸ್ ಗವರ್ನರಾದ ಸರ್ ಜಾರ್ಜ್ ಸ್ಟ್ಯಾನಿಲಿಯವರು ಮೆಟ್ಟೂರು ಜಲಾಶಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಸದ್ಯಕ್ಕೆ ಇದೇ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡ ಜಲಾಶಯವಾಗಿರುವುದು. ಅಣೆಕಟ್ಟು 1 ಮೈಲು 20 ಅಡಿಗಳ ಉದ್ದವಾಗಿಯೂ, ನದೀ ಪಾತ್ರದಿಂದ ಮೇಲಕ್ಕೆ 176 ಅಡಿ ಎತ್ತರವಾಗಿಯೂ ಇರುವುದು. ಇದಕ್ಕೆ ಒಟ್ಟು 6 ಕೋಟಿ ೩೦ ಲಕ್ಷ ರೂ. ಗಳು ವೆಚ್ಚವಾಗಿರುವುದು. ಈ ಅಣೆಕಟ್ಟಿನಿಂದ ತಡೆದು ನಿಲ್ಲುವ ನೀರು 59 ಚದರ ಮೈಲುಗಳಷ್ಟು ವಿಸ್ತೀರ್ಣವಾಗುವುದು. ಈ ಜಲಾಶಯದಿಂದ 3 ಲಕ್ಷ ಎಕರೆಗಳಷ್ಟು ಜಮೀನು ಸಾಗುವಳಿಯಾಗುವುದೆಂದು ಅಂದಾಜು ಹಾಕಲ್ಪಟ್ಟಿದೆ. 106 ಮೈಲು ಉದ್ದವಾಗಿರುವ ಒಂದು ದೊಡ್ಡ ನಾಲೆಯೂ, 594 ಮೈಲುಗಳಷ್ಟು ಉದ್ದ ಶಾಖಾ ನಾಲೆಗಳೂ ಕಟ್ಟಲ್ಪಟ್ಟಿರುವುವು. ಜಲಾಶಯವು ಮದ್ರಾಸ್ ಗವರ್ನರ ನಾಮಾಂಕಿತದಿಂದ ಪ್ರಸಿದ್ಧವಾಗಿರುವುದು.

ಸ್ವೀಕಾರ

ಧಾರವಾಡ ಡಿ|| ಗದಗ ತಾ|| ನಾರಾಯಣಪುರದ ನಿವಾಸಿಗಳಾದ ಮ|| ರಾ|| ತಿಮ್ಮಣ್ಣ ತಂದಿಬಸಪ್ಪ ಹಂಚಿನಾಳ ಇವರು ತಮ್ಮ ಗೃಹದಲ್ಲಿ ಹಿರೇಮಠದ ವೇ|| ಗಂಗಾಧರಯ್ಯನವರಿಂದ ರೇಣುಕವಿಜಯಪುರಾಣ ಪಾರಾಯಣವನ್ನು ಮಾಡಿಸಿ ಕಡೆಯ ದಿವಸ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೪ ನೆಯ ಪುಟದಿಂದ ಮುಂದುವರಿದುದು.]

ಕಟ್ಟಿಸಿ ಜಂಗಮರಿಗೆ ದಾನಮಾಡಿದನಂತರ ದಕ್ಷಿಣದೇಶಕ್ಕೆ ಬಂದು ಶಾಲಿವಾಹನ ಶಕ ೧೫೩೧ರಲ್ಲಿ ಲಿಂಗದೊಳಗಾದನು.'

ದೊಡ್ಡಸಂಕಣ್ಣನಾಯಕನು ಢಿಲ್ಲೀ ಬಾದಶಹನ ಮಂತ್ರಿಯಾದ ಅಂಕುಶಖಾನನೊಡನೆ ಯುದ್ಧಮಾಡಿ ಭೂಮಿಯನ್ನು ಪಡೆದನೆಂದು ಒಂದು ಅದ್ಭುತವಿಷಯವನ್ನು ಲಿಂಗಣ್ಣಕವಿಯು ಅರಿಯುತ್ತಾನೆ. ಇತಿಹಾಸಜ್ಞರಾದವರು ಇದನ್ನು ಕೇವಲ ಕಪೋಲಕಲ್ಪಿತವನ್ನಾಗಿ ಹೇಳುವದರಲ್ಲಿ ಎಷ್ಟು ಸಂದೇಹವಿಲ್ಲ. ಇದು ಢಿಲ್ಲೀ ಬಾದಶಾಹರ ಇತಿಹಾಸದಲ್ಲಿಲ್ಲಿಯೂ ದೊರೆಯಲಾರದ ವಿಷಯವಾಗಿದೆ. ಆದುದರಿಂದ ಇದನ್ನು ಚೆನ್ನಾಗಿ ವಿಚಾರಮಾಡುವದು ಅವಶ್ಯಕವಾಗಿದೆ. ದೊಡ್ಡಸಂಕಣ್ಣನಾಯಕನು ಕ್ರಿ. ಶ. ೧೫೪೭ ರಿಂದ ೧೫೬೦ ವರೆಗೆ ರಾಜನಾಗಿದ್ದನೆಂದು ಕೆಳದಿನೃಪವಿಜಯದಿಂದ ಗೊತ್ತಾಗುತ್ತದೆ. ಈ ನಡುವೆ ಅವನು ಯಾವಾಗ ಕಾಶಿಗೆ ಬಂದನೋ ತಿಳಿಯುವದಿಲ್ಲ. ಅಥವಾ ಸಂಕಣ್ಣನಾಯಕನು ಢಿಲ್ಲಿಗೆ ಬಂದಾಗ ಯಾವ ಬಾದಶಹನಿದ್ದನೋ ಅವನ ಹೆಸರನ್ನಾದರೂ ಈ ಲಿಂಗಣ್ಣಕವಿಯು ಬರೆಯುವದಿಲ್ಲ.

ಬಾಬರ್, ಹುಮಾಯೂ, ಶೇರಶಾಹ, ಅಕಬರ್, ಜಹಾಂಗೀರ್, ಶಹಜಹಾನ್, ಔರಂಗಜೇಬ್ ಮುಂತಾದ ಸುಪ್ರಸಿದ್ಧ ಬಾದಶಹರ ಹೆಸರುಗಳು ಲಿಂಗಣ್ಣಕವಿಗೆ ಗೊತ್ತಿಲ್ಲವೆಂಕಿಲ್ಲ. ಏಕೆಂದರೆ ಅವನೇ ಕೆಳದಿನೃಪವಿಜಯದ [illegible]

[illegible]

ಶೇರಶಾಹ (Sher Shah by Qonugo.) [illegible] **"ಗುಲ್‌ಬದನಬೇಗಂ"** ಎಂಬವಳು **"ಹುಮಾಯೂನನಾಮಾ"** ಎಂಬ ಗ್ರಂಥವನ್ನೂ ಅಬ್ದುಲ ಫಜಲ **"ಅಕಬರ್ ನಾಮಾ"**, **"ಜೌಹರ್"** ಎಂಬವನು **"ತಾಕಯಾತೆ ಹುಮಾಯೂನೀ"** ಎಂಬ ಗ್ರಂಥವನ್ನೂ [illegible]

ಬೈರಾಮಖಾನ, ಖ್ವಾಜಾಮು ಅಜ್ಜಮ್, ಖ್ವಾಜಾ ನಿಜಾಮ್, ನದೀಮ್ ಕೋಕಾ, ಹಾಜಿಮು ಹಮ್ಮದ್‌ಖಾನ, ಬಾಬಾದೋಸ್ತಬಕ್ಷ, ಮಿರ್ಜಾ ಕುಲೀಬೇಗ್ ಚೂಲೀ, ಇಬ್ರಾಹಿಂ ಏಶಖಆಗಾ, ಹಸನಅಲಿಏಶಖಆಗಾ, ಯಾಕೂಬ್ ಕೋರಚೀ ಅಂಬರ್ ನಾಜರ್, ಮುಲ್ಕಮುಖ್ತಾರ್, ಸಂಬಲ್ ಮೀರ್ ಹಜಾರ್, ಖ್ವಾಜಾಕೇಸರ್ [illegible] **ತೋಡರ್‌ಮಲ್ ಬೀರಬಲ್** [illegible]

[illegible]

ಖಾನ್' ಮುಂತಾದ ಅನೇಕ ಹೆಸರುಗಳನ್ನು ಸಂಸ್ಕೃತಲ್ಲಿಗಂದ ಕಲ್ಪಿಸಿ ಬರೆದುದುದನ್ನು ನೋಡಬಹುದು. ೭೧ ನೆಯ ಪುಟದಲ್ಲಿ ಮತ್ತೊಬ್ಬ ಅಂಕುಶಖಾನನ ಹೆಸರನ್ನು ಬರೆದಿದ್ದಾನೆ. ಅಂದಮೇಲೆ ದೊಡ್ಡ ಸಂಕಣ್ಣನಾಯಕನು ಢಿಲ್ಲಿಗೆ ಬಂದು ಅಂಕುಶಖಾನನೊಡನೆ ಯುದ್ಧಮಾಡಿದ ವಿಷಯವು ಸಂಪೂರ್ಣವಾಗಿ ಅಸತ್ಯವೆಂದು ಧೈರ್ಯದಿಂದ ಹೇಳಬಹುದು. ಲಿಂಗಣ್ಣಕವಿಯು ತನ್ನ ರಾಜರ ಪ್ರತಾಪದಲ್ಲಿ ರಮಣೀಯತೆಯನ್ನು ತರುವದಕ್ಕೋಸ್ಕರ ಈ ಕಥೆಯನ್ನು ಕಲ್ಪಿಸಿರುವದರಿಂದ ಇದಕ್ಕೆ ಒಂದು ಅವಧಿಯ ಬೆಲೆಯೂ ಇಲ್ಲವು. ಸಂಕಣ್ಣನಾಯಕನು ಢಿಲ್ಲಿಯಲ್ಲಿ ಮಠಕಟ್ಟಿಸಿದ ವಿಷಯವೂ ಇತಿಹಾಸ ಪ್ರತೀತಿಗಳ ಅಭಾವದಿಂದ ವಿಶ್ವಾಸಾರ್ಹವಾಗಿಲ್ಲ. ಕೆಳದಿನೃಪವಿಜಯಕ್ಕೆ ಪೀಠಿಕೆಯನ್ನು ಬರೆದ ಎ. ಆರ್. ಕೃಷ್ಣಶಾಸ್ತ್ರಿಗಳು **'ದೊಡ್ಡ ಸಂಕಣ್ಣನಾಯಕನು ದಿಲ್ಲಿಗೆ ಹೋಗಿ ಅಂಕುಶಖಾನನನ್ನು ಗೆದ್ದುದು ಕಲ್ಪಿತಕಥೆ'** ಯೆಂದು ಸ್ಪಷ್ಟವಾಗಿ ಬರೆದಿದ್ದಾರೆ. ಅದರೂ ಇಂತಹ ಅಸತ್ಯ ವಿಷಯವನ್ನೇ ಮುಖ್ಯವಾಗಿಟ್ಟುಕೊಂಡು ಇದನ್ನು ಇತಿಹಾಸವೆಂದು ಬಗೆಬಡಿಯುತ್ತ 'ದೊಡ್ಡ ಸಂಕಣ್ಣನಾಯಕನು ಢಿಲ್ಲಿಗೆ ಬಂದು ಮಲ್ಲಯುದ್ಧಮಾಡಿ ಭೂಮಿಯನ್ನು ಪಡೆದು ಉತ್ತರ ದೇಶದಲ್ಲೆಲ್ಲಾ ಮಠಗಳನ್ನು ಕಟ್ಟಿಸಿ ತನ್ನ ಹಿಂದೆ ಬಂದ ಯಾತ್ರಿಕರಾದ ಜಂಗಮರಿಗೆ ದಾನಮಾಡಿದ' ನೆಂಬ ನಿರಾಧಾರ ವಿಷಯವನ್ನು ಬರೆಯುತ್ತ ಭ್ರಾಂತಿರೋಗಗ್ರಸ್ತರಾದ ವಿರಕ್ತಮುನಿಗಳಿಗೆ ಚಿಕಿತ್ಸೆದಾನಗಳ [illegible]

[illegible]

ಜಂಗಮವಾಡಿ ಮಠದ ನಾಲ್ಕು ಕಡೆಗಳಲ್ಲಿ ಸಂಕಣ್ಣನಾಯಕನು ಹಚ್ಚಿದ ಸುದ್ದಿಯೂ ಅಂಗಾಂಗ ಕಲ್ಲುಗಳನ್ನು [illegible] ಅವನು ಹಾಕಿಸಿಯೂ ಇಲ್ಲ. ಅಂತಹ ಕಲ್ಲುಗಳು ಜಂಗಮವಾಡಿಯ ಬೀದಿಯಲ್ಲೆಲ್ಲಿಯೂ ಇಲ್ಲವು!

ಶ್ರೀ ಜಗದ್ಗುರು ವಿಶ್ವಾರಾಧ್ಯರ ಗದ್ದುಗೆಯೂ ಕೈಲಾಸಮಂಟಪವೂ ಅವಿಯಿಂದಲೂ ಇವೆ. ಕಾಶೀರಾಜನಾದ ಜಯಸಂದದೇವನು ತನ್ನ ಕಾಲದಲ್ಲಿ (ವಿಕ್ರಮ ಸಂ. ೬೩೧, ಕ್ರಿ. ಶ. ೫೭೪) ಮಠವನ್ನು ವಿಶೇಷವಾಗಿ ಕಟ್ಟಿಸಿ ಕೇದಾರೇಶ್ವರ ಗಂಗಾ ಘಟಗಳ ಮಧ್ಯದಲ್ಲಿ **"ಜಂಗಮಪುರ"** ವೆಂಬ ಅಗ್ರಹಾರ (ಅಂಬಳಗ್ರಾಮವನ್ನು) ಸಮರ್ಪಿಸಿರುತ್ತಾನೆ. [illegible] ಶ್ರೀ. ಜ. ವೀರಭದ್ರಮಹಾಸ್ವಾಮಿಗಳಿಂದಲೂ ಶ್ರೀ ಜ. ಗು. ರಾಜೇಶ್ವರಮಹಾಸ್ವಾಮಿಗಳಿಂದಲೂ ಕಟ್ಟಿಸಲ್ಪಟ್ಟವೆನ್ನುವದು ಸುಪ್ರಸಿದ್ಧವಾದ ವಿಷಯವಾಗಿದೆ. ಎಂದಮೇಲೆ ಕೆಳದಿರಾಜನಾದ ಸಂಕಣ್ಣನಾಯಕನು ಯಾವ ಸ್ಥಳದಲ್ಲಿ ಅತಿಮನೋಹರವಾದ ಮಠವನ್ನು ಕಟ್ಟಿಸಿದನೋ ಎಷ್ಟು ವಿಚಾರಮಾಡಿದರೂ ಅಸಂಗತವಾಗಿಯೇ ತೋರುತ್ತಿದೆ. ಇಂತಹ ದೊಡ್ಡ ಮಠವನ್ನು ಇವನೇ ಕಟ್ಟಿಸಿದ ಪಕ್ಷದಲ್ಲಿ ಶಿಲಾಶಾಸನವನ್ನೇಕೆ ಬರೆಸಲಿಲ್ಲ? ಕೆಳದಿ ನೃಪವಿಜಯದಲ್ಲಾಗಲಿ ಮಠದ ರೆಕಾರ್ಡುಗಳಲ್ಲಾಗಲಿ ಅವನು ಶಿಲಾಶಾಸನವನ್ನು ಬರೆಯಿಸಿದ ಬಗ್ಗೆ ಒಂದಕ್ಷರವೂ ಕಾಣುವದಿಲ್ಲ, ಪ್ರತೀತಿಯೂ ಇಲ್ಲ.

[illegible]

"ಜಂಗಮವಾಟಿಕಾ" [illegible]

ಜಂಗಮವಾಡಿಮಠಕ್ಕೂ ಕೆಳದಿ ದೊಡ್ಡ ಸಂಕಣ್ಣನಾಯಕನಿಗೂ ಎಳ್ಳಷ್ಟಾದರೂ ಸಂಬಂಧವಿದ್ದಂತೆ ತೋರುವದಿಲ್ಲ. [illegible]

[illegible]

ಭವಾನೀರಾಣೀ [illegible]

ಕರ್ದಮೇಶ್ವರಕ್ಷೇತ್ರದಲ್ಲಿರುವ [illegible]

शाके गोत्रतुरंगभूपतिमिते श्रीमद्भवानीनृपा।
गौडाख्यातमहीमहेन्द्रवनिता निष्कर्दमं कार्दमम्
कुंडं ग्रावसुखंडमंडिततया कार्ष्यान्वयाद्‌धादरात्
श्रीतारातनयासुरांतकपरप्रीत्यै विमुक्त्यैनृणाम्॥

ಭೀಮನಚಂದಿಯೆಂಬ [illegible] **"ಗಂಧರ್ವಸಾಗರ"** [illegible]

[illegible] **"ಬನಾರಸ್ ಗೆಜೆಟಿಯರ್"** [illegible] **ಬಾ. ಭಗವಾನದಾಸ್ ಎಂ.ಎ.,** ಯವರು **"ಕಾಶೀ-ಅಂಕ"** [illegible] **"ಚಂಡಿಕೇಶ್ವರಮಂದಿರ"** [illegible]

शाके का... गभूपे गतविलकमलं गौडराजस्य पत्नी
गन्धर्वांभोधिमंभोनिधिसमममनस्वर्गसोपान
युग्मं।
चक्रे राज्ञी भवानी सुकृतमतिकृतिर्भीमचंडी
सकाशे
काश्यामस्याः सुकीर्तिः सुरपति समितौ
गीयते नारदाद्यैः॥

ಇವನ್ನೆಲ್ಲ ವಿಚಾರಮಾಡಿದರೆ **ಕಾಶಿಯಲ್ಲಿಯೂ ಪಂಚಕ್ರೋಶದಲ್ಲಿಯೂ ಕೆಳದಿಯ ದೊಡ್ಡ ಸಂಕಣ್ಣನಾಯಕರ ಸಂಬಂಧವು ಎಷ್ಟು ಕಾಣುವುದಿಲ್ಲ.** ಇವನು ಕಾಶಿಯಿಂದ ಒಬ್ಬ ಲಿಂಗವನ್ನು ವೆಂಕಟಪ್ಪನಾಯಕನು ಸ್ಥಾಪನೆಮಾಡಿದನೆಂಬ ವಿಷಯವೂ (ಕೆ. ನೃ. ವಿ. ಪು. ೮೩) ಸಕ್ಕವಾಗಿ ಕಾಣುವದಿಲ್ಲ. ಏಕೆಂದರೆ ದೊಡ್ಡ ಸಂಕಣ್ಣನಾಯಕನು ತಂದ ಲಿಂಗವು ಅವನ ತರುವಾಯ ಪಟ್ಟಕ್ಕೆ ಬಂದ ಚಿಕ್ಕ ಸಂಕಣ್ಣನಾಯಕ ರಾಮರಾಜ ನಾಯಕರಿಂದ ಸ್ಥಾಪಿಸಲ್ಪಡದೇ ವೆಂಕಟಪ್ಪನಾಯಕನವರೆಗೆ ಮೂಲೆಗೆ ಬಿದ್ದಿರುವುದು ಯೋಗ್ಯವಾಗಿಲ್ಲ!

ಲಿಂಗಣ್ಣಕವಿಯ ಬಗ್ಗೆ ಇಲ್ಲಿಯವರೆಗೆ ತೋರಿಸಿದ ಎಲ್ಲ [illegible] **ಮಹಾದೋಷವು ಹಿಮಾಲಯದಷ್ಟು ದೊಡ್ಡದಾಗಿದೆ.** [illegible]

[illegible]

ಕಪಿಲಧಾರಾಕ್ಷೇತ್ರದಲ್ಲಿ [illegible]

[illegible] **ಸಿಯೂ ಇಲ್ಲ. ಮಗನ ಹೆಸರಿನಿಂದ ಹಾಕಿಸಿಯೂ** ಇಲ್ಲ. [illegible]

ಶ್ರೀ ಸ್ವಸ್ತಿಶ್ರೀ ವಿಕ್ರಮಶಕ ೧೬೭೧ ಶಾಲಿವಾಹನಶಕ ೧೫೩೭ ರ ಸಮಯದಲ್ಲಿ ಕೆಳದಿ ಸದಾಶಿವನಾಯಕರ ಮರಿಮೊಮ್ಮಕ್ಕಳೂ ಸಂಕಣ್ಣನಾಯಕರ ಮೊಮ್ಮಕ್ಕಳೂ ಸಿದ್ದಪ್ಪನಾಯಕರ ಮಕ್ಕಳೂ ಆದ ಶಿವಪ್ಪನಾಯಕ ವೆಂಕಟಪ್ಪನಾಯಕರು ಕಪಿಲಧಾರೆಯಲ್ಲಿ ಕಟ್ಟಿಸಿದ ಕೊಳ.

[illegible] **ದೊಡ್ಡ ಸಂಕಣ್ಣನಾಯಕನು ಕಾಶಿಗೆ ಬಂದಿರಲಿಲ್ಲ.** [illegible]

ಜಂಗಮವಾಡಿಮಠದ ಗುರುಗಳಿಗೆ ವಿಶೇಷದಾನಗಳನ್ನು ಮಾಡಿದ್ದರೆ ಕಪಿಲಧಾರೆಯಲ್ಲಿಯಂತೆ ಜಂಗಮವಾಡಿ ಮಠದಲ್ಲಿಯೂ ಬರೆಯಿಸುತ್ತಿದ್ದನು. ಹಾಗೆ ಮಾಡದಿರುವದರಿಂದ **ಕೆಳದಿರಾಜರಿಗೂ ಜಂಗಮವಾಡಿ ಮಠದ ಕಟ್ಟಡಕ್ಕೂ ಯಾವ ಸಂಬಂಧವೂ ಇಲ್ಲ.** ಪ್ರಾಚೀನಕಾಲದಿಂದಲೂ ಸುಪ್ರಸಿದ್ಧವಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಸಿಂಹಾಸನವು ಜಂಗಮಮೂರ್ತಿಗಳಿಗೆ ವಾಸವಾಗಿರುವದರಿಂದ ಜಂಗಮವಾಡಿಯೆಂಬ ನಾಮಧೇಯವು ಸಹಜವಾಗಿಯೇ ಇದೆ. ಇದೇ ಪ್ರಕಾರವಾಗಿ ಗಯಾಕ್ಷೇತ್ರಯಾಗಗಳಲ್ಲಿಯೂ ಶ್ರೀ ವಿಶ್ವಾರಾಧ್ಯಮಠದ ಅಧಿಕಾರಿಗಳು ಮಠಾಧಿಕಾರವನ್ನು ವಹಿಸಿಕೊಂಡು ಬರುತ್ತಿರುವದರಿಂದ ಅಲ್ಲಿಯೂ ಜಂಗಮವಾಡಿ ಮಠಗಳು ಪ್ರಸಿದ್ಧಿಗೆ ಬಂದವು. ಅಂದರೆ **ಉತ್ತರದೇಶದಲ್ಲಿಯ ಜಂಗಮರೂ ಜಂಗಮರ ಮಠಗಳೂ ಆದಿಕಾಲದವೇ ಹೊರತು ದೊಡ್ಡ ಸಂಕಣ್ಣನಾಯಕನು ಕಟ್ಟಿಸಿದವೆಂದಿಗೂ ಅಲ್ಲ.** ಇದುವೇ ಇತಿಹಾಸದ ಸಿದ್ಧಾಂತ!

ಹೀಗಿದ್ದು ಲಿಂಗಣ್ಣ ಕವಿಯು ತನ್ನ ಕೆಳದಿನೃಪವಿಜಯದಲ್ಲಿ ಸಂಕಣ್ಣನಾಯಕನ ವಿಷಯವಾಗಿ ಇಷ್ಟು ಸುಳ್ಳನ್ನು ಬರೆಯುವ ಕಾರಣವೇನೆಂದರೆ—ಈ ಕವಿಯು ಕೆಳದಿರಾಜರ ಸಂಸ್ಥಾನದ ಆಶ್ರಿತನಾಗಿದ್ದು ಆ ರಾಜರ ಚರಿತ್ರೆಯನ್ನು ಅತ್ಯದ್ಭುತವಾಗಿ [illegible]

[illegible]

ಲೀಖವನ್ನು ಪ್ರಕಟಿಸಿ ಗುರುದ್ರೋಹವನ್ನೂ ವೀರಶೈವ ಮಠದ ಇತಿಹಾಸಕ್ಕೆ ಅನರ್ಥವನ್ನೂ ಮಾಡಲು ಸಾಹಸಪಟ್ಟು 'ಅಪಾತ್ರಕ್ಕೆ ಧೂಳೆತ್ತಿರಿದವನಂತೆ' ಸ್ವಮುಖಕ್ಕೇನೇ ಕಲಂಕ ಹಚ್ಚಿಕೊಂಡಿರುವನಲ್ಲದೆ ಈತನ ಲೇಖದಿಂದ ಶ್ರೀ ಜಗದ್ಗುರು ಪೀಠಕ್ಕೆ ಯಾವ ಹಾನಿಯೂ ಇಲ್ಲ. ಆದುದರಿಂದ ಸತ್ಯರುಷರು ಇಂತಹ ವಾಚಾಳಿಗಳ ಜಾಲಕ್ಕೆ ಬೀಳದೆ ಅನಾದಿ ಸಂಸಿದ್ಧವಾದ ಶ್ರೀಮದ್ವೀರಶೈವೇತಿಹಾಸದಲ್ಲಿ ಸಂಪೂರ್ಣ ವಿಶ್ವಾಸವುಳ್ಳವರಾಗಿ ಜೀವನ ಸೃಷ್ಟಿಗೆ ಪಾತ್ರರಾಗಬೇಕೆಂದು ಸಮಸ್ತ ಶುದ್ಧ ವೀರಶೈವ ಸಜ್ಜನರಲ್ಲಿ ಸಾದರವಿನೇದನೆ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು— ನಂ 7 ಅರಕಾಟು ಶ್ರೀನಿವಾಸಾಚಾರ್ಯರ ವೀಧಿ, ಬೆಂಗಳೂರು ಸಿಟಿ. 41

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

[illegible]

ಬೆಲೆ ೧ ರೂಪಾಯಿ.
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮಲೇರಿಯಾಕ್ಕೆ ಮಲೇರಿಯಾನ

ಮಲೇರಿಯಾವು ಮಲೆಜ್ವರ, ಛಳಿಜ್ವರ, [illegible] 2,3 ದಿವಸಕ್ಕೊಮ್ಮೆ ಬರುವ ಜ್ವರ, [illegible] ಕ್ರಯ 1-8-0 ಮತ್ತು ಅಣೆ 14. [illegible] ರೂ. 8-8-0, ರೂ. 5, 1 ಡಜನ್ ರೂ. 16-8-0, ರೂ. 9-12-0

ಮಲೇರಿನ್ ಬಿಲ್ಲೆಗಳು: [illegible] 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0, 500, 1000ಕ್ಕೆ ರೂ. 7 ಮತ್ತು 13-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಅಣೆ 4, 8, 14, ರೂ. 1/6, 2.

The Malariana Co., Mangalore (21)

ಬೇಬಿಟೋನ್: [illegible] ಕ್ರಯ 1-4-0.

ಹೂಪಿಂಗ್ ಕಫ್ ರೆಮಿಡಿ: [illegible] ರೂ. 1 ಮತ್ತು ಅಣೆ 9.

ನರ್ವ್ ಎಕ್ಸೆಲ್ಲರ್ ಬಿಲ್ಲೆಗಳು: [illegible] ರೂ. 5. 100ಕ್ಕೆ ರೂ. 2-0-0.

ಸಿರಪ್ ನೆಸಿಕೂಜ: [illegible] ರೂ. 3-8-0, [illegible] ರೂ. 1-14-0.

[illegible]

'ಆರೋಗ್ಯಭಾಗ್ಯದ ನೀತಿಸೂತ್ರ' ವೆಂಬ ಪುಸ್ತಕಕ್ಕೆ ಬರೆರಿ ಧರ್ಮಾರ್ಥ.

ಪತ್ರ— **ಮಲೇರಿಯಾನ ಕಂಪೆನಿ, (ಹಂಪನಕಟ್ಟೆ), 21, ಮಂಗಳೂರು.**

[51]

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಹ್ಯಾ ಶೀಲಾರೋಹಣಮಾಡಿದರಲ್ಲಿ ಐವರು ಆಚಾರ್ಯರು ಒಂದೆಡೆಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೦—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಲ್ಪವೃಕ್ಷದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಕಾಣುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[33] ಪೋ. ಬಾ. ೫೧೦. ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮುರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಭಸಿತವಾದಿ ಸಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ವೀರಶೈವಮತವಿಚಾರಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಭಸಿತಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವರ ಭಾಷಣಗಳು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯೋಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಸೆಪ್ಟೆಂಬರ್ ೧೯೩೮ [ಸಂಚಿಕೆ ೧೬

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೆ ಪ್ರವೃತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನ ಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಹಿಟ್ಲರರ ಭಾಷಣ,
ಸಾರ್ ಪ್ರಾಂತ್ಯದ ಭವಿಷ್ಯಪ್ರದರ್ಶನ.

೧೯೩೫ ನೇ ಇಸವಿ ೧೩ ಕ್ಕೆ ಸಾರ್ ಪ್ರಾಂತ್ಯದ ಭವಿಷ್ಯದ ವಿಷಯವಾಗಿ ಅಲ್ಲಿಯ ಪ್ರಜಾಭಿಪ್ರಾಯವನ್ನು ಪಡೆಯಲಾಗುವುದಷ್ಟೆ! ಸಾರ್ ಪ್ರಾಂತ್ಯವು ಜರ್ಮನಿಗೆ ತಿರುಗಿ ಬರಬೇಕೆಂಬ ಜರ್ಮನರ ಚಳವಳಿಯನ್ನು ಇಂದು ಹೆರ್ ಹಿಟ್ಲರರು ಆರಂಭ ಮಾಡಿದರು.

ಹೆರ್ ಹಿಟ್ಲರರೂ, ಡಾ|| ಗೋಬೆಲ್ಸರೂ ಇಂದು ಕೋಬ್ಲೆನ್ಸ್ ನಿಂದ ಏಹ್ರೆನ್‌ಬ್ರೈಟ್‌ಸ್ಟೈನ್ ಕೋಟೆಗೆ ಬಂದಾಗ ಅವರಿಗೆ ನಾಜಿಗಳೆಲ್ಲರೂ ವಿಶೇಷವಾದ ಸ್ವಾಗತವನ್ನು ಕೊಟ್ಟರು. ಹಿಟ್ಲರರು ಭಾಷಣವನ್ನು ಆರಂಭ ಮಾಡಿದರು.

"ಹೊರಗಿನವರು ನಮ್ಮನ್ನು ದೂಷಿಸುತ್ತಿರುವುದೇಕೆಂದರೆ, ನಮ್ಮ ಪ್ರಜೆಗಳ ಹಕ್ಕನ್ನು ಹಿಡಿದಿರುವುದಕ್ಕಾಗಿ ನಮಗೆ ಶಾಂತಿಯಿಂದಿರುವುದನ್ನೆಲ್ಲಾ ಮಾಡಬೇಕೆಂದು ಒಂದು ಅಂತರರಾಷ್ಟ್ರೀಯ ಒಳಸಂಚಿದೆ. ಇಂಥ ಗೊಣಗುಟ್ಟುಗಾರರಿಗೆ ನಾವು ಹೇಳುವುದಿಷ್ಟೆ! ಏನೇನಾದರೂ ಮಾಡಿರಿ! ನಾವು ಸ್ವಲ್ಪವೂ ಜಗ್ಗುವುದಿಲ್ಲ.

ನಮ್ಮ ಕಷ್ಟನಷ್ಟಗಳು ಹೆಚ್ಚಿದ ಹಾಗೆಲ್ಲಾ ನಮ್ಮ ಶಕ್ತಿಯೂ ಹೆಚ್ಚುತ್ತಾ ಹೋಗುತ್ತದೆ. ಸಹಸ್ರಾರು ವರ್ಷಗಳವರೆವಿಗೂ ಜರ್ಮನರು ನಾಶವಾಗುವುದೇ ಇಲ್ಲ.

ಸಾರ್ ಪ್ರದೇಶದಲ್ಲಿರುವ ನಾಜೀ ವಿರೋಧಿಗಳು ಜರ್ಮನರೆಂದು ಕರೆಯಲ್ಪಡಲು ಅರ್ಹರಲ್ಲ. ಅವರೆಲ್ಲಾ ಕ್ರಿಸ್ತನ ವಿರೋಧಿಗಳಾದ ಜುದಾಸ್‌ರು; ಜುದಾಸ್‌ನು ಎಷ್ಟೆಷ್ಟೆ ದ್ರೋಹ ಸಾಧಿಸುತ್ತಿದ್ದರೂ, ಕ್ರಿಸ್ತಮತವು ಹೇಗೆ ಸ್ಥಾಪಿತವಾಯಿತೋ, ಹಾಗೆಯೇ ಸಾರ್ ಪ್ರಾಂತ್ಯದಲ್ಲಿ ನಾಜೀ ವಿರೋಧಿಗಳ ಪ್ರಬಲವು ಎಷ್ಟೇ ಇದ್ದರೂ, ನಮ್ಮ ಚಳವಳಿಗೆ ಜಯವು ಸಂಭವಿಸುವುದು.

'ಸಾರ್ ಪ್ರಾಂತ್ಯದವರಿಗೆ ನಾನು ಹೇಳಬೇಕಾದುದಿಷ್ಟೇ! ಕಾಲವು ಬಂದಾಗ ಸಾರ್ ಪ್ರಾಂತ್ಯದವರಿಗೆ ಜರ್ಮನಿಯವರಲ್ಲಿ ಐಕ್ಯವಾಗಲು ಅವಕಾಶವು ಇರುವುದು. ಸಾರ್ ಪ್ರಾಂತ್ಯದವರು ಹಿಂದೆ ಯಾವ ಪಂಗಡದವರಾಗಿದ್ದರೂ ಚಿಂತೆಯಿಲ್ಲ. ಅವರಿಗೂ ನಮಗೂ ಸೌಹಾರ್ದವನ್ನು ಕಲ್ಪಿಸುವುದೇ ನಮ್ಮ ಗುರಿ. ಸಾರ್ ಪ್ರಾಂತ್ಯದ ಆರ್ಥಿಕಸ್ಥಿತಿಯಲ್ಲೂ ಅಭಿವೃದ್ಧಿಯು ಆಗುವುದು.'

ಸಾರ್ ಪ್ರಾಂತ್ಯದ ಭವಿಷ್ಯ.
ನಾಜೀ ವಿರುದ್ಧ ಪ್ರದರ್ಶನ.

ಸುರ್‌ಬ್ರ್ಯೂಕ್. ಎಂಬಲ್ಲಿ ಕಮ್ಯೂನಿಸ್ಟ್‌ಗಳೂ, ಸೋಷಿಯಲಿಸ್ಟ್‌ಗಳೂ, ರೋಮನ್ ಕ್ಯಾಥೋಲಿಕರೂ, ಇತರರೂ ವ್ಯವಸ್ಥೆಮಾಡಿದ್ದ ಹಿಟ್ಲರ್ ವಿರುದ್ಧ ಪ್ರದರ್ಶನದಲ್ಲಿ ೮೦ ಸಹಸ್ರ ಜನರು ಭಾಗ ವಹಿಸಿದ್ದರು.

ಎಲ್ಲರೂ ಏಕಕಂಠದಿಂದ "ಸಾರ್ ಪ್ರಾಂತ್ಯವು ಎಂದೆಂದಿಗೂ ಹಿಟ್ಲರನಿಗೆ ಸೇರುವುದಿಲ್ಲ; ನಮ್ಮ ದೇಶದಲ್ಲಿ ಹಿಟ್ಲರನ ಪ್ಲೇಗು ತಲೆಹಾಕಲಾರದು" ಎಂದು ಪ್ರತಿಜ್ಞೆ ಮಾಡಿದರು.

ಪ್ರಜೆಗಳ ಮೇಲೆ ಎರಡು ಗ್ಯಾಸ್ ಬಾಂಬುಗಳನ್ನು ಹಾಕಿದ ಇಬ್ಬರು ನಾಜಿಗಳು ದಸ್ತಗಿರಿಯಾಗಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಈ ತಿಂಗಳ ಮಧ್ಯಭಾಗದಲ್ಲಿ ದಿವಾನರವರು ಹಾಸನ ಡಿಸ್ಟ್ರಿಕ್ಟಿನಲ್ಲಿ ಸಂಚರಿಸುವರೆಂದು ತಿಳಿದುಬಂದಿದೆ.

ರಾಜಧಾನಿಯ ವೆಂಕಟರಮಣನೆಂಬ ಟಪಾಲ್ ಜವಾನನು ಪೋಸ್ಟಾಫೀಸಿನ ಹಣವನ್ನು ದುರುಪಯೋಗಪಡಿಸಿದನೆಂಬ ಕಾರಣದ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ನಡೆಯಿಸಿ ಅಪರಾಧಿಗೆ 3 ತಿಂಗಳ ಕಠಿಣಶಿಕ್ಷೆಯನ್ನೂ 30 ರೂ. ದಂಡವನ್ನೂ ವಿಧಿಸಿರುತ್ತಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಪದವೀಪ್ರದಾನ ಸಮಾರಂಭವು ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಅಕ್ಟೋಬರ್ 31 ನೇ ತಾರೀಖು ಬುಧವಾರ ಬೆಳಗ್ಗೆ ನಡೆಯುವದು. ಈ ಸಂದರ್ಭದಲ್ಲಿ ಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಮಿ|| ಸಿ. ವೈ. ಚಿಂತಾಮಣಿಯವರು ನೂತನ ಪದವೀಧರರನ್ನುದ್ದೇಶಿಸಿ ಭಾಷಣಮಾಡುವರು.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಲಂಬಾಣಿ ಹುಡುಗಿಯನ್ನು ಅಪಹರಿಸಿಕೊಂಡು ಹೋಗಿದ್ದರೆಂಬ ಕಾರಣದ ಮೇಲೆ ಪೋಲೀಸರು 8 ಜನರನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿದ್ದರು. ಶಿವಮೊಗ್ಗೆಯ ಅ|| ಸೆಷನ್ಸ್ ಜಡ್ಜರವರು ವಿಚಾರಣೆ ನಡೆಯಿಸಿ 3 ಜನರಿಗೆ 5 ವರ್ಷಗಳ ಕಠಿಣಶಿಕ್ಷೆಯನ್ನೂ, ಉಳಿದ 5 ಜನರಿಗೆ 3 ವರ್ಷಗಳ ಕಠಿಣಶಿಕ್ಷೆಯನ್ನೂ ವಿಧಿಸಿರುತ್ತಾರೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿರುವ (ಶರಾವತಿ ನದಿಯ) ಗೆರಸೊಪ್ಪ ಅಥವಾ ಜೋಗ ಜಲಪಾತದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸುವ ವಿಷಯದಲ್ಲಿ ಮೈಸೂರು ಸರಕಾರಕ್ಕೂ ಮುಂಬಯಿ ಸರಕಾರಕ್ಕೂ ನಡೆಯುತ್ತಿದ್ದ ವ್ಯವಹಾರವು ತೃಪ್ತಿಕರವಾಗಿ ಸಮಾಪ್ತಿಯಾಗಿರುವದೆಂದೂ, ಸರಕಾರದವರು ಅಲ್ಲಿ 20,000 ಕುದುರೆ ಶಕ್ತಿಯ ವಿದ್ಯುಚ್ಛಕ್ತಿಯನ್ನು ತಯಾರಿಸಬೇಕೆಂದು ಆಲೋಚಿಸಿರುವರೆಂದೂ, ಪ್ರಾರಂಭದಲ್ಲಿ 10,000 ಅಶ್ವಶಕ್ತಿಯನ್ನು ಮಾತ್ರ ತಯಾರಿಸುವರೆಂದೂ ತಿಳಿದುಬಂದಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು,
ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಯಾವ ಶಿಕ್ಷಣವು ಸಾತ್ವಿಕ (ಸತ್ವಪ್ರಧಾನ) ವಾದುದೋ ಅದು ಎಂದೂ ಅನಿಷ್ಟವಲ್ಲವಾದುದರಿಂದ, ನಾವಾದರೂ ಅದನ್ನು ಮನ್ನಿಸುತ್ತೇವೆ. '**ತದ್ಜ್ಞಾನಂ ಪ್ರಶಮಕರಂ ಯದಿಂದ್ರಿಯಾಣಾಂ**' ಯಾವ ಜ್ಞಾನವು ಅಂತರ್ಬಹಿರಿಂದ್ರಿಯಗಳಿಗೆ ಶಾಂತಿಪ್ರದವಾದುದೋ ಅದುವೇ ನಿಜವಾದ ಜ್ಞಾನವು. ಎಂಬುದಾಗಿ ಅಭಿಯುಕ್ತರು ಹೇಳುತ್ತಾರೆ. ಮತ್ತು, ಈ ವಿಷಯಕವಾಗಿ—

ತಜ್ಜ್ಞಾನಂ ಹರತಿ ವಿಮಲಂ ಯೇನ
ಶೀಲಂ ನ ಕಾಮ।
ಸ್ತದ್ಧೀರತ್ವಂ ಪ್ರಶಮವಶತಾಂ ಯಾನ್ತಿ
ಯೇನೇಂದ್ರಿಯಾಣಿ ॥
ತದ್ವೈದಗ್ಧ್ಯಂ ಭುವನಜಯಿನೀ ವಂಚ್ಯತೇ
ಯೇನ ಮಾಯಾ।
ತತ್ಪಾಂಡಿತ್ಯಂ ಭವಪರಿಭವಃ ಶಾನ್ತಿ
ಮಾಯಾತಿ ಯೇನ ॥

ಎಂಬುದಾಗಿ ಹೇಳಲ್ಪಟ್ಟಿರುವ ವಾಕ್ಯಗಳನ್ನಾದರೂ ನಾವಾಗಲಿ, ಶಿಕ್ಷಣಾಭಿಮಾನಿಗಳಾಗಲಿ ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳುವುದು ಯುಕ್ತವು.

ಆದರೆ ವರ್ತಮಾನಸಮಯದಲ್ಲಿ ಜನರಿಗೆ ಅಭಿನಿವೇಶಪೂರ್ವಕವಾಗಿ ಒದಗಿಸಿಕೊಡುವ ಶಿಕ್ಷಣವು ಇಂದ್ರಿಯ ಪ್ರಶಮಕರವಾದುದೇ? ಅದಕ್ಕೆ ಬದಲು ಅವುಗಳನ್ನು ಉಚ್ಛೃಂಖಲ (ಕಟ್ಟುಬಿಟ್ಟ) ಗೊಳಿಸುತ್ತಿರುವುದೇ ವಿಶೇಷವಾಗಿ ದೃಗ್ಗೋಚರವಾಗುತ್ತಿರುವುದಿಲ್ಲವೇ? ಅದರಿಂದ ಜನರ ಅಂತಃಕರಣಗಳಲ್ಲಿ ಹಿತಾವಹವೂ, ಉಚ್ಚತಮವೂ ಆದ ವಿಚಾರೋತ್ಪತ್ತಿಗಾಸ್ಪದವಿಲ್ಲದಂತಾಗಿ ವಿಪರೀತಭಾವನೆಗಳೇ ಮೂಡುತ್ತಲಿವೆ. ಇತರ ವಿಷಯಕವಾಗಿಯೂ, ಧರ್ಮವಿಷಯಕವಾಗಿಯೂ ಅದಾಭಾವವೇ ಪರಿಸತೊಡಗಿ ಕೇವಲ ತಾತ್ಸಾರತೆಯೂ, ವಾವದೂಕತೆಯೂ ದುರಭಿಮಾನವೂ ಮಾನ್ಯರಲ್ಲಿಯು ಸಹ ಅನಾದರಬುದ್ಧಿಯೂ ಎಂಬೀ ದೋಷಗಳು ಅತಿರೇಕವಾಗಿರುವುವು. ಮಹಾಪದವೀಧರರಲ್ಲಿಯು ಕೂಡ ದೃಷ್ಟದ ಆಚೆಗೆ ಅದೃಷ್ಟವಾದುದೊಂದು ವಸ್ತುವಿರುವುದೆಂಬ ಎಚ್ಚರವೇ (ಅರಿವೇ) ಉಳಿದಿಲ್ಲ. ಅವರಂತಃಕರಣದೊಳಗಿನ ಸ್ವಾಭಾವಿಕಶ್ರದ್ಧೆಯು ನಷ್ಟವಾಗಿರುವುದರಿಂದ ಅವರು 'ಧರ್ಮ' ವೆಂದರೇನು? ಅದೊಂದು ಬೂಟಾಟಿಕೆಯೇಸೈ! ಎಂದು ಥಟ್ಟನೆ ನುಡಿಯುತ್ತಾರೆ. ಮಾನ್ಯರಾಗಿರುವರೊ ಅವರ ಮಾನಮರ್ಯಾದೆಗಳನ್ನಾದರೂ ಉಳಿಸಬೇಕೆಂಬ ವೃತ್ತಿಯು ಆ ಸುಶಿಕ್ಷಿತ ಮಹೋದಯರಲ್ಲಿ ಸಮೂಲವಾಗಿ ನಷ್ಟವಾಗಿದೆ. ಅನಾದಿಕಾಲದಿಂದ ನಡೆದು ಬಂದ ವೇದಾಗಮ ಪ್ರಸಿದ್ಧವಾದ 'ಧರ್ಮ' ವನ್ನು ಇದೊಂದು ಕಲ್ಪನೆಯ ಪರಿಣಾಮವೆಂದು ಭಾವಿಸಿ, 'ಈ ಕಾಲವೇ ಬೇರೆಯಾಗಿದೆ. ಈ ನವಯುಗದಲ್ಲಿ ಆ ಹಳೆಯ ವೇದಾಗಮಗಳಿಂದೇನೂ ಪ್ರಯೋಜನವಿಲ್ಲ. ಈಗಣ ನಮ್ಮ ಸುಧಾರಣೆಯ ಪ್ರವಾಹವನ್ನು ಅಡ್ಡಗಟ್ಟುವ ಒಡ್ಡಿನಂತಿರುವ ಆ ವೇದಶಾಸ್ತ್ರರೂಪವಾದ ವೈದಿಕ ಸಾಹಿತ್ಯವನ್ನೇ ನಾಮಾವಶೇಷವನ್ನಾಗಿ ಮಾಡಿದ ಹೊರತು ನಾವು ಸುಧಾರಿಸುವುದೇ ಅಸಂಭವವು;' ಎಂಬುದಾಗಿ ನಮ್ಮ ಶಿಕ್ಷಾದೀಕ್ಷಿತರಲ್ಲಿ ಬಹುಜನರು ನಿರ್ಭಯದಿಂದ ನುಡಿಯುತ್ತಿರುವರು.

ಅಯ್ಯೋ! ಯಾವ ವಿದ್ಯೆಯು ಮೊದಲು ಹೊಟ್ಟೆಯ ಸಲುವಾಗಿ ಗ್ರಹಿಸಲ್ಪಟ್ಟಿತೋ ಅದುವೇ ವೇದಾಗಮ ಪ್ರಸಿದ್ಧವೂ ಅನಾದಿಕಾಲದಿಂದ ನಡೆದು ಬಂದುದೂ ಆದ 'ಧರ್ಮ' ವನ್ನೇ ನಾಶಪಡಿಸುವುದರಲ್ಲಿ ಈಗ ಸಜ್ಜಾಗಿರುವುದು. ಅದು ಪ್ರಕೃತದಲ್ಲಿ ಸನಾತನ ಧರ್ಮವನ್ನು ಪ್ರತಿಭಟಿಸಿ ನಡೆಸಿರುವ ಗಲಭೆಯ ಸಂಬಂಧವಾದ ಅಧಿಕ ವೃತ್ತಾಂತವನ್ನು ನಾವೇ ಹೇಳಬೇಕೆನ್ನುವ ಹಾಗಿಲ್ಲವಷ್ಟೇ?

ಇದು ನಮ್ಮ ಕರ್ನಾಟಕದ ಸ್ಥಿತಿಯು. ಇನ್ನು ಇತರ ಪ್ರಾಂತಗಳಿಗೂ ಧರ್ಮದೃಷ್ಟ್ಯಾ ನ್ಯೂನಾಧಿಕ ಪ್ರಮಾಣದಿಂದ ಇದೇ ಅವಸ್ಥೆಯುಂಟಾಗಿದೆ. ಆಂಗ್ಲಭಾಷಾಭಿಜ್ಞಮಂಡಳಿಯು ಅಧಿಕಾರಾರೂಢವೂ ಲಕ್ಷ್ಮೀಕೃಪಾಕಟಾಕ್ಷಪಾತ್ರವೂ ಅದುದರಿಂದ ಅದರ ಮುಂದೆ ಹಳೆಯ ಹೊತ್ತಿಗೆಯ (ಪಠಿವಾರಿಕ) ಜಾಹಿರ ತಿಳ್ಳ 'ಶಾಸ್ತ್ರಿ' ವರ್ಗದ ಬೆಳಕು ಮಸಕಿತು. ಮೆಲ್ಲಮೆಲ್ಲನೆ ಈ ಪದವೀಧರರೇ "**ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ।**" ಎಂಬುಕ್ತಿಯಂತೆ ಶಿಷ್ಟರೂ ಕಲ್ಯಾಣಮಾರ್ಗದರ್ಶಕರೂ ಆಗಿರುತ್ತಾರೆಂಬ ಭಾವನೆಯು ಅಜ್ಞರಲ್ಲಿ ಹುಟ್ಟುದುದರಿಂದ ಆ ಅಜ್ಞಜನರಾದರೂ ಕ್ರಮೇಣ ಅವರನ್ನೇ ಅನುಕರಣಮಾಡುತ್ತಲಿದ್ದಾರೆ. ಹೀಗೆ ಬುದ್ಧಿವಂತರೂ ಅಜ್ಞರೂ ನೀರಸವಾದ ಅಧಿಭೌತಿಕ ಸುಖಕ್ಕೆ ಮರುಗುತ್ತಿರುವದರಿಂದ ಮೊದಲಿನ ಧರ್ಮಸಂಬಂಧವಾದ ಉದಾತ್ತ ಕಲ್ಪನೆಯು ಅಳಿಗಲಾರಂಭಿಸಿದೆ. ಆಂಗ್ಲಭಾಷಾಭಿಜ್ಞರ ಸ್ವೈರವೃತ್ತಿಗೆ ಸನಾತನ ಧರ್ಮವು ರುಚಿಸದಂತಾಗಿ ಅವರು ಧರ್ಮವೆಂಬುದು 'ರಬ್ಬರ' ಹೇಗೋ ಹಾಗೆ ಹಿಡಿದೆಳೆದರೆ ಹಿಗ್ಗಬೇಕು. ಬಿಟ್ಟರೆ ಮುದುಡಿಕೊಳ್ಳಬೇಕು; ಮತ್ತು ಅದುವೇ ತಮ್ಮನ್ನು ಹಿಂಬಾಲಿಸಬೇಕು. ತಾವು ಅದನ್ನನುಸರಿಸಿ ನಡೆವುದಾದರೋ ಸುಶಿಕ್ಷಿತರ ವ್ಯಕ್ತಿಸ್ವಾತಂತ್ರ್ಯಕ್ಕೆ ಕೊರತೆಯುಂಟಾಗುವುದು; ಎಂಬೀ ಮುಂತಾದ ತರ್ಕಪ್ರಧಾನವಾದ ವಿಚಾರ ಪ್ರವಾಹದಲ್ಲಿ ಧುಮುಕಿದ್ದಾರೆ. ಆದರೆ '**ಇತಿಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ**' ಎಂಬ ವಾಕ್ಯವನ್ನು ದುರ್ಲಕ್ಷಿಸಿರುವ ಮೂಲಕವೇ ಆ ತರ್ಕವು ಭ್ರಾಮಕವೂ ಅಪ್ರತಿಷ್ಠಿತವೂ ಆಗಿರುವುದೆಂಬ ವಿಚಾರವು ಅವರ ತೀಕ್ಷ್ಣಜ್ಞಾನಚಕ್ಷುಗಳಲ್ಲಿ ಹೊಳೆಯಲಾಸ್ಪದವಿಲ್ಲದಂತಾಗಿರುತ್ತದೆ. ಇದರಿಂದ ಧರ್ಮದಲ್ಲಿ ಅನುಚಿತವಾದ ಗಲಭೆಯುಂಟಾಗಿದೆ. ಇವರ ಸಹವಾಸಗಳಿಂದ ಸರ್ವಧರ್ಮಬಂಧನಗಳೂ ಜ್ಞಾತಿಬಂಧನಗಳೂ ಶಿಥಿಲವಾಗಿ ಯಾರು ಯಾರನ್ನೂ ಲೆಕ್ಕಿಸದಂತಾಗಿರುವುದು. ಪರವಿದ್ಯಾಪ್ರಭಾವದಿಂದ ಕಲುಷಿತರಾದವರಿಗೆ ಧರ್ಮದ ನಿಜಸ್ವರೂಪವು ಹೇಗೆ ಗೋಚರವಾಗುವುದು? ಧರ್ಮದಲ್ಲಿ ಶ್ರದ್ಧೆಯೇ ಇಲ್ಲದವರು ಧರ್ಮದ ಯಾಥಾತ್ಮ್ಯವನ್ನು ಹೇಗೆ ತಾನೇ ಅರಿಯಬಲ್ಲರು? ಶ್ರದ್ಧೆಯು ಇದ್ದ ಹೊರತು ಧರ್ಮದಂತೆ ನಡೆಯಲು ಸಾಧ್ಯವಿಲ್ಲ. ಮತ್ತು ಧರ್ಮದಲ್ಲಿಯೂ ಆಚಾರದಲ್ಲಿಯೂ ಬದಲಾವಣೆಯಾಗಬೇಕೆಂದು ಹಾರೈಸುವ ಈ ಮಂಡಳಿಯ ಮನೋಭಿಪ್ರಾಯವು ಚಿಂತನೀಯವಾಗಿದೆ. ಕೋಮಲಾಂತಃಕರಣವುಳ್ಳವನಾದ ಒಬ್ಬ ಹುಡುಗನನ್ನು ಮಿಷನರೀ ಶಾಲೆಗೆ ಕಳುಹಿದರೆ ಸ್ವಲ್ಪ ದಿವಸಗಳಲ್ಲಿಯೇ ಆ ಬಾಲಕನ ಸ್ಥಿತಿಯು ಯಾವ ವಿಧವಾಗಿ ಪರಿಣಮಿಸುವುದೆಂಬುದನ್ನು ಎಲ್ಲರೂ ಬಲ್ಲರು. ಈ ಮಂಡಳಿಯಾದರೂ ಧರ್ಮದಲ್ಲಿಯೂ ಆಚರಣೆಗಳಲ್ಲಿಯೂ ಬದಲಾವಣೆಯಾಗಬೇಕೆಂದು ಹಾತೊರೆವ ಪರಿಯಾದರೂ ಯಾವುದರ ದ್ಯೋತಕವಿರಬಹುದು? ಮನಸ್ಸು ಕಲುಷಿತವಾಗಿರುವುದರ ದ್ಯೋತಕವಲ್ಲವೇ? ಶ್ರದ್ಧಾಭಾವದ ಹೆಗ್ಗುರುತಲ್ಲವೇ? ಸದ್ಭಾವನೆಗು ಕೂಡ ಅಂಥ ಶ್ರದ್ಧೆಯೆಂದೇ ಹೆಸರಿಡುವ ಅಪ್ರಾಮಾಣಿಕ ಗುಣಾಭಿವ್ಯಂಜಕವಲ್ಲವೇ? ಇವರಲ್ಲಿಯೇ ಕೆಲಂಬರು 'ದೇಶ ಸೇವೆಯೇ ಧರ್ಮಸೇವೆಯು' ಎಂಬುದಾಗಿಯೂ ನುಡಿಯುತ್ತಾರೆ. ಹೀಗೆ ನುಡಿವುದಾದರೋ ಭ್ರಾಂತಿಮೂಲಕವಾದುದೇ ಸರಿ. ಸ್ವಧರ್ಮವನ್ನು ಅನುಷ್ಠಾನದಿಂದ ರಕ್ಷಿಸುವುದೇ ಮನುಷ್ಯನ ಮುಖ್ಯವಾದ ಕರ್ತವ್ಯವೆಂದು ನಾವು ತಿಳಿಯುತ್ತೇವೆ. ಅದರಿಂದ ಲಭಿಸುವ ನಿರುಪದ್ರವವಾದ ಸುಖವೇ ನಿಜವಾದ ಐಹಿಕೋತ್ಕರ್ಷವು. ಲೌಕಿಕ ಪುರುಷಾರ್ಥವು ನಾಶವಾಗಕೂಡದು ದೈವಪ್ರಾಪ್ತವೂ ಆಗಿದೆ. ಅರ್ಥಕಾಮಗಳೆಂಬ ಪುರುಷಾರ್ಥಗಳು ಧರ್ಮವಿರುದ್ಧಗಳಾಗಿರಬೇಕೆಂಬ ಸುವಿಚಾರವಿಲ್ಲದವನಲ್ಲಿ ಮನುಷ್ಯತ್ವವಿರುವುದೇ? ದೇಶಸೇವೆಯ ನೆವದಿಂದ ಸನಾತನ ಧರ್ಮವನ್ನೇ ಬುಡಮೇಲು ಮಾಡಲು ಪ್ರಯತ್ನಿಸುತ್ತಿರುವವರ ಅಮಾನುಷಕೃತಿಗಳು ವಿಪರೀತಗಳಾಗಿರುವುವು.

ದೇಶದ ಸ್ಥಿತಿಗಿಂತಲೂ ಧರ್ಮದ ಸ್ಥಿತಿಯು ಮಿಗಿಲಾದುದಲ್ಲವೇ? ದೇಶವು ಕೇವಲ ಈ ಜನ್ಮದ ಮಟ್ಟಿಗಿರುವುದು. ಧರ್ಮವಾದರೋ ಅನೇಕ ಜನ್ಮಗಳ ಪರ್ಯಂತ ಸಂಬಂಧವುಳ್ಳದ್ದಾಗಿದೆ. ದೇಶಸ್ಥಿತಿಯು ಪರಿವರ್ತನಶೀಲವಾದುದು. ಧರ್ಮದ ಸ್ಥಿತಿಯಾದರೋ ಅಂತಲ್ಲ: ದೇಶದೊಳಗಿನ ಪಕ್ಷಭೇದಗಳು ಸರ್ವಥಾ ಇಲ್ಲದಂತಾಗಿ ಪಕ್ಕವೇ ತ್ರಿಕಾಲಾಬಾಧಿತವಾಗಿ ಉಳಿವುದು ಶಕ್ಯವೇ ಇಲ್ಲ. ಪಕ್ಷಭೇದಗಳು ಸ್ವಾಭಾವಿಕಗಳೂ ಅಪರಿಹಾರ್ಯಗಳೂ ಆಗಿವೆ. ಪ್ರಕೃತಿವೈಚಿತ್ರ್ಯವನ್ನು ಅಳಿಸಲು ಅದಾವನು ಸಮರ್ಥನು? ಮುಖ್ಯಭೇದಗಳೂ ಅವಾಂತರಭೇದಗಳೂ ಎಂಬಿವು ಒಂದು ಜನಾಂಗದ ಅಥವಾ ರಾಷ್ಟ್ರದ ಸುಧಾರಣೆಗೆ ಪ್ರತಿಬಂಧಕಗಳಾದುದರಿಂದ ಅವೆಲ್ಲಾ ಅಳಿದುಹೋಗಿ ಸರ್ವತ್ರ ಏಕರೂಪವೇ ತೋರಬೇಕೆಂಬ ಹಂಬಲದಿಂದ ಅದಕ್ಕಾಗಿಯೇ ಪ್ರಯತ್ನಿಸುತ್ತಿರುವ ಬಂಟರಿಗೆ ಇನ್ನುಮುಂದೆ ಪ್ರಾಣಿವರ್ಗದ ಸ್ತ್ರೀ-ಪುಲ್ಲಿಂಗ ಭೇದನಾದರೂ ಅಸಹ್ಯವಾಗುವದೆಂದು ಈಗಲೇ ನಾವು ಊಹಿಸಬಾರದೇಕೆ? ಅಂತಹ ಅಘಟನಘಟನೆಯು ಈ ಸುಶಿಕ್ಷಿತರಿಗೆ ಸಾಧ್ಯವಾದ ಪಕ್ಷದಲ್ಲಿ ಅದಾದರೂ ಸುಧಾರಣೆಯ ವೈಭವದ ಅತಿರೇಕವೆಂದೇ ಹೇಳಲ್ಪಡುವುದಲ್ಲವೆ?

ಆಂಗ್ಲಭಾಷಾಭಿಜ್ಞಮಂಡಳಿಯಿಂದ ಪ್ರಕೃತದಲ್ಲಿ ಧರ್ಮಸಂಬಂಧವಾದ ವಿಪರೀತಭಾವನಾಮಯವಾದ ಕೋಲಾಹಲವು ಹೆಚ್ಚುತ್ತಲಿರುವುದೆಂಬುದನ್ನು ನಾವೇ ಹೇಳುತ್ತಿರುವೆವಂತಲ್ಲ. ಆಂಗ್ಲಭಾಷಾಭಿಜ್ಞರಲ್ಲಿ ಕೆಲವರು ಸ್ವಧರ್ಮನಿಷ್ಠೆಯುಳ್ಳವರೂ ಆಚಾರಶೀಲರೂ ಇದ್ದಾರೆ. ಅವರಾದರೂ ಹಾಗೇ ನುಡಿಯುತ್ತಿರುವರು. ಅದ್ದರಿಂದ 'ಆಂಗ್ಲಭಾಷಾಭಿಜ್ಞರು' ಎಂಬುದಾಗಿ ಹೇಳಲ್ಪಡುವುದಾದರೋ '**ಛತ್ರಿಣೋ ಯಾನ್ತಿ**' ಎಂಬ ನ್ಯಾಯಾನುಸಾರವಾಗಿರುವುದೆಂದು ತಿಳಿಯತಕ್ಕದ್ದು.

ಈ ಆಂಗ್ಲಭಾಷಾಭಿಜ್ಞರು ಧರ್ಮವೆಂಬುದು ಏಕಾಂಗಿಯಾಗಿರುವುದೆಂದೂ ತತ್ಪ್ರವರ್ತಕರೂ ಏಕಾಂಗಿಗಳಾಗಿರುವರೆಂದೂ ತಮ್ಮ ತಿಳಿವಳಿಕೆಯೇ ವ್ಯಾಪಕವಿಚಾರಪರಿಪ್ಲುತವಾದುದೆಂದೂ ಭಾವಿಸಿದ್ದಾರೆ. ಅದುಕಾರಣವೇ ಈ ಮಹಾಭಾಗರು ಧರ್ಮವು ಸರ್ವಾಂಗಸುಂದರವಾಗಿ ತೋರಬೇಕಾದರೆ ಅದರ ಪ್ರವರ್ತಕರು ಈಗಣ ಪರಿಸ್ಥಿತಿಗನುಗುಣವಾಗಿ ತಮ್ಮಂಥವರೇ ಆಗಿರುವುದು ಯುಕ್ತವೆಂದು ನುಡಿಯುತ್ತಾರೆ. ಇಷ್ಟೇ ಅಲ್ಲ, ಧರ್ಮಪೀಠಾಧೀಶರು ಆಂಗ್ಲಭಾಷಾಭಿಜ್ಞರೇ ಇರತಕ್ಕದ್ದೆಂಬಭಿನಿವೇಶವುಳ್ಳವರಾಗಿ ಸ್ವಾಭಿಮತಸಿದ್ಧಿಗೋಸ್ಕರ ಪಂಚಿಕೆಯ ಹಲವು ಹುನ್ನಾರಗಳನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಮಾಡತೊಡಗಿದ್ದಾರೆ. ಸರ್ವ ಪೀಠಾಧೀಶರೂ ಇಂತಹ ಸುಶಿಕ್ಷಿತರೇ ಆದ ಪಕ್ಷದಲ್ಲಿ ಕೇಳುವದೇನು? ಗುರುಗಳೂ ಶಿಷ್ಯರೂ ಒಂದೇ ಮಾಲೆಯೊಳಗಿನ ಮಣಿಗಳಾಗುವರು! ಇವರ ಜ್ಞಾನಚಕ್ಷುಗಳ ಚುರುಕುತನವು ಕೇವಲ ತರ್ಕಪ್ರತಿಷ್ಠವಾದುದು. ಇವರಲ್ಲಿ ಒಬ್ಬನು ಧರ್ಮವು, ಧರ್ಮವು ಅಂದರೇನು? ಎಂಬುದಾಗಿ ಪ್ರಶ್ನೆ ಮಾಡುವನು; ಮತ್ತೊಬ್ಬನು ತತ್ವವೇ ಅದಾವ ಮಹತ್ತರವಾದ ವಿಷಯವು? ಧರ್ಮವು ಅಂದರೆ ಸೋಮಾರಿಗಳಾದ ಹಳಬರಿಂದ ಕಲ್ಪಿಸಲ್ಪಟ್ಟ ಒಂದುವಿಧವಾದ ಅಂಧಶ್ರದ್ಧಾಮಯ ಭಾವನೆಯಲ್ಲದೆ ಮತ್ತೇನು? ಎಂದು ಸ್ವತರ್ಕಾರೂಢಬುದ್ಧಿಯ ಬೆಳಕನ್ನು ಬೀರುವನು! ಇಂತಹ ಸ್ಥಿತಿಯು ಪರವಿದ್ಯಾಪ್ರಭಾವದಿಂದೇ ಸಂಭವಿಸಿರುವುದಲ್ಲವೇ? '**ಜನಕಾದೇಃ ಕಥಂ ರಾಜ್ಯಮಿತಿಚೇದ್ದೃಢ ಬೋಧತಃ**' ತತ್ವಜ್ಞಾನಸಂಪನ್ನನಾದ ಜನಕನು ಅದೆಂತು ರಾಜ್ಯವನ್ನಾಳಿದನು? ಎಂಬುದಾಗಿ ಬೋಧ್ಯನು ಪ್ರಶ್ನೆಯನ್ನು ಮಾಡಲು ಬೋಧಕನು—ಜನಕರಾಜನಿಗೆ ದೃಢಬೋಧವಿದ್ದಿತು. ದೃಢವಾದ ಬೋಧವುಳ್ಳವನ (ಸ್ಥಿತಪ್ರಜ್ಞನ) ವೃತ್ತಿಯು ಅನ್ಯ ಯಾವುದರಿಂದಲೂ ವಿಕಳತೆಯನ್ನು ಹೊಂದದು; ಎಂದುಹದೇಶಿಸಿದನು. ಆದರೆ, ಈ ಆಂಗ್ಲಭಾಷಾಭಿಜ್ಞರಿಗೆ ದೃಢಬೋಧವಂತೂ ದೊರವಿರುವುದು; ಧರ್ಮವಿಷಯದಲ್ಲಿಯೂ ಅಲ್ಪಬೋಧವು ಕೂಡ ಉಂಟೋ ಇಲ್ಲವೋ. ಇಂತಹ ಸ್ಥಿತಿಯಲ್ಲಿ ಧಾರ್ಮಿಕಸಂಬಂಧವಾದ ಪ್ರತಿಯೊಂದು ವಿಚಾರದಲ್ಲಿಯೂ ಇವರ ಚಿತ್ತಸ್ಥೈರ್ಯವು ಇರುವ ಬಗೆಹೇಗೆ?

ಇವರು ತಮ್ಮಲ್ಲಿ ಅದಾವ ವೈಗುಣ್ಯವಿರುವುದೆಂಬುದನ್ನು ತಾವೇ ನಿರಭಿಮಾನಪೂರ್ವಕವಾಗಿ ವಿಚಾರಿಸಿ ಅದನ್ನು ಬದಿಗಿಟ್ಟು ಶ್ರದ್ಧೆಯೊಡನೆ ಧರ್ಮದ ತಾತ್ವಿಕಸ್ವರೂಪವನ್ನು ಕಂಡುಕೊಳ್ಳಲು ಪ್ರಯತ್ನಿಸುವುದಾದರೆ ಈಗ ಉಲ್ಬಣಾವಸ್ಥೆಯನ್ನು ಹೊಂದುತ್ತಲಿರುವ ಧಾರ್ಮಿಕಸಂಬಂಧವಾದ ಹುಡುಗಿಯು ಶೀಘ್ರವಾಗಿಯೇ ಶಮನವಾಗಬಹುದು.

ಇನ್ನಾದರೂ ಸನಾತನಧರ್ಮಾನುಯಾಯಿಗಳು ತಮ್ಮ ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿಯೇ ಧರ್ಮದ ಸಾಧಾರಣಬೋಧವಾದರೂ ದೊರಕುವ ಹಾಗೆ ಯೋಗ್ಯವಾದ ಅನುಕೂಲ್ಯವನ್ನು ಒದಗಿಸಿಕೊಡುವ ಪಕ್ಷದಲ್ಲಿ ಈಗ ಸಂಭವಿಸಿರುವ ಧಾರ್ಮಿಕ ಹ್ಯಾಸತೆಯು ದೂರವಾಗುವದರಲ್ಲಿ ಸಂದೇಹವೇ ಇಲ್ಲ. ಕುಮಾರಿಲಭಟ್ಟರು ಸ್ವಮತಶಾಸ್ತ್ರಗಳಲ್ಲಿ ನಿಷ್ಣಾತರಾಗಿ ದೃಢಬೋಧವನ್ನು ಸಂಪಾದಿಸಿದ ತರುವಾಯವೇ ಜೈನಪಂಡಿತರ ಬಳಿಯಲ್ಲಿ ಜೈನಗ್ರಂಥಗಳನ್ನು ಅಭ್ಯಾಸಿಸಲಿಲ್ಲವೇ? ಆದರೂ ಆ ಭಟ್ಟಪಾದರಲ್ಲಿ ಯಾವಜ್ಜೀವವೂ ಸ್ವಮತಶ್ರದ್ಧೆಯು ಅಬಾಧಿತವಾಗಿತ್ತೆಂಬ ಸಂಗತಿಯು ಸುಪ್ರಸಿದ್ಧವಾಗಿರುತ್ತಿದು, ಇರಲಿ.

ಪರಭಾಷಾ ಶಿಕ್ಷಣದ ಪ್ರಭಾವವು ಹೇಗಿರುವುದು, ಮತ್ತು ಅದರಿಂದ ಸಂಭವಿಸುತ್ತಿರುವ ಧಾರ್ಮಿಕ ನ್ಯೂನತೆಯು ಹೇಗೆ ದೂರವಾಗಬಹುದು; ಎಂಬೀ ವಿಷಯಕವಾದ ವಿಚಾರವನ್ನು ನಾವು ಪ್ರಾಂಜಲತನದಿಂದ ಇಲ್ಲಿ ತಾರಿ (ತಕ್ಕ) ದ್ದೇವೆ. ಹೀಗೆ ನುಡಿಯಲು ಕಾರಣವೇನೆಂದರೆ, ಆಂಗ್ಲಭಾಷಾಭಿಜ್ಞಮಂಡಳಿಯು ದುರಾಗ್ರಹದಿಂದಲೂ ಅವಿಚಾರದಿಂದಲೂ ಅದನ್ನು ಮಮತೆ ಸಮಾನವಾಗಿ ತಿಳಿಯುತ್ತಿರಬಹುದಲ್ಲವೇ? ಹೇಗಾದರೂ ನಾವು ಅಂಗೀಕೃತವಾದ ಕಾರ್ಯವನ್ನು ಕೊನೆಯ ಉಸಿರಾಡುವ ತನಕ ಬೇಸರವಿಲ್ಲದೆ ಮಾಡಬೇಕೆಂಬ ದೃಢಸಂಕಲ್ಪವುಳ್ಳವರಾಗಿದ್ದೇವೆ. ಅದನ್ನು ಸಾರ್ಥಕಗೊಳಿಸಲು ಸಮರ್ಥನಿದ ಶಿವನನ್ನು ಸ್ಮರಿಸಿ ಪ್ರಕೃತವನ್ನನುಸರಿಸುವಾ!

ಈ ಹಿಂದೆ ಪ್ರತಿಪಾದಿಸಲ್ಪಟ್ಟಿರುವ ಮೇರೆಗೆ ವೈದಿಕಸಾಹಿತ್ಯವು ಅಪರಿಮಿತವಾಗಿರುವುದಾದರೂ "**ಯತ್ಸಾರಭೂತಂ ತದುಪಾಸಿತವ್ಯಂ**" ಎಂಬಂತೆ ಮುಮುಕ್ಷುಜನರು ತಮಗುಪಾದೇಯವಾದುದನ್ನೇ ಸ್ವೀಕರಿಸಬೇಕೆಂಬಭಿಪ್ರಾಯವು ಸಿದ್ಧಿಸುವುದು. ಆದರೆ ಮುಮುಕ್ಷುಗಳೆಂದು ಹೇಳಿಸಿಕೊಳ್ಳಬಹುದು ನಿವೃತ್ತಿ ಧರ್ಮನಿಷ್ಠರಾದರೂ ವೇದಾಗಮಗಳಂತೆಯೇ ತದನುಸಾರಿಗಳಾದ ಕಲ್ಪಸೂತ್ರಗಳನ್ನೂ ಸ್ಮೃತಿಗಳನ್ನೂ ಅವಲಂಬಿಸದಿರುವದಾದರೆ ಅವರಲ್ಲಿ ವೈದಿಕತ್ವವು ಸಿದ್ಧಿಸುವುದೇ? ಎಂಬಾಕ್ಷೇಪದ ಸಮಾಧಾನವು ಹೀಗಿರುತ್ತದೆ. ಕಲ್ಪ (ಶ್ರೌತ) ಸೂತ್ರಗಳಲ್ಲಿ ಕೇವಲ ಯಾಗಾದಿ ಕ್ರಿಯಾನುಷ್ಠಾನವೇ ಪ್ರತಿಪಾದಿಸಲ್ಪಟ್ಟಿರುವುದರಿಂದ ನಿವೃತ್ತಿಧರ್ಮನಿಷ್ಠರಾದ ಆತ್ಮಾರ್ಥಿಗಳು ಬ್ರಹ್ಮವಿದ್ಯೋಪಯುಕ್ತಗಳಾದ ಶಿವಧರ್ಮಾಚರಣೆಗಳನ್ನು ಪ್ರತಿಪಾದಿಸತಕ್ಕ ವೇದಾಗಮವಚನಗಳನ್ನೇ ಮನನಮಾಡುವರಲ್ಲದೆ ಪ್ರವೃತ್ತಿಧರ್ಮಾನುಷ್ಠಾನ ಬೋಧಕಗಳಾದ ಕಲ್ಪಸೂತ್ರಗಳ ಮೇಲೆಯೇ ಕ್ರಿಯಾವಿರತರಲ್ಲ. ಹಾಗೂ, ವೇದಗಳಲ್ಲಿಯೂ ಆಗಮಗಳಲ್ಲಿಯೂ ಶಿವಾರ್ಚನೆ, ಶಿವವ್ರತಾದಿ ಕ್ರಿಯಾಚರಣೆಗಳು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರಲು ಅವುಗಳ ಪರಿಜ್ಞಾನದಪೇಕ್ಷೆಯಿಂದ ಅವರು ಸ್ಮೃತಿಗಳನ್ನಾದರೂ ಅಡಿಗಡಿಗವಲಂಬಿಸಬೇಕಾದ ಅವಶ್ಯಕತೆಯಿರುವುದಿಲ್ಲ. ಇದೇ ಅಭಿಪ್ರಾಯದಿಂದೇ ಹರದತ್ತ ಶಿವಾಚಾರ್ಯರು ಹೀಗೆ ಹೇಳುತ್ತಾರೆ:—

ಧ್ಯಾನಂ ಯಥಾ ಭವತಿ ತದ್ವಿಷಯೋ ಯಥಾತ್ಮಂ
ಯಾದೃಗ್ಗುಣಶ್ಚ ಭಗವನ್ನಧಿಕಾರಿವರ್ಗಃ।
ಸರ್ವಾಣಿ ತಾನಿ ಭವದಾಗಮಸಂಹಿತಾಭಿಃ
ಕಲ್ಪೈರಿವಾಧ್ವರವಿಧೇರುಪಪಾದಿತಾನಿ ॥

ಎಲೈ ಪರಶಿವನೇ! ನಿನ್ನನ್ನು ಧ್ಯಾನಿಸುವ ರೀತಿಯು ಹೇಗೆ? ಧ್ಯಾನವೆಂದರೇನು? ಆ ಧ್ಯಾನದಿಂದ ಸಾಕ್ಷಾತ್ಕರಿಸಲ್ಪಡತಕ್ಕ ನಿನ್ನ ಸ್ವರೂಪವೆಂತಿಹುದು? ಧ್ಯಾನಮಾಡಲರ್ಹವಾದ ಅಧಿಕಾರಿವರ್ಗವು ಹೇಗಿರುವುದು? ಎಂಬೀ ಮುಂತಾದ ಅತ್ಯಾಶ್ರಮ ಧರ್ಮಾಚರಣೆಗೆ ಸಂಬಂಧಿಸತಕ್ಕ ಸರ್ವವಿಷಯಗಳನ್ನೂ, ಕಲ್ಪಸೂತ್ರಗಳು ಯಾಗವಿಧಿಯ ತಂತ್ರಗಳನ್ನೂ ಹೇಗೆ ಹೇಳಿದವೋ ಹಾಗೆ ನಿನ್ನ ಆಗಮಗಳು ಹೇಳಿವೆ.

ಮೂಲತ್ವಕ್ಕೇರನುಪಲಂಭಪರಾಹತಾಯಾ
ದೂತೀವ ಯಾ ನಭವತಿ ಸ್ವರಸಾತ್ಪ್ರಮಾಣಮ್।
ಪ್ರತ್ಯಕ್ಷವೇದವಿಹಿತಂ ಯಜನಂ ತ್ವದೀಯಂ
ತಸ್ಯಾಸ್ಸ್ಮೃತೇರಪಿ ಕಿಮಿಚ್ಛತಿ ದೃಷ್ಟಿಪಾತಮ್ ॥

ವೇದವಾಕ್ಯವು ಉಪಲಬ್ಧವಿಲ್ಲದಿರುವ ಮೂಲಕ ತಿರಸ್ಕೃತವಾದ ಒಂದಾನೊಂದು ಸ್ಮೃತಿವಾಕ್ಯವು ಸ್ವತಂತ್ರವಾಗಿಯೇ ಅರ್ಥವನ್ನು ಹೇಳತೊಡಗಿದರೆ ಅದರ ಸ್ಥಿತಿಯು ಒಡೆಯನನ್ನು ಕಾಣದೆ ನಿನ್ನಷ್ಟಕ್ಕೆ ತಾನೇ ಸ್ವತಂತ್ರವಾಗಿ ನುಡಿವ ತೊತ್ತಿನ ಪರಿಯಾಗಿರುತ್ತದೆ. ಎಲೈ ಮಹಾದೇವನೇ! ಪ್ರತ್ಯಕ್ಷವಾಗಿ ವೇದದಲ್ಲಿಯೇ ಭೋಗಮೋಕ್ಷಾಪೇಕ್ಷಿಗಳಾದ ಸರ್ವರೂ ನಿನ್ನನ್ನೇ ಪೂಜಿಸಬೇಕೆಂದು ಹೇಳಲ್ಪಡುತ್ತಿರಲು, ಆ ವೇದವು (ಶ್ರುತಿಯು) ನನ್ನ ಮೇಲೆ ಸ್ಮೃತಿಯ ದೃಷ್ಟಿಪಾತವಾಗಲೆಂದು ಹಾರೈಸುವುದುಂಟೇ? ಅಂದರೆ ವೇದದಲ್ಲಿ ಶಿವಾರ್ಚನಾದಿ ಅತ್ಯಾಶ್ರಮಧರ್ಮವು ಸ್ಪಷ್ಟವಾಗಿ ನಿರೂಪಿಸಲ್ಪಡುತ್ತಿರಲು, ಆ ಬಗ್ಗೆ ಮತ್ತೆ ಸ್ಮೃತಿವಚನವನ್ನು ಪರಿಶೋಧಿಸುವ ಕೋಟಲೆಯಿಂದೇನೂ ಪ್ರಯೋಜನವಿಲ್ಲ.

ಅದ್ದರಿಂದ ಕಲ್ಪಸೂತ್ರಗಳಿಗೂ ಸ್ಮೃತಿಗಳಿಗೂ ಮೂಲಭೂತಗಳಾದ ವೇದಾಗಮಗಳನ್ನು ಶಿರಸಾವಹಿಸಿ ಅವುಗಳಿಂದ ಸ್ಫುಟವಾಗಿ ನಿರೂಪಿಸಲ್ಪಡುವ ಶಿವಾರ್ಚನೆ, ಶಿವವ್ರತ, ಶಿವಧ್ಯಾನವೇ ಮುಂತಾದ ಅತ್ಯಾಶ್ರಮಧರ್ಮಗಳನ್ನು ಸೂತ್ರಸ್ಮೃತಿಗಳ ಹಂಗಿಲ್ಲದೆ ಅನುಷ್ಠಿಸುತ್ತಿರುವ ಮುಮುಕ್ಷುಜನರಲ್ಲಿ ವೈದಿಕತ್ವವು ನಿಷ್ಪ್ರತ್ಯೂಹವಾಗಿರುವುದು. (ಸಶೇಷ.)

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಗುರುವರ್ಗವೇ ನಮ್ಮ ಮಠದ ತಳಹದಿಯು.

ವಾಚಕಮಹಾಶಯರೇ! ವೀರಶೈವಮಠದ ತಳಹದಿಯು ಗುರುವರ್ಗದವರನ್ನೇ ಅವಲಂಬಿಸಿರುತ್ತದೆ. ಈ ಜವಾಬ್ದಾರಿಯನ್ನು ಇನ್ನೊಬ್ಬರಿಗೆ ಹೊರಿಸುತ್ತೇವೆಂದು ಹೇಳಿದರೆ ಅದು ದುರಭಿಮಾನದ ಮಾತಲ್ಲದೆ ಉಪ್ಪಿಂತು ಸಪ್ಪೆಗೆಂದು ಹೇಳುವ ಮೂರ್ಖನ ಮಾತು. ಯಾಕೆಂದರೆ ಶ್ರೇಷ್ಠವಾದ ಗುರುವರ್ಗವು ಇಂದಿನವರೆಗೂ ವೀರಶೈವರ ಧಾರ್ಮಿಕ ಕರ್ಮಗಳನ್ನು ಮಾಡಿ ಮಾಡುತ್ತಿರುವದು ಲೋಕಪ್ರಸಿದ್ಧವೇ ಇದೆ. ಇಂಥ ಗುರುವರ್ಗದಿಂದ ಉತ್ಕೃಷ್ಟತೆ ಹೊಂದಿದ ನಾವುಗಳು ಈಗ ಆ ಗುರುವರ್ಗವನ್ನು ಹೀಯಾಳಿಸುವದೆಂದರೆ ಮೂರ್ಖತನವಲ್ಲವೇ? "ಸಗುರುರ್ಮತ್ತಮಃ ಪ್ರೋಕ್ತೋ ಮಂತ್ರವೀರ್ಯಪ್ರಕಾಶಕಃ।" ಎಂಬುಕ್ತಿಯಂತೆ ಶಿವನೇ ಗುರುವಾಗಿರುವನೆಂದು ಶಾಸ್ತ್ರಸಿದ್ಧಾಂತವು. ಈ ಸಿದ್ಧಾಂತವನ್ನರಿತುಕೊಂಡಿದ್ದರೂ ಗುರುನಿಂದೆಯನ್ನು ಮಾಡುವದೂ, ಗುರುವಿಗೆ ದ್ರೋಹವನ್ನುಂಟುಮಾಡುವದೂ, ದ್ರೋಹಿಗಳೊಡನೆ ಸಹಕರಿಸುವದೂ, ಶಿವದ್ರೋಹಕರವಲ್ಲವೇ? ಹೀಗೆ ಗುರುವಿಗೂ ಶಿವನಿಗೂ ದ್ರೋಹಿಗಳಾಗಿ ಇಹಪರಲೋಕಗಳಲ್ಲಿ ಅನುಭವಿಸುವ ಸಂಕಷ್ಟ ಅದಾವುದೋ ಕಾಣದಾಗಿದೆ. ರಾಜದ್ರೋಹಿಗಳಾದ ಪ್ರಜೆಗಳು ರಾಜಶಾಸನಕ್ಕೀಡಾಗುವಂತೆ ಗುರುದ್ರೋಹಿಗಳಾದ ಶಿಷ್ಯರು ಶಿವಶಾಸನಕ್ಕೀಡಾಗುವುದರಲ್ಲಾವ ಸಂಶಯವೂ ಇಲ್ಲ. ಶಿವದ್ರೋಹವನ್ನೂ ಗುರುದ್ರೋಹವನ್ನೂ ಮಾಡಿ ಪ್ರಪಂಚದಲ್ಲಿ ಯಾವ ಮನುಷ್ಯರೂ ಉದ್ಧಾರವಾಗಿರುವ ದೃಷ್ಟಾಂತಗಳು ಎಲ್ಲಿಯೂ ಕಾಣುವದಿಲ್ಲ. ಗುರುಮೂರ್ತಿಯನ್ನು ಆಶ್ರಯಿಸಿ ಘನತರವಾದ ಪದವಿಯನ್ನು ಹೊಂದಿರುವ ದೃಷ್ಟಾಂತಗಳು ಎಲ್ಲರ ಕಣ್ಮುಂದೆ ಇಟ್ಟಿರುತ್ತವೆ. ಮಾಡಿಕೊಂಡ ಗಂಡನನ್ನು ಬಿಟ್ಟು ಮತ್ತೊಬ್ಬ ಪುರುಷನನ್ನು ಆಶ್ರಯಿಸಿದರೆ ಸ್ತ್ರೀಯಳಿಗೆ ಪಾತಿವ್ರತ್ಯಭಂಗವುಂಟಾಗಿ ಹೇಗೆ ವ್ಯಭಿಚಾರ ದೋಷವು ಪ್ರಾಪ್ತವಾಗುವುದೋ ಹಾಗೆಯೇ ವಂಶಪರಂಪರೆಯಾಗಿ ಹೆಸರನ್ನು ಹೇಳುತ್ತ ಬಂದಿರುವ ಗುರುವನ್ನು ಬಿಟ್ಟು ಮತ್ತೊಬ್ಬನಲ್ಲಿ ಗುರುತ್ವಾರೋಪಣೆಯನ್ನು ಮಾಡಿ ಅವನನ್ನು ಆಶ್ರಯಿಸುವದು ಮಹಾದೋಷವಲ್ಲವೇ? ಬದಗಿಯ ಹೊಡಕಲ್ಕೆ ತಲೆಕೊಟ್ಟು ಪೆಟ್ಟಾಗಬಾರದೆಂದು ಹೇಳಿದರೆ ಬಿಟ್ಟೀತೆ! ಹಾವಿನ ಕೋಪಿನ ಬಾಯೊಳಗೆ ಸಿಕ್ಕು ಪ್ರಾಣದಿಂದ ಉಳಿಯುತ್ತೇನೆಂಬ ಭರವಸೆಯನ್ನು ಯಾರಾದರೂ ಕೊಡಬಹುದೋ? ಗುರುವು ಸಾಮಾನ್ಯನಲ್ಲ! (ವೈರ್‌ಲೆಸ್ ಟೆಲಿಗ್ರಾಂ) ತಂತಿಯಿಲ್ಲದ ಸಮಾಚಾರದಂತೆ ಇಹಲೋಕದ ಸಮಾಚಾರವನ್ನು ಶಿವಲೋಕಕ್ಕೆ ತಿಳುಹಿಸುವ ಮಹಿಮಾಮೂರ್ತಿಯು. ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲಿಯೂ ನಮ್ಮ ಅಭ್ಯುದಯ ನಿಃಶ್ರೇಯಸ್ಸುಗಳಿಗೆ ಕಾರಣೀಭೂತನಾದ ಶ್ರೀಗುರುವಿನಲ್ಲಿ ಭಕ್ತಿಯನ್ನಿರಿಸದಿದ್ದರೆ ಕುಬೇರನಿಗಿದ್ದಷ್ಟು ದ್ರವ್ಯವಿದ್ದರೂ, ಬೃಹಸ್ಪತಿಗಿದ್ದಷ್ಟು ವಿದ್ಯೆಯಿದ್ದರೂ, ಇಂದ್ರನಿಗಿದ್ದಷ್ಟು ಅಧಿಕಾರ ಸಂಪತ್ತೈಭವವಿದ್ದರೂ, ಅವೆಲ್ಲವೂ ನಿರರ್ಥಕವೇ ಸರಿ! ಆ ವಿದ್ಯೆ, ಆ ದ್ರವ್ಯ, ಆ ಅಧಿಕಾರ, ಆ ವೈಭವಗಳು ಗುರುವಿನ ಕೃಪೆಯಿಂದ ಪ್ರಾಪ್ತವಾಗುತ್ತವೆ. ಪೂರ್ವದಲ್ಲಿ ನಮ್ಮ ಹಿಂದೂ ದೇಶವು ಗುರುಭಕ್ತಿ ದೈವಭಕ್ತಿಗಳಿಂದ ತುಂಬಿತುಳುಕುತ್ತಿತ್ತು. ಅಗ್ಗ ಇದಕ್ಕೆ ಸುವರ್ಣಭೂಮಿಯೆನ್ನುತ್ತಿದ್ದರು. ಜನಗಳಾದರೋ ಆರೋಗ್ಯಶಾಲಿಗಳಾಗಿ ಗುರುಸೇವೆ ದೇವಸೇವೆಗಳಿಂದ ಕ್ರಿಯಾಸಿದ್ಧಿಯುಳ್ಳವರಾಗಿ ತಮ್ಮ ತಮ್ಮ ಗೃಹಕೃತ್ಯಗಳನ್ನು ನಡೆಯಿಸಿಕೊಂಡು ಧನಿಕರಾಗಿಯೂ, ವಿದ್ಯಾವಂತರಾಗಿಯೂ ಅಧಿಕಾರಸಂಪನ್ನರಾಗಿಯೂ, ವೈಭವಶಾಲಿಗಳಾಗಿಯೂ ಇದ್ದರು. ಈಗ ಕಲಿಕಾಲದ ಮಹತ್ವದಿಂದ ಗ್ರಹಗಳ ಬದಲಾವಣೆಯಾಗುವಂತೆ ಜನಗಳ ಮನಸ್ಸು ಕೂಡ ಬದಲಾವಣೆಯಾಗಿ ಗುರುಶಿಷ್ಯರಲ್ಲಿಯೂ ಪತಿಪತ್ನಿಗಳಲ್ಲಿಯೂ, ತಂದೆಮಕ್ಕಳಲ್ಲಿಯೂ ಪರಸ್ಪರ ಪೂಜ್ಯಪೂಜಕಭಾವವೂ ಪ್ರೀತಿವಿಶ್ವಾಸವೂ ತಪ್ಪಿ ಹಿಂದುಸ್ಥಾನವು ದಾರಿದ್ರ್ಯದಿಂದಲೂ, ಪರಾಧೀನತೆಯಿಂದಲೂ ನರಳುತ್ತಿರುವುದು. ಈಗಲೇ ಹೀಗಾದಮೇಲೆ ಮುಂದೇನು ಗತಿಯೆಂದು ಬಹುಜನ ಗುರುಚರಣಸೇವಾಭಿಲಾಷಿಗಳು ಯೋಚನೆಯಲ್ಲಿರುವರು. ಗುರುವಿನ ಸೇವೆಯನ್ನೂ ಗುರುವಿನ ಪೂಜೆಯನ್ನೂ ಮಾಡಿ ಗುರುವಿನ ಕೃಪೆಯನ್ನು ಸಂಪಾದಿಸುವದರ ಬದಲು ಗುರುನಿಂದೆಯನ್ನು ಮಾಡಿ ಗುರುದ್ರೋಹಕ್ಕೆ ಪಾತ್ರರಾದ್ದರಿಂದಲೇ ದೇಶದಲ್ಲಿ ನಾನಾತರಹದ ರೋಗಗಳೂ, ನಾನಾತರಹದ ಪೀಡೆಗಳೂ, ನಾನಾತರಹದ ಕಷ್ಟಗಳೂ, ನಾನಾತರಹದ ತೊಂದರೆಗಳೂ ಉಂಟಾಗಿ ಮಳೆಬೆಳೆಗಳಿಲ್ಲದೆ ಜನಗಳಿಗೆ ಹೊಟ್ಟೆಗೆ ಹಿಟ್ಟಿಲ್ಲದೆ ಮೈಗೆ ಬಟ್ಟೆಗಳಿಲ್ಲದೆ ಕೂಳುಕೂಳು ನೀರುನೀರೆಂದು ಹುಚ್ಚರಂತೆ ಅಲೆದಾಡುತ್ತಿರುವರು. ಸಂಪತ್ತು-ವಿದ್ಯಾ-ಅಧಿಕಾರಾದಿಗಳು ಮೂರು ದಿವಸದ ಸಂತೆಯಂತಿರುವವು. ಗುರುವಿನ ಕೃಪೆಯಿಂದ ದೊರೆತ ಸಂಪತ್ತು-ವಿದ್ಯಾ-ಅಧಿಕಾರಾದಿಗಳು ಭಂಗಾರಕ್ಕೆ ಕುಂದಣಹಾಕಿದಂತಾಗುತ್ತವೆ. ಅದ್ದರಿಂದ ಪ್ರತಿಯೊಬ್ಬ ಲಿಂಗಧಾರಿಯು ತಮ್ಮ ವಂಶೋದ್ಧಾರಕರಾದ, ತಮಗೆ ಇಷ್ಟಲಿಂಗ ದಾನಮಾಡಿ ಸದ್ಗತಿಗೆ ಕಾರಣೀಭೂತರಾದ, ಶ್ರೀಗುರುಗಳನ್ನು ಹಗಲಿರುಳೂ ಧ್ಯಾನಿಸುತ್ತ ಅವರ ಕೃಪಾಶೀರ್ವಾದಕ್ಕೆ ಪಾತ್ರರಾಗಿ ಅವರ ಸೇವೆಯನ್ನು ತನುಮನಧನಗಳಿಂದ ಮಾಡುತ್ತ ಸಂಪತ್ತು-ಸಂತತಿ-ವಿದ್ಯಾ-ಅಧಿಕಾರಾದಿಗಳನ್ನು ಸಾರ್ಥಕಮಾಡಿಕೊಳ್ಳಬೇಕು. ಪುರಾಣಗಳಿಲ್ಲ ವೇದಗಳಿಲ್ಲ ದೇವರಿಲ್ಲವೆಂದು ಹೇಳುವ ನಾಸ್ತಿಕರಂತೆ ಗುರುಗಳಿಲ್ಲ ಗುರುಪೀಠಗಳಿಲ್ಲವೆಂದು ಹೇಳುವದು ಸನಾತನ ಮತಾನುಯಾಯಿಗಳಿಗೆ ಶೋಭಿಸುವದಿಲ್ಲ 'ಹರಮುನಿದರೆ ಗುರುಕಾಯ್ವನು ಗುರುಮುನಿದರೆ ಹರಕಾಯಲಾರನು' ಅದ್ದರಿಂದ ಗುರುವಿನಲ್ಲಿ ಅಸಾಧಾರಣ ಭಕ್ತಿಯಿಡಬೇಕು. ಹೆಂಡತಿಗೆ ತನ್ನ ಗಂಡನಮೇಲೆ ಅಭಿಮಾನವಿದ್ದಂತೆ ಪ್ರತಿಯೊಬ್ಬ ಶಿಷ್ಯನಿಗೆ ತನ್ನ ಗುರುವಿನ ಮೇಲೆ ಅಭಿಮಾನವಿರಬೇಕು. ನಂಬಿಗೆ ಇರಬೇಕು. ಪೂರ್ಣಭಕ್ತಿಯೂ ಇರಬೇಕು. ರಾಷ್ಟ್ರೋನ್ನತಿಗೆ ರಾಜನು ಕಾರಣನಾದಂತೆ ಸಮಾಜೋನ್ನತಿಗೆ ಶ್ರೀಗುರುವು ಕಾರಣನಾಗಿರುವನು. ಪ್ರಜೆಗಳಿಗೆ ಹೇಗೆ ರಾಜಭಕ್ತಿಯು ಅವಶ್ಯಕತೆಯುಳ್ಳದೋ ಹಾಗೆ ಶಿಷ್ಯರಿಗೆ ಗುರುಭಕ್ತಿಯ ಅವಶ್ಯಕತೆಯುಳ್ಳದು. ಈ ಶಾಸ್ತ್ರಮರ್ಯಾದೆಯನ್ನು ದೂರಮಾಡಿ ಗುರುದ್ರೋಹಾತ್ಮಕಗಳಾದ ಲೇಖನಗಳನ್ನು ಬರೆಯುವದರಿಂದಾಗಲೀ ವ್ಯಾಖ್ಯಾನಗಳನ್ನು ಕೊಡುವುದರಿಂದಾಗಲೀ ಸದ್ಗತಿಯು ದೊರೆಯಲಾರದು. ನಾವು ಗಳಿಸಿದ ಸಂಪತ್ತೂ ನಾವು ಕಲಿತ ವಿದ್ಯೆಯೂ ನಾವು ದೊರಕಿಸಿಕೊಂಡ ಅಧಿಕಾರವೂ ಉಳಿಯಲಾರವು. ಇದನ್ನೆಲ್ಲಾ ವಿಚಾರಮಾಡಿ ಸರ್ವರೂ ಸನಾತನ ವೈದಿಕಪದ್ಧತಿಯಂತೆ ಗುರುಭಕ್ತಿಪರಾಯಣರಾಗಬೇಕು.

ಎಚ್. ಎಸ್. ಆರಾಧ್ಯಮಠ

ಕುದೇರು ಗ್ರಾಮಕ್ಕೆ ದಿವಾನ್ ಸಾಹೇಬರವರ ಮಹಾದರ್ಶನವು ಲಭಿಸಿತು.

ನಮ್ಮ ಮೈಸೂರು ಸಂಸ್ಥಾನದ ಮಿರ್ಜಾ ದಿವಾನ್ ಸಾಹೇಬರವರ ಸವಾರಿಯು ಇದೇ ಆಗಸ್ಟ್ ಮಾಹೆ ತಾರೀಖು 16, 17, 18, 19 ರಲ್ಲಿ ನಂಜನಗೂಡು, ಚಾಮರಾಜನಗರ, ಯಳಂದೂರು, ಟಿ. ನರಸೀಪುರ, ಕೊಳ್ಳೇಗಾಲ, ಗುಂಡ್ಲುಪೇಟೆ ಈ ತಾಲ್ಲೋಕುಗಳ ಪ್ರಾಂತ್ಯಕ್ಕೆ ದಯಮಾಡಿಸಿದ್ದುದು ಸರಿಯಷ್ಟೆ!

ಈ ಸಂದರ್ಭದಲ್ಲಿ ಈ ಕುದೇರುಗ್ರಾಮಕ್ಕೆ ಇಲ್ಲಿಯ ಸಾಹುಕಾರ್ ಮ|| ಕೆ. ವಿ. ವೀರಣ್ಣನವರ (R. A. Member) ಪ್ರಾರ್ಥನೆಯಂತೆ ತಾ|| 17 ನೇ ಶುಕ್ರವಾರದ ದಿವಸ ಸಾಯಂಕಾಲ ಆರು ಘಂಟೆಗೆ ಸರಿಯಾಗಿ ಮೆ|| ದಿವಾನ್ ಸಾಹೇಬರವರ ಸವಾರಿಯು ದಯಮಾಡಿಸುವ ಏರ್ಪಾಡು ಆಗಿರಾಗಿ ಆ ಕಾಲಕ್ಕೆ ಸರಿಯಾಗಿ ರೋಡಿನಲ್ಲಿ ಗೇಟ್ ಪಿಲರ್ ಬಳಿ ಹಾಕಲ್ಪಟ್ಟಿದ್ದ ಚಪ್ಪರದ ಬಳಿ ಗ್ರಾಮಪಂಚಾಯತಿಯ ಛೇರ್‌ಮೆನ್‌ರವರಾದ ಮ|| ರಾ|| ಸಾಹುಕಾರ್ ಕೆ. ವಿ. ಶಾಂತವೀರಪ್ಪನವರು ಮತ್ತು ಪಂಚಾಯತಿಯ ಮೆಂಬರುಗಳು ಮಿಡಲ್‌ಸ್ಕೂಲ್ ಸ್ಟಾಫ್‌ಗಳಾದಿಯಾಗಿ ಸ್ಥಳಪರಸ್ಥಳದ ಸುಮಾರು ಸಾವಿರಾರು ಜನರು ದಿವಾನ್ ಸಾಹೇಬರವರು ದಯಮಾಡಿಸುವ ಆಗಮನವನ್ನು ನಿರೀಕ್ಷಿಸಿಕೊಂಡಿರಲಾಗಿ ದಿವಾನ್ ಸಾಹೇಬರವರ ಸವಾರಿಯು ಚಿತ್ತೈಸಿತು. ಆ ಕ್ಷಣವೇ ಮ|| ಸಾಹುಕಾರ್ ಕೆ. ವಿ. ವೀರಣ್ಣನವರಿಂದ ಹಾರವು ಒಪ್ಪಿಸಲ್ಪಟ್ಟಿ ತರುವಾಯ ಗ್ರಾಮಕ್ಕೆ ಮೋಟಾರುಕಾರಿನಲ್ಲಿಯೇ ಚಿತ್ತೈಸಿದರು. ಪಂಚಾಯತಿಯ ಛೇರ್‌ಮೆನ್‌ರವರಾದ ಮ|| ಸಾಹುಕಾರ್ ಕೆ. ವಿ. ಶಾಂತವೀರಪ್ಪನವರು ಸ್ಕೂಲ್‌ರೋಡಿನಲ್ಲಿ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿದ್ದ ಮತ್ತು ಸಾವಿರಾರು ಜನರ ಗುಂಪಿನಿಂದ ಒಳಗೊಂಡಿದ್ದ ಚಪ್ಪರದ ಬಳಿ ಬಂದ ದಿವಾನ್ ಸಾಹೇಬರವರಿಗೆ ಹಾರವನ್ನು ಅರ್ಪಿಸಿದರು. ಅನಂತರ ಮಿ|| ಕೆ. ವಿ. ಎಸ್. ನಿತ್ಯಾನಂದಸ್ವಾಮಿಗಳವರಿಂದಲೂ, ಎಸ್. ಪುಟ್ಟಮಾದಪ್ಪನವರಿಂದಲೂ ಹಾರಗಳು ಒಪ್ಪಿಸಲ್ಪಟ್ಟವು. ತರುವಾಯ ಸ್ಥಳದ ಕೆಲವು ಕೊಂಕಣಿಗಳು ದಿವಾನ್ ಸಾಹೇಬರವರ ಸನ್ನಿಧಿಯಲ್ಲಿ ಆಟವಾಡಲ್ಪಟ್ಟವು.

ತರುವಾಯ ಸಾಹುಕಾರ್ ಮಿ|| ಕೆ. ವಿ. ವೀರಣ್ಣನವರ ಪ್ರಾರ್ಥನೆಯಂತೆ ಅವರ ಆಫೀಸಿಗೆ ದಿವಾನ್ ಸಾಹೇಬರವರ ಸವಾರಿಯು ಚಿತ್ತೈಸಿತು.

ಅಲ್ಲಿ ಫಲಾಹಾರಗಳನ್ನು ಮಾಡಿಕೊಂಡು ಪುಷ್ಪತಾಂಬೂಲಾದಿಗಳನ್ನು ಸ್ವೀಕರಿಸಿದ ನಂತರ ಗ್ರಾಮಪಂಚಾಯತಿಯ ವಿಸಿಟರ್ಸ್ ಬುಕ್ಕನ್ನು ಸಾಂಗವಾಗಿ ಪರಾಂಬರಿಸಿ ಸಂತೋಷಪಟ್ಟು ನಂತರ ಪಾದಚಾರಿಗಳಾಗಿ ಪರಿವಾರಸಮೇತ ಗ್ರಾಮವನ್ನು ನೋಡಲು ಹೊರಟು ಸಮೀಪದಲ್ಲಿಯೇ ದಿವಾನರವರ ದೃಷ್ಟಿಪಥಕ್ಕೆ ಬಿದ್ದ ರೋಡಿನ ಟರ್ನಿಂಗಿಗೆ ಸ್ಥಳ ವಿಸ್ತರಿಸಬೇಕೆಂಬುವ ವಿಚಾರದಲ್ಲಿ ಗ್ರಾಮಪಂಚಾಯತಿಯವರಿಗೆ ಆಜ್ಞೆಯನ್ನು ಇತ್ತು ಮುಂದುವರಿದು ರೋಡಿನಲ್ಲಿ ಬ್ರಾಂಚು ಪೋಸ್ಟು ಮಾಸ್ಟರಿಂದ ಒಪ್ಪಿಸಲ್ಪಟ್ಟ ಮರ್ಯಾದೆಯನ್ನು ಸ್ವೀಕರಿಸಿ ಮುಂದೆ ವರ್ತಕಮಂಡಲಿಯವರಿಂದ ರೋಡಿನಲ್ಲಿ ಸ್ಪೆಷಲ್ಲಾಗಿ ತಯಾರುಮಾಡಲ್ಪಟ್ಟ ಪಾರ್ಕಿನಲ್ಲಿ ಮಿ|| ಎಸ್. ಚನ್ನವೀರಪ್ಪನವರಿಂದ ಮರ್ಯಾದೆಯು ಒಪ್ಪಿಸಲ್ಪಟ್ಟಿತು.

ಮಿರ್ಜಾ ದಿವಾನ್ ಸಾಹೇಬರವರು ಗ್ರಾಮಪಂಚಾಯತಿಯವರು ಕೆಲಸಮಾಡುತ್ತಿರುವ ಗ್ರಾಮನೈರ್ಮಲ್ಯದ ವಿಚಾರವಾಗಿ ಬಹಳ ಸಂತೋಷಪಟ್ಟು ಈ ಗ್ರಾಮಕ್ಕೆ ಎಲೆಕ್ಟ್ರಿಕ್ ಲೈಟನ್ನು ಕೊಡಿಸಿಕೊಡುತ್ತೇವೆಂದು ತಮ್ಮ ಘನವಾದ ಅಪ್ಪಣೆಯನ್ನು ದಯಪಾಲಿಸಿದರು.

ಅನಂತರ ಸಾಹುಕಾರ್ ಮಿ|| ಕೆ. ವಿ. ವೀರಣ್ಣ ಅಂಡ್ ಬ್ರದರ್ಸ್‌ರವರ ಜ್ಞಾಪಕಾರ್ಥವಾಗಿ ಕಟ್ಟಿಸಿಕೊಟ್ಟಿರುವ ಗರ್ಲ್ಸ್ ಸ್ಕೂಲ್ ಕಟ್ಟಡವನ್ನು ನೋಡಿ ಒಳಗೆ ಪ್ರವೇಶಿಸಿ ಪರಾಂಬರಿಸಿಕೊಂಡು ನಂತರ ಮಿಡಲ್‌ಸ್ಕೂಲ್ ಕಟ್ಟಡವನ್ನೂ ಸಿಂಕಲ್‌ಚರಲ್ ಫಾರಮ್ಮನ್ನೂ ಸಹ ಪರಾಂಬರಿಸಿಕೊಂಡು ಸವಾರಿಯು ಪರಿವಾರ ಸಮೇತ ಮುಂದುವರಿಯಿತು.

ಪ್ರತ್ಯಕ್ಷದರ್ಶಿ.

ಶ್ರೀ ಗುರುವರಪ್ರಸೀದ.

ದುಃಖಪ್ರದರ್ಶನ.

ಯಾದಗಿರಿಯ ಸುಪ್ರಸಿದ್ಧ ವರ್ತಕರೂ, ಧರ್ಮವೀರ ಶಂಕರಪ್ಪನವರ ಬಲದ ಅಸ್ತ್ರಿಯ ಮಾಲಿಕರೂ ಆಗಿದ್ದ ಮ|| ರಾ|| ಚನ್ನಪ್ಪರಾಚಪ್ಪ ಸಜ್ಜನಶೆಟ್ಟಿ ಇವರು ತಾ|| ೨೩-೮-೧೯೩೪ ಭಾವಸಂ|| ಶ್ರಾವಣ ಬ|| ೨ ಶನಿವಾರ ಉದಯ ೮ ಗಂಟೆಗೆ ಶಿವಾಧೀನರಾದರೆಂದು ತಿಳಿಸಲು ಪರಮ ವಿಷಾದವಾಗುತ್ತದೆ. ಚನ್ನಪ್ಪನವರು ಶ್ರೀಮಂತರಿದ್ದರೂ, ನಿಗರ್ವಿಗಳೂ, ದಯಾಪರರೂ ಉದಾರ ಸ್ವಭಾವದವರೂ, ಬಹುವ ಪ್ರೇಮಿಗಳೂ, ಕಾರ್ಯಚತುರರೂ ಇದ್ದರು. ಯಂತ್ರಕಾರ್ಯದಲ್ಲಿ ಇವರು ಅಸಾಧಾರಣ ಬುದ್ಧಿಯುಳ್ಳವರಾಗಿದ್ದರು. ಅಂತೆಯೇ ತಮ್ಮ ಗಿರಣಿಯನ್ನು ಸ್ವತಃ ನಡೆಸುತ್ತಿದ್ದರು. ಇಮಾರತಿಗಳ ವಿಷಯದಲ್ಲಿಯೂ ಇವರ ಚತುರತೆಯು ಪ್ರಶಂಸನೀಯವಾಗಿತ್ತು. ಇವರು ಶಂಕರ ಕಾಲೇಜಿಗೆ ಕೇವಲ ಮೆಂಬರರಾಗಿದೆ, ಕಾಲೇಜಿನ ವಿಷಯದಲ್ಲಿ ಯಾವಾಗಲೂ ದೇಹದಂಡನೆ ಮಾಡಿ ದುಡಿಯುತ್ತಿದ್ದರು. ಕಾಲೇಜಿನ ಸರ್ವ ಅಧ್ಯಾಪಕರನ್ನೂ ವಿದ್ಯಾರ್ಥಿಗಳನ್ನೂ ಕೇವಲ ಸಹೋದರಭಾವದಿಂದ ಕಾಣುತ್ತಿದ್ದರಲ್ಲದೆ, ಕಾಲೇಜಿನ ಸುಖವೇ ತಮ್ಮ ಸುಖವು, ಕಾಲೇಜಿನ ದುಃಖವೇ ತಮ್ಮ ದುಃಖವೆಂಬ ಭಾವನೆಯು ಕಡೆಯವರೆಗೂ ಇವರಲ್ಲಿ ಅಚ್ಚಳಿಯದಂತಿತ್ತು. ಕಾಲೇಜಿನ ಯಾವದೊಂದು ಕಾರ್ಯವು ಪಟಿಷ್ಠವಾದರೆ, ತಮ್ಮ ಮನೆಯ ಕಾರ್ಯವು ಎಷ್ಟು ಅವಶ್ಯವಾದದ್ದಿದ್ದರೂ ಬಿಟ್ಟು ಬಂದು ಕಾಲೇಜಿನ ಕಾರ್ಯವನ್ನು ಸಾಗಿಸುತ್ತಿದ್ದರು. ಧರ್ಮಕಾರ್ಯದಲ್ಲಿ ಇಷ್ಟು ಕಳಕಳಿಯುಳ್ಳ ವ್ಯಕ್ತಿಯು " ನ ಭೂತೋ ನ ಭವಿಷ್ಯತಿ " ಎಂದು ಬರೆದರೆ ಅತಿಶಯೋಕ್ತಿಯಾಗಲಾರದು. ಈಗಿರುವ ಕಾಲೇಜಿನ ಇಮಾರತಿಯು ಶಹರಮಧ್ಯದಲ್ಲಿರುವದರಿಂದಲೂ, ಸುತ್ತಣ ಹವೆಯು ಸಾಮಾನ್ಯವಾದುದರಿಂದಲೂ ಗ್ರಾಮಕ್ಕೆ ಅರ್ಧ ಮೈಲು ದೂರದಲ್ಲಿ ಎತ್ತರವಾದ ಮತ್ತು ಶುದ್ಧ ಹವೆಯುಳ್ಳ ಪ್ರದೇಶದಲ್ಲಿ ಒಂದು ಇಮಾರತಿಯನ್ನು ಸ್ವಂತವಾಗಿ ಕಟ್ಟಿಸಿಕೊಡಬೇಕೆಂದು ಪ್ರಾರಂಭಿಸಿದ್ದರು. ಅದು ಗೋಡೆಗಳ ಕಟ್ಟಡವು ಪೂರೈಸಿ ಅರ್ಧಕ್ಕೆ ನಿಂತಿದೆ. ಅದರ ಬಾಜು ಮತ್ತು ಸುತ್ತಲೂ ಟೆಂಗು, ಮಾವು ಮೊದಲಾದ ಗಿಡಗಳನ್ನು ಹಾಕಿಸಿ, ಬನವನ್ನು ಮಾಡಿರುತ್ತಾರೆ. ಧರ್ಮವೀರರು ಮತ್ತು ಅವರ ಪತ್ನಿಯವರು ಮಾಡಿದಂತೆ ತಾವು ದಂಪತಿಗಳು ಚಿರಸ್ಥಾಯಿಯೂ, ಕೀರ್ತಿಪ್ರದವೂ ಆದ ಕಾರ್ಯವನ್ನು ಮಾಡಬೇಕೆಂಬ ಇವರ ಮನೋಭಾವವು ಆಗಾಗ್ಗೆ ಹೊರಬೀಳುತ್ತಿತ್ತು. ಇವರ ಸರಳ ಮತ್ತು ಉದಾರ ಸ್ವಭಾವವನ್ನು ನೋಡಿದರೆ, ಇವರಿಂದ ಇನ್ನೂ ಎಂತಹ ಮಹತ್ಕಾರ್ಯಗಳಾಗುತ್ತಿದ್ದವೋ ಹೇಳಲು ಶಕ್ಯವಿಲ್ಲ. ಇಂಥ ಧರ್ಮಕಾರ್ಯಕರ್ತರು ಕೇವಲ ೪೨ ವರ್ಷ ವಯಸ್ಸಿನವರೂ ಆದ ಈ ಧರ್ಮಾತ್ಮರ ನಿಧನದಿಂದ ಶಂಕರಕಾಲೇಜಿಗೆ ಅನೇಕ ಇಡೀ ಸಮಾಜಕ್ಕೇನೇ ದೊಡ್ಡ ಹಾನಿಯಾದಂತಾಗಿದೆ. ಅವರ ದುಃಖಪ್ರದರ್ಶನವು ತಾ||

(೬ ನೆಯ ಪುಟವನ್ನು ನೋಡಿ.)

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರು.

ರಾಜಧಾನಿಯಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಮಹೋತ್ಸವ. (ತಾ॥ 23—9—1934)

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು ಮೈಸೂರು ರಾಜಧಾನಿಯ ವೀರಶೈವಮಂಡಳಿಯವರ ಪ್ರಾರ್ಥನೆಯ ಮೇರೆಗೆ ಬಿಜಮಾಡುವ ವಿಷಯವು ಸರ್ವತ್ರ ಪ್ರಸಿದ್ಧವಷ್ಟೆ! ಆ ಪ್ರಕಾರ ರಾಜಧಾನಿಯಲ್ಲಿ **ತಾ॥ ೨೩—೯—೧೯೩೪** ನೆಯ ಭಾನುವಾರ ಪ್ರಾತಃಕಾಲ ೯॥ ಘಂಟೆಗೆ ಸರಿಯಾಗಿ ಶ್ರೀ ಜಗದ್ಗುರುಗಳವರ ಸುವರ್ಣರಜತಾಂದೋಲಿಕಾ ಮಹೋತ್ಸವವು ನಮ್ಮ ಮಹಾಪ್ರಭುಗಳವರು ದಯಪಾಲಿಸಿರುವ ಸಮಸ್ತಬಿರುದಾವಳಿಗಳೊಡನೆ ವಿಶೇಷವೈಭವದಿಂದ ನೆರವೇರುವುದು. ಸಾಕ್ಷಾದ್ಧರ್ಮಮೂರ್ತಿಗಳೆಂದು ಸಕಲ ಪ್ರಪಂಚದ ಜನಗಳಿಂದ ಮುಕ್ತಕಂಠದಿಂದ ಹೊಗಳಿಸಿಕೊಳ್ಳುತ್ತಿರುವ ನಮ್ಮ ಧರ್ಮಪ್ರಭುಗಳವರ ನಿತ್ಯಾವಾಸದಿಂದ ಧರ್ಮಭೂಮಿಯೆನಿಸಿರುವ ರಾಜಧಾನಿಯು, ಮನೋಹರಗಳಾದ ಮಹಾಮಹಾ ರಾಜಮಂದಿರಗಳಿಂದಲೂ, ವಿಶಾಲಗಳಾದ ರಾಜಮಾರ್ಗಗಳಿಂದಲೂ, ಸುಂದರತರಗಳಾದ ಸೌಧಗಳಿಂದಲೂ, ನಾನಾವಿಧಗಳಾದ ನಗರೋದ್ಯಾನಗಳಿಂದಲೂ, ಚಿತ್ರವಿಚಿತ್ರತರಗಳಾದ ವಿದ್ಯುದ್ದೀಪಾವಳಿಗಳಿಂದಲೂ, ಪ್ರೇಕ್ಷಣೀಯಗಳಾದ ಪಶುಪಕ್ಷಿ ಮೃಗಾಲಯಗಳಿಂದಲೂ, ವಿವಿಧ ವಿದ್ಯಾಲಯಗಳಿಂದಲೂ, ಸಕಲಕಲಾಲಯಗಳಿಂದಲೂ ಭರತಖಂಡದಲ್ಲಿರುವ ಸಮಸ್ತ ಸುಂದರನಗರಗಳಿಗೆಲ್ಲಾ ಆದರ್ಶಭೂತವಾಗಿದ್ದು "ಇಂಡಿಯಾದೇಶದ ಪ್ಯಾರಿಸ್" ಎಂಬ ಭವ್ಯಾಭಿಧಾನದಿಂದ ಭುವನಪ್ರಸಿದ್ಧವಾಗಿ ಮೆರೆಯುತ್ತಿರುವ ವಿಷಯವು ಪ್ರಪಂಚಕ್ಕೆಲ್ಲಾ ವೇದ್ಯವೇ ಅದೆ. ಇಂತಹ ವಿವಿಧವೈಭವವಿರಾಜಮಾನವಾದ ರಾಜಧಾನಿಯಲ್ಲಿ ಅಸಾಧಾರಣವೈಭವದಿಂದ ನೆರವೇರುವ ಶ್ರೀ ಗುರುಮಹೋತ್ಸವಕ್ಕೆ ಭರತಖಂಡದ ನಾನಾಭಾಗಗಳಲ್ಲಿ ವಾಸವಾಗಿರುವ ಸಮಸ್ತ ಗುರುಭಕ್ತರೂ ಆಗಮಿಸಿ ಶ್ರೀ ಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಪಡೆದು ಧನ್ಯಾತ್ಮರಾಗಬೇಕಾದುದು ಅವರ ಆದ್ಯಕರ್ತವ್ಯವಾಗಿದೆ.

ವರ್ತಮಾನಸಂಗ್ರಹ.

1932 ನೇ ವರ್ಷದಲ್ಲಿ ಜರ್ಮನಿಯಲ್ಲಿ ಪ್ರಾಪಂಚಿಕ ಕಷ್ಟಾನುಭವವನ್ನು ತಾಳಲಾರದೆ 18,934 ಜನ ಹೆಂಗಸರು ಆತ್ಮಹತ್ಯಮಾಡಿಕೊಂಡರಂತೆ!

ಅಮೇರಿಕೆಯ ಸಂಯುಕ್ತಸಂಸ್ಥಾನಕ್ಕೆ ಮಿ॥ ರೂಜ್‌ವೆಲ್ಟರು ಅಧ್ಯಕ್ಷರಾದ ಮೇಲೆ 41,20,000 ಜನ ನಿರುದ್ಯೋಗಿಗಳಿಗೆ ಕೆಲಸವು ದೊರಕಿರುವುದಂತೆ!

ಆಗಸ್ಟ್ 29 ನೇ ತಾರೀಖಿನ ಬೆಳಗ್ಗೆ ಮುಜಫರಪುರದಲ್ಲಿ ಪುನಃ ಭೂಕಂಪವಾಯಿತು. ಕಂಪವು ಜೋರಾಗಿದ್ದರೂ ಅದೃಷ್ಟವಶಾತ್ ಪ್ರಾಣಹಾನಿಯೇನೂ ಸಂಭವಿಸಲಿಲ್ಲ.

ಕಪೂರ್ಥಲಾ ಸಂಸ್ಥಾನಕ್ಕೆ ಸೇರಿದ ಜೇರ್ಪಾಲಿ ಗ್ರಾಮದಲ್ಲಿ ಒಬ್ಬ ಕಳ್ಳನು ಒಬ್ಬರ ಮನೆಗೆ ನುಗ್ಗಿ ಆಭರಣಗಳ ಪೆಟ್ಟಿಗೆಯಲ್ಲಿ ಹುಡುಕುತ್ತಿದ್ದಾಗ ಹಾವು ಕಡಿದು ಮೃತಪಟ್ಟನು.

ವಾಷಿಂಗ್‌ಟನ್ ನಗರದ ಜಾರ್ಜ್ ಪೆಂಡ್ರ್ ಎಂಬಾತನು ಮೀನು ತಿನ್ನುವುದರಲ್ಲಿ ಪ್ರಪಂಚದಲ್ಲೆಲ್ಲಾ ಮೊದಲನೆಯವನೆಂದು ಹೆಸರು ಪಡೆದಿರುವನು. ಒಂದು ಸಾರಿ ಹಟದಮೇಲೆ 193 ಮೀನುಗಳನ್ನು ತಿಂದನಂತೆ!

ಲಾಹೋರ್ ಪೋಲೀಸರು ಆ ನಗರದಲ್ಲಿ ನಡೆದ ಅನೇಕ ಕಳ್ಳತನಗಳಿಗೆ ಕಾರಣರೆಂಬ ಅನುಮಾನದಮೇಲೆ ಒಂದು ದೊಡ್ಡ ಕಳ್ಳರ ಗುಂಪನ್ನು ದಸ್ತಗಿರಿಮಾಡಿರುವರು. ಅವರ ಬಳಿಯಲ್ಲಿ 700 ಬೇರೆ ಬೇರೆ ನಮೂನೆಯ ಬೀಗದಕೈಗಳಿದ್ದವಂತೆ!

ಆಸ್ಟ್ರೇಲಿಯಾದಲ್ಲಿ 'ಎಕೋಮೀಟರ್' ಎಂಬುದೊಂದು ಯಂತ್ರವು ಹೊಸದಾಗಿ ತಯಾರಿಸಲ್ಪಟ್ಟಿದ್ದು ಅದರ ಸಹಾಯದಿಂದ ಸಮುದ್ರದೊಳಗೆ 720 ಮಾರುಗಳವರೆಗಿರುವ ಮೀನು ಮೊದಲಾದ ಸಮಸ್ತ ಪ್ರಾಣಿಗಳೂ ಸ್ಪಷ್ಟವಾಗಿ ಕಾಣಿಸುವುವಂತೆ!

ಗ್ರೀಸ್‌ದೇಶದಲ್ಲಿ ಸುಮಾರು 200 ಚದರ ಮೈಲುಗಳ ವಿಸ್ತೀರ್ಣವಾದ ಮೌಂಟ್ ಆಥಾಸ್ ಎಂಬ ಕ್ರೈಸ್ತಸಾಧುಗಳ ರಾಜ್ಯವಿರುವುದು. ಅದರಲ್ಲಿ 20 ಸನ್ಯಾಸಾಶ್ರಮಗಳೂ, ಅವುಗಳಲ್ಲಿ 9000 ಸಾಧುಗಳೂ ಇರುವರು. 900 ವರ್ಷಗಳಿಂದೀಚೆಗೆ ಆ ರಾಜ್ಯದೊಳಕ್ಕೆ ಒಬ್ಬ ಹೆಂಗಸೂ ಪ್ರವೇಶಮಾಡಿಲ್ಲವಂತೆ!

ಕಾಂಗ್ರಿ ನಗರದ ಸಮೀಪದಲ್ಲಿರುವ ಚಂಡಿಪೆಟ್ಟದ ಪತ್ತಿರದಲ್ಲಿ ಕೆಲವು ವಿದ್ಯಾರ್ಥಿಗಳು 15 ಅಡಿಗಳಿಗಿಂತಲೂ ಉದ್ದವಾದ ಒಂದು ಹೆಬ್ಬಾವನ್ನು ಗುಂಡಿನಿಂದ ಕೊಂದರು. ಅದನ್ನು ಗುರುಕುಲಕ್ಕೆ ತಂದು ಸೀಳಿ ನೋಡಲು, ಅದರ ಹೊಟ್ಟೆಯಲ್ಲಿ ಒಂದು ದೊಡ್ಡ ಜಿಂಕೆಯು ಅರ್ಧಮಾತ್ರ ಜೀರ್ಣವಾಗಿದ್ದಿತಂತೆ!

ಪೋರ್ಚುಗಲ್ ದೇಶದಲ್ಲಿ ಮದುವೆಯಾಗುವವರ ಸಂಖ್ಯೆಯು ವರ್ಷವರ್ಷಕ್ಕೂ ಕಡಿಮೆಯಾಗುತ್ತಿರುವದಂತೆ! ಅದಕ್ಕಾಗಿ ಸರಕಾರದವರು ಮದುವೆಗಳ ಫೀಜನ್ನು ಅರ್ಧಭಾಗ ಕಡಿಮೆಮಾಡಬೇಕೆಂದೂ, ನಿರ್ಗತಿಕರಾಗಿದ್ದು ಮದುವೆಯಾಗಲಿಚ್ಛಿಸುವವರಿಗೆ ಫೀಜನ್ನು ಮಾಫಿಮಾಡಬೇಕೆಂದೂ ತೀರ್ಮಾನ ಮಾಡಿರುತ್ತಾರೆ.

ಜರ್ಮನಿ ಮತ್ತು ಜಪಾನ್‌ದೇಶಗಳಮೇಲೆ ಸ್ಪರ್ಧೆ ಮಾಡುವುದಕ್ಕಾಗಿ, ಜೆಕೊಸ್ಲೋವಿಯಾ ದೇಶದ ಮೋಟಾರ್ ಕಾರ್ಖಾನೆಯವರು ಕೇವಲ 270 ರೂ. ಬೆಲೆಯಾಗುವ ಹೊಸತರಹದ ಮೋಟಾರುಗಳನ್ನು ತಯಾರಿಸುತ್ತಿರುವರಂತೆ! ಈ ಮೋಟಾರುಗಳು ಇಬ್ಬರು ಕುಳಿತುಕೊಳ್ಳುವಷ್ಟು ಚಿಕ್ಕವಾಗಿದ್ದು 18 ಕುದುರೆಗಳ ಶಕ್ತಿಯುಳ್ಳವುಗಳಾಗಿರುವುವಂತೆ!

ಗಂಗಾ, ಸರಯೂ ಮೊದಲಾದ ನದಿಗಳಲ್ಲಿ ಪ್ರವಾಹವು ಬಹಳವಾಗಿ ಹೆಚ್ಚಿ ಜನರು ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುತ್ತಾರೆ. ನದೀತೀರದಲ್ಲಿ ಸುಮಾರು 200 ಮೈಲು ಉದ್ದ ಮತ್ತು 10 ಮೈಲು ಅಗಲವಾದ ಪ್ರದೇಶವೆಲ್ಲವೂ ಅಪಾಯಕ್ಕೀಡಾಗಿದೆ. ಈ ಪ್ರವಾಹದ ಅಪಾಯವು ಕಳೆದ ಭೂಕಂಪದ ಅಪಾಯಕ್ಕಿಂತಲೂ ಹೆಚ್ಚಾಗಿರುವುದೆಂದೂ, ಮನುಷ್ಯರೂ, ಪ್ರಾಣಿಗಳೂ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವರೆಂದೂ, ಪಾಟ್ನಾದಿಂದ ವರ್ತಮಾನಬಂದಿರುತ್ತದೆ. ರೈಲ್ ರಸ್ತೆಗಳು ಅನೇಕ ಕಡೆಗಳಲ್ಲಿ ಕೊಚ್ಚಿಕೊಂಡು ಹೋಗಿರುತ್ತವೆ. ಕಾಶೀಪಟ್ಟಣದಲ್ಲಿರುವ ಸ್ನಾನಘಟ್ಟಗಳೆಲ್ಲವೂ ಮುಳುಗಿಹೋಗಿದ್ದು, ನಗರದ ತಗ್ಗುಪ್ರದೇಶಗಳಿಗೆಲ್ಲಾ ನೀರು ನುಗ್ಗುತ್ತಿದೆ. ಈಸ್ಟ್ ಇಂಡಿಯನ್ ಬೆಂಗಾಲು ರೈಲ್ವೆ ರಸ್ತೆಯಲ್ಲಿರುವ ಹಾರ್ಡಿಂಜ್ ಸೇತುವೆಯೂ ಕೊಚ್ಚಿಕೊಂಡು ಹೋಗಬಹುದೆಂದು ತಿಳಿದು ಅಧಿಕಾರಿಗಳು ಅದರ ಸಂರಕ್ಷಣಾಕಾರ್ಯದಲ್ಲಿ ನಿರತರಾಗಿರುತ್ತಾರೆ. ಅಜ್ಮೀರದಲ್ಲಿ 40 ಗಂಟೆಗಳ ಕಾಲ ಮಳೆ ಬಂದು ವಿಶೇಷ ಅನರ್ಥವುಂಟಾಗಿರುತ್ತದೆ.

ಹಿಂದೂಸ್ಥಾನದಲ್ಲಿ ಮತ್ತೊಮ್ಮೆ ಭೂಕಂಪ!

ಒಬ್ಬ ಜರ್ಮನ್ ಪ್ರೊಫೆಸರರು 1935 ನೆಯ ಫೆಬ್ರವರಿ 15 ನೆಯ ತಾರೀಖಿನ ದಿವಸ ಹಿಂದೂಸ್ಥಾನದಲ್ಲಿ ಮತ್ತೊಂದು ಭೂಕಂಪವಾಗುವುದೆಂದು ಭವಿಷ್ಯವನ್ನು ಹೇಳಿರುತ್ತಾರೆ.

ಮಂಜಿನಮೇಲೆ ಕುಳಿತುಕೊಳ್ಳುವ ಪಂತ!

ಅಮೇರಿಕೆಯ ನ್ಯೂಯಾರ್ಕ್ ನಗರದಲ್ಲಿ ಮಂಜಿನ ಮೇಲೆ ಕುಳಿತುಕೊಳ್ಳುವ ಒಂದು ವಿಚಿತ್ರಪಂದ್ಯವು ನಡೆಯಿತು. ಅದರಲ್ಲಿ ಒಬ್ಬ ತರುಣಿಯು 4 ಅಡಿ ದಪ್ಪವಾಗಿದ್ದ ಒಂದು ಮಂಜುಗಡ್ಡೆಯ ಮೇಲೆ 5¾ ಘಂಟೆಗಳವರೆಗೆ ಬತ್ತಲೆಯಾಗಿ ಕುಳಿತು ಪಂದ್ಯದಲ್ಲಿ ಗೆದ್ದಳು.

ಇದೊಂದು ಭವಿಷ್ಯ!

ಕರಾಚಿಯ ಜ್ಯೋತಿಷ್ಕರೊಬ್ಬರು ನವಂಬರ್ 1 ನೆಯ ತಾರೀಖಿನ ಸುಮಾರಿನಲ್ಲಿ, ಗಾಂಧಿಯವರು ಸಾಯುವವರೆಗೂ ಉಪವಾಸವ್ರತವನ್ನಾಚರಿಸುವರೆಂದೂ, ಕಾಂಗ್ರೆಸ್ ಮೆಂಬರರಲ್ಲಿ ಉಂಟಾಗುವ ಭಿನ್ನಾಭಿಪ್ರಾಯವೇ ಇದಕ್ಕೆ ಕಾರಣವಾಗುವುದೆಂದೂ ಭವಿಷ್ಯವನ್ನು ನುಡಿದಿರುತ್ತಾರೆ.

ಪ್ರಿನ್ಸ್ ಜಾರ್ಜರ ವಿವಾಹ.

ಚಕ್ರವರ್ತಿಯವರ ದ್ವಿತೀಯ ಕುಮಾರರಾದ ಪ್ರಿನ್ಸ್ ಜಾರ್ಜ್‌ರವರು ಗ್ರೀಸ್‌ದೇಶದ ರಾಜಕುಮಾರಿ ಮೆರೈನಾ ಎಂಬವರನ್ನು ವಿವಾಹವಾಗುವರೆಂದೂ, ಚಕ್ರವರ್ತಿಯವರು ಈ ಸಂಬಂಧವನ್ನು ಬಹಳ ಸಂತೋಷದಿಂದ ಒಪ್ಪಿ ಒಂದು ಪ್ರಕಟಣೆಯನ್ನು ಹೊರಡಿಸಿರುವರೆಂದೂ ತಿಳಿದುಬಂದಿದೆ.

ಯೂರೋಪಿನಲ್ಲಿ ರಾಕ್ಷಸರು.

ಯೂರೋಪಿನ ಜನರು ಈಗ್ಗೆ 70 ವರ್ಷಗಳ ಹಿಂದೆ ಇದ್ದುದಕ್ಕಿಂತಲೂ ಈಗ ಸರಾಸರಿ 2 ಅಂಗುಲ ಎತ್ತರವಾಗಿ ಬೆಳೆದಿರುವುದರಿಂದ ಕಾಲಕ್ರಮದಲ್ಲಿ ಯುರೋಪಿನ ಜನರೆಲ್ಲರೂ ರಾಕ್ಷಸಾಕಾರವುಳ್ಳವರಾಗುವರೆಂದು ಕೊಲಂಬಿಯಾ ವಿಶ್ವವಿದ್ಯಾಲಯದ ಡಾಕ್ಟರ್ ಪ್ರಾಂಜ್‌ಬೋಯಾರವರು ಹೇಳುತ್ತಿರುವರು.

ಮಿಂಚಿನ ವೇಗ!

ಹೆರ್ ಗೆರ್‌ಹಾರ್ಡ್ ಜಕ್ಕರ್ ಎಂಬೊಬ್ಬ ಜರ್ಮನ್ ತರುಣನು 'ರಾಕೆಟ್' ಎಂಬ ಒಂದು ಯಂತ್ರವನ್ನು ನಿರ್ಮಾಣಮಾಡಿರುವನು. ಈ ಯಂತ್ರದ ಸಹಾಯದಿಂದ ಲಂಡನ್ ನಗರದಿಂದ ಸಹಸ್ರಾರು ಮೈಲುಗಳ ದೂರದಲ್ಲಿರುವ ನ್ಯೂಯಾರ್ಕ್ ನಗರಕ್ಕೆ 28 ನಿಮಿಷಗಳಲ್ಲಿ ಟಪಾಲನ್ನು ಒಯ್ಯಬಹುದಂತೆ! ಇದಕ್ಕೆ ವೆಚ್ಚವಾದರೂ ಅತ್ಯಲ್ಪ! ಸದ್ಯಃ ಈ ಯಂತ್ರವನ್ನು ಪಶ್ಚಿಮ ಸ್ಕಾಟ್ಲೆಂಡಿನಲ್ಲಿ ಪರೀಕ್ಷಿಸುತ್ತಿರುವರು.

ಜೋಧಪುರ ಮಹಾರಾಜರ ಹೊಸ ಅರಮನೆ.

ಜೋಧಪುರದ ಮಹಾರಾಜರು ತಮ್ಮ ರಾಜಧಾನಿಯ ಸಮೀಪದಲ್ಲಿ ಲಕ್ಷಾಂತರ ರೂಪಾಯಿಗಳ ಖರ್ಚಿನಿಂದ ಒಂದು ಹೊಸ ಅರಮನೆಯನ್ನು ಕಟ್ಟಿಸುತ್ತಿರುವರು. ಕಟ್ಟಡವು ಪ್ರಾರಂಭವಾಗಿ 5ವರ್ಷಗಳಾದುವು. ಈ ಕಟ್ಟಡದಲ್ಲಿ ಬಿಸಿಲುಕಾಲದಲ್ಲಿ ತಂಪನ್ನು ಹುಟ್ಟಿಸುವುದಕ್ಕಾಗಿ 5 ಲಕ್ಷ ರೂ. ಗಳ ಬೆಲೆಯುಳ್ಳ ಒಂದು ಯಂತ್ರವನ್ನು ತರಿಸಿ ಇಟ್ಟಿರುತ್ತಾರೆ. ಇಂತಹ ಯಂತ್ರವು ಇಂಡಿಯಾದೇಶದಲ್ಲಿ ಇನ್ನೆಲ್ಲಿಯೂ ಇಲ್ಲವಂತೆ!

ಅದ್ಭುತವಾದ ಮೀನು!

ಬಂಗಾಲ ಪ್ರಾಂತದಲ್ಲಿರುವ ಧಾಲೇಶ್ವರೀ ನದಿಯಲ್ಲಿ 20 ಅಡಿ ಉದ್ದವಾಗಿಯೂ 30 ಮಣ ತೂಕವಾಗಿಯೂ ಇರುವ ಒಂದು ಅದ್ಭುತವಾದ ಮೀನು ದೊರಕಿದ್ದು, ಅದಕ್ಕೆ ಆನೆಯ ಕಿವಿಗಳಷ್ಟು ದೊಡ್ಡದಾದ 2 ಕಿವಿಗಳೂ 5-6 ಅಡಿ ಉದ್ದವಾದ ಎರಡು ರೆಕ್ಕೆಗಳೂ, ಏಕಕಾಲದಲ್ಲಿ ಇಬ್ಬರು ಮನುಷ್ಯರನ್ನು ನುಂಗಬಹುದಾಗಷ್ಟು ದೊಡ್ಡ ಬಾಯಿಯೂ ಹರಿತವಾದ ಹಲ್ಲುಗಳೂ ಇರುವುವಂತೆ!

ವಿದ್ಯುಚ್ಛಕ್ತಿಯ ಮನುಷ್ಯ!

ಲಂಡನ್ ನಗರದ ಮೇಫೇರ್ ಹೋಟಲಿನಲ್ಲಿ ಒಬ್ಬ ಜವಾನನಿರುವನು. ಜನರು ಅವನನ್ನು 'ವಿದ್ಯುಚ್ಛಕ್ತಿಯ ಮನುಷ್ಯ' ನೆಂದು ಕರೆಯುವರು. ಅವನ ಶರೀರದಲ್ಲಿ ವಿದ್ಯುಚ್ಛಕ್ತಿಯು ಅಪಾರವಾಗಿ ಉತ್ಪತ್ತಿಯಾಗುತ್ತಿದ್ದು, ಯಾವುದಾದರೂ ಲೋಹದ ವಸ್ತುಗಳನ್ನು ಮುಟ್ಟಿದ ಕೂಡಲೇ ಕಿಡಿಗಳು ಹಾರುವುವಂತೆ! ಅವನು ಹೊಟೇಲಿಗೆ ಬರುವ ಪ್ರತಿಯೊಂದು ಮೋಟಾರಿನ ಬಾಗಿಲಿನ ಹಿಡಿಯನ್ನೂ ಸ್ಪರ್ಶಿಸುವನು. ಹಿಡಿಯನ್ನು ಮುಟ್ಟಿದ ಕೂಡಲೇ ಕಿಡಿಯು ಹಾರುವುದು.

ಚಕ್ರವರ್ತಿಗಳ ಶಿಲಾಪ್ರತಿಮೆ.

ಭರತಖಂಡದಲ್ಲಿ ದೇಶೀಯ ರಾಜರುಗಳೆಲ್ಲರೂ ಒಟ್ಟಾಗಿ ಚಕ್ರವರ್ತಿಯವರಲ್ಲಿ ತಮಗಿರುವ ಭಕ್ತಿಯನ್ನು ಪ್ರದರ್ಶಿಸುವುದಕ್ಕಾಗಿ ದೆಹಲಿಯಲ್ಲಿ ಚಕ್ರವರ್ತಿಯವರ ಪ್ರತಿಮೆಯೊಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಿರುವರು. ಪ್ರತಿಮೆಯು 18½ ಅಡಿ ಎತ್ತರವಾಗಿಯೂ, ಕೆಳಭಾಗದ ಪೀಠವು ಸೇರಿ 59½ ಅಡಿ ಎತ್ತರವಾಗಿಯೂ ಇರುವುದು. ಲಂಡನ್ ನಗರದ ಮಿ॥ ಜಗ್ಗರ್ ಎಂಬವರು ಈ ಪ್ರತಿಮೆಯ ನಕಲೊಂದನ್ನು ತಯಾರಿಸುತ್ತಿರುವರು. ಅದು ಸಂಪೂರ್ಣವಾಗಿ ಭರತಖಂಡಕ್ಕೆ ಬಂದನಂತರ ಇಲ್ಲಿಯ ಶಿಲ್ಪವಿದ್ಯಾಪಟುಗಳು ಅದರಂತೆಯೇ ಅಮೃತಶಿಲೆಯ ವಿಗ್ರಹವನ್ನು ತಯಾರಿಸುವರಂತೆ!

ನಂಬಿದರೆ ನಂಬಿ, ಬಿಟ್ಟರೆ ಬಿಡಿ!

ಮೆಕ್ಸಿಕೋದೇಶದಲ್ಲಿ ಒಂದು ವಿಚಿತ್ರ ಶಿಶುವಿನ ಜನನದಿಂದ ಅಲ್ಲಿಯ ಜನರೆಲ್ಲರೂ ಭೀತಿಗ್ರಸ್ತರಾಗಿರುವರು. ಮಗುವು ಹುಟ್ಟಿದ ಕೆಲವು ನಿಮಿಷಗಳೊಳಗಾಗಿ ಡಾಕ್ಟರರ ಕಡೆಗೆ ತಿರುಗಿ ಸ್ಪೇನ್‌ದೇಶದ ಭಾಷೆಯಲ್ಲಿ ಸ್ಪಷ್ಟವಾಗಿ "ಮುಂದಿನ ಆರು ತಿಂಗಳುಗಳಲ್ಲಿ ಮಹಾನರ್ಥಗಳು ಸಂಭವಿಸುವುವು. ಭೂಕಂಪ ಅಥವಾ ಬಿರುಗಾಳಿ ಇವುಗಳಲ್ಲಿ ನೀವು ಯಾವುದನ್ನು ಅಪೇಕ್ಷಿಸುವಿರಿ?" ಎಂದು ಪ್ರಶ್ನೆಮಾಡಿತು. ಡಾಕ್ಟರರು 'ಭೂಕಂಪ' ಎಂದು ಉತ್ತರಕೊಟ್ಟರು. ಮಗುವು 'ತಥಾಸ್ತು' ಎಂದು ಹೇಳಿ ಪ್ರಾಣಬಿಟ್ಟಿತು. ಆ ಮಗುವಿನ ನುಡಿಗಳನ್ನು ಕೇಳಿ ಸಾವಿರಾರು ಜನರು ತಮಗೆ ಯಾವ ಕೆಡಕೂ ಆಗದಿರಲೆಂದು ದೇವರನ್ನು ಪ್ರಾರ್ಥಿಸುತ್ತಿರುವರು. ಇದರಿಂದ ಜನರ ಮನಸ್ಸಿನ ಮೇಲೆ ಆಗಿರುವ ಭಯಂಕರ ಪರಿಣಾಮವನ್ನು ಕಂಡು ಅಧಿಕಾರಿಗಳು ಇದರ ನಿಜಾಂಶವನ್ನು ಕೂಲಂಕಷವಾಗಿ ವಿಚಾರಿಸುವಂತೆ ಅಪ್ಪಣೆಮಾಡಿರುವರು.

ಸ್ವೀಕಾರ

ಹುಣಸಗಟ್ಟಮಠದ ವೇ॥ ಶಿವಕಥಾ ಪಂಡಿತ ನಂಜುಂಡಾರಾಧ್ಯರವರು ತಮ್ಮ ಪುತ್ರಿ ಚಿ॥ ಕುಂ॥ ಸೌ॥ ದಾಕ್ಷಾಯಣೀದೇವಿಯನ್ನು ಚಿ॥ ಸ॥ ಶ್ರೀಕಂಠಾರಾಧ್ಯನಿಗೆ ಕೊಟ್ಟು ಬೆಂಗಳೂರು ದಂಡು ಹಲಸೂರಿನಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೩ ನೆಯ ಪುಟದಿಂದ ಮುಂದುವರಿದುದು.)

೨೪-೮-೧೯೩೪ ಇಸವಿ ಶ್ರಾವಣ ಬ|| ೩ ಸೋಮವಾರ ಶಾಲೇ ಜಿಕ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಮಾಡಲ್ಪಟ್ಟಿತು. ಇವರ ವಿಯೋಗದಿಂದ ಶೋಕಸಾಗರದಲ್ಲಿ ಮಗ್ನರಾದ ಇವರ ಧರ್ಮ ಪತ್ನಿಯವರಿಗೂ, ಬಂಧುಬಾಂಧವರಿಗೂ ದುಃಖಶಮನವನ್ನು ಮಾಡಿ ಸುಖಸಮಾಧಾನಗಳನ್ನೂ, ಅಗಲಿದವರ ಆತ್ಮಕ್ಕೆ ಶಾಂತಿ ಯನ್ನೂ ಆ ದಯಾಮಯನಾದ ಜಗದೀಶನು ಕರುಣಿಸಲೆಂದು ಅನನ್ಯಭಾವನೆಯಿಂದ ಪ್ರಾರ್ಥಿಸುವ.

ಪಂ|| ಬಸವರಾಜಶಾಸ್ತ್ರಿ, ಪ್ರಿನ್ಸಿಪಾಲ,
ಶಂಕರಸಂಸ್ಕೃತಶಾಲೆ, ಯಾದಗಿರಿ.

ವಿವಾಹಮಹೋತ್ಸವ.

ಕರ್ನಾಟಕದಲ್ಲಿ ಸುಪ್ರಸಿದ್ಧರೂ ಶಿವಕಥಾಪಂಡಿತರೂ ಆದ ಹುಣಸೀಗಟ್ಟದ ಮಠದ ವೇ|| ಜ|| ನಂಜುಂಡಾರಾಧ್ಯರವರು ತಮ್ಮ ಪುತ್ರಿ ಚಿ|| ಸೌ|| ಹ|| ಶಂ|| ಕೋ|| ದಾಕ್ಷಾಯಣಿ ದೇವಿಯನ್ನು ಬೀರೂರು ಮಠದ ವೇ|| ಪುಟ್ಟಯ್ಯನವರ ಪುತ್ರ ಚಿ|| ಶ್ರೀಶಂಕರಾರಾಧ್ಯನಿಗೆ ಕೊಟ್ಟು ಇದೇ ಭಾವನಾಮಸಂವತ್ಸರದ ಶ್ರಾವಣ ಶುದ್ಧ ಸಪ್ತಮಿ ಶುಕ್ರವಾರ (ತಾ|| ೧೭-೮-೩೪) ಸೂರ್ಯೋದಯಾದಿ ೧೦-೩೪ ಘಳಿಗೆಗೆ ಸಲ್ಲುವ ಶುಭ ಕನ್ಯಾಲಗ್ನದಲ್ಲಿ ಬೆಂಗಳೂರಿಗೆ ಸೇರಿದ ಹಲಸೂರು ಜೋಗಪಾಳ್ಯದಲ್ಲಿರುವ ಮಠದಲ್ಲಿ ವಿವಾಹಮಹೋತ್ಸವವನ್ನು ಬೆಳಸಿದರು. ಈ ಮಹೋತ್ಸವಕ್ಕೆ ಸ್ಥಳಸ್ಥಳಾಂತರದಿಂದ ಅನೇಕ ಜನ ಮಹನೀಯರು ದಯ ಮಾಡಿಸಿದ್ದರು. ನೂತನ ದಂಪತಿಗಳಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಾಗಲೆಂದು ಗುರುಮೂರ್ತಿಗಳು ಆಶೀರ್ವದಿಸಿದರು. ಅನಂತರ ವೇ|| ಆರಾಧ್ಯರವರು ತಮ್ಮ ಶಕ್ತ್ಯನುಸಾರವಾಗಿ ಸರ್ವರನ್ನು ಫಲತಾಂಬೂಲ ದಕ್ಷಿಣೆ ಮೊದಲಾದವುಗಳಿಂದ ಸತ್ಕರಿಸಿದರು.

ಕೆ. ಎಂ. ಕಲ್ಲೇಶ್ವರಯ್ಯ, ಬೆಂಗಳೂರು ಸಿಟಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ನವರತ್ನಮಾಲಿಕಾ.

ಪರಮಗುರುವರರೇಣುಕಾರ್ಯನ |
ಪರಮಪೀಠದಿಂದು ಜಗದೊಳು |
ಪರಮಮಹಿಮೆಯ ತೋರುತೊಯ್ಯನೆ ಭಕ್ತಸಂಕುಲವ ||
ಪೊರೆಯುತಮದಿನ ಧರ್ಮವಣಿಗೇರಿ |
ಪರಿಸಿ ಶಿವಮತವೇಳ್ಗೆಗೋಸುವ |
ಪರಮಪಥನವರೇಣುಕಾರ್ಯನು ಪಾಳ್ಕೆ ಸಂಪದವ ||೧||

ಜಗಮುಖರವರಸಿ ನೋಡುತ |
ಉಗುವ ಶಿವಮತತತ್ತ್ವಸಾರದ |
ಬಗೆಯನೆಲ್ಲವನರಿದು ಶಿವಸಿದ್ಧಾಂತವಿವೇಚಿಸಿ ||
ಸೊಗಸಿನಗ್ರಂಥವ್ರಜ ರೂಪವ |
ತೊಗುಮಿಗೆಯನುಪದೇಶಗೆಯ್ಯುತೆ |
ಸೊಗಪ್ರತ್ಯಕ್ಷನು ಕೊನೆಯಭಿನವರೇಣುಕಾಚಾರ್ಯಾ ||೨||

ನಿನ್ನ ದರ್ಶನಗೈವ ನೇತ್ರವೆ |
ನಿನ್ನನಿಪ್ಪುದು ಧರ್ಮಮೂರುತಿ |
ನಿನ್ನ ಪಾದವ ಪೂಜೆಗೆಯ್ಯುವ ಹಸ್ತವದು ಧನ್ಯಂ ||
ನಿನ್ನ ನಾಮವ ಪೊಗಳ್ವ ನಾಲಗೆ |
ಮಾನ್ಯವದೆದಿಹುದಖಿಲಲೋಕದಿ |
ಸನ್ನುತೋನ್ನತಚರಿತನಭಿನವರೇಣುಕಾಚಾರ್ಯಾ ||೩||

ಪಾಶುಪತರು ಕವಿಗಳೆಲ್ಲರು |
ಶಾಡೆ ನಿನ್ನಯ ಪೂತಚರಿತವ |
ಕಡಿಯೊಳಗಿನ್ನಿಲ್ಲ ಸರಿಸಮನೆಂದು ಪಲವಗೆಯಂ ||
ಮೂಢಮತಿಗಳದೇನಬಲ್ಲರು |
ಪಾಡಿಗಗ್ಗಳಗುರುವೆನಿಪ್ಪುದು |
ನೋಡು ದಯೆವರದೈದೆಯಭಿನವರೇಣುಕಾಚಾರ್ಯಾ ||೪||

ಪರಿ ನೊಸಲೊಳುರಿ ಭಸಿತವೊಪ್ಪಿರೆ |
ಕೊರಲೊಳಗೆ ರುದ್ರಾಕ್ಷಮಾಲೆಗೆ |
ಅರಲು ಮೆಯ್ಯೊಳು ಪಾವುಡೆಯುನಲವಡಿಸಿ ಶಿರದೊಳಗೆ ||
ಧರದಿ ದಂಡಕಮಂಡಲಿಸಿದಿರೆ |
ಚರಣಸರಸಿಜದಲ್ಲಿ ಪಾದುಗೆ |
ಮೆರೆಯುತಿರುವಭಿನವಗುರುರತ್ನಮರೇಣುಕಾಚಾರ್ಯಾ ||೫||

'ಜಗಮಂ ಬಾಧಿಪ ಕಾಮನಂ ಜಯಿಸುತುಂ ಮಾರಾರಿ
ಯಂತೊಪ್ಪುವೈ |
ಸೊಗದಿಂ ಶಂಕರಪೂಜೆಯಂ ನೆಗಳುತುಂ ತತ್ತ್ವಾರ್ಥಸಂತಾನಮಂ||
ಜಗದೊಳ್ಪೇಳಿಸಿ ದಿವ್ಯತತ್ವದಿರವಂ ಕಣ್ಗಂಡು ಸಂಮೋದಿಪೈ |
ಪೊಗಳಲ್ಕೆನ್ನಳವಲ್ಲವೈ ಅಭಿನವಶ್ರೀರೇಣುಕಾಧೀಶ್ವರಾ ||೬||

ಧರೆಯಂ ಪಾವನಗೆಯ್ಯಲೆಂದು ಬಗೆದಾ ಶ್ರೀಚಂದ್ರಮೌಳೀ
ಶ್ವರಂ |
ಧರದಿಂ ಚಂದ್ರಧರತ್ವಮಾಡಿಕಳೆಯಂ ಪೋಗಾಡಿ ಭೂಲೋಕ
ದೊಳ್ |
ಗುರುರೂಪೆತ್ತಿರೆ ಪಾಪರಾಶಿಯುಡಿಪಂ ಶಿಧರ್ಶನಂ ಮಾಡಲೆಂ |
ದಿರದೈತಂದು ಚರಿಪ್ಪನೀಂ ಅಭಿನವಶ್ರೀರೇಣುಕಾಧೀಶ್ವರಾ ||೭||

ಶಿವಪಾವನಾಮೃತವಿದಾಂಯುತುಂ ಸರಸದಿಂ ಲಿಂಗಾಂಗ
ತತ್ತ್ವಾರ್ಥಮಂ |
ಶಿವಭಕ್ತಗೀರಡ್ಕೈದೆ ಬೋಧಮೆಸಗುತ ಸ್ವಾಂಗಯೋಗಾನ್ವಿತಂ |
ಭುವಿಯೊಳ್ ಸಂಚರಿಗೈದು ಶೈವಮತಮಂ ಸಂರಕ್ಷಣಂಗೆ
ಯ್ಯುತುಂ|
ಸವಮಂದಾರವಿದೆಂಬವೊಲ್ ಮೆರೆಯುವಂ ಶ್ರೀಶೈವಚೇತ್ಯಾಧಿಪಂ||

ಶರಣಜನಪರಿಪಾಲ ಭವಭಯ |
ಹರಣ ಗುರುಕುಲವಾರ್ಧಿಚಂದಿರ |
ಚರಿತ ನಾಡೊಳಗೈದೆ ಸೊಂಪಿನಲಂಪು ಮೆರೆದಿಹುದು ||
ಕರುಣೆ ಭವಸಾಗರಮುಕ್ತಿದಾಯಕನ |
ಶರಣರಪರಶಿವನೊಲ್ಮೆ ವೆತ್ತನ |
ಚರಣಸರಸಿಜಕಿದನು ಪಂಡಿತವೃಷಭನರ್ಪಿಸಿದಂ ||೯||

ಎಸ್. ಎಂ. ಬಸವಯ್ಯ,
ಹೈಸ್ಕೂಲ್ ಕನ್ನಡ ಪಂಡಿತ, ಶಿವಮೊಗ್ಗಾ.

ಪುರಾಣಪ್ರವಚನ.

ಜಮಖಂಡಿ ಸಂಸ್ಥಾನ ಪೈಕಿ ಹುಲ್ಯಾಳಗ್ರಾಮದಲ್ಲಿ ಇದೇ ಶ್ರಾವಣ ಶುದ್ಧ ೫ ಬುಧವಾರ (ತಾ|| ೧೫-೮-೩೪) ದಿವಸ ದೈವದವರ ಇಚ್ಛೆಯ ಪ್ರಕಾರ ಸ್ಕಂದಪುರಾಣವು ವಿಜಾಪುರ ಬೃಹನ್ಮಠದ ಪಂಡಿತ ಶಂಭುಲಿಂಗಶಿವಾಚಾರ್ಯಸ್ವಾಮಿಗಳವರಿಂದ ಪ್ರಾರಂಭಿಸಲ್ಪಟ್ಟಿತು. ಈ ಸ್ವಾಮಿಗಳವರ ಪರಿಚಯವು ನಮ್ಮ ಕನ್ನಡನಾಡಿನಲ್ಲಿ ಚನ್ನಾಗಿರುವದು. ಅವರ ಬಗ್ಗೆ ವಿಶೇಷ ವರ್ಣನಮಾಡುವುದು ಕಾರಣವಿಲ್ಲ. ಶ್ರೀಗಳವರು ಪುರಾಣದಲ್ಲಿ ನೈತಿಕ-ಧಾರ್ಮಿಕ-ಸಾಮಾಜಿಕ-ಆಧ್ಯಾತ್ಮಿಕ ವಿಷಯಗಳನ್ನು ವಿವರಿಸಿ ವಾಕ್ಚಾತುರ್ಯದಿಂದಲೂ, ಉತ್ಸಾಹದಿಂದಲೂ, ಗಾಂಭೀರ್ಯದಿಂದಲೂ ಹೇಳುತ್ತಾರೆ. ಇದರಿಂದ ವೀರಶೈವ ಸಮಾಜದಲ್ಲಿ ಧರ್ಮದ ಬಗ್ಗೆ ಜಾಗೃತಿಯಾಗಹತ್ತಿರುವದು. ಈಗಂತೂ ವೀರಶೈವ ಸಮಾಜವು ಅವನತಿಯ ಮಾರ್ಗದಲ್ಲಿ ಬಿದ್ದಿರುವದನ್ನು ಎಲ್ಲರೂ ಬಲ್ಲರು. ಈ ಬಗ್ಗೆ ಇವರು ಅನೇಕ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿರುವರು. ಧಾರ್ಮಿಕ ಕೊರತೆಯನ್ನು ನಿವಾರಿಸಲು ಶ್ರೀಶಂಭುಲಿಂಗಸ್ವಾಮಿಗಳವರು ಬದ್ಧಕಂಕಣರಾಗಿರುವರು. ಅವರು ಪುರಾಣದಲ್ಲಿ ಸಂದರ್ಭಾನುಸಾರವಾಗಿ ಸ್ತ್ರೀಯರ ಸುಧಾರಣೆಯ ವಿಷಯವನ್ನು ಕುರಿತು ತಂದು ಜನರನ್ನು ಸುಧಾರಿಸ ಹತ್ತಿರುವರು.

ಈಗ್ಗೆ ದೇಶದಲ್ಲಿ ಜನರು ಕ್ರಿಶ್ಚಿಯನ್ ಜನರಂತೆ ನಡೆಯಲು ಹತ್ತಿರುವರು. ಓ ಸಮಾಜವೇ ! ಯುರೋಪವು ನಮ್ಮ ಪಶ್ಚಿಮ ದಿಕ್ಕಿಗಿದೆ. ಅಂದರೆ ಸೂರ್ಯನು ಅಸ್ತನಾಗುವ ದಿಕ್ಕು. ನಾವು ಅವರನ್ನು ಅನುಸರಿಸಿ ನಡೆದರೆ, ಧರ್ಮರೂಪಿ ಸೂರ್ಯನು ಅಸ್ತನಾಗಿ ಗಾಢಾಂಧದಲ್ಲಿ ಬೀಳುವೆವು. ಇನ್ನಾದರೂ ಮಹನೀಯರ ವಾಕ್ಯಗಳಲ್ಲಿ ವಿಶ್ವಾಸವಿಟ್ಟು, ನಮ್ಮ ಪೂರ್ವಿಕರಂತೆ ವರ್ತಿಸಿ ಅಸ್ತಧರ್ಮದ ಸೂರ್ಯನನ್ನು ಉದಯಿಸುವಂತೆ ಮಾಡಬೇಕಾಗಿ ಪ್ರಾರ್ಥನೆ.

ಓರ್ವ ವೀರಶೈವ.

ಬಾಳೆಯ ಉಪಯೋಗಗಳು.

ಬಾಳೆಯ ಗಿಡವು ಉಷ್ಣ ಪ್ರದೇಶದಲ್ಲಿ ಬೆಳೆಯುವ ಗಿಡವಾಗಿದೆ. ಇಂಡಿಯಾದಲ್ಲಿ ಎಲ್ಲೆಲ್ಲಿಯೂ ಇದು ಬೆಳೆಯುವದು. ಒಳ್ಳೆಯ ಪೋಷಣ ಗುಣವುಳ್ಳದುದಾಗಿ, ರುಚಿಯಾದ ಹಣ್ಣುಗಳಲ್ಲಿ ಪ್ರಖ್ಯಾತಿಗೊಂಡಿದೆ. ಇಂಡಿಯಾ ದೇಶದಲ್ಲಿ ಈ ಬಾಳೆಯ ಗಿಡದ ಬೇರೆ ಬೇರೆ ಉಪಯೋಗಗಳನ್ನೂ, ಮುಖ್ಯವಾಗಿ ಅದರಲ್ಲಿರುವ ಔಷಧಗಳನ್ನೂ ಇಲ್ಲಿ ಸಂಗ್ರಹವಾಗಿ ಹೇಳುವೆವು. ಇಂಡಿಯಾ ದೇಶದ ಅನೇಕ ಸ್ಥಳಗಳಲ್ಲಿ ಬೆಳೆಯುವ ಬಾಳೆಯ ಜಾತಿಗಳನ್ನೆಲ್ಲ ವರ್ಣವ್ಯತ್ಯಾಸದಿಂದ ಮೂರು ಬಗೆಯಾಗಿ ವಿಭಾಗಿಸಬಹುದು. ಹಸರುಬಾಳೆ, ಅರಿಸಿನಬಾಳೆ ಮತ್ತು ಕೆಂಬಾಳೆ. ಈ ಒಂದೊಂದರಲ್ಲಿ ರುಚಿಯಲ್ಲಿ ಭೇದವುಂಟು. ಬಾಳೆಯ ಗಿಡವು ಸಾಧಾರಣವಾಗಿ ೧೦ ರಿಂದ ೧೨ ಅಡಿಗಳ ವರೆಗೆ ಬೆಳೆಯುವದು. ನದೀತೀರದಲ್ಲಿ ಇನ್ನೂ ಹೆಚ್ಚು ಎತ್ತರವಾಗಿ ಬೆಳೆಯುವುದುಂಟು. ಬಾಳೆಯಮರವೂ, ಅದರಲ್ಲಿ ಹುಟ್ಟುವ ಕಾಯಿ ಮೊದಲಾದ ವಸ್ತುಗಳೂ ಅನೇಕ ವಿಧದಲ್ಲಿ ಉಪಯೋಗಿಸಲ್ಪಡುವವು. ಅವೆರಡೂ ಔಷಧಿಗಳಾಗಿಯೋ, ಅಥವಾ ಆಹಾರವಾಗಿಯೋ ಉಪಯೋಗವಾಗುವವು. ಈ ಗಿಡದ ಒಂದು ಭಾಗವಾದರೂ ನಿರರ್ಥಕವಾದುದಲ್ಲ. ಇದರ ಉಪಯೋಗಗಳು ಎಲ್ಲರಿಗೂ ತಿಳಿದಿರುವದರಿಂದ, ಇಂಡಿಯಾ ದೇಶದ ಬಹುಲು ದೇಶಗಳಲ್ಲಿ ಒಂದೊಂದು ಗ್ರಾಮದಲ್ಲಿಯೂ, ಮತ್ತು ಒಂದೊಂದು ಚಿಕ್ಕ ಹಳ್ಳಿಯಲ್ಲಿಯೂ ಬಾಳೆಯು ಬೆಳೆಸಲ್ಪಡುವದು.

ಬಾಳೆಯಗಿಡ—ಬಾಳೆಯ ಕಂಬಗಳನ್ನು ಎಂದರೆ, ಬೇರನ್ನು ಬಿಟ್ಟು ಉಳಿದ ಪೂರ್ಣ ಗಿಡವನ್ನು ವಿವಾಹ ಮುಂತಾದ ವಿಶೇಷ ದಿವಸಗಳಲ್ಲಿ ಬಾಗಿಲಿಗೆ ಅಲಂಕಾರಕ್ಕಾಗಿ ಕಟ್ಟುವರು.

ಬೇರು—ಪ್ರ್ಯಾಂಕೋಸಿಲ್ ವ್ಯಾಧಿಗೂ ಮತ್ತು ಗಂಡಮಾಲೆ ರೋಗಗಳಿಗೂ ಚಿಕಿತ್ಸೆಗಾಗಿ ಇದು ಉಪಯೋಗಿಸಬಹುದು. ಬೇರನ್ನು ಭಸ್ಮಮಾಡಿ ರಕ್ತಹೀನತೆಗೂ, ಮತ್ತು ಕಾಕೇಕ್ಸಿಯಾ ಎಂಬ ವ್ಯಾಧಿಗೂ ಚಿಕಿತ್ಸೆಗಾಗಿ ಉಪಯೋಗಿಸುವರು. ಅದರ ರಸವನ್ನು ಹಿಂಡಿ ಕಷಾಯವಾಗಿ ಕುಡಿದರೆ, ಮದ್ಯರಸದಿಂದಾದ ಅಮಲು ಇಳಿಯುವದು. ಎಳೆ ಬೇರಿನ ರಸವು ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಉಪಯೋಗಿಸಲ್ಪಡುವದು. ಈ ಬೇರಿನ ರಸದಲ್ಲಿ ಸುಟ್ಟ ಬೆಳಗಾರ, ಪೆಟ್ಲುಪ್ಪು ಇವುಗಳನ್ನು ಕರಗಿಸಿ, ಮೂತ್ರವನ್ನು ಹಿಲ್ಲಿಸುವದಕ್ಕಾಗಿ ಕೊಡುವರು. ಕಡೆದ ಬೆಣ್ಣೆಯನ್ನೂ ಸಕ್ಕರೆಯನ್ನೂ ಇದರೊಡನೆ ಸೇರಿಸಿ ಪಟ್ಟೆ ರೋಗಗಳಿಗೆ ಚಿಕಿತ್ಸೆ ಮಾಡುವರು.

ನಾರು—ಮೇಲು ಭಾಗದ ನಾರಿನ ರಸವನ್ನು ಹಿಂಡಿ ಮೂತ್ರ ವ್ಯಾಧಿಗಳಿಗೆ ಅದರಿಂದ ಚಿಕಿತ್ಸೆ ಮಾಡುವರು. ಮಕ್ಕಳಿಗೆ ಅಧಿಕವಾಗಿ ಉಪಯೋಗಿಸಲ್ಪಟ್ಟ ಸಂದರ್ಭದಲ್ಲಿ, ಅದಕ್ಕೆ ಉಪಶಮನವಾಗಿ ಇದರ ರಸವನ್ನು ಕೊಡುವರು. ಬಾಳೆಯ ನಾರಿನ ರಸವು ಹಾವಿನ ಕಡಿತಕ್ಕೂ ಔಷಧವಾಗಿ ಉಪಯೋಗಿಸಲ್ಪಡುವದು. ನಾಗರಹಾವಿನ ವಿಷವಿದ್ದಾಗಲೂ ಈ ರಸದಿಂದ ಅನೇಕ ಜನರಿಗೆ ಗುಣವಾಗಿದೆ. ಇದರ ಒಂದು ಔನ್ಸಿನಷ್ಟು ರಸವನ್ನು ತೆಗೆದುಕೊಂಡು ಅದರೊಡನೆ ಒಂದು ಔನ್ಸಿನ ಬೆಣ್ಣೆಯನ್ನು ಸೇರಿಸಿ ಕುಡಿ ಕೊಟ್ಟರೆ, ಚೆನ್ನಾಗಿ ಭೇದಿಯಾಗುವದು. ಇದರ ಎಳೆ ನಾರನ್ನು ದೇಹದ ಉಷ್ಣಾಂಶವನ್ನು ತಗ್ಗಿಸುವದಕ್ಕಾಗಿ ತಲೆಯ ಮೇಲೆ ಕಟ್ಟುವದುಂಟು. ಇದರ ನಾರನ್ನು ಪುಷ್ಪಗಳನ್ನು ಕಟ್ಟುವದಕ್ಕೂ, ಮಾಲೆಗಳನ್ನು ಪೋಣಿಸುವದಕ್ಕೂ ಉಪಯೋಗಿಸುವರು. ಒಣಗಿದ ನಾರನ್ನು ರಸಾಯನವಸ್ತುಸಂಬಂಧದಿಂದ ಸಂಸ್ಕರಿಸಿ, ದೃಢವಾಗಿ ಮಾಡಿ, ಅದರಿಂದ ಬಟ್ಟೆಗಳನ್ನು ನೇಯುವರು. ಅನೇಕ ದೇಶಗಳಲ್ಲಿ ಇದೇ ಒಂದು ಪ್ರಧಾನವಾದ ಕೈಗಾರಿಕೆಯಾಗಿದೆ. ಇದರಿಂದ ತಯಾರಿಸಿದ ಬಟ್ಟೆಗಳು ಒಳ್ಳೇ ರೇಷ್ಮೆ ಬಟ್ಟೆಗಳಂತೆಯೇ ಅಂದವಾಗಿರುವವು.

ಎಳೇದಿಂಡು—ಮರದೊಳಗಿನ ಎಳೇದಂಟನ್ನು ದೇಹದ ಉಷ್ಣವನ್ನು ತಗ್ಗಿಸುವದಕ್ಕಾಗಿ ತಲೆಯಮೇಲಿಟ್ಟು ಕಟ್ಟುವರು. ಇದನ್ನು ಅಡಿಗೆಗೂ ಉಪಯೋಗಿಸುವದುಂಟು. ಬಾಳೇದಂಟನ್ನು ಭೋಜನದಲ್ಲಿ ಉಪಯೋಗಿಸುವದರಿಂದ ಮೂತ್ರವು ಧಾರಾಳವಾಗಿ ಇಳಿಯುವದು. ಇದರಿಂದ ಪಚ್ಚಡಿಯನ್ನು ಮಾಡುವರು. ಗಾಂಜಾದಿ ದುರ್ಗುಣಗಳನ್ನು ನೀಗಿಸುವದಕ್ಕಾಗಿಯೂ ಇದನ್ನು ಉಪಯೋಗಿಸುವರು. ಪೂರ್ವಕಾಲದಲ್ಲಿ ಇದರ ಒಣಗಿದ ನಾರನ್ನೂ, ತರಗೆಲೆಗಳನ್ನೂ ಸುಟ್ಟು, ಆ ಬೂದಿಯಿಂದ ಪೊಟ್ಯಾಸಿಯಂ ಕಾರ್ಬೋ ಹೈಡ್ರೇಟನ್ನು ತೆಗೆಯುತ್ತಿದ್ದರು. ಬಾಳೆ ಎಲೆಗಳನ್ನು ಊಟಮಾಡುವ ಪತ್ರಗಳಂತೆ ಉಪಯೋಗಿಸುವರು. ತರಗೆಲೆಗಳನ್ನು ಹೊಲಿದು ದೊನ್ನೆಗಳನ್ನಾಗಿ ಮಾಡುವರು. ಇದರ ಎಲೆಗಳನ್ನೂ, ದೊನ್ನೆಗಳನ್ನೂ ದಕ್ಷಿಣ ಇಂಡಿಯಾದಲ್ಲಿ ಅನೇಕ ಜನರು ಪ್ರತಿದಿನವೂ ವಿಶೇಷವಾಗಿ ಉಪಯೋಗಿಸುತ್ತಿರುವರು. ಸಳಗಳನ್ನು ಕತ್ತರಿಸಿ, ಸುಟ್ಟಗಾಯ, ಉರಿ ಮುಂತಾದವುಗಳ ಮೇಲೆ ಶೀತಲಕ್ಕಾಗಿ ಕಟ್ಟುವದುಂಟು. ಚಂದಚರ್ಮವು ಹೋದ ಮೇಲೆ ವ್ರಣವು ಆರುವದಕ್ಕಾಗಿ ಈ ಬಾಳೆಯ ಎಲೆಗೆ ಎಣ್ಣೆಯನ್ನು ಸವರಿ, ವ್ರಣಗಳ ಮೇಲೆ ಕಟ್ಟುವರು. ಬಲಿತ ಹಸೀ ಎಲೆಗಳನ್ನು ಕಣ್ಣುಗಳಿಗೆ ಮರೆಯಾಗಿಟ್ಟು ಕಟ್ಟುವದುಂಟು.

ಬಾಳೆಯ ಹೂ:—ಇದರಿಂದ ವಿಧವಿಧವಾದ ಪಲ್ಯಗಳನ್ನು ಮಾಡುವದುಂಟು. ಮಧುಮೇಹ ವ್ಯಾಧಿಗೆ ಇದು ಗುಣಕಾರಿಯಾದುದು. ಬಾಳೆಯ ಹೂವನ್ನಿಡಿದು ರಸವನ್ನು ಹಿಂಡಿ, ಅದರೊಡನೆ ಮಜ್ಜಿಗೆಯನ್ನೂ ಸೇರಿಸಿಕೊಟ್ಟರೆ, ಹೆಂಗಸರಿಗೆ ಮುಟ್ಟಾಗುವಾಗ ಹೊಟ್ಟೆಕಡಿತ, ಅತ್ಯಮೃತ್ಸ್ರಾವ, ಮುಂತಾದ ಋತುಸಂಬಂಧವ್ಯಾಧಿಗಳು ಗುಣವಾಗುವವು.

ಬಾಳೆಕಾಯಿ:—ಇದು ಒಂದು ಒಳ್ಳೇ ಆಹಾರ ಪದಾರ್ಥವು. ಡಿಸೋಪ್ಸಿಸ್, ಮತ್ತು ಮಧುಮೇಹವ್ಯಾಧಿ, ಇವುಗಳಿಂದ ನರಳುವವರಿಗೆ ಬಾಳೇಕಾಯಿ ಬಹಳ ಒಳ್ಳೆಯ ಔಷಧವು. ಇದನ್ನು ಒಣಗಿಸಿ ಸಕ್ಕರೆಯೊಡನೆ ಸೇರಿಸಿ ತಿಂದರೆ, ಕಜ್ಜಿ, ತುರಿ, ಮುಂತಾದ ಚರ್ಮರೋಗಗಳು ನೀಗುವವು. ಮಲಯಾಳದಲ್ಲಿ ಮತ್ತು ಪಶ್ಚಿಮ ಸಮುದ್ರತೀರಗಳಲ್ಲಿ ಒಂದು ಬಗೆಯ ಬಾಳೆಯು ಬೆಳೆಸಲ್ಪಡುವದು. ಅದರ ಕಾಯಿಯನ್ನು ತುಂಡುತುಂಡಾಗಿ ಮಾಡಿ, ತೆಂಗಿನ ಎಣ್ಣೆಯಲ್ಲಿಯಾಗಲಿ ಅಥವಾ ಬೆಣ್ಣೆಯಲ್ಲಿಯಾಗಲಿ ಹುರಿದಿಡುವರು. ಇದು ಬಹುದಿನಗಳವರೆಗೆ ಕೆಡುವದಿಲ್ಲ. ಇವನ್ನೇ ಬಿಸಿಲಿನಲ್ಲಿ ಒಣಗಿಸಿ, ಹಿಟ್ಟುಮಾಡಿ, ಮಕ್ಕಳಿಗೆ ಆಹಾರವನ್ನಾಗಿ ಉಪಯೋಗಿಸುವರು. ಇದರಿಂದ ರೊಟ್ಟಿ ಮುಂತಾದವುಗಳನ್ನು ಮಾಡುವದುಂಟು. ಇದರ ಹಿಟ್ಟನ್ನು ಗಂಜಿಕಾಯಿಸಿ, ಹಾಲನ್ನು ಬೆರಸಿಕೊಡುವದರಿಂದ ಅಜೀರ್ಣಸಂಬಂಧವಾದ ಹೊಟ್ಟೆಶೂಲೆಗೆ ಇದು ಒಳ್ಳೆಯ ಚಿಕಿತ್ಸೆಯಾಗುವದು.

ಬಾಳೇಹಣ್ಣು—ಇದು ಗಿಡದಲ್ಲಿಯೇ ಮಾಗಿದರೆ ಒಳ್ಳೆಯದು. ಹಾಗಿಲ್ಲದೆ ಗೊನೆಯನ್ನು ಕೊಯ್ದಮೇಲೆ ಹಣ್ಣಾಗಿಸಿದರೆ, ಅದರಲ್ಲಿ ಅಷ್ಟು ರುಚಿಯಿರುವದಿಲ್ಲ. ಬಾಳೆಯ ಹಣ್ಣಿನಲ್ಲಿ ಎ. ಬಿ. ಸಿ. ಎಂಬ ಮೂರು ಬಗೆಯ ಜೀವಸತ್ವಗಳೂ ಸೇರಿವೆ. ಇದರಲ್ಲಿ ಕಬ್ಬಿಣದ ಅಂಶವೂ ಇರುವದರಿಂದ ರಕ್ತಬಲವಿದ್ದವರಿಗೆ ಇದು ಅನುಕೂಲವಾಗುವದು. ದೀರ್ಘಕಾಲದ ಶೀತಭೇದಿ ಮತ್ತು ಭೇದಿ, ಇವುಗಳಿಗೆ ಇದು ಗುಣಕಾರಿ. ಇದಕ್ಕೆ ಹುಣಿಸೆಹಣ್ಣಿನ ಹುಳಿಯನ್ನು ಸೇರಿಸಿ ಸ್ವಲ್ಪ ಉಪ್ಪುಹಾಕಿ ಕಲಿಸಿಕೊಡಬೇಕು. ಈ ಹಣ್ಣನ್ನೂ, ಜೇನನ್ನೂ, ಸಮಪ್ರಮಾಣದಲ್ಲಿ ಬೆರಸಿ ಕಲಸಿಕೊಟ್ಟರೆ ಮೂತ್ರದಲ್ಲಿ ಸಕ್ಕರೆಯು ತಗ್ಗುವದು. ಮಧುಮೇಹವ್ಯಾಧಿಗೆ ಈ ಬಾಳೆಯಹಣ್ಣು ಒಳ್ಳೆಯದು. ಬಾಳೆಯ ಹಣ್ಣನ್ನು ಹಿಂಡಿ ಅದರ ರಸವನ್ನು ತೆಗೆದು ಅದನ್ನು ಹುಳಿಯುವದಕ್ಕಾಗಿ ಬಿಟ್ಟು, ಅನಂತರ ಕೊಟ್ಟರೆ ಗುಲ್ಮವ್ಯಾಧಿಗೆ ಅದು ಒಳ್ಳೇ ಔಷಧವಾಗುವದು. ಬಾಳೆಯಹಣ್ಣನ್ನು ಚೆನ್ನಾಗಿ ಕಲಿಸಿ ನಾಲ್ಕು ಔನ್ಸು ಹಾಲಿನೊಡನೆ ಸೇರಿಸಿಕೊಟ್ಟರೆ, ಸ್ವರ, ಭೇದಿ ಮುಂತಾದ ವ್ಯಾಧಿಗಳನ್ನು ನೀಗಿಸುವದು. ಬಾಳೆಯಕಾಯನ್ನು ಹುಳಿಮಾಡಿಯೂ ಇದಕ್ಕಾಗಿ ಉಪಯೋಗಿಸುವದುಂಟು.

ಬಾಳೆಯ ಬೀಜಗಳು—ಕೆಲವು ಜಾತಿಯ ಬಾಳೆಗೆ ಬೀಜಗಳುಂಟು. ಈ ಬೀಜದ ರಸವು ಶಿವ್ಪೊಟ್ಟೆಯಲ್ಲಿ ಕಾಣುವ ಉರಿಯನ್ನು ತಗ್ಗಿಸುವದು. ಭೇದಿಯಾಗುತ್ತಿರುವವರಿಗೂ ಇದು ಗುಣಕಾರಿ.

ಬಾಳೆಯಸಿಪ್ಪೆ—ಬಾಳೆಯ ಸಿಪ್ಪೆಯನ್ನು ಸುಟ್ಟರೆ, ಅದರ ಬೂದಿಯಲ್ಲಿ ಸೋಡಾ ಇರುವದು. ಅದನ್ನು ಬಟ್ಟೆಗಳ ನೊಗೆಯುವದಕ್ಕಾಗಿ ಉಪಯೋಗಿಸಬಹುದು. ಬಾಳೆಯ ಮರವನ್ನೇ ಸುಟ್ಟರೆ ಅದರಲ್ಲಿ ಪೊಟ್ಯಾಷ್ ಉಪ್ಪುಗಳಿರುವವು. ಇದು ವಾಂತ್ಯ, ಉರಿ, ಹೊಟ್ಟೆಶೂಲೆ, ಇವುಗಳನ್ನೆಲ್ಲ ತಗ್ಗಿಸುವದು.

"ಗುಡ್ ಹೆಲ್ತ್"

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 42

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 48

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಮಲೆಜ್ವರಕ್ಕೆ
ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14. ½ ಡಜನ್ 8-8-0, ರೂ. 5, 1 ಡಜನ್ ರೂ. 16-8-0, ರೂ. 9-12-0

ಮಲೆರಿನ್ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0, 500, 1000ಕ್ಕೆ ರೂ. 7 ಮತ್ತು 13-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8, 14, ರೂ. 1/6, 2.

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣ, ಗ್ರಹಣಿ ಹುಳದ ಉಪದ್ರ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಕರಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್ ಕಫ್ ರೆಮೆಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಫಕೆಮ್ಮು ಇವನ್ನು ನೀರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಹಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5. 100ಕ್ಕೆ ರೂ. 2-0-0.

ಸಿರಪ್ ವೆಸಿಕೂಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣಾಗಿರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡಸೀಸೆ ರೂ. 3-8-0, ಸಣ್ಣಸೀಸೆ ರೂ. 1-14-0.

☞ ಟಿಕ್ಸು ಹೊಮ್ಯೋಪತಿ ಮದ್ದುಗಳೂ, ದೃಷ್ಟಿಚಕ್ರಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಹರಿವಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ' ವೆಂಬ
ಪುಸ್ತಕಕ್ಕೆ ಬರಿರಿ ಧರ್ಮಾರ್ಥ.

ಪತ್ರ:— ಮಲೇರಿಯಾನ ಕಂಪೆನಿ,
The Malariana Co., Mangalore (21) [52] (ಹಂಪನಕಟ್ಟೆ), 21, ಮಂಗಳೂರು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವನಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಪ್ತ ಶಿವಾಚಾರ್ಯರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಛಾಯಾಚಿತ್ರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಚಿತ್ರಪಟದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ಸಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[34] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೬ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೬ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೬ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೬ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರಧುರಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ವವೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಸೆಪ್ಟಂಬರ್ ೧೯೩೪ [ಸಂಚಿಕೆ ೧೮

|| ಶ್ರೀಜಗದ್ಗುರು ರೇಣುಕಾಚಾರ್ಯಃ ಪ್ರಸೀದತು ||

ಜೀಯಾಚ್ಛ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ |
ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ

ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ

ಸುವರ್ಣರಜತಾಂದೋಲಿಕೋತ್ಸವಾಹ್ವಾನಪತ್ರಿಕಾ.

ಅಖಿಲಮಹಾಜನಗಳಲ್ಲಿ ವಿಜ್ಞಾಪನೆ

ಮೈಸೂರು ರಾಜಧಾನಿಯ ವೀರಶೈವ ಮಂಡಳಿಯವರ ಪ್ರಾರ್ಥನೆಯ ಮೇರೆಗೆ ಶ್ರೀ ಜಗದ್ಗುರುಗಳವರ ಸ್ವಾರಿಯು ಮೈಸೂರು ರಾಜಧಾನಿಗೆ ಇದೇ ಭಾವನಾಮಸಂವತ್ಸರ ಭಾದ್ರಪದ ಶು|| ೧೫ (ತಾ|| **23-9-1934**) ಭಾನುವಾರ ಪ್ರಾತಃಕಾಲ ೯|| ಘಂಟೆಗೆ ಸರಿಯಾಗಿ ಸಾಕ್ಷಾದ್ಧರ್ಮಾವತಾರಿಗಳಾದ ನಮ್ಮ ಮಹಾಪ್ರಭುಗಳವರು ದಯಪಾಲಿಸಿರುವ ಸಮಸ್ತ ಬಿರುದಾವಳಿಗಳೊಡನೆ ಮಹೋತ್ಸವಪೂರ್ವಕವಾಗಿ ದಯಮಾಡಿಸುವುದರಿಂದ ಆ ಕಾಲಕ್ಕೆ ತಾವು ತಮ್ಮ ಪುತ್ರಮಿತ್ರಕಲತ್ರಬಂಧುಬಾಂಧವರೊಡನೆ ಆಗಮಿಸಿ ಶ್ರೀಗುರುದರ್ಶನಾಶೀರ್ವಾದಗಳನ್ನು ಪಡೆದು ಧನ್ಯರಾಗಬೇಕೆಂದು ಕೋರುವ,

ಮೈಸೂರು ರಾಜಧಾನಿ,
ತಾ|| ೮—೯—೧೯೩೪.

ಡಾ|| ಟಿ. ಎಸ್. ಸಿದ್ಧಪ್ಪ,
ಸ್ವಾಗತಸಂಘದ ಅಧ್ಯಕ್ಷ.

ಸೂಚನೆ—ಈ ಮಹೋತ್ಸವಕ್ಕೆ ಪರಸ್ಥಳದಿಂದ ಬರುವ ಮಹಾಜನರೂ, ಸ್ವಯಂಸೇವಕರಾಗಲಿಚ್ಛಿಸುವವರೂ ವಸತಿ ವಗೈರೆ ಅನುಕೂಲತೆಗಳನ್ನು ಅಪೇಕ್ಷಿಸುವ ಪಕ್ಷದಲ್ಲಿ ತಾವು ಬರುವ ತಾರೀಖು, ರೈಲ್ವೆಕಾಲ, ಜನಸಂಖ್ಯೆ ವಗೈರೆ ನಮೂದಿಸಿ ಪತ್ರವನ್ನು ತಾ|| 18—9—1934 ರ ಒಳಗಾಗಿ ತಲಪುವಂತೆ ಬರೆಯಬೇಕು.

ರಾಜಧಾನಿಗೆ ಧಾರವಾಡ ಮೊದಲಾದ ಪ್ರಾಂತಗಳಿಂದ ಬರತಕ್ಕವರು ಅರಸೀಕೆರೆ ಮಾರ್ಗವಾಗಿಯೂ, ಬಳ್ಳಾರಿ ಮೊದಲಾದ ಪ್ರಾಂತಗಳಿಂದ ಬರತಕ್ಕವರು ಬೆಂಗಳೂರು ಮಾರ್ಗವಾಗಿಯೂ ಬರಬೇಕು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು, ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಈ ರೀತಿಯಾಗಿ ಪ್ರಮಾಣದೃಷ್ಟಿಯಿಂದ ಪರಿಭಾವಿಸಿದರೆ ಅತ್ಯಾಶ್ರಮವ್ರತಧಾರಣವಾದರೋ ವರ್ಣಾಶ್ರಮಾವಿರುದ್ಧವಾಗಿರುವುದೆಂಬ ತಾತ್ಪರ್ಯವು ಸಿದ್ಧವಾಗುವುದು. ಅದುಕಾರಣವೇ ಚಂದ್ರಜ್ಞಾನಾಗಮದುತ್ತರಭಾಗದಲ್ಲಿ (ಚರ್ಯಾ. ಪ. ೧)—

ಅವಿಸ್ಮೃತಪ್ರಪಂಚಸ್ಯ ಸಾಧಕಸ್ಯ ಹಿತೈಷಿಣಃ |
ನ ಭವೇತ್ಕರ್ಮ ಸಂತ್ಯಾಜ್ಯಂ ವರ್ಣಾಶ್ರಮನಿಯಂತ್ರಿತಂ ||೮||

ಅಂದರೆ ಅತ್ಯಾಶ್ರಮ (ಶಾಂಭವ) ವ್ರತಧಾರಣಪೂರ್ವಕ ಶಿವಯೋಗಸಾಧಕನಾದ ದ್ವಿಜನು ಪ್ರಪಂಚ ಪ್ರಕ್ರಿಯುಳ್ಳವನಿರುವ ಪರಿಯಂತರವೂ ಸ್ವವರ್ಣಾಶ್ರಮನಿಯಂತ್ರಿತವಾದ ಶಿವಜ್ಞಾನಾವಿರುದ್ಧ ಕರ್ಮಗಳನ್ನು ಅನುಷ್ಠಿಸುತ್ತಿರಬೇಕು; ಎಂಬುದಾಗಿ ಶ್ರೀ ಅನಂತರುದ್ರನು ಗೀಷ್ಪತಿಯನ್ನು ಕುರಿತು ಬೋಧಿಸಿರುವ ರಹಸ್ಯವು ಶಿಷ್ಟಾದರಣೀಯವಾಗಿರುವುದು.

ಮತ್ತು, ಸೂತಸಂಹಿತೆಯಲ್ಲಿ (೩—೫)—

ಅತಿವರ್ಣಾಶ್ರಮೀ ಸಾಕ್ಷಾದ್ಗುರೂಣಾಂ ಗುರುರುಚ್ಯತೇ | ತತ್ಸಮೋ ನಾಧಿಕಶ್ಚಾತ್ರ ಲೋಕೇಽಸ್ತ್ಯೇವ ನ ಸಂಶಯಃ ||೧೫||

ಪರಬೊಮ್ಮನನ್ನು ಹೋಲುವುದೂ ಮೀರಿದುದೂ ಆದ ವಸ್ತುವು ಬೇರೊಂದಿಲ್ಲ. ಅಂತಹ ಪರಶಿವಬ್ರಹ್ಮನ ಯಾಥಾತ್ಮ್ಯಜ್ಞಾನವು ಸಹ ಅಸದೃಶವೂ ['ನಹಿಜ್ಞಾನೇನಸದೃಶಂ' ಗೀ.] ಅಧಿಕವೂ ಆಗಿದೆ. ಸರ್ವೋತ್ಕೃಷ್ಟವೂ ಶಿವಜ್ಞಾನಸಾಧಕವೂ ಆದ ವಿಶುದ್ಧಸಂಸ್ಕಾರವನ್ನಾದರೂ ಅಸಮಾನವೂ ಅಧಿಕವೂ ಆದುದೆಂದು ಹೇಳಬಾರದೇಕೆ? ಈ ವಿಧವಾದ ಸಂಸ್ಕಾರವನ್ನು ಹೊಂದಿ ವಿಶ್ವಮೋಹವಳಿದು ವಿಶ್ವಪ್ರಕಾಶಕನಾದ ಪರಶಿವನನ್ನು ಸ್ವಾತ್ಮಭೂತನನ್ನಾಗಿ ಸಾಕ್ಷಾತ್ಕಾರಮಾಡಿಕೊಂಡು ತತ್ಸ್ವರೂಪಭೂತನಾಗಿ ವಿಹರಿಸುವ ಶಿವಯೋಗಿಯು (ಸ್ಥಿತಪ್ರಜ್ಞನು) ತಾನೊಂದು ವರ್ಣಾಶ್ರಮೋಪೇತನಾಗಿ ಕಾಣಲ್ಪಡುವನಾದರೂ ಆ ಚರಮಶರೀರಿಯನ್ನು ಮಿಕ್ಕ ವರ್ಣಾಶ್ರಮಿಗಳಿಗೆ ಸರಿಗಟ್ಟಬಹುದೇ? ಸರ್ವಸಾಧಾರಣಗಳಾದ ವರ್ಣಾಶ್ರಮಧರ್ಮಪರಾಯಣರಿಗಿಂತಲೂ ಅಧಿಕವಾದ ವೈಶಿಷ್ಟ್ಯವು ಆ ಅಪ್ರಾಕೃತಾತ್ಮನಲ್ಲಿರುವುದಷ್ಟೇ? ಅದುಕಾರಣವೇ ಆ ಅತಿವರ್ಣಾಶ್ರಮಿಗೆ ಸಮಾನನೂ ಅಧಿಕನೂ ಬೇರೊಬ್ಬನಿಲ್ಲ. ಅವನೇ ಪ್ರಾಕೃತಾತ್ಮರಲ್ಲಿ ಗುರುಗಳೆಂದು ಹೇಳಿಸಿಕೊಳ್ಳಲ್ಪಡುವ ಗುರುಗಳಿಗೂ ಸಹ ಗುರುವಾಗಿದ್ದಾನೆ. ಎಂಬ ಈ ವಚನವು ಸರ್ವರಿಂದಲೂ ಪುರಸ್ಕರಿಸಲ್ಪಡತಕ್ಕದ್ದಾಗಿದೆ. ಆದ್ದರಿಂದ ನಾವು ಈ ಮುಂದಿನ ವಚನಗಳನ್ನಾದರೂ ಪರಾಮರ್ಶಿಸಬೇಕಲ್ಲವೇ? ಆ ವಚನಗಳಾವುವೆಂದರೆ—

ಯಃ ಶರೀರೇಂದ್ರಿಯಾದಿಭ್ಯೋ ವಿಭಿನ್ನಂ ಸರ್ವಸಾಕ್ಷಿಣಂ |
ಪಾರಮಾರ್ಥಿಕವಿಜ್ಞಾನ ಸುಖಾತ್ಮಾನಂ ಸ್ವಯಂಪ್ರಭಂ ||೧೭||
ಪರತತ್ತ್ವಂ ವಿಜಾನಾತಿ ಸೋಽತಿವರ್ಣಾಶ್ರಮೀ ಭವೇತ್ |
ಯೋ ವೇದಾನ್ತಮಹಾವಾಕ್ಯಶ್ರವಣೇನೈವ ಕೇಶವ ||
ಆತ್ಮಾನಮೀಶ್ವರಂವೇದ ಸೋಽತಿವರ್ಣಾಶ್ರಮೀ ಭವೇತ್ |
ಯೋಽವಸ್ಥಾತ್ರಯ ನಿರ್ಮುಕ್ತಮವಸ್ಥಾತ್ರಯ ಸಾಕ್ಷಿಣಂ ||೧೮||
ಮಹಾದೇವಂ ವಿಜಾನಾತಿ ಸೋಽತಿವರ್ಣಾಶ್ರಮೀ ಭವೇತ್ |
ವರ್ಣಾಶ್ರಮಾದಯೋ ದೇಹೇ ಮಾಯಯಾ ಪರಿಕಲ್ಪಿತಾಃ ||೧೯||
ನಾತ್ಮನೋ ಬೋಧರೂಪಸ್ಯ ಮಮ ತೇ ಸನ್ತಿ ಸರ್ವದಾ |
ಇತಿ ಯೋ ವೇದವೇದಾನ್ತೈಃ ಸೋಽತಿವರ್ಣಾಶ್ರಮೀ ಭವೇತ್ ||೨೦||

ಎಂಬುದಾಗಿರುವ ಈ ವಾಕ್ಯಗಳಿಂದ ಹೇಳಲ್ಪಡುವ ಮೇರೆಗೆ ಅದಾವನವ್ಯಕ್ತಿಯುರುವುದೋ ಅಂತಹ ಅಪ್ರಾಕೃತನು (ವಿಶುದ್ಧಸಂಸ್ಕಾರಿಯು) 'ಅತಿವರ್ಣಾಶ್ರಮಿ' ಯೆಂದು ಹೇಳಲ್ಪಡುತ್ತಾನೆ. ಅವನು ಮಿಕ್ಕ ಪ್ರಾಕೃತಜೀವಿಗಳಂತೇ ದೇಹವುಳ್ಳವನಾಗಿ ವ್ಯವಹರಿಸಿದರೂ ವಿದೇಹಿಯೇ; ವರ್ಣಾಶ್ರಮಗಳುಳ್ಳವನಾಗಿ ಕಾಣಲ್ಪಟ್ಟರೂ ಅತಿವರ್ಣಾಶ್ರಮಿಯೇ ಎಂಬುದು ಸಿದ್ಧಾಂತವು.

ಇನ್ನು, ಈ ಪ್ರಮಾಣವೆಂಬ ಒರೆಗಲ್ಲಿಗೆ ಹಲಕೆಲವು ಯುಕ್ತಿಯುಕ್ತವಚನಗಳನ್ನು ಸ್ವಲ್ಪ ತಿಕ್ಕಿನೋಡುವಾ. **'ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ'** ಎಂಬುದಾಗಿ ಭಗವಂತನು ಪಾರ್ಥನನ್ನು ಕುರಿತು 'ಅಯ್ಯಾ, ನೀನು ನಿಸ್ತ್ರೈಗುಣ್ಯನಾಗು' ಎಂದುಪದೇಶಿಸಿದುದರ ಗೂಢಾರ್ಥವನ್ನು ಕಾಣಲರಿಯದ ಕೆಲಂಬರು 'ಭಗವಂತನು ಆ ವಾಕ್ಯದಿಂದ ಅರ್ಜುನನಿಗೆ ವೇದಬಾಹ್ಯನಾಗೆಂದು ಬೋಧಿಸಿದನು.' ಎಂಬರ್ಥವನ್ನು ದೃಢಪಡಿಸಲು ಹೆಣಗಾಡುತ್ತಿರುವಂತೇ 'ಅತಿವರ್ಣಾಶ್ರಮಿ' ಯೆಂಬ ಶಬ್ದದ ಅರ್ಥವನ್ನಾದರೂ ತಲೆಕೆಳಗೆಮಾಡಿ ತೋರಿಸಲು ಹೆಣಗಾಡುತ್ತಾರೆ. ಅವರು ವೇದಾಗಮ ಪ್ರಮಾಣವಾಕ್ಯಗಳನ್ನು ಪುರಸ್ಕರಿಸುವುದೇ ಇಲ್ಲ. ಅಥವಾ ಒಮ್ಮೊಮ್ಮೆ ಲೆಕ್ಕಿಸಿದರೂ ತಮ್ಮ ದುರಾಗ್ರಹಬುದ್ಧಿಗೆ ಪ್ರತಿಕೂಲಗಳೆನಿಸುವ ಆ ಪ್ರಮಾಣವಾಕ್ಯಗಳ ಅರ್ಥವನ್ನಾದರೂ ವಿಪರೀತವಾಗಿ ಕಲ್ಪಿಸುವುದರಲ್ಲಿ ಬಂಟರು! 'ಅತಿವರ್ಣಾಶ್ರಮಿಯು' ಅಂದರೆ ಶಾಂಭವವ್ರತಾಚಾರಸಂಪನ್ನನು; ಎಂಬ ವಾಸ್ತವಿಕವಾದರ್ಥವು ಪ್ರಮಾಣಸಿದ್ಧವಾದರೂ ಅದನ್ನು ಮರೆತು, ಸ್ವಬುದ್ಧಿಕಲ್ಪಿತವಾದ 'ವರ್ಣಾಶ್ರಮಗಳಿಲ್ಲದವನೇ ಅತಿವರ್ಣಾಶ್ರಮಿ' ಯೆಂಬರ್ಥವನ್ನೇ ಮುಂದೆ ಮಾಡಿ ತಾವು ಅತಿವರ್ಣಾಶ್ರಮಿಗಳೆಂದೂ ತಮಗೆ ಯಾವ ವರ್ಣಾಶ್ರಮಗಳೂ ಇಲ್ಲವೇ ಇಲ್ಲವೆಂದೂ ಮೊದಲಾದ ಗಲಭೆಯನ್ನೆಬ್ಬಿಸಿ ವರ್ಣಾಶ್ರಮಗಳ ಅಭಾವವನ್ನು ಸಾಧಿಸಲುದ್ಯುಕ್ತರಾದವರ ಪರಿಯು **'ಮೀಲಯತ್ಯಕ್ಷಿ ಮಾರ್ಜಾರೋ ನ ಭೂರಸ್ತಿಂಗಮಿಷ್ಯತಿ'** ಎಂಬ ನ್ಯಾಯವನ್ನನುಸರಿಸುವುದಲ್ಲವೇ?

ಮತ್ತು, ಅತ್ಯಾಶ್ರಮಿಯು ಅಂದರೆ ವರ್ಣಾಶ್ರಮಬಾಹ್ಯನು (ಯಾವವರ್ಣಾಶ್ರಮಧರ್ಮಗಳೂ ಇಲ್ಲದವನು) ಎಂಬರ್ಥವನ್ನು ತಮ್ಮಲ್ಲಿ ಅನ್ವಯಿಸಿಕೊಳ್ಳುವವರು—

ಚಂಡಾಲಗೇಹೇ ವಿಪ್ರಾಣಾಂ ಗೃಹೇವಾ ಪರಮಾರ್ಥವಿತ್ |
ಭಕ್ಷ್ಯಭೋಜ್ಯಾದಿವೈಷಮ್ಯಂ ನ ಕಿಂಚಿದಪಿ ಪಶ್ಯತಿ ||

ಎಂಬಂತೆ ಪ್ರತಿಯೊಬ್ಬನೂ ಅವಧೂತಾವಸ್ಥೆಯಿಂದ ವ್ಯವಹರಿಸುತ್ತಿರುವನೇ? **'ನಿಸ್ತ್ರೈಗುಣ್ಯೇ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ'** ಎಂಬ ವಾಕ್ಯವನ್ನು ಮಾತ್ರ ಮುಂದೆ ಮಾಡಿ ಯಾವಾಗಲೂ ಕೇವಲ ಶಿಶ್ನೋದರ ಪರಾಯಣರಾಗಿರುವ ವಾಗದ್ವೈತಿಗಳಿಗೂ ಅಂತಹ ವರ್ಣಾಶ್ರಮವಿರೋಧಿಗಳಿಗೂ ಯಾವ ಭೇದವಿರುವುದು? ಬೃಹಜ್ಜಾಬಾಲೋಪನಿಷತ್ತಿನಲ್ಲಿ (ಬ್ರಾ. ೫)

ತ್ರೈವರ್ಣಿಕಾನಾಂ ಸರ್ವೇಷಾಮಗ್ನಿಹೋತ್ರಸಮುದ್ಭವಂ |
ಇದಂ ಮುಖ್ಯಂ ಗೃಹಸ್ಥಾನಾಂ ವಿರಜಾನಲಜಂ ಭವೇತ್ ||೩||
ವಿರಜಾನಲಜಂ ಚೈವ ಧಾರ್ಯಂ ಪ್ರೋಕ್ತಂ ಮಹರ್ಷಿಭಿಃ |
ಔಪಾಸನಸಮುತ್ಪನ್ನಂ ಗೃಹಸ್ಥಾನಾಂ ವಿಶೇಷತಃ ||೪||
ಸಮಿದಗ್ನಿ ಸಮುತ್ಪನ್ನಂ ಧಾರ್ಯಂ ವೈ ಬ್ರಹ್ಮಚಾರಿಣಾ |
ಶೂದ್ರಾಣಾಂ ಶ್ರೋತ್ರಿಯಾಗಾರಪಚನಾಗ್ನಿಸಮುದ್ಭವಂ ||೫||
ಅನ್ಯೇಷಾಮಪಿ ಸರ್ವೇಷಾಂ ಧಾರ್ಯಂ ದಾವಾನಲೋದ್ಭವಂ |
ಯತೀನಾಂ ಜ್ಞಾನದಂ ಪ್ರೋಕ್ತಂ ವನಸ್ಥಾನಾಂ ವಿರಕ್ತಿದಂ ||೬||
ಅತಿವರ್ಣಾಶ್ರಮಾಣಾಂತು ಶ್ಮಶಾನಾಗ್ನಿಸಮುದ್ಭವಂ |
ಸರ್ವೇಷಾಂ ದೇವಾಲಯಸ್ಥಂ ಭಸ್ಮ ಶಿವಾಗ್ನಿಜಂ ಶಿವಯೋಗಿನಾಂ ||೭||
ಶಿವಾಲಯಸ್ಥ ತಲ್ಲಿಂಗಲಿಪ್ತಂ ವಾ ಮನ್ತ್ರ ಸಂಸ್ಕಾರ ದಗ್ಧಂ ವಾ |

ಎಂಬುದಾಗಿ ಬೇರೆಬೇರೆ ವರ್ಣಾಶ್ರಮಿಗಳಿಂದ ಧರಿಸಲ್ಪಡತಕ್ಕ ಭಸ್ಮಭೇದಗಳು ವಿಧಿಸಲ್ಪಟ್ಟಿವೆ. ೭ ನೆಯ ಮಂತ್ರದಲ್ಲಿ ನಿರ್ದಿಷ್ಟರಾದ ಅತಿವರ್ಣಾಶ್ರಮಿಗಳು ನಾವೇ ಎಂದು ಹೇಳುವವರು ಸುಡಗಾಡ ಬೂದಿಯನ್ನೇ ಧರಿಸುತ್ತಿರಬಹುದಲ್ಲವೇ? ಅದೇ ಉಪನಿಷತ್ತಿನಲ್ಲಿ (ಬ್ರಾ. ೩) ಗೋಮಯ ಭಸ್ಮವನ್ನು ಮಾಡತಕ್ಕ ವಿಧಿಯಾದರೂ ನಿರೂಪಿಸಲ್ಪಟ್ಟಿದೆ. ಅಲ್ಲಿ ಗೋಮಯಪಿಂಡಗಳನ್ನು ದಹಿಸಲುಚಿತವಾದ ಅಗ್ನಿಯನ್ನು ಪ್ರತಿಷ್ಠಿಸುವಾಗ **'ಸ್ವಗೃಹ್ಯೋಕ್ತವಿಧಾನೇನ'** ಎಂಬ ವಿಧಿವಾಕ್ಯಗಳು ಅತ್ಯಾಶ್ರಮಾಚಾರಪರಾಯಣರಾದ ತ್ರೈವರ್ಣಿಕರನ್ನನುಲಕ್ಷಿಸಿರುತ್ತವೆ. ಅದುಕಾರಣವೇ ಅನುಕಲ್ಪ, ಉಪಕಲ್ಪಾದಿ ಚತುರ್ವಿಧ ಭಸ್ಮಗಳಾದರೂ ಕಲ್ಪೋಕ್ತವಿಧಿಗಳನ್ನನುಸರಿಸಿಯೇ ಮಾಡಲ್ಪಡುತ್ತವೆ. ಹೀಗೆ ವಿಧಿಪೂರ್ವಕವಾಗಿ ಭಸ್ಮವನ್ನು ನಿರ್ಮಿಸುವಾಗ ವಿನಿಯೋಗಿಸಲ್ಪಡತಕ್ಕ 'ಗವಾದಿಭಸ್ಮಾನ್ತ'ವಾದುದರ ಮಂತ್ರಸಂಸ್ಕಾರಕರಣ ಪ್ರಸಂಗದಲ್ಲಿ **'ಅಗಾವೋ ಅಕ್ಸ್ಮುತ'** ಎಂದು ಮೊದಲಾಗಿ **'ಓಮಿತಿಬ್ರಹ್ಮ'** ಎಂಬುದರವರೆಗಿರುವ ವೈದಿಕಮಂತ್ರಗಳನ್ನು ಪಠಿಸುವ ಅಧಿಕಾರವು ಶೂದ್ರನಿಗೆ (ತ್ರೈವರ್ಣಿಕರಿಗುಚಿತವಾದುಪನಯನವೆಂಬ ವರ್ಣಸಂಸ್ಕಾರ ಹೀನನಿಗೆ) ಇಲ್ಲವಾದುದರಿಂದ ಅವನು ಅತ್ಯಾಶ್ರಮ (ಭಸ್ಮಧಾರಣಾದಿವ್ರತ) ಸ್ಥನಾದರೂ ಕಲ್ಪೋಕ್ತವಿಧಿನಿರ್ಮಿತ ವಿರಜಾನಲಜಾದಿ ಭಸ್ಮಧಾರಣಾನರ್ಹನು. ವಿರಜಾನಲಜಭಸ್ಮವೇ ವೈದಿಕಪಾಶುಪತ ಅತ್ಯಾಶ್ರಮವ್ರತದೀಕ್ಷಾರಂಭದಲ್ಲಿ ಉದ್ಧೂಲನಾದಿಗಳಿಗುಪಯುಕ್ತವಾಗಿದೆ. ವಿರಜಾಹೋಮವಿಲ್ಲದೆ ಆ ಪಾಶುಪತ ವ್ರತಗ್ರಹಣಾಧಿಕಾರವಿಲ್ಲ; ಅದುಕಾರಣವೇ (ಕೂರ್ಮ ಅ. ೧೪) ಶ್ವೇತಾಶ್ವತರಮುನಿಯು ಕ್ಷತ್ರಿಯನಾದ ಸುಶೀಲನಿಂದ ವಿರಜಾಹೋಮವನ್ನು ಮಾಡಿಸಿದನು. ಅತ್ಯಾಶ್ರಮವ್ರತಾಂಗಭೂತವಾದ ಈ ವಿರಜಾಹೋಮವು ವೈದಿಕವಾದುದರಿಂದ ಇದನ್ನನುಷ್ಠಿಸುವಲ್ಲಿ ಶೂದ್ರನಿಗಧಿಕಾರವಿಲ್ಲವೆಂಬುದು ಸ್ಪಷ್ಟವೇ. ಯತಿಯು ಆ ಹೋಮಾದಿಗಳನ್ನು ಮಾಡದಿದ್ದರೂ ಪಾಶುಪತವ್ರತಾಧಿಕಾರಿಯಾಗಿರುವನಲ್ಲವೇ? ಎಂದು ಆಕ್ಷೇಪಿಸಲಾಗದು. ಏಕೆಂದರೆ ಸನ್ಯಾಸಗ್ರಹಣದಲ್ಲಿ ಮೊದಲು ವಿರಜಾಹೋಮವು ಆತ್ಮಶುದ್ಧ್ಯರ್ಥವಾಗಿ ಅನುಷ್ಠಿಸಲ್ಪಡುವುದು. ಮತ್ತು ಜನ್ಮಾಂತರೀಯ ಹೋಮವ್ರತಾನುಷ್ಠಾನಾದಿಗಳಿಂದ ಮನೋನೈರ್ಮಲ್ಯವಿರುವುದಾದಕಾರಣ ಈಗಲಾದರೋ ಆ ಹೋಮಾದಿಗಳನ್ನು ಮಾಡಬೇಕಾದುದಿಲ್ಲವೆಂಬ ಕೊಂಟಿನೆವನ್ನು ಮುಂದೆಮಾಡುವುದೂ ಯುಕ್ತವಾದುದಲ್ಲ. ಹಾಗಾದಪಕ್ಷದಲ್ಲಿ ಹೆಚ್ಚು ಕಡಿಮೆ ಪ್ರಮಾಣದಿಂದ ಈ ಜಗತ್ತಿನಲ್ಲಿರುವ ಸರ್ವಮಾನವರನ್ನೂ ಜನ್ಮಾಂತರೀಯ ಹೋಮವ್ರತಾನುಷ್ಠಾನ ಸಿದ್ಧರೆಂದೇ ಊಹಿಸಿದರಾಯ್ತು! ಇದರಿಂದ ಕೂರ್ಮಪುರಾಣೋಕ್ತವಾದ ಅತ್ಯಾಶ್ರಮಾಧಿಕಾರಿಯ ಲಕ್ಷಣಪ್ರತಿಪಾದನ ವೈಯರ್ಥ್ಯವು ಸಂಭವಿಸುವುದು. ಇನ್ನು, ಮಂತ್ರೋಚ್ಚಾರಣಮಾತ್ರದಿಂದಲೂ ತದರ್ಥಸಿದ್ಧಿಯು ಸಂಭವಿಸುವುದು ಅಂದರೆ ಅರ್ಥವ್ಯತಿರಿಕ್ತವಾದ ಕರ್ಮದಲ್ಲಿ ಮಂತ್ರೋಚ್ಚಾರದಿಂದೇ ಅನುಷ್ಠಾನಫಲಸಿದ್ಧಿಯು ಪೂರ್ವತಂತ್ರದಲ್ಲಿರುವುದರಿಂದ, ಅದೇ ಪ್ರಕಾರವಾಗಿ ಪಾಶುಪತವ್ರತಕೋಪಯುಕ್ತಮಂತ್ರೋಚ್ಚಾರದಿಂದೇ ಹೋಮಾದ್ಯನುಷ್ಠಾನವು ಸಿದ್ಧಿಸುವುದೆಂದು ಹೇಳುವುದಾದರೂ ಪ್ರಕೃತೋಚಿತವಾದುದಲ್ಲ. ಕೆಲವು ಮಂತ್ರಗಳು ಬೇರೆ ಬೇರೆ ಕರ್ಮವಿಧಾಯಕಗಳಾಗಿದ್ದರೂ ಆ ಮಂತ್ರಗಳಲ್ಲಿರುವ ಉಪಕ್ರಮಶಬ್ದಗಳಿಂದ ಶನಿ ಬುಧಾದಿಗ್ರಹಗಳ ಪೂಜೆಯು ಅಂಗೀಕೃತವಾಗಿದೆ. ಆ ಮಂತ್ರಗಳರ್ಥವಾದರೋ ಬೇರೆಯೇ ಇರುವುದು. ಆ ಆ ದೇವತಾವಾಚಕಪದಗಳ ಅನ್ವಯಸಂಬಂಧದಿಂದ ಆ ಆ ಮಂತ್ರಗಳು ಆ ಆ ದೇವತಾವಾಚಕಗಳಾಗಿರುವುವೆಂದು ತಿಳಿದು ಅವುಗಳನ್ನು ಪಠಿಸುತ್ತಾರೆ. ಹೇಗೆಂದರೆ **'ಶಮಗ್ನಿರಗ್ನಿಭಿಃ ಕರತು'** (ಋ.) **'ಉದ್ಬುಧ್ಯಸ್ವಾಗ್ನೇ ಪ್ರತಿಜಾಗೃಹ್ಯೇನಮಿಷ್ಟಾ'** (ಕೃ.) ಎಂಬಿವೆರಡು ಮಂತ್ರಗಳು ಅರ್ಥದೃಷ್ಟಿಯಿಂದಾದರೋ ಶನಿ ಬುಧಗ್ರಹಗಳಿಗೇನೂ ಸಂಬಂಧಪಟ್ಟವುಗಳಲ್ಲವಾದರೂ ಇವೆರಡೂ ಮಂತ್ರಗಳು ಶನಿ ಬುಧಗ್ರಹಗಳ ಪೂಜೆಯಲ್ಲಿ ವಿನಿಯೋಗಿಸಲ್ಪಟ್ಟಿವೆ. ಈ ಅಭಿಪ್ರಾಯವು ಹರದತ್ತ ಶಿವಾಚಾರ್ಯರ ವಾಕ್ಯಗಳಿಂದಲೂ ಅರಿಯಲ್ಪಡುವುದು ಹೇಗೆಂದರೆ—

ಅಪ್ಯರ್ಕದೈವತವತೀಮೃಚಮಾಮನಾಮಃ
ಶಬ್ದೇನ ವಿಶ್ವ ಇತಿ ಶಂಕರವೈಶ್ವದೇವೀಮ್ |
ಪಿತ್ರ್ಯಂ ಚ ಮರ್ತ ಇತಿ ಪೂಷಪದೇನ ಪೌಷೀ
ಮೇತಾದೃಶಾನಿ ಕತಿನಾಮ ನಿದರ್ಶನಾನಿ ||೭೮||
ಏಷಾ ಗತಿಃ ಶ್ರುತಿಗಿರಾಮಿತಿನಿರ್ಣಯೇನ
ತತ್ತದ್ಗ್ರಹಾರ್ಚನವಿಧೌ ಮುನಯಃ ಸ್ಮರನ್ತಿ |
ಮನ್ತ್ರೇಣ ಶಂಕರ ಶನೈಃಸಮುಪಕ್ರಮೇಣ
ಬುಧ್ಯಸ್ವ ಶಬ್ದಸಹಿತೇನ ಬುಧಸ್ಯ ಪೂಜಾಮ್ ||೭೯||

ಈ ಮೇಲಿನ ವಾಕ್ಯಗಳಿಂದ 'ಕರ್ಮವ್ಯತಿರಿಕ್ತ ವಚನಗಳಿಂದ ಕರ್ಮವನ್ನು ಗ್ರಹಿಸುವಿಕೆಯು' ಎಂಬ ತಾತ್ಪರ್ಯವು ಸಿದ್ಧಿಸುವುದು. ಆದರೆ ಈ ನ್ಯಾಯವು ಅತ್ಯಾಶ್ರಮ ವ್ರತಗ್ರಹಣಾಧಿಕಾರವಿಧಿಗೆ ಏನೂ ಸಂಬಂಧಪಟ್ಟುದಲ್ಲ. ಯಾವುದೋ ಒಂದು ಸಂದರ್ಭಕ್ಕೆ ಸಂಬಂಧಿಸಿದರ್ಥವನ್ನು ತನ್ನ ಮನಸ್ಸಿನ ಲಹರಿಗನುಸಾರವಾಗಿ ಯಾವುದಕ್ಕೋ ತಂದು ಸೇರಿಸುವುದು ಆಲದಗಿಡಕ್ಕೆ ಬದನೆಯ ಟೊಂಗೆಯನ್ನು ಅಂಟಿಸಿದಂತೇ ಸರಿ. ಯಾವ ನ್ಯಾಯವಾದರೂ ಗೋವತ್ಸಸಂಬಂಧವಂತಿರಬೇಕಲ್ಲವೇ? ಮತ್ತು ಜಪ (ಮಂತ್ರೋಚ್ಚಾರ) ಮಾತ್ರದಿಂದೇ ವಿರಕ್ತ (ವಿಶಾಖತ್ವ) ವು ಸಿದ್ಧಿಸುವ ಪಕ್ಷದಲ್ಲಿ ಶ್ವೇತಾಶ್ವತರ ಮುನಿಯು ಕ್ಷತ್ರಿಯ (ದ್ವಿಜ) ನಾದ ಸುಶೀಲನಿಂದ ಮಂತ್ರೋಚ್ಚಾರವನ್ನು ಮಾತ್ರ ಮಾಡಿಸದೆ ಅತ್ಯಾಶ್ರಮವಿಧಿಯನ್ನು ಸಂಪೂರ್ಣವಾಗಿ ಮಾಡಿಸಿದುದೇಕೆ? ಮತ್ತು ಏಕಾದಶಿಯ ದಿವಸವೇ ಶ್ರಾದ್ಧವು ಮಾಡಲ್ಪಡಬೇಕಾದಲ್ಲಿ ಶ್ರಾದ್ಧಶೇಷವನ್ನು ಭುಂಜಿಸಬೇಕೆಂಬ ವಿಧಿಯನ್ನು ಆಘ್ರಾಣಿಸುವ ಮಾತ್ರದಿಂದ ನೆರವೇರಿಸಬೇಕೆಂಬ ನಿಯಮವು ಪಾಶುಪತ ವ್ರತಧಾರಣ ವಿಧಿಯಲ್ಲಿ ದೃಷ್ಟಾಂತರೂಪವಾಗಿ ಸೇರಿಸಲ್ಪಡುವುದೂ ಅಪ್ರಾಸಂಗಿಕವು. **'ನಾ ಪುತ್ರಸ್ಯ ಲೋಕೋಽಸ್ತಿ'** (ಐ. ಬ್ರಾ.) **'ನ ಕರ್ಮಣಾ'** (ಕೈ. ಉ.) ಎಂಬ ಮುಂತಾದೆಡೆಯಲ್ಲಿ **'ತುಲ್ಯಬಲವಿರೋಧೇ ವಿಕಲ್ಪಃ'** ಎಂಬ ನ್ಯಾಯಾನುಸಾರವಾಗಿ ವಿಕಲ್ಪಾರ್ಥವಿರುವುದೇನೋ ನಿಜ; ಹಾಗೆ ಅತ್ಯಾಶ್ರಮವ್ರತಧಾರಣವಿಧಿಯಲ್ಲಿ ವಿಕಲ್ಪಬೋಧಕವಾಕ್ಯಗಳಾವುವು? ಅವನ್ನಷ್ಟು ಉದ್ಧರಿಸಬಾರದೇ?

ಅಂದರೆ ಆ ವಿಧಿಯಲ್ಲಿ 'ಕೃತಹೋಮವೂ ಅಕೃತಹೋಮವೂ' ಎಂಬ ವಿಕಲ್ಪವು ಪ್ರತಿಪಾದಿಸಲ್ಪಟ್ಟಿರುವುದೇ? ವಿಕಲ್ಪವಿರುವುದಾದರೆ ಆ ವಿಧಿಯಲ್ಲಿ ವಿರಜಾಹೋಮಾದಿಕರ್ತವ್ಯಬೋಧಕ ವಾಕ್ಯಗಳು ಸ್ಪಷ್ಟವಾಗಿರುವುವೇಕೆ? ವಿಕಲ್ಪವಾಕ್ಯಗಳು ಬೇರೆ ವಿಧಿವಾಕ್ಯಗಳು ಬೇರೆ; ಆ ವಿಧಿವಾಕ್ಯಗಳಲ್ಲಾದರೋ ವಿಕಲ್ಪವಾಕ್ಯವು ಒಂದಾದರೂ ಇಲ್ಲ. ಅಥವಾ ಆ ಹೋಮಾದಿಕ್ರಿಯೆಗಳಿಗೆ ಸಂಬಂಧಿಸಿದ ಅವಾಂತರ ಮಂತ್ರಗಳನ್ನು ಬಿಟ್ಟರೂ ಮುಖ್ಯಮಂತ್ರವಾದರೋ ಬಿಡಲ್ಪಡುವುದಿಲ್ಲವಷ್ಟೇ? ಪಾಶುಪತವಿಧಿಯು ವೈದಿಕಪದ್ಧತಿಯನನುಸರಿಸಿರುವುದರಿಂದ ಅನುಪನೀತನಿಗೆ ತನ್ಮಂತ್ರೋಚ್ಚಾರಣಾಧಿಕಾರವಿರುವುದಿಲ್ಲ. ಯತಿಗಳು ಪಾಕಕರ್ಮಗಳನ್ನು ತ್ಯಜಿಸಿದರೂ ಅವರಿಗೆ ಅವೈದಿಕತ್ವವಿರುವುದಿಲ್ಲ; ಅದೂ ಪರಿಗ್ರಹಿತವಾದುದರ ತ್ಯಾಗವೇ ಸಂಭವಿಸುವುದು. ಅತ್ಯಾಶ್ರಮವ್ರತಾಧಿಕಾರಿಗಳೆನಿಸುವವರೆಲ್ಲರೂ ಜನ್ಮತಃ ಯತಿಸಮಾನರೇ ಆಗಿರಬಲ್ಲರೇ?

ಮತ್ತು, ಪಾಶುಪತಧಾರಣವಿಧಿಯು ವಾಯವೀಯಸಂಹಿತೆಯಲ್ಲಿಯೂ ನಿರೂಪಿಸಲ್ಪಟ್ಟಿದೆ. ಅಲ್ಲಿ ವ್ರತಸಂಕಲ್ಪವು ಎಷ್ಟು ದಿವಸಗಳವರೆಗಿರುವುದೋ ಅಷ್ಟು ದಿವಸಗಳವರೆಗೆ ವ್ರತಿಯು ಜಡೆಯುಳ್ಳವನಾಗಿಯೇ ಅಥವಾ ಮುಂಡಿತನಾಗಿಯೋ ಶಿಖಾಮಾತ್ರವೇ ಜಡೆಯುಳ್ಳವನಾಗಿಯೋ ಇರಬಹುದೆಂದು ಹೇಳಲ್ಪಟ್ಟಿದೆ. ಹೀಗೆ ಹೇಳತಕ್ಕ ವಚನಗಳು ಬೇರೆ ಬೇರೆ ಆಶ್ರಮಿಗಳನ್ನನುಲಕ್ಷಿಸಿರುವುದರಿಂದ, ಅಲ್ಲಿ 'ಮುಂಡೀ' ಎಂಬುದಾಗಿರುವ ಶಬ್ದವು ಸನ್ಯಾಸಿವಿವಕ್ಷಿತವಾಗಿದೆ; ಏಕೆಂದರೆ ಪಾಶುಪತವ್ರತಧಾರಣಾಧಿಕಾರವು ನಾಲ್ಕು ಆಶ್ರಮದವರಿಗಿರುವುದಷ್ಟೇ? ವಿರಜಾನಲಾದಿವೈದಿಕ ಕರ್ಮಾನುಷ್ಠಾನಾಧಿಕಾರವಿಲ್ಲದ ಶೂದ್ರರು ವೈದಿಕ ಪಾಶುಪತ ವ್ರತಾಧಿಕಾರಿಗಳಲ್ಲವಾದ್ದರಿಂದ ಅವರಿಗೆ ಬೋಳದಲೆಯು ಭೂಷಣವೇ ಆಗಿರಬಹುದು. ಬೋಳದಲೆಯವರೆಲ್ಲಾ ಆ 'ಮುಂಡಿಯ' ಗಳಹುರೇ? ಪ್ರಾಯಶ್ಚಿತ್ತವಿಷಯದಲ್ಲಿ ತ್ರೈವರ್ಣಿಕರಾದ ಗೃಹಸ್ಥರಿಗೂ ಮುಂಡನಾಧಿಕಾರವು ವಿಹಿತವಾಗಿದೆ. ಇದುನಿಜ: ಅಂದರೆ ಬ್ರಹ್ಮಹತ್ಯಾದಿ ಮಹಾಪಾತಕಿಯು ಪ್ರಾಯಶ್ಚಿತ್ತಪೂರ್ವಕ ಶುದ್ಧನಾಗುವ ಪ್ರಸಂಗದಲ್ಲಿ ಅವನಿಗೆ 'ಸಶಿಖವಪನ' ವು ವಿಧಿಸಲ್ಪಡುವುದು. ಅದಾದರೂ ವಿಕಲ್ಪವು—

ರಾಜೋವಾ ರಾಜಪುತ್ರೋವಾ ಬ್ರಾಹ್ಮಣೋವಾ ಬಹುಶ್ರುತಃ |
ಕೇಶಸಂರಕ್ಷಣಾರ್ಥಂ ಹಿ ದ್ವಿಗುಣಂ ವ್ರತಮಾಚರೇತ್ ||

ಎಂಬುದಾಗಿ ಹೇಳಲ್ಪಟ್ಟಿರುವುದರಿಂದ ಪ್ರಾಯಶ್ಚಿತ್ತಕ್ಕೋಸ್ಕರ ಮಾಡಲ್ಪಡತಕ್ಕ ಕೃಚ್ಛ್ರಾದಿವ್ರತಗಳನ್ನು ಶಿಖೆಯ ಸಂರಕ್ಷಣೆಯನ್ನುದ್ದೇಶಿಸಿ ಇಮ್ಮಡಿಯಾಗಿ ಮಾಡತಕ್ಕದ್ದು. ಈ ರೀತಿಯಾಗಿರುವ ವಿಧಿವಿಕಲ್ಪಕ್ಕೂ ಪಾಶುಪತವ್ರತಧಾರಣವಿಧಿಗೂ ಯಾವ ಸಂಬಂಧವೂ ಇರುವುದಿಲ್ಲ. ಆದ್ದರಿಂದ ವೈದಿಕಪಾಶುಪತವು ವ್ರತಧಾರಣಾರ್ಹರಾದ ತ್ರೈವರ್ಣಿಕರಲ್ಲಿ ಯತಿಯೊಬ್ಬನನ್ನುಳಿದು ಮಿಕ್ಕವರು ಮುಂಡಿಗಳಾಗಲಾರರು. ಯಾವನಾದರೂ ಅತ್ಯಾಶ್ರಮವ್ರತಧಾರಣಮಾತ್ರದಿಂದೇ ಯತಿಸಮಾನನೇ ಆಗುವನಾದ್ದರಿಂದ ಅವನೂ ಮುಂಡಿಯೇ ಆಗಿರಬೇಕೆಂಬುದುಚಿತವಲ್ಲ: ಏಕೆಂದರೆ ಆ ವ್ರತವು ಸರ್ವಾಶ್ರಮಿಗಳಿಂದಲೂ ಸ್ತ್ರೀಯರಿಂದಲೂ ಸಹ ಪರಿಗ್ರಹಿಸಲ್ಪಡುವುದಷ್ಟೇ? ತ್ರೈವರ್ಣಿಕ ಸ್ತ್ರೀಯರು ಸಮಯದೀಕ್ಷಾರ್ಹರಾಗಿರುವರು.

ಮತ್ತು ಅಗ್ನಿಹೋತ್ರೋಪಾಸಕನು ಅರ್ಧಾವಧಾನನೆಂದೂ ಸರ್ವಾವಧಾನನೆಂದೂ ದ್ವಿವಿಧವಾಗಿದೆ. ಸರ್ವಾವಧಾನಿಯಾದರೆ ಗೃಹ್ಯಸಂಬಂಧವಾದ ಪಾಕಸಂಸ್ಥಾದಿಕರ್ಮಗಳು ಲೋಪವಾಗುತ್ತವೆ. ಗೃಹ್ಯಾಗ್ನಿಯೇ ಶ್ರೌತಾಗ್ನಿಯಲ್ಲಿ ಅಡಗಿಹೋಗುವುದರಿಂದ ಶ್ರೌತಕರ್ಮಗಳಲ್ಲಿ ಗೃಹ್ಯಕರ್ಮಗಳು ಸಮಾರೋಪಗೊಳಿಸಲ್ಪಡುತ್ತವೆ; ಹೇಗೆ ಅವನು (ಸರ್ವಾವಧಾನಿಯು) ಉಭಯಾರ್ಹನಾಗಿದ್ದರೂ ಕೇವಲ ಶ್ರೌತಕರ್ಮಗಳನ್ನೇ ಮಾಡುತ್ತಾನೆ; ಇದರಿಂದ ಅವನಲ್ಲಿ ಗೃಹ್ಯಕರ್ಮಗಳು ಲೋಪವಾಗುವುವು; ಹಾಗೇ ಅತ್ಯಾಶ್ರಮಧರ್ಮದಲ್ಲಿ ಚತುರಾಶ್ರಮಕರ್ಮಗಳೂ ಸಮಾರೋಪಗೊಳಿಸಲ್ಪಡುತ್ತವೆ; ಎಂದು ಹೇಳಲ್ಪಡುವುದು ಸೋಪಪತ್ತಿಕವಾದುದಲ್ಲ. ಏಕೆಂದರೆ, ಗೃಹ್ಯಾಗ್ನಿಯನ್ನು ಶ್ರೌತಾಗ್ನಿಯಲ್ಲಿ ಸಮಾರೋಪಗೊಳಿಸುವ ಬಗ್ಗೆ ಆಪಸ್ತಂಬ ಬೋಧಾಯನಾದಿಕಲ್ಪ (ಶ್ರೌತ) ಗಳಲ್ಲಿ ಪ್ರಮಾಣವಚನಗಳಿವೆ. ಸನಾತನ ಆರ್ಯಧರ್ಮಾನುಯಾಯಿಗಳು ವೈದಿಕಾಚರಣೆಗಳನ್ನು (ವರ್ಣಾಶ್ರಮಧರ್ಮಗಳನ್ನು) ಸಂಪೂರ್ಣವಾಗಿ ತ್ಯಜಿಸಿ ಕೇವಲ ತಾಂತ್ರಿಕಾಚರಣಗಳನ್ನೇ ಪರಿಗ್ರಹಿಸಬೇಕೆಂಬಲ್ಲಿ ಪ್ರಮಾಣವಾವುದು? ತಂತ್ರಕಾರರಿಗೆ ತಂತ್ರವೇ ಈ ವಿಷಯದಲ್ಲಿ ಪ್ರಮಾಣವು ಎನ್ನುವುದಾದರೆ ಆ ತಂತ್ರವಾದರೋ ಶ್ರೌತವೋ ಅಶ್ರೌತವೋ ಹೇಳು? ಅಶ್ರೌತವೆಂದರೆ ಆ ತಾಂತ್ರಿಕವಿಷಯೋಪಪತ್ತಿಗಾಗಿ ಶ್ರೌತಪ್ರಮಾಣವಚನಗಳನ್ನೇಕೆ ಮುಂದೆ ತಂದಿರುತ್ತೀಯೆ? ವೈದಿಕತಾಂತ್ರಿಕೋಭಯಾರ್ಹನು ಗೃಹ್ಯಾಗ್ನಿ ಧರ್ಮಗಳಂತೆ ಮೊದಲು ವೈದಿಕ ಧರ್ಮಗಳನ್ನಾಚರಿಸಿ, ತರುವಾಯ ವೈದಿಕಧರ್ಮಗಳನ್ನು ತಾಂತ್ರಿಕ ಧರ್ಮಗಳಲ್ಲಿ ಸಂಪೂರ್ಣವಾಗಿ ಸಮಾರೋಪಗೊಳಿಸುವನೆಂದು ನಿನ್ನ ಹೇಳಿಕೆಯ ಗುಟ್ಟು; ಶಹಬಾಶ್! ಮೊದಲು ವೈದಿಕನಾಗಿದ್ದವನೇ ಬಳಿಕ ತಾಂತ್ರಿಕ ಧರ್ಮಗಳನ್ನನುಷ್ಠಿಸುವನೆಂದು ನೀನು ಹೇಳುವ ಪಕ್ಷದಲ್ಲಿ ವೈದಿಕರು ಸಹ ಅಶ್ರೌತ (ವೇದಬಾಹ್ಯ) ತಂತ್ರದೀಕ್ಷಿತರಾಗಲು ಬಯಸುವರೆಂಬಭಿಪ್ರಾಯವು ಸಿದ್ಧಿಸುವುದಲ್ಲವೇ? ವೈದಿಕರು ವೇದಾವಿರುದ್ಧ (ಶ್ರೌತ) ತಂತ್ರೋಕ್ತ ಧರ್ಮಗಳನ್ನಾಚರಿಸುವುದರಿಂದಾದರೋ ಅವರ ವೈದಿಕತ್ವಕ್ಕೆ ಹಾನಿಯಿಲ್ಲ. ಹಾಗೂ ಶ್ರೌತ ಸ್ಮಾರ್ತರೂಪ ಉಭಯ ಕರ್ಮಾಧಿಕಾರಿಗಳಾದ ಸರ್ವಾಧಾನಿಗಳು [ಸಂಪೂರ್ಣವಾಗಿ ಗೃಹ್ಯಾಗ್ನಿಯನ್ನು ಶ್ರೌತಾಗ್ನಿಯಲ್ಲಿ ಸಮಾರೋಪಗೊಳಿಸುವವರು ಅಂದರೆ ಕೂಡಿಸುವವರು] ಮುಂದೆ ಪಾಕಸಂಸ್ಥಾದಿ ಗೃಹ್ಯಕರ್ಮಗಳನ್ನು ಬಿಟ್ಟು ಕೇವಲ ಹವಿಸ್ಸಂಸ್ಥೆಯೂ ಸೋಮಸಂಸ್ಥೆಯೂ ಮುಂತಾದ ಶ್ರೌತಕರ್ಮಗಳನ್ನೇ ಮಾಡುತ್ತಾರೆ; ಈ ಮೂಲಕ ಗೃಹ್ಯಕರ್ಮಗಳು ಲೋಪವಾಗುವುದರಿಂದ ಪ್ರತ್ಯವಾಯವಿಲ್ಲ. ಅದರಂತೆ ವೈದಿಕತಾಂತ್ರಿಕೋಭಯಾರ್ಹನು ವೈದಿಕ ಧರ್ಮಗಳನ್ನು ತಾಂತ್ರಿಕಧರ್ಮಗಳಲ್ಲಿ ಅಡಗಿಸುತ್ತಾನೆ; ಇದರಿಂದ ವೈದಿಕಧರ್ಮಗಳ ಲೋಪವಾದರೂ ಪ್ರತ್ಯವಾಯ (ದೋಷ) ವಿಲ್ಲವೆಂಬುದಾಗಿ ಹೇಳುವುದಾದರೂ ಯುಕ್ತವಾದುದಲ್ಲ. ಏಕೆಂದರೆ ಸ್ಮಾರ್ತ (ಗೃಹ್ಯ) ಕರ್ಮಗಳು ಲೋಪವಾದರೂ ಶ್ರೌತಕರ್ಮಗಳಾಗುವುದಿಲ್ಲ ಅಂದರೆ ಹವಿಸ್ಸಂಸ್ಥೆಯೂ ಸೋಮಸಂಸ್ಥೆಯೂ ಮೊದಲಾದ ಶ್ರೌತಕರ್ಮಗಳು ಶ್ರೌತಾಗ್ನಿಯಲ್ಲಿ ಮಾಡಲ್ಪಡುತ್ತವೆ. ವೈದಿಕನು ಗೃಹ್ಯಾಗ್ನಿಯಿಂದೇ ಶ್ರೌತಾಗ್ನಿಯನ್ನು ಪರಿಗ್ರಹಿಸಲಧಿಕಾರಿಯಾದನು. ಅದುಕಾರಣವೇ ಅವನು ಶ್ರೌತಾಗ್ನಿಯಲ್ಲಿ ಪ್ರವೃತ್ತನಾದನು; ಗೃಹ್ಯಪರಿಗ್ರಹವಿಲ್ಲದೆ ಶ್ರೌತಪರಿಗ್ರಹವಿರುವುದಿಲ್ಲ. ಆದ್ದರಿಂದ ಆ ಶ್ರೌತನಿಗೆ ವರ್ಣಾಶ್ರಮಧರ್ಮಗಳು ಲೋಪವಾಗುವುದಿಲ್ಲ. ಅತ್ಯಾಶ್ರಮವ್ರತಪರಿಗ್ರಹದಿಂದ ವೈದಿಕ ವರ್ಣಾಶ್ರಮಧರ್ಮಗಳು ಲೋಪವಾಗುವುವೆಂದು ಹೇಳುವಲ್ಲಿ ವೇದಾಗಮ ಪ್ರಮಾಣಗಳಿರುವುದಿಲ್ಲ. ಮತ್ತು **'ಪುತ್ರೈಷಣ ವಿತ್ತೈಷಣ ದಾರೈಷಣಾ ಮಯಾ ಸನ್ಯಸ್ತಾಃ |'** ಎಂಬ ಪ್ರೈಷೋಚ್ಚಾರಣವಾದ ಮೇಲೆ ಸನ್ಯಾಸಿಯಾಗಲೇಬೇಕು. ಹೀಗೆ ಸನ್ಯಾಸಿಯಾದವನು ಶ್ರೌತಗೃಹ್ಯಸೂತ್ರೋಕ್ತ ಕರ್ಮಗಳನ್ನನುಷ್ಠಿಸುವುದಿಲ್ಲ; ಅಷ್ಟು ಮಾತ್ರದಿಂದೇ ಅವನು ಬ್ರಾಹ್ಮಣ್ಯಹೀನನೂ ಅವೈದಿಕನೂ ಎಂದು ಹೇಳಲ್ಪಡುವುದಿಲ್ಲ; ಹಾಗೇ ಅವನು ಅತ್ಯಾಶ್ರಮವ್ರತವನ್ನು ಗ್ರಹಣಮಾಡಿದರೂ ಸನ್ಯಾಸಾಶ್ರಮವು ಲೋಪವಾಗುವುದಿಲ್ಲ.

ಮತ್ತು, **'ಸಶಿಖಂ ವಪನಂ ಕೃತ್ವಾ ಬಹಿಃಸೂತ್ರಂ ತ್ಯಜೇದ್ಬುಧಃ | ಯದಕ್ಷರಂ ಪರಬ್ರಹ್ಮ ತತ್ಸೂತ್ರಮಿತಿಧಾರಯೇತ್ ||'** (ಅಥ. ಬ್ರ.) ಇತ್ಯಾದ್ಯುಪನಿಷದ್ವಚನಗಳು ಸನ್ಯಾಸ ಧರ್ಮಗಳನ್ನು ವಿಧಿಸುತ್ತವೆ. ಈ ವಿಧಿಯು ಅತ್ಯಾಶ್ರಮವನ್ನನುಲಕ್ಷಿಸಿರುವುದಿಲ್ಲ. ಅತ್ಯಾಶ್ರಮವೆಂಬ ವ್ರತಗ್ರಹಣದಲ್ಲಿ ಶಿಖಾವಪನವೂ ಬಹಿಃಸೂತ್ರತ್ಯಾಗವೂ ವಿಧಿಸಲ್ಪಡುವುದಿಲ್ಲ. ಯಾವ ಆಶ್ರಮದವನಾದರೂ ಅತ್ಯಾಶ್ರಮಧರ್ಮಾಚರಣೆಯಲ್ಲಿ ಅಧಿಕಾರಿಯಾಗುವನೆಂಬ ವಿಷಯವನ್ನು ಈ ಹಿಂದೆ ಸಪ್ರಮಾಣವಾಗಿ ಸ್ಪಷ್ಟೀಕರಿಸಿದ್ದೇವೆ. ಅತ್ಯಾಶ್ರಮವನ್ನು ಗ್ರಹಿಸತಕ್ಕವರಲ್ಲಿ ಶಿಖಾಯಜ್ಞೋಪವೀತಗಳುಳ್ಳ ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥ (ಜಟೀ) ನಾಗಲಿ, ಶಿಖಾಯಜ್ಞೋಪವೀತಗಳಿಲ್ಲದ ಸನ್ಯಾಸಿ (ಮುಂಡಿ) ಯಾಗಲಿ ಅವರೆಲ್ಲರೂ ಅಧಿಕೃತರಾಗಿದ್ದಾರೆ. ಈ ಉದ್ದೇಶದಿಂದೇ 'ಶಿಖೀ ಮುಂಡೀ ಜಟೀವಾಪಿ' ಎಂಬ ವಾಕ್ಯವಿದೆ. ಈ ವಾಕ್ಯವು ವಿಕಲ್ಪಾರ್ಥಬೋಧಕವಾದುದೆಂದು ಕಲ್ಪಿಸಿ ಜಲ್ಪಿಸಕೂಡದು. ಮತ್ತು, **"ಸಶಿಖಂ ವಪನಂ ಕೃತ್ವಾ"** ಎಂಬ ಸನ್ಯಾಸಧರ್ಮವಿಧಾಯಕ ವಾಕ್ಯವೈಯರ್ಥ್ಯ ಯೋಚನೆಯೂ ಬೇಡ. ಅತ್ಯಾಶ್ರಮವ್ರತವನ್ನು ಪರಿಗ್ರಹಿಸದವನು ಸಂನ್ಯಸ್ತನಾಗಬಹುದು. ಆದರೆ ಆ ವಾಕ್ಯವು ಎಲ್ಲರೂ ಜುಟ್ಟುಜನಿವಾರಗಳನ್ನು ತ್ಯಜಿಸಿ ಮುಂಡಿಗಳೇ ಆಗಬೇಕೆಂಬ ನಿರ್ಬಂಧಸೂಚಕವಾದುದಲ್ಲ. ಹಾಗೂ ವಿದ್ಯಾರಣ್ಯಸ್ವಾಮಿಯು (ಜೀವನ್ಮುಕ್ತಿ. ಪ್ರ. ೫)—**"ಶಿಖಾಜ್ಞಾನಮಯೀ ಯಸ್ಯೋಪವೀತಂ ಚಾಪಿತನ್ಮಯಂ | ಬ್ರಾಹ್ಮಣ್ಯಂ ಸಕಲಂ ತಸ್ಯ ಇತಿ ಬ್ರಹ್ಮವಿದೋವಿದುಃ ||"** ಎಂಬ ಅದೇ ಉಪನಿಷತ್ತಿನ ವಾಕ್ಯವನ್ನೆತ್ತಿ ಹಿಡಿದು **"ತಸ್ಮಾದ್ಯೋಗಿನಃ ಶಿಖಾಯಜ್ಞೋಪವೀತೇ ವಿದ್ಯೇತೆ | ತಥೈವಸಂಧ್ಯಾಪಿ ವಿದ್ಯತೆ"** ಎಂಬ ವಾಕ್ಯಗಳನ್ನು ಬರೆದು ಅವುಗಳ ಬಗೆಯಾದರೂ ಬೇರೆಯೇ ಇರುವುದೆಂದೂ ಆ ಮೂಲಕವಾಗಿ ಸನ್ಯಾಸಿಗಾದರೂ ಬ್ರಾಹ್ಮಣ್ಯವು ಅಪ್ರತ್ಯೂಹವಾಗಿರುವುದೆಂದೂ ಪ್ರತಿಪಾದಿಸುತ್ತಾನೆ. ಅಂತಹ ಅಂತರಂಗಿಕ ಶಿಖಾಯಜ್ಞೋಪವೀತ ಸಂಧ್ಯಾದಿಗಳು ಅಧ್ಯಾತ್ಮ ವೀರನಾದ ಶಿವಯೋಗಿಯಲ್ಲಿಯೂ ಅನುಭವಗಮ್ಯವಾಗಿರುವುದು ಸೋಜಿಗವಲ್ಲ. ಸನ್ಯಾಸಾಶ್ರಮವಾದರೋ ಚಿತ್ತಶುದ್ಧಿಸಾಪೇಕ್ಷಿತವಾದುದಷ್ಟೇ? ಅಂದಬಳಿಕ ಮೊದಲೇ ಯಾವ ಜೀವ ಅತ್ಯಾಶ್ರಮವ್ರತವನ್ನು ಪರಿಗ್ರಹಿಸಿದವನಿಗಾದರೋ 'ಸಶಿಖಂ ವಪನಂ ಕೃತ್ವಾ' ಎಂಬ ವಾಕ್ಯವು ಸಂಬಂಧಪಟ್ಟುದಲ್ಲ. ಆದ್ದರಿಂದ ದ್ವಿಜರು ಯಾವ ಆಶ್ರಮದವರಾಗಿದ್ದರೂ ಶಾಂಭವ ವ್ರತಧಾರಿಗಳಾಗಿ ಅತ್ಯಾಶ್ರಮಿಗಳೆನಿಸಿಕೊಳ್ಳಬಹುದು.

(ಸಶೇಷ.)

ಶ್ರೀಗುರುಭ್ಯೋನಮಃ.

ದೀಕ್ಷಾಸಮಾರಂಭ.

ಪ್ರತಿಯೊಬ್ಬ ವೀರಶೈವನು ಮುಕ್ತಿಯನ್ನು ಪಡೆಯಬೇಕಾದರೆ ದೀಕ್ಷೆಯನ್ನು ಮಾಡಿಕೊಳ್ಳಲೇಬೇಕು. ಈ ದೀಕ್ಷೆಯು ಧಾರ್ಮಿಕಸಂಸ್ಕಾರಗಳಲ್ಲಿ ಮುಖ್ಯವಾಗಿದೆ. ಹೀಗಿದ್ದರೂ ವೀರಶೈವರಾದ ನಾವುಗಳು ಅದನ್ನು ಬಿಟ್ಟು ಇಚ್ಛಾಸ್ವಾಚಾರವಾಗಿ ವರ್ತಿಸಿ ಧರ್ಮದ್ರೋಹಕ್ಕೆ ಗುರಿಯಾಗುತ್ತಿದ್ದೇವೆ. ಇಂಥ ಸಮಯದಲ್ಲಿ ಹುಟಗಿ ಬೃಹನ್ಮಠಾಧೀಶ ಶ್ರೀ|| ಷ|| ಬ್ರ|| ಬಾಲಕಷ್ಟ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರು ನಮ್ಮಗಳ ಕಲ್ಯಾಣಕ್ಕೋಸ್ಕರ ಹಗಲುರಾತ್ರಿ ಅವಿಶ್ರಾಂತಶ್ರಮವನ್ನು ವಹಿಸಿ ಹಳ್ಳಿ ಹಳ್ಳಿಗೆ ಹೋಗಿ ತಮ್ಮ ಅಮೃತಮಯವಾದ ಭಾಷಣದಿಂದ ಭಕ್ತರಾದ ನಮ್ಮಗಳ ಅಜ್ಞಾನವನ್ನು ಹೋಗಲಾಡಿಸಿ ದೀಕ್ಷಾನ್ವಿತರನ್ನಾಗಿಮಾಡಿ ಮೋಕ್ಷಮಾರ್ಗದರ್ಶಕರಾಗಿರುತ್ತಾರೆ. ಇದೇ ಮೇರೆಗೆ ಗುರುವರ್ಗದವರಾದ ಪಟ್ಟದರಾಧಿಕಾರಿಗಳು ದೀಕ್ಷಾರೂಪವಾದ ಸ್ವಕರ್ತವ್ಯದಲ್ಲಿ ಕಟಿಬದ್ಧರಾದರೆ ವೀರಶೈವಮತವು ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದುವುದೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಸದರಿ ಸ್ವಾಮಿಗಳ ಅಪ್ಪಣೆಯ ಮೇರೆಗೆ ಭೂಕೈಲಾಸವೆನಿಸಿದ ಸೊಲ್ಲಾಪುರದಲ್ಲಿ ಇದೇ ಶ್ರಾವಣ ಬ|| ಕೃ|| ಗುರುವಾರ ತಾ|| ೬-೯-೩೪ ನೇ ದಿವಸ ಸುಪ್ರಸಿದ್ಧವಾದ ಮಲ್ಲಿಕಾರ್ಜುನದೇವಾಲಯದಲ್ಲಿ ನಾಲ್ಕೈದುನೂರು ಜನರು ವಿಧ್ಯುಕ್ತವಾಗಿ ಶಿವಾಯುಕ್ತರಾಗಿ ದೀಕ್ಷೆಯನ್ನು ಪಡೆದರು. ದೀಕ್ಷಾಸಮಾರಂಭವು ಅತ್ಯಂತ ವಿಜೃಂಭಣೆಯಿಂದ ಸಾಗಿತು. ಈ ಸಮಾರಂಭದಲ್ಲಿ ಶ್ರೀ|| ಷ|| ಬ್ರ|| ಗುರುಪಯ್ಯಸ್ವಾಮಿ ಸುತ್ತಗಟ್ಟಿ. ಷ|| ಬ್ರ|| ಗುರುಪಾದಸ್ವಾಮಿ ಮುಳ್ಳೂರು ಶ್ರೀ|| ಷ|| ಬ್ರ|| ಮಹಾಲಿಂಗಸ್ವಾಮಿ ಜೈನಾಪುರ, ಶ್ರೀ|| ಷ|| ಬ್ರ|| ಶಿವಾನಂದಸ್ವಾಮಿ ಅಹಿರವಾಡಿ, ದೇಶಿಕಮೂರ್ತಿಗಳಾದ ರುದ್ರಮುನಿಸ್ವಾಮಿ ಹಾಗೂ ದೇಶಿಕಮೂರ್ತಿಗಳಾದ ಹರಳಯ್ಯಸ್ವಾಮಿ ಬೃಹನ್ಮಠ ಸೋಲಾಪುರ ಇವರೇ ದೀಕ್ಷಾಗುರುಗಳಾಗಿದ್ದರು. ವೇ|| ಶಂ|| ಮಲ್ಲಿಕಾರ್ಜುನಶಾಸ್ತ್ರಿಗಳು ವೈದಿಕರಾಗಿದ್ದರು. ಸದರಿ ಮಹಾಸ್ವಾಮಿಗಳ ಪ್ರೇರಣೆಯಿಂದ ಶ್ರೀ ಸಿದ್ಧೇಶ್ವರ ಪ್ರಾಸಾದಿಕ ಭಜನಾಮಂಡಳಿಯಲ್ಲಿ ಪ್ರಮುಖರಾದ ರೇವಣಸಿದ್ಧಪ್ಪ ಹಿರೇಹಬ್ಬು, ಆನಂದರಾವ್ ಜಗ್ಗೋಪಾಟೀಲ್, ಸಿದ್ಧರಾಮಪ್ಪ ಬುಗಡೆ, ಮಲ್ಲಿಕಾರ್ಜುನಪ್ಪ ಭೋಗಡೆ, ಪಂಚಪ್ಪ ಲಿಗಾಡೆ ಭೀಮಾಶಂಕರಪಾಟಿ. ಬಾಬೂ ಧುಮ್ಮಾ, ಬಾಬಾ ಬಹಿರೋ ಪಾಟೀಲ್, ಬುದ್ದಪ್ಪ ಕಳಕೆ, ಅಣ್ಣಪ್ಪ ಸೇಟಿ, ಗುರುಪಾದಪ್ಪ ಹಮಶೆಟ್ಟಿ, ಶಂಕರ್ ಬುಗಡೆ ಇವರೇ ಮೊದಲಾದವರು ಶ್ರೀಕರಣಪೂರ್ವಕವಾಗಿ ಅವಿಶ್ರಾಂತಶ್ರಮವನ್ನು ವಹಿಸಿ ಕೆಲಸಮಾಡಿದ್ದಕ್ಕೆ ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಸ್ವಲ್ಪವೇ ಸರಿ! ಈ ಕಾಲದಲ್ಲಿ ಕೆಲವು ಜನರು ಇಂಥ ಪುಣ್ಯಕೆಲಸಗಳಲ್ಲಿ ಮನಸ್ಸನ್ನು ಇಡುವದು ಅತ್ಯಂತ ದುರ್ಲಭವಾಗಿದೆ. ಇಂಥ ಸಮಯದಲ್ಲಿ ಸದರಿ ಮುಖಂಡರು ದೀಕ್ಷಾಸಮಾರಂಭವನ್ನು ನೆರವೇರಿಸಿ ಶ್ರೀಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಕೃಪೆಗೆ ಪಾತ್ರರಾಗಿದ್ದಾರೆ. ಜಗದಾಚಾರ್ಯರು ಈ ಪ್ರಮುಖರಿಗೆ ಇದೇ ಧರ್ಮಬುದ್ಧಿಯನ್ನಿಟ್ಟು ಕಾಪಾಡಲೆಂದು ಆ ಪೂಜ್ಯಪಾದರನ್ನು ಭಜಿಸುತ್ತೇನೆ. ಶರಣಬಸವಶರ್ಮಾ, ಅರಳೇರಿ.

ಜೀವವಿಮೆ.

(ಆರ್. ಎಸ್. ಆರಾಧ್ಯ, ಬಿ. ಕಾಂ., ವಿದ್ಯಾರ್ಥಿ)

ಜೀವವಿಮೆಯು ಆಪತ್ಕಾಲದಲ್ಲಿ ರಕ್ಷಿಸುವಂತಹುದು. ಇದರಿಂದ ಸ್ವಾತಂತ್ರ್ಯವೂ ಮುಪ್ಪಿನಲ್ಲಿ ಸುಖವೂ ಮತ್ತು ಕಷ್ಟಪರಿಹಾರವೂ ಆಗುತ್ತವೆ. ಮಿತವ್ಯಯ ಮತ್ತು ಕಾರ್ಯದಕ್ಷತೆಯೇ ಜೀವವಿಮೆಯ ಮುಖ್ಯೋದ್ದೇಶ. ಮಿತವ್ಯಯದ ಜೊತೆಗೆ ಜಾಣತನ ಮತ್ತು ಹಣ ಮಿಗಿತಾಯವನ್ನು ಕಲಿಸುವುದಕ್ಕೆ ಈ ಜೀವವಿಮೆಯು ಬಹಳ ಸಹಕಾರಿ.

ಜೀವವಿಮೆಯ ಸಂಸ್ಥೆಗಳು (Life insurance company) ನಮ್ಮ ದೇಶದಲ್ಲಿ ಬಹಳ ಸ್ವಲ್ಪವಿವೆ. ಯಾವ ದೇಶದಲ್ಲಿ ಜೀವವಿಮಾ ಸಂಸ್ಥೆಗಳು ಮತ್ತು ವಿಮೇದಾರರು ಹೇರಳವಾಗಿರುವರೋ ಅಂತಹ ದೇಶಗಳಲ್ಲಿ ಜನಗಳು ಆಪತ್ಕಾಲದಲ್ಲಿ ಬಹಳ ಕಷ್ಟಕ್ಕೀಡಾಗುವುದಿಲ್ಲ. ವಿಮೇದಾರರು ಚಿಕ್ಕ ಚಿಕ್ಕ ಕಂತುಗಳ (Premium) ಮೂಲಕ ಕಟ್ಟಿದ ಹಣವು ಅವರ ಮಕ್ಕಳಿಗೆ ಅಥವಾ ವಾರಸುದಾರರಿಗೆ ತುಂಬಾ ಸಹಾಯ ಮಾಡುವಂತಾಗುತ್ತದೆ. ಒಂದೊಂದು ವೇಳೆ ಹೀಗೆ ಶೇಖರಿಸಿದ ಹಣವು ಮುದುಕರಿಗೆ, ನಿರ್ಗತಿಕರಿಗೆ ಮತ್ತು ಚಿಕ್ಕಮಕ್ಕಳಿಗೆ ದೈವಸಹಾಯವೆಂದೇ ಹೇಳಬೇಕು. ಹೀಗೆ ವಿಮೇದಾರರು ವಿಮೆ ಮಾಡುವುದರಿಂದ ತನ್ನ ದೇಶಕ್ಕೂ ತನ್ನ ಜನಾಂಗಕ್ಕೂ ಮುಖ್ಯವಾಗಿ ತನ್ನ ಕುಟುಂಬಕ್ಕೂ ಮಾಡತಕ್ಕ ಕಾರ್ಯಭಾರವನ್ನು ಮಾಡಿದಂತಾಗುವುದು. ಆಸ್ತಿಪಾಸ್ತಿಗಳಿಲ್ಲದೆ ತಮ್ಮ ಜೀವನಕ್ಕೆ ತಕ್ಕಷ್ಟು ಸಂಪಾದನೆ ಮಾಡತಕ್ಕವರು ಅಂದರೆ ಮಧ್ಯಮತರಗತಿಯವರು ಮತ್ತು ಕೂಲಿಗಾರರೂ ಜೀವವಿಮೆಯನ್ನು ಮಾಡದಿದ್ದರೆ ಅವರ ಮಕ್ಕಳನ್ನು ಬಹಳ ಸಂಕಟಕ್ಕೀಡಾಗುವಂತೆ ಮಾಡುತ್ತಾರೆ. ಜೀವವಿಮೆ ಸಂಸ್ಥೆಗಳು ಸ್ಥಾಪಿತವಾಗಿರುವುದು ಸಾಹುಕಾರರಿಗಲ್ಲ. ಅವು ಸಾಹುಕಾರರ ಹಣವನ್ನು ಹೆಚ್ಚಿಸುವುದಕ್ಕಲ್ಲ; ಬಡವರಿಗೆ ಬಂದೊದಗುವ ಕಷ್ಟಗಳನ್ನು ನಿವಾರಿಸುವುದಕ್ಕೆ. ನಮ್ಮ ದೇಶದವರು ಈ ವಿಷಯದಲ್ಲಿ ತಕ್ಕಷ್ಟು ಸಹಾಯವನ್ನಾದರೂ ತಮ್ಮವರಿಗೆ ಮಾಡುತ್ತಿಲ್ಲ. ಸರಿಯಾದ ವಿಮಾಸಂಸ್ಥೆಗಳನ್ನು "ಆಪದ್ಬಂಧು" ಎಂದು ಸಂಬೋಧಿಸಬಹುದಾಗಿದೆ. ಹೆಚ್ಚು ಆಸ್ತಿ ಸಂಪಾದನೆ, ಗೌರವಗಳಿಷ್ಟ್ಯುಳ್ಳವರೆಲ್ಲರೂ ತಮ್ಮ ಜೀವದ ಅಶಾಶ್ವತೆಯನ್ನು ತಿಳಿದು ತಮ್ಮ ತಮ್ಮ ಜೀವಗಳನ್ನು ವಿಮೆಮಾಡಿರುವರು. ಆದ್ದರಿಂದ ಪ್ರತಿಯೊಬ್ಬ ಮಾನವನೂ ತನ್ನ ಮತ್ತು ತನ್ನನ್ನು ನಂಬಿರುವವರ ಪಾಲನೆಗೋಸ್ಕರ ತನ್ನ ಯೋಗ್ಯತಾನುಸಾರ ವಿಮೆಮಾಡುವುದು ಅವನ ಕರ್ತವ್ಯವಾಗಿದೆ.

(೬ ನೆಯ ಪುಟವನ್ನು ನೋಡಿ.)

॥ श्री जगद्गुरु रेणुकाचार्यः प्रसीदतु ॥

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ

ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ

ಶಿವಾಚಾರ್ಯಮಹಾಸ್ವಾಮಿಗಳವರು

ಇದೇ ತಿಂಗಳು ೨೩ ನೆಯ ತಾರೀಖು ಭಾನುವಾರ ರಾಜಧಾನಿಗೆ ಬಿಜಮಾಡುವರು. ಆ ದಿವಸ ಪ್ರಾತಃಕಾಲ ಶ್ರೀಗಳವರ

ಸುವರ್ಣರಜತಾಂದೋಲಿಕೋತ್ಸವವು

ನಮ್ಮ ಮಹಾಪ್ರಭುಗಳವರು ದಯಪಾಲಿಸುವ ರಾಜಮರ್ಯಾದೆಗಳೊಡನೆಯೂ, ಘನ ಸರ್ಕಾರದವರು ದಯಪಾಲಿಸಿರುವ ಸಮಸ್ತ ಬಿರುದಾವಳಿಗಳೊಡನೆಯೂ ವಿಶೇಷ ವೈಭವದಿಂದ ನೆರವೇರುವುದು.

ಈ ಗುರುಮಹೋತ್ಸವಕ್ಕೆ ಭರತಖಂಡದ ನಾನಾಭಾಗಗಳಲ್ಲಿರುವ ಗುರುಭಕ್ತರೆಲ್ಲರೂ ಆಗಮಿಸಿ, ನೇತ್ರಾನಂದವನ್ನು ಹೊಂದಿ ಗುರುದರ್ಶನಾಶೀರ್ವಾದಗಳಿಂದ ಧನ್ಯರಾಗಬೇಕೆಂದು ಕೋರಿಕೆ.

ಒಳದೇಶದ ವೃತ್ತಾಂತಗಳು.

ಪ್ರಜಾಪ್ರತಿನಿಧಿಸಭೆಯ ದಸರಾ ಅಧಿವೇಶನವು ಅಕ್ಟೋಬರ್ 19 ನೇ ತಾರೀಖು ಗುರುವಾರ ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುವುದು.

ಬೆಂಗಳೂರು ಶಂಕರಪುರದ ಪೋಸ್ಟಾಫೀಸು ಗುಮಾಸ್ತರಾಗಿದ್ದ ರಾಜಾರಾವ್ ಎಂಬವರು ಪೋಸ್ಟಾಫೀಸಿನ ಹಣವನ್ನು ದುರುಪಯೋಗ ಪಡಿಸಿದರೆಂಬ ಅಪಾದನೆಯ ಮೇಲೆ ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಯಿಸಿ ರಾಜಾರಾಯರಿಗೆ ಒಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದರು.

ದಿವಾನರಾದ ಸರ್ ಮಿರ್ಜಾಮಹಮದ್ ಇಸ್ಮಾಯಿಲ್‌ರವರು ಈ ದಿವಸ ಬೆಳಗ್ಗೆ ಬೆಂಗಳೂರಿನಿಂದ ಹೊರಟು ಶ್ರವಣಬೆಳಗೊಳ, ಹಾಸನ ಹೊಳೆನರಸೀಪುರ, ಬೇಲೂರು, ಹಳೇಬೀಡು, ಬಾಣಾವಾರ ಮೊದಲಾದ ಊರುಗಳನ್ನು ಪರಾಮರ್ಶಿಸಿಕೊಂಡು 19 ನೇ ತಾರೀಖು ಬುಧವಾರ ಸಾಯಂಕಾಲ ಬೆಂಗಳೂರಿಗೆ ಹಿಂತಿರುಗುವರೆಂದು ತಿಳಿದು ಬಂದಿದೆ.

ಇದೇ ಸೆಪ್ಟಂಬರ್ 7 ನೇ ತಾರೀಖಿನ ರಾತ್ರಿ ಸುಮಾರು 10 ಗಂಟೆಯ ಸಮಯದಲ್ಲಿ ಬೆಂಗಳೂರು ಗೊಲ್ಲರಪೇಟೆಯ ಮುನಿಸಾಮಿನಾಯುಡು ಎಂಬವನು 50 ಟನ್ ಹುಲ್ಲವನ್ನು ಸುಂಕವನ್ನು ತೀರಿಸದೆ ಗಾಡಿಯಲ್ಲಿ ತರುತ್ತಿದ್ದನೆಂಬ ಕಾರಣದ ಮೇಲೆ ಬೆಂಚ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ ಅಪರಾಧಿಗೆ 25 ರೂ. ದಂಡವು ವಿಧಿಸಲ್ಪಟ್ಟಿತು.

ಶ್ರೀಮನ್ಮಹಾರಾಜರವರಲ್ಲಿ ತಮ್ಮ ಕಷ್ಟನಿಷ್ಠೂರಗಳನ್ನು ಹೇಳಿಕೊಳ್ಳಬೇಕೆಂಬ ನೆಪದಮೇಲೆ ಹಿರಿಣ್ಣಯ್ಯ ಎಂಬವರು ಒಂದು ದಿನ ರಾತ್ರಿ 12 ಘಂಟೆಯ ಸಮಯದಲ್ಲಿ ಯಾರಿಗೂ ತಿಳಿಯದಂತೆ ಪ್ಯಾಲೇಸ್ ಬಂಗಲೆಯ ಪಕ್ಕದಲ್ಲಿರುವ ವಸಂತ ಮಹಲಿಗೆ ಪ್ರವೇಶಿಸಿದರೆಂಬ ಕಾರಣದ ಮೇಲೆ ಸಿಟಿ ಮ್ಯಾಜಿಸ್ಟ್ರೇಟರವರು ಅಪರಾಧಿಗೆ 9 ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದರು.

ನವರಾತ್ರಿ ಮಹೋತ್ಸವದ ಕಾಲದಲ್ಲಿ ಹೊರಗಿನಿಂದ ರಾಜಧಾನಿಗೆ ಆಗಮಿಸುವ ಅತಿಥಿಗಳಿಗೆ ಅವಶ್ಯಕವಾದ ಅನುಕೂಲತೆಗಳನ್ನು ಸಿದ್ಧಪಡಿಸಿಕೊಟ್ಟು ಅವರನ್ನು ಸತ್ಕರಿಸುವುದಕ್ಕಾಗಿ, ಮೈಸೂರು ಸರಕಾರದವರು ಜನರಲ್ ಅಂಡ್ ರೆವಿನ್ಯೂ ಸೆಕ್ರೆಟರಿಯಟ್ಟಿನ ರಿಜಿಸ್ಟ್ರಾರರಾದ ಮಿ|| ಸಿ. ಎಸ್. ಶ್ರೀನಿವಾಸಾಚಾರ್ ಬಿ.ಎ., ರವರನ್ನು ಇದೇ ಸೆಪ್ಟಂಬರ್ 10 ನೇ ತಾರೀಖಿನಿಂದ ರಾಜಧಾನಿಯಲ್ಲಿ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೇಮಿಸಿರುವರು.

ವರ್ತಮಾನಸಂಗ್ರಹ.

ಪ್ರತಿಯೊಬ್ಬ ಮನುಷ್ಯನೂ ಒಂದು ವರ್ಷಕ್ಕೆ ಸರಾಸರಿ 1,18,00,000 ಶಬ್ದಗಳನ್ನು ಉಚ್ಚರಿಸುವನಂತೆ!

ಬೋಗ್ರಾ ಗ್ರಾಮದಲ್ಲಿರುವ ಒಬ್ಬ ವರ್ತಕನ ಮನೆಯಲ್ಲಿ 6 ಅಡಿ ಉದ್ದವಾದ ಒಂದು ನಾಗರಹಾವು ಒಂದು ಇಲಿಯಬೋನಿನಲ್ಲಿ ಹಿಡಿಯಲ್ಪಟ್ಟಿತು.

ದೆಹಲಿಯ ರೈಲ್ವೇ ಪೋಲೀಸರು ಪ್ರೇಮಚಂದ ಎಂಬ ಪದವೀಧರ (ಗ್ರ್ಯಾಜುಯೇಟ್) ನನ್ನು ಕಳ್ಳತನದ ಆರೋಪದ ಮೇಲೆ ದಸ್ತಗಿರಿ ಮಾಡಿರುತ್ತಾರೆ.

ಕಳೆದ ವರ್ಷ ಇಂಗ್ಲೆಂಡ್‌ದೇಶದಲ್ಲಿ ಚಲನಚಿತ್ರಗಳಿಗೆ ಹೋಗುವವರ ಮೇಲೆ ಹಾಕಿದ್ದ ವಿನೋದದ ತೆರಿಗೆಯಿಂದ 12 ಕೋಟಿ ರೂಪಾಯಿಗಳು ಉತ್ಪತ್ತಿಯಾದುವಂತೆ!

ಅಲ್ಮೋರಾ ಡಿಸ್ಟ್ರಿಕ್ಟಿಗೆ ಸೇರಿದ ಕಾಟ್ಯೂರ್ ಗ್ರಾಮದಲ್ಲಿ ಸಿಡಿಲುಬಡಿದು 20 ದನಗಳು ಮೃತಪಟ್ಟವು. ಅವುಗಳ ಜೊತೆಯಲ್ಲಿದ್ದ ಇಬ್ಬರು ಗಂಡಸರು ಮತ್ತು ಒಬ್ಬ ಹೆಂಗಸಿಗೆ ಅಲ್ಪಸ್ವಲ್ಪ ಗಾಯಗಳಾದವು.

ಕಪೂರ್ಥಲಾ ಸಂಸ್ಥಾನದ ಸರಕಾರದವರು ತಮ್ಮ ಸಂಸ್ಥಾನದಲ್ಲಿ ವಿದ್ಯಾವಂತರಾಗಿದ್ದು ನಿರುದ್ಯೋಗಿಗಳಾಗಿರುವವರ ಪಟ್ಟಿಯೊಂದನ್ನು ತಯಾರಿಸುವಂತೆ ಸಂಸ್ಥಾನದ ಎಲ್ಲ ಮುನಿಸಿಪಲ್ ಕಮಿಟಿಗಳಿಗೂ ಅಪ್ಪಣೆಮಾಡಿರುತ್ತಾರೆ.

ಅಮೇರಿಕಾದೇಶದ "ಮೋರೊ ಕ್ಯಾಸಲ್" ಎಂಬ ಹಡಗು ಸಾಂಡಿಹುಕ್ ಎಂಬಲ್ಲಿ ಮಧ್ಯರಾತ್ರಿಯಲ್ಲಿ ಸಿಡಿಲು ಬಡಿದು ನಾಶವಾಯಿತು. ಈ ಅನಾಹುತದಲ್ಲಿ 60 ಜನರು ಮೃತಪಟ್ಟರು. 73 ಜನರು ಏನಾದರೋ ಪತ್ತೆಯಿಲ್ಲ. 425 ಜನರು ರಕ್ಷಿಸಲ್ಪಟ್ಟರು.

ಮೋಟಾರುಗಳನ್ನು ತಯಾರಿಸುವುದರಲ್ಲಿ ಅತ್ಯಂತ ಪ್ರಖ್ಯಾತಿಯನ್ನು ಹೊಂದಿರುವ ಹೆನ್ರಿಫೋರ್ಡ್‌ರವರು ಎಡಿಸನ್ ಇನ್‌ಸ್ಟಿಟ್ಯೂಟ್ ಮ್ಯೂಜಿಯಮ್ಮಿನ ಪ್ರಧಾನ ಪ್ರದರ್ಶನ ಮಂದಿರದಲ್ಲಿ 2,70,000 ಚ. ಅಡಿಗಳ ಪ್ರದೇಶಕ್ಕೆ ತೇಗದ ಹಲಗೆಗಳನ್ನು ಹಾಕಿಸಿರುವರು.

ಅಮೇರಿಕಾದೇಶದ ಒಬ್ಬ ಜ್ಯೋತಿಷ್ಕರು ಹಿಟ್ಲರರ ಜಾತಕವು ಹೂವರ್, ಸ್ಯಾಮುಯಲ್ ಇನ್‌ಸಲ್ ಮತ್ತು ದಿಲ್ಲಿಂಜರ್ ಮೊದಲಾದವರ ಜಾತಕಗಳಂತೆಯೇ ಇರುವುದೆಂದೂ, ಅವರಂತೆ ಹಿಟ್ಲರರೂ ಅಂತ್ಯದಲ್ಲಿ ಪದಚ್ಯುತರಾಗುವರೆಂದೂ ಭವಿಷ್ಯ ನುಡಿದಿರುವರು.

ಶ್ರೀಮತಿ ಸರೋಜಿನಿನಾಯುಡುರವರ ಹಿರಿಯ ಮಗನಾದ ಶ್ರೀ|| ಜಯಸೂರ್ಯನಾಯುಡುರವರು 13 ವರ್ಷಗಳನಂತರ ಹಿಂದೂಸ್ಥಾನಕ್ಕೆ ಹಿಂತಿರುಗಿ ಬಂದಿರುತ್ತಾರೆ. ಇವರು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಪ್ರಥಮಶ್ರೇಣಿಯಲ್ಲಿ ಎಂ. ಡಿ. ಪದವಿಯನ್ನು ಪಡೆದಿರುತ್ತಾರೆ.

ಅಸ್ಟ್ರೇಲಿಯಾ ದೇಶದ ಸರ್ ಚಾರಲ್ಸ್ ಕಿಂಗ್ಸ್‌ಫರ್ಡ್ ಸ್ಮಿತ್ ಎಂಬ ಪ್ರಸಿದ್ಧ ವೈಮಾನಿಕರು ಪರ್ತ್‌ನಿಂದ 2220 ಮೈಲುಗಳ ದೂರದಲ್ಲಿರುವ ಸಿಡ್ನಿ ನಗರಕ್ಕೆ 9¾ ಘಂಟೆಗಳಲ್ಲಿ ಹಾರಿದರಂತೆ! ಅಂದರೆ ಅವರು ಘಂಟೆ 1ಕ್ಕೆ ಸರಾಸರಿ 227⅓ ಮೈಲುಗಳಂತೆ ಹಾರಿ ಹೋಗಿರುವರು.

ಚಕ್ರವರ್ತಿ ಸಾರ್ವಭೌಮರು ಹಾವಿನ ಆಟಗಳನ್ನು ನೋಡಬೇಕೆಂದು ಅಪೇಕ್ಷೆಪಟ್ಟಿರುವುದರಿಂದ ದಕ್ಷಿಣ ಆಫ್ರಿಕೆಯ ಲಕ್ಷಾಧೀಶ್ವರರೊಬ್ಬರು 1000 ಪೌಂಡುಗಳನ್ನು ವೆಚ್ಚಮಾಡಿ ಬರ್ಮಾದೇಶದ ಕೆಲವು ಹಾವಾಡಿಗರನ್ನು ಇಂಗ್ಲೆಂಡಿಗೆ ಕರೆದುಕೊಂಡು ಹೋಗಬೇಕೆಂದು ಏರ್ಪಾಡುಮಾಡುತ್ತಿರುವರು.

ಜಪಾನ್ ದೇಶಕ್ಕೆ ಸೇರಿದ ಹಾಯಿಹೋಜಿ ಎಂಬ ನಗರಕ್ಕೆ ಅಕಸ್ಮಾತ್ ಬೆಂಕಿಬಿದ್ದು 400 ಮನೆಗಳು ಸುಟ್ಟು ಭಸ್ಮವಾಗಿರುತ್ತವೆ. ಗಾಳಿಯು ಬಲವಾಗಿ ಬೀಸುತ್ತಿರುವುದರಿಂದ ಬೆಂಕಿಯು ಹೆಚ್ಚುತ್ತಿರುವುದೆಂದೂ, ಬೆಂಕಿಯನ್ನು ಆರಿಸಲು ಸರ್ವಪ್ರಯತ್ನಗಳನ್ನೂ ಮಾಡುತ್ತಿರುವರೆಂದೂ ತಿಳಿದುಬಂದಿದೆ.

ಹೈದರಾಬಾದಿಗೆ ಸೇರಿದ ಸಾಫಿಯಾ ಪೋಸ್ಟಾಫೀಸಿನಲ್ಲಿ ಗುಮಾಸ್ತನಾಗಿದ್ದ ಅಬ್ದುಲ್ ಅಜೀಜ್ ಕ್ವಾದಿರ್ ಎಂಬವನು ಪೋಸ್ಟಾಫೀಸಿನ ಬಾಬ್ತು 16,000 ರೂ.ಗಳನ್ನು ಅಪಹರಿಸಿ ಮುಂಬಯಿಗೆ ಓಡಿಹೋಗಿದ್ದನು. ಮುಂಬಯಿ ಪೋಲೀಸರು ಅತನನ್ನು ದಸ್ತಗಿರಿಮಾಡಿ ವಿಚಾರಣೆಗಾಗಿ ಹೈದರಾಬಾದಿಗೆ ಕಳುಹಿಸಿರುತ್ತಾರೆ.

ಡಾರ್ಜಿಲಿಂಗ್‌ನಲ್ಲಿ ಬಂಗಾಳಾ ಗವರ್ನರರ ಮೇಲೆ ಗುಂಡುಹಾರಿಸಿದ ಸಂದರ್ಭದಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದವರಲ್ಲಿ 3 ಜನರಿಗೆ ಮರಣದಂಡನೆಯೂ, ಇಬ್ಬರಿಗೆ 14 ವರ್ಷಗಳ ಕಠಿಣಶಿಕ್ಷೆಯೂ, ಇನ್ನೊಬ್ಬನಿಗೆ 12 ವರ್ಷಗಳ ಕಠಿಣಶಿಕ್ಷೆಯೂ, ಮಿಸ್ ಅಮಿಯ ಮುಜುಂದಾರ್ ಎಂಬ ಯುವತಿಗೆ ಜೀವಾವಧಿ ಗಡೀಪಾರ್ ಶಿಕ್ಷೆಯೂ ವಿಧಿಸಲ್ಪಟ್ಟಿದೆ.

ದಕ್ಷಿಣ ಚೀನಾದೇಶಕ್ಕೆ ಸೇರಿದ ಹುಯ್ಯಿಯಾನ್ ಎಂಬಲ್ಲಿ 13 ವರ್ಷದ ಮೇಲ್ಪಟ್ಟು 19 ವರ್ಷ ವಯಸ್ಸಿನೊಳಗಿರುವ 9 ಜನ ತರುಣಿಯರು ತಮ್ಮ ತಂದೆತಾಯಿಗಳು ತಮ್ಮ ಇಷ್ಟಕ್ಕೆ ವಿರೋಧವಾಗಿ ತಾವು ಪ್ರೀತಿಸದಿದ್ದವರಿಗೆ ಮದುವೆಮಾಡಿದರೆಂಬ ಕಾರಣದ ಮೇಲೆ 9 ಜನರೂ ಒಟ್ಟಿಗೆ ಹಗ್ಗವನ್ನು ಕಟ್ಟಿಕೊಂಡು ನದಿಯಲ್ಲಿ ಬಿದ್ದು ಪ್ರಾಣವನ್ನು ಬಿಟ್ಟರು.

ಇಂಗ್ಲೆಂಡ್ ದೇಶಕ್ಕೆ ಸೇರಿದ ಪರ್ತ್ ಎಂಬ ನಗರದಲ್ಲಿ ಜೋಸೆಫ್ ಓಬ್ರಿಯನ್ ಎಂಬವನು ದಂಗೆಕೋರನೆಂಬ ಅಪಾದನೆಯ ಮೇಲೆ 10 ದಿವಸಗಳ ಕಠಿಣಶಿಕ್ಷೆಗೆ ಗುರಿಯಾದನು. ಕೋರ್ಟಿನಲ್ಲಿ ತೀರ್ಮಾನವನ್ನು ಹೇಳಿದ ಕೂಡಲೇ ಓಬ್ರಿಯನ್ನನು "ಅಯ್ಯೋ ದೇವರೇ—ನಾನು ಸತ್ತಿದ್ದರೆ ಚೆನ್ನಾಗಿತ್ತಲ್ಲಾ!" ಎಂದನು. ಮರುಕ್ಷಣವೇ ಅವನು ಕೆಳಕ್ಕೆ ಬಿದ್ದು ಸತ್ತನು.

ಆಸ್ಟ್ರಿಯಾದೇಶದ ಛಾನ್ಸಲರ್ ಡಾಲ್ಫಸ್‌ರವರ ಕೊಲೆಯ ಸಂಬಂಧದಲ್ಲಿ 300 ಜನ ಪೋಲೀಸರು ಒಳಸಂಚಿನಲ್ಲಿ ಸೇರಿದ್ದರೆಂಬ ಅಪಾದನೆಯ ಮೇಲೆ ದಸ್ತಗಿರಿಮಾಡಲ್ಪಟ್ಟಿರುವರು. ಇವರಲ್ಲಿ 4 ಜನರಿಗೆ ಮರಣದಂಡನೆಯೂ, ಇಬ್ಬರಿಗೆ ಅಜೀವ ಕಾರಾಗೃಹವಾಸವೂ, ಇಬ್ಬರಿಗೆ 20 ವರ್ಷಗಳ ಕಠಿಣಶಿಕ್ಷೆಯೂ, ಒಬ್ಬನಿಗೆ 15 ವರ್ಷಗಳ ಕಠಿಣಶಿಕ್ಷೆಯೂ ವಿಧಿಸಲ್ಪಟ್ಟವು. ಇತರರ ವಿಚಾರಣೆಯು ನಡೆದಿರುವುದು.

ಟರ್ಕಿ ಸರಕಾರದವರು ಜಪಾನಿಗೆ 10 ಯುದ್ಧದ ಹಡಗುಗಳನ್ನು ತಯಾರಿಸುವುದಕ್ಕೆ ಆರ್ಡರ್ ಕೊಟ್ಟಿರುವರು. ಈ ಯುದ್ಧದ ಹಡಗುಗಳಿಗಾಗಿ ಟರ್ಕಿಯವರು ದ್ರವ್ಯರೂಪವಾಗಿ ಏನನ್ನೂ ಕೊಡುವುದಿಲ್ಲ. ಆದರೆ ಜಪಾನ್ ದೇಶದವರು ಟರ್ಕೀದೇಶದಲ್ಲಿ ಕೆಲವು ಕಾರ್ಖಾನೆಗಳನ್ನು ಸ್ಥಾಪಿಸಿ ಅಲ್ಲಿ ತಯಾರಾಗುವ ಪದಾರ್ಥಗಳಿಗೆ 'ಟರ್ಕೀದೇಶದಲ್ಲಿ ತಯಾರಾದದ್ದು' ಎಂದು ಚೀಟಿ ಅಂಟಿಸುವುದಕ್ಕೆ ಅವಕಾಶವು ಕೊಡಲ್ಪಡುವುದಂತೆ!

ಸರ್ ಅಲನ್ ಕ್ಯಾಬ್‌ಹ್ಯಾಂ ಮತ್ತು ಹೆಲೋರ್ ಎಂಬಿಬ್ಬರು ವೈಮಾನಿಕರು ಇಂಗ್ಲೆಂಡ್ ದೇಶಕ್ಕೆ ಸೇರಿದ ಪೋರ್ಟ್ಸ್‌ಮತ್ ನಗರದಿಂದ ಹೊರಟು ಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ 48 ಘಂಟೆಗಳೊಳಗಾಗಿ ಕರಾಚಿಯನ್ನು ತಲಪಬೇಕೆಂದು ಆಲೋಚಿಸಿ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವರು. ಈ ತಿಂಗಳು 21 ನೇ ತಾರೀಖಿನ ದಿವಸ ಅವರು ಪೋರ್ಟ್ಸ್‌ಮತ್ತಿನಿಂದ ಹೊರಡುವರು.

ನ್ಯೂಜೀಲೆಂಡ್ ದೇಶದಲ್ಲಿರುವ ರುಯಾ ಪೆಹು ಎಂಬ ಜ್ವಾಲಾಮುಖಿಯು 39 ವರ್ಷಗಳಿಂದಲೂ ತಣ್ಣಗಾಗಿದ್ದು, ಆ ಪ್ರದೇಶದಲ್ಲಿ ನೀರು ನಿಂತು ಒಂದು ದೊಡ್ಡ ಸರೋವರವಾಗಿರುವುದು. ಕೆಲವು ದಿವಸಗಳ ಹಿಂದೆ, ಜ್ವಾಲಾಮುಖಿಯು ಪುನಃ ಚೇತನಹೊಂದಿ, ಅಪಾರವಾದ ನೀರೂ ಮತ್ತು ಹಬೆಯೂ 700 ಅಡಿಗಳ ಎತ್ತರದವರೆಗೆ ಎಸೆಯಲ್ಪಟ್ಟವು. ಸರೋವರದ ನೀರಿನೊಡನೆ ಅಪಾರವಾದ ಗಂಧಕವು ಕೂಡಿಕೊಂಡು ಬಗ್ಗಡವಾಗಿರುವುದಲ್ಲದೆ, ನೀರು ಕುದಿಯಲಾರಂಭಿಸಿರುವುದಂತೆ!

ಬೊಗಳುವ ಯಂತ್ರ!

ಲಂಡನ್ ನಗರದ ಒಲಿಂಪಿಯಾ ಎಗ್ಜಿಬಿಷನ್ನಿನಲ್ಲಿ ಒಂದು ನೂತನ ರೇಡಿಯೋಯಂತ್ರವು ಪ್ರದರ್ಶಿಸಲ್ಪಟ್ಟಿರುವುದು. ಈ ಯಂತ್ರಕ್ಕೆ 10 ಶಬ್ದವರ್ಧಕಯಂತ್ರಗಳಿದ್ದು ಅವುಗಳನ್ನು ಒಂದೇ ಮನೆಯಲ್ಲಿ ಬೇರೆಬೇರೆ ಕೋಣೆಗಳಲ್ಲಿ ಇಡಬಹುದು. ಯಾವನಾದರೂ ಕಳ್ಳನು ಮನೆಯಲ್ಲಿ ಯಾವ ಕೋಣೆಗೆ ನುಗ್ಗಿದರೂ, ಯಂತ್ರವು ಕೂಡಲೇ ನಾಯಿಯಂತೆ ಗಟ್ಟಿಯಾಗಿ ಬೊಗಳುವುದಲ್ಲದೆ, ಮನುಷ್ಯರಂತೆ 'ಯಾರಲ್ಲಿ?' ಎಂದು ಕೇಳುವದಂತೆ!

ಸ್ವೀಕಾರ

ಅರಸೀಕೆರೆ ತಾ|| ದಿಬ್ಬೂರು ಮಾಸ್ಟರ್ ಮ|| ರಾ|| ಎ. ಚನ್ನಪ್ಪನವರು ಕಡೂರು ಡಿ|| ಶಿಂಗಟಗೆರೆ ಶ್ರೀ ಕಲ್ಲೇಶ್ವರಸ್ವಾಮಿ ದೇವಾಲಯದಲ್ಲಿ ರೇಣುಕವಿಜಯ ಮಹಾಪುರಾಣವನ್ನು ಶ್ರವಣಮಾಡಿಸಿ ಅನೇಕ ಭಕ್ತ ಮಾಹೇಶ್ವರರಿಗೆ ಸಂತರ್ಪಣೆ ನಡೆಯಿಸಿ ಸದರಿ ಸ್ವಾಮಿಗೆ ಒಂದು ಘಂಟೆಯನ್ನು ಸಮರ್ಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಕಳುಹಿಸಿಕೊಟ್ಟಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೪ ನೆಯ ಪುಟದಿಂದ ಮುಂದುವರಿದುದು.)

ಪಾಶ್ಚಿಮಾತ್ಯ ದೇಶಗಳಲ್ಲಿ ಜೀವವಿಮೆ ಸಂಸ್ಥೆಗಳು ತುಂಬಿ ಹೋಗಿವೆ. ಅಲ್ಲಿಯ ಜನರು ಅದರ ಬೆಲೆಯನ್ನು ತಿಳಿದು ಅವುಗಳನ್ನು ಅಭಿವೃದ್ಧಿಗೊಳಿಸಿದ್ದಾರೆ. ಜೀವವಿಮೆ ಸಂಸ್ಥೆಗಳಿಂದ ಪ್ರತಿಯೊಬ್ಬರಿಗೂ ಅನುಕೂಲವೇ ಹೊರತು ಯಾವ ತೊಂದರೆಯೂ ಆಗುವುದಿಲ್ಲ. ಪಾಶ್ಚಿಮಾತ್ಯದೇಶದಲ್ಲಿ ಎಂಥಹ ಬಡಗಿಕೆಲಸದವರೂ ವಿಮೆಯನ್ನು ಮಾಡಿಕೊಂಡು ಕೊಂಚ ಹಣವನ್ನಾದರೂ ಕಂತುಗಳ ಮೂಲಕ ಕಟ್ಟುತ್ತಿರುತ್ತಾನೆ. ಪಾಶ್ಚಿಮಾತ್ಯದೇಶದ ವಿಮಾ ಮೊಬಲಗನ್ನು ನಮ್ಮ ದೇಶದ ವಿಮಾ ಮೊಬಲಗಿನೊಡನೆ ಹೋಲಿಸಿ ನೋಡಿದರೆ ಈ ವಿಷಯದಲ್ಲಿ ನಮ್ಮ ದೇಶವು ಎಷ್ಟು ಕ್ಷೀಣದೆಸೆಯಲ್ಲಿರುವುದು, ಆ ದೇಶಗಳು ಎಷ್ಟು ಉನ್ನತಸ್ಥಿತಿಯಲ್ಲಿರುವುವು ಎಂಬುದು ತಿಳಿಯುವುದು. ಅಮೆರಿಕಾದೇಶದಲ್ಲಿ ಒಬ್ಬನು ಸರಾಸರಿ ೨೦೦೦ ರೂಪಾಯಿಗಳಂತೆಯೂ, ಕೆನಡಾದಲ್ಲಿ ೧೫೦೦ ರೂಪಾಯಿಗಳಂತೆಯೂ, ಇಂಗ್ಲೆಂಡಿನಲ್ಲಿ ೮೦೦ ರೂಪಾಯಿಗಳಂತೆಯೂ, ಜಪಾನಿನಲ್ಲಿ ೪೦೦ ರೂಪಾಯಿಗಳಂತೆಯೂ ವಿಮಾಮಾಡಿರುವರು. ಆದರೆ ನಮ್ಮ ದೇಶದಲ್ಲಿ ವಿಮಾ ಮಾಡಿರುವ ಒಟ್ಟು ಮೊಬಲಗನ್ನು ಜನಸಂಖ್ಯೆಗೆ ಹಂಚಿನೋಡಿದರೆ ಕೇವಲ ೨ ರೂಪಾಯಿಗಳಂತೆಮಾತ್ರ ವಿಮೆಮಾಡಿದಂತಾಗುವುದು. ಪಾಶ್ಚಿಮಾತ್ಯದೇಶಗಳಲ್ಲಿ ವಿಮೆಮಾಡುವುದು ಎಷ್ಟು ಅಭಿವೃದ್ಧಿ ಹೊಂದಿದೆಯೆಂಬುದು ವರ್ಣಿಸಲು ಅಸಾಧ್ಯ. ಅಮೆರಿಕಾ ಒಂದರಲ್ಲಿಯೇ ಸುಮಾರು ೧೯೪ ಮಂದಿ ಸಾಹುಕಾರರು ಒಬ್ಬೊಬ್ಬರು ೩೦ ಲಕ್ಷ ರೂಪಾಯಿಗಳಂತೆಯೂ ಮತ್ತು ೧೩,೦೦೦ ಜನರು ಪ್ರತಿಯೊಬ್ಬರೂ ಸರಾಸರಿ ೧೫,೦೧೦ ರೂಪಾಯಿಗಳಂತೆಯೂ, ೨೩ ಜನರು ೧ ಕೋಟಿ ರೂಪಾಯಿಗಳಂತೆಯೂ ವಿಮೆ ಮಾಡಿರುವರು. ಇದಲ್ಲದೆ 'ರೆಡ್ಮೇನ್ ವಾನಾ ಮೇಕರ್' ಎಂಬಾತನೊಬ್ಬನೇ ೨,೫೦,೦೦,೦೦೦ (೨|| ಕೋಟಿ) ರೂಪಾಯಿಗಳಿಗೆ ವಿಮೆಮಾಡಿರುವನು. ಇವನೇ ಪ್ರಪಂಚೆಕ್ಕೆಲ್ಲಾ ಹೆಚ್ಚಿನ ಮೊಬಲಗಿಗೆ ವಿಮೆಮಾಡಿರತಕ್ಕವನು.

ವಿಮೆಮಾಡುವುದರಲ್ಲಿಯೂ ಅನೇಕ ವಿಧಗಳಿವೆ.

ಜೀವದ ಅಪಾಯಕ್ಕೂ, ಬೆಂಕಿಯ ಅಪಾಯಕ್ಕೂ, ಮೋಟಾರಿನ ಅಪಾಯಕ್ಕೂ, ಸಮುದ್ರದ ಅಪಾಯಕ್ಕೂ ಮತ್ತು ಇನ್ನೂ ಅನೇಕ ಅಪಾಯಗಳಿಗೂ (Life-insurance, Fire insurance, Motor insurance, Marine insurance etc.) ಜನಗಳು ವಿಮೆಮಾಡುವುದುಂಟು. ಪಿಟೀಲು ನುಡಿಸುವುದರಲ್ಲಿ ಹೆಸರುವಾಸಿಯಾದ "ಕುಬೇಲಿಕ್" ಎಂಬುವನು ತನ್ನ ಪ್ರಾಶಸ್ತ್ಯಕ್ಕೆಲ್ಲ ತನ್ನ ಬೆರಳುಗಳೇ ಕಾರಣವೆಂದು ತಿಳಿದು ಅವುಗಳಿಗೆ ಯಾವ ರೀತಿಯಿಂದಲಾದರೂ ಅಪಾಯವುಂಟಾದರೆ, ತನ್ನ ವರಮಾನಕ್ಕೆ ಚ್ಯುತಿಯುಂಟಾಗುವುದೆಂದು ಭಾವಿಸಿ, ತನ್ನ ಪ್ರತಿಯೊಂದು ಬೆರಳುಗಳನ್ನೂ ವಿಮೆಮಾಡಿರುವನು. ಎಡಗೈ ಮಧ್ಯದ ಮೂರು ಬೆರಳುಗಳನ್ನು ತಲಾ ೨೭೦೦ ಸವರ್‌ನ್‌ಗಳಿಗೂ, ಎಡಗೈ ಕಿರುಬೆರಳನ್ನು ೨೨೦೦ ಸವರ್‌ನ್‌ಗಳಿಗೂ ಎಡಗೈ ಹೆಬ್ಬೆಟ್ಟನ್ನು ೭೫೦೦ ಸವರ್‌ನ್‌ಗಳಿಗೂ ಮತ್ತು ಬಲಗೈ ಮಧ್ಯದ ಮೂರು ಬೆರಳುಗಳನ್ನು ತಲಾ ೬೯೦೦ ಸವರ್‌ನ್‌ಗಳಿಗೂ ಬಲಗೈ ಕಿರುಬೆರಳನ್ನು ೪೭೦೦ ಸವರ್‌ನ್‌ಗಳಿಗೂ, ಬಲಗೈ ಹೆಬ್ಬೆಟ್ಟನ್ನು ೯೦೦೦ ಸವರ್‌ನ್‌ಗಳಿಗೂ, ಒಟ್ಟು ಹತ್ತು ಬೆರಳುಗಳನ್ನು ೩೯೮೭೦ ಸವರ್‌ನ್‌ಗಳಿಗೆ ವಿಮೆಮಾಡಿರುತ್ತಾನೆ. "ಮ್ಯಾರ್ಲಿನ್ ಡಿಟ್ರಿಚ್" ಎಂಬಾಕೆಯು ತನ್ನ ಕಾಲುಗಳು ಬಹಳ ಸುಂದರವಾಗಿರುವುದರಿಂದಲೂ ಮತ್ತು ತನ್ನ ನಾಟ್ಯವು ತನ್ನ ಕಾಲುಗಳಿಂದಲೇ ಹೆಸರು ಪಡೆದಿದೆಯೆಂದು ತಿಳಿದು, ತನ್ನ ಕಾಲುಗಳನ್ನು ೯೦,೦೦೦ ಡಾಲರ್‌ಗಳಿಗೆ ವಿಮೆಮಾಡಿರುವಳು. ಅರಬ್ಬಿದೇಶದ ಪ್ಪರ್ಕೈಷಿ ಎಂಬಾತನು ಸುಗಂಧದ್ರವ್ಯಗಳ ವಾಸನೆಯನ್ನು ಬಹಳ ಚೆಂದಿಯಿಂದ ಕಂಡುಹಿಡಿಯಬಲ್ಲವನಾದ್ದರಿಂದ ತನ್ನ ಮೂಗನ್ನು ೩೦,೦೦೦ ರೂಪಾಯಿಗಳಿಗೆ ವಿಮೆಮಾಡಿರುವನು. ಹೀಗೆಯೇ ಅನೇಕ ಸ್ತ್ರೀಪುರುಷರು ಮುಖ, ಕೈ, ಕಿವಿ, ಮೂಗು, ತುಟಿ ಇವುಗಳಿಗೆ ಕೂಡ ಲಕ್ಷಾಂತರ ರೂಪಾಯಿಗಳವರಿವಿಗೂ ವಿಮೆಮಾಡಿರುವರು. ಯಾವ ಅಂಗವನ್ನಾಗಲಿ ವಿಮೆಮಾಡಿದ್ದರೆ ಅಂತಹ ಅಂಗಕ್ಕೆ ಯಾವ ರೀತಿಯಿಂದ ಅಪಾಯವಾದರೂ ವಿಮೆ ಸಂಸ್ಥೆಯವರು ಕೊಡಲು ಬದ್ಧರಾಗಿರುತ್ತಾರೆ. ಪಾಶ್ಚಿಮಾತ್ಯದೇಶದಲ್ಲಿ ಇಷ್ಟು ಉನ್ನತಸ್ಥಿತಿಗೆ ಬಂದಿರುವ ವಿಮಾ ಸಂಸ್ಥೆಗಳು ನಮ್ಮ ದೇಶದಲ್ಲಿ ಅಭಿವೃದ್ಧಿಬರಲು ನಾವು ಮಾಡಬೇಕಾದ ಕರ್ತವ್ಯ ಒಂದೇ. ಪ್ರತಿಯೊಬ್ಬರೂ ಅಂದರೆ ವ್ಯವಸಾಯಗಾರರೂ, ವ್ಯಾಪಾರಗಾರರೂ, ಕೈಗಾರಿಕೆಗಾರರೂ ಮತ್ತು ಉದ್ಯೋಗಸ್ಥರೂ, ತಪ್ಪದೆ ತಮ್ಮ ಕೈಲಾದಷ್ಟು ಮೊಬಲಗನ್ನು ವಿಮೆಮಾಡುತ್ತಾ ಬಂದರೆ, ನಮ್ಮ ದೇಶದಲ್ಲಿಯೂ ಅಂತಹ ಸಂಸ್ಥೆಗಳು ಹೆಚ್ಚಿ ನಮಗೆ ನೆರವಾಗಬಹುದಲ್ಲವೆ?

ಕನ್ನಡ ಶಿಲಾಲೇಖಗಳ ಸಂಶೋಧನ.

ದೆಹಲಿ ಅಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳು.

ಅಸೆಂಬ್ಲಿಯ ೩೧ ನೇ ತಾರೀಖಿನ ದಿವಸ ಅಧಿವೇಶನದಲ್ಲಿ ಧಾರವಾಡದ ರಾ. ಬ. ಬಿ. ಎಲ್. ಪಾಟೀಲರು ಮುಂಬಯಿ ಮತ್ತು ಮದ್ರಾಸ ಇಲಾಖೆಯಲ್ಲಿಯ ಕನ್ನಡ ಶಿಲಾಲೇಖಗಳ ಸಂಶೋಧನ, ಸಂಗ್ರಹ ಮತ್ತು ಅವುಗಳ ಪ್ರಕಟನೆಯ ಕಾರ್ಯವನ್ನು ಮುಗಿಸುವ ಸಂಬಂಧದಲ್ಲಿ ಮಾಡಿದ ಪ್ರಶ್ನೆಗಳಿಗೆ ಸರಕಾರದವರು ಕೊಟ್ಟ ಉತ್ತರಗಳು.

ಪ್ರಶ್ನೆ—೭ ವರ್ಷಗಳ ಹಿಂದೆ ಕರ್ನಾಟಕದ ಪರಿಯಿಂದ ಅಸೆಂಬ್ಲಿಗೆ ಆರಿಸಿ ಬಂದ ಶ್ರೀ. ಡಿ. ಪಿ. ಕರಮಕರ ಇವರು ಮುಂಬಯಿ ಮತ್ತು ಮದ್ರಾಸ ಇಲಾಖೆಯಲ್ಲಿಯ ಕನ್ನಡ ಶಿಲಾಲೇಖಗಳ ಸಂಶೋಧನ, ಸಂಗ್ರಹ ಮತ್ತು ಪ್ರಕಟನೆಯ ಕಾರ್ಯವನ್ನು ಬೇಗನೆ ಮುಗಿಸಬೇಕೆಂದು ಅಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಆಗ ೧೩ ವರ್ಷಗಳಲ್ಲಿ ಈ ಕಾರ್ಯವನ್ನು ಮುಗಿಸಲಾಗುತ್ತದೆಂದು ಸರಕಾರವು ಆಶ್ವಾಸನ ಕೊಟ್ಟದ್ದುದು ಸರಕಾರಕ್ಕೆ ಗೊತ್ತಿದೆಯೇ?

ಉತ್ತರ—ಹೀಗೆ ಆಶ್ವಾಸನ ಕೊಟ್ಟದ್ದುದು ಸರಕಾರಕ್ಕೆ ಗೊತ್ತಿರುವದಿಲ್ಲ. ಆದರೆ ಅವರು ಸಪ್ಟಂಬರ ೧೯೨೭ ರಲ್ಲಿ ಕರ್ನಾಟಕ ಇತಿಹಾಸ ಮಂಡಳಕ್ಕೆ ಒಂದು ಪತ್ರಬರೆದು ಮುಂಬಯಿ ಇಲಾಖೆಯಲ್ಲಿಯ ಕನ್ನಡ ಶಿಲಾಲೇಖಗಳ ನಕಲು ತೆಗೆದುಕೊಳ್ಳುವ ಕಾರ್ಯವು ಸುಮಾರು ೧೩ ವರ್ಷಗಳಲ್ಲಿ ಮುಗಿಯಬಹುದೆಂದು ತೋರುತ್ತದೆಂದು ತಿಳಿಸಿದ್ದರು.

ಪ್ರಶ್ನೆ—ಈ ೭ ವರ್ಷಗಳ ಅವಧಿಯಲ್ಲಿ ಎಷ್ಟು ತಾಲೂಕುಗಳಲ್ಲಿಯ ಸಂಶೋಧನವು ಮುಗಿದಿದೆ ಮತ್ತು ಇನ್ನೂ ಎಷ್ಟು ತಾಲೂಕುಗಳು ಉಳಿದಿವೆಯೆಂಬುದನ್ನು ಹೇಳುವದಾಗಬೇಕು.

ಉತ್ತರ—೧೨ ತಾಲೂಕುಗಳಲ್ಲಿಯ ಸಂಶೋಧನ ಮುಗಿದಿದ್ದು ಇನ್ನೂ ೪೦ ತಾಲೂಕುಗಳು ಉಳಿದಿವೆ.

ಪ್ರಶ್ನೆ—ಉಳಿದ ತಾಲೂಕುಗಳಲ್ಲಿಯ ಸಂಶೋಧ ಕಾರ್ಯವನ್ನು ಇನ್ನುಳಿದ ೬ ವರ್ಷಗಳಲ್ಲಿ ಮುಗಿಸುವದು ಶಕ್ಯವಿದೆಯೋ ಹೇಗೆ? ಶಕ್ಯವಿಲ್ಲದಿದ್ದರೆ ಸರಕಾರದವರು ತಮ್ಮ ಆಶ್ವಾಸನದ ಪ್ರಕಾರ ೬ ವರ್ಷಗಳ ಅವಧಿಯಲ್ಲಿ ಈ ಕಾರ್ಯವನ್ನು ಮುಗಿಸಲು ಯಾವ ಉಪಾಯಗಳನ್ನು ಯೋಜಿಸಲಿಚ್ಛಿಸುವರು?

ಉತ್ತರ—ಶಿಲಾಸಂಶೋಧನ ಖಾತೆಯ ಶಾಖೆಯಲ್ಲಿ ಆರ್ಥಿಕ ಕಾರಣದ ಮೂಲಕ ಜನರನ್ನು ಕಡಿಮೆಮಾಡಿದ್ದರಿಂದ ಈಕಾರ್ಯವು ಇನ್ನು ೬ ವರ್ಷಗಳ ಅವಧಿಯಲ್ಲಿ ಮುಗಿಯುವದು ಶಕ್ಯವಿಲ್ಲ. ಇದರಂತೆ ಈ ಕಾರ್ಯದಲ್ಲಿ ಹೆಚ್ಚಿನ ಪ್ರಗತಿಯಾಗುವದೂ ಸಾಧ್ಯವಿಲ್ಲ.

ಪ್ರಶ್ನೆ—ಈವರೆಗೆ ಎಷ್ಟು ಶಿಲಾಲೇಖಗಳು ಸಂಗ್ರಹಿಸಲ್ಪಟ್ಟಿವೆ?

ಉತ್ತರ—ಮುಂಬಯಿ ಕರ್ನಾಟಕದಲ್ಲಿ ಶಿಲಾಲೇಖ ಸಂಶೋಧ ಕಾರ್ಯವು ಪ್ರಾರಂಭವಾದಂದಿನಿಂದ ಈವರೆಗೆ ೧೩೪೫ ಶಿಲಾಲೇಖಗಳು ಸಂಗ್ರಹಿಸಲ್ಪಟ್ಟಿವೆ. ಇದಲ್ಲದೆ ಪಶ್ಚಿಮ ಭಾಗದ ಶಿಲಾಸಂಶೋಧನಖಾತೆಯ ಸೂಪರಿಂಟೆಂಡೆಂಟರಿಂದ ಕೆಲವು ವರ್ಷಗಳ ಹಿಂದೆ ಸಿದ್ಧಮಾಡಲ್ಪಟ್ಟ ಮುಂಬಯಿ ಕರ್ನಾಟಕದಲ್ಲಿಯ ೧೨೧೨ ಕನ್ನಡ ಶಿಲಾಲೇಖಗಳನ್ನು ಸರಕಾರಿ ಶಿಲಾಸಂಶೋಧಕರ ಕಡೆಗೆ ಕಳಿಸಿದ್ದು ಅವುಗಳ ಪುನರೀಕ್ಷಣವು ನಡೆದಿದೆ.

ಪ್ರಶ್ನೆ—ಈ ಯಾವತ್ತು ಶಿಲಾಲೇಖಗಳು ಪ್ರಸಿದ್ಧಿಸಲ್ಪಟ್ಟಿವೆಯೋ ಹೇಗೆ? ಇಲ್ಲವಾದರೆ ಈ ಶಿಲಾಲೇಖಗಳು ಬೇಗನೆ ಪ್ರಸಿದ್ಧವಾಗುವಂತೆ ಸರಕಾರವು ಯಾವ ವ್ಯವಸ್ಥೆ ಮಾಡಲಿಚ್ಛಿಸುವದು?

ಉತ್ತರ—೧೯೨೬-೨೭ ರಿಂದ ೧೯೩೦-೩೧ ಮತ್ತು ೧೯೩೨-೩೩ ರಲ್ಲಿ ತೆಗೆದುಕೊಳ್ಳಲಾದ ಯಾವತ್ತು ಶಿಲಾಲೇಖಗಳ ನಕಲುಗಳು ಈಗ ಅಚ್ಚಾಗಲಿವೆ. ಮತ್ತು ೧೯೩೩-೩೪ರಲ್ಲಿ ತೆಗೆದುಕೊಳ್ಳಲಾದ ನಕಲುಗಳ ಪುನರೀಕ್ಷಣ ಮತ್ತು ಯಾದಿಯು ನಡೆದಿದೆ.

ದಸರಾಮಹೋತ್ಸವ, ಪುತ್ತೂರು, ದ. ಕ.

ಪುಸ್ತಕ ಪ್ರದರ್ಶನ. 1934.

ಅಕ್ಟೋಬರ ತಾ. 11 ರಿಂದ 18 ರ ತನಕ.

ಶ್ರೀ. ಪಂಜೆ ಮಂಗೇಶರಾಯರು ಇದನ್ನು ತಾ. 11 ರ ದಿನ ಪ್ರಾತಃಕಾಲ, ಘಂಟೆ 9ಕ್ಕೆ ತೆರೆಯುವರು.

ಕರ್ಣಾಟಕದ ಗ್ರಂಥಕರ್ತ, ಪ್ರಕಾಶಕ, ಪುಸ್ತಕ ವ್ಯಾಪಾರಿಗಳಲ್ಲಿ ವಿನಂತಿ,

ಮಹಾಶಯರೇ!

ನಾವು ಪುತ್ತೂರಲ್ಲಿ ತೆರೆಯಬೇಕೆಂದು ನಿಶ್ಚಯಿಸಿರುವ ಈ ಪುಸ್ತಕ ಪ್ರದರ್ಶನವು ಯಶಸ್ವಿಯಾಗಲು, ತಮ್ಮೆಲ್ಲರ ವಿಶೇಷ ಸಹಾಯವು ಅವಶ್ಯವಾಗಿದೆ. ತಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳ ಪ್ರತಿ ಒಂದೊಂದನ್ನು ತಾವು ಅವಶ್ಯವಾಗಿ ನಮ್ಮಲ್ಲಿಗೆ ಕಳುಹಿಸಬೇಕಾಗಿ ಕೋರಿಕೆ.

1920 ನೇ ಇಸವಿಯ ನಂತರ ಮುದ್ರಿತವಾದ ಎಲ್ಲಾ ಕನ್ನಡ ಪುಸ್ತಕಗಳೂ ಸ್ವೀಕಾರಾರ್ಹವು.

ನಮ್ಮ ಜನರಲ್ಲಿ ವಾಚನಾಭಿರುಚಿಯನ್ನು ಬೆಳೆಯಿಸುವ ಸಲುವಾಗಿ ಮಾಡುವ ಈ ಕಾರ್ಯಕ್ಕೆ ಆದಷ್ಟು ಹೆಚ್ಚಿನ ಸಂಖ್ಯೆಯಿಂದ ಎಲ್ಲಾ ವಿಧದ ಪುಸ್ತಕಗಳು ಬೇಕಾಗಿವೆ.

ಪುಸ್ತಕದ ಪ್ರತಿಗಳ ಜತೆಗೆ—ಅದನ್ನು ಬರೆದವರ, ಮುದ್ರಿಸಿದವರ, ಮತ್ತು ಪ್ರಕಾಶಕರ ಹೆಸರನ್ನು ತಿಳಿಸಬೇಕು.

ಅದರ ಮೌಲ್ಯವೆಷ್ಟೆಂದೂ, ಅದನ್ನು ಮಾರಬಹುದಾದರೆ ಅನುಮತಿಯನ್ನೂ ಕೊಡಬೇಕು.

ವಿಕ್ರಯಿಸಿದ ಮೌಲ್ಯವನ್ನು ಪ್ರದರ್ಶನಾಂತ್ಯದಲ್ಲಿ ಕಳುಹಿಸುವೆವು.

ಪುಸ್ತಕಗಳನ್ನು ಮರಳಿ ನಿಮಗೆ ಕಳುಹಿಸುವ ಸಲುವಾಗಿ ಬೇಕಾಗುವ ಮೌಲ್ಯವನ್ನು ಕಳುಹಿಸಬೇಕು.

ಪುಸ್ತಕದ ಬಹಿರಂಗಕ್ಕೂ ಹೆಚ್ಚಿನ ಮನ್ನಣೆ ಕೊಡಲಾಗುವುದು.

ಗ್ರಂಥಕರ್ತರ ಭಾವಚಿತ್ರವನ್ನು ಆದರದಿಂದ ಸ್ವೀಕರಿಸಿ ಪ್ರದರ್ಶಿಸಲಾದೀತು.

ಪುಸ್ತಕವನ್ನು ಕಳುಹಿಸುವವರು—C. P. C. ಬಸ್ಸು ಮಾಡನ್ ಬಸ್ಸು ಸರ್ವಿಸುಗಳ ಮುಖಾಂತರ ಪುತ್ತೂರಿಗೆ ಮುಟ್ಟಿಸಬಹುದು.

ರೈಲ್ವೆ ಮುಖಾಂತರ ಕಳುಹಿಸುವವರು ಪಾರ್ಸೆಲುಗಳನ್ನು ಮಂಗಳೂರಿಗೆ ಕಳುಹಿಸಿ—ರಶೀದಿಯನ್ನು ನಮಗೆ ರವಾನಿಸಬೇಕು. ಪುತ್ತೂರಿಗೆ ಪ್ರತ್ಯೇಕ ರೈಲ್ವೆ ಸ್ಟೇಷನಿಲ್ಲ.

ಈ ಸಮಯದಲ್ಲಿ ಕಾಲಾನುಕ್ರಮದ ಕನ್ನಡ ಹಸ್ತಲಿಖಿತ ಮಾಸಪತ್ರಿಕೆಯ ಪ್ರದರ್ಶನವೂ ಇದೆ. ಆದುದರಿಂದ ಉತ್ಸಾಹಿ ತರುಣರು ದಸರೆಗಾಗಿ ವಿಶೇಷ ಸಂಚಿಕೆಯನ್ನು ಹೊಂದಿಸಿ ನಮಗೆ ರವಾನಿಸಬೇಕೆಂದು ದಕ್ಷಿಣ ಕನ್ನಡದ ಎಲ್ಲಾ ಶಾಲೆಯವರಲ್ಲೂ ವಿನಂತಿ ಮಾಡುತ್ತೇವೆ.

ಅಧ್ಯಕ್ಷ:

ಬಿ. ರಾಮಚಂದ್ರ ರಾವ್, ಎಂ.ಎ., ಬಿ.ಎಲ್.

ಕ್ಷಯರೋಗವು ಗುಣವಾಗತಕ್ಕ ವ್ಯಾಧಿಯೇ?

ರಾವ್ ಬಹದ್ದೂರ್, ಡಾಕ್ಟರ್ ಎಂ. ಕೇಶವರಾಯ್ ಓ. ಬಿ., ಇ. ಎಂ. ಡಿ., ಸೂಪರಿಂಟೆಂಡೆಂಟ್,

ಕ್ಷಯರೋಗದ ಆಸ್ಪತ್ರೆ, ಮದ್ರಾಸ್ ಅವರಿಂದ.

ಈ ಮೇಲಿನ ಪ್ರಶ್ನೆಯ ಉತ್ತರವು ಕಳೆದ ಐವತ್ತು ವರ್ಷಗಳಿಂದೀಚೆಗೆ ಬಹಳಮಟ್ಟಿಗೆ ಮಾರ್ಪಟ್ಟಿದೆ. ೧೮೮೨ ನೆಯ ವರ್ಷದಲ್ಲಿ ರಾಬರ್ಟ್‌ಕೋಚ್ ಎಂಬವರು, ಕ್ಷಯರೋಗದ ಕ್ರಿಮಿಗಳನ್ನು ಕಂಡುಹಿಡಿಯುವುದಕ್ಕೆ ಮೊದಲು, ಈ ಕ್ಷಯರೋಗವೆಂಬುದು ಬಹಳ ಅಪಾಯಕರವೆಂದೂ, ಇದು ಮರಣದಲ್ಲಿಯೇ ಪರ್ಯವಸಾನವಾಗುವುದು ನಿಶ್ಚಯವೆಂದೂ ಅಭಿಪ್ರಾಯವಿದ್ದಿತು. ಅಲ್ಲದೆ ಆ ರೋಗವಿದ್ದ ಕೆಲವರು ಅದರಿಂದ ಗುಣಹೊಂದಿ ಚೇತರಿಸಿಕೊಂಡ ಕೆಲವು ಸಂದರ್ಭಗಳಲ್ಲಿಯೂ ಕೂಡ, ಅದು ಗುಣವಾದುದರಿಂದಲೇ ಅದು ಕ್ಷಯರೋಗವಲ್ಲವೆಂಬ ಅಭಿಪ್ರಾಯವನ್ನೂ ಹೊರಡಿಸುತ್ತಿದ್ದರು. ಅದರಿಂದಾಚೆಗೆ ಈ ಕ್ಷಯರೋಗದ ಕ್ರಿಮಿಗಳನ್ನು ಆದಿಯಲ್ಲಿ ಕಂಡುಹಿಡಿದ ಮೇಲೆ ಕೆಮ್ಮಲು, ಜ್ವರ ಮುಂತಾದ ಕ್ಷಯರೋಗದ ಪೂರ್ವಚಿಹ್ನೆಗಳೇ ಕಂಡುಬಂದಾಗ ಕೂಡ, ಅಂತವರನೇಕರು ತಿರಿಗಿ ಚೇತರಿಸಿಕೊಂಡು ರೋಗದಿಂದ ಸಂಪೂರ್ಣ ಗುಣಹೊಂದಿ ಅನೇಕವರ್ಷಗಳವರೆಗೆ ಚಟುವಟಿಕೆಯಿಂದ ಕೆಲಸಮಾಡುತ್ತ, ದೀರ್ಘಕಾಲ ಬದುಕಿದ್ದಹಾಗೆಯೂ ತಿಳಿದುಬಂದಿತು. ಅಲ್ಲದೆ ಈ ನಡುವೆ ಅಲ್ಲಲ್ಲಿನ ಆಸ್ಪತ್ರೆಗಳಲ್ಲಿ ಕಂಡುಬಂದ ಅನುಭವಗಳಿಂದ, ಆ ಆಸ್ಪತ್ರೆಗಳಲ್ಲಿ ಕ್ಷಯರೋಗವಲ್ಲದೆ ಬೇರೆಕಾರಣಗಳಿಂದ ಸತ್ತುಹೋದ ಕೆಲವು ಮಕ್ಕಳ ಮತ್ತು ವಯಸ್ಕರ, ಮೃತಶರೀರವನ್ನೇ ಪರೀಕ್ಷಿಸಿದ್ದರಲ್ಲಿ, ಈ ಕೆಳಗೆ ಕಂಡ ಕೆಲವು ಸಂಗತಿಗಳೂ ಕಂಡುಬಂದಿವೆ. ಅವರು ಬದುಕಿದ್ದಾಗ ಅವರಲ್ಲಿ ಕ್ಷಯರೋಗದ ಚಿಹ್ನೆಗಳೆಂದೂ ಕಾಣದಿದ್ದರೂ, ಅವರ ಮರಣಕ್ಕೆ ಬೇರೆ ಕಾರಣಗಳು ಸ್ಪಷ್ಟವಾಗಿ ಕಂಡುಬಂದಿದ್ದರೂ, ಅವರ ದೇಹದೊಳಗಿನ ಶ್ವಾಸಕೋಶಗಳು ಮತ್ತು ಕೆಲವು ಗ್ರಂಥಿಗಳು ಮುಂತಾದುವನ್ನು ಸೂಕ್ಷ್ಮವಾಗಿ ಪರಿಶೋಧಿಸಿ ನೋಡಿದಾಗ, ಆ ಕ್ಷಯರೋಗದ ಲಕ್ಷಣಗಳೂ, ಅದೇ ತರದ ಕ್ರಿಮಿಗಳೂ ಕಂಡುಬಂದಿವೆ. ಅದರಿಂದಾಚೆಗೆ ಇನ್ನೂ ಸೂಕ್ಷ್ಮವಾದ ಶರೀರಶಾಸ್ತ್ರ ಯಂತ್ರಗಳ ಮೂಲಕವಾಗಿ ಪರಿಶೋಧನೆ ಮಾಡಿದುದರಲ್ಲಿ, ಎಲ್ಲಾ ನಾಗರಿಕ ದೇಶಗಳಲ್ಲಿಯೂ ಇರುವ ಮನುಷ್ಯರಲ್ಲಿ, ಹೆಚ್ಚು ಜನಗಳ ಶರೀರದಲ್ಲಿ ಈ ಕ್ಷಯರೋಗದ ಕ್ರಿಮಿಗಳ ಸಂಬಂಧವು ಇದ್ದಿರುವುದನ್ನು ಕಾಣಬಹುದೆಂದೂ, ಹಾಗಿದ್ದರೂ ಕೆಲವರ ದೇಹದಲ್ಲಿ ಮಾತ್ರವೇ ಆ ರೋಗದ ಪ್ರಾಬಲ್ಯವು ಕಾಣುವುದೆಂದೂ ತಿಳಿದುಬಂದಿತು.

ಅದರಿಂದಾಚೆಗೆ ವೈದ್ಯಶಾಸ್ತ್ರಜ್ಞರ ಮತ್ತು ಕ್ರಿಮಿಶಾಸ್ತ್ರಜ್ಞರ ಅನುಭವಗಳನ್ನೆಲ್ಲಾ ಒಟ್ಟುಗೂಡಿಸಿ ನೋಡುವಲ್ಲಿ, ಜೀವಂತರಾಗಿರುವ ಸಾವಿರ ಜನರಲ್ಲಿ ಒಂಭೈನೂರು ಮಂದಿಗೆ ಕಡಮೆಯಿಲ್ಲದೆ, ದೇಹದಲ್ಲಿ ಕ್ಷಯರೋಗ ಕ್ರಿಮಿಗಳ ಸಂಬಂಧವುಳ್ಳವರಾಗಿಯೇ ಇರುವರೆಂದೂ, ಆ ಸಂಬಂಧವು ಅವರ ಶೈಶವದಲ್ಲಿಯೋ ಅಥವಾ ಅದರಿಂದಾಚೆಗೆ ಬಾಲ್ಯದಲ್ಲಿಯೋ ಆರಂಭಿಸಿರಬೇಕೆಂದೂ ಸ್ಪಷ್ಟವಾಗಿ ತಿಳಿದುಬಂದಿತು. ಸಾವಿರಕ್ಕೆ ಐನೂರು ಜನಗಳಿಗಿಂತ ಮೇಲೆಯೇ ಅವರ ಶ್ವಾಸಕೋಶದಲ್ಲಿಯೋ, ಇತರ ಅವಯವಗಳಲ್ಲಿಯೋ ಆ ರೋಗದ ಲಕ್ಷಣಗಳನ್ನು ಸ್ಪಷ್ಟವಾಗಿ ಹೊಂದಿದ್ದರೂ, ಮೇಲಿನಾತ್ರ ಅವರಿಗೆ ಆ ರೋಗಗಳು ವ್ಯಕ್ತವಾಗಿ ಕಾಣದೆ ಇದ್ದಹಾಗೆಯೂ ತಿಳಿದುಬಂದಿದೆ. ಮತ್ತು ಸಾವಿರಕ್ಕೆ ಮೂವತ್ತರಿಂದ ಅರವತ್ತು ಜನಗಳವರಿಗೆ ಮಾತ್ರವೇ ಕ್ಷಯರೋಗದಿಂದಾಗಲಿ, ಅಥವಾ ಗಂಡಮಾಲೆಯಿಂದಾಗಲಿ, ಕಷ್ಟಪಡುವುದಾಗಿಯೂ ಹೀಗಿದ್ದರೂ, ಸಾವಿರಕ್ಕೆ ಮೂರರಿಂದ ಐದರವರೆಗೆ ಮಾತ್ರವೇ ಸಾಲಿಯಾನ ಈ ಕ್ಷಯರೋಗದಿಂದ ಸಾಯುತ್ತಿರುವುದಾಗಿಯೂ ತಿಳಿದುಬಂದಿದೆ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂಥಾ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 50

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾಠಶಾಲಾ, ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮಲೇರಿಯಾಕ್ಕೆ ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2,3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14. ½ ಡಜ್ 8-8-0, ರೂ. 5, 1 ಡಜ್ ರೂ. 16-8-0, ರೂ. 9-12-0

ಮಲೆರಿನ್ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0, 500, 1000ಕ್ಕೆ ರೂ. 7 ಮತ್ತು 13-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8, 14, ರೂ. 1/6, 2.

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣ, ಗ್ರಹಣಿ ಹುಳದ ಉಪದ್ರ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತ ತುಂಬಿಸಿ ದೇಹವನ್ನು ಪುಷ್ಟಿಕರಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್‌ಕೆಫ್ ರೆಮೆಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಫಕೆಮ್ಮು ಇವನ್ನು ನೀರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5. 100ಕ್ಕೆ ರೂ. 2-0-0.

ಸಿರಪ್‌ವೆಸಿಕೂಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣುಕೋರುವ ಕೀವು, ಮೂತ್ರ ಬಿಂದು ಬಿಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡ ಸೀಸೆ ರೂ. 3-8-0, ಸಣ್ಣ ಸೀಸೆ ರೂ. 1-14-0.

☞ ಟಿಂಕ್ಚ, ಹೊಮ್ಯೊಪತಿ ಮದ್ದುಗಳೂ, ದೃಷ್ಟಿ ಚಶ್ಮಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಪರಿಮಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ' ವೆಂಬ ಪುಸ್ತಕಕ್ಕೆ ಬರಿರಿ ಧರ್ಮಾರ್ಥ.

ಪತ್ತೆ:— ಮಲೇರಿಯಾನ ಕಂಪೆನಿ, (ಹಂಪನಕಟ್ಟೆ), 21, ಮಂಗಳೂರು.

The Malariana Co., Mangalore (21) [2]

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೋಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಅಕ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಬೆಂಗಳೂರು ಸಿಟಿ. 44

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂರ್ಘರದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೨—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[36] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಳಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯೋಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೪ನೇ ಸೆಪ್ಟಂಬರ್ ೧೯೩೪ [ಸಂಚಿಕೆ ೧೯

ವರ್ತಮಾನಸಂಗ್ರಹ.

ರಾಧಾಕೃಷ್ಣಭಾರ್ಗವನೆಂಬ ಗ್ವಾಲಿಯರ್ ಹೈಸ್ಕೂಲ್ ವಿದ್ಯಾರ್ಥಿಯು ಶಾಲಾಪುಸ್ತಕಗಳನ್ನು ಕೊಂಡುಕೊಳ್ಳಲು ಗತಿಯಿಲ್ಲದೆ ವಿಷಪಾನಮಾಡಿ ಸತ್ತನು.

ಝಾನ್ಸಿನಗರದ 16 ವರ್ಷದ ಒಬ್ಬ ಹುಡುಗನು ನಿದ್ದೆಮಾಡುವ ಕಾಲದಲ್ಲಿ ಎಲ್ಲರಂತೆ ಗೊರಕೆ ಹಾಕದೆ ಸಿಳ್ಳೆಹಾಕುವನಂತೆ! ಅದು ಒಂದು ಫರ್ಲಾಂಗಿನವರೆಗೆ ಕೇಳಿಸುವುದಂತೆ!

ಮುಂಬಯಿಯಲ್ಲಿ ರಾಷ್ಟ್ರೀಯ ಮಹಾಸಭೆಗಾಗಿ ಕಟ್ಟಲ್ಪಡುತ್ತಿರುವ 'ಅಬ್ದುಲ್‌ಗಫರ್‌ನಗರ' ವೆಂಬ ವಿಶಾಲವಾದ ಚಪ್ಪರದ ಅಲಂಕಾರಕ್ಕೆ 40,000 ರೂ. ಗಳ ಬೆಲೆ ಬಾಳುವ ಖಾದಿಯು ಉಪಯೋಗಿಸಲ್ಪಡುವುದಂತೆ!

ಬಾಲ್ಟಿಮೋರ್ ನಗರದಲ್ಲಿ ಒಂದು ಸಣ್ಣ ಜಾಡರ ಹುಳುವಿಗೂ ಒಂದು ಹಸುರುಹಾವಿಗೂ 4 ದಿವಸಗಳವರೆಗೆ ಕಾದಾಟವಾಗಿ ಕಡೆಗೆ ಅದನ್ನು ನೋಡಿದ ಕೆಲವು ಜನರಿಂದ ಹಾವು ಕೊಲ್ಲಲ್ಪಟ್ಟಿತೆಂದೂ, ಜಾಡರ ಹುಳುವಿನ ಸೂಕ್ಷ್ಮತಂತುಗಳಿಂದ ಹಾವು ಅತ್ತಿತ್ತ ಅಲುಗಾಡದಂತೆ ಸಾಯುವಸ್ಥಿತಿಗೆ ಬಂದಿದ್ದಿತೆಂದೂ ತಿಳಿದುಬಂದಿದೆ.

ವಿಚಿತ್ರ ಶಾಸನ.

ಅಮೇರಿಕೆಯ ಲಾಸ್ ಆಂಗಲ್ಸ್ ನಗರದ ಒಬ್ಬ ಪ್ರಸಿದ್ಧ ಬ್ಯಾಂಕರನು ಗುಂಡಿನಿಂದ ಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡನು. ಸಾಯುವುದಕ್ಕೆ ಮುಂಚೆ ಆತನು ಒಂದು ಚಿಕ್ಕಿನಲ್ಲಿ ತನ್ನ ಪತ್ನಿಗೆ ಜೀವಿಸುವವರೆಗೆ ಸುಖಶಾಂತಿಗಳನ್ನು ಕೊಡಿರೆಂದು ಬರೆದಿಟ್ಟಿದ್ದನು.

ಇದ್ದಲಿನಿಂದ ನಡೆಯುವ ಬಸ್!

ರೋಂನಗರದಲ್ಲಿ ಕೇವಲ ಕಲ್ಲಿದ್ದಲಿನಿಂದಲೇ ನಡೆಯುವ ಒಂದು ಹೊಸ ಮೋಟಾರು ತಯಾರಿಸಲ್ಪಟ್ಟಿರುವುದು. ಪೆಟ್ರೋಲಿಗಿಂತಲೂ ಇದಕ್ಕೆ ಖರ್ಚು ಕಡಿಮೆ! ಸರಕಾರದವರು ನಗರದಲ್ಲಿರುವ ಟ್ರಾಂಗಳನ್ನೆಲ್ಲಾ ತೆಗೆದುಹಾಕಿ, ಮೇಲ್ಕಂಡ ಮೋಟಾರುಗಳನ್ನೇ ಇಡಬೇಕೆಂದು ಆಲೋಚಿಸುತ್ತಿರುವರು.

ಮಹಾವಿಷ್ಣು ಯಜ್ಞ.

ದೆಹಲಿಯಲ್ಲಿ "ಭಾರತವರ್ಷೀಯ ಮಹಾವಿಷ್ಣು ಯಜ್ಞ" ವೆಂಬ ಅದ್ಭುತ ಯಜ್ಞವನ್ನು ಮಾಡುವುದಕ್ಕಾಗಿ ತಕ್ಕ ಏರ್ಪಾಡುಗಳು ನಡೆದಿರುವುವು. ಈ ಯಜ್ಞಕ್ಕೆ 1,25,000 ಮಣ ತುಪ್ಪವು ವೆಚ್ಚವಾಗುವುದೆಂದೂ, ಒಟ್ಟು ಸುಮಾರು 3 ಕೋಟಿ ರೂಪಾಯಿಗಳು ಖರ್ಚಾಗುವುವೆಂದೂ ತಿಳಿದುಬಂದಿದೆ.

ಸಮುದ್ರದ ನೀರಿನಿಂದ ಪೆಟ್ರೋಲ್!

ಆಲ್ಬರ್ಟ್ ಸಾಹೂರ್ಸ್ ಎಂಬ ಒಬ್ಬ ಫ್ರೆಂಚ್ ಶಾಸ್ತ್ರಜ್ಞರು ಸಮುದ್ರದ ನೀರಿನಿಂದ ಪೆಟ್ರೋಲನ್ನು ತಯಾರಿಸುವ ಮಾರ್ಗವನ್ನು ಕಂಡುಹಿಡಿದಿರುತ್ತಾರೆ. ಇದಕ್ಕೆ ಒಂದು ಗ್ಯಾಲನ್ನಿಗೆ 6 ಕಾಸುಗಳು ಮಾತ್ರ ಖರ್ಚಾಗುವುದಂತೆ! ಇದರ ರಹಸ್ಯವನ್ನು ಹೇಳಿಕೊಡುವುದಕ್ಕೆ 50,00,00,000 ರೂಪಾಯಿಗಳನ್ನು ಕೊಡಬೇಕೆಂದು ಸಾಹೂರ್ಸ್‌ರವರು ಕೇಳುತ್ತಿರುವರು.

ಕರೆನ್ಸಿನೋಟುಗಳನ್ನು ಕತ್ತರಿಸಕೂಡದು.

ಕರೆನ್ಸಿ ನೋಟುಗಳನ್ನು ಇನ್ಶೂರ್ ಮೂಲಕ ರವಾನಿಸುವವರು ನೋಟುಗಳನ್ನು ಎರಡು ತುಂಡುಗಳನ್ನಾಗಿ ಕತ್ತರಿಸಿ ಕಳುಹಿಸುವ ಪದ್ಧತಿಯು ಬಹುಕಾಲದಿಂದಲೂ ಆಚರಣೆಯಲ್ಲಿ ಬಂದಿದೆ. ಆದರೆ ಇಂಡಿಯಾಸರಕಾರದವರು ಇನ್ನು ಮುಂದೆ ಈ ರೀತಿ ಯಾರೂ ನೋಟುಗಳನ್ನು ಕತ್ತರಿಸಿ ಕಳುಹಿಸಕೂಡದೆಂದೂ ನೋಟುಗಳನ್ನು ಇನ್ಶೂರ್ ಮಾಡುವ ಚಾರ್ಜನ್ನು ಕಡಿಮೆಮಾಡಬೇಕೆಂದೂ ಯೋಚಿಸಿರುತ್ತಾರೆ.

ಚಲಿಸುವ ಗೃಹ!

ರಷ್ಯಾದೇಶದ ರಾಜಧಾನಿಯಾದ ಮಾಸ್ಕೋನಗರದಲ್ಲಿರುವ 4 ಅಂತಸ್ತಿನ ಒಂದು ಕಲ್ಲಿನ ಕಟ್ಟಡವು ಈಗಿರುವ ಸ್ಥಳದಿಂದ 117 ಅಡಿ ದೂರ ಸಾಗಿಸಲ್ಪಡುವುದು. ಈ ಕಟ್ಟಡದಲ್ಲಿ 370 ಜನರು ವಾಸವಾಗಿದ್ದು ಕಟ್ಟಡದ ತೂಕವು ಸುಮಾರು 6,000 ಟನ್ನುಗಳಾಗಬಹುದೆಂದು ಊಹಿಸಲ್ಪಟ್ಟಿದೆ. ಕಟ್ಟಡವನ್ನು ಸಾಗಿಸುವ ಕಾಲದಲ್ಲಿ ಕಟ್ಟಡದಲ್ಲಿ ವಾಸಮಾಡುವ ಜನರು ಎಂದಿನಂತೆಯೇ ಅಲ್ಲಿಯೇ ವಾಸವಾಗಿರುವರಲ್ಲದೆ, ನೀರು ಮತ್ತು ಎಲೆಕ್ಟ್ರಿಕ್ ಲೈಟಿನ ಸಂಬಂಧವೂ ಹಾಗೆಯೇ ಇರುವುವಂತೆ!

ಶ್ರೀಮನ್ಮಹಾರಾಜರವರ ಆಗಮನ.

ಶ್ರೀಮನ್ಮಹಾರಾಜರವರು ನಿನ್ನೆ (23-9-34) ಭಾನುವಾರ ಬೆಳಿಗ್ಗೆ ಪೂನಾನಗರದಿಂದ ಸ್ಪೆಷಲ್ ಟ್ರೇನಿನಲ್ಲಿ ರಾಜಧಾನಿಗೆ ಆಗಮಿಸಿದರು.

ಅತ್ಯಂತ ವಿಷಾದದ ವಿಷಯ!

ನಿನ್ನೆ ದಿವಸ ಕೆಲವರು ಶ್ರೀ ಜಗದ್ಗುರುಗಳವರ ಮಹೋತ್ಸವವನ್ನು ನೋಡಬಾರದೆಂದು ಮಲ್ಲನಮೂಲೆಗೆ ಹೋಗಿದ್ದರಂತೆ! ಅವರಲ್ಲಿ ಇಬ್ಬರು ನದಿಯಲ್ಲಿ ಪ್ರಾಣಬಿಟ್ಟರೆಂಬ ವಿಷಾದವಾರ್ತೆಯು ರಾಜಧಾನಿಯಲ್ಲೆಲ್ಲಾ ವ್ಯಾಪಿಸಿದೆ. ಈ ವಿಷಯವು ಸರ್ವರಿಗೂ ವ್ಯಸನವನ್ನುಂಟುಮಾಡುವುದಾಗಿದೆ.

ಆನೆಯ ಸೇಡು!

ಮೆಕ್ಸಿಕೋನಗರದ ಪೆಡ್ರೋಗಾರ್ಸಿಯಾ ಎಂಬ ಒಬ್ಬ ಸರ್ಕಸ್ ಜವಾನನು ಒಂದು ದಿನ ಹುಡುಗಾಟಕ್ಕಾಗಿ ಸರ್ಕಸ್ಸಿನ ಆನೆಗೆ ಕುಡಿಯುವ ನೀರಿಗೆ ಸ್ವಲ್ಪ ಸುಣ್ಣವನ್ನು ಬೆರಸಿಕೊಟ್ಟನು. ಆನೆಯು ಅದನ್ನು ಕುಡಿಯುವ ಕಾಲದಲ್ಲಿ ಸಮೀಪದಲ್ಲಿ ನಿಂತು ಗಟ್ಟಿಯಾಗಿ ನಕ್ಕನು. ಕೆಲವು ದಿವಸಗಳ ನಂತರ ಗಾರ್ಸಿಯಾನು ಸರ್ಕಸ್ ನಡೆಯುವ ಕಾಲದಲ್ಲಿ ಜನರ ಮಧ್ಯದಲ್ಲಿ ಹೋಗುತ್ತಿದ್ದಾಗ, ಆ ಆನೆಯು ತನ್ನ ಸೊಂಡಿಲಿನಿಂದ ಅವನನ್ನು ಹಿಡಿದು ನೆಲಕ್ಕೆ ಅಪ್ಪಳಿಸಿ ಕಾಲಿನಿಂದ ತುಳಿದುಬಿಟ್ಟಿತು.

ಸ್ವೀಕಾರ

ಧಾರವಾಡ ಡಿ॥ ನವಲಗುಂದ ತಾಲೂಕು ಸಿಸುವಿನಹಳ್ಳಿಗ್ರಾಮದ ವೇ॥ ಅಂದಾನಯ್ಯನವರು ಪಂಚಯ್ಯನವರು ಹಿರೇಮಠ, ಓವರ್‌ಸಿಯರ್ ಇವರ ಪುತ್ರನಿಗೆ "ಪಂಚಾಕ್ಷರಿ" ಎಂದು ನಾಮಕರಣವನ್ನು ಮಾಡಿ ಗಣಾರಾಧನೆಯನ್ನು ಮಾಡಿದ ಸಮಯದಲ್ಲಿ ವೇ॥ ಸೋಮನಾಥಯ್ಯನವರು ಹಿರೇಮಠ ಇವರ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ತೆಗೆಯಿಸಲ್ಪಟ್ಟ 1 ರೂ. ಯು ವೇ॥ ಸೋಮನಾಥಯ್ಯನವರು ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ.

ಗುಲ್ಬರ್ಗಾ ಜಿಲ್ಲಾ ಜಹಗೀರ ಜೇವುರಗಿಗ್ರಾಮ ನಿವಾಸಿಗಳಾದ ಶ್ರೀಮಂತ ಶಿವರಾವ ಶಿದ್ರಾಮಪ್ಪಾ ಪಾಟೀಲ ಇವರು ಶ್ರಾವಣ ಶುದ್ಧ ಪಾಡ್ಯದಿಂದ ಶ್ರಾವಣ ಬಹುಳ ಅಮಾವಾಸ್ಯೆಯ ವರೆಗೆ ಶ್ರೀ ಗುರುಶಾಂತಶಿವಾಚಾರ್ಯಸ್ವಾಮಿಗಳವರ ಪಾದಪೂಜೆಯನ್ನು ಮಾಡಿ ಗಣಾರಾಧನೆಯನ್ನು ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ॥ ಗದಗ ತಾಲೂಕು ಹುಮ್ಮಿಗಿ ವೇ॥ ನಾಗಭೂಷಣ ಮಠದ ಶರಭಯ್ಯನವರು ಶಿವೈಕ್ಯರಾದ ಸಂಬಂಧ ಅವರ ಧರ್ಮಪತ್ನಿ ವೀರಮ್ಮನವರು ವಾರ್ಷಿಕ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2ರೂ. ಗಳು, ಅದೇ ಗ್ರಾಮದ ಮ॥ ರಾ॥ ವರದಾ ವೀರಪ್ಪನವರು ತಮ್ಮ ದ್ವಿತೀಯ ಪತ್ನಿಯಲ್ಲಿ ಪ್ರಥಮ ಪುತ್ರರತ್ನವು ಜನಿಸಿದ ಸಂತೋಷಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಒಟ್ಟು 4 ರೂ. ಗಳು ಗುರುಭಕ್ತಕೇಸರಿ ಮ॥ ರಾ॥ ಹುಮ್ಮಿಗಿ ಶಾಂತಪ್ಪನವರು ಕುಬಸದ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

|| ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು ||

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ
ಮಹಾಸ್ವಾಮಿಗಳವರ ದಿವ್ಯಸನ್ನಿಧಿಯಲ್ಲಿ

ಮೈಸೂರು ರಾಜಧಾನಿಯ ಸ್ವಾಗತಸಮಿತಿಯ ಸದಸ್ಯರು ಅನಿತರಸಾಧಾರಣ

ಭಕ್ತಿಭಾವದಿಂದ ಸಮರ್ಪಿಸಿದ

ವಿಜ್ಞಾಪನಾಪತ್ರಿಕೆ.

ಮಹಾಸ್ವಾಮಿ !

ಜಗದ್ವಿಖ್ಯಾತರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಪರಶಿವನ ಆಜ್ಞೆಯಮೇರೆಗೆ ಭರತಖಂಡವಿರಾಜಮಾನಗಳಾದ ಶ್ರೀ ಸೋಮನಾಥ-ಸಿದ್ಧೇಶ್ವರ-ರಾಮನಾಥ-ಮಲ್ಲಿಕಾರ್ಜುನ-ವಿಶ್ವನಾಥಲಿಂಗಗಳಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ, ಪರಮಪವಿತ್ರವಾದ ವೀರಶೈವ ಸಿದ್ಧಾಂತವನ್ನು ಸೇತುಶೀತಾಚಲಪರ್ಯಂತವಾಗಿ ನೆಲೆಗೊಳಿಸಿ, ಈ ಮತದ ರಕ್ಷಣಾದಿಗಳ ಬಗ್ಗೆ ರಂಭಾಪುರಿ, ಉಜ್ಜಯಿನಿ, ಹಿಮಾಲಯ, ಶ್ರೀಶೈಲ, ಕಾಶಿ ಈ ಪಂಚಪುಣ್ಯಕ್ಷೇತ್ರಗಳಲ್ಲಿ ಪಂಚಧರ್ಮಪೀಠಗಳನ್ನು ಸ್ಥಾಪಿಸಿ, ಜಗದ್ವಂದ್ಯರಾಗಿರುವರಲ್ಲದೆ, ಆ ಮಹಿಮರ ಧರ್ಮಪೀಠಗಳು ಇಂದಿಗೂ ರಾಜಾಧಿರಾಜಮಾನ್ಯಗಳಾಗಿ ಮೆರೆಯುತ್ತಿರುವುವೆಂಬ ವಿಷಯವನ್ನು ಅರಿಕೆಮಾಡಿಕೊಳ್ಳಲು ಅತ್ಯಾನಂದವೆನಿಸುತ್ತದೆ, ಮಹಾಸ್ವಾಮಿ !

ಈ ಪಂಚಾಚಾರ್ಯಪೂಜ್ಯಪಾದರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದ ತಮ್ಮ ಪೀಠದ ಮೂಲಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಾದಿ ಮಹರ್ಷಿಗಳಿಗೂ, ವಿಭೀಷಣ, ವಿಕ್ರಮ ಮೊದಲಾದ ಚಕ್ರವರ್ತಿಗಳಿಗೂ ವೀರಶೈವ ಸಿದ್ಧಾಂತವನ್ನು ಬೋಧಿಸಿ, ಅನಂತಾನಂತ ಮಹಿಮೆಗಳ ದ್ವಾರಾ ಸರ್ವರ ಹೃದಯಭೂಮಿಯಲ್ಲಿ ಶಿವಭಕ್ತಿಬೀಜವನ್ನು ಬಿತ್ತಿ ನಮ್ಮ ಭರತ ಖಂಡವನ್ನು ಶಿವಭಕ್ತಿಮಯವನ್ನಾಗಿ ಮಾಡಿ ಈ ಮತದ ರಕ್ಷಣೆಗಾಗಿ ನಮ್ಮ ಧರ್ಮಪ್ರಭುಗಳವರ ಧರ್ಮರಾಜ್ಯದಲ್ಲಿ ರಾರಾಜಿಸುವ ರಂಭಾಪುರೀ ಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿ, ತನ್ಮೂಲಕ ಅನಾದಿಕಾಲದಿಂದ ಈ ಹೊತ್ತಿನವರೆಗೂ ಈ ಧರ್ಮರಾಜ್ಯದಲ್ಲಿರುವ ಶಿಷ್ಯಸಂದೋಹವನ್ನು ಪುನೀತವಾಗುವಂತೆ ಮಾಡಿರುವ ವಿಷಯವನ್ನು ಮಹಾಸನ್ನಿಧಾನದಲ್ಲಿ ಅರಿಕೆಮಾಡಿಕೊಳ್ಳಲು ಅತ್ಯಂತ ಸಂತೋಷವೆನಿಸುತ್ತದೆ, ಮಹಾಸ್ವಾಮಿ !

ಶ್ರೀ ರೇಣುಕಭಗವತ್ಪಾದಾಚಾರ್ಯರಿಂದ ಸ್ಥಾಪಿತವಾದ ತಮ್ಮ ಧರ್ಮಪೀಠವನ್ನು ಅನುಕ್ರಮವಾಗಿ ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯ, ಮುಕ್ತಿಮುನೀಶ್ವರ ಶಿವಾಚಾರ್ಯ, ದಿಗಂಬರಮುಕ್ತಿಮುನೀಶ್ವರ ಶಿವಾಚಾರ್ಯರೇ ಮೊದಲಾದ ೧೦೭ ಜನ ಆಚಾರ್ಯರು ಅಲಂಕರಿಸಿ, ಈ ಮತದ ಸನಾತನತ್ವವನ್ನು ದೃಢೀಕರಿಸುತ್ತಿರುವ ವಿಷಯವನ್ನು ಮಹಾಸನ್ನಿಧಿಯಲ್ಲಿ ನಿವೇದಿಸಲು ಪರಮಾನಂದವೆನಿಸುತ್ತದೆ, ಮಹಾಸ್ವಾಮಿ !

ಸಮಸ್ತಪವಿತ್ರಕ್ಷೇತ್ರಮಸ್ತಕಮಣೀಭೂತ ಶ್ರೀಮದ್ರಂಭಾಪುರೀ ಮಹಾಕ್ಷೇತ್ರದಲ್ಲಿ ವಿರಾಜಿಸುತ್ತಿರುವ ತಮ್ಮ ಮಹಾಧರ್ಮಪೀಠವು ಈ ಮೊದಲು ನಾಲ್ಕು ವರ್ಷಗಳವರೆಗೆ ಅನಾಥವಾಗಿದ್ದ ಸಮಯದಲ್ಲಿ ಯದುವಂಶಪಯಃಪಾರಾವಾರರಾಕಾಸುಧಾಕರೋಪಮಾನರೂ, ಸನಾತನಧರ್ಮಪರಿಪಾಲನಶೀಲರೂ, ಸತ್ಕೋದ್ಧರಣದೀಕ್ಷಿತರೂ, ಸಾಕ್ಷಾದ್ಧರ್ಮಾವತಾರಿಗಳೂ, ರಾಜರ್ಷಿಮಂಡಲಮಂಡನಾಯಮಾನರೂ ಆದ ನಮ್ಮನ್ನಾಳುವ ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಧರ್ಮಪೀಠದ ಮೇಲೆ ದಿವ್ಯದೃಷ್ಟಿಯನ್ನಿಟ್ಟು ವ್ಯಾಕರಣಾದಿ ಸಕಲ ಶಾಸ್ತ್ರತತ್ತ್ವವೇತ್ತರೂ, ಸದ್ಗುಣಗಣಮಂಡಿತರೂ, ಶಾಂತಾತ್ಮರೂ, ಜಗದ್ಗುರುಪದಲಕ್ಷಣಲಕ್ಷಿತರೂ ಆದ ತಮ್ಮನ್ನು ನಮ್ಮ ಜಗದ್ಗುರುಪೀಠಕ್ಕೆ ಅಧಿಪತಿಗಳನ್ನಾಗಿ ಮಾಡಿ ವೀರಶೈವ ಸಮಾಜಕ್ಕೆ ಅಸಾಧಾರಣವಾದ ಗೌರವವನ್ನು ಉಂಟುಮಾಡಿದುದಕ್ಕಾಗಿ ನಮ್ಮ ಧರ್ಮಪ್ರಭುಗಳು ಭರತಖಂಡದಲ್ಲಿ ವಾಸಿಸುವ ಸಮಸ್ತ ವೀರಶೈವಮಹಾಜನಗಳ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಾರೆಂಬ ವಿಷಯವನ್ನು ಅರಿಕೆಮಾಡಿಕೊಳ್ಳಲು ಆನಂದತುಂದಿಲಹೃದಯರಾಗಿದ್ದೇವೆ, ಮಹಾಸ್ವಾಮಿ !

ಮಹಾಸ್ವಾಮಿಯವರು ನಮ್ಮ ಧರ್ಮಪೀಠವನ್ನಾರೋಹಿಸಿದಮೇಲೆ ೯ ವರ್ಷಗಳವರೆಗೆ ಈ ರಾಜ್ಯದಲ್ಲೆಲ್ಲಾ ಸಂಚರಿಸಿ ಸಮಸ್ತ ಶಿಷ್ಯವೃಂದಕ್ಕೆ ತಮ್ಮ ಶುಭದರ್ಶನವನ್ನಿತ್ತು ಸರ್ವರನ್ನೂ ಪುನೀತರನ್ನಾಗಿ ಮಾಡಿ ಮಹೀಶೂರ ರಾಜ್ಯಕ್ಕೆ ದ್ವಿತೀಯ ರಾಜಧಾನಿಯೆನಿಸಿದ ಬೆಂಗಳೂರು ನಗರಕ್ಕೆ ದಯಮಾಡಿಸಿ, ಅಲ್ಲಿಂದ ನಮ್ಮಗಳ ಪ್ರಾರ್ಥನೆಯ ಮೇರೆಗೆ ನಮ್ಮ ಧರ್ಮಪ್ರಭುಗಳ ನಿತ್ಯಾವಾಸದಿಂದ ಧರ್ಮಭೂಮಿಯೆನಿಸಿರುವ ರಾಜಧಾನಿಗೆ ಬಿಜಯಮಾಡಿಸಿ, ಇಲ್ಲಿಯ ಶಿಷ್ಯಸಂದೋಹವನ್ನು ಆನಂದಸಾಗರದಲ್ಲಿ ಮುಳುಗಿಸಿದ ವಿಷಯವನ್ನು ಮಹಾಸನ್ನಿಧಾನದಲ್ಲಿ ನಿವೇದಿಸಲು ನಮ್ಮ ಸಂತೋಷಕ್ಕೆ ಪಾರವಿಲ್ಲದಾಗಿದೆ, ಮಹಾಸ್ವಾಮಿ !

ರಾಜಧಾನಿಯಲ್ಲಿ ಮಠಾಚಾರ್ಯರ ಸ್ಮಾರಕವಾಗಿ ಯಾವ ಧರ್ಮಸಂಸ್ಥೆಯೂ ಇಲ್ಲದಿರುವುದರಿಂದ ಅನೇಕ ಜನರು ಮಠಾಚಾರ್ಯರ ಸ್ವರೂಪವನ್ನೇ ತಿಳಿಯದಾಗಿರುವರು. ಆದುದರಿಂದ ಮಹಾಸನ್ನಿಧಿಯವರು ಈ ವಿಷಯವನ್ನು ದಿವ್ಯಚಿತ್ತಕ್ಕೆ ತಂದುಕೊಂಡು ಈ ಮಹಾರಾಜಧಾನಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಸ್ಮಾರಕವಾಗಿ "ಶ್ರೀ ರೇಣುಕಾಲಯ" ಎಂಬ ಪವಿತ್ರಾಭಿಧಾನದಿಂದ ಒಂದು ಗುರುಮಂದಿರವನ್ನು ನಿರ್ಮಿಸಿ ರಾಜಧಾನಿಯ ವೀರಶೈವರ ಮನೋಭಿಲಾಷೆಯನ್ನು ಪೂರ್ತಿಗೊಳಿಸಬೇಕೆಂದು ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ !

ಜಗದ್ವಿಖ್ಯಾತವಾದ ನಮ್ಮ ವೀರಶೈವಮತವು ಕಾಲಮಹಿಮೆಯಿಂದ ಅತ್ಯಂತ ಜೀರ್ಣಾವಸ್ಥೆಯನ್ನು ಹೊಂದುತ್ತಿರುವ ವಿಷಯವು ಮಹಾಸ್ವಾಮಿಯವರ ಚಿತ್ತಕ್ಕೆ ವೇದ್ಯವೇ ಆಗಿದೆ. ಆದರೂ ಇತ್ತೀಚೆಗೆ ಮಠಾಚಾರ್ಯರ ಅಮೋಘವಾದ ಉದಾರಾಶ್ರಯದಿಂದಲೂ, ಆಶೀರ್ವಾದ ಪ್ರಭಾವದಿಂದಲೂ ಈಗ ಅನೇಕ ಕಡೆಗೆ ಸಂಸ್ಕೃತಭಾಷೆಯು ಪ್ರಚಾರವಾಗಿ ಪ್ರಾಚೀನವೈದಿಕಧರ್ಮಸುಧಾರಣೆಯು ಹೆಚ್ಚುತ್ತ ನಡೆದಿರುವುದು ಈ ಮತಾಭಿವೃದ್ಧಿಯ ಶುಭಸೂಚನೆಯೆಂದೇ ಹೇಳಬಹುದಾಗಿದೆ. ಮಹಾಗುರುಗಳ ಸಂಚಾರದಿಂದ ನಮ್ಮ ಭರತ ಭೂಮಿಯಲ್ಲಿ ವಾಸಿಸುವ ವೀರಶೈವ ಜನಾಂಗವು ಪೂರ್ವದಂತೆ ಅಭಿವೃದ್ಧಿಯನ್ನು ಹೊಂದಿ ಸತ್ಯಸದ್ಧರ್ಮಾಚರಣೆಗಳಿಂದ ಈ ಜಗತೀತಲದಲ್ಲಿ ವಿರಾಜಿಸಲೆಂದೂ, ಶ್ರೀ ಜಗದ್ಗುರು ರೇಣುಕಾದಿ ಪೂರ್ವಾಚಾರ್ಯರ ಆಶೀರ್ವಾದಬಲದಿಂದಲೂ, ತಮ್ಮಗಳ ತಪಃಪ್ರಭಾವದಿಂದಲೂ ಸರ್ವತ್ರ ಬೆಳಗಲೆಂದೂ ಆ ಪೂಜ್ಯಪಾದರನ್ನು ಅಸಾಧಾರಣ ಭಕ್ತಿಭಾವದಿಂದ ಭಜಿಸಿ ಮಹಾಸನ್ನಿಧಾನದ ಆಶೀರ್ವಾದವನ್ನು ಕೋರುತ್ತೇವೆ, ಮಹಾಸ್ವಾಮಿ !

ಮೈಸೂರು,
ತಾ|| ೨೩—೯—೧೯೩೪.

ಮೈಸೂರು ರಾಜಧಾನಿಯ ಸ್ವಾಗತಸಮಿತಿಯ ಸದಸ್ಯರು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು

ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು

ಶ್ರೀಮನ್ಮಹಿಸೂರು ರಾಜಧಾನಿಗೆ ಆಗಮಿಸಿದ ಕಾಲದಲ್ಲಿ ಸ್ವಾಗತ ಮಂಡಳಿಯು ಸವಿನಯವಾಗಿ ಸಮರ್ಪಿಸಿದ

ಸ್ವಾಗತ ಪದ್ಯಪಂಚಕಂ.

ಭಾ|| ಷ|| ವಿನುತರಂಭಾಪುರಿಯ ವಿಲಸ |
ದ್ವನತರ ಶ್ರೀ ವೀರಸಿಂಹಾ |
ಸನದಧೀಶ್ವರರೇ ಸುಖಾಗಮನವೆ ಭವನ್ನನದೇ ||
ಅನಿಶಮುಂನೆರೆಗೊಂಡು ಪೂಜೆಯ |
ವನುವಿನಿಂ ಕೈಗೊಳ್ತ ಗಿರಿಸುತೆ |
ಯನಯನೊಲವಿಂ ಬಳೆಯುತಿಹವೇಂ ನಿಮ್ಮಕಮಲಗಳು ||೧||

ಶರಣಜನತಾನುಗ್ರಹಕ್ಕೆಂ |
ದಿರದೆ ಸಂಚರಿಸುತ್ತ ಹರಿದಂ |
ತರಗಳೊಳ್ ಶಿವಮತದ ತತ್ತ್ವವ ಮಂಡಿಗೇಯಿಸುತ ||
ಪರಮಗುರುರೇಣುಕಗಣಾಧಿಪ |
ನುರೆ ಧರಿತ್ರೀತಲದೆ ಮೆರೆದಂ |
ತಿರೆ ಗುರೂತ್ತಮ ಮೆರೆಯುತಿಹಿರೇಂ ವಿಜಯವೊಂದಿಹಿರೇಂ ||೨||

ವಾ|| ಷ|| ವರಶಿವಾನಂದರಾಜೇಂದ್ರಗುರುವರ್ಯರೇ |
ಸಿರಿಗನ್ನಡದ ರಾಜಧಾನಿಯಾಗಿತೆಯದೆ |
ದೊರೆವಡೆದ ಮೈಸೂರಿಗಾಗಮಿಸೆ ಬಸವಾಯ್ತು ಶೈವಜನ
ಭಾಗ್ಯೋದಯಂ ||
ದೊರೆತೊಂದುದಾಸ್ತಿಕರ ಪೂರ್ವಪುಣ್ಯದ ಬೆಳಸು |
ಧರಣೀಶ ನಾಲ್ವಡಿಯಕೃಷ್ಣೇಂದ್ರರಾಳ್ಕೆಯೊಳ್ |
ಕೊರತೆಯಿಲ್ಲದೆ ಧರ್ಮದಾಚರಣೆಗಾಸ್ತಿಕಮನೆಸಗಿ ಸಿದ್ಧಿಂಗರಾಗ||

ಶಾ|| ಷ|| ಬಳೆಯಲಿ ನಿಮ್ಮಯ ಶಾಸ್ತ್ರಪ್ರವಚನ |
ಮಲಸದೆ ನಿಮ್ಮಯ ಶಿಷ್ಯಪ್ರಕರವು |
ತೊಳಗುವ ಲಿಂಗಾಂಗದೆ ಸಮರಸತೆಯ ಶಿವಾಂತಃಸ್ಫುರಣೆ ||
ಕಳೆಯಲಿ ಮಂಜಿಯ ಮಾಯಾತಿಮಿರವು |
ಬೆಳೆಯಲಿ ಶೈವಾಗಮಶಶಿಕಿರಣವು |
ನಲವಿಳೆಯೆಲ್ಲಂ ರೇಣುಕನಾಮದ ಪಾಠಲಿ ಪಾಲಿರುಳು ||೪||

ನಿಮ್ಮಯ ಶಿಷ್ಯರು ಚತುರಾಶನರೇ |
ನಿಮ್ಮಯ ಪರಿವಾರವು ಚಿನ್ಮಯವಲೆ |
ನಿಮ್ಮಯ ದರ್ಶನಭಾಗ್ಯವನಾಂತರು ಪುರುಷೋತ್ತಮರಲ್ತೇ ||
ನಿಮ್ಮಂ ಸತ್ಕರಿಸಿದರೇ ವಿಬುಧರು |
ನಿಮ್ಮಂ ಧ್ಯಾನಿಸಿದವರೆ ಕೃತಾರ್ಥರು |
ನಿಮ್ಮಾಗಮನದೆ ನಮ್ಮಯ ನಾಡಿದು ಧನ್ಯಂ ತಾನಾಯ್ತು ||೫||

ಆಸ್ಥಾನವಿದ್ವಾನ್ ನಂ. ಶ್ರೀಕಂಠಶಾಸ್ತ್ರಿಕೃತ.

ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ

ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸನ್ನಿಧಾನದಲ್ಲಿ

ಮೈಸೂರು ರಾಜಧಾನಿಯ ಸಂತೇಪೇಟೆ ವರ್ತಕ ಮಂಡಳಿಯವರು ಸಭಕ್ತಿವಿನಯವಾಗಿ ಸಮರ್ಪಿಸಿದ ವಿಜ್ಞಾಪನಾಪತ್ರಿಕೆ.

ಮಹಾಸ್ವಾಮಿ,

ವೀರಶೈವಮತಸ್ಥಾಪಕರಾದ ಶ್ರೀಮತ್ಪಂಚಾಚಾರ್ಯರಲ್ಲಿ ವಿಶೇಷ ಪ್ರಸಿದ್ಧಿಯನ್ನು ಪಡೆದಿರುವ ಶ್ರೀ ಜಗದ್ಗುರು ರೇಣುಕಾಚಾರ್ಯರ ಧರ್ಮಪೀಠವು ನಮ್ಮ ಧರ್ಮಪ್ರಭುಗಳ ಧರ್ಮರಾಜ್ಯದಲ್ಲಿ ಪರಿಶೋಭಿಸುತ್ತಿರುವ ವಿಷಯವು ಸರ್ವತ್ರ ಸುಪ್ರಸಿದ್ಧವಾಗಿದೆ. ಇಂಥ ಮಹಾಪೀಠಕ್ಕೆ ನಮ್ಮ ಮಹಾಪ್ರಭುಗಳವರ ಅಪ್ಪಣೆಯ ಮೇರೆಗೆ ಘನ ಸರ್ಕಾರದವರು ಸಕಲಶಾಸ್ತ್ರಪಾರಂಗತರಾದ ತಮ್ಮನ್ನು ಅಧಿಪತಿಗಳನ್ನಾಗಿ ಮಾಡಿ ರೇಣುಕಪೀಠದ ವೈಭವವನ್ನು ಸರ್ವತ್ರ ಪ್ರಕಾಶಪಡಿಸಿದುದಕ್ಕಾಗಿ ನಾವು ಅತ್ಯಂತ ಸಂತೋಷಪಡುತ್ತೇವೆ, ಮಹಾಸ್ವಾಮಿ !

ತಾವು ೧೫-೧೬ ವರ್ಷಗಳವರೆಗೆ ವಿದ್ಯಾನಿಧಿಯಾದ ಕಾಶೀಕ್ಷೇತ್ರದಲ್ಲಿದ್ದು ವ್ಯಾಕರಣಶಾಸ್ತ್ರದಲ್ಲಿ ಅಸಾಧಾರಣವಾದ ಪಾಂಡಿತ್ಯವನ್ನು ಪಡೆದು ಕಲಕತ್ತಾ ಗವರ್ನಮೆಂಟಿನವರಿಂದ "ವ್ಯಾಕರಣತೀರ್ಥ" ಎಂಬ ಮಹಾಪ್ರಶಸ್ತಿಯನ್ನು ಪಡೆದು ತಮ್ಮ ವಿದ್ವತ್ತ್ವಭಾವವನ್ನು ಸರ್ವತ್ರ ಹರಡುತ್ತ ಪಂಡಿತಮಂಡಲಿಯ ಸ್ತೋತ್ರಕ್ಕೆ ಪಾತ್ರರಾಗಿ ಸದಾ ವೇದಾಂತ ವಿಚಾರದಲ್ಲಿಯೂ ಬ್ರಹ್ಮಚಿಂತನೆಯಲ್ಲಿಯೂ ಕಾಲ ಕಳೆಯುತ್ತಿರುವ ವಿಷಯವು ಸರ್ವಜನಾಂಗದವರ ಭಕ್ತಿವಿಶ್ವಾಸಗಳನ್ನೂ ಹೆಚ್ಚಿಸಲು ಮೂಲಸಾಧನವಾಗಿದೆ, ಮಹಾಸ್ವಾಮಿ !

ತಾವು ಶ್ರೀ ಗುರುಪೀಠದ ಅಧಿಕಾರವನ್ನು ಈಗ್ಗೆ ೯ ವರ್ಷಗಳ ಪೂರ್ವದಲ್ಲಿ ವಹಿಸಿ ಮೈಸೂರು ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸಿ ತಮ್ಮ ವಿದ್ವತ್ಪ್ರಭೆಯಿಂದಲೂ, ತಪಃಪ್ರಭಾವದಿಂದಲೂ ಸರ್ವರ ಭಕ್ತಿ ವಿಶ್ವಾಸಗಳಿಗೂ ಪಾತ್ರರಾಗಿರುವ ವಿಷಯವನ್ನು ಕೇಳಿ ಪರಮಾನಂದಗೊಳ್ಳುತ್ತೇವೆ. ತಾವು ಸಕಲ ಮತ ತತ್ತ್ವಜ್ಞರಾಗಿ ಎಲ್ಲಾ ಮತದವರಲ್ಲಿಯೂ ಸಮಾನವಾದ ದೃಷ್ಟಿಯನ್ನಿಟ್ಟು ಸರ್ವಜನಾಂಗದವರಲ್ಲಿಯೂ ಪ್ರೇಮವನ್ನು ತೋರ್ಪಡಿಸುತ್ತಿರುವಿರಿ.

ತಾವು ಮೈಸೂರು ರಾಜಧಾನಿಯ ವೀರಶೈವರ ಪ್ರಾರ್ಥನೆಯಮೇರೆಗೆ, ಇಂದು ರಾಜಧಾನಿಗೆ ನಮ್ಮ ಮಹಾಪ್ರಭುಗಳವರು ದಯಪಾಲಿಸಿರುವ ವಿಶೇಷ ರಾಜಮರ್ಯಾದೆಗಳೊಡನೆ ಆಗಮಿಸಿ ಸಕಲ ಜನಾಂಗದವರಿಗೂ ತಮ್ಮ ಶುಭದರ್ಶನವನ್ನಿತ್ತುದು ನಮ್ಮಗಳ ಪುಣ್ಯೋದಯವೆಂದೇ ಭಾವಿಸುತ್ತೇವೆ, ಮಹಾಸ್ವಾಮಿ !

ಶಿವಪೂಜಾಲೋಲರೂ ತಪೋನಿಧಿಗಳೂ ಮಂಗಲಮೂರ್ತಿಗಳೂ ಆದ ಮಹಾಸನ್ನಿಧಿಯವರು ಸದಾ ವ್ಯಾಪಾರಾದಿ ಲೌಕಿಕಕಾರ್ಯಗಳಲ್ಲಿ ನಿರತರಾದ ನಮ್ಮಗಳಮೇಲೆ ಕರುಣಾಕಟಾಕ್ಷವನ್ನಿಟ್ಟು ಅನುಗ್ರಹಿಸಬೇಕೆಂದು ಬೇಡುತ್ತೇವೆ ಮಹಾಸ್ವಾಮಿ !

ಮೈಸೂರು ರಾಜಧಾನಿ,
ತಾ|| ೨೩—೯—೧೯೩೪.

ಸಂತೇಪೇಟೆ ವರ್ತಕಮಂಡಳಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ

ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ರಾಜಧಾನಿಯಾದ ಮೈಸೂರಿಗೆ ಬಿಜಮಾಡಿದ ಉತ್ಸವಸಮಾರಂಭದಲ್ಲಿ ವಿಜ್ಞಾಪಿಸಿಕೊಂಡ

ಪಂಚರತ್ನಮಾಲಿಕೆ.

ಸಲ್ಲಿಸಲು ಶಿವನಾಜ್ಞೆಯನು ಧರೆ |
ಯಲ್ಲಿ ಮೆರೆವಾ ಕೆಲಗುರಾಷ್ಟ್ರದ |
ಕೊಲ್ಲಿಪಾಕಿಯೊಳೆಸೆವ ಸೋಮೇಶಾಖ್ಯಲಿಂಗದೊಳು ||
ಎಲ್ಲರುಂ ನೋಳ್ಪಂತೆ ಪೊರಮಡು |
ತಲ್ಲಿ ರೇಣುಕಸಿದ್ಧನಾಮದಿ |
ನೆಲ್ಲ ಭಕ್ತರ ಪೊರೆದ ಗುರುವರನೀಗೆ ಮಂಗಲವ ||೧||

ಆ ಗುರೂತ್ತಮವೀರಪೀಠದೊ |
ಳೀಗ ಮಂಡಿಸಿ ನಿರುತಮಾತಿವ |
ಯೋಗದೊಳ್ವಿಹರಿಪ ಶಿವಾನಂದಾಖ್ಯಗುರುವರನೆ ||
ಸ್ವಾಗತವು ನಿನಗಕ್ಕೆ ಸಮ್ರಾ |
ಡ್ಯೋಗಿ ಕೃಷ್ಣಕ್ಷಿತಿಪನಾಳ್ವ ಸು |
ಯೋಗದೀ ವರರಾಜಧಾನಿಗೆ ಧರ್ಮವಾಹಿನಿಗೆ ||೨||

ಈಜಗದೆ ಸದ್ಧರ್ಮರೂಪದ |
ರಾಜನಾಳ್ವೀಪುರದೆ ನಿಮ್ಮಯ |
ಪೂಜೆಯಾಹ್ನಿಕಮಂತೆ ಶಾಸ್ತ್ರಪ್ರವಚನಾದಿಗಳು ||
ರಾಜಿಸುತೆ ನಿರ್ವಿಘ್ನದಿಂದೀ |
ರಾಜಧಾನಿಯೊಳಿರ್ಪ ಭಕ್ತಸ |
ಮಾಜಕೀಯಲಿ ಪರತರಾನಂದವನುಶಾಂತಿಯನು||೩||

ಅವನಿಯೊಳ್ ಸದ್ಭಕ್ತನಿಗೆ ಸಂ |
ಭವಿಪ ಭವತಾಪವನು ತೊಲಗಿಸ |
ತವನ ಶಿವನಂ ಮಾಳ್ದು ನಿತ್ಯಾನಂದವನು ಕುಡುತೆ ||
ಅವಿರತಂ ಗುರುರೂಪದಿಂದೀ |
ಬುವಿಯೊಳೆಸೆವುದರಿಂದೆ ಗುರುವರ |
ತವ ಶಿವಾನಂದಾಭಿಧಾನವು ಸಾರ್ಥಮಹುದಲ್ತೆ ||೪||

ಮಂಗಲಂ ಸಿತಭಸಿತಲಸಿತಗೆ |
ಮಂಗಲಂ ವಿದ್ಯಾಭಿರಾಮಗೆ |
ಮಂಗಲಂ ವರವೀರಶೈವಜಗದ್ಗುರೂತ್ತಮಗೆ ||
ಮಂಗಲಂ ಬುಧವಿತತಿಗೀತಗೆ |
ಮಂಗಲಂ ಧೃತವೀರಪೀಠಗೆ |
ಮಂಗಲಂ ನುತಗುಣ ಶಿವಾನಂದಾಖ್ಯಗುರುವರಗೆ ||೫||

ಎಂ. ಎಸ್. ಬಸವಲಿಂಗಯ್ಯ,
ಅ|| ಕ್ಯೂರೇಟರ್, ಗ|| ಓರಿಯೆಂಟಲ್
ಲೈಬ್ರರಿ, ಮೈಸೂರು.

ಪುರಾಣ ಸಮಾಪ್ತಿ ಸಮಾರಂಭ.

ಕೊಪ್ಪಳ ಜಿಲ್ಲಾ ಯರೇಹಂಚಿನಾಳ ಗ್ರಾಮದ ಭಕ್ತರು ಪ್ರತಿವರ್ಷದ ಪದ್ಧತಿಯಂತೆ ಈ ವರ್ಷವೂ ಶ್ರಾವಣಮಾಸದಲ್ಲಿ ಮಹಾಕೋಟಿಮಹತ್ವವೆಂಬ ಪುರಾಣವನ್ನು ಪ್ರಾರಂಭಿಸಿ ಪುರಾಣಸಮಾಪ್ತಿಯ ಕಾಲಕ್ಕೆ ಅಬ್ಬಿಗೇರಿ ಶ್ರೀ ಅರಳೆಲೆಮಠದ ಪಟ್ಟಾಧ್ಯಕ್ಷರನ್ನು ಬರಮಾಡಿಕೊಂಡು ತಮ್ಮ ಗ್ರಾಮದಲ್ಲಿರುವ ಪ್ರಸಿದ್ಧವಾದ ಪುರಾತನ ಬಿಲ್ವವನದಲ್ಲಿ ಮಹಾಗಣಾರಾಧನೆಯನ್ನೂ, ಮರುದಿವಸ ತಳಿರುತೋರಣಗಳಿಂದಲಂಕೃತವಾದ ರಾಜಬೀದಿಗಳಲ್ಲಿ ಶ್ರೀಗಳವರ ಅಡ್ಡಪಲ್ಲಕ್ಕಿ ಮಹೋತ್ಸವವನ್ನೂ ಅತ್ಯಂತ ವೈಭವದಿಂದ ನೆರವೇರಿಸಿದರು. ದಾರಿಯುದ್ದಕ್ಕೂ ನೆರೆದಿದ್ದ ಭಕ್ತಶ್ರೇಷ್ಠರ ಜಯಘೋಷದಿಂದಲೂ ಭಜನಾಸಂಘದವರ ಗುರುಭಜನೆಯಿಂದಲೂ, ಬಾಜಾಬಜಂತ್ರಿ ಮೊದಲಾದ ವಾದ್ಯವಿಶೇಷದಿಂದಲೂ, ಉತ್ಸವಕ್ಕೆ ಅಪೂರ್ವಶೋಭೆಯುಂಟಾಗಿತ್ತು. ಹೀಗೆ ಉತ್ಸವವು ಅತ್ಯಂತ ವೈಭವದಿಂದ ಪುರಮಧ್ಯದಲ್ಲಿರುವ ಶ್ರೀವೀರಭದ್ರದೇವರ ಗುಡಿಗೆ ಬಂದನಂತರ ಶ್ರೀಗಳವರು ಪಲ್ಲಕ್ಕಿಯಿಂದಿಳಿದು ಸಿಂಗರಿಸಲ್ಪಟ್ಟ ಸಿಂಹಾಸನದ ಮೇಲೆ ಮೂರ್ತಮಾಡಿದರು. ಅನಂತರ ಅಲ್ಲಿ ನೆರೆದಿದ್ದ ಪಂಡಿತಜನರಿಂದ ಧರ್ಮಸಂಬಂಧ ಭಾಷಣಗಳೂ, ಪುರಾಣ ಸಮಾಪ್ತಿಯೂ ಆದನಂತರ 'ಪಂಚಾಚಾರ್ಯ ಮಹಾರಾಜಕೀ ಜೈ' ಎಂಬ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಕೊಟ್ರಪ್ಪ ಕಮತರ, ನಿಂಗಪ್ಪ ಹಳ್ಳಿಗುಡಿ, ಬಸಪ್ಪ ಪರೇಗಲ್ಲ, ನಿಂಗಪ್ಪ ಅಸೂಟಿ, ಗುರುಪ್ಪ ಸೋಮರಡ್ಡಿ, ಪರಪ್ಪ ಗಡೆದ, ಶಿವಬಸಪ್ಪ ಮುಂಡರಗಿ, ಈರಪ್ಪ ವಾಲಿಕೊಪ್ಪ, ರಾ|| ರೇಚಪ್ಪ.

ವ್ಯವಸ್ಥಾಪಕರು.

60 ರೂ. ಗೆ ಒಂದು ಮೋಟಾರ್ !

ಹೆವರ್ಡ್‌ಬಾಯ್ಸ್ ಎಂಬ ಒಬ್ಬ ಬ್ರಿಟಿಷ್ ಇಂಜನಿಯರು 60 ರೂ. ಗಳ ವೆಚ್ಚದಿಂದ ಒಂದು ಮೋಟಾರನ್ನು ಸ್ವಂತವಾಗಿ ತಯಾರಿಸಿರುತ್ತಾರೆ. ಈ ಮೋಟಾರು ಒಂದು ಗ್ಯಾಲನ್ ಪೆಟ್ರೋಲಿಗೆ 100 ಮೈಲುಗಳ ದೂರ ಹೋಗುವುದಂತೆ ! ಮಿ|| ಬಾಯ್ಸ್‌ರವರು ಈ ಮೋಟಾರಿನಲ್ಲಿ ಇದುವರೆಗೆ 1,50,000 ಮೈಲುಗಳ ಸಂಚಾರಮಾಡಿರುವರು. ಮೋಟಾರಿನ ಆಕಾರವು ಬಹಳ ನಮೂನೆಯಾಗಿದ್ದು, ಇಂಡಿಯಾ ಮತ್ತು ಸ್ವೀಡ್‌ದೇಶದ ವರ್ತಕರು ಅವುಗಳ ಏಜನ್ಸಿಗೆ ವ್ಯವಹಾರಮಾಡುತ್ತಿರುವರು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಶುಭಾಗಮನ, ಮೈಸೂರು.

ಸಾಕ್ಷಾದ್ಧರ್ಮಾವತಾರಿಗಳೂ, ಸಮಸ್ತ ಸನಾತನ ವೈದಿಕಧರ್ಮಪರಿಪಾಲನ ಶೀಲರೂ, ಚಾಮುಂಡೀಚರಣಾಬ್ಜಲೋಲರೂ, ಪೃಥಿವೀವಲಯಪ್ರಕಾಶಿತ ಯದು ವಂಶಪ್ರಭಾಪ್ರಸರಣೈಕಮೂಲರೂ, ರಾಜರ್ಷಿಮಂಡಲಮಂಡನಾಯಮಾನರೂ, ಸತ್ಕ್ಷೇತ್ರೋದ್ಧರಣದೀಕ್ಷಿತರೂ, ಸಾಕ್ಷಾದ್ಧರ್ಮಾವತಾರಿಗಳೂ ಆದ ಶ್ರೀಕೃಷ್ಣ ರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಅರಮನೆಯವತಿ ಯಿಂದ ೧೧ ತೋಪುಗಳ ಗೌರವವನ್ನು ದಯಪಾಲಿಸಿದ್ದರು. ಅಲ್ಲದೆ ಆನೆ, ಕುದುರೆ, ಮ್ಯಾನಾ, ಬಾರ್‌ಸಿಪಾಯಿಗಳು, ಬ್ಯಾಂಡಿನವರು, ನಾನಾತರಹದ ವಾದ್ಯ ದವರು, ಬೆಳ್ಳಿಕಟ್ಟಿಗೆಯವರು, ಹಸುರುಕಟ್ಟಿಗೆಯವರು, ಹಗಲುದೀವಟಿಗೆ, ಛತ್ರಿ, ಚಾಮರ, ಚೌರಿ ಮೊದಲಾದ ರಾಜಬಿರುದುಗಳನ್ನು ದಯಪಾಲಿಸಿದ್ದರು. ಇದ ರಿಂದ ಶ್ರೀ ಜಗದ್ಗುರುಗಳವರ ಮಹೋತ್ಸವಕ್ಕೆ ಅಸಾಧಾರಣವಾದ ಶೋಭೆಯುಂ ಟಾಗಿತ್ತು. ಉತ್ಸವದಲ್ಲಿ ಜನಸ್ತೋಮವು ಸಮುದ್ರದಂತೆ ವ್ಯಾಪಿಸಿತ್ತು. ಒಟ್ಟಿಗೆ ರಾಜಧಾನಿಯಲ್ಲಿ ಇಂದಿನವರೆಗೆ ಈ ತರಹದ ಮಹೋತ್ಸವವು ಯಾವಗುರುಗಳ ವರದೂ ನೆರವೇರಿಲ್ಲವೆಂದು ನಗರನಿವಾಸಿಗಳು ಮುಕ್ತಕಂಠದಿಂದ ಸಾರುತ್ತಿ ರುವರು. ಸನಾತನಧರ್ಮವನ್ನು ರಕ್ಷಿಸುತ್ತಿರುವ ಯದುವಂಶವು ಈ ಧರಾಮಂಡಲ ದಲ್ಲಿ ಆಚಂದ್ರಾರ್ಕವಾಗಿ ಮೆರೆಯಲಿ! ನಮ್ಮ ಧರ್ಮಪ್ರಭುವಿಗೆ ಮಂಗಲವಾಗಲಿ!!

ಮೈಸೂರು ರಾಜಧಾನಿಯಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಅಭೂತಪೂರ್ವಮಹೋತ್ಸವ.

ಭರತಖಂಡದಲ್ಲಿ ದೇವೇಂದ್ರನ ಅಮರಾವತಿಯಂತೆ ರಾರಾಜಿಸುತ್ತಿರುವ ಮೈಸೂರು ರಾಜಧಾನಿಯಲ್ಲಿ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸುವರ್ಣರಜತಾಂದೋಲಿಕಾಮಹೋತ್ಸವವು ನಿನ್ನೆಯ ದಿವಸ (ತಾ|| ೨೩—೯—೧೯೩೪) ಅಭೂತಪೂರ್ವವಾಗಿ ನೆರವೇರಿತು. ಈ ಮಹೋತ್ಸವಕ್ಕಾಗಿ ಸೊಲ್ಲಾಪುರ-ವಿಜಾಪುರ-ಬಾರ್ಸಿ-ಹುಟಗಿ-ರಾಯಚೂರು-ಗುಲಬರ್ಗಾ-ಧಾರವಾಡ-ಹುಬ್ಬಳ್ಳಿ-ಗದಗ-ಕುಂದಗೋಳ-ಹಾವೇರಿ-ಕೊಟ್ಟೂರು-ಬಳ್ಳಾರಿ-ಇದವಾನಿ, ಹರಿಹರ, ದಾವಣಗೆರೆ, ಬೀರೂರು, ಅರಸೀಕೆರೆ, ತಿಪಟೂರು, ತುಮಕೂರು, ಗುಬ್ಬಿ, ಕುಣಿಗಲು, ಯಡಿಯೂರು, ಕೃಷ್ಣರಾಜಪೇಟೆ, ನೆಲಮಂಗಲ, ಮಾಗಡಿ, ಬಿಡದಿ, ಚನ್ನಪಟ್ಟಣ, ಕೊಳ್ಳೇಗಾಲ ಮೊದಲಾದ ನಾನಾಪ್ರಾಂತಗಳಿಂದ ಅಸಂಖ್ಯಜನರು ಆಗಮಿಸಿದ್ದರು. ಬೆಂಗಳೂರಿಂದ ೫೦೦ ಜನಗಳಿಂದ ಯುಕ್ತವಾದ "ಶ್ರೀ ಜಗದ್ಗುರು ರೇಣುಕಾಚಾರ್ಯ ಸ್ಪೆಷಲ್ ಟ್ರೇನ್" ಎಂಬ ಪವಿತ್ರಾಭಿಧಾನದಿಂದ ಒಂದು ದೊಡ್ಡ ರೈಲ್ವೆಗಾಡಿಯೇ ಆಗಮಿಸಿತ್ತು. ಈ ರೀತಿ ಪ್ರಚಂಡಜನಸ್ತೋಮದಿಂದ ಕೂಡಿದ ಈ ಮಹೋತ್ಸವವು ರಾಜಧಾನಿಯ ಉಕ್ಕಡದಿಂದ ಪ್ರಾರಂಭವಾಯಿತು. ಅಲ್ಲಿ ತರುಪಲ್ಲವ ಫಲಪುಷ್ಪಾದಿಗಳಿಂದ ಭವ್ಯವಾಗಿ ನಿರ್ಮಿತವಾಗಿದ್ದ ಪೆಂಡಾಲಿಗೆ ಮೊದಲೇ ಮೈಸೂರು ಡಿ|| ಡೆಪ್ಯುಟಿಕಮಿಷನರ್ ಸಾಹೇಬರವರು, ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು, ಸಬ್‌ಡಿವಿಜನ್ ಆಫೀಸರವರು, ಸಿಟಿ ಮ್ಯಾಜಿಸ್ಟ್ರೇಟ್ ಸಾಹೇಬರವರು, ತಾಲೂಕು ಅಮಲ್ದಾರ್ ಸಾಹೇಬರವರೇ ಮೊದಲಾದ ಮುಖ್ಯಮುಖ್ಯ ಸರಕಾರಿ ಅಧಿಕಾರಿಗಳೂ, ನಮ್ಮ ಮಹಾಪ್ರಭುಗಳವರ ಅ|| ಪ್ರೈವೇಟ್ ಸೆಕ್ರೆಟರಿಗಳೇ ಮೊದಲಾದ ಅರಮನೆಯ ಅಧಿಕಾರಿಗಳೂ, ಸಿಟಿ ಮುನಿಸಿಪಲ್ ಪ್ರೆಸಿಡೆಂಟರವರು, ವೈಸ್‌ಪ್ರೆಸಿಡೆಂಟರವರು, ಹೆಲ್ತ್‌ಆಫೀಸರವರೇ ಮೊದಲಾದ ಪೌರಸಭಾಧಿಕಾರಿಗಳೂ, ಶ್ರೀಮಾನ್ ಕೆ. ಬಸವರಾಜ ಅರಸರವರು, ಲೋಕಹಿತೈಷಿ ಎಚ್. ನಂಜುಂಡರಾಜ ಅರಸರವರು, ದರ್ಬಾರ ಭಕ್ಷಿ ಲಿಂಗರಾಜ ಅರಸರವರು, ರಾ|| ಮು|| ಭಕ್ಷಿ ಲಿಂಗರಾಜ ಅರಸರವರು ಇವರೇ ಮೊದಲಾದ ರಾಜಬಂಧುಗಳೂ ಮೈಸೂರು ಸಿಟಿಯ ಸಕಲ ಮತಗಳ ಶ್ರೀಮಂತರೂ, ಸಮಸ್ತ ವರ್ತಕಮಹಾಶಯರೂ, ಭರತಖಂಡದ ನಾನಾಭಾಗಗಳಿಂದ ಬಂದ ಅಗಣಿತಜನ ಭಕ್ತರೂ ಆಗಮಿಸಿದ್ದರಲ್ಲದೆ, ನಮ್ಮ ಮಹಾಪ್ರಭುಗಳವರಿಂದ ದಯಪಾಲಿಸಲ್ಪಟ್ಟ ಅರಮನೆಯ ಮರ್ಯಾದೆಗಳೂ, ಮಹಾಪೀಠದ ಸಮಸ್ತ ಬಿರುದುಗಳೂ ಸಿದ್ಧವಾಗಿದ್ದವು. ಸಾಕ್ಷಾದ್ಧರ್ಮಾವತಾರಿಗಳೂ ರಾಜರ್ಷಿಪುಂಗವರೂ ಆದ ನಮ್ಮ ಮಹಾಪ್ರಭುಗಳವರು ಅರಮನೆಯಿಂದ ೩ ಆನೆಗಳು, ೧೧ ಕುದುರೆಗಳು, ೧೩ ಜನ ಬಾರ್ ಸಿಪಾಯಿಗಳು, ಅವರ ಮೇಲ್ಪಟ್ಟವರು, ೧೮ ಜನ ಬ್ಯಾಂಡಿನವರು, ತಾಸಾಮಾರ್ಪ-ವಾಲಗದವರು-ಶಿಂಗು ೧೨ ಜನ ಕಟ್ಟಿಗೆಯವರು, ೧೩ ಜನ ಬೆಳ್ಳಿಕಟ್ಟಿಗೆಯವರು, ೧೨ ಜನ ಹಸರುಕಟ್ಟಿಗೆಯವರು, ಹಗಲುದೀವಟಿಗೆ, ಛತ್ರಿ, ಚಾಮರ, ಚೌರಿ, ಮ್ಯಾನಾ ಇತ್ಯಾದಿ ರಾಜಮರ್ಯಾದೆಗಳನ್ನು ದಯಪಾಲಿಸಿದ್ದರಲ್ಲದೆ ೧೧ ತೋಪುಗಳ ಗೌರವವನ್ನೂ ದಯಪಾಲಿಸಿದ್ದರು. ಶ್ರೀ ಜಗದ್ಗುರುಗಳವರು ಅರಮನೆಯ ಮ್ಯಾನಾದಲ್ಲಿ ಆರೂಢರಾಗಿ ನಿಯಮಿತ ಸ್ಥಳಕ್ಕೆ ಬಿಜಯಂಗೈಸಿದರು. ಕೂಡಲೇ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕಿ ಜೈ" ಎಂಬ ಗುರುನಾಮ ಜಯಘೋಷವು ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿತು. ಬಳಿಕ ಸರಕಾರಿ ಅಧಿಕಾರಿಗಳ, ರಾಜಬಂಧುಗಳ, ಪುರಪ್ರಮುಖರಾದಿಗಳ ಕುಶಲಪ್ರಶ್ನೆಗಳಾದವು. ಅನಂತರ ಉತ್ಸವವು ಪ್ರಾರಂಭವಾಯಿತು. ಅರಮನೆಯ ಬಿರುದುಗಳೂ, ಮಹಾಸಂಸ್ಥಾನದ ಬಿರುದುಗಳೂ ಸಾಲುಸಾಲಾಗಿ ಸಾಗಿ ಈ ಮಹೋತ್ಸವಕ್ಕೆ ಅಭೂತಪೂರ್ವವಾದ ಶೋಭೆಯನ್ನುಂಟುಮಾಡಿದ್ದವು. ಈ ಮಹೋತ್ಸವದ ಶೋಭೆಯ ವರ್ಣನವನ್ನು ಮಾಡಲು ಈ ಲೇಖನಿಯು ಎಂದೂ ಸಮರ್ಥವಾಗಲಾರದು. ಮಹೋತ್ಸವವು ೯|| ಘಂಟೆಗೆ ಸರಿಯಾಗಿ ಪ್ರಾರಂಭವಾಗಿ ಅಸಾಧಾರಣವಾದ ವೈಭವವಿಶೇಷದೊಡನೆ ದೊಡ್ಡಪೇಟೆಯ ಮಾರ್ಗವಾಗಿ ಸಾಗಿತು.

ಗಣನಾತೀತವಾದ ಜನಸ್ತೋಮದ ಮಧ್ಯದಲ್ಲಿ ಅನಿತರ ಸಾಧಾರಣ ವೈಭವದೊಡನೆ ಹೊರಟ ಈ ಮಹೋತ್ಸವವನ್ನು ನೋಡಿ ಮಹಾಜನಗಳು ಇದೊಂದು ಚಿಕ್ಕ ನವರಾತ್ರಮಹೋತ್ಸವವೇ ಸರಿ! ಎಂದು ಉದ್ಗಾರವನ್ನು ತೆಗೆಯುತ್ತಿದ್ದರು. ಈ ರೀತಿಯಾದ ಅನನ್ಯಾದೃಶವೈಭವದಿಂದ ಯುಕ್ತವಾದೀ ಮಹೋತ್ಸವವು ದೊಡ್ಡಗಡಿಯಾರದ ಚೌಕಕ್ಕೆ ಬಂದಕೂಡಲೇ ಗೌರವಾರ್ಥವಾಗಿ ೧೧ ತೋಪುಗಳು ಹಾರಿಸಲ್ಪಟ್ಟವು. ತೋಪುಗಳ ಅತ್ಯದ್ಭುತಧ್ವನಿಯು ಸಮುದ್ರದಂತಿದ್ದ ಜನಸ್ತೋಮದ ಸಂತೋಷವನ್ನು ಮೀರೆದಿಸಿತು. ಆ ದಿವಸ ಪ್ರಾತಃಕಾಲವೇ ನಮ್ಮ ಮಹಾಪ್ರಭುಗಳವರು ಪೂನಾಪಟ್ಟಣದಿಂದ ದಯಮಾಡಿಸಿದರೆಂಬ ಮಹಾನಂದವಾರ್ತೆಯು ನಗರದಲ್ಲಿ ವ್ಯಾಪಿಸಿದಕೂಡಲೇ ಮಹಾಜನಗಳ ಸಂತೋಷವು ನೂರ್ಮಡಿಯಾಯಿತು. ಈ ರೀತಿಯಾದ ಸಂತೋಷಾತಿಶಯದಿಂದ ಮಹೋತ್ಸವವು ದೇವರಾಜಮಾರ್ಕೆಟ್ಟಿನ ಮಾರ್ಗವಾಗಿ ಸಂತೇಪೇಟೆಯನ್ನು ಪ್ರವೇಶಿಸಿತು. ಅಲ್ಲಿಯ ವರ್ತಕರೆಲ್ಲರೂ ಶ್ರೀಗಳವರಿಗೆ ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಿದರು. ಅಲ್ಲಿಂದ ಉತ್ಸವವು ಅಂಗಡಿಬೀದಿಯಮಾರ್ಗವಾಗಿ ವಾಣೀವಿಲಾಸ ಮಾರ್ಕೆಟ್ಟಿಗೆ ಆಗಮಿಸಿತು. ಅಲ್ಲಿ ವರ್ತಕಮಹಾಶಯರು ಶ್ರೀಗಳವರಿಗೆ ಅಡ್ರೆಸ್ಸನ್ನೊಪ್ಪಿಸಿದರು. ಅಲ್ಲಿಂದ ಮಹೋತ್ಸವವು ವಾಣೀವಿಲಾಸರೋಡಿನ ಮಾರ್ಗವಾಗಿ ಹೊರಟು ಶ್ರೀಗಳವರ ವಾಸಕ್ಕಾಗಿ ಸಿದ್ಧಪಡಿಸಿದ್ದ ಶ್ರೀಮಾನ್ ಎಂ. ವಿ. ಸಂಜೀವರಾಜ ಅರಸರವರ ರಾಜಭವನಕ್ಕೆ ಬಂದು ತಲ್ಪಿತು. ಶ್ರೀಗಳವರು ಪಲ್ಲಕ್ಕಿಯಿಂದಿಳಿದು ಅಲ್ಲಿ ರಚಿಸಲ್ಪಟ್ಟಿದ್ದ ಸಿಂಹಾಸನವನ್ನಾರೋಹಿಸಿದಕೂಡಲೇ ಜಗದಾಚಾರ್ಯರ ಜಯಜಯಕಾರವು ದಶದಿಕ್ಕುಗಳನ್ನು ವ್ಯಾಪಿಸಿತು. ಆಗ್ಗೆ ಶ್ರೀಗಳವರು ಸಮಯೋಚಿತವಾದ ಭಾಷಣವನ್ನು ಮಾಡಿ ಸರ್ವಶಿಷ್ಯಸಂದೋಹವನ್ನು ಆನಂದಸಾಗರದಲ್ಲಿ ಮುಳುಗಿಸಿದರು. ಅಷ್ಟಕ್ಕೆ ಸಮಯವು ವಿಶೇಷವಾದಕಾರಣ ಆಚಾರ್ಯರ ನಾಮಸಂಕೀರ್ತನದೊಡನೆ ಸಭೆಯಕಾರ್ಯವು ಪೂರ್ಣವಾಯಿತು. ಈ ಮಹೋತ್ಸವದ ಬಗ್ಗೆ ನಮ್ಮ ಘನ ಸರ್ಕಾರದವರು ಅತ್ಯುತ್ತಮವಾದ ಏರ್ಪಾಡನ್ನಿಟ್ಟಿದ್ದರು. ಈ ಬಗ್ಗೆ ನಮ್ಮ ಧರ್ಮಸರಕಾರದವರನ್ನು ಎಷ್ಟು ಸ್ತುತಿಸಿದರೂ ತೀರದಂತಾಗಿದೆ. ನಮ್ಮ ಧರ್ಮಸರಕಾರಕ್ಕೆ ಜಯವಾಗಲಿ!

ಬಳಿಕ ಸಾಯಂಕಾಲ ೬ ಘಂಟೆಗೆ ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಭೆಯು ನೆರವೇರಿತು. ಸಭೆಗೆ ಅನೇಕಜನ ರಾಜಬಂಧುಗಳೂ, ಸರಕಾರಿ ಅಧಿಕಾರಿಗಳೂ, ಮಹಾಮಹಾ ಪದವೀಧರರೂ, ವರ್ತಕಮಹಾಶಯರೂ, ಅಗಣಿತಜನ ಭಕ್ತಮಹಾಶಯರೂ ಆಗಮಿಸಿದ್ದರು. ಆದಿಯಲ್ಲಿ ಆಸ್ಥಾನವಿದ್ವಾನ್ ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಂದ ವಿರಚಿತಗಳಾಗಿದ್ದ ಸ್ವಾಗತಪದ್ಯಗಳನ್ನು ಸುಪ್ರಸಿದ್ಧ ಸಂಗೀತ ವಿದ್ವಾನ್ ಮ|| ರಾ|| ಕೊಟ್ಟೂರು ಬಸವಯ್ಯನವರು ತಮ್ಮ ಗಂಭೀರವಾದ ವಾಣಿಯಿಂದೋದಿ ಸರ್ವಸಭಿಕರನ್ನು ಆನಂದತುಂದಿಲಹೃದಯರನ್ನಾಗಿಮಾಡಿದರು. ಅನಂತರ ರಿ|| ಪೋ|| ಇನ್ಸ್‌ಪೆಕ್ಟರ್ ಮ|| ರಾ|| ಕೆ. ಎಚ್. ತಿಮ್ಮಪ್ಪಯ್ಯನವರ ಮೊಮ್ಮಗಳು ಚಿ|| ಸೌ|| ರಾಜಮ್ಮನವರು ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯ ಅ|| ಕ್ಯೂರೇಟರಾದ ಮ|| ರಾ|| ಎಂ. ಎಸ್. ಬಸವಲಿಂಗಯ್ಯ, ಎಂ.ಎ. ಬಿ.ಎಲ್., ಇವರಿಂದ ವಿರಚಿತವಾಗಿದ್ದ ಸ್ವಾಗತ ಪಂಚರತ್ನಮಾಲಿಕೆಯನ್ನು ತಮ್ಮ ಮೃದುಮಧುರವಾದ ಸುಸ್ವರದಿಂದ ಪಠಿಸಿ ಸರ್ವಸಭಿಕರನ್ನು ಸಂತೋಷಸಾಗರದಲ್ಲಿ ಲೋಲಾಡುವಂತೆ ಮಾಡಿದರು. ಅನಂತರ ಮ|| ರಾ|| ಎಂ. ಪಿ. ಲಿಂಗಪ್ಪಯ್ಯನವರು ಮುಂದೆ ನಡೆಯುವ ಕಾರ್ಯಕ್ರಮಗಳ ವಿಷಯವನ್ನು ಸಭಿಕರಿಗೆ ತಿಳುಹಿಸಿದರು. ಸ್ವಾಗತಕಮಿಟಿಯ ಪ್ರೆಸಿಡೆಂಟರಾದ ಮ||ರಾ|| ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು ಸ್ವಾಗತಕಮಿಟಿಯ ಪರವಾಗಿ ಶ್ರೀ ಜಗದ್ಗುರುಗಳವರ ಸನ್ನಿಧಿಗೆ ಸಮರ್ಪಿಸಲ್ಪಡುವ ವಿಜ್ಞಾಪನಾಪತ್ರಿಕೆಯನ್ನು ಸೆಕ್ರೆಟರಿಗಳಾದ ಮ|| ರಾ|| ಜಿ. ಮಲ್ಲಣ್ಣನವರು ಓದುತ್ತಾರೆಂದು ವಿಜ್ಞಾಪಿಸಿಕೊಂಡರು. ಅದರಂತೆ ಸೆಕ್ರೆಟರಿಗಳವರು ವಿಜ್ಞಾಪನಾಪತ್ರಿಕೆಯನ್ನೋದಿ ಶ್ರೀ ಸನ್ನಿಧಿಯಲ್ಲಿ ಸಮರ್ಪಿಸಿದರು. ಬಳಿಕ ಜಗದ್ಗುರುಗಳವರು ಅಡ್ರೆಸ್ಸಿನಲ್ಲಿ ಪ್ರತಿಪಾದಿತಗಳಾಗಿದ್ದ ಎಲ್ಲಾ ವಿಷಯಗಳಿಗೂ ಸದುತ್ತರವನ್ನು ದಯಪಾಲಿಸಿದರು. ಶ್ರೀಗಳವರು ತಮ್ಮ ಭಾಷಣದಲ್ಲಿ ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ವಿಷಯವನ್ನೂ, ತಮ್ಮ ಪೀಠದ ಮೂಲಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಷಯವನ್ನೂ, ಇನ್ನುಳಿದ ಮಠಾಚಾರ್ಯರ ವಿಷಯವನ್ನೂ, ಎಲ್ಲಾ ಮಠಗಳ ಆಚಾರ್ಯರು ಪರಸ್ಪರವಾಗಿ ತೋರ್ಪಡಿಸುತ್ತಿರುವ ಸೌಹಾರ್ದಭಾವವನ್ನೂ, ನಮ್ಮ ಮಹಾಪ್ರಭುಗಳವರ ಧಾರ್ಮಿಕಬುದ್ಧಿಯ ಪ್ರಭಾವವನ್ನೂ, ಅವರು ಪ್ರಜೆಗಳನ್ನು ಪರಿಪಾಲಿಸುತ್ತಿರುವ ರೀತಿಯನ್ನೂ, ಎಲ್ಲಾ ಮಠಾಚಾರ್ಯ ಪೀಠಗಳಲ್ಲಿ ಆ ರಾಜರ್ಷಿಗಳು ಸ್ವಾಭಾವಿಕವಾಗಿ ಇಟ್ಟಿರುವ ಭಕ್ತಿಭಾವವನ್ನೂ ಬಹು ವಿಶದವಾಗಿ ಬಣ್ಣಿಸಿದರು. ಶ್ರೀಗಳವರ ಭಾಷಣವನ್ನು ಕೇಳಿ ಸಭಿಕರು ತಮ್ಮ ಸಂತೋಷಾತಿಶಯವನ್ನು ಮೇಲಿಂದ ಮೇಲೆ ಕರತಾಡನಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಈ ರೀತಿಯಾಗಿ ಸಭಾಕಾರ್ಯವು ರಾತ್ರಿ ೯ ಘಂಟೆಯವರೆಗೆ ಸಾಗಿ ಜಗದಾಚಾರ್ಯರ ಜಯಜಯಕಾರದೊಡನೆ ಸಮಾಪ್ತಿಯನ್ನು ಹೊಂದಿತು. ನಿನ್ನೆಯ ದಿವಸ ರಾಜಧಾನಿಯೆಲ್ಲಾ ಸಂತೋಷಸಮುದ್ರದಲ್ಲಿ ಮುಳುಗಿಹೋಗಿತ್ತು. ಸಕಲ ಮತೀಯರೂ ಏಕಕಂಠದಿಂದ ಶ್ರೀಗಳವರನ್ನು ಸ್ತುತಿಸುತ್ತಿದ್ದರು. ಒಟ್ಟಿಗೆ ನಿನ್ನೆಯ ದಿವಸವು ರಾಜಧಾನಿಯ ವರ್ಣನಾತ್ಮಕೇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕದಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಿಕ್ಕಿಲ್ಲ. ರಾಜಧಾನಿಗೆ ಮಂಗಲವಾಗಲಿ; ಯದುವಂಶವು ಈ ಜಗತೀತಲದಲ್ಲಿ ಆಚಂದ್ರಾರ್ಕವಾಗಿ ಪರಿಶೋಭಿಸಲಿ; ಸದ್ಧರ್ಮಮೂರ್ತಿಗಳಾದ ನಮ್ಮ ಧರ್ಮಪ್ರಭುಗಳವರು ಚಿರಕಾಲ ಬಾಳಲಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪ್ರಭಾದರ್ಶ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು,
ಬೃಹನ್ಮಠ, ವಿಜಾಪುರ.

ತೃತೀಯೋಲ್ಲಾಸವು.

(ಹಿಂದಿನಿಂದ ಮುಂದುವರಿದುದು).

ಇನ್ನು, ಪಾಶುಪತಾಚರಣೆಯು ಭೋಗಮೋಕ್ಷಪ್ರದವಾದುದಷ್ಟೇ? ಯಾರು ಐಹಿಕ (ಸಂತತಿ ಸಂಪದಾದಿ) ಪಾರತ್ರಿಕ (ಸ್ವರ್ಗಾದಿ) ಫಲಪ್ರಾಪ್ತಿಗೋಸ್ಕರ ಆ ವ್ರತವನ್ನನುಷ್ಠಿಸುವರೋ ಅವರು ಅದನ್ನು ಪರಿಮಿತಕಾಲಾವಧಿಗೆ ಸಮಾಪ್ತಿಗೊಳಿಸುತ್ತಾರೆ. ಆದರೆ ಮುಮುಕ್ಷುಜನರಿಂದ ಪರಿಗ್ರಹಿಸಲ್ಪಡುವ ಆ ವ್ರತಕ್ಕಾದರೋ ಇಷ್ಟೇ ದಿವಸಗಳಿಗೆ ಸಮಾಪ್ತಿಗೊಳಿಸಬೇಕೆಂಬ ಪರಿಮಿತ (ಕ್ಲುಪ್ತ) ವಾದ ಕಾಲಾವಧಿಯಿರುವುದಿಲ್ಲ. ಆದ್ದರಿಂದ ಅದು ಯಾವಜ್ಜೀವವೂ ಅವ್ಯಾಹತವಾಗಿ ಅನುಷ್ಠಿಸಲ್ಪಡುವುದು. ಎಕೆಂದರೆ:—

ಇಹ ಚಾಮುತ್ರವಾ ಕಾಮ್ಯಂ ಪ್ರವೃತ್ತಂ
ಕರ್ಮ ಕೀರ್ತ್ಯತೇ |
ನಿಷ್ಕಾಮಂ ಜ್ಞಾನಪೂರ್ವಂತು ನಿವೃತ್ತ
ಮುಪದಿಶ್ಯತೇ ||

ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಯಾವುದಾದರೊಂದು ಅಭೀಷ್ಟಫಲವು ದೊರಕಬೇಕೆಂಬಾಸೆಯಿಂದ ಮಾಡಲ್ಪಡುವ ಕರ್ಮವು ಪ್ರವೃತ್ತಿರೂಪವಾದುದು, ಅಂದರೆ ಫಲದ್ವಾರಾ ಸಂಸಾರಪ್ರವೃತ್ತಿಗೆ ಕಾರಣವಾದುದು; ಐಹಿಕದೃಷ್ಟಫಲವನ್ನೂ ಪಾರಲೌಕಿಕ ಅದೃಷ್ಟಫಲವನ್ನೂ ಇಚ್ಛಿಸದೆ ಶಿವಜ್ಞಾನಾನುಸಂಧಾನದೊಡನೆ ಮಾಡಲ್ಪಡುವ ಕರ್ಮವು ಚಿತ್ತನೈರ್ಮಲ್ಯದ್ವಾರಾ ಸಂಸಾರನಿವೃತ್ತಿಗೆ ಹೇತುಭೂತವಾದುದರಿಂದ ನಿವೃತ್ತಿರೂಪವಾದುದು. ಎಂಬುದಾಗಿ ಮನುವಾದರೂ(೧೨-೮೮)ಹೇಳುತ್ತಾನೆ. ಆದ್ದರಿಂದ ಐಹಿಕ ಪಾರತ್ರಿಕವಿಷಯಾಭಿಲಾಷೆಯಿಲ್ಲದ ಪರಮ ಮುಮುಕ್ಷು ಪುರುಷನು ಶಿವಜ್ಞಾನಸಿದ್ಧಿಯೇ ಮುಖ್ಯವಾದ ಧ್ಯೇಯವುಳ್ಳವನಾಗಿರುತ್ತಾನೆ. ಅವನು ಚಿತ್ತಶುದ್ಧಿಯ ಮೂಲಕ ಸ್ವಸ್ವರೂಪಸಾಕ್ಷಾತ್ಕಾರವನ್ನು ಪಡೆಯಲೋಸುಗ ಆ ಪಾಶುಪತವ್ರತವಿರುವ ಪರ್ಯಂತವೂ ಬಿಡುವಿಲ್ಲದೆ ಅನುಷ್ಠಿಸುವನಾದುದರಿಂದ ಅಪ್ರತಿಹತಶಿವವ್ರತಿಯೂ, ನೈಷ್ಠಿಕನೂ, ಮಹಾಪಾಶುಪತನೂ, ಶಿವಾಶ್ರಮಿಯೂ ಎಂಬೀ ಮುಂತಾದ ಪವಿತ್ರಾಭಿಧಾನಗಳಿಂದ ಬಣ್ಣಿಸಲ್ಪಡುವನು.

ಅಂತಹ ಶಿರೋವ್ರತಧಾರಣಾಂಗಭೂತವಾದ ಶಿವಸಂಸ್ಕಾರದ ಸ್ವರೂಪವನ್ನು ಈ ಹಿಂದೆ ನಾವು ದಿವ್ಯಾಗಮಪ್ರಮಾಣಪೂರ್ವಕವಾಗಿ ಸ್ಪಷ್ಟೀಕರಿಸಿದ್ದೇವೆ. ಹಾಗೂ, ವಾಯವೀಯಸಂಹಿತೆಯ ಪೂರ್ವಭಾಗದ ೩೩ನೆಯ ಅಧ್ಯಾಯದಲ್ಲಿ—

ಸಮುತ್ಸೃಜಾಮಿ ಭಗವನ್ ವ್ರತಮೇತತ್ತ್ವದಾ
ಜ್ಞಯಾ |

ಎಂಬುದಾಗಿ ಪರಿಮಿತಕಾಲಾವಧಿಯಲ್ಲಿ ಸಮಾಪ್ತಿಗೊಳಿಸಲ್ಪಡುವ ಪಾಶುಪತವ್ರತದ ಸ್ವರೂಪವು ವರ್ಣಿಸಲ್ಪಟ್ಟ ತರುವಾಯ ಯಾವಜ್ಜೀವಾನುಷ್ಠೇಯವಾದ ಪಾಶುಪತವ್ರತಧಾರಣಸಂಪನ್ನನ ಪ್ರಾಶಸ್ತ್ಯವು ಹೀಗೆ ನಿರ್ದೇಶಿಸಲ್ಪಡುವುದು—

ಯಃ ಕೃತ್ವಾತ್ಯಂತಿಕೀಂ ದೀಕ್ಷಾಮಾದೇಹಾಂತ
ಮನಾಕುಲಃ |
ವ್ರತಮೇತತ್ಕುರ್ವೀತ ಸತುವೈ ನೈಷ್ಠಿಕಃಸ್ಮೃತಃ ||
ಸೋsತ್ಯಾಶ್ರಮೀಚ ವಿಜ್ಞೇಯೋ ಮಹಾಪಾಶುಪತ
ಸ್ತಥಾ |
ಸ ಏವ ತಪತಾಂಶ್ರೇಷ್ಠಃ ಸಏವಹಿ ಮಹಾವ್ರತೀ ||

ಇತ್ಯಾದಿ ಪ್ರಮಾಣವಚನಾನುಸಾರವಾಗಿ ಮುಮುಕ್ಷುಜನರು ವಿಶುದ್ಧಸಂಸ್ಕಾರಪೂರ್ವಕ ಅಪ್ರಾಕೃತರೆನಿಸಿ ಯಾವಜ್ಜೀವವ್ರತಧಾರಿಗಳಾಗಿ ಶಿವಾರ್ಚನಾದಿ ಶಿವಭಜನಾಸಕ್ತರಾದ ಅತ್ಯಾಶ್ರಮಿಗಳಾದರೂ ವರ್ಣಾಶ್ರಮಲೋಪವಿಲ್ಲದವರಾಗಿರುತ್ತಾರೆ.

ವಾಯವೀಯಸಂಹಿತೆಯಲ್ಲಿಯೂ (ಉ. ೧೧-೫೩), ಸಿದ್ಧಾಂತಶಿಖಾಮಣಿಯಲ್ಲಿಯೂ (೯-೨೩) ಅಪ್ರಾಕೃತನು ವೇದಗಳನ್ನು ಪಠಿಸದೆ ಶ್ರೀರುದ್ರಸೂಕ್ತಾದಿಗಳ ಆವರ್ತನರೂಪವಾದ ಜಪಪರಾಯಣನಾಗಿರತಕ್ಕದ್ದು: ಎಂಬಭಿಪ್ರಾಯಪ್ರತಿಪಾದಕವಾಕ್ಯಗಳಿರುವುದರಿಂದ ಸಾಂಗವೇದಾಧ್ಯಯನವಿಧಿಯು ಅಪ್ರಾಕೃತನನ್ನುಲಕ್ಷಿಸಿರುವುದಿಲ್ಲ. ಆದ್ದರಿಂದ ಅತ್ಯಾಶ್ರಮಿಗಳೆಂದು ಹೇಳಲ್ಪಡತಕ್ಕವರಾದ ನಿವೃತ್ತಿಧರ್ಮನಿಷ್ಠರಿಗೆ 'ವೇದಪರಿಚಯ' ದಿಂದಾವ ಪ್ರಯೋಜನವಿದೆ? ಎಂಬುದಾಗಿ ನುಡಿವ ಮಹನೀಯರು ಆ ಪ್ರಮಾಣವಾಕ್ಯಗಳನ್ನು ಸಾವಧಾನಚಿತ್ತದಿಂದ ಪರಾಮರ್ಶಿಸುತಿರುವ ವಿಹಿತವು. ಅಪ್ರಾಕೃತನು ಅಂದರೆ, ವಿಶುದ್ಧಸಂಸ್ಕಾರವನ್ನು ಪಡೆದವನು; ಆ ಸಂಸ್ಕಾರವು ಮತದೀಕ್ಷೆಯೆನಿಸುವುದು. ಅದನ್ನು ಪಡೆಯದಿರುವ ಪರ್ಯಂತವೂ ವರ್ಣಸಂಸ್ಕಾರಸಂಪನ್ನನಾದ ದ್ವಿಜನಾದರೂ ಪ್ರಾಕೃತನೇ. ಸಾಮಾನ್ಯವಾಗಿ ಶಿವಚಿಹ್ನಾಂಕಿತರಾದವರು ಅಪ್ರಾಕರೆನಿಸಿದರೂ ವಿಶೇಷಸಂಸ್ಕಾರವನ್ನು ಪಡೆದವರಲ್ಲಿಯೇ ಅಪ್ರಾಕೃತತ್ವವು ಪೂರ್ಣವಾಗಿರುವುದೆಂದು ಆಗಮಗಳುಲಿಯುತ್ತಿವೆ. ತ್ರೈವರ್ಣಿಕರೇ ವಿಶೇಷ ಸಂಸ್ಕಾರಾರ್ಹರೆಂಬ ವಿಷಯವಾದರೂ ಶಾಸ್ತ್ರಸಿದ್ಧವು. ಅಂದಬಳಿಕ ವಿಶೇಷ ಸಂಸ್ಕಾರವನ್ನು ಪಡೆಯುವದಕ್ಕಿಂತ ಪೂರ್ವದಲ್ಲಿಯೇ ವರ್ಣಸಂಸ್ಕಾರವನ್ನು ಹೊಂದಿರುವಾತನು ವೇದಾಧ್ಯಯನವಿಧಿಗೆ ಕಿಂಕರನಾಗಿರುತ್ತಾನೆ. ಅದುಕಾರಣವೇ "**ಸ್ವಾಧ್ಯಾಯೋsಧ್ಯೇತವ್ಯಃ**" ಎಂಬ ವಿಧಿವಚನಾನುಸಾರವಾಗಿ ಆ ದ್ವಿಜನು ಸ್ವಶಾಖಾಧ್ಯಯನವನ್ನಾದರೂ ಮಾಡತಕ್ಕದ್ದೇ ಯುಕ್ತವು. ಅದುಕೂಡ ಇಲ್ಲದವನು ದ್ವಿಜನೇ? ಅವನು ಸ್ವಗೃಹ್ಯೋಕ್ತಕರ್ಮಗಳನ್ನಾದರೂ ಅನುಷ್ಠಿಸಲರ್ಹನೇ? ಉಪನಯನೋತ್ತರ ಕಾಲದಲ್ಲಿ ವಿಶುದ್ಧಸಂಸ್ಕಾರವನ್ನು ಪಡೆದ ದ್ವಿಜನು ಪ್ರಾಕೃತಕರ್ಮಗಳನ್ನು ಅನುಷ್ಠಿಸದವನಾದರೂ ಅಪ್ರಾಕೃತಕ್ರಿಯೆಗಳನ್ನಾದರೂ ನೆರವೇರಿಸುವನಲ್ಲವೇ? ಅವುಗಳನ್ನನುಷ್ಠಿಸುವಲ್ಲಿಯಾದರೂ ವೇದಮಂತ್ರಗಳ ಅವಶ್ಯಕತೆಯಿರುವುದಲ್ಲವೇ?

ಶರೀರಸಂಪೋಷವೇ ತಪವೆನಿಸುವುದು. ಪ್ರಾಕೃತನು ಕೃಚ್ಛ್ರಚಾಂದ್ರಾಯಣಾದಿ ವ್ರತಾಚರಣೆಗಳಿಂದ ತನ್ನ ದೇಹವನ್ನು ತವಿಸುವನು. ಅಪ್ರಾಕೃತನು ಶಿವಸ್ವರೂಪರಾದ ಗುರುಲಿಂಗಜಂಗಮರ ಸೇವೆಗಾಗಿ ದೇಹವನ್ನು ದಂಡಿಸುವನು. ಹೀಗೆ ಶಿವಾಚಾರವನ್ನುದ್ದೇಶಿಸಿರುವ ದೇಹದಂಡನವೇ ಅಪ್ರಾಕೃತನಿಂದನುಷ್ಠಿಸಲ್ಪಡುವ ತಪವು. ಪ್ರಾಕೃತನು ಸ್ವರ್ಗಾದಿ ಪಾರತ್ರಿಕ ಸುಖವನ್ನಪೇಕ್ಷಿಸಿ ಜ್ಯೋತಿಷ್ಟೋಮಯಾಗಾದಿ ಕರ್ಮಗಳನ್ನನುಷ್ಠಿಸುವನು. ಅದರಿಂದ ಅವನ ಭವ (ಜನನಮರಣಾತ್ಮಕ ದುಃಖ) ವು ಹಿಂಗದಾದ ಕಾರಣ ಅವನು ಭವಿಯೆನಿಸುವನು. ಅಪ್ರಾಕೃತನು ಬ್ರಹ್ಮವಿದ್ಯಾಧಿಕಾರಿಯಾದುದರಿಂದ ನಶ್ವರಫಲಪ್ರದಗಳಾದ ಆ ಯಾಗಾದಿ ಕರ್ಮಗಳನ್ನನುಷ್ಠಿಸದೆ ಶಿವಯೋಗಸಾಧಕಗಳಾದ ಶಿವಾರ್ಚನಾದಿ ಸತ್ಕ್ರಿಯೆಗಳಲ್ಲಿಯೇ ನಿಷ್ಠೆಯುಳ್ಳವನಾಗಿರುತ್ತಾನೆ. ಪ್ರಾಕೃತಕರ್ಮಗಳಲ್ಲಿ ಅಧಿಕೃತನಾದವನು ಆ ಯಾಗಾದಿ ಕರ್ಮಪ್ರತಿಪಾದಕ ವೇದಭಾಗವನ್ನು ಪಠಿಸುವನು. ವಿಶುದ್ಧಸಂಸ್ಕಾರಸಂಪನ್ನನಾದರೋ ಶಿವಜ್ಞಾನ, ಶಿವಧ್ಯಾನ, ಶಿವಾರ್ಚನಾದಿ ಶಿವಯೋಗಾಚರಣೆ (ಅತ್ಯಾಶ್ರಮಧರ್ಮ)ಗಳನ್ನು ಬೋಧಿಸತಕ್ಕ ನಾಸದೀಯಸೂಕ್ತ, ರುದ್ರಸೂಕ್ತ, ಮುಂತಾದ ವೇದಭಾಗಗಳನ್ನೇ ವಿಶೇಷತಃ ಅರ್ಥಾನುಸಂಧಾನದೊಡನೆ ಪಠಿಸುತ್ತಿರುವನು; ಎಂಬ ಈ ಅಭಿಪ್ರಾಯ ಬೋಧಕ ವಾಕ್ಯಗಳು ಅಧಿಕಾರ ತಾರತಮ್ಯಾನುಗುಣವಾಗಿ ವೇದಭಾಗಸ್ವೀಕಾರವನ್ನು ಪುರಸ್ಕರಿಸತಕ್ಕವುಗಳೇ ಆಗಿರುತ್ತವಲ್ಲದೆ ಅಪ್ರಾಕೃತನಿಗೆ 'ವೇದಪರಿಚಯ'ವೇ ಅನಾವಶ್ಯಕವಾದುದೆಂಬರ್ಥವನ್ನು ಸೂಚಿಸುವುದಿಲ್ಲ. ಮತ್ತು, ವಿಶೇಷ ಸಂಸ್ಕಾರಾನರ್ಹರಾದ ಅನುಪನೀತರಿಗೆ ರುದ್ರಸೂಕ್ತಾದಿಗಳನ್ನಾಗಲಿ ಷಡಕ್ಷರಪೂರ್ವಕಗಳಾದ ಮೂಲಪ್ರಣವಾದಿ ಮಂತ್ರಗಳನ್ನಾಗಲಿ ಪಠಿಸುವ ಅಧಿಕಾರವಿರುವುದಿಲ್ಲವೆಂಬಾಶಯವಾದರೂ '**ರುದ್ರಾನುಷ್ಠಾನಕಲ್ಪದ್ರುಮ**' ಮೊದಲಾದ ಗ್ರಂಥಗಳಲ್ಲಿ—'**ಇಹ ಚ ರುದ್ರಾನುಷ್ಠಾನೇ ತ್ರೈವರ್ಣಿಕಾನಾಮೇವಾಧಿಕಾರಃ |**' ಎಂಬೀ ಮುಂತಾದ ವಾಕ್ಯಗಳಿಂದ ಪ್ರತಿಪಾದಿಸಲ್ಪಟ್ಟಿದೆ.

ಯಾವ ವಿದ್ಯೆಯನ್ನು ಯಾರಿಗೆ ಹೇಳತಕ್ಕದ್ದು, ಯಾರಿಗೆ ಹೇಳಕೂಡದೆಂಬೀ ವಿಷಯಕವಾದ ನಿರ್ಬಂಧವು ಹಿಂದುಸ್ಥಾನದಲ್ಲಿ ಬಹುದಿನಗಳಿಂದಲೂ ಇದೆ. ಇದು ಬುದ್ಧಿಸಂಸ್ಕಾರ ತಾರತಮ್ಯವನ್ನನುಲಕ್ಷಿಸಿರುವುದಲ್ಲದೆ ಭಾರತೀಯರ ದುರಾಗ್ರಹ ಪಕ್ಷಪಾತಾದಿಗುಣಗಳಿಂದುಂಟಾದ ಸಂಕುಚಿತಭಾವನೆಯ ದ್ಯೋತಕವಲ್ಲ. ಛಾಂದೋಗ್ಯಬ್ರಾಹ್ಮಣದಲ್ಲಿ—

ವಿದ್ಯಾಹ ವೈ ಬ್ರಾಹ್ಮಣಮಾಜಗಾಮ
ತವಾಹಮಸ್ಮಿ ತ್ವಂ ಮಾಂ ಪಾಲಯ |
ಅನರ್ಹತೇ ಮಾನಿನೇ ನೈವಮಾದಾ
ಗೋಪಾಯ ಮಾಂ ಶ್ರೇಯಸೀ ತಥಾಹಮಸ್ಮಿ ||

ನಿರುಕ್ತದಲ್ಲಿ—

ವಿದ್ಯಾಹವೈ ಬ್ರಾಹ್ಮಣಮಾಜಗಾಮ
ಗೋಪಾಯ ಮಾಂ ಶೇವಧಿಷ್ಟೇsಹಮಸ್ಮಿ |
ಅಸೂಯಕಾಯಾನೃಜವೇsಯತಾಯ
ನ ಮಾಂಬ್ರೂಯಾ ವೀರ್ಯವತೀತಥಾಸ್ಯಾಮ್ ||

ಮನುಸ್ಮೃತಿಯಲ್ಲಿ—

ವಿದ್ಯಾಬ್ರಾಹ್ಮಣಮೇತ್ಯಾಹ ಶೇವಧಿಷ್ಟೇsಸ್ಮಿರಕ್ಷಮಾಂ||
ಅಸೂಯಕಾಯ ಮಾಂ ಮಾದಾಸ್ತಥಾಸ್ಯಾಂ ವೀರ್ಯ
ವತ್ತಮಾ ||

ಎಂಬುದಾಗಿ ನಿರೂಪಿಸಲ್ಪಟ್ಟಿರುವ ವಾಕ್ಯಗಳ ತಾತ್ಪರ್ಯವಿಂತಿರುವುದು. ವಿದ್ಯೆಯು ಮೂರ್ತಸ್ವರೂಪವನ್ನು ಧರಿಸಿ ವೇದವೇದಾಂಗಗಳರ್ಥವನ್ನು ಬಲ್ಲವನೂ, ಜಿತೇಂದ್ರಿಯನೂ ಆದ ಬ್ರಾಹ್ಮಣನ (ಅಧ್ಯಾಪಕನ) ಬಳಿಸಾರ್ದು ನುಡಿದುದೇನೆಂದರೆ— ಎಲೈ ಬ್ರಾಹ್ಮಣನೇ! ನಾನು ನಿನ್ನ ಮೂಲಧನದ ನಿಧಿಯಾಗಿದ್ದೇನೆ. ಆದ್ದರಿಂದ ನನ್ನನ್ನು ದ್ವೇಷಿಯೂ, ಕಪಟಿಯೂ, ಸ್ವೇಚ್ಛಾಚಾರಪರನೂ ಆದ ಮನುಷ್ಯನ ಸ್ವಾಧೀನಪಡಿಸಬೇಡ ಕಂಡೆಯಾ ನೀನು ಈ ನುಡಿಯನ್ನು ಮನ್ನಿಸಿದರೇನೆ ನಾನು ನಿನ್ನಲ್ಲಿ ಅತಿಶಯವಾದ ತೇಜಸ್ವಿಯಾಗಿರುವೆನು. ಆದರೆ, ಯಾವನು ಶುದ್ಧನೂ ದೋಷರಹಿತನೂ ಬುದ್ಧಿಶಾಲಿಯೂ ಬ್ರಹ್ಮಚರ್ಯವನ್ನು ಪಾಲಿಸುವಾತನೂ ಆಗಿರುತ್ತಾನೆಂದು ನಿನಗೆ ಚೆನ್ನಾಗಿ ಮನವರಿಕೆಯಾಗಿ, ಅವನು ನಿನಗೆ ಎಂದೂ ದ್ರೋಹವನ್ನು ಮಾಡತಕ್ಕವನಲ್ಲವೆಂಬುದೂ ತಿಳಿದುಬಂದರೆ, ವಿದ್ಯಾನಿಧಿಯನ್ನು ಸಂರಕ್ಷಿಸುವುದರಲ್ಲಿ ಅಪ್ರಮತ್ತನಾದ ಅಂತಹ ಪವಿತ್ರಾತ್ಮನಿಗೆ ನನ್ನನ್ನು ಸಂತೋಷದಿಂದೊಪ್ಪಿಸು.

ವೇದವಿದ್ಯೆಯ ಸಂಪ್ರದಾಯವಿಧಿಯನ್ನು ಹೇಳುತ್ತಿರುವ ಪ್ರಕರಣದಲ್ಲಿ ಈ ವಚನಗಳಿರುತ್ತವೆ. ಆಚಾರ್ಯನು ಶಿಷ್ಯನಿಗೆ ಅವಶ್ಯವಾಗಿ ವೇದಶಾಸ್ತ್ರಾಧ್ಯಯನವನ್ನು ಮಾಡಿಸತಕ್ಕದ್ದು. ಆದರೆ ಅವನು ಯೋಗ್ಯನಾಗಿದ್ದರೇನೇ ಆಚಾರ್ಯನು ಅವನಿಗೆ ವೇದಶಾಸ್ತ್ರಪಾಠವನ್ನು ಹೇಳಬೇಕಲ್ಲದೆ ಅಯೋಗ್ಯನಾಗಿರುವಾತನಿಗೆ ಎಂದೂ ಬೋಧಿಸಬಾರದು. ಈ ಕಟ್ಟಳೆಯಾದರೋ ಶಿಷ್ಯನ ಯೋಗ್ಯತಾಯೋಗ್ಯತೆಯ ವಿಚಾರವನ್ನನುಲಕ್ಷಿಸಿರುವುದು. ಮನುವು—

ಧರ್ಮಾರ್ಥೌ ಯತ್ರ ನ ಸ್ಯಾತಾಂ ಶುಶ್ರೂಷಾವಾಪಿ
ತದ್ವಿಧಾ |
ತತ್ರವಿದ್ಯಾ ನ ವಪ್ತವ್ಯಾ ಶುಭಂ ಬೀಜಮಿವೋಷರೇ ||

ಯಾವ ಶಿಷ್ಯನಲ್ಲಿ ಧರ್ಮಾರ್ಥಗಳೆಂಬಿವೆರಡರಲ್ಲಿ ಒಂದು ಗುಣವಾದರೂ ಕಾಣಬರುವುದಿಲ್ಲವೋ ಅಥವಾ ಅಧ್ಯಯನಕ್ಕನುರೂಪವಾದ ಶುಶ್ರೂಷೆಯಾದರೂ ಇರುವುದಿಲ್ಲವೋ ಅವನಿಗೆ ವೇದವಿದ್ಯೆಯನ್ನು ಹೇಳಕೂಡದು. ಏಕೆಂದರೆ ಊಷರಭೂಮಿಯಲ್ಲಿ (ಸವುಳುನೆಲದಲ್ಲಿ) ಬಿತ್ತಿದ ಧಾನ್ಯವು ನಾಟದಿರುವಂತೆ (ವ್ಯರ್ಥವಾಗುವಹಾಗೆ) ಅಂತಹ ವಿದ್ಯಾರ್ಥಿಗೆ ಕಲಿಸಿದ ವಿದ್ಯೆಯು ನಿಷ್ಫಲವಾಗುವುದು. ಎಂಬುದಾಗಿ ವೇದವಿದ್ಯಾನಧಿಕಾರಿಯ ಸ್ವರೂಪವನ್ನು ದೃಷ್ಟಾಂತದೊಡನೆ ನಿರೂಪಿಸಿದ್ದಾನೆ. ಶ್ರೀಮಂತನಾಗಿರುವ ಶಿಷ್ಯನಿಂದ ದ್ರವ್ಯವನ್ನು ತೆಗೆದುಕೊಂಡು ಅವನಿಗೆ ವಿದ್ಯೆಯನ್ನು ಕಲಿಸುವುದರಿಂದ ಧೃತಕಾಧ್ಯಾಪಕತ್ವದೋಷವು ಸಂಭವಿಸುವುದೆಂದಾಶಂಕಿಸಕೂಡದು. ಏಕೆಂದರೆ, 'ನೀನು ನನಗೆ ಇಂತಿಷ್ಟು ಹಣವನ್ನು ಕೊಟ್ಟರೇನೆ ನಾನು ನಿನಗೆ ಇಷ್ಟು ವಿದ್ಯೆಯನ್ನು ಕಲಿಸುವೆನು' ಎಂಬ ಪೂರ್ವ ಸಂಕೇತದೊಡನೆ ವಿದ್ಯೆಯನ್ನು ಕಲಿಸುವುದರಿಂದ ಧೃತಕಾಧ್ಯಾಪಕತ್ವ ದೋಷವು ಸಂಭವಿಸುವುದು; ಆದರೆ ಶಿಷ್ಯನು ಗುರುವಿಗೆ ಸ್ವಸಂತೋಷಪೂರ್ವವಾಗಿ ವಿದ್ಯಾನಿಷ್ಕ್ರಯಾರ್ಥಧನವನ್ನೀಯುವುದರಿಂದ ಗುರುವಿಗೆ ಪ್ರಸ್ತುತದೋಷವು ತಪ್ಪದು.

ಮತ್ತು—

ವಿದ್ಯಯೈವ ಸಮಂ ಕಾಮಂ ಮರ್ತವ್ಯಂ
ಬ್ರಹ್ಮವಾದಿನಾ |
ಆಪದ್ಯಪಿ ಹಿ ಘೋರಾಯಾಂ ನ ತ್ವೇನಾಮಿರಿಣೇ
ವಪೇತ್ ||

ವೇದಾಗಮಾರ್ಥ ಪರಿಜ್ಞಾನವುಳ್ಳ ಆಚಾರ್ಯನು ಯೋಗ್ಯಶಿಷ್ಯನು ದೊರಕದಿದ್ದರೆ ತಾನು ತನ್ನ ವಿದ್ಯೆಯೊಡನೆ ಮೃತನಾಗುವುದೇ ಲೇಸು. ಆದರೆ ದುಃಸಹವಾದ ಆಪತ್ತಿನಲ್ಲಿಯು ಕೂಡ ಅನಧಿಕಾರಿಯಾದ ಶಿಷ್ಯನಿಗೆ ಅದನ್ನು ಕಲಿಸುವುದು ವಿಹಿತವಲ್ಲ.

ತಾನು ದೀರ್ಘಕಾಲದವರೆಗೂ ಗುರುಕುಲವಾಸವಾಡಿ ಬಹುಕಷ್ಟದಿಂದ ಸಂಪಾದಿಸಿದ ವಿದ್ಯೆಯು ಅನ್ಯರಿಗುಪದೇಶಿಸಲ್ಪಡದಿದ್ದರೆ ಅದರಿಂದುಪಯೋಗವೇನು? ಆದ್ದರಿಂದ ಯೋಗ್ಯನಾದ ಶಿಷ್ಯನು ದೊರಕದಿರುವ ಪಕ್ಷದಲ್ಲಿ ಅಪಾತ್ರನಿಗಾದರೂ ಅದನ್ನು ಕಲಿಸುವುದೇ ಒಳ್ಳೆಯದಲ್ಲವೇ? ಎಂಬ ಕಲ್ಪನೆಯನ್ನು ಕೂಡ ಮಾಡುವುದು ಯುಕ್ತವಲ್ಲ. ಮೇಲಿನ ಶ್ಲೋಕದಲ್ಲಿರುವ 'ಇರಿಣ' ಶಬ್ದವು 'ಊಷರ' ಶಬ್ದದ ಪರ್ಯಾಯವಾಚಕವು.

ತಾನು ಬಹುಕಷ್ಟಪಟ್ಟು ಸಂಪಾದಿಸಿದ ದ್ರವ್ಯವು ಮುಂತಾದುದರ ದುರುಪಯೋಗವಾಗಬಾರದೆಂಬ ಯೋಚನೆಯು ಒಬ್ಬಾನೊಬ್ಬ ಉದಾರಸ್ವಭಾವವುಳ್ಳ ಧನಾಢ್ಯನಲ್ಲಿರುವಂತೆ, ತನ್ನಿಂದ ಕಷ್ಟಪೂರ್ವಕವಾಗಿ ಸಂಪಾದಿಸಲ್ಪಟ್ಟ ಶುದ್ಧಸಾತ್ವಿಕರೂಪವಾದ ಶ್ರುತಾಧ್ಯಯನವು ಅಸ್ಥಾನದಲ್ಲಿ ವಿನಿಯೋಗಿಸಲ್ಪಡತಕ್ಕ ಪ್ರಸಂಗವು ಪ್ರಾಪ್ತವಾಗಬಾರದೆಂಬ ಯೋಚನೆಯು ವಿದ್ವಾಂಸರಲ್ಲಿರುತ್ತಿರುವುದು ಸೋಜಿಗವಲ್ಲ. ಆದರೂ ತಮಗೆ ಯೋಗ್ಯರಾದ ಶಿಷ್ಯರು ದೊರಕಬೇಕೆಂದೂ ಅವರು ವಿದ್ವಾಂಸರಾಗಿ ತಮಗಿಂತಲೂ ಘನವಾದ ಯೋಗ್ಯತೆಯನ್ನು ಹೊಂದಿ ಸತ್ಕೀರ್ತಿವಂತರಾಗಬೇಕೆಂದೂ ಇಚ್ಛಿಸುತ್ತಿರುವ ಸಚ್ಛೀಲರಾದ ಗುರುಗಳು ವಿರಳರಲ್ಲವೇ? ಅಂತಹ ಗುರುಗಳ ಈ ಶುಭೇಚ್ಛೆಯು ಸಾರ್ಥಕವಾಗುವುದಕ್ಕಾಗಿಯೂ, ಅವರ ಬಳಿಗೆ ಉತ್ತಮಾಧಿಕಾರಿಗಳಾದ ಶಿಷ್ಯರು (ಬ್ರಹ್ಮಜಿಜ್ಞಾಸಾಬುದ್ಧಿಯುಳ್ಳವರು) ಬರುವುದಕ್ಕಾಗಿಯೂ, ಅಂತಹ ಶಿಷ್ಯರನ್ನು ವಿದ್ಯಾದಾನ ಅನ್ನದಾನಾದಿಗಳ ಮೂಲಕ ಪೋಷಿಸತಕ್ಕ ಸಾಮರ್ಥ್ಯವು ತಮಗುಂಟಾಗುವುದಕ್ಕೋಸ್ಕರವೂ ಗುರುಗಳಿಂದನುಷ್ಠಿಸಲ್ಪಡುವ ಜಪಹೋಮಾದಿಗಳಿಗೆ ಸಂಬಂಧಪಟ್ಟ ಕೆಲವು ಮಂತ್ರಗಳು ತೈತ್ತಿರೀಯೋಪನಿಷತ್ತಿನಲ್ಲಿರುತ್ತವೆ. (ಶಿಕ್ಷಾಧ್ಯಾಯ. ಅನು. ೪)

(ಸಶೇಷ)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 51

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಮಲೇರಿಯಾಕ್ಕೆ
ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2,3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜೆಕ್ಷನ್ನಿಂದಲೂ ಕ್ವಿನೀನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14. ½ ಡಜನ್ 8-8-0, ರೂ. 5, 1 ಡಜನ್ ರೂ. 16-8-0, ರೂ. 9-12-0

ಮಲೆರಿ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0, 500, 1000ಕ್ಕೆ ರೂ. 7 ಮತ್ತು 13-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಡ್ರಾಮ್ ಆಣೆ 4, 8, 14, ರೂ. 1/6, 2.

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣತೆ, ಗ್ರಹಣಿ ಹುಳದ ಉಪದ್ರ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಕರಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್ ಕಫ್ ರೆಮಿಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಕಫಕೆಮ್ಮು ಇವನ್ನು ನೀರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ್ ಎಕ್ಸ್‌ಪೆಲ್ಲರ್ ಬಿಲ್ಲೆಗಳು: ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5. 100ಕ್ಕೆ ರೂ. 2-0-0.

ಸಿರಪ್ ವೆಸಿಕೂಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ತೋರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡ ಸೀಸೆ ರೂ. 3-8-0, ಸಣ್ಣ ಸೀಸೆ ರೂ. 1-14-0.

☞ ಬಿಕ್ಕು, ಹೋಮ್ಯೋಪತಿ ಮದ್ದುಗಳೂ, ದೃಷ್ಟಿಚಕ್ರಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಸವಿಮಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ' ವೆಂಬ ಪುಸ್ತಕಕ್ಕೆ ಬರಿರಿ ಧರ್ಮಾರ್ಥ.

The Malariana Co., Mangalore (21) [3] ಪತ್ತೆ:— ಮಲೇರಿಯಾನ ಕಂಪೆನಿ, (ಹಂಪನಕಟ್ಟೆ), 21, ಮಂಗಳೂರು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೩೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
„ ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 45

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆರಿ ೧ಕ್ಕೆ	೦—೬—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆರಿ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆರಿ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆರಿ ೧ಕ್ಕೆ	೦—೦—೯
ಸಪ್ತ ಶಿವಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆರಿ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೋಗಳಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಪಾತಾಳಲಂಕೆಯಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆರಿ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪಕದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[37] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮಹುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬ ಆ
पंडित श्रीकाशीनाथशास्त्री यांचें भाषण (मराठी)	८ आणे
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯೋಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಅಕ್ಟೋಬರ್ ೧೯೩೪ [ಸಂಚಿಕೆ ೨೦

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸ್ವೀಕಾರ

ಧಾರವಾಡ ಡಿ|| ಹಾವೇರಿಯಲ್ಲಿರುವ ಮ|| ರಾ|| ರಾಚಪ್ಪ ಚನ್ನಬಸವಪ್ಪ ಯರೆಸೀಮೆ ಮಾಲಿಕ ಮ|| ರಾ|| ಚನ್ನಬಸವಪ್ಪನವರು ಕಳೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಸಮಯದಲ್ಲಿ ನೂತನವಾಗಿ ಅಂಗಡಿಯನ್ನು ಸ್ಥಾಪಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 5 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ನಿಜಾಮು ಇಲಾಖಾ ಕೊಪ್ಪಳ ಡಿ|| ಅಳವಂಡಿ ಗ್ರಾಮದ ಮಾಲಿ ಪಾಟೀಲ ಮ|| ರಾ|| ಸೋಮನಗೌಡರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 4 ರೂ. ಗಳು ವೇ|| ಶಿವಯ್ಯನವರು ಹಿರೇಮಠ ಬನ್ನಿಕೊಪ್ಪ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಹಾವೇರಿಯಲ್ಲಿರುವ ಹರಸೂರು ಬಣ್ಣದ ಮಠದ ಶ್ರೀ ಷ|| ಬ್ರ|| ಚರಪಟ್ಟಾಧ್ಯಕ್ಷ ಚನ್ನಮಲ್ಲಸ್ವಾಮಿಗಳವರು ತಮ್ಮಲ್ಲಿ ಶ್ರೀ ರೇಣುಕವಿಜಯ ಪುರಾಣವನ್ನು ಪ್ರಾರಂಭಿಸಿ ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಕಳುಹಿಸಿದ್ದಾರೆ.

ಸಿರಾ ತಾಲೂಕು ಚಿಕ್ಕನಹಳ್ಳಿಯಲ್ಲಿರುವ ಯಜಮಾನ ಹಂ|| ರುದ್ರಪ್ಪನವರ ಅಕ್ಕಂದಿರಾದ ೯೦ ವರ್ಷದ ನಂಜಮ್ಮನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ಉಜ್ಜಯಿನೀಮಠದ ಚನ್ನಬಸವಾರಾಧ್ಯರ ದ್ವಾರಾ ತಲ್ಪಿರುತ್ತದೆ.

ಬೆಂಗಳೂರು ಡಿ|| ಬಿಡದಿಯಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ನಿತ್ಯಾನುಷ್ಠಾನಕ್ಕೆ ತಮ್ಮ ಗೃಹವನ್ನು ಒಪ್ಪಿಸಿದ್ದ ಮ|| ರಾ|| ಬಿ. ಸಿ. ರೇವಣ್ಣಶಾಸ್ತ್ರಿಗಳು ಕಳೆದ ತಿಂಗಳು 18ನೆಯ ತಾರೀಖಿನ ದಿವಸ ಶ್ರೀಗಳವರ ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಬೆಂಗಳೂರು ಸಿಟಿ ಜಿ. ಆರ್. ಸಿದ್ಧಪ್ಪನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನವರಾತ್ರಿಮಹೋತ್ಸವಾಹ್ವಾನಪತ್ರಿಕಾ,

ಬಳ್ಳಾರಿ.

ಮಹಾಶಯರಿಗೆ ತಿಳಿಸುವದೇನಂದರೆ,

೧೯೩೪ ನೇ ಇಸವಿ ಅಕ್ಟೋಬರು ತಿಂಗಳು ೯ ನೇ ತಾರೀಕಿಗೆ ಸರಿಯಾದ ಭಾವನಾಮಸಂ|| ರದ ಆಶ್ವಯುಜ ಶು|| ೧ ಲಾಗಾಯತು ಇದೇ ಶು|| ೯ ವರಿವಿಗೂ ಪ್ರತಿದಿನ ಸಾಯಂಕಾಲ ೫-೩೦ ಘಂಟೆ ಮೊದಲುಗೊಂಡು ರಾತ್ರಿ ೯-೩೦ ಘಂಟೆವರಿವಿಗೂ ಶ್ರೀ ಮರಿಸ್ವಾಮಿಗಳವರ ಮಠದಲ್ಲಿ ಬಿಜಾಪುರದ ಬೃಹನ್ಮಠದ ಪಟ್ಟಾಧ್ಯಕ್ಷ ಪ್ರವಚನ ಬೃಹಸ್ಪತಿ ಶ್ರೀ ಶಂಭುಲಿಂಗಶಿವಾಚಾರ್ಯ ಮಹಾಸ್ವಾಮಿಗಳಿಂದ ಶ್ರೀ ಸಿದ್ಧಾಂತ ವಾಕ್ಯಪ್ರವಚನವು ಜರಗುವದು ಈ ಪ್ರವಚನಕ್ಕೂ ಮತ್ತು ವಿಜಯದಶಮಿ ದಿವಸ ಜರಿಯಿಸ್ತದವರೆಗೂ ಜರಗತಕ್ಕ ಮಹೋತ್ಸವಕ್ಕೂ ತಾವು ತಮ್ಮ ಮಿತ್ರಮಂಡಲಿಯೊಂದಿಗೆ ಬಂದು ಮಹಾಸ್ವಾಮಿಯ ಕೃಪೆಗೆ ಪಾತ್ರರಾಗಿ ಆನಂದವನ್ನು ಹೊಂದಿ ಸುಕೃತಭಾಜನರಾಗಬೇಕಾಗಿ ಹಾರೈಸುವ

ಮಠದ ಅಧ್ಯಕ್ಷರಾದ ವೇ|| ಮರಿಬಸವಾರಾಧ್ಯರು.

ಅಡ್ವೊಕೇಟರಿಗೆ ದಂಡ
ಕೋರ್ಟಿನ ಅಪಮಾನದ ಬಗ್ಗೆ.

ರಾಮಮೋಹನಲಾಲರೆಂಬ ಅಡ್ವೊಕೇಟರು ಬಾರ ಕೌನ್ಸಿಲಿನ ಚುನಾವಣೆಯ ಕಾಲಕ್ಕೆ ಮತದಾರರನ್ನುದ್ದೇಶಿಸಿ ಹೊರಡಿಸಿದ ಬಿನ್ನಹಪತ್ರಿಕೆಯಿಂದ ಕೋರ್ಟಿನ ಮಾನಹಾನಿಯಾಯಿತೆಂಬ ಆರೋಪದಿಂದ ಅವರಿಗೆ ಹಾಯಕೋರ್ಟಿನವರು ೨೫೦ ರೂಪಾಯಿಗಳ ದಂಡವನ್ನು ವಿಧಿಸಿದ್ದಾರೆ. ಜಸ್ಟಿಸ್ ಟಾಮ್ ಮತ್ತು ಜಸ್ಟಿಸ್ ಹ್ಯಾರಿಸರೆದುರಿಗೆ ಅವರ ವಿಚಾರಣೆ ನಡೆದಿತ್ತು. ಖಟ್ಲೆಯ ವೆಚ್ಚವನ್ನು ಕೂಡ ಆರೋಪಿಗಳೇ ವಹಿಸಬೇಕೆಂದು ವಿಧಿಸಲಾಗಿದೆ.

ಒಂದು ಪೌಂಡು ತೂಕದ ಕೂಸು.

ಇಂಗ್ಲೆಂಡಿನಲ್ಲಿ ಮಾಲ್ಡಮಸ್ಟೋ ಎಂಬಲ್ಲಿ ಅತ್ಯಂತ ಚಿಕ್ಕ ಹೆಣ್ಣುಮಗುವೊಂದಿರುವುದು. ಎಂಜೆಲಾ ಮೋರ್ಟನ್ ಎಂದು ಅದರ ಹೆಸರು. ಹುಟ್ಟಿದಾಗ ಅದು ಕೇವಲ ೧ ಪೌಂಡು ಮಾತ್ರವಿತ್ತು. ಅದು ಪ್ರತಿ ದಿವಸ ಒಂದು ಔನ್ಸ್ ತೂಕ ಹೆಚ್ಚುತ್ತಿರುವುದು. ಫೌಂಟನ್‌ಪೆನ್ ತುಂಬುವ ನಳಿಕೆಯಿಂದ ಅದಕ್ಕೆ ಹಾಲು ಹಾಕುವರು.

ಪತ್ರವ್ಯವಹಾರ.

ಜಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ, ಬೆಂಗಳೂರು.

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ, ಶ್ರೀಕ್ಷೇತ್ರಕಾಶೀ.

ಆರೋಗ್ಯಮಾರ್ಗ.

ಪ್ರಪಂಚದಲ್ಲಿ ಜೀವಧಾರಣೆಯನ್ನು ಮಾಡಿದ ಸಕಲ ಪ್ರಾಣಿಸಮುದಾಯವು ನಿರಂತರದಲ್ಲಿ ಸುಖವನ್ನೇ ಇಚ್ಛಿಸುವುದಲ್ಲದೆ ದುಃಖವನ್ನು ಸ್ವಪ್ನದಲ್ಲಿಯಾದರೂ ಅನುಭವಿಸಬಿಚ್ಛಿಸುವುದಿಲ್ಲ. ಇದು ಪ್ರಾಣಿಮಾತ್ರದ ಸ್ವಾಭಾವಿಕಗುಣವಾಗಿದೆ. ಅದರಲ್ಲಿಯೂ ಜ್ಞಾನಪ್ರಧಾನವಾದ ಶ್ರೇಷ್ಠಮಾನವ ಜನ್ಮವನ್ನು ಹೊಂದಿದ ಪ್ರಾಣಿಗಳಂತೂ ತಮ್ಮ ಜೀವನವನ್ನು ನಾನಾವಿಧ ಸುಖಗಳ ನಿಧಿಯನ್ನಾಗಿ ಮಾಡಿಕೊಳ್ಳಲೋಸುಗ ಹಗಲಿರುಳು ನಾನಾವಿಧಗಳಾದ ಉಪಾಯಗಳನ್ನು ಚಿಂತಿಸುತ್ತ ತಮ್ಮ ಸಮಸ್ತ ಜೀವಿತಸಮಯವನ್ನು ಅಂತಹ ಉಪಾಯಗಳನ್ನು ಹುಡುಕುವುದರಲ್ಲಿಯೇ ವಿನಿಯೋಗಿಸುತ್ತಿರುವುದನ್ನು ಪ್ರತಿದಿನದಲ್ಲಿ ನೋಡುತ್ತಲೂ ಕೇಳುತ್ತಲೂ ಇರುವೆವಾಗಿದೆ.

ಜಗತ್ಕರ್ತನಾದ ಪರಮೇಶ್ವರನು ಮಾನವ ಪ್ರಾಣಿಗಳ ಚಿಂತೆಯನ್ನು ದೂರಮಾಡುವುದಕ್ಕಾಗಿಯೇ ವಿದ್ಯೆ, ಧನ, ಪ್ರಭುತ್ವ, ಭೂಮಿ ಮೊದಲಾದ ಅನೇಕವಿಧ ಸಂಪತ್ತುಗಳನ್ನು ನಿರ್ಮಿಸಿರುವನು. ಈ ಸಂಪತ್ತುಗಳು ಅವರವರ ಪೂರ್ವಾರ್ಜಿತ ಸುಕೃತವಿಶೇಷದ ಪ್ರಭಾವದಿಂದ ಹೊಂದಲ್ಪಟ್ಟವುಗಳಾಗಿ ಮನುಷ್ಯಜೀವನವನ್ನು ಸುಖಮಯವನ್ನಾಗಿ ಮಾಡಲು ಅದ್ಭುತಶಕ್ತಿಸಂಪನ್ನಗಳಾಗಿರುತ್ತವೆ. ಮಾನವರ ಶೀಘ್ರಪ್ರತಿಷ್ಠೆಗಳಿಗೆ ಈ ಸಂಪತ್ತುಗಳೇ ಕಾರಣವಾಗಿರುವುವೆಂಬ ವಿಷಯವು ಸರ್ವಾನುಭವಸಿದ್ಧವಾಗಿರುತ್ತದೆ. ಇಹಲೋಕ ಪರಲೋಕ ಸುಖಗಳಿಗಾದರೂ ಈ ಸಂಪತ್ತುಗಳೇ ಮುಖ್ಯ ಕಾರಣವಾಗಿರುತ್ತವೆಂಬುದನ್ನು ಸಕಲಶಾಸ್ತ್ರಗಳೂ ಸಿದ್ಧಗೊಳಿಸುತ್ತವೆ. ಆದರೆ ಈ ನಾನಾವಿಧ ಸಂಪತ್ತುಗಳಿಂದ ವಿಭೂಷಿತರಾದವರೆಲ್ಲರೂ ಸುಖಿಗಳಾಗುವರೆ? ಎಂಬ ವಿಷಯವು ಅತಿ ಗಂಭೀರವೂ ವಿಚಾರಣೀಯವೂ ಆಗಿರುತ್ತದೆ.

ಲೋಕದಲ್ಲಿ ಮನುಷ್ಯನು ಸಂಪತ್ತಿನಿಂದೊಡಗೂಡಿದ ಮಾತ್ರಕ್ಕೇ ಸುಖಿಯಾಗುವನೆಂಬ ಮಾತು ಸ್ವಪ್ನಪ್ರಾಯವಾಗಿರುವುದು. ಮನುಷ್ಯನಲ್ಲಿ ಯಾವ ಸಂಪತ್ತಾದರೂ ಇರಲಿ ಜೀವನದ ಮುಖ್ಯ ಸಾರಭೂತವಾದ ಆರೋಗ್ಯಭಾಗ್ಯವೊಂದಿಲ್ಲದಿದ್ದರೆ ಉಳಿದ ಸಂಪತ್ತುಗಳೆಲ್ಲವೂ ಜನಸಂಚಾರವೇ ಇಲ್ಲದ ಘೋರಾರಣ್ಯದಲ್ಲಿ ಬಿದ್ದ ಶರತ್ಕಾಲದ ಪೂರ್ಣಚಂದ್ರನ ಶೀತಲಕಿರಣದಂತೆ ನಿರರ್ಥಕವಾಗುವುವು.

ಆರೋಗ್ಯಭಾಗ್ಯದಿಂದ ವಂಚಿತನಾದವನು ಸಕಲ ವಿದ್ಯಾಪಾರಾವಾರಪಾರಂಗತನಾಗಿ ಲೋಕೋತ್ತರಪಾಂಡಿತ್ಯಮಂಡಿತನಾಗಿದ್ದರೂ ಅವನ ಪಾಂಡಿತ್ಯವೂ ಅವನ ಅಸಾಧಾರಣ ಪ್ರತಿಭಾಶಕ್ತಿಯೂ ಎಣ್ಣೆಯು ಮುಗಿದವಂತರ ದೀಪಪ್ರಕಾಶವು ಕ್ಷೀಣವಾಗುವಂತೆ ತೇಜೋರಹಿತವಾಗುವುವು.

ಆರೋಗ್ಯಭಂಡಾರದಿಂದ ರಹಿತನಾದವನು ಸವಾಲಕ್ಷ ಪೃಥ್ವಿಯನ್ನಾಳುವಂತಹ ಸಾರ್ವಭೌಮನಾಗಿದ್ದರೂ ಅವನ ಪ್ರಭುತ್ವಶಕ್ತಿಯೂ ಅವನ ಸುಖಸಾಮಗ್ರಿಗಳೂ ಮರುಭೂಮಿಯಲ್ಲಿ ಬಿದ್ದ ಮಳೆಯಂತೆ ವ್ಯರ್ಥವಾಗುವುವು.

ನವದ್ವಾರಗಳಿಂದಭಿಬಂಧುರವಾದ ಶರೀರಮಂದಿರಕ್ಕೆ ಆಧಾರಭೂತವಾಗಿರುವ ಆರೋಗ್ಯವೆಂಬ ಕಳಸವಿಯು ಸಡಿಲವಾದರಾಯಿತು! ಮಂದಿರದ ಶೋಭೆಯನ್ನು ವರ್ಧಿಸುತ್ತಲಿರುವ ಜ್ಞಾನೇಂದ್ರಿಯಕರ್ಮೇಂದ್ರಿಯಗಳೆಂಬ ಮಂದಿರದ ಸಾಮಗ್ರಿಗಳು ಶಿಥಿಲವಾಗಿ ತಾವಾಗಿಯೇ ಬೀಳುವಂತಾಗುವುವು. ಇಂತಹ ಮುರುಕು ಮನೆಯಲ್ಲಿ ವಾಸಿಸಲು ಜುಗುಪ್ಸಿತನಾಗಿ ಮಂದಿರಾಧ್ಯಕ್ಷನಾದ ಜೀವಾತ್ಮನು ಸರ್ವಾಂಗಸುಂದರವಾದ ಮತ್ತೊಂದು ಹೊಸಮನೆಯನ್ನು ಹುಡುಕಿಕೊಳ್ಳುವನು.

ಆರೋಗ್ಯವೆಂಬ ಅನರ್ಘಮಾಣಿಕ್ಯವನ್ನೊಂದುಸಲ ಕಳೆದುಕೊಂಡ ಮೇಲೆ ಅದು ಪುನಃ ಸಿಗುವದು ಅಸಂಭವವಾಗಿರುವುದು.

ಆರೋಗ್ಯವೆಂಬ ಅಮೂಲ್ಯ ನಿಧಿಯಿಂದಲಂಕೃತನಾದವನಲ್ಲಿ ಸುಖಸಾಧನಗಳಾದಿತರ ಸಂಪತ್ತುಗಳಿಲ್ಲದಿದ್ದರೂ ಅವನು ಆಡಂಬರರಹಿತನಾಗಿ ತನ್ನ ಆರೋಗ್ಯಮಯ ಜೀವನವನ್ನೇ ಸುಖದ ನಿಧಿಯನ್ನಾಗಿ ತಿಳಿದುಕೊಂಡು ಭಗವದ್ಧ್ಯಾನ, ಸತ್ಕಥಾಕಾಲಕ್ಷೇಪಗಳಿಂದ ತನ್ನ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳುವನು.

ಆರೋಗ್ಯಶಾಲಿಯಾದವನು ತನ್ನ ಶಾರೀರಕ ಮಾನಸಿಕ ಬಲಗಳಿಂದ ಮಾನವಜನ್ಮದ ಮುಖ್ಯೋದ್ದೇಶಗಳಾದ ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳನ್ನು ಸಾಧಿಸಿಕೊಳ್ಳಲು ಸಮರ್ಥನಾಗುವನು. ಆದುದರಿಂದಲೇ ಆರೋಗ್ಯವೆಂಬ ಲೋಕೋತ್ತರ ವಸ್ತುವು ಚತುರ್ವಿಧ ಪುರುಷಾರ್ಥಗಳಿಗೂ ಮೂಲಭೂತವಾಗಿರುವುದೆಂದು ಚರಕಮಹರ್ಷಿಯು 'ಧರ್ಮಾರ್ಥ ಕಾಮಮೋಕ್ಷಾಣಾಮಾರೋಗ್ಯಂ ಮೂಲಮುತ್ತಮಂ' ಎಂದು ಹೇಳಿರುವನು.

ಆರೋಗ್ಯವೆಂಬುದು ಬೆಲೆಯನ್ನು ಕೊಟ್ಟು ಕೊಳ್ಳಬೇಕಾದ ಬಾಹ್ಯವಸ್ತುವೇನೂ ಅಲ್ಲ. ಅದು ನಮ್ಮ ಕಾಲೋಚಿತಗಳಾದ ದೈನಿಕವ್ಯವಹಾರಗಳಿಂದಲೇ ಉಪಲಬ್ಧವಾಗುವುದಾಗಿದೆ. ಯಾವನು ಹಿತ ಮತ್ತು ಮಿತಗಳಾದ ಆಹಾರವಿಹಾರಗಳನ್ನು ಆಯಾಯ ಕಾಲಾನುಗುಣವಾಗಿ ಸೇವಿಸುತ್ತಿರುವನೋ ಅವನ ಶರೀರವು ಆರೋಗ್ಯಮಯವಾಗುವುದರಲ್ಲಿ ಸಂಶಯವೂ ಇಲ್ಲ.

ಪ್ರಕೃತಿವಿರುದ್ಧ, ಕಾಲವಿರುದ್ಧಗಳಾದ ಆಹಾರವಿಹಾರಗಳನ್ನು ಸೇವಿಸುವುದರಿಂದ ವಾತಾದಿ ದೋಷಗಳು ಕುಪಿತಗಳಾಗಿ ಶರೀರವು ನಾನಾವಿಧ ರೋಗಗಳಿಗೆ ಆಕರವಾಗುವುದು. ವೈದ್ಯಶಾಸ್ತ್ರನಿಯಮವಿರುದ್ಧವಾದ ಆಚರಣೆಯಿಂದ ಆರೋಗ್ಯವನ್ನು ಕಳೆದುಕೊಂಡು ಪ್ರತಿದಿನದಲ್ಲಿಯೂ ವಿವಿಧಗಳಾದ ಔಷಧಗಳ ಸೇವನೆಗೋಸುಗ ವೈದ್ಯರ ಮನೆಯ ಹಾದಿಯನ್ನು ನವೆಸುತ್ತಿರುವ ಸ್ವೇಚ್ಛಾಹಾರ ವಿಹಾರಶೀಲರಾದ ನಮ್ಮ ಭಾರತೀಯರ ಬುದ್ಧಿಬಲವನ್ನೆಷ್ಟು ಹೊಗಳಿದರೂ ತೀರದಾಗಿದೆ. ಆರಂಭದಲ್ಲಿಯೇ ಸುಲಭವಾಗಿ ತಮ್ಮ ಪಥ್ಯಾಹಾರ ವಿಹಾರಗಳಲ್ಲಿ ಕಾಲೋಚಿತವಾದ ಪರಿವರ್ತನೆಯನ್ನು ಮಾಡಿಕೊಂಡು ಆರೋಗ್ಯಸುಖವನ್ನು ಹೊಂದುವುದಕ್ಕಿಂತಲೂ ಮಿಗಿಲಾದ ವಿವೇಕಶೀಲತೆಯಿನ್ನಾವುದುಂಟು? 'ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ' ಎಂಬ ನೀತಿವಚನದಂತೆ ಕೆಸರಿನಲ್ಲಿ ಕೈಯನ್ನು ಹಾಕಿ ಪುನಃ ಅದನ್ನು ತೊಳೆದುಕೊಳ್ಳುವ ಕಷ್ಟವನ್ನು ವಹಿಸುವುದಕ್ಕಿಂತಲೂ ಕೆಸರಿನಿಂದ ದೂರವಾಗಿರುವುದೇ ಬುದ್ಧಿಶಾಲಿಗಳ ಕರ್ತವ್ಯವಾಗಿರುವುದಲ್ಲವೆ? ಆರೋಗ್ಯವನ್ನು ಸ್ಥಿರಗೊಳಿಸುವಂತಹ ವಿಹಿತಾಚರಣೆಯ ಕಡೆಗೆ ಲಕ್ಷ್ಯಗೊಡದೆ ನಾನಾವಿಧ ರೋಗಗಳಿಗೆ ಆಮಂತ್ರಣವನ್ನಿತ್ತು ಪುನಃ ಅವುಗಳನ್ನು ನಿವಾರಿಸಿಕೊಳ್ಳಲು ಧನವ್ಯಯ ಶರೀರಪರಿಶ್ರಮಗಳನ್ನು ವಹಿಸುವುದು ವಿವೇಕಶಾಲಿಗಳಾದವರಿಗೆ ಶೋಭಿಸುವುದೆ?

ನಮ್ಮ ಜನ್ಮಭೂಮಿಯಾಗಿರುವೀ ಭಾರತದೇಶಕ್ಕೆ ಶಿರೋಮಣಿಗಳಾಗಿಯೂ ಭೂಮಂಡಲಕ್ಕೆ ಆದರ್ಶವ್ಯಕ್ತಿಗಳಾಗಿಯೂ ಇದ್ದ ನಮ್ಮ ಪ್ರಾಚೀನ ಮಹಾಪುರುಷರು ಹಿತಾಹಾರ ವಿಹಾರಶೀಲರಾಗಿ ಆರೋಗ್ಯಸಂಪತ್ತಿನಿಂದ ಕೂಡಿದವರಾಗಿದ್ದುದರಿಂದಲೇ ತಮ್ಮ ವಿದ್ಯಾವಿನಯ, ಶೌರ್ಯ, ತಪಸ್ಸಾಮರ್ಥ್ಯ, ವೈಭವಗಳಿಂದ ಜಗತ್ತಿನ ಮಾನವಸಮೂಹಕ್ಕೇ ಮಾರ್ಗದರ್ಶಕರಾಗಿದ್ದರು. ಇಂತಹ ಅಘಟಿತಘಟನಾಪಟುಗಳಾಗಿದ್ದ ಅವ್ಯಾಜಕರುಣಾಶಾಲಿಗಳಾದ ಚರಕಸುಶ್ರುತಾದಿ ಮಹರ್ಷಿಗಳು ಆಯುರ್ವೇದಶಾಸ್ತ್ರವನ್ನು ಮಥಿಸಿ ಹಿತಾಹಿತಬೋಧಕಗಳಾದ ಆರೋಗ್ಯಸೂತ್ರಗಳೆಂಬ ದಿವ್ಯರತ್ನಗಳನ್ನು ಜಗತ್ಕಲ್ಯಾಣಕ್ಕಾಗಿ ಪ್ರಸಾರಗೊಳಿಸಿರುವರು. ಇಂತಹ ದಿವ್ಯರತ್ನಗಳ ತೇಜೋಮಯವಾದ ಬೆಳಕಿನಲ್ಲಿ ಮಾನವರು ಹಿತಾಹಾರವಿಹಾರರೂಪಗಳಾದ ಮಾರ್ಗಗಳಿಂದ ಪ್ರವೇಶಿಸಿ ಆರೋಗ್ಯವೆಂಬ ಸರ್ವೋತ್ತಮವಸ್ತುವನ್ನು ಹೊಂದಲೆಂಬುದೇ ಅಗ್ನಿವೇಶ ಚರಕಸುಶ್ರುತಾದಿ ಮಹರ್ಷಿಗಳ ಪ್ರಧಾನೋದ್ದೇಶವಾಗಿರುತ್ತದೆ.

ಈ ಆರೋಗ್ಯಸೂತ್ರಗಳು ಚರಕ ಸುಶ್ರುತಾದಿ ಗ್ರಂಥಗಳಲ್ಲಿ ಸ್ವಸ್ಥವೃತ್ತವೆಂಬ ಅಂಕಿತದಿಂದ ಪರಿಶೋಭಿಸುತ್ತವೆ. ಸ್ವಸ್ಥನ ಲಕ್ಷಣವನ್ನು ಸುಶ್ರುತಮಹರ್ಷಿಯು,

> ಸಮದೋಷಃ ಸಮಾಗ್ನಿಶ್ಚ ಸಮಧಾತು ಮಲಕ್ರಿಯಃ |
> ಪ್ರಸನ್ನಾತ್ಮೇಂದ್ರಿಯಮನಾಃ ಸ್ವಸ್ಥ ಇತ್ಯಭಿಧೀಯತೇ ||
>
> ಸು. ಸೂ. ಅ. ೧೫.

ಎಂಬ ಶ್ಲೋಕದಿಂದ ವರ್ಣಿಸಿರುವನು. ವಾತ ಪಿತ್ತ ಕಫಗಳ ಸಮಾನತೆಯಿಂದ ಕೂಡಿದವನೂ ಮಂದ, ವಿಷಮ, ತೀಕ್ಷ್ಣ, ಸಮಗಳೆಂಬ ಜಠರಾಗ್ನಿಗಳಲ್ಲಿ ಶ್ರೇಷ್ಠವಾದ ಸಮಾಗ್ನಿಯಿಂದ ಕೂಡಿದವನೂ ರಸ ರಕ್ತ ಮಾಂಸ ಮೇದ ಅಸ್ಥಿ ಶುಕ್ರ (ವೀರ್ಯ) ಗಳೆಂಬ ಸಪ್ತಧಾತುಗಳ ಮತ್ತು ಮಲ ಮೂತ್ರ ಸ್ವೇದ (ಬೆವರು) ಗಳೆಂಬ ಮಲತ್ರಯದ ಸಮಾನಕ್ರಿಯೆಯಿಂದ ಕೂಡಿದವನೂ ದೃಢಶರೀರ ಮತ್ತು ನಿರ್ಮಲಗಳಾದ ಇಂದ್ರಿಯ ಮನಸ್ಸುಗಳಿಂದ ಯುಕ್ತನಾದವನೂ ಸ್ವಸ್ಥ (ಆರೋಗ್ಯಶಾಲಿ) ನೆಂದೆನಿಸಿಕೊಳ್ಳುವನು. ಈ ಸ್ವಸ್ಥನಾದ ಮನುಷ್ಯನು ತನ್ನ ಸ್ವಾಸ್ಥ್ಯ (ಆರೋಗ್ಯ) ವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಆಚರಿಸಬೇಕಾಗಿರುವ ಆಚರಣೆಗೆ ಸ್ವಸ್ಥವೃತ್ತವೆಂಬ ನಾಮಧೇಯ ಉಂಟಾಗಿರುತ್ತದೆ. ಇಂತಹ ಸ್ವಸ್ಥವೃತ್ತವನ್ನನುಸರಿಸಿ ನಡೆಯುವವನು ಆರೋಗ್ಯಸಂಪನ್ನನಾಗುವನೆಂದು ಚರಕಮಹರ್ಷಿಯು,

> ಸ್ವಸ್ಥವೃತ್ತಂ ಯಥೋದ್ದಿಷ್ಟಂ ಯಃ ಸಮ್ಯಗನುತಿಷ್ಠತಿ |
> ಸ ಸಮಾಃ ಶತಮವ್ಯಾಧಿರಾಯುಷಾ ನ ವಿಯುಜ್ಯತೇ ||
>
> ಚ. ಸೂ. ಅ. ೮.

ಎಂದು ಹೇಳಿರುವನು. ಶಾಸ್ತ್ರವಿಹಿತವಾದ ಸ್ವಸ್ಥವೃತ್ತವನ್ನು ಕ್ರಮದಿಂದಾಚರಿಸುವ ಮನುಷ್ಯನು 'ಶತಾಯುರ್ವೈ ಪುರುಷಃ ಶತವೀರ್ಯಃ' (ಐ. ಬ್ರಾ. ೨-೭) ಎಂಬ ಶ್ರುತಿವಾಕ್ಯದಂತೆ ಮರಣಪರ್ಯಂತವಾಗಿ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಲ್ಲಿ ಅಕುಂಠಿತವಾದ ಶಕ್ತಿಯನ್ನು ಹೊಂದಿ ವ್ಯಾಧಿರಹಿತನಾಗಿ ನೂರು ವರ್ಷಗಳ ಪೂರ್ಣಾಯುಷ್ಯವನ್ನು ಹೊಂದುವನು.

ಸ್ವಸ್ಥವೃತ್ತವೆಂಬ ಬೀಜದಲ್ಲಿ ಆರೋಗ್ಯವೆಂಬ ಮಹಾವೃಕ್ಷವು ಅಂಕುರರೂಪದಿಂದ ಅಂತರ್ಗತವಾಗಿದ್ದು ಹಿತಾಹಾರವಿಹಾರರೂಪವಾದ ಮಳೆಯು ಬಿದ್ದನಂತರ ಬಹಿರ್ಗತವಾಗಿ ಕಾಲಕ್ರಮದಿಂದ ಅಭಿವೃದ್ಧಿಯನ್ನೈದಿ ನಿರೋಗತೆ, ಬಲ, ವರ್ಣ, ಬುದ್ಧಿ, ದೀರ್ಘಾಯುಗಳೆಂಬ ಅಮೃತಸದೃಶಗಳಾದ ಸುಮಧುರ ದಿವ್ಯಫಲಗಳಿಂದ ಮಾನವರನ್ನು ಆನಂದಗೊಳಿಸುತ್ತದೆ.

ಉಚಿತಾಹಾರವಿಹಾರಗಳಿಂದ ಪರಿಪೋಷಿತವಾದ ಸ್ವಸ್ಥಶರೀರದಲ್ಲಿ ಪೂರ್ವಕರ್ಮವಶದಿಂದೊಂದುವೇಳೆ ರೋಗವುಂಟಾದರೂ ಅದು ವಿಶೇಷ ಬಾಧಕವಾಗಲಾರದು. ಮತ್ತು ಸಾಮಾನ್ಯೋಪಚಾರಗಳಿಂದಲೇ ಶಾಂತವಾಗುತ್ತದೆ. ಆದುದರಿಂದ ಆರೋಗ್ಯಾಭಿಲಾಷಿಯಾದ ಪ್ರತಿಯೊಬ್ಬ ವಿವೇಕಶಾಲಿಯಾದ ಮನುಷ್ಯನು,

> ನಗರೀ ನಗರಸ್ಯೇವ ರಥಸ್ಯೇವ ರಥೀ ಯಥಾ |
> ಸ್ವಶರೀರಸ್ಯ ಮೇಧಾವೀ ಕೃತ್ಯೇಷ್ವವಹಿತೋ ಭವೇತ್ ||
>
> ಚ. ಸೂ. ಅ. ೫.

ನಗರಾಧ್ಯಕ್ಷನು ಪಟ್ಟಣರಕ್ಷಣೆಯಲ್ಲಿ ಹೇಗೆ ಜಾಗ್ರತನಾಗಿರುವನೋ ರಥಾರೋಹಣವನ್ನು ಮಾಡಿದವನು ರಥದ ರಕ್ಷಣೆಯಲ್ಲಿ ಹೇಗೆ ಆಸಕ್ತನಾಗಿರುವನೋ ಅದೇರೀತಿಯಾಗಿ ಹಿತಾಚರಣೆಯಿಂದ ಶರೀರಾರೋಗ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಪ್ರತಿಕ್ಷಣದಲ್ಲಿಯೂ ಎಚ್ಚರದಿಂದರಬೇಕಾಗುತ್ತದೆ.

ಪ್ರತಿಯೊಬ್ಬನೂ ಮೊದಲು ರೋಗವುಂಟಾಗದಿರುವುದಕ್ಕೆ ಸಮುಚಿತಗಳಾದ ಉಪಾಯಗಳನ್ನು ಹುಡುಕಿ ಅವುಗಳನ್ನು ಆಚರಣೆಯಲ್ಲಿ ತಂದು ಅನಂತರ ರೋಗನಿವಾರಣೋಪಾಯಗಳನ್ನು ಹುಡುಕಿಕೊಳ್ಳುವುದು ಸರ್ವೋತ್ತಮಕಾರ್ಯವಾಗಿದೆ.

ರೋಗಸಮೂಹವೆಂಬ ಶತ್ರುಮಂಡಲದ ಆಕ್ರಮಣವನ್ನು ತಡೆಯಲು ದಿನಚರ್ಯೆ ಋತುಚರ್ಯೆಗಳೆಂಬ ದೃಢತರಗಳಾದ ಮಹಾದ್ವಾರಗಳಿಂದತಿಬಂಧುರವಾದ ಸ್ವಸ್ಥವೃತ್ತವೆಂಬ ಅಭೇದ್ಯವಾದ ಕೋಟೆಯು ಅತ್ಯಂತ ಸಮರ್ಥವಾಗಿರುತ್ತದೆ. ಈ ಕೋಟೆಯಲ್ಲಿ ವಾಸಿಸುವ ಮಾನವಶರೀರಕ್ಕೆ ಜ್ವರಾದಿ ರೋಗಗಳೆಂಬ ವೈರಿಗಳ ಭಯವು ಸ್ವಪ್ನದಲ್ಲಿಯೂ ಸಂಭವಿಸಲಾರದು. ಆದುದರಿಂದ ವಿವೇಕಿಗಳಾದ ಪ್ರಿಯವಾಚಕರು ಇಂತಹ ಬಂಧುರವಾದ ಕೋಟೆಯಲ್ಲಿ ವಾಸಮಾಡುತ್ತ ವೈರಿಗಳ ಆಕ್ರಮಣದಿಂದ ರಹಿತರಾಗಿ ಆರೋಗ್ಯಸಾಮ್ರಾಜ್ಯಸುಖವನ್ನನುಭವಿಸುವರಾಗಲೆಂದು ಆದಿಯಲ್ಲಿ ರೋಗಪ್ರತಿಬಂಧಕಗಳಾದ ದಿನಚರ್ಯೆ, ಋತುಚರ್ಯೆಗಳಿಂದೊಡಗೂಡಿದ ಹಿತಾಹಿತಸೂಚಕವಾದ ಸ್ವಸ್ಥವೃತ್ತವೆಂಬ ಆರೋಗ್ಯವನ್ನು ತೋರಿಸಿ ಅನಂತರ ರೋಗನಿವಾರಣೆಗೆ ಅತಿಸುಲಭಸಾಧ್ಯಗಳಾದ ಉಪಾಯ (ಚಿಕಿತ್ಸೆ) ಗಳನ್ನು ಬರೆಯುವುದುಚಿತವಾಗಿರುತ್ತದೆ.

ಬ್ರಾಹ್ಮ್ಯಪ್ರಬೋಧ.

> ಬ್ರಾಹ್ಮೇ ಮುಹೂರ್ತೇ ಬುಧ್ಯೇತ ಸ್ವಸ್ಥೋ ರಕ್ಷಾರ್ಥಮಾಯುಷಃ |
> ದಿನದುಃಖಪ್ರಶಾಂತ್ಯರ್ಥಂ ಸ್ಮರೇದ್ಗುರುಪದಾಂಬುಜಂ ||

ದೀರ್ಘಾಯುವನ್ನಪೇಕ್ಷಿಸುವ ಸ್ವಸ್ಥನಾದ ಮನುಷ್ಯನು ಪ್ರತಿದಿನದಲ್ಲಿಯೂ ಸೂರ್ಯೋದಯಕ್ಕಿಂತ ಮುನ್ನವೇ ದುಃಖನಿವಾರಣೈಕದಕ್ಷರಾದ ಜಗದಾಚಾರ್ಯ ಭಗವತ್ಪೂಜ್ಯಪಾದರ ಪಾದಾರವಿಂದಗಳನ್ನು ಅನನ್ಯಚಿತ್ತನಾಗಿ ಸ್ಮರಿಸುತ್ತ ಹಾಸಿಗೆಯನ್ನು ಬಿಟ್ಟೇಳಬೇಕು.

ಬ್ರಾಹ್ಮ್ಯಮುಹೂರ್ತದಲ್ಲಿ ಏಳುವುದು ಆರೋಗ್ಯವನ್ನು ಸ್ಥಿರಗೊಳಿಸುವುದಾಗಿದೆ. ಯಾರು ರಾತ್ರಿಯಲ್ಲಿ ಬೇಗನೆ (೧೦ ಗಂಟೆಯೊಳಗೆ) ಮಲಗಿ ಪ್ರಾತಃಕಾಲದಲ್ಲಿ ಬೇಗನೆ (೪ ಗಂಟೆಯೊಳಗೆ) ಏಳುವರೋ ಅವರಿಗೆ ಪ್ರಾಯಶಃವಾಗಿ ಯಾವ ರೋಗಗಳೂ ಬರಲಾರವು. ಅವರ ಶರೀರವು ಆರೋಗ್ಯಮಂದಿರವಾಗಿ ವಿದ್ಯೆ, ಬುದ್ಧಿ, ಪೂರ್ಣಾಯುಗಳೆಂಬ ಅನುಪಮವಸ್ತುಗಳಿಂದ ಪರಿಶೋಭಿಸುವಂತಾಗುವುದು.

ಸೂರ್ಯೋದಯಕ್ಕಿಂತ ಪೂರ್ವದ ರಾತ್ರಿಯ ಕಡೆಯ ಯಾಮವು ಅತ್ಯಂತ ಪವಿತ್ರತಮವಾದುದರಿಂದ ಇದಕ್ಕೆ ಬ್ರಾಹ್ಮ್ಯಮುಹೂರ್ತವೆಂಬ ನಾಮಧೇಯವುಂಟಾಗಿರುವುದು. ಈ ಅಮೃತವೇಳೆಯಲ್ಲಿ ಎಚ್ಚರಗೊಳ್ಳುವುದು ಸರ್ವಾರ್ಥಸಾಧಕವಾದುದೆಂದು ಘೋಷಿಸುತ್ತಿರುವ,

> ರಾತ್ರೇಶ್ಚ ಪಶ್ಚಿಮೇ ಯಾಮೇ ಮುಹೂರ್ತೋ ಯಸ್ತೃತೀಯಕಃ |
> ಸ ಬ್ರಾಹ್ಮ ಇತಿ ವಿಜ್ಞೇಯೋ ವಿಹಿತಃ ಸಂಪ್ರಬೋಧನೇ ||

ಎಂಬ ಆಯುರ್ವೇದಸಿದ್ಧಾಂತವು ಸರ್ವಮಾನ್ಯವಾಗಿರುವುದು.

ಬ್ರಾಹ್ಮ್ಯಸಮಯದಲ್ಲಿನ ಪರಿಶುದ್ಧವಾಯುವು ಇಂದ್ರಿಯ ಮನಸ್ಸುಗಳಲ್ಲಿ ಸಾತ್ವಿಕಭಾವವನ್ನು ದಯಗೊಳಿಸಿ ಶರೀರದಲ್ಲಿ ಬಲ ವರ್ಣಸ್ಫೂರ್ತಿಗಳನ್ನು ಸ್ಥಿರಗೊಳಿಸುವದು. ಈ ಸಮಯವು ಅತಿ ಕಠಿಣತರವಾದ ವಿಷಯವನ್ನ ತಿಸುಲಭವಾಗಿ ಸ್ಫುರಣೆಗೊಳಿಸುವಂತಹ ಅಸಾಧಾರಣ ಗುಣದಿಂದ ಕೂಡಿರುವುದಾಗಿದೆ. ಈ ಸಮಯದಲ್ಲಿ ಅಧ್ಯಯನಮಾಡಿದ ವಿದ್ಯೆಯು ಚಿರಸ್ಥಾಯಿಯಾಗುವದೆಂಬ ವಿಷಯವು ಶಾಸ್ತ್ರ ಮತ್ತು ಅನುಭವಗಳಿಂದ ಸಿದ್ಧವಾಗಿದೆ. ವಿದ್ಯಾಧ್ಯಯನಶೀಲರಿಗೆ ಈ ಪವಿತ್ರಸಮಯವು ಕಲ್ಪತರುವಿನಂತೆ ಇಷ್ಟಾರ್ಥದಾಯಕವಾಗಿರುವುದು. ಆಂಗ್ಲಭಾಷೆಯಲ್ಲಿಯಾದರೂ 'Early to bed and early to rise makes a man healthy, Wealthy and wise' ರಾತ್ರಿಯಲ್ಲಿ ಬೇಗನೆ ಮಲಗಿ ಪ್ರಾತಃಕಾಲದಲ್ಲಿ ಬೇಗನೆ ಏಳುವ ಮನುಷ್ಯನು ಆರೋಗ್ಯಶಾಲಿಯೂ ಭಾಗ್ಯಶಾಲಿಯೂ ಬುದ್ಧಿಶಾಲಿಯೂ ಆಗುವನು. ಎಂಬ ನೀತಿವಚನವು ಪ್ರಸಿದ್ಧವಾಗಿದೆ.

ಈಗಿನಕಾಲದ ವಿಲಾಸಮಯ ಜೀವಿಗಳೂ, ಆಲಸ್ಯಮೂರ್ತಿಗಳೂ, ಲಕ್ಷ್ಮೀಕೃಪಾಪಾತ್ರರೂ, ಆದ ಅನೇಕ ಜನರು ಜಗತ್ತಿನವರೆಲ್ಲಾ ಎಚ್ಚತ್ತು ತಮ್ಮ ತಮ್ಮ ಜೀವನ ನಿರ್ವಾಹಕಾಲದಲ್ಲಿ ಪ್ರವಿಷ್ಟರಾಗುತ್ತಿದ್ದರೂ ಅದನ್ನರಿಯದೆ ಶಾವು ಮಾತ್ರ ಮಾಯಾಮಯಯಾದ ನಿದ್ರಾದೇವಿಯ ಮೋಹಪಾಶದಿಂದ ಬಂಧಿತರಾಗಿ ಮದಿರೋನ್ಮತ್ತರಂತೆ ಅರ್ಧೋನ್ಮೀಲಿತ ನೇತ್ರರಾಗಿ ಸೂರ್ಯನು ಉದಯಾಚಲವನ್ನು ಬಿಟ್ಟು ಆಕಾಶಮಧ್ಯದ ಅರ್ಧಮಾರ್ಗವನ್ನತಿಕ್ರಮಿಸುವವರೆಗೂ ಮಿಥ್ಯಾಸುಖಸ್ವಪ್ನಗಳಲ್ಲಿ ವಿಲೀನರಾಗುತ್ತಿರುವರಲ್ಲವೆ?

ಪ್ರಾತಃಕಾಲದಲ್ಲಿ ೮-೯ ಗಂಟೆಗಳು ಒದೆದುಹೋದಮೇಲೆಯೂ ನಿದ್ರಾವಶರಾಗಿರುವ ಪದ್ಧತಿಯು ಪ್ರಾಯಶಃ ಸಕಲ ದೇಶಗಳಲ್ಲಿ ವಿರಾಜಿಸುತ್ತಿರುವ ಅನಂತ ಸುಖಸಾಮಗ್ರಿ ಸಂಪನ್ನರಾದ ಶ್ರೀಮಂತರಲ್ಲಿಯೇ ವಿಶೇಷವಾಗಿ ತೋರಿಬರುತ್ತಲಿದೆ. ಅವರಿಗೆ ಜೀವಿಕೆಯ ಚಿಂತೆಯೇ ಇಲ್ಲದಿರುವಾಗ 'ಬಡವರಂತೆ ಜೀವನನಿರ್ವಾಹದ ಸಾಮಗ್ರಿಯನ್ನು ಹುಡುಕಿಕೊಳ್ಳಲೋಸುಗ ಬೇಗನೆ ಏಳುವಂತಹ ಪ್ರಸಂಗವಾದರೂ ಏನಿದೆ? ಇಂತಹ ಆಲಸಿಗಳಾದ ಹಣವಂತರು ಪ್ರಾತಃಕಾಲದಲ್ಲಿ ಬಹಳ ಹೊತ್ತಿನವರೆಗೆ ಮಲಗಿರುವ ಕೆಟ್ಟಪದ್ಧತಿಯನವಲಂಬಿಸಿ ಮಲಬದ್ಧತೆಯೇ ಮೊದಲಾದ ಅಜೀರ್ಣರೋಗಗಳಿಂದ ಸಿಕ್ಕದಲ್ಲಿ ಪಡೆಯುತ್ತ ಆರೋಗ್ಯಭಾಗ್ಯಕ್ಕೆ ತಿಲಾಂಜಲಿಯನ್ನಿತ್ತು ಯಾವಾಗಲೂ ವರ್ತಮಾನಪತ್ರಗಳಲ್ಲಿ ಆರೋಗ್ಯವರ್ಧಕಗಳೆಂದು ಪ್ರಕಟಿಸಲ್ಪಡುತ್ತಿರುವ ಔಷಧಗಳ ಮಾಯಾಜಾಲದಲ್ಲಿ ಸಿಕ್ಕಿ ಹಣವನ್ನು ನೀರಿನಂತೆ ಸುರಿಯುತ್ತಿರುವುದನ್ನು ನೋಡಿದರೆ ಯಾರಿಗೆ ದುಃಖವುಂಟಾಗದು? ವೈದ್ಯಶಾಸ್ತ್ರನಿಯಮಗಳನ್ನನುಸರಿಸಿ ನಡೆಯುವವರಿಗೆ ಆರೋಗ್ಯವರ್ಧನೆಗಾಗಿ ಇತರ ಔಷಧಗಳ ಅವಶ್ಯಕತೆಯೇ ಇರುವದಿಲ್ಲವೆಂಬ ವಿಷಯವು ಇಂತಹ ಆಡಂಬರಜೀವಿಗಳಿಗೆ ಸ್ವಪ್ನದಲ್ಲಿಯೂ ಬರುವಂತಿಲ್ಲ.

ಸೂರ್ಯೋದಯ ಸೂರ್ಯಾಸ್ತಮಯಗಳಲ್ಲಿ ಮಲಗಿರುವವರನ್ನು ಲಕ್ಷ್ಮಿಯು ಬಿಟ್ಟೋಡುವಳೆಂದು 'ಸೂರ್ಯೋದಯೇ ಚಾಸ್ತಮಿತೇ ಶಯಾನಂ ವಿಮುಂಚತಿ ಶ್ರೀರ್ಯದಿ ಚಕ್ರಪಾಣಿಃ' ಎಂಬ ನೀತಿವಚನವು ಸಾರುತ್ತಿದೆ.

ಪ್ರಿಯವಾಚಕರೇ! ನೀವು ಆರೋಗ್ಯಶಾಲಿಗಳಾಗಿ ಪ್ರಾಚೀನ ಮಹಾಪುರುಷರಂತೆ ಆದರ್ಶವ್ಯಕ್ತಿಗಳಾಗಬೇಕೆಂದಿಚ್ಛಿಸುವದಾದರೆ ಪ್ರತಿದಿನದ ಪ್ರಾತಃಕಾಲದಲ್ಲಿ ಸೂರ್ಯೋದಯಕ್ಕಿಂತ ಪೂರ್ವಸಮಯವಾದ ಬ್ರಾಹ್ಮ್ಯಮುಹೂರ್ತದಲ್ಲಿ ಏಳುವ ಪವಿತ್ರನಿಯಮವನ್ನವಲಂಬಿಸಿ ಸುಖಿಗಳಾಗುವುದುತ್ತಮವಲ್ಲವೆ?

(ಸಶೇಷ.)

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಸುವರ್ಣರಜತಾಂದೋಲಿಕೋತ್ಸವ ಬಿದರಿ.

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸುವರ್ಣರಜತಾಂದೋಲಿಕೋತ್ಸವವು ಕಳೆದ ತಿಂಗಳು 16 ನೇ ತಾರೀಖು ಭಾನುವಾರದ ದಿವಸ ನಮ್ಮ ಶ್ರೀಮನ್ಮಹಾರಾಜರವರು ದಯಪಾಲಿಸಿರುವ ಸಮಸ್ತ ಬಿರುದಾವಳಿಗಳೊಡನೆ ಬಿದರಿ ಗ್ರಾಮದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಈ ಮಹೋತ್ಸವಕ್ಕೆ ಕ್ಲೋಸ್‌ಪೇಟೆ ತಾಲ್ಲೋಕು ಮ|| ಸಬ್ ಡಿವಿಜನ್ ಸಾಹೇಬರವರು ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ತಾಲ್ಲೋಕ್ ಅಮಲ್ದಾರ್ ಸಾಹೇಬರವರು ಪೋಲೀಸ್ ಸಿಬ್ಬಂದಿಯೊಡನೆ ಆಗಮಿಸಿ ಅತ್ಯಂತ ತೃಪ್ತಿಕರವಾದ ಏರ್ಪಾಡನ್ನಿಟ್ಟಿದ್ದರು. ಈ ಮಹೋತ್ಸವಕ್ಕಾಗಿ ಬೆಂಗಳೂರಿನ ಪ್ರಮುಖ ಮಹಾಶಯರೂ ಮತ್ತು ಡಿಸ್ಟ್ರಿಕ್ಟಿನ ನಾನಾಭಾಗಗಳಿಂದ ಅನೇಕ ಮಹಾಶಯರು ಆಗಮಿಸಿದ್ದರು. ಈ ಮಹೋತ್ಸವದಲ್ಲಿ ೫-೬ ಸಾವಿರ ಜನರು ಭಾಗಿಗಳಾಗಿದ್ದರು. ಈ ರೀತಿಯಾಗಿದ್ದ ಜನಸ್ತೋಮದ ಮಧ್ಯದಲ್ಲಿ ಗ್ರಾಮಕ್ಕೆ ಸಮೀಪದಲ್ಲಿ ರಚಿಸಿದ್ದ ಸಿದ್ಧಾಣಕ್ಕೆ ಮಹಾಸ್ವಾಮಿಯವರ ಸವಾರಿಯು ದಯಮಾಡಿಸಿದಕೂಡಲೇ ಸರ್ಕಾರಿ ಅಧಿಕಾರಿಗಳೂ ಗ್ರಾಮಪ್ರಮುಖರೂ ಬೆಂಗಳೂರು ಮುಂತಾದ ಸ್ಥಳಗಳಿಂದ ದಯಮಾಡಿಸಿದ ಮಹನೀಯರುಗಳೂ ಇತ್ತಕಡಾಲದೊಡನೆ ಶ್ರೀಜಗದ್ಗುರುಗಳವರಿಗೆ ಹಾರತುರಾಯಿ ಫಲಪುಷ್ಪಾದಿಗಳನ್ನು ಸಮರ್ಪಿಸಿದ ತರುವಾಯ ದೇಶವರೆಶೆಟ್ಟರು ಚಿಕ್ಕಗಂಗಶೆಟ್ಟರು ಸರ್ಕಾರಿ ಅಧಿಕಾರಿಗಳನ್ನೂ ಗ್ರಾಮಪ್ರಮುಖರನ್ನೂ ಮಹಾಸ್ವಾಮಿಯವರಿಗೆ ಪರಿಚಯಮಾಡಿಸಿದರು. ತರುವಾಯ ಶ್ರೀ ಜಗದ್ಗುರುಗಳವರು ಪಲ್ಲಕ್ಕಿಯಲ್ಲಿ ಮೂರ್ತಮಾಡಿದರು. ಅಸಂಖ್ಯ ಬಿರುದುಗಳೂ ಗಜತುರಗಪದಾತಿಗಳೂ ಉತ್ಸವಕ್ಕೆ ಭವ್ಯತರವಾದ ಶೋಭೆಯನ್ನುಂಟುಮಾಡಿದ್ದುವು. ಮಂಗಳವಾದ್ಯಗಳು ಭೋರ್ಗರೆಯುತ್ತಿದ್ದವು. ಚಿಕ್ಕಮಕ್ಕಳಾದಿಯಾಗಿ ಪ್ರತಿಯೊಬ್ಬರೂ ಭಕ್ತಿಪರವಶರಾಗಿ ಜಗದಾಚಾರ್ಯರ ಜಯಜಯಕಾರವನ್ನು ಮಾಡುತ್ತಿದ್ದರು. ಬಿದರಿಯ ರಾಜಮಾರ್ಗವು ಬಹುಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಈ ಮಹೋತ್ಸವದ ವೈಭವವನ್ನು ಕಣ್ಣಾರೆ ಕಂಡ ಕಣ್ಣುಗಳೇ ಧನ್ಯ! ಈ ಉತ್ಸವದಲ್ಲಿ ಭಾಗಿಗಳಾಗಿದ್ದ ಮಾನವರ ಜನ್ಮವೇ ಸಾರ್ಥಕ!

ಈ ಮಹೋತ್ಸವದಲ್ಲಿ ಕೇವಲ ವೀರಶೈವರೇ ಭಾಗಿಗಳಾಗಿರದೆ ಬ್ರಾಹ್ಮಣರೂ ಮತ್ತು ಮಹಮ್ಮದೀಯರೇ ಮೊದಲಾದ ಸರ್ವಮತದವರೂ ಭಾಗಿಗಳಾಗಿ ಅಸಾಧಾರಣವಾದ ಭಕ್ತಿವಿಶೇಷದಿಂದ ಈ ಮಹೋತ್ಸವವನ್ನು ನಡೆಸಿದರೆಂಬ ವಿಷಯವನ್ನು ಕೇಳಿದರೆ ಯಾವ ಮಾನವನ ಹೃತ್ಕಮಲವು ವಿಕಸಿತವಾಗಲಿಕ್ಕಿಲ್ಲ?

ಶ್ರೀ ಜಗದ್ಗುರುಗಳವರ ಅನುಜ್ಞೆಯ ಮೇರೆಗೆ ಉತ್ಸವವು ಪ್ರಾರಂಭವಾಗಿ ಮುಂದಕ್ಕೆ ಸಾಗಿತು. ಮ|| ರಾ|| ಅಬ್ದುಲ್ ರಹೀಂ ಸಾಹೇಬರವರು ತಮ್ಮ ಜನಾಂಗದ ಪರವಾಗಿ ರಚಿಸಿದ್ದ ಸುಂದರವಾದ ಚಪ್ಪರದಲ್ಲಿ ಅಡ್ರಸ್ಸನ್ನು ಓದಿ ಅರ್ಪಿಸಿ ತಮ್ಮ ವಂದನೆಗಳನ್ನು ಸಮರ್ಪಿಸಿದರು. ಅದಕ್ಕೆ ಮಹಾಸನ್ನಿಧಿಯವರು ಹಿಂದೀ ಭಾಷೆಯಲ್ಲಿ ಅಮೋಘವಾದ ಭಾಷಣವನ್ನು ದಯಪಾಲಿಸಿದರು. ಪ್ರತಿಯೊಬ್ಬರೂ ಭಕ್ತಿವಿಶೇಷದಿಂದ ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ಸುಂದರವಾದ ಚಪ್ಪರಗಳನ್ನೂ ಆರ್ಚುಗಳನ್ನೂ ತಳಿರುತೋರಣ ರಂಭಾಸ್ತಂಭಗಳಿಂದ ಬಹು ಅಂದವಾಗಿ ಶೃಂಗರಿಸಿದ್ದರು. ಎಲ್ಲಾ ಮತಸ್ಥರೂ ಸೇರಿ ಅಸದೃಶವಾದ ಭಕ್ತಿಯಿಂದ ಈ ತರಹದ ವೈಭವವನ್ನು ಏರ್ಪಡಿಸಿದ್ದನ್ನು ನೋಡಿದರೆ ಇದು ಜಗದಾಚಾರ್ಯರ ಮಹಿಮೆಯೆಂದೇ ಹೇಳಬೇಕಾಗಿದೆ. ಈ ಮಹೋತ್ಸವವು ತಮ್ಮ ತಮ್ಮ ಮನೆಗಳ ಮುಂಭಾಗಕ್ಕೆ ದಯಮಾಡಿಸಿದ ಕೂಡಲೇ ಭಕ್ತರು ಫಲಪುಷ್ಪ ಹಾರತುರಾಯಿಗಳನ್ನರ್ಪಿಸಿ ೧೦೮ ಆರತಿಗಳನ್ನು ಹಾಕುತ್ತಿದ್ದರು. ಸುವಾಸಿನಿಯರು ಅಲ್ಲಲ್ಲಿ ಮಹಾಸ್ವಾಮಿಯವರಿಗೆ ಮಂಗಲ ನೀರಾಜನವನ್ನು ಬೆಳಗುತ್ತಿದ್ದರು. ಮಹೋತ್ಸವವು ಟ್ರಾವೆಲರ್ಸ್ ಬಂಗಲೆಯಲ್ಲಿ ರಚಿಸಲ್ಪಟ್ಟಿದ್ದ ಸಭಾಮಂಟಪಕ್ಕೆ ಬಿಜಯಂಗೈಸಿತು. ಶ್ರೀ ಜಗದ್ಗುರುಗಳವರು ಪಲ್ಲಕ್ಕಿಯಿಂದಿಳಿದು ಸಭಾಭವನದಲ್ಲಿ ಭವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಸಿಂಹಾಸನವನ್ನಾರೋಹಣಮಾಡಿದರು. ಕೂಡಲೆ ಜಗದಾಚಾರ್ಯರ ಜಯಜಯಕಾರವು ದಿಙ್ಮಂಡಲವನ್ನು ವ್ಯಾಪಿಸಿತು. ಬೆಂಗಳೂರಿನಿಂದ ದಯಮಾಡಿಸಿದ್ದ ಮಹಂತಿನಮಠದ ಪೀಠಾಧ್ಯಕ್ಷರಾದ ಶ್ರೀ|| ವೇ|| ಷ|| ಬ್ರ|| ಗಂಗಾಧರ ಶಿವಾಚಾರ್ಯ ಸ್ವಾಮಿಗಳವರು ಗುರುಸ್ತೋತ್ರ ವಿಷಯವಾಗಿ ಭಾಷಣ ಮಾಡಿದರು. ಅನಂತರ ಬಿದರಿ ಗ್ರಾಮದ ಸ್ವಾಗತ ಭಕ್ತಮಂಡಲಿಯವರು ವಿಜ್ಞಾಪನಾಪತ್ರವನ್ನು ಓದಿ ಸಮರ್ಪಿಸಿದರು. ಆ ಬಳಿಕ ಶ್ರೀ ಜಗದ್ಗುರುಗಳವರು ಸರ್ವಮತಸಮ್ಮತವಾದ ಸನಾತನ ಉದಾತ್ತಧರ್ಮತತ್ವಗಳನ್ನು ಬೋಧಿಸಿ ವಿಜ್ಞಾಪನಾಪತ್ರಿಕೆಗೆ ಪ್ರತ್ಯುತ್ತರವನ್ನು ಅಪ್ಪಣೆಕೊಡಿಸಿ ಬಿದರಿ ಗ್ರಾಮದ ಭಕ್ತರು ಸನ್ನಿಧಿಯ ಸ್ವಾಗತಕ್ಕೆ ಮಾಡಿದ ಕಾರ್ಯಕಲಾಪಗಳ ಸಮರ್ಪಕತೆಯನ್ನು ಸೂಚಿಸಿ ಸರ್ಕಾರಿ ಅಧಿಕಾರಿಗಳು ಉತ್ಸವವನ್ನು ಶಾಂತರೀತಿಯಿಂದ ನಡೆಸಿದ್ದನ್ನು ಶ್ಲಾಘಿಸಿ ಪುಷ್ಪಮಾಲಿಕೆಗಳನ್ನಾಶೀರ್ವದಿಸಿ ನಮ್ಮನ್ನಾಳುವ ಧರ್ಮಮೂರ್ತಿಗಳಾದ ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬವರ್ಗಕ್ಕೂ ಸಮಸ್ತಪ್ರಜೆಗಳಿಗೂ ಶ್ರೀಭಗವತ್ಪಾದ ರೇಣುಕಾಚಾರ್ಯರು ಆಯುರಾರೋಗ್ಯಭಾಗ್ಯಾದಿ ಸಕಲ ಸನ್ಮಂಗಳಗಳನ್ನೀಯಲೆಂದು ಕೋರಿ ಪೂಜಾನುಷ್ಠಾನದ ಸಮಯವಾದ್ದರಿಂದ ಸಭಾವಿಸರ್ಜನೆಗೆ ಅಪ್ಪಣೆಯನ್ನು ದಯಪಾಲಿಸಿದರು. ಸಮಸ್ತರೂ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಾಜಕೀ ಜೈ ಎಂಬ ಜಯಘೋಷವನ್ನು ಮಾಡಿದರು. ಈ ಮಹೋತ್ಸವ ಕಾರ್ಯವನ್ನು ಬಿದರಿ ಗ್ರಾಮದ ಗುರುಭಕ್ತರೆಲ್ಲರೂ ಅತ್ಯುತ್ಸಾಹದಿಂದ ನಡೆಸಿದುದು ಶ್ಲಾಘನೀಯವಾಗಿದೆ. ಜಗದಾಚಾರ್ಯನು ಸಮಸ್ತ ಗುರುಭಕ್ತರಿಗೂ ಸನ್ಮಂಗಳಗಳನ್ನೀಯಲೆಂದು ಕೋರುವ,

ಓರ್ವ ಪ್ರತ್ಯಕ್ಷದರ್ಶಿ.

ಸಲಗರ ಪಟ್ಟಾಧ್ಯಕ್ಷ ತಪೋನಿಧಿ ಶ್ರೀ ಸಾಂಬ ಸ್ವಾಮಿಗಳವರ ಆಗಮನ, ಕಾಶಿ.

ಗುರುವರ್ಗದ ದಿವ್ಯಜ್ಯೋತಿಗಳಾದ ಅನೇಕ ಮಹಾಮಹಿಮರು ಅಲ್ಲಲ್ಲಿಯೇ ತಪೋನಿಷ್ಠಾಗರಿಷ್ಠರಾಗಿರುವುದು ಸುಪ್ರಸಿದ್ಧವೇ ಅದೆ. ನಿಜಾಂ ಪ್ರಾಂತ ಗುಲಬರ್ಗಾ ಜಿಲ್ಲಾ ಸಲಗರ ಗ್ರಾಮದ ವೀರಗೋತ್ರೀಯ ಬೃಹನ್ಮಠಾಧ್ಯಕ್ಷರಾದ ಷ|| ಬ್ರ|| ಶ್ರೀ|| ಸಾಂಬಶಿವಾಚಾರ್ಯಸ್ವಾಮಿಗಳು ಶಾಪಾನುಗ್ರಹಶಕ್ತರೂ ಸದಾ ಶಿವಪೂಜಾನಿಷ್ಠರೂ ತಪೋನಿಧಿಗಳೂ ಎಂಬುದು ವಿಖ್ಯಾತವಿಷಯವಾಗಿದೆ. ಇವರು ಬಾಲ್ಯದಿಂದಲೂ ಈವರೆಗೂ ತೋರಿಸಿದ ಮಹಿಮೆಗಳು ಅನಂತವಾಗಿವೆ. ಬಾಲ್ಯದಲ್ಲಿ ಶತ್ರುಗಳು ವಿಷಪ್ರಯೋಗಮಾಡಿದಾಗ ಅದು ವಿಷವೆಂದು ತಿಳಿದಿದ್ದರೂ ಲಿಂಗನೈವೇದ್ಯವಾದುದರಿಂದ ಸ್ವೀಕರಿಸಿ ಜೀರ್ಣಮಾಡಿದರು. ಒಂದು ದೊಡ್ಡ ಹಳ್ಳವು ತುಂಬಿ ಹರಿಯುತ್ತಿರುವಾಗ ಯಾರಿಗೂ ಅಪಾಯವಾಗದಂತೆ ಸಾವಿರಾರು ಜನರನ್ನು ದಾಟಿಸಿದರು. ಅನೇಕ ರೋಗಿಗಳೂ ಅಪುತ್ರರೂ ಇವರ ಅನುಗ್ರಹದಿಂದ ಇಷ್ಟಾರ್ಥಗಳನ್ನು ಪಡೆದಿದ್ದಾರೆ. ಹಿಟ್ಟೂರಿನಲ್ಲಿ ಗತವರ್ಷ ಪ್ಲೇಗು ಬಂದಾಗ ಸಾವಿರಾರು ಜನರು ಈ ತಪಸ್ವಿಗಳ ಭೂತಿಪಾದೋದಕದಿಂದಲೇ ಮೃತ್ಯುವಿನಿಂದ ದೂರರಾಗಿದ್ದಾರೆ. ಮೂರು ವರುಷಗಳ ಹಿಂದೆ ಪ್ರತಿಜ್ಞಾಪೂರ್ವಕವಾಗಿ ಜಲತಪಾನುಷ್ಠಾನದಿಂದ ೫೦೦ ಮೈಲುಗಳ ಪ್ರದೇಶದಲ್ಲಿ ಮಳೆಯನ್ನು ತರಿಸಿ ಲಕ್ಷಗಟ್ಟಲೆ ದುಃಖಿತರಿಗೆ ಕಲ್ಯಾಣವನ್ನುಂಟುಮಾಡಿದ ವಿಷಯವು ಮಹಾರಾಷ್ಟ್ರದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ಈ ಮಹನೀಯರು ತಮ್ಮ ಈ ೫೫ ನೆಯ ವರ್ಷದ ವಯಸ್ಸಿನೊಳಗಾಗಿಯೇ ನಾಲ್ಕಾರು ಲಕ್ಷ ರೂಪಾಯಿಗಳನ್ನು ಮಾಹೇಶ್ವರ ಸಂತರ್ಪಣೆ ಮುಂತಾದವುಗಳಿಗೆ ವಿನಿಯೋಗಿಸಿದರೆಂದು ಕೇಳುತ್ತೇವೆ. ಒಂದೆರಡು ಲಕ್ಷ ರೂಪಾಯಿಗಳ ಮೂಲಧನದಿಂದ ವೀರಮಾಹೇಶ್ವರ ಗುರುಕುಲವನ್ನು ನಿರ್ಮಿಸುವ ಸಂಕಲ್ಪವುಳ್ಳವರಾಗಿರುವರೆಂದು ತಿಳಿದರೆ ಯಾರಿಗೆ ಆನಂದವಾಗಲಾರದು? ಈ ತಪೋನಿಧಿಗಳು ಈಗ ಶ್ರೀ ಕಾಶೀ ಜಗದ್ಗುರುಪೀಠಕ್ಕೆ ಆಗಮಿಸಿದ್ದು ಇಲ್ಲಿಯ ಅನೇಕ ದೊಡ್ಡ ಮನುಷ್ಯರು ಸಂದೋಹಸಂಹವಾಗಿ ಶ್ರೀ ಸ್ವಾಮಿಗಳವರ ದರ್ಶನಾಶೀರ್ವಾದಗಳನ್ನು ಪಡೆಯುತ್ತಿರುವರು. ಇವರ ಅಮೃತ ಸಾಮರ್ಥ್ಯವನ್ನು ನೋಡಲಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಜಯವೆಂದೇ ನನಗೆ ಭಾವನೆಯುಂಟಾಗಿದೆ.

ಪ್ರತ್ಯಕ್ಷದರ್ಶಿ, ಕಾಶಿ.

ಹಾಸನ ಡಿಸ್ಟ್ರಿಕ್ಟಿನ ಅಭ್ಯುದಯ. ಮಹಾರಾಜರ ಮತ್ತು ದಿವಾನರ ಆಗಮನ.

ಶ್ರೀಮನ್ಮಹಾರಾಜರವರು ಕಳೆದ ತಿಂಗಳಲ್ಲಿ ಹಾಸನಕ್ಕೆ ದಯಮಾಡಿಸಿ ತಾ|| 30-8-34 ರಲ್ಲಿ ಅರಕಲಗೂಡು, ಮಲ್ಲಿಪಟ್ಟಣ ಮತ್ತು ಸಕಲೇಶಪುರಗಳಲ್ಲಿ ಸಂಚಾರಮಾಡಿದರು. ತಾ|| 2-9-34 ರಲ್ಲಿ ಪುನಃ ಸಕಲೇಶಪುರ ಮಾರನಹಳ್ಳಿ ಈ ಪ್ರಾಂತಗಳಲ್ಲಿ ಸಂಚಾರಮಾಡಿದರು. ಮಹಾಸ್ವಾಮಿಯವರ ದರ್ಶನವು ಅನಾಯಾಸವಾಗಿ ದೊರೆತಿದ್ದರಿಂದ ಈ ನಾಡಿನ ಪ್ರಜೆಗಳ ಸಂತೋಷಕ್ಕೆ ಪಾರವೇ ಇಲ್ಲದಂತಾಗಿದೆ. ತಾ|| 3-9-34 ರಲ್ಲಿ ಮಂಜರಾಬಾದ ತಾಲ್ಲೂಕು ಕಾಫಿಪ್ಲಾಂಟರ್ ಮ|| ರಾ|| ದೋಗರಾಲ್ ಬಿ. ಬಸವೇಗೌಡರಿಗೂ, ಅರಕಲಗೂಡು ತಾಲ್ಲೂಕು ಸಾಹುಕಾರ್ ಮ|| ರಾ|| ಎ. ವಿ. ಸೂರ್ಯನಾರಾಯಣಶೆಟ್ಟರಿಗೂ ಮಹಾಸ್ವಾಮಿಯವರು ಇಂಟರ್‌ವ್ಯೂ ದಯಪಾಲಿಸಿ ಆಯಾಯ ತಾಲ್ಲೂಕುಗಳ ಕಷ್ಟಸುಖಗಳನ್ನು ಅವರಿಂದ ವಿಚಾರಿಸಿದರೆಂದು ತಿಳಿಯುತ್ತದೆ. ಮಹಾಸ್ವಾಮಿಯವರ ಈ ವಿಧವಾದ ವರ್ತನೆಯಿಂದ ಇವರ ಪ್ರಜಾವಾತ್ಸಲ್ಯವೂ, ಪ್ರಜಾಪ್ರಮುಖರಿಗಿರುವ ಉತ್ತೇಜನವೂ ಬಹಳಮಟ್ಟಿಗೆ ವ್ಯಕ್ತಗೊಳ್ಳುತ್ತದೆ

ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲರು ಸಹ ಈ ತಿಂಗಳಲ್ಲಿ ಹಾಸನಕ್ಕೆ ದಯಮಾಡಿಸಿ ಈ ಡಿಸ್ಟ್ರಿಕ್ಟಿನ ಅನೇಕ ತಾಲ್ಲೂಕುಗಳಲ್ಲಿ ಸಂಚಾರಮಾಡಿ ಪ್ರಜಾಪ್ರಮುಖರಿಂದಲೂ, ಖಾಸಗೀ ದೊಡ್ಡ ಮನುಷ್ಯರಿಂದಲೂ ತಿಳಿದುಬಂದ ಸ್ಥಾನಿಕರಿಕ್ತಗಳಿಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರಣೆ ನಡೆಸಿ ನಿರ್ಣಯಗೊಳಿಸಿದರು. ಪರಸೀಪುರಕ್ಕೆ ದಯಮಾಡಿಸಿ ಹೈಸ್ಕೂಲಿನ ಪ್ರಾರಂಭೋತ್ಸವ, ನೀರು ಸರಬರಾಯಿ ಯಂತ್ರದ ಕಟ್ಟಡದ ಪ್ರಾರಂಭೋತ್ಸವಗಳಲ್ಲಿ ಭಾಗವಹಿಸಿ ಸುಗಮವಾಗಿ ಕಾರ್ಯಗಳನ್ನು ನೆರವೇರಿಸಿದರು.

ಈ ಡಿಸ್ಟ್ರಿಕ್ಟಿಗೆ ಮಹಾರಾಜರ ಮತ್ತು ದಿವಾನರ ಆಗಮನದಿಂದ ರಾಜಮಾರ್ಗಗಳು ಎಂಜಿನಿಯರುಗಳನ್ನು ಕಂಡು ರಿಪೇರಿಗೊಂಡು ವಿಶಾಲವಾದುವು. ಧರ್ಮಕಾರ್ಯಪ್ರಸಕ್ತರು ಮುಂದೆ ಬಂದು ಧರ್ಮಕಾರ್ಯಗಳಿಗೆ ಉದಾರಾಶ್ರಯವನ್ನಿತ್ತರು. ಒಟ್ಟಿನಲ್ಲಿ ಈ ಡಿಸ್ಟ್ರಿಕ್ಟಿನ ಅಭ್ಯುದಯವೇ ಆಯಿತು.

ಒಬ್ಬ ರೈತ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪುರಾಣಸಮಾಪ್ತಿಮಹೋತ್ಸವ, ಹಾವೇರಿ.

ಹಾವೇರಿ ಸದುವಿನಮಠದಲ್ಲಿ ಶ್ರಾವಣಶುದ್ಧ ಪಾಡ್ಯ ಸೋಮವಾರದಿಂದ ಶ್ರೀಮಜ್ಜಗದ್ಗುರು ರೇಣುಕವಿಜಯವೆಂಬ ಪುರಾಣವು ಇಲ್ಲಿಯ ಹರಸೂರಬಣ್ಣದಮಠದ ಶ್ರೀ|| ಷ|| ಬ್ರ|| ಚರಪಟ್ಟಾಧ್ಯಕ್ಷ ಶ್ರೀ ಚನ್ನಮಲ್ಲಸ್ವಾಮಿಗಳವರ ಸನ್ನಿಧಿಯಲ್ಲಿ ಜರುಗಿಸಲ್ಪಟ್ಟಿತು. ಮತ್ತು ವೇ|| ಪ್ರಭುಶಾಸ್ತ್ರಿಗಳು ಪುರಾಣಿಕ ಹದಳ್ಳ ರಯ್ಯನವರು ಬೆಂಚಿಹಳ್ಳಿ ವೇ|| ಸಿದ್ಧಲಿಂಗದೇವರು ಹಿರೇಮಠ ಹಿರೇಹರಕುಣಿ ವೇ|| ಗಾರೀಮಠದ ಜಯದೇವಗವಾಯಿಗಳು ಇವರುಗಳು ಭಾದ್ರಪದ ಶುದ್ಧ ತ್ರಯೋದಶಿ ಶುಕ್ರವಾರದವರೆಗೂ ಭಕ್ತಾದಿಗಳ ಮನಸ್ಸಿನಮೇಲೆ ಪರಿಣಾಮಕರವಾಗುವಂತೆ ಈ ಪುರಾಣವನ್ನು ಬೋಧಮಾಡಿದರು. ಮಧ್ಯಮಧ್ಯದಲ್ಲಿ ಗಣಾರಾಧನೆಗಳು ಸರ್ವಭಕ್ತಮಂಡಳಿಯಿಂದ ಜರುಗುತ್ತಲಿದ್ದವು. ಸಮಾಪ್ತಿಯ ದಿವಸ ಮೊದಲು ಏರ್ಪಡಿಸಿದಂತೆ ಪುರದ ಮುಖ್ಯ ರಾಜಮಾರ್ಗಗಳು ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟಿದ್ದವು. ಆ ದಿವಸ ಸಮಸ್ತಭಕ್ತಮಾಹೇಶ್ವರರಿಗೂ ಅತಿಥಿಅಭ್ಯಾಗತರಿಗೂ ಅನ್ನಸಂತರ್ಪಣೆಯು ಜರುಗಿಸಲ್ಪಟ್ಟಿತು. ಸಂಜೆ ೬ ಘಂಟೆಗೆ ಸರಿಯಾಗಿ ಜಗದ್ಗುರು ರೇಣುಕ ಶಿವಾಚಾರ್ಯರ ಭಾವಪಟವನ್ನು ಆಂದೋಲಿಕೆಯಲ್ಲಿ ಮೂರ್ತಮಾಡಿಸಿ ಸಕಲ ಬಿರುದಾವಳಿಗಳಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘಗಳ ಇಂಪಾದ ಸ್ತೋತ್ರಗಳಿಂದಲೂ ನಗಾರಿ ನೌಬತ್ತು ದೊಳ್ಳು ಭಜಂತ್ರಿ ತಾಳ ಮೊದಲಾದ ಸಮಸ್ತ ವಾದ್ಯಗಳಿಂದಲೂ, ಶ್ರೀಪತಿ ವಿನಮಠದಿಂದ ಉತ್ಸವವು ಹೊರಡಿಸಲ್ಪಟ್ಟಿತು. ಮಾರ್ಗದಲ್ಲಿ ಸುವಾಸಿನಿಯರು ನೀರಾಜನಾದಿಗಳಿಂದ ಸಹಿತರಾಗಿ ಫಲಪುಷ್ಪಾದಿಗಳನ್ನು ಅರ್ಪಿಸಿ ಆಶೀರ್ವಾದಗಳನ್ನು ಪಡೆಯುತ್ತಿದ್ದರು. ಮಧ್ಯದಲ್ಲಿ ಯುವಕರು ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಪರಾಕುಗಳನ್ನು ಸಿಂಹನಾದದಂತೆ ಗರ್ಜಿಸುತ್ತಿದ್ದರು. ಈ ರೀತಿಯಾಗಿ ಪುರದ ಎಲ್ಲಾ ಬೀದಿಗಳಲ್ಲಿ ಹೊರಟು ರಾತ್ರಿ ೨ ಘಂಟೆಗೆ ಮಠಕ್ಕೆ ಬಂದು ತಲುಪಿತು. ಅನಂತರ ಪುರಾಣದಲ್ಲಿ ಭಾಗವಹಿಸಿದ ಸಮಸ್ತ ಪಂಡಿತರಿಗೂ ಯೋಗ್ಯಸಂಭಾವನೆಯು ಶ್ರೀಗಳವರಿಂದ ಕೊಡಲ್ಪಟ್ಟಿತು. ಉಳಿದ ಸಮಸ್ತ ಭಜನಾಸಂಘದವರಿಗೆ ಆಚಾರ್ಯರ ಭಾವಪಟದಿಂದ ಕೆತ್ತಿದ ರಜತ ಪದಕಗಳು ಕೊಡಲ್ಪಟ್ಟವು ಆಚಾರ್ಯರ ಜಯಘೋಷದೊಡನೆ ಮಂಗಳಮಾಡಲ್ಪಟ್ಟಿತು. ಅನಂತರ ಸಮಸ್ತರೂ ಫಲಾಶೀರ್ವಾದ ಹೊಂದಿ ಆನಂದತುಂದಿಲರಾಗಿ ತೆರಳಿದರು.

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘ. ಸೆಕ್ರೆಟರಿ, ಹಾವೇರಿ.

ಪಂಚಾಚಾರ್ಯ ಪ್ರಭಾ.

೧೯೩೪ ನೇ ಅಕ್ಟೋಬರ್ ತಾ|| ೧ ನೇ ಸೋಮವಾರ.

ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಭೆ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರ ಸವಾರಿಯು ರಾಜಧಾನಿಗೆ ಕಳೆದ ತಿಂಗಳು ೨೩ ನೆಯ ತಾರೀಖಿನ ದಿವಸ ಅಭೂತಪೂರ್ವವಾದ ವೈಭವದೊಡನೆ ಆಗಮಿಸಿದ ವಿಷಯವು ಈ ಮೊದಲೇ ನಮ್ಮ ಪತ್ರಿಕೆಯಲ್ಲಿ ಪ್ರಕಟಿತವಾಗಿರುವುದು ಸರಿಯಷ್ಟೆ! ಆ ದಿವಸ ಮೊದಲ್ಗೊಂಡು ಪ್ರತಿ ದಿವಸವೂ ಮಹಾಸನ್ನಿಧಿಯಲ್ಲಿ ಸಭೆ ಸೇರಿ ಧರ್ಮಬೋಧೆಯಾಗುತ್ತಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ. ರಾಜಧಾನಿಯ ಎಲ್ಲಾ ಮತೀಯರೂ ಅಸಾಧಾರಣ ಪ್ರೇಮೋತ್ಸಾಹಾದಿಗಳಿಂದೊಡಗೂಡಿ ಗುಂಪುಗುಂಪಾಗಿ ಬಂದು ಶ್ರೀಗಳವರ ಬೋಧಾಮೃತವನ್ನು ಪಾನಮಾಡುತ್ತಿರುವರು. ಶ್ರೀಗಳವರು ತಮ್ಮ ಉಪದೇಶದಲ್ಲಿ ಸರ್ವಸಮರ್ಪಕವಾದ ಅತ್ಮಾನಾತ್ಮವಿಚಾರವನ್ನು ಬೋಧಿಸುತ್ತಿರುವುದರಿಂದಲೂ, ಎಲ್ಲಾ ಮತಗಳಲ್ಲಿ ಸಹಾನುಭೂತಿಯನ್ನು ಪ್ರದರ್ಶಿಸುತ್ತಿರುವುದರಿಂದಲೂ, ಸರ್ವಮತಾಚಾರ್ಯರೂ ಭಗವದಂಶೀಭೂತರಾಗಿ ಅವತರಿಸಿರುವುದರಿಂದ ಆಯಾಮತೀಯರು ಆಯಾಮತಾಚಾರ್ಯರು ಹಾಕಿರುವ ಮೇಲ್ಪಂಕ್ತಿಯನ್ನೇ ಅನುಸರಿಸುತ್ತ ಮೋಕ್ಷಸುಖವನ್ನು ಸುಭವಿಸಬೇಕೆಂದು ಬೋಧಿಸುತ್ತಿರುವುದರಿಂದಲೂ, ಈ ಕಾಲದಲ್ಲಿ ಸರ್ವತ್ರ ಮರಣೋನ್ಮುಖವಾಗಿ ಸರಳುತ್ತಿರುವ ಧರ್ಮವಿಷಯವನ್ನೆತ್ತಿಕೊಂಡು ಪ್ರತಿಯೊಬ್ಬರ ಹೃದಯವು ಕರಗುವಂತೆ ಸಂಭಾಷಿಸುತ್ತಿರುವುದರಿಂದಲೂ ಸರ್ವಮತೀಯರ ಸ್ತುತಿಗೆ ಪಾತ್ರರಾಗಿದ್ದಾರೆ.

ಶ್ರೀಗಳವರ ದಿವ್ಯಪ್ರಭಾವವನ್ನೂ, ಅವರು ನಿರರ್ಗಳವಾಗಿ ಪ್ರತಿಪಾದಿಸುತ್ತಿರುವ ಶಾಸ್ತ್ರೀಯವಿಷಯವನ್ನೂ, ಸಂಸ್ಕೃತ-ಕನ್ನಡ-ಹಿಂದಿ-ಮರಾಠಿ-ಆಂಧ್ರ ಮೊದಲಾದ ಭಾಷೆಗಳಲ್ಲಿ ಕಂಠೀರವಸದೃಶವಾದ ಕಂಠಧ್ವನಿಯಿಂದ ಭಕ್ತಮಂಡಳಿಗೆ ಉಪದೇಶಿಸುತ್ತಿರುವುದನ್ನೂ ನೋಡಿ ಜನರು ಆನಂದಸಾಗರದಲ್ಲಿ ಲೋಲಾಡುತ್ತಿದ್ದಾರೆ. ಇಂಥ ಸುಯೋಗವನ್ನು ರಾಜಧಾನೀ ನಿವಾಸಿಗಳು ಯಾವ ಕಾಲದಲ್ಲಿಯೂ ಪಡೆದಿಲ್ಲವೆಂದು ಮುಕ್ತಕಂಠದಿಂದ ಸಾರುತ್ತಿದ್ದಾರೆ. ಒಟ್ಟಿಗೆ ಶ್ರೀಗಳವರು ರಾಜಧಾನಿಯ ಸಕಲಮತೀಯರ ಭಕ್ತಿವಿಶ್ವಾಸಗಳಿಗೆ ಪಾತ್ರರಾಗಿರುವುದು ವೀರಶೈವಮತಕ್ಕೆ ಪರಮಶೋಭಾವಹವಾದುದೆಂದು ಸಾರಿಸಾರಿ ಹೇಳಬಹುದು. ಶ್ರೀಗಳವರ ಭಾಷಣವಾದ ಮೇಲೆ ಪ್ರತಿದಿವಸವೂ ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳವರು ಧಾರ್ಮಿಕ ವಿಷಯದಲ್ಲಿಯೂ, ಗುರುಭಕ್ತಿಯ ವಿಷಯದಲ್ಲಿಯೂ, ಮೋಕ್ಷಸಾಧನ ವಿಷಯದಲ್ಲಿಯೂ ಉಪನ್ಯಾಸಗಳನ್ನು ಮಾಡುತ್ತಿರುವರು. ಯುಕ್ತಿಯುಕ್ತವೂ ಹಾಸ್ಯರಸಗರ್ಭಿತವೂ ಆದ ಇವರ ಭಾಷಣವನ್ನು ಜನರು ಬಹು ಆದರಬುದ್ಧಿಯಿಂದ ಕೇಳುತ್ತಿರುವರು. ಇವರು ತಮ್ಮ ಭಾಷಣದಲ್ಲಿ ಲೌಕಿಕೋದಾಹರಣೆಗಳನ್ನು ತೆಗೆದುಕೊಂಡು ಧರ್ಮಪ್ರಭೆಯನ್ನು ಸರ್ವರಮೇಲೂ ಪ್ರಸರಿಸುತ್ತಿರುವರು. ಸೊಲ್ಲಾಪುರ ಡಿ|| ಹೋಟಗಿ ಬೃಹನ್ಮಠಾಧೀಶ ಬಾಲತಪಸ್ವಿ ಶ್ರೀ ಚನ್ನವೀರಶಿವಾಚಾರ್ಯಸ್ವಾಮಿಗಳವರು ಧರ್ಮಸುಧಾರಣೆಯ ವಿಷಯವಾಗಿ ಬಹು ಹೃದಯಂಗಮವಾದ ಭಾಷಣವನ್ನು ಮಾಡಿ ಸರ್ವ ಸಭಿಕರನ್ನು ಆನಂದತುಂದಿಲಹೃದಯರನ್ನಾಗಿ ಮಾಡಿದರು. ಮಹಾರಾಷ್ಟ್ರದೇಶ ವಿರಾಜಮಾನವಾದ ಬಾರ್ಸಿ ಟವನ್ನಿನಿಂದಾಗಮಿಸಿದ ಶ್ರೀ ಪರಂಡಕರ ಮಠಾಧ್ಯಕ್ಷರಾದ ರಾಚಲಿಂಗಸ್ವಾಮಿಗಳವರು ಧರ್ಮೋನ್ನತಿಯ ವಿಷಯದಲ್ಲಿಯೂ, ಆಚಾರ್ಯರನ್ನು ತಮ್ಮ ಪ್ರಾಂತಕ್ಕೆ ದಯಮಾಡಿಸಿಕೊಳ್ಳುವ ವಿಷಯದಲ್ಲಿಯೂ ಮರಾಠಿ ಭಾಷೆಯಲ್ಲಿ ಅತ್ಯುಜ್ವಲವಾದ ಭಾಷಣಮಾಡಿ ಸಭಿಕರಿಗೆ ಸಂತೋಷವನ್ನುಂಟುಮಾಡಿದರು. ಇದೇ ರೀತಿಯಾಗಿ ಅನೇಕ ಜನ ಮಹಾಮಹಾ ವ್ಯಾಖ್ಯಾತೃಗಳು ಅಮೋಘವಾದ ಭಾಷಣಗಳನ್ನು ಮಾಡಿ ಭಕ್ತಸಮುದಾಯವನ್ನು ಸಂತೋಷಗೊಳಿಸುತ್ತಿರುವುದು ರಾಜಧಾನಿಯ ಸೌಭಾಗ್ಯವೆಂದೇ ಹೇಳಬೇಕಾಗಿದೆ. ಇದೇ ಸಮಯದಲ್ಲಿ ಬಾಬಾಬುಡನ್‌ಗಿರಿಯ ದತ್ತಾತ್ರೇಯ ಪೀಠದ ಮಹಮ್ಮದೀಯ ಗುರುಗಳು ಪದ್ಧತಿಪ್ರಕಾರವಾಗಿ ಮಹಾಸನ್ನಿಧಿಗೆ ಆಗಮಿಸಿ ಪ್ರತಿದಿವಸವೂ ಸಭೆಯನ್ನಲಂಕರಿಸುತ್ತ ಪರಸ್ಪರ ಪ್ರೇಮಭಾವವನ್ನು ಸೂಚಿಸುತ್ತಿರುವುದು ಹಿಂದೂ ಮುಸಲ್ಮಾನರ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ. ಅಸ್ತು!

ಮಹಾಸನ್ನಿಧಾನದಲ್ಲಿ ಈ ರೀತಿಯಾಗಿ ಕೇವಲ ಭಾಷಣಗಳಲ್ಲದೆ, ಗಾನಕಲಾಕುಶಲರು ಆಗಮಿಸಿ, ತಮ್ಮ ಮೃದುಮಧುರವಾದ ಗಾನದಿಂದಲೂ, ಗುರುಸ್ತವನಗಳಿಂದಲೂ, ನಾನಾವಿಧ ವಾದ್ಯವಿಶೇಷದಿಂದಲೂ ಸಭಿಕರನ್ನು ಸಂತೋಷಗೊಳಿಸುತ್ತಿರುವರು. ಈಗ್ಗೆ ೨೩ ದಿವಸಗಳಿಂದ ಮಹಾಸನ್ನಿಧಿಯಲ್ಲಿ ಶ್ರೀರೇಣುಕಾಚಾರ್ಯರ ಪವಿತ್ರಚರಿತ್ರವು ಪಠಿಸಲ್ಪಡುತ್ತಿರುವುದು. ಮಹಾಸಂಸ್ಥಾನದ ಪೌರಾಣಿಕರಾದ ವೇ|| ಪಂ|| ವೃಷಭಲಿಂಗಶಾಸ್ತ್ರಿಗಳವರು ಆಚಾರ್ಯರ ದಿವ್ಯಚರಿತ್ರವನ್ನು ಬಹು ಮನೋಹರವಾಗಿ ಶ್ರವಣಮಾಡಿಸುತ್ತಿರುವರು. ರಾಜಧಾನೀ ನಿವಾಸಿಗಳು ಶ್ರೀ ಜಗದಾಚಾರ್ಯರ ಅದ್ಭುತ ಲೀಲೆಗಳನ್ನು ಕೇಳಿ ನಲಿಯುತ್ತಿರುವರು. ಸದ್ಯಃ ರಾಜಧಾನಿಯಲ್ಲಿ ಎತ್ತನೋಡಿದರತ್ತ ಶ್ರೀಗಳವರ ಸ್ತುತಿಯೇ ಸ್ತುತಿಯಾಗಿದೆ. ಇಂಥ ಆನಂದಮಯಸಮಯದಲ್ಲಿ ನಮ್ಮ ಮಹಾಪ್ರಭುಗಳವರು—ಶ್ರೀಗಳವರು ಭಕ್ತರ ಮನೆಗಳಿಗೆ ಪಾದಪೂಜಾದಿಗಳಿಗೆ ದಯಮಾಡಿಸುವಾಗ್ಗೆ ರಾಜಮರ್ಯಾದೆಗಳೊಡನೆ ದಯಮಾಡಿಸಬೇಕೆಂದು ಅಪ್ಪಣೆಯನ್ನು ಮಾಡಿರುವ ವಿಷಯವು ಸರ್ವರ ಆನಂದವನ್ನು ಶತಗುಣವಾಗಿ ಹೆಚ್ಚಿಸಿದೆ. ಶ್ರೀಗಳವರ ಆಗಮನದಿಂದ ರಾಜಧಾನಿಯು ಆನಂದಮಯವಾಗಿ ಪರಿಣಮಿಸಿದೆ. ಸರ್ವತ್ರ ಆನಂದವೇ ಆನಂದ!

ವರ್ತಮಾನಸಂಗ್ರಹ.

ನವಜೀವನದ ಪತ್ರಿಕೆಯ ಸಂಪಾದಕರು ತಾಯಿನಾಡು ಪತ್ರಿಕೆಯ ಮೇಲೆ ಹೂಡಿದ್ದ ಮಾನನಷ್ಟದ ಮೊಕದ್ದಮೆಯು ರಾಜಿ ಆಯಿತು.

ಧಾರವಾಡದ ಜೋಗಳಾಯರು ಅಸೆಂಬ್ಲಿಗೆ ಪಂಡಿತ ಮಾಲವೀಯರ ರಾಷ್ಟ್ರೀಯ ಪಕ್ಷದ ಪರವಾಗಿ ನಿಲ್ಲುವುದನ್ನು ನಿಶ್ಚಯಿಸಿರುವರಾಗಿ ತಿಳಿದುಬರುತ್ತದೆ.

ಪ್ರಪಂಚದಲ್ಲೆಲ್ಲ ಬಹಳ ಉದ್ದವಾದ ೧೧ ಮೈಲಿಯ ಒಂದು ಸೇತುವೆಯನ್ನು ಡೆನ್ಮಾರ್ಕ ಕಟ್ಟುವುದರಲ್ಲಿದೆ. ಇದಕ್ಕೆ ಕಂಬಗಳು ೧೬೪. ಖರ್ಚು, ೬,೩೫೦,೦೦೦ ಪೌಂಡು.

ಸಿಲ್ಹಟ್ ಪ್ರಾಂತದಲ್ಲಿ 122 ವರ್ಷ ಪ್ರಾಯದ ಷೇಕ್ ಮಜಾಹರ ಎಂಬವನು ಕಳೆದ ತಾ|| 11 ರಲ್ಲಿ ಮೃತನಾದನು. ಈತನಿಗೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೂ ಸೇರಿ ಒಟ್ಟಿಗೆ 83 ಮಂದಿ ಇದ್ದಾರೆ.

ವೈಸರಾಯರ ಭೂಕಂಪ ನಿವಾರಣೆಯ ಫಂಡು ಈಗ ಸುಮಾರು 59,37,694 ರೂಪಾಯಿಗಳಿಗೇರಿದೆ. ಇದಲ್ಲದೆ ಬಟ್ಟೆ ಬರೆಗಳೇ ಮೊದಲಾದ ಸಾಮುಗ್ರಿಗಳೂ ಬೇರೆ ಇವೆ. ಈ ಸಂಗ್ರಹವು ಅಕ್ಟೋಬರ್ 1ನೆಯ ತಾರೀಖಿಗೆ ಮುಗಿಯುತ್ತದೆ.

ಬಿಹಾರ, ಪಂಜಾಬ, ಮಹಾರಾಷ್ಟ್ರ ಮತ್ತು ಕೇರಳ ಕಾಂಗ್ರೆಸ್ ಕಮಿಟಿಯವರು ಮುಂಬಯಿಯಲ್ಲಿ ಕೂಡುವ ಕಾಂಗ್ರೆಸ್ ಅಧಿವೇಶನಕ್ಕೆ ಶ್ರೀಬಾಬು ರಾಜೇಂದ್ರ ಪ್ರಸಾದರನ್ನೇ ಅಧ್ಯಕ್ಷರನ್ನಾಗಿ ಆರಿಸಬೇಕೆಂದು ಮತಕೊಟ್ಟಿದ್ದಾರೆ.

ಬಡತನ ಮತ್ತು ಸಂಸಾರ ತಾಪತ್ರಯದ ದೆಸೆಯಿಂದ ಇಟಾರಸಿಯಲ್ಲಿ ಒಬ್ಬ ಆಂಗ್ಲೊ-ಇಂಡಿಯನ್, (ಇಂಜಿನ್ ಟರ್ನರ) ಮಿ. ರಿಬೆಲ್ಲೋ ಎಂಬಾತನ ಹೆಂಡತಿಯು ತನ್ನ ಮೂರು ಮಂದಿ ಚಿಕ್ಕ ಮಕ್ಕಳೊಂದಿಗೆ ಒಂದು ಕೆರೆಗೆ ಹಾರಿ ಪ್ರಾಣ ಬಿಟ್ಟಳು.

ರಸ್ತೆಗಳಿಗೆ ಡಾರು ಬಳಿದುದರಿಂದ ದ್ರಾಕ್ಷಿಹಣ್ಣಿನ ರುಚಿಯು ಕೆಟ್ಟಿದೆ ಎಂದು ಲಾಯನ್ಸ್ ಪ್ರಾಂತದ ಒಂದು ಗ್ರಾಮದವರು ಸರಕಾರದಿಂದ ನಷ್ಟ ಕೇಳಿದ್ದಾರೆ. ಇದಕ್ಕಾಗಿ ಈಗ ಸರಕಾರದ ಕಡೆಯ ಪರಿಶೋಧಕರು ಪರೀಕ್ಷೆಗೆ ಹೊರಟಿದ್ದಾರೆ.

ಹಿಂದೂಸ್ಥಾನದೊಡನೆ ಬ್ರಿಟಿಷರ ಸಂಬಂಧವುಂಟಾದಂದಿನಿಂದ ಇಂದಿನವರೆಗೆ ಬಂಗಾಲವು ಎದುರಿಸಬೇಕಾಗಿರುವ ಎಲ್ಲ ಗಂಡಾಂತರಗಳಲ್ಲಿ ಮುಖ್ಯಮಂತ್ರಿಗಳ ಇಂದಿನ ಜಾತೀಯನಿರ್ಣಯವೇ ಬಹು ಭಯಂಕರವಾಗಿದೆಯೆಂದು ಜೆ. ಎಮ್. ಗುಪ್ತರು ಉದ್ಗಾರ ತೆಗೆದಿರುವರು.

ಗಾಂಧಿಯವರೂ ಅವರ ಅನುಯಾಯಿಗಳೂ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಸಂಸ್ಥೆಯ ಮೇಲೆ ದಾಳಿಮಾಡುವುದಿಲ್ಲವೆಂದೂ, ವಿಷಯಗಳನ್ನು ಬಹುಮತ ಅಥವಾ ವೋಟಿನ ತತ್ವದ ಮೇಲೆಯೇ ನಿರ್ಧರಮಾಡುವುದಿಲ್ಲವೆಂದೂ ಸರದಾರ್ ಪಟೇಲರು ತಿಳುಹಿಸಿದರು.

ಗದಗಿನ ರಾವಸಾಹೇಬ ವೀರಪ್ಪ ಮಾನವಿಯವರು ಮೋಸಮಾಡಿದರೆಂಬ ಆರೋಪದ ಮೇಲೆ ಮ|| ಬಸವನಗೌಡರು ಡಿ. ಮ್ಯಾಜಿಸ್ಟ್ರೇಟರ ಕಡೆಗೆ ಫಿರ್ಯಾದಿ ಮಾಡಿದ್ದು ಕಲೆಕ್ಟರ ಸಾಹೇಬರು ಆ ಬಗ್ಗೆ ವಿಚಾರ ಮಾಡಿ ಶ್ರೀ ಮಾನವಿಯವರ ಮೇಲೆ ಚಾರ್ಜ ಇಟ್ಟಿರುವುದಾಗಿ ತಿಳಿಯುವದು.

ಲಕ್ನೋದಲ್ಲಿ ಕುಲೀನ ಮಹಿಳೆಯರು ಮಾತ್ರವೇ ಉಳ್ಳ ಒಂದು ಆನರರಿ ಬೆಂಚ್ ಮ್ಯಾಜಿಸ್ಟ್ರೇಟರ ಕೋರ್ಟ ಸ್ಥಾಪಿತವಾಗಿರುತ್ತದೆ. ಈ ಕೋರ್ಟಿಗೆ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರ ಅಧಿಕಾರವಿರುತ್ತದೆ. ಹುಡುಗರ ಮತ್ತು ಹೆಂಗಸರ ತಪ್ಪುಗಳನ್ನು ವಿಚಾರಿಸಿ ದಂಡಿಸುವುದೇ ಈ ಕೋರ್ಟಿನ ಧ್ಯೇಯ!

ಕವಿ ರವೀಂದ್ರನಾಥ ಠಾಗೋರರನ್ನು ಮದ್ರಾಸಿಗೆ ಸುಮಾರು ಅಕ್ಟೋಬರ ೨೦ ನೇ ತಾರೀಖಿಗೆ ದಯಮಾಡಿಸಲು ಆಮಂತ್ರಿಸಬೇಕಾಗಿಯೂ, ಆಗ 'ಟಾಗೋರ್ ವಾರ' ವನ್ನು ಮದ್ರಾಸಿನಲ್ಲಿ ಆಚರಿಸಬೇಕಾಗಿಯೂ, 'ವಿಶ್ವಭಾರತಿ' ಯ ಸಹಾಯಕ್ಕಾಗಿ ಕಾಣಿಕೆಯನ್ನು ಅರ್ಪಿಸಬೇಕಾಗಿಯೂ ಆಲೋಚನೆಯು ನಡೆದಿದೆ.

ಶ್ರೀರಂಭಾಪುರೀ ಜಗದ್ಗುರುಗಳವರಿಗೆ ರಾಜಮರ್ಯಾದೆ.

ಶ್ರೀ ರಂಭಾಪುರೀ ಜಗದ್ಗುರುಗಳವರು ಶಿಷ್ಯರ ಮನೆಗಳಿಗೆ ಪಾದಪೂಜೆಗಾಗಿ ದಯಮಾಡಿಸುವಾಗ್ಗೆ ನಮ್ಮ ಮಹಾಪ್ರಭುಗಳವರು ಅರಮನೆಯಿಂದ ರಾಜಮರ್ಯಾದೆಗಳನ್ನು ದಯಪಾಲಿಸಿರುತ್ತಾರೆ.

ತುಂಗಭದ್ರಾ ಸಮ್ಮೇಳನ.

ಬೆಂಗಳೂರು ಸೆಕ್ರೆಟೆರಿಯಟ್‌ನಲ್ಲಿ ಅಕ್ಟೋಬರ್ 2 ಮತ್ತು 3ನೇ ತಾರೀಖುಗಳಲ್ಲಿ ಅಂತರ ಸರಕಾರಗಳ ಸಮ್ಮೇಳನವು ಕೂಡಲಿರುವುದು. ತುಂಗಭದ್ರಾ ನದಿಯ ನೀರನ್ನು ಯಾರ್ಯಾರು ಎಷ್ಟೆಷ್ಟು ಉಪಯೋಗಿಸಕೊಳ್ಳಬೇಕೆಂಬ ವಿಚಾರದಲ್ಲಿ ಮೈಸೂರು ಮತ್ತು ಮದರಾಸ ಸರಕಾರಗಳೊಂದಿಗೆ ಹೈದರಾಬಾದ ಸರಕಾರವೂ ಭಾಗಿಯಾಗಿರುವದಂತೆ!

ಕಳವು.

ಅರಳೀಪೇಟೆಯಲ್ಲಿರುವ ವರ್ತಕರಾದ ಶ್ರೀ ಗಂಗೋಜಿರಾಯರ ಮನೆಯಲ್ಲಿ 1600 ರೂಪಾಯಿಗಳ ಕಳುವಾಗಿ ಗುರುವಾರ ರಾತ್ರಿ ಪೋಲೀಸರಿಗೆ ವರದಿ ಮುಟ್ಟಿತು. ಗಂಗೋಜಿರಾಯರ ಮನೆಯಲ್ಲಿನ ಅಡಿಗೆಯವನಾದ ನರಸೋಜಿರಾಯನನ್ನು ಸಂಶಯದ ಮೇಲೆ ಹಿಡಿಯಲಾಯಿತು. 700 ರೂಪಾಯಿಗಳ ಮೊತ್ತವು ಸಿಕ್ಕಿತು. ಚೌಕಶಿಯು ನಡೆದಿದೆ.

ಚರ್ಚಹಿಲ್ಲರು ಈಗ ಚಿತ್ರಪಟದ ಉದ್ಯೋಗದ ಕಡೆಗೆ ತಮ್ಮ ಲಕ್ಷ್ಯಹಾಕತೊಡಗಿದ್ದು ಅವರು ಈ ಬಗ್ಗೆ ಚಿತ್ರಪಟ ಕಂಪನಿಗಳೊಡನೆ ಕಾಂಟ್ರಾಕ್ಟ ಮಾಡಿಕೊಂಡು ಕಂಟ್ರಾಕ್ಟ ಪತ್ರಕ್ಕೆ ಸಹಿ ಮಾಡಿದ್ದಾರೆ. ಅವರು ಕಂಪನಿಗಳಿಗೆ ಪುನಃ ರಾಜಪ್ರಭುತ್ವ ಜನಾನದ ಹೆಚ್ಚಳ, ನಿರುದ್ಯೋಗ, ಜಾಗತಿಕ ಭಂಗಾರದ ಪದ್ಧತಿ ಇವೇ ಮೊದಲಾದವುಗಳ ಬಗ್ಗೆ ಬರೆದುಕೊಡುವವರಿದ್ದಾರೆ.

ಮೆಕ್ಸಿಕೋದಲ್ಲಿ ಭೂಕಂಪ.

ಮೆಕ್ಸಿಕೋದಲ್ಲಿ ಭೂಕಂಪದ ಧಕ್ಕೆಗಳು ತಗಲಿದ್ದರಿಂದ ಒಂಬತ್ತು ಜನರು ಸತ್ತುಹೋದರು. ಇನ್ನೂರು ಜನರು ಗಾಯಗೊಂಡಿದ್ದಾರೆ.

ಪ್ರಸವ ಯಂತ್ರ.

ಲಿವರ್‌ಪೂಲಿನ ಡಾಕ್ಟರನೊಬ್ಬನು ನೋವಿಲ್ಲದೆ ಹಡೆಯಲು ಸಾಧಕವಾದ ಯಂತ್ರವೊಂದನ್ನು ಸಿದ್ಧಪಡಿಸಿರುವನು. ಇಂಗ್ಲಂಡಿನಲ್ಲಿ ಸೂಲಗಿತ್ತಿಯರು ಅದನ್ನು ಉಪಯೋಗಿಸುತ್ತಿರುವರು.

ಸೃಷ್ಟಿವೈಚಿತ್ರ್ಯ.

ಶ್ರೀಮತಿ ಸೊನಾಜಿ ಎಂಬ ದ್ರಾವಿಡ ಹೆಣ್ಣುಮಗಳು ಮಧುರೆಯ ಸರಕಾರೀ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ ಒಂದು ಹೆಣ್ಣುಮಗುವನ್ನು ಹೆತ್ತಳು. ಆ ಮಗುವಿಗೆ ಹಣೆಯ ಮೇಲೆ ಒಂದೇ ಕಣ್ಣಿತ್ತಂತೆ! ಮೂಗೂ ಇಲ್ಲ, ಉಳಿದ ಕಣ್ಣುಗಳೂ ಇಲ್ಲ; ಆದರೆ ಮಗುವು ಹುಟ್ಟಿದ ಐದೇ ನಿಮಿಷಗಳಲ್ಲಿ ಸತ್ತುಹೋಯಿತಂತೆ!

ಜರ್ಮನಿಯಲ್ಲಿ ಕಮ್ಯೂನಿಷ್ಟರ ಸೆರೆ.

ರಾಜದ್ರೋಹದ ಅಪಾದನೆಯ ಮೇಲೆ ಗುಪ್ತ ಪೋಲೀಸ್ ಶಾಖೆಯವರು ೬ ಜನ ಕಮ್ಯೂನಿಷ್ಟರನ್ನು ಸೆರೆಮಾಡಿರುವರು. ಇವರಲ್ಲಿ ಮೊದಲಿನ ಕಮ್ಯೂನಿಸ್ಟ ರಿಚ್‌ಸ್ಟಗ್ ಡೆಪ್ಯೂಟಿಯವರಾಗಿದ್ದ ಮಿ|| ಥರ್ಲೆ ಯವರೂ ಒಬ್ಬರು. ಕಮ್ಯೂನಿಸ್ಟ ಚಳುವಳಿಗಾರರಲ್ಲಿ ಇವರು ಪ್ರಮುಖರೆಂದೂ, ಹೆಚ್ಚು ಅಪಾಯಕರವೆಂದೂ, ಕೂಲಿಕಾರರ ತಳಮಳಕ್ಕೆ ಇವರೇ ಜವಾಬ್ದಾರರೆಂದೂ ಗುಪ್ತಪೋಲೀಸರು ಇವರ ಮೇಲೆ ಅಪಾದನೆಗಳನ್ನು ಹೊರಿಸಿದ್ದಾರೆ.

೨೦೦ ಜನರ ಜಲಸಮಾಧಿ!

ನಾಂಜರಿಯ ಹತ್ತಿರ ಒಂದು ನಾವೆ ಕೃಷ್ಣಾ ನದಿಯನ್ನು ದಾಟುವಾಗ ಸೆಳವಿಗೆ ಸಿಲುಕಿ ಭರದಿಂದ ಒಯ್ದು ಹೋಗಲಾರಂಭಿಸಿತು. ಅಂಕಲಿಯ ಹತ್ತಿರದ ಮುಳುಗಿದ ಪೂಲಿಗೆ ನಾವೆ ಅಪ್ಪಳಿಸಿ ಜಲಸಮಾಧಿ ಪಡೆಯಿತು. ಅದರೊಳಗಿನ ೫೦ ಜನರು ಈಸಿ ದಡಕ್ಕಾಗಿ ಬಂದಿರುವರು. ನೂರಾರು ಹೆಣಗಳು ದಡೆಗೆ ತೇಲಿ ಬಂದಿದ್ದು ಒಟ್ಟು ೨೦೦ ಜನರು ಜಲಸಮಾಧಿಯನ್ನು ಪಡೆದಿರುವರಂತೆ! ಈ ಅನಾಹುತದ ವಿಸ್ತಾರ ಸುದ್ದಿಯು ಇನ್ನೂ ತಿಳಿದಿಲ್ಲ.

ಲಾಹೋರ ಜಿಲ್ಲೆಯಲ್ಲಿ ಗೋಳೀಬಾರು.

ಲಾಹೋರ ಜಿಲ್ಲೆಯ ಬಡಾಲೆ ಎಂಬ ಹಳ್ಳಿಯಲ್ಲಿ ಹಿಂದೂ ಮುಸಲ್ಮಾನರ ದೊಂಬಿಯಾಗಿ ಪೋಲೀಸರು ಮುಸಲ್ಮಾನರ ಮೇಲೆ ಗೋಳೀಬಾರ ಮಾಡುವ ಪ್ರಸಂಗ ಬಂದಿತೆಂದು ತಿಳಿಯುತ್ತದೆ. ಅಲ್ಲಿಯ ಓರ್ವಪ್ರಸಿದ್ಧ ಹಿಂದೂ ಜಮೀನದಾರನು ಒಂದು ಮಸೀದೆಯ ಸ್ಥಳದಲ್ಲಿ ಬೇರೊಂದು ಕಟ್ಟಡವನ್ನು ಕಟ್ಟಿಸಬೇಕೆಂದು ಅದನ್ನು ಕೆಡವಿಸಿದನಂತೆ! ಬಹಳ ಪುರಾತನ ಮಸೀದಿಯಾದ್ದರಿಂದ ಅದನ್ನು ಕೆಡವಿಸಬಾರದೆಂದು ಮುಸಲ್ಮಾನರು ಪ್ರತಿಬಂಧಿಸಿ ರೊಚ್ಚಿಗೆದ್ದು ಜಮೀನದಾರನ ಮೇಲೆ ಏರಿಹೋದರಂತೆ ಕೂಡಲೆ ಜಮೀನದಾರನು ಅವರ ಮೇಲೆ ಗುಂಡು ಹಾರಿಸಿದನು. ಇದರಿಂದ ಜನರಿಗೆ ಗಾಯವಾಯಿತು. ಇಷ್ಟರಲ್ಲಿ ಪೋಲೀಸರು ಸ್ಥಳಕ್ಕೆ ಓಡಿಬಂದು ಗಾಯಹೊಂದಿದವರನ್ನು ಆಸ್ಪತ್ರೆಗೆ ಸಾಗಿಸಿದರು.

ಏಕತ್ರಕುಟುಂಬದ ವಿಧವೆಗೆ ದತ್ತಕ ಹಕ್ಕು.

ಏಕತ್ರ ಕುಟುಂಬದ ವಿಧವೆಗೆ ದತ್ತಕ ಮಾಡಿಕೊಳ್ಳಲಿಕ್ಕೆ ಕಾಯದೆಯಿಂದ ಬರುವದೆಂದು ಪ್ರಿವ್ಹಿ ಕೌನ್ಸಿಲ್ಲಿನವರು ಈಚೆಗೆ ನಿರ್ಣಯಿಸಿದ್ದುದರಿಂದ ಅನೇಕ ಮನೆತನಗಳಲ್ಲಿ ಗೊಂದಲಗಳು ಎದ್ದಿವೆಯಷ್ಟೆ! ಈ ಸ್ಥಿತಿಯನ್ನು ದೂರಮಾಡುವ ಉದ್ದೇಶದಿಂದ ದಕ್ಷಿಣ ಇನಾಂದಾರರ ಪರವಾಗಿ ಮುಂಬಯಿ ಕಾಯದೆ ಕೌನ್ಸಿಲ್ಲಿನ ಸಭಾಸದರಾದ ಧಾರವಾಡದ ಮಿ|| ಹನುಮಂತರಾವ ದೇಸಾಯಿ ಇವರು ಒಂದು ಕಾಯದೆಯ ಮಸೂದೆಯನ್ನು ಮುಂದೆಮಾಡಿರುವರು. ಇದು ಕಳೆದ ಕೌನ್ಸಿಲ್ಲಿನಲ್ಲಿ ಚರ್ಚೆಯಾಗಿ ಈ ಕಾಯದೆಯ ಬಗ್ಗೆ ಜನತೆಯ ಅಭಿಪ್ರಾಯವೇನಿರುವುದೆಂಬುದನ್ನು ತಿಳಿಯುವದಕ್ಕಾಗಿ ಅದರ ವಿಚಾರಣೆಯು ಮುಂದೆ ಹಾಕಲ್ಪಟ್ಟಿತು. ಈ ಕಾಯದೆಯ ಮಸೂದೆಯು ತಾ|| ೮-೯-೧೯೩೪ ನೇ ಮುಂಬಯಿ ಸರಕಾರಿ ಗ್ಯಾಜೇಟ್ ಭಾಗ ೫ ಇದರಲ್ಲಿ ಪ್ರಸಿದ್ಧಮಾಡಲ್ಪಟ್ಟಿದೆ. ಅದರಲ್ಲಿ ಹೇಳಿರುವದೇನೆಂದರೆ—

ಹಿಂದೂ ವಿಧವೆಯ ಆಕೆಯ ಗಂಡನು ಬೇರೆಯಾಗದೆ ಏಕತ್ರ ಕುಟುಂಬದಲ್ಲಿ ಮರಣ ಹೊಂದಿದರೆ, ಅವನ ಆಸ್ತಿಯು ಆಕೆಗೆ ಬರುವದಿಲ್ಲ. ಇಂಥ ಸ್ಥಿತಿಯಲ್ಲಿ ಈ ವಿಧವೆಗೆ ಹಿಂದೂಧರ್ಮಶಾಸ್ತ್ರದ ಪ್ರಕಾರ ದತ್ತಕ ತೆಗೆದುಕೊಳ್ಳಲಿಕ್ಕೆ ಬರಲಾರದು. ದತ್ತಕ ತೆಗೆದುಕೊಳ್ಳುವದಾದರೆ ಆಕೆಯು ತನ್ನ ಗಂಡನಿಂದ ಅಧಿಕಾರ ಹೊಂದಿದವಳಾಗಿರಬೇಕು. ಇಲ್ಲವೆ ತನ್ನ ಗಂಡನ ಏಕತ್ರ ಕುಟುಂಬದ ದಾಯಾದಿಗಳು ದತ್ತಕಕ್ಕೆ ಒಪ್ಪಿಗೆ ಕೊಟ್ಟಿರಬೇಕು. ಹೀಗೆ ರೂಢಿಯು ಮುಂಬಯಿ ಇಲಾಖೆಯಲ್ಲಿ ಕಳೆದ ೬೦ ವರ್ಷಗಳಿಂದಲೂ ನಡೆದು ಬಂದಿರುತ್ತದೆ. ಆದರೆ ಈಚೆಗೆ ಪ್ರಿವ್ಹಿ ಕೌನ್ಸಿಲ್ಲಿನವರು ಬೇರೆ ನಿರ್ಣಯಮಾಡಿರುವರು. ಇದರಿಂದ ಗಂಡನು ದತ್ತಕ ತೆಗೆದುಕೊಳ್ಳಬಾರದೆಂದು ಆಜ್ಞೆ ಮಾಡಿದ ಹೊರತು ಏಕತ್ರ ಕುಟುಂಬದ ವಿಧವೆಗೆ ದತ್ತಕ ತೆಗೆದುಕೊಳ್ಳುವ ಹಕ್ಕು ನಷ್ಟವಾಗಲಾರದು. ದತ್ತಕಕ್ಕೆ ಆಕೆಯ ಗಂಡನ ದಾಯಾದಿಗಳ ಒಪ್ಪಿಗೆಯು ಅವಶ್ಯವಿಲ್ಲ ಅಥವಾ ಆಕೆಯ ಗಂಡನು ಏಕತ್ರ ಕುಟುಂಬದವನಿದ್ದರೂ ಕೂಡ ಆಕೆಯ ದತ್ತಕ ಅಧಿಕಾರವು ಹೋಗಲಾರದು.

ಮುಂಬೈ ಹೈಕೋರ್ಟಿನಲ್ಲಿ ಕಮಿಷನರ ಖಂಡನೆ.

ಮುಂಬೈ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಮತ್ತು ನ್ಯಾಯಮೂರ್ತಿ ರಾಂಗನೇಕರರು ಇನ್‌ಕಮ್‌ಟ್ಯಾಕ್ಸ್ ಕಮಿಷನರರ ಮೇಲೆ ಕಠೋರವಾಗಿ ಟೀಕೆ ಮಾಡಿರುವರು. ಬೊಂಬೈ ಟ್ರಸ್ಟ ಕಾರ್ಪೋರೇಶನ್ನಿನವರು ೧೯೨೭ ರಲ್ಲಿ ತಾವು ತುಂಬಿದ ಪ್ರಾಪ್ತಿಯ ತೆರಿಗೆಯಲ್ಲಿ ಮೂರು ಲಕ್ಷಕ್ಕಿಂತಲೂ ಹೆಚ್ಚು ರೂಪಾಯಿಗಳು ತಮಗೆ ಮರಳಿ ದೊರೆಯಬೇಕೆಂದು ಹಿಂದಕ್ಕೆ ಹೈಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದರು. ಇಷ್ಟೊಂದು ಹೆಚ್ಚಿಗೆ ತೆರಿಗೆಯನ್ನು ಹೇರಿದ್ದು ಅನ್ಯಾಯವೆಂದು ಹೇಳಿ ಹೈಕೋರ್ಟಿನವರು ಅರ್ಜಿಗೆ ಅನುಕೂಲವಾದ ಹುಕುಮು ಮಾಡಿದ್ದರು. ಅನಂತರ ಇನ್ಕಮ್‌ಟ್ಯಾಕ್ಸ್ ಕಮಿಶನರರು ಆ ತೆರಿಗೆಯ ಬಗ್ಗೆ ಪುನರ್ವಿಚಾರಣೆ ನಡೆಯಬೇಕೆಂದು ಹುಕುಮು ಕೊಟ್ಟಿದ್ದರು. ಆದರೆ ಮತ್ತೆ ತೆರಿಗೆಯನ್ನು ಅಥವಾ ಪ್ರಿವ್ಹಿ ಕೌನ್ಸಿಲಿನಲ್ಲಿ ಹೈಕೋರ್ಟಿನ ನಿರ್ಣಯವು ತಿರುಗಿದರೆ ಅದನ್ನು ಮತ್ತೆ ತುಂಬುವ ಬಗ್ಗೆ ಇ. ಡಿ. ಸಸೂನ ಕಂಪನಿಯವರು ಹೊಣೆಯಾದ ಹೊರತು ತಾವು ಆ ಮೂರು ಲಕ್ಷ ರೂಪಾಯಿಗಳನ್ನು ತಿರುಗಿ ಕೊಡುವದಿಲ್ಲವೆಂದು ಹೇಳಿದರು. ಈ ಹಣವು ತಮಗೆ ಮರಳಿ ದೊರೆಯಲೇಬೇಕೆಂದು ಅರ್ಜಿದಾರರು ಮತ್ತೆ ಹೈಕೋರ್ಟಿಗೆ ಹೋದರು. ಹಣವನ್ನು ಬಡ್ಡಿಸಹಿತವಾಗಿ ಅರ್ಜಿದಾರರಿಗೆ ಕೊಡಬೇಕೆಂದು ಈಗ ಹೈಕೋರ್ಟಿನವರು ಹುಕುಮು ಮಾಡಿದ್ದಾರೆ. ಹೈಕೋರ್ಟಿನ ತೀರ್ಮಾನವನ್ನು ಇನ್‌ಕಂಟ್ಯಾಕ್ಸ್ ಅಧಿಕಾರಿಗಳು ದುರ್ಲಕ್ಷಿಸುವ ಪ್ರಯತ್ನ ಮಾಡಿದ್ದಾರೆಂದು ನ್ಯಾಯಮೂರ್ತಿಗಳು ಎಂದಿದ್ದಾರೆ. ಇಷ್ಟು ಹೆಚ್ಚಿನ ತೆರಿಗೆಯನ್ನು ಹೇರುವುದು ಯೋಗ್ಯವೆಂಬ ವಿಷಯಕ್ಕೆ ಪುರಾವೆಗಳು ಎಷ್ಟುಮಾತ್ರವೂ ಇಲ್ಲವೆಂದು ಹೈಕೋರ್ಟ ಸ್ಪಷ್ಟವಾಗಿ ಹೇಳಿರಲು ಮತ್ತೆ ಅದನ್ನು ಹೇರುವ ಬಗ್ಗೆ ಅಧಿಕಾರಿಗಳು ಪ್ರಯತ್ನಪಡುತ್ತಿರುವರೆಂದು ಕೋರ್ಟಿನವರು ಟೀಕೆಮಾಡಿದ್ದಾರೆ. ಇನ್ನು ಮುಂದೆ ಅಧಿಕಾರಿಗಳು ಹೀಗೆ ವರ್ತನ ಮಾಡಲಿಕ್ಕಿಲ್ಲವೆಂಬ ಅಪೇಕ್ಷೆಯನ್ನೂ ನ್ಯಾಯಾಧೀಶರು ವ್ಯಕ್ತಮಾಡಿದ್ದಾರೆ. ಅರ್ಜಿದಾರರ ವೆಚ್ಚವನ್ನು ಕಮಿಷನರರೇ ಕೊಡಬೇಕೆಂದು ವಿಧಿಸಲಾಗಿದೆ.

ಸನಾತನಿಗಳ ಉಪಕಾರಸ್ಮರಣೆ.

ಮಂದಿರಪ್ರವೇಶ ಬಿಲ್ಲಿನ ಇತಿಶ್ರೀ.

ಶ್ರೀಯುತ ರಂಗ ಅಯ್ಯರವರು ಅಸೆಂಬ್ಲಿಯಲ್ಲಿ ಮಂದಿರಪ್ರವೇಶ ಬಿಲ್ಲನ್ನು ತಂದಂದಿನಿಂದ ಮಿಕ್ಕ ಪ್ರಾಂತಗಳ ಸನಾತನಿಗಳಂತೆ ಕರ್ನಾಟಕದ ಸನಾತನಿಗಳಿಗೂ ಬಹಳ ಮನೋವ್ಯಥೆಯಾಗಿತ್ತೆಂಬುದನ್ನು ಬೇರೆ ಹೇಳುವ ಕಾರಣವಿಲ್ಲ. ಆದರೆ ಯಾವದೊಂದು ಸಂಭವಿಸುವ ಅಥವಾ ಸಂಭವಿಸಿದ ದುಃಖದ ಬಗ್ಗೆ ವ್ಯಥೆಪಡುತ್ತ ಕೂಡ್ರುವದು ಬೇರೆ ಮತ್ತು ಅದನ್ನು ಅದಷ್ಟು ಹುರುಪಿನಿಂದ ಹೋಗಲಾಡಿಸಲಿಕ್ಕೆ ಯತ್ನಿಸುವದು ಬೇರೆ—ಹೀಗೆ ಬಂದ ಸಂಕಟವನ್ನು ಹೋಗಲಾಡಿಸಲು ಹೇಗೆ ಯತ್ನಿಸತಕ್ಕದ್ದೆಂಬುದನ್ನು ನಮ್ಮ ಸನಾತನಧರ್ಮಿಗಳು ತಕ್ಕಮಟ್ಟಿಗೆ ಕಲಿತಿರುವರೆಂದು ಅನುಭವದಿಂದ ಹೇಳಬೇಕಾಗಿದೆ. ಆದರೂ ಸನಾತನಿಗಳಲ್ಲಿ ಈಗಿದ್ದಷ್ಟೇ ಚಟುವಟಿಕೆಯು ಸಾಲದು. ಮುಂದೆ ಬರಬಹುದಾದ ಸುಧಾರಕರ ಅನೇಕತರಹದ ಧರ್ಮವಿರೋಧ ಅಘಾತಗಳನ್ನು ಎದುರಿಸಬೇಕಾದರೆ ಇದಕ್ಕೂ ಹೆಚ್ಚು ಬಲವಾದ ಸಂಘಟಿತತನವು ಬೇಕು. ಸನಾತನಿಗಳ ಮೇಲೆ ಸುಧಾರಕರ ಹಾವಳಿಯು ಬಹಳವಾಗಹತ್ತಿದೆ. ಅವರು ಸನಾತನಿಗಳ ಕೊರಳು ಕೊಯ್ಯಲು ಕಾಯ್ದೆಮಂಡಲಗಳ ಉಪಯೋಗವನ್ನು ಮಾಡಿಕೊಳ್ಳಲು ಯತ್ನಿಸುತ್ತಿರುವರು. ಇದು ಸಣ್ಣಹುಡುಗರ ಮದುವೆಯನ್ನು ನಿಲ್ಲಿಸುವ ಕಾಯ್ದೆ, ಗುಡಿಗಳಲ್ಲಿ ಅಸ್ಪೃಶ್ಯರನ್ನು ಹೊಗಿಸುವ ಬಿಲ್ಲು ಮೊದಲಾದ ಕೃತಿಗಳ ಮೇಲಿಂದ ಸ್ಪಷ್ಟವಾಗಿದೆ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಮುಂದೆ ಬರುವ ಕಾಯ್ದೆಮಂಡಲಗಳ ಚುನಾವಣೆಯಲ್ಲಿ ಧರ್ಮದ್ರೋಹ ಮಂಡಿಸುವಂಥ ಸುಧಾರಕರು ಆರಿಸಿ ಬರದಂತೆ ಸನಾತನಿಗಳು ಎಚ್ಚರಾಗಿರುವುದು ಅವಶ್ಯವಾಗಿದೆ. ಇರಲಿ;

ಸದ್ಯಃ ನಮ್ಮ ಗುಡಿಗಳ ಪಾವಿತ್ರ್ಯವನ್ನು ಹಾಳು ಮಾಡುವ ಮಂದಿರಪ್ರವೇಶಬಿಲ್ಲೊಂದು ಹಾಳಾಗಿ ಹೋಯಿತು. ಇಷ್ಟಾಗಬೇಕಾದರೆ ಇಡೀ ಭರತಖಂಡದಲ್ಲೆಲ್ಲ ಕಡೆಯಲ್ಲಿಯೂ, ಸಂದಿಗೊಂದಿಗಳಲ್ಲಿ ಸಹ ಸನಾತನಿಗಳು ಎಚ್ಚತ್ತು ಇದನ್ನು ವಿರೋಧಿಸಲಿಕ್ಕೆ ಮುಂದೆಬಂದದ್ದೇ ಕಾರಣವು. ನಮ್ಮ ಕರ್ನಾಟಕದಲ್ಲಿಯೂ ಈ ಬಿಲ್ಲನ್ನು ಹೊಡೆದು ಹಾಕುವ ಕೆಲಸದಲ್ಲಿ ಎಲ್ಲ ಭಾಗದ ಸನಾತನಿಗಳೂ ಅಂತಃಕರಣಪೂರ್ವಕವಾಗಿ ಸಹಾಯ ಮಾಡಿರುವರು. ಕರ್ನಾಟಕ ಸನಾತನ ಸಭೆಯವರು ಬಿಲ್ಲನ್ನು ನಿಷೇಧಿಸುವ ಛಾಪಿಸಿದ ಅರ್ಜಿಗಳ ನಮೂನೆಗಳನ್ನು ಎಲ್ಲ ಕಡೆಯಲ್ಲಿಯೂ ಪ್ರಚಾರಮಾಡಿದ ಕೂಡಲೆ ಜಾಗ್ರತೆಯಿಂದ ಎಲ್ಲ ಊರುಗಳ ಸನಾತನಿಗಳೂ ಅವುಗಳ ಮೇಲೆ ಸಹಿ ಮಾಡಿ ಸರಕಾರಕ್ಕೆ ಕೊಟ್ಟು ಕಳುಹಿಸಿ ತಮ್ಮ ನಿಷೇಧವನ್ನು ತೋರಿಸಿದರು. ಅಂತೇ ಈ ಕಾರ್ಯವು ಯಶಸ್ವಿಯಾಯಿತು. ಈ ಬಗ್ಗೆ ನಾವು ನಮ್ಮ ಕರ್ನಾಟಕದೊಳಗಿನ ಎಲ್ಲ ಸನಾತನಧರ್ಮಬಾಂಧವರನ್ನು ಅಭಿನಂದಿಸುತ್ತೇವೆ. ಮತ್ತು ಅವರ ಉಪಕಾರವನ್ನು ಸ್ಮರಿಸುತ್ತೇವೆ. ಈ ಕೆಲಸದಲ್ಲಿ ಅಸ್ಪೃಶ್ಯರು ಸಹ ತಮ್ಮ ಸಹಿಗಳನ್ನು ಕೊಟ್ಟು ಸಹಾಯಮಾಡಿರುವರು. ಅಂಥ ಅಸ್ಪೃಶ್ಯರಿಗೂ ನಾವು ಋಣಿಯಾಗಿದ್ದೇವೆ ಮತ್ತು ಇನ್ನು ಮುಂದೆ ಸಹ ಇಂಥ ಧರ್ಮರಕ್ಷಣೆಯ ಕೆಲಸಗಳಲ್ಲಿ ಹೀಗೆಯೇ ಕೆಲಸಮಾಡಿ, ಯಶಪಡೆದುಕೊಳ್ಳಲಿಕ್ಕೆ ದೇವರು ಇವರಿಗೆ ಬುದ್ಧಿಯನ್ನೂ ಉತ್ಸಾಹವನ್ನೂ ಕೊಡಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ಸೆಕ್ರೆಟರಿಗಳು,

ಧಾರವಾಡ. ಶ್ರೀ|| ಗೋವಿಂದಾಚಾರ್ಯ ಗೋಠೆ,

ಶ್ರೀ|| ರಾಮಚಂದ್ರ ಗಣೇಶ ಜೋಯಿಸ.

ನಮಃ ಪಂಚಜಗದ್ಗುರುಭ್ಯಃ

ರೇವಣಸಿದ್ಧೇಶ್ವರ ವಾಚನಾಲಯ.

ಸೋಲಾಪೂರ ತಾಲೂಕ ಸ್ಮೈಕ ಬಂಟೋಳ ಎಂಬುವ ಗ್ರಾಮದಲ್ಲಿ ೧ ತಿಂಗಳಿಂದ ಹೋಟಗಿ ಮಲ್ಲಯ್ಯನವರು ಪುರಾಣೀಕ ಅವರ ಪುರಾಣವು ನಡೆದು ತಾ|| ೧೯-೯-೩೪ ಕ್ಕೆ ಹೋಟಗೀ ಶ್ರೀಗಳಿಂದ ದೀಕ್ಷಾವಿಧಿಯು ನೆರವೇರಿಸಲ್ಪಟ್ಟು ಮರುದಿವಸ ತಾ|| ೨೦-೯-೩೪ ಕ್ಕೆ ಪ್ರಾತಃಕಾಲದಲ್ಲಿ ಸಭೆಸೇರಿ "ಶ್ರೀರೇವಣಸಿದ್ಧೇಶ್ವರ ವಾಚನಾಲಯ" ವೆಂಬುವ ವಾಚನಾಲಯವು ಸ್ಥಾಪಿಸಲ್ಪಟ್ಟಿತು. ಈ ಕಾರ್ಯಗಳಿಗೆಲ್ಲ ವೀರಯ್ಯ, ರೇವಣಯ್ಯ, ಗುರುಸಿದ್ಧಪ್ಪಾ, ಭೀಮಾಶಂಕರ, ಗುರುಲಿಂಗಪ್ಪ, ಮಲಕಪ್ಪ, ಭೀಮಶಪ್ಪ, ಇತ್ಯಾದಿ ಜನರೇ ಕಾರಣೀಭೂತರು. ವೀರಯ್ಯನೆಂಬುವ ತರುಣನು ವಿಶೇಷ ಪರಿಶ್ರಮವನ್ನು ವಹಿಸಿದನು. ಇವರಿಗೆ ಜಗದಾಚಾರ್ಯರು ಇದೇ ಸನ್ಮತಿಯನ್ನೀಯಲೆಂದು ಪ್ರಾರ್ಥಿಸುವ

ಓರ್ವ ಶ್ರೀಕೃಷ್ಣದಾಸ.

ಬೆಂಗಳೂರು ತಾಲ್ಲೋಕು ಯಶವಂತಪುರದ ಹೋಬಳಿ ಕನ್ನಳ್ಳಿಗ್ರಾಮದಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸುವರ್ಣರಜತಾಂದೋಲಿಕೋತ್ಸವ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಸದರಿ ಗ್ರಾಮದ ದೇಶದಶೆಟ್ಟರು ಯಜಮಾನರು ಮತ್ತು ತ್ಯಾಗಸಂಘದ ಸದಸ್ಯರು ಮುಂತಾದವರ ಪ್ರಾರ್ಥನೆಯಂತೆ ತಾ|| 13-7-1934 ನೇ ಶುಕ್ರವಾರ ಪ್ರಾತಃಕಾಲ 9-30 ಘಂಟೆಗೆ ಕೆರೆ ಅಂಗಳದಲ್ಲಿ ಹಾಕಿಸಿದ್ದ ಚಪ್ಪರಕ್ಕೆ ದಯಮಾಡಿಸಿತು. ಅಲ್ಲಿ ಸುಮಾರು 4-5 ಸಾವಿರಕ್ಕೆ ಮೇಲ್ಪಟ್ಟು ಭಕ್ತರು ಶ್ರೀಗಳವರ ದರ್ಶನಕ್ಕಾಗಿ ಕಾದುಕೊಂಡಿದ್ದರು. ಶ್ರೀಜಗದ್ಗುರುಗಳವರ ಸವಾರಿಯು ದಯಮಾಡಿಸಿದ ಕೂಡಲೆ ಶೆಟ್ಟರು ಯಜಮಾನರು ಮುಂತಾದವರು ಭಕ್ತಿಪೂರ್ವಕವಾಗಿ ನಜರು ಕಾಣಿಕೆ ಒಪ್ಪಿಸಿ ಮರ್ಯಾದಿಸಿದೊಡನೆ ವೇದಘೋಷವಾಗುತ್ತಿರುವಾಗ್ಯೆ ಸುವರ್ಣರಜತಾಂದೋಲಿಕದಲ್ಲಿ ಮಂಡಿಸಿದರು. ಅಲ್ಲಿಂದ ಧರ್ಮಪ್ರಭುಗಳಾದ ಮೈಸೂರು ಶ್ರೀಮೆಯ ಶ್ರೀಮನ್ ಮಹಾರಾಜ ಸಾಹೇಬ್ ಬಹದ್ದೂರರವರು ದಯಪಾಲಿಸಿರುವ ಸಮಸ್ತರಾಜಮರ್ಯಾದೆಗಳೊಡನೆ ಮಹೋತ್ಸವ ಪೂರ್ವಕವಾಗಿ ಗ್ರಾಮದೊಳಗಿರುವ ಮಹಂತಿನಮಠಕ್ಕೆ ದಯಮಾಡಿಸಿದರು. ದಾರಿಯುದ್ದಕ್ಕು 6-7 ಕಡೆ ಚಪ್ಪರಗಳನ್ನು ಹಾಕಿದ್ದ ಕಡೆಗಳಲ್ಲಿ ಜನರು ಫಲಪುಷ್ಪಗಳನ್ನು ಭಕ್ತಿಯಿಂದ ಒಪ್ಪಿಸಿ ಆಶಿರ್ವಾದವನ್ನು ಪಡೆದರು. ತಾ|| 14 ನೇ ಶನಿವಾರ ಸಾಯಂಕಾಲ ಮಹಂತಿನ ಮಠದಲ್ಲಿ ಸಭೆಯನ್ನು ನಡಿಸಿದರು. ಆ ವೇಳೆಯಲ್ಲಿ ತ್ಯಾಗಸಂಘದವರು ಕೆ. ಸಾವಂದಯ್ಯನವರು ಬಿನ್ನಹ ಪತ್ರಿಕೆಯನ್ನು ಓದಿ ಒಪ್ಪಿಸಿದರು. ಇದರಲ್ಲಿ ಈ ಗ್ರಾಮದ ಮತ್ತು ಇದಕ್ಕೆ ಸೇರಿದ ನೆಲಮಂಗಲದ ಮಹಂತಿನ ಮಠಗಳನ್ನು ಸದರಿ ಸಂಸ್ಥಾನದ ಅಧೀನಕ್ಕೆ ಒಪ್ಪಿಸಿರುವುದಾಗಿಯೂ ಈ ಮಠಗಳಿಗೆ ಸಂಸ್ಥಾನದಿಂದಲೇ ವಿದ್ಯಾವಂತರಾದ ಒಬ್ಬ ಪಟ್ಟಾಧಿಕಾರಿಗಳನ್ನು ನೇಮಿಸಿಕೊಡಬೇಕೆಂತಲೂ ಪ್ರಾರ್ಥಿಸಿಕೊಂಡಿದ್ದರು. ಅದರಂತೆ ನೆರವೇರಿಸಿಕೊಡುವುದಾಗಿ ಶ್ರೀ ಜಗದ್ಗುರುಗಳವರು ಅಪ್ಪಣೆಕೊಡಿಸಿದರು. ಅಲ್ಲಿಂದ ೩-೪ ದಿನಗಳು ಸಾಯಂಕಾಲದ ವೇಳೆ ಪುರಾಣಪ್ರವಚನವಾಗುತ್ತಿತ್ತು. ಇದಕ್ಕಾಗಿ ಪ್ರತಿನಿತ್ಯವೂ ೨೦೦-೩೦೦ ಜನಗಳವರಿವಿಗೂ ಸೇರಿ ಕರ್ಣಾನಂದ ಹೊಂದುತ್ತಿದ್ದರಲ್ಲದೆ, ಅನೇಕ ಸದ್ವಿಷಯಗಳನ್ನು ತಿಳಿದುಕೊಂಡರು. ತಾ|| 16 ನೇ ಸೋಮವಾರ ಮಹಂತಿನಮಠದಲ್ಲಿರುವ ಶ್ರೀ ವಿರೂಪಾಕ್ಷೇಶ್ವರನಿಗೂ ತಾ|| ೧೭ ನೇ ಮಂಗಳವಾರ ಶ್ರೀ ವೀರೇಶನಿಗೂ ಸದರಿ ಸಂಸ್ಥಾನದ ಪರವಾಗಿ ಮಹಾರುದ್ರಾಭಿಷೇಕ ವಗೈರೆ ಕಾರ್ಯಗಳು ನೆರವೇರಿ ರಾತ್ರಿಗೆ ವೀರೇಶನ ಉತ್ಸವ ನಡೆಯಿತು. ಇದೇ ದಿವಸ ಮಹಾಸನ್ನಿಧಾನ ಸವಾರಿಯು ಭಕ್ತರ ಪ್ರಾರ್ಥನೆಯಂತೆ ರಾಯರಪಾಳ್ಯವೆಂಬ ಗ್ರಾಮಕ್ಕೆ ದಯಮಾಡಿಸಿದ್ದು ಸಾಯಂಕಾಲಕ್ಕೆ ಕನ್ನಳ್ಳಿಗೆ ವಾಪಸ್ ದಯಮಾಡಿಸಿದರು. ತಾ|| ೧೮ ನೇ ಬುಧವಾರ ಸಾಯಂಕಾಲ ಬೆಂಗಳೂರು ಮೊಕ್ಕಾಮಿಗೆ ದಯಮಾಡಿಸಿದರು.

ಮಲ್ಲಯ್ಯನವರ ಮುದ್ದಯ್ಯ.

ಭಜನಾಮಹೋತ್ಸವ.

ಶಿವಮೊಗ್ಗಾ ವೀರಶೈವ ಮಠದ ಗುಂಡಾಭಕ್ತರು ಶ್ರಾವಣ ಮಾಸದ ಪ್ರಾರಂಭದಿಂದ ಅಂತ್ಯದವರೆಗೂ ಪಂಚಾಚಾರ್ಯ ಭಜನಾಸಂಘವನ್ನು ಏರ್ಪಾಡುಮಾಡಿ ಇದೇ ಶ್ರಾವಣ ಬಹುಳ ೩೦ ಶನಿವಾರ (8-9-34) ರಾತ್ರಿ ಶ್ರೀ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋವನ್ನು ಹೂವಿನ ಪಲ್ಲಕ್ಕಿಯಲ್ಲಿರಿಸಿ ವಾದ್ಯವೈಭವದೊಡನೆಯೂ ಪಂಚಾಚಾರ್ಯ ಮಹಾರಾಜಕಿ ಜೈ ಎಂಬ ಜಯಘೋಷದೊಡನೆ ಎಲ್ಲಾ ಮತೀಯರಿಂದಲೂ ಮಂಗಳಾರತಿಯನ್ನು ಸ್ವೀಕರಿಸುತ್ತ ಭಜನಮಂದಿರವನ್ನು ಸೇರಿದರು. ಅನಂತರ ಹಾನಗಲ್ಲು ಮಹೇಶ್ವರರು ಶ್ರೀ ಜಗದ್ಗುರುಗಳ ವಿಚಾರದಲ್ಲಿ ಭಾಷಣವನ್ನು ಮಾಡಿದರು. ವೇ|| ದೀರೂರು ಶಿ|| ರೂ|| ರುದ್ರಾರಾಧ್ಯರು ವೀರಶೈವಮತತತ್ವ ವಿಚಾರವನ್ನೂ ಪಂಚಾಕ್ಷರ ಮಂತ್ರದ ಮಹತ್ವವನ್ನೂ ತಿಳಿಸಿದರು. ಮರುದಿವಸ ಶ್ರೀ ಪಂಚಾಚಾರ್ಯರ ಹೆಸರಿನಲ್ಲಿ ಸಂತರ್ಪಣೆಯು ನೆರವೇರಿತು.

ಮ|| ರಾ|| ಅಡ್ವೋಕೇಟು K. ಕೃಷ್ಣಪ್ಪನವರು B.A. B.L., ಇವರು ಈ ಕಾರ್ಯಕ್ಕೆ ಧನಸಹಾಯ ಮಾಡಿದುದಲ್ಲದೆ ಮುಂದೆಯೂ ಕೂಡ ಇದೇ ರೀತಿ ನಡೆಸುವಂತೆ ಪ್ರೋತ್ಸಾಹಕೊಟ್ಟರು.

ಈ ಪ್ರಾಂತ್ಯ ಗುರುಕಾರ್ಯಕ್ಕೆ H. M. ರುದ್ರಾರಾಧ್ಯರು ದೇವರಕೋಟಾದಿಯಲ್ಲಿ ಬಂದು ತಮ್ಮ ಕೆಲಸವನ್ನು ಲಕ್ಷಿಸದೆ ಬದ್ಧಕಂಕಣರಾಗಿ ನಮ್ಮಲ್ಲಿ ಆ ರೇಣುಕನ ಭಕ್ತಿ ಬೀಜವನ್ನು ಬಿತ್ತಿ ಜ್ಞಾನೋದಯವನ್ನುಂಟುಮಾಡಿದರು. ಇವರು ಕೇವಲ ಚಕ್ರವರಾದರೂ ಈ ರೀತಿ ಈ ಮಹಾಕಾರ್ಯ ನೆರವೇರಿಸಿದುದು ರೇಣುಕ ಲೀಲೆಯೋ ಸರಿ! ಇವರಿಗೂ ಮತ್ತು ಈ ಕಾರ್ಯಕ್ಕೆ ಧನಸಹಾಯಮಾಡಿದ ಇತರ ದೊಡ್ಡ ಮನುಷ್ಯರಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯ ಐಶ್ವರ್ಯವನ್ನು ಕೊಡಲೆಂದು ಹಾರೈಸುತ್ತೇವೆ.

ತಮ್ಮ ವಿಧೇಯರು,

ಗುಂಡಾಭಕ್ತ ಪಂಚಾಚಾರ್ಯ ಭಜನಸಂಘ.

ಕಾರ್ಯದರ್ಶಿಗಳು—ಬಸವಾರಾಧ್ಯ, ಬೆಂಕಿಪುರದ ಚನ್ನಪ್ಪ, ಚೆನ್ನಬಸಪ್ಪ.

ಶೋಕಸಮಾಚಾರ.

ಕೊಪ್ಪಳಪ್ರಾಂತದ ಪ್ರಸಿದ್ಧಪುರುಷರಲ್ಲೊಬ್ಬರಾದ ಮ|| ರಾ|| ಸೋಮನಗೌಡರು ಪಾಟೀಲ ಅಳವಂಡಿ ವ ಭಟ್ಟರಹಳ್ಳಿ ಹಾಲ ಇವರು ಶಿವಾಧೀನರಾದರೆಂಬ ಶೋಕಸಮಾಚಾರವನ್ನು ತಿಳುಹಿಸಲು ಖೇದವೆನಿಸುತ್ತದೆ.

ಸೋಮವಾರ ದಿವಸ ಕೈಲಾಸ ಮಹಾದ್ವಾರವು ತೆರೆದಿರುತ್ತದೆಂತಲು ಆ ದಿವಸ ನಿಧನಹೊಂದುವವರು ಪರಮೇಶ್ವರನ ಸನ್ನಿಧಿಯನ್ನು ಸೇರುವರೆಂತಲೂ ಶಿವಾಗಮಗಳು ಸಾರುತ್ತಿರುವವು. ಈ ಪಾಟೀಲರು ಶ್ರೀಭಾವನಾಮ ಸಂ|| ಆಷಾಢಶುದ್ಧ ೧೨ ಸೋಮವಾರ ಹಗಲು ೮ ಘಂಟೆಗೆ ತಮ್ಮ ಪಾರ್ಥಿವಶರೀರವನ್ನು ನೀಗಿದರು. ಇವರ ನಿಧನವಾರ್ತೆಯು ಹಬ್ಬಿದ ಕೂಡಲೇ ಗ್ರಾಮದವರೆಲ್ಲರೂ ದುಃಖೋದ್ವೇಗದಿಂದ ಮರುಗಹತ್ತಿದರು. ಇವರು ಮೃದುಸ್ವಭಾವದವರೂ ಪರೋಪಕಾರಿಗಳೂ ಆಗಿದ್ದರು. ಅಂತೆಯೇ ಸರ್ವರೂ ಇವರ ಸುಗುಣಗಳನ್ನು ಕೊಂಡಾಡುತ್ತಿರುವರು. ಇವರು ಸಾಮಾಜಿಕನೈತಿಕಾದಿ ಗುಣಗಳಿಂದ ಭೂಷಿಸುತ್ತಿದ್ದರು.

ಸೋಮನಗೌಡರು ತಮ್ಮ ಅಭಿಧಾನವನ್ನು ಸಾರ್ಥಕ ಪಡಿಸಿಕೊಂಡಿದ್ದುದರಿಂದ ಇವರು ಸಕಲಲೋಕಾಧೀಶನಾದ ಸೋಮಧರನ ಚರಣಾರವಿಂದದಲ್ಲಿ ವಿರಾಜಮಾನರಾಗಲಬಹುದಷ್ಟೇ! ಇವರು ಶಾಂತಿಗುಣದಲ್ಲಿ ಸೋಮನಿಗೆ ಸದೃಶರಾಗಿದ್ದರು. ಸೋಮನು ಶಿವನಲ್ಲಿ ಶೋಭಿಸುತ್ತಿರುವಾಗ ಈ ಸೋಮನಾದರೂ ಶಿವನಲ್ಲಿ ಶೋಭಿಸದೆ ಇರಲಾರನು. ಇವರ ಕಾಲದಲ್ಲಿ ಇವರ ಗೃಹವು ಅನ್ನದಾನಕ್ಕೆ ಕೌರರಂಗಿತ್ತು. ಅನ್ನದಾನದ ಬಲವು ಮನುಷ್ಯನನ್ನು ಉನ್ನತಸ್ಥಿತಿಗೆ ತರುವದು. ಅಂತೆಯೇ ಈ ಗೌಡರು ಪ್ರಸಿದ್ಧಿಗೆ ಬಂದರು. ಇವರಲ್ಲಿ ಗುರುಲಿಂಗಜಂಗಮ ಭಕ್ತಿಯು ಅಸದೃಶವಾಗಿತ್ತು. ಇವರು ಗಾನಪ್ರಿಯರು ಸಂಗೀತ ಕನ್ನಡ ಸಂಸ್ಕೃತ ಸಾಹಿತ್ಯಾಭಿವೃದ್ಧಿ ಮಹನೀಯರಪ್ರಕಾಶ, ಪುರಾತನವೀರರಕೊಳಿ, ಸ್ವದೇಶಪ್ರೇಮ ಸ್ವಧರ್ಮಾಭಿಮಾನಗಳನ್ನು ಕರ್ನಾಟಕದಲ್ಲಿ ಬೀರುವ ಉದ್ದೇಶದಿಂದ ಪ್ರಸಿದ್ಧ ನಟರನ್ನು ಕೂಡಿಸಿ "ಶ್ರೀ ಜಗದ್ಗುರು ಪಂಚಾಚಾರ್ಯ ಕೃಪಾಪೋಷಿತ ನಾಟಕಮಂಡಳಿ" ಎಂಬ ಹೆಸರಿನಿಂದ ಒಂದು ಕಂಪನಿಯನ್ನು ತೆಗೆದಿದ್ದರು. ಗಜೇಂದ್ರಗಡ-ಬೆಳಸೂರು (ಶಾಂತಲನಗರ) ಅಕರಕಿ, ಕೊಪ್ಪಳ, ಪಡಗಲಿ, ಹಂಪಸಾಗರ, ಹರಪನಹಳ್ಳಿ, ಹೊಸಪೇಟೆ, ಕೊಟ್ಟೂರು, ಸಿಂಗಟಾಲೂರು ಮುಂತಾದ ಪ್ರಸಿದ್ಧ ಸ್ಥಳಗಳಲ್ಲಿ ಈ ಕಂಪನಿಯು ತನ್ನ ಪ್ರಕಾಶದಿಂದ ಬೆಳಗಿತು. ಮುಂದೆ ಕರ್ನಾಟಕದ ಕೇಂದ್ರಸ್ಥಾನಗಳಲ್ಲಿ ಶ್ರೇಯಸ್ಸನ್ನು ಪಡೆಯುವ ಹಂಬಲದಲ್ಲಿಯೇ ಅಕಾಲಮರಣದ ಬಾಯಿಗೆ ತುತ್ತಾಯಿತು.

ಈ ಪಾಟೀಲರು ತಮ್ಮ ಪೂರ್ವಜರಿಂದ ಹಿಡಿದುಹೋಗಿ ಪರಧರ್ಮೀಯರ ಕೈಸೇರಿದ್ದ ತಮ್ಮ ಅಳವಂಡಿ ಮಾಲೀಪಾಟೀಲಿಕೆಯನ್ನು ತಮ್ಮ ಕಾಲದಲ್ಲಿ ದೊರಕಿಸಿ ಅದರ ಫಲಾಮೃತವನ್ನು ತಮ್ಮ ತಂದೆಯವರಿಗೆ ಉಣಬಡಿಸಿ ತಾವೂ ಸವಿದು ತಮ್ಮ ಮುಂದಿನ ಪೀಳಿಗೆಗೆ ಗೌರವಾಧಾರಸ್ತಂಭರಾದರು. ಅದರೆ ನಮ್ಮ ಸರಕಾರದ ಸಕ್ಕಾಂಶವನ್ನೂ ರಾಜನೀತಿಜ್ಞತ್ವವನ್ನೂ ಎಷ್ಟು ಹೊಗಳಿದರೂ ತೀರದೆಂಬುದಕ್ಕೆ ಇವರದೊಂದೇ ಸಾಕಾದ ದೃಷ್ಟಾಂತವು ಕೈಬಿಟ್ಟುಹೋದ ವತನವನ್ನು ಸಂಪಾದಿಸಿ ವಿಜಯಮಾಲಿಕೆಯನ್ನು ಶ್ರೀ ಸಿದ್ಧೇಶ್ವರನ ಕೃಪೆಯಿಂದ ಪಡೆದುದು ಸಾಧಾರಣವಾದುದೇ? ಇವರಲ್ಲಿ ಶಕ್ತಿ-ಯುಕ್ತಿ-ಸಾಹಸಾದಿ ಗುಣಗಳು ಮೂರ್ತಿಮಂತಾಗಿದ್ದವು. ಇಲ್ಲಿಗೆ ಎಂದೂ ಬಾರದೆ ಇದ್ದ ಶ್ರೀ ಕೇದಾರ ಜಗದ್ಗುರುಗಳ ಮಹಾಗಮನವು ಈ ಗುರುಭಕ್ತರ ಕಾಲದಲ್ಲಿಯೇ ಆಯಿತು. ಆ ವೇಳೆಯಲ್ಲಿ ಶ್ರೀ ೧೦೮ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯ ಕೇದಾರ ಮಹಾಸ್ವಾಮಿಗಳ ಪಾದಪೂಜಾದಿಗಳನ್ನು ಮಾಡಿ ಕಾಣಿಕಾದಿಗಳನ್ನೊಪ್ಪಿಸಿ ಕೃತಕೃತ್ಯರಾದರು. ಇವರೂ ಇವರ ಮನೆತನದವರೂ ಜಗದಾಚಾರ್ಯ ಪ್ರೇಮಿಗಳಾಗಿದ್ದರೆಂಬುದಕ್ಕೆ ಇವರ ಗೃಹದ ದೇವರ ಜಗುಲಿಯಲ್ಲಿ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಭಾವಚಿತ್ರಗಳು ಮೆರೆಯುತ್ತಿರುವದೇ ಸಾಕ್ಷಿ? ಇವರಿಗೆ ಇನ್ನು (೪೦) ವರ್ಷಗಳಾಗಿರಲಿಕ್ಕಿಲ್ಲ. ಅಲ್ಪವಯಸ್ಸಿನಲ್ಲಿಯೇ ಪರಂಧಾಮವನ್ನು ಹೊಂದಿದ್ದು ಅತ್ಯಂತ ವಿಷಾದವು. ಇವರ ವಿಯೋಗದಿಂದ ಈ ನಾಡಿನ ವೀರಶೈವ ಸಮಾಜಕ್ಕೆ ದೊಡ್ಡದೊಂದು ಕೊರತೆಯುಂಟಾಯಿತೆಂದು ಹೇಳಿದರೆ ಅತಿಶಯೋಕ್ತಿಯೆನಿಸದು.

ಈ ಗುರುಭಕ್ತರ ಕಳೇಬರದ ಮೆರವಣಿಗೆಯು ವಿಶೇಷವೈಭವದಿಂದ ನೆರವೇರಿತು. ಶ್ರೀ ಸಿದ್ಧೇಶ್ವರ ಬಜಾರದಲ್ಲಂತೂ ಅಗಣಿತ ಜನಸಮೂಹವು ಕೂಡಿತ್ತು. ವಿಧ್ಯುಕ್ತವಾಗಿ ಸಮಾಧಿಯ ಕಾರ್ಯಗಳು ಕೊನೆಗೊಂಡವು. ದಾಸಧರ್ಮಾದಿಗಳು ಪೂರ್ಣವಾದವು. ಇವರ ತಮ್ಮಂದಿರಾದ ಮ|| ರಾ|| ಶಂಕರಗೌಡರು ಪಾಟೀಲರು ಅತ್ಯಂತ ಶ್ರದ್ಧಾಪೂರ್ವಕವಾಗಿ ಪ್ರಭಾಪೋಷಣಕ್ಕಾಗಿ ಒಂದು ವರಹವನ್ನು ಸಮರ್ಪಿಸಿ ವೇ|| ಶ್ರೀ ಶಿವಯ್ಯನವರು ಹಿರೇಮಠ ಬನ್ನಿಕೊಪ್ಪ (ಹಮಪುರ) ಸ್ಕೂಲಮಾಸ್ತರ ಅಳವಂಡಿ ಇವರ ಕಡೆಗೆ ಒಪ್ಪಿಸಿದರು. ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಆ ಭೂತನಾದವನ್ನು ಪ್ರಾರ್ಥಿಸುವ,

ಓರ್ವ ದುಃಖಿತಾಗ.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ಸಮರ್ಪಿಸಿದ ಪಂಚರತ್ನಂ.

ಭುವನದೆ ವೀರಶೈವಮತಮಂ ಸಲೆ ನಿರ್ಮಿಸಿ ಶೈವತತ್ತ್ವಮಂ | ಸವಿನುಡಿಯಿಂದೆ ಬೋಧಿಸಿ ಪವಿತ್ರರನಾಗಿಸಿ ಭಾವನೀಯತಾಂ || ಭವಮತಕಲ್ಪಭೂಜನೆನಿಸಗ್ಗಳಕೀರ್ತಿಯನಾಂತು ಕೂರ್ಮೆಯಿಂ | ತವಕದೆ ಭಕ್ತರಂ ಪೊರೆಯಲೈದಿದೆ ನೀಂ ಗುರುವರ್ಯ ರೇಣುಕಾ ||೧||

ಪರಮಶ್ರೀರೇಣುಕಾಚಾರ್ಯರ ಸದಮಲಪೀಠಕ್ಕೆ ಸದ್ವಂಶಮಾಹೇ | ಶ್ವರವಂಶೋದ್ಭೂತ ನಿನ್ನುತ್ತಮ ಗುಣಗಣಮಂ ನೋಡಿ ಕೊಂಡಾಡಿ ಕೂರ್ಪಿಂ || ಗುರುಪೀಠಾಚಾರ್ಯನಂಗೈಸಿದ ನರಪತಿಭೂಪಾಲಕೃಷ್ಣಂಗೆ ಸಾವೆ || ಲ್ಲರುಮೆಂದುಂ ತೀರದುದ್ಯದ್ರುಣಿಗಳೆಲೆ ಶಿವಾನಂದರಾಜೇಂದ್ರವರ್ಯಾ ||೨||

ಗುರುವರ ಸ್ತೈಜವಲ್ತೆ ನಿನಗೀನಿರತಂಕೃತಿ ಸತ್ಯವಾಣಿ ಬಂ | ಧುರತರಶಾಂತಿ ನಿಶ್ಚಲಿತಶಾಂಕರಭಕ್ತಿ ಸುಶೀಲಜಾಣ್ಮೆವಿ || ಸ್ಫುರಿತಕಳಾಪ್ರವೀಣತೆ ಸಮುಜ್ಜ್ವಲದಾನಪರೋಪಕಾರಭಾ | ಸುರಶುಭವೃತ್ತಿಸತ್ಕವಿವಿಶ್ರುತಸದ್ಗುಣವಿಸ್ತಾರಧಾತ್ರಿಯೊಳ್ ||೩||

ಧರೆಗೆಸೆವಾಸೋಮೇಶ್ವರ |
ವರಲಿಂಗದೊಳುದ್ಭವಿಸಿದ ರೇಣುಕವರ್ಯಂ ||
ಕರುಣದೆ ಕಾಯಲಿ ನಾಲ್ವಡಿ |
ನರಪತಿಕೃಷ್ಣೇಂದ್ರಭೂಪನಂ ಬಿಡದೆಂದುಂ ||೪||

ಜಯಮಕ್ಕೆ ವೀರಸಿಂಹಾಸನಾಧೀಶಂಗೆ |
ಜಯಮಕ್ಕೆ ಶ್ರೀಶಿವಾನಂದರಾಜೇಂದ್ರಂಗೆ ||
ಜಯಮಕ್ಕೆ ಸಂತತಂ ಮಹಿತನಾಲ್ವಡಿಕೃಷ್ಣರಾಜಂಗೆ ಭೂಮಿಪಂಗೆ |
ಜಯಮಕ್ಕೆ ಶರಧಿಗಂಭೀರಯುವರಾಜಂಗೆ ||
ಜಯಮಕ್ಕೆ ಸ್ಮರರೂಪಜಯಚಾಮರಾಜಂಗೆ |
ಜಯಮಕ್ಕೆ ಜಯಮಕ್ಕೆ ಸಂತತಂ ಭರತಖಂಡದ ಮಹಿತಭೂಮಾತೆಗೆ ||೫||

ಶ್ರೀವರ್ಣಮಹಾರಾಜರವರ ಕಾಲೇಜ್ ಲೇಟ್ ಕನ್ನಡಪಂಡಿತ ಚಿ. ಸಿದ್ಧಲಿಂಗಶಾಸ್ತ್ರಿಗಳ ಕುಮಾರ,

ಯಂ. ಯಸ್. ವೀರಭದ್ರಶಾಸ್ತ್ರಿ

ತಾ|| 26—9—1934 ಮೈಸೂರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಆರ್ಚಕರ ಮುಖಾಂತರ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 52

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾಠಶಾಲಾ, ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ಮಲೇರಿಯಾಕ್ಕೆ ಮಲೇರಿಯಾನ

ಮಲೇರಿಯಾನವು ಮಲೆಜ್ವರ, ಛಳಿಜ್ವರ, ನಡುಗಿಬರುವ ಜ್ವರ, ಬಿಟ್ಟುಬಿಟ್ಟು ಬರುವ ಜ್ವರ, 2.3 ದಿವಸಕ್ಕೊಮ್ಮೆ ಬರುವ ಜ್ವರ, ಇಂಜಕ್ಷನ್ನಿಂದಲೂ ಕ್ವಿನೈನಿನಿಂದಲೂ ಬಿಡದಿರುವ ಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. ಹೊಟ್ಟೆಯಲ್ಲಿ ಬೆಳೆದ ಜ್ವರದ ಗೆಡ್ಡೆಯನ್ನು ಸಹಾ ಕರಗಿಸುತ್ತದೆ. ಸೀಸೆಗೆ 1-8-0 ಮತ್ತು ಆಣೆ 14, ½ ಡಜನ್ 8-8-0, ರೂ. 5, 1 ಡಜನ್ ರೂ. 16-8-0, ರೂ. 9-12-0

ಮಲೆರಿ ಬಿಲ್ಲೆಗಳು: ಮಲೆಜ್ವರ, ಛಳಿಜ್ವರ ಮತ್ತು ಪಿತ್ತಜ್ವರಕ್ಕೆ ದಿವ್ಯೌಷಧಿ. 60 ಮತ್ತು 100 ಬಿಲ್ಲೆಗಳಿಗೆ ರೂ. 1 ಮತ್ತು 1-8-0, 500, 1000ಕ್ಕೆ ರೂ. 7 ಮತ್ತು 13-8-0.

ಶುದ್ಧವಾದ ನೀಲಗಿರಿ ತೈಲ: 1, 2, 4, 8 ಮತ್ತು 16 ಔನ್ಸ್ ಆಣೆ 4, 8, 14, ರೂ. 1/6, 2.

ಬೇಬಿಟೋನ್: ಈ ಅಮೃತವು ಮಕ್ಕಳ ಅಜೀರ್ಣ, ಗ್ರಹಣೆ ಹುಳದ ಉಪದ್ರ ಇತರ ವ್ಯಾಧಿಗಳನ್ನು ಸಂಪೂರ್ಣ ಗುಣಪಡಿಸಿ ರಕ್ತತುಂಬಿಸಿ ದೇಹವನ್ನು ಪುಷ್ಟಿಕರಿಸುತ್ತದೆ. ಸೀಸೆಗೆ 1-4-0.

ಹೂಪಿಂಗ್ ಕಫ್ ರಮೆಡಿ: ಮಕ್ಕಳ ನಾಯಿಕೆಮ್ಮು, ಒಣಕೆಮ್ಮು, ಉಬ್ಬಸಕೆಮ್ಮು ಇವನ್ನು ಬೇರುಮಾಡಿ ಹೊರಪಡಿಸಿ ರೋಗವನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 1 ಮತ್ತು ಆಣೆ 9.

ವರ್ಮ ಎಕ್ಸ್ಪೆಲ್ಲರ್ ಬಿಲ್ಲೆಗಳು: ಸಕಲತರದ ಹೊಟ್ಟೆಹುಳಗಳನ್ನು ನಾಶಮಾಡಿ ಜಾಡಿಸುವದರಲ್ಲಿ ಮುಖ್ಯ ಔಷಧಿ. ಡಜನಿಗೆ ಆಣೆ 5. 100ಕ್ಕೆ ರೂ. 2-0-0.

ಸಿರಪ್ ವೆಸಿಕೂಜ: ಇದು ಪ್ರಮೇಹ, ಮೂತ್ರಕೋಶದ ಉರಿ, ಮೂತ್ರನಾಳದಲ್ಲಿ ಹುಣ್ಣು ತೋರುವ ಕೀವು, ಮೂತ್ರ ಬಂದು ಬಂದು ಹೋಗುವುದು ಇತ್ಯಾದಿಗಳಿಗೆ ದೊಡ್ಡ ಸೀಸೆ ರೂ. 3-8-0, ಸಣ್ಣ ಸೀಸೆ ರೂ. 1-14-0.

☞ ಟಿಕ್ಚು, ಹೋಮ್ಯೋಪತಿ ಮದ್ದುಗಳೂ, ದೃಷ್ಟಿಚಕ್ರಗಳೂ, ಶುದ್ಧ ಜರ್ಮನ್ ಮತ್ತು ಅಮೇರಿಕದವಾಗಿದ್ದು ದೊಡ್ಡ ಪರಿಮಾಣದಲ್ಲಿ ವಿಕ್ರಯಿಸುವೆವು.

'ಆರೋಗ್ಯಭಾಗ್ಯದ ನೀತಿಸೂತ್ರ' ವೆಂಬ ಪುಸ್ತಕಕ್ಕೆ ಬರೆರಿ ಧರ್ಮಾರ್ಥ.

The Malariona Co., Mangalore (21)

ಪತ್ರ:— ಮಲೇರಿಯಾನ ಕಂಪೆನಿ, (ಹಂಪನಕಟ್ಟೆ), 21, ಮಂಗಳೂರು. [4]

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರು,

ಆಯುರ್ವೇದರಸಾಯನಶಾಲಾ, ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—

ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಬೆಂಗಳೂರು ಸಿಟಿ. 46

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಸಮ್ಮೇಳನದಿಂದ ದೇವತಾರಾಧನೆಮಾಡಿದ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[38] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ನೇ ಅಕ್ಟೋಬರ್ ೧೯೩೪ [ಸಂಚಿಕೆ ೨೧

ಪ್ರಭಾಭ್ಯುದಯವೇ ಪಂಚಾಚಾರ್ಯರ ಜಯಜಯಕಾರವು.

ಬರೆದವ—ದೈವಜ್ಞ ವಿನೋದ.

ಪ್ರಭೋದಯವಾದಂದಿನಿಂದ ಪಂಚಾಚಾರ್ಯರ ವಿಜಯಧ್ವನಿಯು ವಿಶ್ವದಲ್ಲೆಲ್ಲ ಕೇಳಿಸತೊಡಗಿತು. ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರ ಅಮೋಘವಾದ ದಿವ್ಯಶಕ್ತಿಯನ್ನು ಸಂಕುಚಿತಗೊಳಿಸಲೆಳಸಿದವರ ಕೃಷ್ಣಕಾರಸ್ಥಾನಗಳೆಲ್ಲವೂ ನಮ್ಮ ಪಂಚಾಚಾರ್ಯಪ್ರಭೋದಯದಿಂದ ವಿನಾಶವಾದವು. ಸೇತು-ಹಿಮಾಚಲಪರ್ಯಂತವಾಗಿ ಶ್ರೀ ಜಗದ್ಗುರು ಪಂಚಾಚಾರ್ಯರು ವೀರಶೈವ ಮತಸಾಮ್ರಾಜ್ಯವನ್ನು ಬೆಳೆಯಿಸಿದ ಮಹದೇಳ್ಗೆಯ ಸಿರಿಯ ಸೊಬಗನ್ನು 'ಪ್ರಭಾ' ಮೂಲಕ ಇಂದು ಪ್ರಪಂಚವೇ ಕಣ್ದೆರೆದು ನೋಡತೊಡಗಿರುವದು. ಪಂಚಾಚಾರ್ಯರ ಜಯಜಯಕಾರವೇ ಪ್ರಭಾಭ್ಯುದಯದ ಮಂಗಲಪ್ರಭಾತವು. ವೀರಶೈವ ಪ್ರಪಂಚಕ್ಕೆ 'ಪಂಚಾಚಾರ್ಯಪ್ರಭಾ' ಪತ್ರಿಕೆಯು ಮಾಡಿದ ಉಪಕೃತಿಯು ಅಚಲವಾದುದಾಗಿದೆ. ವೀರಶೈವ ಮತದ ಯಶೋಧ್ವಜವು ಕನ್ನಡನಾಡಿನಲ್ಲೆಲ್ಲ ಮೆರೆದು ಕನ್ನಡ ರಾಜಧಾನಿಯಾದ ಮೈಸೂರಿನಲ್ಲಿ ರಾಜಮರ್ಯಾದಾಪೂರ್ವಕವಾಗಿ ಅಭೂತಪೂರ್ವವಾದ ವೈಭವೋತ್ಸವಗಳಿಂದ ಏರಾಜಿಸಿದ ವಿಷಯವನ್ನು ಕೇಳಿ ವೀರಶೈವರ ಆನಂದಕ್ಕೆ ಪಾರವೇ ಇಲ್ಲದಾಗಿದೆ. ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಭಾವಲಯವು ಕೇವಲ ಕನ್ನಡನಾಡಿನಲ್ಲಷ್ಟೇ ಅಲ್ಲ; ಇಡೀ ಭಾರತ ನಾಡಿನಲ್ಲೆಲ್ಲ ಪ್ರಚಾರವಾಗತೊಡಗಿದೆ. ಅದಕ್ಕೆ ನಮ್ಮ 'ಪ್ರಭಾ' ದರ್ಶನವೇ ಕಾರಣವೆಂದು ಹೇಳಬೇಕಾಗಿದೆ. ಭರತಖಂಡದ ಉತ್ತರದಿಗ್ಭಾಗವನ್ನೆಲ್ಲ ಕಾಶೀ-ಹಿಮವತ್ಕೇದಾರ ಪೀಠಾಧಿಪತಿಗಳು ತಮ್ಮ ದಿವ್ಯಪ್ರಭೆಯಿಂದ ಬೆಳಗುತ್ತಲಿದ್ದಾರೆ. ದಕ್ಷಿಣಹಿಂದೂಸ್ಥಾನದಲ್ಲಿ ಉಜ್ಜಯಿನೀ-ರಂಭಾಪುರೀ ಪೀಠಾಚಾರ್ಯರು ಮರಾಠಾ-ಆಂಧ್ರ-ಕನ್ನಡ ಮೊದಲಾದ ನಾಡಿನ ವೀರಶೈವರನ್ನು ಜಾಗ್ರತಗೊಳಿಸಹತ್ತಿದ್ದಾರೆ. ಒಟ್ಟಿನಮೇಲೆ ವೀರಶೈವರಿಗೆ ತಮ್ಮ ಮತಸ್ವರೂಪಜ್ಞಾನವುಂಟಾಗಲು ಮತಸ್ಥಾಪನಾಚಾರ್ಯರ ದಿಗ್ವಿಜಯಸೂಚಕ ಸಂಚಾರವೇ ಮುಖ್ಯಕಾರಣವಾದರೂ ಭಾಸ್ಕರನ ಉದಯಸೂಚನೆಯು ಅರುಣೋದಯದಿಂದ ತಿಳಿಯುವಂತೆ ಪಂಚಾಚಾರ್ಯರ ಪ್ರತಿಭೆಯ ಆಗಮನಸೂಚನೆಯು 'ಪಂಚಾಚಾರ್ಯಪ್ರಭೆ' ಯಿಂದಲೇ ತಿಳಿಯಿತಷ್ಟೆ! ಪ್ರಭೋದಯಕ್ಕೆ ಕಾರಣಮೂರ್ತಿಗಳಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪ್ರಭಾವಾತಿಶಯವನ್ನು ಈ ಪ್ರಭಾಪತ್ರಿಕೆಯಲ್ಲಿಯೇ ಪ್ರಶಂಸೆಯನ್ನು ಮಾಡುವದು ಪ್ರಶಸ್ತವಾಗದೆಂದೂಹಿಸಿದರೂ, ಆ ಲೋಕವಿಖ್ಯಾತ ಅತ್ಯದ್ಭುತ ಚರಿತ್ರೆಯ ಪವಿತ್ರತೇಜಸ್ಸು ಲೇಖಕನನ್ನು ಮೂಗನ್ನಾಗಿಸಿದೆ. ಶ್ರೀ ಜಗದ್ಗುರು ಪಂಚಪೀಠಗಳ ಪ್ರಭಾವಾತಿಶಯಗಳಿಗೆ ಈ ಮಹನೀಯರ ಶಕ್ತಿಸಾಹಸಗಳು ಜೋಡಣೆಯಾಗಿ ದಿಗಂತವನೆಲ್ಲ ವ್ಯಾಪಿಸುವಂತೆ ಮಾಡಿದವು. ಅಥವಾ ಶ್ರೀ ಜಗದಾಚಾರ್ಯರ ಅವ್ಯಕ್ತತೇಜಸ್ಸೇ ಈ ಮಹನೀಯರ ಹೃದಯಾಂತರಂಗದಲ್ಲಿ ಆವಿರ್ಭವಿಸಿ ಪ್ರಪಂಚಕ್ಕೆ ವ್ಯಕ್ತವಾಗಿರಬಹುದಲ್ಲವೇ? ಶ್ರೀ ಜಗದ್ಗುರು ಪಂಚಾಚಾರ್ಯರ ವಿಜಯಧ್ವನಿಗೆ ಪ್ರಭಾಭ್ಯುದಯದ ಮಂಗಲನಾದವೂ ಈ ನಾದಾತ್ಮಕ ಮಹಾಭೇರಿಯ ಕರ್ತೃಗಳಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪ್ರಸಾದಿಕವಾಣಿಯೂ ಪ್ರಪಂಚವನ್ನೆಲ್ಲ ಬೆಳಗಲೆಂದು ವಿನೋದನ ಅಭಿಲಾಷೆಯು.

ನಿನ್ನೆ ದಿವಸ ಸಾಯಂಕಾಲ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಆರ್ಯಮಹಿಳೆಯರ ಪ್ರಾರ್ಥನೆಯ ಮೇರೆ ಸ್ತ್ರೀಧರ್ಮೋಪದೇಶವನ್ನು ಮಾಡಿದರು. ಸಾವಿರಾರು ಜನ ಆರ್ಯಮಹಿಳೆಯರು ಆಗಮಿಸಿ ಭಕ್ತಿಯಿಂದ ಗುರುಗಳ ಬೋಧಾಮೃತವನ್ನು ಪಾನಮಾಡಿದರು.

ಶ್ರೀಕೇದಾರಪ್ರಾಂತೀಯ ಸಮಾಚಾರ.

ಶ್ರೀ ಕೇದಾರನಾಥ ಮಂದಿರದ ಸೆಕ್ರೆಟರಿ ಮತ್ತು ಟ್ರೆಜರರಾದ ಸಿದ್ಧಮರಿಸ್ವಾಮಿ ಇವರು ತಮ್ಮ ಪಾರ್ಟಿಯೊಂದಿಗೆ ತಾ|| 2-9-34 ಕ್ಕೆ ಶ್ರೀ ಕೇದಾರನಾಥ ಮಂದಿರದಿಂದ ಮಧ್ಯಮಹೇಶ್ವರನಿಗೆ ಹಿಮಾಲಯ ಪರ್ವತದ ಮಾರ್ಗವಾಗಿ ಪ್ರಯಾಣಮಾಡಿದ್ದರು. ನಮ್ಮ ಹಿಂದೂದೇಶದಲ್ಲಿ ಅತ್ಯುನ್ನತವಾದ ಶಿಖರವು ಹಿಮಾಲಯ ಪರ್ವತದಲ್ಲಿ ಕಾಂಚನಗಂಗ ಎನ್ನುವುದಾಗಿದೆ. ಸಮ್ಮನ್ನಾಳುವ ಮಹಾಪ್ರಭುಗಳು 1922 ರಿಂದಲೂ ಆ ಶಿಖರದಲ್ಲಿ ಏನಿದೆಯೆನ್ನುವದನ್ನು ಕಂಡುಹಿಡಿಯಬೇಕೆಂದು ಪ್ರಯತ್ನಿಸುತ್ತಲಿದ್ದಾರೆ. ನಮ್ಮ ಹಿಂದೂದೇಶದಲ್ಲಿ ಮೇಲ್ಕಂಡವರು ಪ್ರಯಾಣಮಾಡಿದುದು ಮೊದಲಿನದಾಗಿದೆ. ಈ ಪಾರ್ಟಿಯಲ್ಲಿ ನಾಲ್ಕು ಜನರಿದ್ದರು. 1. ಸೆಕ್ರೆಟರಿಗಳು ಮಂದಿರ ಶ್ರೀ ಕೇದಾರನಾಥ, 2. ಶ್ಯಾಮಸಿಂಗ ಜಮಾದಾರ ಚಪರಾಸಿ, 3. ಶಿವಲಾಲಸಿಂಗ ಚಪರಾಸಿ, 4. ತೋತಾಸಿಂಗ ಮಠಾಧಿಕಾರಿ ಕಾಳೀಮಠ, ಇವರು ಪ್ರಯಾಣದ ಕಾಲಕ್ಕೆ ಜತನನ್ನು ಮಾತ್ರ ಸೇವಿಸುತ್ತಿದ್ದರು. ತಾ|| 2, 3, 4 ಪ್ರಯಾಣಮಾಡುತ್ತ ಸಾಯಂಕಾಲ 4 ಘಂಟೆಗೆ ಎರಡನೇ ಕೈಲಾಸವೆಂದು ಕರೆಯಲ್ಪಡುವ ಶ್ರೀ ಮಧ್ಯಮೇಶ್ವರವನ್ನು ಸೇರಿದರು. ಹಿಮಾಲಯ ಪರ್ವತದಲ್ಲಿ ಅಥಿಣೆಯೆನ್ನುವ ಮತ್ತೊಂದು ಪರ್ವತವು ಇದೆ. ಇದು ಸುಮಾರು 20,000 ಫೂಟು ಎತ್ತರ ಇರಬಹುದು. ಭಾದ್ರಪದ ಮಾಸದಲ್ಲಿ ಈ ಪರ್ವತದಲ್ಲಿ ಬರ್ಫ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುತ್ತದೆ. ಇದುವರೆಗೂ ಈ ನಮ್ಮ ಪ್ರದೇಶದ ಜನಗಳು ಯಾರೂ ಇಂಥ ಸಾಹಸದ ಕಾರ್ಯವನ್ನು ಮಾಡಿರುವದಿಲ್ಲ. ಸಿದ್ಧಮರಿಸ್ವಾಮಿ ಇವರು ಈ ನಮ್ಮ ಪರ್ವತಪ್ರಾಂತಕ್ಕೆ ದಯಮಾಡಿಸಿ 1 ವರುಷ 4 ತಿಂಗಳುಗಳಾದವು. ಇವರ ವಯಸ್ಸು 22 ವರುಷ. ಇವರ ಧೈರ್ಯಸಾಹಸಗಳನ್ನು ನೋಡಿ ಈ ನಮ್ಮ ದೇಶದ ಜನಗಳೆಲ್ಲರೂ ಅತ್ಯಾನಂದಪಡುತ್ತಿರುವರು. ಇವರಿಗೆ ತಾ|| 8-9-34 ರಲ್ಲಿ 'ವೀರಕೇಸರಿ' ಎಂಬ ಟೈಟಲ್ ಸನಾತನಧರ್ಮ ಮಹಾವಿದ್ಯಾಲಯದಿಂದ ಕೊಡಲ್ಪಟ್ಟಿತು. ಈ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುವ,

ಓರ್ವ ವಿದ್ಯಾರ್ಥಿ.

ದಸರಾ ಮಹೋತ್ಸವ—ಪ್ರೋಗ್ರಾಂ.

(ಶ್ರೀ ಭಾವನಾಮಸಂವತ್ಸರದ ಆಶ್ವಯುಜ ಶುದ್ಧ)

ಅಕ್ಟೋಬರ್ 1934

ಅಕ್ಟೋಬರ್ 9 ನೇ ಮಂಗಳವಾರ—ಪ್ರಾತಃಕಾಲ 10-30 ಘಂಟೆಗೆ ಶ್ರೀಮನ್ಮಹಾರಾಜರವರು ದರ್ಬಾರ್ ಹಾಲಿಗೆ ದಯಮಾಡಿಸಿ 11 ಘಂಟೆ 9 ನಿಮಿಷಗಳಿಗೆ ಸಿಂಹಾಸನಾರೋಹಣವನ್ನು ಬೆಳಸುತ್ತಾರೆ. ದಿವಾನರಿಂದಲೂ, ಬಾಸಾ ಛೋಟಮೈದುನರಿಂದಲೂ, ಕೌನ್ಸಿಲರುಗಳಿಂದಲೂ, ಸರದಾರರುಗಳಿಂದಲೂ ಮತ್ತು ಮುಖ್ಯರಾದ ಅರಸುಗಳಿಂದಲೂ ನಜರ್. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಕೆಲವು ಸಿವಿಲ್ ಆಫೀಸರುಗಳಿಂದಲೂ ಮತ್ತು ಅರಸುಗಳು ವಗೈರೆ ದರ್ಬಾರಿಗಳಿಂದಲೂ ನಜರ್ (ಬಿಳಿ ಟಿಕೀಟಿನವರು).

10 ನೇ ಬುಧವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸರುಗಳಿಂದಲೂ, ಪೋಲೀಸ್ ಆಫೀಸರುಗಳಿಂದಲೂ ಮತ್ತು ಕೆಲವು ಸಿವಿಲ್ ಆಫೀಸರುಗಳಿಂದಲೂ ನಜರ್ (ನೀಲಿ ಟಿಕೀಟಿನವರು).

11 ನೇ ಗುರುವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಕೆಲವು ಸಿವಿಲ್ ಆಫೀಸರುಗಳಿಂದಲೂ, ವರ್ತಕರಿಂದಲೂ ಮತ್ತು ಇತರ ದರ್ಬಾರಿಗಳಿಂದಲೂ ನಜರ್ (ಕೆಂಪು ಟಿಕೀಟಿನವರು).

12 ನೇ ಶುಕ್ರವಾರದಿಂದ—16 ನೇ ಮಂಗಳವಾರದ ತನಕ ಪ್ರತಿ ದಿನ ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆ ಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್.

17 ನೇ ಬುಧವಾರ—ಪ್ರಾತಃಕಾಲ 6-30 ಘಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧ ಕೆರೆ ಬಳಿಗೆ ಬೆಳದು ಅರಮನೆಗೆ 7-30 ಘಂಟೆಗೆ ಹಿಂದಕ್ಕೆ ಬಿಜಮಾಡುವುದು. ಅನಂತರ ಆಯುಧ, ಗಜಾಶ್ವಾದಿಗಳ ಪೂಜೆ. ಸಾಯಂಕಾಲ 7 ಘಂಟೆಗೆ ದರ್ಬಾರ್ (ಯೂರೋಪಿಯನ್ ಗೆಸ್ಟ್ಸ್).

18 ನೇ ಗುರುವಾರ—ಪ್ರಾತಃಕಾಲ 10-45 ಘಂಟೆಗೆ ಆಯುಧ, ಗಜಾಶ್ವ ಬನ್ನೀ ಮಂಟಪಕ್ಕೆ ಬಿಜಮಾಡುವುದು. ಅನಂತರ ಪಟ್ಟೀ ಕಾಳಗ. ಸಾಯಂಕಾಲ 4 ಘಂಟೆಗೆ ಜಂಬೂಸವಾರಿ.

19 ನೇ ಶುಕ್ರವಾರ—ಸಾಯಂಕಾಲ 7-30 ಘಂಟೆಗೆ ದರ್ಬಾರ್. ಹಿಂದಿನ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದೆ ಇರುವ ಸಿವಿಲ್, ಮಿಲಿಟರಿ ಮತ್ತು ಪೋಲೀಸ್ ಆಫೀಸರುಗಳಿಂದಲೂ ಮತ್ತು ಪ್ರಜಾಪ್ರತಿನಿಧಿಗಳಿಂದಲೂ ನಜರ್.

20 ನೇ ಶನಿವಾರ—ಸಾಯಂಕಾಲ 7-30 ಘಂಟೆಗೆ ದರ್ಬಾರ್.

CASE AGAINST PRESIDENT AND SECRETARY BAR ASSOCIATION MYSORE

Sir Alladi Krishnaswami Ayyar's Arguments.

LANGUAGE OF RESOLUTIONS "HIGHLY IMPROPER" SAYS THE CHIEF JUSTICE.

Sir Alladi Krishnaswami Iyer, who appeared yesterday, at the Mysore High Court for Messrs C. Narasimhaiya and R. Gopalaf krishna Setty. President and Secretary o- the Bar Association, Mysore, in the case in which they were issued notices under section 11 (f) of the Mysore Legal Practitioners' Regulation, (A short report of which has already appeared in these columns yesterday) argued at length on the merits and demerits of the civil circular recently issued by the High Court of Mysore.

Sir Alladi's Arguments

Sir Alladi Krishnaswamy Iyer, commenced his arguments by raising a preliminary objection with regard to the procedure in the cases coming under the Legal Practitioners' Regulation. He said that he would like to file in the court all the papers and statements connected with the Notice in question and that he would be satisfied if the Government Advocate would say what exactly the position was. The chief papers concerning the proceedings of the case were the civil circular, the Inspection notes and the proceedings of the Bar Association, Mysore, which he would examine, not so much for the purpose of investigation but for the sake of finding out where exactly his clients stood. He wanted to know whether after all, the whole thing was an exhibition of unnecessary excitement on the part of his clients at a meeting which was perhaps convened to express some feelings which the Bar felt.

Mr. Justice A. S. R. Chari:—You are asked to show cause here why you should not be dealt with under the Regulation. So, are you not to show cause?

Sir Alladi:—In case of this kind which have come up in other places a different procedure is followed. But here, it is not with a view to urge on the court a certain procedure that I raise the preliminary objection. Still I have to say that what is done usually is to frame a charge first and then call upon the person against whom the charge is framed to explain his conduct.

Chief Justice:—Here we are dealing particularly with papers and resolutions sent to this Court by the President and Secretary of the Bar Association.

Counsel:—But what have you got to say with regard to the charges.

Chief Justice:—I understand that this notice is something like a charge.

Counsel:—Even with regard to that there is a kind of *prima facie* case to be made out I am only placing before your Lordship, the usual procedure. Just before the charge, there is usually the preliminary enquiry, then there is the charge materials to which are placed before the court.

Justice Chari.—Addressing Government Advocate. "Have you any papers to file?"

Government Advocate: No.

Sir Alladi:—Addressing Government Advocate, "I should like to know beyond the charge, what you have got to say."

C. J.: In this case we have supplied the material that is before you. That is all what we can produce. If you put in any objection as A. B. C. etc., we will then be in a position to know where we are.

Proceding with his arguments, Sir Alladi Krishnaswamy Iyer referred to the copy of the resolutions, passed by the Bar Association. He observed that the kind of resolutions the Association passed was the result of a circular by the High Court. He would like here to invite the attention of the Court to the remarks of the late Chief Justice in the first para of the Civil Circular, about the irregularities with regard to a certain suit found to have been filed in a certain Court on a time-barred document. The remarks in that paragraph "The Counsel for the plaintiff as an officer of the court ought to have invited the attention of the court to the suspicious alteration in the document on which his suit was based or at least in order to protect the interests of his client he ought to have explained it to satisfy the Judge that the party had no hand in the alteration." The Counsel stated, it was one of the strongest points in his case. Unfortunately such remarks crept into the circular, possibly unwittingly on the part of the late Chief Justice.

Next, Sir Krishnaswamy Iyer, referred to the second paragraph of the civil circular wherein the High Court had made the following observation when the case came up in revision. "There is one circumstance which has escaped the attention of the Munsiff and which cannot be omitted to be noticed. The legal practioner who prepared the plaint and filed the suit on such a bond containing an admitted alteration of the year has not at all brought the above alteration to the notice of the Court. Nor has he explained in the plaint under what circumstances such an admitted alteration was made in the suit document. The Munsiff will enquire into the conduct of the Legal practitioner concerned under the Legal Practitioners' Regulation and submit his report through the District Judge within two months. In the face of the High Court's order to make the above said enquiry under the Legal Practitioner's Regulation, the Munsiff simply took an explanation from the Legal Practitioner concerned and sent it and the District Judge also mechanically forwarded it to the High Court. The District Judge has now been called upon to submit the Munsiff's explanation and ordered to enquire into the case himself as required by the Legal Practitioners' Regulation and to submit a report to the High Court." He argued that the circular was *sub judice* and stated that the stage at which the matters stood were that the Munsiff in that case did not follow the procedure and that the District Judge was called upon to enquire in the case. The order to conduct enquiry in the case was issued on the 19th of May 1930. The circular was issued on the 26th of June 1934. The inspection notes were written in February 1934, and the circular embodied the Inspection Notes, when the matter was pending in the lower Court, the Circular should not have been issued. So the whole question was *Sub-judice* so far as the legal practitioners were concerned and this paragraph of stricture, unfortunately, had been passed into the Inspection Notes.

Then, Sir Krishnaswamy Iyer drew the attention of the Court to another paragraph of the Circular which stated that during the inspection of the late Chief Justice, the Chief Justice sat, in a Court with the presiding officer to watch the proceedings in court.

'Mistaken his function.'

The Counsel remarked that he found in the Inspection Notes that the Chief Justice interfered with the proceedings of the case. Unfortunately, the late Chief Justice seemed to have mistaken his functions. The report that the Chief Justice did interfere with the proceedings of the case in question did not commend itself to him. He took objection to certain other remarks made by the late Chief Justice in the Inspection Notes.

No Disrespect to the late Chief Justice.

Closing his remarks on the Circular, the Counsel stated that the question was whether his clients were guilty of impropriety of conduct, by studying the circular. He had not viewed the circular with an attitude of disrespect to the late Chief Justice but he had brought it to the notice of the Court only for the purpose of elucidating matters.

Association Acted Bona-fide.

Continuing his arguments, Sir Krishnaswamy Iyer said that he would file the statements and resolutions of the Association passed at his meetings on the 15th and the 19th of July last only to show that the Association acted bona-fide. He might mention that the counsels on both the sides in the particular case concerned, gave statements to the Association on that occasion. so that the Association might verify the facts.

Expression 'unfair and unwarranted'

He would mention one thing in connection. He would take exception to the resolution of the Bar Association in which the members had used the expression 'unfair and unwarranted' with regard to the civil circular. Every member of the Bar thought that such expressions were uncalled for. But if he might venture to offer another remark, if a practice such as the interference of an inspecting Judge with the proceedings of a case, was obtaining in the Law Courts of Mysore, he would say that the sooner the practice was abolished the better it was.

Sequence of dates.

Sir Alladi filed in the Court the extracts of the Inspection Notes considered by the Association and pointed out that the circular was received by the Law Association on the 12th of July and the notice was received by Mr. Narasimhaiya, the President on the 14th and a meeting was held on the 15th. He said that the sequence of these dates were important for the purpose of identification.

Another important point he said, was, that the circular itself appeared in the newspapers on the 18th of July. (Here he filed the Daily Post copy in which the circular had appeared).

Did not like General Indictment.

Next, Sir Alladi Krishnaswamy Iyer, drew the attention of the Court to certain paragraphs of the Address delivered by the late Chief Justice, at the recent Judicial Officer's Conference. He observed that on page 9 of the Address, while he admired the spirit with which the observations there were made, he did not like the general indictment about the Judicial Service.

Mr. Justice Chari:—You are not appering for the Judiciory.

Sir Alladi:—We are as much interested in the prestige and dignity of the Bench, as the Bench is in the Bar.

Expressions Rather Strong.

Proceeding, the Counsel stated that the expressions of the late Chief Justice were rather strong in that portion of the Chief Justice.

Thought things much better in Mysore.

Referring to the criticism of the late Chief Justice regarding the administration of Justice made in page 29 of the address, the Counsel remarked that he certainly thought that things were much better in Mysore than the rest of India. Certainly it was the duty of ths Bar, as was remarked then by the late Chief Justice, to offer co-operation with the Bench, in regard to the administration of justice, but the strong remarks were uncalled for. So, in the circustances, the Association thought that the remark was unwarranted.

Expression of Regret.

After citing two or three leading cases in support of his contention Sir Alladi Krishnaswamy Iyer concluded his arguments by

saying that he regretted the strong language of the resolutions of the Bar Association, that the Association had acted only bonafide and that in the circumstances, the proceedings be dropped in view of the statements made by him.

GOVERNMENT ADVOCATE

The Government Advocate, in his turn, stated that in view of the regret expressed on the other side, his work had been simplified. The circular by the High Court was meant only for the general guidance of Lower Courts. It did not refer to any particular court nor did it mean to insist anybody.

ORDER OF THE FULL BENCH

In his case notice has been issued to the two Respondents, who are advocates of this Court practising at Mysore, to show cause why they should not be dealt with for misconduct under Section 11 (f) of the Legal Practitioner's Regulation for participating in certain resolutions passed by the Mysore District Bar Association on the 19th of July 1934, a copy of which was sent by Respondent 2 to this Court with a letter, dated the 20th of July 1934, in his capacity as Secretary of that Association, of which Respondent 1 is the President. Notice has been issued particularly to these Respondents because the resolutions as sent to this Court were signed by the President, Respondent I, and came with a letter signed by the Secretary, Respondent 2.

Sir Krishnaswami Iyer, who has appeared for the Respondents today, has very properly disclaimed any intention of raising any technical objection on behalf of the respondents that they were only acting in their official capicity as officers of that Association. Nor could it be suggested, I think, that it makes any difference to our treatment of their conduct under the Legal Practitioner's Regulation, that the resolutions with which we are dealing are not resolutions for which they were alone responsible but for which they and their Association, or at any rate the members who were present at the meeting of the Association, were responsible. If the Respondents or any other legal practitioners are really guilty of misconduct, they cannot escape the consequences of their act by saying that they did it in a body with other persons. However it is unnecessary on this occasion to pursue that aspect of the case any further.

The resolutions with which we are concerned contain remarks and expressions of opinion regarding this Court and the late Chief Justice. The record of the resolutions sent to this Court shows that the meeting at which they were passed was called to consider Civil Circular 304, dated the 29th of June 1934, issued by this Court, and the address of the late Chief Justice as President of the first Judicial Officers' Conference at Bangalore on the 7th of July 1934. I do not understand why the meeting should have been called to consider that presidential address. I can see nothing what ever in that address to which any lawyer could reasonably take exception and very much to admire in it. And I should like to take this opportunity of saying that in my opinion my learned predecessor, the late Chef Justice of this court, in his vigorous attempts to get the work of the Court of this State done in a more prompt and business-like way was performing a very valuable public service, for which we should all be grateful to him, and certainly not least the members of the Bar in their own interest and in the interest of their clients,

But the main subject for consideration at the meeting at which these resolutions were passed was the circular of this Court which I have mentioned. That circular was addressed to the subordinate Courts and to no one else. There was no intention that the circular should be sent to any member of the Bar or to any Bar Association. But a very unfortunate mistake, which was made about that circular, has led to very unfortunate misapprehensions and is really the cause of this case. By a mistake made in the office of this Court, that circular which one might say was a domestic matter between this Court and the Court's subordinate to it was sent to every Bar Association in the State. The reason of that was that a good many years ago a previous Chief Justice made an order in relation to circulars of this Court dealing with matters of practice and procedure, that when they were issued to subordinate Courts, they should also be issued to Bar Associations, which would naturally be interested in them and wish to see them. Very unfortunately that order which was intended to deal with that sort of circular, was applied by mistake to this circular, with which we are now concerned and which was not intended to go to any Bar Association at all. I understand that the circular somehow got into the public press; but I do not know how that happened. However, when this circular was once sent to Bar Association, I think it is clear that any Bar Association which thought fit had a right to make a reply to it. The Bar Association of of the Mysore District thought it necessary that they should make some reply. In my opinion they busied themselves a little unwisely in trying to fit some of the remarks in that circular to particular cases in which members of their Association had appeared. No names were mentioned in the circular at all, which was in the nature of general instructions to subordinate Courts as to how they should deal with certain matters and how they should deal with members of the Bar in certain circumstances. However, if the Mysore District Bar Association thought it necessary to investigate whether any of the remarks in that circular could apply to any member of their Association, that was their affair. And, being under the very reasonable misapprehension in consequence of the mistake when I mentioned that this circular, which came to them, was intended for them as well as other Bar Associations and not only for the Courts there was nothing unreasonable or improper in their making a respectful reply to it or any respectful representations which they might think fit. There would have been nothing objectionable I think althogh the circular had not been intended for them and in that sense was not their affair—if they had offered temperate criticism of the remarks made in the circular or a respectful defence of the Bar against any statements in the circular to which they objected.

Sir Krishnaswamy Iyer has laid stress before us to day on the importance of the independence of the Bar I need hardly say that my learned brothers and I are as interested in the independence of the Bar as he or any one else can be. Unless every member of the Bar feels free not only to urge clients' cases but to make representations to us individually or collectively, we cannot get the assistance from members of the Bar which we have a right to expect. We desire and expect of the members of the Bar a manly independence. But we expect and shall exact also due respect for the Court.

The language of the resolutions which have been sent to this Court is, I think it cannot be denied, in several places very highly improper. When I first read those resolutions, they caused me very great astonishment. As the resolutions were passed in reply to a circular sent by mistake to the Bar Association, which led them to a misapprehension that it was addressed to them, we are ready to make any possible allowance for the language used. But it is impossible for us not to express very strong condemnation of it. It was language such as no member of the Bar and no Association of the members of the Bar should have used about this Court. However Sir Krishnaswami Iyer has assured us that his clients and the members of their Association had no intention whatever in passing those resolutions and in sending them to this Court to lower the prestige of this Court in any way; and on behalf of the Respondents he has expressed their regret for the excessive language used in those resolutions.

We are quite prepared to accept that assurance and that expression of regret. This is his Highness' Court, and I cannot believe that the Respondents as loyal subjects of His Highness and themselves officers of this Court could have had any deliberate intention of scandalizing the Court. That being so, taking into consideration the unfortunate mistake which was made in sending the circular to the Bar Association and the misapprehension thereby aroused in the minds of the Respondents and the members of the Association, we do not think that this matter need be pursued any further.

In conclusion I should only like to say that, while we hope that no member of the Bar will be under any apprehension that we shall not always be ready to listen to any reasonable and proper representations made to us, we also hope that no one will go away under any mistake that we shall not insist upon proper respect to the Court.

This rule against the Respondents will be discharged.

(From the Daily Post 15-9-34.)

ಚಕ್ರವರ್ತಿ ಸಾರ್ವಭೌಮರವರು ಕಳೆದ ಬುಧವಾರ ಗ್ಲಾಸ್ಗೋನಗರದಲ್ಲಿ ಬಹು ದೊಡ್ಡದಾದ ಒಂದು ಹೊಸ ಹಡಗಿನ ನಾಮಕರಣೋತ್ಸವವನ್ನು ನೆರವೇರಿಸಿದರು. ಆ ಹಡಗಿಗೆ ಚಕ್ರವರ್ತಿನಿಯವರ ನಾಮಧೇಯವನ್ನು ಇಡಲಾಗಿದೆ. ಆ ಹಡಗು ಪ್ರಪಂಚದಲ್ಲೆಲ್ಲಾ ಬಹು ದೊಡ್ಡದಾದದ್ದೆಂದೂ, ಪ್ರಯಾಣಿಕರ ಸೌಕರ್ಯಕ್ಕನುಗುಣವಾಗಿ ಅತ್ಯುತ್ತಮ ರೀತಿಯಿಂದ ಕಟ್ಟಲ್ಪಟ್ಟಿರುವದೆಂದೂ ತಿಳಿದುಬರುತ್ತದೆ.

ಅರಮನೆಗೆ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಆಗಮನ.

ಭರತಖಂಡದಲ್ಲಿ ಪರಿಶೋಭಿಸುತ್ತಿರುವ ಭೂಪಾಲವರ್ಗಕ್ಕೆ ಭೂಷಣಪ್ರಾಯರಾಗಿ ಮೆರೆಯುತ್ತಿರುವವರೂ, **"ಸತ್ಯಮೇವೋದ್ಧರಾಮ್ಯಹಂ"** ಎಂಬ ತಮ್ಮ ಮಹಾಬಿರುದನ್ನು ಅಕ್ಷರಶಃ ಪಾಲಿಸಿ ತಮ್ಮ ರಾಜ್ಯವನ್ನು ರಾಮರಾಜ್ಯವನ್ನಾಗಿ ಮಾಡಿ **"ರಾಜಾಪ್ರತ್ಯಕ್ಷದೇವತಾ"** ಎಂಬ ಮಹಾವಾಕ್ಯವನ್ನು ಸಾರ್ಥಕಗೊಳಿಸಿಕೊಂಡು ಸಮಸ್ತ ಪ್ರಪಂಚದ ಜನಗಳಿಂದ ಮುಕ್ತಕಂಠದಿಂದ ಹೊಗಳಿಸಿಕೊಳ್ಳುವವರೂ, ಯದುವಂಶದ ಪ್ರಭಾವವನ್ನು ದಶದಿಕ್ಕುಗಳಲ್ಲಿ ಹರಡಿ ತಮ್ಮ ಪವಿತ್ರವಂಶದ ಕೀರ್ತಿಯನ್ನು ಆಚಂದ್ರಾರ್ಕವಾಗಿ ಸ್ಥಿರಗೊಳಿಸಿದವರೂ, ಸಾಕ್ಷಾದ್ಧರ್ಮಾವತಾರಿಗಳೂ ಆಗಿರುವ ಕರ್ಣಾಟಕಸಿಂಹಾಸನಾಧೀಶ್ವರ ಸರ್ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ವೀರಶೈವಮತಾಚಾರ್ಯರೂ, ಶಮದಮಾದಿ ದಿವ್ಯಗುಣಗಳಾಲಂಕೃತರೂ, ಸಕಲಶಾಸ್ತ್ರತತ್ವವೇತ್ತರೂ, ತಪೋನಿಧಿಗಳೂ ಆಗಿರುವ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರನ್ನು ಇದೇ ತಿಂಗಳು ೪ ನೆಯ ತಾರೀಖು ಗುರುವಾರ ದಿವಸ ಸಕಲರಾಜಮರ್ಯಾದೆಗಳೊಡನೆ ಲೋಕವಿಖ್ಯಾತವಾದ ತಮ್ಮ ಅರಮನೆಗೆ ಬಿಜಯಮಾಡಿಸಿಕೊಂಡರು. ಪ್ರಾತಃಕಾಲ ೭ ಘಂಟೆಗೆ ಅರಮನೆಯಿಂದ ಆನೆಗಳು, ಕುದುರೆಗಳು, ನಾನಾವಿಧ ಕಾಲಾಳುಗಳು, ಬಿರುದುಗಳು ಶ್ರೀಗಳವರ ಬಿಡಾರಕ್ಕೆ ಕಳುಹಿಸಲ್ಪಟ್ಟವು. ಅಲ್ಲಿಂದ ಶ್ರೀಗಳವರ ರಜತಾಂದೋಲಿಕೋತ್ಸವವು ೮ ಘಂಟೆಗೆ ಸರಿಯಾಗಿ ಸಮಸ್ತ ರಾಜವೈಭವದೊಡನೆ ಹೊರಟಿತು. ರಾಜಧಾನಿಯ ಭಕ್ತರೂ, ದೂರದೂರದೇಶಗಳಿಂದ ಆಗಮಿಸಿದ್ದ ಭಕ್ತರೂ ಈ ರಾಜೋತ್ಸವದಲ್ಲಿ ಭಾಗಿಗಳಾಗಿ ಉತ್ಸವಕ್ಕೆ ಅಸಾಧಾರಣವಾದ ಶೋಭೆಯನ್ನುಂಟುಮಾಡಿದ್ದರು. ಈ ರೀತಿಯಾಗಿ ಅನ್ಯಾದೃಶ ರಾಜವೈಭವದೊಡನೆ ರಾರಾಜಿಸುತ್ತಿರುವ ಈ ರಾಜಮಹೋತ್ಸವವು ವಾಣೀವಿಲಾಸ ರೋಡ್ ಸಯ್ಯಾಜಿರಾವ್ ರೋಡುಗಳ ಮಾರ್ಗವಾಗಿ ಅರಮನೆಯ ಕೋಟೆಯನ್ನು ಪ್ರವೇಶಿಸಿ ರಾಜಭವನದ ಮಹಾದ್ವಾರಕ್ಕೆ ಬಂದು ತಲ್ಪಿತು. ಕೂಡಲೆ ಮಹಾದ್ವಾರದಲ್ಲಿ ಆಯುಧಪಾಣಿಗಳಾಗಿ ಸಾಲುಸಾಲಾಗಿ ನಿಂತಿದ್ದ ಅರಮನೆಯ ಸಿಪಾಯಿಗಳ ಸಮುದಾಯವು ಸೈನಿಕ ಪದ್ಧತಿಗನುಸಾರವಾಗಿ ವಂದನಾರೂಪವಾದ ಮರ್ಯಾದೆಯನ್ನು ಸಮರ್ಪಿಸಿತು. ಅಲ್ಲದೆ, ಅದರ ಮೇಲ್ಪಟ್ಟ ಉಭಯ ಅಧಿಕಾರಿಗಳು ರಾಜಚಿಹ್ನಾಂಕಿತಗಳಾಗಿದ್ದ ಉಭಯ ಧ್ವಜಗಳನ್ನು ಭೂಮಿಗೆ ಬಗ್ಗಿಸಿ ಮಹಾಮರ್ಯಾದೆಯನ್ನು ಸಮರ್ಪಿಸಿದರು. ಈ ಗೌರವಕ್ಕೆ "ಗಾರ್ಡ್ ಆಫ್ ಆನರ್" ಎಂದು ಕರೆಯುತ್ತಿರುವರು. ಈ ಮಹಾಗೌರವವು ಮಹಾಮಹಾ ರಾಜರುಗಳಿಗೆ ಸಲ್ಲತಕ್ಕದಾಗಿರುವುದು. ಇಂಥ ಮಹಾಗೌರವವನ್ನು ನಮ್ಮ ಮಹಾಪ್ರಭುಗಳವರು ಅಸಾಧಾರಣವಾದ ಸಂತೋಷದಿಂದ ವೀರಶೈವಮತಾಚಾರ್ಯರಿಗೆ ದಯಪಾಲಿಸಿದುದಕ್ಕಾಗಿ, ಭರತಖಂಡದಲ್ಲಿ ವಾಸಿಸುವ ಇಡೀ ವೀರಶೈವಸಮಾಜವೇ ಮಹಾಪ್ರಭುಗಳವರಿಗೆ ಚಿರಋಣಿಯಾಗಿದೆಯೆಂದು ಸಾರಿ ಸಾರಿ ಹೇಳಬಹುದಾಗಿದೆ. ಶ್ರೀಗಳವರು ಈ ರೀತಿಯಾದ ರಾಜಗೌರವವನ್ನು ಸ್ವೀಕರಿಸಿ ಆನೆಯ ಬಾಗಿಲಿನ ಮುಂಭಾಗದಲ್ಲಿ ಪಲ್ಲಕ್ಕಿಯಿಂದಿಳಿದರು. ಕೂಡಲೆ ಅರಮನೆಯ ಅಧಿಕಾರಿಗಳೂ, ಸಮಸ್ತ ರಾಜಬಂಧುಗಳೂ ಶ್ರೀಗಳವರನ್ನು ಎದುರ್ಗೊಂಡು ಗೌರವಿಸಿದರು. ಬಳಿಕ ಶ್ರೀಗಳವರು ಕಲ್ಯಾಣಮಂಟಪದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ಅನಂತರ ಸ್ನಾನಾದಿಕ್ರಿಯೆಗಳನ್ನು ತೀರಿಸಿಕೊಂಡು ಅನುಷ್ಠಾನಕ್ಕೆ ಕುಳಿತರು. ಅನುಷ್ಠಾನಾದಿ ಕ್ರಿಯೆಗಳು ಸಮಾಪ್ತಿಗೊಂಡಮೇಲೆ ಸಾಕ್ಷಾದ್ಧರ್ಮಮೂರ್ತಿಗಳಾದ ನಮ್ಮ ಮಹಾಪ್ರಭುಗಳವರು ಮತ್ತು ಯುವರಾಜಪ್ರಭುಗಳವರು ಭಕ್ತಿಭಾವದಿಂದೊಡಗೂಡಿ ಶ್ರೀಗಳವರಲ್ಲಿಗೆ ಆಗಮಿಸಿ, ಪ್ರಣತಿಪೂರ್ವಕ ರಾಜಪಿಲ್ಲತ್ತುಗಳನ್ನು ಸಮರ್ಪಿಸಿ, ಶ್ರೀ ಸ್ವಾಮಿಯ ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು. ಆಮೇಲೆ ಶ್ರೀಗಳವರು ಉಭಯಪ್ರಭುಗಳವರಿಗೂ ತಮ್ಮ ಸಂಸ್ಥಾನದ ವತಿಯಿಂದ ಮಹಾರಾಜಯೋಗ್ಯಗಳಾದ ಪಿಲ್ಲತ್ತುಗಳನ್ನು ಆಶೀರ್ವದಿಸಿದರು. ಬಳಿಕ ಕೆಲವು ನಿಮಿಷಗಳವರೆಗೆ ಶ್ರೀಗಳವರಿಗೂ ಮಹಾಪ್ರಭುಗಳವರಿಗೂ ಸಂಭಾಷಣವು ನಡೆಯಿತು. ಅನಂತರ ಉಭಯಪ್ರಭುಗಳವರು ವಂದಿಮಾಗಧರ ವಿಜಯನಾದವಾಗುತ್ತಿರಲು ಸ್ವಸ್ಥಾನಕ್ಕೆ ಬಿಜಮಾಡಿದರು. ಆಮೇಲೆ ಭಕ್ತಿವಿಶೇಷದಿಂದ ಸಾಲುಸಾಲಾಗಿ ನಿಂತಿದ್ದ ರಾಜಬಂಧುಗಳು ಶ್ರೀಗಳವರಲ್ಲಿಗೆ ಒಬ್ಬೊಬ್ಬರಾಗಿ ಬಂದು ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು. ಆ ದಿವಸ ಅರಮನೆಯಲ್ಲಿ ಏರ್ಪಡಿಸಲ್ಪಟ್ಟ ಪೂಜಾವೈಭವವು ವರ್ಣನಾತೀತವಾದುದು. ಅಂದಿನ ಮಹೋತ್ಸವದಲ್ಲಿ ಭಾಗಿಗಳಾಗಿದ್ದ ಮಾನವರ ಜನ್ಮವೇ ಸಾರ್ಥಕ!

ಈ ರೀತಿಯಾಗಿ ಪೂಜಾದಿಕಾರ್ಯಗಳು ತೀರಿದಮೇಲೆ ಪ್ರಸಾದವಿನಿಯೋಗವಾಯಿತು. ನಾಲ್ಕು ಘಂಟೆಯಾದಮೇಲೆ ಶ್ರೀಗಳವರು ಅರಮನೆಯ ಮುಖ್ಯಮುಖ್ಯ ಸ್ಥಾನಗಳನ್ನು ಸಂದರ್ಶಿಸಿ ಆನಂದತುಂದಿಲಹೃದಯರಾದರು. ಪುನಃ ೫ ಘಂಟೆಗೆ ಆಂದೋಲಿಕೋತ್ಸವವು ಅರಮನೆಯಿಂದ ಸಕಲ ರಾಜವೈಭವದೊಡನೆ ಹೊರಟು ಶ್ರೀಗಳವರ ವಾಸಸ್ಥಾನಕ್ಕೆ ಬಂದು ತಲ್ಪಿತು. ಆ ದಿವಸ ರಾಜಧಾನೀ ನಿವಾಸಿಗಳ ಸಂತೋಷಕ್ಕೆ ಪಾರವೇ ಇರಲಿಲ್ಲ; ಸಕಲ ಮತೀಯರೂ ತಮ್ಮ ಸಂತೋಷವನ್ನು ಕ್ಷಣಕ್ಷಣಕ್ಕೂ ವ್ಯಕ್ತಪಡಿಸುತ್ತಿದ್ದರು. ಎತ್ತನೋಡಿದಡತ್ತ ಆನಂದವೇ ಆನಂದವಾಗಿತ್ತು. ಸಕಲಮತೀಯಪ್ರಜೆಗಳಲ್ಲಿ ಈ ರೀತಿಯಾಗಿ ಆನಂದವು ಉಕ್ಕೇರುತ್ತಿರುವಾಗ ಆನಂದಮಯಮೂರ್ತಿಗಳೆನಿಸಿದ ನಮ್ಮ ಮಹಾಪ್ರಭುಗಳವರ ಆನಂದವನ್ನು ವರ್ಣಿಸಲು ಸಾಧ್ಯವೇ?

ಪ್ರತಿಯೊಂದು ಯುಗದಲ್ಲಿಯೂ ಶಿವಲಿಂಗಮುಖದಿಂದವತರಿಸಿ ವೀರಶೈವಮತವನ್ನು ಪ್ರತಿಷ್ಠಿಸಿ ಲೋಕವಿಖ್ಯಾತರಾಗಿ ಹೋಗಿರುವ ಶ್ರೀ ಜಗದ್ಗುರು ರೇಣುಕಾಚಾರ್ಯರು ವಿಭೀಷಣ-ವಿಕ್ರಮ-ನೀಲಗಳು ಮೊದಲಾದ ಚಕ್ರವರ್ತಿಗಳ ಅರಮನೆಗೆ ದಯಮಾಡಿಸಿ ರಾಜಾಧಿರಾಜಮಾನ್ಯರಾಗಿ ಮೆರೆದರೆಂಬ ವಿಷಯವನ್ನು ಇಲ್ಲಿಯವರೆಗೂ ಸರ್ವರೂ ಆ ಗುರುವರೇಣ್ಯರ ಪವಿತ್ರ ಚರಿತ್ರಗಳಲ್ಲಿ ನೋಡಿ ಸಂತೋಷಿಸುತ್ತಿದ್ದರು. ಆದರೆ ಅಂಥ ವೈಭವವನ್ನು ಆ ಮಹಿಮರ ಪೀಠವನ್ನಲಂಕರಿಸಿ **"ಅಭಿನವರೇಣುಕ"** ಎಂಬ ಪವಿತ್ರಾಭಿಧಾನದಿಂದ ಪರಿಭೂಷಿಸುತ್ತಿರುವ ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರಿಗೆ ಕರ್ಣಾಟಕಸಿಂಹಾಸನಾಧೀಶ್ವರ ಶ್ರೀ ಕೃಷ್ಣಭೂಪಾಲರು ತಮ್ಮ ಆಳ್ವಿಕೆಯಲ್ಲಿ ಪ್ರತ್ಯಕ್ಷವಾಗಿ ದಯಪಾಲಿಸಿ ಅಖಿಲ ವೀರಶೈವ ಜಗತ್ತನ್ನು ಸಂತೋಷಸಾಗರದಲ್ಲಿ ಮುಳುಗಿಸಿರುವುದನ್ನು ನೋಡಿದರೆ ಯಾವ ವೀರಶೈವನು ಮಹಾಪ್ರಭುಗಳಿಗೆ ಋಣಿಯಾಗಲಿಕ್ಕಿಲ್ಲ? ಅಂದು ರಾಜಮಂದಿರದಲ್ಲಿ ಪೂಜೆಗೊಂಡ ಗುರುವಾರದಿವಸವೂ, ಶ್ರೀಗಳವರ ಮತ್ತು ಮಹಾಪ್ರಭುಗಳವರ ದಿವ್ಯನಾಮಗಳೂ ವೀರಶೈವೇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕವಾಗಿವೆಯೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಸದ್ಧರ್ಮಮೂರ್ತಿಯಾದ ನಮ್ಮ ಮಹಾಪ್ರಭುವಿಗೆ ಜಯವಾಗಲಿ! ಯದುವಂಶವು ಈ ಭೂವಲಯದಲ್ಲಿ ಆಚಂದ್ರಾರ್ಕವಾಗಿ ವಿರಾಜಿಸಲಿ!!

ಸೂಚನೆ.

ಪ್ರತಿ ವರ್ಷ ಪದ್ಧತಿಯಂತೆ ನವರಾತ್ರಿ ಮಹೋತ್ಸವ ನಿಮಿತ್ತವಾಗಿ ಮುಂದಿನ ವಾರದ (ತಾ|| ೧೫-೧೦-೧೯೩೪ ನೆಯ) ಪತ್ರಿಕೆಯು ಹೊರಡುವುದಿಲ್ಲವೆಂಬ ವಿಷಯವನ್ನು ಚಂದಾದಾರರು ಗಮನಿಸಬೇಕು.

ಸಂ—

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಈಗ ಎರಡುಮೂರು ದಿವಸಗಳಿಂದಲೂ ಮಳೆಯು ವಿಶೇಷವಾಗುತ್ತಲಿದೆ.

ನಮ್ಮ ಸಂಸ್ಥಾನದ ದಿವಾನರವರೂ, ಕೌನ್ಸಿಲರುಗಳೂ ೮ ನೆಯ ತಾರೀಖಿನ ದಿವಸ ರಾಜಧಾನಿಗೆ ಆಗಮಿಸುವವರಾಗಿದ್ದಾರೆ.

ಈ ಸಾರೆಯ ದಸರಾ ಮಹೋತ್ಸವಕ್ಕೆ ಮದ್ರಾಸ್ ಗವರ್ನರಾದ ಸರ್ ಜಾರ್ಜ್ ಸ್ಟ್ಯಾನ್ಲಿಯವರೂ ಅವರ ಪತ್ನಿಯವರೂ ಆಹ್ವಾನಿಸಲ್ಪಟ್ಟಿದ್ದಾರೆ.

ಮಂಡ್ಯದ ಕರ್ಣಾಟಕ ಸಂಘದ ಆಶ್ರಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ವಾಂಸರು ಇದೇ ಮಾಹೆ ತಾರೀಖು ೯-೧೦-೩೪ನೇ ಮಂಗಳವಾರದಿಂದ ತಾ|| ೧೫-೧೦-೩೪ ನೇ ಸೋಮವಾರದ ವರೆಗೂ "ಉಪನ್ಯಾಸ ಸಪ್ತಾಹವನ್ನು" ನಡೆಸುವರು.

ಮೈಸೂರು ಡಿಸ್ಟ್ರಿಕ್ಟಿನ ಸ್ಕೂಲ್ ಬೋರ್ಡಿನ ಮೆಂಬರಾಗಿದ್ದ ಶ್ರೀಮತಿ ಕೆ. ಸಾಕಮ್ಮನವರು ರಾಜೀನಾಮೆ ಕೊಟ್ಟದ್ದರಿಂದ ಅವರ ಸ್ಥಾನಕ್ಕೆ ಇನ್ನೊಬ್ಬರನ್ನು ಇದೇ ಅಕ್ಟೋಬರ್ ತಾ|| 13 ನೇ ತಾರೀಖಿನ ದಿವಸ ಚುನಾಯಿಸುವರೆಂದು ತಿಳಿಯುತ್ತದೆ.

ಬೆಂಗಳೂರು ಸಿಟಿ ಪೋಲೀಸ್ ಕಾನ್ಸ್ಟೇಬಲ್‌ರಾದ ಜೋಸೆಫ್ ಎಂಬಾತನು ಮುನಿಸ್ವಾಮಿ ಎಂಬ ಅಕ್ಕಸಾಲೆಯೂ ಕೃತ್ರಿಮನಾಣ್ಯಗಳನ್ನು ರಚಿಸುವರೆಂದು ರುಜುವಾತಾದುದರಿಂದ ಅ|| ಸೆಷನ್ಸ್ ಜಡ್ಜರವರು ಇವರಿಗೂ ಎರಡೆರಡು ವರ್ಷ ಕಠಿಣಶಿಕ್ಷೆಯನ್ನು ವಿಧಿಸಿರುತ್ತಾರೆ.

ರಾಜಧಾನಿಯಲ್ಲಿ ನವರಾತ್ರಿಯ ಪ್ರಯುಕ್ತ ವಸ್ತುಪ್ರದರ್ಶನವು ನಾಳೆಯಿಂದ ಪ್ರಾರಂಭವಾಗುವದು. ಸ್ಟಾಲುಗಳೆಲ್ಲವೂ ಭರ್ತಿಯಾಗಿವೆ. ಸ್ಥಲಪರಸ್ಥಲಗಳಿಂದ ಅನೇಕ ಜನ ಪ್ರದರ್ಶನಕಾರರು ಬರುತ್ತಿರುವರು. ಈ ವಸ್ತುಪ್ರದರ್ಶನವು ೧೫ ದಿವಸಗಳವರೆವಿಗೂ ನಡೆಯಬೇಕೆಂದು ಗೊತ್ತಾಗಿದೆ.

ಮೊನ್ನೆ 3 ನೆಯ ತಾರೀಖಿನ ದಿವಸ ಪ್ರಾತಃಕಾಲ 9 ಘಂಟೆಗೆ ದರ್ಬಾರ್ ಸರ್ಜನರಾದ ಡಾ|| ಜೆ. ಎಫ್. ರಾಬರ್ಟ್‌ಸನ್‌ರವರು ಶ್ರೀ ಜಯಚಾಮರಾಜ ಒಡೆಯರವರಿಗೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಗಂಟಲಿನಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿದರು. ಶ್ರೀ ರಾಜಕುಮಾರರು ಆರೋಗ್ಯದಿಂದಿರುತ್ತಾರೆ.

ನಾಗಮಂಗಲ ತಾಲ್ಲೂಕು ಬೆಳ್ಳೂರಿನಲ್ಲಿ ಮ|| ಜಿ. ಎಸ್. ಗಂಗಪ್ಪನವರು ಕಟ್ಟಿಸಿರುವ ನೂತನ ಆಸ್ಪತ್ರೆ ವಾರ್ಡ್ ಕಟ್ಟಡದ ಪ್ರವೇಶೋತ್ಸವವನ್ನು ಮೈಸೂರು ಡೆಪ್ಯುಟಿ ಕಮಿಷನರ್ ಮ|| ಸಿ. ಎಸ್. ಕುಪ್ಪುಸ್ವಾಮಿ ಅಯ್ಯಂಗಾರ್ಯರವರು ಕಳೆದ 3 ನೆಯ ತಾರೀಖಿನ ಪ್ರಾತಃಕಾಲ ನೆರವೇರಿಸಿದರೆಂದು ಕೇಳುತ್ತೇವೆ.

ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಕೈಲಾಸ ಮಹಾಯಾತ್ರೆಯ ಚಲನಚಿತ್ರಪ್ರದರ್ಶನ.

ನಿನ್ನೆಯ ದಿವಸ ರಾತ್ರಿ ಅರಮನೆ ಇಲಾಖೆಯವರು ನಮ್ಮ ಮಹಾಪ್ರಭುಗಳವರು ಬಹು ಕಷ್ಟಸಾಧ್ಯವಾದ ಕೈಲಾಸಪರ್ವತಕ್ಕೆ ದಯಮಾಡಿಸಿದ ಚಲನಚಿತ್ರ (ಸಿನಿಮಾ) ವನ್ನು ಶ್ರೀಗಳವರ ಸನ್ನಿಧಿಯಲ್ಲಿ ಪ್ರದರ್ಶಿಸಿ ಸರ್ವರನ್ನೂ ಸಂತೋಷಗೊಳಿಸಿದರು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಸದ್ಯಃ ನವರಾತ್ರಮಹೋತ್ಸವಕ್ಕೆ ಮೂಲಭೂತವಾದ ರಾಜಧಾನಿಯಲ್ಲಿಯೇ ವಾಸವಾಗಿರುವುದರಿಂದ ಈ ಸಾರೆ ನವರಾತ್ರಮಹೋತ್ಸವವನ್ನು ನೆರವೇರಿಸುವುದಿಲ್ಲವೆಂಬ ವಿಷಯವನ್ನು ಸರ್ವರ ಅವಗಾಹನೆಗಾಗಿ ಮಹಾಸಂಸ್ಥಾನದ ಏಜಂಟರವರು ತಿಳುಹಿಸಲಪೇಕ್ಷಿಸುತ್ತಾರೆ.

ರಾಜಧಾನಿಯ ಬರ್ಮಾಷೆಲ್ ಕಂಪನಿ ಏಜಂಟರಾದ ಮ|| ಎ. ಡಿ. ರಾಜಾರಾಮ ಮೊದಲಿಯಾರ್ರವರು 23,000 ರೂ.ಗಳನ್ನು ಧರ್ಮಾರ್ಥವಾಗಿ ಕೊಟ್ಟು ಅದರಲ್ಲಿ 13,000 ರೂ. ಗಳಿಂದ ನಂಜನಗೂಡು ಟವ್ನಿನಲ್ಲಿ ಹೆರಿಗೆ ಆಸ್ಪತ್ರೆಯನ್ನೂ ಮಕ್ಕಳಿಗೆ ಹಾಲೆರೆಯುವ ಕಟ್ಟಡವನ್ನೂ ಕಟ್ಟಿಸಬೇಕೆಂದೂ, ಉಳಿದ 10,000 ರೂಪಾಯಿಗಳ ಬಡ್ಡಿಯಿಂದ ಮಕ್ಕಳಿಗೆ ಹಾಲು ಕೊಡುತ್ತ ಬರಬೇಕೆಂದೂ ನಿಶ್ಚಯಿಸಿರುತ್ತಾರೆ. ಸ್ತುತ್ಯ!

ಕಳೆದ ಮೂರನೆಯ ತಾರೀಖು ಬುಧವಾರ ದಿವಸ ಹಳೇ ಅಗ್ರಹಾರದಲ್ಲಿರುವ ಮ|| ಎಂ. ಪಿ. ಲಿಂಗಪ್ಪಯ್ಯನವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ತಮ್ಮ ಮನೆಗೆ ದಯಮಾಡಿಸಿಕೊಂಡು ವಿಧ್ಯುಕ್ತವಾದ ಪೂಜೆಯನ್ನು ಮಾಡಿ ಗುರುಕಾಣಿಕೆಯನ್ನು ಸಮರ್ಪಿಸಿದರು. ವೆಸ್ಲಿಯನ್ ಮಿಷನ್ ಹೈಸ್ಕೂಲಿನ ಪ್ರಿನ್ಸಿಪಾಲರಾದ ಮ|| ಬೂಟ್ ಸಾಹೇಬರು ಪ್ರೊ|| ಎ. ಆರ್. ವಾಡಿಯಾರವರು ಅಮಲ್ದಾರರಾದ ಶ್ರೀ|| ಎನ್. ಅನಂತರಾಮಯ್ಯನವರೂ ಮೊದಲಾದ ಅನೇಕ ಮಹಾಶಯರು ಆ ಸಮಯದಲ್ಲಿ ಆಹೂತರಾಗಿದ್ದು ಶ್ರೀಗಳೊಂದಿಗೆ ಕುಶಲಪ್ರಶ್ನೆಗಳನ್ನು ಮಾಡಿದರು.

ಬೆಂಗಳೂರು ದಂಡಿನ ಪ್ರದೇಶವನ್ನು ಮೈಸೂರು ಸಂಸ್ಥಾನಕ್ಕೆ ವಾಪಸು ಕೊಡುವ ವಿಷಯದಲ್ಲಿ ದಂಡಿನ ವರ್ತಕ ಸಂಘದವರೂ, ರೇಟ್-ಪೇಯರುಗಳ ಸಂಘದವರೂ, ಬೇರೆ ಕೆಲವು ಸಂಘಗಳವರೂ ಏಕೀಭವಿಸಿ "ದಂಡಿನ ಪ್ರದೇಶವು ಯುರೋಪಿಯನ್ನರ ಆಳ್ವಿಕೆಯಲ್ಲೇ ಇದ್ದೀತೆಂಬ ಭರವಸೆಯ ಮೇಲೆ ಅನೇಕ ಆಂಗ್ಲೋ-ಇಂಡಿಯನ್ನರು ಪರಸ್ಥಳಗಳಿಂದ ಬಂದು ಮಿಲಿಟರಿ ಉದ್ಯೋಗದಾರರಿಂದ ನಿವೇಶನಗಳನ್ನು ಕ್ರಯಕ್ಕೆ ಪಡೆದು ಮನೆಮಠಾದಿಗಳನ್ನು ಕಟ್ಟಿಕೊಂಡು ವಾಸಮಾಡುತ್ತ ಬಂದಿದ್ದಾರೆ. ಆ ಪ್ರದೇಶವು ಅವರಿಂದ ಬಹಳಮಟ್ಟಿಗೆ ಅಭಿವೃದ್ಧಿಗೆ ಬಂದಿರುವುದು. ಆದಕಾರಣ ಇಂಥ ಪ್ರದೇಶದ ಆಳ್ವಿಕೆಯನ್ನು ಮೈಸೂರು ಗವರ್ನ್‌ಮೆಂಟಿಗೆ ವಹಿಸತಕ್ಕದ್ದಲ್ಲ" ಎಂಬುದಾಗಿ ವೈಸ್‌ರಾಯರವರಲ್ಲಿ ಅರಿಕೆಮಾಡಿದ್ದಾರೆಂದು ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಪೋಲೀಸರು ಕಲ್ಕತ್ತಾ ಶಹರದ ಅನೇಕ ಸ್ಥಳಗಳಲ್ಲಿ ಮುತ್ತಿಗೆ ಹಾಕಿ ಝಡತಿಮಾಡಿದ್ದರಿಂದ ಆಕ್ಷೇಪಕಾರಕ ಕಾಗದಪತ್ರಗಳು ಹೊರಟವು. ಪೋಲೀಸರು ಇದರ ಬಗ್ಗೆ ಅನೇಕ ಜನ ಬಂಗಾಲಿ ತರುಣರನ್ನು ಬಂಧನಮಾಡಿದ್ದಾರೆ. ಅವರೆಲ್ಲರೂ ವಿದ್ಯಾರ್ಥಿಗಳಿರುವರೆಂದು ತಿಳಿಯುತ್ತದೆ.

೨ನೇ ತಾ|| ದಿವಸ ಕಲ್ಕತ್ತಾನಗರದ ಪ್ರಮುಖರು ಖಾನ್ ಅಬ್ದುಲ್ ಗಫೂರ್ ಖಾನರಿಗೆ ಟೌನ್‌ಹಾಲ್ ಸಭಾಮಂದಿರದಲ್ಲಿ ಅಭಿನಂದನ ಪತ್ರವನ್ನು ಸಮರ್ಪಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಭಾಷಣಮಾಡುತ್ತ ಖಾನರವರು "ಹಿಂದೂ-ಮುಸ್ಲಿಂ ಏಕಮತ್ಯವಿಲ್ಲದೆ ಸ್ವರಾಜ್ಯವು ಸಿದ್ಧಿಸದು. ಈ ಏಕಮತ್ಯವು ಪ್ರೀತಿಗೌರವಗಳಿಂದ ಹುಟ್ಟಿದ್ದಾಗಿರಬೇಕು." ಎಂದು ಹೇಳಿದರು.

ಪಂಡಿತ ಮದನಮೋಹನ ಮಾಳವೀಯರವರು ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ "ಕಾಂಗ್ರೆಸ್ಸಿಗೆ ತೊಂದರೆಯಾಗುವುದು ನನಗಿಷ್ಟವಿಲ್ಲ; ಆದಾಗ್ಯೂ ನನ್ನ ಹೆಜ್ಜೆಯ ಹಿಂದೆ ಹಾಕುವುದನ್ನು ಬಿಟ್ಟರೆ ಬೇರೆ ಮಾರ್ಗವೇ ತೋರುವುದಿಲ್ಲ. ನಾನು ಮುಂದಿನ ಬೊಂಬಾಯಿ ಕಾಂಗ್ರೆಸ್ಸಿಗೆ ಹೋದಾಗ ನನ್ನ ಅಭಿಪ್ರಾಯಗಳನ್ನು ತೀರ್ಪಿಗಾಗಿ ಸಭೆಯ ಮುಂದಿಡುತ್ತೇನೆ" ಎಂದು ಹೇಳಿದರು.

ಗ್ರೆಸ್‌ಫೋರ್ಡ್‌ದಲ್ಲಿಯ ಖಣಿಯಲ್ಲಿ ಒಮ್ಮಿಂದೊಮ್ಮೆ ಸ್ಫೋಟವಾಗಿ ೨೬೦ ಜನರು ಸತ್ತಿರುವರೆಂದು ಜಾಹೀರ್ ಮಾಡುವದರಲ್ಲಿ ಬಂದಿದೆ. ಸ್ಫೋಟವಾಗಲು ಖಣಿಯಲ್ಲಿ ಕಂದೀಲನ್ನು ಉಪಯೋಗಿಸಿದ್ದೇ ಕಾರಣವೆಂದು ತಿಳಿಯುತ್ತದೆ. ಇನ್ನೂ ಬೆಂಕಿಯ ಕಿಡಿಗಳು ಹಾರುತ್ತಿದ್ದು, ಮೇಲಿಂದ ಮೇಲೆ ಸ್ಫೋಟಗಳಾದರೂ ಆಗುತ್ತಿರುವವು. ಈ ಹೊತ್ತು ಈ ಖಣಿಯಲ್ಲಿ ಕೆಲಸ ಮಾಡುವವರನ್ನು ಬಂದುಮಾಡುವದರಲ್ಲಿ ಬಂದಿರುವದು.

ಜರ್ಮನಿ ದೇಶಕ್ಕೆ ಸೇರಿದ ಸಾರ್ ಡಿಸ್ಟ್ರಿಕ್ಟು ಘೋರಯುದ್ಧವು ಕೊನೆಗಂಡ ಲಾಗಾಯಿತು ಜನಾಂಗಸಂಯೋಜನದ ಒಂದು ಸಮಿತಿಯ ಮೇಲ್ವಿಚಾರಣೆಯಲ್ಲಿ ಇರುವುದಲ್ಲದೆ ಅದರ ಆದಾಯವು ಫ್ರಾನ್ಸ್ ದೇಶದ ಸರಕಾರಕ್ಕೆ ಸಂದಾಯವಾಗುತ್ತಿದೆ. ಆ ಡಿಸ್ಟ್ರಿಕ್ಟಿನ ಪ್ರಜೆಗಳು ತಮ್ಮ ಡಿಸ್ಟ್ರಿಕ್ಟು ಇನ್ನು ಮುಂದೆಯೂ ಫ್ರಾನ್ಸ್ ಸರಕಾರದ ವಶದಲ್ಲಿಯೇ ಇರತಕ್ಕದ್ದೋ, ಅಥವಾ ಜರ್ಮನಿ ದೇಶಕ್ಕೆ ಸೇರತಕ್ಕದ್ದೋ ಎಂಬ ವಿಚಾರವನ್ನು ಇತ್ಯರ್ಥಪಡಿಸುವ ಬಗ್ಗೆ 1935 ನೇ ಇಸವಿ ಜನವರಿ ತಿಂಗಳಲ್ಲಿ ತಮ್ಮ ವೋಟುಗಳನ್ನು ಕೊಡಬೇಕೆಂದು ನಿಷ್ಕರ್ಷಿಸಿದ್ದಾರೆ. ಸಾರ್ ಡಿಸ್ಟ್ರಿಕ್ಟಿನವರು ಜರ್ಮನಿಯವರ ಪರ ವೋಟುಗಳನ್ನು ಕೊಡಲು ಜರ್ಮನಿ ಸರಕಾರದವರು ಅವರನ್ನು ಬಹಳಮಟ್ಟಿಗೆ ಪ್ರೇರೇಪಿಸುತ್ತಿದಾರೆ. ಆದರಿಂದ ಆ ಪ್ರಾಂತ್ಯದಲ್ಲಿ ಶಾಂತಿಸಮಾಧಾನಗಳಿಗೆ ಅಡಚಣೆಯುಂಟಾಗಿದೆ. ಜನಾಂಗಸಂಯೋಜನ ಮಂಡಲಿಯಲ್ಲಿ ಫ್ರಾನ್ಸ್ ಸರಕಾರದ ಪ್ರತಿನಿಧಿಯಾಗಿರುವ ಮಿ|| ಬಾರ್ಥು ಎಂಬವರು ಜೆನೀವಾ ನಗರದಲ್ಲಿ ಮೊನ್ನೆ ನಡೆದ ಸಂಯೋಜನ ಮಂಡಲಿಯ ಕೂಟದಲ್ಲಿ ಆ ಸಂಬಂಧವಾಗಿ ಮಾತನಾಡುತ್ತ ಈ ರೀತಿ ಹೇಳಿರುತ್ತಾರೆ—"ಜರ್ಮನಿ ದೇಶದವರು ಇದೇ ರೀತಿ ಇನ್ನು ಮುಂದೆಯೂ ಸಾರ್ ಪ್ರಾಂತ್ಯದ ಜನರನ್ನು ಪ್ರೇರೇಪಿಸುವದರಲ್ಲಿ ಉದ್ಯುಕ್ತರಾಗಿ ಶಾಂತಿ ಸಮಾಧಾನಗಳಿಗೆ ಲೋಪ ಉಂಟುಮಾಡಿದಲ್ಲಿ ಪುನಃ ಸಮಾಧಾನಗಳನ್ನು ನೆಲೆಗೊಳಿಸಲು ಸಾಕಾದಷ್ಟು ಪೋಲೀಸಿನವರ ಸಹಾಯವು ಒದಗದಿದ್ದ ಪಕ್ಷಕ್ಕೆ ಫ್ರಾನ್ಸ್ ಸರಕಾರದವರು ಆ ಪ್ರಾಂತ್ಯಕ್ಕೆ ಸೈನಿಕರನ್ನು ಕಳುಹಿಸಲು ಹಿಂಜರಿಯುವದಿಲ್ಲ.

ಒಂದು ವಾರದಲ್ಲಿ ೨೦೦೦ ಮರಣ.

ಮಧ್ಯಪ್ರಾಂತ್ಯದ ಅಮರಾವತಿ ಭಾಗದಲ್ಲಿ ಒಂದು ವಾರದೊಳಗೆ ೨೦೦೦ ಜನರು ಕಾಲರಾ ರೋಗದಿಂದ ಸತ್ತರು. ಆರೋಗ್ಯಖಾತೆಯವರು ಜನರಿಗೆ ಇನಾಕ್ಯುಲೇಷನ್ ಮಾಡುತ್ತಿದ್ದಾರೆ.

ಪೃಥ್ವೀಸಂಚಾರ.

ಶ್ರೀ ಸುಬೋಧರಂಜನದಾಸಗುಪ್ತನೆಂಬ ಬಂಗಾಲಿ ತರುಣನು ಪೃಥ್ವೀಸಂಚಾರಕ್ಕಾಗಿ ಕಾಲುನಡಿಗೆಯಿಂದ ಹೊರಟಿದ್ದಾನೆ. ಎಪ್ರಿಲ್ ೯ನೆಯ ತಾರೀಖಿನಿಂದ ತನ್ನ ಪ್ರವಾಸವನ್ನು ಪ್ರಾರಂಭಿಸಿದ್ದಾನೆ.

ಅಮೇರಿಕೆಯಲ್ಲಿ $2\frac{1}{2}$ ಲಕ್ಷ ಮೋಟಾರುಗಳ ಕಳವು.

ಅಮೇರಿಕೆಯಲ್ಲಿ ಕಳೆದ ೧ ವರ್ಷದಲ್ಲಿ ೨೫೦ ಸಾವಿರ ಮೋಟಾರುಗಳು ಕದಿಯಲ್ಪಟ್ಟು ಬೇರೆ ಕಡೆಗೆ ಕಳುಹಿಸಲ್ಪಟ್ಟಿವೆ. ಇದರಿಂದ ವಿಮಾ ಕಂಪನಿಗಳು ೧೯ ಕೋಟಿ ಹಣವನ್ನು ತೆತ್ತಬೇಕಾಯಿತು.

ಬಾಬು ರಾಜೇಂದ್ರ ಪ್ರಸಾದರು ಕಾಂಗ್ರೆಸ್ಸಿನ ಅಧ್ಯಕ್ಷರಾಗುವರು.

ಈ ಸಾರೆ ಹದಿನೇಳು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಬಾಬೂ ರಾಜೇಂದ್ರಪ್ರಸಾದರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿವೆ. ಉಳಿದ ನಾಲ್ಕು ಪ್ರಾಂತಗಳಾದರೂ ಅವರ ಹೆಸರನ್ನೇ ಸೂಚಿಸುವವೆಂದು ನಿರೀಕ್ಷಿಸಲಾಗಿದೆ. ಆದುದರಿಂದ ವರ್ಕಿಂಗ್ ಕಮಿಟಿಯ ಅಪೇಕ್ಷೆಯ ಮೇರೆಗೆ ಬಾಬೂ ರಾಜೇಂದ್ರಪ್ರಸಾದರು ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು.

ಮಾದಕಪದಾರ್ಥಗಳನ್ನು ಸೇವಿಸುವವರಿಗೆ ಮರಣಶಿಕ್ಷೆ.

ಮಾದಕ ಪದಾರ್ಥಗಳಾದ ಅಫು, ಗಾಂಜೆ ಇವುಗಳ ಸೇವನೆ ಮಾಡುವವರಾಗಲಿ ಅಥವಾ ಇವುಗಳ ವ್ಯವಹಾರಮಾಡುವವರಾಗಲಿ ಯಾರಾದರೂ ಕಂಡುಬಂದರೆ ಅವರ ತಲೆ ಒಡಿಸಲಾಗುವದೆಂದು ಉಗ್ರ ಕಾಯದೆಯೊಂದು ಚೀನದೇಶದಲ್ಲಿ ಪಾಸಾಗಿದೆ. ಮೊದಲು ಇಂಥ ಚಟಹತ್ತಿದವರನ್ನು ಸುಧಾರಿಸುವುದಕ್ಕಾಗಿ ಆಸ್ಪತ್ರೆಗೆ ಕಳಿಸಿ ಚಟ ಬಿಡದಿದ್ದರೆ ಅವರನ್ನು ಗುಂಡುಹಾರಿಸಿ ಕೊಲ್ಲುವರು. ಸದ್ಯಃ ಈ ಕಾಯದೆಯು ಅಮಲಿನಲ್ಲಿದೆ.

ಚದುರಂಗದ ಆಟದಲ್ಲಿ ಕೊಲೆ.

ಕೇಬಲಪುರಕ್ಕೆ ಸಮೀಪದಲ್ಲಿರುವ ಗಾಝಿ ಮಿನಾರಾ ಎಂಬ ಹಳ್ಳಿಯಲ್ಲಿ ಕೆಲವು ತರುಣರು ಚದುರಂಗ ಆಡುತ್ತ ಕುಳಿತಿದ್ದರು. ಆಗ ಆಟದಲ್ಲಿ ಯಾವುದೋ ಮಾತಿನ ವಿಷಯಕ್ಕೆ ಜಗಳವೆದ್ದು ಜಗಳವು ವಿಕೋಪಕ್ಕೆ ಹೋಯಿತು. ಓರ್ವ ಶೀಖ್ಖ ತರುಣನು ಆಟವನ್ನು ಬಿಟ್ಟು ಒಮ್ಮೆಲೇ ಎದ್ದು ನಿಂತು ತನ್ನೊಂದಿಗೆ ಆಡುತ್ತಿದ್ದ ಮತ್ತೊಬ್ಬ ತರುಣನಿಗೆ ಆಯಕಟ್ಟಿನ ಸ್ಥಳದಲ್ಲಿ ಜೋರಿನಿಂದ ಒದ್ದನು. ಆ ಹುಡುಗನು ತತ್‌ಕ್ಷಣವೇ ಪ್ರಜ್ಞೆತಪ್ಪಿ ಬಿದ್ದು ಮರಣಹೊಂದಿದನು. ಸದ್ಯ ತರುಣನನ್ನು ಸೆರೆಹಿಡಿದಿದ್ದಾರೆ. ಸತ್ತವನು ಸೀಖನ ಅಣ್ಣನ ಮಗನಂತೆ!

ಹಾವುಕಡಿತಕ್ಕೆ ವಿಚಿತ್ರ ಔಷಧ!

ಜುನಾಗಡ ಸಂಸ್ಥಾನದ ಘೋರಾಪ ಎಂಬಲ್ಲಿ ಕೂಲಿಯವನೊಬ್ಬನಿಗೆ ಹಾವು ಕಚ್ಚಿತು. ಅವನು ಎತ್ತಿನ ಗಾಡಿಯೊಂದರಲ್ಲಿ ಆಸ್ಪತ್ರೆಗೆ ಒಯ್ಯಲ್ಪಡುವಾಗ ೧೨ ವರ್ಷದ ಹುಡುಗನೊಬ್ಬನು ತಾನು ಗುಣಪಡಿಸುವೆನೆಂದು ಹೇಳಿ ತನ್ನ ಕುತ್ತಿಗೆಗೊಂದು ಗಾಯಮಾಡಿ ಅದರಿಂದ ಬಂದ ರಕ್ತವನ್ನು ಕೂಲಿಯವನ ಮೇಲೆ ಚಿಮಕಿಸಿದನು. ಕೂಡಲೇ ಕೂಲಿಯವನಿಗೆ ಎಚ್ಚರವಾಯಿತು. ಅನಂತರ ಆ ಹುಡುಗನು ತನ್ನ ಗಾಯಕ್ಕೆ ಉಗುಳನ್ನು ಹಚ್ಚಿ ರಕ್ತನಿಲ್ಲುವಂತೆ ಮಾಡಿದನು. ಸರ್ಪಕಡಿದವನ ಗಾಯವನ್ನು ಕಾಯಿಸಿದ ಕಬ್ಬಿಣದಿಂದ ಸುಟ್ಟು ಸಂಪೂರ್ಣ ಗುಣಗೊಳಿಸಿದನಂತೆ!

ಮೂರ್ಛೆಗೊಳಿಸುವ ಹೊಸ ಶೋಧ.

ಜರ್ಮನಿಯಲ್ಲಿ ಕೇಲಹಾಸೆ ಎಂಬ ಸಂಶೋಧಕನು ಅರ್ಧ ಮೈಲು ಅಂತರದ ಮೇಲಿದ್ದ ಸಜೀವ ಪ್ರಾಣಿಯನ್ನು ಮೂರ್ಛೆಗೊಳಿಸುವ ಒಂದು ಬಂದೂಕವನ್ನು ರಚಿಸಿದ್ದಾನೆ. ಈ ಬಂದೂಕಿನಲ್ಲಿ ಗುಂಡಾಗಲಿ ಮದ್ದಾಗಲಿ ಇರುವುದಿಲ್ಲ. ೧೦ ಲಕ್ಷ ಕ್ಯಾಂಡಲ್ ಶಕ್ತಿಯ ಪ್ರಕಾಶವು ಮಾತ್ರ ಬೀಳುತ್ತದೆ. ಈ ಭಯಂಕರವಾದ ಪ್ರಕಾಶವನ್ನು ಜೀವವಿದ್ದ ಪ್ರಾಣಿಯಮೇಲೆ ಕೆಡವಿದರೆ ಆ ಪ್ರಾಣಿಯು ತತ್‌ಕ್ಷಣವೇ ನಿಶ್ಚೇತನವಾಗಿ ನೆಲಕ್ಕುರುಳುವದಂತೆ! ಯುದ್ಧದ ಸಮಯದಲ್ಲಿ ನಾವಿಕರು, ವೈಮಾನಿಕರು, ಕಾಲಾಳುಗಳು ಇದರಿಂದ ವೈರಿಗಳನ್ನು ಸಹಜವಾಗಿ ನಿರ್ಬಲರನ್ನಾಗಿ ಮಾಡಬಹುದಾಗಿದೆ.

ಬ್ರಿಟಿಷ್ ವಿಮಾನವು ಸಮುದ್ರದಲ್ಲಿ ಬಿದ್ದಿತು.

ಇಂಗ್ಲಿಷ್ ಕಡಲ್ ಕಾಲುವೆಯಲ್ಲಿ ವಿಮಾನವು ಬಿದ್ದು ವೈಮಾನಿಕನೂ ಸೇರಿ ಏಳು ಜನರು ಮರಣಹೊಂದಿದರು. ತೀರದಿಂದ ೩ ಮೈಲುಗಳ ದೂರದಲ್ಲಿ ವಿಮಾನವು ಸಮುದ್ರಕ್ಕೆ ಬಿತ್ತು. ಬೀಳುತ್ತಿದ್ದ ವಿಮಾನದಿಂದ ಕಳುಹಿಸಲ್ಪಟ್ಟ ವಾಯುವಾರ್ತೆಯು ಸರಿಯಾಗಿ ತಲುಪಲಿಲ್ಲವಾದುದರಿಂದ ವಿಮಾನಕ್ಕೆ ಸಹಾಯವು ದೊರೆಯಲಿಲ್ಲ. ಬೇರೆ ಹಡಗಿನವರು ಸಮುದ್ರದಲ್ಲಿ ಸತ್ತುಬಿದ್ದ ೫ ಹೆಣಗಳನ್ನು ತೆಗೆದರು. ವಿಮಾನವು ಹಿಲ್‌ಮ್ಯಾನ್ಸ್‌ರವರಿಗೆ ಸೇರಿದ್ದಿತೆಂದು ಗೊತ್ತಾಗಿದೆ. ಈ ವಿಮಾನವು ಬೆಳಗಿನ ಮಂಜಿನಿಂದ ದಾರಿಯು ಕಾಣದೆ ಸಮುದ್ರದಲ್ಲಿ ಬಿದ್ದಿತೆಂದೂ, ವಿಮಾನದಲ್ಲಿ ೩ ಜನರು ಬ್ರಿಟಿಷರೂ, ಮೂವರು ಫ್ರೆಂಚರೂ, ಒಬ್ಬ ಅಮೇರಿಕ ದೇಶೀಯನೂ ಪ್ರಯಾಣಮಾಡುತ್ತಿದ್ದರಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶೌಚವಿಧಿ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ, ಬೆಂಗಳೂರು.

(ಹಿಂದಿನಿಂದ ಮುಂದೆ ಸಾಗಿದುದು.)

ಪ್ರಾತಃಕಾಲದಲ್ಲಿ ಎದ್ದನಂತರ ಸ್ವಲ್ಪಹೊತ್ತಿನವರೆಗೆ ಶುದ್ಧ ವಾಯುವಿನ ಸಂಚಾರವುಳ್ಳ ಪ್ರದೇಶದಲ್ಲಿ ತಿರುಗಾಡಿ ಅನಂತರ ಮಲವಿಸರ್ಜನೆಯನ್ನು ಮಾಡುವುದುತ್ತಮವಾದುದು. ಹೀಗೆ ತಿರುಗಾಡುವುದರಿಂದ ಅನಾಯಾಸವಾಗಿ ಮಲವಿಸರ್ಜನೆಯಾಗುವುದು. ಎದ್ದಕೂಡಲೆ ಶೌಚಾಲಯದ ಕಡೆಗೋಡುವುದುಚಿತವಲ್ಲ. ಮಲದ ವೇಗವಿದ್ದರೆ ಮಾತ್ರ ನೂರಾರು ಕೆಲಸಗಳನ್ನಾದರೂ ಬಿಟ್ಟು ಮಲದ ವೇಗವನ್ನು ನಿವಾರಿಸಿಕೊಳ್ಳುವುದು ಪ್ರಥಮಕಾರ್ಯವಾಗಿರುವುದಾಗಿದೆ. ಮಲಮೂತ್ರಗಳ ವೇಗವನ್ನು ತಡೆಯುವುದು ಹೆದೆಯನ್ನೆತ್ತಿಕೊಂಡು ವೇಗದಿಂದೋಡುತ್ತಿರುವ ಕೃಷ್ಣಸರ್ಪದ ಗತಿಯ ವೇಗವನ್ನು ತಡೆಯುವುದರಿಂದ ಯಾವ ಭಯಂಕರ ಪರಿಣಾಮವುಂಟಾಗುವುದೋ ಅದಕ್ಕಿಂತಲೂ ಹೆಚ್ಚಿನದಾದ ಭಯಂಕರ ಪರಿಸ್ಥಿತಿಯನ್ನುಂಟುಮಾಡುವುದಾಗಿದೆ. ಮಲಮೂತ್ರಗಳ ವೇಗವನ್ನು ತಡೆದರೆ ಹೊಟ್ಟೆಯು ಉಬ್ಬಿಕೊಳ್ಳುವುದು, ಹೊಟ್ಟೆನೋವು, ಗುದಸ್ಥಾನದಲ್ಲಿ ಮತ್ತು ಮೂತ್ರಾಶಯದಲ್ಲಿ ಕತ್ತರಿಯಿಂದ ಕತ್ತರಿಸಿದಂತಾಗುವುದು, ದುರ್ಗಂಧಯುಕ್ತಗಳಾದ ತೇಗುಗಳು ಬರುವುದು, ಉರಿಮೂತ್ರ, ತಲೆನೋವು ಮೊದಲಾದ ವ್ಯಾಧಿಗಳಾದ ಉಪದ್ರವಗಳು ಸಂಭವಿಸುವುವು.

ಸ್ವಾಭಾವಿಕವಾಗಿ ತೋರುವ ಮಲ, ಮೂತ್ರ, ಕೆಮ್ಮು, ತೇಗು, ಸೀನು, ಅಧೋವಾಯು, ಆಕಳಿಕೆ, ಹಸಿವು, ನೀರಡಿಕೆ, ಕಣ್ಣೀರು, ನಿದ್ರೆ, ಪರಿಶ್ರಮದಿಂದುಂಟಾದ ನಿಶ್ವಾಸ, ಮುಂತಾದುವುಗಳ ವೇಗವನ್ನು ತಡೆಯುವುದು ನಾನಾ ರೋಗಗಳನ್ನುಂಟುಮಾಡುವುದೆಂದು ಚರಕಮಹರ್ಷಿಯು,

ನ ವೇಗಾನ್ ಧಾರಯೇದ್ಧೀಮಾನ್ ಜಾತಾನ್ ಮೂತ್ರ ಪುರೀಷಯೋಃ
ನ ರೇತಸೋ ನ ವಾತಸ್ಯ ನ ಚ್ಛರ್ದ್ಯಾಃ ಕ್ಷವಥೋರ್ನ ಚ ||
ನೋದ್ಗಾರಸ್ಯ ನ ಜೃಂಭಾಯಾ ನ ವೇಗಾನ್ ಕ್ಷುತ್ಪಿಪಾಸಯೋಃ||
ನ ಬಾಷ್ಪಸ್ಯ ನ ನಿದ್ರಾಯಾ ನಿಶ್ವಾಸಸ್ಯ ಶ್ರಮೇಣ ಚ
ಏತಾನ್ ಧಾರಯತೋ ಜಾತಾನ್ ವೇಗಾನ್ ರೋಗಾ ಭವಂತಿ ಹಿ ||
ಚ. ಸೂ. ಅ. ೭

ಎಂಬುದಾಗಿ ಹೇಳಿರುವನು.

ಯುಕ್ತಾಯುಕ್ತ ವಿಚಾರಪರನಾದ ಮನುಷ್ಯನು ಈ ವೇಗಗಳನ್ನು ತಡೆಯದೆ ಲೋಕದಲ್ಲಿ ಮತ್ತು ಸಮಾಜದಲ್ಲಿ ನಾನಾವಿಧಗಳಾದ ಅನರ್ಥಗಳನ್ನುಂಟುಮಾಡುವ ಮಾನಸಿಕ, ವಾಚಿಕ, ಕಾಯಿಕಗಳಾದ ದುಷ್ಕರ್ಮಗಳ ವೇಗವನ್ನು ತಡೆಯುವುದೇ ಇಹಪರಸಾಧಕವಾದ ಪರಮಕರ್ತವ್ಯವಾಗಿರುವುದೆಂದು ಚರಕಸಂಹಿತೆಯ 'ನ ವೇಗಾನ್ ಧಾರಣೀಯ' ಎಂಬ ಸೂತ್ರಸ್ಥಾನದ ಏಳನೆಯ ಅಧ್ಯಾಯದಲ್ಲಿ,

ಇಮಾಂಸ್ತು ಧಾರಯೇದ್ವೇಗಾನ್ ಹಿತೈಷೀ ಪ್ರೇತ್ಯ ಚೇಹ ಚ
ಸಾಹಸಾನಾಮಶಸ್ತಾನಾಂ ಮನೋವಾಕ್ಕಾಯಕರ್ಮಣಾಂ ||

ಎಂದುಪದೇಶಿಸುತ್ತಿರುವುದು. ಮತ್ತು ಇದೇ ಅಧ್ಯಾಯದಲ್ಲಿನ ಮನೋವಾಕ್ಕಾಯ ಕರ್ಮಗಳೆಂಬ ತ್ರಿಕರಣಗಳ ದುಷ್ಕಾರ್ಯ ವೇಗವರ್ಜನೆಯು ಅತಿ ಮನೋಹರವೂ ಸನ್ಮಾರ್ಗದರ್ಶಕವೂ ಆಗಿರುವುದರಿಂದ ಇಲ್ಲಿ ಅದನ್ನುದಾಹರಿಸುವುದನುಚಿತವಾಗಲಾರದು.

ಲೋಭಶೋಕಭಯಕ್ರೋಧಮಾನವೇಗಾನ್ ವಿಧಾರಯೇತ್
ನೈರ್ಲಜ್ಜ್ಯೇರ್ಷ್ಯಾತಿರಾಗಾಣಾಮಭಿಧ್ಯಾಯಾಶ್ಚ ಬುದ್ಧಿಮಾನ್ ||

ಲೋಭ, ಶೋಕ, ಭಯ, ಕ್ರೋಧ, ಮಾನ (ತನ್ನನ್ನು ತಾನೇ ಮಹಾಪುರುಷನೆಂದು ತಿಳಿದುಕೊಳ್ಳುವುದು) ನಿರ್ಲಜ್ಜತೆ (ಕೆಟ್ಟ ಕೆಲಸವನ್ನು ಜನರಿಗೆ ತೋರಗೊಡದಂತೆ ಮುಚ್ಚಿಟ್ಟುಕೊಳ್ಳುವುದು) ಈರ್ಷ್ಯೆ (ಪರರ ಅಭ್ಯುದಯವನ್ನು ನೋಡಿ ಸಹಿಸದಿರುವಿಕೆ) ಅತಿರಾಗ (ವಿಷಯಗಳಲ್ಲಿ ಮಿತಿಮೀರಿದ ಆಸಕ್ತಿ) ಅಭಿಧ್ಯೆ (ಪರರ ದ್ರವ್ಯವನ್ನು ಹರಿಸಬೇಕೆಂಬ ದುರಾಶೆ) ಇವೇ ಮೊದಲಾದ ಮಾನಸಿಕ ದುರ್ಗುಣಗಳ ವೇಗವನ್ನು ತಡೆಯಬೇಕು.

ಪರುಷಸ್ಯಾತಿಮಾತ್ರಸ್ಯ ಸೂಚಕಸ್ಯಾನೃತಸ್ಯ ಚ |
ವಾಕ್ಯಸ್ಯಾಕಾಲಯುಕ್ತಸ್ಯ ಧಾರಯೇದ್ವೇಗಮುತ್ಥಿತಂ ||

ಪರುಷಭಾಷಣ (ಪರರ ಮನಸ್ಸನ್ನು ನೋಯಿಸುವಂತಹ ಬಿರುಸುವಾತು), ಅತಿಮಾತ್ರ ಭಾಷಣ (ವ್ಯರ್ಥವಾಗಿ ಬಹಳ ಮಾತಾಡುವುದು), ಸೂಚಕಭಾಷಣ (ಇತರರಿಗೆ ಹಾನಿಯನ್ನುಂಟುಮಾಡುವ ಮಾತು), ಅಸತ್ಯಭಾಷಣ, ಅಪ್ರಸ್ತುತ ಮತ್ತು ಅಸಂಬದ್ಧವಾಗಿರುವ ಭಾಷಣ ಇವೇ ಮುಂತಾದ ವಾಚಿಕ ದುರ್ವ್ಯಾಪಾರಗಳ ವೇಗವನ್ನು ತಡೆಯಬೇಕು.

ದೇಹಪ್ರವೃತ್ತಿರ್ಯಾಕಾಚಿದ್ವಿದ್ಯತೇ ಪರಪೀಡಯಾ |
ಸ್ತ್ರೀಭೋಗಸ್ತೇಯಹಿಂಸಾದ್ಯಾ ತಸ್ಯಾ ವೇಗಾನ್ ವಿಧಾರಯೇತ್ ||

ಪರಸ್ತ್ರೀಸಂಪರ್ಕ, ಕಳ್ಳತನ, ಪ್ರಾಣಿಹಿಂಸೆ, ಮೊದಲಾದ ಶಾರೀರಕ ದುರ್ವ್ಯಾಪಾರಗಳ ವೇಗವನ್ನೂ ಮತ್ತು ಪರರಿಗೆ ಹಿಂಸೆಯನ್ನುಂಟುಮಾಡುವ ಸಕಲವಿಧ ಶಾರೀರಕ ಚೇಷ್ಟೆಗಳ ವೇಗವನ್ನೂ ತಡೆಯಬೇಕು.

ನಮ್ಮ ಭಾರತದೇಶವಾಸಿಗಳಲ್ಲಿ ನೂರಕ್ಕೆ ೯೦ ಜನಗಳು ಆಲಸ್ಯದಿಂದಲೋ, ಇತರ ಕಾರ್ಯಗಳ ಗದ್ದಲದಲ್ಲಿ ತೊಡಗುವುದರಿಂದಲೋ, ನಾಚಿಕೆಯಿಂದಲೋ, ಉಚಿತಸ್ಥಾನದ ಅಭಾವದಿಂದಲೋ ಸ್ವಾಭಾವಿಕವಾಗಿ ತೋರಿಬರುವ ಮಲಮೂತ್ರಾದಿಗಳ ವೇಗಗಳನ್ನು ತಡೆಯುತ್ತ ನಾನಾರೋಗಗಳಿಗೀಡಾಗುತ್ತಿರುವುದನ್ನು ಪ್ರತಿದಿನಗಳಲ್ಲಿ ನೋಡುತ್ತಲೂ, ಕೇಳುತ್ತಲೂ ಇರುವುದಾಗಿದೆ. ಅದರಲ್ಲಿಯೂ ಈ ವೇಗಗಳ ಅವರೋಧದಿಂದುಂಟಾಗುವ ಸಕಲರೋಗಗಳ ಜನ್ಮಸ್ಥಾನವಾಗಿರುವ ಮಲಬದ್ಧತೆಯೆಂಬ ಮಹಾವ್ಯಾಧಿಯಿಂದ ನರಳುತ್ತಿರುವವರನ್ನೇ ವಿಶೇಷವಾಗಿ ನೋಡುತ್ತಿರುವುದಾಗಿದೆ. ಈ ಮಲಬದ್ಧತೆಗೆ ಮಲದ ವೇಗವನ್ನು ತಡೆಯುವುದೇ ಕಾರಣವಲ್ಲದೆ ಇನ್ನೂ ಅನೇಕಕಾರಣಗಳಿರುವುವು. ಅಕಾಲಭೋಜನ, ಮೊದಲನೆಯ ಆಹಾರವು ಪಚನವಾಗದಿರುವಾಗ ನಾಲಿಗೆಯ ರುಚಿಗೆ ವಶರಾಗಿ ಪುನಃ ಉಣ್ಣುವುದೂ, ಇವೇ ಮುಂತಾದ ಕಾರಣಗಳಿಂದ ಮಲಬದ್ಧತೆಯುಂಟಾಗುವುದು. ನಾನಾವಿಧ ವಿರುದ್ಧಾಹಾರ ಸೇವನೆಯಿಂದ ಜಠರಾಗ್ನಿಯು ಮಂದವಾಗಿ ಅಜೀರ್ಣವು ಬೆಳೆದು ಅಪಚನಶೀಲವಾದ ಆಹಾರವು ಹೊಟ್ಟೆಯಲ್ಲಿಯೇ ಕೊಳೆಯುತ್ತ ಮಲಮೂತ್ರಗಳ ಹೊರಗೆಸೆಯುವ ಅಧೋವಾಯುವಿನ ಗತಿಯು ಊರ್ಧ್ವಮುಖವಾಗಿ ಮಲಮೂತ್ರಗಳ ಸ್ವಾಭಾವಿಕಕಾರ್ಯವು ನಿಂತುಹೋಗುವುದು.

ಮಲಬದ್ಧತೆಯಿಂದ ಜ್ಞಾನತಂತುಗಳ ಶಕ್ತಿಯು ನಷ್ಟವಾಗಿ ಸ್ಮರಣಶಕ್ತಿಯು ಲೋಪಗೊಳ್ಳುವುದು ಮಲಬಂಧವುಂಟಾದ ಮೇಲೆ ಮಲವಿಸರ್ಜನೆಯ ಸಮಯದಲ್ಲಿ ಗುದಸ್ಥಾನದ ಮೇಲೆ ವಿಶೇಷಭಾರವು ಬೀಳುವುದರಿಂದ ಅದರ ಸ್ವಾಭಾವಿಕವಾದ ಸಂಕೋಚ (ಮುಚ್ಚಿಕೊಳ್ಳುವುದು) ವಿಕಾಸ (ತೆರೆಯುವುದು) ಶಕ್ತಿಯು ಕಷ್ಟವಾಗಿ ದಿನಕ್ರಮದಿಂದ ಮೂಲವ್ಯಾಧಿಯೆಂಬ ರಾಜರೋಗವು ತಲೆದೋರುವುದು. ಮಲಬದ್ಧತೆಯುಳ್ಳವರಿಗೆ ಎಂದಾದರೊಂದುದಿನ ಅಕಸ್ಮಾತ್ತಾಗಿ ಸರಿಯಾದ ಮಲವಿಸರ್ಜನೆಯಾದರೆ ಆ ದಿನದಲ್ಲಿ ಸ್ವರ್ಗಸುಖವನ್ನನುಭವಿಸಿದಷ್ಟು ಆನಂದಪಡುವರು.

ಮಲಬಂಧವಾದಾಗ ಮಲತ್ಯಾಗಸಮಯದಲ್ಲಿ ವಿಶೇಷವಾಗಿ ತಿಣುಕಬೇಕಾಗುವುದರಿಂದ ಮಲವಾಹಕಯಂತ್ರ (ಪಕ್ವಾಶಯ) ದಲ್ಲಿರುವ ಸೂಕ್ಷ್ಮವಾದ ನರಗಳು ಶಕ್ತಿಹೀನಗಳಾಗುತ್ತವೆ. ಈ ನರಗಳು ದೃಢಗಳಾಗಿದ್ದರೇ ಮಲಾಶಯದ ಕಾರ್ಯವು ಸುಲಭವಾಗಿ ಜರುಗುವುದು. ಈ ಯಂತ್ರದ ಕಾರ್ಯವು ಶಿಥಿಲವಾಗಲು ಮಲಬಂಧವು ಕಾರಣವಾಗಿದೆ. ಮಲಬಂಧಕ್ಕೆ ಅಜೀರ್ಣವು ಕಾರಣವಾಗಿದೆ. ಅಜೀರ್ಣಕ್ಕೆ ಅನುಚಿತಾಹಾರವು ಕಾರಣವಾಗಿದೆ. ಹೀಗೆ ಒಂದಕ್ಕೊಂದು ಕಾರಣವಾಗಿ ಕಡೆಗೆ ವಿರುದ್ಧಾಹಾರ ವಿಹಾರರೂಪವಾದ ಕಾರಣದಲ್ಲಿಯೇ ಮಲಬದ್ಧವೆಂಬ ಕಾರ್ಯವು ವಿಶ್ರಾಂತಿಯನ್ನು ಹೊಂದುತ್ತದೆ.

ಯಾರಿಗೆ ಮಲವಿಸರ್ಜನೆಯು ನಿಯಮಿತಸಮಯಕ್ಕೆ ಅನಾಯಾಸವಾಗಿ ಆಗುವುದಿಲ್ಲವೋ ಅವರು ನಿತ್ಯರೋಗಿಗಳಾಗುವರು. ರೋಗವೆಂಬುದು ಅವರ ಬೆನ್ನಿನ ಹಿಂದೆಯೇ ಇರುತ್ತದೆ. ಅನೇಕರು ಈ ಅಸಹ್ಯರೋಗನಿವಾರಣೆಗಾಗಿ ಪ್ರತಿದಿನದಲ್ಲಿ ರೇಚಕ ಪಾಚಕ ಚೂರ್ಣ ಮತ್ತು ಗುಳಿಗೆಗಳ ಸೇವನೆಯನ್ನು ನಿತ್ಯಕರ್ಮದಂತಾಚರಿಸುತ್ತಿರುವರು. ಔಷಧಸೇವನೆಯನ್ನು ಬಿಟ್ಟರೆ ಮಲವಿಸರ್ಜನೆಯ ಕಾರ್ಯವೇ ನಿಂತುಹೋಗುವುದರಿಂದ ನಿರುಪಾಯರಾಗಿ ಔಷಧವನ್ನು ಮರಣಪರ್ಯಂತವಾಗಿ ತಮ್ಮ ಪ್ರಿಯಮಿತ್ರನನ್ನಾಗಿ ಮಾಡಿಕೊಳ್ಳುವರು. ಔಷಧಬಲದಿಂದಾಗುವ ಮಲತ್ಯಾಗವು ಕ್ಷಣಿಕಸುಖವನ್ನೀಯುವುದಾದರೂ ದಿನಕ್ರಮದಿಂದ ಶರೀರವು ಅಪ್ರಾಕೃತಿಕಗಳಾದ ಉಪಾಯಗಳಿಂದ ಶಿಥಿಲವಾಗಿ ಹೋಗುವುದು ಸಹಜವಾಗಿದೆ. ಆದುದರಿಂದ ವಿವೇಕಮತಿಗಳು ಮಲಬದ್ಧತೆಯನ್ನು ಪಥ್ಯದ ಆಹಾರವಿಹಾರಗಳಿಂದಲೇ ನಿವಾರಿಸಿಕೊಳ್ಳುವುದು ಯುಕ್ತವಾಗಿದೆ.

ಮಲಬಂಧವುಳ್ಳವರು ನಿತ್ಯದಲ್ಲಿ ಆರುದಿನದ ಹಳೆಯ ಅಕ್ಕಿ, ಹಳೆಯ ತೊಗರಿಯಬೇಳೆ, ಹೆಸರಕಾಳು, ಹಳೆಯ ಗೋಧಿ ಮುಂತಾದ ಹಳೆಯ ಧಾನ್ಯಗಳನ್ನೂ ಚಕ್ಕೋತ, ಕಾಕಿ, ಬಸಳೆ, ಕಿರುಕಸಾಲೆ, ಪುಳ್ಳಂಪುರಿಕೆ, ಅಗಸೆ, ಮುಗ್ಗಿ ಮೊದಲಾದ ಸೊಪ್ಪುಗಳನ್ನೂ ಬೀಜವಿಲ್ಲದ ಎಳೆಯ ಬದನೆಯಕಾಯಿ, ತುಪ್ಪ ಹೀರೆಯಕಾಯಿ, ಎಳೆಯ ಮೂಲಂಗಿ, ಬಾಳೆಯ ಹೂವು, ಹಾಗಲಕಾಯಿ, ಹಸಿಯ ಕೊಬರಿ, ದ್ರಾಕ್ಷಿ, ಅಂಜೂರ, ದಾಳಿಂಬರೆಯಹಣ್ಣು, ಹಸಿಯ ಶುಂಠಿ, ಜೀರಿಗೆ, ಸೈಂಧವಲವಣಗಳಿಂದ ಹದಮಾಡಿದ ಮಜ್ಜಿಗೆ ಮೊದಲಾದ ಪಾಚಕ ಮತ್ತು ಮಲಶೋಧಕ ವಸ್ತುಗಳನ್ನೂ ಸೇವಿಸಬೇಕು. ಕಾಳುಗಳಿಗಿಂತಲೂ ವಿಶೇಷವಾಗಿ ಕಾಯಿಪಲ್ಯಗಳನ್ನು ಪಯೋಗಿಸುವುದುತ್ತಮವಾದುದು. ತುಪ್ಪವನ್ನು ಕಡಿಮೆಯಾಗಿ ಸೇವಿಸುವುದೂ ಹಣ್ಣುಗಳನ್ನು ವಿಶೇಷವಾಗಿ ಸೇವಿಸುವುದೂ ಹಿತಕರವಾಗಿರುತ್ತದೆ. ಮಲಬದ್ಧತೆಯ ಸಮಯದಲ್ಲಿ ವಾಯುವು ಕುಪಿತವಾಗಿರುವುದರಿಂದ ವಾತನಾಶಕ ಪದಾರ್ಥಗಳನ್ನೇ ಸೇವಿಸಬೇಕು.

ಪ್ರತಿದಿನದಲ್ಲಿ ತಮ್ಮ ತಮ್ಮ ಶರೀರಕ್ಕೆ ಅನುಗುಣವಾದ ವ್ಯಾಯಾಮವನ್ನು ಮಾಡಲೇಬೇಕು. ಹೀಗೆ ಸ್ವಾಭಾವಿಕಗಳಾದ ಉಪಾಯಗಳಿಂದ ಕೆಲವು ದಿನಗಳೊಳಗಾಗಿ ಮಲಬದ್ಧತೆಯು ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ. ಮಲಬಂಧದಿಂದತಿಶಯವಾದ ತೊಂದರೆಯುಂಟಾದರೆ ಮೃದುವಿರೇಚನವನ್ನು ತೆಗೆದುಕೊಳ್ಳುವುದು ಹಾನಿಕರವಲ್ಲ. ಇಂತಹ ಸಮಯದಲ್ಲಿ ತೀವ್ರವಾದ ವಿರೇಚನವನ್ನು ತೆಗೆದುಕೊಳ್ಳುವುದು ಅತ್ಯಂತ ಹಾನಿಕರವಾದುದು.

ಮೃದುವಿರೇಚನವನ್ನು ಮಾಡಿಸುವುದರಲ್ಲಿ ಅರಳೆಣ್ಣೆಯು ಅತ್ಯುತ್ತಮವಾದುದು ಅಥವಾ ಈ ಕೆಳಗೆ ಕಾಣಿಸಿರುವ ಚೂರ್ಣವನ್ನಾದರೂ ಸೇವಿಸಬಹುದು.

ಸೊನಾಮುಖಿ, ಅಳಲೆಯಕಾಯಿಯ ಸಿಪ್ಪೆ, ಸೋಂಪು, ಶುಂಠಿ, ಸೈಂಧವಲವಣ ಇವುಗಳನ್ನು ಸಮಭಾಗದಿಂದ ಸೇರಿಸಿ ಕುಟ್ಟಿ ಪುಡಿಮಾಡಿ ಬಟ್ಟೆಯಿಂದ ಶೋಧಿಸಿಕೊಳ್ಳಬೇಕು. ಸಂದರ್ಭಾನುಸಾರವಾಗಿ ನಾಲ್ಕಾಣೆಯ ತೂಕದಿಂದ ಎಂಟಾಣೆಯ ತೂಕದವರೆಗೆ ಅವಶ್ಯಾನುಸಾರವಾಗಿ ಈ ಚೂರ್ಣವನ್ನು ರಾತ್ರಿಯಲ್ಲಿ ಮಲಗುವಾಗ ಸೇವಿಸಿ ಮೇಲೆ ಸ್ವಲ್ಪ ಬಿಸಿನೀರನ್ನು ಕುಡಿಯಬೇಕು.

ಒಂದುವೇಳೆ ಅತ್ಯುಷ್ಣಪ್ರಕೃತಿಯುವರಿಗೆ ಇದರಿಂದ ವಿರೇಚನವಾಗದಿದ್ದರೆ ಮೇಲೆ ಬರೆದಿರುವ ಪ್ರಮಾಣದಷ್ಟು ಚೂರ್ಣ, ೧೦-೧೫ ಕರಿಯ ದ್ರಾಕ್ಷಿ (ಬೀಜವನ್ನು ತೆಗೆದು) ೨ ತೊಲೆ ಗುಲ್ಕನ್ ಇವುಗಳನ್ನು ಒಂದು ಪಾವು ನೀರಿನೊಡನೆ ಒಂದು ಗಡಿಗೆಯಲ್ಲಿ ಹಾಕಿ ಕುದಿಸಿ ಅರ್ಧಪಾವಿನಷ್ಟಾದ ಕೆಳಗಿಳಿಸಿ ತಣ್ಣಗಾದನಂತರ ಶಿವಿಚಿ ಬಟ್ಟೆಯಿಂದ ಶೋಧಿಸಿ ಮಲಗುವಾಗ ಕುಡಿಯಬೇಕು. ಇದು ಸಕಲವಿಧ ಪ್ರಕೃತಿಯುವರಿಗೂ ಹಾನಿರಹಿತವಾದ ವಿರೇಚನವಾಗಿರುತ್ತದೆ. ಅಥವಾ ೨ ತೊಲೆ ಗುಲ್ಕನ್ ೧೦-೧೫ ಕರಿಯ ದ್ರಾಕ್ಷಿಗಳನ್ನೂ (ಬೀಜವನ್ನು ತೆಗೆದು) ೧ ಪಾವು ಗುಲಾಬಿ ಹೂವಿನ ನೀರಿನಲ್ಲಿ (ಪನ್ನೀರು) ಅಥವಾ ಕೇವಲ ನೀರಿನಲ್ಲಾಗಲಿ ಅರೆದು ಮಲಗುವ ಸಮಯದಲ್ಲಿ ಕುಡಿದರೆ ಪ್ರಾತಃಕಾಲದಲ್ಲಿ ಒಂದು ಸಲ ಸುಖಭೇದಿಯಾಗುವುದು. ಈ ಉಪಾಯಗಳೆಲ್ಲಾ ಅತ್ಯಂತ ಕಷ್ಟಸಮಯದಲ್ಲಿ ಉಪಯೋಗಿಸಲ್ಪಡತಕ್ಕವುಗಳಾಗಿರುವುವು. ನಿತ್ಯದಲ್ಲಿ ಔಷಧದ ಬಲದಿಂದಲೇ ಮಲವಿಸರ್ಜನೆಯನ್ನು ಮಾಡುವುದು ಹಾನಿಕರವಾಗಿರುವುದರಿಂದ ಸ್ವಾಭಾವಿಕಗಳಾದ ಆಹಾರವಿಹಾರಗಳಿಂದಲೇ ಮಲಬದ್ಧತೆಯನ್ನು ದೂರಮಾಡಿಕೊಳ್ಳುವುದೇ ಉತ್ತಮಮಾರ್ಗವಾಗಿರುತ್ತದೆ.

(ಮುಂದೆಸಾಗುವುದು)

ಕಾಶೀಕ್ಷೇತ್ರ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ವಿದ್ಯಾರ್ಥಿಗಳ ಪರೀಕ್ಷಾಫಲವು.

ಕಾಶೀ ಗೌರ್ನಮೆಂಟು ಪರೀಕ್ಷೆ.

ವೇದಾಂತಾಚಾರ್ಯ ದ್ವಿತೀಯ ಖಂಡದಲ್ಲಿ
ನೀಲಕಂಠಶಾಸ್ತ್ರಿ, ಭಾಸಾಪುರ.

ಸಾಹಿತ್ಯಶಾಸ್ತ್ರೀ ದ್ವಿತೀಯಖಂಡದಲ್ಲಿ
ಗುರುದೇವಶಿವಾಚಾರ್ಯ ಚಿಕ್ಕಮುಣ್ಣೂರು.

ಕಲ್ಕತ್ತಾ ಯೂನಿವರ್ಸಿಟಿ ಪರೀಕ್ಷೆ.

ಸ್ಮೃತಿತೀರ್ಥದಲ್ಲಿ
ವೀರಭದ್ರಶಾಸ್ತ್ರಿ, ಚಿಂಚಿನಿ.

ಕಾವ್ಯತೀರ್ಥದಲ್ಲಿ
ವಾಗೀಶಶಿವಾಚಾರ್ಯ, ಮುದೇನೂರು.

ಕಾವ್ಯಮಧ್ಯಮದಲ್ಲಿ
ಮಲ್ಲಿಕಾರ್ಜುನಶಿವಾಚಾರ್ಯ, ಚಿಮ್ಮಲಗಿ.

ಸರ್ವದರ್ಶನಮಧ್ಯಮದಲ್ಲಿ
ವೀರಭದ್ರಶಾಸ್ತ್ರಿ, ಚಿಂಚಿನಿ.

ನಿಜಾಮಾಂತಾದ್ಯದಲ್ಲಿ
ವೀರಭದ್ರಶಾಸ್ತ್ರಿ, ಚಿಂಚಿನಿ.

ವ್ಯಾಕರಣಾದ್ಯದಲ್ಲಿ
ಸಿದ್ಧಲಿಂಗಶರ್ಮಾ, ಬಂಕಾಪುರ.

ಮಥುರಾ ವ್ರಜಮಂಡಲ ಯೂನಿವರ್ಸಿಟಿ ಪರೀಕ್ಷೆ.

ಧರ್ಮಾಚಾರ್ಯದಲ್ಲಿ
ವೀರಭದ್ರಶಾಸ್ತ್ರಿ, ಚಿಂಚಿನಿ. (ಪ್ರಥಮಶ್ರೇಣಿ)

ಸಾಹಿತ್ಯಾಚಾರ್ಯದಲ್ಲಿ
ವಾಗೀಶಶಿವಾಚಾರ್ಯ, ಮುದೇನೂರು. (ಪ್ರಥಮಶ್ರೇಣಿ)
ಅನ್ನದಾನಶಿವಾಚಾರ್ಯ, ಜಮಖಂಡಿ.

ಸಾಹಿತ್ಯಶಾಸ್ತ್ರಿಯಲ್ಲಿ
ಗುರುಶಾಂತಶಿವಾಚಾರ್ಯ, ಮುಕನಾಳ.

ಆಯುರ್ವೇದಾಚಾರ್ಯದಲ್ಲಿ
ಶಿವಕುಮಾರಸ್ವಾಮಿ, ಬೆಂಗಳೂರು. (ಪ್ರಥಮಶ್ರೇಣಿ)

ಆಯುರ್ವೇದಮಧ್ಯಮಾ ಪ್ರಥಮಖಂಡದಲ್ಲಿ
ಸಿದ್ಧಲಿಂಗದೇವರು, ಹೊಂಗಲ. (ಪ್ರಥಮಶ್ರೇಣಿ)

ಕಾಶೀ ಸಂಸ್ಕೃತ ವಿಶ್ವವಿದ್ಯಾನಿಲಯ ಆಯುರ್ವೇದ ಸಮ್ಮೇಲನ ಪರೀಕ್ಷೆ.

ಸಂಪೂರ್ಣಮಧ್ಯಮದಲ್ಲಿ
ಸಿದ್ಧಲಿಂಗಶರ್ಮಾ, ಬಂಕಾಪುರ.

Vasudeo Rao Diwan,
Jangamvadi Matha,
Benares City

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಂಬಂಧಪಟ್ಟವರು ಶಿಷ್ಯರ ಮನೆಗಳಿರುತ್ತಿದ್ದು. ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿಯೂ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಬಹಳ ಕಿಮ್ಮತ್ತಿನ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.
ಅಂಚೆವೆಚ್ಚ ಬೇರೆ. 52

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾಠಶಾಲಾ, ಮಹಾಗಾಂವ್, ಜಿಲ್ಲಾ ಗುಲ್ಬರ್ಗಾ.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಕಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿ ಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ, ಬೆಂಗಳೂರು ಸಿಟಿ. 47

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಚೌರಿ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನೀಶ್ವರರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಚೌರಿ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಚೌರಿ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಚೌರಿ ೧ಕ್ಕೆ	೦—೦—೯
ಸಮಸ್ತ ಪೀಠಾಧೀಶರುಗಳು ಮತ್ತು ಆಚಾರ್ಯರು ಒಂದೆಡೆಯೇ ಇದ್ದ ಫೋಟೋ ಸೈಜು ೧೪-೧೦ ಚೌರಿ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಧರ್ಮೋಪದೇಶ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಲಂಕಾಪಟ್ಟಣದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಚೌರಿ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಖರದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಧುಗಸಟ್ಟಿ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[39] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पंडित श्रीकाशीनाथशास्त्री यांचें भाषण (मराठी)	८ आ[illegible]
Speeches by Pandit Shri Kashinatha Shastri (*English*)	12 A[illegible]
ವೇದೋಕ್ತಶಿವಪೂಜಾವಿಧಿ	೧೦ ಆ[illegible]
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[illegible]
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ[illegible]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[illegible]
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆ[illegible]
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ವೀರಶೈವಸಿದ್ಧಾಂತಸುಧಾಕರ	೨ ರೂ[illegible]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪಟ್ಟಿ)	೧ ರೂ[illegible]
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ[illegible]
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ[illegible]
लिंगधारणचंद्रिका (संस्कृत)	३ [illegible]
महानारायणोपनिषत् (वीरशैवभाष्य-संस्कृत)	१ [illegible]
वीरशैवेंदुशेखर (संस्कृत)	१ [illegible]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[illegible]

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಕ್ಷಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ತುರೀಲೋಕವಮ್ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಅಕ್ಟೋಬರ್ ೧೯೩೪ [ಸಂಚಿಕೆ ೨೩

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಯೂನಿಯನ್ ಪಂಚಾಯತ ಬೋರ್ಡು ಚುನಾವಣೆ, ಹುವ್ವಿನ ಹಡಗಲಿ.

ಇದೇ 1934 ನೇ ಇಸವಿ ಅಕ್ಟೋಬರ್ 2ನೇ ತೇದಿ ಮಂಗಳವಾರ ನಡೆದ ಯೂನಿಯನ್ ಎಲೆಕ್ಷನ್ನಿನಲ್ಲಿ ಉಮೇದುವಾರರಾಗಿ ನಿಂತುಕೊಂಡ ಮಹಾಶಯರ ಪೈಕಿ, ಮ|| ರಾ|| ಅಕ್ಕಸಾಲಿ ಅಂಬಪ್ಪನವರು, ಮ|| ರಾ|| ಗಂಗಾವತಿ ಪಂಪಾಪತಿಶೆಟ್ಟರು, ವೇ|| ಗಂಗಾಪುರ ಮಠದ ಗವಿಯಯ್ಯನವರು, ಮ|| ರಾ|| ಹೋಳಲ ರಾಯಪ್ಪನವರು, ಜನಾಬ್, ಜವಳಿ ಮಹ್ಮದಸಾಹೇಬರವರು, ಮ|| ರಾ|| ಸೊಪ್ಪಿನಮಲ್ಲಪ್ಪನವರು, ಮ|| ರಾ|| ಕೃಷ್ಣಪ್ಪನಾಯಕರು, ಮ|| ರಾ|| ದೊಂಬ್ರ ಭಂಗಾರಶೆಟ್ಟರು ಈ ಮಹೋದಯರಿಗೆ ಪುರಜನರು ತಮ್ಮ ಅಮೋಘವಾದ ಮತವನ್ನು ಸಲ್ಲಿಸಿ, ಬಹುಮತದಿಂದ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟಿದ್ದನ್ನು ಯೋಚಿಸಿದರೆ ಪುರಜನರ ಅಭಿಮಾನವೂ, ಅವರಲ್ಲಿದ್ದ ವಿಚಾರಶಕ್ತಿಯೂ, ವ್ಯಕ್ತವಾಗದಿರದು. ಏಕೆಂದರೆ ಹಿಂದಿನ ಎಲೆಕ್ಷನ್ನಿನಲ್ಲಿ ಧರ್ಮಶೀಲರಾದ ಮ|| ರಾ|| ಸೊಪ್ಪಿನಮಲ್ಲಪ್ಪನವರು, ವೇ|| ಗಂಗಾಪುರ ಮಠದ ಗವಿಯಯ್ಯನವರು, ಮ|| ರಾ|| ದೊಂಬರ ಭಂಗಾರಶೆಟ್ಟರೇ ಮುಂತಾಗಿ ಪ್ರತಿನಿಧಿಗಳಾಗಿ, ಅಧ್ಯಕ್ಷರ ಚುನಾವಣೆಯಲ್ಲಿ ಮ|| ರಾ|| ಸೊಪ್ಪಿನಮಲ್ಲಪ್ಪನವರನ್ನು ಸರ್ವಸಮ್ಮತಿಯಿಂದ ಚುನಾಯಿಸಿ ಗೌರವಿಸಿದುದು ತುಂಬಾ ಸ್ತೋತ್ರಾರ್ಹವಾದ ಸಂಗತಿಯಾಗಿದ್ದು, ಇವರು ಅಧ್ಯಕ್ಷಸ್ಥಾನವನ್ನು ವಹಿಸಿದಂದಿನಿಂದ 'ಪರೋಪಕಾರಾರ್ಥಮಿದಂ ಶರೀರಂ' ಎಂಬ ತತ್ವವನ್ನಿಟ್ಟುಕೊಂಡು ತಮ್ಮ ಗೃಹಕೃತ್ಯಗಳನ್ನು ಲಕ್ಷಿಸದೆ ತಾವು ಕೈಕೊಂಡ ಕಾರ್ಯದಲ್ಲಿ ಸಂಪೂರ್ಣಶ್ರದ್ಧೆಯಿಂದಲೂ, ನ್ಯಾಯರೀತಿಯಿಂದಲೂ, ಪುರಜನರ ಹಿತಚಿಂತನೆಯೇ ತಮ್ಮ ಧ್ಯೇಯವೆಂದು ಭಾವಿಸಿ, ವರ್ತಿಸುತ್ತಿದ್ದ ಈ ಮಹಾಶಯರಿಗೆ ಮಧ್ಯದಲ್ಲಿ ಬಲವಾದ ವಿಘ್ನವು ಸಂಭವಿಸಿದರೂ ಅದನ್ನು ಮುರಿದು ಮೂಲೆಗೊತ್ತಿ ಜಯಶೀಲರಾದುದಕ್ಕೆ ಇವರಲ್ಲಿ ನೆಲಸಿದ ಸದ್ಗುಣಗಳೇ ಕಾರಣಗಳಾದುವೆಂದು ನಿಸ್ಸಂಶಯವಾಗಿ ಹೇಳಬಹುದು. ಅಲ್ಲದೆ ಇವರು ಪುರಜನರಿಗೆ ಒದಗಿಸಿಕೊಟ್ಟಿರುವ ಅನುಕೂಲತೆಗಳನ್ನು ಪರಾಮರ್ಶಿಸಿದರೆ ಪ್ರತಿಯೊಬ್ಬ ಪುರನಿವಾಸಿಯೂ ತನ್ನ ಕೃತಜ್ಞತೆಯನ್ನು ತೋರ್ಪಡಿಸದಿರಲಾರನು. ಹೀಗಿದ್ದು ಪುನಃ ಶ್ರೀಜಗದಾಚಾರ್ಯರ ಕೃಪಾಬಲದಿಂದ ಕಾರ್ಯದಕ್ಷರಾದ ಮೇಲ್ಕಂಡ ಮಹಾಶಯರೇ ಈ ಸಾರೆಯೂ ಪ್ರತಿನಿಧಿಗಳಾಗಿ ಆರಿಸಿ ಬಂದುದು ಪುರಜನರ ಸುಕೃತವೆಂದೇ ಹೇಳಬಹುದು.

ಓರ್ವ ಗ್ರಾಮವಾಸಿ.

ಹಿರೇಹಾಳಿನ ಒಂದು ರತ್ನವು ಮಾಯವಾಯಿತು.

ತಾ|| 28-9-34 ರಲ್ಲಿ ಬಳ್ಳಾರಿ ಜಿಲ್ಲಾ ರಾಯದುರ್ಗ ತಾಲೂಕು ಹಿರೇಹಾಳು ಗ್ರಾಮಕ್ಕೆ ರತ್ನದೋಪಾದಿಯಲ್ಲಿದ್ದ ವೇ|| ಮಠದ ಉಮಾಪತಯ್ಯನವರು ಬೆಂಗಳೂರು ನಗರಕ್ಕೆ ಹೋಗಿ ಅಲ್ಲಿ ಚಳಿಜ್ವರದಿಂದ ಸ್ವರ್ಗಸ್ಥರಾದರೆಂದು. ಕೇಳಿ ಗ್ರಾಮನಿವಾಸಿಗಳೆಲ್ಲರ ಹೃದಯವು ತಲ್ಲಣಿಸಿತು. ಇವರು ಕೇವಲ ಶಾಂತಮೂರ್ತಿಗಳೂ, ಉದಾರಿಗಳೂ, ನಿಷ್ಪಕ್ಷಪಾತಿಗಳೂ, ಬಡವರಾಧಾರಿಗಳೂ ಆಗಿದ್ದರು. ಇವರು ಈ ಗ್ರಾಮದ ಪಂಚಾಯತಿ ಕೋರ್ಟಿಗೆ ಅಧ್ಯಕ್ಷರಾಗಿದ್ದು ಅತ್ಯುನ್ನತ ರೀತಿಯಲ್ಲಿ ಕಾರ್ಯಭಾಗಗಳನ್ನು ನಡೆಯಿಸಿದರು. ಇಲ್ಲಿಯ ಬಾಲಲೀಲಾವಿನೋದಿನೀ ಸಂಗೀತ ನಾಟಕ ಮಂಡಳಿಯ ವ್ಯವಸ್ಥಾಪಕರಾಗಿ ಕಂಪನಿಯನ್ನು ಸುಧಾರಿಸಿದ್ದಲ್ಲದೆ ಇನ್ನೂರು ಮೈಲುಗಳ ಅಂತರದಲ್ಲಿರುವ ಶ್ರೀ ರೇಣುಕಾಚಾರ್ಯರ ಪೀಠದ ದರ್ಶನ ಭಾಗ್ಯವು ಕಂಪನಿಯವರಿಗೆಲ್ಲಾ ಲಭಿಸುವಂತೆ ಮಾಡಿ ಕೀರ್ತಿಭಾಗಿಗಳಾದರು. ಸಾರ್ವಜನಿಕ ಕಾರ್ಯಗಳಲ್ಲಿಯೂ ಕೇವಲ ಮುಂದಾಳುಗಳಾಗಿದ್ದರು. ಇಂಥ ಮೂರ್ತಿಗಳನ್ನು ಕಳೆದುಕೊಂಡದ್ದು ಈ ಗ್ರಾಮದ ದುರ್ದೈವವೆಂದೇ ಹೇಳಬಹುದು. ಇವರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನೀಯಲೆಂದು ಕೋರುವ,

ಓರ್ವ ಗ್ರಾಮನಿವಾಸಿ.

ಜಪಾನಿನಲ್ಲಿ ಭಯಂಕರ ಬಿರುಗಾಳಿ.

ಜಪಾನಿನಲ್ಲಿ ಬಿರುಗಾಳಿಯಿಂದ ಅನೇಕ ರೀತಿಯಿಂದ ನಷ್ಟವಾಗಿದೆ. ಬಿರುಗಾಳಿಯು ೬ ತಾಸುಗಳವರೆಗೆ ಬೀಸಿತು. ಓಸಾಕಾದ ಒಂದೇ ಭಾಗದಲ್ಲಿ ೪೨೦ ಜನರು ಸತ್ತಿದ್ದು ೧೩೫೧ ಜನರು ಗಾಯಗೊಂಡಿರುತ್ತಾರೆ. ಶಾಲೆಯ ಇಮಾರತಿಗಳು ಬಿದ್ದುದರಿಂದ ಹುಡುಗರು ಮರಣಹೊಂದಿದರು. ಓಸಾಕಾದ ಉಪನಗರದ ೩೯೦೦ ಮನೆಗಳು ನಾಶವಾಗಿದ್ದು ೧೨೦೦ ಮನೆಗಳು ಅರ್ಧಾರ್ಧ ಬಿದ್ದಿವೆ. ಸಮುದ್ರವು ಉಲ್ಲೋಲಕಲ್ಲೋಲವಾಗಿದ್ದರಿಂದ ಅಂಝೂರಿ ನದಿಯ ನೀರು ಬಹುದೂರದವರೆಗೆ ಹೋಗಿತ್ತು. ೫೦ ಸಾವಿರ ಮನೆಗಳು ನೀರಲ್ಲಿ ಮುಳುಗಿರುತ್ತವೆ. ೨೯ ವಿಮಾನಗಳು ನಾಶವಾಗಿ ಹೋಗಿರುತ್ತವೆ

ಸ್ವೀಕಾರ

ಧಾರವಾಡ ಡಿ|| ಗದಗ ತಾ|| ಹಮ್ಮಿಗಿ ಗ್ರಾಮದ ನಾಗಭೂಷಣಮಠದ ಶರಭಯ್ಯನವರು ಶಿವೈಕ್ಯರಾದ ಬಗ್ಗೆ ಮಾಡಿದ ವಾರ್ಷಿಕ ಗಣಾರಾಧನೆಯ ಕಾಲಕ್ಕೆ ಸದರಿಯವರ ಧರ್ಮಪತ್ನಿಯವರಾದ ವೀರವ್ವನವರು ಪ್ರಭಾಪೋಷಣೆಗಾಗಿ ಸಮರ್ಪಿಸಿದ 2 ರೂ. ಮತ್ತು ಸದರಿ ಗ್ರಾಮದಲ್ಲಿರುವ ಮ|| ರಾ|| ವರದಾ ವೀರಪ್ಪನವರು ತಮ್ಮ ದ್ವಿತೀಯ ಪತ್ನಿಗೆ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂ. ಒಟ್ಟು 4 ರೂ. ಗಳು ಗುರುಭಕ್ತರೇಸರ ಹಮ್ಮಿಗಿ ಶಾಂತಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ನರಗುಂದಪೇಟಾ ಚಿಕ್ಕನರಗುಂದ ಗ್ರಾಮದ ಮ|| ರಾ|| ಬಸಪ್ಪನವರು ಸಪ್ಪರದ ಇವರು ಭಾದ್ರಪದ ಶು|| ೬ ದಿವಸ ತಮ್ಮ ಗೃಹದಲ್ಲಿ ಮಹಾರುದ್ರಾಭಿಷೇಕ ಪೂರ್ವಕ ಶ್ರೀ ಕೊಣ್ಣೂರು ಹಿರೇಮಠದ ಪಟ್ಟದಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ 1 ರೂ. ಕಳುಹಿಸಿರುತ್ತಾರೆ.

ಧಾರವಾಡ ಡಿ|| ರೋಣ ತಾ|| ಚಿಕ್ಕಮಣ್ಣೂರು ಬೃಹನ್ಮಠದ ಪಟ್ಟದಸ್ವಾಮಿಗಳು ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಇದೇ ತಿಂಗಳು ೧೬ನೆಯ ತಾರೀಖಿನ ದಿವಸ ಮಹಾಮಂತ್ರೋಪದೇಶವನ್ನು ಪಡೆದುಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂ. ಯನ್ನು ಕಳುಹಿಸಿರುತ್ತಾರೆ.

ಧಾರವಾಡ ಡಿ|| ಹಾನಗಲ್ಲು ತಾ|| ಆಲೂರಲ್ಲಿರುವ ಮ|| ರಾ|| ಚೌಸಪ್ಪಿ ಪುಟ್ಟಪ್ಪನವರು ತಮ್ಮ ಗೃಹದಲ್ಲಿ ನೆರವೇರಿಸಿದ ಶಿವದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ದಿವಾನ್‌ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ.

1934 ನೆಯ ಇಸವಿ ಅಕ್ಟೋಬರ್ 19 ನೆಯ ತಾರೀಖು.

ಒಂದನೆಯ ಭಾಗ.

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿರಾ,

ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಪೂಜ್ಯಮಾತೆಯವರಾದ ಮಹಾಮಾತೃಶ್ರೀ ಶ್ರೀ ವಾಣೀವಿಲಾಸ ಸನ್ನಿಧಾನದವರು ಅವರ ಪೂರ್ಣಾಯುಸ್ಸಿನ ಅವಧಿಯು ಮುಗಿಯುವುದಕ್ಕೆ ಮುಂಚಿತವಾಗಿಯೇ ಕಳೆದ ಜುಲೈ 7 ನೆಯ ತಾರೀಖಿನ ದಿನ ಕಾಲವಶರಾದುದರಿಂದ ಮಹಾಸ್ವಾಮಿಯವರಿಗೂ ಸಂಸ್ಥಾನಕ್ಕೂ ಉಂಟಾಗಿರುವ ಅಪಾರವಾದ ನಷ್ಟವನ್ನು ಈ ಅಧಿವೇಶನದ ಕಾರ್ಯಾರಂಭಕ್ಕೆ ಮುಂಚಿತವಾಗಿ ಸೂಚಿಸುವ ದುಃಖಕರವಾದ ಕರ್ತವ್ಯವು ಒದಗಿದೆ.

ಅಳಿದ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರು ಕೇವಲ ಮೂವತ್ತೊಂದು ವರುಷಗಳ ಚಿಕ್ಕವಯಸ್ಸಿನಲ್ಲಿಯೇ ಕಾಲವಶರಾದರು. ಆಗ ನಮ್ಮ ಶ್ರೀಮನ್ಮಹಾರಾಜರವರು ಇನ್ನೂ ಬಾಲ್ಯದಶೆಯಲ್ಲಿದ್ದರು. ಆದಕಾರಣ, ಅವರು ಪ್ರಾಪ್ತವಯಸ್ಕರಾಗುವವರೆಗೂ ಮಹಾಮಾತೃಶ್ರೀಯವರೇ ರಾಜ್ಯಾಡಳಿತ ಸೂತ್ರವನ್ನು ವಹಿಸಬೇಕಾಯಿತು. ಸುಮಾರು ಎಂಟು ವರುಷಗಳ ಕಾಲ ಮಹಾಮಾತೃಶ್ರೀಯವರು ರೀಜಂಟರಾಗಿದ್ದು, ವಿಚಕ್ಷಣೆಯಿಂದ ಅತಿ ಸಮರ್ಥರಾಗಿ ರಾಜ್ಯಭಾರವನ್ನು ನಿರ್ವಹಿಸಿ, ಸಮಸ್ತರ ಶ್ಲಾಘನೆಗೂ ಪಾತ್ರರಾಗಿ, ಯಶೋರಾಶಿಯನ್ನು ಗಳಿಸಿದರು. ಮೈಸೂರು ಸಂಸ್ಥಾನದ ಶ್ರೇಯೋಭಿವೃದ್ಧಿಗೆ ಸೇರಿದ ಸಮಸ್ತ ವಿಚಾರಗಳಲ್ಲಿಯೂ ಅವರು ಯಾವಜ್ಜೀವವೂ ತೀವ್ರಾಸಕ್ತಿಯನ್ನಿಟ್ಟುಕೊಂಡಿದ್ದು ಅದಕ್ಕಾಗಿ ಅನುಗ್ರಹಪೂರ್ವಕವಾಗಿ ಶ್ರಮಿಸಿ ಉಪಕರಿಸಿದರು. ಅದರಲ್ಲಿಯೂ ವಿಶೇಷವಾಗಿ ಸ್ತ್ರೀಯರ ಪುರೋಭಿವೃದ್ಧಿಯಲ್ಲಿ ಮಹಾಮಾತೃಶ್ರೀಯವರಿಗೆ ಅತ್ಯಂತ ಆದರವಿದ್ದಿತು. ಸಾರ್ವಜನಿಕ ವಿಚಾರಗಳಲ್ಲಿ ಭಾಗಿಗಳಾಗಬೇಕೆಂಬ ಕೇವಲ ಕುತೂಹಲದಿಂದಲ್ಲ ಅವರು ಕೆಲಸಮಾಡಿದುದು. ಪ್ರಜೆಗಳೆಲ್ಲರೂ ಅಭ್ಯುದಯ ಹೊಂದಿದರೆ ಸಾಕೆಂಬ ಸ್ತ್ರೀಜನೋಚಿತವಾದ ಕೌತುಕ ಮಾರ್ಗದಿಂದಲೂ ಧನಿಕರು ದರಿದ್ರರೆನ್ನದೆ ಸಮಸ್ತ ಪ್ರಜೆಗಳಲ್ಲಿಯೂ ಔದಾರ್ಯವನ್ನು ತೋರಿಸಿ ಪ್ರೀತಿಕರುಣೆಗಳಿಂದ ಕಾಣುವ ಸಮದರ್ಶಿತ್ವದ ಮನೋವೃತ್ತಿಯಿಂದಲೂ ಉದ್ದೀಪಿತರಾಗಿ, ಅವರು ತಮ್ಮ ಅಮೋಘವಾದ ಪ್ರಜಾವಾತ್ಸಲ್ಯವನ್ನು ಪ್ರದರ್ಶಿಸಿ ಚರಿತಾರ್ಥರಾದರು; ಅವರ ಅಮೋಘವಾದ ಈ ಸದ್ಗುಣಗಳೇ ಪ್ರಜೆಗಳೆಲ್ಲರಿಗೂ ಅವರಲ್ಲಿ ಪ್ರೀತಿಭಕ್ತಿಗಳನ್ನುಂಟುಮಾಡಿದುವು.

ಮಹಾಮಾತೃಶ್ರೀಯವರು ಕಾಲವಶರಾದ ಕಾರಣ, ಶ್ರೀಮನ್ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಅಪಾರವಾದ ಮತ್ತು ಅಶರಿಹಾರ್ಯವಾದ (?) ನಷ್ಟವುಂಟಾಗಿದೆಯೆಂಬುದು ನನ್ನ ಭಾವನೆ. ತಮ್ಮೆಲ್ಲರ ಭಾವನೆಯೂ ಅದೇರೀತಿಯಲ್ಲಿದೆಯೆಂದು ನಾನು ನಂಬಿದ್ದೇನೆ. ಶ್ರೀಮನ್ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ ಈ ಸಭೆಯವರ ಹೃತ್ಪೂರ್ವಕವಾಗಿ ದುಃಖಪಡುವ ವಿಚಾರದಲ್ಲಿ ತಾವೆಲ್ಲರೂ ನನ್ನೊಡನೆ ಭಾಗಿಗಳೆಂಬುದನ್ನು ನಾನು ಬಲ್ಲೆನು.

ಪ್ರಪಂಚದ ಪರಿಸ್ಥಿತಿ.

ಪ್ರಪಂಚದ ಸ್ಥಿತಿಗತಿಗಳು ಹದಗೆಟ್ಟು ಆತಂಕಜನಕವಾಗಿದ್ದುದು ಕಡಿಮೆಯಾಗಿ, ಸ್ತಿಮಿತಕ್ಕೆ ಬರುವ ಪರಿಸ್ಥಿತಿಯು ಈಗ ಒದಗಿದೆ. ಸುಖಪ್ರದವಾಗುವಂಥ ಸ್ಥಿತಿಗತಿಗಳನ್ನು ಹೊಸ ಸನ್ನಿವೇಶಗಳಿಗೆ ಹೊಂದಿಕೆಗೊಳಿಸಿ ರೂಪಿಸುವ ಪ್ರಯತ್ನವು ನಡೆಯುತ್ತಿದೆ. ಒಟ್ಟು ಮನುಷ್ಯವರ್ಗದ ಮುಂದಿನ ಭಾಗ್ಯಪದ್ಧತಿಯ ಮೇಲೆ ಪರಿಣಾಮಕಾರಿಯಾಗಿರುವ ಭಾರಿ ಭಾರಿ ಸಮಸ್ಯೆಗಳು ಒದಗುತ್ತಿವೆ. ಅವುಗಳೆಲ್ಲ ಬಗೆಹರಿಯಬೇಕಾಗಿವೆ. ಅವುಗಳಲ್ಲಿ ಕೆಲವು ತೀರ ಹೊಸ ಸಮಸ್ಯೆಗಳು. ಉಳಿದವುಗಳು ಹಿಂದಿನ ಪ್ರಪಂಚದ ತತ್ತ್ವಗಳನ್ನು ಇಂದಿನ ಪ್ರಪಂಚಕ್ಕೆ ಅನ್ವಯಿಸುವ ಪ್ರಯತ್ನದಲ್ಲಿ ತಲೆದೋರಿದಂಥವುಗಳು. ನಾನಾವಿಚಾರಗಳನ್ನೂ ತುಲನೆಮಾಡಿ ಯಾವ ಯಾವ ಅಂಶಗಳಿಗೆ ಎಷ್ಟೆಷ್ಟು ಪ್ರಾಧಾನ್ಯವಿರಬೇಕೆಂಬುದನ್ನು ನಿಶ್ಚಯಮಾಡುವ ರೀತಿನೀತಿಗಳಲ್ಲಿ ಹೊಸ ಹೊಸ ಪ್ರಮಾಣಗಳು ಏರ್ಪಡುತ್ತಿವೆ; ಹೊಸ ಹೊಸ ನಿಯಮಗಳು ದೀರ್ಘಾಲೋಚನೆಯಿಂದ ಸಿದ್ಧವಾಗುತ್ತಿವೆ. ಆದರೂ, ಸುಖಸಾಧನೆಯ ಪ್ರಯತ್ನವು ಸುಲಲಿತವಾಗಿ ನೆರವೇರದಂತೆ ಅಡ್ಡಿಯೊಂದು ಒದಗಿದೆ. ಕಳೆದ ಘೋರಯುದ್ಧದ ಫಲವಾಗಿ ಪ್ರಪಂಚದ ನಾನಾ ಜನಾಂಗಗಳೂ ಅಪಾರವಾಗಿ ಸಾಲಮಾಡಬೇಕಾಗಿ ಬಂದುದರ ದೆಸೆಯಿಂದ ಹಣದ ಚಲಾವಣೆಯ ಏರ್ಪಾಡು ಅಯಶಸ್ವಿ ನಾನಾ ಜನಾಂಗಗಳಿಗೂ ಬೇಕಾದಾಗ ಸಾಲಗಳು ಯಥೇಷ್ಟವಾಗಿ ದೊರೆಯುತ್ತಿದ್ದ ಅನುಕೂಲವು ಕಡಿಮೆಯಾದುದೇ ಆ ಅಡ್ಡಿ. ಯುದ್ಧಕಾಲದಲ್ಲಿ ಜನಾಂಗಗಳು ಸಾಲಮಾಡಿದುದಾದರೂ ಏತಕ್ಕೆ? ವಸ್ತುಗಳ ರಚನೆಯಿಂದ ಪ್ರಜಾಕೋಟಿಗೆ ಉಪಕಾರಮಾಡುವುದಕ್ಕಲ್ಲ; ನಾನಾ ವಸ್ತುನಿಚಯವನ್ನೂ ಧ್ವಂಸಮಾಡುವುದಕ್ಕಾಗಿ ಮಾತ್ರವೇ. ಆ ಮಾತು ಹಾಗಿರಲಿ. ಈಗ ಯಾವ ದೇಶದಲ್ಲಿ ನೋಡಿದರೂ ಅಲ್ಲಿಯ ಆರ್ಥಿಕ ಸನ್ನಿವೇಶಗಳಿಗನುಗುಣವಾಗಿ ಪರಿಣಾಮಕರವಾದ ಕಾರ್ಯಕ್ರಮವನ್ನನುಗೊಳಿಸಿಕೊಳ್ಳುವ ಪ್ರಯತ್ನವು ಮುಂದುವರಿಯುತ್ತಿರುವುದು ಈಗಿನ ಲಕ್ಷಣವಾಗಿದೆ. ಆದರೆ ಈ ಮಾರ್ಗದಲ್ಲಿಯೂ ಸುಗಮವಾಗಿ ಕೆಲಸವು ಸಾಗುತ್ತಿಲ್ಲ. ಏಕೆಂದರೆ, ಕಳೆದ ಯುದ್ಧಕ್ಕೆ ಮುಂಚೆ ಎಲ್ಲ ಜನಾಂಗಗಳ ಯೋಗಕ್ಷೇಮಕ್ಕೂ ಸಾಧಕವಾಗುವಂತೆ ವ್ಯಾಪಾರದಲ್ಲಿ ಹೊಂದಿಕೆಗೊಳಿಸುವ ಕಾರ್ಯಕ್ರಮವು ಜರುಗುತ್ತಿದ್ದಿತು. ಆದರೆ ಈಗ ಹಾಗಿಲ್ಲ. ಪ್ರತಿಯೊಂದು ಜನಾಂಗವೂ ತನ್ನ ಯೋಗಕ್ಷೇಮವೊಂದಕ್ಕೇ ಪ್ರಾಧಾನ್ಯವಿರುವಂತೆ ವರ್ತಿಸುತ್ತಿರುವುದು ಈಗಿನ ಕಾರ್ಯಕ್ರಮ. ಅದು ಎರಡು ರೂಪಗಳಲ್ಲಿ ಸಾಗುತ್ತಿದೆ. ಮೊದಲನೆಯದು: ಪ್ರತಿಯೊಂದು ದೇಶದವರೂ ತಮ್ಮ ಬಳಕೆಗೆ ಅವಶ್ಯಕವಾದ ಬಗೆಬಗೆಯ ವಸ್ತುಗಳಲ್ಲಿ ಸಾಧ್ಯವಾಗಿಸಿದವುಗಳನ್ನೆಲ್ಲ ತಮ್ಮ ದೇಶದ ಸಾಧನಸಂಪತ್ತುಗಳಿಂದಲೇ ಒದಗಿಸಿಕೊಳ್ಳುವುದು. ಎರಡನೆಯದು: ಪ್ರತಿಯೊಂದು ಜನಾಂಗದವರೂ ತಮ್ಮ ನೆರೆಹೊರೆಯ ದೇಶಗಳಲ್ಲಿ ವ್ಯಾಪಾರಮಾಡುವ ಸುಗ್ಗಿಯು ಎಷ್ಟು ಸಾಧ್ಯವೆನಿಸಿದರೆ ಅಷ್ಟುಮಟ್ಟಿಗೂ ತಮ್ಮ ದೇಶದವರಿಗೇ ದೊರೆತು ಅನುಕೂಲವಾಗುವಂತೆ ಪ್ರವರ್ತಿಸುವುದು. ಇವೆರಡೂ ಇಂದಿನ ಆರ್ಥಿಕ ಕಾರ್ಯಕಲಾಪಗಳ ಲಕ್ಷಣಗಳು. ಇವುಗಳ ದೆಸೆಯಿಂದ ಆರ್ಥಿಕ ಸಮರವೆಂದು ಕರೆಯಬಹುದಾದ ಪರಸ್ಪರ ಸ್ಪರ್ಧೆಯೂ ಹೋರಾಟವೂ ಮಸಗುತ್ತಿವೆ. ಮೊದಲೇ ಕ್ಲೇಶದಾಯಕವಾಗಿದ್ದ ಕೊರತೆಯ ಸನ್ನಿವೇಶದಲ್ಲಿ, ಪ್ರತಿಯೊಂದು ಜನಾಂಗದವರೂ ವ್ಯಾಪಾರ ವಾಣಿಜ್ಯ ಮುಂತಾದ ಆರ್ಥಿಕ ವಿಚಾರಗಳಲ್ಲಿ ತಮ್ಮದೇ ಮೇಲುಗೈಯಾಗಬೇಕೆಂದು ಹೋರಾಡುತ್ತಿರುವ ಈಗಿನ ಈ ಆರ್ಥಿಕ ಸಮರವು ಹೆಚ್ಚು ಹೆಚ್ಚು ಆತಂಕಜನಕವಾಗಿ ಪರಿಣಮಿಸುತ್ತಿದೆ. ಇವುಗಳ ಪರಿಣಾಮ ಫಲವಾಗಿ ಮದ್ದುಗುಂಡುಗಳ ಯುದ್ಧದ ಜೊತೆಗೆ ಆಮದು ವಸ್ತುಗಳ ಮೇಲಣ ಸುಂಕಗಳ ಯುದ್ಧವೂ ಸೇರಿದೆ. ಪ್ರತಿಯೊಂದು ದೇಶದವರೂ ತಮ್ಮ ದೇಶದ ಕೈಗಾರಿಕೆಗಳನ್ನು ರಕ್ಷಿಸುವ ನಿಮಿತ್ತದಿಂದ ಪರದೇಶಗಳ ಕೈಗಾರಿಕೆ ಸಾಮಾನುಗಳ ಮೇಲೆ ಆಮದು ಸುಂಕಗಳ ರೂಪದ ಆಯುಧಗಳನ್ನು ಹಿಡಿದು ಯುದ್ಧಮಾಡತೊಡಗಿರುವುದಲ್ಲದೆ, ಬಗೆಬಗೆಯ ವಸ್ತುಗಳ ಮಾರಾಟಕ್ಕಾಗಿಯೂ ನಾನಾ ಕೈಗಾರಿಕೆಗಳವರೂ ಒಟ್ಟುಗೂಡಿ ಮಿತ್ರಮಂಡಲಿಗಳನ್ನು ಏರ್ಪಡಿಸಿಕೊಂಡು ಇತರ ಜನಾಂಗಗಳ ಕೈಗಾರಿಕೆಗಳನ್ನು ನಿಃಸ್ಥಿತಿಗಿಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಶತ್ರುಗಳ ಸೀಮೆಯನ್ನು ಮುತ್ತುವ ದಂಡಿನಂತೆಯೇ ಅಗ್ಗದ ಸಾಮಾನುಗಳ ಪಡೆಯು ದೇಶದೇಶಗಳನ್ನೂ ಮುತ್ತುತ್ತಿದೆ. ಇದರ ಫಲಿತಾಂಶವಾದರೂ ಏನು? ಮುತ್ತಿದ ಸೀಮೆಯ ಪ್ರಜೆಗಳ ಬಾಯಿಗಳಿಗೆ ಹೋಗುತ್ತಿದ್ದ ತುತ್ತುಗಳನ್ನು ಕಸಿದುಕೊಳ್ಳುವ ದಾರುಣ ಪ್ರಸಂಗ. ಕೆಲವು ಸಂದರ್ಭಗಳಲ್ಲಂತು, ಈ ಬಗೆಯ ಆರ್ಥಿಕ ಸಂಗ್ರಾಮಗಳನ್ನು ಸರ್ಕಾರಗಳವರೇ ನಡೆಯಿಸುತ್ತಿದ್ದಾರೆ. ರಷ್ಯಾದೇಶದ ಪ್ರಜಾಪ್ರಭುತ್ವದ ಸರ್ಕಾರದವರು ಸಮಸ್ತ ಕೈಗಾರಿಕೆಗಳನ್ನೂ ತಮ್ಮ ಹತೋಟಿಯಲ್ಲಿಟ್ಟುಕೊಂಡು ಪ್ರಜೆಗಳಲ್ಲಿ ಪ್ರತಿಯೊಬ್ಬನೂ ಸಾಕ್ಷಾತ್ತಾಗಿ ಸರ್ಕಾರದ ಸೇವಕನೇ ಆಗಬೇಕಾಗುವ ವ್ಯವಸ್ಥೆಯನ್ನು ಮಾಡಿದ್ದಾರೆ. ಅಮೆರಿಕಾ ಖಂಡದ ಸಂಯುಕ್ತಸಂಸ್ಥಾನಗಳವರು ಇಷ್ಟು ದೂರ ಹೋಗದೆ ಇರುವುದೇನೋ ನಿಜ. ಅದಾಗ್ಯೂ ಇದುವರೆಗೂ ವ್ಯಕ್ತಿಗೇ ವಿಶಾಲವೆಂಬ ಭಾವನೆಯಿದ್ದ ಅನೇಕ ವಿಚಾರಗಳಲ್ಲಿ ಅಲ್ಲಿಯ ಸರ್ಕಾರದವರು ಕೈಹಾಕಿ, ವ್ಯಕ್ತಿಗಳಿಗಿದ್ದ ಪ್ರಯೋಜನಗಳನ್ನು ಕುಂಠಿತಗೊಳಿಸಿದ್ದಾರೆ. ಜರ್ಮನಿ ಸರ್ಕಾರದವರಂತು, ಕೈಗಾರಿಕೆಗಳನ್ನೂ ಕೂಲಿಯವರನ್ನೂ ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ವ್ಯವಸ್ಥೆಯನ್ನೇ ಬಿಗಿಮಾಡುತ್ತಿದ್ದಾರೆ. ಇನ್ನು ಜಪಾನಿನವರ ವಿಚಾರ. ಜಪಾನಿನ ಪ್ರಜೆಗಳೆಲ್ಲರೂ ಉದ್ಯೋಗನಿರತರಾಗಿ ಅತ್ಯಂತ ಚಟುವಟಿಕೆಯಿಂದ ಕೆಲಸಮಾಡತಕ್ಕವರು; ಕುಶಲರಾದ ಮೇಧಾವಿಗಳು. ಜಪಾನರು ವಿಸ್ಮಯ ಜನಕವಾದಷ್ಟು ಕಡಿಮೆ ವೆಚ್ಚದಲ್ಲಿ ಸಾಮಾನುಗಳನ್ನು ತಯಾರಿಸುತ್ತಿದ್ದಾರೆ. ಅಷ್ಟು ಕಡಿಮೆ ವೆಚ್ಚದಲ್ಲಿ ಸಾಮಾನುಗಳನ್ನು ತಯಾರಿಸುವುದು ಸಾಧ್ಯವೆಂದು ಈಗ್ಗೆ ಕೆಲವು ವರುಷಗಳ ಹಿಂದೆ ಯಾರು ಹೇಳಿದರೂ ನಂಬಲಾಗುತ್ತಿರಲಿಲ್ಲ. ಜಪಾನಿನವರು ಅತ್ಯಂತ ಅಗ್ಗದ ಬೆಲೆಗೆ ತಮ್ಮ ಸಾಮಾನುಗಳನ್ನು ತಂದು ತುಂಬುತ್ತ ಅದರ ಪರಿಣಾಮ ಫಲವಾಗಿ ಜಗತ್ತಿನ ಶಾಂತಿಯನ್ನೇ ಕಲಕುವಂಥ ಸನ್ನಿವೇಶಗಳನ್ನೊಂದನ್ನು ಕಲ್ಪಿಸಿದ್ದಾರೆ. ತುರ್ಕಿಸ್ಥಾನ, ಆಸ್ಟ್ರಿಯಾದೇಶ, ಜೆಕೊಸ್ಲೊವಾಕಿಯಾದೇಶ, ಪಾರ್ಶಿಸ್ಥಾನ (ಪರ್ಶಿಯ), ಹಾಲೆಂಡು ದೇಶ, ಸ್ವೀಡನ್ ದೇಶ, ಮೆಕ್ಸಿಕೊ ದೇಶ ಮುಂತಾದವುಗಳಲ್ಲಿ ಎಲ್ಲಿ ನೋಡಿದರೂ ಇದೇ ಕಥೆ; ಇದೇ ಸನ್ನಿವೇಶ.

ಹೀಗೆ ಇತರ ದೇಶಗಳವರೆಲ್ಲರೂ ಸ್ವಂತ ಸುಖವನ್ನು ಮಾತ್ರವೇ ಸಾಧಿಸುವ ಉನ್ಮತ್ತಗೀತೆಯನ್ನು ಹಾಡಿಕೊಳ್ಳುತ್ತ ಅದಕ್ಕನುಸಾರವಾಗಿ ವರ್ತಿಸುತ್ತಿದ್ದಾರೆ. ಪರಿಸ್ಥಿತಿಯು ಹೀಗಿರುವಲ್ಲಿ ಭರತಖಂಡವು ಉದಾಸೀನತೆಯಿಂದ ತೆಪ್ಪಗಿರುವುದು ಸಾಧ್ಯವಿಲ್ಲ. ಕ್ರಮಕ್ರಮವಾಗಿ ಭರತಖಂಡವೂ ಸಹ—ಮನಸ್ಸಿಲ್ಲದಿದ್ದರೂ ಅನಿವಾರ್ಯ ಪಕ್ಷವಾಗಿ ಅನುಮಾನಿಸುತ್ತ—ಅದೇ ಬಗೆಯ ಕಾರ್ಯನೀತಿಯನ್ನೇ ತಾನೂ ಅನುಸರಿಸುತ್ತಿರುವಂತೆ ತೋರುವುದು. ಭಗವಂತನ ಅನುಗ್ರಹದಿಂದ ಭರತಖಂಡದ ಸಾಧನಸಂಪತ್ತು ಹೇರಳವಾಗಿದೆ; ಭಾರತೀಯರು ಉದ್ಯೋಗಪ್ರಿಯರಾಗಿದ್ದಾರೆ. ಇದರ ಜೊತೆಗೆ ಭರತಖಂಡಕ್ಕೆ ಬ್ರಿಟಿಷ್ ಜನಾಂಗದ ಅಮೂಲ್ಯವಾದ ಮೈತ್ರಿಯೂ, ಅನುಭವಶಾಲಿಗಳಾದ ಬ್ರಿಟಿಷರ ಮಾರ್ಗದರ್ಶನವೂ, ಲಭಿಸಿವೆ. ಆದಕಾರಣ, ಮುಂದಿನ ಆಗುಹೋಗುಗಳು ಯಾವ ರೂಪದವೇ ಆಗಿರಲಿ, ಭರತಖಂಡವು ಶಂಕಾತಂಕಗಳಾವುವೂ ಇಲ್ಲದೆ ಸಮಾಧಾನಚಿತ್ತದಿಂದ ತನ್ನ ಕಾರ್ಯಕ್ರಮವನ್ನು ಮುಂದುವರಿಸಬಹುದಾಗಿದೆ. ಭಾಗ್ಯವಶದಿಂದ ಮತ್ತೊಂದು ಅನುಕೂಲವೂ ಇದೆ: ಬ್ರಿಟಿಷ್ ಜನರು ಒದಗಿಸಬಲ್ಲ ಅನೇಕ ವಸ್ತುಗಳು ಭರತಖಂಡವು ಒದಗಿಸಿಕೊಳ್ಳಲಾಗದಂಥವು. ಭರತಖಂಡವು ಒದಗಿಸಬಲ್ಲ ಅನೇಕ ವಸ್ತುಗಳು ಬ್ರಿಟಿಷ್ ಜನರು ತಮ್ಮ ದೇಶದಲ್ಲಿ ಒದಗಿಸಿಕೊಳ್ಳಲಾಗದಂಥವು. ಆದಕಾರಣ, ಬ್ರಿಟಿಷ್ ಜನಾಂಗದವರಿಗೆ ಪ್ರತಿಕೂಲವನ್ನುಂಟುಮಾಡಿ ಭರತಖಂಡಕ್ಕೆ ಅನುಕೂಲವನ್ನು ಪಡೆಯಬೇಕಾಗಿಲ್ಲ. ಹಾಗೆಯೇ ಬ್ರಿಟಿಷ್ ಜನಾಂಗದ ಅನುಕೂಲವನ್ನು ಸಾಧಿಸುವಲ್ಲಿ ಭರತಖಂಡಕ್ಕೆ ಪ್ರತಿಕೂಲವನ್ನುಂಟುಮಾಡಿ ಅದನ್ನು ಸಾಧಿಸಬೇಕಾದ ಅಗತ್ಯವೂ ಇಲ್ಲ. ಆದುದರಿಂದ ಬ್ರಿಟಿಷರ ಯೋಗಕ್ಷೇಮದೃಷ್ಟಿಯಿಂದಲೂ, ಭಾರತೀಯರ ಯೋಗಕ್ಷೇಮದೃಷ್ಟಿಯಿಂದಲೂ ಉಭಯಥಾಪಿ ಇವೆರಡು ಜನಾಂಗಗಳ ಈಗಿನ ಮೈತ್ರಿಯೂ ಸಂಬಂಧವೂ ನಡೆದು ಬರಬೇಕಾದುದು ಅವಶ್ಯಕವೂ, ಯುಕ್ತವೂ ಆಗಿದೆ. ಅವು ಹಾಗೆ ಶಾಶ್ವತವಾಗಿ ನಡೆದು ಬರುವುವೆಂದು ದೃಢವಾಗಿ ನಂಬಿರುವವರಲ್ಲಿ ನಾನೂ ಒಬ್ಬನು.

ಇದು ಪ್ರಪಂಚದ ಸ್ಥಿತಿಯು ಹೇಗಿದೆಯೆಂಬ ವಿಷಯವನ್ನು ಕುರಿತು ಸಂಕ್ಷೇಪವಾದ ಈ ವಿವರವನ್ನು ತಮ್ಮ ಅವಗಾಹನೆಗೆ ತಂದಿರುವುದರಲ್ಲೊಂದು ಉದ್ದೇಶವಿದೆ. ಸರ್ಕಾರದ ನಾನಾ ಶಾಖೆಗಳಲ್ಲಿಯೂ ನಡೆದಿರುವ ಕಾರ್ಯಗಳನ್ನೂ ಮುಂದೆ ನಡೆಯಬೇಕಾಗಿರುವ ಕಾರ್ಯಕ್ರಮವನ್ನೂ ತಮಗೆ ನಿವೇದಿಸಿದಾಗ, ಒಟ್ಟು ಪ್ರಪಂಚದ ಪರಿಸ್ಥಿತಿಯನ್ನು ನೆನಪಿನಲ್ಲಿಟ್ಟುಕೊಂಡು ಆ ದೃಷ್ಟಿಯಿಂದ ಅವುಗಳನ್ನು ತೂಗಿನೋಡಿ ವಿಮರ್ಶಿಸಲು ತಮಗೆ ಅನುಕೂಲಿಸಲೆಂಬುದೇ ನನ್ನ ಆ ಉದ್ದೇಶ. ನಾನಾ ವಸ್ತುಗಳ ಧಾರಣೆಗಳೂ ಸಹ, ಹಿಂದೆ ಎಂದೂ ಇಲ್ಲದಷ್ಟುಮಟ್ಟಿಗೆ ಈಗ ಇಳಿದು ಹೋಗಿವೆ. ಆಯವ್ಯಯಗಳನ್ನು ಸರಿದೂಗಿಸಿಕೊಂಡು ಜೀವನ ಮಾಡುವುದೇ ಅನೇಕಾನೇಕ ಮಂದಿಗಳಿಗೆ ಈಗ [illegible]ವೆನಿಸುವಷ್ಟು ಕಷ್ಟವಾಗಿದೆ. ಮೊದಲೇ ಇಷ್ಟು ಕಷ್ಟವಾಗಿರುವ ಪರಿಸ್ಥಿತಿಯಲ್ಲಿ, ಮಳೆಬೆಳೆಗಳು ಸರಿಯಾಗಿಲ್ಲದ ಅಸಾಧಾರಣವಾದ ಕಷ್ಟವೂ ಒದಗಿದೆ. ಆದಕಾರಣ ವೆಚ್ಚಗಳನ್ನೆಲ್ಲ ತಗ್ಗಿಸಿ ತೀರ ಕಡಿಮೆಮಾಡಿ, ನಾನಾ ಕಾರ್ಯಕಲಾಪಗಳನ್ನೂ ಸಾಧ್ಯವೆನಿಸುವ ಮಟ್ಟಿನ ಸಂಕುಚಿತ ರೂಪಕ್ಕಿಳಿಸಿ, ಮುಂದೆ ಸುಭಿಕ್ಷವು ಬರುವವರೆಗೂ ಅದೇ ಸ್ಥಿತಿಯಲ್ಲಿ ನಡೆಯಿಸಿಕೊಂಡು ಬರುವುದೊಂದೇ ಈಗಿನ ಕಷ್ಟದೆಸೆಯಿಂದ ಪಾರಾಗುವ ಮಾರ್ಗವೆಂದು ತಮ್ಮಲ್ಲಿ ಕೆಲವರಿಗೆ ತೋರಬಹುದು. ಆದರೆ ಇದೇ ಸನ್ನಿವೇಶದ ಸಂಬಂಧದಲ್ಲಿ ಮತ್ತೊಂದು ಭಾವನೆಯುಳ್ಳವರೂ ಇದ್ದಾರೆ. ಅವರು ಹೇಳುವುದೇನೆಂದರೆ: ಹೊಳೆಯ ದಡದಲ್ಲಿದ್ದು ಬಾಯಾರಿಕೆಯಿಂದ ಬಳಲಬೇಕಾಗಿ ಬಂದರೆ ಹೇಗೋ ಹಾಗೆ ಧಾನ್ಯಸಮೃದ್ಧವಾಗಿರುವ ಸನ್ನಿವೇಶದಲ್ಲಿದ್ದೂ ಕೂಡ, ಕೊಳ್ಳಲು ಹಣವಿಲ್ಲದ ಕಾರಣ, ಜನರು ಹೊಟ್ಟೆಗಿಲ್ಲದೆ ಸೊರಗಬೇಕಾದ ವಿಚಿತ್ರ ಸ್ಥಿತಿಯೊದಗಿದೆ. ಆದಕಾರಣ, ಈಗ ಆಗಬೇಕಾಗಿರುವುದು ವೆಚ್ಚವನ್ನು ತಗ್ಗಿಸುವ ಕಾರ್ಯವಲ್ಲ; ವೆಚ್ಚದ ಪರಿಮಿತಿಗಳನ್ನು ಹಿಗ್ಗಿಸುವುದು: ಸುಖಜೀವನದ ಮಟ್ಟವು ಮೇಲೇರಿ, ಜನರು ಇನ್ನೂ ಹೆಚ್ಚಿನ ಹಂತದ ಜೀವನಕಾಂಕ್ಷೆಗಳನ್ನು ಬಯಸುವಂತೆ ಮಾಡುವುದು; ಇದಕ್ಕೆ ಸಾಧಕವಾಗುವಂತೆ ಜನರ ಕೈಯಲ್ಲಿ ಹಣವು ಇನ್ನೂ ಹೆಚ್ಚು ಹೆಚ್ಚಾಗಿ ಓಡಾಡುವಂತೆ ಮಾಡುವುದು; ಹೀಗೆಂದು ಕೆಲವರು ಹೇಳುತ್ತಾರೆ. ಆಯುಧಗಳ ಹೋರಾಟ ಜೊತೆದಾಟಗಳಿಗೆ ಬದಲಾಗಿ ಇತರ ದೇಶಗಳವರು ಅಗ್ಗದ ಸಾಮಾನುಗಳನ್ನು ತಂದು ತುಂಬಿ ಹಣವನ್ನು ಹೀರುವ ಆರ್ಥಿಕ ಸಮರವು ನಡೆಯುತ್ತಿರುವಲ್ಲಿ, ಅಕ್ಕತಳ್ಳುವ ಪ್ರಯತ್ನಮಾಡದೆ ಹೋದರೆ ಪರಿಣಾಮವಾಗದೆಂಬ ವಾದಕ್ಕೂ ಅವಕಾಶವಿದೆ. ಇತರ ಜನಾಂಗಗಳಂತೆಯೇ ನಾವೂ ವಸ್ತುರಚನೆಯ ವಿಧಾನಗಳನ್ನು ಉತ್ತಮಪಡಿಸಿಕೊಂಡು ನಮ್ಮ ದೇಶದ ವಸ್ತುಗಳಿಗೆ ಗಿರಾಕಿಗಳನ್ನು ಹೆಚ್ಚಿಸಿಕೊಳ್ಳಬೇಕು. ಎಲ್ಲಕ್ಕೂ ಮಿಗಿಲಾಗಿ, ನಮ್ಮವರ ದೇಹಬಲವೂ ಬುದ್ಧಿಬಲವೂ ಕೌಶಲ್ಯವೂ ಇನ್ನೂ ಹೆಚ್ಚುವಂತೆ ಮಾಡಿಕೊಳ್ಳಬೇಕಾದುದು ಅತ್ಯಾವಶ್ಯಕ.

ಅವುಗಳನ್ನು ಹೆಚ್ಚುಮಾಡಿಕೊಳ್ಳಬೇಕಾದ ವಿಚಾರದಲ್ಲಿ ಪ್ರಪಂಚದಲ್ಲೆಲ್ಲ ಪ್ರಯತ್ನವು ನಡೆಯುತ್ತಿದೆ. ಆತಂಕಜನಕವಾದ ಈಗಿನ ಅವಾಂತರದ ಮಧ್ಯದಲ್ಲಿ ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಸಮಾನ ಧರ್ಮದಂತೆ ಬೆಳಗುತ್ತಿರುವ ಹರ್ಷಜನಕವಾದ ಕೆಲವು ಶುಭಲಕ್ಷಣಗಳಲ್ಲಿ ಇದೂ ಒಂದಾಗಿದೆ. ಬಂಡವಾಳಗಾರರಾದ ವ್ಯಕ್ತಿಗಳ ಕಾರ್ಯಕಲಾಪಗಳಿಗೆ ವಿರೋಧಿಗಳಾದ "ಸೋಷಿಯಲಿಜಮ್" ಸಿದ್ಧಾಂತವಾದಿಗಳಿಗೂ ಬಂಡವಾಳಗಾರರಿಗೂ ಮಸಗುತ್ತಿರುವ ಹೋರಾಟದ ಮಧ್ಯದಲ್ಲಿಯೂ, ಮತ್ತು ಸುಖಸಾಧಕವಾಗುವಂತೆ ಆರ್ಥಿಕ ವಿಚಾರಗಳನ್ನಳವಡಿಸಿಕೊಳ್ಳಬೇಕೆಂಬ ಲವಲವಿಕೆಯಿಂದ ನಾನಾ ಜನಾಂಗಗಳೂ ಸಿದ್ಧಮಾಡಿಕೊಳ್ಳುತ್ತಿರುವ ಕಾರ್ಯಕ್ರಮದ ಮಧ್ಯದಲ್ಲಿಯೂ, ಕೂಲಿಗಾಗಿ ದುಡಿಯುವವರ ಸ್ಥಿತಿಯನ್ನು ಉತ್ತಮಪಡಿಸುವ ಒಂದು ಅಂಶವು ಸಮಸ್ತರ ಆದರಕ್ಕೂ ಪಾತ್ರವಾಗಿರುವುದು ಮಾತ್ರ ಮೆಚ್ಚಿ ತಲೆದೂಗುವಂತಿದೆ. ಕೂಲಿಗಾಗಿ ದುಡಿಯುವ ಹೆಂಗಸರೇ ಆಗಲಿ, ಅಥವಾ ಗಂಡಸರೇ ಆಗಲಿ, ಹೆಚ್ಚು ಆರೋಗ್ಯವಾಗಿರುವಂತೆ ಮಾಡುವುದು, ಅವರ ವಿದ್ಯಾಭ್ಯಾಸವು ಇನ್ನೂ ಚೆನ್ನಾಗಿ ನಡೆಯುವಂತೆ ಮಾಡುವುದು, ಅವರುಗಳು ಕಡಿಮೆಮಟ್ಟಿಗೂ ಸುಖವಾಗಿರುವುದಕ್ಕೆ ಬೇಕಾದ ಜೀವನಸೌಕರ್ಯಗಳನ್ನು ಹೆಚ್ಚಿಸುವುದು. ಈ ಭಾಗಗಳಲ್ಲಿ ಔತ್ಸುಕ್ಯದಿಂದ ಕೆಲಸ ನಡೆಯುತ್ತಿರುವುದು ಶ್ಲಾಘ್ಯವಾದ ಸಂಗತಿಯೇ ಸರಿ.

ಮಾತೆಯರ ಮತ್ತು ಯೋಗಕ್ಷೇಮ.

ನಾನು ಮೇಲೆ ಸೂಚಿಸಿರುವ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತೆಯರ ಮತ್ತು ಮಕ್ಕಳ ಯೋಗಕ್ಷೇಮ ವಿಚಾರವಾಗಿ ಕಳೆದ ಒಂದು ವರುಷದ ಅವಧಿಯಲ್ಲಿ ನಮ್ಮ ಸಂಸ್ಥಾನದಲ್ಲಿ ನಡೆದಿರುವ ಕೆಲಸವನ್ನು ಸಂಕ್ಷೇಪವಾಗಿ ವಿಚಾರಮಾಡೋಣ. ಹೆರಿಗೆಯ ಕಾಲದಲ್ಲಿ ಹೆಂಗಸರ ದೇಹಸ್ಥಿತಿಯನ್ನೂ, ಎರಡು ವರುಷಗಳು ತುಂಬುವವರೆಗೆ ಮಕ್ಕಳ ಬೆಳವಣಿಗೆಯನ್ನೂ ಸರಿಯಾಗಿ ನೋಡಿಕೊಳ್ಳುವುದೇ ಜನಾಂಗದ ಬಲಕ್ಕೆ ಮುಖ್ಯಾಧಾರವೆಂಬ ಸಂಗತಿಯನ್ನು ನಾವು ಸರಿಯಾಗಿ ಮನವಟ್ಟು ಮಾಡಿಕೊಳ್ಳದಿರುವ ಸಂಭವವುಂಟು. ಪ್ಲೇಗು, ಕಾಲರಾ, ಸಿಡುಬು ಈ ಮೂರು ರೋಗಗಳಿಂದ ಜನರು ಮರಣಹೊಂದುವುದಕ್ಕಾಗಿ ನಾವು ಮನಮರುಗುವೆವು. ಅವುಗಳ ದೆಸೆಯಿಂದ ಸಂಭವಿಸುವ ಮರಣಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗಿ ನಮ್ಮಿಂದ ಸಾಧ್ಯವಿರುವ ಪ್ರಯತ್ನಗಳನ್ನೆಲ್ಲ ಮಾಡಲು ನಾವು ಹೇರಳವಾಗಿ ಹಣವನ್ನು ವೆಚ್ಚಮಾಡುವೆವು. ಆದರೆ ಈ ಮೂರು ರೋಗಗಳಿಂದಲೂ ಮೃತಪಡುವ ಜನರ ಒಟ್ಟು ಸಂಖ್ಯೆಯು ಹೆರಿಗೆಯ ಕಾಲದಲ್ಲಿ ಮೃತಪಡುವ ಹೆಂಗಸರ ಮತ್ತು ಎರಡುವರುಷ ವಯಸ್ಸಾಗುವ ಮೊದಲೇ ಮೃತಪಡುವ ಮಕ್ಕಳ ಸಂಖ್ಯೆಯಲ್ಲಿ ಮೂರರಲ್ಲೊಂದು ಭಾಗಕ್ಕೂ ಕಡಿಮೆ. ಇದು ನಮ್ಮಲ್ಲಿ ಹಲವರಿಗೆ ಮನವಟ್ಟಾಗಿಲ್ಲದೆಯೇ ಎಂದು ನಾನು ವಿಸ್ಮಯಪಡುತ್ತೇನೆ. ಹೀಗೆ ಮರಣಗಳಾಗುವಷ್ಟಕ್ಕೇ ಮುಗಿಯಲಿಲ್ಲ. ಹೆರಿಗೆಯ ಕಾಲದಲ್ಲಿ ದೇಹಸ್ಥಿತಿಯನ್ನು ಸರಿಯಾಗಿ ನೋಡಿಕೊಳ್ಳದಕಾರಣ, ಅನೇಕ ಸ್ತ್ರೀಯರು ಯಾವಜ್ಜೀವವೂ ರೋಗಿಗಳಾಗಿ ಕಾಲ ಹಾಕಬೇಕಾಗುವ ದುರವಸ್ಥೆಗೆ ಗುರಿಯಾಗುತ್ತಾರೆ. ಎಳೆಯ ವಯಸ್ಸಿನಲ್ಲಿ ಸರಿಯಾಗಿ ಪೋಷಣೆಮಾಡಿ ದೇಹಸ್ಥಿತಿಯನ್ನು ನೋಡಿಕೊಳ್ಳದೆ ಅಲಕ್ಷ್ಯಮಾಡಿದ ಕಾರಣದಿಂದ ಅಂಥ ಮಕ್ಕಳು ಮುಂದೆ ಬದುಕಿರುವವರೆಗೂ ಒಂದಲ್ಲ ಒಂದು ಬಗೆಯ ನ್ಯೂನತೆಯಿಂದ ಕಾಡಿ ಪಾಡುಪಡುತ್ತಾರೆ. ಕೇವಲ ಆರ್ಥಿಕ ದೃಷ್ಟಿಯಿಂದ ಪರಿಗಣಿಸಿದರೂ ಕೂಡ, ಸಂಸ್ಥಾನದ ಜನ ಬಲದ ಸಂಪತ್ತಿಗೆ ಇದರಿಂದ ಎಷ್ಟು ನಷ್ಟವಾಗುತ್ತಿದೆಯೆಂಬುದು ತಮ್ಮೆಲ್ಲರಿಗೂ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರಪಂಚದಲ್ಲಿ ನಡೆಯುತ್ತಿರುವ ಆರ್ಥಿಕ ಸಮರವನ್ನು ಕುರಿತು ಈಗ ತಾನೇ ನಾನು ಪ್ರಸ್ತಾಪಿಸಿರುವುದು ಸರಿಯಷ್ಟೆ. ಒಂದು ಜನಾಂಗವು ಕೈಗಾರಿಕೆಯಲ್ಲಿ ಹಿಂದೆ ಬಿದ್ದಿರುವ ಮತ್ತೊಂದು ಜನಾಂಗದ ಮೇಲೆ ನಡೆಯಿಸುವ ಆ ಸಮರದಲ್ಲಿ ಆಯಾ ದೇಶದಲ್ಲಿ ದುಡಿಯುವ ಕೆಲಸಗಾರರೇ ಸೈನಿಕರು. ಆ ಸೈನಿಕರಾದ ಕೆಲಸಗಾರರ ಸ್ಥಿತಿಯನ್ನು ಉತ್ತಮಪಡಿಸುವ ಭಾಗದಲ್ಲಿ ಸಮಸ್ತ ದೇಶಗಳಲ್ಲಿಯೂ ಪ್ರಯತ್ನಗಳು ನಡೆಯುತ್ತಿರುವ ಅಂಶವನ್ನೂ ನಾನು ಸೂಚಿಸಿದೆನು. ಮಾತೆಯರ ಮತ್ತು ಮಕ್ಕಳ ದೇಹಸ್ಥಿತಿಯನ್ನು ನೋಡಿಕೊಳ್ಳುವ ವಿಚಾರದಲ್ಲಿ ರಷ್ಯಾದೇಶದವರಷ್ಟು ಮಟ್ಟಿಗೆ ಮತ್ತಾವ ದೇಶದವರೂ ಗೌರವವನ್ನು ಕಲ್ಪಿಸಿಲ್ಲ. ಈ ವಿಚಾರದಲ್ಲಿ ಮೊನ್ನೆ ಮೊನ್ನೆ ಪ್ರಕಟವಾದೊಂದು ಗ್ರಂಥದಲ್ಲಿ ಬರೆದಿರುವ ಸಂಗತಿಗಳನ್ನು ನೋಡಿದರೆ, ಮಾತೆಯರ ಮತ್ತು ಮಕ್ಕಳ ಯೋಗಕ್ಷೇಮಕ್ಕೆ ಗಮನ ಕೊಡುವ ವಿಷಯದಲ್ಲಿ ರಷ್ಯಾದೇಶದವರ ಕಾರ್ಯಕಲಾಪಗಳು ಇತರ ಸಮಸ್ತ ದೇಶಗಳಿಗೂ ಮಾದರಿಯಂತಿವೆ. ಮಾತೆಯರ ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವ ವಿಚಾರದಲ್ಲಿ ನಮ್ಮ ಸಂಸ್ಥಾನದಲ್ಲಿಯೂ ಅನೇಕ ವರುಷಗಳಿಂದಲೂ ಕೆಲಸ ನಡೆಯುತ್ತಿದೆಯಷ್ಟೆ. ನಮ್ಮ ಸಂಸ್ಥಾನದಲ್ಲಿ ಈ ಕೆಲಸವು ಹಿಂದೆ ಪ್ರಾರಂಭವಾದುದು ದಿವಂಗತರಾದ ಮಹಾಮಾತೃಶ್ರೀಯವರ ಕಾರುಣ್ಯದ ಫಲವಾಗಿ ಮಾತ್ರವೇ. ಅವರ ನಾಮಾಂಕಿತದಿಂದ ಶೋಭಿಸುತ್ತಿರುವ ಹೆಂಗಸರ ಆಸ್ಪತ್ರೆಯು ಮೈಸೂರು ನಗರದಲ್ಲಿ 1880 ನೆಯ ಇಸವಿಯಲ್ಲಿ ಸ್ಥಾಪಿತವಾಯಿತು. ಆ ರೀತಿಯಲ್ಲಿ ಅವರು ನಮ್ಮೆಲ್ಲರಿಗೂ ಮಾರ್ಗತೋರಿ ಉಪಕಾರಮಾಡಿದರು. ಮಹಾಮಾತೃಶ್ರೀಯವರು ದಿವಂಗತರಾಗುವುದಕ್ಕೆ ಸ್ವಲ್ಪ ಪೂರ್ವದಲ್ಲಿ ನಿರ್ಧರವಾದಂತೆ ಬೆಂಗಳೂರಿನಲ್ಲಿ ಅವರ ನಾಮಾಂಕಿತದಿಂದ ಶೋಭಿಸುವ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗೆ ಅವರ ಕುವರರಾದ ಶ್ರೀಮದ್ಯುವರಾಜರವರು ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸಿದರು. ಆ ಆಸ್ಪತ್ರೆಯು ಇಂಡಿಯಾದೇಶದಲ್ಲೆಲ್ಲ ಅತ್ಯಂತ ಶ್ರೇಷ್ಠವಾದ ಆಸ್ಪತ್ರೆಗಳಲ್ಲೊಂದಾಗುತ್ತದೆ. ಏತನ್ಮಧ್ಯೆ, ತಾಯಿಯರ ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕಾಗಿ "ಗುಡಾಂಬಾ ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಟ್ರಸ್ಟ್" ಎಂಬ ಹೆಸರಿನ ವ್ಯವಸ್ಥೆಯನ್ನೇರ್ಪಡಿಸುವುದಕ್ಕಾಗಿ 1923 ರಲ್ಲಿ 1,20,000 ರೂಪಾಯಿಗಳ ನಿಧಿಯನ್ನು ಮಹಾಮಾತೃಶ್ರೀಯವರ ಸೋದರರಾದ ರಾಜಸೇವಾಧುರೀಣ ಸರ್. ಎಂ. ಕಾಂತರಾಜ ಅರಸಿನವರು ದಯೆಪಾಲಿಸಿ ಉಪಕರಿಸಿದರು. ಅವರ [illegible] ಘನವಾದ ಮೇಲ್ಪಂಕ್ತಿಯನ್ನನುಸರಿಸಿ, ಸಂಸ್ಥಾನದ ದಾನಶೀಲರಲ್ಲಿ ಬಹುಮಂದಿ ಧರ್ಮಕಾರ್ಯಗಳನ್ನು ನೆರವೇರಿಸಿರುವುದು ಹರ್ಷಜನಕವಾದ ಸಂಗತಿಯಾಗಿದೆ. ಸಂಸ್ಥಾನದ ನಾನಾ ಸ್ಥಳಗಳಲ್ಲಿಯೂ ಆಸ್ಪತ್ರೆಗಳನ್ನು ಕಟ್ಟಿಸಲು ಅವರುಗಳು ಈಗ್ಗೆ ಕೆಲವು ವರುಷಗಳ ಅವಧಿಯಲ್ಲಿ 9 ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸರ್ಕಾರದವರೂ ಈ ಸಂಬಂಧವಾಗಿ ತಮ್ಮ ಭಾಗದ ಕೆಲಸವನ್ನು ನೆರವೇರಿಸಿಯೂ ನೆರವೇರಿಸುತ್ತಲೂ ಇದ್ದಾರೆ. ಅವರು ಸೂಲಗಿತ್ತಿಯರನ್ನು ಹೆಚ್ಚು ಹೆಚ್ಚಾಗಿ ನೇಮಕಮಾಡುತ್ತಿದ್ದಾರೆ. ಲೇಡಿ ಡಾಕ್ಟರುಗಳು ತಮ್ಮ ಕಸಬಿಗೆ ಸಮೀಪವಾಗಿರುವ ಸ್ಥಳಗಳಿಗೆ ಹೋಗಿ ಹೆಂಗಸರ ಮತ್ತು ಮಕ್ಕಳ ದೇಹಸ್ಥಿತಿಯನ್ನು ನೋಡಿಕೊಂಡು ಬರುವಂತೆ ಮಾಡುವ ವಿಶೇಷ ವಿಧದ ಏರ್ಪಾಡು ನಡೆಯುತ್ತಿದೆ. ಬಸುರಿ ಬಾಣಂತಿಯರ ಮತ್ತು ಮಕ್ಕಳ ಯೋಗಕ್ಷೇಮ ವ್ಯವಸ್ಥೆಯ ಏರ್ಪಾಡುಗಳೂ ಮುಂದುವರಿಯುತ್ತಿವೆ. ಇದಕ್ಕಾಗಿ ಏರ್ಪಟ್ಟಿರುವ ಹದಿನಾಲ್ಕು "ಚೈಲ್ಡ್ ವೆಲ್ಫೇರ್ ಸೆಂಟರು"ಗಳೆಂಬ ವ್ಯವಸ್ಥಾಸ್ಥಾನಗಳು ಈಗಿವೆ. ಈಚೆಗೆ ನಡೆಯುತ್ತಿರುವ ಶಿಶುಸಪ್ತಾಹದ ಏರ್ಪಾಡಿನ ಸಂಬಂಧವಾಗಿ ಕಳೆದ ಎರಡು ವರುಷಗಳಲ್ಲಿ ಪ್ರತಿವರ್ಷವೂ ಸುಮಾರು ಎಂಟು ಸಾವಿರ ಮಕ್ಕಳು ನಿಪುಣರಾದ ಡಾಕ್ಟರುಗಳ ಪರೀಕ್ಷೆಗೆ ಬಂದು ಅವುಗಳ ದೇಹಸ್ಥಿತಿಯ ಪರೀಕ್ಷೆಯು ನಡೆದಿದೆ. ಈ ಭಾಗದಲ್ಲಿ ನಡೆದ ಕಾರ್ಯಕಲಾಪಗಳಲ್ಲಿ ಒಟ್ಟು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿಯೇ ನಡೆದ ಸ್ಪರ್ಧೆಯಲ್ಲಿ ಮೈಸೂರು ಸಂಸ್ಥಾನಕ್ಕೆ 1932 ನೆಯ ಇಸವಿಯಲ್ಲಿ ಎರಡನೆಯ ಸ್ಥಾನವೂ, 1933 ನೆಯ ಇಸವಿಯಲ್ಲಿ ಮೊದಲನೆಯ ಸ್ಥಾನವೂ, ಮತ್ತು 1934 ನೆಯ ಇಸವಿಯಲ್ಲಿ ಮೂರನೆಯ ಸ್ಥಾನವೂ ದೊರೆತಿವೆ.

(ಸಶೇಷ)

ವಿಜಯತಾಂ ಭಗವಾನ್ ಸಹಸ್ರಕಿರಣಃ.

ಅಖಿಲಕರ್ಣಾಟಕ ದ್ವಿತೀಯ ಜ್ಯೌತಿಷಿಕ ಸಮ್ಮೇಳನ, ಮೈಸೂರು.

ಮಹಾಸ್ವಾಮಿಯವರೆ ಮತ್ತು ಸಭ್ಯಮಹಾಶಯರೆ,

ನಮ್ಮನ್ನಾಳುವ ಪ್ರಭುವರ್ಯರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಅವರ ಮತ್ತು ನಮ್ಮ ಶ್ರೀಮದ್ಯುವರಾಜರು ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ.ಸಿ.ಐ.ಇ., ಅವರ ಉದಾರಾಶ್ರಯ ಮತ್ತು ಪ್ರೋತ್ಸಾಹಗಳಿಂದ ಈ ದಿವಸ ಇಲ್ಲಿ ನೆರೆದಿರುವ ಅಖಿಲಕರ್ಣಾಟಕ ದ್ವಿತೀಯ ಜ್ಯೌತಿಷಿಕ ಸಮ್ಮೇಳನಕ್ಕೆ ಆಹ್ವಾನಿಸಲ್ಪಟ್ಟ ತಾವುಗಳು, ಸ್ವಾಗತಸಂಘದವರ ಪ್ರಾರ್ಥನೆಯನ್ನು ಲಾಲಿಸಿ, ತಮ್ಮ ದೇಹಶ್ರಮಾದಿಗಳನ್ನು ಪರಿಗಣಿಸದೆ ಇಲ್ಲಿಗೆ ದಯಮಾಡಿಸಿದುದರಿಂದ, ಸ್ವಾಗತಸಂಘದವರ ಪರವಾಗಿ ತಮ್ಮೆಲ್ಲರಿಗೂ ಸುಸ್ವಾಗತವನ್ನು ಬಯಸಲು ತುಂಬ ಹರ್ಷಿಸುತ್ತೇನೆ. ಈ ಸಮ್ಮೇಳನದ ಪ್ರಾರಂಭೋತ್ಸವವನ್ನು ತಮ್ಮ ಅಮೃತವಾಣಿಯಿಂದ ನೆರವೇರಿಸಲು, ನಮ್ಮ ಶ್ರೀಮದ್ಯುವರಾಜರು ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ.ಸಿ.ಐ.ಇ., ಅವರು ತಮ್ಮ ಅನೇಕ ರಾಜಕಾರ್ಯಗಳ ಮಧ್ಯದಲ್ಲಿ ಅವಕಾಶವನ್ನು ಕಲ್ಪಿಸಿಕೊಂಡು ನಮ್ಮ ಪ್ರಾರ್ಥನೆಯಂತೆ ಇಲ್ಲಿಗೆ ದಯಮಾಡಿಸಿರುವುದು ನಮ್ಮಗಳ ಭಾಗ್ಯೋದಯವೆಂದು ಉದ್ಘೋಷಿಸಬೇಕಾಗಿದೆ. ಇಂಥ ನಮ್ಮ ಮಹಾಸ್ವಾಮಿಯವರಿಗೆ ತಮ್ಮೆಲ್ಲರ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ಅಲ್ಲದೆ ನಮ್ಮ ಈ ಸ್ವಾಗತಸಭೆಯವರ ಪ್ರಾರ್ಥನೆಯನ್ನು ಅತ್ಯಾನಂದದಿಂದ ಅಂಗೀಕರಿಸಿ, ಈ ಸಮ್ಮೇಳನದ ಅಧ್ಯಕ್ಷತೆಯನ್ನು ಸ್ವೀಕರಿಸಲು ಒಪ್ಪಿ, ಇದರ ಉದ್ದೇಶಗಳು ಸಫಲವಾಗುವಂತೆ ಮಾಡಲು, ಇಲ್ಲಿಗೆ ದಯಮಾಡಿರುವ ಮದರಾಸು ಹೈಕೋರ್ಟ್ ನ್ಯಾಯಾಧೀಶರಾದ ಸರ್ ವಿ. ರಾಮೇಶಂ ಅವರಿಗೂ ತಮ್ಮೆಲ್ಲರ ಪರವಾಗಿ ವಂದನೆಗಳನ್ನು ಅರ್ಪಿಸುವೆನು.

ನಾವು ಅಂತರಿಕ್ಷದಲ್ಲಿ ಸೂರ್ಯಚಂದ್ರಾದಿ ಗ್ರಹಗಳನ್ನೂ ನಕ್ಷತ್ರಗಳನ್ನೂ ಉದ್ದೇಶಪೂರ್ವಕವಾಗಿಯೋ, ಉದ್ದೇಶವಿಲ್ಲದೆಯೋ ಪ್ರತಿ ಕ್ಷಣದಲ್ಲಿಯೂ ನೋಡುತ್ತಲಿದ್ದೇವೆ. ಆದರೆ ನಾವಿರುವ ಭೂಗೋಳದಿಂದ ಖಗೋಳದಲ್ಲಿರುವ ಗ್ರಹಗಳು ಎಷ್ಟು ದೂರದಲ್ಲಿವೆ? ಅವುಗಳು ತಮ್ಮ ತಮ್ಮ ಮಾರ್ಗಗಳಲ್ಲಿ ಅಂದರೆ ಕಕ್ಷ್ಯಾವೃತ್ತಗಳಲ್ಲಿ ಹೇಗೆ ಸಂಚರಿಸುತ್ತಿವೆ? ಅವುಗಳಿಗೆ ಎಷ್ಟು ವಿಧವಾದ ಗತಿಗಳಿರುತ್ತವೆ? ಅವುಗಳ ಉದಯ, ಅಸ್ತಮಯ, ಗ್ರಹಣ ಮೊದಲಾದುವುಗಳ ಸ್ವರೂಪವೇನು? ಮತ್ತು ಖಗೋಳದಲ್ಲಿರುವ ಗ್ರಹಾದಿಗಳಿಗೂ ಭೂಗೋಳದಲ್ಲಿ ನೆಲಸಿರುವ ಚರಾಚರವಸ್ತುಗಳಿಗೂ ಇರುವ ಪರಸ್ಪರ ಸಂಬಂಧವೇನು? ಎಂಬ ಅಂಶಗಳನ್ನು ನಾವು ತಿಳಿಯಲು ಯತ್ನಿಸದೆ "ಅತಿಪರಿಚಯಾದವಜ್ಞಾ" ಎಂಬ ನ್ಯಾಯದಂತೆ ನಾವುಗಳು ಉದಾಸೀನರಾಗಿರುತ್ತೇವೆ. ಇಂಥ ನಮ್ಮ ಔದಾಸೀನ್ಯವನ್ನು ತೊಲಗಿಸಿ, ಮೇಲೆ ಕಂಡ ಅಂಶಗಳ ವಿಷಯವಾಗಿ ನಮಗೆ ಜ್ಞಾನಸಂಪತ್ತನ್ನಿತ್ತು, ನಮ್ಮ ಜೀವನಕ್ರಮವನ್ನು ಉತ್ತಮಗೊಳಿಸಲು, ಪರಮದಯಾಳುಗಳಾದ ಪೂರ್ವದ ಮಹರ್ಷಿಗಳು ತಮ್ಮ ಸೂಕ್ಷ್ಮದೃಷ್ಟಿಯಿಂದ ಗ್ರಹಗತಿಗಳನ್ನು ಕಂಡುಹಿಡಿದು, ಅನೇಕ ಜ್ಯೌತಿಷ ಸಿದ್ಧಾಂತಗ್ರಂಥಗಳನ್ನು ಬರೆದಿರುತ್ತಾರೆ.

ಅಲ್ಲದೆ ಕರ್ಮಭೂಮಿಯಾದ ನಮ್ಮ ಭರತಖಂಡದಲ್ಲಿ ಹುಟ್ಟಿದ ಪ್ರತಿಯೊಬ್ಬ ಮಾನವನ ಜೀವಮಾನದ ಸಮಸ್ತ ವ್ಯವಹಾರಗಳಲ್ಲಿಯೂ, ಜ್ಯೋತಿಶ್ಶಾಸ್ತ್ರದ ಜ್ಞಾನವು ಪರಮಾವಶ್ಯಕವೆಂಬುದು ನಮಗೆಲ್ಲ ಅನುಭವವೇದ್ಯವಾದ ವಿಷಯವಾಗಿದೆ. 'ವೇದಾಸ್ತಾವದ್ಯಜ್ಞಕರ್ಮಪ್ರವೃತ್ತಾ ಯಜ್ಞಾಃ ಪ್ರೋಕ್ತಾಸ್ತೇತು ಕಾಲಾಶ್ರಯೇಣ | ಶಾಸ್ತ್ರಾದಸ್ಮಾತ್ ಕಾಲಬೋಧೋ ಯತಃಸ್ಯಾತ್ ವೇದಾಂಗತ್ವಂ ಜ್ಯೋತಿಷಸ್ಯೋಕ್ತಮಸ್ಮಾತ್ ||' 'ವೇದಚಕ್ಷುಃ ಕಿಲೇದಂ ಸ್ಮೃತಂ ಜ್ಯೋತಿಷಂ' ಎಂದು ಭಾಸ್ಕರಾಚಾರ್ಯರು ತಮ್ಮ ಗ್ರಹಗಣಿತದಲ್ಲಿ ಹೇಳಿರುವಂತೆ, ಯಜ್ಞಾದಿ ಸಕಲವೈದಿಕಕರ್ಮಗಳನ್ನೂ ಆಯಾಯ ನಿರ್ದಿಷ್ಟಕಾಲಗಳಲ್ಲಿಯೇ ಆಚರಿಸಬೇಕಾಗಿರುವುದರಿಂದ, ಆ ಕಾಲದ ಸ್ವಭಾವವನ್ನು ವಿವರಿಸುವ ಜ್ಯೋತಿಶ್ಶಾಸ್ತ್ರವು ವೇದಾಂಗವೆಂತಲೂ, 'ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ' ಎಂಬಂತೆ ಆ ವೇದಾಂಗಗಳೆಲ್ಲ ಈ ಶಾಸ್ತ್ರವು ನೇತ್ರರೂಪವಾಗಿರುವುದೆಂತಲೂ ಪ್ರತೀತಿಯಿರುವುದರಿಂದ ನಮ್ಮಲ್ಲಿ ಜ್ಯೋತಿಶ್ಶಾಸ್ತ್ರಕ್ಕೆ ಅತಿಶಯವಾದ ಮಹತ್ತ್ವವುಂಟಾಗಿದೆ.

ಈ ಜ್ಯೋತಿಶ್ಶಾಸ್ತ್ರವು ಗಣಿತ, ಹೋರಾ, ಸಂಹಿತಾ ಎಂಬುದಾಗಿ ಮೂರು ಸ್ಕಂಧಗಳನ್ನೊಳಗೊಂಡಿದೆ. ಗಣಿತಭಾಗದಲ್ಲಿ ಸೂರ್ಯಾದಿಗ್ರಹಗಳ ಚಲನವೇ ಮುಂತಾದ ವಿಷಯಗಳನ್ನೂ, ಹೋರಾಸ್ಕಂಧದಲ್ಲಿ ಜಾತಕಾದಿ ಫಲಶ್ರುತಿಗಳನ್ನೂ, ವಿವಾಹಾದಿ ಸಂಸ್ಕಾರಗಳಿಗೆ ಮುಹೂರ್ತಗಳನ್ನೂ, ಮೂರನೆಯದಾದ ಸಂಹಿತೆಯಲ್ಲಿ ಉಲ್ಕಾಪಾತಾದಿ ಆಕಾಶವೈಚಿತ್ರ್ಯವೇ ಮೊದಲಾದುವುಗಳನ್ನೂ ಗ್ರಂಥಕರ್ತರಾದ ಪೂರ್ವಾಚಾರ್ಯರು ವರ್ಣಿಸಿರುತ್ತಾರೆ. ಈ ಸ್ಕಂಧತ್ರಯದಲ್ಲಿ ಗಣಿತದ ಜ್ಞಾನವನ್ನು ನಾವುಗಳು ಮೊದಲು ಪಡೆಯಬೇಕಾಗಿದೆ. ಈ ಗಣಿತಭಾಗವನ್ನು ಲಲ್ಲ, ಆರ್ಯಭಟ, ವರಾಹಮಿಹಿರರೇ ಮೊದಲಾದ ನಮ್ಮ ಪ್ರಾಚೀನಜ್ಯೋತಿಷಾಚಾರ್ಯರು ಸಿದ್ಧಾಂತರೂಪವಾಗಿ ಬರೆದಿರುತ್ತಾರೆ. ಅವುಗಳಲ್ಲಿ ಸೂರ್ಯಸಿದ್ಧಾಂತವೇ ಮೊದಲಾದ ಹದಿನೆಂಟು ಸಿದ್ಧಾಂತಗಳು ಪ್ರಸಿದ್ಧವಾಗಿವೆ.

ಈ ಸಿದ್ಧಾಂತಗಳಲ್ಲಿ ಗ್ರಹಗಣಿತವನ್ನು ಮಾಡಲು ಒಂದು ಕಲ್ಪದ ಪ್ರಾರಂಭದಿಂದಲೂ ಗಣಿತಮಾಡಬೇಕಾಗುವ ಕ್ರಮವನ್ನು ತಪ್ಪಿಸಲು, ತಂತ್ರಗ್ರಂಥಗಳನ್ನು ಪೂರ್ವಾಚಾರ್ಯರು ರಚಿಸಿ, ಅವುಗಳಲ್ಲಿ ಆಯಾಯ ಯುಗದ ಪ್ರಾರಂಭದಿಂದಲೂ ಗಣಿತಮಾಡುವುದನ್ನು ಪ್ರತಿಪಾದಿಸಿದರು. ಕಾಲಕ್ರಮೇಣ ಇದೂ ಸಹ ಕಷ್ಟಸಾಧ್ಯವೆಂದು ತೋರಿದ ಮೇಲೆ ಕೇಶವದೈವಜ್ಞರೇ ಮೊದಲಾದವರು ಕರಣಗ್ರಂಥಗಳನ್ನು ಬರೆದು ಅವುಗಳಲ್ಲಿ ಶಕಾದಿಯಾಗಿ ಗಣಿತಮಾಡುವ ಕ್ರಮವನ್ನು ರೂಢಿಗೆ ತಂದರು. ಈ ಕರಣಗ್ರಂಥಗಳನ್ನು ಬರೆದವರು ಅವರು ಇದ್ದ ಕಾಲಕ್ಕನುಸಾರವಾಗಿ ಧ್ರುವಕಗಳನ್ನು ಏರ್ಪಡಿಸಿಕೊಂಡು ಬರೆದಿರುವುದರಿಂದ ಆ ಗ್ರಂಥಗಳನ್ನು ಎಲ್ಲಾ ಕಾಲಗಳಿಗೂ ಬದಲಾವಣೆಮಾಡದೆ ಸಮನ್ವಯಿಸಿದರೆ ಆನಯನಾದಿಗಳಲ್ಲಿ ವ್ಯತ್ಯಾಸಗಳು ಬಂದೇ ಬರುವುವು. ಈ ರೀತಿ ಸಿದ್ಧಾಂತವನ್ನನುಸರಿಸಿ ಆಯಾಯ ಕಾಲಕ್ಕೆ ಸರಿಯಾಗಿ ಕರಣಗ್ರಂಥಗಳನ್ನು ಬದಲಾವಣೆಮಾಡಿಕೊಳ್ಳದೇ ಇರುವುದೂ, ಹಾಗೆ ಮಾಡಿದರೂ ಕೆಲವಂಶಗಳನ್ನು ಮಾತ್ರ ಸರಿಪಡಿಸಿಕೊಂಡು, ಉಳಿದ ಕೆಲವಂಶಗಳನ್ನು ಕರಣಗ್ರಂಥಗಳಲ್ಲಿ ಹೇಳಿರುವಂತೆಯೇ ಅನುಸರಿಸುವುದೂ, ಈಗಿನಕಾಲದಲ್ಲಿ ಕಂಡುಬರುವ ಪಂಚಾಂಗಗಳ ಪರಸ್ಪರ ವ್ಯತ್ಯಾಸಗಳಿಗೆ ಕಾರಣವಾಗಿದೆ. ಇದೂ ಅಲ್ಲದೆ, ಒಂದು ದೇಶದಲ್ಲಿಯೇ ಪಂಚಾಂಗಕರ್ತರಲ್ಲಿ ಒಬ್ಬರು ಒಂದು ಕರಣಗ್ರಂಥವನ್ನು ಅನುಸರಿಸಿದರೆ ಮತ್ತೊಬ್ಬರು ಮತ್ತೊಂದು ಕರಣಗ್ರಂಥವನ್ನನುಸರಿಸಿ ತಿಥ್ಯಾದಿಗಳನ್ನು [illegible]ಸುವುದೂ ಪಂಚಾಂಗಗಳ ವ್ಯತ್ಯಾಸಗಳಿಗೆ ಕಾರಣವಾಗಿದೆ. ಈ ನ್ಯೂನತೆಗಳನ್ನು ಸರಿಪಡಿಸಿಕೊಂಡ ಹೊರತು ಪಂಚಾಂಗಗಳಲ್ಲಿ ಏಕವಾಕ್ಯತೆಯು ಬರುವುದಿಲ್ಲ. ಈ ನ್ಯೂನತೆಗಳನ್ನು ನಿವಾರಿಸಲು ಸಿದ್ಧಾಂತಗ್ರಂಥಗಳ ಪೂರ್ಣಜ್ಞಾನವೂ, ಗಣಿತಶಾಸ್ತ್ರಾಭಿಜ್ಞತೆಯೂ ಇಂತಹವರೇ ಸಮರ್ಥರೆಂದು ಹೇಳಿದರೆ ಅಸಂಗತವೆನಿಸಲಾರದೆಂದು ಭಾವಿಸುತ್ತೇನೆ. ಈ ವಿಧವಾದ ನ್ಯೂನತೆಗಳ ಪರಿಹಾರಕ್ಕಾಗಿಯೇ ನಮ್ಮ ಪೂರ್ವಾಚಾರ್ಯರು ರಚಿಸಿರುವ ಸಿದ್ಧಾಂತಗ್ರಂಥಗಳಲ್ಲಿ ಯಂತ್ರಾಧ್ಯಾಯವೆಂಬುದನ್ನು ಪ್ರತ್ಯೇಕವಾಗಿ ವಿವರಿಸಿ ಬರೆದಿರುತ್ತಾರೆ. ಈ ಅಧ್ಯಾಯದಲ್ಲಿ [illegible] ಯಂತ್ರಗಳ ವೇಧೆಯಿಂದ ಗ್ರಹಗಳ ಚಲನಾದಿಗಳಲ್ಲಿ ಆಗುವ ವ್ಯತ್ಯಾಸಗಳನ್ನು ಆಗಾಗ ಕಂಡುಹಿಡಿದುಕೊಂಡು, ಅವಕ್ಕನುಸಾರವಾದ ಪಂಚಾಂಗಗಳನ್ನು ಮಾಡಿಕೊಳ್ಳುವುದಕ್ಕೆ ಮಾರ್ಗವನ್ನು ಕಲ್ಪಿಸಿಕೊಟ್ಟಿರುತ್ತಾರೆ. ಈಗ ಎರಡು ಮೂರು ಶತಮಾನಗಳ ಹಿಂದೆ ಜಯಪುರಕ್ಕೆ ಅಧಿಪತಿಯಾಗಿದ್ದ ಜಯಸಿಂಹ ಮಹಾರಾಜನು ಉಜ್ಜಯಿನಿ ಮುಂತಾದ ಸ್ಥಳಗಳಲ್ಲಿ ಈ ವಿಧವಾದ ಯಂತ್ರಗಳನ್ನು ನಿರ್ಮಿಸಿ ನಕ್ಷತ್ರಶಾಲೆಗಳನ್ನು ಸ್ಥಾಪಿಸಿದ್ದನು. ಈಗಲೂ ಸಹ ಉಜ್ಜಯಿನಿಯಲ್ಲಿ ಶಿಥಿಲವಾಗಿ ಬಿದ್ದುಹೋಗಿರತಕ್ಕ ಆ ನಕ್ಷತ್ರಶಾಲೆಗಳನ್ನು ನೋಡಬಹುದು. ಆದರೆ ಜನಗಳಲ್ಲಿ ಕ್ರಮೇಣ ಕಾಲವೈಪರೀತ್ಯದಿಂದ ಗಣಿತ ಮತ್ತು ಸಿದ್ಧಾಂತಗಳಲ್ಲಿ ಅಭಿರುಚಿಯು ಕಡಿಮೆಯಾಗುತ್ತ ಬಂದುದರಿಂದ ಈ ಯಂತ್ರಗಳ ಉಪಯೋಗಜ್ಞಾನವೂ ಕಡಿಮೆಯಾಗುತ್ತ ಬಂದು ಕೊನೆಕೊನೆಗೆ ಈ ಯಂತ್ರಗಳು ನಾಮಾವಶೇಷವಾಗುವ ಸ್ಥಿತಿಗೆ ಬಂದಿರುವುದು ಶೋಚನೀಯವಾದ ಸಂಗತಿಯೆಂದು ಪ್ರಾಜ್ಞರಾದ ತಮಗೆ ಹೇಳಬೇಕಾಗಿಲ್ಲ.

ಈ ಜ್ಯೋತಿಶ್ಶಾಸ್ತ್ರವು ಹಿಂದೂಗಳಲ್ಲಲ್ಲದೆ, ಮಹಮ್ಮದೀಯರಲ್ಲಿಯೂ ಬಹುಕಾಲದಿಂದಲೂ ಪ್ರಚಲಿತವಾಗಿದ್ದಿತು. ಈ ಎರಡು ಬಗೆಯ ಪಂಡಿತರುಗಳೂ ಪರಸ್ಪರ ಐಕಮತ್ಯದಿಂದ ಕಲೆತು ಈ ಶಾಸ್ತ್ರವನ್ನು ಬಹಳ ಅಭಿವೃದ್ಧಿಸ್ಥಿತಿಗೆ ತಂದಿದ್ದರು.

ಇತ್ತೀಚೆಗೆ ಅಂದರೆ ಹದಿನಾರನೆಯ ಶತಮಾನದಿಂದೀಚೆಗೆ ಪಾಶ್ಚಾತ್ಯರಲ್ಲಿ ವಿಜ್ಞಾನಶಾಸ್ತ್ರವು ಬಹಳಮಟ್ಟಿಗೆ ಅಭಿವೃದ್ಧಿಗೆ ಬಂದಿರುವುದರಿಂದಲೂ, ಬಹುಧನ ವ್ಯಯಸಾಧ್ಯವಾದ ಅನೇಕ ಸೂಕ್ಷ್ಮಯಂತ್ರಗಳ ಸಹಾಯದಿಂದಲೂ ಅವರಲ್ಲೀಗ ಈ ಶಾಸ್ತ್ರವು ಅತ್ಯುನ್ನತಸ್ಥಿತಿಗೆ ಬಂದಿರುತ್ತದೆ. ನಮ್ಮಲ್ಲಾದರೋ ಈ ಎರಡು ಅಂಶಗಳ ಅಭಾವದಿಂದ ಗಣಿತಕ್ರಮವು ಕೆಟ್ಟು ಗ್ರಹಗಳ ಗ್ರಹಣ ಉದಯಾಸ್ತಮಯಾದಿಗಳ ಕಾಲನಿರ್ಣಯವು ವ್ಯತ್ಯಸ್ತವಾಗುತ್ತ ಬಂದು, ಜ್ಯೋತಿಶ್ಶಾಸ್ತ್ರಕ್ಕೇನೇ ಒಂದು ಅಪಖ್ಯಾತಿಯುಂಟಾಗಿದೆ. ಪಂಚಾಂಗಗಳಲ್ಲಿರತಕ್ಕ ಪರಸ್ಪರ ವ್ಯತ್ಯಾಸಗಳಿಂದ ಜನರಿಗೆ ಈ ಶಾಸ್ತ್ರದಲ್ಲಿ ಉಂಟಾಗಿರುವ ಔದಾಸೀನ್ಯವನ್ನು ಪರಿಹರಿಸಲು ತಕ್ಕ ನಕ್ಷತ್ರಶಾಲೆಯ ಸ್ಥಾಪನೆಯೇ ಮುಂತಾದ ಸದುಪಾಯಗಳನ್ನು ಆಲೋಚಿಸಿ, ಜನಗಳಲ್ಲಿ ಶಾಸ್ತ್ರಶ್ರದ್ಧೆ, ಧರ್ಮಶ್ರದ್ಧೆಗಳು ಎಂದಿನಂತೆ ದೃಢಮೂಲವಾಗುವಂತೆ ಮಾಡುವುದು ಶಾಸ್ತ್ರಜ್ಞರ ಆದ್ಯಕರ್ತವ್ಯವೆಂದು ಭಾವಿಸಿ, ಅಖಿಲಕರ್ಣಾಟಕ ಜ್ಯೌತಿಷಿಕ ಸಮ್ಮೇಳನದ ಮೊದಲನೆಯ ಅಧಿವೇಶನವನ್ನು ಶಿವಮೊಗ್ಗೆಯಲ್ಲಿ 19-3-1933 ರಲ್ಲಿ ಕೆಲವು ಜ್ಯೋತಿಶ್ಶಾಸ್ತ್ರಾಭಿಮಾನಿಗಳು ವೇ|| ಮಹಾವಿದ್ವಾನ್, ಕರೂರು ಶೇಷಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಎರಡನೆಯ ಅಧಿವೇಶನವನ್ನು

[6ನೆಯ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೪ನೇ ಅಕ್ಟೋಬರ್ ತಾ|| ೨೨ನೇ ಸೋಮವಾರ.

ನವರಾತ್ರ ಮಹೋತ್ಸವ.

ಭಾರತೀಯರಿಗೆ ಅತ್ಯಂತ ಪವಿತ್ರಹಬ್ಬವೆನಿಸಿದ ನವರಾತ್ರ ಮಹೋತ್ಸವವು ಪ್ರತಿವರ್ಷಕ್ಕಿಂತಲೂ ಈಸಾರಿ ಮೈಸೂರು ರಾಜಧಾನಿಯಲ್ಲಿ ಅಭೂತಪೂರ್ವವಾದ ವೈಭವದಿಂದ ನೆರವೇರಿತು. ನವರಾತ್ರಮಹೋತ್ಸವವು ಭರತಖಂಡದಲ್ಲೆಲ್ಲಾ ಸುಪ್ರಸಿದ್ಧವಾದ ಹಬ್ಬವಾಗಿ ವೈಭವದಿಂದನೆರವೇರುತ್ತಿದ್ದರೂ ಈ ಹಬ್ಬವು ಮೈಸೂರು ರಾಜಧಾನಿಯಹೊರತು ಇನ್ನೆಲ್ಲಿಯೂ ಇಷ್ಟು ವೈಭವದಿಂದ ನೆರವೇರುವದಿಲ್ಲವು. ಸಮಸ್ತ ಭಾರತೀಯರ ರೀತಿ, ನೀತಿಗಳನ್ನು ತಿಳಿಯಬೇಕೆನ್ನುವವರು ಈ ಮಹೋತ್ಸವದಲ್ಲಿ ರಾಜಧಾನಿಯಲ್ಲಿದ್ದರೆ ಸಾಕು! ಹತ್ತು ದಿವಸಗಳಲ್ಲಿಯೇ ಸಮಸ್ತ ಭಾರತೀಯರ ಸ್ಥಿತಿಗತಿಗಳ ಪರಿಚಯವನ್ನು ಬಹಳ ಸುಲಭವಾಗಿ ಮಾಡಿಕೊಳ್ಳಬಹುದು. ಭಿನ್ನಭಿನ್ನವಾದ ವೇಷಭಾಷಾಚಾರವ್ಯವಹಾರಗಳಿಂದ ಕೂಡಿದ ನಾನಾದೇಶದ ಜನಗಳಿಂದಲೂ, ಚಿತ್ರವಿಚಿತ್ರಗಳಾದ ಅಪೂರ್ವಪದಾರ್ಥಗಳಿಂದಲೂ, ಮನೋಹರಗಳಾದ ವಿದ್ಯುದ್ದೀಪಾವಳಿಗಳಿಂದಲೂ, ಸಂಗೀತ ಸಾಹಿತ್ಯಾದ್ಯನೇಕ ಕಲೆಗಳಲ್ಲಿ ನಿಪುಣರಾದ ಪಂಡಿತ ಮಂಡಲಿಯಿಂದಲೂ ಅಲಂಕೃತವಾದ ರಾಜಧಾನಿಯು ಪ್ರಪಂಚದ ನಾನಾ ಭಾಗಗಳಲ್ಲಿ ಜನ್ಮವೆತ್ತಿ ಅನೇಕ ಪುಣ್ಯಕಾರ್ಯಗಳನ್ನು ಮಾಡಿ ಅಂತ್ಯದಲ್ಲಿ ಸ್ವರ್ಗಸುಖವನ್ನನುಭವಿಸಲು ಬಂದಿರುವ ಪುಣ್ಯಜೀವಿಗಳಿಂದ ಯುಕ್ತವಾದ ಎರಡನೆಯ ದೇವಲೋಕವೋ ಎನೋ ಎನ್ನುವಂತೆ ಭಾಸವಾಗುತ್ತದೆ. ಅಶ್ವಯುಜ ಶು|| ೧ ದಿವಸ ಪ್ರಾತಃಕಾಲ ಶುಭಮುಹೂರ್ತದಲ್ಲಿ ಧರ್ಮಪ್ರಭುಗಳಾದ ಶ್ರೀಮನ್ಮಹಾರಾಜರವರು ಪಾಂಡವ ವಂಶಾವತಂಸ ಧರ್ಮರಾಜಾದ್ಯನೇಕ ಜನ ಚಕ್ರವರ್ತಿಗಳಿಂದ ಪರಂಪರೆಯಾಗಿ ಬಂದ ರತ್ನಸಿಂಹಾಸನವನ್ನು ಆರೋಹಣಮಾಡಿದರು. ಅಂದಿನಿಂದ ವಿಜಯದಶಮಿಯವರೆಗೆ ಪ್ರತಿ ಸಾಯಂಕಾಲವೂ ಸಿಂಹಾಸನಾರೋಹಣಮಾಡಿ ಸಚಿವೋಪಸಚಿವರು, ರಾಜಬಂಧುಗಳು, ಪ್ರಜಾಪ್ರಮುಖರು, ಪೌರವೃದ್ಧರೇ ಮೊದಲಾದವರು ಭಕ್ತಿಯಿಂದರ್ಪಿಸಿದ ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದರು. ಪ್ರತಿ ದಿನವೂ ಸಭಾಮಂದಿರದ ಮುಂಭಾಗದ ಬೈಲಿನಲ್ಲಿ ಕುಸ್ತಿ, ಪಂಜಿನಾಟ, ಕತ್ತಿವರಸೆ, ಸೈನಿಕರ ಕವಾಯಿತುಗಳೂ ಹಾಗೂ ಅಭೂತಪೂರ್ವವಾದ ವಿನೋದಗಳೂ ನಡೆಯುತ್ತಿದ್ದವು. ನವರಾತ್ರಮಹೋತ್ಸವದಲ್ಲಿ ರಾಜಧಾನಿಯು ಸಾಕ್ಷಾತ್ ದೇವೇಂದ್ರನ ರಾಜಧಾನಿಯಾದ ಅಮರಾವತಿಯೇ ಆಗಿದ್ದಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ವಿಜಯದಶಮಿಯ ಶುಭದಿವಸ ಮಹಾಪ್ರಭುಗಳು ಆಯುಧಗಜಾಶ್ವಾದಿಗಳ ಪೂಜೆಯನ್ನು ವಿಧ್ಯುಕ್ತವಾಗಿ ನೆರವೇರಿಸಿ ಅದೇ ದಿವಸ ಮಧ್ಯಾಹ್ನ 4 ಘಂಟೆಗೆ ನಾನಾ ವಿಧವಾದ ವಾದ್ಯಧ್ವನಿಯೂ ಪ್ರಯಾಣಭೇರೀರವವೂ ದಶದಿಕ್ಕುಗಳನ್ನು ವ್ಯಾಪಿಸುತ್ತಿರಲು ಅನರ್ಘವಾದ ಉಡುಪನ್ನು ಧರಿಸಿಕೊಂಡು ಶ್ರೀಮದ್ಯುವರಾಜರು ಮತ್ತು ಶ್ರೀಮಜ್ಜಯಚಾಮರಾಜೇಂದ್ರ ಒಡೆಯರವರೊಡನೆ ಗಜದಮೇಲೆ ಸ್ಥಾಪಿಸಲ್ಪಟ್ಟ ರತ್ನಖಚಿತವಾದ ಅಂಬಾರಿಯನ್ನು ಅಲಂಕರಿಸಿದರು. ಕೂಡಲೆ ಪ್ರಯಾಣಸೂಚಕಗಳಾದ 21 ತೋಪುಗಳು ಹಾರಿಸಲ್ಪಟ್ಟವು. ಶ್ರೀಮನ್ಮಹಾರಾಜರವರು ತಮ್ಮ ಪಕ್ಕದಲ್ಲಿ ಯುವರಾಜರನ್ನೂ ಹಿಂಭಾಗದಲ್ಲಿ ಜಯಚಾಮರಾಜ ಒಡೆಯರವರನ್ನೂ ಕುಳ್ಳಿರಿಸಿಕೊಂಡಿದ್ದರಿಂದ ಮಹೋತ್ಸವಕ್ಕೆ ವಿಶೇಷ ಶೋಭೆಯು ಪ್ರಾಪ್ತವಾಗಿತ್ತು. ಈ ರೀತಿಯಾಗಿ ಉತ್ಸವವು ಸಕಲ ವೈಭವದೊಡನೆ ಮಂದಗತಿಯಿಂದ ಹೊರಟು ಕೋಟೆಯ ದ್ವಾರವನ್ನು ದಾಟಿ ಶ್ರೀಮಚ್ಚಾಮರಾಜೇಂದ್ರ ಒಡೆಯರವರ ಪ್ರತಿಮೆಯ ಬಲಭಾಗದ ಮಾರ್ಗದಿಂದ ದೊಡ್ಡಪೇಟೆಯನ್ನು ಪ್ರವೇಶಿಸಿತು. ಮಹಾಪ್ರಭುಗಳವರು ದಾರಿಯುದ್ದಕ್ಕೂ ಯೂರೋಪಿಯನ್ ಅತಿಥಿಗಳಿಂದ ಸಮರ್ಪಿಸಲ್ಪಟ್ಟ ವಂದನೆಗಳನ್ನೂ ಪ್ರಜಾಪ್ರಮುಖರಿಂದ ಸಮರ್ಪಿಸಲ್ಪಟ್ಟ ಪುಷ್ಪಹಾರಗುಚ್ಛಾದಿಗಳನ್ನೂ ಪ್ರತಿವಂದನೆಯೊಡನೆ ಸ್ವೀಕರಿಸುತ್ತಿದ್ದರು. ಉತ್ಸವವು ಬನ್ನಿಮಂಟಪಕ್ಕೆ ಬಿಜಯಮಾಡಿಸಿದನಂತರ ಪ್ರಭುಗಳವರು ಅಂಬಾರಿಯಿಂದಿಳಿದು ಶಮೀವೃಕ್ಷದ ಪೂಜೆಯನ್ನು ವಿಧ್ಯುಕ್ತವಾಗಿ ನೆರವೇರಿಸಿ ಸೈನಿಕರ ಕವಾಯಿತುಗಳನ್ನೂ ಮದ್ದಿನ ತಮಾಷೆಗಳನ್ನೂ ಪರಾಮರ್ಶಿಸಿ ನೂತನ ವಸ್ತ್ರಾಭರಣಗಳಿಂದಲಂಕೃತರಾಗಿ ರಾತ್ರಿ 8 ಘಂಟೆಗೆ ಪುನಃ ಉತ್ಸವದೊಡನೆ ಹೊರಟರು. ರಾತ್ರಿ ಸಮಯದಲ್ಲಿ ವಿದ್ಯುದ್ದೀಪಾವಳಿಗಳ ಪ್ರಕಾಶವು ಉತ್ಸವದ ಸೊಬಗನ್ನು ಇಮ್ಮಡಿಗೊಳಿಸಿ ಪ್ರೇಕ್ಷಕರಿಗೆ ಅಪೂರ್ವವಾದ ಸಂತೋಷವನ್ನುಂಟುಮಾಡಿದ್ದಿತು. ಉತ್ಸವವು ರಾತ್ರಿ 10½ ಘಂಟೆಗೆ ಅರಮನೆಯನ್ನು ಸೇರಿತು. ಆಗ್ಗೆ ಆಗಮನಸೂಚಕಗಳಾದ 21 ತೋಪುಗಳು ಹಾರಿಸಲ್ಪಟ್ಟವು. ಸಾಕ್ಷಾದ್ಧರ್ಮಾವತಾರಿಗಳೂ ರಾಜರ್ಷಿಗಳೂ ಆದ ಮಹಾಪ್ರಭುಗಳ ಉತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಸಂಸ್ಥಾನದ ಸಕಲ ಪ್ರಜೆಗಳನ್ನು ಸಮಾನಭಾವದಿಂದಲೂ ಪ್ರೀತಿಯಿಂದಲೂ ರಕ್ಷಿಸುತ್ತ ಕಲಿಯುಗದ ಜನಕನೆಂಬ ಬಿರುದಾಂಕಿತರಾದ ಪ್ರಭುವರ್ಯರಿಗೂ, ಶ್ರೀಮದ್ಯುವರಾಜರವರಿಗೂ, ಶ್ರೀಮಜ್ಜಯಚಾಮರಾಜೇಂದ್ರ ಒಡೆಯರವರಿಗೂ ಅಶೇಷ ರಾಜಕುಟುಂಬವರ್ಗಕ್ಕೂ ಶ್ರೀ ಜಗದ್ಗುರು ಪಂಚಾಚಾರ್ಯರು ಇಹೋಪ್ಯತಿಶಯವಾದ ಸಕಲ ಸೌಭಾಗ್ಯಗಳನ್ನುಂಟುಮಾಡಲೆಂದು ಹಾರೈಸುತ್ತೇವೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಾದಪೂಜೋತ್ಸವಾದಿಗಳು.

ಶ್ರೀ ಜಗದ್ಗುರು ಸ್ವಾಗತಕಮಿಟಿಯ ಪ್ರೆಸಿಡೆಂಟರಾದ ಶ್ರೀಮಾನ್ ಡಾ|| ಟಿ. ಎಸ್. ಸಿದ್ಧಪ್ಪನವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ಇದೇ ತಿಂಗಳು ೧೧ನೆಯ ತಾ|| ಗುರುವಾರ ದಿವಸ ವಾಣೀವಿಲಾಸರೋಡಿನಲ್ಲಿ ನೂತನವಾಗಿ ರಚಿಸಿರುವ ತಮ್ಮ ಭವನಕ್ಕೆ ದಯಮಾಡಿಸಿಕೊಂಡು ಬಂದು ವಿಧ್ಯುಕ್ತವಾಗಿ ಪಾದಪೂಜೆಯನ್ನು ನೆರವೇರಿಸಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾದರು. ಆ ಸಮಯದಲ್ಲಿ ಡಾಕ್ಟರರ ಧರ್ಮಪತ್ನಿಯವರು ನೂತನವಾದ ದಿವ್ಯ ಭವನವನ್ನೇ ಜಗದ್ಗುರುಗಳಿಗೆ ಸಮರ್ಪಣಮಾಡಿದರೆಂಬ ವಿಷಯವು ಪ್ರತಿಯೊಬ್ಬ ವೀರಶೈವನಿಗೂ ಸಂತೋಷವನ್ನುಂಟುಮಾಡಿರುತ್ತದೆ. ಪವಿತ್ರವಾದ ದಾನಗಳಲ್ಲೊಂದಾದ ಈ ಗೃಹದಾನದಿಂದ ಈ ಧರ್ಮಾತ್ಮ ಸತೀಪತಿಗಳು ತಮ್ಮ ಕೀರ್ತಿಯನ್ನು ಆಚಂದ್ರಾರ್ಕವಾಗಿ ಸ್ಥಿರಮಾಡಿಕೊಂಡರು. ಈ ಧರ್ಮಾತ್ಮರಿಗೆ ಶ್ರೀ ಜಗದಾಚಾರ್ಯರು ದೀರ್ಘಾಯುರಾರೋಗ್ಯಭಾಗ್ಯವನ್ನು ಅನುಗ್ರಹಿಸಲೆಂದು ಕೋರುತ್ತೇವೆ.

ಇದೇ ತಿಂಗಳು ೧೫ನೆಯ ತಾರೀಖು ಸೋಮವಾರ ದಿವಸ ರಾಜಧಾನೀ ನಿವಾಸಿಗಳಾದ ಮ|| ರಾ|| ದೊಡ್ಡಯ್ಯಣ್ಣನವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಾದಪೂಜೆಯನ್ನು ಬಹಳ ಉತ್ಸಾಹದಿಂದ ನೆರವೇರಿಸಿದರು. ಪ್ರಾತಃಕಾಲ ೮ ಘಂಟೆಗೆ ತಮ್ಮ ಮನೆಯಿಂದ ನಾನಾವಿಧ ವಾದ್ಯ ಸಂದಿಧ್ವಜಾದಿ ವೈಭವದೊಂದಿಗೆ ಶ್ರೀಗಳವರ ಸನ್ನಿಧಿಗೆ ಬಂದು ಬಿನ್ನಹವನ್ನು ಒಪ್ಪಿಸಿ ಅರಮನೆಯಿಂದ ಕೊಡಲ್ಪಟ್ಟ ರಾಜಮರ್ಯಾದೆಗಳೊಡನೆ ಶ್ರೀಗಳವರನ್ನು ಮನೆಗೆ ಬಿಜಮಾಡಿಸಿಕೊಂಡು ಬಂದರು. ಉತ್ಸವಕ್ಕೆ ವಿಶೇಷ ಜನಗಳು ಆಗಮಿಸಿದ್ದರು. ಉತ್ಸವವು ಮನೆಗೆ ತಲ್ಪಿ ಶ್ರೀಗಳವರು ಪೀಠದಲ್ಲಿ ಮಂಡಿಸಿದ ಬಳಿಕ ೧೭ವರ್ಷದ ಬಾಲಕನೋರ್ವನು ಮಧುರವಾದ ಗಾನಾಲಾಪದೊಡನೆ ವೀಣೆಯನ್ನು ಬಾರಿಸಿ ಜಗದ್ಗುರುಗಳ ಚಿತ್ತಕ್ಕೆ ಉಲ್ಲಾಸವನ್ನುಂಟುಮಾಡಿ ಆಶೀರ್ವಾದವನ್ನು ಪಡೆದನು. ಬಳಿಕ ಶ್ರೀಗಳವರ ಪಾದಪೂಜೆಯು ನಡೆದು ತೀರ್ಥಪ್ರಸಾದ ವಿನಿಯೋಗವಾಯಿತು. ಆ ಮೇಲೆ ಶ್ರೀಗಳವರಿಗೆ ಕಾಣಿಕೆಯನ್ನರ್ಪಿಸಿ ಆಶೀರ್ವಾದವನ್ನು ಪಡೆದರು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಒಂದು ತಿಂಗಳಿಂದಲೂ ಗುರುಭಕ್ತರ ಪ್ರಾರ್ಥನಾನುಸಾರವಾಗಿ ಪ್ರತಿ ದಿವಸವೂ ತಮ್ಮ ಬಿಡಾರದಲ್ಲಿ ಭಕ್ತರಿಗೆ ಧರ್ಮಬೋಧೆಯನ್ನು ಮಾಡುತ್ತಲಿರುವುದು ಸರಿಯಷ್ಟೆ! ಈ ವರ್ಷ ಶ್ರೀಮನ್ಮಹಾರಾಜರವರ ನವರಾತ್ರೋತ್ಸವ ಪ್ರಯುಕ್ತವಾಗಿ ಜಗದ್ಗುರುಗಳು ತಮ್ಮಲ್ಲಿ ನಡೆಯಬೇಕಾದ ನವರಾತ್ರೋತ್ಸವದ ವೈಭವಗಳನ್ನೆಲ್ಲ ನಿಲ್ಲಿಸಿ, ಮಹಾಪ್ರಭುಗಳ ಶ್ರೇಯೋಭಿವೃದ್ಧಿದಾಯಕವಾದ ಅನುಷ್ಠಾನಾದಿಗಳನ್ನು ಮಾತ್ರ ನಿರ್ವಹಿಸುತ್ತ ೧೭ ನೆಯ ತಾರೀಖು ಬುಧವಾರ ಪ್ರಾತಃಕಾಲ ಪದ್ಧತಿಪ್ರಕಾರ ಸಂಸ್ಥಾನದ ಗಜಾಶ್ವಾಯುಧಾದಿಗಳ ಪೂಜೆಯು ನಡೆದು ಮಧ್ಯಾಹ್ನದ ಅಹ್ನಿಕಾದಿ ಕ್ರಿಯೆಗಳು ಪೂರ್ಣಗೊಂಡ ತರುವಾಯ 4 ಘಂಟೆಗೆ ಜಗದ್ಗುರುಗಳು ಕಿರೀಟಧಾರಿಗಳಾಗಿ ತಮ್ಮ ವಾಸಸ್ಥಾನದ ಪ್ರಾಕಾರದಲ್ಲಿ ದೈವೇಚ್ಛೆಯಿಂದ ತಾನಾಗಿಯೇ ಬೆಳೆದ ಶಮೀವೃಕ್ಷದ ಬಳಿಗೆ ದಯಮಾಡಿಸಿ ಭದ್ರಪೀಠದ ಮೇಲೆ ಮಂಡಿಸಿ, ಷೋಡಶೋಪಚಾರಗಳಿಂದ ಶಮೀವೃಕ್ಷವನ್ನು ಪೂಜೆಮಾಡಿಸಿ ಶಮೀಪತ್ರಚ್ಛೇದನವು ಮಾಡಲ್ಪಟ್ಟು ಸಮಸ್ತಭಕ್ತಸಮುದಾಯದ ಜಯಘೋಷದೊಡನೆ ಸಭಾಂಗಣವನ್ನು ಪ್ರವೇಶಿಸಿ, ಸಿಂಹಾಸನವನ್ನಾರೋಹಣಮಾಡಿ ವಿಜಯದಶಮಿಯ ಮಹತ್ವವನ್ನೂ ಶಮೀಪೂಜಾಫಲವನ್ನೂ ಸಭಿಕರಿಗುಪದೇಶಮಾಡಿ ಮಹಾಪ್ರಭುಗಳಿಗೆ ವಿಜಯಾಶೀರ್ವಾದವನ್ನು ಮಾಡಿದರು. ಬಳಿಕ ಅರಮನೆಯ ಆಸ್ಥಾನ ಸಂಗೀತ ವಿದ್ವಾಂಸರಾದ ಮ|| ರಾ|| ಶಿವರುದ್ರಪ್ಪನವರು ವಾದ್ಯಗಾರರೊಂದಿಗೆ ಪಿಟೀಲು ಬಾರಿಸುತ್ತ ಮಧುರವಾದ ಗಾನಾಲಾಪದಿಂದ ಸಭಿಕರನ್ನು ಆನಂದಸಾಗರದಲ್ಲಿ ಮುಳುಗಿಸಿದರು. ಅನಂತರ ಹಾವೇರಿಯಿಂದ ಗುರುಸೇವೆಗಾಗಿ ಆಗಮಿಸಿದ ಗುರುಶಾಂತಯ್ಯನೆಂಬ ಅಂಧಬಾಲಕನು ಜಗದ್ಗುರು ರೇಣುಕಾಚಾರ್ಯರ ಮಹಿಮಾಪ್ರದರ್ಶಕ ಕೀರ್ತನಗಳನ್ನು ಹಾಡಿದನು. ಆ ಮೇಲೆ ಗೋವಿಂದದಾಸರೆಂಬವರು ಭಕ್ತಿರಸಪ್ರಧಾನವಾದ ಗುರುಸ್ತವನವನ್ನು ಮಾಡುತ್ತ ನರ್ತನಮಾಡಿದರು. ತರುವಾಯ ಸಂಗೀತ ವಿದ್ವಾನ್ ಹಾರ್ಮೋನಿಯಂ ಕೊಟ್ಟೂರು ಬಸವಯ್ಯನವರು ಪಂಚಾಚಾರ್ಯರ ಸ್ತೋತ್ರ ಪದ್ಯಗಳನ್ನು ತಮ್ಮ ಇಂಪಾದ ಧ್ವನಿಯಿಂದ ಹಾಡಿದರು. ಶ್ರೀಗಳವರು ಸಂತೋಷಚಿತ್ತರಾಗಿ ಶ್ರೀಮಾನ್ ಶಿವರುದ್ರಪ್ಪನವರಿಗೆ "ಪಿಟೀಲು ಸಂಗೀತ ವಿದ್ಯಾನಿಪುಣ" ಎಂಬ ಉಪಾಧಿಯಿಂದೊಡಗೂಡಿದ ಸುವರ್ಣಪದಕವನ್ನೂ, ಶ್ರೀಮಾನ್ ಕೊಟ್ಟೂರು ಬಸವಯ್ಯನವರಿಗೆ "ಹಾರ್ಮೋನಿಯಂ ಸಂಗೀತ ವಿದ್ಯಾಕುಶಲ" ಎಂಬುಪಾಧಿಯಿಂದೊಡಗೂಡಿದ ಸುವರ್ಣಪದಕವನ್ನೂ, ಗೋವಿಂದದಾಸರಿಗೆ ಶಾಲನ್ನೂ ಆಶೀರ್ವದಿಸಿದರು. ದರ್ಶನಾರ್ಥವಾಗಿ ಬಂದಿದ್ದ ಗುರುಭಕ್ತರೆಲ್ಲರೂ ಗುರುಕಾಣಿಕೆಯನ್ನು ಒಪ್ಪಿಸಿದ ಬಳಿಕ ಫಲಾಶೀರ್ವಾದಗಳು ನಡೆದು ಜಯಧ್ವನಿಯೊಡನೆ ಸಭೆಯು ಮುಕ್ತಾಯವಾಯಿತು.

ಇದೇ ತಿಂಗಳು ೧೯ ನೆಯ ತಾರೀಖು ಶುಕ್ರವಾರ ದಿವಸ ರಾಜಧಾನೀ ನಿವಾಸಿಗಳಾದ ಮ|| ರಾ|| ಚಿಲ್ಲರೆ ಅಂಗಡಿ ಕೆಂಪಣ್ಣನವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ಅರಮನೆಯಿಂದ ದಯಪಾಲಿಸಲ್ಪಟ್ಟ ರಾಜಮರ್ಯಾದೆಗಳೊಡನೆ ತಮ್ಮ ಮನೆಗೆ ಬಿಜಮಾಡಿಸಿಕೊಂಡು ವಿಧ್ಯುಕ್ತ ಪಾದಪೂಜೆಯನ್ನು ನಡೆಯಿಸಿ ಸಾವಿರಾರುಜನಗಳಿಗೆ ಅನ್ನಶಾಂತಿಯನ್ನು ಮಾಡಿ ಗುರುಕಾಣಿಕೆಯನ್ನು ಸಮರ್ಪಿಸಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾದರು.

ಸರ್ದಾರ್ ಎಂ. ಲಕ್ಷ್ಮೀಕಾಂತರಾಜ ಅರಸರವರ ರಾಜಭವನದಲ್ಲಿ ಪಾದಪೂಜೆ.

ಈ ದಿವಸ ಶ್ರೀಮದ್ರಂಭಾಪುರೀ ಜಗದ್ಗುರುಗಳವರು ನಮ್ಮ ಮಹಾಪ್ರಭುಗಳವರ ಬಂಧುಗಳಾದ ಮ|| ಸರ್ದಾರ್ ಎಂ. ಲಕ್ಷ್ಮೀಕಾಂತರಾಜ ಅರಸರವರ ರಾಜಭವನಕ್ಕೆ ಪಾದಪೂಜೆಗಾಗಿ ಸಮಸ್ತ ರಾಜಮರ್ಯಾದೆಗಳೊಡನೆ ದಯಮಾಡಿಸಿದರು. ನಮ್ಮ ಮಹಾಪ್ರಭುಗಳವರು ಶ್ರೀಗಳವರನ್ನು ತಮ್ಮ ಅರಮನೆಗೆ ದಯಮಾಡಿಸಿಕೊಂಡ ಸಮಯದಲ್ಲಿ ಯಾವ ಯಾವ ರಾಜಮರ್ಯಾದೆಗಳನ್ನು ಕೊಟ್ಟಿದ್ದರೋ ಆ ಎಲ್ಲಾ ಮರ್ಯಾದೆಗಳನ್ನು ಕೊಟ್ಟಿರುವರು. ಇದು ಸರ್ವರಿಗೂ ಸಂತೋಷವನ್ನುಂಟುಮಾಡತಕ್ಕ ವಿಷಯವಾಗಿದೆ.

ವರ್ತಮಾನಸಂಗ್ರಹ.

ಬೊಂಬಾಯಿಪಟ್ಟಣಕ್ಕೂ ಕಾಂಗ್ರೆಸ್ಸ್‌ನಗರಕ್ಕೂ ಸ್ಪೆಷಲ್ ಟ್ರಾಂಗಳನ್ನೂ ಮತ್ತು ಬಸ್ಸುಗಳನ್ನೂ ಕಲ್ಪಿಸಿರುತ್ತಾರೆ.

ಕಳೆದವಾರ ಮುಂಬಯಿಯಿಂದ ೭೭೭೭೮೫೪ ರೂಪಾಯಿಗಳ ಬೆಲೆಯ ಬಂಗಾರವು ಪರದೇಶಕ್ಕೆ ಕಳುಹಿಸಲ್ಪಟ್ಟಿತು.

ಬೊಂಬಾಯಿನಗರದಲ್ಲಿ ನಡೆಯುವ ಕಾಂಗ್ರೆಸ್ಸಿಗೆ ಬರತಕ್ಕ ಗುಜರಾಥ ಮತ್ತು ಕರ್ನಾಟಕ ದೇಶದ ರೈತರುಗಳಿಗೆ ವಸತಿಗಳನ್ನು ಫ್ರೀಯಾಗಿ ಕೊಡುವಂತೆ ತೀರ್ಮಾನಿಸಿರುತ್ತಾರೆ.

ಪತ್ತೆಯಾಗದಿದ್ದ ಭಾರತೀಯ ವೈಮಾನಿಕನೂ ಮಿ|| ಫೆರೆಫನ್ ಸ್ಮೋನ್ ಇವರೀರ್ವರೂ ಈಗ ಪತ್ತೆಯಾಗಿರುವರು. ಬಾಸರ್ನಾದ ದಕ್ಷಿಣಕ್ಕೆ ೨೦೦ ಮೈಲಿ ದೂರದಲ್ಲಿರುವ ಒಂದು ಮರಳಿನ ಕಾಡಿನಲ್ಲಿ ಕ್ಷೇಮದಿಂದಾಗಿರುವರಂತೆ!

ಅಲಹಾಬಾದಿನಲ್ಲಿ ನವಂಬರ್ ೧೩ರಲ್ಲಿ ನಡೆಯತಕ್ಕಾದ ಯೂನಿವರ್ಸಿಟಿಯ ಪದವೀಪ್ರದಾನಮಹೋತ್ಸವಸರದಲ್ಲಿ ಆಂಧ್ರವಿಶ್ವವಿದ್ಯಾನಿಲಯದ ವೈಸ್ ಛಾನ್ಸಲ್ಲರಾದ ಸರ್ ರಾಧಾಕೃಷ್ಣನ್‌ರವರು ಭಾಷಣ ಮಾಡಲು ಒಪ್ಪಿರುವರು.

ಹಿಟ್ಲರ್‌ರವರು ಲಂಡನ್ ಗೌಡಿಯಮಠದ ಸ್ವಾಮಿಗಳಾದ ಬಾನ್‌ರವರನ್ನು ತಮ್ಮ ಅತಿಥಿಗಳನ್ನಾಗಿ ಮಾಡಿಕೊಂಡು ಆಹ್ವಾನವನ್ನು ಕಳುಹಿಸಿರುವರಂತೆ! ನವಂಬರ್ ೭ ನೆಯ ತಾರೀಖಿನ ದಿವಸ ಈ ಹಿಂದೂ ಸನ್ಯಾಸಿಗಳೊಂದಿಗೆ ಸಂಭಾಷಿಸುವರು.

ಪ್ಯಾರಿಸ್ಸಿನಲ್ಲಿ ಥರ್ಮಾಮಿಟರ್ (ಉಷ್ಣಮಾಪಕ ಯಂತ್ರ) ಯಂತ್ರಾಗಾರದಲ್ಲಿ ೨೫ ಸಾವಿರ ಯಂತ್ರಗಳು ಒಂದೇಸಾರಿ ಹಾರಿ ಮೇಲಕ್ಕೆ ಸಿಡಿದವು. ಯಂತ್ರಾಗಾರದ ಒಂದುಭಾಗವು ಸುಟ್ಟುಹೋಯಿತು. ಉಷ್ಣಾಂಶವು ಹೆಚ್ಚಿದ್ದರಿಂದ ಹೀಗಾಯಿತೆಂದು ತಿಳಿಬರುತ್ತದೆ.

ಕೈರಿ ಎಂಬ ಹಳ್ಳಿಯಲ್ಲಿ ಮುಳ್ಳುಹಂದಿಯಿರುವ ಗವಿಯಲ್ಲಿ ಒಂದು ಮಗುವು ಇದ್ದುದನ್ನು ಪೋಲೀಸಿನವರು ನೋಡಿ ಆ ಮಗುವನ್ನು ಅಲಹಾಬಾದಿಗೆ ತೆಗೆದುಕೊಂಡು ಬಂದಿದ್ದಾರೆ. ಸಿವಿಲ್‌ಸರ್ಜನ್ನರವರು ಆ ಮಗುವನ್ನು ಪರೀಕ್ಷಿಸುವಲ್ಲಿ ಮುಖದ ಮೇಲೆ ಪರಚಿದ ಒಂದೆರಡು ರೇಖೆಗಳು ಕಂಡುಬಂದಿವೆ. ಮಗುವು ಮೂರು ದಿವಸದ್ದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಸ್ವದೇಶಿ ಬೈಸಿಕಲ್ ಟ್ಯೂಬುಗಳು.

ಈ ಟ್ಯೂಬುಗಳು ದಿನವೊಂದಕ್ಕೆ ಎರಡುಸಾವಿರದಂತೆ ದಕ್ಷಿಣ ಇಂಡಿಯಾದೇಶದಲ್ಲಿ ವಿಕರಯಾಗುತ್ತವೆ. ಈ ಕಾರ್ಯಕ್ಕೆ ಕರಾಚಿ ಪಟ್ಟಣದ ಲಕ್ಷ್ಮೀರಬ್ಬರ್ ಕಂಪನಿಯವರೇ ಕಾರಣರು. ಈ ರಬ್ಬರು ಟ್ಯೂಬುಗಳು ಪರದೇಶಿ ಮಾಲುಗಳಿಗಿಂತಲೂ ಉತ್ತಮವಾಗಿವೆ ಯೆಂದು ಅನೇಕರು ತಮ್ಮ ಮೆಚ್ಚಿಗೆಯನ್ನು ಪ್ರಕಟಿಸಿರುತ್ತಾರೆ.

ಪುರುಷವೇಷದ ಸ್ತ್ರೀ.

ಕಳೆದವಾರ ಧಾರವಾಡ ರೈಲ್ವೆ ಸ್ಟೇಶನ್ನಿನಲ್ಲಿ ಒಬ್ಬ ಪುರುಷವೇಷದ ಸ್ತ್ರೀಯನ್ನು ಹಿಡಿದರು. ಮುನ್ನಾದಿನ ರಾತ್ರಿ ೧೧ ಗಂಟೆಯ ಉಗಿಬಂಡಿಗೆ ಬಂದ ಆ ವ್ಯಕ್ತಿಯು ರಾತ್ರಿ ಮಲಗಿ ಕಾಲಕಳೆಯುತ್ತಿದ್ದಳು. ಸಂಗಡಿಗರಾರೂ ಇರಲಿಲ್ಲ. ಅಲ್ಲಿಯ ಕೆಲಸಗಾರರಿಗೆ ಈ ವ್ಯಕ್ತಿಯ ವೃತ್ತಿಯ ಬಗ್ಗೆ ಸಂಶಯವುಂಟಾಗಿ ಹಣೆಯ ಮೇಲಿನ ಹಚ್ಚೆಯು 'ಹೆಂಗಸು' ಎಂದು ಹೇಳಿತು. ರೈಲ್ವೆ ಪೋಲೀಸರು ಅವಳನ್ನು ಕೈದುಮಾಡಿ ಹುಬ್ಬಳ್ಳಿಗೆ ಸಾಗಿಸಿದ್ದಾರೆ.

ಪರ್ಷಿಯಾದ ಸರಸ್ವತೀಭಾಂಡಾರ.

ಪರ್ಷಿಯಾದ ಮಾಷಿದ್ ನಗರದಲ್ಲಿ ಇಮಾಂರಿಜಾ ಎಂಬ ಮಹಿಮನ ಗೋರಿಯಲ್ಲಿರುವ ಸರಸ್ವತೀ ಮಂದಿರವು ಪ್ರಪಂಚದಲ್ಲೆಲ್ಲಾ ವಿಖ್ಯಾತವಾದ ಅನೇಕ ಪರ್ಷಿಯನ್ ಗ್ರಂಥಗಳನ್ನೊಳಗೊಂಡಿದೆ. ಇಲ್ಲಿ ಪರ್ಷಿಯಾದ ಬೇರೆಬೇರೆ ರಾಜರು ದಾನಮಾಡಿದ ಕುರಾನಿನ ೯೦೦೦ ಪ್ರತಿಗಳಿವೆಯಂತೆ! ಇವುಗಳಲ್ಲಿ ಅನೇಕ ಪ್ರತಿಗಳು ಸುಂದರ ಚಿತ್ರಕೆಲಸದಿಂದ ಕೂಡಿವೆ. ಒಂದು ಪ್ರತಿಯ ಮುಖಚಿತ್ರವನ್ನು ಬರೆಯಲು ಚಿತ್ರಗಾರನಿಗೆ ೭ ವರ್ಷಗಳು ಹಿಡಿದವಂತೆ!

ಸ್ತ್ರೀಯಳ ಎದೆಯೊಳಗಿಂದ ಪ್ರಕಾಶ.

ದಮ್ಮು ಬೇನೆಯಿಂದ ಬಳಲುವ ಸ್ತ್ರೀಯನ್ನು ಪಿರೇನೋ ಎಂಬ ಊರಿನ ಆಸ್ಪತ್ರೆಯಲ್ಲಿಟ್ಟಿದ್ದಾರೆ. ಅವಳು ಮಲಗಿದಾಗ್ಗೆ ರಾತ್ರಿ ಅವಳ ಎದೆಯೊಳಗಿನಿಂದ ಒಂದು ಪ್ರಕಾಶವು ಹೊರಬಿದ್ದು ಅವಳು ಸ್ಪಷ್ಟವಾಗಿ ಕಾಣುವಷ್ಟು ಬೆಳಕುಕೊಡುತ್ತದೆ. 1 ಸೆಕೆಂಡಿನ ವರೆಗೆ ಇದ್ದು ಪುನಃ ಅದು ಮಾಯವಾಗುತ್ತದೆ. ಆ ಕಾಲದಲ್ಲಿ ಅವಳು ಒಳ್ಳೇ ಕಷ್ಟದಿಂದ ಹೊರಳಾಡುತ್ತ "ಓ ಕ್ರಿಸ್ತನೇ ನನ್ನನ್ನು ಕಾಪಾಡು" ಎಂದು ಅನ್ನುತ್ತಿರುತ್ತಾಳೆ. ಅವಳನ್ನು ಆ ಕಾಲಕ್ಕೆ ಎಬ್ಬಿಸಿದರೆ ಅವಳ ಮೈ ಬಿಸಿಯಾಗಿದ್ದು ನಾಡಿಗಳು ಹೆಚ್ಚು ವೇಗವಾಗಿ ಹಾರುತ್ತಿರುತ್ತವೆ.

ರಾತ್ರಿಯಲ್ಲಿ ಮಹಾಪ್ರಕಾಶ!

ಫ್ರಾನ್ಸಿನ ಸಮುದ್ರತೀರದಲ್ಲಿ ಕಳೆದವಾರ ಒಂದು ಆಶ್ಚರ್ಯಕರವಾದ ಸಂಗತಿಯು ನಡೆಯಿತು. ಆ ದಿನ ರಜಾದಿನವಾದುದರಿಂದ ಅನೇಕರು ಸಮುದ್ರದತೀರದಲ್ಲಿ ಸೇರಿದ್ದರು. ಸಂಜೆ ಸುಮಾರು ೭ ಗಂಟೆಯಲ್ಲಿ ಆಕಾಶವು ಮೇಘಾವೃತವಾಗಿ ಪ್ರಕಾಶಮಾನವಾದ ಮಿಂಚಿನ ಮಾಲೆಯು ತಲೆದೋರಿತು. ಇದರಿಂದ ಸುಮಾರು ೫ ಗಂಟೆಗಳಕಾಲ ಆಕಾಶವೆಲ್ಲವೂ ನೀಲಜ್ಯೋತಿಯಿಂದ ತುಂಬಿತ್ತು. ಸಮುದ್ರದಲ್ಲಿದ್ದ ಹಡುಗುಗಳೂ ತೀರದ ಬೆಟ್ಟಗಳೂ ಕಾಂತಿಯಿಂದ ಬೆಳಗಿದವು. ಕೆಲವು ಸಮಯದಲ್ಲಿ ಸೂರ್ಯಕಾಂತಿಯು ಭ್ರಾಂತಿಯನ್ನು ಹುಟ್ಟಿಸುತ್ತಿತ್ತು. ಈ ಆಶ್ಚರ್ಯಕರವಾದ ಪ್ರಕೃತಿವೈಚಿತ್ರ್ಯವು ಸಾಯಂಕಾಲ ೭ ಗಂಟೆಗೆ ಪ್ರಾರಂಭವಾಗಿ ಮಧ್ಯರಾತ್ರಿಯ ವರೆಗೂ ನಡೆಯಿತು.

ಹೆಂಡತಿಯನ್ನು ಮಾರಿ ಸ್ಟಾಂಪುಗಳನ್ನು ಕೊಂಡನು.

ಅಮೇರಿಕಾದೇಶದ ನ್ಯೂಜರ್ಸಿ ಪ್ರಾಂತ್ಯದಲ್ಲಿ ನಾನಾದೇಶದ ಸ್ಟಾಂಪುಗಳನ್ನು ಶೇಖರಿಸುವ ಹುಚ್ಚು ಹಿಡಿದಿದ್ದ ಒಬ್ಬನು ತನ್ನ ಹೆಂಡತಿಯನ್ನು ೭೦೦ ಡಾಲರುಗಳಿಗೆ ಮಾರಿ ಬಂದ ಹಣದಿಂದ ಸ್ಟಾಂಪುಗಳನ್ನು ಕೊಂಡನು. ಈ ವ್ಯಾಪಾರಕ್ಕೆ ಗಂಡ ಹೆಂಡರೂ, ವಿಕ್ರಯದಾರನೂ ಒಪ್ಪಿ ಒಂದು ಕರಾರು ಮಾಡಿಕೊಂಡಿದ್ದರು. ಹೆಂಡತಿಯು ತನ್ನ ನೂತನ ಪತಿಯ ಹತ್ತಿರ ಹೋಗುವಾಗ ೧೭೫ ಡಾಲರು ಸ್ಟಾಂಪುಗಳನ್ನು ಸಂಗಡ ತೆಗೆದುಕೊಂಡು ಹೋದಳು. ಗಂಡನು ಅವುಗಳನ್ನು ತಿರುಗಿ ಕೊಡುವಂತೆ ಕೇಳಿದನು. ಹೆಂಡತಿ ಒಪ್ಪಲಿಲ್ಲ. ಗಂಡನು ಪೋಲೀಸಿಗೆ ಫಿರ್ಯಾದುಮಾಡಿದನು. ಆಗ ಎಲ್ಲಾ ವಿಚಾರವು ಹೊರಬಿತ್ತು. ಈಗ ಮೂವರೂ ವಿಚಾರಣಾಧೀನರಾಗಿದ್ದಾರೆ.

4 ವರ್ಷ ಒಂದೇ ಸಮನೆ ನಿದ್ರೆ.

ಇಂಗ್ಲೆಂಡಿನಲ್ಲಿ ರೈಲ್ವೆ ನೌಕರನಾಗಿದ್ದ ವಿಕ್ಟರ್ ಸ್ಟೇನ್ಲೇಕ್ಲೀನ್ ಎಂಬವನು ಮಹಾಯುದ್ಧದ ಕಾಲದಲ್ಲಿ ಫ್ರಾನ್ಸದಲ್ಲಿ 3 ವರ್ಷ ಕೆಲಸ ಮಾಡಿದನು. 1918 ರಲ್ಲಿ ಬಾಂಬು ತಾಕಿ ಗಾಯಹೊಂದಿದನು. ಅದರಿಂದ ಅವನು ವಿಶ್ರಾಂತಿ ತೆಗೆದುಕೊಳ್ಳುತ್ತಲೇ ಇದ್ದನಲ್ಲದೆ ಯಾವಾಗಲೂ ಬೇಜಾರುಪಟ್ಟವನಂತೆ ಇರುತ್ತಿದ್ದನು. 1928 ರ ಸುಮಾರಕ್ಕೆ ಅವನು ಊಟಕ್ಕೆ ಕುಳಿತಾಗ್ಗೆ ಎದ್ದು ನಿಂತಾಗ್ಗೆ ಸಹ ನಿದ್ರೆ ಮಾಡಹತ್ತಿದನು. ಆದ್ದರಿಂದ ಅವನನ್ನು ಅದೇ ವರ್ಷ ಕೋಶಾಮ ಎಂಬಲ್ಲಿಯ ದವಾಖಾನೆಗೆ ಹಾಕಿದರು. ಅಲ್ಲಿ ಅವನು 1928 ನೇ ಇಸವಿ ಮೇ ತಿಂಗಳಲ್ಲಿ ಒಮ್ಮೆ ಮಲಗಿದವನು ಏಳಲೇ ಇಲ್ಲ. ಎಲ್ಲರೂ ಅವನನ್ನು ಎಬ್ಬಿಸದೆ ಪರೀಕ್ಷಿಸುತ್ತಿರಲು 1932 ನೇ ಇಸವಿಯಲ್ಲಿ ಎದ್ದನು. ಎದ್ದ ದಿವಸ ಅವನ ಹೆಂಡತಿಯು ಆತುರತೆಯಿಂದ ಹೋಗಿ ಮಾತಾಡಿಸಲು ಅದಕ್ಕೆ ಉತ್ತರ ಕೊಟ್ಟನಂತೆ! ಅವನು ಈಗಲೂ ಸಹ ಹಾಸಿಗೆ ಬಿಟ್ಟು ಏಳುವಂತಿರದಿದ್ದರೂ ಅವನ ಜೀವನಕ್ಕೆ ಭಯವಿಲ್ಲವೆಂದು ಡಾಕ್ಟರರು ಹೇಳಿದ್ದಾರೆ.

ಅಕ್ಕಿಯ ಮಳೆ.

ಬೊಂಬಾಯಿಯ ದಾನಾಬಂದರಿನ ಒಂದು ಮನೆಯಲ್ಲಿ ಶನಿವಾರ ರಾತ್ರಿ ಒಂದು ವಿಚಿತ್ರವಾದ ಘಟನೆಯು ನಡೆಯಿತು. ಈ ವೈಚಿತ್ರ್ಯವು ನಡೆದ ತರುವಾಯ ಮನೆಯವರು ತೆರೆದ ಕಣ್ಣುಗಳಿಂದ ರಾತ್ರಿಯನ್ನು ಕಳೆದರು. ಮನೆಯ ಎರಡನೆಯ ಮಹಡಿಯಲ್ಲಿ ಮಾಳಿಗೆಯಿಂದ 8 ಘಂಟೆಗಳ ಪರ್ಯಂತ ಒಂದೇ ಸಮನೆ ಆರು ಕಡೆಗೆ ಅಕ್ಕಿಯು ಸುರಿಯಲಾರಂಭಿಸಿತು! ಮೇಲಿನ ಮಹಡಿಯಲ್ಲಿದ್ದ ಅಕ್ಕಿಯು ಬಿರುಕುಗಳ ಮೂಲಕ ಸೋರಿರಬಹುದೆಂದು ಅವರು ಮೊದಲು ತರ್ಕಿಸಿದರು. ಅದರೆ ಅದು ಸುಳ್ಳಾಯಿತು. ಅಕ್ಕಿಯನ್ನು ತುಂಬಿಡಲು ಮೇಲಿನ ಮಹಡಿಯನ್ನು ಎಂದೂ ಉಪಯೋಗಿಸಿರಲಿಲ್ಲ. ಕೆಲವರು ಇದು ದೆವ್ವದ ಕಾಟವಿರಬಹುದೆಂದರು. ಮತ್ತೆ ಕೆಲವರು ಶುಭಸೂಚನೆಯೆಂದರು. ಜ್ಯೋತಿಷ್ಕರನ್ನು ಕರೆಯಿಸಲಾಯಿತು. ಈ ವಿಚಿತ್ರ ಘಟನೆಗೆ ಅವರು ಏನೂ ಹೇಳಲಾರದೆ ಹೋದರು. ಅದಾಗ್ಯೂ ಅವರು ದೆವ್ವವನ್ನು ದೂರಮಾಡುವುದಕ್ಕೆಂದು ಮಾಳಿಗೆಗೆ ಒಂದು ತೆಂಗಿನಕಾಯಿ ಒಂದು ನಿಂಬೆಹಣ್ಣು ಕಟ್ಟಿ ಬಂದರು. ಇದರ ನಿಜಾಂಶವನ್ನು ತಿಳಿಯಲೋಸುಗ ನಡೆದ ಸ್ಥಳಕ್ಕೆ ಪತ್ರಿಕಾ ಪ್ರತಿನಿಧಿಗಳೊಬ್ಬರು ಹೋದರು. ಶನಿವಾರ ರಾತ್ರಿ 8-30 ರಿಂದ 1-30 ಘಂಟೆಯ ವರೆಗೆ ಈ ಕೃತಿಯು ನಡೆಯಿತು. ಭಾನುವಾರ ಪ್ರಾತಃಕಾಲವೂ ಇದು ಪುನಃ ನಡೆಯಿತಂತೆ!

[3ನೆಯ ಪುಟದಿಂದ ಮುಂದುವರಿದುದು.]

ಧರ್ಮೋಪದೇಶಗಳೂ, ಅಸ್ತಿಕಪುಂಗವರೂ, ರಾಜರ್ಷಿವರ್ಯರೂ ಆದ ನಮ್ಮ ಪ್ರಭುವರ್ಯರ ನಿಶ್ಶಾಪಾಶದಿಂದ ಪುನೀತವಾದೀ ರಾಜಧಾನಿಯಲ್ಲಿ ನಮ್ಮ ಮಹಾಪ್ರಭುಗಳ ಮತ್ತು ಮಠಾಧಿಪತಿಗಳ, ಪುರಪ್ರಮುಖರ ಮತ್ತು ಜ್ಯೋತಿಶ್ಶಾಸ್ತ್ರಾಭಿಮಾನಿಗಳ ಉದಾರವಾದ ಧನಸಹಾಯಪ್ರೋತ್ಸಾಹಗಳಿಂದ ಏರ್ಪಡಿಸಲಾಗಿದೆ. ಸಮುಚಿತರಾದ ಅಧ್ಯಕ್ಷರ ನೇತೃತ್ವದಲ್ಲಿ ಈ ಸಮ್ಮೇಳನದ ಕಾರ್ಯಕಲಾಪಗಳೂ ಉದ್ದೇಶಗಳೂ ಸಫಲವಾಗುವಂತೆ ಪರಮಾತ್ಮನು ಅನುಗ್ರಹಿಸಲೆಂದೂ, ನಮ್ಮನ್ನಾಳುವ ಮಹಾಪ್ರಭುಗಳಿಗೂ, ಶ್ರೀಮದ್ಯುವರಾಜ ಪ್ರಭುಗಳಿಗೂ, ಈ ಸಮ್ಮೇಳನದ ಅಧ್ಯಕ್ಷರವರಿಗೂ ಬಹಳ ದೂರದೇಶದಿಂದ ದಯಮಾಡಿಸಿರುವ ಜ್ಯೋತಿಷ ಪಂಡಿತಶ್ರೇಷ್ಠರಿಗೂ, ಸದಸ್ಯರಿಗೂ ಸಹ ಶ್ರೀ ಸೂರ್ಯದೇವನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಗಳನ್ನು ದಯಪಾಲಿಸಿ ಕಾಪಾಡಲೆಂದೂ ಮನಃಪೂರ್ವಕವಾಗಿ ಪ್ರಾರ್ಥಿಸಿ, ಈ ಸಮ್ಮೇಳನದ ಪ್ರಾರಂಭೋತ್ಸವವನ್ನು ತಮ್ಮ ದಿವ್ಯವಚನೋಪದೇಶದಿಂದ ಆರಂಭಿಸುವಂತೆ ಶ್ರೀಮದ್ಯುವರಾಜ ಕಂಠೀರವ ಮಹಾಸ್ವಾಮಿಯವರನ್ನು ಮತ್ತೊಮ್ಮೆ ತಮ್ಮಗಳ ಪರವಾಗಿ ವಂದಿಸಿ ಬೇಡಿಕೊಳ್ಳುತ್ತೇನೆ.

ಎಚ್. ಲಿಂಗರಾಜ ಅರಸು.
ಅರಮನೆಯ ರಿಟೈರ್ಡ್ ಮುಜರಾಯಿಭಕ್ಷಿ.
ಮತ್ತು ಸ್ವಾಗತಸಂಘದ ಅಧ್ಯಕ್ಷ.

ತಿಪಟೂರಿಗೆ ದಿವಾನರ ಆಗಮನ.

ತಿಪಟೂರು ಪೌರಸಭಾಧ್ಯಕ್ಷರಾದ ಶ್ರೀಮಾನ್ ಎಂ. ಶಿವಬಸಪ್ಪನವರ ಸುವ್ಯವಸ್ಥಿತವಾದ ಏರ್ಪಾಡು.

ತಿಪಟೂರು ಪೌರಕಾರ್ಯಸಭಾಧ್ಯಕ್ಷರಾದ ಶ್ರೀಮಾನ್ ಎಂ. ಶಿವಬಸಪ್ಪನವರು ಪೌರಕಾರ್ಯಸಭಾಸದಸ್ಯರುಗಳೊಡನೆಯೂ ಮತ್ತು ಇತರ ಪುರಪ್ರಮುಖರೊಡನೆಯೂ ತಿಪಟೂರು ಟ್ರಾವಿಲರ್ಸ್ ಬಂಗಲೆಯ ಎದುರಿಗೆ ಪೌರಸಭೆಯವರು ನಿರ್ಮಿಸಿದ್ದ ಚಪ್ಪರದ ಬಳಿ ದಿವಾನರನ್ನು ಸ್ವಾಗತಿಸಲು ಕಾದಿದ್ದರು. ಪ್ರೋಗ್ರಾಮಿನಂತೆ ದಿವಾನ್ ಸಾಹೇಬರವರು ತಮ್ಮ ಅನುಯಾಯಿಗಳೊಡನೆ ತಾ|| 27-7-34 ನೇ ಗುರುವಾರ ಮಧ್ಯಾಹ್ನ 12-20 ಕ್ಕೆ ಸರಿಯಾಗಿ ಹೊನ್ನವಳ್ಳಿ ಮಾರ್ಗವಾಗಿ ತಿಪಟೂರಿಗೆ ದಯಮಾಡಿಸಿದರು. ಪೌರಕಾರ್ಯಸಭೆಯವರು ನಿರ್ಮಿಸಿದ್ದ ಚಪ್ಪರಕ್ಕೆ ದಿವಾನ್ ಸಾಹೇಬರವರು ಮತ್ತು ಅವರ ಅನುಯಾಯಿಗಳು ದಯಮಾಡಿದ ಕೂಡಲೇ ವೇದಮೂರ್ತಿಗಳು ರಾಜಾಶೀರ್ವಾದವನ್ನು ಮಾಡಿದರು. ಅನಂತರ ಮುನಿಸಿಪಲ್ ಅಧ್ಯಕ್ಷರಾದ ಶ್ರೀಮಾನ್ ಎಂ. ಶಿವಬಸಪ್ಪನವರು ದಿವಾನರಿಗೆ ಹಾರತುರಾಯಿಗಳನ್ನು ಅರ್ಪಿಸಿ ದಿವಾನ್ ಸಾಹೇಬರಿಗೂ ಮತ್ತು ಅವರ ಅನುಯಾಯಿಗಳಿಗೂ ಸುಸ್ವಾಗತವನ್ನು ಬಯಸಿ ಟ್ರಾವಿಲರ್ಸ್ ಬಂಗಲೆಗೆ ಕರೆದುಕೊಂಡು ಬಂದರು.

ದಿವಾನ್ ಸಾಹೇಬರ ಆಗಮನಾರ್ಥವಾಗಿ ಮುನಿಸಿಪಲ್ ಅಧ್ಯಕ್ಷರಾದ ಶ್ರೀಮಾನ್ ಎಂ. ಶಿವಬಸಪ್ಪನವರು ಒಂದು ಭಾರಿ ಔತಣವನ್ನು ಕೊಟ್ಟರು. ಈ ಔತಣವನ್ನು ಸ್ವೀಕರಿಸಿ ದಿವಾನ್ ಸಾಹೇಬರವರು ಪುರಜನರ ಅಹವಾಲ್‌ಗಳನ್ನು ಕೇಳಲು 2 ಘಂಟೆಗೆ ಚಪ್ಪರಕ್ಕೆ ದಯಮಾಡಿಸಿದರು. ಮುನಿಸಿಪಾಲಿಟಿಗೆ ಡ್ರೈನೇಜು ಸ್ಕೀಮು ಟವನ್ ಹಾಲ್ ಕಟ್ಟಿಸಿದ ಮತ್ತು ಊರಿಗೆ ಎಲೆಕ್ಟ್ರಿಕ್ ಲೈಟು ತರಿಸಿಕೊಡುವ ವಿಚಾರ ಮತ್ತು ತಾಲ್ಲೂಕು 2 ನೇ ಮುನ್ಸೀಫ್ ಕೋರ್ಟನ್ನು ಈ ಊರಿಗೆ ವರ್ಗಾಯಿಸಿಕೊಡಬೇಕೆಂದು ವಗೈರೆ ಪ್ರಾರ್ಥನೆಗಳನ್ನು ಸಾವಧಾನದಿಂದ ಕೇಳಿ ಅವುಗಳಿಗೆ ಸೂಕ್ತವಾದ ಉತ್ತರಗಳನ್ನು ಇತ್ತರು.

ದಿವಾನರ ಆಗಮನಾರ್ಥವಾಗಿ ಗ್ರೂಪ್ ಫೋಟೋ ತೆಗೆದ ನಂತರ ಶ್ರೀಮಾನ್ ಡಿ. ಯಸ್. ಮಲ್ಲಪ್ಪನವರು ತಮ್ಮ ಮನೆಯಲ್ಲಿ ದಿವಾನ್ ಸಾಹೇಬರವರಿಗೂ ಮತ್ತು ಅವರ ಅನುಸಾಯಿಗಳಿಗೂ ಏರ್ಪಡಿಸಿದ್ದ ಉಪಹಾರಕ್ಕೆ ದಯಮಾಡಿಸಿದರು. ಉಪಹಾರವಾದನಂತರ ಪಾದಚಾರಿಗಳಾಗಿ ಹೊರಟು ತಿಪಟೂರು ಕಲ್ಪಾಟಿಕಸಂಘವನ್ನು ಪರಾಂಬರಿಸಿಕೊಂಡು ತಿಪಟೂರು ದೊಡ್ಡಪೇಟೆಯಲ್ಲಿರುವ ದಿವಾನರ ಛತ್ರದಲ್ಲಿ ಇಟ್ಟಿರುವ ಶ್ರೀ ಸತ್ಯಗಣಪತಿಯ ದರುಶನಕ್ಕೆ ದಯಮಾಡಿಸಬೇಕೆಂಬುದಾಗಿ ಶ್ರೀ ಸತ್ಯಗಣಪತಿಯ ಸೇವಾಕರ್ತರಾದ ಶ್ರೀಮಾನ್ ಕೆ. ತಿಮ್ಮಪ್ಪನವರು ಪ್ರಾರ್ಥಿಸಿಕೊಂಡಮೇಲೆ ಶ್ರೀ ಸತ್ಯಗಣಪತಿಸ್ವಾಮಿಯ ದರುಶನಕ್ಕೆ ದಯಮಾಡಿಸಿ ಅಲ್ಲಿ ಶ್ರೀಮಾನ್ ತಿಮ್ಮಪ್ಪನವರು ಶ್ರೀ ಸತ್ಯಗಣಪತಿಯ ಸೇವಾವಿಚಾರದಲ್ಲಿ ವಿಜ್ಞಾಪಿಸಿಕೊಂಡ ಅಹವಾಲುಗಳನ್ನೆಲ್ಲಾ ದಿವಾನ್ ಸಾಹೇಬರವರು ಆದರದಿಂದ ಕೇಳಿದರು ಶ್ರೀ ಸತ್ಯಗಣಪತಿಗೆ ಮಂಗಳಾರತಿ ಮಾಡಿದನಂತರ ಪ್ರಸಾದಹೂವಾಲೆಗಳನ್ನು ಸ್ವೀಕರಿಸಿ ಮಂಗಳಾರತಿ ತಟ್ಟೆಗೆ ದಿವಾನ್ ಸಾಹೇಬರವರು ಒಂದು ರೂಪಾಯಿಯನ್ನು ಹಾಕಿದರು.

ಅನಂತರ ಮುನಿಸಿಪಲ್ ಅಧ್ಯಕ್ಷರಾದ ಶ್ರೀಮಾನ್ ಯಂ. ಶಿವಬಸಪ್ಪನವರನ್ನು ತಮ್ಮ ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಟವನ್ ಇನ್ಸ್‌ಪೆಕ್ಷನ್‌ಗಾಗಿ ಹೊರಟು ಮೈಸೂರು ಬ್ಯಾಂಕ್‌ಗೆ ದಯಮಾಡಿಸಿ ಅಲ್ಲಿನ ಕೆಲಸಗಳನ್ನು ನೋಡಿಕೊಂಡು ರೈಲ್ವೆ ಸ್ಟೇಷನ್ ರೋಡಿನ ಮಾರ್ಗವಾಗಿ ಕಾರೋನೇಷನ್ ರೋಡಿಗೆ ತಿರುಗಿ ಟಾಡಿ ಕಂಟ್ರಾಕ್ಟರ್ ಶ್ರೀಮಾನ್ ಕೆ. ಟಿ. ಕಮರಪ್ಪನವರು ತಮ್ಮ ಮನೆಯ ಮುಂದೆ ನಿರ್ಮಿಸಿದ್ದ ಚಪ್ಪರಕ್ಕೆ ದಯಮಾಡಿಸಿ ಅವರು ಕೊಟ್ಟ ಹಾರತುರಾಯಿಗಳನ್ನು ಸ್ವೀಕರಿಸಿ ಸೊಸೈಟಿಯ ಬಳಿ ದಯಮಾಡಿಸಿ ಸಂಘದ ಸೆಕ್ರೆಟರಿ ಶ್ರೀಮಾನ್ ಸಿ. ಕೆ. ತಮ್ಮಣ್ಣನವರು ಕೊಟ್ಟ ಹಾರತುರಾಯಿಗಳನ್ನು ಸ್ವೀಕರಿಸಿದರು. ಮಧ್ಯದಾರಿಯಲ್ಲಿ ನಿರ್ಮಿಸಿದ್ದ ಪ್ರತಿ ಚಪ್ಪರದ ಬಳಿಯಲ್ಲೂ ನಿಂತು ಅವರುಗಳು ಕೊಟ್ಟ ಹಾರತುರಾಯಿಗಳನ್ನು ಸ್ವೀಕರಿಸಿ ಮುನಿಸಿಪಲ್ ಅಧ್ಯಕ್ಷರಾದ ಶ್ರೀಮಾನ್ ಯಂ. ಶಿವಬಸಪ್ಪನವರ ಮನೆ ಎದುರಿಗೆ ನಿರ್ಮಿಸಿದ್ದ ಹಸುರುವಾಣಿ ಚಪ್ಪರಕ್ಕೆ ದಯಮಾಡಿಸಿದರು. ಶ್ರೀಮಾನ್ ಯಂ. ಶಿವಬಸಪ್ಪನವರ ಕೋರಿಕೆಯಂತೆ ಅವರ ಮನೆಗೆ ದಯಮಾಡಿಸಿ ಅವರು ಕೊಟ್ಟ ಹಾರತುರಾಯಿ ಮತ್ತು ತಾಂಬೂಲಾದಿಗಳನ್ನು ಸ್ವೀಕರಿಸಿ ಮಧ್ಯಾಹ್ನ 30-30 ಘಂಟೆಗೆ ತಿಪಟೂರಿನಿಂದ ಗುಬ್ಬಿಗೆ ಪ್ರಯಾಣಮಾಡಿದರು.

ಈ ಸಾರೆ ದಿವಾನ್ ಸಾಹೇಬರವರು ತಿಪಟೂರಿಗೆ ದಯಮಾಡಿಸಿದ ವೇಳೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಗಳು ಬಹಳ ಸಮರ್ಪಕವಾಗಿದ್ದವು. ಈ ಟವನ್ನಿನ ಕೆಲಸಕಾರ್ಯಗಳು ಬಹಳ ದಕ್ಷತೆಯಿಂದ ನಡಿಸಲ್ಪಡುತ್ತಿವೆ ಎಂಬುದಾಗಿ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದರು. ದಿವಾನ್ ಸಾಹೇಬರವರು ಈ ಟವನ್‌ಗೆ ದಯಮಾಡಿಸಿದ ವೇಳೆಯಲ್ಲಿ ವಿಶದತೆಯಿಂದ ಕಾರ್ಯಕಲಾಪಗಳನ್ನು ನಡಿಸಿ ತಿಪಟೂರಿಗೆ ಶಾಶ್ವತವಾದ ಕೀರ್ತಿಯನ್ನು ಶ್ರೀಮಾನ್ ಮುನಿಸಿಪಲ್ ಅಧ್ಯಕ್ಷರಾದ ಯಂ. ಶಿವಬಸಪ್ಪನವರು ತಂದರು. ಈ ಶಾಶ್ವತವಾದ ಕೀರ್ತಿಯನ್ನು ತಿಪಟೂರಿಗೆ ತಂದದ್ದಕ್ಕಾಗಿ ಪ್ರತಿಯೊಬ್ಬ ತಿಪಟೂರು ನಿವಾಸಿಯೂ ಶ್ರೀಮಾನ್ ಯಂ. ಶಿವಬಸಪ್ಪನವರಿಗೆ ಚಿರಋಣಿಯಾಗಿರಬೇಕಾಗಿರುತ್ತದೆ.

ತಿಪಟೂರು ನಿವಾಸಿ.

ಅಮಾನುಲ್ಲ.

ಆರ್. ಎಸ್. ಆರಾಧ್ಯ, ಬಿ. ಕಾಂ. ವಿದ್ಯಾರ್ಥಿ.

ಅಮಾನುಲ್ಲನು ಅಫ್‌ಘಾನಿಸ್ಥಾನದ ಅರಸನು. ರಾಜ್ಯಭಾರವನ್ನು ಬಹಳ ದರ್ಪದಿಂದ ಮಾಡಿಕೊಂಡು ಜನಗಳ ಮನ್ನಣೆಗೆ ಪಾತ್ರನಾಗಿದ್ದನು. ಜನಗಳು ಹಿಂದಿನಕಾಲದ ಪದ್ಧತಿಗಳನ್ನು ಕೊಂಚವೂ ಬಿಡದೆ, ಅವರ ಗುರುಗಳಾದ ಮೌಲ್ವಿಗಳಲ್ಲಿಯೂ ಮತ್ತು ರಾಜನಲ್ಲಿಯೂ ಬಹಳ ಭಕ್ತಿಯನ್ನಿಟ್ಟುಕೊಂಡಿದ್ದರು. ರಾಜನಾದ ಅಮಾನುಲ್ಲನಿಗೆ ಪಾಶ್ಚಿಮಾತ್ಯದೇಶಗಳನ್ನು ನೋಡಿಕೊಂಡುಬರಬೇಕೆಂಬ ಹುಚ್ಚು. ಇದನ್ನು ಪೂರೈಸಿಕೊಳ್ಳಲು ಹೆಂಡತಿಯಾದ ಸೌರಿಯೊಡನೆ ಹೊರಟನು. ಈ ಹುಚ್ಚೇ ಇವನನ್ನು ಕೊನೆಗೆ ಅಧೋಗತಿಗೆ ಇಳಿಸಿಬಿಟ್ಟಿತು.

ಅಮಾನುಲ್ಲನು ಪಾಶ್ಚಿಮಾತ್ಯದೇಶಗಳನ್ನು ನೋಡಿಕೊಂಡು ಬಂದದ್ದೇ ತಡ; ಅವನ ರಾಜ್ಯವನ್ನು ಪಾಶ್ಚಿಮಾತ್ಯದೇಶಗಳಂತೆ ಮಾಡಬೇಕೆಂದು ಆಸೆಹುಟ್ಟಿತು. ಜನರೆಲ್ಲರನ್ನೂ ಯೂರೋಪಿಯನರಂತೆ ಮಾಡಬೇಕೆಂಬ ಆಸೆ ಬೇರೆ. ಅದ್ದರಿಂದ ಜನರನ್ನು ಒತ್ತಾಯಮಾಡತೊಡಗಿದನು. ಅಲ್ಲಿಯ ಮಹಮ್ಮದೀಯರಿಗೆ ಗಡ್ಡಗಳನ್ನು ಬೋಳಿಸಿ, ತಲತಲಾಂತರದಿಂದ ಬಂದಿದ್ದ ದೊಗಲೆ ಪರಾಯಿಗಳನ್ನು ತೆಗೆದು ತಲೆಯಲ್ಲಿ ಕ್ರಾಪ್ ಬೆಳಸಿಕೊಂಡು ಸೂಟ್‌ಹಾಕಿಕೊಳ್ಳುವುದಕ್ಕೆ ಕೊಂಚವಾದರೂ ಸಮ್ಮತಿಯಿಲ್ಲ. ಅಲ್ಲಿಯ ಮೌಲ್ವಿಗಳು ಈ ಸಂಕಟಕ್ಕೆ ಸಿಕ್ಕಿ ಗೋಳಾಡಬೇಕಾಗಿ ಬಂತು. ಅದ್ದರಿಂದ ಅವರೂ ಅಲ್ಲಿನ ಮಹಮ್ಮದೀಯರಿಗೆ ಹುರಿದುಂಬಿಸತೊಡಗಿದರು.

"ಪುರಾತನಕಾಲದಿಂದ ನಡೆದುಬಂದ ನಮ್ಮ ಪದ್ಧತಿಯನ್ನು ಹಾಳುಮಾಡಿ, ನಮ್ಮ ಕುಲಾಚಾರವನ್ನು ಕೆಡಿಸಲು ಕಂಕಣಬದ್ಧನಾಗಿದ್ದಾನೆ. ಇದಕ್ಕೆ ನಾವು ಉತ್ತೇಜನಕೊಟ್ಟರೆ ನಾವುಗಳೆಲ್ಲರೂ ಧ್ವಂಸವಾಗಿ ಹೋಗುತ್ತೇವೆ" ಎಂದು ಹೇಳತೊಡಗಿದರು. ನಾಡಿನಲ್ಲಿ ಅಸಂತೃಪ್ತಿ ಮೊಳೆತು ಗಿಡವಾಗಲು ಪ್ರಾರಂಭಿಸಿತು. ಮುಖ್ಯವಾಗಿ ಹೆಂಗಸರಿಗಿದ್ದ ಘೋಷಾಪದ್ಧತಿಯನ್ನು ತೆಗೆದುಹಾಕಿಸಲು ಅಮಾನುಲ್ಲನು ಪ್ರಯತ್ನಿಸಿದುದೇ ದೊಡ್ಡ ತಪ್ಪಾಗಿ ಹೋಯಿತು. ರಾಜ್ಯದಲ್ಲೆಲ್ಲಾ ಜನಗಳು ದಂಗೆಯೆದ್ದು ರಾಜನನ್ನು ಕೊಲ್ಲಲು ಕೂಡ ಉದ್ಯುಕ್ತರಾದರು. ಯಾವ ರಾಜ್ಯದಲ್ಲಿಗಲಿ ಕೊಂಚ ಮಾರ್ಪಾಟಾಗಬೇಕಾದರೆ ಜನಗಳ ಸಮ್ಮತಿಯು ಅತ್ಯಾವಶ್ಯಕ. ಅಂಥಾದ್ದರಲ್ಲಿ ಇಂತಹ ಮಾರ್ಪಾಟುಗಳನ್ನು ಮಾಡಬೇಕಾದರೆ ಕೊಂಚದಿವಸಗಳಲ್ಲಾಗುವುದಿಲ್ಲ. ಅನೇಕ ವರ್ಷಗಳವರೆಗೆ ಜನಗಳಿಗೆ ಅದರ ಪ್ರಯೋಜನ ಮತ್ತು ಹಿಂದಿನ ಪದ್ಧತಿಯ ತೊಂದರೆಗಳನ್ನು ವಿಮರ್ಶಿಸಿ ಹೇಳಿ, ಅವರೂ ಇಷ್ಟಪಟ್ಟರೆ ನಿಧಾನವಾಗಿ ಅದನ್ನು ರೂಢಿಗೊಳಿಸಬಹುದು. ಇದನ್ನು ಬಿಟ್ಟು ತತ್‌ಕ್ಷಣವೇ ರಾಜ್ಯವೆಲ್ಲವೂ ಪಾಶ್ಚಿಮಾತ್ಯದೇಶಗಳಂತೆ ಆಗಬೇಕೆಂದರೆ ಸಾಮಾನ್ಯವೇ! ಅದರಲ್ಲೂ ಅಫ್ಘಾನಿಸ್ಥಾನದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಅಲ್ಲಿನ ಮಹಮ್ಮದೀಯ ಗುರುಗಳಾದ ಮೌಲ್ವಿಗಳ ಮಾತು ಚಾಚೂ ತಪ್ಪದೆ ನಡೆಯುತ್ತವೆ. ಅಲ್ಲದೆ ಮೌಲ್ವಿಗಳಿಗೆ ಬೇಕಿಲ್ಲದ ಕೆಲಸವನ್ನು ಆ ರಾಜ್ಯದಲ್ಲಿ ನಡೆಸಲು ಸಾಧ್ಯವೇ ಇಲ್ಲ. ಇದನ್ನು ನೋಡಿ ನೋಡಿ ಅಮಾನುಲ್ಲನು ದುಡುಕಿ ತನ್ನ ರಾಜ್ಯದಲ್ಲಿ ಹೆಂಗಸರಿಗೆ ಘೋಷಾಪದ್ಧತಿಯನ್ನು ತೆಗೆದುಹಾಕಿಸಲು ಪ್ರಯತ್ನಿಸಿದುದೂ, ಜನಗಳನ್ನು ಪಾಶ್ಚಿಮಾತ್ಯದೇಶದ ಜನಗಳಂತೆ ಉಡುಪನ್ನು ಧರಿಸಿಕೊಳ್ಳುವ ಹಾಗೆ ಮಾಡಬೇಕೆಂದಿದ್ದುದೂ ದೊಡ್ಡ ತಪ್ಪು. ಅಲ್ಲಿನ ಮೌಲ್ವಿಗಳು ಜನಗಳನ್ನು ಮರಳುಮಾಡಿ, ಅನೇಕ ತೊಂದರೆಗಳಿಗೆ ಈಡುಮಾಡುತ್ತಾರೆಂದು ಅಮಾನುಲ್ಲನಿಗೆ ಗೊತ್ತು. ಅದ್ದರಿಂದ ಅದನ್ನು ತಪ್ಪಿಸಲು ಅಮಾನುಲ್ಲನು ಮಾಡಿದ ಪ್ರಯತ್ನಗಳು ಸಿದ್ಧಿಸದೆ ಜನಗಳು ಮೌಲ್ವಿಗಳ ದುರ್ಬೋಧನೆಗೊಳಗಾಗಿ ಅಮಾನುಲ್ಲನನ್ನೇ ಎದುರಿಸತೊಡಗಿದರು.

ಅಮಾನುಲ್ಲನು ಮಾಡುತ್ತಿದ್ದ ಈ ಕಾರ್ಯವು ಒಳ್ಳೆಯದೆಂದು ಒಪ್ಪಿಕೊಳ್ಳಬಹುದು. ಜನಗಳ ಮತ್ತು ದೇಶದ ಏಳಿಗೆಗೆ ಅನೇಕ ಮಾರ್ಪಾಡುಗಳನ್ನು ಮಾಡಬೇಕೆಂಬ ಕುತೂಹಲವು ಇವನಿಗೆ ಬಹಳ ಹೆಚ್ಚು. ಇವನ ಆಶೆ ಆಶಯಗಳು ದೇಶದ ಅಭಿವೃದ್ಧಿಗೆ ಬಹಳ ಸಹಕಾರಿ; ಆದರೆ ಇವನು ಪ್ರಯತ್ನಪಟ್ಟ ವಿಧಾನವು ಸರಿಯಾದುದಲ್ಲವೆಂದು ತೋರುತ್ತದೆ. ಬಹಳ ದುಡುಕಿ ಕೆಲಸಮಾಡಲು ಯತ್ನಿಸಿದ. ಹೀಗೆ ದುಡುಕಿದುದೇ ಜನಗಳ ಗೊಂದಲಕ್ಕೆ ಕಾರಣವಾಯಿತು. ಪ್ರಜೆಗಳೆಲ್ಲರೂ ದಂಗೆ ಏಳಲು ಪ್ರಾರಂಭಿಸಿದರು. ದಂಗೆಯನ್ನಡಗಿಸಲು ಅಮಾನುಲ್ಲನು ಅನೇಕರನ್ನು ಬಂಧಿಸಿದನು. ಅನೇಕರನ್ನು ಕೊಲ್ಲಿಸಿ ರಕ್ತವನ್ನು ಚೆಲ್ಲಾಡಿದನು. ಏನಾದರೇನು! ಜನಗಳು ಮಾತ್ರ ತಮ್ಮ ಹಟವನ್ನು ಬಿಡಲಿಲ್ಲ. ಕುಂಟರಸೇಕರಿಗೆ ಒಳ್ಳೆಯ ಸಮಯಸಿಕ್ಕಿದ ಹಾಗಾಯ್ತು ಎಲ್ಲರನ್ನೂ ಹಿಂಸಿಸುತ್ತಾ ರಾಜನ ಮೇಲೆ ಎತ್ತಿಗಟ್ಟಿದರು. ಅಮಾನುಲ್ಲನು ದಂಗೆಯನ್ನು ಅಡಗಿಸಲು ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ದೇಶದಲ್ಲೆಲ್ಲಾ ಅಶಾಂತಿ ತಲೆದೋರಿ ಜನಗಳೆಲ್ಲರೂ ಬಹಳ ತೊಂದರೆಗೊಳಗಾದರು. ಇದಕ್ಕೆ ಮುಖ್ಯಕಾರಣನಾದ ಅಮಾನುಲ್ಲನು ರಾಜ್ಯವನ್ನು ಬಿಟ್ಟುಹೊರಡಬೇಕಾಯ್ತು. ಅದರಂತೆ ಅವನು ನವಮಾಸಗರ್ಭಿಣಿಯಾಗಿದ್ದ ತನ್ನ ಹೆಂಡತಿ ಸೌರಿಯೊಡನೆ ಅಫ್ಘಾನಿಸ್ಥಾನವನ್ನು ತ್ಯಜಿಸಿ, ಬೊಂಬಾಯಿಯ ಮೂಲಕ ಯೂರೋಪಿಗೆ ಪ್ರಯಾಣ ಬೆಳಸಿದನು.

ಈತನು ರಾಜವನ್ನು ಬಿಟ್ಟುಹೋದ ಕೊಂಚದಿನಗಳಲ್ಲಿಯೇ ಕುಂಟರ ಮುಖಂಡನಾದ "ಬಚಾಏಸಾಕೋ" ಎಂಬ ಹೀನಕುಲದವನು, ಜನಗಳನ್ನು ಬಹಳವಾಗಿ ಹಿಂಸಿಸತೊಡಗಿದನು. ರಾಜ್ಯದಲ್ಲೆಲ್ಲಾ ಹದೆಯುಲಕದಳವಾದ ಕ್ರೂರಕೆಲಸಗಳನ್ನು ಮಾಡಿ ತಾನೇ ಅಧಿನಾಯಕನೆಂದು ಹೇಳಿಕೊಳ್ಳುತ್ತಾ, ಅಮಾನುಲ್ಲನ ಸ್ಥಾನಕ್ಕೆ ಬರುವಷ್ಟರಲ್ಲಿಯೇ ಸೇನಾನಾಯಕನಾದ ನಾದಿರಷಹನು ಆ ಕುಂಟನನ್ನು ನಿರ್ಮೂಲಮಾಡಿ ಅಫ್ಘಾನಿಸ್ಥಾನದ ಅರಸನಾದನು. ನಾದಿರಷಹನು ಪಟ್ಟಕ್ಕೆ ಬಂದಕೂಡಲೇ ಬಚ್ಚಾಏಸಾಕೋವಿನ ಜನರನ್ನು ಒಟ್ಟಿಗೆ ಒಂದೇಸಲ ಕಾಬೂಲಿನಲ್ಲಿ ನೇಣುಹಾಕಿ ಕೊಲ್ಲಿಸಿದನು. ಈ ಕೊಲೆಯು ನಡೆದ ಮೇಲೆ ಜನಗಳಲ್ಲಿ ದಂಗೆ ಎಂಬ ಶಬ್ದವನ್ನೇ ಕೇಳದ ಹಾಗಾಯ್ತು. ನಾಡಿನಲ್ಲೆಲ್ಲಾ ಶಾಂತತೆಯು ತಲೆದೋರಿ ಪ್ರಜಾಸೇವೆ ಮಾಡಿಗೆ ಅವಕಾಶವಾಯಿತು. ಅಮಾನುಲ್ಲನ ಆಶೆಯಂತೆ ನಾದಿರಷಹನು ದೇಶದಲ್ಲಿ ಸುಧಾರಣೆಗೆ ಮೊದಲು ಮಾಡಿದನು. ಆದರೆ ಈತನು ಅಮಾನುಲ್ಲನಂತೆ ದುಡುಕಲಿಲ್ಲ. ಈ ಹೊಸಸುಧಾರಣೆಗಳನ್ನು ನಿಧಾನವಾಗಿ ಜನಗಳ ಇಷ್ಟದಂತೆ ಮಾರ್ಪಾಡು ಮಾಡತೊಡಗಿದನು

ಅಮಾನುಲ್ಲನು ಸರಳ ಜೀವಿ. ಆದರೂ ಇವನ ಆಶೆಯು ಮಾತ್ರ ಹೇಳಲಸಾಧ್ಯ. ಇವನ ಹೆಸರಿಗೆ ತಕ್ಕಂತೆ ಇವನು 'ಶಾಂತಿಪ್ರಿಯನೇ' ಅಹುದು. ಅಫ್ಘಾನಿಸ್ಥಾನಕ್ಕೆ ಹೋಗಿ ತಿರುಗಿ ರಾಜನಾಗಿ ತನ್ನ ದೇಶವನ್ನೆಲ್ಲಾ ಪಾಶ್ಚಿಮಾತ್ಯದೇಶಗಳಂತೆ ಮಾಡಬೇಕೆಂಬ ಆಶೆ ಇನ್ನೂ ಇವನಿಗೆ ಬಿಟ್ಟಿಲ್ಲ. ಈತನನ್ನು ಅಲ್ಲನು ಬಾ ಎಂದು ಕರೆದರೆ ಖಂಡಿತ ತಪ್ಪದೆ ಹೋಗುವನೆಂದು ಹೇಳುವನಂತೆ! ತನ್ನ ರಾಜ್ಯವನ್ನೂ ಜನಗಳನ್ನೂ ಪೂರ್ಣ ಅಭಿವೃದ್ಧಿಗೊಳಿಸಬೇಕೆಂಬ ಆಶೆ ಸಂಪೂರ್ಣವಾಗಿದೆ. ಅಮಾನುಲ್ಲನು ತನ್ನ ಮನೆತನದ ಅಮೂಲ್ಯ ವಸ್ತ್ರಾಭರಣಗಳನ್ನು ತೆಗೆದುಕೊಂಡು ತನ್ನ ರಾಜ್ಯವನ್ನು ಬಿಟ್ಟುಬಂದಿದ್ದನು. ಅವುಗಳಲ್ಲಿ ಹಲವನ್ನು ಸ್ವಿಟ್ಜರ್‌ಲ್ಯಾಂಡಿನಲ್ಲಿ ಮಾರಿಕೊಂಡು ಇಟಲಿಯ ರೋಮ್ ನಗರದ ಹತ್ತಿರ ಒಂದು ಸಣ್ಣ ಬಂಗಲೆಯಲ್ಲಿ ವಾಸಿಸುತ್ತಿರುವನು. ಇವನ ಹೆಂಡತಿಯೂ ಕೂಡ ಈಗಿನ ಅವರ ಸ್ಥಿತಿಗೆ ತಕ್ಕಂತೆ ಖರ್ಚುಮಾಡಿಕೊಂಡು ಸಂಸಾರವನ್ನು ನಡೆಯಿಸಿಕೊಂಡು ಬರುತ್ತಿರುವಳು. ರಾಜವೈಭವ, ಸನ್ಮಾನ, ಮರ್ಯಾದೆಗಳಿಂದ ಮೆರೆಯುತ್ತಿದ್ದ ಆ ಅಫ್ಘನ್ ಅರಸನಾದ ಅಮಾನುಲ್ಲನು ಈಗ ಬಡತನದ ಜೀವನ ಮಾಡುವಂತಾಗಿದೆ. ನಾದಿರಷಹನು ಕೊಲ್ಲಲ್ಪಟ್ಟ ಸುದ್ದಿಯನ್ನು ಕೇಳಿ ತನ್ನ ರಾಜ್ಯಕ್ಕೆ ಹೋಗಬೇಕೆಂಬ ಆಶೆ ಅಮಾನುಲ್ಲನಿಗೆ ಹುಟ್ಟಿತು. ಆದರೇನು? ಇವನನ್ನು ಬಾ ಎಂದು ಕರೆಯುವವರಾರು!

ಪ್ರಜೆಗಳು ಇಷ್ಟಪಟ್ಟರೆ ಅಮಾನುಲ್ಲನು ಈಗಲೂ ಕೂಡ ಅಫ್ಘನ್ ಅರಸನಾಗಬಹುದು.

ಕಾಶೀಕ್ಷೇತ್ರ ಶ್ರೀ ಜಗದ್ಗುರು ವಿಶ್ವಾರಾಧ್ಯ, ಗುರುಕುಲ ವಿದ್ಯಾರ್ಥಿಗಳ ಪರೀಕ್ಷಾಫಲವು.

ಕಲಕತ್ತಾ ಯೂನಿವರ್ಸಿಟಿ ಪರೀಕ್ಷೆ.

ವ್ಯಾಕರಣಾದ್ಯದಲ್ಲಿ
ಸದಾಶಿವಶರ್ಮ, ಬಾವಲುಡಿಕಿ.

ಸಾಹಿತ್ಯಾದ್ಯದಲ್ಲಿ
ಸಿದ್ಧಲಿಂಗಶರ್ಮ, ಬಂಕಾಪುರ.

[ನೋಟು—ಹೋದವಾರದ ಪತ್ರಿಕೆಯಲ್ಲಿ ಈ ವಿದ್ಯಾರ್ಥಿಗಳ ಹೆಸರು ಪರೀಕ್ಷೆಗಳು ವ್ಯತ್ಯಾಸವಾಗಿ ಮುದ್ರಣವಾಗಿರುವದರಿಂದ ಪುನಃ ಮುದ್ರಿಸೋಣವಾಗಿದೆ.

VASUDEVA RAO,
Diwan Jangamvadi Math
Benares City.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಅವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಅರಿಯಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಅಚ್ಚಾಗಿದೆ! ಮಾರಾಟಕ್ಕೆ ಸಿದ್ಧವಾಗಿದೆ!!

ರಮಲವಿದ್ಯಾರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ಮೂವತ್ತೇಳು ಅಧ್ಯಾಯಗಳೂ ಇದ್ದು, ನಾನಾವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವನು ತನ್ನ ಪ್ರಶ್ನವು ಇಂಥದೆಂದು ಹೇಳದಿದ್ದರೂ ಈ ಗ್ರಂಥದ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿಯೆಂದು ಪ್ರಶ್ನಕರ್ತನಿಗೆ ಹೇಳಿ ಆಶ್ಚರ್ಯಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ, ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದುದರಿಂದಲೇ ಇದಕ್ಕೆ ರಮಲವಿದ್ಯಾರಹಸ್ಯವೆಂಬ ಅನ್ವರ್ಥಕನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನು ಅವಶ್ಯವಾಗಿ ತರಿಸಿಕೊಂಡು ನೋಡಿ ಲಾಭವನ್ನು ಪಡೆಯಬೇಕು.

ಪುಸ್ತಕದ ಬೆಲೆ ೧ಕ್ಕೆ ರೂ. ೪—೦—೦.

ಅಂಚೆವೆಚ್ಚ ಬೇರೆ. 54

ವಿಳಾಸ—ಬ್ರ. ಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
ಪಾಠಶಾಲಾ, ಮಹಾಗಾಂವ್,
ಜಿಲ್ಲಾ ಗುಲ್ಬರ್ಗಾ.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೨೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೫—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಶರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಸ್ವತಂತ್ರ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಸ್ವತಂತ್ರ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ತಿಳಿದು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವನೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೦ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 48

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಪೀಠಾಧೀಶವರರುಗಳಾದ ಐವರು ಆಚಾರ್ಯರು ಒಂದೆಡೆಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟಾಕರ್ಣನಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಲ್ಮಠದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪ...

...ಗಳನ್ನು ಕೊಟ್ಟಿ... ರು. ಪ್ರಸಿದ್ಧವಾದ... ನಶ್ಯದ ಪುಡಿಯಿ... ಸ್ವಸ್ಥವಾಗುವ ವ್ಯಾ... ಧಿಗಳು ಯಾವವೆ... ರೆ:—ಪೀನಸಿ, ಒ... ತಲೆನೋವು, ತಲೆ... ಲ್ಲಿಯ ರೋಗಗ... ಕಣ್ಣುಗಳಲ್ಲಿ ಉಂಟ... ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ... ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[41] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ...
पंडित श्रीकाशीनाथशास्त्री यांचें भाषण (मराठी)	८ आ...
Speeches by Pandit Shri Kashinatha Shastri (*English*)	12 A...
ವೇದೋಕ್ತಶಿವಪೂಜಾವಿಧಿ	೧೦ ...
ವೀರಶೈವರತ್ನ (೫ನೆಯ ಆವೃತ್ತಿ)	೧೨ ...
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ...
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ...
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ...
ಶಿವಾಸೂತ್ರಸಿದ್ಧಾಂತದರ್ಪಣ	೧೨ ...
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ.
लिंगधारणचंद्रिका (संस्कृत)	३ ...
महानारायणोपनिषत् (वीरशैवभाष्य-संस्कृत)	१ ...
वीरशैवेंदुशेखर (संस्कृत)	१ ...

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ...

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ಷೇ॥ ಬ್ರಂ॥ ಪಂಡಿತ ಶಿರ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 ॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ತ್ವಿಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಅಕ್ಟೋಬರ್ ೧೯೩೪ [ಸಂಚಿಕೆ ೨೪

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ಸಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ಸಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 49

ಶಾರದಾಮಹೋತ್ಸವ, ಸೊಲ್ಲಾಪುರ.

ಶ್ಲೋ ॥ ನಾನಾಶಾಸ್ತ್ರ ಮಹಾನದೀಜಲನಿಧಿಂ ಲೋಕೇಕ ಹರ್ಷಪ್ರದಾಂ | ಬಿದ್ವನ್ಮಾನಸಕಂಜ ಸತ್ತಮರಗಾಂ ವಿದ್ಯಾರ್ಥಿನಾಂ ದೇವತಾಂ ॥ ವೀಣಾದಂಡವತೀಂ ಸುಗಾಯನರತೀಂ ಗೀರ್ವಾಣ ಭಾಷಾಶ್ರುತಾಂ | ವಂದೇಹಂ ತ್ರಿದಶಾದಿ ವಂದಿತಪದಾಂ ಚಂದ್ರಾನನಾಂ ಶಾರದಾಂ ॥೨॥

ಯಾವಳ ಬಲದಿಂದ ನಾವು ಈ ಪ್ರಪಂಚದಲ್ಲಿ ಸುಖವಾಗಿ ವ್ಯವಹರಿಸುವೆವೋ, ಯಾವಳ ಬಲದಿಂದ ಮಾನವನು ಕೀರ್ತಿಶಾಲಿಯಾಗುವನೋ ಅಂಥ ವಿದ್ಯಾಧಿದೇವತೆಯಾದ ಶಾರದಾದೇವಿಯ ಮಹೋತ್ಸವವು ಪದ್ಧತಿಯಂತೆ ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯಿತು. ವಿದ್ಯುದ್ದೀಪಗಳಿಂದಲೂ ರಂಭಾಸ್ತಂಭ ತಳಿರುತೋರಣಗಳಿಂದಲೂ ಪಾಠಶಾಲೆಯು ಶೋಭಾಯಮಾನವಾಗಿದ್ದಿತು. ತಾ॥ ೧೬-೧೦-೩೪ ನೆಯ ಮಂಗಳವಾರ ದಿವಸ ಸಾಯಂಕಾಲ ಧಾರ್ಮಿಕ ವಿಷಯಕವಾಗಿ ಶ್ರೀಮಂತ ಸಿದ್ಧರಾಮಪ್ಪಾ ಧುಮ್ಮಾ ವಕೀಲ್ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರೆಯಿತು. ಆ ಸಭೆಗೆ ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಚನ್ನವೀರಶಿವಾಚಾರ್ಯಸ್ವಾಮಿಗಳು ಹೊಟ್ಟಿಗಿ ಇವರು ಆಗಮಿಸಿದ್ದರಲ್ಲದೆ, ಶ್ರೀನರ್ಜಾ ಚನ್ನಬಸವಪ್ಪಾ (ಉರ್ಫ) ಬಾಬಾ ಸಾಹೇಬವಾರದ ಶ್ರೀಮಂತ ಶಿವಲಿಂಗಪ್ಪಾ ಮಾಳಿಗೆ ಇವರೇ ಮೊದಲಾದ ಪ್ರಮುಖ ಮಹಾಶಯರು ಆಗಮಿಸಿದ್ದರು. ಆ ಮೇಲೆ ಕೆಲ ಜನ ವಿದ್ಯಾರ್ಥಿಗಳು ಧಾರ್ಮಿಕ ವಿಷಯವಾಗಿ ವ್ಯಾಖ್ಯಾನಗಳನ್ನು ಮಾಡಿದರು. ಮತ್ತು ಯಮನಪ್ಪ ಮಾಸ್ತರ ಲೋಣಿ ಇವರು ಕೂಡ ವ್ಯಾಖ್ಯಾನಮಾಡಿದರು. ಅನಂತರ ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಚನ್ನವೀರಶಿವಾಚಾರ್ಯಸ್ವಾಮಿಗಳವರು ತಮ್ಮ ಅಮೃತಮಯವಾದ ವಾಣಿಯಿಂದ ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಧಾರ್ಮಿಕೋಪನ್ಯಾಸವನ್ನು ಮಾಡಿದರು. ಈ ಮಹನೀಯರಂತೆ ಗುರುವರ್ಗದವರೆಂದು ಹೊಗಳಿಸಿಕೊಳ್ಳುವ ನಮ್ಮ ಪಟ್ಟಾಧಿಕಾರಿಗಳು ತಪಸ್ಸಿನಲ್ಲಿಯೂ ವಿದ್ಯಾ ಹಾಗೂ ವಕ್ತೃತ್ವದಲ್ಲಿಯೂ ಚನ್ನಾಗಿ ನಿಪುಣರಾದರೆ ನಮ್ಮ ವೀರಶೈವ ಮತವು ಪೂರ್ವಸ್ಥಿತಿಯನ್ನು ಹೊಂದಲು ಅಭ್ಯಂತರವಿಲ್ಲ. ಇಷ್ಟಾದ ಮೇಲೆ ಸಭೆಯು ಮುಕ್ತಾಯವಾಯಿತು. ಉತ್ಸವದಲ್ಲಿ ಭಾಗಿಗಳಾದ ವಿದ್ಯಾರ್ಥಿಗಳಿಗೆ ಶಾರದಾದೇವಿಯು ಉತ್ಕೃಷ್ಟ ಬುದ್ಧಿಯನ್ನು ಕೊಟ್ಟು ಸಲಹಲೆಂದು ಭಜಿಸುವ

ಶರಣಬಸವಶರ್ಮಾ,
ಆರಕೇರಿ.

ಗಜಾನನಮಹೋತ್ಸವ.

ನೈಜಾಮ್ ಸ್ಟೇಟ್ ತಾಲೂಕ ಚಿತಾಪೂರ ಗ್ರಾಮದಲ್ಲಿ ಜಾಫರ್ ಗಂಜ (ಅಡತಿ ಬಜಾರ) ವ್ಯಾಪಾರಿ ಮಂಡಳಿಯವರಿಂದ ಕಳೆದ ಭಾದ್ರಪದ ಶುದ್ಧ ಬುಧವಾರ ದಿವಸ ವಿಘ್ನಗಳನ್ನು ವಿನಾಶಗೊಳಿಸಿ ಅಖಿಲ ಸುಖಸಂಪತ್ತನ್ನು ಕೊಡುವ ಪಾರ್ವತೀ ಪುತ್ರನಾದ ಶ್ರೀ ವಿಘ್ನೇಶ್ವರನ ಉತ್ಸವವು ಅತ್ಯಂತ ಉತ್ಸುಕತೆಯಿಂದ ಜರುಗಿಸಲ್ಪಟ್ಟಿತು. ಈ ಉತ್ಸವಕ್ಕೆ ಶ್ರೀಮಂತ ಕೃಷ್ಣಾಜೀ ಮಾರ್ತಾಂಡನಾಯಿಕ ಶ್ರೀಯುತ ಕರೆಪ್ಪ ಮುಗಳಿ, ರಾ॥ ರಾ॥ ಶ್ರೀ ವೀರಪ್ಪಾ ಮೊಟನಳ್ಳಿ, ಮ॥ ರಾ॥ ಬಸಪ್ಪಾ ಸಜ್ಜನಶೆಟ್ಟಿ, ಶ್ರೀಮಂತ ರೇವಣಸಿದ್ಧಪ್ಪಾ ಮಾಸ್ತರ ಇವರೇ ಮೊದಲಾದ ತರುಣ ಮಂಡಳಿಯವರು ನಿತ್ಯದಲ್ಲಿ ರಾತ್ರಿ ೯ ಘಂಟೆಯಿಂದ ೧೧ ರ ವರೆಗೆ ಭಜನೆಯನ್ನು ನಡೆಸುತ್ತಿದ್ದರು. ಮ॥ ರಾ॥ ಶ್ರೀರಾಮನಾರಾಯಣ ಗೋಕುಲದಾಸ ಅಮರಪ್ಪಾ ಶೆಟ್ಟಿ ಶಂಕರಪ್ಪಾ ರೊಕಡಿ ಬಸಪ್ಪಾ ಬೊಮ್ಮನಳ್ಳಿ ಮೊದಲಾದವರ ವ್ಯವಸ್ಥಾಪಕತ್ವದಲ್ಲಿ ಗ್ರಾಮದ ಸರ್ವಮಾಹೇಶ್ವರರಿಗೂ ಎಡಬಲದ ಹಳ್ಳಿಗಳಿಂದ ಬಂದ ಜಂಗಮರಿಗೂ ಅನಾಥರಿಗೂ ಭಕ್ತಸಮೂಹಕ್ಕೂ ಅನ್ನದಾನವು ಮಾಡಲ್ಪಟ್ಟಿತು. ಅನಂತರ ರಾತ್ರಿ ೧೦ ಘಂಟೆಯಿಂದ ಸಂಗೀತಸಂಘದವರಿಂದ ಭಜನೆಯು ನಡೆಯಿತು. ಮರುದಿವಸ ೮ ಘಂಟೆಗೆ ಸ್ಥಲ ಪರಸ್ಥಲದಿಂದ ಬಂದಿರತಕ್ಕ ಜನಸಮೂಹದಿಂದಲೂ ಮತ್ತು ಭಾಜಾಭಜಂತ್ರಿ, ಮೊದಲಾದ ಅನೇಕ ವಾದ್ಯವೈಭವದಿಂದಲೂ ಮೆರವಣಿಗೆಯು ಸ್ಟೇಷನ್ ರೋಡಿನಿಂದ ಹೊರಟು ಗ್ರಾಮದ ಮುಖ್ಯ ಮುಖ್ಯ ಭಾಗಗಳಲ್ಲಿ ಹಾಯ್ದು ಶಿವಶಂಕರನಾಮಕವಾದ ಭಾವಿಯ ಭವ್ಯವಾದ ಮೈದಾನಕ್ಕೆ ೧೧ ಘಂಟೆಗೆ ಬಂದು ತಲ್ಪಿತು. ಅಲ್ಲಿ ಎಲ್ಲಾ ಕ್ರಿಯೆಗಳು ನೆರವೇರಿದುವು. ಆ ಸಮಯದಲ್ಲಿ ಪಂಚಾಚಾರ್ಯ ಪ್ರಭಾಪೋಷಣಕ್ಕೆ ೧ ರೂ. ಯು ತೆಗೆಯಿಸಲ್ಪಟ್ಟಿತು. ಜಗನ್ನಿಯಾಮಕರಾದ "ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯು ಈ ಗ್ರಾಮದ ಮೇಲೆ ಸಂಪೂರ್ಣವಿರಲೆಂದು ಸರ್ವರೂ ಜಯಘೋಷವನ್ನು ಮಾಡಿ ಹಿಂದಿರುಗಿದರು.

ಓರ್ವ ಪ್ರತ್ಯಕ್ಷದರ್ಶಿ.

ವಿಜಯದಶಮೀ ಮಹೋತ್ಸವ, ಕುಂದಗೋಳ.

ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳ ಟವನ್ನಿನಲ್ಲಿರುವ ವೀರಶೈವ ಮಂಡಳಿಯವರು ಈ ವರ್ಷ ವಿಜಯದಶಮೀ ಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು. ಪದ್ಧತಿ ಪ್ರಕಾರವಾಗಿ ಆ ದಿವಸ ಸರ್ವರೂ ಹಿರೇಮಠಕ್ಕೆ ಸೇರಿ ಆಂದೋಲಿಕೋತ್ಸವದೊಡನೆ ಶಮೀವೃಕ್ಷದ ಬಳಿಗೆ ಹೋಗಿ ಅಲ್ಲಿ ಪೂಜಾದಿ ಕ್ರಿಯೆಗಳನ್ನು ತೀರಿಸಿಕೊಂಡು ಶ್ರೀಗಳವರಿಗೆ ಶಮಿಯನ್ನು ಸಮರ್ಪಿಸಿ ಅಟ್ಟಹಾಸದೊಡನೆ ಮಹೋತ್ಸವ ಪೂರ್ವಕವಾಗಿ ಮಠಕ್ಕೆ ಆಗಮಿಸಿದರು. ಪ್ರತಿವರ್ಷಕ್ಕಿಂತಲೂ ಈ ವರ್ಷ ಈ ಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತೆಂಬ ವಿಷಯವನ್ನು ಬರೆಯಲು ಅತ್ಯಾನಂದವೆನಿಸುತ್ತದೆ. ಶ್ರೀಜಗದಾಚಾರ್ಯರು ಈ ಮಹೋತ್ಸವಕಾರ್ಯದಲ್ಲಿ ಭಾಗಿಗಳಾದ ಸರ್ವರಿಗೂ ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಕೋರುವ

ಪ್ರತ್ಯಕ್ಷದರ್ಶಿ.

ದುಃಖವಾರ್ತೆ.

ಕೊಳ್ಳೆಗಾಲ ತಾಲೂಕು ಮುಡಿಗುಂಡಂ ಶ್ರೀಮಾನ್ ಗುರಿಕಾರ್ ಮಾದಪ್ಪನವರ ಧರ್ಮಪತ್ನಿ ಸೌ॥ ಗೌರಮ್ಮನವರು ಆಕಸ್ಮಿಕವಾಗಿ ಉದರ ಶೂಲದಿಂದ ಗುರುವಾರ ರಾತ್ರಿ ಶಿವಾಧೀನರಾದರೆಂಬ ಸಮಾಚಾರವು ಅತ್ಯಂತ ವಿಷಾದವನ್ನುಂಟುಮಾಡಿದೆ. ಇವರು ಒಳ್ಳೆ ಆಚಾರಶೀಲರೂ ಧರ್ಮ ಪರಾಯಣರೂ ದೈವ ಭಕ್ತಿಯುಳ್ಳವರೂ ಆಗಿದ್ದರಲ್ಲದೆ ಕಾಶೀರಾಮೇಶ್ವರಾದಿ ಅನೇಕ ತೀರ್ಥಯಾತ್ರೆಗಳನ್ನು ಮಾಡಿ ಬಡವರಿಗೆ ದಾನಧರ್ಮಗಳನ್ನು ಮಾಡುತ್ತ ಆರ್ಯಮಹಿಳೆಯರಿಗೆಲ್ಲಾ ಆದರ್ಶಪ್ರಾಯರಾಗಿದ್ದರು. ಇವರ ಅಕಾಲ ಮರಣದಿಂದ ಪರಮಾಸ್ತಿಕರಾದ ಇವರ ಪತಿಗಳಿಗೆ ಅಪಾರವಾದ ದುಃಖವು ಸಂಭವಿಸಿದೆ. ದೈವೇಚ್ಛೆಯನ್ನು ಮೀರಲು ಶಕ್ಯವಿಲ್ಲ.

ಪುರುಷನು ಸ್ತ್ರೀಯಾದನು.

ಸೋಲಾಪುರದಲ್ಲಿರುವ ಧನರಾಜ ಗಿರಜಿ ಆಸ್ಪತ್ರೆಯಲ್ಲಿ ಒಬ್ಬ ೨೦ ವರ್ಷದ ತರುಣನಿಗೆ ಶಸ್ತ್ರಕ್ರಿಯೆಯು ಮಾಡಲಾಯಿತು. ಆ ಸಮಯದಲ್ಲಿ ಆತನ ಉದರದಲ್ಲಿ ಸ್ತ್ರೀಗರ್ಭಾಶಯವೂ ಸ್ತ್ರೀಬೀಜಗ್ರಂಥಿಗಳೂ ಕಂಡುಬಂದವು. ಆತನ ಬಹಿರಿಂದ್ರಿಯಗಳೆಲ್ಲವೂ ಪುರುಷೇಂದ್ರಿಯಗಳಾಗಿರುವವು. ಆದರೆ ಇತ್ತೀಚೆಗೆ ಅವನು ಸ್ತ್ರೀಯಾಗಿ ರೂಪಾಂತರ ಹೊಂದುತ್ತಿರುವನೆಂದು ತಿಳಿದುಬರುತ್ತದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ದಿವಾನ್‌ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ.

1934 ನೆಯ ಇಸವಿ ಅಕ್ಟೋಬರ್ 19 ನೆಯ ತಾರೀಖು.

ಒಂದನೆಯ ಭಾಗ.

ಮಹಿಳೆಯರೇ ಮತ್ತು ಮಹಾಶಯರೇ, ಇಷ್ಟು ಕೆಲಸವು ನಡೆದಿರುವುದೇನೋ ನಿಜ. ಆದಾಗ್ಯೂ, ನಾವುಗಳು ನೆರವೇರಿಸಲು ಇನ್ನೂ ಉಳಿದಿರುವ ಕೆಲಸಗಳೊಡನೆ ಹೋಲಿಸಿದರೆ, ಈಗ ನಡೆದಿರುವ ಕೆಲಸವು ಏನೇನೂ ಸಾಲದು. ನಾವಿನ್ನೂ ಆರಂಭದಶೆಯಲ್ಲಿದ್ದೇವೆಂದು ಮಾತ್ರವೇ ಹೇಳಬೇಕಾಗುತ್ತದೆ. ಈ ವಿಷಯದ ಸಂಬಂಧದಲ್ಲಿ ರಷ್ಯಾದೇಶದಲ್ಲಿ ನಡೆದಿರುವ ಕೆಲಸಗಳೊಡನೆ ಹೋಲಿಸಿದರೆ, ನಮ್ಮ ಸಂಸ್ಥಾನದಲ್ಲಿ ನಡೆದಿರುವ ಕೆಲಸಗಳು ತೀರ ಅಲ್ಪವೆಂದೇ ಹೇಳಬೇಕಾಗುತ್ತದೆ. ಆದರೆ ಒಂದು ಮಾತು; ರಷ್ಯಾದೇಶದ ಸೋವಿಯಟ್ ಸರ್ಕಾರದವರು ಪ್ರಜೆಗಳಿಂದ ಅನಿವಾರ್ಯ ಶಕ್ತವಾಗಿ ಅತಿ ನಿರ್ಬಂಧದ ಸನ್ನಿವೇಶವನ್ನು ಕಲ್ಪಿಸಿ ಕೆಲಸಮಾಡಿಸುತ್ತಾರೆ. ಆ ಬಗೆಯ ನಿರ್ಬಂಧದ ಕಾರ್ಯಕ್ರಮವಾವುದನ್ನೂ ನಾವು ಇಲ್ಲಿ ಮಾಡತಕ್ಕವರಾಗಿಲ್ಲ. ನಾವುಗಳೂ ಕೂಡ ಅದನ್ನು ಬಯಸುವುದಿಲ್ಲವೆಂದು ನಾನು ನಂಬಿದ್ದೇನೆ. ಆದರೂ ನನ್ನದೊಂದು ಸಲಹೆಯುಂಟು. ನಮ್ಮ ದೇಶದಲ್ಲಿ ಧರ್ಮಕಾರ್ಯಗಳಲ್ಲಿ ಪ್ರವೃತ್ತಿಯುಳ್ಳ ಧನಿಕರು ಯಾರ ನಿರ್ಬಂಧವೂ ಇಲ್ಲದೆ ಜನೋಪಕಾರ ಬುದ್ಧಿಯಿಂದ ತಾವಾಗಿಯೇ ಸ್ತ್ರೀಯರ ಮತ್ತು ಶಿಶುಗಳ ಸಹಾಯಾರ್ಥವಾದ ಪುಣ್ಯಕಾರ್ಯಗಳನ್ನು ಶ್ಲಾಘ್ಯರೀತಿಯಲ್ಲಿ ನೆರವೇರಿಸಿದ್ದಾರೆ. ಅವರು ಇವುಗಳಿಗಾಗಿ 9 ಲಕ್ಷ ರೂಪಾಯಿಗಳಷ್ಟು ದ್ರವ್ಯಸಹಾಯ ಮಾಡಿರುವುದನ್ನು ನಾನು ತಮಗೆ ಪ್ರಕಟಪಡಿಸಿದ್ದೇನೆ. ಈ ಏರ್ಪಾಡನ್ನು ಮತ್ತಷ್ಟು ಹಿಗ್ಗಿಸಿ ಬಡಾವಣೆಗೊಳಿಸಬೇಕೆಂಬುದೇ ನನ್ನ ಸಲಹೆ. ನಮ್ಮ ನಾಡಿನ ಧನಿಕರೂ ಇನ್ನು ಮುಂದೆ ಕೂಡ ಇದೇ ರೀತಿ ತಾವಾಗಿಯೇ ಧರ್ಮಕಾರ್ಯಗಳನ್ನು ನೆರವೇರಿಸಿ ಪುಣ್ಯವನ್ನು ಗಳಿಸಬೇಕು. ಅಲ್ಲದೆ, ಈ ವಿಚಾರದಲ್ಲಿ ಕೆಲವು ಮಂದಿಗಳೇ ಧರ್ಮಕಾರ್ಯಗಳನ್ನು ನೆರವೇರಿಸಿಕೊಳ್ಳಲೆಂದು ಇತರರೂ ಸುಮ್ಮನಿರಕೂಡದು. ಒಟ್ಟು ದೇಶದಲ್ಲಿಯೇ ಔದಾರ್ಯವು ಹಾಲು ಹೊಳೆಯಂತೆ ಹರಿದು, ಮುಂದಿನ ಜನಾಂಗವನ್ನು ಬೆಳೆಯಿಸುವ ಇಂದಿನ ತಾಯಿಯರ ಸೇವೆಗೆ ಯಥಾಶಕ್ತಿಯಾಗಿ ನೆರವಾಗಬೇಕೆಂಬ ಉತ್ಸಾಹದಿಂದ ಪ್ರಜೆಗಳೆಲ್ಲರ ಹೃದಯವೂ ಉಬ್ಬಬೇಕು. ಮುಂದಿನ ಪ್ರಜೆಗಳಾಗುವ ಇಂದಿನ ಮಕ್ಕಳ ಯೋಗಕ್ಷೇಮಕ್ಕೆ ಪ್ರಜೆಗಳೆಲ್ಲರೂ ಆಸೆಯಿಂದ ಮನಗೊಡಬೇಕು. ಹೀಗಾಗಬೇಕೆಂಬುದೇ ನನ್ನ ಸಲಹೆ. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾನು "ರೆಡ್‌ಕ್ರಾಸ್" ಸಂಘದವರ ಕಾರ್ಯಕಲಾಪಗಳಿಗೆ ಸಹಾಯಮಾಡಿ ಸಹಕರಿಸಿ ವರ್ತಿಸುವಂತೆ ಆ ಸಂಘದವರ ಪರವಾಗಿ ಎಲ್ಲ ಮುನಿಸಿಪಾಲಿಟಿಗಳಿಗೂ, ಪರಸ್ಪರ ಸಹಾಯ ಸಂಘಗಳಿಗೂ ಮತ್ತು ಗ್ರಾಮಪಂಚಾಯಿತಿಗಳಿಗೂ ಹೋಗತಕ್ಕ ಬಿನ್ನಹಕ್ಕೆ ನನ್ನ ಒತ್ತಾಸೆಯನ್ನು ಕೊಟ್ಟಿರುವುದು. ಆ ಸಂಘದವರ ಕಾರ್ಯಕಲಾಪಗಳು ಎರಡು ಬಗೆಯಾಗಿವೆ. ನಮ್ಮ ದೇಶದ ಜನರು ಅನೇಕ ಸಂದರ್ಭಗಳಲ್ಲಿ ಅನ್ಯಾಯವಾಗಿ ಕಷ್ಟಗಳನ್ನನುಭವಿಸುತ್ತಿರುವುದಕ್ಕೆ ಮೂಲಕಾರಣವಾದ ಅಜ್ಞಾನವನ್ನು ತೊಲಗಿಸಿ ಸರಿಯಾದ ತಿಳಿವಳಿಕೆ ಹೇಳುವುದೊಂದು. ಈಗಿನ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕಾಗಿ ಬಸುರಿ ಬಾಣಂತಿಯರ ಯೋಗಕ್ಷೇಮಕ್ಕೆ ತೀರ ಅವಶ್ಯಕವಾಗಿರುವ "ಮೆಟರ್ನಿಟಿ ಹೋಮು"ಗಳೆಂಬ ಹೆರಿಗೆಯ ಶಾಲೆಗಳನ್ನೂ, ಶಿಶುಗಳ ಯೋಗಕ್ಷೇಮವನ್ನು ನೋಡಿಕೊಳ್ಳುವ "ಚೈಲ್ಡ್ ವೆಲ್ಫೇರ್ ಸೆಂಟರು"ಗಳೆಂಬ ವ್ಯವಸ್ಥಾಸ್ಥಾನಗಳನ್ನೂ ಏರ್ಪಡಿಸುವುದೊಂದು; ಇವೆರಡು ಕಾರ್ಯಗಳನ್ನೂ "ರೆಡ್‌ಕ್ರಾಸ್" ಸಂಘದವರು ನೆರವೇರಿಸುತ್ತಾರೆ. ನಮ್ಮೆಲ್ಲರ ಸಹೋದರಿಯರ ಕಷ್ಟನಿವಾರಣೆಗಾಗಿಯೂ ನಮ್ಮ ಸಂಸ್ಥಾನದ ಪುರೋಭಿವೃದ್ಧಿಗಾಗಿಯೂ, ಆ ಸಂಘದವರ ಕಾರ್ಯಕಲಾಪಗಳಿಗೆ ತಮ್ಮಿಂದ ಸಾಧ್ಯವಿರುವಷ್ಟು ಮಟ್ಟಿನ ಸಮಸ್ತ ಸಹಾಯಗಳನ್ನೂ ಮಾಡಬೇಕೆಂದು ನಾನು ಬಿನ್ನವಿಸುವೆನು.

ಗ್ರಾಮಪಂಚಾಯಿತಿಗಳು.

ಗ್ರಾಮಪಂಚಾಯಿತಿಗಳವರು ಸಂಸ್ಥಾನದ ಪ್ರಜೆಗಳ ಪುರೋಭಿವೃದ್ಧಿಗಾಗಿ ಸಹಾಯಮಾಡಬಹುದಾದ ಇದೊಂದು ಮಾರ್ಗದ ಜೊತೆಗೆ ಮತ್ತೆ ಕೆಲವೂ ಇವೆ. ಅವುಗಳಲ್ಲಿ ಅವರು ಸರ್ಕಾರದವರಿಗೆ ಈಗ ಸಹಾಯ ಮಾಡುತ್ತಲೇ ಇದ್ದಾರೆ. ಅವರು ಅವುಗಳಲ್ಲಿ ಮತ್ತಷ್ಟು ಸಹಾಯವನ್ನು ಮಾಡಿ ತಮ್ಮವರ ಕಾರ್ಯಪಟುತ್ವವನ್ನೂ ಸುಖ ಜೀವನ ಸೌಕರ್ಯದ ಮಟ್ಟವನ್ನೂ ಮತ್ತಷ್ಟು ಹೆಚ್ಚಿಸುವುದು ಸಾಧ್ಯವಿದೆಯೆಂದು ನಾನು ಸೂಚಿಸಲಿಚ್ಛಿಸುವೆನು. ಅನೇಕ ಗ್ರಾಮಪಂಚಾಯಿತಿಗಳವರು ತಮ್ಮ ತಮ್ಮ ಗ್ರಾಮಗಳಲ್ಲಿ ಶುದ್ಧವಾದ ಕುಡಿಯುವ ನೀರಿಗಾಗಿ ಬಾವಿಗಳನ್ನು ತೋಡಿಸಿಕೊಡುವ ವಿಚಾರದಲ್ಲಿಯೂ, ಮಲೇರಿಯಾ ಜ್ವರದ ಹಾವಳಿಯನ್ನು ಕಡಮೆಮಾಡುವುದಕ್ಕಾಗಿ ಗ್ರಾಮಸ್ಥರಿಗೆ ಕ್ವಿನೈನ್ ಮಾತ್ರೆಗಳನ್ನು ಹಂಚುವ ವಿಚಾರದಲ್ಲಿಯೂ ವಿಶೇಷ ಶ್ಲಾಘ್ಯರೀತಿಯಲ್ಲಿ ಉತ್ಸಾಹವನ್ನು ತೋರಿಸಿ ಕೆಲಸಮಾಡುತ್ತಿದ್ದಾರೆ. ವ್ಯವಸಾಯಕ್ಕೆ ಬೇಕಾದ ಉತ್ತಮ ವಿಧದ ನೇಗಿಲುಗಳು ಮುಂತಾದ ಸಾಮಾನುಗಳನ್ನು ತರಿಸಿಟ್ಟುಕೊಂಡು ಮಾರಾಟ ಮಾಡುವುದು; ಬೀಜದ ಹೋರಿಗಳನ್ನು ಕೊಂಡುಕೊಂಡು ಸಾಕಾಡುವುದು; ಛತ್ರಗಳ ಆಡಳಿತವನ್ನೂ, ದೇವಸ್ಥಾನಗಳೇ ಮುಂತಾದ ಮುಜರಾಯಿ ಸಂಸ್ಥೆಗಳ ಆಡಳಿತವನ್ನೂ ನೆರವೇರಿಸುವುದು; ಈ ಕೆಲಸಗಳಿಗಾಗಿ ತಕ್ಕ ಏರ್ಪಾಡುಗಳು ಹಲವು ಗ್ರಾಮಪಂಚಾಯಿತಿಗಳಲ್ಲಿ ಆಚರಣೆಗೆ ಬಂದಿವೆ. ಮೈಸೂರು ಡಿಸ್ಟ್ರಿಕ್ಟಿನ ಏಳು ಗ್ರಾಮಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನೊದಗಿಸುವ ಏರ್ಪಾಡು ನಡೆದಿದೆ. ಇನ್ನೂ ಆರು ಗ್ರಾಮಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸುವುದಕ್ಕಾಗಿ ಬಂದಿರುವ ಸಲಹೆಗಳು ಪರ್ಯಾಲೋಚನೆಯಲ್ಲಿವೆ. ಗ್ರಾಮನಿವಾಸಿಗಳಿಗೆ ಶಾಶ್ವತವಾಗಿ ಪ್ರಯೋಜನಕರವಾದ ಸಂಚಾರ ಮಾರ್ಗಗಳು, ಕೆರೆಕಟ್ಟೆಗಳ ಏರಿಗಳಿಗೆ ಕಾಮಗಾರಿಗಳು ಮುಂತಾದವುಗಳ ಸಂಬಂಧದಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಮೀರಿದ ವೆಚ್ಚದಿಂದ ಮಾತ್ರವೇ ಸಾಧ್ಯವಾಗುತ್ತಿದ್ದಷ್ಟು ಕೆಲಸವನ್ನು ರೈತರುಗಳೇ ಉಚಿತವಾಗಿ ದುಡಿದು ಅಥವಾ ಕೆಲಸಕ್ಕೆ ಬದಲಾಗಿ ಹಣವನ್ನೇ ಕೊಟ್ಟು ನೆರವೇರಿಸಿದ್ದಾರೆ. ಗ್ರಾಮಪಂಚಾಯಿತಿಗಳ ಏರ್ಪಾಡಿನ ಸಂಬಂಧದಲ್ಲಿ ಈ ಅಂಶವು ಶ್ಲಾಘ್ಯತಮವಾದುದಾಗಿಯೂ ಅತ್ಯಂತ ಆಶಾಜನಕವಾಗಿಯೂ ಇದೆ. ರೈತರು ಸಾರ್ವಜನಿಕ ಹಿತಸಾಧನೆಯ ದೃಷ್ಟಿಯಿಂದ ಹೀಗೆ ಶ್ರಮಿಸುವುದರಿಂದ ಮಾತ್ರವೇ ಗ್ರಾಮಾಭಿವೃದ್ಧಿ ಕಾರ್ಯಗಳು ಶೀಘ್ರವಾಗಿಯೂ ತೃಪ್ತಿಕರವಾಗಿಯೂ ನೆರವೇರುವುದು ಸಾಧ್ಯ. ಈ ಬಗೆಯ ಕಾಮಗಾರಿಗಳ ಸಂಬಂಧದಲ್ಲಿ ಹಣವನ್ನು ಕೊಡಲು ಶಕ್ತಿಯಿಲ್ಲದ ರೈತರು ಉಚಿತ ಪ್ರಮಾಣದಷ್ಟು ಕೆಲಸವನ್ನೇ ಮಾಡುತ್ತ, ತಮ್ಮ ಗ್ರಾಮವು ಸಾಧ್ಯವಾದಷ್ಟು ಮಟ್ಟಿಗೂ ಚೊಕ್ಕಟವಾಗಿಯೂ ಆರೋಗ್ಯವಾಗಿಯೂ ಇರುವಂತೆ ಮಾಡಿ, ಗ್ರಾಮಸ್ಥರ ಸುಖ ಸಂತೋಷಗಳು ವೃದ್ಧಿಯಾಗಲು ಸಹಾಯಕರಾಗುವಂತೆ ಸರ್ಕಾರಿ ಉದ್ಯೋಗಸ್ಥರೂ ಖಾಸಗಿ ದೊಡ್ಡ ಮನುಷ್ಯರೂ ಅವರನ್ನು ಪ್ರೇರಿಸಿ ಪ್ರೋತ್ಸಾಹಿಸಬೇಕೆಂಬುದು ನನ್ನ ಅಭಿಪ್ರಾಯವಾಗಿದೆ.

ಜನಾರೋಗ್ಯ ರಕ್ಷಣೆ.

ಇನ್ನು, ಜನಾರೋಗ್ಯ ರಕ್ಷಣೆ ಇಲಾಖೆಯ ಕಾರ್ಯಕಲಾಪಗಳ ವಿಚಾರದಲ್ಲಿ ಒಂದೆರಡು ಸಂಗತಿಗಳನ್ನು ಸೂಚಿಸಲಿಚ್ಛಿಸುವೆನು. 1933-34 ನೆಯ ಸಾಲಿನಲ್ಲಿ ಸಂಸ್ಥಾನದಲ್ಲಿ ಜನಾರೋಗ್ಯಸ್ಥಿತಿಯು ಸಮರ್ಪಕವಾಗಿದ್ದಿತು. ಜನಾರೋಗ್ಯಸ್ಥಿತಿಯನ್ನು ಉತ್ತಮಪಡಿಸಲು ನಮ್ಮ ಸಂಸ್ಥಾನದಲ್ಲಿ ಬಹುಮುಖ್ಯವಾಗಿ ನಡೆಯಬೇಕಾಗಿರುವ ಏರ್ಪಾಡುಗಳೆಂದರೆ ಪ್ಲೇಗು, ಸಿಡುಬು ಮತ್ತು ಮಲೇರಿಯಾ ಜ್ವರ, ಇವುಗಳ ಹಾವಳಿಯನ್ನಡಗಿಸುವ ಏರ್ಪಾಡುಗಳೇ ಅಹುದು. 1933-34 ನೆಯ ಸಾಲಿನ ಆರಂಭದಲ್ಲಿ ಸಿಡುಬು ಅಲ್ಪಾವಾಗುವ ಸೂಚನೆಗಳು ಕಂಡುಬಂದುವು. ಆದರೆ, ರೋಗವು ಹೆಚ್ಚುವ ಸಂಭವವು ಗೊತ್ತಾದೊಡನೆಯೇ, ಆ ಬಗೆಯ ಕಳೆಯಿದ್ದ ಪ್ರದೇಶಗಳಲ್ಲೆಲ್ಲ ಜನರಿಗೆ ದೇವಿ ಹಾಕಿಸುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಪ್ರಬಲವಾಗಿ ನೆರವೇರಿಸಲಾಯಿತು. ಹಾಗೆ ಮಾಡಿದುದರಿಂದ ಸಿಡುಬುರೋಗವು ಹೆಚ್ಚದಂತೆ ಹತೋಟಿಯಲ್ಲಿಟ್ಟುಕೊಳ್ಳುವುದು ಸಾಧ್ಯವಾಯಿತು. ಪ್ಲೇಗುರೋಗವು ತಗುಲದಂತೆ ಮಾಡಲು ಜನರು ಮನೆಗಳನ್ನು ಬಿಡುವಂತೆ ಮಾಡುವುದು, ಇನಾಕ್ಯುಲೇಷನ್ ಮಾಡಿಸುವುದು, ಪ್ಲೇಗುರೋಗದ ಸೋಂಕು ತಗುಲಿದ ಸ್ಥಳಗಳನ್ನು ಕ್ರಿಮಿನಾಶಕ ವಸ್ತುಗಳಿಂದ ಶುದ್ಧಿಮಾಡುವುದು—ಈ ಮೂರು ಕೆಲಸಗಳನ್ನೂ ಸಕಾಲದಲ್ಲಿ ನೆರವೇರಿಸಲಾಯಿತು. ಮಲೇರಿಯಾ ಜ್ವರದ ಹಾವಳಿಯನ್ನಡಗಿಸುವ ಕೆಲಸಗಳನ್ನು ಅರ್ವಿನ್ ನಾಲಾ ಬಯಲಿನ ಪ್ರದೇಶದಲ್ಲಿ ನಡೆಯಿಸಿ, ಅದರಿಂದ ನರಳುತ್ತಿದ್ದ 46,237 ಮಂದಿಗಳಿಗೆ ಕ್ವಿನೈನನ್ನು ಹಂಚಲಾಯಿತು. ಆ ಪ್ರದೇಶದಲ್ಲಿ ಮಲೇರಿಯಾ ರೋಗದ ಹಾವಳಿಯನ್ನಡಗಿಸಿ ಅನುಕೂಲಮಾಡಿಕೊಡುವ ಬಗೆ ಹೇಗೆಂಬುದನ್ನು ಕುರಿತು ಸಲಹೆಗಳನ್ನೊಪ್ಪಿಸಲು ಒಂದು ಸಮಿತಿಯು ನೇಮಕವಾಗಿದೆ. ಅಂಜನಾಪುರದ ಅಣೆಕಟ್ಟೆಯ ನೀರಾವರಿ ಪ್ರದೇಶದಲ್ಲಿ ಮಲೇರಿಯಾಜ್ವರದ ಹಾವಳಿಯನ್ನಡಗಿಸುವ ವಿಚಾರವೂ ಪರಿಶೀಲನೆಯಲ್ಲಿದೆ. ಬೆಂಗಳೂರು ಮೈಸೂರು ನಗರಗಳಲ್ಲಿಯೂ ಮತ್ತು ಮೂರು ಪರೀಕ್ಷಾ ಕ್ಷೇತ್ರಗಳಲ್ಲಿಯೂ ಮಲೇರಿಯಾ ಜ್ವರದ ಹಾವಳಿಯನ್ನು ಕಡಮೆ ಮಾಡುವ ವಿಚಾರಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳು 1933-34 ನೆಯ ಸಾಲಿನಲ್ಲಿಯೂ ಹಿಂದಿನಂತೆಯೇ ನಡೆದುವು. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ನಾರುಹುಣ್ಣಿನ ಜಾಡ್ಯವನ್ನು ಕಡಮೆಮಾಡುವ ಪ್ರಯತ್ನಗಳು ನಡೆಯುತ್ತಿವೆ. ನಾರುಹುಣ್ಣು ಇರುವವರ ದೇಹದಿಂದ ಕೊಳಗಳು ಕಟ್ಟೆಗಳು ಮುಂತಾದವುಗಳ ನೀರಿಗೆ ನಾರುಹುಣ್ಣಿನ ಹುಳುಗಳ ಮೊಟ್ಟೆಗಳೂ ಮರಿಗಳೂ ಹೋಗಿ ಆ ನೀರಿನ ದೆಸೆಯಿಂದ ಇತರರಿಗೆ ನಾರುಹುಣ್ಣು ಬರುವುದನ್ನು ತಪ್ಪಿಸುವ ಉದ್ದೇಶದಿಂದ, ಅಲ್ಲಿ ಕುಡಿಯುವ ನೀರಿಗಾಗಿ ಹೆಚ್ಚು ಹೆಚ್ಚಾಗಿ ಸೇದುವ ಬಾವಿಗಳನ್ನು ತೋಡಿಸುತ್ತಿದೆ. ಅಲ್ಲದೆ, ಕೊಳ, ಕಟ್ಟೆ ಮುಂತಾದವುಗಳ ನೀರಿಗೆ ಸೇರಿದ ಈ ರೋಗದ ಹುಳುಗಳ ಮೊಟ್ಟೆಗಳನ್ನೂ ಮರಿಗಳನ್ನೂ ತಿಂದುಹಾಕುವ ಬಗೆಬಗೆಯ ಮೀನುಗಳನ್ನು ಬಿಡುವುದರಿಂದ ಈ ರೋಗದ ಹಾವಳಿಯು ಮಟ್ಟುಬೀಳುವಂತೆ ಮಾಡುವುದು ಸಾಧ್ಯವೇ ಎಂಬ ಪರಿಶೀಲನೆಯೂ ನಡೆಯುತ್ತಿದೆ. ನಾರುಹುಣ್ಣಿನ ರೋಗವಿರುವ ಗ್ರಾಮಗಳ ಸಂಖ್ಯೆಯು 1928 ನೆಯ ಇಸವಿಯಲ್ಲಿ 91 ಇದ್ದುದು ಈಗ 36 ಕ್ಕೆ ತಗ್ಗಿದೆ.

"ರಾಕ್ಫೆಲರ್ ಫೌಂಡೇಷನ್" ಸಂಸ್ಥೆಯವರು ನಮ್ಮ ಸಂಸ್ಥಾನದಲ್ಲಿ ಕೆಲಸಮಾಡಲು ಕಳುಹಿಸಿಕೊಟ್ಟಿದ್ದ ಡಾಕ್ಟರ್ ಸ್ಟೀಟ್‌ರವರು ಏಳು ವರುಷಗಳ ಕಾಲ ಸಂಸ್ಥಾನಕ್ಕೆ ಅಮೂಲ್ಯವಾದ ಸೇವೆಯನ್ನು ಮಾಡಿ, ಕಳೆದ ಫೆಬ್ರವರಿ ತಿಂಗಳಿನಲ್ಲಿ ಸಂಸ್ಥಾನವನ್ನು ಬಿಟ್ಟು ಹೊರಟುಹೋದರು. ಆದರೂ, ಅವರ ಹೊಸ ಹುದ್ದೆಯಲ್ಲಿ ಬೆಂಗಳೂರಿನಲ್ಲಿಯೇ ಕಚೇರಿಯನ್ನೇ ಇರಿಸಿಕೊಳ್ಳುವ ಕಾರಣ, ಅವರು ಬೆಂಗಳೂರಿಗೆ ಮತ್ತೆ ಹಿಂತಿರುಗುವವರಾಗಿದ್ದಾರೆ.

ವೈದ್ಯದ ಇಲಾಖೆ.

ರೋಗಿಗಳ ಚಿಕಿತ್ಸೆಯು ನಡೆಯುವ ಭಾಗದಲ್ಲಿ ವಿಶೇಷ ಗಣನೀಯವಾದ ಅಭಿವೃದ್ಧಿಯು ಕಂಡುಬಂದಿತು.

ಎಲ್ಲ ವೈದ್ಯ ಸಂಸ್ಥೆಗಳಿಂದಲೂ ಸೇರಿ, ಒಟ್ಟು 41,72,435 ಮಂದಿ ರೋಗಿಗಳಿಗೆ ಚಿಕಿತ್ಸೆಯು ನಡೆಯಿತು. ಅವರಲ್ಲಿ 34,277 ಮಂದಿ ರೋಗಿಗಳು ಆಸ್ಪತ್ರೆಗಳಲ್ಲಿದ್ದು ಚಿಕಿತ್ಸೆ ಹೊಂದಿದರು. ಉಳಿದ 41,38,158 ಮಂದಿ ರೋಗಿಗಳು ತಮ್ಮ ತಮ್ಮ ಮನೆಗಳಿಂದಲೇ ಬಂದು ಚಿಕಿತ್ಸೆ ಹೊಂದಿದರು. ಈಗ್ಗೆ ಹತ್ತು ವರುಷಗಳ ಹಿಂದೆ ಎಲ್ಲ ವೈದ್ಯ ಸಂಸ್ಥೆಗಳಿಂದಲೂ ಸೇರಿ, ಒಟ್ಟು 20,44,937 ಮಂದಿ ರೋಗಿಗಳಿಗೆ ಚಿಕಿತ್ಸೆ ನಡೆದಿದ್ದಿತು. ಅವರಲ್ಲಿ 20,401 ಮಂದಿ ರೋಗಿಗಳು ಆಸ್ಪತ್ರೆಗಳಲ್ಲಿದ್ದು ಚಿಕಿತ್ಸೆ ಹೊಂದಿದವರು; 20,24,536 ಮಂದಿ ರೋಗಿಗಳು ತಮ್ಮ ತಮ್ಮ ಮನೆಗಳಿಂದ ಬಂದು ಚಿಕಿತ್ಸೆ ಹೊಂದಿದವರು. ವಿಶೇಷ ಸ್ವಭಾವದ ಆಸ್ಪತ್ರೆಗಳಲ್ಲಿಯೇ 4 407 ಮಂದಿ ರೋಗಿಗಳಿದ್ದು ಚಿಕಿತ್ಸೆ ಹೊಂದಿದರು. ಅವುಗಳಲ್ಲಿ ಚಿಕಿತ್ಸೆ ಹೊಂದಲು ಮನೆಗಳಿಂದ ಬಂದು ಹೋದ ರೋಗಿಗಳ ಸಂಖ್ಯೆಯು 31,950 (ಪರಿಶಿಷ್ಟವನ್ನು ನೋಡಿ).

ವಿದ್ಯಾಭ್ಯಾಸದ ಇಲಾಖೆ.

ವಿದ್ಯಾಭ್ಯಾಸದ ಬಾಬಿನಲ್ಲಿ 1933-34 ನೆಯ ಸಾಲಿನಲ್ಲಿ 55,30,285 ರೂಪಾಯಿಗಳನ್ನು ವೆಚ್ಚಮಾಡಲಾಯಿತು; 2,97,850 ಮಂದಿ ವ್ಯಾಸಂಗಮಾಡುತ್ತಿದ್ದರು. 1932-33 ನೆಯ ಸಾಲಿನಲ್ಲಿ 53,26,463 ರೂಪಾಯಿಗಳು ವೆಚ್ಚವಾಗಿದ್ದುವು; 2,97,099 ಮಂದಿ ವ್ಯಾಸಂಗ ಮಾಡುತ್ತಿದ್ದರು. ಹೈಸ್ಕೂಲುಗಳಲ್ಲಿ ಕಸುಬುಗಳನ್ನು ಕಲಿಸುವುದನ್ನೂ ಈಗಿನ ಇತರ ವ್ಯಾಸಂಗ ವಿಷಯಗಳ ಜೊತೆಗೆ ಎಷ್ಟರಮಟ್ಟಿಗೆ ಸೇರಿಸಿ ಅದರ ಒಂದು ಭಾಗವಾಗಿ ಮಾಡಬೇಕೆಂಬುದೊಂದು; ಮತ್ತಾವ ಕಸುಬುದಾರಿ ವಿಷಯಗಳನ್ನು ಹೈಸ್ಕೂಲು ತರಗತಿಗಳಲ್ಲಿ ಕಲಿಸುವ ಏರ್ಪಾಡು ಮಾಡಬೇಕೆಂಬುದೊಂದು; ಇವೆರಡು ವಿಷಯಗಳನ್ನೂ ಪರಿಶೀಲಿಸಿ ಸರ್ಕಾರದವರಿಗೆ ಸಲಹೆ ಹೇಳುವುದಕ್ಕಾಗಿ ಕಸುಬುದಾರಿ ವಿದ್ಯಾಭ್ಯಾಸದ ಸಲಹೆಯ ಒಂದು ಬೋರ್ಡು ಈಗ ಹೊಸದಾಗಿ ಏರ್ಪಡಿಸಲ್ಪಟ್ಟಿದೆ. ವಿದ್ಯಾಭ್ಯಾಸದ ಸಂಬಂಧವಾದ ತಮ್ಮ ಕಾರ್ಯಕಲಾಪಗಳಲ್ಲಿ ಕೆಲವು ಮಾರ್ಪಾಡುಗಳೂ ನಡೆದಿವೆ. ಅವುಗಳಲ್ಲಿ ಮುಖ್ಯವಾದವುಗಳಾವುವೆಂದರೆ:—

ಹೈಸ್ಕೂಲು ತರಗತಿಗಳಲ್ಲಿ ಚರಿತ್ರೆಗೂ ಭೂಗೋಳಕ್ಕೂ ಕನ್ನಡ ಭಾಷೆಯಲ್ಲಿ ಬರೆದಿರುವ ಗ್ರಂಥಗಳನ್ನೇ ಇಟ್ಟು ಕನ್ನಡದಲ್ಲಿ ಪಾಠ ಹೇಳುವ ಏರ್ಪಾಡು ಸಫಲವಾಗಿ ಪರಿಣಮಿಸಿರುವ ಕಾರಣ, ಗಣಿತಶಾಸ್ತ್ರವನ್ನೂ ಕನ್ನಡದಲ್ಲಿ ಬೋಧಿಸುವ ಏರ್ಪಾಡನ್ನು ಪರೀಕ್ಷಾರ್ಥವಾಗಿ ಆಚರಣೆಗೆ ತರಬೇಕೆಂದು ಅಪ್ಪಣೆ ಮಾಡಲಾಗಿದೆ. ಆದರೆ, ಪ್ರತಿಯೊಂದು ಸರ್ಕಾರಿ ಹೈಸ್ಕೂಲಿನಲ್ಲಿಯೂ ನಾಲ್ಕನೆಯ, ಐದನೆಯ ಮತ್ತು ಆರನೆಯ ಫಾರಮುಗಳಲ್ಲಿ ಪ್ರತಿಯೊಂದರಲ್ಲಿಯೂ ಇಂಗ್ಲಿಷಿನಲ್ಲಿ ಗಣಿತ ಶಾಸ್ತ್ರವನ್ನು ಬೋಧಿಸುವ ಒಂದೊಂದು ಶಾಖೆಯಾದರೂ (ಸೆಕ್ಷನ್) ನಡೆಯಲೇಬೇಕೆಂಬ ಷರತ್ತಿಗೊಳಪಡಿಸಿ ಹೀಗೆ ಮಾಡಲಾಗಿದೆ.

ಬೆಂಗಳೂರಿನಲ್ಲಿರುವ ಇಂಜನಿಯರಿಂಗ್ ಸ್ಕೂಲಿನಲ್ಲಿ ವ್ಯಾಸಂಗವನ್ನು ಪೂರೈಸಿ ಮೇಲಿನ ದರ್ಜೆಯ ಮೆಕ್ಯಾನಿಕಲ್ ಇಂಜನಿಯರಿಂಗ್ ಭಾಗದಲ್ಲಿ ತೇರ್ಗಡೆ ಹೊಂದಿದವರಿಗೆ ಎಲ್. ಎಂ. ಇ. ಡಿಪ್ಲೊಮವನ್ನೂ, ಮೇಲಿನ ದರ್ಜೆಯ ಎಲೆಕ್ಟ್ರಿಕಲ್ ಇಂಜನಿಯರಿಂಗ್ ಭಾಗದಲ್ಲಿ ತೇರ್ಗಡೆ ಹೊಂದಿದವರಿಗೆ ಎಲ್. ಇ. ಇ. ಡಿಪ್ಲೊಮವನ್ನೂ ಕೊಡಬೇಕೆಂದು ತೀರ್ಮಾನವಾಗಿದೆ.

ವಿಶ್ವವಿದ್ಯಾನಿಲಯ.

ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯೇ ಮುಂತಾದ ನಾನಾ ಸಭೆಗಳನ್ನೂ 1933 ನೆಯ ಇಸವಿಯ ಮೊದಲನೆಯ ನಂಬರು ರೆಗ್ಯುಲೇಷನ್ನಿನ ಮೇರೆಗೆ 1933 ನೆಯ ಇಸವಿ ಜುಲೈ 1 ನೆಯ ತಾರೀಖಿನ ದಿನ ಪುನರ್ನವಕ್ಕೆ ಮಾಡಲಾಯಿತು. ವಿಶ್ವವಿದ್ಯಾನಿಲಯದ ನಿಬಂಧನೆಗಳನ್ನು ಸ್ಟ್ಯಾಟ್ಯೂಟುಗಳ ಮತ್ತು ಆರ್ಡಿನೆನ್ಸುಗಳ ರೂಪದಲ್ಲಿ ಕ್ರೋಢೀಕರಿಸಲು ನೇಮಕವಾಗಿದ್ದ ಸಮಿತಿಯವರು ಆ ಕಾರ್ಯವನ್ನು ನಿರ್ವಹಿಸಿದರು. ಅವರ ಸಲಹೆಗಳು ಸೆನೆಟ್ ಸಭೆಯವರ ಅನುಮೋದನವನ್ನು ಪಡೆದು ವಿಶ್ವವಿದ್ಯಾನಿಲಯದ ನಾನಾ ನಿಬಂಧನೆಗಳೂ ಅವಕ್ಕನುಗುಣವಾಗಿ ಏರ್ಪಟ್ಟುವು. ಅವುಗಳನ್ನು ಸರ್ಕಾರದವರು ಅನುಮೋದಿಸಿದ್ದಾರೆ. ಬೆಂಗಳೂರಿನಲ್ಲಿರುವ ಸ್ತ್ರೀಯರ ಇಂಟರ್ಮೀಡಿಯೇಟ್ ಕಾಲೇಜಿನಲ್ಲಿ ಭಾಷಾ ವ್ಯಾಸಂಗ ಪ್ರಧಾನವಾದ "ಆರ್ಟ್ಸ್" ಶಾಖೆಯ ಕಾರ್ಯಕಲಾಪಗಳನ್ನು 1931 ನೆಯ ಇಸವಿಯಲ್ಲಿ ತಾತ್ಕಾಲಿಕವಾಗಿ ನಿಲ್ಲಿಸಿ ಆರ್ಟ್ಸ್ ಇಂಟರ್ಮೀಡಿಯೇಟ್ ಪರೀಕ್ಷೆಗೆ ಬಾಲಕಿಯರು ಹೋಗುವುದಕ್ಕೆ ತಪ್ಪಿಸಿದ್ದ ಅವಕಾಶವನ್ನು ಮತ್ತೆ ಕಲ್ಪಿಸಲಾಯಿತು. ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದವರ ಸಂಖ್ಯೆಯು ವಿದ್ಯಾರ್ಥಿನಿಯರೂ ಸೇರಿ 1932-33 ನೆಯ ಸಾಲಿನಲ್ಲಿ 2,834 ಇದ್ದುದು 1933-34 ನೆಯ ಸಾಲಿನಲ್ಲಿ 2,955 ಕ್ಕೆ ಹೆಚ್ಚಿತು. 1932-33 ನೆಯ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ನಾನಾ ತರಗತಿಗಳಲ್ಲಿಯೂ 144 ಮಂದಿ ಸ್ತ್ರೀಯರು ವ್ಯಾಸಂಗ ಮಾಡುತ್ತಿದ್ದುದಕ್ಕೆ 1933-34 ನೆಯ ಸಾಲಿನಲ್ಲಿ 146 ಮಂದಿ ಸ್ತ್ರೀಯರು ವ್ಯಾಸಂಗಮಾಡುತ್ತಿದ್ದರು. 1933-34 ನೆಯ ಸಾಲಿನಲ್ಲಿ ನಾನಾ ಡಿಗ್ರಿ ಪರೀಕ್ಷೆಗಳಲ್ಲಿಯೂ ತೇರ್ಗಡೆ ಹೊಂದಿದವರ ಸಂಖ್ಯೆಯು 358. ನಾನಾ ಪರೀಕ್ಷೆಗಳಲ್ಲಿಯೂ ತೇರ್ಗಡೆ ಹೊಂದಿದ ಸ್ತ್ರೀಯರ ಸಂಖ್ಯೆಯು 56. ಅವರಲ್ಲಿ 19 ಮಂದಿ ಹೆಂಗಸರು "ಡಿಗ್ರಿ" ಪ್ರಶಸ್ತಿಯನ್ನು ಪಡೆಯುವ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರು. ಆ 19 ಮಂದಿ ಹೆಂಗಸರಲ್ಲಿ ಇಬ್ಬರು ಘೋಷಾ ಹೆಂಗಸರು. ಔಷಧ ಚಿಕಿತ್ಸೆಯಲ್ಲಿಯೂ ಶಸ್ತ್ರ ಚಿಕಿತ್ಸೆಯಲ್ಲಿಯೂ ಡಿಗ್ರಿ ಪ್ರಶಸ್ತಿಯು ದೊರೆಯುವ ಎಂ. ಬಿ. ಬಿ. ಎಸ್ ಪರೀಕ್ಷೆಯ ವ್ಯಾಸಂಗಕ್ಕೆ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳುವುದಕ್ಕಾಗಿ ಅದಕ್ಕೆ ಪೂರ್ವಭಾವಿಯಾಗಿ ಒಂದು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಅವಕಾಶವನ್ನು ಕಲ್ಪಿಸಲಾಗಿದೆ. ಆ ಪೂರ್ವಭಾವಿಯಾದ ಪರೀಕ್ಷೆಗೆ ಆರು ತಿಂಗಳುಗಳ ಕಾಲದ ವ್ಯಾಸಂಗ ಕ್ರಮವನ್ನೇರ್ಪಡಿಸಲಾಗಿದೆ. ಇಂಟರ್ಮೀಡಿಯೇಟ್ ಪರೀಕ್ಷೆಯ ವ್ಯಾಸಂಗ ಕ್ರಮದ ಸಾಮಾನ್ಯ ತಿದ್ದುಪಾಟೊಂದು ಮಂಜೂರಾಗಿ ಅದಕ್ಕನುಸಾರವಾಗಿ ವ್ಯಾಸಂಗ ವಿಷಯಗಳು ಮಾರ್ಪಾಡಾಗಿವೆ. ಈ ಹೊಸ ಶಿಸ್ತಿನ ಪ್ರಕಾರ 1934 ನೆಯ ಇಸವಿಯ ಜೂನಿಯರ್ ಇಂಟರ್ಮೀಡಿಯೇಟ್ ತರಗತಿಯಲ್ಲಿ ಪಾಠಪ್ರವಚನಗಳು ಪ್ರಾರಂಭವಾಗಿವೆ.

ಮಳೆಬೆಳೆಗಳು ಮತ್ತು ಧಾರಣೆಗಳು.

ಸಂಸ್ಥಾನದ ನಿವಾಸಿಗಳು ಸತ್ಪ್ರಜೆಗಳಾಗಿ ಬಾಳುವುದಕ್ಕೆ ಸಹಾಯಕವಾಗಿ ನಡೆದಿರತಕ್ಕ ನಾನಾ ಕಾರ್ಯಕಲಾಪಗಳ ವಿಷಯವನ್ನು ಇದುವರೆಗೂ ಪ್ರಸ್ತಾಪಿಸಿದುದಾಯಿತು. ಸಂಸ್ಥಾನದ ನಿವಾಸಿಗಳಲ್ಲಿ ಬಹು ಭಾಗದವರಾದ ರೈತರ ಸ್ಥಿತಿಯನ್ನು ಕುರಿತು ಇನ್ನು ಪ್ರಸ್ತಾಪಿಸುವೆನು. 1932-33 ನೆಯ ಸಾಲಿನಲ್ಲಿ ಆದಷ್ಟು ಮಳೆಯು 1933-34 ನೆಯ ಸಾಲಿನಲ್ಲಿ ಆಗಲಿಲ್ಲ. ಆದಾಗ್ಯೂ, ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಮಳೆಯಾಗಿ ಕೆರೆಗಳಿಗೆ ಚೆನ್ನಾಗಿ ನೀರು ಬಂದಿತು. ಹಾಸನ ಡಿಸ್ಟ್ರಿಕ್ಟಿನಲ್ಲಿಯೂ, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿಯೂ, ಮಿತಿಮೀರಿ ಮಳೆಯಾಯಿತು. ಸೊರಬ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ 22,846 ರೂಪಾಯಿಗಳ ಕಂದಾಯ ಮಾಫಿಯು ಮಂಜೂರಾಯಿತು. ಪ್ರಸಕ್ತ ವರ್ಷದಲ್ಲಿ ಚೆನ್ನಾಗಿ ಬೆಳೆಯಾಯಿತು. ಮೈಸೂರು ಡಿಸ್ಟ್ರಿಕ್ಟಿನ ಮತ್ತು ತುಮಕೂರು ಡಿಸ್ಟ್ರಿಕ್ಟಿನ ಕೆಲಕೆಲವು ಭಾಗಗಳಲ್ಲಿ ಅಕಾಲದಲ್ಲಿ ಮಳೆಯಾಗಿ ಬೆಳೆಗಳು ಕೆಟ್ಟುಹೋದುವು. ಅಲ್ಲಿ ಹೊರತು, ಸಂಸ್ಥಾನದ ಉಳಿದ ಸಮಸ್ತ ಭಾಗಗಳಲ್ಲಿಯೂ ಆಹಾರದ ಧಾನ್ಯಗಳು ಸಮೃದ್ಧಿಯಾಗಿದ್ದುವು. ಕೃಷ್ಣರಾಜಸಾಗರದ ಕೆಳಗೆ ಕಾವೇರಿನಾಲೆಯ ಕಾಮಗಾರಿಯು 14ನೆಯ ಮೈಲಿಯವರೆಗೂ ಪೂರೈಸಿತು; ನೀರಾವರಿ ಸಾಗುವಳಿಗೆ ಸಾಧ್ಯವಾದ ವಿಸ್ತೀರ್ಣವು 60,000 ಎಕರೆಗಳಿಂದ 66,000 ಎಕರೆಗಳಿಗೆ ಹೆಚ್ಚಿತು. ಮಂಡ್ಯದಲ್ಲಿ ಸ್ಥಾಪಿಸಿರುವ ಸಕ್ಕರೆ ಕಾರ್ಖಾನೆಗೆ ಸರಬರಾಯಿ ಮಾಡುವುದಕ್ಕಾಗಿ ಅರ್ವಿನ್ ನಾಲಾ ಪ್ರದೇಶದಲ್ಲಿ ರೈತರು ಬಹಳ ಹೇರಳವಾಗಿ ಕಬ್ಬನ್ನು ಬೆಳೆದರು. ಆ ಪ್ರದೇಶದಲ್ಲಿ ಕಬ್ಬಿನ ಬೆಳೆಯು ರೈತರಿಗೆ ಲಾಭದಾಯಕವಾಗಿ ಪರಿಣಮಿಸುವಂತಿದೆ.

ಮಳೆಬೆಳೆಗಳೇನೋ ಒಟ್ಟಿನಲ್ಲಿ ಚೆನ್ನಾಗಿದ್ದರೂ, ರೈತರಿಗೆ ಮಾತ್ರ ಕಷ್ಟವು ತಪ್ಪಲಿಲ್ಲ. ಧಾರಣೆಗಳು ಮಿತಿಮೀರಿ ಇಳಿದು ಹೋಗಿದ್ದ ಕಾರಣ, ಪುಷ್ಕಳವಾಗಿ ಬೆಳೆಯಾಗಿಯೂ ಅವರಿಗೆ ಹೆಚ್ಚು ಫಲವಾಗಲಿಲ್ಲ. ಧಾರಣೆಗಳು ಇಳಿದು ಹೋಗಿರುವುದಕ್ಕೆ ಒಟ್ಟು ಪ್ರಪಂಚದ ಆರ್ಥಿಕ ಸ್ಥಿತಿಗತಿಗಳೇ ಮುಖ್ಯಕಾರಣ. ರೈತರು ತಮ್ಮ ಬೆಳೆಗಳ ಆಧಾರದ ಮೇಲೆ ಮುಂಗಡವಾಗಿ ತೆಗೆದಿದ್ದ ಸಾಲಗಳನ್ನೂ, ಇತರ ಸಾಲಗಳನ್ನೂ ತೀರಿಸುವ ವಿಚಾರದಲ್ಲಿ ಬಹು ಕಷ್ಟಪಡಬೇಕಾಯಿತು. ಅವರಿಗೆ ಸಹಾಯಮಾಡುವುದಕ್ಕಾಗಿ ಸರ್ಕಾರದವರು ವ್ಯವಸಾಯಗಾರರ ಕಷ್ಟನಿವಾರಣೆಯ ರೆಗ್ಯುಲೇಷನು ಸಂಸ್ಥಾನದಲ್ಲೆಲ್ಲ ಆಚರಣೆಗೆ ಬರಬೇಕೆಂದು ಅಪ್ಪಣೆಮಾಡಿದರು. ಆದರೆ, ಹೀಗೆ ಮಾಡಿದುದರಿಂದ ರೈತರಿಗೇ ಹೆಚ್ಚು ಸಹಾಯವಾಗುವುದಿಲ್ಲವೆಂಬ ಅಭಿಪ್ರಾಯವೂ ಅನೇಕರಲ್ಲಿ ಹುಟ್ಟಿತು. ಆ ವಿಚಾರವು ತಮ್ಮೆಲ್ಲರಿಗೂ ತಿಳಿದೇ ಇದೆ. ಈ ರೆಗ್ಯುಲೇಷನನ್ನು ಆಚರಣೆಗೆ ತಂದುದರಿಂದ ರೈತರಿಗೆ ಸಾಲಗಳು ದೊರೆಯಲು ಕಷ್ಟವಾಗಿರುವುದು ಎಷ್ಟುಮಟ್ಟಿಗೆಂಬ ವಿಷಯವನ್ನೂ ಮತ್ತು ಯಾವ ಯಾವ ಭಾಗಗಳಲ್ಲಿ ಈ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದು ಅವಶ್ಯಕವೆಂಬ ವಿಷಯವನ್ನೂ ಪರ್ಯಾಲೋಚಿಸುವುದಕ್ಕಾಗಿ ಒಂದು ಸಮಿತಿಯು ನೇಮಕವಾಗಿದೆ. ರೈತರ ಸಹಾಯಾರ್ಥವಾಗಿ ಸರ್ಕಾರಿ ಮತ್ತು ಖಾಸಗಿ ಸದಸ್ಯರ ಮತ್ತೊಂದು ಸಮಿತಿಯೂ ನೇಮಕವಾಗಿದೆ. ಧಾರಣೆಗಳು ಬಹಳವಾಗಿ ಇಳಿದು ಹೋಗಿರುವ ಈಗಿನ ಸ್ಥಿತಿಯಿಂದ ರೈತರಲ್ಲಿಯೂ ಮತ್ತು ಜಮೀನ್ದಾರರುಗಳಲ್ಲಿಯೂ ಸಾಧನಸಂಪತ್ತುಗಳು ಎಷ್ಟುಮಟ್ಟಿಗೆ ಕುಗ್ಗಿವೆ, ಅವರುಗಳು ಸಾಲ ಸೋಲಗಳನ್ನು ತೀರಿಸಲು ಎಷ್ಟುಮಟ್ಟಿನ ಕಷ್ಟಗಳುಂಟಾಗಿವೆ, ಅವರಿಗೆ ಸಾಲವು ದೊರೆಯತಕ್ಕ ಸೌಕರ್ಯವು ಎಷ್ಟುಮಟ್ಟಿಗೆ ಕಡಮೆಯಾಗಿದೆ—ಎಂಬ ವಿಚಾರಗಳನ್ನು ಪರಿಶೀಲಿಸಿ ಈಗಿನ ಕಷ್ಟದಶೆಯಲ್ಲಿ ಅವರಿಗೆ ಯಾವ ಸಹಾಯಗಳನ್ನು ಎಷ್ಟುಮಟ್ಟಿಗೆ ಮಾಡುವುದು ಅವಶ್ಯಕವೆಂಬುದನ್ನು ಕುರಿತು ವರದಿಮಾಡುವ ಕೆಲಸವನ್ನು ಆ ಸಮಿತಿಯವರಿಗೆ ವಹಿಸಲಾಗಿದೆ. ಈ ಎರಡು ಸಮಿತಿಗಳವರಿಂದಲೂ ಶೀಘ್ರದಲ್ಲಿಯೇ ವರದಿಗಳು ಬರುವುವೆಂದು ಸರ್ಕಾರದವರು ನಿರೀಕ್ಷಿಸಿದ್ದಾರೆ. ಆ ವರದಿಗಳು ಬಂದಾಗ್ಗೆ ಅವುಗಳನ್ನು ಕುರಿತು ಸರ್ಕಾರದವರು ತೀವ್ರಾಸಕ್ತಿಯಿಂದ ಪರ್ಯಾಲೋಚಿಸುತ್ತಾರೆ.

ಸಂಬಳಗಳ ಸ್ಕೇಲುಗಳ ಮಾರ್ಪಾಡು.

ಕಳೆದ ಬಜೆಟ್ ಅಧಿವೇಶನದಲ್ಲಿ ನಾನು ಮಾಡಿದ ಪರಿಸಮಾಪ್ತಿ ಭಾಷಣದಲ್ಲಿ, ವೆಚ್ಚವನ್ನು ತಗ್ಗಿಸುವುದಕ್ಕಾಗಿ ಸಂಬಳ ಸ್ಕೇಲುಗಳನ್ನು ಮಾರ್ಪಾಡುಮಾಡುವ ವಿಚಾರವು ಆಗ್ಗೆ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದಿತೆಂದು ಸೂಚಿಸಿದ್ದೆನು. ಅಲ್ಲದೆ, ಸಾಮಾನ್ಯವಾಗಿ ಯಾವರೀತಿಗಳಲ್ಲಿ ಸಂಬಳಗಳನ್ನು ಬದಲಾವಣೆ ಮಾಡಲಾಗುವುದೆಂಬುದನ್ನೂ ತಿಳಿಸಿದ್ದೆನು.

ಸ್ವಲ್ಪ ಹೆಚ್ಚು ಕಡಮೆ ಎಲ್ಲ ಇಲಾಖೆಗಳ ಗೆಜೆಟೆಡ್ ಅಧಿಕಾರಿಗಳ ಸಂಬಳಗಳ ಸ್ಕೇಲುಗಳನ್ನೂ ಮಾರ್ಪಡಿಸಿ ಹುಕುಂ ಹೊರಡಿಸಲಾಗಿದೆ. ಉಳಿದ ಇಲಾಖೆಗಳ ವಿಚಾರದಲ್ಲಿ ಶೀಘ್ರವಾಗಿ ಕ್ರಮ ನಡೆಯಿಸಲಾಗುವುದು.

ಸಂಬಳಗಳ ಸ್ಕೇಲುಗಳನ್ನು ಮಾರ್ಪಡಿಸಿದುದರ ಫಲಿತಾಂಶ ವರುಷಕ್ಕೆ ಸುಮಾರು $3\frac{1}{2}$ ಲಕ್ಷ ರೂಪಾಯಿಗಳ ವೆಚ್ಚವು ಕಡಮೆಯಾಗುವುದೆಂದು ನಿರೀಕ್ಷಿಸಲಾಗಿದೆ. ಮಾರ್ಪಾಡಾದ ಸಂಬಳಗಳ ಸ್ಕೇಲುಗಳು 1934 ನೆಯ ಇಸವಿ ಮಾರ್ಚಿ 6 ನೆಯ ತಾರೀಖಿನಿಂದೀಚೆಗೆ ಕೆಲಸಕ್ಕೆ ನೇಮಕವಾದವರಿಗೂ ಮತ್ತು ಬಡ್ತಿ ಹೊಂದಿದವರಿಗೂ ಮಾತ್ರವೇ ಅನ್ವಯಿಸುವಂತೆ ಏರ್ಪಡಿಸಿರುವುದರಿಂದ, ಈ $3\frac{1}{2}$ ಲಕ್ಷ ರೂಪಾಯಿಗಳ ಉಳಿತಾಯವು ಈ ಕೂಡಲೇ ಕಂಡುಬರುವುದಿಲ್ಲ; ಕಾಲಾನುಕ್ರಮದಲ್ಲಿ ಮಾತ್ರವೇ ಅದು ಕಂಡುಬರುತ್ತದೆ.

ವೆಚ್ಚಗಳನ್ನು ನಡೆಯಿಸುವ ಇಲಾಖೆಗಳು.

ಇನ್ನು, ಹುಟ್ಟುವಳಿಗಿಂತ ವೆಚ್ಚವೇ ಹೆಚ್ಚಾಗಿದ್ದು ಭಾರಿ ವೆಚ್ಚಗಳನ್ನು ನಡೆಯಿಸುವ ಇಲಾಖೆಗಳ ವಿಚಾರ. ಪ್ರಪಂಚದ ನಾನಾ ದೇಶಗಳೂ ಪರಸ್ಪರವಾಗಿ ಮಾಡುತ್ತಿರುವ ಆರ್ಥಿಕ ಸ್ಪರ್ಧೆಯ ವಿಷಯವನ್ನು ನಾನು ಮೊದಲೇ ಸೂಚಿಸಿದ್ದೇನೆ. ಆ ಸಂಬಂಧದಲ್ಲಿ ನಾನು ಸೂಚಿಸಿದ ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ತಾವೆಲ್ಲರೂ ಒಂದು ವಿಷಯವನ್ನು ಗಮನಿಸಬೇಕೆಂದು ಬಿನ್ನಹ. ವೆಚ್ಚವನ್ನು ಪೂರ್ತಿಯಾಗಿ ಕಡಮೆಮಾಡಿ ನಿಲ್ಲಿಸಿಬಿಡುವುದು ಯುಕ್ತವೆಂದೇನೋ ನಾವು ಭಾವಿಸಲಿಲ್ಲವಾದರೂ, ನಡೆಯುವ ವೆಚ್ಚಗಳಲ್ಲೇನೋ ಹೆಚ್ಚು ಸಂದರ್ಭಗಳಲ್ಲಿ ಮೈಸೂರು ಸಂಸ್ಥಾನದ ವಸ್ತುಗಳನ್ನೇ ಕ್ರಯಕ್ಕೆ ತೆಗೆದುಕೊಂಡು, ಮೈಸೂರು ಸಂಸ್ಥಾನದ ಕೆಲಸಗಾರರಿಗೆ ಕೂಲಿಯನ್ನು ಕೊಡುವುದಕ್ಕೇ ಸರ್ಕಾರದ ಹಣವು ವಿನಿಯೋಗವಾಗಿದೆ. ಆದಕಾರಣ, ಪ್ರಜೆಗಳ ಕಾರ್ಯಗಳನ್ನೂ ಸಂಪಾದನೆಯ ಶಕ್ತಿಯನ್ನೂ ವಿಶಾಲವಾಗಿ ಹೆಚ್ಚಿಸಿದಂತಾಯಿತು; ಅಲ್ಲದೆ, ಕೂಲಿಯವರಿಗೆ ಕೆಲಸವು ದೊರೆಯುವಂತೆಯೂ ಹೆಚ್ಚು ಹಣವು ಓಡಾಡುವಂತೆಯೂ ಮಾಡಿ ಅನುಕೂಲಪಡಿಸಿದಂತೆಯೂ ಆಯಿತು.

ಪಬ್ಲಿಕ್ ವರ್ಕ್ಸ್ ಇಲಾಖೆ.

ಪಬ್ಲಿಕ್ ವರ್ಕ್ಸ್ ಇಲಾಖೆಗೊಬ್ಬರು ಚೀಫ್ ಇಂಜನಿಯರೂ, ಕೃಷ್ಣರಾಜಸಾಗರ ಕಾಮಗಾರಿಗಳಿಗೊಬ್ಬರು ಚೀಫ್ ಇಂಜನಿಯರೂ ಇದ್ದುದನ್ನು ತಪ್ಪಿಸಿ, ಒಬ್ಬರೇ ಚೀಫ್ ಇಂಜನಿಯರು ಎರಡು ಬಾಬುಗಳನ್ನೂ ನೋಡಿಕೊಳ್ಳುವಂತೆ ಏರ್ಪಡಿಸಲಾಯಿತು. ದಿವಾನ್ ಬಹದ್ದೂರ್ ಎನ್. ಎನ್. ಅಯ್ಯಂಗಾರ್ಯರನ್ನು ಚೀಫ್ ಇಂಜನಿಯರರಾಗಿಯೂ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆ, ವಿದ್ಯುಚ್ಛಕ್ತಿ ಇಲಾಖೆ ಮತ್ತು ರೈಲ್ವೇ ಇಲಾಖೆಯ ಸರ್ಕಾರದ ಸೆಕ್ರೆಟರಿಯವರಾಗಿಯೂ ನೇಮಕ ಮಾಡಲಾಯಿತು. ಚೀಫ್ ಇಂಜನಿಯರ ಸಹಾಯಕ್ಕಾಗಿ ಒಬ್ಬರು ಡೆಪ್ಯುಟಿ ಚೀಫ್ ಇಂಜನಿಯರ್ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯ ಅಂಡರ್ ಸೆಕ್ರೆಟರಿಯವರಿರುವಂತೆ ಒಂದು ಹೊಸ ಹುದ್ದೆಯನ್ನು ಏರ್ಪಡಿಸಿ ಮಂಜೂರಾತಿಯನ್ನು ಕೊಡಲಾಯಿತು.

ಬೆಂಗಳೂರಿನಲ್ಲಿ ವಾಣೀವಿಲಾಸ ಆಸ್ಪತ್ರೆಯ ಕಟ್ಟಡದ ಕೆಲಸವು ಪೂರೈಸುತ್ತ ಬಂದಿದೆ. ಮುಂದಿನ ಡಿಸೆಂಬರು ತಿಂಗಳ ಹೊತ್ತಿಗೆ ಅದು ಉಪಯೋಗಕ್ಕೆ ಸಿದ್ಧವಾಗುವುದೆಂದು ನಿರೀಕ್ಷಿಸಲಾಗಿದೆ. ಬೆಂಗಳೂರಿನಲ್ಲಿ ಕಟ್ಟುತ್ತಿರುವ ಪುಟ್ಟಣ್ಣಚೆಟ್ಟಿ ನಗರಭವನ, ವೃತ್ತಿ ಶಿಕ್ಷಣಶಾಲೆ, ಸಂಸ್ಕೃತ ಮಹಾಪಾಠಶಾಲೆ, ಮೈಸೂರಿನಲ್ಲಿ ಅಂಗವಿಹೀನರಿಗಾಗಿ ಕಟ್ಟುತ್ತಿರುವ ಶಿಕ್ಷಣಶಾಲೆ, ಶಿವಮೊಗ್ಗೆಯಲ್ಲಿ ಕಟ್ಟುತ್ತಿರುವ ಮ್ಯಾಗ್ಗನ್ ಆಸ್ಪತ್ರೆ, ಇವುಗಳ ಕಟ್ಟಡಗಳ ಕೆಲಸವು ಬೇಗಬೇಗ ಮುಂದುವರಿಯುತ್ತಿದೆ. ಮೈಸೂರಿನಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಆವರಣದಲ್ಲಿ ಮಕ್ಕಳ ಚಿಕಿತ್ಸೆಯ ವಾರ್ಡು ಕಟ್ಟಡದ ಕೆಲಸವು ಮುಗಿದು, ಕಳೆದ ಜೂನ್ ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಅದರ ಪ್ರವೇಶಮಹೋತ್ಸವವನ್ನು ನೆರವೇರಿಸಿ ಕೃಪೆಮಾಡಿದರು.

ಅಕ್ಕಿಹೆಬ್ಬಾಳಿನ ಬಳಿಯಲ್ಲಿ ಹೇಮಾವತೀ ನದಿಗೆ ಸೇತುವನ್ನು ಕಟ್ಟಿ ಪೂರೈಸಲಾಯಿತು. ಕಳೆದ ಡಿಸೆಂಬರು ತಿಂಗಳಿನಲ್ಲಿ ಶ್ರೀಮನ್ಮಹಾರಾಜರವರು ಆ ಸೇತುವಿನ ಸಂಚಾರ ಸಮಾರಂಭ ಮಹೋತ್ಸವವನ್ನು ನೆರವೇರಿಸಿ ಅದಕ್ಕೆ ಶ್ರೀಮದ್ಯುವರಾಜರವರ ನಾಮಾಂಕಿತವನ್ನಿಡಲು ಅನುಜ್ಞೆಯನ್ನು ದಯಪಾಲಿಸಿದರು. ಕಪಿಲಾ ನದಿಗೆ ತಾಂಡವಾಳದ ಹತ್ತಿರ ಸೇತುವನ್ನು ಕಟ್ಟಲು 3,45,060 ರೂಪಾಯಿಗಳ ಅಂದಾಜೊಂದನ್ನು ಮಂಜೂರು ಮಾಡಲಾಯಿತು. 1933-34 ನೆಯ ಸಾಲಿನಲ್ಲಿ ಅದರ ಕೆಲಸವನ್ನೂ ಪ್ರಾರಂಭಿಸಲಾಯಿತು. ಇದಕ್ಕೆ ಹಿಡಿಯುವ ವೆಚ್ಚದಲ್ಲಿ ಅರ್ಧವನ್ನಾಗಲಿ ಅಥವಾ 1,73,000 ರೂಪಾಯಿಗಳನ್ನಾಗಲಿ, ಅಂತು ಈ ಎರಡರಲ್ಲಿ ಯಾವ ಮೊತ್ತವು ಕಡಮೆಯೋ ಅದನ್ನು ಪೆಟ್ರೋಲ್ ತೆರಿಗೆ ಹಣದಿಂದ ಕೊಡುವುದಾಗಿ ಇಂಡಿಯಾ ಸರ್ಕಾರದವರು ವಾಗ್ದಾನ ಮಾಡಿದ್ದಾರೆ.

ಕೃಷ್ಣರಾಜಸಾಗರದ ಕೋಡಿಯ ಬಳಿಯಲ್ಲಿ ಜೋಡಣೆಗೊಳಿಸಬೇಕಾಗಿದ್ದ 136 ತೂಬಿನ ಬಾಗಿಲುಗಳಲ್ಲಿ, ಬೇಕಾದಾಗ ಮೇಲಕ್ಕೆತ್ತಿ ಬೇಡದಾಗ ಕೆಳಕ್ಕಿಳಿಸುವ ಎಡಭಾಗದ 88 ಮರಳುತ್ತನ ಕಟ್ಟಡದ ತೂಬಿನ ಬಾಗಿಲುಗಳೂ ಮತ್ತು ನೀರಿನ ಮಟ್ಟವು ಒಂದು ಪರಿಮಿತಿಗಿಂತ ಮೇಲಕ್ಕೇರಿದಾಗ ತೂಬಿನ ಬಾಗಿಲುಗಳು ತಾವಾಗಿಯೇ ತೆರೆದು ಅದು ಇಳಿದು ಹೋದಾಗ ಮತ್ತೆ ತಾವಾಗಿಯೇ ಮುಚ್ಚಿಕೊಳ್ಳುವ ಏರ್ಪಾಡು ಮಾಡಿರುವ ಎಂಟು ತೂಬಿನ ಯಂತ್ರಗಳೂ 1932-33 ರಲ್ಲಿ ಜೋಡಣೆಯಾಗಿದ್ದುವು. ಈಚೆಗೆ ಆ ಎಂಟು ತೂಬಿನ ಯಂತ್ರಗಳ ಜೊತೆಗೆ ಮತ್ತೆ ನಲವತ್ತು ತೂಬಿನ ಯಂತ್ರಗಳನ್ನು ಜೋಡಿಸಲಾಯಿತು; ಅಲ್ಲಿಗೆ ಇವೆರಡು ವಿಧಗಳವೂ ಸೇರಿ ಒಟ್ಟು 136 ತೂಬಿನ ಬಾಗಿಲುಗಳು ಸಿದ್ಧವಾದಂತಾಯಿತು. ಹೆಚ್ಚು ನೀರು ಹರಿದು ಹೋಗುವಂತೆ ಏರ್ಪಡಿಸಿರುವ ಅಣೆ ಏರಿಯ ಭಾಗದ ತೂಬುಗಳ ಯಂತ್ರಗಳಲ್ಲಿ ಸಮರ್ಪಕವಾಗಿ ಕೆಲಸ ನಡೆಯಿತು. ಮದರಾಸು ಸರ್ಕಾರದವರೊಡನೆ ಒಪ್ಪಂದವಾಗಿರುವಷ್ಟು ಪ್ರಮಾಣದ ನೀರನ್ನು ಅವುಗಳ ಮೂಲಕ ನದಿಗೆ ಬಿಡುವ ಕೆಲಸವು ಕಾಲಕಾಲಕ್ಕೆ ಸರಿಯಾಗಿ ಸಮರ್ಪಕವಾಗಿ ನಡೆಯಿತು. ದಕ್ಷಿಣದ ದಡದಲ್ಲಿಯೂ ಮತ್ತು ಉತ್ತರದ ದಡದಲ್ಲಿಯೂ ಏರ್ಪಡಿಸಿರುವ ಉದ್ಯಾನಗಳನ್ನು ವಿಶೇಷರೀತಿಯಲ್ಲಿ ಉತ್ತಮಪಡಿಸಲಾಯಿತು.

1932 ನೆಯ ಇಸವಿ ಅಕ್ಟೋಬರು ತಿಂಗಳಿನಲ್ಲಿ ಅರ್ಕಾವತೀ ನದಿಯಲ್ಲಿ ಅಸಾಧಾರಣವಾಗಿ ಭಾರಿ ಪ್ರವಾಹವು ಬಂದಿತು. ಆದಕಾರಣ ಬೆಂಗಳೂರಿಗೆ ನೀರನ್ನೊದಗಿಸುವುದಕ್ಕಾಗಿ ಆ ನದಿಗೆ ಅಡ್ಡವಾಗಿ ತಿಪ್ಪಗೊಂಡನಹಳ್ಳಿಯ ಸಮೀಪದಲ್ಲಿ ಕಟ್ಟಿರತಕ್ಕ ಶ್ರೀ ಚಾಮರಾಜೇಂದ್ರ ಜಲಾಶಯಕ್ಕೆ ಹಂಗಾಮಿಯಾಗಿ ಕಟ್ಟಿದ್ದ ಕೋಡಿಯ ಬಳಿಯಲ್ಲಿ ಕೆಳಭಾಗವು ಕೊರೆದುಹೋಗಿ ವಿಶೇಷ ನಷ್ಟವು ಸಂಭವಿಸಿತು. ಕಾಮಗಾರಿಯ ವಿಚಾರದಲ್ಲಿ ಸಲಹೆ ಕೊಡಲು ನೇಮಕವಾಗಿದ್ದ ಆಲೋಚನಾ ಸಮಿತಿಯವರ ಸೂಚನೆಗಳಂತೆ ಖಾಯಮಾಗಿ ಕೋಡಿಯನ್ನು ಕಟ್ಟಿಸಿ, ಭಾರಿ ಪ್ರವಾಹ ಬಂದಾಗ ಹೆಚ್ಚು ನೀರು ಹರಿದು ಹೋಗಲು ತೂಬಿನ ಯಂತ್ರಸಾಧನಗಳನ್ನು ಜೋಡಣೆಗೊಳಿಸುವುದಕ್ಕಾಗಿ 9,35,000 ರೂಪಾಯಿಗಳ ವೆಚ್ಚದಲ್ಲಿ ಒಂದು ಅಂದಾಜನ್ನು ಮಂಜೂರು ಮಾಡಲಾಯಿತು. ಆ ಸಂಬಂಧದ ಕಾಮಗಾರಿಗಳು ತ್ವರೆಯಿಂದ ಮುಂದುವರಿಯುತ್ತಿವೆ. ಲಕ್ಕವಳ್ಳಿಯ ಬಳಿಯಲ್ಲಿ ಭದ್ರಾನದಿಗೆ ಅಣೆಯನ್ನು ಕಟ್ಟುವ ಸಂಬಂಧದಲ್ಲಿ ಪರಿಶೀಲನೆಗಳು ಪ್ರಸಕ್ತ ವರ್ಷದಲ್ಲಿಯೂ ನಡೆದುವು. ಅಲ್ಲಿ ಜಲಾಶಯವನ್ನೂ ನಾಲೆಗಳನ್ನೂ ನಿರ್ಮಿಸಲು, ಒಂದು ಒಪ್ಪಿಗೆಯಾಗಿದ್ದರೆ ಮತ್ತೊಂದು ಅಂಗೀಕೃತವಾಗಬಹುದೆಂದು ಎರಡು ಬಗೆಯ ಕಾಮಗಾರಿ ಅಂದಾಜುಗಳು ರಚಿತವಾಗಿವೆ. ಎರಡು ಲಕ್ಷ ಎಕರೆಗಳಿಗೆ ನೀರಾವರಿಯಾಗುವಂತೆಯೂ 17,000 ಅಶ್ವಶಕ್ತಿಗಳ ಬಲದ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗಲನುಕೂಲಿಸುವಂತೆಯೂ ಜಲಾಶಯದೊಳಗೆ 180 ಅಡಿಗಳ ನೀರು ನಿಲ್ಲುವಂತೆ ಕಾಮಗಾರಿ ನಡೆಯಬೇಕೆಂದೂ ಸಲಹೆಯಾಗಿದೆ.

ವಿದ್ಯುಚ್ಛಕ್ತಿ ಇಲಾಖೆ.

1933-34 ನೆಯ ಸಾಲಿನಲ್ಲಿ ಮಾಲೂರು, ಗುಬ್ಬಿ, ನೆಲಮಂಗಲ ದೊಮ್ಮಸಂದ್ರ ಈ ಊರುಗಳಿಗೂ ಮತ್ತು ಇತರ ಕೆಲವು ಗ್ರಾಮಗಳಿಗೂ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸುವ ವಿಚಾರಕ್ಕೆ ಗಮನಕೊಡಲಾಯಿತು. ನೆಲಮಂಗಲಕ್ಕೂ, ದೊಮ್ಮಸಂದ್ರಕ್ಕೂ, ಇತರ ಕೆಲವು ಗ್ರಾಮಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸಿಕೊಡಲಾಯಿತು. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವ ಏರ್ಪಾಡಿಗಾಗಿ ಕಳೆದ ಜೂನ್ ತಿಂಗಳ 30 ನೆಯ ತಾರೀಖಿನವರೆಗೆ ವೆಚ್ಚವಾಗಿರುವ ಒಟ್ಟು ಮೊಬಲಗು 20,43,055 ರೂಪಾಯಿಗಳು. ಈ ಮೊತ್ತದ ಮೇಲೆ ವರುಷಕ್ಕೆ ಶೇಕಡ 5ರಂತೆ ವರಮಾನವು ಬರುವುದಾಗಿ ಖಾತರಿಗಳನ್ನೇನೋ ಸಂಬಂಧಪಟ್ಟ ಗ್ರಾಮಪಂಚಾಯಿತಿಗಳು, ಮುನಿಸಿಪಾಲಿಟಿಗಳು ಮುಂತಾದ ಸಂಸ್ಥೆಗಳವರು ಮಾಡಿಕೊಟ್ಟಿದ್ದಾರೆ. ಆದಾಗ್ಯೂ, ಆ ಪ್ರಮಾಣಕ್ಕನುಸಾರವಾಗಿ ಶೇಕಡ 5ರಂತೆ ಪೂರ್ತಿ ಹುಟ್ಟುವಳಿಯು ಇನ್ನೂ ಬರುತ್ತಿಲ್ಲ. ವಿದ್ಯುಚ್ಛಕ್ತಿಯ "ಟ್ರಾನ್ಸ್ಫಾರ್ಮರು"ಗಳೆಂಬ ಯಂತ್ರಸಾಧನಗಳನ್ನು ಸ್ಥಳದಲ್ಲೇ ತಯಾರಿಸಿ ಒದಗಿಸಿಕೊಳ್ಳಬೇಕೆಂಬ ಕಾರ್ಯಕ್ರಮಕ್ಕನುಸಾರವಾಗಿ ಅವುಗಳ ತಯಾರಿ ಕೆಲಸವು ತೃಪ್ತಿಕರವಾಗಿ ಮುಂದುವರಿಯುತ್ತಿದೆ. ಮೆಟ್ಟೂರಿಗೆ ವಿದ್ಯುಚ್ಛಕ್ತಿಯನ್ನೊದಗಿಸುತ್ತಿದ್ದ ಕೆಲಸವು ಕಳೆದ ಜೂನ್ ತಿಂಗಳಿನಿಂದ ನಿಂತುಹೋಯಿತು. ಭದ್ರಾವತಿಯಲ್ಲಿ ಉಕ್ಕನ್ನು ತಯಾರಿಸುವ ಯಂತ್ರಗಳಿಗೆ ಶಿವನಸಮುದ್ರದಿಂದ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಸರ್ಕಾರದವರು ತೀರ್ಮಾನಿಸಿ ಅಪ್ಪಣೆಮಾಡಿದ್ದಾರೆ. ಶಿವನಸಮುದ್ರದಿಂದ ಕೃಷ್ಣರಾಜನಗರ, ಹೊಳೆನರಸೀಪುರ, ಹಾಸನ, ಬೇಲೂರು ಮತ್ತು ಚಿಕ್ಕಮಗಳೂರು, ಈ ಊರುಗಳ ಮಾರ್ಗವಾಗಿ ಭದ್ರಾವತಿಗೆ ವಿದ್ಯುಚ್ಛಕ್ತಿಯ ತಂತಿಗಳನ್ನು ಹಾಕಬೇಕಾಗುವುದು. ಆದಕಾರಣ, ಆ ಊರುಗಳಿಗೆಲ್ಲ ವಿದ್ಯುಚ್ಛಕ್ತಿಯನ್ನೊದಗಿಸುವುದೂ ಸಾಧ್ಯವಾಗುವುದು. ಅಲ್ಲದೆ, ಶಿವಮೊಗ್ಗೆಗೂ, ದಾವಣಗೆರೆಗೂ ವಿದ್ಯುಚ್ಛಕ್ತಿಯನ್ನೊದಗಿಸುವ ಕೆಲಸವೂ ನೆರವೇರುವುದು. ವಿದ್ಯುಚ್ಛಕ್ತಿಯನ್ನು ಸಾಗಿಸುವ ಒಂಟಿಯಾದ ಟ್ರಾನ್ಸ್ಮಿಷನ್ ಲೈನು ಹಾಕಿದರೆ 12,70,000 ರೂಪಾಯಿಗಳ ವೆಚ್ಚವು ತಗಲುವುದು. ಅದರ ಜೋಡಿ ಟ್ರಾನ್ಸ್ಮಿಷನ್ ಲೈನನ್ನು ಹಾಕುವುದಾದರೆ 21,85,000 ರೂಪಾಯಿಗಳ ವೆಚ್ಚವು ತಗಲುವುದು. ಇದೇ ಹೆಚ್ಚು ಅನುಕೂಲ. ಅಲ್ಲದೆ, ಈಗ ಜೋಡಿ ಲೈನನ್ನು ಹಾಕದೆ ಸುಮ್ಮನಿದ್ದರೂ ಮುಂದಾದರೂ ಅದನ್ನು ಹಾಕಲೇಬೇಕಾಗುವುದು. ಆದಕಾರಣ, ಈಗ ನಮಗೆ ಹಣದ ಮುಗ್ಗಟ್ಟು ಒದಗಿದ್ದರೂ ಕೂಡ, ಈಗಿನ ಸ್ಥಿತಿಯಲ್ಲಿಯೂ ಈ ವೆಚ್ಚವನ್ನು ಕೈಕೊಳ್ಳುವುದು ಯುಕ್ತವೆಂದು ನನಗೆ ನಿಸ್ಸಂದೇಹವಾಗಿ ತೋರುವುದು. ಅದು ಲಾಭದಾಯಕವಾದ ವೆಚ್ಚವೆಂಬ ಭರವಸೆಯು ನನಗಿರುವುದೇ ಅದಕ್ಕೆ ಕಾರಣ.

ಲಾಭದಾಯಕವಲ್ಲದ ಮತ್ತು ಅನುಪಯುಕ್ತವಾದ ಮೇಲ್ಪಾಟುಗಳಿಗಾಗಿ ಹಣವನ್ನು ವೆಚ್ಚಮಾಡುವ ಆತುರದ ಕೆಲಸಕ್ಕೆ ನಾವು ಕೈಹಾಕದೆ ಎಚ್ಚರಿಕೆಯಿಂದಿರಬೇಕಾದುದು ಅವಶ್ಯಕವೇ ಸರಿ; ಆದಾಗ್ಯೂ, ಪುರೋಭಿವೃದ್ಧಿಸಾಧನೆಯ ಪ್ರಯತ್ನದಲ್ಲಿ

(6ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೪ನೇ ಅಕ್ಟೋಬರ್ ತಾ|| ೨೯ನೇ ಸೋಮವಾರ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಾದಪೂಜೋತ್ಸವ.

ನಮ್ಮ ಮಹಾಪ್ರಭುಗಳವರ ಬಂಧುಗಳಾದ ಸರದಾರ ಲಕ್ಷ್ಮೀಕಾಂತರಾಜ ಅರಸರವರು ಕಳೆದ ಸೋಮವಾರ ದಿವಸ ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ತಮ್ಮ ರಾಜಭವನಕ್ಕೆ ಅರಮನೆಯಿಂದ ಕೊಡಲ್ಪಟ್ಟ ಗಜಾಶ್ವಾಯುಧಾದಿ ಸಮಸ್ತ ರಾಜಮರ್ಯಾದೆಗಳೊಡನೆ ಸುವರ್ಣರಜತಾಂದೋಳಿಕೋತ್ಸವ ಪೂರ್ವಕವಾಗಿ ಬಿಜಯಮಾಡಿಸಿಕೊಂಡರು. ಉತ್ಸವವು ಪ್ರಾತಃಕಾಲ ೯|| ಘಂಟೆಗೆ ಶ್ರೀಗಳವರ ಬಿಡಾರದಿಂದ ಹೊರಟು 12 ಘಂಟೆಗೆ ಸರದಾರರ ರಾಜಭವನಕ್ಕೆ ಸೇರಿತು. ಈ ಉತ್ಸವಕ್ಕೆ ರಿಟೈರ್ಡ್ ಚೀಫ್ ಜಸ್ಟಿಸ್ ಪಿ. ಮಹಾದೇವಯ್ಯನವರು ಮುಂತಾದ ಅನೇಕ ಜನ ಸುಪ್ರಸಿದ್ಧ ವೀರಶೈವರು ಭಾಗಿಗಳಾಗಿದ್ದರು. ಅರಮನೆಯಲ್ಲಿ ಏರ್ಪಾಡಾದಂತೆ ಶ್ರೀಗಳವರ ಸ್ನಾನ ಪೂಜಾದಿಗಳಿಗೆ ಸಮರ್ಪಕವಾದ ಸಿದ್ಧತೆಗಳು ಮಾಡಲ್ಪಟ್ಟಿದ್ದವು. ಮಹಾಪೂಜೆಯನ್ನು ನೋಡುವುದಕ್ಕಾಗಿ ಸಕಲ ವೀರಶೈವರಿಗೂ ರಾಜಬಾಂಧುಗಳಿಗೂ ಅವಕಾಶವು ಕೊಡಲ್ಪಟ್ಟಿದ್ದಿತು. ಪೂಜಾಸಮಾಪ್ತಿಯಾದನಂತರ ಶ್ರೀ ಜಗದ್ಗುರು ರೇಣುಕಮೂರ್ತಿಯ ಮಂಗಳಾರತಿಯು ಬೆಳಗಿಸಲ್ಪಟ್ಟಿತು. ಸರದಾರ್ ಲಕ್ಷ್ಮೀಕಾಂತ ಅರಸರವರು ಸಪತ್ನೀಕರಾಗಿ ಶ್ರೀಗಳವರಿಗೆ ದಿವ್ಯನೂತನಾಂಬರಗಳೊಡನೆ ಕಾಣಿಕೆಯನ್ನು ಒಪ್ಪಿಸಿ ತೀರ್ಥವನ್ನು ಸೇವಿಸಿದರು. ಬಳಿಕ ರಾಜಬಂಧುಗಳಿಗೆ ತೀರ್ಥಪ್ರಸಾದ ವಿನಿಯೋಗವು ನಡೆಯಿತು. ಅಲ್ಲಿಂದ ಶ್ರೀಗಳವರು ತಮ್ಮ ನಿಯಮಿತಸ್ಥಲಕ್ಕೆ ದಯಮಾಡಿಸಿ ಸಂಕ್ಷಿಪ್ತ ಜಪತಪೋನುಷ್ಠಾನಗಳನ್ನು ತೀರಿಸಿಕೊಂಡರು. ಸಾಯಂಕಾಲವಾಗುವವರೆಗೂ ಬಂದ ಮಹಾಜನಗಳಿಗೆಲ್ಲ ಮೃಷ್ಟಾನ್ನ ಭೋಜನವು ನಡೆಯಿತು. ಸರ್ದಾರರವರು ತಮ್ಮ ಭವ್ಯವಾದ ರಾಜಭವನದ ದೃಶ್ಯಭಾಗಗಳನ್ನೆಲ್ಲಾ ಶ್ರೀಗಳವರಿಗೆ ತೋರಿಸಿದರು. ಸಾಯಂಕಾಲ ೮ ಘಂಟೆಗೆ ಆಂದೋಳಿಕೋತ್ಸವವು ಪುನಃ ರಾಜಭವನದಿಂದ ಹೊರಟು 9 ಘಂಟೆಗೆ ಸ್ವಸ್ಥಾನವನ್ನು ಸೇರಿತು. ಉತ್ಸವವು ಹಿಂದಿರುಗುವಾಗ ಅಸಂಖ್ಯ ದೀಪಮಾಲಿಕೆಯಿಂದೊಡಗೂಡಿದ್ದುದರಿಂದ ಉತ್ಸವವು ಪ್ರೇಕ್ಷಕರ ಮನಸ್ಸಿಗೆ ವಿಶೇಷವಾದ ಆಹ್ಲಾದವನ್ನುಂಟುಮಾಡುತ್ತಲಿತ್ತು. ಪರಮಾಸ್ತಿಕರಾದ ಸರ್ದಾರ್ ಲಕ್ಷ್ಮೀಕಾಂತ ಅರಸರವರು ಶ್ರೀಜಗದ್ಗುರು ರೇಣುಕಾಚಾರ್ಯರ ಧರ್ಮಪೀಠದಲ್ಲಿ ಅನಿತರ ಸಾಧಾರಣವಾದ ಭಕ್ತಿಯನ್ನಿಟ್ಟು ಸೇವೆಮಾಡಿ ಧನ್ಯರಾದರು. ಮಹಾಮಹಿಮನಾದ ಶ್ರೀ ಜಗದ್ಗುರು ರೇವಣಸಿದ್ಧನು ಇವರಿಗೂ ಇವರ ಅಶೇಷ ಬಂಧುವರ್ಗಕ್ಕೂ ಆಯುರಾರೋಗ್ಯಭಾಗ್ಯಾದಿ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಕೋರುತ್ತೇವೆ.

26 ನೆಯ ತಾರೀಖು ಶುಕ್ರವಾರ ದಿವಸ ದೊಡ್ಡಪೇಟೆಯಲ್ಲಿರುವ ಗುರುಮಲ್ಲಯ್ಯನವರ ಮಕ್ಕಳು ಮ|| ರಾ|| ಬಸವಣ್ಣನವರು ಶ್ರೀಮದ್ರಂಭಾಪುರೀ ಜಗದ್ಗುರು ಮಹಾಸ್ವಾಮಿಗಳವರನ್ನು ಪಾದಪೂಜೆಗಾಗಿ ತಮ್ಮ ಮನೆಗೆ ದಯಮಾಡಿಸಿಕೊಂಡಿದ್ದರು. ನದರಿಯವರು ಪ್ರಾತಃಕಾಲ 8 ಘಂಟೆಗೆ ನಾನಾವಿಧ ವಾದ್ಯವೈಭವದೊಡನೆ ಜಗದ್ಗುರುಗಳ ಬಿಡಾರಕ್ಕೆ ಹೋಗಿ ಶ್ರೀಗಳವರಿಗೆ ಫಲಪುಷ್ಪಾವಳಿಯನ್ನೊಪ್ಪಿಸಿ ಅನುಜ್ಞೆಯನ್ನು ಪಡೆದುಕೊಂಡು ರಾಜಮರ್ಯಾದೆಗಳೊಡನೆಯೂ ಮಕರತೋರಣನಂದಿಧ್ವಜಾದಿ ಸಕಲ ಬಿರುದುಗಳೊಡನೆಯೂ ಶ್ರೀಗಳವರನ್ನು ಮನೆಗೆ ಕರೆದುಕೊಂಡುಬಂದರು. ಉತ್ಸವಕ್ಕೆ ಸ್ವಮತ ಪರಮತದ ಅನೇಕರು ಆಗಮಿಸಿದ್ದರು. ಮನೆಯಲ್ಲಿ ಶ್ರೀಗಳವರು ಸಿಂಹಾಸನದಲ್ಲಿ ಮಂಡಿಸಿದ ಮೇಲೆ ಸ್ವಲ್ಪ ಹೊತ್ತು ಸಂಗೀತವು ನಡೆಯಿತು. ಬಳಿಕ ಪುರಾಣರತ್ನ ವೇ|| ಬಸವಲಿಂಗಶಾಸ್ತ್ರಿಗಳ ಉಪನ್ಯಾಸವಾಯಿತು. ತರುವಾಯ ಮಹಾಸ್ವಾಮಿಗಳವರು ಧರ್ಮತತ್ತ್ವವನ್ನು ಬೋಧಿಸಿದರು. ಆಮೇಲೆ ಮ|| ಬಸವಣ್ಣನವರು ಇವರ ಮಕ್ಕಳು ಮ|| ನಂಜುಂಡಪ್ಪನವರು ಶ್ರೀಗಳವರ ಪಾದಪೂಜೆಯನ್ನು ವಿಧ್ಯುಕ್ತವಾಗಿ ನಡೆಯಿಸಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಬಂಗಾರದ ಬಿಲ್ವಮಣಿಸರವನ್ನೂ ಗುರುಕಾಣಿಕೆಯನ್ನೂ ಒಪ್ಪಿಸಿದರು. ಅನ್ನಶಾಂತಿಯು ವಿಶೇಷವಾಗಿ ನಡೆಯಿಸಲ್ಪಟ್ಟಿತು. ಸಾಯಂಕಾಲ 7 ಘಂಟೆಗೆ ಶ್ರೀಗಳವರನ್ನು ವಿಶೇಷ ದೀಪೋತ್ಸವದೊಡನೆ ಬೀಳ್ಕೊಟ್ಟು ಶ್ರೀಗಳವರ ಆಶೀರ್ವಾದವನ್ನು ಪಡೆದು ಧನ್ಯರಾದರು.

ಮೈಸೂರು ಕೃಷ್ಣರಾಜಮೊಹಲ್ಲಾ ಸೊಪ್ಪಿನಕೊಳದ ಬೀದಿಯಲ್ಲಿರುವ ಮ||ರಾ|| ಎಸ್. ಪುಟ್ಟಣ್ಣನವರು ಶ್ರೀಮದ್ರಂಭಾಪುರೀ ಜಗದ್ಗುರುಗಳನ್ನು 25 ನೆಯ ತಾರೀಖು ಗುರುವಾರ ದಿವಸ ಅರಮನೆಯಿಂದ ಕೊಡಲ್ಪಟ್ಟ ರಾಜಮರ್ಯಾದೆಗಳೊಂದಿಗೆ ತಮ್ಮ ಮನೆಗೆ ದಯಮಾಡಿಸಿಕೊಂಡು ಬಂದು ವಿಧ್ಯುಕ್ತಪಾದಪೂಜೆಯನ್ನು ನಡೆಯಿಸಿ ಗುರುಕಾಣಿಕೆಯನ್ನು ಒಪ್ಪಿಸಿ 5 ಘಂಟೆಗೆ ಯಥಾಪ್ರಕಾರ ಉತ್ಸವದೊಡನೆ ಗುರುಗಳನ್ನು ಅವರ ಬಿಡಾರಕ್ಕೆ ಕಳುಹಿಸಿಕೊಟ್ಟರು. ಮಹೋತ್ಸವದಲ್ಲಿ ರಾಜಧಾನಿಯ ಪ್ರಮುಖ ವೀರಶೈವರೂ ಇವರ ಅನೇಕ ಜನ ಬಂಧುಮಿತ್ರರೂ ಭಾಗಿಗಳಾಗಿದ್ದರು. ಅನ್ನಶಾಂತಿಯು ವಿಶೇಷವಾಗಿ ನಡೆಯಿಸಲ್ಪಟ್ಟಿತು.

ಹಳೇ ಅಗ್ರಹಾರದ ಸೊಪ್ಪಿನಕೊಳದ ಬೀದಿಯಲ್ಲಿರುವ ಕಂಟ್ರಾಕ್ಟರ್ ಮ|| ರಾ|| ಚನ್ನವೀರಪ್ಪನವರು ನಿನ್ನೆ ದಿವಸ ಪ್ರಾತಃಕಾಲ ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ರಾಜಮರ್ಯಾದೆಗಳೊಡಗೂಡಿ ವಾದ್ಯವೈಭವದೊಡನೆ ತಮ್ಮ ಮನೆಗೆ ಬಿಜಮಾಡಿಸಿಕೊಂಡು ಪಾದಪೂಜೆಯನ್ನು ನಡೆಯಿಸಿ ತೀರ್ಥಪ್ರಸಾದಗಳನ್ನು ಸೇವಿಸಿ ಗುರುಕಾಣಿಕೆಯನ್ನೊಪ್ಪಿಸಿ ಗುರುಶುಶ್ರೂಷಾಫಲಕ್ಕೆ ಭಾಗಿಗಳಾದರು.

ಒಳದೇಶದ ವೃತ್ತಾಂತಗಳು.

ಕಳೆದವಾರ ಕೋಲಾರದ ಚಿನ್ನದ ಗಣಿಗಳಲ್ಲಿ ಆಕಸ್ಮಿಕವಾಗಿ ಕಲ್ಲು ಸಿಡಿದು ಕೆಲಸಮಾಡುವವರ ಮೇಲೆ ಕಲ್ಲು ಮಣ್ಣು ವಿಶೇಷವಾಗಿ ಬಿದ್ದು ನಾಲ್ಕಾರು ಜನಗಳು ಮರಣಹೊಂದಿದರೆಂದು ತಿಳಿದುಬರುತ್ತದೆ.

ಉರಿಗಂ ಚಿನ್ನದಗಣಿಯಲ್ಲಿ ೪೦೦ ರೂ. ಬೆಲೆಬಾಳುವ ಚಿನ್ನವನ್ನು ಕದ್ದನೆಂದು ರಾಮಾಚಾರಿ ಎಂಬವನಿಗೆ ಉರಿಗಂ ಸ್ಪೆಷಲ್ ೧ನೆಯ ದರ್ಜೆಯ ಮ್ಯಾಜಿಸ್ಟ್ರೇಟರು ೬ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿರುವರು.

ಕೃಷ್ಣರಾಜಸಾಗರದ ಕಟ್ಟೆಯ ಮೇಲೆ ಹೋಗಿಬರತಕ್ಕ ಮೋಟಾರ್ ಕಾರುಗಳಿಗೆ ತಲಾ 1 ರೂಪಾಯಿಯಂತೆಯೂ, ಬಸ್ಸುಗಳಿಗೆ 2 ರೂಪಾಯಿಗಳಂತೆಯೂ ಸುಂಕವನ್ನು ಕೊಡಬೇಕೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ.

ಹಿಂದೆ ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆಯನ್ನು ಬರೆದಿದ್ದ ಎಂ. ಶಿಂಗ್ರಯ್ಯನವರಿಗೆ ನಮ್ಮ ಶ್ರೀ ಮಹಾಪ್ರಭುಗಳು ತಾ|| 23-10-34 ನೆಯ ದಿವಸ ಹುಜೂರು ಸೆಕ್ರೆಟರಿಯವರ ಮೂಲಕ ಖಿಲ್ಲತ್ತನ್ನು ದಯಪಾಲಿಸಿರುತ್ತಾರೆ.

ಮೈಸೂರು ದಸರಾ ಕೈಗಾರಿಕೆ ವಸ್ತುಪ್ರದರ್ಶನಾಶ್ರಯದಲ್ಲಿ ಕಳೆದ ತಾ|| 20 ರಲ್ಲಿ 12 ರಿಂದ 15 ವರ್ಷಗಳೊಳಗಿರುವ ಹುಡುಗಿಯರ ಸೌಂದರ್ಯಸ್ಪರ್ಧೆಯೊಂದನ್ನು ಮಹಿಳಾ ಉಪಸಮಿತಿಯವರು ನಡೆಯಿಸಿದರು. ಇಂತಹ ಸ್ಪರ್ಧೆಯು ಮೈಸೂರಿನಲ್ಲಿ ಇದೇ ಮೊದಲನೆಯದಾಗಿದೆ.

ಮಹಾಪ್ರಭುಗಳವರು 19 ನೇ ತಾರೀಖಿನ ದಿವಸ ದ್ವಿತೀಯ ಸಚಿವರಾದ ಶ್ರೀಯುತ ರಾಜಗೋಪಾಲಾಚಾರ್ಯರವರಿಗೆ ರಾಜಮಂತ್ರಪ್ರವೀಣ ಎಂಬ ಬಿರುದನ್ನೂ ಸೆಕ್ರೆಟರಿ ಶ್ರೀಮಾನ್ ರಂಗರಾಯರಿಗೆ ರಾಜಸೇವಾಸಕ್ತ ಎಂಬ ಬಿರುದನ್ನೂ ಶ್ರೀಮತಿ ಲಕ್ಷ್ಮೀದೇವಮ್ಮನವರಿಗೆ ಧರ್ಮಪರಾಯಣೆ ಎಂಬ ಬಿರುದನ್ನೂ ದಯಪಾಲಿಸಿರುತ್ತಾರೆ.

ಬೊಂಬಾಯಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಮ|| ತಗಡೂರು ರಾಮಚಂದ್ರರಾಯರು, ಆಗರಂ ರಂಗಯ್ಯನವರು, ನಂಜನಗೂಡಿನ ವಿಶ್ವೇಶ್ವರಗೌಡರು, ಪಿ. ಶ್ರೀನಿವಾಸಶೆಟ್ಟರು, ಎಂ. ಎನ್. ಜೋಯಿಸರು, ಎ. ಸೂರ್ಯನಾರಾಯಣ ಪಂಡಿತರು, ಎನ್. ವಾಸುದೇವರಾವ್ ನವಜೀವನ ಸಂಪಾದಕರಾದ ಸಿ. ಅಶ್ವತ್ಥನಾರಾಯಣರಾಯರು, ಮಂಡಿ ಎಸ್. ಕೆ. ನರಸಿಂಹಯ್ಯನವರು ಮೈಸೂರಿನ ಪ್ರತಿನಿಧಿಗಳಾಗಿ ಬೊಂಬಾಯಿಗೆ ಪ್ರಯಾಣ ಮಾಡಿದ್ದಾರೆ.

ಈ ಸಾರೆ ನಡೆದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಬೆಂಗಳೂರು ಹೆರಿಗೆ ಆಸ್ಪತ್ರೆಗೆ 15 ಸಾವಿರ ರೂಪಾಯಿಗಳನ್ನೂ ಕುರುಡಮೂಕರ ಪಾಠಶಾಲೆಗೆ 25 ಸಾವಿರ ರೂಪಾಯಿಗಳನ್ನೂ ದಾನಮಾಡಿರುವ ಮೈಸೂರು ಎಕ್ಸೈಜು ಕಂಟ್ರಾಕ್ಟರ್ ಮ|| ಆರ್. ಎನ್. ಬಾಯ್ಸ್‌ರವರಿಗೂ, ಬೆಂಗಳೂರಲ್ಲಿರುವ ವೈದ್ಯಶಾಲೆಗೆ 10 ಸಾವಿರ ರೂಪಾಯಿಗಳ ಧರ್ಮವನ್ನು ಮಾಡಿದ ಬೆಂಗಳೂರು ಶಿವಾಜಿ ಎಣ್ಣೆ ಮತ್ತು ಶೀಗೆಕಾಯಿ ಮಿಲ್ಲಿನ ಮಾಲೀಕರಾದ ಮ|| ರಾ|| ಎಂ. ಕೆ. ಸಿಂಧೆಯವರಿಗೂ, ಉರಿಗದ ದೇವಸ್ಥಾನದ ರಿಪೇರಿಗಾಗಿ 8 ಸಾವಿರ ರೂಪಾಯಿಗಳನ್ನೂ ಹಿಂದುಳಿದವರ ಸ್ಕೂಲಿಗಾಗಿ 6 ಸಾವಿರ ರೂಪಾಯಿಗಳನ್ನೂ ಕೊಟ್ಟಿರುವ ರಾಬರ್ಟ್‌ಸನ್ ಪೇಟೆಯ ಮ|| ಆರ್ಕಾಟು ಎ. ಎಲ್. ದೇವರಾಜ ಮೊದಲಿಯಾರರವರಿಗೂ, ಹೊಳೆನರಸೀಪುರದ ನೇಯ್ಗೆ ಸ್ಕೂಲಿನ ಸೂಪರಿಂಟೆಂಡೆಂಟರಾದ ಮ|| ಎಂ. ಎ. ಸಂಪತ್ತಯ್ಯಂಗಾರ್ರವರಿಗೂ, ಕೆರೆಯನ್ನು ದುರಸ್ತುಮಾಡಿಸಿದ ಮೂಗೋಡಗ್ರಾಮದ ಮ|| ಮಲ್ಲೇಗೌಡರಿಗೂ, ಹೆರಿಗೆ ಆಸ್ಪತ್ರೆಗೆ 30 ಸಾವಿರ ರೂಪಾಯಿಗಳನ್ನು ಕೊಟ್ಟಿರುವ ಶಿವಮೊಗ್ಗ ಅಡಿಕೆ ವ್ಯಾಪಾರಿಗಳಾದ ಶ್ರೀ ಭೂಪಾಲಂ ರುಕ್ಮಯ್ಯಶೆಟ್ಟರಿಗೂ, ಆಸ್ಪತ್ರೆಗೆ 20,000 ರೂಪಾಯಿಗಳನ್ನು ಕೊಟ್ಟಿರುವ ಶಿವಮೊಗ್ಗೆಯ ಮ|| ಗೋವಿಂದಸ್ವಾಮಿಶೆಟ್ಟರಿಗೂ, ವ್ಯವಸಾಯದ ಸ್ಕೂಲಿಗೂ ಹೆರಿಗೆ ಆಸ್ಪತ್ರೆಗೂ ದೇವಸ್ಥಾನದ ಕಟ್ಟಡಕ್ಕೂ ಸೇರಿ 10,000 ರೂಪಾಯಿಗಳನ್ನು ಕೊಟ್ಟ ಮೂಗನಾಯಕನ ಕೋಟೆ ಸುಬ್ಬಮ್ಮನವರಿಗೂ ಗೌರವಯುತರಾದ ಪದಕಗಳನ್ನು ದಯಪಾಲಿಸಿರುತ್ತಾರೆ.

ವರ್ತಮಾನಸಂಗ್ರಹ.

ವೈಸರಾಯರಿಗೂ ಅವರ ಕಡೆಯವರಿಗೂ ಕುಳಿತುಕೊಳ್ಳಲಿಕ್ಕಾಗಿ ಘಂಟೆಗೆ ೧೨೭ ಮೈಲು ವೇಗವುಳ್ಳ ವಿಮಾನವೊಂದು ಬರುವುದಂತೆ !

ಸರ್ಕಾರಕ್ಕೆ ವಿರುದ್ಧವಾಗಿ ಪಿತೂರಿ ನಡೆಸಿದರೆಂದು ಮಾಸ್ಕೋ ನಗರದಲ್ಲಿ ಮೂವರು ಕೂಲಿಕಾರರು ಮರಣದಂಡನೆಗೆ ಗುರಿಯಾದರು.

ಅಹಮದಾಬಾದಿನ ಗೋವರ್ಧನ ಮಿಲ್ಲಿನಲ್ಲಿ ಬೆಂಕಿಯ ಅನಾಹುತವುಂಟಾಗಿ ಹತ್ತಿಬಟ್ಟೆಗಳೆಲ್ಲಾ ನಾಶವಾದವು. ಅರ್ಧ ಲಕ್ಷ ರೂಪಾಯಿಗಳ ನಷ್ಟ ಸಂಭವಿಸಿದೆ.

ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಹಿಂದೀ ನಾಟಕ ಸಭೆಯವರು ಬರುವ ಡಿಸೆಂಬರಿನಲ್ಲಿ ಅಖಿಲ ಭಾರತ ಕಾಲೇಜು ನಾಟಕಸಂಘಗಳ ಸ್ಪರ್ಧೆಯೊಂದನ್ನು ನಡೆಯಿಸಬೇಕೆಂದು ನಿಶ್ಚಯಮಾಡಿದ್ದಾರೆ.

ಸೊಲ್ಲಾಪುರದಲ್ಲಿ ಇದೇ ತಿಂಗಳು ೧೫ನೆಯ ತಾರೀಖಿನ ದಿವಸ ಪ್ರಾತಃಕಾಲ ೬|| ಘಂಟೆಯಲ್ಲಿ ಮೂರು ನಿಮಿಷಗಳವರೆಗೂ ಭೂಕಂಪವಾಯಿತು. ಇದೇ ಪ್ರಕಾರ 3 ದಿವಸಗಳವರೆಗೆ ಭೂಕಂಪವಾಯಿತಂತೆ ! ಯಾವ ಅಪಾಯವೂ ಆಗಿಲ್ಲವು.

ಜಬಿತ್ಪುರದಲ್ಲಿ ಒಬ್ಬಳು ಒಂದು ಹಾವನ್ನು ಹೆತ್ತಿರುವಳೆಂದೂ ಆ ಹಾವು ಕಾಡಿನಲ್ಲಿದ್ದುಕೊಂಡು ತಾಯಿಯ ಎದೆಯ ಹಾಲನ್ನು ಕುಡಿಯಲು ಆಗಾಗ್ಗೆ ಮನೆಗೆ ಬರುತ್ತದೆಂದೂ ಮನೆಯವರು ಆ ಹಾವನ್ನು ಅಟ್ಟುತ್ತಾರೆಂದೂ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ನೆಲ್ಲೂರಿನ ನಾಯಿಡುಪೇಟೆಯಲ್ಲಿ ಕಳೆದ ಗುರುವಾರ ರಾತ್ರಿ ಒಬ್ಬ ಚಿನ್ನ ಬೆಳ್ಳಿ ವ್ಯಾಪಾರಿಯ ಮನೆಯಲ್ಲಿ ಮನೆಯ ಯಜಮಾನನಾದ ಸೇನಯ್ಯ, ಅವನ ಪತ್ನಿ, ಮಗ ಮತ್ತು ಅಡಿಗೆಯವನು ಇಷ್ಟು ಜನರನ್ನೂ ಯಾರೋ ಕತ್ತಿಯಿಂದ ತಿವಿದು ಬಹಳ ಗಾಯಪಡಿಸಿರುವರು. ಪೋಲೀಸರು ಅಪರಾಧಿಗಳನ್ನು ಶೋಧಿಸುತ್ತಿರುವರು.

ಹೊಶಂಗಾಬಾದಿನಲ್ಲಿ ನಂಗಾಸಾಧುಗಳೊಬ್ಬರು ನವರಾತ್ರಿಯ ಸಮಯದಲ್ಲಿ ೯ ದಿವಸಗಳವರೆಗೆ ಸಮಾಧಿಯನ್ನು ಹೊಂದಿ ತಮ್ಮ ಆಶ್ಚರ್ಯಕರವಾದ ಶಕ್ತಿಯನ್ನು ತೋರಿಸಿದರು. ಎದೆಯವರೆಗೆ ಮಣ್ಣಿನಲ್ಲಿ ಶರೀರವನ್ನು ಮುಚ್ಚಿ ಅದರ ಮೇಲೆ ಗೋಧಿಯನ್ನು ಬೆಳೆಯಿಸಿ ಒಂಭತ್ತನೆಯ ದಿವಸ ಸಮಾಧಿಯಿಂದ ಎಚ್ಚತ್ತು ಹೊರಗೆ ಬಂದರು.

ಜಾವಾ ದ್ವೀಪದ ಸಕ್ಕರೆಯ ಕ್ರಯವು ಸ್ವಲ್ಪಮಟ್ಟಿಗೆ ಇಳಿದುಹೋಗಿರುವದರಿಂದ ಈಗ ಸಕ್ಕರೆಯು ಹೇರಳವಾಗಿ ಇಂಡಿಯಾಕ್ಕೆ ಬರುವ ಸಂಭವವಿದೆ. ಇದಕ್ಕಾಗಿ ಸಕ್ಕರೆಯ ಮೇಲೆ ಸುಂಕವನ್ನು ಹೆಚ್ಚಿಸಬೇಕೆಂದು ಇಂಡಿಯಾದೇಶದ ಸಕ್ಕರೆ ಕಾರ್ಖಾನೆಗಳ ಸಮ್ಮೇಳನದವರು ಇಂಡಿಯಾ ಸರ್ಕಾರದವರನ್ನು ವಿಜ್ಞಾಪಿಸಿಕೊಂಡಿರುತ್ತಾರೆ.

ಕಳೆದ ಶುಕ್ರವಾರ ರಾಯಚೂರು ಪಟ್ಟಣದಿಂದ ಮದರಾಸ ನಗರಕ್ಕೆ ಹೋಗುತ್ತಿದ್ದ ಒಂದು ರೈಲು ಗಾಡಿಯು ಪುತ್ತೂರಿನ ಸಮೀಪದಲ್ಲಿ ರೈಲ್ವೆ ಕಂಬಿಯನ್ನು ಬಿಟ್ಟು ಹೋದುದರಿಂದ ಕೆಲವು ಲಗ್ಗೇಜು ಗಾಡಿಗಳು ಮುರಿದುಹೋದವು. ರೈಲ್ವೆ ರಸ್ತೆಯೂ ಕಿತ್ತುಹೋಯಿತು. ಯಾರಿಗೂ ಪ್ರಾಣಾಪಾಯವಾಗಲಿಲ್ಲ. ಇಬ್ಬರಿಗೆ ಮಾತ್ರ ಗಾಯಗಳಾದವು. ಇದರಿಂದ 2 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಬರ್ಲಿನ್ ನಗರದಲ್ಲಿ ಲಕ್ಷಾಂತರ ಸಭಿಕರಿಂದೊಡಗೂಡಿದ ಒಂದು ಮಹಾಸಭೆಯಲ್ಲಿ ಹೆರ್ ಹಿಟ್ಲರರು ಭಾಷಣಮಾಡುತ್ತ ಸ್ತ್ರೀ ಸ್ವಾತಂತ್ರ್ಯದ ವಿಷಯವನ್ನೆತ್ತಿಕೊಂಡು—ಈಗ ಜಗತ್ತಿನಲ್ಲಿ ಒಂದು ಕೂಗು ಎದ್ದಿದೆ. ಪುರುಷರಿಗಿರತಕ್ಕ ಸ್ವಾತಂತ್ರ್ಯವನ್ನು ಸ್ತ್ರೀಯರೂ ಅಪೇಕ್ಷಿಸುವರಂತೆ! ಜರ್ಮನಿಯ ಸ್ತ್ರೀಯರಿಗೆ ಅಂಥ ಸ್ವಾತಂತ್ರ್ಯವು ಬೇಕಿಲ್ಲ. ಗೃಹಕೃತ್ಯ ಪಾಲನಪೋಷಣಗಳೆರಡೇ ಸ್ತ್ರೀಯರ ಕರ್ತವ್ಯವು. ತನ್ನ ಗಂಡ, ತನ್ನ ಮನೆ ಇವುಗಳೇ ಹೆಣ್ಣುಮಕ್ಕಳ ನೈಜಪ್ರಪಂಚವು. ಸ್ತ್ರೀಪ್ರಪಂಚಕ್ಕೂ ಪುರುಷಪ್ರಪಂಚಕ್ಕೂ ಅತಿನಿಕಟ ಸಂಬಂಧವಿರುವದು. ಒಂದರಿಂದ ಮತ್ತೊಂದು ಪರಿಪೂರ್ಣತೆಯನ್ನು ಹೊಂದಬೇಕಾಗಿದೆ. ಸ್ತ್ರೀಯರ ಮುಖ್ಯ ಕರ್ತವ್ಯವೆಂದರೆ ಶಿಶುಪಾಲನೆ. ಸ್ತ್ರೀಯರು ಪುರುಷನ ಕಾರ್ಯಕ್ಷೇತ್ರದಲ್ಲಿ ಕಾಲಿಡುವದು ಶುದ್ಧ ಅಸಂಗತವು. ದೇವರ ಸಂಕಲ್ಪಕ್ಕೆ ವಿರುದ್ಧವಾಗಿರುವ ಆಧುನಿಕ ತತ್ವಗಳು ನನಗೆ ಬೇಕಿಲ್ಲವೆಂದು ಹೇಳಿದರು. ಸ್ವಸ್ತಿ !

ಬಿರುಗಾಳಿಯಿಂದ ಹಾನಿ.

ಮನಿಲಾದಲ್ಲಿ ಸಂಭವಿಸಿದ ಬಿರುಗಾಳಿಯಿಂದ ೫೫ ಸಾವಿರ ಜನರು ಮನೆಮಠಗಳಿಲ್ಲದೆ ನಿರಾಶ್ರಿತರಾಗಿದ್ದಾರೆಂದೂ, ಸುಮಾರು ೩೦ ಲಕ್ಷ ಡಾಲರ್ ಹಾನಿ ಯಾಗಿರುವದೆಂದೂ ತಿಳಿಯುತ್ತದೆ.

ಗವರ್ನರರವರ ಆಗಮನ.

ಈ ದಿವಸ ಧಾರವಾಡ ಡಿ|| ಗದಗ ಟವನ್ನಿಗೆ ಬೊಂಬಾಯಿಯ ಗವರ್ನರ್ ಸಾಹೇಬರವರು ಆಗಮಿಸತಕ್ಕವರಿದ್ದು ಕೆಲವು ಸಂಸ್ಥೆಗಳವರು ಮಾನಪತ್ರಗಳನ್ನು ಸಮರ್ಪಿಸುವರೆಂದು ತಿಳಿದು ಬಂದಿದೆ.

ಸ್ತ್ರೀ ಶವದಸಂಗಡ ಮದುವೆ.

ಬೆಲಗ್ರೇಡಿನಲ್ಲಿ ಲಮಾನೆಲ ಕ್ರೆಡಾಕ್ ಎಂಬ ಯುವಕನು ಮಿಸ್ ಸೇನಿಯಾಡಾ ಎಂಬ ಸುಂದರ ತರುಣಿಯನ್ನು ಮದುವೆಮಾಡಿಕೊಳ್ಳಲಿಚ್ಛಿಸಿ ಆಕೆಯು ಮರಣಹೊಂದಿದ್ದರಿಂದ ಆ ಶವವನ್ನೇ ಮದುವೆಯಾಗಿ ತನ್ನ ಅನುರಾಗವನ್ನು ವ್ಯಕ್ತಪಡಿಸಿದನಂತೆ !

ಸ್ತ್ರೀಯರಿಗೆ ಸೇನಾಶಿಕ್ಷಣ.

ಪೋಲೆಂಡಿನಲ್ಲಿ ಇನ್ನುಮೇಲೆ ಸ್ತ್ರೀಯರೂ ಕೂಡ ಸೈನ್ಯಶಿಕ್ಷಣವನ್ನು ಕೆಲವು ವರ್ಷಗಳಕಾಲ ಹೊಂದಬೇಕೆಂದು ಹೊಸ ಶಾಸನವು ಪ್ರಚಾರಕ್ಕೆ ಬಂದಿದೆ. ಇದಕ್ಕೆ ತಪ್ಪುವ ಸ್ತ್ರೀಯರಿಗೆ ೧ ತಿಂಗಳು ಕಾರಾಗೃಹವಾಸ ಅಥವಾ ೧೫೦ ಪೌಂಡುಗಳ ದಂಡವನ್ನು ವಿಧಿಸಲಾಗುವುದಂತೆ !

ಅದ್ಭುತಾಕಾರದ ಹುಡುಗ.

ಇಂಗ್ಲೆಂಡಿನಲ್ಲಿರುವ 13 ವರ್ಷ ಪ್ರಾಯದ ಅರ್ಥರ್ ವೈನ್ ಎಂಬುವನ ತೂಕವು 226 ಪೌಂಡುಗಳಿರುತ್ತದೆ. ಅವನ ಎದೆಯ ಸುತ್ತಳತೆಯು 50 ಇಂಚಿರುತ್ತದೆ. ಈಗಲೇ ಎತ್ತರ 5 ಅಡಿ 6 ಇಂಚು ಇರುತ್ತದೆ. ಅವನು ಸಿನೆಮಾಕ್ಕೆ ಹೋದರೆ ಇಬ್ಬರ ಸೀಟುಬೇಕಾಗುವದು. ಅರ್ಥರನು ಇನ್ನೂ ಬೆಳೆಯುತ್ತಿರುವನು.

ಕುಷ್ಠರೋಗನಿವಾರಕಸಾಧು.

ಕೌಂಡಿ ಎಂಬಲ್ಲಿಯ ರಾಧಾವಲ್ಲಭದೇವಸ್ಥಾನದಲ್ಲಿರುವ ಸ್ವಾಮಿ ಭೂತಾನಂದನೆಂಬ ಸಾಧುವೊಬ್ಬನು ಕುಷ್ಠರೋಗವನ್ನು ಗುಣಪಡಿಸುವ ಮಂತ್ರಶಕ್ತಿಯುಳ್ಳವನಾಗಿದ್ದಾನೆ. ಈ ಸಾಧುವು ಮೊದಲು ಕುಷ್ಠತಗಲಿರುವ ಸ್ಥಳವನ್ನು ನೆಕ್ಕುವನು. ಅನಂತರ ಒಳಗಿನ ಮತ್ತು ಹೊರಗಿನ ಉಪಯೋಗಕ್ಕೆ ಔಷಧವನ್ನು ಕೊಡುವನು.

ಸೃಷ್ಟಿ ವೈಚಿತ್ರ್ಯ.

ಶ್ರೀಮತಿ ಸೋನಾಬೆ ಎಂಬ ದ್ರಾವಿಡ ಹೆಣ್ಣುಮಗಳು ಮಧುರೆಯ ಸರಕಾರಿ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ ಒಂದು ಹೆಣ್ಣುಮಗುವನ್ನು ಹೆತ್ತಳು. ಮಗುವಿಗೆ ಹಣೆಯಮೇಲೆ ಒಂದೇ ಕಣ್ಣಿತ್ತಂತೆ ! ಮೂಗೂ ಇಲ್ಲ. ಉಳಿದ ಕಣ್ಣುಗಳೂ ಇಲ್ಲ. ಆದರೆ ಮಗುವು ಹುಟ್ಟಿದ ಐದೇ ನಿಮಿಷಗಳಲ್ಲಿ ಸತ್ತುಹೋಯಿತು.

ಸರಕಾರದಮೇಲೆ ದಾವೆ.

ಸತ್ಯಾಗ್ರಹವು ಜೋರಾಗಿ ನಡೆಯುತ್ತಿದ್ದಾಗ್ಗೆ ಪ್ರಭಾತ ಪೇರಿಯಲ್ಲಿ ಕಾರ್ಯಮಾಡುತ್ತಿದ್ದ ಹರಿಗೋವಿಂದ ಲಾಲಜಿ ಎಂಬವರನ್ನು ಪೋಲೀಸರು ಗಾಯಪಡಿಸಿದ್ದಕ್ಕಾಗಿ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿದ್ದರು. ಅಲ್ಲಿ ಹರಿಗೋವಿಂದರು ಮೃತರಾದರು. ತನ್ನ ಪತಿಯು ಸರಕಾರದ ಪೋಲೀಸರ ಹೊಡೆತದಿಂದ ತೀರಿಹೋದುದರಿಂದ ಒಂದು ಲಕ್ಷ ರೂಪಾಯಿ ನಷ್ಟದ್ರವ್ಯವನ್ನು ಕೊಡಬೇಕೆಂದು ಹರಿಗೋವಿಂದರ ಪತ್ನಿಯಾದ ನರ್ಮದಾಬಾಯಿಯವರು ಹೈಕೋರ್ಟಿನಲ್ಲಿ ಇಂಡಿಯಾ ಸೆಕ್ರೆಟರಿಗಳ ಮೇಲೆ ದಾವೆ ದಾಖಲು ಮಾಡಿದರು. ಹೈಕೋರ್ಟಿನಲ್ಲಿ ಮೊಕದ್ದಮೆಯ ವಿಚಾರಣೆಯಾಯಿತು. ಆಗ ಪೋಲೀಸ್ ಕಮಿಷನರರಾಗಿದ್ದ ಮಿ|| ಹೀಲಿಯವರು ಡಿಫೆನ್ಸ್ ಪರ ಸಾಕ್ಷಿ ಕೊಟ್ಟು ಮೊಕದ್ದಮೆಯಲ್ಲಿಯ ಆಪಾದನೆಯನ್ನು ನಿರಾಕರಿಸಿದರು. ವಿಚಾರಣೆಯು ನಡೆಯುತ್ತಿದೆ.

ಲಾರ್ಡ್ ಬಕ್ಸಟನ್ನರ ಮರಣ.

ಲಾರ್ಡ್ ಬಕ್ಸಟನ್ನರು ಬೋರ್ಡ್ ಆಫ್ ಟ್ರೇಡಿನ ಮಾಜೀ ಅಧ್ಯಕ್ಷರಾಗಿದ್ದರು. ೧೯೧೧ ರಲ್ಲಿ ಇಂಗ್ಲೆಂಡಿನ ಆದ್ಯಂತವೂ ನಡೆದ ರೈಲ್ವೆ ಮುಷ್ಕರವನ್ನು ಸಮಾಧಾನಕರವಾದ ರೀತಿಯಲ್ಲಿ ಪರಿಷ್ಕರಿಸಲೋಸುಗ ವಿಶೇಷಶ್ರಮಪಟ್ಟು ವಿಜಯಿಗಳಾದರು. ೧೯೦೫ ರಿಂದ ೧೯೧೦ ರ ವರೆಗೆ ಇಂಗ್ಲೇಂಡಿನ ಪೋಸ್ಟ್ ಮಾಸ್ಟರ್ ಜನರಲ್ಲರಾಗಿದ್ದರು. ಇಂಗ್ಲೆಂಡಿಗೆ ವೈರ್‌ಲೆಸ್ ಟೆಲಿಗ್ರಾಫಿನ ಪದ್ಧತಿಯನ್ನು ಜಾರಿಯಲ್ಲಿಟ್ಟು ಮನ್ನಣೆಗೆ ಪಾತ್ರರಾದರು. ೧೯೧೪ ರಲ್ಲಿ ದಕ್ಷಿಣ ಆಫ್ರಿಕಾದ ಗವರ್ನರ್ ಜನರಲ್ಲರಾಗಿ ನಿಯಮಿಸಲ್ಪಟ್ಟರು. ಅದೇ ವರ್ಷದಲ್ಲಿ ಲಾರ್ಡ್ ಬಕ್ಸ್‌ಟನ್ನರಿಗೆ "ಜಿ. ಸಿ. ಎಂ. ಜಿ." ಎಂಬ ಬಿರುದು ಬಂದಿತು. ೧೯೨೦ ರಲ್ಲಿ ಗವರ್ನರ್ ಪದವಿಯಿಂದ ನಿವೃತ್ತರಾಗಿ ಸ್ವದೇಶಕ್ಕೆ ಹಿಂತಿರುಗಿದರು. ಮಹಾ ಸಂಗ್ರಾಮದಲ್ಲಿ ತಮ್ಮ ಏಕಮಾತ್ರ ಪುತ್ರನು ಗುಂಡಿನೇಟಿಗೆ ತುತ್ತಾದುದು ಇವರ ಸ್ಫೂರ್ತಿ ಉತ್ಸಾಹಗಳನ್ನು ಕುಂದಿಸಿತು. ಜಗದೀಶನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಕಾಂಗ್ರೆಸ್ ಅಧಿವೇಶನ.

ಬೊಂಬಾಯಿ

ಬೊಂಬಾಯಿಯಲ್ಲಿ ಕಾಂಗ್ರೆಸ್ಸಿನ 48 ನೆಯ ಅಧಿವೇಶನವು ವೈಭವದಿಂದ ಸೇರಿರುತ್ತದೆ. ಅಧ್ಯಕ್ಷರಾದ ಬಾಬುರಾಜೇಂದ್ರ ಪ್ರಸಾದರವರಿಗೆ ಅಭೂತಪೂರ್ವವಾದ ಸ್ವಾಗತವು ಮಾಡಲ್ಪಟ್ಟಿತು. ಬೊಂಬಾಯಿಗೆ 35 ಮೈಲು ದೂರದಲ್ಲಿರುವ ಕಲ್ಯಾಣದಿಂದ ಅಧ್ಯಕ್ಷರು ಸ್ಪೆಷಲ್ ರೈಲಿನಲ್ಲಿ ಬಂದಿಳಿದರು. ದಾರಿಯುದ್ದಕ್ಕೂ ಪ್ರಚಂಡ ಜನ ಸಮೂಹವು ಜಯಜಯಕಾರಗಳನ್ನು ಮಾಡಿತು. ವಿಕ್ಟೋರಿಯಾ ಟರ್ಮಿನಸ್ ಸ್ಟೇಷನ್ನಿನಲ್ಲಿ ಅಪಾರ ಜನ ಸಂದಣಿಯು ಸೇರಿತ್ತು. ಶ್ರೀಮತಿ ನಾಯಿಡುರವರು, ಶ್ರೀ|| ಕೆ. ಎಫ್. ನರಿಮನ್ನರೇ ಮೊದಲಾದ ರಾಷ್ಟ್ರ ಮುಖಂಡರು ಅಧ್ಯಕ್ಷರನ್ನು ಎದುರುಗೊಂಡರು. ನಾಲ್ಕು ಕುದುರೆಗಳನ್ನು ಕಟ್ಟಿದ್ದ ರಥದಲ್ಲಿ ಅಧ್ಯಕ್ಷರನ್ನು ಕುಳ್ಳಿರಿಸಿದ್ದರು. ಮೆರವಣಿಗೆಯು ನಿಧಾನವಾಗಿ ಸಾಗಿತು. ಎರಡು ಕಡೆಗಳಲ್ಲಿಯೂ ಸ್ವಯಂಸೇವಕರು ಕುದುರೆಗಳ ಮೇಲೇರಿ ರಾಷ್ಟ್ರಧ್ವಜಗಳನ್ನು ಹಿಡಿದುಕೊಂಡು ಮುಂದೆ ಸಾಗುತ್ತಿದ್ದರು. ೫೦ ಮಂದಿ ದೇಶಸೇವಿಕೆಯರು ಕೇಸರಿ ಬಣ್ಣದ ಸೀರೆಗಳನ್ನುಟ್ಟು ರಾಷ್ಟ್ರಧ್ವಜಗಳನ್ನು ಹಿಡಿದು ಮುಂಭಾಗದಲ್ಲಿ ನಡೆದಿದ್ದರು. ಇವರ ನಾಯಿಕೆಯರು ಸೈಕಲ್ಲುಗಳ ಮೇಲೆ ಇವರ ಮುಂದೆ ಸವಾರಿ ಮಾಡುತ್ತಿದ್ದರು. ಸ್ವಯಂಸೇವಕರೂ ಪೋಲೀಸರೂ ಮೆರವಣಿಗೆಯುದ್ದಕ್ಕೂ ನಡೆಯುತ್ತ ಶಾಂತಿಪಾಲನೆಯನ್ನು ಮಾಡುತ್ತಿದ್ದರು. ದಾರಿಯುದ್ದಕ್ಕೂ ತಳಿರುತೋರಣಧ್ವಜಗಳಿಂದ ಅಲಂಕೃತವಾದ ಏಳು ಸ್ವಾಗತ ಮಂಟಪಗಳು ನಿರ್ಮಿಸಲ್ಪಟ್ಟಿದ್ದವು. ಸಾವಿರಾರು ಜನರು ದಾರಿಯುದ್ದಕ್ಕೂ ಕುಳಿತು ಮೆರವಣಿಗೆಯ ವೈಭವವನ್ನು ನೋಡಿ ಆನಂದಪಟ್ಟರು. ಕಾಂಗ್ರೆಸ್ ಮಂದಿರದಲ್ಲಿ ಹಾರವನ್ನು ಸ್ವೀಕರಿಸಿ ಅಧ್ಯಕ್ಷರು ಕಾಂಗ್ರೆಸ್ ನಗರಕ್ಕೆ ಪ್ರಯಾಣಮಾಡಿದರು.

ಸ್ವೀಕಾರ

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿರುವ ವೇ|| ವಿರಾಳಘಟ್ಟ ಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರ ಮಕ್ಕಳು ಚನ್ನಬಸವಪ್ಪಯ್ಯನವರಿಗೆ ಪುತ್ರರತ್ನವು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ಪಂಡಿತ ಶಂಕರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಹಳೆಅಗ್ರಹಾರದಲ್ಲಿರುವ ಚಿಲ್ರೆಅಂಗಡಿ ಮ|| ರಾ|| ಕೆಂಪಣ್ಣನವರು ಶ್ರೀಮದ್ರಂಭಾಪುರೀ ಜಗದ್ಗುರುಗಳನ್ನು ತಮ್ಮ ಬಂಗಲೆಗೆ ಬಿಜಮಾಡಿಸಿಕೊಂಡು ಪಾದಪೂಜೆಯನ್ನು ನಡೆಯಿಸಿದ ಸಂದರ್ಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ನಮಗೆ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಮಾಚೇನಹಳ್ಳಿಯಲ್ಲಿರುವ ಮ|| ರಾ|| ಹರಿಯಾಪುರದ ಮಲ್ಲಪ್ಪನವರ ಪುತ್ರಿಗೆ ಪ್ರಾಪ್ತವಾಗಿದ್ದ ಬಾಲಗ್ರಹಪೀಡೆಯು ಶ್ರೀ ಜಗದಾಚಾರ್ಯರ ಕೃಪಾಬಲದಿಂದ ದೂರವಾದ ಸಂತೋಷಕ್ಕಾಗಿ ಸಮರ್ಪಿಸಿದ 1. ರೂ. ಯು ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗಾ ಡಿ|| ಹಾರ್ನಹಳ್ಳಿಯಲ್ಲಿ ವಾಸವಾಗಿರುವ ವೇ|| ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳಿಗೆ ಜಗದಾಚಾರ್ಯರ ಆಶೀರ್ವಾದಬಲದಿಂದ ಪುತ್ರಿಕೋತ್ಸವವು ನೆರವೇರಿದ ಸಮಯದಲ್ಲಿ ನದರಿಯವರು 1 ರೂ. ಯನ್ನು ಕಳುಹಿಸಿರುತ್ತಾರೆ.

ನಿಜಾಮು ಇಲಾಖಾ ಚಿತಾಪುರ ಗ್ರಾಮದಲ್ಲಿ ನೆರವೇರಿದ ಗಣಪತಿ ಮಹೋತ್ಸವದಲ್ಲಿ ಸಮರ್ಪಿಸಿದ 1 ರೂ. ಯು ಶ್ರೀ ದಿಗ್ಗಾವಿ ಹಿರೇಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(3ನೆಯ ಪುಟದಿಂದ ಮುಂದುವರಿದುದು.)

ಕೆಲವು ವೆಚ್ಚಗಳು ಅನಿವಾರ್ಯವಾದ ಅವಶ್ಯಕತೆಗಳೆಂಬುದನ್ನೂ ನಾವು ಗಮನಿಸಬೇಕಾದುದೂ ಅಗತ್ಯ. ಮೊದಲು ಹಣವನ್ನು ವೆಚ್ಚಮಾಡಿದುದಲ್ಲದೆ ಪುರೋಭಿವೃದ್ಧಿ ಸಾಧನೆಯಲ್ಲಿ ಮುಂದುವರಿಯುವುದು ಸಾಧ್ಯವಲ್ಲವೆಂಬ ಅಂಶವನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು. ಪುರೋಭಿವೃದ್ಧಿ ಸಾಧನೆಗೆ ಈ ಬೆಲೆಯನ್ನು ಕೊಟ್ಟೇತೀರಬೇಕು. ಯಾವುದೊಂದು ಸರ್ಕಾರದವರೇ ಆಗಲಿ, ಅಥವಾ ವ್ಯಾಪಾರ ಮಂಡಲಿಯವರೇ ಆಗಲಿ ಈ ಬೆಲೆಯನ್ನು ಕೊಟ್ಟು ಅಭ್ಯುದಯ ಸಾಧನೆಮಾಡಬೇಕು. ಅವರು ವಿವೇಕ ವಿವೇಚನೆಗಳಿಂದ ಮಾತ್ರವೇ ಅಲ್ಲದೆ ಧೈರ್ಯದಿಂದಲೂ ದೀರ್ಘ ದರ್ಶಿತ್ವದಿಂದಲೂ ಅವಶ್ಯಕ ಕಂಡಂತೆ ಉದಾರವಾಗಿ ಹಣವನ್ನು ವೆಚ್ಚಮಾಡಿ ಅಭ್ಯುದಯ ಸಾಧನೆ ಮಾಡಬೇಕು. ಸರ್ಕಾರದವರು ಭದ್ರಾವತಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದನ್ನೂ, ಭದ್ರಾವತಿಯಲ್ಲಿ ಉಕ್ಕನ್ನು ತಯಾರಿಸುವುದನ್ನೂ ಕೈಕೊಳ್ಳುವಂತೆ ಅಪ್ಪಣೆಮಾಡಿರುವುದು, ಈ ಬಗೆಯ ಮನೋಧರ್ಮದಿಂದಲೇ. ಭದ್ರಾವತಿಗೆ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಸಂಬಂಧಪಟ್ಟ ಅಂಶಗಳನ್ನು ಈಗ ತಾನೇ ತಿಳಿಸಿದ್ದೇನೆ. ಉಕ್ಕನ್ನು ತಯಾರಿಸುವ ಕಾರ್ಯಕ್ರಮವನ್ನು ಕುರಿತು ಮುಂದೆ ಪ್ರಸ್ತಾಪಿಸುತ್ತೇನೆ.

ಯಂತ್ರಗಳೇ ಮುಂತಾದವು ಸವೆದು ಕಿಮ್ಮತ್ತಿನಲ್ಲಿ ಕಡಮೆಯಾಗುವುದರ ಸಂಬಂಧದಲ್ಲಿ ಭರ್ತಿ ಹಾಕಲು ಏರ್ಪಟ್ಟಿರುವ "ಡಿಪ್ರಿಸಿಯೇಷನ್ ಫಂಡ್" ಎಂಬ ನಿಧಿಗೆ 6,50,000 ರೂಪಾಯಿಗಳನ್ನು ಕೊಟ್ಟು, 1933-34 ನೆಯ ಸಾಲಿನಲ್ಲಿ ವಿದ್ಯುಚ್ಛಕ್ತಿಯ ಇಲಾಖೆಗೆ 35,76,015 ರೂಪಾಯಿಗಳ ನಿವ್ವಳ ಹುಟ್ಟುವಳಿಯು ಬಂದಿದೆ. ಅಲ್ಲಿಗೆ ಒಟ್ಟು ಬಂಡವಾಳದ ಮೇಲೆ ಶೇಕಡ 12.28 ರಂತೆ ನಿವ್ವಳ ಪ್ರತಿಫಲವು ಬಂದಂತಾಯಿತು.

ರೈಲ್ವೆ ಇಲಾಖೆ.

1932-33 ನೆಯ ಸಾಲಿನಲ್ಲಿ ನಮ್ಮ ಸಂಸ್ಥಾನದಲ್ಲಿದ್ದ ರೈಲು ಮಾರ್ಗಗಳ ಒಟ್ಟು ದೂರವು 722.29 ಮೈಲಿಗಳು. 1933-34 ರಲ್ಲಿ ಅದು 731.62 ಮೈಲಿಗಳಿಗೆ ಹೆಚ್ಚಿತು. ಕಳೆದ ಏಪ್ರಿಲ್ ತಿಂಗಳಲ್ಲಿ ಅರಸಾಳು-ಆನಂದಪುರದ ರೈಲುಮಾರ್ಗದಲ್ಲಿ ರೈಲುಗಳನ್ನು ಬಿಡಲು ಪ್ರಾರಂಭವಾದುದೇ ಈ ಅಧಿಕ್ಯಕ್ಕೆ ಕಾರಣ. ಸರ್ಕಾರದವರ ಆಡಳಿತದಲ್ಲಿದ್ದ ರೈಲುಮಾರ್ಗಗಳು 460.06 ಮೈಲಿಗಳು. ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೇ ಕಂಪೆನಿಯವರ ಆಡಳಿತದಲ್ಲಿದ್ದ ರೈಲುಮಾರ್ಗಗಳು 271.56 ಮೈಲಿಗಳು. ರೈಲ್ವೆಯ ಒಟ್ಟು ಹುಟ್ಟುವಳಿಯು, ಭದ್ರಾವತಿ ಕಬ್ಬಿಣದ ಕಾರ್ಖಾನೆಯವರು ಕೊಟ್ಟ ಬಾಕಿ ಮೊಬಲಗುಗಳೂ ಸೇರಿ 70.82 ಲಕ್ಷ ರೂಪಾಯಿಗಳು. 1932-33 ನೆಯ ಸಾಲಿನಲ್ಲಿ ಇದೇ ಹುಟ್ಟುವಳಿಯು 72.61 ಲಕ್ಷ ರೂಪಾಯಿಗಳು. ರೈಲ್ವೆಗಳ ಹುಟ್ಟುವಳಿಯಲ್ಲಿ ಹೀಗೆ 1.79 ಲಕ್ಷ ರೂಪಾಯಿಗಳು ಕಡಮೆ ಬಿದ್ದವು. ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೇ ಕಂಪೆನಿಯ ಜನಗಳ ಸಂಚಾರವೂ, ಸಾಮಾನುಗಳ ರವಾನೆ ಸಾಗಿಸುವುದೂ ಕಡಮೆಯಾದ ಕಾರಣ, ಹುಟ್ಟುವಳಿಯಲ್ಲಿ 4.74 ಲಕ್ಷ ರೂಪಾಯಿಗಳು ಕಡಮೆ ಬಿದ್ದುದರಿಂದ ಹೀಗಾಯಿತು. ಅದರಲ್ಲಿ 4.74 ಲಕ್ಷ ರೂಪಾಯಿಗಳು ಕಡಮೆ ಬಿದ್ದುದಕ್ಕೆ ಪ್ರತಿಯಾಗಿ ಸರ್ಕಾರದ ಆಡಳಿತದಲ್ಲಿದ್ದ ರೈಲುಗಳ ಹುಟ್ಟುವಳಿಯು ಸ್ವಲ್ಪ ಹೆಚ್ಚಿದ ಕಾರಣ, ಆ ನಷ್ಟಕ್ಕೆ ಸ್ವಲ್ಪಮಟ್ಟಿಗೆ ಭರ್ತಿಯಾದುದು ಕಳೆದು, ಒಟ್ಟಿನಲ್ಲಿ 1.79 ಲಕ್ಷ ರೂಪಾಯಿಗಳು ಮಾತ್ರವೇ ಕಡಮೆಯಾಗಲು ಕಾರಣವಾಯಿತು. ಸರ್ಕಾರದ ಆಡಳಿತದಲ್ಲಿದ್ದ ರೈಲುಗಳ ಹುಟ್ಟುವಳಿಯು ಹೆಚ್ಚಿದುದು ಒಂದು ಲಕ್ಷ ರೂಪಾಯಿಗಳು ಮಾತ್ರ. ಉಳಿದ ಅಧಿಕ್ಯಕ್ಕೆ ಭದ್ರಾವತಿ ಕಾರ್ಖಾನೆಯಿಂದ ಬರಬೇಕಾಗಿದ್ದ ಬಾಕಿಗಳು ಬಂದುದೇ ಕಾರಣ. ರೈಲ್ವೆಗಳಿಗಾಗಿ ಆದ ಒಟ್ಟು ವೆಚ್ಚವು 1932-33 ನೆಯ ಸಾಲಿನಲ್ಲಿ 57.85 ಲಕ್ಷಗಳಾಗಿದ್ದುದು, 1933-34 ನೆಯ ಸಾಲಿನಲ್ಲಿ 56.78 ಲಕ್ಷ ರೂಪಾಯಿಗಳಿಗೆ ತಗ್ಗಿತು. 'ಡಿಪ್ರಿಸಿಯೇಷನ್ ಫಂಡ್' ನಿಧಿಗೆ ಕೊಡಬೇಕಾದ ಮೊಬಲಗನ್ನೂ, ಕಂಪೆನಿಗಳಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಕೊಡಬೇಕಾಗಿದ್ದ ಲಾಭದ ಮೊಬಲಗನ್ನೂ ಮತ್ತು ಖಾತರಿ ಮಾಡಿದ್ದ ಬಡ್ಡಿ ಮೊಬಲಗನ್ನೂ ಕೊಟ್ಟುದೂ ಸಹ, ಈ ವೆಚ್ಚದಲ್ಲಿ ಸೇರಿದೆ. ವೆಚ್ಚಗಳೆಲ್ಲ ಕಳೆದು ಸರ್ಕಾರದವರಿಗೆ 14.04 ಲಕ್ಷ ರೂಪಾಯಿಗಳ ನಿವ್ವಳ ಹುಟ್ಟುವಳಿಯು ಬಂದಿತು; 1932-33 ನೆಯ ಸಾಲಿನಲ್ಲಿ ಇದೇ ಬಗೆಯ ನಿವ್ವಳ ಹುಟ್ಟುವಳಿಯು 14.76 ಲಕ್ಷ ರೂಪಾಯಿಗಳಾಗಿದ್ದಿತು. ಎಂದರೆ ಬಂಡವಾಳದ ಮೇಲೆ ಶೇಕಡ 2.33 ರೂಪಾಯಿಗಳ ಪ್ರತಿಫಲವು ಬಂದಂತಾಯಿತು.

ಶಿವಮೊಗ್ಗೆಯಿಂದ ಆನಂದಪುರದವರೆಗೆ ಈಗಿರುವ ರೈಲುಮಾರ್ಗವನ್ನು ಸಾಗರದವರೆಗೂ ಹಾಕಿಸುವುದಕ್ಕೆ ಸಂಬಂಧಪಟ್ಟ ಸಲಹೆಗಳು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ. ಮೈಸೂರಿನ ರೈಲ್ವೆ ವರ್ಕ್‌ಷಾಪನ್ನು ಬದಾವಣೆಗೊಳಿಸುವ ಕೆಲಸವು ಕಳೆದ ವರುಷ ಪ್ರಾರಂಭವಾಯಿತು. ಅದು ಮುಂದುವರಿಯುತ್ತಿದೆ. ಅಕ್ಕಪಕ್ಕದ ಗ್ರಾಮಗಳಿಂದ ಜನಗಳು ಬಂದು ಪ್ರಯಾಣಮಾಡುವುದಕ್ಕೆ ಅವಕಾಶವಿರುವಂತೆ ಹಾಲ್ಟ್ ರೈಲುಗಳನ್ನು ನಿಲ್ಲಿಸತಕ್ಕ ಸ್ಥಳಗಳ ಸಂಖ್ಯೆಯನ್ನು ಕ್ರಮಕ್ರಮವಾಗಿ ಹೆಚ್ಚಿಸುತ್ತಿದೆ.

ರೈಲ್ವೆಗೆ ಸಂಬಂಧಪಟ್ಟ ಸಾಲದ ವಿಚಾರ.

ಸರ್ಕಾರದವರಿಗೆ 50 ಲಕ್ಷ ರೂಪಾಯಿಗಳ ನಗದು ಸಾಲವು ಬೇಕಾಗಿದೆಯೆಂದೂ, ಇಷ್ಟಪಟ್ಟವರು ಹಣವನ್ನು ಕೊಟ್ಟು ಸಾಲಪತ್ರಗಳನ್ನು ಪಡೆದುಕೊಳ್ಳಬಹುದೆಂದೂ, ಈಚೆಗೆ ಇಸ್ತಿಹಾರ್‌ಮೆಯು ಪ್ರಕಟವಾಗಿರುವುದು ನಮ್ಮೆಲ್ಲರಿಗೂ ತಿಳಿದೇ ಇದೆ. ಈ ಸಾಲದ ಮೊಬಲಗಿನ ಮೇಲೆ ವರುಷಕ್ಕೆ ಶೇಕಡ $3\frac{1}{2}$ ರೂಪಾಯಿಗಳಂತೆ ಬಡ್ಡಿಯು ಸಲ್ಲುವಂತೆ ಗೊತ್ತಾಗಿದೆ. ಅಲ್ಲದೆ ಸರ್ಕಾರದವರು ಇಷ್ಟಪಟ್ಟಲ್ಲಿ ಈ ಸಾಲವನ್ನು 17 ವರುಷಗಳ ತರುವಾಯ ತೀರಿಸಬಹುದೆಂದೂ, ಹೇಗೇ ಆದರೂ 24 ವರುಷಗಳಾದ ಕೊನೆಗೆ ಅದನ್ನು ತೀರಿಸಲೇಬೇಕೆಂದೂ, ತೀರ್ಮಾನವಾಗಿದೆ. ಹೀಗೆ ನಗದುಸಾಲವನ್ನು ತೆಗೆದುಕೊಳ್ಳುವ ಏರ್ಪಾಡನ್ನು ಮಾಡಿರುವುದೇಕೆಂಬುದನ್ನು ಈಗ ಸಂಕ್ಷೇಪವಾಗಿ ವಿವರಿಸುವೆನು.

ಬೆಂಗಳೂರಿನಿಂದ ಹರಿಹರದವರೆಗೂ, ಬೆಂಗಳೂರಿನಿಂದ ಹಿಂದೂಪುರದವರೆಗೂ ಇರುವ ರೈಲ್ವೇ ಮಾರ್ಗದ ಆಡಳಿತವನ್ನು ಈಗ "ಮದರಾಸು ಮತ್ತು ಸದರ್ನ್ ಮರಾಟಾ" ರೈಲ್ವೇ ಕಂಪೆನಿಯವರು ನಿರ್ವಹಿಸುತ್ತಿದ್ದಾರಷ್ಟೆ. ಈ ವಿಚಾರದಲ್ಲಿ ಅವರೊಡನೆ ನಡೆದಿರುವ ಕರಾರು ಒಪ್ಪಂದದ ಅವಧಿಯು 1937 ನೆಯ ಇಸವಿ ಡಿಸೆಂಬರು 31 ನೆಯ ತಾರೀಖಿನ ದಿನ ಮುಗಿಯುತ್ತದೆ. ಆ ಬಳಿಕ ಅವರು ಆ ರೈಲ್ವೇ ಆಡಳಿತವನ್ನು ಮೈಸೂರು ಸಂಸ್ಥಾನಕ್ಕೇ ಹಿಂದಕ್ಕೆ ಬಿಟ್ಟುಕೊಡಬೇಕಾಗುತ್ತದೆ. ನಾವು ಹಾರೈಸುತ್ತಿರುವಂತೆ ಇನ್ನೂ ಮುಂಚಿತವಾಗಿಯೇ ಆ ರೈಲ್ವೇ ಆಡಳಿತವು ನಮಗೆ ಬರಬಹುದು. ಹಿಂದೆ ಈ ರೈಲು ಮಾರ್ಗಗಳನ್ನು ಏರ್ಪಡಿಸಿದಾಗ್ಗೆ "ಸದರ್ನ್ ಮರಾಟಾ ರೈಲ್ವೇ ಕಂಪೆನಿ" ಯವರು 1886 ರಲ್ಲಿ 12,00,000 ಪೌಂಡುಗಳ ಡಿಬೆಂಚರು ಸಾಲವನ್ನು ಮಾಡಿದ್ದರು; ಅದಕ್ಕೆ ಪೌಂಡುಗಳ ರೂಪದಲ್ಲಿ ಹಣವನ್ನು ಸಲ್ಲಿಸಿ ಡಿಬೆಂಚರು ಸಾಲಪತ್ರಗಳನ್ನು ಕೊಂಡುಕೊಳ್ಳುವಂತೆ ಗೊತ್ತಾಗಿದ್ದಿತು; ಅಲ್ಲದೆ ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರ ಖಾತರಿಯ ಮೇಲೆ ಆ ಡಿಬೆಂಚರು ಸಾಲದ ಏರ್ಪಾಡು ನಡೆದಿದ್ದಿತು. ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರು ಇಷ್ಟಪಟ್ಟಲ್ಲಿ 1936ನೆಯ ಇಸವಿ ಏಪ್ರಿಲ್ 1 ನೆಯ ತಾರೀಖಿನ ತರುವಾಯ ಆ ಸಾಲವನ್ನು ತೀರಿಸಬಹುದೆಂದು ಹಿಂದೆಯೇ ಗೊತ್ತಾಗಿದೆ. ಅದರೆ ಹಾಗೆ ಮಾಡಬೇಕಾದರೆ ಒಂದು ವರುಷ ಮುಂಚಿತವಾಗಿಯೇ ಸಾಲವನ್ನು ತೀರಿಸುವ ಅಂಶವನ್ನು ತಿಳಿಸಬೇಕೆಂದೂ ಗೊತ್ತಾಗಿದೆ. ಈ ಸಾಲವನ್ನು 1936 ನೆಯ ಇಸವಿ ಏಪ್ರಿಲ್ 1 ನೆಯ ತಾರೀಖಿನ ದಿನವೇ ತೀರಿಸಿಬಿಡಬೇಕೆಂದು ನಾವು ತೀರ್ಮಾನಿಸಿದ್ದೇವೆ. ಅಲ್ಲದೆ ಆ ವಿಚಾರವನ್ನು ಇಂಡಿಯಾ ಸರ್ಕಾರದವರಿಗೂ ತಿಳಿಸಿದ್ದೇವೆ.

ಈ ಸಾಲಕ್ಕಾಗಿ ತೀರ್ವೆ ನಿಧಿಯೊಂದನ್ನು ಏರ್ಪಡಿಸಲಾಗಿದೆ. ಅದರಲ್ಲಿ ಈಗ 9,00,000 ಪೌಂಡುಗಳು ಶೇಖರವಾಗಿವೆ. ಸಾಲವನ್ನು ತೀರಿಸುವುದಕ್ಕೆ ಬೇಕಾದ ಉಳಿದ ಹಣವನ್ನು ಒದಗಿಸಿಕೊಳ್ಳುವುದಕ್ಕಾಗಿ ಈಗಿನ ಹೊಸ ಸಾಲವನ್ನು ಏರ್ಪಡಿಸಲಾಗಿದೆ. ಈಗಿನ ಬಡ್ಡಿ ದರಗಳನ್ನು ನೋಡಿದರೆ, ಸುಲಭ ಬಡ್ಡಿಯ ಸಾಲವನ್ನೆತ್ತಲು ಇದು ಅತ್ಯಂತ ಅನುಕೂಲವಾದ ಕಾಲವೆಂದು ತೋರುವುದು. ಇದು ಎಲ್ಲರಿಗೂ ತಿಳಿದೇ ಇರುವ ಅಂಶ. ಶೇಕಡ ನಾಲ್ಕರಂತೆ ಬಡ್ಡಿಯನ್ನು ಕೊಡುತ್ತಿರುವ ಸಾಲವನ್ನು ತೀರಿಸುವುದಕ್ಕಾಗಿ ಶೇಕಡ $3\frac{1}{2}$ ಯಂತೆ ಬಡ್ಡಿಯನ್ನು ಕೊಡಬೇಕಾಗುವ ಸಾಲವನ್ನು ತೆಗೆಯುವುದರಿಂದ ಸರ್ಕಾರಕ್ಕೆ ಲಾಭ ಉಂಟೆಂಬುದನ್ನು ನಾವೆಲ್ಲರೂ ಒಪ್ಪಿಯೇ ಒಪ್ಪುವಿರಿ.

ನಾವು ಏರ್ಪಡಿಸಿದ ಈ ಹೊಸ ಸಾಲಕ್ಕೆ ನಾವು ಕೋರಿದಷ್ಟಕ್ಕಿಂತಲೂ ಬಹಳ ಹಣವನ್ನು ಕೊಡುವುದಾಗಿ ದರಖಾಸ್ತುಗಳು ಬಂದು, ನಮ್ಮ ಪ್ರಯತ್ನವು ಅತ್ಯಂತ ಸಫಲವಾಗಿ ನೆರವೇರಿದೆ. ನಾವು ಕೇಳಿದ್ದುದು 50 ಲಕ್ಷ ರೂಪಾಯಿಗಳಾದರೆ, ಸಾಲದ ದರಖಾಸ್ತು ಕಳುಹಿಸಲು ಅವಕಾಶವಿದ್ದ ಮೊಟ್ಟಮೊದಲನೆಯ ದಿವಸವೇ 150 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಮೊಬಲಗುಗಳನ್ನು ಹಾಕಲು ದರಖಾಸ್ತುಗಳು ಬಂದುವು. ಆದಕಾರಣ, ಆ ತರುವಾಯ ಆ ದಿನ ಹೊಸ ದರಖಾಸ್ತುಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಲಾಯಿತು. ಸ್ವೀಕರಿಸಿದ ದರಖಾಸ್ತುಗಳ ವಿಚಾರದಲ್ಲಿ ಕೂಡ, ಅವುಗಳಲ್ಲಿ ಕೇಳಿರುವಷ್ಟು ಮೊಬಲಗುಗಳಿಗೂ ಸಾಲಪತ್ರಗಳನ್ನು ಸಾದರುಮಾಡದೆ ಕೆಲಕೆಲವು ಭಾಗಗಳ ಮೊತ್ತಗಳಿಗೆ ಮಾತ್ರ ದರಖಾಸ್ತುದಾರರಿಗೆ ಸಾಲಪತ್ರಗಳನ್ನು ಕೊಡುವ ಏರ್ಪಾಡು ನಡೆಯುತ್ತಿದೆ. ಅಂತು, ಹೀಗೆ ಹೆಚ್ಚು ಮೊತ್ತಕ್ಕೆ ಸಾಲ ಪತ್ರಗಳಿಗೆ ದರಖಾಸ್ತುಗಳು ಬಂದಿರುವುದನ್ನು ನೋಡಿದರೆ ಹಣಕಾಸಿನ ವಿಚಾರವಾಗಿ ಮೈಸೂರು ಸಂಸ್ಥಾನದ ವಿಷಯದಲ್ಲಿ ಮೈಸೂರು ದೇಶೀಯರಿಗೂ ಹೊರಗಿನ ಪ್ರಾಂತ್ಯಗಳ ಜನರಿಗೂ ಎಷ್ಟು ಹೆಚ್ಚಿನ ನಂಬಿಕೆಯೂ ನಂಬಿಕೆಯೂ ಇವೆಯೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಕಬ್ಬಿಣದ ಕಾರ್ಖಾನೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ತಯಾರಾಗುವ ನಾನಾವಸ್ತುಗಳಿಗೂ ಗಿರಾಕಿಯು ಕಡಿಮೆಯಾಗಿದ್ದ ಕಾರಣ, ಕಾರ್ಖಾನೆಯು ಪ್ರತಿಯೊಂದು ಶಾಖೆಯಲ್ಲಿ ತಯಾರಾಗಬಹುದಾದ ಪ್ರಮಾಣಕ್ಕಿಂತಲೂ ಕಡಮೆ ಪ್ರಮಾಣದಲ್ಲಿ ನಾನಾ ವಸ್ತುಗಳನ್ನು ಪ್ರಸಕ್ತ ವರ್ಷದಲ್ಲಿ ತಯಾರಿಸಬೇಕಾಯಿತು. ಧಾರಣೆಗಳು ಸ್ವಲ್ಪವೂ ಹೆಚ್ಚಲಿಲ್ಲ. ವ್ಯಾಪಾರದ ಮುಗ್ಗಟ್ಟಿನ ಸಾಮಾನ್ಯಸ್ಥಿತಿಯು ಏಕರೀತಿಯಲ್ಲಿದ್ದುದೇ ಅದಕ್ಕೆ ಮುಖ್ಯಕಾರಣ. ಗಿರಾಕಿಯಿದ್ದುದೂ ಬಹಳವಾಗಿ ಇಂಡಿಯಾ ದೇಶದಲ್ಲಿಯೇ. ಕಾರ್ಖಾನೆಯ ಕೊಳಾಯಿಗಳೊಡನೆ ಹೊರದೇಶಗಳಿಂದ ಬಂದ ಕೊಳಾಯಿಗಳ ಸ್ಪರ್ಧೆಯು ಇದ್ದುದರಿಂದ, ಕೊಳಾಯಿಗಳ ಧಾರಣೆಯು ಕಡಮೆಯಾಗಿಯೇ ಇರಲು ಕಾರಣವಾಯಿತು. ಕಬ್ಬಿಣದ ಜೊತೆಗೆ ದೊರೆಯುವ ಇತರ ಉಪವಸ್ತುಗಳ ವಿಚಾರ. 1933-34 ನೆಯ ಸಾಲಿನಲ್ಲಿ ಕಾರ್ಖಾನೆಯವರು ತಯಾರಿಸಿದ ಉಪವಸ್ತುಗಳೆಲ್ಲ ನಿಶ್ಶೇಷವಾಗಿ ಮಾರಾಟವಾದುವು. ಅಲ್ಲದೆ 1932-33 ನೆಯ ಸಾಲಿನಲ್ಲಿ ದೊರೆತಿದ್ದ ಧಾರಣೆಗಿಂತಲೂ ಸ್ವಲ್ಪ ಹೆಚ್ಚಿನ ಧಾರಣೆಗಳೇ ಅವಕ್ಕೆ ದೊರೆತುವು. ಕಾಡುಗಳಲ್ಲಿ ಇದ್ದಿಲಿಗಾಗಿ ಏರ್ಪಡಿಸಿದ ಗುಣಿಗಳಲ್ಲಿ ಮರವನ್ನು ಸುಟ್ಟು ಇದ್ದಲನ್ನು ತಯಾರಿಸುವ ಕೆಲಸವು ಕ್ರಮಕ್ರಮವಾಗಿ ಉತ್ತಮಗೊಳ್ಳುತ್ತಿದೆ. ಅಲ್ಲದೆ ಇದ್ದಲನ್ನು ತಯಾರಿಸುವುದಕ್ಕೆ ಮುಟ್ಟುವ ವೆಚ್ಚವು ಕ್ರಮಕ್ರಮವಾಗಿ ಕಡಮೆಯಾಗುತ್ತಿದೆ.

ಇಂಡಿಯಾ ಸರ್ಕಾರದವರು ಕಬ್ಬಿಣದ ಮತ್ತು ಉಕ್ಕಿನ ಕೈಗಾರಿಕೆಗೆ 1941 ನೆಯ ಇಸವಿ ಮಾರ್ಚಿ ತಿಂಗಳಿನ ಕೊನೆಯವರೆಗೆ ಏಳುವರುಷಗಳಕಾಲ ರಕ್ಷಣೆಯನ್ನು ಕೊಡುವ ಉದ್ದೇಶದಿಂದ ಕಾನೂನೊಂದನ್ನು (1934 ನೆಯ ಇಸವಿಯ ಕಬ್ಬಿಣದ ಮತ್ತು ಉಕ್ಕಿನ ಸುಂಕಗಳ ಆಕ್ಟು) ಏರ್ಪಡಿಸಿ ಮಂಜೂರು ಮಾಡಿದರು. ಆದಕಾರಣ, ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಉಕ್ಕನ್ನು ತಯಾರಿಸುವ ಯಂತ್ರಗಳನ್ನಿಟ್ಟು ಕೆಲಸ ನಡೆಯಿಸಬಹುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಅವಶ್ಯಕವಾದ ಯಂತ್ರಸಾಮಗ್ರಿಗಳು ಕ್ರಯಕ್ಕೆ ದೊರೆಯುವುದಕ್ಕೆ ದೇಶಗಳಿಗೆ ಅವುಗಳನ್ನು ನಮಗೆ ಕಳುಹಿಸುವಂತೆ ಬರೆಯಲಾಗಿದೆ. ಮುಂದಿನ ಅಕ್ಟೋಬರು ತಿಂಗಳಿನಲ್ಲಿ ಆ ಯಂತ್ರಗಳು ಭದ್ರಾವತಿಯಲ್ಲಿ ಸ್ಥಾಪಿತವಾಗಿ ಕೆಲಸ ಮಾಡುವ ಸ್ಥಿತಿಯಲ್ಲಿರುವುದಾಗಿ ನಿರೀಕ್ಷಿಸಿದೆ. ಶಿವನಸಮುದ್ರದಿಂದ ವಿದ್ಯುಚ್ಛಕ್ತಿಯನ್ನೊದಗಿಸಲಾಗುತ್ತದೆ. ಭದ್ರಾವತಿಯಲ್ಲಿಯೇ ವಿದ್ಯುಚ್ಛಕ್ತಿಯನ್ನು ತಯಾರಿಸಿದ್ದರೆ ಅಗ್ಗ ಆ ಸಂಬಂಧದಲ್ಲಿ ಅದಿಯ ಯಂತ್ರಕ್ಕಾಗಿ ಆಗುತ್ತಿದ್ದ ಬಹಳವಾದ ಸೌದೆಯ ವೆಚ್ಚವು ಅದರಿಂದ ಮಿಗುವುದಲ್ಲದೆ ವಿಶೇಷವಿಧದ ಅಥವಾ ಉತ್ತಮಗುಣದ ಬಗೆಬಗೆಯ ಉಕ್ಕುಗಳನ್ನು ತಯಾರಿಸಲೂ ಸಹ ಅದರಿಂದ ಅನುಕೂಲವಾಗುತ್ತದೆ. ವಾರ್ಷಿಕ ವೆಚ್ಚವನ್ನು ಕಡಮೆ ಮಾಡುವ ಉದ್ದೇಶದಿಂದ ನಡೆಯಿಸಿದ ಸಿಬ್ಬಂದಿಯ ಪುನರ್ವ್ಯವಸ್ಥೆಯ ಫಲಿತಾಂಶವಾಗಿ ವರುಷಕ್ಕೆ 50,000 ರೂಪಾಯಿಗಳ ಉಳಿತಾಯವು ಕಂಡು ಬಂದಿದೆ. ಕೂಲಿಯವರಿಗೆ ಕೊಡುತ್ತಿರುವ ಹಣದ ಸಂಬಂಧದಲ್ಲಿಯೂ ವೆಚ್ಚವನ್ನು ತಗ್ಗಿಸುವ ಏರ್ಪಾಡುಗಳು ನಡೆಯುತ್ತಿವೆ.

ರೇಷ್ಮೆ ಕೈಗಾರಿಕೆ.

ಹೊರದೇಶಗಳಿಂದ ಬಹಳ ಅಗ್ಗದ ಬೆಲೆಗೆ ರೇಷ್ಮೆಯು ಇಂಡಿಯಾ ದೇಶಕ್ಕೆ ಬಂದು ಬೀಳುತ್ತಿದೆ. ಈ ಸ್ಪರ್ಧೆಯಿರುವ ಕಾರಣದಿಂದ ಮೈಸೂರು ಸಂಸ್ಥಾನದ ರೇಷ್ಮೆ ಕೈಗಾರಿಕೆಯು ನರಳುತ್ತಲು ತುಂಬ ಕಷ್ಟವಾಗಿದೆ. ಉಪ್ಪುನೇರಳೆ ವ್ಯವಸಾಯ ಪ್ರದೇಶದ ವಿಸ್ತೀರ್ಣವು 53,000 ಎಕರೆಗಳಿದ್ದುದು ಕಳೆದ ಏಳುವರುಷಗಳ ಅವಧಿಯಲ್ಲಿ 33,000 ಎಕರೆಗಳಿಗೆ ಇಳಿದುಹೋಗಿದೆ. ಟ್ಯಾರಿಫ್ ಬೋರ್ಡಿನವರ ಸಲಹೆಯಂತೆ ಇಂಡಿಯಾ ಸರ್ಕಾರದವರು ನೆಯ್ಗೆ ಕೈಗಾರಿಕೆ ರಕ್ಷಣೆಗಾಗಿ ಈಚೆಗೆ ಮಂಜೂರು ಮಾಡಿದ (1934 ನೆಯ ಇಸವಿಯ ಆಕ್ಟಾದ) ಆಮದು ಸುಂಕಗಳ ಆಕ್ಟಿನಿಂದ ಇದುವರೆಗೂ ಏನೇನೂ ಫಲಿತಾಂಶವೇ ಆಗಿಲ್ಲವೆಂದು ಸಲ್ಲುವುದು. ಒಂದುವೇಳೆ ಪ್ರಯೋಜನವಾಗಿದ್ದರೂ ಅದು ತೀರ ಸ್ವಲ್ಪ. ಇಂಡಿಯಾ ಸರ್ಕಾರದವರು ಹೊರದೇಶಗಳಿಂದ ಆಮದಾಗುವ ರೇಷ್ಮೆಯ ಮೇಲೆ ಹೊಸದಾಗಿ ಸುಂಕವನ್ನು ವಿಧಿಸಿದ್ದೂ ಕೂಡ 1934 ನೆಯ ಇಸವಿ ಆಗಸ್ಟು ತಿಂಗಳು 31 ನೆಯ ತಾರೀಖಿಗೆ ಹಿಂದಿನ ಐದು ತಿಂಗಳುಗಳ ಅವಧಿಯಲ್ಲಿ ಆಮದಾಗಿರುವ ರೇಷ್ಮೆ ಪರಿಮಾಣವು ಕಳೆದ ವರುಷದ ಆಮದಿನ ಪರಿಮಾಣಕ್ಕಿಂತಲೂ ಹೆಚ್ಚಾಗಿದೆ. ಅದೇ ಅವಧಿಯಲ್ಲಿ ರೇಷ್ಮೆದಾರ ಮತ್ತು ರೇಷ್ಮೆ ಸರಕುಗಳ ಆಮದು ಕೂಡ 110 ಲಕ್ಷ ರೂಪಾಯಿಗಳಿಂದ 133.7 ಲಕ್ಷ ರೂಪಾಯಿಗಳಿಗೆ ಏರಿದೆ. ಎಂದರೆ, 23 ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ. ಬೇರೆ ರೇಷ್ಮೆಯಿಂದ ತಯಾರಾಗಿ ಬರುವ ನೂಲಿನ (ಸ್ಪನ್ ಸಿಲ್ಕ್) ಮೇಲೆ ರಕ್ಷಣೆಯ ಸುಂಕವೇನೂ ವಿಧಾಯಕವಾಗಿಲ್ಲ. ಈ ಕಾರಣದಿಂದ, ಆ ಬಗೆಯ ರೇಷ್ಮೆಯ ಆಮದು ಅದೇ ಐದು ತಿಂಗಳ ಅವಧಿಯಲ್ಲಿ ಶೇಕಡ 75 ರಷ್ಟು ಹೆಚ್ಚಿದೆ. ಅದು 16.7 ಲಕ್ಷ ರೂಪಾಯಿಗಳಷ್ಟಿದ್ದುದು 28.9 ಲಕ್ಷ ರೂಪಾಯಿಗಳವರೆಗೂ ಏರಿದೆ. ಹೀಗೆ ಆಮದುಗಳೂ ಹೆಚ್ಚಾಗಿವೆ. ಅಲ್ಲದೆ ಬಹಳ ಅಗ್ಗದ ಬೆಲೆಗೂ ಈ ಆಮದುಗಳು ನಡೆಯುತ್ತಿವೆ. ವ್ಯಾಪಾರದ ಮುಗ್ಗಟ್ಟಿನಿಂದ ರೇಷ್ಮೆಗೆ ಗಿರಾಕಿಗಳೇ ಇಳಿದುಹೋಗಿರುವಲ್ಲಿ, ಇದ್ದ ಸ್ವಲ್ಪ ಗಿರಾಕಿಗಳು ನಮ್ಮ ಸಂಸ್ಥಾನದ ರೇಷ್ಮೆಯನ್ನು ಮಾತ್ರವೇ ಕೊಳ್ಳದಂತೆ ಸ್ಪರ್ಧೆಯು ಇದೆ. ಇದರ ಫಲಿತಾಂಶವಾಗಿ ಮೈಸೂರು ಸಂಸ್ಥಾನದ ರೇಷ್ಮೆ ಕೈಗಾರಿಕೆಯು ಬಹಳ ಹೀನಸ್ಥಿತಿಗೆ ಬಂದಿದೆ.

ರೇಷ್ಮೆವ್ಯವಸಾಯದ ಇಲಾಖೆಯವರು ಕಳೆದ ಏಳುವರ್ಷಗಳ ಅವಧಿಯಲ್ಲಿ ರೋಗರಹಿತವಾದ ರೇಷ್ಮೆ "ಬಿತ್ತನೆ" ಗಳನ್ನು (ಎಂದರೆ, ರೋಗರಹಿತವಾದ ಮೊಟ್ಟೆಗಳನ್ನು) ಸರಬರಾಯಿ ಮಾಡುವ ಪರಿಮಾಣವನ್ನು 5 ಲಕ್ಷಗಳಿಂದ 38 ಲಕ್ಷಗಳಿಗೆ ಹೆಚ್ಚಿಸಿದ್ದಾರೆ. ಹೀಗೆಯೇ ರೋಗರಹಿತವಾದ ಮಿಶ್ರಜಾತಿಗಳ ಬಿತ್ತನೆಗಳ ಸರಬರಾಯಿ ಪ್ರಮಾಣವನ್ನೂ ಆ ಅವಧಿಯಲ್ಲಿ ಇಲಾಖೆಯವರು $1\frac{1}{3}$ ಲಕ್ಷಗಳಿಂದ 12 ಲಕ್ಷಗಳಿಗೆ ಹೆಚ್ಚಿಸಿದ್ದಾರೆ. ಮೈಸೂರು ಸಂಸ್ಥಾನದ ರೇಷ್ಮೆಕೈಗಾರಿಕೆಯು ಮುಳುಗಿಹೋಗದಂತೆ ಮಾಡಲು ಇನ್ನೂ ಬಹಳ ಕೆಲಸ ನಡೆಯಬೇಕಾಗಿದೆ. ಈ ಕಷ್ಟಕಾಲದಲ್ಲಿ ಸಹಾಯಮಾಡುವ ಉದ್ದೇಶದಿಂದ ಸರ್ಕಾರದ ಕೋಠಿಗಳಿಂದ ಮಾರುವ ರೇಷ್ಮೆ "ಬಿತ್ತನೆ" ಗಳ ಬೆಲೆಯನ್ನು ಮಿಶ್ರಜಾತಿಯವುಗಳಿಗೆ ಪ್ರತಿ ನೂರಕ್ಕೆ ರೂ. 1-8-0 ಗಳಿಂದ ಒಂದು ರೂಪಾಯಿಗೂ ಮತ್ತು ಮೈಸೂರು ಸಂಸ್ಥಾನದ "ಬಿತ್ತನೆ" ಗಳಿಗೆ ಪ್ರತಿ ನೂರಕ್ಕೆ ಒಂದು ರೂಪಾಯಿಯಿಂದ ಎಂಟಾಣೆಗಳಿಗೂ ತಗ್ಗಿಸಲಾಗಿದೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನಲ್ಲಿಯೂ, ರೇಷ್ಮೆ ವ್ಯವಸಾಯ ನಡೆಯುತ್ತಿರುವ ಸ್ಥಳಗಳನ್ನು ನಾನು ಮೊನ್ನೆ ಮೊನ್ನೆ ಪರೀಕ್ಷಿಸಿ ಬಂದಿದ್ದೇನೆ. ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವ ವಿಚಾರದಲ್ಲಿ, ಇನ್ನೂ ಚೆನ್ನಾಗಿ ಮತ್ತಷ್ಟು ತ್ವರೆಯಿಂದ ಕೆಲಸಗಳು ನಡೆಯಬೇಕಾದುದು ಅವಶ್ಯಕವೆಂದು ನನ್ನ ಮನಸ್ಸಿಗೆ ಖಚಿತವಾಗಿ ಕಂಡುಬಂದಿದೆ. ಅದಕಾರಣ, ರೇಷ್ಮೆ ಹುಳುಗಳನ್ನು ಸಾಕಿ ಬೀಜದ ಗೂಡುಗಳನ್ನು ಸಿದ್ಧಪಡಿಸಲು ಕೆಲಸ ನಡೆಯಿಸತಕ್ಕವರು ಇಲಾಖೆಯಿಂದ ಪಡೆದ ಪ್ರತಿ 100 "ಬಿತ್ತನೆ" ಗಳಿಗೆ 500 ಬೀಜದ ಗೂಡುಗಳಂತೆ, ರೇಷ್ಮೆ ಗೂಡುಗಳನ್ನು ಕೊಡಬೇಕೆಂಬ ನಿರ್ಬಂಧವನ್ನು ತೆಗೆದುಹಾಕಿ, ಸರ್ಕಾರದವರು ಹೊಸ ರಿಯಾಯಿತಿಯನ್ನು ಮಂಜೂರು ಮಾಡಿದ್ದಾರೆ. ಮೈಸೂರು ಸಂಸ್ಥಾನದ ರೇಷ್ಮೆ ಸಂಘದವರ ಪ್ರತಿನಿಧಿಗಳು ಈಚೆಗೆ ನನ್ನಲ್ಲಿಗೆ ಬಂದಿದ್ದರು. ರೇಷ್ಮೆ ಕೈಗಾರಿಕೆಯು ಚಲಿಸುತ್ತಿರುವಂತೆ ಮಾಡಿ ಅಭಿವೃದ್ಧಿಗೆ ತರಲು ಯಾವ ಯಾವ ಕೆಲಸಗಳು ನಡೆಯಬೇಕೆಂಬ ವಿಚಾರದಲ್ಲಿ ಅವರ ಪರವಾಗಿ ರಾಜಸಭಾಭೂಷಣ ಮಿ|| ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರವರು ತಿಳಿಸಿದ ಸಂಗತಿಗಳನ್ನೂ ಕೇಳಿ ಪರ್ಯಾಲೋಚಿಸಿದ್ದೇನೆ. ಈ ಕೈಗಾರಿಕೆಯ ಪುರೋಭಿವೃದ್ಧಿಯ ವಿಚಾರವಾಗಿ ಸಲಹೆ ಹೇಳಲು ರೇಷ್ಮೆಯ ಬೋರ್ಡೊಂದನ್ನು ಏರ್ಪಡಿಸಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದಾರೆ. ಮುಂದೆ ನಡೆಯಬೇಕಾದ ಕಾರ್ಯಕ್ರಮದಲ್ಲಿ ಈ ಕೆಳಗೆ ಕಂಡವು ಸೇರಿರುತ್ತವೆ—

(1) ಉಪ್ಪುನೇರಳೆ ಸಾಗುವಳಿಯನ್ನು ಉತ್ತಮಪಡಿಸುವುದು;

(2) ರೋಗ ರಹಿತವಾದ ಮೊಟ್ಟೆಗಳ (ಎಂದರೆ, "ಬಿತ್ತನೆ" ಗಳ) ಸರಬರಾಯಿ ಹೆಚ್ಚಿಸುವುದು;

(3) ರೇಷ್ಮೆ ಹುಳುಗಳನ್ನು ಸಾಕುವ ವಿಧಾನವನ್ನು ಉತ್ತಮಪಡಿಸುವುದು;

(4) ಸಂಸ್ಥಾನದಲ್ಲಿ ಒದಗುವ ರೇಷ್ಮೆ ಗೂಡುಗಳೆಲ್ಲದರಿಂದಲೂ ರಾಟೆಯಂತ್ರಗಳ ಮೂಲಕ ಹಸನಾದ ರೇಷ್ಮೆಯ ನೂಲನ್ನು ತೆಗೆಯುವ ಏರ್ಪಾಡು ಮಾಡುವುದು;

(5) ಇಂಥ ಏರ್ಪಾಡು ಸಕ್ಕಷ್ಟು ಭಾರಿ ಪ್ರಮಾಣದಲ್ಲಿ ನಡೆದಾಗನೆಯೇ ಬಗೆಬಗೆಯ ರೇಷ್ಮೆಗಳ ಯೋಗ್ಯತೆಯನ್ನು ನಾನಾ ಅಂಶಗಳಲ್ಲಿಯೂ ಪರೀಕ್ಷಿಸತಕ್ಕ 'ಕಂಡಿಷನಿಂಗ್ ಹೌಸು' ಗಳೆಂಬ ಕಚೇರಿ ಸ್ಥಾಲಯಗಳನ್ನೇರ್ಪಡಿಸುವುದು;

(6) ರೇಷ್ಮೆ ಕೈಗಾರಿಕೆಯ ವಿಚಾರದಲ್ಲಿ ಜನಗಳಿಗೆ ತಿಳುವಳಿಕೆ ಹೇಳುವ ಬೋಧನಾಕಾರ್ಯವನ್ನು ನೆರವೇರಿಸುವುದು; ಮತ್ತು

(7) ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟ ನಾನಾ ಲೆಕ್ಕಪಕ್ಕಗಳನ್ನು ಸಂಗ್ರಹಿಸುವ ಕಾರ್ಯವನ್ನೂ ಜರುಗಿಸುವುದು.

ರೇಷ್ಮೆಯ ಗೂಡುಗಳಿಂದ ರೇಷ್ಮೆಯನ್ನು ತೆಗೆದ ಮೇಲೆ ಉಳಿಯುವ 'ಜೂಟ್' ಎಂಬ ಮಾಸಲು ಬಣ್ಣದ ನಾರಿನಂತಿರುವ ವಸ್ತುವಿನಿಂದಲೂ ನೂಲನ್ನು ತೆಗೆಯುವ ಯಂತ್ರವು ಅದಷ್ಟು ಬೇಗ ಸ್ಥಾಪಿತವಾಗುವಂತೆ ಸರ್ಕಾರದವರು ಏರ್ಪಾಡು ಮಾಡುವವರಾಗಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ರೇಷ್ಮೆ ಗೂಡುಗಳಿಂದ ಹಸನಾಗಿ ರೇಷ್ಮೆ ನೂಲನ್ನು ತೆಗೆಯುವ ರಾಟೆಯಂತ್ರಗಳ (ಫಿಲೇಚರುಗಳ) ಸಂಖ್ಯೆಯು ಹೆಚ್ಚಬೇಕು. ಖಾಸಗಿ ಪ್ರಯತ್ನಗಳಿಂದ ಇದು ನೆರವೇರೀತೆಂದು ಸರ್ಕಾರದವರು ನಿರೀಕ್ಷಿಸುತ್ತಾರೆ. ರೇಷ್ಮೆಗೆ ಹೆಚ್ಚು ಗಿರಾಕಿಗಳು ದೊರೆತು ರೇಷ್ಮೆಯ ವ್ಯಾಪಾರವು ವೃದ್ಧಿಯಾಗುವುದಕ್ಕೆ ಬೇಕಾದ ಸೌಕರ್ಯಗಳನ್ನೊದಗಿಸುವ ಭಾಗದಲ್ಲಿ ಆರಂಭರೂಪದ ವ್ಯವಸ್ಥೆಗಳನ್ನು ಮೈಸೂರು ಸಂಸ್ಥಾನದ ರೇಷ್ಮೆ ಸಂಘದವರು ಏರ್ಪಡಿಸುವರೆಂದು ಸರ್ಕಾರದವರು ನಂಬಿದ್ದಾರೆ. ಸಾಧ್ಯವಾದ ಸಹಾಯಗಳನ್ನೆಲ್ಲವನ್ನೂ ಸರ್ಕಾರದವರು ಅವರಿಗೆ ಮಾಡಿಯೇ ಮಾಡುವರೆಂಬುದನ್ನು ಹೇಳಬೇಕಾದುದೇ ಇಲ್ಲ.

ಕಾಡುಗಳು.

ಚಾಮುಂಡಿ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಬಾಬಾಬುಡನ್ ಬೆಟ್ಟ ಮತ್ತು ನಂದಿಬೆಟ್ಟ ಇವುಗಳ ಮೇಲೆ ಗಿಡಗಳನ್ನು ಬೆಳೆಯಿಸಿ ಕಾಡುಗಳನ್ನು ಏರ್ಪಡಿಸುವ ಕೆಲಸವು ಮುಂದುವರಿಯುತ್ತಿದ್ದಿತು. ಹುಲಿಕೆರೆ ಬಳಿಯ ಪ್ರದೇಶದಲ್ಲಿ ಕಡಿದುಹಾಕಿದ್ದ ಮರಗಳಿಗೆ ಬದಲಾಗಿ ಗಿಡಗಳನ್ನು ಹಾಕಿ ಕಾಡು ಯಥಾಪ್ರಕಾರ ಏರ್ಪಡುವಂತೆ ಮಾಡುವ ಪ್ರಯತ್ನವೂ ಮುಂದುವರಿಯಿತು. 1,390.5 ಎಕರೆಗಳಷ್ಟು ಪ್ರದೇಶದಲ್ಲಿ ತೇಗದ ಸಸಿಗಳನ್ನು ಹಾಕಲಾಯಿತು. ಇಲಾಖೆಯವರ ಆಡಳಿತದಲ್ಲಿರುವ ತೇಗದ ತೋಪಿನ ವಿಸ್ತೀರ್ಣವು 10,540 ಎಕರೆಗಳು. 408 ಎಕರೆಗಳ ಜಮೀನಿನಲ್ಲಿ ಸೌದೆಗೆ ಉಪಯೋಗವಾಗುವ ಗಿಡಗಳನ್ನು ನೆಟ್ಟು ಬೆಳೆಯಿಸುತ್ತಿದ್ದಾರೆ. ಕಾಡುಗಳಲ್ಲಿ ಗಿಡಗಳನ್ನು ನಾಟಿ ಬೆಳೆಯಿಸುವ ಕಾರ್ಯಕಲಾಪಗಳಿಗಾಗಿ ಸಸಿಗಳನ್ನು ಒಟ್ಟಲು ಹಾಕಿ ಸಿದ್ಧಪಡಿಸುವ ದೊಡ್ಡದೊಡ್ಡ ಕ್ಷೇತ್ರಗಳನ್ನು ಕೆಲವು ಡಿವಿಜನ್ನುಗಳಲ್ಲಿ ಏರ್ಪಡಿಸಲಾಯಿತು. ಡಿಸ್ಟ್ರಿಕ್ಟ್ ಬೋರ್ಡುಗಳು, ಮುನಿಸಿಪಾಲಿಟಿಗಳು ಮುಂತಾದವುಗಳಿಗೆ ಸಾಲುಮರಗಳ ಸಸಿಗಳನ್ನೊದಗಿಸುವುದಕ್ಕಾಗಿ ಸಸಿಗಳನ್ನು ಬೆಳೆಯಿಸುವ ಕ್ಷೇತ್ರಗಳನ್ನೂ ಏರ್ಪಡಿಸಲಾಯಿತು. ಚಾಪೀನೆಯೇ ಮುಂತಾದ ಜಂಗಲು ಉತ್ಪನ್ನಗಳಿಗೆ ಗಿರಾಕಿಯು ಮಟ್ಟಾಗಿದ್ದಿತು. ಅಲ್ಲದೆ ಧಾರಣೆಗಳೂ ಕಡಿಮೆಯಾಗಿದ್ದುವು. ಚಾಪೀನೆಯನ್ನೂ, ಸೌದೆಯನ್ನೂ, ವಾಡಿಕೆಯಂತೆ ಸರ್ಕಾರಿ ಕಾರ್ಖಾನೆಗಳಿಗೂ, ರೈಲ್ವೆಗಳಿಗೂ, ಮತ್ತು ಸರ್ಕಾರದ ಚಿನ್ನದಗಣಿಗಳಿಗೂ ಇಲಾಖೆಯವರು ಒದಗಿಸಿದರು.

ಪೋಲೀಸು ಇಲಾಖೆ.

ಪೋಲೀಸು ಇಲಾಖೆಗಾಗಿ 1932-33 ನೆಯ ಸಾಲಿನಲ್ಲಿ ಸಿಬ್ಬಂದಿಯ ಪುನರ್ವ್ಯವಸ್ಥೆಯನ್ನೂ ಮತ್ತು ಸಬ್‌ಇನ್‌ಸ್ಪೆಕ್ಟರುಗಳಿಗೆ ಸಂಬಳವನ್ನು ಹೆಚ್ಚುಮಾಡುವುದನ್ನೂ ಮಂಜೂರು ಮಾಡಲಾಗಿತ್ತಷ್ಟೆ. ಆ ಏರ್ಪಾಡನ್ನು ಇನ್ನೂ ಸ್ವಲ್ಪಮಟ್ಟಿಗೆ ಪ್ರಸಕ್ತವರ್ಷ ಜಾರಿಯಲ್ಲಿ ತರಲಾಯಿತು.

ಮೋಟಾರು ಬಸ್ಸುಗಳೇ ಮುಂತಾದವುಗಳ ಸಂಚಾರವನ್ನು ಕ್ರಮಪಡಿಸುವುದಕ್ಕೆ ಸಲಹೆಗಳನ್ನು ಕೊಡುವುದಕ್ಕಾಗಿ ಸರ್ ಚಾರಲ್ಸ್ ಟಾಡ್‌ಹಂಟರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ನೇಮಕವಾಗಿದ್ದುದು ಸರಿಯಷ್ಟೆ. ಆ ಸಮಿತಿಯವರ ಸಲಹೆಗಳಲ್ಲಿ ಸರ್ಕಾರದವರು ಹೆಚ್ಚು ಭಾಗದವುಗಳನ್ನು ಅನುಮೋದಿಸಿದ್ದಾರೆ. ಅವರು ಅನುಮೋದಿಸಿರತಕ್ಕವುಗಳನ್ನು ಆಚರಣೆಗೆ ತರುವುದಕ್ಕಾಗಿ ಕಾನೂನು ಆಗಬೇಕಾಗುತ್ತದೆ. ಅದಕ್ಕಾಗಿ ಮಸೂದಾ ಕಾನೂನನ್ನು ರಚಿಸಿ ಕ್ರಮ ಜರುಗಿಸಲಾಗಿದೆ.

ಸೈನ್ಯದ ಇಲಾಖೆ.

ಪದಾತಿಸೈನ್ಯ ಬಲವನ್ನು ಕ್ರಮಕ್ರಮವಾಗಿ ಹೆಚ್ಚಿಸಿ ಪೂರ್ವ ಪರಮಾವಧಿಗೆ ತರುವ ಪ್ರಯತ್ನದ ಒಂದು ಭಾಗವಾಗಿ 1933-34 ನೆಯ ಸಾಲಿನಲ್ಲಿ ಮೊದಲನೆಯ ಪಟಾಲಮಿನಲ್ಲಿ ಎರಡು ತುಕಡಿಗಳನ್ನು ಹೆಚ್ಚಾಗಿ ಏರ್ಪಡಿಸಲಾಯಿತು.

ಮುನಿಸಿಪಾಲಿಟಿಗಳು.

ಮುನಿಸಿಪಾಲಿಟಿಗಳ ಹೊಸ ಕಾನೂನು 1933 ನೆಯ ಇಸವಿ ಆಗಸ್ಟು 1 ನೆಯ ತಾರೀಖಿನಿಂದ ಜಾರಿಗೆ ಬಂದಿತು. ಬೆಂಗಳೂರು ಸಿಟಿ ಮುನಿಸಿಪಾಲಿಟಿಯನ್ನೂ ಮೈಸೂರು ಸಿಟಿ ಮುನಿಸಿಪಾಲಿಟಿಯನ್ನೂ ಪುನರ್ವ್ಯವಸ್ಥೆಗೊಳಿಸಲಾಯಿತು. ಟವನು ಮುನಿಸಿಪಾಲಿಟಿಗಳಲ್ಲಿಯೂ ಮೈನರ್ ಮುನಿಸಿಪಾಲಿಟಿಗಳಲ್ಲಿಯೂ ಬಹಳ ಹೆಚ್ಚು ಭಾಗದವುಗಳ ಪುನರ್ವ್ಯವಸ್ಥೆಯೂ ನಡೆಯಿತು.

ಬೆಂಗಳೂರು, ಮೈಸೂರು, ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ, ಇತರ ಅನೇಕ ಸಣ್ಣ ಊರುಗಳಲ್ಲಿಯೂ ಆಯಾ ಪಟ್ಟಣದ ಅಥವಾ ಊರಿನ ಸೌಂದರ್ಯವನ್ನು ಹೆಚ್ಚಿಸಿ ಅಭಿವೃದ್ಧಿಪಡಿಸುವ ಅನೇಕ ಕಾರ್ಯಗಳು ನಡೆದಿವೆ. ಆರೋಗ್ಯಸ್ಥಿತಿ ಅವುಗಳನ್ನು ಉತ್ತಮಪಡಿಸಿ ಅವುಗಳು ಪ್ರಪಂಚದ ಇತರ ಭಾಗಗಳಲ್ಲಿರುವ ಈ ಕಾಲದ ದೊಡ್ಡ ಪಟ್ಟಣಗಳನ್ನು ಹೋಲುವಂತೆ ಮಾರ್ಪಡಿಸುವ ಉದ್ದೇಶದಿಂದ ಬೇಕಾದಷ್ಟು ಕೆಲಸವು ನಡೆದಿದೆ ಆದಾಗ್ಗ್ಯೂ, ಈ ಭಾಗದಲ್ಲಿ ನಡೆಯಬೇಕಾದ ಕೆಲಸವು ಇನ್ನೂ ಬಹಳವಾಗಿದೆ. ಆ ಕೆಲಸವೂ ನೆರವೇರುವ ಭಾಗದಲ್ಲಿ ತಾವೆಲ್ಲರೂ ನನ್ನೊಡನೆ ಸಹಕರಿಸುವಿರೆಂದು ನಂಬಿದ್ದೇನೆ.

ಟವನುಗಳಲ್ಲಿಯೂ ಗ್ರಾಮಗಳಲ್ಲಿಯೂ ನೀರಿನ ವಸತಿ.

ಹೋಲೇನರಸೀಪುರಕ್ಕೆ ನೀರು ಸರಬರಾಯಿ ಮಾಡಲು ಅಗತ್ಯವಾಗಿ ಬೇಕಾದ ಕಾಮಗಾರಿಗಳು ನಡೆಯುತ್ತಾ ಇವೆ. ದೊಡ್ಡಬಳ್ಳಾಪುರ, ಮಧುಗಿರಿ, ಮಾಲೂರು, ಫ್ರೆಂಚ್‌ರಾಕ್ಸ್, ಶ್ರೀರಂಗಪಟ್ಟಣ, ಚನ್ನಪಟ್ಟಣ ಮತ್ತು ತುರುವನೂರು—ಇವುಗಳಿಗೆ ನೀರನ್ನು ಸರಬರಾಯಿ ಮಾಡುವ ಏರ್ಪಾಡುಗಳು ಪ್ರಸಕ್ತ ವರ್ಷದಲ್ಲಿ ಎಂದರೆ 1933-34 ನೆಯ ಸಾಲಿನಲ್ಲಿ ಪೂರೈಸಲ್ಪಟ್ಟುವು. ಚನ್ನಗಿರಿ, ಚಿತ್ರದುರ್ಗ ಮತ್ತು ಚಿಂತಾಮಣಿ-ಈ ಊರುಗಳಲ್ಲಿ ನೀರಿನ ವಸತಿಗಾಗಿ ಯಂತ್ರಗಳಿಂದ (ಬೋರ್ ಹೋಲ್) ಬಾವಿಗಳನ್ನು ತೋಡಿಸಲಾಯಿತು. ಭದ್ರಾವತಿಯಲ್ಲಿಯೂ ಎಚ್.ಡಿ.ಕೋಟೆಯಲ್ಲಿಯೂ ನೀರು ಸರಬರಾಯಿ ಏರ್ಪಾಡನ್ನು ಉತ್ತಮಪಡಿಸಲಾಯಿತು. ಕೊಣನೂರು, ಕುಣಿಗಲು, ಬೆಂಗಳೂರು ಡಿಸ್ಟ್ರಿಕ್ಟಿನ ಬೇಗೂರು, ಸಾತನೂರು ಮತ್ತು ವೈಟ್‌ಫೀಲ್ಡ್ ಗ್ರಾಮ—ಇವುಗಳಿಗೆ ನೀರು ಸರಬರಾಯಿ ಮಾಡಲು ಪ್ರಾಜೆಕ್ಟುಗಳು ಪರ್ಯಾಲೋಚನೆಯಲ್ಲಿವೆ. ಅರಸೀಕೆರೆ, ಚಿಂತಾಮಣಿ, ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಹಾಸನ-ಈ ಸ್ಥಳಗಳ ನೀರು ಸರಬರಾಯಿ ಏರ್ಪಾಡನ್ನು ಮತ್ತಷ್ಟು ಉತ್ತಮಪಡಿಸುವ ವಿಚಾರವು ಪರ್ಯಾಲೋಚನೆಯಲ್ಲಿದೆ.

ಪರಿಸಮಾಪ್ತಿ.

ಮಹಿಳೆಯರೇ ಮತ್ತು ಮಹಾಶಯರೇ, ಕಳೆದ ವರುಷದಲ್ಲಿ ನಡೆದ ಕಾರ್ಯಕಲಾಪಗಳನ್ನೂ, ಮುಂದೆ ನಾವು ಅನುಸರಿಸಬೇಕೆಂದಿರುವ ಕಾರ್ಯಕ್ರಮದ ವಿವರಗಳನ್ನೂ ತಮಗೆ ಪ್ರಕಟಪಡಿಸಿದ್ದೇನೆ. ಪ್ರಜೆಗಳ ಆರೋಗ್ಯಸ್ಥಿತಿಯನ್ನು ಉತ್ತಮಗೊಳಿಸುವುದು, ಜನಜೀವನದ ಸ್ಥಿತಿಗತಿಗಳನ್ನು ಮೇಲ್ಪಡಿಸುವುದು, ಪ್ರಜೆಗಳು ತಮ್ಮ ಬದುಕಿಗೆ ಹೆಚ್ಚು ಹೆಚ್ಚು ಸೌಖ್ಯಸಾಧನಗಳನ್ನು ಒದಗಿಸಿಕೊಳ್ಳುವಂತೆ ಪ್ರೇರಿಸಿ ಜೀವನದ ಮಟ್ಟವು ಉನ್ನತಿ ಹೊಂದುತ್ತ ಬರುವಂತೆ ಮಾಡುವುದು, ಪ್ರತಿಯೊಬ್ಬನೂ ತಾನಾ ಪೌರಧರ್ಮಗಳನ್ನು ಪರಿಪಾಲಿಸತಕ್ಕ ಸತ್ಪ್ರಜೆಯೆಂಬ ಹೆಮ್ಮೆಯೂ ಕರ್ತವ್ಯಬುದ್ಧಿಯೂ ಹುಟ್ಟುವಂತೆ ಮಾಡುವುದು, ಪ್ರಜೆಗಳ ಜೀವನಕ್ಕೆ ಬೇಕಾದ ಸಾಮಗ್ರಿಗಳಲ್ಲಿ ಸಂಸ್ಥಾನದಲ್ಲಿಯೇ ಎಷ್ಟನ್ನು ಒದಗಿಸಿಕೊಳ್ಳುವುದು ಸಾಧ್ಯವೋ ಅಷ್ಟನ್ನೂ ಒದಗಿಸಿಕೊಳ್ಳುವ ವ್ಯವಸ್ಥೆಯನ್ನು ಏರ್ಪಡಿಸುವುದು, ಜೀವನ ಸಂಗ್ರಾಮದಲ್ಲಿ ತಮ್ಮದೇ ಮೇಲುಗೈಯಾಗಬೇಕೆಂದು ದೇಶದೇಶಗಳವರೂ ಹೋರಾಡುತ್ತಿರುವಲ್ಲಿ ನಮ್ಮ ದೇಶದಿಂದ ರಫ್ತಾಗುವ ವಸ್ತುಗಳಿಗೂ ಹೆಚ್ಚು ಹೆಚ್ಚಾಗಿ ಗಿರಾಕಿಗಳು ದೊರೆಯುವುದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿ, ಜೀವನದ ಹೋರಾಟದಲ್ಲಿ ನಮ್ಮ ದೇಶದವರಿಗೆ ಕ್ಲೇಶವು ತಲೆಗೆ ಕಟ್ಟಿದ ಜೀವನವು ಕೊನೆದತುಟ್ಟಿಗೂ ಸುಖಕರವಾಗುವಂತೆ ಮಾಡಿಕೊಳ್ಳುವುದು—ಇವುಗಳು ಹಿಂದಿನ ವರುಷದ ಕಾರ್ಯಕಲಾಪಗಳಲ್ಲಿಯೂ ಮುಂದಿನ ಕಾರ್ಯಕ್ರಮದಲ್ಲಿಯೂ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಂಡಿರುವ ಧ್ಯೇಯಗಳು. ಪ್ರತಿಯೊಂದು ದೇಶದವರೂ ತಮ್ಮ ದೇಶದವರು ಮಾತ್ರ ಸುಖವಾಗಿದ್ದರೆ ಸಾಕೆಂಬ ಮನೋಭಾವದಿಂದ ಕೂಡಿ ವ್ಯವಹರಿಸುತ್ತಿರುವ ಈಗಿನ ಈ ಬಗೆಯ ವರ್ತನೆಯು ತಪ್ಪಿ ಒಟ್ಟು ಪ್ರಪಂಚದ ಜನರೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರೆಂಬ ಭಾವನೆಯು ಹುಟ್ಟುವ ಕಾಲವು ಬಂದೇ ಬರುತ್ತದೆಂದು ನನಗೆ ಭರವಸೆಯುಂಟು. ಆ ಕಾಲವು ಬಂದೇ ಬರುವುದು; ಅಗ್ಗ ಒಟ್ಟು ಪ್ರಪಂಚದ ಜನರೆಲ್ಲರಿಗೂ ಸುಖಸಂತೋಷಗಳುಂಟಾಗುವುದಕ್ಕೆ ಸಾಧಕವಾಗುವ ಹಾಗೆ ವ್ಯಾಪಾರ ವಾಣಿಜ್ಯಗಳನ್ನು ನಡೆಯಿಸುವುದನ್ನೂ, ಪ್ರಪಂಚವೇ ಒಂದು ಕುಟುಂಬವೆಂದು ಭಾವಿಸಿಲ ಮಾನವಸಮುದಾಯದ ಮಂಗಳವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಸಹಕರಿಸಿ ವರ್ತಿಸುವುದನ್ನೂ, ಸಮಸ್ತ ಜನಾಂಗಗಳವರೂ ತಮ್ಮ ಧ್ಯೇಯವಾಗಿಟ್ಟುಕೊಂಡು ಅದಕ್ಕನುಸಾರವಾಗಿ ನಡೆಯುವರೆಂದು ನಾನು ನಂಬಿರುವೆನು. ಆದಾಗ್ಯೂ, ಸದ್ಯದಲ್ಲೇನೂ ನಾನಾ ಜನಾಂಗಗಳಿಗೂ ಈ ಬಗೆಯ ಮನೋಧರ್ಮವು ಹುಟ್ಟಿ, ಒಟ್ಟು ಪ್ರಪಂಚದ ಯೋಗಕ್ಷೇಮಕ್ಕೆ ಸಾಧಕವಾಗುವಂತೆ ಕಾರ್ಯೋತ್ಸಾಹಗಳೇರ್ಪಡುವ ಸಂಭವವಿಲ್ಲ. ಅದರ ಆ ಕಾರಣದಿಂದಲೇ, ಮೈಸೂರು ಸಂಸ್ಥಾನದಲ್ಲಿ ನಾವು ನಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಂಡು ಜೀವನದ ಮೇಲ್ಮೆಯನ್ನು ಸಾಧಿಸಬೇಕಾದ ಅಗತ್ಯವೂ, ಮುಂದೆ ಸಕಲ ಜನಾಂಗಗಳೂ ಒಟ್ಟು ಪ್ರಪಂಚದ ಹಿತಸಾಧನೆಯ ದೃಷ್ಟಿಯಿಂದ ಸಹಕರಿಸಿ ವರ್ತಿಸುವ ಕಾಲವು ಬಂದಾಗ್ಗೆ ಮೈಸೂರು ಸಂಸ್ಥಾನಕ್ಕೂ ಅಂದಿನ ವ್ಯವಸ್ಥೆಯಲ್ಲಿ ತಕ್ಕ ಸ್ಥಾನಮಾನಗಳು ಲಭಿಸುವ ಅರ್ಹತೆಯೊದಗುವಂತೆ ಈಗಿನಿಂದಲೇ ಸರ್ವಪ್ರಯತ್ನಗಳನ್ನೂ ಮಾಡುತ್ತ ಬರಬೇಕಾದ ಅಗತ್ಯವೂ ಸಹ ಒದಗಿವೆ.

ಕೇಂದ್ರ ಸರ್ಕಾರದ ಶಾಸನಸಭೆಗಳು, ಒಟ್ಟು ಇಂಡಿಯಾದೇಶದ ಮೇಲೆ ಪರಿಣಾಮವುಳ್ಳವುಗಳಾದ ಅಧಿಕಾರವಿಚಾರಗಳಿಗೆ ಹಿಂದೆ ಗಮನಕೊಟ್ಟುದಕ್ಕಿಂತ ಹೆಚ್ಚಿನ ತೀವ್ರಾಸಕ್ತಿಯಿಂದ ಇನ್ನು ಮುಂದೆ ಗಮನಕೊಡುತ್ತವೆ. ಆ ಅಧಿಕಾರವಿಚಾರಗಳನ್ನು ಬಗೆಹರಿಸಿ ವ್ಯವಸ್ಥೆಗೊಳಿಸುವ ವಿಷಯದಲ್ಲಿ ನೂತನ ಸುಧಾರಣೆಗಳ ಮೇರೆಗೆ ಆ ಶಾಸನಸಭೆಗಳು ಪರಿಣಾಮಕರವಾದ ರೀತಿಯಲ್ಲಿ ಕಾರ್ಯಗಳೆಸಗಬೇಕಾಗಿ ಬರುತ್ತದೆ. ಬ್ರಿಟಿಷ್ ಇಂಡಿಯಾದ ಪ್ರಾಂತ್ಯಗಳಲ್ಲಿ ಬಾಧಕವಾಗಿರುವಷ್ಟೇ ಮಟ್ಟಿಗೆ ಸಂಸ್ಥಾನಗಳಲ್ಲಿಯೂ ಬಾಧಕವಾಗಿರುವಂಥ ವಿಚಾರಗಳು ಇತ್ಯರ್ಥವಾಗುವಲ್ಲಿ ಕೂಡ, ಈಗ ಸಂಸ್ಥಾನಗಳವರ ಸಲಹೆಗಳಿಗೆ ಅವಕಾಶವಿಲ್ಲ. ಇದಕ್ಕೊಂದು ಉದಾಹರಣೆಯಾಗಿ ರೇಷ್ಮೆ ಕೈಗಾರಿಕೆಯನ್ನು ತೆಗೆದುಕೊಳ್ಳೋಣ. ಹೊರದೇಶಗಳ ಸ್ಪರ್ಧೆಯ ದೆಸೆಯಿಂದ ಈ ಕೈಗಾರಿಕೆಗೆ ಪೆಟ್ಟುಬೀಳದಂತೆ ಸ್ವಲ್ಪಮಟ್ಟಿಗೆ ಅನುಕೂಲವಾಗುವ ಹಾಗೆ ಇಂಡಿಯಾ ಸರ್ಕಾರದವರು ಈಚೆಗೆ ಒಂದು ಕಾನೂನನ್ನು ಮಂಜೂರುಮಾಡಿದ್ದಾರೆಂಬುದೇನೋ ನಿಜ. ಆದರೆ ಈ ವಿಷಯವನ್ನು ವ್ಯವಸ್ಥೆಮಾಡಿದ ಶಾಸನಸಭೆಗಳವರು ನಮ್ಮ ಅಭಿಪ್ರಾಯಗಳನ್ನೇನಾದರೂ ಕೇಳಿ ವ್ಯವಹರಿಸಿದರೇನು? ಹೊರಗಿನ ದೇಶಗಳ ಸ್ಪರ್ಧೆಯಿಂದ ಇಂಡಿಯಾದೇಶದ ಉಕ್ಕಿನ ಕೈಗಾರಿಕೆಗೆ ಬಾಧಕವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಮಂಜೂರುಮಾಡಿರುವ ಕಾನೂನಿನ ವಿಚಾರದಲ್ಲಿಯೂ ಹೀಗೆಯೇ ನಡೆಯಿತೆಂದು ಹೇಳಬೇಕಾಗಿದೆ. ಸಂಸ್ಥಾನಗಳ ಸಲಹೆಗಳನ್ನೂ ಕೇಳಿ ವರ್ತಿಸುವ ವಿಚಾರವನ್ನು ಅಷ್ಟುಮಟ್ಟಿಗೆ ಪೂರ್ತಿಯಾಗಿ ಉದಾಸೀನಮಾಡುವ ಪರಿಸ್ಥಿತಿಯನ್ನೇ ಇನ್ನುಮುಂದೆ ಕೂಡ ಮನಸ್ಸಿಗೆ ಸರಿಕಂಡು ಕೊಂಡು ಸಂಸ್ಥಾನಗಳವರು ತೃಪ್ತಿಪಟ್ಟುಕೊಂಡಿರುವುದು ಸರ್ವಥಾ ಸಾಧ್ಯವಿಲ್ಲ.

ಏತನ್ಮಧ್ಯೆ, ತಾವೆಲ್ಲರೂ ಘನತರವಾದೊಂದು ಕಾರ್ಯದಲ್ಲಿ ಸರ್ಕಾರದವರಿಗೆ ನೆರವಾಗುವಂತೆ ಬಿನ್ನಹಮಾಡಿಕೊಳ್ಳುವೆನು. ಮೈಸೂರು ಸಂಸ್ಥಾನದ ಪ್ರಜೆಗಳ ಸುಖಸಂತೋಷಗಳು ಮತ್ತಷ್ಟು ವೃದ್ಧಿಯಾಗುವಂತೆಯೂ ಪ್ರಪಂಚದಲ್ಲಿಯೇ ಪ್ರಸಿದ್ಧವಾಗಿರುವ ದೊಡ್ಡ ಚಕ್ರಾಧಿಪತ್ಯಕ್ಕೆ ಸೇರಿದ ರಾಷ್ಟ್ರವಾಗಿ ತಕ್ಕನುಗುಣವಾದ ಶ್ರೇಷ್ಠ ರೀತಿಯಲ್ಲಿ ಮೈಸೂರು ಸಂಸ್ಥಾನವು ತನ್ನ ಕರ್ತವ್ಯವನ್ನು ನಿರ್ವಹಿಸುವಂತೆಯೂ, ಮಾಡುವುದಕ್ಕಾಗಿ ಸರ್ಕಾರದವರು ನೆರವೇರಿಸುತ್ತಿರತಕ್ಕ ಸಮಸ್ತ ಕಾರ್ಯಗಳಲ್ಲಿಯೂ ತಾವುಗಳು ವೈಯಕ್ತಿಕವಾಗಿಯೂ ಈ ಸಭೆಯ ಸದಸ್ಯರಾಗಿಯೂ ತಮ್ಮ ಸರ್ವಸಾಮರ್ಥ್ಯವನ್ನೂ ವಿನಿಯೋಗಿಸಿ ಸಹಕರಿಸಿ ವರ್ತಿಸಬೇಕೆಂದು ಕೋರುವೆನು. ತಮ್ಮಲ್ಲಿ, ಗ್ರಾಮಪಂಚಾಯಿತಿಗಳಲ್ಲಿಯೂ ಮುನಿಸಿಪಲ್ ಸಭೆಗಳಲ್ಲಿಯೂ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿಯೂ ಸದಸ್ಯರಾಗಿರುವವರು, ಆ ಸಂಸ್ಥೆಗಳ ಸದಸ್ಯರಾಗಿರುವ ಕಾರಣದಿಂದ ತಮ್ಮಿಂದ ಸಾಧ್ಯವಿರುವ ಸಮಸ್ತ ರೀತಿಗಳಲ್ಲಿಯೂ ಈ ಮಹತ್ತರವಾದ ಪ್ರಯತ್ನದಲ್ಲಿ ಸರ್ಕಾರದವರೊಡನೆ ಸಹಕರಿಸಿ ವರ್ತಿಸಬೇಕು. ಹಾಗೆ ನಾವೆಲ್ಲರೂ ಸೌಹಾರ್ದದಿಂದ ಒಟ್ಟುಗೂಡಿ ಕೆಲಸಮಾಡುತ್ತ ನಾವು ಈಗ ಸಾಧಿಸಿರುವುದಕ್ಕಿಂತ ನಮ್ಮ ನಾಡು ಹೆಚ್ಚಿನ ಸುಖದ ಬೀಡಾಗಿಯೂ, ನಮ್ಮ ನಾಡು ಬ್ರಿಟಿಷ್ ಚಕ್ರಾಧಿಪತ್ಯದ ರತ್ನಹಾರದಲ್ಲಿ ತಕ್ಕ ಸ್ಥಾನವುಳ್ಳ ಶ್ರೇಷ್ಠ ರತ್ನವಾಗಿಯೂ ಪರಿಣಮಿಸಲು ಸಾಧಕವಾಗುವಹಾಗೆ ನಾವೆಲ್ಲರೂ ಯಥಾಶಕ್ತಿಯಾಗಿ ನಮ್ಮ ಕರ್ತವ್ಯವನ್ನು ಪರಿಪಾಲಿಸಿ ಚರಿತಾರ್ಥರಾಗುವಂತೆ ಕೃಪಾನಿಧಿಯಾದ ಭಗವಂತನು ಅನುಗ್ರಹಿಸಲೆಂಬುದೇ ನನ್ನ ಪ್ರಾರ್ಥನೆ!

ಮೈಸೂರು. ಮಿರ್ಜಾ ಎಂ. ಇಸ್ಮಾಯಿಲ್,

1ನೆಯ ಅಕ್ಟೋಬರ್ ಮೈಸೂರು ಸಂಸ್ಥಾನದ ದಿವಾನರವರು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಾದ್ವೈತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೩
ಸಕ್ಕ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಠಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂತಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ಕೊಂಡುಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಬೀ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂಗಿನಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಿಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೧೦, ಮದರಾಸು.

[42]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬ್ರಹ್ಮವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವತತ್ವವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಸ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಹುಪಥ್ಯಾಂತ ದಿನಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)	೬ ಆಣೆ
पंडित श्रीकाशीनाथशास्त्री यांचे भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವವ್ರತ (೩ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮೋಕ್ತ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೩ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य—संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿತಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತತ್ತ್ವಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಶಿವಸ್ವಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೪ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ನವಂಬರ್ ೧೯೩೪ [ಸಂಚಿಕೆ. ೨೫

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರರಾದ ಶ್ರೀಮಜ್ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ನವರತ್ನಮಾಲಾ.

ಚರಲಿಂಗಾಚಾರ್ಯಭಾಸ್ವದ್ಗುರುಮಣಿಗಣವಿಖ್ಯಾತಲಿಂಗಾಂಗಸಂಯೋ | ಗೀಪದಸ್ಯಾರ್ಥಸುಧಾವಪ್ರದಬುಧವಿನುತಂ ವೇದಸಂಸ್ತುತ್ಯಸಂಚಾ || ಕ್ಷರಮಂತ್ರಪ್ರಾಣನಾಯಕ್ಷರಕರಣಸುತಂ ಧರ್ಮಶಾಸ್ತ್ರಮಾರ್ಗವೇದೋಕ್ತಾ | ಮುರಭೂಜಂ ಧೂತಿಸಾಂದ್ರಂ ವಿಜಯಕುಗೆ ಶಿವಾನಂದರಾಜೇಂದ್ರದೇವಂ ||೧||

ಸ್ಥಿರಚಿತ್ತಂ ವೃಷತ್ತ್ವಾದಿವ್ರಜಮದಹರನತ್ಯಂತಕಾಮರ್ಥ್ಯಯುಕ್ತಂ | ಚರಲಿಂಗಶ್ರೇಣಿಪೂಜ್ಯಂ ಪರಮಶಿವಾದ್ವೈತವಿದ್ಯೋಪವಿದ್ಯಾ || ಕರವಿನ್ಯಸ್ತಂದ್ಯಪಾದಂ ವಿಬುಧವರಶಿವಾನಂದರಾಜೇಂದ್ರಶೈವೋ | ದ್ಧರದೀಕ್ಷಾಬದ್ಧಪೆಮ್ಮಂ ಸಲಹುಗೆ ಸತತಂ ವೀರಪೀಠಾಧಿಪಾಥಂ ||೨||

ಪದೆದಂ ಸರ್ವಜ್ಞತೆಯಂ | ಪದೆದಂ ವಾಕ್ಸಿದ್ಧಿವೃದ್ಧಿಯಂ ಸಂಪದಮಂ || ಬಿಡದೆ ಜಗದ್ಗುರುಪದಮಂ | ಪಡೆದ ಶಿವಾನಂದದೇಶಿಕಂ ಕೇವಲನೇಂ ||೩||

ಪಾವೀದಾಹುಕ ಪಾಶಮಂ ನಿಗಮವೇತ್ತಂ ಹಟ್ಸ್ಥಲಜ್ಞಾನಕ | ತ್ವರಸಿಶೀಲ್ಯಸಮನ್ವಿತಂ ವಿಮಲಚಿತ್ತಂ ಪ್ರಾಣಲಿಂಗೈಕ್ಯಭಾ || ಸುರನತ್ಯಂತವಿಶುದ್ಧಕೀರ್ತಿಚರಿತಂ ಶ್ರೀಮಚ್ಛಿವಾನಂದಜ | ದ್ಗುರುರಾಜೇಂದ್ರಯತೀಶ್ವರಂ ದುರಿತದೂರಂ ಮಾಳ್ಕೆ ಕಲ್ಯಾಣಮಂ ||೪||

ಕಲಿಕಲುಷಹರಂ ಶ್ರೀಕರ | ವಿಲಸದ್ಗುರು ಜಂಗಮಕೋಟಿಗೆ ಮುಖ್ಯಂಪ || ಕಲಶೀವ ಶಿವಾನಂದೇಂ | ದ್ರಲಸದ್ಗುರುವಿರೆ ಕಲ್ಪತರುವಿಂದೆಮಗೇಂ ||೫||

ಬಂಧುರವೀರಶೈವಮತತತ್ತ್ವಸುಧಾರ್ಣವ ಪೂರ್ಣಶೀತಗು | ಬಂಧಸುಧರ್ಮರಾಶಿಕಲಿವೆತ್ತುದು ಘಾತುದು ಸಾಂದ್ರಸದ್ಗುಣ || ವೇಂದ್ರಮಹೇಶಭಕ್ತಜನತಾಸುಕೃತಂ ಕರುಣಾಕರಂ ಶಿವಾ | ನಂದಮಹೇಶನೀರೆ ಗುರುರೇಣುಕವೀರಮೃಗೇಂದ್ರಪೀಠಮಂ ||೬||

ಅಣಿಮಾದ್ಯಷ್ಟಸಿದ್ಧಿ ಪದಕಾ | ರಜಮೂರ್ತಿ ಭವತ್ಪದಾಬ್ಜಮೆರೆ ಗುರುದೇವಾ || ಗ್ರಣಿ ಭೀಮಣಿ ಭುವನದೊಳಾ | ರೆಣೆವರ್ಪರ್ ನಿನಗೆ ಮಹಿಮೆಯೊಳ್ ವಿಶದಪದೊಳ್ ||೭||

ಸನ್ನಮ್ರಕೋಟನೋಕ್ತಿ ಸುರಭೂರುಹಮರ್ಥಿಜನಕ್ಕೆ ಪಕ್ಷಮು | ಸ್ಯನ್ನತಪೀಡಧಿಷ್ಟಮನೊಂದಟ್ಟುತೆ ದಿಕ್ಪಟಿಕೀರ್ತನಾಗಿಸಂ || ಪನ್ನಶಿವಾನುಭಾವಪರಿಶೋಭಿತವಾಗಿ ವಿರಾಜಿಸಂ ಗುಣ | ಪ್ರೋನ್ನತಭಾಸುರಾಂಗ ಯತಿವರ್ಯ ಲಸಚ್ಛಿವದೇವದೇಶಿಕಾ ||೮||

ಸಿರಿಯುಂ ಭಾರತಿಯುಂ ಹರಿ | ಪರಮೇಷ್ಠಿಗಳನುವದೆಲಸುತ ಶಿವಾನಂದೇಂ || ದ್ರರ ಸೇದುರ್ದಿನಾಲೋಕಿಸಿ | ಗಿರಿಜೆಸುಮರಿ ಮುಖ್ಯಲಾಂತನವಸಿಕಂ ಗಿರಿಶಂ ||೯||

ಪ್ರವಿದಿತರತ್ನಾವಳಿಯಂ | ಕವೆ ತಾಂ ಕನ್ನಡಿಸಿರ್ಪನಲ್ತಿ ಮುಕ್ತಿಪದನಂ || ಭುವಿಯೊಳ್ ಮುದ್ರಿಸಿ ಮೆರೆಯಿಸೆ | ಭವವೀಯ ದಯಾಸಹಾಯಮಂ ಬಯಸಿದಪೇಂ ||೧೦||

ಪ್ರಭುವರಚಾಮಭೂಮಿಪಸಭಾಸುಕವೀಂದ್ರನೆನಲ್ ಪ್ರಸಿದ್ಧಿವೆ | ತ್ತಭಿನವಕಾಳಿದಾಸನವನೆಂಬನೆಗೆಳ್ತಿಯನಾಕವೀಂದ್ರರಾ || ಸಭೆಯೊಳ್ ಕಾರ್ತ ಮಡಿಪ್ರಮಹಾವಿದುಷಂ ಬಸವಪ್ಪಶಾಸ್ತ್ರಿಶೀಲ್ | ವಿಭುಕೀಲಿದಂಗಡಾಶನ ಸುತಂ ರಚಿಸಿರ್ಪನಿದಂ ಕೃಪೇಕ್ಷಿಯಂ ||೧೧||

ಕೇರಾಪುರ. ಆಸ್ಥಾನವಿದ್ವಾನ್ ಬಿ. ಮಹಾದೇವಶಾಸ್ತ್ರಿ.

ಮತದಾರರೇ ಜಾಗ್ರತರಾಗಿರಿ.

ಬಳ್ಳಾರಿ ಜಿಲ್ಲೆಯ ಓಟರ್ಸ್ ಮಹಾಶಯರೇ ಸದ್ಯಃ ಇದೇ ನವಂಬರ್ 10 ನೇ ತಾರೀಖಿಗೆ ಅಸೆಂಬ್ಲಿಯ ಪ್ರಜಾಪ್ರತಿನಿಧಿಗಳ ಚುನಾವಣೆಯೂ, ಅನಂತರ ಮುಂದೆ ಮದ್ರಾಸ್ ನ್ಯಾಯವಿಧಾಯಕ ಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಪ್ರತಿನಿಧಿಗಳ ಚುನಾವಣೆಯೂ ಜರುಗತಕ್ಕದ್ದಿರುವದು ಸರಿಯಷ್ಟೆ. ಸರ್ಕಾರದವರೇನೋ ಪ್ರಜಾಹಿತದೃಷ್ಟಿಯಿಂದ ಈ ಸಂಸ್ಥೆಗಳನ್ನು ಏರ್ಪಡಿಸಿದ್ದರೂ, ಬಹುಜನರಿಗೆ ವಿಷಯದ ಯಥಾರ್ಥಜ್ಞಾನವಿಲ್ಲವೆಂದೇ ಹೇಳಬಹುದು. ಯಾರು ಅಭ್ಯರ್ಥಿಗಳ ಕಾಟಕ್ಕೆ, ಯಾರು ಪ್ರಮುಖಜನರ ಭಿಡೆಯಕ್ಕೆ ಯಾರು ಏನೂ ಗೊತ್ತಿಲ್ಲದೆ ಹೇಳಿಕೊಟ್ಟವರ ಹೆಸರಿಗೆ ಕತ್ತರಿಗುರ್ತು ಹಾಕುವದರಿಂದ, ಭಾವೀರಾಷ್ಟ್ರದ ಹಿತವನ್ನೇ ಕತ್ತರಿಸಿಹಾಕುವ ಕತ್ತರಿ ಹಾಕಿದರೆಂದು ಹೇಳಬಹುದು. ಮತದಾರರೇ ಸುವಿಚಾರದೃಷ್ಟಿಯಿಂದ ನಿಮ್ಮ ಮತವನ್ನು ಸದುಪಯೋಗಮಾಡಿಕೊಳ್ಳದಿದ್ದಲ್ಲಿ ಅದರಿಂದ ನಿಮಗೂ, ನಿಮ್ಮ ದೇಶಕ್ಕೂ ಅತ್ಯಂತ ಅನರ್ಥಕಾರಿಯಾಗಿ ಪರಿಣಮಿಸಿ ಇಂಥಾ ದೇಶದ್ರೋಹರೂಪ ಪಾಪಕ್ಕೆ ನೀವೇ ಜವಾಬ್ದಾರರಲ್ಲದೆ ಮತ್ತಾರೂ ಕಾರಣರಾಗಲಾರರು. ಜಗತ್ತು ಸ್ವಲ್ಪ ಜಾಗ್ರತವಾದ್ದರಿಂದಲೇ ದೇವಸ್ಥಾನದ ಅಪವಿತ್ರ ಕುತ್ತಿನಿಂದ ಪಾರುಮಾಡಿ ಧರ್ಮವನ್ನು ಕಾಪಾಡಿದ, ಧರ್ಮಸರ್ಕಾರದ ಜಯಜಯಕಾರವು ಇಡೀ ಭೂಮಂಡಲವಲ್ಲಿ ಘೋರ್ಗರಿಯುತ್ತಿರುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಒಟ್ಟಿನಮೇಲೆ ಇಡೀ ದೇಶದ ಉನ್ನತಾವನತಿಯ ಸೂತ್ರವೇ ಮತದಾರರಾದ ನಿಮ್ಮ ಕೈಯಲ್ಲಿದೆ

ಶುದ್ಧ ಕನ್ನಡನಾಡಾದ ನಮ್ಮ ಬಳ್ಳಾರಿ ಜಿಲ್ಲೆಯು ಕನ್ನಡಿಗರ ಅಲಕ್ಷತೆಯಿಂದ ತನ್ನ ಮಾತೃಭಾಷೆಯ ಪರ್ಸನ್ನು ಕಳೆದುಕೊಂಡು, ಔದ್ಯೋಗಿಕ ನೈತಿಕ ಮುಂತಾದ ಎಲ್ಲಾ ವಿಷಯಗಳಲ್ಲಿಯೂ ಅತ್ಯಂತ ಹಿಂದೆ ಬಿದ್ದಿದೆ. ಇದಕ್ಕೆ ಜಿಲ್ಲೆಯ ಹದಿನಾಲ್ಕಾಣೆ ಭಾಗಕ್ಕಿಂತಲೂ ಹೆಚ್ಚಾದ ಕನ್ನಡಿಗರ ಕರ್ತವ್ಯವಿಮುಖತೆಯೂ, ಈ ಜಿಲ್ಲೆಯ ಪ್ರಜಾಪ್ರತಿನಿಧಿಗಳಾದ ಮೆಂಬರ್ ಮಹಾಶಯರ ಕನ್ನಡಭಾಷಾ ಉದಾರಸೀನತೆಯೂ, ಮುಖ್ಯಕಾರಣವೆಂದು ಹೇಳಬಹುದು. ಇತರ ಜಿಲ್ಲೆಗಳಿಗೆ ಹೋಲಿಸಿ ನೋಡಿದರೆ ಈ ಬಳ್ಳಾರಿಯ ಕನ್ನಡಿಗರ ಸೌಖ್ಯಸಾಧನೆಗಳಸಲುವಾಗಿಯೂ ಬಳ್ಳಾರಿಜಿಲ್ಲೆಯ ಮೆಂಬರರು ಹಾಗೂ, ನೆರೆಹೊರೆಯ ಬಂಧುಗಳಾದ ಇತರ ಮೆಂಬರರೂ ಅಷ್ಟು ಪ್ರಯತ್ನಪಟ್ಟಿಲ್ಲವೆಂದೇ ಹೇಳಬಹುದು. ಎಲ್ಲಿಯವರೆಗೆ ಮಾತೃಭಾಷೆಯ ಉದ್ಧಾರವಾಗುವುದಿಲ್ಲವೋ ಅಲ್ಲಿಯವರೆಗೆ ಈ ಜಿಲ್ಲೆಯು ಉದ್ಧಾರವಾಗಲಾರದು.

ಮತದಾರರೇ ನಿಮ್ಮ ಸುವಿಚಾರಬುದ್ಧಿಯನ್ನು ಜಾಗ್ರತವಿಟ್ಟು ಸಾರಾಸಾರ ವಿಚಾರಮಾಡಿ ನಿಮ್ಮ ದೇಶದ ಹಿತದ ಕಡೆಗೆ ಲಕ್ಷ್ಯವಿಟ್ಟು ನಿಮ್ಮ ಜಿಲ್ಲೆಯ ಅರ್ಥಾತ್ ನಿಮ್ಮ ದೇಶದ ಮಾತೃಭಾಷೆಯನ್ನು ಉದ್ಧಾರಮಾಡುವ, ಸನಾತನಧರ್ಮವನ್ನು ಕಾಪಾಡುವ ದೇಶಸೇವೆಯೇ ದೇವಸೇವೆಯೆಂಬ ಭಾವನೆಯುಳ್ಳ ಸ್ವಾರ್ಥರಹಿತ ಮೆಂಬರ್ ಮಹಾಶಯರಿಗೆ ನಿಮ್ಮ ಅಮೋಘವಾದ ಮತವನ್ನು ಕೊಟ್ಟು ನಿಮ್ಮ ದೇಶವನ್ನು ಉದ್ಧಾರಮಾಡಬೇಕಾಗಿ ಸವಿನಯಸೂಚನೆ.

ಸರ್ವೇಜನಾಸ್ಸುಖಿನೋಭವಂತು.

ಪಾಟೀಲ್ ಗುರುಬಸವನಗೌಡ,
ಹೊಳಗುಂದಿ.

ಗುರಿಕಾರ್ ಮರಿಮಲ್ಲಪ್ಪನವರ ಧರ್ಮದ ಫಂಡು.

ಮೇಲ್ಕಂಡ ಫಂಡಿನಿಂದ ವಿದ್ಯಾರ್ಥಿವೇತನವನ್ನು ಪಡೆಯಲು ಅಪೇಕ್ಷಿಸುವ ಇಂಟರ್‌ಮಿಡಿಯೆಟ್ ಮತ್ತು ಇತರ ಉಚ್ಚತರಗತಿಯಲ್ಲಾಗಲಿ, ಅಥವಾ ಉಚ್ಚಕೈಗಾರಿಕೆ ಕಲೆಯನ್ನಾಗಲಿ ಅಭ್ಯಾಸಿಸುತ್ತಿರುವ ವೀರಶೈವ ವಿದ್ಯಾರ್ಥಿಗಳು ಮುಂದಿನ ಡಿಸಂಬರ್ ತಿಂಗಳು 15 ನೇ ತಾರೀಖಿನೊಳಗಾಗಿ ಇದಕ್ಕೋಸ್ಕರ ತಯಾರಾಗಿರುವ ಫಾರಂನಲ್ಲಿ ಅಪ್ಲಿಕೇಷನ್ ಬರೆದುಕೊಳ್ಳಬೇಕು.

ಸದರಿ ಅಪ್ಲಿಕೇಷನ್ ಫಾರಂಗಳು ಸೆಕ್ರೆಟರಿಯವರಲ್ಲಿ 9 ಪೈ ಪೋಸ್ಟಲ್ ಸ್ಟಾಂಪ್ ಕಳುಹಿಸಿ ಪಡೆಯಬಹುದು.

(*Sd.*) M. S. Basavalingiah, M.A., B.L.,
Hon. Secretary,
Marimallappa's Charitis, Mysore.

ತಿರುಪ್ಪೂರು ಬಳಿ ನೊಯ್ಯಾನದೀ ಪ್ರವಾಹ ಬಂದಿದ್ದಾಗ್ಯೆ ಜನಗಳು ಹೋಗಿ ನೋಡಿಕೊಂಡು ರಾತ್ರಿ ಹಿಂತಿರುಗಿ ಬರುತ್ತಿದ್ದಾಗ್ಯೆ ಪಟ್ಟಣದ ಚೌಕದಲ್ಲಿ ಒಂದು ಪ್ರಕಾಶಮಾನವಾದ ಪದಾರ್ಥವು ಸಂಚರಿಸುತಿರುವುದನ್ನು ನೋಡಿ ಹತ್ತಿರ ಹೋಗುವುದಕ್ಕೆ ಹೆದರಿದರು. ಪ್ರಕಾಶವು ಸ್ವಲ್ಪ ಹೊತ್ತು ಇದ್ದು ಮಾಯವಾಯಿತು. ಇದನ್ನು ಸಾವಿರ ವರುಷದಿಂದ ಜೀವಿಸಿರುವ ನಾಗರಹಾವಿನ ತಲೆಯಲ್ಲಿರುವ ರತ್ನದ ಪ್ರಕಾಶವಾಗಿರಬಹುದೆಂದು ಹೇಳುತ್ತಾರೆ.

ತಿರುವೆಂದಿರಂನಲ್ಲಿ ಪದ್ಮನಾಭಸ್ವಾಮಿ ದೇವಸ್ಥಾನಕ್ಕೆ ಬೆಂಕಿಹತ್ತಿ ಸುಟ್ಟುಹೋಯ್ತು. ಅಲ್ಲಿಯ ಮಹಾರಾಜರೇ ಖುದ್ದು ಬಂದು ಬಹಳ ಕಷ್ಟದಿಂದ ದೇವರ ಮೂರ್ತಿಗಳನ್ನು ಬೇರ್ಪಡಿಸಿದರು. ಅಲ್ಲಿನ ಪೋಲೀಸಿನವರೂ ಫೈರ್ ಬ್ರಿಗೇಡಿನವರೂ ಬಹಳ ಕಷ್ಟಪಟ್ಟು ಬೆಂಕಿಯನ್ನು ಆರಿಸಿದರು. ನಷ್ಟನೇನೋ ಬಹಳ ಆಗಿರುತ್ತದೆ. ಬೆಂಕಿ ಆರಿಸಲು ಮೆಹನತ್ತು ಮಾಡಿದವರಿಗೆ ಮಹಾರಾಜರು 2000 ರೂಪಾಯಿ ಬಹುಮಾನಕೊಡುವುದಕ್ಕೆ ಏರ್ಪಡಿಸಿದ್ದಾರೆ. ಸುಮಾರು 1 ಲಕ್ಷ ರೂಪಾಯಿ ನಷ್ಟವಾಗಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ದಿವಾನ್‌ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ.

1934 ನೆಯ ಇಸವಿ ಅಕ್ಟೋಬರ್ 19 ನೆಯ ತಾರೀಖು.

ಎರಡನೆಯ ಭಾಗ.

ಆಯವ್ಯಯಗಳ ಆಡಳಿತ.

1933-34ನೇ ಸಾಲಿನ ತಿದ್ದುಪಾಟಿಂದ ಆಯವ್ಯಯದ ಅಂದಾಜುಗಳನ್ನು ಕಳೆದ ಜೂನ್ ಅಧಿವೇಶನದಲ್ಲಿ ಈ ಸಭೆಯ ಸದಸ್ಯರುಗಳ ಅವಗಾಹನೆಗೆ ತರಲಾಗಿದ್ದಿತಷ್ಟೆ. ಈ ಅಂದಾಜುಗಳ ಪ್ರಕಾರ ಒಟ್ಟು 344.37 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರುವುದಾಗಿಯೂ, 365.92 ಲಕ್ಷ ರೂಪಾಯಿಗಳ ವೆಚ್ಚವು ನಡೆಯುವುದಾಗಿಯೂ ನಿರೀಕ್ಷಿಸಲ್ಪಟ್ಟಿದ್ದಿತು, ಮತ್ತು ಸಾಮಾನ್ಯ ಹುಟ್ಟುವಳಿಯ ಆಯವ್ಯಯಗಳ ವಾಸ್ತವಿಕ ಲೆಕ್ಕಗಳಲ್ಲಿ ವೆಚ್ಚಕ್ಕಿಂತಲೂ ವರಮಾನವು 21.55 ಲಕ್ಷ ರೂಪಾಯಿಗಳಷ್ಟು ಕಡಮೆಯಾಗಿರುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತು. ಆದರೆ, 1933,34 ನೆಯ ಸಾಲಿನ ಆಯವ್ಯಯಗಳ ಆಡಳಿತಕ್ಕೆ ಸಂಬಂಧಪಟ್ಟ ಕಚ್ಚಾ ಲೆಕ್ಕಗಳು ಈಗ ಸಿದ್ಧವಾಗಿವೆ. ಅವುಗಳ ಪ್ರಕಾರ ನೋಡಿದಲ್ಲಿ, ಹುಟ್ಟುವಳಿಯು 343.05 ಲಕ್ಷ ರೂಪಾಯಿಗಳಾಗಿಯೂ, ವೆಚ್ಚವು ಒಟ್ಟು 364.88 ಲಕ್ಷ ರೂಪಾಯಿಗಳಾಗಿಯೂ ಆಗುವುದೆಂದು ಕಂಡುಬಂದಿದೆ. ಎಂದರೆ, ಹುಟ್ಟುವಳಿಗೆ ಸಂಬಂಧಪಟ್ಟ ವಾಸ್ತವಿಕ ಲೆಕ್ಕಗಳ ಪ್ರಕಾರ ವರಮಾನಕ್ಕಿಂತಲೂ ವೆಚ್ಚವು 21.83 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿರುವುದಾಗಿ ಕಂಡುಬಂದಿದೆ. ತಿದ್ದುಪಾಟಾದ ಅಂದಾಜು ಲೆಕ್ಕಗಳೊಡನೆ ಹೋಲಿಸಿ ನೋಡಿದರೆ "ಜಮೀನು ಕಂದಾಯ" ದ ಬಾಬಿನಲ್ಲಿ ವಾಸ್ತವವಾಗಿ ವಸೂಲಾಗಿರತಕ್ಕ ಮೊಬಲಗು ತಿದ್ದುಪಾಟು ಅಂದಾಜಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ 2.44 ಲಕ್ಷ ರೂಪಾಯಿಗಳಷ್ಟು ಕಡಮೆ ಬಿದ್ದಿರುತ್ತದೆ "ಶ್ರೀ ಚಾಮರಾಜೇಂದ್ರ ನೀರುಸರಬರಾಯಿಯ ಕಾಮಗಾರಿಗಳು" ಎಂಬ ಬಾಬಿನಲ್ಲಿ ತಿದ್ದುಪಾಟು ಅಂದಾಜಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ 2.17 ಲಕ್ಷ ರೂಪಾಯಿಗಳಷ್ಟು ವರಮಾನವು ಕಡಮೆಯಾಗಿರುತ್ತದೆ. ಬೆಂಗಳೂರು ಸಿಟಿ ಮುನಿಸಿಪಾಲಿಟಿಯವರು ಕೊಡಬೇಕಾಗಿದ್ದ ಹಣದ ಪೈಕಿ ಸ್ವಲ್ಪ ಭಾಗವನ್ನು ಪಾವತಿಮಾಡದೆ ಹೋದುದೇ ಇದಕ್ಕೆ ಕಾರಣವಾಗಿದೆ. 1933-34 ನೆಯ ಸಾಲಿನಲ್ಲಿ ಕಬ್ಬಿಣದ ಕಾರ್ಖಾನೆಯ ಕೆಲಸ ನಡೆಸಿದುದರ ಫಲಿತಾಂಶವಾಗಿ 2.52 ಲಕ್ಷ ರೂಪಾಯಿಗಳ ನಷ್ಟವು ಸಂಭವಿಸುವುದಾಗಿ ತಿದ್ದುಪಾಟು ಅಂದಾಜಿನಲ್ಲಿ ನಿರೀಕ್ಷಿಸಲಾಗಿದ್ದಿತು. ಆದರೆ ವಾಸ್ತವವಾಗಿ 2.48 ಲಕ್ಷ ರೂಪಾಯಿಗಳು ನಷ್ಟವಾಗಿವೆ. ಕೆಲವು ಅದುರುಗಳು, ಬೀಡು ಕಬ್ಬಿಣ, ಕೊಳಾಯಿಗಳು ಇವೇ ಮುಂತಾದ ಹಳೆಯ ದಾಸ್ತಾನುಗಳ ಕಿಮ್ಮತ್ತು 2.06 ಲಕ್ಷ ರೂಪಾಯಿಗಳಷ್ಟು ಇಳಿದುಹೋಯಿತು. ಈ ಇಳುವರಿಯನ್ನು ಭರ್ತಿಮಾಡಲಾಯಿತು. ಇದರಿಂದ ಒಟ್ಟು ನಷ್ಟವು 4.54 ಲಕ್ಷ ರೂಪಾಯಿಗಳಷ್ಟು ಆದ ಹಾಗಾಯಿತು. ಆದರೆ ಈ ಬಾಬುಗಳಲ್ಲಿ, ವರಮಾನವು ಕಡಮೆಯಾದುದಕ್ಕೆ ಪ್ರತಿಯಾಗಿ ಇತರ ಕೆಲವು ಹುಟ್ಟುವಳಿಯ ಬಾಬುಗಳಲ್ಲಿ, ಎಂದರೆ, "ರೈಲ್ವೆಗಳು" "ಕೃಷ್ಣರಾಜಸಾಗರ ನೀರಾವರಿಯ ಮತ್ತು ವಿದ್ಯುಚ್ಛಕ್ತಿಯ ಕಾಮಗಾರಿಗಳು" ಮತ್ತು "ಗಂಧದ ಎಣ್ಣೆ" ಮುಂತಾದ ಬಾಬುಗಳಲ್ಲಿ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ವರಮಾನವು ಬಂದಿತು. ಸೆಕ್ಯೂರಿಟಿ ಪತ್ರಗಳ ಮಾರಾಟದ ಸಂಬಂಧದಲ್ಲಿ 22 ಲಕ್ಷ ರೂಪಾಯಿಗಳು ಬರುವುದಾಗಿ ತಿದ್ದುಪಾಟು ಅಂದಾಜಿನಲ್ಲಿ ನಿರೀಕ್ಷಿಸಲ್ಪಟ್ಟಿದ್ದಿತು. ಆದರೆ ಈ ಸಂಬಂಧವಾಗಿ 3.41 ಲಕ್ಷ ರೂಪಾಯಿಗಳ ಲಾಭವು ಬಂದಿತು. ಒಟ್ಟಿನಲ್ಲಿ ಹುಟ್ಟುವಳಿಯು ಸರ್ಕಾರದವರು ನಿರೀಕ್ಷಿಸಿದ್ದುದಕ್ಕಿಂತಲೂ 1.32 ಲಕ್ಷ ರೂಪಾಯಿಗಳಷ್ಟು ಮಾತ್ರ ಕಡಮೆ ಬಂದಿತು. ಇದಕ್ಕೆ ಪ್ರತಿಯಾಗಿ ವೆಚ್ಚದಲ್ಲಿ 1.04 ಲಕ್ಷ ರೂಪಾಯಿಗಳು ಕಡಮೆಯಾದುವು. ಅದರಲ್ಲಿಯೂ ಮುಖ್ಯವಾಗಿ "ಬಡ್ಡಿ" ಮತ್ತು "ಸೈನ್ಯ" ದ ಬಾಬುಗಳಲ್ಲಿ ವೆಚ್ಚವು ಬಹಳವಾಗಿ ಕಡಮೆಯಾಯಿತು.

ಸರ್ಕಾರದವರು ಇಷ್ಟರಲ್ಲಿ 20 ವರುಷಗಳಮೇಲೆ ಪಾವತಿಯಾಗಬಹುದಾದ ಆದರೆ 30 ವರ್ಷಗಳ ತರುವಾಯ ವಾಪಸು ಪಾವತಿಯಾಗಲೇಬೇಕಾದಂಥ, ವರಮಾನದ ತೆರಿಗೆಗೆ ಗುರಿಯಾಗದಂಥ ಮತ್ತು ಶೇಕಡ 4 ರಂತೆ ಬಡ್ಡಿಯುಳ್ಳಂಥ ಒಂದು ಪರಿವರ್ತನೆಯ ಸಾಲವನ್ನು 1933-34 ನೆಯ ಸಾಲಿನಲ್ಲಿ ಎರಡು ಕಂತುಗಳಲ್ಲಿ ಸಾದರ್‌ಪಡಿಸಲಾಯಿತು. ಸೇವಿಂಗ್ಸ್ ಬ್ಯಾಂಕಿನಲ್ಲಿ ಕೇಳಿದಾಗ ಪಾವತಿಮಾಡುವ ಚಾಲ್ತಿ ಠೇವಣಿಗಳನ್ನು ("ಸೇವಿಂಗ್ಸ್ ಬ್ಯಾಂಕ್ ಕರೆಂಟ್ ಡಿಪಾಜಿಟ್ಟು" ಗಳನ್ನು) ಇಟ್ಟಿರತಕ್ಕವರಿಗೂ ಮತ್ತು ವರ್ಷವೊಂದಕ್ಕೆ ಶೇಕಡ 4 ರಂತೆ ಬಡ್ಡಿಯುಳ್ಳ, ಅವು ಕಾಲಾವಧಿಯು ಕಳೆಯುವವರೆಗೆ ಹಿಂದಕ್ಕೆ ಹಣ ತೆಗೆದುಕೊಳ್ಳಲಾಗದ ಠೇವಣಿಗಳನ್ನು (ಫಿಕ್ಸೆಡ್ ಡಿಪಾಜಿಟ್ಟುಗಳನ್ನು) ಇಟ್ಟಿರತಕ್ಕವರಿಗೂ ಮಾತ್ರವೇ ಸಾಲಪತ್ರಗಳನ್ನು ಸಾದರ್‌ಪಡಿಸುವಂತೆ ಮೊದಲು ಏರ್ಪಾಡು ಮಾಡಲಾಗಿದ್ದಿತು. ಆದರೆ ಆ ಮೇಲೆ, ಎಲ್ಲ ಬಗೆಯ ಫಿಕ್ಸೆಡ್ ಠೇವಣಿಗಳನ್ನಿಟ್ಟವರಿಗೂ, ಶೇಕಡ 5½ ಯಂತೆ ಬಡ್ಡಿಯನ್ನುಳ್ಳ 1938 ನೆಯ ಇಸವಿಯಲ್ಲಿ ಸಾಲವು ಹಿಂದಕ್ಕೆ ಸಂದಾಯವಾಗುವ ಸರ್ಕಾರಿ ಸಾಲಪತ್ರಗಳು ಶೇಕಡ 6¼ ರಂತೆ ಬಡ್ಡಿಯನ್ನುಳ್ಳ 1940 ನೆಯ ಇಸವಿಯಲ್ಲಿ ಸಾಲವು ಹಿಂದಕ್ಕೆ ಸಂದಾಯವಾಗುವ ಸರ್ಕಾರಿ ಸಾಲಪತ್ರಗಳು ಮತ್ತು ಶೇಕಡ 6½ ಯಂತೆ ಬಡ್ಡಿಯನ್ನುಳ್ಳ 1941-51 ರ ಬಾಬತು ಸರ್ಕಾರಿ ಸಾಲಪತ್ರಗಳು—ಈ ಪತ್ರಗಳನ್ನಿಟ್ಟವರಿಗೂ ಸಹ ಈ ಹೊಸ ಪರಿವರ್ತನೆಯ ಸಾಲಪತ್ರಗಳನ್ನು ಪಡೆಯಲು ಅವಕಾಶವನ್ನು ಕೊಡಲಾಯಿತು. ಅಲ್ಲದೆ, ವಿಮೇದಾರರ ಪ್ರಯೋಜನಾರ್ಥವಾಗಿ ಜೀವವಿಮೆ ನಿಧಿಯ ಒಂದು ಭಾಗವನ್ನು ಈ ಹೊಸ ಸಾಲಪತ್ರಗಳನ್ನು ಕೊಂಡುಕೊಳ್ಳುವುದಕ್ಕಾಗಿ ವಿನಿಯೋಗಿಸಲು ಅನುಮತಿಯನ್ನು ಕೊಡಲಾಯಿತು. ಈ ರೀತಿಯಾಗಿ ಸಾದರ್‌ಪಡಿಸಲ್ಪಟ್ಟ ಪರಿವರ್ತನೆಯ ಸಾಲಪತ್ರಗಳ ಒಟ್ಟು ಮೊಬಲಗು 2,48,41,700 ರೂಪಾಯಿಗಳಾಗಿದ್ದಿತು.

ಶೇಕಡ 4 ರಂತೆ ಬಡ್ಡಿಯನ್ನುಳ್ಳ ಈ ಹೊಸ ಸಾಲಪತ್ರಗಳು ಜನಗಳ ಆದರಕ್ಕೆ ಪಾತ್ರವಾಗಿವೆ. 100 ರೂಪಾಯಿಗಳ ಮೌಲ್ಯವು ನಮೂದಿಸಲ್ಪಟ್ಟಿರತಕ್ಕ ಒಂದು ಸಾಲಪತ್ರವನ್ನು ಈಗ 107 ರಿಂದ 108 ರೂಪಾಯಿಗಳವರೆಗೂ ಬೆಲೆಗೆ ಕೇಳುತ್ತಿದ್ದಾರೆ. ಆದುದರಿಂದ ಹೆಚ್ಚು ದರದ ಬಡ್ಡಿಗಳನ್ನುಳ್ಳವಾಗಿದ್ದು, 1938 ನೆಯ ಇಸವಿಯಿಂದ 1941 ನೆಯ ಇಸವಿಯವರೆಗೆ ಇರತಕ್ಕ ಅವಧಿಯಲ್ಲಿ ಹಣವು ವಾಪಸು ಪಾವತಿಯಾಗಬೇಕಾಗಿರುವಂತಹ ಸಾಲಪತ್ರಗಳನ್ನು ಕಡಮೆ ಬಡ್ಡಿಯುಳ್ಳ ಬೇರೆ ಹೊಸ ಸಾಲಪತ್ರಗಳಿಗೆ ಪರಿವರ್ತನೆಗೊಳಿಸುವ ಏರ್ಪಾಡನ್ನು ಕೈಕೊಳ್ಳುವುದಕ್ಕೆ ಇದೇ ಸುಸಮಯವೆಂದು ಭಾವಿಸಲಾಯಿತು. ಅದರಂತೆಯೇ, ಶೇಕಡ 4 ರಂತೆ ಬಡ್ಡಿಯುಳ್ಳ ಸಾಲಪತ್ರಗಳನ್ನು ಹೊಸದಾಗಿ ಸಾದರ್‌ಪಡಿಸುವುದನ್ನು ಈಗ ಮಂಜೂರ್‌ಮಾಡಲಾಗಿದೆ. ಶೇಕಡ 5½ ಯಂತೆ ಬಡ್ಡಿಯುಳ್ಳ ಸಾಲಪತ್ರಗಳು, ಶೇಕಡ 6¼ ರಂತೆ ಬಡ್ಡಿಯುಳ್ಳ ಸಾಲಪತ್ರಗಳು ಶೇಕಡ 6½ ಯಂತೆ ಬಡ್ಡಿಯನ್ನುಳ್ಳ ಸಾಲಪತ್ರಗಳು—ಇವುಗಳನ್ನು ಶೇಕಡ 4 ರಂತೆ ಬಡ್ಡಿಯನ್ನುಳ್ಳ ಹೊಸ ಹೊಸ ಸಾಲಪತ್ರಗಳಿಗೆ ಪರಿವರ್ತನೆಗೊಳಿಸುವುದಕ್ಕೆ ಯಾರಾದರೂ ಇಷ್ಟಪಟ್ಟಲ್ಲಿ ಅಂಥವರಿಗೆ ಈ ಹೊಸ ಸಾಲಪತ್ರಗಳನ್ನು ಸಾದರ್‌ಪಡಿಸುವಂತೆ ಕಂಟ್ರೋಲರವರಿಗೆ ಅಧಿಕಾರ ಕೊಡಲಾಯಿತು. ಅಲ್ಲದೆ, ಇದರ ಜೊತೆಗೆ ಯುಕ್ತವಾದ ಒಂದು ನಗದು ಬೋನಸ್ ಹಣವನ್ನು ಕೊಡುವಂತೆಯೂ ಏರ್ಪಾಡು ಮಾಡಲಾಯಿತು. ಈ ಬೋನಸ್ ಮೊಬಲಗು ಎಷ್ಟಿರಬೇಕೆಂಬುದನ್ನು ಆಗಿಂದಾಗ್ಗೆ ಗೊತ್ತುಮಾಡಲಾಗುವುದು.

ಇದುವರೆಗೆ ಸುಮಾರು 14 ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ಸಾಲ ಪತ್ರಗಳು ಪರಿವರ್ತನೆಗಾಗಿ ಬಂದಿವೆ.

ಸೇವಿಂಗ್ಸ್ ಬ್ಯಾಂಕಿಗೆ ಠೇವಣಿಗಳು ಬಹಳವಾಗಿ ಬಂದವು. ಈ ಬಾಬಿನಲ್ಲಿ ಸಿಲ್ಕು ಮೊಬಲಗು ಕಡಿಮೆಯಾದುದಕ್ಕೆ, 1953-63 ರ ಬಾಬತು ಶೇಕಡ 4 ರಂತೆ ಬಡ್ಡಿಯುಳ್ಳ ಹೊಸ ಸಾಲಪತ್ರಗಳಿಗೆ ಈ ಠೇವಣಿಗಳನ್ನು ಪರಿವರ್ತನೆಗೊಳಿಸಿದುದೇ ಕಾರಣವಾಗಿದೆ. ಐದು ವರ್ಷಗಳ ಕಾಲದವರೆಗೆ ಇಡಲ್ಪಟ್ಟಿರತಕ್ಕ ಠೇವಣಿಗಳ ಮೇಲೆ, 1933 ನೆಯ ಇಸವಿ ಜುಲೈ 1 ನೇ ತಾರೀಖಿನ ದಿನ ಬಡ್ಡಿಯ ದರವು ಶೇಕಡ 4 ರಂತೆ ಇದ್ದಿತು. ಅದನ್ನು 1933 ನೆಯ ಇಸವಿ ಅಕ್ಟೋಬರ್ 13 ನೇ ತಾರೀಖಿನ ಲಾಗಾಯತು ಶೇಕಡ 3¾ ಕ್ಕೆ ತಗ್ಗಿಸಲಾಯಿತು. 1934 ನೆಯ ಇಸವಿ ಫೆಬ್ರುವರಿ 13 ನೇ ತಾರೀಖಿನ ಲಾಗಾಯತು ಅದನ್ನು ಶೇಕಡ 3½ ಗೆ ತಗ್ಗಿಸಲಾಯಿತು.

ಭೂಕಂದಾಯ.

ಭೂಕಂದಾಯದ ಬಾಬಿನಲ್ಲಿ, ಹಿಂದಿನ ವರುಷಗಳ ಬಾಕಿಗಳನ್ನೂ ಸೇರಿಸಿಕೊಂಡು, ಒಟ್ಟು 1,43,98,138 ರೂಪಾಯಿಗಳಷ್ಟು ಹಣವು ವಸೂಲಾಗಬೇಕಾಗಿದ್ದಿತು; ಆದರೆ 1932-33 ನೆಯ ಸಾಲಿನಲ್ಲಿ ವಸೂಲಾಗಬೇಕಾಗಿದ್ದ ಮೊಬಲಗು 1,47,53,986 ರೂಪಾಯಿಗಳಾಗಿದ್ದಿತು. ಪ್ರಸಕ್ತ ಸಾಲಿನಲ್ಲಿ ವಸೂಲಾಗಬೇಕಾಗಿದ್ದ ಮೊಬಲಗಿನ ಪೈಕಿ, ಕಂದಾಯವನ್ನು ಮಾಫೀ ಬಿಟ್ಟ ಮೊಬಲಗೂ ಸೇರಿ 1,23,11,409 ರೂಪಾಯಿಗಳು ವಸೂಲಾದವು; ಆದರೆ 1932-33 ನೆಯ ಸಾಲಿನಲ್ಲಿ 1,31,86,292 ರೂಪಾಯಿಗಳು ಮಾತ್ರ ವಸೂಲಾಗಿದ್ದುವು. ಪ್ರಸಕ್ತ ವರ್ಷದ ಅಖೈರಿನಲ್ಲಿ 20,86,729 ರೂಪಾಯಿಗಳು ವಸೂಲಾಗದೆ ಬಾಕಿ ನಿಂತಿದ್ದುವು.

"ಪ್ಲಾಂಟರ್ಸ್ ಅಸೋಸಿಯೇಷನ್" ಎಂಬ ಸಂಘದವರು ಅರಿಕೆಮಾಡಿಕೊಂಡುದರ ಮೇಲೆ ತೇಯಲೆ (ಟೀ) ವ್ಯವಸಾಯಕ್ಕಾಗಿ ಸಂಸ್ಥಾನದಲ್ಲಿ ಹೊಸದಾಗಿ ಜಮೀನುಗಳನ್ನು ಕೊಡುವುದನ್ನು ನಿಲ್ಲಿಸಲಾಯಿತು.

ಜಮೀನುಗಳಿಗಾಗಿ ಹಾಕಿಕೊಳ್ಳಲ್ಪಟ್ಟಿದ್ದ 17,240 ದರಖಾಸ್ತುಗಳ ಪೈಕಿ, 13,334 ದರಖಾಸ್ತುಗಳು ಫೈಸಲಾದುವು. ಸೈನ್ಯದ ಇಲಾಖೆಯಲ್ಲಿರುವವರಿಂದ ಜಮೀನಿಗೋಸ್ಕರ ಬಂದ 168 ದರಖಾಸ್ತುಗಳ ಪೈಕಿ, 78 ದರಖಾಸ್ತುಗಳನ್ನು ತಿರಸ್ಕರಿಸಲಾಯಿತು ಮತ್ತು 39 ದರಖಾಸ್ತುಗಳ ವಿಷಯದಲ್ಲಿ ದರಖಾಸ್ತುದಾರರಿಗೆ ಜಮೀನುಗಳನ್ನು ಕೊಡಲಾಯಿತು. ಆದಿಕರ್ನಾಟಕರಿಗೆ, ರಿಯಾಯಿತಿ ನಿಬಂಧನೆಗಳಿಗನುಸಾರವಾಗಿ, 5,601 ಎಕರೆಗಳಷ್ಟು ವಿಸ್ತೀರ್ಣವುಳ್ಳ ಜಮೀನನ್ನು ಕೊಡಲಾಯಿತು.

ಪಾಪಾಸುಕಳ್ಳಿಯ ಗಿಡಗಳಿಗೆ ಕಿರಿಮಂಜಿ ಹುಳುಗಳನ್ನು ಬಿಟ್ಟು ಆ ಗಿಡವನ್ನು ನಿರ್ಮೂಲಮಾಡುವ ಪ್ರಯತ್ನವು, ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಫಲಕಾರಿಯಾಗಿ ಪರಿಣಮಿಸಿದೆ. ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಹಲವು ಗ್ರಾಮಗಳಲ್ಲಿ ಬೆಳೆದಿರುವ ಲಾಂಟಾನಾಗಿಡವನ್ನು ಕತ್ತರಿಸಿ, ಅದು ಹರಡದಂತೆ ಮಾಡುವ ಕಾರ್ಯವನ್ನು, ಗ್ರಾಮಾಭಿವೃದ್ಧಿಯ ಏರ್ಪಾಡಾಗಿ ಆಯಾ ಗ್ರಾಮಪಂಚಾಯತಿಯವರೇ ನಡೆಯಿಸುತ್ತಲಿದ್ದಾರೆ. ಪ್ರಸಕ್ತ ಸಾಲಿನಲ್ಲಿ 125 ಕೆರೆ ಪಂಚಾಯತಿಗಳಿದ್ದುವು.

ಪ್ರಸಕ್ತ ಸಾಲಿನಲ್ಲಿ 7 ತಾಲ್ಲೂಕುಗಳಲ್ಲಿ ಜಮೀನು ಹಕ್ಕುಗಳ ದಾಖಲಾತಿಯ ಏರ್ಪಾಡು ಜಾರಿಗೆ ಬರುವಂತೆ ಮಾಡಲಾಯಿತು. ಈ ಏರ್ಪಾಡು ಇದುವರೆಗೆ ಒಟ್ಟು 49 ತಾಲ್ಲೂಕುಗಳಲ್ಲಿ ಈಗ ಜಾರಿಯಲ್ಲಿರುತ್ತದೆ.

ಪರಸ್ಪರ ಸಹಾಯ ಸಂಘಗಳ ಬಾಬತು, 10,69,627 ರೂಪಾಯಿಗಳು ವಸೂಲಾಗಬೇಕಾಗಿದ್ದ 5,882 ಡಿಕ್ರಿಗಳ ವಿಷಯದಲ್ಲಿ ಜಾರಿಕ್ರಮ ನಡೆಸಬೇಕಾಗಿದ್ದಿತು. ಅವುಗಳ ಪೈಕಿ 4,59,152 ರೂಪಾಯಿಗಳು ವಸೂಲಾಗಬೇಕಾಗಿದ್ದ 2,734 ಡಿಕ್ರಿಗಳು ಫೈಸಲಾದುವು.

ರೈತರಿಗೆ ಉಂಟಾಗಿರುವ ತೊಂದರೆಯನ್ನು ಪರಿಹರಿಸುವುದಕ್ಕಾಗಿ, ವ್ಯವಸಾಯಗಾರರ ಕಷ್ಟನಿವಾರಣೆಯ ರೆಗ್ಯುಲೇಷನು ಸಂಸ್ಥಾನಕ್ಕೆಲ್ಲ ಅನ್ವಯಿಸುವಂತೆ ಮಾಡಲಾಗಿದೆ. ಅಲ್ಲದೆ ಕಷ್ಟನಿವಾರಣೆಯ ಇತರ ಕೆಲವು ಏರ್ಪಾಡುಗಳನ್ನೂ ಸಹ ಮಂಜೂರ್‌ಮಾಡಲಾಗಿದೆ. ತರೀಜಮೀನುಗಳ ಮೇಲಿನ ಕಂದಾಯವನ್ನು ಮಾಫೀಬಿಡುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು ತಿದ್ದುಪಾಟು ಮಾಡಲಾಯಿತು. ಅಲ್ಲದೆ ಯಾವುದಾದರೊಂದು ಸರುಸದಲ್ಲಿ ಫಸಲಾಗದಿದ್ದ ಪಕ್ಷದಲ್ಲಿ, ಅಂಥ ಸಂದರ್ಭಗಳಲ್ಲಿ ಕಂದಾಯವನ್ನು ಮಾಫೀಬಿಡುವಂತೆ ಸಲಹೆಮಾಡಬಹುದೆಂದು ಅಪ್ಪಣೆ ಮಾಡಲಾಯಿತು. ಬಹಳವಾಗಿ ಮಳೆಯಾದುದರಿಂದಾಗಲಿ ಅಥವಾ ಇತರ ಯಾವುದಾದರೂ ವಿಶೇಷರೀತಿಯ ಕಾರಣಗಳಿಂದಾಗಲಿ, ಸಾರ್ವತ್ರಿಕವಾಗಿ ಬೆಳೆಯಾಗದೆಹೋದ ಪ್ರದೇಶಗಳ ವಿಷಯದಲ್ಲಿ, ಸಾಮಾನ್ಯವಾದ ನಿಬಂಧನೆಗಳನ್ನು ಗಣನೆಗೆ ತೆಗೆದುಕೊಳ್ಳದೆ, ವಿಶೇಷರೀತಿಯ ಸಂದರ್ಭವೆಂದೆಣಿಸಿ, ಕಂದಾಯಗಳನ್ನು ಮಾಫೀಬಿಡುವಂತೆ ಹುಕುಂ ಮಾಡಲಾಯಿತು. ಜಮೀನು ಹಕ್ಕುಗಳ ದಾಖಲಾತಿಯ ಫೀಜುಗಳನ್ನು ವಸೂಲ್‌ಮಾಡುವ ವಿಷಯದಲ್ಲಿ, ಕಚ್ಚಾ ದಾಖಲೆಗಳೆಲ್ಲವೂ ಪೂರೈಸಿದ ದಿನದಿಂದ ಒಂದು ವರುಷವಾದ ಮೇಲೆ ಅದನ್ನು ವಸೂಲ್‌ಮಾಡುವುದಕ್ಕೆ ಪ್ರಾರಂಭಿಸಬೇಕೆಂದು ಹುಕುಂ ಮಾಡಲಾಯಿತು. ಅಲ್ಲದೆ, ರೈತರುಗಳು ಇಷ್ಟಪಟ್ಟಲ್ಲಿ, ಈ ಮೊಬಲಗನ್ನು ಸಮವಾದ ಮೂರು ವಾರ್ಷಿಕ ಕಂತುಗಳಿಗೆ ವಿಭಾಗಿಸಿ ಪಾವತಿಮಾಡುವುದಕ್ಕೆ ಅವಕಾಶಕೊಡಲಾಯಿತು. ಪರಂತು, ಹಾಗೆ ಸಂದಾಯಮಾಡತಕ್ಕ ಪ್ರತಿಯೊಂದು ಕಂತಿನ ಮೊಬಲಗು ಕನಿಷ್ಠಪಕ್ಷ 2 ರೂಪಾಯಿಗಳಾದರೂ ಆಗಿರಬೇಕೆಂದು ಗೊತ್ತುಮಾಡಲಾಯಿತು. ಜಮೀನು ಅಡಮಾನದ ಸಾಲಗಳ ರೆಗ್ಯುಲೇಷನಿನ ಮೇರೆಗೆ ಕೊಡುವ ಸಾಲಗಳ ಮೇಲಿನ ಸಾದಾ ಬಡ್ಡಿಯ ದರವನ್ನು ಶೇಕಡ 6½ ಯಿಂದ 5½ ಗೂ, ಮತ್ತು ಸುಸ್ತಿ ಬಡ್ಡಿಯ ದರವನ್ನು ಶೇಕಡ 8 ರಿಂದ 6½ ಗೂ, 1934 ನೆಯ ಇಸವಿ ಜನವರಿ 1 ನೇ ತಾರೀಖಿನಿಂದ ಒಂದು ವರುಷದವರೆಗೆ ತಗ್ಗಿಸಲಾಗಿದೆ. ಸಾಲದ ಕಂತುಗಳನ್ನು ವಾಪಸು ಪಾವತಿಮಾಡುವುದಕ್ಕೂ, ಕಂಟ್ರಿಬ್ಯೂಷನ್ ಮೊಬಲಗನ್ನು ಸಂದಾಯಮಾಡುವುದಕ್ಕೂ ಮತ್ತು ಕೆರೆಯ ರಕ್ಷಣೆಯ ವೆಚ್ಚಗಳನ್ನು ಸಂದಾಯಮಾಡುವುದಕ್ಕೂ ಸಾಕಾದಷ್ಟು ವಾಯಿದೆಯನ್ನು ಯುಕ್ತವಾದ ಸಂದರ್ಭಗಳಲ್ಲಿ ಕೊಡಲಾಯಿತು. ಭಾರಿ ಕಂದಾಯದ ಮೊಬಲಗುಗಳನ್ನು ಪಾವತಿಮಾಡಬೇಕಾಗಿರುವ ಜನಗಳಿಗೆ ತಕ್ಕಷ್ಟು ವಾಯಿದೆಯನ್ನು ಕೊಡುವುದಕ್ಕೆ ಡೆಪ್ಯುಟಿ ಕಮಿಷನರುಗಳಿಗೆ ಅಧಿಕಾರ ಕೊಡಲಾಯಿತು. ಕಂದಾಯವನ್ನು ವಸೂಲ್‌ಮಾಡುವುದರಲ್ಲಿ ನಿರ್ಬಂಧಕವಾದ ಜಾರಿಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದನ್ನು ಬಹಳಮಟ್ಟಿಗೆ ಕಡಮೆಮಾಡಲಾಯಿತು.

ಎಕ್ಸೈಜು ಇಲಾಖೆ.

ಪ್ರಸಕ್ತ ಸಾಲಿನಲ್ಲಿ ಎಕ್ಸೈಜು ಬಾಬಿನಿಂದ 57,25,563 ರೂಪಾಯಿಗಳ ಹುಟ್ಟುವಳಿಯು ಬಂದಿತು; 1932-33 ನೆಯ ಸಾಲಿನಲ್ಲಿ ಈ ಬಾಬಿನಲ್ಲಿ 58,60,093 ರೂಪಾಯಿಗಳ ಹುಟ್ಟುವಳಿಯು ಬಂದಿದ್ದಿತು; ಎಂದರೆ, 1932-33 ನೆಯ ಸಾಲಿಗಿಂತಲೂ ಪ್ರಸಕ್ತ ಸಾಲಿನಲ್ಲಿ 1,35,000 ರೂಪಾಯಿಗಳಷ್ಟು ಹುಟ್ಟುವಳಿಯು ಕಡಮೆಯಾಗಿದೆ. ಮುಖ್ಯವಾಗಿ "ಮಾದಕ ದ್ರವ್ಯಗಳ ಮೇಲಿನ ಸುಂಕ" ಎಂಬ ಬಾಬಿನಲ್ಲಿ ಹುಟ್ಟುವಳಿಯು ಕಡಮೆಯಾಗಿದೆ. ಸಾರಾಯಿ ಮತ್ತು ಹೆಂಡ ಇವುಗಳ ಸೇವನೆಯು ಕಡಮೆಯಾದುದೇ ಇದಕ್ಕೆ ಕಾರಣ. ಮದ್ಯವನ್ನು ಮಾರುತ್ತಿದ್ದ 59 ಅಂಗಡಿಗಳು ಪ್ರಸಕ್ತ ವರ್ಷ ಮುಚ್ಚಲ್ಪಟ್ಟುವು. ಕಾರ್ಖಾನೆಯಿಂದ ತಯಾರಿಸಿದ ಸಾರಾಯಿಯ ಸೇವನೆಯು 14,785 ಗ್ಯಾಲನ್ನುಗಳಷ್ಟು ಕಡಿಮೆಯಾಗಿದೆ. ವಿಶೇಷರ ಮಾದಕದ್ರವ್ಯಗಳು, ಗಾಂಜಾ ಮತ್ತು ಅಫೀಮು—ಇವುಗಳ ಸೇವನೆಯೂ ಕೂಡ ಕಡಮೆಯಾಗಿದೆ. ಎಕ್ಸೈಜು ಬಾಬಿನಿಂದ ಸಂಸ್ಥಾನದ ಪ್ರಜಾಸಂಖ್ಯೆಯಲ್ಲಿ ತಲೆಯೊಂದಕ್ಕೆ ಸರಾಸರಿ ಬೀಳತಕ್ಕ ತೆರಿಗೆಯು 14 ಆಣೆ 3 ಕಾಸುಗಳಾಗಿದೆ. 1932-33 ನೆಯ ಸಾಲಿನಲ್ಲಿ ಇದು 14 ಆಣೆ 7 ಕಾಸುಗಳಷ್ಟಿದ್ದಿತು. ಮಾದಕದ್ರವ್ಯಗಳನ್ನು ತಯಾರಿಸತಕ್ಕ ಮತ್ತು ಒದಗಿಸತಕ್ಕ ಕಂಟ್ರಾಕ್ಟನ್ನು (ಗುತ್ತಿಗೆಯನ್ನು) ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆಯವರಿಗೆ ವಹಿಸಿಕೊಡಲಾಗಿದೆ.

ವರಮಾನದ ತೆರಿಗೆ.

1932-33 ನೆಯ ಸಾಲಿನಲ್ಲಿ ವಸೂಲಾಗದೆ ಬಾಕಿನಿಂತಿದ್ದ ಮೊಬಲಗೂ ಸೇರಿ ವರಮಾನದ ತೆರಿಗೆಯ ಬಾಬಿನಲ್ಲಿ ಒಟ್ಟು 14,42,897 ರೂಪಾಯಿಗಳೂ ಮತ್ತು ಸೂಪರ್‌ಟ್ಯಾಕ್ಸ್ ಬಾಬಿನಲ್ಲಿ ಒಟ್ಟು 6,13,833 ರೂಪಾಯಿಗಳೂ ಪ್ರಸಕ್ತ ಸಾಲಿನಲ್ಲಿ ವಸೂಲಾಗಬೇಕಾಗಿದ್ದುವು; 1932-33 ನೆಯ ಸಾಲಿನಲ್ಲಿ ಈ ರೀತಿ ವಸೂಲಾಗಬೇಕಾಗಿದ್ದ ಒಟ್ಟು ಮೊಬಲಗು ವರಮಾನದ ತೆರಿಗೆಯ ಬಾಬಿನಲ್ಲಿ 9,20,435 ರೂಪಾಯಿಗಳೂ ಮತ್ತು ಸೂಪರ್ ಟ್ಯಾಕ್ಸ್ ಬಾಬಿನಲ್ಲಿ 3,07,764 ರೂಪಾಯಿಗಳೂ ಆಗಿದ್ದುವು.

ಪ್ರಸಕ್ತ ಸಾಲಿನಲ್ಲಿ, ವರಮಾನದ ತೆರಿಗೆಯ ಬಾಬಿನಲ್ಲಿ ಒಟ್ಟು 13,14,938 ರೂಪಾಯಿಗಳೂ ಮತ್ತು ಸೂಪರ್ ಟ್ಯಾಕ್ಸ್ ಬಾಬಿನಲ್ಲಿ ಒಟ್ಟು 6,12,271 ರೂಪಾಯಿಗಳೂ ವಸೂಲಾದುವು. ವರಮಾನದ ತೆರಿಗೆಯ ಸಂಬಂಧವಾಗಿ 621 ಅಪೀಲುಗಳೂ ಮತ್ತು ಪುನರ್ವಿಮರ್ಶೆಗಾಗಿ ಹಾಕಲ್ಪಟ್ಟ 56 ಅರ್ಜಿಗಳೂ ತೀರ್ಮಾನವಾಗಬೇಕಾಗಿದ್ದುವು; ಅವುಗಳ ಪೈಕಿ 550 ಅಪೀಲು ಮೊಕದ್ದಮೆಗಳನ್ನೂ ಮತ್ತು ಪುನರ್ವಿಮರ್ಶೆಗಾಗಿ ಹಾಕಿದ 32 ಅರ್ಜಿಗಳನ್ನೂ ತೀರ್ಮಾನ ಮಾಡಲಾಯಿತು.

ರಿಜಿಸ್ಟ್ರೇಷನ್ ಇಲಾಖೆ.

ಪ್ರಸಕ್ತ ಸಾಲಿನಲ್ಲಿ ಒಟ್ಟು 1,21,497 ದಸ್ತಾವೇಜುಗಳು ರಿಜಿಸ್ಟರು ಮಾಡಲ್ಪಟ್ಟುವು; 1932-33 ನೆಯ ಸಾಲಿನಲ್ಲಿ 1,34,345 ದಸ್ತಾವೇಜುಗಳು ರಿಜಿಸ್ಟರಾಗಿದ್ದುವು. ಎಂದರೆ ರಿಜಿಸ್ಟರು ಮಾಡಲ್ಪಟ್ಟಿರುವ ದಸ್ತಾವೇಜುಗಳ ಸಂಖ್ಯೆಯು ಶೇಕಡ 9.4 ರಷ್ಟು ಕಡಮೆಯಾದಹಾಗಾಯಿತು. ಈ ಇಲಾಖೆಯಲ್ಲಿ 2,62,036 ರೂಪಾಯಿಗಳು 1933-34 ನೆಯ ಸಾಲಿನಲ್ಲಿ ಹುಟ್ಟುವಳಿಯಾಗಿವೆ. 1932-33 ನೆಯ ಸಾಲಿನಲ್ಲಿ 3,04,404 ರೂಪಾಯಿಗಳ ಹುಟ್ಟುವಳಿಯಾಗಿದ್ದಿತು. ರಿಜಿಸ್ಟರಾದ ದಸ್ತಾವೇಜುಗಳ ಸಂಖ್ಯೆಯೂ ಮತ್ತು ಆ ಮೂಲಕ ಇಲಾಖೆಯಲ್ಲಿನ ಹುಟ್ಟುವಳಿಯೂ ಕಡಮೆಯಾಗಿರುವುದಕ್ಕೆ ಒಂದೇ ಸಮನಾಗಿ ಒದಗಿರತಕ್ಕ ವ್ಯಾಪಾರದ ಮುಗ್ಗಟ್ಟೇ ಮುಖ್ಯಕಾರಣವೆಂದು ವರದಿಯಾಗಿದೆ.

ಸ್ಟಾಂಪು ಇಲಾಖೆ.

1933-34 ನೆಯ ಸಾಲಿನಲ್ಲಿ ಸ್ಟಾಂಪು ಬಾಬಿನಿಂದ 19,33,500 ರೂಪಾಯಿಗಳ ಒಟ್ಟು ಹುಟ್ಟುವಳಿಯಾಗಿದೆ; 1932-33 ನೆಯ ಸಾಲಿನಲ್ಲಿ ಈ ಬಾಬಿನಲ್ಲಿ 21,69,800 ರೂಪಾಯಿಗಳ ಹುಟ್ಟುವಳಿಯಾಗಿದ್ದಿತು. ಎಂದರೆ ಪ್ರಸಕ್ತ ಸಾಲಿನಲ್ಲಿ ಹುಟ್ಟುವಳಿಯು 2,36,300 ರೂಪಾಯಿಗಳಷ್ಟು ಕಡಮೆಯಾಗಿದೆ. ಸ್ಟಾಂಪು ಬಾಬಿನಲ್ಲಿಯೂ ಸಹ ಹುಟ್ಟುವಳಿಯು ಕಡಮೆಯಾಗುವುದಕ್ಕೆ ಈಗ ಒದಗಿರುವ ದುಸ್ಥಿತಿಯು ಕಾರಣವಾಗಿದೆ. ಸಂಘಗಳ ರಿಜಿಸ್ಟ್ರೇಷನ್ ರೆಗ್ಯುಲೇಷನಿನ ಮೇರೆಗೆ ರಿಜಿಸ್ಟರು ಮಾಡಲ್ಪಟ್ಟ ಸಂಘಗಳ (ಸೊಸೈಟಿಗಳ) ವಿಷಯದಲ್ಲಿ ರಂಜನ ವಿನೋದಗಳ ತೆರಿಗೆಯು ಅನ್ವಯಿಸದಂತೆ ಅವುಗಳಿಗೆ ವಿನಾಯಿತಿಯನ್ನು ಕೊಡಲಾಯಿತು.

ಕೋರ್ಟುಗಳು.

1933-34 ನೆಯ ಸಾಲಿನಲ್ಲಿ 37,780 ಸಿವಿಲ್ ಮೊಕದ್ದಮೆಗಳೂ ಮತ್ತು 24,999 ಕ್ರಿಮಿನಲ್ ಮೊಕದ್ದಮೆಗಳೂ ದಾಖಲ್‌ಮಾಡಲ್ಪಟ್ಟುವು; ಈ ಕ್ರಿಮಿನಲ್ ಮೊಕದ್ದಮೆಗಳಲ್ಲಿ 42,838 ಜನರು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು.

ಕ್ರಿಮಿನಲ್ ಬಾಬಿನಲ್ಲಿಯೂ ಮತ್ತು "ಸ್ಮಾಲ್ ಕಾಜು" ಬಾಬಿನಲ್ಲಿಯೂ ಕೂಡ ದಾಖಲಾದ ದಾವೆಗಳ ಸಂಖ್ಯೆಯು 1932-33 ನೆಯ ಸಾಲಿನದ್ದುದಕ್ಕಿಂತಲೂ ಶೇಕಡ 13.7 ರಷ್ಟು ಕಡಮೆಯಾಯಿತು. ಕ್ರಿಮಿನಲ್ ಮೊಕದ್ದಮೆಗಳ ಸಂಬಂಧವಾಗಿಯೂ ಕೂಡ ಅಪರಾಧಿಗಳ ಸಂಖ್ಯೆಯು ಶೇಕಡ 6.2 ರಷ್ಟು ಮತ್ತು ವಿಚಾರಣೆಗೆ ಗುರಿಮಾಡಲ್ಪಟ್ಟ ಜನರ ಸಂಖ್ಯೆಯು ಶೇಕಡ 7.4 ರಷ್ಟು ಕಡಮೆಯಾಗಿವೆ. ತಪ್ಪು ಸಾಬೀತಾಗಿ ಶಿಕ್ಷೆ ವಿಧಿಸಲ್ಪಟ್ಟ ಸಂದರ್ಭಗಳ ಸಂಖ್ಯೆಯು ಶೇಕಡ 2.3 ರಷ್ಟು ಹೆಚ್ಚಿದೆ.

ಕೋಲಾರ, ಚಿತ್ರದುರ್ಗ ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿರುವ ಮೊದಲನೆಯ ತರಗತಿಯ ಮ್ಯಾಜಿಸ್ಟ್ರೇಟರುಗಳು, 1934 ನೆಯ ಇಸವಿ ಮಾರ್ಚಿ 1 ನೆಯ ತಾರೀಖಿನಿಂದ, ಆಯಾ ಡಿಸ್ಟ್ರಿಕ್ಟಿನ ಸಿವಿಲ್ ಅಪೀಲು ಮೊಕದ್ದಮೆಗಳನ್ನು ಹಿಡಿದು ವಿಚಾರಣೆ ನಡೆಸಬಹುದೆಂದು ಅವರಿಗೆ ಅಧಿಕಾರಕೊಟ್ಟಿದೆ; ಕಕ್ಷಿಗಾರರಿಗೆ ಅನಾವಶ್ಯಕವಾಗಿ ತಗಲುವ ವೆಚ್ಚವನ್ನು ತಪ್ಪಿಸುವುದಕ್ಕಾಗಿ ಹೀಗೆ ಅಪ್ಪಣೆ ಮಾಡಲಾಗಿದೆ.

ಸಕಲೇಶಪುರದಲ್ಲಿದ್ದ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ಹಂಗಾಮಿಯಾಗಿ ವಜಾಮಾಡಲಾಯಿತು. ಶಿವಮೊಗ್ಗೆಯಲ್ಲಿ ಹಾಲಿ ಇರುವ ಮುನ್ಸೀಫರ ಕೋರ್ಟಿನ ಜೊತೆಗೆ ಹಂಗಾಮಿಯಾಗಿ ಒಂದು ವರುಷಕಾಲ ಇರುವಂತೆ ಒಂದು ಅಡಿಷನಲ್ ಮುನ್ಸೀಫರ ಕೋರ್ಟನ್ನು ಏರ್ಪಡಿಸಲಾಯಿತು.

ಬೆಂಗಳೂರು ನಗರದಲ್ಲಿ ಮುನ್ಸಿಪಲ್ ಮೊಕದ್ದಮೆಗಳ ಇತ್ಯರ್ಥವಾಗಲು ಕಾಲವಿಳಂಬವಾಗುತ್ತಿರುವುದನ್ನು ತಪ್ಪಿಸುವುದಕ್ಕಾಗಿಯೂ ಮತ್ತು ಈಗಿರುವ ಒಬ್ಬ ಸಿಟಿ ಮ್ಯಾಜಿಸ್ಟ್ರೇಟರಿಗೆ ಅವರು ನಿರ್ವಹಿಸಬಹುದಾದುದಕ್ಕಿಂತಲೂ ಹೆಚ್ಚು ಕೆಲಸವಿದ್ದುದರಿಂದ ಅದನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡಬೇಕೆಂಬ ಉದ್ದೇಶದಿಂದಲೂ ಬೆಂಗಳೂರು ನಗರದಲ್ಲಿ, ಒಂದು ವರ್ಷಕಾಲ ಇರುವಂತೆ, ಎರಡನೆಯ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟೊಂದನ್ನು ಏರ್ಪಡಿಸಲಾಯಿತು.

ಕೋರ್ಟಿನವರು ಸಂಚಾರಹೊರಟು ಮೊಕದ್ದಮೆಗಳು ನಡೆದ ಆಯಾ ತಾಲ್ಲೂಕುಗಳಲ್ಲಿಯೇ ಅವುಗಳನ್ನು ವಿಚಾರಣೆ ಮಾಡತಕ್ಕ (ಏಟಿನರೇಷನ್) ಏರ್ಪಾಡಿನಿಂದ ಕಕ್ಷಿಗಾರರಿಗೂ ಮತ್ತು ಸಾಕ್ಷಿಗಳಿಗೂ ಅನುಕೂಲವುಂಟಾಗಬಹುದಾಗಿಯೂ ಮತ್ತು ಕ್ರಿಮಿನಲ್ ಮೊಕದ್ದಮೆಗಳು ಜಾಗ್ರತೆಯಾಗಿ ಇತ್ಯರ್ಥವಾಗುವುದಕ್ಕೆ ಇದರಿಂದ ಅನುಕೂಲವಾಗುತ್ತದೆಂದೂ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರುಗಳ ಪೈಕಿ ಬಹುಮಂದಿ ಅಭಿಪ್ರಾಯಪಟ್ಟರು. ಹೈಕೋರ್ಟಿನವರೂ ಕೂಡ ಇದೇ ರೀತಿ ಅಭಿಪ್ರಾಯಪಟ್ಟರು. ಆ ಏರ್ಪಾಡು ಎಂದಿನಂತೆ 1933-34 ನೆಯ ಸಾಲಿನಲ್ಲಿಯೂ ಆಚರಣೆಯಲ್ಲಿದ್ದಿತು.

ರಾಬರ್ಟ್‌ಸನ್‌ಪೇಟೆಯಲ್ಲಿರುವ ಮುನ್ಸೀಫರಿಗೆ ಅವರು ನಿರ್ವಹಿಸಬಹುದಾದುದಕ್ಕಿಂತಲೂ ಹೆಚ್ಚು ಕೆಲಸವಿದ್ದುದರಿಂದ ಅದನ್ನು ಸ್ವಲ್ಪಮಟ್ಟಿಗೆ ಕಡಮೆಮಾಡುವುದಕ್ಕಾಗಿ ರಾಬರ್ಟ್‌ಸನ್‌ಪೇಟೆಯಲ್ಲಿರುವ ಮೊದಲನೆಯ ತರಗತಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನು ಅಡಿಷನಲ್ ಮುನ್ಸೀಫರನ್ನಾಗಿ ನೇಮಕಮಾಡಿದೆ.

ಸಿವಿಲ್ ಕೋರ್ಟುಗಳ ಆಡಿಟರ ಹುದ್ದೆಯನ್ನು ಕೆಲವುಕಾಲದ ಹಿಂದೆ ವಜಾಮಾಡಲಾಗಿದ್ದಿತಷ್ಟೆ; ಅದನ್ನು ಪುನಃ ಏರ್ಪಡಿಸುವುದು ಅವಶ್ಯಕವೆಂದು ಪರಿಗಣಿಸಿ, ಮೊದಲಿನಂತೆ ಸಿವಿಲ್ ಕೋರ್ಟುಗಳಲ್ಲಿನ ಹಣಕಾಸಿನ ಲೆಕ್ಕಗಳ ಸ್ಥಳೀಯ ಆಡಿಟ್ ಕೆಲಸವನ್ನು ಪುನಃ ನಡೆಯಿಸುವುದಕ್ಕಾಗಿ ಕಂಟ್ರೋಲರವರ ಆಫೀಸಿಗೆ ಸೇರಿದ ಸ್ಥಳೀಯ ಆಡಿಟ್ ಶಾಖೆಯಲ್ಲಿ ಕೆಲಸಮಾಡುತ್ತಿರುವ ತಕ್ಕ ಅರ್ಹತೆಯುಳ್ಳ ಒಬ್ಬ ನೌಕರರನ್ನು ಕಳುಹಿಸಿಕೊಡತಕ್ಕದ್ದೆಂದು 1933ನೆಯ ಇಸವಿ ಅಕ್ಟೋಬರು ತಿಂಗಳಲ್ಲಿ ಹುಕುಂ ಕೊಡಲಾಯಿತು.

ಪೋಲೀಸು ಇಲಾಖೆ.

ಪೋಲೀಸು ಇಲಾಖೆಯಲ್ಲಿನ ಖಾಯಂ ಸಿಬ್ಬಂದಿಯಲ್ಲಿ 968 ಮಂದಿ ಆಫೀಸರುಗಳೂ, 5,485 ಮಂದಿ ಕಾನ್‌ಸ್ಟೇಬಲು ಮುಂತಾದ ನೌಕರರುಗಳೂ ಇರುವಂತೆ ಮಂಜೂರಾಗಿದ್ದಿತು. ಈ ಸಿಬ್ಬಂದಿಯ ವೆಚ್ಚದ ಮೊಬಲಗು, ಸಲಕರಣೆಗಳ ಮತ್ತು ಉಡುಪುಗಳ ವೆಚ್ಚವೂ ಸೇರಿ ಸುಮಾರು ರೂ. 17,63,894-1-0 ಗಳಾಗಿದ್ದಿತು. ಪ್ರಸಕ್ತ ವರ್ಷದಲ್ಲಿ ವಾರಂಟಿಲ್ಲದೆ ದಸ್ತಗಿರಿ ಮಾಡಬಹುದಾಗಿದ್ದು ಪೋಲೀಸಿನವರಿಗೆ ವರದಿಮಾಡಲ್ಪಟ್ಟ ತಕ್ಸೀರುಗಳ ಒಟ್ಟು ಸಂಖ್ಯೆಯು 12,093 ಆಗಿದ್ದಿತು. 1932-33ನೆಯ ಸಾಲಿನಲ್ಲಿ ನಡೆದ ತಕ್ಸೀರುಗಳ ಸಂಖ್ಯೆಗೆ ಹೋಲಿಸಿ ನೋಡಿದಲ್ಲಿ ಈ ಸಾಲಿನಲ್ಲಿ 180 ತಕ್ಸೀರುಗಳು ಕಡಮೆಯಾಗಿರುವಂತೆ ಇದರಿಂದ ಕಂಡುಬರುತ್ತದೆ. ಕ್ರಿಮಿನಲ್ ಸ್ವಭಾವದ ದೊಂಬಿ ಮೊಕದ್ದಮೆಗಳ ಸಂಖ್ಯೆಯು ಕಡಮೆಯಾಗಿದ್ದಿತು. ಆದರೆ ಆರ್ಥಿಕದುಸ್ಥಿತಿಯ ದೆಸೆಯಿಂದ ಸಣ್ಣಪುಟ್ಟ ಕಳವುಗಳ ಸಂಖ್ಯೆ ಹೆಚ್ಚಿತು. ಸ್ವತ್ತಿನ ಹಕ್ಕಿನ ಕಾನೂನಿಗೆ ವಿರುದ್ಧವಾಗಿ ನಡೆದ ತಕ್ಸೀರುಗಳಿಗಾಗಿ ಹೂಡಲ್ಪಟ್ಟ ಮೊಕದ್ದಮೆಗಳ ಸಂಖ್ಯೆಯೂ ಸಹ ಕಡಮೆಯಾಯಿತು. 3,811 ಕಳವುಗಳು ನಡೆದುದಾಗಿಯೂ, ಅವುಗಳಲ್ಲಿ ಒಟ್ಟು ರೂ. 2,68,975-12-10 ಗಳ ಬೆಲೆ ಬಾಳುವ ಸ್ವತ್ತು ಹೋಗಿರುವುದಾಗಿಯೂ ವರದಿಯಾಗಿದ್ದಿತು. 2,226 ಮೊಕದ್ದಮೆಗಳಲ್ಲಿ ರೂ. 1,21,522-4-1 ಬೆಲೆ ಬಾಳುವಷ್ಟು ಸ್ವತ್ತು ಪತ್ತೆಯಾಗಿ ಸಿಕ್ಕಿತು; ಎಂದರೆ, ಕಳೆದುಹೋದ ಸ್ವತ್ತಿನಲ್ಲಿ ಪತ್ತೆಯಾಗಿ ಸಿಕ್ಕಿದ ಸ್ವತ್ತಿನ ಶೇಕಡಾವಾರು 58.4 ರಷ್ಟಾಯಿತು. ಫೈಸಲಾದ ಮೊಕದ್ದಮೆಗಳ ಪೈಕಿ ತಪ್ಪು ಸಾಬೀತಾದವುಗಳ ಶೇಕಡಾವಾರು ಸುಮಾರು 70 ಕ್ಕೆ ಬಂದಿತು. ಪ್ರಸಕ್ತ ವರ್ಷದಲ್ಲಿದ್ದ, ಚಲನಚಿತ್ರಗಳಿಗೆ ಸಂಬಂಧಪಟ್ಟ 18 ಯಂತ್ರಗಳ ಪೈಕಿ ಎರಡು ನಿಂತುಹೋದುವು. 1933-34 ನೆಯ ಸಾಲಿನ ಅಖೈರಿನಲ್ಲಿ 16 ಯಂತ್ರಗಳಲ್ಲಿ ಪ್ರದರ್ಶನವು ನಡೆಯುತ್ತಿದ್ದಿತು. ಸೆನ್ಸರುಗಳ (ಪರಿಶೋಧಕರ) ಕೆಲಸವನ್ನು ನಡೆಸುವುದಕ್ಕಾಗಿ ಆರು ಬೋರ್ಡುಗಳನ್ನು ನೇಮಕಮಾಡಲಾಗಿದ್ದಿತು. ಪ್ರಸಕ್ತ ವರ್ಷದಲ್ಲಿ 1,034 ಮೋಟಾರು ವಾಹನಗಳು ರಿಜಿಸ್ಟರಾದವು; ಪರದೇಶದಲ್ಲಿ ರಿಜಿಸ್ಟರಾಗಿದ್ದು ಇಲ್ಲಿ ಪುನಃ ರಿಜಿಸ್ಟರಾದ ಮೋಟಾರು ವಾಹನಗಳೂ ಸಹ ಇದರಲ್ಲಿ ಸೇರಿವೆ. ರಿಜಿಸ್ಟರು ಮಾಡಲ್ಪಟ್ಟ ಮತ್ತು ರಿಜಿಸ್ಟ್ರೇಷನು ನವೀಕರಿಸಲ್ಪಟ್ಟ ಮೋಟಾರು ಲಾರಿಗಳ ಸಂಖ್ಯೆಯು 342 ರಿಜಿಸ್ಟ್ರೇಷನ್ ಫೀಜುಗಳು ಮುಂತಾದವುಗಳ ರೂಪದಲ್ಲಿ ರೂ. 58,519-12-0 ಯಷ್ಟು ಮೊತ್ತವು ಇಲಾಖೆಯವರಿಗೆ ಪಾವತಿಯಾಯಿತು.

ತಕ್ಸೀರು ಪಂಗಡಗಳಿಗೆ ಸಂಬಂಧಪಟ್ಟ ರೆಗ್ಯುಲೇಷನಿನ ಮೇರೆಗೆ ಏರ್ಪಟ್ಟ ನಿಬಂಧನೆಗಳನ್ನು ಆಚರಣೆಗೆ ತರುವುದರಲ್ಲಿ ಕಂಡುಬಂದ ಹಲವು ಕುಂದುಕೊರತೆಗಳನ್ನು ಪರಿಹರಿಸುವುದಕ್ಕಾಗಿ ಆ ನಿಬಂಧನೆಗಳನ್ನು ಗಣನೀಯವಾದಷ್ಟುಮಟ್ಟಿಗೆ ತಿದ್ದುಪಾಟು ಮಾಡಲಾಯಿತು.

ಸೈನ್ಯದ ಇಲಾಖೆ.

ಮೈಸೂರು ಸಂಸ್ಥಾನದ ಸೈನ್ಯದ ದಳಗಳಲ್ಲಿ, 'ಮೈಸೂರು ಲ್ಯಾನ್ಸರ್' ಎಂಬ (ಭಲ್ಲೆ) ಸವಾರರ ದಳ, 'ಮೈಸೂರು ಹಾರ್ಸ್' ಎಂಬ ಕುದುರೆ ಸವಾರರ ದಳ, 'ಮೈಸೂರು ಇನ್‌ಫೆಂಟ್ರಿ' ಎಂಬ ಕಾಲ್ಬಲದ ದಳ ಈ ಮೂರು ದಳಗಳು ಸೇರಿವೆ. 'ಮೈಸೂರು ಲ್ಯಾನ್ಸರ್' ದಳದಲ್ಲಿ 481 ಮಂದಿ ಯೋಧರೂ, 'ಮೈಸೂರು ಹಾರ್ಸ್' ದಳದಲ್ಲಿ 128 ಮಂದಿ ಯೋಧರೂ, ಮೈಸೂರು ಕಾಲ್ಬಲದ ದಳದಲ್ಲಿ 785 ಮಂದಿ ಯೋಧರೂ ಇದ್ದಾರೆ. ಮೊದಲನೇ ಎರಡು ದಳಗಳಿಗೂ, ಕಾಲ್ಬಲದ ದಳದ ಒಂದು ಪಟಾಲಮಿಗೂ, ರಣರಂಗದಲ್ಲಿ ಯುದ್ಧಮಾಡುವುದಕ್ಕೆ ತಕ್ಕ ತರಬೇತನ್ನು ಕೊಡಲಾಗಿದೆ.

'ಸೈನ್ಯ'ದ ಬಾಬಿನಲ್ಲಿ, 1932-33ನೆಯ ಸಾಲಿನಲ್ಲಿ ಒಟ್ಟು 13,95,344 ರೂಪಾಯಿಗಳು ವೆಚ್ಚವಾಗಿದ್ದುದಕ್ಕೆ ಪ್ರಸಕ್ತ ಸಾಲಿನಲ್ಲಿ 12,44,170 ರೂಪಾಯಿಗಳು ವೆಚ್ಚವಾದುವು.

ಕುಣಿಗಲಿನ ಅಶ್ವಪಾಲನಾ ಕ್ಷೇತ್ರದ ಕುದುರೆಗಳನ್ನು ಮಾರಾಟಮಾಡಿದುದರಿಂದ ಒಟ್ಟು 20,370 ರೂಪಾಯಿಗಳು ಬಂದುವು. ಈ ಕ್ಷೇತ್ರದ ಇತರ ಉತ್ಪನ್ನಗಳ ಮಾರಾಟದಿಂದ 5,525 ರೂಪಾಯಿಗಳು ಬಂದುವು.

ಬಂದೀಖಾನೆಗಳ ಇಲಾಖೆ.

ಬಂದೀಖಾನೆಗಳ ಇಲಾಖೆಯ ಒಟ್ಟು ವೆಚ್ಚವು ಪ್ರಸಕ್ತ ಸಾಲಿನಲ್ಲಿ 1,18,157 ರೂಪಾಯಿಗಳಾಯಿತು. 1932-33ನೆಯ ಸಾಲಿನಲ್ಲಿ ಇದು 1,27,587 ರೂಪಾಯಿಗಳಾಗಿದ್ದಿತು. ಎಲ್ಲ ಬಾಬುಗಳಿಂದಲೂ ಈ ಇಲಾಖೆಗೆ ಬಂದ ಒಟ್ಟು ವರಮಾನವು 1932-33 ನೆಯ ಸಾಲಿನಲ್ಲಿ 54,441 ರೂಪಾಯಿಗಳಾಗಿದ್ದುದಕ್ಕೆ ಪ್ರಸಕ್ತ ಸಾಲಿನಲ್ಲಿ 44,461 ರೂಪಾಯಿಗಳಾಯಿತು. ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲು ಮತ್ತು ಮೈಸೂರಿನಲ್ಲಿರುವ ಸಬ್-ಜೈಲು, ಈ ಎರಡು ಜೈಲುಗಳಲ್ಲಿಯೂ ಒಟ್ಟು 7,400 ಮಂದಿ ಖೈದಿಗಳಿದ್ದರು. ಆ ಪೈಕಿ 6,421 ಮಂದಿ ಬಿಡುಗಡೆ ಮಾಡಲ್ಪಟ್ಟರು. ಸಾಲಾಖೈರಿನಲ್ಲಿ 979 ಮಂದಿ ಜೈಲಿನಲ್ಲಿದ್ದರು.

ಜನಾರೋಗ್ಯರಕ್ಷಣೆಯ ಇಲಾಖೆ.

ಪ್ರಸಕ್ತ ಸಾಲಿನಲ್ಲಿ ಒಟ್ಟು 1,14,914 ಶಿಶುಗಳು ಜನನವಾದುವೆಂದೂ, 1,19,591 ಜನಗಳು ಮರಣ ಹೊಂದಿದರೆಂದೂ ವರದಿಯಾಗಿದೆ. ಮರಣಗಳು ಸಂಭವಿಸಿದುದಕ್ಕೆ ಬಗೆಬಗೆಯ ಜ್ವರಗಳು ಮತ್ತು ಪ್ಲೇಗು—ಇವೇ ಮುಖ್ಯಕಾರಣಗಳೆಂದು ತಿಳಿಸಲ್ಪಟ್ಟಿದೆ. ಒಟ್ಟು 12,118 ಮಕ್ಕಳು ಮೃತಪಟ್ಟುವು. ಜನನ ಮರಣಗಳನ್ನು ದಾಖಲ್‌ಮಾಡುವುದಕ್ಕೆ ಮೊದಲಿಗಿಂತಲೂ ಉತ್ತಮವಾದ ರಿಜಿಸ್ಟರುಗಳನ್ನು ಜಾರಿಯಲ್ಲಿ ತಂದುದರಿಂದ, ಜನನ ಮರಣಗಳನ್ನು ರಿಜಿಸ್ಟರ್‌ಮಾಡುವ ಕೆಲಸವು ಬಹಳಮಟ್ಟಿಗೆ ಉತ್ತಮಸ್ಥಿತಿಗೆ ಬಂದಿದೆ. ಅಂಟುರೋಗಗಳನ್ನು ಆಸ್ಪತ್ರೆಗಳಲ್ಲಿ ಪ್ರಕಟಿಸುವ ಪದ್ಧತಿಯನ್ನು ಜಾರಿಯಲ್ಲಿ ತರುವುದರ ಮೂಲಕ ಪ್ರಕಟನೆಯ ಕ್ರಮವನ್ನು ಸುಲಭಗೊಳಿಸಲಾಯಿತು.

ಕೊಂಡಿಹುಳದ ರೋಗದಿಂದ ಪೀಡಿತರಾದ ಜನಗಳಿಗೆ ಹಾಸನ ಮೈಸೂರು, ಕಡೂರು ಮತ್ತು ಶಿವಮೊಗ್ಗ—ಈ ಡಿಸ್ಟ್ರಿಕ್ಟುಗಳಲ್ಲಿನ ಡಿಸ್ಪೆನ್ಸರಿಗಳಲ್ಲಿ ಒಟ್ಟೊಟ್ಟಾಗಿ ಚಿಕಿತ್ಸೆ ಮಾಡುತ್ತ ಬರಲಾಯಿತು. ಈ ರೀತಿಯಾಗಿ ಒಟ್ಟು 19,453 ಮಂದಿ ಈ ರೋಗಕ್ಕೆ ಚಿಕಿತ್ಸೆಯನ್ನು ಪಡೆದಿರುತ್ತಾರೆ.

ಸ್ವಚ್ಛತಾಮಾರ್ಗಕ್ಕೆ ಸಂಬಂಧಪಟ್ಟ (ಸ್ಯಾನಿಟರಿ ಇಂಜಿನಿಯರಿಂಗ್) ಕಾಮಗಾರಿಗಳಿಗೆ ಇಲಾಖೆಯವರು ವಿಶೇಷ ರೀತಿಯ ಗಮನವನ್ನು ಕೊಟ್ಟರು. ನೀರು ಸರಬರಾಯಿ ಮಾಡುವುದಕ್ಕೆ ಸಂಬಂಧಪಟ್ಟ ಇಪ್ಪತ್ತು ಏರ್ಪಾಡುಗಳನ್ನು (ಸ್ಕೀಮುಗಳನ್ನು) ಪರಿಶೀಲಿಸಿ, ರಚನಾಕ್ರಮಗಳನ್ನು (ಡಿಜೈನುಗಳನ್ನು) ತಯಾರಿಸಲಾಯಿತು. ಆ ಪೈಕಿ 11 ಪೂರೈಸಿದುವು. ಬೆಂಗಳೂರು ನಗರದಲ್ಲಿ ಬಳೇಪೇಟೆಯಲ್ಲಿಯೂ ಮತ್ತು ಜೈಲು "ಎಕ್ಸ್‌ಟೆನ್‌ಷನಲ್ಲಿ" ಯೂ ಭೂಮಿಯೊಳಗೇ ಕೊಳಾಯಿಗಳಲ್ಲಿ ಚರಂಡಿಗಳ ನೀರು ಹರಿದುಹೋಗುವ ಏರ್ಪಾಡಿನ ಕಾಮಗಾರಿಯನ್ನು ನಡೆಸಿ ಪೂರೈಸಲಾಯಿತು.

ಮಲೆನಾಡು ಅಭಿವೃದ್ಧಿಯ ಏರ್ಪಾಡು.

ಮಲೆನಾಡು ಅಭಿವೃದ್ಧಿಯ ಏರ್ಪಾಡಿನ ಸಂಬಂಧದಲ್ಲಿ ಒಟ್ಟು 25 ಡಿಸ್ಪೆನ್ಸರಿಗಳಿದ್ದುವು. ರೂ. 1,458-13-0 ಗಳಷ್ಟು ಬೆಲೆ ಬಾಳುವ "ಕ್ವಿನಾ" ವನ್ನು (ಕ್ವಿನೈನ್) ಕೊಂಡುಕೊಂಡು ಮಲೆನಾಡು ಪ್ರದೇಶಗಳಲ್ಲಿ ಮುಫತ್ತಾಗಿ ಹಂಚಲಾಯಿತು. ಹಣದ ಮುಗ್ಗಟ್ಟಿನ ದೆಸೆಯಿಂದ ಸರ್ಕಾರದವರು ಬಾವಿಗಳಿಗಾಗಿ ಮತ್ತು ಇತರ ಕಾಮಗಾರಿಗಳಿಗಾಗಿ ಹಣವೇನನ್ನೂ ಮಂಜೂರ್‌ಮಾಡಲಿಲ್ಲ.

ವ್ಯವಸಾಯದ ಇಲಾಖೆ.

ಉತ್ತಮ ಸಾಗುವಳಿಯನ್ನು ಮಾಡುವುದಕ್ಕಾಗಿ, ವಿಶೇಷ ರೀತಿಯಲ್ಲಿ ತಕಾವಿಸಾಲ ಕೊಡುವ ಪದ್ಧತಿಯ ಮೇರೆಗೆ, ಕೃತಕ ಗೊಬ್ಬರವನ್ನು ಎಡತೊರೆ, ತಿರುಮಕೂಡಲು ನರಸೀಪುರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಇನ್ನೂ ಸರಬರಾಯಿ ಮಾಡುತ್ತ ಬರುತ್ತಿರಲಾಗಿದೆ. ಅರ್ವಿನ್ ನಾಲಾ ಪ್ರದೇಶದಲ್ಲಿ ಕಬ್ಬನ್ನು ಸಾಗುವಳಿ ಮಾಡುವುದಕ್ಕಾಗಿ ಸಕ್ಕರೆ ಕಾರ್ಖಾನೆಯವರು ಮಿಶ್ರಣ ಗೊಬ್ಬರವನ್ನು ಒದಗಿಸುತ್ತಿದ್ದಾರೆ. ಅದರಂತೆ, ಭತ್ತದ ಬೆಳೆಯ ವಿಷಯದಲ್ಲಿಯೂ ಸಹ ಅದೇ ರೀತಿಯಲ್ಲಿ ಕೃತಕ ಗೊಬ್ಬರವನ್ನು ಸರಬರಾಯಿ ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ರೈತರುಗಳು ಅರಿಕೆಮಾಡುತ್ತಿದ್ದಾರೆ.

ಅಡಿಕೆ ಮತ್ತು ಕಾಫಿ ಬೆಳೆಗಳಿಗೆ ತಕ್ಕ ಗೊಬ್ಬರವನ್ನು ಒದಗಿಸುವ ವಿಷಯವನ್ನು ಪರೀಕ್ಷಿಸುತ್ತಿರಲಾಗಿದೆ. ತಕ್ಕಾಪಿ. ಈ ಬೆಳೆಗಳಿಗೆ ಎಷ್ಟು ಸಲ ಮತ್ತು ಎಷ್ಟು ಕಾಲಕ್ಕೊಮ್ಮೆ ಗೊಬ್ಬರವನ್ನು ಹಾಕಿದರೆ ಉತ್ತಮವಾಗಿ ಬೆಳೆ ಬರುವುದೆಂಬ ವಿಷಯವನ್ನು ವಿಶೇಷರೀತಿಯಲ್ಲಿ ಪರೀಕ್ಷಿಸುತ್ತಿರಲಾಗಿದೆ.

ಅಡಿಕೆ ಮರಗಳಿಗೆ ತಗಲತಕ್ಕ ಕೊಳೆರೋಗವನ್ನು ನಿವಾರಣೆ ಮಾಡುವುದಕ್ಕಾಗಿ ಪಿಚಕಾರಿಗಳ ಮೂಲಕ ಔಷಧವನ್ನೆರಚುವ ಕೆಲಸವು ಎಂದಿನಂತೆ ಜನಗಳಲ್ಲಿ ಬಹಳವಾಗಿ ಪ್ರಚಾರದಲ್ಲಿದ್ದಿತು. ಪ್ರಸಕ್ತ ಸಾಲಿನಲ್ಲಿ ಸುಮಾರು 10,000 ಎಕರೆಗಳಷ್ಟು ಪ್ರದೇಶದಲ್ಲಿ ಔಷಧವನ್ನು ಎರಚಲಾಯಿತು. 1932-33 ನೆಯ ವರ್ಷದಲ್ಲಿ 9,000 ಎಕರೆಗಳಷ್ಟು ಪ್ರದೇಶಕ್ಕೆ ಮಾತ್ರ ಈ ರೀತಿ ಎರಚಲಾಗಿದ್ದಿತು. ಹೀಗೆ ಎರಚತಕ್ಕ ಔಷಧದ ಮಿಶ್ರಣವು ಗಿಡಗಳ ಮೇಲೆ ಸರಿಯಾಗಿ ಹರಡಿಕೊಂಡು ವ್ಯಾಪಿಸುವಂತೆ ಮಾಡುವುದಕ್ಕಾಗಿ ಇದುವರೆಗೆ "ಕ್ಯಾಸೀನ್" ಮತ್ತು "ಕಾಸ್ಟಿಕ್ ಸೋಡಾ" ಎಂಬ ಪದಾರ್ಥಗಳನ್ನು ಉಪಯೋಗಿಸುತ್ತಿರಲಾಗಿದೆಯಷ್ಟೆ. ಆದರೆ ಇನ್ನು ಮುಂದೆ ಇವುಗಳಿಗೆ ಬದಲಾಗಿ ಹೊಂಗೇಎಣ್ಣೆ ಅಥವಾ ಅಪರೇಕಾಯಿ ಎಣ್ಣೆಯನ್ನೇ ಉಪಯೋಗಿಸುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಇವು ಸ್ಥಳದಲ್ಲಿಯೇ ಯಥೇಷ್ಟವಾಗಿ ದೊರೆಯುತ್ತದೆ. ಬಾಳೆಹೊನ್ನೂರು ಕಾಫಿಕ್ಷೇತ್ರದಲ್ಲಿ ಗಿಡಗಳಿಗೆ ಪಿಚಕಾರಿಯಿಂದ ಔಷಧವನ್ನೆರಚುವ ಪ್ರಯೋಗಗಳನ್ನು ನಡೆಸಿದುದರಿಂದ ಖಾಸಗಿ ಜನಗಳ ಕಾಫಿ ಎಸ್ಟೇಟುಗಳಲ್ಲಿಯೂ ಸಹ ಈ ರೀತಿ ಔಷಧವನ್ನೆರಚುವ ಕೆಲಸವನ್ನು ನಡೆಸುವುದಕ್ಕೆ ಬಹುಮಟ್ಟಿಗೆ ಸಹಾಯವಾಯಿತು. ಪ್ರಸಕ್ತ ಸಾಲಿನಲ್ಲಿ 20,000 ಎಕರೆಗಳಿಗೆ ಮೇಲ್ಪಟ್ಟಷ್ಟು ಪ್ರದೇಶದಲ್ಲಿ ಈ ರೀತಿ ಔಷಧವು ಎರಚಲ್ಪಟ್ಟಿರುವುದಾಗಿ ವರದಿಯಾಗಿದೆ; ಕೆಲವು ಗಿಡಗಳಿಗೆ ತಗಲತಕ್ಕ ಕೀಟಗಳ ಹಾವಳಿಯನ್ನು ನಿವಾರಿಸುವುದಕ್ಕಾಗಿ,

(6ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೪ ನೇ ನವಂಬರ್ ತಾ|| ೫ನೇ ಸೋಮವಾರ.

ದೀಪಾವಳಿ.

ಪ್ರಪಂಚದಲ್ಲಿ ಆಯಾಯ ದೇಶಪದ್ಧತಿಗನುಸಾರವಾಗಿಯೂ ಕಾಲಮಾನಾನುಸಾರವಾಗಿಯೂ ಜನಗಳು ಸಂತೋಷದಿಂದ ಅನೇಕ ಹಬ್ಬಗಳನ್ನಾಚರಿಸುತ್ತಾರೆ. ಇಂಥ ಹಬ್ಬಗಳನ್ನು ಮಾಡುವ ದಿವಸಗಳಲ್ಲಿ ತಮಗೆ ಎಷ್ಟು ಬಡತನವಿದ್ದರೂ ಎಷ್ಟು ದುಃಖಗಳಿದ್ದರೂ ಅವುಗಳನ್ನೆಲ್ಲಾ ಲಕ್ಷ್ಯಕ್ಕೆ ತಂದುಕೊಳ್ಳದೆ ಬಡವರು ಶ್ರೀಮಂತರು ಆದಿಯಾಗಿ ಎಲ್ಲರೂ ಆಯಾಯ ಹಬ್ಬಗಳನ್ನು ಮಾಡುವ ಪದ್ಧತಿಯು ಅನಾದಿಕಾಲದಿಂದ ಬಂದಿರುತ್ತದೆ. ವೇದಶಾಸ್ತ್ರಾವಲಂಬಿಗಳಾದ ನಮ್ಮ ಭಾರತೀಯರಲ್ಲಂತೂ ಇಂಥ ಹಬ್ಬಗಳನ್ನು ಬಹು ಸಂಭ್ರಮದಿಂದ ನಡೆಯಿಸುತ್ತ ಬಂದಿದ್ದಾರೆ. ಆದರೆ ಯಾವ ಯಾವ ಹಬ್ಬಗಳು ಯಾವುಯಾವುದಕ್ಕಾಗಿ ಹುಟ್ಟಿದವು? ಈ ಹಬ್ಬಗಳನ್ನಾಚರಿಸುವ ಉದ್ದೇಶವೇನು? ಎಂಬ ವಿಚಾರಶಕ್ತಿಯು ಮಾತ್ರ ಅನೇಕರಲ್ಲಿಲ್ಲದೆ "ಗತಾನುಗತಿಕೋ ಲೋಕಃ" ಎಂಬ ಗಾದೆಯ ವಾಕ್ಯದಂತೆ ಒಬ್ಬರನ್ನು ನೋಡಿ ಒಬ್ಬರು ಆಚರಿಸುತ್ತ ಬರುವರಲ್ಲದೆ ಈ ಹಬ್ಬಗಳ ಯಥಾರ್ಥಾಚರಣೆಗಳನ್ನು ಮರೆತಿರುತ್ತಾರೆ. ನಮ್ಮ ಪೂರ್ವಿಕರು ಒಂದೊಂದು ಕಾರಣದಿಂದ ಪ್ರಪಂಚಸೌಖ್ಯಕ್ಕಾಗಿ ಈ ಹಬ್ಬಗಳನ್ನು ಇಟ್ಟಿದ್ದಾರೆ. ಇವುಗಳನ್ನು ತಿಳಿದು ಹಬ್ಬಗಳನ್ನು ಮಾಡುವುದರಿಂದ ಮನುಷ್ಯರಿಗೊಂದು ವಿಧವಾದ ನೀತಿಯೂ ದೈವಭಕ್ತಿಯೂ ಮಾತಾಪಿತೃಗಳಲ್ಲಿ ಶ್ರದ್ಧೆಯು ಉತ್ಪನ್ನವಾಗುವುದು. ಪ್ರಕೃತದಲ್ಲಿ ಈ ದಿವಸದಿಂದ ದೀಪಾವಳಿಹಬ್ಬವು ಪ್ರಾರಂಭವಾಗಿರುವುದಷ್ಟೆ. ಈ ಹಬ್ಬವನ್ನು ನಮ್ಮ ಭಾರತೀಯರೆಲ್ಲರೂ ತಪ್ಪದೆ ಆಚರಿಸುತ್ತಾರೆ. ಈ ಹಬ್ಬವನ್ನು ಕೆಲವುಕಡೆಗಳಲ್ಲಿ ದೊಡ್ಡ ಹಬ್ಬವೆಂದೂ ಕರೆಯುತ್ತಾರೆ. ಈ ಹಬ್ಬದಲ್ಲಿ ಮುಖ್ಯವಾಗಿ ದೀಪಗಳನ್ನು ಹೆಚ್ಚಾಗಿ ಹಚ್ಚುವ ವಿಧಿಯಿಂದ ದೀಪಾವಳಿ ಹಬ್ಬವೆಂದು ಹೆಸರುಂಟಾಗಿದೆ. ಎಲ್ಲಾ ಹಬ್ಬಗಳನ್ನು ಒಂದೊಂದು ದಿವಸ ಆಚರಿಸಿದರೆ ಈ ಹಬ್ಬವನ್ನು ಅಶ್ವಯುಜ ತ್ರಯೋದಶೀ ಮೊದಲುಗೊಂಡು ಕಾರ್ತಿಕ ಶುದ್ಧ ಬಿದಿಗೆಯವರೆವಿಗೂ ಆಚರಿಸುತ್ತಾರೆ. ಈ ಐದುದಿವಸಗಳಿಗೂ ಧನತ್ರಯೋದಶಿ, ನರಕಚತುರ್ದಶಿ, ಧನಲಕ್ಷ್ಮಿ ಅಮಾವಾಸ್ಯ, ಬಲಿಪ್ರತಿಪತ್, ಭ್ರಾತೃದ್ವಿತೀಯಾ, ಎಂದು ಹೆಸರುಗಳು ಬಂದಿರುತ್ತವೆ. ಇವುಗಳ ಕಾರಣವು ನಮ್ಮ ಭಾರತೀಯ ಪುರಾಣಗಳಲ್ಲಿ ಅನೇಕ ರೀತಿಯಾಗಿ ವರ್ಣಿಸಲ್ಪಟ್ಟಿರುತ್ತವೆ.

ಜಗದ್ರಕ್ಷಕನಾದ ಯಮಧರ್ಮರಾಯನು ಅವನ ದೂತರನ್ನು ಕುರಿತು ಅಯ್ಯಾ ದೂತರಿರಾ? ಪಾಶವನ್ನು ಹಾಕಿ ಪ್ರಾಣಿಗಳನ್ನು ಹಿಡಿತರುವ ಕಾಲದಲ್ಲಿ ಎಂದಾದರೂ ನಿಮಗೆ ದಯಾರಸವು ಹುಟ್ಟಿರುವುದೇ ಹಾಗೆ ಹುಟ್ಟಿದ್ದರೆ ಆ ಸಮಯವನ್ನು ತಿಳಿಸಬಲ್ಲಿರಾ ಎಂದು ಪ್ರಶ್ನೆಮಾಡಿದನು. ದೂತರು ಯಮರಾಜನೆ, ಇಂದ್ರಪ್ರಸ್ಥಾಧಿಪತಿಯಾದ ಹಂಸನೆಂಬ ಮಹಾರಾಜನು ಒಂದು ದಿವಸ ಬೇಟೆಯಾಡಲು ಕಾಡಿನಲ್ಲಿ ಸುತ್ತುತ್ತ ಧರ್ಮಿಷ್ಠನಾದ ಹೈಮನೆಂಬ ರಾಜನ ಪಟ್ಟಣಕ್ಕೆ ಹೋದನು. ಆ ಹೈಮನ ಆದರಾತಿಥ್ಯವನ್ನು ನೋಡಿ ಹಂಸನು ಪರಮಸಂತೋಷಗೊಂಡನು ಆ ಸಮಯದಲ್ಲಿ ಆ ಹೈಮರಾಜನಿಗೆ ಪುತ್ರನು ಜನಿಸಿದ್ದರಿಂದ ವಿಶೇಷೋತ್ಸವವು ನಡೆಯುತ್ತಲಿತ್ತು. ಆಗ ಒಬ್ಬ ಸ್ತ್ರೀಯಳು ಕಾಣಿಸಿಕೊಂಡು ಅಯ್ಯಾ, ಹೈಮರಾಜನೆ, ನಿನ್ನ ಮಗನು ಮದುವೆಯಾದ ನಾಲ್ಕನೆಯ ದಿವಸ ಸರ್ಪದಷ್ಟನಾಗಿ ಸಾಯುತ್ತಾನೆಂದು ಹೇಳಿ ಅದೃಶ್ಯಳಾದಳು. ರಾಜನಿಗೆ ಬಹಳ ವ್ಯಸನವುಂಟಾಯಿತು. ದಾನ ಧರ್ಮ ಜಪತಪೋನುಷ್ಠಾನಗಳನ್ನು ಮಾಡಿಸಿದನು. ಹಂಸರಾಜನು ಇದನ್ನು ನೋಡಿ ವ್ಯಸನಪಡುತ್ತ ತನ್ನೂರಿಗೆ ಹೋಗಿ ಹೈಮರಾಜನ ಪುತ್ರನ ಅಪಮೃತ್ಯುವನ್ನು ತಪ್ಪಿಸಲೇಬೇಕೆಂದಾಲೋಚಿಸಿ ಯಮುನಾನದಿಯ ಮಧ್ಯದಲ್ಲಿ ಭದ್ರವಾದ ಒಂದು ಕಲ್ಲಿನಮನೆಯನ್ನು ಕಟ್ಟಿಸಿ, ಅಲ್ಲಿ ಅವರನ್ನು ತಂದಿರಿಸಿದನು. ಆ ಮನೆಯಲ್ಲಿ ಒಂದು ಇರುವೆಯು ಸಹ ಹರಿದಾಡಲು ಅವಕಾಶವಿರಲಿಲ್ಲ. ಹದಿನಾರು ವರ್ಷಗಳು ಕಳೆದವು. ಆಗ ಹಂಸರಾಜನು ಸುಸಂಜಯನೆಂಬ ವೀರನ ಮಗಳನ್ನು ಹೈಮನ ಮಗನಿಗೆ ಕೊಡಿಸಿ ಮದುವೆಮಾಡಿಸಿದನು. ಮದುವೆಯಾಗಿ ನಾಲ್ಕು ದಿವಸಗಳು ಕಳೆದವು. ವಿಧಿಶಾಸನವನ್ನು ಮೀರುವರಾರು, ಯಮನ ಆಜ್ಞೆಯಿಂದ ಯಮದೂತರು ಪಾಶಸಹಿತ ಬಂದರು. ಅಷ್ಟರೊಳಗೆ ಹೈಮನಿಗೆ ಒಂದು ಸೀನು ಬಂದಿತು. ಆ ಕ್ಷಣವೇ ಮೂಗಿನಿಂದ ಒಂದು ಹಾವು ಬಂದು ರಾಜಪುತ್ರನನ್ನು ಕಚ್ಚಿತು. ಇಂಥ ಮದುವೆಯ ಸಂಭ್ರಮದಲ್ಲಿ ಕೋಮಲನಾದ ಬಾಲಕನನ್ನು ಮೃತ್ಯುಪಾಶದಿಂದ ಎಳೆಯುವ ಸಮಯದಲ್ಲಿ ಮಾತ್ರ ನಮಗೆ ಬಹಳ ಕನಿಕರವುಂಟಾಯಿತೆಂದು ಹೇಳಿ ಯಮಧರ್ಮರಾಯನೆ, ಲೋಕದಲ್ಲಿ ಇಂಥ ಅಪಮೃತ್ಯು ಬರದಂತೆ ಏನಾದರೂ ಒಂದು ಉಪಾಯವನ್ನು ಕಲ್ಪಿಸೆಂದು ಕೇಳಿದರು. ಆಗ ಯಮನು ಅಶ್ವಯುಜ ಬಹುಳ ತ್ರಯೋದಶಿಯಿಂದ ೫ ದಿವಸಗಳವರೆಗೆ ಸಂಧ್ಯಾಕಾಲ ದೀಪಗಳನ್ನು ಯಾವನು ಹಚ್ಚುವನೋ ಅವನಿಗೆ ಅಪಮೃತ್ಯುವು ಖಂಡಿತವಾಗಿ ತಪ್ಪುವುದೆಂದು ಅಭಯದಾನ ಮಾಡಿದನು. ಅದಕ್ಕಾಗಿ ಈ ಹಬ್ಬವನ್ನು ದೀಪಾವಳಿಯೆಂದು ಕರೆಯುತ್ತಾರೆ. ಈ ದೀಪಾವಳಿ ಮಹೋತ್ಸವದ ಎರಡನೆ ದಿವಸವು ಭಗವಂತನು ಲೋಕಕಂಟಕನಾದ ನರಕ ಎಂಬ ದೈತ್ಯನನ್ನು ವಧಿಸಿದ್ದಕ್ಕಾಗಿ ನರಕಚತುರ್ದಶಿಯೆಂದು ಹೆಸರುಂಟಾಯಿತು. ಈ ನರಕಚತುರ್ದಶಿ ದಿವಸ ಉಷಃಕಾಲದಲ್ಲೆದ್ದು ಎಲ್ಲರೂ ತೈಲಾಭ್ಯಂಗಸ್ನಾನವನ್ನು ಮಾಡಿ ತಮ್ಮ ನಿತ್ಯಪೂಜಾದಿಗಳನ್ನು ನೆರವೇರಿಸಬೇಕೆಂಬ ಬಲವಾದ ನಿಯಮವಿರುತ್ತದೆ. ಇದಲ್ಲದೆ ವಿಷ್ಣುವು ವಾಮನಾವತಾರವನ್ನು ತಾಳಿ ಬಲೀಂದ್ರಚಕ್ರವರ್ತಿಯಿಂದ ಮೂರು ಹೆಜ್ಜೆ ಭೂಮಿಯನ್ನು ಕೇಳಿ ಒಂದೊಂದು ಹೆಜ್ಜೆಯಿಂದ ಒಂದೊಂದು ಲೋಕವನ್ನು ಆಕ್ರಮಿಸಿದ ದಿವಸಗಳೆಂದರೆ ಕ್ರಮವಾಗಿ ತ್ರಯೋದಶಿ, ಚತುರ್ದಶಿ, ಅಮಾವಾಸ್ಯಾದಿವಸಗಳು. ವಾಮನನು ಬಲಿಯ ದಾನಕ್ಕೆ ಮೆಚ್ಚಿ ವರವನ್ನು ಕೇಳೆಂದುದಕ್ಕೆ ಬಲಿಯು ನೀನೇ ನನ್ನ ಅತಿಥಿಯಾದ ಮೇಲೆ ನನಗೇನೂ ಬೇಕಿಲ್ಲವು. ಆದರೆ ಈ ತ್ರಯೋದಶಿ ಹಿಡಿದು ಮೂರುದಿವಸಗಳಲ್ಲಿ ಭೂಲೋಕದಲ್ಲಿ ನನ್ನ ರಾಜ್ಯದ ಸ್ಮರಣಾರ್ಥವಾಗಿ ಮನೆಗಳಲ್ಲಿ ದೀಪೋತ್ಸವವು ನಡೆಯಬೇಕು. ಹೀಗೆ ದೀಪೋತ್ಸವವು ನಡೆಯುವ ಮನೆಗಳಲ್ಲಿ ಲಕ್ಷ್ಮೀದೇವಿಯು ತಾಂಡವವಾಡುತ್ತಿರಬೇಕು. ಮತ್ತು ದೀಪೋತ್ಸವವನ್ನಾಚರಿಸದೆ ಕತ್ತಲೆಯಲ್ಲಿರುವವರ ಮನೆಯಲ್ಲಿ ದಾರಿದ್ರ್ಯವು ನೆಲಗೊಳ್ಳಬೇಕು. ಚತುರ್ದಶಿ ದಿವಸ ದೀಪೋತ್ಸವ ನಡೆಸುವುದರಿಂದ ನರಕದಲ್ಲಿ ಬಿದ್ದ ಪಿತೃಗಳೂ ಸಹ ವಿಮೋಚನಹೊಂದುವರು. ಈ ಮೂರುದಿವಸ ಎಲ್ಲರೂ ದುಃಖಶೋಕಗಳಿಗೊಳಗಾಗದೆ ಆನಂದದಿಂದ ಕಾಲಕಳೆಯಬೇಕೆಂದು ವರವನ್ನು ಕೇಳಿದನು. ಆಗಿನಿಂದಲೂ ಈ ಹಬ್ಬವು ರೂಢಿಗೆ ಬಂದಿತೆಂದು ಗೊತ್ತಾಗುತ್ತದೆ. ಅಶ್ವಯುಜ ಬಹುಳ ಅಮಾವಾಸ್ಯೆಯ ದಿವಸ ಧನಲಕ್ಷ್ಮಿಯ ಪೂಜೆಯನ್ನು ವಿಧ್ಯುಕ್ತವಾಗಿ ಪೂಜಿಸಿ ದೇವತೆಗಳೊಡನೆ ಶಯನೋತ್ಸವ ಮಾಡಿಸಬೇಕು. ಲಕ್ಷ್ಮಿಯು ಸ್ಥಿರಗೊಳ್ಳುವಳು.

ಈ ಧನಲಕ್ಷ್ಮೀ ಪೂಜಾ ವೈಭವವು ಮುಂಬಯಿ, ಗುಜರಾತ ಮುಂತಾದ ಪ್ರಾಂತಗಳಲ್ಲಿ ಪ್ರೇಕ್ಷಣೀಯವಾದುದಾಗಿದೆ. ಆ ದಿವಸ ವರ್ತಕಮಹಾಶಯರು ತಮ್ಮ ತಮ್ಮ ಮಿತ್ರಮಂಡಲಿಯನ್ನು ಆಮಂತ್ರಿಸಿ ಸಂತೋಷಗೊಳಿಸುವ ಪದ್ಧತಿಯಿದೆ. ಮುಖ್ಯವಾಗಿ ಆಸ್ತಿಕ ಮಹಾಜನಗಳು ಈ ದೀಪಾವಳಿ ಹಬ್ಬವನ್ನು ಆಚರಿಸುವುದರಿಂದ ವಿಶೇಷವಾಗಿ ಲಕ್ಷ್ಮೀಕಟಾಕ್ಷಕ್ಕೆ ಪಾತ್ರರಾಗಿ ದುಃಖಗಳಿಂದ ಬಿಡಲ್ಪಟ್ಟು ಎಲ್ಲರೂ ಸುಖಿಗಳಾಗಿ ಬಾಳುವರೆಂದು ನಮ್ಮ ಭಾರತೀಯ ಚರಿತ್ರೆಗಳಿಂದ ಗೊತ್ತಾಗುತ್ತದೆ.

ಜರ್ಮನಿಯಲ್ಲಿ ಗೂಢಚಾರ ಕೆಲಸದಲ್ಲಿದ್ದ ಇಬ್ಬರು ಹುಡುಗಿಯರು ಸೈನ್ಯ ವಿಚಾರಗಳನ್ನು ಪರದೇಶದ ಸರ್ಕಾರಕ್ಕೆ ಮಾರಿದರೆಂದು ಗುಂಡಿನಿಂದ ಸುಡಲ್ಪಟ್ಟರು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಾದಪೂಜಾಮಹೋತ್ಸವ.

ರಿಟೈರ್ಡ್ ಪೋಲೀಸ್ ಇನ್ಸ್ಪೆಕ್ಟರ್ ತಿಮ್ಮಪ್ಪಯ್ಯನವರು ಶ್ರೀಮದ್ರಂಭಾಪುರೀ ಜಗದ್ಗುರುಗಳನ್ನು ಕಳೆದ ತಿಂಗಳು 30 ನೆಯ ತಾರೀಕು ಮಂಗಳವಾರ ದಿವಸ ಅರಮನೆಯಿಂದ ಕೊಡಲ್ಪಟ್ಟ ರಾಜಮರ್ಯಾದೆಗಳೊಡನೆ ತಮ್ಮ ಮನೆಗೆ ಬಿಜಯಂಗೈಸಿಕೊಂಡು ವಿಧ್ಯುಕ್ತವಾಗಿ ಗುರುಪೂಜೆಯನ್ನು ಮಾಡಿ ಬಂದ ಅತಿಥಿ ಅಭ್ಯಾಗತರಿಗೆ ಅನ್ನಶಾಂತಿಯನ್ನು ಮಾಡಿ ಗುರುಗಳ ಆಶೀರ್ವಾದವನ್ನು ಪಡೆದರು. ಆ ಸಮಯದಲ್ಲಿ ಇವರ ಮೊಮ್ಮಗಳು ಶ್ರೀಮತಿ ಸೌ|| ರಾಜಮ್ಮನೆಂಬ ಬಾಲಿಕೆಯು ಮೃದುಮಧುರವಾದ ಕಂಠದಿಂದ ಕೆಲವು ಕೀರ್ತನಗಳನ್ನು ಹಾಡಿಯೂ, ವಿಧವಿಧಗಳಾದ ರಾಗಾಲಾಪಗಳಿಂದ ಪದ್ಯಗಳನ್ನು ಓದಿಯೂ ಜಗದ್ಗುರುಗಳಿಗೆ ಆನಂದವನ್ನುಂಟುಮಾಡಿದಳು. ಬಳಿಕ ಮ|| ತಿಮ್ಮಪ್ಪಯ್ಯನವರು ಗುರುಕಾಣಿಕೆಯನ್ನೊಪ್ಪಿಸಿ ಯಥಾಪ್ರಕಾರ ಗುರುಗಳನ್ನು ಸ್ವಸ್ಥಾನಕ್ಕೆ ಉತ್ಸವದೊಡನೆ ಕಳುಹಿಸಿಕೊಟ್ಟರು.

ಹಳೆ ಅಗ್ರಹಾರದಲ್ಲಿರುವ ಜವಳಿ ಅಂಗಡಿ ಬಿ.ಎಸ್. ರುದ್ರಪ್ಪನವರು ಶ್ರೀಮದ್ರಂಭಾಪುರೀ ಮಹಾಸ್ವಾಮಿಗಳನ್ನು ಪಾದಪೂಜೆಗಾಗಿ ಉತ್ಸವದೊಡನೆ ಕಳೆದ ತಿಂಗಳು 31 ನೇ ತಾರೀಕಿನ ದಿವಸ ರಂಭಾಸ್ತಂಭಾದಿಗಳಿಂದಲಂಕೃತವಾದ ತಮ್ಮ ಮನೆಗೆ ದಯಮಾಡಿಸಿಕೊಂಡು ಬಂದರು. ಶ್ರೀಗಳವರು ಭದ್ರಪೀಠದಲ್ಲಿ ಮಂಡಿಸಿದ ಮೇಲೆ ಮ|| ರಾ|| ಬಸವರಾಜ ಸಹೋದರರ ಇಂಪಾದ ಗಾನಾಲಾಪವು ನಡೆದ ಬಳಿಕ ಶ್ರೀಗಳವರಿಗೆ ಹಾರವನ್ನೊಪ್ಪಿಸಿ ಸಭಿಕರನ್ನು ಫಲಪುಷ್ಪಾದಿಗಳಿಂದ ಸಂತೋಷಗೊಳಿಸಿದ ಬಳಿಕ ಮಹಾಸನ್ನಿಧಿಯವರ ಸ್ನಾನಪೂಜಾದಿಗಳು ನಡೆದವು. ವಿಧ್ಯುಕ್ತ ಪಾದಪೂಜೆಯು ನಡೆದು ತೀರ್ಥಪ್ರಸಾದ ವಿನಿಯೋಗವಾದನಂತರ ಆಮಂತ್ರಿತರಾದ ಮಹಾಜನಗಳಿಗೆ ಮೃಷ್ಟಾನ್ನಭೋಜನವು ನಡೆಯಿತು. ಸಾಯಂಕಾಲ 5 ಘಂಟೆಗೆ ಮ|| ರಾ|| ರುದ್ರಪ್ಪನವರು ಭಕ್ತಿಪೂರ್ವಕವಾಗಿ ಗುರುಕಾಣಿಕೆಯನ್ನೊಪ್ಪಿಸಿ ಆಶೀರ್ವಾದ ಪಡೆದು ಯಥಾಪ್ರಕಾರ ಉತ್ಸವದೊಡನೆ ಗುರುಗಳನ್ನು ಬಿಡಾರಕ್ಕೆ ಕಳುಹಿಸಿಕೊಟ್ಟರು.

ಧಾರ್ಮಿಕೋಪನ್ಯಾಸ.

ಶ್ರೀಮದ್ವೀರಶೈವಮಹಾಮತಸ್ಥಾಪನಾಚಾರ್ಯರಾದ ಶ್ರೀಮದ್ರಂಭಾಪುರೀ ಸಂಸ್ಥಾನಾಧೀಶರಾದ ಅಭಿನವರೇಣುಕಾಚಾರ್ಯರವರ ಸನ್ನಿಧಿಯಲ್ಲಿ ಪ್ರತಿದಿವಸವೂ ಶ್ರೀ ರೇಣುಕಪುರಾಣವು ನಡೆಯುತ್ತಿರುವುದಲ್ಲದೆ ಪಂಡಿತರ ಧಾರ್ಮಿಕೋಪನ್ಯಾಸಗಳು ನಡೆಯುತ್ತಿರುವುವು. ಪ್ರತಿದಿವಸವೂ ಅನೇಕ ಆರ್ಯಮಹಿಳೆಯರೂ ಅನೇಕ ಗುರುಭಕ್ತರೂ ಗುರುದರ್ಶನಾರ್ಥವಾಗಿ ಬಂದು ಸದ್ಬೋಧವನ್ನು ಕೇಳುತ್ತ ಪವಿತ್ರಾತ್ಮರಾಗುತ್ತಿರುವರು. ಕಳೆದ 31ನೆಯ ತಾರೀಕಿನ ದಿವಸ ಪ್ರಸಿದ್ಧಪತ್ರಿಕೆಯಲ್ಲಿ ಪ್ರಕಟವಾಗಿದ್ದಂತೆ ಶ್ರೀಮದ್ರಂಭಾಪುರೀ ಅಭಿನವರೇಣುಕಾಚಾರ್ಯರು ತಮ್ಮ ಬಿಡಾರದಲ್ಲಿ "ಸನಾತನ ವೀರಶೈವಧರ್ಮ" ಎಂಬುದರ ಮೇಲೆ ದೀರ್ಘವಾದೊಂದು ಭಾಷಣಮಾಡಿದರು. ಶ್ರೀಗಳವರ ಉಪದೇಶ ಶ್ರವಣಕ್ಕಾಗಿ ಅನೇಕಜನ ಸ್ವಮತ ಪರಮತದ ವೈದಿಕಲೌಕಿಕ ಪಂಡಿತರು ಆಗಮಿಸಿದ್ದರಲ್ಲದೆ ಸರ್ದಾರ್ ಗೋಪಾಲರಾಜ ಅರಸಿನವರು, ರಾಜಕವಿಭೂಷಣ ಎಚ್. ಲಿಂಗರಾಜ ಅರಸಿನವರು, ದರ್ಬಾರ್ ಭಕ್ಷಿ ಶ್ರೀಮಾನ್ ಲಿಂಗರಾಜ ಅರಸಿನವರು, ಶ್ರೀಮಾನ್ ಸುಬ್ರಹ್ಮಣ್ಯರಾಜ ಅರಸಿನವರು ಮುಂತಾದ ಅನೇಕ ರಾಜಬಂಧುಗಳೂ ಆಗಮಿಸಿದ್ದರು. ಶ್ರೀ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವ ಮತದ ಸನಾತನತ್ವವನ್ನು ವೇದಾಗಮಪುರಾಣೇತಿಹಾಸಾನುಭವ ಪ್ರಮಾಣಪೂರ್ವಕವಾಗಿಯೂ ಯುಕ್ತಿಯುಕ್ತವಾಗಿಯೂ ತಮ್ಮ ಉಪದೇಶವಾಣಿಯಿಂದ ಸಂಸ್ಕೃತಭಾಷೆಯಲ್ಲಿ ಪ್ರತಿಪಾದಿಸಿ ತರುವಾಯ ಕರ್ನಾಟಕಭಾಷೆಯಲ್ಲಿ ಮುಕ್ತಿಸಾಧನವಾದ ಶಿವಲಿಂಗಧಾರಣವು ವೇದಾಗಮಸಿದ್ಧವಾದುದೆಂಬುದನ್ನು ಸಪ್ರಮಾಣವಾಗಿ ಪ್ರತಿಪಾದಿಸಿದರು. ಇದೇ ತಿಂಗಳು ೧ ನೇ ತಾರೀಖು ಗುರುವಾರ ದಿವಸ ಸಾಯಂಕಾಲ ಶ್ರೀಮದ್ರಂಭಾಪುರೀ ಮಹಾಸ್ವಾಮಿಗಳು ಭದ್ರಪೀಠವನ್ನು ಅಲಂಕರಿಸಿದ ತರುವಾಯ ಸಭಿಕರು ಜಯಘೋಷವನ್ನು ಮಾಡಿದರು. ಗವಾಯಿ ಗುರುಶಾಂತಯ್ಯ ಗಾನಕುಶಲ ಇವರ ಸಂಗೀತವು ಸ್ವಲ್ಪ ಹೊತ್ತು ನಡೆಯಿತು. ಅನಂತರ ಬೆಂಗಳೂರು ಮಹಾಂತಿನಮಠದ ಗಂಗಾಧರ ಶಿವಾಚಾರ್ಯರು 'ಶಿವದೀಕ್ಷಾ' ಎಂಬ ವಿಷಯವಾಗಿ ಗಂಭೀರವಾದ ಭಾಷಣಮಾಡಿದರು. ಗುರುವಿಲ್ಲದವನಿಗೆ ಶಿವದೀಕ್ಷೆಯು ಸಂಭವಿಸುವುದಿಲ್ಲ. ಶಿವದೀಕ್ಷೆಯಿಲ್ಲದವನಿಗೆ ಲಿಂಗಧಾರಣಾಧಿಕಾರವಿಲ್ಲ. ಲಿಂಗಧಾರಣವಿಲ್ಲದವನಿಗೆ ಮೋಕ್ಷಾಧಿಕಾರವಿಲ್ಲ. ವೀರಶೈವಮತದಲ್ಲಿ ಜನ್ಮವನ್ನು ಧರಿಸಿದವನಿಗೆ ಗುರುವಿನಿಂದ ಶಿವದೀಕ್ಷೆಯನ್ನು ಪಡೆಯುವುದು ಅತ್ಯವಶ್ಯಕವಾದುದೆಂದು ಅನೇಕ ಲೌಕಿಕೋದಾಹರಣೆಗಳಿಂದ ಭಾಷಣವನ್ನು ಮಾಡಿ ಸಭಿಕರಿಗೆ ಸಂತೋಷವನ್ನುಂಟುಮಾಡಿದರು.

ಪದವೀದಾನಸಮಾರಂಭ.

ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕೋತ್ಸವವು ಕಳೆದ ತಿಂಗಳು 31 ನೇ ತಾರೀಕು ಬುಧವಾರ ದಿವಸ ರಾಜಧಾನಿಯ ಜಗನ್ಮೋಹನ ಪ್ರಾಸಾದದಲ್ಲಿ ಜರುಗಿತು. ಶ್ರೀಮದ್ಯುವರಾಜರವರು ನಿಖಿಲರಾಜಮರ್ಯಾದೆಯೊಡನೆ ದಯಮಾಡಿಸಿ ಸಭಾಧ್ಯಕ್ಷತೆಯನ್ನು ಸ್ವೀಕರಿಸಿದರು. ಯೂನಿವರ್ಸಿಟಿ ಅಧಿಕಾರಿಗಳು ದಿವಾನ್ ಸಾಹೇಬರವರು ಕೌನ್ಸಿಲ್ ಮೆಂಬರುಗಳು ಹುಜೂರು ಸೆಕ್ರೆಟರಿಗಳೂ ಅ|| ಸೆಕ್ರೆಟರಿಗಳು ಅಸಂಖ್ಯ ವಿದ್ವಾಂಸರೂ, ಪುರಪ್ರಮುಖರೂ ಯೂರೋಪಿಯನ್ನರುಗಳೂ ಅನೇಕ ಮಹಿಳೆಯರೂ ದರ್ಬಾರ್ ಉಡುಪುಗಳಿಂದ ಬಂದಿದ್ದರು. ಶ್ರೀಮದ್ಯುವರಾಜರವರು ಯೂನಿವರ್ಸಿಟಿ ಪ್ರೌಢಪರೀಕ್ಷೆಗಳಲ್ಲಿ ಉತ್ತೀರ್ಣರಾದ 356 ವಿದ್ಯಾರ್ಥಿವಿದ್ಯಾರ್ಥಿನಿಯರುಗಳಿಗೆ ಡಿಗ್ರಿಗಳನ್ನು ಅನುಗ್ರಹಿಸಿದರು. ಅನಂತರ ಕಲ್ಕತ್ತ ಯೂನಿವರ್ಸಿಟಿಯ ವೈಸ್ ಛಾನ್ಸಲರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಸರ್ ಹಸನ್ ಸುಹ್ರಾವರ್ದಿಯವರು ಸ್ತ್ರೀವಿದ್ಯಾಭ್ಯಾಸ ಸಮ್ಮಿಳಿತ ವಿದ್ಯಾಭ್ಯಾಸ ಪ್ರಜಾಸಕ್ತವಾದ ಆಳಿಕೆ ಶಾರೀರಕ ದೌರ್ಬಲ್ಯ ಮಾತೃಭಾಷಾಸೇವೆ ಹಿಂದೂ ಮುಸಲ್ಮಾನರ ಐಕಮತ್ಯ ಮುಂತಾದ ವಿಷಯಗಳನ್ನು ಕುರಿತು ಭಾಷಣವನ್ನು ಮಾಡಿದನಂತರ ಸಭೆಯು ಮುಕ್ತಾಯವಾಗಿ ಶ್ರೀಮದ್ಯುವರಾಜರವರು ಅರಮನೆಗೆ ಚಿತ್ತೈಸಿದರು.

ವರ್ತಮಾನಸಂಗ್ರಹ.

ಲಾಹೋರು ರೈಲ್ವೆಸ್ಟೇಷನಿಂದ ಕಳ್ಳಿದ್ದಲು ಕದ್ದದ್ದಕ್ಕಾಗಿ ಕಾಂಗ್ರಾ ಸೀಮೆಯ ಒಬ್ಬ ಯುವಕನಿಗೆ ಆರು ತಿಂಗಳು ಕಠಿಣಸಜಾ ವಿಧಿಸಿದರು.

ಕಾನ್ಪುರದಲ್ಲಿ ಮೀನು ಹಿಡಿಯುತ್ತಿರುವಾಗ್ಯೆ ಕಾಲುಜಾರಿ ನೀರಿಗೆ ಬಿದ್ದ ತನ್ನ ತಮ್ಮನನ್ನು ಬದುಕಿಸುವುದರಲ್ಲಿ ಕ್ರೈಸ್ತಹುಡುಗನೊಬ್ಬನು ತಾನೇ ಪ್ರಾಣಬಿಟ್ಟನು.

ರಹಿಮಾಯರ್‌ಖಾನ್ ಬಳಿ ಎರಡು ಗೂಡ್ಸು ರೈಲುಗಳು ಒಂದಕ್ಕೊಂದು ತಗುಲಿ ಎರಡು ಇಂಜನ್ನುಗಳ ಡ್ರೈವರುಗಳೂ ಮೃತಿಹೊಂದಿದರೆಂದು ತಿಳಿದು ಬರುತ್ತದೆ.

ಸುಮಾರು 50 ಮಂದಿ ಮಕ್ಕಳುಗಳ ತಂದೆಗಳೂ ಮತ್ತು ಪೋಷಕರುಗಳೂ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸದಿದ್ದುದಕ್ಕಾಗಿ ಡೆಲ್ಲಿ ಮುನಿಸಿಪಲ್ ಮ್ಯಾಜಿಸ್ಟ್ರೇಟರಿಂದ ಜುಲ್ಮಾನೆ ಹಾಕಲ್ಪಟ್ಟರು.

ಕಾಪೂರ್‌ಥಾಲಾ ಜೈಲಿನಲ್ಲಿ 5 ವರುಷದಿಂದ ಸಜಾ ಅನುಭವಿಸುತ್ತಿದ್ದ ಚೌಧುರಿ ಅಬ್ದುಲ್ ಅಜೀಜ್ ಎಂಬ ಖೈದಿಗೆ ಹೊರಗಿನಿಂದ ಸಮಾಚಾರವನ್ನು ತಲ್ಪಿಸಿದ್ದಕ್ಕಾಗಿ ವಾರ್ಡರನು ಕೆಲಸದಿಂದ ತೆಗೆಯಲ್ಪಟ್ಟನು.

ಲಕ್ನೋ ಪಟ್ಟಣದಲ್ಲಿ ಒಬ್ಬ ಹುಡುಗಿಯು ತನ್ನ ನಡತೆಯ ವಿಷಯವಾಗಿ ಇತರರಲ್ಲಿ ದುರಭಿಪ್ರಾಯ ಉಂಟಾಗುವರೀತಿ ಹೇಳಿದನೆಂದು ತನ್ನ ಸ್ವಂತ ತಂದೆಯ ಮೇಲೆ ಮಾನನಷ್ಟಕ್ಕೆ ದಾವಾ ಮಾಡಿರುತ್ತಾಳೆ.

ಹೊಸ ಡೆಲ್ಲಿಯಲ್ಲಿ ರಾತ್ರಿ ಮಲಗಿದ ಹೆಂಗಸು ಹಾಸಿಗೆಯಲ್ಲೆ ಪ್ರಾಣಬಿಟ್ಟಿದ್ದಾಳೆಂದು ಪಕ್ಕದ ಮನೆಯವರಿಂದ ಪೋಲೀಸಿಗೆ ಸಮಾಚಾರ ಬಂದದ್ದರಿಂದ ಹೆಣವನ್ನು ಪರೀಕ್ಷೆಗೆ ಕಳುಹಿಸಿ ಅನುಮಾನದಿಂದ ಆಕೆಯ ಗಂಡನನ್ನು ಹುಡುಕುತ್ತಿದ್ದಾರೆ.

ನಾಗಪುರದ ಬಳಿ ಕಂಬಿಯ ಮೇಲೆ ಕಬ್ಬಿಣದ ಕುರ್ಚಿಯನ್ನಿಟ್ಟು ರೈಲು ಉರುಳಿಸುವ ಪ್ರಯತ್ನವನ್ನು ಯಾರೋ ದುಷ್ಟರು ಮಾಡಿದ್ದರು. ಆದರೆ ಎಂಜಿನು ಬಂದು ತಗುಲಿದೊಡನೆ ಕುರ್ಚಿಯು ಪುಡಿಪುಡಿಯಾದ್ದರಿಂದ ಗಾಡಿಗೆ ಯಾವ ಅಪಾಯವೂ ಆಗಲಿಲ್ಲ.

ಬೆಂಗಳೂರಿನಿಂದ ಮದ್ರಾಸಿಗೆ ಹೋಗುವ ರೈಲು ಜೋಲಾರಪೇಟೆ ಬಳಿ ಕಂಬಿ ತಪ್ಪಿ ಎಂಜಿನ್ ಪಕ್ಕದಲ್ಲಿದ್ದ ಎರಡುಗಾಡಿಗಳು ಕೆಳಗೆ ಉರುಳಿದವು. ಯಾರಿಗೂ ಅಪಾಯವಾಗಲಿಲ್ಲ. ಜೋಲಾರಪೇಟೆ ಸ್ಟೇಷನಿಂದ ಬೇರೆ ಎಂಜಿನ್ ಸಹಾಯಕ್ಕೆ ತಂದು ಗಾಡಿಯನ್ನು ಮುಂದೆ ಸಾಗಿಸಿದರು. ಆ ದಿವಸ ರೈಲು ಮದರಾಸಿಗೆ ತಲಪಲು ತಾವಕಾಶವಾಯಿತು.

ಅಹಮದಾಬಾದಿನ ಸೆಷನ್ ಜಡ್ಜಿಗಳು ಕುರುಬರ ಹುಡುಗಿಯೊಬ್ಬಳನ್ನು ಕೊಂದ ತಪ್ಪಿಗಾಗಿ ಒಬ್ಬ ಮುಸಲ್ಮಾನನಿಗೆ ಮರಣದಂಡನೆಯನ್ನು ವಿಧಿಸಿದರು. ಕೊಲೆಯು ವಿಚಿತ್ರರೀತಿಯಿಂದ ಹೊರಬಿತ್ತು. ಹುಡುಗಿಯನ್ನು ಕೊಂದು ಹೂತುಹಾಕಿದ್ದನ್ನು ರಣಹದ್ದುಗಳು ಪತ್ತೆಮಾಡಿ ದೇಹವನ್ನು ಎಳೆದದ್ದರಿಂದ ಕೊಲೆಯು ಪತ್ತೆಯಾಯಿತು.

ಕಳೆದ 30 ನೆಯ ತಾರೀಖಿನ ದಿವಸ ಲಾಹೋರ್ ಝಂಗಿನ ಸಮೀಪದಲ್ಲಿ ಅಕಸ್ಮಾತ್ತಾಗಿ ಬೆಂಕಿಬಿದ್ದು ಒಂದು ಮೊಹಲ್ಲವೇ ಸುಟ್ಟು ಬೂದಿಯಾಯಿತು. ಮಧ್ಯಾಹ್ನ ಹನ್ನೆರಡು ಘಂಟೆಗೆ ಬೆಂಕಿಯು ಹತ್ತಿ ಬೀದಿಯನ್ನೆಲ್ಲಾ ಆವರಿಸುವುದರೊಳಗಾಗಿ ಲ್ಯಾಲಪುರದಿಂದ ಬೆಂಕಿಯನ್ನಾರಿಸುವ ಇಂಜನ್ನುಗಳನ್ನು ತಂದು ಬೆಂಕಿಯನ್ನಾರಿಸುವ ಪ್ರಯತ್ನವನ್ನು ಮಾಡಿದರೂ ಸಾಧ್ಯವಾಗದೆ ಮೊಹಲ್ಲವೇ ಅಗ್ನಿದೇವನಿಗೆ ಆಹುತಿಯಾಯಿತು.

ಕಿವುಡರೂ ಕೇಳುವಂಥ ಹೊಸಮಾದರಿಯ ಗ್ರಾಮಾಫೋನ್ ಯಂತ್ರವು ಜರ್ಮನಿಯಲ್ಲಿ ತಯಾರಾಗಿರುತ್ತದೆ. ಈ ಯಂತ್ರದ ಹತ್ತಿರ ನಿಂತರೂ ಕೂಡ ಇದರಿಂದ ಹೊರಡುವ ಶಬ್ದವು ಕೇಳಿಸುವುದಿಲ್ಲ. ವಿದ್ಯುಚ್ಛಕ್ತಿಯ ಮೂಲಕ ಶಬ್ದವು ಹಿಡಿಗಳನ್ನುಳ್ಳ ಸಣ್ಣ ಮೆತ್ತೆಗಳಿಗೆ ಒಯ್ಯಲ್ಪಡುತ್ತದೆ. ಆ ಮೆತ್ತೆಗಳನ್ನು ತಲೆಯ ಯಾವ ಭಾಗಕ್ಕಾದರೂ ಒತ್ತಿಹಿಡಿದುಕೊಂಡರೆ ಕೂಡಲೆ ಕಿವುಡಾಗಿರುವ ಮನುಷ್ಯನಿಗೂ ಕೂಡ ಮೂಳೆಗಳ ಮೂಲಕ ಶಬ್ದವು ಕೇಳಿಸುತ್ತದೆ. ಮುಖ್ಯವಾಗಿ ಇಂಥ ಯಂತ್ರದಿಂದ ಕಿವುಡು ಹುಡುಗರಿಗೂ ವಿದ್ಯೆಯನ್ನು ಕಲಿಸಬಹುದು.

ಕಾನ್‌ಪುರದಲ್ಲಿ ಅಖಿಲ ಇಂಡಿಯಾ ಖೈದಿಗಳ ಸಹಾಯಕ್ಕಾಗಿ ಒಂದು ಸಂಸ್ಥೆಯು ಏರ್ಪಡಿಸಲ್ಪಟ್ಟು ಡಿ|| ಮ್ಯಾಜಿಸ್ಟ್ರೇಟರ ಅಧ್ಯಕ್ಷತೆಯಲ್ಲಿ ಲಾಹೋರಿನ ಮಲಕರ್‌ರಾಮ್ ಲಕೀಯ ಎಂಬುವರು ಅಪರಾಧವೆಂಬುವದು ಒಂದು ತರಹದ ರೋಗವೆಂತಲೂ ಇದಕ್ಕೂ ಔಷಧವುಂಟೆಂತಲೂ ಅಪರಾಧಿಗಳು ಬಿಡಲ್ಪಟ್ಟನಂತರ ಅವರಿಗೆ ಬೇರೆ ಕೆಲಸವು ಸಿಕ್ಕದಿದ್ದರೆ ಪುನಃ ಅಪರಾಧಗಳನ್ನು ಮಾಡುವರೆಂತಲೂ ಇದಕ್ಕಾಗಿ ಅಪರಾಧಿಗಳಿಗೆ ಕೆಲಸಗಳನ್ನು ಕಲ್ಪಿಸಿಕೊಡುವುದಲ್ಲದೆ ಖೈದಿಗಳನ್ನು ಸಹಾನುಭೂತಿಯಿಂದ ಕಾಣುತ್ತಿರಬೇಕೆಂತಲೂ ಭಾಷಣಮಾಡಿದರು.

ಕಳೆದವಾರ ಮಂಗಳೂರಿನಲ್ಲಿ ವೇಶ್ಯಾಪಂಗಡಕ್ಕೆ ಸೇರಿದ ಒಬ್ಬ ಹುಡುಗಿಯು ಬಾಯಿಲೆ ಇದ್ದ ತನ್ನ ಗಂಡನಿಗೆ ಮರಣವು ಸಮೀಪಿಸಿದ್ದನ್ನು ನೋಡಿ, ಅವನ ಬಾಯಿಗೆ ನೀರು ಬಿಟ್ಟು ತಾನು ಹೋಗಿ ಬಾವಿಯಲ್ಲಿ ಬಿದ್ದಳು. ನೆರೆಮನೆಯವರು ಬಂದು ತೆಗೆಯುವುದರಲ್ಲಿ ಪ್ರಾಣವು ಹೋಗಿತ್ತು. ಗಂಡಹೆಂಡರಿಬ್ಬರಿಗೂ ಏಕಕಾಲದಲ್ಲಿಯೇ ಸಂಸ್ಕಾರ ಮಾಡಲಾಯಿತು. ಈ ಪಂಗಡದಲ್ಲಿ ಈ ರೀತಿಯಾದ ವಿಶ್ವಾಸವಿರುವುದು ಅಪೂರ್ವವಾದ್ದರಿಂದ ಅವಳ ವಿಷಯದಲ್ಲಿ ಜನಗಳು ತುಂಬಾ ಕನಿಕರ ಪಡುತ್ತಾರೆ. ಹೆಣವನ್ನು ಭಾವಿಯಿಂದ ಹೊರಕ್ಕೆ ತೆಗೆದಾಗ ಮೈಮೇಲೆ ಯಾವ ಒಡವೆಗಳೂ ಇರಲಿಲ್ಲವಾದುದರಿಂದ ಕಳುವು ನಡೆದಿರಬೇಕೆಂದು ಪೋಲೀಸರು ಕೆಲವರನ್ನು ದಸ್ತಗಿರಿ ಮಾಡಿದ್ದಾರೆ.

ಜೈಲಿನಲ್ಲಿ ಕಾಳಿಪೂಜೆ.

ಮಧ್ಯಪ್ರಾಂತ್ಯಗಳಿಗೆ ಸೇರಿದ ಡಾರ್ಮೆ ಜೈಲಿನಲ್ಲಿರುವ ನಾಲ್ಕು ಜನ ಬೆಂಗಾಳಿ ಯುವಕರು ನಾಲ್ಕು ತಿಂಗಳು ಕಷ್ಟಪಟ್ಟು ಕಾಳಿ ವಿಗ್ರಹವನ್ನು ನಿರ್ಮಿಸಿ ಪೂಜಾನಂತರ ನೀರಿನಲ್ಲಿ ಬಿಡುವುದಕ್ಕಾಗಿ ಅಧಿಕಾರಿಗಳ ವಶಕ್ಕೆ ಕೊಟ್ಟರು. ಮತ್ತು ಅದಕ್ಕೆ ತಗಲುವ ವೆಚ್ಚ 1000 ರೂ. ಗಳನ್ನು ತಮ್ಮ ಭತ್ಯದಿಂದ ಕೊಡಲು ಒಪ್ಪಿದ್ದಾರೆ. ವಿಗ್ರಹವನ್ನು ಹೊರಕ್ಕೆ ತರುವುದರೊಳಗೆ ಜೈಲಿನ ಬಾಗಿಲಿನಲ್ಲಿ ಅನೇಕ ಜನರು ನೆರೆದಿದ್ದರು. ಪೋಲೀಸರು ಬಂದು ಇವರನ್ನು ಚದುರಿಸಿದರು.

ಮನಿಯಾರ್ಡರ್ ಹಣವನ್ನು ಫೋರ್ಜರಿಯಿಂದ ದುರುಪಯೋಗಪಡಿಸಿಕೊಂಡನೆಂದು ಪೋಸ್ಟುಮ್ಯಾನ್ ನಾರಾಯಣರಾವ್ ಎಂಬುವನಿಗೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಎರಡು ವರ್ಷ ಐದು ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದರು.

(3ನೆಯ ಪುಟದಿಂದ ಮುಂದುವರಿದುದು.)

ಹಿಪ್ಪಿನ ಎಣ್ಣೆಯಲ್ಲಿ ತಯಾರಿಸಿದ ಸಾಬೂನನ್ನು ಪಶ್ಚಿಮತೀರ ಪ್ರದೇಶದಿಂದ ತರಿಸುತ್ತಿದ್ದೆವಷ್ಟೆ. ಈಗ ಇದಕ್ಕೆ ಬದಲಾಗಿ ಸ್ಥಳದಲ್ಲಿಯೇ ಹೊಂಗೇ ಎಣ್ಣೆಯಿಂದ ತಯಾರಿಸಲ್ಪಡತಕ್ಕ ಸಾಬೂನು ಈ ಕೆಲಸಕ್ಕೆ ಪ್ರಯೋಜನಕರವಾಗಿ ಪರಿಣಮಿಸಿದೆ; ಅದು ಜನಗಳಲ್ಲಿ ಹೆಚ್ಚು ಬಳಕೆಗೆ ಬರುತ್ತಿದೆ.

ಬಗೆಬಗೆಯ ಪ್ರಯೋಗಗಳನ್ನು ನಡೆಯಿಸಿ ಮುಖ್ಯಮುಖ್ಯವಾದ ಬೆಳೆಗಳ ಉತ್ತಮ ಜಾತಿಗಳನ್ನು ಕಂಡುಹಿಡಿಯುವ ಕೆಲಸವನ್ನೂ ಮತ್ತು ಅತ್ಯುತ್ತಮ ಜಾತಿಯ ಪೈರುಗಳನ್ನು ಬೆಳೆಯಿಸಿ ವೃದ್ಧಿಗೊಳಿಸುವ ಕೆಲಸವನ್ನೂ ಪ್ರಸಕ್ತ ವರ್ಷದಲ್ಲಿಯೂ ನಡೆಸಿಕೊಂಡು ಬರಲಾಗಿದೆ. ಹೊಸದಾದ ಆರು ಬಗೆಯ ರಾಗಿಗಳು ಖಾರುರಾಗಿ ಪ್ರದೇಶದಲ್ಲಿ ಬೆಳೆಯುವುದಕ್ಕೆ ತಕ್ಕದಾಗಿರುವಂತೆಯೂ, ಹೊಸದಾದ ನಾಲ್ಕು ಬಗೆಯ ರಾಗಿಗಳು ಹೈನುರಾಗಿ ಪ್ರದೇಶದಲ್ಲಿ ಬೆಳೆಯುವುದಕ್ಕೆ ತಕ್ಕದಾಗಿರುವಂತೆಯೂ ಕಂಡು ಬಂದುವು. ನಾಗೇನಹಳ್ಳಿ ಕ್ಷೇತ್ರದಲ್ಲಿ 200 ಕ್ಕೆ ಮೇಲ್ಪಟ್ಟಷ್ಟು ಬಗೆಗಳ ಬತ್ತವನ್ನು ಅಜಮಾಯಿಷಿ ಮಾಡುತ್ತಿರಲಾಗಿದೆ. ಭಾರೀ ಮಳೆಯು ಬೀಳತಕ್ಕ ಪ್ರದೇಶಗಳಲ್ಲಿ ಸರಿಯಾಗಿ ಬೆಳೆಯುವುದಕ್ಕೆ ತಕ್ಕದಾಗಿರುವಂಥ ಬತ್ತದ ಜಾತಿಗಳನ್ನು ಮರ್ತೂರು ಕ್ಷೇತ್ರದಲ್ಲಿ ಅಜಮಾಯಿಷಿ ಮಾಡಿ ನೋಡುತ್ತಿರಲಾಗಿದೆ. ಜಾವಾ ದ್ವೀಪದಿಂದ ತರಿಸಿರುವ ಕೆಲವು ಜಾತಿಗಳ ಕಬ್ಬುಗಳೂ ಸೇರಿ ಅನೇಕ ಬಗೆಯ ಕಬ್ಬುಗಳನ್ನು ಬೆಳೆಯಿಸಿ ಫಲಿತಾಂಶವನ್ನು ಪರೀಕ್ಷಿಸುತ್ತಿರಲಾಗಿದೆ.

ಬಬ್ಬೂರು ಕ್ಷೇತ್ರದಲ್ಲಿ ಹಣ್ಣಿನ ಸಸಿಗಳನ್ನು ಬೆಳೆಯಿಸುವ ಕೆಲಸವನ್ನು ಪ್ರಸಕ್ತಸಾಲಿನ ಆಖೈರುಭಾಗದಲ್ಲಿ ಪ್ರಾರಂಭಿಸಲಾಯಿತು.

ದನಕರುಗಳಿಗೆ ದೊಡ್ಡರೋಗವು ತಗಲುವುದು ಕಡಿಮೆಯಾಗುತ್ತಲೇ ಬಂದಿದೆ. ಪ್ರಸಕ್ತಸಾಲಿನಲ್ಲಿ, ತಿರುಮಕೂಡಲು ನರಸೀಪುರ, ಮಾಲೂರು, ಗುಬ್ಬಿ—ಈ ಮೂರು ಸ್ಥಳಗಳಲ್ಲಿ ಮೂರು ಪಶುವೈದ್ಯದ ಡಿಸ್ಪೆನ್ಸರಿಗಳನ್ನು ಹೊಸದಾಗಿ ಸ್ಥಾಪಿಸಲಾಯಿತು. ಇದರಿಂದ ಸಂಸ್ಥಾನದಲ್ಲಿರತಕ್ಕ ಪಶುವೈದ್ಯದ ಸಂಸ್ಥೆಗಳ ಒಟ್ಟು ಸಂಖ್ಯೆಯು 60 ರಿಂದ 63 ಕ್ಕೆ ಹೆಚ್ಚಿರುತ್ತದೆ.

ದೊಡ್ಡರೋಗವು ತಗಲದಂತೆ ಸಿಡುಬು ಚುಚ್ಚುವುದಕ್ಕಾಗಿ ಬೇಕಾಗುವ ಸೀರಂ ರಸವನ್ನೂ ಮತ್ತು ದೊಡ್ಡರೋಗದ "ವೈರಸ್" ರಸವನ್ನೂ ಸೀರಂ ಇನ್‌ಸ್ಟಿಟ್ಯೂಟ್‌ನಲ್ಲಿ ತಯಾರಿಸಲಾಗುತ್ತಿದ್ದಿತಷ್ಟೆ. ಈಗ ಅವುಗಳ ಜೊತೆಗೆ ಹೊಸಬಗೆಯ ಸಿಡುಬು ರಸವನ್ನೂ ಮತ್ತು ಸೀರಂಗಳನ್ನೂ ತಯಾರಿಸಿ, ಸಂಸ್ಥಾನದ ಹೊರಗಿನ ಪ್ರಾಂತ್ಯಗಳಿಗೂ ಸಹ ಬಹಳವಾಗಿ ಒದಗಿಸುತ್ತಿರಲಾಗಿದೆ. ಸಂಸ್ಥಾನದ ಹೊರಗಿನ ಪ್ರಾಂತ್ಯಗಳಿಗೆ ಅವುಗಳನ್ನು ಕಳುಹಿಸಿದುದರಿಂದ ಬಂದ ವರಮಾನವು ಪ್ರಸಕ್ತಸಾಲಿನಲ್ಲಿ 49,646 ರೂಪಾಯಿಗಳಾಯಿತು. 1932-33 ನೆಯ ಸಾಲಿನಲ್ಲಿ ಇದು 58,751 ರೂಪಾಯಿಗಳಾಗಿದ್ದಿತು. ವರಮಾನವು ಈ ರೀತಿ ಕಡಿಮೆಯಾದುದಕ್ಕೆ, ಅವುಗಳ ಮಾರಾಟದಲ್ಲಿ ಬೆಲೆಯನ್ನು ಇಳಿಸಿದುದೇ ಕಾರಣವಾಗಿದೆ.

ವಿದ್ಯಾಭ್ಯಾಸದ ಇಲಾಖೆ.

ಪ್ರಸಕ್ತಸಾಲಿನಲ್ಲಿ ಸರ್ಕಾರಿ ಪಾಠಶಾಲೆಗಳ ಸಂಖ್ಯೆಯು 6,762 ಆಗಿಯೂ, ಅವುಗಳಲ್ಲಿ ವ್ಯಾಸಂಗಮಾಡುತ್ತಿದ್ದವರ ಸಂಖ್ಯೆಯು 2,97,850 ಆಗಿಯೂ ಇದ್ದಿತು. 1932-33ನೆಯ ಸಾಲಿನಲ್ಲಿ ಸರ್ಕಾರಿ ಪಾಠಶಾಲೆಗಳ ಸಂಖ್ಯೆಯು 6,746 ಆಗಿಯೂ ಅವುಗಳಲ್ಲಿ ವ್ಯಾಸಂಗಮಾಡುತ್ತಿದ್ದವರ ಸಂಖ್ಯೆಯು 2,97,099 ಆಗಿಯೂ ಇದ್ದಿತು.

ಪ್ರಸಕ್ತ ವರ್ಷದಲ್ಲಿ, ಸ್ತ್ರೀಯರಿಗಾಗಿ ಎರಡು ಕಾಲೇಜುಗಳೂ ಆರು ಇಂಗ್ಲೀಷ್ ಹೈಸ್ಕೂಲುಗಳೂ, ಒಂದು ಕನ್ನಡ (ವರ್ನಾಕ್ಯುಲರ್) ಹೈಸ್ಕೂಲೂ, 34 ಮಿಡ್ಲ್ ಸ್ಕೂಲುಗಳೂ, 536 ಪ್ರೈಮರಿ ಸ್ಕೂಲುಗಳೂ, ಮೂರು ತರಬೇತಿನ (ಟ್ರೈನಿಂಗ್) ಸಂಸ್ಥೆಗಳೂ ಮತ್ತು ಮೂರು ಕೈಗಾರಿಕೆಯ ಸ್ಕೂಲುಗಳೂ ಇದ್ದುವು. ಆದಿಕರ್ನಾಟಕರ ಪಂಗಡದ ಹುಡುಗರಿಗಾಗಿ 540 ಸ್ಕೂಲುಗಳಿದ್ದುವು ಮತ್ತು ಅವುಗಳಲ್ಲಿ 12,509 ಮಂದಿ ಹುಡುಗರಿದ್ದರು. ಆದಿಕರ್ನಾಟಕರ ಹುಡುಗಿಯರಿಗಾಗಿ ಮೂರು ಸ್ಕೂಲುಗಳಿದ್ದುವು. ಅವುಗಳಲ್ಲಿ 81 ಮಂದಿ ಹುಡುಗಿಯರಿದ್ದರು. ಲಂಬಾಣಿಗಳು, ಕುಂಚಿಗರು, ಕಾಡುಜನಗಳ ಪಂಗಡಗಳು ಮತ್ತು ವಡ್ಡರುಗಳು—ಇವರುಗಳಿಗಾಗಿ 42 ಸ್ಕೂಲುಗಳು ಇದ್ದುವು ಮತ್ತು ಅವುಗಳಲ್ಲಿ 724 ಮಂದಿ ವಿದ್ಯಾರ್ಥಿಗಳಿದ್ದರು.

1936 ನೆಯ ಇಸವಿಯ ಪರೀಕ್ಷೆಯ ಲಾಗಾಯತು ಜಾರಿಗೆ ಬರುವಂತೆ ಮಿಡ್ಲ್‌ಸ್ಕೂಲು ಪರೀಕ್ಷೆಗೆ ವ್ಯಾಸಂಗಮಾಡತಕ್ಕ ವಿಷಯಗಳಲ್ಲಿ, "ಸಂಗೀತ" ವನ್ನೂ ಒಂದು ಐಚ್ಛಿಕ ವಿಷಯವನ್ನಾಗಿ ಸೇರಿಸುವಂತೆ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಬಾಲಚಮೂ (ಸ್ಕೌಟ್) ವಿಭಾಗವು ಬಹಳ ಚೆನ್ನಾಗಿ ಮುಂದುವರಿಯುತ್ತಿದೆ. 1934 ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಒಟ್ಟು 13,200 ಮಂದಿ ಈ ವಿಭಾಗದಲ್ಲಿ ಸೇರಿದ್ದರು, ಎಂದರೆ, ಈ ಸಂಖ್ಯೆಯು 1933 ನೆಯ ಇಸವಿಯಲ್ಲಿ ಇದ್ದುದಕ್ಕಿಂತಲೂ 2,530 ಹೆಚ್ಚಾಗಿದ್ದಿತು. 'ಗರ್ಲ್‌ಗೈಡ್' ಎಂಬ ಬಾಲಿಕಾಚಮೂ ವಿಭಾಗವೂ ಸಹ ಬಹಳವಾಗಿ ಮುಂದುವರಿಯಿತು.

ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆ.

ಸರ್ಕಾರದ ಸಾಬೂನು ಕಾರ್ಖಾನೆಯಲ್ಲಿ ತಯಾರಾದ ವಸ್ತುಗಳ ಪರಿಮಾಣವು ಹೆಚ್ಚಿತು ಮತ್ತು ಮೈಗೆ ಉಪಯೋಗಿಸತಕ್ಕ ಸಾಬೂನುಗಳ ಧಾರಣೆಗಳನ್ನೂ, ಬಟ್ಟೆಗಳನ್ನೊಗೆಯುವುದಕ್ಕೆ ಉಪಯೋಗಿಸತಕ್ಕ ಸಾಬೂನುಗಳ ಧಾರಣೆಗಳನ್ನೂ ಕಡಿಮೆ ಮಾಡಲಾಯಿತು.

'ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ' ಎಂಬ ಪ್ರಯೋಗಾಲಯದಲ್ಲಿ ಎಂದಿನಂತೆ ಔಷಧಗಳನ್ನು ತಯಾರಿಸಿ ಸರ್ಕಾರದ ಮೆಡಿಕಲ್ ಸ್ಟೋರಿಗೆ ಸರಬರಾಯಿ ಮಾಡಲಾಯಿತು. ಪಿಂಗಾಣಿ ಕಾರ್ಖಾನೆಯ ಯಂತ್ರಸಾಮಗ್ರಿಗಳನ್ನು ಮತ್ತಷ್ಟು ಹೆಚ್ಚಿಸಲಾಯಿತು. ಈ ಕಾರ್ಖಾನೆಯವರು ನಾನಾ ಬಗೆಯ ಇನ್ಸುಲೇಟರುಗಳನ್ನೂ ಮತ್ತು ವಿದ್ಯುಚ್ಛಕ್ತಿಯ ಸಾಮಾನುಗಳನ್ನೂ ವಿದ್ಯುಚ್ಛಕ್ತಿಯ ಇಲಾಖೆಗೂ ಮತ್ತು ಹೊರದೇಶಗಳಲ್ಲಿರತಕ್ಕ ಫರ್ಮುಗಳಿಗೂ ಸರಬರಾಯಿ ಮಾಡಿದರು. ಕಾರ್ಖಾನೆಯಲ್ಲಿ ಒಟ್ಟು 39,485 ರೂಪಾಯಿಗಳಷ್ಟು ಬೆಲೆಬಾಳುವ ಸಾಮಾನುಗಳು ತಯಾರಾದುವು. ಒಟ್ಟು 40,805 ರೂಪಾಯಿಗಳಷ್ಟು ಬೆಲೆ ಬಾಳುವ ಸಾಮಾನುಗಳು ಬಿಕರಿಯಾದುವು. ಮದರಾಸಿನಲ್ಲಿ ನಡೆಯುವ 'ಗಿಲ್ಡ್ ಆಫ್ ಲಂಡನ್ ಇನ್‌ಸ್ಟಿಟ್ಯೂಟ್' ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಸರ್ಕಾರದ ಪೆಯ್ಗೆಯ ಕಾರ್ಖಾನೆಯಲ್ಲಿ ತರಬೇತನ್ನು ಕೊಡುತ್ತಿರಲಾಗಿದೆ. ಪ್ರಸಕ್ತಸಾಲಿನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯವರು ಕೈಗಾರಿಕೆಯ ಸಂಬಂಧವಾದ 36 ಯಂತ್ರಗಳನ್ನು ಸ್ಥಾಪಿಸಿಕೊಟ್ಟರು. ಅವುಗಳ ಮೇಲೆ ವಿನಿಯೋಗಿಸಿದ ಒಟ್ಟು ಬಂಡವಾಳವು 77,398 ರೂಪಾಯಿಗಳು. ಅವುಗಳ ಪೈಕಿ 24 ಖಾಸಗಿ ಯಂತ್ರಸ್ಥಾಪನೆಗಳು. ಪ್ರಸಕ್ತವರ್ಷದಲ್ಲಿ ಕೈಗಾರಿಕೆಯ ಸಂಬಂಧದಲ್ಲಿ 30,905 ರೂಪಾಯಿಗಳಷ್ಟು ತಕಾವಿ ಸಾಲಗಳು ಮಂಜೂರಾದುವು. ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಯಂತ್ರದಿಂದ ಬಾವಿಗಳನ್ನು ತೋಡಿಸಿಕೊಡುವಂತೆ ಸ್ಥಳೀಯ ಸಂಸ್ಥೆಗಳವರು ಪ್ರಾರ್ಥಿಸಿ ಬರೆದುಕೊಂಡಿದ್ದ ಮನವಿಗಳ ಸಂಖ್ಯೆಯು ಹಿಂದಿದ್ದುದಕ್ಕಿಂತಲೂ ಹೆಚ್ಚಾಗಿದ್ದಿತು. 1932-33 ನೆಯ ಸಾಲಿನಲ್ಲಿ 19 ಬಾವಿಗಳು ಮಾತ್ರ ಈ ರೀತಿ ತೋಡಿಸಲ್ಪಟ್ಟಿದ್ದುವು. ಆದರೆ ಪ್ರಸಕ್ತಸಾಲಿನಲ್ಲಿ 39 ಬಾವಿಗಳು ತೋಡಿಸಲ್ಪಟ್ಟುವು. ನೀರಾವರಿಯ ಉದ್ದೇಶಗಳಿಗಾಗಿ ಯಂತ್ರದಿಂದ ಬಾವಿಗಳನ್ನು ತೋಡಿಸುವ ವಿಷಯದಲ್ಲಿ ಅಜಮಾಯಿಷಿ ಕಾರ್ಯಗಳನ್ನು ನಡೆಸುತ್ತಿರಲಾಗಿದೆ.

ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ವಿದ್ಯಾರ್ಥಿಗಳ ಸಂಖ್ಯೆಯು 1932-33ನೆಯ ಸಾಲಿನಲ್ಲಿ 228 ಇದ್ದುದು ಪ್ರಸಕ್ತ ವರ್ಷ 258ಕ್ಕೆ ಹೆಚ್ಚಿತು. ಈ ಇನ್‌ಸ್ಟಿಟ್ಯೂಟಿನಲ್ಲಿ, ಮದರಾಸು ಸರ್ಕಾರದ ಟೆಕ್ನಿಕಲ್ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳಿಗೆ ತರಬಿಯತ್ತು ಕೊಡುವುದು ಮಾತ್ರವಲ್ಲದೆ ಸರ್ಕಾರದ ಹೈಸ್ಕೂಲುಗಳಲ್ಲಿನ ವಿದ್ಯಾರ್ಥಿಗಳಿಗೆ ಕಸಬುದಾರಿ ಶಿಕ್ಷಣವನ್ನೂ ಸಹ ಕೊಡುತ್ತಿರಲಾಗಿದೆ. ಈ ಇನ್‌ಸ್ಟಿಟ್ಯೂಟಿನ ಜೊತೆಗೆ ಸರ್ಕಾರದ 9 ಇತರ ಕೈಗಾರಿಕೆ ಸ್ಕೂಲುಗಳೂ, ಸರ್ಕಾರಿ ಸಹಾಯದ್ರವ್ಯ ಪೋಷಿತವಾದ 5 ಕೈಗಾರಿಕೆ ಸ್ಕೂಲುಗಳೂ ಇದ್ದುವು. ಸ್ತ್ರೀಯರುಗಳು ತಮಗೆ ಬಿಡುವು ಸಿಕ್ಕಿದ ಕಾಲಗಳಲ್ಲಿ ಉಪಯುಕ್ತವಾದ ಸಣ್ಣಪುಟ್ಟ ಕುಶಲ ಕೈಗಾರಿಕೆಗಳನ್ನು ಮನೆಯಲ್ಲಿಯೇ ನಡೆಸಿ, ಸ್ವಲ್ಪಮಟ್ಟಿನ ಆದಾಯವನ್ನು ಪಡೆಯುವುದಕ್ಕೆ ಅನುಕೂಲಿಸುವಂತೆ, ಅವರಿಗೆ ಇಂಥ ಉಪಯುಕ್ತವಾದ ಮನೆಕೈಗಾರಿಕೆಗಳನ್ನು ಕಲಿಸುವುದಕ್ಕಾಗಿ, ಸರ್ಕಾರಿ ದ್ರವ್ಯಸಹಾಯವನ್ನು ಪಡೆಯತಕ್ಕ 10 ತರಗತಿಗಳು ಏರ್ಪಟ್ಟಿದ್ದುವು.

ಸಕ್ಕರೆ ಕೈಗಾರಿಕೆ.

ಮೈಸೂರು ಸಂಸ್ಥಾನದ ಸಕ್ಕರೆ ಕಾರ್ಖಾನೆಯಲ್ಲಿ ದಿನವೊಂದಕ್ಕೆ 1,400 ಟನ್ನುಗಳಷ್ಟು ಕಬ್ಬನ್ನು ಅರೆಯಾಡುವುದು ಸಾಧ್ಯವಾಗುವಂತೆ ಈ ಕಾರ್ಖಾನೆಯ ಯಂತ್ರಾದಿಗಳನ್ನು ಹೆಚ್ಚಿಸಿ ಬದಾವಣೆ ಮಾಡುವುದಕ್ಕಾಗಿ ಬೇಕಾದ ಹಣವನ್ನು ಒದಗಿಸಲು ಸಕ್ಕರೆ ಕಂಪೆನಿಯವರು ಸಾಲಿಯಾನಾ ಶೇಕಡ 6 ರೂಪಾಯಿಗಳ ಬಡ್ಡಿಯಮೇಲೆ 20 ಲಕ್ಷ ರೂಪಾಯಿಗಳನ್ನು ಡಿಬೆಂಚರ್ ಸಾಲವಾಗಿ ತೆಗೆದುಕೊಂಡಿರುತ್ತಾರೆ. ಈ ಮೊಬಲಗಿನ ಪೈಕಿ ಶೇಕಡ 60 ರಷ್ಟನ್ನು ಸರ್ಕಾರದವರೂ ಮತ್ತು ಉಳಿದ ಹಣವನ್ನು ಮಹಾಜನರೂ ಪಾವತಿಮಾಡಿರುತ್ತಾರೆ. ಕಾರ್ಖಾನೆಯ ಬದಾವಣೆಗೆ ಬೇಕಾದ ಯಂತ್ರಸಾಮಗ್ರಿಗಳನ್ನು ತರಿಸಲು ಅವಶ್ಯಕವಾದ ಕ್ರಮ ನಡೆಸಲಾಗಿದೆ. 1934ನೆಯ ಇಸವಿ ಆಗಸ್ಟು ತಿಂಗಳ ಕೊನೆಯವರೆಗೆ 3,917 ಟನ್ನುಗಳಷ್ಟು ಸಕ್ಕರೆಯು ಮಾರಾಟವಾಗಿದೆ ಮತ್ತು ಇದರಿಂದ 10,44,616 ರೂಪಾಯಿಗಳು ಬಂದಿವೆ. 1935-36ನೆಯ ಸಾಲಿನಲ್ಲಿ ಕಬ್ಬನ್ನು ಅರೆಯಾಡುವ ಕಾಲಕ್ಕೆ ಒದಗುವುದಕ್ಕಾಗಿ ರೈತರ ಜಮೀನುಗಳಲ್ಲಿ ಒಟ್ಟು 7,416 ಎಕರೆಗಳಷ್ಟು ಪ್ರದೇಶದಲ್ಲಿ ಕಬ್ಬನ್ನು ಬೆಳೆಮಾಡಲು ಏರ್ಪಡಿಸಲಾಗಿದೆ. ಸಕ್ಕರೆ ಕಾರ್ಖಾನೆಯವರು ಸಾಗುವಳಿ ಮಾಡಿಸುತ್ತಿರುವ ಜಮೀನುಗಳೂ ಸೇರಿ, ಬರುವ ವರುಷದಲ್ಲಿ 8,901 ಎಕರೆಗಳಷ್ಟು ಪ್ರದೇಶದಲ್ಲಿ ಕಬ್ಬು ಬೆಳೆಯಾಗಿ ಸಕ್ಕರೆ ಕಾರ್ಖಾನೆಗೆ ಒದಗಬಹುದೆಂದು ನಿರೀಕ್ಷಿಸಲಾಗಿದೆ. ಭಟ್ಟಿಯಿಳಿಸಿ ಸಾರಾಯಿ ಮುಂತಾದ ಪದಾರ್ಥಗಳನ್ನು ತಯಾರಿಸುವುದಕ್ಕಾಗಿ ಬೇಕಾದ ಯಂತ್ರೋಪಕರಣಗಳು ಬಂದಿವೆ ಮತ್ತು ಅವುಗಳನ್ನು ಜೋಡಿಸುವ ಕೆಲಸವು ನಡೆಯುತ್ತಿದೆ. ಮುಂದಿನ ಜನವರಿ ತಿಂಗಳಿಂದ ಈ ಯಂತ್ರದ ಕೆಲಸವು ಪ್ರಾರಂಭವಾಗಬಹುದೆಂದು ನಿರೀಕ್ಷಿಸಿದೆ. ಬೆಂಗಳೂರಿನಲ್ಲಿ ಸರ್ಕಾರದವರು ಸ್ಥಾಪಿಸಿರುವ 'ಡಿಸ್ಟಿಲರಿ' ಎಂಬ ಭಟ್ಟಿ ಕಾರ್ಖಾನೆಯಲ್ಲಿ 1934ನೆಯ ಇಸವಿ ಅಕ್ಟೋಬರ್ 1ನೆಯ ತಾರೀಖಿನಿಂದ 'ಆಲ್ಕೊಹಾಲ್' ಎಂಬ ಮಾದಕದ್ರವವನ್ನು ತಯಾರಾಗುವ ಕೆಲಸವನ್ನು ಸಕ್ಕರೆ ಕಾರ್ಖಾನೆಯವರು ವಹಿಸಿಕೊಂಡಿದ್ದಾರೆ.

ಪಬ್ಲಿಕ್‌ವರ್ಕ್ಸ್ ಇಲಾಖೆ.

ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಕೆಲಸ ನಡೆಯಿಸಿದ ಎಲ್ಲಾ ಬಾಬುಗಳೂ ಸೇರಿ ಒಟ್ಟು 48,69,804 ರೂಪಾಯಿಗಳು ವೆಚ್ಚವಾಗಿವೆ. ನೀರಾವರಿ ಕಾಮಗಾರಿಗಳು ಹೆಚ್ಚು ಹೆಚ್ಚಾಗಿ ಪದೆಸು ತೃಪ್ತಿಕರವಾಗಿ ಕೆಲಸ ನಡೆದಿದೆ. ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಸಿಹಿಕಾಲಿ ಕೆರೆಯ ಕಾಮಗಾರಿಯು ಪೂರೈಸುತ್ತ ಬಂದಿತು ಮತ್ತು ಈ ಕೆರೆಯಿಂದ ನೀರಾವರಿ ಸಾಗುವಳಿಗಾಗಿ ನೀರನ್ನು ಬಿಡಲಾಯಿತು. ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಕಾಮಸಮುದ್ರದ ಕೆರೆಯ ಕಾಮಗಾರಿಯು ಇನ್ನೇನು ಪೂರೈಯಾಯಿತೆಂದು ಹೇಳಬಹುದಾದ ಸ್ಥಿತಿಯಲ್ಲಿದೆ. ಹಾಸನ ಡಿವಿಜನ್ನಿನಲ್ಲಿರುವ ಕಡ್ಲೂರು ಅಣೆಕಟ್ಟಿನಿಂದ ನಾಲೆಯನ್ನು ತೆಗೆಯುವ ಕೆಲಸವು, ಮಧ್ಯ ಮಧ್ಯದಲ್ಲಿ ಉಳಿದಿರುವ ಕೆಲವು ಭಾಗಗಳಲ್ಲಿ ಹೊರತು, 15ನೆಯ ಮೈಲಿಯ ಕೊನೆಯವರೆಗೂ ಪೂರೈಸಿದೆ ಮತ್ತು ನೀರಾವರಿ ಸಾಗುವಳಿಗಾಗಿ 5½ ಮೈಲಿಗಳಷ್ಟು ದೂರದವರೆಗೆ ನೀರು ಬಿಡಲಾಗಿದೆ. ನಾಗಮಂಗಲ ತಾಲೂಕಿನಲ್ಲಿರುವ ಭೀಮನಹಳ್ಳಿಯ ಬಳಿಯಲ್ಲಿ ಅಣೆಕಟ್ಟುವ ಕಾಮಗಾರಿಯನ್ನೂ ಮತ್ತು ಕುಣಿಗಲು ತಾಲೂಕಿನಲ್ಲಿ ಶಿಂಷಾನದಿಗೆ ಚೆಂಡನಹಳ್ಳಿಯ ಹತ್ತಿರ ಒಂದು ಅಣೆಕಟ್ಟುವ ಕಾಮಗಾರಿಯನ್ನೂ ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಅಂಜನಾಪುರ ಜಲಾಶಯ, ಕುಂಬಾಡಿಕೆರೆ, ದಳವಾಯಿಕೆರೆ ಮತ್ತು ಮರಳವಾಡಿಕೆರೆ—ಇವುಗಳು ಭಾರಿ ಕಾಮಗಾರಿಗಳು. ಇವುಗಳ ಕೆಲಸವು ಮುಂದುವರಿಯುತ್ತಿದೆ. ಮೈನರ್ ಕೆರೆಗಳ ವಿಚಾರವಾಗಿಯೂ ಸರ್ಕಾರದವರು ಗಮನಕೊಡುತ್ತಿದ್ದಾರೆ. ಅವುಗಳಿಗಾಗಿ 1,65,559 ರೂಪಾಯಿಗಳನ್ನು ವೆಚ್ಚಮಾಡಿದೆ. 210 ಮೈನರ್ ಕೆರೆಗಳ ಕೆಲಸವು ಈ ವರ್ಷ ನಡೆಯುತ್ತಿದ್ದಿತು. ಅವುಗಳ ಪೈಕಿ 48 ಕೆರೆಗಳ ಕೆಲಸವು ಪೂರೈಸಿತು. ನೀರಾವರಿ ಸೆಸ್ಸು ನಿಧಿಯಿಂದ (ಫಂಡಿನಿಂದ) ಮೈನರ್ ಕೆರೆಗಳ ಸಂಬಂಧವಾಗಿ 3,95,059 ರೂಪಾಯಿಗಳು ವೆಚ್ಚವಾಗಿವೆ. ಈ ಮೊಬಲಗು ಕೆರೆಗಳನ್ನೂ ಮತ್ತು ಕಾಲುವೆಗಳನ್ನೂ ದುರಸ್ತುಮಾಡುವುದಕ್ಕೂ ಮತ್ತು ಅವುಗಳನ್ನು ಉತ್ತಮಪಡಿಸುವುದಕ್ಕೂ ವೆಚ್ಚವಾಗಿದೆ.

ಸಾಗರದಲ್ಲಿನ ಪೌರಮಂದಿರದ (ಟೌನ್‌ಹಾಲ್) ಕೆಲಸವೂ ಮತ್ತು ಶಿವಮೊಗ್ಗೆಯಲ್ಲಿ ತಿರುಪಾಳಯ್ಯನವರ ಛತ್ರದ ಕೆಲಸವೂ ಪೂರೈಸಿದುವು. 1934ನೆಯ ಇಸವಿ ಫೆಬ್ರವರಿ ತಿಂಗಳಲ್ಲಿ ಅವುಗಳ ಪ್ರಾರಂಭೋತ್ಸವವು ನೆರವೇರಿತು. ಸ್ತ್ರೀಚಮೂಗಳಿಗಾಗಿ (ಗರ್ಲ್‌ಗೈಡುಗಳಿಗಾಗಿ) ಬೆಂಗಳೂರಿನಲ್ಲಿ ಅವರ ಮುಖ್ಯ ಕಚೇರಿಯ ಕಟ್ಟಡವನ್ನು ಕಟ್ಟುವ ಕೆಲಸವು ಪ್ರಾರಂಭವಾಗಿದೆ.

ಕೃಷ್ಣರಾಜಸಾಗರದ ಕಾಮಗಾರಿಗಳು.

ಕೃಷ್ಣರಾಜಸಾಗರದ ಕಾಮಗಾರಿಗಳಿಗಾಗಿ ಒಟ್ಟು 12,38,300 ರೂಪಾಯಿಗಳನ್ನು ಮಂಜೂರುಮಾಡಲಾಗಿದ್ದಿತು; ಈ ಮೊಬಲಗಿನ ಪೈಕಿ ಒಟ್ಟು 11,10,447 ರೂಪಾಯಿಗಳು ವೆಚ್ಚವಾದುವು.

ಇರ್ವಿನ್ ನಾಲೆಯ ಕಾವೇರೀ ಶಾಖೆಯನ್ನು 14ನೆಯ ಮೈಲಿಯವರೆಗೆ ವಿಸ್ತರಿಸುವ ಕೆಲಸವನ್ನು ಪೂರೈಸಿದುದರಿಂದ ಇರ್ವಿನ್ ನಾಲೆಯ ನೀರು ಮಂಡ್ಯದವರೆಗೆ ಬಂದಿದೆ. ಈ ನಾಲೆಯಿಂದ ಸಕ್ಕರೆ ಕಾರ್ಖಾನೆಗೆ ನೀರನ್ನು ಒದಗಿಸಲಾಗುತ್ತಿದೆ. ಇರ್ವಿನ್ ನಾಲೆಯ ಪ್ರದೇಶದ 56,000 ಎಕರೆಗಳಷ್ಟು ಜಮೀನುಗಳ ಪೈಕಿ 9,300 ಎಕರೆಗಳಷ್ಟು ಜಮೀನು ಸರ್ಕಾರಿ ಬಂಜರು ಪ್ರದೇಶವಾಗಿದೆ; ಮತ್ತು ಉಳಿದ 46,700 ಎಕರೆಗಳು ಖಾಸಗೀ ಜನರಿಗೆ ಸೇರಿದ ಹಿಡುವಳಿ ಪ್ರದೇಶಗಳಾಗಿವೆ. ಇದುವರೆಗೆ 26,728 ಎಕರೆಗಳಷ್ಟು ಪ್ರದೇಶದ ಸಂಬಂಧವಾಗಿ ರೈತರುಗಳಿಂದ ಮುಚ್ಚಳಿಕೆಗಳನ್ನು ಬರೆಸಿಕೊಂಡಿದೆ. ಹಾಲಿ ಇರತಕ್ಕ ಕಾವೇರೀನದಿಯ ನಾಲೆಗಳು, ಚಿಕ್ಕದೇವರಾಯಸಾಗರ ನಾಲೆ, ವಿರಜಾನದಿ ನಾಲೆ, ದೇವರಾಯ ನಾಲೆ ಮತ್ತು ಚಾಮರಾಜ ಎಡದಡದ ನಾಲೆ ಮತ್ತು ರಾಮಸಮುದ್ರ ನಾಲೆ, ಇವುಗಳನ್ನು ಉತ್ತಮಪಡಿಸುವ ಮತ್ತು ಬದಾವಣೆ ಮಾಡುವ ಕೆಲಸಗಳೂ ಮತ್ತು ಕೃಷ್ಣರಾಜಸಾಗರದಿಂದ ಏರ್ಪಡಿಸಲ್ಪಟ್ಟ ಕೆಳಮಟ್ಟದಲ್ಲಿ ಹರಿಯುವ ಬಲದಡದ ಕಾಲುವೆಯನ್ನು ಉತ್ತಮಪಡಿಸುವ ಸಂಬಂಧವಾದ ಕಾಮಗಾರಿಗಳೂ ನಡೆಯುತ್ತಿದ್ದುವು. ಹುಲ್ಲಹಳ್ಳಿ ನಾಲೆಯನ್ನು 7½ ಮೈಲಿಗಳಷ್ಟು ದೂರವೂ ಮತ್ತು ರಾಮಸ್ವಾಮಿ ನಾಲೆಯನ್ನು 4 ಮೈಲಿಗಳಷ್ಟು ದೂರವೂ ಬದಾವಣೆ ಮಾಡುವುದಕ್ಕೂ ಮತ್ತು ಉಳಿದಿರುವಷ್ಟು ದೂರದವರೆಗೆ ಅವುಗಳನ್ನು ಉತ್ತಮಪಡಿಸುವುದಕ್ಕೂ ತಯಾರಿಸಿ ಕಳುಹಿಸಿದ್ದ ಅಂದಾಜುಗಳು ಮಂಜೂರಾದುವು. ಕೃಷ್ಣರಾಜಸಾಗರದಲ್ಲಿ 120 ಅಡಿಗಳಷ್ಟು ಮಟ್ಟದವರೆಗೆ ನೀರು ನಿಲ್ಲುವುದರಿಂದ ಎಷ್ಟು ಹಿಡುವಳಿ ಜಮೀನುಗಳ ಪ್ರದೇಶವು ಮುಳುಗಡೆಗೆ ಬರಬಹುದೋ ಅಷ್ಟು ಪ್ರದೇಶವನ್ನೂ ಸರ್ಕಾರದ ಸ್ವಾಧೀನಪಡಿಸಿಕೊಳ್ಳುವ ಕೆಲಸವು ಪೂರೈಸಿದುದರಿಂದಲೂ ಮತ್ತು ನೀರು ಮಟ್ಟವನ್ನು 120 ಅಡಿಗಳಿಂದ 124 ಅಡಿಗಳವರೆಗೆ ಹೆಚ್ಚಿಸುವುದರಿಂದ ಆಗ್ಗೆ ಮುಳುಗಡೆಗೆ ಬರಬಹುದಾದ ಹೆಚ್ಚಿಗೆ ಪ್ರದೇಶದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಆವಶ್ಯಕತೆಯು ಈಗ ಸದ್ಯದಲ್ಲೇನೂ ಇಲ್ಲವಾದುದರಿಂದಲೂ ಕೃಷ್ಣರಾಜಸಾಗರದ ಕಾಮಗಾರಿಗಳ ಸಂಬಂಧವಾಗಿ ಏರ್ಪಡಿಸಿದ್ದ ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸರ ಹುದ್ದೆಯನ್ನು ವಜಾಮಾಡಲಾಯಿತು ಮತ್ತು ಉಳಿದಿರುವ ಕೆಲಸಗಳನ್ನು ರೆವೆನ್ಯೂ ಸಬ್‌ಡಿವಿಜನ್ನಿಗೇ ಸೇರಿಸಿಬಿಡಲಾಯಿತು.

ಕೃಷ್ಣರಾಜಸಾಗರದ ಕಾಮಗಾರಿಗಳ ಸಂಬಂಧದಲ್ಲಿ ಏರ್ಪಟ್ಟಿರುವ ಸಮಿತಿಯವರು, ಸಕ್ಕರೆ ಕಾರ್ಖಾನೆಯ ಬದಾವಣೆ, ಆ ಪ್ರದೇಶದಲ್ಲಿ ಮಲೇರಿಯಾ ಜ್ವರವು ಹರಡದಂತೆ ಅವಶ್ಯ ಹತೋಟಿಯಲ್ಲಿಡುವುದು, ಬಾಗಾಯತು ವ್ಯವಸಾಯಕ್ಕೂ [illegible] ಪೈರುಗಳ ವ್ಯವಸಾಯಕ್ಕೂ ಪ್ರೋತ್ಸಾಹ ಕೊಡುವುದು, ಮತ್ತು ಹೊಸದಾಗಿ ಗ್ರಾಮ ರಸ್ತೆಗಳನ್ನು ಹಾಕಿಸುವುದು, ಮುಂತಾದ ಮುಖ್ಯವಾದ ನಾನಾ ವಿಚಾರಗಳಿಗೂ ಗಮನಕೊಟ್ಟರು.

ಯಡತೊರೆ ಹೊಸ ಟೌನಿಗೆ ಸಂಬಂಧಪಟ್ಟ ಕಾಮಗಾರಿಗಳೆಲ್ಲವೂ ಪೂರೈಸಿದುವು. ಶ್ರೀಮನ್ಮಹಾರಾಜರವರು ಈ ಹೊಸ ಟೌನಿನ ಪ್ರಾರಂಭ ಮಹೋತ್ಸವವನ್ನು 1934ನೆಯ ಇಸವಿ ಜೂನ್ 16ನೆಯ ತಾರೀಖಿನಲ್ಲಿ ನೆರವೇರಿಸಿ ಕೃಪೆಮಾಡಿದರು. ಅವರ ಕೃಪಾಪೂರ್ವಕವಾದ ಅನುಮತಿಯನ್ನು ಪಡೆದು ಆ ಟೌನು ಮತ್ತು ತಾಲೂಕಿಗೆ 'ಕೃಷ್ಣರಾಜಸಾಗರ'ವೆಂಬ ಅಭಿಧಾನವನ್ನಿಡಲಾಗಿದೆ. ಹೆಂಗಸರ ಆಸ್ಪತ್ರೆಯ ಮತ್ತು ಕನ್ನಡ ಬಾಲಕಿಯರ ಸ್ಕೂಲು ಕಟ್ಟಡದ ಪ್ರವೇಶಮಹೋತ್ಸವಗಳು 1932ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಜರುಗಿದುವು. ಮಂಡ್ಯದ ಟೌನ್ ಬದಾವಣೆಯ ಕಾಮಗಾರಿಗಳು ಮುಂದುವರಿಯುತ್ತಿವೆ.

ವಿದ್ಯುಚ್ಛಕ್ತಿಯ ಇಲಾಖೆ.

ಪ್ರಸಕ್ತ ವರ್ಷದಲ್ಲಿ 190,274,030 ಬಿ.ಒ.ಟಿ. ಯೂನಿಟ್ಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಯಿತು. 1932-33ನೆಯ ಸಾಲಿನಲ್ಲಿ 1,78,340,592 ಬಿ.ಒ.ಟಿ. ಯೂನಿಟ್ಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗಿದ್ದಿತು. ಪ್ರಸಕ್ತವರ್ಷದಲ್ಲಿ ಈ ಇಲಾಖೆಯ ಒಟ್ಟು ವರಮಾನವು 54,33,711 ರೂಪಾಯಿಗಳು. 1932-33ನೆಯ ಸಾಲಿನಲ್ಲಿ ಈ ವರಮಾನವು 51,97,851 ರೂಪಾಯಿಗಳಾಗಿದ್ದಿತು. ಹೊಸ ಟೌನುಗಳಿಗೂ ಗ್ರಾಮಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿದುದೂ, ಗೋಲ್ಡ್ ಮೈನಿಂಗ್ ಕಂಪೆನಿಗಳವರಿಂದ ಸುಮಾರು 1,50,000 ರೂಪಾಯಿಗಳ ಹೆಚ್ಚು ಹುಟ್ಟುವಳಿ ದೊರೆತುದೂ ಪ್ರಸಕ್ತವರ್ಷದಲ್ಲಿ ಈ ಅಧಿಕ್ಯವುಂಟಾದುದಕ್ಕೆ ಮುಖ್ಯಕಾರಣ. ಆ ಕಂಪೆನಿಗಳವರು ಸುಮಾರು 2,300 ಅಶ್ವಶಕ್ತಿಗಳಷ್ಟು ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡಿದ್ದಾರೆ.

ಕೋಲಾರದ ಚಿನ್ನದಗಣಿ ಕಂಪೆನಿಗಳನ್ನು ಬಿಟ್ಟು, ವಿದ್ಯುಚ್ಛಕ್ತಿಯ ಮತ್ತು ವಿದ್ಯುಚ್ಛಕ್ತಿಯ ದೀಪಗಳ ಯಂತ್ರಸ್ಥಾಪನೆಗಳ ಒಟ್ಟು ಸಂಖ್ಯೆಯು 21,512 ರಿಂದ 24,423ಕ್ಕೆ ಹೆಚ್ಚಿತು. ಮತ್ತು ಬೀದಿ ದೀಪಗಳ ಸಂಖ್ಯೆಯು 10,736 ರಿಂದ 12,087 ಕ್ಕೆ ಹೆಚ್ಚಿತು. ಇದಲ್ಲದೆ ಮೈಸೂರು ಸಿಟಿಯಲ್ಲಿ ಚೌಕಗಳಲ್ಲಿ ಹನ್ನೊಂದು ಟ್ರಾಫಿಕ್ ಕಂಬಗಳು ಇವೆ ಮತ್ತು ಮೈಸೂರಿನಲ್ಲಿ ಹೆಚ್ಚು ಬೆಳಕನ್ನು ಬಹುದೂರದವರೆಗೆ ಬೀರುವ ಫ್ಲಡ್ ಲೈಟ್ ಪ್ರೊಜೆಕ್ಟರ್ಸ್ ಎಂಬ 63 ಕಂಬಗಳೇರ್ಪಟ್ಟಿವೆ. ಪ್ರಕಟನೆಯ (ಅಡ್ವರ್ಟೈಸ್‌ಮೆಂಟ್) ಉದ್ದೇಶಗಳಿಗಾಗಿ ಅಂಗಡಿಗಳಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಉಪಯೋಗಿಸುವುದಕ್ಕಾಗಿ ಇಡಲ್ಪಟ್ಟ ಯಂತ್ರಗಳ ಒಟ್ಟು ಸಂಖ್ಯೆಯು 92 ರಿಂದ 107 ಕ್ಕೆ ಹೆಚ್ಚಿತು. ನೀರನ್ನೆತ್ತುವ ಪಂಪುಗಳ ಸಂಖ್ಯೆಯು 355 ರಿಂದ 382 ಕ್ಕೆ ಹೆಚ್ಚಿತು.

ದಾಸ್ತಾನಿನಲ್ಲಿರುವ ಸಾಮಾನುಗಳ ಮೌಲ್ಯವು 1934 ನೆಯ ಇಸವಿ ಜೂನ್ ತಿಂಗಳ ಅಖೈರಿನಲ್ಲಿ 22,35,912 ರೂಪಾಯಿಗಳಾಗಿದ್ದಿತು. ಆದರೆ 1933 ನೆಯ ಇಸವಿ ಜೂನ್ ತಿಂಗಳ ಅಖೈರಿನಲ್ಲಿ ಈ ಮೌಲ್ಯವು 20,12,615 ರೂಪಾಯಿಗಳಾಗಿದ್ದಿತು. ಪರದೇಶಗಳಿಂದ ತರಿಸಿದ ಮತ್ತು ಸ್ಥಳದಲ್ಲಿಯೇ ಕೊಂಡುಕೊಂಡ ಸಾಮಾನುಗಳ ಮೌಲ್ಯವು 18,29,339 ರೂಪಾಯಿಗಳಾಯಿತು.

ಆಟೊಮ್ಯಾಟಿಕ್ ಟೆಲಿಫೋನುಗಳೆಂಬ ದೂರಭಾಷಣ ಯಂತ್ರಸಾಧನಗಳಿಂದ ದೊರೆತ ಒಟ್ಟು ವರಮಾನವು 31,513 ರೂಪಾಯಿಗಳಾಯಿತು. ಮತ್ತು ಅವುಗಳನ್ನು ನಡೆಸಿಕೊಂಡು ಬರುವುದಕ್ಕಾಗಿ ತಗುಲಿದ ವೆಚ್ಚವು 17,601 ರೂಪಾಯಿಗಳಾಯಿತು. ಇದರಿಂದ ಇವುಗಳಿಗಾಗಿ ಹಾಕಿದ 2,46,631 ರೂಪಾಯಿಗಳ ಬಂಡವಾಳದ ಮೇಲೆ ಶೇಕಡ 5.64 ರಷ್ಟು ಪ್ರತಿಫಲವು ದೊರೆತಂತಾಯಿತು. ಟೆಲಿಫೋನುಗಳನ್ನು ಅಪೇಕ್ಷಿಸುವ ಗಿರಾಕಿಗಳು ಹೆಚ್ಚುತ್ತಿದ್ದಾರೆ. ಈ ವಿಭಾಗವನ್ನು ಇನ್ನೂ ಉತ್ತಮಪಡಿಸಬೇಕೆಂಬ ವಿಷಯವೂ, ಈ ವಿಭಾಗದ ಪ್ರಯೋಜನಗಳು ಇನ್ನೂ ಹೆಚ್ಚು ಜನರಿಗೆ ದೊರೆಯುವಂತೆ ಮಾಡಬೇಕೆಂಬ ವಿಷಯವೂ ಪರ್ಯಾಲೋಚನೆಯಲ್ಲಿವೆ.

ಭೂಗರ್ಭಶೋಧನೆಯ ಇಲಾಖೆ.

ಖನಿಜ ವಸ್ತುಗಳ ವ್ಯಾಪಾರಕ್ಕೆ ಪ್ರಪಂಚದಲ್ಲಿ ಒಂದೇ ಸಮನಾಗಿ ಮುಗ್ಗಟ್ಟು ಉಂಟಾಗಿರುವುದರ ದೆಸೆಯಿಂದ, ಗಣಿಗಳಿಂದ ಖನಿಜವಸ್ತುಗಳನ್ನು ತೆಗೆಯುವುದರಲ್ಲಿ ಜನರಿಗೆ ಸ್ವಲ್ಪವೂ ಆಸಕ್ತಿಯಿರಲಿಲ್ಲ. ಆದರೆ ಬೈರಾಪುರದ ಕ್ರೋಮ್ ಗಣಿಯಲ್ಲಿ ಪ್ರಸಕ್ತ ವರ್ಷದ ಕೊನೆಯಭಾಗದಲ್ಲಿ ಅದುರನ್ನು ತೆಗೆಯುವ ಕೆಲಸವನ್ನು ಬಹಳ ತೀವ್ರವಾಗಿ ನಡೆಸಿಕೊಂಡು ಬರಲಾಯಿತು. ಒಟ್ಟು 5,545 ಟನ್ನುಗಳಷ್ಟು ಅದುರನ್ನು ತೆಗೆಯಲಾಯಿತು. [illegible] ಕ್ರೋಮ್ ಗಣಿಯಲ್ಲಿ ಅದುರಿನ ಜಲ್ಲಿಯನ್ನು ಶೇಖರಿಸುವ ಕೆಲಸವನ್ನು ನಡೆಸಲಾಯಿತೇ ಹೊರತು ಗಣಿಯನ್ನು ತೋಡುವ ಕೆಲಸವನ್ನು ನಡೆಸಲಿಲ್ಲ. ಕರಿಯ ಸೀಸದ (ಗ್ರ್ಯಾಫೈಟ್) ಅದುರನ್ನು ಮೈಸೂರು ಕಬ್ಬಿಣದ ಕಾರ್ಖಾನೆಗೆ ಒದಗಿಸುವುದಕ್ಕಾಗಿ ಬೌರಿಂಗ್‌ಪೇಟೆ ತಾಲೂಕಿನಲ್ಲಿರುವ ಗಣಾಚಾರಿ ಪುರದಲ್ಲಿ ಗಣಿಯನ್ನು ಮತ್ತಷ್ಟು ಆಳವಾಗಿ ತೋಡುವ ಕೆಲಸವನ್ನು ನಡೆಯಿಸಲಾಯಿತು. ಬೆಂಗಳೂರು ತಾಲೂಕು ಕರೀತಿಮ್ಮನಹಳ್ಳಿ ಬಂಡೆಯಲ್ಲಿರುವ ಬೆಣಚುಕಲ್ಲಿನ ಮತ್ತು ಪೆಗ್ಮೆಟೈಟ್ ಎಂಬ ಖನಿಜದ ಅದುರುಗಳನ್ನು ಸರ್ಕಾರದ ಪಿಂಗಾಣಿ ಕಾರ್ಖಾನೆಗಾಗಿ ಅಮಾನತ್ತು (ರಿಜರ್ವ್) ಮಾಡಲಾಯಿತು. ಮ್ಯಾಂಗನೀಸ್ ಅದುರಿನ ವ್ಯಾಪಾರವು ಈ ವರುಷವೂ ಸಹ ಬಹಳ ಮಟ್ಟಾಗಿಯೇ ಇದ್ದಿತು.

ಮೈಸೂರು ತಾಲೂಕಿನಲ್ಲಿರುವ ದೊಡ್ಡ ಕಾನ್ಯದಲ್ಲಿ ಹಿಂದಿನ ವರುಷಗಳಲ್ಲಿ ನಡೆಸುತ್ತಿದ್ದಂತೆಯೇ ಒಂದೇ ಒಂದು ತಾಕಿನಲ್ಲಿ ಮ್ಯಾಗ್ನಸೈಟ್ ಅದುರನ್ನು ತೆಗೆಯುವ ಕೆಲಸವನ್ನು ನಡೆಸಲಾಯಿತು.

ಪ್ರಸಕ್ತ ವರ್ಷದಲ್ಲಿ ಗಣಿ ತೋಡುವ 36 ಗೇಣಿಗಳನ್ನೂ, ಖನಿಜಾನ್ವೇಷಣೆಯ 12 ಲೈಸೆನ್ಸುಗಳನ್ನೂ, ಖನಿಜಗಳನ್ನು ಶೇಖರಿಸುವ 5 ಲೈಸೆನ್ಸುಗಳನ್ನೂ ಮತ್ತು ಅಂಗೀಕಾರದ 11 ಸರ್ಟಿಫಿಕೇಟುಗಳನ್ನೂ ಕೊಡಲಾಯಿತು. ಗಣಿ ತೋಡುವ ಗೇಣಿಗಳಿಗೂ ಖನಿಜಾನ್ವೇಷಣ ಲೈಸೆನ್ಸುಗಳಿಗೂ ಸಂಬಂಧಪಟ್ಟ ಒಟ್ಟು ಪ್ರದೇಶವು 23,099 ಎಕರೆಗಳು; ಮತ್ತು ಈ ಪ್ರದೇಶಕ್ಕಾಗಿ ವಸೂಲಾದ ಒಟ್ಟು ಗುತ್ತಿಗೆ ಮೊಬಲಗು ರೋಯಲ್ಟಿ ಸೆಸ್ಸಿನ ಮತ್ತು ಇತರ ಸೆಸ್ಸುಗಳ ಸಮೇತ ರೂ. 14,392-6-6 ಗಳಾಗಿದ್ದಿತು.

ಪ್ರಸಕ್ತ ಸಾಲಿನಲ್ಲಿ ಗಣಿ ಹುಟ್ಟುವಳಿ ಮುಂತಾದವುಗಳಿಂದ ಬರಬೇಕಾಗಿದ್ದ ಒಟ್ಟು ಮೊಬಲಗು (ಚಿನ್ನದ ಬಾಬಿನಿಂದ ಬರಬೇಕಾದ ಮೊಬಲಗನ್ನು ಬಿಟ್ಟು) ರೂ 1,18,674-11-9 ಗಳಾಗಿದ್ದಿತು. ಕ್ರೋಮೈಟ್ ಅದುರಿನ ವಿಕ್ರಯದಿಂದ ಬಂದ 95,300 ರೂಪಾಯಿಗಳೂ ಇದರಲ್ಲಿ ಸೇರಿವೆ. ಸ್ವಲ್ಪ ಹೆಚ್ಚು ಕಡಿಮೆ ಪೂರಾ ಮೊಬಲಗೂ ವಸೂಲಾಯಿತು.

ಮುಜರಾಯಿ ಇಲಾಖೆ.

ಕೃಷ್ಣರಾಜನಗರದಲ್ಲಿರುವ ಶ್ರೀ ಯೋಗಾನಂದಮಠದ ಪೀಠಕ್ಕೆ ವೇದಮೂರ್ತಿ ಕೃಷ್ಣಶಾಸ್ತ್ರಿಗಳವರು ಬಂದಿರುವುದನ್ನೂ, ಕಾಶಿಯಲ್ಲಿರುವ ಶ್ರೀ ಜಂಗಮವಾಡಿಮಠದ ಪೀಠಕ್ಕೆ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಯವರು ಬಂದಿರುವುದನ್ನೂ ಮತ್ತು ಅರಸೀಕೆರೆ ತಾಲೂಕು ಹಾರನಹಳ್ಳಿ ಸಮೀಪದಲ್ಲಿರುವ ಕೋಡಿಮಠದ ಪೀಠಕ್ಕೆ ವೇದಮೂರ್ತಿ ಚನ್ನಬಸವಯ್ಯನವರು ಬಂದಿರುವುದನ್ನೂ, ಸರ್ಕಾರದವರು ಅನುಮೋದಿಸಿರುತ್ತಾರೆ. ಶ್ರೀ ಕೂಡ್ಲಿ ಶೃಂಗೇರಿಮಠಕ್ಕೆ ಸಂಸ್ಥಾನದೊಳಗಡೆಯಲ್ಲಿಯೂ ಮತ್ತು ಹೊರಗಡೆಯಲ್ಲಿಯೂ ಇರತಕ್ಕ ಸ್ವತ್ತುಗಳ ಆಡಳಿತವನ್ನು, ಸ್ವಾಮಿಗಳವರ [illegible] ಕೋರಿಕೆಯ ಮೇಲೆ ಸರ್ಕಾರದವರೇ ವಹಿಸಿಕೊಂಡಿರುತ್ತಾರೆ.

ಮುಜರಾಯಿ ಸಂಸ್ಥೆಗಳಿಗೆ ಸಂಬಂಧಪಟ್ಟ ಕೈಪಿಡಿಯ ತಿದ್ದುಪಾಟಾದ ಪ್ರತಿಯನ್ನೂ ಮತ್ತು ಕಳಸದ ದೇವಸ್ಥಾನದ ಕೈಪಿಡಿಯನ್ನೂ ಪ್ರಸಕ್ತಸಾಲಿನಲ್ಲಿ ಪ್ರಕಟಿಸಲಾಯಿತು. ಮೈಸೂರು ಸಂಸ್ಥಾನದ ಪುರಾತನ ವಸ್ತುಗಳನ್ನು ಸ್ಮಾರಕವಸ್ತುಗಳನ್ನಾಗಿ ರಕ್ಷಿಸುವುದಕ್ಕೆ ಸಂಬಂಧಪಟ್ಟ, ರೆಗ್ಯುಲೇಷನ್ನಿನ ಮೇರೆಗೆ ನಿಬಂಧನೆಗಳನ್ನು ರಚಿಸಿ, ಅವುಗಳನ್ನು ಪ್ರಕಟಿಸಲಾಯಿತು.

ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡು.

1933-34 ನೆಯ ಸಾಲಿನಲ್ಲಿ 1,557 ಖಾಲಿ ನೌಕರಿಗಳು ಪ್ರಕಟಿಸಲ್ಪಟ್ಟುವು. ಇವುಗಳ ಪೈಕಿ 1,321 ನೌಕರಿಗಳನ್ನು ಉಮೇದುವಾರರಿಗೆ ಕೊಟ್ಟರೆಂಬ ಸಂಗತಿಯು ವರದಿಯಾಗಿದೆ. ಹೀಗೆ ವರದಿಯಾಗಿರುವುದರ ಪೈಕಿ 284 ನೌಕರಿಗಳನ್ನು ಬ್ರಾಹ್ಮಣರಿಗೂ, ಉಳಿದ ನೌಕರಿಗಳನ್ನು ಇತರ ನಾನಾಪಂಗಡಗಳ ಉಮೇದುವಾರರುಗಳಿಗೂ ಕೊಡಲಾಯಿತು. 1933 ನೆಯ ಇಸವಿ ಜೂನ್ 30 ನೆಯ ತಾರೀಖಿನ ದಿವಸ ನಾನಾ ಸರ್ಕಾರಿ ಆಫೀಸುಗಳಲ್ಲಿ 3,846 ಬ್ರಾಹ್ಮಣರೂ, 2,169 ಮಂದಿ ಬ್ರಾಹ್ಮಣೇತರರೂ ಮೇಲುದರ್ಜೆಯ (ಸುಪೀರಿಯರ್) ಸರ್ವಿಸ್ಸಿನ ಲಿಖಾವಟ್ ನೌಕರಿಗಳಲ್ಲಿ ಕೆಲಸಮಾಡುತ್ತಿದ್ದರು. ಇದರಿಂದ ಬ್ರಾಹ್ಮಣರ ಶೇಕಡಾವಾರು 64.02 ರಷ್ಟೂ, ಬ್ರಾಹ್ಮಣೇತರರ ಶೇಕಡಾವಾರು 35.98 ರಷ್ಟೂ ಇದ್ದಂತಾಯಿತು. ಮೇಲುದರ್ಜೆಯ ಸರ್ವಿಸ್ಸಿನ ಎಕ್ಸಿಕ್ಯೂಟಿವ್ ಸಿಬ್ಬಂದಿಯಲ್ಲಿ 7,741 ಬ್ರಾಹ್ಮಣರೂ ಮತ್ತು 8,358 ಬ್ರಾಹ್ಮಣೇತರರೂ ಇದ್ದರು; ಎಂದರೆ, ಬ್ರಾಹ್ಮಣರ ಶೇಕಡಾವಾರು 48.08 ರಷ್ಟೂ ಮತ್ತು ಬ್ರಾಹ್ಮಣೇತರರ ಶೇಕಡಾವಾರು 51.92 ರಷ್ಟೂ ಇದ್ದಂತಾಯಿತು. ಹೊಸದಾಗಿ ಕೆಲಸಕ್ಕೆ ಸೇರಿಸಿಕೊಳ್ಳುವುದಕ್ಕೆ ಸಂಬಂಧಪಟ್ಟ (ರಿಕ್ರೂಟ್‌ಮೆಂಟ್) ನಿಬಂಧನೆಗಳಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿರುವುದರಿಂದ ಈ ನ್ಯೂನತೆಗಳನ್ನು ಸರಿಪಡಿಸುವುದಕ್ಕಾಗಿ ಅವುಗಳನ್ನು ಈಚೆಗೆ ತಿದ್ದುಪಾಟು ಮಾಡಲಾಗಿದೆ.

ಮೈಸೂರು, ತಾ|| 19-10-1934.

ಮಿರ್ಜಾ ಎಂ. ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನರವರು.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಅರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 50

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾದ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೮೮ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಪಟ್ಟಾಧಿಕಾರೋತ್ಸವಮಾಡಿದ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಕೊಲ್ಹಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರ...

...ಗಳನ್ನು ಕೊಟ್ಟಿ... ರು. ಪ್ರಸಿದ್ಧವಾದ... ನಶ್ಯದ ಪುಡಿಯಿ... ಸ್ವಸ್ಥವಾಗುವ ವ್ಯಾ... ಧಿಗಳು ಯಾವವೆಂ... ರೆ:—ಪಿನಸಿ, ಒಂ... ತಲೆನೋವು, ತಲೆ... ಲ್ಲಿಯ ರೋಗಗಳು... ಕಣ್ಣುಗಳಲ್ಲಿ ಉಂಟಾ... ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟು... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿ... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪...
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[44] ಪೋ. ಬಾ. ೫೧೦, ಮದರಾ...

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಪಡಕ್ಷರಿ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ...
पंडित श्रीकाशीनाथशास्त्री यांचें भाषण (मराठी)	८ आ...
Speeches by Pandit Shri Kashinatha Shastri (*English*)	12 ...
ವೇದೋಕ್ತಶಿವಪೂಜಾವಿಧಿ	೧೦ ...
ವೀರಶೈವರತ್ನ (೫ನೆಯ ಆವೃತ್ತಿ)	೧೨ ...
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ...
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ...
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ...
ಶಿವಾಸೂತ್ರಸಿದ್ಧಾಂತದರ್ಪಣ	೧೨ ...
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ...
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ...
ಕೇನೋಪನಿಷತ್ (ವೀರಶೈವಭಾಷ್ಯ)	೧ ...
ವೀರಶೈವಸಿದ್ಧಾಂತಸುಧಾಕರ	೨ ...
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ...
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ...
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ...
लिंगधारणचंद्रिका (संस्कृत)	३ ...
महानारायणोपनिषत् (वीरशैवभाष्य-संस्कृत)	१ ...
वीरशैवेंदुशेखर (संस्कृत)	१ ...

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು... ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ...

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

...ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ನೇ ನವಂಬರ್ ೧೯೩೪ [ಸಂಚಿಕೆ ೨೬

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಭಾಷಣ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರುಗಳವರ ಸನ್ನಿಧಿಯಲ್ಲಿ ಕಳೆದ ಸೋಮವಾರ ದಿವಸ ಆಸ್ಥಾನವಿದ್ವಾನ್ ಧರ್ಮರತ್ನ ವೇ|| ಪಂಡಿತ ಉಮಚಗಿ ಶಂಕರಶಾಸ್ತ್ರಿಗಳವರು ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ಮೇಲೆ ಮನೋಹರವಾದ ಭಾಷಣವನ್ನು ಮಾಡಿದರು. ಶಕ್ತಿವಿಶಿಷ್ಟಾದ್ವೈತವೆಂಬಲ್ಲಿ ಶಿವನಶಕ್ತಿ, ಜೀವನಶಕ್ತಿ ಹೀಗೆ ಎರಡುವಿಧವಾದ ಶಕ್ತಿಗಳುಂಟೆಂದೂ, ಶಿವನ ಚಿಚ್ಛಕ್ತಿಯು ಜ್ಞಾನಕ್ರಿಯಾಶಕ್ತಿಗಳನ್ನೊಳಗೊಂಡು ಚೇತನಪುರುಷನಿಂದ ವ್ಯೋಮನಪವಾದಿಗಳು ಆವಿರ್ಭವಿಸುವಂತೆ ತನ್ನಿಂದ ಪರಂಪರೆಯಾಗಿ ಆವಿರ್ಭವಿಸಿದ ತಾಮಸ (ಜಡ) ಮಾಯಾಶಕ್ತಿಯಲ್ಲಿ ಪ್ರತಿಸ್ಫುರಣಗತಿಯಿಂದ ಪ್ರವೇಶಿಸಿ ಸತ್ವರಜಸ್ತಮೋಗುಣಾತ್ಮಕ ಪ್ರಕೃತಿ (ಚಿತ್ತ) ಯೆನಿಸಿತೆಂದೂ, ಈ ಚಿತ್ತವೇ ಜೀವನಶಕ್ತಿಯೆಂದೂ, ಈ ಉಭಯವಿಧ ಚಿಚ್ಛಕ್ತಿ ಚಿತ್ತಶಕ್ತಿಗಳಿಂದ ಯುಕ್ತರಾದವರೇ ಶಿವಜೀವರೆಂದೂ, ಜೀವನ ಚಿತ್ತಶಕ್ತಿಯು ವಿಕಲ್ಪಕ್ಷಯ ಶಕ್ತಿಸಂಕೋಚಾದ್ಯುಪಾಯಗಳಿಂದ ವಿಕಾಸವಾಗಲು ಶಿವನ ಚಿಚ್ಛಕ್ತಿರೂಪವಾಗಿ ಪರಿಣಮಿಸುವುದೆಂದೂ, ಆಗ ಜೀವನು ಶುದ್ಧಶಿವಾಂಶರೂಪನಾದ ಆತ್ಮನಾಗುವನೆಂದೂ, ಯಮುನಾಗಂಗಾದಿ ನದಿಗಳು ತಮ್ಮ ತಮ್ಮ ನಾಮರೂಪಾದಿಗಳನ್ನು ಬಿಟ್ಟು ಸಮುದ್ರದಲ್ಲಿ ಸಮರಸಭಾವವನ್ನು ಹೊಂದುವಂತೆ ಶಿವನಲ್ಲಿ ಜೀವನು ಸಮರಸಭಾವವನ್ನು ಹೊಂದುವನೆಂದೂ, ಇದೇ ಶಕ್ತಿವಿಶಿಷ್ಟಾದ್ವೈತದ ಸ್ವರೂಪವೆಂದೂ ಸಂಭಾಷಿಸಿದರು. ಮರುದಿವಸ ಅದೇ ವಿಷಯವನ್ನೆತ್ತಿಕೊಂಡು ಒಂದಾದ ಮೇಲೊಂದು ಮಧುರಿಮಾದಿ ಷಡ್ರಸಸ್ವರೂಪವನ್ನು ಹೊಂದುವಂತೆ ಚಿತ್ತಶಕ್ತಿವಿಶಿಷ್ಟ ಜೀವನೇ ಆಧಾರಾದಿ ಷಟ್‌ಸ್ಥಾನಗಳನ್ನು ಹೊಂದಿ ಭಕ್ತಾದಿ ಷಡ್ವಿಧಾಂಗಸ್ಥಲಸ್ವರೂಪನಾಗುವನೆಂದೂ, ಈ ಅಂಗರ ರಕ್ಷಣೆಗಾಗಿ ಲಿಂಗವೂ ಕೂಡ ಆಚಾರಲಿಂಗಾದಿ ಭೇದದಿಂದ ಷಡ್ವಿಧಲಿಂಗಸ್ವರೂಪವನ್ನು ಹೊಂದಿತೆಂದೂ, ಕ್ರಿಯಾದಿಶಕ್ತಿಗಳಿಂದ ವಿಶಿಷ್ಟವಾದ ಆಚಾರಾದಿ ಲಿಂಗಗಳಲ್ಲಿ ಭಕ್ತಾದಿಷಡ್ವಿಧಾಂಗಸ್ಥಲಗಳ ಸಾಮರಸ್ಯವೇ ಲಿಂಗಾಂಗಸಾಮರಸ್ಯವೆಂದೂ, ಇದೇ ಶಿವಾದ್ವೈತ ಅಥವಾ ಶಕ್ತಿವಿಶಿಷ್ಟಾದ್ವೈತವೆಂದೂ, ಈ ತತ್ವವನ್ನು ಶ್ರೀಗುರುವಿನಮುಖದಿಂದ ತಿಳಿದು ಸರ್ವರೂ ಮುಕ್ತಾತ್ಮರಾಗಬೇಕೆಂದೂ ಅನೇಕ ಪ್ರಮಾಣಗಳಿಂದ ಪಂಡಿತಪಾಮರರೆಲ್ಲರಿಗೂ ತಿಳಿಯುವಂತೆ ಭಾಷಿಸಿದರು. ಅನೇಕರು ಪಂಡಿತರ ಈ ತರಹದ ಭಾಷಣವನ್ನು ಕೇಳಿ ಸಂತುಷ್ಟಚಿತ್ತರಾಗಿ ಇನ್ನೂ ಈ ತರಹದ ಕೆಲವು ಭಾಷಣಗಳು ಮೇಲಿಂದ ಮೇಲೆ ಆಗುತ್ತಿರಬೇಕೆಂದು ಅಪೇಕ್ಷಿಸುತ್ತಿರುವರು.

ಭರತಖಂಡಕ್ಕೆ ರಿಜರ್ವಬ್ಯಾಂಕಿನ ಹೊಸನೋಟುಗಳು!

ಈ ಬ್ಯಾಂಕು 1935 ನೇ ಇಸ್ವಿ ಏಪ್ರಿಲ್ 1 ರಿಂದ ಲೇವಾದೇವಿಯನ್ನು ನಡೆಸುವುದು. ಆಗ ಇಂಪೀರಿಯಲ್ ಬ್ಯಾಂಕಿನವರು ತಮ್ಮಲ್ಲಿರುವ ಸರಕಾರದ ಎಲ್ಲಾ ಹಣಕಾಸುಗಳನ್ನೂ ಲೆಖ್ಖಾಚಾರಗಳನ್ನೂ ರಿಜರ್ವ್ ಬ್ಯಾಂಕಿನ ವಶಪಡಿಸುವರು.

ಈ ಹೊಸ ರಿಜರ್ವ್ ಬ್ಯಾಂಕಿನ ಶೇರುಗಳನ್ನು ಕೊಂಬಲು ಮುಂದಿನ ವರ್ಷದ ಜುಲೈ ತಿಂಗಳಲ್ಲಿ ಸಾರ್ವಜನಿಕ ಜನರಿಗೆ ಅವಕಾಶ ಕೊಡಲಾಗುವುದೆಂದು ತಿಳಿಯಬರುತ್ತದೆ.

ಏಪ್ರಿಲ್ [೧೯೩೫ ನೇ ಇಸ್ವಿ] ತಿಂಗಳ ಮೊದಲನೇ ತಾರೀಖಿನಿಂದ ಇಂಡಿಯಾದೇಶದಲ್ಲಿ ಚಲಾವಣೆಯಲ್ಲಿರುವ ನೋಟುಗಳ ಮೇಲೆ ರಿಜರ್ವ್ ಬ್ಯಾಂಕಿನ ಗವರ್ನರರಾದ ಸರ್ ಆಸ್ ಬಾರ್ನ್ ಸ್ಮಿತ್‌ರವರ ರುಜು ಇರುವುದು. ಈ ನೋಟುಗಳು ಆಕಾರದಲ್ಲಿ ಇಂಗ್ಲೆಂಡಿನಲ್ಲಿ ಚಲಾವಣೆಯಲ್ಲಿರುವ ಬ್ಯಾಂಕ್ ಆಫ್ ಇಂಗ್ಲೆಂಡಿನ ನೋಟುಗಳಂತೆಯೇ ಇರುವವು. ರಿಜರ್ವ್ ಬ್ಯಾಂಕ್ ಮಸೂದೆಯ ಪ್ರಕಾರ ಬ್ಯಾಂಕಿನ ಹಣಕಾಸುಗಳ ಲೇವಾದೇವಿಯ ಶಾಖೆಯೂ ನೋಟುಗಳ ಶಾಖೆಯೂ ಪ್ರತ್ಯೇಕವಾಗಿರುವುವು.

ಹಾಲಿ ಬೊಂಬಾಯಿಯಲ್ಲಿ ಕರೆನ್ಸಿ ಇಲಾಖೆಯ ಡೆಪ್ಯುಟಿ ಕಂಟ್ರೋಲರಾಗಿರುವ ಮಿ|| ಶಾಕರರಾಯರು ಈ ಬ್ಯಾಂಕಿನ ನೋಟುಗಳ ಇಲಾಖಾ ಮೊಟ್ಟೆಸಂರಾಗಿ ಸ್ಪೆಷಲ್ ಡ್ಯೂಟಿಯಮೇಲೆ ನಿಯಮಿಸಲ್ಪಡುವರು.

ಈ ಬ್ಯಾಂಕಿಗೆ ಒಬ್ಬ ಗವರ್ನರರವರು ಇರಬೇಕೆಂದು ಗೊತ್ತಾಗಿದೆ. ಪ್ರಾರಂಭದಲ್ಲಿ ಈ ಬ್ಯಾಂಕಿನ ಕೆಲಸದ ಏಳು ಶಾಖೆಗಳಿಗೂ ಏಳು ಮಂದಿ ಅಧೀಕರುಗಳಿರುವರು. ಇವರೆಲ್ಲರೂ ಮುಖ್ಯ ಅಧಿಕಾರಿಗಳಾದ ಗವರ್ನರರವರ ಮತ್ತು ಕೇಂದ್ರ ಸಮಿತಿಯವರಿಗೆ ಅಧೀನರಾಗಿರತಕ್ಕದ್ದು.

ಕೆಲಸಗಳನ್ನು ಹಂಚುವ ಮತ್ತು ಆಡಳಿತವನ್ನು ನೋಡಿಕೊಳ್ಳುವ ಭಾರವು ಮಿ|| ಟೇಲರ್‌ರವರದು. ಬ್ಯಾಂಕಿನ ಸ್ಥಾಪನೆಯಾಗಲು ಇನ್ನೂ ಆರು ತಿಂಗಳ ಕಾಲವಿದ್ದಾಗ್ಯೂ ಕೆಲಸಗಳಿಗೆ ಈಗಾಗಲೇ ಅರ್ಜಿಗಳು ಬಂದು ಸುರಿಯುತ್ತಿವೆಯಂತೆ!

ಬೊಂಬಾಯಿಯ ಕಛೇರಿಯು ಈಗಿನ ಇಂಪೀರಿಯಲ್ ಬ್ಯಾಂಕಿನ ಕಟ್ಟಡದಲ್ಲಿಯೇ ಸ್ಥಾಪಿಸಲ್ಪಡುವ ಸಂಭವವಿದೆ.

ಮಾಳವೀಯರ ಪತ್ನಿಯವರಿಗೆ ಗಾಯ.

ಪಂಡಿತ ಮದನಮೋಹನ ಮಾಳವೀಯರವರ ಪತ್ನಿಯವರು ಯಮುನಾಸ್ನಾನದಿಂದ ಸ್ನಾನಮಾಡಿಕೊಂಡು ಮನೆಗೆ ಬರುತ್ತಿರುವಾಗ್ಗೆ ಎದುರಿಗೆ ಬರುತ್ತಿದ್ದ ಜಟಕಾಗಾಡಿಗೆ ಸಿಕ್ಕಿದ್ದರಿಂದ ಬಹಳ ಗಾಯಗಳಾಗಿವೆ ಪಂಡಿತರಿಗೆ ಸಮಾಚಾರ ಕಳುಹಿಸಲಾಗಿದೆ.

ಕಾನೂನಿನಂತೆ ಕೆಲಸಮಾಡಿದ್ದಕ್ಕೆ ಕೆಲಸಹೋಯಿತು.

ಚೀನಾದೇಶದ ಷಾಂಘಾಯಿ ಪಟ್ಟಣದ ಒಬ್ಬ ಪೋಲೀಸಿನವನು ಮರ್ಯಾದೆವಿರಾರಿ ನಡೆಯುವ ಸ್ತ್ರೀಯರನ್ನು ಶಿಕ್ಷಿಸಬೇಕೆಂಬ ಹೊಸಕಾನೂನಿನಂತೆ, ದಾರಿಯಲ್ಲಿ ಹೋಗುವವರನ್ನು ನೋಡಿ ನಗುತ್ತಿದ್ದ ಇಬ್ಬರು ಸ್ತ್ರೀಯರನ್ನು ಅವರು ಎಷ್ಟು ಕೇಳಿಕೊಂಡರೂ ಬಿಡದೆ ಸ್ಟೇಷನ್ನಿಗೆ ಕರೆದುಕೊಂಡು ಹೋದನು. ಅಲ್ಲಿ ವಿಚಾರಿಸುವಾಗ್ಗೆ ಆ ಸ್ತ್ರೀಯರು ಅದೇ ಊರಿನ ಒಬ್ಬ ಪ್ರಸಿದ್ಧ ನ್ಯಾಯವಾದಿಯ ಹೆಂಡತಿಯರೆಂದು ತಿಳಿದು ಬಂದಿತು. ಕೂಡಲೆ ಪೋಲೀಸ್ ಅಧಿಕಾರಿಗಳು ಸ್ತ್ರೀಯರನ್ನು ಬಿಟ್ಟಿದ್ದಲ್ಲದೆ ನ್ಯಾಯವಾದಿಯು ಕೋರ್ಟಿಕ್ಕೆ ಹೆದರಿ ಅವರನ್ನು ದಸ್ತಗಿರಿಮಾಡಿದ ಪೋಲೀಸಿನವನನ್ನು ಕೆಲಸದಿಂದ ತೆಗೆದುಹಾಕಿದರು.

ಸ್ವೀಕಾರ

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಆಶೀರ್ವಾದ ನಿರೂಪದಮೇರೆಗೆ ಬಳ್ಳಾರಿ ಡಿ|| ಹುವಿನಹಡಗಲಿ ತಾ|| ಹೊಳಗುಂದಿಗ್ರಾಮದ ಉಜ್ಜಯಿನೀ ಒಡೆಯರ ಮಠದ ದೊಡ್ಡಚರಂತಪ್ಪಯ್ಯನವರ ಪುತ್ರ ಬಸವಯ್ಯನೆಂಬ ವಟುವಿಗೆ ಶ್ರೀ ಮಾಸಿಹಳ್ಳಿ ಪುರವರ್ಗ ಮಠದ ಪಟ್ಟಾಧ್ಯಕ್ಷರ ಮತ್ತು ಉಜೇವು ಬೃಹನ್ಮಠದ ಶ್ರೀ ಚರಮೂರ್ತಿಸ್ವಾಮಿಗಳವರ ನೇತೃತ್ವದಲ್ಲಿ ಪಟ್ಟಾಧಿಕಾರವಾದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಮ|| ರಾ|| ಯಜಮಾನ ಶಾನುಭೋಗ ಶಂಕರಪ್ಪನವರ ಮಕ್ಕಳು ಸಿದ್ಧಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ರಾಜಧಾನಿಯ ಚಾಮುಂಡೀ ಬಡಾವಣೆಯಲ್ಲಿ ವಾಸವಾಗಿರುವ ಮ|| ರಾ|| ಯಂ. ವಿ. ವೀರಪ್ಪನವರಿಗೆ ಕಾಲಿನಬಾಧೆಯು ಅಸಾಧ್ಯವಾಗಿ 'ಪರಿಣಮಿಸಿ ಜಗದಾಚಾರ್ಯರ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿದ್ದಾರೆ.

ನಿಜಾಮಸ್ಟೇಟು ಪಾಯಿಗಾ ಇಲಾಖೆಗೆ ಸೇರಿದ ಕೊಲ್ಲೂರು ಗ್ರಾಮದಲ್ಲಿ ನೆರವೇರಿದ ಶ್ರೀ ಶರಣಬಸವೇಶ್ವರ ಪುರಾಣ ಸಮಾಪ್ತಿಸಮಯದಲ್ಲಿ ಸಮರ್ಪಿಸಿದ 1 ರೂ. ಯು ಸ್ಕೂಲ್‌ಮಾಸ್ಟರ್ ವೇ|| ವಿರೂಪಾಕ್ಷಯ್ಯನವರ ದ್ವಾರಾ ತಲ್ಪಿರುತ್ತದೆ.

ರಾಜಧಾನಿಯ ಮ|| ರಾ|| ಕಂಠಮಲ್ಲಣ್ಣನವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ತಮ್ಮ ಮನೆಗೆ ಪಾದಪೂಜೆಗಾಗಿ ಬಿಜಯಂಗೈಸಿಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಅವರ ಮಕ್ಕಳು ಕಂಠಸುಬ್ಬಣ್ಣನವರ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುವತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ. ಬೆಂಗಳೂರು.
ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ, ಶ್ರೀಕ್ಷೇತ್ರಕಾಶೀ.

ದಂತಶೋಧನೆ.

ಸಕಲ ಪ್ರಾಣಿಗಳಿಗೆ ವಿಶ್ರಾಂತಿಸುಖವನ್ನೀಯುವ ರಾತ್ರಿಯ ಸಮಯದಲ್ಲಿ ನಾವುಗಳು ಬಾಯಿಯನ್ನು ಮುಚ್ಚಿಕೊಂಡು ಜಿಪ್ಪಿಸುವುದು ಸ್ವಾಭಾವಿಕವಾಗಿರುವುದಷ್ಟೆ? ಆ ಸಮಯವು ಆಹಾರದ ಪರಿಪಾಕಕಾಲವಾಗಿರುವುದರಿಂದ ನಾವು ಸೇವಿಸುವ ಪಥ್ಯಸಯುಕ್ತವಾದ ಆಹಾರದ ಮಲಿನಾಂಶವು ಉಸಿರಿನ ಮಾರ್ಗದಿಂದ ಬಂದು ಹಲ್ಲು ನಾಲಗೆಗಳ ಮೇಲೆ ಹೊಲಸಿನ ರೂಪದಿಂದ ಒಟ್ಟುಗೂಡುವುದು. ಹೀಗೆ ಒಟ್ಟುಗೂಡಿದ ಹೊಲಸು ದುರ್ಗಂಧಮಯವಾಗಿಯೂ ವಿಷಕ್ಕೆ ಸಮಾನವಾಗಿಯೂ ಇರುವುದಾಗಿದೆ. ಈ ಹೊಲಸನ್ನು ನಾವು ಪ್ರತಿದಿವಸದಲ್ಲಿ ತೊಳೆಯುತಿದ್ದರೆ ಬಾಯಿಯು ಹೊಲಸಿನ ಕೊಟ್ಟಿಯಾಗಿ ಸಮಾಪದಲ್ಲಿದ್ದವರಿಗೆ ಮೂಗನ್ನು ಮುಚ್ಚಿಕೊಳ್ಳುವದು, ಅಸಹ್ಯವಾಗುವುದಲ್ಲದೆ ನಮಗೂ ಅತ್ಯಂತ ಜುಗುಪ್ಸೆಯನ್ನು ಹುಟ್ಟಿಸುವುದು. ಆದುದರಿಂದ ಇಂಥ ಮುಖದುರ್ಗಂಧವನ್ನು ದೂರಮಾಡಿಕೊಂಡು ಆರೋಗ್ಯವನ್ನು ರಕ್ಷಿಸಿಕೊಳ್ಳಲೋಸುಗವಾಗಿಯೇ ಭಾರತದೇಶದಲ್ಲಿ ಪ್ರಾಚೀನಕಾಲದಿಂದಲೂ ಬೇವು ಮುಂತಾದ ವೃಕ್ಷಗಳ ಹಸಿಯ ಕಡ್ಡಿಗಳಿಂದ ದಂತಶೋಧನೆಯನ್ನು ಮಾಡುವ ಪದ್ಧತಿಯು ಪ್ರಚಾರದಲ್ಲಿ ಬಂದಿರುವುದಾಗಿದೆ. ಈ ದಂತಶೋಧನವಿಧಿಯು ಪ್ರಾಚೀನಾಯುರ್ವೇದಗ್ರಂಥಗಳಲ್ಲಿ ಅತಿಮನೋಹರವಾಗಿ ವರ್ಣಿತವಾಗಿರುತ್ತದೆ.

ಚರಕಸಂಹಿತೆಯು
ಭಕ್ಷಯೇದ್ದಂತಪವನಂ ದಂತಮಾಂಸಾನ್ಯಬಾಧಯನ್
ನಿಹಂತಿ ಗಂಧಂ ವೈರಸ್ಯಂ ಜಿಹ್ವಾದಂತಾಸ್ಯಜಂ ಮಲಂ ||
ನಿಷ್ಕೃಷ್ಯರುಚಿಮಾಧತ್ತೇ ಸದ್ಯೋ ದಂತವಿಶೋಧನಂ
ದೌರ್ಗಂಧ್ಯಂ ಭಜತೇ ಜೀವ ಸಶ್ಚಾಜ್ಞ ಪ್ರಾಂ ವಿನಿರ್ದಿಶೇತ್ ||
ಚ. ಸಂ. ಅ ೫.

ಎಂದು ದಂತಶೋಧನ ವಿಧಿಯನ್ನು ಬೋಧಿಸುತ್ತದೆ.

ಶಿಶ್ಯದಲ್ಲಿ ಬೇವು ಮುಂತಾದ ವೃಕ್ಷಗಳ ಹಸಿಯ ಕಡ್ಡಿಗಳಿಂದ ಹಲ್ಲುಗಳನ್ನು ತಿಕ್ಕಿ ನಾಲಗೆಯನ್ನು ಕೆರೆದು ಸ್ವಚ್ಛಗೊಳಿಸುವುದರಿಂದ ರಾತ್ರಿಯ ನಿದ್ರೆಯ ಸಮಯದಲ್ಲಿ ಬಾಯಿಯೊಳಗೆ ಒಟ್ಟುಗೂಡಿರುವ ದುರ್ಗಂಧಮಯವಾದ ಹೊಲಸು ನಾಶವಾಗಿ ಹಲ್ಲು ನಾಲಗೆಗಳು ಪರಿಶುದ್ಧಗಳಾಗಿ ಆಹಾರದಲ್ಲಿ ವಿಶೇಷವಾದ ಅಭಿರುಚಿಯುಂಟಾಗುತ್ತದೆ.

ದಂತಶೋಧನೆಗೆ ಬೇವು ಜಾಲಿ ಕಗ್ಗಲಿ ಹೊಂಗೆ ಎಕ್ಕ ಇಪ್ಪೆ ಸುರಹೊನ್ನೆ ಮುಂತಾದ ವೃಕ್ಷಗಳ ಹಸಿಯ ಕಡ್ಡಿಗಳು ಪ್ರಶಸ್ತಗಳಾಗಿವೆ. ಸುಶ್ರುತಮಹರ್ಷಿಯು "ಕಹಿರಸದಲ್ಲಿ ಬೇವಿನಮರದ ಕಡ್ಡಿಯೂ, ಒಗರಿನಲ್ಲಿ ಕಗ್ಗಲಿ ಮರದ ಕಡ್ಡಿಯೂ, ಖಾರದಲ್ಲಿ ಹೊಂಗೇಮರದ ಕಡ್ಡಿಯೂ, ದಂತಶೋಧನೆಗೆ ಶ್ರೇಷ್ಠವಾದುವೆಂದು" ಹೇಳಿರುವನು. ಈ ನಾಲ್ಕು ರಸಗಳಿಂದ ಕೂಡಿದ ಕಡ್ಡಿಗಳೇ ಹಲ್ಲುಗಳ ಸಮಸ್ತರೋಗಗಳನ್ನು ನಿರ್ಮೂಲಗೊಳಿಸುವುದರಲ್ಲಿ ಸಮರ್ಥಗಳಾಗಿರುವುವು. ಲವಣ ಮತ್ತು ಆಮ್ಲರಸಗಳಿಂದ ಕೂಡಿದ ಕಡ್ಡಿಗಳನ್ನು ದಂತಶೋಧನೆಗೆ ಉಪಯೋಗಿಸಬಾರದು. ಕಹಿ ಮೊದಲಾದ ರಸಗಳುಳ್ಳ ಗಿಡಗಳೊಳಗೆ ಸುಲಭವಾಗಿ ಸಿಗತಕ್ಕ ಯಾವುದಾದರೊಂದು ಗಿಡದ ೧೨ ಅಂಗುಲ ಉದ್ದವೂ ಕಿರುಬೆರಳನಷ್ಟು ದಪ್ಪವೂ ಇರುವ ಸರಳವಾದ ಹಸಿಯ ಕಡ್ಡಿಯನ್ನು ಹಲ್ಲುಗಳಿಂದ ಜಗಿದು ತುದಿಯನ್ನು ಕುಂಚದಂತೆ (ಬ್ರಷ್ಷಿನಂತೆ) ಮಾಡಿ ಅದರಿಂದ ಒಸಡುಗಳಿಗೆ ತಗಲಿಸದಂತೆ ಪ್ರತಿಯೊಂದು ಹಲ್ಲನ್ನು ಸಾವಧಾನದಿಂದ ತಿಕ್ಕಿ ಅನಂತರ ಅದೇ ಕಡ್ಡಿಯನ್ನು ಸೀಳಿ ಬಿಲ್ಲಿನಂತೆ ಬಗ್ಗಿಸಿ ನಾಲಗೆಯನ್ನು ಕೆರೆದು ಸ್ವಚ್ಛಮಾಡಿ ಶುದ್ಧವಾದ ನೀರಿನಿಂದ ಅನೇಕಸಲ ಬಾಯಿಮುಕ್ಕಳಿಸಿ ಅನಂತರ ಮುಖವನ್ನು ತೊಳೆದುಕೊಳ್ಳಬೇಕು. ಸಾಧ್ಯವಾದರೆ ಬೆಳ್ಳಿ ತಾಮ್ರ ಹಿತ್ತಾಳೆ ಸೀಸ ತವರಗಳಿಂದ ತೆಳ್ಳಗೆ ಬಿಲ್ಲಿನಾಕಾರವಾದ ಕಡ್ಡಿಯನ್ನು ಮಾಡಿಸಿ ಅದರಿಂದ ನಾಲಗೆಯನ್ನು ಕೆರೆದು ಸ್ವಚ್ಛಗೊಳಿಸಬಹುದು. ಈ ವಿಧಿಯಿಂದ ನಾಲಗೆಯ ಕಸಿಕೆಯು ದೂರವಾಗಿ ರಸಗ್ರಹಣಶಕ್ತಿಯು ವೃದ್ಧಿಯಾಗುವುದು.

ಕಡ್ಡಿಯಿಂದ ದಂತಶೋಧನೆಯನ್ನು ಮಾಡುವಾಗ ದಂತಸಂಸ್ಕಾರ ಚೂರ್ಣವನ್ನು ಉಪಯೋಗಿಸುವುದಾದರೆ ಸುವರ್ಣದಲ್ಲಿ ಸುಗಂಧವು ಬೆರಸಿದಂತಾಗುವುದರಲ್ಲಿ ಸಂದೇಹವಿಲ್ಲ. ವಾಚಕರ ಉಪಯೋಗಕ್ಕಾಗಿ ಇಲ್ಲಿ ಒಂದೆರಡು ದಂತಸಂಸ್ಕಾರ ಚೂರ್ಣಗಳ ವಿಧಿಯನ್ನು ಬರೆಯುವುದಾಗುತ್ತದೆ

೧. ಶುಂಠಿ, ಮೆಣಸು, ಹಿಪ್ಪಲಿ, ತೇಜಪತ್ರೆ, ಸೈಂಧವಲವಣಗಳ ಸಮಭಾಗ ಚೂರ್ಣವನ್ನು ಜೇನುತುಪ್ಪದೊಡನೆಯಾಗಲಿ ಎಳ್ಳೆಣ್ಣೆಯೊಡನೆಯಾಗಲಿ ಅಥವಾ ಎರಡರೊಡನೆಯಾಗಲಿ ಕೂಡಿಸಿ ಬ್ರಷ್ಷಿನಂತೆ ಮಾಡಿರುವ ಕಡ್ಡಿಯ ತುದಿಯಿಂದ ಎತ್ತಿಕೊಂಡು ಒಸಡುಗಳಿಗೆ ತಗಲಿಸದಂತೆ ಹಲ್ಲುಗಳನ್ನು ಮಾತ್ರ ತಿಕ್ಕುವುದಾದರೆ ಹಲ್ಲಿನಿಂದ ರಕ್ತವು ಸೋರುವುದು ಒಸಡು ಬಾಯುವುದು ಮುಂತಾದ ದಂತರೋಗಗಳು ನಾಶವಾಗಿ ಹಲ್ಲುಗಳು ಸುಂದರವಾಗುವುವಲ್ಲದೆ ಅತ್ಯಂತ ದೃಢಗಳೂ ಆಗುವುವು.

೨. ಶುಂಠಿ, ಮೆಣಸು, ಹಿಪ್ಪಲಿ, ಏಲಕ್ಕಿ, ಬಳೆಮುಚ್ಚಿರಿಗೆ, ದಾಲಚಿನ್ನಿ, ಕೊತ್ತುಂಬರಿಬೀಜ, ಕಚೋರ, ಬೆಂಗಲ್‌ಕೋಷ್ಠ, ಕುಂಗೆಮುಸ್ತೆ, (ಜೀಕಿನಗಡ್ಡೆ) ತೇಜಪತ್ರೆ, ಪಟಿಕ, ಮೈಲುತುತ್ತ, ಇವುಗಳನ್ನು ಸಮಭಾಗವಾಗಿ ತಂದು ಮೊದಲು ಪಟಿಕ ಮೈಲುತುತ್ತಗಳನ್ನು ಕೆಂಡದ ಮೇಲಿಟ್ಟು ಅರಳುಮಾಡಿ ಕೊತ್ತುಂಬರಿ ಬೀಜ ಜೀರಿಗೆಗಳನ್ನು ಸ್ವಲ್ಪ ಹುರಿದು ಎಲ್ಲವನ್ನೂ ಕುಟ್ಟಿ ಬಟ್ಟೆಯಿಂದಾಗಲಿ ಸಣ್ಣಕಣ್ಣಿನ ಜಲ್ಲಡಿಯಿಂದಾಗಲಿ ಸೋಸಿಕೊಳ್ಳಬೇಕು. ಈ ಚೂರ್ಣವನ್ನು ಕಡ್ಡಿಯ ತುದಿಯಿಂದ ಎತ್ತಿಕೊಂಡಾದರೂ ಉಪಯೋಗಿಸಬಹುದು ಅಥವಾ ಬೆರಳಿನಿಂದಾದರೂ ಉಪಯೋಗಿಸಬಹುದು. ಈ ಸಂಘೂರ್ಣಚೂರ್ಣದ ಅರ್ಧದಷ್ಟು ಬಿಳಿಯ ಸುದ್ದೆಮಣ್ಣನ್ನು (ಇದು ಅಂಗಡಿಗಳಲ್ಲಿ ಚಾಕಲೇಟ್, ಖಡುವು, ಸೀಮೆಸುಣ್ಣ, Pipeday, ಎಂಬ ಹೆಸರುಗಳಿಂದ ಮಾರಲ್ಪಡುತ್ತದೆ. ಈಗ ಸಿಗುವ ಟೂತ್ ಪೌಡರುಗಳಲ್ಲಿ ಇದೇ ವಿಶೇಷವಾಗಿರುತ್ತದೆ.) ಕೂಡಿಸಿ ಉಪಯೋಗಿಸುವುದಾದರೆ ಹಲ್ಲುಗಳು ಬಹಳ ಬೆಳ್ಳಗಾಗುವುವು.

ಬ್ರಷ್ಷುಗಳನ್ನು ಉಪಯೋಗಿಸುವವರು ಬ್ರಷ್ಷಿನಿಂದೀಚೂರ್ಣವನ್ನಿದ್ದಿಕೊಂಡು ಹಲ್ಲುಗಳನ್ನು ತಿಕ್ಕಬಹುದು. ಕೆಲಸವಾದನಂತರ ಬ್ರಷ್ಷನ್ನು ಬಿಸಿನೀರಿನಲ್ಲಿ ೧೦-೧೫ ನಿಮಿಷಗಳವರೆಗೆ ಕುದಿಸಿ ತೊಳೆದಿಡಬೇಕು. ಹೀಗೆ ಸ್ವಚ್ಛಮಾಡದಿದ್ದರೆ ಕೂದಲುಗಳ ಸಂದುಗಳಲ್ಲಿ ಹೊಲಸುನಿಂತು ಅದರಲ್ಲಿ ಸೂಕ್ಷ್ಮಗಳಾದ ಕೀಟಾದಿಗಳು ಉತ್ಪನ್ನವಾಗುವುವು. ಪುನಃ ಹಾಗೆಯೇ ಅದನ್ನು ಉಪಯೋಗಿಸುವುದರಿಂದ ಹೊಟ್ಟೆಯಲ್ಲಿ ಸೇರಿ ಜೀರ್ಣಶಯವನ್ನು ಕೆಡಿಸಿ ಅನೇಕ ವಿಧಗಳಾದ ಉದರರೋಗಗಳನ್ನು ಹುಟ್ಟಿಸುವುವು. ಆದುದರಿಂದ ಬ್ರಷ್ಷಿನ ಭಕ್ತರು ಇವುಗಳ ಶುದ್ಧತೆಯ ಕಡೆಗೆ ವಿಶೇಷಲಕ್ಷ್ಯವನ್ನು ಕೊಡುವುದು ಅತ್ಯವಶ್ಯಕವಾಗಿರುತ್ತದೆ. ಬೇಸರದಿಂದ ಇವುಗಳ ನಿರ್ಮಲತೆಯಲ್ಲಿ ಉದಾಸೀನಮಾಡುವದಾದರೆ 'ವಿನಾಯಕಂ ಪ್ರಕುರ್ವಾಣೋ ರಚಯಾಮಾಸವಾನರಂ' ಗಣೇಶನನ್ನು ಮಾಡಲಾರಂಭಿಸಿ ಮಾಡುತ್ತ ಮಾಡುತ್ತ ಕಡೆಗೆ ಮಂಗನ ಆಕಾರವಾಗಿ ಪರಿಣಮಿಸಿಬಿಟ್ಟ ಗಾದೆಯಂತೆ ಹಲ್ಲುಗಳ ಸ್ವಚ್ಛತೆಗೆಂದುಪಯೋಗಿಸಿದ ಬ್ರಷ್ಷು ಉದರರೋಗಕ್ಕೆ ಕಾರಣವಾಗಿ ಲಾಭಕ್ಕೆ ಬದಲು ಹಾನಿಯನ್ನೇ ಉಂಟುಮಾಡುವುದಾಗುತ್ತದೆ. ಇದರಿಂದುಂಟಾಗುವ ಹಾನಿಯು ಆಗಿಂದಾಗಲೇ ಕಾಣಿಸದಿದ್ದರೂ ದಿವಸ ಕ್ರಮದಿಂದ ಬೆಳೆದು ಕಡೆಗೆ ಬೆಟ್ಟದಂತಾಗುತ್ತದೆ.

ಪ್ರತಿದಿನದಲ್ಲಿ ಬ್ರಷ್ಷಿನ ಶುದ್ಧತೆಗಾಗಿ ಇಷ್ಟು ಕಷ್ಟವನ್ನು ವಹಿಸುವುದಕ್ಕಿಂತಲೂ ಅಲ್ಪಕಷ್ಟ, ಅಲ್ಪಸಮಯದ ವ್ಯಯ, ಅಲ್ಪಧನದ ವ್ಯಯಗಳಿಂದ ಸಾಧ್ಯವಾಗುವ ಮತ್ತು ವಿಶೇಷ ಫಲವನ್ನು ಕೊಡುವ ನಮ್ಮ ದೇಶದ ಪ್ರಾಚೀನವಾದ ದಂತಶೋಧನಪದ್ಧತಿಯನ್ನೇ ಅನುಸರಿಸುವುದು ಸರ್ವೋತ್ತಮಮಾರ್ಗವಾಗಿರುತ್ತದೆ. ಪ್ರಾಜ್ಞರಾದ ವಾಚಕರು ನಿಷ್ಪಕ್ಷಪಾತದೃಷ್ಟಿಯಿಂದ ವಿಚಾರಪೂರ್ವಕವಾಗಿ ಪರೀಕ್ಷಿಸುವುದಾದರೆ ಇವೆರಡೂ ವಸ್ತುಗಳಲ್ಲಿರುವ ಗುಣದೋಷಗಳು ಕಾಣದಿರಲಾರವು. ವಾಚಕರ ವಿಷಮದೃಷ್ಟಿಯ ಪರಿಹಾರಕ್ಕಾಗಿ ಈ ವಸ್ತುಗಳ ಮೇಲ್ಮುಸುಗನ್ನು ತೆಗೆಯುವುದುಚಿತವಾಗಿ ಕಾಣುತ್ತದೆ.

ನಾವು ನಿತ್ಯದಲ್ಲಿ ಹಲ್ಲುಗಳ ಶುದ್ಧಿಗಾಗಿ ಹೊಸ ಹೊಸ ಕಡ್ಡಿಗಳನ್ನೇ ಉಪಯೋಗಿಸುವುದಾದರೆ ಇವುಗಳಿಂದ ಯಾವ ಸಾಂಕ್ರಾಮಿಕ ಕ್ರಿಮಿಗಳ ಭಯವೂ ಇರುವುದಿಲ್ಲ. ಈ ಕಡ್ಡಿಗಳಲ್ಲಿ ಕ್ರಿಮಿಗಳನ್ನು ನಾಶಗೊಳಿಸಿ ಹಲ್ಲುಗಳನ್ನು ಭದ್ರಪಡಿಸುವಂಥ ಅಸಾಧಾರಣಶಕ್ತಿಯುಂಟು. ಮತ್ತು ಇವುಗಳಲ್ಲಿರುವ ಕಹಿ, ಒಗರು, ಸಿಹಿ, ಖಾರ, ಈ ನಾಲ್ಕು ರಸಗಳು ಕುಪಿತಗಳಾದ ವಾತಪಿತ್ತಶ್ಲೇಷ್ಮಗಳನ್ನು ಶಾಂತಗೊಳಿಸಿ ದೋಷಗಳನ್ನು ಸಮಾನಾವಸ್ಥೆಯಲ್ಲಿರಿಸುತ್ತವೆ. ದೋಷಗಳ ಸಮಾನತೆಯೇ ಆರೋಗ್ಯದ ಮೂಲಕಾರಣವಾಗಿದೆ. ಆದುದರಿಂದ ದಂತಶುದ್ಧಿಗೆ ಬೇವು ಮುಂತಾದ ಮರಗಳ ಹಸಿಯ ಕಡ್ಡಿಗಳೇ ಅತ್ಯಂತ ಪ್ರಶಸ್ತಗಳಾಗಿರುತ್ತವೆ.

ಬ್ರಷ್ಷು ಒಂದು ಜಾತಿಯ ಮೃಗದ ಕೂದಲುಗಳಿಂದ ಮಾಡಲ್ಪಟ್ಟಿರುವುದಾಗಿದೆ. ಇದರಲ್ಲಿ ಯಾವ ಕ್ರಿಮಿನಾಶಕಶಕ್ತಿಯೂ, ಹಲ್ಲುಗಳ ದೃಢತೆಗನುಕೂಲವಾದ ಯಾವ ಗುಣವೂ, ಇಲ್ಲ ಮತ್ತು ತ್ರಿದೋಷನಾಶಕಶಕ್ತಿಯಂತೂ ಹೆಸರಿಗಾದರೂ ಇರುವುದಿಲ್ಲ. ಇಷ್ಟೇಕೆ? ಯಾವ ವಿಧವಾದ ಸ್ವತಂತ್ರಶಕ್ತಿಯೂ ಇರುವುದಿಲ್ಲವೆಂದು ಹೇಳುವುದತಿಶಯೋಕ್ತಿಯಾಗಲಾರದು. ಒಹೋ! ಮರೆತೆ! ಒಂದು ಗುಣವು ಮಾತ್ರ ಇದರಲ್ಲಿರುವುದು ನಿಜ. ಅದಾವುದು? ಟೂತ್‌ಪೌಡರಿಗೆ ಸಹಾಯಕವಾಗುವುದು! ಟೂತ್‌ಪೌಡರಿನ ಬಲನೇ ಬಲ! ಇದು ಸ್ವತಂತ್ರದಿಂದಾವ ಕೆಲಸವನ್ನೂ ಮಾಡಲಾರದೆಂಬುದನ್ನು ವಾಚಕರರಿಯದವರೋ ಇಲ್ಲವೋ ದೇವರೇ ಬಲ್ಲ. ಇಷ್ಟಾದರೂ ನಮ್ಮ ದೇಶದ ಸುಶಿಕ್ಷಿತರೂ ಅಶಿಕ್ಷಿತರೂ ಇದರ ಹಿಂದೆಯೇ ಓಡುತ್ತಿರುವುದನ್ನು ನೋಡಿದರೆ ಇದರಲ್ಲಿ ಮತ್ತಾವುದೋ ಒಂದು ವಿಲಕ್ಷಣಶಕ್ತಿಯಿರಬಹುದೆಂದು ತೋರುತ್ತದೆ. ಅದಾವುದಿರ ಯಾವುದು? "ಸೌಂದರ್ಯ" ಕೇವಲ ಈ ಸೌಂದರ್ಯಕ್ಕೆ ಮರುಳಾಗಿ ಜನರು ಇದನ್ನೇ ಹಂಬಾಲಿಸುತ್ತಿರುವರಲ್ಲವೆ? ಅಥವಾ ಕಡ್ಡಿಗಳನ್ನು ಹುಡುಕಿತರಲು ಆಲಸ್ಯದಿಂದಲೋ ಅಥವಾ ಸುಂದರವಾದ ಮತ್ತು ಬೆಲೆಯುಳ್ಳ ಲೇಖಿನಿ (ಫೌಂಟನ್ ಪೆನ್) ಯಿಂದಲಂಕೃತವಾಗುವ ಸುಂದರಪಕ್ಕೆ ಎದ್ದುಕಾಣಲಿ ಕುಚ್ಚವಾದ ಕಾಷ್ಠವನ್ನು (ಹಲ್ಲುಕಡ್ಡಿ) ಮುಟ್ಟುವುದು ಭೂಷಣವಲ್ಲವೆಂದೋ, ಅಥವಾ ಲಕ್ಷಗಟ್ಟಲೆ ರೂಪಾಯಿಗಳ ಸ್ಪರ್ಶವನ್ನು ಮಾಡುವಂತಹ ಲಕ್ಷ್ಮೀಲಕ್ಷಣಸಂಪನ್ನವಾದ ಮತ್ತು ಕರಕಮಲಗಳನ್ನು ಅಗಲಿಂದಲೂ ಪರಿಶೋಧಿಸುವ ಕರಕಮಲದಿಂದ ಪ್ರಾತಃಕಾಲದಲ್ಲಿದ್ದ ಕೂಡಲೆ ಕೆಲಸಕ್ಕೆ ಬಾರದ ನೀಚಕಾಷ್ಠವನ್ನು (ಹಲ್ಲುಕಡ್ಡಿ) ಧರಿಸುವುದು ದರಿದ್ರಲಕ್ಷಣವೆಂದೋ ದಿನದಿನಕ್ಕೆ ಸೌಂದರ್ಯದ ಉನ್ನತಿಯನ್ನು ಹೊಂದುತ್ತಿರುವ ಮನೋಮೋಹಕವಾದ ಬ್ರಷ್ಷಿನ ಮೋಹಕಾಕಳ್ಳಿಕೆಗಾಗಿ ವ್ಯರ್ಥವಾಗಿ ದುಡ್ಡನ್ನು ಸುರಿಯುತ್ತಿರುವರಲ್ಲವೆ? ಓಹೋ! ಈ ಬ್ರಷ್ಷಿನ ಸೌಂದರ್ಯಕ್ಕೆ ಮರುಳಾಗಿ ಲೇಖಿನಿಯು ಇಷ್ಟು ದೂರ ಓಡಿಬಂದಿತಲ್ಲವೆ? ವಾಚಕರೇ! ಕ್ಷಮಿಸಿರಿ ಈ ವಸ್ತುಗಳು ಮುಸುಕಿನ ಮರೆಯಲ್ಲಿದ್ದರೆ ಇವುಗಳ ನಿಜಸ್ವರೂಪವು ಹೊರಬೀಳುವುದಿಲ್ಲವೆಂದು ತಿಳಿದು ಇವುಗಳ ಹರಿಯಮೇಲಿನ ಮುಸುಗನ್ನು ಸ್ವಲ್ಪವೇ ಓರೆಮಾಡಿರುವುದಾಗಿದೆ. ಇಷ್ಟರಿಂದಲೇ ಇವುಗಳ ಸಂಪೂರ್ಣಸ್ವರೂಪವು ನಿಮಗೆ ಕಾಣದಿದ್ದರೆ ವಿಚಾರವೆಂಬ ದಿವ್ಯಾಂಜನವನ್ನು ನಿಮ್ಮ ನೇತ್ರಗಳಿಗೆ ಹಚ್ಚಿಕೊಂಡು ನೋಡುವುದಾದರೆ ಮುಚ್ಚಿಕೊಂಡಿರುವ ಇನ್ನುಳಿದ ಸ್ವರೂಪವು ಕಾಣುವುದರಲ್ಲಿ ಸಂಶಯವಿಲ್ಲ. ಇವುಗಳ ನಿಜಸ್ವರೂಪವನ್ನು ನೋಡಿದನಂತರ ಗುಣಗ್ರಾಹಕರಾದ ನಿಮಗೆ ಯಾವುದು ರುಚಿಸುವುದೋ ಅದನ್ನೇ ಗ್ರಹಿಸಿರಿ.

ದಂತಶೋಧನ ನಿಷೇಧ:—ಕುತ್ತಿಗೆ, ಅಂಗುಳು, ತುಟಿ, ನಾಲಿಗೆಗಳಲ್ಲಿ ರೋಗವಿರುವಾಗಲೂ ಮುಖಪಾಕ (ಬಾಯಲ್ಲಿ ಬೊಕ್ಕೆಗಳೇಳುವುದು) ದಮ್ಮು, ಕೆಮ್ಮು, ಬಿಕ್ಕಳಿಕೆ, ವಾಂತಿ, ಅಜೀರ್ಣ, ಮೂರ್ಛೆ, ತಲೆನೋವು, ಕಿವಿನೋವು, ಹಲ್ಲುನೋವು ಈ ರೋಗಗಳುಂಟಾಗಿರುವಾಗಲೂ ಮಾದಕವಸ್ತುವನ್ನು ಸೇವಿಸಿರುವಾಗಲೂ ದಣುವು ನೀರಡಿಕೆಗಳುಂಟಾದಾಗಲೂ ಕಡ್ಡಿಯಿಂದ ಹಲ್ಲುಗಳನ್ನು ತಿಕ್ಕಬಾರದೆಂದು ಸುಶ್ರುತಸಂಹಿತೆಯು ಬೋಧಿಸುತ್ತದೆ. ಇಂತಹ ಸಮಯಗಳಲ್ಲಿ ಮೇಲೆ ಬರೆದಿರುವ ಚೂರ್ಣವನ್ನೇ ಸಾವಧಾನದಿಂದುಪಯೋಗಿಸುವುದು ಹಾನಿಕರವಾಗಲಾರದು.

(ಸಶೇಷ.)

ಕರ್ನಾಟಕದ ವ್ಯಾಪಾರಸ್ಥರಲ್ಲಿ ಕಳಕಳಿಯ ವಿನಂತಿ.

ಅಯ್ಯಾ, ನೀವು ಕರ್ನಾಟಕ ಕನ್ನಡ ವ್ಯಾಪಾರಿಗಳಲ್ಲವೇ? ಅಂದಮೇಲೆ ನಿಮಗೆ ಕನ್ನಡಿಗರ ಅಭಿಮಾನವಿಲ್ಲವೇ? ನೀವು ವಾಸಮಾಡಿರುವದು ಕನ್ನಡನಾಡು, ಊಟಮಾಡುವದು ಕನ್ನಡನಾಡಿನ ಅನ್ನವು. ಅಂದಮೇಲೆ ನೀವು ಕನ್ನಡತಾಯಿಯ ಮಕ್ಕಳಲ್ಲವೇ. ಹಾಗಾದರೆ ನಿಮ್ಮ ಮನೆತನದ ಹಳೇ ನಡೆನುಡಿಗಳನ್ನೇಕೆ ಬಿಟ್ಟುಬಿಡಿರಿ. ಹೆರವರ ಜಾಲಕ್ಕೆ ಮಣಸೋತು ಮರೆತುಹೋಯಿತೋ ಅಥವಾ ನಿಮ್ಮಲ್ಲಿ ಅಂಥ ಯೋಗ್ಯತೆಯಿಲ್ಲವೋ? ಇದ್ದರೆ ಎಲ್ಲ ನಾಡಿನವರು ತಮ್ಮ ಪೂರ್ವಜರ ನಡೆನುಡಿಗಳನ್ನು ಆಚರಿಸುವಂತೆ ಆಚರಿಸಲಶಕ್ಯವಾದ ಒಂದಾದರೂ ಗುಣವೂ ನಿಮ್ಮಲ್ಲಿಲ್ಲವಲ್ಲ! ಹೀಗೇಕಾಯಿತು? ನಿಮಗೆ ಸ್ವಾಭಿಮಾನವಿಲ್ಲವೇ, ಇದ್ದರೆ ನಿಮ್ಮ ವರ್ಷದ ಮೊದಲನೆಯ ದಿವಸ ಯಾವದೆಂಬುವದು ಕನ್ನಡಿಗರಾದ ನಿಮಗೆ ಗೊತ್ತದೆಯೋ? ಗೊತ್ತಿದ್ದರೆ ಹೀಗೇಕೆ ದೀಪಾವಳಿಯಲ್ಲಿ ಹುಚ್ಚರಂತೆ ಧುಂದುಗಾರರಾಗುವಿರಿ? ನಿಮ್ಮ ನಿಮ್ಮ ಅಂಗಡಿಗಳ ವಹಿ (ಬುಕ್ಕು)ಗಳನ್ನು ಏಕೆ ಬದಲುಮಾಡುವಿರಿ? ಯಾವ ನಾಡಿನವರೇ ಆಗಲಿ ವರ್ಷಾರಂಭವನ್ನು ಮಾಡಬೇಕಾದರೆ ತಮ್ಮ ನಾಡಿನ ಕಳೆದುಹೋದ ಜನರ ರೀತಿಯನ್ನು ಗಣನೆಗೆ ತಂದುಕೊಂಡವರನ್ನು ಪ್ರಾರಂಭಿಸುವರು.

ಯೂರೋಪದವರು ಕ್ರೈಸ್ತನ ಮಿತಿಯನ್ನು ಜನವರಿ ಮೊದಲನೇ ತಾರೀಖಿನಿಂದಲೂ ಮುಸಲಮಾನರು ಮಹಮ್ಮದ ಪೈಗಂಬರನ ಹಿಜರಿ ಮತ್ತು ಫಜಲಿ ಇನ್ನಿಯ ಮೊದಲನೇ ತಾರೀಖಿನಿಂದಲೂ ಗಣನೆಮಾಡುವಂತೆ ನಮ್ಮ ಭರತಖಂಡದೊಳಗೆ ನರ್ಮದಾ ನದಿಯ ಉತ್ತರನಾಡಿನವರು ವಿಕ್ರಮಶಕೆಯನ್ನು ಕಾರ್ತಿಕ ಶುದ್ಧ ೧ (ಪ್ರತಿಪದೆ) ಯಿಂದ ಆರಂಭಿಸುವಂತೆ ದಕ್ಷಿಣನಾಡಿನವರು (ಕರ್ನಾಟಕದವರು) ಸಹ ಶಾಲಿವಾಹನ ಶಕೆಯನ್ನು ಚೈತ್ರ ಶು|| ೧ ರಿಂದ ಆರಂಭಿಸುತ್ತ ಬಂದಿರುತ್ತಾರೆ. ನಮ್ಮ ಪೂರ್ವಜರು ಚೈತ್ರದಿಂದಲೇ ವರ್ಷಾರಂಭವನ್ನು ಮಾಡುತ್ತ ಬಂದಿರುತ್ತಾರೆಂಬುವದಕ್ಕೆ ಅನೇಕ ಆಧಾರಗಳುಂಟು. ಚೈತ್ರ ಶು|| ೧ ಯುಗಾದಿಯೆಂಬ ಗೌರವದ ಹೆಸರನ್ನು ಇಟ್ಟು ಹೊಸ ವರ್ಷವನ್ನು ಪ್ರಾರಂಭಿಸಿ ತಮ್ಮ ಲೆಖ್ಖಪತ್ರಗಳ ಬುಕ್ಕುಗಳನ್ನು ಬದಲುಮಾಡುತ್ತಿದ್ದರು. ಉದಾ:—(ಯುಗಾದಿ ಉದ್ರಿಯೆಂಬ ನಾಣ್ಣುಡಿಯನ್ನು ನಮ್ಮ ವಾಡಿಕೆಯಲ್ಲಿ ಈಗೂ ಕೇಳುತ್ತೇವೆ. ಇದರಿಂದ ಕೊಡಕೊಳ್ಳುವ ವ್ಯವಹಾರವು ಯುಗಾದಿಗೆ ಇತ್ಯಂದು ಸ್ಪಷ್ಟವಾಗಿ ತೋರುತ್ತದೆ. ಆದ್ದರಿಂದ ಅದಕ್ಕೆ ಯುಗಾದಿ ಉದ್ರಿಯೆಂಬ ಹೆಸರು ಬಂದಿತು. ಈಗ್ಯೂ ಕೆಲವು ಕಡೆಗೆ ಚೈತ್ರದಿಂದಲೇ ಹೊಸ ವರ್ಷದ ಲೆಖ್ಖವನ್ನು ಪ್ರಾರಂಭಿಸುತ್ತಾರೆ. ಚೈತ್ರ ಶುದ್ಧ ೧ (ಯುಗಾದಿ) ಗೆ ಪ್ರಾರಂಭವಾಗುವ ಹೊಸಲೆಖ್ಖದ ಬುಕ್ಕುಗಳಿಗೆ ಹಳೇಲೆಖ್ಖದ ಉಕಾರವು ಬರಬಾರದೆಂದು ಯಾವತ್ತು ವರ್ತಕರು (ಮಾಘ) ಪಾಲ್ಗುಣಮಾಸದ ಅಮೈರದೊಳಗಾಗಿ ಯಾವತ್ತು ಲೆಖ್ಖದ ವ್ಯವಹಾರವನ್ನು ಪೂರಾಚುಕ್ತಾ ಮಾಡುತ್ತಿದ್ದರು. ಇದಲ್ಲದೆ ರೈತರು ಹೊಲದ ಲಾವಣಿ ಹಣವನ್ನು ಕೊಡುವದು, ಮತ್ತು ಹೊಸದಾಗಿ ಲಾವಣಿ ಹೊಲಗಳನ್ನು ಹಿಡಿಯುವದೂ ಕೊಡುವದೂ ಮಾಡುತ್ತಿದ್ದರು. ಆ ಪ್ರಕಾರ ಇಂದಿಗೂ ರೈತರಲ್ಲಿ ಈ ವ್ಯವಹಾರವು ಸ್ಥಿರವಾಗಿದೆ. ಆದರೆ ಸುಧಾರಿಸಿದವರೂ ನಾಗರೀಕರೂ ಎಂದು ಹೆಸರು ಪಡೆದ ವರ್ತಕರು ಮಾತ್ರ ತಮ್ಮ ನಾಡಿನ ತಮ್ಮ ಪೂರ್ವಜರ ತಮ್ಮ ಕರ್ನಾಟಕದ ಅಭಿಮಾನವನ್ನು ಮರೆತು ಹೆರವರ ನಾಡಿನ ಅನುಕರಣಮಾಡುವದೆಂದರೆ ಬಹಳ ದುಃಖದಾಯಕ ಸಂಗತಿಯಾಗಿದೆ.

ಕರ್ನಾಟಕದವರು ಇತ್ತೀಚೆಗೆ ಮುಂಬೈ ಮತ್ತು ಉತ್ತರ ಹಿಂದುಸ್ಥಾನದವರ ಕೂಡ ವ್ಯವಹಾರವನ್ನು ಹೆಚ್ಚಾಗಿ ಬೆಳಸಿ ಅವರ ಭಾಷೆಯು ತಿಳಿಯದ ಕಡಿಮೆ ಲೆಖ್ಖದಲ್ಲಿ ಕೊಂದರೆಯಾಗಬಾರದೆಂಬ ಭಾವನೆಯಿಂದ ವಿಕ್ರಮಶಕದಂತೆ ಕಾರ್ತಿಕ ಶು|| ೧ (ದೀಪಾವಳಿಗೆ) ತಮ್ಮ ವಹಿಗಳನ್ನು ಬದಲುಮಾಡಹತ್ತಿದರು. ಇದೇ ರೂಢಿಯು ಎಲ್ಲರಲ್ಲಿಯೂ ಹಬ್ಬಿ ಎಲ್ಲ ಕಡೆಯಲ್ಲಿಯೂ ದೀಪಾವಳಿಯೇ (ಕಾರ್ತಿಕ ಶು|| ೧) ಮುಖ್ಯ ದಿವಸವೆಂದು ಇತ್ತೀಚೆಗೆ ಕನ್ನಡಿಗರು ಆರಂಭಿಸಹತ್ತಿದರು. ಕನ್ನಡಿಗರಾದ ನಾವು ಇಂಥ ಸಣ್ಣ ಸಣ್ಣ ವಿಷಯಗಳಲ್ಲಿಯೂ ಕೂಡ ಸ್ವತಂತ್ರತಾವೃತ್ತಿಯನ್ನು ಇಟ್ಟುಕೊಳ್ಳದೆ ನಿಂಭಿಮಾನಿಗಳಾಗಿ ಹೆರವರಮೇಲೆ ಅವಲಂಬಿಸುವೆವೆಂಬುದು ಚೆನ್ನಾಗಿ ಒಡೆದು ಕಾಣುವುದು.

ಪ್ರತಿಯೊಂದು ನಾಡಿನವರಿಗೂ ತಮ್ಮ ನಾಡಿನ ಪೂಜ್ಯಪುರುಷರ ಅಭಿಮಾನವಿರಬೇಕು, ಇಲ್ಲದಿದ್ದರೆ ನಾವು ಮನುಷ್ಯರೆಂಬ ಹೆಸರಿಗೆ ಸರ್ವಥಾ ಪಾತ್ರರಾಗಲಾರೆವು. ಆದಕಾರಣ ಇಲ್ಲಿಯವರೆಗೆ ಆದದ್ದು ಆಯಿತು. ಇನ್ನುಮೇಲಾದರೂ ನಮ್ಮ ಕನ್ನಡಬಂಧುಗಳು ಜಾಗ್ರತರಾಗಿ ದೀಪಾವಳಿಯ ಹಬ್ಬದಲ್ಲಿ ದೀಪೋತ್ಸವದ ಹೊರತು ಲೆಖ್ಖಪತ್ರಗಳ ವಹಿಗಳನ್ನು ಬದಲು ಮಾಡದೆ ಚೈತ್ರ ಶು|| ೧ (ಯುಗಾದಿಯಿಂದಲೇ) ತಮ್ಮ ವ್ಯವಹಾರದ ಲೆಖ್ಖಪತ್ರದ ವಹಿಗಳನ್ನು ಬದಲು ಮಾಡಿಕೊಂಡು ಹೊಸವರ್ಷವನ್ನು ಪ್ರಾರಂಭಿಸಬೇಕೆಂದು ನಮ್ಮ ಸರ್ವ ಕನ್ನಡಬಂಧುಗಳಿಗೆ ಆಗ್ರಹದ ವಿನಂತಿಯು.

ಇದರ ಬಗ್ಗೆ ಚಳವಳಿಯು ನಡೆದು ಈಗ ಕಳೆದ ನಾಲ್ಕು ವರ್ಷಗಳ ಲಾಗಾಯಿತು. ಕನ್ನಡವರ್ತಮಾನಪತ್ರಗಳಲ್ಲಿ ಇದರ ಸಂಬಂಧಿ ಲೇಖಗಳನ್ನು ಪ್ರಸಿದ್ಧಿಸುತ್ತ ಬಂದಿರುತ್ತೇವೆ. ಅದರಂತೆ ಈ ವರುಷವಾದರೂ ತಮ್ಮೆಲ್ಲರ ಗಮನಕ್ಕೆ ಮತ್ತೊಮ್ಮೆ ಈ ವಿಷಯವನ್ನು ಅರಿಕೆಮಾಡಿಕೊಂಡಿರುತ್ತೇವೆ.

ಕರ್ನಾಟಕದ ಯಾವತ್ತು ವರ್ತಕರು ಈ ವಿಷಯವನ್ನು ಮನಸ್ಸಿನ ಮೇಲೆ ತೆಗೆದುಕೊಂಡು ಚೈತ್ರ ಶು|| ೧ (ಯುಗಾದಿ) ಯಿಂದಲೇ ತಮ್ಮ ಲೆಖ್ಖಪತ್ರಗಳ ವಹಿ (ಬುಕ್ಕು) ಗಳನ್ನು ಬದಲಾಯಿಸಿ ನಿಜವಾದ ಕನ್ನಡಿಗರಾಗುವಿರೆಂದು ನಂಬಿರುವ

೧. ಬಸಪ್ಪ ಹೊನ್ನಗುಡಿ.
೨. ಶಿವನಗೌಡಾ ಉಮಚಗಿ, ಗದಗ.

ಪರಸ್ತ್ರೀಗಮನನಿಷೇಧ

ಇಹದಲ್ಲಿ ಸುಖವೂ ಪರದಲ್ಲಿ ಗತಿಯೂ ಉಂಟಾಗಬೇಕೆಂದು ಇಚ್ಛಿಸುವ ಪ್ರತಿಯೊಬ್ಬ ಗೃಹಸ್ಥನೂ ತನ್ನ ಪತ್ನಿಯ ಹೊರತು ಇತರ ಸ್ತ್ರೀಯರನ್ನು ತನ್ನ ಸಹೋದರಿಯರಂತೆ ಭಾವಿಸಬೇಕು. ಪರಸ್ತ್ರೀಮೋಹಿತನಾದವನ ಆಯುಷ್ಯವೂ, ಮಾನವೂ, ಧನವೂ, ಕೀರ್ತಿಯೂ ನಾಶವಾಗಿ ದೇಹಾಂತದಲ್ಲಿ ನರಕಭಾಗಿಯಾಗುವನು. ರಾಜಾಧಿರಾಜರೂ ಸಹ ಪರಸ್ತ್ರೀಮೋಹದಲ್ಲಿ ಸಿಕ್ಕು ತಮ್ಮ ರಾಜ್ಯವೈಭವವನ್ನೆಲ್ಲ ಹಾಳುಮಾಡಿಕೊಂಡು ನಾಮಮಾತ್ರಶೇಷರಾದರು. ಹಿಂದೆ ಲಂಕಾಧಿಪತಿಯಾದ ರಾವಣನು ಜನಕ ಪುತ್ರಿಯಾದ ಜಾನಕಿಯನ್ನೂ, ವಾಲಿಯು ಸುಗ್ರೀವನ ಪತ್ನಿಯಾದ ತಾರೆಯನ್ನೂ, ಕೀಚಕನು ಪಾಂಡವರ ಪತ್ನಿಯಾದ ದ್ರೌಪದಿಯನ್ನೂ ಮೋಹಿಸಿ ಅನೇಕ ಸಂಕಟಗಳನ್ನು ಅನುಭವಿಸಿ ತಾವೂ ನಾಶವಾದುದಲ್ಲದೆ ತಮ್ಮ ವಂಶನಾಶಕ್ಕೂ ಕಾರಣೀಭೂತರಾದರು.

ಅಷ್ಟೇಕೆ? ಪರಸ್ತ್ರೀಯರಿಗಾಗಿ ಹೊಡಿಸಿಕೊಂಡು ಬಡಿಸಿಕೊಂಡು ಕಡಿಸಿಕೊಂಡು ನಾಶಹೊಂದಿದವರನ್ನು ಈಗಲೂ ಅನೇಕ ಊರುಗಳಲ್ಲಿ ಕಾಣಬಹುದಲ್ಲವೆ? ಅಂದಮೇಲೆ ಪರಸ್ತ್ರೀಮೋಹವು ನಾಶಕರವಾದುದೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಇದರಮೇಲೆ ಕೆಲವರು ಗೃಹಿಣಿಯರನ್ನು ಮೋಹಿಸಿದರೆ ಇಂಥ ಕೆಡಕುಗಳು ಸಂಭವಿಸಬಹುದು. ವೇಶ್ಯಾಗಮನಕ್ಕೇನು ಬಾಧಕವೆಂದು ಪ್ರಶ್ನೆ ಮಾಡಬಹುದು. ಆದಾದರೂ ಒಳ್ಳೆಯದಲ್ಲ. ಯಾಕೆಂದರೆ—

ಸೂಳೆ ಇರುವಳು ಜೀಟು |
ವಿಟನಾರನ ಮೇಲೆ ಬಿಡುವಳು ಕಡೆಗಣ್ಣಿನ ನೋಟು |
ಬಂದಕೂಡಲೆ ತೆಗೆಯುವಳ್ಕೆ ಗೃಹದ ಕವಾಟು |
ಕಂಡಿರುವಳ್ಕೆ ತಾಂಬೂಲದ ತಾಟು |
ಆಮೇಲೆ ತೆಗೆಯಿಸುವಳ್ಕೆ ಕಿಸೆಯೊಳಗಿನ ನೂರುರೂಪಾಯಿಯ ನೋಟು |
ಇಲ್ಲವೆನಲು ಕಾಣ್ಣುವಳು ಮುಸ್ಸುಕಪಳೊಟುರ |
ಆ ಮೇಲೆ ಹಾಕಿಸುವಳ್ಕೆ ಪಾಪಾಸ ಏಟು |
ಹೇಗ್ಯೆಕೆ ನೋಡಪ್ಪಾ ಸೂಳೆಯಾಟು ||೧||
ಸೂಳೆಕಾಣಿಸಲುರಬಭೋಗಕಟ್ಟು |
ಸಂದುಸಂದಿಗೆ ಹಾಕಿಸುವಳು ಮಲ್ಲಾಮುದಪಟ್ಟು |
ತಪ್ಪದೇ ಉಣಿಸುವಳು ಸಪ್ಪನ್ನ ಕಟ್ಟು |
ಊರೊಳಗೆ ಕಳಿಸುವಳು ಜೋಳಗೆಯ ಕೊಟ್ಟು |
ಕೀಂಫೋಗಿಬಾಯೆಂದುಕಳಿಸುವಳುಯಮನಪಟಾಯಿಯೊಳಿಟ್ಟು ||

ಇದು ಅಕ್ಷರಶಃ ನಿಜವಿರುವದು. ವೇಶ್ಯೆಯು ನಾನಾ ತರಹದ ರೋಗವಿಕಾರವುಳ್ಳ ಜನರನ್ನು ತನ್ನ ಸುರತವಿಲಾಸಕ್ಕೆ ಕರೆದುಕೊಳ್ಳುವದರಿಂದ ಉಪದಂಶ (ಉಷ್ಣ ಅಥವಾ ಗರ್ಮಿ) ಎಂಬ ಮಹಾಭಯಂಕರ ರೋಗವು ಅವಳಲ್ಲಿ ಉದ್ಭವಿಸಿ ತನ್ನ ರೋಗಪ್ರಸಾದವನ್ನು ತನ್ನಲ್ಲಿ ಬರುವ ವಿಟಗಾರರಿಗೆ ಹಂಚುವಳು. ಅಂದಮೇಲೆ ಕೇಳುವದೇನು? ಆ ರೋಗವು ಮಹಾಜ್ವಾಲೆಯಂತೆ ಆತನ ಶರೀರದಲ್ಲಿ ವ್ಯಾಪಿಸಿ ಗುಪ್ತಸ್ಥಾನಾದಿ ಅವಯವಗಳಲ್ಲಿ ಹುಣ್ಣುಗಳು ಅವನನ್ನು ಹುಣ್ಣುಮಾಡಿಬಿಡುವವು. ಇಷ್ಟೇ ಅಲ್ಲ, ಆ ರೋಗದ ಬಾಧೆಯು ಪ್ರಬಲಗೊಂಡಂತೆ ದೇಹದಲ್ಲೆಲ್ಲಾ ನಾನಾತರಹದ ಶೂಲೆಗಳುತ್ಪನ್ನವಾಗಿ ಹಾಸಿಗೆಯಲ್ಲಿ ಬಿದ್ದು ಹೊರಳಾಡುವನು. ಮೈಯೊಳಗಿನ ಹುಣ್ಣುಗಳು ಒಡೆದು ಕೀವು ರಕ್ತ ಸೋರಿ ಶರೀರವು ದುರ್ಗಂಧಮಯವಾಗಿ ಹೋಗುವದು.

ಪಾಪಿಗಳನ್ನು ಯಮನು ನರಕಯಾತನೆಯಲ್ಲಿ ಹಾಕುತ್ತಾನೆಂದು ಪುರಾಣಾದಿಗಳಲ್ಲಿ ಕೇಳಿದ್ದು, ಈ ಯಾತನೆಗಿಂತಲೂ ಹೆಚ್ಚಿನದಿರಬಹುದೇ? ಈ ರೋಗದಿಂದ ಇವರಿಗಷ್ಟೇ ಅಲ್ಲ, ಇವರ ಹೆಂಡರೂ ಸಹ ರೋಗಪೀಡಿತರಾಗಿ ದುಃಖಭಾಗಿಗಳಾಗಬೇಕಾಗುವದು. ಇವರಿಂದ ಹುಟ್ಟಿದ ಮಕ್ಕಳು ಹುಟ್ಟಿದಾಗಲೇ ಬೆಂದು ಬೆಂಡಾಗಿ ಬೀಳುವವು. ಬದುಕಿದರೂ ರೋಗಿಗಳಾಗಿ ಬಲಹೀನವಾಗುವವು. ತಾನೊಬ್ಬನು ವ್ಯಭಿಚಾರಿಯಾಗಿ ಪುತ್ರಪೌತ್ರಾದಿಗಳನ್ನು ಸಹ ರೋಗಪೀಡಿತರನ್ನಾಗಿಯೂ ಸದಾ ದುಃಖಿಗಳನ್ನಾಗಿಯೂ ಮಾಡುವದು ಎಂಥ ಪಾಪಕೃತ್ಯವೆಂದು ಹೇಳಬೇಕು? ಈ ಪಾಪಕ್ಕಿಂತ ಇನ್ನಾವ ಪಾಪವು ಹೆಚ್ಚಿನದಿರುವದು?

ಹಿರಿಯರು ಗಳಿಸಿಟ್ಟ ದ್ರವ್ಯವನ್ನು ವಾರಾಂಗನೆಯರಿಗೆ ಕೊಟ್ಟು ಹಾಳುಮಾಡಿ ಕಡೆಗೆ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಬೀದಿಬೀದಿ ತಿರುಗುವವರನ್ನೂ ಇಲ್ಲವೆ ಅದೇ ಜಾರಿಣಿಯ ಮನೆಯಲ್ಲಿ ಚಾಕರಿಗೆ ನಿಂತುಕೊಂಡು ಅವಳ ಮನೆಯ ಕಸ ತೆಗೆಯುವವರನ್ನೂ ಪ್ರತ್ಯಕ್ಷ ನೋಡುತ್ತಿರುವೆವಲ್ಲವೆ? ಈ ಸ್ಥಿತಿಯನ್ನು ನೋಡಿಯಾದರೂ ಜಾರತರುಣರು ಜಾಗರೂಕರಾಗಬಹುದಲ್ಲವೆ? ಪರಸ್ತ್ರೀಯರನ್ನು ತಮ್ಮ ಸಹೋದರಿಯರಂತೆ ತಿಳಿದುಕೊಂಡು ವರ್ತಿಸಿದರೆ ಜನರಲ್ಲಿ ಮಾನವು ಸಿಗುವದು. ದೇವರಾದರೂ ಒಲಿಯುವನು. ಪರಸ್ತ್ರೀಯಳನ್ನು ಕಣ್ಣೆತ್ತಿನೋಡದವನ ಮನಸ್ಸು ನಿಶ್ಚಲವಾಗುವದರಿಂದ ಅವನ ಬುದ್ಧಿಕುಶಲತೆಯು ಹೆಚ್ಚುವದು. ಅವನು ಹಿಡಿದ ಕಾರ್ಯವು ಕೈಗೂಡುವದು. ಸ್ವಾತಂತ್ರ್ಯವಿಲ್ಲದೆ ಕೊರಗುವ ಭಾರತವು ಸ್ವತಂತ್ರತೆಯನ್ನು ಹೊಂದಬಹುದು.

ಮಲ್ಲಿಕಾರ್ಜುನಶರ್ಮಾ ಗುಳೇದಗುಡ್ಡ,
ಶಂಕರಕಾಲೇಜ ಯಾದಗಿರಿ.

ಗುರುಭಕ್ತಿ.

ಭಾ|| ಷ||

ಗುರುವೆ ಪರತರಮುಕ್ತಿಗೊಡೆಯನು | ಗುರುವೆ ಜಗದುದಯಾದಿಗಾದ್ಯನು | ಗುರುವಿಗಧಿಕವದಿಲ್ಲವೆನ್ನುತಲೊರೆವುದೈ ಶ್ರುತಿಯು || ನರರ ದುರಿತವ ಕಳೆಯಲೋಸುಗ | ಧರೆಗೆ ವರಗುರುರೂಪವಾಂತು | ಚರಿಸುತಿರ್ಪನು ಭುವಿಯೊಳಿದನರಿದಲಸದಿರು ಮನುಜಾ ||೧||

ತನುಧನವನೊಸೆದಿತ್ತು ಗುರುಪದ | ಮನದೊಳಿರಿಯ್ಯನ ಧ್ಯಾನಗೆಯ್ಯುತೆ | ನೆನೆವರಘವನು ಕಳೆವ ಸಾಧಕನೆಂದು ನೆರೆನಂಬಿ || ಮನಸಿಜಾರಿಯವಯವನೈದಲು | ವಿನುತಸುಖಸಂಪದವ ಪಡೆಯಲು | ಘನಗುರುವೆ ಗತಿಯೆಂದು ನೀನರಿದುಚಿರಸುಖವಾಳ್ಕೆ ||೨||

ಪಸಿದ ಜಂಗಮ ಮನೆಗೆ ಬಂದೊಡೆ | ಬಸುರೊಳಗೆ ಬ್ರಹ್ಮಾಂಡದುಂಬಿದ | ಪಶುಪತಿಯೆ ತಾನೆಂದು ಭಾವಿಸುತೈದೆ ಮನದೊಳಗೆ || ಪುಸಿಯದಾಗಳೆ ಗುರುವ ಭಕ್ತಿಯೊಳಸಮಸಂತಸವೆತ್ತು ಸೇವಿಸಿ | ಹಸನಮಾಗುಣ ಬಡಿಸಿವ ಗುರುಭಕ್ತನೆನಿಸುವನು ||೩||

ಸಿಂದಿಸುತ್ತಲಿ ಪದರ ಮನಸಿಗೆ | ಕುಂದುತರುವುದು ಘೋರಪಾಪವ | ದೆಂದು ಭಾವಿಸು ಮನಕೆ ಕೋರಿದ ತೆರೆದಿನದೆಯುತಲಿ | ದಂದುಗದ ಪಡಬೇಡ ಶಿವಪದ | ವಂದದಿಂದಲಿ ಭಜಿಸಿಸುತ್ತಲಿ | ಸಂದಗುರುವಿನ ಪಾದ ಸೇವೆಯೆ ಭಕ್ತನೇಳಗೆಯ್ಯೆ ||೪||

ವಸಿತೆಧಸಕುಲರಸಿಕ ಮೊದಲಾ | ದನಿಸುವನು ಹಿರಿದೆಂದು ನಂಬುತೆ | ವಿನುತಸಮಯಾಚಾರ ಧರ್ಮವನ್ನೆಲ್ಲ ನೆರೆಬಿಟ್ಟು || ತನಗೆ ಸರಿಯಿಲ್ಲೆಂದು ಬೀಗುವ | ಮನುಜಗುರೆ ತತ್ವಾರ್ಥವೇಳುತೆ | ಮನಕೆ ಶಾಂತಿಯನೀವ ಗುರುವನು ಮರೆಯದಿರು ಮನುಜಾ ||೫||

ಭವವನೀಗಲು ಶಿವನನೊಲಿಸಲು | ಜವನಬಾಧೆಯ ತಡೆಯಲಪ್ಪೊಡೆ | ಭುವಿಯೊಳಾವಗಜಸವ ಪಡೆಯಲು ಗುರುವೆನೆಂದೈಸೇ || ತಪಿಸಿ ಪಾಪವ ದಿವ್ಯತತ್ವದ | ಸಿವಪದಾಗರವೆನಿಪ ಗುರುವನು | ಜವದಿ ಪೂಜಿಸಿ ನೆನೆವನಿತು ಪರಸುಖವನೈದುವನು ||೬||

ರಾಗದೂರನು ಯೋಗವಾಸನೆ | ನಾಗಮಜ್ಞನು ದಾರಶೀಲನು | ಭೋಗಮೋಕ್ಷಗಳೀವಮಹಿಮನು ಸುಗುಣ ಮಂಡಿತನು || ನೀಗಿತೊಳಗುವ ನಾರುವರ್ಗವ | ನಾಗು ಹೋಗುವನರಿದು ಭಕ್ತನ | ಭಾಗದೊಡೆಯನೆನಿಪ್ಪ ಗುರುವನು ಮರೆಯದಿರು ಮನುಜಾ ||೭||

ಅಂಗಲಿಂಗದಸಾಮರಸ್ಯದ | ಇಂಗಿತವನರಿಯುತ್ತೆ ಮನದೊಳು | ಮಂಗಳಾಕರನಾಗಿ ಮೆರೆಯುವ ಗುರುವ ನೆಡೆಗೈದಿ || ಪಿಂಗದೊಯ್ಯನೆ ನಮಿಸಿ ಪದದೊಳು | ಭಂಗಬಡುತಿಹೆನಧಿಕಭವದಲಿ | ಹಿಂಗಿಸೆಂದೊಲವಿನಲಿ ಗುರುವನು ನುತಿಸಿ ಸೊಗವಾಳ್ಕೆ ||೮||

ಪಂಚಗುರುಗಳ ಗೋತ್ರಪುರುಷರೆ | ವಾಂಛಿತಾರ್ಥವನೀಯಬಲ್ಲರು | ಸಂಚಿತಾಘವನಿಕ್ಕಿ ಭವಸಾಗರವ ದಾಂಟಿಪರು || ಪಂಚವಾಣಗಳೆಂದು ತಿಳಿಯುತೆ | ಪಂಚಗುರುಗಳ ಸೇವೆಗೆಯ್ಯುತ | ಪಂಚಮುಖನೊಲುಮೆಯನು ಪಡೆವವ ಧನ್ಯನೀಜಗದಿ ||೯||

ಗುರುವೆ ಅಷ್ಟಾವರಣಕಾದ್ಯನು | ಗುರುವೆ ಘನತರ ಲಿಂಗದಾತನು | ಗುರುವೆ ಜಂಗಮನಾಗಿ ಮೆರೆವ ಪ್ರಸಾದವೀಯುತಲಿ || ಗುರುವಿನಿಂದಲೆ ತೀರ್ಥ ಮಂತ್ರವು | ವರಭಸಿತರುದ್ರಾಕ್ಷ ಪಾವನ | ಗುರುವೆ ಧರ್ಮದ ಮೂಲಪದವಿದನರಿದು ನಡೆ ಮನುಜಾ ||೧೦||

ಸಂ|| ಎಸ್. ಎಂ. ಬಸವಯ್ಯ,
ಗೌರ್ನಮೆಂಟ್ ಹೈಸ್ಕೂಲ್ ಶಿವಮೊಗ್ಗ.

ದುಃಖವಾರ್ತೆ.

ಬಳ್ಳಾರಿ ಜಿಲ್ಲಾ ರಾಯದುರ್ಗ ತಾಲ್ಲೂಕು ಕಣೇಕಲ್ ಗ್ರಾಮದಲ್ಲಿ ಊಟೆಪ್ಪನ ಮಠದ ಬಸಯ್ಯನವರೆಂಬವರು ಇದೇ ಗ್ರಾಮದ ಹಿರೇಮಠದ ಶಿಷ್ಯವರ್ಗಕ್ಕೆ ಸೇರಿದವರಲ್ಲಿ ಒಬ್ಬರಾಗಿದ್ದು 98 ವರ್ಷ ವಯಸ್ಸಿನವರಾಗಿದ್ದರು. ಇವರಿಗೆ ಓರ್ವ ಪುತ್ರನಿದ್ದನು. ಆತನು ಈಗ ಸುಮಾರು 7-8 ವರ್ಷಗಳ ಕೆಳಗೆ ಪರಂಧಾಮವನ್ನೈದಿದನು. ಅಂದಿನಿಂದ ಇವರನ್ನು ಇದೇ ಗ್ರಾಮದ ಅಗರ್ಭ ಶ್ರೀಮಂತರೂ ಸದ್ಭಕ್ತರೂ ಆದ ಸೌದ್ರಿ ಮಹಾಂತಬಸಪ್ಪನವರು ಇದುವರೆಗೆ ಕಾಪಾಡಿದರು. ಇವರಿಗೆ 98 ವರ್ಷ ವಯಸ್ಸಾದರೂ ನೇತ್ರಪಾಟವವೂ ದಂತಪಟುತ್ವವೂ ಚನ್ನಾಗಿದ್ದಿತು. ಈ ಕಾಲದಲ್ಲಿ ಇಂಥವರನ್ನು ಯಾರೂ ನೋಡಲಿಕ್ಕಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇವರು ಬಹು ಬುದ್ಧಿಶಾಲಿಗಳಾಗಿದ್ದರು. ಇವರು ತಾ|| ೨೫-೧೦-೩೪ ನೇ ಶುಕ್ರವಾರ ಉದಯ 6 ಘಂಟೆಗೆ ಶಿವಸಾಯುಜ್ಯವನ್ನು ಹೊಂದಿದರು. ಇವರ ಸಂಸ್ಕಾರವನ್ನು ಶ್ರೀಮಂತರು ವಿಧ್ಯುಕ್ತವಾಗಿ ಉತ್ಸವದಿಂದಲೂ ನಾನಾವಾದ್ಯಗಳಿಂದಲೂ ಪೂರೈಸಿ ಕೈಲಾಸ ಗಣಾರಾಧನೆಯನ್ನು ತಾ|| ೩-೧೧-೩೪ ರಲ್ಲಿ ನೆರವೇರಿಸಿದರು. ೨೫೦-೩೦೦ ಜನಕ್ಕೆ ಮೇಲ್ಪಟ್ಟು ಭಕ್ತಮಾಹೇಶ್ವರರಿಗೆ ಸಂತೃಪ್ತಿಗೊಳಿಸಿ ಭೂರಿದಕ್ಷಿಣೆಯನ್ನಿತ್ತರು. ಇಂಥ ಹಿರಿಯರನ್ನು ಕಳೆದುಕೊಂಡ ಕಣೇಕಲ್ ಪುರವೇ ದುರ್ದೈವಿ ಎಂದು ಹೇಳುವದರಲ್ಲಿ ಸಂದೇಹವಿಲ್ಲ. ಸದ್ಭಕ್ತರಾದ ಈ ಶ್ರೀಮಂತರಿಗೆ ಶ್ರೀಪರಮೇಶ್ವರನು ಉತ್ತರೋತ್ತರ ಪುತ್ರಪೌತ್ರಾದ್ಯೈಶ್ವರ್ಯವನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ.

ಓರ್ವ ಗ್ರಾಮವಾಸಿ.

ಪಂಚಾಚಾರ್ಯ ಪ್ರಭಾ.

೧೯೩೪ನೇ ನವಂಬರ್ ತಾ|| ೧೨ನೇ ಸೋಮವಾರ.

ಮೋಕ್ಷೋಪಾಯ.

ಸಾಧುಮಾರ್ಗಂ ಪರಿತ್ಯಜ್ಯ ಮಾರ್ಗಾಂತರಮುಪಾಸತೇ |
ತೇ ಸರ್ವೇ ಪತ್ತನಂ ಘೋರೇ ಪತಂತಿ ನರಕಂ ಧ್ರುವಂ ||
ಕಿಮುಸ್ತಿ ಬಹುನೋಕ್ತೇನ ಮಾನುಷಂ ಜನ್ಮ ದುರ್ಲಭಂ |
ತತ್ರಾಪಿ ದುರ್ಲಭಂ ಜನ್ಮ ಕುಲೇ ಶೈವಸ್ಯ ಕಸ್ಯಚಿತ್ ||
ವೀರಶೈವಾನ್ವಯೇ ಜನ್ಮ ಪರಮಂ ದುರ್ಲಭಂ ಸ್ಮೃತಂ |
ತತ್ರ ಜಾತಾ ಪರಾಸ್ಸರ್ವೇ ವೀರಶೈವಾ ನರೋತ್ತಮಾಃ ||

ಯಾರು ಶಾಸ್ತ್ರಸಿದ್ಧವಾದ ಮಾರ್ಗವನ್ನು ಬಿಟ್ಟು ತಮ್ಮ ತಮ್ಮ ಮನಸ್ಸಿಗೆ ಬಂದ ಮಾರ್ಗದಲ್ಲಿ ಪ್ರವೇಶಿಸುವರೋ ಅವರು ದೇಹಾಂತ್ಯದಲ್ಲಿ ನಿಶ್ಚಯವಾಗಿ ಘೋರವಾದ ನರಕದಲ್ಲಿ ಬಿದ್ದು ಕಷ್ಟಪಡುವರು. ಬಹುಮಾತಿನಿಂದ ಪ್ರಯೋಜನವಿಲ್ಲ. ಮುಖ್ಯವಾಗಿ ಸಕಲ ಜನ್ಮಗಳೊಳಗೆ ಮನುಷ್ಯಜನ್ಮವನ್ನು ಪಡೆಯುವುದೇ ಕಷ್ಟವಾದುದು. ಇಂಥ ಮನುಷ್ಯಜನ್ಮಗಳೊಳಗೆ ಯಾವುದಾದರೊಂದು ಶಿವಮತದಲ್ಲಿ ಜನ್ಮವನ್ನು ಧರಿಸುವುದಂತೂ ಬಹುಕಷ್ಟವಾದುದು; ಇಂಥ ಶಿವಮತಗಳೊಳಗೆ ಅತಿ ಶ್ರೇಷ್ಠವಾದ ವೀರಶೈವಮತದಲ್ಲಿ ಹುಟ್ಟುವುದಾದರೂ ಬಹುಕಷ್ಟತರವಾದುದು. ವೀರಶೈವಮತದಲ್ಲಿ ಹುಟ್ಟಿದ ಮಾನವರು ಪವಿತ್ರಾತ್ಮರಾಗಿದ್ದಾರೆ ಎಂದು ವೀರಶೈವಮತದ ಉತ್ಕೃಷ್ಟತೆಯನ್ನು ಶಿವಾಗಮಗಳು ಮುಕ್ತಕಂಠದಿಂದ ಹೊಗಳುತ್ತಿರುವುದನ್ನು ನೋಡಿದರೆ, ವೀರಶೈವಸಿದ್ಧಾಂತವು ಮುಮುಕ್ಷುಗಳಾದ ಜೀವಾತ್ಮರಿಗೆ ಬಹು ಸುಲಭವಾಗಿ ಮೋಕ್ಷವನ್ನೀಯುವ ಮಾರ್ಗವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಜೀವಾತ್ಮನು ಪರಮಾತ್ಮನ ಅಂಶೀಭೂತನಾಗಿದ್ದರೂ ಸೂರ್ಯನನ್ನು ಆವರಿಸಿ ಮಲಿನಾಕಾರವುಳ್ಳವನನ್ನಾಗಿ ಮಾಡುವ ಮೋಡಗಳಂತೆ ಆಣವಾದಿಮಲಗಳು ಜೀವಾತ್ಮರನ್ನು ಆವರಿಸಿ ಸ್ವಶಕ್ತಿಕುಂಠಿತರನ್ನಾಗಿ ಮಾಡಿರುತ್ತವೆ. ಎಲ್ಲಿಯವರೆಗೂ ಮೋಡಗಳು ಸೂರ್ಯನನ್ನು ಆವರಿಸಿರುತ್ತವೆಯೋ ಅಲ್ಲಿಯವರೆಗೂ ಇರುವ ದಿವಸಗಳನ್ನು ದುರ್ದಿನಗಳೆಂದು ಜನಗಳು ಕರೆಯುತ್ತಿರುವಂತೆ, ಎಲ್ಲಿಯವರೆಗೂ ಆತ್ಮನನ್ನು ಮಲಗಳು ಆವರಿಸಿರುತ್ತವೆಯೋ ಅಲ್ಲಿಯವರೆಗೂ ಸಂಸಾರಿಯನ್ನಾಗಿ ಹೇಳುವರು. “ಮಲಾವೃತಸ್ಸಂಸಾರೀ” ಮಲಾವರಣವುಳ್ಳ ಆತ್ಮನೇ ಸಂಸಾರಿಪುರುಷನೆನಿಸುವನೆಂದು ಶಕ್ತಿಸೂತ್ರವು ಸಹ ಸಂಸಾರಿಪುರುಷನ ಲಕ್ಷಣವನ್ನು ಸ್ಪಷ್ಟಪಡಿಸಿರುತ್ತದೆ. ವೀರಶೈವಸಿದ್ಧಾಂತರೀತಿಯಾಗಿ ಮಲಗಳು ಒಂದುವಿಧವಾಗಿರದೆ ಮೂರು ವಿಧಗಳಾಗಿರುತ್ತವೆ. ಒಂದು ಆಣವಮಲವೆಂತಲೂ, ಮತ್ತೊಂದು ಮಾಯೀಯ ಮಲವೆಂತಲೂ, ಇನ್ನೊಂದು ಕಾರ್ಮಿಕಮಲವೆಂತಲೂ ಇವಕ್ಕೆ ಹೆಸರುಗಳು ಕೊಡಲ್ಪಟ್ಟಿರುತ್ತವೆ. ಈ ಮೂರು ಮಲಗಳು ಆತ್ಮನನ್ನು ಒಂದರ ಮೇಲೊಂದು ಸುತ್ತಿಕೊಂಡಿರುತ್ತವೆ. ಮೊದಲನೆಯ ಮಲವು ಅತಿ ಸೂಕ್ಷ್ಮವಾದುದು. ಎರಡನೆಯ ಮಲವು ಸೂಕ್ಷ್ಮವಾದುದು. ಮೂರನೆಯದು ಸ್ಥೂಲವಾದುದು. ಈ ಮಲಗಳು ಎದುವರೆಗೂ ಆತ್ಮನನ್ನು ಆವರಿಸಿರುತ್ತವೆಯೋ ಅದುವರೆಗೂ ಆತ್ಮನು ಪುಣ್ಯಾಪಾಪಕರ್ಮಾನುಗುಣವಾಗಿ ನಾನಾಯೋನಿಗಳಲ್ಲಿ ಜನ್ಮವನ್ನು ಧರಿಸುತ್ತ ವೈಷಯಿಕಗಳಾದ ಸುಖದುಃಖಗಳನ್ನು ಅನುಭವಿಸುತ್ತ ಘಟೀಯಂತ್ರದಲ್ಲಿ ಸಿಕ್ಕ ಘಟಗಳಂತೆ ಕೀಳು ಮೇಲುಗಳನ್ನನುಭವಿಸುತ್ತಿರುವುದೇ ಅನಾದಿಕಾಲದಿಂದ ಬಂದ ಜೀವಾತ್ಮನ ಸ್ವಭಾವವಾಗಿ ಹೋಗಿರುತ್ತದೆ. ಈ ಮಲಗಳು ನಾಶವಾಗುವವರೆಗೂ ಜೀವಾತ್ಮನು ಜರಾಮರಣಗಳಿಂದ ಬಿಡುಗಡೆಯಾಗುವಂತಿಲ್ಲವು. ಭತ್ತದ ಧಾನ್ಯವು ಎದುವರೆಗೂ ತುಷ-ಕಂಚುಕ-ಕಿಂಶಾರುಕ ಎಂಬ ಮೂರುತರಹದ ಹೊಟ್ಟುಗಳಿಂದ ಕೂಡಿರುವುದೋ ಅದುವರೆಗೂ ಆ ಭತ್ತದಲ್ಲಿ ಅಂಕುರಿಸುವ ಶಕ್ತಿಯು ಇದ್ದೇ ಇರುತ್ತದೆ. ಇಂತಹ ಭತ್ತವನ್ನು ಭೂಮಿಗೆ ಬಿತ್ತಿ ನೀರನ್ನು ಹಾಕುವುದರಿಂದ ಅಂಕುರಿಸಿಯೇ ಅಂಕುರಿಸುತ್ತದೆ. ಆಘಾತದಿಂದ ಭತ್ತದಮೇಲಿನ ಮೂರುತರಹದ ಹೊಟ್ಟುಗಳ ಶಕ್ತಿಯು ಎಂದು ನಾಶವಾಗುವುದೋ ಅಂದಿನಿಂದಲೂ ಆ ಧಾನ್ಯದಲ್ಲಿರುವ ಅಂಕುರಿಸುವ ಶಕ್ತಿಯು ನಾಶವಾಗುತ್ತದೆ. ಅದರಂತೆ ಈ ಮೂರೂಮಲಗಳು ಆತ್ಮನನ್ನು ಆವರಿಸಿರುವವರೆಗೂ ಹುಟ್ಟುಸಾವುಗಳು ಜೀವಾತ್ಮನಿಗೆ ತಪ್ಪುವುದಿಲ್ಲ. ಹೀಗೆ ಬಹುಕಾಲದಿಂದ ಆವರಿಸಿದ ಭವಸಾಧಕಗಳಾದ ಮಲಗಳು ಭಗವಂತನ ಉಪಾಸನೆಯೊಂದರಿಂದಲೇ ನಷ್ಟವಾಗಬೇಕಾಗಿವೆ. ಇಂಥ ಭಗವಂತನ ಉಪಾಸನೆಯನ್ನು ವೀರಶೈವಸಿದ್ಧಾಂತದಲ್ಲಿ ಶಿವಲಿಂಗೋಪಾಸನೆಯೆಂದು ಕರೆಯುತ್ತಾರೆ. ಮಾನವನು ಗುರೂಪದೇಶದಂತೆ ಭಕ್ತಿ ಜ್ಞಾನ ವೈರಾಗ್ಯಗಳಿಂದೊಡಗೂಡಿ ಹೇಗೆ ಹೇಗೆ ಶಿವಲಿಂಗೋಪಾಸನೆಯನ್ನು ಮಾಡುತ್ತ ಬರುವನೋ ಹಾಗೆ ಹಾಗೆ ಈ ಮಲಗಳು ಕ್ರಮಕ್ರಮವಾಗಿ ನಾಶವಾಗುತ್ತ ಬರುತ್ತವೆ. ಗಾಳಿಯಿಂದ ಚದುರಿಸಲ್ಪಟ್ಟ ಮೇಘಗಳುಳ್ಳ ಸೂರ್ಯನೋಪಾದಿಯಲ್ಲಿ ಮಲಗಳಿಂದ ಬಿಡಲ್ಪಟ್ಟ ಜೀವಾತ್ಮನಲ್ಲಿ ಸರ್ವಜ್ಞತ್ವಾದಿ ಶಕ್ತಿಗಳು ಪ್ರಕಾಶವನ್ನು ಹೊಂದಿ ಪ್ರಾಪಂಚಿಕ ದುಃಖಗಳ ಸುಳಿವಿಲ್ಲದಂತಾಗುವುದು. ಗಂಗಾ ಗೋದಾವರೀ ಮುಂತಾದ ಮಹಾನದಿಗಳು ತಮ್ಮತಮ್ಮ ಸ್ಥೂಲಗಳಾದ ನಾಮರೂಪಾದಿ ವ್ಯವಹಾರಗಳನ್ನು ಬಿಟ್ಟು ಸಮುದ್ರದಲ್ಲಿ ಸೇರಿ ಸಮುದ್ರಾಕಾರವಾಗುವಂತೆ ಅಂಗಶಬ್ದವಾಚ್ಯನಾದ ಜೀವಾತ್ಮನು ದೃಢತರವಾದ ಶಿವಲಿಂಗೋಪಾಸನೆಯಿಂದ ತನ್ನ ಅಂಗಸಿಷ್ಠಗುಣಗಳನ್ನು ನಾಶಮಾಡಿಕೊಂಡು ಶಿವಸ್ವರೂಪನಾಗುವನು. ಇದೇ ಅರ್ಥವು “ಯಥಾನದ್ಯಸ್ಸ್ಯಂದಮಾನಾಸ್ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ | ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂಪುರುಷಮುಪೈತಿದಿವ್ಯಂ” ಎಂಬ ಉಪನಿಷತ್ತಿನಲ್ಲಿಯೂ ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ. ಜೀವಾತ್ಮನು ಪರಿಶುದ್ಧನಾಗಿ ಪರಮಾತ್ಮನಲ್ಲಿ ಸೇರಿ ನಿತ್ಯಾನಂದವನ್ನು ಅನುಭವಿಸುವ ಸ್ಥಿತಿಯೇ ಲಿಂಗಾಂಗಸಾಮರಸ್ಯವೆಂದು ವೀರಶೈವಸಿದ್ಧಾಂತಸ್ಥಾಪಕರಾದ ರೇಣುಕಾದ್ಯಾಚಾರ್ಯಭಗವತ್ಪಾದರು ಉಪದೇಶಮಾಡಿರುತ್ತಾರೆ. ಇಂಥ ಲಿಂಗಾಂಗಸಾಮರಸ್ಯರೂಪವಾದ ಮೋಕ್ಷವನ್ನು ಪಡೆಯಲು ಅನೇಕ ವಿಧವಾದ ಸುಲಭೋಪಾಯಗಳು ಈ ವೀರಶೈವಮತದಲ್ಲಿರುವುದರಿಂದಲೂ, ಈ ಉಪಾಯಗಳನ್ನು ಪ್ರತಿಯೊಬ್ಬ ವೀರಶೈವನೂ ತಿಳಿದು ಉಪಾಸನಾಮಾರ್ಗದಲ್ಲಿ ಪ್ರವೇಶಿಸಿ ಲಿಂಗಾಂಗಸಾಮರಸ್ಯಸಿದ್ಧಿಯನ್ನು ಹೊಂದಲು ಯೋಗ್ಯನಾಗಿರುವುದರಿಂದಲೂ, ಮುಮುಕ್ಷುಗಳಾದ ಮಾನವರಿಗೆ ಈ ವೀರಶೈವಸಿದ್ಧಾಂತವು ಸುಲಭವಾದ ಮಾರ್ಗವಾಗಿರುತ್ತದೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ “ತತ್ರಜಾತಾನರಾಸ್ಸರ್ವೇ ವೀರಶೈವಾನರೋತ್ತಮಾಃ” ಎಂಬಂತೆ ವೀರಶೈವಮತದಲ್ಲಿ ಹುಟ್ಟಿದವರಿಗೆ ಪರಮಪುರುಷಾರ್ಥವಾದ ಮೋಕ್ಷವನ್ನು ಸಾಧಿಸುವ ಜ್ಞಾನವು ಸುಲಭಸಾಧ್ಯವಾದುದರಿಂದ ವೀರಶೈವಮತದಲ್ಲಿ ಜನ್ಮಧಾರಣಮಾಡಿದವರೇ ಧನ್ಯಾತ್ಮರೆಂದು ಪ್ರಮಾಣವಾಕ್ಯಗಳು ಉದ್ಘೋಷಿಸುತ್ತವೆ. ಇಂಥ ಪವಿತ್ರವಾದ ವೇದಮಾನ್ಯವಾದ ವೀರಶೈವಮತದಲ್ಲಿ ಜನ್ಮಧಾರಣ ಮಾಡಿದ್ದೂ ಅನೇಕರು ತಮ್ಮ ಮತದ ಸ್ವರೂಪಜ್ಞಾನವಿಲ್ಲದವರಾಗಿ ಶಾಸ್ತ್ರೀಯ ಉಪಾಸನಾಮಾರ್ಗವನ್ನೂ ಮುಕ್ತಿಸಾಧನವಾದ ಶಿವಲಿಂಗವನ್ನನುಗ್ರಹಿಸಿದ ಗುರುಗಳನ್ನೂ ನಿರಾಕರಿಸಿ ತಮ್ಮತಮ್ಮ ಮನಸ್ಸಿಗೆ ಬಂದ ಹಾಗೆ ನಡೆಯಹತ್ತಿದ್ದಾರೆ. ಇಂಥವರು ಈ ಮತದಲ್ಲಿ ಜನ್ಮವೆತ್ತದಿರುವುದೇ ಉಚಿತವಾಗಿದೆ. ಆದುದರಿಂದ ವೀರಶೈವ ಎಂಬ ಹೆಸರನ್ನು ಧರಿಸಿದವರು ವೀರಶೈವಮತದ ಮೂಲಗುರುಗಳಲ್ಲಿಯೂ ಆ ಗುರುಗಳಿಂದ ಅನುಗ್ರಹಿಸಲ್ಪಟ್ಟ ಶಿವಲಿಂಗದಲ್ಲಿಯೂ ಶ್ರದ್ಧೆಯನ್ನಿಟ್ಟು ಶಾಸ್ತ್ರೀಯವಾದ ಮಾರ್ಗದಲ್ಲಿ ಪ್ರವೇಶಿಸಿ ಮಲಾವರಣದಿಂದ ನಿವೃತ್ತರಾಗಿ ವೀರಶೈವ ಎಂಬ ತಮ್ಮ ಅಭಿಧಾನವನ್ನು ಅನ್ವರ್ಥಕಪಡಿಸಿಕೊಳ್ಳುವಂತೆ ಆಚಾರ್ಯಭಗವತ್ಪಾದರು ಎಲ್ಲರಿಗೂ ಸದ್ಬುದ್ಧಿಯನ್ನೀಯಲಿ.

ಶ್ರೀಮನ್ಮಹಾರಾಜರವರ ಪ್ರೈವೇಟಸೆಕ್ರೆಟರಿಗಳಾದ ಸರ್ ಚಾರಲ್ಸ್ ಟಾಡ್‌ಹಂಟರ್‌ರವರು ಶರೀರಾಲಸ್ಯದಿಂದ ರಜದಮೇಲೆ ಇಂಗ್ಲೆಂಡಿಗೆ ಪ್ರಯಾಣ ಬೆಳೆಯಿಸುವರೆಂದು ಕೇಳುತ್ತೇವೆ.

ಒಳದೇಶದ ವೃತ್ತಾಂತಗಳು.

ನೀರುಬೆರಸಿದ ಹಾಲನ್ನು ಮಾರಿದ್ದಕ್ಕೆ ಮೈಸೂರಿನಲ್ಲಿರುವ ಗಂಗಮ್ಮ ಎಂಬಾಕೆಗೆ 5 ರೂ. ಜುಲ್ಮಾನೆಯು ವಿಧಿಸಲ್ಪಟ್ಟಿತು.

ನವನಗರದ ಸಂಸ್ಥಾನದಲ್ಲಿ ತಯಾರಾದ ಬೆಂಕಿಕಡ್ಡಿಪೆಟ್ಟಿಗೆಗಳು ಮೈಸೂರು ಸಂಸ್ಥಾನಕ್ಕೆ ತರಿಸಲ್ಪಡಕೂಡದೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ.

ರಜದ ಮೇಲಿರುವ ಅಮಲ್‌ದಾರ್‍ರು ಮ|| ರಾ|| ಕೆ. ವೇದಾಂತ ಅಯ್ಯಂಗಾರ್ಯರವರಿಗೆ ಇನ್ನೂ ಎರಡು ತಿಂಗಳು ಫರ್ಲೋ ರಜಾ ಮಂಜೂರು ಮಾಡಲ್ಪಟ್ಟಿದೆ.

ಮ|| ರಾ|| ಅಸಿಸ್ಟೆಂಟ್ ಸರ್ಜನ್ ಎಸ್. ವಿ. ಬೀಗಿರಿ ಅಯ್ಯಂಗಾರ್ಯರವರು ಮಂಡ್ಯದ ಲೋಕಲ್ ಫಂಡ್ ಆಸ್ಪತ್ರೆಯಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟರು.

ರಾಜಧಾನಿಯ ವೃದ್ಧಪಿತಾಮಹರ ಮೊಮ್ಮಕ್ಕಳಾದ 25 ವರ್ಷದ ಶ್ರೀ|| ಎಂ. ಎಸ್. ರಾಮನಾಥನ್‌ರವರು ಬೈಸಿಕಲ್ಲಿನ ಮೇಲೆ ಆಫ್‌ಘಾನಿಸ್ಥಾನ, ಅರೇಬಿಯಾ ಮುಂತಾದ ದೇಶಗಳಮೇಲೆ ಹಾಯ್ದು ಇಂಗ್ಲೆಂಡಿಗೆ ಪ್ರಯಾಣ ಬೆಳೆಯಿಸಿರುವರು.

ಶ್ರೀಮತಿ ನೆಲ್ಯಾಳ ಸಂಸ್ಥಾನದ ರಾಜ್ಞಿ ಬೋರಮ್ಮಣ್ಣಿಯವರು ಇಷ್ಟರಲ್ಲಿ ರಂಭಾಪುರೀ ಜಗದ್ಗುರುಗಳನ್ನು ತಮ್ಮ ಬಂಗಲೆಗೆ ಬಿಜಯಂಗೈಸಿಕೊಂಡು ಪಾದಪೂಜೆಯನ್ನು ನಡೆಯಿಸಿ ಸಂಸ್ಥಾನಕ್ಕೆ ಷೋಡಶ ಮಹಾದಾನಗಳಲ್ಲೊಂದಾದ ಗಜದಾನವನ್ನು ಮಾಡುವರೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ಮೈಸೂರು ಯೂನಿವರ್ಸಿಟಿ ಕೌನ್ಸಿಲಿಗೆ ಇಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ|| ಎಫ್. ಎಕ್. ಮೌದಾವಾಲಾ ಎಂ.ಎ. ರವರನ್ನೂ ಮತ್ತು ರಿಟೈರ್ಡ್ ಚೀಫ್ ಜಸ್ಟಿಸ್ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ಪಿ. ಮಹಾದೇವಯ್ಯನವರನ್ನೂ ಮೆಂಬರರನ್ನಾಗಿ ನಿಯಮಿಸಿರುತ್ತಾರೆ.

ರಾಜಧಾನಿಯಲ್ಲಿ ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ರಂಭಾಪುರೀ ಜಗದ್ಗುರು ಸ್ವಾಗತಸಂಘದ ವೀರಶೈವ ಮಹಾಜನಗಳು ಪ್ರತಿನಿತ್ಯವೂ ಜಗದ್ಗುರುಗಳ ಸೇವೆಯಲ್ಲಿ ನಿರತರಾಗಿ ಗುರುಗಳಿಗೆ ವಿಶೇಷವಾದ ಆದರಾತಿಥ್ಯಗಳನ್ನು ನಡೆಸುತ್ತ ಗುರುಭಕ್ತಿಧುರಂಧರತೆಯನ್ನು ಪ್ರಕಾಶಗೊಳಿಸುತ್ತಿರುವರು.

ತರೀಕೆರೆ ತಾ|| ನಂದಿಬಟ್ಲು ಮತ್ತು ಸಂತವೇರಿ ಗ್ರಾಮಗಳ ಬಳಿ ಸುಮಾರು ಮೂರು ಮೈಲು ಸುತ್ತಳತೆಗೆ ಒಳಪಟ್ಟ ಪ್ರದೇಶದಲ್ಲಿ ಈ ಲಾಗಾಯ್ತು 3 ತಿಂಗಳವರೆಗೂ ಯಾರು ಬೇಕಾದರೂ ಹುಲಿಶಿಕಾರಿ ಮಾಡಬಹುದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ. ಅಲ್ಲಿ ಹುಲಿಗಳ ಹಾವಳಿಯು ಹೆಚ್ಚಾಗಿರುವುದೇ ಇದಕ್ಕೆ ಕಾರಣ !

ರಾಜಧಾನಿಯಲ್ಲಿ ಲಕ್ಷ್ಮೀ, ಮಲ್ಲಿ, ಮುನಿ ರಾಜಮ್ಮ ಎಂಬ ಪರ್ಯಾಯನಾಮಗಳನ್ನು ಹೊಂದಿರುವ ಓರ್ವ ಹೆಂಗಸು ತಳೂರುಮಠದ ಬೀದಿಯಲ್ಲಿ 8 ವರ್ಷದ ರತ್ನಮ್ಮನೆಂಬವಳನ್ನು ಮೋಸದಿಂದ ಕರೆದೊಯ್ದು ಮೈಮೇಲಿದ್ದ ಆಭರಣಗಳನ್ನು ಅಪಹರಿಸಿದಳೆಂದು ಮ್ಯಾಜಿಸ್ಟ್ರೇಟರು ಅವಳಿಗೆ ಮೂರುವರ್ಷ ಹತ್ತು ತಿಂಗಳು ಕಠಿಣಶಿಕ್ಷೆ ವಿಧಿಸಿದರು.

ಮ|| ರಾ|| ಆರ್. ಕೆ. ಸಂಗಮೇಶ್ವರ್ ಎಂ. ಎ. ಎಲ್. ಟಿ. ಶಿವಮೊಗ್ಗಾ ಗೌರ್ನಮೆಂಟ್ ಹೈಸ್ಕೂಲು ಹೆಡ್ಮಾಸ್ಟರವರಿಗೆ ಇದೇ ಅಕ್ಟೋಬರ್ 22 ನೇ ತಾರೀಖು ಲಾಗಾಯ್ತು ಪೂರ್ತಾ ಸಂಬಳದ ಮೇಲೆ ಒಂದು ತಿಂಗಳು ಹದಿನೇಳು ದಿವಸಗಳ ಫರ್ಲೋ ರಜ ಮಂಜೂರು ಮಾಡಲ್ಪಟ್ಟಿದೆ. ಇವರ ರಜಾ ಕಾಲದಲ್ಲಿ ಇವರ ಸ್ಥಾನಕ್ಕೆ ಮ|| ರಾ|| ಡಿ. ವ್ಯಾಸರಾವ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರವರನ್ನು ನೇಮಿಸಿದ್ದಾರೆ.

ಸದ್ಯಃ ರಾಜಧಾನಿಯಲ್ಲಿ ವಾಸವಾಗಿರುವ ಕೂಡಲಿ ಶೃಂಗೇರಿ ಪೀಠಾಧಿಪತಿಗಳಾದ ಶ್ರೀ ವಿದ್ಯಾಭಿನವವಾಗೀಶ್ವರ ಭಾರತೀಸ್ವಾಮಿಗಳವರು ಪೌರಾಣಿಕಶಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರು ಸಂಸ್ಕೃತಭಾಷೆಯಲ್ಲಿದ್ದ ಶಂಕರವಿಜಯಕಾವ್ಯವನ್ನು ಕರ್ನಾಟಕಭಾಷೆಯಲ್ಲಿ ಪದ್ಯರೂಪವಾಗಿ ಬರೆದು ಪ್ರಸಿದ್ಧಪಡಿಸಿದ ಸಂತೋಷಕ್ಕಾಗಿ ಸದರಿಯವರಿಗೆ “ಕುಮಾರವ್ಯಾಸ” ನೆಂಬ ಪದವಿಯನ್ನು ಅನುಗ್ರಹಿಸಿರುತ್ತಾರೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಾದಪೂಜಾಮಹೋತ್ಸವ.

ಕಳೆದ ಸೋಮವಾರದ ದಿವಸ ಮೈಸೂರು ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ಸುಪ್ರಸಿದ್ಧ ವರ್ತಕರಾದ ಮ|| ರಾ|| ಕಂತೀಮಲ್ಲಣ್ಣನವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ತಮ್ಮ ಮನೆಗೆ ಬಿಜಮಾಡಿಸಿಕೊಂಡಿದ್ದರು. ಗುರುಪೂಜೆಗಾಗಿ ಮನೆಯನ್ನು ಸುಣ್ಣಬಣ್ಣಗಳಿಂದಲೂ ನೂತನಪಲ್ಲವ ರಂಭಾಸ್ತಂಭಾದಿಗಳಿಂದೊಡಗೂಡಿದ ಚಪ್ಪರದಿಂದಲೂ ಅಲಂಕಾರಗೊಳಿಸಿದ್ದರು. ಪ್ರಾತಃಕಾಲ ೯ ಘಂಟೆಗೆ ಮ|| ರಾ|| ಮಲ್ಲಣ್ಣನವರು ಇಷ್ಟಮಿತ್ರಾದಿ ಮಹಾಜನಗಳೊಡಗೂಡಿ ನಾನಾವಿಧ ವಾದ್ಯವೈಭವಸಹಿತ ಇಸ್ತಕಪಾಲನ್ನು ತೆಗೆದುಕೊಂಡು ಗುರುಗಳ ಬಿಡಾರಕ್ಕೆ ಹೋಗಿ ಗುರುಕಾಣಿಕೆಯೊಡನೆ ಸಾಷ್ಟಾಂಗಪ್ರಣಾಮಪೂರ್ವಕವಾಗಿ ಬಿನ್ನಹವನ್ನೊಪ್ಪಿಸಿದರು. ಉತ್ಸವವು ಅರಮನೆಯಿಂದ ಕೊಡಲ್ಪಟ್ಟ ರಾಜಮರ್ಯಾದೆಗಳೊಡನೆ ಚಾಮರಾಜರೋಡಿನಲ್ಲಿ ಹಾಯ್ದು ಹೊಸರೋಡಿನ ದ್ವಾರಾ ಬಿಡದಿ ದೇವಣ್ಣನವರ ಬೀದಿಯಿಂದ ಮ|| ರಾ|| ಮಲ್ಲಣ್ಣನವರ ಮನೆಗೆ ತಲ್ಪಿತು. ಶ್ರೀ ಪಂಚಾಚಾರ್ಯ ಜಯಧ್ವನಿಯಾಗುತ್ತಿರಲು ಶ್ರೀಗಳವರು ಮ್ಯಾನಾದಿಂದಿಳಿದು ಭದ್ರಪೀಠವನ್ನಲಂಕರಿಸಿದರು. ಬಂದ ಮಹಾಜನಗಳು ಫಲಪುಷ್ಪ ಗಂಧಾದ್ಯುಪಚಾರಗಳಿಂದ ಸತ್ಕರಿಸಲ್ಪಟ್ಟರು. ಶ್ರೀಗಳವರ ಸ್ನಾನಪೂಜಾದಿಗಳು ನಡೆದ ತರುವಾಯ ಮ|| ರಾ|| ಮಲ್ಲಣ್ಣನವರು ವಿಧ್ಯುಕ್ತವಾಗಿ ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ವಿಶೇಷವಾದ ಗುರುಕಾಣಿಕೆಯನ್ನೊಪ್ಪಿಸಿ ಗುರುಕೃಪೆಗೆ ಪಾತ್ರರಾದರು. ಅನೇಕಜನ ಬಂಧುಬಾಂಧವರೂ ಇಷ್ಟಮಿತ್ರರೂ ಪಾದಪೂಜೆಯಲ್ಲಿ ಭಾಗಿಗಳಾಗಿದ್ದರು. ಸಾಯಂಕಾಲ 5 ಘಂಟೆಗೆ ಗುರುಗಳ ಆಶೀರ್ವಾದ ಪಡೆದು ಯಥಾಪ್ರಕಾರ ಉತ್ಸವದೊಡನೆ ಶ್ರೀಗಳವರನ್ನು ಅವರ ಬಿಡಾರಕ್ಕೆ ಕಳುಹಿಸಿಕೊಟ್ಟರು.

ವರ್ತಮಾನಸಂಗ್ರಹ.

ಕೇಪ್‌ಟೌನಿನಲ್ಲಿ ವಿಪರೀತ ಕುಡಿದು ಜ್ಞಾನತಪ್ಪಿ ಬಿದ್ದಳೆಂದು ಮೇರಿಮಾರಿಸ್ ಎಂಬಾಕೆಗೆ ಮ್ಯಾಜಿಸ್ಟ್ರೇಟರು 2 ತಿಂಗಳು ಕಠಿಣ ಸಜಾ ವಿಧಿಸಿದರು.

ಕರಾಚಿ ಇಂಪೀರಿಯಲ್ ಬ್ಯಾಂಕಿನಲ್ಲಿ 2500 ರೂಪಾಯಿಗಳ ನೋಟುಗಳು ಕಳುವು ಆಗಿರುತ್ತವೆ. ಸಂದೇಹದ ಮೇಲೆ 6 ಜನರನ್ನು ದಸ್ತಗಿರಿಮಾಡಿದ್ದಾರೆ.

ಬೊಂಬಾಯಿನಗರದ ಮುಗತಾಲೇನ್ ಎಂಬ ಭಾಗದಲ್ಲಿ ಬೆಂಕಿಬಿದ್ದು 5 ಅಂಗಡಿಗಳು ಸುಟ್ಟುಹೋದವು. ಸುಮಾರು 5000 ರೂ. ಗಳ ನಷ್ಟವಾಗಿರುತ್ತದೆ.

ಅನಂತಶಯನದ ದೇವಸ್ಥಾನವನ್ನು ತಿರುಗಿ ಕಟ್ಟಲು ಪ್ರಾರಂಭ ಮಾಡಿದ್ದಾರೆ. ಸುಮಾರು 1 ಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ಅಂದಾಜಾಗಿದೆ.

ಫ್ರೆಂಚ್ ಇಂಡಿಯದ ಪೋಸ್ಟಲ್ ಇಲಾಖೆಯಲ್ಲಿ 50 ಸಾವಿರ ರೂಪಾಯಿಗಳನ್ನು ದುರುಪಯೋಗಪಡಿಸಿದರೆಂಬುದರಮೇಲೆ ಅನೇಕ ನೌಕರರನ್ನು ದಸ್ತಗಿರಿ ಮಾಡಿದ್ದಾರೆ.

ರಂಗಪಟ್ಟಣಕ್ಕೆ ಸೇರಿದ ಒಂದು ಹಳ್ಳಿಯಲ್ಲಿ 140 ಜನಕ್ಕೆ ಮಲೇರಿಯಾ ಜ್ವರವುಬಂದು 11 ಜನರು ಮೃತಪಟ್ಟರು. ಆ ದೇಶದಲ್ಲೆಲ್ಲಾ ಇದರ ಉಪದ್ರವವು ಬಹಳ ಹೆಚ್ಚಾಗಿದೆ.

27 ಜನ ಇಂಡಿಯಾ ಕ್ರಿಕೆಟ್ ಹುಡುಗರು ಮಿ|| ಡಬ್ಲ್ಯು. ಹೆಚ್. ಹಾಗ್, ಎಂಬವರ ಕೈಕೆಳಗೆ, ಆಸ್ಟ್ರೇಲಿಯ ದೇಶದಲ್ಲಿ ನಡೆಯುವ ಕ್ರಿಕೆಟ್ ರ್‍ಯಾಲಿಯಲ್ಲಿ ಸೇರುವ ಉದ್ದೇಶದಿಂದ ಕೊಲಂಬೋ ಮಾರ್ಗವಾಗಿ ಹೊರಟಿರುತ್ತಾರೆ.

ಲಾಹೋರಿನಲ್ಲಿ ಹಿಂದೂಸಭೆಯ ಸದಸ್ಯರಾದ ಗೋವಿಂದರಾಮ್ ಎಂಬವರು 7 ನೇ ತಾರೀಖು ರಾತ್ರಿ 8-30 ಘಂಟೆಯಲ್ಲಿ ನಾಟಕವನ್ನು ನೋಡುವುದಕ್ಕಾಗಿ ಹೊರಟು ಸ್ವಲ್ಪದೂರ ಹೋಗುವುದರಲ್ಲಿ ಯಾರೋ ಇವರ ಹೊಟ್ಟೆಗೆ ಗುಂಡಿನಿಂದ ಹೊಡೆದರು. ಎಕ್ಸ್‌ರೇ ಪರೀಕ್ಷೆಗಾಗಿ ಇವರನ್ನು ರಾವಲ್ಪಿಂಡಿಗೆ ಸಾಗಿಸಬೇಕಾಯಿತು. ಅಲ್ಲಿ ಇವರು ಪ್ರಾಣಬಿಟ್ಟರು.

ಲಫ್ಟ್ ಎಂಬಲ್ಲಿಂದ ಹ್ಯಾರ್ ಪ್ರದೇಶಕ್ಕೆ ಹೋಗುತ್ತಿದ್ದ ಜರ್ಮನರ ಸಾಮಾನು ಸಾಗಿಸುವ ವಿಮಾನವು ಕೆಳಕ್ಕೆ ಬಿದ್ದುಹೋಯಿತು. ನಡೆಯಿಸುತ್ತಿದ್ದವನಿಗೆ ತಲೆಗೆ ಬಹಳ ಪೆಟ್ಟು ಬಿತ್ತು. 5 ಜನರು ಸತ್ತುಹೋದರು. ವೈರ್‌ಲೆಸ್ ಆಪರೇಟರ್‌ಗೆ ಮಾತ್ರ ಏನೂ ಅಪಾಯವಾಗಲಿಲ್ಲ. ಈ ವಾರದಲ್ಲಿ ವಿಮಾನ ಬಿದ್ದುದು ಎರಡನೆಯ ಸಾರಿ.

ಸಾಲದಿಂದ ಮರಣ.

ಪುದುಕೋಟೆಯಲ್ಲಿ ಪೆಟ್ರೋಲ್ ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದ ಅರುಣಾಚಲಂ ಎಂಬವನು ತಾನು ಮಾಡಿದ ಸಾಲವನ್ನು ತೀರಿಸುವುದಕ್ಕೆ ಆಗದೆ ಹೋದುದರಿಂದ ನಾಥಪಳ್ಳಂ ಕೆರೆಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡನು.

೪|| ವರ್ಷದ ಬಾಲಕನ ಸಾಹಸ !

ನವಗಂಗಾದಲ್ಲಿ ನಾಲ್ಕುವರೆ ವರ್ಷ ವಯಸ್ಸುಳ್ಳ ಮಾಸ್ಟರ್ ಅಸಿತರಂಜನ ಷಹಾ ಎಂಬ ಬಾಲಕನೋರ್ವನು ಕೆಲವು ಘಂಟೆಗಳವರೆಗೂ ಒಂದು ಮೈಲಿನಷ್ಟು ಈಜಾಡಿದನು. ನೆರೆದಿದ್ದ ಸಾವಿರಾರು ಜನಗಳು ಈ ಬಾಲಕನ ಸಾಹಸವನ್ನು ನೋಡಿ ವಿಸ್ಮಿತರಾದರು.

ಶಿಲ್ಪವಸ್ತುಪ್ರದರ್ಶನ.

ಭಾರತದ ಪುರಾತನವೂ ಮತ್ತು ನೂತನವೂ ಆದ ಶಿಲ್ಪಶಾಸ್ತ್ರದ ವಸ್ತುಸಂಗ್ರಹದ ಪ್ರದರ್ಶನವೊಂದು ಮುಂದೆ ಬರುವ ಡಿಸೆಂಬರದಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ನಡೆಯುವದು. ಪ್ರಾಚೀನಸಂಪ್ರದಾಯವುಳ್ಳ ಹಿಂದೂ ದೇವಾಲಯಗಳ ಚಿತ್ರಗಳು ಅಲ್ಲಿ ತೋರಿಸಲ್ಪಡುತ್ತವೆ.

ಚೀನಾಶಬ್ದಕೋಶ !

ಚೀನಾಶಬ್ದಕೋಶವು ಇತಿಹಾಸದಲ್ಲೆಲ್ಲಾ ಪ್ರಸಿದ್ಧವಾದ ಸಾಹಿತ್ಯಸಂಗ್ರಹವಾಗಿದ್ದು 9,17000 ಪುಟಗಳುಳ್ಳದ್ದಾಗಿಯೂ 3,6,7000,000 ಅಕ್ಷರಗಳುಳ್ಳದಾಗಿಯೂ ಇರುವುದರಿಂದ ಇದನ್ನು ಮುದ್ರಣ ಮಾಡಿಸುವದು ಶಕ್ಯವಿಲ್ಲವೆಂದು ತಿಳಿದು ಮೂರು ಕೈಬರಹದ ಪುಸ್ತಕಗಳನ್ನು ಮಾತ್ರ ಬರೆಯಿಸಿಡಲ್ಪಟ್ಟಿರುವದು.

ವಿಚಿತ್ರಶಿಶು.

ನೆಲ್ಲೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ 4 ನೆಯ ತಾರೀಖು ರಾತ್ರಿ ಒಬ್ಬ ಹೆಂಗಸು ಒಂದು ವಿಚಿತ್ರವಾದ ಮಗುವನ್ನು ಹೆತ್ತಳು. ಅದಕ್ಕೆ ಹೊಟ್ಟೆಯೊಳಗೆ ಇರಬೇಕಾದ ಕರುಳು ಮತ್ತು ಇತರಕೋಶಗಳು ಹೊರಗಡೆಯಲ್ಲಿಯೇ ಇದ್ದು ಮಗುವು ಹುಟ್ಟಿದ ಸ್ವಲ್ಪ ಕಾಲದಲ್ಲೇ ಸತ್ತುಹೋಯಿತು. ಮಗುವಿನ ದೇಹವನ್ನು ದ್ರಾವಕದಲ್ಲಿ ಕೆಡದಂತೆ ಹಾಕಿ ಇಟ್ಟಿದ್ದಾರೆ.

ಮೀನಿನೆಣ್ಣೆಯಿಂದ ಮರಣ !

ದಕ್ಷಿಣ ಟಾಂಗನೇಕಾದಲ್ಲಿ ಒಂದು ಬೋರ್ಡಿಂಗ್ ಸ್ಕೂಲಿನಲ್ಲಿ ಷಾರ್ಕ್ ಆಯಿಲ್ ಎಂಬ ಮೀನಿನೆಣ್ಣೆಯನ್ನು ಕುಡಿದಿದ್ದರಿಂದ 33 ಜನ ಹುಡುಗಿಯರು ಸತ್ತುಹೋದರು. ಉಪಾಧ್ಯಾಯಿನಿಯೂ ತೊಂದರೆ ಪಡುತ್ತಿದ್ದಾಳೆ. ಹೀಗಾಗುವುದಕ್ಕೆ ಕಾರಣವು ಗೊತ್ತಿಲ್ಲದ್ದರಿಂದ, ಅದು ಪತ್ತೆಯಾಗುವವರೆಗೂ ಯಾರೂ ಈ ಎಣ್ಣೆಯನ್ನು ಉಪಯೋಗಿಸಕೂಡದೆಂದು ಗೌರ್ನಮೆಂಟಿನವರು ಪ್ರಸಿದ್ಧಪಡಿಸಿದ್ದಾರೆ.

ಮಗಳು ಆಸ್ತಿಗಾಗಿ ತಾಯಿತಂದೆಗಳಿಗೆ ವಿಷಕೊಟ್ಟಳು.

ಪ್ಯಾರಿಸ್‌ನಗರದ ಸುಮಾರು 18 ವಯಸ್ಸಿನ ಒಬ್ಬ ಹುಡುಗಿಯು ತನ್ನ ತಂದೆತಾಯಿಗಳು ತಿನ್ನುವ ಆಹಾರದಲ್ಲಿ ವಿಷ ಬೆರಸಿದಳೆಂದು ಕೋರ್ಟು ಮುಂದೆ ತರಲ್ಪಟ್ಟಿದ್ದಾಳೆ. ತಂದೆಯು ಸತ್ತುಹೋದನು. ತಾಯಿಯು ಇನ್ನೂ ಆಸ್ಪತ್ರೆಯಲ್ಲಿ ಇದ್ದಾಳೆ. ತಾಯಿತಂದೆಗಳ ಮರಣಾನಂತರ ಆಸ್ತಿ ಎಲ್ಲಾ ತನ್ನ ಕೈಗೆ ಬರುವುದೆಂಬುದೇ ಈ ವಿಧವಾದ ಕೃತ್ಯಕ್ಕೆ ಕಾರಣವೆಂದು ಊಹಿಸಲಾಗಿದೆ.

ಬೂಟ್ಸಿನಿಂದ ಕೊಲೆಯ ಪತ್ತೆ !

ಪ್ರೇಗ್‌ಪಟ್ಟಣದಲ್ಲಿ ಹೆಂಗಸೊಬ್ಬಳು ತಮ್ಮ ತಂದೆಯು ಗಾಡೀಖಾನೆಯಲ್ಲಿ ಆತ್ಮಹತ್ಯಮಾಡಿಕೊಂಡಿದ್ದಾನೆಂದು ಪೋಲೀಸಿಗೆ ತಿಳಿಸಿದಳು. ವಿದ್ಯಮಾನಗಳನ್ನು ಪರೀಕ್ಷಿಸಲು ಬಂದ ಪೋಲೀಸ್ ಅಧಿಕಾರಿಯು ಶವವನ್ನು ಪರೀಕ್ಷಿಸುವಲ್ಲಿ ಅವನ ದೃಷ್ಟಿಯು ಹೆಣದ ಕಾಲಿನಲ್ಲಿದ್ದ ಶುಭ್ರವಾದ ಬೂಟ್ಸಿನಮೇಲೆ ಬಿದ್ದಿತು. ಗಾಡೀಖಾನೆಯ ಸುತ್ತಲೂ ಕೆಸರಾಗಿದ್ದು, ಸತ್ತವನ ಬೂಟ್ಸು ಶುಭ್ರವಾಗಿರುವುದನ್ನು ನೋಡಿದ ಕೂಡಲೆ ಹತ್ಯೆಯು ಮನೆಯಲ್ಲಿ ನಡೆದು, ಶವವನ್ನು ಇಲ್ಲಿ ಹಾಕಿರಬೇಕೆಂದು ಊಹಿಸಿ, ಹೆಂಗಸನ್ನೂ ಮತ್ತು ಅವಳ ಗಂಡನನ್ನೂ ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿದನು. ಹೆಂಗಸು ತಪ್ಪಿತವನ್ನು ಒಪ್ಪಿಕೊಂಡದ್ದರಿಂದ, ಗಂಡನಿಗೆ 15 ವರ್ಷ, ಹೆಂಗಸಿಗೆ 20 ವರ್ಷ ಕಠಿಣಶಿಕ್ಷೆಯು ವಿಧಿಸಲ್ಪಟ್ಟಿತು.

ಮದ್ರಾಸಿನಲ್ಲಿ ಸಯಾಂ ದೇಶದ ಅಕ್ಕಿ ೬೦೦೦೦ ಟನ್ನುಗಳು

ಮದರಾಸಿನಲ್ಲಿ ಹಾಲಿ ದಾಸ್ತಾದಿರುವ ಇಂಡೋಚೀನಾ ಮತ್ತು ಸಯಾಂ ಅಕ್ಕಿಯು ಬಹಳ ಹೆಚ್ಚಾಗಿದೆಯೆಂದು ತಿಳಿದು ಬರುತ್ತದೆ.

ಮದರಾಸಿನ ಅಕ್ಕಿ ವರ್ತಕರು ಈ ಸಾರೆ ಮಳೆಗಳು ಹೋಗಿ ಬೆಳೆಗಳು ಕೆಟ್ಟು ಅಕ್ಕಿಗೆ ಒಳ್ಳೆ ಧಾರಣೆ ಸಿಗುವುದೆಂಬ ಆಲೋಚನೆಯ ಮೇಲೆ ಹೆಚ್ಚು ಹೆಚ್ಚಾಗಿ ಅಕ್ಕಿಗೆ ಆರ್ಡರು ಕೊಟ್ಟು ತರಿಸಿದರು.

ಈಗ ಮದರಾಸು ನಗರದಲ್ಲಿಯೇ ಅರವತ್ತು ಸಾವಿರಟನ್ನುಗಳ ಅಕ್ಕಿಯು ಶೇಖರವಾಗಿದೆ. ಅಂದರೆ ಒಂದು ವರ್ಷಕ್ಕೆಲ್ಲ ಇಡೀ ಮದ್ರಾಸ್ ಅಧಿಪತ್ಯಕ್ಕೆ ಬರುತ್ತಿದ್ದ ಅಕ್ಕಿಯಲ್ಲಿ ಅರ್ಧಕ್ಕಿಂತಲೂ ಹೆಚ್ಚಾದ ಹಾಗಾಯಿತು. ಇಷ್ಟರಲ್ಲಿಯೇ ಇನ್ನೂ ಅನೇಕ ಹಡಗುಗಳಲ್ಲಿ ಅಕ್ಕಿಯು ವಿಶೇಷವಾಗಿ ಬರುವುದೆಂಬ ವರ್ತಮಾನವಿದೆ.

ಇಂಡಿಯಾದೇಶಕ್ಕೆ ೪೮೦೦ ಮಂದಿ ವಿದೇಶೀಯರ ಆಗಮನ.

ಇಂಡಿಯಾದೇಶದ ಸೊಬಗನ್ನು ನೋಡುವ ಹಂಬಲವು ಈಚೀಚೆಗೆ ಪಾಶ್ಚಾತ್ಯರಿಗೆ ಹೆಚ್ಚುತ್ತ ನಡೆದಿದೆ.

ಆದುದರಿಂದ ಇಟಲೀದೇಶದ ಹಡಗುಗಳ ಕಂಪೆನಿಗಳವರು ಈ ಸಾರೆ ತಮ್ಮ ಅನೇಕ ಹಡಗುಗಳನ್ನು ಇಂಡಿಯಾಕ್ಕೆ ನೋಟಕರ ಸೌಕರ್ಯಕ್ಕಾಗಿ ಕಳುಹಿಸುವವರಾಗಿದ್ದಾರೆ. ಲಾಯಿಡ್ ಟ್ರಿಸ್ಟಿನೋ ಎಂಬ ಕಂಪೆನಿಯೊಂದೇ ಈ ನವಂಬರ್ ತಿಂಗಳಿಂದ ಬರುವ ಫೆಬ್ರವರಿ ತಿಂಗಳೊಳಗಾಗಿ ಆರು ಹಡಗುಗಳನ್ನು ಕಳುಹಿಸುತ್ತದೆ.

ಈ ಹಡುಗುಗಳಲ್ಲಿ ಇಂಡಿಯಾಕ್ಕೆ ಬರುವವರು ೪೦ ದಿನಗಳ ಕಾಲ ಇಂಡಿಯಾದಲ್ಲಿದ್ದು ನೋಡತಕ್ಕ ಎಲ್ಲಾ ನೋಟಗಳನ್ನೂ ನೋಡಲವಕಾಶವುಂಟು. ಈಗ ಅವರು ಹಾಕಿರುವ ಪ್ರೋಗ್ರಾಂ ಪ್ರಕಾರ ಬೊಂಬಾಯಿ, ಡೆಲ್ಲಿ, ಆಗ್ರಾ, ಕಾಶಿ, ಉದಯಪುರ ಕಲ್ಕತ್ತಾ ಮದರಾಸು, ಕಾನ್‌ಪುರ, ಕೊಲಂಬೊ ಮುಂತಾದ ನಗರಗಳಿಗೆಲ್ಲಾ ಹೋಗುವವರಿದ್ದಾರೆ. ಈಗ ತಿಳಿದುಬಂದಿರುವ ರೀತ್ಯಾ ೪೮೦೦ ಮಂದಿ ನೋಟಕರು ಹೊರಡಬಹುದೆಂಬ ನಿರೀಕ್ಷಣೆಯಿದೆಯಂತೆ ! ಈಗಾಗಲೆ ಇಂಡಿಯಾಕ್ಕೆ ಹೊರಡಲಿರುವ ಹಡಗುಗಳು ಎಲ್ಲಾ ಸ್ಥಳಗಳಿಗೂ ಭರ್ತಿಯಾಗಿಹೋಗಿವೆ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶರಣಬಸವೇಶ್ವರ ಪುರಾಣಸಮಾಪ್ತಿ.

ಮಹಾಶಯರೆ! ಶಿವಶರಣರಲ್ಲೊಬ್ಬರಾದ ಶ್ರೀ ಶರಣಬಸವೇಶ್ವರರು ಈಗ್ಗೆ ೧ ಶತಮಾನದ ಹಿಂದೆ ನಿಜಾಂ ಸ್ಟೇಟ್ ಹರಳಗುಂಡಿಗಿ ಎಂಬ ಗ್ರಾಮದಲ್ಲಿ ದ್ವಿತೀಯಶಂಕರನಂತೆ ಅವತರಿಸಿ ತಮ್ಮ ಮಹಿಮಾತಿಶಯಂಗಳಿಂದ ಸರ್ವರನ್ನೂ ಆನಂದಗೊಳಿಸುತ್ತ ದಾಸೋಹಕ್ಕೆ ಬಂದ ಅತಿಥಿ ಅಭ್ಯಾಗತ ಜಂಗಮ ಸಾಧುಸತ್ಪುರುಷ ಮುಂತಾದ ಸಹಸ್ರಾರು ಜನರನ್ನು ಈ ಶರಣ ದಂಪತಿಗಳೇ ಅವರವರ ಇಷ್ಟಾನುಸಾರವಾಗಿ ಪಂಚಾಮೃತ ಭೋಜನಗಳಿಂದಲೂ ವಸ್ತ್ರಾಭರಣಭೂಷಣಗಳಿಂದಲೂ ತೃಪ್ತಿಗೊಳಿಸುತ್ತಿದ್ದರು. ಹೀಗಿರುವಾಗ್ಗೆ ಒಂದಾನೊಂದು ಸಮಯದಲ್ಲಿ ಶಿವಲಾಂಛನಧಾರಿಯಾದೊಬ್ಬ ಜಂಗಮ ಮೂರ್ತಿಯು "ಭಿಕ್ಷಾಂದೇಹಿ" ಎಂದು ಗೃಹಾಂಗಣದಲ್ಲಿ ಬಂದು ನಿಂತನು. ಆಗ್ಗೆ ಶರಣಪ್ಪನವರು ಎಲ್ಲಿಯೋ ಹೊರಗೆ ಹೋಗಿದ್ದರು. ಮನೆಯಲ್ಲಿ ಪತಿಸೇವಾನಿರತರಾದ ಸಾಧ್ವೀಶಿರೋಮಣಿ ಮಹಾದೇವಮ್ಮನವರು ಗರ್ಭಭಾರದಿಂದ ಶಯನಮಾಡಿದ್ದರು. ಅಷ್ಟರಲ್ಲಿ ಶರಣರು ಹೊರಗಿಂದ ಬಂದು ಈ ಜಟಾಮಕುಟಧಾರಿಯಾದ ಶಿವನನ್ನು ಕಂಡು ದೀರ್ಘದಂಡ ನಮಸ್ಕಾರಮಾಡಿ ವಿನಯೋಕ್ತಿಗಳಿಂದ ಪ್ರಾರ್ಥಿಸಿಕೊಂಡು ಆಸನದಮೇಲೆ ಕುಳ್ಳಿರಿಸಿ ಮಹಾದೇವೀ ಎಂದು ಆಹ್ವಾನಿಸಿದರು. ಶಬ್ದವೇ ಬರಲಿಲ್ಲ. ಎರಡನೆಯ ಸಾರೆಯೂ ಕೂಡ ಉತ್ತರವೇ ದೊರೆಯಲಿಲ್ಲ. ಆ ಮೇಲೆ ಮಹಾದೇವಮ್ಮನವರಿಗೆ ಎಚ್ಚರಿಕೆಯುಂಟಾಗಿ ಭಯಗ್ರಸ್ತರಾಗಿ ಬರುವದರಲ್ಲಿ ಶರಣರು ಕೋಪೋದ್ರೇಕದಿಂದ ನೀನು ಶಿವಯೋಗಿಗಳನ್ನು ಲಕ್ಷಿಸದೆ ಮಾಯಾಂಧಳಾದುದಕ್ಕೆ ನೀನು ಪ್ರಸೂತಳಾಗದಿರು ಎಂದು ನುಡಿದರು. ಅದಕ್ಕಾಗಿ ೨೩ ಮಾಸದವರೆಗೂ ಹಾಗೆಯೇ ಗರ್ಭಧಾರಣದಿಂದ ಕಾಲ ಕಳೆಯಲು ಸಾಕ್ಷಾತ್ ಕೃಪಾಸಾಗರನಾದ ಶಂಕರನು ಪ್ರಾದುರ್ಭವಿಸಿ ಅವರ ಮನೋವೈಕಲ್ಯವನ್ನು ಪರಿಹರಿಸಿ ದಂಪತ್ಯಸುರಾಗವನ್ನು ವೃದ್ಧಿಗೊಳ್ಳುವಂತೆ ಅನುಗ್ರಹಿಸಿ ಅಂತರ್ಧಾನನಾದನು. ಇದು ಪ್ರಥಮ ಲೀಲೆಯಾಗಿದೆ. ಶರಣಬಸಪ್ಪನವರು ಹೀಗೆಯೇ ದಾಸೋಹದುರಂಧರರಾಗಿ ಹಲವುಕಾಲ ಅಲ್ಲಿಯೇ ವಾಸಮಾಡಿ ಅನಂತರ ಕಲ್ಬುರ್ಗಿಗೆ ದಯಮಾಡಿದರು. ಅಲ್ಲಿಯ ಶೆಟ್ಟರು ಶಾನಭೋಗ ದೊಡ್ಡಪ್ಪಗೌಡರು ಮುಂತಾದ ಗ್ರಾಮ ಪುಥಾರಿಗಳು ನಿತ್ಯದಲ್ಲೂ ಶರಣರ ದರ್ಶನಕ್ಕೆ ಬಂದು ಶ್ರೌತಾದಿ ವಿಷಯಗಳಂ ಕೇಳಿ ಫಲಾಶೀರ್ವಾದವನ್ನು ಪಡೆದುಕೊಳ್ಳುತ್ತಿದ್ದರು. ಅದೇ ಸಮಯದಲ್ಲಿ ಕಲಬುರ್ಗಿಯ ಹಿರೇ ರೋಜದ ಮಹಮ್ಮದೀಯ ರಾಜ್ಯವೊಂದು ಪರರಾಜರ ಹಸ್ತಗತವಾಗಿತ್ತು. ಈ ಸಮ್ಮ ಚರಿತ್ರನಾಯಕರ ಆಶೀರ್ವಾದಬಲದಿಂದಲೇ ಲಯವಾಗಿದ್ದ ಆ ರಾಜ್ಯವು ಪುನಃ ಲಭಿಸಿತು. ಅಲ್ಲದೆ ಒಂದುಸಾರೆ ದಾಸೋಹಕ್ಕೆ ಕುಳ್ಳುಗಳು ಕಡಿಮೆಬಿದ್ದಾಗ ಒಂದು ಸಹಸ್ರ ಕುಳ್ಳುಗಳನ್ನು ತೆಗೆದುಕೊಂಡು ಒಬ್ಬ ಬಡವಂಧ್ಯಾಸ್ತ್ರೀಯಳಿಗೆ ಪುತ್ರಸಂತಾನವನ್ನಿತ್ತರು. ಇವೇ ಮೊದಲಾದ ಅನೇಕಾನೇಕ ಮಹತ್ವಗಳನ್ನು ಮಾಡಿದ ಶಿವಶರಣರ ಪುರಾಣಪ್ರವಚನವು ಪಾಯಿಗಾ ಇಲಾಖೆಗೆ ಸೇರಿದ ಕೊಲ್ಲೂರುಗ್ರಾಮದಲ್ಲಿ ಪ್ರಾರಂಭವಾಯಿತು. ದಿನಾಲು ನೂರಾರು ಜನ ಶಿವಭಕ್ತರು ಕಥಾಶ್ರವಣಕ್ಕಾಗಿ ಆಗಮಿಸುತ್ತಿದ್ದರು. ಬಂದಂಥ ಜನರಿಗೆ ಅನ್ನೋದಕಗಳನ್ನು ಕೊಡುವ ವ್ಯವಸ್ಥೆಯೂ ಕೂಡ ಮಾಡಲ್ಪಟ್ಟಿತ್ತು. ಹೈಸ್ಕೂಲ್‌ಮಾಸ್ಟರ್ ಕೀರ್ತನವಿಚಕ್ಷಣ ವೇ|| ವಿರೂಪಾಕ್ಷಯ್ಯನವರು ಪುರಾಣಪದ್ಯಗಳನ್ನು ತಮ್ಮ ಮಧುರಸ್ವರದಿಂದ ಓದುತ್ತಿದ್ದರು. ಕಲ್ಯಾಣಯ್ಯಶಾಸ್ತ್ರಿಗಳು ಮಲಖೇಡ ಇವರು ತಮ್ಮ ಸುವಾಣಿಯಿಂದ ಅಮೃತತುಲ್ಯವಾದ ಶರಣರ ಲೀಲಾಬೋಧಕ ಚರಿತ್ರಗಳನ್ನು ವಿವರವಾಗಿ ಹೇಳುತ್ತ ಜನರನ್ನು ಆನಂದಗೊಳಿಸುತ್ತಿದ್ದರು.

ಈ ಪುರಾಣ ಸಮಾರಂಭವು ಒಂದೂವರೆ ತಿಂಗಳವರೆಗೂ ನಡೆದು ಅಶ್ವಯುಜ ಶು|| ೧೧ ಗುರುವಾರ ದಿವಸ ಸಮಾಪ್ತಿಯಾಯಿತು. ಸಾಯಂಕಾಲ ೬ಳು ಘಂಟೆಗೆ ಶರಣಬಸವೇಶ್ವರ ರಥೋತ್ಸವವು ರಾಜಪಥದಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಸಹಸ್ರಾರು ಜನರು ನೆರೆದು ಎತ್ತನೋಡಿದತ್ತ ಶಿವನಾಮವನ್ನು ಘೋಷಿಸುತ್ತಿದ್ದರು. ನೂರಾರು ಜನ ಸುವಾಸಿನಿಯರು ಮಂಗಲಗೀತವನ್ನು ಪಾಡುತ್ತ ಶರಣರ ಪ್ರಭಾವವನ್ನು ಕೊಂಡಾಡುತ್ತಿದ್ದರು. ಅಲ್ಲಲ್ಲಿ ತಳಿರುತೋರಣಗಳಿಂದಲೂ ದೀಪಾವಳಿಗಳಿಂದಲೂ ಶೃಂಗರಿಸಲ್ಪಟ್ಟ ವೈಭವವು ನಭೂತೋನಭವಿಷ್ಯತಿ ಎನ್ನುವಂತಿತ್ತು. ಈ ಮಂಗಲೋತ್ಸವವು ನಂದಿಕೇಶ್ವರದೇವಸ್ಥಾನವನ್ನು ಸೇರಿತು. ಮಾರನೆಯ ದಿವಸ ಸಾವಿರಾರು ಜನ ಮಾಹೇಶ್ವರರಿಗೂ ಭಕ್ತರಿಗೂ ಅನ್ನಸಂತರ್ಪಣೆಯೂ ದಾನಧರ್ಮಾದಿಗಳೂ ನಡೆದವಲ್ಲದೆ, ಒಬ್ಬ ವಟುವಿನ ದೀಕ್ಷಾಸಂಸ್ಕಾರವೂ ಕೂಡ ನೆರವೇರಿಸಲ್ಪಟ್ಟಿತು. ಮಹೋತ್ಸವಕ್ಕೆ ಬಾಡದ ಚರಮೂರ್ತಿ ಸಿದ್ಧರಾಮಸ್ವಾಮಿಗಳೂ ಲಿಂಗಪೂಜಾಧುರೀಣರಾದ ಸಿದ್ಧಲಿಂಗಸ್ವಾಮಿಗಳೂ ಆಗಮಿಸಿ ಈ ಮಹಾಕಾರ್ಯಕ್ಕೆ ಪ್ರೋತ್ಸಾಹವನ್ನುಂಟುಮಾಡಿದುದಕ್ಕೆ ಕೊಲ್ಲೂರು ಭಕ್ತಸಮಾಜವು ಈ ಮಹನೀಯರಿಗೆಋಣಿಯಾಗಿದೆ. ಮರುದಿವಸ ಜನರು ಸಭೆಗೂಡಿನಾವು ಇದುವರೆಗೂ ಶಿವಶರಣರ ಸುಬೋಧವಚನಂಗಳನ್ನು ಕೇಳಿ ಸಂತೋಷಭರಿತರಾದೆವು. ಇದೇ ಸದ್ಬುದ್ಧಿಯನ್ನು ಶರಣರು ನಿರಂತರವೂ ಸರ್ವರ ಹೃದಯದಲ್ಲಿ ನೆಲೆಗೊಳ್ಳುವಂತೆ ಮಾಡಲೆಂದು ನುಡಿದು ಶ್ರೀ ಶರಣಬಸವೇಶ್ವರರ ಜಯಜಯಕಾರಗಳೊಡನೆ ಸಭೆಯನ್ನು ಸಮಾಪ್ತಿಗೊಳಿಸಿದರು.

ಆಚಾರ್ಯಕಿಂಕರ,
ಕರಿಬಸವಶರ್ಮಾ ಕೊಲ್ಲೂರು.

ದಿ ಕರ್ನಾಟಕ ಆರ್ಟ ಸೊಸಾಯಿಟಿ, ೨ನೇ ಪ್ರದರ್ಶನ, ಧಾರವಾಡ.

ಈ ಪ್ರದರ್ಶನವು ಬರುವ ಡಿಶೆಂಬರ್ ತಾರೀಖು ೨೯-೧೨-೩೪ ರಿಂದ ತಾ|| ೪-೧-೩೫ ರ ವರೆಗೆ ನಡೆಯುವುದು. ಉತ್ತಮತರಹದ ಚಿತ್ರಗಳಿಗೆ ಮೆಡಲ್, ಸರ್ಟಿಫಿಕೇಟ್, ಪಾರಿತೋಷಕಗಳು ಕೊಡಲ್ಪಡುವುವು. ಆದಕಾರಣ ಯಾವತ್ತೂ ಚಿತ್ರಕಾರರು ತಮ್ಮ ತಮ್ಮ ಕೈಗಾರಿಕೆಗಳನ್ನೂ, ಚಿತ್ರಗಳನ್ನೂ ತಾ|| ೨೦-೧೨-೩೪ರ ಒಳಗಾಗಿ ಮುಟ್ಟುವಂತೆ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳತಕ್ಕದ್ದು.

ಕಾರ್ಯದರ್ಶಿ
ದಾ. ವೀ. ಹಾಲಭಾಂವಿ
ಉಳವಿ ಬಸವೇಶ್ವರಗುಡ್ಡ, ಧಾರವಾಡ.

ಗುರಿಕಾರ್ ಮರಿಮಲ್ಲಪ್ಪನವರ ಧರ್ಮದ ಫಂಡು.

ಮೇಲ್ಕಂಡ ಫಂಡಿನಿಂದ ವಿದ್ಯಾರ್ಥಿವೇತನವನ್ನು ಪಡೆಯಲು ಅಪೇಕ್ಷಿಸುವ ಇಂಟರ್‌ಮೀಡಿಯೆಟ್ ಮತ್ತು ಇತರ ಉಚ್ಚತರಗತಿಯಲ್ಲಾಗಲಿ, ಅಥವಾ ಉಚ್ಚಕೈಗಾರಿಕೆ ಕಲೆಯಲ್ಲಾಗಲಿ ಅಭ್ಯಾಸಿಸುತ್ತಿರುವ ವೀರಶೈವ ವಿದ್ಯಾರ್ಥಿಗಳು ಮುಂದಿನ ಡಿಶಂಬರ್ ತಿಂಗಳು 15 ನೇ ತಾರೀಖಿನೊಳಗಾಗಿ ಇದಕ್ಕೋಸ್ಕರ ತಯಾರಾಗಿರುವ ಫಾರಂನಲ್ಲಿ ಅಪ್ಲಿಕೇಷನ್ ಬರೆದುಕೊಳ್ಳಬೇಕು.

ಸದರಿ ಅಪ್ಲಿಕೇಷನ್ ಫಾರಂಗಳು ಸೆಕ್ರಿಟರಿಯವರಲ್ಲಿ 9 ಪೈ ಪೋಸ್ಟಲ್ ಸ್ಟ್ಯಾಂಪ್ ಕಳುಹಿಸಿ ಪಡೆಯಬಹುದು.

(*Sd.*) M. S. Basavalingiah, M.A., B.L.,
Hon. Seretary,
Marimallappa's Charitis, Mysore.

ನರಸಾಪುರದ ಸಬ್‌ಕಲೆಕ್ಟರವರ ಆಫೀಸಿಗೆ ಕಳ್ಳರು ನುಗ್ಗಿ ಸುಮಾರು 150 ರೂ. ಬೆಲೆಬಾಳುವ ಪದಾರ್ಥಗಳನ್ನು ಕದ್ದೊಯ್ದರು. ಪೋಲೀಸಿನವರು ಪತ್ತೆತರದೂದು ನಡೆಸುತ್ತಿದ್ದಾರೆ.

ಮೈಸೂರು ಯೂನಿವರ್ಸಿಟಿ

ಮೆಡಲುಗಳು ಮತ್ತು ಬಹುಮಾನಗಳನ್ನು ಪಡೆದವರು.

ರಾಜಧಾನಿಯಲ್ಲಿ ನಡೆದ ಮೈಸೂರು ಯೂನಿವರ್ಸಿಟಿ ಕಾನ್ವೊಕೇಷನ್ ವಾರ್ಷಿಕಸಭೆಯಲ್ಲಿ ಕಳೆದ ವರುಷದ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಹೆಚ್ಚು ನಂಬರುಗಳನ್ನು ಪಡೆದ ವಿದ್ಯಾರ್ಥಿಯರಿಗೂ ಯೂನಿವರ್ಸಿಟಿ ಅಧಿಕಾರಿಗಳು ಶ್ರೀಮದ್ಯುವರಾಜರವರ ಹಸ್ತ ಮೆಡಲುಗಳನ್ನು ಮತ್ತು ಬಹುಮಾನಗಳನ್ನು ಕೊಡಿಸಿದರು. ಅವನ್ನು ಪಡೆದವರು ಯಾರೆಂದರೆ—

ಮೆಡಲುಗಳು.

ಎಂ.ಎ. ಪರೀಕ್ಷೆಯಲ್ಲಿ—(1) ಸರ್ ಹ್ಯೂಡೇಲಿ, (2) ಮ|| ಎಚ್. ವಿ. ನಂಜುಂಡಯ್ಯ, (3) ಸರ್ ಎಂ. ಕಾಂತರಾಜ ಅರ್ಸ್, ಈ ಮೂರು ಮೆಡಲುಗಳೂ ಮ|| ಸಿ. ನರಸಿಂಹಮೂರ್ತಿಯವರಿಗೆ; ನವೀನಂ ರಾಮಾನುಜಾಚಾರ್ಯರ ಮೆಡಲು ಮ|| ಸಿ. ಕೆ. ರಂಗನಾಥಾಚಾರ್ರಿಗೆ; ಪ್ರಧಾನಶಿರೋಮಣಿ ಟಿ. ಆನಂದರಾಯರ ಮೆಡಲು ಮ|| ಕೆ. ಗೋಪಿನಾಥರಾಯರಿಗೆ.

ಬಿ.ಎ. (ಆನರ್ಸ್)ಪರೀಕ್ಷೆಯಲ್ಲಿ—ನವೀನಂ ರಾಮಾನುಜಾಚಾರ್ಯರ ಮತ್ತು ಪೂರ್ಣ ಕೃಷ್ಣರಾಯರ ಮೆಡ್ಲುಗಳು ಮ|| ಎಸ್. ಸುಬ್ಬರಾಯರಿಗೆ; ಕೋಣೆ ಸಿದ್ಧಪ್ಪನವರ ಮೆಡಲು ಮ|| ಕೆ. ದೊರೆಸ್ವಾಮಿಯವರಿಗೆ; ಪೂರ್ಣ ಕೃಷ್ಣರಾಯರ ಮೆಡಲು ಮ|| ಆರ್. ಗುರುರಾಜಾಚಾರ್ಯರಿಗೆ; ಚಾಂದಿ ಮೆಡ್ಲು ಮ|| ಎಸ್. ವೆಂಕಟದೇಶಿಕಾಚಾರ್ರಿಗೆ; ಶ್ರೀ ಬಾಲಾಮಣಿ ಮೆಡ್ಲು ಮ|| ಎಂ. ಶ್ರೀನಿವಾಸಮೂರ್ತಿಯವರಿಗೆ.

ಬಿ.ಎ. ಪರೀಕ್ಷೆಯಲ್ಲಿ—(1) ಸರ್ ಹ್ಯೂಡೇಲಿ. (2) ಅಲಮೇಲಮ್ಮಾಳ್ ಎಚ್. ರಾಮಾನುಜಯ್ಯಂಗಾರ್, (3) ಸಕಲೇಶಪುರ ಷಾಪ್ ಸಿದ್ದೇಗೌಡ್ರ, ಈ ಮೂರು ಮೆಡ್ಲುಗಳೂ ಮ|| ಟಿ. ಸುಬ್ಬರಾಯರಿಗೆ; ಸರ್ ಪಿ. ಎನ್. ಕೃಷ್ಣಮೂರ್ತಿ ಮೆಡ್ಲು ಮ|| ಎ. ಎಸ್. ವೆಂಕಟರಾಯರಿಗೆ; ಶ್ರೀಮದ್ಯುವರಾಜರ ಮೆಡಲು ಮಿ|| ಬಿ. ಅಬ್ದುಲ್ ಜಬ್ಬಾರ್‌ಯವರಿಗೆ; ಸರ್ ಶೇಷಾದ್ರಿ ಮೆಡ್ಲು ಮತ್ತು ಷಾ ಚುಮ್ಮನ್ಮಲ್ ದುಂಗಾಜಿ ಮೆಡ್ಲು ಸಹ ಮ|| ಎಚ್. ಚೆಳ್ಳಣ್ಣನವರಿಗೆ; ಬಿಯರ್ ಮೆಡ್ಲು ಮ|| ಬಿ. ಎಸ್. ರಾಮರಾಯರಿಗೆ; ಶ್ರೀ ಲಕ್ಷ್ಮಮ್ಮ ಮೆಡ್ಲು ಶ್ರೀ ಎಸ್. ಎನ್. ರತ್ನಮ್ಮನವರಿಗೆ; ಬಿ. ಕೆ. ಶ್ರೀನಿವಾಸಯ್ಯಂಗಾರ್ರ ಮೆಡ್ಲು ಮ|| ಎಸ್. ದಿವಾಕರಯ್ಯನವರಿಗೆ.

ಎಂ.ಎಸ್‌ಸಿ. ಪರೀಕ್ಷೆಯಲ್ಲಿ—ಪೂರ್ಣ ಕೃಷ್ಣರಾವ್ ಮೆಡ್ಲುಗಳಲ್ಲಿ ಒಂದು ಮ|| ಎ. ಚಂದ್ರಶೇಖರಯ್ಯನವರಿಗೆ, ಇನ್ನೊಂದು ಮ|| ಯು. ಎಸ್. ಕೃಷ್ಣರಾಯರಿಗೆ.

ಬಿ.ಎಸ್.ಸಿ. (ಆನರ್ಸ್) ಪರೀಕ್ಷೆಯಲ್ಲಿ—ಹನುಮಂತಪ್ಪ ಮೆಡಲು ಮ|| ಕೆ. ಶ್ರೀನಿವಾಸಮೂರ್ತಿಯವರಿಗೆ; ನಗರ ಮಂಜೈ ಅಡುಹರ ಮೆಡ್ಲು ಮ|| ಪಿ.ಎ. ರಾಮಕೃಷ್ಣ ಅಯ್ಯರಿಗೆ.

ಬಿ.ಎಸ್.ಸಿ. ಪರೀಕ್ಷೆಯಲ್ಲಿ—ಎಚ್. ರಾಮಾನುಜಯ್ಯಂಗಾರ್ಯರ ಮೆಡ್ಲು ಮ|| ಎಲ್. ಎಸ್. ಗುರುರಾಜಾಚಾರ್ರಿಗೆ; ಶ್ರೀ ಲಕ್ಷ್ಮೀದೇವಮ್ಮ ಮೆಡ್ಲು ಮ|| ಎಂ. ಆರ್. ಗೋವಿಂದರಾಜಯ್ಯಂಗಾರ್ರಿಗೆ.

ಬಿ.ಇ. ಪರೀಕ್ಷೆಯಲ್ಲಿ—ಬಿ. ವಿ. ಕೃಷ್ಣಯ್ಯಂಗಾರ್ರ ಮೆಡ್ಲು ಮ|| ಎಂ. ಎಸ್. ವೆಂಕಟರಾಮಯ್ಯನವರಿಗೆ; ಬಿ. ಬಿ. ಗರುಡಾಚಾರ್ರ ಮೆಡ್ಲು ಮ|| ಎಂ. ಶೇಷಾದ್ರಯ್ಯಂಗಾರ್ರಿಗೆ.

ಎಂ.ಬಿ.ಬಿ.ಎಸ್. ಪರೀಕ್ಷೆಯಲ್ಲಿ—ಆರುಮುಗಂ ಮೆಡ್ಲು ಮ|| ಬಿ. ಕೆ. ಸುಬ್ಬರಾಯರಿಗೆ; ಟಿ. ಆರ್. ಎ. ತಂಬುಚೆಟ್ಟಿ ಮೆಡ್ಲು ಮ|| ಎಚ್. ವಿ. ಕಂಠಯ್ಯನವರಿಗೆ; ಬೇಲಿ ವೆಂಕೋಬರಾಯರ ಮೆಡ್ಲು ಮ|| ಟಿ. ಪ್ರಸನ್ನಸಿಂಹರಾಯರಿಗೆ.

ಬಹುಮಾನಗಳು.

ಭಾಸ್ಕರಮ್ಮಾಳ್ ಬಹುಮಾನ ಮ|| ಎಚ್. ಚೆಳ್ಳಣ್ಣನವರಿಗೆ, ವಾಟರ್ಸ್ ಬಹುಮಾನ ಮ|| ಕೆ. ನಾಗಭೂಷಣರಾಯರಿಗೆ, ಅನ್ನಪೂರ್ಣಮ್ಮ ಬಹುಮಾನ ಶ್ರೀ ಎಸ್. ಎನ್. ರತ್ನಮ್ಮನವರಿಗೆ, ಭಾಭಾ ಬಹುಮಾನಗಳು ಮ|| ಇ. ಎ. ಪಸ್ಸನ್ನಾಯವರಿಗೆ, ಟಿಯಿಟ್ ಬಹುಮಾನ ಮ|| ಬಿ. ಎಸ್. ರಾಮಣ್ಣನವರಿಗೆ, ವಿ. ರಂಗಸ್ವಾಮಯ್ಯಂಗಾರ್ರ ಬಹುಮಾನ ಮ|| ಬಿ. ಆರ್. ನಾರಾಯಣಯ್ಯಂಗಾರ್ರಿಗೆ, ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಬಹುಮಾನವೂ ಪಿ. ಅಕ್ಕಯ್ಯಮ್ಮ ಬಹುಮಾನವೂ ಶ್ರೀ ನರಸಮ್ಮನವರಿಗೆ, ಮೈಸೂರು ಫ್ರೀಮೇಸನ್ ಲಾಡ್ಜ್ ಜ್ಯೂಬಿಲಿ ಬಹುಮಾನ ಒಂದು ಮ|| ಎ. ರಂಗಸ್ವಾಮಿಯವರಿಗೆ, ಇನ್ನೊಂದು ಮ|| ಎಚ್. ವಿ. ಕಂಠಯ್ಯನವರಿಗೆ, ಎನ್. ಎಸ್. ಸುಬ್ಬರಾವ್ ಬಹುಮಾನ ಮ|| ಎಂ. ಶ್ರೀನಿವಾಸಮೂರ್ತಿಯವರಿಗೆ, ಮೈಸೂರು ಗವರ್ನಮೆಂಟ್ ಫಿಜಿಕಲ್ ಸೈನ್ಸ್ ಬಹುಮಾನ ಒಂದು ಮ|| ಬಿ. ನಾಗೇಶರಾಯರಿಗೆ, ಇನ್ನೊಂದು ಬಹುಮಾನ ಮ|| ಕೆ. ಸುಬ್ಬರಾಮಯ್ಯನವರಿಗೆ.

ರಂಗೂನಿನಲ್ಲಿ ಗುಂಟವೆಂಬ ಊರಿನ ಬಳಿ ಹೋಗುತ್ತಿದ್ದ ಮೋಟಾರ್‌ಬಸ್ ಎದುರಿಗೆ ಸುಮಾರು 9 ಅಡಿ ಇದ್ದ ನಾಗರಹಾವು ಬಂದು 3 ಅಡಿ ಎತ್ತರ ಎದ್ದು ನಿಂತದ್ದರಿಂದ ಡ್ರೈವರು ಹೆದರಿ ಗಾಡಿ ನಿಲ್ಲಿಸಿದನು ಪ್ರಯಾಣಿಕರಲ್ಲಿ ಕೆಲವರು ಹೆದರಿ ಓಡಿದರು. ಮತ್ತೆ ಕೆಲವರು ಧೈರ್ಯಮಾಡಿ ಕಲ್ಲು, ದೊಣ್ಣೆಗಳಿಂದ ಅದನ್ನು ಹೊಡೆದು ಕೊಂದರು.

ಶ್ರೀ ಜಗದ್ಗುರು ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ ಶ್ರೀ ಚಿದ್ಘನಲಿಂಗ ರಾಜ ಶಿವಾಚಾರ್ಯಮಹಾಸ್ವಾಮಿಗಳವರ

ದಸರಾಮಹೋತ್ಸವ.

ಬಳ್ಳಾರಿಜಿಲ್ಲಾ ಆದವಾನಿ ಟವನ್ನಿನ ಗುರುಭಕ್ತರ ಪ್ರಾರ್ಥನಾನುಸಾರವಾಗಿ ಪ್ರತಿನಿತ್ಯವೂ ಸನ್ನಿಧಿಯಲ್ಲಿ ಭಕ್ತಾದಿಗಳಿಗೆ ಸದ್ಬೋಧೆಯು ನಡೆಯುತ್ತಿರುವುದು. ತಾ|| 17 ನೆಯ ಬುಧವಾರ ಪ್ರಾತಃಕಾಲ ಸಂಸ್ಥಾನದ ಪದ್ಧತಿಪ್ರಕಾರ ಗಜಾಶ್ವಾಯುಧಾದಿಗಳ ಪೂಜೆಯು ನೆರವೇರಿತು. ೪ ಘಂಟೆಗೆ ಸರಿಯಾಗಿ ಶ್ರೀಮಹಾಸ್ವಾಮಿಯು ತಮ್ಮ ವಾಸಸ್ಥಾನದಿಂದ ಸಕಲ ಬಿರುದುಗಳೊಡನೆ ಪೇಟೆ ಶ್ರೀ ವೀರಭದ್ರಸ್ವಾಮಿಯ ದೇವಸ್ಥಾನದ ಮಾರ್ಗವಾಗಿ ಹೊರಟು ಶಮೀವೃಕ್ಷದ ಬಳಿಗೆ ದಯಮಾಡಿಸಿ ಪೂಜಾದಿಗಳು ನೆರವೇರಿ ಶಮೀಸಮರ್ಪಣವಾಯಿತು. ಅನಂತರ ಶ್ರೀಗಳವರು ಶಮೀಮಹಿಮೆಯನ್ನು ಸಮಸ್ತ ಗುರುಭಕ್ತಸಮುದಾಯಕ್ಕೆ ಅಪ್ಪಣೆಕೊಡಿಸಿ ಸರ್ವರನ್ನೂ ಸಂತೋಷಭರಿತರನ್ನಾಗಿ ಮಾಡಿದರು.

ಓರ್ವ ಗುರುಭಕ್ತ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪಿಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಪೋಸ್ಟ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ ಶ್ರೀಮನ್ಮಹಾರಾಜಾಧಿರಾಜ **ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 51

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸಮ್ಮೇಳನದ ಕಾರ್ಯನಿರ್ವಾಹಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೦—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪಕಲಾ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[45] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ನವಂಬರ್ ೧೯೩೪ [ಸಂಚಿಕೆ ೨೭

ವರ್ತಕರಲ್ಲಿ ವಿಜ್ಞಾಪನೆ.

ಶಿವಮೊಗ್ಗ ಡಿಸ್ಟ್ರಿಕ್ಟು ಕುಂಶಿ ತಾಲ್ಲೂಕು ಹಾರ್ನಹಳ್ಳಿಯ ವರ್ತಕರುಗಳು ವ್ಯಾಪಾರಾಭಿವೃದ್ಧಿಗೋಸ್ಕರ ಮಾಡಿಕೊಂಡ ಏರ್ಪಾಟುಗಳು—

ಮೇಲ್ಕಂಡ ಹಾರ್ನಹಳ್ಳಿಗೆ ರೈಲ್ವೆ ಕನೆಕ್ಷನ್ನು ಇರುವುದರಿಂದ ತರೀಕೆರೆ, ಶಿವಪುರ, ದಾವಣಗೇರಿ, ಶಿವಮೊಗ್ಗ ಅರಸಿಕೆರೆ ಮುಂತಾದ ಸ್ಥಳಗಳ ಸಂತೆಯಿಂದ ಖರೀದಿಯಾದ ಮಾಲು ಇಲ್ಲಿಗೆ ಶನಿವಾರ ಬೆಳಗಿನ ಗೂಡ್ಸಿಗೆ ಎಲ್ಲಾ ಮಾಲು ಅಂದರೆ ಕಾಯಿ, ಕೊಬರಿ, ಧನಿಯ, ಈರುಳ್ಳಿ, ಬೆಳ್ಳುಳ್ಳಿ, ಗೋಧಿ, ಜೋಳ ಮುಂತಾದ ಎಲ್ಲಾ ದಿನಸು ಸಹ ಬರಲು ಅನುಕೂಲವಾಗಿರುತ್ತದೆ. ಈಗ ಹಾಲಿ ಆ ಕಡೆಗೆ ಮಾಲು ಬರುತ್ತಲೂ ಇದೆ. ಆದ್ದರಿಂದ ನ್ಯಾಮತಿ ಮತ್ತು ಹೊನ್ನಾಳಿ ಮಲೆಬೆನ್ನೂರು ಆ ಕಡೆ ಪ್ರಾಂತ್ಯದವರು ತಮ್ಮಲ್ಲಿರುವ ಮಾಲು ವಿಕ್ರಯಮಾಡಿಕೊಂಡು ತಮಗೆ ಬೇಕಾದ ಮಾಲು ತೆಗೆದುಕೊಂಡು ಹೋಗಲಿಕ್ಕೂ ಶನಿವಾರ ದಿವಸವು ಅನುಕೂಲವಾಗಿರುತ್ತದೆ ಮತ್ತು ಸಾಗರ ತೀರ್ಥಹಳ್ಳಿ, ಕಲ್ಲೂರುಕಟ್ಟೆಯವರೆಗೂ ಸಹ ತಮ್ಮಲ್ಲಿರುವ ಅಡಕೆ ಮುಂತಾದ ಸರಕುಗಳನ್ನು ತಂದು ಮಾರಿ ಬೇಕಾದ ಸರಕು ಒಯ್ಯಲಿಕ್ಕೆ ಅನುಕೂಲವಾಗಿರುತ್ತದೆ ಇಲ್ಲಿ ರೈಲ್ವೆ ಕನೆಕ್ಷನ್ನು ಇರುವುದರಿಂದ ಖರೀದಿಯಾದ ಮಾಲನ್ನು ರವಾನಿಸಿಕೊಂಡು ಹೋಗುವುದಕ್ಕೆ ಬಹಳಅನುಕೂಲವಾಗಿರುತ್ತದೆ. ಅಲ್ಲದೆ ಇದೇರೀತಿ ಅರಸೀಕೆರೆ ಮುಂತಾದ ಸ್ಥಳಗಳಲ್ಲಿ ವರ್ತಕರುಗಳು ವ್ಯಾಪಾರಾಭಿವೃದ್ಧಿಗೋಸ್ಕರ ಏರ್ಪಡಿಸಿಕೊಂಡಿದ್ದರೆ ಮತ್ತು ಖರೀದಿ ಮಾಡುವವರಿಗೂ ವಿಕ್ರಯಮಾಡುವವರಿಗೂ ತುಂಬಾ ಅನುಕೂಲ, ಆದ್ದರಿಂದ ಮೇಲೆ ಕಂಡ ಶನಿವಾರ ದಿವಸ ವರ್ತಕಮಹಾಶಯರೆಲ್ಲರೂ ಪ್ರೋತ್ಸಾಹಕೊಟ್ಟು ವ್ಯಾಪಾರವನ್ನು ಹೆಚ್ಚಿಸಿ ಲಾಭಪಡೆಯಬೇಕಾಗಿ ಕೋರುತ್ತೇವೆ—ಇದಕ್ಕೆ ಪಂಚಾಯಿತಿಯವರು ಸಹ ಬೇಕಾದ ಸಲಕರಣೆಯನ್ನು ಒದಗಿಸಿಕೊಡಲು ಕುತೂಹಲವುಳ್ಳವರಾಗಿರುತ್ತಾರೆ. ಇದರಂತೆ ಜನವರಿ ತಿಂಗಳಿಂದ ಮುಂದುವರಿಸಬೇಕಾಗಿ ಕೋರಿಕೆ.

ಓರ್ವ ವರ್ತಕ.

ಶ್ರೀ ಪಂಚಾಚಾರ್ಯಾಃ ಪ್ರಸೀದಂತು.

ಯೂನಿಯನ್ ಪಂಚಾಯತಿ ಬೋರ್ಡ್ ಪ್ರೆಸಿಡೆಂಟರವರ ಚುನಾವಣೆ, ಹುವ್ವಿನಹಡಗಲಿ.

ತಾ|| ೯-೧೧-೧೯೩೪ ನೇ ಶುಕ್ರವಾರ ಸಾಯಂಕಾಲ 5 ಘಂಟೆಗೆ ನಿಶ್ಚೈಸಿದ ಪ್ರಕಾರ ಎಲ್ಲಾ ಮೆಂಬರು ಪುರಪ್ರಮುಖರೂ ಆಫೀಸಿನಲ್ಲಿ ಸೇರಿದ್ದರು. ಪ್ರೆಸಿಡೆಂಟರವರ ಅಧ್ಯಕ್ಷತೆಯಲ್ಲಿ ಎಲ್ಲಾ ಮೆಂಬರುಗಳು ರಾಜಭಕ್ತಿಯನ್ನು ತೋರ್ಪಡಿಸಿ ಪ್ರಮಾಣವನ್ನು ಮಾಡಿದರು. ಅನಂತರ ಪ್ರೆಸಿಡೆಂಟರವರು ಕ್ಯಾಂಡಿಡೇಟರಾಗಿ ನಿಲ್ಲುವವರಿದ್ದುದರಿಂದ ಸದರಿ ಸಭೆಗೆ ಮ|| ರಾ|| ಗಂಗಾಪುರ ಮಠದ ಗವಿಯಯ್ಯನವರನ್ನು ಪ್ರೆಸಿಡೆಂಟರನ್ನಾಗಿ ಮಾಡಿದರು. ಮ|| ರಾ|| ಶ್ರೀಮಂತ ಸೊಪ್ಪಿನ ಮಲ್ಲಪ್ಪನವರೇ ಪ್ರೆಸಿಡೆಂಟರಾಗಬೇಕೆಂದು ಮ|| ರಾ|| ಡಂಬಳ ಭಂಗಾರಶೆಟ್ಟರವರು ಪ್ರಪೋಜ್ ಮಾಡಿದರು. ಮ|| ರಾ|| ಗಂಗಾವತಿ ಪಂಪಾಪತಪ್ಪನವರು, ಮ|| ರಾ|| ಜವಳಿ ಮೃತ್ಯುಂಜಯಪ್ಪನವರು ಸೆಕೆಂಡ್ ಮಾಡಿದರು. ಬಳಿಕ ಸರ್ವಾನುಮತದಿಂದ ಮ|| ರಾ|| ಶ್ರೀಮಂತ ಸೊಪ್ಪಿನ ಮಲ್ಲಪ್ಪನವರೇ ಪ್ರೆಸಿಡೆಂಟರಾಗಿ ಆರಿಸಿಬಂದರು. ತರುವಾಯ ಮ|| ರಾ|| ಡಂಬಳ ಭಂಗಾರಶೆಟ್ಟರು ವೈಸ್‌ಪ್ರೆಸಿಡೆಂಟರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಸರ್ವರೂ ಏಕಮತ್ಯದಿಂದ ಗ್ರಾಮಾಭಿವೃದ್ಧಿಕಾರ್ಯಗಳನ್ನು ಮಾಡುತ್ತಿರುವದು ಸ್ತುತ್ಯವಾಗಿದೆ. ಹಿಂದೆ ನಡೆಸಿದಂತೆ ಗ್ರಾಮದ ಭಾವಿ, ರಸ್ತೆ, ದೀಪಗಳನ್ನು ಅಭಿವೃದ್ಧಿಗೆ ತರುವುದಲ್ಲದೆ ಪುರಜನರ ಸಂತೋಷಕ್ಕಾಗಿಯೂ ಗ್ರಾಮದ ಶೋಭೆಕ್ಕಾಗಿಯೂ ಮ|| ರಾ|| ಶೆಟ್ಟರವರು ಗ್ಯಾಸ್‌ಲೈಟ್ ಕಂಬಗಳ ಯುಕ್ತವಾಗಿ ಗ್ರಾಮವನ್ನು ಅಲಂಕರಿಸುವರೆಂದು ನಂಬಿರುತ್ತೇವೆ. ಇಂಥ ಅನೋಘವಾದ ಕಾರ್ಯಗಳು ಹಿಂದೆ ಯಾವ ಪ್ರೆಸಿಡೆಂಟರಿಂದಲೂ ಆಗಿಲ್ಲ, ಆದ್ದರಿಂದ ಇವರು ಗ್ಯಾಸ್‌ಲೈಟನ್ನು ಇಟ್ಟುಮಾಡಿ ಪುರಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿ ಅಪಾರವಾದ ಕೀರ್ತಿಯನ್ನು ಸಂಪಾದಿಸುವರೆಂದು ಹಾರೈಸುವ,

ಓರ್ವ ಗ್ರಾಮನಿವಾಸಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀ ಧನಲಕ್ಷ್ಮೀ ಪೂಜಾಮಹೋತ್ಸವ.

ಶಿವಮೊಗ್ಗ ಡಿ|| ಆಯನೂರು ಗ್ರಾಮದ ಮಹಾಜನರ ಪ್ರೋತ್ಸಾಹದಿಂದ ನೂತನವಾಗಿ ಸ್ಥಾಪಿಸಲ್ಪಟ್ಟಿರುವ ಶ್ರೀ ರೇಣುಕೇಶ್ವರ ರೈಸ್‌ಮಿಲ್ಲಿನ ಆವರಣದಲ್ಲಿ ಇದೇ ಭಾವನಾಮ ಸಂ|| ಅಶ್ವಯುಜ ಬ|| ೩೦ (ತಾ|| 6-11-34) ಮಂಗಳವಾರ ಸಾಯಂಕಾಲ 7 ಘಂಟೆಗೆ ಧನಲಕ್ಷ್ಮೀ ಪೂಜಾಕಾರ್ಯವು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಆಹೂತರಾದ ಸಮಸ್ತ ಮಹಾಜನರಿಗೂ ಗಂಧಪುಷ್ಪತಾಂಬೂಲಾದಿಗಳನ್ನಿತ್ತು ಗೌರವಿಸಿದ ತರುವಾಯ ಸದರಿ ರೈಸ್‌ಮಿಲ್ಲಿನ ಮಾಲೀಕರಾದ ನ್ಯಾಮತಿ ಸಾ|| ತುರಿಕಡಲಿ ಸಣ್ಣವಿರುಪಣ್ಣನವರ ಪ್ರಾರ್ಥನೆಯಂತೆ ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು "ರೇಣುಕವಿಜಯ" ಎಂಬ ಕೀರ್ತನೆಯನ್ನು ಮೂರು ಘಂಟೆಗಳ ವರೆಗೆ ಅನುವಾದ ಮಾಡಿ ವಿರಮಿಸಿದರು. ಉಳಿದ ಭಾಗವನ್ನು ತಾ|| 8-11-34 ಗುರುವಾರ ರಾತ್ರಿ 9 ಘಂಟೆಯಿಂದ ಪ್ರಾರಂಭಿಸಿ ಸುಮಾರು 6 ಘಂಟೆಗಳ ವರೆಗೂ ನಡೆಯಿಸಿ, ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಮಾಪ್ತಿಗೊಳಿಸಿದರು. ಬಳಿಕ ಈ ಸಮಾರಂಭದ ಜ್ಞಾಪಕಾರ್ಥವಾಗಿ ಕಾರ್ಯಕರ್ತೃಗಳಿಂದ ಪ್ರಭಾಪೋಷಣಕ್ಕಾಗಿ ೧ ರೂ. ಯು ಶಾಸ್ತ್ರಿಗಳ ವಶಕ್ಕೆ ಸಮರ್ಪಿಸಲ್ಪಟ್ಟಿತು. ಶ್ರೀ ಗುರುಸಾರ್ವಭೌಮರ ಅದ್ಭುತ ಲೀಲೆಗಳನ್ನು ೯ ಘಂಟೆಗಳ ವರೆಗೆ ಅನೇಕ ಲೌಕಿಕ, ಪಾರಮಾರ್ಥಿಕ ವಿಚಾರಗಳಿಂದ ಸ್ವಮತ ಪರಮತದ ಆಬಾಲವೃದ್ಧರೂ ಸಂತೋಷಗೊಳ್ಳುವಂತೆ ಮಾಡಿದ ಶಾಸ್ತ್ರಿಗಳವರ ಸ್ವಾನುಭವವೂ, ಸಮಯೋಚಿತ ವಾಕ್ಚಾತುರ್ಯವೂ ಜನಚಿತ್ತಾಕರ್ಷಣನೈಪುಣ್ಯವೂ ಅತ್ಯಂತ ಶ್ಲಾಘನೀಯವಾಗಿವೆ. ಇಂತಹ ಮಹಾಮಹಿಮರ ಲೀಲಾಶ್ರವಣಾನಂದ ಸುಯೋಗವನ್ನು ನಮ್ಮಗಳಿಗೆ ದೊರಕಿಸಿಕೊಟ್ಟು ಕೃತಾರ್ಥರನ್ನಾಗಿ ಮಾಡಿದ ಸಾ|| ಸಣ್ಣವಿರುಪಣ್ಣನವರಿಗೂ ಇವರ ಅಶೇಷ ಕುಟುಂಬವರ್ಗಕ್ಕೂ ಶ್ರವಣೇಚ್ಛುಗಳಾಗಿ ಆಗಮಿಸಿದ್ದ ಮಹಾಜನರಿಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರು ಪರಮಸೌಖ್ಯವನ್ನೀಯಲೆಂದು ಹಾರೈಸುವ,

ಓರ್ವ ಗುರುಚರಣಸೇವಾನಿರತ.

ಸ್ವೀಕಾರ

ಬಳ್ಳಾರಿ ಡಿ|| ಹುವ್ವಿನಹಡಗಲಿ ಯೂನಿಯನ್ನಿಗೆ ಮ|| ರಾ|| ಸೊಪ್ಪಿನ ಮಲ್ಲಪ್ಪನವರು ಅಧ್ಯಕ್ಷರಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಯು ಮ|| ಗುಗ್ಗರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗಾ ಡಿ|| ಹಾರ್ನಹಳ್ಳಿಯಲ್ಲಿರುವ ಮ|| ರಾ|| ಎಸ್. ಎಸ್. ಗಂಗಾಧರಪ್ಪನವರು ತಮ್ಮ ಅಂಗಡಿಯಲ್ಲಿ ಧನಲಕ್ಷ್ಮೀಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಶಿವಮೊಗ್ಗಾ ಡಿ|| ಆಯನೂರಲ್ಲಿರುವ ಶ್ರೀ ರೇಣುಕೇಶ್ವರ ರೈಸ್‌ಮಿಲ್ಲಿನ ಮಾಲಕರಾದ ಮ|| ರಾ|| ಸಣ್ಣವಿರುಪಣ್ಣನವರು ಧನಲಕ್ಷ್ಮೀ ಪೂಜೆಯಲ್ಲಿ ಸಮರ್ಪಿಸಿದ 1 ರೂ. ಯು ಗುಬ್ಬಿ ಶಿವರುದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಾಲಕೊಡದಿದ್ದುದಕ್ಕಾಗಿ ಉಪವಾಸ!

ಲಾಹೋರಿನಲ್ಲಿ ಕಾನೂನುಭಂಗದ ಚಳವಳಿಯಲ್ಲಿ ಭಾಗವಹಿಸಿದ್ದ 74 ವರ್ಷದ ಒಬ್ಬ ಬ್ರಾಹ್ಮಣಪಂಡಿತನು ಒಬ್ಬ ಸಾಹುಕಾರನಲ್ಲಿ ಸಾಲತೆಗೆದುಕೊಳ್ಳಬೇಕೆಂದು ಮಾತುಕತೆಗಳು ನಡೆದು ಸಾಹುಕಾರನು ಒಪ್ಪಿಕೊಡದಿದ್ದುದರಿಂದ ಇದೇ ತಿಂಗಳು 12ನೇ ತಾರೀಖಿನಿಂದ ಸಾಯುವವರೆಗೂ ಉಪವಾಸವ್ರತವನ್ನು ಮಾಡುವೆನೆಂಬ ಪ್ರತಿಜ್ಞೆಯನ್ನು ಮಾಡಿ ಉಪವಾಸ ಮಾಡಲಾರಂಭಿಸಿರುತ್ತಾನೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ.
ಬೆಂಗಳೂರು.
ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ.
ಶ್ರೀಕ್ಷೇತ್ರಕಾಶೀ.

ವ್ಯಾಯಾಮ.

ಸಂಸಾರದಲ್ಲಿ ಹುಟ್ಟಿದ ಪ್ರತಿಯೊಂದು ಪ್ರಾಣಿಗೂ ಬಲವೆಂಬುದು ಆತ್ಮರಕ್ಷಣೆಗೆ ಮುಖ್ಯಸಾಧನವಾಗಿದೆ. ಬಲದ ಪ್ರಭಾವದಿಂದಲೇ ಸಕಲಪ್ರಾಣಿಗಳೂ ತಮ್ಮ ಶರೀರವನ್ನು ವಿಪತ್ತಿನಿಂದ ರಕ್ಷಿಸಿಕೊಳ್ಳುವುವು. ಬಲದ ಮಹಿಮೆಯಿಂದಲೇ ಸಕಲದೇಶಗಳು ತಮ್ಮ ತಮ್ಮ ಅರ್ಥಿಕೋನ್ನತಿಯನ್ನು ಬೆಳೆಸಿಕೊಂಡು ಜಗತ್ತಿನಲ್ಲಿ ಸರ್ವೋನ್ನತಗಳಾಗಿ ಮೆರೆಯುವುವು. ಬಲದಿಂದಲೇ ವಿದ್ಯೆ ಧನ ಪ್ರಭುತ್ವ ಮೊದಲಾದ ಸಂಪತ್ತುಗಳ ನಿಜವಾದ ಸುಖವು ದೊರೆಯುವುದು. ಬಲವಂತನಿಗಾಗಿಯೇ ಸಕಲಸಂಪತ್ತುಗಳೂ ನಿರ್ಮಿತಗಳಾಗಿರುವುವು. ಬಲಶಾಲಿಯೇ ಲೋಕದಲ್ಲಿ ಸರ್ವಮಾನ್ಯನಾಗುವನು. ಬಲಹೀನನನ್ನು ಸಕಲಸಂಪತ್ತುಗಳೂ ಬಿಟ್ಟೋಡುವುವು. ನಿರ್ಬಲನು ಜಗತ್ತಿನಲ್ಲಿ ಯಾವ ಸುಖವನ್ನೂ ಹೊಂದಲಾರನು. ಬಲವಿಲ್ಲದವನಿಗೆ ಜಗತ್ತೇ ಶೂನ್ಯವಾಗಿ ಕಾಣಿಸುವುದು ಬಲದಿಂದಲೇ ಅಲ್ಲವೇ? ಸಿಂಹವು ವನರಾಜ, ಮೃಗರಾಜಗಳೆಂಬ ಸಾರ್ಥಕನಾಮಧೇಯಗಳಿಂದಲಂಕೃತವಾಗಿರುವುದು? ಬಲವಿಲ್ಲದ ನೊಲವು ತಲೆಯನ್ನು ತಪ್ಪಿಸಿಕೊಂಡು ಬಿಲವನ್ನೇ ಅಲಂಕರಿಸಿರುವುದಾಗಿದೆ. ಅಂದಮೇಲೆ ಇಂತಹ ಬಲವನ್ನು ಸಾಧಿಸಿಕೊಡಲು ಯಾವ ವಸ್ತುಗಳು ಸಮರ್ಥವಾಗಿರುವುವೆಂಬುದನ್ನು ವಿಮರ್ಶಿಸಲು ಎಲ್ಲರೂ ಕುತೂಹಲ ಪಡುವರಲ್ಲವೆ? ಯಾರನ್ನಾದರೂ ಬಲಸಾಧಕವಸ್ತುಗಳಾವುವೆಂದು ಕೇಳಿದರೆ ಥಟ್ಟನೆ ಬಾಯಿಂದ ಒಂದೇ ಉಸಿರಿನಲ್ಲಿ ಹಾಲು, ತುಪ್ಪ, ಬಾದಾಮಿ, ಅಕರೋಟು ಮೊದಲಾದ ಬಲವರ್ಧಕವಸ್ತುಗಳ ಹೆಸರನ್ನೇ ಹೇಳಬಹುದಲ್ಲವೆ? ಆದರೆ ಈ ವಸ್ತುಗಳಿಂದ ನಿಜವಾದ ಬಲವುಂಟಾಗಬಹುದೆ? ಇದೇ ಸಂಶಯಾಸ್ಪದವಾಗಿದೆ. ಈ ವಸ್ತುಗಳಿಂದಲೇ ಬಲವುಂಟಾಗುವುದು ಸಹಜವಾಗಿರುವುದಾದರೆ ಈಗ ಜಗತ್ತಿನಲ್ಲಿ ಎಷ್ಟೋ ಶ್ರೀಮಂತರು ನಿತ್ಯದಲ್ಲಿ ಸೇರುಗಟ್ಟಲೆ ಹಾಲನ್ನು ಕುಡಿದರೂ ಸೇರುಗಟ್ಟಲೆ ತುಪ್ಪವನ್ನು ತಿಂದರೂ ಮಣಗಟ್ಟಲೆ ಬಾದಾಮಿ ಅಕ್ರೋಟುಗಳನ್ನು ತಿಂದರೂ ಬಲವೇ ಇಲ್ಲದೆ ಬೊಜ್ಜು ಬೆಳೆಸಿಕೊಂಡು ನಾಲ್ಕು ಹೆಜ್ಜೆಗಳನ್ನೂ ಸಹಾಯವಿಲ್ಲದೆ ಮುಂದಿಡಲು ಸಮರ್ಥರಾಗದೆ ಕಷ್ಟದಿಂದ ಹೇಗೋ ಎಳೆಂಟು ಹೆಜ್ಜೆಗಳನ್ನು ಭೂಮಿಯಲ್ಲಿಟ್ಟಕೂಡಲೆ ಹೃದಯದ ಶ್ವಾಸವು ಬಾಯಿಗೆ ಬಂದು ಉಬ್ಬಸದಿಂದ ಪ್ರಾಣಸಂಕಟವನ್ನನುಭವಿಸುವರೇಕೆ? ಎಷ್ಟೋ ಜನರು ಈ ಬಲವರ್ಧಕ ಪದಾರ್ಥಗಳನ್ನು ಸೇವಿಸಿದರೂ ಆ ಪದಾರ್ಥಗಳ ಸಾರವು ರಕ್ತದಲ್ಲಿ ಸೇರದೆ ಶರೀರವು ದಿನದಿನಕ್ಕೆ ಹುಳಬಿದ್ದ ಗಿಡದಂತೆ ಕಳೆಗುಂದಿ ಒಣಗಿಕೊಂಡೇ ಹೋಗುತ್ತಿರುವುದೇಕೆ? ಎಷ್ಟೋ ಮಂದಿ ಲಕ್ಷ್ಮೀಪುತ್ರರು ನಾನಾವಿಧಪುಷ್ಟಿಕರಗಳಾದ ಆಹಾರಗಳನ್ನು ಎಡೆಬಿಡದೆ ದಿನಕ್ಕೆ ಏಳೆಂಟುಸಲ ಉದರಕೋಟೆದಲ್ಲಿ ತುರುಕಿದರೂ ಅವರ ಶರೀರವು ಕೃಶಾಂಗಿಯರಾದ ಅಬಲೆಯರ ಸುಕುಮಾರ ಶರೀರಕ್ಕಿಂತಲೂ ಸುಕುಮಾರವಾಗಿ ಶರೀರದ ಯಾವ ಭಾಗದಲ್ಲಿಯಾದರೂ ಸ್ವಲ್ಪಮುಟ್ಟಿದರೂ ಹಾ! ಎಂದು ಮೂರುದಿನಗಳವರೆಗೂ ಆಸ್ಥಳವನ್ನು ಮುಟ್ಟಿನೋಡಿಕೊಳ್ಳುತ್ತ ಮಹಾಯುದ್ಧದಲ್ಲಿ ಕೈಕಾಲುಗಳನ್ನು ಮುರಿದುಕೊಂಡು ಹಾಸಿಗೆಯಲ್ಲಿ ಬಿದ್ದು ನರಳುವವನಂತೆ ನರಳುತ್ತಿರುವುದೇಕೆ? ಇವರೆಲ್ಲರೂ ಗಂಟಲಿನ ಕೆಳಗೆ ಬಿಟ್ಟಿರುವ ಆ ಪುಷ್ಟಿಕರಗಳಾದ ಆಹಾರಗಳೆಲ್ಲಾ ಎಲ್ಲಿ ಮಾಯವಾದುವು? ಬಲವನ್ನು ಕೊಡತಕ್ಕ ಹಾಲು ತುಪ್ಪ ಬಾದಾಮಿಗಳು ಯಾವ ಮೂಲೆಯಲ್ಲಿ ಸೇರಿಕೊಂಡಿರುವುವು? ಪಾಠಕರೇ! ಹಾಲು ತುಪ್ಪ ಮೊದಲಾದವೇ ಬಲವರ್ಧಕಗಳೆಂದು ಹೇಳುವವರು ಈ ಮಹನೀಯರಲ್ಲಿ ಬಲದ ಹೆಸರನ್ನಾದರೂ ತೋರಿಸಬಲ್ಲರೆ? ಹಾಗಾದರೆ ಈ ಪದಾರ್ಥಗಳಿಂದಲೂ ಬಲವುಂಟಾಗುವುದಿಲ್ಲವೆಂದು ಹೇಳುವುದಾದರೆ ಜಗತ್ತಿನಲ್ಲಿ ಮನುಷ್ಯ ಶರೀರವನ್ನು ಬಲಶಾಲಿಯನ್ನಾಗಿ ಮಾಡುವ ಮತ್ತಾವುದೋ ಒಂದು ವಿಲಕ್ಷಣ ಪದಾರ್ಥವಿರಬೇಕೆಂದೇ ಸಿದ್ಧವಾಗುತ್ತದೆ ಅದಾವುದು? ಅದೇ! ನಿಮ್ಮ ಹಾಲು ತುಪ್ಪ ಬಾದಾಮಿಗಳೇ ಮೊದಲಾದ ಪುಷ್ಟಿಯ ಪದಾರ್ಥಗಳನ್ನು ಜೀರ್ಣಗೊಳಿಸಿ ಅವುಗಳ ನಿಜವಾದ ಸತ್ವವನ್ನು ರಕ್ತಗತವನ್ನಾಗಿ ಮಾಡಿ ಶರೀರವನ್ನು ಸೌಂದರ್ಯದ ನಿಧಿಯನ್ನಾಗಿಯೂ ಶಕ್ತಿಯ ಭಂಡಾರವನ್ನಾಗಿಯೂ ಮಾಡುವ 'ವ್ಯಾಯಾಮ' ಈ ವ್ಯಾಯಾಮವೇ ನೀವು ಸೇವಿಸುವ ಸಮಸ್ತಾಹಾರವನ್ನೂ ಭಸ್ಮಗೊಳಿಸಿ ನಿಮ್ಮನ್ನು ಬಲದ ಮೂರ್ತಿಯನ್ನಾಗಿ ಮಾಡುವುದು. ಈ ವ್ಯಾಯಾಮವೇ ನಿಮ್ಮ ಉನ್ನತಿಗೆ ಶತ್ರುವಾಗಿರುವ ಆಲಸ್ಯವನ್ನು ಸದೆಬಡಿಯುವುದು. ಈ ವ್ಯಾಯಾಮವೇ ನಿಮ್ಮ ಶಾರೀರಕ ಮಾನಸಿಕಬಲಗಳನ್ನು ದೃಢಗೊಳಿಸಿ ನಿಮ್ಮನ್ನು ಪುರುಷಾರ್ಥಸಂಪಾದನೆಗೆ ಯೋಗ್ಯರನ್ನಾಗಿ ಮಾಡುವುದು. ಬಲವೆಂಬ ಅಮೂಲ್ಯವಸ್ತುವು ಈ ವ್ಯಾಯಾಮದಿಂದಲೇ ಉಂಟಾಗುವುದಲ್ಲದೆ ಮತ್ತಾವ ವಸ್ತುವಿನಿಂದಲೂ ಉಂಟಾಗಲಾರದೆಂಬುವನ್ನು ಎಂದೆಂದಿಗೂ ಮರೆಯಬೇಡಿರಿ.

ಪಶ್ಚಿಮ ದೇಶೀಯರು ವ್ಯಾಯಾಮಕ್ಕೆ ವಿಶೇಷ ಮಹತ್ವವನ್ನು ಕೊಟ್ಟಿರುವರು. ಅವರಲ್ಲಿ ಬಾಲಕರು ಮೊದಲುಗೊಂಡು ವೃದ್ಧರವರೆಗೂ ಯಾವುದೋ ಒಂದು ವ್ಯಾಯಾಮವನ್ನು ನಿತ್ಯದಲ್ಲಿ ಬಿಡದೆ ಮಾಡುತ್ತಾರೆ. ಈ ಕಾರಣದಿಂದಲೇ ಅವರು ಯಾವಾಗಲೂ ಆಲಸ್ಯರಹಿತರೂ ವಿಶೇಷಪರಿಶ್ರಮಿಗಳೂ ಆಗಿ ನಿತ್ಯದಲ್ಲಿ ಒಂದೊಂದು ಹೊಸಹೊಸ ಆವಿಷ್ಕಾರಗಳನ್ನು ತೆಗೆಯುತ್ತಿರುವರು. ವ್ಯಾಯಾಮದ ಪ್ರಭಾವದಿಂದಲೇ ವಿದೇಶೀಯರು ಸಕಲದೇಶಗಳಲ್ಲಿ ನಿರ್ಭಯದಿಂದ ಪ್ರವೇಶಮಾಡಿ ತಮ್ಮ ವ್ಯಾಪಾರವನ್ನು ಹರಡುತ್ತಿರುವರು ವ್ಯಾಯಾಮದಲ್ಲಿ ಜಪಾನ್ ದೇಶದವರು ಬಹಳ ಮುಂದಾಗಿರುವರು. ಆ ದೇಶದಲ್ಲಿ ಒಂದು ವಿಧವಾದ ಅದ್ಭುತ ವ್ಯಾಯಾಮವು ವಿಶೇಷ ಪ್ರಚಾರದಲ್ಲಿರುತ್ತದೆ. ಅದಕ್ಕೆ ಜಪಾನ್ ಭಾಷೆಯಲ್ಲಿ "ಜಿಜಿತ್ಸು" ಎಂಬ ಹೆಸರಿರುತ್ತದೆ. ಆ ವ್ಯಾಯಾಮದ ಬಲದಿಂದ ಒಬ್ಬ ಮನುಷ್ಯನು ತನಗಿಂತಲೂ ಎರಡಷ್ಟು ಬಲವುಳ್ಳವನನ್ನೂ ಒಂದೇ ಸಲ ಸೊಳ್ಳೆಯನ್ನು ಒಸಗಿದಂತೆ ಒಸಗಿಬಿಡುವನು. ಈಗೀಗ ಇಂಗ್ಲೆಂಡಿನವರೂ ಜಪಾನ್ ದೇಶದ "ಜಿಜಿತ್ಸು" ಎಂಬ ವ್ಯಾಯಾಮವನ್ನು ಕಲಿಯಲಿಕ್ಕೆ ಜಪಾನ್ ದೇಶವನ್ನು ಗುರುವನ್ನಾಗಿ ಮಾಡಿಕೊಂಡಿರುವರು. ನೋಡಿದಿರಾ! ಇತರ ದೇಶದವರು ವ್ಯಾಯಾಮಕ್ಕಾಗಿ ಪ್ರತಿವರ್ಷದಲ್ಲಿ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿ ತಮ್ಮ ದೇಶದಲ್ಲಿ ವ್ಯಾಯಾಮದ ಮಹತ್ವವನ್ನು ಸ್ಥಿರಗೊಳಿಸಿಕೊಂಡಿರುವರು. ನಮ್ಮ ಭಾರತೀಯರಾದರೋ, ವ್ಯಾಯಾಮದ ಹೆಸರನ್ನೇ ಮರೆತಿರುವರು. ನಮ್ಮ ಪೂರ್ವಜರಾದರೂ ಈ ವ್ಯಾಯಾಮವನ್ನು ನಿತ್ಯವಿಧಿಯನ್ನಾಗಿ ಮಾಡಿಕೊಂಡಿದ್ದರು. ಈ ವ್ಯಾಯಾಮದ ಬಲದಿಂದಲೇ ಮರಣಪರ್ಯಂತವಾಗಿ ದೃಢಶರೀರಿಗಳಾಗಿ ಸಕಲ ಭೋಗಗಳನ್ನನುಭವಿಸುತ್ತಿದ್ದರು. ಈ ವ್ಯಾಯಾಮದ ಬಲದಿಂದಲೇ ನಮ್ಮ ಪೂರ್ವಜರು ರೋಗದ ಸಂಪರ್ಕದಿಂದ ದೂರರಾಗಿದ್ದರು. ಇಂತಹ ಬಲಶಾಲಿಗಳ ಕೇಂದ್ರಸ್ಥಾನವಾಗಿದ್ದ ಭಾರತದೇಶದಲ್ಲಿ ನಾವು ಜನ್ಮಧಾರಣೆಯನ್ನು ಮಾಡಿದರೂ ಕೆಚ್ಚಲಿನಲ್ಲಿರುವ ಉಣ್ಣೆಯಂತೆ ವ್ಯಾಯಾಮದ ಮಹತ್ವವನ್ನರಿಯದವರಾಗಿರುವೆವಲ್ಲವೆ? ವ್ಯಾಯಾಮದಲ್ಲಿ ಸಕಲ ದೇಶಗಳ ಶಿರೋಮಣಿಯಂತಿದ್ದ ನಮ್ಮ ದೇಶಕ್ಕೆ ಇಂತಹ ದುರವಸ್ಥೆಯು ಬಂದೊದಗಿತಲ್ಲವೆ? ಇದೂ ಒಂದು ಕಾಲಮಹಿಮೆಯೆಂದೇ ಹೇಳಬೇಕಾಗಿದೆ.

ವ್ಯಾಯಾಮವನ್ನು ಮಾಡಬೇಕಾದರೆ ಮೊದಲು ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಯಾವಾಗಲೂ ವಿಷಯಾಸಕ್ತನಾಗಿ ಶಕ್ತಿಗೆ ಮೂಲಭೂತವಾಗಿರುವ ವೀರ್ಯವನ್ನು ಕಳೆಯುತ್ತ ಎಷ್ಟು ವ್ಯಾಯಾಮವನ್ನು ಮಾಡಿದರೂ ದಿನದಿನಕ್ಕೆ ಶರೀರವು ಕ್ಷೀಣವಾಗುವುದೇ ಹೊರತು ವೃದ್ಧಿಯೆಂದೂ ಆಗಲಾರದು. ವ್ಯಾಯಾಮವೆಂಬ ಅನರ್ಘರತ್ನವು ಬ್ರಹ್ಮಚರ್ಯವೆಂಬ ಸುವರ್ಣಕವಚವನ್ನು ಹೊಂದಿದರೇ ತನ್ನ ನಿಜವಾದ ಕಾಂತಿಯನ್ನು ವ್ಯಕ್ತಗೊಳಿಸುವುದು. ಬ್ರಹ್ಮಚರ್ಯವೆಂಬಜಲಧಾರೆಯಿಂದ ವೃದ್ಧಿಗೊಂಡ ವ್ಯಾಯಾಮ ವೃಕ್ಷವು ಮನೋಹರವಾದ ಆರೋಗ್ಯವೆಂಬ ಮಧುರಫಲವನ್ನೀಯುವುದು. ಬ್ರಹ್ಮಚರ್ಯವನ್ನು ರಕ್ಷಿಸಿಕೊಳ್ಳದೆ ಮಾಡಿದ ವ್ಯಾಯಾಮವು ಬೂದಿಯಲ್ಲಿ ಹೋಮವನ್ನು ಮಾಡಿದಂತಾಗುವುದು. ಆದುದರಿಂದ ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ಸಮುಚಿತವಾದ ವ್ಯಾಯಾಮವನ್ನು ಮಾಡುವುದಾದರೆ ಶರೀರವು ದೃಢವೂ ಸೌಂದರ್ಯಯುಕ್ತವೂ ಆಗುತ್ತದೆ.

ಬ್ರಹ್ಮಚರ್ಯವೆಂಬ ವಿಷಯವು ಅತಿಗಂಭೀರವಾಗಿರುವುದರಿಂದ ಇದನ್ನು ಮುಂದಿನ ಪ್ರಕರಣಗಳಲ್ಲಿ ವಿಸ್ತಾರವಾಗಿ ಬರೆಯುವುದಾಗುತ್ತದೆ. ವ್ಯಾಯಾಮಕ್ಕೂ ಬ್ರಹ್ಮಚರ್ಯಕ್ಕೂ ಅತ್ಯಂತ ಸಮೀಪಸಂಬಂಧವಿರುವುದರಿಂದ ಈ ವ್ಯಾಯಾಮಪ್ರಕರಣದಲ್ಲಿ ಅದರ ಸಂಕ್ಷೇಪಸ್ವರೂಪವನ್ನು ಮಾತ್ರ ಬರೆಯುವುದಾಗುತ್ತದೆ.

ಬ್ರಹ್ಮಚರ್ಯದ ಪ್ರಧಾನೋದ್ದೇಶವು ವೀರ್ಯರಕ್ಷಣೆಯೇ ಆಗಿರುವುದು. ವೀರ್ಯದ ಪ್ರಭಾವದಿಂದಲೇ ಮನುಷ್ಯನು ತನ್ನ ಸಕಲೇಷ್ಟಾರ್ಥಗಳನ್ನು ಸಂಪಾದಿಸಿಕೊಂಡು ಸುಖಿಯಾಗುವನು. ವೀರ್ಯವೇ ಶರೀರದ ವೃದ್ಧಿಕ್ಷಯಗಳಿಗೆ ಪ್ರಧಾನಕಾರಣವಾಗಿರುವುದು.

ಆಹಾರಸ್ಯ ಪರಂ ಧಾಮ ಶುಕ್ರಂ ತದ್ರಕ್ಷ್ಯಮಾತ್ಮನಃ|
ಕ್ಷಯೋಹ್ಯಸ್ಯ ಬಹೂನ್ ರೋಗಾನ್ಮರಣಂ ವಾ
ನಿಯಚ್ಛತಿ || ಚ. ನಿ. ಅ. ೬

ವೀರ್ಯವು ನಾವು ಸೇವಿಸುವ ಆಹಾರದ ಕಡೆಯ ಪರಿಣಾಮರೂಪವಾದ ಸಾರವಸ್ತುವಾಗಿದೆ. ಈ ವೀರ್ಯದಿಂದ 'ಓಜ' ಎಂಬ ತೇಜೋರೂಪವಾದ ಸೂಕ್ಷ್ಮ ವಸ್ತುವು ಹುಟ್ಟಿ ಸಮಸ್ತಶರೀರವನ್ನು ವ್ಯಾಪಿಸಿ ಶರೀರದ ಸಕಲಕಾರ್ಯಗಳಿಗೂ ಸಹಾಯವನ್ನುಂಟುಮಾಡುತ್ತದೆ. ಈ ಓಜವು ಎಂದು ಕ್ಷೀಣವಾಗುವುದೋ ಅಂದೇ ಮನುಷ್ಯನು ತನ್ನ ಇಹಲೋಕಯಾತ್ರೆಯನ್ನು ಮುಗಿಸಿಕೊಂಡು ಯಮರಾಜನ ಅತಿಥಿಯಾಗುವನು. ಈ ಓಜಕ್ಕೆ ಕಾರಣವಾದ ವೀರ್ಯವನ್ನು ರಕ್ಷಿಸಿಕೊಳ್ಳದಿದ್ದರೆ ಅನಂತರೋಗಗಳು ಶರೀರವನ್ನಾಕ್ರಮಿಸುವುವು. ವೀರ್ಯವು ಶರೀರವನ್ನು ಹೇಗೆ ವ್ಯಾಪಿಸಿರುವುದೆಂಬುದನ್ನು ಚರಕಸಂಹಿತೆಯ ಚಿಕಿತ್ಸಾಸ್ಥಾನದ ೨ನೆಯ ಅಧ್ಯಾಯದಲ್ಲಿರುವ—

ರಸ ಇಕ್ಷೌ ಯಥಾ ದಧ್ನಿ ಸರ್ಪಿಸ್ತೈಲಂ ತಿಲೇ ಯಥಾ|
ಸರ್ವತ್ರಾನುಗತಂ ದೇಹೇ ಶುಕ್ರಂ ಸಂಸ್ಪರ್ಶನೇ
ತಥಾ ||

ಎಂಬ ಶ್ಲೋಕದಿಂದ ತಿಳಿಯಬಹುದು. ಕಬ್ಬಿನ ಸರ್ವಾಂಗದಲ್ಲಿ ರಸವು ವ್ಯಾಪಕವಾಗಿರುವಂತೆಯೂ ಮೊಸರಿನ ಪ್ರತಿಯೊಂದು ಕಣದಲ್ಲಿ ತುಪ್ಪವು ಸೂಕ್ಷ್ಮರೂಪದಿಂದ ವ್ಯಾಪಿಸಿರುವಂತೆಯೂ ಎಳ್ಳಿನ ಸರ್ವಾವಯವದಲ್ಲಿ ಎಣ್ಣೆಯು ವ್ಯಾಪಿಸಿರುವಂತೆಯೂ ವೀರ್ಯವು ಸಂಪೂರ್ಣ ಶರೀರ ಮತ್ತು ಚರ್ಮದಲ್ಲಿ ವ್ಯಾಪಿಸಿಕೊಂಡಿರುವುದಾಗಿದೆ. ಆದುದರಿಂದ ಹಿತಾಹಾರವಿಹಾರಗಳಿಂದಲೂ ಸದಾಚರಣೆಯಿಂದಲೂ ಶರೀರಧಾರಣೆಗೆ ಮೂಲಕಾರಣವಾದ ವೀರ್ಯವನ್ನು ರಕ್ಷಿಸಿಕೊಳ್ಳುವುದರಲ್ಲಿ ಬಹಳ ಎಚ್ಚರಿಕೆಯಿಂದಿರಬೇಕಾದುದು ಮನುಷ್ಯಮಾತ್ರದ ಪ್ರಥಮಕರ್ತವ್ಯವಾಗಿರುತ್ತದೆ.

ಬ್ರಹ್ಮಚರ್ಯಪರಿಪಾಲನೆ (ವೀರ್ಯರಕ್ಷಣೆ) ಯ ಮೂಲಕವಾಗಿ ಮಾಡಿದ ವ್ಯಾಯಾಮವು ಮನುಷ್ಯನಿಗೆ ಯಾವ ಫಲವನ್ನು ಕೊಡುತ್ತದೆಂಬ ವಿಷಯವು ಆಯುರ್ವೇದ ಗ್ರಂಥಗಳಲ್ಲತಿವಿಸ್ತಾರವಾಗಿ ವರ್ಣಿತವಾಗಿರುತ್ತದೆ.

ಶರೀರೋಪಚಯಃ ಕಾಂತಿರ್ಗಾತ್ರಾಣಾಂ ಸುವಿ
ಭಕ್ತತಾ|
ದೀಪ್ತಾಗ್ನಿತ್ವಮನಾಲಸ್ಯಂ ಸ್ಥಿರತ್ವಂ ಲಾಘವಂ
ಮೃಜಾ|
ಶ್ರಮಕ್ಲಮಪಿಪಾಸೋಷ್ಣಶೀತಾದೀನಾಂ ಸಹಿಷ್ಣುತಾ|
ಆರೋಗ್ಯಂಚಾಪಿ ಪರಮಂ ವ್ಯಾಯಾಮಾದುಪಜಾ
ಯತೇ || ಸು. ಸೂ. ಅ. ೨೪.

ನಿಯಮಪೂರ್ವಕವಾಗಿ ನಿತ್ಯದಲ್ಲಿ ಮಾಡಲ್ಪಡುವ ವ್ಯಾಯಾಮದಿಂದ ಶರೀರದ ಸಕಲಾವಯವಗಳು ಸುಂದರವಾಗಿ ವಿಭಾಗವನ್ನು ಹೊಂದಿ ದೃಢಗಳೂ ಕಾಂತಿವಿಶಿಷ್ಟಗಳೂ ಆಗುವುವು. ಜಠರಾಗ್ನಿಯು ವೃದ್ಧಿಗೊಂಡು ಆಹಾರದ ರಸವು ಶರೀರದಲ್ಲಿ ವ್ಯಾಪಿಸಿ ಚಟುವಟಿಕೆ, ಕಾರ್ಯದಲ್ಲಿ ಉತ್ಸಾಹ, ಇಂದ್ರಿಯಗಳಲ್ಲಿ ಸ್ಥಿರತೆ, ಲಾಘವ (ಶರೀರವು ಹಗುರಾಗುವುದು), ಇಂದ್ರಿಯ ಮನಸ್ಸುಗಳ ನಿರ್ಮಲತೆಯೇ ಮುಂತಾದುವುಗಳುಂಟಾಗುತ್ತವೆ. ವ್ಯಾಯಾಮದಿಂದ ಶರೀರ ಪರಿಶ್ರಮ ಬಾಯಾರಿಕೆ ಮತ್ತು ಶೀತೋಷ್ಣಗಳ ವೇಗವನ್ನು ಸಹಿಸಿಕೊಳ್ಳುವ ಸಾಮರ್ಥ್ಯವುಂಟಾಗುತ್ತದೆ. ಸಿಂಹವನ್ನು ನೋಡಿ ಮೃಗಗಳು ಪಲಾಯನವನ್ನು ಮಾಡುವಂತೆ ವ್ಯಾಯಾಮಶೀಲನಾದವನನ್ನು ನೋಡಿ ರೋಗಗಳು ಪಲಾಯನಸೂಕ್ತವನ್ನು ಪಠಿಸುತ್ತವೆ. ವ್ಯಾಯಾಮದಿಂದ ಶರೀರದ ಸ್ಥೂಲತೆಯು ಕಡಿಮೆಯಾಗುತ್ತದೆ. ವ್ಯಾಯಾಮವು ಕುರೂಪಿಯನ್ನು ಸುರೂಪಿಯನ್ನಾಗಿ ಮಾಡುತ್ತದೆ. ವ್ಯಾಯಾಮದಿಂದ ಸಂತೃಪ್ತವಾದ ಶರೀರವನ್ನು ವಾರ್ಧಕ್ಯವು (ಮುಪ್ಪು) ಶೀಘ್ರವಾಗಿ ಆಕ್ರಮಿಸಲಾರದು. ವ್ಯಾಯಾಮವೇ ಮಾನವನ ಸಕಲ ಸುಖಗಳಿಗೆ ಆಧಾರವಾಗಿರುವುದಾಗಿದೆ.

ಶರೀರದ ಸಂಪೂರ್ಣ ಬಲವನ್ನು ಪಯೋಗಿಸಿ ವ್ಯಾಯಾಮವನ್ನು ಮಾಡಬಾರದು. ಯಾವಾಗಲೂ ವ್ಯಾಯಾಮದಲ್ಲಿ ತನ್ನ ಅರ್ಧಬಲವನ್ನೇ ಉಪಯೋಗಿಸುವುದು ಹಿತಕರವಾಗಿರುತ್ತದೆ.

ಕಕ್ಷಾಲಲಾಟನಾಸಾಸು ಹಸ್ತಪಾದಾದಿಸಂಧಿಷು |
ಪ್ರಸ್ವೇದಾಸ್ಮುಖಶೋಷಾಚ್ಚ ಬಲಾರ್ಧಂ ತದ್ಧಿ
ನಿರ್ದಿಶೇತ್ ||
ಸು. ಸೂ. ಅ ೨೪.

ಬಗಲು, ಹಣೆ, ಮೂಗು, ಕೈಕಾಲುಗಳೇ ಮೊದಲಾದುವುಗಳ ಸಂಧಿಗಳು, ಇವುಗಳಲ್ಲಿ ವಿಶೇಷವಾಗಿ ಬೆವರು ಬಂದು ಶ್ವಾಸೋಚ್ಛ್ವಾಸಗಳಿಂದ ಬಾಯಿಯು ಒಣಗುತ್ತ ಬಂದಾಗ ಶರೀರದ ಅರ್ಧಬಲವು ವ್ಯಯವಾಯಿತೆಂದರಿತು ವ್ಯಾಯಾಮಮಾಡುವುದನ್ನು ನಿಲ್ಲಿಸಬೇಕು. ಅತಿವ್ಯಾಯಾಮದಿಂದ ಕ್ಷಯ, ವಾಂತಿ, ರಕ್ತಪಿತ್ತ (ಮೇಲ್ಭಾಗ ಕೆಳಭಾಗಗಳ ಅವಯವಗಳಲ್ಲಿ ರಕ್ತವು ಸೋರುವುದು) ಮೂರ್ಛೆ, ಕೆಮ್ಮು, ದಮ್ಮು, ಜ್ವರ ಮುಂತಾದ ರೋಗಗಳು ಸಂಭವಿಸುವುವು. ಈ ಮೇಲೆ ಕಾಣಿಸಿರುವ ರೋಗಗಳು ಬಂದಾಗಲೂ ಕ್ಷೀಣ ಶರೀರವುಳ್ಳವರೂ, ಹೃದಯರೋಗದಿಂದ ಪೀಡಿತರಾದವರೂ ಊಟವಾದಮೇಲೆ ವ್ಯಾಯಾಮವನ್ನು ಮಾಡುವದು ಹಾನಿಕರವೆಂದು ಆಯುರ್ವೇದಗ್ರಂಥಗಳು ಘೋಷಿಸುತ್ತಿವೆ.

ಪುಷ್ಟಿಕರವಾದ ಆಹಾರವನ್ನು ಸೇವಿಸತಕ್ಕವರೂ ಬಲಶಾಲಿಗಳೂ ಸಕಲ ಋತುಗಳಲ್ಲಿ ವ್ಯಾಯಾಮವನ್ನು ಮಾಡಬಹುದು. ಅದರಲ್ಲಿಯೂ ಶೀತಕಾಲ ವಸಂತಕಾಲಗಳಲ್ಲಿ ಮಾಡುವ ವ್ಯಾಯಾಮವು ವಿಶೇಷ ಫಲಕಾರಿಯಾಗಿರುತ್ತದೆ. ವಿವೇಕಶಾಲಿಗಳಾದವರು ಬಲಾಬಲ ಮತ್ತು ಕಾಲದೇಶಗಳನ್ನು ವಿಚಾರಿಸಿಕೊಂಡು ತಮ್ಮ ತಮ್ಮ ಶರೀರಕ್ಕೆ ಅನುಗುಣವಾದ ವ್ಯಾಯಾಮವನ್ನು ನಿಯಮಪೂರ್ವಕವಾಗಿ ಆಚರಿಸಿ ನಿರೋಗಿಗಳೂ ದೀರ್ಘಾಯುಗಳೂ ಆಗುವುದೇ ಉತ್ತಮ ಮಾರ್ಗವಾಗಿದೆ.

(ಸಶೇಷ.)

ಬ್ರಹ್ಮಚರ್ಯ

ಋತುಕಾಲದಲ್ಲಿ ತನ್ನ ಧರ್ಮಪತ್ನಿಯೊಡನೆ ಶಾಸ್ತ್ರದ ಆದೇಶಾನುಸಾರ ಕೇವಲ ಸಂತಾನಾರ್ಥವಾಗಿ ಸಮಾಗಮ ಮಾಡುವ ಪುರುಷನು ಗೃಹಸ್ಥಾಶ್ರಮಿಯಾಗಿದ್ದರೂ ಬ್ರಹ್ಮಚಾರಿಯೆಂದೇ ಭಾವಿಸಲ್ಪಡುವನು. ಋತುಕಾಲದಲ್ಲಿ ಮಾತ್ರ ಸ್ತ್ರೀಯೊಡನೆ ಸಂಭೋಗಮಾಡುವ ವಿಧಾನವಿರುತ್ತದೆಯೇ ವಿನಾ ಮನಸ್ಸು ಬಂದಂತೆ ಅನಂಗಲೀಲಾರೂಪದಿಂದಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ಋತುಕಾಲವಾವುದು? ರಜೋದರ್ಶನದ ನಾಲ್ಕನೆಯ ದಿನವೇ ಋತುಕಾಲವಲ್ಲ; ಹೆಚ್ಚಿದ ದಿನಗಳಲ್ಲಿ ಸ್ತ್ರೀಸಂಗವು ನಿಷಿದ್ಧವಿರುತ್ತದೆ! ಈ ಬಗ್ಗೆ ಮನುವು ಈ ರೀತಿಯಾಗಿ ಹೇಳುತ್ತಾನೆ.—

ಋತುಃ ಸ್ವಾಭಾವಿಕಃ ಸ್ತ್ರೀಣಾಂ ರಾತ್ರಯಃ ಷೋಡಶಸ್ಮೃತಾಃ| ಚತುರ್ಭಿರಿತರೈಃ ಸಾರ್ಧಮಹೋಭಿಃ ಸದ್ವಿಗರ್ಹಿತೈಃ || ತಾಸಾಮಾದ್ಯಾಶ್ಚತಸ್ರಸ್ತು ನಿಂದಿತೈಕಾದಶೀ ಚ ಯಾ | ತ್ರಯೋದಶೀ ಚ ಶೇಷಾಸ್ತು ಪ್ರಶಸ್ತಾ ದಶರಾತ್ರಯಃ ||

ಸತ್ಪುರುಷರ ದ್ವಾರಾ, ನಿಂದಿತವಾದ ರಜೋದರ್ಶನಕ್ಕೆ ಮೊದಲು ನಾಲ್ಕು ದಿನಗಳ ಸಹಿತ, ೧೬. ರಾತ್ರಿಗಳು ಸ್ತ್ರೀಯರಿಗೆ ಸ್ವಾಭಾವಿಕ ಋತುಕಾಲವೆಂದು ಹೇಳಲ್ಪಡುತ್ತದೆ. ಈ ಹದಿನಾರು ದಿನಗಳಲ್ಲಿ ಮೊದಲನೆಯ ನಾಲ್ಕು ರಾತ್ರಿಗಳು, ಹನ್ನೊಂದು ಹಾಗೂ ಹದಿಮೂರನೇ ರಾತ್ರಿಗಳು ಸ್ತ್ರೀಸಹವಾಸಕ್ಕೆ ನಿಷಿದ್ಧ. ಉಳಿದ ಹತ್ತು ರಾತ್ರಿಗಳು ಉತ್ತಮ.

ಹತ್ತು ರಾತ್ರಿಗಳಲ್ಲಿ ಪ್ರತಿಪದೆ, ಷಷ್ಠಿ, ಅಷ್ಟಮಿ, ಏಕಾದಶಿ, ದ್ವಾದಶಿ, ಚತುರ್ದಶಿ ಹಾಗೂ ಪೂರ್ಣಿಮಾ ಮೊದಲಾದ ತಿಥಿಗಳು ಹಾಗೂ ವ್ಯತೀಪಾತ, ಗ್ರಹಣ, ಶಿವರಾತ್ರಿ, ಜನ್ಮಾಷ್ಟಮಿ, ಶ್ರಾದ್ಧ ದಿವಸ, ಸಂಕ್ರಾಂತಿ ಹಾಗೂ ಭಾನುವಾರ ಮೊದಲಾದ ದಿನಗಳನ್ನು ಬಿಟ್ಟು, ಇನ್ನುಳಿದ ದಿನಗಳಲ್ಲಿ ಸ್ತ್ರೀಯ ಇಚ್ಛೆಯಿಂದ ಅಥವಾ ಸಂತಾನಾರ್ಥವಾಗಿ ಯಾವನು ತಿಂಗಳಲ್ಲಿ ಎರಡು ಸಾರೆ ಮಾತ್ರ ಸ್ತ್ರೀಸಂಗವನ್ನು ಮಾಡುತ್ತಾನೋ ಅವನು ಗೃಹಸ್ಥಾಶ್ರಮಿಯಾಗಿದ್ದರೂ ಬ್ರಹ್ಮಚಾರಿಯೆಂದೇ ತಿಳಿಯಲ್ಪಡುತ್ತಾನೆ.

ರಜಸ್ವಲೆಯೊಡನೆ ಎಂದಿಗೂ ಸಂಸರ್ಗಮಾಡಬಾರದು. ಇದರಿಂದ ಅನೇಕತರದ ರೋಗಗಳು ಬರುತ್ತವೆ. ಇದಲ್ಲದೆ, ಆಶ್ಲೇಷಾ, ಮಘಾ, ಮೂಲ, ಕೃತ್ತಿಕಾ, ಜ್ಯೇಷ್ಠ, ರೇವತಿ, ಉತ್ತರಾಭಾದ್ರಪದ, ಉತ್ತರಾಫಲ್ಗುನೀ, ಹಾಗೂ ಉತ್ತರಾಷಾಢ ನಕ್ಷತ್ರಗಳಲ್ಲಿ ಸ್ತ್ರೀಸಹವಾಸವು ನಿಷಿದ್ಧವು. ದೇವಾಲಯ, ರಸ್ತೆ, ಸ್ಮಶಾನ, ಔಷಧಾಲಯ, ಬ್ರಾಹ್ಮಣನ ಮನೆ, ಗುರುವಿನ ಮನೆ ಈ ಸ್ಥಳಗಳಲ್ಲಿಯೂ, ಅಪವಿತ್ರ ಅವಸ್ಥೆಯಲ್ಲಿಯೂ, ಔಷಧಿ ತೆಗೆದುಕೊಂಡಾಗಲೂ, ಹಸಿವೆದ್ದಾಗಲೂ. ಊಟಮಾಡಿದ ತತ್‌ಕ್ಷಣವೂ, ಮಲ-ಮೂತ್ರತ್ಯಾಗದ ಅವಸರದಲ್ಲೂ, ವ್ಯಾಯಾಮಮಾಡಿಯೂ, ದಣಿದಿರುವಾಗಲೂ, ಕ್ಷುಭಿತ ಮನಸ್ಸಿನಲ್ಲೂ, ಆವೇಗ-ಕ್ರೋಧಗಳಲ್ಲಿಯೂ, ಉಪವಾಸದ ದಿನವೂ, ಬೆಳಗ್ಗೆ-ಸಂಧ್ಯಾಕಾಲಗಳಲ್ಲಿಯೂ, ಮಿತ್ರರು ಹಾಗೂ ಗುರುಜನರ ಹಾಸಿಗೆಗಳ ಮೇಲೂ, ಇತರರ ಎದುರಿಗೂ ಸ್ತ್ರೀಸಹವಾಸ ಮಾಡಬಾರದು. ಸ್ತ್ರೀಸಹವಾಸದ ಸಂಬಂಧವಾಗಿ ಗ್ರೀಸಿನ ಸಾಕ್ರೆಟಿಸನಿಗೂ ಅವನ ಶಿಷ್ಯನೊಬ್ಬನಿಗೂ ಈ ರೀತಿ ಸಂಭಾಷಣೆ ನಡೆದಿದೆ.

ಶಿಷ್ಯ—ಮನುಷ್ಯನು ಸ್ತ್ರೀಸಹವಾಸವನ್ನು ಎಷ್ಟು ಸಾರೆ ಮಾಡಬೇಕು?

ಸಾಕ್ರೆಟೀಸ್—ಇಡೀ ಜೀವಮಾನದಲ್ಲಿ ಒಂದೇ ಸಾರೆ.

ಶಿಷ್ಯ—ಅದರಿಂದ ತೃಪ್ತಿಯಾಗದಿದ್ದರೆ?

ಸಾಕ್ರೆಟೀಸ್—ವರ್ಷದಲ್ಲಿ ೨ ಸಾರೆ ಮಾಡಬಹುದು.

ಶಿಷ್ಯ—ಅದರಿಂದಲೂ ಮನಸ್ಸು ಸಮಾಧಾನವಾಗದಿದ್ದರೆ?

ಸಾಕ್ರೆಟೀಸ್—ತಿಂಗಳಿಗೊಂದಾವರ್ತಿ.

ಶಿಷ್ಯ—ಅಲ್ಲಿಗೂ ಸಮಾಧಾನವಾಗದಿದ್ದರೆ?

ಸಾಕ್ರೆಟೀಸ್—ಸರಿ. ತಿಂಗಳಿಗೆರಡು ಸಾರೆ ಮಾಡಬಹುದು. ಪರಂತು ಹೀಗೆ ಮಾಡುವವನಿಗೆ ಮೃತ್ಯುವು ಬೇಗ ಪ್ರಾಪ್ತವಾಗುತ್ತದೆ.

ಶಿಷ್ಯ—ಅಷ್ಟರಮೇಲೂ ಆಸೆಯು ಬೆಳೆದರೆ?

ಸಾಕ್ರೆಟೀಸ್—ಮೊದಲು ಹೆಣದಮೇಲೆ ಹೊದಿಸುವ ಬಟ್ಟೆಯನ್ನು ಮನೆಯಲ್ಲಿ ತಂದಿಟ್ಟುಕೊಂಡು ಅನಂತರ ಬೇಕಾದಹಾಗೆ ಸಹವಾಸ ಮಾಡಬಹುದು.

ಉಪರ್ಯುಕ್ತಪ್ರಮಾಣಗಳಿಂದ ಸಿದ್ಧವಾಗುವುದೇನೆಂದರೆ—ಸ್ತ್ರೀಸಹವಾಸವನ್ನು ಕಡಿಮೆಮಾಡಿದಷ್ಟು ಒಳ್ಳೆಯದು. ಇದು ಮನುಷ್ಯನ ಪಾರಮಾರ್ಥಿಕತೆಗೆ ಉಪಯೋಗಕರ.

ಯಾವ ಸ್ತ್ರೀ-ಪುರುಷರು ಸ್ವಂತ ಇಚ್ಛೆಯಿಂದ ಸದಾ ಬ್ರಹ್ಮಚಾರಿಗಳಾಗಿರಲು ಇಚ್ಛಿಸುತ್ತಾರೋ, ಅವರಿಗೆ ಅವಶ್ಯವಾಗಿ ಹಾಗೆ ಇರಲು ಆಸ್ಪದಕೊಡಬೇಕು. ಕೆಲವರು ಕೃತ್ರಿಮ ಹಾಗೂ ಅಸ್ವಾಭಾವಿಕ ಸಾಧನಗಳಿಂದ ಸಂತಾನೋತ್ಪಾದನೆಯನ್ನು ತಡೆಯಲಿಚ್ಛಿಸುತ್ತಾರೆ. ಇದು ಮಹಾಪಾಪ! ಅಧಿಕ ಸಂತಾನವನ್ನು ಉತ್ಪನ್ನ ಮಾಡದಿರಲು ಸರ್ವಸುಂದರ ಹಾಗೂ ಧರ್ಮಯುಕ್ತ ಉಪಾಯವೆಂದರೆ, ದಂಪತಿಗಳು ಸ್ವಂತ ಇಚ್ಛೆಯಿಂದ ಬ್ರಹ್ಮಚರ್ಯದ ಪಾಲನೆಮಾಡುವುದು. ಇದರಿಂದ ಇಹ ಹಾಗೂ ಪರಲೋಕಗಳೆರಡರ ಸಾಧನವೂ ಸುಗಮವಾಗುತ್ತದೆ.

ಬ್ರಹ್ಮಚರ್ಯದ ಸಾಧನವು

೧. ಬಾಲ್ಯವಿವಾಹವನ್ನು ಸರ್ವಥಾ ತ್ಯಜಿಸುವುದು. ಹುಡುಗರಿಗೆ ಕನಿಷ್ಠಪಕ್ಷ ೧೮ ವರ್ಷಕ್ಕೆ ಮುಂಚೆಯೂ, ಹುಡುಗಿಯರಿಗೆ ೧೦ ವರ್ಷಕ್ಕೆ ಮುಂಚೆಯೂ ಎಂದಿಗೂ ಮದುವೆಮಾಡಬಾರದು.

೨. ವೃದ್ಧವಿವಾಹಕ್ಕೆ ಎಂದಿಗೂ ಅವಕಾಶಕೊಡಕೂಡದು.

೩. ಧರ್ಮದ ಮೂಲಕ ಬ್ರಹ್ಮಚರ್ಯದ ಶಿಕ್ಷಣವನ್ನು ಕೊಡುವ, ಬ್ರಹ್ಮಚರ್ಯಾಶ್ರಮಗಳನ್ನು ಸ್ಥಾಪಿಸಬೇಕು. ಹುಡುಗರು ಕನಿಷ್ಠಪಕ್ಷ ೧೮ ವರ್ಷಗಳು ಗುರುಕುಲದಲ್ಲಿ ವಾಸಿಸಬೇಕೆಂದು ಕಡ್ಡಾಯ ಮಾಡಬೇಕು.

೪. ಹುಡುಗ-ಹುಡುಗಿಯರಿಗೆ ಬಹುಬೇಗ ಸಂಬಂಧ ಕಲ್ಪಿಸಬಾರದು.

೫. ಬಾಲಕ-ಬಾಲಿಕೆಯರಿಗೆ ಸುಂದರವಾದ ಬಟ್ಟೆಗಳನ್ನು ಹಾಗೂ ಆಭರಣಗಳನ್ನು ಧರಿಸಲು ಅವಕಾಶ ಕೊಡಬಾರದು.

೬. ಶೃಂಗಾರರಸದ ಯಾವುದೇ ಕಾವ್ಯ, ನಾಟಕ ಅಥವಾ ಉಪನ್ಯಾಸ ಗ್ರಂಥಗಳ ಪ್ರಚಾರವನ್ನು ಯಥಾಸಾಧ್ಯ ನಿಲ್ಲಿಸಬೇಕು. ಕಡೇಪಕ್ಷ ಸಣ್ಣ ವಯಸ್ಸಿನ ಬಾಲಕಬಾಲಿಕೆಯರ ಕೈಗೆ ಇಂತಹ ಪುಸ್ತಕಗಳು ಸಿಕ್ಕದಂತೆ ನೋಡಿಕೊಳ್ಳಬೇಕು. ಹಾಗೂ ವಿದ್ಯಾರ್ಥಿಗಳಿಗೆ ಸಾಹಿತ್ಯದೃಷ್ಟಿಯಿಂದಾದರೂ ಇಂತಹ ಪುಸ್ತಕಗಳನ್ನು ಓದಲಿಕ್ಕೆ ಕೊಡಬಾರದು.

೭. ಶೃಂಗಾರರಸಯುಕ್ತ ನಾಟಕ—ಸಿನೀಮಾಗಳನ್ನು ಎಂದಿಗೂ ನೋಡಬಾರದು.

೮. ಉತ್ತೇಜಕ ಪದಾರ್ಥಗಳನ್ನು ತಿನ್ನಬಾರದು. ಮೆಣಸಿನಕಾಯಿ, ಸಾಸುವೆ, ಬಿಸಿ ಮಸಾಲೆ, ಹುಳಿ, ಅಧಿಕ ಸಿಹಿ ಹಾಗೂ ಬಹಳ ಬಿಸಿ ಪದಾರ್ಥಗಳನ್ನು ತಿನ್ನಬಾರದು. ಭೋಜನವು ಚೆನ್ನಾಗಿ ಪಕ್ವವಾಗಿದ್ದು ನಿಯಮಿತ ಸಮಯದಲ್ಲಿ ಮಾತ್ರ ತೆಗೆದುಕೊಳ್ಳಲ್ಪಡಬೇಕು. ಯಾವುದೇ ತರದ ಮಾದಕವಸ್ತುಗಳನ್ನು ತೆಗೆದುಕೊಳ್ಳಬಾರದು.

೯. ಯಥಾಸಾಧ್ಯ ಬೆಳಗ್ಗೆ ಮತ್ತು ಸಾಯಂಕಾಲ ಪರಿಶುದ್ಧಗಾಳಿಯಲ್ಲಿ ಸಂಚಾರಮಾಡಬೇಕು.

೧೦. ರಾತ್ರಿ ಜಾಗ್ರತೆ ಮಲಗಬೇಕು. ಹಾಗೂ ಪ್ರಾತಃಕಾಲ ಬ್ರಾಹ್ಮೀಮುಹೂರ್ತದಲ್ಲಿ ಕಡೇಪಕ್ಷ ಸೂರ್ಯೋದಯಕ್ಕೆ ೧ ಘಂಟೆಗೆ ಮುಂಚೆ ಅವಶ್ಯ ಏಳಬೇಕು. ಮಲಗುವಾಗ ಮೂತ್ರವಿಸರ್ಜನೆಮಾಡಿ ಮಲಗಬೇಕು. ರಾತ್ರಿ ಮಲಗುವಾಗಲೂ ಬೆಳಗ್ಗೆ ಏಳುವಾಗಲೂ ಭಗವಚ್ಚಿಂತನೆ ಮಾಡಬೇಕು.

೧೧. ಕುಸಂಗತಿಯನ್ನು ಸರ್ವಥಾ ಬಿಡಬೇಕು. ಸ್ತ್ರೀಸಂಬಂಧವಾದ ಚರ್ಚೆಯನ್ನು ಎಂದಿಗೂ ಮಾಡಬಾರದು. ಅದರಂತೆಯೇ ಸ್ತ್ರೀಯೂ ಪುರುಷಚಿಂತನೆಯನ್ನು ಮಾಡಬಾರದು.

೧೨. ದಂಪತಿಗಳು ವಿನಾ ಸ್ತ್ರೀ-ಪುರುಷರು ಜೊತೆಯಲ್ಲಿ ಕೂಡಲುಬಾರದು. ಏಕಾಂತದಲ್ಲಿ ಸಂಭಾಷಿಸಲೂ ಬಾರದು.

೧೩. ಸ್ತ್ರೀಯರಕಡೆಗೆ ಎಂದಿಗೂ ದೃಷ್ಟಿಯಿಡಬಾರದು. ಒಂದು ವೇಳೆ ದೃಷ್ಟಿಬಿದ್ದರೆ ಮಾತೃಭಾವನೆ ಇಲ್ಲವೆ ಪರಮಾತ್ಮಭಾವನೆಯನ್ನು ಇಡಬೇಕು. ಅಂತೆಯೇ ಸ್ತ್ರೀಯರೂ ಸಹ ಪುರುಷರ ಕಡೆ ದೃಷ್ಟಿಯಿಡಬಾರದು. ದೃಷ್ಟಿಬಿದ್ದರೆ, ಪಿತೃಭಾವ ಇಲ್ಲವೆ ಪರಮಾತ್ಮಭಾವದಿಂದ ಕಾಣಬೇಕು.

[6ನೆಯ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ.

೧೯೩೪ನೇ ನವಂಬರ್ ತಾ॥ ೧೯ನೇ ಸೋಮವಾರ.

ಗುರುವೇ ಮೋಕ್ಷಮೂಲಭೂತನು.

ಜನನಮರಣರೂಪವಾದ ಚಕ್ರದಲ್ಲಿ ಯಾವನು ನರಳುತ್ತಿರುವನೋ ಅವನು ಬದ್ಧನೆನಿಸುವನು. ಈ ಚಕ್ರದಿಂದ ಯಾವನು ಬಿಡುಗಡೆಯನ್ನು ಹೊಂದುವನೋ ಅವನು ಮುಕ್ತನೆನಿಸುವನು. ಬಂಧನದಿಂದ ತಪ್ಪಿಸಿಕೊಂಡು ಮೋಕ್ಷವನ್ನು ಪಡೆಯುವುದೇ ಜೀವಾತ್ಮನ ಕರ್ತವ್ಯವಾಗಿರುತ್ತದೆ. ಬಂಧನವೆಂಬುದು ದುಃಖಸಾಧನವಾದುದು. ಮೋಕ್ಷವೆಂಬುದು ಸುಖಸಾಧನವಾದುದು. ಪ್ರತಿಯೊಬ್ಬ ಆತ್ಮನೂ ಸುಖವನ್ನು ಅಪೇಕ್ಷಿಸುತ್ತಾನಲ್ಲದೆ ದುಃಖವನ್ನು ಅಪೇಕ್ಷಿಸುವುದಿಲ್ಲ. ಹೀಗಿದ್ದರೂ ದುಃಖವು ತರಂಗತರಂಗವಾಗಿ ನಮ್ಮ ಆತ್ಮರನ್ನು ಆವರಿಸಿ ಅಧೋಗತಿಗೀಡುಮಾಡಿರುತ್ತದೆ. ಹೀಗಾಗಲು ಕಾರಣವೇನೆಂಬುದನ್ನು ನಾವು ವಿಚಾರಿಸುವುದವಶ್ಯಕವಾಗಿದೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವಚ | ಬುದ್ಧಿಂತ ಸಾರಥಿಂ ವಿದ್ಧಿ ಮನಃಪ್ರಗ್ರಹಮೇವಚ || ಇಂದ್ರಿಯಾಣಿ ಹಯಾನಾ ಹುರ್ವಿಷಯಾಂಸ್ತೇಷು ಗೋಚರಾನ್ ||

ಶರೀರವೇ ಒಂದು ರಥವಾಗಿದೆ. ಆ ಶರೀರರೂಪವಾದ ರಥದಲ್ಲಿ ಆತ್ಮನೆಂಬ ಮಹಾರಾಜನು ಕುಳಿತಿರುವನು. ಬುದ್ಧಿಯೇ ಆ ರಥವನ್ನು ಹೊಡೆಯುವ ರಥಿಕನಾಗಿರುವನು. ಚಕ್ಷುರಾದೀಂದ್ರಿಯಗಳೇ ಆ ರಥಕ್ಕೆ ಕಟ್ಟಿದ ಕುದುರೆಗಳಾಗಿವೆ. ಮನಸ್ಸೇ ಕುದುರೆಗಳಿಗೆ ಹಾಕಿದ ಲಗಾಮಾಗಿದೆ. ವಿಷಯಗಳೇ ಮಾರ್ಗವಾಗಿವೆ. ಎಂದು ಶ್ರುತಿಯು ಸಾರುತ್ತಿರುವುದು. ಸ್ರಕ್ಚಂದನವನಿತಾದಿ ಬಾಹ್ಯವಿಷಯಗಳಿಗೂ ಚಕ್ಷುರಾದಿ ಇಂದ್ರಿಯಗಳಿಗೂ ಪ್ರತಿನಿತ್ಯವೂ ಸನ್ನಿಕರ್ಷವಿರುವುದರಿಂದಲೂ ಶಬ್ದಾದಿವಿಷಯಗಳು ಚಕ್ಷುರಾದೀಂದ್ರಿಯ ಗೋಳಕದ್ವಾರಾ ಮನಸ್ಸನ್ನೂ ಆ ಮನಸ್ಸಿನ ದ್ವಾರಾ ಆತ್ಮನನ್ನೂ ಪ್ರವೇಶಿಸಿದುವುದರಿಂದಲೂ ಆತ್ಮನು ಕಿಂಚಿದ್ಜ್ಞನೂ ಅಶ್ವತ್ತನೂ ಕಲಿಷಿತಾತ್ಮನೂ ಆಗಿದ್ದಾನೆ. ಸರೋವರದಲ್ಲಿರುವ ನೀರು ಸ್ವಭಾವದಿಂದ ಅತಿಸ್ವಚ್ಛವಾಗಿದ್ದರೂ, ಮದಗಜಗಳ ನುಗ್ಗಾಟದಿಂದ ಬೊಗ್ಗಡವಾಗಿ ಪಾನಕ್ಕೆ ಅನರ್ಹವಾಗುವಂತೆ, ನವನವೋನ್ಮೇಷಶಾಲಿಯಾದ ವಿಷಯಸಂಬಂಧದಿಂದ ಜೀವಾತ್ಮನು ತನ್ನ ಕಲ್ಯಾಣಗುಣಗಳಿಂದ ಬಿಡಲ್ಪಟ್ಟು ವಿಷಯಾಕಾರನಾಗಿ ಪರಿಣಮಿಸಿರುತ್ತಾನೆ.

ನೀರು ಹಳ್ಳವಿದ್ದ ಕಡೆಗೇ ಹರಿಯುವ ಸ್ವಭಾವವುಳ್ಳುದಲ್ಲದೆ ಮೇಲಕ್ಕೆ ಹರಿಯುವ ಸ್ವಭಾವವುಳ್ಳುದಲ್ಲ. ಆತ್ಮನು ಅನಾದಿಕಾಲದಿಂದ ಅನೇಕ ಶರೀರಗಳನ್ನು ಧರಿಸುತ್ತ ಬಂದಿರುವುದರಿಂದ ವಿಷಯಪಂಕದಿಂದ ಕಲುಷಿತನಾಗಿ ಬಹು ಕೀಳುದಶೆಯನ್ನು ಅನುಭವಿಸುತ್ತಲಿರುವನು. ಹೀಗೆ ಜೀವಾತ್ಮನಿಗೆ ವಿಷಯಸಂಬಂಧದೋಷದಿಂದ ಪ್ರಾಪ್ತವಾಗಿರುವ ಕೀಳುದಶೆಯು ತೊಲಗಿ ಎಂದಿನಂತೆ ಲಿಂಗರೂಪಿಯಾದ ಪರಮಾತ್ಮನಲ್ಲಿ ಸಮರಸಭಾವವನ್ನು ಹೊಂದಿ ನಿತ್ಯಾನಂದವನ್ನು ಅನುಭವಿಸುವುದು ದುಸ್ತರವಾಗಿ ಹೋಗಿರುತ್ತದೆ.

ಜೀವಾತ್ಮನೂ ಪರಮಾತ್ಮನೂ ಯಾವಾಗಲೂ ಒಂದೆಡೆಯಲ್ಲಿದ್ದರೂ ಅನಾದಿಕಾಲದಿಂದ ಬಂದಿರುವ ಮಾಯಾವರಣದಿಂದ ಈ ಉಭಯರ ಮೈತ್ರಿಯು ತಪ್ಪಿಹೋಗಿ ಒಬ್ಬರಿಗೊಬ್ಬರ ಅವಲೋಕನಕ್ಕೂ ಕೂಡ ಅವಕಾಶವಿಲ್ಲದಂತಾಗಿ ಸಾಮರಸ್ಯವೇ ತಪ್ಪಿಹೋಗಿರುತ್ತದೆ. ಇದರಿಂದ ಒಬ್ಬನು ಕರ್ಮಾನುಗುಣವಾದ ಸುಖದುಃಖಗಳನ್ನೂ ಮತ್ತೊಬ್ಬನು ಸದಾನಂದವನ್ನೂ ಅನುಭವಿಸುತ್ತಿರುವರು.

ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೆ |
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನಭಿಚಾಕಶೀತಿ ||

ಎಂಬ ಶ್ರುತಿಯು ಸಹ ಜೀವಾತ್ಮಪರಮಾತ್ಮರ ಲಕ್ಷಣಗಳನ್ನು ತೋರಿಸಿರುತ್ತದೆ. ಜೀವಾತ್ಮ ಪರಮಾತ್ಮ ಎಂಬ ಎರಡು ಪಕ್ಷಿಗಳು ದೇಹವೆಂಬ ಒಂದೇ ವೃಕ್ಷವನ್ನಾಶ್ರಯಿಸಿರುವವು. ಈ ಎರಡು ಪಕ್ಷಿಗಳೊಳಗೆ ಜೀವಾತ್ಮನೆಂಬ ಪಕ್ಷಿಯಾದರೋ ತಾನು ಮಾಡಿದ ಪುಣ್ಯಪಾಪಕರ್ಮಾನುಗುಣವಾದ ಸುಖದುಃಖಗಳೆಂಬ ಬೀಜಗಳನ್ನು ತಿಂದು ಜೀವಿಸುತ್ತದೆ. ಪರಮಾತ್ಮನೆಂಬ ಪಕ್ಷಿಯಾದರೋ ಇಂಥ ಸುಖದುಃಖಗಳನ್ನನುಭವಿಸದೆ ಸರ್ವತೋಮುಖವಾಗಿ ವ್ಯಾಪಿಸಿರುತ್ತದೆ. ಹೀಗೆ ಒಂದಕ್ಕೊಂದು ವಿರುದ್ಧಸ್ವಭಾವವುಳ್ಳವುಗಳಾದುದರಿಂದ ಪರಮಾತ್ಮ ಜೀವಾತ್ಮರುಗಳಿಗೆ ಇರುವ ಸಂಬಂಧವು ತಪ್ಪಿಹೋಗಿ ಒಬ್ಬರಿಗೊಬ್ಬರು ವಿರುದ್ಧಸ್ವಭಾವವುಳ್ಳವರಾಗಿದ್ದಾರೆ. ಪ್ರಪಂಚದಲ್ಲಿ ಯಾವ ವಸ್ತುಗಳು ಸಮಾನಗುಣವುಳ್ಳವುಗಳಾಗಿರುತ್ತವೆಯೋ ಅಂಥವುಗಳಿಗೆ ಸಂಬಂಧವೂ ಏಕತ್ರಾವಾಸವೂ ಸಿದ್ಧಿಸುವುದು. ಪ್ರಕೃತದಲ್ಲಿ ಜೀವನು ಮಲಾವೃತನಾಗಿ ಜರಾಮರಣಗಳಿಂದ ಕೂಡಿರುವನು. ಪರಮಾತ್ಮನಾದರೋ ತೇಜೋಮಯನಾಗಿರುವನು. ಇಂಥ ತೇಜೋಮಯನಾದ ಪರಮಾತ್ಮನಲ್ಲಿ ಸೇರುವವರೆಗೂ ಜೀವಾತ್ಮನು ದುಃಖದಿಂದ ನಿವೃತ್ತನಾಗುವಂತಿಲ್ಲವು. ದುಃಖ ನಿವೃತ್ತಿಯಾಗುವವರೆಗೂ ಪರಮಾತ್ಮನಲ್ಲಿ ಸೇರುವಂತಿಲ್ಲ. ಇಂಥ ಸಮಸ್ಯೆಯು ತಪ್ಪಬೇಕಾದರೆ ಮಧ್ಯದಲ್ಲಿ ಇದರ ನಿಮಿತ್ತವನ್ನು ಬಲ್ಲ ಒಬ್ಬ ಮಧ್ಯಸ್ಥಗಾರನು ಬೇಕಾಗುವುದು. ಅತನೇ ಗುರುವೆನಿಸಲ್ಪಡುವನು. ದುಃಖವು ಗುರುವಿನಿಂದಲೇ ಪರಿಹಾರವಾಗಬೇಕಾಗಿದೆಯಲ್ಲದೆ, ಇನ್ನಾರಿಂದಲೂ ಪರಿಹಾರವಾಗುವಂತಿಲ್ಲ. 'ಗುರುರುಪಾಯಃ' ಎಂದು ಶಿವಸೂತ್ರದಲ್ಲಿ ಹೇಳಿರುವಂತೆ ಜೀವಾತ್ಮ ಪರಮಾತ್ಮರಿಬ್ಬರಿಗೆ ಉಂಟಾಗಿರುವ ವಿರೋಧವನ್ನು ತಪ್ಪಿಸಿ ಪರಸ್ಪರ ಸ್ನೇಹವನ್ನು ಬೆಳೆಯಿಸುವ ಶಕ್ತಿಯಾದರೂ ಗುರುವಿನಲ್ಲಿಯೇ ಉಂಟೆಂದು ಸಿದ್ಧವಾಗುತ್ತದೆ. ಪ್ರಪಂಚವ್ಯವಹಾರಕ್ಕಾಗಲಿ ಪಾರಮಾರ್ಥಿಕವ್ಯವಹಾರಕ್ಕಾಗಲಿ ಎಲ್ಲಕ್ಕೂ ಗುರುವಿರಲೇಬೇಕು. ಉಪದೇಶಕರಿಲ್ಲದ ಯಾವ ಕಾರ್ಯವೂ ಸರಿಹೋಗುವುದಿಲ್ಲ. ಆದರೆ ಪ್ರಪಂಚವ್ಯವಹಾರವನ್ನು ತಿಳುಹಿಸುವ ಉಪದೇಶಕನು ಇಂಥವನೇ ಆಗಬೇಕೆಂಬ ನಿಯಮವೇನೂ ಇಲ್ಲ. ಪರಮಾರ್ಥತತ್ವವನ್ನುಪದೇಶಿಸುವವನು ಮಾತ್ರ ಶಾಸ್ತ್ರಸಿದ್ಧಗಳಾದ ಅನೇಕ ನಿಯಮಗಳಿಂದೊಡಗೂಡಿರಬೇಕು. ಈ ನಿಯಮವು ಮುಕ್ತಿಸಾಧಕವಾದ ಪ್ರತಿಯೊಂದು ಮತದಲ್ಲಿಯೂ ಅನಾದಿಕಾಲದಿಂದ ಸಂಪ್ರದಾಯಾನುಗತವಾಗಿ ಬಂದಿರುತ್ತವೆ. ವೇದಾಗಮಸಿದ್ಧವಾದ ನಮ್ಮ ವೀರಶೈವಸಿದ್ಧಾಂತದಲ್ಲಿ ಅಂಥ ಮೋಕ್ಷಮಾರ್ಗವನ್ನುಪದೇಶಿಸುವ ಗುರುಗಳಾದರೋ ಶ್ರೀ ರೇಣುಕಾದಿ ಪಂಚಾಚಾರ್ಯರೇ ಹೊರತು ಮತ್ತೊಬ್ಬರಿಲ್ಲವೆಂದು ಶಿವಾಗಮಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವದು. ಪಂಚಾಚಾರ್ಯರ ಸತ್ವವು ಪ್ರತಿಯೊಬ್ಬ ವೀರಶೈವನ ಪ್ರತಿಯೊಂದು ರೋಮನಾಳದಲ್ಲಿಯೂ ಅವಿಚ್ಛಿನ್ನವಾಗಿ ವ್ಯಾಪಿಸಿಕೊಂಡಿರುವದೆಂಬುದಕ್ಕೆ ಅವರವರು ಧರಿಸಿರುವ ಲಿಂಗ ಭಸ್ಮ ರುದ್ರಾಕ್ಷಾದಿಗಳೂ ವೀರಶೈವ ಎಂಬ ನಾಮವೂ ಬಲವಾದ ಸಾಕ್ಷಿಗಳಾಗಿವೆ. ಹೀಗೆ ವೀರಶೈವಮತದಲ್ಲಿ ತಾವು ಜನ್ಮವೆತ್ತಿದ್ದರೂ ಎದೆಯಮೇಲೆ ಗುರುಗಳ ಚಿಹ್ನವೆನಿಸಿದ ಲಿಂಗವನ್ನು ಧರಿಸಿದ್ದರೂ ಇತ್ತೀಚೆಗೆ ಕೆಲವು ಆಧುನಿಕಪುರುಷರು ಅಂಥ ಗುರುಗಳ ಮೇಲೆ ಟೀಕೆಯನ್ನು ಮಾಡಲು ಉದ್ಯುಕ್ತರಾದರೆ ಇಂಥವರಿಗೆ ದುಃಖನಿವೃತ್ತಿಯಾಗಿ ಮೋಕ್ಷಪದವಿಯು ದೊರೆಯುವುದೆಂತು? ಲೋಕದಲ್ಲಿ ಪ್ರತಿಯೊಬ್ಬ ಮತೀಯನೂ ತನ್ನ ಮತಾಚಾರ್ಯರಲ್ಲಿ ಅಸಾಧಾರಣ ಭಕ್ತಿಯನ್ನಿಟ್ಟುಕೊಂಡು ಅವರ ಉಪದೇಶದಂತೆ ನಡೆಯುವುದರಲ್ಲಿ ಬದ್ಧಾದರನಾಗಿರುವಲ್ಲಿ ವೀರಶೈವರೆಂದು ಹೇಳಿಸಿಕೊಳ್ಳುವ ಕೆಲವರು ತಮ್ಮ ಮತಾಚಾರ್ಯರನ್ನು ದೂಷಿಸುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಇಂಥವರು ಇನ್ನಾದರೂ ಮುಕ್ತಿಮಾರ್ಗೋಪದೇಶಕರಾದ ತಮ್ಮ ಮತಾಚಾರ್ಯರಲ್ಲಿ ಪ್ರೀತಿಯಿಂದ ವರ್ತಿಸಿ ಅವರು ಉಪದೇಶಿಸಿದ ಮಾರ್ಗದಲ್ಲಿ ಪ್ರವೇಶಿಸಿ ದುಃಖದಾಯಕನಾದ ಬಂಧನದಿಂದ ದೂರರಾಗುವುದು ಯುಕ್ತವಾದುದು.

ಬೆಂಗಳೂರು ಇಂಜನಿಯರಿಂಗ್ ಕಾಲೇಜ ಡೆ ಮಹೋತ್ಸವವು ರಾಜಮಂತ್ರಪ್ರವೀಣ ಎಸ್. ಪಿ. ರಾಜಗೋಪಾಲಾಚಾರ್ಯರವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ ೨ ನೇ ತಾರೀಖಿನ ದಿವಸ ನೆರವೇರಿಸಲ್ಪಡುವದು.

ಒಳದೇಶದ ವೃತ್ತಾಂತಗಳು.

ಗ್ರೀಸಿನ ಮಾಜಿಚಕ್ರವರ್ತಿಗಳಾದ ಜಾರ್ಜರವರು ಜನವರಿ ತಿಂಗಳಲ್ಲಿ ಮೈಸೂರಿಗೆ ಬರುವರೆಂದು ತಿಳಿದು ಬರುತ್ತದೆ.

ಕಳೆದ 15 ನೆಯ ತಾರೀಖಿನ ದಿವಸ ನೀಲಸಂದ್ರ ಮತ್ತು ಕ್ಯಾಂಬೆಲ್ ರೋಡು ಸೇರುವ ಸ್ಥಳದಲ್ಲಿ ಬಸ್ಸಿಗೂ ಲಾರಿಗೂ ಢಿಕ್ಕಿ ಹೊಡೆದು ಬಸ್ಸಿನ ಡ್ರೈವರು ಆಸ್ಪತ್ರೆಗೆ ಸಾಗಿಸಲ್ಪಟ್ಟು ಮೃತಿಹೊಂದಿದನೆಂದೂ ಮೂವರು ಗುಣಮುಖರಾಗುತ್ತಿರುವರೆಂದೂ ತಿಳಿದು ಬರುತ್ತದೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ನಿನ್ನೆದಿವಸ ಆಸ್ಥಾನ ಸಂಗೀತವಿದ್ವಾನ್ ಮ॥ ರಾ॥ ಬಿ. ದೇವೇಂದ್ರಪ್ಪನವರ ಸಂಗೀತ ಕಚೇರಿಯು ಅತ್ಯಂತ ಮನೋಹರವಾಗಿ ನೆರವೇರಿತು. ಸಂಗೀತ ಶ್ರವಣಕ್ಕಾಗಿ ಆಗಮಿಸಿದ್ದ ಮಹಾಜನಗಳೆಲ್ಲರೂ ಇವರ ಸಂಗೀತಕಲಾಕುಶಲತೆಯನ್ನು ಕಂಡು ಪರಮಾನಂದಭರಿತರಾದರು. ಶ್ರೀ ಜಗದ್ಗುರುಗಳವರು ಇವರ ಗಾನಪ್ರೌಢಿಮೆಯನ್ನು ಪರಾಮರ್ಶಿಸಿ ಸಂತುಷ್ಟಚಿತ್ತರಾಗಿ ಮ॥ ರಾ॥ ದೇವೇಂದ್ರಪ್ಪನವರಿಗೆ "ಗಾನಾಲಂಕಾರ" ಎಂಬ ಪದವಿಯನ್ನು ಅನುಗ್ರಹಿಸಿ, ಈ ಪದವೀ ವಿಭೂಷಿತವಾದ ಸುವರ್ಣಾಭರಣ (ತೋಡಾ) ವನ್ನು ಆಶೀರ್ವದಿಸಿದರು. ಈ ದಿವಸ ಸಾಯಂಕಾಲ ೭ ಘಂಟೆಗೆ ಪುನಃ ಮಹಾಸನ್ನಿಧಿಯಲ್ಲಿ ಸದರಿ ಆಸ್ಥಾನ ಸಂಗೀತ ವಿದ್ವಾಂಸರಿಂದ ವಾದನವಿದ್ಯಾನೈಪುಣ್ಯವು ಪ್ರದರ್ಶಿಸಲ್ಪಡುವುದು. ಸರ್ವರಿಗೂ ಆಹ್ವಾನವುಂಟು.

ರಾಜಧಾನೀ ನಿವಾಸಿಗಳಾಗಿದ್ದ ಲೇಟ್ ಶೇಗು ಚಿಕ್ಕಿಚಂಗಯ್ಯಶೆಟ್ಟರವರ ಹೆಸರಿನ ಧರ್ಮಫಂಡಿನಿಂದ ವಿಶೇಷ ದ್ರವ್ಯವನ್ನು ವೆಚ್ಚಮಾಡಿ ಪಶ್ಚಿಮವಾಹಿನಿಯಲ್ಲಿ ಒಂದು ಧರ್ಮಛತ್ರವನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಇದೇ ತಿಂಗಳು 15 ನೆಯ ತಾರೀಖಿನ ದಿವಸ ಮೈಸೂರು ಡಿ॥ ಜಡ್ಜರವರ ಹಸ್ತದಿಂದ ಶಂಕುಸ್ಥಾಪನ ಕಾರ್ಯವು ವಿಶೇಷವೈಭವದೊಡನೆ ನೆರವೇರಿಸಲ್ಪಟ್ಟಿತು. ಈ ಮಹಾಸಮಾರಂಭಕ್ಕೆ ರಾಜಧಾನಿಯ ಸುಪ್ರಸಿದ್ಧ ವಕೀಲರೂ, ಚೀಫ್ ಆಫೀಸರರೂ, ವರ್ತಕಮಂಡಳಿಯವರೂ, ವೈಶ್ಯಮಂಡಳಿಯವರೂ, ಇತರ ಮತೀಯರೂ ಆಗಮಿಸಿದ್ದರು. ಈ ಸಮಾರಂಭವು ಸಮಾಪ್ತಿಯಾದ ಬಳಿಕ ಸರ್ವರೂ ಫಲಾಹಾರಾದಿಗಳಿಂದ ಸತ್ಕರಿಸಲ್ಪಟ್ಟರು. ಈ ಧರ್ಮಛತ್ರ ನಿರ್ಮಾಣದಿಂದ ಚಂಗಯ್ಯಶೆಟ್ಟರ ಕೀರ್ತಿಯು ಈ ಜಗತೀತಲದಲ್ಲಿ ಸ್ಥಿರವಾಗುವುದೆಂದು ಧಾರಾಳವಾಗಿ ಹೇಳಬಹುದಾಗಿದೆ. ಈ ಸಮಾರಂಭದಲ್ಲಿ ಮಾಡರನ್ ಇಂಜನಿಯರಿಂಗ್ ಕಂಪನಿಯ ಮ॥ ರಾ॥ ಎಂ. ಎಸ್. ಮಾದಪ್ಪನವರು ವಿಶೇಷ ಶ್ರಮವಹಿಸಿ ಕಾರ್ಯವನ್ನು ಮಾಡಿದರು. ಈಗ 10 ವರ್ಷಗಳಿಂದಲೂ ಈ ಫಂಡಿನ ಬಡ್ಡಿಯಿಂದ ಪ್ರತಿವರ್ಷ ತುಲಾಮಾಸದಲ್ಲಿ ಅನ್ನದಾನವು ಮಾಡಲ್ಪಡುತ್ತಿರುವುದು. ಧರ್ಮ ಕರ್ತೃಗಳಿಗೆ ಶ್ರೀಜಗದೀಶ್ವರನು ನಿತ್ಯಸುಖವನ್ನೀಯಲೆಂದು ಹಾರೈಸುತ್ತೇವೆ.

ರಾಜಧಾನೀ ನಿವಾಸಿಗಳಾದ ಮ॥ ರಾ॥ ಮರಿಪುಟ್ಟಣ್ಣನವರ ಮಕ್ಕಳು ಎಂ. ಪಿ. ದೇವಪ್ಪನವರು ಕಳೆದ 12 ನೆಯ ತಾರೀಖು ಸೋಮವಾರ ದಿವಸ ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ಶಂಕರಮಠದ ಬಳಿ ಇರುವ ತಮ್ಮ ಮನೆಗೆ ಪಾದಪೂಜೆಗಾಗಿ ಬಿಜಮಾಡಿಸಿಕೊಂಡಿದ್ದರು. ಮ॥ ರಾ॥ ದೇವಪ್ಪನವರು ಪ್ರಾತಃಕಾಲ 9 ಘಂಟೆಗೆ ಸರಿಯಾಗಿ ರಾಜಧಾನಿಯ ಪ್ರಮುಖ ವೀರಶೈವ ಮಹಾಜನಗಳೊಡಗೂಡಿ ವಾದ್ಯವೈಭವದೊಡನೆ ಮಹಾಸನ್ನಿಧಿಯ ಬಿಡಾರಕ್ಕೆ ಹೋಗಿ ಶ್ರೀಗಳವರಿಗೆ ನಜರುಕಾಣಿಕೆಯನ್ನೊಪ್ಪಿಸಿ ಅನುಜ್ಞೆ ಪಡೆದು ಅರಮನೆಯಿಂದ ದಯಪಾಲಿಸಲ್ಪಟ್ಟ ರಾಜಮರ್ಯಾದೆಗಳೊಡನೆ ಬಿಜಯಂಗೈಸಿಕೊಂಡು ಬಂದರು. ಮ॥ ರಾ॥ ದೇವಪ್ಪನವರು ಬಂದ ಮಹಾಜನಗಳನ್ನು ಫಲಪುಷ್ಪ ಗಂಧಾದಿಗಳಿಂದ ಸತ್ಕರಿಸಿದರು. ಮಹಾಸನ್ನಿಧಿಯವರ ಸ್ನಾನಪೂಜಾದಿ ನಿತ್ಯವಿಧಿಗಳು ಸಾಂಗವಾಗಿ ನಡೆದ ಬಳಿಕ ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು. 5 ಘಂಟೆಯ ಸಮಯಕ್ಕೆ ಗುರುಕಾಣಿಕೆಯನ್ನೊಪ್ಪಿಸಿ ತಮ್ಮ ಬಂಧುಬಾಂಧವರೊಡಗೂಡಿ ಗುರುಗಳ ಆಶೀರ್ವಾದವನ್ನು ಪಡೆದರು. ಆಮೇಲೆ ಗುರುಗಳನ್ನು ಮಹೋತ್ಸವದೊಡನೆ ಶಂಕರಾಲಯದ ಪಶ್ಚಿಮಕ್ಕೆ ಕಾಂಪೌಂಡುಹಾಕಿರುವ ತಮ್ಮ ಬಾಬ್ತು ಖಾಲಿನಿವೇಶನಕ್ಕೆ ಕರೆದುಕೊಂಡು ಹೋಗಿ ಆ ಸ್ಥಲವನ್ನು ಗುರುಗಳಿಗೆ ಒಪ್ಪಿಸಿ ರಾಜಧಾನಿಗೆ ಮಹಾಸನ್ನಿಧಿಯು ದಯಮಾಡಿಸಿದ ಜ್ಞಾಪಕಾರ್ಥವಾಗಿ ಇಲ್ಲಿ ಒಂದು ರೇಣುಕಾಲಯವನ್ನು ಕಟ್ಟಿಸಿ ರೇಣುಕಮೂರ್ತಿಯನ್ನು ಸ್ಥಾಪಿಸಬೇಕೆಂದು ಪ್ರಾರ್ಥಿಸಿದರು. ಮಹಾಸನ್ನಿಧಿಯವರು ದೇವಪ್ಪನವರ ಭಕ್ತಿಗೆ ಮೆಚ್ಚಿ ಸಂತುಷ್ಟಚಿತ್ತರಾಗಿ ಭೂದಾನವನ್ನು ಅಂಗೀಕರಿಸಿ ರೇಣುಕಾಲಯವನ್ನು ಕಟ್ಟಿಸಲು ಅನುಮೋದನವನ್ನಿತ್ತರು. ಇವರ ದಾನವು ಅತ್ಯಂತ ಸ್ತುತ್ಯವಾದುದು.

ರಾಜಕವಿಭೂಷಣರ ಗೃಹಕ್ಕೆ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಆಗಮನ.

ರಾಜಬಂಧುಗಳಾದ ರಾಜಕವಿಭೂಷಣ ರಿ॥ ಮುಜರಾಯಿಭಕ್ಷಿ ಶ್ರೀಮಾನ್ ಎಚ್. ಲಿಂಗರಾಜ ಅರಸರವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ಈ ದಿವಸ ತಮ್ಮ ಭವ್ಯಭವನಕ್ಕೆ ರಾಜಮರ್ಯಾದೆಗಳೊಡನೆ ಮಹೋತ್ಸವ ಪೂರ್ವಕವಾಗಿ ಬಿಜಯಮಾಡಿಸಿಕೊಂಡರು. ಈ ಮಹೋತ್ಸವಕ್ಕೆ ರಾಜಬಂಧುಗಳೂ, ರಾಜಧಾನಿಯ ವೀರಶೈವಪ್ರಮುಖರೂ ಆಗಮಿಸಿ ವಿಶೇಷವಾದ ಶೋಭೆಯನ್ನುಂಟುಮಾಡಿದ್ದರು. ಮಹೋತ್ಸವವು ೧೦॥ ಘಂಟೆಗೆ ರಾಜಕವಿಭೂಷಣರ ಭವನಕ್ಕೆ ಬಂದು ತಲುಪಿತು. ತದನಂತರ ಶ್ರೀಗಳವರ ಪೂಜಾದಿಗಳು ನೆರವೇರಿದುವು. ಬಳಿಕ ರಾಜಕವಿಭೂಷಣರೂ ರಾಜಬಂಧುಗಳೂ ತೀರ್ಥಪ್ರಸಾದಗಳನ್ನು ಸ್ವೀಕರಿಸಿದರು. ರಾಜಕವಿಭೂಷಣರು ಪೂರ್ವದಿಂದಲೂ ಶ್ರೀ ರೇಣುಕಪೀಠದಲ್ಲಿ ವಿಶೇಷವಾದ ಭಕ್ತಿವಿಶ್ವಾಸಗಳನ್ನಿಟ್ಟು, ಈ ದಿವಸ ಆ ಪೀಠಾಧಿಪತಿಗಳನ್ನು ತಮ್ಮ ಭವನಕ್ಕೆ ಅಸಾಧಾರಣವಾದ ಸಂತೋಷದೊಡನೆ ಬಿಜಯಮಾಡಿಸಿಕೊಂಡು ಧರ್ಮಪೀಠಕ್ಕೆ ಸಲ್ಲುವ ಪಿಲ್ಲತ್ತುಗಳನ್ನೂ ಕಾಣಿಕೆಯನ್ನೂ ಸಮರ್ಪಿಸಿದುದು ಅತ್ಯಂತ ಸ್ತೋತ್ರಾರ್ಹವಾಗಿದೆ. ಶ್ರೀ ಜಗದಾಚಾರ್ಯರು ರಾಜಕವಿಭೂಷಣರಿಗೂ ಅವರ ಅಶೇಷ ಕುಟುಂಬವರ್ಗಕ್ಕೂ ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನೀಯಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

ಜರ್ಮನಿಯ ಒಂದು ವಿಮಾನವು ಗ್ರೀಸ್‌ನ ಕೀಟಿದ ಸಮೀಪದಲ್ಲಿ ಅಕಸ್ಮಾತ್ತಾಗಿ ಒಡೆದು ೫ ಜನಗಳು ಮೃತಪಟ್ಟರು.

ಮದರಾಸು ವಾಷರ್‌ಮನ್ ಪೇಟೆಯಲ್ಲಿರುವ ಆರ್ಮುಗನಾಯಿಕರ್ ಎಂಬವನು ಖೋಟಾನಾಣ್ಯಗಳನ್ನು ತಯಾರಿಸುತ್ತಿದ್ದುದು ಪತ್ತೆಯಾದ್ದರಿಂದ ಪೋಲೀಸಿನವರು ಸಾಮಾನು ಸಮೇತ ಅವನನ್ನು ಹಿಡಿದು ಛಾರ್ಜುಮಾಡಿರುತ್ತಾರೆ

೩೦ ಇಂಚು ಉದ್ದ ೧೬ ಇಂಚ್ ಡಯಾಮೀಟರ್‌ವುಳ್ಳ ಒಂದು ಬಾಂಬು ಇರವಾಡಿ ನದಿಯಲ್ಲಿ ಶಿಕ್ಕಿಯವುದು. ಇಂಗ್ಲೀಷಿನವರು ಬರ್ಮಾದೇಶವನ್ನು ಸ್ವಾಧೀನಪಡಿಸಿಕೊಳ್ಳುವಾಗ ಇದನ್ನು ಉಪಯೋಗಿಸಿಕೊಳ್ಳುತ್ತಿದ್ದರೆಂದು ವದಂತಿಯುಂಟಾಗಿದೆ. ಈಗ ಇದು ಪೋಲೀಸಿನವರ ವಶದಲ್ಲಿದೆ.

ಇಟಲಿಯಲ್ಲಿ ಕಟ್ಟಿದ ಎರಡು ಹಡಗುಗಳು ಕೊಲಂಬೋ ಬಂದರಕ್ಕೆ ಬಂದಿವೆ. ಇವು ವ್ಲಾಡಿವೊಸ್ಟೊಕಿಗೆ (ರಷ್ಯಾ) ಹೊರಡಲು ಸಿದ್ಧವಾಗಿವೆ. ಅಲ್ಲಿ ಯುದ್ಧದ ಹಡಗಿಗೆ ಬೇಕಾದ ಸಾಮಗ್ರಿಗಳನ್ನು ಸಿದ್ಧಗೊಳಿಸಿರುವರು. ಹಡಗಿನಲ್ಲಿ ಆಯುಧಸಾಮಗ್ರಿಗಳಾವೂ ಇರುವುದಿಲ್ಲ. ಇಟಲಿಯವರೇ ಹಡಗನ್ನು ನಡೆಯಿಸುತ್ತಿರುವರು. ರಷ್ಯಾಪ್ರತಿನಿಧಿಗಳು ಕೆಲವರು ಹಡಗಿನಲ್ಲಿರುವಂತೆ ತೋರುತ್ತದೆ.

ಚೌಕದಲ್ಲಿ ಪೋಸ್ಟ್ ಆಫೀಸಿನವರು ಟೆಲಿಫೋನ್ ತಂತಿಯನ್ನು ಹಾಕುತ್ತಿದ್ದಾಗ್ಗೆ ಒಂದು ಮೋಟಾರ್ ಲಾರಿಯು ಅಕಸ್ಮಾತ್ ಬಂದು ಏಣಿಗೆ ಹೊಡೆದು ತಳ್ಳಿಬಿಟ್ಟಿತು. ಏಣಿಯು ದಾರಿಯಲ್ಲಿ ಬರುತ್ತಿದ್ದ ಹೆಂಗಸಿನಮೇಲೆ ಬಿದ್ದಿತು. ಆ ಹೆಂಗಸು ತಳ್ಳಿಕೊಂಡು ಬರುತ್ತಿದ್ದ ಮಕ್ಕಳ ಗಾಡಿಯ ಮೇಲೆ ಬಿದ್ದಳು. ಆಗ ಆ ಗಾಡಿಯಲ್ಲಿದ್ದ ಎಂಟು ತಿಂಗಳ ಮಗುವು ರಸ್ತೆಯಲ್ಲಿ ಬಿದ್ದು ಮೂರ್ಛೆ ಹೋದುದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವುದು.

ಜಬ್ಬಲ್ಪುರದಲ್ಲಿರುವ ಜೀವನ್ ಎಂಬವನು ತನ್ನ ಹೆಂಡತಿಯ ಮೂಗನ್ನು ಕತ್ತರಿಸಿ ಆಕೆಯನ್ನು ಬೀದಿಯಲ್ಲಿ ಮೆರವಣಿಗೆ ಮಾಡಿಕೊಂಡು ಪೋಲೀಸ್ ಸ್ಟೇಷನ್ನಿಗೆ ಕರೆದೊಯ್ದನೆಂಬ ಅಪಾದನೆಯ ಮೇಲೆ ನಾಲ್ಕು ತಿಂಗಳು ಸಜಾ ವಿಧಿಸಲ್ಪಟ್ಟಿತು. ಈಕೆಯ ವಿಷಮವಾರ್ತೆಯನ್ನು ನೋಡಲಾರದೆ ಹಲವು ಸಾರಿ ಜಾತಿಯ ಪಂಚಾಯಿತರಿಗೆ ದಂಡಕೊಟ್ಟುಕೊಟ್ಟು ಬೇಸತ್ತು ಕೋಪಾವಿಷ್ಟನಾಗಿ ಈ ಕ್ರೂರ ಕೃತಿಯನ್ನು ಮಾಡಿದನೆಂದು ತಿಳಿದುಬರುತ್ತದೆ.

ಕಾಮಾಂಧರಿಗೆ ಶಿಕ್ಷೆ!

ಸದ್ಯಃ ಜರ್ಮನಿಯಲ್ಲಿ ಹೊಸಕಾಯಿದೆಯೊಂದನ್ನು ಹೊರಡಿಸಿದ್ದಾರೆ. ಕಾಮಾಂಧತೆಯಿಂದ ಅತ್ಯಾಚಾರ ಮಾಡಿದ ೧೧೧ ಜನರನ್ನು ಸರಕಾರದವರು ಈ ಕಾನೂನಿನ ಪ್ರಕಾರ ನಪುಂಸಕರನ್ನಾಗಿ ಮಾಡಿದರು. ಈ ಶಸ್ತ್ರಚಿಕಿತ್ಸೆಯು ನಡೆಯಬೇಕಾದರೆ 8 ನಿಮಿಷಗಳಾಗುವವಂತೆ!

ಮೋಟಾರ್ ಅನಾಹುತ.

ನಾಗಪುರದಲ್ಲಿ ವಿಹಾರಾರ್ಥವಾಗಿ ಹೊರಟಿದ್ದ ಮಾರ್ವಾಡಿ ಪನ್ನಾಲಾಲ್ ಎಂಬವರ ಮೋಟಾರು ತಿರುಗಿಸುವಾಗ ಮೊಗಚಿಕೊಂಡಿತು. ಒಳಗೆ ಕುಳಿತಿದ್ದ ಹೆಂಗಸರು ಮಕ್ಕಳು 7 ಜನರು ಕೆಳಕ್ಕೆ ಬಿದ್ದು ಘಾಯಪಟ್ಟರು. $1\frac{1}{2}$ ವರ್ಷ ವಯಸ್ಸಿನ ಮಗುವು ಕೂಡಲೆ ಮೃತಪಟ್ಟಿತು.

ಚಕ್ರವರ್ತಿಗಳ ಜ್ಯೂಬಿಲಿ ಮಹೋತ್ಸವ.

ಚಕ್ರವರ್ತಿ ಸಾರ್ವಭೌಮರು ಪಟ್ಟಕ್ಕೆ ಬಂದು 25 ವರ್ಷಗಳಾಗುವುದರಿಂದ ಆ ಸಂಬಂಧಿ ಸಿಲ್ವರ್ ಜೂಬಿಲಿ ಮಹೋತ್ಸವವನ್ನು ಮುಂದಿನವರುಷ ಮೇ ತಿಂಗಳಲ್ಲಿ ನಡೆಯಿಸಬೇಕೆಂದು ಯು. ಪಿ. ಪ್ರಾವಿನ್ಸಿನವರು ಈಗಿನಿಂದಲೇ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲು ಪ್ರಾರಂಭಿಸಿದ್ದಾರೆ.

ಬೆಂಕಿಯ ಅನಾಹುತ.

ನಾರಾಯಣವರಂನಲ್ಲಿ ಅಸ್ಪೃಶ್ಯರ ಗುಡಿಸಲುಗಳಿಗೆ ಬೆಂಕಿ ಹತ್ತಿ ಸುಮಾರು 28 ಗುಡಿಸಲುಗಳು ಸುಟ್ಟುಹೋದುವು. ಪ್ರಾಣಾಪಾಯವೇನೂ ಆಗಲಿಲ್ಲ. ಸುಮಾರು 2000 ರೂ. ಗಳಷ್ಟು ನಷ್ಟವಾಗಿರುತ್ತದೆ. ಆ ಹಳ್ಳಿಯ ಪ್ರಮುಖ ಜನರು ನಿರಾಶ್ರಿತರಾದ 200 ಜನರಿಗೆ ಅನ್ನೋದಕಗಳನ್ನು ಕೊಡುತ್ತಿದ್ದಾರೆ.

ಬಂಗಾರದ ಪ್ರವಾಹ.

ಕಳೆದವಾರದಲ್ಲಿ ಇಂಡಿಯಾ ದೇಶದಿಂದ ಯೂರೋಪ್ ಮತ್ತು ಅಮೇರಿಕಾಖಂಡಗಳಿಗೆ ಸುಮಾರು 3715397 ರೂಪಾಯಿ ಬೆಲೆಬಾಳುವ ಚಿನ್ನವು ಕಳುಹಿಸಲ್ಪಟ್ಟಿತು. ಇಲ್ಲಿಂದ ಚಿನ್ನವು ಹೊರಕ್ಕೆ ಹೋಗುವುದಕ್ಕೆ ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ ಸುಮಾರು 2025618326 ರೂಪಾಯಿ ಬೆಲೆಯಾಗುವಷ್ಟು ಚಿನ್ನವು ವಿದೇಶಗಳಿಗೆ ಹೋಗಿದೆ.

ಹೊಸತರಹದ ಪೆಟ್ರೋಲ್!

ಪೀಟ್ ಎಂಬ ಒಂದು ತರಹದ ಪದಾರ್ಥದಿಂದ ತೆಗೆದ ಪೆಟ್ರೋಲ್ ಎಣ್ಣೆಯು ಈಗ ಭೂಮಿಯಿಂದ ತೆಗೆಯುತ್ತಿರುವ ಪೆಟ್ರೋಲ್ ಎಣ್ಣೆಗಿಂತ ಯಾವ ಭಾಗದಲ್ಲಿಯೂ ಕೆಟ್ಟದ್ದಲ್ಲವೆಂಬ ವಿಷಯವನ್ನು ರಷ್ಯಾದೇಶದ ಇಂಜನಿಯರರು ಪತ್ತೆಮಾಡಿದ್ದಾರಲ್ಲದೆ ಇದೇ ಎಣ್ಣೆಯನ್ನು ಹಾಕಿ ಯಾವ ತೊಂದರೆಯೂ ಇಲ್ಲದೆ ಮೋಟಾರ್ ನಡೆಸಿರುತ್ತಾರೆ. ಈ ಪದಾರ್ಥವು ರಷ್ಯಾದ ಜೌಗುಪ್ರದೇಶದಲ್ಲಿ ಬಹಳವಾಗಿರುವುದರಿಂದ ಅವರು ತುಂಬಾ ಲಾಭವನ್ನು ಸಂಪಾದಿಸಬಹುದಾಗಿದೆ.

ಗಣಪತಿಯ ಅವತಾರ!

ನೀಲಗಿರಿ ಬೆಟ್ಟದಲ್ಲಿರುವ ಓರ್ವ ಹೆಂಗಸಿನ ಗರ್ಭದಲ್ಲಿ ಗಣಪತಿಯ ಆಕಾರವುಳ್ಳ ಒಂದು ಮಗುವು ಜನಿಸಿರುತ್ತದೆ. ಈ ಮಗುವನ್ನು ನೋಡುವುದಕ್ಕೆ ಪ್ರತಿದಿವಸವೂ ಸಾವಿರಾರು ಜನಗಳು ಹೋಗುತ್ತಿರುವರು. ಈಕೆಯು ತನ್ನ ಬಡತನದಿಂದ ಆ ಮಗುವನ್ನು ನೋಡಲು ೧ ಆಣೆ ಪ್ರವೇಶಧನವನ್ನಿಟ್ಟಿದ್ದಾಳೆ. ಈಗ ಬೆಂಗಳೂರಿನ ಬಳ್ಳಾಪುರದಪೇಟೆಯಲ್ಲಿರುವ ಕ್ರೈಸ್ಟ್ ಮೆಮೋರಿಯಲ್ ಚರ್ಚಿನ ಹತ್ತಿರ ಒಂದು ಜಗುಲಿಯ ಮೇಲೆ ಈ ಗಣೇಶಾಕೃತಿಯ ಕೂಸನ್ನು ಪ್ರದರ್ಶಿಸುವಳೆಂದು ತಿಳಿದುಬರುತ್ತದೆ.

ವಿದ್ಯುಚ್ಛಕ್ತಿಯಿಂದ ಮರಣ.

ಹೆರಾಲ್ಡ್ ಕೂಟ್ಸ್ ಎಂಬವನು ತನ್ನ ಮನೆಯ ಅಂಗಳದಲ್ಲಿ ಕಿತ್ತು ಬಿದ್ದಿದ್ದ ಟೆಲಿಫೋನ್ ತಂತಿಯನ್ನು ಹಿತ್ತಲಿನಕಡೆಗೆ ಹಿಡಿದು ಎಳೆದುಕೊಂಡು ಹೋದುದರಿಂದ ಪ್ರಾಣಬಿಟ್ಟನು. ಇವನು ಎಳೆದುಕೊಂಡು ಬಂದಾಗ್ಗೆ ಕಂಬದಮೇಲಿದ್ದ ಭಾಗವು ಪಕ್ಕದಲ್ಲಿದ್ದ ಎಲೆಕ್ಟ್ರಿಕ್ ತಂತಿಗೆ ತಗುಲಿದ್ದರಿಂದ ವಿದ್ಯುಚ್ಛಕ್ತಿಯು ಪ್ರವಹಿಸುವುದಕ್ಕೆ ಕಾರಣವಾಯಿತು. ಇವನು ಸಾಯುವಾಗ ಕೂಗಿದ್ದನ್ನು ಕೇಳಿ ಇವನ ಸ್ನೇಹಿತನಾದ ವಿಲಿಯಂ ಬ್ರೈಟ್ ಎಂಬವನು ಓಡಿಬಂದು ಇವನನ್ನು ಎತ್ತುವುದಕ್ಕೆ ಮುಟ್ಟಿದಕೂಡಲೆ ವಿದ್ಯುಚ್ಛಕ್ತಿಯ ವೇಗದಿಂದ ಅವನೂ ಕೂಗಿಕೊಂಡು ಪ್ರಾಣಬಿಟ್ಟನು.

ಹಿಂದೂವಿಶ್ವವಿದ್ಯಾನಿಲಯಕ್ಕೆ ಇಂಗ್ಲೆಂಡಿನ ದಾನ.

ಮೇಜರ್ ಗ್ರಹಾಂಪೋಲರು ಕಾಶೀ ವಿಶ್ವವಿದ್ಯಾನಿಲಯಕ್ಕೆ ಲಂಡನ್ನಿನಿಂದ ೧೧,೬೯೩ ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಮೇಜರ್‌ಪೋಲರು ಮೇಜರ್ ಟೆಲ್ಲರ ಆಸ್ತಿಗೆಲ್ಲಾ ಟ್ರಸ್ಟಿಗಳಾಗಿದ್ದರು. ಡಾ॥ ಅನಿಬೆಸಂಟರು ಮೃತಿಹೊಂದಿದ ಬಳಿಕ ಈ ಧನಸಹಾಯವನ್ನು ಸೆಂಟ್ರಲ್ ಹಿಂದೂಕಾಲೇಜಿಗೆ ಕೊಡಬೇಕೆಂದು ಒಪ್ಪಂದದಲ್ಲಿದ್ದಿತು. ಈಗ ಸೆಂಟ್ರಲ್ ಹಿಂದೂ ಕಾಲೇಜು ಕಾಶೀವಿಶ್ವವಿದ್ಯಾಲಯದಲ್ಲಿ ಸೇರಿರುವುದರಿಂದ ಆ ಧನವನ್ನು ವಿಶ್ವವಿದ್ಯಾಲಯಕ್ಕೆ ಕೊಡಬೇಕಾಗಿದೆ. ಈ ದ್ರವ್ಯಸಹಾಯವನ್ನು ವಿದ್ಯಾರ್ಥಿನಿಯರ ಹಾಸ್ಟಲ್ ನಿರ್ಮಾಣಕ್ಕೆ ಉಪಯೋಗಿಸಲಾಗುವುದಲ್ಲದೆ ಈ ಕಟ್ಟಡಕ್ಕೆ ಡಾ॥ ಬೆಸಂಟರ ನಾಮಕರಣಮಾಡಲ್ಪಡುತ್ತದೆ.

ಮಗುವು ಎರಡುಸಲ ಸತ್ತು ಬದುಕಿತು!

ವಿ॥ ಜೇ ಎಂಬವನ ಸುಮಾರು ೨ ವರುಷದ ಗಂಡುಮಗುವು ೨ ದಿವಸ ಖಾಯಿಲೆಯಾಗಿದ್ದು ಮೂರನೇದಿನ ಉಸಿರು ನಿಂತಿತು. ನೋಡಿದವರೆಲ್ಲರೂ ಮಗುವು ಸತ್ತುಹೋಯಿತೆಂದು ತೀರ್ಮಾನಿಸಿದರು. ಆದರೆ ಕಾರಣಾಂತರದಿಂದ ಹೂಳುವುದಕ್ಕೆ ತೆಗೆದುಕೊಂಡು ಹೋಗಲು ೨ ದಿನ ಸಾವಕಾಶವಾಯಿತು. ಆಮೇಲೆ ಇವರು ಸ್ಮಶಾನಕ್ಕೊಯ್ಯಲು ಸಿದ್ಧಪಡಿಸುತ್ತಿರಲು ಮಗುವು ಸ್ವಲ್ಪ ಸ್ವಲ್ಪವಾಗಿ ಉಸಿರಾಡಿಸುತ್ತ ಚೇತರಿಸಿಕೊಂಡಿತು. ಇದಾದ ಮೂರು ನಾಲ್ಕು ದಿನಗಳಲ್ಲಿ ತಿರುಗಿ ಮಗುವಿಗೆ ಮೊದಲಿನಂತೆಯೇ ಪ್ರಜ್ಞೆ ತಪ್ಪಿತು. ಈ ಸಾರಿಯೂ ತಾಯಿತಂದೆಗಳು ಮೊದಲಿನಂತೆ ಮಗುವು ಹುಷಾರಾಗಬಹುದೆಂದು ತಿಳಿದು ಹೂಳುವುದಕ್ಕೆ ನಾಲ್ಕು ದಿನ ಸಾವಕಾಶಮಾಡಿದರು. ಅಲ್ಲಿಗೂ ಬದುಕುವ ಲಕ್ಷಣವು ಕಾಣದ್ದರಿಂದ ಒಂದು ಪೆಟ್ಟಿಗೆಯನ್ನು ತಂದು ಅದರಲ್ಲಿ ಅದನ್ನು ಮಲಗಿಸಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಹೂಳಲು ಇಷ್ಟವಿಲ್ಲದೆ ಮೇಲೆಯೇ ಇಟ್ಟು ಬಂದರು. ಮೂರನೆಯ ದಿನ ಕುರಿಕಾಯಲು ಹೋಗಿದ್ದ ಹುಡುಗರು ಅಳುವ ಧ್ವನಿ ಕೇಳಿ ಆ ಪೆಟ್ಟಿಗೆಯನ್ನು ಒಡೆದು ಮಗುವನ್ನು ಮನೆಗೆ ತಂದುಬಿಟ್ಟರು. ಈಗ ಮಗುವು ಹುಷಾರಾಗಿ ಆಡಿಕೊಂಡಿದೆ. ದೈವಲೀಲೆಯು ವಿಚಿತ್ರವಾದುದು!

[3ನೆಯ ಪುಟದಿಂದ ಮುಂದುವರಿದುದು.]

೧೪. ನಿತ್ಯವೂ ಸತ್ಸಂಗ ಮಾಡಬೇಕು. ಸದ್ಗ್ರಂಥಗಳ ಅಧ್ಯಯನ ಮಾಡಬೇಕು.

೧೫. ಪೋಕು ಮಾಡುವುದನ್ನು ಸರ್ವಥಾ ಬಿಡಬೇಕು. ಶೃಂಗಾರ ಹಾಗೂ ಅಲಂಕಾರ ರಸಗಳಿಂದ ಕಾಮವಾಸನೆಯು ಜಾಗೃತವಾಗುತ್ತದೆಂಬುದನ್ನು ನೆನಪಿನಲ್ಲಿಡಬೇಕು. ಶೃಂಗಾರ ಮಾಡುವವನು ತಾನೂ ಮುಳುಗುವುದಲ್ಲದೆ ಇತರರನ್ನೂ ಮುಳುಗಿಸುತ್ತಾನೆ.

೧೬. ಪುಷ್ಪಮಾಲೆಗಳನ್ನು ಧರಿಸಕೂಡದು. ಗಂಧವನ್ನು ಲೇಪಿಸಕೂಡದು. ಅಲಂಕಾರ ಮಾಡಿಕೊಳ್ಳಬಾರದು. ಚರ್ಬು ಮಾಡುವುದನ್ನು ಬಿಡಬೇಕು. ಕೂದಲು ಬೆಳೆಸಬಾರದು; ಕನ್ನಡಿಯಲ್ಲಿ ಮುಖ ನೋಡಿಕೊಳ್ಳಬಾರದು, ತುಟಿಗಳನ್ನು ಕೆಂಪಗೆ ಮಾಡಲು ತಾಂಬೂಲವನ್ನು ತಿನ್ನಬಾರದು, ಮಧುಸೇವನೆ ಮಾಡಬಾರದು. ಉತ್ತೇಜಕ ಔಷಧಗಳನ್ನು ಸೇವಿಸಬಾರದು.

೧೭. ಮೂತ್ರ ಹಾಗೂ ಮಲವಿಸರ್ಜನೆಮಾಡಿದ ಮೇಲೆ, ಆಯಾ ಅಂಗಗಳನ್ನು (ಇಂದ್ರಿಯಗಳನ್ನು) ತಣ್ಣೀರಿನಿಂದ ತೊಳೆಯಬೇಕು.

೧೮. ಮಲಮೂತ್ರಗಳನ್ನು ಎಂದಿಗೂ ತಡೆಯಬಾರದು. ಯಥಾಸಾಧ್ಯ ತಣ್ಣೀರಿನಿಂದ ಪ್ರತಿನಿತ್ಯವೂ ಸ್ನಾನಮಾಡಬೇಕು.

೧೯. ನಿಯಮಿತ ವ್ಯಾಯಾಮ ಮಾಡುವುದಲ್ಲದೆ ಸಾಧ್ಯವಿದ್ದರೆ ಕೆಲವು ಯೋಗಾಸನಗಳ ಹಾಗೂ ಪ್ರಾಣಾಯಾಮದ ಅಭ್ಯಾಸ ಮಾಡಬೇಕು.

೨೦. ಕೌಪೀನ ಅಥವಾ ಲಂಗೋಟಿಯನ್ನು ಅವಶ್ಯಕವಾಗಿ ಧರಿಸಲೇಬೇಕು.

೨೧. ಭಗವಂತನ ಮೂರ್ತಿಯನ್ನು ಪ್ರೇಮಪೂರ್ವಕ ದರ್ಶನ ಮಾಡಬೇಕು. ಸಾಧು-ಸಂತ ಹಾಗೂ ಮಹಾಪುರುಷರ ಸೇವೆಯನ್ನು ಮನಃಪೂರ್ವಕವಾಗಿ ಮಾಡಬೇಕು.

೨೨. ಪ್ರತಿದಿನ ನಿಯಮಿತಕಾಲದಲ್ಲಿ ಪರಮಾತ್ಮನ ಧ್ಯಾನವನ್ನು ಅವಶ್ಯ ಮಾಡಬೇಕು.

೨೩. ಯಾವನೂ ವ್ಯಭಿಚಾರಿಯ ವಿಷಯವನ್ನು ಕುರಿತು ಚರ್ಚೆಮಾಡಬಾರದು. ಕೇಳಲೂ ಬಾರದು. ಅಂತಹವನ ಒಳಿ ಕೂಡಲೂ ಬಾರದು.

೨೪. ನಿರಂತರ ಭಗವನ್ನಾಮವನ್ನು ಜಪಿಸಬೇಕು. ಶ್ವಾಸದಿಂದ ಮಾಡುವುದಾದರೆ ಬಹು ಉತ್ತಮ. ಕಾಮವಾಸನೆಯು ಜಾಗೃತವಾದರೆ ಶಿವನಾಮಜಪವನ್ನು ಜೋರಾಗಿ ಉಚ್ಚರಿಸಬೇಕು. ಕಾಮವಾಸನೆಯು ಕೀರ್ತನೆ ಹಾಗೂ ಶಿವನಾಮಜಪದ ಮುಂದೆ ಎಂದಿಗೂ ನಿಲ್ಲಲಾರದು.

೨೫. ಜಗತ್ತಿನಲ್ಲಿ ವೈರಾಗ್ಯಭಾವನೆಯಿಟ್ಟು ಇದರ ಅನಿತ್ಯತೆಯನ್ನು ಮನನಮಾಡಬೇಕು.

೨೬. ಸ್ತ್ರೀಯರೂಪದಲ್ಲಿ ಪುರುಷನೂ ಪುರುಷನ ರೂಪದಲ್ಲಿ ಸ್ತ್ರೀಯೂ ಒಬ್ಬರ ಶರೀರದಲ್ಲೊಬ್ಬರು ದೋಷವೆಣಿಸಲು ಕಲಿಯಬೇಕು. ಚರ್ಮದಿಂದ ಸುತ್ತಲ್ಪಟ್ಟಿರುವ ಶರೀರದಲ್ಲಿ ಮಾಂಸ, ರಕ್ತ, ಕಫ, ಮೂತ್ರ, ಮೂಳೆ ಮೊದಲಾದ ಎಲ್ಲಾ ಅಪವಿತ್ರ ಪದಾರ್ಥಗಳೆಂಬುದನ್ನು ಯೋಚಿಸಿ, ಈ ವಿಚಾರದಿಂದ ಪರಸ್ಪರ ರಮಣೀಯತೆಯನ್ನು ನಿವಾರಿಸಬೇಕು.

೨೭. ಮಹಾಪುರುಷರ ಮತ್ತು ವೀರ ಬ್ರಹ್ಮಚಾರಿಗಳ ಚರಿತ್ರೆಗಳನ್ನು ಮನನಮಾಡಬೇಕು.

೨೮. ಭಗವತ್ಪ್ರಾಪ್ತಿಯೇ ತನ್ನ ಅಂತಿಮ ಗುರಿಯೆಂಬುದನ್ನು ಸದಾ ಧ್ಯಾನದಲ್ಲಿಡಬೇಕು.

(ಕಲ್ಯಾಣ)

THE MYSORE BAR ASSOCIATION.

Mr. H. Subba Rao's Bluster.

(BY AN ADVOCATE)

Mr. H. Subba Rao, who is a member of the above Association, has written an article to "The Daily Post" of the 2nd inst criticising "A Citizen" and has thrown a challenge for discussion on some of the questions relating to the above case. I therefore desire to examine them and satisfy the curiosity of Mr. Subba Rao.

Mr. Subba Rao starts by finding fault with "A Citizen" for having taken 8 days for his article though he himself has taken 10 days for his "Bluster." He seems to think a moral loses its value if it is drawn 8 days after the event, a theory which had not been heard of before.

Mr. Lloyd George and his "War Memories."

If such a theory is known to journalism Mr. Lloyd George, the Ex-Prime Minister of England, would not have started writing his illuminating articles about the World War after 16 years, articles which are creating a sensation in more than one continent and are attracting the careful attention of all statesmen in every country in the world.

Once a Moral, ever a Moral.

It has to be pointed out that a moral which can be deduced from a fearless struggle for a righteous cause against a combination of vested interests will not deteriorate or stink like the morals of those who neglect their sacred duties and still claim to be men of honour and limbs and high priests of law and justice, and raise a storm of dust against those who legitimately point out their imperfections in the discharge of public duty. A moral arising from a good cause is always fresh and elevating, and its fragrance never suffers by lapse of time.

Faculty of Reasoning "Impaired."

Mr. Subba Rao's temper has been upset simply because "A Citizen" has pointed out the duties and obligations of legal practitioners by his unanswerable arguments, which have not been controverted, and Mr. Subba Rao's rage seems to have seriously impaired his faculty of reasoning. Again, while all sensible men appreciate wisdom irrespective of the question from where it comes, Mr. Subba Rao lays down the astounding maxim that it is the personality that counts and not the intrinsic merit of the principles enunciated. Some of the greatest men known to history have contributed, and are still contributing to the Press under a literary title and influenced public opinion on large issues of national importance; and Mr. Lloyd George has shown how even Cabinet Ministers while in office were similarly writing articles opposing the British Government when he decided to reject the military policy till they followed with disastrous consequences to the allies and set up a Supreme Council of the Allied Powers to direct operations during the World War. But Mr. Subba Rao has a sweeping condemnation for all such writers, and his remarks about 'foundings' are shocking and opposed to good taste.

Under the Searchlight.

I now proceed to examine a more interesting subject. Mr. Subba Rao seems to possess a tendency for confusion of ideas, and he has shown his inability to distinguish a distinct proposition of law from a moral said to be drawn from a concrete case. He feels uneasy and imagines that that "A Citizen" has drawn the following moral from the Judgment—

"That every member of the Bar should act as a gentleman!"

He misreads the article, reverses all rules of grammatical construction, and confounds a proposition which forms the quintessence of the principles laid down by the High Courts. It takes Mr. Subba Rao unawares and suddenly excites his feeling of wonder and astonishment, thus showing that it is a proposition to which Mr. Subba Rao was a stranger before.

What is "Gentlemanliness"

"Gentlemanliness" seems to be a disagreeable or undesirable quality ("virtue") in the opinion of Mr. Subba Rao, involving some degradation to its possessor; and according to him "A Citizen" acted improperly in having invited reference to an inconvenient proposition laid down by a competent High Court, and so Mr. Subba Rao condemns him to share that disagreeable quality and also share that degradation along with the members of the Bar. If "gentlemanliness" had, on the other hand, been understood by Mr. Subba Rao to be an estimable quality ennobling or diverting its possession he would certainly have reserved the whole of it exclusively for the members of the Bar and would not have given any share in it to the correspondent.

The legal profession is admittedly an "honourable" profession. "Honour" involves a nice sense of what is right, just and true, with course of life correspondent thereto, strict conformity to the duty imposed by conscience, position, or privilege.

"Say what is *honour*? 'Tis the finest sense.
Of Justice which the human mind can frame,
Intent each lurking frailty to disclaim,
And guard the way of life from all offence
"Suffered or done."

—Wordsworth.

A "gentleman" is a man of honour or courtesy; one who has an assured position in society by reason of his birth, education or occupation. "The grand old name of gentleman," in the phrase from Tennyson's "In memoriam" is given to none but men of honour and courteous behaviour.

Mr. Subba Rao's "Standard of Ethics"

But is there a conflict between "gentlemanliness" and "honour" in Mr. Subba Rao's opinion? Can "gentlemanliness" be divorced from "honour" according to his views? And if a member of the Bar acts "otherwise than as a gentleman in his dealings with his clients, or the public, or with the court, can he still claim to be an honourable member of an honourable profession according to Mr. Subba Rao's standard of Ethics? In view of the novel theories propounded by Mr. Subba Rro in his article so soon after the full Bench decision, the public have a right to know whether the members of his Association should in Mr. Subba Ra'o opinion, be excluded from the cotegory of gentlemen" so as to be free from the responsibility of acting as gentlemen.

A Tragedy or a Comedy?

If his answer is in the affirmative, then it may be open to doubt whether, in the face of the High Court decisions which are clear, emphatic and unimpeachable, the members of his Association will be entiled to continue to remain on the Court's Roll and enjoy the high privileges of the profession. If it is in the negative then Mr. Subba Rao stands self-condemned.

Is this a tragedy or a comedy for Mr. Subba Rao?

The Plea of "Sub-Judice."

Mr. Subba Rao wants to give prominence to the question of Sub-judice. This circular contains only a statement of facts and certain necessary instructions to Judge concerned on the administrative side without which no inquiry could be started under the Legal Practitioners' Regulation. It is not an opinion or a finding, and the question of Sub-judice had no bearing on the case before the High Court. It may be of interest to state that the Madras High Court not only expressed their opinion in a Full Bench case, but went further and gave directions to the District Judge in the Judgment itself as to the charge he had to frame against a certain lawyer and ordered the District Judge to hold an inquiry and submit a report. On the receipt of the report the same Judges differed from the District Judge and found the lawyer guilty of the charge framed under their own directions and punished him.

A Strange Mentality.

Mr Subba Rao is evidently under a misconception that a lawyer can conduct case in Court in any way he likes. If Mr. Subba Rao thinks that the art of a advocacy recognizes no limit, no control and no restriction it is indeed a strange mentality. To say that a lawyer owes no duties to the Court in the conduct of a case is to ignore the principles laid down by all the High Courts. On this subject the Mysore High Court has laid down as follows in 39 Mysore High Court Reports—

"An Advocate must never attempt to mislead the court himself nor permit his client to do so. There should be no false suggestions; no misrepresentations; no statements made to induce the court to believe that there are no facts beyond what the Advocate himself has stated; and no suppression of what it is the duty to put before the Court."

"A lawyer is also a moral agent. As such moral agent, he is a judge of right and wrong, and an advocate of what is right. Hence ditates of conscience have to play a prominent part in the practice of the law, and search for truth is to be the ideal of the lawyer since the object of administering the law is the promotion of truth and justice."

But Mr. Subba Rao entertains serious doubts and again gives expression to his feelings of surprise, and questions the rights of the public to say in what way a lawyer should conduct a case.

(To be Continued)

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರ್ಮಕುಂಚದಲ್ಲಿರುವ ಪ್ರತಿಯೊಂದು ಗುರುವರ್ಗಕ್ಕೂ ಮುಖ್ಯವಾಗಿ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು. ಆ ಮಠಾಧಿಕಾರಿಗಳು ಐದುವರ್ಷಕ್ಕೊ ಹತ್ತುವರ್ಷಕ್ಕೊ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಅರಿತುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿ ಕಂಡ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ. ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೫೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೫೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೫೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಛಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೫—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೫—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಳಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ್,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ವಿಜ್ಞಾಪನೆಗಳು.

ಬೆಂಗಳೂರು ಚಿಕ್ಕಪೇಟೆ ನಂ. 92 ಸಿಟಿ ಮೆಡಿಕಲ್ & ಜನರಲ್ ಏಜನ್ಸಿಗೆ ನಮ್ಮ ಔಷಧಿಗಳು ಕಳುಹಿಸುವುದನ್ನು ನಿಲ್ಲಿಸಿರುತ್ತೇವೆ. ಇನ್ನು ಮುಂದೆ ನಮ್ಮ ಎಲ್ಲಾ ಔಷಧಿಗಳು ಚಿಕ್ಕಪೇಟೆ ನಂ. 20/9 ಉತ್ತರಾದಿಮಠ ಬಿಲ್ಡಿಂಗ್ಸ್‌ನಲ್ಲಿರುವ ನಮ್ಮ ಬ್ರಾಂಚಿನಲ್ಲಿ ದೊರೆಯುತ್ತವೆ. ಗ್ರಾಹಕರು ಮೊದಲಿನಂತೆಯೇ ವಿಶ್ವಾಸವಿರಿಸಲು ಪ್ರಾರ್ಥನೆ.

ಪಾಳ್ಯದ ವೆಂಕಟಾಚಲಪಂಡಿತ,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚು—
ನಂ. 7 ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ,
ಬೆಂಗಳೂರು ಸಿಟಿ. 52

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಹದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಸತ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ .ರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿನೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[46] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
पंडित श्रीकाशीनाथशास्त्री यांचे भाषण (मराठी)	८ आणे
Speeches by Pandit Shri Kashinatha Shastri (*English*)	12 A
ವೇದೋಕ್ತಶಿವಪೂಜಾವಿಧಿ	೧೦ ಆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ ರೂ
लिंगधारणचंद्रिका (संस्कृत)	३ रु
महानारायणोपनिषत् (वीरशैवभाष्य-संस्कृत)	१ रु
वीरशैवेंदुशेखर (संस्कृत)	१ रु

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತ... ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಷ್ಟಾವಿದ್ಯಾ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯೋ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಅಷ್ಟಾವಿದ್ಯಾ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ನವಂಬರ್ ೧೯೩೪ [ಸಂಚಿಕೆ ೨೮

ಶ್ರೀ ಗುರುಭ್ಯೋನಮಃ

ದೀಕ್ಷಾ ಸಮಾರಂಭ.

ಮಾನವರು ತಮ್ಮ ಜನ್ಮವನ್ನು ಸಾರ್ಥಕಗೊಳಿಸಬೇಕಾದರೆ ಸನಾತನಕಾಲದಿಂದ ಬಂದ ತಮ್ಮ ತಮ್ಮ ಮತಾಚಾರಗಳನ್ನು ಬಿಟ್ಟು ಎಂದೂ ವರ್ತಿಸಬಾರದೆಂದು ಸರ್ವಮತಗ್ರಂಥಗಳು ಸಿಂಹಗರ್ಜನೆಯಂತೆ ಗರ್ಜಿಸುತ್ತವೆ. ಅದರಂತೆಯೇ ಎಲ್ಲಾ ಮತೀಯರೂ ವರ್ತಿಸುತ್ತಾರೆ. ಆದರೆ ವೀರಶೈವ ಮತೀಯರು ತಮ್ಮ ಧರ್ಮಕ್ಕನುಗುಣವಾದ ದೀಕ್ಷಾಕರ್ಮವನ್ನು ಬಿಟ್ಟು ಮೋಕ್ಷಮಾರ್ಗವಿರೋಧಿಗಳಾಗುವದಲ್ಲದೆ ಧರ್ಮದ್ರೋಹವನ್ನು ಕೂಡ ಕಟ್ಟಿಕೊಳ್ಳುತ್ತಿದ್ದಾರೆ. ಇನ್ನೂ ಎಷ್ಟೋಜನ ವೀರಶೈವರು ಸ್ವಧರ್ಮ ಗ್ರಂಥಗಳನ್ನು ಕಣ್ಣೆತ್ತಿನೋಡದೆ ದೀಕ್ಷೆಯ ಮಹತ್ವವನ್ನು ತಿಳಿಯದೆ ಕುಕಲ್ಪನೆಗಳನ್ನು ಹುಟ್ಟಿಸಿ ತಾವೂ ಕೆಡುವುದಲ್ಲದೆ ವೀರಶೈವ ಜನಾಂಗವನ್ನೂ ಕೆಡಿಸುತ್ತಿದ್ದಾರೆ. ಯಾವನು ಮೋಕ್ಷವನ್ನು ಅಪೇಕ್ಷಿಸುವನೋ ಅವನು ಅವಶ್ಯವಾಗಿ ದೀಕ್ಷಿತನಾಗಲೇಬೇಕು. ದೀಕ್ಷೆಯಿಲ್ಲದೆ ಎಷ್ಟು ಪೂಜೆಮಾಡಿದರೂ, ಗುಡ್ಡಕ್ಕೆ ಕಲ್ಲುಹೊತ್ತಂತಾಗುವುದು. ದೀಕ್ಷಾರಹಿತನಾಗಿ ಯಾವನು ಶಿವಪೂಜೆಯನ್ನು ಮಾಡುವನೋ ಅವನು ಘೋರಾರಣ್ಯದಲ್ಲಿ ಬ್ರಹ್ಮರಾಕ್ಷಸನಾಗಿ ಹುಟ್ಟುವನೆಂದು ವೀರಶೈವಾಚಾರ ಪ್ರದೀಪಿಕೆ ಎಂಬ ಗ್ರಂಥವು ಸಿಂಹಗರ್ಜನೆಯಂತೆ ಗರ್ಜಿಸುತ್ತಿದ್ದರೂ, ನಾವು ಅದರ ಕಡೆಗೆ ಕಿವಿಗೊಡದಿರುವುದು ವಿಷಾದಕರವಾಗಿದೆ. ಅಹಾ ಏನಿದು ಆರ್ಯಸಮಾಜದ ಸೊಬಗು? ಅಹಾ! ಏನಿದು ಕ್ರೈಸ್ತಸಮಾಜದ ಬೆಳವಣಿಗೆ? ಎಂದು ಅನ್ಯ ಸಮಾಜಗಳ ಆಟೋಪವನ್ನು ನೋಡಿ ಅದಕ್ಕೆ ಮೆಚ್ಚಿ ಸ್ವಧರ್ಮಭ್ರಷ್ಟರಾಗುವ ಸಮಯದಲ್ಲಿ ಮರಾಠಿ ದೇಶದ ವೀರಶೈವರ ಅಭ್ಯುದಯಕ್ಕಾಗಿ ಸೊಲ್ಲಾಪುರ ಜಿಲ್ಲೆಗೆ ಸೇರಿದ ಹುಟ್ಟಿಗಿ ಗ್ರಾಮದಲ್ಲಿ ಒಂದು ವಿಭೂತಿಯು ಪ್ರಕಾಶಿಸುತ್ತಿದೆ. ಯಾವ ವ್ಯಕ್ತಿಯಿಂದ ಮರಾಠಿ ದೇಶದ ಜನರ ಜನ್ಮಗಳು ಸಾರ್ಥಕತೆಯನ್ನು ಹೊಂದಿದವೋ ಯಾವ ಮಹನೀಯರಿಂದ ವೀರಶೈವ ಸಮಾಜವು ಶೋಭೆಯನ್ನು ಹೊಂದಿದೆಯೋ ಅಂಥ ಶ್ರೀ ಷ|| ಬ್ರ|| ಪಟ್ಟಾಧ್ಯಕ್ಷ ಬಾಲತಪಸ್ವಿ ಹುಟ್ಟಿಗಿ ಶ್ರೀಗಳವರು ಮರಾಠಿದೇಶದಲ್ಲಿ ಸಂಚರಿಸುತ್ತ ಧರ್ಮವಿಮುಖರಾದ ಜನರನ್ನು ಧರ್ಮಸಮ್ಮುಖರನ್ನಾಗಿ ಮಾಡುತ್ತ ಅಕ್ಕಲಕೋಟೆ ಸಂಸ್ಥಾನಕ್ಕೆ ಸೇರಿದ ಚಪ್ಪಳಗಾಂವ ಎಂಬ ಗ್ರಾಮಕ್ಕೆ ದಯಮಾಡಿಸಿ ತಮ್ಮ ಅಮೃತ ಮಯವಾದ ವಾಣಿಯಿಂದ ದೀಕ್ಷಾಕರ್ಮದಲ್ಲಿ ಆಸಕ್ತಿಯುಳ್ಳವರನ್ನಾಗಿ ಮಾಡಿದರು. ಆಗ ಆ ಗ್ರಾಮಸ್ಥವೀರಶೈವರು ಅತ್ಯಂತ ಭಕ್ತಿಯಿಂದ ಕೂಡಿದವರಾಗಿ ಆ|| ೧೧ ಶುಕ್ರವಾರ ದಿವಸ ರಾವಜಪ್ಪ ಪಾಟೀಲರವರ ಮನೆಯಲ್ಲಿ ೪೦೯ ಜನರು ಶಿವಾಸಹಿತರಾಗಿ ದೀಕ್ಷೆಯನ್ನು ಪಡೆದುಕೊಂಡರು. ಅಲ್ಲಿ ಶ್ರೀಷ|| ಬ್ರ|| ಪಟ್ಟಾಧ್ಯಕ್ಷ ಗುರುವರ್ಯಸ್ವಾಮಿ ಸುತ್ತಗಟ್ಟಿ, ಶ್ರೀ ಷ|| ಬ್ರ|| ಮಹಾಲಿಂಗಸ್ವಾಮಿ ಜೈನಾಪೂರ ಶ್ರೀ ಷ|| ಬ್ರ|| ಧೇನುಕರ್ಣಸ್ವಾಮಿ ಸೊಲ್ಲಾಪೂರ, ಶ್ರೀದೇಶಿಕವರ್ಯ ಶಿವಕುಮಾರಸ್ವಾಮಿ ವರೂರ, ಶಾಂತವೀರದೇವರು ತಳವಾರಗೇರಿ, ಇವರು ದೀಕ್ಷಾ ಗುರುಗಳಾಗಿದ್ದರು. ಈ ಕಾರ್ಯದಲ್ಲಿ ಭೀಮರಾವ ಸರಟೆ ಇವರು ಬಹಳ ಸಹಾಯಮಾಡಿದರು. ಭಾಗೀರಥೀಬಾಯಿಕಟಾಪೆ ಸೋಲಾಪೂರ ಇವರು ಜನರಮ್ಯವಾಗುವಂತೆ ಗುರುವಿಷಯವಾಗಿ ಕೀರ್ತನವನ್ನು ಮಾಡಿದರು. ಆ ಮೇಲೆ ಅಲ್ಲಿಯ ವೀರಶೈವ ಮುಖಂಡರು (ಶ್ರೀ ಮದ್ವೀರಶೈವ ಸೇವಾಸಂಘದ) ವತಿಯಿಂದ ಮರುಳಾರಾಧ್ಯ ವಾಚನಾಲಯ, ಪಂಚಾಚಾರ್ಯರ ಭಜನಾಸಂಘಗಳನ್ನು ಸ್ಥಾಪಿಸಿದ್ದಾರೆ. ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ೨ ರೂಪಾಯಿಗಳು ಸಮರ್ಪಿಸಲ್ಪಟ್ಟವು. ಈ ಸಂಘಗಳಿಗೆ ರಾವಜಪ್ಪ ಪಾಟೀಲ ಇವರು ಅಧ್ಯಕ್ಷರಾಗಿಯೂ ಸಾಯಬಣ್ಣ ಮಮಾಣೆ ಇವರು ಉಪಾಧ್ಯಕ್ಷರಾಗಿಯೂ ಅಣ್ಣಾರಾವ ಪಾಟೀಲ ಇವರು ಸೆಕ್ರೆಟರಿಗಳಾಗಿಯೂ, ಭೀಮಾಶಂಕರ ದುಲಂಗೇ ಇವರು ಕೋಶಾಧ್ಯಕ್ಷರಾಗಿಯೂ, ಬಸವಣ್ಣಪ್ಪ ಪಾಟೀಲ, ವ ಸಿದ್ಧರಾಮಪ್ಪ ಯಲಗಡೆ ಇವರು ಆಡಿಟರಾಗಿಯೂ ಸಿದ್ಧಪ್ಪ ಬಾನೇಗಾವ ಭೋಜರಾಯ ಪಾಟೀಲ, ವಿಶ್ವನಾಥಸ್ವಾಮಿ ಇವರೇ ಮೊದಲಾದವರು ಮೆಂಬರಾಗಿಯೂ ಆರಿಸಲ್ಪಟ್ಟರು. ಗುರುಭಕ್ತಿ, ನಿಷ್ಠಾಗರಿಷ್ಠರಾದ ಇವರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಶುಭನನ್ನೀಯಲೆಂದು ಕೋರುವ,

ಶರಣಬಸವಶರ್ಮಾ ಅರಕೇರಿ,
ವಾರದಪಾಠಶಾಲಾ ಸೊಲ್ಲಾಪೂರ.

ಹಿಂದೂಪುರದ ವೃತ್ತಾಂತ

ಹಿಂದೂಪುರದಲ್ಲಿರುವ ವೀರಶೈವ ಮತೀಯರಲ್ಲಿ ಪ್ರಮುಖರೂ, ಮೈಸೂರು ದೇಶದ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜಮೀನುದಾರರೂ ಆಗಿರುವ ಶ್ರೀಮಂತ ಮ|| ರಾ|| ದುರ್ಗದ ಸಂಬುಂಡಪ್ಪನವರು ಟೌನ್ ಮುನಿಸಿಪಾಲಿಟಿಯಲ್ಲಿ ಕೌನ್ಸಿಲರ ಪದವಿಯನ್ನು ಪಡೆದು ತಾ|| 12-11-34 ರಲ್ಲಿ ವೈಸ್ ಪ್ರೆಸಿಡೆಂಟ್ ಪದವಿಯಲ್ಲಿ ವಿಜಯವನ್ನು ಹೊಂದಿರುವುದು ಅತ್ಯಂತ ಸಂತೋಷಕರವಾಗಿದೆ. ಈ ಮುನಿಸಿಪಾಲಿಟಿಯು, 16000 ಪ್ರಜಾ ಸಂಖ್ಯೆಯುಳ್ಳದ್ದಾಗಿಯೂ, ದೊಡ್ಡ ಮುನಿಸಿಪಾಲಿಟಿಯಾಗಿಯೂ ಇದ್ದು ಅಲ್ಪ ಸಂಖ್ಯಾಕರಾದ ನಮ್ಮ ವೀರಶೈವರಲ್ಲಿ ವೈಸ್ ಪ್ರೆಸಿಡೆಂಟ್ ಪದವಿಯು ದೊರೆತದ್ದು ನಮ್ಮ ಮತಕ್ಕೆ ಅತ್ಯಂತ ಭೂಷಣವಾಗಿದೆ.

ಶಾಸನಕೋಟೆ ಚನ್ನಮಲ್ಲಪ್ಪ.

16 ನೇ ತಾರೀಖು ಪ್ರಾತಃಕಾಲ ಕಲ್ಕತ್ತಾದ ಒಂದು ಭಾರೀ ಕಣಬಿನ ಕಾರ್ಖಾನೆಗೆ ಬೆಂಕಿಬಿದ್ದು ಸುಮಾರು 4000 ಪಿಂಡಿ ಕಣಬು ಸುಟ್ಟು ಹೋಯಿತು. 1 ಲಕ್ಷ ರೂಪಾಯಿಗಳ ನಷ್ಟವಾಗಿದೆ.

ಸ್ವೀಕಾರ

ಶಿಕಾರಿಪುರ ತಾ|| ಕಡೆನಂದಿಹಳ್ಳಿ ಮಠದ ವೇ|| ಕಾವ್ಯತೀರ್ಥ ಗುರುಮೂರ್ತಿಸ್ವಾಮಿಗಳವರಿಗೆ ಪ್ರಾಪ್ತವಾಗಿದ್ದ ಎರಡು ದುರ್ಘಟ ಪ್ರಸಂಗಗಳು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಬಲದಿಂದ ನಿವಾರಣೆಯಾದುದಕ್ಕಾಗಿ ಸದರಿಯವರು ಪ್ರಭಾ ಪೋಷಣ ಕ್ಕೋಸ್ಕರ 4 ರೂ. ಗಳನ್ನು ಕಳುಹಿಸಿದ್ದಾರೆ.

ಅಕ್ಕಲಕೋಟೆ ಸಂಸ್ಥಾನಕ್ಕೆ ಸೇರಿದ ಚಪ್ಪಳಗಾಂವದಲ್ಲಿ ನೆರವೇರಿದ ಶಿವದೀಕ್ಷಾ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಶ್ರೀ|| ಷ|| ಬ್ರ|| ಹೋಟಗಿ ಬೃಹನ್ಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹುವ್ವಿನ ಹಡಗಲಿಯಲ್ಲಿರುವ ಮ|| ರಾ|| ಸೊಪ್ಪಿನ ಚನ್ನಪ್ಪನವರು ತಮ್ಮ ಮನಃಸಂಕಲ್ಪವು ಜಗದಾಚಾರ್ಯರ ಆಶೀರ್ವಾದ ಬಲದಿಂದ ನೆರವೇರಿದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಶ್ರೀಮಂತ ಗುಗ್ಗರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಈಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಐರಿಷ್ ಜನಗಳು ಇಂಗ್ಲಿಷರನ್ನು ದ್ವೇಷಿಸುವುದಿಲ್ಲ.

ಐರಿಷ್ ಮುಖಂಡರಾದ ಡಿವೇಲರಾರವರು ಡಬ್ಲಿನ್ ಯೂನಿವರ್ಸಿಟಿಯಲ್ಲಿ ಭಾಷಣಮಾಡುವಾಗ್ಗೆ, ಯಾವ ಐರಿಷ್ ಪ್ರಜೆಯೂ ಇಂಗ್ಲಿಷರನ್ನು ದ್ವೇಷಿಸುವುದಿಲ್ಲವೆಂದೂ, ಆದರೆ ತಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸಿದಕ್ಕಾಗಿ ಆಗ್ರಹಗೊಂಡರೆಂದೂ, ಉಳಿದ ವಿಷಯದಲ್ಲಿ ಸ್ನೇಹದಿಂದ ನಡೆದುಕೊಳ್ಳಲು ಸಿದ್ಧರಾಗಿದ್ದಾರೆಂದೂ ಹೇಳಿದರು.

ಭೂಮಿಯು ತಿರುಗುತ್ತಿರುವುದೆಂದು ಹೇಳುವುದು ತಪ್ಪು!

ಯುನೈಟೆಡ್ ಪ್ರಾವಿನ್ಸಿಸ್ ಮೆಕಾನಿಕ್‌ರವರಲ್ಲಿ ಒಬ್ಬರಾದ ಮಿ|| ಅಲ್ಲಾರಾಖೆರವರು ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರದ ಅಧಿಕಾರಿಗಳಿಗೆ ಭೂಮಿಯು ಗುಂಡಾಗಿಲ್ಲವೆಂದೂ, ಇದ್ದ ಕಡೆಯಲ್ಲಿಯೇ ಇರುತ್ತದೆಂದೂ, ಇದನ್ನು ನಾನು ಸಮರ್ಥಿಸಬಲ್ಲೆನೆಂದೂ ಒಂದು ಪ್ರಕಟನೆಯನ್ನು ಕಳುಹಿಸಿದ್ದಾರೆ. ಇವರು ವಿಶ್ವವಿದ್ಯಾನಿಲಯಕ್ಕೆ ಕೆಲವು ಯಂತ್ರಗಳನ್ನು ಕಳುಹಿಸಿದ್ದಾರೆ. ಇದರ ಸಹಾಯದಿಂದ ಭೂಮಿಯು ಗುಂಡಾಗಿದ್ದು ಸೂರ್ಯನನ್ನು ಸುತ್ತುತ್ತಿರುವುದೆಂಬ ಸಿದ್ಧಾಂತವು ತಪ್ಪೆಂದು ತೋರಿಸಿರುವೆನೆಂಬುದಾಗಿ ಹೇಳಿದ್ದಾರೆ.

ಪತ್ರವ್ಯವಹಾರ.

ಜಾಸ್ತೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಶಯ.

ಆರೋಗ್ಯಮಾರ್ಗ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ. ಬೆಂಗಳೂರು.

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ, ಶ್ರೀಕ್ಷೇತ್ರಕಾಶೀ.

ತೈಲಾಭ್ಯಂಗ.

ಪಂಚಮಹಾಭೂತಗಳಲ್ಲೊಂದಾಗಿರುವ ವಾಯುವು ಜಗತ್ತಿನ ಸಕಲ ಕಾರ್ಯಗಳಿಗೂ ಸಹಾಯಕವಾಗಿರುತ್ತದೆ. ವಾಯುವಿನ ಬಲದಿಂದಲೇ ಸಕಲ ಪ್ರಾಣಿಗಳು ಜೀವಿಸುತ್ತವೆ. ವಾಯುವು ಕೋಪಗೊಂಡರೆ ನಿಮಿಷಮಾತ್ರದಲ್ಲಿಯೇ ಜಗತ್ತು ಸಂಪೂರ್ಣ ನಿರ್ನಾಮವಾಗುವುದು. ವಾಯುವಿನ ಕೃಪೆಯಿಂದಲೇ ಸಂಸಾರದ ಪ್ರತಿಯೊಂದು ಕಾರ್ಯವೂ ನಿರ್ವಿಘ್ನವಾಗಿ ಜರುಗುವುದು. ವಾಯುವು ಅತಿ ಶೀಘ್ರಗಮನಶೀಲವಾಗಿಯೂ, ಶೀತಗುಣವಿಶಿಷ್ಟವಾಗಿಯೂ, ಜಗದ್ವ್ಯಾಪಕವೂ ಆಗಿರುತ್ತದೆ. ಇಂತಹ ಅಸಾಧಾರಣ ಶಕ್ತಿಸಂಪನ್ನವಾದ ವಾಯುವು ಮನುಷ್ಯ ಶರೀರದಲ್ಲಿ ಉದಾನ, ಪ್ರಾಣ, ಸಮಾನ, ಅಪಾನ, ವ್ಯಾನಗಳೆಂಬ ಹೆಸರುಗಳನ್ನು ಸ್ಥಾನಭೇದದಿಂದ ಹೊಂದಿ ಶರೀರದ ಸಂಪೂರ್ಣ ಕಾರ್ಯಸಮೂಹವನ್ನು ತನ್ನ ಅಧೀನವನ್ನಾಗಿ ಮಾಡಿಕೊಂಡು ಸರ್ವಾವಯವಗಳಲ್ಲಿ ಸಂಚರಿಸುವುದಾಗಿದೆ. ವಾಯುವಿನ ಸಹಾಯವಿಲ್ಲದೆ ಕಣ್ಣು ಕಿವಿ ಮುಂತಾದ ಇಂದ್ರಿಯಗಳು ಮತ್ತು ರಸ ರಕ್ತ ಮಾಂಸಾದಿ ಧಾತುಗಳು, ಮಲ ಮೂತ್ರ ಬೆವರುಗಳೆಂಬ ಮಲತ್ರಯ, ಇವುಗಳ ಯಾವ ಕಾರ್ಯವೂ ನಡೆಯಲಾರದು. ಮತ್ತು ಪ್ರತಿಯೊಂದವಯವದ ಕಾರ್ಯವಾದರೂ ವಾಯುವಿನ ಸಹಾಯವಿಲ್ಲದೆ ನಡೆಯುವಂತಿಲ್ಲ. ಆದುದರಿಂದ ವಾಯುವು ಶರೀರದಲ್ಲಿರುವ ಕರಚರಣಾದಿ ಸಕಲಾವಯವಗಳಿಗೂ ಸಪ್ತಧಾತುಗಳಿಗೂ ಪಿತ್ತ ಶ್ಲೇಷ್ಮಗಳಿಗೂ ಮಲತ್ರಯಕ್ಕೂ ರಾಜನಂತಿರುತ್ತದೆ. ವಾಯುವಿನ ಸರ್ವವ್ಯಾಪಕತ್ವವನ್ನೂ ಸಕಲಾವಯವಗಳ ಪ್ರಭುತ್ವವನ್ನೂ ಚರಕಸಂಹಿತೆಯ ಸೂತ್ರಸ್ಥಾನದ 'ವಾತಕಲಾಕಲೀಯ' ಎಂಬ ೧೨ನೆಯ ಅಧ್ಯಾಯದಲ್ಲಿ—

ವಾಯುಸ್ತಂತ್ರಯಂತ್ರಧರಃ ಪ್ರಾಣೋದಾನಸಮಾನವ್ಯಾನಾಪಾನಾತ್ಮಾ........ ಸರ್ವೇಂದ್ರಿಯಾಣಾಮುದ್ಯೋಜಕಃ ಸರ್ವೇಂದ್ರಿಯಾರ್ಥಾನಾಮಭಿವೋಢಾ ಸರ್ವಶರೀರಧಾತುವ್ಯೂಹಕರಃ ಸಂಧಾನಕರಃ ಶರೀರಸ್ಯ ಪ್ರವರ್ತಕೋ ವಾಚಃ ಪ್ರಕೃತಿಃ ಸ್ಪರ್ಶಶಬ್ದಯೋಃ ಶ್ರೋತ್ರಸ್ಪರ್ಶನಯೋರ್ಮೂಲಂ........ ||

ಎಂದು ಅತಿ ವಿಸ್ತಾರವಾಗಿ ವರ್ಣಿಸಿರುತ್ತದೆ. ವಾಚಕರೇ! ಕೇಳಿದಿರಾ! ವಾಯುವಿನ ಅಪಾರ ಮಾಹಾತ್ಮ್ಯವನ್ನು? ಇದುವರೆಗೂ ವರ್ಣಿಸಿರುವ ವಾಯುಪುರಾಣದಿಂದ ನಿಮಗೇನು ತಿಳಿಯಬಂದಿತು? ಇದೇ ಅಲ್ಲವೇ ವಾಯುವು ಶರೀರದ ಸಕಲಸಾಮಗ್ರಿಗಳಿಗೆ ಅಧಿಪತಿಯಾಗಿರುವುದು? ಇದು ಕೋಪಕೊಂಡರೆ ಶರೀರದ ಎಲ್ಲಾ ಕಾರ್ಯಗಳೂ ನಿಂತುಹೋಗುವುವು. ಅಥವಾ ಇದರ ಕೋಪದಿಂದ ಶರೀರದಲ್ಲಿ ನಾನಾವಿಧಗಳಾದ ಉಪದ್ರವಗಳುಂಟಾಗುವುದಾದುದರಿಂದ ವಾಯುದೇವನು ಶರೀರದಲ್ಲಿ ಕೋಪಗೊಂಡು ತನ್ನ ಪ್ರತಾಪವನ್ನು ಅನೇಕ ವಿಧವಾಗಿ ತೋರಿಸದಿರುವುದಕ್ಕೆ ಅವನ ಶಾಂತಿಗಾಗಿ ಶ್ರೇಷ್ಠವಾದ ಉಪಾಯವನ್ನು ಹುಡುಕಬೇಕೆಂದು? ಅಹುದು ಈ ಅನ್ವೇಷಣೆಯು ವೈದ್ಯಶಾಸ್ತ್ರಸಮ್ಮತವಾಗಿರುತ್ತದೆ. ಹಾರೀತಮುನಿಯಾದರೂ ಮನುಷ್ಯರಲ್ಲಿ ವಾಯುವನ್ನೇ ರಕ್ಷಿಸಬೇಕೆಂದು

ರಕ್ಷಣೀಯಂ ಗಜೇ ಪಿತ್ತಂ ಶ್ಲೇಷ್ಮಂ ವಾಜಿಷು ಸರ್ವದಾ | ಪವನೋಯಂ ಮನುಷ್ಯೇಷು ಪ್ರಾಯೋ ರಕ್ಷ್ಯೇಷ್ಟ ಸರ್ವದಾ || ಹಾರೀತಸಂಹಿತಾ

ಎಂಬ ಶ್ಲೋಕದಿಂದ ಹೇಳಿರುವನು. ಆನೆಯು ರೋಗಗಳಿಂದ ದೂರವಾಗಿ ಸುಖಿಯಾಗಿರಬೇಕಾದರೆ ಪಿತ್ತವು ಕೋಪಗೊಳ್ಳದಿರುವುಕ್ಕೆ ಅನುಕೂಲವಾದ ಉಪಚಾರವನ್ನು ಮಾಡಬೇಕು. ಕುದುರೆಯು ನೀರೋಗದಿಂದಿರಬೇಕಾದರೆ ಶ್ಲೇಷ್ಮವು ಕುಪಿತವಾಗುವುದಕ್ಕನುಕೂಲವಾದ ಉಪಾಯವನ್ನು ಮಾಡಬೇಕು. ಮನುಷ್ಯರು ಯಾವಾಗಲೂ ನೀರೋಗಿಗಳಾಗಿ ಸುಖದಿಂದ ಜೀವಿಸಬೇಕಾದರೆ "ವಾಯುವು" ಕೋಪಗೊಳ್ಳದಿರುವುದಕ್ಕೆ ಸಮುಚಿತಗಳಾದ ಉಪಾಯಗಳನ್ನು ಹುಡುಕಿ ಆ ಉಪಾಯಗಳಲ್ಲಿ ಅತ್ಯಂತ ಶ್ರೇಷ್ಠವಾದುದನ್ನೇ ನಿಯಮ ಪೂರ್ವಕವಾಗಿ ಆಚರಿಸಿ ವಾಯುವಿನ ಕೋಪವನ್ನು ಶಾಂತಿಗೊಳಿಸಿಕೊಳ್ಳಬೇಕು. ವಾಯುಕೋಪವನ್ನು ಶಾಂತಿಗೊಳಿಸುವುದಕ್ಕಾಗಿ ಚರಕಮಹರ್ಷಿಯು ಸರ್ವಪ್ರಧಾನವಾದ ಉಪಾಯವನ್ನು

ಸ್ಪರ್ಶನೇಽಭ್ಯಧಿಕೋ ವಾಯುಃ ಸ್ಪರ್ಶನಂಚತ್ವಗಾಶ್ರಿತಂ | ತ್ವಚಶ್ಚ "ಪರಮೋಽಭ್ಯಂಗಃ" ತಸ್ಮಾತ್ತಂ ಶೀಲಯೇನ್ನರಃ || ಚ. ಸೂ. ೮೫

ಎಂದು ಬೋಧಿಸಿರುವನು. "ರೂಪರಹಿತಸ್ಪರ್ಶವಾನ್ವಾಯುಃ" ಎಂಬ ವೈಶೇಷಿಕ ಪ್ರಮಾಣಾನುಸಾರವಾಗಿ ವಾಯುವು ಕಣ್ಣುಗಳಿಗೆ ಕಾಣಿಸುವಂತಹ ಸ್ವಭಾವವುಳ್ಳದಾಗಿರುವುದಿಲ್ಲ. ಇದರ ಇರುವಿಕೆಯು ನಮಗೆ ಸ್ಪರ್ಶದಿಂದಲೇ ಗೊತ್ತಾಗುವುದು. ಆದುದರಿಂದಲೇ ರೂಪರಹಿತವಾಗಿಯೂ ಸ್ಪರ್ಶೇಂದ್ರಿಯ ಗೋಚರವಾಗಿಯೂ ಇರುವುದೆಂಬ ವಾಯುಸ್ವರೂಪ ನಿರ್ಣಯವು ಪ್ರಸಿದ್ಧವಾಗಿದೆ. ಈ ನಿರ್ಣಯದಿಂದ ವಾಯುವಿನ ಸ್ಥಿತಿಯು ಸ್ಪರ್ಶನೇಂದ್ರಿಯದಿಂದಲೇ ಗೊತ್ತಾಗುವುದೆಂಬುದು ಸಿದ್ಧವಾಯಿತು. ಸ್ಪರ್ಶನೇಂದ್ರಿಯವಾದರೋ ಚರ್ಮವನ್ನಾಶ್ರಯಿಸಿಕೊಂಡಿರುವುದಾಗಿದೆ. ವಾಯುವು ತನ್ನ ಆಶ್ರಯಸ್ಥಾನವಾದ ಸ್ಪರ್ಶನೇಂದ್ರಿಯ (ಚರ್ಮ) ದಲ್ಲಿಯೇ ವಿಶೇಷವಾಗಿರುತ್ತದೆ. ಒಟ್ಟಿನ ಮೇಲೆ ವಾಯುವು ಶರೀರಕ್ಕೆ ಆವರಣ ಸ್ವರೂಪವಾದ ಚರ್ಮದಲ್ಲಿಯೇ ಹೆಚ್ಚಾಗಿರುತ್ತದೆಂಬುದೇ ತಿಳಿದಂತಾಯಿತು. ಆದುದರಿಂದ ಈ ಚರ್ಮಗತವಾದ ವಾಯುವು ಕೋಪಗೊಳ್ಳದೆ ಯಾವಾಗಲೂ ಸಮಾನಾವಸ್ಥೆಯಲ್ಲಿರಬೇಕೆಂಬುದರ ಸಲುವಾಗಿಯೇ ನಿತ್ಯದಲ್ಲಿ ಶ್ರೇಷ್ಠವಾದ "ತೈಲಾಭ್ಯಂಗ"ವನ್ನು ಮಾಡಬೇಕೆಂದು ವೈದ್ಯಶಾಸ್ತ್ರವು ಬೋಧಿಸುತ್ತದೆ.

ವಾಯುಪ್ರಕೋಪವನ್ನು ಶಾಂತಿಗೊಳಿಸುವುದಕ್ಕಾಗಿ ತೈಲಚಿಕಿತ್ಸೆಯೇ ಪ್ರಧಾನವಾಗಿರುವುದು. ಒಣಗಿದ ಕಟ್ಟಿಗೆಯನ್ನು ಎಣ್ಣೆಯಲ್ಲಿ ಸ್ವಲ್ಪ ದಿನಗಳವರೆಗೆ ಹಾಕಿದ್ದರೆ ಅದನ್ನು ಬೇಕಾದಂತೆ ಬಗ್ಗಿಸಿಕೊಳ್ಳಬಹುದು. ವಾಯುವಿನ ಕೋಪದಿಂದ ಕೈಕಾಲುಗಳು ಕಟ್ಟಿಗೆಯಂತೆ ಚಲನರಹಿತಗಳಾಗಿ ಬಗ್ಗಿಸಲಿಕ್ಕೆ ಬಾರದಿರುವಾಗ ಕೆಲವು ದಿನಗಳವರೆಗೆ ಎಣ್ಣೆಯನ್ನು ತಿಕ್ಕುತ್ತಿದ್ದರೆ ಕೈಕಾಲುಗಳು ತಾವಾಗಿಯೇ ಬಗ್ಗುವಂತಾಗುವುವು. ಆದುದರಿಂದಲೇ ವಾತಪ್ರಕೋಪದಿಂದುಂಟಾಗುವ ರೋಗಗಳಲ್ಲಿ ತೈಲಾಭ್ಯಂಗ ತೈಲಪಾನ ತೈಲಬಸ್ತಿ (ಗುದದ್ವಾರದಿಂದ ಪಿಚಕಾರಿಯಮೂಲಕ ಎಣ್ಣೆಯನ್ನು ಪ್ರವೇಶಗೊಳಿಸುವುದು) ಮುಂತಾದ ತೈಲಚಿಕಿತ್ಸೆಗಳೇ ವಿಶೇಷವಾಗಿ ಹೇಳಲ್ಪಟ್ಟಿವೆ. ವಾತಜನ್ಯರೋಗಗಳ ಶಾಂತಿಗಾಗಿ ತೈಲಚಿಕಿತ್ಸೆಯಂತಹ ಉತ್ತಮ ಚಿಕಿತ್ಸೆಯು ಮತ್ತೊಂದಿಲ್ಲ. ತೈಲಾಭ್ಯಂಗದಿಂದುಂಟಾಗುವ ಫಲವು ಸುಶ್ರುತಸಂಹಿತೆಯಲ್ಲಿ.

ಜಲಸಿಕ್ತಸ್ಯ ವರ್ಧಂತೇ ಯಥಾಮೂಲೇಂಕುರಾಸ್ತರೋಃ | ತಥಾ ಧಾತುವಿವೃದ್ಧಿರ್ಹಿ ಸ್ನೇಹಸಿಕ್ತಸ್ಯ ಜಾಯತೇ || ಸು. ಚಿ. ಅ ೨೪

ವೃಕ್ಷದ ಮೂಲಕ್ಕೆ ನೀರನ್ನೆರದರೆ ಶಾಖೆಗಳೂ, ಎಲೆಗಳೂ ಪುಷ್ಪಫಲಗಳೂ ಅಭಿವೃದ್ಧಿಯನ್ನೈದಿ ಆ ವೃಕ್ಷವು ಅತಿತರ ಬಿಸಿಲಿನಿಂದುಂಟಾದ ಸಂತಾಪವನ್ನು ತನ್ನ ತಂಪಾದ ನೆರಳಿಂದ ನಿವಾರಣೆಗೊಳಿಸಿ ತನ್ನ ಮಧುರ ಫಲಗಳಿಂದ ಮತ್ತು ಸುವಾಸನೆಯುಳ್ಳ ಪುಷ್ಪಗಳಿಂದ ಮನಸ್ಸನ್ನಾನಂದಗೊಳಿಸುವಂತೆ ನಿತ್ಯದಲ್ಲಾಚರಿಸುವ ತೈಲಾಭ್ಯಂಗದಿಂದ ವಾಯುವು ಸಮಾನತೆಯನ್ನು ಹೊಂದಿ ರಕ್ತಮಾಂಸಾದಿಧಾತುಗಳೂ, ಸಮಸ್ತ ಅವಯವಗಳೂ ಉಚಿತಪರಿಮಾಣದಿಂದ ವೃದ್ಧಿಗೊಂಡು ದೇಹವು ಕಾಂತಿವಿಶಿಷ್ಟವಾಗಿ ಕಣ್ಣು ಕಿವಿ ಮುಂತಾದ ಇಂದ್ರಿಯಗಳಲ್ಲಿ ಶಕ್ತಿಯು ಹೆಚ್ಚಾಗುವುದು.

ತಲೆಗೆ ಎಣ್ಣೆಯನ್ನು ಹಚ್ಚಿ ತಿಕ್ಕುವುದರಿಂದ ಸ್ಮೃತಿಭಂಡಾರವಾದ ಮೆದಳಿನ ಶಕ್ತಿಯು ವೃದ್ಧಿಯಾಗಿ ಕೂದಲುಗಳು ದೀರ್ಘವಾಗಿಯೂ ಭ್ರಮರಗಳಂತೆ ಕಪ್ಪಾಗಿಯೂ ದೃಢಮೂಲಗಳಾಗಿಯೂ ಬೆಳೆದು ತಲೆನೋವು ಕೂದಲುದರುವುದು ಕೂದಲು ಬೆಳ್ಳಗಾಗುವುದು ಕಣ್ಣು ನೋವು ನಿದ್ರೆ ಬರದಿರುವುದು ಇವೇ ಮೊದಲಾದ ರೋಗಗಳು ಶಾಂತವಾಗುವುವು.

ಕಿವಿಗಳಿಗೆ ಎಣ್ಣೆಯನ್ನು ಬಿಡುವುದರಿಂದ ಕುತ್ತಿಗೆಯಲ್ಲಿರುವ 'ಮನ್ಯಾ' ಎಂಬ ನರವು ದೃಢವಾಗಿ ಕುತ್ತಿಗೆಯಲ್ಲಿ ಬಲವು ಸ್ಥಿರವಾಗುವುದಲ್ಲದೆ ಕಿವಿಯು ಸೋರುವುದು ಕಿವಿಯು ನೋವು ಕಿವಿಯು ಕೇಳಿಸದಿರುವುದೇ ಮೊದಲಾದ ರೋಗಗಳು ನಾಶವಾಗುವುವು.

ಕಾಲುಗಳಿಗೆ ಎಣ್ಣೆಯನ್ನು ಹಚ್ಚಿ ತಿಕ್ಕುವುದರಿಂದ ಅಂಗಾಲಿನಲ್ಲಿ ಉರಿಯುವುದು ಹಿಮ್ಮಡಿಯೊಡೆಯುವುದು ಇವೇ ಮೊದಲಾದ ರೋಗಗಳುಂಟಾಗುವುದಿಲ್ಲ ಮತ್ತು ಕಣ್ಣುಗಳಲ್ಲಿ ದೃಷ್ಟಿಶಕ್ತಿಯು ಸ್ಥಿರವಾಗುವುದು.

ಉಳಿದ ಅಂಗಗಳಲ್ಲಿ ಎಣ್ಣೆಯನ್ನು ಹಚ್ಚಿ ತಿಕ್ಕುವುದರಿಂದ ಚರ್ಮವು ಮೃದುವೂ ಕಾಂತಿಯುಕ್ತವೂ ಆಗಿ ಕಜ್ಜಿ ತುರಿ ತದ್ದು ಇಸಬು ಮೊದಲಾದ ಚರ್ಮರೋಗಗಳ ಭಯವು ಸ್ವಪ್ನದಲ್ಲಿಯೂ ಸಂಭವಿಸಲಾರದು.

ದೇಹಕ್ಕೆ ಎಣ್ಣೆಯನ್ನು ಸುಮ್ಮನೆ ಹಚ್ಚಿದ ಮಾತ್ರಕ್ಕೇ ಯಾವ ಪ್ರಯೋಜನವೂ ಉಂಟಾಗಲಾರದು. ಎಣ್ಣೆಯನ್ನು ಹಚ್ಚಿ ೧೦-೧೫ ನಿಮಿಷಗಳವರೆಗೂ ತಿಕ್ಕಿದರೆ ಆ ಎಣ್ಣೆಯು ರೋಮಕೂಪಗಳಲ್ಲಿ ೩೦೦ ಮಾತ್ರೆಗಳ ಕಾಲದವರೆಗೂ ಇದ್ದು (ಒಂದಕ್ಷರಕ್ಕೊಂದು ಮಾತ್ರೆ) ಅನಂತರ ಒಂದೊಂದು ನೂರು ಮಾತ್ರೆಗಳ ಕಾಲಪ್ರಮಾಣದಿಂದ ೯೦೦ ಮಾತ್ರಾ ಕಾಲದವಧಿಯಲ್ಲಿ ಕ್ರಮವಾಗಿ ಚರ್ಮ ರಕ್ತ ಮಾಂಸ ಮೇದಸ್ಸು ಅಸ್ಥಿ ಮಜ್ಜ ಶುಕ್ರ (ವೀರ್ಯ) ಗಳನ್ನು ಪ್ರವೇಶಿಸಿ ಅವುಗಳಲ್ಲುಂಟಾಗುವ ವಾತ ಪಿತ್ತ ಶ್ಲೇಷ್ಮ ವಿಕಾರಗಳನ್ನು ಶಾಂತಗೊಳಿಸುತ್ತದೆ. ಆದುದರಿಂದ ನಿತ್ಯದಲ್ಲಿ ತೈಲಾಭ್ಯಂಗವನ್ನು ಮಾಡುವುದು ಅತ್ಯಂತ ಹಿತಕರವಾದುದಾಗಿದೆ. ನಿತ್ಯದಲ್ಲಿ ಮಾಡದೆ ಇದ್ದರೂ ವಾರಕ್ಕೆರಡುಸಲವಾಗಲಿ ಕಡೆಯ ಪಕ್ಷಕ್ಕೆ ವಾರಕ್ಕೊಂದುಸಲವಾದರೂ ತೈಲಾಭ್ಯಂಗವನ್ನು ಮಾಡಿಯೇ ತೀರಬೇಕು. ಇಲ್ಲವಾದರೆ ವಾಯುವು ಕೋಪಗೊಂಡು ಅನೇಕವಿಧಗಳಾದ ಉಪದ್ರವಗಳುಂಟಾಗುವುವು. ವಾಯುದೇವನು ಸ್ನೇಹಾಭಿಷೇಕದಿಂದ (ಎಣ್ಣೆಯನ್ನು ಹಚ್ಚುವುದರಿಂದ) ತೃಪ್ತನಾಗುವಂತೆ ಮತ್ತಾವ ವಸ್ತುವಿನಿಂದಲೂ ತೃಪ್ತನಾಗಲಾರನು.

ಅಭ್ಯಂಗ ನಿಷೇಧ:—ನೂತನ ಜ್ವರ ಅಜೀರ್ಣ ಅತಿಸಾರ ವಾಂತಿಗಳುಂಟಾದಾಗಲೂ ವಿರೇಚನೌಷಧವನ್ನು ಸೇವಿಸಿರುವಾಗಲೂ ಬಸ್ತಿಕ್ರಿಯೆಯನ್ನು (ಎನಿಮಾ) ಆಚರಿಸಿದಾಗಲೂ ತೈಲಾಭ್ಯಂಗವನ್ನು ಮಾಡಬಾರದು. ತೈಲಾಭ್ಯಂಗವನ್ನು ವ್ಯಾಯಾಮದಿಂದುಂಟಾಗಿರುವ ಉಷ್ಣತೆಯು ಶಾಂತವಾದ ಮೇಲೆಯೇ ಮಾಡಬೇಕು.

ಅಭ್ಯಂಗಕ್ಕೆ ಅರಳೆಣ್ಣೆ ಎಳ್ಳೆಣ್ಣೆ ಕೊಬ್ಬರಿಯ ಎಣ್ಣೆಗಳು ಉತ್ತಮವಾಗಿವೆ ಅಥವಾ ಸುವೈದ್ಯರಿಂದ ಮಾಡಲ್ಪಟ್ಟಿರುವ ಭೃಂಗಾಮಲಕ ಭೃಂಗರಾಜ, ಚಂದನಾದಿ ಹಿಮಸಾಗರ ಲಾಕ್ಷಾದಿ ಬ್ರಾಹ್ಮೀ ಮೊದಲಾದ ಶಾಸ್ತ್ರೀಯತೈಲಗಳನ್ನಾದರೂ ಉಪಯೋಗಿಸಬಹುದು. ಅಂಗಡಿಗಳಲ್ಲಿ ಮಾರಲ್ಪಡುತ್ತಿರುವ ನಾನಾವಿಧ—ಸುಗಂಧ ತೈಲ (ಹೇರ್ ಆಯಿಲ್) ಗಳನ್ನು ಉಪಯೋಗಿಸಬಾರದು. ಪ್ರಾಯಿಕವಾಗಿ ೧೦೦ ಕ್ಕೆ ೯೦ ಹೇರಾಯಿಲ್ಲುಗಳು ವಾಸನೆಯನ್ನು ತೆಗೆದು ಸೀಮೆಯ ಎಣ್ಣೆಯಲ್ಲಿ (ವೈಟ್ ಆಯಿಲ್) ಸ್ವಲ್ಪ ಎಳ್ಳೆಣ್ಣೆಯನ್ನೂ ಬಣ್ಣ ಮತ್ತು ಸುಗಂಧ (ಸೆಂಟ್) ಗಳನ್ನೂ ಕೂಡಿಸಿ ಸಿದ್ಧಗೊಳಿಸಲ್ಪಟ್ಟವುಗಳಾಗಿವೆ. ಮೆದಳಿನ ಶಕ್ತಿಯನ್ನು ವರ್ಧನಗೊಳಿಸುವ ಪದಾರ್ಥಗಳ ಸಂಸರ್ಗವಿಂದ ರಹಿತಗಳಾದೀ ತೈಲಗಳನ್ನು ಉಪಯೋಗಿಸುವುದರಿಂದ ಅಕಾಲದಲ್ಲಿಯೇ ಸುಂದರ ಕೃಷ್ಣಕೇಶಗಳು ಬೆಳ್ಳಗಾಗಿ ಸ್ಮೃತಿಶಕ್ತಿಯು ಕ್ಷೀಣವಾಗುವುದು. ನಿತ್ಯದಲ್ಲಿ ಕೇಶಸಂಸ್ಕಾರವನ್ನು (ತಲೆಯನ್ನು ಬಾಚಿಕೊಳ್ಳುವುದು) ಮಾಡಿಕೊಳ್ಳುವ ಸ್ತ್ರೀಯರೂ ಪುರುಷರೂ ಹೇರಾಯಿಲ್ಲುಗಳ ಮನೋಮೋಹಕವಾದ ಕೇವಲ ಸುಗಂಧಕ್ಕೆ ಮರುಳಾಗಿ ಅವುಗಳನ್ನೇ ಉಪಯೋಗಿಸುತ್ತಿರುವುದು ಸಕಲ ದೇಶಗಳಲ್ಲಿ ವಾಡಿಕೆಯಾಗಿರುವುದಷ್ಟೆ? ಆದರೆ ಈ ತೈಲಗಳು ತತ್ಕಾಲದಲ್ಲಿ ಮನಸ್ಸನ್ನಾನಂದಗೊಳಿಸುವುವಾದರೂ ದಿನಕ್ರಮದಿಂದ ನಾನಾವಿಧಗಳಾದ ಉಪದ್ರವಗಳನ್ನುಂಟುಮಾಡುತ್ತವೆ. ಈ ವಿಷಯವನ್ನು ತಿಳಿದಿರುವ ಎಷ್ಟೋ ಮಂದಿ ಸುಶಿಕ್ಷಿತರೂ ಸುಗಂಧದ ಮೋಹಪಾಶಕ್ಕೊಳಪಟ್ಟು ಈ ತೈಲಗಳಿಂದುಂಟಾಗುವ ಉಪದ್ರವಗಳಿಗೆ ಮತ್ತಾವಕಾರಣವನ್ನೋ ತೋರಿಸಿ ಹೇರಾಯಿಲ್ಲುಗಳನ್ನು ಮಾತ್ರ ನಿರಪರಾಧಿಗಳನ್ನಾಗಿ ಮಾಡುವರು. ಈ ಕಾರಣದಿಂದಲೇ ಪ್ರತಿ ದಿನದಲ್ಲಿಯೂ ಹೊಸಹೊಸ ತೈಲಗಳು ಹೊಸಹೊಸ ವೇಷಗಳನ್ನು ಧರಿಸಿ ನಮ್ಮ ದೇಶದ ಸುಶಿಕ್ಷಿತ ತರುಣರನ್ನು ಮೋಸಗೊಳಿಸುತ್ತಿವೆ. ಸುವಿಚಾರಿಗಳಾದ ವಾಚಕರು ಈ ವೇಷಧಾರಿಗಳಾದ ಹೇರಾಯಿಲ್ಲುಗಳ ಮಾಯಾಜಾಲಕ್ಕೆ ಬೀಳದೆ ಯಾವ ತೈಲವನ್ನು ಉಪಯೋಗಿಸಬೇಕಾದರೂ ಮೊದಲು ಅದರ ಗುಣದೋಷಗಳನ್ನು ಪರಿಶೀಲಿಸಿ ಯೋಗ್ಯವೆಂದು ಕಂಡುಬಂದರೆ ಮಾತ್ರ ಅದನ್ನು ಉಪಯೋಗಿಸುವುದು ಹಿತಕರವಾಗಿರುತ್ತದೆ.

ವಾಚಕರ ಉಪಯೋಗಕ್ಕಾಗಿ ಇಲ್ಲಿ ಒಂದೆರಡು ತೈಲಗಳ ಸುಲಭವಿಧಿಗಳನ್ನು ಬರೆಯುವುದಸಾಮಯಿಕವಾಗಲಾರದು.

೧. ಮಾರಿಲೆಯ ಹೊನ್ನೆ (ಶಾಲಿಪರ್ಣಿ) ಒಂದೆಲೆಯ ಹೊನ್ನೆ (ಪೃಶ್ನಿಪರ್ಣಿ, ಇದು ನರಿಹೊನ್ನೆಯೆಂತಲೂ ರೂಢಿಯಲ್ಲಿದೆ,) ಹೆಗ್ಗುಳ್ಳ, ಸಣ್ಣಗುಳ್ಳ, ನೆಗ್ಗಿಲಿಯಮುಳ್ಳು, ದೇವದಾರು, ಬಿಳಿಯ ನೆಲಗುಂಬಳದ ಗಡ್ಡೆ, ಅತಿಮಧುರ, ಶತಾವರಿ (ಇದನ್ನು ಹಲವೀಬೇರೆಂತಲೂ ಅನ್ನುವರು.) ಈ ವಸ್ತುಗಳನ್ನು ಸಮಭಾಗವಾಗಿ ತಂದು ನೀರಿನ ಸಹಾಯದಿಂದ ಕಲ್ಲಿನ ಮೇಲೆ ಚಟ್ನಿಯಂತರೆದು ಅನಂತರ ಕಲಾಯಿಯ ದೊಡ್ಡ ಪಾತ್ರೆಯಲ್ಲಿ ಅಥವಾ ತೂಳೆಯಿಲ್ಲದ ಕಬ್ಬಿಣದ ಬಾಣಲೆಯಲ್ಲಾಗಲಿ (ಬಾಣಲೆಯು ದೊಡ್ಡದಿರಬೇಕು.) ಮೇಲಿನ ಒಟ್ಟು ಸಾಮಾನುಗಳ ನಾಲ್ಕರಷ್ಟು ಕರಿಯ ಎಳ್ಳಿನ ಎಣ್ಣೆಯನ್ನೂ. ಎಣ್ಣೆಯ ನಾಲ್ಕರಷ್ಟು ನೀರನ್ನೂ ಹಾಕಿ ಮೊದಲೇ ಅರೆದಿಟ್ಟಿರುವ ಕಲ್ಕವನ್ನೂ ಹಾಕಿ ಪಾತ್ರೆ ಅಥವಾ ಬಾಣಲೆಯನ್ನು ಒಲೆಯ ಮೇಲಿಟ್ಟು ಮಂದಾಗ್ನಿಯಿಂದ ಕುದಿಸಬೇಕು. ಕುದಿಯುವಾಗ ಕಲ್ಕವು ತಳದಲ್ಲಿ ಹೊತ್ತದಿರುವುದಕ್ಕಾಗಿ ಸೌಟಿನಿಂದ ತಿರುಗಿಸುತ್ತ ನೀರೆಲ್ಲಾ ಹೋಗಿ ಕೇವಲ ಎಣ್ಣೆಯೇ ಉಳಿದಿರುವುದನ್ನು ನೋಡಿಕೊಂಡು ಪಾತ್ರೆಯನ್ನಿಳಿಸುವಾಗ ದಾಲಚಿನ್ನಿ ಸಣ್ಣ ವಿಲಕ್ಕಿ, ಲವಂಗ, ತೇಜಪತ್ರೆ, ನಾಗಕೇಸರ, ಕರ್ಪೂರ, ಬಾಲಮೆಣಸು, ಅಗರು, ಶಿಲಾರಸ, ಈ ವಸ್ತುಗಳನ್ನು ಒಂದು ಸೇರು ಎಣ್ಣೆಗೆ ಅರ್ಧ ಅರ್ಧ ತೊಲೆಯಂತೆ ಕುಟ್ಟಿ ಪುಡಿಮಾಡಿ ಹಾಕಿ ಪಾತ್ರೆಯನ್ನಿಳಿಸಿ ತಣ್ಣಗಾದನಂತರ (ಮರುದಿನದಲ್ಲಿ) ಒಟ್ಟೆಯಿಂದ ಶೋಧಿಸಿ ಸೀಸೆಗಳಲ್ಲಿಟ್ಟುಕೊಳ್ಳಬೇಕು. ಇದರಲ್ಲಿ ಸ್ವಾಭಾವಿಕವಾಗಿ ಸೌಮ್ಯವಾದ ಸುಗಂಧವಿದ್ದೇ ಇರುತ್ತದೆ. ಆದರೂ ಹೆಚ್ಚಿನ ಸುಗಂಧವನ್ನಪೇಕ್ಷಿಸುವವರು ಶುದ್ಧವಾದ ಚಂದನದ ತೈಲವನ್ನಾಗಲಿ ನಮ್ಮ ದೇಶದಲ್ಲಿಯೇ ಸಿಗುವ ಸುಗಂಧವಸ್ತು (ಅತ್ತರ್) ಗಳನ್ನಾಗಲಿ ಕೂಡಿಸಿಕೊಳ್ಳಬಹುದು. ಆದಷ್ಟುಮಟ್ಟಿಗೆ ಈ ಅತ್ತರುಗಳನ್ನು ಎಣ್ಣೆಯೊಡನೆ ಕೂಡಿಸುವುದನ್ನು ಕಡಿಮೆ ಮಾಡುವುದೊಳ್ಳೆಯದು. ಏಕೆಂದರೆ—ಈ ಮೇಲೆ ಕೂಡಿಸುವ ಸುಗಂಧದ್ರವ್ಯಗಳ ಸಂಯೋಗದಿಂದ ತೈಲದ ಯಥಾರ್ಥಗುಣವು ಕಡಿಮೆಯಾಗುವುದು ಮತ್ತು ಅತ್ತರ್ ಮೊದಲಾದ ಸುಗಂಧ ದ್ರವ್ಯಗಳು ಕೂದಲನ್ನು ಬೆಳ್ಳಗೆ ಮಾಡುತ್ತವೆ. ಆದುದರಿಂದ ವಾಚಕರು ತೈಲದ ಸ್ವಾಭಾವಿಕ ಸುಗಂಧದಿಂದಲೇ ಸಂತುಷ್ಟರಾಗಿ ಗುಣದ ಕಡೆಗೇ ವಿಶೇಷ ಲಕ್ಷ್ಯವನ್ನು ಕೊಡಬೇಕು.

೨. ಕಲ್ಲುಹೂವು. ತುಂಗಮುಸ್ತೆ, ಕಚೋರ, ಚಂಗಲ್‌ಕೋಷ್ಟ, ಲವಂಗ, ಸಣ್ಣ ದೊಡ್ಡ ವಿಲಕ್ಕಿಗಳು, ಕೊತ್ತುಂಬರಿಬೀಜ, ಲಾವಂಚ (ಬಾಳದಬೇರು), ಕವಚೆಸಾಂಬ್ರಾಣಿ, ಶಿಲಾರಸ, ಕರ್ಪೂರ, ಶ್ರೀಗಂಧದ ಪುಡಿ, ಗುಲಾಬಿಹೂವು, ದಾಲಚಿನ್ನಿ, ಮುಡಿವಾಳ, ಬಾಲಮೆಣಸು, ಈ ವಸ್ತುಗಳನ್ನು ಒಂದೊಂದು ತೊಲೆಯಂತೆ ತಂದು ಎಲ್ಲವನ್ನೂ ಕುಟ್ಟಿ ಇಟ್ಟುಕೊಂಡು (ಚೂರ್ಣಮಾಡಬಾರದು) ೪ ಸೇರು (೨೪ ತೊಲೆಗಳ ಸೇರು) ಕರಿಯ ಎಳ್ಳಿನ ಎಣ್ಣೆ ಅಥವಾ ಉತ್ತಮವಾದ ಕೊಬರಿ ಎಣ್ಣೆಯನ್ನು ತೊಳೆಯಿಲ್ಲದ ಡಬ್ಬಿಯಲ್ಲಿ ಹಾಕಿ ಇದರಲ್ಲಿ ಮೇಲಿನ ಕುಟ್ಟಿದ ಸಾಮಾನುಗಳನ್ನೂ ಹಾಕಿ ಗಾಳಿಯು ಒಳಗೆ ಪ್ರವೇಶಿಸದಂತೆ ಭದ್ರವಾಗಿ ಡಬ್ಬಿಯ ಬಾಯಿ ಮುಚ್ಚಿ ೮ ದಿನಗಳವರೆಗೆ ಹಗಲಿನಲ್ಲಿ ತೀಕ್ಷ್ಣವಾದ ಬಿಸಿಲಿನಲ್ಲಿಯೂ ರಾತ್ರಿಯಲ್ಲಿ ಮಾಳಿಗೆಯ ಮೇಲೆ ಮಂಜು ಬೀಳುವ ಸ್ಥಳದಲ್ಲಿಟ್ಟಿದ್ದು ೯ ನೆಯ ದಿನ ಎಣ್ಣೆಯನ್ನು ತೆಗೆದು ಶೋಧಿಸಿಟ್ಟುಕೊಳ್ಳಬೇಕು. ಬಣ್ಣವನ್ನಿಚ್ಛಿಸುವವರು ಎಣ್ಣೆಯಲ್ಲಿ ಉಪಯೋಗಿಸುವುದಕ್ಕಾಗಿಯೇ ಬಜಾರದಲ್ಲಿ ಬಣ್ಣಗಳು ಸಿಗುತ್ತವೆ. ಅವುಗಳನ್ನೇ ಉಪಯೋಗಿಸಿಕೊಳ್ಳಬಹುದು. ಈ ತೈಲಕ್ಕೆ ಕೆಂಪುಬಣ್ಣವೇ ಶೋಭಿಸುತ್ತದೆ.

೩. ಹಸಿಯ ನೆಲ್ಲೀಕಾಯಿಗಳ ರಸ ೧ ಸೇರು, ಕರಿಯ ಎಳ್ಳಿನ ಎಣ್ಣೆ ೫ ಸೇರು (೮೦ ತೊಲೆಗಳ ಸೇರು ಅಥವಾ ೩ ಪೌಂಡು) ಇವೆರಡನ್ನೂ ಒಂದು ಕಲಾಯಿಯ ಪಾತ್ರೆಯಲ್ಲಿ ಅಥವಾ ತೊಳೆಯಿಲ್ಲದಿರುವ ಬಾಣಲೆಯಲ್ಲಿ ಹಾಕಿ ಅದರಲ್ಲಿ ತುಂಗಮುಸ್ತೆ, ಶ್ರೀಗಂಧದ ಪುಡಿ, ಕರ್ಪೂರ, ಚಂಗಲ್ ಕೋಷ್ಟ, ಗುಲಾಬಿ ಹೂವು, ಪ್ರತಿಯೊಂದು ೫-೫ ತೊಲೆ ಗಂಟು ಕಚೋರ, ತೇಜಪತ್ರೆ, ದಾಲಚಿನ್ನಿ, ಮುಡಿವಾಳ, ಸುಗಂಧ ಜಟಾಮಾಂಸಿ, ಇವು ಪ್ರತಿಯೊಂದು ೨||—೨|| ತೊಲೆಯಂತೆ ನೀರಿನಿಂದ ಚಟ್ನಿಯಂತರೆದು ಎಣ್ಣೆಯಲ್ಲಿ ಕೂಡಿಸಬೇಕು. ಅನಂತರ ೨೦ ತೊಲೆ ಕಾಡಿಗೆಗರುಗದ ಸೊಪ್ಪನ್ನು (ಭೃಂಗರಾಜ) ಅರೆದು ಇದರಲ್ಲಿ ಕೂಡಿಸಿ ಮಂದಾಗ್ನಿಯಿಂದ ೧ ನೆಯ ಎಣ್ಣೆಗೆ ಬರೆದಿರುವಂತೆ ಕುದಿಸಿ ರಸವು ಹೋಗಿ ಕೇವಲ ಎಣ್ಣೆಯೇ ಉಳಿದನಂತರ ಪಾತ್ರೆಯನ್ನಿಳಿಸಿ ತಣ್ಣಗಾದಮೇಲೆ ಬಟ್ಟೆಯಿಂದ ಶೋಧಿಸಿಟ್ಟುಕೊಳ್ಳಬೇಕು. ಇದರಲ್ಲಿ ಸ್ವಾಭಾವಿಕವಾಗಿಯೇ ಎಲೆಹಸರು ಬಣ್ಣವು ಬರುತ್ತದೆ. ಸ್ವಾಭಾವಿಕ ಸುಗಂಧವೂ ಇರುತ್ತದೆ.

ಈ ೩ ತೈಲಗಳು ಬಜಾರದ ಹೇರಾಯಿಲ್ಲುಗಳಂತೆ ಉತ್ಕಟ ಸುಗಂಧದಿಂದ ಮನಸ್ಸನ್ನು ಪರಿಹರಿಸತಕ್ಕವುಗಳಲ್ಲದಿದ್ದರೂ ಗುಣದಿಂದ ಸಕಲ ಜನಗಳ ಮನಸ್ಸುಗಳನ್ನಾನಂದಗೊಳಿಸತಕ್ಕವುಗಳಾಗಿವೆ. ಇವು ತಮ್ಮಲ್ಲಿರುವ ಸ್ಮೃತಿವರ್ಧಕ, ಕೇಶವರ್ಧಕ ಮೊದಲಾದ ಅನುಪಮ ಸುಗುಣಗಳಿಂದ ಗುಣಜ್ಞರಾದ (ರೂಪಜ್ಞರಲ್ಲ) ಸುಶಿಕ್ಷಿತ ಜನಗಳಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳದಿರಲಾರವು.

(ಸಶೇಷ)

THE MYSORE BAR ASSOCIATION.

Mr. H. Subba Rao's Bluster.

(BY AN ADVOCATE)

(Concluded From Our Last Issue)

Sir Alladi's Arguments.

Sir Alladi was pleased to hold aloft a high standard for the Mysore Bar Association and to give a glowing account of its ethical virtues in his arguments before the High Court. But Mr. Subba Rao, as a representative of that Association, has within less than a month ruthlessly pulled down that high standard and apeared in his true colours, and it is a worthy sight for Sir Alladi to witness the present picture. It may also be observed that the fact that an eminent counsel appears in a case makes absolutely no difference whatever.

Professional Ethics.

On the other hand, as pointed out by Sir P. S. Sivaswamy Iyer, the higher the standing of the Advocate the greater should be the self-restraint in putting forward unsound argument. The theory that any argument however unsound may be put forward, on the ground that it is for the judge to determine what is sound, 'should not be ridden to death,' and it does not commend itself to professional ethics.

Rights and Duties.

That Mr. Subba Rao possesses strange conceptions of the 'rights and duties' of the legal profession is a matter which admits of no doubt, and his example affords convincing proof to show that his Association has not disabused his mind of erroneous notions on questions of vital importance to the legal profession. Nor is there anything to show that his Association, or for this matter of that any other Bar Association in the State has at any time in its history exercised any corrective influence over erring members or prevented such members from retaining their membership. But it does not seem to be what exactly is the object of this journalistic venture on the part of Mr. Subba Rao and why he has raised serious doubts on important matters and involved the aid of Sir Alladi's arguments in the face of a final and conclusive decision by the High Court. If his intention is to create an impression that the members of the Bar are at liberty to act as they like and not his Association must be deemed to have acted properly in spite of the High Court decision, it needs no argument to state that he will be undertaking a serious responsibility upon himself.

Mr. Subba Rao's Challenge.

He says that the 'Judgment is eloquently silent regarding the resolutions protesting against the Circular' and challenges 'A Citizen' for a discussion on this subject. This observation on the High Court Judgment by a member of the Association which escaped punishment speaks for itself and found a sad commentary of the ethical standard held up before the High Court on behalf of the Association.

Quibble a Bad Grace.

Again, he actually doubts whether "Sir Alladi requested the Court to accept the expression of regret," and adds that it is "news to those who have carefully watched the proceedings." He somehow feels uneasy over the expression of regret and attempts to nullify its effect by this surprising attitude and a quibble of this kind comes with a bad grace at this stage. If Sir Alladi really thought that he had a good case on the merits, there was no need for him to have punctuated his arguments from beginning to end with expressions of regret or to have requested the High Court to drop the proceedings against the Association. Were Sir Alladi's expressions of regret only intended to be suspended in mid-air to be evaporated like a puff of smoke if they were not intended for the Court's acceptance?

The Propriety.

In the face of what the full Bench has stated in the judgment, is it open to a legal practitioner to raise this quibble in a newspaper and challenge a public discussion? This is rather a dangerous experiment for a legal practitioner to make at the expense of the High Court. Is this consistent with good taste or that respect which we always owe to the Court? Is it worthy of a number of an honourable and chivalrous profession, whose duty is to support the Court against unjust criticism, to provoke a public discussion on the ethics of the acceptance of the regret by the High Court, after enjoying the full benefit of that acceptance? It is for the discerning public to furnish an answer. If Sir Alladi did make a request, then Mr. Subba Rao necessarily stands condemned. If he did not make a request and yet the High Court accepted the regret Mr. Subba Rao ought not to publicly question the propriety of the acceptance and place the High Court in an awkward situation.

Sir Alladi's Erroneous Assumption.

Mr. Subba Rao has given undue importance to Sir Alladi's arguments and wants to preach their virtues before the public. But if they are subjected to strict legal scrutiny the result will be disappointing to Mr. Subba

[ಒತಿಯ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ.

೧೯೩೪ನೇ ನವಂಬರ್ ತಾ|| ೨೬ನೇ ಸೋಮವಾರ.

ಗುರುಭಕ್ತಿ.

ಅಖಿಲ ಮಾನವರ ಉದ್ಧಾರಕ್ಕಾಗಿ ವೈದಿಕಧರ್ಮಗಳೂ ಆ ಧರ್ಮಗಳನ್ನು ಪ್ರಚಾರಮಾಡುವ ಆಚಾರ್ಯರೂ ಪ್ರಪಂಚದಲ್ಲಿ ಅವತರಿಸಿದರು. ಯಾವ ಮಾನವನಿಗೆ ವೇದೋಕ್ತವಾದ ಧರ್ಮದಲ್ಲಿಯೂ ಆಚಾರ್ಯರಲ್ಲಿಯೂ ಶ್ರದ್ಧೆಯಿಲ್ಲವೋ ಅವನು ಭಗವಂತನ ಕೃಪೆಗೆ ದೂರನಾಗುವನು. ವೈದಿಕಧರ್ಮವನ್ನು ಬೋಧಿಸುವ ಆಚಾರ್ಯರಿಗೂ ಭಗವಂತನಿಗೂ ಅತಿನಿಕಟ ಸಂಬಂಧವಿರುತ್ತದೆ. ಸೃಷ್ಟಿಸ್ಥಿತಿ ಸಂಹಾರ ಕರ್ತನಾದ ಪರಮೇಶ್ವರನು ಯುಗಾದಿ ವೇದಗಳ ಮೂಲಕವಾಗಿಯೂ ಆಗಮಗಳ ಮೂಲಕವಾಗಿಯೂ ಮಾನವಧರ್ಮಗಳನ್ನು ಬೋಧಿಸಿ ತನ್ನ ಪೂರ್ಣಾಂಶಗಳಿಂದ ಆಚಾರ್ಯರನ್ನು ಅವತಾರಮಾಡಿಸಿ ಅವರ ಮೂಲಕವಾಗಿ ಆ ಧರ್ಮಪರಿಪಾಲನೆಯನ್ನು ಮಾಡಿಸುವನು. ಅವರೇ ಮೂಲಾಚಾರ್ಯರೆನಿಸಿಕೊಳ್ಳುತ್ತಾರೆ. ಪ್ರತಿಯೊಂದು ಮತದಲ್ಲಿಯೂ ಮೂಲಾಚಾರ್ಯರು ಇದ್ದೇ ಇರುತ್ತಾರೆ. ವೀರಶೈವಮತದಲ್ಲಿ ಮೂಲಾಚಾರ್ಯರೆಂದರೆ ರೇಣುಕಾದಿ ಪಂಚಾಚಾರ್ಯರಾಗಿದ್ದಾರೆ. ಈ ಮತದಲ್ಲಿ ಜನಿಸಿದ ಬ್ರಹ್ಮಚಾರಿ ಮೊದಲುಗೊಂಡು ನಿರಾಭಾರಿಯವರೆಗೂ ಇರುವ ಸಕಲ ಮಾನವರಿಗೂ ಪಂಚಾಚಾರ್ಯರೇ ಗುರುಗಳಾಗಿರುತ್ತಾರೆ. ಅದ್ವೈತಮತಸ್ಥರಿಗೆಲ್ಲಾ ಶ್ರೀ ಶಂಕರಾಚಾರ್ಯರೇ ಮೂಲಗುರುಗಳಾಗಿರುವಂತೆಯೂ, ದ್ವೈತಮತಸ್ಥರಿಗೆಲ್ಲಾ ಮಧ್ವಾಚಾರ್ಯರೇ ಮೂಲಗುರುಗಳಾಗಿರುವಂತೆಯೂ, ವಿಶಿಷ್ಟಾದ್ವೈತ ಮತೀಯರಿಗೆಲ್ಲಾ ರಾಮಾನುಜಾಚಾರ್ಯರೇ ಮೂಲಗುರುಗಳಾಗಿರುವಂತೆಯೂ, ವೀರಶೈವಮತಸ್ಥರಿಗೆಲ್ಲಾ ಶ್ರೀ ರೇಣುಕಾದಿಪಂಚಾಚಾರ್ಯರೇ ಮೂಲಗುರುಗಳಾಗಿರುತ್ತಾರೆ. ವೀರಶೈವಮತದ ಧರ್ಮಕರ್ಮಗಳಿಗೆಲ್ಲಾ ಈ ಮೂಲಾಚಾರ್ಯರೇ ಅಧಿಕಾರಿಗಳಾಗಿರುವುದರಿಂದ ಪ್ರತಿಕ್ಷಣದಲ್ಲಿಯೂ ಪ್ರತಿಯೊಬ್ಬಲಿಂಗಾಂಗಿಯೂ ಈ ಜಗದ್ಗುರುಗಳ ನಾಮಸ್ಮರಣೆಯಿಂದ ಪವಿತ್ರನಾಗಬೇಕಾಗಿದೆ. ಇದಕ್ಕೆ ವಿರುದ್ಧವಾಗಿ ಅನೇಕರು ತಾವು ವಿಾರಿದ ಸ್ಥಲದವರೆಂದು ಹೇಳಿಕೊಂಡು ವೀರಶೈವಮತದಲ್ಲಿ ಜನ್ಮವನ್ನು ಎತ್ತಿದ್ದರೂ, ಆಚಾರ್ಯರು ಅನುಗ್ರಹಿಸಿದ ಲಿಂಗವನ್ನು ಕಂಠದಲ್ಲಿ ಧರಿಸಿದ್ದರೂ, ಅವರು ಬೋಧಿಸಿದ ಮಂತ್ರವನ್ನೇ ಪಠಿಸುತ್ತಿದ್ದರೂ, ಅಂಥ ಮೂಲಗುರುಗಳಲ್ಲಿ ಅಶ್ರದ್ಧೆಯನ್ನು ತೋರಿಸುತ್ತಿರುವುದು ವಿಷಾದಕರವಾಗಿದೆ.

ವೀರಶೈವಮತದಲ್ಲಿ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ ಎಂಬ ನಾಲ್ಕು ತರಗತಿಗಳುಂಟು. ಇವುಗಳು ಅವನವನ ಉಪಾಸನಾಸಾಮರ್ಥ್ಯಾನುಸಾರವಾಗಿ ಒಬ್ಬನಲ್ಲೇ ಸಂಘಟಿಸುತ್ತವೆ. ಸಾಮಾನ್ಯವಾಗಿ ಗುರುಕುಲವಾಸಮಾಡಿ ದೀಕ್ಷಾದಿಗಳಿಂದ ಪರಿಶುದ್ಧನಾಗಿ ಅಧ್ಯಯನಾಸಕ್ತನಾಗಿರುವವನೇ ಬ್ರಹ್ಮಚಾರಿಯು. ಇವನು ಗುರುವಿನ ಆಜ್ಞೆಯಿಂದ ಧರ್ಮಪತ್ನೀಸ್ವೀಕಾರಮಾಡಿದರೆ ಗೃಹಸ್ಥನೆನಿಸುವನು. ಈತನೇ ಗುರುವಿನ ಆಜ್ಞೆಯನ್ನು ಪಡೆದು ತನ್ನ ಪುತ್ರರಿಗೆ ಸಂಸಾರಭಾರವನ್ನೆಲ್ಲಾ ವಹಿಸಿ ಅರಣ್ಯದಲ್ಲಿದ್ದು ಕಂದಮೂಲಾಹಾರಾದಿಗಳಿಂದ ಜೀವಿಸುತ್ತಿದ್ದರೆ ವಾನಪ್ರಸ್ಥನೆನಿಸುವನು. ಹಿಂದಿನ ಮೂರು ಆಶ್ರಮಗಳನ್ನು ತ್ಯಾಗಮಾಡಿ ಕೇವಲ ಗುರುವಿನಿಂದುಪದಿಷ್ಟವಾದ ಮಹಾಮಂತ್ರಧ್ಯಾನಾಸಕ್ತನಾಗಿರುವವನೇ ಸನ್ಯಾಸಿಯೆನಿಸುವನು. ಹೀಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಶಿಷ್ಯರ ಹೃದಯಕ್ಷೇತ್ರದೊಳಗೆ ಬ್ರಹ್ಮಚರ್ಯಾಶ್ರಮದಲ್ಲಿ ಬಿತ್ತಿದ ಮಂತ್ರಬೀಜವು ಉಪಾಸನಾಶಕ್ತಿಯಿಂದ ಬೆಳೆಯುತ್ತ ಶಿವಸಾಕ್ಷಾತ್ಕಾರವೆಂಬ ಮಹಾಫಲವನ್ನು ಯಾವನು ಪಡೆಯುವನೋ ಅವನೇ ನಿರಾಭಾರಿಯೆಂದೂ ಲಿಂಗಾರೂಢನೆಂದೂ ಶಿವಯೋಗಿಯೆಂದೂ ಲಿಂಗಾವಧೂತನೆಂದೂ ಅನಂತನಾಮಗಳಿಂದ ಕರೆಯಿಸಿಕೊಳ್ಳಲ್ಪಡುವನು. ಇದರಿಂದ ತಾನು ಯಾವ ಆಶ್ರಮವನ್ನು ಸ್ವೀಕರಿಸಿದರೂ ಗುರುವಿನ ಮಂತ್ರೋಪದೇಶವನ್ನಾಗಲಿ ಗುರುವಿನಲ್ಲಿಟ್ಟ ಭಕ್ತಿಯನ್ನಾಗಲಿ ಗುರುವು ಧರಿಸಿದ ಲಿಂಗವನ್ನಾಗಲಿ ಗುರುವಿನಿಂದ ಬಂದ ಪಂಚಾಚಾರಾಷ್ಟಾವರಣಗಳನ್ನಾಗಲಿ ಬಿಡುವಂತಿಲ್ಲವು. ಶಾಸ್ತ್ರದೃಷ್ಟಿಯಿಂದಲೂ ವಿವೇಕದೃಷ್ಟಿಯಿಂದಲೂ ವಿಚಾರಮಾಡಿನೋಡಿದರೆ ಬಾಲ್ಯಾವಸ್ಥೆಯಲ್ಲಿರುವ ಬ್ರಹ್ಮಚಾರಿಗಳಿಗಿಂತಲೂ ಗೃಹಸ್ಥನಿಗೂ, ವಿಷಯಲಂಪಟನಾದ ಆ ಗೃಹಸ್ಥನಿಗಿಂತಲೂ ನಿರ್ಜನಗೋಷ್ಠಿಯಲ್ಲಿ ಮಿತಾಹಾರಿಯಾಗಿ ಪರಿಶುದ್ಧನಾಗಿರುವ ವಾನಪ್ರಸ್ಥನಿಗೂ, ಅಂಥ ವಾನಪ್ರಸ್ಥನಿಗಿಂತಲೂ ಸರ್ವಸಂಗಪರಿತ್ಯಾಗಮಾಡಿದ ಸನ್ಯಾಸಿಗೂ ಉತ್ತರೋತ್ತರ ವಿಶೇಷ ಭಕ್ತಿಯುನೆಲೆಗೊಳ್ಳಬೇಕು.

> ಯಥಾ ದೇವೇ ಜಗನ್ನಾಥೇ ಸರ್ವಾನುಗ್ರಹಕಾರಕೇ |
> ತಥಾ ಗುರುವರೇ ಕುರ್ಯಾದುಪಚಾರಾನ್ ವಿಶೇಷತಃ ||

ಎಲೈ ವಿರಕ್ತಶಿಖಾಮಣಿಯಾದ ಅಗಸ್ತ್ಯಮಹರ್ಷಿಯೇ! ನೀನು ಸರ್ವಕರ್ತನಾದ ಯಾವ ಪರಮೇಶ್ವರನನ್ನು ಪ್ರತಿದಿವಸವೂ ಹೇಗೆ ಉಪಚರಿಸುವಿಯೋ, ಹಾಗೆಯೇ ಲಿಂಗರೂಪನಾದ ಪರಮೇಶ್ವರನನ್ನು ನಿನ್ನ ಹಸ್ತದಲ್ಲಿ ಅನುಗ್ರಹಿಸಿದ ಗುರುವನ್ನೂ ಉಪಚರಿಸು.

> ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯಯಾ |
> ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಮುಕ್ತಿಸಿದ್ಧಯೇ ||

ಅಪ್ರತ್ಯಕ್ಷನಾದ ಪರಶಿವನು ಗುರುರೂಪದಿಂದ ಪ್ರತ್ಯಕ್ಷನಾಗಿ ಬಂದು ಮುಕ್ತಿಯನ್ನು ಅನುಗ್ರಹಿಸುವನೆಂದು ಶ್ರೀ ರೇಣುಕಾಚಾರ್ಯರು ಬೋಧಿಸಿರುವರು.

> ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ |

ಎಂದು ಶ್ವೇತಾಶ್ವತರೋಪನಿಷತ್ತು ಸಹ ಇದೇ ಅರ್ಥವನ್ನೇ ಬೋಧಿಸಿರುವುದರಿಂದ ವೀರಶೈವಮತದಲ್ಲಿ ಜನ್ಮವೆತ್ತಿದ ಸಕಲಾಶ್ರಮಿಗಳೂ ಶ್ರೀ ರೇಣುಕಾದಿ ಮೂಲಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನು ತೋರಿಸುತ್ತ ಅವರವರ ಆಶ್ರಮಾನುಸಾರವಾಗಿ ಧರ್ಮನಿಷ್ಠರಾಗುತ್ತ ಧನ್ಯರಾಗಿ, ವೀರಶೈವಮತಸ್ಥರೆಂಬ ತಮ್ಮ ಹೆಸರನ್ನು ಅನ್ವರ್ಥಕಪಡಿಸಿಕೊಳ್ಳಬೇಕು. ತಾಯಿಯನ್ನು ಬಿಟ್ಟ ಕರುವಿನಂತೆ ಗುರುವನ್ನು ಬಿಟ್ಟು ಅಂಬಲಿಸಿದರೆ ಸೌಖ್ಯವು ಎಂದೂ ದೊರೆಯದು. ಆದಕಾರಣ ಪ್ರತಿಯೊಂದು ಆಶ್ರಮದವರೂ ಮೋಕ್ಷಮೂಲಭೂತರಾದ ಮೂಲಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಸದ್ಗತಿಯನ್ನು ಪಡೆಯಬೇಕೆಂದಾಶಿಸುತ್ತೇವೆ.

ಪ್ರಶಸ್ತಿಪತ್ರಿಕಾಪ್ರದಾನ.

ಕಳೆದ ಸೋಮವಾರ ಸಾಯಂಕಾಲ ಸಂಗೀತಾಸ್ಥಾನವಿದ್ವಾನ್ ಮ|| ರಾ|| ಬಿ. ದೇವೇಂದ್ರಪ್ಪನವರು ತಮ್ಮ ಮಂಡಲಿಯುತರಾಗಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಕಛೇರಿಯನ್ನು ನಡೆಯಿಸಿದರು. ಆಗ್ಗೆ ಅನೇಕ ರಾಜಬಂಧುಗಳೂ ಪುರಪ್ರಮುಖರೂ ಆಗಮಿಸಿದ್ದರು. ಮೊದಲು ಬಿ. ದೇವೇಂದ್ರಪ್ಪನವರು ಪಿಟೀಲನ್ನು ಮನೋಹರವಾಗಿ ಬಾರಿಸಿದರು. ಬಳಿಕ ಮಧುರವಾದ ಗಾನಾಲಾಪದೊಡನೆ ಜಲತರಂಗವನ್ನು ಬಾರಿಸಿದರು. ಆದಿವಸ ನಡೆದ ಪಿಟೀಲು, ಕೊಳಲು,ಮೃದಂಗ, ಹಾರ್ಮೋನಿಯಂ ಮುಂತಾದ ವಾದ್ಯವಾದನ ಚಾತುರ್ಯವು ಸಭಿಕರ ಮನಸ್ಸಿಗೆ ಪರಮಾನಂದವನ್ನುಂಟುಮಾಡಿತು. ಈ ವಾದ್ಯಮಾಲಿಕಾವಾದನ ಪ್ರವಾಹದಲ್ಲಿ ದೇವೇಂದ್ರಪ್ಪನವರ ಸುಶ್ರಾವ್ಯವಾದ ಕಂಠಮಾಧುರ್ಯರಸವು ಮಿಳಿತವಾದುದರಿಂದ ಶ್ರೋತೃಗಳ ಹೃದಯಕಮಲವು ಪ್ರಫುಲ್ಲಿತವಾಯಿತು. ಶ್ರೀಮದ್ರಂಭಾಪುರೀ ಜಗದ್ಗುರುಗಳು ದೇವೇಂದ್ರಪ್ಪನವರ ಸಂಗೀತವಿದ್ಯಾಕಲಾಕುಶಲತೆಯನ್ನೂ ವಾದ್ಯವಾದನಚಾತುರ್ಯವನ್ನೂ ನೋಡಿ ಹರ್ಷಗೊಂಡು "ನಾದೋಬ್ರಹ್ಮ" ಎಂಬ ವಾಕ್ಯವನ್ನು ತೆಗೆದುಕೊಂಡು ಶ್ರಾವ್ಯವಾದ ಸಂಗೀತಾಲಾಪವು ಲೋಕದಲ್ಲಿ ಕಷ್ಟತರಗಳಾದ ತಪೋನುಷ್ಠಾನಾದಿ ನಿಯಮಗಳಿಲ್ಲದೆಯೂ ದೀರ್ಘವಾದ ವೇದಾಂತಶಾಸ್ತ್ರಸಮಾಲೋಚನೆಯಿಲ್ಲದೆಯೂ ಬ್ರಹ್ಮಾನಂದವನ್ನುಂಟುಮಾಡುವುದೆಂದೂ, ಇನ್ನಾವವಿದ್ಯೆಗಳೂ ಇಷ್ಟು ಸುಲಭವಾಗಿ ಆನಂದವನ್ನುಂಟುಮಾಡುವುದಿಲ್ಲವೆಂದೂ ದೇವೇಂದ್ರಪ್ಪನವರಿಗೆ ನಾದಾಧಿದೇವತೆಯಾದ ಶಿವನು ಸಂಗೀತಪಾಂಡಿತ್ಯವನ್ನು ಅನುಗ್ರಹಿಸಿರುವುದೊಂದು ಆನಂದವಿಷಯವಾಗಿರುವುದೆಂದೂ ಅಪ್ಪಣೆಕೊಡಿಸಿ… ರು. ಹಿಂದಿನದಿವಸ ದಯಪಾಲಿಸಿದ್ದ 'ಗಾನಾಲಂಕಾರ… ಎಂಬ ಅಕ್ಷರಗಳಿಂದ ಭೂಷಿತವಾದ ಮಣಿಖಚಿ… ಸುವರ್ಣಕಂಕಣದ ಜೊತೆಯಲ್ಲಿ ಪ್ರಶಸ್ತಿಪತ್ರಿಕೆಯೊ… ದು ಇವರಲ್ಲಿ ಇರಬೇಕಾದುದು ಅವಶ್ಯಕವೆಂದಾಲೋ… ಚಿಸಿ ಜರತಾರಿವಸ್ತ್ರದೊಡನೆ ಪ್ರಶಸ್ತಿಪತ್ರಿಕೆಯನ್ನು ಅನುಗ್ರಹಿಸಿದರು. ಹಿಂದೆ ಗಾನವಿಶಾರದ ಬಿ. ಕೃಷ್ಣಪ್ಪನವರೆಂಬ ಮಹೋದಯರು ಗಾನವಿದ್ಯೆಯಲ್ಲಿ ಅತ್ಯಂ… ಖ್ಯಾತಿಪಡೆದಿದ್ದರು. ಆ ಯೋಗ್ಯತೆಯು ಅವರ ಶಿಷ್ಯರಾ… ಬಿ. ದೇವೇಂದ್ರಪ್ಪನವರಲ್ಲಿ ಭ್ರಮರಕೀಟನ್ಯಾಯದಿಂ… ಪ್ರಾಪ್ತವಾಗಿರುವುದೆಂದು ಸಭಿಕರು ತಮ್ಮ ಸಂತೋ… ವನ್ನು ಸೂಚಿಸುತ್ತಿದ್ದರು. ಸಂಗೀತವಿದ್ಯೆಯನ್ನು ಕ… ತವರಲ್ಲಿ ಪರಸ್ಪರ ವೈಷಮ್ಯಭಾವಗಳು ಇತ್ತೀಚೆ… ಅಲ್ಲಲ್ಲಿ ತೋರಿಬರುತ್ತವೆ. ಯಾರಲ್ಲಿ ಶಾರದಾದೇವಿಯ… ಒಲಿದಿರುವಳೋ ಅವರಲ್ಲಿ ಜಾತಿಕುಲ ಮಾತ್ಸರ್ಯ… ನ್ನಿಡದೆ ಪ್ರೋತ್ಸಾಹಿಸುವುದು ವಿದ್ವಾಂಸರ ಕರ್ತವ್ಯ… ವೆಂಬುದನ್ನು ಯಾರೂ ಮರೆಯಬಾರದು. ಜಗದೀ… ಶ್ವರನು ಈ ಸಂಗೀತವಿದ್ವಾಂಸರಿಗೆ ಪೂರ್ಣಾಯುಸ್ಸನ್ನು ಕೊಟ್ಟು ಕರ್ಣಾಟಕ ಸಂಗೀತ ವಿದ್ಯೆಯು ಜಗ… ತಲದಲ್ಲಿ ಪ್ರಖ್ಯಾತಿಗೊಳ್ಳುವಂತೆ ಮಾಡಲೆಂದು ಹಾ… ಸುತ್ತೇವೆ.

ಒಳದೇಶದ ವೃತ್ತಾಂತಗಳು.

ಅಮೃತರಸಂ ಡಿಪೋ ಏಜಂಟ್ ಎಂದು ಹೇ… ಕೊಂಡು ಹಣವಸೂಲು ಮಾಡಿಕೊಂಡನೆಂದು ಮೈಸೂ… ರಿನ ಶಿವಯ್ಯನೆಂಬವನನ್ನು ಬೆಂಗಳೂರಿನಲ್ಲಿ ದಸ್ತಗಿ… ಮಾಡಿ ಮೈಸೂರಿಗೆ ತಂದು ರಿಮ್ಯಾಂಡಿನಲ್ಲಿಟ್ಟಿದ್ದಾ…

ಸರ್. ಛಾರಲ್ಸ್ ಟಾಡ್‌ಹಂಟರವರು ರಜ… ಮೇಲೆ ಸೀಮೆಗೆ ಹೋಗಿರುವ ಕಾಲದಲ್ಲಿ ರಾಜಸಭಾ… ಭೂಷಣ ಮಿ|| ಟಿ. ತಂಬೂಚೆಟ್ಟಿರವರು ತಮ್ಮ ಕೆ… ಸದ ಜೊತೆಗೆ, ಪ್ರೈವೇಟ್ ಸೆಕ್ರೆಟರಿಗಳ ಕೆಲಸವನ್ನು ನೋಡಿಕೊಳ್ಳುತ್ತಾರೆ.

ಶ್ರೀರಂಗಪಟ್ಟಣದಲ್ಲಿ ನಲ್ಲಿಯ ಮೂಲಕ ನೀ… ಬಿಡುವ ಪ್ರಾರಂಭೋತ್ಸವಕ್ಕೆ ಶ್ರೀ ಜಯಚಾಮರಾ… ಒಡೆಯರವರನ್ನು ಕರೆಯಿಸಿ ಡಿಸೆಂಬರ್ ೩ ನೇ ತಾ… ಖಿನ ದಿವಸ ದೊಡ್ಡ ಸಮಾರಂಭವನ್ನು ನಡೆಯಿಸ… ರೆಂದು ಕೇಳುತ್ತೇವೆ.

ಬೆಂಗಳೂರು ಮಾಲ್ದಾರ್ ಪೇಟೆಯಲ್ಲಿ ಜೂಜಾ… ತ್ತಾರೆಂಬ ಸಂದೇಹದ ಮೇಲೆ ಅಬ್ದುಲ್ಲಾಖಾನ್ ಎಂ… ವನ ಮನೆಯನ್ನು ಪೋಲೀಸರು ಶೋಧಿಸಿ ಕೆಲವರ… ದಸ್ತಗಿರಿ ಮಾಡಿದ್ದಲ್ಲದೆ ಜೂಜಿಗೆ ಸಂಬಂಧಪ… ಕೆಲವು ಸಾಮಾನುಗಳನ್ನೂ ಜಪ್ತಿಮಾಡಿದ್ದಾರೆ.

ಚಾಮರಾಜನಗರ ತಾ|| ಲಿಂಗನಪುರದ, ಮ… ಗೌಡ ಮತ್ತು ರಾಮಚಂದ್ರಪ್ಪ ಎಂಬವರು ತ… ಸರಹದ್ದಿನಲ್ಲಿ ತುಂಬಾತೊಂದರೆ ಕೊಡುತ್ತಿದ್ದ ಚಿ… ಯನ್ನು ಕಲ್ಲಿನ ಬೋನು ಇಟ್ಟು ಹಿಡಿದಿದ್ದಾ… ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇವರುಗಳಿಗೆ ಏ… ದರೂ ಬಹುಮಾನ ಕೊಡಿಸುವವರಾಗಿದ್ದಾರೆ… ತಿಳಿದುಬಂದಿದೆ.

ಕಳೆದ ಶುಕ್ರವಾರ ದಿವಸ ರಾಜಧಾನಿಯಲ್ಲಿ… ನೆಲ್ಲಾಳ ಸಂಸ್ಥಾನದ ಶ್ರೀಮತಿ ರಾಜ್ಞಿ ಬೌರಮ್ಮ… ಯವರು ಶ್ರೀಮದ್ರಂಭಾಪುರೀ ಜಗದ್ಗುರುಗಳವ… ಲಕ್ಷ್ಮೀಪುರದಲ್ಲಿರುವ ತಮ್ಮ ಭವ್ಯ ಭವನಕ್ಕೆ ಬಿ… ಮಾಡಿಸಿಕೊಂಡಿದ್ದರು. ಪ್ರಾತಃಕಾಲ ೯ ಘಂ… ಸರಿಯಾಗಿ ಇವರ ಅಳಿಯಂದಿರಾದ ಪುಂಗನೂ… ರಾಜಾ ಯಶವಂತರಾವ್ ಬಹದ್ದೂರ್‌ರವರು ರಾ… ಧಾನೀ ನಿವಾಸಿಗಳಾದ ವೀರಶೈವಪ್ರಮುಖರೊ… ಗೂಡಿ ವಾದ್ಯವೈಭವದೊಂದಿಗೆ ಇಸ್ತ್ರಕಪಾಲ ತೆಗೆ… ಕೊಂಡು ಶ್ರೀಗಳವರ ಬಿಡಾರಕ್ಕೆ ಆಗಮಿಸಿ ಬಿನ್ನ… ವನ್ನು ಮಾಡಿದರು. ಶ್ರೀಗಳವರು ಅರಮನೆಯಿ… ಕೊಡಲ್ಪಟ್ಟ ರಾಜಮರ್ಯಾದೆಗಳೊಡಗೂಡಿ ಮಹೋ… ತ್ಸವದಿಂದ ಪ್ರಯಾಣಬೆಳೆಯಿಸಿದರು. ಉತ… ವಾಣೀವಿಲಾಸ ರೋಡಿನಲ್ಲಿ ಹಾಯ್ದು ಹಳೆಅಗ್ರಹಾ… ಅಂಗಡಿಬೀದಿಯ ಮೂಲಕ ಕಾಂತರಾಜ ರೋ… …ದ್ವಾರಾ ೧೨ ಘಂಟೆಗೆ ರಾಜ್ಞಿ ಬೌರಮ್ಮಣ್ಣಿಯವರ …ಬಂಗಲೆಗೆ ತಲ್ಪಿತು. ಶ್ರೀಗಳವರು ಮ್ಯಾನಾದಿಂದ …ಇಳಿದೊಡನೆಯೇ ಗುರುಗಳಿಗೆ ಸಮರ್ಪಿಸುವುದಕ್ಕಾಗಿ …ತರಿಸಿದ್ದ ಕಲಭ (ಆನೆಮರಿ) ವು ತನ್ನ ಎರಡೂಕಾಲು …ಗಳನ್ನೂರಿ ನಮಸ್ಕಾರಮಾಡಿತು. ಅಲ್ಲಿಂದ ಶ್ರೀಗಳ …ವರು ಭದ್ರಪೀಠವನ್ನಲಂಕರಿಸಿದ ಬಳಿಕ ಸ್ವಲ್ಪಹೊತ್ತು …ಸಂಗೀತಗಾರರ ಗಾನಾಲಾಪವು ನಡೆಯಿತು. ಸಭಿ…ಕರು ಫಲಪುಷ್ಪಗಂಧಾದಿಗಳಿಂದ ಸತ್ಕರಿಸಲ್ಪಟ್ಟರು.

ಅಲ್ಲಿಂದ ಶ್ರೀಗಳವರ ಸ್ನಾನ ಜಪತಪೋನುಷ್ಠಾನ…ಗಳೆಲ್ಲಾ ಮುಗಿದು ಸಾಂಗ ಏಕಾದಶವಾರ ರುದ್ರಾಭಿಷೇ…ಕವಾದ ತರುವಾಯ ವಿಧಾನೋಕ್ತವಾಗಿ ಪಾದಪೂಜೆ…ಯು ನಡೆದು ತೀರ್ಥಪ್ರಸಾದ ವಿನಿಯೋಗವಾಯಿತು. …ಅನಂತರ ಬಂದ ಮಹಾಜನಗಳಿಗೆಲ್ಲಾ ಮೃಷ್ಟಾನ್ನ…ಭೋಜನವು ನಡೆಯಿತು. ಬಳಿಕ ಸಂಧ್ಯಾಕಾಲ ಸಮ…ಯದಲ್ಲಿ ಶ್ರೀಮತಿ ರಾಜ್ಞಿಯವರು ತಾವು ತರಿಸಿದ …ಆನೆಯನ್ನು ನೂತನಾಂಬರಗಳಿಂದಲಂಕರಿಸಿ ನಾನಾ…ವಿಧವಾದ್ಯಘೋಷದೊಡನೆ ವಿಧ್ಯುಕ್ತಪೂಜೆಯನ್ನು ನಡೆ…ಯಿಸಿ ಬಿಲ್ಲಪತ್ರಗಳೊಡನೆಯೂ ಭೂರಿದಕ್ಷಿಣೆಯೊಡ…ನೆಯೂ ಸನ್ನಿಧಿಗೆ ಸಮರ್ಪಣಮಾಡಿದರು. ಗುರುಗಳು …ರಾಜ್ಞಿಯವರ ಸೌಶೀಲ್ಯ ಔದಾರ್ಯ ಸದಾಚರಣ ಶಿವ…ಭಕ್ತ್ಯಾದಿ ಸದ್ಗುಣಗಳನ್ನು ನೋಡಿ ಸಂತುಷ್ಟ ಚಿತ್ತ…ರಾಗಿ ಜಗದ್ಗುರು ರೇಣುಕಾಚಾರ್ಯರ ನಾಮಸ್ಮರಣ …ಪೂರ್ವಕವಾಗಿ ಆಶೀರ್ವಾದವನ್ನು ಮಾಡಿದರು. ಪುನಃ …ಶ್ರೀಗಳವರನ್ನು ರಾತ್ರಿ ೮ ಘಂಟೆಗೆ ರಾಜಮರ್ಯಾದೆಗ…ಳೊಡನೆ ಬಿಡಾರಕ್ಕೆ ಕಳುಹಿಸಿಕೊಟ್ಟರು.

ಧರ್ಮಶಾಸ್ತ್ರದಲ್ಲಿ ದಾನಗಳೊಳಗೆ ಗಜದಾನವು …ಅತಿಶ್ರೇಷ್ಠವಾದುದೆಂದೂ ಅತೀವಪುಣ್ಯದಾಯಕವೆಂ…ದೂ ಹೇಳಲ್ಪಟ್ಟಿರುವುದು. ಶ್ರೀಮತಿ ರಾಜ್ಞಿಯವರು …ಸಮುದ್ರದಂತೆ ಗಂಭೀರಸ್ವಭಾವವುಳ್ಳವರೂ, ಉದಾರ…ಮತಿಗಳೂ, ಗುರುದೇವರಲ್ಲಿ ನಿಸ್ಸೀಮಭಕ್ತಿಯುಳ್ಳ…ವರೂ, ಆಚಾರಧುರಂಧರೆಯರೂ ವಯೋವೃದ್ಧೆಯ…ರೂ ಆಗಿರುವುದರಿಂದ ತಮ್ಮ ಮಠಾಚಾರ್ಯರನ್ನು …ಯಸ್ತರಮಟ್ಟಿಗೆ ಗೌರವಿಸಿದ್ದು ಅವರ ಸದ್ಗುಣಾ…ವಳಿಯ ಪ್ರಕಾಶಕ್ಕೆ ಕಾರಣವಾಯಿತಲ್ಲದೆ, ಈಶ್ವರನ …ಸಂತೋಷಕ್ಕೂ ಕಾರಣವಾಯಿತು. ರಾಜ್ಞಿಯವರು …ಗಿಂದಾಗ್ಗೆ ಸಮಾಜ ಸುಧಾರಣಾವಿಷಯದಲ್ಲಿಯೂ, …ಡಬಗ್ಗರ ವಿಷಯದಲ್ಲಿಯೂ ಅನೇಕವಿಧವಾದ ದಾನ…ಧರ್ಮಗಳನ್ನು ಮಾಡುತ್ತ ಪ್ರಪಂಚದಲ್ಲಿ ಬಹಳ …ಯಶಸ್ವಿನಿಯರಾಗಿರುತ್ತಾರೆ. ಶ್ರೀ ಜಗದ್ಗುರು ರೇಣು…ಕಾದಿಪಂಚಾಚಾರ್ಯರು ಶ್ರೀಮತಿ ರಾಜ್ಞಿಯವರಿಗೆ …ದೀರ್ಘಾಯುರಾರೋಗ್ಯಾದಿಭಾಗ್ಯಪರಂಪರೆಯನ್ನೀಯ…ಲೆಂದು ಅಪೇಕ್ಷಿಸುವೆವು.

ಗೌರ್ನಮೆಂಟ್ ಪ್ರೆಸ್ಸಿನ 1933–34 ನೆಯ ವರ್ಷದ ರಿಪೋರ್ಟು.

ಮಿ|| ಬಿ. ಪುಟ್ಟಯ್ಯನವರಿಗೆ ಕೊಟ್ಟಿದ್ದ ರಜಾ…ಕಾಲದಲ್ಲಿ ಮಿ|| ಬಿ. ಶ್ರೀನಿವಾಸಯ್ಯಂಗಾರ್ಯರು ಇವರ …ಬದಲಿ ಕೆಲಸ ನೋಡಿದರು.

ಕಳೆದ ವರ್ಷಕ್ಕಿಂತಲೂ ಈ ವರ್ಷ ಮೈಸೂರು …ಬೆಂಗಳೂರು ಎರಡೂ ಕಡೆಗಳಿಂದ ಒಟ್ಟು 19838 …ರೂಪಾಯಿಗಳು ಹೆಚ್ಚು ಖರ್ಚಾಗಿವೆ. 20600 ರೂ…ಪಾಯಿಗಳಷ್ಟು ಹೊಸ ಮಿಷನ್ ತರಿಸಿದ್ದರಿಂದ ಈ …ತಿ ಹೆಚ್ಚು ಖರ್ಚಾಯಿತು.

ಕಳೆದ ವರ್ಷಕ್ಕಿಂತಲೂ ಈ ವರ್ಷ 76577 ಬುಕ್ಕು… ಕಡಿಮೆ ತಯಾರಾಗಿರುತ್ತವೆ.

ಕಳೆದ ವರ್ಷಕ್ಕಿಂತಲೂ ಗೆಜೆಟ್ ಚಂದಾ ಮತ್ತು …ಅಡ್ವರ್‌ಟೈಸ್‌ಮೆಂಟ್ ಬಾಬತು 1402 ರೂಪಾಯಿಗಳು …ಕಡಿಮೆಯಾಗಿ ವಸೂಲಾಗಿದೆ.

ಕಳೆದ ವರ್ಷಕ್ಕಿಂತಲೂ ಈ ವರ್ಷ 50 ಪುಸ್ತಕ… ಹೆಚ್ಚು ರಿಜಿಸ್ಟರ್ ಕಾಪಿರೈಟ್ ಮಾಡಲ್ಪಟ್ಟವು.

…ಏಜನ್ಸಿಗಳು ಬ್ರಾಂಚುಗಳು ಎಲ್ಲದುದರಿಂದ ಹೋದ …ವರ್ಷಕ್ಕಿಂತ ಈ ವರ್ಷ ವ್ಯಾಪಾರದಲ್ಲಿ 8809 ರೂ. … ಕಡಿಮೆಯಾದುವು. 517 ರೂಪಾಯಿಗಳಷ್ಟು …ವರ್ಚ ಹೆಚ್ಚಾಗಿದೆ.

…ಪ್ರೆಸ್ ಕೆಲಸಗಾರರಿಗೆ ಪ್ರಿಂಟಿಂಗ್ ಬುಕ್‌ಬೈಂಡಿಂ… ಮೊದಲಾದ ಶಿಕ್ಷಣಗಳು ಚನ್ನಾಗಿ ನಡೆಯುತ್ತಿವೆ. …ನಲ್ಲಿ ಈ ವರ್ಷದ ಕೆಲಸವೆಲ್ಲಾ ಸಮರ್ಪಕವಾಗಿದೆ.

ವರ್ತಮಾನಸಂಗ್ರಹ.

ಸಂತೆಯಿಂದ ಮನೆಗೆ ಬರುತ್ತಿದ್ದ ೫ ಜನ ಹಿಂದೂ ಹುಡುಗಿಯರ ಮೇಲೆ ಅತ್ಯಾಚಾರ ನಡೆಸಿದ ಮೂವರು ಮುಸಲ್ಮಾನರಿಗೆ ನಟ್ಟೋರ್ ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರಿಗೂ ಆರಾರು ತಿಂಗಳು ಕಠಿನ ಶಿಕ್ಷೆಯನ್ನು ವಿಧಿಸಿದರು.

ಲಂಡನ್ ಪಟ್ಟಣದಲ್ಲಿರುವ ಇಂಡಿಯಾದೇಶದ ಬಡಜನರಿಗೆ, ಇಂಡಿಯನ್ ಸೋಷಿಯಲ್ ಕ್ಲಬ್ಬಿನವರು, ದೀಪಾವಳಿಯ ಸಂತೋಷಾರ್ಥವಾಗಿ ವೆಸ್ಟೆಂಡ್ ಹೋಟಲಿನಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದಲ್ಲದೆ, ಬಡಮಕ್ಕಳಿಗೆ ಬಟ್ಟೆಬರೆಗಳನ್ನೂ, ನಗದು ಬಹುಮಾನಗಳನ್ನೂ ಕೊಟ್ಟು ಸಂತೋಷಪಡಿಸಿದರು.

15 ನೇ ತಾರೀಖು ರಾತ್ರಿ ಸುಮಾರು 9½ ಗಂಟೆ ಸಮಯದಲ್ಲಿ ಪೆಷಾವರಿಗೆ ಸೇರಿದ ಬಟಗ್ರಾಂ ಪೋಲೀಸ್ಟೇಷನ್ ಸರಹದ್ದಿನಲ್ಲಿ ಯಾರೋ ದುಷ್ಟರು ಮರೆಯಲ್ಲಿ ನಿಂತು ಪೋಲೀಸರ ಮೇಲೆ ಗುಂಡು ಹಾರಿಸಿದರು. ನಾಲ್ಕು ಮಂದಿ ಪೋಲೀಸರಿಗೆ ಗಾಯಗಳಾದುವು. ಇವರಲ್ಲಿ ಗುಲ್‌ಬಹದ್ದೂರ್ ಎಂಬ ಕಾನ್‌ಸ್ಟೇಬಲ್‌ನು ಮಾರನೆಯ ಬೆಳಗ್ಗೆ ಸತ್ತುಹೋದನು.

ಆಫ್ರಿಕಾದಲ್ಲಿ ಒಬ್ಬ ಮೋಟಾರ್ ಡ್ರೈವರನು ಕಾಡಿನ ರಸ್ತೆಯಲ್ಲಿ ಗಾಡಿ ನಡೆಸುತ್ತಿರುವಾಗ ಒಂದು ತಿರುವಿನಲ್ಲಿ ಇದ್ದಕ್ಕಿದ್ದಂತೆ 20 ಆನೆಗಳ ಗುಂಪನ್ನು ಕಂಡನು. ಎಷ್ಟು ಜಾಗ್ರತೆ ಬ್ರೇಕ್ ಹಾಕಿದರೂ ಮೋಟಾರ್ ಮಡ್‌ಗಾರ್ಡು ಹೋಗಿ ಒಂದು ಆನೆಯ ಕಾಲಿಗೆ ತಗುಲಿತು. ಕೂಡಲೆ ಆನೆಯು ಕೋಪದಿಂದ ಗಾಡಿಯ ದೀಪಗಳನ್ನು ಕಿತ್ತಿಸೆದು ಮುಂದಿನ ಗಾಜನ್ನು ಒಡೆಯಿತು. ಗಾಡಿಯು ಒಂದು ಪಕ್ಕಕ್ಕೆ ತಿರುಗಿ ಸ್ವಲ್ಪ ದೂರದಲ್ಲಿ ಒಂದು ಮರುಳು ದಿಣ್ಣೆಯ ಬಳಿ ನಿಂತಿತು. ಕೂಡಲೆ ಡ್ರೈವರನು ಇಳಿದು ಬಹಳ ಕಷ್ಟದಿಂದ ಗಾಡಿಯನ್ನು ಮುಂದಕ್ಕೆ ನಡೆಸಿಕೊಂಡು ಹೋದನು. ಏಟಿನಿಂದ ಆನೆಯು ಬಹಳ ದೂರದವರೆಗೂ ಇವನನ್ನು ಓಡಿಸಿಕೊಂಡು ಬಂದರೂ ಅದೃಷ್ಟವಶಾತ್ ತಪ್ಪಿಸಿಕೊಂಡನು.

ಬಿಹಾರ್ ಭೂಕಂಪದ ವೈಸ್ರಾಯ್ ನಿಧಿಗೆ ಜಪಾನ್ ದೇಶದ ಸಹಾಯ.

ಜಪಾನ್ ಪ್ರಜೆಗಳು ವೈಸ್ರಾಯ್ ಭೂಕಂಪ ನಿಧಿಗೆ 18204-2-5 ಕಳುಹಿಸಿದ್ದಾರೆ. ಇಲ್ಲಿಯವರೆಗೆ 6020774-5-1 ರೂ. ಗಳು ಕೂಡಿವೆ.

ಜೂಜುಗಾರರ ದಸ್ತಗಿರಿ.

ದೀಪಾವಳಿ ಹಬ್ಬದಲ್ಲಿ ಜೂಜಾಡುತ್ತಿದ್ದುದಕ್ಕಾಗಿ ಜಬ್ಬಲ್‌ಪುರದ ಪೋಲೀಸರು ಸುಮಾರು 160 ಜನರನ್ನು ದಸ್ತಗಿರಿಮಾಡಿದ್ದಲ್ಲದೆ 1500 ರೂಪಾಯಿಗಳನ್ನು ವಶಪಡಿಸಿಕೊಂಡರು.

3 ಜನ ನಾಜಿಗಳಿಗೆ ಮರಣದಂಡನೆ.

ಆಸ್ಟ್ರಿಯಾದೇಶಕ್ಕೆ ಸೇರಿದ ಸೇತುವೆಗಳನ್ನು ಡೈನಾಮೆಂಟ್ ಹಾರಿಸಿ ಒಡೆದುಹಾಕಲು ಪ್ರಯತ್ನಮಾಡುತ್ತಿದ್ದರೆಂದು ಮೂರು ಜನ ನಾಜಿಗಳಿಗೆ, ಅಲ್ಲಿಯ ನ್ಯಾಯಾಧೀಶರು ಮರಣದಂಡನೆಯನ್ನು ವಿಧಿಸಿದರು.

ಹೃದಯಕ್ರಿಯೆಯನ್ನು ತಿಳಿಯುವ ಸಾಧನ !

ಸ್ಪೇನ್ ದೇಶದ ಡಾಕ್ಟರೊಬ್ಬರು ಮನುಷ್ಯನ ಹೃದಯಚಲನಶಬ್ದವನ್ನು ತಿಳುಹಿಸುವ ಗ್ರಾಮೊಫೋನ್ ರಿಕಾರ್ಡನ್ನು ತಯಾರುಮಾಡಿದ್ದಾರೆ. ಇದರಿಂದ ವೈದ್ಯರಿಗೆ ತುಂಬಾ ಸಹಾಯವಾಗುವುದರಲ್ಲಿ ಸಂಶಯವಿಲ್ಲ.

ಜಪಾನ್ ಭಾಷೆ.

ಜಪಾನ್ ಭಾಷೆಯಲ್ಲಿ ತುಚ್ಛವಾದ ಬೈಗಳಗಳೇ ಇಲ್ಲವಂತೆ! ಬಹಳ ನಿಕೃಷ್ಟ ಬೈಗಳೆಂದರೆ 'ನೀನು ಒಂದು ಮೃಗ' ಎಂಬುದು. ಅದಕ್ಕೂ ಹೆಚ್ಚಾಗಿ ಹೃದಯಭೇದಿಯಾಗಬೇಕಾದರೆ 'ನೀನು ಜಪಾನೀಯನಲ್ಲ' ಎಂಬುದು.

ವ್ಯಾಧಿಯು ಗುಣವಾಗದಿದ್ದುದಕ್ಕಾಗಿ ಆತ್ಮಹತ್ಯೆ.

ರಂಗೂನಿನಲ್ಲಿ ಒಬ್ಬ ಇಂಡಿಯಾದೇಶದ ಪೋಲೀಸ್ ಕಾನ್‌ಸ್ಟೇಬಲ್ಲನ ಹೆಂಡತಿಯು, ಸುಮಾರು 2 ವರ್ಷಗಳಿಂದ ಯಾವುದೋ ವ್ಯಾಧಿಯಿಂದ ನರಳುತ್ತಿದ್ದು ಆ ಬಾಧೆಯನ್ನು ತಡೆಯಲಾರದೆ ಮಹಡಿಯ ಕಿಟಕಿಯಿಂದ ಬಿದ್ದು ಪ್ರಾಣಬಿಟ್ಟಳೆಂದು ತಿಳಿದುಬಂದಿದೆ.

ಸಾಧುವಾದ ಸರ್ಪ !

ಗೌಹತ್ತಿ ಹತ್ತಿರವಿರುವ ಬಾರ್‌ಪೇಟೆ ಎಂಬಲ್ಲಿ ಒಂದು ಮಹಾಸರ್ಪವು ತನ್ನ ಯಜಮಾನನಾದ ಒಬ್ಬ ಸಾಧುವಿನ ಸಮಾಧಿಯ ಹತ್ತಿರ ವಾಸವಾಗಿದ್ದು ಯಾರು ಎಷ್ಟು ಹಿಂಸಿಸಿದರೂ ಕೋಪಗೊಳ್ಳದೆ ಆ ಸ್ಥಳವನ್ನು ಬಿಟ್ಟು ಹೊರಡದೆ ಶಾಂತಿಯಿಂದ ವರ್ತಿಸುತ್ತಿದೆಯೆಂದು ತಿಳಿದುಬಂದಿದೆ.

ತರುಣಿಯರಿಗೆ ಜಯ !

19 ನೇ ತಾರೀಖಿನ ದಿವಸ ನಾಗಪುರದ ಮಾರಿಸ್ ಕಾಲೇಜಿನ ಹುಡುಗರಿಗೂ ಹುಡುಗಿಯರಿಗೂ ಕ್ರಿಕೆಟ್ ಆಟವು ನಡೆಯಿತು. ಹುಡುಗಿಯರು ಮೊದಲು ೧೪೯ ರನ್ನು ಮಾಡಿದರು. ಅನಂತರ ಹುಡುಗರು ೧೩೦ ರನ್ನು ಮಾಡಿದರು. ೧೯ ರನ್ನುಗಳಿಂದ ಬಾಲಿಕೆಯರು ಜಯವನ್ನು ಪಡೆದರು.

೫ ವರ್ಷಗಳಿಂದ ನಿದ್ರೆಯಿಲ್ಲದ ಮನುಷ್ಯ.

ಇಂಗ್ಲೆಂಡಿಗೆ ಸೇರಿದ ಕೆಂಟ್ ಎಂಬಲ್ಲಿ ೨೫ ವರ್ಷ ವಯಸ್ಸಿನ ಮನುಷ್ಯನೊಬ್ಬನು. ಈಗ 5 ವರ್ಷಗಳ ಹಿಂದೆ ಮೋಟಾರ್ ಸೈಕಲ್ ಸವಾರಿ ಮಾಡುತ್ತಿದ್ದಾಗ ಸಾಮಾನಿನ ಲಾರಿಗೆ ಡಿಕ್ಕಿ ಹೊಡೆದು ಘಾಯಹೊಂದಿ 12 ದಿನಗಳು ಜ್ಞಾನವಿಲ್ಲದಿದ್ದು ಬದುಕಿಕೊಂಡನು. ಅವನು ಅಂದಿನಿಂದ ಇಲ್ಲಿಯವರೆಗೂ ನಿದ್ರೆಯೇ ಇಲ್ಲದೆ ರಾತ್ರಿಕಾಲವನ್ನೆಲ್ಲಾ ಕಥೆಗಳನ್ನು ಓದುತ್ತ ಕಳೆಯುತ್ತಿದ್ದಾನೆ.

ಹಿಟ್ಲರನ ಚಿತ್ರಕ್ಕೆ ವಿರೋಧ !

ಸ್ಪೇನ್ ದೇಶದಿಂದ, ಲಂಡನ್ ಪಟ್ಟಣಕ್ಕೆ ಮಾರಾಟಕ್ಕೆ ಬಂದಿದ್ದ 100000 ಕಿತ್ತಲೆಹಣ್ಣುಗಳಿಗೆ ಸುತ್ತಿದ್ದ ಕಾಗದದಮೇಲೆ ಹಿಟ್ಲರನ ಚಿತ್ರವಿದ್ದುದನ್ನು ನೋಡಿ ಜನಗಳು ಅಸಮಾಧಾನಪಟ್ಟು ಗಲಭೆಮಾಡಿದರು. ವರ್ತಕನು ಕೂಡಲೆ ಅವುಗಳನ್ನು ಹೊರಕ್ಕೆ ತೆಗೆಯಿಸಿ, ಜರ್ಮನಿಗೆ ಹೋಗಬೇಕಾದ ಹಣ್ಣುಗಳು ತಪ್ಪಿ ಇಲ್ಲಿಗೆ ಬಂದಿರುವವೆಂದು ಹೇಳಿದಮೇಲೆ, ಜನಗಳು ಸಮಾಧಾನವಾಗಿ ಜಯಧ್ವನಿಮಾಡಿದರಂತೆ!

ಪೋಲೀಸ್ ವೇಷವನ್ನು ಧರಿಸಿದ ಢಕಾಯಿತರು.

30 ಜನ ಢಕಾಯಿತರು ಲಕ್ನೋದ ಹತ್ತಿರವಿರುವ ಒಂದು ಹಳ್ಳಿಗೆ ಹೋಗಿ ತಮ್ಮ ಗುಂಪಿನ ಕೆಲವರಿಗೆ. ಪೋಲೀಸರ ಉಡುಪು ಹಾಕಿ ರಾತ್ರಿ ವೇಳೆಯಲ್ಲಿ ಆ ಊರಿನ ಗಜಧರನೆಂಬವನ ಮನೆಗೆಹೋಗಿ ಪೋಲೀಸು ಠಾಣೆಗೆ ಬರಬೇಕೆಂದು ಕೂಗಿಸಿದರು. ಮನೆಯ ಯಜಮಾನನು ಬಾಗಿಲು ತೆಗೆದಕೂಡಲೆ ಎಲ್ಲರೂ ಒಳಕ್ಕೆ ನುಗ್ಗಿ ಮನೆಯವರನ್ನು ಹೆದರಿಸಿ ಹೊರಗಿನ ಸಹಾಯ ಬರುವುದರಲ್ಲಿ ಒಡವೆವಸ್ತುಗಳನ್ನೆಲ್ಲಾ ದೋಚಿಕೊಂಡು ಹೋದರು.

ಗೋಣೀಚೀಲದಲ್ಲಿ ಮಗುವಿನ ಹೆಣ.

15ನೇ ತಾರೀಖಿನ ದಿವಸ ಮನ್ನಾರ್‌ಗುಡಿಗೆ ಸೇರಿದ 10 ಮೈಲು ದೂರದಲ್ಲಿರುವ ಪಂಡಿತ ಕುಡಿ ಎಂಬಲ್ಲಿ ವಾಸವಿಲ್ಲದ ಮನೆಬಾಗಿಲನ್ನು ಮನೆ ಯಜಮಾನನು ಬಂದು ತೆಗೆದಾಗ್ಗೆ ಗೋಣೀಚೀಲದಲ್ಲಿ ಕಟ್ಟಿಹಾಕಿದ್ದ 5 ವರ್ಷದ ಒಬ್ಬ ಹುಡುಗಿಯ ಹೆಣವನ್ನು ನೋಡಿ, ಪೋಲೀಸರಿಗೆ ತಿಳುಹಿಸಿದನು. ಮಗುವಿನ ಮೈಮೇಲಿದ್ದ ಒಡವೆಗಳು ಹೋಗಿರುವುದರಿಂದ ಯಾರೋ ಒಡವೆಯನ್ನು ಕದ್ದು ಮಗುವನ್ನು ಕೊಂದಿದ್ದಾರೆಂದು ತಿಳಿಯುತ್ತದೆ. ಪತ್ತೆತರಮೂದು ನಡೆಯುತ್ತಿದೆ.

[೪ನೇ ಪುಟದಿಂದ ಮುಂದುವರಿದುದು.]

Rao's feelings of vanity, and in unnecessarily dragging the name of Sir Alladi into the controversy he has rendered a distinct disservice to the noble knight of Madras. In the first place, Sir Alladi proceeded on the erroneous assumption that the Chief Justice is the High Court and that the High Court is the Chief Justice, contrary to the Rules and Regulations of the Mysore High Court. This confusion led him to treat the 'High Court Circular' as the 'Chief Justice's Circular' though it had been issued on the authority and responsibility of all the three Judges, and to direct all his attacks relating to the Circular against the late Chief Justice alone. Arguments vitiated by such a mistake lose much of their force for obvious reasons and cannot be said to command acceptance. This cannot be said to be a verbal error, or a mere matter of form; nor can it be said that such mistakes will not prejudice the parties concerned in cases before the courts, when arguments based on such mistakes are likely to influence the decision.

Single Judge Decision vs. Full Bench.

Orders passed and opinions expressed by the three Judges stand on a different footing from those of a single Judge, and if it had been otherwise there would have been no need for the Rules and Regulations to provide that appeals should be heard by two Judges instead of one, and that a Full Bench should consist of all the three Judges. Of course, the late Chief Justice had no opportunity of being heard, and it is a matter for regret that the Government Advocate did not point out this serious mistake on the part of Sir Alladi. An erroneous atmosphere prejudical to the late Chief Justice was created and he was subjected to undeserved attacks without a remedy.

Does Law Allow Concerted Action ?

In the next place the paramount question for consideration in this case was whether the law allows concerted action by lawyers to protest against an alleged wrong to one of its members or in respect of anything connected with the administration of justice. The High Courts have given an emphatic answer against lawyers in this respect. The Calcutta High Court has laid down that the Bar in any such case cannot constitute the authority to adjudge on such grievance, and that its duty is not to lower the authority of the Court or to withhold the respect due to it under any circumstances. As regards the proper procedure to be followed in such cases, the High Court states that if a legal practitioner has a grievance he must seek the remedy from the judicial authority appropriate for the particular case just as the remedy for other grievances should be sought from the administrative authority concerned. These principles have been discussed, approved and followed by the High Courts of Bombay, Patna and Rangoon and their correctness has not till now been doubted in any quarter. Sir Alladi did not attack these principles and did not show, as he ought to have done, that they are opposed to recognised notions of professional ethics or well-known principles of English jurisprudance. No Bar Association in any part of B. India is reported to have complained against these principles, and Sir Alldi did not show how they acted oppressively against the Mysore Bar Association in particular. Nor did he cite a single decision of any High Court or other authority to justify collective action of lawyers against judges.

Lawyers as Ministers of Justice.

The principle laid down by the Bombay High Court is that when lawyers openly denounce the conduct of judges they could not be relied upon to do their duty as officers of the court. According to the Privy Council and the Allahabad High Court, lawyers should maintain by their acts and conduct not only the honour of the body to which they belong, but also the honour of the court of which by reason of their enrolment they form an integral part. The well-known English decision of Hutchinson vs Stephens is an authority for the proposition that it is the duty of lawyers as ministers of justice "to uphold the majesty of the law *whether good or otherwise.*"

Special Grounds.

But Sir Alladi proceeded to justify the concerted action of the Bar Association on special grounds. He argued that the late Chief Justice had been harsh about the judiciary about whom he had made some remarks, that as officers of the Court the members of the Bar Association were sensitive about the remarks since they were interested "in the integrity and prestige of the judiciary" and that "just as it struck the Chief Justice that there was a want of decency and decorum, the Association also felt that the expressions used by the Chief Justice were unwarranted and highly unjustifiable." This argument does not contain a statement of the law on the subject, and all the facts referred to therein cannot change the law and confer a new right on the lawyers to do an act which the law prohibits. That it was the solicitude of the lawyers for the judiciary which induced them to pass the resolutions is an astonishing proposition, and it is amusing to hear that Sir Alladi came all the way from Madras to defend the subordinate judiciary against the alleged harsh treatment of their own official superior. This theory is violently opposed to the very first resolution which declares that the persons aggrieved were the lawyers and not the judiciary, and such a defence had not also been raised by the President and the Secretary in the written statement which they filed before the High Court and the Government Advocate ought to have pointed out this inconsistency. The admitted facts go to show that the late Chief Justice, with fearless determination, has thrown a fierce light on the dark spots existing in the legal profession, and that it was his exposure of the shortcomings of the lawyers that was responsible for their agitation. If pulling down the highest judges, from whose hands all lawyers receive their Sannads, is to be deemed an admirable virtue in the lawyers, then the principles laid down by Lord Mansfield, who is recognised to be one of the seven greatest judges in the British Empire, principles which have made the English Bar a model of perfection and which have been followed from more than 160 years by all the High Courts in England, America and India, including the Mysore High Court, shall have to be revived. To say that the members of the Bar sacrificed the prestige, dignity and authority of the High Court Judges in order to safeguard the interests of their subordinates, posing themselves as their champions, to subvert discipline which all lawyers are precluded from doing, and if a place of honour is to be given to such persons on the ground of chivalry, then the entire code of ethics hitherto followed in the Anglo-Saxon world shall have to be revised.

(To be Continued)

ಹೆರ್ ಹಿಟ್ಲರನಿಗೂ ಹೆಣ್ಣಿನ ಹುಚ್ಚು ಹಿಡಿಯಿತೇ ?

ರಾಜಕುಮಾರಿಯೊಡನೆ ಮದುವೆ !

ಅಡೋಲ್ಫ್ ಹಿಟ್ಲರೆಂದರೆ ಇಂದಿನ ಜರ್ಮನಿಯಲ್ಲಿ ಎಲ್ಲರ ಶಿಕ್ಷಾರಕ್ಷಣಗಳನ್ನು ತನ್ನ ಹಿಡಿಯಲ್ಲಿ ಹಿಡಿದಿರುವಾತನು. ಈತನ ಮಾತೇ ವೇದವಾಕ್ಯ. ಅಜ್ಞೆಗೆ ಅಡ್ಡಿಯಿಲ್ಲ; ಕೃಪಾಣಕ್ಕೆ ತಡೆಯಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ, ಜರ್ಮನಿಯ ಏಕಮಾತ್ರ ಸರ್ವಶಕ್ತನೆಂದರೆ ಈತನೇ !

ಈತನು ತನ್ನ ಅಧಿಕಾರವನ್ನು ಸ್ವಯಂ ಗಳಿಸಿದನು. ಅನೇಕ ವರ್ಷಗಳಿಂದ ಪ್ರಯತ್ನಪಟ್ಟು ತನ್ನ ಆಶೆಯ ಪರಮಾವಧಿಯನ್ನೇ ಮುಟ್ಟಿದನೆನ್ನಬಹುದು.

ಈತನು ಈ ದಿನ ಸರ್ವಾಧಿಕಾರವನ್ನು ನಡೆಸುತ್ತಿರುವ ರೀತಿಯನ್ನು ನೋಡಿದರೆ, ಜರ್ಮನಿಯಲ್ಲಿ ಹಿಂದೆ ಆಗಿಹೋದ ಯಾವ ಕೈಸರ್ ಚಕ್ರವರ್ತಿಗಳೂ ಇವನಿಗೆ ಸರಿಯಾಗಲಾರರು. ಅವರಲ್ಲಿ ಯಾರಿಗೂ ಇವನಿಗಿದ್ದಷ್ಟು ಮಹಾಶಕ್ತಿಯಿರಲಿಲ್ಲ.

ಈಗ ಈ ಮಹಾಶಕ್ತಿಯುತನು ಒಬ್ಬ ರಾಜಕುಮಾರಿಯನ್ನು ಮದುವೆಮಾಡಿಕೊಳ್ಳಬೇಕೆಂದಿದ್ದಾನೆ; ತನ್ನ ಪೀಳಿಗೆಯನ್ನೂ ಅರಸುಮನೆತನವನ್ನೂ ಬೆಳೆಯಿಸಬೇಕೆಂದಿದ್ದಾನೆ.

ಈತನ ಮಡದಿಯಾಗುವವಳು ಜರ್ಮನಿಯ ಚಕ್ರವರ್ತಿ ಮನೆತನಕ್ಕೆ ಸೇರಿದವಳು. ಆ ಕಾಲದಲ್ಲಿ ಈ ಹಿಟ್ಲರನು 'ಡ್ಯೂಕ್' ಬಿರುದನ್ನು ಧರಿಸುವನಂತೆ!

(ಈ ರೀತಿಯಾಗಿ ಪ್ಯಾರಿಸ್ ನಗರದಲ್ಲಿ ಪ್ರಕಟವಾಗುತ್ತಿರುವ 'ಪಾರಿಸರ್ ಟ್ಯಾಗೆ ಬ್ಲಾಟ್' ಎಂಬ ಜರ್ಮನಿಯ ಪತ್ರಿಕೆಯು ಹೇಳುತ್ತದೆಂದು ಅಮೇರಿಕೆಯ 'ಚಿಕಾಗೋ ಟ್ರಿಬ್ಯೂನ್' ಪತ್ರಿಕೆಯು ತಿಳಿಸುತ್ತದೆ.

'ಸಾಮ್ರಾಟ್ ನೆಪೋಲಿಯನ್ನನು ತಾನು ಉನ್ನತಸ್ಥಿತಿಗೆ ಏರಿದ್ದಾಗ ತನ್ನ ಅರಸುಮನೆತನದ ಪೀಳಿಗೆಯನ್ನು ಬೆಳೆಸಲು ಆಸ್ಟ್ರಿಯಾದ ರಾಜಕುವರಿಯಾದ ಆರ್ಚ್ ಡಚಸ್ ಮೇರಿಲೂಯಿ ಎಂಬವಳನ್ನು ಮದುವೆಯಾದಂತೆಯೇ' ಈಗ ಸರ್ವಾಧಿಕಾರಿ ಹಿಟ್ಲರನು ಸಹ ತಾನೊಬ್ಬಳು ರಾಜಕುವರಿಯನ್ನು ವಿವಾಹಮಾಡಿಕೊಂಡು ಕೈಸರನಾಗಿ ತನ್ನ ಮನೆತನವನ್ನು ಮುಂದುವರಿಸಬೇಕೆಂದಿದ್ದಾನೆ' ಎಂಬುದಾಗಿ ಆ ವೃತ್ತಪತ್ರಿಕೆಯು ಸಾರುತ್ತದೆ.

ಈ ಹಿಟ್ಲರನು ಹುಡುಕಿರುವ ಕನ್ಯೆಯಾದರೋ ಮಹೋನ್ನತಮನೆತನದವಳು! ಈಗಾಗಲೇ ಇಂಗ್ಲೆಂಡು, ಸ್ವೀಡನ್, ಬೆಲ್ಜಿಯಂ, ಬಲ್ಗೇರಿಯ, ರಷ್ಯಾ, ಪೋರ್ಚುಗಲ್ ಮುಂತಾದ ಸಾರ್ವಭೌಮ ಮನೆತನಗಳೊಡನೆ ವಿವಾಹ ಸಂಬಂಧದಿಂದ ಕಲೆತು, ಚೆನ್ನಾಗಿ ಹೆಣೆದುಕೊಂಡಿರುವ 'ಸ್ಯಾಕ್ಸ್—ಕೋಬರ್ಗ್ ಮತ್ತು ಗೋಥಾ' ವಂಶದವಳು;

ಪ್ರಾಯಶಃ ಹಿಟ್ಲರನು ಈ ತನ್ನ ವಂಶದೇಳಿಗೆಯ ವಿಧಾನವು ಇಷ್ಟರಲ್ಲಿಯೇ ಹೊರಬೀಳಬಹುದು. ಮುಂದೆ 'ಸ್ಯಾಕ್ಸ್ ಕೋಬರ್ಗ್ ಮತ್ತು ಗೋಥಾ' ಮನೆತನದ ರಾಜಕುವರಿಯೊಡನೆ ಜರುಗಲಿರುವ ವಿವಾಹದ ಸುದ್ದಿಯು ಈ ತಿಂಗಳ ಅಂತ್ಯಭಾಗದೊಳಗಾಗಿ ಪ್ರಸಿದ್ಧಗೊಳಿಸಲ್ಪಡುವುದು.

ಈಗ ಹಿಟ್ಲರನ ಪಕ್ಷದವರೇನೋ 'ಈತನ ಪೀಳಿಗೆಯು ವರ್ಧಿಸುವುದು ಸರ್ವಥಾ ಸರಿಯಾದುದು. ನೀತಿಯ ದೃಷ್ಟಿಯಿಂದಲೂ ಇದು ಅತ್ಯವಶ್ಯವಾದುದು. ಇಂತಹ ವಿವಾಹಮಹೋತ್ಸವವು ನಡೆಯುವುದೆಂದರೆ ಅದರಿಂದಾದರೂ ಕೊಂಚಮಟ್ಟಿಗೆ ಈಗ ರಾಷ್ಟ್ರದಲ್ಲಿ ನೆಲಸಿರುವ ಆರ್ಥಿಕಕಷ್ಟಗಳೇ ಮುಂತಾದುವನ್ನು ಜನರು ಮರೆಯಬಲ್ಲರು. ಆದುದರಿಂದ ಈ ವಿವಾಹವು ಬಹು ಮುಖ್ಯವಾದುದು' ಎಂದು ಅಭಿಪ್ರಾಯಪಡುತ್ತಿದ್ದಾರೆ.

ಡ್ಯೂಕ್ ಮೊದಲನೇ ಅಡೋಲ್ಫ್.

ಒಂದು ವೇಳೆ ಮೊದಲೇ ಸ್ವಾಭಾವಿಕವಾಗಿ ನಾಜಿಗಳಿಗೆ ಒಂದು ಸೊಗಸಾದ ಮಹೋತ್ಸವವನ್ನೇ ಏರ್ಪಡಿಸಬೇಕೆಂಬ ಆಶೆ. ಆದರ ಜೊತೆಗೆ ಹಿಟ್ಲರನು ಸಮಸ್ತ ಜರ್ಮನರ ಪ್ರಭುವಾಗುವುದೂ ಅದರಲ್ಲೂ ಒಬ್ಬ ಜರ್ಮನ್ ರಾಜಕುವರಿಯ ವರನಾಗುವುದೂ ಸೇರಿಬಿಟ್ಟರಂತೂ ಜರ್ಮನರಿಗೆ ಹಿಂದೆಂದೂ ಉಂಟಾಗದಿದ್ದ ಆನಂದಾನುಭವವಾಗುವುದರಲ್ಲಿ ಸಂದೇಹವೇ ಇಲ್ಲ.

ಮೇಲಾಗಿ ಜರ್ಮನರು ಮೊದಲಿನಿಂದಲೂ ರಾಜನನ್ನು ಓಲೈಸುವುದೇ ತಮ್ಮ ಜೀವನಧ್ಯೇಯವೆಂದೂ ತಮ್ಮ ಆದ್ಯಕರ್ತವ್ಯವೆಂದೂ ಭಾವಿಸುವವರು. 'ಪ್ರಪಂಚಕ್ಕೆಲ್ಲ ಇದೇ ಭಾವನೆ' ಎಂಬುದಾಗಿ ಇವರ ಅಭಿಪ್ರಾಯ.

ಇನ್ನು ವಧುವಿನ ಮನೆತನದ ಕಡೆಗಷ್ಟು ನೋಡೋಣ. ಜರ್ಮನ್ ಸಾರ್ವಭೌಮ ಮನೆತನಗಳಲ್ಲಿ ಪುರಾತನವೆಂದು ಖ್ಯಾತಿಗೊಂಡಿರುವ ಈ ಸಾಕ್ಸ್ ಕೋಬರ್ಗ್ ಮತ್ತು ಗೋಥಾ ಮನೆತನದವರೇ ಹಿಟ್ಲರನ ರಾಷ್ಟ್ರೀಯ ಸಮತಾವಾದಿತ್ವವನ್ನು ಒಪ್ಪಿಕೊಂಡವರು. ಇಷ್ಟೇ ಅಲ್ಲದೆ ಆ ಮನೆತನದ ಈಗಿನ ಯಜಮಾನನು ತಾನೇ ಖುದ್ದಾಗಿ ನಾಜಿ ಸ್ಟಾರಂಟ್ರೂಪಿನ ಮುಖಂಡನಾಗಿದ್ದವನು. ಇವರ ಜೊತೆಗೆ ತನ್ನ ಮಗಳನ್ನು ಸ್ವೀಡ ದೇಶದ ರಾಜಪುತ್ರನಾದ ಗಸ್ಟಾವ್ ಅಡೋಲ್ಫ ಎಂಬಾತನಿಗೆ ಕೊಟ್ಟು (ತಾ||೨೯-೧೧-೩೪ರಲ್ಲಿ) ಮಹಾವೈಭವದೊಡನೆ ವಿವಾಹಮಾಡಿದಾಗ ಈ ಹಿಟ್ಲರನಿಗೆ ಆಹ್ವಾನ ಕೊಟ್ಟು ಗೌರವಿಸಿದನು. ಈ ಮದುವೆಯ ಕಾಲದಲ್ಲಿ ವಧುವಿನ ತಂದೆಯಾದ ಡ್ಯೂಕ್ ಕಾರ್ಲ್ ಎಡ್ವರ್ಡನು ಹಿಟ್ಲರನ ವಿಷಯದಲ್ಲಿ ಅತಿ ವಿನಯ ಗೌರವಗಳನ್ನು ತೋರ್ಪಡಿಸಿದನೆಂದೂ, ಮದುವೆಯಲ್ಲಿ ರಾಜ್ಯತಂತ್ರದ ನೋಂಕಿರುವುದೆಂದೂ ತಿಳಿದು ಇಂಗ್ಲೆಂಡಿನ ಸಾರ್ವಭೌಮಮನೆತನದವರು ತಮ್ಮ ಪರವಾಗಿ ಯಾರನ್ನೂ ಪ್ರತಿನಿಧಿಗಳಾಗಿ ಕಳುಹಿಸಿರಲಿಲ್ಲ.

ಈ ಸುದ್ದಿಯೆಲ್ಲವೂ ಈ "ಪ್ಯಾರಿಸರ್ ಟ್ಯಾಗೆ ಬ್ಲಾಟ್" ಪತ್ರಿಕೆಗೆ ಗೊತ್ತು. ಜರ್ಮನಿಯ ಪ್ರತಿಯೊಂದಂಶವೂ ಇದಕ್ಕೆ ಚೆನ್ನಾಗಿ ತಿಳಿದಿದೆ. ಈ ಪತ್ರಿಕೆಯ ಅಭಿಪ್ರಾಯದಂತೆ "ಹಿಟ್ಲರನು ಕೈಸರನಾಗುವ ಸಂಭವವಿದೆ. ಈತನ ಮಂತ್ರಿಯಂತಿರುವ ಅಲ್ಫ್ರೆಡ್ ರೋಸೆನ್‌ಬರ್ಗರವರು ಈತನು ಪುರಾತನವೂ, ಶೋಭಾಯಮಾನವೂ ಆದ "ಜರ್ಮನರ ಡ್ಯೂಕ್" ಎಂಬ ಬಿರುದನ್ನು ಧರಿಸಲಿ ಎಂದು ಇಚ್ಛಿಸುತ್ತಿದ್ದಾರೆ; ಎಂಬುದಾಗಿ ತಿಳಿಸುತ್ತದೆ.

ಡ್ಯೂಕ್ ಎಂದರೆ ಮುಖಂಡನೆಂದು ಅರ್ಥವಾಗುವುದಂತೆ! ಹಿಟ್ಲರನು ಅಂತಹ ಬಿರುದಾಂಕಿತನಾಗಿ ನಾಜಿಗಳ ಧ್ಯೇಯದ ಪರಮಾವಧಿಯಾಗಿರುವ "ಪ್ರಜಾಚಕ್ರಾಧಿಪತ್ಯ" ವನ್ನು ಸ್ಥಾಪಿಸಲಿದ್ದಾನೆಂದು ತಿಳಿದು ಬಂದಿದೆಯಂತೆ.

ಇಷ್ಟಾದರೂ ಹಿಟ್ಲರನಿಗೆ ಕೊಡುವ ಹೆಣ್ಣು ಯಾವುದು ಎಂಬುದು ಇನ್ನೂ ಚೆನ್ನಾಗಿ ವ್ಯಕ್ತಪಟ್ಟಿಲ್ಲ. ಡ್ಯೂಕಿನ ಹೆಣ್ಣು ಮಕ್ಕಳೆಲ್ಲರಿಗೂ ಮದುವೆಯಾಗಿ ಹೋಗಿದೆ; ಆದರೆ ಈತನ ಬಂಧುವರ್ಗದಲ್ಲಿ ಅನೇಕರಿದ್ದಾರೆ. ಆಸ್ಟ್ರಿಯಾದಲ್ಲಿರುವ ರಾಜಕುಮಾರಿ ಲಿಪಾಲ್ಡೈನ್ (ವಯಸ್ಸು ೨೯) ರಾಜಕುಮಾರಿ ಮೇರಿ (ವಯಸ್ಸು ೩೦) ರಾಜಕುಮಾರಿ ಜೋಸೆಫೈನ್ (ವಯಸ್ಸು ೨೩) ಮುಂತಾದವರಿದ್ದಾರೆ.

ಹಿಟ್ಲರನು ಈಗ ಮದುವೆಮಾಡಿಕೊಳ್ಳಬೇಕೆಂದಿರುವುದಕ್ಕೆ ಮತ್ತೂ ಒಂದು ಕಾರಣವಿದೆಯಂತೆ! ತನಗೆ ಇಷ್ಟೊಂದು ವಯಸ್ಸಾಗಿದ್ದರೂ ಇನ್ನೂ ಅವಿವಾಹಿತನಾಗಿಯೇ ಇರುವುದರಿಂದ ಜನರು ಅಲ್ಲಲ್ಲಿ ಬಾಯಿಗೆ ಬಂದಂತೆ ಅಷ್ಟು ಸುಶ್ರಾವ್ಯವಲ್ಲದ ಮಾತುಕತೆಗಳನ್ನು ಆಡಿಕೊಳ್ಳಲು ಪ್ರಾರಂಭವಾಗಿದೆಯಂತೆ! ಈ ಹೆಣ್ಣಿನ ಮೇಲಿನ ಹುಚ್ಚಿಗೆ ಅದೂ ಒಂದು ಕಾರಣವಿರಬಹುದು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳುದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ಮುದ್ರಣಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ **ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ್ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು. ಆ ಮಠಾಧಿಕಾರಿಗಳು ಐದುವರ್ಷಗಳಿಗೋ ಹತ್ತುವರ್ಷಗಳಿಗೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಶ್ಯೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟಾಭಿಷೇಕಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ. ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[47] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಸ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಮಾಕವಿದ್ಯಾರ್ಥಿ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಅಸ್ಮಾಕ ವಿದ್ಯಾರ್ಥಿ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಡಿಶಂಬರ್ ೧೯೩೪ [ಸಂಚಿಕೆ ೩೦

ಇಪ್ಪತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ.

ಮಹಾಶಯರೆ,

೨೦ ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಹೈದರಾಬಾದು ಸಂಸ್ಥಾನದಲ್ಲಿರುವ ರಾಯಚೂರು ನಗರದಲ್ಲಿ ೧೯೩೪ ನೆಯ ಡಿಸೆಂಬರ್ ೨೮ ನೆಯ ತಾರೀಖು ಶುಕ್ರವಾರ ಮಧ್ಯಾಹ್ನ ೧ ಘಂಟೆಗೆ ಪ್ರಾರಂಭವಾಗಿ, ೨೯, ೩೦ ನೆಯ ತಾರೀಖುಗಳಲ್ಲಿ ಸಹ ನಡೆಯುವಂತೆ ಏರ್ಪಾಟಾಗಿದೆ.

ಅಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀಮಾನ್ ಗುಡಿಹಾಳ ಹನುಮಂತರಾವ್ ದೇಶಪಾಂಡೆ ಅವರ ನೇತೃತ್ವದಲ್ಲಿ ಸ್ವಾಗತ ಮಂಡಲಿಯು ಏರ್ಪಟ್ಟು ಸಮ್ಮೇಳನಕ್ಕೆ ಬೇಕಾದ ಅನುಕೂಲತೆಗಳನ್ನು ಸಿದ್ಧಗೊಳಿಸುತ್ತಿದೆ.

ಸುಪ್ರಸಿದ್ಧ ಸಾಹಿತಿಗಳಾದ ಮಂಗಳೂರಿನ ಶ್ರೀಮಾನ್ ಪಂಜೆ ಮಂಗೇಶರಾವ್, ಬಿ.ಎ., ಎಲ್.ಟಿ., ಅವರು ಅಧ್ಯಕ್ಷಸ್ಥಾನವನ್ನು ವಹಿಸಲು ದಯವಿಟ್ಟು ಒಪ್ಪಿರುತ್ತಾರೆ.

ಸಮ್ಮೇಳನಕಾಲದಲ್ಲಿ ಉಪನ್ಯಾಸಗಳು, ಕಾವ್ಯವಾಚನ, ನಾಟಕಪ್ರದರ್ಶನ ಮೊದಲಾದ ಸಾಹಿತ್ಯಕಾರ್ಯಗಳು ಸ್ವಾರಸ್ಯರೀತಿಯಲ್ಲಿ ನಡೆಯುವುವೆಂದು ನಿರೀಕ್ಷಿಸಲ್ಪಟ್ಟಿದೆ. ಇವುಗಳ ಜೊತೆಗೆ ಗದ್ಯಪದ್ಯ ಲೇಖಕರ ಸಮ್ಮೇಳನವೂ ಪ್ರಾಚೀನ ವಸ್ತುಪ್ರದರ್ಶನವೂ ನಡೆಯುವಂತೆ ಏರ್ಪಾಟಾಗಿವೆ.

ರಾಯಚೂರಿನ ಸುತ್ತಮುತ್ತ ನೋಡಲರ್ಹವಾದ ಐತಿಹಾಸಿಕ ಸ್ಥಳಗಳೂ ಪವಿತ್ರಕ್ಷೇತ್ರಗಳೂ ಅನೇಕ ಇವೆ. ಅವುಗಳ ವಿವರವನ್ನೂ ಪ್ರಯಾಣಕಾಲ ಮೊದಲಾದ ವಿವರಗಳನ್ನೂ ಮುಂದೆ ಕಾಣಿಸಿದೆ.

ನುಹಿಳೆಯರ ವಸತಿ ಮೊದಲಾದ ಅನುಕೂಲಗಳ ವಿಚಾರಕ್ಕೆ ಹೆಚ್ಚು ಗಮನಕೊಟ್ಟಿದೆ.

ತಾವು ದಯಮಾಡಿ ರಾಯಚೂರಿಗೆ ಬಂದು, ಸಮ್ಮೇಳನದಲ್ಲಿ ಸಹಕರಿಸಿ, ಸ್ವಾಗತಮಂಡಲಿ ಪರಿಷತ್ತುಗಳೊಡನೆ ದೇಶಭಾಷಾಸೇವೆಯಲ್ಲಿ ಭಾಗವಹಿಸಬೇಕೆಂದು ಬೇಡುತ್ತೇವೆ.

ತಮ್ಮನ್ನು ರಾಯಚೂರಿನಲ್ಲಿ ನಿರೀಕ್ಷಿಸಬಹುದಾದ ತಾರೀಖು ಕಾಲಗಳನ್ನೂ ತಮಗೆ ಬೇಕಾದ ಅನುಕೂಲಗಳ ವಿವರವನ್ನೂ ಸ್ವಾಗತ ಮಂಡಲಿಯ ಕಾರ್ಯದರ್ಶಿಗಳವರಿಗೆ ತಿಳಿಯಪಡಿಸಬೇಕೆಂದು ಕೋರುತ್ತೇವೆ.

ತಮ್ಮ ವಿಧೇಯರು,
ಹರದರ ಶ್ರೀಪಾಲರಾಜ,
ಗೌ|| ಕಾರ್ಯದರ್ಶಿ,
ಸ್ವಾಗತ ಮಂಡಲಿ, ರಾಯಚೂರು.
ಸಿ. ಕೆ. ವೆಂಕಟರಾಮಯ್ಯ,
ಗೌ|| ಕಾರ್ಯದರ್ಶಿ,
ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

ವಿಶೇಷ ಸೂಚನೆ.

ಭೋಜನ ವಸತಿ ಮುಂತಾದವುಗಳ ವಿಚಾರವನ್ನು ಸ್ವಾಗತಮಂಡಲಿಯು ಈ ಕೆಳಗಿನಂತೆ ಗೊತ್ತುಮಾಡಿದೆ.

೧. ಪ್ರತಿನಿಧಿತ್ವಕ್ಕಾಗಿ ರುಸುಂ (Delegateship fee) ಒಂದು ರೂಪಾಯಿ.

೨. ಭೋಜನ ವಸತಿಗಳಿಗಾಗಿ (ಮೂರು ದಿನವೂ ಸೇರಿ) ಎರಡೂವರೆ ರೂಪಾಯಿ.

೩. ಪ್ರೇಕ್ಷಕರಿಗೆ (3 ದಿನವೂ ಸೇರಿ) ಎಂಟಾಣೆ.

೪. ಸ್ತ್ರೀ ಪ್ರತಿನಿಧಿಗಳು ಭೋಜನ ವಸತಿಗಳಿಗೂ ಪ್ರತಿನಿಧಿತ್ವಕ್ಕೂ ರುಸುಂ ಕೊಡಬೇಕಾದದ್ದಿಲ್ಲ.

೫. ವಿದ್ಯಾರ್ಥಿಗಳು ಪ್ರತಿನಿಧಿತ್ವಕ್ಕಾಗಿ ರುಸುಂ ಕೊಡಬೇಕಾದದ್ದಿಲ್ಲ.

೬. ಸಮ್ಮೇಳನದಲ್ಲಿ ಮತ (Vote) ಕೊಡುವ ಅಧಿಕಾರವು ಪ್ರತಿನಿಧಿಗಳಾದವರಿಗೆ ಮಾತ್ರ ಇರುತ್ತದೆ.

ನೋಡತಕ್ಕ ಸ್ಥಳಗಳು.

೧. ರಾಯಚೂರು—ರಾಯಚೂರಿನಕೋಟೆ ಬಹುಪುರಾತನವಾದದ್ದು: ವಿಜಯನಗರದ ಅರಸರಿಗೂ ಬಹಮನೀ ರಾಜ್ಯದ ಅರಸರಿಗೂ ನಡೆದ ಉಗ್ರ ಯುದ್ಧದಲ್ಲಿ ರಾಯಚೂರು ಕೋಟೆ ಬಹಳ ಮುಖ್ಯವಾಗಿತ್ತು. ಕೋಟೆಯಲ್ಲಿ ದೊರೆಯುವ ೧೨, ೧೩, ೧೪ ನೆಯ ಶತಮಾನಗಳ ಕನ್ನಡ ಶಾಸನಗಳೂ ಫಾರಸೀ ಶಾಸನಗಳೂ ನೋಡತಕ್ಕವಾಗಿವೆ.

೨. ಮಲಿಯಾಬಾದಿಯ ದುರ್ಗ—ರಾಯಚೂರಿನಿಂದ ೬ ಮೈಲಿ ದೂರದಲ್ಲಿದೆ. ಐತಿಹಾಸಿಕ ಸ್ಥಳ. ಅಲ್ಲಿಗೆ ರಾಯಚೂರಿನಿಂದ ಬಸ್ಸುಗಳು ದೊರೆಯುತ್ತವೆ.

೩. ಕೃಷ್ಣ (ಜಿ ಐ ಪಿ. ರೈಲ್ವೆ ಸ್ಟೇಷನ್)—ಪವಿತ್ರ ಕ್ಷೇತ್ರ. ಸಮೀಪದಲ್ಲಿಯೇ ಭೀಮರಥೀ ಮತ್ತು ಕೃಷ್ಣಾ ನದಿಗಳ ಸಂಗಮಸ್ಥಾನವಿದೆ. ರಾಯಚೂರಿನಿಂದ ಸುಮಾರು ೧೫ ಮೈಲಿ (ರೈಲು ಛಾರ್ಜು ಸುಮಾರು ೬ ಆಣೆ.)

೪. ಮಂತ್ರಾಲಯ—ಇಲ್ಲಿ ರಾಘವೇಂದ್ರಸ್ವಾಮಿಗಳ ಬೃಂದಾವನವಿದೆ: ಪುಣ್ಯಕ್ಷೇತ್ರ. ರಾಯಚೂರಿನಿಂದ ೧೨ ಮೈಲಿ. ತುಂಗಭದ್ರಾ ಎಂಬ ಎಂ. ಎಸ್.ಎಂ.ಆರ್. ರೈಲ್ವೆ ಸ್ಟೇಷನ್ನಿನಲ್ಲಿ ಇಳಿದು ಬಸ್ಸಿನಲ್ಲಿ ಹೋಗಬಹುದು.

೫. ಮಾನವಿ—ರಾಯಚೂರಿನಿಂದ ೨೯ ಮೈಲಿ. ಇದು ಜಗನ್ನಾಥದಾಸರ ಜನ್ಮಸ್ಥಳ. ಇಲ್ಲಿ ನೋಡತಕ್ಕ ದುರ್ಗವಿದೆ. ಇಲ್ಲಿಗೆ ಬಸ್ಸುಗಳ ಅನುಕೂಲವಿದೆ.

೬. ದೇವದುರ್ಗ—ಇದು ಪಾಳೆಯಗಾರರಿಗೆ ಸೇರಿದ್ದ ಐತಿಹಾಸಿಕ ಸ್ಥಳ. ಬಸ್ಸುಗಳು ದೊರೆಯುತ್ತವೆ.

೭. ಗೊಬ್ಬೂರು—ರಾಯಚೂರಿನಿಂದ ದೇವದುರ್ಗಕ್ಕೆ ಹೋಗುವಾಗ ದಾರಿಯಲ್ಲಿ ಸಿಕ್ಕುತ್ತದೆ. ಇಲ್ಲಿ ಅನೇಕ ಶಾಸನಗಳೂ ನೋಡತಕ್ಕ ಪ್ರಾಚೀನ ಕಟ್ಟಡಗಳೂ ಇವೆ.

೮. ಮುದುಗಲ್—ಇಲ್ಲಿಗೆ ಬಸ್ಸಿನ ಅನುಕೂಲತೆ ಇದೆ. ಇಲ್ಲಿ ರಾಯಚೂರಿನ ಕೋಟೆಯಂತೆಯೇ ಐತಿಹಾಸಿಕ ಮಹತ್ವವುಳ್ಳ ಪ್ರಸಿದ್ಧವಾದ ಕೋಟೆ ಇದೆ.

ಶ್ರೀ ಕೊಟ್ಟೂರೇಶನ ಕಾರ್ತಿಕ ಮಹೋತ್ಸವ ಕೊಟ್ಟೂರು.

ಬಳ್ಳಾರಿ ಡಿ|| ಕೊಟ್ಟೂರು ಪಟ್ಟಣದಲ್ಲಿ ಅಗಾಧಮಹಿಮಾಶೀಲನಾದ ಶ್ರೀ ಕೊಟ್ಟೂರೇಶನ ಕಾರ್ತಿಕ ಮಹೋತ್ಸವವು ಇದೇ ಮಾರ್ಗಶಿರ ಬಹುಳ ೩ ತಾ|| 24-12-34 ನೇ ಸೋಮವಾರ ದಿವಸ ಪದ್ಧತಿ ಮೇರೆಗೆ ಬಹುವಿಜೃಂಭಣೆಯಿಂದ ನಡೆಯುತ್ತದೆ. ಹವೆಯು ಆರೋಗ್ಯಕರವಾಗಿರುತ್ತದೆ. ಆ ಕಾಲಕ್ಕೆ ಭಕ್ತರು ಆಗಮಿಸಿ ಕೃತಾರ್ಥರಾಗಬೇಕೆಂದು ಆಶಿಸುತ್ತೇನೆ.

ಪಿ. ಯಂ. ಮರುಲಸಿದ್ಧಯ್ಯ,
ಕೊಟ್ಟೂರು.

ಪಾದಪೂಜೋತ್ಸವ.

ನಂಜನಗೂಡಿನ ಕೈ|| ಬಂಡಯ್ಯನವರ ಕುಟುಂಬ ಶ್ರೀಮತಿ ತಿಮ್ಮಮ್ಮನವರು ಶ್ರೀಮದ್ರಂಭಾಪುರೀ ಜಗದ್ಗುರುಗಳನ್ನು ನಿನ್ನೆ ದಿವಸ ಬೆಳಗ್ಗೆ 9 ಘಂಟೆಗೆ ಸಮಸ್ತಬಿರುದಾವಳಿಗಳಸಹಿತ ಸುವರ್ಣರಜತಾಂದೋಳಿಕಾ ಮಹೋತ್ಸವಪೂರ್ವಕವಾಗಿ ತಮ್ಮ ಮನೆಗೆ ಬಿಜಯಮಾಡಿಸಿಕೊಂಡಿದ್ದರು. ಶ್ರೀಗಳವರು ಪೀಠದಲ್ಲಿ ಮೂರ್ತಮಾಡಿದನಂತರ ಮ|| ರಾ|| ಮಾಯಗೌಡರು ನೂತನರಚಿತಗಳಾದ ಪದ್ಯಗಳನ್ನು ಓದಿದರು. ಶ್ರೀಮತಿ ತಿಮ್ಮಮ್ಮನವರು ತಮ್ಮ ಬಂಧುಬಾಂಧವರೊಡಗೂಡಿ ಅಷ್ಟವಿಧಾರ್ಚನೆಯಿಂದ ಶ್ರೀ ಪಾದುಕಾರ್ಚನೆಮಾಡಿ ಶ್ರೀ ರೇಣುಕ ಅಷ್ಟೋತ್ತರ ಶತನಾಮಾವಳಿಯನ್ನು ವೈದಿಕರು ಪಠಿಸುತ್ತಿರಲು ಕ್ರಮವಾಗಿ ಪುಷ್ಪಸಹಿತ ೧೦೮ ರೂಪಾಯಿಗಳನ್ನು ಸಮರ್ಪಿಸಿದರು. ಅನಂತರ ಫಲಪುಷ್ಪಾವಳಿಯೊಡಗೂಡಿ ಗುರುಕಾಣಿಕೆಯನ್ನೊಪ್ಪಿಸಿ ಆಶೀರ್ವಾದ ಪಡೆದರು. ೧೨ ಘಂಟೆಗೆ ಯಥಾಪ್ರಕಾರ ಉತ್ಸವದೊಡನೆ ಶ್ರೀಗಳವರನ್ನು ಅರಮನೆಗೆ ಕಳುಹಿಸಿಕೊಟ್ಟರು. ಈ ಉತ್ಸವಕ್ಕೆ ಮೈಸೂರಿನ ಸ್ವಾಗತಸಂಘದ ವೀರಶೈವ ಮಹಾಜನಗಳು ಆಗಮಿಸಿದ್ದರಲ್ಲದೆ ಇತರ ದೊಡ್ಡಮನುಷ್ಯರನೇಕರು ಆಗಮಿಸಿದ್ದರು. ಶ್ರೀಗಳವರು ತಮ್ಮ ಬಿಡಾರದಲ್ಲಿ ಮಾಧ್ಯಾಹ್ನಿಕಕ್ರಿಯೆಯನ್ನು ನೆರವೇರಿಸಿದ ನಂತರ ಅಲ್ಲಿಯೇ ಏರ್ಪಾಡಾಗಿದ್ದಂತೆ ಬಂದ ಮಹಾಜನಗಳಿಗೆಲ್ಲಾ ಸುಖಭೋಜನವು ನಡೆಯಿತು. ತಿರುಗಿ ಸಾಯಂಕಾಲ ಮ|| ರಾ|| ಮಾಯಗೌಡರ ಮನೋಹರವಾದ ಓದುಗಾರಿಕೆಯನ್ನು ಕೇಳಿ ಶ್ರೀಗಳವರು ಬಹಳ ಸಂತೋಷಪಟ್ಟರು. ಶ್ರೀಮತಿ ತಿಮ್ಮಮ್ಮನವರು ಇದುವರೆಗೆ ಅನೇಕ ಧರ್ಮಕಾರ್ಯವನ್ನು ಮಾಡಿ ಪ್ರಸಿದ್ಧಿಪಡೆದುದಲ್ಲದೆ ಪಾರಮಾರ್ಥಿಕವಾದ ಗುರುಸೇವೆನ್ನು ಸಹ ಮಾಡಿ ಧನ್ಯಜೀವಿಗಳಾದರು.

ಪತ್ರವ್ಯವಹಾರ.

ಜಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ, ಬೆಂಗಳೂರು.
ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ, ಶ್ರೀಕ್ಷೇತ್ರಕಾಶೀ.

ಆಹಾರ.

ಪ್ರಾಣಿನಾಂ ಪುನರ್ಮೂಲಮಾಹಾರೋ ಬಲವರ್ಣೌಜಸಾಂಚ
ಷಟ್ಸು ರಸೇಷು ಆಯತ್ತಃ ರಸಾಃ ಪುನರ್ದ್ರವ್ಯಾಶ್ರಯಿಣಃ ||
ಲೋಕಸ್ಯಾಹಾರಃ ಸ್ಥಿತ್ಯುತ್ಪತ್ತಿವಿನಾಶಹೇತುರಾಹಾರಾಭಿವೃದ್ಧಿ
ರ್ಬಲಮಾರೋಗ್ಯಂ ವರ್ಣೇಂದ್ರಿಯಪ್ರಸಾದಶ್ಚ ||
ಸೂ. ಸೂ. ೪೬

ಜಗತ್ತಿನಲ್ಲಿ ಜನ್ಮಧಾರಣೆಯನ್ನು ಮಾಡಿದ ಸಕಲ ಪ್ರಾಣಿಗಳು ಯಾವುದಾದರೊಂದು ವಿಧವಾದ ಆಹಾರವನ್ನು ಸೇವಿಸಿದ ಹೊರತು ಪ್ರಾಣಧಾರಣೆಯನ್ನು ಮಾಡಲು ಸಮರ್ಥಗಳಾಗಲಾರವು. ಆಹಾರದಿಂದಲೇ ಪ್ರಾಣಿಗಳು ಬಲ, ವರ್ಣ, ಓಜಸ್ಸುಗಳನ್ನು ಹೊಂದಿ ಸುಖದಿಂದ ಜೀವಿಸತಕ್ಕವುಗಳಾಗಿವೆ. ಪಂಚಭೂತಾತ್ಮಕವಾದ ಶರೀರದ ಉತ್ಪತ್ತಿಯು ಆಹಾರದಿಂದಲೇ ಆಗಿರುವುದಾಗಿದೆ. ಆಹಾರರಸದಿಂದಲೇ ಉದ್ಭವಿಸುವ ಶುಕ್ರಶೋಣಿತಗಳ ಸಮ್ಮೇಳನದಿಂದ ಗರ್ಭದಲ್ಲಿ ಪಿಂಡೋತ್ಪತ್ತಿಯಾಗಿ ಆ ಪಿಂಡವು ತಾಯಿಯು ಸೇವಿಸುವ ಆಹಾರದ ರಸದಿಂದಲೇ ಕಾಲಕ್ರಮದಿಂದಭಿವೃದ್ಧಿಗೊಂಡು ಕರಚರಣಾದ್ಯವಯವಗಳಿಂದೊಡಗೂಡಿ ಚೇತನಾವಿಶಿಷ್ಟವಾಗಿ ಗರ್ಭದಿಂದ ಹೊರಗೆ ಬಂದ ಮೇಲೆ ಆಹಾರರಸದಿಂದಲೇ ಉದಯಿಸುವ ರಕ್ತಮಾಂಸಾದಿಗಳಿಂದ ಪರಿಪೋಷಿತಗಳಾದ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜ, ಶುಕ್ರಗಳೆಂಬ ಸಪ್ತಧಾತುಗಳ ಆಧಾರದಿಂದಲೇ ಮರಣಪರ್ಯಂತವಾಗಿ ಶರೀರವನ್ನು ಧರಿಸಿಕೊಂಡಿರಲು ಸಮರ್ಥವಾಗುವುದು. ಕಡೆಗೆ ಮೃತ್ಯುವಿನ ಬಾಯಿಗೆ ತುತ್ತಾಗುವುದಕ್ಕೂ ಆಹಾರವೇ ಕಾರಣವಾಗುತ್ತದೆ.

ವ್ಯಾಧಿಮಿಂದ್ರಿಯದೌರ್ಬಲ್ಯಂಮರಣಂಚಾಧಿಗಚ್ಛತಿ |
ವಿರುದ್ಧರಸವೀರ್ಯಾಣಿ ಭುಂಜಾನೋಽನಾತ್ಮವಾನ್ನರಃ || ಸು. ಸೂ. ಅ. ೨೦.

ಎಂಬ ಸುಶ್ರುತವಚನದಂತೆ ಮನುಷ್ಯರು ನಾಲಗೆ ಚಟವನ್ನು ತಡೆಯಲಾರದೆ ನಾನಾವಿಧವಾದ ವಿರುದ್ಧಾಹಾರವನ್ನು ಸೇವಿಸಿ ಅದರಿಂದುಂಟಾಗುವ ಅಸಾಧ್ಯರೋಗಗಳಿಂದ ನರಳುತ್ತ ದಿನದಿನಕ್ಕೆ ಇಂದ್ರಿಯಗಳ ಕ್ಷೀಣತೆಯನ್ನು ಹೊಂದಿ ಕಡೆಗೆ ಒಂದು ದಿನ ತಮ್ಮ ಅಮೂಲ್ಯವಾದ ಶರೀರವನ್ನು ಯಮರಾಜನಿಗೆ ಕಾಣಿಕೆಯನ್ನಾಗಿ ಅರ್ಪಿಸಿಬಿಡುವರು. ಆದುದರಿಂದ ಮಾನವರ ಉತ್ಪತ್ತಿ-ಸ್ಥಿತಿ-ಲಯಗಳು ಆಹಾರವನ್ನೇ ಅವಲಂಬಿಸಿರುವುದೆಂಬ ಸುಶ್ರುತಮಹರ್ಷಿಯ ಉಪದೇಶವು ಸತ್ಯವಾದುದಾಗಿದೆ.

ಪಾಂಚಭೌತಿಕ ಶರೀರವನ್ನು ಧರಿಸಿದ ಅನಂತರ ಜ್ಞಾನಿಯಾಗಲಿ, ಅಜ್ಞಾನಿಯಾಗಲಿ, ರಾಜನಾಗಲಿ, ತಿರುಕನಾಗಲಿ ಎಲ್ಲರೂ ಪ್ರಾಣಧಾರಣೆಗೋಸುಗ ಅವರವರ ತಾರತಮ್ಯಾನುಸಾರವಾಗಿ ಒಂದಲ್ಲದೊಂದಾಹಾರವನ್ನು ಸೇವಿಸಬೇಕಾದುದನಿವಾರ್ಯವಾಗಿರುವುದೆಂದು ಚರಕಮಹರ್ಷಿಯು—

ಪ್ರಾಣಾಃ ಪ್ರಾಣಭೃತಾಮನ್ನಮನ್ನಂ ಲೋಕೋಽಭಿಧಾವತಿ
ವರ್ಣಪ್ರಸಾದಃ ಸೌಸ್ವರ್ಯಂ ಜೀವಿತಂ ಪ್ರತಿಭಾ ಸುಖಂ
ತುಷ್ಟಿಃ ಪುಷ್ಟಿರ್ಬಲಂ ಮೇಧಾ ಸರ್ವಮನ್ನೇ ಪ್ರತಿಷ್ಠಿತಂ ||
ಲೌಕಿಕಂ ಕರ್ಮ ಯದ್ವೃತ್ತೌ ಸ್ವರ್ಗತೌ ಯಚ್ಚ ವೈದಿಕಂ
ಕರ್ಮಾಪವರ್ಗೇ ಯಚ್ಚೋಕ್ತಂ ತಚ್ಚಾಪ್ಯನ್ನೇ ಪ್ರತಿಷ್ಠಿತಂ ||

ಎಂಬುದಾಗಿ ಚರಕಸಂಹಿತೆಯ ಸೂತ್ರಸ್ಥಾನದ ಅನ್ನಪಾನವಿಧಿಬೋಧಕವಾದ ೨೭ ನೆಯ ಅಧ್ಯಾಯದ ಅಂತ್ಯಭಾಗದಲ್ಲಿ ಹೇಳಿರುತ್ತಾನೆ.

ಅನ್ನವು ಪ್ರಾಣಿಗಳಿಗೆ ಪ್ರಾಣಸ್ವರೂಪವಾಗಿರುವುದರಿಂದಲೇ ಜಗತ್ತಿನ ಸಕಲಪ್ರಾಣಿಗಳು ಅನ್ನದ ಕಡೆಗೇ ಓಡುತ್ತವೆ. ಅನ್ನರಸದ ಬಲದಿಂದಲೇ ಪ್ರಾಣಿಗಳಲ್ಲಿ ಬಲ, ವರ್ಣ, ಬುದ್ಧಿ, ಪ್ರತಿಭೆ, ಸಕಲೇಂದ್ರಿಯಗಳ ವಿಷಯಗ್ರಹಣಶಕ್ತಿ, ಸುಖ, ಆನಂದ, ಶರೀರದ ದೃಢತೆ, ಆರೋಗ್ಯ ಮುಂತಾದುವುಗಳುಂಟಾಗುವುವು. ಇಷ್ಟೇಕೆ? ಇಹಲೋಕಸುಖಸಾಧನಗಳಾದ ವ್ಯವಸಾಯ, ಪಶುಪಾಲನೆ, ವ್ಯಾಪಾರ ಮೊದಲಾದ ಲೌಕಿಕಕರ್ಮಗಳೂ, ಪರಲೋಕಸುಖಸಾಧನಗಳಾದ ಯಜ್ಞ, ಯಾಗ, ಜಪ, ಹೋಮಾದಿ ವೈದಿಕಕರ್ಮಗಳೂ, ಮತ್ತು ಸಂಸಾರಪಾಶವಿಮೋಚನೆಗೆ ಪ್ರಧಾನಸಾಧನವಾಗಿರುವ ವೇದಾಂತತತ್ತ್ವಾರ್ಥವಿಚಾರರೂಪವಾದ ಮಾರ್ಗವನ್ನು ತೋರಿಸಿಕೊಡುವ ಬ್ರಹ್ಮಚರ್ಯರಕ್ಷಣೆ ವಿದ್ಯಾಧ್ಯಯನ, ಗುರೂಪದೇಶಶ್ರವಣ ಮೊದಲಾದವುಗಳೂ ಅನ್ನದಲ್ಲಿಯೇ ಅಡಕವಾಗಿರುತ್ತವೆ.

ಈ ಕರ್ಮಗಳೆಲ್ಲವೂ ಪಂಚಭೂತಾತ್ಮಕವಾದ ಶರೀರದಿಂದಲೇ ಸಾಧ್ಯವಾಗತಕ್ಕವುಗಳಾಗಿರುವುವಲ್ಲವೆ? ಆ ಶರೀರವಾದರೋ ಅನ್ನದ ಬಲದಿಂದಲೇ ಇರತಕ್ಕುದಾದುದರಿಂದ ಈ ಅನ್ನವು ಸರ್ವಾಧಾರವಾಗಿರುವುದೆಂಬುದು ಅಕ್ಷರಶಃ ಸತ್ಯವಾಗಿದೆ. ಅನ್ನವು ಪ್ರಾಣಿಗಳಿಗೆ ಪ್ರಾಣಾಧಾರವಾಗಿರುವುದೆಂಬ ವಿಷಯವನ್ನು ಶ್ರುತಿವಾಕ್ಯಗಳೂ ಅತಿಮನೋಹರವಾಗಿ ಬೋಧಿಸುತ್ತವೆ.

ಛಾಂದೋಗ್ಯಶ್ರುತಿಯು—

ಅನ್ನಂ ವಾವ ಬಲಾದ್ಭೂಯಸ್ತಸ್ಮಾದ್ಯದ್ಯಪಿದಶ ರಾತ್ರೀರ್ನಾಶ್ನೀಯಾದ್ಯದ್ಯುಹ ಜೀವೇದಥವಾಽದ್ರಷ್ಟಾಽಶ್ರೋತಾಽಮಂತಾಽಬೋದ್ಧಾಽಕರ್ತಾಽವಿಜ್ಞಾತಾಥವತ್ಯನ್ನಸ್ಯಾಽಽಯೈದ್ರಷ್ಟಾ ಭವತಿ ಶ್ರೋತಾ ಭವತಿ............ಭವತ್ಯನ್ನ ಮುಪಾಸ್ವೇತಿ ||
ಛಾಂ. ಅ. ೭ ಖಂ. ೧೦.

ಮನುಷ್ಯರಲ್ಲಿ ಬಲವುಂಟಾಗುವುದಕ್ಕೆ ಅನ್ನವೇ ಕಾರಣವಾಗಿದೆ. ಅನ್ನವನ್ನು ಸೇವಿಸದೆ ೧೦-೧೫ ರಾತ್ರಿಗಳನ್ನು ಕಳೆಯಬಹುದಾದ ಸಂದರ್ಭಗಳಲ್ಲಿ ಪ್ರಾಣಗಳು ಸಂಪೂರ್ಣವಾಗಿ ನಾಶವಾಗದಿದ್ದರೂ, ಶರೀರದ ಬಲವೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ವಿಷಯಗ್ರಹಣಶಕ್ತಿಯೂ, ಮನಸ್ಸು ಮತ್ತು ಬುದ್ಧಿಯ ಕಾರ್ಯಶಕ್ತಿಯೂ ಕ್ಷೀಣವಾಗುವುದರಲ್ಲಾವ ಸಂಶಯವೂ ಇಲ್ಲ. ಮನುಷ್ಯನು ಅನ್ನರಸದಿಂದಲೇ ದೃಢಶರೀರನಾಗಿ ಇಹಪರಸಾಧನಗಳಾದ ನಾನಾವಿಧಕರ್ಮಗಳನ್ನಾಚರಿಸಲು ಸಮರ್ಥನಾಗುವನಾದುದರಿಂದ "ಅನ್ನಮುಪಾಸ್ವ" ಎಂದು ಅನ್ನಸೇವನೆಯನ್ನು ವಿಧಿಸುತ್ತದೆ.

ಬೃಹದಾರಣ್ಯಕಶ್ರುತಿಯು—

ಶುಷ್ಯತಿ ವೈ ಪ್ರಾಣ ಋತೇಽನ್ನಾದೇತೇ.....ಅನ್ನೇ ಹೀಮಾನಿ ಸರ್ವಾಣಿ ಭೂತಾನಿ ವಿಷ್ಟಾನಿ ರಮಿತಿ ಪ್ರಾಣೋ ವೈರಂ ಪ್ರಾಣೇ ಹೀಮಾನಿ ಸರ್ವಾಣಿ ಭೂತಾನಿ ರಮಂತೇ ಸರ್ವಾಣಿ ಹ ವಾ ಅಸ್ಮಿನ್ ಭೂತಾನಿ ವಿಶಂತಿ || ಬೃ. ಅ ೫. ಬ್ರಾಹ್ಮಣ ೧೨.

ಅನ್ನರಸದಿಂದಲೇ ಹುಟ್ಟಿರುವ ಪ್ರಾಣಗಳು ಅನ್ನದ ಸಂಬಂಧವಿಲ್ಲದೆ ಉಳಿಯುವ ಸಂಭವವಿಲ್ಲದಿರುವುದರಿಂದ ಸಕಲ ಪ್ರಾಣಿಗಳಿಗೆ ಪ್ರಾಣಸ್ವರೂಪವಾದ ಅನ್ನವನ್ನು ಸೇವಿಸುವುದನಿವಾರ್ಯವಾಗಿರುವುದೆಂದು ಬೋಧಿಸುತ್ತದೆ.

ತೈತ್ತಿರೀಯಶ್ರುತಿಯು—

ಅನ್ನಂ ಬ್ರಹ್ಮೇತಿ ವ್ಯಜಾನಾತ್ |
ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ||
ಅನ್ನೇನ ಜಾತಾನಿ ಜೀವಂತಿ |
ಅನ್ನಂಪ್ರಯಂತ್ಯಭಿಸಂವಿಶಂತಿ ||
ತೈ. ಭೃಗುವಲ್ಲೀ. ಅನುವಾಕ ೨.

ಸಕಲ ಪ್ರಾಣಿಗಳು ಅನ್ನದಿಂದಲೇ ಹುಟ್ಟಿ ಅನ್ನದಿಂದಲೇ ಬೆಳೆದು ಕಡೆಗೆ ಅನ್ನದಲ್ಲಿಯೇ ಲೀನವಾಗುವುದರಿಂದ ಪ್ರಾಣಿಗಳ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣವಾಗಿರುವ ಅನ್ನವನ್ನು 'ಬ್ರಹ್ಮ' ಸ್ವರೂಪವನ್ನಾಗಿ ಬೋಧಿಸುತ್ತದೆ.

ಪ್ರಶ್ನೋಪನಿಷತ್ತಿನಲ್ಲಿ—

ಅನ್ನಂ ವೈಪ್ರಜಾಪತಿಸ್ತತೋಹ ವೈ ತದ್ರೇತಸ್ತಸ್ಮಾದಿಮಾಃ ಪ್ರಜಾಯಂತ ಇತಿ || ಪ್ರ. ೧. ೧೪.

ಎಂದು ಅನ್ನರಸದಿಂದಲೇ ಉಂಟಾಗುವ ಶುಕ್ರಶೋಣಿತಗಳು ಪ್ರಜೋತ್ಪತ್ತಿಗೆ ಕಾರಣವಾಗಿರುವುದರಿಂದ 'ಪ್ರಜಾಪತಿ' ಸಂಜ್ಞೆಯಿಂದ ವರ್ಣಿತವಾಗಿರುತ್ತದೆ.

ಸ್ಮೃತಿಯಾದರೂ—

ಅನ್ನಂ ಪ್ರಾಣೋ ಬಲಂಚಾಽನ್ನಮನ್ನಾಜ್ಜೀವಿತಮುಚ್ಯತೇ
ಅನ್ನಂ ಚ ಜಗದಾಧಾರಂ ಸರ್ವಮನ್ನೇ ಪ್ರತಿಷ್ಠಿತಂ |
ಸರ್ವೇಷಾಂ ದೇವತಾದೀನಾಮನ್ನಂ ಜೀವಃ ಪ್ರಕೀರ್ತಿತಃ
ತಸ್ಮಾದನ್ನಾತ್ಪರಂ ತತ್ವಂ ನ ಭೂತಂ ನ ಭವಿಷ್ಯತಿ ||
ಬೃ. ಪರಾ. ಅ. ೫.

ಅನ್ನವು ಪ್ರಾಣಿಗಳಿಗೆ ಪ್ರಾಣಸ್ವರೂಪವಾಗಿದೆ. ಅನ್ನದಿಂದಲೇ ಪ್ರಾಣಿಗಳು ಬದುಕುವುವು. ಅನ್ನವೇ ಜಗತ್ತಿಗಾಧಾರವಾಗಿದೆ. ಸಮಸ್ತ ಲೌಕಿಕ-ವೈದಿಕ-ಕರ್ಮಗಳೂ ಅನ್ನದಲ್ಲಿಯೇ ಅಡಗಿಕೊಂಡಿವೆ. ದೇವದಾನವ ಮಾನವಾದಿಗಳಿಗೂ ಅನ್ನವು ಜೀವಸ್ವರೂಪವಾಗಿದೆ. ಆದುದರಿಂದ ಅನ್ನಕ್ಕಿಂತಲೂ 'ಶ್ರೇಷ್ಠವಸ್ತು'ವು ಜಗತ್ತಿನಲ್ಲಿ ಮತ್ತೊಂದಿಲ್ಲವೆಂದು ಪ್ರತಿಪಾದಿಸುತ್ತದೆ.

ಈ ವಿಧವಾದ ಆಯುರ್ವೇದ ಮತ್ತು ಶ್ರುತಿಸ್ಮೃತಿಗಳ ಪ್ರಮಾಣಗಳನ್ನು ಪರಿಶೀಲಿಸಿದರೆ ಅನ್ನವು ಸಕಲ ಪ್ರಾಣಿಗಳಿಗೆ 'ಪ್ರಾಣಾಧಾರ'ವಾದ ಆಹಾರವಸ್ತುವಾಗಿರುವುದೆಂದೇ ಸಿದ್ಧವಾಗುವುದಲ್ಲವೇ? 'ಅನ್ನ'ವೆಂಬ ಶಬ್ದವು ಕೆಲವೆಡೆಗಳಲ್ಲಿ ಅಕ್ಕಿಯನ್ನು ಬೇಯಿಸಿ ಸಿದ್ಧಗೊಳಿಸಲ್ಪಟ್ಟಿರುವ ಆಹಾರವಸ್ತುವಿಗೇ ವಿಶೇಷವಾಗಿ ವ್ಯವಹರಿಸಲ್ಪಡುತ್ತಿರುವುವಾದರೂ 'ಅದ ಭಕ್ಷಣೆ' ಎಂಬ ವ್ಯುತ್ಪತ್ತಿಯ ಬಲದಿಂದ ಅನ್ನಶಬ್ದವು ಸಾಮಾನ್ಯವಾಗಿ ಹಲ್ಲುಗಳ ಸಹಾಯದಿಂದ ತಿನ್ನಲ್ಪಡುವ ಸಕಲವಿಧವಾದ ಆಹಾರವಸ್ತುಗಳನ್ನೂ (ದ್ರವವಸ್ತುಗಳನ್ನು ಬಿಟ್ಟು) ಬೋಧಿಸುವುದಾಗಿರುತ್ತದೆ.

ಪ್ರಾಣಾಧಾರವಾಗಿರುವ ಆಹಾರವು ಮಧುರ, ಆಮ್ಲ, ಲವಣ, ಕಟು (ಕಾರ) ತಿಕ್ತ (ಕಹಿ) ಕಷಾಯ (ಒಗರು) ಗಳೆಂಬ ಆರು ವಿಧ ರಸಗಳನ್ನಾಶ್ರಯಿಸಿಕೊಂಡಿರುವುದು. ಈ ರಸಗಳಾದರೋ ನಾನಾವಿಧ ದ್ರವ್ಯಗಳನ್ನಾಶ್ರಯಿಸಿ ಮಾತ್ರಾ, ಕಾಲ, ದೇಶ, ಪ್ರಕೃತಿ, ವಯಃ ಪರಿಮಾಣ, ಮತ್ತು ಬಲಾಬಲಗಳ ವಿವೇಚನೆಯಿಂದ ಸೇವಿಸಲ್ಪಟ್ಟವುಗಳಾಗಿ ಶರೀರವನ್ನು ಪೋಷಿಸಲು ಸಮರ್ಥಗಳಾಗುವುವು. ಶರೀರಪೋಷಕಗಳಾದವುಗಳನ್ನೇ ಕಾಲಾದಿಗಳ ವಿವೇಚನೆಯಿಲ್ಲದೆ ಸೇವಿಸುವುದಾದರೆ ಇವು ಪೋಷಣೆಗೆ ಬದಲು ಶೋಷಣೆಯನ್ನೇ ಉಂಟುಮಾಡುವುವೆಂಬುದು ನಿಸ್ಸಂಶಯವಾಗಿರುತ್ತದೆ.

ಆಹಾರವು ಪ್ರಾಣರಕ್ಷಕವಾಗಿರುವುದೇನೋ ನಿಜ ಆದರೆ ಅದರ ಯಥಾರ್ಥರೂಪವನ್ನರಿತು ವಿಧಿಯನ್ನನುಸರಿಸಿ ಸೇವಿಸಲ್ಪಡುವುದಾದರೆ ಆಹಾರವು ತನ್ನ ಹೆಸರಿಗೆ ತಕ್ಕ ಫಲವನ್ನೀಯುವುದು; ಇಲ್ಲವಾದರೆ ತನ್ನ ಸಹಜವಾದ 'ರಕ್ಷಕ' ಗುಣವನ್ನು ಬಿಟ್ಟು 'ಭಕ್ಷಕ' ಗುಣವನ್ನವಲಂಬಿಸಿ "ಪ್ರಾಣಘಾತುಕ"ವಾಗುವುದು. ಆಯುರ್ವೇದ ಮತ್ತು ಶ್ರುತಿಸ್ಮೃತಿಗಳಿಂದಲೂ ಏಕವಾಕ್ಯದಿಂದ ಪ್ರಶಂಸಿಸಲ್ಪಟ್ಟಿರುವ ಜಗದಾಧಾರವಾದ ಆಹಾರದ ವಿವೇಚನೆಯು ಸಾಮಾನ್ಯವಿಷಯವಾಗಿರುವುದಿಲ್ಲ. ಆಹಾರವು ಲೋಕದಲ್ಲಿ ಸರ್ವಾರ್ಥಸಾಧಕವಾಗಿರುವುದರಿಂದ ಇದರ ವಿವೇಚನೆಯೂ ಅತಿಗಂಭೀರವಾಗಿರುವುದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಹಸಿವಾದಾಗ ಆಹಾರವನ್ನು ಸೇವಿಸಬೇಕೆಂಬುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇರುವುದಾಗಿದೆ. ಹೊಟ್ಟೆಯು ಬರಿದಾದ ಕೂಡಲೆ ಅದನ್ನು ಆಹಾರದಿಂದ ತುಂಬಿಸಬೇಕೆಂಬುದನ್ನು ಅಕ್ಷರಶತ್ರುವಾಗಿರುವ ಪಾಮರನೂ ಅರಿತಿರುವನು. ಹಸಿವಾದ ಕೂಡಲೆ ಆಹಾರದಲ್ಲಿ ಪ್ರವೃತ್ತಿಯುಂಟಾಗುವುದೂ ಸ್ವಾಭಾವಿಕವಾಗಿದೆ. ಪ್ರವೃತ್ತಿಯುಂಟಾದ ಕೂಡಲೆ ಹೊಟ್ಟೆಯಲ್ಲಿ ಯಾವುದೋ ಒಂದಾಹಾರವನ್ನು ತುಂಬುವುದೂ ಸ್ವಾಭಾವಿಕವಾಗಿದೆ. ಈ ಸ್ವಭಾವಸಿದ್ಧವಾಗಿರುವೆರಡು ವಿಷಯಗಳನ್ನೇ ಅರಿತು ಆಹಾರವನ್ನು ಸೇವಿಸುವುದಾದರೆ ಅದರ ಯಥಾರ್ಥಫಲವು ದೊರೆಯಬಹುದೆ? ಮನುಷ್ಯನು ಎಲ್ಲಿಯವರೆಗೆ ಆಹಾರದ ನಿಜಸ್ವರೂಪವನ್ನೂ ಅದರ ಕಾರ್ಯಕಲಾಪವನ್ನೂ ಅರಿಯದಿರುವನೋ ಅಲ್ಲಿಯವರೆಗೆ ಆಹಾರದ ಯಥಾರ್ಥಫಲದಿಂದ ವಂಚಿತನಾಗಿಯೇ ಇರುವನು. ಆಹಾರದ ಕಾರ್ಯಕಲಾಪವನ್ನು ವಿಚಾರಮಾಡದ ಹೊರತು ಆಹಾರ ವಿವೇಚನೆಯಲ್ಲಿ ಪ್ರವೃತ್ತಿಯುಂಟಾಗಲಾರದು. ಆದುದರಿಂದ ಆಹಾರದ ಹಿತಾಹಿತ ವಿವೇಚನೆಯನ್ನು ಮಾಡುವುದಕ್ಕಿಂತ ಮೊದಲು ಆಹಾರವು ಹೊಟ್ಟೆಯಲ್ಲಿ ಸೇರಿ ಯಾವ ಯಾವ ಕಾರ್ಯವನ್ನು ಮಾಡುವುದೆಂಬುದನ್ನೇ ವಿಚಾರಮಾಡುವುದುಚಿತವಾಗಿರುತ್ತದೆ.

ನಾವು ಸೇವಿಸುವ ಪ್ರತಿಯೊಂದು ಆಹಾರವೂ ಪ್ರಾಣವಾಯುವಿನ ಆಕರ್ಷಣೆಯಿಂದ ಕುತ್ತಿಗೆಯ ದ್ವಾರದಿಂದ ಹೊಟ್ಟೆಯಲ್ಲಿ ಹೋಗಿ ಮೊದಲು ಆಮಾಶಯವನ್ನು ಸೇರುವುದು. ಅಲ್ಲಿಗೆ ಸೇರಿದ ಕೂಡಲೆ ಷಡ್ರಸಯುಕ್ತವಾದ ಆಹಾರವು ಮಧುರರಸವಾಗಿಯೇ ಪರಿಣಾಮವನ್ನು ಹೊಂದಿ ಬುರುಗಿನ ಆಕಾರವನ್ನು ವಹಿಸುವುದು. ಅಲ್ಲಿಂದ ಸ್ವಲ್ಪ ಕೆಳಗಿಳಿದು ಅದೇ ಆಹಾರವು ಪಾಚಕಪಿತ್ತದ ಉಷ್ಣತೆಯಿಂದ ಪರಿಪಾಕವಾಗಿ ಅಮ್ಲರಸ (ಹುಳಿ) ಯುಕ್ತವಾಗುವುದು. ಅನಂತರ ಅಮ್ಲರಸದ ಆ ಆಹಾರವನ್ನು ನಾಭಿಯಲ್ಲಿರುವ ಸಮಾನವಾಯುವು ಗ್ರಹಣೀಸ್ಥಾನವಾಗಿರುವಅಗ್ನ್ಯಾಶಯಕ್ಕೆ ಸೇರಿಸುವುದು. (ಗ್ರಹಣೀ ಎಂಬ ನಾಡಿಯು ಜಠರಾಗ್ನಿಗೆ ಆಶ್ರಯವಾಗಿರುವುದು) ಅಲ್ಲಿರುವ ಪಾಚಕಪಿತ್ತರೂಪವಾದ ಅಗ್ನಿಯು ಆಹಾರವನ್ನು ಪೂರ್ಣಪಕ್ವವನ್ನಾಗಿ ಮಾಡುವುದು. ಈ ಆಶಯದಲ್ಲಿ ಪರಿಪಾಕವಾಗುವ ಸಮಯದಲ್ಲಿ ಆಹಾರವು ಕಟುರಸ (ಕಾರ) ದಿಂದ ಕೂಡಿದ್ದು ಅಗ್ನಿಯಿಂದ ಪೂರ್ಣಪಕ್ವವಾದ ಮೇಲೆ ಕಡೆಯಲ್ಲಿ ಮಧುರರಸದಿಂದೊಡಗೂಡಿ ಸ್ನಿಗ್ಧತೆಯನ್ನು (ನುಣುಪಾಗಿರುವುದು) ಹೊಂದುತ್ತದೆ.

ಈ ವಿಧದಿಂದ ಪರಿಪಕ್ವವಾದ ಆಹಾರದ ಸಾರವೇ 'ರಸ' ವೆಂಬ ಸಂಜ್ಞೆಯನ್ನು ಹೊಂದುವುದು. ಈ ರಸವು ಆಹಾರದ ಸೂಕ್ಷ್ಮಸಾರವಾಗಿದೆ. ಸಾರಹೀನವಾದ ಭಾಗವು 'ಕಿಟ್ಟ' ವೆಂಬ ಸಂಜ್ಞೆಯನ್ನು ಹೊಂದುವುದು. ಈ ಕಿಟ್ಟದಲ್ಲಿರುವ ಜಲಭಾಗವು ಮೂತ್ರಕೋಶಕ್ಕೂ ಗಟ್ಟಿಯಾದ ಭಾಗವು ಮಲಕೋಶ (ಪಕ್ವಾಶಯ) ಕ್ಕೂ ಸೇರಿ ಅಲ್ಲಿ ಸಂಚರಿಸುವ ಅಪಾನವಾಯುವಿನಿಂದ ಪ್ರೇರಿತಗಳಾಗಿ ಆ ಜಲಮಲಗಳು ಮೂತ್ರದ್ವಾರ ಮಲದ್ವಾರಗಳ ಮೂಲಕ ಹೊರಬೀಳುತ್ತವೆ.

ಈ ರೀತಿಯಾಗಿ ನಿಸ್ಸಾರಭಾಗಗಳು ಹೊರಬಿದ್ದನಂತರ ಉಳಿದಿರುವ ಸಾರಭೂತವಾದ ರಸವನ್ನು ಆಮಾಶಯದಲ್ಲಿ ಸಂಚರಿಸುವ ಸಮಾನವಾಯುವು ಸ್ಥಾಯಿರಸಧಾತುವಿನ ಕೇಂದ್ರಸ್ಥಾನವಾಗಿರುವ ಹೃದಯಕ್ಕೆ ಸೇರಿಸುವುದು. ಹೃದಯದಿಂದ ೧೦ ನಾಡಿಗಳು ಮೇಲ್ಭಾಗಕ್ಕೂ ೧೦ ನಾಡಿಗಳು ಕೆಳಭಾಗಕ್ಕೂ ೪ ನಾಡಿಗಳು ಅಡ್ಡಡ್ಡವಾಗಿಯೂ ಹಬ್ಬಿಕೊಂಡಿರುತ್ತವೆ. ಈ ನಾಡಿಗಳ ಮೂಲಕವಾಗಿಯೇ ಆಹಾರದ 'ರಸವು' ಸಂಪೂರ್ಣಶರೀರದಲ್ಲಿ ಸಂಚರಿಸುವ ವ್ಯಾನವಾಯುವಿನ ಸಹಾಯದಿಂದ ಶರೀರದಲ್ಲಿ ಸ್ಥಾಯಿರೂಪದಿಂದಿರುವ ರಸಾದಿ ಧಾತುಗಳಲ್ಲಿ ಪ್ರವೇಶಮಾಡುತ್ತದೆ.

(ಸಶೇಷ.)

ಶ್ರೀಮಜ್ಜಗದ್ಗುರು ರಂಭಾಪುರೀ ಪೀಠಕ್ಕೆ ದ್ವಿತೀಯ ಸಚಿವರ ಆಗಮನ.

ತಾರೀಖು 28—11—1934 ರಲ್ಲಿ ಮೈಸೂರುದೇಶದ ದ್ವಿತೀಯಸಚಿವರಾದ ರಾಜಮಂತ್ರಪ್ರವೀಣ ಶ್ರೀಮಾನ್ ಎಸ್. ಪಿ. ರಾಜಗೋಪಾಲಾಚಾರ್ಯರವರು ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರವರು ಡಿ॥ ಫಾರೆಸ್ಟ್ ಆಫೀಸರು ಮತ್ತು ಇನ್ನೂ ಅನೇಕ ಅಧಿಕಾರಿವರ್ಗದವರೊಂದಿಗೆ ಶ್ರೀ ಪೀಠಕ್ಕೆ ಆಗಮಿಸಿದರು. ಶ್ರೀ ಮಠದ ಏಜಂಟರು ಸಚಿವರನ್ನು ಸ್ವಾಗತಿಸಿ ಶ್ರೀ ಪೀಠದ ದರ್ಶನವನ್ನು ಮಾಡಿಸಿ, ಪೀಠಾಧಿದೇವತೆಯಾದ ಶ್ರೀ ವೀರೇಶನಿಗೆ ಮಂಗಳಾರತಿಯನ್ನು ಮಾಡಿಸಿ, ಪ್ರಸಾದವಿನಿಯೋಗವಾದನಂತರ ಈ ಪೀಠದ ಪ್ರಾಚೀನತೆಯೇ ಮೊದಲಾದ ಪರಿಚಯವನ್ನು ಮಾಡಿಸಿದರು. ಬಳಿಕ ದೇವಾಲಯದ ಒಂದು ಕಲ್ಲುಕಂಬದಲ್ಲಿ ಮೊದಲು ರೇಖಾರೂಪವಾಗಿದ್ದ ವೃಷಭಾಕೃತಿಯು ಈಗ್ಗೆ ಕೆಲವು ವರ್ಷಗಳಿಂದಲೂ ಬೆಳೆಯುತ್ತಿರುವುದನ್ನು ತಿಳಿಸಲು, ಮಂತ್ರಿವರ್ಯರು ವಿಸ್ಮಿತರಾದುದಲ್ಲದೆ, ಇಲ್ಲಿಯ ಪ್ರೇಕ್ಷಣೀಯಾಂಶಗಳನ್ನೆಲ್ಲಾ ಅತ್ಯಂತ ಶ್ರದ್ಧಾಯುತರಾಗಿ ಪರಾಮರ್ಶಿಸಿ, ಮಠದಲ್ಲಿ ಕೆಲಹೊತ್ತು ವಿಶ್ರಮಿಸಿ, ದೇಶಾಟನದಲ್ಲಿರುವ ಈಗಿನ ಶ್ರೀಗಳವರ ಯೋಗಕ್ಷೇಮವನ್ನೂ, ಮುಂದಿನ ಸಂಚಾರದ ಪ್ರೋಗ್ರಾಮನ್ನೂ ವಿಚಾರಿಸಿದರಲ್ಲದೆ ಅತ್ಯಂತ ಪ್ರಾಚೀನವಾದ ಈ ಪೀಠವು ಇಷ್ಟೊಂದು ಗಹನವಾದ ಅರಣ್ಯಪ್ರದೇಶದಲ್ಲಿರುವುದನ್ನು ಕುರಿತು ಪ್ರಶಂಸಿಸಿ, ತಮಗುಂಟಾದ ಆನಂದವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅನೇಕ ಜನ ಸ್ವಪರಮತೀಯ ಕಾಫೀ ಪ್ಲಾಂಟರುಗಳೂ, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರೂ, ಮೆಂಬರುಗಳೂ ಮತ್ತು ಪ್ರಜಾಪ್ರತಿನಿಧಿಸಭೆಯ ಮೆಂಬರುಗಳೂ ದಯಮಾಡಿಸಿದ್ದುದು ಸಚಿವರ ಆಗಮನಕ್ಕೆ ಹೆಚ್ಚಾದ ಶೋಭೆಯನ್ನುಂಟುಮಾಡಿದ್ದಿತು. ಶ್ರೀಮಾನ್ ಆಚಾರ್ಯರು ತಮ್ಮ ವಿಶೇಷ ಕಾರ್ಯಗೌರವಗಳ ಮಧ್ಯೆ, ಈ ರೀತಿ ಆಗಮಿಸಿ ಶ್ರೀ ಮಠದವರು ಒಪ್ಪಿಸಿದ ಪುಷ್ಪಹಾರ-ಫಲ-ತಾಂಬೂಲಗಳನ್ನು ಸ್ವೀಕರಿಸಿ ತೆರಳಿದುದು ಇವರಿಗಿರುವ ಆಸ್ತಿಕತೆಯನ್ನೂ, ಎಲ್ಲಾ ಧರ್ಮಪೀಠಗಳ ಮೇಲೆ ಇರತಕ್ಕ ನೈಜವಾದ ಸರ್ವಸಮತಾಭಾವನೆಯನ್ನೂ ಸೂಚಿಸುತ್ತದೆ. ಇವರಿಗೆ ಶ್ರೀ ಜಗದ್ಗುರು ರೇಣುಕಭಗವತ್ಪಾದರವರು ಇತ್ಯೋಪ್ಯತಿಶಯವಾದ ಆಯುರಾರೋಗ್ಯಭಾಗ್ಯಾದಿ ಸುಖಸಂಪದಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಸಮಾಜಾಭಿಮಾನಿ.

ಶ್ರೀರಂಗಪಟ್ಟಣಕ್ಕೆ ಕುಡಿಯುವ ನೀರು.

ಶ್ರೀ ಜಯಚಾಮರಾಜವೊಡೆಯರವರ ಪ್ರಥಮಭಾಷಣ.

ಜಗತಾಂ ಜೀವನಾಧಾರಂ ಸಲಿಲಂ ಸೃಷ್ಟವಾನಜಃ |
ಲೋಹನಾಳಾದಂತರಾಳಮಾರ್ಗೇಣ ಸಲಿಲಂ ತತ್ ||
ಪ್ರಥಮಂ ಕೇನ ದಾತವ್ಯಮಸ್ಮಿನ್ ಶ್ರೀರಂಗಪತ್ತನೆ |
ಇತಿಸಮ್ಯಕ್ಸಮಾಲೋಚ್ಯ ಜಯಚಾಮಮಹೀಪತೇ ||
ಭಾವೀಜೀವನದಾತಾತ್ವಮಿದಾನೀಮಪಿ ಜೀವನಂ |
ದಾತವ್ಯಂ ಕೃಪಯೇತಿ ತ್ವಾಂ ಪ್ರಾರ್ಥಯಾಮೋ ವಯಂ ಮುದಾ ||

ಶ್ರೀರಂಗಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವ ಉತ್ಸವವು ಕಳೆದ ಭಾನುವಾರ (ತಾ॥ 2-12-34) ಬೆಳಗ್ಗೆ ವಿಶೇಷ ಆಟ್ಟಹಾಸದಿಂದಲೂ ನೇತ್ರಾನಂದಕರವಾಗಿಯೂ ಶ್ರೀ ಜಯಚಾಮರಾಜ ಒಡೆಯರವರ ಹಸ್ತದಿಂದ ನೆರವೇರಿಸಲಾಯಿತು. ರಾಜಕುಮಾರರು ಹಾಮುಜನಸಭೆಯಲ್ಲಿ ಅಗ್ರಾಸನವನ್ನು ಅಲಂಕರಿಸಿದ್ದೂ, ಭಾಷಣಪೂರ್ವಕವಾಗಿ ಪ್ರಜಾಹಿತಕಾರ್ಯಾರಂಭಮಾಡಿದ್ದೂ ಇದೇ ಪ್ರಥಮ.

ಈ ಪ್ರಾರಂಭೋತ್ಸವಕ್ಕಾಗಿ ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಅಧಿಕಾರಿಗಳು ಆಹ್ಲಾದಕರವಾದ ಏರ್ಪಾಡುಗಳನ್ನು ಮಾಡಿದ್ದರು. ಗಂಗಾಧರಸ್ವಾಮಿ ದೇವಸ್ಥಾನದ ಮುಂಭಾಗದ ಮೈದಾನಿನಲ್ಲಿ ಭಾರಿಯಾದ ಮೂರು ವಿಸ್ತಾರವಾದ ಡೇರಾಗಳನ್ನು ಹಾಕಿ ನಾನಾ ಪ್ರಕಾರವಾಗಿ ಅಲಂಕಾರಮಾಡಿದ್ದರು. ಡೇರಾಗಳ ತುಂಬಾ ಶ್ರೀರಂಗಪಟ್ಟಣದ ಆ ಸುತ್ತ ಮುತ್ತಿನ ಪ್ರಜಾಪ್ರಮುಖರೂ ಮಹಿಳೆಯರೂ ಅಲ್ಲದೆ ರಾಜಧಾನಿಯಿಂದ ನೂರಾರು ಮಂದಿ ರಾಜಬಂಧುವರ್ಗ, ಅರಮನೆಯ ಮತ್ತು ಸರ್ಕಾರದ ಅಧಿಕಾರ ವರ್ಗದವರೂ, ಖಾಸಗಿ ದೊಡ್ಡ ಮನುಷ್ಯರೂ, ಯೂರೋಪಿಯನ್ನರೂ ಸುಮಾರು 50 ಮೋಟಾರುಗಳ ತುಂಬಾ ದಯಮಾಡಿಸಿ ಉತ್ಸವದಲ್ಲಿ ಬೆರೆದಿದ್ದರು. ಬೆಳಗಿನ 9 ಗಂಟೆಗೆ ಸರಿಯಾಗಿ ರಾಜಧಾನಿಯಿಂದ ಡೇರಾ ಬಳಿಗೆ ಮೋಟಾರಿನಲ್ಲಿ ಚಿತ್ತೈಸಿದ ಶ್ರೀ ಜಯಚಾಮರಾಜ ಒಡೆಯರವರನ್ನು ಡೆಪ್ಯುಟಿಕಮಿಷನರ್ ಮ॥ ಸಿ. ಎಸ್. ಕುಪ್ಪುಸ್ವಾಮಿ ಅಯ್ಯಂಗಾರ್ರು ಎದುರುಗೊಂಡು ಕಾರಿನಿಂದ ಇಳಿಸಿದ ಮೇಲೆ ಸಾಲುಕಟ್ಟಿ ನಿಂತಿದ್ದ ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳ ಪರಿಚಯವನ್ನು ಮಾಡಿಸುವಲ್ಲಿ ಮಂಗಳವಾದ್ಯಗಳಾಗುತ್ತಿದ್ದುವು. ರಾಜಕುಮಾರರು ಹಸ್ತವನ್ನು ನೀಡಿ ಕೌನ್ಸಿಲರುಗಳ ಕರತಾಡನಮಾಡಿಕೊಂಡು ಡೇರಾದೊಳಕ್ಕೆ ಚಿತ್ತೈಸಿ ಅತಿಥಿಗಳ ಮುಜುರೆಗಳಿಗೆ ಪ್ರತಿವಂದನೆಮಾಡುತ್ತ ಶ್ರೇಷ್ಠಾಸನವನ್ನು ಅಲಂಕರಿಸಿದರು.

ಮ॥ ಸುಬ್ಬಕೃಷ್ಣಯ್ಯನವರು ಸಂಸ್ಕೃತದಲ್ಲಿ ಶ್ರೀಯಾಪ್ರಾರ್ಥನಾಶ್ಲೋಕಗಳನ್ನು ಪಠಿಸಿದ ಮೇಲೆ ಮ॥ ಮಹಮದ್‌ಮುಸ್ಲಿಮ್‌ರವರು ಹಿಂದೂಸ್ತಾನೀ ಭಾಷೆಯಲ್ಲಿ ಕವನ ಮಾಡಿದ್ದ ವಚನಗಳನ್ನು ಪಠನಮಾಡಿದರು. ಬಳಿಕ ಮ್ಯುನಿಸಿಪಲ್ ವೈಸ್-ಪ್ರೆಸಿಡೆಂಟ್ ಮ॥ ದೇವಯ್ಯನವರು ಕೌನ್ಸಿಲ್ಲಿನ ಮತ್ತು ಟವ್ನ್ ಪ್ರಜೆಗಳ ಪರವಾಗಿ ಇಂಗ್ಲೀಷಿನಲ್ಲಿ ಅಡ್ರೆಸ್ಸನ್ನು ಓದಿ ಅರ್ಪಣೆಮಾಡಿದರು. ಅದರ ತಾತ್ಪರ್ಯವೇನೆಂದರೆ:—

'ನಮ್ಮ ನೀರು ಸರಬರಾಯಿಯ ಕಾರ್ಯವು ತಮ್ಮ ಪ್ರೀತಿಯುತವಾದ ಹೆಸರಿನಿಂದ ಕರೆಯಲ್ಪಡಬೇಕೆಂಬ ಪ್ರಾರ್ಥನೆಯನ್ನು ಕರುಣಾಪೂರ್ಣತೆಯಿಂದ ಕಿವಿಗೊಟ್ಟು ಅಂಗೀಕರಿಸಿದುದಕ್ಕೂ, ತಮ್ಮಿಂದ ಇದರ ಆರಂಭೋತ್ಸವವು ನೆರವೇರಿಸಲ್ಪಡಲು ಅವಕಾಶವನ್ನು ಕೃಪೆಮಾಡಿದುದಕ್ಕೂ ಶ್ರೀರಂಗಪಟ್ಟಣದ ಪುರನಿವಾಸಿಗಳೂ, ಮುನಿಸಿಪಲ್ ಕೌನ್ಸಿಲರುಗಳೂ ಅತ್ಯಂತ ವಿನಯದಿಂದ ನಮ್ಮ ಶ್ರೀಮನ್ಮಹಾರಾಜರವರ ಸನ್ನಿಧಾನದಲ್ಲಿ ಕೃತಜ್ಞತೆಯನ್ನು ಪ್ರಕಾಶಪಡಿಸುತ್ತೇವೆ. ಈ ಪಟ್ಟಣದ ಮೇಲೂ, ಪುರನಿವಾಸಿಗಳಲ್ಲೂ ಕರುಣಿಸಿರುವ ಕೃಪಾಕಟಾಕ್ಷಕ್ಕಾಗಿ ನಮ್ಮ ಸವಿನಯ ಕೃತಜ್ಞತಾ ಭಾವನೆಯನ್ನು ಶ್ರೀಮನ್ಮಹಾರಾಜರವರಿಗೆ ತಿಳುಹಿಸಬೇಕೆಂದು ಬೇಡುತ್ತೇವೆ. ಪ್ರಾಚೀನ ವೈಭವಗಳನ್ನೆಲ್ಲಾ ಹೃದಯಂಗಮವಾಗಿ ನಮ್ಮ ಮನಸ್ಸಿಗೆ ತರುವ ಈ ಶ್ರೀರಂಗಪಟ್ಟಣವು ನಮ್ಮ ಶ್ರೀಮನ್ಮಹಾರಾಜರವರ ಸಕಲ ಪ್ರಜಾವರ್ಗಕ್ಕೂ ಪ್ರೀತಿಯುತವೂ ಪವಿತ್ರವೂ ಆಗಿದೆ. ಪ್ರಪಂಚದ ಎಲ್ಲಾ ಭಾಗಗಳಿಂದಲೂ ಅಸಂಖ್ಯಾತರಾದ ಪ್ರಯಾಣಿಕರನ್ನು ಈ ಪಟ್ಟಣವು ಆಕರ್ಷಿಸಿದೆ. ತಮ್ಮ ಪ್ರಥಮ ಸಾರ್ವಜನಿಕ ಸಮಾರಂಭವು ಈ ನಮ್ಮ ಪಟ್ಟಣದಲ್ಲಾದುದು ನಮ್ಮ ಹೆಮ್ಮೆಗೀಡಾಗಿದೆ, ಮಹಾಸ್ವಾಮಿ. ಈ ಅಸದಳವಾದ ಗೌರವವನ್ನು ಭಕ್ತಿಯಿಂದ ಕಾಪಾಡಿಕೊಳ್ಳುತ್ತೇವೆ. ಇಲ್ಲಿಗೆ ಪರಿಶುದ್ಧವಾದ ನೀರು ಸರಬರಾಯಿ ಮಾಡುವ ವಿಷಯವು ಬಹಳ ಹಳೆಯದು. ಇದನ್ನು ನೆರವೇರಿಸುವ ಭಾಗವು ಈಗಿನ ಸರ್ಕಾರಕ್ಕೆ ಸಂದಿತು. ನಮ್ಮ ಪಟ್ಟಣದ ಮೇಲೆ ತೋರಿಸುತ್ತಲಿರುವ ಅಪರಿಮಿತವಾದ ಪ್ರೀತಿವಾತ್ಸಲ್ಯಗಳಿಗಾಗಿ ನಮ್ಮ ದಿವಾನ್‌ಸಾಹೇಬರವರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಗೂ, ತಮ್ಮ ಉದಾರವಾದ ಅಭಿಮಾನದಿಂದ ಈ ಸ್ಕೀಮನ್ನು ಮುಂದುವರಿಸಿದ ನಮ್ಮ ಡೆಪ್ಯುಟಿ ಕಮಿಷನರವರಾದ ಶ್ರೀಮಾನ್ ಸಿ. ಎಸ್. ಕುಪ್ಪುಸ್ವಾಮಯ್ಯಂಗಾರ್ಯರವರಿಗೂ ನಾವು ಚಿರಕಾಲ ಕೃತಜ್ಞರಾಗಿದ್ದೇವೆ. ಅಲ್ಲದೆ ತಮ್ಮ 15,000 ರೂಪಾಯಿನ ದಾನದಿಂದ, ಈ ಕಾರ್ಯವನ್ನು ಕೈಗೊಳ್ಳಲು ಸುಸಾಧ್ಯಮಾಡಿಕೊಟ್ಟ ಶ್ರೀಯುತ ಹೆಚ್. ರಾಮಯ್ಯ, ಎಂ.ಎ. ರವರಿಗೂ ನಮ್ಮ ವಂದನೆಯನ್ನರ್ಪಿಸುತ್ತೇವೆ. ಈ ಕಾರ್ಯದಲ್ಲಿ ಶ್ರದ್ಧೆವಹಿಸಿ ಉತ್ಸಾಹಯುತರಾಗಿ ಸಹಾಯಮಾಡಿದ

[6ನೆಯ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೪ನೇ ಡಿಸೆಂಬರ್ ತಾ॥ ೧೦ನೇ ಸೋಮವಾರ.

ಇಷ್ಟಲಿಂಗಾರಾಧನ.

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ |
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ||

ಇತ್ಯಾದಿ ಪ್ರಮಾಣಗಳಿಂದ ಲಿಂಗಧಾರಣವೆಂಬುದು ವೇದಾಗಮಪ್ರಸಿದ್ಧವಾದುದರಿಂದ ವೀರಶೈವಮತದಲ್ಲಿ ಜನ್ಮವನ್ನು ಧರಿಸಿದವನು ನಡೆಯುವಾಗಲೂ, ನಿಂತಿರುವಾಗಲೂ, ಮಲಗುವಾಗಲೂ, ಎಚ್ಚರವಾಗಿರುವಾಗಲೂ, ರೆಪ್ಪೆಗಳನ್ನು ಮುಚ್ಚುವಾಗಲೂ, ತೆರೆಯುವಾಗಲೂ, ಶುಚಿಯಾಗಿರುವಾಗಲೂ, ಅಶುಚಿಯಾಗಿರುವಾಗಲೂ ಶಿವಲಿಂಗವನ್ನು ಧರಿಸಿರಬೇಕು. ಸಾಮಾನ್ಯವಾಗಿ ಲಿಂಗಾರಾಧಕರಲ್ಲಿ ಇಷ್ಟಲಿಂಗಾರಾಧಕರೆಂತಲೂ ಸ್ಥಾವರಲಿಂಗಾರಾಧಕರೆಂತಲೂ ಎರಡು ವಿಧವು. ಇಷ್ಟಲಿಂಗಾರಾಧಕರೇ ವೀರಶೈವರು. ಸ್ಥಾವರಲಿಂಗಾರಾಧಕರೇ ಶೈವರು. ಸ್ಥಾವರಲಿಂಗಾರಾಧಕರಾದ ಶೈವರಿಗಿಂತಲೂ ಇಷ್ಟಲಿಂಗಾರಾಧಕರಾದ ವೀರಶೈವರಲ್ಲಿ ವಿಶೇಷವಾದ ನಿಯಮಗಳುಂಟು. ಸ್ಥಾವರಲಿಂಗಾರಾಧಕರಾದ ಶೈವರಲ್ಲಿ ಅಷ್ಟು ವಿಶೇಷವಾದ ನಿಯಮಗಳು ಕಂಡುಬರುವುದಿಲ್ಲ. ಸಾಮಾನ್ಯವಾಗಿ—

ಬ್ರಹ್ಮವಿಷ್ಣ್ವಾದಯೋ ದೇವಾಸ್ತಥೇ ವೇದಾದಯಸ್ತಥಾ |
ಲೀಯಂತೇ ಯತ್ರ ಗಮ್ಯಂತೇ ತಲ್ಲಿಂಗಂ ಬ್ರಹ್ಮಕೇವಲಂ ||

ಎಂಬ ಪ್ರಮಾಣಾನುಸಾರವಾಗಿ ಚರಾಚರಾತ್ಮಕವಾದೀಜಗತ್ತೂ, ಬ್ರಹ್ಮಾದಿ ಸಕಲದೇವತೆಗಳೂ, ವೇದಾಗಮಪುರಾಣಾದಿ ಸಕಲ ಶಬ್ದರಾಶಿಗಳೂ ಯಾವ ವಸ್ತುವಿನಲ್ಲಿ ಲಯವನ್ನು ಹೊಂದಿ ಪುನಃ ಪ್ರಕಾಶವನ್ನು ಹೊಂದುವುವೋ ಆ ವಸ್ತುವೇ ಲಿಂಗವೆನಿಸಿಕೊಳ್ಳುವುದು. ಇಂಥ ಶಿವಲಿಂಗವು ಭಕ್ತಾನುಗ್ರಹಕ್ಕೋಸ್ಕರವಾಗಿ ಸ್ಥಾವರ ಇಷ್ಟಾದಿ ಪರಿಚ್ಛಿನ್ನರೂಪದಿಂದ ಪರಿಣಮಿಸಿರುತ್ತದೆ. ಈ ಶಿವಲಿಂಗವು ಲಿಂಗರೂಪತ್ವೇನ ಒಂದೇ ಧರ್ಮವುಳ್ಳುದಾಗಿದ್ದರೂ, ಸ್ಥಾವರತ್ವರೂಪದಿಂದಲೂ ಇಷ್ಟತ್ವರೂಪದಿಂದಲೂ ಭೇದವನ್ನು ಪಡೆದಿರುತ್ತದೆ. ಅಂದರೆ ಶಾಸ್ತ್ರನಿಯಮದಿಂದ ಸ್ಥಾವರಲಿಂಗಕ್ಕೂ ಇಷ್ಟಲಿಂಗಕ್ಕೂ ಸಂಸ್ಕಾರದಲ್ಲಾಗಲಿ ಲಿಂಗಲಕ್ಷಣಗಳಲ್ಲಾಗಲಿ ಯಾವ ಭೇದವೂ ಕಂಡಬರುವುದಿಲ್ಲ. ವೀರಶೈವನ ಕಂಠದಲ್ಲಿ ಧರಿಸಲ್ಪಟ್ಟಿರುವ ಲಿಂಗವು ಯಾವ ಲಕ್ಷಣಗಳಿಂದಲೂ ಯಾವಸಂಸ್ಕಾರಗಳಿಂದಲೂ ಕೂಡಿರುವುದೋ ದೇವಾಲಯದಲ್ಲಿರುವ ಲಿಂಗವೂ ಅದೇ ಲಕ್ಷಣಗಳಿಂದಲೂ ಅದೇ ಸಂಸ್ಕಾರಗಳಿಂದಲೂ ಕೂಡಿರುವುದು. ಆದರೆ ದೇವಾಲಯದಲ್ಲಿರುವ ಸ್ಥಾವರಲಿಂಗವನ್ನು ಒಬ್ಬನೇ ಪೂಜಿಸಬೇಕೆಂಬ ನಿಯಮವಿಲ್ಲವು. ಇಷ್ಟಲಿಂಗವಾದರೋ ಗುರುವಿನಿಂದ ಶಿವದೀಕ್ಷಾಪೂರ್ವಕ ಪರಿಶುದ್ಧಗೊಳಿಸಲ್ಪಟ್ಟ ಯಾವ ಶಿಷ್ಯನ ದೇಹವೆಂಬ ಸಂಸ್ಕೃತಭೂಮಿಯಲ್ಲಿ ಧರಿಸಲ್ಪಟ್ಟಿರುವುದೋ ಅತನೋರ್ವನೇ ಆ ಲಿಂಗವನ್ನು ಪೂಜಿಸಬೇಕೆಂಬ ನಿಯಮವಿರುವುದರಿಂದ ಲಿಂಗವು ಸ್ಥಾವರ ಇಷ್ಟ ಎಂಬ ಭೇದವನ್ನು ಹೊಂದಿರುತ್ತದೆ. ಒಂದು ವೇಳೆ ಲಿಂಗವು ಸ್ಥಾವರ ಇಷ್ಟವೆಂದು ಎರಡು ಭೇದಗಳನ್ನು ಹೊಂದದೆ, ಕೇವಲ ಸ್ಥಾವರರೂಪದಿಂದಲೇ ಇದ್ದಪಕ್ಷದಲ್ಲಿ ಶ್ರೀ ಪಂಚಾಚಾರ್ಯಸಿದ್ಧಾಂತಾನುಗುಣವಾಗಿ ಲಿಂಗಾಂಗಸಾಮರಸ್ಯರೂಪವಾದ ಮುಕ್ತಿಯೇ ಇಲ್ಲದಂತಾಗುತ್ತದೆ. ವೀರಶೈವಮತದಲ್ಲಿ ಲಿಂಗಾಂಗಸಾಮರಸ್ಯವೇ ಪರಮಪುರುಷಾರ್ಥವು. ಲಿಂಗವೆಂದರೆ ಶಿವನು ಅಂಗವೆಂದರೆ ಜೀವನು. ಸಾಮರಸ್ಯವೆಂದರೆ ಸಂಯೋಗವು. ಅಂಗವು ತ್ಯಾಗಾಂಗ ಭೋಗಾಂಗ ಯೋಗಾಂಗವೆಂದು ಮೂರುವಿಧವಾಗಿದೆ. ಲಿಂಗವು ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂದು ಮೂರುವಿಧವಾಗಿದೆ. ಈ ತ್ರಿವಿಧಲಿಂಗೋಪಾಸನಾಭ್ಯಾಸಬಲದಿಂದ ಶಿವತತ್ವದಲ್ಲಿ ಲೀನವಾಗಿ ಪುನರಾವೃತ್ತಿಯಿಲ್ಲದೆ ಆನಂದಸ್ವರೂಪದಿಂದಿರುವುದೇ ಶಿವಸಾಯುಜ್ಯರೂಪವಾದ ಮುಕ್ತಿಯು. ಈ ವಿಧವಾದ ಮುಕ್ತಿಯನ್ನು ಪಡೆಯಬೇಕಾದರೆ ಇಷ್ಟಲಿಂಗವನ್ನು ದೇಹದಲ್ಲಿ ಧರಿಸಿರಲೇಬೇಕು. ಲಿಂಗಧಾರಣವಿಲ್ಲದಿದ್ದಲ್ಲಿ ಇಂಥ ಲಿಂಗಾಂಗಸಾಮರಸ್ಯರೂಪವಾದ ಮುಕ್ತಿಯು ಸಂಭವಿಸಲಾರದೆಂಬುದ್ದೇಶದಿಂದ ಈ ವೀರಶೈವಮತದಲ್ಲಿ ಲಿಂಗಧಾರಣವೆಂಬುದು ಪ್ರಬಲವಾದ ನಿಯಮವಾಗಿರುತ್ತದೆ. ಸ್ಥಾವರಲಿಂಗಾರಾಧಕನು ಯಾವಾಗಲೂ ಪರಿಶುದ್ಧನಾಗಿರುತ್ತಾನೆಂದು ಹೇಳಲು ಆಗುವುದಿಲ್ಲ. ಈ ಲಿಂಗವನ್ನು ಯಾವಾಗ ಪೂಜಿಸಲಿಚ್ಛಿಸುವನೋ ಆಗ ಮಾತ್ರ ಶಿವಲಿಂಗಸಾನ್ನಿಧ್ಯಬಲದಿಂದ ಪರಿಶುದ್ಧನಾಗಿಯೂ ನಿರ್ಮಲಾತ್ಮನಾಗಿಯೂ ಇರುವನು. ಪೂಜಾಕಾರ್ಯವು ಮುಗಿದ ಬಳಿಕ ಲಿಂಗಸಾನ್ನಿಧ್ಯ ತಪ್ಪಿಹೋಗುತ್ತದೆ. ಆಗ ಅಷ್ಟು ನಿರ್ಮಲಾಂತಃಕರಣದಿಂದ ಇರುವನೆಂದು ಹೇಳಲವಕಾಶವಿಲ್ಲ. ಇಷ್ಟಲಿಂಗಧಾರಿಯಾದ ವೀರಶೈವನು ಮಾತ್ರ ಎಡಬಿಡದೆ ಲಿಂಗಸಾನ್ನಿಧ್ಯವುಳ್ಳವನಾದುದರಿಂದಲೂ ತ್ರಿಸಂಧ್ಯಗಳಲ್ಲಿ ಆ ಲಿಂಗವನ್ನು ಪೂಜಿಸಬೇಕಾಗಿರುವುದರಿಂದಲೂ ಯಾವಾಗಲೂ ಪರಿಶುದ್ಧನಾಗಿರುವನೆಂದು ಸ್ಪಷ್ಟವಾಗುತ್ತದೆ. ಮತ್ತು ಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಭಗವತ್ಪಾದರು—

ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್ |
ತಲ್ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ ||
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್ |
ಲಿಂಗಧಾರೀ ಸದಾಶುದ್ಧಃ ನಿಜಲಿಂಗಂ ಮನೋಹರಂ ||
ಅರ್ಚಯೇದ್ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ||

ಗುರುವು ಶಿಷ್ಯನ ಸ್ಥೂಲಸೂಕ್ಷ್ಮಕಾರಣ ಶರೀರಗಳನ್ನು ಕ್ರಿಯಾ ವೇಧಾ ಮನು ಎಂಬ ಮೂರು ದೀಕ್ಷೆಗಳಿಂದ ಪರಿಶುದ್ಧಗೊಳಿಸಿ ಶಿಷ್ಯನ ಜೀವಕಲಾರೂಪವಾದ ಪ್ರಾಣವನ್ನು ಆಕರ್ಷಿಸಿ ಇಷ್ಟಲಿಂಗದಲ್ಲಿ ನೆಲೆಗೊಳಿಸಿಯೂ ಆ ಶಿವಕಲಾಯುಕ್ತವಾದ ಇಷ್ಟಲಿಂಗವನ್ನು ಆ ಶಿಷ್ಯನ ಜೀವಕಲಾರೂಪವಾದ ಪ್ರಾಣದಲ್ಲಿ ಯೋಜಿಸಿ "ಪಾಣಿಮಂತ್ರಂ ಪವಿತ್ರಂ" ಎಂಬ ಮಂತ್ರವನ್ನುಚ್ಚರಿಸುತ್ತಾ ಶಿಷ್ಯನ ಹಸ್ತದಲ್ಲಿಟ್ಟು ಅಯ್ಯಾ! ನೀನು ಲಿಂಗಶರೀರಿಯಾದುದರಿಂದ ಯಾವಾಗಲೂ ಪರಿಶುದ್ಧನಾಗಿರಬೇಕಲ್ಲದೆ ಒಂದು ನಿಮಿಷವೂ ಅಪರಿಶುದ್ಧನಾಗಿರಕೂಡದು. ಈ ಮುಕ್ತಿದಾಯಕವಾದ ಇಷ್ಟಲಿಂಗವನ್ನು ಕರಪೀಠದಲ್ಲಿಟ್ಟು ಗಂಧಾದಿಗಳಿಂದ ಅರ್ಚಿಸುತ್ತಿರು. ಮತ್ತು,

ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ |
ಕದಾಚಿತ್ಕುತ್ರಚಿದ್ವಾಪಿ ನವಿಯೋಜಯ ದೇಹತಃ ||
ಮೂರ್ಧ್ನಿ ವಾ ಕಂಠದೇಶೇ ವಾ ಕಕ್ಷೇ ವಕ್ಷಸ್ಥಲೇಪಿ ವಾ |
ಕುಕ್ಷೌ ಹಸ್ತತಲೇ ವಾಪಿ ಧಾರಯೇಲ್ಲಿಂಗಮೈಶ್ವರಂ ||

ಅಯ್ಯಾ ಶಿಷ್ಯನೆ, ನಿನ್ನ ಪ್ರಾಣಧಾರಣೆಯಲ್ಲಿ ಎಷ್ಟು ಆದರವುಳ್ಳವನಾಗಿರುವಿಯೋ ಇಷ್ಟಲಿಂಗದಲ್ಲಿಯೂ ಅಷ್ಟು ಆದರವುಳ್ಳವನಾಗಿರು. ಯಾವ ಕಾಲದಲ್ಲಿಯೂ ನಿನ್ನ ದೇಹದಿಂದ ಈ ಲಿಂಗವನ್ನು ಅಗಲಿರಬೇಡ. ಇದನ್ನು ನಿನ್ನ ಮಸ್ತಕದಲ್ಲಾಗಲಿ, ಕಂಠದಲ್ಲಾಗಲಿ, ಕಂಕಳಲ್ಲಾಗಲಿ ಎದೆಯಲ್ಲಾಗಲಿ, ಹೊಟ್ಟೆಯಮೇಲಾಗಲಿ, ತೋಳಿನಲ್ಲಾಗಲಿ ಈ ಆರುಸ್ಥಳಗಳಲ್ಲಿ ಯಾವುದಾದರೊಂದು ಸ್ಥಳದಲ್ಲಿ ಧರಿಸುತ್ತಿರು.

ಯದಿ ಪ್ರಮಾದಾತ್ಪತಿತೇ ಲಿಂಗೇ ದೇಹಾನ್ಮಹೀತಲೇ |
ಪ್ರಾಣಾನ್ವಿಮುಂಚ ಸಹಸಾ ಪ್ರಾಯಶ್ಚಿತ್ತಂ ನ ಮೋಕ್ಷ ಸಂತದು ||

ಒಂದುವೇಳೆ ತಿಳಿಯದ ದೋಷದಿಂದ ಈ ಇಷ್ಟಲಿಂಗವು ದೇಹದಿಂದ ಅಗಲಿದರೆ ನಿನ್ನ ಪ್ರಾಣವು ಹೋದಂತೆ ಭಾವಿಸು. ಈ ರೀತಿಯಾಗಿ ವರ್ತಿಸುತ್ತ ಬಂದರೆ ಈ ಇಷ್ಟಲಿಂಗವು ನಿನ್ನ ಅಭೀಷ್ಟದಂತೆ ಸಮಸ್ತ ಐಹಿಕಸುಖವನ್ನೀಯುವುದಲ್ಲದೆ ಲಿಂಗಾಂಗಸಾಮರಸ್ಯವೆಂಬ ಪಾರಮಾರ್ಥಿಕಸಿದ್ಧಿಯನ್ನು ಉಂಟುಮಾಡುವದೆಂದು ಅನುಜ್ಞೆಯನಿತ್ತಿರುವರು.

ಈ ರೀತಿಯಾಗಿ ಭಗವತ್ಪಾದ ರೇಣುಕಾಚಾರ್ಯರು ಇಷ್ಟಲಿಂಗಮಹತ್ವವನ್ನು ವಿಸ್ತರಿಸಿ ಲಿಂಗಪೂಜಾಕ್ರಮವನ್ನುಪದೇಶಿಸಿ ಲಿಂಗಪೂಜಾಂಗವಾದ ಪಂಚಾಚಾರಗಳನ್ನೂ ಅಷ್ಟಾವರಣಗಳನ್ನೂ ಸ್ಪಷ್ಟವಾಗಿ ಬೋಧಿಸಿ ಅವುಗಳಿಗೆ ಬೇಕಾದ ಶ್ರುತ್ಯಾಗಮಾದಿಪ್ರಮಾಣಗಳನ್ನುದಾಹರಿಸಿರುವದರಿಂದ ಪ್ರತಿಯೊಬ್ಬ ವೀರಶೈವನೂ ಮತಾಚಾರ್ಯರಾದ ಗುರುಗಳು ಹೇಳಿದಂತೆ ಇಷ್ಟಲಿಂಗವನ್ನು ಆರಾಧಿಸುತ್ತ ಲಿಂಗಧರ್ಮಾನುಗುಣವಾದ ಜ್ಞಾನಾಚರಣೆ ಕ್ರಿಯಾಚರಣೆಗಳಲ್ಲಿ ನಿಷ್ಠನಾಗುತ್ತ ಇಷ್ಟಲಿಂಗವನ್ನು ಅನುಗ್ರಹಿಸಿದ ಗುರುಗಳಲ್ಲಿ ಭಕ್ತಿಯನ್ನು ತೋರಿಸುತ್ತ ಲಿಂಗಾಂಗಿಧರ್ಮವನ್ನು ರಕ್ಷಿಸಿಕೊಳ್ಳುವ ವೀರಶೈವನಿಗೆ—

ಏಕೇನ ಜನ್ಮನಾ ಮುಕ್ತಿರ್ವೀರಶಾಂತು ಮಹೇಶ್ವರಿ |

ಎಂಬ ಶಿವಾಗಮವಾಕ್ಯದಂತೆ ಮುಕ್ತಿಯು ಒಂದೇ ಜನ್ಮದಲ್ಲಿ ಸಿದ್ಧಿಸಿಸುವುದು.

ಒಳದೇಶದ ವೃತ್ತಾಂತಗಳು.

ಅಸವೇರಿಯಿಂದ ಚನ್ನಗಿರಿಗೆ ತಾಯಿ, ಮಗ ಇಬ್ಬರು ಬರುತ್ತಿರುವಾಗ್ಯೆ ದಾರಿಯಲ್ಲಿ ದೊಡ್ಡಘಟ್ಟ ಎಂಬ ಸ್ಥಳದಲ್ಲಿ ದೊಡ್ಡ ಹುಲಿಯೊಂದು ಅಡ್ಡಬಂದು ತಾಯಿಯನ್ನು ಎತ್ತಿಕೊಂಡು ಹೋಯಿತೆಂದು ತಿಳಿದುಬರುತ್ತದೆ.

ಶ್ರೀಜಗದ್ಗುರು ರಂಭಾಪುರೀ ಸಂಸ್ಥಾನದ ಆಶ್ರಯದಲ್ಲಿರುವ ಗಾನಕುಶಲ ಎಚ್. ಕೆ. ಗುರುಶಾಂತಯ್ಯನವರ ಸಂಗೀತವು ನಿನ್ನೆ ದಿವಸ ಸಾಯಂಕಾಲ 4 ಘಂಟೆ ಸಮಯದಲ್ಲಿ ಅರಮನೆಯೊಳಗೆ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ನಡೆಯಿತೆಂದು ಕೇಳುತ್ತೇವೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳು ಪೀಠಾರೋಹಣವಾಗಿ ನಾಳೆ 13 ನೇ ತಾರೀಖಿಗೆ 9 ವರ್ಷಗಳು ತುಂಬದವು. ಪೀಠದ ಪದ್ಧತಿಪ್ರಕಾರ 13 ನೇ ತಾರೀಖು ಗುರುವಾರ ದಿವಸ ನಂಜನಗೂಡಿನ ಮುಕ್ಕಾಮಿನಲ್ಲಿ ಶ್ರೀಗಳವರ ವರ್ಧಂತಿಯು ವಿಜೃಂಭಣೆಯಿಂದ ನಡೆಯುವುದೆಂದು ತಿಳಿದುಬರುತ್ತದೆ.

ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ ನೂಲುವ ಸೆಂಟರನ್ನೂ, ಬದನವಾಳಿನ ನೂಲುವ ಸೆಂಟರನ್ನೂ ಏಕವಾಗಿ ಮಾಡಿ ಖರ್ಚಿನಲ್ಲಿ ಸಾಲಿಯಾನಾ ಉಳಿಯುವ 1,284 ರೂಪಾಯಿಯನ್ನು ಬೆಂಗಳೂರು ಮತ್ತು ಕೋಲಾರ್ ಸೆಂಟರುಗಳ ಖಾದಿ ಸೆಂಟರುಗಳನ್ನು ವೃದ್ಧಿಪಡಿಸುವಂತೆ ಸರ್ಕಾರದವರು ಹುಕುಂ ಮಾಡಿರುತ್ತಾರೆ.

ಬೊಂಬಾಯಿಯ ಸುಪ್ರಸಿದ್ಧ ಗಾಯಕರಾದ ಪ್ರೊಫೆಸರ್ ನಾರಾಯಣರಾವ್ ವ್ಯಾಸರವರು ಇದೇ ತಿಂಗಳು ೧೩ನೆಯ ತಾರೀಖಿನ ದಿವಸ ಬೆಂಗಳೂರು ಶಿವಾನಂದ ಥಿಯೇಟರಿನಲ್ಲಿಯೂ ೧೬ ನೆಯ ತಾರೀಖಿನದಿವಸ ರಾಜಧಾನಿಯ ಟವನ್‌ಹಾಲಿನಲ್ಲಿಯೂ ಸುಶ್ರಾವ್ಯವಾದ ಸಂಗೀತಕಚೇರಿಯನ್ನು ಮಾಡುತ್ತಾರೆಂದು ತಿಳಿದುಬರುತ್ತದೆ.

ರಾಜಧಾನಿಯಲ್ಲಿರುವ ಮ॥ ಜೆ. ಆರ್. ಜೋಷ್ಯರವರು ಸೋಷಿಯಾಲಜಿ, ಟೀಪುಸುಲ್ತಾನ್, ದಕ್ಷಿಣ ಹಿಂದೂಸ್ಥಾನದ ತತ್ವಸಾರ ಎಂಬೀ ಗ್ರಂಥಗಳನ್ನು ರಚಿಸಿರುವುದನ್ನು ಪರಿಶೀಲಿಸಿ ಮೆಚ್ಚಿ ಫ್ರಾನ್ಸ್ ದೇಶದ ಚರಿತ್ರ ಶೋಧನಾ ಮಹಾಸಂಘದವರು ಅವರಿಗೆ ದೊಡ್ಡ ಸಿಲ್ವರ್ ಮೆಡಲನ್ನು ಬಹುಮಾನ ಮಾಡಿರುತ್ತಾರೆಂದು ತಿಳಿದುಬಂದಿದೆ.

ಬೆಂಗಳೂರು ಕೋಟೆ ಗ॥ ಹೈಸ್ಕೂಲಿನ 4 ನೇ ಫಾರಮಿನಲ್ಲಿ ಓದುತ್ತಿದ್ದ ಆರ್. ಷಣ್ಮುಗಂ ಎಂಬ ವಿದ್ಯಾರ್ಥಿಯು ಬೆಂಗಳೂರು ಮಾಮೂಲ್‌ಪೇಟೆ ಮಿಡ್ಲ್ ಸ್ಕೂಲಿನಲ್ಲಿ ಅವನಿಗೆ ಕೊಟ್ಟಿದ್ದ ಲೀವಿಂಗ್ ಸರ್ಟಿಫಿಕೇಟನ್ನು ತಿದ್ದಿ ಬದಲಾಯಿಸಿದನೆಂದು, ಈ ವರ್ಷ ಸಂಸ್ಥಾನದಲ್ಲಿ ಯಾವ ಹೈಸ್ಕೂಲಿಗೂ ಅವನನ್ನು ಸೇರಿಸಿಕೊಳ್ಳಕೂಡದೆಂದು ಹುಕುಂ ಆಗಿದೆ.

ಕುಂಸಿ ಡೆಪ್ಯುಟಿ ಅಮಲ್ದಾರರವರಿಗೆ ವರ್ಗವಾದ ಸಂದರ್ಭದಲ್ಲಿ ಅಲ್ಲಿಯ ಜನಗಳು ಸಂತೋಷಕೂಟವನ್ನೇರ್ಪಡಿಸಿ ರೈಲ್ವೆ ಸ್ಟೇಷನ್ನಿಗೆ ಕಳುಹಿಸಿಕೊಡುವುದಕ್ಕೆ ಬಂದು ಸಂತೋಷಪ್ರದರ್ಶನಕ್ಕೆ ರೈಲ್ವೆ ಕಂಬಿಯ ಮೇಲೆ ಸಿಡಿಮದ್ದನ್ನಿಟ್ಟಿದ್ದರು. ಗಾಡಿಯು ಹೊರಟ ಕೂಡಲೆ ಮದ್ದು ಹಾರಿ ಪಕ್ಕದಲ್ಲಿ ನಿಂತಿದ್ದ ಒಬ್ಬ ಹುಡುಗನಿಗೂ ಮತ್ತೊಬ್ಬರಿಗೂ ತಗಲಿ ತುಂಬಾ ಗಾಯಗಳಾದವು. ಹುಡುಗನು ಮಾರನೇದಿನ ಮೃತಪಟ್ಟನು. ರೈಲ್ವೆಪೋಲೀಸಿನವರು ವಿವರಗಳನ್ನು ತನಿಖೆ ಮಾಡುತ್ತಿದ್ದಾರೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳು ನಂಜನಗೂಡಿನಲ್ಲಿರುವ ಭಕ್ತರ ಪ್ರಾರ್ಥನೆಯ ಮೇರೆ ಕಳೆದವಾರ ಸಕಲ ಬಿರುದಾವಳಿಸಹಿತವಾಗಿ ಮಹೋತ್ಸವದಿಂದ ನಂಜನಗೂಡಿಗೆ ದಯಮಾಡಿಸಿರುವುದು ಸರಿಯಷ್ಟೆ! ಪ್ರತಿನಿತ್ಯವೂ ಸಾಯಂಕಾಲ ಪುರಾಣಶ್ರವಣವೂ ಶ್ರೀಗಳವರ ಮತ್ತು ಪಂಡಿತರ ಭಾಷಣಗಳು ನಡೆಯುತ್ತಿರುವವು. ಆ ಊರಿನ ಮಹಾಜನಗಳೂ ಸುತ್ತಮುತ್ತಣ ಗ್ರಾಮಗಳ ಜನಗಳೂ ಭಕ್ತಿಯಿಂದ ಬಂದು ಗುರುವಾಕ್ಯವನ್ನಾಲಿಸಿ ಧನ್ಯರಾಗುತ್ತಿರುವರು. ಅನೇಕಜನ ಭಕ್ತರು ತಮ್ಮ ತಮ್ಮ ಮನೆಗಳಿಗೆ ಉತ್ಸವದಿಂದ ಬಿಜಮಾಡಿಸಿಕೊಂಡು ಪಾದಪೂಜೆಯನ್ನು ಮಾಡಿ ಗುರುಕಾಣಿಕೆಯನ್ನು ಒಪ್ಪಿಸುತ್ತಿರುವರು.

ತಾ॥ 27 ರಲ್ಲಿ ನಮ್ಮನ್ನಾಳುವ ಮಹಾಪ್ರಭುಗಳು ಶುಕ್ರವಾರ ಸಂಜೆಯಿಂದ ಸಕಲೇಶಪುರಕ್ಕೆ ದಯಮಾಡಿದರು. ಪಟ್ಟಣವೂ ಅದರ ವಸತಿ ಪ್ರದೇಶವೂ ಬಹಳ ದಿನಗಳಿಂದ ಶೃಂಗರಿಸಲ್ಪಡುತ್ತಾ ಇತ್ತು. ತಾ॥ 28 ನೇ ಬುಧವಾರ ಈ ತಾಲ್ಲೂಕಿನ ಸುತ್ತುಮುತ್ತಲೂ, ಚಿಕ್ಕಮಗಳೂರು ಪ್ರಾಂತ್ಯದ ಸುತ್ತಲೂ ಇರುವ ಯೂರೋಪಿಯನ್ ಕಾಫಿ ಪ್ಲಾಂಟರುಗಳು ಮಹಾರಾಜರವರನ್ನು ಕರೆದು ಟೀ ಪಾರ್ಟಿ ಮಾಡಿ ಮರ್ಯಾದೆಯಿಂದಲೂ, ಆದರದಿಂದಲೂ ಸತ್ಕರಿಸಿ ಸಂತೋಷಪಡಿಸಿದರು. ಈ ಕಾರ್ಯಭಾರವನ್ನು ಹೊಸೂರು ತೋಟದಲ್ಲಿರುವ ಮಿ॥ ಇ. ಹೆಚ್. ಯಂಗ್ ಸಾಹೇಬರು ವಹಿಸಿಕೊಂಡು ಸುಲಲಿತವಾಗಿ ನಡೆಯುವಂತೆ ಮಾಡಿದರು. ತಾ॥ 29 ನೇ ಗುರುವಾರ ಸಾಯಂಕಾಲ ಮಹಾರಾಜರು ಈ ಸುತ್ತುಮುತ್ತಲಿರುವ ಎಲ್ಲಾ ಯೂರೋಪಿಯನ್ ಮತ್ತು ಇಂಡಿಯನ್ ಕಾಫಿ ಪ್ಲಾಂಟರುಗಳನ್ನೂ, ಸರ್ಕಾರಿ ಅಧಿಕಾರಿಗಳನ್ನೂ, ಊರಿನ ಪ್ರಮುಖರನ್ನೂ ಕರೆಸಿ ಅವರಿಗಾಗಿ ಒಂದು ಟೀ ಪಾರ್ಟಿಯನ್ನು ಅದೇ ಮಂಜರಾಬಾದ್ ಕ್ಲಬ್ಬಿನಲ್ಲಿ ಏರ್ಪಡಿಸಿದ್ದರು. ಮಹಾರಾಜರವರ ಸವಾರಿಯು 1-15 ಕ್ಕೆ ಟಿ. ಬಿ. ಯಿಂದ ಕ್ಲಬ್ಬಿಗೆ ದಯಮಾಡಿಸಿತು. ಆ ದಿನ ಸಂತೆಯಾದ್ದರಿಂದ ಸಾವಿರಾರು ಜನರಿಗೆ ಅವರ ದರ್ಶನ ಲಭಿಸಿತು. ಸುಮಾರು ಮುಕ್ಕಾಲು ಘಂಟೆ ಅವರು ಕ್ಲಬ್ಬಿನಲ್ಲಿ ಕಳೆದು ವಾಪಸು ತಮ್ಮ ಬಿಡಾರಕ್ಕೆ ತೆರಳಿದರು.

ವರ್ತಮಾನಸಂಗ್ರಹ.

ಮಹಾರಾಜ ನಾಥೂರಾಮ ಎಂಬವರನ್ನು ಕರಾಚಿ ಕೋರ್ಟಿನ ಕಾಂಪೌಂಡಿನಲ್ಲಿಯೇ ಕೊಲೆಮಾಡಿದ ಒಬ್ಬ ಮಹಮ್ಮದೀಯನಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು.

ನೇಪಾಳದ ಮಹಾರಾಜರು ಹೊಸಡೆಲ್ಲಿಯಲ್ಲಿ ಒಂದು ವಾರಕಾಲ ವಾಸಿಸುವುದಕ್ಕೆ ಹೈದರಾಬಾದ್ ನಿಜಾಮರವರು ತಮ್ಮ ಅರಮನೆಯನ್ನು ಬಿಟ್ಟುಕೊಟ್ಟಿರುತ್ತಾರೆಂದು ತಿಳಿದುಬರುತ್ತದೆ.

ಬಾಬುರಾಜೇಂದ್ರಪ್ರಸಾದರವರು ತಮ್ಮ ಅಸ್ವಸ್ಥತೆಯ ಕಾಲದಲ್ಲಿ ವಾರ್ಧಾ ಆಶ್ರಮಕ್ಕೆ ಬಂದು ವಿಶ್ರಾಂತಿ ತೆಗೆದುಕೊಳ್ಳಬಹುದೆಂದು ಗಾಂಧಿಯವರು ಸದರಿಯವರನ್ನು ಆಹ್ವಾನಿಸಿರುತ್ತಾರೆ.

ಡೆಲ್ಲಿಯಲ್ಲಿ ಸರ್ಕಸ್ಸಿನ ಹುಲಿಯನ್ನು ನೋಡಲು ಸಮಾಪಕ್ಕೆ ಹೋದ 9 ವರ್ಷದ ಹುಡುಗನನ್ನು ಹುಲಿಯು ತನ್ನ ಪಂಜರದಿಂದ ಹೊಡೆದು ಗಾಯಪಡಿಸಿತು. ಕೂಡಲೆ ಅವನನ್ನು ಆಸ್ಪತ್ರೆಗೆ ಸಾಗಿಸಿದರು.

ತ್ರಿವೇಂದ್ರಮ್ಮಿನಲ್ಲಿರುವ ಅನಂತಪದ್ಮನಾಭಸ್ವಾಮಿ ದೇವಸ್ಥಾನದ ಅನಾಹುತಕ್ಕೆ ಕಾರಣರಾರೆಂಬುದನ್ನು ತಿಳುಹಿಸಿದವರಿಗೆ 5000 ರೂಪಾಯಿ ಬಹುಮಾನ ಕೊಡುವುದಾಗಿ ಅಲ್ಲಿಯ ಪೋಲೀಸು ಕಮಿಷನರವರು ಪ್ರಕಟಿಸಿರುತ್ತಾರೆ.

ವಾಯವ್ಯಪ್ರಾಂತದಲ್ಲಿ ಕೊಲೆಗಡಕರ ಹಾವಳಿ!

ವಾಯುವ್ಯ ಸರಹದ್ದಿನ ಪ್ರಾಂತದಲ್ಲಿ ಕಳೆದ 1 ವರ್ಷದಲ್ಲಿ ಸುಮಾರು 513 ಕ್ಕೆ ಹೆಚ್ಚು ಕೊಲೆಗಳು ನಡೆದಿವೆಯೆಂದು ತಿಳಿದುಬರುತ್ತದೆ. ಪ್ರಪಂಚದ ಇನ್ನಾವ ಭಾಗದಲ್ಲಿಯೂ ವರ್ಷದಲ್ಲಿ ಇಷ್ಟು ಕೊಲೆಗಳು ನಡೆಯುವುದಿಲ್ಲವೆಂದು ಹೇಳಬಹುದು.

66 ಜನಕ್ಕೆ ಮರಣದಂಡನೆ.

ರಷ್ಯಾದೇಶದಲ್ಲಿ ಕ್ರಾಂತಿಯನ್ನು ನಡಿಸಿದರೆಂದು ಅಲ್ಲಿಯ ಸರ್ಕಾರದವರು 66 ಜನರನ್ನು ಮರಣದಂಡನೆಗೆ ಗುರಿಮಾಡಿದರೆಂದು ತಿಳಿದುಬರುತ್ತದೆ.

ಅದ್ಭುತವಾದ ಮೊಸಳೆ!

ಹುಗ್ಲಿ ನದಿಯಲ್ಲಿ ಉತ್ತರಾಮಘಾಟಿನ ಹತ್ತರ ಸ್ನಾನಾದಿಗಳಿಗೆ ಹೋಗುತ್ತಿದ್ದವರಿಗೆ ತೊಂದರೆಕೊಡುತ್ತಿದ್ದ ದೊಡ್ಡ ಮೊಸಳೆಯನ್ನು ಅಲ್ಲಿಯ ಪೋಲೀಸು ಇನ್‌ಸ್ಪೆಕ್ಟರವರು ಗುಂಡಿನಿಂದ ಹೊಡೆದು ಕೊಂದರು. ಈ ಮೊಸಳೆಯು 17 ಅಡಿಗಳಷ್ಟು ಉದ್ದವಿತ್ತೆಂದು ತಿಳಿದುಬರುತ್ತದೆ.

300 ವರ್ಷದ ರಬ್ಬರು!

ಪೆರುದೇಶದಲ್ಲಿ ಒಂದು ಮಗುವಿನ ಸಮಾಧಿಯಲ್ಲಿ ಒಂದು ರಬ್ಬರಿನ ಚೆಂಡು ಸಿಕ್ಕಿರುತ್ತದೆ. ಇದು ಸುಮಾರು 300 ವರುಷಗಳ ಹಿಂದಿನದೆಂದು ಹೇಳುತ್ತಾರೆ. ಇದರಿಂದ 300 ವರುಷಗಳ ಹಿಂದೆಯೇ ರಬ್ಬರು ಉಪಯೋಗದಲ್ಲಿತ್ತೆಂದು ತಿಳಿದುಬರುತ್ತದೆ.

ಹೊಸತರಹದ ಗಾಜು!

ಆಸ್ಟ್ರಿಯಾದೇಶದ ಒಬ್ಬ ಶಾಸ್ತ್ರಜ್ಞರು ಹೊಸ ಮಾದರಿಯಲ್ಲಿ ಗಾಜುಮಾಡುವದನ್ನು ಕಂಡುಹಿಡಿದಿರುವರು. ಅದು ಈಗಿನ ಗಾಜಿನಂತೆ ಕಠಿಣವಾಗಿರದೆ ಕಾಗದದಂತೆ ಯಾವರೀತಿ ಬೇಕಾದರೂ ಬಗ್ಗಿಸುವಂತೆ ಮೃದುವಾಗಿರುತ್ತದೆ. ಇದಕ್ಕೆ ಅವರು 'ಪ್ಲಾಸ್' ಎಂದು ಹೆಸರು ಕೊಟ್ಟಿದ್ದಾರೆ.

2 ಆಣೆಗೆ 50 ರೂಪಾಯಿ ಜುಲ್ಮಾನೆ.

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಅಂಗಡಿಯವನು ತನಗೆ ಒಬ್ಬ ಹುಡುಗಿಯು ಕೊಡಬೇಕಾಗಿದ್ದ 2 ಆಣೆ ಸಾಲವನ್ನು ಕೇಳಿದಾಗ ಕೊಡಲಿಲ್ಲವೆಂದು ಅವಳನ್ನು ಹೊಡೆದದ್ದರಿಂದ, ಕೋರ್ಟಿನಲ್ಲಿ ಮೊಕದ್ದಮೆಯಾಗಿ ಅವನಿಗೆ 50 ರೂಪಾಯಿ ಜುಲ್ಮಾನೆಯಾಯಿತು.

ಚೀನಾದೇಶದಲ್ಲಿ ಹೊಸಕಾನೂನು!

ಚೀನಾದೇಶದವರು ವಿದೇಶೀಯ ಸ್ತ್ರೀಯರನ್ನು ಮದುವೆಮಾಡಿಕೊಳ್ಳಕೂಡದೆಂದು ಕಾನೂನು ಜಾರಿ ಮಾಡುವುದರಲ್ಲಿದ್ದಾರೆ. ಇದು ಪ್ಯಾಸಾದರೆ ಈಗ ಮದುವೆಯಾಗಿರುವ ವಿದೇಶೀಯ ಸ್ತ್ರೀಯರನ್ನು ವಿವಾಹದಿಂದ ವಿಚ್ಛೇದಮಾಡಿ ಅವರನ್ನು ಅವರ ದೇಶಗಳಿಗೆ ಕಳುಹಿಸಬೇಕಾಗುತ್ತದೆ.

ವಿಹಾಹದಲ್ಲಿ ಕತ್ತೆಯಹಾಲಿನಿಂದ ಸ್ನಾನ!

ಅಫ್ಘಾನಿಸ್ಥಾನದಲ್ಲಿ ಪ್ರತಿಯೊಬ್ಬ ಹುಡುಗಿಯೂ ಮದುವೆಯಾಗುವಾಗ ಮೊದಲು ಕತ್ತೆಯ ಹಾಲಿನಲ್ಲಿಯೂ, ಅನಂತರ ಪನ್ನೀರಿನಲ್ಲಿಯೂ ಸ್ನಾನಮಾಡುವ ಶಾಸ್ತ್ರಪದ್ಧತಿಯಿರುವುದೆಂದು ಅಫ್ಘಾನ ಯುವಕನನ್ನು ಮದುವೆಯಾಗಿದ್ದ ಮಾರ್ಗರೆಟ್ ಅಬ್ದುಲ್ಲ ಎಂಬ ಯುವತಿಯು ತಿಳಿಸಿದ್ದಾಳೆ.

ಇನ್ಫ್ರಾರೆಡ್ ಬೆಳಕು.

ಎಕ್ಸ್‌ರೇ ಬೆಳಕು ಮಾಂಸಖಂಡಗಳ ಮೂಲಕ ಪ್ರವೇಶಿಸಿ ಮೂಳೆಗಳನ್ನು ಕಾಣುವ ಹಾಗೆ ಮಾಡುವಂತೆ ಈ ಬೆಳಕು ಚರ್ಮದ ಮೂಲಕ ಪ್ರವೇಶಿಸಿ ರಕ್ತನಾಳಗಳನ್ನೂ, ನರಗಳನ್ನೂ, ಖಂಡಗಳನ್ನೂ ದೃಷ್ಟಿಗೋಚರವಾಗುವಂತೆ ಮಾಡುತ್ತದೆ. ಇದರಿಂದ ರಕ್ತನಾಳಗಳ ಖಾಯಿಲೆಗಳಿದ್ದರೆ ಸುಲಭವಾಗಿ ತಿಳಿಯಬಹುದು.

ಹುಟ್ಟುಕುರುಡಿಯು ಅಧ್ಯಾಪಿಕೆಯಾಗಿದ್ದಾಳೆ!

ಇಂಗ್ಲೆಂಡಿನಲ್ಲಿ ಹೇಜಲ್‌ವಾಟರ್ ಎಂಬ ಹುಟ್ಟುಕುರುಡಿಯು ತನ್ನ 30 ನೆಯ ವರ್ಷದಲ್ಲಿಯೇ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ (ಮಾಡರ್ನ್ ಹಿಸ್ಟರಿ) ಚರಿತ್ರೆಯಲ್ಲಿ ಬಿ. ಎ. ಪರೀಕ್ಷೆಯಲ್ಲಿ ಮೊದಲನೆಯವಳಾಗಿ ಉತ್ತೀರ್ಣಳಾಗಿದ್ದಾಳೆ. ಈಗ ಅವಳು ಹುಡುಗರಿಗೆ ಪಾಠವನ್ನು ಹೇಳುತ್ತಿದ್ದಾಳೆ.

ಬಾಲಕರ ಸಿನಿಮಾಮಂದಿರಗಳು!

ರಷ್ಯಾದೇಶದಲ್ಲಿ ದೊಡ್ಡವರು ಹೋಗುವ ಸಿನಿಮಾ ಮಂದಿರಗಳಿಗೆ ಹುಡುಗರು ಮಕ್ಕಳು ಹೋಗುವುದರಿಂದ ಅವರ ಬುದ್ಧಿಯು ಕೆಡುತ್ತದೆಂದು ಮಕ್ಕಳಿಗೋಸ್ಕರವಾಗಿಯೇ ಬೇರೆ ಸಿನಿಮಾಗಳನ್ನು ಇಟ್ಟಿದ್ದಾರೆ. ಇವುಗಳಲ್ಲಿ ಹಾಸ್ಯರಸಗರ್ಭಿತವಾದ ವಿಷಯಗಳನ್ನೂ ಮಕ್ಕಳಜ್ಞಾನಾಭಿವೃದ್ಧಿಗೆ ಬೇಕಾದ ವಿಷಯಗಳನ್ನೂ ಮಾತ್ರ ಪ್ರದರ್ಶಿಸುತ್ತಾರೆಂದು ತಿಳಿದು ಬಂದಿದೆ.

ಅಸ್ಪೃಶ್ಯಬಾಲಕನ ವಿಚಿತ್ರಮರಣ.

ಪಯಲ್‌ಪುರದ ಅಸ್ಪೃಶ್ಯಬಾಲಕನೊಬ್ಬನು ಸ್ಮಶಾನಕ್ಕೆ ಹೋಗಿ ಅಲ್ಲಿ ಬಿದ್ದಿದ್ದ ಒಂದು ಬಟ್ಟೆಯನ್ನು ತೆಗೆದುಕೊಂಡು ಕೈಒರೆಸಿಕೊಂಡನು. ಸ್ವಲ್ಪವೇಳೆಯಲ್ಲೇ ಅವನ ಕೈ ಊದುವುದಕ್ಕೆ ಪ್ರಾರಂಭಿಸಿತು. ಕೂಡಲೆ ಹುಡುಗನು ಹೆದರಿ ಮನೆಗೆ ಓಡಿಹೋಗಿ ಮಲಗಿದನು. ತಾನು ಒಬ್ಬ ಬ್ರಾಹ್ಮಣನೆಂತಲೂ, ತನ್ನನ್ನು ಯಾರೂ ಮುಟ್ಟಕೂಡದೆಂತಲೂ ಕೂಗಿಕೊಳ್ಳುವುದಕ್ಕೆ ಪ್ರಾರಂಭಿಸಿದನು. ಮಂತ್ರವಾದಿಗಳಿಂದಲೂ ಡಾಕ್ಟರರಿಂದಲೂ ಏನೂ ಸಹಾಯವಾಗದೆ ಹುಡುಗನು ಮಾರನೆದಿನ ಸತ್ತುಹೋದನು.

10 ವರ್ಷ ವಯಸ್ಸಿನಲ್ಲೇ ಕವಿ.

ರಾಬರ್ಟ್ ಹಾಲೆಂಡ್ ಎಂಬ ಇಂಗ್ಲೀಷು ಬಾಲಕನು ತನ್ನ 10ವರುಷ ವಯಸ್ಸಿನಲ್ಲಿಯೇ ಅನೇಕ ನಾಟಕಗಳನ್ನು ಬರೆದಿರುವನಲ್ಲದೆ ವೈರ್‌ಲೆಸ್ ಮುಖಾಂತರ ಭಾಷಣಗಳನ್ನೂ ಮಾಡಿದಾನೆ. ಇವನು ಹಾಸ್ಯ, ಶೋಕ, ಶೃಂಗಾರಾದಿ ರಸಗರ್ಭಿತವಾದ ನಾಟಕಗಳನ್ನು ಮಕ್ಕಳಕೈಯಲ್ಲಿ ಆಡಿಸಬೇಕೆಂದರೆ ಅವರು ಬರದುಕೊಟ್ಟಿದ್ದನ್ನು ಮರೆತುಬಿಡುತ್ತಾರೆಂದು ಹೇಳುತ್ತಾನೆ. ತಾನು ರಚಿಸುವದನ್ನು ಇವನು ಕೈಯಿಂದ ಬರೆಯುವುದಿಲ್ಲ. ಟೈಪು ಮಾಡುತ್ತಾನೆ. ಇಲ್ಲದಿದ್ದರೆ ಇವನ ತಾಯಿಯು ಇವನು ಹೇಳುವುದನ್ನು ಬರೆದುಕೊಳ್ಳುತ್ತಾಳೆ. ಸದ್ಯಃ ೧ ಬುಕ್ಕು ಪ್ರಿಂಟಾಗಿದೆ. ಇನ್ನೊಂದು ಪ್ರೆಸ್ಸಿನಲ್ಲಿ ಮುದ್ರಣವಾಗುತ್ತಿದೆಯಂತೆ!

ಸತ್ತವರನ್ನು ಬದುಕಿಸುವ ಪ್ರಯತ್ನ!

ಅಮೇರಿಕೆಯಲ್ಲಿ ಡಾ॥ ರಾಬರ್ಟ್ ಕಾರ್ನಿಷ್ ಎಂಬವರು ಸತ್ತವರನ್ನು ಬದುಕಿಸುವದಕ್ಕೆ ಸಾಧನಗಳನ್ನು ಕಂಡುಹಿಡಿಯುತ್ತಿದ್ದಾರೆ. ಇವರು ಲಾಜರಸ್ ಎಂಬ ನಾಯಿಯನ್ನು ಕೊಂದು 7 ನಿಮಿಷಗಳ ತರುವಾಯ ಬದುಕಿಸಿದರು. ಎಂದಿನಂತೆ ಆರೋಗ್ಯವನ್ನು ಹೊಂದಿದರೂ ಅದರ ಗುಣವು ಮಾತ್ರ ಬದಲಾಯಿಸಿರುತ್ತದೆ. ಅದು ಮೊದಲಿನಂತೆ ಬೊಗಳುವುದಿಲ್ಲ. ಮೇಲೆಏಳಲು ಹೋಗುವುದಿಲ್ಲ. ಅಲ್ಲದೆ ಇತರ ನಾಯಿಗಳು ಇದರ ಜೊತೆಯಲ್ಲಿ ಸೇರುವುದಿಲ್ಲ ಇದನ್ನು ನೋಡಿದೊಡನೆ ಗುರುಗುಟ್ಟುತ್ತಾ ಓಡಿಹೋಗುತ್ತವೆ. ಈ ವಿಧವಾದ ವ್ಯತ್ಯಾಸಕ್ಕೆ ಕಾರಣವೇನೋ ಇನ್ನೂ ತಿಳಿದಿರುವುದಿಲ್ಲ. ಕಂಡುಹಿಡಿಯುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ.

ಸ್ವೀಕಾರ

ಸೊಲ್ಲಾಪುರ ಡಿ॥ ವಾಡೀಶಹರದಲ್ಲಿರುವ ವೀರಶೈವ ಮಹಾಜನಗಳು ಶ್ರೀ॥ ಷ॥ ಬ್ರ॥ ಹೋಟಗಿ ಬೃಹನ್ಮಠಾಧ್ಯಕ್ಷ ಪಟ್ಟದಸ್ವಾಮಿಗಳವರ ನೇತೃತ್ವದಲ್ಲಿ ಶಿವದೀಕ್ಷೆಯನ್ನು ಪಡೆದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ. ಯು ಶ್ರೀ॥ ಷ॥ ಬ್ರ॥ ಜೈನಾಪುರ ಬೃಹನ್ಮಠದ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಸತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3ನೆಯ ಪುಟದಿಂದ ಮುಂದುವರಿದುದು]

ನಮ್ಮ ಪ್ರೆಸಿಡೆಂಟರಾಗಿದ್ದ ಶ್ರೀಯುತ ಹೈದರಾಲಿ ಖಾನರವರಿಗೂ ಮತ್ತು ಸ್ಯಾನಿಟರಿ ಇಂಜನಿಯರ್ ಶ್ರೀಯುತ ಬಿ. ಆರ್. ಗರುಡಾಚಾರ್ಯರಿಗೂ ಇವರ ಪರಿವಾರಕ್ಕೂ ಈ ಸಮಯದಲ್ಲಿ ನಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಲು ಸಂತೋಷಿಸುತ್ತೇವೆ. ಈ ನಮ್ಮ ನೀರು ಸರಬರಾಯಿಯ ಆರಂಭೋತ್ಸವವನ್ನು ನೆರವೇರಿಸಲೂ, ಇದಕ್ಕೆ ತಮ್ಮ ಪ್ರೀತಿಯುತ ನಾಮಾಂಕಿತವನ್ನಿಡಲೂ ತಮ್ಮ ಉದಾರವಾದ ಒಪ್ಪಿಗೆಯಿತ್ತು, ಅಪ್ರತಿಮವಾದ ವಾತ್ಸಲ್ಯತೆಯನ್ನು ನಮ್ಮ ಮೇಲೆ ದಯೆಗೈದುದಕ್ಕಾಗಿ ನಾವು ತಮಗೆ ಪುನಃ ಪುನಃ ವಂದಿಸುತ್ತೇವೆ. ನಮ್ಮ ಶ್ರೀಮನ್ಮಹಾರಾಜರವರನ್ನೂ, ತಮ್ಮನ್ನೂ, ಸಕಲ ರಾಜವರ್ಗದವರನ್ನೂ ದೀರ್ಘಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನಿತ್ತು ಸಲಹುವಂತೆ ಶ್ರೀ ರಂಗನಾಥಸ್ವಾಮಿಯನ್ನು ಭಕ್ತಿಯುತರಾಗಿ ಪ್ರಾರ್ಥಿಸುತ್ತೇವೆ. ಈಗ ತಾವು ಈ ಶ್ರೀ ಜಯಚಾಮರಾಜ ವಾಟರ್ ವರ್ಕ್ಸಿನ ಪ್ರಾರಂಭೋತ್ಸವವನ್ನು ಕೃಪೆಮಾಡಿ ನೆರವೇರಿಸಬೇಕೆಂದು ಬೇಡಿಕೊಳ್ಳುತ್ತೇವೆ.'

ಈ ಅಡ್ರೆಸ್ಸನ್ನು ಬೆಳ್ಳಿ ಕ್ಯಾಸ್ಕೆಟ್ಟಿನಲ್ಲಿಟ್ಟು ರಾಜಕುಮಾರರಿಗೆ ಪುಷ್ಪಮಾಲೆ ಸಹಿತ ಒಪ್ಪಿಸಿದರು. ಆ ಮೇಲೆ ನೀರನ್ನು ಆ ಟವನಿಗೆ ಒದಗಿಸುವ ವಿಷಯದಲ್ಲಿ ಕಾಮಗಾರಿ ವೊದಲಾದವುಗಳನ್ನು ಮಾಡಿಸಿ ಸಿದ್ಧಪಡಿಸಿದ ಸ್ಯಾನಿಟರಿ ಇಲಾಖೆಯ ಎಗ್ಜಿಕ್ಯುಟಿವ್ ಇಂಜನಿಯರ್ ಮ|| ಬಿ. ಆರ್. ಗರುಡಾಚಾರ್ಯರು ಮುಂದೆ ಬಂದು ಕಾಮಗಾರಿಯ ವೃತ್ತಾಂತವನ್ನು ಓದಿ ಅರಿಕೆಮಾಡಿದರು. ಅದರ ಸಾರಾಂಶವೇನೆಂದರೆ—

ಈ ಟವನ್ನಿಗೆ ಒಳ್ಳೆಯ ಕುಡಿಯುವ ನೀರನ್ನು ಒದಗಿಸುವ ವಿಚಾರವು ಹುಟ್ಟಿ 33 ವರ್ಷಗಳಾದವು. ಮೊದಲು ಮಿ|| ಲೀ ಸಾಹೇಬರು ಸೂಚಿಸಿದ ಕಾಮಗಾರಿಗೆ 68,150 ರೂಪಾಯಿನ ಅಂದಾಜಾ ಆಗಿ ಅಷ್ಟು ಹಣ ಒದಗುವುದಿಲ್ಲನೆಂದು ಬಿಟ್ಟರು. ಎರಡನೆಯ ಸಾರಿ ಮಾಡಿದ ಏರ್ಪಾಡಿಗೆ 89,543 ರೂಪಾಯಿ ಬೇಕಾಗುವುದೆಂದೂ, ಇನ್ನೊಂದು ಕಾಮಗಾರಿಗೆ 61,000 ರೂಪಾಯಿ ಬೇಕಾದೀತೆಂದೂ ಅಂದಾಜಾ ಪಟ್ಟಿಗಳು ತಯಾರಾದವು. ಇವೆರಡಕ್ಕೂ ಒಪ್ಪಿಗೆ ದೊರೆಯಲಿಲ್ಲ. 74,000 ರೂಪಾಯಿನ ಮತ್ತೊಂದು ಅಂದಾಜಾ ಪಟ್ಟಿಯೂ ಖರ್ಚು ಹೆಚ್ಚೆಂದು ಮಂಜೂರಾಗದೆ ಹೋಯಿತು. ಆದರಿಂದೀಚೆಗೆ ತಯಾರಾದ 78,490 ರೂಪಾಯಿನ ಎಸ್ಟಿಮೇಟನ್ನು ಕೂಡ ಸರ್ಕಾರದವರು ಸ್ಯಾಂಕ್ಷನ್ ಮಾಡಲು ಸಾಧ್ಯವಾಗಲಿಲ್ಲ. ಅದರ ಮೇಲೆ 1932 ನೆಯ ಜನವರಿಯಲ್ಲಿ 31,080 ರೂಪಾಯಿ ಖರ್ಚಾಗುವ ಎಸ್ಟಿಮೇಟು ತಯಾರು ಮಾಡಲಾಯಿತು. ವಿದ್ಯುಚ್ಛಕ್ತಿಯ ಸಹಾಯ ಒದಗಿಸಿಕೊಳ್ಳಬಹುದೆಂಬ ಅಭಿಪ್ರಾಯದ ಮೇಲೆ ಅದೂ ಸ್ಯಾಂಕ್ಷನ್ ಆಗಲಿಲ್ಲ. ಈಚೆಗೆ ಅಂದರೆ 1933 ನೆಯ ಜನವರಿಯಲ್ಲಿ 22,140 ರೂಪಾಯಿಗೆ ಎಸ್ಟಿಮೇಟು ತಯಾರುಮಾಡಲಾಯಿತು. ಅಷ್ಟರಲ್ಲಿ ಪರಹಿತಕಾರ್ಯಾಸಕ್ತರಾದ ಮ|| ಎಚ್. ರಾಮಯ್ಯನವರು 15,000 ರೂಪಾಯಿಗಳನ್ನು ಉಚಿತವಾಗಿ ದಾನಮಾಡಿದರು. ಈ ಧರ್ಮಾತ್ಮರ ಔದಾರ್ಯವನ್ನು ಸರಕಾರದವರು ವಂದನಾಪೂರ್ವಕ ಸ್ವೀಕರಿಸಿ ಈ ಟವರ್‌ನಲ್ಲಿ ಮನೆಗಳಿಗೂ ನಲ್ಲೀ ನೀರನ್ನು ಒದಗಿಸುವ ಕಾಮಗಾರಿಗಳನ್ನು ಮಾಡಿ ಪೂರೈಸಿರುತ್ತಾರೆ. ಇದಕ್ಕೆಲ್ಲಾ 32,000 ರೂಪಾಯಿ ಖರ್ಚಾಗಿದೆ. ಇದರಲ್ಲಿ ಸರಕಾರದವರು ದಯವಿಟ್ಟು 12,000 ರೂಪಾಯಿ ಸ್ಯಾಂಕ್ಷನ್ ಮಾಡಿ ಒದಗಿಸುತ್ತಾರೆ. ಈಗ ನಡೆದಿರುವ ಕಾಮಗಾರಿಗಳಿಂದ ಟವನ್ನಿಗೆ ಆರೋಗ್ಯಕರವಾದ ನೀರು ಸಾಕಾದಷ್ಟು ಸರಬರಾಯಿ ಆಗುವುದರಲ್ಲಿ ಅನುಮಾನವಿಲ್ಲ.

ಪ್ರತ್ಯುತ್ತರ.

ಶ್ರೀ ಜಯಚಾಮರಾಜಒಡೆಯರವರು ಅವರು ಅರಿಕೆ ಮಾಡಿದ್ದನ್ನು ಲಾಲಿಸಿ ಅವರು ಒಪ್ಪಿಸಿದ ಹಾರಾತುರಾಯಿಗಳನ್ನು ಸ್ವೀಕರಿಸಿ ಸಭೆಯಲ್ಲಿದ್ದ ಮಹಾಜನರನ್ನು ಕುರಿತು ಇಂಗ್ಲೀಷಿನಲ್ಲಿ ಧಾರಾಳವಾಗಿಯೂ, ಸ್ಫುಟವಾಗಿಯೂ ಪ್ರತ್ಯುತ್ತರವನ್ನು ದಯಪಾಲಿಸಿದರು. ಅವರು ಅಪ್ಪಣೆಕೊಡಿಸಿದ್ದೇನೆಂದರೆ:—

ಶ್ರೀರಂಗಪಟ್ಟಣದ ಪೌರಸಭಾಧ್ಯಕ್ಷರೇ, ಸಭಿಕರೇ, ಮಹಿಳೆಯರೇ, ಮಹನೀಯರೇ—ಈ ದಿನ ಪ್ರಾತಃಕಾಲ ತಾವು ಸಹೃದಯತೆಯಿಂದ ನನಗೆ ಸುಸ್ವಾಗತವನ್ನಿತ್ತುದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. ತಮ್ಮ ಊರಿಗೆ ನೀರನ್ನು ಒದಗಿಸುವ ಈ ಪ್ರಾರಂಭೋತ್ಸವವನ್ನು ನೆರವೇರಿಸುವುದಕ್ಕಾಗಿ ತಾವು ಇತ್ತ ಆಹ್ವಾನವನ್ನು ನಾನು ಅತಿಶಯ ಸಂತೋಷದಿಂದ ಅಂಗೀಕರಿಸಿರುತ್ತೇನೆ. ಸಾರ್ವಜನಿಕ ಸಮಾರಂಭಗಳಲ್ಲಿ ನಾನು ಭಾಗಿಯಾಗುವುದು ಇದೇ ಮೊದಲು. ಅದರಲ್ಲೂ ಇಂತಹ ಸುಪ್ರಸಿದ್ಧವಾದ ಊರಿನ ಜನಕ್ಕೆ ಚಿರಕಾಲ ಮಹದುಪಯೋಗವಾಗುವ ಕಾರ್ಯದಲ್ಲಿ ಭಾಗಿಯಾದುದರಿಂದ ನನ್ನ ಸಂತೋಷವು ಇಮ್ಮಡಿಯಾಗುತ್ತದೆ. ನೀವು ಕೈಕೊಂಡ ಈ ಉದ್ಯಮವು ಸಾಂಗವಾಗಿ ಫಲಕಾರಿಯಾದುದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಗ್ರಾಮ ಪಾಠಶಾಲೆಗಳು, ಪೌರನೈರ್ಮಲ್ಯ ಮತ್ತು ಆರೋಗ್ಯರಕ್ಷಣೆಯೇ ಮೊದಲಾದ ಜನಹಿತ ಕಾರ್ಯಗಳಲ್ಲಿ ತಾವು ಪ್ರವರ್ತಿಸುತ್ತೀರೆಂಬ ದೃಢನಂಬಿಕೆಯೂ ನನಗೆ ಇದೆ. ನಿಮ್ಮ ಪುರಜನರು ರೋಗಾದಿಗಳ ಉಪಟಳಕ್ಕೆ ಸಿಲುಕದಂತೆ ಪಾರುಮಾಡುವ ಪ್ರಯತ್ನವೂ, ಅವರು ಆರೋಗ್ಯದೃಢಕಾಯರಾಗಿಯೂ ಸುಸಂತೋಷಭರಿತರಾಗಿಯೂ ಇರುವಂತೆ ಮಾಡುವ ನಿಮ್ಮ ಕರ್ತವ್ಯವಾಗಿರುತ್ತದೆ. ಸರಕಾರಕ್ಕೆ ಎಷ್ಟೇ ಉದಾರವಾಗಿ ಸಹಾಯವನ್ನು ಮಾಡಬೇಕೆಂಬ ಅಭಿಲಾಷೆಯಿದ್ದರೂ ನಗರವನ್ನು ನಾನಾ ತೆರದಲ್ಲಿ ಉತ್ತಮಗೊಳಿಸುವ ಕಾರ್ಯಕ್ಕೆ ಯಥೇಷ್ಟವಾದ ಅನುಕೂಲತೆಯು ಬೇಕಾಗುವುದರಿಂದ ಆಯಾ ಪೌರಜನರ ಉದಾರ ದ್ರವ್ಯಸಹಾಯ ಮತ್ತು ಸಹಕಾರವಿಲ್ಲದೆ ಹೋದಲ್ಲಿ ಸರಕಾರವು ಅಂತಹ ಕಾರ್ಯಗಳನ್ನು ಕೈಕೊಳ್ಳಲಾರದು. ಆದರೆ ಮೈಸೂರು ಸಂಸ್ಥಾನದಲ್ಲಿ ಅಂತಹ ಸಹಾಯಕರು ಮತ್ತು ಸಹಕಾರಿಗಳು ಇಲ್ಲದೆ ಇಲ್ಲ. ನಮ್ಮ ಸಂಸ್ಥಾನದ ಐಶ್ವರ್ಯವಂತರಲ್ಲಿ ಮ|| ರಾಮಯ್ಯನವರಂಥ ಧರ್ಮಿಷ್ಠರೂ, ಪೌರಜನ ಸಹಾಯಕರೂ ಇರುವುದು ನನಗೆ ಬಹಳ ಸಂತೋಷವಾಗುತ್ತದೆ. ಇತರರೂ ಕೂಡ ಅವರ ಮೇಲ್ಪಂಕ್ತಿಯನ್ನನುಸರಿಸುವರೆಂದು ನಾನು ದೃಢವಾಗಿ ನಂಬುತ್ತೇನೆ. ಸರ್ವಜನೋಪಕಾರಬುದ್ಧಿಪ್ರದರ್ಶನಕ್ಕೂ, ಉದಾರದಾನಮಾಡುವುದಕ್ಕೂ ನಿಜವಾಗಿಯೂ ನಮ್ಮಲ್ಲಿ ಬೇಕಾದಷ್ಟು ಅವಕಾಶವುಂಟು. ತಮ್ಮ ನಿವೇದನ ಪತ್ರಿಕೆಯಲ್ಲಿ ತಾವು ಸೂಚಿಸಿರುವ ತಮ್ಮ ರಾಜಭಕ್ತಿಯನ್ನೂ, ಶ್ರದ್ಧಾನುರಾಗವನ್ನೂ ನಮ್ಮನ್ನಾಳುವ ಮಹಾಸ್ವಾಮಿಯವರ ದಿವ್ಯಸನ್ನಿಧಾನದಲ್ಲಿ ಸಂತೋಷದಿಂದ ಅರಿಕೆ ಮಾಡುವೆನು. ಈ ಸತ್ಕಾರ್ಯವು ನನ್ನ ನಾಮಧೇಯದಿಂದ ಕರೆಯಲ್ಪಡತಕ್ಕುದೆಂಬುದನ್ನು ತಿಳಿಯಲು ನಾನು ತುಂಬಾ ಸಂತೋಷಪಡುತ್ತೇನೆ. ಮತ್ತು ಇದು ನನಗೆ ವಿಶೇಷ ಗೌರವವೆಂದೇ ನಾನು ಭಾವಿಸುತ್ತೇನೆ. ಶ್ರೀರಂಗಪಟ್ಟಣವು ಊರ್ಜಿತಸ್ಥಿತಿಗೆ ಬಂದು ಮಾದರಿಯ ಪಟ್ಟಣವೆನಿಸಿಕೊಳ್ಳುವುದೆಂಬ ಭರವಸೆಯಿಂದ ಈ ಆರಂಭ ಮಹೋತ್ಸವವನ್ನು ನೆರವೇರಿಸುತ್ತೇನೆ.'

ರಾಜಕುಮಾರಕಂಠೀರವರು ಇಂಜನಿಯರವರು ಮೇಜಿನ ಬಳಿ ತೋರಿಸಿದ ಕೀಲನ್ನು ಜಯಧ್ವನಿಯಾಗುತ್ತಿರುವಲ್ಲಿ ತಿರುಗಿಸಿದರು. ಅದರಿಂದ ಟವರ್‌ಗೆಲ್ಲಾ ನಲ್ಲಿಗಳಲ್ಲಿ ನೀರು ಹರಿದದ್ದಲ್ಲದೆ ಮೇಜಿನ ಮುಂಭಾಗದಲ್ಲಿದ್ದ ಒಂದು ಸುಂದರವಾದ ಕೊಳಾಯಿಯಿಂದ ನೀರಿನ ಹನಿಗಳು ಸಹಸ್ರಾರು ಹಾರಿ ಸಭಿಕರಿಗೆ ಪರಮಾನಂದವನ್ನುಂಟುಮಾಡಿತು. ಬಳಿಕ ಯುವರಾಜಕುಮಾರರು ಮೋಟಾರಿನಲ್ಲಿ ಹೊರಟು ಸ್ವಚ್ಛವಾಗಿಯೂ ಅಲಂಕಾರಯುಕ್ತವಾಗಿಯೂ ಇದ್ದ ಟವರ್ ರಾಜಬೀದಿಗಳಲ್ಲಿ ಸಂಚಾರಮಾಡಿ ಉದ್ದಕ್ಕೂ ಪ್ರಜೆಗಳು ಕಿಕ್ಕಿರಿಯುವಂತೆ ನಿಂತು ದರ್ಶನಾನಂದವನ್ನು ಹೊಂದಿ ಜಯಧ್ವನಿ ಮಾಡುತ್ತಿದ್ದುದನ್ನು ಹರ್ಷದಿಂದ ಪರಾಮರ್ಶಿಸಿ ಅಲ್ಲಿಂದ ರಾಜಧಾನಿಗೆ ಚಿತ್ತೈಸಿದರು. ಈ ಉತ್ಸವಕ್ಕೆ ದಯಮಾಡಿದ್ದ ಅತಿಥಿಗಳಿಗೆ ದರಿಯಾ ದವಲತ್ ಬಾಗಿನಲ್ಲಿ ಕೌನ್ಸಿಲರುಗಳು ಫಲಾಹಾರಾದಿಗಳಿಂದ ಸತ್ಕರಿಸಿ ಸಂತೋಷಪಡಿಸಿ ಬೀಳ್ಕೊಟ್ಟರು.

ಚಾಮುಂಡಾಂಬಾ ಕೃಪಯಾ ಜೇಜೀಯಾಜ್ಜಗತಿ
ಕೃಷ್ಣರಾಜೇಂದ್ರಃ |
ಜಯತಾಂ ಜಯಚಾಮೇಂದ್ರಃ ಜಯತಾಂಶ್ರೀಮ
ನ್ನೃಸಿಂಹರಾಜೇಂದ್ರಃ ||

ನಿಜಾಮ ಸಂಸ್ಥಾನದಲ್ಲಿ ಸಕ್ಕರೆಯ ಕಾರಖಾನೆ.

೨೫ ಲಕ್ಷ ರೂ. ಭಾಂಡವಲು, ಸರಕಾರದ ಪ್ರಕಟನೆ.

ನಿಜಾಮ ಸರಕಾರದವರು ನಿಜಾಮ ಸಾಗರ ಹದ್ದಿಯಲ್ಲಿ ೨೫ ಲಕ್ಷ ರೂಪಾಯಿ ಭಾಂಡವಲದಿಂದ ಒಂದು ಸಕ್ಕರೆಯ ಕಾರಖಾನೆ ತೆಗೆಯಬೇಕೆಂದು ಪ್ರಕಟನೆ ತೆಗೆದು ಅದರಲ್ಲಿ ಹೀಗೆ ಉಲ್ಲೇಖಿಸಿರುವರು.

ನಿಜಾಮಸಾಗರ ಕಾಲುವೆಯ ಕ್ಷೇತ್ರದಲ್ಲಿ ಸಕ್ಕರೆ ಕಾರಖಾನೆಯನ್ನು ತೆಗೆಯುವದು ಲಾಭಕರವಾಗುವದೋ ಹೇಗೆಂಬ ಬಗ್ಗೆ ವಿಚಾರಮಾಡಿ ಸಲಹೆ ಕೊಡಲು ಶ್ರೀ ವಾಸ್ತವ ಇವರನ್ನು ನಿಯಮಿಸಿತ್ತು. ಅವರು ತಮ್ಮ ಸೂಚನೆಗಳನ್ನು ಸರಕಾರಕ್ಕೆ ಒಪ್ಪಿಸಿದ್ದು, ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು ಇತ್ತೀಚೆಗೆ ಸಭೆಸೇರಿ ಅವರ ಸೂಚನೆಗಳನ್ನು ವಿಚಾರಮಾಡಿ ಈ ರೀತಿ ಅಭಿಪ್ರಾಯಪಟ್ಟಿರುವರು.

ನಿಜಾಮಸಾಗರ ಕಾಲುವೆ ಕ್ಷೇತ್ರದಲ್ಲಿ ಸಕ್ಕರೆ ಕಾರಖಾನೆಯನ್ನು ಪ್ರಾರಂಭಿಸುವದು ಅತಿಶಯ ಅನುಕೂಲವೂ, ರೈತರ ದೃಷ್ಟಿಯಿಂದ ಹಿತಕರವೂ ಇರುವದರಿಂದ ಬೇಗನೆ ಒಂದು ಕಂಪನಿಯನ್ನು ತೆಗೆದು ಸಕ್ಕರೆ ಕಾರಖಾನೆಯನ್ನು ಪ್ರಾರಂಭಿಸುವ ಕಾರ್ಯವನ್ನು ಅದಕ್ಕೊಪ್ಪಿಸಬೇಕು. ಈ ಕಾರಖಾನೆಗೆ ಡುರ್ಕಿ ಎಂಬುದು ಯೋಗ್ಯಸ್ಥಳವಾಗಿದೆಯೆಂದು ನಮ್ಮ ಮತವಿದೆ. ಕಂಪನಿಯ ಭಾಂಡವಲು ೨೫ ಲಕ್ಷ ರೂಪಾಯಿ ಇರಬೇಕು. ಇದರಲ್ಲಿ ೧೭|| ಲಕ್ಷ ರೂಪಾಯಿಗಳು ಹೈದರಾಬಾದದಿಂದ ಬಂದ ಹಣವಿರಬೇಕು. ಈ ವಿಷಯದಲ್ಲಿ ಸ್ವಲ್ಪ ಹಣ ಹಾಕಿದವರು ಮತ್ತು ಕಬ್ಬು ಬೆಳೆಯುವವರಿಗೆ ವಿಶೇಷ ಸವಲತ್ತು ಕೊಡಬೇಕು. ಇಂಡಸ್ಟ್ರಿಯಲ್ ಟ್ರಸ್ಟ್ ಫಂಡಿನವರು ಅವಶ್ಯವೆನಿಸಿದರೆ ಕಂಪನಿಯ ಭಾಂಡವಲ ಹಣಕ್ಕೆ ೧೦೦ ಕ್ಕೆ ೪೦ ರಷ್ಟು ಹಣಕೊಡಬೇಕು. ಮ್ಯಾನೇಜಿಂಗ್ ಏಜನ್ಸಿಯ ಪದ್ಧತಿಯು ನಮಗೆ ಯೋಗ್ಯ ತೋರುವದಿಲ್ಲ. ಇದರ ಬದಲು ಓರ್ವ ಮ್ಯಾನೇಜಿಂಗ್ ಡಾಯರೆಕ್ಟರರನ್ನು ನಿಯಮಿಸಿಕೊಳ್ಳಬೇಕು. ಮತ್ತು ಅವನನ್ನು ಬೋರ್ಡಿನಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕು. ಕಂಪನಿಯವರು ತಮಗೆ ಬೇಕಾಗುವ ಕಬ್ಬುಗಳನ್ನು ಮುಖ್ಯವಾಗಿ ರೈತರಿಂದೇ ಕೊಂಡುಕೊಳ್ಳಬೇಕು. ಆದರೆ ಕಂಪನಿಯು ಕಬ್ಬಿನ ಕ್ಷೇತ್ರವಾದರೂ ಇರಬೇಕು. ಈ ಬಗ್ಗೆ ರೆವಿನ್ಯೂ ಡಿಪಾರ್ಟಮೆಂಟಿನವರು ಇಂಡಸ್ಟ್ರಿಯಲ್ ಟ್ರಸ್ಟ ಫಂಡಿನ ಪರವಾಗಿ ಕಂಪನಿಯವರಿಗೆ ಕಬ್ಬು ಬೆಳೆಯಲು ೨೪೮೦ ಎಕರೆ ಭೂಮಿಯನ್ನು ೩೦ ವರ್ಷಗಳ ಕರಾರಿನಿಂದ ಒದಗಿಸಿಕೊಡಬೇಕು. ಮತ್ತು ಅವಶ್ಯವೆನಿಸಿದರೆ ಅವಧಿಯನ್ನು ಮತ್ತೆ ೩೦ ವರ್ಷ ಬೆಳೆಸುವದನ್ನೂ ಕಂಪನಿಯವರ ಕಡೆಗೆ ಬಿಟ್ಟುಕೊಡಬೇಕು. ರೆವಿನ್ಯೂ ಡಿಪಾರ್ಟಮೆಂಟಿನವರು ಇದರ ಹೊರತು ೫ ವರ್ಷ ಕರಾರಿನಿಂದ ಬೇರೆ ೨೫೫೭ ಎಕರೆ ಭೂಮಿಯನ್ನು ದೊರಕಿಸಬೇಕು. ಕಬ್ಬು ಕಡಿಮೆ ಬೆಳೆದಲ್ಲಿ ಈ ಭೂಮಿಯ ಉಪಯೋಗವಾಗುವದು. ಇದರಂತೆ ರೈತರಿಂದ ಕಬ್ಬನ್ನು ಯಾವ ಧಾರಣೆಯ ಪ್ರಕಾರ ಕೊಂಡುಕೊಳ್ಳತಕ್ಕದ್ದೆಂಬುದನ್ನು ರೆವಿನ್ಯೂ ಡಿಪಾರ್ಟಮೆಂಟಿನವರೇ ನಿಶ್ಚಯಿಸಬೇಕು.

ಸಂಸ್ಥಾನದಲ್ಲಿ ಸಕ್ಕರೆಯ ಉದ್ಯೋಗವನ್ನು ಬೆಳೆಸಲು ಸರಕಾರದ ವಾಣಿಜ್ಯ ಮತ್ತು ಔದ್ಯೋಗಿಕ ಖಾತೆಯವರು ಮುಲ್ಕಿ ಜನರಿಗೆ ಶಿಷ್ಯವೇತನಕೊಟ್ಟು ಅವರನ್ನು ಕಾನಪುರದ ಹಾರಕೋರ್ಟ ಬಟ್ಲರ ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟಿಗೆ ಸಕ್ಕರೆಮಾಡುವ ವಿಧಾನವನ್ನು ಕಲಿತು ಬರಲು ಕಳಿಸಿಕೊಡುವ ಯೋಜನೆ ಕೈಕೊಳ್ಳಬೇಕು.

ನಿಜಾಮ ಸಂಸ್ಥಾನಕ್ಕೆ ಪ್ರತಿವರ್ಷ ೯೮ ಲಕ್ಷ ರೂಪಾಯಿಯ ಸಕ್ಕರೆ ಮತ್ತು ಬೆಲ್ಲ ಹೊರಗಿನಿಂದ ಬರುವದು.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು.

ಧಾತುಪುಷ್ಟಿಲೇಹ.

1. ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ; ಇದರ ಸೇವನೆಯಿಂದ ಮಲಬದ್ಧತೆ, ಒಳಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಕೀಳುವಿಕೆ, ರಕ್ತಹೀನತೆ, ಬೆನ್ನು ನೋವು, ತಲೆ ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ರಕ್ತವೃದ್ಧಿಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0.

2. **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು. ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0.

3. **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇಂಫ್ಲುಯಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ. ಬಾಟ್ಲಿ 1ಕ್ಕೆ 1—8—0. ಸಣ್ಣ ಬಾಟ್ಲಿಗೆ 0—13—0. 3ಕ್ಕೆ 4—0—0. ಸಣ್ಣ ಬಾಟ್ಲಿ 3ಕ್ಕೆ 2—4—0.

ಖಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕುದಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗಿಗೆ ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್,

ಔಷಧಿ ಸಿಕ್ಕುವ ಸ್ಥಳಗಳು— ಆಯುರ್ವೇದಿಕ್ ಫಿಜಿಸಿಯನ್, ರಥಬೀದಿ, ನಂಬರು 271 ಮಂಗಳೂರು.

1 **ಮೆಸ್ಸರ್ಸ್ ಪೆಟರನ್ ಬ್ರದರ್ಸ್,** 91 ಚಿಕ್ಕಪೇಟೆ ಬೆಂಗಳೂರು ಸಿಟಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦-೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦-೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟಿ	೧	೧—೦—೦
ಶಿಲಾಜಿತ ಅಗ್ನಿಪುಟಿ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಸತ್ಯ ಶಿವಾರೋಪಣವಾಡಿದಕಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಲ್ಪವೃಕ್ಷದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿಸಿಶಿ, ಒಂಟಿ ತಲೆನೋವು, ತಲೆಯುಳ್ಳಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುದ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[49] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
पंडित श्रीकाशीनाथशास्त्री यांचें भाषण (मराठी)	८ आणे.
Speeches by Pandit Shri Kashinatha Shastri (*English*)	12 As.
ವೇದೋಕ್ತಶಿವಪೂಜಾವಿಧಿ	೧೦ ಆಣೆ
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ.
लिंगधारणचंद्रिका (संस्कृत)	३ रु.
महानारायणोपनिषत् (वीरशैवभाष्य-संस्कृत)	१ रु.
वीरशैवेंदुशेखर (संस्कृत)	१ रु.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ವದೇಶದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರದೇಶದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಡಿಶಂಬರ್ ೧೯೩೪ [ಸಂಚಿಕೆ ೩೧

ಶಿವಮೊಗ್ಗಾ ದೊಂಬಿ ಮೊಕದ್ದಮೆಯ ತೀರ್ಪು.

ಈ ತಿಂಗಳು ೧೧ ನೆಯ ತಾರೀಖಿನ ದಿವಸ ೧೧-೪೫ ಘಂಟೆಗೆ ನ್ಯಾಯಾಧೀಶರು ಶಿವಮೊಗ್ಗೆಯ ದೊಂಬಿ ಮೊಕದ್ದಮೆಯ ತೀರ್ಪನ್ನು ಹೇಳಲುಪಕ್ರಮ ಮಾಡಿದರು. ೨ ಘಂಟೆಗಳ ಕಾಲ ತೀರ್ಪು ಹೇಳುವುದಕ್ಕೆ ಹಿಡಿಯಿತು. ಕೋರ್ಟಿನ ಹೊರಗಡೆ ತೀರ್ಪನ್ನು ಕೇಳಲು ಮಹಮ್ಮದೀಯರು ನೆರೆದಿದ್ದರು.

ತೀರ್ಪಿನ ಸಾರಾಂಶ.

ಅಪರಾಧಿಗಳೆಲ್ಲರೂ ಒಟ್ಟು ೨೫ ಅಪಾದನೆಗಳಿಂದ ಶಿಕ್ಷೆಯನ್ನು ಪಡೆದಿದ್ದಾರೆ. ಈ ಅಪರಾಧಿಗಳೆಲ್ಲರೂ ಹಿಂದುಗಳ ಮನೆಗಳಿಗೆ ಬೆಂಕಿ ಹತ್ತಿಸಿ, ಲೂಟಿಮಾಡಬೇಕೆಂಬುದೇ ಇವರ ಉದ್ದೇಶವಾಗಿತ್ತು.

ಅಪರಾಧಿಗಳೆಲ್ಲರೂ ಇತರ ಅಪಾದನೆಗಳೊಂದಿಗೆ ಐ. ಪಿ. ಸಿ. ೧೪೯ ನೇ ಸೆಕ್ಷನ್ ಪ್ರಕಾರವಾಗಿಯೂ ಅಪಾದನೆಗೆ ಗುರಿಯಾಗಿದ್ದಾರೆ. ಗಲಭೆಯಾದುದಕ್ಕೆ ಸಾಕಾದಷ್ಟು ಕಾರಣಗಳಿವೆ. ಅನೇಕ ಮಹಮ್ಮದೀಯರು ಭಾಗ ವಹಿಸಿದ್ದಾರೆಂದು ಹೇಳಿದೆ.

ಸೆಷನ್ಸ್ ಕೋರ್ಟಿನಲ್ಲಿ ೪ ತಿಂಗಳ ದೀರ್ಘಕಾಲ ಇದರ ವಿಚಾರಣೆಯಾಗಿದೆ. ಇಷ್ಟು ದೀರ್ಘಕಾಲದವರೆಗೆ ವಿಚಾರಣೆಯಾಗಬಾರದಾಗಿತ್ತು. ಸಾಕ್ಷಿಗಳನ್ನು ವಿವರವಾಗಿ ವಿಚಾರಿಸಿಲ್ಲ.

೧೦ ನೇ ಅಪರಾಧಿಯ ವಿಷಯವಾಗಿ ೨೩ ನೇ ಸಾಕ್ಷಿಯು ತನ್ನನ್ನು ಅಪರಾಧಿಯು ಅಟ್ಟಿಸಿಕೊಂಡು ಬಂದನೆಂದು ಹೇಳಿದ್ದಾನೆ. ೩೭ ನೇ ಸಾಕ್ಷಿಯೂ ಹೀಗೆಯೇ ಹೇಳಿದ್ದಾನೆ. ಆದರೆ ೧೭ ರಲ್ಲಿ ಈ ವಿಷಯವನ್ನು ಯಾರೂ ವಾದ ಮಾಡಿಲ್ಲ. ಆ ದಿವಸ ಈತನು ಐನೂರಿನಲ್ಲಿದ್ದನೆಂದು ತಿಳಿದುಬಂದಿದೆ. ೭-೮ ನೇ ಸಾಕ್ಷಿಗಳು ಹೀಗೆ ಹೇಳಿದ್ದಾರೆ. ಆದ್ದರಿಂದ ೧೦ ನೇ ಅಪರಾಧಿಯನ್ನು ಬಿಡುಗಡೆ ಮಾಡಿದ್ದಾಗಿದೆ.

ಕೆಳ ಕೋರ್ಟಿನ ಜಡ್ಜರು, ಜೂರಿಗಳಿಗೆ ಕೇಸಿನ ವಿದ್ಯಮಾನವನ್ನು ಸರಿಯಾಗಿ ತಿಳಿಸಿಲ್ಲ. ಪ್ರತಿಯೊಬ್ಬರ ಮೇಲೂ ೧೪೯ ನೇ ಐ. ಪಿ. ಸಿ. ಸೆಕ್ಷನ್ನನ್ನು ಉಪಯೋಗಿಸಿದ್ದಾರೆ. ಇದು ಉಪಯೋಗಿಸಲು ಬಹಳ ಕಷ್ಟವಾಗಿ ತೋರಿದೆ. ಇಲ್ಲಿ ಬೊಂಬಾಯಿ ಮದರಾಸು, ಅಲಹಾಬಾದ್ ಹೈಕೋರ್ಟಿನ ಕೆಲವು ತೀರ್ಮಾನಗಳನ್ನು ಹೇಳಿದರು. ಇದರಿಂದ ನಿರಪರಾಧಿಗಳಾದ ದೊಡ್ಡ ಮನುಷ್ಯರುಗಳೂ ಸಹ ಭಾಗಿಯಾಗುವ ಸಂಭವವಿರುತ್ತದೆ. ಆದ್ದರಿಂದ ಇದನ್ನು ಜಡ್ಜರು ಉಪಯೋಗಿಸುವಾಗ ಯೋಚನೆ ಮಾಡಬೇಕಾಗಿತ್ತು. ಆದ್ದರಿಂದ ೧೪೯ ನೇ ಸೆಕ್ಷನ್ನಿನ ಪ್ರಕಾರ ಯಾರು ಶಿಕ್ಷಿಸಲ್ಪಟ್ಟಿದ್ದಾರೋ ಅವರನ್ನೆಲ್ಲಾ ಖುಲಾಸೆ ಮಾಡಿದ್ದಾಗಿದೆ.

ಕೆಲವು ವಿಚಾರಗಳಲ್ಲಿ ಅಪರಾಧಿಗಳ ಕಡೆ ಸಾಕಾದಷ್ಟು ಆಧಾರವಿಲ್ಲದಿದ್ದರೂ ಜೂರಿಗಳಿಗೆ ತಪ್ಪು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದರಿಂದ ಕೆಲವು ಅಪರಾಧಿಗಳಿಗೆ ಸರಿಯಾದ ನ್ಯಾಯವು ಸಿಕ್ಕಿಲ್ಲ.

ಐದು ಜನ ಜೂರಿಗಳಲ್ಲಿ ಮೂರು ಜನರು ಅಪರಾಧಿಗಳು ತಪ್ಪಿತಸ್ಥರಲ್ಲವೆಂದು ಹೇಳಿದ್ದಾರೆ. ಮತ್ತಿಬ್ಬರು ತಪ್ಪಿತಸ್ಥರೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗಿದ್ದೂ ಸಹ ನ್ಯಾಯಾಧೀಶರು ತಪ್ಪಿತಸ್ಥರೇ ಎಂದು ತೀರ್ಮಾನಿಸಿದ್ದಾರೆ.

ನ್ಯಾಯಾಧೀಶರ ತೀರ್ಪಿನಲ್ಲೂ ಸಹ ಅಕ್ರಮಗಳಿವೆ. ಅಪಾದನೆಗಳನ್ನು ಸರಿಯಾಗಿ ವಿಚಾರಿಸಿಲ್ಲ.

೧೭ ನೆಯ ಅಪಾದನೆಯ ಮೇಲೆ ಶಿಕ್ಷಿಸಲ್ಪಟ್ಟವರ ಕಡೆ ತಪ್ಪಿತಸ್ಥರೆಂದು ಸಾಕಾದಷ್ಟು ಕಾರಣಗಳಿಲ್ಲ. ಅವರನ್ನು ಅಪಾದನೆಯಿಂದ ವಜಾಮಾಡಿದ್ದೇವೆ.

ಸೆಷನ್ಸ್ ಜಡ್ಜರು ಜೂರಿಗಳಿಗೆ ಅಪರಾಧಿಗಳ ಸಾಕ್ಷಿ ಹೇಳಿಲ್ಲ. ಪ್ರಾಸಿಕ್ಯೂಷನ್ನಿನ ಲೋಪ ದೋಷಗಳನ್ನು ಹೊರಪಡಿಸಿಲ್ಲ. ಯಾವ ತರಹದ ಅಪಾದನೆ ಎಂಬುದನ್ನು ಜೂರಿಗಳಿಗೆ ವಿಶದಪಡಿಸಿಲ್ಲ.

೧೮ ನೇ ಅಪಾದನೆಯಲ್ಲಿ ಸಾಕ್ಷಿಗಳ ಹೇಳಿಕೆಯಲ್ಲಿ ಅನೇಕ ಅನ್ಯಾಯಗಳಿವೆ. ಅದನ್ನು ಮೂಲೆಗೊತ್ತರಿಸಿದ್ದಾಗಿದೆ. ೧೭ ನೇ ಅಪಾದನೆಯಲ್ಲಿ ೧೭ನೇ ಅಪರಾಧಿಯನ್ನು ೧೫ ನೇ ಅಪಾದನೆಯಲ್ಲಿ ೧೭ ನೇ ಅಪರಾಧಿಯನ್ನು ೩ ನೇ ಅಪಾದನೆಯಲ್ಲಿ ೭, ೧೦ ಅಪರಾಧಿಗಳನ್ನು ೧ ನೇ ಅಪಾದನೆಯಲ್ಲಿ ೩, ೧೦, ೧೨, ೧೪, ೧೯, ೨೨, ೨೪, ೨೫, ೩೨, ೩೭, ನೇ ಅಪರಾಧಿಗಳನ್ನು ೧೯ ನೇ ಅಪಾದನೆಯಲ್ಲಿ ೩೫ ನೆಯ ಅಪರಾಧಿಯನ್ನು, ೨೧ ನೆಯ ಅಪಾದನೆಯಲ್ಲಿ ೨, ೧೪, ೭ ಅಪರಾಧಿಗಳನ್ನು ಖುಲಾಸೆ ಮಾಡಿದೆ.

ಬೆಂಕಿ ಹತ್ತಿಸಿದರೆಂಬ ಅಪಾದನೆಯ ಮೇಲೆ ಕೆಲವರಿಗೆ ೧೦ ವರ್ಷ ಕಠಿಣಶಿಕ್ಷೆಯನ್ನು ವಿಧಿಸಿದ್ದಾರೆ. ಇದು ಎಂಥ ಅಕಾರ್ಯ? ಎಷ್ಟು ಅನಾಹುತ ಸಂಭವಿಸಬಹುದೆಂಬುದನ್ನು ಇವರು ಗಮನಿಸಲಿಲ್ಲ. ಆದರೆ ಅಂಥ ಅನಾಹುತವೇನೂ ಸಂಭವಿಸಲಿಲ್ಲ. ಆದ್ದರಿಂದ ಇವರಿಗೆ ೧೦ ವರ್ಷದಿಂದ ೫ ವರ್ಷಗಳಿಗೆ ಶಿಕ್ಷೆಯನ್ನು ಕಡಿಮೆಮಾಡಿದೆ.

ಮನೆ ಒಡೆದರೆಂಬ ಅಪಾದನೆಯ ಮೇಲೆ ಕೆಲವರಿಗೆ ೨ ವರುಷ ಕಠಿಣ ಶಿಕ್ಷೆ ವಿಧಿಸಿದ್ದಾರೆ. ಇದು ಅತ್ಯಲ್ಪವಾದ ಶಿಕ್ಷೆ. ಕಡಿಮೆಮಾಡಲಾಗುವುದಿಲ್ಲ.

ಯಾರು ಈ ಎರಡು ಶಿಕ್ಷೆಗಳನ್ನು ಹೊಂದಿರುತ್ತಾರೋ ಅವರು ಒಂದೇ ಕಾಲದಲ್ಲಿ ಈ ಶಿಕ್ಷೆಗಳನ್ನು ಅನುಭವಿಸತಕ್ಕದ್ದು.

ಬೆಂಗಳೂರು ವೆಸ್ಲಿಯನ್ ಮಿಷನ್ ಹೈಸ್ಕೂಲಿನ ಶತಮಾನೋತ್ಸವವು ಈ ತಿಂಗಳು ೨೨ ನೆಯ ತಾರೀಖಿನ ದಿವಸ ನೆರವೇರಿಸಲ್ಪಡುವುದು. ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರವರು ಅಧ್ಯಕ್ಷರಾಗಿರಲು ಒಪ್ಪಿರುತ್ತಾರೆ.

ಸಿಡುಬುರೋಗ.

ಸಿಡುಬುರೋಗವು ಬೆಂಗಳೂರಿನಲ್ಲಿ ಹರಡುತ್ತಲಿದೆ. ಆದ್ದರಿಂದ ದೇವಿ ಹಾಕದೆ ಇರತಕ್ಕ ಮಕ್ಕಳಿಗೆ ಕೂಡಲೆ ದೇವಿ ಹಾಕಿಸುವುದು ಅತ್ಯವಶ್ಯಕವಾಗಿದೆ.

ಪ್ರತಿ ವರ್ಷವೂ ಅನೇಕ ಮಕ್ಕಳು ಅನ್ಯಾಯವಾಗಿ ಸಿಡುಬು ರೋಗಕ್ಕೆ ಆಹುತಿಯಾಗುತ್ತಿರುವರು. ದೇವಿ ಹಾಕಿಸುವುದರಿಂದ ಇದನ್ನು ತಪ್ಪಿಸಬಹುದು.

ಸಿಡುಬು ರೋಗವು ಮಕ್ಕಳ ಮಟ್ಟಿಗೆ ಬರತಕ್ಕ ರೋಗವೆಂದು ಭಾವಿಸಬಾರದು. ದೊಡ್ಡವರಿಗೆ ತಗಲಿದರೆ ಉಪದ್ರವ ಹೆಚ್ಚು. ಆದ್ದರಿಂದ ದೊಡ್ಡವರು ಸಹ ದೇವಿ ಹಾಕಿಸಿಕೊಳ್ಳುವುದು ಬಹಳ ಒಳ್ಳೆಯದು.

ದೇವಿ ಹಾಕಿಸಿಕೊಳ್ಳುವುದೆ ಸಿಡುಬಿನ ಹಾವಳಿಯನ್ನಡಗಿಸುವುದಕ್ಕೆ ಅತ್ಯುತ್ತಮವಿಧಾನವೆಂಬುದು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಈಗ್ಗೆ ನೂರು ವರ್ಷಗಳ ಅನುಭವದಿಂದ ಕಂಡುಬಂದಿದೆ.

ದೇವೀ ಹಾಕಿಸಿಕೊಳ್ಳದೇ ಉಪೇಕ್ಷೆಮಾಡಿದಂಥವರಿಗೆ ಸಿಡುಬು ಏಳುವ ಸಂಭವವುಂಟು ಮತ್ತು ಇವರು ಯಾವಾಗೆದರೆ ಆಗ ಸಿಡುಬಿಗೆ ತುತ್ತಾಗಬಹುದು.

ಆರು ತಿಂಗಳು ತುಂಬುವುದಕ್ಕೆ ಮುಂಚೆಯೇ ಮಕ್ಕಳಿಗೆ ದೇವಿ ಹಾಕಿಸಿ ತರುವಾಯ ನಾಲ್ಕು ವರ್ಷಗಳಿಗೊಂದಾವರ್ತಿ ಪುನಃ ದೇವಿ ಹಾಕಿಸಬೇಕು.

ಸಿಡುಬು ರೋಗದಿಂದ ನರಳುತ್ತಿರುವವರ ಸಂಪರ್ಕದಿಂದಲೂ ಅವರ ಬಟ್ಟೆಗಳನ್ನು ಮುಟ್ಟುವುದರಿಂದಲೂ ಮತ್ತು ಗಾಳಿ ಮೂಲಕವೂ ಈ ರೋಗದ ಸೋಂಕು ಹರಡಲಾಸ್ಪದವಾಗುತ್ತದೆ. ಸಿಡುಬು ಎದ್ದವರ ಮೈಯಲ್ಲಿ ಹೊಕ್ಕು ಪೂರ್ತಿಯಾಗಿ ಬಿದ್ದುಹೋಗುವವರಿಗೂ ಅವರನ್ನು ಕಂಡಕಡೆ ಸೇರಿಸಬಾರದು ಅಲ್ಲದೆ ರೋಗಿಯ ಬಟ್ಟೆಯನ್ನು ಚೆನ್ನಾಗಿ ದ್ರಾವಕದಿಂದ (Disinfectant) ಶುದ್ಧಿಮಾಡುವುದು ಕೇವಲ ಅವಶ್ಯಕ. ಇದರಂತೆ ಆಚರಿಸಬೇಕಾಗಿ ಕೋರಲ್ಪಟ್ಟಿದೆ.

ಟಿ. ಚಂದ್ರಶೇಖರಯ್ಯ,
ಹೆಲ್ತ್ ಆಫೀಸರ್.

ಸೌಂದರ್ಯದ ಹೆಮ್ಮೆಯಿಂದ ಮರಣ!

ಜರ್ಮನಿಗೆ ಸೇರಿದ ಜುಗೋಸ್ಲೋವೋಕಿಯ ಎಂಬ ಪಟ್ಟಣದಲ್ಲಿದ್ದ ವಿಂಜಲಿಜ್ ಎಂಬ ಹುಡುಗಿಯನ್ನು ಆ ಗ್ರಾಮದವರೆಲ್ಲರೂ ಪ್ರಪಂಚದಲ್ಲೆಲ್ಲಾ ರೂಪವತಿಯೆಂದು ಹೇಳುತ್ತಿದ್ದರು. ಬೇರೆಗ್ರಾಮದಿಂದ ಬಂದ ಕೆಲವರು ಇವಳ ಹೆಮ್ಮೆಯನ್ನು ತಗ್ಗಿಸುವುದಕ್ಕೆಂದು ತಾವು ಇವಳಿಗಿಂತ ಸಹಸ್ರಪಾಲು ಅಧಿಕಸುಂದರಿಯರನ್ನು ನೋಡಿರುವೆವೆಂದು ಹೇಳಿದರು. ಮಾರನೆಯ ಬೆಳಗ್ಗೆ ಹುಡುಗಿಯು ತನಗಿಂತಲೂ ಸುಂದರಿಯರಿರುವೀ ಪ್ರಪಂಚದಲ್ಲಿ ತಾನಿರುವುದಿಲ್ಲವೆಂದು ಬರೆದಿಟ್ಟು ನೇಣು ಹಾಕಿಕೊಂಡು ಸತ್ತಿದ್ದಳಂತೆ!

ಪತ್ರವ್ಯವಹಾರ.

ಚಾಕ್ರೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯ ವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಲಾಲಾಲಜಪತರಾಯ್.

ಲೇಖಕ—ಆರ್. ಎಸ್. ಆರಂಭ್ಯ, ಕೊರಟಗೆರೆ.

ನಮ್ಮ ಭಾರತದೇಶದಲ್ಲಿ ಹುಟ್ಟಿದ ಮಹಾಪುರುಷ ರಲ್ಲಿ ಲಾಲಾಲಜಪತರಾಯರೊಬ್ಬರು. ಇವರು ಬಹು ದಯಾಳುಗಳೂ, ಯೋಚನಾಪರರೂ ಆಗಿದ್ದರು. ಇವರು ಯಾವ ಕಾರ್ಯವನ್ನು ಮಾಡಬೇಕಾದರೂ ಫಲಾಫಲಗ ಗಳನ್ನೂ, ಕಷ್ಟಸುಖಗಳನ್ನೂ ದೂರದೃಷ್ಟಿಯಿಂದ ಪರಿ ಶೀಲಿಸಿ ಮಾಡತಕ್ಕವರು. ಈ ಗುಣಗಳೆಲ್ಲವನ್ನೂ ಇವರ ತಾಯಿಯವರು ಬೋಧಿಸಿ, ಭಾರತಭೂ ಮಿಯ ಜನಗಳಲ್ಲಿ ಲಜಪತರಾಯರ ಹೆಸರನ್ನು ಸ್ಥಿರ ವಾಗಿ ನೆಲಸಿರುವಂತೆ ಮಾಡಿದರು. ಲಾಲಾಲಜಪತ ರಾಯರು ೧೮೬೫ ರಲ್ಲಿ ಜನಿಸಿದರು.

ಸುಮಾರು ೨೦ ವರ್ಷದವರೆಗೂ ಇವರು ವಿದ್ಯಾ ರ್ಜನೆಯಲ್ಲಿಯೇ ಕಾಲಕಳೆದು, ಅನಂತರ ಸಾಮಾನ್ಯ ತರುಣರಂತೆ ನ್ಯಾಯವಾದಿಗಳಾಗಿ ತಮ್ಮ ಜೀವನವ ನ್ನಾರಂಭಿಸಿದರು. ಇವರು ಆರ್ಯಸಮಾಜದಲ್ಲಿ ಬೆಳೆದವ ರಾದುದರಿಂದ ನಮ್ಮ ಹಿಂದೂ ಧರ್ಮದಲ್ಲಿಯೂ, ಸ್ವರಾಜ್ಯಸೇವೆಯಲ್ಲಿಯೂ ನಿರತರಾಗಲು ಮನಸ್ಸು ಮಾಡಿದರು. ಆಗ ಇನ್ನೂ ಹೊಸದಾಗಿ ದೇಶದ ಲ್ಲೆಲ್ಲಾ ಸ್ವಾತಂತ್ರ್ಯದ ಕಳೆಯನ್ನು ಹಾಕುವ ಅಂಶವು ಗೋಚರಿಸುತ್ತಿದ್ದಿತು. ಭಾರತದೇಶದಲ್ಲಿ ನಡೆಯುತ್ತಿದ್ದ ಅನ್ಯಾಯ ಮತ್ತು ದಬ್ಬಾಳಿಕೆಗಳನ್ನು ಪಾಶ್ಚಿಮಾತ್ಯದೇಶಗಳಲ್ಲಿರುವ ಜನಗಳಿಗೆ ತಿಳುಹಿಸುವುದು ಅವಶ್ಯಕವೆಂದು ಆಗಿನ ಮುಖಂಡರಿಗೆ ತೋರಿಬಂದಿತು. ಇಂತಹ ದೊಡ್ಡ ಕಾರ್ಯವನ್ನು ಸಫಲಗೊಳಿಸಬೇಕಾ ದರೆ ಯಾರಿಂದ ಸಾಧ್ಯವೆಂಬ ಪ್ರಶ್ನೆ ಹುಟ್ಟಿತು. ಪ್ರಜಾಹಿತದೀಕ್ಷಾಬದ್ಧರಾದ ಲಾಲಾಲಜಪತರಾಯ ರನ್ನೂ, ಗೋಖಲೆಯವರನ್ನೂ ಪಾಶ್ಚಿಮಾತ್ಯದೇಶಗ ಳಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು. ಅದ ರಂತೆಯೇ ಲಜಪತರಾಯರು ಈ ಮಹತ್ಕಾರ್ಯವನ್ನು ಸಾಧಿಸಲು ಸಿದ್ಧರಾದರು. ೧೮೯೯ ರಲ್ಲಿ ಬಂದ ಕ್ಷಾಮದಲ್ಲಿಯೂ, ೧೯೦೫ ರಲ್ಲಿ ನಡೆದ ಭೂಕಂಪ ದಲ್ಲಿಯೂ ಜನಗಳಿಗೆ ಮಾಡಿದ ಅಸಾಧಾರಣ ಸಹಾ ಯವೇ ಇವರನ್ನು ಇಂಗ್ಲೆಂಡಿಗೆ ಹೊರಡಿಸಿತು. ತಮ್ಮ ಪ್ರಯಾಣದಲ್ಲಿ ಯೂರೋಪಿನ ಮತ್ತು ಅಮೇರಿಕಾ ಖಂಡದ ಪ್ರತಿಯೊಂದು ದೇಶದ ವಿವಿಧವಿದ್ಯಾಶಾಲೆಗ ಳನ್ನೂ, ಅಲ್ಲಿಯ ವಿದ್ಯಾಭ್ಯಾಸಕ್ರಮವನ್ನೂ ಪರಿಶೀಲಿ ಸಿಕೊಂಡು ಬಂದು, ಇಂಗ್ಲೆಂಡಿನಲ್ಲಿ ತಮ್ಮ ಕಾರ್ಯಕ್ಕೆ ಕೈಹಾಕಿದರು. ಈ ಉಭಯರು ಭಾರತದೇಶದ ಹೀನ ಸ್ಥಿತಿಯನ್ನೂ ಮತ್ತು ಭಾರತೀಯರು ಪಡುತ್ತಿರುವ ಕಷ್ಟವನ್ನೂ ತಮ್ಮ ಘನವಾದ ಭಾಷಣಗಳಿಂದ ತಿಳುಹಿಸಿ ಪಾಶ್ಚಿಮಾತ್ಯರನ್ನು ಬೆರಗುಮಾಡಿದರು. ಇವರ ವ್ಯಾಖ್ಯಾನವನ್ನು ಕೇಳಿ, ಪಾಶ್ಚಿಮಾತ್ಯರಿಗೆ ಭಾರತದೇ ಶದ ಸರಿಯಾದ ಸ್ಥಿತಿಯು ತಿಳಿದಂತಾಯಿತು.

ಲಜಪತರಾಯರು ಸಮುದ್ರಯಾನವನ್ನು ತೀರಿಸಿ ಕೊಂಡು ಮರಳಿ ಭಾರತದೇಶಕ್ಕೆ ಬಂದ ಮೇಲೆ ಸ್ವರಾಜ್ಯ ಚಳವಳಿಯು ಪ್ರಬಲವಾಗಹತ್ತಿತು. ಆ ಸಮಯದಲ್ಲಿ ಲಜಪತರಾಯರ ಕೀರ್ತಿಯು ದಿನದಿನಕ್ಕೆ ಬೆಳೆಯುತ್ತ ಬಂದಿತು. ಪಂಜಾಬ್‌ದೇಶದಲ್ಲಿ ಇವರು ಮಾಡುತ್ತಿದ್ದ ರಾಜಕೀಯ ಚಳವಳಿಯನ್ನೂ, ಕಾಶಿ ಯಲ್ಲಿ ಮಾಡಿದ ಭಾಷಣವನ್ನೂ ನೋಡಿ, ಭಾರತಭೂ ಮಿಯನ್ನು ಬಿಟ್ಟು ಹೋಗಬೇಕೆಂದು ಸರಕಾರದವರು ಅಪ್ಪಣೆಮಾಡಿದರು. ಅದರಂತೆ ಲಜಪತರಾಯರು ಅಮೇ ರಿಕಾದೇಶಕ್ಕೆ ಹೋದರು. ಆದರೂ ಜನ್ಮಭೂಮಿಯ ಮೇಲಿನ ವಾತ್ಸಲ್ಯವು ಕೊಂಚಮಾತ್ರವೂ ಕಡಿಮೆ ಯಾಗಲಿಲ್ಲ. ಅಮೇರಿಕಾದೇಶೀಯರಿಗೆ ಭಾರತದೇಶದ ವಿಚಾರವನ್ನು ತಿಳುಹಿಸಲೋಸುಗ 'ಎಂಗ್ ಇಂಡಿಯಾ' ಎಂಬ ವೃತ್ತಪತ್ರಿಕೆಯನ್ನು ಪ್ರಕಟಿಸತೊಡಗಿದರು. ಅಲ್ಲದೆ 'ಇಂಡಿಯನ್ ಬ್ಯೂರೊ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ ಭಾರತದೇಶದ ಸೇವೆ ಯನ್ನು ಮಾಡತೊಡಗಿದರು.

ಲಜಪತರಾಯರು ಅಮೇರಿಕಾ ದೇಶದಿಂದ ಹಿಂತಿ ರುಗಿ ಬಂದಮೇಲೆ ಸ್ವರಾಜ್ಯ ಚಳವಳಿಯು ಬಹುಮ ಟ್ಟಿಗೆ ಹೆಚ್ಚಿದ್ದಿತು. ಗಾಂಧಿಯವರು ಮಾಡುತ್ತಿದ್ದ ಅಸಹಕಾರ ಚಳವಳಿಯನ್ನು ಲಜಪತರಾಯರು ಒಪ್ಪ ಲಿಲ್ಲ. ಆದರೂ ಅದಕ್ಕೆ ಜನರು ಕೊಡುತ್ತಿದ್ದ ಮನ್ನಣೆ ಯಿಂದ ಲಜಪತರಾಯರು ವಿರೋಧಾಭಿಪ್ರಾಯವನ್ನು ಬಿಟ್ಟು ಅಸಹಕಾರ ಚಳವಳಿಗೆ ಸೇರಿ ಅಭಿವೃದ್ಧಿಗೊಳಿ ಸತೊಡಗಿದರು. ಇವರು ಸೇರಿದ ಕೊಂಚ ದಿವಸಗಳ ಲ್ಲಿಯೇ ಚಳವಳಿಯು ಬಲಿಷ್ಠವಾಗಹತ್ತಿತು. ಆಗ ಸರ್ಕಾ ರದವರು ಲಜಪತರಾಯರನ್ನು ಸೆರೆಯಲ್ಲಿರಿಸಿದರು. ಆದರೆ ಕೊಂಚ ದಿವಸಗಳಲ್ಲಿಯೇ ಇವರ ಶರೀರಸ್ಥಿತಿ ಯು ಕೆಡಲು ಸೆರೆಯಿಂದ ಬಿಡುಗಡೆ ಮಾಡಿದರು. ಸೆರೆಮನೆಯಿಂದ ಬಿಡುಗಡೆ ಹೊಂದುವಷ್ಟರಲ್ಲಿ ದೇಶದಲ್ಲಿ ಅಸಹಕಾರ ಚಳುವಳಿಯು ಬಹುಮಟ್ಟಿಗೆ ಕುಂದಿಹೋ ಗಿದ್ದಿತು. ಆಗ ಲಜಪತರಾಯರು ಮೋತಿಲಾಲ್‌ನೆಹರು, ಸಿ. ಆರ್. ದಾಸ್ ಮುಂತಾದವರೊಡನೆ ಸೇರಿಕೊಂ ಡು ಸ್ವರಾಜ್ಯ ಚಳವಳಿಗೆ ಮೊದಲು ಮಾಡಿದರು. ಅಸಹಕಾರ ಚಳವಳಿಯಲ್ಲಿ ಜನಗಳಿಗೆ ಹೆಚ್ಚು ನಂಬಿಕೆ ಬಾರದಿರಲು ಸ್ವರಾಜ್ಯ ಪಕ್ಷವೊಂದನ್ನು ಸ್ಥಾಪಿಸಿ ಶಾಸನಸಭೆಗೆ ಹೋಗಲು ತಕ್ಕ ಏರ್ಪಾಡುಗಳನ್ನು ಮಾಡಿ ಮುಖಂಡರುಗಳ ಇಚ್ಛೆಯಂತೆ ತಾವು ಚುನಾವಣೆಗೆ ನಿಂತರು. ಚುನಾವಣೆಯಲ್ಲಿ ಜಯಶೀಲರಾದ ನೇಲೆ ಶಾಸನಸಭೆಗಳಲ್ಲಿ ಮಾಡಿದ ಭಾಷಣಗಳು ಇವರ ಅಸಾ ಧಾರಣಶಕ್ತಿಯನ್ನು ತೋರಿಸುತ್ತವೆ.

ಲಾಲಾಲಜಪತರಾಯರ ಪರಾಕ್ರಮ, ದೇಶಭಕ್ತಿ, ಮತ್ತು ದಯಾಳುತನವನ್ನು ಎಷ್ಟು ವರ್ಣಿಸಿದರೂ ಸಾಲದು. ಇವರು ಮಾಡಿರುವ ಕಾರ್ಯಗಳು ಇವರ ಹೆಸರನ್ನು ಶಾಶ್ವತವಾಗಿ ನೆಲಸಿರುವಂತೆ ಮಾಡಿವೆ. ೧೮೯೯ ರಲ್ಲಿ ಬಂದಿದ್ದ ಕ್ಷಾಮದಲ್ಲಿ ಮಾಡಿದ ವಿಶೇಷ ಸಹಾಯವೂ, ೧೯೦೫ ರಲ್ಲಿ ಭೂಕಂಪದಿಂದ ಜನಗ ಳಿಗೆ ಉಂಟಾದ ಕಷ್ಟಗಳನ್ನು ನಿವಾರಿಸಲೋಸುಗ ಮಾಡಿದ ಸಹಾಯವೂ ಮತ್ತು ಶಾಸನ ಸಭೆಗೆ ಆರಿಸಿ ಬಂದಮೇಲೆ "ಭಾರತ ಸೇವಾಸಂಘ"ಕ್ಕೆ ಸುಮಾರು ೩ ಲಕ್ಷ ರೂಪಾಯಿಗಳನ್ನು ಶೇಖರಿಸಿದುದೂ, ಹಿಂದೂ ಮತೀಯರಿಗಿದ್ದ ಕಷ್ಟನಿವಾರಣೆ ಮತ್ತು ಅವರ ಏಕಮ ತ್ಯಕ್ಕೋಸ್ಕರ ಹಿಂದೂ ಸಭೆಯನ್ನು ಮಾಡಿದುದೂ, ಮಿಸ್‌ಮೇಯೋ ಬರೆದ 'ಮದರ್ ಇಂಡಿಯಾ' ಎಂಬ ಪುಸ್ತಕಕ್ಕೆ ಉತ್ತರವಾಗಿ 'ಅನ್ ಹ್ಯಾಪಿ ಇಂಡಿಯಾ' (unhappy India) ಎಂಬ ಪುಸ್ತಕ ವನ್ನು ಬರೆದದ್ದೂ ಇವರ ದೇಶವಾತ್ಸಲ್ಯವನ್ನು ತೋರಿ ಸುತ್ತವೆ.

ವೀರಶೈವಮತದ ವೈದಿಕಾಚರಣೆ.

ಬರೆದವ—ದೈವಜ್ಞ ವಿನೋದ.

ಇದೀಗ ವೀರಶೈವ ಪ್ರಪಂಚಕ್ಕಿರುವ ಮುಖ್ಯ ಕೊರ ತೆಯೆಂದರೆ—'ವೈದಿಕ ವಿದ್ಯೆ.' ವೇದಾಗಮಗಳಿಂದ ಪ್ರಶಂಸನೀಯವಾದ ನಮ್ಮ ವೀರಶೈವ ಮತವು ಶಿವಾ ಗಮೋಕ್ತ ವಿಶಿಷ್ಟಾಚರಣೆಗಳನ್ನು ಪಾಲಿಸಲು ಬದ್ಧ ವಾಗಿರುವದಷ್ಟೆ! ಧಾರ್ಮಿಕಾಚರಣೆಗಳನ್ನು ಪಾಲಿಸದ ವನು ಮಾನವಕೋಟಿಯಲ್ಲಿಯೂ ಸಹ ಸೇರನು; ಅಂದ ಬಳಿಕ 'ವೀರಶೈವ' ನೆಂದು ಹೇಗೆ ಹೇಳಿಸಿಕೊಳ್ಳು ವನು? ಅಖಿಲವೀರಶೈವ ಪ್ರಪಂಚಕ್ಕೆ ವೈದಿಕಾಚಾರ ಮಾರ್ಗವು ಒಂದೇ ಆಗಿರುವದಲ್ಲದೆ ಭಿನ್ನಭಿನ್ನವಾಗಿ ರುವದಿಲ್ಲ. ಪ್ರಸ್ತುತಕಾಲದಲ್ಲಿ ಮಾತ್ರ ದೇಶದೇಶ ಭೇದಾಚರಣೆಗಳಲ್ಲ; ಮನೆಮನೆಗೂ ವ್ಯಕ್ತಿವ್ಯಕ್ತಿಗೂ ಭಿನ್ನಭಿನ್ನಾಚರಣೆಗಳು ಬಳಕೆಯಲ್ಲಿರುವದನ್ನು ಎಷ್ಟು ಬರೆದರೂ ತೀರದು. ಅಸ್ತು. ಈ ಭಿನ್ನ ಭಿನ್ನಾಚರಣೆಗಳು ಸಂಪೂರ್ಣವಾಗಿ ಅಡಗಿ ಏಕತ್ರಾಚರಣೆಯು ನೆಲೆಗೊ ಳ್ಳುವ ಉಪಾಯವನ್ನು ಕಂಡುಹಿಡಿಯುವದೇ ವೀರಶೈವ ಮತ ಸಿದ್ಧಾಂತ ತತ್ವಜ್ಞರ ಮೊದಲನೆಯ ಕೆಲಸವಾಗಿದೆ. ಈಗ ಸಿದ್ಧಾಂತಿಗಳೊಂದು ವಿಧವಾಗಿ ಶಿವಾರ್ಚನೆಮಾಡಿ ದರೆ ಅವರ ಮಗನೊಂದು ವಿಧವಾಗಿ ಮಾಡುವನು; ಹೀಗಾಗದೆ ವೀರಶೈವಮತದ ಸಮಸ್ತ ವೈದಿಕಾಚರಣೆ ಗಳು ಒಂದೇ ವಿಧವಾಗಿ ಸಾಗುವಂತೆ ಪ್ರಾಜ್ಞರು ಪ್ರಬ ಲವಾಗಿ ಪ್ರಯತ್ನಿಸಬೇಕು, 'ಪ್ರಾಥಮಿಕ ಶಿಕ್ಷಣ' ದೊಡನೆ 'ವೈದಿಕವಿದ್ಯೆಯು' ಸಮಾವೇಶಮಾಡಿದಲ್ಲಿ ಅತ್ಯಂತ ಸುಲಭವಾಗಿ ವೈದಿಕಾಚರಣೆಗಳ ಮಹತ್ವಾತಿ ಶಯವು ವಿದ್ಯಾರ್ಥಿಗಳ ನಿರ್ಮಲಹೃದಯದಲ್ಲಿ ಅಂಕು ರಿಸಿ ವಿಕಸಿತವಾಗಿ ಬೆಳೆದು ವೀರಶೈವ ಮತಸಾಮ್ರಾ ಜ್ಯವೆಲ್ಲ ಸದಾಚರಣೆಯ ಸುಗ್ಗಿಯನ್ನು ಹಿಗ್ಗಿನಿಂದ ಮಾಡಿ ಮುಕ್ತಿಫಲವನ್ನು ಹೊಂದುವದು. ವೀರ ಶೈವ ಮತತತ್ವ ರತ್ನಗಳೂ ಅವುಗಳ ಧರ್ಮ ಸಂಸ್ಕಾರ ಜ್ಞಾನ-ಕ್ರಿಯೆಗಳೂ 'ಸಂಸ್ಕೃತ' ಭಾಷೆ ಯಲ್ಲಿಯೇ ಇರುತ್ತವೆ. ಕೆಲವರು ಮಾತೃಭಾಷೆಗಿಂತ ಸಂಸ್ಕೃತವು ಹೆಚ್ಚಿನದಲ್ಲ; ನಮ್ಮ ಕನ್ನಡ ವಾಙ್ಮಯ ದಲ್ಲೇನು ವೀರಶೈವ ಸಿದ್ಧಾಂತ ಗ್ರಂಥಗಳಿಲ್ಲವೇ? ಎಂದು ಸಂಸ್ಕೃತದ ಬಗ್ಗೆ ಮೂಗುಮುರಿಯುತ್ತಿರು ವರು. ಈ ಬಹುದ್ದೂರರಿಗೆ ಸಂಸ್ಕೃತಭಾಷೆಯ ವಿಶಾಲ ತೆಯು ತಿಳಿಯದಿರುವದೇ ಮುಖ್ಯಕಾರಣವಾಗಿದೆ. 'ದೇವಭಾಷೆ' ಎಂದು ವಿಶ್ವಪ್ರಪಂಚವೇ ಕೈಯೆತ್ತಿ ಸಾರುತ್ತಿರುವಾಗ ಭಾರತದೊಂದು ಮೂಲೆಯಲ್ಲಿ ವಾಸಿಸಿದ ಕನ್ನಡಿಗರು ಸಂಸ್ಕೃತದ ಶತ್ರುಗಳಾಗಿರು ವದು (ಕೆಲವರು ಮಾತ್ರ) ಅತ್ಯಂತ ವಿಷಾದದ ಸಂಗತಿ ಯಾಗಿದೆ. ತಮ್ಮ ನುಡಿಗನ್ನಡಿಯನ್ನು ಚನ್ನಾಗಿ ತಿಕ್ಕಿಕೊಳೆದು ತಮ್ಮ ಭಾಷೆಯು ಸಂಸ್ಕೃತ ಮಾತೆಯ ಹಾಲನ್ನುಂಡು ಬೆಳೆದು ಪರಿಪುಷ್ಟವಾದದ್ದನ್ನು ನೋಡ ಬಹುದು. ಕನ್ನಡಿಗನಾದ ದೈವಜ್ಞವಿನೋದ ಲೇಖಕ ನಿಗೂ ಕನ್ನಡಮ್ಮನ ನುಡಿಯ ಅಭಿಮಾನವು ತುಂಬಾ ಇರುವದು. ಆದರೆ ಜಗತ್ತಿನ ಸಮಸ್ತಭಾಷೆಯ ಮಾತೆ ಯಾಗಿಯೂ ದೇವವಾಣಿಯಾಗಿಯೂ ವಿಶ್ವಪ್ರೇಮಿ ಯಾಗಿಯೂ ಇರುವ ಸಂಸ್ಕೃತದ ಪ್ರಾಶಸ್ತ್ಯಕ್ಕೆ ಹಾನಿ ಯಾಗದಿರುವದುಂಟೇ? ಅದಿರಲಿ; ಪ್ರಸ್ತುತ ನನ್ನ ವೈದಿ ಕಾಚರಣೆಯ ಲೇಖನ ವಿಷಯದಲ್ಲಿ ಭಾಷಾವಿವರಣೆಯು ಪ್ರವೇಶಿಸಲು ನಮ್ಮ ವೀರಶೈವ ವೈದಿಕಾಚರಣೆಗಳು ಸಂಸ್ಕೃತ ಭಾಷೆಯಲ್ಲಿದ್ದದ್ದೇ ಕಾರಣವಾಯಿತು. ಇಂಥ ಸಂಸ್ಕೃತ ಭಾಷೆಯನ್ನು ಪೋಷಿಸುವದೇ ಸಮಸ್ತ ಆಸ್ತಿಕರ ಕರ್ತವ್ಯವಾಗಿದೆ. ನಮ್ಮ ವೀರ ಶೈವ ಮತೀಯರಿಂದ ಸ್ಥಾಪಿತವಾಗಿದ್ದ ಸಂಸ್ಕೃತ ಪಾಠಶಾಲೆಗಳಲ್ಲಿ ವೈದಿಕ ವಿದ್ಯೆಯನ್ನು ಪ್ರಾಥಮಿಕಾ ಧ್ಯಯನದಿಂದಲೇ ಪ್ರಾರಂಭಿಸಬೇಕು. ಕೇವಲ ತರ್ಕ. ವ್ಯಾಕರಣ, ನ್ಯಾಯ, ಮೀಮಾಂಸಾದಿ ಶಾಸ್ತ್ರಾಧ್ಯ ಯನದಿಂದ ಯಾವ ಪ್ರಯೋಜನವೂ ಇಲ್ಲ; 'ಧರ್ಮ ಶಾಸ್ತ್ರಜ್ಞ' ನಾಗುವದೇ ಪ್ರತಿಯೊಬ್ಬನ ಗುರಿಯಾಗಿರ ಬೇಕು. ಧಾರ್ಮಿಕನಲ್ಲದವನ ತರ್ಕ, ನ್ಯಾಯ, ವ್ಯಾಕ ರಣ, ಮೀಮಾಂಸಾದಿ ಶಾಸ್ತ್ರಾಧ್ಯಯನಕ್ಕೆ ಪುಷ್ಪ ಬೆಲೆಯು ಬರಲಾರದು. ಈ ಲೌಕಿಕ ಶಾಸ್ತ್ರಜ್ಞನಾಗ ದಿದ್ದರೂ ಧರ್ಮನಿಷ್ಠನಾಗಿ ಧರ್ಮಾಚರಣೆಯಲ್ಲಿ ರುವಾತನಿಗೆ ವಿಶೇಷಗೌರವವೂ ಪಾರಮಾರ್ಥಿಕ ಫಲ ವೂ ದೊರೆಯುವದರಲ್ಲಿ ಸಂದೇಹವಿಲ್ಲ. ಅದಕ್ಕಾಗಿ ಮೊಟ್ಟಮೊದಲು ವೀರಶೈವ ವಿದ್ಯಾರ್ಥಿಗಳಿಗೆ ಆರಂಭ ದಿಂದಲೇ ಧಾರ್ಮಿಕ ಶಿಕ್ಷಣವನ್ನು ಕ್ರಮಿಸಬೇಕು. ಈಗಿನ ಗೌರ್ನಮೆಂಟಿನಿಂದ ಸ್ಥಾಪಿತವಾದ ಶಾಲೆಕಾಲೇ ಜುಗಳಲ್ಲಿಯಂತೂ ಧಾರ್ಮಿಕ ವಿಚಾರಕ್ಕೆ ಬಹಿಷ್ಕಾರ ವನ್ನೇ ಹಾಕಿರುವರು. ಆದ್ದರಿಂದ ವೀರಶೈವ ಸಂಸ್ಕೃತ ಪಾಠಶಾಲೆ ಕಾಲೇಜುಗಳ ಬಾಲಕರು ವೀರಶೈವ ವಿಶಿಷ್ಟ ಧರ್ಮಾಚಾರ ಶಿಕ್ಷಣಕ್ರಮವನ್ನು ಅತ್ಯವಶ್ಯ ವಾಗಿ ಪರಿಗ್ರಹಿಸಿದಲ್ಲಿ ನಮ್ಮ ಮತದ ವೈದಿಕಾಚರ ಣೆಯು ಬಳಕೆಯಲ್ಲಿ ಬರುವುದು.

ವೈದಿಕ ಶಿಕ್ಷಣಗ್ರಂಥಗಳು ಎಲ್ಲಾ ಪಾಠಶಾಲೆ ಗಳಲ್ಲಿ ಒಂದೇ ವಿಧವಾಗಿರಬೇಕು; ಮತ್ತು ಅವು ಶಿವಾಗಮಗಳ ಸಮುದಾಯದಿಂದ ಪ್ರಾದುರ್ಭವಿಸಿರ ಬೇಕು; ಅಥವಾ 'ಮತಾಚಾರಣೆ' 'ಮತ ಪ್ರಶಂಸೆ' 'ಮತ ತತ್ವಬೋಧೆ' ಮೊದಲಾದ ವಿಷಯಗಳಿಂದೊಡ ಗೂಡಿದ ಪಾರಮೇಶ್ವರಾಗಮಾದಿ ಮೂಲಗ್ರಂಥಗಳನ್ನೇ ಪಠ್ಯಗ್ರಂಥಗಳನ್ನಾಗಿಟ್ಟುಕೊಳ್ಳಬಹುದು. ವೀರಶೈವ ಮತದ ಸರ್ವಸ್ವವನ್ನೇ ಅಡಕಮಾಡಿಕೊಂಡಿರುವ ಸಿದ್ಧಾಂತಶಿಖಾಮಣಿ ಗ್ರಂಥವಾದರೂ ಅತ್ಯುಪಯುಕ್ತ ವಾಗಿದೆ. ಹೀಗೆ ಏಕಮುಖವಾಗಿ ವೈದಿಕ ವಿದ್ಯಾ ಪ್ರಚಾರವಾಗುವ ಉಪಾಯಗಳಿಂದ ನಮ್ಮ ಮತಾ ಚರಣೆಗಳೂ ಒಂದೇ ವಿಧವಾಗಿ ಸಾಗುವವು. ಒಟ್ಟಿನ ಮೇಲೆ ವೀರಶೈವ ವೈದಿಕವಿದ್ಯಾಪ್ರಚಾರವಾಗಲು ಈಗಿನ ಸಂಸ್ಕೃತ ಪಾಠಶಾಲೆ ಕಾಲೇಜದವರು ಒಂದೇ ವಿಧವಾದ ವೈದಿಕಶಿಕ್ಷಣಗ್ರಂಥಗಳನ್ನಿಟ್ಟುಕೊಳ್ಳಬೇಕು. ಇದಲ್ಲದೆ ಈಗಿನ ಧರ್ಮೋಪದೇಶಕರೂ ಗುರುವರ್ಗ ದವರೂ ಶಿಕ್ಷಣಾಲಯಗಳಲ್ಲಿ ಪ್ರಾರಂಭಿಸಿದ ಗ್ರಂಥೋ ಕ್ತಧಾರ್ಮಿಕಾಚರಣೆಯನ್ನೇ ಬೋಧಿಸುತ್ತಲೂ ನೆಲೆ ಗೊಳಿಸುತ್ತಲೂ ಸಾಗಿದಲ್ಲಿ ಸ್ವಲ್ಪ ದಿವಸಗಳಲ್ಲಿಯೇ ನಮ್ಮ ವಿಶಾಲವಾದ ವೀರಶೈವಮತೀಯರ ಧಾರ್ಮಿ ಕಾಚರಣೆಗಳೆಲ್ಲವೂ ಒಂದೇ ವಿಧವಾಗಿ ಸಾಗಲುಪಕ್ರಮಿ ಸುತ್ತವೆ. ಈ ವೈದಿಕವಿದ್ಯೆಯು ಏಕಮುಖವಾಗಿ ಸಾಗದಿದ್ದರೆ ಮತಕ್ಕೆ ಇದೊಂದು ಕಲಂಕವೆಂದು ಹೇಳ ಬಹುದಲ್ಲವೇ?

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಶ್ರೀ ಸನಾತನ ಧರ್ಮಬೋಧಕರ ಶುಭಾಗಮನ.

ರಾಯಚೂರು ಡಿಸ್ಟ್ರಿಕ್ಟ ಸಿಂಧನೂರು ತಾಲೂಕು ಒಳಗಾನೂರ ಗ್ರಾಮಕ್ಕೆ ಶ್ರೀ|| ಷ|| ಬ್ರ|| ರೇವಣ ಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಬೃಹನ್ಮಠ ಚಿಕ್ಕ ಮಣ್ಣೂರು ಇವರು ತಾ|| ೪-೧೨-೧೯೩೪ ನೆಯ ದಿವಸ ಆಗಮಿಸಿದರು. ಅಗ್ಗ ಪುರಪ್ರಮುಖರಾದ ವೇ|| ಪಂ|| ಬಸವಲಿಂಗಶಾಸ್ತ್ರಿಗಳು ಜವಳಗೇರಿ ಸಂಸ್ಕೃತಪಾಠ ಶಾಲಾಧ್ಯಾಪಕರು, ಶಂಕರದೇವರ ಮಠದ ಬಸವಯ್ಯ ನವರು, ಹಿರೇಮಠದ ಗುಂಡಯ್ಯನವರು, ಕೋಡಿಹಾಳ ಬಸಪ್ಪನವರು, ಮರಡಿ ಗುಂಡಪ್ಪನವರು ಸಭೆಯನ್ನು ನೆರವೇರಿಸಿದರು. ಸಭೆಗೆ ಟೌನ್ ಅಮಾನಸಾಹೇಬರೇ ಮೊದಲಾದ ಪ್ರಮುಖರು ಆಗಮಿಸಿದ್ದರು. ಶ್ರೀಗಳ ವರು ಶ್ರೀಮದ್ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರ ವಿಷಯವಾ ಗಿಯೂ, ಸನಾತನಧರ್ಮ ವಿಷಯವಾಗಿಯೂ, ದೀಕ್ಷಾ ವಿಷಯವಾಗಿಯೂ ವಿಶೇಷವಾಗಿ ಬೋಧಿಸಿದರು. ಸರ್ವ ರೂ ಆಚಾರಶೀಲರಾಗಿ ಧರ್ಮಗುರುಗಳಿಂದ ದೀಕ್ಷೆಯಂ ಪಡೆದು ಭಕ್ತಿಯನ್ನು ವಹಿಸಿ ಇಹಪರ ಸುಖಕ್ಕೆ ಪಾತ್ರ ರಾಗಬೇಕೆಂದು ಶಾಸ್ತ್ರೀಯ ಪ್ರಮಾಣಗಳಿಂದ ಬೋಧ ಮಾಡಿ ಸರ್ವರಿಗೂ ಆನಂದವನ್ನುಂಟುಮಾಡಿದರೆಂದು ಬರೆದರೆ ಅತಿಶಯೋಕ್ತಿಯಾಗಲಾರದು. ಮೈಸೂರು ರಾಜಧಾನಿಯಲ್ಲಿ 'ಶ್ರೀ ಕಾಶೀನಾಥ ಗ್ರಂಥಮಾಲಾ' ಎಂಬ ಅಭಿಧಾನದಿಂದ ಅನೇಕ ಮತಗ್ರಂಥಗಳನ್ನು ಪ್ರಕಾಶಗೊಳಿಸುತ್ತಿರುವ ವೇ|| ಪಂ|| ಶ್ರೀ ಕಾಶೀ ನಾಥಶಾಸ್ತ್ರಿಗಳವರು ವಿಶೇಷ ಧನವನ್ನು ಖರ್ಚುಮಾಡಿ ಶಿವಾದ್ವೈತಮಂಜರಿ, ವೀರಶೈವರತ್ನ, ಶ್ರೀ ರೇಣುಕಾ ಚಾರ್ಯರ ಪುರಾಣ ಮೊದಲಾದ ಅನೇಕ ಮತಗ್ರಂಥ ಗಳನ್ನು ಮುದ್ರಿಸಿ ಸಮಾಜಕ್ಕೆ ಮಹೋಪಕಾರಮಾಡಿ ದ್ದಾರೆ. ಇಂಥ ಮಹತ್ತರವಾದ ಗ್ರಂಥಗಳನ್ನು ಪ್ರತಿ ಯೊಬ್ಬಮತೀಯರೂ ತರಿಸಿಕೊಳ್ಳಬೇಕೆಂದೂ ತಮ್ಮ ಸರ್ಕೀಟಿನಲ್ಲಿರುವ ಗ್ರಂಥಗಳನ್ನು ಸಭಿಕರು ನೋಡಬೇ ಕೆಂದೂ ತೋರಿಸಿ ಸಭೆಯಲ್ಲಿ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರ ನಾಮವನ್ನೆತ್ತಿ ಕರತಾಡನಪೂರ್ವಕ ಗೌರವಿಸಿದರು. ಚಿಕ್ಕಮಣ್ಣೂರುಸ್ವಾಮಿಗಳು ಸನಾ ತನಧರ್ಮ ಸುಧಾರಣೆಗಾಗಿ ಅಲ್ಲಲ್ಲಿ ಸಂಚರಿಸುತ್ತಿರು ವದು ಸ್ತುತ್ಯವಾಗಿದೆ. ಧರ್ಮಗುರುಗಳಲ್ಲಿ ಬೋಧ ಮಾಡುವ ಸರ್ಕೀಟ ಇದ್ದರೇನೇ ಧರ್ಮವು ಸುಧಾರಿ ಸುವದಾಗಿದೆ. ಆದಕಾರಣ ಪ್ರತಿಯೊಂದು ಗ್ರಾಮದ ಪ್ರಮುಖರೂ ಸನಾತನ ಧರ್ಮವನ್ನು ಕಾಪಾಡಿಕೊಳ್ಳ ಬೇಕೆಂದು ಕೋರುವ,

ಬಸವಲಿಂಗಶಾಸ್ತ್ರಿಗಳು, ಪಾಠಶಾಲಾ,
ಒಳಗಾನೂರ.

ಕೃತ್ತಿಕೋತ್ಸವಾಹ್ವಾನ ಪತ್ರಿಕಾ.

ತುಮಕೂರು ಡಿಸ್ಟ್ರಿಕ್ಟ ಚಿಕ್ಕನಾಯಕನಹಳ್ಳಿ ತಾಲ್ಲೂಕು ಶೆಟ್ಟಿಕೆರೆ ಸಮ್ಮತು ಕುಪ್ಪೂರು ಗ್ರಾಮದಲ್ಲಿ ರುವ ಶ್ರೀ ಮರುಳಸಿದ್ಧ ಯತೀಂದ್ರರವರ ಗದ್ದುಗೆ ಮಠದ ಶ್ರೀ ಚಂದ್ರಶೇಖರಸ್ವಾಮಿಗಳವರ ಸನ್ನಿಧಾನ ದಿಂದ ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪಶಾ ಲೀವಾಹನ ಶಕ ೧೮೫೬ ನೇ ಪ್ರವರ್ತಮಾನಕ್ಕೆ ಸಲ್ಲುವ ಶ್ರೀ ಭಾವನಾಮ ಸಂವತ್ಸರದ ಮಾರ್ಗಶಿರ ಶುದ್ಧ ಪೂರ್ಣಿಮಾ ಗುರುವಾರ (ತಾ|| 20-12-34) ರಲ್ಲು ಪ್ರತಿವರ್ಷದ ಪದ್ಧತಿಪ್ರಕಾರ ಬೆಳಗಿನ ೮ ಘಂಟೆ ಯಿಂದ ೧೨ ಘಂಟೆ ವರೆಗೆ ಶ್ರೀವೃಷಭೋತ್ಸ ವವೂ, ೧೨ ಘಂಟೆಯಿಂದ ೩ ಘಂಟೆ ವರೆಗೆ ಮಹಾ ಗಣಾರಾಧನೆಯೂ, ೪ ಘಂಟೆಯಿಂದ ರಾತ್ರಿ ೮ ಘಂಟೆ ವರೆಗೆ ಬೆಂಗಳೂರು ಸಿಟಿ ಚಿಕ್ಕಪೇಟೆ, ಮಹಾಂತಿನ ಮಠದ, ಪಟ್ಟಾಧ್ಯಕ್ಷ ಷ|| ಬ್ರ|| ಶ್ರೀ|| ಗಂಗಾಧರ ಶಿವಾಚಾರ್ಯಸ್ವಾಮಿಗಳವರಿಂದ ಗುರೂತ್ಕರ್ಷ ಎಂಬ ವಿಷಯದಲ್ಲಿ ಭಾಷಣವೂ ನಡೆಸಲ್ಪಡುವುವು. ರಾತ್ರಿ ೧ ಘಂಟೆಯಿಂದ ಬೆಳಗಿನ ೬ ಘಂಟೆ ವರೆಗೆ ಶ್ರೀಮರು ಳಸಿದ್ಧ ಯತೀಂದ್ರರವರ ರಥೋತ್ಸವವೂ ನಡೆಯುವ ದಾದುದರಿಂದ ತಾವು ಪರಿವಾರ ಸಮೇತ ಬಂದು ಶ್ರೀ ಗುರುಕೃಪೆಗೆ ಪಾತ್ರರಾಗಿ ದರ್ಶನಾಶೀರ್ವಾದವನ್ನು ಹೊಂದಬೇಕೆಂದು ಆಶಿಸುತ್ತೇನೆ.

ಕಾರ್ಯದರ್ಶಿ,
ಮರುಳ ಮರಿದೇವರು.

---

೨೧. ಮೂಲವ್ಯಾಧಿ.

ಸಾಮಾನ್ಯವಾಗಿ ಈ ರೋಗವು ಅನೇಕರಲ್ಲಿ ಕಂಡುಬರುತ್ತದೆ. ವಾತಾದಿದೋಷಗಳು ತ್ವಚೆ, ಮಾಂಸ ಮೇಧಸ್ಸುಗಳನ್ನು ದೂಷಿಸಿ ಗುದಮಾರ್ಗದಲ್ಲಿ ಮಾಂಸಾಂಕುರಗಳನ್ನು ಹುಟ್ಟಿಸುವವು. ಇದಕ್ಕೆ ಮೂಲವ್ಯಾಧಿ ಎನ್ನುವರು. ಇದಕ್ಕೆ ಸಂಸ್ಕೃತದಲ್ಲಿ ಅರ್ಶವೆಂಬ ಹೆಸರು. ಇದು ಶತ್ರುವಿನಂತೆ ಮನುಷ್ಯನಿಗೆ ದುಃಖ ಕೊಡುತ್ತದೆ, ಎಂದು ಈ ಹೆಸರು ಬಂದಿದೆ. ದೊಡ್ಡ ಕರುಳಿನ ಕಟ್ಟಕಡೆಯ ನಾಲ್ಕುವರೆ ಬೆರಳು ಉದ್ದವಾದ ಭಾಗಕ್ಕೆ ಗುದವೆಂದೆನ್ನುವರು. ಅದರಲ್ಲಿ ಒಂದೂವರೆ ಅಂಗುಲ ಉದ್ದದ ಮೂರು ವಲಯ (ಮಡಿಕೆ) ಗಳುಂಟು. ತೀರ ಒಳಗಿನ ವಲಯಕ್ಕೆ ಪ್ರವಾಹಿನಿ, ಎರಡನೆಯದಕ್ಕೆ ವಿಸರ್ಜನಿ, ಮೂರನೆ ಯದಕ್ಕೆ ಸಂವರಣಿ ಎಂಬ ಹೆಸರುಗಳುಂಟು. ಸಂವ ರಣಿಯು ಮುಂದೆ ಒಂದು ಅಂಗುಲ ಅಂತರದಿಂದ ಗುದೋಷ್ಠವಿರುತ್ತದೆ. ಕೆಲವರಿಗೆ ಮೂಲವ್ಯಾಧಿಯು ಜನಿಸುವಾಗಲೇ ಹಿಂದುಗಡೆಯಿಂದಲೂ ಆಗುವದುಂಟು. ಅದರಲ್ಲಿ ಸಾಧಾರಣವಾಗಿ ಶುಷ್ಕ ಸ್ರಾವಯುಕ್ತ ಎಂದು ಎರಡು ಭೇದಗಳನ್ನು ಮಾಡಬಹುದು. ಮಾತಾಪಿತೃಗಳ ವಿರುದ್ಧ ಆಹಾರವಿಹಾರಗಳಿಂದಲೂ, ದೈವದಿಂದಲೂ ಗರ್ಭ ಉತ್ಪನ್ನವಾಗುವಾಗಲೇ ಸಹಜ ಮೂಲವ್ಯಾಧಿಯು ಬೀಜರೂಪದಿಂದ ಉತ್ಪನ್ನವಾಗು ವುದು.

ಮೂಲವ್ಯಾಧಿ ರೋಗವು ಅನುವಂಶಿಕವಾಗಿ ಬರು ವದೂ ಉಂಟು. ಸಹಜ ಅರ್ಶವು ಸೊಕ್ಕುವಿದ್ದು ಕಣ್ಣಿಗೆ ಕಾಣಿಸದಂತೆ ಇರುವದು. ಅವುಗಳ ಮುಖ ಗಳು ಒಳಭಾಗಕ್ಕೆ ಇದ್ದು ಬೆಳ್ಳಗೆ ಇರುವವಲ್ಲದೆ ಬಹಳ ತೊಂದರೆಯನ್ನುಂಟುಮಾಡುವ ಸ್ವಭಾವವುಳ್ಳ ವುಗಳಾಗಿರುತ್ತವೆ. ಜನ್ಮದನಂತರ ಉತ್ಪನ್ನವಾಗುವ ಅರ್ಶಗಳಲ್ಲಿ ವಾತಜ, ಪಿತ್ತಜ, ಕಫಜ, ದ್ವಂದ್ವಜ, ಸಾನ್ನಿಪಾತಿಕ, ರಕ್ತಜ ಎಂದು ಆರು ಭೇದಗಳುಂಟು. ವಾತಾರ್ಶ ಕಫಾರ್ಶಗಳು ಶುಷ್ಕವಾಗಿರುತ್ತವೆ. ರಕ್ತಾರ್ಶ ಹಾಗೂ ಪಿತ್ತಾರ್ಶಗಳು ಸ್ರಾವಯುಕ್ತ ವಾಗಿ ಇರುತ್ತವೆ. ಸಾಮಾನ್ಯಕಾರಣ! ಅತಿ ಸ್ತ್ರೀಸಂ ಭೋಗ, ಕುದುರೆ ಸವಾರಿ, ಗುದದ್ವಾರಕ್ಕೆ ಆಘಾತ, ಬಹಳ ತಿಣುಕುವದು, ಅತಿ ಉಷ್ಣ ಪದಾರ್ಥಗಳ ಸೇವನೆ, ಮಲಾವರೋಧ, ವಾತಮೂತ್ರ, ಮಲಗಳ ವೇಗಗಳನ್ನು ತಡೆದು ಹಿಡಿಯುವದು, ಜ್ವರ, ಗುಲ್ಮ, ಅತಿಸಾರ ಸಂಗ್ರಹಣಿ, ಪಾಂಡುರೋಗಗಳಿಂದ ಕ್ಷೀಣ ವಾಗುವುದು, ಗರ್ಭಪಾತ ಇತ್ಯಾದಿ ಕಾರಣಗಳಿಂದ ಮೂಲವ್ಯಾಧಿಯು ಉತ್ಪನ್ನವಾಗುವದು.

ಮೂಲವ್ಯಾಧಿಯ ಪೂರ್ವರೂಪ ಅಗ್ನಿಮಾಂದ್ಯ, ಹೊಟ್ಟೆ ಉಬ್ಬುವದು, ಕೈಕಾಲು ಹರಿಯುವದು, ಭ್ರಮೆ ಬಂದಂತಾಗುವದು, ಬೋಳಿಕೆ ಬರುವದು, ಕಣ್ಣಿಗೆ ಕತ್ತಲು, ಮಲಾವರೋಧ, ಹೊಟ್ಟೆಯಲ್ಲಿ ವಾತದ ವಿಶೇಷ ಸಂಚಾರ, ತೇಕರಿಕೆಗಳು ಬಹಳ ಬರುವದು, ಅನ್ನದ ಮೇಲೆ ಇಚ್ಛೆ ಇಲ್ಲದಂತಾಗುವದು, ಟೊಂಕ ಶೂಲಿ ಈ ಲಕ್ಷಣಗಳು ಪ್ರಾರಂಭವಾಗುವವು. ಇನ್ನು ಮೂಲವ್ಯಾಧಿಯು ಬೆಳೆದು ಪೂರ್ಣವಾಯಿತೆಂದರೆ, ಮೇಲೆ ಹೇಳಿದ ವಿಕಾರಗಳೆಲ್ಲ ಹೆಚ್ಚು ಕಂಡುಬರುವವು. ಆದರೆ ಈ ಎಲ್ಲ ವಿಕಾರಗಳು ಕಾಣಬರುತ್ತವೆ ಎಂದು ತಿಳಿಯದೆ, ಹೆಚ್ಚು ಕಡಿಮೆ ಪ್ರಮಾಣದಿಂದ ಕಾಣ ಬರುತ್ತವೆ ಎಂದು ತಿಳಿಯಬೇಕು. ವಾತಜ ಮೂಲ ವ್ಯಾಧಿಯು ಮುಳ್ಳುಗಳು ಒಣಗಿದಂತೆ ಇರುತ್ತವೆ. ಅದರಿಂದ ನೋವು ಬಹಳ. ಅವುಗಳ ವರ್ಣ ಕಪ್ಪು ಅಥವಾ ತಿಳಿಗೆಂಪು. ಮುಳ್ಳುಗಳು ಬೇರೆ ಬೇರೆ ಆಕಾ ರದವು ಇದ್ದು ಅಡ್ಡತಿಡ್ಡಾಗಿಯೂ ಇರುತ್ತವೆ. ಅವು ಗಳ ತುದಿಯು ಸೀಳಿದಂತೆ ಇರುತ್ತದೆ. ವಾತಜ ಅರ್ಶ ದಲ್ಲಿ ತಲೆಶೂಲಿ, ಟೊಂಕಶೂಲಿ, ಪಾರ್ಶ್ವಶೂಲಿಗಳು ಇರುತ್ತವೆ. ಮಲಾವರೋಧ, ಅರುಚಿ, ಹಸಿವೆಯಾಗ ದಿರುವದು, ತಲೆ ತಿರುಗಿದಂತಾಗುವದು ಈ ಲಕ್ಷಣ ಗಳಾದರೂ ಆಗುವವು. ತ್ವಚೆ, ಉಗುರು, ಮಲ, ಮೂತ್ರ, ಕಣ್ಣು, ನಾಲಗೆಗಳು ಕಪ್ಪುಛಾಯೆಯುಳ್ಳ ವುಗಳಾಗುವವು. ಪಿತ್ತಜನ್ಯ ಅರ್ಶದಲ್ಲಿಯ ಮುಳ್ಳು ಗಳ ವರ್ಣವು ನೀಲೀ ಬಣ್ಣದ್ದಾಗಿರುತ್ತದೆ. ಅವುಗಳಿಂದ ರಕ್ತವು ಸೋರುತ್ತಿರುತ್ತದೆ. ಒಮ್ಮೊಮ್ಮೆ ದುರ್ಗಂಧ ವಾದರೂ ಬರುವದುಂಟು. ಪಿತ್ತಜನ್ಯ ಮೂಲವ್ಯಾಧಿ ಯಲ್ಲಿ ನೀರಡಿಕೆ ಹೆಚ್ಚಾಗುವದು, ಭ್ರಮೆ ಕಣ್ಣಾರಿ ಭೋಳಿಕೆ ಈ ಲಕ್ಷಣಗಳಾಗುವವು. ಉಗುರು ತ್ವಚೆ ಕಣ್ಣುಗಳು ಹಳದಿ ವರ್ಣದಂತಾಗಿ ಕಾಣು ವವು, ಕಫಜನ್ಯ. ಮೂಲವ್ಯಾಧಿಯ ಮುಳ್ಳುಗಳು ಬಹಳ ಒಳಕ್ಕೆ ಇದ್ದು, ಕಡಿಮೆ ವೇದನೆಯುಂಟುಮಾ ಡುವವು. ಕಫಾರ್ಶದಿಂದ ನಪುಂಸಕತ್ವ, ಅಗ್ನಿಮಾಂದ್ಯ, ಅಮಾಂಶ, ವಾಂತಿ ಈ ವಿಕಾರಗಳಾಗುವವು. ಉಗುರು ತ್ವಚೆ ಕಣ್ಣುಗಳು ಬೆಳ್ಳಗಾಗುವವು. ಸಾಮಾನ್ಯವಾಗಿ ರಕ್ತಜ ಮೂಲವ್ಯಾಧಿಯು ಪಿತ್ತಜನ್ಯ ಮೂಲವ್ಯಾಧಿ ಯಂತೆಯೇ ಇರುತ್ತದೆ. ಮುಳ್ಳುಗಳು ರಕ್ತವರ್ಣ ದ್ದಾಗಿರುವವು. ಭೇದಿಯಾಗುವ ಸಮಯದಲ್ಲಿ ಆ ಮುಳ್ಳುಗಳಿಂದ ಅತಿಶಯ ರಕ್ತಬೀಳುವದು. ರಕ್ತಹೀನ ತೆಯಿಂದ ರೋಗಿಯು ಕಾಂತಿಹೀನ, ಬಲಹೀನ ಉತ್ಸಾಹಹೀನನಾಗುವನು. ಅವನ ಶಕ್ತಿಯು ತೀರ ಕುಗ್ಗುತ್ತ ಹೋಗುವದು. ದ್ವಂದ್ವಜ ಮೂಲವ್ಯಾಧಿ ಯಲ್ಲಿ ಯಾವದೇ ಎರಡು ದೋಷಗಳ ಲಕ್ಷಣಗಳು ಕಂಡುಬರುವವು. ಆ ಲಕ್ಷಣಗಳ ಮೇಲಿಂದ ಯಾವ ದೋಷಗಳೆಂಬುದನ್ನು ಗೊತ್ತುಹಚ್ಚಿಕೊಳ್ಳಬೇಕು. ಇನ್ನು ಸಾನ್ನಿಪಾತಿಕ ಮೂಲವ್ಯಾಧಿಯಲ್ಲಿ ತ್ರಿದೋಷ ಗಳ ಲಕ್ಷಣಗಳು ಕಂಡುಬರುವವು. ಸಹಜ ಹಾಗೂ ತ್ರಿದೋಷಜನ್ಯ ಮೂಲವ್ಯಾಧಿಯು ಅಸಾಧ್ಯವೆಂದು ತಿಳಿಯಬೇಕು. ಉಳಿದವುಗಳು ವ್ಯಾಧಿಯು ಉತ್ಪನ್ನ ವಾಗಿ ಒಂದು ವರ್ಷದೊಳಗಿನವು ಇದ್ದು ರೋಗಿಯು ಬಲಿಷ್ಠನಿದ್ದರೆ ಸುಸಾಧ್ಯವೆಂದು ತಿಳಿಯಬೇಕು.

ಗುದದ ಮೂರನೇ ವಲಯದಲ್ಲಿ ಒಂದೇ ದೋಷ ದಿಂದ ಉದ್ಭವಿಸಿದ ಮೂಲವ್ಯಾಧಿಯಾದರೂ ಸುಸಾಧ್ಯವೆಂದೇ ತಿಳಿಯಬೇಕು. ದ್ವಂದ್ವಜ ಹಾಗೂ ಎರಡನೆಯ ವಲಯದಲ್ಲಿ ಉತ್ಪನ್ನವಾದ ಮೂಲವ್ಯಾ ಧಿಯು ತುಸು ಕಷ್ಟಸಾಧ್ಯವೆಂದು ತಿಳಿಯಬೇಕು. ಮೂಲವ್ಯಾಧಿಯುಳ್ಳ ರೋಗಿಯ ಕೈಕಾಲುಗಳು, ಗುದ, ನಾಭಿ, ಮುಖ, ತರಡುಬೀಜಗಳಲ್ಲಿ ಬಾವು ಇದ್ದು ಹೃದಯದಲ್ಲಿ ವೇದನೆಯಿದ್ದರೆ ಅಸಾಧ್ಯವೆಂದು ತಿಳಿಯ ಬೇಕು.

ಬರವಣಿಗೆಯ ವೈಲಕ್ಷಣ್ಯ!

ಸಾಧಾರಣ ಜನರೂ, ಫೋರ್ಜರಿಮಾಡುವವರೂ, ಇವರಿಗಿಂತ ಕೊಲೆಮಾಡುವವರು ಬರವಣಿಗೆಯಲ್ಲಿ ಬಹಳ ನಿಧಾನವೆಂಬುದನ್ನು ಅಮೇರಿಕನ್ನರು ಕಂಡು ಹಿಡಿದಿದ್ದಾರೆ. ಸಾಮಾನ್ಯರು ೪೦ ನಿಮಿಷಗಳಲ್ಲಿ ಬರೆ ಯಬಲ್ಲ ಒಂದು ವಾಕ್ಯವನ್ನು ಫೋರ್ಜರಿ ಮಾಡು ವವರು 68 ನಿಮಿಷಗಳಲ್ಲೂ ಕೊಲೆಪಾತಕರು 101 ನಿಮಿಷಗಳಲ್ಲೂ ಬರೆಯುತ್ತಾರೆಂದು ಅವರ ಅಭಿಪ್ರಾ ಯವಾಗಿದೆ.

ಪಂಚಾಚಾರ್ಯ ಪ್ರಭಾ.

೧೯೩೪ ನೇ ಡಿಸೆಂಬರ್ ತಾ|| ೧೭ ನೇ ಸೋಮವಾರ.

ಶಕ್ತ್ಯಂಕಸಮಾಲೋಚನೆ.

ಅಲಾಹಾಬಾದ್ ಇಲಾಖೆಗೆ ಸೇರಿದ ಗೋರಖಪುರ ಪಟ್ಟಣದಲ್ಲಿ "ಕಲ್ಯಾಣ" ಎಂಬ ಕಲ್ಯಾಣಾಭಿಧಾನದಿಂದ ಪ್ರತಿತಿಂಗಳಲ್ಲಿಯೂ ಒಂದು ಹಿಂದೀಮಾಸಪತ್ರಿಕೆಯು ಪ್ರಕಟವಾಗುತ್ತಿರುವ ವಿಷಯವು ಭರತಖಂಡನಿವಾಸಿಗಳೆಲ್ಲರಿಗೂ ತಿಳಿದವಿಷಯವಾಗಿದೆ. ದೇವಭಕ್ತಿಪ್ರಧಾನವಾದ ನಮ್ಮ ಭರತಖಂಡದಲ್ಲಿ ಕಲಿಕಾಲಪ್ರಭಾವದಿಂದ ವಿಶೇಷವಾಗಿ ಶೈಥಿಲ್ಯವನ್ನು ಹೊಂದುತ್ತಿರುವ ದೇವತಾಭಕ್ತಿಯನ್ನೂ, ಗುರುಭಕ್ತಿಯನ್ನೂ, ಮಾತೃಪಿತೃಭಕ್ತಿಯನ್ನೂ, ಸನಾತನವೈದಿಕಸಂಪ್ರದಾಯಗಳನ್ನೂ, ಶ್ರೌತಸ್ಮಾರ್ತಧರ್ಮಗಳನ್ನೂ ಪೂರ್ವದಂತೆ ಪ್ರಚಾರಕ್ಕೆ ತರಬೇಕೆಂಬ ಸದ್ದೇಶುವಿನಿಂದ ಈ ಪತ್ರಿಕೆಯು ಜನ್ಮವೆತ್ತಿದೆ. ಪ್ರತಿತಿಂಗಳಲ್ಲಿಯೂ ಈ ಪತ್ರಿಕೆಯುಲ್ಲಿ ಭಕ್ತಿ-ಜ್ಞಾನ-ವೈರಾಗ್ಯಾದಿ ವಿಷಯರತ್ನಗಳಿಂದೊಡಗೂಡಿದ ಉತ್ತಮೋತ್ತಮ ಲೇಖಗಳು ಪ್ರಕಟವಾಗುತ್ತಿರುವುದರಿಂದ ಈ ಕಲ್ಯಾಣಪತ್ರಿಕೆಯು ತನ್ನ ಪ್ರಭಾವವನ್ನು ಭರತಖಂಡದಲ್ಲಿಯೂ, ಯೂರೋಪ್-ಅಮೇರಿಕಾ-ಆಫ್ರಿಕಾದಿ ಖಂಡಗಳಲ್ಲಿಯೂ ಹರಡಿ ಪತ್ರಿಕಾಪ್ರಪಂಚಚಕ್ರವರ್ತಿಯಾಗಿ ಮೆರೆಯುತ್ತಿದೆ. ಆದುದರಿಂದಲೇ ಈ ಮಾಸಪತ್ರಿಕೆಗೆ ಎಲ್ಲಾ ಖಂಡಗಳಲ್ಲಿಯೂ ಕೂಡಿ ೨೫ ಸಾವಿರ ಜನರು ಚಂದಾದಾರರಿರುತ್ತಾರೆ. ಕಲ್ಯಾಣಪತ್ರಿಕೆಯ ಕೀರ್ತಿಯೆಲ್ಲಾ ಆ ಪತ್ರಿಕೆಯ ಸಂಪಾದಕರಾದ ಶ್ರೀಮಾನ್ ಪೋದ್ದಾರ್ ಹನೂಮಾನ್ ಪ್ರಸಾದರವರಿಗೆ ಸಲ್ಲತಕ್ಕುದಾಗಿದೆ. ಹನೂಮಾನ್ ಪ್ರಸಾದರವರು ಮಹಾ ಮೇಧಾವಿಗಳೂ, ಉಭಯಭಾಷಾವಿಶಾರದರೂ, ಶಾಂತರೂ, ಆಚಾರಶೀಲರೂ, ಧರ್ಮಮೂರ್ತಿಗಳೂ ಆಗಿ ಪ್ರಕಾಶಿಸುತ್ತಿರುವರು. ಈ ಮಹೋದಯರ ಗುಣಗಳನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಸರಿ! ಈ ಧರ್ಮೋದ್ಧಾರಕರು ಪ್ರತಿವರ್ಷದಲ್ಲಿಯೂ ಒಂದೊಂದು ವಿಶೇಷಾಂಕವನ್ನು ಹೊರಡಿಸಿ ತಮ್ಮ ಚಂದಾದಾರರಿಗೆಲ್ಲಾ ಆ ಮಹಾಗ್ರಂಥವನ್ನು ಪುಕ್ಕಟೆಯಾಗಿ ಕೊಡುತ್ತಿರುವುದನ್ನು ನೋಡಿದರೆ ಇವರ ಔದಾರ್ಯಕ್ಕೆ ಸೀಮೆಯೇ ಇಲ್ಲವೆಂದು ಹೇಳಬೇಕಾಗುತ್ತದೆ. ಇವರ ಪತ್ರಿಕೆಯ ವಾರ್ಷಿಕ ಚಂದಾ ಹಣವು ೪ ರೂ. ೩ ಆಣೆ ಮಾತ್ರ. ಇವರು ಪುಕ್ಕಟೆಯಾಗಿ ಕೊಡುತ್ತಿರುವ ವಿಶೇಷಾಂಕಕ್ಕೆ ಕನಿಷ್ಠಪಕ್ಷ ೧೦-೧೫ ರೂಪಾಯಿಗಳಾದರೂ ಆಗಬಹುದು. ಈ ರೀತಿಯಾಗಿ ಲಾಭದಕಡೆಗೆ ದೃಷ್ಟಿಯನ್ನಿಡದೆ ಧರ್ಮದಕಡೆಗೆ ದೃಷ್ಟಿಯನ್ನಿಟ್ಟು ವರ್ತಿಸುತ್ತ ಪ್ರಪಂಚದಲ್ಲಿ ಸನಾತನಧರ್ಮವನ್ನು ಪ್ರಚಾರ ಮಾಡುತ್ತಿರುವುದು ಅತ್ಯಂತ ಸ್ತುತ್ಯವಾಗಿದೆ. ಈ ಮಹೋದಯರು ಕಳೆದ ವರುಷ "ಶಿವಾಂಕ" ಎಂಬ ಪವಿತ್ರಾಭಿಧಾನದಿಂದ ವಿಶೇಷ ಸಂಚಿಕೆಯನ್ನು ಹೊರಡಿಸಿದರು. ಆ ಶಿವಾಂಕದ ಸಮಾಲೋಚನೆಯನ್ನು ನಾವು ಕಳೆದವರ್ಷ ನಮ್ಮ ಪತ್ರಿಕೆಯುಲ್ಲಿ ವಿಶದವಾಗಿ ಮಾಡಿರುವ ವಿಷಯವು ನಮ್ಮ ಪತ್ರಿಕಾ ವಾಚಕಮಹಾಶಯರೆಲ್ಲರಿಗೂ ವೇದ್ಯವಿರಬಹುದು. ಈ ವರ್ಷ ಈ ಮಹೋದಯರು "ಶಕ್ತ್ಯಂಕ" ಎಂಬ ಪುಣ್ಯಾಭಿಧಾನದಿಂದ ವಿಶೇಷ ಸಂಚಿಕೆಯನ್ನು ಹೊರಡಿಸಿರುವರು. ಈ ಸಂಚಿಕೆಯು ಕ್ರೌನ್ ¼ ಆಕೃತಿಯಲ್ಲಿ ಮುದ್ರಿತವಾಗಿದ್ದು ೭೦೦ ಪುಟಗಳಿಂದ ಯುಕ್ತವಾಗಿದೆ. ಶಕ್ತಿತತ್ತ್ವದ ಬಗ್ಗೆ ೨೦೪ ಜನ ಸುಪ್ರಸಿದ್ಧ ಮೇಧಾವಿಗಳು ಸರ್ವೋತ್ಕೃಷ್ಟಗಳಾದ ಲೇಖಗಳನ್ನು ಬರೆದಿರುತ್ತಾರೆ. ೪೨ ಜನರು ಕವನಗಳನ್ನು ಬರೆದಿರುತ್ತಾರೆ. ದರ್ಶನಮಾತ್ರದಿಂದ ನಾಸ್ತಿಕನನ್ನು ಸಹ ಆಸ್ತಿಕನನ್ನಾಗಿ ಮಾಡುವ ಆದಿಶಕ್ತಿಯ ಬಹು ಬಣ್ಣಗಳಿಂದ ಕೂಡಿ ಪ್ರಕಾಶಿಸುತ್ತಿರುವ ೫೬ ಚಿತ್ರಗಳು ವಿಶೇಷಾಂಕದ ಸೌಂದರ್ಯವನ್ನು ಸರ್ವತೋಮುಖವಾಗಿ ಹೆಚ್ಚಿಸಿರುವುವು. ಇದಲ್ಲದೆ ಒಂದು ಬಣ್ಣದ ೨೧೦ ಚಿತ್ರಗಳು ಈ ಗ್ರಂಥದಲ್ಲಿ ಪರಿಶೋಭಿಸುತ್ತಿರುವುವು.

ಈ ಚಿತ್ರಗಳು ಭರತಖಂಡದಲ್ಲಿ ರಾರಾಜಿಸುತ್ತಿರುವ ಶಕ್ತಿದೇವಾಲಯಾತ್ಮಕಗಳಾಗಿರುತ್ತವೆ. ಶಕ್ತಿತತ್ತ್ವದ ಬಗ್ಗೆ ಅನೇಕಜನ ಸುಪ್ರಸಿದ್ಧಭಾರತೀಯರಿಂದಲೂ ಆಂಗ್ಲದೇಶೀಯರಿಂದಲೂ ಬರೆಯಲ್ಪಟ್ಟ ಲೇಖಗಳು ವಾಚನೀಯಗಳಾಗಿವೆ. ಈ ಗ್ರಂಥವು ಶಕ್ತಿತತ್ತ್ವಕ್ಕೆ ರತ್ನಾಕರಸ್ವರೂಪವಾಗಿದೆ. ಶಕ್ತಿತತ್ತ್ವದ ಬಗ್ಗೆ ಇಲ್ಲಿಯವರೆಗೆ ಎಲ್ಲಿಯೂ ಈ ತರಹದ ಗ್ರಂಥವು ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ದುರ್ಗಾಸಪ್ತಶತಿಯ ೭೦೦ ಶ್ಲೋಕಗಳನ್ನು ೨ ಪುಟಗಳಲ್ಲಿಯೇ ಮುದ್ರಣಮಾಡಿರುವುದು ಸರ್ವರಿಗೂ ಆಶ್ಚರ್ಯವನ್ನುಂಟುಮಾಡತಕ್ಕದಾಗಿದೆ. ಕೆಲವುಕಡೆಗೆ ಶಕ್ತಿಯಂತ್ರಗಳು ಮನೋಹರವಾಗಿ ಮುದ್ರಿಸಲ್ಪಟ್ಟಿವೆ. ಕಲ್ಯಾಣಪತ್ರಿಕೆಗೆ ೪ ರೂ. ೩ ಆಣೆಗಳನ್ನು ಕಳುಹಿಸಿ ಚಂದಾದಾರರಾದರೆ ಸಾಕು! ಒಂದು ವರ್ಷದವರೆಗೆ ದೊಡ್ಡ ಮಾಸಪತ್ರಿಕೆಯು ಬರುವುದಲ್ಲದೆ ಈ ಮಹಾಗ್ರಂಥವು ವೆಚ್ಚವಿಲ್ಲದೆ ದೊರೆಯುವುದು. ಈ ಮಾಸಪತ್ರಿಕೆಯು ಹಿಂದೀಭಾಷೆಯಲ್ಲಿ ಪ್ರಕಟವಾಗುವುದರಿಂದ, ಇದರ ಪಠನದಿಂದ ಜನರಿಗೆ ಹಿಂದೀಭಾಷೆಯನ್ನು ಕಲಿಯಲು ಸಹಾಯವಾಗುವುದು. ಇಂಥ ಅಮೂಲ್ಯವಾದ ಪತ್ರಿಕೆಯನ್ನು ಹೊರಡಿಸಿ ಎಲ್ಲಾ ಖಂಡಗಳಲ್ಲಿಯೂ ಪ್ರಚಾರಪಡಿಸಿ ಪ್ರಾಚೀನ ಭಾರತಧರ್ಮಬೀಜಗಳನ್ನು ಸರ್ವರ ಹೃದಯಭೂಮಿಯಲ್ಲಿ ಬಿತ್ತಿ ಸಕಲ ಜನಾಂಗವನ್ನು ಸನ್ಮಾರ್ಗದಲ್ಲಿ ತರಲು ಪ್ರಯತ್ನಪಡುತ್ತಿರುವ ಸಂಪಾದಕ ಮಹಾಶಯರಿಗೆ ಭರತಖಂಡ ನಿವಾಸಿಗಳಾದ ಸಕಲ ಮತೀಯರೂ ಧನ್ಯವಾದಗಳನ್ನು ಸಮರ್ಪಿಸಬೇಕಾಗಿದೆ. ಕಲ್ಯಾಣ ಪತ್ರಿಕೆಯು ಇದೇ ರೀತಿಯಾಗಿ ಧರ್ಮಸೇವೆಯನ್ನು ಮಾಡಿ ತನ್ನ ಪವಿತ್ರಾಭಿಧಾನದಂತೆ ಸಮಸ್ತ ಜನತೆಗೆಲ್ಲಾ ಕಲ್ಯಾಣವನ್ನೀಯಲೆಂದೂ, ಈ ಪವಿತ್ರ ಪತ್ರಿಕೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಇದರ ಕೀರ್ತಿಯು ಈ ಧರಾತಲದಲ್ಲಿ ಆಚಂದ್ರಾರ್ಕವಾಗಿ ಮೆರೆಯಲೆಂದೂ ಜಗಜ್ಜನನೀಜನಕರಾದ ಪಾರ್ವತೀ ಪರಮೇಶ್ವರರನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಹೈಕೋರ್ಟಿನಲ್ಲಿರುವ ಮೊಕದ್ದಮೆಗಳು ಬೇಗ ಇತ್ಯರ್ಥವಾಗುವಂತೆ, ಸರಕಾರದವರು ಹೈಕೋರ್ಟಿಗೆ ಒಬ್ಬ ಅಡಿಷನಲ್ ಜಡ್ಜರನ್ನು ನಿಯಮಿಸಬೇಕೆಂದು ಯೋಚಿಸುತ್ತಿರುವರು.

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ ಸೂಪರಿಂಟೆಂಡೆಂಟರಾದ ಶ್ರೀ ಎಂ. ಎಸ್. ಶಾಸ್ತ್ರಿಯವರನ್ನು ಡೈಪುಟಿ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್‌ರವರನ್ನಾಗಿ ನೇಮಕಮಾಡಿದ್ದಾರೆ.

ಬೆಂಗಳೂರು ದಂಡಿನ ಇಂಜನಿಯರರ ಮೋಟಾರಿಗೆ ಇಬ್ಬರು ಶಿಪಾಯಿಗಳು ಶಿಲುಕಿ ಗಾಯಪಟ್ಟರು. ಅವರಲ್ಲಿ ಒಬ್ಬನಿಗೆ ಹೆಚ್ಚು ಏಟು ಬಿದ್ದುದರಿಂದ ಕೂಡಲೆ ಅವನು ಮಿಲಿಟರಿ ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸುವರ್ಣರಜತಾಂದೋಲಿಕಾಮಹೋತ್ಸವವು ಇದೇ ತಿಂಗಳು 21 ನೇ ತಾರೀಖು ಶುಕ್ರವಾರ ಪ್ರಾತಃಕಾಲ ೯|| ಘಂಟೆಗೆ ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಗ್ರಾಮದಲ್ಲಿ ನಡೆಯುವುದರಿಂದ ಎಲ್ಲಾ ಗ್ರಾಮದ ವೀರಶೈವರು ಆಗಮಿಸಿ ಶ್ರೀಗುರುದರ್ಶನಾಶೀರ್ವಾದಗಳನ್ನು ಪಡೆಯಬೇಕೆಂದು ಹುಲ್ಲಹಳ್ಳಿಯ ಸ್ವಾಗತಸಮಿತಿಯ ಸದಸ್ಯರು ತಿಳಿಸಿರುತ್ತಾರೆ.

ಬೆಂಗಳೂರಿನಲ್ಲಿ ಸಿಟಿ ಮ್ಯಾಜಿಸ್ಟ್ರೇಟರಾಗಿರುವ ಅಸಿಸ್ಟೆಂಟ್ ಕಮಿಷನರ್ ಮಿ|| ಎಸ್. ನಾರಾಯಣರಾಯರಿಗೆ ಡಿಶಂಬರ್ 17 ನೆಯ ತಾರೀಖು ಲಾಗಾಯ್ತು ೯ ದಿವಸಗಳ ಪ್ರಿವಿಲೇಜ್ ರಜಾ ಮುಂಜೂರಾಗಿರುತ್ತದೆ. ಕ್ರಿಸ್‌ಮಸ್ ಮತ್ತು ವರ್ಷಾರಂಭ ದಿನಗಳ ರಜವನ್ನೂ ಇವರು ಉಪಯೋಗಿಸಿಕೊಳ್ಳಬಹುದು. ಇವರ ರಜಾಕಾಲದಲ್ಲಿ 2 ನೆಯ ಮ್ಯಾಜಿಸ್ಟ್ರೇಟರು ತಮ್ಮ ಕೆಲಸದ ಜೊತೆಗೆ ಇವರ ಕೆಲಸವನ್ನೂ ನೋಡಿಕೊಳ್ಳುತ್ತಾರೆ.

ನಿನ್ನೆ ದಿವಸ ನಂಜನಗೂಡು ಮ|| ರಾ|| ಮಣಿಗಾರ್ ಸಿದ್ದಪ್ಪನವರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ತಮ್ಮ ಮನೆಗೆ ಬಿರುದಾವಳಿಸಹಿತ ಮಹೋತ್ಸವದಿಂದ ಬಿಜಯಮಾಡಿಸಿಕೊಂಡು ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸೇವಿಸಿ ಆಗಮಿಸಿದ್ದ ಮಹಾಜನಗಳಿಗೆಲ್ಲಾ ಮೃಷ್ಟಾನ್ನಭೋಜನಮಾಡಿಸಿ, ಶ್ರೀಗಳವರಿಗೆ ಗುರುಕಾಣಿಕೆಯನ್ನೊಪ್ಪಿಸಿ ಪುನಃ ಸಾಯಂಕಾಲ ಶ್ರೀಗಳವರನ್ನು ಬಿಡಾರಕ್ಕೆ ಕಳುಹಿಸಿಕೊಟ್ಟರು.

ಎಕ್ಸೈಜ್ ಕಮಿಷನರ್ ಇನ್‌ಕಂಟ್ಯಾಕ್ಸ್ ಕಮಿಷನರ್ ಮುಂತಾದ ಕೆಲಸಗಳನ್ನು ನೋಡುತ್ತಿರುವ ಮಿ|| ಡಿ. ಶ್ರೀನಿವಾಸಯ್ಯಂಗಾರ್ಯರಿಗೆ 1935 ನೆಯ ಜನವರಿ 2 ನೆಯ ತಾರೀಖಿನಿಂದ 7 ದಿನಗಳು ಪ್ರಿವಿಲೇಜ್ ರಜಾ ಮುಂಜೂರಾಗಿರುತ್ತದೆ. ಇವರು ಕ್ರಿಸ್‌ಮಸ್ ಮತ್ತು ಹೊಸ ವರ್ಷಾರಂಭ ದಿವಸದ ರಜವನ್ನು ಉಪಯೋಗಿಸಿಕೊಳ್ಳಬಹುದು. ಮೇಲ್ಕಂಡವರ ರಜಾಕಾಲದಲ್ಲಿ ಎಕ್ಸೈಜ್ ಕಮಿಷನರಿಗೆ ಅಸಿಸ್ಟೆಂಟರಾಗಿರುವ ಮಿ|| ಎ. ವಿ. ಕೃಷ್ಣಮೂರ್ತಿಯವರು ತಮ್ಮ ಕೆಲಸಗಳ ಜೊತೆಗೆ ಅವರ ಕೆಲಸಗಳನ್ನೂ ನೋಡುತ್ತಾರೆ.

ಮೈಸೂರು ನ್ಯಾಯವಿಧಾಯಕ ಸಭೆ.

ಈ ಮಾಹೆ ೧೭, ೧೮, ೧೯ ನೆಯ ತಾರೀಖುಗಳಲ್ಲಿ ಜರುಗುವ ನ್ಯಾಯವಿಧಾಯಕ ಸಭೆಯಲ್ಲಿ ಈ ಕೆಳಗೆ ಕಂಡ ವಿಷಯಗಳು ಚರ್ಚಿಸಲ್ಪಡುವುವು.

೧. ಈಗಿರತಕ್ಕ ಡಿಸ್ಟ್ರಿಕ್ಟ್ ಬೋರ್ಡುಗಳ ಆದಾಯವು ಕಡಿಮೆಯಾಗಿರುವುದರಿಂದ ಸರಕಾರದವರು ಸ್ವಲ್ಪ ಗ್ರಾಂಟನ್ನು ಕೊಡಬೇಕು.

೨. ಮಂಡ್ಯದ ಸಕ್ಕರೆ ಕಾರ್ಖಾನೆಯವರು ಕೊಳ್ಳುತ್ತಿರುವ ಕಬ್ಬನ್ನು ಇನ್ನು ಮೇಲೆ ಟನ್ ಒಂದಕ್ಕೆ ೧೨ ರೂಪಾಯಿಗೆ ಹೆಚ್ಚಿಸಬೇಕು.

೩. ಚಿಕ್ಕಮಗಳೂರಿಗೆ ರೈಲು ಹಾಕತಕ್ಕದ್ದು.

೪. ಹಿಂದೂ ವಿಧವಾ ವಿವಾಹಕ್ಕೆ ನ್ಯಾಯವಾದ ಕಾನೂನನ್ನು ಮಾಡತಕ್ಕದ್ದು.

೫. ಬಾರ್ ಕೌನ್ಸಿಲ್ ಒಂದನ್ನು ಸ್ಥಾಪಿಸತಕ್ಕದ್ದು.

೬. ಎಲ್ಲಾ ಕಾಲೇಜುಗಳಲ್ಲಿಯೂ ಮಿಲಿಟರಿ ಶಿಕ್ಷಣವನ್ನು ಕೊಡಬೇಕು.

೭. ಗಿಡಗಳನ್ನು ನಾಟುವ ವ್ಯವಸಾಯಕ್ಕಾಗಿ ಲ್ಯಾಂಡ್‌ಮಾರ್ಟಗೇಜ್ ಬ್ಯಾಂಕಿಗೆ ೨೦ ಲಕ್ಷ ರೂಪಾಯಿಗಳನ್ನು ಕೊಡತಕ್ಕದ್ದು.

೮. ಒಂದು ರೂಪಾಯಿಯ ಕಾಫಿ ಬೀಜಕ್ಕೆ ೩ ಕಾಸು ತೆರಿಗೆ ಕೊಡಬೇಕೆನ್ನುವುದನ್ನು ಬೆಂಗಳೂರು ಸಿಟಿಯಲ್ಲಿ ತೆಗೆದುಹಾಕತಕ್ಕದ್ದು.

೯. ಕಾಯಪುಷ್ಟಿವಂತರಾದವರು ಭಿಕ್ಷೆಬೇಡುವುದನ್ನು ತಪ್ಪಿಸಬೇಕು.

ಮೈನರ್ ಅಪರಾಧಿಗಳಿಗೆ ಒಂದು ರಿಫರ್ಮೇಟರಿ ಮತ್ತು ಬಾರ್‌ಸ್ಟಲ್ ಸ್ಕೂಲನ್ನು ಸ್ಥಾಪಿಸಬೇಕು.

ವರ್ತಮಾನಸಂಗ್ರಹ.

ಕಳೆದವಾರ ಯೂರೋಪಿನಿಂದ ಕಲ್ಕತ್ತಾಕ್ಕೆ ಬಂದ ಟಪಾಲು ವಿಮಾನದಲ್ಲಿ ಲಂಡನ್ ಪಟ್ಟಣದ ಒಂದು ಟಪ್ಪಾಲ್ ಚೀಲವು ಕಳೆದುಹೋಗಿದೆಯೆಂದು ತಿಳಿದುಬರುತ್ತದೆ.

ಪೋಸ್ಟ್ ಹಣದ ದುರುಪಯೋಗ!

ಜನರಲ್ ಪೋಸ್ಟಾಫೀಸಿನಲ್ಲಿ ಪೋಸ್ಟು ಮ್ಯಾನ್ ಆಗಿದ್ದ ಗೋವಿಂದರಾಜು ಎಂಬವನು ತನ್ನಲ್ಲಿದ್ದ ಮನಿಯಾರ್ಡರ್ ಹಣವನ್ನು ತೆಗೆದುಕೊಂಡು ಪರಾರಿಯಾಗಿರುವನು. ಪೋಲೀಸರು ಸದರಿಯವನನ್ನು ಹುಡುಕುತ್ತಿದ್ದಾರೆ.

ಕನ್ಯಾನ್ವೇಷಣಕ್ಕಾಗಿ ಪರದೇಶಗಮನ.

ಪ್ಯಾಲಸ್ಟೈನ್ ದೇಶದಲ್ಲಿ ಹೆಣ್ಣುಮಕ್ಕಳ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಮದುವೆಮಾಡಿಕೊಡಲು ಕನ್ಯಾಶುಲ್ಕವನ್ನು ಹೆಚ್ಚಾಗಿ ಕೇಳುತ್ತಿರುವುದರಿಂದ ಅನೇಕ ಜನ ಯುವಕರು ಅನ್ಯದೇಶವಾದ ಸೈಪ್ರಸ್ ಎಂಬಲ್ಲಿಗೆ ಕನ್ಯಾನ್ವೇಷಣಕ್ಕೆ ಹೋಗುತ್ತಿದ್ದಾರಂತೆ!

ಕಾಗೆಗಳಿಂದ ತೊಂದರೆ!

ಕೊರಿಯಾದೇಶದ ಹೇಜೋ ಪಟ್ಟಣದಲ್ಲಿ ಕಾಗೆಗಳ ಒಂದು ಗುಂಪು ಎಲೆಕ್ಟ್ರಿಕ್ ತಂತಿಯಮೇಲೆ ಬಂದು ಕುಳಿತದ್ದರಿಂದ ಷಾರ್ಟ್‌ಸರ್ಕ್ಯೂಟ್ ಆಗಿ ಸ್ವಲ್ಪ ಹೊತ್ತು ಊರಿನ ದೀಪಗಳೆಲ್ಲಾ ಕೆಟ್ಟುಹೋಗಿದ್ದು ಟ್ರಾಂಗಾಡಿಗಳೂ ಫ್ಯಾಕ್ಟರಿಗಳೂ ಸಿನಿಮಾಗಳೂ ನಿಂತುಹೋದುವಂತೆ!

ವಿದ್ಯುಚ್ಛಕ್ತಿಗೆ ಬದಲು ಸೂರ್ಯರಶ್ಮಿ!

ರಷ್ಯನ್ನರು ಪಂಪಿನ ಮೂಲಕ ನೀರನ್ನು ಎತ್ತುವುದಕ್ಕೆ ವಿದ್ಯುಚ್ಛಕ್ತಿಯು ಬದಲಾಗಿ ಸೂರ್ಯ ರಶ್ಮಿಯನ್ನು ಉಪಯೋಗಿಸಿಕೊಳ್ಳಬೇಕೆಂದು ಬಹಳ ದ್ರವ್ಯವನ್ನು ಖರ್ಚುಮಾಡಿ ಮಿಷನ್ನುಗಳನ್ನು ನಿರ್ಮಿಸುತ್ತಿದ್ದಾರೆ. ಈ ಉದ್ಯಮವು ಕೈಗೂಡಿದರೆ ಪ್ರಪಂಚಕ್ಕೆ ವಿಶೇಷ ಸುಖವಾಗುತ್ತದೆ.

ಲೋಹದ ಮನುಷ್ಯ!

ಪ್ರೊ|| ಹಾರಿಮೇ ಎಂಬ ಲಂಡನ್ ಪಟ್ಟಣದ ಶಾಸ್ತ್ರಜ್ಞರೊಬ್ಬರು ಕೇಳಿದ ಕೆಲವು ಪ್ರಶ್ನೆಗಳಿಗೆ ಮನುಷ್ಯರಂತೆ ಜವಾಬುಕೊಡುವ ಮತ್ತು ಹೇಳಿದ ಕೂಡಲೆ ಗುಂಡುಹಾರಿಸುವ ಲೋಹದ ಮನುಷ್ಯನನ್ನು ತಯಾರಿಸಿದ್ದಾರೆ. ಇದನ್ನು ಮಾಡುವದಕ್ಕೆ ಅವರಿಗೆ 14 ವರ್ಷಗಳು ಹಿಡಿದವಂತೆ!

ಅಪರಾಧಕ್ಕೆ ತಕ್ಕ ಶಿಕ್ಷೆ!

ಇಂಗ್ಲೆಂಡಿನಲ್ಲಿ ಬರ್ಕಿನ್‌ಹೆಡ್ ಎಂಬಲ್ಲಿ ಒಬ್ಬನು ತಾನು ವಾಸವಾಗಿದ್ದ ಮನೆಯ ಕೆಳಗಿನ ಅಂತಸ್ತಿನಲ್ಲಿದ್ದ ಇತರರು ಸ್ನಾನಮಾಡುವ ಸ್ಥಳದ ವಿದ್ಯಮಾನಗಳನ್ನು ನೋಡುವುದಕ್ಕೆ ನಡುವೆ ರಂಧ್ರವನ್ನು ಮಾಡಿಕೊಂಡಿದ್ದನೆಂದು ಪೊಲೀಸಿನವರಿಂದ ಹಿಡಿಯಲ್ಪಟ್ಟು 10 ಪೌಂಡು ಜುಲ್ಮಾನೆಗೆ ಗುರಿಯಾದನು.

30 ಮಕ್ಕಳ ತಂದೆ!

ಜರ್ಮನಿಯಲ್ಲಿ 63 ವರ್ಷ ವಯಸ್ಸಿನ ಹೆರ್‌ಥಿಸಲ್ ಎಂಬ ಒಬ್ಬ ಸಣ್ಣ ಜಮೀನ್‌ದಾರನಿಗೆ 30 ಜನ ಮಕ್ಕಳಿವೆ. ಇವನ ಹೆಂಡತಿಯು ಈಗ 30ನೆಯ ಮಗುವನ್ನು ಪ್ರಸವಿಸಿರುವಳು. ಹಿಂದಿನ 29 ಮಕ್ಕಳೂ ಜೀವಂತರಾಗಿದ್ದಾರೆ. ಇವನು ದೊಡ್ಡ ಸಂಸಾರಿಯೆಂದು ಜರ್ಮನರು ಇವನಿಗೆ ಬಹುಮಾನಮಾಡಿದರು.

ರೇಲ್ವೆಕಂಪೆನಿಯು ೮ ಸಾವಿರ ರೂ. ದಂಡ ಕೊಡಬೇಕಾಗಿ ಬಂದಿತು.

ರಾ|| ಆಲ್ಮೋರಾ ಕಲೆಕ್ಟರರಾದ ಧನಪಾಂಡೆ ಎಂಬವರು ರೋಹಿಲಾಖಂಡ ರೇಲ್ವೆಕಂಪೆನಿಯ 2 ನೆಯ ತರಗತಿ ಗಾಡಿಯಲ್ಲಿ ಪ್ರಯಾಣಮಾಡುತ್ತಿರುವಾಗ ಮೇಲಿನ ಡೆಯ ತೂಗುಬೆಂಚು ಕಿತ್ತುಬಿದ್ದು ಕೈಮೂಳೆಯು ಮುರಿದುದರಿಂದ ಸದರಿಯವರು ಕಂಪೆನಿಯಮೇಲೆ 10,000 ರೂಪಾಯಿಗಳ ನಷ್ಟಕ್ಕೆ ದಾವಾಹಾಕಿದರು. ಕೋರ್ಟಿನಲ್ಲಿ 8000 ರೂ. ಗಳಿಗೆ ಡಿಕ್ರಿ ಆಯಿತು.

ಪ್ರೀತಿಗಾಗಿ ಪ್ರಾಣದಾನ!

ಸೆನೆಗಾಲ್ ದೇಶದ ಪೂರ್ವ ನಿವಾಸಿಗಳ ಮುಖ್ಯಸ್ಥನೊಬ್ಬನ ಮಗಳನ್ನು ಫ್ರೆಂಚ್ ತರುಣ ಸೈನಿಕನೊಬ್ಬನು ಪ್ರೀತಿಸಿದ ತಪ್ಪಿಗಾಗಿ, ಯುವಕಯುವತಿಯರಿಬ್ಬರನ್ನೂ ಅವರ ಹಳೆಯಪದ್ಧತಿಯ ಪ್ರಕಾರ ಮದುವೆಮಾಡಿ ಅನಂತರ ಸುಟ್ಟುಬಿಟ್ಟರು. ಫ್ರೆಂಚ್ ಗೌರ್ನ್‌ಮೆಂಟಿನವರು ಈ ಅಪರಾಧದಲ್ಲಿ ಭಾಗಿಗಳಾದವರಿಗೆ ಯಾವ ಶಿಕ್ಷೆಯನ್ನು ಮಾಡಬೇಕೆಂದು ಯೋಚಿಸುತ್ತಿದ್ದಾರೆ.

ಎಂಟುದಿವಸ ಬೆಂಕಿಯಲ್ಲಿ ಇದ್ದು ಬದುಕಿದ ಇಲಿ.

ಪಾಟಿಯಾಲಾ ರಾಜ್ಯದ ಗಂಗೋರ್ ಎಂಬ ಹಳ್ಳಿಯಲ್ಲಿ ಒಬ್ಬ ಕುಂಬಾರನು ಮಡಕೆಗಳನ್ನು ಆವಿಗೆಯಲ್ಲಿಟ್ಟು ಎಂಟುದಿವಸ ಉರಿಹಾಕಿದನು. ಅನಂತರ ತೆಗೆದುನೋಡುವಲ್ಲಿ 4 ಮಡಕೆಗಳ ಹೊರತು ಉಳಿದವೆಲ್ಲವೂ ಸರಿಯಾಗಿ ಸುಟ್ಟಿದ್ದವು. ಸುಡದೆ ಇದ್ದ ಮಡಕೆಗಳನ್ನು ನೋಡುವಾಗ್ಗೆ ಒಂದರಲ್ಲಿ ಇಲಿಯೂ ಅದರ ಮರಿಗಳೂ ಜೀವಸಹಿತ ಇದ್ದುವಂತೆ! ದೈವಲೀಲೆಯು ವಿಚಿತ್ರವಾದುದು!

ರೈಸ್‌ಮಿಲ್ ಅನಾಹುತ.

ವಿಲಾಸಪುರದ ಹತ್ತರವಿರುವ ಅಕಲ್‌ತಾರಾ ಎಂಬಲ್ಲಿ ಒಂದು ಭತ್ತದ ಮಿಲ್ಲು ನಡೆಯುತ್ತಿರುವಾಗ ಅದರ ಇಂಜನ್ನಿನ ಭಾರಿ ಚಕ್ರವೊಂದು ಬಿಚ್ಚಿಬಿದ್ದುದರಿಂದ ಇಂಜನ್ ಮುರಿದದ್ದಲ್ಲದೆ ವೇಗದಿಂದ ಎಸೆಯಲ್ಪಟ್ಟ ಚಕ್ರವು ಸುಮಾರು 300 ಅಡಿಗಳಷ್ಟು ದೂರ ಹೋಗಿ ಎದುರಿಗೆ ಇದ್ದ ಗೋಡೆಯನ್ನು ಬೀಳಿಸಿ ಒಬ್ಬ ಕೆಲಸಗಾರನನ್ನು ಕೊಂದಿತು. ಮಿಲ್ಲಿಗೆ ಅನೇಕ ಸಾವಿರ ರೂಪಾಯಿಗಳ ನಷ್ಟವಾಗಿರುತ್ತದೆ.

ನಾಯಿಯಂತೆ ಕೂಗುವ ಪಕ್ಷಿ!

ದಕ್ಷಿಣ ಅಮೇರಿಕೆಯಲ್ಲಿ ಮನೆಗಳನ್ನು ಕಾಯುವುದಕ್ಕಾಗಿ ನಾಯಿಗಳ ಬದಲು "ಟೆರಾಟೆರಾ" ಎಂಬ ಒಂದು ತರಹದ ಪಕ್ಷಿಯನ್ನು ಸಾಕುತ್ತಾರೆ. ಇವುಗಳ ಕಾಲುಗಳ ಹೊರತು ಉಳಿದ ಅವಯವಗಳೆಲ್ಲವೂ ಪಾರಿವಾಳದಂತೆ ಇವೆ. ಕಾಲುಗಳು ಮಾತ್ರ ೫ ಅಂಗುಲ ಉದ್ದವಾರುತ್ತವೆ. ಇವು ಹೊಸಬರಾರಾದರೂ ಮನೆಯ ಹತ್ತರ ಬಂದಕೂಡಲೆ ನಾಯಿಯಂತೆ ಕೂಗಿ ವಿಶೇಷ ಶಬ್ದಮಾಡಿ ಎಲ್ಲರಿಗೂ ಎಚ್ಚರಕೊಡುತ್ತವೆ.

ತಾಯಿ ಸತ್ತ 7 ನಿಮಿಷಗಳ ಮೇಲೆ ಶಿಶುವು ಜನಿಸಿತು!

ಒಕ್ಲೆಂಡ್ ಆಸ್ಪತ್ರೆಯಲ್ಲಿ ಒಬ್ಬ ಗರ್ಭಿಣಿ ಸ್ತ್ರೀಯಳು ಸತ್ತುಹೋದ 7 ನಿಮಿಷಗಳನಂತರ ಗರ್ಭಕೋಶವನ್ನು ಕುಯಿದು ಮಗುವನ್ನು ಹೊರಗೆ ತೆಗೆದರು. ಹೊರಗೆ ತೆಗೆದಾಗ ಮಗುವು ಉಸಿರಾಡುತ್ತಿರಲಿಲ್ಲವಾದರೂ ಡಾಕ್ಟರರು ನಿರಾಶರಾಗದೆ 20 ನಿಮಿಷಗಳವರೆಗೂ ಶಾಸ್ತ್ರರೀತ್ಯಾ ಅವಯವಚಲನಮಾಡಿದ್ದರಿಂದ ಮಗುವು ಚೇತರಿಸಿಕೊಂಡಿತು. ಈಗ ಮಗುವು ದಾದಿಯ ವಶದಲ್ಲಿ ಸೌಖ್ಯವಾಗಿ ಬೆಳೆಯುತ್ತಿದೆ. ಈಶ್ವರ ಲೀಲೆಯು ಅಗಾಧವಾದುದು!

ಅತ್ಯಾಶೆ ಗತಿಗೆಡಿಸಿತು!

ಪಿಸಿಫಿಕ್ ಸಾಗರದಲ್ಲಿರುವ ಕಾರ್ಲೊ ದ್ವೀಪದ ಬೆಸ್ತರವನೊಬ್ಬನಿಗೆ ಸಮುದ್ರತೀರದಲ್ಲಿ ಬಹು ಸುಂದರವಾದ 100 ಕ್ಯಾರೆಟ್ ತೂಕದ ಒಂದು ಮುತ್ತು ಸಿಕ್ಕಿತು. ಅದನ್ನು ಮಾರುವುದಕ್ಕೆ ಅವನು ಕ್ಯಾಲಿಫೋರ್ನಿಯದ ವರ್ತಕರಲ್ಲಿ ತೆಗೆದುಕೊಂಡುಹೋದನು. ಅವರು ಅದಕ್ಕೆ 200 ಪೌಂಡ್ ಬೆಲೆ ಕಟ್ಟಿದರು. ಬೆಸ್ತರವನು ಮನಸ್ಸಿನಲ್ಲಿ ಅದಕ್ಕೆ 20,000 ಪೌಂಡ್‌ವರೆಗೆ ಬರುತ್ತದೆಂದು ಆಶೆಯಿಟ್ಟುಕೊಂಡಿದ್ದರಿಂದ ಬುದ್ಧಿಯು ಕೆಟ್ಟು ಮುತ್ತನ್ನು ಸಮುದ್ರಕ್ಕೆ ಬಿಸಾಡಿ, ತಾನೂ ಬಿದ್ದು ಮರಣ ಹೊಂದಿದನು.

ಮಲಗಿದ್ದವನಿಗೆ ಅಂತ್ಯಸಂಸ್ಕಾರ!

ಕೊಲಂಬೋದಹತ್ತರವಿರುವ ಒಂದು ಹಳ್ಳಿಯಲ್ಲಿ ಒಬ್ಬ ಮನುಷ್ಯನು ಬಹಳ ಹೊತ್ತು ಮಲಗಿದನು. ಎದ್ದು ನೋಡುವಲ್ಲಿ ತಾನು ಒಂದು ಹೆಣಗಳನ್ನು ಹಾಕುವ ಪೆಟ್ಟಿಗೆಯಲ್ಲಿ ಇಡಲ್ಪಟ್ಟಿದ್ದನ್ನು ನೋಡಿ ವಿಸ್ಮಿತನಾದನು. ಇವನು ಮಲಗುವಾಗ್ಗೆ ನಿದ್ರೆಬರುವ ಔಷಧವನ್ನು ಹೆಚ್ಚಾಗಿ ಸೇವನೆ ಮಾಡಿದ್ದರಿಂದ ಮರುದಿನ ಬಹಳ ಹೊತ್ತಾದರೂ ಏಳಲಿಲ್ಲವಾದುದರಿಂದ ಇವನ ಸ್ನೇಹಿತರು ಇವನು ಮರಣಹೊಂದಿದನೆಂದು ಯೋಚಿಸಿ ಅಂತ್ಯ ಸಂಸ್ಕಾರಕ್ಕೆ ಎಲ್ಲವನ್ನೂ ಸಿದ್ಧಪಡಿಸಿದ್ದರಂತೆ!

ಕೃತ್ರಿಮಮಳೆ!

ರಷ್ಯಾದೇಶದವರು ವಿಮಾನಗಳಲ್ಲಿ 4,200 ಅಡಿ ಮೇಲಕ್ಕೆ ಹೋಗಿ ಅಲ್ಲಿ ಕೆಲವು ರಸಾಯನಶಾಸ್ತ್ರ ನಿರ್ಮಿತಪದಾರ್ಥವನ್ನು ಚೆಲ್ಲುವುದರಿಂದ ಮೋಡಕಟ್ಟಿ ಮಳೆಬರುವಂತೆ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಇದು ಮಳೆಯಿಲ್ಲದ ಅವರ ದೇಶದಲ್ಲಿ ಕಾಲಕಾಲಕ್ಕೆ ಮಳೆಯಾಗುವಂತೆ ಮಾಡುವುದಕ್ಕೂ ಮತ್ತು ಅಲ್ಲಿ ವಿಶೇಷ ಪ್ರಾಬಲ್ಯದಲ್ಲಿ ಇದ್ದುಕೊಂಡು ಮಳೆಗೋಸ್ಕರ ತಮ್ಮ ಮಶೀದಿಗಳಿಗೆ ಬಂದು ಪ್ರಾರ್ಥನೆಮಾಡುವಂತೆ ಜನಗಳನ್ನು ಪ್ರೇರಿಸುವ ಮಹಮ್ಮದೀಯ ಮುಲ್ಲಾಗಳ ತೊಂದರೆಯನ್ನು ಕಡಿಮೆಮಾಡುವುದಕ್ಕೂ ಉಪಯೋಗಿಸುತ್ತಾರಂತೆ!

ಮಗುವಿನ ಅಪಹಾರ.

ಬೊಂಬಾಯಿ ನಾರ್ತ್‌ಬ್ರೂಕ್ ತೋಟದಲ್ಲಿ ತಾಯಿಯ ಹತ್ತರ ಆಡುತ್ತಿದ್ದ 3 ವರ್ಷ ವಯಸ್ಸಿನ ಮಗುವನ್ನು ಅದರ ಮೈಮೇಲಿನ ಒಡವೆಗಳ ಆಶೆಯಿಂದ ಅಪಹಾರಮಾಡಲು ಯತ್ನಿಸಿದ ತುಕಾರಾಂ ಗೋವಿಂದನೆಂಬ 24 ವರ್ಷ ವಯಸ್ಸಿನ ಯುವಕನನ್ನು ಹಿಡಿದಿದ್ದಾರೆ. ಇವನು ಮಗುವನ್ನು ಎತ್ತಿಕೊಂಡು ಹೋದ ಕೂಡಲೆ ಪಕ್ಕದಲ್ಲಿ ಮಗುವಿಲ್ಲದ್ದನ್ನು ಕಂಡ ತಾಯಿಯು ಕೂಗಿಕೊಂಡು ಗಲಾಟೆ-ಮಾಡಿದಳು. ಸುತ್ತಲಿದ್ದವರು ಪಕ್ಕದ ಗಲ್ಲಿಯಲ್ಲೆಲ್ಲಾ ಹುಡುಕುವಾಗ್ಗೆ ಕಳ್ಳನು ಸಿಕ್ಕಿಬಿದ್ದನು. ಪೋಲೀಸರು ಕಳ್ಳನನ್ನು ಕೋರ್ಟಿಗೆ ಹಾಜರ್ಮಾಡಿದ್ದಾರೆ.

ಅಬ್ದುಲ್ ಗಫ್ಫೂರ್‌ಖಾನರಿಗೆ ೨ ವರ್ಷ ಕಠಿನಶಿಕ್ಷೆ.

ಅಬ್ದುಲ ಗಫ್ಫೂರಖಾನರು ಮುಂಬಯಿಯಲ್ಲಿ ರಾಜದ್ರೋಹ ಭಾಷಣ ಮಾಡಿದರೆಂದು ಮುಂಬಯಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೊರಡಿಸಿದ ವಾರಂಟಿನ ಮೇರೆಗೆ ಪೋಲೀಸರು ೭ ನೆಯ ತಾರೀಖಿನ ದಿವಸ ವಾರ್ಧಾದಲ್ಲಿರುವ ಗಾಂಧಿಯವರ ಆಶ್ರಮದಲ್ಲಿ ಇವರನ್ನು ಸೆರೆಹಿಡಿದರು. ಆಗ್ಗೆ ಇವರು ಗಾಂಧಿಯವರೊಡನೆ ಮಾತನಾಡುತ್ತ ಕುಳಿತಿದ್ದರು. ನಾಗಪುರದ ಎಕ್ಸಪ್ರೆಸ್ ಗಾಡಿಯಿಂದ ಮುಂಬಯಿಗೆ ತಂದರು. ಅಕ್ಟೋಬರ್ ೨೭ ನೆಯ ತಾರೀಖಿನ ದಿವಸ ಮುಂಬಯಿಯಲ್ಲಾದ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಅವರು ಖುದಾಯಿ ಖಿದಮತ್ ಸಂಸ್ಥೆಯ ಬಗ್ಗೆ ಮಾಡಿದ ಭಾಷಣವು ರಾಜದ್ರೋಹಾತ್ಮಕವಾದದ್ದೆಂದು ಅಧಿಕಾರಿಗಳಿಗೆ ಕಂಡುಬಂದುದರಿಂದ ಸೆರೆಹಿಡಿಯಲ್ಪಟ್ಟರು. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ೨ ವರ್ಷ ಶಿಕ್ಷೆಯನ್ನು ವಿಧಿಸಿದರು.

ನಿವೇದನೆ.

ಪ್ರಿಯಮಿತ್ರರೇ!

ನಾನು ತಾ|| 11-12-34 ರಲ್ಲಿ ಯಾವುದೋ ಒಂದು ಕಾಗದವನ್ನು ಪೋಸ್ಟ್ ಮಾಡಲು General ಪೋಸ್ಟಾಫೀಸಿಗೆ ಹೋಗಿದ್ದೆನು. ಆ ಕಾಗದದಲ್ಲಿ ಇನ್ನೂ ಕೆಲವು ವಿಷಯಗಳನ್ನು ಬರೆಯಬೇಕಾಯಿತು. ನನ್ನಲ್ಲಿ ಪೆನ್ ಇರಲಿಲ್ಲ. ಆದರೆ ಯಾರೋ ಒಬ್ಬರು ಫೌಂಟೆನ್ ಪೆನ್ನನ್ನು ಕೊಟ್ಟರು. ನನ್ನ ಬರೆವಣಿಗೆಯು ಮುಗಿದನಂತರ ಪೆನ್ನನ್ನು ವಾಪಸ್ ಕೊಡಲು ಪೆನ್ ಮಾಲಿಕರನ್ನು ನೋಡಲು ಅವರು ಸಿಕ್ಕಲಿಲ್ಲ. ಬಹಳ ಹೊತ್ತು ಹುಡುಕಿದಾಗ್ಯೂ ಪ್ರಯೋಜನವಾಗಲಿಲ್ಲ. ಅವರು ಮರೆತು ಹೊರಟುಹೋದಂತೆ ಕಾಣುತ್ತದೆ. ಅವರಿಗೂ ನನಗೂ ಪರಿಚಯವೇ ಇಲ್ಲ. ಆದುದರಿಂದ ಸದರಿ ಪೆನ್ನಿನ ಮಾಲೀಕರು ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬಂದು ಸದರಿ ಪೆನ್ನನ್ನು ತೆಗೆದುಕೊಂಡು ಹೋಗಬೇಕಾಗಿ ಕೋರುತ್ತೇನೆ.

M. R. Venkatasubbiah,
C/o The Eastern Engineering Corporation Ltd.,
Water Works Contractor, Doddapet, Mysore

ಜರ್ಮನಿಯ ಭೀಷ್ಮಪಿತಾಮಹ ಹಿಂಡನ್‌ಬರ್ಗ್.

(ಶ್ರೀ ಶಂಕರ)

ಕಳೆದ ಮಹಾಯುದ್ಧದಿಂದ ಜರ್ಮನಿಗುಂಟಾದ ದುರ್ದೆಶೆಯನ್ನು ನೋಡಿ ಅನೇಕರು 'ಇನ್ನು ೫೦ ವರ್ಷಗಳಲ್ಲದೆ ಜರ್ಮನ್ ದೇಶವು ಸುಧಾರಿಸಲಾರದು' ಎಂದನ್ನುತ್ತಿದ್ದರು. ಅಪಜಯದಿಂದ ಜರ್ಮನ್ ರಾಷ್ಟ್ರದ ಪಂಚಾಂಗವೇ ಕುಸಿದಿತ್ತು. ಜನರಿಗೆ ಹೆಜ್ಜೆಹೆಜ್ಜೆಗೂ ಪತನದ ಲಕ್ಷಣವು ಕಂಡುಬರುತ್ತಿತ್ತು. ಆದರೆ ಫಾಲ್‌ವಾನ್ 'ಹಿಂಡನ್ ಬರ್ಗ್'ರು ಪ್ರೆಸಿಡೆಂಟರಾದಂದಿನಿಂದ ಜರ್ಮನಿಯನ್ನು ಮೇಲಕ್ಕೆತ್ತಲು ತಮ್ಮ ಸರ್ವಸ್ವವನ್ನೆಲ್ಲಾ ಧಾರೆ ಎರೆದು ಬದ್ಧಕಂಕಣರಾದರು. ಇವರು ಸಾಯುವವರೆಗೂ ಜರ್ಮನಿಯ ಹಿತಕ್ಕಾಗಿಯೇ ದುಡಿದರು.

ಹಿಂಡನ್‌ಬರ್ಗರು ೧೮೪೭ ನೇ ಅಕ್ಟೋಬರದಲ್ಲಿ ಪೋಸೇನ್ ಎಂಬಲ್ಲಿ ಹುಟ್ಟಿದರು. ತಮ್ಮ ಹತ್ತನೆಯ ವರ್ಷದಲ್ಲಿ ಸೈನಿಕ ವಿದ್ಯಾಲಯದಲ್ಲಿ ಸೇರಿ ಹತ್ತೊಂಭತ್ತನೆಯ ವರ್ಷದಲ್ಲಿ ಅಂದರೆ ೧೮೬೬ ರಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಅದೇ ವರ್ಷ ಲೆಫ್ಟನೆಂಟರಾಗಿ ಪ್ರಶ್ಯವು ಆಸ್ಟ್ರಿಯದೊಡನೆ ತೊಡಗಿದ ಯುದ್ಧದಲ್ಲಿ ಸೇರಿದರು.

೧೮೭೦ ರಲ್ಲಿ ಜರ್ಮನಿಗೂ ಫ್ರಾನ್ಸಿಗೂ ನಡೆದ ಇತಿಹಾಸ ಪ್ರಸಿದ್ಧವಾದ ಯುದ್ಧದಲ್ಲಿ ಇವರು ವೀರತೆಯಿಂದ ಕಾದಾಡಿದರು, ಇದರಿಂದ ದಿನೇ ದಿನೇ ಇವರ ಅಭಿವೃದ್ಧಿಯಾಗತೊಡಗಿತು.

೧೮೮೯ ರಲ್ಲಿ ಹಿಂಡನ್ ಬರ್ಗರು ಯುದ್ಧಸಚಿವರೂ ಟೆರಿಟೋರಿಯಲ್ ಸೇನೆಗಳ ಪ್ರಧಾನರೂ ಆದರು.

೧೯೦೩ ರಲ್ಲಿ ಸೇನಾಪತಿಯಾದರು. ಆ ಕಾಲದಲ್ಲಿ ಕೈಸರ್ ವಿಲಿಯಮನ ಅಧಿಕಾರವು ನಡೆಯುತ್ತಿದ್ದು ಆತನಿಗೂ ಮಂತ್ರಿಗಳಿಗೂ ಅನೇಕ ವಿಷಯಗಳಲ್ಲಿ ಮತಭೇದವು ಉಂಟಾಗುತ್ತಿತ್ತು. ಸೇನಾಸಂಬಂಧವಾಗಿ ಕೈಸರನಿಗೂ ಹಿಂಡನ್ ಬರ್ಗರಿಗೂ ಯಾವಾಗಲೂ ಮತಭೇದವೇ. ಹೀಗಾಗಿ ಹಿಂಡನ್ ಬರ್ಗರು ೧೯೧೧ ರಲ್ಲಿ ತಮ್ಮ ೬೪ ನೇ ವರ್ಷದಲ್ಲಿ ತಮ್ಮ ಕೆಲಸದಿಂದ ನಿವೃತ್ತರಾದರು. ಆ ಕಾಲದಲ್ಲಿ ಅವರು ಹೇಳಿದ ಮಾತುಗಳನ್ನು ಕೇಳಿದರೆ ಅವರ ಹೃದಯವಿಶಾಲತೆ ಎಷ್ಟಿತ್ತೆಂಬುದು ಗೊತ್ತಾಗುತ್ತದೆ. ಅವರು ಹೀಗೆ ಹೇಳಿದರು—'ನಾನು ಸೈನ್ಯದಲ್ಲಿ ಎಷ್ಟು ಮರ್ಯಾದೆ ಪಡೆಯಬಹುದೋ ಅಷ್ಟನ್ನೂ ಪಡೆದೆನು. ಇನ್ನು ಯುದ್ಧದ ಸಂಭವವೇನೂ ಕಂಡು ಬರುವುದಿಲ್ಲ. ಆದ್ದರಿಂದ ನನ್ನಿಂದ ಕೆಳಗಿನ ಅಧಿಕಾರಿಗಳು ಮೇಲೆ ಬಂದು ಕೆಲಸ ಮಾಡಲಿಕ್ಕಾಗಿ ನಾನು ಈ ಸ್ಥಾನದಿಂದ ವಿಶ್ರಾಂತಿಯನ್ನು ಹೊಂದುತ್ತೇನೆ."

ಆದರೆ ಯುದ್ಧದ ಸಂಭವವಿಲ್ಲವೆಂದು ಹೇಳಿದ ಹಿಂಡನ್ ಬರ್ಗರ ಮಾತು ಅಸತ್ಯವಾಯಿತು. ೧೯೧೪ ರಲ್ಲಿ ಮಹಾಯುದ್ಧವು ಪ್ರಾರಂಭವಾಯಿತು. ಆಗ ಕೈಸರನಿಗೆ ತನ್ನ ಶಕ್ತಿಯಮೇಲೆ ನಂಬಿಕೆಯಿತ್ತು. ಆಸ್ಟ್ರಿಯಾದೇಶವನ್ನು ಯುದ್ಧಕ್ಕಾಗಿ ಪ್ರೇರೇಪಿಸಿದನು.

ರಣಭೇರಿಯನ್ನು ಕೇಳಿದ ಕೂಡಲೆ ಹಿಂಡನ್ ಬರ್ಗರ ಕ್ಷಾತ್ರತೇಜವು ಎಚ್ಚರಗೊಂಡಿತು. ಹಿಂಡನ್ ಬರ್ಗರು ತಾವು ಈ ಯುದ್ಧದಲ್ಲಿ ಸೇರುತ್ತೇನೆಂದು ಕೈಸರನಿಗೆ ನಿವೇದಿಸಿದರು. ಕೈಸರನು ಆ ಪ್ರಾರ್ಥನೆಯನ್ನು ಉಪೇಕ್ಷಿಸಿದನು. ಆದರೆ ರಷ್ಯನರ ಆಕ್ರಮಣದಿಂದ ಪೂರ್ವ ಪ್ರಶ್ಯದಲ್ಲಿ ಜರ್ಮನರಿಗೆ ಸೋಲು ಉಂಟಾದ ಮೇಲೆ ಕೈಸರನಿಗೆ ಎಚ್ಚರವಾಯಿತು. ಆಗ ಕೈಸರನು ಹಿಂಡನ್ ಬರ್ಗರನ್ನು ಪೂರ್ವಸರಹದ್ದಿನಲ್ಲಿ ಯುದ್ಧಮಾಡಲು ನೇಮಿಸಿದನು. ಹಿಂಡನ್ ಬರ್ಗರೇ ಈ ಕಾರ್ಯಕ್ಕೆ ಯೋಗ್ಯರಾಗಿದ್ದರು. ಅವರು ಸೇನಾಪತಿಗಳಾಗಿದ್ದು ಪೂರ್ವಪಕ್ಷದಲ್ಲಿ ವಾಸಮಾಡಿ ಅಲ್ಲಿ ಯಾವ ರೀತಿಯಿಂದ ಯುದ್ಧಮಾಡಬೇಕೆಂದು ಅನುಭವಮಾಡಿಕೊಂಡಿದ್ದರು. ಇವರು ಸೇನಾಪತಿಗಳಾದ ಕೆಲವು ದಿನಗಳಲ್ಲಿ ರಷ್ಯನರನ್ನು ಸೋಲಿಸಿದರು. ರಷ್ಯನರು ಈ ಯುದ್ಧದಲ್ಲಿ ಬಹಳ ನಷ್ಟ ಹೊಂದಿದರು.

ಇದಾದ ಮೇಲೆ ಹಿಂಡನ್ ಬರ್ಗರು ಪೋಲೆಂಡ್ ಮತ್ತು ಲೋಡ್‌ಜೆಕ್ ಯುದ್ಧಗಳಲ್ಲಿ ಜಯಶೀಲರಾದರು. ಆ ವರ್ಷ ಕೈಸರನು ಇವರನ್ನು ಫೀಲ್ಡ್ ಮಾರ್ಷಲರನ್ನಾಗಿ ಮಾಡಿ ಯೋಗ್ಯರೀತಿಯಿಂದ ಆದರಿಸಿದನು.

ಇತ್ತ ಪಶ್ಚಿಮ ಯುದ್ಧಕ್ಷೇತ್ರವಾದ ಬರ್ಡೂನಿನಲ್ಲಿ ಫಾಲ್ಕೇನ್ ಹೇಯನರು ಸೋತ ಮೇಲೆ ಜರ್ಮನ್ ಸೈನಿಕರು ನಿರುತ್ಸಾಹಿಗಳಾಗಲು ಹಿಂಡನ್ ಬರ್ಗರನ್ನು ಪೂರ್ವದಿಂದ ಕರೆಯಿಸಿ ಪಶ್ಚಿಮದಲ್ಲಿ ನಿಯೋಜಿಸಿದನು. ಹಿಂಡನ್ ಬರ್ಗರ ಶಕ್ತಿಯಿಂದ ಸೈನಿಕರು ಉತ್ಸಾಹಗೊಂಡರು. ಹಿಂಡನ್ ಬರ್ಗರು ಪಶ್ಚಿಮ ಯುದ್ಧಕ್ಷೇತ್ರದಲ್ಲಿ ತಮ್ಮ ಯುದ್ಧ ಕಲಾಕೌಶಲವನ್ನು ತೋರಿಸಿದರೂ ಸಫಲರಾಗಲಿಲ್ಲ.

1925 ರಲ್ಲಿ ಜರ್ಮನಿಯ ಮೊದಲನೆಯ ಪ್ರೆಸಿಡೆಂಟರಾದ ಇಬರ್ಟನ ಮರಣದನಂತರ ರಾಜತಂತ್ರವಾದಿಗಳು ಹೋಹೇನ್ ಜೋಲರ್ನ್ ಪರಿವಾರದವರನ್ನು ಪುನಃ ರಾಜ್ಯಾಧಿಕಾರಿಗಳನ್ನಾಗಿ ಮಾಡಬೇಕೆಂದು ಪ್ರಯತ್ನಿಸಿದರು. ಇದಕ್ಕಾಗಿ ಅವರು ಜಾರೇಸನನ್ನು ಪ್ರೆಸಿಡೆಂಟ್ ಸ್ಥಾನಕ್ಕೆ ಯೋಜಿಸಿದರು. ಆದರೆ ಆತನಿಗೆ ಸಾಕಷ್ಟು ಓಟು ದೊರಕದಿರಲು ಎರಡನೆಯ ಚುನಾವಣೆಯಲ್ಲಿ ಹಿಂಡನ್ ಬರ್ಗರನ್ನು ನಿಲ್ಲಿಸಿದರು. ಹಿಂಡನ್ ಬರ್ಗರು ಪ್ರೆಸಿಡೆಂಟರಾದದ್ದನ್ನು ಕೇಳಿ ಜನರು ಇವರು ಕೈಸರನನ್ನು ಪುನಃ ಜರ್ಮನಿಗೆ ತಾರದಿರಲಾರರೆಂದು ಶಂಕಿಸಿದರು. ಜರ್ಮನಿಯ ಜನರು ಪ್ರಾಣಪಣದಿಂದ ಹಿಂಡನ್‌ಬರ್ಗರಿಗೆ ಸಹಾಯವಿತ್ತರು.

ಹಿಂಡನ್ ಬರ್ಗರು ಜರ್ಮನಿಯ ಪ್ರೆಸಿಡೆಂಟರಾದರೂ ಅವರಿಗೆ ಕೈಸರನ ಮೇಲೆ ಅತಿಶಯ ಭಕ್ತಿಯಿತ್ತು. ಅವರು ಸಾಯುವುದಕ್ಕೆ ಸ್ವಲ್ಪ ಮೊದಲು ಕೈಸರನಿಗೊಂದು ಪತ್ರವನ್ನು ಬರೆದಿದ್ದರು. ಪ್ರೆಸಿಡೆಂಟರಾದಂದಿನಿಂದ ಸಾಯುವವರೆಗೂ ಜರ್ಮನಿಯನ್ನು ಮೇಲೆತ್ತುವ ಕಾರ್ಯದಲ್ಲೇ ಹಿಂಡನ್ ಬರ್ಗರಿದ್ದರು. ಕೆಟ್ಟು ಹೋಗುತ್ತಿರುವ ಜರ್ಮನಿಯನ್ನು ಅನೇಕಸಾರೆ ಸರಿಗೊಳಿಸಿದರು.

ಹಿಂಡನ್ ಬರ್ಗರಿಗೆ ಒಬ್ಬನ ಮೇಲೆ ವಿಶ್ವಾಸವಾದರೆ ಸಾಕು. ಅವರು ಮತ್ತೆಂದಿಗೂ ತಮ್ಮ ಪ್ರೀತಿಯನ್ನು ಬಿಡಲಿಕ್ಕಿಲ್ಲ. ಅವರು ನಿಜವಾದ ದೇಶಭಕ್ತರಾಗಿದ್ದರು. ಅವರು ದೇಶಹಿತಕ್ಕಾಗಿ ಶತ್ರುಮಿತ್ರರಲ್ಲಿ ಒಂದೇ ರೀತಿಯಿಂದ ನಡೆಯುತ್ತಿದ್ದರು. ದೇಶಹಿತೈಷಿಯಾದ ವ್ಯಕ್ತಿಯೊಡನೆ ಮತಭೇದವಿದ್ದರೂ ಅವರು ಸಹಕರಿಸುತ್ತಿದ್ದರು. ಹಾಗೆಯೇ ರಾಷ್ಟ್ರವಿರೋಧಿಯಾದವನು ಎಷ್ಟೇ ಪ್ರಿಯನಾದರೂ ಆತನನ್ನು ಅವರು ಮುಖವೆತ್ತಿ ಸಹ ನೋಡುತ್ತಿರಲಿಲ್ಲ.

1930 ನೇ ಜುಲೈ ತಿಂಗಳಲ್ಲಿ ಬ್ರೂನಿಂಗ್ ಸರಕಾರವು ಸೋತುಹೋದಾಗ ಹಿಂಡನ್ ಬರ್ಗರು ಒಂದು ವಿಧದಿಂದ ಡಿಕ್ಟೇಟರರಾಗಿದ್ದರು. 1931ನೇ ಮಾರ್ಚಿಯಲ್ಲಿ ಜರ್ಮನೀ ಪಾರ್ಲಿಮೆಂಟು ಇನ್ನು 6 ತಿಂಗಳುಗಳವರೆಗೆ ಸಭೆ ಸೇರಲಿಕ್ಕಿಲ್ಲವೆಂದು ನಿಶ್ಚಯಿಸಿತು. ಜೂನಿನಲ್ಲಿ ಇದಕ್ಕೆ ವಿರೋಧವು ಬರತೊಡಗಿತು. ಆಗ ಹಿಂಡನ್ ಬರ್ಗರು ಚಾನ್ಸಲರ್ ಬ್ರೂನಿಂಗ್ ಸರಕಾರದ ಧೋರಣೆಯನ್ನು ವಿರೋಧಿಸಿ ಹೊಸ ಚುನಾವಣೆಯಾಗಬೇಕೆಂದು ಹೇಳಿದರು. ಆದರೆ ಜರ್ಮನಿಯ ಬಹುಪಕ್ಷವು ಬ್ರೂನಿಂಗನ ಕಡೆಗೆ ಇಲ್ಲದಿರುವುದನ್ನು ನೋಡಿ ಅವರು ಜರ್ಮನಿಯ ಶಾಸನಾಧಿಕಾರವನ್ನು ಎರಡನೆಯವರಿಗೊಪ್ಪಿಸಲು ಹಿಂಜರಿಯಲಿಲ್ಲ.

ಇದೇ ಕಾಲದಲ್ಲಿ ಹಿಂಡನ್ ಬರ್ಗರ ಪ್ರೆಸಿಡೆಂಟ್ ಸ್ಥಾನದ ಅವಧಿಯು ಸಮಾಪಿಸಿತು. ಭಿನ್ನಭಿನ್ನ ದಲಗಳು ಸಂಘಟಿತವಾದುವು. ಹಿಂಡನ್‌ಬರ್ಗರು ತಮಗೆ ವಾರ್ಧಕ್ಯವು ಪ್ರಾಪ್ತವಾದುದರಿಂದ ಚುನಾವಣೆಗೆ ನಿಲ್ಲುವುದಿಲ್ಲವೆಂದರು. ಆದರೂ ಜರ್ಮನಿಯಲ್ಲಿ ಗೃಹಯುದ್ಧವು ಆಗಬಾರದೆಂಬ ಇಚ್ಛೆಯಿಂದ ಪುನಃ ಚುನಾವಣೆಗೆ ನಿಂತರು. ಈ ಚುನಾವಣೆಯಲ್ಲಿ ಜರ್ಮನ್ ಶಾಸನವಿಧಾನದ ಪ್ರಕಾರ ಹಿಂಡನ್‌ಬರ್ಗರಿಗೆ ಸಾಕಷ್ಟು ಓಟು ದೊರಕಲಿಲ್ಲ. ಆದರೆ 1932ನೆಯ ಎಪ್ರಿಲಿನಲ್ಲಿ ನಡೆದ 2ನೇ ಚುನಾವಣೆಯಲ್ಲಿ 60 ಲಕ್ಷ ಓಟುಗಳು ಬಹುಮತದಿಂದ ದೊರಕಿ ಹಿಂಡನ್ ಬರ್ಗರು ಎರಡನೇ ಸಾರೆ ಪ್ರೆಸಿಡೆಂಟರಾದರು.

ಬಹಳ ಮುದುಕರಾದರೂ ಹಿಂಡನ್ ಬರ್ಗರು ಶಾಸನವಿಧಾನದಲ್ಲಿ ದಕ್ಷರಾಗಿಯೇ ಇದ್ದರು. ಬ್ರೂನಿಂಗ್ ಮಂತ್ರಿಮಂಡಲವು ರಾಜೀನಾಮೆಕೊಟ್ಟಾಗ ಹಿಂಡನ್ ಬರ್ಗರು ವಾನ್‌ಪೋಪನ್‌ರನ್ನು ಚಾನ್ಸಲರನ್ನಾಗಿ ಮಾಡಿ ಎಲ್ಲರನ್ನೂ ಆಶ್ಚರ್ಯಪಡಿಸಿದರು. ಹೀಗಿರಲು 1931ನೇ ಜುಲೈ ಚುನಾವಣೆಯಲ್ಲಿ ಹಿಟ್ಲರನ ಮುಂದಾಳುತನದಿಂದ ಜರ್ಮನ್ ಪಾರ್ಲಿಮೆಂಟಿನಲ್ಲಿ ನಾಜೀ ದಲವು ಬಹು ಸಂಖ್ಯೆಯಿಂದ ಸೇರಿತು. ಹಿಂಡನ್ ಬರ್ಗರು ಹಿಟ್ಲರನೊಂದಿಗೆ ವಾನ್ ಪೋಪನ್‌ರ ಸಹಾಯದಿಂದ ಶಾಸನ ಕಾರ್ಯವನ್ನು ನಡೆಸುವ ಪ್ರಸ್ತಾಪವೆತ್ತಿದಾಗ ಅದು ಹಿಟ್ಲರನಿಗೆ ರುಚಿಸಲಿಲ್ಲ. ಹಿಟ್ಲರನು ಮಂತ್ರಿಮಂಡಲದ ನೇತೃತ್ವವನ್ನೂ ತಾನು ತನ್ನ ಕಡೆಯವರೂ ಪಡೆಯಬೇಕೆಂದಿದ್ದರು. ಹಿಂಡನ್ ಬರ್ಗರು ಮೊದಲು ನಾಜೀ ದಲಕ್ಕೆ ಎಚ್ಚರಕೊಟ್ಟರು. ಕಡೆಗೆ ನಡೆದ ಅನೇಕ ಸಂಗತಿಗಳಿಂದ ನಾಜಿಗಳೇ ಪ್ರಬಲರಾದರು. ಕಡೆಗೆ ಹಿಂಡನ್‌ಬರ್ಗರು ಕೂಡ ಜರ್ಮನಿಯಲ್ಲಿ ಶಾಂತಿಯನ್ನು ಸ್ಥಾಪಿಸಲಿಕ್ಕೆ ಸಮರ್ಥರೆಂದು ತಿಳಿದು 1932ನೇ ಮಾರ್ಚಿ 25 ನೇ ತಾರೀಖಿನಲ್ಲಿ ಹಿಟ್ಲರನನ್ನು ಜರ್ಮನಿಯ ಡಿಕ್ಟೇಟರನನ್ನಾಗಿ ಮಾಡಿದರು.

ಹಿಂಡನ್‌ಬರ್ಗರ ಕಾರ್ಯವು ಮಹತ್ತಾದದ್ದು. ಅವರು ಅನೇಕ ವಿಷಯಗಳಲ್ಲಿ ಸಫಲತೆಯನ್ನು ಹೊಂದಿದ್ದಾರೆ. ಜರ್ಮನಿಯಲ್ಲಿ ಪುನಃ ಅರಾಜಕತೆಯುಂಟಾಗಬಾರದೆಂದು ಕೆಲವು ತಿಂಗಳುಗಳ ಹಿಂದೆ ಹಿಟ್ಲರನು ನಡೆಸಿದ ಹತ್ಯಾಕಾಂಡದಲ್ಲಿ ಹಿಂಡನ್‌ಬರ್ಗರು ಯಾವ ಬಾಧೆಯನ್ನೂ ತಂದೊಡ್ಡಲಿಲ್ಲ. ಸಾಯುವ ಕಾಲಕ್ಕೆ ಹಿಂಡನ್‌ಬರ್ಗರಿಗೆ 86 ವರ್ಷವಾಗಿತ್ತು. ಅವರು ಬಹಳ ಮುದುಕರಾಗಿದ್ದರೂ ಜರ್ಮನಿಗೆ ಅವರ ಅವಶ್ಯಕತೆಯಿತ್ತು. ಅವರ ಮರಣಾನಂತರ ಹಿಟ್ಲರನಿಗೆ ಯಾವ ಬಾಧೆಯೂ ಇಲ್ಲದೆ ಪ್ರೆಸಿಡೆಂಟ್ ಸ್ಥಾನವು ದೊರಕಿತು. ಜರ್ಮನ್ ರಾಷ್ಟ್ರದ ಇತಿಹಾಸದಲ್ಲಿ ಪ್ರಿನ್ಸ್ ಬಿಸ್ಮಾರ್ಕರ ಸ್ಥಾನವು ಹಿಂಡನ್ ಬರ್ಗರಿಗೇ ದೊರಕಿತು. ಹಿಂಡನ್ ಬರ್ಗರ ಹೆಸರು ಈ ಪ್ರಪಂಚದಲ್ಲಿ ಸ್ಥಿರವಾಗಿ ಉಳಿಯಿತು.

ಕೆನಡಾದೇಶದಿಂದ ಆಸ್ಟ್ರೇಲಿಯಾಕ್ಕೆ ವಿಮಾನದಲ್ಲಿ ಹೋಗಬೇಕೆಂದು ಹೊರಟಿದ್ದ ಆಲ್ ಮತ್ತು ಹ್ಯಾನ್ ಎಂಬುವರು ಮಧ್ಯೆ ಪೆಟ್ರೋಲ್ ಎಣ್ಣೆ ಸಾಲದೇಹೋದ್ದರಿಂದ ಎಲ್ಲಿಯೋ ಅದೃಶ್ಯರಾಗಿದ್ದಾರೆ. ಇವರು ಬಿದ್ದ ಅಥವಾ ಇಳಿದ ಸ್ಥಳವನ್ನು ಪತ್ತೆಮಾಡಲು ಅನೇಕ ವಿಮಾನಗಳೂ ಮತ್ತು ಹಡಗುಗಳೂ ೨೪ ಘಂಟೆಗಳ ಕಾಲ ಪ್ರಯತ್ನಪಟ್ಟರೂ ಸಿಕ್ಕದ್ದರಿಂದ ನಿರಾಶರಾಗಿದ್ದಾರೆ.

ಆಸ್ಟ್ರೇಲಿಯಾದೇಶದ ಮುಖ್ಯ ಪಟ್ಟಣವಾದ ಮೆಲ್ ಬೋರನ್ ಎಂಬಲ್ಲಿ ತಪ್ಪದೆ 30 ಘಂಟೆಗಳ ಹೊತ್ತು ಮಳೆಯು ಸುರಿದು ಬಿರುಗಾಳಿಯು ಹೊಡೆದು ಅನೇಕ ಸ್ಥಲಗಳು ನೀರೊಳಗೆ ಮುಳುಗಿದವೆಂದೂ 1[illegible] ಜನರು ಮರಣಹೊಂದಿದರೆಂದೂ 6000 ಜನಗಳಿಗೆ ವಾಸಮಾಡಲು ಮನೆಯಿಲ್ಲದಂತಾಗಿದೆ ಎಂದೂ ತಿಳಿದುಬರುತ್ತದೆ. ಜಿಸ್ ಲ್ಯಾಂಡ್ ಎಂಬಲ್ಲಿ ಸಾವಿರಾರು ಕುರಿಗಳೂ ಕುದುರೆಗಳೂ ಇತರ ಪ್ರಾಣಿಗಳೂ ನೀರಿನಲ್ಲಿ ಕೊಚ್ಚಿಹೋದವೆಂದು ಹೇಳುತ್ತಾರೆ. ಇದರಿಂದ 250000 ಪೌಂಡಿನಷ್ಟು ನಷ್ಟ ಸಂಭವಿಸಿತೆಂದು ಗೊತ್ತಾಗುತ್ತದೆ.

ದಕ್ಷಿಣ ಆರ್ಕಾಟಿಗೆ ಸೇರಿದ ಶಂಕರಪುರ ಎಂಬ ಗ್ರಾಮದಲ್ಲಿ ವಾಸಿಸುವ ರೈತರಿಗೂ ಆ ಗ್ರಾಮದ ಜಹಗೀರದಾರರಿಗೂ ಕಂದಾಯವಿಷಯದಲ್ಲಿ ಬಹುದಿವಸಗಳಿಂದ ಮನಸ್ತಾಪವಿದ್ದು ಈಗ ಸ್ವಲ್ಪ ದಿವಸಗಳಲ್ಲಿ ಜಹಗೀರದಾರರ ಕಡೆಯ ಏಜಂಟರು ಇಬ್ಬರು ಪೋಲೀಸಿನವರನ್ನು ತೆಗೆದುಕೊಂಡು ಕಂದಾಯವಸೂಲಿಗಾಗಿ ಆ ಊರಿಗೆ ಹೋಗಿದ್ದರು. ಆ ಗ್ರಾಮದವರು ಅಂದಾಜ 500 ಜನಗಳವರೆಗೂ ಆಯುಧಪಾಣಿಗಳಾಗಿ ಬಂದು ಪೋಲೀಸಿನವರ ಮೇಲೆ ಬಿದ್ದು ಗಾಯಗೊಳಿಸಿದರು. ಏಜಂಟರನ್ನು ಜೀವಸಹಿತವಾಗಿ ಸುಟ್ಟರು. ಒಬ್ಬ ಪೋಲೀಸಿನವನನ್ನು ನೆಲದಮೇಲೆ ಮಲಗಿಸಿ ಆತನ ಎದೆಯಮೇಲೆ ದೊಡ್ಡ ಕಲ್ಲನ್ನು ಹೇರಿದರು. ಯಾರೋ ದಾರಿಕಾರರು ಬಂದು ಆ ಕಲ್ಲನ್ನು ತೆಗೆದು ಅವನನ್ನು ಆಸ್ಪತ್ರೆಗೆ ಸಾಗಿಸಲು ದಾರಿಯಲ್ಲಿಯೇ ಮರಣಹೊಂದಿದನು. ಇನ್ನೊಬ್ಬನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆಂದೂ ತಿಳಿದುಬಂದಿದೆ.

ವೀರಶೈವರತ್ನ

ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವದರಿಂದ ಇದು "**ವೀರಶೈವರತ್ನ**" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ಕೊಂಡುಕೊಂಡು ಅದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇನೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿವಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೭೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ**. ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು.

ಧಾತುಪುಷ್ಟಿಲೇಹ.

1. ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ; ಇದರ ಸೇವನೆಯಿಂದ ಮಲಬದ್ಧತೆ, ಒಳಜ್ವರ, [illegible], ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಯಕ್ತಿ, ಕಾಲು ಕೀಳುವಿಕೆ, ರಕ್ತಹೀನತೆ, ಬೆನ್ನು ನೋವು, [illegible] ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, [illegible] ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ [illegible]ಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0.

2. **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ. ಮೂತ್ರ[illegible]ದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ [illegible]ವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು. ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0.

3. **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇನ್ಫ್ಲುಯೆಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ. ಬಾಟ್ಲಿ 1ಕ್ಕೆ 1—8—0. [illegible] ಬಾಟ್ಲಿಗೆ 0—13—0. 3ಕ್ಕೆ 4—0—0. ಸಣ್ಣ ಬಾಟ್ಲಿ 3ಕ್ಕೆ 2—4—0.

[illegible]ಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕುದಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗ್ [illegible] ಬರೆಯಿರಿ.

ಎಂ. ಗಣಪಯ್ಯ ಅಂಡ್ ಸನ್ಸ್.

ಆಯುರ್ವೇದಿಕ್ ಫಿಜಿಸಿಯನ್, ರಥಬೀದಿ, ನಂಬರು 271 ಮಂಗಳೂರು.

[illegible] ಸಿಕ್ಕುವ ಸ್ಥಳಗಳು—

ಮೆಸ್ಸರ್ಸ್ ಪೆಟರನ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ.

2

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ, ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲ	ಮೌಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ಕಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತ್ರಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಳಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೩
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೬
ಸಚ್ಛ್ರೀ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೩
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೦—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೦
ಶ್ರೀಮತ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೦—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೬
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೬
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೬
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೬
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೬
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೬
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ಕೊಂಡುಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರ-

ಗಳನ್ನು ಕೊಟ್ಟಿರು- ರು. ಪ್ರಸಿದ್ಧವಾದ ನಶ್ಯದ ಪುಡಿಯಿಂ ಸ್ವಸ್ಥವಾಗುವ ವ್ಯಾ- ಧಿಗಳು ಯಾವವೆಂ- ರೆ:—ಪಿನಶಿ, ಒಂ- ತಲೆನೋವು, ತಲೆ- ಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾ- ಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇ- ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ- ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟ- ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು- ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ- ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಬಿಷಧವಾಗಿ ಉಪಯೋ- ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ-

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[50] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧, ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पंडित श्रीकाशीनाथशास्त्री यांचें भाषण (मराठी)	८ आ[illegible]
Speeches by Pandit Shri Kashinatha Shastri (*English*)	12 A[illegible]
ವೇದೋಕ್ತಶಿವಪೂಜಾವಿಧಿ	೧೦ ಆ[illegible]
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[illegible]
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ[illegible]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[illegible]
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆ[illegible]
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ವೀರಶೈವಸಿದ್ಧಾಂತಸುಧಾಕರ	೨ ರೂ[illegible]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ[illegible]
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ[illegible]
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	೮ ರೂ[illegible]
लिंगधारणचंद्रिका (संस्कृत)	३ [illegible]
महानारायणोपनिषत् (वीरशैवभाष्य-संस्कृत)	१ [illegible]
वीरशैवेंदुशेखर (संस्कृत)	१ [illegible]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ[illegible] ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್[illegible] ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಮಾಮವಿದ್ಯಾ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ[illegible]

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಕ್ಷಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಅಸ್ಮಾಮ ವಿದ್ಯಾ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ನೇ ಡಿಶಂಬರ್ ೧೯೩೪ [ಸಂಚಿಕೆ ೩೨

ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೦ನೆಯ ಕರ್ನಾಟಕ ಸಾಹಿತ್ಯಸಮ್ಮೇಳನದ ಆಹ್ವಾನ ಪತ್ರಿಕೆಯ ೫ ನೆಯ ಕಲಮಿನ ತಿದ್ದುಪಾಟು.

ಮಹಾಶಯರೆ,

ಇದೇ ಡಿಸೆಂಬರು ತಿಂಗಳಲ್ಲಿ ರಾಯಚೂರು ನಗರದಲ್ಲಿ ನಡೆಯುವ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಆಹ್ವಾನಪತ್ರಿಕೆಯ ನೋಡತಕ್ಕ ಸ್ಥಳಗಳ ಪಟ್ಟಿಯ ೫ ನೆಯ ಕಲಮಿನಲ್ಲಿ ಮಾನವಿ ಜಗನ್ನಾಥದಾಸರ ಜನ್ಮಸ್ಥಳವೆಂದು ಪ್ರಕಟಿಸಲಾಗಿದೆ. ಆದರೆ ಅದು ಜಗನ್ನಾಥದಾಸರ ಜನ್ಮಸ್ಥಳವಲ್ಲವೆಂದು ರಾಯಚೂರು ವೀರಶೈವ ಪ್ರಮುಖರಿಂದ ತಿಳಿದು ಬಂದಿದೆ. ಈ ಪ್ರಕಾರ ತಪ್ಪು ಸುದ್ದಿಯು ಆಹ್ವಾನ ಪತ್ರಿಕೆಯಲ್ಲಿ ಪ್ರಕಟನೆಯಾದದ್ದಕ್ಕೆ ವಿಷಾದಿಸುತ್ತೇವೆ. ಈಗ ಪ್ರಕಟಿಸಿರುವ ಸ್ಥಳಗಳಲ್ಲದೆ, ರಾಯಚೂರು ಸುತ್ತಮುತ್ತಲೂ ನೋಡತಕ್ಕಂಥಾ ವೀರಶೈವಕ್ಷೇತ್ರಗಳು ಬಹಳ ಇರುತ್ತವೆ.

ಹರದರ ಶ್ರೀಪಾಲರಾಜ,
ಗೌ|| ಕಾರ್ಯದರ್ಶಿ ಸ್ವಾಗತಮಂಡಲ.
ಸಿ. ಕೆ. ವೆಂಕಟರಾಮಯ್ಯ,
ಗೌ|| ಕಾರ್ಯದರ್ಶಿ. ಸಾಹಿತ್ಯ ಪರಿಷತ್ತು.

ಸಿಂಗಟಾಲೂರು ಗುಡ್ಡಕ್ಕೆ ಬಳ್ಳಾರಿ ಡಿ|| ಎಲ್. ಬಿ. ಪ್ರೆಸಿಡೆಂಟರ ಆಗಮನ.

ತಾರೀಖು ೧೬-೧೧-೩೪ ನೆಯ ಇಸವಿ ಸೋಮವಾರ ದಿವಸ ಶ್ರೀ ವೀರಭದ್ರದೇವರ ದರ್ಶನಾರ್ಥವಾಗಿ ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದ ಮ|| ರಾ|| ಪೈ. ಮಹಾಬಲೇಶ್ವರಪ್ಪನವರು ಬಂದು ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಸಂತೋಷಪಟ್ಟು ದೇವಸ್ಥಾನದ ವಿಜಿಟರ್ಸ್ ಬುಕ್ಕಿನಲ್ಲಿ ಈ ಕೆಳಗೆ ಬರೆದಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುತ್ತಾರೆ.

'ಈ ದಿವಸ ನಾನು ದೇವಸ್ಥಾನವನ್ನು ಸಂದರ್ಶಿಸಿದೆನು. ದೇವಸ್ಥಾನದ ವ್ಯವಸ್ಥಾಪಕ ಕಮಿಟಿಯವರು ದೇವಾಲಯವನ್ನೂ ಸುತ್ತಲಿನ ಪ್ರದೇಶವನ್ನೂ ಸುಧಾರಿಸಲಿಕ್ಕೆ ಸತತ ಪ್ರಯತ್ನಪಡುತ್ತಲಿರುತ್ತಾರೆ. ಮುಂಬಯಿ ಮತ್ತು ಮದ್ರಾಸ್ ಇಲಾಖೆಯೊಳಗಿನ ಸರ್ವಜನರಿಂದಲೂ ಎಲ್ಲ ಬಗೆಯಾಗಿ ಉತ್ತೇಜನ ಹೊಂದಲಿಕ್ಕೆ ಕಮಿಟಿಯವರು ಅರ್ಹರಿರುತ್ತಾರೆ.'

ಪಂಚಕಮಿಟಿಯ ಕ್ಲಾರ್ಕ್ ರುದ್ರಪ್ಪ.

ಪಂಚರತ್ನಗಳು.

ದಕ್ಷಿಣಮಹಾರಾಷ್ಟ್ರಭಾಗದಲ್ಲಿ ಪಂಚರತ್ನರೂಪರಾಗಿರುವ ಗುರುಭಕ್ತಾಗ್ರೇಸರರು ಪ್ರಕಾಶಿಸುತ್ತಿರುವರು. ಈ ರತ್ನಗಳಿಂದ ವೀರಶೈವರಲ್ಲಿ ವಿಶೇಷ ಜಾಗ್ರತಿಯಾಗಹತ್ತಿರುತ್ತದೆ.

೧ ನೆಯ ರತ್ನವು—ಸಿದ್ಧರಾಮಪ್ಪ ಬುಗಡೆ ಚಪ್ಪಳಗಾಂವ ಇವರು ಸದ್ಯಃ ಸೋಲಾಪೂರದಲ್ಲಿರುತ್ತಾರೆ. ಇವರು ಸೋಲಾಪೂರದಲ್ಲಿ ಕಸಬಾ ಪೇಟೆಯಲ್ಲಿ ಫರಾಳಪ್ಪನಮಠದಲ್ಲಿ ಶ್ರೀಹೋಟಗೀ ಶ್ರೀಗಳವರ ಪೂಜೆಯ ಸಮಾರಂಭದಲ್ಲಿ ವಿಶೇಷ ಪರಿಶ್ರಮವನ್ನು ವಹಿಸಿದ್ದಲ್ಲದೆ ಸೋಲಾಪೂರ ವೀರಶೈವರ ದೀಕ್ಷಾ ಸಮಾರಂಭದಲ್ಲಿಯೂ ಮುಂದಾಳಾಗಿದ್ದರು. ಅಲ್ಲದೆ ಚಪ್ಪಳಗಾಂವ ಎಂಬಲ್ಲಿ ೪೦೯ ಜನರ ದೀಕ್ಷೆಯ ಸಮಯದಲ್ಲಿಯುಂತೂ ಇವರ ಪ್ರಯತ್ನವು ಅಸಾಧಾರಣವಾದುದು! ಇವರ ವಯಸ್ಸು ೩೫.

೨ ನೆಯ ರತ್ನವು—ಬಸವಣ್ಣಪ್ಪ ಪಾಟೀಲ ಚಪ್ಪಳಗಾಂವ ಸದ್ಯಃ ಮುಕ್ಕಾಂ ಅಕ್ಕಲಕೋಟೆ, ಇವರು ದೊಡ್ಡ ವ್ಯಾಪಾರಿಗಳೂ ಶ್ರೀಮಂತರೂ, ಗುಣವಂತರೂ ಆಗಿರುತ್ತಾರೆ. ಇವರ ವಿಶ್ವಪ್ರಯತ್ನದಿಂದ ಚಪ್ಪಳಗಾಂವದಲ್ಲಿ ವೀರಶೈವ ಸೇವಾಸಂಘವು ಸ್ಥಾಪನವಾಗಿ "ಶ್ರೀ ಮರುಳಾರಾಧ್ಯ ವಾಚನಾಲಯವು, ಸ್ಥಾಪಿತವಾಗಿದೆ. ಇವರಲ್ಲಿರುವ ನಿಷ್ಠೆ, ಗುರುಭಕ್ತಿ, ಯುಕ್ತಿ, ಇವುಗಳನ್ನು ಯಾವ ಶಬ್ದಗಳಿಂದ ವರ್ಣಿಸಿದರೂ ತೀರದು. ಇವರ ವಯಸ್ಸು ೪೦.

೩ ನೆಯ ರತ್ನವು—ಶಿವಲಿಂಗಪ್ಪ ಪಾಟೀಲಧೋತ್ರಿ ಇವರು ವೀರಶೈವ ಧರ್ಮಸುಧಾರಣೆಗಾಗಿ ಅನೇಕಾನೇಕ ಕಾರ್ಯಗಳನ್ನು ಮಾಡಿರುವರು ಮತ್ತು ಮಾಡುತ್ತಿರುವರು. ಇವರು ಗುರುನಿಂದೆಯನ್ನು ಎಂದೂ ಸಹಿಸರು. ಇವರ ಧರ್ಮಪತ್ನಿಯವರು ಶಿವಾಧೀನರಾದ ನಂತರ ಸ್ವಯಂಪಾಕಿಗಳಾಗಿ ಧರ್ಮಕಾರ್ಯದಲ್ಲಿ ತೊಡಗಿರುತ್ತಾರೆ. ೨ ನೇ ಲಗ್ನವಾಗಲಿಕ್ಕೆ ಎಷ್ಟೋ ಜನರು ಆಗ್ರಹಪಟ್ಟರೂ, ಸಮಾಜಸೇವೆಗೆ ತೊಂದರೆಯಾಗಬಹುದೆಂದು ಹಾಗೆಯೇ ಇರುವರು. ಇವರ ಪ್ರಯತ್ನದಿಂದ ಧೋತ್ರಿಯಲ್ಲಿ 'ವೀರಶೈವ ಧರ್ಮಸುಧಾರಣಾಸಂಘ' ವು ಸ್ಥಾಪಿತವಾಗಿದೆ. "ಶ್ರೀಚನ್ನವೀರಶಿವಾಚಾರ್ಯ" ವಾಚನಾಲಯವೂ ಒಳ್ಳೇ ಉತ್ತಮ ಪ್ರಕಾರದಲ್ಲಿದೆ." ಮೊನ್ನೆ ಶ್ರೀ|| ಷ|| ಬ್ರ|| ಗಂಗಾಧರ ಶಿವಾಚಾರ್ಯರು ಮಹಂತಿನ ಮಠ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ 'ವೀರಶೈವ ಧರ್ಮೋನ್ನತಿ ಪರಿಷತ್ತು' ನೆರವೇರಿಸಲ್ಪಟ್ಟಿತು. ಇವರ ವಯಸ್ಸು ೨೯.

೪ ನೆಯ ರತ್ನವು—ವೀರಯ್ಯನವರು ಲಿಂಬಿಚಿಂಚೋಳಿ ಇವರ ವಿಶ್ವಪ್ರಯತ್ನದಿಂದ ಹಾಲಳ್ಳಿ, ವಾಡಿ, ಚಿಂಚೋಳಿ, ಎತ್ನಾಳ, ಇತ್ಯಾದಿ ಗ್ರಾಮಗಳು ಸುಧಾರಿಸಿವೆ. ೨೨ ವಯಸ್ಸು

೫ ನೆಯ ರತ್ನವು—ನಿಜಗುಣಸ್ವಾಮಿ ದಿಂಡೂರು ಇವರು ಪರ್ವತ ಶಾಖೆಗೆ ಸೇರಿದವರು. ಇವರ ಮಠದಲ್ಲಿ ಯಾವಾಗಲೂ ದಾಸೋಹವು ನಡೆಯುತ್ತಿದೆ. ಇವರಿಗೆ ತಕ್ಕ ಧರ್ಮಪತ್ನಿಯವರೂ ಇರುತ್ತಾರೆ. ದಿಂಡೂರು ಜನರು ಮಹಾ ಅಜ್ಞಾನಿಗಳು. ಅವರಿಗೆ ಸದ್ಬೋಧಮಾಡಿ, ಮೊನ್ನೆ ೧೫೫ ಜನರಿಗೆ ಶಿವದೀಕ್ಷಾಸಂಸ್ಕಾರವನ್ನು ಮಾಡಿಸಿದರು. ಇವರ ವಯಸ್ಸು ೩೧.

ಇವರೆಲ್ಲರೂ ಗೃಹಸ್ಥಾಶ್ರಮಿಗಳಾದರೂ ಆ ಕಡೆಗೆ ಲಕ್ಷ್ಯಗೊಡದೆ ಧರ್ಮಕಾರ್ಯದಲ್ಲಿ ಅಹೋರಾತ್ರಿ ದುಡಿಯುತ್ತಿರುವುದು ಅತ್ಯಂತ ಸ್ತುತ್ಯವಾಗಿದೆ. ಕೇವಲ ಧರ್ಮಸುಧಾರಣೆಗಾಗಿ ಅಧಿಕಾರವನ್ನು ವಹಿಸಿರುವ ಪಟ್ಟಚರಾಧಿಕಾರಿಗಳೇ! ಈ ಗೃಹಸ್ಥಾಶ್ರಮಿಗಳ ಧರ್ಮಾಭಿಮಾನವನ್ನು ನೋಡಿರಿ! ಇನ್ನುಮುಂದಾದರೂ ಕಣ್ದೆರೆಯಿರಿ! ಎಚ್ಚರಾಗಿರಿ! ನಿಮ್ಮ ಕಾರ್ಯದಲ್ಲಿ ಆಸಕ್ತರಾಗಿರಿ.

ಚಪ್ಪಳಗಾಂವ ಪೈಕಿ ವಾಡಿಯಲ್ಲಿ ೨೧೧ ಜನರು ದೀಕ್ಷಾಸಂಸ್ಕಾರವನ್ನು ಹೊಂದಿದರು. ಆಗ್ಗೆ ಬಸವಂತಪ್ಪ ಮತ್ತು ಸಾತಪ್ಪ ಇವರು ವಿಶೇಷಶ್ರಮವಹಿಸಿದರು. ಅಲ್ಲಿ 'ಪಂಚಾಚಾರ್ಯ ಭಜನಾಸಂಘವು' ಸ್ಥಾಪನವಾಗಿದೆ.

ದಿಂಡೂರಿನಲ್ಲಿ ೧೫೫ ಜನರು ದೀಕ್ಷೆಯನ್ನು ಹೊಂದಿದರು. ಆಗ್ಗೆ ಧೋಂಡಪ್ಪ ಪಾಟೀಲ, ಸಿದ್ಧರಾಮಪ್ಪ ನಿಜಗುಣಯ್ಯ, ಮಲ್ಲಯ್ಯ, ವೀರಯ್ಯ ಇತ್ಯಾದಿಯವರು ಬಹಳೇ ಕಷ್ಟಪಟ್ಟರು. ಅಲ್ಲಿ ಪಂಚಾಚಾರ್ಯ ಭಜನಾಸಂಘವು ಸ್ಥಾಪನವಾಯಿತು. ಶಂಕರನೆಂಬ ೧೫ ವರ್ಷದ ಹುಡುಗನು ತನ್ನ ಕೋಮಲ ಕಂಠದಿಂದ ಸರ್ವರನ್ನೂ ಆನಂದಗೊಳಿಸಿದನು.

ಓರ್ವ ಪ್ರವಾಸಿ.

ಸ್ವೀಕಾರ

ಬಳ್ಳಾರಿ ಡಿ|| ಕುಡತಿನಿಯಲ್ಲಿರುವ ಶ್ರೀಮತಿ ಎಣ್ಣಿ ವೀರಮ್ಮನವರು ತಮ್ಮಲ್ಲಿ ರೇಣುಕವಿಜಯ ಪುರಾಣವನ್ನು ಪ್ರಾರಂಭಿಸಿ ಸಮಾಪ್ತಿ ಸಮಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಕಂಪಲಿ ಸೋಮಣ್ಣನವರ ದ್ವಾರಾ ತಲ್ಪಿರುತ್ತವೆ.

ಈಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ.
ಬೆಂಗಳೂರು.

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ,
ಶ್ರೀಕ್ಷೇತ್ರಕಾಶೀ.

ಆಹಾರ.

ದ್ರವರೂಪವಾಗಿರುವೀ ಆಹಾರರಸವು ಮೊದಲು ಸ್ಥಾಯಿರಸದ ಸ್ಥಾನಕ್ಕೆ (ಹೃದಯಕ್ಕೆ ಹೋಗಿ ಅಲ್ಲಿರುವ ಸ್ಥಾಯಿರಸದೊಡನೆ ಸೇರಿ ಆ ರಸವನ್ನು ಪೋಷಣೆಗೊಳಿಸಿ ಅನಂತರ ಯಕೃತ್ (Liver) ಪ್ಲೀಹ (Spleen) (ಇವು ಹೃದಯದ ಬಲಭಾಗ ಮತ್ತು ಎಡಭಾಗದಲ್ಲಿರುತ್ತವೆ. ಇವೇ ರಕ್ತವನ್ನೂ ಆಹಾರವನ್ನು ಪಚನಮಾಡುವ ಪಿತ್ತರಸವನ್ನೂ ಹುಟ್ಟಿಸತಕ್ಕವುಗಳಾಗಿವೆ) ಗಳಲ್ಲಿ ಪ್ರವೇಶಿಸಿ ರಂಜಕಪಿತ್ತದ ಉಷ್ಣತೆಯಿಂದ ಪಕ್ವವಾಗಿ ರಕ್ತವಾಗುವುದು; ರಕ್ತವು ಸಂಪೂರ್ಣ ಶರೀರವನ್ನು ವ್ಯಾಪಿಸಿಕೊಂಡು ಪ್ರಾಣರಕ್ಷಕವಾಗಿರುತ್ತದೆ. ಯಾವ ರೀತಿಯಾಗಿ 'ರಸವು' ರಕ್ತಸ್ಥಾನಕ್ಕೆ ಹೋಗಿ ರಕ್ತವಾಗಿ ಪರಿಣಮಿಸುವುದೋ ಅದೇ ರೀತಿಯಾಗಿ ರಸದಿಂದ ಪೋಷಿತವಾಗಿರುವೀ 'ರಕ್ತವು' ಮಾಂಸಸ್ಥಾನದಲ್ಲಿ ಪ್ರವೇಶಿಸಿ ಮಾಂಸದ ರೂಪವನ್ನು ಹೊಂದಿ ಸ್ಥಾಯಿರೂಪದಿಂದಿರುವ ಮಾಂಸವನ್ನು ಪೋಷಿಸುವುದು. ಇದರಂತೆಯೇ ಮಾಂಸದಿಂದ ಮೇದಸ್ಸು (ಕೊಬ್ಬು) ಮೇದಸ್ಸಿನಿಂದ ಅಸ್ಥಿ (ಎಲಬು) ಅಸ್ಥಿಯಿಂದ ಮಜ್ಜ (ಎಲುಬಿನಲ್ಲಿ ಕೂಡಿರುವ ಒಂದು ವಿಧವಾದ ರಸ) ಗಳ ರೂಪದಿಂದ ಪರಿಣತವಾಗಿ ಆ ರಸವೇ ಕಡೆಗೆ ವೀರ್ಯದ ರೂಪವನ್ನು ಹೊಂದುವುದು. ಆಹಾರ ರಸದಿಂದುದಯಿಸುವ ಸಪ್ತಧಾತುಗಳು (ಇವುಗಳಿಗೆ 'ಪೋಷಕ' ವೆಂಬ ಹೆಸರು ಬಂದಿರುವುದು) ಗರ್ಭದಿಂದಲೇ ಉತ್ಪನ್ನಗಳಾಗಿ ಕಾಲಕ್ರಮದಿಂದಭಿವೃದ್ಧಿಗೊಂಡು ಶರೀರದಲ್ಲಿ ಸ್ಥಾಯಿರೂಪದಿಂದಿರುವ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜ, ಶುಕ್ರ (ವೀರ್ಯ) ಗಳೆಂಬ ಸಪ್ತಧಾತುಗಳನ್ನು (ಈ ಸ್ಥಾಯಿ ಧಾತುಗಳು "ಪೋಷ್ಯ" ವೆಂಬ ಹೆಸರನ್ನು ಹೊಂದಿವೆ) ಪರಿಪೋಷಿಸುತ್ತವೆ. ಇದೇ ಕ್ರಮದಿಂದ ಸ್ತ್ರೀಯರಲ್ಲಿ ಮಾಸಿಕ ರಜೋತ್ಪತ್ತಿಯಾಗುವುದು.

ಆಹಾರವು ಪರಿಪಾಕವಾಗಿ ರಸಾದಿ ಸಪ್ತಧಾತುಗಳ ರೂಪವನ್ನು ಹೊಂದಲು ಎಷ್ಟು ಕಾಲವು ಹಿಡಿಯುತ್ತದೆಂಬ ವಿಷಯದಲ್ಲಿ ಆಯುರ್ವೇದ ಗ್ರಂಥಕಾರರು ಭಿನ್ನಭಿನ್ನಮತಗಳನ್ನು ಪ್ರಕಟಪಡಿಸಿರುತ್ತಾರೆ. ಸುಶ್ರುತಮಹರ್ಷಿಯು—

ಷಟಿಲು ತ್ರೀಣಿ ತ್ರೀಣಿ ಕಲಾಸಹಸ್ರಾಣಿ ಪಂಚ
ದಶ ಚ |
ಕಲಾ ಏಕೈಕಸ್ಮಿನ್ ಧಾತೌ ಅವತಿಷ್ಠತೆ; ಏವಂ
ಮಾಸೇನ
ರಸಃ ಶುಕ್ರೀಭವತಿ ಸ್ತ್ರೀಣಾಂ ಚಾರ್ತವಂ ||
ಸು. ಸೂ. ಅ೧೪.

ಆಹಾರವು ೨೪ ಗಂಟೆಗಳಲ್ಲಿ ರಸವಾಗಿ ಪರಿಣಾಮವನ್ನು ಹೊಂದಿ ಈ ರಸವೇ ಐದೈದು ದಿವಸಗಳವರೆಗೆ ಒಂದೊಂದು ಧಾತುವಿನಲ್ಲಿದ್ದು ಆಯಾಯ ಧಾತುವಿನ ರೂಪವನ್ನು ಹೊಂದಿ ಅದನ್ನು ಪೋಷಿಸುತ್ತ ಕ್ರಮವಾಗಿ ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜಗಳ ರೂಪದಿಂದ ಪರಿಣತವಾಗಿ ಕಡೆಗೆ ವೀರ್ಯದ ರೂಪವನ್ನು ಧರಿಸುವುದು. ಹೀಗೆ ಇಂದು ಉಂಡ ಅನ್ನವು ೩೦ ದಿನಗಳ ಅವಧಿಯೊಳಗೆ ವೀರ್ಯವಾಗುವುದೆಂದು ಪ್ರತಿಪಾದಿಸಿರುವನು.

ಚರಕಸಂಹಿತೆಯ ವ್ಯಾಖ್ಯಾಕಾರನಾದ ಚಕ್ರಪಾಣಿಯು

ಆಹಾರೋಽದ್ಯತನಃ ಶ್ವೋ ಹಿ ರಸತ್ವಮನುಗಚ್ಛತಿ
ಶೋಣಿತತ್ವಂ ತೃತೀಯೇಽಹ್ನಿ ಚತುರ್ಥೇ
ಮಾಂಸತಾಮಪಿ ||
ಮೇದಸ್ತ್ವಂ ಪಂಚಮೇ, ಷಷ್ಠೇತ್ವಸ್ಥಿತ್ವಂ,
ಸಪ್ತಮೇತ್ವಿಯಾತ್
ಮಜ್ಜತಾಂ ಶುಕ್ರತಾಂ ಯಾವನ್ನಿಯಮಾದಷ್ಟಮೇ
ನ್ಯಣಾಂ || ಚ. ಚಿ. ಅ೧೫.

ಎಂಬ ಪರಾಶರಮುನಿಯ ಮತವನ್ನುದ್ಧರಿಸಿರುವನು. ಇದರಿಂದ ಆಹಾರವು ರಸದಿಂದ ವೀರ್ಯದವರೆಗೆ ಪರಿಣಮಿಸಲು ೮ ದಿನಗಳು ಹಿಡಿಯುವುವೆಂದು ಪರಾಶರನ ಮತವಾಯಿತು.

ಇನ್ನು ಕೆಲಬರು ೬ ದಿನಗಳಲ್ಲಿ ಮತ್ತೆ ಕೆಲಬರು ೨೪ ಗಂಟೆಗಳಲ್ಲಿ ಆಹಾರವು ರಸಾದಿ ಶುಕ್ರಾಂತಧಾತುಗಳ ರೂಪದಿಂದ ಪರಿಣತವಾಗುವುದೆಂದು ಹೇಳುವರೆಂಬುದು "ಷಡ್ಭಿಃ ಕೇಚಿದಹೋರಾತ್ರೈರಿಚ್ಛಂತಿ ಪರಿವರ್ತನಂ" (ಚ. ಚಿ. ಅ೧೫) ಎಂಬ ಚರಕೋಕ್ತಿಯಿಂದ ತಿಳಿದು ಬರುತ್ತದೆ.

ಈ ವಿವಾದಗ್ರಸ್ತವಿಷಯವನ್ನು ಚರಕಮಹರ್ಷಿಯು ಸರ್ವಸಮ್ಮತವಾಗಿರುವಂತೆ ಸರಳರೀತಿಯಿಂದ 'ಸಂತತ್ಯಾ ಭೋಜ್ಯಧಾತೂನಾಂ ಪರಿವೃತ್ತಿಸ್ತು ಚಕ್ರವತ್' (ಚ. ಚಿ. ಅ. ೧೫)ಎಂದು ಪ್ರತಿಪಾದಿಸಿರುತ್ತಾನೆ. 'ಧಾತವೋ ಹಿ ಧಾತ್ವಾಹಾರಾಃ' (ಚ. ಚಿ. ಅ ೧೫) ಎಂಬ ನಿಯಮವನ್ನನುಸರಿಸಿ ಧಾತುಗಳು ಒಂದಕ್ಕೊಂದು ಆಹಾರವಾಗಿರುತ್ತವೆ. ರಸವು ರಕ್ತಕ್ಕೂ, ರಕ್ತವು ಮಾಂಸಕ್ಕೂ, ಮಾಂಸವು ಮೇದಸ್ಸಿಗೂ, ಮೇದಸ್ಸು ಅಸ್ಥಿಗೂ, ಅಸ್ಥಿಯು ಮಜ್ಜಕ್ಕೂ, ಮಜ್ಜವು ವೀರ್ಯಕ್ಕೂ ಆಹಾರವಾಗಿವೆ. ರಸವು ಸಕಲ ಧಾತುಗಳನ್ನೂ ಪೋಷಿಸುತ್ತದೆ. ರಸದಿಂದ ಪರಿಪೋಷಿತಗಳಾದೀ ಧಾತುಗಳು ಸಂಪೂರ್ಣ ಶರೀರದಲ್ಲಿ ವಿಶ್ರಾಂತಿಯಿಲ್ಲದೆ ಚಕ್ರದಂತೆ ಸುತ್ತುತ್ತ ತಮ್ಮ ತಮ್ಮ ಅಗ್ನಿಬಲಾನುಸಾರವಾಗಿ ಪರಿಪಾಕ ಮತ್ತು ಪರಿಣಾಮವನ್ನು ಹೊಂದುತ್ತಿರುವುವು.

ಬಾವಿಯಿಂದ ನೀರು ತುಂಬಿದ ಕೊಡವನ್ನು ಹಗ್ಗದ ಮೂಲಕ ಆಯಾಸವಿಲ್ಲದೆ ಮೇಲಕ್ಕೆಳೆದುಕೊಳ್ಳಲೋಸುಗ ಬಾವಿಯ ಮೇಲೆ ಒಂದು ಚಕ್ರವು (ಗಾಲಿ) ಇರುವುದು ಸರಿಯಷ್ಟೆ! ಈ ಚಕ್ರವು ಹಗ್ಗವನ್ನೆಳೆಯುವ ವ್ಯಕ್ತಿಯ ಕೈಯ ಬಲವನ್ನನುಸರಿಸಿ ವೇಗ ಅಥವಾ ಮಂದಗತಿಯಿಂದ ತಿರುಗುವುದಲ್ಲವೆ? ಕೈಗಳಲ್ಲಿ ಹೆಚ್ಚಾದ ಬಲವಿದ್ದರೆ ಚಕ್ರವು ವೇಗದಿಂದ ತಿರುಗಿ ನೀರಿನ ಕೊಡವೂ ಬಹು ಬೇಗನೆ ಮೇಲಕ್ಕೆ ಬರುವುದು. ಕೈಗಳ ಬಲವು ಕಡಿಮೆಯಾಗಿದ್ದರೆ ಚಕ್ರವು ಮೆಲ್ಲಗೆ ತಿರುಗುತ್ತ ನೀರಿನ ಕೊಡವೂ ಮೇಲಕ್ಕೆ ಮೆಲ್ಲಗೆ ಬರುವುದು. ಇದರಂತೆಯೇ ಧಾತುಗಳಲ್ಲಿ ಅಗ್ನಿಬಲವು ಸರಿಯಾಗಿದ್ದರೆ ರಸದಿಂದ ತೃಪ್ತಗಳಾಗಿರುವ ಧಾತುಗಳು ಶರೀರದಲ್ಲಿ ವೇಗದಿಂದ ಸುತ್ತುತ್ತ ವೇಗದಿಂದಲೇ ಪರಿಪಾಕ ಮತ್ತು ಪರಿಣಾಮವನ್ನು ಹೊಂದುವುದರಿಂದ ವೀರ್ಯವೂ ಶೀಘ್ರವಾಗಿಯೇ ಹುಟ್ಟುವುದು. ಇನ್ನು ಧಾತುಗಳಲ್ಲಿ ಉಷ್ಣತೆಯು ಕಡಿಮೆಯಾಗಿದ್ದರೆ ಧಾತುಗಳ ಪರಿಪಾಕ, ಪರಿಣಾಮಗಳು ಮಂದಗತಿಯಿಂದುಂಟಾಗುವುದರಿಂದ ವೀರ್ಯವೂ ತಡವಾಗಿಯೇ ಹುಟ್ಟುತ್ತದೆ. ನೀರಿನ ಕೊಡವು ಬೇಗನೆ ಅಥವಾ ಮೆಲ್ಲನೆ ಬರಲು "ಚಕ್ರದ ಗತಿಯು" ಹೇಗೆ ಕಾರಣವಾಗಿರುವುದೋ ಹಾಗೆಯೇ ಆಹಾರರಸವು ವೀರ್ಯರೂಪವನ್ನು ಹೊಂದಲು "ಧಾತುಗಳ ಅಗ್ನಿಬಲ" ವೇ ಕಾರಣವಾಗಿರುವುದರಿಂದ ಇಷ್ಟೇ ದಿನಗಳಿಗೆ ಆಹಾರದಿಂದ ವೀರ್ಯವುಂಟಾಗುತ್ತದೆಂದು ನಿರ್ಧರಿಸುವುದು ಅಸಂಭವವಾಗಿರುತ್ತದೆ. ಈ ಚಕ್ರಗತಿಯ ಸಿದ್ಧಾಂತವನ್ನವಲಂಬಿಸಿಯೇ ಆಹಾರಪರಿಣಾಮಕಾಲದ ವಿಷಯದಲ್ಲಿ ವಿಭಿನ್ನಮತಗಳುಂಟಾಗಿರುವುವು. ಸಕಲ ಮತಗಳಿಗೂ, ಈ "ಚಕ್ರಸಿದ್ಧಾಂತ" ವೇ ಆಧಾರವಾಗಿರುತ್ತದೆ. ಈ ಚರಕಮಹರ್ಷಿಯ ಮತವನ್ನೇ ಅನುಸರಿಸಿ "ಕೃತ್ಸ್ನಾಹ್ನೇಯನು" "ರಸಪರಿಣಾಮೋಽಪಿ ಅಗ್ನ್ಯಾದಿಭೇದೇನ ಪ್ರಕೃಷ್ಟಾಪ್ರಕೃಷ್ಟಕಾಲಜ ಉಕ್ತ ಏವ" ಎಂದು ಹೇಳಿರುವುದನ್ನು ಚಕ್ರಪಾಣಿಯು ಮೇಲುದಹರಿಸಿರುವ "ಷಡ್ಭಿಃಕೇಚಿದಹೋರಾತ್ರೈಃ" ಎಂಬ ಶ್ಲೋಕದ ವ್ಯಾಖ್ಯಾನಾವಸರದಲ್ಲಿ ಉದ್ಧರಿಸಿರುವನು. ವಾಗ್ಭಟಾಚಾರ್ಯನಾದರೂ ಚರಕಮತವನ್ನೇ ಸಮರ್ಥನಮಾಡಿರುತ್ತಾನೆ.

ಆಹಾರರಸದಿಂದ ಹುಟ್ಟುವ ಕಡೆಯ ಧಾತುವಾಗಿರುವ ಪೋಷಕವೀರ್ಯದಿಂದ ಬಿಳುಪು, ಕೆಂಪು, ಹಳದಿ ಬಣ್ಣಗಳಿಂದ ಮಿಶ್ರವಾಗಿ ತೇಜೋಮಯವಾದ ಒಂದು ಸೂಕ್ಷ್ಮವಸ್ತುವು ಹುಟ್ಟಿ "ಓಜ" ವೆಂಬ ಸಂಜ್ಞೆಯಿಂದೊಡಗೂಡಿ ಸಂಪೂರ್ಣಶರೀರದ ಕಾರ್ಯಗಳಿಗೆ ಉತ್ತೇಜನವನ್ನುಂಟುಮಾಡುತ್ತದೆ. ಈ ಓಜಸ್ಸು ಎರಡು ವಿಧವಾಗಿದೆ; ಒಂದು ೮ ಬಿಂದುಗಳಿಂದೊಡಗೂಡಿ ಯಾವಾಗಲೂ ಹೃದಯದಲ್ಲಿಯೇ ಇದ್ದು ಹೃದಯವನ್ನು ರಕ್ಷಿಸುವುದು. ಮತ್ತೊಂದು ಅರ್ಧಾಂಜಲಿಪ್ರಮಾಣದಿಂದ ಕೂಡಿ (ಒಂದು ಕೈಬೊಗಸೆಯಷ್ಟು) ಉಳಿದ ಸಮಸ್ತಾವಯವಗಳ ಕಾರ್ಯಗಳಿಗೆ ಸಹಾಯಕವಾಗುವದು. ಮೊದಲನೆಯ ಓಜಸ್ಸು "ಪರಮೋಜ' ವೆಂದು ವೈದ್ಯಶಾಸ್ತ್ರದಿಂದ ನಿರ್ಧರಿಸಲ್ಪಟ್ಟಿರುವುದಾಗಿದೆ. ಇದರಲ್ಲಿಯ ಒಂದು ಬಿಂದುವಾದರೂ ನಾಶವಾದರೆ ಸಾಕು! ಅಕ್ಷಣದಲ್ಲಿಯೇ ಮರಣವುಂಟಾಗುತ್ತದೆ. ಗರ್ಭದ ಉತ್ಪತ್ತಿಗೆ ಕಾರಣಗಳಾಗಿರುವ ಶುಕ್ರಶೋಣಿತಗಳಲ್ಲಿ ಈ ಓಜಸ್ಸಿನ ವ್ಯಾಪಕತೆಯಿಲ್ಲದಿದ್ದರೆ ಅವು 'ಜೀವಾಣು' ಗಳ ಸಂಚಾರದಿಂದ ಶೂನ್ಯಗಳಾಗಿರುವುವು. ಇಂತಹ ಜೀವಾಣುರಹಿತಗಳಾದ ಶುಕ್ರಶೋಣಿತಗಳು ಗರ್ಭೋತ್ಪತ್ತಿಗೆ ಕಾರಣವಾಗಲಾರವು. ಓಜಸ್ಸು ಗರ್ಭಧಾರಣಕಾಲದಿಂದ ಹಿಡಿದು ಮನುಷ್ಯನ ಪ್ರಾಣಾಂತ್ಯಕಾಲದವರೆಗೂ ಹೃದಯದಲ್ಲಿ ಸ್ಥಾಯಿರೂಪದಿಂದಿದ್ದು ಆಹಾರರಸದಿಂದ ಪೋಷಣೆಯನ್ನು ಹೊಂದುತ್ತ ಸರ್ವಪ್ರಕಾರದಿಂದಲೂ ಶರೀರವನ್ನು ಕಾಪಾಡತಕ್ಕುದಾಗಿದೆ.

ಇಲ್ಲಿ ವರ್ಣಿಸಲ್ಪಡುವ ಓಜಸ್ಸು ರಸಾದಿಶುಕ್ರಾಂತವಾದ ಸಪ್ತಧಾತುಗಳಿಗಿಂತಲೂ ಭಿನ್ನವಾದ ಎಂಟನೆಯ ಧಾತುವಾಗಿರಬಹುದೆಂಬ ಸಂಶಯವುಂಟಾಗಬಾರದೆಂತಲೇ ಸುಶ್ರುತಮಹರ್ಷಿಯು, 'ರಸಾದೀನಾಂ ಶುಕ್ರಾಂತಾನಾಂ ಧಾತೂನಾಂ ಯತ್ಪರಂ ತೇಜಸ್ತತ್ ಖಲು ಓಜಸ್ತದೇವ ಬಲಮಿತ್ಯುಚ್ಯತೇ' (ಸು. ಸೂ. ಅ. ೧೫) ಎಂಬ ವಾಕ್ಯದಿಂದ ಓಜಸ್ಸಿಗುಂಟಾಗುವ ಅಷ್ಟಮ ಧಾತುತ್ವವನ್ನು ಬಾಧಿಸಿರುತ್ತಾನೆ. ಅದು ಕಾರಣವೇ ಈ ಓಜಸ್ಸೆಂಬುದು ಆಹಾರರಸಪರಿಪೋಷಿತಗಳಾದ ರಸಾದಿಸಪ್ತಧಾತುಗಳ ಸಾರಭೂತವಾಗಿರುವ ತೇಜೋರೂಪವಾದ ಸ್ನೇಹ (ಎಣ್ಣೆ) ವಸ್ತುವಾಗಿರುವುದಲ್ಲದೆ ಎಂಟನೆಯ ಧಾತುವಾಗಿರುವುದಿಲ್ಲ. ಒಂದು ವೇಳೆ ಇದೂ ಅಷ್ಟಮಧಾತುವಾಗಿ ಪರಿಗಣಿಸಲ್ಪಡುವುದಾದರೆ 'ಸಪ್ತಧಾತುಕಂ ಶರೀರಂ' ಎಂಬ ಆಯುರ್ವೇದ ಸಿದ್ಧಾಂತಕ್ಕೆ ಭಂಗವುಂಟಾಗುತ್ತದೆ. ಈ ಓಜಸ್ಸು ಕೆಲವೆಡೆಗಳಲ್ಲಿ ಬಲವೆಂಬ ಹೆಸರಿನಿಂದಲೂ ವ್ಯವಹರಿಸಲ್ಪಡುತ್ತಿರುವುದಾದರೂ ವಸ್ತುತಃ ವಿಚಾರಮಾಡಿ ನೋಡುವುದಾದರೆ ಇವೆರಡಕ್ಕೂ ಭೇದವು ಕಾಣಬಹುದಾಗಿದೆ. ವೈದ್ಯಶಾಸ್ತ್ರವು ಓಜಸ್ಸಿನಲ್ಲಿ ರೂಪ, ರಸ, ಗಂಧ, ವರ್ಣಗಳಿರುವುವೆಂತಲೂ, ಬಲವು ಈ ವಿಧವಾದ ಗುಣಗಳಿಂದ ರಹಿತವಾಗಿ ಭಾರವನ್ನು ಹೊರುವುದೇ ಮೊದಲಾದ ಕಾರ್ಯಗಳಿಂದೂಹಿಸಲ್ಪಡುವುದಾಗಿರುವುದೆಂತಲೂ ಪ್ರತಿಪಾದಿಸುವುದಾದುದರಿಂದಲೂ ಇದೇ ಆಹಾರಪ್ರಕರಣದ ಆದಿಭಾಗದಲ್ಲಿ ಉದಾಹೃತವಾಗಿರುವ 'ಬಲವರ್ಣೌಜಸ್ಕಾಂಚ' ಎಂಬ ಸುಶ್ರುತವಾಕ್ಯದಲ್ಲಿ ಬಲ ಮತ್ತು ಓಜಃಶಬ್ದಗಳು ಪ್ರತ್ಯೇಕವಾಗಿ ನಿರ್ದೇಶಿಸಲ್ಪಟ್ಟಿರುವುದರಿಂದಲೂ ಇವೆರಡೂ ಭಿನ್ನಾರ್ಥದ್ಯೋತಕಗಳಾದ ಭಿನ್ನಶಬ್ದಗಳಾಗಿರುವುವೆಂತಲೇ ಸಿದ್ಧವಾಗಿರುತ್ತದೆ.

ಈ ಓಜಸ್ಸು ಶರೀರದಲ್ಲಿ ಸ್ಥಿರವಾಗಿರುವುದರಿಂದಲೇ ಮನುಷ್ಯನು ಪ್ರಾಣಧಾರಣೆಯಲ್ಲಿ ಸಮರ್ಥನಾಗುವನು. ಇಲ್ಲವಾದರೆ ಪ್ರಾಣವು ಒಂದು ಕ್ಷಣವಾದರೂ ನಿಲ್ಲಲಾರದು. ಮತ್ತು, ಸಕಲಪ್ರಾಣಿಗಳ ಶರೀರದ ವೃದ್ಧಿಕ್ಷಯಗಳಿಗೆ ಓಜಸ್ಸೇ ಕಾರಣವಾಗಿರುವುದೆಂದು ಚರಕಮಹರ್ಷಿಯು,

ಯೇನೌಜಸಾ ವರ್ತಯಂತಿ ಪ್ರೀಣಿತಾಃ
ಸರ್ವದೇಹಿನಃ
ಯದೃತೇ ಸರ್ವಭೂತಾನಾಂ ಜೀವಿತಂ ನಾವತಿಷ್ಠತಿ ||
ಚ. ಸೂ. ಅ೩೦

ಎಂಬುದಾಗಿ ಹೇಳಿರುವನು.

ಸುಶ್ರುತಮಹರ್ಷಿಯು,

ಓಜಃ ಸೋಮಾತ್ಮಕಂ ಸ್ನಿಗ್ಧಂ ಶುಕ್ಲಂ ಶೀತಂ
ಸ್ಥಿರಂ ಸರಂ
ವಿವಿಕ್ತಂ ಮೃದು ಮೃತ್ಸ್ನಂ ಚ ಪ್ರಾಣಾಯತನ
ಮುತ್ತಮಂ || ಸು. ಸೂ. ಅ೧೫

ಎಂದು ರೂಪ, ರಸ, ಗಂಧ, ವರ್ಣವಿಶಿಷ್ಟವಾಗಿರುವ ಓಜಸ್ಸನ್ನು ಪ್ರಾಣಾಧಾರವನ್ನಾಗಿ ಪ್ರತಿಪಾದಿಸಿರುವನು. ವಾಗ್ಭಟಾಚಾರ್ಯನಿಂದಲೂ,

ಯನ್ನಾಶೇ ನಿಯತಂ ನಾಶೋ ಯಸ್ಮಿಂಸ್ತಿಷ್ಠತಿ ತಿಷ್ಠತಿ
ನಿಷ್ಪದ್ಯಂತೇ ಯತೋ ಭಾವಾವಿವಿಧಾ
ದೇಹಸಂಶ್ರಯಾಃ || ಅ. ಹೃ. ಸೂ. ಅ೧೧

ಶರೀರದ ಸಕಲಕಾರ್ಯಗಳಿಗೂ ಆಧಾರಭೂತವಾಗಿರುವೀ ಓಜಸ್ಸಿನ ನಾಶದಿಂದ ಶರೀರನಾಶವುಂಟಾಗುವುದೆಂದು ವರ್ಣಿತವಾಗಿರುತ್ತದೆ. ಈ ಸಕಲಪ್ರಮಾಣಗಳ ವಿಮರ್ಶನೆಯಿಂದ ಓಜಸ್ಸಿನ ಮಹತ್ತ್ವವು ಎಷ್ಟರಮಟ್ಟಿಗಿರುವುದೆಂಬುದು ಪಾಠಕರಿಗೆ ಗೊತ್ತಾಗಬಹುದಲ್ಲವೆ? ನೋಡಿದಿರಾ! ಇಂತಹ ಅಸಾಧಾರಣಗುಣಗಣಮಂಡಿತವೂ, ಪ್ರಾಣರಕ್ಷಣದಕ್ಷವೂ, ಆಗಿರುವ ಈ ಓಜಸ್ಸಿನ ಉತ್ಪತ್ತಿಗೆ ಆಧಾರವಸ್ತುವಾವುದೆಂಬುದು ಗೊತ್ತಾಯಿತೆ? ಅದೇ ಅಲ್ಲವೆ? ನೀವು ನಿತ್ಯದಲ್ಲಿ ಸೇವಿಸುತ್ತಿರುವ ಆಹಾರ! ಈ ಆಹಾರವೇ ನಿಮ್ಮ ಸಕಲವಿಧ ಮನೋರಥಗಳನ್ನು ಪೂರ್ತಿಗೊಳಿಸುವ ಓಜೋರೂಪವಾದ ಕಲ್ಪತರುವಿನ ಜನ್ಮಭೂಮಿಯಾಗಿರುವುದು. ಆಹಾರಕ್ಕೆ ಬಹು ದೂರದಲ್ಲಿರುವ ಓಜಸ್ಸಿನವರೆಗೂ ನಿಮ್ಮ ವಿಚಾರಪರಿಪೂರಿತವಾಗಿರುವ ಜ್ಞಾನದೃಷ್ಟಿಯನ್ನೋಡಿಸಿದರಲ್ಲವೇ ಅದರ ಗೂಢತತ್ತ್ವದ ಪರಿಚಯವುಂಟಾಗುವುದು? ಆಹಾರದ ನಿಜರೂಪವನ್ನರಿತು ಹಿತಾಹಿತವಿವೇಚನೆಯಿಂದ ಅದನ್ನು ಸೇವಿಸುವುದಾದರೆ ಅದು ಯಥಾರ್ಥಫಲವನ್ನೀಯುವುದಾಗುತ್ತದೆ. ಹಸಿದಾಗ ಎದುರಿಗೆ ಬಂದ ಯಾವುದೋ ಒಂದು ಪದಾರ್ಥವನ್ನು ಹೊಟ್ಟೆಯಲ್ಲಿ ಸೇರಿಸಿ ಬಿಡುವದೇ ಆಹಾರದ ಲಕ್ಷಣವೆಂದರಿತು ಸಿಕ್ಕಿದ ಆಹಾರವನ್ನು ಗುಣದೋಷಗಳ ಪರಿಜ್ಞಾನವಿಲ್ಲದೆ ಉದರಕುಹರದಲ್ಲಿ ತುಂಬುವುದಾದರೆ ಅಂತಹ ಆಹಾರವು ಮಹೋನ್ನತಗುಣಸಂಪನ್ನವಾಗಿರುವ ಓಜಸ್ಸಿನ ಆವಿರ್ಭಾವಕ್ಕೆ ಮೂಲಕಾರಣವಾದ 'ರಸ' ವನ್ನು ಹುಟ್ಟಿಸಬಹುದೆ? ಆಹಾರವು ಕೇವಲ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕೋಸುಗವೇ ಜಗತ್ತಿನಲ್ಲಿ ನಿರ್ಮಿತವಾಗಿದ್ದರೆ ಅದನ್ನು ಆಯುರ್ವೇದ ಮತ್ತು ಶ್ರುತಿಸ್ಮೃತಿಗಳು 'ಪ್ರಾಣಾಧಾರ, ಜಗದಾಧಾರ, ಸರ್ವಾಧಾರ' ಗಳೆಂಬ ಲೋಕೋತ್ತರ ವಿಶೇಷಣಗಳಿಂದ ಭೂಷಿಸುತ್ತಿದ್ದುವೆ? ಉದರಂಭರಣಕ್ಕಾಗಿಯೇ ಆಹಾರವನ್ನು ಸೇವಿಸುವುದಾದರೆ ಪಶುಗಳಿಗೂ ಮನುಷ್ಯರಿಗೂ ಭೇದವೇನು? ಮನುಷ್ಯರು ಆಹಾರವನ್ನು ಸೇವಿಸುವಾಗ ಮೊದಲು ಓಜಸ್ಸಿನವರೆಗೂ ಬುದ್ಧಿಯನ್ನು ಪಸರಿಸಿ ತದನುಗುಣವಾದ ನಿರ್ದುಷ್ಟಾಹಾರವನ್ನು ಸೇವಿಸುವುದು ಪುರುಷಾರ್ಥಸಾಧಕವಾಗಿರುತ್ತದೆ. ಆಹಾರದ ಪ್ರಧಾನೋದ್ದೇಶವು 'ಓಜ' ಸ್ಸಿನ ರಕ್ಷಣೆಯೇ ಆಗಿರುವುದಲ್ಲವೆ? ಅಂತಹ ಓಜಸ್ಸನ್ನು ಶರೀರದಲ್ಲಿ ಸ್ಥಿರಗೊಳಿಸಲು ಹಿತಾಹಾರಪರಿಪಾಕಜನ್ಯವಾದ 'ರಸವೇ' ಮೂಲಕಾರಣವಾಗಿರುವುದೆಂಬುದು ಆಯುರ್ವೇದ ಸಿದ್ಧಾಂತವಾಗಿರುತ್ತದೆ. ಅದುದರಿಂದಲೇ ರಸದ ರಕ್ಷಣೆಯಲ್ಲಿ ಮನುಷ್ಯನು ಸರ್ವದಾ ಜಾಗ್ರತನಾಗಬೇಕೆಂದು ಸುಶ್ರುತಮಹರ್ಷಿಯು,

ಸರ್ವೇಷಾಂ ಧಾತೂನಾಮನ್ನಪಾನರಸಃ ಪ್ರೀಣ
ಯಿತಾ |
ರಸಜಂ ಪುರುಷಂ ವಿದ್ಯಾದ್ರಸಂ ರಕ್ಷೇತ್ಪ್ರಯತ್ನತಃ
ಅನ್ನಾತ್ ಪಾನಾಚ್ಚ ಮತಿಮಾನಾಹಾರಾಚ್ಚಾಪ್ಯ
ತಂದ್ರಿತಃ || ಸು. ಸೂ. ಅ ೧೪.

ಅನ್ನಪಾನಗಳ ಸಮೀಚೀನ ಪರಿಪಾಕದಿಂದುಂಟಾದ ರಸವೇ ಸಪ್ತಧಾತುಗಳನ್ನೂ ಇವುಗಳ ಸಾರಭೂತವಾದ ಓಜಸ್ಸನ್ನೂ ಪೋಷಿಸುವುದಾಗಿದೆ. ಮಾನವಶರೀರವು ಅನ್ನರಸದಿಂದಲೇ ಜನಿಸಿರುವುದಾದ ಕಾರಣವೇ ಈ ರಸದ ರಕ್ಷಣೆಗೋಸುಗ ವಿವೇಕಶಾಲಿಯಾದ ಮಾನವನು ಸದಾಚಾರನಿರತನೂ, ಯುಕ್ತಾಯುಕ್ತವಿಚಾರಪರನೂ, ಆಗಿ ವೈದ್ಯಶಾಸ್ತ್ರನಿಯಮಗಳನ್ನುಲ್ಲಂಘಿಸದೆ ಕಾಲೋಚಿತಗಳಾದ ಹಿತ ಮತ್ತು ಮಿತಾಹಾರಗಳನ್ನು ಸೇವಿಸುವುದುಚಿತವಾಗಿರುತ್ತದೆ.

ವೈದ್ಯಶಾಸ್ತ್ರವು ಆಹಾರಸೇವನೆಯ ವಿಷಯದಲ್ಲಿ ಸಾವಿರಾರು ನಿಯಮಗಳನ್ನು ಪದೇಶಿಸುತ್ತದೆ. ಆದರೆ 'ಸ್ವಾಸ್ಥ್ಯಪರಿಪಾಲನ ಹೇತುಷು ಮಾತ್ರಾವದನ್ನಂ ಪ್ರಧಾನಂ' (ಚ. ಸೂ. ಅ ೫) ಎಂಬ ಚರಕೋಕ್ತಿಯಿಂದ ಆರೋಗ್ಯಪ್ರದಗಳಾದ ಆ ಅನಂತನಿಯಮಗಳಲ್ಲಿ 'ಮಾತ್ರಾಶನ' ವೆಂಬ ನಿಯಮವು ಸರ್ವೋತ್ಕೃಷ್ಟವಾಗಿರುವುದೆಂಬುದಾಗಿ ತಿಳಿದುಬರುತ್ತದೆ. ಈ ಮಾತ್ರಾಶನವು ಅತ್ಯಂತ ಗಂಭೀರವಿಷಯಗಳಿಂದೊಡಗೂಡಿ ಉಳಿದ ಸಕಲ ನಿಯಮಗಳಿಗೂ ಸೂತ್ರಪ್ರಾಯವಾಗಿರುತ್ತದೆ.

ಮಾತ್ರಾಶೀ ಸ್ಯಾತ್ ಆಹಾರಮಾತ್ರಾ ಪುನರಗ್ನಿ
ಬಲಾಪೇಕ್ಷಿಣೀ |
ಯಾವದ್ಧ್ಯಸ್ಯಾಶನಮಶಿತಮನುಪಹತ್ಯ ಪ್ರಕೃತಿಂ
ಯಥಾಕಾಲಂ ||
ಜರಾಂ ಗಚ್ಛತಿ ತಾವದಸ್ಯ ಮಾತ್ರಾಪ್ರಮಾಣಂ
ವೇದಿತವ್ಯಂಭವತಿ || ಚ. ಸೂ. ಅ ೫.

ಆಹಾರದ ಪ್ರಮಾಣವು ಸಕಲಜನಗಳಿಗೂ ಒಂದೇ ವಿಧವಾಗಿರುವುದಿಲ್ಲ. ಅವರವರ ಜಠರಾಗ್ನಿಯ ಬಲವನ್ನನುಸರಿಸಿಯೇ ಆಹಾರಪ್ರಮಾಣವನ್ನು ನಿರ್ಧರಿಸಬೇಕಾಗುತ್ತದೆ. ಯಾವ ಆಹಾರವು ರಸ, ರಕ್ತ, ಮಾಂಸಾದಿ ಧಾತುಗಳನ್ನೂ, ತ್ರಿದೋಷಗಳನ್ನೂ ವಿಷಮಗೊಳಿಸದೆ ಎರಡು ಕಾಲಗಳಲ್ಲಿಯೂ (ದಿನದಲ್ಲಿ ಸೇವಿಸಲ್ಪಟ್ಟುದು ರಾತ್ರಿಯೂ, ರಾತ್ರಿಯ ಆಹಾರವು ಮರುದಿನದ ಪ್ರಾತಃಕಾಲದಲ್ಲಿಯೂ) ನಿಶ್ಶೇಷವಾಗಿ ಜೀರ್ಣಗೊಳ್ಳುವುದೋ, ಯಾವ ಆಹಾರವನ್ನು ಸೇವಿಸಿದ ನಂತರ ಹೊಟ್ಟೆಯಲ್ಲಿ ನೋವು, ಎದೆಯು ಬಿಗಿಯುವುದು, ಶರೀರದ ಪಾರ್ಶ್ವಭಾಗಗಳ ಸೆಳೆತವು, ಹೊಟ್ಟೆಯನ್ನೆತ್ತದಂತಾಗುವುದು, ಇವೇ ಮೊದಲಾದ ತೊಂದರೆಗಳುಂಟಾಗದೆ; ಇಂದ್ರಿಯಗಳಲ್ಲಿ ತೃಪ್ತಿಯುಂಟಾಗಿ ಹಸಿವು ನೀರಡಿಕೆಗಳು ಶಾಂತವಾಗಿ ನಿಲ್ಲುವುದಕ್ಕೂ, ಕೂತುಕೊಳ್ಳುವುದಕ್ಕೂ, ಮಲಗುವುದಕ್ಕೂ, ತಿರುಗಾಡುವುದಕ್ಕೂ, ಉಸಿರಾಡುವುದಕ್ಕೂ, ನಗುವುದಕ್ಕೂ, ಮಾತನಾಡುವುದಕ್ಕೂ, ಯಾವ ವಿಧವಾದ ಆತಂಕವೂ ಉಂಟಾಗುವುದಿಲ್ಲವೋ, ಅಂತಹ ಆಹಾರವೇ "ಮಾತ್ರಾಶನ' ವೆಂಬ ಸಂಜ್ಞೆಯನ್ನು ಹೊಂದುತ್ತದೆ. ಇಂತಹ ಆಹಾರವೇ ನಿರ್ದುಷ್ಟವಾದ ರಸವನ್ನು ಹುಟ್ಟಿಸಿ ಸಪ್ತಧಾತುಗಳನ್ನು ಪೋಷಿಸಿ ಶರೀರದಲ್ಲಿ ಬಲ, ವರ್ಣ, ಓಜಸ್ಸುಗಳನ್ನು ಸ್ಥಿರಗೊಳಿಸಿ ಆರೋಗ್ಯವನ್ನುಂಟುಮಾಡುತ್ತದೆ. ಆಯುರ್ವೇದವು ಭೋಜನ ಸಂಬಂಧವಾದ ಅನಂತ ನಿಯಮಗಳನ್ನ ತಿವಿಸ್ತಾರವಾಗಿ ಬೋಧಿಸುತ್ತದೆ. ಆ ನಿಯಮಗಳನ್ನೆಲ್ಲ ಒಂದೂ ಬಿಡದಂತೆ ಬರೆಯಲಾರಂಭಿಸಿದರೆ ಕೇವಲ ಆಹಾರನಿಯಮಗಳದೇ ಒಂದು ದೊಡ್ಡ ಗ್ರಂಥವಾಗಬಹುದು. ವಿಸ್ತಾರಭಯದಿಂದ ಅವೆಲ್ಲವನ್ನೂ ಬರೆಯದೆ ಅವುಗಳಲ್ಲೇ ಅತ್ಯುಪಯುಕ್ತಗಳಾದ ಕೆಲವು ನಿಯಮಗಳನ್ನು ಪಾಠಕರ ಆಹಾರಜ್ಞಾನಸಂಪಾದನೆಗೋಸುಗ ಇಲ್ಲಿ ಸಂಕ್ಷೇಪವಾಗಿ ಬರೆಯುವುದಾಗುವುದು.

(ಸಶೇಷ)

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ನಂಜನಗೂಡಿನಲ್ಲಿ ನೆರವೇರಿದ ಶ್ರೀ ಜಗದ್ಗುರು

ರಂಭಾಪುರೀ ವೀರಸಿಂಹಾಸನಾಧೀಶ್ವರ

ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ವರ್ಧಂತ್ಯುತ್ಸವವು.

ಶ್ರೀಮಹಾಸ್ವಾಮಿಗಳವರು ನಂಜನಗೂಡಿಗೆ ದಯಮಾಡಿರುವ ಸಂಗತಿಯು ಸರ್ವತ್ರವಿದಿತವೇ ಇದೆಯಷ್ಟೆ. ಈ ಮುಕ್ಕಾಮಿನಲ್ಲಿ ವರ್ಧಂತ್ಯುತ್ಸವವನ್ನು ನೆರವೇರಿಸುವ ಸುಯೋಗವು ದೊರೆತಿದ್ದರಿಂದ ಶ್ರೀ ಜಗದ್ಗುರು ಶುಭಾಗಮನ ವ್ಯವಸ್ಥಾಪಕ ಕಮಿಟಿ ಪ್ರೆಸಿಡೆಂಟರೂ ಸೆಕ್ರೆಟರಿಗಳೂ ಮೆಂಬರರೂ ಮುಂತಾದ ಸಮಸ್ತ ವೀರಶೈವರು ಧರ್ಮಾಭಿಮಾನಿಗಳಾದ ಇತರ ಮತದ ಪ್ರಮುಖಮಹಾಶಯರೂ ಮಹಾಸಂಸ್ಥಾನದ ಪದ್ಧತಿಯನ್ನನುಸರಿಸಿ ಪೂಜಾ ಗಣಾರಾಧನೋತ್ಸವಕಾರ್ಯಕ್ಕೆ ಬೇಕಾದ ಸಂಭಾರಗಳಂ ಸಿದ್ಧಗೊಳಿಸಿಕೊಂಡು ಮಹಾಗುರುಸೇವೆಯನ್ನು ಮಾಡಲು ಬದ್ಧೋತ್ಸಾಹಿಗಳಾಗಿದ್ದರು. ಅಲ್ಲದೆ ಈ ಮಹೋತ್ಸವ ಸಂಗತಿಯು ಶ್ರುತವಾಗಿ ಸ್ವಭಾವತಃ ಧರ್ಮನಿಷ್ಠರೂ ಧರ್ಮಮೂರ್ತಿಗಳೂ ಆದ ಶ್ರೀಮನ್ಮಹಾಪ್ರಭುಗಳವರ ಪರಮಬಂಧುಗಳೂ ಗುರುದೇವತಾಭಕ್ತಿತತ್ಪರರೂ ಆಗಿರುವ ಶ್ರೀಮಾನ್ ಸರ್ದಾರ್ ಯಂ. ಲಕ್ಷ್ಮೀಕಾಂತರಾಜ ಅರಸರವರು ಈ ಮೊದಲು ತಮ್ಮ ಮಂದಿರಕ್ಕೆ ದಯಮಾಡಿಸಿಕೊಂಡು ಪೂಜಾಸಪ್ತಾಹವಂ ಮಾಡಿ ಅಮೂಲ್ಯ ವಸ್ತುಗಳನ್ನಿತ್ತು ಆನಂದಿಸಿದ್ದರೂ ಗುರುದೇವತಾರ್ಚನೆಯು ನಿತ್ಯಕರ್ಮವೆಂದು ಭಾವಿಸಿರುವದರಿಂದ ತಮ್ಮ ವಂಶದ ಕುಲದೇವತೆಯಾದ ಶ್ರೀಕಂಠೇಶ್ವರನಿಗೆ ರಾಜಧಾನಿ ಎನಿಸಿಪ ನಂಜನಗೂಡಿನಲ್ಲಿ ನಡೆಯಬೇಕಾಗಿದ್ದ ಜಗದ್ಗುರುಗಳವರ ವರ್ಧಂತ್ಯುತ್ಸವಸೇವಾಭಿಕಾಂಕ್ಷಿಗಳಾಗಿ ಮಹಾಗುರು ಪೂಜಾದಿಗಳಿಗೂ ಗಣತೃಪ್ತಿಗೂ ಬೇಕಾದ ಸಕಲಸಂಭಾರಗಳನ್ನು ಮುಂಚಿತವಾಗಿಯೇ ಕಳುಹಿಸಿ ವಿನಿಯೋಗವು ನಿರಾತಂಕವಾಗಿ ಜರಗುವಂತೆ ವ್ಯವಸ್ಥೆಯನ್ನಿಡಿಸಿ ಪೂಜಾಸಮಯಕ್ಕೆ ಸರಿಯಾಗಿ ಬಂಧುಗಳು ಮತ್ತು ಪರಿವಾರದೊಡನೆ ಆಗಮಿಸಿದರು. ಪೂಜಾಸಮಾರಂಭದಲ್ಲಿ ಕೇವಲ ಶಿವಧರ್ಮಪ್ರಿಯರಾದ ಶ್ರೀಮಂತ ಸರ್ದಾರ್ ದಂಪತಿಗಳವರು ಲಿಂಗಪೂಜೋತ್ಸವಾನಂದವನನುಭವಿಸಿ ತೀರ್ಥಪ್ರಸಾದ ಸೇವನೆಯಂಗೈದು ಗಣತೃಪ್ತಿಯ ವಿಚಾರವಂ ತೆಗೆದುಕೊಂಡು ನಿರಾತಂಕವಾಗಿ ಜರಗಿದ ಸದ್ವಿನಿಯೋಗದಿಂದ ತಮ್ಮ ಕೃತಾರ್ಥತೆಯನ್ನು ವ್ಯಕ್ತಪಡಿಸಲು ಈ ವರ್ಧಂತ್ಯುತ್ಸವದ ಸುಸಮಯದಲ್ಲಿಯೂ ಶ್ರೀಮಹಾಗುರುಪೀಠಕ್ಕೆ ಸುವರ್ಣ ರಜತಾತ್ಮಕ ಪೂಜಾಪಾತ್ರಾದ್ಯುಪಕರಣಗಳನ್ನೂ ಅನೇಕ ಅಮೂಲ್ಯಗಳಾದ ವಸ್ತುಗಳನ್ನೂ ದರ್ಬಾರಿಗೆ ಬೇಕಾದ ಅಮೂಲ್ಯಜರತಾರೀ ಸಾಮಾನುಗಳನ್ನೂ ಅರ್ಪಿಸಿ ಸನಾತನ ಧರ್ಮಿಗಳಿಗೆ ಸನ್ಮಾರ್ಗದರ್ಶಕರಾದರು. ಶ್ರೀಮಾನ್ ಸರ್ದಾರರ ಭಕ್ತಿಯು ಅಸದೃಶವಾದುದು. ಸ್ವಭಾವತಃ ರಾಜವಂಶವು ಯಾವಾಗಲೂ ಸನಾತನಧರ್ಮದಲ್ಲಿ ಅತ್ಯುತ್ಕಟೇಚ್ಛೆಯುಳ್ಳದ್ದಿರುವದೆಂಬುದು ವಿಶ್ರುತವೇ ಆಗಿದೆ. ಅದರಲ್ಲಿಯೂ ಈ ದಂಪತಿಗಳು ಗುರುಭಕ್ತಿಮೂರ್ತಿಗಳೆಂದೇ ಹೇಳಲು ಅಭ್ಯಂತರವಿಲ್ಲ. ಶ್ರೀಮದಾಚಾರ್ಯರು ಈ ದಂಪತಿಗಳಿಗೂ ಇವರ ಬಂಧುವರ್ಗಕ್ಕೂ ಚಿರಾಯುರಾರೋಗ್ಯಾದಿಭಾಗ್ಯವನ್ನೀಯಲೆಂದು ಜಗದೀಶ್ವರನನ್ನು ಬೇಡುತ್ತೇನೆ. ಪ್ರೋಗ್ರಾಂ ನಿಶ್ಚಯಿಸಿದ್ದಂತೆ ಸಾಯಂಕಾಲ ನಾಲ್ಕು ಘಂಟೆಗೆ ಸುವರ್ಣರಜತಾತ್ಮ ಕಾಂದೋಲಿಕೋತ್ಸವವು ಪ್ರಾರಂಭವಾಯಿತು. ಶ್ರೀಮನ್ಮಹೀಶೂರ ರಾಜಧಾನಿಯಿಂದಲೂ ನಂಜನಗೂಡಿನ ಸುತ್ತಮುತ್ತಣ ಗ್ರಾಮಗಳಿಂದಲೂ ಅನೇಕರು ಆಗಮಿಸಿದ್ದರು. ಸ್ವದೇಶೀಯ ವಿದೇಶೀಯ ವಾದ್ಯಗಳಿಂದಲೂ ಪಾಠಕರುಗಳಿಂದಲೂ ಗುರುಭಕ್ತರ ಜಯಜಯಕಾರದಿಂದಲೂ ತಳಿರುತೋರಣಚಪ್ಪರಗಳಿಂದಲಂಕೃತವಾದ ಪುರವಳಯದ ಬೀದಿಗಳಲ್ಲಿ ಮಹೋತ್ಸವವು ವಿಜೃಂಭಣೆಯಿಂದ ಜರಗಿ ರಾಜವಾಡೆಗೆ ಬಂದಿತು. ಶ್ರೀ ಸಿಂಹಾಸನವನಾರೋಹಿಸಿದ ಕೂಡಲೆ ಸರ್ವರೂ ಕರತಾಡನವನ್ನು ಮಾಡಿ ಅಪ್ಪಣೆಯಿಂದ ಸಮುಚಿತಾಸನಗಳಲ್ಲಿ ಕುಳಿತುಕೊಂಡರು. ಶ್ರೀಮಾನ್ ಸರದಾರ್ ಯಂ. ಲಕ್ಷ್ಮೀಕಾಂತರಾಜಅರಸರವರು ಇವರ ಅಣ್ಣಂದಿರಾದ ಶ್ರೀಮಂತ ಅರಮನೆ ಮುನೀಬ ಸುಬ್ಬರಾಜ ಅರಸರವರೂ ಶ್ರೀ ಜಗದ್ಗುರುಗಳವರನ್ನು ಮೈಸೂರಿಗೆ ದಯಮಾಡಿಸಿದ ಲಾಗಾಯಿತು ತಮ್ಮ ಮಂದಿರವನ್ನು ವಸತಿಗೆ ಕೊಟ್ಟು ಅಹೋರಾತ್ರಿಗಳಲ್ಲಿಯೂ ಗುರುಸೇವೆಯಲ್ಲಿ ನಿರತರಾದ ಶ್ರೀಮಾನ್ ಧರ್ಮನಿಷ್ಠ ಸಂಜೀವರಾಜ ಅರಸರವರೂ ಸುಬ್ಬರಾಜ ಅರಸರವರ ಕುಮಾರರಾದ ಗುರುಭಕ್ತಿನಿಕೇತನ ಸುಬ್ರಹ್ಮಣ್ಯರಾಜಅರಸರವರೂ ಮೈಸೂರಿನ ಮಹಾಜನಗಳೊಡನೆ ಈ ಸಭೆಯನ್ನಲಂಕರಿಸಿದ್ದರಿಂದ ಈ ವರ್ಷದ ವರ್ಧಂತ್ಯುತ್ಸವಕ್ಕೆ ಅಭೂತಪೂರ್ವವಾದ ಶೋಭೆಯುಂಟಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಿಯಮಿತವಾಗಿದ್ದ ಪ್ರಕಾರ ವಿಜ್ಞಾಪನಾಪತ್ರಿಕಾಪಠನ

(6ನೆಯ ಪುಟವನ್ನು ನೋಡಿರಿ.)

ಪಂಚಾಚಾರ್ಯ ಪ್ರಭಾ.

೧೯೩೧ ನೇ ಡಿಸೆಂಬರ್ ತಾ|| ೨೧ ನೇ ಸೋಮವಾರ.

ಅಂತರ್ಲಿಂಗೋಪಾಸನೆ.

ಲಿಂಗಧಾರಣಮಾಖ್ಯಾತಂ ದ್ವಿಧಾ ಸರ್ವಾರ್ಥಸಾಧಕೈಃ |
ಬಾಹ್ಯಮಾಭ್ಯಂತರಂ ಚೇತಿ ಮುನಿಭಿರ್ಮೋಕ್ಷಕಾಂಕ್ಷಿಭಿಃ ||

ಮುಮುಕ್ಷುಗಳಾದ ಮಹರ್ಷಿಗಳು ಬಾಹ್ಯ-ಅಭ್ಯಂತರ ಎಂಬ ಭೇದದಿಂದ ಲಿಂಗಧಾರಣವನ್ನು ಎರಡು ವಿಧವಾಗಿ ಮಾಡಿರುವರೆಂದು ಶ್ರೀ ಭಗವತ್ಪಾದ ರೇಣುಕಾಚಾರ್ಯರ ಉಕ್ತಿಯಿರುವುದರಿಂದ ಮೋಕ್ಷವೇ ಮುಖ್ಯಧ್ಯೇಯವಾಗುಳ್ಳ ವೀರಶೈವರು ಬಾಹ್ಯಲಿಂಗಧಾರಣೋಪಾಸನೆಯಲ್ಲಿಯೂ, ಅಂತರ್ಲಿಂಗಧಾರಣೋಪಾಸನೆಯಲ್ಲಿಯೂ ಆಸಕ್ತಿಯುಳ್ಳವರಾಗಿರಬೇಕೆಂದು ಸ್ಪಷ್ಟವಾಗುತ್ತದೆ. ಇವೆರಡರ ಉಪಾಸನೆಯನ್ನು ಮಾಡದವನಿಗೆ ಲಿಂಗಾಂಗಸಾಮರಸ್ಯರೂಪವಾದ ಮುಕ್ತಿಯು ಸಂಭವಿಸುವುದಿಲ್ಲ. ಆಚಾರ್ಯಭಗವತ್ಪಾದರು ಅನುಜ್ಞೆಯಿತ್ತಿರುವಂತೆ ಶಿರಸ್ಸು-ಕಂಠಾದಿಸ್ಥಾನಗಳಲ್ಲಿ ಧರಿಸಲ್ಪಡುತ್ತಿರುವ ಪಂಚಸೂತ್ರಘಟಿತಲಿಂಗವೇ ಬಾಹ್ಯ (ಇಷ್ಟಲಿಂಗ) ವು. ಹೃದಯಕಮಲಮಧ್ಯದಲ್ಲಿ ಬೆಳಗುತ್ತಿರುವ ಪರಶಿವಬ್ರಹ್ಮವೇ ಅಭ್ಯಂತರಲಿಂಗ (ಅಂತರ್ಲಿಂಗ) ವು. ಈ ಉಭಯವಿಧ ಶಿವಲಿಂಗೋಪಾಸನೆಯು ಶ್ರುತ್ಯಾಗಮಾದಿಗಳಲ್ಲಿ ಪ್ರತಿಪಾದಿಸಲ್ಪಟ್ಟಿರುತ್ತದೆ. ತೈತ್ತಿರೀಯ ಶ್ರುತಿಯಲ್ಲಿ—

ದಹರಂ ವಿಪಾಪ್ಮಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಂ |
ತತ್ರಾಪಿ ದಹ್ರೇ ಗಗನಂ ವಿಶೋಕಃ ತಸ್ಮಿನ್ ಯದಂತಸ್ತದುಪಾಸಿತವ್ಯಂ ||

ಅತಿ ಸೂಕ್ಷ್ಮವೂ ಪಾಪಸಂಬಂಧವಿಲ್ಲದುದೂ ಪರಮಾತ್ಮನ ನಿತ್ಯವಾಸಸ್ಥಾನವೂ ಆದ ಕಮಲವು ದೇಹಮಧ್ಯದಲ್ಲಿ ವಿರಾಜಿಸುತ್ತಿರುವುದು. ಆ ಹೃದಯಕಮಲದ ಸೂಕ್ಷ್ಮಪ್ರದೇಶದಲ್ಲಿ ಆಕಾಶದಂತೆ ಸರ್ವವ್ಯಾಪಕವೂ ಅಮೂರ್ತವೂ ದುಃಖಲೇಶರಹಿತವೂ ಆಗಿರುವ ಯಾವ ವಸ್ತುವುಂಟೋ ಆ ವಸ್ತುವನ್ನು ಅನವರತವೂ ಉಪಾಸಿಸುತ್ತಿರಬೇಕೆಂದು ಹೇಳಿರುತ್ತದೆ. ಇಲ್ಲಿ "ತಂ ಯಥಾ ಯಥೋಪಾಸತೇ ತತ್ತದೇವ ಭವತಿ" ಯಾರು ಯಾವ ಯಾವ ಭಾವನೆಯಿಂದ ಬ್ರಹ್ಮವಸ್ತುವನ್ನು ಉಪಾಸಿಸುತ್ತ ಬರುವರೋ ಅವರು ಆಯಾಯವಸ್ತುವಿನಾಕಾರವನ್ನೇ ಪಡೆಯುವರೆಂದು ಶ್ರುತಿಯಲ್ಲಿ ಹೇಳಿರುವುದನ್ನು ನೋಡಿದರೆ ಹೃದಯಕಮಲದಲ್ಲಿ ಶೋಭಿಸುತ್ತಿರುವ ನಿರಾಕಾರವಾದ ವಸ್ತುವನ್ನು ಒಂದು ಆಕಾರದಿಂದ ಭಾವಿಸಿ ಉಪಾಸನೆಮಾಡಬೇಕೆಂದು ತಿಳಿದುಬರುವುದು. ಆದರೆ ದಹರಾಕಾಶದಲ್ಲಿರುವ ಆ ವಸ್ತುವು ಇಂತಹ ವಸ್ತುವೆಂದೂ ಇಂತಹ ಗುಣವುಳ್ಳದೆಂದೂ ನಿರ್ಣಯವಾದಹೊರತು ಉಪಾಸನೆಯಲ್ಲಿ ಪ್ರವೃತ್ತಿಯು ಹುಟ್ಟುವುದಿಲ್ಲವಾದುದರಿಂದ ದಹರಾಕಾಶದಲ್ಲಿರುವ ವಸ್ತುವು ಶಿವರೂಪವಸ್ತುವೇ ಆಗಿದೆಯೆಂದು ಶ್ರುತಿಯು ಸ್ಪಷ್ಟಪಡಿಸುತ್ತದೆ.

ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ |
ತಸ್ಯ ಪ್ರಕೃತಿಲೀನಸ್ಯ ಯಃ ಪರಸ್ಸ ಮಹೇಶ್ವರಃ ||

ಋಗಾದಿ ವೇದಗಳ ಆದಿಯಲ್ಲಿಯೂ ಮಾಂಡೂಕ್ಯಾದ್ಯುಪನಿಷತ್ತುಗಳಲ್ಲಿಯೂ ಯಾವ ಸ್ವರವು ಹೇಳಲ್ಪಟ್ಟಿರುತ್ತದೆಯೋ ಅಂತಹ ಬ್ರಹ್ಮವಿಷ್ಣುರುದ್ರರೂಪವಾದ ಅಕಾರ ಉಕಾರ ಮಕಾರಾತ್ಮಕವಾದ ಓಂಕಾರಶಬ್ದಕ್ಕೆ ಮಹೇಶ್ವರನೆಂಬವನೇ ವಾಚ್ಯಾರ್ಥನಾಗಿರುವನು. ಆ ಓಂಕಾರವಾಚ್ಯವಾದ ಮಹೇಶ್ವರ ಶಬ್ದಕ್ಕೆ ಶಿವನೋರ್ವನಲ್ಲಿಯೇ ಶಕ್ತಿಯಿರುವುದರಿಂದ ದಹರಾಕಾಶದಲ್ಲಿ ಉಪಾಸಿಸಲ್ಪಡುವ ವಸ್ತುವಾದರೋ ಶಿವನೆಂದೇ ನಿರ್ಧರವಾಗುತ್ತದೆ.

ಋತಂ ಸತ್ಯಂ ಪರಂಬ್ರಹ್ಮ ಪುರುಷಂ ಕೃಷ್ಣಪಿಂಗಲಂ |
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ ||

ಯಾವ ಪರಬ್ರಹ್ಮವು ವ್ಯಾವಹಾರಿಕದಲ್ಲೂ ಪಾರಮಾರ್ಥಿಕದಲ್ಲೂ ಸತ್ಯವಸ್ತುವಾಗಿದೆಯೋ ಆ ಬ್ರಹ್ಮವು "ಪುರುಷಂ" ತನ್ನ ಭಕ್ತರನ್ನು ಅನುಗ್ರಹಿಸುವದಕ್ಕೋಸ್ಕರ ಉಮಾಮಹೇಶ್ವರಾತ್ಮಕ ಪುರುಷರೂಪವನ್ನು ಹೊಂದಿದೆ. "ಕೃಷ್ಣಪಿಂಗಲಂ" ಮಹೇಶ್ವರ ಭಾಗದಲ್ಲಿ ಕಪ್ಪುಬಣ್ಣವುಳ್ಳದಾಗಿಯೂ, ಉಮಾಭಾಗದಲ್ಲಿ ಪಿಂಗಲವರ್ಣವುಳ್ಳದಾಗಿಯೂ ಇರುವದು. ಇಂತಹ ವಿಶ್ವಸ್ವರೂಪಿಯಾದ ಮಹಾಯೋಗೀಶ್ವರನಾದ ವಿರೂಪಾಕ್ಷನಿಗೆ ನಮಸ್ಕಾರವೆಂದು ಶ್ರುತಿದೇವಿಯು ದಹರಾಕಾಶದಲ್ಲಿರುವ ವಸ್ತುವಿನ ಗುಣಾವಳಿಯನ್ನು ಸ್ತುತಿಸಿರುವಳು.

ಯತ್ಪುಂಡರೀಕಂ.........ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ ನೀಲಕಂಠಂ ಪ್ರಶಾಂತಂ.........ಅಂಗುಷ್ಠಮಾತ್ರಃ ಪುರುಷಃ ಜ್ಯೋತಿರಿವಾಧೂಮಕಃ.........ಈಶಾನೋ ಭೂತಭವ್ಯಸ್ಯ ||

ಇತ್ಯಾದಿ ಕೈವಲ್ಯ, ಕಠವಲ್ಲಿ, ಛಾಂದೋಗ್ಯಾದಿ ಶ್ರುತಿಗಳಲ್ಲಿಯೂ ಇದೇ ಅರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿರುವುದರಿಂದ ಹೃದಯದಲ್ಲಿರುವ ದಹರಾಕಾಶದಲ್ಲಿ ಬೆಳಗುವ ವಸ್ತುವು ಶಿವನೆಂದೇ ನಿರ್ಧರಿಸಿ ಧ್ಯಾನಿಸುತ್ತಿರುವುದೇ ಅಂತರುಪಾಸನಾಮಾರ್ಗವಾಗಿದೆ

ಏಷೋಽಸೌ ಪರಮೋ ಹಂಸೋ ಭಾನುಕೋಟಿಪ್ರತೀಕಾಶೋ ಯೇನೇದಂ ವ್ಯಾಪ್ತಂ | ತಸ್ಯಾಷ್ಟಧಾವೃತ್ತಿರ್ಭವತಿ ಪೂರ್ವದಲೇ ಪುಣ್ಯವೃತ್ತಿಃ ಆಗ್ನೇಯೇ ನಿದ್ರಾಲಸ್ಯಾದಯೋ ಭವಂತಿ | ಯಾಮ್ಯೇ ಕ್ರೌರ್ಯಮತಿಃ ನೈರುತೇ ಪಾಪೇ ಮನೀಷಾ ವಾರುಣ್ಯಾಂ ಕ್ರೀಡಾ ವಾಯವ್ಯೇ ಗಮನಾದೌ ಬುದ್ಧಿಃ | ಸೌಮ್ಯೇ ರತಿಪ್ರೀತಿಃ ಈಶಾನೇ ದ್ರವ್ಯಾದಾನಂ ಮಧ್ಯೇ ವೈರಾಗ್ಯಂ ಕೇಸರೇ ಜಾಗ್ರದವಸ್ಥಾ ಕರ್ಣಿಕಾಯಾಂ ಸ್ವಪ್ನಃ ಲಿಂಗೇ ಸುಷುಪ್ತಿಃ ಪದ್ಮತ್ಯಾಗೇ ತುರೀಯಂ ಯದಾ ಹಂಸೋ ನಾದೇ ವಿಲೀನೋ ಭವತಿ ತದಾ ತತ್ತುರೀಯಾತೀತಂ ||

ಎಂದು ಹಂಸೋಪನಿಷತ್ತಿನಲ್ಲುಕ್ತವಾಗಿರುವುದರಿಂದ ದಹರಾಕಾಶದಲ್ಲಿ ಉಪಾಸ್ಯವಾದ ವಸ್ತುವು ಲಿಂಗರೂಪಿಯಾಗಿರುವುದೆಂದು ಸ್ಪಷ್ಟವಾಗುತ್ತದೆ. ಕೋಟಿ ಸೂರ್ಯರಂತೆ ಪ್ರಕಾಶಿಸುವವನೂ, ನೀರನ್ನೂ ಹಾಲನ್ನೂ ಬೇರ್ಪಡಿಸಿ ಹಾಲನ್ನೇ ಸ್ವೀಕರಿಸುವ ಸ್ವಭಾವವುಳ್ಳ ಹಂಸಪಕ್ಷಿಯೋಪಾದಿಯಲ್ಲಿ ಭಕ್ತರ ಸದ್ಗುಣವನ್ನು ಮಾತ್ರ ಪರಿಗ್ರಹಿಸಿ ಅನುಗ್ರಹಿಸುವ ಸ್ವಭಾವವುಳ್ಳವನಾದ್ದರಿಂದ ಪರಮಹಂಸಪದವಾಚ್ಯನೂ ಆಗಿರುವ ಯಾವ ಮಹೇಶನುಂಟೋ ಆ ಮಹೇಶನು ವಾಸಮಾಡಿರುವ ಹೃದಯಕಮಲವು ಎಂಟು ದಳಗಳುಳ್ಳದಾಗಿರುವದು. ಆ ದಳಗಳಲ್ಲಿ ಆತ್ಮನು ಸದಾ ಸಂಚರಿಸುತ್ತಿರುವನು. ಇವುಗಳಲ್ಲಿ ಪೂರ್ವದಳದಲ್ಲಿ ಸಂಚರಿಸುವುದರಿಂದ ಆತ್ಮನಿಗೆ ಪುಣ್ಯಬುದ್ಧಿಯೂ, ಅಗ್ನಿದಿಕ್ಕಿನದಳದಲ್ಲಿ ಸಂಚರಿಸುವುದರಿಂದ ಮಂದಬುದ್ಧಿಯೂ, ದಕ್ಷಿಣದಳದಲ್ಲಿ ಕ್ರೂರಬುದ್ಧಿಯೂ, ನೈರುತ್ಯಕ್ಕೆ ಬರಲು ಪಾಪಬುದ್ಧಿಯೂ, ಪಶ್ಚಿಮದಲ್ಲಿ ಕ್ರೀಡಾಸಕ್ತಿಯೂ, ವಾಯವ್ಯದಲ್ಲಿ ಗಮನೇಚ್ಛೆಯೂ, ಉತ್ತರದಲ್ಲಿ ರತಿಪ್ರೀತಿಯೂ, ಈಶಾನ್ಯದಲ್ಲಿ ದ್ರವ್ಯಾಪೇಕ್ಷೆಯೂ ಉತ್ಪನ್ನವಾಗುತ್ತದೆ. ಆತ್ಮನು ಆ ಕಮಲದ ಮಧ್ಯಭಾಗದಲ್ಲಿ ನಿಂತರೆ ವೈರಾಗ್ಯಬುದ್ಧಿಯೂ, ಕೇಸರದಲ್ಲಿ ಸಂಚರಿಸಿದರೆ ಜಾಗ್ರದವಸ್ಥೆಯೂ, ಕರ್ಣಿಕೆಯಲ್ಲಿ ಸ್ವಪ್ನವೂ, ಲಿಂಗದಲ್ಲಿ ಪ್ರವೇಶಿಸಿದರೆ ಸುಷುಪ್ತ್ಯವಸ್ಥೆಯೂ, ಆ ಹೃದಯಸ್ಥಾನವನ್ನು ಬಿಟ್ಟರೆ ತುರೀಯಾವಸ್ಥೆಯೂ ಹಂಸನಾದದಲ್ಲಿ ಐಕ್ಯವಾದರೆ ತುರೀಯಾತೀತಾವಸ್ಥೆಯೂ ಪ್ರಾಪ್ತವಾಗುವುದು. ಈ ಉಪನಿಷತ್ತಿನಲ್ಲಿ 'ಲಿಂಗೇಸುಷುಪ್ತಿಃ' ಎಂಬ ವಾಕ್ಯವಿರುವುದರಿಂದ ಹೃದಯಕಮಲದಲ್ಲಿ ಪ್ರಕಾಶಿಸುವ ಶಿವನು ಲಿಂಗರೂಪಿಯಾಗಿರುವನೆಂದು ಸ್ಪಷ್ಟವಾಗುತ್ತದೆ. ಮತ್ತ,

ತತೋಽವ್ಯಯಾತ್ಮಾ ಸ ಹರಿಃ ಸ್ವಪ್ಮಕ್ಷಂ ಕೌಶಿಕಾಯನಂ |
ದರ್ಶಯಾಮಾಸ ದೇವಾನಾಂ ಮುರಾರಿರ್ಲಿಂಗಮೈಶ್ವರಂ ||

ನಾರಾಯಣನು ತನ್ನ ಹೃದಯಕಮಲದಲ್ಲಿ ಪ್ರಕಾಶಿಸುವ ಶಿವಲಿಂಗವನ್ನು ದೇವತೆಗಳಿಗೆ ಸಾಕ್ಷಾತ್ಕಾರ ಮಾಡಿಸಿದನೆಂದು ವಾಮನಪುರಾಣದಲ್ಲಿ ಉಕ್ತವಾಗಿರುವುದು.

ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಂ |
ಭ್ರೂಮಧ್ಯೇ ಸ್ಫಟಿಕಪ್ರಖ್ಯಂ ಲಿಂಗಂ ಯೋಗೀ ವಿಭಾವಯೇತ್ ||

ಅಂತರ್ಧ್ಯಾನಸಾಮರ್ಥ್ಯವುಳ್ಳ ಮಹಾಯೋಗಿಯು ಶಿವರೂಪವಾದ ಆ ಲಿಂಗಮೂರ್ತಿಯನ್ನು ಆಧಾರಚಕ್ರದಲ್ಲಿ ಭಂಗಾರದಂತೆ ಹೊಳೆಯುವದನ್ನಾಗಿಯೂ ಹೃದಯಕಮಲದಲ್ಲಿ ಹವಳದಂತೆ ಪ್ರಕಾಶಿಸುವದನ್ನಾಗಿಯೂ ಭ್ರೂಮಧ್ಯಸ್ಥಾನದಲ್ಲಿ ಸ್ಫಟಿಕಮಣಿಯಂತೆ ಮಿನುಗುತ್ತಿರುವದನ್ನಾಗಿಯೂ ಧ್ಯಾನಿಸುತ್ತಿರಬೇಕೆಂದು ಶಿವಾಗಮಗಳು ಈ ತತ್ತ್ವವನ್ನೇ ಪ್ರತಿಪಾದಿಸುತ್ತಿರುವುದರಿಂದ ಹೃದಯಾಕಾಶದಲ್ಲಿರುವ ಅಮೂರ್ತವಾದ ಪರಮಾತ್ಮನು ಲಿಂಗರೂಪಿಯೇ ಆಗಿರುವನೆಂದು ಸ್ಪಷ್ಟವಾಗುವುದು. ಇಂತಹ ಲಿಂಗರೂಪಿಯಾದ ಪರಬ್ರಹ್ಮವನ್ನು ಅವಿಚ್ಛಿನ್ನವಾಗಿ ಧ್ಯಾನಿಸುತ್ತಿರುವುದೇ ಅಭ್ಯಂತರ ಲಿಂಗೋಪಾಸನೆಯೆನಿಸಿಕೊಳ್ಳುತ್ತದೆ. ಇದನ್ನೇ ಅಂತರ್ಲಿಂಗಧಾರಣೆಯೆಂತಲೂ ಜ್ಯೋತಿರ್ಲಿಂಗಧಾರಣೆಯೆಂತಲೂ ಪ್ರಾಣಲಿಂಗಧಾರಣೆಯೆಂತಲೂ ಪರ್ಯಾಯನಾಮಗಳಿಂದ ಕರೆಯುವರು. ಹೀಗೆ ಮುಕ್ತಿಮೂಲಗಳಾದ ಇಷ್ಟಲಿಂಗಧಾರಣ ಅಂತರ್ಲಿಂಗಧಾರಣಗಳಲ್ಲಿ ಅಂತರ್ಲಿಂಗಧಾರಣವನ್ನು ಸಂಕ್ಷಿಪ್ತವಾಗಿ ಪ್ರಮಾಣಾನುಭವಗಳಿಂದ ತೋರಿಸಿ ಇನ್ನುಮುಂದೆ ದಹರಾಕಾಶದಲ್ಲಿರುವ ಆ ಬ್ರಹ್ಮಲಿಂಗವೇ ಇಷ್ಟಲಿಂಗರೂಪದಿಂದ ಪರಿಣಮಿಸಿ ಭಕ್ತರ ಕಂಠಾದಿ ಉತ್ತಮಾಂಗಗಳಲ್ಲಿ ನೆಲೆಗೊಳಿಸಿ ಮೋಕ್ಷಮಾರ್ಗದಲ್ಲಿ ಪ್ರವೇಶಿಸಿದ ಭಕ್ತರಿಗೆ ಸೌಲಭ್ಯವನ್ನುಂಟುಮಾಡುವುದೆಂಬ ವಿಷಯವು ಕ್ರಮದಿಂದ ಪ್ರತಿಪಾದಿಸಲ್ಪಡುವುದು.

ಒಳದೇಶದ ವೃತ್ತಾಂತಗಳು.

ಕಳೆದವಾರ ಕೋಲಾರದ ಚಿನ್ನದ ಗಣಿಯಲ್ಲಿ ಯಾರೋ ದುಷ್ಟರು ರೂಮಿನ ಕಿಟಕಿ ಸಲಾಕಿಗಳನ್ನು ಮುರಿದು ಒಳಕ್ಕೆ ನುಗ್ಗಿ 1500 ರೂಪಾಯಿ ಬೆಲೆ ಬಾಳುವ ಚಿನ್ನವನ್ನು ಕದ್ದುಕೊಂಡುಹೋದರೆಂದು ತಿಳಿದುಬಂದಿದೆ.

ಅರಮನೆ ಆಸ್ಪತ್ರೆಯ ಡಾಕ್ಟರ್ ಮ|| ರಾ|| ರಂಗಾಚಾರ್ಯರು ರಿಟೈರಾಗುವುದರಿಂದ ಅವರ ಸ್ಥಾನಕ್ಕೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಡಾ|| ಮ|| ರಾ|| ಟಿ. ಬಾಲಕೃಷ್ಣಮೊದಲಿಯಾರ್ರನ್ನು ವರ್ಗಾಯಿಸಿದೆ.

ಚೆನ್ನಗಿರಿ ತಾಲೂಕು ಚೋಳದಾಳಿನ ಸಮೀಪಸ್ಥಳದಲ್ಲೆಲ್ಲಾ ಹಾವಳಿಮಾಡುತ್ತಿರುವ ಹುಲಿಯನ್ನು ಯಾರು ಬೇಕಾದರೂ ಶಿಕಾರಿ ಮಾಡಬಹುದೆಂದು ಸರಕಾರದವರು ಮೂರುತಿಂಗಳುಗಳ ವರೆಗೆ ಅವಧಿಯನ್ನು ಕೊಟ್ಟಿದ್ದಾರೆ.

ಮೈಸೂರು ಸಂಸ್ಥಾನದ ಹೈಕೋರ್ಟಿಗೆ ಇನ್ನೊಬ್ಬ ಜಡ್ಜಿಯರ ಅವಶ್ಯಕತೆಯು ಕಂಡು ಬಂದಿರುವುದರಿಂದ ಸೀನಿಯರ್ ಡಿಸ್ಟ್ರಿಕ್ಟ್ ಜಡ್ಜ್ ಮ|| ಎ. ಕೆ. ಶ್ರೀನಿವಾಸರಾಯರನ್ನು ಬರುವ ಜನವರಿಯಿಂದ ಮೂರು ತಿಂಗಳುಗಳವರೆಗೆ ನೇಮಕಮಾಡಲಾಗುವದೆಂದು ತಿಳಿದು ಬಂದಿದೆ.

ಮೈಸೂರು ಎಜ್ಯುಕೇಷನ್ ಲೀಗಿನ ಕಾನ್ಫರೆನ್ಸ್ ಅಧಿವೇಶನವು ಬರುವ ಜನವರಿ 3-4 ಮತ್ತು 5ನೆಯ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವುದು. ಮಲ್ಲೇಶ್ವರದ ಗೌರ್ನಮೆಂಟ್ ಹೈಸ್ಕೂಲ್ ಹೆಡ್ ಮಾಸ್ಟರ್ ಶ್ರೀ ಕೆ. ಎನ್. ಕಿಣಿ ಎಂ.ಎ., ಪಿ.ಎಚ್.ಡಿ. ಇವರು ಸ್ವಾಗತಕಮಿಟಿಯ ಚೇರ್ಮನ್ನಾಗಿ ಆರಿಸಲ್ಪಟ್ಟಿದ್ದಾರೆ.

ಮೈಸೂರು ರೈಲ್ವೆ ಚೀಫ್ ಸ್ಟೋರ್‌ಕೀಪರ್ ಮಿ|| ವಿ. ಸದಾಶಿವಮೊದಲಿಯಾರ್ರವರಿಗೆ 5 ನೇ ಜನವರಿಯಿಂದ 25 ದಿನಗಳು ಪ್ರಿವಿಲೇಜ್ ರಜಾ ಮುಂಜೂರಾಗಿರುವುದರಿಂದ ಇವರ ರಜಾಕಾಲದಲ್ಲಿ ಸಬ್ ಅಸಿಸ್ಟೆಂಟ್ ಸ್ಟೋರ್‌ಕೀಪರ್ ಮಿ|| ಎ. ವಿ. ಚಿನ್ನಸ್ವಾಮಿಯವರು ತಮ್ಮ ಕೆಲಸಗಳ ಜೊತೆಗೆ ಇವರ ಕೆಲಸವನ್ನೂ ನೋಡಿಕೊಳ್ಳುತ್ತಾರೆ.

ಮಾಲೂರು ತಾಲೂಕಿಗೆ ಸೇರಿದ ಲಕ್ಕೂರು, [illegible]ತ್ಯಾಕಲ್ಲು, ಚಿಕ್ಕತಿರುಪತಿ, ಮಾಸ್ತಿ ಮತ್ತು ದೊಡ್ಡನಾಯಕನದೊಡ್ಡಿ ಈ ಸ್ಥಳಗಳಲ್ಲಿ ನಡೆಯುವ ಸಂತೆಗಳಿಗೆ ಸುತ್ತಲಿನ ಜನಗಳು ಬಂದು ಸೇರುವುದರಿಂದ ಕಾಲರಾ ಹರಡುವಶಂಕೆ ಇರುವುದರಿಂದ ಮೇಲ್ಕಂಡ ಸ್ಥಳಗಳಲ್ಲಿ ಇನ್ನು 4 ವಾರಗಳ ವರೆಗೆ ಸಂತೆಯು ನಡೆಯ ಕೂಡದೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ನಂಜನಗೂಡು ಕ್ಷೇತ್ರದಲ್ಲಿರುವ ಹೊಂದಲಗೆರೆ ಮಠದ ಶ್ರೀ ಪಟ್ಟಾಧ್ಯಕ್ಷರು ಶ್ರೀಮದ್ರಂಭಾಪುರೀ ಜಗದ್ಗುರುಗಳವರನ್ನು ಇದೇ ತಿಂಗಳು ೧೪ ತಾರೀಖಿನ ದಿವಸ ಸಮಸ್ತ ಬಿರುದಾವಳಿಗಳೊಡನೆ ತಮ್ಮ ಮಠಕ್ಕೆ ಬಿಜಮಾಡಿಸಿಕೊಂಡು ವಿಧ್ಯುಕ್ತವಾಗಿ ಪಾದಪೂಜೆಯನ್ನು ಮಾಡಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಗುರುಕಾಣಿಕೆಯನ್ನು ಸಮರ್ಪಿಸಿ ಶ್ರೀಗಳವರ ಕೃಪಾಕಟಾಕ್ಷಕ್ಕೆ ಪಾತ್ರರಾದರು.

ತುಮಕೂರು ಟೌನ್ ಕೋ-ಅಪರೇಟಿವ್ ಸೊಸೈಟಿಯ ಲೆಖ್ಖಗಳನ್ನು ತಿದ್ದಿ ಫೋರ್ಜರಿಮಾಡಿ ಸೊಸೈಟಿಯ ಹಣವನ್ನು ದುರುಪಯೋಗಪಡಿಸಿಕೊಂಡರೆಂಬ ಅಪಾದನೆಯ ಮೇಲೆ ಸೆಕ್ರಿಟರಿಗಳಾಗಿದ್ದ ಅಡ್ವೋಕೇಟ್ ಮ|| ರಾ|| ಎಸ್. ಕೆ. ಸೆಟ್ಲೂರವರಿಗೆ 2 ವರ್ಷ ಗುಮಾಸ್ತರುಗಳಾಗಿದ್ದ ಎಚ್. ಗೋವಿಂದಪ್ಪನಿಗೆ 6 ತಿಂಗಳು, ಬಿ. ಕೃಷ್ಣಪ್ಪನಿಗೆ 3 ತಿಂಗಳು ಕಠಿನಶಿಕ್ಷೆಯು ವಿಧಿಸಲ್ಪಟ್ಟಿತೆಂದು ತಿಳಿದುಬಂದಿದೆ.

ವರ್ತಮಾನಸಂಗ್ರಹ.

ಪೋಲೀಸ್ ಇನ್ಸ್‌ಪೆಕ್ಟರಿಗೆ ಶಿಕ್ಷೆ.

ಬೊಂಬಾಯಿಯಲ್ಲಿ ಲಂಚ ತೆಗೆದುಕೊಂಡನೆಂದು ಒಬ್ಬ ಪೋಲೀಸು ಸಬ್ ಇನ್ಸ್‌ಪೆಕ್ಟರಿಗೆ 4 ತಿಂಗಳು ಕಠಿನ ಶಿಕ್ಷೆಯು ವಿಧಿಸಲ್ಪಟ್ಟಿತು.

ಬೆಂಕಿಯಿಂದ ನಷ್ಟ!

ಬೊಂಬಾಯಿಯಲ್ಲಿರುವ ಸೂರ್ಯದೇವಗಿರಣಿಯ ಹತ್ತಿಸ್ಟೋರಿಗೆ ಬೆಂಕಿಬಿದ್ದು, ಸುಮಾರು 30 ಸಾವಿರ ರೂಪಾಯಿಗಳಷ್ಟು ನಷ್ಟವಾಗಿರುತ್ತದೆ.

ಗೃಹಶುದ್ಧಿಗಾಗಿ ಬಹುಮಾನ!

ಡೆಲ್ಲಿ ಮುನಿಸಿಪಾಲಿಟಿಯವರು ಯಾರು ಮನೆಯನ್ನು ಚೊಕ್ಕಟವಾಗಿಟ್ಟಿರುತ್ತಾರೆಯೋ, ಅವರಿಗೆ ಬಹುಮಾನಗಳನ್ನು ಕೊಡಬೇಕೆಂದು ಯೋಚಿಸಿದ್ದಾರೆ.

ಆತ್ಮಹತ್ಯೆಗಳು!

ಮಧ್ಯಪ್ರಾಂತ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಸುಮಾರು 441 ಜನ ಗಂಡಸರೂ, 553 ಜನ ಸ್ತ್ರೀಯರೂ ಆತ್ಮಹತ್ಯೆಮಾಡಿಕೊಂಡಿರುತ್ತಾರೆಂದು ತಿಳಿದುಬರುತ್ತದೆ.

ಊರಿನ ಹೊಲಸಿಗಾಗಿ ರೈಲ್ವೆಗಾಡಿ!

ಡೆಲ್ಲಿ ಮುನಿಸಿಪಾಲಿಟಿಯವರು ಊರಿನ ಹೊಲಸನ್ನೆಲ್ಲಾ ಹೊರಗೆ ಸಾಗಿಸುವುದಕ್ಕೋಸ್ಕರ ಒಂದು ರೈಲು ಗಾಡಿಯನ್ನೇ ಉಪಯೋಗಿಸಬೇಕೆಂದು ಯೋಚನೆಮಾಡಿದ್ದಾರೆ.

ಆತ್ಮಹತ್ಯೆ!

ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ನಾರಾಯಣ ಪ್ರಭು ಎಂಬವನು, ಕಳೆದವಾರ ಹಾಸ್ಟಲಿನಲ್ಲಿ ನೇಣುಹಾಕಿಕೊಂಡು ಪ್ರಾಣಬಿಟ್ಟನೆಂದೂ, ಕಾರಣವು ತಿಳಿದುಬಂದಿಲ್ಲವೆಂದೂ ದೇಹವನ್ನು ಪರೀಕ್ಷೆಗೆ ಕಳುಹಿಸಿರುತ್ತಾರೆಂದೂ ತಿಳಿದುಬರುತ್ತದೆ.

ಹಡಗಿನ ಅನಾಹುತ.

ಫ್ರೆಂಚ್ ಜನಗಳಿಗೆ ಸೇರಿದ "ಪಿಯಾಫಿನೋ" ಎಂಬ ಹಡಗು ಸಮುದ್ರದ ಮಧ್ಯದಲ್ಲಿ ಒಡೆದು ಹೋದುದರಿಂದ 25 ಜನರು ನೀರಿನ ಪಾಲಾದರೆಂದು ತಿಳಿದುಬಂದಿದೆ. ಅದರ ಸಹಾಯಕ್ಕೆ ಬಂದ ಹಡಗುಗಳು ಮನುಷ್ಯರನ್ನೂ ಸಾಮಾನುಗಳನ್ನೂ ಸಾಗಿಸುತ್ತಿವೆ.

ಚಿಕ್ಕತಮ್ಮನನ್ನು ಹೊಡೆದದ್ದಕ್ಕೆ ಅಣ್ಣನಿಗೆ ಶಿಕ್ಷೆ!

ಬೊಂಬಾಯಿಯ ದಾದರ್ ಎಂಬಲ್ಲಿರುವವನೊಬ್ಬನು ತನ್ನ ಚಿಕ್ಕತಮ್ಮನು ಪಾಠಗಳನ್ನು ಸರಿಯಾಗಿ ಅಭ್ಯಾಸಮಾಡಲಿಲ್ಲವೆಂದು ಅತಿಯಾಗಿ ಹೊಡೆದು ಘಾಸಿಮಾಡಿದ್ದರಿಂದ ಪೋಲೀಸರು ಆ ಚಿಕ್ಕ ಹುಡುಗನನ್ನು ಆಸ್ಪತ್ರೆಗೆ ಕಳುಹಿಸಿ ಅಣ್ಣನನ್ನು ಶಿಕ್ಷೆಗೆ ಗುರಿಪಡಿಸಿದರು.

ಅದ್ಭುತವಾದ ಜ್ವಾಲಾಮುಖಿ!

ನ್ಯೂಜಿಲೆಂಡಿನ ವೆಲ್ಲಿಂಗ್‌ಟನ್ ಎಂಬಲ್ಲಿ ಅದ್ಭುತವಾದ ಜ್ವಾಲಾಮುಖಿಯು ಕಳೆದ 9 ನೇ ತಾರೀಖಿನಲ್ಲಿ ಕಾಣಿಸಿಕೊಂಡಿದೆಯೆಂದೂ, ಇದರಿಂದ ಅನೇಕ ಕಲ್ಲುಗಳು ಸಿಡಿದುಬಿದ್ದುವೆಂದೂ, ಉರಿಯು ಶಿಖರಕ್ಕಿಂತ ಸುಮಾರು 6,000 ಅಡಿ ಎತ್ತರದವರೆಗೂ ವ್ಯಾಪಿಸಿತ್ತೆಂದೂ ತಿಳಿದುಬರುತ್ತದೆ.

ಮಿಠಾಯಿಯಿಂದ ಮರಣ.

ಸಿಕಂದರಾಬಾದಿನಲ್ಲಿ ಒಬ್ಬ ಹುಡುಗನು ದಾರಿಯಲ್ಲಿ ಬಿದ್ದಿದ್ದ ಮಿಠಾಯಿ ಚೂರನ್ನು ತಾನು ತಿಂದು ತನ್ನ ಅಣ್ಣಂದಿರಿಬ್ಬರಿಗೂ ಸ್ವಲ್ಪ ಸ್ವಲ್ಪ ಕೊಟ್ಟನು. ಕೂಡಲೇ ಆಮೂವರೂ ಅಸ್ವಸ್ಥರಾಗಿ ಇಬ್ಬರು ಸತ್ತುಹೋದರು. ಒಬ್ಬನು ಇನ್ನೂ ನರಳುತ್ತಿದ್ದಾನೆ. ಕಾರಣವು ತಿಳಿದಿರುವುದಿಲ್ಲ.

ವಿದ್ಯುಚ್ಛಕ್ತಿಯ ದುರುಪಯೋಗ.

ಆಗ್ರಾಪಟ್ಟಣದಲ್ಲಿ ಕಳ್ಳತನದಿಂದ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಿಕೊಂಡುದಕ್ಕಾಗಿ ಇಬ್ಬರು ಮಿಲ್ಲಿನ ಕೆಲಸಗಾರರಿಗೆ 3 ತಿಂಗಳ ಶಿಕ್ಷೆಯನ್ನು ವಿಧಿಸಲಾಗಿದೆ. ಇವರು ಮೀಟರ್ ಪೆಟ್ಟಿಗೆಯಿಂದ ತಂತಿಗಳನ್ನು ತೆಗೆದು ವಿದ್ಯುಚ್ಛಕ್ತಿಯು ಮೀಟರಿಗೆ ಹೋಗದಂತೆ ಮಾಡಿದ್ದರಂತೆ!

ವಜ್ರದ ಗಣಿ.

ಬರೋಡಾ ಸಂಸ್ಥಾನಕ್ಕೆ ಸೇರಿದ ಶಾರದಾಪುರ ಎಂಬಲ್ಲಿರುವ ಬೆಟ್ಟಗಳಲ್ಲಿ ಕೆಲಸಮಾಡುತ್ತಿದ್ದ ಕೂಲಿಕಾರರಿಗೆ 2 ಬೆಲೆಯುಳ್ಳ ವಜ್ರಗಳು ದೊರೆತವು. ಸರಕಾರದವರು ಇವುಗಳನ್ನು ವಶಪಡಿಸಿಕೊಂಡು ಅಲ್ಲಿ ವಜ್ರದಗಣಿ ಇರಬಹುದೆಂದು ಪೋಲೀಸ್ ಕಾವಲಿನ್ನಿಟ್ಟಿದ್ದಾರೆ.

ವಿಚಿತ್ರ ಯುವಕ!

ಲಂಡನ್ ಪಟ್ಟಣದಲ್ಲಿ 19 ವರ್ಷ ವಯಸ್ಸಿನ ಒಬ್ಬ ಹುಡುಗನಿದ್ದಾನೆ. ಅವನಿಗೆ ಇತರ ಯಾವ ಕೆಲಸವೂ ಬರದಿದ್ದರೂ, ವಾಸನೆಯಿಂದ ಪದಾರ್ಥಗಳನ್ನು ವಿಂಗಡಿಸುವ ವಿಚಿತ್ರ ಶಕ್ತಿಯನ್ನು ಹೊಂದಿದ್ದಾನೆ. ಇವನು ಒಗೆದ ಬಟ್ಟೆಗಳನ್ನು ವಾಸನೆ ನೋಡಿ ವಿಂಗಡಿಸುವ ಕೆಲಸ ಮಾಡುತ್ತಿದ್ದಾನಂತೆ!

ಮೋಟಾರ್ ಅನಾಹುತ.

ಕಳೆದವಾರ ಮಧುರೆ-ದೇವಿಕೋಟೆ ರಸ್ತೆಯಲ್ಲಿ ಹೋಗುತ್ತಿದ್ದ ಮೋಟಾರ್ ಬಸ್ಸು, ಕೀಲೂರಿ ಎಂಬ ಗ್ರಾಮದ ಬಳಿ ಎದುರಿಗೆ ಬರುತ್ತಿದ್ದ ಗಾಡಿಯನ್ನು ತಪ್ಪಿಸುವುದಕ್ಕೆ ಪಕ್ಕಕ್ಕೆ ತಿರುಗಿಸಿದಾಗ ಮರಕ್ಕೆ ಢಿಕ್ಕಿ ಹೊಡೆದು ಮೊಗುಚಿಕೊಂಡಿತು. ಇದರಿಂದ ಒಬ್ಬ ಸ್ತ್ರೀಯಳು ಮರಣಹೊಂದಿದಳು. ಇನ್ನಿಬ್ಬರಿಗೆ ಗಾಯಗಳಾಗಿವೆ.

ಕೂಲಿಯವನ ಮೋಸ.

ಡೆಲ್ಲಿ ರೈಲ್ವೆಸ್ಟೇಷನ್ನಿನಲ್ಲಿ ಒಬ್ಬ ದೊಡ್ಡ ಶ್ರೀಮಂತರ ಸಾಮಾನನ್ನು ಕೂಲಿಯವನು ತೆಗೆದುಕೊಂಡು ಪರಾರಿಯಾಗಿರುತ್ತಾನೆಂದೂ, ಅದರಲ್ಲಿ 1000 ರೂ. ಬೆಲೆಬಾಳುವ ಪದಾರ್ಥಗಳೂ, 3000 ಮತ್ತು 1500 ರೂಪಾಯಿಯ ಎರಡು ಪ್ರಾಮಿಸರಿನೋಟುಗಳೂ ಇದ್ದುವೆಂದೂ, ಕಳ್ಳನು ಇನ್ನೂ ಸಿಕ್ಕಿರುವುದಿಲ್ಲವೆಂದೂ ತಿಳಿದುಬರುತ್ತದೆ.

ಗುಪ್ತ ಹಡಗು!

ಇಂಗ್ಲೆಂಡಿನ ಪಲ್ ಎಂಬ ರೇವಿನಲ್ಲಿ ತುದಿಯಿಂದ ಅಡಿಯವರೆಗೂ ಕಪ್ಪುಬಣ್ಣ ಹಾಕಲ್ಪಟ್ಟ ಒಂದು ಹಡಗವು ಯಾವುದೋ ಗುಪ್ತಕೆಲಸಕ್ಕಾಗಿ ಸಿದ್ಧಪಡಿಸಲ್ಪಟ್ಟು ಅಪ್ಪಣೆಯನ್ನು ಎದುರು ನೋಡುತ್ತಿದೆ. ಅದರಲ್ಲಿರುವ ಪ್ರಾಣರಕ್ಷಣ ಬೆಲ್ಟುಗಳಿಗೂ ಕಪ್ಪು ಬಣ್ಣವನ್ನು ಹಾಕಿದ್ದಾರೆ. ಇದನ್ನು ಯಾವ ಕೆಲಸಕ್ಕೆ ಉಪಯೋಗಿಸುತ್ತಾರೆಂಬುದು ತಿಳಿದಿಲ್ಲ.

11 ವರ್ಷ ವಯಸ್ಸಿನ ಹುಡುಗಿಯ ಕೊಲೆ!

ಕಲ್ಕತ್ತಾನಗರದಲ್ಲಿ ಕಳೆದ ಗುರುವಾರ ರಾತ್ರಿ ತನ್ನ ಸ್ನೇಹಿತಳನ್ನು ನೋಡುವುದಕ್ಕಾಗಿ ಹೊರಗೆ ಬಂದ 11 ವರ್ಷ ವಯಸ್ಸಿನ ದುರ್ಗಾ ಎಂಬ ಹುಡುಗಿಯನ್ನು ಹನ್ನೆರಡು ಜನ ಬಂಗಾಳಿಗಳು ಹಿಂಬಾಲಿಸಿ, ಚೂರಿಯಿಂದ ತಿವಿದು ಕೊಂದು ಓಡಿಹೋದರಂತೆ! ಹುಡುಗಿಯ ಮೈಮೇಲಿನ ಆಭರಣಗಳು ಹಾಗೆಯೇ ಇವೆ. ಕೊಲೆಗೆ ಕಾರಣವು ತಿಳಿದುಬಂದಿಲ್ಲ.

ಅಫ್ಘಾನರ ಅಕೃತ್ಯ.

ಅಫ್ಘಾನರ ಕೆಲವು ಸೈನ್ಯದ ಅಧಿಕಾರಿಗಳೂ ಮತ್ತು ಟಿಹರ್ನ ಎಂಬ ಪಂಗಡದವರೂ ತಮ್ಮ ದೇಶದ ಎಲ್ಲೆಯನ್ನು ದಾಟಿ ಪರ್ಷಿಯಾ ದೇಶಕ್ಕೆ ಸೇರಿದ ಕೆಲವು ಹಳ್ಳಿಗಳನ್ನು ಲೂಟಿಮಾಡಿ, ಅನೇಕರನ್ನು ಕೈಸೆರೆ ಹಿಡಿದಿದ್ದಾರೆಂದೂ, ಸುಮಾರು 25 ಜನರನ್ನು ಕೊಂದಿದ್ದಾರೆಂದೂ ತಿಳಿದು ಬಂದಿದೆ. ಈ ವಿಚಾರದಲ್ಲಿ ಪರ್ಷಿಯಾ ಸರ್ಕಾರಕ್ಕೂ ಅಫ್ಘಾನ್ ಸರ್ಕಾರಕ್ಕೂ ತೀಕ್ಷ್ಣವಾದ ಮಾತು ಕಥೆಗಳು ನಡೆಯುತ್ತಿವೆ.

ತೆಂಗಿನಕಾಯಿಚಿಪ್ಪಿನ ಉಪಯೋಗ.

ವಿಷವಾಯು ನಿವಾರಣೆಗಾಗಿ [illegible]ಚಿಪ್ಪಿನ [illegible]ಲು ಸರ್ವಶ್ರೇಷ್ಠವೆಂಬುದನ್ನು [illegible]ದಿದ್ದಾರೆ. ಇದಕ್ಕಾಗಿ ಸಿಲೋನಿನಿಂದ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ 900 ಟನ್ನು ಇದ್ದಲನ್ನು ಕೊಂಡುಕೊಂಡರು. ಒಂದು ವರುಷದಲ್ಲಿ ಸುಮಾರು 3658ಟನ್ನು ಅಂದರೆ 17000 ಪೌಂಡು ಬೆಲೆಯಾಗುವಷ್ಟನ್ನು ತೆಗೆದುಕೊಂಡಿದ್ದಾರೆ. ಇದರಿಂದ ತೆಂಗು ಬೆಳೆಯುವ ದೇಶಗಳಿಗೆ ಲಾಭವಾಗುವಂತಿದೆ.

ಯುದ್ಧದ ಚಿಹ್ನೆ!

ರಷ್ಯಾ ಗೌರ್ನಮೆಂಟಿನವರು ತಮ್ಮ ಪೂರ್ವ ಸರಹದ್ದಾದ ಸೈಬೀರಿಯಾದೇಶದ ಕೋಟೆಗಳನ್ನೆಲ್ಲಾ ಸರಿಪಡಿಸಿ ಸೈನ್ಯಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಮಾಂಚೂರಿಯಾ ರೇಲ್ವೆ ವಿಚಾರವಾಗಿ ಜಪಾನ್ ಗೌರ್ನಮೆಂಟಿನವರು ಏನಾದರೂ ತೊಂದರೆಕೊಡಬಹುದೆಂಬ ಸಂದೇಹವೇ ಇದಕ್ಕೆ ಕಾರಣ! ಯುದ್ಧದ ಕಿಡಿಯು ಈ ಪೂರ್ವದೇಶದಲ್ಲಿ ಹುಟ್ಟಿ ಪ್ರಪಂಚವನ್ನೇ ಆವರಿಸಬಹುದೆಂಬ ಭೀತಿಯುಂಟಾಗಿದೆ.

ಹಾವಿನವಿಷವೇ ದಿವ್ಯೌಷಧ.

ಶಸ್ತ್ರಚಿಕಿತ್ಸೆಮಾಡಿದ ಸ್ಥಳದಿಂದಾಗಲಿ, ಅಥವಾ ಗಾಯಗಳಿಂದಾಗಲಿ ಸೋರುವ ರಕ್ತವನ್ನು ಕೂಡಲೆ ನಿಲ್ಲಿಸುವುದಕ್ಕೆ 1 ಕ್ಕೆ ಸಾವಿರ ಪಾಲು ನೀರು ಬೆರಸಿದ ಹಾವಿನ ವಿಷವೇ ದಿವ್ಯೌಷಧವೆಂದು ಲಂಡನ್ ಪಟ್ಟಣದ ಡಾಕ್ಟರ್ ಮ್ಯಾಕ್‌ಫರ್ಲೇನ್ ಮತ್ತು ಬರ್ಗೆಸ್‌ಬಾರ್ನೆಟ್ ಎಂಬವರು ತಮ್ಮ ಅನುಭವದಿಂದ ಪ್ರಕಟಿಸಿರುತ್ತಾರಲ್ಲದೆ ಇಂಡಿಯಾ ದೇಶದಲ್ಲಿ ಸಿಕ್ಕುವ ರಸಲ್ಸ್ ವೈಪರ್ ಎಂಬ ಜಾತಿಯ ಹಾವಿನ ವಿಷವು ಶ್ರೇಷ್ಠವಾದುದೆಂದು ಹೇಳುತ್ತಾರೆ.

ನೂತನ ದೇಹಧಾರಣ!

ಡಾ|| ರಾಜಾ ದೇವೀಪ್ರಸಾದ ಮಿಶ್ರರೆಂಬವರು ತಾವು ಅಭ್ಯಾಸಮಾಡಿರುವ ಅಥರ್ವಣವೇದದಲ್ಲಿ ಹೇಳಿರುವ ಪ್ರಕಾರ ಕೆಲವು ವಿಷ ವಸ್ತುಗಳನ್ನು ಆವಿರೂಪದಲ್ಲಿ ನೋಡಕಟ್ಟುವಂತೆ ಮಾಡಿ ಶತ್ರುಗಳ ಮೇಲೆ ವಿಷವರ್ಷವನ್ನು ಸುರಿಸಬಹುದೆಂತಲೂ, ತಾವು 6 ತಿಂಗಳು ಬೊಂಬಾಯಿಯಲ್ಲಿ ಬಿಳಿ ಮಣ್ಣು ಮಿಶ್ರವಾದ ಪೊಟಾಸಿಯಂ ಕೋರೆಡ್ ಮತ್ತು ಹಾಲಿನ ಆಹಾರವನ್ನು ತೆಗೆದುಕೊಂಡನಂತರ ಅಮೇರಿಕಾಕ್ಕೆ ಹೋಗಿ, ತಮ್ಮ ಈಗಿನ ದೇಹವನ್ನು ಸುಡಿಸಿಕೊಂಡು ಹೊಸ ಶರೀರಧಾರಣಮಾಡುವುದಾಗಿಯೂ ಹೇಳುತ್ತಿದ್ದಾರೆ.

(3ನೆಯ ಫುಟದಿಂದ ಮುಂದುವರಿದುದು.)

ರ್ಪಣ ನಜರಮುಜರೆಗಳು ಆಸ್ಥಾನ ವಿದ್ವಾನ್ ದೇವೇಂದ್ರಪ್ಪನವರ ಸಂಗೀತ, ಶ್ರೀಯುತ ನೀಲಕಂಠರಾಯರ ಇಂದ್ರಜಾಲವಿದ್ಯಾಪ್ರದರ್ಶನ ಮಾಯಿಗೌಡರ ಸಂಗೀತಶೈಲಿಯಿಂದ ಪುರಾಣವನ್ನು ಓದುವಿಕೆ ಇವು ಕ್ರಮವಾಗಿ ತಮ್ಮ ತಮ್ಮ ವೇಳೆಯನ್ನು ಎದುರುನೋಡುತ್ತಿದ್ದವು. ಆದಿಯಲ್ಲಿ ಮಂಗಲವಾಗಿ ಸ್ವಾಗತಸಂಘದ ಪ್ರೆಸಿಡೆಂಟ್ ಮಹೇಶಚಂದ್ರಗುರು ಬಿ.ಎ.,ಬಿ.ಎಲ್. ನಂಜನಗೂಡು ಇವರು ಕಾರ್ಯಕ್ರಮವನ್ನು ಸೂಚಿಸಿ ವಿಜ್ಞಾಪನಾಪತ್ರಿಕೆಯನ್ನು ಓದಿ ಸಮರ್ಪಿಸಿದರು. ಶ್ರೀಗಳವರು ಎಲ್ಲ ವಿಷಯದ ತತ್ವವನ್ನು ಗರ್ಭೀಕರಿಸಿಕೊಂಡು ಧರ್ಮಪ್ರಧಾನವಾದ ಭರತಖಂಡದ ಪ್ರಾಚೀನ ವೈಭವವನ್ನು ಸೂಚಿಸಿ ಈ ಖಂಡದ ಪುನರುಜ್ಜೀವನಕ್ಕೆ ಧಾರ್ಮಿಕ-ಲೌಕಿಕ-ವಿದ್ಯಾ ಕಲೆಗಳೊಡನೆ ಪರಸ್ಪರೈಕತಾದಿ ಸದ್ಗುಣಗಳು ಅವಶ್ಯವಿರುವದರಿಂದ ಸರ್ವ ಮತೀಯರು ತಮ್ಮ ತಮ್ಮ ಧರ್ಮದಲ್ಲಿ ನಿಷ್ಠಾಪರರಾಗಿ ಪರಸ್ಪರಾನುರಾಗದಿಂದ ಭಗವತ್ಕೃಪೆಗೆ ಪಾತ್ರರಾಗುವುದು ಕರ್ತವ್ಯಕರ್ಮವೆಂದು ಅಪ್ಪಣೆಯನ್ನು ಕೊಡಿಸಿ ಮಹಾಸಭಾರಿಯನ್ನು ಮೈಸೂರಿಗೆ ದಯಮಾಡಿಸಿಕೊಂಡುಬರಲು ಒದ್ಯೋತ್ಸಾಹಿಗಳಾದ ತಮ್ಮ ಧರ್ಮಪತ್ನಿಯರೊಡನೆ ಹದಿಮೂರು ಸಹಸ್ರರೂಪಾಯಿಗಳ ಬೆಲೆಯುಳ್ಳ ಭವ್ಯಮಂದಿರವನ್ನು ಗುರುಸೇವೆಗರ್ಪಿಸಿ ವೀರಶೈವ ಸಮಾಜಕ್ಕೆ ಪರಮಬಂಧುಗಳೆನಿಸಿದ ಧರ್ಮನಿಷ್ಠರೂ ಶಾಂತರೂ ಧೀರರೂ ಗುರುದೇವತಾ ಭಕ್ತಿತತ್ಪರರೂ ಗುರುಪೀಠಾಭಿಮಾನಿಗಳೂ ಆದ ಡಾ|| ಟಿ. ಎಸ್. ಸಿದ್ದಪ್ಪನವರಿಗೆ ಗುರುದೇವತಾಕೃಪಾಕವಚವೆಂದು ಫಲಾಶೀರ್ವಾದಪೂರ್ವಕ ಶಾಲನ್ನೂ 'ಆಚಾರ್ಯಸೇವಾಧುರೀಣ' ಎಂಬ ಪದವಿಯನ್ನೂ ದಯಪಾಲಿಸಿದರು. ಮತ್ತು ಇಂದ್ರಜಾಲವಿದ್ಯೆಯನ್ನು ಪ್ರದರ್ಶಿಸಿ ಸಭೆಗೆ ಆನಂದವನ್ನುಂಟುಮಾಡಿದ ಶ್ರೀಯುತ ನೀಲಕಂಠರಾಯರಿಗೆ ಶಾಲಿನ ಜೊತೆಗೆ 'ಇಂದ್ರಜಾಲವಿದ್ಯಾಕುಶಲ' ಎಂಬ ಪ್ರಶಸ್ತಿಯನ್ನೂ ಸಂಗೀತ ಮಾರ್ಗಾನುಸಾರವಾಗಿ ಪುರಾಣಪಠನಚಾತುರ್ಯದಿಂದ ಸರ್ವರನ್ನೂ ಆನಂದಗೊಳಿಸಿದ ಶ್ರೀಯುತ ಮಾಯಿಗೌಡರಿಗೆ ಫಲಾಶೀರ್ವಾದಪೂರ್ವಕ ಶಾಲನ್ನೂ ಆಶೀರ್ವದಿಸಿದರು. ಈ ಮಧ್ಯೆ ಪೂರ್ವಪರಿಚಿತರಾದ ಶ್ರೀಯುತ ವಕೀಲ ಶೇಷಾಚಲಯ್ಯನವರು ತಮ್ಮ ಆನಂದ ಪ್ರದರ್ಶನಕ್ಕಾಗಿ ರಚಿಸಿದ ಸಂಸ್ಕೃತ ಮತ್ತು ಕನ್ನಡ ಪದ್ಯಗಳನ್ನು ಪಠಿಸಿದ್ದನ್ನು ಕೇಳಿ ಆನಂದಿಸಿ ಈ ದಿವಸದ ಮಹೋತ್ಸವಕಾರ್ಯಕ್ಕೆ ಶ್ರೀಯುತ ವಕೀಲ ಶೇಷಾಚಲಯ್ಯನವರು ಪಿ. ಪಾಪಣ್ಣನವರು ಕೆ. ವೆಂಕಟಪ್ಪಗೌಡರು ಪಟೇಲ್ ರಾಮೇಗೌಡರು ಮುಂತಾದ ಪುರಪ್ರಮುಖ ಮಹಾಶಯರು ಅಭಿಮಾನದಿಂದ ಆಗಮಿಸಿ ಈ ಸಭೆಯನ್ನಲಂಕರಿಸಿ ಆನಂದಾತಿಶಯದಿಂದ ತಮ್ಮ ಉತ್ಕಟ ಧರ್ಮಾಭಿಮಾನವನ್ನು ವ್ಯಕ್ತಗೊಳಿಸಿದ ವಿಷಯವು ಧರ್ಮಜೀವನವಾದ ಈ ಭರತಖಂಡದ ಅಭ್ಯುದಯಕ್ಕೆ ಹೇತುವೆಂದು ಚಿತ್ತಕ್ಕೆ ತಂದು ಸಂತೋಷಾತಿಶಯದಿಂದ ಈ ಸಮಸ್ತ ಮಹಾಶಯರಿಗೂ ಜಗನ್ನಿಯಾಮಕ ಶಂಕರನು ಚಿರಾಯುರಾರೋಗ್ಯಾದಿ ಸಕಲ ಭಾಗ್ಯಗಳನ್ನಿತ್ತು ರಕ್ಷಿಸಲೆಂದು ಹರಸಿ ಸಭಾವಿಸರ್ಜನಕ್ಕೆ ಅಪ್ಪಣೆಯನ್ನು ದಯಪಾಲಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯರ ಮತ್ತು ಧರ್ಮಮೂರ್ತಿ ರಾಜರ್ಷಿ ಶ್ರೀಮನ್ಮಹಾರಾಜರವರ ನಾಮಗಳಿಂದ ತ್ರಿವಾರ ಜಯಘೋಷವಾಗಿ ಸಭೆಯು ವಿಸರ್ಜಿತವಾಯಿತು. ಶ್ರೀಮಾನ್ ಮಹೇಶಚಂದ್ರಗುರು ಅಡ್ವೋಕೇಟ ಬಿ.ಎ., ಎಲ್.ಎಲ್.ಬಿ., ಶ್ರೀಮಾನ್ ಎಂ. ಎಲ್. ಲಿಂಗಪ್ಪಯ್ಯನವರು ಅಡ್ವೋಕೇಟ ಬಿ.ಎ., ಎಲ್.ಎಲ್.ಬಿ., ಶ್ರೀಮಾನ್ ಎಂ. ಎನ್. ಬಸವಪ್ಪನವರು ಶ್ರೀಮಾನ್ ಜಿ. ನಂಜುಂಡಪ್ಪನವರು ಶ್ರೀಮಾನ್ ಮಣೆಗಾರ ಸಿದ್ದಪ್ಪನವರು ಶ್ರೀಮಾನ್ ಡಿ. ಸುಬ್ಬಣ್ಣನವರು ಶ್ರೀಮಾನ್ ದೇವೀರಮ್ಮಯ್ಯನವರು ಶ್ರೀಮಾನ್ ಪಿ. ಪಾಪಣ್ಣನವರು ಶ್ರೀಮಾನ್ ವಿಶ್ವೇಶ್ವರಗೌಡರು ಮುಂತಾದ ಮಹಾಶಯರು ಅತ್ಯುತ್ಕಟ ಭಕ್ತಿಯಿಂದ ಶ್ರೀಜಗದ್ಗುರುಗಳನ್ನು ದಯಮಾಡಿಸಿಕೊಂಡು ತನುಮನೋಧನಗಳಿಂದ ಸೇವೆಗೈಯುತ್ತ ಆಬಾಲವೃದ್ಧರೆಲ್ಲರನ್ನು ಗುರುಸೇವಾಫಲಕ್ಕೆ ಭಾಗಿಗಳನ್ನು ಮಾಡಿ ಕೃತಾರ್ಥರಾಗಿ ಐಹಿಕಾಮುಷ್ಮಿಕ ಫಲಾಪೇಕ್ಷೆಗಳಿಗೆ ಮಾರ್ಗದರ್ಶಕರಾದರು. ಈ ಮಹಾಶಯರಿಗೆ ಜಗದ್ಗುರು ಪಂಚಾಚಾರ್ಯರು ಇತೋಪ್ಯತಿಶಯವಾಗಿ ಗುರುಭಕ್ತಿಯನ್ನು ಕೊಟ್ಟು ಆಯುರಾರೋಗ್ಯೈಶ್ವರ್ಯ ಸತ್ಸಂತಾನಾದ್ಯಖಿಲ ಸಂಪತ್ತಿನಿಂದ ರಕ್ಷಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುವ.

ಓರ್ವ ಗುರುಭಕ್ತ.

ರೇಣುಕವಿಜಯಪುರಾಣಸಮಾರಂಭ,

ಕುಡತಿನಿ.

ಚಂದ್ರಹಾಸ ಮಹಾರಾಜನಿಗೆ ನಿಜರಾಜಧಾನಿಯೆನಿಸಿದ ಕುಂತಳನಗರವೆಂದು ಸುಪ್ರಸಿದ್ಧವಾದ ಬಳ್ಳಾರಿ ಜಿಲ್ಲಾ ಕುಡತಿನಿ ಗ್ರಾಮದ ಅಗರ್ಭಶ್ರೀಮಂತರಾದ ಯಣ್ಣಿ ವೀರಭದ್ರಪ್ಪನವರ ಧರ್ಮಪತ್ನಿ ಶ್ರೀಮತಿ ವೀರಮ್ಮನವರು ಷಣ್ಮುಖಸ್ವಾಮಿಯಂತೆ ವಿರಾಜಮಾನರಾದ ನಯನಸ್ವಾಮಿಗಳ ಮಠದ ಶ್ರೀ ಪಟ್ಟಾಧ್ಯಕ್ಷ ನಯನಸ್ವಾಮಿಗಳವರ ಸನ್ನಿಧಾನದಲ್ಲಿ ಯಾವುದಾದರೊಂದು ಪುಣ್ಯಕಾರ್ಯವನ್ನು ನಡೆಯಿಸಬೇಕೆಂದು ಪ್ರಾರ್ಥಿಸಿದಂತೆ ಶ್ರೀ ಸ್ವಾಮಿಗಳವರ ಅಪ್ಪಣೆಪ್ರಕಾರ ಸದರಿ ಶ್ರೀಮತಿ ವೀರಮ್ಮನವರು ಇದೇ ಕಾರ್ತಿಕಮಾಸ ಪ್ರತಿಪದಾದಿಯಾಗಿ ಮಾರ್ಗಶೀರ್ಷ ಶುದ್ಧ ೫ ವರೆಗೂ ತಮ್ಮ ಮನೆಯಲ್ಲಿ ಮೇಲ್ಕಂಡ ಶ್ರೀ ನಯನಸ್ವಾಮಿಗಳವರಿಂದ ಪ್ರತಿದಿವಸ ರುದ್ರಾಭಿಷೇಕವನ್ನೂ ಮಾಹೇಶ್ವರಸಮಾರಾಧನೆಯನ್ನೂ ಷಣ್ಮುಖಸ್ವಾಮಿಗುಡಿಯಲ್ಲಿ ಕಾರ್ತಿಕೋತ್ಸವವನ್ನೂ ಅತ್ಯಂತ ವಿಜೃಂಭಣೆಯಿಂದ ನಡೆಯಿಸಿದರು. ಅವರ ಮನೆಯಲ್ಲಿ ಸಣ್ಣ ಸಣ್ಣ ಬಾಲಕರೂ ಕೂಡ ಕೇವಲ ಗುರುಭಕ್ತಿಪರಾಯಣರಾಗಿ ಪ್ರತಿದಿವಸವೂ ಗುರುಪಾದಪೂಜಾ ಸಹಸ್ರಬಿಲ್ವಾರ್ಚನೆಯನ್ನು ಮಾಡಿ ಗುರುಪಾದೋದಕವಿಲ್ಲದೆ ಪ್ರಸಾದವನ್ನು ಸ್ವೀಕಾರಮಾಡುತ್ತಿರಲಿಲ್ಲ. ಈ ವೀರಮ್ಮನವರು ಶ್ರೀ ಜಗದ್ಗುರು ರೇವಣಸಿದ್ಧನ ಲೀಲಾಜಾಲದಿಂದ ತುಂಬಿರುವ ರೇಣುಕವಿಜಯವೆಂಬ ಮಹಾಪುರಾಣವನ್ನು ಕೇಳಲಪೇಕ್ಷಿಸಿ ತಮ್ಮ ಮನೆಗುರುಗಳೂ ಪುರಾಣವನ್ನು ಹೇಳುವದರಲ್ಲಿ ಸುಪ್ರಸಿದ್ಧಿಯಂ ಹೊಂದಿದವರೂ ಆಗಿರುವ ಹರಪನಹಳ್ಳಿ ಗುರುಪಾದದೇವರ ಮಠದ ಶ್ರೀ ಪಟ್ಟಾಧ್ಯಕ್ಷ ಗುರುಪಾದಸ್ವಾಮಿಗಳವರನ್ನು ಭಕ್ತಿಯಿಂದ ಬರಮಾಡಿಕೊಂಡು ಪುರಾಣವನ್ನು ಪ್ರಾರಂಭಿಸಿದರು. ಪುರಾಣವು ಮಾರ್ಗಶೀರ್ಷ ಶುದ್ಧ ೫ ವರೆಗೆ ನಡೆಯಿತು. ಇವರ ಹೇಳುವಿಕೆಯೂ ವಾಗ್ಮಿತೆಯೂ ಪದಲಾಲಿತ್ಯವೂ ಅತ್ಯಂತ ರಮಣೀಯವಾದುದಲ್ಲದೆ ಶ್ರೋತೃಜನಗಳಿಗೆ ಉತ್ಸುಕತೆಯನ್ನುಂಟುಮಾಡುತ್ತಿತ್ತು. ಅಲ್ಲದೆ ಧಾರ್ಮಿಕ ನೈತಿಕ ಸಾಮಾಜಿಕ ವಿಷಯವು ಪ್ರತಿದಿವಸವೂ ಚನ್ನಾಗಿ ಪ್ರತಿಪಾದಿಸಲ್ಪಡುತ್ತಿತ್ತು. ಮಧ್ಯೆ ಮಧ್ಯೆ ವೀರಶೈವ ಮತದ ತತ್ವವನ್ನು ಪ್ರತಿಪಾದಿಸುತ್ತಿದ್ದುದರಿಂದ ಸರ್ವರೂ ಇವರನ್ನು ಕೊಂಡಾಡುತ್ತಿದ್ದರು. ಇವರ ಮುಖದಿಂದ ಅಷ್ಟಾವರಣಲಕ್ಷಣವನ್ನು ಕೇಳಿದ ಪ್ರತಿಯೊಬ್ಬರೂ ಲಿಂಗಧಾರಣೆಯಲ್ಲಿಯೂ, ಲಿಂಗಪೂಜೆಯಲ್ಲಿಯೂ ವಿಶೇಷ ಆಸಕ್ತಿಯುಳ್ಳವರಾಗುತ್ತಿದ್ದರು. ಸ್ತ್ರೀಯರ ಕರ್ತವ್ಯಗಳನ್ನೂ ಪತಿಸೇವಾಲಕ್ಷಣಗಳನ್ನೂ ಪಾತಿವ್ರತ್ಯಧರ್ಮಪಾಲನೆಯಿಂದುಂಟಾಗುವ ಮಹಾಫಲವನ್ನೂ ದುರ್ವರ್ತನದಿಂದಾಗುವ ಯಮಲೋಕಪ್ರಾಪ್ತಿಯನ್ನೂ ಚನ್ನಾಗಿ ಪ್ರತಿಪಾದಿಸುತ್ತಿದ್ದರು. ಎಳುಬೆಂಚಿ ಕಟ್ಟೆಪ್ಪಯ್ಯನವರ ಮಕ್ಕಳು ವೇದಮೂರ್ತಿ ವೀರಬಸಯ್ಯನವರ ಓದುವಿಕೆಯು ರಾಗ ತಾಳಲಯಗಳಿಂದ ಕೇಳುವ ಜನಗಳಿಗೆ ಇಂಪಾಗಿದ್ದಿತು.

ಈ ಪುರಾಣಕ್ಕೆ ಮೇಲ್ಕಂಡ ಶ್ರೀ ನಯನಸ್ವಾಮಿಗಳವರನ್ನೇ ಕ್ರಿಯಾಮೂರ್ತಿಗಳನ್ನಾಗಿ ಮಾಡಿಕೊಂಡಿದ್ದರು. ಈ ಪುರಾಣಕ್ಕೆ ಪಂಡಿತವರಿಗಣನೀಯರಾದ ಬಳ್ಳಾರಿ ಸಂಸ್ಕೃತಪಾಠಶಾಲಾಧ್ಯಕ್ಷರಾದ ಆನಗೂಡು ಪಟ್ಟದ ಸ್ವಾಮಿಗಳವರು ಶಿಷ್ಯವೃಂದದೊಡನೆ ಆಗಮಿಸಿ ಪುರಾಣಾನಂತರದಲ್ಲಿ ಧಾರ್ಮಿಕ ವಿಷಯವನ್ನು ಕುರಿತು ಚನ್ನಾಗಿ ಪ್ರತಿಪಾದಿಸಿದರು. ಈ ಪುರಾಣಕ್ಕೆ ಸುತ್ತಹಳ್ಳಿಗಳ ಜನಗಳೂ ಬಳ್ಳಾರಿ ಭಕ್ತರೂ ಪ್ರತಿದಿವಸ ಬರುತ್ತಿದ್ದರು. ಬಂದವರ ಆತಿಥ್ಯವನ್ನು ಶ್ರೀಮತಿ ವೀರಮ್ಮನವರೇ ವಹಿಸಿದ್ದರು. ಇವರ ಅಣ್ಣನವರಾದ ಮ|| ರಾ|| ಬಳ್ಳಾರಿ ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು, ಇವರ ಅಳಿಯಂದಿರಾದ ವಡ್ಡಿನ ಮಹಾದೇವಪ್ಪನವರ ಮಕ್ಕಳು ಚನ್ನಮಲ್ಲಪ್ಪನವರು ಕೊಡುಮುರುಗು ಚಿಂತಾನಾಗಪ್ಪನವರ ಮಕ್ಕಳು ಬಸಪ್ಪನವರು ಇವರ ಗುಮಾಸ್ತನಾದ ಕಂಪ್ಲಿ ಸೋಮಣ್ಣನು ಅತ್ಯಂತ ಶ್ರದ್ಧೆವಹಿಸಿ ಕಾರ್ಯವನ್ನು ಸಾಂಗಗೊಳಿಸಿದರು. ಈ ಸದ್ಧರ್ಮಮಾರ್ಗಾವಲಂಬಿಯರಾದ ಶ್ರೀಮತಿ ವೀರಮ್ಮನವರಿಗೂ ಇವರ ಕುಟುಂಬವರ್ಗಕ್ಕೂ ಶ್ರೀ ಜಗದ್ಗುರು ರೇವಣಸಿದ್ಧನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲಿ.

ಕಂಪ್ಲಿ ಸೋಮಣ್ಣ.

ಶ್ರೀ ಹೊಳೆಲಿಂಗೇಶ್ವರಸ್ವಾಮಿಯ ರಥೋತ್ಸವಾಹ್ವಾನಪತ್ರಿಕಾ.

ಶಿವಮೊಗ್ಗಾ ಡಿ|| ಸೊರಬ ತಾ|| ಜಡೇಹೋಬಳಿ ಬಂಕ್ಸಾಣ ಗ್ರಾಮಸ್ಥರು

ವಿನಯಪೂರ್ವಕ ಶ್ರುತಪಡಿಸುವುದೇನೆಂದರೆ,

ನಮ್ಮ ಗ್ರಾಮದ ಸಮೀಪದಲ್ಲಿ ವರದಾ ಮತ್ತು ದಂಡಕನದಿಗಳ ಸಂಗಮವಾಗಿ ಹೊಳೆಯಲ್ಲಿ ಲಿಂಗವು ಉದ್ಭವಿಸಿ ಅತ್ಯಂತ ಪುಣ್ಯಸ್ಥಳವೆನಿಸಿಕೊಂಡಿದ್ದು, ಈಗ ಅನೇಕ ವರ್ಷಗಳಿಂದ ಮಕರಸಂಕ್ರಮಣದಲ್ಲಿ ನಡೆಯುವ ರಥೋತ್ಸವವನ್ನು ಆಜೂಬಾಜೂ ಗ್ರಾಮಗಳ ಪ್ರಮುಖರು ಅತ್ಯಂತ ಪ್ರೋತ್ಸಾಹದಿಂದ ನಡೆಯಿಸುತ್ತಾ ಇದ್ದಾರೆ. ಪದ್ಧತಿಪ್ರಕಾರ ಶಕೆ 1856 ನೆಯ ಭಾವನಾಮಸಂವತ್ಸರದ ಪುಷ್ಯ ಶು|| ೧೦ ಸೋಮವಾರ ಮಕರಸಂಕ್ರಮಣ ಹಬ್ಬ (ತಾ|| 14-1-35) ಬೆಳಗಿನಿಂದ ಸಾಯಂಕಾಲದವರೆಗೆ ಲಿಂಗಪೂಜಾ, ರಾತ್ರಿ ೭ ಘಂಟೆಯಿಂದ ದೇವರ ಅಲಂಕಾರ, ದೀಪಾರಾಧನೆ, ಮತಸಂಬಂಧಿ ಆಚರಣೆ, ಸಭೆ, ಕೀರ್ತನ, ಭಜನೆ ಇವುಗಳು ನಡೆದ ತರುವಾಯ ಬೆಳಗಿನ ೫ ಘಂಟೆಗೆ ಶ್ರೀ ಹೊಳೆಲಿಂಗೇಶ್ವರನ ರಥಾರೋಹಣ ಮಹೋತ್ಸವವು ನಡೆಯುತ್ತದೆ. ಮರುದಿನ (ತಾ|| 15-1-35) ನದಿಯಲ್ಲಿ ತೆಪ್ಪೋತ್ಸವ, (ತಾ|| 16-1-35) ನೆಯ ದಿವಸ ದನಗಳ ಪ್ರದರ್ಶನ ಮತ್ತು ಹೋರಿ ಮೆಯಿಸಿದವರಿಗೆ ಬಹುಮಾನವು ಕೊಡಲ್ಪಡುತ್ತದೆ. ಮತ್ತು ತಾ|| 17 ರಿಂದ ತಾ|| 24-1-35 ರ ವರೆಗೆ ಕುಸ್ತಿ ನಡೆಸಿ ಬಹುಮಾನವು ಕೊಡಲ್ಪಡುತ್ತದೆ. ಪ್ರತಿ ವರ್ಷವೂ ದನಕರುಗಳ ವ್ಯಾಪಾರವು ಹೆಚ್ಚಾಗಿ ನಡೆಯುತ್ತಾ ಇದೆ. ಹೊಸದಾಗಿ ಬರತಕ್ಕ ನಾಟಕದವರೂ, ಅಂಗಡಿಕಾರರೂ, ತಮ್ಮ ಅನುಕೂಲತೆಯ ಬಗ್ಗೆ ಮ|| ರಾ|| ಶ್ರೀ ಜಡೇಹೋಬಳಿ ಶ್ಯಾನವಲ್ನವರಾಗಿ ದೊಡ್ಡವೀರಪ್ಪಗೌಡರಿಗೂ ಮ|| ರಾ|| ಶ್ರೀ ಬಂಕ್ಸಾಣದ ಪಟೇಲ ಪುಟ್ಟಪ್ಪಗೌಡರಿಗೂ ಮೊದಲೇ ತಿಳುಹಿಸತಕ್ಕದ್ದು.

ಈ ಸಂಗಮಪ್ರದೇಶವು ಆನವಟ್ಟಿಗೆ ೩ ಮೈಲು, ಆಲೂರಿಗೆ ೧೦ ಮೈಲು, ಬನವಾಸಿಗೆ ೯ ಮೈಲು ದೂರದಲ್ಲಿದೆ. ಸದ್ಭಕ್ತರು ಎಂದಿನಂತೆ ಬಂದು ಮಕರಸಂಕ್ರಮಣ ಸ್ನಾನಮಾಡಿ ಪುಣ್ಯಭಾಗಿಗಳಾಗಬೇಕಾಗಿ ಕೋರುತ್ತೇವೆ.

ಮ|| ರಾ|| ಪುಟ್ಟಪ್ಪಗೌಡ್ರು, (ಕಮ್ಷೀನರ್)

ದೇಶದಲ್ಲೆಲ್ಲಾ ಉತ್ತಮವಾದ ಸಾಧನಗಳಿಂದ ಕೂಡಿದ ಫ್ಯಾಕ್ಟರಿ !

ಜಾಮಷೇದ್‌ಪುರದಲ್ಲಿರುವ ತಾತಾ ಕಬ್ಬಿಣದ ಫ್ಯಾಕ್ಟರಿಯೇ ನಮ್ಮ ದೇಶದಲ್ಲೆಲ್ಲಾ ಅತ್ಯಂತ ಉತ್ತಮವಾದ ಸಾಧನಗಳಿಂದ ಕೂಡಿ ಕೆಲಸಮಾಡುತ್ತಿರುವುದು. ಪ್ರತಿದಿವಸವೂ 16 ರೈಲುಗಳು ಇದಕ್ಕೆ ಪದಾರ್ಥಗಳನ್ನು ಒದಗಿಸುವುದಕ್ಕೆ ಇಲ್ಲಿಗೆ ಬರುತ್ತವೆ. 11 ರೈಲುಗಳು ಇಲ್ಲಿ ತಯಾರಾದ ಪದಾರ್ಥಗಳನ್ನು ಹೊರಕ್ಕೆ ಸಾಗಿಸಿ ಇಂಡಿಯಾ ದೇಶಕ್ಕೆಲ್ಲಾ ಒದಗಿಸುತ್ತವೆ. ಬಿ. ಎನ್. ರೈಲ್ವೆಯ ಸುಮಾರು ⅓ ಭಾಗ ಉತ್ಪತ್ತಿಯನ್ನು ಈ ಫ್ಯಾಕ್ಟರಿಯು ಒದಗಿಸುತ್ತದೆ.

ವೀರಶೈವರತ್ನ

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಈ ಮೊದಲು ಮಾಡಿದ ಎರಡು ಭಾಷಣಗಳನ್ನು ಲಕ್ಷಾಂತರ ಜನ ಸ್ವಮತ ಪರಮತೀಯರು ಓದಿನೋಡಿ ಆ ಭಾಷಣಗಳ ಮಹತ್ವವನ್ನು ಮುಕ್ತಕಂಠದಿಂದ ಹೊಗಳಿರುವ ವಿಷಯವು ಲೋಕಪ್ರಸಿದ್ಧವಾಗಿದೆ. ಪಂಡಿತರು ಇತ್ತೀಚೆಗೆ ಮಾಡಿದ ಎರಡು ಭಾಷಣಗಳು ಹೊಸದಾಗಿ ಮುದ್ರಿಸಲ್ಪಟ್ಟಿವೆ. ಅವುಗಳ ಮಹತ್ವವಂತೂ ವರ್ಣಿಸಲಸಾಧ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಪಂಡಿತರ ಪವಿತ್ರಭಾಷಣಗಳಿಂದ ಯುಕ್ತವಾದ ಈ ಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ ಇದು "ವೀರಶೈವರತ್ನ" ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಸದ್ಯಃ ನೂತನವಾಗಿ ಮುದ್ರಿಸಲ್ಪಟ್ಟಿರುವ ವೀರಶೈವರತ್ನವು ೨೦೦ ಪುಟಗಳುಳ್ಳದಾಗಿದ್ದು, ಅತ್ಯುತ್ತಮವಾದ ಕಾಗದದಿಂದಲೂ, ಬಹು ಸುಂದರವಾದ ಬೈಂಡಿನಿಂದಲೂ ಯುಕ್ತವಾಗಿದೆ. ಅಲ್ಲದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಅತ್ಯಂತ ಮಹತ್ವದ ೧೧ ಫೋಟೋಗಳು ಸೇರಿಸಲ್ಪಟ್ಟಿರುವುವು. ಗ್ರಂಥದ ಆದಿಯಲ್ಲಿ ಪಂಡಿತರ ಪವಿತ್ರ ಜೀವನಚರಿತ್ರವು ಮುದ್ರಿಸಲ್ಪಟ್ಟಿದೆ. ಅತ್ಯಂತ ಮಹತ್ವವಿಷಯಗಳಿಂದ ಕೂಡಿದ ಈ ಗ್ರಂಥರತ್ನವನ್ನು ಪ್ರತಿಯೊಬ್ಬರೂ ತರಿಸಿಕೊಂಡು ಆದರಲ್ಲಿಯ ಅಮೂಲ್ಯವಿಷಯಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಲೆ ೧೨ ಆಣೆ.

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲಾ ಶಿರೋರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿಣವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೭೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಛಾಯಾಚಿತ್ರವನ್ನು ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೫೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ **೮ ರೂಪಾಯಿ.** ಒಂದು ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ **೬ ರೂ.** ಗೆ ದೊರೆಯುವದು. ವಿ. ಪಿ. ಚಾರ್ಜ ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

1876 ನೆಯ ಇಸವಿಯಿಂದಲೂ ಪ್ರಸಿದ್ಧಹೊಂದಿದ ಔಷಧಗಳು.

ಧಾತುಪುಷ್ಟಿಲೇಹ.

1. ಇದು ಬಲಹೀನ ದೇಹಗಳಿಗೆ ಅದ್ಭುತವಾದ ಔಷಧಿ; ಇದರ ಸೇವನೆಯಿಂದ ಮಲಬದ್ಧತೆ, ಒಳಜ್ವರ, ಅಜೀರ್ಣ, ಅಗ್ನಿಮಾಂದ್ಯ, ನಿದ್ರಾಹೀನತೆ, ನರಗಳ ನಿಶ್ಶಕ್ತಿ, ಕಾಲು ಸೇಳುವಿಕೆ, ರಕ್ತಹೀನತೆ, ಬೆನ್ನು ನೋವು, ... ನೋವು, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಸ್ವಪ್ನಾವಸ್ಥೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಯೋಗಶಕ್ತಿಯು ಕುಂದಿರುವಿಕೆ, ಶರೀರದ ಉಷ್ಣತೆ ಇವುಗಳನ್ನೆಲ್ಲಾ ಹೋಗಲಾಡಿಸಿ ... ಯನ್ನೂ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0.

2. **ಮೇಹಕುಠಾರಪ್ರಮೇಹ** ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳನ್ನು ಶೀಘ್ರದಲ್ಲಿ ಗುಣಪಡಿಸುವದು. ಡಬ್ಬಿ 1ಕ್ಕೆ 2—8—0. 3ಕ್ಕೆ 7—0—0.

3. **ಮಲೇರಿಯಾ ನಿವಾರಿಣಿ** ಇದು ಮಲೇರಿಯಾ, ದಿನಬಿಟ್ಟು ಬರುವ ಜ್ವರ, ಚಳಿಜ್ವರ, ಇಂಫ್ಲುಯೆಂಜಾ, ನ್ಯೂಮೋನಿಯಾ, ಕಫಜ್ವರ, ಜ್ವರಗೆಡ್ಡೆ ಮುಂತಾದವುಗಳಿಗೆ ದಿವ್ಯೌಷಧಿ. ಬಾಟ್ಲಿ 1ಕ್ಕೆ 1—8—0. ... ಬಾಟ್ಲಿಗೆ 0—13—0. 3ಕ್ಕೆ 4—0—0. ಸಣ್ಣ ಬಾಟ್ಲಿ 3ಕ್ಕೆ 2—4—0.

... ರಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಿಗೆ ತಕ್ಕುದಾದ ಔಷಧಿ ರವಾನಿಸಲಾಗುತ್ತೆ. ಕ್ಯಾಟಲಾಗ್ ಬರೆಯಿರಿ.

ಎಂ. **ಗಣಪಯ್ಯ ಅಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಸಿಯನ್, ರಥಬೀದಿ, ನಂಬರು 271 ಮಂಗಳೂರು.

... ಸಿಕ್ಕುವ ಸ್ಥಳಗಳು—

ಮೆಸ್ಸರ್ಸ್ ಪೆಟರನ್ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಗಳಿಗೋ ಹತ್ತುವರ್ಷಗಳಿಗೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲೆ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
" ೨ ನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು.		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಕಪ್ಪೆಚಿಪ್ಪಿನ ಭಸ್ಮ	೧	೦—೮—೦
ಸಾರಂಗದ ಕೋಡಿನ ಭಸ್ಮ	೧	೦—೮—೦
ಗೋದಂತಿಹರತಾಲಭಸ್ಮ	೧	೦—೮—೦
ಕಸ್ತೂರಿ (೧ನೇ ನಂಬರ್)	೧	೫೦—೦—೦
ಶಿಲಾಜಿತ ಸೂರ್ಯಪುಟ	೧	೧—೦—೦
ಶಿಲಾಜಿತ ಅಗ್ನಿಪುಟ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದರಸಾಯನಶಾಲಾ,

ಪೋಸ್ಟ್ ಓಖಿಮಠ, ಜಿಲ್ಲಾ ಗಢವಾಲ್ ಯು. ಪಿ.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನಿಗಳಿಗೆ ಶಿವಸಿದ್ಧಾಂತವನ್ನು ಬೋಧಿಸುವ ಫೋಟೋ ಸೈಜು ೧೦×೧೪ ಬೆಲೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಪಟ್ಟಾಭಿಷೇಕವನ್ನು ಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೦—೬
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರಶಿವಾಚಾರ್ಯರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ (ಬಾಳೆಹಳ್ಳಿ) ಜಗದ್ಗುರುಗಳವರ ಫೋಟೋ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘಂಟೆಯಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಿಲ್ಪದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಸೊಲ್ಲಾಪುರದಲ್ಲಿ ನೆರವೇರಿದ ಉಜ್ಜಯಿನೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿಮಹೋತ್ಸವದ ಫೋಟೋ	೦—೧—೦

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ, ಸಾಫಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿಸಶಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[51] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಾವಳಿ	೨ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೫ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶಾ	೩ ಆಣೆ
ಶಿವಶಕ್ತಿವಿಲಾಸ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರುತಿಸಾರಭಾಷ್ಯ	೫ ಆಣೆ
ಆಗಮಪರಿಜ್ಞಾನ	೮ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ[illegible]
पंडित श्रीकाशीनाथशास्त्री यांचें भाषण (मराठी)	८ आ[illegible]
Speeches by Pandit Shri Kashinatha Shastri (*English*)	12 A[illegible]
ವೇದೋಕ್ತಶಿವಪೂಜಾವಿಧಿ	೧೦ ಆ[illegible]
ವೀರಶೈವರತ್ನ (೫ನೆಯ ಆವೃತ್ತಿ)	೧೨ ಆ[illegible]
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆ[illegible]
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ[illegible]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[illegible]
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆ[illegible]
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ[illegible]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ಕೇನೋಪನಿಷತ್ (ವೀರಶೈವಭಾಷ್ಯ)	೧ ರೂ[illegible]
ವೀರಶೈವಸಿದ್ಧಾಂತಸುಧಾಕರ	೨ ರೂ[illegible]
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ[illegible]
ಶಿಷ್ಯರ ಮನೆಗಳ ರಜಿಷ್ಟರ್ ಬುಕ್	೧ ರೂ[illegible]
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	೮ [illegible]
लिंगधारणचंद्रिका (संस्कृत)	३ [illegible]
महानारायणोपनिषत् (वीरशैवभाष्य-संस्कृत)	१ [illegible]
वीरशैवेंदुशेखर (संस्कृत)	१ [illegible]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ[illegible] ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪು[illegible] ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ[ರು].

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿತ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೮.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೧ನೇ ಡಿಶಂಬರ್ ೧೯೩೪ [ಸಂಚಿಕೆ ೩೩

ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡ್.

ಪ್ರಕಟಣೆ ನಂಬರು ಸಿ. 250 L. B. 34-35

ತಾ|| 20—12—34.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

(1) ಶಿವಮೊಗ್ಗ ಡಿ|| ಹೊನ್ನಾಳಿ ತಾಲ್ಲೂಕು ರಾಂಪುರ ಗ್ರಾಮದಲ್ಲಿ ತಾ|| 20-2-1935 ರ ಆರಾಭ್ಯ, 11 ದಿವಸಗಳು ನಡೆಯುವ ಶ್ರೀ ಹಾಲಸ್ವಾಮಿಗಳವರ ಜಾತ್ರೆಕಾಲದಲ್ಲಿ ಸೇರುವ ದನಗಳ ಮೇಲೆ ತಲೆಯೊಂದಕ್ಕೆ ಒಂದಾಣೆ (0-1-0)ಯಂತೆ ಹಾಸಲು ವಸೂಲುಮಾಡಲಾಗುತ್ತೆ.

(2) ಸದರಿ ಹಾಸಲು ವಸೂಲಿ ಹಕ್ಕನ್ನು 1935ನೇ ಇಸವಿ ಜನವರಿ ಮಾಹೆ ತಾ|| 16 ನೇ ಬುಧವಾರ ಮಧ್ಯಾಹ್ನ 2ಘಂಟೆಗೆ ಹೊನ್ನಾಳಿ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜುಹಾಕಿಸಲ್ಪಡುತ್ತೆ.

(3) ಜಾತ್ರೆಯು ತುಂಗಭದ್ರಾನದಿ ದಡದ ಮೇಲೆ ನಡೆಯುವದರಿಂದ ರಾಸುಗಳಿಗೆ ಎಲ್ಲಾ ಸೌಕರ್ಯವು ಇರುತ್ತೆ.

(4) ಜಾತ್ರೆ ಸಮಯದಲ್ಲಿ ದನಗಳ ಪ್ರದರ್ಶನವು ನಡೆಸಲಾಗುತ್ತೆ. ಉತ್ತಮತರಹೆ ರಾಸುಗಳಿಗೆ ಬಹುಮಾನ ದೊರೆಯುತ್ತೆ.

K. H. Halappa,
ಪ್ರೆಸಿಡೆಂಟ್,
ಡಿಸ್ಟ್ರಿಕ್ಟ್ ಬೋರ್ಡ್, ಶಿವಮೊಗ್ಗ.

ನೋಟೀಸ್.

ಮೈಸೂರು ರಾಜಧಾನಿಯಲ್ಲಿರುವ ಶ್ರೀ ಶಂಕರವಿಲಾಸ ಸಂಸ್ಕೃತ ಪಾಠಶಾಲೆಯಲ್ಲಿ ಪ್ರೈಮರಿ, ಕಾವ್ಯ ಮತ್ತು ಚಂಪೂನಾಟಕ ಪರೀಕ್ಷೆಗಳಿಗೆ ವ್ಯಾಸಂಗ ಮಾಡಲು ಅಪೇಕ್ಷಿಸುವ ವೀರಶೈವ ವಿದ್ಯಾರ್ಥಿಗಳು ೧೯೩೫ ನೇ ಜನವರಿ ತಿಂಗಳಿನ ಅಖೈರಿನೊಳಗಾಗಿ ತಮ್ಮ ಹೆಸರು, ವಾಸಸ್ಥಳ, ತಂದೆ ಅಥವಾ ಪೋಷಕರ ಹೆಸರು ಮತ್ತು ತಾವು ಓದಲು ಇಚ್ಛಿಸುವ ತರಗತಿಗಳನ್ನು ನಮೂದಿಸಿ, ಸ್ಥಳೀಯ ದೊಡ್ಡಮನುಷ್ಯರ ಯೋಗ್ಯತಾಪತ್ರಿಕೆಯೊಡನೆ ಅಪ್ಲಿಕೇಷನ್ನನ್ನು ಪಾಠಶಾಲೆಯ ಪ್ರೆಸಿಡೆಂಟರವರಿಗೆ ಬರೆದುಕೊಳ್ಳತಕ್ಕದ್ದು. ಈ ಪಾಠಶಾಲೆಯಲ್ಲಿ ವ್ಯಾಸಂಗಮಾಡಲು ಅರ್ಹರಾದ ವಿದ್ಯಾರ್ಥಿಗಳಿಗೆ ಉಚಿತ ಭೋಜನ, ವೇತನ ಮೊದಲಾದ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗುವುದು.

Sd. ಡಾ|| ಟಿ. ಎಸ್. ಸಿದ್ಧಪ್ಪ L.M. & S.
ಪ್ರೆಸಿಡೆಂಟ್,
ಶ್ರೀ ಶಂಕರ ವಿಲಾಸ ಸಂಸ್ಕೃತ ಪಾಠಶಾಲಾ,
17-12-1934. ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮಹನೀಯರ ಹಿತವಾಕ್ಯಗಳು.

೧. ಸತ್ಯವನ್ನಾಡಬೇಕು: ಕ್ರೋಧಕ್ಕೊಳಗಾಗಬಾರದು: ಯಾರಾದರೂ ಸಹಾಯವನ್ನಪೇಕ್ಷಿಸಿದರೆ, ಸಾಧ್ಯವಾದಷ್ಟು ಸಹಾಯ್ಯಮಾಡಬೇಕು. ಈ ಮೂರು ಮಾರ್ಗಗಳನ್ನು ಅನುಸರಿಸಿದ್ದೇ ಆದರೆ ಖಂಡಿತವಾಗಿಯೂ ಅವನು ಜಗನ್ಮಾನ್ಯನಾಗುವನು.

೨. ಯಾವಾಗ ತಮ್ಮ ಸದಸದ್ವಿವೇಕಬುದ್ಧಿಗೆ, ಉಪದೇಶಕರ ಉಪದೇಶವು ವಿಹಿತವಾಗಿ ತೋರುತ್ತದೆಯೋ ಆ ಕೂಡಲೇ ಅದನ್ನು ಗ್ರಹಿಸಬೇಕು.

೩. ಮಾಡಿದ ಅಪರಾಧಕ್ಕೋಸ್ಕರ ಪಶ್ಚಾತ್ತಾಪಪಡುವದೂ, ಪುನಃ ಅಂತಹ ಅಪರಾಧವನ್ನು ಮಾಡದಿರುವದೂ, ವಿವೇಕಿಗಳ ಕರ್ತವ್ಯ.

೪. ಯಾರು ಸುಳ್ಳು ಹೇಳುತ್ತಾರೆಯೋ ತಮ್ಮ ಪಾಪಕೃತ್ಯಗಳನ್ನು ಅನ್ಯರಮೇಲೆ ಹೊರಿಸುತ್ತಾರೆಯೋ ಅವರಿಗೆ ನರಕದ ಹೊರತು ಬೇರೆಗತಿಯಿಲ್ಲ.

೫. ಪಾಪವು ಎಲ್ಲಿಯವರೆಗೂ ಫಲರೂಪಕ್ಕೆ ಬಂದಿಲ್ಲವೋ ಅಲ್ಲಿಯವರೆಗೂ ಅದು ಮೂರ್ಖನಿಗೆ ಮಧುರವಾಗಿ ತೋರುವುದು.

೬. ನಾಚಿಕೆಯಿಲ್ಲದವರೂ, ದುರ್ಮಾರ್ಗಿಗಳೂ, ಪರನಿಂದಕರೂ, ವಾಚಾಳಿಗಳೂ, ಅವಿವೇಕಿಗಳೂ, ಕಾಗೆಗಳೂ, ಈ ಲೋಕದಲ್ಲಿ ಜೀವಿಸುವುದು ಅತಿ ಸುಲಭ.

೭. ಯಾರ ಚಿತ್ತವು ಕಾಮವಾಸನೆಯಿಂದಲೂ, ಕ್ರೋಧದಿಂದಲೂ, ಆಲಸ್ಯದಿಂದಲೂ, ಭ್ರಾಂತಿಯಿಂದಲೂ, ಸಂಶಯದಿಂದಲೂ ಆಚ್ಛಾದಿಸಲ್ಪಟ್ಟಿದೆಯೋ ಅವರು ಸ್ವಪರಹಿತಗಳು ಯಾವುದರಿಂದ ಲಭಿಸುತ್ತವೆಂಬುದನ್ನು ಕಂಡುಕೊಳ್ಳಲಾರರು

೮. ಪರಸ್ತ್ರೀಯರನ್ನು ಕಾಮದೃಷ್ಟಿಯಿಂದ ನೋಡುವದಕ್ಕಿಂತಲೂ, ಕಬ್ಬಿಣದ ಕಾದ ಸರಳನ್ನು ಕಣ್ಣಲ್ಲಿ ಚುಚ್ಚಿಕೊಂಡು ಆ ಪಾಪನೇತ್ರವನ್ನೇ ಸುಟ್ಟುಬಿಡುವದುತ್ತಮ.

೯. ತನಗಿಂತಲೂ ಹಿರಿಯರಾದ ಸ್ತ್ರೀಯರನ್ನು ತಾಯಿಯವರಂತೆಯೂ, ಚಿಕ್ಕವರನ್ನು ಮಕ್ಕಳಂತೆಯೂ, ತರುಣಿಯರನ್ನು ಸಹೋದರಿಯರಂತೆಯೂ ತಿಳಿದು ಆಚರಿಸಬೇಕು.

೧೦. ಯಾವ ಮನುಷ್ಯನು ಅವಿಚಾರತ್ವದಿಂದ ಕ್ಷಣಿಕಸುಖಕ್ಕಾಗಿ ವ್ಯರ್ಥವಾಗಿ ವೀರ್ಯವನ್ನು ಕಳೆದುಕೊಳ್ಳುವನೋ ಅವನಿಗೆ ಶತಶಃ ಧಿಕ್ಕಾರವಿರಲಿ.

೧೧. ಒಂದು ಗಾಡಿ ಪುಸ್ತಕಗಳನ್ನು ಓದಿ ಬಿಗೆಯುವದಕ್ಕಿಂತಲೂ, ಅವುಗಳಲ್ಲಿಯ ಆರೇ ಸಾಲುಗಳನ್ನು ಆಚರಣೆಯಲ್ಲಿ ತಂದರೆ ಸಾಕು.

೧೨. ಜಗತ್ತಿನವರನ್ನೆಲ್ಲ ಪ್ರೀತಿಸಲು ಕಲಿಯುವದೇ ಈಶ್ವರ ದರ್ಶನದ ಹೆಗ್ಗುರುತು.

೧೩. ಸತ್ಯಧರ್ಮಾಚರಣೆಯೇ ಮುಕ್ತಿಯ ದ್ವಾರವು. ಮುಕ್ತಿಯು ಬೇಕಾಗಿದ್ದರೆ ಸತ್ಯಧರ್ಮಗಳನ್ನಾಚರಿಸಬೇಕು.

೧೪. ಯಾವಾಗಲೂ ಆದರದಿಂದಲೂ, ಪ್ರೀತಿಯಿಂದಲೂ ಸವಿಮಾತುಗಳನ್ನಾಡಬೇಕು. ಅಂದರೆ ಜಗತ್ತೇ ನಮ್ಮನ್ನು ಪ್ರೀತಿಸುವುದು.

೧೫. ಮಿತಿಮೀರಿ ಮಾತನಾಡಬಾರದು. ಮಾತನಾಡಿದರೆ ಚಾಣಾಕ್ಷ್ಯಯಿಂದ ಮಾತನಾಡಬೇಕು.

೧೬. ಎಂದು ಹೃದಯದಲ್ಲಿ ಮಹಾವೇದನೆಯುಂಟಾಗುವದೋ, ಎಂದು ನಾಲ್ಕೂ ದಿಕ್ಕುಗಳಲ್ಲಿ ದುಃಖವೆಂಬ ಬಿರುಗಾಳಿಯೆದ್ದು ಬೀಸುವುದೋ, ಎಂದು ಬೆಳಕುಕಾಣದೆ ಹೋಗುವಂತೆ ತೋರುವುದೋ ಆಗ ತಾನೇ ಬ್ರಹ್ಮಜ್ಯೋತಿಯು ಸ್ಫೂರ್ತಿಯುಂಟಾಗುವುದು.

೧೭. ಎಲೈ ಮನುಜನೇ! ನೀನು ಯಾವ ಪದಾರ್ಥದ ಮೇಲೆ ಪ್ರೇಮವಿಡುವಿಯೋ ಅದೇ ಪದಾರ್ಥವೇ ನೀನಾಗಬೇಕಾಗುತ್ತದೆ. ಪರಮಾತ್ಮನಲ್ಲಿಟ್ಟರೆ ಪರಮಾತ್ಮನಾಗುವಿ. ಮಣ್ಣಲ್ಲಿಟ್ಟರೆ ಮಣ್ಣಾಗುವಿ.

೧೮. ಯಾವಕಾಲದಲ್ಲಿಯೂ, ಎಂಥ ಸಂದರ್ಭದಲ್ಲಿಯೂ, ಕೋಪಗೊಳ್ಳಬೇಡ.

೧೯. ಎಲ್ಲಿ ಬುದ್ಧಿಯು ಅಪಜಯವನ್ನು ಹೊಂದುತ್ತದೆಯೋ ಅಲ್ಲಿ ಪ್ರೇಮವು ಜಯವನ್ನು ಹೊಂದುತ್ತದೆ.

೨೦. ಯಾರನ್ನೂ ನಿಂದಿಸಬೇಡ; ಯಾರನ್ನೂ ಹಿಂಸಿಸಬೇಡ; ಸತ್ಯಧರ್ಮವನ್ನತಿಕ್ರಮಿಸಬೇಡ; ಮಿತಾಹಾರದಲ್ಲಿರು; ನಿರಂತರದಲ್ಲಿಯೂ ಉತ್ತಮ ಯೋಜನೆಯಲ್ಲಿರು. ಇವೇ ಜ್ಞಾನಿಗಳ ಬೋಧೆ.

ಮಲ್ಲಿಕಾರ್ಜುನಶರ್ಮಾ, ಗುಳೇದಗುಡ್ಡ.
ಶಂಕರಕಾಲೇಜ್, ಯಾದಗಿರಿ.

ಅತ್ಯಂತ ಶೀಘ್ರಗಾಮಿಯಾದ ವಿಮಾನ.

ಲೆಫ್ಟಿನೆಂಟ್ ಆರ್ಥರ್ ಮೆಟ್ಕಾಫ್ ಎಂಬವರು ತಯಾರಿಸಿರುವ ಹೊಸಮಾದರಿಯ ಯುದ್ಧದ ವಿಮಾನವು ಘಂಟೆಗೆ 350 ಮೈಲುಗಳಿಗಿಂತ ಹೆಚ್ಚು ವೇಗವಾಗಿ ಹೋಗಬಲ್ಲುದೆಂದು ಹೇಳುತ್ತಾರೆ.

ತೋಳಗಳ ಹಾವಳಿ.

ಸ್ವೀಡನ್ ದೇಶದ ಉತ್ತರ ಪ್ರಾಂತ್ಯದಲ್ಲಿ ತೋಳಗಳ ಹಾವಳಿಯು ಬಹಳ ಹೆಚ್ಚಾಗಿದೆ. ಪ್ರತಿ ರಾತ್ರಿಯಲ್ಲೂ ಹಳ್ಳಿಗರ ಮನೆಗಳ ಸಮೀಪಕ್ಕೆ ಬಂದು ದನಗಳನ್ನು ತಿನ್ನಲು ಹವಣಿಸುತ್ತಿವೆ. ಇಲ್ಲಿಯ ವರೆಗೂ ತಪ್ಪಿಸಿಕೊಂಡ ಎಷ್ಟೋ ದನಗಳನ್ನು ಹಿಡಿದು ತಿಂದಿವೆ. ಇದಕ್ಕಾಗಿ ರಾತ್ರಿಯೆಲ್ಲಾ ಬೆಂಕಿ ಹಾಕಿಕೊಂಡು ಕಾವಲಿರಬೇಕಾಗಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಆಯುರ್ವೇದಪರಿಚಯ.

ಆರೋಗ್ಯಮಾರ್ಗ.

ಲೇಖಕ—ಆಯುರ್ವೇದಾಚಾರ್ಯ ಶಿವಕುಮಾರಸ್ವಾಮಿ, ಬೆಂಗಳೂರು.
ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ, ಶ್ರೀಕ್ಷೇತ್ರಕಾಶೀ.

ಆಹಾರ ನಿಯಮಗಳು.

೧. ಯಾವ ರೀತಿಯಾಗಿ ಪಂಚಭೂತಗಳಲ್ಲೊಂದಾಗಿರುವ ಹೊರಗಿನ ಅಗ್ನಿಯು ತನ್ನ ಆಹಾರವಾಗಿರುವ ಇಂಧನ (ಕಟ್ಟಿಗೆ) ವನ್ನು ಹೊಂದದೆ ಆರಿಹೋಗುವುದೋ ಅದೇ ರೀತಿಯಾಗಿ ಹಸಿವೆಯಾದಾಗ ಭೋಜನವನ್ನು ಮಾಡದಿದ್ದರೆ ಜಠರಾಗ್ನಿಯು ಆರಿಹೋಗುವುದು. ದೀಪ್ತವಾಗಿರುವ ಜಠರಾಗ್ನಿಯು ಯಾವಾಗಲೂ ತನ್ನ ಆಹಾರವನ್ನು ನಿರೀಕ್ಷಿಸುತ್ತಲೇ ಇರುತ್ತದೆ. ಆ ಸಮಯಕ್ಕೆ ಸರಿಯಾಗಿ ಆಹಾರವು ದೊರೆಯದಿದ್ದರೆ ಸಮೀಪದಲ್ಲಿರುವ ವಾತಾದಿದೋಷಗಳನ್ನೇ ತಿನ್ನಲಾರಂಭಿಸುವುದು. ಇವುಗಳನ್ನು ತಿಂದ ಬಳಿಕ ರಸ, ರಕ್ತ, ಮಾಂಸಾದಿಧಾತುಗಳನ್ನು ತಿನ್ನಲು ಪಕ್ರಮಿಸುವುದು. ಇವುಗಳನ್ನೂ ತಿಂದು ತೀರಿದ ಮೇಲೆ ಕಡೆಗೆ ಉಳಿದಿರುವ ಪ್ರಾಣಗಳಿಗೆ ಕೈಹಾಕಿ ಅವುಗಳ ಹೆಸರನ್ನೇ ಅಳಿಸಿ ಬಿಡುತ್ತದೆ. ಹಸಿವೆಯಾದಾಗ ಆಹಾರವನ್ನು ಸೇವಿಸದಿದ್ದರೆ ಕೈಕಾಲುಗಳಲ್ಲಿ ಬಲವಿಲ್ಲದಂತಾಗಿ ಕಣ್ಣುಗಳಲ್ಲಿ ಕತ್ತಲೆಯು ಕವಿದಂತಾಗಿ ಶರೀರದ ಬಲವು ಕ್ಷೀಣಗೊಂಡು ಸಕಲೇಂದ್ರಿಯಗಳ ಶಕ್ತಿಯು ಕಡಿಮೆಯಾಗುವುದೆಂಬುದು ಸರ್ವಾನುಭೂತವಿಷಯವಾಗಿರುವುದಲ್ಲವೆ? ಆದುದರಿಂದ ಹಸಿವಾದ ಕೂಡಲೆ ಸಾವಿರ ಕೆಲಸಗಳಿದ್ದರೂ ಅವುಗಳನ್ನು ಬಿಟ್ಟು ಮೊದಲು ಭೋಜನವನ್ನು ಮಾಡಬೇಕು.

೨. ನಿಯಮಿತಸಮಯದಲ್ಲಿ ಭೋಜನವನ್ನು ಮಾಡುವುದತ್ಯವಶ್ಯಕವಾಗಿದೆ. ಹೀಗೆ ಗೊತ್ತಾದಕಾಲದಲ್ಲಿ ಭೋಜನವನ್ನು ಮಾಡಿದರೆ ಜಠರಾಗ್ನಿಯು ಮೊದಲನೆಯ ಆಹಾರವನ್ನು ನಿರಾಯಾಸವಾಗಿ ಪಚನವನ್ನು ಮಾಡುವುದಲ್ಲದೆ ಮಧ್ಯದಲ್ಲಿ ಸಾಕಾದಷ್ಟು ಅವಕಾಶವು ದೊರೆಯುವುದರಿಂದ ಎರಡನೆಯ ಆಹಾರವನ್ನೂ ಅರಗಿಸಲು ಸನ್ನದ್ಧವಾಗಿರುವುದು. ಅದು ಕಾರಣವೇ ನಿತ್ಯದಲ್ಲಿ ನಿರ್ದಿಷ್ಟವಾದ ಸಮಯದಲ್ಲಿಯೇ ಆಹಾರವನ್ನು ಸೇವಿಸಬೇಕು.

೩. ಯಾವ ಮನುಷ್ಯನು ಭೋಜನದ ಸಮಯವು ಒದಗುವುದರೊಳಗಾಗಿ ನಾಲಗೆಯ ಚಟವನ್ನು ತಡೆಯಲಾರದೆ ಉಣ್ಣುವನೋ ಅವನ ಶರೀರವು ಭಾರವಾಗಿ ಬಲವು ಕುಂದುವುದು. ಹೀಗೆ ಬಲವು ಕುಂದಿದ ಮೇಲೆ ತಲೆನೋವು, ಅಜೀರ್ಣ, ವಿಷೂಚಿಕೆ (ಕಾಲರಾ ಅಥವಾ ವಾಂತಿಭೇದಿ) ಯೇ ಮುಂತಾದ ಅಸಾಧ್ಯರೋಗಗಳು ತಲೆದೋರುತ್ತವೆ. ಆದುದರಿಂದ ಗೊತ್ತುಮಾಡಿಕೊಂಡಿರುವ ಸಮಯದಲ್ಲಿಯೇ ಅದರಲ್ಲಿಯೂ ಚನ್ನಾಗಿ ಹಸಿವುಂಟಾದ ಮೇಲೆಯೇ ಭೋಜನವನ್ನು ಮಾಡುವುದುಚಿತವಾಗಿದೆ.

೪. ಯಾವನು ಊಟದ ಸಮಯವು ಕಳೆದ ಬಹಳ ಹೊತ್ತಿಗೆ ಉಣ್ಣುವನೋ ಅವನ ಪಾಚಕಾಗ್ನಿಯು ವಾಯುವಿನ ವೇಗದಿಂದ ತಣ್ಣಗಾಗುವುದು. ಹೀಗೆ ಅಗ್ನಿಯು ಕ್ಷೀಣವಾಗುವುದರಿಂದ ಅಕಾಲದಲ್ಲಿ ಉಂಡ ಅನ್ನವು ಕಷ್ಟದಿಂದ ಪಚನವಾಗುವುದಲ್ಲದೆ ೨ನೆಯ ಭೋಜನದಲ್ಲಿ ಅಭಿರುಚಿಯೂ ಕಡಿಮೆಯಾಗುತ್ತದೆ. ಆದುದರಿಂದ ಹಸಿವಾದಾಗ ಭೋಜನದ ಸಮಯವನ್ನತಿಕ್ರಮಿಸಬಾರದು.

೫. ಇಂದ್ರಿಯಗಳಲ್ಲಿ ಉತ್ಸಾಹವೂ, ಹಸಿವು ನೀರಡಿಕೆಗಳೂ ಉಂಟಾಗಿ ಆಮ್ಲರಸವಿಲ್ಲದ ಶುದ್ಧವಾದ ತೇಗುಗಳು ಬಂದು ಶರೀರವು ಹಗುರಾದನಂತರ ಮೊದಲನೆಯ ಆಹಾರವು ಪಚನವಾಗಿರುವುದೆಂದರಿತು ಸಮಯವನ್ನು ಮೀರದೆ ಎರಡನೆಯ ಭೋಜನವನ್ನು ಮಾಡಬೇಕು.

೬. ಹೊಟ್ಟೆಯಲ್ಲಿ ೪ ವಿಭಾಗಗಳನ್ನು ಮಾಡಿ ಅದರಲ್ಲಿ ೨ ಭಾಗಗಳನ್ನು ಅನ್ನದಿಂದಲೂ ೩ ನೆಯ ಭಾಗವನ್ನು ನೀರಿನಿಂದಲೂ ಪೂರ್ಣಮಾಡಿ ೪ ನೆಯ ಭಾಗವನ್ನು ವಾಯುಸಂಚಾರಕ್ಕೆ ಬಿಡಬೇಕು. ಚೀಲದಲ್ಲಿ ಹೊಟ್ಟನ್ನು ತುರುಕುವಂತೆ ಉದರದ ನಾಲ್ಕು ಭಾಗಗಳನ್ನೂ ಅನ್ನದಿಂದಲೇ ತುಂಬುವುದುಚಿತವಲ್ಲ. ಊಟದಲ್ಲಿ ಸ್ವಲ್ಪ ಕಡಿಮೆಯಾದರೆ ಯಾವ ಹಾನಿಯೂ ಸಂಭವಿಸಲಾರದು. ಹೆಚ್ಚಾದರೆ ಮಾತ್ರ ಅಜೀರ್ಣದಿಂದ ಅನೇಕ ಉಪದ್ರವಗಳುಂಟಾಗುತ್ತವೆ.

೭. ಬಹಳ ಬಿಸಿಯಾಗಿರುವ ಆಹಾರವನ್ನು ಸೇವಿಸುವುದರಿಂದ ಬಲವು ಕ್ಷೀಣವಾಗುವುದು. ಬಹಳ ತಣ್ಣಗಾದ ಮತ್ತು ಒಣಗಿದ ಆಹಾರವು ಕಷ್ಟದಿಂದ ಪಚನವಾಗುವುದು. ಹಳಸಿದ ಮತ್ತು ಬಹಳ ದಿನಗಳವರೆಗಿಟ್ಟಿದ್ದ ಆಹಾರವು ಹಾನಿಯನ್ನುಂಟುಮಾಡುವುದು. ಆದುದರಿಂದ ಇಂತಹ ದುಷ್ಟಾಹಾರವನ್ನು ವರ್ಜಿಸಬೇಕು

೮. ಆಹಾರವನ್ನು ಬಹಳ ಕಡಿಮೆಯಾಗಿಯೂ ಬಹಳ ಹೆಚ್ಚಾಗಿಯೂ ಸೇವಿಸಬಾರದು. ಏಕೆಂದರೆ, ಬಹಳ ಕಡಿಮೆಯಾಗಿ ಉಣ್ಣುವುದರಿಂದ ಜಠರಾಗ್ನಿಯು ತನ್ನ ಪೂರ್ಣಾಹಾರವನ್ನು ಹೊಂದದೆ ಸಮಾಗತವಾಗಿರುವ ರಸವನ್ನು ಶೋಷಣೆಗೊಳಿಸುವುದರಿಂದ ಶರೀರವು ಬಲಹೀನವಾಗುತ್ತದೆ. ಬಹಳ ಹೆಚ್ಚಾಗಿ ಉಣ್ಣುವುದರಿಂದ ತನ್ನ ಪ್ರಮಾಣಕ್ಕಿಂತಲೂ ಹೆಚ್ಚಾಗಿರುವ ಆಹಾರವನ್ನು ಜಠರಾಗ್ನಿಯು ಪಚಿಸಲಸಮರ್ಥವಾಗುತ್ತದೆ. ಹೀಗೆ ಅಪರಿಪಕ್ವಾಹಾರವು ಉದರದಲ್ಲಿ ಕೊಳೆಯುತ್ತ ಆಲಸ್ಯ, ಮೈಭಾರ, ಹೊಟ್ಟೆಯುಬ್ಬರ, ಹೊಟ್ಟೆಯಲ್ಲಿ ಅಜೀರ್ಣಸೂಚಕವಾದ 'ಗುಡುಗುಡು' ಎಂಬ ಧ್ವನಿಯುಂಟಾಗುವಿಕೆ ಇವೇ ಮೊದಲಾದ ಉಪದ್ರವಗಳುಂಟಾಗುತ್ತವೆ.

೯. ಆರೋಗ್ಯಾಭಿಲಾಷಿಯಾದವನು ಚನ್ನಾಗಿ ಹಸಿವಾದಾಗ ತನ್ನ ಪ್ರಕೃತಿ ಮತ್ತು ದೇಶಕಾಲಗಳನ್ನು ಪರಿಶೀಲಿಸಿ ಶೀಘ್ರವಾಗಿ ಪಚನವಾಗುವ-ಪರಿಶುದ್ಧವಾದ-ರುಚಿಕರವಾದ-ಹಿತಾಹಾರವನ್ನು ಮಿತವಾಗಿ ಸೇವಿಸಬೇಕಲ್ಲದೆ, ನೀರಸವಾದ-ಹಳಸಿದ-ಅಪಕ್ವವಾದ-ಹೊತ್ತಿದ-ಎಂಜಲಾದ-ಸ್ವಾದರಹಿತವಾದ ಪದಾರ್ಥವನ್ನು ಸೇವಿಸಿ ರೋಗಗಳಿಗೆ ನಿಮಂತ್ರಣವನ್ನೀಯುವುದುಚಿತವಲ್ಲ.

೧೦. ಬಹಳ ವೇಗದಿಂದುಣ್ಣುವುದಾದರೆ, ಪದಾರ್ಥಗಳ ಗುಣದೋಷಗಳನ್ನು ವಿಮರ್ಶಿಸಲವಕಾಶವೇ ದೊರೆಯುವುದಿಲ್ಲ; ಮತ್ತು ವೇಗದಿಂದುಂಡ ಆಹಾರವು ಬಹಳ ಹೊತ್ತಿಗೆ ಪಚನವಾಗುವುದು. ಆಹಾರವಸ್ತುಗಳನ್ನು ಹಲ್ಲುಗಳಿಂದ ಸರಿಯಾಗಿ ಅಗಿದು ಪಚನಕ್ರಿಯೆಗೆ ಅತ್ಯಂತ ಸಹಾಯಕರವಾಗಿರುವ ಬಾಯಿಯೊಳಗಿನ ಲಾಲಾರಸ (ಜೊಲ್ಲು) ದಿಂದ ಮೆತ್ತಗೆ ಮಾಡಿ ಹೊಟ್ಟೆಗೆ ಕಳಿಸಿದರೆ, ಅದು ಅತಿ ಸುಲಭವಾಗಿ ಜೀರ್ಣಗೊಂಡು ಸಪ್ತಧಾತುಗಳ ಆಹಾರವಾಗಿರುವ ರಸವನ್ನು ಸಿದ್ಧಗೊಳಿಸುತ್ತದೆ. ಈ ರಸವೇ ಅಲ್ಲವೆ ಸಪ್ತಧಾತುಗಳ ಮತ್ತು ಓಜಸ್ಸಿನ ರಕ್ಷಕವಾಗಿರುವುದು? ಇನ್ನು ವೇಗದಿಂದುಣ್ಣಬಾರದೆಂದು ಒಂದೊಂದು ಗಂಟೆಯವರೆಗೂ ಉಣ್ಣುತ್ತಲೇ ಇರುವುದೂ ಉಚಿತವಲ್ಲ; ಏಕೆಂದರೆ, ಬಹಳ ಸಾವಕಾಶದಿಂದುಣ್ಣುವಾಗ ಪರಿಮಾಣಕ್ಕಿಂತಲೂ ಹೆಚ್ಚಾದ ಆಹಾರವು ಹೊಟ್ಟೆಯಲ್ಲಿ ಸೇರಿ ಅದು ಜಠರಾಗ್ನಿಯಿಂದ ಸರಿಯಾದ ಪರಿಪಾಕವನ್ನು ಹೊಂದದೆ ಆಮಾಶಯದಲ್ಲಿಯೇ ಆಮ (ಅಪಕ್ವಾಹಾರ) ರೂಪವನ್ನು ಹೊಂದಿ ಸರ್ವರೋಗಗಳ ಮೂಲಭೂತವಾಗಿರುವ ಅಜೀರ್ಣಕ್ಕೆ ಕಾರಣವಾಗುವುದಲ್ಲದೆ ಈ ವಿಷಮ ಪರಿಪಾಕವನ್ನು ಹೊಂದಿರುವ ಆಹಾರದಿಂದ ರಸವೇ ಹುಟ್ಟಲಾರದು. ರಸದ ಅಭಾವದಿಂದ ಸಪ್ತಧಾತುಗಳು ಕ್ಷೀಣವಾಗುತ್ತವೆ. ಆದುದರಿಂದ ಮಧ್ಯಮರೀತಿಯಿಂದುಣ್ಣುವುದೇ ಆರೋಗ್ಯದಾಯಕವಾಗಿದೆ.

೧೧. ಊಟದ ಸಮಯವು ಒದಗಿದಾಗ ನೀರನ್ನು ಕುಡಿಯುವುದೂ, ನೀರಡಿಕೆಯಾದಾಗ ಉಣ್ಣುವುದೂ ಇವೆರಡೂ ರೋಗಕ್ಕೆ ಕಾರಣವಾಗಿವೆ. ಹಸಿವಾದಾಗ ಉಣ್ಣದೆ ನೀರನ್ನು ಕುಡಿಯುವುದರಿಂದ 'ಜಲೋದರ' ರೋಗವುಂಟಾಗುವುದು. ನೀರಡಿಕೆಯಾದಾಗ ನೀರನ್ನು ಕುಡಿಯದೆ ಉಣ್ಣುವುದರಿಂದ 'ಗುಲ್ಮ' ರೋಗವುಂಟಾಗುವುದು.

೧೨. ಊಟವನ್ನು ಮಾಡುವಾಗ ನೀರನ್ನು ಊಟದ ಮಧ್ಯದಲ್ಲಿ ಕುಡಿಯಬೇಕೆಂದು ವೈದ್ಯಶಾಸ್ತ್ರವು ವಿಧಿಸುತ್ತದೆ. ಆದರೆ ಈ ವಿಷಯದಲ್ಲಿ ಅನೇಕರು ಅನೇಕ ವಿಧವಾಗಿ ಹೇಳುತ್ತಿರುವರಾದುದರಿಂದ ಈ ವಿಷಯವನ್ನು ವೈದ್ಯಶಾಸ್ತ್ರಪ್ರಮಾಣ ಪ್ರದರ್ಶನ ಪುರಸ್ಸರವಾಗಿ ವಿವೇಚಿಸುವುದುಚಿತವಾಗಿದೆ.

ವಾಗ್ಭಟಾಚಾರ್ಯನು ಅಷ್ಟಾಂಗ ಹೃದಯದಲ್ಲಿ "ಸಮಸ್ಥೂಲಕೃಶಾ ಭುಕ್ತಮಧ್ಯಾಂತ ಪ್ರಥಮಾಂಬುಪಾಃ" (ಅ. ಹೃ. ಸೂ. ಅ ೫) ಎಂದು ಹೇಳಿರುತ್ತಾನೆ. ಎಂದರೆ—ಭೋಜನ ಮಧ್ಯದಲ್ಲಿ ನೀರನ್ನು ಸ್ವಲ್ಪ ಸ್ವಲ್ಪವಾಗಿ ಕುಡಿಯುವುದರಿಂದ ಸಪ್ತಧಾತುಗಳು ಸಮಾನತೆಯನ್ನು ಹೊಂದಿ ಶರೀರವು ಬಹಳ ದಪ್ಪಗೂ ಬಹಳ ತೆಳ್ಳಗೂ ಆಗದೆ ಸಮತೂಕದಲ್ಲಿರುವುದು. ಭೋಜನದ ಅಂತ್ಯದಲ್ಲಿ ನೀರನ್ನು ಕುಡಿಯುವುದಾದರೆ ಆಮಾಶಯದಲ್ಲಿ ಕಫವು ವೃದ್ಧಿಯಾಗಿ ಶರೀರವು ಕಫಾಧಿಕ್ಯದಿಂದ ಬಹಳ ಸ್ಥೂಲವಾಗುವುದು. ಭೋಜನಕ್ಕೆ ಮೊದಲು ನೀರನ್ನು ಕುಡಿಯುವುದರಿಂದ ಪ್ರಜ್ವಲಿತವಾಗಿರುವ ಜಠರಾಗ್ನಿಯು ತಣ್ಣಗಾಗಿ ಉಂಡ ಅನ್ನವನ್ನು ಸರಿಯಾಗಿ ಪಚನಮಾಡಲಸಮರ್ಥವಾಗುವುದು. ಕ್ಷೀಣಬಲವುಳ್ಳ ಅಗ್ನಿಯಿಂದ ಅಪರಿಪಕ್ವವಾದ ಆಹಾರವು ರಸವನ್ನು ಹುಟ್ಟಿಸದಿರುವುದರಿಂದ ರಸದ ಬಲದಿಂದಲೇ ಜೀವಿಸುವ ಸಪ್ತಧಾತುಗಳು ಕ್ಷೀಣಗೊಂಡು ಸಪ್ತಧಾತುಗಳ ಬಲದಿಂದಲೇ ಇರುವ ಶರೀರವು ಅತ್ಯಂತ ಕೃಶವಾಗುತ್ತದೆಂಬ ತಾತ್ಪರ್ಯವಾಯಿತು. ಈ ತಾತ್ಪರ್ಯಾವಲೋಕನದಿಂದ ವಾಗ್ಭಟಾಚಾರ್ಯನಿಗೆ "ಭೋಜನಮಧ್ಯದ" ಜಲಪಾನವೇ ಅಭಿಮತವಾಗಿರುವುದೆಂದು ತಿಳಿದುಬರುತ್ತದೆ.

ಸುಶ್ರುತಮಹರ್ಷಿಯು,

ತದಾದೌ ಕರ್ಶಯೇತ್ಪೀತಂ ಸ್ಥಾಪಯೇನ್ಮಧ್ಯಸೇವಿತಂ
ಪಶ್ಚಾತ್ಪೀತಂ ಬೃಂಹಯತಿ "ತಸ್ಮಾದ್ವೀಕ್ಷ್ಯೈವ
ಪ್ರಯೋಜಯೇತ್" ಸು. ಸೂ. ಅ ೪೬

ಭೋಜನದ ಆದಿಯಲ್ಲಿ ಕುಡಿದ ನೀರು ಶರೀರವನ್ನು ಕೃಶಗೊಳಿಸುತ್ತದೆ. ಮಧ್ಯದಲ್ಲಿ ಕುಡಿದ ನೀರು ಶರೀರವನ್ನು ಸಮತೂಕದಲ್ಲಿರಿಸುತ್ತದೆ. ಅಂತ್ಯದಲ್ಲಿ ಕುಡಿದ ನೀರು ಶರೀರವನ್ನು ಸ್ಥೂಲಗೊಳಿಸುತ್ತದೆ. ಆದುದರಿಂದ ವಿಚಾರಮಾಡಿ ಯುಕ್ತಿಯಿಂದ ನೀರನ್ನು ಕುಡಿಯಬೇಕೆಂದು ಹೇಳಿರುವನು. ಇಲ್ಲಿ ವಿಚಾರಮಾಡಿ ಕುಡಿಯಬೇಕೆಂದು ಹೇಳಿರುವುದರಿಂದ ಶರೀರದ ಕೃಶತೆಯನ್ನಪೇಕ್ಷಿಸುವವರು ಊಟಕ್ಕೆ ಮೊದಲು ನೀರನ್ನು ಕುಡಿಯಬಹುದೆಂತಲೂ, ಸಮತೆಯನ್ನಿಚ್ಛಿಸುವವರು ಮಧ್ಯದಲ್ಲಿ ಕುಡಿಯಬಹುದೆಂತಲೂ, ಸ್ಥೂಲತೆಯ ಅಭಿಲಾಷೆಯುಳ್ಳವರು ಅಂತ್ಯದಲ್ಲಿ ಕುಡಿಯಬಹುದೆಂತಲೂ, ಸಿದ್ಧವಾಗುವುದಲ್ಲವೆ? ಇನ್ನು ಜಗತ್ತಿನಲ್ಲಿ ಸುಖಾಭಿಲಾಷಿಗಳಾದ ಮಾನವರೆಲ್ಲರೂ ತಮ್ಮ ದೈನಿಕಕಾರ್ಯಗಳನ್ನು ಅನಾಯಾಸವಾಗಿಯೂ ಚಟುವಟಿಕೆಯಿಂದಲೂ, ಮಾಡಲಿಕ್ಕೆ ಅನುಕೂಲವಾದ "ಸಮಶರೀರ" ವನ್ನೇ ಅಪೇಕ್ಷಿಸುವರಲ್ಲದೆ ಕೂತರೆ ಏಳಲಿಕ್ಕೆ ಬರದಂತಹ ಸ್ಥೂಲಶರೀರವನ್ನೂ ಊದಿದರೆ ಹಾರಿಹೋಗುವಂತಹ ಕೃಶಶರೀರವನ್ನೂ ಎಂತಹ ಪಾಮರನಾದರೂ ಇಚ್ಛಿಸಲಾರನೆಂದ ಮೇಲೆ ಸುಶಿಕ್ಷಿತರೆಂದೆನಿಸಿಕೊಳ್ಳುವ ಅನಂತಕಾರ್ಯಭಾರವನ್ನು ತಲೆಯಮೇಲೆ ಹೊತ್ತಿರುವ ಮಾನವರು ಇಂತಹ ಶರೀರಗಳನ್ನಿಚ್ಛಿಸುವರೆಂಬುದು ಬಹುದೂರದಲ್ಲೇ ಉಳಿಯಿತು. ಏಕೆಂದರೆ—ಈ ಸ್ಥೂಲ ಮತ್ತು ಕೃಶಶರೀರಗಳು ಅತ್ಯಂತ ನಿಂದಿತಗಳಾಗಿರುವುವೆಂದು ಚರಕಸಂಹಿತೆಯ "ಅಷ್ಟೌನಿಂದಿತೀಯ" ವೆಂಬ ಅಧ್ಯಾಯದಲ್ಲಿ ವರ್ಣಿತಗಳಾಗಿರುತ್ತವೆ.

ಇಹಖಲು ಶರೀರಮಧಿಕೃತ್ಯಾಷ್ಟೌ ನಿಂದಿತಾಃ
ಪುರುಷಾಭವಂತಿ
ತದ್ಯಥಾ-ಅತಿದೀರ್ಘಶ್ಚಾತಿಹ್ರಸ್ವಶ್ಚಾತಿಲೋಮಾ
ಚಾಲೋಮಾ ಚಾತಿಕೃಷ್ಣಶ್ಚಾತಿ ಗೌರಶ್ಚಾತಿ "ಸ್ಥೂಲ
ಶ್ಚಾತಿಕೃಶ" ಶ್ಚೇತಿ ॥ ಚ. ಸೂ. ಅ೨೧.

ಬಹಳ ಉದ್ದವಾಗಿ ಬೆಳೆದಿರುವವನು, ಬಹಳ ಗಿಡ್ಡನು, ಮೈಯ ತುಂಬ ಅತ್ಯಂತ ದಟ್ಟವಾದ ಕೂದಲುಳ್ಳವನು, ಮೈಯಲ್ಲಿ ಒಂದು ಕೂದಲಾದರೂ ಇಲ್ಲದವನು, ಬಹಳ ಕಪ್ಪು ಬಣ್ಣವುಳ್ಳವನು, ಬಹಳ ಬೆಳ್ಳಗಿರುವವನು, ಬಹಳ ದಪ್ಪಗಿರುವವನು, ಬಹಳ ತೆಳ್ಳಗಿರುವವನು ಈ ಎಂಟುವಿಧ ಮನುಷ್ಯರು ಲೋಕದಲ್ಲಿ ಹಾಸ್ಯಕ್ಕೀಡಾಗುವುದರಿಂದ ಅತಿ ನಿಂದಿತಶರೀರಿಗಳೆಂದು ಪರಿಗಣಿಸಲ್ಪಟ್ಟಿರುವರು. ಅದರಲ್ಲಿಯೂ ಅತಿಸ್ಥೂಲ, ಅತಿಕೃಶರು ಯಾವ ಕಾರ್ಯವನ್ನೂ ಆಯಾಸವಿಲ್ಲದೆ ಮಾಡಲು ಸಮರ್ಥರಾಗದಿರುವುದರಿಂದಲೂ, ನಿತ್ಯರೋಗಿಗಳಾಗಿರುವುದರಿಂದಲೂ, ಈ ಎರಡುವಿಧ ಶರೀರವುಳ್ಳವರು ಅತ್ಯಂತ ನಿಂದಿತರಾಗಿರುವರೆಂದು ಶಾಸ್ತ್ರ ಮತ್ತು ಅನುಭವಗಳಿಂದ ಸಿದ್ಧವಾಗಿರುವುದಾಗಿದೆ. ಅದುಕಾರಣವೇ ಸುಶ್ರುತಮಹರ್ಷಿಯು ಈ ನಿಂದಿತಶರೀರಗಳಿಗೆ ಕಾರಣವಾಗಿರುವ ಭೋಜನಾದಿ ಭೋಜನಾಂತ್ಯಗಳ ಜಲಪಾನಗಳು ಅಗ್ನಿಮಾಂದ್ಯ ಮತ್ತು ಕಫವೃದ್ಧಿಗಳನ್ನುಂಟುಮಾಡುವುವೆಂತಲೂ, ಭೋಜನ ಮಧ್ಯದ ಜಲಪಾನವು ಶರೀರವನ್ನು ಸಮತೂಕದಲ್ಲಿರಿಸುವುದೆಂತಲೂ ಸೂಚಿಸಿ ಕಡೆಯಲ್ಲಿ 'ತಸ್ಮಾದ್ವೀಕ್ಷ್ಯೈವ ಪ್ರಯೋಜಯೇತ್' ಎಂಬ ಸಾವಧಾನಸೂಚಕವಾಕ್ಯದಿಂದ ಗುಣದೋಷವಿಮರ್ಶನಪಟುಗಳಾದ ಮಾನವರನ್ನು ಎಚ್ಚರಗೊಳಿಸಿರುವನು.

ಅಷ್ಟಾಂಗಸಂಗ್ರಹದ ಸೂತ್ರಸ್ಥಾನದಲ್ಲಿರುವ,

ಭಕ್ತಸ್ಯಾದೌ ಜಲಂ ಪೀತಮಗ್ನಿಸಾದಂ
ಕೃಶಾಂಗತಾಂ ।
ಅಂತೇ ಕರೋತಿ ಸ್ಥೂಲತ್ವಮೂರ್ಧ್ವಮಾಮಾ
ಶಯೇ ಕಫಂ ।
ಮಧ್ಯೇ ಮಧ್ಯಂ ಗತಂ ಸಾಮ್ಯಂ ಧಾತೂನಾಂ
ಜರಣಂ ಸುಖಂ ॥

ಎಂಬೀ ಶ್ಲೋಕಗಳನ್ನವಲೋಕಿಸುವುದರಿಂದ ಊಟಕ್ಕೆ ಮೊದಲಿನ ಜಲಪಾನವು ಜಠರಾಗ್ನಿಯನ್ನು ಮಂದಗೊಳಿಸಿ ಶರೀರದಲ್ಲಿ ಕೃಶತೆಯನ್ನುಂಟುಮಾಡುವುದೆಂತಲೂ, ಊಟದ ಕಡೆಯ ಜಲಪಾನವು ಆಮಾಶಯದಲ್ಲಿ ಕಫವೃದ್ಧಿಯನ್ನು ಮಾಡಿ ಶರೀರವನ್ನು ಸ್ಥೂಲಗೊಳಿಸುವುದೆಂತಲೂ, ಊಟದ ಮಧ್ಯದ ಜಲಪಾನವೇ ಧಾತುಸಾಮ್ಯವನ್ನುಂಟುಮಾಡಿ ಆಹಾರದ ಅನಾಯಾಸಪಚನೆಗೆ ಸಹಾಯಕವಾಗಿ ಶರೀರವನ್ನು ಸಮತೂಕದಲ್ಲಿರಿಸುವುದೆಂತಲೂ ಗೊತ್ತಾಗುತ್ತದೆ. ಮತ್ತು ಚರಕಸಂಹಿತೆಯಲ್ಲಿರುವ,

ಅತ್ಯಂಬುಪಾನಾನ್ನ ವಿಪಚ್ಯತೇಽನ್ನಂ ನಿರಂಬುಪಾ
ನಾಚ್ಚ ಸ ಏವ ದೋಷಃ ।
ಅತೋ ಬುಧಸ್ತತ್ಪರಿವರ್ಜನಾಯ 'ಮುಹುರ್ಮುಹು
ರ್ವಾರಿ ಪಿಬೇದಭೂರಿ' ॥ ಚ. ಸೂ. ಅ. ೨೭.

ಎಂಬೀ ಶ್ಲೋಕದಲ್ಲಿನ ಉತ್ತರಾರ್ಧದ ಅಂತಿಮ ಚರಣವು ಭೋಜನಮಧ್ಯದಲ್ಲಿ ಪುನಃ ಪುನಃ ಸ್ವಲ್ಪ ಸ್ವಲ್ಪ ನೀರನ್ನು ಕುಡಿಯಬೇಕೆಂದು ವಿಧಿಸುತ್ತದೆ. ಮತ್ತು ಇದೇ ಅಧ್ಯಾಯದಲ್ಲಿ 'ಅನುಪಾನಂ ಹಿತಂ ಯುಕ್ತಂ ತರ್ಪಯತ್ಯಾಶು ಮಾನವಂ' ಎಂಬೀ ಶ್ಲೋಕದಲ್ಲಿರುವ 'ಯುಕ್ತಂ' ಎಂಬ ಪದಕ್ಕೆ ವ್ಯಾಖ್ಯಾಕಾರನು (ಯುಕ್ತ್ಯಾಪ್ರಯುಕ್ತಂ) ಎಂದು ಅರ್ಥವನ್ನು ಬರೆದಿರುವನು. ಎಂದರೆ ಭೋಜನಸಮಯದಲ್ಲಿ ಯುಕ್ತಿಯಿಂದ ನೀರನ್ನು ಪಯೋಗಿಸುವುದಾದರೆ ಅದು ಆಹಾರವನ್ನು ಸರಿಯಾಗಿ ಪಚನಗೊಳಿಸಿ ಶರೀರಕ್ಕೆ ಹಿತವನ್ನುಂಟುಮಾಡುವುದೆಂಬ ತಾತ್ಪರ್ಯವು. ಯುಕ್ತಿಯೆಂದರೆ! ಊಟಕ್ಕೆ ಮೊದಲು ನೀರನ್ನು ಕುಡಿಯುವುದರಿಂದ ರಸವು ಹುಟ್ಟುವುದಿಲ್ಲ; ರಸದಿಂದಲೇ ಪೋಷಣೆಗೊಳ್ಳುವ ಸಪ್ತಧಾತುಗಳು ತಮ್ಮ ಆಹಾರವನ್ನು ಹೊಂದದೆ ಕ್ಷೀಣವಾಗಿ ಶರೀರವನ್ನು ಕೃಶಗೊಳಿಸುವುವು. ಊಟದ ಅಂತ್ಯದಲ್ಲಿ ಕುಡಿದ ನೀರು ಆಮಾಶಯದಲ್ಲಿ ಕಫವನ್ನು ವೃದ್ಧಿಗೊಳಿಸಿ, ಶರೀರದಲ್ಲಿ ಸ್ಥೂಲತೆಯನ್ನುಂಟುಮಾಡುವುದು. ಊಟದ ಮಧ್ಯದಲ್ಲಿ ಕುಡಿದ ನೀರು ಆಹಾರದೊಡನೆ ಏಕಾಕಾರವನ್ನು ಹೊಂದಿ ಉಂಡ ಅನ್ನವನ್ನು ಅನಾಯಾಸವಾಗಿ ಜೀರ್ಣಗೊಳಿಸುವುದರಿಂದ ಪರಿಶುದ್ಧವಾದ ರಸವು ಹುಟ್ಟಿ ಸಪ್ತಧಾತುಗಳಲ್ಲಿ ಸಮಾನವಾಗಿ ವ್ಯಾಪಿಸಿ ಧಾತುಗಳ ಬಲದಿಂದಲೇ ಇರುವ ಶರೀರವನ್ನು ಸಮತೂಕದಲ್ಲಿರಿಸುತ್ತದೆ. ಈ ವಿಧವಾದ ಯುಕ್ತಿಯನ್ನೇ ಇಲ್ಲಿ ಗ್ರಹಿಸತಕ್ಕದು ಶಾಸ್ತ್ರಸಮ್ಮತವಾಗಿರುತ್ತದೆ. ಈ ಯುಕ್ತಿಯನ್ನವಲಂಬಿಸಿಯೇ ಸಕಲ ಗ್ರಂಥಕಾರರು ಏಕವಾಕ್ಯದಿಂದ ಜಲಪಾನವಿಧಿಯನ್ನು ಪ್ರತಿಪಾದಿಸಿರುತ್ತಾರೆ. ಕಡೆಯಲ್ಲಿ ಭಾವಮಿಶ್ರನ ಅಭಿಪ್ರಾಯವನ್ನೂ ತೋರಿಸಿ ಈ ವಿಷಯವನ್ನು ಮುಗಿಸುವುದಾಗುತ್ತದೆ.

ಭುಕ್ತಸ್ಯಾದೌ ಜಲಂ ಪೀತಂ ಕಾರ್ಶ್ಯಮಂದಾಗ್ನಿ
ದೋಷಕೃತ್
ಮಧ್ಯೇಽಗ್ನಿದೀಪನಂ ಶ್ರೇಷ್ಠಮಂತೇ ಸ್ಥೌಲ್ಯಕಫ
ಪ್ರದಂ ॥ ಭಾ. ಪ್ರ. ಖಂ ೧.

ಭೋಜನಾದಿಯ ಜಲಪಾನವು ಮಂದಾಗ್ನಿ, ಶರೀರದ ಕೃಶತೆಗಳೆಂಬ ದೋಷಗಳಿಗೆ ಕಾರಣವಾಗಿಯೂ, ಭೋಜನಾಂತ್ಯದ ಜಲಪಾನವು ಕಫವೃದ್ಧಿ, ಶರೀರದ ಸ್ಥೂಲತೆಗಳಿಗೆ ಕಾರಣವಾಗಿಯೂ ಇರುವುದರಿಂದ ಜಠರಾಗ್ನಿಯನ್ನು ವೃದ್ಧಿಗೊಳಿಸಿ ಧಾತು ಸಾಮ್ಯವನ್ನುಂಟುಮಾಡುವ "ಭೋಜನಮಧ್ಯದ ಜಲಪಾನವೇ" ಶ್ರೇಷ್ಠವಾಗಿರುವುದೆಂದು ಭಾವಮಿಶ್ರಪಂಡಿತನು ಹೇಳಿರುತ್ತಾನೆ.

ಇಲ್ಲಿಯವರೆಗೆ ಉದಾಹರಿಸಲ್ಪಟ್ಟಿರುವ ವೈದ್ಯಶಾಸ್ತ್ರಪ್ರಮಾಣಗಳ ಪರಿಶೀಲನೆಯಿಂದ ವಾಚಕರಿಗೆ ಭೋಜನ ಸಮಯದಲ್ಲಿಮಾಡುವ ಜಲಪಾನಗಳಲ್ಲಿ ಯಾವುದು ಹಿತಕರವಾದುದೆಂಬುದು ವೇದ್ಯವಾಗದಿರಲಾರದು. ಈ ನಿರ್ಣಯದಿಂದ ಊಟವಾದ ಮೇಲೆ ನೀರನ್ನು ಸ್ವಲ್ಪವಾದರೂ ಕುಡಿಯುವುದು ನಿಷಿದ್ಧವೆಂತಲೂ ತಿಳಿಯಬಾರದು. ಊಟದ ಕಡೆಯಲ್ಲಿ ಕೇವಲ ಮುಖಶುದ್ಧಿಗಾಗಿ ಸ್ವಲ್ಪ ನೀರನ್ನು ಕುಡಿಯುವುದು ಹಾನಿಕರವಾಗಿರುವುದಿಲ್ಲ; ಊಟದ ಮಧ್ಯದಲ್ಲಿ ನೀರನ್ನು ಸ್ವಲ್ಪವಾದರೂ ಕುಡಿಯದಿದ್ದರೆ ಕಡೆಯಲ್ಲಿ ಒಂದೊಂದು ತಂಬಿಗೆಯಷ್ಟು ನೀರನ್ನು ಒಂದೇ ಸಲ ಕುಡಿಯಬೇಕಾಗುವುದು. ಹೀಗೆ ಒಂದೇ ಸಲ ಕುಡಿದ ಹೆಚ್ಚಾದ ನೀರು ಪರಿಪಾಕಕ್ಕೆ ಸಹಾಯವನ್ನೀಯುವ ಲಾಲಾರಸ (ಜೊಲ್ಲು) ದಿಂದ ಕೂಡಿರುವ ಅನ್ನದ ಮೇಲೆ ಸೇರಿ ಆ ಲಾಲಾರಸವನ್ನು ಕೆಡಿಸುವುದರಿಂದ ಅನ್ನವು ಸರಿಯಾಗಿ ಪಕ್ವವಾಗದೆ ಕಫವು ವೃದ್ಧಿಗೊಂಡು ಶರೀರವು ಸ್ಥೂಲವಾಗುತ್ತದೆ. ಅತ್ಯಲ್ಪವಾಗಿ ನೀರನ್ನು ಕುಡಿಯುವುದರಿಂದ ಈ ದೋಷವುಂಟಾಗಲಾರದು. ಊಟವಾದ ಒಂದೆರಡು ಗಂಟೆಗಳ ಮೇಲೆ ತೃಪ್ತಿಯಾಗುವಷ್ಟು ನೀರನ್ನು ಕುಡಿಯಬಹುದು.

ಮೇಲೆ ಉದಾಹೃತಗಳಾಗಿರುವ ಜಲಪಾನವಿಧಿಪ್ರತಿಪಾದಕಪ್ರಮಾಣಗಳಲ್ಲಿ ಕಾರ್ಶ್ಯ ಮತ್ತು ಸ್ಥೂಲತೆಗಳ ಹಿಂದೆ 'ಅತಿ' ಎಂಬ ವಿಶೇಷಣವಿಲ್ಲದಿರುವುದನ್ನು ನೋಡಿ ವಾಚಕರು ಈ ಪ್ರಮಾಣಗಳೆಲ್ಲವೂ ಸಾಧಾರಣವಾಗಿರುವ ಕೃಶತೆ ಮತ್ತು ಸ್ಥೂಲತೆಗಳನ್ನೇ ಪ್ರತಿಪಾದಿಸುತ್ತವೆ; ಇಂತಹ ಸಾಮಾನ್ಯಕೃಶರೂ ಸಾಮಾನ್ಯಸ್ಥೂಲರೂ ಲೋಕದಲ್ಲಿ ಅತಿನಿಂದಿತರೆನಿಸಿಕೊಳ್ಳಲಾರರೆಂದು ಸಂತುಷ್ಟರಾಗಬಾರದು. ಶಾಸ್ತ್ರನಿಷಿದ್ಧವಾದ ಜಲಪಾನಪದ್ಧತಿಯನ್ನನುಸರಿಸತಕ್ಕವರು ಕೆಲವು ದಿನಗಳು ಕಳೆದ ಮೇಲೆ 'ಅತಿ' ಯೆಂಬ ವಿಶೇಷಣದಿಂದಲೂ ಭೂಷಿತರಾಗಿ ಚರಕೋಕ್ತಿಯಂತೆ ಅತ್ಯಂತನಿಂದಿತರಾಗುವುದರಲ್ಲಾವ ಸಂಶಯವೂ ಇಲ್ಲ. ಕೆಲವರು ಹುಟ್ಟುವಾಗಲೇ ಬೀಜದೋಷದಿಂದ ಕೃಶ ಮತ್ತು ಸ್ಥೂಲ ಶರೀರಗಳನ್ನು ಧರಿಸಿಕೊಂಡೇ ಅವತರಿಸುವರು. ಇಂತಹ ಜನರು ಈ ಭೋಜನಾದಿ ಭೋಜನಾಂತ್ಯಗಳ ಜಲಪಾನಪದ್ಧತಿಯನ್ನವಲಂಬಿಸುವುದರಿಂದ ಕೆಲವು ದಿನಗಳ ಮೇಲೆ ಎಂತಹ ಸುಂದರ ಶರೀರಗಳಿಂದ ವಿಭೂಷಿತರಾಗುವರೆಂಬುದನ್ನು ವಾಚಕರೇ ಊಹಿಸಬಹುದು.

(ಸಶೇಷ)

ಏಕೇಶ್ವರೀಭಕ್ತಿ.

ಪ್ರತಿಯೊಂದಕ್ಕೂ ಏಕವೇ ಮುಖ್ಯವಾದುದು. ಜಗತ್ತಿನ ಯಾವ ಕಾರ್ಯಗಳಾದರೂ, ಏಕರೂಪವಾಗಿದ್ದರೆ ಸರಿಯಾಗಿ ಸಾಗಿ ಫಲಕಾರಿಯಾಗುತ್ತವೆ. ಏಕವಚನೀಯನಾದ ಹರಿಶ್ಚಂದ್ರನು ಲೋಕವಿಖ್ಯಾತನಾದನು. ಏಕಪತ್ನೀವ್ರತಸ್ಥನಾದ ರಾಮಚಂದ್ರನು ಪರಮಪೂಜ್ಯನಾದನು. ಏಕನಿಷ್ಠಾಸಕ್ತನಾದ ಹನೂಮಂತನು ಸರ್ವರಿಗೂ ಮಾರ್ಗದರ್ಶಕನಾದನು. ಏಕಧರ್ಮವೃತ್ತಿಯಾದ ಸಂಭಾಜಿಯು ಇತಿಹಾಸಪ್ರಸಿದ್ಧನಾದನು. ಗುರುಭಕ್ತ್ಯೈಕನಿಷ್ಠಾತಳಾದ ಮಾಯಿದೇವಿಯು ಬಂಧನದಲ್ಲಿ ಬಿದ್ದ ತನ್ನ ಸುಪುತ್ರಿಯಾದ ರೇವಣಾಂಬೆಯನ್ನು ಹನ್ನೆರಡು ಸಹಸ್ರ ಕನ್ಯೆಯರೊಡನೆ ಬಂಧವಿಮೋಚನಕ್ಕೆ ಕಾರಣೀಭೂತಳಾದಳು. ಗುರುಭಕ್ತ್ಯೈಕನಿಷ್ಠನಾದ ಅಗಸ್ತ್ಯನು ಸಪ್ತಸಮುದ್ರ ಪಾನಮಾಡಲು ಸಮರ್ಥನಾದನು. ಒಟ್ಟಿನ ಮೇಲೆ ಏಕತ್ವದಿಂದ ಇಹಪರಗಳಲ್ಲಿ ಸಕಲಸೌಖ್ಯಗಳು ಕರಗತಗಳೆಂದು ಬೇರೆ ಹೇಳುವ ಆವಶ್ಯಕತೆಯಿಲ್ಲ. ಆದ್ದರಿಂದ ಪ್ರತಿಯೊಂದು ಧರ್ಮ, ಸಮಾಜ, ಇಲ್ಲವೆ ಪಂಥ, ಕುಲ, ಜಾತಿ ಇತ್ಯಾದಿಗಳು ಓರ್ವ ವ್ಯಕ್ತಿಯಿಂದ ಸಾಗುವವೇ ಹೊರತು ಅನೇಕಧಾ ಸರ್ವಥಾ ಶಕ್ಯವಿಲ್ಲವು. ಯಾವ ಧರ್ಮೀಯನಿಗಾದರೂ ಒಬ್ಬನೇ ದೇವರುಂಟು. ಆಯಾಯ ಧರ್ಮಾಚಾರ್ಯರು ತೋರಿಸಿಕೊಟ್ಟ ದೇವತೆಯನ್ನು ಬಿಟ್ಟು ಯಾರು ಅನೇಕ ಪ್ರಕಾರಗಳಾದ ದೇವತೆಗಳ ಬೆಂಬಲರಾಗುವರೋ ಅವರಿಗೆಂದಿಗೂ ಸೌಖ್ಯವು ಸಿಕ್ಕದು. ಈ ತತ್ತ್ವವನ್ನರಿತ ಮುಸಲ್ಮಾನರು ತಮ್ಮ ದೇವತೆಯ ಹೊರತು ಇತರ ಹಿಂದೂ ದೇವತೆಗಳಿಗೆ ಎಂದೂ ನಮಿಸುವದಿಲ್ಲ. ವೈಷ್ಣವರಾದರೂ ವಿಷ್ಣುವಿನ ಹೊರತು ಇತರ ದೇವತೆಗಳನ್ನು ಪೂಜಿಸುವುದಿಲ್ಲ. ಅದೇ ಪ್ರಕಾರವಾಗಿಯೇ ವೀರಶೈವರಲ್ಲಿಯೂ ಕಡುತರತಾಪಸವಿದ್ದರೂ ವೀರಶೈವರ ಅಜ್ಞಾನದಿಂದಲೋ, ಗುರುಗಳ ಅಜಾಗರೂಕತೆಯಿಂದಲೋ ಬಹುಮಟ್ಟಿಗೆಶಿಥಿಲವಾಗಿದೆಯೆಂದು ಬರೆಯಲು ವ್ಯಸನವೆನಿಸುತ್ತದೆ. ಪ್ರತಿಯೊಂದು ಹಳ್ಳಿಗಳಲ್ಲಿ ಇಲ್ಲವೆ ಶಹರಗಳಲ್ಲಿಯ ವೀರಶೈವರು ವರ್ತಿಸುವದನ್ನು ನೋಡಿದರೆ ಪರಮ ದುಃಖವೆನಿಸುತ್ತದೆ. ವೀರಶೈವರಿಗೆ ಸದ್ಗುರುನಾಥನಿಂದ ದಯಪಾಲಿಸಲ್ಪಟ್ಟ ಇಷ್ಟಲಿಂಗಮೂರ್ತಿಯ ಹೊರತು ಇತರ ದೇವತೆಗಳೇ ಇರುವದಿಲ್ಲ. ಈ ಇಷ್ಟಲಿಂಗಮೂರ್ತಿಯಲ್ಲಿ ತಮ್ಮ ಇಚ್ಛಿತಫಲವನ್ನು ಅವಶ್ಯವಾಗಿ ಹೊಂದಬೇಕು. ಈ ಲಿಂಗಮೂರ್ತಿಯಲ್ಲಿ ನಿಶ್ಚಲಮನಸ್ಸು ಇಲ್ಲದ ಮೂಲಕ ನಮಗೆ ಯಾವ ಫಲವೂ ದೊರೆಯದು. ವೀರಶೈವರಲ್ಲಿದ್ದಷ್ಟು ಭಿಕ್ಷುಕರೂ, ಬಡವರೂ ಇತರ ಮತೀಯರಲ್ಲಿ ಕಂಡು ಬರುವದಿಲ್ಲ. ಮಾರವಾಡಿ ಗುಜ್ಜರು ಇವರಂತೂ ತಮ್ಮ ದೇವರಿಗಾಗಿ ಮನೋಹರಗಳಾದ ಮಂದಿರಗಳನ್ನು ಕಟ್ಟಿಸಿ, ಅಸಾಧಾರಣವಾದ ಭಕ್ತಿಯಿಂದ ಪೂಜಿಸುತ್ತಿರುವ ಕಾರಣ ಅವರಿಗೆ ಬಡತನವೇ ಗೊತ್ತಿಲ್ಲವೆಂದರೂ ಅಡ್ಡಿಯಿಲ್ಲ. ವೀರಶೈವರು ಪ್ರತಿಯೊಂದು ಕಾರ್ಯದಲ್ಲಿಯೂ ಹಿಂದುಳಿದಿರುವರು. ಗೃಹಸ್ಥಾಶ್ರಮಿಗಳಿಗೆ ಸರ್ವದಾ ತಮ್ಮ ಇಷ್ಟದೇವತೆಯಾದ ಈಶ್ವರನನ್ನು ಸ್ಮರಿಸಲು ಶಕ್ಯವಿಲ್ಲವಾದ್ದರಿಂದ ಪೂರ್ವಜರು ತಮ್ಮ ಮಕ್ಕಳಿಗಾದರೂ ಈಶ್ವರನ ನಾಮವನ್ನಿಟ್ಟರೆ, ಪದೇಪದೇ ಪುತ್ರವಾತ್ಸಲ್ಯದಿಂದ ಕರೆಯಲು ಈಶ್ವರನಾಮವನ್ನು ಗ್ರಹಿಸಿದಂತಾದೀತೆಂದು ಈಶ್ವರನಾಮವನ್ನು ಮಕ್ಕಳಿಗೆ ಇಡುತ್ತಿದ್ದರು. ಆದರೆ ಈಗಿನ ವೀರಶೈವರು ಎಷ್ಟೋ ಅನ್ಯದೇವತೆಗಳಿಗೆ ಹರಕೆ ಹೊತ್ತು ಹಡೆದು ಆಯಾ ದೇವತೆಗಳ ಹೆಸರನ್ನಿಡುತ್ತಾರೆ. ವೀರಶೈವರಲ್ಲಿ ಪೀರಪ್ಪ, ಶೇಕಪ್ಪ, ಫಕೀರಪ್ಪ ಉಸೇನಪ್ಪ, ವಿಠೋಬಾ, ನಾರಾಯಣ, ಕೇಶವ, ರಾಮಚಂದ್ರ, ಲಕ್ಷ್ಮಣ, ಲಕ್ಕಪ್ಪ, ತಿಕ್ಕಬುಕ್ಕಪ್ಪ ಇದಕ್ಕಿಂತಲೂ ಕೀಳು ಹೆಸರುಗಳೆಂದರೆ—ಕಲ್ಲಪ್ಪ, ಮಣ್ಣಪ್ಪ, ಗಾಳೆಪ್ಪ, ಧೂಳೆಪ್ಪ, ಧೋಂಡಪ್ಪ, ದಗಡಯ್ಯ, ಎಮ್ಮೆಪ್ಪ, ಮುಸುರೆಪ್ಪ, ಗಾಡಿಗೆಪ್ಪ, ಮನೋಬಾ, (ಕೋಣ) ಬಂಡಪ್ಪ, (ನಾಯಿ) ಕೋಳೆಪ್ಪ, ಬೈಲಪ್ಪ, ಬೂದೆಯ್ಯ, ತಿಪ್ಪಣ್ಣ, ಚಿಪಾಟಿರಾವ, ಕೋರೆಪ್ಪ, ರಗಟೆಪ್ಪ ಇತ್ಯಾದಿ ಇನ್ನೂ ಅನೇಕಾನೇಕ ಅಸಹ್ಯ ಹೆಸರುಗಳನ್ನಿಟ್ಟು ನಾವು ವೀರಶೈವರೆಂದು ಹೇಳಿಕೊಳ್ಳುವದೆಂದರೆ ಅತ್ಯಂತ ಹಾಸ್ಯಾಸ್ಪದ ಸಂಗತಿಯಾಗಿದೆ. ಶಿವಾಶಿವಾ! ವೀರಶೈವರಿಗೆ ಶಿವನ ಹೆಸರುಗಳೇ ಗೊತ್ತಿಲ್ಲವೋ ಹೇಗೆ? ಅಥವಾ ಶಿವನಿಗೆ ಹೆಸರುಗಳೇ ಇಲ್ಲವೋ? ಇಲ್ಲವೇ ಶಿವನು ಇವರಿಗೆ ನನ್ನ ಹೆಸರನ್ನೇ ತೆಗೆದುಕೊಳ್ಳಬೇಡಿರೆಂದು ಹೇಳಿರುವನೋ? ಅಥವಾ ಈ ವೀರಶೈವರಿಗೆ ಶಿವನಹೆಸರಿನಿಂದ ಅನ್ಯಾಯ

(೬ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ.

೧೯೩೪ ನೇ ಡಿಸೆಂಬರ್ ತಾ|| ೩೧ ನೇ ಸೋಮವಾರ.

ಇಷ್ಟಲಿಂಗೋಪಾಸನೆ.

ಕಳೆದವಾರದ ನಮ್ಮ ಪತ್ರಿಕೆಯಲ್ಲಿ "ದಹರಂ ವಿಪಾಪ್ಮಂ" ಇತ್ಯಾದಿ ಶ್ರುತಿವಾಕ್ಯಗಳಿಂದ ಅಂತರ್ಲಿಂಗೋಪಾಸನೆಯು ಪ್ರತಿಪಾದಿಸಲ್ಪಟ್ಟಿರುವುದಷ್ಟೆ! ಈಗ ಅವೇ ಶ್ರುತಿವಾಕ್ಯಗಳಿಂದ ಬಹಿರ್ಲಿಂಗೋಪಾಸನೆಯು ಪ್ರತಿಪಾದಿಸಲ್ಪಡುತ್ತದೆ. ತೈತ್ತಿರೀಯಶ್ರುತಿಯಲ್ಲಿ— "ಏತತ್ಸೋಮಸ್ಯ ಸೂರ್ಯಸ್ಯ ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ" ಎಂಬ ಮಂತ್ರವು ಹೇಳಲ್ಪಟ್ಟಿರುತ್ತದೆ. ಈ ಮಂತ್ರಕ್ಕೆ ಶ್ರೀ ರೇಣುಕಾದಿ ಪೂರ್ವಾಚಾರ್ಯರು ಇಷ್ಟಲಿಂಗಧಾರಣಪರವಾಗಿ ವ್ಯಾಖ್ಯಾನವನ್ನು ಮಾಡಿರುವುದರಿಂದಲೂ ಈ ಮಂತ್ರವು ದೀಕ್ಷಾಸಂಸ್ಕಾರದಿಂದ ಪರಿಶುದ್ಧಗೊಳಿಸಲ್ಪಟ್ಟ ಶಿಷ್ಯರ ದೇಹದಲ್ಲಿ ಶ್ರೀಗುರುವು ಇಷ್ಟಲಿಂಗವನ್ನು ಧರಿಸುವ ಸಮಯದಲ್ಲಿ ವಿನಿಯೋಗಿಸಲ್ಪಟ್ಟ ಮಂತ್ರವಾಗಿರುವದರಿಂದಲೂ ಈ ಮಂತ್ರಾರ್ಥವು ಲಿಂಗಧಾರಣಪರವಾದುದೆಂದು ಸ್ಪಷ್ಟವಾಗುತ್ತದೆ ಈ ವಾಕ್ಯದ ಹಿಂದುಗಡೆಯಲ್ಲಿಯೇ ಇರುವ "ಹಿರಣ್ಯಾಯ ನಮಃ ಹಿರಣ್ಯಲಿಂಗಾಯ ನಮಃ | ಶಿವಾಯ ನಮಃ ಶಿವಲಿಂಗಾಯ ನಮಃ" ಇತ್ಯಾದಿ ವಾಕ್ಯಗಳಿಂದ ಶ್ರುತಿದೇವಿಯು ಲಿಂಗಸ್ತುತಿಯನ್ನು ಮಾಡಿದ್ದಾಳೆ. ಸೋಮಸ್ಯ—ಉಮಾಸಹಿತವಾದ, ಸೂರ್ಯಸ್ಯ—ಸೂರ್ಯಮಂಡಲಾಂತರ್ವರ್ತಿಯಾದ, ಪವಿತ್ರಂ—ಯಾವಾಗಲೂ ಪರಿಶುದ್ಧವಾಗಿರುವ, ಪಾಣಿಮಂತ್ರಂ—ಹಸ್ತದಲ್ಲಿಟ್ಟು ಪೂಜಿಸಲ್ಪಡಲು ಯೋಗ್ಯವಾಗಿರುವ ಶಿವಲಿಂಗವು ಸರ್ವಲಿಂಗಂ ಸ್ಥಾಪಯತಿ—ಸಮಸ್ತ ಶಿವಭಕ್ತರ ದೇಹದಲ್ಲಿ ಧರಿಸಲ್ಪಡಲು ತಕ್ಕುದೆಂದು ಶರೀರದಲ್ಲಿ ಲಿಂಗಧಾರಣವನ್ನೂ, ಹಸ್ತಪೀಠದಲ್ಲಿ ಆ ಲಿಂಗದ ಪೂಜೆಯನ್ನೂ ಸ್ಪಷ್ಟವಾಗಿ ವಿಧಿಸಿರುತ್ತದೆ.

ಈ ಮಂತ್ರದಲ್ಲಿ "ಸ್ಥಾಪಯತಿ" ಎಂಬ ಕ್ರಿಯಾಪದವಿರುವುದರಿಂದ ಶಿವಲಿಂಗವನ್ನು ಭೂಮಿಯಲ್ಲಿಯಾದರೂ ಶರೀರದಲ್ಲಾದರೂ ಸ್ಥಾಪಿಸಬಹುದೆಂದು ಪೂರ್ವಪಕ್ಷವುಂಟಾಗುವುದು. ಈ ಮಂತ್ರಕ್ಕೆ ಭೂಮಿ ಪ್ರತಿಷ್ಠಿತವಾದ ಲಿಂಗದಪರವಾಗಿ ಅರ್ಥಮಾಡಿ ದೇಹದಲ್ಲಿ ಧರಿಸಲ್ಪಟ್ಟ ಲಿಂಗದಪರವಾಗಿ ಅರ್ಥಮಾಡದೆ ಹೋದರೆ ಆ ಶ್ರುತಿವಾಕ್ಯಕ್ಕೆ ಸಂಕೋಚವನ್ನುಂಟುಮಾಡಿದಂತಾಗುವುದು. "ಸ್ಥಾಪಯತಿ" ಎಂಬ ಕ್ರಿಯಾಪದದ ಮುಂದುಗಡೆಯಲ್ಲಿ "ಪಾಣಿಮಂತ್ರಂ" ಎಂಬ ವಿಶೇಷವಾಕ್ಯವಿರುವುದರಿಂದ ಶರೀರದಲ್ಲಿಯೇ ಲಿಂಗಸ್ಥಾಪನವು ಸಿದ್ಧವಾಗುವುದು. "ಪಾಣೌ ಮಂತ್ರಂ ಪಾಣಿಮಂತ್ರಂ" ಎಂಬ ವ್ಯುತ್ಪತ್ತಿಬಲದಿಂದ ಹಸ್ತದಲ್ಲಿಟ್ಟು ಪೂಜಿಸಬೇಕಾದರೆ ಭೂಮಿಯಲ್ಲಿ ಪ್ರತಿಷ್ಠಿತವಾದ ಸ್ಥಾವರಲಿಂಗದಲ್ಲಿ ಅಂತಹ ಪೂಜೆಯು ಸಂಭವಿಸದೆ, ಶರೀರದಲ್ಲಿ ಧರಿಸಲ್ಪಟ್ಟಿರುವ ಶಿವಲಿಂಗದಲ್ಲಿಯೇ ಸಂಭವಿಸುವುದೆಂದು ಸ್ಪಷ್ಟವಾಗುತ್ತದೆ. ಹೀಗೆ ಶ್ರುತಿದೇವಿಯ ತಾತ್ಪರ್ಯವು ಇಷ್ಟಲಿಂಗಧಾರಣಪರವಾಗಿರುವುದರಿಂದಲೇ, ಲಿಂಗಧಾರಣಸಾಧನವಾದ ದೀಕ್ಷಾಸಮಯದಲ್ಲಿ ಗುರುವು, ಶಿಷ್ಯದೇಹವನ್ನು ಸಂಸ್ಕಾರದಿಂದ ಶುದ್ಧಗೊಳಿಸಿದ ತರುವಾಯ ಆ ಶಿವಲಿಂಗವನ್ನು ತನ್ನ ಹಸ್ತಪೀಠದಲ್ಲಿರಿಸಿಕೊಂಡು "ಓಂ ನಮೋ ಬ್ರಹ್ಮಣೇಧಾರಣಂ ಮೇ ಅಸ್ತು" ಎಂಬ ಮಂತ್ರವನ್ನು ಶಿಷ್ಯನಿಂದ ಹೇಳಿಸಿ ಆಚಾರ್ಯನು "ಊರ್ಧ್ವಾಯ ನಮಃ ಊರ್ಧ್ವಲಿಂಗಾಯನಮಃ........ಪಾಣಿಮಂತ್ರಂ ಪವಿತ್ರಂ" ಎಂಬ ಮಂತ್ರವನ್ನುಚ್ಚರಿಸುತ್ತ ಶಿಷ್ಯನ ವಾಮಹಸ್ತದಲ್ಲಿರಿಸಿ ಅಯ್ಯಾ ಶಿಷ್ಯನೆ! ಇದೇ ನಿನ್ನ ಪ್ರಾಣಲಿಂಗವು; ಇದೇ ಪರವಸ್ತುವು: ಇದನ್ನು ಒಂದು ನಿಮಿಷವಾದರೂ ನಿನ್ನ ಶರೀರದಿಂದ ಅಗಲಿಸಬೇಡ: ಪ್ರತಿ ದಿವಸವೂ ಇದನ್ನು ನಿನ್ನ ಹಸ್ತಪೀಠದಲ್ಲಿಟ್ಟು ಪೂಜಿಸುತ್ತಿರು. ನೀನು ಯಾವ ಪದಾರ್ಥವನ್ನು ಭುಂಜಿಸಬೇಕಾದರೂ ಮೊದಲು ಈ ಶಿವಲಿಂಗಕ್ಕೆ ಅರ್ಪಿಸದೆ ಭುಂಜಿಸಬೇಡ; ಈ ಶಿವಲಿಂಗದಿಂದಲೇ ಸಮಸ್ತ ಭೋಗಮೋಕ್ಷಾದಿಗಳು ಸಂಭವಿಸುವುವು. ಎಂದು ಬೋಧಿಸುತ್ತಾನೆ. ಹೀಗೆ 'ಸರ್ವಲಿಂಗಂ ಸ್ಥಾಪಯತಿ' ಎಂಬ ಮಂತ್ರಕ್ಕೆ ಲಿಂಗಧಾರಣಪರವಾಗಿ ಅರ್ಥಮಾಡುವುದರಿಂದಲೇ ವೀರಶೈವ ಸಿದ್ಧಾಂತಾನುಗುಣವಾದ ದೀಕ್ಷಾವಿಧಾನಕ್ಕೂ, ಮಂತ್ರಕ್ಕೂ ಏಕವಾಕ್ಯತೆಯುಂಟಾಗುತ್ತದೆ. ಈ ವಿಷಯದಲ್ಲಿ ಸ್ಕಾಂದಪುರಾಣಾದಿಗಳೇ ಬಲವಾದ ಆಧಾರಗಳಾಗಿರುತ್ತವೆ.

ವೇದೇಷು ಶಾಸ್ತ್ರಸಂಘೇಷು ಪುರಾಣೇಷ್ವಾಗಮೇಷು ಚ |
ಬ್ರಾಹ್ಮಣಸ್ಯ ಸಮಾಖ್ಯಾತಂ ಲಿಂಗಧಾರಣಮುತ್ತಮಂ ||
ಯಜುರಾಖ್ಯಾಹ ಸರ್ವಂವೈ ಲಿಂಗಂ ಸ್ಥಾಪಯತೀತಿ ಚ |
ತಸ್ಮಾದ್ಧಾರ್ಯಂ ಮಹಾಲಿಂಗಂ ಪಾಣಿಮಂತ್ರೇತಿ ಮಂತ್ರತಃ |
ಪಾಣೌ ಮಂತ್ರಂ ವಿನಿಕ್ಷಿಪ್ಯ ದೀಕ್ಷಾಕಾಲೆ ಗುರುಶ್ಶಿವಂ ||
ಯೇನ ಸ್ತುವತಿ ತನ್ಮಂತ್ರಂ ಪಾಣಿಮಂತ್ರಂ ವದಂತಿಹಿ |
ಪವಿತ್ರತ್ವಾತ್ಸ್ವದೇಹಸ್ಯ ಶಿವಸ್ಯ ಪ್ರತಿಪಾದನಾತ್ |
ಪವಿತ್ರಶರಣಾತ್ಪುಂಸಾಂ ಪವಿತ್ರಮಿತಿ ಕಥ್ಯತೆ ||
ಅತಸ್ಸರ್ವೇಷು ಕಾಲೇಷು ಧಾರಯೇಲ್ಲಿಂಗಮುತ್ತಮಂ |
ಗಚ್ಛಂಸ್ತಿಷ್ಠನ್ ಸ್ವಪನ್ ಜಾಗ್ರಚ್ಛೃಣ್ವನ್ಮಿಷನ್ನಪಿ ||
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ |
ಲಿಂಗಧಾರೀ ಸದಾಶುದ್ಧೋ ನಿಜಲಿಂಗಂ ಮನೋಹರಂ |
ಅರ್ಚಯೇತ್ ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ |
ನಿತ್ಯಾನಿ ಕರ್ಮಾಣ್ಯಂದಾನಿ ತಥಾ ನೈಮಿತ್ತಿಕಾನಿ ಚ |
ಶಿವಾರ್ಪಣಧಿಯಾ ಕುರ್ವನ್ ಸಮ್ಯಗ್ಜ್ಞಾನಾಭವೃದ್ಧಯೆ ||

ಅಂದರೆ ವೇದಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ, ಪುರಾಣಗಳಲ್ಲಿಯೂ, ಆಗಮಗಳಲ್ಲಿಯೂ ಲಿಂಗಧಾರಣವು ಹೇಳಲ್ಪಟ್ಟಿರುತ್ತದೆ. ಈ ಲಿಂಗಧಾರಣವನ್ನು ಯಜುರ್ವೇದಮಂತ್ರವು ಸ್ಪಷ್ಟವಾಗಿ ಹೇಳುತ್ತದೆ. ಆದುದರಿಂದ ಶ್ರೀಗುರುವು "ಪಾಣಿಮಂತ್ರಂ ಪವಿತ್ರಂ" ಎಂಬ ಮಂತ್ರವನ್ನು ದೀಕ್ಷಾಸಮಯದಲ್ಲಿ ಉಚ್ಚರಿಸುತ್ತ ಶಿಷ್ಯನಿಗೆ ಇಷ್ಟಲಿಂಗವನ್ನು ಧರಿಸಬೇಕು. ಶ್ರೀಗುರುವು ದೀಕ್ಷೆಯನ್ನು ಮಾಡುವ ಸಮಯದಲ್ಲಿ ಮಂತ್ರಶಬ್ದವಾಚ್ಯವಾದ ಶಿವಲಿಂಗವನ್ನು ಶಿಷ್ಯನ ಹಸ್ತದಲ್ಲಿರಿಸಿ ಈ ಮಂತ್ರವನ್ನು ಪಠಿಸಬೇಕು. ಪುರುಷರನ್ನು ಪರಿಶುದ್ಧಿಗೊಳಿಸುವುದರಿಂದ ಈ ಇಷ್ಟಲಿಂಗವು ಪವಿತ್ರವೆನಿಸುತ್ತದೆ. ಅಂತಹ ಪರಮಪವಿತ್ರವಾದ ಈ ಇಷ್ಟಲಿಂಗವನ್ನು ಸರ್ವಕಾಲದಲ್ಲೂ ಧರಿಸಬೇಕು. ಲಿಂಗಧಾರಿಯಾದವನು ಆ ಲಿಂಗಸಂಬಂಧದಿಂದ ಯಾವಾಗಲೂ ಪರಿಶುದ್ಧನಾಗಿರುವುದರಿಂದ ಶುಚ್ಯಶುಚಿಕಾಲಗಳಲ್ಲಿಯೂ ಲಿಂಗವನ್ನು ಬಿಡಲಾಗದು. ಪ್ರತಿ ದಿವಸವೂ ಸ್ನಾನದಿಂದ ಪರಿಶುದ್ಧನಾಗಿ ತನ್ನ ಹಸ್ತಪೀಠದಲ್ಲಿಟ್ಟುಕೊಂಡು ಗಂಧಪುಷ್ಪಾದಿಗಳಿಂದರ್ಚಿಸಬೇಕು. ಲಿಂಗಧಾರಿಯಾದವನು ತಾನು ಮಾಡಬೇಕಾದ ನಿತ್ಯಕರ್ಮಗಳನ್ನೂ ನೈಮಿತ್ತಿಕ ಕರ್ಮಗಳನ್ನೂ ಕಾಮ್ಯಾಪೇಕ್ಷೆಯಿಲ್ಲದವನಾಗಿ ಕೇವಲ ಶಿವಾರ್ಪಣಬುದ್ಧಿಯಿಂದ ಆಚರಿಸಬೇಕು. ಲಿಂಗಪುರಾಣವು "ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ" ಎಂಬ ತೈತ್ತಿರೀಯ ಮಂತ್ರದಲ್ಲಿರುವ ಅವೇ ಶಬ್ದಗಳನ್ನುದಾಹರಿಸಿಕೊಂಡು ಸ್ಪಷ್ಟವಾಗಿ ಅನುವಾದ ಮಾಡಿರುವುದರಿಂದಲೂ ಶ್ರೀ ರೇಣುಕಾದಿ ಪೂರ್ವಾಚಾರ್ಯರು ಈ ಮಂತ್ರಾರ್ಥವು ಇಷ್ಟಲಿಂಗಧಾರಣಪರವಾದುದೆಂದು ಅಂಗೀಕಾರಮಾಡಿರುವುದರಿಂದಲೂ ಶ್ರುತಿಯ ಆಶಯವು ಇಷ್ಟಲಿಂಗಧಾರಣವಿಷಯಕವಾದುದೆಂಬುದು ನಿರ್ವಿವಾದವಾಗಿದೆ.

ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ ವಿನ್ಯಸ್ಯ ತಲ್ಲೀನಮನಃಪ್ರಚಾರಃ | ಬಾಹ್ಯಕ್ರಿಯಾ ಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗ ಸವೀರಶೈವಃ || ತದೇವತಸ್ತಾಂಬುಜಪೀಠಮಧ್ಯೇ ನಿಧಾಯ ಲಿಂಗಂ ಪರಮಾತ್ಮಚಿಹ್ನಂ | ಪ್ರಪೂಜಯೇದ್ಭಕ್ತಿಯೋಪಚಾರೈರ್ನರಸ್ತು ಬಾಹ್ಯಾಂತರ್ಭೇದಭಿನ್ನೈಃ || ಬಾಹ್ಯಪೀಠಾರ್ಚನಾದೇತಸ್ಮ ಕರಪೀಠಾರ್ಚನಂ ವರಂ | ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಂ ||

ಯಾವನು ದೀಕ್ಷಾಪೂರ್ವಕವಾಗಿ ಗುರುವಿನಿಂದ ಕೊಡಲ್ಪಟ್ಟ ಇಷ್ಟಲಿಂಗವನ್ನು ಹಸ್ತವೆಂಬ ಸಿಂಹಾಸನದಲ್ಲಿರಿಸಿ ಬಾಹ್ಯವ್ಯವಹಾರಗಳನ್ನೆಲ್ಲ ತ್ಯಜಿಸಿ ಆ ಲಿಂಗದಲ್ಲಿಯೇ ಮನಸ್ಸನ್ನು ಲಯಗೊಳಿಸುವನೋ ಅವನೇ ವೀರಶೈವನು. ಬಾಹ್ಯಪೀಠಗಳಲ್ಲಿ ಲಿಂಗವನ್ನು ಪೂಜಿಸುವುದಕ್ಕಿಂತಲೂ ಹಸ್ತಪೀಠದಲ್ಲಿರಿಸಿ ಪೂಜಿಸುವುದೇ ಮುಮುಕ್ಷುಗಳಾದ ವೀರಶೈವರಿಗೆ ಶ್ರೇಷ್ಠವಾದ ನಿತ್ಯವ್ರತವಾಗಿದೆ. ಎಂದು ಸ್ಕಾಂದಪುರಾಣವು ಸಹ ವಿಸ್ತರಿಸಿ ಹೇಳಿರುತ್ತದೆ. ಆದುದರಿಂದ ಬಾಹ್ಯಲಿಂಗಧಾರಣ ಕರಪೀಠಾರ್ಚನಗಳು ಸರ್ವೋತ್ಕೃಷ್ಟಗಳೆನ್ನುವುದೇ ಶ್ರುತಿದೇವಿಯ ಶಾಸನವು.

ಒಳದೇಶದ ವೃತ್ತಾಂತಗಳು.

ನಮ್ಮ ಚಂದಾದಾರರಿಗೆ ಈ ವಾರದಪತ್ರಿಕೆಯ ಸಂಗಡ ೧೯೩೫ ನೆಯ ಇಸ್ವಿಯ ಕ್ಯಾಲೆಂಡರನ್ನು ಕಳುಹಿಸಿದೆ.

ಮೈಸೂರು ಚಾಮರಾಜನಗರದ ಎಲ್ಲಾ ರೈಲುಗಳಲ್ಲಿಯೂ ಮೈಸೂರು-ಅರಸೀಕೆರೆ ಮತ್ತು ಬೀರೂರು ಶಿವಮೊಗ್ಗ ಹಗಲು ರೈಲುಗಳಲ್ಲಿಯೂ ಇಂಟರ್‌ಕ್ಲಾಸನ್ನು ತೆಗೆದುಹಾಕಬೇಕೆಂದು ರೈಲ್ವೆ ಅಡ್ವೈಜರಿ ಕಮಿಟಿಯವರು ಶಿಫಾರಸುಮಾಡಿರುವರು.

ಮೈಸೂರಿನಲ್ಲಿ ಕೆಟ್ಟುಹೋದ ರೇಷ್ಮೆಯನ್ನು ನೆಯ್ಗೆ ಉಪಯೋಗಕ್ಕೆ ಅನುಕೂಲಿಸುವ ಕಾರ್ಖಾನೆಯೊಂದು 'ಸಿಲ್ಕ್‌ವೇಸ್ಟ್ ಸ್ಪಿನಿಂಗ್ ಫ್ಯಾಕ್ಟರಿ' ಎಂಬ ಹೆಸರಿನಿಂದ ಸ್ಥಾಪನೆಯಾಗುವುದರಲ್ಲಿದೆ. ಇದಕ್ಕೆ ಅನೇಕ ಮಂದಿ ದೊಡ್ಡ ಮನುಷ್ಯರೂ ಸರಕಾರದವರೂ ಸಹಾಯಮಾಡುತ್ತಾರೆಂದು ತಿಳಿದುಬಂದಿದೆ.

ಇದುವರೆಗೆ ಸರ್ಕಾರದವರ ಆಡಳಿತಕ್ಕೊಳಪಟ್ಟಿದ್ದ ಶ್ರೀ ಕೃಷ್ಣರಾಜೇಂದ್ರಮಿಲ್ಲಿನ ಮೇಲ್ವಿಚಾರಣೆಯನ್ನು ಇನ್ನುಮೇಲೆ ಬೆಂಗಳೂರು ಮಿನರ್ವ ಮಿಲ್ಲಿನ ಮಾಲೀಕರೂ ಮತ್ತು ಮಹಾರಾಜಾ ಮಿಲ್ಲುಗಳ ಮ್ಯಾನೇಜಿಂಗ್ ಏಜಂಟರೂ ಆದ ಮಿ|| ಎಸ್. ಸಿರೂರರವರಿಗೆ ವಹಿಸುವರೆಂದೂ, ಮಿ|| ಸಿರೂರರವರು ಎರಡು ಮೂರು ದಿವಸಗಳವರೆಗಿದ್ದು ಮಿಲ್ಲಿನ ಆಡಳಿತವನ್ನು ನೋಡಿ ಹೋಗಿರುವರೆಂದೂ ತಿಳಿದುಬರುತ್ತದೆ.

ಶ್ರೀಮನ್ಮಹಾರಾಜರವರು ಮಿತಪರಿವಾರದೊಡನೆ ರಾಜಧಾನಿಯಿಂದ ಹಾಸನಕ್ಕೆ ಚಿತ್ತೈಸಿ ಪುನಃ ರಾಜಧಾನಿಗೆ ದಯಮಾಡಿಸಿದರು. ಶ್ರೀಮದ್ಯುವರಾಜರವರೂ, ಶ್ರೀ ಜಯಚಾಮರಾಜ ಒಡೆಯರವರೂ, ಅರಮನೆಯ ರಾಣೀವಾಸದವರೂ ಪರಿವಾರಸಮೇತ ಕಳೆದ ಭಾನುವಾರ ರಾತ್ರಿ ರಾಜಧಾನಿಯಿಂದ ಬೊಂಬಾಯಿಗೆ ಪ್ರಯಾಣಮಾಡಿದರು. ಅವರು ಅಲ್ಲಿ ಸುಮಾರು ೩ ವಾರಗಳವರೆಗೆ ಇದ್ದು ಆಮೇಲೆ ರಾಜಧಾನಿಗೆ ದಯಮಾಡುತ್ತಾರೆಂದು ತಿಳಿದುಬರುತ್ತದೆ.

ಶ್ರೀಮದ್ರಂಭಾಪುರೀ ಜಗದ್ಗುರುಗಳವರು ಈ ತಿಂಗಳು ೨೧ ನೆಯ ತಾರೀಖು ಶುಕ್ರವಾರದಿವಸ ನಂಜನಗೂಡು ತಾಲ್ಲೂಕಿಗೆ ಸೇರಿದ ಹುಲ್ಲಹಳ್ಳಿ ಗ್ರಾಮಕ್ಕೆ ದಯಮಾಡಿಸಿದರು. ಆ ದಿವಸ ಅಲ್ಲಿಯ ಸಜ್ಜನಸಂಗಡದವರು ಶ್ರೀಗಳವರ ಉತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿ ಗುರುಕಾಣಿಕಾದಿಗಳನ್ನು ಸಮರ್ಪಿಸಿದರೆಂದೂ, ಶ್ರೀಗಳವರ ವಾಸಕ್ಕಾಗಿ ಮ|| ರಾ|| ಡಿ. ಎಸ್. ಪುಟ್ಟಸ್ವಾಮಯ್ಯನವರ ಗೃಹವು ಏರ್ಪಡಿಸಲ್ಪಟ್ಟಿರುವದೆಂದೂ, ಮ||ರಾ|| ಶಿವರುದ್ರಪ್ಪನವರು ತಮ್ಮ ಗೃಹಕ್ಕೆ ಶ್ರೀಗಳವರನ್ನು ಬಿಜಮಾಡಿಸಿಕೊಂಡು ಹೋಗಿ ಕಾಣಿಕಾದಿಗಳನ್ನು ಸಮರ್ಪಿಸಿದರೆಂದೂ ತಿಳಿದುಬರುತ್ತದೆ. ಸುತ್ತಮುತ್ತಲಿನ ಗ್ರಾಮದವರು ತಮ್ಮತಮ್ಮ ಗ್ರಾಮಗಳಿಗೆ ಶ್ರೀಗಳವರನ್ನು ಬಿಜಮಾಡಿಸಿಕೊಂಡು ಹೋಗಿ ಭಕ್ತಿವಿಶೇಷದಿಂದ ಗುರುಸೇವೆಯನ್ನು ಮಾಡುತ್ತಿರುವರು. ಶ್ರೀಗಳವರು ಅಲ್ಲಿಂದ ಇನ್ನು ೩-೪ ದಿವಸಗಳಲ್ಲಿ ಪುನಃ ನಂಜನಗೂಡಿಗೆ ದಯಮಾಡಿಸುತ್ತಾರೆಂದು ತಿಳಿದುಬರುತ್ತದೆ.

ತಂದೆಯನ್ನು ಕೊಂದ ಸತ್ಪುತ್ರ!

ಆಸ್ತಿಯಲ್ಲಿ ಸ್ವಲ್ಪ ಭಾಗವನ್ನು ತನ್ನ ತಂಗಿಯ ಮಗನಿಗೆ ಕೊಡುವುದನ್ನು ತಪ್ಪಿಸುವುದಕ್ಕಾಗಿ ತಂದೆಯನ್ನು ಕೊಲೆಮಾಡಿ, ಒಂದು ಹೊಲದಲ್ಲಿ ಹೂತಿಟ್ಟನೆಂದು, ಒಬ್ಬ ಸಿಕ್ಕ ತರುಣನನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ವರ್ತಮಾನಸಂಗ್ರಹ.

ಪೋಸ್ಟ್ ಆಫೀಸ್ ಕಬ್ಬಿಣಪೆಟ್ಟಿಗೆಯಿಂದ ದುಡ್ಡು ಮಾಯ!

ಮಾಂಡವಿ ಪೋಸ್ಟಾಫೀಸಿನ ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟಿದ್ದ ಸುಮಾರು 14,000 ರೂಪಾಯಿಗಳು ಮಾಯವಾಗಿವೆ. ಮನಿಯಾರ್ಡರ್ ಕ್ಲಾರ್ಕ್ ಅಬ್ದುಲ್ಲ ಎಂಬವನು ಅದೃಶ್ಯನಾಗಿದ್ದಾನೆ. ಪೋಲೀಸರು ಶೋಧ ನಡೆಯಿಸುತ್ತಿದ್ದಾರೆ.

ಪರ್ಷಿಯಾ ಸರಕಾರದ ಅಪ್ಪಣೆ!

ಕರಾಚಿ ಪಟ್ಟಣದಲ್ಲಿರುವ 20 ರಿಂದ 30 ವರುಷ ವಯಸ್ಸಿಗೆ ಒಳಪಟ್ಟ ಪ್ರತಿಯೊಬ್ಬ ಪರ್ಷಿಯನ್ನನೂ 18 ತಿಂಗಳಕಾಲ ಮಿಲಿಟರಿ ಟ್ರೇನಿಂಗ್ ಪಡೆಯುವುದಕ್ಕೆ ಪರ್ಷಿಯಾಕ್ಕೆ ಬರಬೇಕೆಂದು ಪರ್ಷಿಯಾ ಸರಕಾರದವರು ಅಪ್ಪಣೆ ಮಾಡಿದ್ದಾರೆ.

ಪಂಜಾಬು ವಿಶ್ವವಿದ್ಯಾನಿಲಯ.

ಈ ವರುಷ ಪಂಜಾಬ ವಿಶ್ವವಿದ್ಯಾನಿಲಯದ ಡಿಗ್ರಿ ಪರೀಕ್ಷೆಗೆ ಹೋಗಿದ್ದ 3000 ವಿದ್ಯಾರ್ಥಿಗಳಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬನೂ ಪ್ರತಿ ಆರು ವಾಕ್ಯಗಳಿಗೊಮ್ಮೆಯಾದರೂ ಸ್ಪೆಲ್ಲಿಂಗ್ ತಪ್ಪು ಮಾಡಿರುತ್ತಾನೆಂದು ಅಲ್ಲಿಯ ಪರೀಕ್ಷಕರ ವರದಿಯಿಂದ ತಿಳಿದುಬರುತ್ತದೆ.

ರಬ್ಬರಿನಿಂದ ಪೆಟ್ರೋಲು.

ಲಂಡನ್ ಪಟ್ಟಣದ ವೈಜ್ಞಾನಿಕರು ರಬ್ಬರನ್ನು ಹೈಡ್ರೋಜನ್ ವಾಯುವಿನೊಡನೆ ಸೇರಿಸಿ ಸ್ವಚ್ಛವಾದ ಪೆಟ್ರೋಲ್ ಎಣ್ಣೆಯನ್ನು ತಯಾರುಮಾಡುವುದನ್ನು ಕಂಡುಹಿಡಿದಿದ್ದಾರೆ. ಆದರೆ ಈಗಿನ ರಬ್ಬರ್ ಬೆಲೆಗಿಂತ ಇದು ಅಷ್ಟು ಲಾಭಕರವಲ್ಲವೆಂದು ತಿಳಿದು ಆ ಕಾರ್ಯವನ್ನು ನಿಲ್ಲಿಸಿದ್ದಾರೆ.

ನದಿಯ ಕೆಳಭಾಗದಲ್ಲಿ ರೈಲ್ವೆ.

ಲಂಡನ್ ಬಳಿ ಥೇಮ್ಸ್ ನದಿಯ ಕೆಳಗೆ ಡಾರ್ಟ್‌ಫರ್ಡ್ ಎಂಬಲ್ಲಿಂದ ರೈಲ್‌ಗಾಡಿಯು ಹೋಗುವಂತೆ ಸುರಂಗಮಾರ್ಗವನ್ನು ಹಾಕುವುದಕ್ಕೆ 35 ಲಕ್ಷ ಪೌಂಡುಗಳಷ್ಟು ಖರ್ಚು ಆಗುವುದೆಂದು ಅಂದಾಜು ಮಾಡಿದ್ದಾರೆ. ಶೀಘ್ರವಾಗಿ ಕೆಲಸಕ್ಕೆ ಪ್ರಾರಂಭಮಾಡುವರೆಂದು ತಿಳಿದುಬಂದಿದೆ.

ಕಾಂಗ್ರೆಸ್ ಆಫೀಸಿನ ಬದಲಾವಣೆ.

ಆಲ್ ಇಂಡಿಯಾ ಕಾಂಗ್ರೆಸ್ ಆಫೀಸನ್ನು ಅಲಹಾಬಾದಿನಿಂದ ಪಾಟ್ನಾನಗರದ ಹತ್ತಿರವಿರುವ ಒಂದು ಹಳ್ಳಿಗೆ ಬದಲಾಯಿಸಬೇಕೆಂದು ಯೋಚನೆಮಾಡಿದ್ದಾರೆ. ಪ್ರೆಸಿಡೆಂಟರಾದ ಬಾಬುರಾಜೇಂದ್ರಪ್ರಸಾದರವರು ಅಲ್ಲಿಯೇ ಹೋಗಿ ವಾಸಮಾಡಬೇಕೆಂದು ಯೋಚಿಸಿದ್ದಾರೆಂದು ತಿಳಿದುಬರುತ್ತದೆ.

ಮರಣದಂಡನೆ.

ಇಂಗ್ಲೆಂಡಿನ ಯಾರ್ಕ್‌ಪಟ್ಟಣದಲ್ಲಿ 27 ವರ್ಷ ವಯಸ್ಸಿನ ಫ್ರೆಡ್ರಿಕ್‌ರಷ್‌ವರ್ತ್ ಎಂಬವನಿಗೂ, ಅವನ ವಶದಲ್ಲಿದ್ದ 24 ವರ್ಷ ವಯಸ್ಸಿನ ಲಿಡಿಯ ಬಿಂಕ್ಸ್ ಎಂಬ ಹೆಂಗಸಿಗೂ ಮ್ಯಾಜಿಸ್ಟ್ರೇಟರು ಮರಣದಂಡನೆಯನ್ನು ವಿಧಿಸಿದರು. ಇವರು ತಮಗೆ ಜನಿಸಿದ ಹೆಣ್ಣುಮಗುವನ್ನು ಜೀವಸಹಿತ ಸಮಾಧಿಮಾಡಿದ್ದೇ ಇದಕ್ಕೆ ಕಾರಣ!

ಥಕಾಯತಿ.

ಲಾಹೋರಿನ ಮಹಾಂತ ಆತ್ಮಾರಾಮ ಎಂಬವರ 1[?] ವರ್ಷ ವಯಸ್ಸಿನ ಮಗಳನ್ನು ಥಕಾಯಿತರು ಅತ್ತಗಟ್ಟಿ ಅವಳಲ್ಲಿದ್ದ 1500 ರೂಪಾಯಿಗಳಷ್ಟು ಒಡವೆ ವಸ್ತು ನಗದು ಹಣವನ್ನು ಅಪಹರಿಸಿರುತ್ತಾರೆ. ಥಕಾಯಿತರ ದಸ್ತಗಿರಿಗೆ ಸಹಾಯಮಾಡಿದವರಿಗೆ 100 ರೂಪಾಯಿ ಬಹುಮಾನ ಕೊಡುವುದಾಗಿ ಮಹಾಂತರವರು ಪ್ರಕಟಿಸಿದ್ದಾರೆ.

ತಂತಿ ಇಲ್ಲದ ಸಮಾಚಾರ.

ತಂತಿ ಇಲ್ಲದೆ ಸಮಾಚಾರವನ್ನು ಕಳುಹಿಸುವ ಮತ್ತು ಗ್ರಹಿಸುವ ಯಂತ್ರಗಳು ಭೂಮಿಯ ಮೇಲೆ ಕೆಲಸಮಾಡುವುದಕ್ಕಿಂತ ಅಂತರಿಕ್ಷದಲ್ಲಿ ಬಹಳ ಚನ್ನಾಗಿ ಕೆಲಸಮಾಡುತ್ತಿವೆಯೆಂದೂ, ಎಷ್ಟುದೂರದ ಶಬ್ದವಾದರೂ ಸ್ಪಷ್ಟವಾಗಿ ಕೇಳಿಬರುತ್ತದೆಂದೂ, ವಿಮಾನಗಳಲ್ಲಿ ಇಟ್ಟಿರುವ ಶಬ್ದಗ್ರಾಹಕ ಯಂತ್ರಗಳಿಂದ ತಿಳಿದುಬಂದಿರುತ್ತದೆ. ಈ ವಿಧವಾದ ವ್ಯತ್ಯಾಸಕ್ಕೆ ಕಾರಣವು ತಿಳಿದಿಲ್ಲ. ಶಾಸ್ತ್ರಜ್ಞರು ಶೋಧಮಾಡುತ್ತಿದ್ದಾರೆ.

ಮಗನೋ ಮರಿಮಗನೋ ?

ಪೋಲೆಂಡಿನಲ್ಲಿ ಎಂ. ಮಾರ್ಕೋವಿಚ್ ಎಂಬವನ ಮನೆಯಲ್ಲಿ ಎರಡು ಮಕ್ಕಳು ಏಕಕಾಲದಲ್ಲಿಯೇ ಜನಿಸಿದವು. ಒಂದು ಅವನ ಹೆಂಡತಿ ಹೆತ್ತುದು. ಇನ್ನೊಂದು ಅವನ ಮೊಮ್ಮಗಳು ಹೆತ್ತುದು. ಎರಡು ಹೆರಿಗೆಯನ್ನೂ ನೋಡಿಕೊಳ್ಳುವ ಅವಸರದಲ್ಲಿ ಸೂಲಗಿತ್ತಿಯು ಎರಡನ್ನೂ ಒಂದೇ ತೊಟ್ಟಿಲಿನಲ್ಲಿ ಮಲಗಿಸಿದಳು. ಈಗ ಯಾರ ಮಗು ಯಾವುದೆಂಬುದು ಸಂದೇಹಕ್ಕೆ ಬಂದಿದೆ. ತಂದೆಗೆ ತಾನು ಎತ್ತಿಕೊಳ್ಳುವ ಮಗುವು ತನ್ನ ಮಗನೋ ಅಥವಾ ಮರಿಮಗನೋ ಗೊತ್ತಾಗುವಂತಿಲ್ಲ.

ಸಮುದ್ರದಲ್ಲಿ ಟೆಲಿಗ್ರಾಂ ತಂತಿ.

ಇಲ್ಲಿಯವರೆಗೂ ಟೆಲಿಗ್ರಾಂ ತಂತಿಗಳನ್ನು ಸಮುದ್ರದೊಳಗೆ ಸುಮ್ಮನೆ ಬಿಡುತ್ತಿದ್ದರು. ಇದಕ್ಕೆ ಗಾಳಿಯಿಂದಲೂ ಸಂಚರಿಸುವ ಹಡಗುಗಳಿಂದಲೂ ಕೆಲವು ವೇಳೆ ತೊಂದರೆಯುಂಟಾಗುತ್ತಿತ್ತು. ಅದಕ್ಕಾಗಿ ಈಗ ಈ ತಂತಿಗಳನ್ನು ಸಮುದ್ರದ ತಳದಲ್ಲಿ ಹಾಕುವ ಪ್ರಯತ್ನವನ್ನು ಮಾಡಹತ್ತಿದ್ದಾರೆ. ಈಗ ಸುಮಾರು 100 ಮೈಲುಗಳಷ್ಟು ದೂರ ತಂತಿಗಳನ್ನು 2500 ಅಡಿ ಆಳದಲ್ಲಿ ಹಾಕಿದ್ದಾರೆ. ಈ ಪ್ರಯತ್ನವು ಫಲಕಾರಿಯಾದರೆ ವರ್ಷಕ್ಕೆ ರಿಪೇರಿಗೆ ಖರ್ಚಾಗುತ್ತಿದ್ದ 50,000 ಪೌಂಡುಗಳು ಉಳಿಯುವುವೆಂದು ತಿಳಿದುಬರುತ್ತದೆ.

ಸಿನಿಮಾ ನೋಟದ ಪರಿಣಾಮ!

ಮದುವೆಯಾಗಿ 2 ತಿಂಗಳು ಮಾತ್ರವಾಗಿದ್ದ 19 ವರುಷ ವಯಸ್ಸಿನ 'ಎವಿಫ್ಯಾರ್ಕ್ಸ್ ಫೆರಿಸಲೆ' ಎಂಬ ಹುಡುಗಿಯು ಸಿನಿಮಾ ನೋಡಿಕೊಂಡು ಬಂದು ಅದರಲ್ಲಿಯ ಕಥಾನಾಯಿಕೆಯು ಮಾಡಿದಂತೆ ತಾನೂ ವಿಷವಾಯುವನ್ನು ಸೇವಿಸಿ ಪ್ರಾಣಬಿಟ್ಟಳು. ಅವಳ ಗಂಡನಾದ ಫ್ರಾಂಕ್‌ಲೆಯ ಹೇಳಿಕೆಯಿಂದಲೂ, ತನ್ನ ಮದುವೆಯು ಸುಖಕಾರಿಯಾಗಲಿಲ್ಲವಾದುದರಿಂದ ತಾನು ಪ್ರಾಣ ಬಿಡುವುದಾಗಿ ಅವಳು ಬರೆದಿಟ್ಟ ಕಾಗದದಿಂದಲೂ, ಅವಳು ನೋಡಿದ ಸಿನಿಮಾ ಪ್ರದರ್ಶನವು ಅವಳ ಮನಸ್ಸಿನ ಮೇಲೆ ಇಂಥ ಪರಿಣಾಮವನ್ನುಂಟುಮಾಡಿತೆಂದು ತಿಳಿದುಬಂದಿದೆ.

ವಿಮಾನದಿಂದ ಪ್ರಾಣಹಾನಿ!

ಇಂಗ್ಲೆಂಡಿನಿಂದ ಆಸ್ಟ್ರೇಲಿಯಾ ದೇಶಕ್ಕೆ ವೇಗವಾಗಿ ವಿಮಾನ ಯಂತ್ರವನ್ನು ನಡೆಸಿಕೊಂಡು ಹೋಗುವ ಪಂದ್ಯದಲ್ಲಿ ಎರಡನೆಯದಾಗಿದ್ದ ಡಚ್‌ದೇಶದ ವಿಮಾನಯಂತ್ರವೊಂದು ಪ್ಯಾಲಸ್ಟೈನಿಗೆ ಸೇರಿದ ಗಾಜ ಎಂಬ ಊರಿನ ಮೇಲೆ ಹಾರಿಹೋದನಂತರ ಇದುವರೆಗೂ ಅದರ ಸಮಾಚಾರವೇ ತಿಳಿದುಬಂದಿಲ್ಲವೆಂದೂ, ಕೆಲವು ದಿನಗಳ ಕೆಳಗೆ ಎದ್ದಿದ್ದ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ನಾಶಹೊಂದಿದೆಯೆಂದೂ, ಎಷ್ಟು ಹುಡುಕಿದರೂ ಇನ್ನೂ ಸಿಕ್ಕಲಿಲ್ಲವೆಂದೂ, ಆ ಯಂತ್ರದಲ್ಲಿ ನಾಲ್ಕು ಜನ ಯಂತ್ರನಡೆಸುವವರೂ ಮೂರು ಜನ ಪ್ರಯಾಣಿಕರೂ ಇದ್ದರೆಂದೂ ಪ್ರಕಟವಾಗಿತ್ತು. ಈಗ ಈ ವಿಮಾನವು ಸಿರಿಯಾ ಮರುಭೂಮಿಯ ಸಮೀಪದಲ್ಲಿ ಬೆಂಕಿಯಿಂದ ಸುಟ್ಟು ಬಿದ್ದಿದೆಯೆಂದು ಕೆಲವು ಬ್ರಿಟಿಷ್ ವೈಮಾನಿಕರು ಪತ್ತೆಮಾಡಿರುತ್ತಾರೆ. ವಿಮಾನದಲ್ಲಿದ್ದ 7 ಜನರೂ ಸುಟ್ಟು ಮರಣಹೊಂದಿರುತ್ತಾರೆಂದು ಪ್ರಕಟವಾಗಿದೆ.

ಪೀಠಗಳ ಹೆಸರನ್ನು ಹೇಳುತ್ತ ಅಲ್ಲಲ್ಲಿ ಸಂಚರಿಸುವ ವೇಷಧಾರಿಗಳು!

ಪರ್ವತ ಮೊದಲಾದ ಪೀಠಗಳ ಹೆಸರುಗಳನ್ನು ಹೇಳಿಕೊಂಡು ಕೆಲಜನ ವೇಷಧಾರಿಗಳು ಅಲ್ಲಲ್ಲಿ ಸಂಚರಿಸುತ್ತಿರುವುದು ಮಹಾಸಂಸ್ಥಾನಕ್ಕೆ ತಿಳಿದುಬಂದಿರುವುದೆಂದೂ, ಏನೂ ತಿಳಿಯದ ಭಕ್ತಾದಿಗಳು ಅವರೇ ಮೂಲಗುರುಗಳೆಂದು ಭಾವಿಸಿ ಕಾಣಿಕಾದಿಗಳನ್ನು ಸಮರ್ಪಿಸುತ್ತಿರುವರೆಂದೂ, ಹೀಗೆ ಮಾಡುವುದರಿಂದ ಮೂಲಪೀಠಗಳ ಗೌರವವೆಲ್ಲಾ ನಾಶವಾಗುವುದೆಂದೂ, ಆದಕಾರಣ ಪ್ರತಿಯೊಂದು ಗ್ರಾಮದ ಭಕ್ತಮಾಹೇಶ್ವರರು ಇವರು ನಿಜವಾದ ಪೀಠಾಧಿಪತಿಗಳು ಅಹುದೋ ಅಲ್ಲವೋ ಎಂಬುದನ್ನು ವಿಚಾರಿಸಿ ಕಾಣಿಕಾದಿಗಳನ್ನು ಸಮರ್ಪಿಸಬೇಕೆಂದೂ, ವೇಷಧಾರಿಗಳು ಯಾವ ಯಾವ ಪೀಠದ ಹೆಸರುಗಳನ್ನು ಹೇಳುತ್ತಾರೆಯೋ ಆಯಾ ಪೀಠಗಳಿಗೆ ಪತ್ರವನ್ನು ಬರೆದುಕೊಂಡು ಅಲ್ಲಿಂದ ಉತ್ತರವನ್ನು ತರಿಸಿಕೊಂಡು ಮುಂದಿನ ಕಾರ್ಯವನ್ನು ಕೈಕೊಳ್ಳಬೇಕೆಂದೂ, ಹಾಗಿಲ್ಲದೆ ಅಂಧಭಕ್ತಿಯಿಂದ ವರ್ತಿಸಿದ್ದೇ ಆದರೆ ಮೂಲಪೀಠಗಳಿಗೆ ಅಗೌರವವನ್ನುಂಟುಮಾಡಿದಂತಾಗುವುದೆಂದೂ, ಪರ್ವತಪೀಠದ ಬಗ್ಗೆ ಗುಂತಕಲ್ಲಿನಲ್ಲಿರುವ ಶ್ರೀ ಜಗದ್ಗುರು ಪರ್ವತಸಿಂಹಾಸನಕ್ಕೆ ಬರೆದುಕೊಳ್ಳಬೇಕೆಂದೂ ಮಹಾಸಂಸ್ಥಾನದ ಅಪ್ಪಣೆಯಾಗಿರುತ್ತದೆ.

ವೈಸ್‌ರಾಯರ ಭಾಷಣದ ಸಾರ!

ಕಳೆದವಾರ ಕಲ್ಕತ್ತಾ ಪಟ್ಟಣದಲ್ಲಿರುವ ಯೂರೋಪಿಯನ್ ಅಸೋಸಿಯೇಷನ್ನಿನಲ್ಲಿ ವೈಸರಾಯರಾದ ಲಾರ್ಡ್ ವಿಲ್ಲಿಂಗ್ಡನ್‌ರವರು ಭಾಷಣಮಾಡುತ್ತ ಹೇಳಿದುದೇನೆಂದರೆ—ಹಿಂದೂಸ್ಥಾನದ ಮುಂದಿನ ಆಳ್ವಿಕೆಯ ರಚನೆಯು ಹೇಗಿರಬೇಕೆಂಬ ವಿಷಯವಾಗಿ ನಡೆಯುತ್ತಿದ್ದ ದೀರ್ಘಕಾಲದ ಚರ್ಚೆಯು ಮುಗಿದು ಒಂದು ತೀರ್ಮಾನಕ್ಕೆ ಬರುತ್ತಿರುವುದು. ಈ ಆಳ್ವಿಕೆಯ ವಿಷಯದಲ್ಲಿ ಇನ್ನೂ ಅನೇಕ ತಿದ್ದುಪಾಟುಗಳು ಆಗಬೇಕಾಗಿದ್ದಾಗ್ಯೂ ಬ್ರಿಟಿಷ್ ಸರ್ಕಾರದವರು ಇನ್ನು ಹೆಚ್ಚು ತಡಮಾಡದೆ ಈ ಮಸೂದೆಯನ್ನು ಆದಷ್ಟು ಶೀಘ್ರ ಕಾಯಿದೆಯನ್ನಾಗಿ ಮಾಡಲು ಪಾರ್ಲಿಮೆಂಟಿನ ಕಾಮನ್ಸ್ ಸಭೆಯವರ ಮುಂದೆ ಇಡುತ್ತಾರೆ. ಅಲ್ಲಿ ಅದು ಚರ್ಚೆಯಾಗುತ್ತಿರುವಾಗ ಇಲ್ಲಿ ನಾನು ನನ್ನ ಸರಕಾರದೊಡನೆ ಆ ಹೊಸ ಆಳ್ವಿಕೆಯನ್ನು ಪ್ರಾರಂಭಗೊಳಿಸಲು ಅವಶ್ಯಕವಾದ ಏರ್ಪಾಡುಗಳನ್ನೆಲ್ಲಾ ಮಾಡಲು ಪ್ರಯತ್ನಪಡುತ್ತೇನೆ. ಸಾರ್ವಭೌಮ ನ್ಯಾಯವಿಧಾಯಕ ಸಭೆಗೆ ಕಾಂಗ್ರೆಸ್ ಪಕ್ಷದವರು ಚುನಾವಣೆ ಹೊಂದಿ ಬಂದಿರುವುದು ನನಗೆ ಬಹಳ ಸಂತೋಷ! ಅನೇಕ ಸಂದರ್ಭಗಳಲ್ಲಿ ನನ್ನ ಮತ್ತು ನನ್ನ ರಾಜಕೀಯ ಅಧಿಕಾರಿಗಳ ಸಹತೆಗಳ ವಿಷಯದಲ್ಲಿ ನಾವುಗಳು ದೇಶೀಯ ರಾಜರುಗಳಿಗೆ ವಿಶೇಷ ಸನ್ಮಾನಗಳನ್ನು ಕೊಡುತ್ತೇವೆಂಬ ಆಶೆಯನ್ನು ತೋರಿಸಿಯೂ ಮತ್ತು ಹೆದರಿಸಿಯೂ ಅವರು ಸಂಯುಕ್ತ ಆಳ್ವಿಕೆಗೆ ಸೇರುವಂತೆ ಬಲವಂತ ಮಾಡುತ್ತಿದ್ದೇವೆಂಬ ಸತ್ಯಾಂಶವಿಲ್ಲದ ಸಮಾಚಾರಗಳು ಪ್ರಕಟಿಸಲಾಗಿವೆ. ಅವೆಲ್ಲವೂ ಆಧಾರವಿಲ್ಲದ ಸಮಾಚಾರಗಳು. ಅನೇಕ ದೇಶೀಯ ರಾಜರುಗಳು ತಾವು ಈ ಸಂಯುಕ್ತ ಆಳ್ವಿಕೆಗೆ ಸೇರುವ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಕೇಳಿದರು. ನಿಮ್ಮ ನ್ಯಾಯಸಂಬಂಧವಾದ ಆಶೆಗಳೆಲ್ಲವೂ ಸಂಯುಕ್ತ ಆಳ್ವಿಕನೆ ಸೇರುವುದರಿಂದ ನೆರವೇರುವ ಪಕ್ಷದಲ್ಲಿ ನೀವು ಖಂಡಿತವಾಗಿಯೂ ಸೇರತಕ್ಕದ್ದೆಂದು ಹೇಳಿರುವೆನು. ಮತ್ತು ದೇಶೀಯ ರಾಜರುಗಳೂ ಸಂಯುಕ್ತ ಆಳ್ವಿಕೆಗೆ ಸೇರುವುದರಿಂದ ಅವರಿಗೆ ವಿಶೇಷ ಪ್ರಯೋಜನವಾಗುವುದಲ್ಲದೆ ಇಂಡಿಯಾ ದೇಶಕ್ಕೂ ಅತ್ಯಂತ ಸಹಾಯವಾದಂತಾಗುತ್ತದೆ. ಈಗ ಪ್ರಚುರವಾಗಿರುವ ರಿಪೋರ್ಟಿನಲ್ಲಿ ಅನೇಕ ವಿಷಯಗಳು ನಿಮಗೆ ಸಮಾಧಾನಕರವಾಗಿಲ್ಲದಿರಬಹುದು ಆದರೆ ಶ್ರಮವಹಿಸಿ ಆ ಶಿಫಾರಸುಗಳಂತೆ ಕೆಲಸಮಾಡಿದಲ್ಲಿ ಭಾರತೀಯರಿಗೆ ಇಂಡಿಯಾ ದೇಶದಲ್ಲಿ ಪೂರ್ಣ ಅಧಿಕಾರವು ದೊರೆಯಲು ಅವು ವಿಶೇಷ ಸಹಕಾರಿಗಳಾಗುತ್ತವೆಂಬುದರಲ್ಲಿ ನನಗೆ ಏನೂ ಸಂಶಯ ತೋರುವುದಿಲ್ಲ.